ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ ನಿಘಂಟು

ಏಳನೆಯ ಸಂಪುಟ

"ಶಬ್ದಪಾರಮಾರ್ಗಮಶಕ್ಯಂ"
–ಕೇಶಿರಾಜ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು–೧೮

೧೯೯೩

KANNADA NIGHANTU - VOL-VII
Second Edition : 2010
Published by : Kannada Sahitya Parishat
Pampa Mahakavi Road, Chamarajapet, Bangalore - 560 018
Pages : X+6481 to 7747 Price : Rs. 350=00

ಮೊದಲನೆಯ ಮುದ್ರಣ – ೧೯೯೩
ಎರಡನೆಯ ಮುದ್ರಣ – ೨೦೧೦
ಪ್ರತಿಗಳು : ೨೦೦೦
ಬೆಲೆ : ಮುನ್ನೂರು ಐವತ್ತು ರೂಪಾಯಿಗಳು

@ ಹಕ್ಕುಗಳನ್ನು ಕಾಯ್ದಿರಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು (೨೦೧೦)

ಅಧ್ಯಕ್ಷರು

ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಗೌರವ ಕಾರ್ಯದರ್ಶಿಗಳು

ಪ್ರೊ. ಎಚ್.ಕೆ. ಮಳಲಿಗೌಡ

ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ

ಗೌರವ ಕೋಶಾಧ್ಯಕ್ಷರು

ಶ್ರೀ ಮುಂಡಲೀಕ ಹಾಲಂಬಿ

ಮುದ್ರಣ: ರಾಜಾ ಪ್ರಿಂಟರ್ಸ್
ನಂ.೫೯, ೪ನೆ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು- ೫೬೦ ೦೨೭

ಕನ್ನಡ ನಿಘಂಟು ಸಂಪಾದಕ ಸಮಿತಿ

(೧೯೯೨ನೆಯ ಡಿಸೆಂಬರ್ ತಿಂಗಳಿನಲ್ಲಿ ಇದ್ದಂತೆ)

ಅಧ್ಯಕ್ಷರು

ಪ್ರೊ. ಜಿ. ಎಸ್. ಗಾಯಿ, ಪಿಎಚ್.ಡಿ.

ಪ್ರಧಾನ ಸಂಪಾದಕರು

ಶ್ರೀ ಎನ್. ಬಸವಾರಾಧ್ಯ, ಎಂ.ಎ.

ಸದಸ್ಯರು

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
ಡಾ. ಆರ್.ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.
ಡಾ. ಹಾ.ಮಾ. ನಾಯಕ, ಎಂ.ಎ., ಪಿಎಚ್.ಡಿ.
ಡಾ. ಜಿ.ಎಸ್. ಶಿವರುದ್ರಪ್ಪ, ಎಂ.ಎ., ಪಿಎಚ್.ಡಿ

ಡಾ. ಎಂ. ಚಿದಾನಂದಮೂರ್ತಿ, ಎಂ.ಎ., ಪಿಎಚ್.ಡಿ.
ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಎಂ.ಎ. ಪಿಎಚ್.ಡಿ.
ಡಾ. ಕೆ.ವಿ. ರಮೇಶ್, ಎಂ.ಎ., ಪಿಎಚ್.ಡಿ.
ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ.

ಕರ್ನಾಟಕ ಸರ್ಕಾರದ ಪ್ರತಿನಿಧಿಗಳು

ಡಾ. ಸಿದ್ಧಯ್ಯ ಪುರಾಣಿಕ, ಡಿ.ಲಿಟ್.

ಪರಿಷತ್ತಿನ ಅಧ್ಯಕ್ಷರು

ಶ್ರೀ ಗೊ.ರು. ಚನ್ನಬಸಪ್ಪ

ಪರಿಷತ್ತಿನ ಗೌರವ ಕಾರ್ಯದರ್ಶಿಗಳು

ಪ್ರೊ. ಎಸ್. ಶ್ರೀನಿವಾಸನ್, ಎಂ.ಎ.
ಶ್ರೀ ಜಿ. ಚನ್ನವೀರಸ್ವಾಮಿ, ಎಂ.ಎ., ಬಿ.ಇಡಿ.

ಪರಿಷತ್ತಿನ ಗೌರವ ಕೋಶಾಧಿಕಾರಿಗಳು

ಪ್ರೊ. ಹೆಚ್.ಆರ್. ದಾಸೇಗೌಡ, ಎಂ.ಎ., ಬಿ.ಎಲ್.

ಕನ್ನಡ ನಿಘಂಟು ಕಚೇರಿಯ ಸಿಬ್ಬಂದಿ

(೧೯೯೨ನೆಯ ಡಿಸೆಂಬರ್ ತಿಂಗಳಿನಲ್ಲಿ ಇದ್ದಂತೆ)

ಪ್ರಧಾನ ಸಂಪಾದಕರು

ಶ್ರೀ ಎನ್. ಬಸವಾರಾಧ್ಯ, ಎಂ.ಎ.

ಉಪ ಸಂಪಾದಕರು

ಶ್ರೀ ಟಿ. ಆರ್. ಮಹಾದೇವಯ್ಯ, ಎಂ.ಎ.

ಸಹಾಯಕ ಸಂಪಾದಕರು

ಶ್ರೀಮತಿ ಮಂಜುಳಾರಾವ್, ಎಂ.ಎ.
ಶ್ರೀಮತಿ ಎಂ.ಎನ್. ಜಾನಕಮ್ಮ, ಎಂ.ಎ.
ಶ್ರೀಮತಿ ಉಮಾದೇವಿ, ಎಂ.ಎ
ಶ್ರೀಮತಿ ವಿಜಯಲಕ್ಷ್ಮಿ, ಎಂ.ಎ
ಶ್ರೀಮತಿ ಎಂ.ಎಸ್. ಸುಜಯ, ಎಂ.ಎ
ಶ್ರೀ ಬಿ. ಆರ್. ಬಸವರಾಜ, ಎಂ.ಎ.

ಪೂರ್ಣಕಾಲದ ಸಹಾಯಕರು

ಶ್ರೀ ಕೆ.ಆರ್. ಶೇಷಗಿರಿ, ಎಂ.ಎ.

ಬೆರಳಚ್ಚುಗಾರ್ತಿಯರು : ಶ್ರೀಮತಿ ಎ. ನೇತ್ರಾವತಿಬಾಯಿ, ಶ್ರೀಮತಿ ಸಿ. ಎನ್. ವಿಜಯಲಕ್ಷ್ಮಿ

ಸಹಾಯಕರು : ಶ್ರೀ ರಾಘವೇಂದ್ರ ಪ್ರಸಾದ್, ಶ್ರೀ ಆರ್. ಶಂಕರಪ್ಪ, ಶ್ರೀ ರೇವಯ್ಯ

ಅಧ್ಯಕ್ಷರ ನುಡಿ

'ನಿಘಂಟು ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟು' ಎಂದೇ ಖ್ಯಾತವಾಗಿರುವ ಈ ಮಹಾನಿಘಂಟಿನ ಎಂಟು ಸಂಪುಟಗಳನ್ನು ಅದು ಪ್ರಕಟವಾದ ೧೫ ವರ್ಷಗಳ ನಂತರ ಮತ್ತಷ್ಟು ಸುಂದರವಾಗಿ ಮರುಮುದ್ರಣಗೊಳಿಸಿ ಕನ್ನಡ ಕುಲಕೋಟಿಗೆ ಅರ್ಪಿಸಲು ನನಗೆ ಸಂತೋಷವೆನಿಸುತ್ತದೆ. ಕನ್ನಡ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಪಡೆದುಕೊಂಡಿರುವುದು ಅದರ ಸಂಪನ್ನತೆ ಮತ್ತು ಅರ್ಹತೆಗಳಿಂದಾಗಿಯೇ ಎಂಬುದನ್ನು ಲೋಕದೆದುರು ಬಿಚ್ಚತೋರಿಸುವ ಸಾಧನಗಳಲ್ಲಿ ಮುಖ್ಯವಾದದ್ದು ಈ ಬೃಹತ್ ನಿಘಂಟು. ಕನ್ನಡದ ಸಮಸ್ತ ಜ್ಞಾನವನ್ನೂ ತನ್ನೊಳಗೆ ಐಕ್ಯಗೊಳಿಸಿಕೊಂಡಿರುವ ಈ ನಿಘಂಟಿನ ವಿವಿಧ ಸಂಪುಟಗಳಲ್ಲಿ ಶಬ್ದವೊಂದರ ಅರ್ಥ, ವಿವರಣೆ, ಉದಾಹರಣೆ ಒಮ್ಮೊಮ್ಮೆ ಅರ್ಥಪುಟವನ್ನು ದಾಟಿ ಒಂದು ಪುಟವನ್ನು ಆವರಿಸಿಕೊಂಡಿರುವುದುಂಟು.

ಕ್ರಿ.ಶ.೪೫೦ರ ಹಲ್ಮಿಡಿಶಾಸನದಿಂದ ಪ್ರಾರಂಭವಾಗಿ ಈ ಸಂಪುಟ ಯೋಜನೆ ಅನುಷ್ಠಾನಗೊಂಡ ೧೯೯೫ರವರೆಗೆ ಕನ್ನಡದಲ್ಲಿ ಪ್ರಕಟವಾದ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳಿಂದಲೂ ಉಲ್ಲೇಖಗಳನ್ನು ನೀಡಲಾಗಿರುವುದು, ಕೆಲವೊಮ್ಮೆ ಒಂದೇ ಶಬ್ದಕ್ಕೆ ಬೇರೆ ಬೇರೆ ಅರ್ಥಗಳು ಪ್ರಾಪ್ತವಾಗುವ ಸಂದರ್ಭಗಳನ್ನು ಜೊತೆಗಿರಿಸಿ ಕೊಟ್ಟಿರುವುದು, ಪ್ರತಿಯೊಂದು ಶಬ್ದವನ್ನೂ ನಾಮಪದ ಅಥವಾ ಕ್ರಿಯಾಪದವೆಂದು ಖಚಿತವಾಗಿ ವಿಂಗಡಿಸಿಕೊಂಡಿರುವುದು, ಅರ್ಥ ಸ್ಪಷ್ಟೀಕರಣಕ್ಕೆಂದು ಉದಾಹರಣೆಯಾಗಿ ಕೊಟ್ಟಿರುವ ವಾಕ್ಯ ಅಥವಾ ವಾಕ್ಯತುಂಡುಗಳೇ ಮೂಲಕಾವ್ಯವನ್ನು ಓದಬೇಕೆನ್ನುವ ಆಸಕ್ತಿಯನ್ನು ಹುಟ್ಟಿಸುವುದು – ಈ ಎಲ್ಲ ಅಂಶಗಳು ಇದರ ಅಪೂರ್ವತೆಯನ್ನು ಎತ್ತಿ ಹಿಡಿಯುವ ಸಾಕ್ಷಿಕಲ್ಲುಗಳಾಗಿವೆ. ನಿಘಂಟು ಎನ್ನುವುದೇ ತುಂಬ ವೈಜ್ಞಾನಿಕವಾದ, ಒಂದು ಭಾಷೆಯ ಸೃಜನ ಸಾಹಿತ್ಯದಷ್ಟೇ ಪ್ರಮುಖವಾದ, ಭಾಷೆಯಲ್ಲಿರುವ ಶಬ್ದಗಳನ್ನು ಶುದ್ಧವಾಗಿ ಉಚ್ಚರಿಸಬೇಕೆಂದು ತಿಳಿಸಿಕೊಡುವ ರಚನೆಯಾಗಿರುವುದರಿಂದ ಜ್ಞಾನೇಂದ್ರಿಯಗಳೆಲ್ಲದರ ಎಚ್ಚರದ ದುಡಿಮೆಯನ್ನು ಬಯಸುತ್ತದೆ. ಕನ್ನಡದ ಅಭಿಮಾನವನ್ನು ಮೈತುಂಬಿಕೊಂಡ ಘನ ವಿದ್ವಾಂಸರ ಸತತ ಪರಿಶ್ರಮದಿಂದ ಈ ಯೋಜನೆ ಶಿಸ್ತುಬದ್ಧವಾಗಿ ಯಶಕಂಡಿದೆ. ಮೊದಲ ಮುದ್ರಣದ ೧೦,೦೦೦ ಪ್ರತಿಗಳು ಕೆಲವೇ ವರ್ಷಗಳಲ್ಲಿ ಕನ್ನಡಿಗರ ಮನೆಯ ಕಪಾಟುಗಳನ್ನು, ಗ್ರಂಥಭಂಡಾರಗಳನ್ನು, ಶಾಲೆಕಾಲೇಜುಗಳನ್ನು ಅಲಂಕರಿಸಿದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು ಧನ್ಯತಾಭಾವವನ್ನು ತಳೆಯುವಂತಾಯಿತು. ಆದರೆ ನಿಘಂಟುವಿನ ಉಪಯುಕ್ತತೆಯನ್ನು ತಡವಾಗಿ ಅರ್ಥಮಾಡಿಕೊಂಡವರು ಅಂದಿನಿಂದ ಇಂದಿನವರೆಗೆ ಸಾಹಿತ್ಯ ಪರಿಷತ್ತಿಗೆ ದೂರವಾಣಿ ಕರೆ ಮಾಡಿ, ಮಾರಾಟ ವಿಭಾಗದಲ್ಲಿ ವಿಚಾರಿಸಿ, ಪುಸ್ತಕ ಮಳಿಗೆಗಳಲ್ಲಿ ಹುಡುಕಾಡಿ ಸಿಗದೆ ನಿರಾಶರಾಗಿದ್ದಾರೆ. ಮರುಪ್ರಕಟಿಸುವಂತೆ ಒತ್ತಾಯ ಮಾಡಿದ್ದಾರೆ.

ಎಂಟು ಸಂಪುಟಗಳಲ್ಲಿ, ಒಂಬತ್ತು ಸಾವಿರಕ್ಕಿಂತಲೂ ಅಧಿಕ ಪುಟಗಳ ವಿಸ್ತಾರದಲ್ಲಿ ಹರಡಿಕೊಂಡಿರುವ, ಎಲ್ಲರ ಮನೆಯನ್ನೂ ಬೆಳಗಬೇಕಾಗಿರುವ ಈ ನಿಘಂಟನ್ನು ಮುದ್ರಿಸುವುದಾಗಲೀ, ಮುದ್ರಿತ ಪ್ರತಿಗಳನ್ನು ಒಂದೆಡೆ ಜೋಡಿಸಿಡುವುದಾಗಲೀ, ಮಾರಾಟದ ವ್ಯವಸ್ಥೆ ಮಾಡುವುದಾಗಲೀ, ಹೆಚ್ಚಿನ ಪ್ರಮಾಣದಲ್ಲಿ ಒಂದು

ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಾಗಲೀ ಅಷ್ಟೊಂದು ಸುಲಭವಾದ ಕೆಲಸವಲ್ಲ. ಈ ಅಸಾಧ್ಯವನ್ನು ಸಾಧ್ಯವಾಗಿಸುವ ಧೈರ್ಯೋತ್ಸಾಹಗಳು ಪರಿಷತ್ತಿನೊಡಲಲ್ಲಿ ಚಿಮ್ಮುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಕಾರಣವಾಯಿತೆಂದರೆ ಅದನ್ನು ಯಾರೂ ಅತಿಶಯೋಕ್ತಿಯೆಂದು ಭಾವಿಸಬೇಕಾಗಿಲ್ಲ. ಕರ್ನಾಟಕ ರಾಜ್ಯ ಸರ್ಕಾರ ಕನ್ನಡ ಸಾಹಿತ್ಯ ಪರಿಷತ್ತಿನ ಮಾತುಗಳನ್ನು ಪ್ರೀತಿಯಿಂದ ಆಲಿಸುತ್ತಿರುವುದು, ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡದ ಸಾರ್ವಭೌಮ ಪ್ರತಿನಿಧಿಯೆಂದೇ ಭಾವಿಸುತ್ತಿರುವುದು ಕನ್ನಡದ ಭಾಗ್ಯವೆಂದೇ ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಲವು ಒತ್ತಡಗಳ ನಡುವೆಯೂ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಅತ್ಯಂತ ಪ್ರೀತಿಯಿಂದ ಭಾಗವಹಿಸುತ್ತಿರುವುದು, ಸಮಾರಂಭಗಳಲ್ಲಿ ಕೊಟ್ಟ ಆಶ್ವಾಸನೆಗಳನ್ನು ಅತಿಶೀಘ್ರವಾಗಿ ಅನುಷ್ಠಾನಗೊಳಿಸುತ್ತಿರುವುದು, ಪರಿಷತ್ತಿನ ಎಲ್ಲಾ ಯೋಜನೆಗಳಿಗೂ ಹಸಿರು ನಿಶಾನೆ ತೋರುತ್ತಿರುವುದು, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಮುಖ್ಯಮಂತ್ರಿ – ಕನ್ನಡ ಸಂಸ್ಕೃತಿ ಮಂತ್ರಿಗಳ ಕಚೇರಿಯ ಹೊರಗೆ ಕಡತಗಳೊಂದಿಗೆ ಗಂಟೆಗಟ್ಟಲೆ ಕಾಯುತ್ತಿದ್ದುದನ್ನು ತಪ್ಪಿಸಿರುವುದು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಿಂದ ತಾಲ್ಲೂಕು ಸಮ್ಮೇಳನಗಳವರೆಗೆ ಎಲ್ಲವೂ ಅದ್ಧೂರಿಯಾಗಿ ನಡೆಯಲು ಬೇಕಾದಷ್ಟು ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡುತ್ತಿರುವುದು – ಇಂಥವನ್ನೆಲ್ಲಾ ಕಂಡಾಗ ಪರಿಷತ್ತಿನ ಅಧ್ಯಕ್ಷನಾಗಿ ನನಗೆ ಮನಸ್ಸು ತುಂಬಿ ಬರುತ್ತದೆ. ಆರುಕೋಟಿ ಕನ್ನಡಿಗರ ಪರವಾಗಿ ಅವರಿಗೆ ಕೃತಜ್ಞತಾ ಕುಸುಮಗಳನ್ನು ಅರ್ಪಿಸಬೇಕೆನ್ನಿಸುತ್ತದೆ. 'ಕನ್ನಡದ ಮುಖ್ಯಮಂತ್ರಿ' 'ಕನ್ನಡಿಗರ ಮುಖ್ಯಮಂತ್ರಿ' ಎಂದು ಅಭಿಮಾನದಿಂದ ನುಡಿಯಬೇಕೆನ್ನಿಸುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಕನ್ನಡದ ಮೇಲಿನ, ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗಿನ ಈ ಅಖಂಡ ಪ್ರೀತಿ ಹೀಗೇ ಮುಂದುವರಿಯಲೆಂದು ಆಶಿಸುತ್ತೇನೆ.

ಕರ್ನಾಟಕ ಸರ್ಕಾರ ನಿಘಂಟು ಯೋಜನೆಯ ಮಹತ್ವವನ್ನು ಮನಗಂಡು ಒಂದು ಕೋಟಿ ರೂಪಾಯಿಗಳನ್ನು ಸಾಹಿತ್ಯ ಪರಿಷತ್ತಿಗೆ ಉದಾರವಾಗಿ ನೀಡಿದೆ. ಸರ್ಕಾರ ಹಣ ನೀಡಿರುವುದು ಪರಿಷತ್ತಿಗಾದರೂ ಇದು ಜನತೆಯ ಹಣ ಮತ್ತು ಇದರ ಅಂತಿಮ ಫಲಾನುಭವಿಗಳೂ ಜನತೆಯೇ. ಈ ಎಚ್ಚರವನ್ನಿರಿಸಿಕೊಂಡೇ ಸಾಹಿತ್ಯ ಪರಿಷತ್ತು ಬಹುಬೇಡಿಕೆಯ ಬೃಹನ್ನಿಘಂಟಿನ ಎಂಟು ಸಂಪುಟಗಳನ್ನು ಪುನರ್ಮುದ್ರಣಗೊಳಿಸುತ್ತಿದೆ. ಸರ್ಕಾರದ ಉದಾರ ಆರ್ಥಿಕ ನೆರವಿನ ಪರಿಣಾಮವಾಗಿ ನಿಘಂಟಿನ ಬೆಲೆಯನ್ನು ಸಾಮಾನ್ಯರೂ ಕೊಳ್ಳಲು ಮನಸ್ಸು ಮಾಡುವಂತೆ ಕಡಿಮೆಗೊಳಿಸಲಾಗಿದೆ. ಭಾಷೆ ಮತ್ತು ಸಾಹಿತ್ಯಾಭಿಮಾನದ ಸಂಕೇತವೆಂಬಂತೆ ಈ ಯೋಜನೆಯ ಯಶಸ್ಸಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವ ರಾಜ್ಯ ಸರ್ಕಾರವನ್ನು ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಮತ್ತು ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರುಗಳನ್ನು ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ. ನಿಘಂಟು ಯೋಜನೆ ಪ್ರಾರಂಭವಾದಾಗ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರಿಂದ ಮೊದಲಗೊಂಡು ಮುಕ್ತಾಯವಾದಾಗ ಅಧ್ಯಕ್ಷರಾಗಿದ್ದ ಡಾ. ಸಾ.ಶಿ. ಮರುಳಯ್ಯನವರವರೆಗೆ ಇದನ್ನು ಆಸಕ್ತಿಯಿಂದ ಮುನ್ನಡೆಸಿಕೊಂಡು ಬಂದ ಎಲ್ಲ ಅಧ್ಯಕ್ಷರುಗಳಿಗೂ ನಿಘಂಟು ಸಮಿತಿಯ ಅಧ್ಯಕ್ಷರು, ಸದಸ್ಯರುಗಳು, ಸಂಪಾದಕರು, ಸಿಬ್ಬಂದಿ ವರ್ಗದವರಿಗೂ ಅಂದವಾಗಿ ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ನವರಿಗೂ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ಕನ್ನಡ ಸಾಹಿತ್ಯ ಪರಿಷತ್ತು ತುಂಬಾ ಆಭಾರಿಯಾಗಿದೆ. ಮರುಮುದ್ರಣದ ಈ ನಿಘಂಟಿನ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿ ವಿಶ್ವಾಸಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಬೆಂಗಳೂರು
೫–೬–೨೦೧೦

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು

ಅರಿಕೆ

ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿರುವ ಕನ್ನಡ ನಿಘಂಟು ಕಾರ್ಯ, ಕರ್ನಾಟಕ ಸರ್ಕಾರದ ಒಂದು ವಿಶೇಷ ಸಾರಸ್ವತ ಯೋಜನೆಯಾಗಿದೆ. ಭಾರತೀಯ ಭಾಷೆಗಳಲ್ಲಿಯೇ ವಿಶಿಷ್ಟವಾಗಿ ರಚನೆಯಾಗುತ್ತಿರುವ ಈ ನಿಘಂಟು ಹಲವು ಭಾಷೆಗಳ ನಿಘಂಟುಗಳಿಗೆ ಮಾದರಿಯೆಂಬಂತಿದೆ. ಭಾಷಾಶಾಸ್ತ್ರ ನಿಯಮಗಳಿಗೆ ಅನುಸಾರವಾಗಿ, ಚಾರಿತ್ರಿಕ ವಿವರಣೆಗಳಿಂದ ಕೂಡಿ ಸಿದ್ಧವಾಗಿರುವ ಈ ನಿಘಂಟು ಪ್ರಮಾಣಭೂತವೂ ಸಮಗ್ರವೂ ಆಗಿದೆ.

ಕನ್ನಡ ನಿಘಂಟು ಯೋಜನೆ ಪ್ರಾರಂಭವಾದಾಗ ಅದು ಇಷ್ಟು ವ್ಯಾಪಕವಾಗಿ ಬೆಳೆಯುವುದೆಂಬ ಕಲ್ಪನೆ ಯಾರಿಗೂ ಇರಲಿಲ್ಲ. ಪ್ರಾರಂಭದಲ್ಲಿ, ಸರ್ಕಾರದ ಒಂದು ಲಕ್ಷ ರೂಪಾಯಿಗಳ ಅನುದಾನದ ಮೂಲಕ ೧೯೫೪ನೆಯ ಇಸವಿ ಅಕ್ಟೋಬರ್ ತಿಂಗಳು ೧೮ನೆಯ ತಾರೀಖು ಈ ಕಾರ್ಯ ಪ್ರಾರಂಭವಾಯಿತು. ಆಗ ನಿಘಂಟನ್ನು ಒಂದೇ ಸಂಪುಟದಲ್ಲಿ ಮುಗಿಸುವ ಯೋಚನೆಯಿತ್ತು. ೧೯೫೮ರ ಹೊತ್ತಿಗೆ ಕನ್ನಡ ನಿಘಂಟಿನ ರೂಪರೇಖೆಗಳು ಸ್ವಲ್ಪಮಟ್ಟಿಗೆ ವಿಸ್ತೃತಗೊಂಡವು. ಆಗ ಈ ಯೋಜನೆಗೆ ಒಂದುಲಕ್ಷ ರೂಪಾಯಿ ಸಾಲದು ಎನ್ನಿಸಿತು. ಏಕೆಂದರೆ ನಿಘಂಟನ್ನು ಒಂದೇ ಸಂಪುಟದಲ್ಲಿ ಮುಗಿಸಲು ಸಾಧ್ಯವಾಗುವುದಿಲ್ಲವೆನ್ನುವುದು ಮನವರಿಕೆಯಾಯಿತು. ಇದಕ್ಕಾಗಿ ಸರ್ಕಾರವು ನೇಮಿಸಿದ ಬಿ. ಎಂ. ಕೃಷ್ಣನ್ ಸಮಿತಿ ಸಂಬಂಧಪಟ್ಟವರೊಡನೆ ಸಮಾಲೋಚನೆ ನಡೆಸಿ ಒಂದು ವರದಿಯನ್ನು ನೀಡಿತು. ಅದರಲ್ಲಿ ನಿಘಂಟನ್ನು ಐದುಸಾವಿರ ಪುಟಗಳ ನಾಲ್ಕುಸಂಪುಟಗಳಲ್ಲಿ ೧೯೬೬ರ ವೇಳೆಗೆ ಹೊರತರಬೇಕೆಂದು ಸೂಚಿಸಲಾಯಿತು. ಈ ಹದಿನೈದುಲಕ್ಷ ರೂಪಾಯಿಗಳ ಯೋಜನೆಯನ್ನು ಸರ್ಕಾರವು ೧೯೬೧ನೆಯ ಮೇ ತಿಂಗಳು ೨೯ರಂದು ಅಂಗೀಕರಿಸಿತು.

ಮೊದಲಿಗೆ ನಿಘಂಟು ರಚನೆಗೆ ಅಗತ್ಯವಾದ ಶಬ್ದಸಂಗ್ರಹ ಕಾರ್ಯ ತ್ವರಿತವಾಗಿ ನಡೆಯಿತು. ನಿಘಂಟುಕಾರ್ಯಕ್ಕೆ ಸಮರ್ಥವಾದ ಸಿಬ್ಬಂದಿ ದೊರೆಯದೆ ನಿಘಂಟು ರಚನೆ ವಿಳಂಬವಾಯಿತು. ನಿಘಂಟಿನ ಕರಡುಪ್ರತಿಯ ಸಿದ್ಧತೆ, ವರಿಷ್ಕರಣ, ಸಂಪಾದಕ ಸಮಿತಿಯಲ್ಲಿ ಅದರ ವಿವರವಾದ ಚರ್ಚೆ, ಅನುಮೋದನೆ, ಮುದ್ರಣಪ್ರತಿಯ ಸಿದ್ಧತೆ– ಈ ವಿವಿಧ ಹಂತಗಳು ಸಾಕಷ್ಟು ಸಮಯವನ್ನು ತೆಗೆದುಕೊಂಡುವು. ಇಂತಹ ವಿದ್ವತ್‌ಕಾರ್ಯ ತ್ವರಿತವಾಗಿ ಮುಗಿಯುವ ಸ್ವರೂಪದ್ದಲ್ಲವೆಂಬುದೂ ಆಗ ಅನುಭವಕ್ಕೆ ಬಂದಿತು.

ನಿಘಂಟಿನಲ್ಲಿ ಬಳಸಿರುವ ಹಲವು ಬಗೆಯ ಅಕ್ಷರಗಳು, ಚಿಹ್ನೆಗಳು ಮತ್ತು ಅದರ ವಿಶಿಷ್ಟ ವಿನ್ಯಾಸ ಮೊದಲಾದುವು ಗಳಿಂದಾಗಿ ಮುದ್ರಣಕಾರ್ಯವನ್ನು ಶೀಘ್ರವಾಗಿ ಮುಗಿಸಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ನಿಘಂಟಿನ ನಾಲ್ಕು ಸಂಪುಟಗಳು ಕ್ರಮವಾಗಿ ೧೯೭೦, ೧೯೭೨, ೧೯೭೨ ಮತ್ತು ೧೯೭೯ರಲ್ಲಿ ಪ್ರಕಟವಾದುವು.

ಹಿಂದೆ ಯೋಚಿಸಿದ್ದಂತೆ ಕನ್ನಡ ನಿಘಂಟು ಐದುಸಾವಿರ ಪುಟಗಳ ನಾಲ್ಕುಸಂಪುಟಗಳಲ್ಲಿ ಮುಗಿಯುವುದಿಲ್ಲ ವೆಂಬುದು ಮನವರಿಕೆಯಾಯಿತು. ಇದಕ್ಕೆ ಕಾರಣಗಳೇನೆಂದರೆ : ಅಪ್ರಕಟಿತ ಹಸ್ತಪ್ರತಿಗಳಿಂದ, ಅಧಿಕಸಂಖ್ಯೆಯ ಶಾಸನ ಗಳಿಂದ ಶಬ್ದಗಳನ್ನು ಸಂಗ್ರಹಿಸಲಾಗಿತ್ತು ; ಪ್ರಾದೇಶಿಕ ಭಾಷೆಯ ವಿಶಿಷ್ಟಪದಗಳ ಸೇರ್ಪಡೆಗೂ ಅವಕಾಶ ನೀಡಲಾಗಿತ್ತು. ಇದರಿಂದಾಗಿ ಶಬ್ದಸಂಗ್ರಹ ಹೆಚ್ಚಿತು ; ನಿಘಂಟಿನ ವ್ಯಾಪ್ತಿ ಬೆಳೆಯಿತು. ನಾಲ್ಕುಸಂಪುಟಗಳ ಯೋಜನೆ ಎಂಟುಸಂಪುಟಗಳ ಯೋಜನೆಯಾಗಬೇಕಾದುದು ಅನಿವಾರ್ಯವಾಯಿತು. ಈ ಎಲ್ಲ ಅಂಶಗಳನ್ನೂ ಸರ್ಕಾರದ ಗಮನಕ್ಕೆ ತಂದು ಹೆಚ್ಚಿನ ಧನಸಹಾಯಕ್ಕೆ ಮನವಿಯನ್ನು ಸಲ್ಲಿಸಲಾಯಿತು. ಕರ್ನಾಟಕ ಸರ್ಕಾರ ಈ ಯೋಜನೆಯ ಮಹತ್ತ್ವವನ್ನು ಮನಗಂಡು ಹೆಚ್ಚಿನ ಅನುದಾನಕ್ಕೆ ಒಪ್ಪಿಗೆಯನ್ನೂ ನೀಡಿತು. ಸರ್ಕಾರ ಮತ್ತೆ ಕೊಟ್ಟ ಅವಧಿ ಮತ್ತು ಅನುದಾನ ಸಾಲದೆಹೋದಾಗ, ಅದು ಮರುಪರಿಶೀಲನೆ ಮಾಡಿ ಅಗತ್ಯವಾದ ಕಾಲಾವಕಾಶವನ್ನೂ ಧನಸಹಾಯವನ್ನೂ ಒದಗಿಸಿ ಈ ಯೋಜನೆ ಮುಂದುವರಿಯಲು ಅವಕಾಶಮಾಡಿಕೊಟ್ಟಿತು.

ಐದನೆಯ ಸಂಪುಟ ಮುದ್ರಣಕ್ಕೆ ಸಿದ್ಧವಾಗಿದ್ದರೂ ಅನಿವಾರ್ಯ ಕಾರಣಗಳಿಂದ ಅದನ್ನು ಅಚ್ಚುಮಾಡಲು ಎಂಟು ವರ್ಷಗಳು ಕಾಯಬೇಕಾಯಿತು. ಅದು ೧೯೮೭ರಲ್ಲಿ ಹೊರಬಂದಿತು. ಅನಂತರ ಆರನೆಯ ಸಂಪುಟವು ೧೯೯೦ರಲ್ಲಿ, ಮೈಸೂರಿನಲ್ಲಿ ಜರುಗಿದ ೭೦ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಬಿಡುಗಡೆಯಾಯಿತು.

ಈಗ ನಿಘಂಟಿನ ಉಳಿದ ಭಾಗಗಳ ಹಸ್ತಪ್ರತಿಯ ಸಿದ್ಧತೆ ಮುಗಿದಿದೆ. ಅದರ ಬಹುಭಾಗವನ್ನು ಸಂಪಾದಕ ಸಮಿತಿ ಪರಿಶೀಲಿಸಿದೆ. ಈ ಏಳನೆಯ ಸಂಪುಟದಲ್ಲಿ 'ಬಲ್ಲ' ಶಬ್ದದಿಂದ ಲಕಾರದ ಎಲ್ಲ ಶಬ್ದಗಳೂ ಸೇರ್ಪಡೆಯಾಗಿವೆ. ಇನ್ನುಳಿದ ಅಕ್ಷರಗಳ ಶಬ್ದಗಳು ಕೊನೆಯದಾದ ಎಂಟನೆಯ ಸಂಪುಟದಲ್ಲಿ ಸೇರ್ಪಡೆಯಾಗಲಿವೆ. ಸರ್ಕಾರಿ

ಮುದ್ರಣಾಲಯದವರು ನಿಘಂಟು ಮುದ್ರಣಕ್ಕಾಗಿ ವಿಶೇಷ ಏರ್ಪಾಡುಗಳನ್ನು ಮಾಡಿ ಕೆಲವು ತಿಂಗಳುಗಳಲ್ಲಿಯೇ ಈ ಕಾರ್ಯವನ್ನು ಮುಗಿಸಿಕೊಟ್ಟಿದ್ದಾರೆ. ಇದಕ್ಕೆ ನೆರವಾದ ಸರ್ಕಾರಿ ಮುದ್ರಣಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಇ. ಕೃಷ್ಣನಾರಾಯಣ ಮತ್ತು ಈಗಿನ ನಿರ್ದೇಶಕರಾದ ಶ್ರೀ ಡಿ. ಎಸ್. ಅಶ್ವತ್ಥ್ ಅವರಿಗೆ ಮತ್ತು ಅವರ ಸಹಾಯಕ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನಮ್ಮ ಧನ್ಯವಾದಗಳು.

ಕನ್ನಡ ನಿಘಂಟಿನ ಸಂಪಾದಕ ಸಮಿತಿಯಲ್ಲಿ ನಾಡಿನ ಪ್ರಸಿದ್ಧ ವಿದ್ವಾಂಸರು ಇದ್ದುಕೊಂಡು ತಮ್ಮ ಜ್ಞಾನಾನುಭವಗಳ ಬೆಳಕು ಚೆಲ್ಲಿ ಈ ಕೋಶ ಶಾಸ್ತ್ರೀಯವಾಗಿ ರೂಪುಗೊಳ್ಳಲು ಕಾರಣರಾಗಿದ್ದಾರೆ. ಕಾಲಕಾಲಕ್ಕೆ ಅವರ ಸಲಹೆ ಸಹಕಾರಗಳು ಈ ಸಂಪುಟವ ಸಿದ್ಧತೆಯಲ್ಲಿಯೂ ದೊರೆತಿವೆ. ಇವರೆಲ್ಲರಿಗೂ ಗೌರವಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇವೆ.

ಏಳನೆಯ ಸಂಪುಟದ ಸಿದ್ಧತೆಯಲ್ಲಿ ೧೯೯೨ರ ಫೆಬ್ರುವರಿ ತಿಂಗಳವರೆಗೆ ಅಧ್ಯಕ್ಷರು ಹಾಗೂ ಪ್ರಧಾನ ಸಂಪಾದಕರಾಗಿ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಸಲ್ಲಿಸಿರುವ ಸೇವೆಯನ್ನು ನಾವು ವಿಶ್ವಾಸದಿಂದ ನೆನೆಯುತ್ತೇವೆ.

ಕನ್ನಡ ನಿಘಂಟು ಸಿಬ್ಬಂದಿವರ್ಗ ನಿಘಂಟು ರಚನೆಯಲ್ಲಿ ನುರಿತವರಾಗಿದ್ದಾರೆ. ನಿಘಂಟು ಬರವಣಿಗೆ, ಪರಿಷ್ಕರಣ, ಕರಡುಪರಿಶೀಲನೆ ಮೊದಲಾದ ಎಲ್ಲ ಪಂತಗಳಲ್ಲೂ ಸಮರ್ಪಣಬುದ್ಧಿಯಿಂದ ದುಡಿದಿದ್ದಾರೆ. ಅವರ ಸಹಕಾರವನ್ನಿಲ್ಲಿ ಸ್ಮರಿಸುತ್ತೇವೆ.

ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೊ. ರು. ಚನ್ನಬಸಪ್ಪ, ಗೌರವ ಕಾರ್ಯದರ್ಶಿಗಳಾದ ಪ್ರೊ. ಎಸ್. ಶ್ರೀನಿವಾಸನ್ ಹಾಗೂ ಶ್ರೀ ಜಿ. ಚನ್ನವೀರಸ್ವಾಮಿ, ಗೌರವ ಕೋಶಾಧಿಕಾರಿಗಳಾದ ಪ್ರೊ॥ ಹೆಚ್. ಆರ್. ದಾಸೇಗೌಡ ಇವರೆಲ್ಲರೂ ಈ ಸಂಪುಟ ಹೊರಬರಲು ಒತ್ತಾಸೆ ನೀಡಿದ್ದಾರೆ. ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಕೊನೆಯದಾದ ಎಂಟನೆಯ ಸಂಪುಟವನ್ನೂ ಸಹ ಇಷ್ಟರಲ್ಲಿಯೇ ಪೂರಯಿಸುವ ಭರವಸೆ ನೀಡುತ್ತ, ಈ ಸಂಪುಟವನು ಕನ್ನಡ ಜನತೆಯ ಕೈಯಲ್ಲಿಡುತ್ತಿದ್ದೇವೆ. ಪ್ರಾಜ್ಞರು ಈ ಏಳುಸಂಪುಟಗಳನ್ನೂ ಪರಿಶೀಲಿಸಿ ನಿಘಂಟಿನ ಉತ್ಕರ್ಷಣೆಗೆ ನೀಡುವ ಎಲ್ಲ ಸಲಹೆ ಸೂಚನೆಗಳನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ.

ಡಾ॥ ಜೆ. ಎಸ್. ಗಾಯಿ
ಅಧ್ಯಕ್ಷರು

ಎನ್. ಬಸವಾರಾಧ್ಯ
ಪ್ರಧಾನ ಸಂಪಾದಕರು

ಪರಿಷತ್ತಿನ ಅಧ್ಯಕ್ಷರ ಕೃತಜ್ಞತೆ

ಕೆನ್ನಡ-ಕನ್ನಡ ಬೃಹನ್ನಿಘಂಟು ಪ್ರಕಟಣೆ, ಕನ್ನಡ ಸಾಹಿತ್ಯ ಪರಿಷತ್ತಿನ ಹೆಮ್ಮೆಯ ಸಾಧನೆಗಳಲ್ಲೊಂದು. ಕನ್ನಡಕ್ಕೆ ಒಂದು ಆಧಾರಭೂತವಾದ ಸಪ್ರಮಾಣವಾದ ಸಮಗ್ರ ನಿಘಂಟು ಅಗತ್ಯವೆಂಬ ಬಹುಜನ ಆಸಕ್ತರ ಅಭಿಲಾಷೆಯೊಂದಿಗೆ ಪ್ರಾರಂಭವಾದ ನಿಘಂಟು ಯೋಜನೆ ಮೊದಲು ಐದು ಸಂಪುಟಗಳಿಗೆ ಮುಗಿಯುವುದೆಂದು ಭಾವಿಸಲಾಗಿತ್ತು. ಕನ್ನಡದ ಅಗಾಧವಾದ ಶಬ್ದರಾಶಿ, ಅವುಗಳಿಗಿರುವ ಅರ್ಥವ್ಯಾಪ್ತಿ, ವಿಸ್ತಾರವಾಗಿರುವಂತೆ ನಾಲ್ಕು ಸಂಪುಟಗಳ ನಿಘಂಟು ಎಂಟು ಸಂಪುಟಗಳಿಗೆ ಹರಡಿದೆ. ಇದರ ಏಳನೆಯ ಸಂಪುಟವನ್ನು ಇದೀಗ ಕನ್ನಡಿಗರ ಕೈದುಲ್ಲಿರಿಸಲು ಹರ್ಷಿಸುತ್ತೇನೆ. ಕೊನೆಯ ಹಾಗೂ ಎಂಟನೆಯ ಸಂಪುಟವನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ವ್ಯವಸ್ಥೆ ಮಾಡಲಾಗಿದೆ. ನಿಘಂಟುವಿನ ಕೆಲಸ ಅವಸರದ ಕೆಲಸವಲ್ಲ. ಒಂದು ಪದಕ್ಕೆ ಸಮರ್ಪಕವಾದ ಅರ್ಥವನ್ನು ಖಚಿತಗೊಳಿಸುವ ಮೊದಲು ಅದನ್ನು ಹಲವಾರು ರೀತಿಯ ನಿಕಪಕ್ಕೊಡ್ಡಿ ಅಂತಿಮವಾಗಿ ಅಂಗೀಕರಿಸಲಾಗುತ್ತದೆ. ಈ ಕಾರ್ಯದಲ್ಲಿ ಕನ್ನಡದ ಘನವಿದ್ವಾಂಸರಿಂದ ಕೂಡಿರುವ ಸಂಪಾದಕ ಮಂಡಳಿ ಸ್ತುತ್ಯಾರ್ಹವಾದ ಕೆಲಸ ಮಾಡುತ್ತಿದೆ.

ಈಗ ನಿರ್ಧಾರವಾಗಿರುವಂತೆ ಎಂಟನೆಯ ಸಂಪುಟದ ಪ್ರಕಟಣೆಯೊಂದಿಗೆ ಈ ನಿಘಂಟು ಯೋಜನೆಯು ಕಾರ್ಯ ಮುಗಿದಂತಲ್ಲ. ಇದು ವಾಸ್ತವವಾಗಿ ಮೊದಲ ಹಂತ. ಮುಂದಿನ ಹಂತ ಈ ಎಲ್ಲ ಸಂಪುಟಗಳ ಪುಷ್ಕರಣ. ನಿಘಂಟು ರಚನೆಯಲ್ಲಿ ಸಾಕಷ್ಟು ಎಚ್ಚರವಹಿಸಿರುವುದು, ಶ್ರಮಪಟ್ಟು ವ್ಯಾಪಕ ಶಬ್ದಸಂಗ್ರಹ ಮಾಡಿರುವುದು ಇದುವರೆಗಿನ ಸಂಪುಟಗಳನ್ನು ಅವಲೋಕಿಸಿದಾಗ ಯಾರಿಗಾದರೂ ಅರ್ಥವಾಗುತ್ತದೆ. ಆದರೆ ಒಂದು ಜೀವಂತಭಾಷೆಗೆ ಕಾಲಗತಿಯಲ್ಲಿ ಹೊಸ ಹೊಸ ಶಬ್ದಗಳು, ಹೊಸ ಹೊಸ ಪ್ರಯೋಗಗಳು ಸೇರಿಕೊಳ್ಳುತ್ತಲೇ ಇರುತ್ತವೆ. ಆಂದಾಗ ಆಚ್ಚಾಗಿರುವ ಸಂಪುಟಗಳಲ್ಲಿ ಅಂತಹ ಎಷ್ಟೋ ಹೊಸ ಶಬ್ದಗಳು, ಬಳಕೆಗಳು ಕೈಬಿಟ್ಟುಹೋಗಿರುವ ಸಾಧ್ಯತ ಇಲ್ಲದಿಲ್ಲ.

ಇಂತಹ ನಿಘಂಟುಗಳ ಕಾರ್ಯ ಇಲ್ಲಿಗೇ ಕೊನೆ ಎನ್ನುವಂತಿಲ್ಲ. ಅವು ಪುನಃ ಪುನಃ ಪರಿಷ್ಕರಣಕ್ಕೆ ಒಳಗಾಗುತ್ತಲೇ ಇರಬೇಕಾಗುತ್ತದೆ. ಭಾಷೆಯ ಬಳಕೆಯೊಡನೆ ನಿಘಂಟಿನ ಸಂಬಂಧ ಬೆಳೆದುಕೊಂಡೇ ಬರುತ್ತದೆ. ಇದನ್ನು ಗಮನದಲ್ಲಿಟ್ಟು ಕೊಂಡು ಈಗಾಗಲೇ ಪೂರ್ಣಗೊಂಡಿರುವ ಏಳು ಸಂಪುಟಗಳ ಪರಿಷ್ಕರಣಕಾರ್ಯವನ್ನು ಕೈಗೆತ್ತಿಕೊಳ್ಳಲು ನೆರವಾಗಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. ಎಂಟನೆಯ ಸಂಪುಟ ಇನ್ನೊಂದು ವರ್ಷದೊಳಗೆ ಮುಗಿಯಲಿದ್ದು ಅದರ ಪರಿಷ್ಕರಣಕಾರ್ಯವೂ ನಡೆಯಬೇಕಾಗುತ್ತದೆ. ರಾಜ್ಯಸರ್ಕಾರ ಈ ಕಾರ್ಯಕ್ಕೆ ಸಕಾಲದಲ್ಲಿ ನೆರವಾಗುವುದೆಂದು ನಂಬಿದ್ದೇನೆ.

ಕನ್ನಡ-ಕನ್ನಡ ನಿಘಂಟು ಕಾರ್ಯ ಪರಿಪೂರ್ಣವಾಗಿ ಸರ್ಕಾರದ ಯೋಜನೆ. ಕನ್ನಡ ಸಾಹಿತ್ಯ ಪರಿಷತ್ತು ಅದನ್ನು ನಿರ್ವಹಿಸುತ್ತಿದೆ. ಈ ಯೋಜನೆಯನ್ನು ಪೂರ್ಣಗೊಳಿಸುವ ಸಲುವಾಗಿ ನಿಗದಿಪಡಿಸಲಾಗಿರುವ ಕಾಲಾವಧಿಯನ್ನು ವಿಸ್ತರಿಸಲು ಹಾಗೂ ಅಗತ್ಯವಾದ ಅನುದಾನವನ್ನು ಮಂಜೂರು ಮಾಡಲು ಕರ್ನಾಟಕ ಸರ್ಕಾರ ತುಂಬ ಸಹಕಾರ ನೀಡುತ್ತಿದೆ. ಇದಕ್ಕಾಗಿ ಸಂಬಂಧಿಸಿದವರಿಗೆಲ್ಲ ಕನ್ನಡ ಸಾಹಿತ್ಯ ಪರಿಷತ್ತು ಚಿರಋಣಿ.

ಕನ್ನಡ ನಿಘಂಟಿನ ಮುದ್ರಣಕಾರ್ಯ ಸುಲಭದ್ದೇನೂ ಅಲ್ಲ. ಇಂಥ ಕ್ಲಿಷ್ಟವಾದ ಕೆಲಸವನ್ನು ಅತ್ಯಂತ ಸಮರ್ಥವಾಗಿ ಅಚ್ಚುಕಟ್ಟಾಗಿ ಮಾಡಿಕೊಟ್ಟಿದ್ದಾರೆ ಸರ್ಕಾರಿ ಮುದ್ರಣಾಲಯದವರು. ಹಿಂದಿನ ನಿರ್ದೇಶಕರಾದ ಶ್ರೀ ಇ. ಕೃಷ್ಣನಾರಾಯಣ ಮತ್ತು ಈಗಿನ ನಿರ್ದೇಶಕರಾದ ಶ್ರೀ ಡಿ. ಎಸ್. ಅಶ್ವಥ್ ಅವರಿಗೂ, ಇತರ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೂ ಧನ್ಯವಾದಗಳು.

ಪ್ರಸ್ತುತ ಏಳನೆಯ ಸಂಪುಟದ ಸಿದ್ಧತೆಯ ಕಾರ್ಯದಲ್ಲಿ ನಿಘಂಟಿನ ಹಿಂದಿನ ಪ್ರಧಾನ ಸಂಪಾದಕರೂ, ಅಧ್ಯಕ್ಷರೂ ಆದ ಪ್ರೊ॥ ಜಿ. ವೆಂಕಟಸುಬ್ಬಯ್ಯ ಅವರ ಸೇವೆಯನ್ನು ಮತ್ತು, ಈಗಿನ ಪ್ರಧಾನ ಸಂಪಾದಕರಾಗಿರುವ ಶ್ರೀ ಎನ್. ಬಸವಾರಾಧ್ಯ ಅವರ ಶ್ರಮವನ್ನು, ನಿಘಂಟು ಸಂಪಾದಕ ಮಂಡಳಿಯ ಅಧ್ಯಕ್ಷರಾಗಿರುವ ಡಾ॥ ಜಿ. ಎಸ್. ಗಾಯಿ ಅವರ ಸೇವೆಯನ್ನು ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ. ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೂ, ನಿಘಂಟು ಸಿಬ್ಬಂದಿ ವರ್ಗಕ್ಕೂ ಪರಿಷತ್ತು ಆಭಾರಿಯಾಗಿದೆ. ಅಷ್ಟೇ ಅಲ್ಲದೆ ಪರಿಷತ್ತಿನ ಹಿಂದಿನ ಅಧ್ಯಕ್ಷರಾದ ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯನವರಿಗೂ, ಪದಾಧಿಕಾರಿಗಳಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಅನಂತ ವಂದನೆಗಳು.

ದಿನಾಂಕ : ೧-೧೧-೧೯೯೩

ಬೆಂಗಳೂರು – ೫೬೦ ೦೦೯

ಗೊ. ರು. ಚನ್ನಬಸಪ್ಪ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಬಿಲ್ಲ₂, ಬಿಲ್ಲವ₂ (ನಾ). ಬೇಡ; ಕಿರಾತ; ವ್ಯಾಧ: "ಬಿಲ್ಲನೆಂಬ ನಾಮಂ ವ್ಯಾಧನಲ್ಲೆ" (ಕ್ಷತ್ರ. ೪೮): ಮಯ್ನವಿರ್ ಪಱಿಗುಮೆಂದು ಮಿಡುಕಲೊಲ್ಲದಲ್ಲಿಯೆ ನಂದು ಬಿಲ್ಲರ್ಗ್ ತಮ್ಮಿಂ ಕಾಮೆ ಪಡುಮಿಗಂಗುಡುವ ಚಮರೀ ಮೃಗಂಗಳಂ (ಹಂಪ್ರಕೃ. ೪-೮೩ ಪ). ಬಿಲ್ಲವ್ವ₂: ಕೊಡಚಲ್ಲಣ ತೊಟ್ಟ ಜೋಡು ಬಿಡದ ಮೆಱಿಯೆ ಬಿಲ್ಲವರು ಕಡೆತಂದರು (ಶಾಂಶಾಂ. ೦೦-೩೩) ; ಹುದುಗಿರ್ದ ಹೊದೆಯಿಂದೆ ಕಾರೊಡಲ ಬಿಲ್ಲವನುರದೆ ಚಿಮ್ಮಿ ತುಡುಕಿದನದಂ ಮಾಂಸದೊಲವಿಂದೆ (ಕ್ರಿಣಾಪ. ೨-೨೩). [< ಸಂ. ಭಿಲ್ಲ]

ಬಿಲ್ಲ₃ (ನಾ). ಒಂದು ಬಗೆಯ ಸಸ್ಯ: ಬಳಪಾಧ್ರಿ. ಹುದ್ದೆ. ಬಿಲ್ಲ. ಹುಳ್ಳಲವೆ. ಹುಲವ (ಪ್ರಸಿಂ. ೬೨-೦೪೭೩). [?./ಸಂ. ಬಿಲ್ಲ=ಅಂಗಗು]

ಬಿಲ್ಲಣೆ (ನಾ). ಬಿಲ್ಲಾಳುಗಳ ಸೈನ್ಯ; ಬಿಲ್ಲಾರರ ಸೇನೆ: ಬಿಲ್ಲಣೆ ಬಿಲ್ಲನೆಯೊಳೆಯ್ದಿ ತೇರ್ ತೇರೊಳ್ ತಳ್ತಿಲ್ಲದೆ ಕಾಗಿದುದು (ಕರ್ಣಪ. ೯-೩೩) ; ರಣಗಬ್ಬಲಿ ಕೈವಿಗೆ ಬಿಲ್ಲಣೆ ಕಡುಕೆಯ್ದುಭಯಬಲದೊಳಂಬಿಕ್ಕುವುದುಂ (ಕಂಗಪ. ೦೬-೪೯); ಕಡುಮುಳಿಸಿಂ ಬಿಲ್ಲಣೆ ತಳ್ತಿಱಿಯುತ್ತಿರ್ದುದು (ಕ್ಷತ್ರಾ. ೨೭೦). [ಬಿಲ್ಲ₂ + ಅಣೆ₂]

ಬಿಲ್ಲಪಕ್ಕಣ (ನಾ). ಬೇಡರು ವಾಸಿಸುವ ಹಳ್ಳಿ: ಗೊಲ್ಲಪ್ಪಗಳೊಳಗುಹಾಂತರ ಬಿಲ್ಲಪಕ್ಕಣದೊಳು . . . ಬಂಬತ್ತಿದನು ಬಿಡದಾ ಕನಕಮಯ ಮೃಗವ (ತೊಡಗ. ೬-೬-೩೮). [ಬಿಲ್ಲ₂ + ಪಕ್ಕಣ]

ಬಿಲ್ಲಪಳ್ಳಿ (ನಾ). = ಬಿಲ್ಲಪಕ್ಕಣ: ಅಱಿದಿನಿಸಂ ಬೆಚ್ಚದೆ ತಾಬ್ಲೆಱಿಗೊಂಡಿರಲೆಂದು ಬಿಲ್ಲಪಳ್ಳಿಗಳೆಲ್ಲಂ ತೊಱೆದುವು ತೊಱೆದಡಿಗಳಂ (ಪಡಿ. ೯-೦೦). [ಬಿಲ್ಲ₂ + ಪಳ್ಳಿ₁]

ಬಿಲ್ಲವ್ವ 'ಬಿಲ್ಲ₂' ಪರಾ.

ಬಿಲ್ಲವ್ವ₂ 'ಬಿಲ್ಲ₂' ನೋ.

ಬಿಲ್ಲವಕ್ಕೆ 'ಬಿಲ್ಲವಕ್ಕ' ನೋ.

ಬಿಲ್ಲವೆಲ್ಗಂಡ ? (ನಾ). ಒಂದು ಪ್ರಾಂತದ ಹೆಸರು (?): ಅತನಿಂ ಕಿಱಿಯಂ ವೂವತ್ತಿಚ್ಚಾಸಿರದ ಬಿಲ್ಲವೆಲ್ಗಂಡಾಸಿಮಯಿನ್ದ ಕಿಱಿಯ ಪೊನ್ನಯ್ಯ ಬಿಲ್ಲಹನ ಬೆಸದಾಳು ಗಜಾಂಕುಶಕೋವನ ಮೇಗೆ ದಣ್ಣಾಪೋಗಲು (ಕೌಶಾ. IX – I. ೫೫-೬ ; ೪೮). [?]

ಬಿಲ್ಲಹದಿಕೆ (ನಾ). ಒಂದು ಬಗೆಯ ತೆರಿಗೆ: ವಂದಕಾರುಂಕ ಕಬ್ಬುನದ ಸುಂಕ ಬಿಲ್ಲಹದಿಕೆ ಬಾಲಪಣ (ಶಿ. XVI. ೫೯ಶಾ. ೬೦-೫೯ ; ೧೩೦). ' ಬಿಲುವಡಿಕೆ ' ಪರಾ. [? + ಪದಿಕೆ₁ (< ಪೊದಕೆ₂)]

ಬಿಲ್ಲಹಾವು (ನಾ). ಮರದಲ್ಲಿ ವಾಸಿಸುವ. ಉದ್ದವಾದ ವಿಷಪೂರಿತ ಹಸುರುಹಾವು: (ಕೃ). [ಬಿಲ್ಲ₂ + ಹಾವ (<ಪಾವ್ಪು₁)]

ಬಿಲ್ಲಾಯ್ತ (ನಾ). = ಬಿಲ್ಲಾರ: ಅವನೆ ಬಿಲ್ಲಾಯ್ತರಲಿ ಗಡ ಕನಾಕ ! (ಹಕ್ಕ. ೩-೨೬). [ಬಿಲ್ಲ₂ + – ಆಯ್ತ]

ಬಿಲ್ಲಾಳ್, ಬಿಲ್ಲಾಳು (ನಾ). ಬಿಲ್ಲುಗಾರ; ಬಿಲ್ವಿದ್ಯೆಯನ್ನು ಬಲ್ಲ ವೀರ: "ಬಿಲ್ಲಂಟನೆಂದು ಬಿಲ್ಲಾಳೆನ್ನಲ್ ವೀರರ್ಗ್ ನಾಡುಮಕ್ಕುಂ" (ಕರ್ಣ. ೦೩೬) ; ದೊಱೆಯಿಲ್ಲದ ಬಿಲ್ಲಾಳ್ . . . ಎಱೆಯಿಲ್ಲದ ಜಕ್ಕವಕ್ಕಿ ಸೊಗಬಿಸಿದವುದೇ (ಕಾಪ್ರ. ೬-೧೭) ; ಮಾರನಿರೊಳ್ ಬಿಲ್ಲಾಳಿ (ಸೊಪಪುಣ. ೬); ನೀನೆ ಜಗದ ಬಿಲ್ಲಾಳ್ಗಳೊಳಗೆ ಜಾಣ್ಮೆಯುಳ್ಳವನಪ್ಪೆ (ಕೃಷ್ಣ. ೪೯-೦೪). ಬಿಲ್ಲಾಳು: "ಧನ್ವೀ, ಧನುಷ್ಮಾನ್, ಧಾನುಷ್ಕಃ. ನಿಷಂಗಿನ್, ಧನುರ್ಧರಃ— ಈ ೫ ಬಿಲ್ಲಾಳು" (ಚಾಸಾಪ. ೦೩೪) ; ಕಾಮನೆಂಬ ಬಿಲ್ಲಾಳು ಅಂಟೆಂಬುದ ನಾವು ಕೇಳಿ ಬಲ್ಲೆವೆಸೆ (ಸಪಾಪ. ೬-೬). [ಬಿಲ್ಲ₂ + ಅಳ್₂]

ಬಿಲ್ಲಾಳು 'ಬಿಲ್ಲಾಳ್' ನೋ.

ಬಿಲ್ಲಾಳುತನ 'ಬಿಲ್ಲಾಳ್ತನ' ನೋ.

ಬಿಲ್ಲಾಳ್ತನ, ಬಿಲ್ಲಾಳುತನ (ನಾ). ಧನುರ್ವಿದ್ಯೆಯ ಪ್ರೌಢಿಮೆ; ಬಿಲ್ವಿದ್ಯೆಯ ನೈಪುಣ್ಯ: ಅತನ ಸಾಹಸದ ಚಲದ ಬಲದ ಬಿಲ್ಲಾಳ್ತನ ದಳವಿಗಳವೆದು ನೋಡಿ (ಕಂಪಾ. ೯-೦೬ ಪ) : ಜವನ ಬಿಲ್ಲಾಳ್ತನಮಂ ಪೇಬ್ಮೊಡೆ (ಧರ್ಮಾಮೃ. ೬-೪೩) ; ಪೊಸತು ಬಿಲ್ಲಾಳ್ತನದೊಳ್ ಕಲಿ ನೀನಲ್ಲದೆ ಪೆಸರಾರ್ (ಸಮಂ. ೪-೪೯). ಬಿಲ್ಲಾಳುತನ : ಪೂತು ಮರುಳು ಬಿಲ್ಲಾಳುತನವಿದು ಭೂತನಾಥಂಗಿಲ್ಲ (ಶಾಬ್ಧಾದಿ. ೬-೦೪).

[ಬಿಲ್ಲಾಳ್ + – ತನ]

ಬಿಲ್ಲು₁ 'ಬಿಲ್ಲ₂' ನೋ.

ಬಿಲ್ಲು₂ (ನಾ). ೧. ಕಾನೂನಿನ ಮಸೂದೆ : ಹೊಸ ವಿಶ್ವವಿದ್ಯಾನಿಲಯದ ಸ್ಥಾಪನೆಯ ಬಿಲ್ಲು ವಿಧಾನಸಭೆಯಲ್ಲಿ ಚರ್ಚೆಯಾಗುತ್ತಿದೆ (ಪತ್ರಿ). ೨. ವ್ಯಾಪಾರದಲ್ಲಿ ವಿಕ್ರಯಿಸಿದ ಪದಾರ್ಥಗಳ ಅಥವಾ ಮಾಡಿದ ಕೆಲಸಕ್ಕಾಗಿ ಕೊಡಬೇಕಾಗುವ ಹಣದ ವಿವರವನ್ನು ಸೂಚಿಸುವ ಪಟ್ಟಿ: ಬೆಲೆಪಟ್ಟಿ : ತಾಲ್ಲೂಕುಕಚೇರಿಯಿಂದ ಸಂಬಳದ ಬಿಲ್ಲು ಪ್ಯಾಸಾಗಿ ಬಂದ ಮೇಲೆ . . . ತೆಗೆದುಕೊಳ್ಳಬೇಕು (ಗ್ರಹಿಳ. ೬) : ದುಡಿದದ್ದೆಲ್ಲ ಹೊಟ್ಟೆಗೆ -- ಡಾಕ್ಟರ ಬಿಲ್ಲಿಗೆ (ಕಾಸ್ವಪ. ೦೩). [← ಇಂ. bill]

ಬಿಲ್ಲುಂಬೆರಗು 'ಬಿಲ್ಲುಂಬೆಱಗು' ನೋ.

ಬಿಲ್ಲುಂಬೆಱಗು, ಬಿಲ್ಲುಂಬೆರಗು (ನಾ). ಕಕ್ಕಾಬಿಕ್ಕಿ ; ದಿಗ್ಭ್ರಮೆ : ವೆಗಬ್ಬೆಯ ಬೀರರೆಲ್ಲಂ ಬಡವರ ಪಿತರರಂತೆ ಮಿಳ್ಕಿಳೆ ನೋಡುತ್ತಿರೆ . . . ಬಿಲ್ಗಳಂ ಮುಂದಿಟ್ಟು ಬಿಲ್ಲುಂಬೆಱಗುಮಾಗಿರೆ (ಕಂಪಾ. ೬-೪೩ ಪ) : ನಾಲ್ವಂ ಬಲಿಸೂನು . . . ಕಂಡು ಬಿಲ್ಲುಂಬೆಱಗಾದರೊರ್ವೊರ್ವದಲೆ ಪಾಱುವುದುಂ ಶಿಶುಪಾಲಮಸ್ತಕಂ (ಶಿಪಾ. ೦೭-೪೮) ; ಮಾರಿದತ್ತನ್ಪಪಂ ಬಿಲ್ಲುಂಬೆಱಗುಮಾದನಾಗ್ಯೇಗಪರಂ (ಯಶೋಧ. ೪-೭೦). ಬಿಲ್ಲುಂಬೆರಗು : ಛಾಮ ನಾಯಕ : (ಬಿಲ್ಲುಂಬೆರಗಾಗಿ) ಏನು ? (ಪುಗಸಂ. ೪-೦೪).

[ಬಿಲ್ಲು ? + ಬೆಱಗು]

ಬಿಲ್ಲುಂಬೆಱಗುವಡು (ಕ್ರಿ). ದಿಗ್ಭ್ರಮೆಯೊಂದು ; ಕಕ್ಕಾಬಿಕ್ಕಿಯಾಗು : ತಬ್ಬಬ್ಬುಗೊಂಬು ತುರಗಾರೋಹಪ್ರತತಿ ಬೆಬ್ಬಳಿಸಿ ಬಿಳ್ದು ಬಿಲ್ಲುಂಬೆಱಗು ವಟ್ಟು ನಿಂದಾ ಮಹಾರಥಸಂತತಿ (ಹಮ್ಮೀ. ೪-೬೩).

[ಬಿಲ್ಲುಂಬೆಱಗು + ಪಡು₁]

ಬಿಲ್ಲುಗಾರ 'ಬಿಲ್ಗಾಱ' ನೋ.

ಬಿಲ್ಲುಗಾರಿಕೆ 'ಬಿಲ್ಗಾಱಿಕೆ' ನೋ.

ಬಿಲ್ಲುಗಾಱ 'ಬಿಲ್ಗಾಱ' ನೋ.

ಬಿಲ್ಲುಗೆಡು (ಕ್ರಿ). ಬಿಲ್ಲನ್ನು ಕಳೆದುಕೊಳ್ಳು; ಧನುಸ್ಸು ಇಲ್ಲವಾಗು : ಹಲ್ಲುಮುಱಿದಹಿಯಂತೆ ಕಣನಲಿ ಬಿಲ್ಲುಗೆಟ್ಟವನಂತೆ . . . ಭಲ್ಲುಕರ ಫರ್ಜನಿಗೆ ಕಲ್ಲದೆ ತಲ್ಲಣಿಸುತಿರೆ (ಶಾಕಾ. ೦೯-೩).

[ಬಿಲ್ಲು₁ (< ಬಿಲ್₂) + ಕೆಡು₁]

ಬಿಲ್ಲುರಿಗ (ನಾ). ಒಂದು ಬಗೆಯ ಹಾವು : ಬಿಲ್ಲುಂ[ಕಾಣಾ.ಲಿ]ಗಂ ಕೊಂಡೊಡೆ ತಡವಿಲ್ಲದೆ ತೊಡೆ ಕಡವು ನೀಲಿ ಪಗ್ಗೆಯ ಬೇರ (ಜಪಾದ. ೦೦-೬೩). 'ಬಿಲುಮುರಿ'. 'ಬಿಲ್ಲೂರಿಹಾವು' ಪರಾ. [?]

ಬಿಲ್ಲುಲಿ (ನಾ). = ಬಿಲ್ದನಿ : "ಜೀವೊಡೆ ಬಿಲ್ಲುಲಿಯಂದೆವಲಾವಗ ಗುಣನಾದ" (ಶಾಂಶಾ. ೬೨). [ಬಿಲ್₂ + ಉಲಿ₂]

ಬಿಲ್ಲುವಿದ್ಯೆ, ಬಿಲುವಿದ್ಯೆ (ನಾ). = ಬಿಲ್ವಿದ್ಯೆ : ಆ ಮುನಿವತಿಗೆ ಶಿಷ್ಯನಾಗಿಯ ಪ್ರೇಮದಲಿ ಪರಬಿಲ್ಲುವಿದ್ಯೆಯ ನೇಮಗೊಂಡೇ ಸಾಧಿಸಿದನಾ ಕೆಲವುಕಾಲದಲಿ (ಸೊಪಪುಣ. ೦೯-೦೬). ಬಿಲುವಿದ್ಯೆ : ಕುರುಕುಲದ ಮಕ್ಕಳಿಗೆ ಬಿಲುವಿದ್ಯೆ ಕಲಿಸುವನಂತೆ (ಹಕ್ಕ. ೩-೦೨). [ಬಿಲ್ಲು₁ (<ಬಿಲ್₂) + ವಿದ್ಯೆ]

ಬಿಲ್ಲೂರಿಹಾವು (ನಾ). = ಬಿಲ್ಲಹಾವು : (ಕೃ). [? + ಹಾವು (< ಪಾವ್ಪು₁)]

ಬಿಲ್ಲೆ (ನಾ). ೧. (ತರಕಾರಿ, ಕಲ್ಲು, ಲೋಹ ಇತ್ಯಾದಿಗಳ) ಚೌಕ, ವೃತ್ತ ಮೊದಲಾದ ಆಕಾರಗಳ ತೆಳುವಾದ ಹಲ್ಲೆ: ಹುರಿಮೆಣಸುಗಡಲೆ ಸಕ್ಕರೆ ತುಂಡಿ ಕಬ್ಬುವಿಲ್ಲೆಗಳನುಜೆ ಮಾಱುವರ್ ಬಹುತರ್ದರು

(ಕಾವ್ಯ. ೪೬-೮೨) ; ಕುಲಿಶದ ಚಿಕ್ಕಬಿಲ್ಲಗಳೀಗ . . . ಚಂದ್ರಕಾಂತದ ಒಲೆಯ ಬಿಲ್ಲೆಯೂ (ಪಜಿತಾ. ೫೬-೧೦). ೨. (ಹಿಂದಿನ ಕಾಲದಲ್ಲಿ ಪ್ರಚಲಿತವಾಗಿದ್ದ) ಮೂರುಕಾಸಿನ ನಾಣ್ಯ : ಇವರಿಗೆ ಸಿಕ್ಕುವ ಈ ಇಪ್ಪತ್ತು ಬಿಲ್ಲಗಳಿಗೇನಾದರೂ ಕೈಹಚ್ಚಿದ್ದಿವೆ ? (ಆಚಾ್ಯ. ೩೦); ಉಪನಯನಕ್ಕೆ ಮುಂಚೆ ಬರೆ ಒಂದು ಬಿಲ್ಲೆ ದಕ್ಷಿಣೆ ಸಿಗುತ್ತಿತ್ತು (ಪ್ರಕೃ. ೦೫೭). ೩. ನಾಣ್ಯ : ಅವನಿಗೆ ಸಾಲ್ಮಾಣಿ ಬಿಲ್ಲೆ ಸಿಕ್ಕಿತು (ಕೂಡ). ೪. "ಒಂದು ಅಧಿಕಾರದ. ಉದ್ಯೋಗದ ಅಥವಾ ಸಂಸ್ಥೆಯ ಗುರುತಾಗಿ ಧರಿಸುವ ಲಾಂಛನ" (Badge. ೩೦೪೭) : ಕಾವ್ಯಸರಸ್ವತಿಯ ಸೇವಕನಾಗಿ. ಅವಾಂತರದಲ್ಲಿ ಇಂದು ಗಣಪತಿಯ ದರುಶನದಿಂದ ಬಿಲ್ಲೆಯನ್ನು (Badge) ಧರಿಸಿಕೊಂಡು ಕುಳಿತಿದ್ದೇನೆ (ಪಪಂಂ. ೧೧. ೨೦೨). ೫. ಹೆಂಚು : 'ಚದುರುಬಿಲ್ಲೆ' ಪರಾ.

[← ಹಿಂ. ಮರಾ. ಬಿಲ್ಲಾ./ತಮಿ. ಪಿಲ್ಲೈ, ಎಲ್ಲೈ: ಮಲ. ವಿಲ್ಲ ; ತುಳು. ಬಿಲ್ಲೆ ; ತೆಲು. ಬಿಳ್ಳ, ಬಿಲ್ಲ]

ಬಿಲ್ಲಜವಾನ (ನಾ). ತನ್ನ ಹುದ್ದೆಯ ಗುರುತನ್ನು ಸೂಚಿಸುವ ಬಿಲ್ಲೆಯನ್ನು ಧರಿಸಿದ ಸೇವಕ : ಫೌಜುದಾರ್ರು ೫. ಬಿಲ್ಲಜವಾನರು ೫೦. ಟೋಪಿಯವರು ೨೪ (ಗುಂಡಿ. ೦೦). 'ಡವಾಲಿಜವಾನ' ಹೋ.

[ಬಿಲ್ಲೆ + ಜವಾನ]

ಬಿಲ್ಲೆಸುಗೆ (ನಾ). ಬಿಲ್ಲಿನಿಂದ ಬಾಣವನ್ನು ಬಿಡುವುದು : ಧನುರ್ವಿದ್ಯೆ: ವಿದುರನಿಗೆ ಬಿಲ್ಲೆಸುಗೆ ಕಲಿಸಿದವರಾರ್ಗೆ ? (ಪಚ್ಚ. ೬-೧೦).

[ಬಿಲ್ಲು + ಎಸುಗೆ]

ಬಿಲ್ಲೆಹುಳು (ನಾ). ಜೋಳಕ್ಕೆ ಹತ್ತುವ ಒಂದು ಬಗೆಯ ಹಸುರು ಹುಳು : (ಕೃ).

[ಬಿಲ್ಲೆ + ಹುಳು (<ಪುಟು)]

ಬಿಲ್ಲೆಜಿಯ (ನಾ). ೧. ಬಿಲ್ಲುವಿದ್ಯೆಯನ್ನು ಕಲಿಸುವ ಗುರು ; ಧನುರ್ವಿದ್ಯಾಗುರು : ಸಾರಲಿಂ ಬಿ[ಜಾಣಂ.ಬ]ಲ್ಲೆಜಿಯನೆಂದುಜೆ ಮಾತು (ಹಯ. ೨೩೧ ಕೃಯೋ). ೨. ಪಾಂಡವ. ಕೌರವರುಗಳಿಗೆ ಧನುರ್ವಿದ್ಯೆಯನ್ನು ಕಲಿಸಿದ ಗುರು ; ದ್ರೋಣಾಚಾರ್ಯ : ಬಿಲ್ಲೆಜಿಯನ್ತೊಡ್ಡಿದ ನಂಕದ ಚಕ್ರವ್ಯೂಹವನಾಹವರಂಗದೊಳ್ (ಪಂಚಭಾ. ೦೦-೦೬); ಬಿಲ್ಲೊಳೀ ಕಿಜಿಯವರಂ ಕುಮಾರಕರನೆಯ್ದೆ ಕರಂ ಕುಶಳರ್ಕಳಾಗೆ ಬಿಲ್ಲೆಜಿಯಂ ಸಮಂತು ಮಾಡಿಮೆನೆ (ಪಚಮು. ೯-೦೨). [ಬಿಲ್ಲು + ಎಜಿಯ]

ಬಿಲ್ಲೊಜ, ಬಿಲ್ಲೋಜ (ನಾ). ೧. = ಬಿಲ್ಲೆಜಿಯ ೧. ೨. = ಬಿಲ್ಲೆಜಿಯ ೨ : ಕಮ್ಮಜಿಯೊವಜಂ ಬಿಲ್ಲೊವಜನೆಂಬುದಂ ಮಾಡುವೆನೇ (ಪಂಚಾಂ. ೦೨-೩). **ಬಿಲ್ಲೋಜ** : ೧. ದಾನೋಪಾಧ್ಯಾಯನಾತ್ಮಕೃತಿಯು ತನಗೆ ಬಿಲ್ಲೋಜನೋಜಃಪ್ರಸಾದಾಧೀನಂ (ಅಧಾಪ್ರ. ೯-೩೩): ಬಿಲ್ಲೋಜರು ಪೆಬಲಂದಿನವರು ತೇಜೋಮಯಬಾಣಗಾಜಿರೇಜುತು ಖಿಗರಾಜನೆಜಂತೆ ಯಿಕ್ಕೆಲದಿ (ಪಚಕಪ. ೩೬-೮೨). ೨. ತಪ್ಪದೆ ಕಮ್ಮಜಿಯೋಜನೆನಿಸಿದಂ ಬಿಲ್ಲೋಜಂ (ಗಣಪತಿ. ೩.೦೩) ; ಈತನಹಿತಕೃತ್ಕಾಂತಕುಂಭಜನೀತನಜಾ ಬಿಲ್ಲೋಜನೆಂಬವನು (ಕಾಶಾ. ೩೦-೦೩). [ಬಿಲ್ಲು + ಒವಜ (<ಒವರ್ಪು)]

ಬಿಲ್ಲೋಜ 'ಬಿಲ್ಲೊವಜ' ನೋ.

ಬಿಲ್ವ (ನಾ). (ಪವಿತ್ರವೆಂಬ ಭಾವನೆಯಿಂದ ಪೂಜೆಗೆ ಉಪಯುಕ್ತವಾದ) ಒಂದು ಬಗೆಯ ಮರ ಮತ್ತು ಅದರ ಎಲೆ. – ದಳ. : "ಮಾಲೂರಃ. ಶ್ರೀಫಲಃ. ಬಿಲ್ವ – ಈ ೩ ಬೆಲ್ಲವತ್ತದ ಪೆಸರ್" (ಕಣಾಮು. ೩೨–೦೦) : ಬಿಲ್ವ[ಜಾಣಂ. ಬಲಂ] ತೊಳಿ ಸಮಸ್ತಂ ದಯ್ವಮಿಂತಿವೆಂಬರ್ಮೂರ್ಧರ್ (ಪಪಂಪು. ೧-೪೪) ; ದೂರ್ವೆ ತುಲಸಿ ಬಿಲ್ವಾದಿ ಪತ್ರಜಾಲಂಗಳಂ . . . ಬೇಱೆ ಬೇಱೆ ಸಂಪಾದಿಸಿ (ಪಪಂಪು. ೧೨).

ಬಿಲ್ವಾಜಪತ್ರಮುಂಡಾರಿ = [ವೈದ್ಯಶಾ] (ಬಿಲ್ವಪತ್ರೆಯ ಬೇರು ಜೀರಿಗೆ ಇತ್ಯಾದಿ ಕೆಲವು ಪದಾರ್ಥಗಳಿಂದ ತಯಾರಿಸುವ) ಒಂದು ಬಗೆಯ ಔಷಧ : ಬೈಲುತುತ್ತ . . . ಬಿಲ್ವದ ಬೇರು. ಕೊಮ್ಮೇ ಬೇರು. ಕರೀಹುಲಿಹೂವು. ಕಚೋರ. ಸೈಂಧವಲವಣ ಇಷ್ಟನ್ನೂ ಸಮಭಾಗ ಮಾಡಿ ಚೂರ್ಣಿಸಿ . . . ಕಣ್ಣಿನಲ್ಲಿಡಲು ಸ್ತ್ರೀಸಂಗದೋಷಗಳು. ನೇತ್ರರೋಗಗಳು. ಸರ್ವವಿಷಗಳು. ಸನ್ನಿಪಾತಜ್ವರಗಳು ಸಹ ಪರಿಹಾರವಾಗುವುವು. ಇದಕ್ಕೆ ಬಿಲ್ವಾಂಜನಮುಂಡಾರಿ ಎಂಬ ಹೆಸರಿದೆ (ಸಿಕೃ. ಸಂ. ೦೦೯). **ಬಿಲ್ವಾದಿ ಅಂಜನ**=(ಬಿಲ್ವಪತ್ರೆಯ ಬೇರು ಇತ್ಯಾದಿಗಳಿಂದ ತಯಾರಿಸುವ) ಒಂದು ಬಗೆಯ ಅಂಜನ.–ಔಷಧಿ : ಬೆಲ್ಲವತ್ತದ ಬೇರು . . . ಅರಿಸಿಪ ಇಷ್ಟು ಸಮಾನ ಚೂರ್ಣಂ ಮಾಡಿ ನಿಂಬೇಹಣ್ಣಿನ ರಸದಲ್ಲಿ ಮರ್ದಿಸಿ ಬಿಲ್ವಾದಿ ಅಂಜನ ಮಾಡುವುದು (ಪಕೃಚಿ. ೧೦). **ಬಿಲ್ವಾದಿ ಕಲ್ಪ**= (ಬಿಲ್ವಪತ್ರೆಯ ಬೇರು ಇತ್ಯಾದಿಗಳಿಂದ ತಯಾರಿಸುವ) ಒಂದು ಬಗೆಯ ಕಲ್ಪ : ಪೈತ್ತಜ್ವರ. ಭರ್ದಿ, ವಿದಾಹ ಮುಂತಾದುದಕ್ಕೆ ಬಿಲ್ವಾದಿ ಕಲ್ಪ (ಸಿಕೃ. ೭೭). **ಬಿಲ್ವಾದಿ ಲೇಹ್ಯ**= (ಬಿಲ್ವಪತ್ರೆಯ ಬೇರು ಮುಂತಾದುವುಗಳಿಂದ ತಯಾರಿಸುವ) ಒಂದು ಬಗೆಯ ಲೇಹ್ಯ : ಬಿಲ್ವಾದಿ ಲೇಹ್ಯ :–(ಅಮಾತಿಸಾರಕ್ಕೆ)–ಬಿಲ್ವವತ್ತದ ಬೇರು ಹಲ ೩೦ . . . ಜೀನುತುಪ್ಪ ಮಾನ ೧ ಲೇಹ್ಯಪಾಕ (ಪಕೃಚಿ. ೧೦) : ಬಿಲ್ವಾದಿ ಲೇಹ್ಯ . . . ಇದು ಅರೋಚಕ. ಭರ್ದಿ. ಮಂದಾಗ್ನಿ. ತ್ರಿದೋಷರೋಗಗಳನ್ನು ಹೋಗಲಾಡಿಸುವುದು (ಸಿಕೃ. ಪಂ. ೧೩೩).

[ಸಂ.]

ಬಿಲ್ವಡೆ (ನಾ). ಬಿಲ್ಲಾರರ ಸೇನೆ : ಆಜಿದುಂ ಬಿಲ್ವಡೆ ಪಡೆದುದು ಭೋಗ್ಗರೆದು ಪರಿದ ನೆತ್ತರ ಕಡಲಂ (ಪಂಕಥಾ. ೦೦-೭೩) ; ಬಿಲ್ವಿಂಕೆಯಿಂದಿರ್ದಿದ ಬಿಲ್ವಡೆ ತನ್ನೆಚ್ಚ ನಿತಿಶರಸಂಹತಿಯಿಂದೆಲ್ವಡಗಾಯ್ತು (ಗಾಪ್ರಕೃ. ೭೯) ; ಇರದೆ ಬಿಲ್ವಡೆ ಬಂದಂಬಿಕ್ಕಲಂಬಂಬನೊರಸಿ ಕೆದಱಿದ ಕಿಡಿಗಳು ಕರಮೆಸೆದವು (ಕುಣಾಪಾಂ. ೭೨-೭೩). [ಬಿಲ್ಲು + ಪಡೆ]

ಬಿಲ್ವಪತ್ರೆ (ನಾ).=ಬಿಲ್ವ : ಬಿಲ್ವಪತ್ರೆಯ ಬೇರು. ಗುಳ್ಳದ ಬೇರು . . . ಇವುಗಳ ಕಷಾಯವು ಹಾಯಿಸಿ ಸೇವಿಸಿದಲ್ಲಿ ವಾತಜ್ವರ ಪರಿಹಾರವಾಗುವುದು (ಸಿಕೃ. ೭೩) ; ನಾನು ಗೋದಾವರಮ್ಮನ ಮನೆಗೆ ಬಿಲ್ವಪತ್ರೆಗೆಂದು ಹೋಗಿದ್ದು. ಅಲ್ಲಿ ಅವರು ಕೇಳಿದ್ದು ಹೇಳಿದೆ (ಕೃಕೃ. ೦೫೭).

[ಸಂ. ಬಿಲ್ವಪತ್ರ]

ಬಿಲ್ವಫಲ (ನಾ). ಬಿಲ್ವಪತ್ರೆಯ ಕಾಯಿ : ಧನು ಬಿಲ್ವಫಲವನೊಂದೇ ವೇಳೆ ಪಿಡಿದಾವ ಮನುಜನೊಬ್ಬನುಳಿವೊಳು ಗುರಿಯನು (ಪಪ್ರಚಿ. ೨೨-೨೩) : ಬಿಲ್ವಫಲ ತುಪ್ಪ ಜೇನುತುಪ್ಪ ಸಜ್ಜರಸ ಚೂರ್ಣರವೆಂಬ ದಶಾಂಗಧೂಪಂಗಳಂ . . . ಬೇಱೆ ಬೇಱೆ ಸಂಪಾದಿಸಿ (ಪಚೀಗೀ. ೧೧).

[ಸಂ.]

ಬಿಲ್ವರ್ಕ, ಬಿದಾರ. ಬಿಲುವರ. ಬಿಲುವರೆ. ಬಿಲ್ವಾರ್ಕ (ನಾ). ಒಂದು ಬಗೆಯ ಮರ : ಕೆಂಪುಮತ್ತಿ ; ಧನ್ವಿ : "ಬಿಲ್ವರಂ ಧನ್ವಿಯಕ್ಕುಂ" (ಕುಂಗೋಾ. ೩೬-೦೬). **ಬಿಲಾರ** : "ಅಬನಾತಿ. ಬಿದಾರದ ಮರ. ತುಂಬುರಯು. ಬಿಲಾರ. ತೂಬರ್" (ಸಿಕೃ. ೫೦). **ಬಿಲುವರ** : ಬಿಲುವರ ಕಪಿತ್ಥ ಸೈಕುಣಿಕೆ (ಕುಣಾಂಗಿ. ೦೦-೭). **ಬಿಲುವರೆ** : ಬಡಗ ಪುತ್ತಿರಲ್ ಬಿಲುವರೆಯುಂ ಮೂಡಲು ಮೂಗದುಂ ಮಾಣ್ದಗುಟು (ಅಲ್ಕಾಪು. ೦೦-೦೨). **ಬಿಲ್ವಾರ್ಕ** : ಮರಗಳು . . . ತೇಗ. ಕೋಲುತೇಗ, ಬಾಗಿ, ಬಿಲ್ವಾರ, ದಿಂಡಿಗ, ಬೂರಗ (ಪಪ್ರಚಿ. ೨೪೩) ; ಬಿಲ್ವಾರ. ಬೀವಾರ, ಬಜಾರಿ, ಬಿಟ್ಟುಸುಜ್ಜಲು (ಪ್ರಚಿ. ೧-೩೬). [ಬಿಲ್ಲು + ಮರ]

ಬಿಲ್ವರ್ಕ, ಬಿಲವರ. ಬಿಲವಾರ. ಬಿಲ್ವಾರ್ಕ (ನಾ). (ಉಕ) (ಒಂದು ಬಗೆಯ) ಚಿನ್ನದ ಬಳೆ ; ಬಂಗಾರದ ಬಳೆ : ಸ್ವರಾಜ್ಯಪ್ರಾಪ್ತಿ ಕೂಡಿಸಲು ಹೊರಟಾಗ ಕೈಯಲ್ಲಿ ಬಿಲ್ವರಗಳನ್ನು ಕೊಟ್ಟು ಆಗ ಆರು ವರ್ಷದ ಬಾಲಿಕೆಯು ಇವನನ್ನಾಕರ್ಷಿಸಿದ್ದಳು (ಜಾಕಥ. ೩೩).

" ಬಿಸಕಂತಂ ಬಳಾಕಮೆನೆ ಬೆಳ್ಕಕ್ಕಿ " (ಪುಣ್ಯಾ. ೫೦-೬).
[< ಸಂ. ಬಿಸಕಂಠಿನ್]

ಬಿಸಕಂತಿಕೆ (ನಾ). = ಬಿಸಕಂಠ್ಯ : " ಬಲಾಕಾ. ಬಿಸಕಂಠಿಕಾ — ಈ ೨ ಬೆಳ್ಕಕ್ಕಿ " (ಪಣಯು. ೪೨-೧೩); " ಬಲಾಕಾ. ಬಿಸಕಂಠಿಕಾ—೨ ಕೊರಳು ಉದ್ದವಾಗಿಯೂ, ಬಿಳುಪಾಗಿಯೂ ಇರುವ ದೊಡ್ಡ ಬೆಳ್ಕಕ್ಕಿಯ ಹೆಸರು" (ಶಬ್ದಾ. ೦೬೦). [ಸಂ. ಬಿಸಕಂಠಿಕಾ]

ಬಿಸಕಂದ (ನಾ). ತಾವರೆಯ ಗಡ್ಡೆ ; ಕಮಲದ ಗಡ್ಡೆ : ಬಿಸಕಂದದಂತೆ ತೋರ್ಪತಿವೃತ್ತದಿಂ ಪೂರ್ಣರಸಭಾವದಿಂದಲಂಕಾರದಿಂ . . . ಮಹಾ ಕವಿಯ ತೆಱದೊಳಂತಲ್ಲಿಯ ಸರೋವರಂ ಕಣ್ಗಸದುದು (ಪಚಂಚ. ೩-೨೩).
[ಸಂ.]

ಬಿಸಕಾಂಡ (ನಾ). ಕಮಲದ ನಾಳ ; ತಾವರೆಯ ದಂಟು.—ದೇಟು : ಕೋಮಳಬಿಸಕಾಂಡಮಂ ಪೆರಸು ವೀಡಿದನಾಗಳದೋರ್ವ ಲುಬ್ಧಕಂ (ಕಾದಂಪು. ೦೭೩); ಬಿಸಕಾಂಡಗರ್ಭದಿಂ ಪಡೆದನೊ ಪೃಥ್ವಗರ್ಭನೆನೆ . . . ದೆಡಂಗುವೆತ್ತುದು ನರೇಂದ್ರವಧೂಧವಳವ್ಯಸಾಧನಂ (ಪಾರ್ಶ್ವ. ೪-೪೪). [ಸಂ.]

ಬಿಸಗುಡಿ (ಕ್ರಿ). ವಿಷವನ್ನು ಕುಡಿ.— ಪಾನಮಾಡು : ಅಂದು ಬಿಸಗುಡಿದು ಸಾಯದೆ ಭಕ್ತಕೃತಪುಣ್ಯದಿಂದ ಬದುಕಿದೆ (ಪಂಂಪ. ೦೬-೪೦). [ಬಿಸ + ಕುಡಿ]

ಬಿಸಗೊರಲ್, ಬಿಸಗೊರಲು, ಬಿಸಗೊರಳು (ನಾ). ವಿಷವನ್ನು ಧಾರಣೆಮಾಡಿದ ಕೊರಳು : ನಂಜನ್ನು ಧರಿಸಿದ ಕಂಠ : 'ಬಿಸ ಗೊರಲ' ಪರಾ. **ಬಿಸಗೊರಲು** : ಲೋಕವನುರುಪುವಗ್ನಿಗಣ್ಬಿಸಗೊರಲು ತಲೆಮುರಿ (ಪಂಪಭಾ. ೩-೩-೦). **ಬಿಸಗೊರಳು** : ಜಡವನತೆಯಂ ಪೊರೆವ ಸುಡುವಾ ಬಿಸಗೊರಳಲಿ (ಅಕ್ಕಿ. ೪). [ಬಿಸ + ಕೊರಲ್]

ಬಿಸಗೊರಲ (ನಾ). = ಬಿಸಕಂಠ : ಬಿಸಗೊರಲನ ಬಿಸುಗಣ್ಣ ಸುತಂ ಬರುತ್ತಿದನೆ (ಪೀಠಕ. ೨-೨೬) ; ಕಲ್ಲಳಿಂ ಗುಂಡಿನಿಂ ಮುರದ ಕೊಂದಿನಿಂದೆ ಬಿಸಗೊರಲನಂ ಸೆಣಸಲೆಲೆ ತವಸಿ ನೀನೀಗ ಪೊಸತಾದ ಕೆಯ್ದುವಳ್ಕೊಡ ಕೊಂಡು ಬಾರೆನಲ್ಕೆ (ಕಬಕ್ಕ. ೩೩-೫೦). [ಬಿಸಗೊರಲ್ + —ಅ]

ಬಿಸಗೊರಲು ' ಬಿಸಗೊರಲ್ ' ನೋ.

ಬಿಸಗೊರಳು ' ಬಿಸಗೊರಲ್ ' ನೋ.

ಬಿಸಜ (ನಾ). ಕಮಲ ; ತಾವರೆ : ಬಿಸಜವಿತಂದಿನೀಮನೋನಯಜಾ ನಂದನನುಂ . . . ವಿತ್ತೋದಯಮುಮಪ್ಪ ಗಭ್ಮಮಾಲಿಗರ್ಭ್ಮನೆಸ್ತಿ (ಪಂಪಭಾ. ೨೫೩-೬೦) ; ಬಿಸಜದಸಟ್ಗಳಂ ಬಿಡೆ ಸಡಿಲ್ದಿ . . . ಬಂದಸಿತಾಸ ಪ್ರಭಾತದ ಸಮಾಗಮಂ (ಜಾತ್ಕಗ. ೦೦-೬೬). [ಸಂ.]

ಬಿಸಜಕರ್ಣಿಕೆ (ನಾ). ತಾವರೆಯ ಬೀಜಕೋಶ ; ಕಮಲದ ಮಧ್ಯ ಭಾಗ : ಎಸಳೆಸಳು ಮಿಗೆ ಸಂಸದಲಿ ಹೋಡಿಸಿದನಮೀವಾಲರನು ತದ್ವಿಸಜಕರ್ಣಿಕೆಯೊಡ್ಡಿನಲಿ ಬಲಿದನು ಸುಯೋಧನ (ಕುಚಿತ್ಕ್ಕೋ. ೯-೦೬). [ಸಂ. ಬಿಸಜಕರ್ಣಿಕಾ]

ಬಿಸಜಗಂಧಿ (ನಾ). ತಾವರೆಯ ಹೂವಿನ ಪರಿಮಳದಂತೆ ಸುಗಂಧ ವುಳ್ಳವಳು ; ಕಮಲಗಂಧಿ : ಎಸಳುಗಂಗಳ . . . ಮುರಿದ ಕುರುಳಿನ ಬಿಸಜಗಂಧಿಯು ರೂಪನಳಿವರ್ಣಸುವಡರಿದೆಂದ (ಕುಚಿತ್ಕ್ಕೋ. ೦೩-೦೩) ; ಕರೆ ಕಂದು ಬಿಸಜಗಂಧಿಯನು ಕೈಗೂಡಿಸುವ ಬಹಳ ಸಂತಸದಿಂದ . . . ತಾಂ ಸುಖದಿರುತಿರ್ದನು (ಪ್ರಾಕಥಾ. ೩-೦೦).
[ಸಂ. (ಬಿಸಜ + ಗಂಧ + —)]

ಬಿಸಜತಂತು (ನಾ). ಕಮಲದ ದಂಟಿನ ನಾರು.—ಎಳೆ ; ತಾವರೆಯ ದಂಟಿನ ಸೂತ್ರ : ಬಿಸಜತಂತುವಿನ ಸಂಚಿದಿಂದ ಮದಗಜ ಬಂಧವಡೆಯ ಬಲ್ಲುದೆ (ಪಚಂ. ೪೪-೨೧೩). [ಸಂ.]

ಬಿಸಜಬಂಧು (ನಾ). ಕಮಲದ ಮಿತ್ರ : ಸೂರ್ಯ : ಬೆಸಸಿದುದಕೆ ಹಾವಾವೆಂದನು ಬಿಸಜಬಂಧುವ ಕಳುಹಿದನು (ಕುವಾ.ಣ. ೦೦-೭೦).
[ಸಂ.]

ಬಿಸಜಭವ (ನಾ). ಕಮಲದಲ್ಲಿ ಹುಟ್ಟಿದವನು : ಬ್ರಹ್ಮ : ಬಿಸಜಭವನಕ್ಕೆ ಮ್ಯಾದನಕ್ಕೆ ಸುರಾಂತಕನಕ್ಕೆ (ಪಂಚಭಾ. ೦೦-೦೨೦) ; ಬಿಸಜಭವನೀತನನೆ ನಿರ್ಮಿಸಿ ಕಳಿಪಿದಂ (ಪಚ್ಚು. ೪-೦-೦೦೬). [ಸಂ.]

ಬಿಸಜಲೋಚನ (ನಾ). ಕಮಲದಂತೆ ಕಣ್ಣುಳ್ಳವನು ; ವಿಷ್ಣು : ಉದಯಾಸ್ತಮಯಕಾಲದಲಿ ಎಸೆವ ವಿದ್ಯಾಂಗನೆಯೊಳೆಂಬರೆ ಬಿಸಜ ಲೋಚನನಾದೊಡೆಯು ವರ್ಜಿಸುವಳವರನು ಭಾಗ್ಯಸಿರಿ (ಶಾಖ್ಯಾ. ೩-೩೬). [ಸಂ.]

ಬಿಸಜಸಖ (ನಾ). ಕಮಲದ ಗೆಳೆಯ ; ಸೂರ್ಯ : ಹೊಸರತುನದ ಗೋಪುರದಿಂ ಬಿಸಜಸಖನನೇಳವ ಕಳಸಂಗಳು ವಸುಧೆಗೆ ಹೊಸತಾಗಿಹವು (ಕೃಷ್ಣಾ. ೭-೭೭) ; ಬಿಸಜಸಖನುದಯದಲಿ ಸತಿ ಮಾಸಮೊಸೆದು . . . ಸಾರಿದಳು ತದ್ದೇವತಾಲಯಕೆ (ಪಚಂ. ೦೪-೩೬). [ಸಂ.]

ಬಿಸಜಾಕ್ಷ (ನಾ). = ಬಿಸಜಲೋಚನ : ನಾಡೆ ರಂಜಿಸಿದಂ. . . .ಶಂಕರಂ ಬಿಸಜಾಕ್ಷಾಕ್ಷಿಸಮರ್ಚಿತಾಂಘ್ರಿಕಮಲಂ ಪಂಪಾಂಬಿಕಾವಲ್ಲಭಂ (ಅಪ್ಪಣ. ೦೩-೦೦೦). [ಸಂ. (ಬಿಸಜ + ಅಕ್ಷಿ + —)]

ಬಿಸಜಾಕ್ಷಿ (ನಾ). ತಾವರೆಯಂತೆ ಕಣ್ಣುಳ್ಳವಳು ; ಕಮಲಾಕ್ಷಿ : ಬಿಸಜಾಕ್ಷಿಯೂ ಮಾತ ಮುಜಿಟ್ಟು ಮನದೊಳಾರ್ಕೈವುತಿರಲು (ಪ್ರಾಕಥಾ. ೩-೨೪). [ಸಂ. ಬಿಸಜಾಕ್ಷೀ (ಬಿಸಜಾಕ್ಷ + —)]

ಬಿಸಜಾರಿ (ನಾ). ಕಮಲದ ಶತ್ರು ; ಚಂದ್ರ : ಬಿಸಜಾರಿ ಪಂಬೊಳೆ ವೀಕ್ಷಿಸೆ ಕಸಕಾದಿಗ್ರಹಂ ಮಹೀನಾಥಂ...ಅಕ್ಕುಂ (ಪಾಕಪ. ೫೦-೩). [ಸಂ.]

ಬಿಸಟಂಬರಿ 'ವಿಸಟಂಬರಿ' ನೋ.

ಬಿಸಣಿಗೆ 'ಬೆಸಳಿಗೆ' ನೋ.

ಬಿಸದಳೆ (ನಾ). = ಬಿಸವಂದ : (೪). [?]

ಬಿಸನಾಳ (ನಾ). ತಾವರೆಯ ದಂಟು ; ಮೃಣಾಳ : ಬುಲೆಲ್ಲಂ ಬಿಸನಾಳ ಜಾಲಕದಿನಾಗಳ್ಕೂಡೆ ಪೀರ್ತಂದುದು . . . ಎಂಬಿನಮೊಂದು ಬೆಳ್ವಿಳಗು ಪರ್ವತ್ತೆಯ್ದೆ ರೋದೋಂತಮಂ (ಕಾದಂಪು. ೦೦೩). [ಸಂ. ಬಿಸನಾಲ]

ಬಿಸನಿಧಿ (ನಾ). ಸಮುದ್ರ; ಕಡಲು : ಅಸಹಾಯಶೂರ ಹನುಮ ಬಿಸನಿಧಿಗೆ ಹಾರಿ ದಶಶಿರನ ಧಂಜಿಸಿ (ಪಚ್ಚೂ.ಣ. ೬೫-೨). [ಬಿಸ + ನಿಧಿ]

ಬಿಸಪ್ರಸೂನ (ನಾ).= ಬಿಸಜ : "ಸಹಸ್ರಪತ್ರಂ, ಶತಪತ್ರಂ . . . ಬಿಸಪ್ರಸೂನಂ . . . ಪಂಕಜಂ— ಈ ೧೭ ತಾವರೆ" (ಪಣಾಯು. ೦೦೨-೫೬); ಪಡಲಿಟ್ಟ ಪಡೆಯ ನೆತ್ತರ ಮಡುವಿನೊಳುಡಿದುಡಿದು ಕೆಡೆದ ಕರಿ ದಂತಂಗಳ್ ತಡಿವಿಡಿದ ಸುಭಟಶಿರಮುಂ ಪಡೆದುವು ತದ್ಬಿಸಬಿಸಪ್ರಸೂನದ ಸಿರಿಯಂ (ಪಾಪಕ. ೬-೦೦೬). [ಸಂ.]

ಬಿಸಮ್$_1$, **ವಿಸಮ** (ಗು). ಕೆಟ್ಟ ; ದುಷ್ಟ : ಬಿಸಮರಕ್ಕಸರ ಬೊಬ್ಬಾಟಮುಂ ಘಾಟುಮುಂ ಬಹುಭಯಂಕರಮಾದುದು (ಕಂಪ್ರ. ೪೪-೩೦). **ವಿಸಮ** : ಅತಿವಿಸಮ ಹಯಪ್ರವೃಧರೇಖಾರೇವಂತನುಂ ಪರಬಲಕ್ರಿತಾನ್ಸನುಂ (ಎಕ. XI, ಚಾಪಕ. ೦೬೨-೦೫: 1266) 'ಬೆಸ್ಕ' ಪರಾ.
[< ಪ್ರಾ. ವಿಸಮ./ಸಂ. ವಿಷಮ]

ಬಿಸಮ$_2$ (ನಾ). ಒಬ್ಬಾತನ ಹೆಸರು : ಶ್ರೀಮಾದವೆಯರಾಳ್ ಬಿಸಮ ನೆಮ್ಮೋ ಮನೆಮಗಡಿ ಅತ ಸಟ್ಟ ಕಲಕೆ ಒರ್ಮಕ್ಕು ಕೆಮ್ಮ ಕೊಟ್ಟೊರ್ (ಎಕ. XI, ೪೪೬-೩೦; ಸಾ. ೩೧೬). [ಬಿಸ + ಅಮ (<ಅಮ್ಮ)]

ಬಿಸಯ, ವಿಸಯ (ನಾ). ೧. ಇಂದ್ರಿಯಭೋಗ ; ವಿಷಯಸುಖ : ಬಿಸಯಕ್ಕೀಡಾದ ದೇಹಕ್ಕತಿಸುಕರವೆನಿಪನ್ನಪಾನೆಂಗಳಿಂ (ಪಾಶ್ವ. ೬೨). **ವಿಸಯ** : ೨. ದೇಶ ; ನಾಡು : "ವಿಷದು — ವಿಸಯ" (ಕಬುದ. ೨೪೬

ಕ್ರಮೋ). ಪಿ. ಸಮಾಚಾರ; ಸಂಗತಿ : "ವಿಸಯ–ವಿಷಯ=ಸಂಗತಿ. ದೇಶ" (ಕ್ರಿಕೋ. ೪೦). [<ಪ್ರಾ. ವಿಸಯ./ಸಂ. ವಿಷಯ]

ಬಿಸರ (ನಾ). ೧. ಸಮೂಹ; ಗುಂಪು : " ಬಿಸರಮನಲದು ಸಮೂಹಂ" (ಶಬ್ದ. ೭೬). ೨. ಅಧಿಕ್ಯ; ಹೆಚ್ಚಳ : ಸಗ್ಗಿಗರಾಣ್ಮನ ಫಲಕರಿಘಟೆಗಳ್ ಬೇಸಗೆಯ ಬಿಸರಕ್ಕೆ ಬಸವಟ್ಟುದು (ಶಾಕುಶ. ೩-೩). [< ಸಂ. ವಿಸರ]

ಬಿಸರುಹ (ನಾ). = ಬಿಸಜ : ಬಿಸರುಹದಳಂಗಳಿಂ ಪೊದೆಯುರ್ದ ಹಿಮ ಗೃಹವನವನಿಪಾಲಂ ಕಂಡುಂ (ಶಾದಶಾ. ೨೦೯); ಬಿಸರುಹ ರಥವಕ್ಕಿ ತಸ್ಕರ ಜಾರರ್ಗೆ ಬಿಸವಾದುದು ಶಶಿಕರಣ (ಹೊಚಕ. ೦೮-೩೨). [ಸಂ.]

ಬಿಸರುಹನೇತ್ರ (ನಾ). ಕಮಲದಂತೆ ಕಣ್ಣುಳ್ಳವನು ; ವಿಷ್ಣು. [ಸಂ.]

ಬಿಸರುಹನೇತ್ರಗಣ (ನಾ). [ಛಂದ] ಒಂದು ಅಂಶಿಗಣದ ಹೆಸರು ; ವಿಷ್ಣುಗಣ : ಬಿಸರುಹೋದ್ಭವಗಣಂ ರಸದಶಸ್ಥಾನದೊಳ್ ಬಿಸ ರುಹನೇತ್ರಗಣಮೆ ಬರ್ಕು (ಛಂಹೊಅಂಪ್ರ. ೩-೨೪೬). [ಸಂ.]

ಬಿಸರುಹನೇತ್ರೆ (ನಾ). ಕಮಲದಂತೆ ಕಣ್ಣುಳ್ಳವಳು: ಬಿಸರುಹೋದ್ಭವ ಗಣಂ ರಸದಶಸ್ಥಾನದೊಳ್ ಬಿಸರುಹನೇತ್ರಗಣಮಿ ಬರ್ಕುಬಾದುವು ಬಿಸರುಹನೇತ್ರೇ ತ್ರಿಪದಿಗೆ (ಛಂಹೊಅಂಪ್ರ. ೩-೨೪೬).

[ಸಂ. ಬಿಸರುಹನೇತ್ರಾ (ಬಿಸರುಹನೇತ್ರ +—)]

ಬಿಸರುಹಾಕ್ಷ (ನಾ). = ಬಿಸರುಹನೇತ್ರ : ಬಿಸರುಹಾಕ್ಷನ ಸದಿಯದಾರ್ಯ (ಗಣಿ. ೩-೨೦). [ಸಂ. (ಬಿಸರುಹ + ಅಕ್ಷಿ + —)]

ಬಿಸರುಹೋದ್ಭವ (ನಾ). = ಬಿಸಜಭವ. [ಸಂ.]

ಬಿಸರುಹೋದ್ಭವಗಣ (ನಾ). [ಛಂದ] ಮೂರಂ ಅಂಶದ ಗಣ ; ಬ್ರಹ್ಮಗಣ : ಬಿಸರುಹೋದ್ಭವಗಣಂ ರಸದಶಸ್ಥಾನದೊಳ್ ಬಿಸರುಹ ನೇತ್ರಗಣಮೆ ಬರ್ಕುಬಾರುವು ಬಿಸರುಹನೇತ್ರೇ ತ್ರಿಪದಿಗೆ (ಛಂಹೊಅಂಪ್ರ. ೩-೨೪೬). [ಸಂ.]

ಬಿಸರುಹಾಸನ (ನಾ). ಕಮಲವನ್ನು ಆಸನವಾಗುಳ್ಳವನು : ಬ್ರಹ್ಮ : ಶಶಿ ರವಿ ತ್ರಾಸಲೀ ಪುರವ ಸಗ್ಗವನೊಲ್ಲಂ ಬಿಸರುಹಾಸನ ತೊಗುತಿರಲು (ಶಂಪ. ೩-೪). [ಸಂ.]

ಬಿಸರೇಖೆ (ನಾ). ವಿಷದ ಗೆರೆ : ಎಲುದೊಡಿಗೆ ಫಣಿಕುಂಡಲ ಕೊಲುವ ಬಿಸರೇಖೆ ಕೊರಲೊಳ್ (ಪಾಚಾಪು. ೪-೭). [ಬಿಸ + ರೇಖೆ]

ಬಿಸಲಡಿಗೆ 'ಬಿಸಿಲಡಿಗೆ' ನೋ.

ಬಿಸಲತೆ (ನಾ). ಕಮಲದ ಬಳ್ಳಿ : ಬಿಸಲತೆಯೊಳಂ ಪೆಯ್ದಂಲ ಸಣ್ಣ ಕಾವಿನೊಳಂ. . .ಬೇಱೆವೇಱೆ ಸುಕ್ಷಿ ಸೊವಡಿಂಗೆಬಗಿದ ಮಱೆದುಂಬಿಯೆ ಮುದ್ರೆಯಾಗೆ ತಂದು ಮುಂದಿಟ್ಟಿ (ಶುಕ್ಷ. ೩-೪೪). [ಸಂ. ಬಿಸಲತಾ]

ಬಿಸವಂದ (ನಾ). ವಿಸ್ಮಯ : ಆಶ್ಚರ್ಯ ; ಸೋಜಿಗ : "ಬಿಸವಂದಮೆನೆ ವಿಸ್ಮಯಾರ್ಥಮಕ್ಕುಂ" (ಕ್ರಿಕೃ. ೨೪) : ಅದಱಂದಂ ಬಿಸವಂದಂ (ಹಂಚಾ. ೬-೩); ನೀನೆನಗಿದ ಬಿಸವಂದಮಂ ಪೇಱಿಸಲ್ (ಜಾಬಾ. ೭-೪ ಪ).

[?-/ ಸಂ. ವಿಸ್ಮಾಪನ]

ಬಿಸವಂದಂಗೊಳ್ (ಕ್ರಿ). ಆಶ್ಚರ್ಯ ಹೊಂದು ; ವಿಸ್ಮಯಪಡು : ಅಗಳ್ ರಾಯನಿಂತೀ ತೆಱದ ಮೊರೆಯಂ ಕೇಳ್ದು ಬಿಸವಂದಂಗೊಂಡು . . . ಬಂದು (ರಾಶಾಕ್ಷ. ೦೦೬-೭). [ಬಿಸವಂದ + ಕೊಳ್]

ಬಿಸವಲ್ಲರಿ (ನಾ). = ಬಿಸಲತೆ : ಜನಶಿಶುವ ಕೋಮಳಾಮಳತನು ಸವನ ವಯಃಪ್ರವಾಹದೊಳ್ ಸೊಗಯಿಸಿದತ್ಪನಿಮಿಷರ ಕಣ್ಗೆ ಗಂಗೆಯ ಪೊಸಲೊಳ್ ನಳನಳಿಸಿ ವಿಸುವ ಬಿಸವಲ್ಲರಿಯೊಲ್ (ಹಂಕ್ರಿ. ೦೪-೦೫೯).

[ಸಂ.]

ಬಿಸವಲ್ಲಿ (ನಾ). =ಬಿಸಲತೆ : ಲಲಿತಕರತಲಮೊಂದಿ ಮೆಱಿವ ನಳಿತೋಳ ರುಣಾಲಬವಾಂತೆಸೆವ ಬಿಸವಲ್ಲಿಯಂ ನೀರ್ವೊಗಿಸೆ ಸಲೆ ಕೊರಲ್ ಜಡಜಾತ ಶಂಖಮಂ ಝಂಕಿಸೆ (ಚಿಕ್ಕಾ. ೩-೨೪). [ಸಂ. ಬಿಸವಲ್ಲೀ]

ಬಿಸಸನ 'ವಿಸಸನ' ನೋ.

ಬಿಸಸಿತ (ನಾ). ತಾವರೆಯ ದಂಟಿನ ಬಿಳಿಯ ಬಣ್ಣವುಳ್ಳದು : ಎನಗಾಸೆದೋಱೆ .ಬಿಸಸಿತಮೆನಿಸುವ ನಿಜತಾರಹಾರಲತೆಯಿಂದಂ . . . ಮದೀಯಾಭಿಮಾನವಂ ಕಟ್ಟೊಯ್ದಾ (ಶಾದಂಪು. ೩೦೩). [ಸಂ.]

ಬಿಸಸೂತ್ರ (ನಾ). ಕಮಲದ ದಂಟಿನ ನಾರು ; ತಾವರೆದಂಟಿನ ದಾರ : ಬಿಸಸೂತ್ರದ ಕಟಸೂತ್ರಂ ಪೊಸದುಗುಲದ ಕೋವಣಂ ಕಮಂಡಲು ರಾರಾಜಿಸೆ ದಂಡವಾಣ ಪೊಕ್ಕಂ . . . ನೃಪಸಭೆಯಂ (ಪಂಚಾಚಾ. ೩-೦೯) ; ಪವಿತ್ರಬಿಸಸೂತ್ರವೃತಂ ನವಪಿಷ್ಟಚರ್ಚಿತಾಶಸ್ರಮು ವಾತ್ರದರ್ಭರಚನಂ . . . ಪೂರ್ಣಕಲಶಂ ತಳೆದತ್ತುಳಂ ವಿಳಾಸಮಂ (ಹಂಧ್ರತ್ರಿ. ೬-೩೩). [ಸಂ.]

ಬಿಸಾಕು 'ಬೀಸಾಕು' ನೋ.

ಬಿಸಾಟು 'ಬೀಸಾಡು' ಪರಾ.

ಬಿಸಾಡಿಸು (ಕ್ರಿ). ವಿಸರ್ಜಿಸುವಂತೆ ಮಾಡು : ಪರ್ಣಫಲು ವಿದ್ಯೆಯಿಂದಾಕೆಯನಾಕ್ಷಣದೊಳ್ ಕೊಂಡೊಯ್ದೊಂದು ಕಟ್ಟಡವಿಯೊಳ್ ಬಿಸಾಡಿಸಲ್ (ಕೃಕ್ಸಾಸ್ಪ. ೦-೪೨ ಪ).

[ಬಿಸಾಡು (< ಬೀಸಾಡು) + — ಇಸ್ಕು]

ಬಿಸಾಡು 'ಬೀಸಾಡು' ನೋ.

ಬಿಸಾತು (ನಾ). ಗಣನೆ ; ಲಕ್ಷ್ಯ : ತನ್ನೆದುರಿಗೆ ಯಾರದೇನು ಬಿಸಾತು ? (ಜಾಕೃ(೦೬. ೦೨೪) : ಕದ್ದು ಕದ್ದು ಕೇಳಿ ಗುಸುಗುಸು ಯಾಕೆ ಮಾತಾಡ್ತೀರಿ . . . ಯಾರಪ್ಪನ ಬಿಸಾತು ಇಲ್ಲವೋ (ಹುಕಥಾ. ೦೫೦) ; ಈ ಒಕ್ಕಲಿಗರಿಗೆ ಅಂಜುವುದೇಕೆ ? ಅವನ ಬಿಸಾತೇನು (ಶಾಹಾಂ. IV, ೩೩).

[<–ಹಿಂ. ಬಿಸಾತ್: ಮರಾ. ಬಿಸಾತ್, ಬಿಸಾದ್, ಬಿಳಾದ್, ಬಿಶಾತ್. ತುಳು. ಬಿಸಾತ್ ; ತೆಲು. ಬಿಸಾತು]

ಬಿಸಿ (ನಾ). ೧. ಕಾವು ; ಶಾಖ : ಹೊಸ ಜಾಲ ಪನಿಗಳಡಿಸಿದ ತೆಱದ ತೆನೆಗಳಂ ತೀಡಿತೀಡಿದು ತಂದು . . . ರಸವುಳ್ಳ ಹಸುರುಳ್ಳ ಬಿಸಿಯುಳ್ಳ ಹುಯ ಕೆಂಪುಳ್ಳವಲಿನಿತ್ತು (ಕಿದ್ಧಣ. ೨-೨೯); ಬಿಸಿಯ ಕಂಡರೆ ಬೆಣ್ಣೆ ಕರಗಿದಲ್ಲದೆ ಮಾಣ್ಬುದೆ (ಸಿಕ್ಕಚ. ೦೩೬-೩೦). ೨. ಶಾಖದಿಂದ ಕೂಡಿರುವುದು ; ಉಷ್ಣದಿಂದ ಕೂಡಿರುವುದು : ಕುಸುಮಾಂಗಳೆಂಬ ಮಾತದು ಪುಷ ದಹನಮಯಂಗಳಂಬುಗಳ್ ಮನಸಿಜನಾ ಜಸಮಬ್ಬಿಯೆ ಸುಡುವು[ವೆರ್ದೆಯಂ ಬಿಸಿಯವೆಂದಿಂತೆ ಪೇಱ್ ಧರ್ಮಾಪೋಹಂ (ಕಾಚಾ. ೬-೦೩೩); ಆದೇಂ ಬಿಸಿಯವೊ ಜಯಲಕ್ಷ್ಮೀರಮನಲಶರಂಗಳ್ (ಕಾಪ್ರ. ೦೩-೬೪); ತಾಳ್ದಾ ವಿರಹದೋಕೆಗೆ ಬೆರ್ದಿಂಗಳ್ ಬಿಳಿಯ ಕಿಚ್ಚಾಗಿ ಸುಟ ಬಿಸಿ (ನಾಕ. ೯-೦೦೭). ೩. ಬೆಂಕಿ : ಅಗ್ನಿ : ' ಬಿಸಿಗಣ್ಣಿ ' ಪರಾ. ೪. ತೀಕ್ಷ್ಣತೆ : ಪ್ರಖರತೆ : 'ಬಿಸಿನಗೆ' ಪರಾ. (ಗು). ೫. ಬೆಚ್ಚನೆಯು ; ಕಾವಿನಿಂದ ಕೂಡಿರುವ : ಹೊಸತಪ್ಪದಿಂದೆ ಕಲಸಿದ ಸಕ್ಕರೆಯನಿಕ್ಕಿಯಟ್ಟ ಹೂರಿಗೆಯ ಬಿಚ್ಚಿ ಬಿಸಿಯೋಡಿನೊಳಗಿಕ್ಕಿ ಖಂಡವಂಡಕವೆಂಬ ಹೆಸರಾಯ್ತು (ಹೂಕಣ. ೦-೨೬).

ಬಿಸಿಬಿಸಿ (ದ್ವಿರುಕ್ತಿ) : ಬಿಸಿಬಿಸಿಯೋಗರಂ ಕೆಲದ ಸೋಡಗೆ ತಿಳ್ಪೊಳು ದುಪ್ಪಮುಪ್ಪಗಾಯ್ ಮೊಸರ್ (ಸಿಕ್ಕಸು. ೦೦-೨೬೩) ; ಅಸಿಪತ್ರವನದ ಜ್ವಾಳಗ್ಗೊಗಿಸಿ ನಿಪ್ಪ ಬಿಸಿಬಿಸಿ ಖಂಡವ ಹೊಱಡಿಸಿ (ಪ್ರಭಂಪ್ರ. ೦-೦೪೨-೪) : ಬಿಸಿಬಿಸಿ ಅನ್ನ ಸಾರುಗಳನ್ನು ಬೇಗ ಬೇಗ ಬಡಿಸಿ ಮುಂದು ವರಿದರು (ಪಾಕಶು. ೧೪). ಬಿಸಿಬೇಳೆಭಾತು = ಅಕ್ಕಿ. ಬೇಳೆ ಮತ್ತು ಕೆಲವು ತರಕಾರಿಗಳನ್ನು ಒಟ್ಟಿಗೆ ಬೇಯಿಸಿ, ಮಸಾಲೆ ಪದಾರ್ಥ ಗಳನ್ನು ಬೆರಸಿ ಮಾಡುವ ಒಂದು ಬಗೆಯ ಕಲಸನ್ನ : ಆಮಂತ್ರಿಸಿದ ಉವಾಹಾರಕ್ಕೆ ಬಿಸಿಬೇಳಿಭಾತು ಮತ್ತು ಗುಲಾಬಿಜಾಮೂನು ಮಾಡಿ ದ್ದಾರೆ (ಕಾಪ್ರ). ಬಿಸಿ ಮಾಡು = ಬೆಚ್ಚಗೆ ಮಾಡು ; ಕಾಯಿಸು :

ರೇವೆಯನ್ನು ಕಬ್ಬಿಣದ ಕೊಪ್ಪರಿಗೆಯೊಳಗೆ ಹಾಕಿ . . . ಬಿಸಿ ಮಾಡು ಕ್ವಾರೆ (ಶುಂಠಿಪ್ರ. ೪–೫೩) ; ಕೇಸರಿಯನ್ನು ಬಿಸಿ ಮಾಡಿ, ಅನಂತರ ಪುಡಿ ಮಾಡಿ ನೆನೆ ಹಾಕಬೇಕು (ಆಯುರ್. ೮೪). ಬಿಸಿಯಾಗು = ೧. ಕಾದು ಬೆಚ್ಚಗಾಗು ; ಉಷ್ಣತೆಯನ್ನು ಹೊಂದು : ಬಿಸಿಯಾಗಿರುವಾಗಲೇ ಬಡಿಸಿರಿ (ಆಯುರ್. ೦೦೬). ೨. ಉದ್ರೇಕಗೊಳ್ಳು : ಕಾವೇರು : ಶಶಿಯ ನೇಮದೆ ಕರ ಚರರು ಕೋಪವ ತಾಳಿ ಬಿಸಿಯಾಗಿ ಏಳರ ಪೂರ್ವ ಲಲೆ ಮುಸುಕಿ ಕಗ್ಗೊದೆಗ್ಕೆದಿದೊಲು ಚಂದ್ರಜ್ಯೋತಿಗಳೆಸೆದುವು ವಾಳಯದೊಳಗೆ (ಕಂಪಿ. ೦೪–೦೦). [ದೇ.ಪ್ರ ತುಳು. ಬಿಸಿ, ಬಿಪಿ ; ತೆಲು. ಬಿಸಿ]

ಬಿಸಿಗ (ನಾ). ಶಾಖದಿಂದ ಕೂಡಿದವನು : ರಾಜಾಧಿವನೆಂಬೆನೆ ಪಪ್ಪಪುಷ್ಪ ಸರೋಜಾಪ್ತನೆಂದೆನೆ ಬಿಸಿಗ ತೇಜೋಮಯ ಕಂದ ಬಾರೆಂದು ರತಿ ಬೃಹದ್ಬೀಜಕ್ಕೆ ಮುತ್ಸನಿಕ್ಕುವಳು (ಕೋಚಕ. ೦೩–೬೩). [ಬಿಸಿ + ಅಗ]

ಬಿಸಿಗಣ್ಣ (ನಾ). ಬೆಂಕಿಯಂ ಕಣ್ಣನ್ನು ಹೊಂದಿದವನು : ಶಿವ : ಇತ್ತ ಬಿಸಿಗಣ್ಣನೊಡನೆ ಕಾದುವನೆಂದು ಕಾಮ ತನ್ನಸಿಯಳ ಕೂಡೆ ಪೇಳಿದನು (ಕೋಚಕ. ೬೨) ; ಕರ್ಮವ ಸುಟ್ಟರುಹನಾ ಪಡೆಗಣ್ಣನೆಂಬರು ಬಿಸಿಗಣ್ಣನೆಂಬರು ಗುಣನಾಮವವ ನೋಡುವಾಗ (ಕರಿಪ. ೭೭–೦೭೭).

[ಬಿಸಿಗಣ್ಣ + –ಅ]

ಬಿಸಿಗಣ್ಣು (ನಾ). ಬೆಂಕಿಯ ಕಣ್ಣು ; ಅಗ್ನಿನೇತ್ರ : ಶಶಿಧರ ಮುಪಿದು ಬಿಸಿಗಣ್ಣ ತೆಱೆದರೆ ಶಿವಶರಣರದನ್ನು ಮಮಸಗೆ ತಾರರು (ಅಪಪಂ. ೨೦೫–೧೭); ನೊಸಲ ಬಿಸಿಗಣ್ಣನೇಱೆಂದು ಶಿವಲಿಂಗಮಂ ಮುಸುಕಿ ಬೆಳಿದುತ್ತ ಭೂಂಗವನು ಬಾವೆಂದು ದಿಟ್ಟಿಸಿ ನೋಡದೆ . . . ಶಂಕಿಸಿ (ಸಿದ್ಧಂ. ೨–೪).

[ಬಿಸಿ + ಕಣ್ಣು (<ಕಣ್)]

ಬಿಸಿಗದಡು (ನಾ). ಬೆಚ್ಚನೆಯ ಕಲ್ಲು : ಸಾಸಿವೆಯ ಬಿಸಿಗದಡು ಬೀಳೆ ಜಠರಾಗ್ನಿಯೊಳ್ ಕೇಸುರಿಗಳುದ್ಭವಿಪುವು (ಪಾಪು. ೮೨–೮೪).

[ಬಿಸಿ + ಕವಡು]

ಬಿಸಿಗದಿರ್ (ನಾ). ಶಾಖವಾದ ಕಿರಣ ; ಶಾಖವುಳ್ಳ ರಶ್ಮಿ : ಇಳಾತಳಮಂ ನಿರಂತರಂ ಬಿಸಿಗದಿರಿಂದೆ ನೋಯಿಸಿದ ಪಾಪಮನಿಲ್ಲಿಯೆ ವೀಗಲೆಂದು . . . ಇಸನೆಯಿಂದನಸ್ತಶೈಲಮಂ (ಸೂಕ್ತಿಮು. ೮–೮).

[ಬಿಸಿ + ಕದಿರ್]

ಬಿಸಿಗದಿರ (ನಾ). ಶಾಖವಾದ ಕಿರಣಗಳನ್ನುಳ್ಳವನು ; ಸೂರ್ಯ : ಬಿಸಿಗದಿರನು ಹುಟ್ಟಿ ಪೂರ್ವಾಚಲದಿ ರಂಜಿಸಿದನು (ಕೋಚಕ. ೪–೮೫) ; ಬಿಸಿಗದಿರನಾವರೋ ಬೆಂಕಿಯನ್ನು ಕಾರುತ್ತಿದ್ದನು (ಸೂಕ್ತಿಸು. ೨೦೬).

[ಬಿಸಿಗದಿರ್ + – ಅ]

ಬಿಸಿಗದಿರ್ಪಟ್ಟು (ನಾ). ಸೂರ್ಯಬಿಂಬ : ಬಿಸಿಗದಿರ್ಪಟ್ಟಿಂಬ ಕಂಬಿಯಚ್ಚಿಂ ಕಾಲವೆಸಪ . . . ಕನಕಪ್ರಭೆಯ ಹೊಸಹೊಸ್ಸ ಸರಿಗೆದಿಗವ ಸುತ್ತುಗಂಧದೊಂದಸಕವಾಯಿತು ಮೇರುತಿಖರಿ (ಕ್ರಶಂಪ. ೦–೫೦).

[ಬಿಸಿಗದಿರ್ + ಪಟ್ಟು]

ಬಿಸಿಗಮ್ಮ (ನಾ). ಶಾಖೋತ್ಪತ್ತಿ ಮಾಡಂವವನು ; ಸೂರ್ಯ : ಕಮಲಚಯ ಬಿಸಿಗಮ್ಮನುದಿಸಲು ವಿಕಸನವನೈದಿದೊಲು (ಪಪಪಚ. ೫೬–೫೩). [ಬಿಸಿ + ಕಮ್ಮ]

ಬಿಸಿಗಾಣ್ (ಕ್ರಿ). ಶಾಖವನ್ನು ಪಡೆ : ಕಾವುಗೊಳ್ಳು : ಬಿಸಿಗಂಡ ಪೊನ್ನ ಪತ್ಥಳಿಯ ಪೊರೆದ ವಾದರಸವಾಱದ ತೆಱನಾಯ್ತು (ಕ್ರಿಪಾಂಡ. ೪–೬೮).

[ಬಿಸಿ + ಕಾಣ್]

ಬಿಸಿಗಿರಣ (ನಾ). = ಬಿಸಿಗದಿರ್ : ಪಾಂಡ್ಯದ ಧೊರೆಯ ದುರ್ಧರ ತೇಜದಿಂ ಬಿಸಿಗಿರಣ ತೆಂಕಣದಿಕ್ಕಿನಲಿ ಸಂಚರಿಪ ಕಾಲದಲಿ ಧರಿಸುವನು ಸೌಮ್ಯತೆಯನು (ಚಾಪು. ೪೯–೯೯). [ಬಿಸಿ + ಕಿರಣ]

ಬಿಸಿಗುಂದು (ಕ್ರಿ). ಕಾವು ಕಡಮೆಯಾಗು– ಕುಗ್ಗು : ಕಾದುವ ಕೆಯ್ದು ಪೋದುದೆನುತಳ್ಕಿದನೇ . . . ಸಾರವೀರರಸಮೇಂ ಬಿಸಿಗುಂದಿದುದೇ (ಕಂಪ. ೪-೩೭). [ಬಿಸಿ + ಕುಂದು]

ಬಿಸಿಗೂಡು (ಕ್ರಿ). ಬೆಚ್ಚಗಿರುವ ಆಹಾರವನ್ನು ಬೆರೆಸು : ಹುವಿಲ್ಲದುಣಬೇಡ ಹಸಿದು ಮತ್ತಿರಬೇಡ ಬಿಸಿಗೂಡಿ ತಂಗೂಳುಣಬೇಡ (ಸೂರ್ಯಶ. ೨೦೦೦). [ಬಿಸಿ + ಕೂಡು]

ಬಿಸಿಗೂರ್ (ನಾ). ಒಂದು ಊರಿನ ಹೆಸರು : ಶಿವಮಾರೆಱೆಅಪ್ಪ ಕಣುಂಗಿಲ್ಲಾಡಾಳೆ ಬಿಸಿಗೂರುಳ್ಳಬ್ಬ ಪ್ರಜೆಗೆಲ್ಲಂ ಕೊಟ್ಟೊಡಾ (ಪ್ರಸಂ. ೦೯೦೩, ೦೯–೯ ; ೩೦೦). [? + ಊರ್]

ಬಿಸಿಗೆ 'ಬೀಸಗೆ' ನೋ.

ಬಿಸಿಗೆಲಸ (ನಾ). (?) : ಬಿಸಿಗೆಲಸದಲ್ಲಮ್ಮ ಕಕ್ಕಯ್ಯ ಬಂದಯ್ಯ ಪನಿಗೆಲಸದ ಮಲ್ಲಯ್ಯ ಧಾರಯ್ಯ ಭೋಗಯ್ಯ (ಅಂಗಕ್ಷ ೨೪–೩೨). 'ಪನಿಗೆಲಸ' ಪಠಾ. [ಬಿಸಿ ? + ಕೆಲಸ]

ಬಿಸಿದು (ನಾ). ೧. ಶಾಖದಿಂದ ಕೂಡಿರುವುದು: ಬಿಸಿಯಾದುದು : ಸುಯ್ ಪೊದಬ್ದು ಬಿಸಿದುಂ ಕಮ್ಮಿತ್ತುಮಾಪ್ಪೋವಳಾ (ಶಾಪ್ಯಶಾ. ೩೬೬ ೩೦೨೪); ಕರಂ ಬಿಸಿದಾಗಿ ಕಾಸಿ ಕಳ್ಳನೆ ಕೆಡಯಿತ್ತಿ ಬಾಯೊಳೆಱಿವರ್ (ಸಮುಪ. ೦೦–೭೩); ಬಿಸಿದವ್ವ ತುಜ್ಪಮನೆಱೆಯದೆ ಶಿರು ನುಂಗಿದಂತೆ (ರಹೋಕ್ಕು. ೪–೦೦). ೨. ಕ್ಷೀಣವಾದುದು; ತಾಪಕರವಾದುದು: ಪ್ರಖರವಾದುದು : ಉಸಿರ್ದೊಡೆ ಬಗೆ ತೀಗುಂ ಬಿಸಿದುಂ ಬೆಚ್ಚತ್ತು ಮುಸಿರದೇಂ ತೀರ್ದಪುದೇ (ಹಂಪಭಾ. ೪-೩೩); ನುಡಿ ಸುರಚಲಬಿಸ್ಪಜಲಂ ಪರಾಕ್ರಮಂ ಖರಕರತೇಜದಿಂ ಬಿಸಿದು (ಜಿ. ii, ೦೩೩–೩೬; ೨೫೩).

ಬಿಸಿಯಂ = ತಾಪದಿಂದ ಕೂಡಿರುವಪನು: ಸೂರ್ಯ : ಬಿಸಿಯುಂ ತಣ್ಣಿದನಪ್ಪ ಪೊಲ್ ಕಡಲೊಳಿರ್ದೋಲಾಡೆ ಚಿಂಡಾಂಶು (ಅಂಗಾಪ ೭–೩೩).

[< ಬಿಸಿ]

ಬಿಸಿನಗೆ (ನಾ). ತೀಕ್ಷ್ಣವಾದ ನಗೆ ; ಪ್ರಖರವಾದ ನಗೆ : ಬಿಸಿನಗೆ ಯಾವುದು ತಣ್ಣಗೆಯಾವುದು ಪುಸಿನಗೆ ಮುಗುಳುನಗೆಗಳು ರಸನಗೆಯಿಳೆ ನಗೆಯಿಂಬಿವೆಂತಿಪವೆಂದು ನಸನಗುತವಳು ವಾಡಿದಳು (ಪಪಪ. ೦೦–೩೦).

[ಬಿಸಿ + ನಗೆ]

ಬಿಸಿನಿ (ನಾ). ೧. ತಾವರೆಯು ಗಡ್ಡೆ : "ಕಂದಃ. ಬಿಸಿನಿಃ. ನಳಿನೀ– ಈ ೩ ಅವಱ ಗೆಡ್ಡೆ" (ಪಾಪಮು. ೦೦೨–೩೦); "ಸಾರಸದ ಗಡ್ಡೆಯದು ಕಂದಂ ಬಿಸಿನಿಯಕ್ಕುಂ" (ಶುಂಗಣ. ೦೨೪–೦೭). ೨. ತಾವರೆಯ ಬಳ್ಳಿ : ಬಿಸಿನಿ ಬಿಸಮಿಲಸುಬ್ಬೆಳೆಬಂತೆ ಬಿಗಿದುಬ್ಬು ವಿಸುನಿವಬ್ಬಿ ವಿಸುಗುತ್ತಿರೆ (ರಾಪಪೀ. ೫-೦೯ ೫). [ಸಂ. ಬಿಸಿನೀ]

ಬಿಸಿನೀರ್, ಬಿಸಿನೀರಂ (ನಾ). ಕಾದ ನೀರು: ಸಂಡುವ ನೀರಂ : ಸುಂಟಿ ತಿಂದ ಬಾಯೊಳ್ ಬಿಸಿನೀರಂ ಕುಡಿದರಂತೆ ವಿಡುವಿಡುವಿಡುವೆ (ರಹೋಕ್ಕು. ೦೦–೦೪೨ ೫); ಚಲದಿಂ ಪುಂಡಳೇಸಗ್ಗೆರ್ ಬೇರೆಱ್ಚಿಸಿನೀರಂ ಪೊಯ್ದಂ (ಜಿ. xii. ರಾಪಪ. ೪೨–೫೨ ; ೧೨೭); ಬಿಸಿನೀರಲ್ಯಾಡೆ ವಾತ ಪ್ರಶಮಿಸುಗುಂ (ಅಕ್ಷಶಾ. ೫–೪೭). ಬಿಸಿನೀರು : ಪೊಂಬಡಿಗವ ಸಾರ್ಚಿ ಬಿಸಿನೀರ ಗಿಂಡಿಯೊಳ್ ತಂದು ಕಾಲ್ದೊಳೆಯೆ (ಕೋಚಕ. ೦೪–೫೪) ; ಮುಡಿವಳೆರ್ ಬಿಸಿನೀರ ಕೇಣಿಗರ್ ಜೂಜುಗಾಜಿರ್ ಮುಖ್ಯರೊದಗಿ ಬರುತಿರ್ಪರೆಂ ವರ್ಣಿಸುವೆಪಾ (ಕಂಪ್ರ. ೪೭–೪೦). [ಬಿಸಿ + ನೀರ್]

ಬಿಸಿನೀರು 'ಬಿಸಿನೀರ್' ನೋ.

ಬಿಸಿನೆತ್ತರು (ನಾ). ಬೆಚ್ಚನೆಯಂ ರಕ್ತ: ಬಿತ್ತರಿಸಿದುವಂಬುಗಳು ಮೆಯ್ಯೊಳು ಬಿಸಿನೆತ್ತರ ಬಿಸುವಂತಗೊಳಿಸಿ (ಕೋಚಕ. ೪೬–೪೨) ; ವೀರರಸೊತ್ತರಿಸಿ ಮೇಲುಕ್ಕುವಂದದಿಂ ಬಿಸಿವ ಬಿಸಿನೆತ್ತರಿಸದಿರೆ (ಕೃಎಂಪಾ. ೦೨–೨೩).

[ಬಿಸಿ+ ನೆತ್ತರು (< ನೆತ್ತರ್)]

ಬಿಸಿಮಸಗು (ಕ್ರಿ). ಶಾಖವು ಹೆಚ್ಚಾಗು; ಉಷ್ಣತೆಯೇರು : ದಡ

ಬಡಿವೆರ್ದ್ ಬಿಸಿಮಸಗುವ ನಿಡುಸುಯ್ ಕಂಪಿಪ ಕರಂಗಳ್ (ಕೃತಾ-೯-೬೨). [ಬಿಸಿ + ಮಸಗು]

ಬಿಸಿಕೊತ (ನಾ). = ಬಿಸಿನೆತ್ತರು : ಮಸೆಯ ಮೈಗಳೊಳೊಜೆವುಡಿರ್ದ್ವು ಬಿಸಿಕೊತ (ಕುಣ್ಮಕ್ಕ್ರಿ. ೦೪-೯); ಅಱೆಯಟ್ಟಿ ಬಿಳಿರ ಖಂಡಿಸಿ ಬಿಸಿಕೊತ ಕೆಂದೂಱಿಯೊಳು ತೊಳೆದ ಚಕ್ರವನು (ಹೂಆಕ. ೦೩-೬): ಹೃದಯದ ಬಿಸಿಕೊತವ ಬಸಿದು . . . ಕುದಿದು ಕಂಗಡುವೀ ದಾಳನು ತೊಳೆದು (ಚಿಸಾಪ್ರ. ೦-೩). [ಬಿಸಿ + ರಕೊತ]

ಬಿಸಿರಕ್ಕ (ನಾ). ೧. = ಬಿಸಿನೆತ್ತರು : ದುಜ್ಜಾದುಜ್ಜಿಪ ಬಿಸಿರಕ್ಕ ವೇಜಿನೊಳೊಜೆತೆ ಮಸಗಿತು (ಕುಪ್ಪಾಳ. ೦೧-೪) ; ಬಿಸಿರಕ್ತವ ಧೂತಕಿರದೆ ಚಿಲ್ಲಿದರಾಕ್ಷಣದೆ (ಕಂಚಿಪ. ೦೫-೩೭). ೨. (ಅಲಂ) ಹರೆಯದ ಉತ್ಸಾಹ: ಎಂತಹ ಪರಿಶ್ರಮವಪಡಬೇಕೆಂಬುದು ಆ ತರುಣರ ಬಿಸಿರಕ್ತಕ್ಕೆ ಗೋಚರವಾಗಲಿಲ್ಲ (ಜಂಗಸ. ೦೪). [ಬಿಸಿ + ರಕ್ತ]

ಬಿಸಿಲ್, ಬಿಸಿಲು (ನಾ). ೧. ಸೂರ್ಯನ ಪ್ರಖರವಾದ ಬೆಳಕು.– ಪ್ರಕಾಶ : ಬಿಸಿಲಂ ಬೆಳ್ದಿಂಗಳುಮಂ ಪಸರಿಸಿ ಕಟ್ಟಲೆ ತೆರಳ್ದು ತೂಳ್ದೋಡೆ(ಆಪ್ತ. ೦೭-೩೦). 'ಬಿಸಿಲ್ಗುದುರೆ', 'ಬಿಸಿಲ್ಮಬೆ' ಪರಾ. ೨. ಸೂರ್ಯನ ಪ್ರಕಾಶದಿಂದುಂಟಾಗುವ ತಾಪ.– ಬಿಸುವು.–ಕಾವು : ನಡುವಗಲ ಬಿಸಿಲ್ ತನ್ನಂ ಸುಡೆ ವನಕರಿ . . . ಸರಸಿಜಮಂ ಕಿಡಿಸಲ್ ತಾಂ ಪೊಕ್ಕುದಾಗ ತೊಳನಂ (ಕಣಾ. ೩-೦೦೩). 'ಬಿಸಿಲ್ಗಾಯ್' ಪರಾ. **ಬಿಸಿಲು** : ೧. 'ಬಿಸಿಲುಗೊಳ್', 'ಬಿಸಿಲುಗೋಲು' ಪರಾ. ೨. "ಬಿಸಿಲು ರೌದ್ರವದಾತಪಾಖ್ಯಮೆನಿಸಿಕ್ಕುಂ" (ಪುಂಗಣ. ೦೦-೨); ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು (ಚಪ್ರ. ೨೦೯); ಬಲು ಬಿಸಿಲೊಳುಱ್ ನೊಂದ· ನೈದಿಲೆಗಳಿಗೆ ಚಂದ್ರಿಕೆ . . . ಅಂತಿರೆ ಪಾರ್ಥ ಮೈದೋಱಿದನು ನಿಜಬಲಕೆ (ಕುಣ್ಮಕ್ಕ್ರಿ. ೩-೪೩); ತಲೆ ಮಚ್ಚು ಕತ್ತಿನ ಹಿಂಭಾಗ ನೇರ ಬಿಸಿಲಿನಿಂದ ಕಾಯುತ್ತಿರುವಾಗಲೂ . . . ವ್ಯಕ್ತಿ ಬಿಸಿಲ ಧಕ್ಕೆಗೆ ಈಡಾಗುವುದಿದೆ (ಕರ್ಮಕ. XII. ೦೫೮).

ಬಿಸಿಲ ಕುದುರೆ = ಬಿಸಿಲ್ಗುದುರೆ ೨ : ಇದನ ಬಾಳೇ ಹೀಗಾಯಿತಲ್ಲ– ಬರಿಯೆ ಬಿಸಿಲ ಕುದುರೆಯ ಹಿಂದೆ ಓಟ (ಪುಷ್ಪಾಜಾ. ೦೫೩). ಬಿಸಿಲ ಹೊಳೆ– ಬಿಸಿಲ್ಗುದುರೆ ೨ : ತೃಷೆ ಮೊದಲು ವಿಷಯಾಧಿಲಾಷೆಯ ಬಿಸಿಲ ಹೊಳೆಯೊಳಗಾಡಲೆಂದೀಪ್ಸಿಸಿ ಪರಿಭ್ರಮಿಸುವನು ಮಾಯಾಮೃಧಮತಿ (ಜಿಕಾಗ. ೩-೪-೩). [ದೇ.ತೆ ತಮಿ. ಮಲ. ಪೆಯಲ್; ಕುಳು. ಬಿಸಿಲು]

ಬಿಸಿಲಕ್ಕೆ (ನಾ). ಬಿಳಿಯ ಅಕ್ಕೆ ; ಬೆಳತಿಗೆಯಕ್ಕೆ : ಬಿಸಿಲ [ಪ್ರಾಕೃ. ಬದಿರ. ಬಿಸಲ. ಬೀಸ]ಕ್ಕಿಯಂ ತೊಳೆದು ನೀರಂಬಿಲದಲೆಸಜ್ಜಿಸೆಸದು ಪೊಳೆಗತ್ತಿಯಕ್ಕಿಯ ಹಾಕೆ (ಜಿಪಾಕಾ. ೩-೩೩). [? + ಅಕ್ಕಿ೧]

ಬಿಸಿಲಡಿಗೆ, ಬಿಸಲಡಿಗೆ (ನಾ). ಮದುವೆಯ ದಿನದ ಹಿಂದಿನ ವರಪೂಜೆಯ ದಿನದ ರಾತ್ರಿ ಊಟಕ್ಕಾಗಿ ಸಿದ್ಧಪಡಿಸುವ ಆಹಾರ ಪದಾರ್ಥ.– ಅಡುಗೆ ; ಈ ಇದು ರಾತ್ರಿಯಲ್ಲಿ ನಡೆಯುವ ಊಟವಾಗಿದ್ದು ಬಿಸಿಲಿನ ಸಂಬಂಧವಿಲ್ಲದುದರಿಂದ ಈ ಪದ ಪ್ರಯೋಗದ ವ್ಯುತ್ಪತ್ತಿಯ ಬಗ್ಗೆ ಅನುಮಾನವೂ 'ಬಿಸಿಲಡ್ಡಿಗೆ'ಯ ಊಟ ಇರಬಹುದೆ ಎಂಬ ಅಭಿಪ್ರಾಯವೂ ಇದೆ : ಬೀಗರು ಬರುವುದು ನಿಧಾನವಾಗಿ ಅವರ ಮನೆಯಲ್ಲಿ ಬಿಸಲಡಿಗೆ ಊಟ ತುಂಬ ತಡವಾಯಿತು (ಸೂಪ್ರ). ಬಿಸಲಡಿಗೆ : ಬೀಗರ ಕಡೆಯವರಿಗೆ ಮಾತ್ರವಲ್ಲದೆ ಊರಿನವರಿಗೂ ಬಿಸಲಡಿಗೆ ಊಟ ವಾಯಿತು (ಸ್ವಕಂ. ೩೫). [< ಬಿಸಿ + ಅಡಿಗೆ (<ಅಡುಗೆ)]

ಬಿಸಿಲು 'ಬಿಸಿಲ್' ನೋ.

ಬಿಸಿಲುಕುದುರೆ 'ಬಿಸಿಲ್ಗುದುರೆ' ನೋ.

ಬಿಸಿಲುಕೋಲು 'ಬಿಸಿಲುಗೋಲು' ನೋ.

ಬಿಸಿಲುಗುದುರೆ 'ಬಿಸಿಲ್ಗುದುರೆ' ನೋ.

ಬಿಸಿಲುಗೊಳ್ (ಕ್ರಿ). ಬಿಸಿಲಿನ ಬೆಳಕನ್ನು ಪಡೆ : ಬಿಸಿಲಿನ ಉಜ್ವಲತೆಯನ್ನು ಹೊಂದು : ಮಣಿಕುಟ್ಟಿಮಭೂಮಿಭಾಗದೊಳಮಿತವಿಭ್ರಮದೇವನ ದಿವ್ಯಚ್ಛಾಯೆ ಪ್ರತಿಬಿಂಬಿಸೆ ಬಿಸಿಲುಗೊಂಡು ಹೋಂಬಾದ ಕಣ್ಣಾ[ಬ್ಜ]ಂತಂಗೆ (ಜಾಂಪ್ರ ೯-೪೬ ಪ). [ಬಿಸಿಲು (<ಬಿಸಿಲ್) + ಕೊಳ್೧]

ಬಿಸಿಲುಗೋಲು, ಬಿಸಿಲುಕೋಲು (ನಾ). ಛಾವಣಿ , ಕಿಟಕಿ ಮುಂತಾದುವುಗಳ ಕಂಡಿಗಳ ಮೂಲಕ ಕೋಲಿನಂತೆ ಬೀಳುವ ಸೂರ್ಯನ ಬೆಳಕು : ಆ ಮಾಧ್ಯಾರ್ಜ . . . ಬಿಸಿಲುಗೋಲಿನ ಜಾಗೆ ಚಕ್ರವರ್ತಿಸುತ್ತದೆ (ಅಂಪ್ರ. ೦೮). ಬಿಸಿಲುಕೋಲು : ಬಿಸಿಲುಕೋಲು ಒಂದು ಕತ್ತಲೊಣತೆಯೊಳಗೆ ಬಿದ್ದರೆ ಆ ಬಿಸಿಲುಕೋ ಲಿನಲ್ಲಿ ಧೂಳಿನ ಸಣ್ಣ ರವಗಳು ಸಿಹ್ನಾಬಿಟ್ಟೆಯಾಗಿ ಕುಣಿದಾಡುತ್ತಿರುವುದು ಕಾಣುತ್ತದೆ (ಶೈಪ್ರ. ೨೫೩). [ಬಿಸಿಲು (<ಬಿಸಿಲ್) + ಕೋಲು೨ (<ಕೋಲ್೧)]

ಬಿಸಿಲುಚಿಕಿತ್ಸೆ (ನಾ). ಬಿಸಿಲಿನ ಶಾಖದಿಂದ ಮಾಡುವ ಒಂದು ಬಗೆಯ ಚಿಕಿತ್ಸೆ.– ವೈದ್ಯೋಪಚಾರ : ಸೂರ್ಯಕಿರಣಗಳನ್ನು ಯಾವುದಾದ ರೊಂದು ವಸ್ತುವಿನ ಮೂಲಕ ಕೇಂದ್ರೀಕರಿಸಿ ಅಥವಾ ಸಂಗ್ರಹಿಸಿಟ್ಟು ಕೊಂಡು ಮಾಡುವ ಚಿಕಿತ್ಸೆಯೇ ಬಿಸಿಲುಚಿಕಿತ್ಸೆ (ಜಜಾ. ೦). [ಬಿಸಿಲು (<ಬಿಸಿಲ್) + ಚಿಕಿತ್ಸೆ]

ಬಿಸಿಲುದಣಿ (ನಾ). ಮರೀಚಿಕೆ : ಬಿಸಿಲುಕುದುರೆ : ಬಯಲಾಸೆಯಲಿ ಬಿಸಿಲುದಣಿದಲಡಿ ಮುಂಚುವುದು ಕೈಸೋಂತಿಗೆ (ಕಂಚಿ. ೩-೯-೪೩). [ಬಿಸಿಲ್ + ಉದಣಿ೩]

ಬಿಸಿಲುದೊಱೆ 'ಬಿಸಿಲ್ಕೊರೆ' ನೋ.

ಬಿಸಿಲುಮಚ್ಚು (ನಾ). ಕಟ್ಟಡದ ಮೇಲುಭಾಗದಲ್ಲಿ ಸೂರ್ಯನ ಬೆಳಕು ಬೀಳುವಂತಿರುವ ತೆರವಾದ ಭಾಗ ; ಮಾಳಿಗೆಯ ಮೇಲು ಭಾಗ : ಮತ್ತೊಂದು ಅಂತ್ಯಸ್ಥ ಬಿಸಿಲುಮಚ್ಚಿನೊಳ್ ವಿಂತು ಚಿನ್ನಾಗಿ ನೊಂಡಿ (ಕಾಗಂಧಿ. ೩೩೯-೦೩); ಮಹಡಿಯ ಮೇಲೆ ಕೂಡ ಒಂದು ಅಂಗಳ . . . ಒಂದು ಪುಟ್ಟ ಬಿಸಿಲುಮಚ್ಚು ಇವೆ (ಜಜಪ್ರ. ೫೩) ; ಮಧುರನು . . . ಎಲ್ಲಿ "ಹೋಗುತ್ತಾನೆಂದು ನೋಡಲು ಬಿಸಿಲುಮಚ್ಚಿಗೆ ಬಂದರು (ಜಂಕು. ೦೦). [ಬಿಸಿಲು (<ಬಿಸಿಲ್) + ಮಚ್ಚು೩]

ಬಿಸಿಲುಮಬೆ 'ಬಿಸಿಲ್ಮಬೆ' ನೋ.

ಬಿಸಿಲುಮಾಳಿಗೆ (ನಾ). = ಬಿಸಿಲುಮಚ್ಚು : ಆ ಮನೆಯಲ್ಲಿ ಸಂಜೆಗೆ ಹಾಕಲು ಬಿಸಿಲುಮಾಳಿಗೆ ತುಂಬಾ ಅನುಕೂಲವಾಗಿದೆ (ಜಜಪ್ರ). [ಬಿಸಿಲು (<ಬಿಸಿಲ್) + ಮಾಳಿಗೆ೩]

ಬಿಸಿಲುಮಬೆ 'ಬಿಸಿಲ್ಮಬೆ' ನೋ.

ಬಿಸಿಲ್ಗಾಯ್ (ಕ್ರಿ). ಸೂರ್ಯನ ತಾಪಕ್ಕೆ ಮೈಯ್ಯೊಡ್ಡು : ಸೀರ್ಮಷ್ಟಬಂಬಲ್ಗಳನುಗುರಿಂ ಸಿಕ್ಕಿ ಬಿಸಿಲ್ಗಾದುದೊಂದು ಮರದ ಕೋಡೊಳ್ ಕೋದಂ (ಜಜಾ. ೦೪-೦೦). [ಬಿಸಿಲ್ + ಕಾಯ್೨]

ಬಿಸಿಲ್ಗುದುರೆ, ಬಿಸಿಲುಕುದುರೆ, ಬಿಸಿಲುಗುದುರೆ (ಜಾ). ೧. ಬಿಸಿಲಿನ ರುಳಿಳದಲ್ಲಿ ಹರಿಯುವ ನೀರಿನಂತೆ ಕಾಣುವ (ಕಲ್ಪನೆಯ) ವ್ಯಕ್ತಿ ; ಮರೀಚಿಕೆ ; ಮೃಗಜಲ : "ಬಯಲೊಂಱೆ ಬಿಸಿ[ಜಾಪ್ರ. ೫೦]ಲ್ಗುದುರೆ–ಈ ೨ ಮರೀಚಿಕಾಜಲಂ" (ಕಣಾ. ೪೯-೩೨) ; ಪೋಗುಮಿಯ್ದೂರ್ ಪೊಳೆಯಿಸೆ ಬಿಸಿಲ್ಗುದುರೆಗಳ್ ಪೊಳವಂತ ಪೊಳವ ಕಡುಗುಮರಿಗಳುಮಾ . . . ಒಡ್ಡಿ ನಿಂದಾಗಳ್ (ಕಂಪ್ರ. ೦೦-೩೦ ಪ) ; ಬಿಸಿಲ್ಗುದುರೆಯಂ ನೀರಂದಾಸೆವಟ್ಟು ಪರಿವ ಮೃಗಮುಂ ಸಂಸಾರದೊಳು ತನಗಲ್ಲವಾಗಿರುವ ಪರಪುಂ ಸೇದೆವಮಗುಂ (ಜಪ್ರಂ. ೪೪-೨). ೨. (ಅಲಂ) ಕೈಗೆ ಎಟುಕದುದು ; ಭ್ರಮೆ : ಬಿಸಿಲ್ಗುದುರೆಯಾಯ್ತು ಕೊಳ್ಕೊಡಗೆಗಳೆಡೆಯೊಳ್ ಬಯಕೆ (ಜಂಬಾಪ್ರ ೩೬-೩೮). **ಬಿಸಿಲುಕುದುರೆ** : ೨. ಛಾವೀಸುಖದ ಕಲ್ಪನೆಯ'ಬಿಸಿಲು ಕುದುರೆ'ಯನ್ನೇರಿದ ಇವರ ಮನಸ್ಸು-ಆ ಸಂತೋಷದ ಚಿಕ್ಕು ಹಕ್ಕಿರದಿದ್ದರೆ

ಅವರು ಮಕ್ಕಳಿಗೆ ಮನೆಯಲ್ಲಿಯೇ ಇದ್ದುಬಿಡಲು ಹೇಳುತ್ತಿದ್ದರೇನೋ ? (ಜುಗಮು. ೬೩) ; ಕರುಣಾವಿನ ನೆನಪು ಎಲ್ಲರಿಗೂ ಬಿಲ್ಲುತುದುರೆಯಾಯಿತು (ಕಪಾಂ.೭೦). ಬಿಲಿಲುಗುದುರೆ : ೧. "ಖರಕರಣ. ಘುರೀಚಿಕೆ. ಮೃಗತೃಷೆ. ಬಿಲಿಲುಗುದುರೆ" (ಜಾಪಾ. ೬) ; ಬಿಲಿಲುಗುದುರೆಯೇಱಿ ಬೇಸಗೊರಾಜ ನಂದೆಸಗಿ ದುವ್ವಾಳಿಸಲು . . . ನುಳಿದಾಳೆ ಪಸರಿಸಿತು (ಕಂಪಾ. ೯-೮೨). ೨. ಬಿಲಿಲುಗುದುರೆಯ ನಂಬಿ ನಡದಿರುವೆ ಜಾನೀಗ (ಕ್ರಪ್ರ. ೮೨).

[ಬಿಲಿಲ್ + ಕುದುರೆ]

ಬಿಲಿದ್ದೊರೆ. ಬಿಲಿಲುದೊಱೆ (ನಾ).=ಬಿಲಿಲ್ಲುದಂರೆ ೧ : ಮಿಕ್ಕೆ ತಾಂ ತನ್ನ ಪುಸಿಸಾಸದ ಬಿಲಿದ್ದೊರೆಯ ಬೇಂಟೆಯಿಂ ಬೇಸತ್ತು (ಕ್ರೀಚಪು. ೪೩೬-೩೭). ಬಿಲಿಲುದೊಱೆ : ಸಾರತರಪೀಯೂಷಪಾರಾವಾರವಿರಲಾ ಬಿಲಿಲುದೊಱೆಯಲಿ ವಾರಿಕೇಳಿಯ (ಜಪಾಪ. ೩-೩-೩).

[ಬಿಲಿಲ್ + ತೊಱೆ (<ತೊಱೆ್)]

ಬಿಲಿಲ್ಮಳೆ. ಬಿಲಿಲುಮಳೆ, ಬಿಲಿಲುವಳೆ (ನಾ). ಬಿಲಿಲಿರುವಾಗ ಬೀಳುವ ಮಳೆ : ಶರದಭ್ರಶುಸುಮತರುಗಳ್ . . . ಅರಲಂ ಸುರಿದಪುವೆಸೆ ಸುರಿವ ಬಿಲಿಲ್ಮಳೆಗಳಿಸದುಮಭ್ರಾಂಗಣದೊಳ್ (ಪಗಂ. ೧-೭೦). ಬಿಲಿಲುಮಳೆ : ಬಿಲಿಲುಮಳೆ ನೋಡಲು ಚೆಂದ (ಮಾಪ). ಬಿಲಿಲುವಳೆ : ಬಿಜುವಳೆ ಬೆದರ್ಪಳೆ ಬಿಲಿಲುವಳೆ ಸುರಿಸೋನೆ ಸಿಡಿಲಿನ ಘಾತನವಳೆಯಲಿ ಘಾಸಿಯಾದುದು ಜಗದ ಜನನಿಕರ (ಕಪಾಂ. ೪-೬-೬). [ಬಿಲಿಲ್ + ಮಳೆ]

ಬಿಲಿಲ್ಹಕ್ಕಿ (ನಾ). ಚಕ್ರವಾಕ ; ಎಳೆಪಕ್ಕಿ ; ☞ ಈ ಹಕ್ಕಿಜೋಡಿಯು ಹಗಲಲ್ಲಿ ಜೊತೆಗೂಡಿ ರಾತ್ರಿವೇಳೆಯಲ್ಲಿ ಅಗಲಿರುವುದೆಂಬುದು ಕವಿಸಮಯ : "ಪೊಣರ್ವಕ್ಕಿ, ಜಕ್ಕವಕ್ಕಿ, ಬಿಲಿಲ್ಹಕ್ಕಿ . . . ಅಮಳ್ಳಕ್ಕಿ —ಈ ೭ ಚೈವಾಕಂ" (ಕಜಾ. ೩೫-೨೦೦) ; ಕೋಗಿಲೆಯು ಬನವಂ ಪಗಲಂ ಬಿಲಿಲ್ಹಕ್ಕಿ ನೋಗೆ ಕಾವರ್ಗಿಲಂ . . . ನೆನೆವೋಲ್ (ಪಂಗಾಪು. ೪-೬-೩೨) : ಮಿಕ್ಕು ವಿಜಿಯುವ ಬಿಲಿಲ್ಹಕ್ಕಿಮೊಲಗಳ ಕೊಳರ್ವಕ್ಕಿಗಳರವದ . . . ವಿದಗ್ಧಾಂಗನೆಯು ಕಣ್ಗ ಸಿಗರಮಾದಳು (ಕಕಾಪ್ರ. ೫-೨೦).

[ಬಿಲಿಲ್ + ಹಕ್ಕಿ]

ಬಿಸಿದಡೆ (ಕ್ರಿ). ಬಿಸಿಯುಗು : ಕಾಯು : ಬಿಸಿವದದಾ ಸರೋವರದಲ್ಲಿ ವಿಸಾಂಗಳು ಬಿಸಿ ತಾಗಿ ಬಾಯ್ತೆಡುವೆದನು ಅಸಿಯಳು ಪುಣುಕದಿಟ್ಟಯಲಿ . . . ಪೋಡಲ್ಯಾಗ ಬಿಸಿ ತಾಪ ವರೆದುದಾಕ್ಷಣದಿ (ಕೋಪಪ. ೯-೧೩).

[ಬಿಸಿ + ಪಡೆ]

ಬಿಸಿವಿಸಿಲ್ (ನಾ). ಸೂರ್ಯನ ಉಗ್ರವಾದ ತಾಪ.—ಶಾಖಿ : ಅಳುರ್ವ ಬಿಸಿವಿಸಿಲ ಬೇಗೆಯನಿಳೆ ಸೈರಿಸಲಾಜಿದಭ್ರಗಂಗಾಜಲಧರದೊಳ್ ಮುಳುಗಲ್ (ಶಾಪಪ. ೩-೧೩). [ಬಿಸಿ + ಬಿಸಿಲ್]

ಬಿಸಿಪೊಂ (ಕ್ರಿ). ತಾಪವನ್ನು ಹೊಂದು ; ಕಾವು ಪಡೆ : ತೇಂಕು ದಾಣಂಗಳಲುಗುವಂಗಂಗಳಿತಿ ಬಿಸಿವಿತ್ತಿವೆ (ಶಿಪ್ರಾ. ೩-೩) ; ಕುಂದಣವನು ರಸಗೊಡ್ಡಾಷ್ಟಣ ಕರುವಿಂದೆ ಬೇರ್ಪಡಿಸಿ ಪುಷ್ಟಳಿಯ ತಂದಡರ್ಚಿದರೆನೆ ಬಿಸಿವೆತ್ತು ಪ್ರಾಣಸಂಬಂಧಿಯ ಬಿಗಿಯಪ್ಪಿದಳು (ಕೋಪಪ. ೫೬-೫೭).

[ಬಿಸಿ + ಪೆಱ್ಱು]

ಬಿಸಿಷ್ಟ, ಬಿಸಿಷ್ಠ (ಪಾ). ೧. ವಿಶೇಷವಾದುದು ; ಅತಿಶಯವಾದುದೆಂ : ಕೇಶವನಂಬಿಪೆ ಮಾಡಿಸಿದಂ ಬಿಸಿಷ್ಟಮೆನೆ ಜಗದೊಳಗೆ (ತೀಾಪು. xx. ೬೦-೪೯; ೨೨೦೬). ಬಿಸಿಷ್ಟ : (ಗೌ). ೨. ವಿಶೇಷವಾದ ; ಅತಿಶಯವಾದ : ಪಿಷ್ಮಿರ್ಮ್ಮವಿರತರತಿಲಿಲಭ್ಯಾಗತವಿಸಿಷ್ಟಜನಪುಜೋತ್ಸಾಹರ್ (ತೀಾಪು. xx. ೪೮-೪ ; ೨೦೮೨). [<ಸಂ. ವಿಶಿಷ್ಟ]

ಬಿಸಿಸೂಲ (ನಾ). ಕಾಯಿಸಿದ ಶೂಲ : ವಿಮ್ಮ ಸೂಲಕೆ ಹಾಕಿಸೆನು ವಿಮ್ಮನ್ ಹುಸಿಸೂಲೆ ಬಿಸಿಸೂಲಕ್ ನಡಪುದೆ ಬಿಟ್ಟರೆ ತಿರುಮಲದೇವ್ಯಲ್ಲಿ (ಜಾಪಪ. ೦೮೩). [ಬಿಸಿ + ಸೂಲ್]

ಬಿಸಿಹಗೆ (ನಾ). ತೀವ್ರವಾದ ಶತ್ರುತ್ವ ; ಉಗ್ರವೈರ : ಬರಿಮೈ ತಣ್ಣಗೆ, ಮನದಲಿ ಬಿಸಿಹಗೆ. ಎರಡೆಳೆ ನಾಲಗೆ ಇದ್ದರು ಸುಮ್ಮಗೆ (ಕವ್ಯಜಾ. ೦೨೩).

[ಬಿಸಿ + ಹಗೆ್ (<ಪಗೆ್)]

ಬಿಸು$_1$, ಬೆಸು, ಬೆಸೆ$_3$ (ಕ್ರಿ). ಬೆಚ್ಚ್$_1$ (ಭೂತಕೃ). ೧. ಹೊಂದಿಸು ; ಒಂದಕ್ಕೊಂದು ಸೇರುವಂತೆ ಮಾಡು ; ಕೂಡಿಸು : ವಿನಯಪ್ರಧಾನ ಗುಣಗಣಗೆಗಣ ಭೂವಾಲಂ ನಿನಗದಱಿಂದನುಕೂಲಂ ಬಿದಿ ಬಿಸುಗೆ ಸಿಂಧುವೊಲ್ ಮಾಸದಿಯೊಳ್ (ಜಾಪಪು. ೩-೦೫೩). ೨. ಲೋಹಗಳನ್ನು ಕಾಯಿಸಿ ಒಂದಕ್ಕೊಂದನ್ನು ಸೇರಿಸು ; ಬೆಸುಗೆ ಹಾಕು : "ಬಿಸು—ಲೋಹಸಂಧಾನೇ (ಬೆಸಯು)" (ಶಮಣಾ) ; ಕಾಯಿಸುವ ಕರಗಿಸುವ . . . ಬಿಸುವ ಮಸೆವ ಜಿನ್ನಿಸುವ ನುನ್ನಿಸುವ ಸಾಣೆವಿಡಿವ ಕಮ್ಮಾರ ಮುಂಗುಡಿಯಿಂ ವುದಂ ಕಣ್ಗೆಂಬಾದುದು (ಜಾಪಪು. ೦೦೩-೦೫). ಬೆಸು : ೧. ಬೆಚ್ಚರೆ ಬೆಸುಗೆಯಱಿಯದಂತಿರಬೇಕು (ಪುಜಾಪ್ರ. ೭ ೦೪೩-೪೩೬) ; ಬೆಸುವ ಭೇದಿಸುವ ಸಮಚಾವಳವ ನುದಿವ ಕವಿಯಾರ್ಯ (ಶಾಪ್ರಾ. ೦೦-೬೮) : ಅಚ್ಚಕಪಿಲವರ್ಣದ ಪಸು ಮಿರ ಕೃಂಗ ಬೆಚ್ಚಂತೆ ಸ್ವರ್ಣಕೋಡಿಳೆ ವಚ್ಚ ಸೊಂತ ಬಂದಿರೆ (ಕೋಪಪ. ೨೨-೪೪). ೨. ಬೆಳುಗಾರವ ಬೆರಸಿ ಬೆಚ್ಚ ಭಂಗಾರಕ್ಕೆ ಸಂದುಂಟೆ ಹೇಳಾ (ಜಪಪು. ೨೨೬-೦೦೨೯) ; ಬಿಸಿಯು ಹದನನು ತಿಳಿದು ಲೋಹವ ಬೆಸುವವೊಲು (ಕ್ರಪ್ರ. ೦೯-೨೦). ಬೆಸ್ಕೆ : ೧. ಪ್ರಸ್ತಕ್ಕೆ ಮಾಡಿದಿಹರೆ ದೆಸ್ಸಂತೆ ಇರದೇಕು (ಸಪ್ರಾ. ೦೩೩೬) ; ಮನವೊಂದು ಮುರಿದರೆ ಮೊದಲಿನಂತೊಂದಾಗಿ ತೋರ್ಪಂತೆ ಬೆಸೆಯುವುದರಿದು (ಜಂಪಪ. ೫೦-೨೩). ೩. ಉಂಟಾಗು ; ಒದಗು : ಬೆಸಯಿತೇ ಕೇಡೆಂದು ಬಿಸುಸುಯ್ದಳಳಳು (ಜಾಪಪ. ೦೩೨-೨೪೬).

ಬಿಸು$_2$, ಬೆ೦$_3$. ಬೆಚ್ಚ್$_2$ (ಸಪೂರೂ). 'ಬಿಸಿದು' ಎಂಬ ನಾಮಪದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಬಿಸುಗಣ್ಣಾ', 'ಬಿಸುಗದಿರ್' ಪರಾ. ಬೆಂ$_3$: 'ಬೆಂಗದಿರ್', 'ಬೆಂಗಲ್' ಪರಾ. ಬೆಚ್ಚ್$_2$: 'ಬೆಚ್ಚಂಬಿಲ್', 'ಬೆಚ್ಚಗುಟ್ಟು' ಪರಾ. [< ಬಿಸುದು]

ಬಿಸುಗಂಪು (ನಾ). ತೀಕ್ಷ್ಣವಾದ ವಾಸನೆ; ಕಟುವಾಸನೆ : ಸುರಭಿಯು ಸೊರ್ಕುಗಂಪು ಪೊಸಂಪಗೆಯೊಳ್ಪಿಸುಗಂಪು ತೋರ್ಪ ಪಾದರಿಗಳ ತಣ್ಪುಗಂಪು . . . ಬಗೆಗೊಂಡುದು (ಜಾಪಪು. ೦೦-೦೯).

[ಬಿಸು$_2$(< ಬಿಸಿದು) + ಕಂಪು]

ಬಿಸುಗಂಬನಿ (ನಾ). ಬೆಚ್ಚನೆಯ ಕಣ್ಣೀರು : ಚಿಲ್ಲಿತು ಹೆಣ್ಣ ಕಣ್ಣಸರಿ ಬಿಸುಗಂಬನಿ ಹೊನಲ್‌! (ಜಪ್ರಾಹ. ೦೫-೨೦೩).

[ಬಿಸು$_2$ (< ಬಿಸಿದು) + ಕಂಬನಿ (< ಕಣ್ಬನಿ)]

ಬಿಸುಗಣ್ (ನಾ). ಪ್ರಜ್ವಲಿಸುವಂತಹ ಕಣ್ಣು ; ಅಗ್ನಿನೇತ್ರ : ಪೊದರ ಮುಸಿದು ಬಿಸುಗಣ್ಣಿ ಕೆಗೆದರೆ ಶಿವಶರಣರದ ಮನಸಿಗೆ ತಾಧರು (ಜಪಪು. ೨೦೩-೨೬೩); ಬಿಸುಗಣ್ಣಿಂ ಭಸಿತದಿಂ ಬಾಸಣಿಸಿ ಬಾಸಿಗಮಾನಿಕ್ಕೆ (ಗಿಪ. ೦೦-೬೦ ಪ).

ಬಿಸುಗಣ್ಣೊಗರವ = ಪ್ರಜ್ವಲಿಸುವ ಕಣ್ಣಿಳ್ಳ ಯಂತಿ: ಅಗ್ನಿನೇತ್ರನಾದ ಶಿವ : ಬಿಲ್ಲಿಂ ತೀವಿರೆ ಬಿಸುಗಣ್ಣೊಗರವಂ ಜಾವನ ತೋಳ್ಬಲ ಮನಜ್ಞವೆನೆಂದೇಬ್ಬಂದಂ (ಕಾ.ಕಾ. ೨೪೦).

[ಬಿಸು$_2$ (< ಬಿಸಿದು) + ಕಣ್]

ಬಿಸುಗಣ್ಣಾ (ನಾ). ಅಗ್ನಿನೇತ್ರ; ಶಿವ : "ಬಿಸುಗಣ್ಣಾನವಲ್ಲೊರ್ವನಪ್ಪುದು" (ಕಪ್ರಲ. ೬) ; ಒರ್ವಂ ಬಿಸುಗಣ್ಣಾನ ಮುಂದೆ ನಿಂದು ತಾನಿಂತೆಂದಂ (ಕಾ.ಕಾ. ೨೪೩); ಬಿಸುಗಣ್ಣಾನಂ ದೇವತಾರಾಧ್ಯನಂ . . . ನುತಿಸಿದಂ (ಜಾಪ್ರಹ. ೩-೩೦).

ಬಿಸುಗಣ್ಣಾಣಗ = ಶಿವನ ಮಗ; ವೀರಭದ್ರ : "ವೀರಭದ್ರಂಗೆ ಬಿಸುಗಣ್ಣಾಣಗೆಂಬ ನಾಮಮಕ್ಕುಂ" (ಕಪ್ರಲ.೬೮). ಬಿಸುಗಣ್ಣಾನ ಮಗ. ಬಿಸು

ಗ್ಗಣ್ಣ ಮಗ = ಬಿಸುಗಣ್ಣಣುಗ : "ಬೀರನೆಂಬಿವರಿ ಜನ್ಮಪಗೆಯಂ ವಿಸುಪ ಬಿಸುಗಣ್ಣನ ಮಗನುಮರಿವಾನಿಸವಗೆಯುನೆಂದು ವೀರಭದ್ರಗೆ ಪೆಸರ್" (ಕ್ರಿಕೃ· ೬) ; "ಜನ್ಮವಗೆಯಂ . . . ಬಿಸುಗಣ್ಣ ಮಗಂ. ಅರವಾನಿಸವಗೆಯಂ—ಈ ೫ ವೀರಭದ್ರಂಗೆ ಪೆಸರ್" (ಕಚಾ· ೦-೬). ಬಿಸುಗಣ್ಣಸುತ = ಬಿಸುಗಣ್ಣಣುಗ : ಬಿಸಗೊರಲನ ಬಿಸುಗಣ್ಣ ಸುತಂ ಬರುತ್ತಿರೆ (ಪಂರೆಚ· ೨-೨೬). [ಬಿಸುಗಣ್ಣ + — ಅ೨]

ಬಿಸುಗದಿರ್. ಬಿಸುಗದಿರು. ಬೆಂಗದಿರ್. ಬೆಂಗದಿರು (ನಾ). (ಸೂರ್ಯನ) ಬೆಚ್ಚನೆಯ ಕಿರಣ ; ಉಷ್ಣರಶ್ಮಿ : ಪಾಸರಪತಿ ಬಿಸುಗದಿಂ ಪೇಸದ ತವೆ ಪೋರ್ಗುಮೆಂಬ ಮಾಱುಕದೊಳಂಭೋಜಾಸನನಂಬುಜವನಮಂ ಬಾಸಱಿಸದಮಿಪುವಿದ ಕಾವರಿಯಲೆಗಳ್ (ಶಾಪ್ರ· ೨೭೬); ಶತಿಯ ಪೊಸತಣ್ಗದಿರ್ಗಳ್ ಬಿಸುಗದಿರ್ಗಳಾಗಿ ಸೋಂಕಿದುವ (ಭುಚರಿ· ೦೦-೬೦). **ಬಿಸುಗದಿರು** : ಬಿಸುಗದಿರಂದ ಪಿಮಿಕಿರಣಮಂತೆ ಪೋಲ್ಪರ ಕಣ್ಗ ಚೆನ್ನಬಸವಂ ಚೆನ್ನಮಂ ತಳಿದನು (ಪಚಿ· ೩-೨೨) ; ರವಿ ಬಿಸುಗದಿರಂ ಕಣ್ಬೆಯಂ . . . ಅ ಮುನಿವನದೊಳ್ (ಪಾಂಪ. ೨-೩೬). **ಬೆಂಗದಿರ್** : ಕಂದ ಮಿತ್ರನ ಬೆಂಗದಿರ್ಗಳವಂ ಕಂಡು ಮಂಜುಳತರಾನಂದಮಂ ನಾಡ ಕೈಕೊಂಡು (ಅಷ್ಟಪ್ರ· ೩-೮೩); ಬೆಂಗದಿರ್ಗಂ ತಂಗದಿರ್ಗಂ ತೆಱಪುಗುಂಡದ ಮರದುಱುಗಲಿ ಕಟ್ಟಲೆಯಂ ಕಾರಿರುಳ್ಗಕ್ಕು (ಕ್ರಿಕೃ. ೨೮೨). **ಬೆಂಗದಿರು** : 'ಬೆಂಗದಿರುಗಲ್' ಪರಾ. [ಬಿಸು₂ (<ಬಿಸುಪು) + ಕದಿರ್₂]

ಬಿಸುಗದಿರ. ಬೆಂಗದಿರ (ನಾ). ಬಿಸಿಯಾದ ಕಿರಣಗಳಂಳ್ಳವನು : ಸೂರ್ಯ : "ಬಿಸುಗದಿರಂ ದಿವೀಶನೊಳೆ" (ಕಚಾರಾ· ೬೦) ; ಬಿಸುಗದಿರನ ಬೆಂಗೆ ಸೈರಿಸದೆ . . . ಕಾರಗೆಗಳ್ ಪುಂಜಿಸಿದಾ ಮಾನಾಜವಸರದ ಪೊಸಮಿಱ್ಕಿನ ಕೆವದಿರ್ಪುದಿರುಳಿಪ್ಪಿನೆಗಂ (ಪರಾಪು· ೦-೫೯) : ಬಿಸುಗದಿರನ ಸುರಿ ನೀರ್ಗುಡಿದಖಿಳರಾತ್ರಿಸಿದು ದುಸ್ತಕದ ಬೈತಲೆಯ ಅಸಿಯ ಚಂದ್ರಾಂಕತಪೆಂಬಂತೆ ಸಜಿಗೆಂಪಿದಂದು (ಮೀಚರ· ೩೭-೨೨). **ಬೆಂಗದಿರ** : "ಪಾದರೆಗಳಯಂ. ಪಗು ಜೊಜಗಂ. ಬೆಂಗದಿರಂ . . . ಗರಂಗಳಾತ್ಮಂ— ಈ ೧೧ ಸೂರ್ಯನ ಪೆಸರ್" (ಶಚಾ ೨೯-೨೮) ; "ಬೆಂಗದಿರನೆಂಬ ಪೆಸರಂತಿರಲಿ ಚಂದ್ರಂಗೆ ಬೆಂಗದಿರನೆಂಬ ಪೆಸರುಚಿತವೆಂದೆನುತೆ . . . ಒರ್ವ ವಿರೋಧಿಯಿರ್ದಳ್ (ಪಾಂಪಚ· ೦೭-೨೨); ಬೆಂಗದಿರವ ಕಾಯ್ಪು. ತಣ್ಗದಿರನ ತಣ್ಪು . . . ಪಡಿಗೊಳೆ ದಶರಥಕುಮಾರಂ ರಾಜ್ಯಮನಾಳು ತಿರ್ದಂ (ರಾಪಚಕ್ಷ· ೭-೦೬). [ಬಿಸುಗದಿರ್ + — ಅ೨]

ಬಿಸುಗದಿರು 'ಬಿಸುಗದಿರ್' ನೋ.

ಬಿಸುಗದಿರ್ವಕ್ಕೆ (ನಾ). = ಬಿಸಿಲ್ದಕ್ಕೆ : ಜಾದಗೆ ತಣ್ಪೆಸುಗದಿರ್ವಕ್ಕೆಗೆ ಬಗೆಗೊಳಿಪಾನಂದದಿರವದಗ್ಗಳಮಲ್ಲೆ (ಪಚಿ· ೪ ೦೭೨). [ಬಿಸುಗದಿರ್ + ಪಕ್ಕೆ]

ಬಿಸುಗಯ್ಯ 'ಬಿಸುಗೈಯ' ನೋ.

ಬಿಸುಗಲ್. ಬೆಂಗಲ್ (ನಾ). ಸೂರ್ಯಕಾಂತಶಿಲೆ : "ನೇಸರ್ಗಲ್, ಬಿಸುಗಲ್ — ಈ ೨ ಸೂರ್ಯಕಾಂತಂ" (ಶಚಾ· ೩೦-೩೪); ಬಿಸುಗದಿರ್, ಬಿಸುಗಲ್ (ರಾಪಚಕ್ಷ· ೦೧೬ ೦೧೫). **ಬೆಂಗಲ್** : ಪಂದಲೆ, ಬೆಂಗಲ್ (ಪಜ್ಞಾಪ· ೬೧೩ ಕ್ರಿಮೀ). [ಬಿಸು₂ (< ಬಿಸಿದು) + ಕಲ್₂]

ಬಿಸುಗಾಳಿ (ನಾ). ಬಿಸಿಯಾದ ಗಾಳಿ : ಬಿಸುನೀರ್, ಬಿಸುಗಾಳಿ (ಪಚಿ· ೦೬೨ ಕ್ರಿಮೀ). [ಬಿಸು₂ (< ಬಿಸಿದು) + ಗಾಳಿ]

ಬಿಸುಗುಷ್ಠ (ನಾ). ಮೈಯ ಶಾಖವೇರುವ ಒಂದು ಬಗೆಯ ರೋಗ ; ಜ್ವರ : ದೇಹ ನಿಂದಳ್ ಬಂದು ಮಲೆವಾಡೆ ಬಿಸುಗುಷ್ಠ ದೊಳ್ಗಾಗೆಯುಮೊಂಕುವಿರೆ (ಕಾಪಚ· ೦೩೪-೩೭೬).

[ಬಿಸು₂ (< ಬಿಸಿದು) + ಕುಷ್ಠ]

ಬಿಸುಗುದಿ (ನಾ). ೧. ತೀವ್ರವಾದ ಶಾಖ—ಬಿಸುಪು : ಅಲಿಯ ಬಿಸುಗುದಿಯು ಬಲುತೆಂಪುವಂದಿನ ಹೊಸಮುಸಿಗಳುರಿ ರುಧಿರ ರಂಗಳಿಸಿ (ಕುಪ್ರ· ೬-೭); ಬಿಸಿಲು ಬೇಗೆ . . . ಕಡಲುಗಳು ಬಿಸು[ಪಚಾಂ· ೫] ಗುದಿಯಲುಕ್ಕಿದವು (ಪೊರಾ· ೨-೪-೦೭); ಮರಳಿ ಪುರಳಿ ಬಿಸುಗುದಿಯ ದಾಣಗಳ್ ಕಟ್ಟುಬ್ಬಿ ಕಮಟಮಂ ಪಸಗೆದಿಸಿ (ಪುರಂಗ· ೬೨-೭೫). ೨. (ಆಲಂ) ತಳಮಳ ; ಉದ್ವೇಗ ; ಬೇಗುದಿ : ಎತ್ತಿದ ಪುಗುಡದಲಿ ಕುಳ್ಕಿರ್ದವಾ ಸುರನದಿಮ ತೀರದಲಿ . . . ಬೇಗೆಯ ಬೇಸಱಾನ ಬಿಸುಗುದಿಯ ಸುಯ್ದುನಲಿ (ಶಾಪ್ರ· ೫೦-೦೫).

[ಬಿಸು₂ (<ಬಿಸಿದು) + ಕುದಿ₂]

ಬಿಸುಗೆ. ಬೆಸಗೆ. ಬೆಸಿಗೆ. ಬೆಸುಗೆ (ನಾ). ೧. ಹೊಂದಿಕೆ; ಜೋಡಣೆ ; ಸೇರಂವೆ : ಬಿಸುವಾವುತಿಯ ಕಳಂಕಪಂಕದೊಳೆ ಪರ್ಚಿದ ಕಬ್ಬಲಿ ತೀವ್ರ ಶಸ್ತ್ರಸಂಹತಿಗಳ ದೀಪ್ತಿಯಿಂ ಬಿಸುಗೆಯಾಗಿ ಕರಂ ಪೊಗರ್ವಟ್ಟು (ಪಂಪಾ· ೦೦-೫೦) ; ವಾರಣದ ದಿದು ಪಿಸುಟ್ಟುದ್ಧೋರಣನಿರದುರುಳೆ ಬಿಸುಗೆ ರಿಪುನ್ಯವಕಾಂತಾದಾರಾಧರಣದ ಬಿಸುಗೆಪೊಲೋರಂತಿರೆ ಕುಲೆ ಭರದಿನೆಚ್ಚರ್ ಜೋದರ್ (ಜಾಸ್ಮಾಕ್ಷ· ೬-೦೩೨). **ಬೆಸುಗೆ** : ೨. ಲೋಹಭಾಗಗಳನ್ನು ಕಾಯಿಸಿ ಒಂದರೊಡನೊಂದು ಸೇರಿಸುವುದು : ಈ ಪಾತ್ರೆಗೆ ಬೆಸಗೆದುನ್ನು ಚೆನ್ನಾಗಿ ಹಾಕಿಲ್ಲ (ಕುಸ್ಮಬು· ೦೪೨). **ಬೆಸಿಗೆ** : ೨. ಈ ಪಾತ್ರೆಗೆ ಬೆಸಿಗೆ ಹಾಕಬೇಕು (ಕೂಪ). ೩. ಗೋಡೆಗೆ ಸೇರಿಕೊಂಡಂತೆ ಕಟ್ಟಿರುವ ಕಟ್ಟೆ ; ಬದು : ಬೆಸಿಗೆಯ ಮೇಲೆ ಮಂದ್ದಿನ ಕಲ್ಲದೆ (ಕೊಗಳ್ಳ· ೦೬೬) ; ಪಾತ್ರೆಗಳನ್ನು ಇಡಲು ಒಂದು ಬೆಸಿಗೆ ಅಥವಾ ಸಣ್ಣ ಬೀರನ್ನು ಅಡಿಗೆಮನೆಯಲ್ಲಿಟ್ಟುಕೊಂಡರೆ ಅಡಿಗೆಸಾಮಾನುಗಳನ್ನೂ ಪಾತ್ರೆಗಳನ್ನೂ ಅದರಲ್ಲಿಟ್ಟುಕೊಳ್ಳಬಹುದು (ಗೃಜ್ಞ· ೦೬೩). **ಬೆಸುಗೆ** : ೧. ಬೆಚ್ಚರೆ ಬಿಸುಗೆಯುಣ್ಣಿಯದಂತಿರಬೇಕು (ಭುಚರಿ· ೩· ೦೪೭-೪೬೬) ; ಚಿಕ್ಕವಾಳದ ಬೆಸುಗೆ ಸದಲಿತು ಚಾರುಚಂದ್ರಾನನೆಯ ಬರವಿನಲಿ (ಸ:ಚಚ· ೫೯-೭೬) ; ಕಮಲಕುಟ್ಮಲದೊಳು ಬೆಸುಗೆಯಾಂತುವ್ವ ತುಂಬಿಗಳು (ಶಂಚಾ· ೨-೫೯). ೨. ಸನ್ನ ಸರದ ಬೆಸುಗೆ ಬಿಟ್ಟುಹೋಗಿದೆ (ಮಂ). ೪. ಒಂದಾಗುವಿಕೆ ; ಲೀನವಾಗುವಿಕೆ : ಅಸುಪಂತ್ಯಾಗದಲಿ ಯೋಗದ ಬಿಸುಗೆಗಳನುಳ್ಳವರು . . . ನಿಮ್ಮನ್ನಮುವ ರಾಯರು (ಕೊಚಿಣಾ· ೦-೩-೦೯).

[ಬಿಸು₁ + — ಗೆ. / ತುಳು. ಬೆಸಗೆ]

ಬಿಸುಗ್ಗೆ (ನಾ). ೧. ಪಗಡೆ ಅಥವಾ ಚೆದುರಂಗದಾಟಕ್ಕೆ ಬಳಸುವ ಕಾಯಿ ; ಸಾರಿ : "ದುಂಡಿಜಯುಮುಂ ಬಿಸುಗೆ ಸಾರಿಯೆಂದಕ್ಕುಂ" (ಕ್ರಿಕೃ· ೦೦) ; ಬಿಸುಗೆ — ಡೊಜೆಯಂ (ಪೊಜೆಯಂ) (ಪಜ್ಞಾಪ· ೫೦. ೨) ; ಹಗಲಿರುಳ ಹಾಸಂಗಿಯೊಡ್ಡಿ ಮಾನವರಂ ಬಿಸುಗೆಯಾಗಿ ನಿಯತಿಯಾಡಿಸುವುದವರಂ (ಗಿಇಷ· ೦೨೨-೨೩). ೨. ಅಂಬಾರಿ ; ಹೌದಾ : ಆಗೇಱಿಸಿದ ಬಿಸುಗೆಗಳುಮಿಕ್ಕಿದ ಲೋಹವಕ್ಕರಿಗಳುಂ . . . ಬೆರಸು (ಕಂಪಣಾ· ೦೦-೫೦ ಪ) ; ಕನ್ನರದೇವಜೋಟನಂ ಕಾದುವನ್ದು ಬೂತುಗಂ ರಾಜಾದಿತ್ಯನಂ ಬಿಸುಗೆಯ ಕಳನಾಗಿ ಸುಂಗಿಱಿದು ಕಾದಿ ಕೊನ್ದು (ಎಇ· III, ಮುಂಕ್ಕ· ೧೮ ೫೦ ; ೧೬೦) ; ವಿಜೃಸಿದ ಬಿಸುಗೆಯುಮುಮರ್ಚಿದ ಲೋಹವಕ್ಕರೆಯುಂ (ಪರ್ಚಪ್ರ· ೨-೧೪ ಪ). 'ಶಿಬಿಕೆ', 'ಸಿವಿಗೆ' ಪೋ. [?]

ಬಿಸುಗ್ಗೆಯ. ಬಿಸುಗಯ್ಯ (ನಾ). = ಬಿಸುಗದಿರ : ಬಿಸುಗ್ಗೆಯನಟ್ಟಿದ ಬೇಪುಕಾಱರ ಸೊ·ಮೆನಲಾಗಪರೆದೊಳೆದೆಯೆಡೆಯೊಳುಲುಂ . . . ಎಸೆದುವ್ವ (ಅಷ್ಟಪ್ರ· ೨೨-೨೯). **ಬಿಸುಗೆಯಯ್ಯ** : ಬಿಸುಗಯ್ಯಂ ಕಣ್ಣಸಗಯ್ಯಂ ಪೊಸಪಿಸುಬಿಸುಮಯ್ಯಂ ಕಣ್ಗಾದಂ (ಅಧ್ಯಕ್ಷ· ೦-೨).

[ಬಿಸು₂ (<ಬಿಸಿದು) + ಕೈ₂ (<ಕೆಯ್₂) + — ಅ೨]

ಬಿಸುಟು₁ (ಕ್ರಿ). (ದೂರಕ್ಕೆ) ಎಸೆ ; ಒಗೆ : ಗುಮಿಗಳ್ಗಂಟುಂ ಶಯನ ಕೆನಗೆ ಒಡೆಯರುಗಳು ಬಿಸುಟಿದರುವೆ ಪೀತಕ್ಷಂಟಲ್ಲೆ (ಪುಚಾಪ· ೦೦-೦); ಸೇವಕರು ಅರಮನೆಯಿಂದ ಎಳೆದು ಬೀದಿಗೆ ಬಿಸುಟಿದರು (ಪುಚಾಕ· ೦೧೨).

[<ಬಿಸುಡು]

ಬಿಸುಟು₂ 'ಬಿಸುಡು' ಪರಾ.

ಬಿಸುಟ್ಟು 'ಬಿಸುಡು' ಪರಾ.

ಬಿಸುಡಿಸು (ಕ್ರಿ). ೧.ಎಸೆಯುವಂತೆ ಮಾಡು ; ಒಗೆಸು : ಕೋಪದಿಂ ಬಂದ ಮದನನ ಬಿಲ್ಲ ಬಿ[ಸುಡಿಸಿದ] ಭಾಪುರೇ (ಸಿದ್ಧಾ. ೪ ಸೂಚ). ನನೆಮುಂಬಂ ಕಂತುವಿಂದಂ ಬಿಸುಡಿಸಿ (ಶಿಷ್ಟಶ. ೨-೨೬). ೨. ಬಿಟ್ಟು ಬಿಡುವಂತೆ ಮಾಡು : ಎಂದು ನುಡಿದು ಬಿಸುಡಿಸಿದಂ ಪುತ್ರೋರ್ವಂ ತನ ಗೆರಡಱಿಯದೊಲ್ದ ನಲ್ಲಳಂ (ಸಂಕಣಾ. ೪-೮೨ ಪ). [ಬಿಸುಡು + — ಇಸು₅]

ಬಿಸುಡು (ಕ್ರಿ). ಬಿಸುಟು₂, ಬಿಸುಟ್ಟು (ಭೂತನ್ಯೂ). ಬಿಸುಟ್ಪಿ (ವರ್ತಕೃ). ೧. (ದೂರಕ್ಕೆ) ಎಸೆ ; ಒಗೆ ; ಚೆಲ್ಲು : ಕೊಲ್ಲಂ ಬಿಸುಡಾಯುಧಮುಂ ಪುಲ್ಲಂ ಕರ್ಚೆಱಿಯು ಪುತ್ರಂ (ಕಬಾ. ೬-೦೧೪) ; ಆ ಬಾಲೆ ಕಾಯ್ದು ಪುಡಿಯೊಳಗೆ ಬಿಸುಟ್ಪಿಳವಾಬಿಯಂತೆ . . . ಮುಮ್ಮಲಮಱುಗುತಿರ್ದಳ್ (ಜೀವಸಂ. ೩-೦೦ ಪ); ಮುನಿದನನಿವಾಸದೊಳೀತನುಮ್ಮುಂ ಬಿಸುಟ್ಟುದು (ಶಾಂತಿಪು. ೬೪); ಮಧುಮಾಸದಗ್ನಿಯುರಿ ಚಿಂತೆ ಬೆಸನೆಂಬ ಚಳಿಯೊಂತೆಯುನು ಬಿಸುಡು (ಅಜಿಪು. ೧೬-೭). ೨. ತೊರೆ; ತ್ಯಜಿಸು; ಬಿಡು : ತನ್ದೆಯು ತಾಯ್ಮಿರಾ ಸನ್ತಾನಮ(ಂ)ನುಳಿದು ಬಿಸುಟೋಂ (ಕೌಷ. XI-೫, ೦೦-೬; ೨೮೬); ಸವಣದ ಧರ್ಮವಂ ನಮಗೆ ಕೊಳಲಾಗ ಬಿಸುಡು (ತತ್ಪಾಣ. ೦೭-೨೦); ಸಮರಾಕರಮಂ ಬಿಸುಟ್ಟು ಕವಲಾಕರಮಂ ಪೊಕ್ಕೆಲವೊ ಮರುಳೆ ಬರ್ದು ಕಲ್ಲುಗವಾ (ಗಜಪು. ೭-೦೪); ಧರೆಗೆ ಹೊಱಿಯಾದನ್ನ ತಮುವನುಯಿರದೆ ಬಿಸುಡುವ ತೆಱದ ಕೃಪೆ ಮಾಡು (ಕುಚ್ಚಾಕ. ೬೦೪- ೨೬-೨೭) ; ಬೋಯಿಗಳು ಪಲ್ಲಕ್ಕಿಯನ್ನು ಬಿಸುಟು ಓಡಿಹೋದಾಗ ಮತ್ತೊಂದು ವಿಪತ್ತಿಗೆ ಕಾರಣ ವಾಯಿತೆಂದು ತಿಳಿದಳು (ಪೀಠಿಕಾ. ೭೭). ೩. ತೆಗೆದು ಹಾಕು ; ಕಳಚು : ಮಾಯೆಯು ಮೇಲ್ಮುಸುಕನು ಬಿಸುಡೆ (ಪಾರ್ಶ್ವ. ೬-೨). [ದೇ.॥ ತಮಿ. ವಿಡು; ತುಳು. ಬೀಜಾಡು, ಬೀಜಾವು; ತೆಲು. ವಿಸರು,ವಿಸುರು]

ಬೀರಡವುಡೆ, ಬೀರಡೌಡೆ (ನಾ). ಯುದ್ಧದಲ್ಲಿ ಉಪಯೋಗಿಸುತ್ತಿದ್ದ ಒಂದು ಬಗೆಯ ಚರ್ಮವಾದ್ಯ; ವೀರಡಿಂಡಿಮ: ಪೊಡವ ಬೀರಡವುಡೆ [ಜಾಪಾ. ಡೌಡೆ]ಯು ಖಂಗಾಲೊಳೆಳ್ವ ಧಾರಿ ಸಂಕಲೆಯು . . . ಗಂಧ ಸಿಂಧುರಸಂದೋಹದಿಂ (ಜಾಪಾ. ೬-೦೦ ಪ). **ಬೀರಡೌಡೆ** : ತಂಬಟದ ಪಟಹದ ಬೀರಡೌಡೆಯ . . . ಕಹಳೆಗಳ ರವಕಸುರಾಲಿ ನಗುತಿರ್ದ (ಕಶ್ರಾಕ. ೬-೪೬). [ಬೀರ + ಡವುಡೆ]

ಬೀರಡಿ (ನಾ). ಒಬ್ಬಾತನ ಹೆಸರು : ಆಸಾಸಲಾ ಬೀರಡಿಗಳು ಮಾರಡಿಗಳುಂ . . . ಪೊಲನಂ ನಡಯಿಸಿದೋರ್ (ಎಳ- XVI, ಗುಬ್ಬಿ. ೭೫-೫೬; ೭೫೫). [ಬೀರ + ಅಡಿ$_1$]

ಬೀರಡೌಡೆ 'ಬೀರಡವುಡೆ' ನೋ.

ಬೀರಣ$_1$ 'ವೀರಣ$_1$' ನೋ.

ಬೀರಣ$_2$ (ನಾ). ಒಬ್ಬಾತನ ಹೆಸರು : ಹುಲಿಯ ಜಂಗುಳಿ ಬೀರಣನ ಮಗ ಮೂವಡಿ (ಎಳ- VIII, ಕಿಸಡ. ೫೬-೭; ೧೦೧೭ ?). [ಬೀರ + <ಅಣ್ಣ$_1$]

ಬೀರಣವಜಿ (ನಾ). ಒಂದು ಬಗೆಯ ಚರ್ಮವಾದ್ಯ : ಹತ್ತು ಜಂಬಕವಜಿ ಹತ್ತು ಬೊಂಬುಳಿಜುಂಜೆ ಹತ್ತು ಬೀರಣವಜಿ (ಕಬಾಶಾಂ. ೪೦-೭೭). [ಬೀರಣ$_1$ (<ವೀರಣ$_1$) + ಪಜಿ$_1$]

ಬೀರಣಿಗ (ನಾ). (?) : ಅವರಿಗೆ ಅರು ಸಹಾಯವಾಧಾರು ಅವರಿತ್ಕಂಡವನೂ ಕೊಂದವನೇ ಬೀರಣಿಗ ಜಾಕಿದಗೆ ಮಂಗಳ ಜವಳ ಅವರಿತ್ಕಂಡವ್ಗೆ ನಾಡು ನಬರ ಪರಿವಾರಕೆ ಹೊರಗು (ಎಳ. ೪. ಕೀಂಹಬ್ಬ. ೭೫-೦೫೯; ೧೨೫೫). [?]

ಬೀರಣಿ (ನಾ). ಅಧಿಕಾರಸೂಚಕವಾದ ಅಸ್ಥಾನದ ಉಡುವು (?) : ಕುಪ್ಪಸದ ಬೀರಣಿಯ ಬಿನ್ನಣದ ಪಸ[ನ್]ಗಂ ಬೊಪ್ಪಿಗೆಯ ಹೊಜವೇಷದಿಹಪರದ ಲೆಕ್ಕಿಗಂ (ಐಸಿ. ೩-೩೯); ಹೊಳೆವ ನವ್ಯಾಭರಣ ವೆಲ್ಲವಂ ನೆಱೆ ತೆಗೆದು ವಳಿಯ ಬೀರಣಿ ಕುಪ್ಪಸಂಗಳಂ ಮಿಗೆ ಕಳೆದು (ಕೇಚಿ. ೫. ೭೦೦-೪). [?]

ಬೀರಣಿಗಾವುಂಡ (ನಾ). ಒಬ್ಬಾತನ ಹೆಸರು : ಮಾಗರ ಬೀರಣಿಗಾವುಣ್ಡರ ಮಗಂ ಬಸವಯ್ಯಂಗೆ ಪಲ್ಲವಾದಿತ್ಯ ನೊಬಂಬಿಗಾವುಣ್ಡನೆಂದು ಪೆಸರಂ ದಯೆಗೆಯ್ದು (ಕ್ರಿಶ. ೦೯೩೨. ೪೫-೦೦; ಸು. ೨೦೦). [ಬೀರಣಿ + ಗಾವುಂಡ (<ಗಾಮುಂಡ)]

ಬೀರತಣಿ (ನಾ). ಮಡಿದ ವೀರನ ಆತ್ಮಶಾಂತಿಗಾಗಿ ನೀಡುವ ತರ್ಪಣ: ಬಟ್ಟಿಯ ಕಣ್ಣೊಳು[ಳ್] ಕಲ್ಲಗೆನಟ್ಟವರೆಲೆ ಬೀರತಣಿಯನಿತ್ತುಂ ಮೂಢರ್ (ಸಮಚ. ೦೨-೩). [ಬೀರ + ತಣ್ಣ]

ಬೀರತೆ (ನಾ). ಶೌರ್ಯ; ಕಲಿತನ : ಭೈರವ ಬೊಮ್ಮರಕ್ಕಸ ಕಾಳ ಜಟ್ಟಿಗ ಬೀರ ಬೇತಾಳರಾರೊಳರು ಬೀರತೆಯುಳ್ಳವರ್ಗಳು ನಿನ್ನಸುಗಾವೊಡಾರಾದರುಮಡ್ಡ ಬರಲಿ (ಕ್ರಿಚಾಂ. ೫-೩೯). [ಬೀರ + ತೆ$_3$]

ಬೀರದೇವ, ಬೀರೆದೇವ (ನಾ). ೧. ಒಬ್ಬಾತನ ಹೆಸರು : ಶ್ರೀಮನ್ಮಹಾಮಂಡಲೇಸ್ವರ ಕುಮಾರ ಬೀರದೇವನೊಡನೆ ಜಾಲುಕ್ಯ ವಿಕ್ರಮದ ೧೯ನೆಯ ಯುಮಸಂವತ್ಸರದ ಮಾಘಸುದ್ಧಪಂಚಮಿ ಆದಿತ್ಯ ವಾರದಂದು ಪರಲೋಕಪ್ರಾಪ್ತನಾಗುತ್ತಮಿರೆ (ಎಳ. VIII, ಶಾಸಿ. ೪೦-೩೯; ೧೦೧೬). **ಬೀರೆದೇವ** : ೨. ಒಬ್ಬ ದೇವತೆಯ ಹೆಸರು; ವೀರಭದ್ರ : (ಶ). [ಬೀರ + ದೇವ]

ಬೀರನೊಬಂಬ (ನಾ). ನೊಳಂಬವಂಶದ ಒಬ್ಬ ರಾಜನ ಹೆಸರು : ಶ್ರೀಮನ್ನೊಬಂಬಾಧಿರಾಜ ಅಯ್ಯಪದೇವನ ಮಗ ಅಣ್ಣಿಗ ಬೀರನೊಬಮ್ಮ (ಎಳ- X, ಗೋಡಿಕಿ. ೯-೩; ಸು. ೭೦೦); ಶ್ರೀಪೃಥಿವೀವಲ್ಲಭ ವಲ್ಲವಕುಲತಿಲಕ ಶ್ರೀಮತ್ ಅಯ್ಯಪದೇವನ ಮಗಂ ಬೀರನೊಬಮ್ಮಂ (ಎಳ. X, ಕೀಚಾಶಾ. ೫೫-೪; ಸು. ೭೭೦). [ಬೀರ + ನೊಬಂಬ]

ಬೀರಪೆರ್ಮನಡಿ (ನಾ). ಗಂಗವಂಶದ ಒಬ್ಬ ರಾಜನ ಹೆಸರು : ನೀತಿಮಾರ್ಗದೆಱೆಯವ್ವ ಪೆರ್ಮನಡಿಯ ಮಗ ಶ್ರೀಮತ್ಸತ್ಯವಾಕ್ಯ ಬೀರಪೆರ್ಮನಡಿಯು ಗೊಟ್ಟ ಕಲ್ಲಾಟು (ಎಳ. ೪. ೫೫೪. ೬೦-೯; ೮೭೦). [ಬೀರ + ಪೆರ್ಮನಡಿ (<ಪೆರ್ಮಾನಡಿ)]

ಬೀರಬೊಬ್ಬೆ (ನಾ). ಪೌರುಷಸೂಚಕವಾದ ಗರ್ಜನೆ,— ಬೊಬ್ಬೆ : ಬೀರಬೊಬ್ಬೆ. ವಿಜಯಯಾತ್ರೆ ಮತ್ತ ಮತ್ತ ಗುಡುಗಲಿ (ಗಂ. ೪೭-೦೦). [ಬೀರ + ಬೊಬ್ಬೆ$_3$]

ಬೀರಮಂಡಿ (ನಾ). ವೀರನು ಮಂಡಿಯೂರಿ ಕುಳಿತುಕೊಳ್ಳುವ ಒಂದು ಭಂಗಿ; ವೀರನು ಬಾಣಪ್ರಯೋಗ ಮಾಡಲು ಮಂಡಿಯೂರುವ ಒಂದು ಭಂಗಿ; ವೀರಮಂಡಿ : ' ಬೀರಮಂಡಿಯೂರು ' ಪರಾ. [ಬೀರ + ಮಂಡಿ$_3$]

ಬೀರಮಂಡಿಯೂರು (ಕ್ರಿ). ವೀರಮಂಡಿ ಹಾಕು; ಮೊಣಕಾಲನ್ನು ಊರಿ ಕುಳಿತುಕೊಳ್ಳು : ಬೀರಮಂಡಿಯೂರಿ ಯುವರಾಜನಿಗೆ ಪ್ರೇಮಾಲಿಂಗನವಿತ್ತು (ಪ್ರೇಕ. ೦೯-೦೬). [ಬೀರಮಂಡಿ + ಊರು$_1$ (<ಊಱು$_1$)]

ಬೀರಮದ್ದಳೆ ' ಬೀರವದ್ದಳೆ ' ನೋ.

ಬೀರಮ್ಮ (ನಾ). ಒಬ್ಬಾತನ ಹೆಸರು : ಬೇಡರ ಬೀರಮ್ಮನ ಪರಿಯೊಳ್ . . . ಪೆ × × ಱ್ದು ಸರ್ಗ್ಗಕೆ ಪನ್ದನ್ (ಎಳ. ೪. ಜಾಸಿ. ೨೯-೬ ; ೭೭೮) ; ಮಲೆಯಂ ಕೊಟ್ಟಿತ್ತು ಬೀರಮ್ಮನ ಕುಲಮನಿತುಂ ದಾಸಿಪತ್ಯಕ್ಕೆ ನಿಂದರ್ (ಜೈಜಾ. XX. ೫೪-೨೮; ೧೦೮೭). [ಬೀರ + ಅಮ್ಮ$_1$]

ಬೀರಯ್ಯ (ನಾ). ೧. ಒಂದು ಕ್ಷುದ್ರದೇವತೆಯ ಹೆಸರು : ಮಾರಯ್ಯ ಬೀರಯ್ಯ . . . ಕೇತಯ್ಯಗಳೆಂಬ ಸೂಜು ಮಡಗೆ ನಮ್ಮ ಕೂಡಲ ಸಂಗಮದೇವ ಶರಣೆಂಬುದೊಂದು ದಡಿ ಸಾಲದೆ (ಬಸ. ೫೫೭). ೨. ಒಬ್ಬಾತನ ಹೆಸರು : ಬರದೊಂ ಬೀರಯ್ಯ (ಎಳ. IV, ತೆಗ್ಗ. ೦೦೬-೦೪; ಸು. ೮೨೦). [ಬೀರ + ಅಯ್ಯ$_1$]

ಬೀರರವ (ನಾ). =ಬೀರಬೊಬ್ಬೆ : ತೆಗೆಯಿ ಬೀರರವ[ದ] ಮೇಲೆ ಪರಿವ ಮದಗಜಂಗಳಿಂ ಚಳತ್ಪುರಂಗಮಂಗಳಿಂ (ಪಂಪಭಾ. ೦-೫೬ ಗದ್ಯ). [ಬೀರ + ರವ]

ಬೀರರಸ (ನಾ). ಒಬ್ಬಾತನ ಹೆಸರು : ಬೀರರಸನ ಮಗ ಬೊಂವರಸನ ಪೆಂಪೆಂತೆಂದಡೆ (ಎಳ- VIII, ಶಾಸಿ. ೩೦-೯; ೧೦೦೦ ?). [ಬೀರ + ಅರಸ$_1$]

ಬೀರವಟ್ಟ (ನಾ). ೧. ಮುಖ್ಯಸೇನಾಪತಿಯ ಪಟ್ಟ,—ಪದವಿ ; ಸೈನ್ಯದ ನಾಯಕತ್ವ ; ವೀರಪಟ್ಟ : ಬೀರವಟ್ಟಮನಾನಿರೆ ನೀನೀ ಸೂತಸುತಂಗೆಡೆಗೊಂಡು ಕೈವಾರದಿಂದೊಸೆದಿತ್ತೊಡಮೇನಾಯ್ತು (ಪಂಪಭಾ. ೦೨-೨೩); ಬೀರವಟ್ಟಕ್ಕೆ ಮೆಟ್ಟಡೆ ಬೀರಾಂಗನೆ ಸೇಸೆಗೊಂಡ ಪಡೆಯಂ ಕೈಸನ್ನೆಗೆಯ್ದುದ್ಧತಂ ನಡೆಯಲ್ವೇಟ್ಟೊಡೆ (ಜಾಅಪು. ೬-೦೦೬). ೨. ಮುಖ್ಯಸೇನಾಪತಿಯ ಪದವಿಯನ್ನು ಸೂಚಿಸುವ (ಹಣೆಗೆ ಕಟ್ಟುವ) ಸಣ್ಣ ಪಟ್ಟಿ : ಜೋಲ್ದ ಪೂರ್ವನೆತ್ತಿ ಕಟ್ಟಿದ ಲಲಾಟಪಟ್ಟ ದೊಳ್ಪಳಚೊವ್ವಿನ ಬೀರವಟ್ಟಮುಮಸದಳಮೆಸೆಯೆ (ಪಂಪಭಾ. ೦೦-೩೨ ಪ). [ಬೀರ + ಪಟ್ಟ$_3$]

ಬೀರವಣ (ನಾ). ೧. ಸೈನಿಕರ ಜೀವನನಿರ್ವಹಣೆಗಾಗಿ ಪ್ರಜೆಗಳು ಕೊಡುತ್ತಿದ್ದ ತೆರಿಗೆ : ಕಿಸುಕಾದೇಬ್ಬತ್ತಱೊಳಂ ಸಾರಿಗೆ ಬೀರವಣಸಹಿತಂ ಸುಂಕಂ ಪರಿಹಾರಂ (ಎಇ. XV. ೬೯-೨೪; ೧೦೨೦); ಬೀರವಣ ಕೊಡತಿವಣ . . . ಆಚಂದ್ರಾರ್ಕ್ಕತಾರಂಬರಂ ಸಲ್ಗೆ (ಕ್ರಿಅ. ೦೯೩೨. ೦೬-೩೦; ೧೦೮೨); ೨. ಊರಿನ ಜನರು ವೀರನೊಬ್ಬನ ಶೌರ್ಯವನ್ನು ಮೆಚ್ಚಿ ಅವನಿಗೆ ಕೊಡುತ್ತಿದ್ದ ಹಣ : ಶಿವಲಿಂಗಮಹಾಮಹಿಮಂಗೆ ನಾಗವಾಡಂ ತವಗೀವ ಬೀರವಣ ದರ್ತ್ಮವಾವಗಮಿತ್ತಸರ್ತ್ತಿಯೀ (ಕಶಾಸಾಶ. ೬-೬೦; ೧೧೪೭). [ಬೀರ + ಪಣ್ಣ$_3$]

ಬೀರಮಣಿಗ (ನಾ). ವರ್ತಕರ ಒಂದು ಪಂಗಡ ಮತ್ತು ಆ ಪಂಗಡಕ್ಕೆ ಸೇರಿದವನು : ವೀರಬಣಂಜುಧರ್ಮ ಮತ್ತು ಆ ಧರ್ಮಕ್ಕೆ ಸೇರಿದವನು : ಬೀರರುಂ ಬೀರಮಣಿಗರುಂ ಗವುಂಡರುಂ . . . ಅಪ್ಪ ಶ್ರೀಮದಯ್ನೂರ್ವ್ವರ ವಿಖ್ಯಾತಿಯೆನ್ದೊಡೆ (ಪಾಶ್ವ. IX-i. ೦೦೬-೫೫; 1057); ಸೆಟ್ಟಿಗುತ್ತರುಂ ಗಾವುಣ್ಡರುಂ ಗಾವುಣ್ಡಸ್ವಾಮಿಗಳುಂ ಬೀರರುಂ ಬ(ಬೀ)ರಮಣಿಗರುಂ (ಎಇ. XIX. ೫೭-೨೦ ; 1136).

[< ಸಂ. ವೀರವಣಿಜ್]

ಬೀರವದ್ದಳೆ. ಬೀರಮದ್ದಳೆ (ನಾ). ಯುದ್ಧಕಾಲದಲ್ಲಿ ಉಪಯೋಗಿಸುವ ಒಂದು ವಾದ್ಯ : ರಣವಾದ್ಯ : ತಂತಮ್ಮ ವೊಸೆಯ ನಾಯಕರ ಬಿರುದಿನ ಬೀರವದ್ದಳೆಯ ಪದಿರ ಪಜಿಯ ಕಹಳೆಯ ಕಳಕಳಂ ಕವಿ ಶಬ್ದಂಗಿಡೆ ದಿವಮನೆಯ್ದೆ (ಪಂಚಪಾ. ೦೭-೮೪ ಪ). ಬೀರಮದ್ದಳೆ: ಕೋಕಿಲಾರವಮದು ಬೀರಮದ್ದಳೆಯ ನಿಸ್ವನಮಾಗಿರೆ (ಹರ್ಷಕ್ರ. ೭-೮೨).

[ಬೀರ + ಮದ್ದಳೆ$_2$ (<ಮದ್ದಲೆ$_1$)]

ಬೀರವರ್ತಿ (ನಾ). ವೀರವೃತ್ತಿಯ ವ್ಯಕ್ತಿ: ಸೈನಿಕ : ಜಗಮನದಿರ್ಪ್ಪಲಾರ್ಪ ಬಿರುದಾಂತ ಬಲಂಗಳನೆತ್ತಿ ನುಂಗಿ ಮತ್ತುಗುಬದ ಬೀರವರ್ತಿನಿಕರಂಗಳ ಬಾಲ್ಗೊದಲಾದ ಜಾಗದೋಲಗದ ವಿದಂಬದಂಬರಕೆ ಕಜ್ಜೆಲೆಯಾದ ವಿಲಾಸಮೊಪ್ಪೆ ಗದ್ದುಗೆಯೊಳಗಿರ್ದುದಗ್ಗಳಿಕೆಯಗ್ಗದ ಪಾರ್ಥಿವ ಪುತ್ರಸಾರ್ಥಕಂ (ಪಜಿಪು. ೨-೨೮). [< ಸಂ. ವೀರವರ್ತಿನ್]

ಬೀರವಸದನ (ನಾ). ವೀರೋಚಿತವಾದ ಅಲಂಕಾರ.— ಪ್ರಸಾದನ : "ಬೀರವಸದನ—ವೀರಪ್ರಸಾದನಂ (ವೀರೋಚಿತ ಆಭರಣ, ಅಲಂಕಾರ)" (ಕ್ಷತ್ರೋ. ೪೦). 'ಬೀರವೆಸದನಂಗೆಯ್' ಪರಾ. [ಬೀರ + ವಸದನ]

ಬೀರವಸದನಂಗೆಯ್ (ಕ್ರಿ). ವೀರೋಚಿತವಾದ ವೇಷಭೂಷಣಗಳನ್ನು ಧರಿಸು : ಕಣ್ಗೆಂಬಾಗಿರೆ ಬೀರವಸದನಂಗೆಯ್ದು . . . ಪೂಣಿವಟ್ಟಂ (ಕ್ಷತ್ರಾ. ೦೯೩). [ಬೀರವಸದನ + ಕೆಯ್$_1$]

ಬೀರವಜೆ[1] (ನಾ). ವೀರೋಚಿತವಾದ ಒಂದು ವಾದ್ಯ.— ಹರೆ ; ಒಂದು ಬಗೆಯ ರಣವಾದ್ಯ.— ತಮಟೆ : ಬಾಜಿಸುವ ಬೀರವಜೆಯು ಪೊಡವ ಡಕ್ಕೆಯ ಪಿಡಿದ ಬಿರುದಿನ ಕಾಳೆಯ ಬಿಲ್ಲುಲಿಯ ಸಡಗರಮೆಲ್ಲಾ ದೆಸೆಗಳಂ ಕವಿಂಡುವಡಿಸೆ (ಕ್ಷತ್ರಾ. ೨೫೦); ನಾನಾ ಬೀರವಜೆಗಳ ರಭಸದಲಿ ರಂಜಿಸಿದುದಾ ದುರ್ಗ (ಕೊಡಗು. ೬-೩-೦೩). [ಬೀರ + ಪಜೆ$_1$]

ಬೀರವಜೆ[2] (ನಾ). ವೀರೋಚಿತವಾದ ಒಂದು ವಾದ್ಯ.— ಹರೆ ; ಒಂದು ಬಗೆಯ ರಣವಾದ್ಯ.— ತಮಟೆ : ಬಾಜಿಸುವ ಬೀರವಜೆಯು ಪೊಡವ ಡಕ್ಕೆಯ ಪಿಡಿದ ಬಿರುದಿನ ಕಾಳೆಯ ಬಿಲ್ಲುಲಿಯ ಸಡಗರಮೆಲ್ಲಾ ದೆಸೆಗಳಂ ಕವಿಂಡುವಡಿಸೆ (ಕ್ಷತ್ರಾ. ೨೫೦); ನಾನಾ ಬೀರವಜೆಗಳ ರಭಸದಲಿ ರಂಜಿಸಿದುದಾ ದುರ್ಗ (ಕೊಡಗು. ೬-೩-೦೩). [ಬೀರ + ಪಜೆ$_1$]

ಬೀರವರ (ನಾ). ಒಂದು ಊರಿನ ಹೆಸರು : ನಾಲ್ಕು ಮತ್ತರ್ಕೆಯು ಬಿಡುವುದೊಕ್ಕೆ ಬೀರವುರಮುಂ ಬಿದಿರ್ವ್ವಳ್ಳಿಯುಮನೊಂದೊ ಅಗ್ರಹಾರಂ ಮಾಡಿ (ಎಇ. XI. ಶ್ರವ. ೫೦-೦೩ : ೧೦೮). [ಬೀರ + ಪುರ$_2$]

ಬೀರಪಂಕಳೆ (ನಾ). ವೀರನು (ಬಿರುದಿನ ಸಂಕೇತವಾಗಿ) ಧರಿಸುವ ಕಾಲ ಬಳೆ ; ವೀರಶೃಂಖಲೆ ; ತೊಡರು : ಪೊಸ ಬೀರಪಂಕಳೆಯು ತೊಳಪ್ಪ ಕನ್ನಡಿಯ ಚಿನ್ನಡಿಯಡ್ಡಣಮೆಡ್ಡಮಾಗೆ (ಕ್ಷತ್ರಾ. ೫೬೨).

[ಬೀರ + ಪಂಕಳೆ$_1$]

ಬೀರಸಗ್ಗ (ನಾ). ಕಾಳಗದಲ್ಲಿ ವೀರೋಚಿತವಾದ ಮರಣವನ್ನು ಪಡೆದ ವೀರನಿಗೆ ದೊರಕುವುದೆಂದು ಭಾವಿಸಲಾದ ಸ್ವರ್ಗ ; ವೀರಸ್ವರ್ಗ : 'ಬೀರಸಗ್ಗಂಬಡೆ' ಪರಾ. [ಬೀರ + ಸಗ್ಗ]

ಬೀರಸಗ್ಗಂಬಡೆ (ಕ್ರಿ). ವೀರಸ್ವರ್ಗವನ್ನು ಹೊಂದು.—ಪಡೆ : ಚೋಟ ಗಣ್ಡರ್ ಅಬ್ಬನ ಮುನ್ದೆ ಪಜಿದು ಬೀರಸಗ್ಗಂಬಡದು (ಕ್ಷತ್ರಾ. ೦೯೫೫. ೬೫-೬ ; 1066). [ಬೀರಸಗ್ಗ+ಪಡೆ$_1$]

ಬೀರಸಾಂತರ (ನಾ). ಸಾಂತರವಂಶದ ಒಬ್ಬ ರಾಜನ ಹೆಸರು : ಸಾನ್ತಳಿಗೆಯ ಬೀರಸಾನ್ತರನ ಮೇಲೆ ನಡವಯ್ತತ್ತು ವಾಡೊಳಿಗಣ ಬಲ್ಲುಗದೊಳ್ಬಿಟ್ಟಬ್ಬನ್ದು (ಎಇ. VIII. ಶಿಕಾ. ೧೭೬-೦೫ : ೧೧). [ಬೀರ + ಸಾಂತರ]

ಬೀರಸೆಟ್ಟಿ (ನಾ). ವ್ಯಾಪಾರಿಗಳ ಒಂದು ವರ್ಗ : ಊರಿಗೆಯ್ದಿದ ಮೂರಿ ಬೀರಸೆಟ್ಟಿಯ ಹೊಯ್ದ ದಾರಿಕಾಱರ ಗಾದೆಯಂತೆ (ಪಜಿ. ೪೨-೪೪). [ಬೀರ + ಸೆಟ್ಟಿ]

ಬೀರಸೇನಸಿದ್ಧಾಂತ (ನಾ). ಒಬ್ಬಾತನ ಹೆಸರು : ಶ್ರೀ ವೆಳ್ಗೊಳ್ಳಿನವಾಸಿಗಳಪ್ಪ ಶ್ರೀ ಬೀರಸೇನಸಿದ್ಧಾನ್ತದೇವರವರ ಶಿಷ್ಯರ್ (ಎಇ. I. ೪೮-೪: ೧೧೮). [ಬೀರ + ಸೇನ$_2$ + ಸಿದ್ಧಾಂತ]

ಬೀರಸೇಸೆ (ನಾ). (ಯುದ್ಧ ಮುಂತಾದ ಸಂದರ್ಭಗಳಲ್ಲಿ) ವೀರನ ತಲೆಯ ಮೇಲೆ ತಳಿಯುವ ಅಕ್ಷತೆ ; ವೀರಸೇಸೆ : ನೊಸಲ ಕಣ್ಣಿನಮಾದೇವನ ಮಿಸುಪ ನೊಸಲೊಳ್ ಬೀರಸೇಸೆಯನಿಟ್ಟು (ರಾಪಪ್ರ. ೦೩೦-೦೩). [ಬೀರ + ಸೇಸೆ$_1$]

ಬೀರಾಳ್ (ನಾ). ಶೂರನಾದ ಸೈನಿಕ : ಇಂತಿಂತು ಬೀರಾಳ್ಗಳಿಲ್ಲಿರ್ದ ಸಗನುಡಿಯುತಿರೆ (ಜಾಪ್ರಪ. ೬೭-೨೧೦): ಲೆಕ್ಕಕ್ಕೆ ವಿಗಿಲ್ ಬೀರಾಳ್ಗಳಂ ತಿಂದೆ (ಕ್ಷತ್ರಾಮಾ. ೬೪೩-೨೪೨). [ಬೀರ + ಆಳ್$_3$]

ಬೀರಿಸು 'ಬೀಱಿಸು' ನೋ.

ಬೀರು$_1$ 'ಬೀಱು$_1$' ನೋ.

ಬೀರು$_2$, ಬೀರ್$_2$ (ನಾ). ಒಂದು ಬಗೆಯ ಮದ್ಯ : ಇನ್ನೂ ಸೊಲ್ಲ ಬೀರು ಬೀಕು (ಅಪಪ್ರ. ೭೭). ಬೀರ್$_3$: ನಾಲ್ಕು ಜನ ಸ್ನೇಹಿತರು ಕೂಳಿತು ಸಂಜೆ ಬೀರ್ ಕುಡಿಯುವುದಕ್ಕೆ ಸೊಗಸಾದ ಸ್ಥಳ (ಹೋಪ್ರಪ. ೫೩); ಆಧುನಿಕ ನಿರನುಭವಿ ಯುವಕರಂತೆ ಬೀರ್ ಕುಡಿದು ನೋಡಿದ (ಕ್ರಕ್ಷೆ. ೫೯). [←ಇಂ. Beer]

ಬೀರು$_3$ (ನಾ). ಬಾಗಿಲುಳ್ಳ ನಿಲುಪೆಟ್ಟಿಗೆ : ಕಪಾಟು : ಅಲುಮಾರು : ಒಂದು ಬೀರುವನ್ನು ಮುಂದು ಹಾಕಲಾಗಿತ್ತು (ಪಾಪ್ರಚ. ೦೫೮); ಬಟ್ಟೆಗಳು ಗಾಜಿನ ಬೀರುವನ್ನು ಸೇರಿದ್ದುವು (ಕುಬಕಥಾ. ೫೫); ಚಂದ್ರಯ್ಯ ಗೌಡಯ ತಮ್ಮ ಬೀರುವಿನ ಪಕ್ಕದಲ್ಲಿ . . . ಮಂಡಿಸಿ ಎಲ್ಲರೊಡನೆಯೂ ಸಂಭಾಷಣೆ ನಡಸುತ್ತಿದ್ದರು (ಕಾಪ್ರಚ. ೬೯).

[← ಇಂ. Bureau. / ತಮಿ. ಪೀರೋ ; ತೆಲು. ಬೀರುವಾ, ಬೀರುವ]

ಬೀರುಗಲ್ (ನಾ). ತೂರಿ ಬರುವ ಕಲ್ಲು ; ಎಸೆದ ಕಲ್ಲು : ಎತ್ತ ತಿರುಗಲುಮಿಲ್ಲದಮ್ಮೋರ್ ಬೀರುಗಲ್ಗಳ್ . . . ನೆರನಿರೆಯೆ, ತೊಪ್ಪ ತೊಪ್ಪನೆ ಕುಪ್ಪೆಯೊಟ್ಟಿದರ್ (ಜಾಪ್ರ. ೦೭-೨೦೦).

[ಬೀರು$_1$ (<ಬೀಱು$_1$) + ಕಲ್$_3$]

ಬೀರೆದೇವ 'ಬೀರದೇವ' ನೋ.

ಬೀರ್ಗ್ಗ 'ಬೀಱುಮಗ್ಗ' ನೋ.

ಬೀರ್ವು (ನಾ). ಕಟ್ಟು ; ಕಟ್ಟಳೆ (?): ಪರ್ವ ನಾಲ್ಕರೊಳಾವುದಾನೊಂದು ಪರ್ವವ ಪೂರ್ವಗೊಂಡುಪವಾಸವಿಹೆಂ ಸರ್ವಥಾ ಯಮುವಲ್ಲ ನಿಯಮ ಮತ್ತದರೊಂದು ಬೀರ್ವು ತಿಂಗಳಿಗೊಂದು ದಿವಸ (ಪಜಿ. ೦೯-೬೯).

[?]

ಬೀವ 'ಬೀವು' ನೋ.

ಬೀವು. ಬೀಹು (ನಾ). ರಿ. ಬೆನ್ನುಹುರಿ : ಬೆನ್ನ ಬೀವಂ[ಹರಿಶ. ಮಂ] ತೆಗೆವ ಬೇತಾಳರುಮಂ . . . ಕಂಡು (ಗದಾಯು. ೫-೬ ಪ); ಬಿಗಿದ ಬೆನ್ನ ಬೀವುಂ ತೆಗೆದ ಬಸಿಱುಂ . . . ನಾಲ್ಕುಂ ತಳಮುಂ ತೋಱುತ್ತುಂ ಸರಳಿಸಿ ಪಾಯ್ದು ಪೋಪ ಪೊಳ್ಕೆವಂದಿಯುಂ ಕಂಡು (ಶಾಪ್ರ. ೬-೦೬ ಪ); ಸಂದ ಬೇವಾಳಸ ಬೆನ್ನ ಬೀವನಿರದೆತ್ತಿ (ಪಾ. XV. ೪೨೦-೨೨: 1172). ಶಿ. ನರ ; ಸ್ನಾಯು : ಕೀವಿನ ನೆತ್ತರ ತಿಪ್ಪೆ ಬೀವಿನಿಂದಂ ಬಿಗಿದಿರ್ದ ಪೆರ್ಮಾಣದ ಖಂಡದ ಮಾಂಸದ ತಾಣವಲ್ಲದೇ (ಪಪಾಪ್ರ. ೫-೨೯) ; ಹಲವೆಲುವಿನಿಕ್ಕೆಗಳ ಬಿಗಿದು ಬೀವಂ ನೆಯ್ದು ನುಲಿಯ ಹಂದೊಗಲ ಹಾಸಿನೊಳು ಮಂಚಂ ಜಡಿಯೆ (ಪಪಾ. ೦೦-೬೦). ಹಿ.

ಹುರಿ ; ಹಗ್ಗ : ರಜ್ಜು : ಬೀವು ಮಿಳಿಯುಮಂ ನೂಲ್ ಕೊಳ್ಳಾರ್ಡೆ ಬಾ (ಜಂಪಂ. ೯-೬೬ ಪ); ತನ್ನ ಕೊರಲನರ್ಘ್ಯಾಭರಣಮಂ ಬೀವಂ ಮಾಡಿ ಕುಮಾರಿಯ ಕೆಯ್ಯೊಳ್ ಕೊಟ್ಟು ... ಆ ಕುಮಾರಿಯಂ ಕೂಪುವುದುಮಾಕೆ ಬೀವಂ ಮುರಿತ್ತುಂ ಬರೆ (ಶಾಂಪು. ೯-೩೦ ಪ); ರಂಜಿಪ ಬೆರಕೆವರಲ ಚಿಬ್ಬಲೊಳಗೆ ಹೊಸ ಹೊನ್ನ ಸರಿಗೆಯ ಬೀವುಗಳನು ತುಂಬಿ (ಕೇಬಾಸಂ. ೫೦-೩೭). ೪. ತಂತೀವಾದ್ಯಗಳಲ್ಲಿ ಉಪಯೋಗಿಸುವ ಸರಿಗೆ.—ತಂತಿ : "ಪಟೀಲು, ಮೊ. ವಾದ್ಯಗಳ ಹುರಿ ; ಬೀವು ; ತಂತಿ" (chord-ಕಾಳ). ಬೀಹು : ೨. ಬಲ್ಲಿಂದ ಬೀಹಿನ ಹಗ್ಗು ಮುಂತಾದವೋಲು ಕಲ್ಲಿಂದ ಕಾಲ್ತುಂಡಿಸುವೋಲು ಬಲ್ಲಿತಪ್ಪಾ ಕೊಲೆಯುಂ ಕೊಂದರಾ ವಿಗಮಿಷ್ಟಿಂ ನಿಲ್ಲದೆಂಬಂತೆ (ಕೇಬಾಸಂ. ೨-೩೨).

ಬೀವು ಮಾಡು = ಹಗ್ಗವನ್ನಾಗಿ ಮಾಡು ; ಹುರಿಯನ್ನಾಗಿಸು : ತನ್ನೆಸೆವ ರತ್ನಮಾಲೆಯನುನ್ನತನಂಪೆಯೆ ಬೀವು ಮಾಡಿ ಬಿಚ್ಕಾ ಕಸ್ಪೆಯ ಕಯ್ಯೊಳ್ ಕೊಟ್ಟು (ಕೇಬಾಪ್ರ. ೯-೩೩).

ಬೀವುಗಾರ್ತಿ (ನಾ). ಹಗ್ಗವನ್ನು ಮಾರುವವಳು : ಬೀವ ಕೊಳ್ಳರೆಯೆಂದು ವೀಣಾರಾವದಿಂ ಪೊಳಲಂಗಡಿಯೊಳಾ ಬೀವುಗಾರ್ತಿ [ಜಾಹೀ. ೫] ಬರಲ್ಕೆ (ಜಾಕೃಪಾ. ೩೦-೨೮). [ಬೀವು + — ಕಾರ್ತಿ + — ತಿ$_1$ (< — ಇತ್ತಿ)]

ಬೀವುಗಿತಿ (ನಾ). = ಬೀವುಗಾರ್ತಿ : ಬೀವುಗಿತಿ ನಿಮಗೇತಱಿಂದಾಯ್ತು ವಿಭವಮಿವೆ ಬೀವ ಮಾಱುದೊಡೀ ವಿಭವವಾಯ್ತೆಂದವಳ್ ಸಭಿ ಮಡಿಯ (ಜಾಕೃಪಾ. ೩೦-೨೯). [ಬೀವು + — ಗಿತಿ$_2$ (< — ಗಿತ್ತಿ)]

ಬೀವುಗೊಳ್ (ಕ್ರಿ). ಹಗ್ಗವನ್ನು ಕೊಂಡುಕೊಳ್ಳು : ಬಂದಂಗನೆ ಬೀವುಗೊಳ್ಳಿಮೆನುತುಂ ಪೊಕ್ಕಾ ಪುರೀವೀಥಿಯೊಳ್ ನಿರಹಂಕಾರದಿನೆಲ್ಲರುತ್ತಿರೆ (ಶಾಬಾಪ್ರ. ೯-೩೮); ಪೋಗಿ ಪೊಬಲಂ ಬಳಿಕಾನನೆ ಬೀವುಗೊಳ್ಳಿಮೆನುತಂ ಪೊಕ್ಕಳ್ (ಜಂಪಂ. ೯-೭೦). [ಬೀವು + ಕೊಳ್$_1$]

ಬೀವೋಡ (ನಾ). ಒಬ್ಬಾತನ ಹೆಸರು : ಅಭಿಮಾನುಗಳೆಂಬ ಗೊಗ್ಗಿ ತನ್ನ ಮನ್ನೆಯ × × ಬೀವೋಡಂಗೆ ಬಿಟ್ಟರಿಂ (ಅ. ಪ್ರ. ಹೊಗಾ. ೫೯-೯ : ೧೮೮). [ಬೀವ (< ಬೀವು) + ಓಜ$_3$ (<ಒವ್ಕು)]

ಬೀಸ, ಬೀಸು$_3$ (ನಾ). ೧. ಒಂದು ಸಂಖ್ಯೆ ; ಇಪ್ಪತ್ತು : "ಬೀಸಿಗೆ (ಬೀಸ) — ವಿಂಶತ್ = ಇಪ್ಪತ್ತು" (ಕ್ರಿಕೋ. ೬೨). ೨. ಇಪ್ಪತ್ತರಲ್ಲಿ ಒಂದು ಭಾಗ. ೩. (?) : ಭಂಗಾರವಂ ಮಾಱುನಿಕದಲ್ಲಿ ದೇವರಂಗ ಭೋಗಕ್ಕೆಯಾಚುದ್ರಾಕ್ಕೆ × × ನಡವಂತಾಗಿ ಪೂಜ್ಕೆ ಬೀಸಮಂ ಬಿಟ್ಟರ್ ಮತ್ತಂ ಚೈತ್ಯಾರೋಪಣಕ್ಕೆ ವರ್ಷಂಪ್ರತಿ ಬೀಸಕ್ಕೆ ಜಾಗವೊಂದು ಬಿಟ್ಟರ್ (ಶಾಸ. XV. ೦೩೬-೩೨; ೧೧೭೦). ಬೀಸು$_3$: ೧. 'ಉತ್ತಮ ಬೀಸು' ಪರಾ. 'ವೀಸ' ಹೋ.

[← ಹಿಂ. ಮರಾ. ಬೀಸ್./ಕ್ರಾ. ವೀಸ್./ಸಂ. ವಿಂಶತಿ]

ಬೀಸಗೆ, ಬಿಸಿಗೆ, ಬೀಸಿಗೆ$_2$ (ನಾ). ೧. ಇಪ್ಪತ್ತುಪಲದ ಪ್ರಮಾಣ: ಬೀಸಗೆವೊಂದಕ್ಕಾ ಪೆರೆ ಲೇಸಾಗಿಪ ಗಂಧ ಪಂಚಿಧಾರವ ಸುಂಕಂ ಅರಸನೊಲಿದೀವ ಪಡಿಯಂ ಭರದಿಂ ತೊಂಭತ್ತು ಧಾರಕೇನುಂ ಬರ್ಕುಂ (ಕ್ಕಶಾ. ೨೯-೦೩); ೧ ಬೀಸಗೆ — ೨೦ ಪಲ (ಶಾಂಪ. ೭೧೩). ಬಿಸಿಗೆ : ೧. ವಿಂಶತಿ ಪಲಂ ಬಿಸಿಗೆ (ಕಾಪ. ೧೪); ಬಿಸಿಗೆ ಪಂದ ಕೊಪಿರಲೆ ಸಾಗಿಪ ಗಂಧ ಪಂಚ ಭಾರದ ಸುಂಕಂ (ಜಾಕ್ಕ. ೪೪-೯). ಬೀಸಿಗೆ$_2$: ೧. "ಪಲಮಕ್ಕೆವಿಪ್ಪತ್ತಿನಲ್ಕೆ ಬೀಸಿಗೆಯದಕ್ಕುಂ" (ಹುಂಗಣ. ೦೦೪-೦೦); ಧಂಡಿಯ ಕರುಸೆಯ ಮಳವೆ ಗೆರಡು ಬೀಸಿಗೆ (ಅ. XIX. ೩೩-೨೮ : ೧೨೨೬) ; ದಶವ್ಯಯಪಲದಿಂ ನಿಲ್ಕುಂ ಬೀಸಿಗೆ (ಕ್ಕಶಾ. ೨-೨೨). ೨. (ಅರುವತ್ತುಸಂವತ್ಸರಗಳನ್ನು ಮೂರುಭಾಗಗಳನ್ನಾಗಿ ವಿಂಗಡಿಸಿದ) ಇಪ್ಪತ್ತುವರ್ಷಗಳ ಅವಧಿ : ಮೊದಲುತ್ತಮಬೀಸಿಗೆಯಿಂದುದಯಿಸುಗುಂ ನಾಲ್ಕು ಯುಗಮುಂ ಪ್ರಭವಾದ್ಯ(ಬ್ದ)ಂ (ಜಿತ್ಯಪು. ೭-೨); ಕ್ರಮದಿಂದುತ್ತಮ ಬೀಸಿಗೆ ಮಧ್ಯಮಂ ಬೀಸಿಗೆ ಕನಿಷ್ಠಂ ಬೀಸಗೆಗಳೆನಿಸಿ ಇಪ್ಪತ್ತಿಪ್ಪತ್ತು ವರುಷಂಗಳಿಂದೊಪ್ಪುತ್ತನು ಭೂತಫಲಮಾಗಿರ್ಕುಂ (ಜಾಗಣ. ೩೫೦). ೩. ಒಂದು ಸಂಖ್ಯೆ ; ಇಪ್ಪತ್ತು : "ಬೀಸಿಗೆ (ಬೀಸ) —ವಿಂಶತ್ = ಇಪ್ಪತ್ತು" (ಕನ್ನಕೋ. ೬೨).

[ಬೀಸ + —ಗೆ]

ಬೀಸಣಿ 'ಬೀಸಣಿಗೆ' ನೋ.

ಬೀಸಣಿಕೆ 'ಬೀಸಣಿಗೆ' ನೋ.

ಬೀಸಣಿಗೆ, ಬೀಸಣಿ, ಬೀಸಣಿಕೆ (ನಾ). ಗಾಳಿ ಬೀಸಿಕೊಳ್ಳಲು (ಓಲೆಗರಿ, ಬಿದಿರು ಮುಂತಾದುವುಗಳಿಂದ) ತಯಾರಿಸಿದ ಒಂದು ಸಾಧನ ; ವ್ಯಜನ : "ವ್ಯಜನಂ. ತಾಲವೃಂತಕಂ — ಈ ೨ ಬೀಸಣಿಗೆ". (ಹೂಆಮು. ೩೨-೧೩೩); ಬೀಸಣಿಗೆ ಗಿಂಡಿ ಪಡಪಂ ಮುಣ ಕಾಳಾಂಜಯನಾಂಪೆಸರ್ ... ಸತಿಯರ್ (ಅಾಕ್ಕಶ. ೨-೯) ; ಱುಳೆವ ಱುಂಜಂಪಿಸಿ ಬೀಸಿದವು ತಂಬೆಲರ ಬೀಸಣಿಗೆಗಳು (ಶಾಬಾಪ್ರ. ೦೨-೦೩). ಬೀಸಣೆ : ಕರದಿ ಬೀಸಣೆ ಕೊಡೆದು ಭೂತದಾಧಾರ ಜಪಸರವಾಂತು (ಜೀಗಣ. ೦೨-೯). ಬೀಸಣಿಕೆ : ಬೆಂದಸದಿಂದ ಪಟ್ಟಿಗೆ ಕರದಿಗೆ ಬೀಸಣಿಕೆ ಮುಂತಾದವುಗಳನ್ನು ಮಾಡುತ್ತಾರೆ (ಪಾಬಂಪಾ. ೩-೬೪); ಕೂಸು ಇದ್ದ ಹುನಿಗೆ ಬೀಸಣಿಕೆ ಯಾತಕ್ಕ ಕೂಸಂ ಕಂದಯ್ಯ ಒಳ ಹೊರಗ ಆಡಿದರ ಬೀಸಣಿಕೆಗಾಳಿ ಸುಳಿದಾವ (ನಳ. ೮೩). 'ಬಿಜ್ಜಣಿಗೆ' ಪರಾ.

ಬೀಸಣಿಗೆಯ ಊಳಿಗ = ಬೀಸಣಿಗೆಯನ್ನು ಹಿಡಿದು ಗಾಳಿ ಬೀಸುವ ಸೇವೆ : ಅರಮನೆಯಲ್ಲಿ ಸಮುಖದೊಳು ನಿತ್ಯಕಟ್ಟಳೆಯಲ್ಲಿ ನಡೆಯುವ ಊಳಿಗಗಳು—ಸಂಜೆಯ ಊಳಿಗ . . . ತೂಗುನೀರಿನ ಊಳಿಗ, ಬೀಸಣಿಗೆಯ ಊಳಿಗ (ಶಾಬಾಪ್ರ. I, ೮೩).

[<ಬಿ.ಸು$_1$. / ತಮಿ. ವಿಚಿಐ; ಮಲ. ವೀಶಣಿ, ವಿಶರಿ; ತುಳು. ಬೀಸಣಿಗೆ, ಬೀಸನಿಗೆ ; ತೆಲು. ವೀವನ. / ಸಂ. ವ್ಯಜನ]

ಬೀಸಣಿಗೆಮರ (ನಾ). ಬೀಸಣಿಗೆಯಾಕಾರದ ಎಲೆಗಳನ್ನು ಹೆಸೆಂದಿರುವ ಒಂದು ಬಗೆಯ ಮರ : ಶ್ರೀತಾಳೆ, ಕೊಡಮರ, ಸೇಗೋ. ಬೀಸಣಿಗೆಮರ, ಒಲೆಗರಿಮರ (ಕ್ಯಾಸಿ. ೨೫-೧೭೮). [ಬೀಸಣಿಗೆ + ಮರ$_1$]

ಬೀಸನೆ (ಅ). ಫಲಗವಾಗಿ ; ಶೀಘ್ರವಾಗಿ : ಅಲ್ಲಿಂದ ಬೀಸನೆ ಹೆಜ್ಜೆ ಜಾತ ಪೊರ್ಟಾಗ . . . ಕೇಳಿಸಿತು (ಕೂಆಕ್ಷ. ೩೭).

ಬೀಸಬೀಸಕೆ (ದ್ವಿರುಕ್ತಿ) : ಬನ್ನಿ, ಬೀಸಬೀಸಕೆ ಹೋಗುವಾ (ಕೂಆಕ್ಷ. ೩೯). [ಬೀಸು$_1$ + —ಅವೆ$_1$]

ಬೀಸರ, ಬೀಸರು (ನಾ). ೧. ವ್ಯರ್ಥವಾದುದು ; ನಿರರ್ಥಕವಾದುದು; ನಿಷ್ಪಯೋಜಕವಾದುದು: ತಡಿಯೊಳ್ ಪೊಳೆವ ತಮ್ಮ ನೆಲಲಟಲ್ಲೊಂದ ಪಲ್ಲಳಿಂದು ಲಲ್ಲಿಸಿ ನೋಟ್ಪ ಜಕ್ಕವಕ್ಕಿಗಳಾಸೆಯುಂ ಬೀಸರಂ ಪಡಿಯುಂ . . . ಸಾಯಂತನಸಮಯಸಮಿರಣಂ ಸೌಖ್ಯಸಾರಸರ್ವಸ್ವಮೆನಿರ್ದಾಗಳ್ (ಪಂಪ್ರಕೃ. ೯-೪ ಪ); ಪರಿವಾಳದ ಮಯವೆನಿಪ ಸಕಲದ್ರವ್ಯಂಗಳಂ ಪರಮಗೆಂತರ್ಪುಸುವೆನವು ಬೀಸರಂಗಳಂ (ಶೀಗ್ಗಕೋ. ೧೯-೩೮) ; ಬಿನ್ನು ಬೀಸರವಹುದೆ ನಿಮ್ಮಯ ಸೊಮ್ಮಿನವರಿಗೆ (ಶಾಬ್ಕಾ. ೯-೩೩) ; ಬೀಸರ ವಿದೆಂದು ಜೀವವಂ ಪರಮೇಶ್ವರಂಗರ್ಪಿಸುತ್ತಂ (ಪಾಕೃಕೃ. ೬-೦೭-೨೩). ೨. ನಾಶ ; ಹಾಳು ; ಕೇಡು : ಅಸುರವಾದುದು ಬೀಸರವಾಯಿತು (ಕಪಂಪ್ರ. ೦೨೦-೨೧೯) ; ಕೇಳು ನಿನ್ನಾತನ ವಿನೋದದ ಖಿಳ ಜೋಳೆಯ ತನದೆಲೊದಗಿದ ಬಾಳಿಕೆಯ ಬೀಸರವನೆಂದನು ಸಂಜಯಮಾ (ಶಾಬ್ಕಾ. ೯-೦೬) ; ವೇದನೀಪರಿಯಂತ ಪುಣ್ಯಫಲೋದಯಕೆ ಪಡಿಯುಂಟೆ ಬೀಸರವಿಲ್ಲಿ ಪಿತಗೆಂದ (ಪಾಜಾಗ. ೯-೭-೦೩). ೩. ಅಹಿತವಾದುದು ; ಕೆಟ್ಟುದು ; ನಿಂದೆ : ಕೂಸಂ ಕೊಟ್ಟಪೆನೆಂಬೀ ದೂಸಱ್ ನೀವಿಂತ ವಜ್ಜೆಗೆಯ್ಯುತ್ತಿರ್ಪಂ ಬೀಸರಮನೆ ನುಡಿ[ಪಾಜಾಗ: ಮಾಡಿ]ದಪರಿ (ಕೂಆಕ್ಷ. ೨೩-೩); ಕಾರುಣತಿ ಬೀಸರಮಂ ನುಡಿಯದೊಳ್ಕಿತಂ ನುಡಿದಪನೇ (ಪಾಜಾಗ.

೪೫೭). 'ಬೀಸರನುಡಿ' ಪರಾ. ೪. ಕಷ್ಟ ; ಆಪತ್ತು : ಆ ಸುಯೋಧನ ಸುತರ ಸರಳ ವಿಳಾಸವನು ಖಂಡಿಸಿದನವದಿರ ಬೀಸರಕೆ ಬಂದಡ್ಡಬೀಳುವ ಭಟರ್ಕಳ್‌ಕೆಡೆಯಚ್ಚೆ (ಶಾಂ೩೨೬. ೫-೬೩); ಬೀಸರಕೆ ಬೆದಱುವ ವಧೂಜನ ದಾಸಱಡಗಲು . . . ನಗುತಿಂತೆಂದನಸುರಾರಾತಿ ಕರುಣದಲಿ (೬ಭಾಪ. ೦೦-೦೬-೫೨). ೫. ಕೊರತೆ ; ಲೋಪ ; ಕುಂದು : ಬೀಸಱಮಱಿಳವೇದಂಗಳುಚ್ಚರಿಪ ವಿನ್ಯೇಶನ ಪಡೆದ ಮಾತೃಕೆಯ ಭಾಸುರಜಿಹ್ವೆಯೊಳ್ ಪೊಱಮಟ್ಟು ವಚನಕೆ ಬೀಸರವಿಲ್ಲೆಂದಳವಳು (ಕೋಚಕ. ೨೫-೩೦). ೬. ಅಂತ್ಯ ; ಕೊನೆ; ಮುಕ್ತಾಯ : ಕಡುಪಿನಿಂದಿರಗಿದಂ ಬೇಡಬೇಡೆಂಬವರ ಕಡಗಣಿಸಿ ನುಡಿಗಳ್ಗೆ ಬೀಸರಂ ಬರದಂ (ಶಾಂಬಸ. ೦೬೦-೬೬೦). ೭. ಮಲಿನತೆ ; ಅಶುದ್ಧತೆ ; ಬೈಲಿಗೆ : ಸಂಸಾರಮೆಂಬ ಶ್ವಾನನಟ್ಟ ವಿಮಾಸಲ ಬೀಸರ ಮಾಡಿದಿರಯ್ಯಾ (೬೫೪. ೫೦೬) ; ಮನ ಬೀಸರವಾದೊಡೆ ಪ್ರಾಣ ಪಲ್ಲಟ ಮಹುದಪ್ಪ (ಪುಷಾಪೇ. ೨. ೪೬-೪೬) ; ಮರುತನ ಸಂಗದಿಂದ ಪರಿಮಳ ಬೀಸರವಾಯಿತ್ತು (೨೦೧೮. ೬೬೫-೨). ೮. ಜೆಲ್ಲುಪಿಲ್ಲಿ ; ಅಸ್ತವ್ಯಸ್ತ : ಕಡುಗೊಯ್ಯಲ್ಕಾದ ಕೆಯ್ಯಂತೆ ತನೆ ಮುಱಿದು ಬೀಸರವಾದ ರಾಶಿಯಂತೆ ಪುಲಿವೞಗಂಗೆಯ್ದು (೪೭೦೪. ೦೦-೬೬ ೪) ; ಭಾಸುರನಾಗನಾಥನ ಫಣಾಮಣಿ ರುಕ್ಮಯಮುರ್ಬಿ ಧಾತ್ರಿ ಮೇಣ್ಬೇಸರಮಾಗಲಲ್ಲಿ ಪೊಱಪೊೞ್ಮೆ ಮಡಲ್ದು ವಿದ್ಯಾಂಭಿವಂತೆ ತೋಱಿ ಸರಸೀಡ್ಯನ್ನಿಧಿಯೊಳ್ (೨೦೪೫. ೦-೭೬). ೯. ಕೆದರುವಿಕೆ ; ಕಲಸುವಿಕೆ : ಪೂಸಿದ ಕುಂಕುಮಮೆನಸುಂ ಬೀಸರಮಾಗಿರದು (೭೦೬೦. ೬-೦೭). ೧೦. ಭಿದ್ರ ; ಭಿನ್ನ ; ಭಂಗ : ಕನ್ನಿಪ್ಪಲಿಂಗ ಭಿನ್ನವಾದಾಗೆ . . . ದೋಷಹರ ಬಸವ ಶಂಕರದೇವರಾ ಲಿಂಗ ಬೀಸರಾಗಲಿ ತಮ್ಮ ತನುವಂ ನಿರಾಕರಿಸಿ ಶೇಷಧರನಂಘ್ರಿಯಂ ಪೊರ್ದಿ ಸುಖಿಯಾದರ್ (೧೪೦೨೨. ೦೬-೨೬). ೧೧. ಆಳ್ಕಳ ; ಸಡಿಲ : ಬೀಸರವಾಗದಪ್ಪ . . . ಮಿಸಲಂತಿರೆ ಮನಮಿರ್ಪುದು (೪೮೧೫. ೪-೬೬). ಬೀಸರು: ೧೨. ಕಪಟ ; ವಂಚನೆ ; ಮೋಸ : ಲೋಕದಲ್ಲಿ ಬಿನ್ನಾಣದಿಂ ಬೀಸರಿಲ್ಲದ ಭಾವಶುದ್ಧಿಯಿಂದೊಲಿದು ನಲಿದೊಲವಿನಿಂದ ಸ್ಥಾಣುವಿಗೆ ನೀರೆಱೆದು . . . ಮುನಿ ಸಂಕುಲಂ ಕೀಣಮಿಲ್ಲದೆ ತದ್ವಸಾಂತರದೊಳಿರ್ದುದು (೫೦೦೬೫ ೨-೫೦). [ಬೀ + ?./ ತೆಲು. ವೀಸರ]

ಬೀಸರಂಬೊಂದು (ಕ್ರಿ). ಮಲಿನವಾಗು : ಇವಳ ಕಡೆಗಣ್ಣಿ ನುಣ್ಗಿದಿರ್ಗಣ್ಣಿಯಿನೆಚ್ಚಪಂ ಕಾಮದೇವಂ . . . ಬೀಸರಂಬೊಂದಿತ್ತು ಮನದೆಸಱಂ (೪೦೫೫. ೨-೪-೬). [ಬೀಸರ + ಪೊಂದು$_1$ (< ಪೊರ್ದು)]

ಬೀಸರಂಬೊಗಿಸು (ಕ್ರಿ). ಮಲಿನಗೊಳಿಸು : ಏಕಭಾಂಡವಾದುದ ಕಂಡುಣದೆ . . . ಆ ಸಯದಾನಗಳ ತೆಗೆದವಂ ಬಳಸದೆ ಬಳಸಿ ಬೀಸರಂ ಬೊಗಿಸಿದೊಂದಱೊಳೆಱೆದಿಂದೆಯೊಂದಿತೆನ್ನದೆಯುಂಡು(೨೮೬೬೫. ೨೬-೦೦೨). [ಬೀಸರಂಬೊಗು + — ಇಸು$_5$]

ಬೀಸರಂಬೊಗು, ಬೀಸರಂಹೊಗು (ಕ್ರಿ). ೧. ಕೆಡು ; ಕೆಟ್ಟುಹೋಗು : ಮುಖದೊಳ್ಗಾನಮಂ ಕೆಯ್ಯೊಳ್ಗಭಯಮಂ ದೃಷ್ಟಿಯೊಳ್ ರಸಮಂ ಪದ ತಳದೊಳ್ ತಾಳಮಂ ಬೀಸರಂದೊಗಲೀಯದೆ ಸಱ್‌ವಿಡಿದು (೨೦೫೬೫. ೪-೦೯ ೪). ೨. ಕಡಮೆಯಾಗು ; ಕುಗ್ಗು ; ಕುಂದು : ವಾಸವಾ ಬೀಸರಂ ದೊಗದ ಸಡಗರದಿಂದೀಸಿಕೊಂಡು ಲೇಸಾಗಿ ವಾಸನೆವಡೆದ ದೇವಾಂಗ ವಾಸಮಂ ತನ್ನಯ ಪರ್ಯಂಕಾಸನಬಂಧದೊಳ್ ಪಾಸಿ ಮೆಲ್ಲನಲ್ಲಿ ಕುಳ್ಳಿರಿಸುವುದುಂ (೨೦೭೪. ೬-೪೫ ೪). ೩. ಮುಗಿ ; ತೀರು ; ಕೊನೆಗಾಣು : ಬರ್ಬುವಲೆ ಬಳ್ಳಿವಲೆ ಗೋರಿವಲೆ ಖಂಡವಲೆಗಳೆಂಬಿವಂ ಬೀಸರಂದೊ [೫೫೫೦. ಬು]ಗದೆ ಬರ್ಹಿ ಬೀಸಿದಾಗಳ್ (೨೦೫೬೫. ೪-೦೦೯ ೪). ೪. ಅಶುದ್ಧವಾಗು ; ಮಾಲಿನ್ಯವನ್ನು ಹೊಂದು : 'ಬೀಸರಂಬೊಗಿಸು' ಪರಾ. **ಬೀಸರುಹೊಗು** : ೩. ಮುರಹರನಾಣೆಫೋಷಣೆಯಲಿ ಜವಿ ಬೀಸರು ಹೊ[೫೫೫೦ ಹೋ]ಗದಂತೆ ನೀನಿರ್ದು ಕರೆಯಲಟ್ಟಿದರೆ ದ್ವಾರಕಿಗೆಯ್ದುವುದು (೪೦೫೫. ೦೬-೦೩) ; "ಜವಿಬೀಸರು = ಕೂದಲಪ್ಪು ಪಾಲುಮಾರಿಕೆ" (೪೦೫೫ ೦೬-೦೨ ೨೫೫). [ಬೀಸರ + ಪೊಗು]

ಬೀಸರಂಬೋಗು, ಬೀಸರಂಪೋಗು, ಬೀಸರವೋಗು (ಕ್ರಿ). ೧. ವ್ಯರ್ಥವಾಗು ; ನಿರರ್ಥಕವಾಗು : ತೊಡರಂ ದೇಸಿಗೆ ಕಾರೊಳಿಕ್ಕಿ ಪಡೆದರ್ಥಂ ಬೀಸರಂಬೋಗದಂತೊಡಲಂ ರಕ್ಷಿಸಿ (೪೪. ೪. ೫೦೦೫೫. ೦೦೨-೧೬ ; ೧೭೫೫) ; ಅಲರ ಬಿಜ್ಜಣಿಗೆಯಿಂ ಬೀಸೆ ಬೀಸರಂಬೋದಂತೆ ಹಸನಂ ಹಸಂಗೆಡೆ (೨೫೫೦. ೬-೮೨ ೪). ೨. ನಾಶವಾಗು ; ಹಾಳಾಗು : ಬೀಸರಂಬೋದುದಿನ್ನೇನು ವಂಶದ ಭೂಲಂ (೨೫೫೦ ೦೬. ೪೬-೨೩). ೩. ಮುಗಿ ; ಕೊನೆಗಾಣು : (೪). **ಬೀಸರಂವೋಗು** : ೪. ವಿಚಲಿತವಾಗು ; ವಿಕ್ಷಿಪ್ತವಾಗು : ಕುಕಿಲ್ದ ಪದಿಯಂಜುವಕ್ಕಿಗಳ್ಗಗ್ಗದಱಿಗೆ ಬೀಸರಂ ಪೋಗದೆ ... ಪದ್ಮಕಿಂಜಲ್ಕದೊಳ್ ಸ್ವಸ್ತಿಕಂ ಬರೆವ ಹಂಸಗಾಮಿನಿಯರುಂ (೨೧೧೫೫. ೪೦-೪೬ ೪). **ಬೀಸರವೋಗು** : ೧. ಹಿಡಿದುದ ಬಿಡದು ಬಿಟ್ಟು ಜಿಜ್ಞೆಯು ಬಳಿಸಿ ಮುಂದಣಡಿಗೆ ಬೀಸರವೋಗಿ ಬಳಲುವನಲ್ಲ (೪೪೧೫. ೫೬-೦೦೬) ; ಮಿಸರ ಗಂಡನೆಂದೆಂಬ ಬಿರುದಿನ ವಿಲಾಸದ ನಡೆ ನಮಗಿನ್ನು ಬೀಸರವೋಗದೆಂದೆಱೆಯನಾ ನೃಪ ಸೂಸಿ ಬಿಟ್ಟನು ಮನದೊಳಗೆ (೪೨೫೫೫. ೬-೧೬). ೨. ದಿನ ವ್ಯರ್ಥ ಹೋಗದೆ ಯೌವನ ಬೀಸರವೋಗದ ಮುನ್ನ ಪಿನಾಕಿಯ ತಂದು ನೆರಹೆನ್ನವ್ವಾ (೪೪೫೫. ೧೬-೩೦೯); ವಿತರ್ಕಣಾಮಮ್ಮ ಮುಂತಾದ ನೈವೇದ್ಯಸಂತತಿಯದೀಕ್ಷಂಗೆ ಹಿತ ಪಲ್ಲಿಂದು ವೆನೆದು ನಿಶ್ಚಿತದೆ ಬೀಸರವೋಗದಮಳತರಸಾರ ಜೀವಾತ್ಮಾರ್ಪಿತಂಗೆಯ್ಯುತೆ (೬೧೫೫. ೫೦-೬೬). ೩. ಮೋಸಹೋಗು ; ವಂಚಿತವಾಗು : ಈಶ್ವರ ಮಡಿದ ನುಡಿಯನಱಿದೆವೆಂದು ಬೀಸರವೋದರಣ್ಣಿಗಳೆಲ್ಲ (೪೪೫೫. ೫೬-೦೨೯). ೪. ಮಲಿನವಾಗು ; ಮಿಸಲಳಿ: ಮಾಲಿನ್ಯವನ್ನು ಹೊಂದು : ತನು ಮಿಸಲು ಮನವೆಲ್ಲ ಮಿಸಲು ಶಿವನ ಈ ಮಿಸಲು ಬೀಸರವೋಗದಂತಿದ್ದರೆ ಆತನೆ ಜಗದೀಶ ಕಾಣಾ (೪೦೫೫. ೫೦-೦೦೦) ; ಲಿಂಗದಲ್ಲಿ ವಜಿಸಿದು ಮುಚ್ಚಿರ್ದ ಮನವು ಹೊಱಗೆ ಬೀಸರವೋಗದೆ (೪೫೫೦. ೪. ೦೫೬-೨೯೪); ಬೀಸರವೋಗದ ಮುನ್ನ ಮಿಸಲಾಗಿ ಅರ್ಪಿಸಬಲ್ಲಡೆ ಕೂಡಿಕೊಂಡಿಪ್ಪ ನಮ್ಮ ಕೂಡಲ ಚನ್ನಸಂಗಮದೇವನು (೪೪೫.೪. ೪೫೦-೭೧೪). ೫. ಭಂಗವಾಗು ; ಮುರಿ : ತನ್ನಲ್ಲಿ ತಾನು ನಿಶ್ಚಯವಾಗಿ ಭಾವೆ ಬೀಸರವೋಗದಯಿಪ್ಪ ಇರವೆ ಕೂಡಲಸಂಗಮದೇವರಲ್ಲಿ ನಮ್ಮ ಮಹದೇವಿಯಕ್ಕಂಗಾಯಿತ್ತು (೨೫೫. ೪. ೦೫೫೫). [ಬೀಸರ + ಪೋಗು$_1$ (<ಪೋ$_1$)]

ಬೀಸರಂಪೋಗು ' ಬೀಸರಂಬೋಗು ' ನೋ.

ಬೀಸರನುಡಿ (ನಾ). ಮೂದಲಿಕೆಯ ಮಾತು ; ನಿಂದೆ : ಹರ ಶಂಕರ ಪಕ್ಷದಿನೀ ದೊರೆ ಪೊಸಬೆಯನಂಟೊಂಡು ಬೀಸರನುಡಿಯಂ ಸೊರಿಸಿ ಕೆಡನುಡಿವತೆನ್ನಂ ಜಱಿದಪಾ ನಿಂದೆ ನಿನ್ನದೇ ಶಶಿಮೌಳಿ (೫೫೫೫. ೬-೦೬-೨೮). [ಬೀಸರ + ನುಡಿ$_3$]

ಬೀಸರವೋಗು ' ಬೀಸರಂಬೋಗು ' ನೋ.

ಬೀಸರಿಗ (ನಾ). ನಾಶಮಾಡುವವನು ; ಕೇಡುಂಟು ಮಾಡುವವನು : ಲೇಸು ಮಾಡಿದೆ ಭುವನಭವನದ ಬೀಸರಿಗನಸುಗೊಡು ನಿಜಪದದಾಸ ವರ್ಗವನುದ್ಧರಿಸಿದೆ (೫೫೫. ೬-೪-೧೦). [ಬೀಸರ + — ಇಗ]

ಬೀಸರಿಸು (ಕ್ರಿ). ೧. ನಾಶ ಮಾಡು : ಸುತ್ತ ಕೆದರಿದ ಹಿಳುಕನೋಸರಿಸಿ ಬೀಸರಿಸಿ . . . ಚಿತ್ತಿದನು ಹಿಳುಕನಂಗಾಂಗದೊಳು (೪೫೫೫. ೫೬-೬೨). ೨. ಭಂಗವಾಗು : ಭಾಸುರಬಾಹ್ಯಸಾಮಗ್ರಿಯೆಳ್ಳುನಿ ಧ್ಯಾನ ಬೀಸರಿಸದ ಏಂದಸೊಳಗೆ (೪೫೫. ೫೬-೬). ೩. ಬಿಡು ; ತ್ಯಜಿಸು ; ತೊರೆ : ಮೋಸದೊರ್ದವ ನಾನಲ್ಪದವನಿನ್ನು ಬೀಸರಿಸುವೆನು ನೋಡೆಂದ (೪೫೫. ೬೦-೬). [ಬೀಸರ + — ಇಸು$_5$]

ಬೀಸರು 'ಬೀಸರ' ನೋ.

ಬೀಸರುಹೊಗು 'ಬೀಸರಂಬೊಗು' ನೋ.

ಬೀಸಲು (ನಾ). ೧. ಬೀಸುವಿಕೆ ; ಬೀಸುವುದು : ಈತಂಜನದ ಮಿಂಚುಂ ಗಂಬಿಯನ್ನೊದದು ನೀಡುಂಗಯ್ಗಳ ಬೀಸಲಿಂದ ತೇಲ್ದು ಹೋಗಿ (ಪಕ್ಕಿ. ೦೫೯-೦೩). 'ತೋಳ್ವೀಸಲು' ಪರಾ. ೨. ವಿಸ್ತಾರವಾದುದು ; ವಿಶಾಲವಾದುದು : 'ಬೀಸಲುಮನ' ಪರಾ.

[ಬೀಸು₁ + — ಅಲು (<—ಅಲ್₃)]

ಬೀಸಲುಮನ (ನಾ). ವಿಶಾಲವಾದ ಮನಸ್ಸು : ಬೀಸಲುಮನದಲ್ಲಿ ಉತ್ಸಾಹ ಜೀವಾಳ ಈಸಲು ಬಿದ್ದಿತು ರಾಮರಾಮಾ (ಕೂರ್ಮಾಪು. ೮೩-೬).

[ಬೀಸಲು + ಮನ]

ಬೀಸಾಕು, ಬಿಸಾಕು (ಕ್ರಿ). ಎಸೆ; ಒಗೆ : ಅವನು ಪಾತ್ರೆ ಬೀಸಾಕಬಹುದು (ಪಾಕಶ. ೬೩). ಬಿಸಾಕು : ಯಾರೋ ಉಂಡು ಬಿಸಾಕಿದ ಎಂಜಲೆಲೆಯನ್ನು ಹೆಕ್ಕಿ ನೆಕ್ಕುತ್ತಿದ್ದರು (ಕುಂಗಾಹಾ. ೦೯); ನನ್ನ ಕಡೆ ಯಾರೂ ಒಂದು ರೊಟ್ಟಿಯ ತುಂಡನ್ನೂ ಕೂಡ ಬಿಸಾಕುವುದಿಲ್ಲ (ಶಹಾಶ. ೦೦೪).

[ಬೀಸು₁ + ಹಾಕು (<ಪಾಯ್₄)]

ಬೀಸಾಟು 'ಬೀಸಾಡು' ಪರಾ.

ಬೀಸಾಡು, ಬಿಸಾಡು (ಕ್ರಿ). ಬಿಸಾಟು, ಬೀಸಾಟು (ಭೂತನ್ನೂ). ೧. (ದೂರಕ್ಕೆ) ಒಗೆ ; ಎಸೆ ; ಬಿಸುಡು : "ಬಿಸಾಡು (ಬಿಸು+ಆಡು) ಕರವಿಮೋಚನೇ" (ಶಪುಣಾ); ಲೇಸುಲೇಸೆನುತೆ ಪಟ್ಟಿಗೆಯನೀಕ್ಷಿಸುತಂದು ಬೀಸಾಟಿಸ್ತಿ ಹೊಱಯಿಂಕೆ (ತಪಾಸ. ಡಿ. ೦೬-೬); ಅವಳು . . . ಅವನಿಯಲಿ ಬೀಸಾಟು ಪದಕವ ಬೆವರಿ ಬಳಲುತ ಬಸುಜ ಹೊಯ್ದಳು (ಶಾಣಾ. ೬-೬೨). ೨. ತೊರೆ ; ತ್ಯಜಿಸು : ಒಳಹೊಱಗೊಂದಾಗದವರಿಗೆ ಅಳಿಯಾಸೆದೋಱಿ ಬೀಸಾಡುವನವರ ಜಗದೀಶ ಕೂಡಲಸಂಗಮದೇವ (ಬಸ. ೧೬). ಬಿಸಾಡು : ೧. ಮಡಿಯ ಕೂಲಿಯ ಬೇಡ ಹೋದರೆ ಬಳಿದು ಹುಡಿದು ಎನ್ನ ಮೇಲೆ ಬಿಸಾಟಿನು (ಪಟಿಪಪಾ. ೫೪-೮೨); ಸತ್ತೆಡೆಯದು ಬಿಸಾಡುವರು (ಎಳ. ೫ (೬). ಪಪ್ಪಕ. ೦೬೯-೦೩ ; 1800) ; ಮೈಮೇಲಿನ ಬಟ್ಟೆಗಳಿಗೆ ಬೆಂಕಿ ಹತ್ತಿದರೆ, ಆ ಕ್ಷಣವೇ ಅದನ್ನು ಮೈಮೇಲಿಂದ ತೆಗೆದು ದೂರ ಬಿಸಾಡಬೇಕು (ಶುಂಜಾಯು. ೯-೬೦). ೨. ಸುಡಲಿನ್ನು ಸಂಸಾರಭೋಗವಿನ್ನೇಕೆಂದು ಬಿಡುವಲ್ಲಿ ಬಿಸಾಡಿದನೊ (ಅಂಬಸ. ೦೯-೦೬೬). [ಬೀಸು₁ + ಆಡು₁]

ಬೀಸಿಕೆ, ಬೀಸಿಗೆ₁ (ನಾ). ೧. ಎಸೆಯುವಿಕೆ ; ಬೀಸುವಿಕೆ : ಗರಿಯ ಪಿಲಿರದ ಹೊಯ್ಲಿನಲಿ ಹೆಮ್ಮರದ ಬೀಸಿಕೆಗಳಲಿ . . . ಹೊದೆಸಿದುದು ನೆಲದುಪ್ಪರದ ರುಧಿರದಲಡಗಿದುದು ನಭವಿವರ ಸಮರದಲಿ (ಕೂರ್ಮಾ. ೬-೦೬-೬೬). **ಬೀಸಿಗೆ₁** : ೨. ಜಡಿವಿಕೆ ; ಹೊಡೆತ ; ಪೆಟ್ಟು ; ಹಜ್ಜಿಗೊರಳೆ ತೋಳಿನ ಬೀಸಿಗೆ [ಜಾಣಾಂ. ಕೆ]ಯ ಬಿಜ್ಜಿಸಿನಲಿ ಹೊರಳಿತು ಮುಂಡವಾ ಖಳನ (ಕೂರ್ಮಾ. ೬-೬-೨೬) ; ಅಸುರಾರಿ ಮಹಾಸ್ತ್ರನಿಕರದ ಬೀಸಿಗೆಯ ಬಿಜ್ಜುವಳೆಯನದ ಹೊಜಬೀಸಿದುದು ಸುರಶಸ್ತ್ರಾವಳಿಯ ಬಿಜ್ಜುಳಿಗೆ (ಪಾಗ. ೬-೦೦-೦೬). ೩. ವ್ಯಾಪ್ತಿ ; ಹರಹು : ಪೇಸಜಿನು ಮುಸುಕಿತು ವಿಮಾನದ ಬೀಸಿಗೆಯ ಬಹುರತ್ನಕಾಂತಿಗಳು (ಪಾಗಾ ೯-೦೦-೦೦). [ಬೀಸು₁ + — ಇಕೆ]

ಬೀಸಿಗೆ₂ 'ಬೀಸಿಕೆ' ನೋ.

ಬೀಸಿಗೆ₃ 'ಬೀಸಗೆ' ನೋ.

ಬೀಸಿಸು (ಕ್ರಿ). ದೀಪ ಮುಂತಾದುವನ್ನು ಗಾಳಿಯಲ್ಲೂದಿ ಆರಿಸು,—ನೆಂದಿಸು : ಒಂದು ದಿನ ಫಲುಗುಣನ ಭೋಜನದಂದವನು ತಾವಜೀಯಲಿಕೆಯರವಿಂದವದನೆಯ ಕೈಯ ದೀಪವನಾರುಳಿ ಬೀಸಿಸಿದ (ಪಂಪಭಾ ೦೭-೦೦೬). [ಬೀಸು₁ + — ಇಸು]

ಬೀಸು₁ (ಕ್ರಿ). ೧. (ವೇಗವಾಗಿ) ಎಸೆ ; ಒಗೆ ; ಬಿಸುಡು : ದೈತ್ಯನಂ ಪಿಡಿದು ಮೃಣಾಳನಾಳಮನೆ ಸೀಳ್ದವೊಲೊರ್ಮೆಯೆ ಸೀಳ್ದು ಬೀಸಿದಂ (ಪಂಪಾ. ೭-೦೬) ; ಕಾಲನವುಂಕೆ ಪತ್ರಿ ಪಿಡಿದೋಪದೆ ಭೋರನೆ ಬೀಸಿ ಕಂಭದೊಳ್ ಲೀಲೆಯಿನಟ್ಟಿ ಮೋದಿಸನೆ (ಶಪುಣಾಕ್ಕ. ೪-೦೬೦). ೨. (ಪ್ರಾಣಿ, ಪಕ್ಷಿ ಮುಂತಾದುವುಗಳನ್ನು ಹಿಡಿಯುವುದಕ್ಕಾಗಿ ಬಲೆ, ಬಟ್ಟೆ ಇತ್ಯಾದಿಗಳನ್ನು) ಎಸೆದು ಹರಡು, — ಹರವು : ನಾಳೆ ಬಂದು ಜಾಲಮಂ ಬೀಸಿ ಮತ್ಸ್ಯಂಗಳಂ ಪಿಡಿವಂ (ಪಂಚತಂ. ೦೫೯-೨೦); ಬಲೆಯ ಸೊಂದಂ ಗಳಿಸಿ ನಿಚ್ಚಂ ಬಲೆಯಮದಕದೊಳಿತ್ತಿ ಬೀಸಲು (ಪಪಕ್ಷ. ೪೭-೨೦); ಸಿಲುಕುವುವು ಮೃಗಪಕ್ಷಿ ಹೂಡಿದ ಬಲೆಗಳಲಿ ಕಾಡಾನೆ ಬೀಸಿದ ಬಲೆಯು ಕೊಂಬುದೆ (ಕುಷ್ಮಾಕ. ೦೩-೦೪). ೩. (ಮಾಯೆ, ಗಾರುಡಿ, ಪರಿಮಳ ಮುಂತಾದುವುಗಳನ್ನು) ಪಸರಿಸು ; ಆವರಿಸುವಂತೆ ಮಾಡು : ಮಾಯಮನೆ ಬೀಸಿ ಪೆಱರನುಪಾಯದೆ ಕಕ್ಕಿಸಿ (ಶಪುಣಾಕ್ಕ. ೦-೦೦೨) ; ಕಾಡೊಡೆದುಸಂ ಸೋನು ಸೊಕ್ಕಿನ ಧೂಪಮಂ ಬೀಸು (ಪಪಣಾ. ೪-೨೯); ಮೋಹನದ ಮದ್ದುಗಳ ಮಾಯೆಯು ಬೀಸುವುದು ಸೂಸುವುದು ಸೊಗಸುಗಳ (ಕುಷ್ಮಾಕ. ೦೩-೨). ೪. ಚಾಚು ; ನೀಡು: ಸುತ್ತಲುಂ ಭೀಮಭೀಷಣ ಕರಟಿಲಜಟಿಲವಿನ್ಯಾಸದಿಂ ಶಾಖಾವಮಜಾಶಾಖೆಗಳ ಬೀಸಿ, ಸ್ವಚ್ಛಂದದಿಂ ಬೆಳೆದಿರ್ದುವಲ್ಲಿ ಭೂಚೇಶಕುಲಕೀರ್ತಿಗಳ್ ಲಕ್ಷೋಪಲಕ್ಷವಾಗಿ (ಕಾ೩ಗ. ೩-೩೦). ೫. (ಬೀಸಣಿಗೆ ಮುಂತಾದುವುಗಳಿಂದ) ಗಾಳಿಯನ್ನು ಹಾಕು : ಎಳಮೈಂದವಾಬೆಯೆಲೆಯ ಬಿಜ್ಜಣಿಗೆಗಳಿಂ ಬೀಸಲ್ಕೈಟ್ಟು (ಪಂಪಣಾ. ೫-೩ ಪ); ಬಬ್ಬುರ ವೆಂಗದೊಳ್ ನೀರಂ ತಳಿದು ಬೀಸಿ ಚೇತರಿಸಿದಾಗಳ್ (ಪಪಣಾಕ್ಕ. ೦೦-೩೩); ಚಂಚತ್ಕಾಳವ್ಯಂಜಂಗಳಿಂ ತಾಂ ನೀಹಾರಮಯೂಖಬಿಂಬಮುಖಿಯರ್ ಬೀಸುತ್ತೆ ಕಣ್ಗೊಪ್ಪಿದರ್ (ಜಾಕೃಭ. ೬-೮೨); ೬. ತೀಡು; ಸುಳಿ : ಮೊಕ್ಕಳಿಂ ಬೀಸುವ ಗಾಳಿ ಜಾಮರದ ಗಾಳಿಯೆನಲ್ (ಪಂಚಣಾ. ೬-೩೯): ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವ (ಪ:ಜಾಗೀ. ೩. ೪೩-೦೦೦); ಅಳಾಪಿಸಿದರು ಕೇಳುವ ಜನರದಿಗೆ ತಂಗಾಳಿ ಬೀಸಿದ ತೆಱನಾಗೆ (ಪಪಣ. ೦-೬೬). ೭. ರಭಸವಾಗಿ ಚಲಿಸು ; ವೇಗವಾದ ಚಲನೆಯನ್ನು ಹೊಂದು : ಏಳೆಯಾನಿಳಂ ಬೀಸೆ ಮಸಗಿದ ಜಲನಿಧಿಯ ಕಲ್ಲೋಲದಂತೆ (ಜಾಪಪು. ೪-೬ ಪ) ; ಪೊಡವ ಸಿಡಿಲಿಂ ಮಿಂಚಿಂ ಭೋರೆಂದು ಬೀಸುವ ಗಾಳಿಯಿಂ (ಪಪಣಾಕ್ಕ. ೨-೪೫೯): ಬೀಸುವ ಬಿಜು ಗಾಳಿ ಬೀಸದಾರದು ಬೀಸದಿರದಾರದು (ಸಭಪ. II. ೬೦-೦೪೫) ; ಅತಿ ನಿರ್ಧರದೊಳಿನಲಂ ಬೀಸಿದನು ಕಿಂಧೂಳಿ ಸೆಗೆಯಿತ್ತು (ಜಪಪು. ೬೦-೦೦). ೮. (ಬೊಣ್ಣೆ, ಕತ್ತಿ, ಗದೆ ಮುಂತಾದ ಆಯುಧಗಳನ್ನು ವೇಗವಾಗಿ) ಆಡಿಸು ; ತಿರುಗಿಸು ; ಝಳಪಿಸು : ಕಾಲದಂಡಮಂ ಪೋಲ್ವ ತನ್ನ ಗದಾದಂಡಮುಂ ಕೊಂಡು ತಿರುಪಿ ಬೀಸುತ್ತುಂ ಬರ್ಪ ಭೀಮಸೇನನಂ (ಪಂಪಣಾ. ೦೨-೦೬೦ ಪ) ; ಗದೆಯುಂ ಬೀಸುವ ಬೆಡಂಗು ರಂಜಿಸಿತು ಭೀಮ ದುರ್ಯೋಧನರಾ (ಗಜಾಯು. ೪-೪) ; ಬೀಸಲ್ ಗಜೆಗಳನವರಂದಾ ಸಕಳ ಧರಿತ್ರಿ ತಿಗುರಿಯಂತಿರೆ ತಿರಿದತ್ತು (ತೀಪ್ರಕೃ. ೦೨-೦೧೬). ೯. (ಸೊಂಡಿಲು, ಕೈ ಮುಂತಾದುವುಗಳನ್ನು) ತೂಗು ; ಅಲುಗಾಡಿಸು : ಘನಸಾರ ಸರಲಚಂದನವನಮ್ಮದುವಲ್ಲವಮನಗ್ರಹಸ್ತದೆ .ಕೊಂಡೊಯ್ಯನೆ ಬೀಸೆ ಬೆಲ್ಲುವದದುದು ಜನಂಗೆ ಚಾಮರವನಿಕ್ಕುವಂತಮರಗಜಂ(ಪಪಕೃ ೬-೬೨): ಲಲಿಕಾಂಗಿ ಮೆಲ್ಲಮೆಲ್ಲವೆ ನಳಿತೋಳಂ ಬೀಸೆ (ಕಾವಪು. ೩೦೬) ; ಓಸರಿಸಿ ಬರ್ಪ ಪಕ್ಕಮನೋಸರಿಸದೆ ಮುನ್ನಿಗಳಿರ್ವ ಹೋಮಸ್ಥಳದೊಳ್ ಭಾಸುರ ದಿನಂತಮಿಂತುಂ ಬೀಸುತ್ತೆಳ್ದಜಿಸಿ ಕುಡುವುದಾ ಶಿಖಿ ಶಿಖಿಯಂ (ಗಂಗ. ೦-೩೩)· · ೧೦. (ಯುದ್ಧವನ್ನು ಆರಂಭಿಸಲು ಚಾಮರ, ದೀವಟಿಗೆ ಅಥವಾ ಕೈಯನ್ನು) ಬೀಸುಗಾಡಿಸಿ ಸೂಚನೆ ಕೊಡು: ಆಗಳರಡುಂ ಪಡೆ ಯೊಡೆಯರ್ ಕಾದುವ ಪೊಲ್ಬಜಿದು ಕಡುಮುಳಿದು ಕೈಯ ಕುಂಚಮಂ

ಬೇಗಬೇಗಂ ಬೀಸಲು (ಕವ್ಯಾ. ೩೬೪) ; ನೆಹಿ ಬೀಸುವ ಬಾರಿಗಳ ಸನ್ನೆಗೆ ಚತುರ್ಬಲವೆಲ್ಲ ದ್ರೋಣನ ದೃಗುಪಥಕೆ ತೋಱಿದರು (ಭಾಷ್ಯಕ್ರೋ. ೯-೦೭) ; ಬೀಸಿದರು ಬಾರಿಗಳ ಬಲವಾರಾಶಿ ಮಸಗುತು (ಕಬ್ಯಾಕ. ೦೩-೭). 'ಕೆಯ್ವಾಸು' ಪರಾ. ೧೧. (ಕತ್ತಿ, ಈಟಿ ಮುಂತಾದುವನ್ನು) ಗುರಿಯಿಟ್ಟು ಪ್ರಯೋಗಿಸು : ಅವರ ಸಮನ್ತಂ ಶ್ರೀಮುತ್ಕರೆ ಅಕಿರಥಗಣ್ಣ ಪೊಸವೆಣ್ಣೆರಬ್ಬಿ ಬೀಸಿ ತಪ್ಪದೊನ್ (ಪಾ. XV. ಅರಣ್ಯ. ೨೦೩-೪ ; ಸು. ೫೧೦). ೧೨. ಅಲುಗಾಡು ; ಅಲ್ಲಾಡು ; ಅತ್ತಿತ್ತ ಚಲಿಸು : ಬಿಡೆ ಬಿಡಿಸುವಂತೆ ನೃಪರೊಳ್ನುಡಿಯಂ ಬೀಸುವೆದು ಚಾಮರಾವಳಿ (ಕಾದಂಪು. ೨೩೭) ; ಬೀಸುತಿರ್ಪ ತಾಳವೃಂತಮಾಸೆಯಾಗದಿರೆ (ಅಷ್ಟ. ೨-೪). ೧೩. ತಿರುಗಿಸು ; ಹೊರಳಿಸು ; ಸುತ್ತಿಸು : ಸುತ್ತಿರ್ದುದು ಜಂಬೂದ್ವೀಪಮಂ ವಾರಿಧಿ ಕವಯರಮಂ ಬೀಸಿದಂತಾಗೆ ಜಿಲ್ವಿಂ (ಕಬಾಚ್ಚ. ೦-೦೩) ; ಕೈವಾರಮಂ ಬೀಸಿದಂತೆ ಬಟ್ಟಿತ್ತಾಗಿ ತೋರ್ಪುದು ಸೊನ್ನೆ (ಪಮದ. ೦೭ ಪ್ರಕೃ). ೧೪. ಬೆಲ್ಲು ; ಎರಚು : ವಾಸವನಪೂರ್ವನಾಟ್ಯವಿಳಾಸದೆ ತಾಂ ಭ್ರುವಂರಿಗುಡುವುದುಂ ನೇತ್ರಸಹಸ್ರಾಸಿತರುಚಿ ಕರ್ನೆಯ್ದಿಲ ಬಾಸಿಗಮಂ ಬೀಸಿದಂತುಟಾದುದು ಸಭೆಯೊಳ್ (ಆಪ್ತ. ೩-೦೩) ; ಒಗೆದಂಭೋಧರಕ್ಕಮಳವರ್ತ್ಮಪತಿ ಬೀಸುತ್ತಿರ್ಪ ಮುಕ್ತಾವಸರ್ಪಗಳೋ . . . ಪೇಬೆನೆ ವಿಂಬುಗಳ್ ನಿಮಿರ್ದುವಾ ಜೀಮೂತಯೂಥಾಗ್ರದೊಳ್ (ಭಾಭಾಚ. ೩-೦೩). ೧೫. ಸೊಸು ; ಬೀರು ; ದ್ವಾರಕಾಪುರದೊಳು ಬೀಸರಾಗಿಹರೆಲ್ಲ ಜನಗಳಿಗೆ ಹರುಷಮಂ ಬೀಸಿ ಬಹೆ ನಾನು (ಕುಂಪಾ. ೦೦-೦೩) ; ರಾಯರು . . . ಬಳಪ್ರಯೋಗದಿಂದ ಮುಗುಳುನಗೆಯನ್ನು ಬೀಸಿ, ಕೈಲಿದ್ದ ದೊಣ್ಣೆಯ ಸಹಾಯದಿಂದ ವೇದಿಕೆಯನ್ನು ಹತ್ತಿ, ಮೇಜನ್ನು ಬಿಗಿಯಾಗಿ ಹಿಡಿದು ಕೊಂಡು ನಿಂತರು (ಡಾಚರಿ. ೪೪). ೧೬. ಸೆಳೆ ; ಸೇಡೆ ; ಕುಕ್ಕು ; ಅಪ್ಪಳಿಸು : ಜವನ ಬಾರಿಯೊಳಿಕ್ಕುವೆನೆಂದು ಪರ್ವ ಭೋರ್ಭೋರೆನೆ ಬೀಸೆ ಕದ್ದುದಸಗಹ್ವರದಿಂ ಬಿಸುನೆತ್ತರುಗ್ಗೆ (ಹಂಪಣಾ. ೩-೩೦) ; ಕಾಸಿ ಕಮ್ಮಾಣನಾದ ಬೀಸಿ ಮಡಿವಾಳನಾದ (ಬಸವ. ೩೯೦) ; ಸೆಳೆವ ಸೀದುವ ಬೀಸುವೊಗವ ಕುಸುಕುವ . . . ಖಿಳರ ಕಳಕಳದ ಕೋಳಾಹಳದೊಳಾ ರೌರವಂ ಭಯಂಕರವಾದುದು (ಸಿದ್ಧಣಾ. ೯-೨೯) ; ಕುದಿಸಿ ಉದಕದೊಳ್ಮಲುಬಿ ಬೀಸುತೊಗೆದು ಪರಡಿ ತೆಗೆತೆಗೆದು ಫಳಿಗೆಯನೊದಗಿವುದು ಮೈಲಿಗೆ ಮಡಿಗಳಹುದಕ್ಕು (ಬಸಪು. ೩೬-೪೬). ೧೭. ರಭಸದಿಂದ ಮುಂದುವರಿ ; ನುಗ್ಗು : ಮಾಸಗಿ ಬೀಸುವ ಕಂಸನಾನೆಯನುಸು ಬಡಿದ ಗಡ (ಭಾಷ್ಯಕ. ೦೦-೦೩). ೧೮. ನುಗ್ಗಿಸು ; ಎರಗುವಂತೆ ಮಾಡು : ಅನೆಗಳ್ ತುಡುಕಿ ಹಯವಳಿಯ ಬಿಸಿದರು ರಥಿಕರು ಜಾಯಿಸ್ದರು ರಥವ (ಭಾಷ್ಯಕ. ೨-೦೩). ೧೯. ನಿವಾರಿಸು ; ಪರಿಹರಿಸು ; ಆಟ್ಟು ; ಓಡಿಸು : ಕುಮುದಾವತಂಸ ಮಧುಪಂಗಳುಮಂ ಕರದಿಂದೆ ಪಿಂಗೆ ಬೀಸುವ . . . ದೇವಸಮಾನಾವನಿಸಿರ್ದಳ್ (ಕಾದಂಕಾ. ೨೯೦) ; ಅಳಿಯ ಮುತ್ತಿಗೆಗಳವು ಬೀಸದೆ ನೆಲಕೆ ಕವಿಯನು ಜೋಲುಬಿಡುವುದು ಬಲುಕಣಿಯ ಹಿಡಿಹಿಂಗೆ ಲಾಗಿಸುತಿರ್ದುದಾ ದಂತಿ (ಭಾಷ್ಯಕ್ರೋ. ೩-೩೭). ೨೦. ಹಾರಾಡಿಸು ; ಹಾರಿಸು : ಅಂತು ರಿಪುಕುರಂಗಕಂಠೀರವನ ಕಯ್ಯೊಳ್ ವೈಕರ್ತನಂ ಸಾಯಲೊಡಂ ಮೇಲುದಂ ಬೀಸಿ ಬೊಬ್ಬಿಜಿದಾರ್ವ ಪಾಂಡವಪತಾಕಿನಿಯೊಳ್ (ಕಂಪಾಭಾ. ೮೨-೨೦೭ ಪ) ; ಮಂಜಿದು ಬಹ ನಿಜಸೇನೆಗಭಯದ ಸೆಜಗ ಬೀಸುತ ಭೀಮಸೇನನ ತಟುಬಿ ನಿಂದನು ಭೀಷ್ಮ (ಭಾಷ್ಯಕ. ೬-೩) ೨೧. ಹೊಂದಿಸು ; ಅಳವಡಿಸು : ಗಜಕೆ ಗುಳವನು ಬೀಸಿ ವಾಜಿವ್ರಜವ ಹಲ್ಲಣಿಸಿದರು (ಭಾಷ್ಯಕ. ೫-೪). ೨೨. (ಬೀಸುವ ಕಲ್ಲು ಮೊದಲಾದುವನ್ನು ತಿರುಗಿಸಿ ರಾಗಿ, ಜೋಳ ಮುಂತಾದ ಧಾನ್ಯಗಳನ್ನು) ಅರೆ ; ಪುಡಿಮಾಡು : ಗೋಪವನಿತೆಯರು ಕುಟ್ಟುತ್ತ ಬೀಸುತ್ತ ತಾ ಪೊಗಳುತಿಪ್ಪ ನಾಮ (ಕುಕಂದ. ೨-೨೦೯-೨) ; ಇಡಿ ಗೋಧಿಯನ್ನು ಬೆ.ಕಾದಂತೆ ಬೀಸಿ ಹಿಟ್ಟು ತಯಾರಿಸಿಕೊಳ್ಳುವುದು ಒಳ್ಳೆಯದು (ಪಥಾಗೃ. ೭೩).

ಬೀಸಹೆಜ್ಜೆ ಹಾಕು = ವೇಗವಾಗಿ ನಡೆ ; ಹೆಂಡತಿಗೆ ಬೈದು ದಂಬ ಬೀಸಹೆಜ್ಜೆ ಹಾಕುತ್ತ ಹೊರಟನು (ರಂಜಾಹಾ. ೪೦). **ಬೀಸಿ ಒಗೆ** = ವೇಗವಾಗಿ ಎಸೆ : ರಭಸದಿಂದ ಬಿಸುಡು ; ಆ ಹಿಮಾಲಯದಿಂದ ನಿನ್ನನ್ನು ಬೀಸಿ ಒಗೆದರೆ ಇಲ್ಲಿಗೆ ? (ಪಥಮು. ೦೦-೦೫). **ಬೀಸಿಕೊಳ್ಳು, ಬೀಸಿಕೊಳ್ಳು** = ೧. (ಬೀಸಣಿಗೆ ಮುಂತಾದುವುಗಳಿಂದ) ಗಾಳಿ ಹಾಕಿಕೊಳ್ಳು ; ಗಾಳಿ ಬರುವಂತೆ ಮಾಡಿಕೊಳ್ಳು : ಪೊಂದಾಳೆಯ ಬಿಜ್ಜಣಗೆಯಿಂ ಮಲ್ಲಮೆಲ್ಲನೆ ಬೀಸಿಕೊಳುತ್ತಂ (ತಂಜಾ. ೦೨-೯೯) ; ಅಂದು ಅವನು ದಿನವಿಡೀ ಆಗ್ನೇರಮಣಿಯು ಬೀಸಣಿಕೆ ಬೀಸಿಕೊಳ್ಳುವದನ್ನು ನೋಡಿದನು (ಇಕ್ಷ್ವ. ೩೭೦). ೨. (ಬೀಸಣಿಕೆ ಮುಂತಾದುವುಗಳನ್ನು) ಆಡಿಸು ; (ಬೀಸಣಿಗೆ ಮುಂತಾದುವುಗಳಿಂದ) ಗಾಳಿ ಹಾಕು : ದೇವಸ್ಥಾನದಲ್ಲಿ ಚಾಮರ ಬೀಸಿಕೊಂಡು ಇರುವ ಹೆಣ್ಣು ನನ್ನನ್ನು ಹಾಗೆ ಅವಮಾನಿಸುವುದೇ ? (ರಚಪಂ. ೦೫೯). ೩. ಹಾರಾಡಿಸು ; ಹಾರಿಸು ; ಅವಳು ಸರಗು ಬೀಸಿಕೊಂಡು ಹೋಗುತ್ತಿದ್ದಾಳೆ (ಕಾಪ). **ಬೀಸಿದು = ಬೀಸಿ ಒಗೆ** : ಗದೆಯಂ ಬೀಸಿಟ್ಟೊಡಾ ಮಾಗಧನ್ಯವನ ರಥಂ ನುರ್ಗೆ (ಪಚಳು. ೨-೨೭). **ಬೀಸಿ ಪೊಯ್ = ರಭಸವಾಗಿ ಹೊಡೆ.—ಬಡಿ** : ಮೂಳೆಯಂ ದುಬ್ಬುಕದಿಂದೆ ನುಗ್ಗುನುಜ್ಜುಮುಜ್ಜುನೆಗಂ ಬಿಡೆ ಬೀಸಿ ಪೊಯ್ದು . . . ಕೊಲ್ವ ಕೊಲೆಯಂ ಹರಿಣೇಕ್ಷಣೆ ಕಂಡು (ಪಚಳು. ೭-೬) ; ಬಡಗಿಯಂತೆ ಕೆತ್ತುವರ್ ಅಗಸನಂತೆ ಬೀಸಿ ಪೊಯ್ವರ್ (ರಚಾಭಾ. ೨-೭೩). **ಬೀಸಿ ಬಿಸುಡು = ಬೀಸಿ ಒಗೆ** : ಬೀಸಿ ಬಿಸುಟವು ಪಾಯ್ದುೞಿವ . . . ಬಿಲವಾರಾಸಿಯಲಿ ಕಾಯ್ಕಳ ಮೊಗೆದವು ಭೀಷ್ಮನಂಬುಗಳು (ಭಾಷ್ಯಭೀ. ೯-೦೦) ; ಬೀಸಿ ಬಿಸುಟ ಮದೇಭ ಮಾರುತವಾಶದಲಿ ಸಿಲುಕಿದವು (ತೊಣಾ. ೬-೪೨-೦೨). **ಬೀಸುವ ಕಲ್ಲು, ಬೀಸೂ ಕಲ್ಲು, ಬೀಸೋ ಕಲ್ಲು** = (ರಾಗಿ, ಅಕ್ಕಿ, ಮೊದಲಾದ) ಧಾನ್ಯಗಳನ್ನು ಹಿಟ್ಟು ಮಾಡಲು ಬಳಸುವ ಕಲ್ಲಿನ ಸಾಧನ ; ರಾಗಿಕಲ್ಲು ; ಘರಟ್ಟ : "ಬೀಸುವ ಕಲ್ಲು ಪೆಸರು ಸಂಘಟಯನಿಕ್ಕುಂ" (ಪುಂಗಣಾ. ೭೦-೦೯) ; ಬೀಸುವ ಕಲ್ಲಿನ ಮುಂದೆ ಕುಳಿತು ನೀಲವ್ವ ಆ ಕಾಳು ಬೀಸುತ್ತಿದ್ದಳು (ಪಚಚಾ. ೦೦೩) ; ಬಿಕ್ಕಿ ಬಿಕ್ಕಿ ಅತ್ತರೆ ಬೀಸುವ ಕಲ್ಲು ತಿರುಗೀತೇ ? (ಗಾಡ) ; ಗಂಗಾಳ ಚರಿಗಿ ಮಂಗಳಸೂತ್ರಾ ತಕ್ಕೊಂಡು ಹೋದರೋ ಬೀಸೂಕಲ್ಲಾ ಎಲ್ಲಾ ತಗೋದರೂ ಸಿಕ್ಕಮ್ಮು (ಕ್ರಚಂಗಿ. ೬೩) ; ಈಸೋ ಕಾಯನೆ ಬಿಟ್ಟು ಬೀಸೋ ಕಲ್ಲನೆ ಕಟ್ಟಿ ಈಸುವ ತೆಱದಿ ಈ ಭೂಸುರರಾ ದ್ರವ್ಯ (ಕುಂದ. ೦-೦೯-೨) ; ರಾಗಿ ಬೀಸೋ ಕಲ್ಲೆ ರನ್ನ ಮುತ್ತಿನ ಕಲ್ಲೆ ಅಣ್ಣನ ಮನೆಯ ಸಿರಿಗಲ್ಲೆ (ಜಾಗಿ. ೩). **ಬೀಸುವ ದೊಣ್ಣೆ** = (ಆಲಂ) ಅಪಾಯ ; ಅಪತ್ತು : ಬೀಸುವ ದೊಣ್ಣೆ ತಪ್ಪುದರೆ ಸಾವಿರ ವರ್ಷ ಆಯುಸ್ಸು (ಗಾಡ). **ಬೀಸುವಾತ = ಗಾಳಿ ಬೀ.ಲು ಕಾರಣ** ನಾದವನು ; ವಾಯು : ಬೀಸುವಾತನು ಬೀಯವಹನಾಕಾಶದಲಿ ಭೂತಾದಿಯೊಳಗಣ ಕಾಶವಡ್ಡಗಿದಡಡಗುವನು ವರಯೋಗಿಯದಱೊಳಗೆ (ಪಣಾಗೃ. ೩-೦-೧೬).

[ದೇ.ಕ ತಮಿ. ವೀಚು; ಮಲ. ವೀಜು, ವೀಯುು, ವೀಶು ; ತುಳು. ಬೀಡ್, ಬೀಡು, ಬೀವು, ಬೀಸ್, ಬೀಸು ; ಕೊಡ. ಬೀಜ್ ; ತೆಲು. ವೀಚು; ಕೋತ. ವೀಜ್; ತೊದ. ಟೀಸ್; ಕುಗ. ವೀಂಜ. /ಸಂ. ವೀಜ್]

ಬೀಸು₂ (ನಾ). ೧. ಬೀಸುವಿಕೆ ; ರುಂಬಳಿಸುವುದು ; ತೂಗುವಿಕೆ ; (೨). ೨. ಸಂಚಾರ ; ನಡೆ ; ಓಟ : ತಿಳಿಗಾಳಿ ತೀಡುದಲಿ . . . ಬಿರುಗಾಳಿ ಬೀಸುವಲಿ ಬರುವ ಮೂರುತಿಯೆ (ಪಸೀಗೀ. ೪೨-೭). ೩. ವಿಸ್ತಾರ ; ಹರಹು : ಕನಕವತ್ರಮನಲ್ಲಿ ಕಂಡು ಬೀಸುಂ ಬಯಿಯು

ವಿಲ್ಲದೆ ನಿಬಿಡಮಾಗಿ ಬರೆದಿರ್ದಕ್ಕರಂಗಳಂ ಅನುಮಾನಿಸಿ ತಾನೆ ನೋದಿ (ಅರ್ಜು. ೬-೭೦ ಪ) ; ಕಾಲುವೆ ಮೇಲೆ ಗೇರುಮರಪ ಕಟ್ಟಿ ಬೀಸುವೋದಕಾಗಿ ಗಡಿಯಂಕನಹಳ್ಳೀ ಮೇರೆಯ ಸುಂಕದವರ ಕಟ್ಟಿ (ಎ. VII. ೨೪೫. ೪೫-೦೦೦ ; 1537) : ಪ್ರತಿಪೊಂದು ವಾಕ್ಯದ ಬೀಸು ಬರುಸುಗಳು ಜೋರ್ ಜಾರುಗಳು . . . ಪ್ರತಿಕೃತಿಯಲ್ಲೂ ಮೂಡಬೇಕು (ಶಾಕಿಕ್ರ. XI. ಕ್ರಿ.ಪ್ರ.೪೪). ೪. ವಿಶಾಲವಾದುದು ; ವಿಸ್ತಾರವಾದುದು : ಬಿ.ಸಾದ ಬಲಯೊಳಗೆ ಕಾಸಿಮಿಸೆಯ ಮೃಗವು ತಾ ಸೋತು ಬಿದ್ದು (ಪ್ಯಾಭಾ. ೪೩-೪೩) ; ಇಲ್ಲಿಯ ಸಭಾಮಂಟಪದ ಬೀಸಾದ ಕಂಭಗಳ ಮೇಲಿನ ಕೆತ್ತನೆಯ ಕೆಲಸವೆ ಅದ್ಭುತವಾದುದು (ಶಾಂಜ. ೧೩) ; ಆ ಗಾಳಿ ಜತಿಗೆ, ನೀ ಗೂಳಿ ಹಾಂಗ ಅಡ್ಡಾಡಿ ಫೋಳು ಏನು ? ಮುಸುಗುಡುತ ಹೊರಟೆ ಬಯಲಾಗ—ನನ್ನ ಮುಂದಾಣ ಭಾಳ ಬೀಸು (ಕ್ಯಕಪ. ೫೬-೦೭). ೫. ಉದ್ದ ; ಲಂಬ : ಮೊದಲೇ ಬೀಸಾದ ಕೆಂಪಾದ ಆಳು, ಮತ್ತೇನು ಕೇಳುವದು ? (ಕೂಲಿ. ೨೬). 'ಬೀಸುಗಾಲು' ಪರಾ. ೬. ಹೊರವು ; ಸೊಂಪು : ಬೀಸಾಗಿ ಬೆಳೆದು ನಿಂತ ಬಾಳೆಯು ನಿಲುವು (ಚಿಕಥಂ. ೨೫) ; ತನ್ನ ಅಕಳ ಹಾಲು ಕುಡಿಯದ ಹೋರಿಯು ಸದೃಢವೂ ಆಗುವುದಿಲ್ಲ ಮತ್ತು ಬೀಸಾಗಿಯೂ ಬೆಳೆಯುವುದಿಲ್ಲ (ಗೋಸ್ವಾ. ೬೬).

ಬೀಚ್ಚುಬೀಸು = ಸ್ವೇಚ್ಛೆ ; ಸ್ವಚ್ಛಂದತೆ : ಪಮ್ಮ ಅಪೂರ್ವನು . . . ಬೀಚ್ಚುಬೀಸಾಗಿ ತಿರುಗುವ ಈ ಬಾಲಿಕೆಯನ್ನು ನಾಲ್ಕಾರು ಬಾರಿ ನೋಡಿದ್ದಾನೆ (ಇತ್ಯ. ೫೭). [< ಬೀಸು₁./ತಮಿ. ವೀಚ್ಚು]

ಬೀಸು₃ 'ಬೀಸ' ನೋ.

ಬೀಸುಂಬಲೆ, ಬೀಸುಬಲೆ, ಬೀಸುವಲೆ (ನಾ). (ಪ್ರಾಣಿ, ಪಕ್ಷಿ, ಮುಂತಾದುವುಗಳನ್ನು ಹಿಡಿಯಲು, ಎಸೆದು ಹರಡುವ) ಒಂದು ಬಗೆಯ ಬಲೆ : ಅಖಿಳಮೃಗಪಟಲಮಂ ಪಿಡಿಯಲೊಡರಿಸಿ ಸಮೆದ ಶಮನ ಶುರನ ಬೀಸುಂಬಲೆಯ ಪಾಸಮೆನಿಸಿ (ಹರಿಪ್ರ. ೦೦-೩ ಪ). **ಬೀಸುಬಲೆ :** ಬೀಸುಬಲೆಯಲಿ ಹುಲಿಯ ಹಿಡಿಯಬಲ್ಲಾ (ಹೋಗಿ. ೫೯-೪). **ಬೀಸುವಲೆ :** ಹಾಸುವಲೆ ಬೀಸುವಲೆ . . . ಮುಂದುಸವಲೆಯ ಹೊಜ್ಗಳ ಬೇಡವಡೆ ನೆರೆದುದು (ಪಚಂ. ೫-೬) ; ಬೀಸುವಲೆ ತಳಿಯ ಮರದ ಗೊಂದಣದ ಸಂವರಣೆಯಿಂದಾ ಕೋಂಟಿ ಕಣ್ಗೊಪ್ಪಿತು (ಸುಬ್ರ. ೦-೨೮).

[ಬೀಸು₁ + ಬಲೆ]

ಬೀಸುಂಬೂರಿಗೆ, ಬಿಸುಬೂರಿಗೆ, ಬಿಸುವೂರಿಗೆ, ಬಿಸುಹೂರಿಗೆ, ಬಿಸೂರಿಗೆ, ಬೀಸುರಿಗೆ, ಬೀಸುಹೂರಿಗೆ, ಬೀಸೂರಿಗೆ (ನಾ). (ಎಣ್ಣೆ ಸವರಿ ಹೆಂಚಿನ ಮೇಲೆ ಬೇಯಿಸಿ ಮಾಡುವ) ಅಗಲವಾಗಿರುವ ಒಂದು ಬಗೆಯ ಸಿಹಿ ಭಕ್ಷ್ಯ : ದೇವ ಬೀಸುಂಬೂರಿಗೆಯನೊಮ್ಮೆ ಸವಿಯಯ್ಯ (ಪಡೆ. ೬-೦೩೬). ಬಿಸುಬೂರಿಗೆ: ಬಿಸುಬೂರಿಗೆಯಂ ಪಲವಂ ಪಲವಿನಿಂದವಂ ಬಡ್ಡಿಸಿದರ್ (ಜಾಂತಿಕ್ಕ. ೦೫-೬೦). ಬಿಸುವೂರಿಗೆ : ಅಲ್ಲಿ ಬಿಸುವೂರಿಗೆ [ಜಾಣಾ. ಬಿಸುವ ಹೂರಿಗೆ] ಗಾರಿಗೆಗಳಾಗೆ ತನಿವಾಲ ಸಣ್ಣ ಸೇವಗೆಯ ಪಾಯಸಮಾಗೆ (ಕೊಮ್ಮ. ಪ. ೨೪೭-೦೫). ಬಿಸುಹೂರಿಗೆ : ಹೂರಿಗೆಯ ಮಂಡಿಗೆಯ ಘನಬಿಸುಹೂರಿಗೆಯ[ಜಾಣಾ. ಚಕ್ಕುಲಿ ಗಾರಿಗೆಯ] . . . ಸಂವರಣೆ ಸವನಿಸಲೀ ಕ್ಷಣದಲೆಂದ (ಜಾಗಗ. ೦೦-೨೨-೦೨). ಬಿಸೂರಿಗೆ : ಚಕ್ಕುಲಿ ಬಿಸೂರಿಗೆಯತಿರಸ (ಕ್ಯಾಪ. ೫೯-೦೨೦). ಬೀಸುರಿಗೆ : ಕರಜಗ ಕಾಯತಿರಸ ಮನೋಹರದಿಂದೆ ಕರಗು ಚಕ್ಕುಲಿ ಬೀಸುರಿಗೆಯ (ಕ್ಯಾಪ. ೨-೦೩೬) ; ಹೊನ್ನ ಹರಿವಾಣದಲಿ ಬಡಿಸಿದರೆಣ್ಣುರಿಗೆ ಬೀಸುರಿಗೆ ಮಂಡಿಗೆ . . . ಕ್ಷೀರ ಸಕ್ಕರೆಯ (ಪುಣಾಪು. ೨-೦೬). ಬೀಸುಹೂರಿಗೆ : ಬೀಸುಹೂರಿಗೆ ತಜುಂಗೆಳ್ಳುಂಡೆ . . . ಪೂಸಣವಾದಿ ಭಕ್ಷ್ಯಚಯಮಂ ತಂದಿಕ್ಕಿದರ್ ಕಾಂತೆಯರ್ (ಧರ್ಮಾ. ೨-೩೭). ಬೀಸೂರಿಗೆ : ಗಾರಿಗೆ ಲಡ್ಡುಗೆ ಬೀಸೂರಿಗೆ . . . ಮುಖಭಕ್ಷಂಗಳಿಗೊಪ್ಪುವ ಖರ್ಜೂರಂ ಕದಳೀ ಸಾರಪ್ಪಿತಂ ಮಧುಸಕ್ಕರೆಗಳ ಸಾರಂಗಳ ಸುಳಿವಾಳೆಯು ದೊನ್ನೆಯೊಳಾರ್ಕೈ ದೆಜ್ಜದರ್ಸವಿಗಾತಿಯರ್ (ಜಡೀಚ. ೦೯-೩೬). [ಬೀಸು₂ + ಪೂರಿಗೆ]

ಬೀಸುಗಂಡಿಯ (ನಾ). ತೂಗುವಂತೆ ಕಟ್ಟಿದ ಕತ್ತಿ.—ಖಿಡ್ಗ : ಕಟ್ಟಿದ ಕೊಂಬುಗತ್ತಿಯ ಸುಂದಿಲೊಳಗಳವಟ್ಟಿದ ಬೀಸುಗಂಡಯದ ಕಟ್ಟಿರಕದ ಚಿತ್ರಪಟುಗಳಂ ರಾಯನ ಪಟ್ಟದಾನೆಗಳ್ಕೈದಿದುವು (ಕಂಪಿ. ೩-೧೩); [ಬೀಸು₁ + ಕಂಡಿಯ₁ (<ಖಂಡಿಯ₂)]

ಬೀಸುಗಣ್ಣಿ (ನಾ). (ವ್ಯಗಪಕ್ಷಿಗಳನ್ನು ಹಿಡಿಯಲು ಉಪಯೋಗಿಸುವ) ಎಸೆಯುವ ಹಗ್ಗ : ಬೀಸುಗಣ್ಣಿ ಗುಗ್ಗುರಿಯರಳು . . . ಕತ್ತಿ, ಬಡಿಕೋಲ್ ಕಲ್ಲಿ ಹಿಡಿದ ಹುಲಿ ಶರಭ ಭೀರುಂಡ ಸಿಂಹ ಪ್ರಕರವೆರಸಿ ಬೇಡರು ನೆರೆದರು (ಪಚಂ ೩-೪) ; ತಡಿಕೆಗಳಿ ಬೀಸುಗಣ್ಣಿ ಹಿಡಿಯೆರಳಿ . . . ಪರಿವರಿಯು ಹಕ್ಕಿವರಸಡವಿಗಂತಕರಂತೆ ನಡವ ಶುರರ ಕಂಡನು (ಕೋಮಾಪ. ೩-೪). [ಬೀಸು₂ + ಕಣ್ಣಿ]

ಬೀಸುಗಲ್ (ನಾ). ಕವಣೆಯಲ್ಲಿಟ್ಟು ಎಸೆಯುವ ಕಲ್ಲು ; ಕವಣೆಕಲ್ಲು : ಸಸುಬಾಗಿ ಬೀಸುಗಲ್ಲನಿಡುತಿರ್ಪ ಪಾಮರಿಯರೊಪ್ಪುವರಾ ಕಳಮ ಪ್ರದೇಶದೊಳ್ (ರ�ಚಾ. ೦-೨೯). [ಬೀಸು₁ + ಕಲ್₂]

ಬೀಸುಗವಣೆ (ನಾ). ರಭಸವಾಗಿ ಎಸೆದ ಕವಣೆ : ಒಡನೆ ನೂಕಿತು ತೋಕುವಂದಿವ ತಡೆವ ಕೂಲವ ಹೊಯ್ದು ಖಿಡುಗದ ಬಿಡುವ ಚಕ್ರದ ಬೀಸುಗವಣೆಯ[ಜಾಣಾ. ಬೀಸುಗಣೆಯಲಿ] ಬಹಳ ಭಟನಿಕರ (ಕೋಚಾ. ೩-೬-೦೦). [ಬೀಸು₁ + ಕವಣೆ]

ಬೀಸುಗಾಲು (ನಾ). ೧. ಉದ್ದವಾದ ಕಾಲು ; ನೀಳವಾದ ಕಾಲು : ಚಂಡಿ ಚಾಮುಂಡಿಯರ್ ನರಶಿರಗಳೊಂದರ್ಬುದವ ಹರಡಿ ಧ್ರುವದಿಂದ ಧ್ರುವಪರಂ ಬೀಸುಗಾಲಿಂದೊದೆದು ಕ್ರೀಡಿಸುವ ಕೆಂಗಾಲ (ಪಕ್ಕಥ. ೦೨-೦). ೨. ದೊಡ್ಡ ಹೆಜ್ಜೆ ; ದಾಪುಗಾಲು : ಆತ ಓಡುತ್ತಿದ್ದಾನೆ ; ಇವರು ಅವನ ಹಿಂದೆ ಬೀಸುಗಾಲು ಹಾಕುತ್ತಿದ್ದಾರೆ (ಜಾಕುಡಾ. ೨೫೬).

[ಬೀಸು₂ + ಕಾಲು₁ (< ಕಾಲ್₂)]

ಬೀಸುಗೆಯ್, ಬೀಸುಗ್ಯೆ (ನಾ). ೧. ನೇಲುವ ಕೈ ; ಜೋಲುಗ್ಯೆ : ಬೀಸುಗೆಯ್ಗಳ[ಜಾಣಾ. ಗ್ಯೆಗಳ] ಡೊಂಕುಗಾಲುಗಳ . . . ತೋರ ಕಾರೊಡಲ ಕುಬುಬಂ (ಜಪ್ಪ. ೨೦-೦೦). ಬೀಸುಗ್ಯೆ : ೨. ಯುದ್ಧದ ಆರಂಭವನ್ನು ಸೂಚಿಸುವ ಸಲುವಾಗಿ ಅಲುಗಾಡಿಸುವ ಕೈ : ರಾಯರಿಬ್ಬರ ಬೀಸುಗ್ಯೆಗಳ್ ಸನ್ನೆ ಸಮವಾಗೆ . . . ಬೆರಸಿದುದುಭಯಬಲ ಬಲುಖತಿಯ ಬಿಂಕದಲಿ (ಕುಪ್ಪ. ೨-೦೨). [ಬೀಸು₁ + ಕೆಯ್₂]

ಬೀಸುಗ್ಯೆ 'ಬೀಸುಗೆಯ್' ನೋ.

ಬೀಸುಗೊಳ್ಳಿ (ನಾ). ಅತ್ಯಿತ್ತ ಅಲುಗಾಡಿಸುತ್ತಿರುವ ಕೊಳ್ಳಿ.—ದೊಂದಿ: ಮುಂದೆ ವಾರ್ಷನ ಬೀಸುಗೊಳ್ಳಿಗಳಿಂದ ತಮದಾವಳಿ ಮುಜಿಯ . . . ಅನಿಬರಟವೀಮ್ಯಂದದಲಿ ಬರುತಿರ್ದರಿರುಳು (ಭಾಪ್ರ. ೦೦-೨೬). [ಬೀಸು₂ + ಕೊಳ್ಳಿ₂]

ಬೀಸುಗೋಲು (ನಾ). "ಒಂದು ಬಗೆಯ ಬೇಟೆಯ ಕೋಲು" (ಕ್ಯಾಂಸಾ. ಕೋಚಿ) : ಬೀಸುಗೋಲಿನ ಸಾಳ್ವ ಕರದ ಮೋಸದಿ ಮೃಗಪಕ್ಷಿ ಹಿಡಿವ ಬಲೆಗಳಿಂವ ಲೇಸಾಗಿ ನಡೆದರೊಗ್ಗಿನಲಿ (ಕ್ಯಾಂಸಾ. ೬-೨೬). [ಬೀಸು₁ + ಕೋಲು₂ (<ಕೋಲ್₂)]

ಬೀಸುದೋಳ್ (ನಾ). ೧. ಜೋತು ಬಿದ್ದಿರುವ ತೋಳು ; ನೇಲುವ ತೋಳು : ಸೆಡೆದೆಳ್ದ ಬೀಸುದೋಳ್ಗೆರೆ ನೆಗೆದಿರ್ಪ ಗೋಣ್ (ಕ್ಯಕಪ. ೦೦-೩೦). ೨. ಅತ್ಯಿತ್ತ ತೂಗಾಡುವ ಕೈ.—ಚಲಿಸುವ ಕೈ : ಗಳಗನೆ ವಜವಾಗ ಬೀಸುದೋ[ಜಾಣಾ. ತೋ]ಳಿಂ ರಕ್ತವೀಡು ಬೆರಳ್ಗಳು ಬಾತು ಮಿಡಿದೊಡವುತು (ಕೋಚಿಚ. ೬-೨೩). [ಬೀಸು₂ + ತೋಳ್]

ಬೀಸುಬಲೆ 'ಬೀಸುಂಬಲೆ' ನೋ.

ಬೀಸುರಿಗೆ 'ಬೀಸುರಂಬೂರಿಗೆ' ನೋ.
ಬೀಸುವಲೆ 'ಬೀಸುಂಬಲೆ' ನೋ.
ಬೀಸುವಿಟ್ಟು (ನಾ). (ಬೀಸುವ ಕಲ್ಲಿನಲ್ಲಿ) ಪುಡಿ ಮಾಡಿದ ಹಿಟ್ಟು : ಕೆಂಗಾಯನರದಿಕ್ಕೆ ಕಡಲೆಯ ಬೀಸುವಿಟ್ಟನಲ್ಪವನಿಕ್ಕಿ ಕಲಸಿ (೩೩೫೩. ೯-೩೩). [ಬೀಸು$_1$ + ಹಿಟ್ಟು]
ಬೀಸುಹೂರಿಗೆ 'ಬೀಸುಂಬೂರಿಗೆ' ನೋ.
ಬೀಸೂರಿಗೆ 'ಬೀಸುಂಬೂರಿಗೆ' ನೋ.
ಬೀಹಳಿ (ನಾ). : (?) [ಬೀ]ಹಳಿಯರೆಸಾದಡಂ ಮೆಯಲು ಬಿ ೧೦ (೩೫೩. XV. ೪೫-೦೦ : 1148) ; ಹಾಡುವ ಬೊಮ್ಮಿರಿಗಂ ಬೀಹಳಿಯವ್ವರ್ಗ್ಗಂ ಎರೆ ಮತ್ತ ೧೩ (೩೫೩. XX. ೪೦೦-೩ ; 1288ರು ೫೫). [?]
ಬೀಹು 'ಬೀವು' ನೋ.
ಬೀಳ್$_1$ 'ಬೀಟ್$_1$' ನೋ.
ಬೀಳ್$_2$ 'ಬೀಡು$_2$' ನೋ.
ಬೀಳ್$_3$ 'ಬೀಡು$_3$' ನೋ.
ಬೀಳಲ್ 'ಬೀಟಲ್' ನೋ.
ಬೀಳಲು 'ಬೀಟಲ್' ನೋ.
ಬೀಳಲುಹಲ್ಲು (ನಾ). ಅರ್ಧಾಡುತ್ತಿರುವ ಹಲ್ಲು : ಬೀಳಲುಪಲ್ಲು ಪತ್ತಿದ ಗಳ್ಲಿದ ವೆಜೆ ವ್ಯವ್ಯನಡಿಯಚ್ಚನೊಲಿದು (೩೫೩೩೦. ೦೬-೩೦). [ಬೀಳಲು (<ಬೀಟಲ್) + ಹಲ್ಲು (<ಪರ್)]
ಬೀಳಲುಬಡು 'ಬೀಟಲ್ಬಿಡು' ನೋ.
ಬೀಳಲುವರಿ 'ಬೀಟಲ್ವರಿ' ನೋ.
ಬೀಳವೃತ್ತಿ 'ಭೀಟವೃತ್ತಿ' ನೋ.
ಬೀಳಾನುಮಿರ್ತಿ (ನಾ). = ಬೀಳಾನುವೃತ್ತಿ : ಶ್ರೀಮನ್ಮಹಾಮಾಣ್ಡಳೀಶ್ವರಂ ಜೋಯಿಮಯ್ಯರಸರ್ . ಸಿಂದವಾಡಿಸಾಸಿರಮಂ ಬೀಳಾನುಮಿರ್ತ್ತಿಯಿಂ ಶ್ರಭೋಗಾಭ್ಯಂತರಸುದ್ಧಿಯಿನಾಳ್ವ ಸುಖದಿನರಸುಗೆಯ್ದ (೩೫೩. IX-i, ೦೫೬-೦೭ ; 107೪). [ಈ ಇದು 'ಬೀಳಾನುವೃತ್ತಿ'ಯ ಅಪಲಿಪಿತ]
ಬೀಳಾನುವೃತ್ತಿ (ನಾ). ಮಾಂಡಲಿಕ ಅಥವಾ ತುಂಡರಸನು ಸ್ವಾಮಿ ಭಕ್ತಿಯಿಂದ ಸೇವೆ ಸಲ್ಲಿಸಿದ ಸಲುವಾಗಿ, ಅಧಿರಾಜನಿಂದ ಪಡೆಯಬಹುದಾದ ವಿಶೇಷವಾದ ಪದವಿ, ಅಧಿಕಾರ ಮುಂತಾದುವು : ಸೋಮೇಶ್ವರ ದೇವರ್ಪ್ಪೆಕ್ಕೊಲದೂಸೂಱುಂ ಪುರಿಗಱಿಮೂನೂಱುಮಂ ಬೀಳಾನುವೃತ್ತಿಯುನಾಳುತಂ ಸುಖದಿನಿರೆ (೩೫೩. XI-i, ೮೫-೬ ; 1049); ಶ್ರೀಮನ್ಮಹಾಮಣ್ಡಳೇಶ್ವರಂ ಲೋಕರಸನಬಲು ಮೂನೂಱುಮಿಱಿತಿ ಮೂನೂಱುಮಂ ಬೀಳಾನುವೃತ್ತಿಯುಂ ರಾಜ್ಯಂಗೆಯ್ಯುತಮಿರಲು (೪೫೫. ೯-೪ ; ೨೪೯ ; 1068) ; ಚಾಳುಕ್ಯಚಕ್ರವರ್ತಿ ತ್ರೈಲೋಕ್ಯಮಲ್ಲದೇವನ ಮಗ ಸೋಮೇಶ್ವರನು 'ಬೀಳಾನುವೃತ್ತಿ'ಯಿಂದ ಆಳುತ್ತಿದ್ದಂತೆ ಒಂದು ಶಾಸನದಿಂದ ತಿಳಿದು ಬರುತ್ತದೆ (೪೫೫. ೪೧೦). 'ಕುಮಾರವೃತ್ತಿ', 'ಬೀಟವೃತ್ತಿ' ಪರಾ. [ಬೀಳ್$_1$ (< ಬೀಟ್$_1$) + ಅನುವೃತ್ತಿ]
ಬೀಳಾಸೆ (ನಾ). ತುಚ್ಛವಾದ ಆಸೆ ; ಕೀಳಾದ ಅಪೇಕ್ಷೆ : ಅವ ಬೀಳಾಸೆಯಿಂದಾದಾವ ಶಾಪಕ್ಕೊ . . . ನಮ್ಮ ತಾಯ್ನುಡಿ ತಪ್ಪಾದ ನಾಡಿನೊಳ್ ಶಾನಮಂಗಳೆಯೆನಿಸಿ . . . ಬನ್ನಪಡುತಿರಲು (೧೫೭೬. ೫೦-೬). [ಬೀಳ್$_2$ (< ಬೀಡು$_2$) + ಆಸೆ$_1$]
ಬೀಳಿಕೆ (ನಾ). ೧. ಬೀಳುವಿಕೆ ; ಪತನ : ಅದೇ ಪ್ರಕಾರ ಈ ಏಳು ಬೀಳಿಯು ಹೊಣ್ಕೆ ಕೂಡ ಇರುತ್ತದೆ (೪೫೦೦೫೫. ೬-೨೨೦). ೨. ಸುರಿಯುವುದು ; ಸುರಿತ : ಸುಮಂತ್ರನು ಶೂನ್ಯಹರುಷದಲಿ . . . ಸಾಂದ ನಕ್ಷತ್ರಗಳ ಬಾರಿಗಳ ಬೀಳಿಕೆಯ [ಶಾಹಾಂ. ಬಳಲಿಕೆಯ] ಬಸಸುಯ್ದನ ಮಹೀಪತಿಯ (೬೫೮೫೫. ೯-೬-೬). [ಬೀಳ್$_1$ (< ಬೀಟ್$_1$) + —ಇಕೆ]
ಬೀಳಿಸು (ಕ್ರಿ). ಕೆಳಗೆ ಬೀಳುವಂತೆ ಮಾಡು ; ಬೀಳಿಸು : ಹೋಗಿ ದೇಶಂಗಳಲಿ ತಿರಿದುದ ಬಾಗಿಲಲಿ ಬೀಳಿಕ್ಕುವಂತಿರೆ ಯೋಗಗತಿಗೀಡೇ ಜುದಿಳವರು ಮೃತ್ಯುವಿನ ಮುಖಿಕೆ (೩೫೫೫. ೦೦-೧೩-೩೬).
[ಬೀಳ್$_1$ (< ಬೀಟ್$_1$) + ಇಸು$_5$]
ಬೀಳಿಚು 'ಬೀಳ್ಚು' ನೋ.
ಬೀಳಿಲ್, ಬೀಳಲು, ಬಿಳಿಲ್, ಬಿಳಿಲು, ಬಿಟಿಲ್, ಬೀಳಿಲು (ನಾ). ೧. ಅಲ ಮುಂತಾದ ಮರಗಳ ಕೊಂಬೆಗಳಿಂದ ಕೆಳಮುಖವಾಗಿ ಇಳಿ ಬಿದ್ದ ಬೇರು.—ಜಟೆ : ಪೊಲನೆ ಬೀಳಿಲ್ದಿಡದರ್ದು ನಡುಗೊಂಬಿ ನೆಲೆದುಜುಗಲ ಪೊದೆ ಪೊರೆಯೊಳ್ ಮೆಯ್ಗುರೆದಿರ್ದ ಗಂಧರ್ವಸ್ತೋಂದರಿ ನೆಲೆವಡದಕ್ಷೀಣರೂಪಯಕ್ಷೀಣಿಯಂತೆಸೆಯೆ ಮಿಸುಪ ಜಟೆವಿಟಿಪಿಯಂ(೩೫೫. ೬-೪೫ ೫). ಬೀಳಲು : ೧. ಒಣಗಿದ ಮರ ಚಿಗುರು ಬಿಗಿ[೩೫೫೦. ೪]ಲು ಬಿಡುವುದ ಕಂಡೆ (೩೫೫೫. ೨೦೬೦). ಬಿಳಿಲ್ : ೨. ಬೀಳಲನ್ನು ಹೊಂದಿರುವ ಆಲದ ಜಾತಿಯ ಮರ : ಬಿಳ್ಪದರಿ ಸಾಲಮಾ ಹೊನ್ನೆ ಚಿನ್ನಂಗಿ ಮೊದಲಾದ ವೃಕ್ಷಂಗಳಿಂ ವನಮಸೆದುದು (೩೫೫. ೩೩-೦೮). ಬಿಳಿಲು : ೧. ಆಲದ ಬಿಳಿಲಂ ಮೇಕೆಯ ಹಾಲಲ್ಲಿ ಅರದು . . . ೩ ದಿನ ಕೊಳ್ಳಲು . ವೀರ್ಯವರ್ಧನಂ (೩೫೩. ೩೪) ; ಜಾರ್ವರಿಗೆ ಇಳಿದ ಬಿಳಿಲಿನ ಹರಹಿನರಿ ಕಂಗೊಳಿಸುತಿಹ ಪಟುವೃಕ್ಷ ಕಂಪಿನ ನೆಳಲ ವಳಯದಿ ಸಿಳಿದುವಾಯ್ದರು (೩೩೫೫. ೬-೪). ೨. ಬಿಳಿಲರಿಯರಂ ಕಕ್ಕೆ . . . ತಜ್ಞಿಯದಿಂದೊಪ್ಪಿ ತಿರ್ದಕ್ಕರಣ್ಯಂ (೧೫೫. ೦-೬೨) ; ಬಿಳಿಲಾಲ ಬೇಲ ಹಿಬ್ಬೇವು . . . ಮೊದಲಾದ ಮರಗಳ ಬಳಗದಿಂದದು ಕಕ್ಕಸವಮದು (೪೦೫೫೫. ೯-೬). ಬಿಟಿಲ್ : ೧. "ತಿಪ್ಪೆ ಜಟಿಯೆನೆ ಬಿಟಿಲಿಳಕ್ಕು" (೪೦೫೫. ೬೨-೪) ; ಸ್ಕಂಧವದೀದರೆದಾಲದ ಬಿಟಿಲನಳಿವೆರು ಕುಂದಿದಂದು ಪೂಣ್ಬವತಿಸಾರಂ ಕೆಡುಗುಂ (೪೫೫೫. ೪-೦೬). ೨. ಬಿಟಿಲ್ಬಿಲ್ಬತ್ತಿ . . . ಕ್ಕಳ್ಮರಂ ಎಂಬೀ ಮರದುಜುಗಲಿಜುಂದಿನಂದತಿಗಹನವೆನಿಪ ಗಹನಾಂತರದೊಳಗೆ (೩೫೫೫. ೦೨-೩೪). ಬೀಳಿಲು : ೧. ಸ್ಕರನಿಧಿಯೆಡೆಗೆಯ್ದುವ ನವಮೋಹನ ತರುವಿನಸಿಯ ಬೀಳಿಲ ತೆಱದಿಂ ಬಂಧುರಮಾದುವು ಕರಯುಗಳಂ (೩೪೫೫. ೬-೪೬). [ಬೀಳ್$_1$ (<ಬೀಟ್$_1$) + —ಇಲ್$_3$]
ಬೀಳಿಲು 'ಬೀಳಿಲ್' ನೋ.
ಬೀಳಿಲುಬಿಡು (ಕ್ರಿ). ಮರದ ಕೊಂಬೆಗಳಿಂದ ಜಟೆಯು ಕೆಳಮುಖವಾಗಿ ಬೆಳೆ : ಪುರುಷನಾವನು ಬಂದಡಾಲದ ಮರನು ಬೀಳಿಲು ಬಿಡುವುದಾತನು ವರನು ತರುಣಿಗೆ ತಪ್ಪದಪ್ಪನು' (೩೪೫. ೬-೩೦). 'ಬೀಟಿಲ್ಬಿಡು' ಪರಾ. [ಬೀಳಿಲು (<ಬೀಳಿಲ್) + ಬಿಡು$_1$]
ಬೀಳಿಸು 'ಬೀಟಿಸು' ನೋ.
ಬೀಳು$_1$ 'ಬೀಟು$_1$' ನೋ.
ಬೀಳು$_2$ 'ಬೀಟು$_2$' ನೋ.
ಬೀಳು$_3$ 'ಬೀಡು$_3$' ನೋ.
ಬೀಳು$_4$ 'ಬೀಡು$_4$' ನೋ.
ಬೀಳು$_5$ 'ಬೀಟು$_4$' ನೋ.
ಬೀಳುಕಟ್ಟೆ (ನಾ). ನೀರು ಜಲಪಾತವಾಗಿ ಬೀಳುವಂತೆ ಮಾಡುವ ಒಂದು ಬಗೆಯ ಕಟ್ಟೆ : ಆದರೆ ಬೀಳುಕಟ್ಟೆಯನ್ನು ಕಟ್ಟಿದ ಕಡೆ ದೋಣಿಗಳ ದಾರಿಯನ್ನು ಏತದಿಂದ ಬೇಪೆಯಾಗಿ ಇಡಬೇಕಾಗುತ್ತದೆ (೩೦೫೫. ೬೦೩). [ಬೀಳು$_1$ (< ಬೀಟ್$_1$) + ಕಟ್ಟೆ$_1$]
ಬೀಳುಕೊಡು 'ಬೀಳ್ಕೊಡು' ನೋ.
ಬೀಳುಕೊಳ್ 'ಬೀಡುಗೊಳ್' ನೋ.
ಬೀಳುಗೆ (ನಾ). ಕೆಡೆಯುವಿಕೆಯನು : "ಪತನ್, ಪತತಿ, ಪತಕಃ—ಈ ೩ ಬೀಳುಗಂ" (೪೦೫೫. ೦೦೬). [ಬೀಳು$_1$ (<ಬೀಟು$_1$)+ —ಗ$_3$]

ಬೀಳುಗತ್ತಲೆ (ನಾ). ಗಾಢವಾದ ಅಂಧಕಾರ : ಹೂಳಿಟೆಯ ಅವಾಂಗಯ್ಯ ಧೂಳ ಚೆಂಡಿಗೆ ಸೇರಿ ಮೂಳೆದೊಳು ಬಿಟ್ಟ ಬೀಡಾರ ಬೆಳತನಕ ಬೀಳುಗತ್ತಲೆಯು ಬೆಳಕಾಗಿ (ಕಸ್ತೂ. ೪೦೩).

[ಬೀಳು$_3$ (<ಬೀಟ್$_1$) + ಕತ್ತಲೆ$_1$ (< ಕುತ್ತಲೆ)]

ಬೀಳುಗಳೆ (ಕ್ರಿ). ಹೀನಾಯ ಮಾಡು; ಹೀಗಳೆ : ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು (ಪಂಪ. ೩-೬) ; ನಾಡನ್ನು ಕಾಡೆಂದು ಬೀಳುಗಳೆವರೆ ಬೀಡ ಟಟ್ಟಿ ಪಟ್ಟಣವನ್ನು ಅಳವೇಕು (ಪಕಾ. ೧೦೨-೬) ; ಮನುಷ್ಯನ ಮನಸ್ಸು ಮಿಕ್ಕವನ್ನೆಲ್ಲ ಬೀಳುಗಳೆಯುವುದು (ಕುಚಾ. ೩೦).

[ಬೀಳು$_4$ (< ಬೀಡು$_3$) + ಕಳೆ$_1$]

ಬೀಳುಗುಂಡಿ (ನಾ). ಉರುಳಿಸಲು ಮಾಡಿರುವ ಹಳ್ಳ ; ಬೀಳಿಸಲು ನಿರ್ಮಿಸಿದ ಕಂದಕ : ಶಕುನಿಯೂ . . . ದುಶ್ಶಾಸನನೂ ಕೋಲು ಜೇನಿಗಾಗಿ ಮರದ ತುದಿಗೆ ಹತ್ತಿ ಬಿಟ್ಟು ಅಲ್ಲಿ ಜೋಲಾಡುತ್ತಿದ್ದಾರೆ. ಕೆಳಗೆ ಭೀಮನ ಕೋಪವೆಂಬ ಬೀಳುಗುಂಡಿ ಅವರುಗಳ ನಾಶಕ್ಕಾಗಿ ಬಾಯಿ ತೆರದು ಕಾದಿರುವುದು ಅವರುಗಳಿಗೆ ತಿಳಿಯಲಿಲ್ಲವಲ್ಲಾ ! (ಜೈಸಿ. ೦೮೨).

[ಬಿ.ಳು$_3$ (< ಬೀಟ್$_1$) + ಗುಂಡಿ$_2$]

ಬೀಳುಗುಂಡು 'ಬೀಟ್ಗುಂಡು' ನೋ.

ಬೀಳುಗುವರ (ನಾ). ಆಯೋಗ್ಯನಾದ ತರುಣ.—ಯುವಕ : ಬಾಳಿ ಬದುಕಿ ಶಕ್ತಿಯಿಲ್ಲದ ತಮ್ಮಂತಿ ಬಾಳಲೆಳಸುವ ಬಾಲಕಿಯ ಬೀಳುಗುವರನಿಗೆ ಬೆರಗ್ಯೆದರೆಂಬುದ ಕೇಳಿ ಕವಿಯ ಮುಚ್ಚುವುದು (ಪಂಪ. ೩-೦೯).

[ಬೀಳು$_4$ (< ಬೀಡು$_3$) + ಕುವರ$_2$]

ಬೀಳುಗೆಡವು (ಕ್ರಿ). ಭೂಮಿಯನ್ನು ಸಾಗುವಳಿ ಮಾಡದಿರು ; ಜಮೀನನ್ನು ಹಾಳುಗೆಡವು : ಅವನು ಕಳ್ಳಭಟ್ಟಿ ಮಾರುವ ಕಸುಬಿಗೆ ಕೈಹಾಕಿ ಗದ್ದೆಗಳನ್ನೆಲ್ಲ ಬೀಳುಗೆಡವಿದ (ಕ್ರಿಪ).

[ಬೀಳು$_4$ (< ಬೀಡು$_3$) + ಕೆಡವ (< ಕೆಡಪು)]

ಬೀಳುಗೊಡು 'ಬೀಳ್ಕೊಡು' ನೋ.

ಬೀಳುಗೊಳ್ 'ಬೀಡುಗೊಳ್' ನೋ.

ಬೀಳುಗೊಳಿಸು$_1$ (ಕ್ರಿ). ನಿವಾರಿಸು ; ಪರಿಹರಿಸು : ಉಸುರುಬ್ಬಸದ ದುಸ್ಥಿತಿಯ ಬೀಳುಗೊಳಿಸುವೆನು (ಪಾರ್ಶ್ವ. ೪-೬-೩೨).

[ಬೀಳುಗೊಳ್ (< ಬೀಡುಗೊಳ್) + — ಇಸು$_5$]

ಬೀಳುಗೊಳಿಸು$_2$ (ಕ್ರಿ). ನಿರರ್ಥಕಗೊಳಿಸು ; ನಿಷ್ಪ್ರಯೋಜಕವನ್ನಾಗಿ ಮಾಡು : ನಾವು ಈ ಶಕ್ತಿಯನ್ನು ಬೀಳುಗೊಳಿಸಿರುವೆವು, ಕೆಲುಗೊಳಿಸಿರುವೆವು (ಪಾರ್ಶ್ವ. ೬೩). [ಬೀಳು$_4$ (<ಬೀಡು$_3$) + ಕೊಳ್$_1$ + —ಇಸು$_5$]

ಬೀಳುಡಿಗೆ (ನಾ). (ಇನ್ನೊಬ್ಬರು ಉಟ್ಟು) ಕಳಚಿದ ಬಟ್ಟೆ : ಅವನಾದರೇನು ಶಿವಮಹಾದೇವನ ನೆನೆವವನ ದಾಯ ತಂಬುಲ ಮೆಲುವೆ ಬೀಳುಡಿಗೆ [ಪಾಣಿ. ಡೆ]ಯಾ ಹೊದೆವೆ (ಪಸಪ. ೪೬೩) ; ತನ್ನ ನಿರ್ಮಲವ ಕೊಟ್ಟನೆನಗೆ ಆ ತೊಟ್ಟ ಬೀಳುಡಿಗೆಯ ಹೊದೆದುಕೊಂಡೆನಾಗಿ ಆ ಮಡಿವಳ ಮಾಟ ತಂದೆಯ ಕೃಪೆಯಿಂದ ಅನು ಬದುಕಿದೆನಯ್ಯಾ (ಪಸಪ. ೦೦೩-೨೦೩) ; ನಮ್ಮ ಕಲಿದೇವನ ಶರಣರ ಬೀಳುಡಿಗೆಯ ತೊಳೆವ ಲೆಂಕನ ಬಡತನವ ನೋಡು (ಕ್ಷಪಪ. I. ೨೫೬).

[ಬೀಳ್$_1$ (<ಬೀಟ್$_1$) + ಉಡಿಗೆ$_1$ (<ಉಡುಗೆ)]

ಬೀಳುಡೆ 'ಬೀಟುಡೆ' ನೋ.

ಬೀಳುದಂಡ (ನಾ). ಬೀಳುಭೂಮಿಯ ಮೇಲೆ ಹಾಕುವ ತೆರಿಗೆ : ಅಲನೆಯು ಅನ್ಯ ಬೀಳುದಂಡ ಬೊಗಾರದನ್ನಾ ಅಪೂರ್ವ್ಯಾಯ ಏನು ಬಂದಡು ಕಂಬುಗಾಜಿ ಮರ್ಯ್ಯಾದಿಯಲಿ ಧಾರೆಯವೆಜದು ಆ ಪಂಡಾಳ ನಡಸುವ ಧರ್ಮಕ್ಕೆ ಸಲುವುದು (ಪಳೆ. IX (೬). ಶಾಶಾ. ೮೨-೩೦ ; ಸಿ. 1300).

[ಬೀಳು$_4$ (<ಬೀಡು$_3$) + ದಂಡ]

ಬೀಳುನುಡಿ$_1$ (ಕ್ರಿ). ಹೀಯಾಳಿಕೆಯ ಮಾತನ್ನು ಆಡು ; ನಿಂದಿಸು ; ಜರೆ: ಹಾಳುಹರಟೆ ಬಿಟ್ಟು ಹೊತ್ತುಕಳೆವುದೆ ಹಬ್ಬ . . . ಬೀಳುನುಡಿವರ ಬಿಟ್ಟುಕೊಡುವುದೆ ಹುಬ್ಬ (ಪಗೂಣಾ. ೦೩೦). [ಬೀಳು$_4$ (<ಬೀಡು$_3$)+ ನುಡಿ$_1$]

ಬೀಳುನುಡಿ$_2$ (ನಾ). ವ್ಯರ್ಥವಾದ ಮಾತು ; ನಿರರ್ಥಕವಾದ ನುಡಿ : ಬೀಳುನುಡಿಯ ಬಿಡು ಮುನಿಪ (ಪಂಚಾಂ. ೧-೦೭).

[ಬೀಳು$_4$ (< ಬೀಡು$_3$) + ನುಡಿ$_2$]

ಬೀಳುಬಾವಿ (ನಾ). ಹಾಳುಬಿದ್ದ ಬಾವಿ ; ನಿರುಪಯುಕ್ತವಾದ ಬಾವಿ : ಎದುರಿಗಿದ್ದ ಬೀಳುಬಾವಿ ಕನ್ನ ಶಾಂತವಕ್ಷಸ್ಥಲದಲ್ಲಿ ಆಕಾಶದ ಸಕಲ ಸಂಪತ್ತನ್ನೂ ತುಂಬಿಕೊಂಡು ನಗುವಂತಿತ್ತು (ಪಾಪಾ. ೮೩).

[ಬೀಳು$_4$ (< ಬೀಡು$_3$) + ಬಾವಿ]

ಬೀಳುಬಿಡು 'ಬೀಡುಬಿಡು$_3$' ನೋ.

ಬೀಳುಬುಟ್ಟಿ (ನಾ). ಒಂದು ಬಗೆಯ ಬಳ್ಳಿಯಿಂದ ಹೆಣೆದ ಕುಕ್ಕೆ : ಅದನ್ನು ಒಂದು ಬೀಳುಬುಟ್ಟಿಯಲ್ಲಿ ತುಂಬಿಸಿ ಒಕ್ಕಲು ಲಿಂಗನ ತಲೆಯ ಮೇಲಿಟ್ಟು . . ಕಳುಹಿಸಿ ಕೊಟ್ಟ (ಕೇಪಹೊ. ೦೧೬).

[ಬೀಳು$_3$ (<ಬೀಟ್$_4$)+ಬುಟ್ಟಿ (<ಪುಟ್ಟಿ$_{17}$)]

ಬೀಳುಭೂಮಿ (ನಾ). ಸಾಗುವಳಿ ಮಾಡದ ನೆಲ. — ಜಮೀನು : ಬೀಳು ಭೂಮಿಯನ್ನು ಹೊಸದಾಗಿ ಸಾಗುಮಾಡೋಣ (ಗಂಗಾಹು. ೪. ೦೩೬).

[ಬೀಳು$_4$ (<ಬೀಡು$_3$) + ಭೂಮಿ]

ಬೀಳುಮಾತು (ನಾ). = ಬೀಳುನುಡಿ$_2$: ಬೀ[ಜಾಂಂ. ೬೧]ಳುಮಾತುಗಳೇಕೆ ನಿಮಗಿದು . . . ನಳನೃಪಗೆಯೆರಡೆಣಿಸುವುದೆ (ಪಕಪ. ೯-೦೨) ; ಹಾಳಲೋಚನನ ಸರ್ವಾಭರಣವಾಂ ನೀನು ಹರಿಯ ಪರಿಯಂಕವೆಂಬ ಬೀಳುಮಾತನು ಸಭಾಪತಿ ಸಭ್ಯರುಗಳು ಮಿಗೆ ಕೇಳ ಛೀ ತೆಗೆಯೆಂಬ ತೆಜದಿ (ಜಪಾಪ್ರ. ೦೬-೩). [ಬೀಳು$_4$ (<ಬೀಡು$_3$) + ಮಾತು$_1$]

ಬೀಳುವಲೆ (ಪಾ). (ಮೃಗ, ಪಕ್ಷಿಗಳು ಸಿಕ್ಕಿಕೊಳ್ಳುವ) ಒಂದು ಬಗೆಯ ಬಲೆ.—ಜಾಲ : ಬೀಳುವಲೆ ಜವಳವಲೆ . . . ಪಗಾಥವಲೆಗಳ ಹೊಱಗಳೋಳಿಯಂ ಪೊತ್ತು ನಡತಂದುದು ಪುಳಿಂದರೂಪದಲೆ ಭೂತಗಣಂಗಳು (ಪಾಂಡಪು. ೦೬-೬೯) ; ಬೀಳುವಲೆ ಕಣ್ಣವಲೆ ಸಿಡಿಲುವಲೆ . . . ಮರವಲೆಗಳರ್ದುವಾ ತುರರಲ್ಲಿ (ಸಿರ್ಕ್ಷಪ್ರ. ೬-೬).

[ಬೀಳು$_1$ (<ಬೀಟ್$_1$) + ಬಲೆ$_1$]

ಬೀಳುವಳ್ಳಿ (ನಾ). ಹಾಳು ಬಿದ್ದ ಗ್ರಾಮ ; ನಿರ್ಜನವಾದ ಹಳ್ಳಿ : ನಗರ ಪಟ್ಟಣ ಪೇಡ ಖರ್ವಡ ಪುರ ಗ್ರಾಮಗಳೆಂಬ ನಾನಾಪೆಸರಾಂತು ಸೊಗಯಿಸುತಿಪ್ಪುವಾ ದೇಶದಿ ಬಿ.ಳುವಳ್ಳಿಗಳಿಲ್ಲ (ಪೋಪಕ. ೨-೦೩).

[ಬೀಳು$_4$ (<ಬೀಡು$_3$) + ಪಳ್ಳಿ$_1$]

ಬೀಳುವೆಣ (ನಾ). ಬಿದ್ದಿರುವ ಹೆಣದಂತಿರುವವನು : ಬಾಳುವೆಣ ಬೀಳುವೆ [ಪಾಪಾ. ಬೀಳ್ವೆ]ಣನ ಸಂಸಾರವೇನವನ (ಪಸಪ. ೦೩೬).

[ಬೀಳು$_1$ (<ಬೀಟ್$_1$) + ಪೆಣ]

ಬೀಳುವೃತ್ತಿ (ನಾ). = ಬೀಳಾನುವೃತ್ತಿ : ಶ್ರೀಮತ್ಕುಂದ್ಯಮರಸರ್ಚ್ಚನವಾ [ಸಿ]ಪನ್ನಿರ್ಜ್ಯಾ[ಸಿ]ರಮಂ ಸುಖಸಂಕಥಾವಿನೋದದಿಂ ಬೀಳುವೃತ್ತಿಯನಾಳ್ತುವಿರೆ (ಕಪ. II. ೩-೦೨ ; 1010). [<ಬೀಳುವೃತ್ತಿ]

ಬೀಳ್ವೆ 'ಬೀಟ್ವೆ' ನೋ.

ಬೀಳ್ಕೊಡಿಗೆ 'ಬೀಳ್ಕೊಡುಗೆ' ನೋ.

ಬೀಳ್ಕೊಡಿಸು (ಕ್ರಿ). ೧. ಕಳುಹಿಸು ; ಹೋಗಲು ಅನುವು ಮಾಡು : ಮಕುಟಪರ್ವತನಂ ಕಾಣಿಸುತಂ ಬಂದ ಚಾರರಂ ಬೀಳ್ಕೊಡಿಸುತಂ ಸುಖದೊಳಿಪ್ಪಲ್ಲಿ (ಪಸಪ. ೩-೩೩) ; ಇಳೆಯಾನ್ಹಾನ ಮನದಿಂಗಿತವಱಿತು ಹೊಂಜೆಳೆ ವಿಡಿದಬ್ಜನೇತ್ರೆಯರು ಎಳವೆಣ್ಣುಗಳ ಚಿತ್ತೈಸೆಂದು ಸತಿಯರ ನಿಳಯಕೆ ಬೀಳ್ಕೊಡಿಸಿದರು (ಪೋಚಪ. ೨೨-೦೩). ೨. ನಿವಾರಿಸು ; ಪರಿಹರಿಸು :

ನಿಜಶ್ರೀವಧುವ ತೋಜಿಸಬೇಕು ವನವಾಸದ ಪರಿಕ್ಲೇಶಾನುಸಂತಾಪವನು ಬೀಳ್ಕೊಡಿಸಿ (ಕುಮಾ. ೦೦-೩೭). [ಬೀಳ್ಕೊಡು + — ಇಸು3]

ಬೀಳ್ಕೊಡು, ಬೀಳುಕೊಡು, ಬೀಳುಗೊಡು, ಬೀಳ್ಗುಡು (ಕ್ರಿ). ೧. (ಅತಿಥಿ, ಬಂಧು, ಗೆಳೆಯ ಮುಂತಾದವರನ್ನು) ಕಳುಹಿಸಿಕೊಡು; ಹೋಗಲು ಬಿಟ್ಟು ಕೊಡು: ಮೃಡಂ ರಕ್ಷಿಸುವೆನೆನುತ್ತ ವಿನಯೋಕ್ತಿಯಿಂದ ಬೀಳ್ಕೊಡೆ (ಕಬ್ಬಿಗ. ೬-೦೦೬); ಭದ್ರದೇಹದ ಭಟನ ಬೀಳ್ಕೊಡೆ ರುದ್ರರೂಪದ ದೈತ್ಯ ಬಂದನು ರಾಮನಿದ್ದೆಡೆಗೆ (ಕೌಶಾ. ೩೯-೨೩) : ಮತ್ತ ಗಜಗಮನೆಯರ ಬೀಳ್ಕೊಟ್ಟನು ಮಹೀಪಾಲ (ಕಿರಾತಾ. ೦-೩-೩೪). ೨. ಬಿಡು; ತ್ಯಜಿಸು: ಮಾನನಿಧಿ ಸಾವಿತ್ರಿಯೌಪಾಖ್ಯಾನವನು ಕೇಳಿದನು ಚಿತ್ರಗ್ಲಾನಿಯನು ಬೀಳ್ಕೊಟ್ಟನು (ಭಾಮಾ. ೨೩-೩). ೩. ತಲುಪುವಂತೆ ಮಾಡು; ತಲುಪಿಸು: ಬರಯಿತಿಯಾತಿಗೆ ಬೀಳ್ಕೊಡಿದನು ತೂಗಲಿಗಿಂಗೆ ಗರಿಯಂ ! (ಗಿತಾ. ೩೩-೦೨). ಬೀಳುಕೊಡು : ೧. ನೀ ಹೋಗಂದು ಗುಣದಲಿ ಬೀಳುಕೊಟ್ಟನು ದ್ರೋಣನರ್ಜುನಪ (ಭಾಷ್ಯಕ್ರೀ. ೯-೩೦) : ದೇಶಾಂತರ ದ್ವೀಪಾಂತರಂಗಳಿಂ ಬಂದ ಜನಮ ಕಾರುಣ್ಯದಿಂದ ಮನ್ನಿಸಿ ಬೀಳುಕೊಟ್ಟು ತಿರುವಾರೂರೊಳೊಪ್ಪುತಿರ್ದಂ ಸೌಂದರಾಧಿಪಂ (ಪೌಂಪು. ೦೦-೧೦) ; ಬೀಳುಕೊಡಿ ನಿಮ್ಮರಸರಿಗೆ ತಾ ಹೇಳಲೇವದ ಹೇಳಿ (ಕಿರಾತಾ. ೩-೩-೦೦೨). ೨. ಕೇಳು ಮಾಯಾಮಲವ ಜಾಳಿಸುವ ಪರಿಗಳಂ ಬೀಳುಕೊಡು ಕುಲವಂಬ ಕಾಳ್ಕರುಳ್ತನಗಳಂ (ಶಾಕ್ತಕೀ. ೪೨-೦೨೨) : ಗುರು ಬೀಳುಕೊಟ್ಟನು ದೇಹವನು (ಭಾಷ್ಯಕ್ರೀ. ೦೯-೦) ; ಯೋಗಿಸಮೂಹ ನಗದೇ ಮನುಜಭಾವವ ಬೀಳುಕೊಡಿ (ಭಾಷಾ. ೪೩-೪೦). ೪. ಇಲ್ಲವಾಗಿಸು; ಮರೆಯಹಾಗಿಸು; ಅಡಗಿಸು: ನಿಮ್ಮ ಭೃತ್ಯನ ಭಾವ ಬಿಟ್ಟಿಕು ವಿಶ್ವರೂಪವ ಬೀಳುಕೊಡಿ (ಭಾಷ್ಯಕ್ರೀ. ೩-೭೯). ಬೀಳು ಗೊಡು : ೧. ಪಿಮ್ಮಯ ಕರುಣವೇ ಸಾಮ್ರಾಜ್ಯ ನಮ್ಮನು ಬೀಳು ಗೊಡಿರಿ (ಭಾಷ್ಯಕ್ರೀ. ೦೨-೩೨) ; ವಿಳುದಿನದಲಿ ಮುಗಿದುದಾ ಮಖಶಾಲೆ ದಕ್ಷಿಣೆಗೊಟ್ಟು ವಿಪ್ರರ ಬೀಳುಗೊಟ್ಟನು (ಭಾಷಾ. ೦-೧೫). ಬೀಳ್ಗುಡು : ೧. ಹಸ್ರಸೂಚನದಿಂದ ಬೀಳ್ಗುಡುವನು (ಪಚ್ಚಿಕ. ೦೦೦-೯).

[ಬೀಳ್2 (< ಬೀಡು2) + ಕೊಡು1]

ಬೀಳ್ಕೊಡುಗೆ, ಬೀಳ್ಕೊಡಿಗೆ (ನಾ). ಒಬ್ಬರನ್ನೊಬ್ಬರು ಅಗಲುವಾಗ ಒಪ್ಪಿಗೆ ತೆಗೆದುಕೊಳ್ಳುವುದು ಅಥವಾ ಕೊಡುವುದು : ನಮ್ಮ ಕಚೇರಿಯಲ್ಲಿ ನಿವೃತ್ತರಾದ ಅಧಿಕಾರಿಯೊಬ್ಬರಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿಕೊಂಡಿದ್ದೇವೆ (ಕೂಪ). ಬೀಳ್ಕೊಡಿಗೆ : ಅವನು ಪರಸ್ಪರ ಬೀಳ್ಕೊಡಿಗೆಯಲ್ಲಿ ಮಗ್ನವಾಗಿದ್ದ ಜನರನ್ನು ನೋಡುತ್ತಿದ್ದನು (ಶಿಕಲು. ೨೯೩) ; ಹಿತವಚನವನ್ನು. ಆ ಬೀಳ್ಕೊಡಿಗೆ ಸಮಾರಂಭದ ಮುಕ್ತಾಯ ಕಾರ್ಯಕ್ರಮವಾಗಿ ನುಡಿದರು (ಕೂಪಸಂ. ೨೦). [ಬೀಳ್ಕೊಡು + — ಗೆ]

ಬೀಳ್ಕೊಳ್ ' ಬೀಡುಗೊಳ್ ' ನೋ.

ಬೀಳ್ಕೊಳಿಸು ' ಬೀಳ್ಕೊಡಿಸು ' ನೋ.

ಬೀಳ್ಕೊಳು ' ಬೀಡುಗೊಳ್ ' ನೋ.

ಬೀಳ್ಕೊಳ್ಳು ' ಬೀಡುಗೊಳ್ ' ನೋ.

ಬೀಳ್ಗುಡು ' ಬೀಳ್ಕೊಡು ' ನೋ.

ಬೀಳ್ಗೆಡಹು (ಕ್ರಿ). ಬೀಳುವಂತೆ ಕೆಡಹು ; ಬೀಳಿಸು : ರಿಪುಗಳ ಕಾಲ್ಗೆಡಹಿ ಬೀಳ್ಗೆಡಹಿ ಸೈನ್ಯವ ನಾಲ್ಗಡೆಗೆ ಪಾರಿಸಿದಡೆ (ಕಾಪಾ. ೦-೦೩-೬).

[ಬೀಳ್1 (< ಬೀಟ್1) + ಕೆಡಹು (< ಕೆಡವು)]

ಬೀಳ್ಗೆಡೆ (ಕ್ರಿ). ಹಾಳಾಗು : ಹಾಳುಬೀಳು : ಜಲಮಿಂಗಿ ಪೋದ ತಂಗೊಳಗಳನಾಗ ಬೀಳ್ಗೆಡೆದ ತೋಟಗಳಂ . . . . ಆವಾರವಳ್ಳಿ ಮೃಗಂಕುಲಮಿಲ್ಲದ ಶಾಂಬವಂಗಳಂ- (ಜಾಕ್ರಬ್ಬ. ೦೨-೧೩).

[ಬೀಳ್3 (< ಬೀಡು2) + ಕೆಡೆ1]

ಬೀಳ್ಚು, ಬೀಳಿಚು (ಕ್ರಿ). ೧. ಉರುಳಿಸು : ಕೆಡಹು : ನಿನ್ನನುಜನವಗಡಿಸಿ ಕೆಡೆಯೆಚ್ಚು ಬೀಳ್ಚಿದಂ (ಕೃಒಚಾ. ೨೦-೩೯). ಬೀಳಿಚು : ೨. ಸಾಯಿಸು ; ಕೊಲ್ಲು : ಮೊರೆಮೊರೆದು ಹೂಂಕರಿಸಿ ಮಾವ್ತರು . . . ಬೀಳಿಚಿದುವೆರ ರ್ದುರ್ದುವನಾಧೀಸರವಳಿಯಿಂದ ನಿಮಿಷಕೆ ಕಾಲನಾಲಯ ತುಂಬಿ ತುಳುಕಸ ಲಾಡೆ ಗಜನಿವಹ (ಕೃಗದು. ೨೦-೦೪) ; ಕಾಲಾಳಿಸಲಿ ಬಿತಿಯಿಂದ ದೈತ್ಯನು ಬೀಳಿಚಿದನೈನೂರುಲಕ್ಷವ (ಕೃಗದು. ೨೩-೭೩).

[ಬೀಳ್2 (< ಬೀಟ್1) + — ಚ್ಚು3]

ಬೀಳ್ದಲೆ (ನಾ). ಉರುಳುವ ತಲೆ ; ಕೆಳಗೆ ಬೀಳುವ ಶಿರ : ದೆವರೊಳೆ ಪೆರ್ದಲೆವೆತ್ತು ವಿರಾಜಿರ್ಪನಾ ತಲೆಯದು ಸಾವಿ ನಿನ್ನ ತಲಗನ್ಯರ ಬೀಳ್ದಲೆ ಸಾವಿಯಕ್ಕುಮೇ (ಕೃತಂ. ೨೩-೭೨).

[ಬೀಳ್1 (< ಬೀಟ್1) + ತಲೆ1]

ಬೀಳ್ದೆಸೆ 'ಬೀಟ್ದೆಸೆ' ನೋ.

ಬೀಳ್ದೋಳು (ನಾ). ಎತ್ತಲಾಗದ ತೋಳು ; ಬಿದ್ದುಹೋಗಿರುವ ತೋಳು : ಸುರವತಿಗೆ ಬೀಳ್ದೋಳು ಮಿಗೆ ದಂತಶೂಲೆ ಪೂಷಂಗೆ ಯಮಜಂಗೆ ಮತ್ತುರುತರಶರೀರವೇದನೆ (ಅಮಾ. ೪೯-೮೩).

[ಬೀಳ್1 (< ಬೀಟ್1) + ತೋಳು (< ತೋಳ್)]

ಬೀಳ್ಮೆಲ 'ಬೀಟ್ಮೆಲ' ನೋ.

ಬೀಳ್ವನೆ 'ಬೀಟುಮನೆ' ನೋ.

ಬೀಜುತ್ 'ಬೀಜು2' ನೋ.

ಬೀಜಿಕೆ (ನಾ). ೧. ಹೊರಸೂಸುವುದು ; ಹೊರಹೊಮ್ಮಿಸುವಿಕೆ : ತಲೆದೂಗಿ ನಮನಗೆದೋಜಿಕೆಯ ಪಯನಾಗ್ರದುಗ್ರದ ಬೀಜಿಕೆಯಲೀ ಮಾತನಾಡಿದನಾ ಪ್ರಹಸ್ತಂಗೆ (ಕೃಪರ್ವ. ೩-೬-೩೩). ೨. ಅರ್ಪಿಸುವುದು ; ಅರ್ಪಣೆ : ಮೂಜಿಜಿಂಳಗೊಲಿದದಜಲರ್ಚನೆ ಮೂಜುಮುನಿಫಲವಹುದು ಯಜ್ಞದ ಬೀಜಿಕೆಯಲಾ ದ್ವಿಜರು ಭಕ್ತಿಯಲರ್ಜಿಸುವರೊಲಿದು (ಕಿರಾತ ೦೦-೩೩-೦೪). [ಬೀಜು1 + — ಇಕೆ]

ಬೀಜಿಸು, ಬೀರಿಸು (ಕ್ರಿ). ೧. ಅತ್ಯಂದಿತ್ಯ ತೂಗಿಸು ; ಒಲೆದಾಡಿಸು : ಬಳಿಕ ಮಿಕ್ಕಿನ ಕಾಳುದ್ಯೋತ್ಕರ ಬಳಗಳಳವೆ ಹರಿಯ ನಾಮವು ಹುಳುಕು ನಂಜಿನ ಹರಿಯ ನಾಮದ ಫೋಷದಾರ್ಢಟಿಕೆ ತಲೆಯ ಬೀಜಿಸಿಕೊಂಡು ಬಳಲಿಯೆ ಕಳವಳಿಸೆ ಸ್ವಾತಂತ್ರ್ಯಮಹಿಮನ ಬಳಕೆಗದು ಯೋಗ್ಯವೇ (ಸಂಶಪ. ೪-೨೦). ಬೀರಿಸು : ೨. ಎಸೆಯುವಂತೆ ಮಾಡು ; ತೂರುವಂತೆ ಮಾಡು : ಕೆಲವು ಪುಂಡರು ಚಿಕ್ಕ ಹುಡುಗರ ಕೈಯಲ್ಲಿ ಬಸ್ಸಿಗೆ ಕಲ್ಲು ಬೀರಿಸುತ್ತಿದ್ದಾರೆ (ಕೂಪ). ೩. ಹಂಚಿಸು ; ವಿತರಣೆ ಮಾಡಿಸು : ಅವಳು ತನ್ನ ಚಿಕ್ಕ ಮಗಳಕೈಯಲ್ಲಿ ಎಳ್ಳು ಬೀರಿಸುತ್ತಿದ್ದಾಳೆ (ಮಾಪ). ೪. ಬದಲಾಯಿಸಿಕೊಳ್ಳು; ವಿನಿಮಯ ಮಾಡು : ರತುವ ಬೆಲೆಗೆ ಹಾತಿ ಪಲ್ಕವ ಕೊಂಬಂತೆಗತಿಗೆ ಸಾಧನವಾದ ನಿನ್ನ ನಾಮಂಗಳು ಕ್ಷಿತಿಯೊಳು ತಾರೆ ತೌಡಿಗೆಬೀರಿಸಲು ಅನುಚಿತಕರ್ಮಗಳೆಲ್ಲ ಉಚಿತಪದೆಂದು ನಗುತ ಕಾಲ ಕಳೆವನೊ (ಅಮಾಕ್ಕ. ೦೦-೪).

[ಬೀಜು1 + — ಇಸು3]

ಬೀಜು1, ಬೀರ್1, ಬೀರು1, ಬೀಜ್ (ಕ್ರಿ). ೧. (ಕಲ್ಲು, ಬಾಣ, ಕೋಲು ಮುಂತಾದುವುಗಳನ್ನು) ಒಗೆ ; ತೂರು ; ಎಸೆ : ಸಮರ್ಥನಲ್ಲಾ ಬಿಡುಗಣೆಯ ಬೀಜುವರೆ ಕಟಕಾಚಾರ್ಯನೆಂದನುತ (ಭಾಷ್ಯಕ್ರೀ. ೬-೦೫) ; ಹುಚ್ಚ ಹಿಡಿದಿಹುದು ಎನಗೆ . . . ಕಡುದುಷ್ಪರಿಷ್ಪನ್ನು ಕಂಡು ನಾನು ಕಲ್ಲು ಕಲ್ಲು ಬೀಜುಮಂಥ (ಭೂಂವ. ೩-೨೯-೨) ; ಬಾಲ್ಯೆದು ಬಾಣಂಗಳಂ ಬೀಜುದು ಬಧೈರ್ಯಾಹನನ ಮೇಲೆ (ಕೃಒಚಾ. ೨೨-೦೩). ೨. (ಬಲೆ ಮುಂತಾದುವುಗಳನ್ನು) ಬೀಸು : ಮಾಯಾಪಾಶಮಂ ಬೀಜುತಿರ್ಪ ಸತಿಯರ ಭಾವಮಂ ಕಂಡನು (ಕೋಚುಚ. ೨-೨೩). ೩. ಕಟ್ಟಿ ಹಾಕು ;

ಬಂಧಿಸು : ಬೆಟ್ಟುಗುಡ್ಡಗಳೆಯ ಕುದಿಬೆಳಗೆಂಬುರುಳ್ಗಣ್ಣಿಯಲ್ಲಿ ಪಥಿಕಮನೋ ಮೃಗವನೆಯ್ದೆ ಬೀಱಿ ತಂದಿಲ್ಲಿ ತಡವರಿವಳ್ದಿರೆಂ ಪ್ರಾಧವಧುಗಳೋ ಮೇಣ್ ಪ್ರಪಾವಧುಗಳೋಯೆನೆ (ಕಬ್ಮಶಾ. ೬-೯). 'ಬೀಱಿಗುಣಕೆ' ಪರಾ. ೪. ಎರಚು; ಚೆಲ್ಲು : ಮುಳಿದಚ್ಚಾಗಳ್ ಮಹೋಗ್ರಪ್ರಳಯಶಿಖಿ ಶಿಖಾನೀಕಮಂ ವಿಸ್ಫುಲಿಂಗಂಗಳುಮಂ ಬೀಱುತ್ತುಂ . . . ಬಂದು ಕೊಂಡಾಗಳಿ ಗಗನತಳಂ ಪಾಯ್ದು ಕೆನ್ನೆತ್ತರಿಂದುಬ್ಬಳಿಸುತ್ತಿರ್ಪನ್ನೆಗಂ ಬಿಟ್ಟುದು ಧರದೆ ಸಿಡಿಲ್ದತ್ತ ಕರ್ಣೋತ್ಪಮಾಂಗಂ (ಹಂಚಕಾ. ೦೨-೨೦೬); ಬರಿಮುಗುಳನು ಮಿಗೆ ಬೀಱಿದರು ಸರಿಮಿಗಿಲೆನೆ ಸಿರಿಯರಸನೊಳರಸಿಯರು (ಗೀತಗೋ. ೨-೦೬). ಪಿ. ಸುರಿಸು; ಕರೆ ; ವರ್ತಿಸು : ಉಪನಿಷತ್ಸಂಕಾಳವಮೋಘಪ್ರಾಯಪೀಯೂಷವನು ಬೀಱಿದರೆ ಖಿಲರಿಗಿತಿದರ್ಪಜ್ವರಪ್ರಜ್ವಲಿತರಿಗೆ ಸೊಗಸುವುದೆ (ಶುಪ್ರಾಸ. ೧-೬೩); ಬೀಱಿದರಂಬುಗಳ ಮಳೆಯ (ಶುಪ್ರಾಕ್ರಿ. ೫-೨೬). ಪಿ. ಎರಗು ; ಮೇಲೆ ಬೀಳು : ಪೇಱಿದರ್ ಭಯರಸವನೊಡನೆ ಬಾಯಾಱಿದರ್ ಬೀಱಿದರ್ ಸಿಡಿಲಂತೆ ಕೌತುಕಂದೋಱಿದರ್ ಮಾಱಿದರ್ ಮೃಗಳಂ ದನುಜರುಂ ಮರುಳ್ಗಳುಂ (ಶಪು. ೩೨-೩೬). ಪಿ. (ಸ್ವಸಂತೋಷದಿಂದ) ಕೊಡು; ನೀಡು : "ಬೀಱು—ಸ್ವೇಚ್ಛಾಪ್ರದಾನೇ (ಇಷ್ಟ ಬಂದಂತೆ ಕೊಡು) " (ಶುಬಾ) ; ಜನಪತಿಗೆ (ಯೊ)ಸಗೆಯುಂ ಪುರಜನಮೆಲ್ಲುಂ ಬೀಱುತಿರ್ಪರ್ (ಕಬಾ. ೦-೧೬); ಅಱೈತ್ಯ ಗೋನಾಳಿ ಫಲಾಗುಣ ತೋಱು ನಿನ್ನಱಿತವನು ಸಲಿಲವ ಬೀಱು ಬೇಗದಿನೆನಲು (ಶಾಕ್ಕೀ. ೦೦-೨೬); ಸೇರಿದೆ ನಿನ್ನನ್ನು ಕೋಱಿದ ವರಗಳ ಬೀಱುವೆನೆಂದು ವಿಚಾರ ಬಿಡಿಸೋ ಎನ್ನ (ತುಂಚ. ೦-೦೩೬-೦). ೮. ಹಂಚು ; ವಿತರಣೆ ಮಾಡು : ಪುರಾಂಗನಾನಿಕರಕ್ಕಿ ಮಣಿಮಯಭಾಜನಂಗಳೊಳ್ ತೆಕ್ಕನೆ ತೀವಿದ ಪಂಚರತ್ನದ [ಕೇಸರಿ]ಯಂ ಕತ್ತುರಿಯ ಕೊಳತದ ಕಪ್ಪುರದ ಪಳಿಪಸ ಬಾಯಿನಂಗಳಂ ಬೀಱಿ (ಅಚ್ಚಿ. ೧-೩೪ ಕ); ನರಪರಿವೃಢನಾ ರತ್ನೋತ್ಕರಮೆಲ್ಲಮನಂದು ತಪ್ಪ ಪರಿಜನಕ್ಕಂ ತತ್ಪುರಜನಕಮರ್ಥಿಜನಕಂ ಪರಿವಿಡಿಯಿಂ ಬೀಱಿ ಸುಪ್ರದಿನಿರಲ್ (ಕಬಾಚ. ೨-೫೦); ಅಕ್ಷರಜ್ಞಾನಮುಂಟದನ್ಯೆದೆ ಮಾಱುಮೆಂ ಕೃಷ್ಣನಣುಗರ್ಗಾದ ಹೊಂಗಳಂ ಬೀಱುಮೆಂ (ಜಪ. ೩-೩೨). ೯. ಹರಡು; ವ್ಯಾಪಿಸು; ಪಸರಿಸು : ಬೀಱುವ ಸೌರಭದಿಂಪಿನಿಂದೆ ಕಂಪಿಸ ಕರುವಾದ ಕೇದಗೆಯ ಮಂಟಪಮೊಪ್ಪುನೆದೆತ್ತ ನೋಬ್ಪೊಡಾ (ಶುಚರಿ. ೦-೦೦೨); ಗಾಯಕರು ತಾಳಂಗಳನುಗುಡೆ ಗೇಯರಸದ ಲಹರಿಗಳಂ ದೆಸದೆಸಗೆ ಬೀಱುತಿರೆ (ಶಪು. ೨೬-೪) ; ಬಳಿಕ ನಿನ್ನಯ ಧರಸುದರ್ಶನ ಸುಳಿವುದೋಱಿಲು ಕೋಟಿಸೂರ್ಯರ ಬೆಳಗು ಬೀಱಿಲು (ಶುಚಾ. ೦೬-೨೬). ೧೦. ಹೆಚ್ಚುವಂತೆ ಮಾಡು ; ಹರಡುವಂತೆ ಮಾಡು : ಪಾಲಿತಪಂ ಸುತ್ತಲುಂ ಕಂಪಿನ ಸೊಂಪಂ ಬೀಱಿ (ಶಾರಂಪು. ೩೫೪); ಪಗಲುಂ ಬೆಳ್ದಿಂಗಳಂ ಬೀಱುವ ಸೊದೆಬೆಳಗು ತಾಳ್ದು ನೀಲ್ದಿಂದಮೆತ್ತಂ ಮುಗಿಲಂ ಪೊತ್ತಿರ್ಪ ಕೂಟಪ್ರಕರದಿಂ (ಹಂಪ್ರಕ. ೬-೬೩). ೧೧. ಸಾರು ; ಘೋಷಿಸು : ಕಳುಪಿ ಕೊಟ್ಟಾದೇಶಮಂ ದೇಶದೊಳು ಸಾಜಿ ತಿಳವಡಿದು ಸುಕುಮಾರವೈವಾಹವಂ ಬೀಱಿ (ಹಂಚಕ. ೩-೪) : ವಿಬ್ಬರದ ಬಿರುದನು ಬೀಱುತಿರ್ದವು ಗೌಜುಗಹಳೆಗಳು (ಶುಚಾ. ೪-೦೪). ೧೨. ಹೊರಸೂಸು; ಹೊರಹೊಮ್ಮಿಸು : ವ್ಯತ್ಕ್ರೋತ್ಕುಂಗಸ್ಯನೆಯರ್ ಶ್ರಮವಾತ್ಸುಮದೇಂ ಸುರಭಿಗಂಧಮಂ ಬೀಱಿದರೋ (ಶಪು. ೦೦-೩೦); ಸರಸಿಜಾಯತದಂದಮನು ಮೋಹರಿಸಿ ಮುಂಚುವ ಪರಿಮಳವನಂದರಸಿ ಬೀಱುತ ಬಂದು ಹೊಕ್ಕಳು ರಾಜಮಂದಿರವ (ಶುಪ್ರಾಕ್ರಿ. ೦-೨೬); ಕಾಂತಿಯ ಬೀಱಿದವೆ ಭುಜಲತೆಗಳಭಿನವಗರ್ಭದೇಳ್ಗೆಯಲಿ (ಕೊಚಾ. ೦-೯-೨). ೧೩. ತೋರಿಸು ; ಪ್ರಕಟಗೊಳಿಸು ; ಪ್ರದರ್ಶಿಸು : ಮಾ[ಜಿ]ಡ್ದುದಲ್ ಸಾಲದೆನ್ನೀ ವಾಣಾವಾಸಕ್ಕೆನುತುಮುಳ್ದಂ ಬೀಱುತುಂ ಬಿಲ್ದೆ ಬಾನಂ ದ್ರೋಣಾಂ ನಿಂದಂ ಮಸಗಿ ತಿರುಪುತ್ತುಂದು ಕೂರಂಬು ನಾಗಳ್ (ಪಂಚಾ. ೦೦-೩೬) ; ಎಲ್ಲಾ ರತ್ನಂಗಳುಮನೊಳಕೊಂಡೊಳ್ಪ ನಿ ಭೋದಿ ಲೋಕಕ್ಕೆಲ್ಲಂ ಬೀಱಲ್ ಪೊಱಗೆ ಕನಿಮಂ ನಿಚ್ಚಮಿಡಾಡು ತಿರ್ಕುಂ (ಶಾಖ್ಯಕ. ೨೩೨); ಸುರಭಿ ಪ್ರಾಲೇಯತೋಯಂಗಳಂ ಯುವ ಪಾಂಥರ್ಗೆಱೆವಲ್ಲಿ ತಮ್ಮ ಲಲಿತಾಂಗೋಪಾಂಗಶೃಂಗಾರಸೌರಭಮಂ ಬೀಱುವರೆಂಬ ದೂಱನಿಸುಗುತ್ತಿರ್ಪರ್ ಪ್ರಪಾಕಾಂತೆಯರ್ (ಪುಷ್ಪ. ೨-೩೨) ; ಸೇರಿದ ಹೊಲವನ್ನು ಪೋಗುವ ಮಗನನ್ನು ಜಾರು ಮೈವೆಱಿದ ಮಗಳನ್ನು ಪರರಲ್ಲಿ ಬೀಱುವವನೆಗ್ಗ (ಸರ್ಪಾಕ್ಕ. ೦೩೩). ೧೪. ಮೆರೆ ; ಕಂಗೊಳಿಸು : ಬೀಱುಶಿಹ ಫಲರಸದೊಳಿಪ್ಪ ನವರುಚಿಯಂತೆ ವಾರಣದ ಮಸ್ತಕದ ಮುತ್ತಿನಂತೆ (ಶಪಗಿ. ೬-೨). ೧೫. ತೂಗು ; ಒಲೆದಾಡು; 'ಬೀಱುಸು' ಪರಾ. ಬೀರ್₁ : ೩. 'ಬೀರ್ವಗ್ಗ' ಪರಾ. ೪. 'ಬೀರ್ಚು' ಪರಾ. ೧೩. ಅತುಲಸೊಗಸುಂ ಬೀರ್ವ ವಿಟನಂತೆ ಮುಂಬರಿದು ತಂಬೆಲರು ತೀಡಿತಾಗ (ಹಂಚಾ. ೩-೬-೨೨). ಬೀರು₁ : ೧. ಕಳ್ಳರು ಹಿಂಡುಗಡೆಯಿಂದ ಕವಣೆಗಲ್ಲನ್ನು ಬೀರುತಾ ಬಂದರು (ಪಚಿಪು. XI, ೪); ಹುಡುಗರು ಬಸ್ಸಿಗೆ ಕಲ್ಲು ಬೀರುತ್ತಿದ್ದಾರೆ (ಡಿಂ). ೩. ನಾಯಿಮರಿಯ ಕುತ್ತಿಗೆಗೆ ಜೋರಾಗಿ ಹಗ್ಗ ಬೀಸೋಡ (ಡಿಂ). ೮. ಅವಳು ಎಳ್ಳನ್ನು ಬೀರುವುದಕ್ಕೆ ಬಂದಿದ್ದಾಳೆ (ಡಿಂ). ೧೨. ಬಾಗುವೆ ಬಳುಕುವೆ ಬಳೆಗಳನಿಣುಸುವೆ ಕಳ್ಳಸೋಟವ ಬೀರುತಿರುವೆ (ಸಂಚಾಪ. ೪೪-೩೩); ನಾರಾಚದೇರಿಗಾರದೆ ಸೋಗೆ ನರಳು ದನಿಯಂ ಬೀರಿ ಚೀರಿಡೆ (ಚಕ್ಕಾಂಗ. ೫೪-೦೧೩೯) ; ಹೀಗೆ ಮಾಡಿದರೆ ಅದು ಸಭಾಜನೆ ಹೊಂದಿ ಕೆಟ್ಟವಾಸನೆಯನ್ನು ಬೀರುತ್ತದೆ (ಗೃಪ್ರ. ೩೦). ೧೩. ಹರಿ ವಿರಂಚಿಗಳಾನಲಾರದ ಭರಿತಕಾರ್ಯವನಿಳೆಯೊಳುದಿಸಿದ ನರನು ತಾ ನಿರ್ವಹಿಪನೆಂದೇ ನಯವ ಬೀರಿದಿರಿ (ಕೀಗಮು. ೬-೦೪). ೧೪. ಕೃಷ್ಣಮೇಘಸದೃಶವೇಣ ತೂರಿ ಬೀರಿ ಬರುವಳು! (ಹಾಂಚಕ. ೦೦-೪). ೧೫. ಉಂಟಾಗಿಸು ; ಉಂಟುಮಾಡು : ಚಲುವಿತೆಯದೋರಿ ಮಾಯಾಭ್ರಮೆಯ ಬೀರಿದುದು (ಅಕಣಾ. ೩-೪-೧೩); ಹಾಡಿ ಮುದವನು ಹೀರಿ, ಜನಕೆ ಹರುಷವ ಬೀರಿ ತೇಲು ಮುಂದೆ (ಹಾಂಚಕ. ೧೩-೦೪); ನೀತಿ ಮತ್ತು ಧರ್ಮದ ಪ್ರಭಾವವನ್ನು ಜನರ ಮೇಲೆ ಬೀರಲು ಯತ್ನಿಸುವನು (ಚಕ್ಕಶ್ರಾ. ೬೦೩). ಬೀಱುಲ್ : ೧. ಜಾತಾರಕ್ಕೆ ಏಱುಲ್, ಬೀಱುಲ್, ಬಿಱಿಲ್ (ಹುದ- ೫೫ ಕ್ರಿಯೋ). ೩. ಆರ್ಚ ಚಂದ್ರಾಗ್ನಿಲೋಚನನಳವಳಿಸುವೆಂ ಬೀರ್ಕಳಿಗಳೆ ವಿ:ಕೆಯವನು (ಶಪು. ೧೩-೩೩). ೪. ದೆಸದೆಸಗೆ ಬೀರ್ವ ತನಿಗಂಪಿನಿಂ ತಂಪಿನಿಂ . . . ಕೊಳಂ ಕಣ್ಗಸೆದುದು (ಕ್ಷತ್ರಾಚಾ. ೦೫-೯). ೧೨. ಕಂತುತನಯಂಗೆ ಪೂರ್ವದಿಗಂಗನೆ ತಂದು ಕೊಟ್ಟರ್ವ ಮಾಣಿಕದ ಕನ್ನಡಿಯೆನೆ ಕಾಂತಿಯ ಬೀರ್ವ ಭಾಸ್ಕರ ಮೂಡಿದನು (ಕೀಗಚ. ೩೫-೦೩).

ಬೀರಿಕೊಳ್ಳು = ಬಿಗಿದುಕೊಳ್ಳು ; ಬಲವಾಗಿ ಕಟ್ಟಿಕೊಳ್ಳು : ನಡುಪಟ್ಟಿಯನ್ನು (ಬೆಲ್ಟ್) ಬಿಗಿಯಾಗಿ ಬಿ ರಿಕೊಂಡರೆ ಹುಪ್ಪು ಕೋರುವುದಿಲ್ಲ (ಕೊಚಕ್ಕೈ. ೩೬).

[ದೇ.ತ ತಮಿ. ವೀಱು; ತುಳು. ಬೀರು; ಕೋತ. ವೀರ್]

ಬೀಱು₂ (ನಾ). ೧. ಬಿಗಿದು ಕಟ್ಟುವ ಕಾಣಿಕೆ.– ಗಂಟು : 'ಬೀಱುಗೊಳ್' ಪರಾ. ೨. ಚಂಚಲವಾಗಿರುವುದು : ಬಲೆದೊಡಕುಗಳು ಕರ್ಮಮಾರ್ಗಂಗಳ ಬೊಳೆಗಳುಗ್ರಂಗಳಾಶಾವಳಯಿತಂಗಳು ಜಾಱುಗಳು ಬೀಱುಗಳು (ಶಪು. ೧೨-೩೭). [<ಬೀಱು₁]

ಬೀಱುಗುಂಡು (ನಾ). (ಯುದ್ಧ ನಡೆಯುವ ಸಮಯದಲ್ಲಿ) ತೂರಿ ಬರುವ ದೊಡ್ಡ ಕಲ್ಲು ; ಎಸೆಯುವ ದೊಡ್ಡ ಕಲ್ಲು : ಬೀಳ್ದ ಕವಣೆಗಲ್ಲಳ ಬೀಱುಗುಂಡುಗಳ ಘಾತಿಯಿಂ ಬಸವಳಿದು ಬೀಳುತಿರ್ದರ್ ಕೆಲಬರು (ಶಪು. ೪೨-೩೬)- [ಬೀಱು₁ + ಗುಂಡು]

ಬೀಜುಗುಣಿಕೆ (ನಾ). ಬಿಗಿದು ಕಟ್ಟುವ ಕುಣಿಕೆ : ಬಂಧಿಸುವ ಗೆಂಟು : ವಾರುವಗಳ ಡಾವಣಿ ನೇಣ್ಗಳ ಬಲುಬೀಜುಗುಣಿಕೆಗಳ ಪಜ್ಜಿದು ಕೇರಿಕೇರಿಯೊಳು ತಮ್ಮಿಚ್ಛೆಯೊಳಗೆ ಸಲೆ ತಾಜುಪಾಜೂಗಿಯೋಡಿದುವೆ (ಕಂಪಿ. ೦೫-೯೦). [ಬೀಜು$_{1}$ + ಕುಣಿಕೆ$_{2}$ (< ಕುಳಿಕೆ$_{1}$)]

ಬೀಜುಗೊಳ್ (ಕ್ರಿ). ಕುಣಿಕೆಗೆ ಸಿಗುವಂತೆ ಮಾಡು : ಬಂಧಿಸು : ಹಣವೇನು ಭಾತೆ ನಿನ್ನಯ ಗುಣವೆಂಬುದು ಮಣಿದಾರವಾಗೆನ್ನ ಮನವ ಕ್ಷಣದಲಿ ಬೀಜುಗೊಂಡುದು (ಕಂಪಿ. ೬-೦೬೯).

[ಬೀಜು$_{3}$ + ಕೊಳ್$_{1}$]

ಬೀಜುವಗ್ಗ, ಬೀರ್ವಗ್ಗ (ನಾ). ಕುಣಿಕೆಯಿರುವ ಹಗ್ಗ.—ಪಾಶ : ಪಾವಿನ ಪೇಗೆ ಗಾಣದ ಸಿಡಿಗಳು ಓವದೆ ಬೀಜುವಗ್ಗಗಳು ತೀವಿ ಬೀಸು ನೂಂಕುವ ಕವಿಜಜಿಗಳಿಂ ಭಾಮಿಸೆ ಕೌತುಕಮಾಯ್ತು . . . ಬಲದೊಳಗೆ (ಅಪಿ. ೦೬-೧೫). **ಬೀರ್ವಗ್ಗ** : ಮೇಣಮನೆಜಿದು ತನುಗಳಂ ಕಾಸಿದರ್ ಬೀರ್ವಗ್ಗದುಂ ಹಾಯ್ಕಿ ಸೇದಿದರ್ ಮರುಳ್ಗೆಗಳಂ ಹೂತರು (ಪಜ್ಞ. ೪೨-೪೬). [ಬೀಜು$_{1}$+ಪಗ್ಗ]

ಬೂತಟ್ಟು (ಕ್ರಿ). ೧. ಅವಮಾನಗೊಳಿಸುವುದಕ್ಕಾಗಿ ದೊತನನ್ನು ಅಟ್ಟು ; ಕುಚೋದ್ಯಕ್ಕಾಗಿ ದೂತನನ್ನು ಕಳುಹಿಸು : ಇಂದ್ರಂ ಮೃಗೇಂದ್ರನಂತೆ ಗರ್ಜಿಸಿ ಚತುರಂಗಬಲಸಮೇತಂ ಪೊಱಮಟ್ಟು ಬೂತಟ್ಟೆ ದೊಡಮೇಂದ್ರನುಂ . . . ಬಾದು ತಾಗುವುದುಂ (೫೦೩೪. ೬-೩೦೪) ; ಪೋರಾಂಧಕಾರಂ ಪುಟ್ಟಿ ಕೆಲದಿಂದಮೇಬೂತಟ್ಟಿರುದನೆ ದಿನಕರಂಗೆ ತತ್ಕಾನನದೊಳ್ ಮುಟ್ಟಿದುದಜಗರಮುಖದಿಂ ಪುಟ್ಟದ ವಿಷವಹ್ನಿಯುಗುಚ್ಚ ಕಹೋಗೆ ಮುಗಿಲುಂ (೧೫೩೫. ೬-೨೪) ; ಜವನೆರ್ದೆಯಂ ಮುಟ್ಟುವೀಕರಂಗೆ ಬೂ[ಣಾಣಂ. ದೂ]ತಟ್ಟುವಗುರ್ವಂ ತೋಱುದಪ್ಪೆಂ (೫೧೬. ೦೬-೬೮). ೨. (ಆಲಂ) ಸ್ಪರ್ಧೆಗೆ ಆಹ್ವಾನಿಸು ; ಹುರುಡಿಸು : ಮನೋಜಪಕ್ಕೆ ಬೂತಟ್ಟುವ ತಕ್ಕ ಮಿಕ್ಕು ಬರೆ ಬಂದುವು ಪೊಬಲಿದೊಲ್ ಪಲ್ಲಣಂಗಟ್ಟಿದ ಪಟ್ಟಸಾಣದ ಪಾಡಿಗಳಂದು ಜಯೋತ್ಸವಾಜಿಗಳ್ (೫೪೭೫. ೯-೯). [ಬೂತ್ಯ + ಅಟ್ಟು]

ಬೂತರಸ (ನಾ). ಒಬ್ಬ ರಾಜನ ತೆರವು : ಬೂತರಸ ಯುವರಾಜಪಥಮುಳ್ ನಿನ್ನು ಕೊಜ್ಜಳ್ಳಾಡು ಪೂನಾಡೆವನಾಗಿಟ್ಟು (೧೪. III (೩). ೫೦೩೫-೩ ; ೫೦೩೫. ೫೮೦-೩ ; ೫೭೦) : ಸತ್ಯವಾಕ್ಯವೆರ್ಮ್ಮಾಡಿಗಳೆ ಪೃಥುವೀರಾಜ್ಯಂಗೆಯು ಬೂತರಸ ತೋಜಿಕಾರಟ್ಟೆಯು ಪದಿಯಳೆಯುಂ ನೆಲೆಗೂರು ಮೊಗವ ಅಳಿಯುಮು ಬಿಟ್ಟೆ (೧೪. III (೩). ೫೦೩೫. ೩೭-೩ ; ೦೫೮೫ ೫೫).

[ಬೂತ್ಯ + ಅರಸ₁]

ಬೂತಾಟ₁ 'ಬೂಟಾಟ' ನೋ.

ಬೂತಾಟ₂ (ನಾ). ೧. ಪಿಶಾಚಿಯಂ ಆಟ ; ದೆವ್ವದ ಕುಣಿತ : ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮಂ ಪುರಸಂಗಿವಿಡಿದು ಬಿಲ್ವಿಡಿದಾಡುವ ಬೂತಾಟಂಗಳುಮಂ ನೋಡಿ (೫೦೬೬. ೧-೧೦ ೫). ೨. ಸ್ವೇಚ್ಛಾಚಾರ : ಜಾಗು ಕೌರವಬಲದವರ ಬೂತಾಟವಾಯಿತೆ ಪಮ್ಮ ಪುಟ್ಟನಲಿ (೪೦೦೫೫೦. ೧೯-೩೬). [ಬೂತ್ಯ + ಆಟ]

ಬೂತಾಟಿಕೆ 'ಬೂಟಾಟಿಕೆ' ನೋ.

ಬೂತಾಳೆ (ನಾ). ಗೆದ್ದೆ, ಹೊಲಗಳ ಸಂತ್ಯ ಬೇಲಿಯಂತೆ ಬೆಳೆಸಂವ, ತಾಳೆಜಾತಿಗೆ ಸೇರಿದ ಒಂದು ಬಗೆಯ ಸಸ್ಯ : ಊರಿನ ಸುತ್ತಲೂ ಕಳ್ಳಿ ಬೂತಾಳೆಗಳ ಬಲವಾದ ಬೇಲಿಗಳಿವ್ದವು (೫೦೬೫. ೦).

[<ಸಂ. ಭೂತಾಲ]

ಬೂತಿಕ್ಕು (ಕ್ರಿ). ಕುಚೋದ್ಯ ಮಾಡು ; ಅಪಹಾಸ್ಯ ಮಾಡು : ಆರುಪತರೆಲ್ಲ ಬೂತಿಕ್ಕಿ ನಗುತಿರೆ ಕಂಡು (೫೦೬೫೫. ೯-೨೮).

[ಬೂತು₁ + ಇಕ್ಕು]

ಬೂತು₁ (ನಾ). ೧. ಕುಚೋದ್ಯ ; ಕುಚೇಷ್ಟೆ : 'ಬೂತಟ್ಟು', 'ಬೂತಿಕ್ಕು' ಪರಾ. ೨. ನೋಗು : ನಟನೆ : 'ಬೂತುಗ' ಪರಾ. ೩. ನಾಚಿಕೆಗೆಟ್ಟ ಮಾತು : ಅಶ್ಲೀಲವಾದ ಮಾತು : 'ಬೂತುಗೆಡೆ' ಪರಾ. ೪. ನಾಚಿಕೆಗೆಟ್ಟ ವ್ಯಕ್ತಿ ; ಭಂಡ ; ಅಬ್ಬೆವ್ಯಕ್ತಿ : "ಬೂತುಗಳೆನೆ ಬಂದರೆಂದು ತಿಳಿಗೆ" (೧೫೮೬. ೨೯) ; ಈ ಬೂತು ಪಗೆಯೊಳ್ಳೊಡಂಬಟ್ಟು ಬಂದನಾಗಲ್ವೇಟ್ಟುಂ (೫೦೫೫೦. ೨೪೦-೧) : ಜಾತಿಸೂಳಿಗೆ ರಣಭೀತನ ಪುಸಿನುಡಿವಾತನ . . . ಬದಗನ ಬೂತಿನ ಮಾತು ದಿಟಮಲ್ತು (೧೯೫೫. ೨-೬೪) : ಏಕೆ ಕೆಣಕಿದೆ ಕರ್ಣ ಬೂತಿನ ಬೀಕಲಿನ ಬದಗಿಯನು (೪೦೬೫. ೦೫-೦೪). ೫. ಮೋಸಗಾರ ; ವಂಚಕ : ಒಂದು ದಿವಸಮೊರ್ವ ಬೂತಿಂಗೆ ದ್ರಮ್ಮವಂ ಕೊಟ್ಟೊಡಂಬಡಿಸಿ . . . ಕಟ್ಟಿದ ಬಲ್ಕೈ ಬರ್ಪೊನಸ್ಮೆಗಮಾ ಬೂತುಮಾ ಪ್ರಸಾದದೊಳ್ ಪೋಗಿ ಮಹಾದೇವಿಯ ಮಂಚಮನೇಱಿರ್ದಾಗಳ್ (೫೦೬೫. ೦೬೬-೦೬) ; ಕೃತಕರುಧಿರಮಪ್ಪುದ ವಜ್ರದೀ ಬೂತಿನ್ನಂ ಬಂಚಿಸಿದನೆಂದು ನೆಜೆದುದ ನರಕಾಯುಷ್ಯಮಂ ನೆಜಪುವನೆಂಬುತೆ ಮುಳಿದು (೫೦೬೫. ೨-೦೦೫) ; ಬೂತಿನ ಪೊಗಟ್ರೆಯಂತೆ . . . ಸೌಂತಿಯ ತೋಂಬದಂತೆ ಕಡೆಯೊಳ್ ಪೇಸುಪಪ್ಪಮುಮಶೋಭೆಯುಮಾಗದೆ ಪೋಗದು (೫೦೫೫೫. ೬-೦೨೨). ೬. ಸಾಮಾನ್ಯನಾದವನು ; ನಾಡಾಡಿ : ನೆರೆದ ಬೂತುಗಳ ಕೋಳಾಹಳರವಂಗಳಿಂ . . . ಕರಮು ಕಣ್ಗೆಸೆದುದು ವರೇಂದ್ರಭವನಾಂಗಣಂ (೫೦೫೫. ೧-೬ ೫೫೪). ೭. (ದಾನ ಪಾತ್ರನಾದ) ದೀನ ; ದರಿದ್ರ : ದ್ರುಪದನ ಪುಲಿಲೊಳ್ ಪಾಂಡವರ್ ಚಾಗಕ್ಕೆ ಬೂತುಂ ಭೋಗಕ್ಕೆ ಪೊಬ್ಬುಂ ನೆಜೆಯದೆನಿಸಿ ಸುಖಿಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರ್ಪನ್ನೆಗಂ (೫೦೬೫. ೧-೦ ೫). ೮. ಕೈಯಲ್ಲಿ ಆಗದವನು ; ಹೇಡಿ : ಭೀತಿ ಮನದಲಿ ಪೌರುಷಾಗಮ ಮಾತು ಮುಖದಲಿ ಮುರಿವ ಕಾಲಲಿ ಬೂತುಗಳು ಕುರುವೀರರೆನುತಿದಿರಾಮರಿಸೆನೆ (೪೦೬೫೫. ೦೫. ೫೩) ; ಸೂತಸುತ ದಳಪತಿಯೆ ಫಡ ಮುಮ್ಮೊಂತರೇ ಮುಂಬಿಗರು ಬಿರುದಿನ ಬೂತುಗಳ ಬೊಬ್ಬಾಟ ಬಿಡದೇ ಕಂಡು ಕಾಣರಲ (೪೦೬೫. ೫-೬). ೯. ಕೆಲಸಕ್ಕೆ ಬಾರದವನು ; ನಿಷ್ಪ್ರಯೋಜಕ : ಇಹಕಂ ಪರಕಂ ಪೆಱಗಾದ ಬೂತಾದಂ (೫೦೫೫೫. ೦೦೫-೦).

ಬೂತಸಟ್ಟು=ಬೂತಟ್ಟು ೧ : ಅರ್ಜುನಂ ಕರ್ಣನಲ್ಲಿಗೆ ಜಾಳೆ

. . . ತಾನುಮಾನುಂ ಕಾಮವಮೆಯುದುಂ ಜೇಟ್ಟು ಬನ್ನಿಮೆಂದು ಬೂತ ನಟ್ಟಿದೊಡೆ (ಪಂಚಕ. ೦೨-೩೨ ಪ). [ದೇ.ಪ ತೆಲು. ಬೂತು]

ಬೂತು₂, ಬೂತ (ನಾ). ೧. ದೆವ್ವ ; ಪಿಶಾಚಿ ; ಭೂತ : ಕೂಡಿ ನಿನ್ನೊಡನೆ ಭೋಗಿಸಲೀಯದೆ ಕಮ್ಮನೆನ್ನನುಮ್ಮುಂತಕನೆಂಬ ಬೂತನೆಲೆ ಮಾಣಿಸಲಾಗದೆ ಪೇಟೆ (ಅಭಿ. ೬-೭) ; ಈ ಬೂತನ್ನ ಸರಂಗೇಳ್ದೊಡಲ್ಲದೆ ಪೊಱಮಡುವನಲ್ಲನಿವಂಗಾನೆ ಸಾರ್ವೆಂ (ಗದಾಯು. ೬-೯ ಪ); ಅಕಟಾ ಬೂತುಗಳ ಕೈದಾಯ್ಗೆ ಬಂದೈ ತಂದೆ ಕುರುರಾಯ (ಕುಮಾ.ಗ. ೩-೦೩). **ಬೂತ** : ೧. ಕೆಲಕೆ ಕಾದಿಹ ಬೂತ ಪೇತವು ಹಲವು ಜಟ್ಟುಗೆ ಮಾಣಿ ಧದ್ರರು (ಶಾಖಾ. ೬೯-೩೬) : ಕೆನಸು ಬೂತವಾದಿತು, ಮನಸು ನಾನೇ ಆದೆ (ಶಶಾ. ೩. ೧೩೫). ೨. (ಅಲಂ) ದೊಡ್ಡದು : ಗಾತ್ರ ವಾದುದು : 'ಬೂತಗನ್ನಡಿ' ಪರಾ.

ಬೂತಾಗು = ಪ್ರೇತವಾಗು ; ಹೆಣವಾಗು : ತಾಗಿದ ಬೇಗದೊಳೆ ಶಿರೋಭಾಗಮನಿಷು ನತೆ ಕಡುಗುವುದ್ಭುವಂ ಬೂ(ಣಣಂ. ಭೂ)ತಾಗಿನೆ ಕೆದರಿ ತಲೆಕೀಗಾಗಿ ಪರಾಜಯಮಂಸಜಿಪುವಂತರಿಬಲದೊಳ್ (ಕರ್ಣಪ. ೪-೩೬). [<ಸಂ. ಭೂತ]

ಬೂತು₃ (ನಾ). ೧. ಸರ್ಕಾರಕ್ಕೆ ಸಂಬಂಧಿಸಿದ ಡೈರಿಯ ಹಾಲು. ಮೊಸರು ಮುಂತಾದುವನ್ನು ಪೂರುವ ಸ್ಥಳ : ಏಳು ಗಂಟೆಯಾದರೂ ಬೂತಿಗೆ ಇನ್ನೂ ಹಾಲು ಬಂದಿಲ್ಲ (ಕ.ವಾ). ೨. (ಸಾರ್ವಜನಿಕ ಸಂಸ್ಥೆ ಮೊದಲಾದ ಸದಸ್ಯರ) ಚುನಾವಣೆಯಲ್ಲಿ ಮತ ಚಲಾಯಿಸಲು ಗೊತ್ತುಪಡಿಸುವ ಸಾರ್ವಜನಿಕ ಸ್ಥಳ : ಈ ಶಾಲೆಯನ್ನು ಚುನಾವಣೆಯ ಬೂತು ಮಾಡಿದ್ದಾರೆ (ಕ.ವಾ). [← ಇಂ. booth]

ಬೂತುಗ (ನಾ) ೧. ಸೋಗುಗಾರ : ಮೂತುಗಂ, ಬೂತುಗಂ, ಕಂತಗಂ (ಪಜಸ. ೫೦೦ ಪ್ರಮೇ). ೨. ಒಬ್ಬಾತನ ಹೆಸರು : ಶ್ರೀಮಜ್ ಬೂತುಗ ಎಜಿಯಪ್ಪ ಪೆರ್ಮ್ಮಾಡಿ ಪಟ್ಟಜ್ಞಗ್ಟುವುದನ್ನು (ಎಕ್ಕ, VII. ಶಿವಮೊ. ೧೬-೨೩ : ಸಂ. ೦೧೨); ಬೂತುಗನಜ್ಜುಕಾಜಿ ಶ್ರೀಮತ್ ಪುನಾಬರುಜ್ಜಿ ಅಸುವರೊಳ್ ಮೆಚ್ಚಿ ಬೇಡಿಕೊಳ್ಳಿಸ್ದೊಡೆ (ಎಕ್ಕ. III. ಹುಣ್ಣ. ೪೦-೯ ; ೦೮೦).

[ಬೂತು₃ + —ಗ್₂]

ಬೂತುಗಿ (ನಾ). ಸೋಗು ಹಾಕುವವಳು : ಮೂತುಗಿ, ಬೂತುಗಿತಿ. ಬೂತುಗಿ, ಬೂತುಗಿತಿ (ಕಣ್ಣಪು. ೦೯೩ ಪ್ರಮೇ). [ಬೂತುಗ + —ಇ₂]

ಬೂತುಗೆಡೆ (ಕ್ರಿ). ತಬ್ಬಿವಾದ ಮಾತನ್ನಾಡು : ಕೆಟ್ಟ ಮಾತನ್ನಾಡು : ಬೂತುಗೆಡೆವನೊಳೆಂಬೆನೇ ಪುಜುಪಾತನೆಲೆ ಗಾಜಗೇಯ (ಕಬ್ಬಾ.ಗ. ೦೫-೦೦); ಕಾತರಿಸಿ ವಿಪಯಾತುರರು ನೆಜೆ ಬೂತುಗೆಡೆದರೆ ಗರುವರಾದವರಾತು ಮಾಜುತ್ತರದ ಕೊಡುವರೆ (ಕೊಕಶಾ. ೩-೪-೨೨). [ಬೂತು₃ + ಕೆಡೆ]

ಬೂತುಗೆಯ್ (ಕ್ರಿ). = ಬೂತಿಕ್ಕು : ಅಯ್ಯೋ ಇದೇಕೆ ಹರಿಯಣ್ಣಂಗೆ ಬಲ್ಲರೊಳ್ ಮೆದ್ಯನಾವರಿಸಿತೆನೆ ತಮ್ಮಜಕರ್ ಬೂತುಗೆಯ್ಯುತಂ ಗಹಗಹಿಸುತಿರೆ (ಪದ್ಮಚ. ೩-೦೦). [ಬೂತು₃ + ಕೆಯ್₁]

ಬೂತುಗೊಳ್ (ಕ್ರಿ). ಪಿಶಾಚಿ ಹಿಡಿ ; ಭೂತ ಮೆಟ್ಟಿಕೊಳ್ಳು : ನೆಟ್ಟನೆ ಬೂತುಗೊಳ್ದ ತೆಱದಿಂ ದುಶಕಂಧರನಾತಿ ಪಾಡಿ ನಾಣ್ಗಿಚ್ಚರೆ ಕೊಂಡ ನಲ್ಲದೆ ಬರಂಗಳೇಶ್ವರನಲ್ಲ ಪೇಲ್ಮಾಪ್ಪುಚ್ಚಜಿಯಿಂದೆ ಕೊಂಡಂ (ಪಂಚಾ. ೯-೩೬). [ಬೂತು₂ + ಕೊಳ್₁]

ಬೂತುತನ (ನಾ). ಸೋಗು ; ವಟನೆ ; ಒಯ್ಯಾರ : ಒಡೆಮಗಿವಲ್ಲದೇಂ ಬಿಡಿಪಳೇ ನೆಱಗ ನಿಜೆ ಭಾಣ ತಾಣಮಂ ಬೆವಕವೆ ಸೈತ ಸೋಂಕುಪಳೆ ಬೂತುತನಂ ಪೆಱಗಾಗೆ ಮೂತುಗನ್ಬುವಪಳೆ (ಅಣಪ. ೨-೦೦೭).

[ಬೂತು₃ + —ತನ]

ಬೂತೆಂತಪ (ನಾ). ಸೋಗಿನ ತಪಸ್ಸು : ಮನರಂಜಗರ್ಭನೆಂಬಿವನ ಮುನ್ನಿನ ಗೆದ್ದು ತಪಂ ಪಿಲೋತ್ಪಮಾಗನೆಯಿನಸಂತುಜಾದುವೆನಿ ಮಾತ್ತಿಸ ಬೂತುತಪಂಗಳೆಮ್ಮ ಪುರ್ವಿನ ಕೆಡೆಯೊಂದು ಜರ್ವಿಸೊಳೆ ತೀರ್ವನ್ನ (ಪಂಪಣಾ. ೬-೦೦). [ಬೂತು₃ + ತಪ್ಪ]

ಬೂತುಮಣಿಗ (ನಾ). = ಬೂತುಗ ೧ : ಬೂತುಗಂ, ಬೂತುಮಣಿಗಂ (ಕಣ್ಣಪು. ೦೦೩ ಪ್ರಯೋ). [ಬೂತು₃ + —ಮಣಿಗ₂]

ಬೂತೇಶ್ವರ, ಬೂತೇಸ್ವರ (ನಾ). ಶಿವನ ದೇವಾಲಯವಿರುವ ಒಂದು ಸ್ಥಳದ ಹೆಸರು : ಶ್ರೀಮದ್ಭುಗ್ಗಂ ಬೂತೇಶ್ವರಕೆ ಪಡುವಣ ತೊರೆ ಪಳ್ಳಿಯ ವಾಸಂಬಾಳ್ಳಿಯೂರ ಮುನ್ನಂಣ ಕೆಜಿಯೊಳಿ ಸಾಬ್ಬಾನಮಸ್ಕಮುಂ ದೇವಭೋಗಂ ಬಿಟ್ಟಂ (ಎಕ್ಕ. III. ಪ್ರಸಿಪು. ೩೬-೦೪ ; ಸಂ. ೦೫೦ ?). ಬೂತೇಸ್ವರ : ಶ್ರೀಮತ್‌ಗೊಗ್ಗಿ ಬೂತೇಸ್ವರಕ್ಕರದಗೋಡುಪಳ್ಳಿಯ ದೇವಭೋಗಂ ಬಿಟ್ಟಂ (ಎಕ್ಕ. III. ಪ್ರಸಿಪು. ೩೬-೩ ; ಸಂ. ೦೫೦ ?).

[<ಭೂತೇಶ್ವರ]

ಬೂತೇಸ್ವರ 'ಬೂತೇಶ್ವರ' ನೋ.

ಬೂದ 'ಬೂದಿ' ನೋ.

ಬೂದಗುಂಬಳ 'ಬೂದಿಗುಂಬಳ' ನೋ.

ಬೂದಗೂಟು (ನಾ). ಒಂದು ಊರಿನ ಹೆಸರು (?) : ಬಾಳುಗುಳಿಯ ಮಹಾಜನ ಅಯ್ದುದಿಬರುಂ ಉಭಯಸಮ್ಮತದೊಳಿಚ್ಚು ಬಳಿಮರ ಬಾದಮ್ಮಗೆ ಬೂದಗೂಟನಿತ್ತೊರ್ (ಪೌಪ್ರ. IX-i. ೫೯-೯೫ ; ೧೦೬ಮು ೫೫) ; ಅರಸರ ಮೆಚ್ಚಿಸಿ ಬೂದಗೂಟಂ ಬಿಡಿಸುವೊನಕ್ಕುಮೆಂದೊಡದ ಬಿಡಿಸಿದೊಡೆ (ಎಇ. XI. ೬-೦೫ ; ೧೦೬ಮು ೫೫). [?]

ಬೂದವೇಱು (ಕ್ರಿ). ಬೂದಿಬಣ್ಣವನ್ನು ಹೊಂದು : ಊದಾಬಣ್ಣಕ್ಕೆ ತಿರುಗು : ಆದು ವೆಂದಲ್ಲೊಂಬುಗಳಿವಿಜಿದಿಳೆಯೊಳ್ ಬಿದ್ದು ಬೇರೊಜಿ ಬೆಳೆದ ಬೀಜಿಲ್ಲಗೊಂದೊಂದನೊತ್ತಿ ಪತ್ತಿ ಸುತ್ತಿ. . .ಪಲ್ಲು ಕೊರ್ಬಿ ಬೂದವೇಱಿ ಬೆಳೆದು ಬೆಳಗಾದು ಬ್ಜಿವಾಗಿ (ಅಣಪ. ೯-೪೦ ಪ).

[ಬೂದ (<ಬೂದಿ) + ವಿಱು₃ (<ವಿಱ್[೧])]

ಬೂದಿ, ಬೂದ, ಬೂದು(ನಾ). ೧. ಯಾವುದಾದರೊಂದು ವಸ್ತುವನ್ನು ಬೆಂಕಿಯು ಪೂರ್ಣವಾಗಿ ಸುಟ್ಟು ಉಳಿಸುವ ಭಾಗ : ಒಲೆಯ ಬೂದಿಯ ಬಿಲಿಯಲು ಬೇಡ ಒಲಿದಂತೆ ಹೂಸಿಕೊಂಡಿಪ್ಪೆದು (ಶಸಪ. ೦೨೪) ; ಮಾದಿಗಳಾಚಾರಿಯನಾಗಿ ಪರನೊಳು ಕಾದಿ ಬೂದಿಯನೆಯ್ದಿದೆಯಾ (ಕೋಪಪ. ೯-೨೦). ೨. ಗೋವಿನ ಸಗಣಿಯನ್ನು ಒಣಗಿಸಿ, ತುಪ್ಪಾಗ್ನಿಯಲ್ಲಿ ಸುಟ್ಟು ಸಂಸ್ಕರಿಸಿದ ಪುಡಿ : ವಿಭೂತಿ ; ಭಸ್ಮ : "ಬೂದಿಯು ಭೂತಿಯಕ್ಕುಂ" (ಕ್ರಿಮೀ. ೦೩) ; ಬೂದಿ ಜೆಡೆ ಲಕ್ಷಣಾ ತವಕಾದುವೆರಬ್ಬೊಣೆ ಶರಾಸನಂ ಕಮಟವಿಮೆಂತಾದುವೊ ಮುತ್ತುಂ ವೆಬುಸುಂ ಕೋದಂತುಟಿ ನಿನ್ನ ತಪದ ಪಾಂಗೆಂತು ಗಡಾ (ಪಂಪಣಾ. ೬-೧೨) : ಜಸುಮೆ ತವಗೆ ಮೆಯ್ಸಿರಿಯೆಂಬುದನೆಜ್ಞಿವಂತೆ ಪೂಸಿದ ಬೂದಿಯೊಳಂ . . . ಚೆಲ್ವನಾಂತು (ಕ್ರಿಶಾ. ೦೬೬) ; ಬೊಕ್ಕಣದ ಬೂದಿಯನುಃಳೆ ನುತಾಂದಿ ಮೂಗಿನೊಳ್ ಪೊಕ್ಕೊಡೆ ಸೀಂತು . . . ಪುರ್ದಿಕ್ಕುವ ಮರ್ಕಟಿಂ ನಗದ ತಾಪಸರಂ ನಗಿಸಿತ್ತರಣ್ಯದೊಳ್ (ಶಾಕ್ಷಾ. ೦೦೦೪). ೩. ಊದಾಬಣ್ಣ : 'ಬೂದಿಗುಂಬಳ' ಪರಾ. **ಬೂದ** : ೩. 'ಬೂದವೇಱು' ಪರಾ. ೪. ಊದಾಬಣ್ಣವಾಳ್ಳುದು : ತಮ್ಮೊಳು ತಾವುಸೊಪ್ಪಿ ಆ ಕುದುರೆ ಬೂದಸುಯೆಂದು ಕದ್ರುವೆಂದಳು (ಶಾಕಾಪ. ೨೩೨-೩). **ಬೂದು** : ೩. 'ಬೂದಿಗುಂಬಳ' ಪರಾ.

ಬೂದಿ ಮಾಡು = ಸುಡು ; ದಹಿಸು : ಇದು ಕೈಲಾಸಂ ಭವಾನೀ ಧವಪ ನೆಲೆ ಮನೋಜಾತನಂ ಬೂದಿ ಮಾಡಿ[ತ್ರಿ]ದಜೀಳ್ (ಪಂಪಾ. ೬-೭೨) : ಅವಪ ಕೋಪಾಗ್ನಿಯ ಲೋಪಿಸಿ ಬೂದಿಮಾಡುವೆನು (ಪಚ. ೫೩-೬೪). ಬೂದಿ ಮುಚ್ಚಿದ ಕೆಂಡ = ಮೇಲೆ ಬೂದಿ ಮುಚ್ಚಿ ಕೊಂಡಿದ್ದು ಒಳಗೊಳಗೇ ಉರಿಯುತ್ತಿರುವ ಕೆಂಡ ; ಅಂತರಂಗದಲ್ಲಿ

ತಾಪವನ್ನು ಹೊಂದಿರುವಿಕೆ: ಆದೊಡಂ ಲೌಕಿಕರ ಮತಂ ತಾನಾಗಿ ಸಂತಸಂ ಬೂದಿಮುಚ್ಚಿದ ಕೆಂಡದಂತಾಗಿ ಅಂಕಣಾಜಂ ತಾನದಾಗಿ (ಚಪ್ಪೂ. ೨೦೬-೪೪); ಬೂದಿ ಮುಚ್ಚಿದ ಕೆಂಡದಂತೆ ಮುದುರಿ ಕೊತವಳನ್ನು ರಂಗ ನಿಮ್ಮೊರವ್ವಷ್ಟಿಯಿಂದ ನೋಡಿದ (ಕೃಷ್ಣ. ೫೦). ಬೂದಿಪ್ಪುಗೆ = (ಶಿವನು ಮನ್ಮಥನನ್ನು ಸುಟ್ಟ ಸಂಕೇತವಾಗಿ) ಫಾಲ್ಗಣಮಾಸದ ಹುಣ್ಣಿಮೆಯಂದು ಆಚರಿಸುವ ಹಬ್ಬ : ಕಾಮನನ್ನು ಸುಟ್ಟನಂತರ ಆ ಬೂದಿಯನ್ನು ಮೈಗೆ ಹಚ್ಚಿಕೊಳ್ಳುವುದು. ಬಣ್ಣದ ನೀರಿನಿಂದ ಓಕುಳಿಯಾಡುವುದು, ಹಾಡುವುದು ಈ ಹುಣ್ಣಿಮೆಯಂ ಮಂಕ್ಕು ಆಚರಣೆಗಳು : "ಹೋಳಿಹುಣ್ಣಿಮೆ" (ಕ್ರಿಪ್ರಾ); (೧). [< ಸಂ. ಭೂತಿ]

ಬೂದಿಕಟ್ಟೆ (ನಾ). ಸಂಡುಗಾಡು ; ಶ್ಮಶಾನ : ಇನ್ನೂ ನನಗೆ ಬೂದಿಕಟ್ಟೆಗೆ ಹೋಗುವ ಕಾಲ ಬರಲಿಲ್ಲ (ಹುಲಿಕಾ. ೫೬). [ಬೂದಿ+ಕಟ್ಟೆ$_{1}$]

ಬೂದಿಕುಂಬಳ 'ಬೂದಿಗುಂಬಳ' ನೋ.

ಬೂದಿಗ (ನಾ). ೧. ವಿಭೂತಿಯನ್ನು ಧರಿಸಿದವನು : ಪಾರ್ವತಿ ಪುತ್ರನಂ ಕೆಡಿಪ ನಂಟುಗಲ್ಲಿನ ತೆಜಿದಿ ಬೂದಿಗರ ಪತ್ನಿ ಪಿದಾತಂ ಪರಬ್ರಹ್ಮವೇ (ಶಿಷಷ್ಟಿ. ೧೩-೬). ೨. ಶಿವ : ಪರಮಾತ್ಮ : ಅಂದಿವಳ ದೊರಾಡಾ ಬೂದಿಗ ಮೊಲ ಕಣ್ಣಿಂದ ಕೇಳೆನ್ನ ಸುದುವನೆ (ಭಾಣಾಚಾ. ೭೭-೧೬). ೩. ಒಬ್ಬಾತನ ಹೆಸರು : ಪೊಲತೇಶಿಯ ಬೂದಿಗನ ಕಾಳಗದೊಳ್ ಪೊಲತೇಸಿಯೊಡತಿಹದು ತೊಡಕಾಳಿನ ತೊನ್ಬಂ ಸತ್ಯ (ಪಾ. III. ಪ್ರಕರು. ೪೪-೬ ; ಸಂ. ೧೦೦೪). [ಬೂದಿ + —ಗ$_{3}$]

ಬೂದಿಗುಂಬಳ. ಬೂದಗುಂಬಳ, ಬೂದಿಕುಂಬಳ, ಬೂಮಗುಂಬಳ (ನಾ). ತರಕಾರಿಯಾಗಿ ಬಳಸುವ, ಕುಂಬಳಜಾತಿಗೆ ಸೇರಿದ ಒಂದು ಬಗೆಯ ಬಳ್ಳಿ ಮತ್ತು ಅದರ ದೊಡ್ಡ ಗಾತ್ರದ ಊದಾ ಬಣ್ಣದ ಕಾಯಿ : ಬೂದಿಗುಂಬಳದ ಕಾಯಂಗಡಿಯೊಳಿಟ್ಟಿರಲು ದೋದಿನಿವ ಕಂಡು ಬಸವಮ್ಮಯಿದು ಭಕ್ಷನೇ ಸಾದರದಿ ನೋಡೆಂದು ಪೇಳೆ (ಗುಹೇಶ್ವ. ೬-೨೯); ಕಳ್ಳಂಗಡಲೆ . . . ರಾಸ್ಕೆ, ಬೂದಿಗುಂಬಳದ ಬೇರು, ಇವಂ ಸಮಭಾಗ ಕಷಾಯಂ ಕೊಡಲು ಸನ್ನಿಪಾತಜ್ವರಗುಣಮಕ್ಕುಂ (ಸಕ್ಕ. ೦೭೬) ; ಬೂದಿಗುಂಬಳ ಬಳ್ಳಿಗಾಧಾರವೆಂದು, ಮೊನೆಮೂಡಿದ ಮುಳ್ಳಿಳ ನೀಡಿ ಬೆಳೆವ ಪೊದೆಯಂತೆ (ಕಷ್ಟ. ೧೩-೯). ಬೂದಗುಂಬಳ : ಹೊಂಗೆಬೀಜ, ಬೂದಗುಂಬಳ, ತಿಗಡೆ, ಮತ್ತಿ, ಕುಪಮವಲ, ಬಿಮನು, ಇವಂ ಸಮತೂಕ ಜಾತಿ ಕಷಾಯ ಕಾಯಿಸಿಕೊಟ್ಟಲ್ಲಿ ಶೀತಜ್ವರ, ವಿಷಮಜ್ವರ, ದೋಷಜ್ವರವುಂ ಸಹ ಮಾಣ್ಗುಂ (ಸಕ್ಕ. ೭೬). ಬೂದಿಕುಂಬಳ : ಬೂದಿಕುಂಬಳ :—ಈ ಬೀಜವಂ ಹಾಲಲ್ಲಿ ಅರೆದು ಬೆಲ್ಲ ಸಹ ಕುಡಿಯಲು ಹುತವಾಗುವಳು (ಪಕ್ಕಿ. ೬). ಬೂದುಗುಂಬಳ : ಸಮಗೆ ಹುರಿದ ಬೂದುಗುಂಬಳದ ಬಿತ್ತವನ್ನು ಕೊಟ್ಟವರೆ : ನಾವು ನೋಡದ ಬಿತ್ತಿದ್ದು ತಪ್ಪು (ಪಾಪ್ರ. ೦೭೬). [ಬೂದಿ + ಕುಂಬಳ]

ಬೂದಿಬಡಕ 'ಬೂದಿಬುಡಿಕ' ನೋ.

ಬೂದಿಬಡಿಕ. ಬೂದಿಬಡಕ, ಬೂದಿಬಡುಕ (ನಾ). ೧. ವಿಭೂತಿಯನ್ನು ಬಳಿದುಕೊಂಡಿರುವವನು ; ಭಸ್ಮವನ್ನು ಲೇಪಿಸಿಕೊಂಡಿರುವವನು. ೨. ಶಿವ ; ಪರಮಾತ್ಮ : ಬೂದಿಬಡಿಕನ ಮೆಯ್ಗೆ ಬಾವನ್ನಮಂತಿರ್ದು (ಜಾಕಪ್ಪ. ೦೭೦-೦೩). ಬೂದಿಬಡಕ : ೨. ಈಶುರ್ದರೇ ಹರಿಯಜಾರ್ದರ್ ನಮ್ಮ ದೂಜನಾ ಪುಸಣಾಜಿಂಗೆ ಬೂದಿ ಬಡಕನಾ ಬೊರೆಯನಾಲಿಸಿದನೇ (ಕಾಪ್ರ. ೩೭-೦೯) ; ಬಿನಮಗುವೇಷವ ಹಾಳ್ದ ಬೂದಿಬಡಕನಿಗೆ ಪನಿಶೆಯಾಗುವರೆ ಬಾಲೆ (ಪುಗಳ. ೦೮). ಬೂದಿ ಬಾಡುಕ : ೧. ಬೂದಿಬಡಂ[ಜಾಕಾಂ. ಡ]ಕರ ಮಾತನೆ ವಂದಿ ಸನ್ಮಾರ್ಗವೇಧಿಯ ಮಾತವ ಬೀನುಳಿದು (ಗೊಪ್ಪ. ೬-೧೧) ; ಪುಸಣಾದೊಳ್ಕೊತಪೇತಪಿಪಾಚಿಗಳೊಡನೆ ವಿರೂಪಾಕ್ಷನೆನಿಸಿಕೊಂಡು ಕುಣಿಯುತ್ತಿರ್ಪ ಬೂದಿಬಡುಕ ಶಿವನಂ ಶೈರ್ಮುಗೆ ಬಂದಂತೆ ಬಿನ್ನಪರ್ (ಜಾಗಾ. ೨೮-೨೮ ಪ). [ಬೂದಿ + —ಬಡಿಕ$_{2}$]

ಬೂದಿಬಡುಕ ' ಬೂದಿಬಡಿಕ ' ನೋ.

ಬೂದಿಬಾಳೆ. ಬೂದುಬಾಳೆ (ನಾ). ಒಂದು ಬಗೆಯ ಬಾಳೆಯ ಗಿಡ ಮತ್ತು ಅದರ ಹಣ್ಣು : ಬದನೆಯ ಕಾಯ ಬೂದಿವಾ[ಜಾಕಂ. ದಾ]ಳೆಯ ಹೂವ ಉಚ್ಚಶಿಕಿಪಡಿದ ಕಗ್ಗುಂಬಳದ ಕಾಯನಡಹೇಳಿ (ಸಿಷಪು. ೩-೩೨); ಬೂದಿಬಾಳೇಹಣ್ಣು . . . ಅಗಸೇವಾರದ ಒಳನಾರು ತಳಿಗೆ ಪಾಕವಿಚ್ಚಲು, ಒಳ್ಳೆಯ ಎಳನೀರ ಪಾಗ ಬಿಡುವುದು (ಪಪ್ರಿ. ೭೨); ಬಾಳೆಯ ಕುಲದಲ್ಲಿ ಗುಜರಾಥಿ, ರಸಬಾಳೆ . . . ಬೂದಿಬಾಳೆ, ಸೊನ್ನಿಬಾಳೆ, ಏಣಾಬಾಳೆ ಎಂದು ಈ ಪ್ರಕಾರ ಹಲವು ವಿಧವಾದ ಬಾಳೆಯ ಕುಲಗಳುಂಟು (ಕೃಪಕ್ರ. ೦೩೩). ಬೂದುಬಾಳೆ : ಹಾದೀಕಲ್ಲಿಗೆ ತೇದ ಗಂಧಾವನಿಕ್ಕಿ ಬೂದುಬಾಳೆಹಣ್ಣು ಸುಲಿದಿಕ್ಕಿ ವಳಗೀರೋ ಬಾಲೆ ಬಂದಕ್ಕೀ ತೊಳಸ್ಯಾಕೋ (ಪುಶಪ. ೫೦). [ಬೂದಿ + ಬಾಳೆ$_{1}$ (<ಬಾಟೆ)]

ಬೂದಿಬುಕ್ಕ (ನಾ). ಮೈಗೆಲ್ಲಾ ಬೂದಿ ಹತ್ತಿರುವಂತಹುದು : ಬೂದಿಬುಕ್ಕಗಾಗಿದ್ದ ಅವನ ಮನೆಯು ನಾಯಿಗಳೂ ರಂಗ ಪುಟ್ಟರ ಮನೆಯ ನಾಯಿಗಳೂ . . . ತೂಗತೊಡಗಿದ್ದುವು (ಪುಂಚು. ೦೯). [ಬೂದಿ +ಬುಕ್ಕ$_{2}$]

ಬೂದಿಬುಧವಾರ (ನಾ). "ಕ್ರೈಸ್ತರ ಉಪವಾಸ ವ್ರತದಿನಗಳ ಮೊದಲನೆಯ ದಿನ (ಆ ದಿನ ಪಶ್ಚಾತ್ತಾಪಿಗಳ ತಲೆಯ ಮೇಲೆ ಬೂದಿಯನ್ನೆರಚುವ ಪದ್ಧತಿ ರೋಮನ್‌ಕ್ಯಾತೊಲಿಕರಲ್ಲಿದೆ)" (Ash-Wednesday. ೩೦೫೨). [ಬೂದಿ + ಬುಧವಾರ]

ಬೂದಿಮೆಯ್ಯ (ನಾ). ಮೈಗೆ ಭಸ್ಮವನ್ನು ಬಳಿದುಕೊಂಡಿರುವ ಶಿವ : "ಎಲುಗ್ಗೆಯ ಬೂದಿಮೆಯ್ಯಂ . . . ಜತ್ತುಗದಲೆಯನೆನೆ ಸತ್ಕವೀಂದ್ರರ್ ಸಲೆ ಪೇಬ್ಪರ್ ಸ್ಮರಹರಂಗೆ ನಾಮುವಿದೆನುತುಂ" (ಕಬಿಂ. ೦೮). [ಬೂದಿ + ಮೆಯ್$_{3}$ +—ಅ$_{3}$]

ಬೂದಿಪೂಸು (ಕ್ರಿ). ವಿಭೂತಿಯನ್ನು ಧರಿಸು : ಪಾಗಶರ್ಮಾ ಬೂದಿ ಪೂಸಿದ ತಪೋಧನನಂತೆಯುಂ . . . ಅಳಿಗಣ್ಣರಂತೆ ವಿಳುವಿಳಿಸಿ ನೋಡುತ್ತುಂ ಮತದಿಂ ಪೊಜಮಟ್ಟು ನಿಂದ ಭಾಂದಸಬ್ರಾಹ್ಮಣನಂ ಕಂಡು (ಪಂಪಂ. ೦೪೭-೦೩). [ಬೂದಿ+ಪೂಸು$_{1}$]

ಬೂದು 'ಬೂದಿ' ನೋ.

ಬೂದುಗುಂಬಳ 'ಬೂದಿಗುಂಬಳ' ನೋ.

ಬೂದುಬಾಳೆ 'ಬೂದಿಬಾಳೆ' ನೋ.

ಬೂಪಳೆ (ನಾ). ಬೂಟಾಟಿಕೆ; ನಟನೆ : 'ಬೂಪಳಗಾತಿ' ಪರಾ. [?]

ಬೂಪಳಗಾತಿ (ನಾ). ಸೋಗಲಾಡಿ; ವಿಟಕಲಾಡಿ : ಬೂಪಳಗಾತಿ . . . ವಿನೂ ಅರಿದ ಪಾಯಿ ಹಂಗೆ ಅಳ್ಳು ಕುಂತವ್ಳೆ ಇಲ್ಲಿ (ಸಚಾಸಂ. ೨೦೦). [ಬೂಪಳೆ +—ಗಾತಿ$_{3}$]

ಬೂಮ. ಬುವ್ವ, ಬೂಪ (ನಾ). ೧. ಮದುವೆಯ ದಿನದಂದು ವಧೂವರರೂ ಎರಡು ಕಡೆಯ ಬೀಗರೂ ಒಂದೇ ಪಂಕ್ತಿಯಲ್ಲಿ ಕುಳಿತು ಪೂಡಂವ ಮೈಷ್ಟಾನ್ನದ ಊಟ : ಮದುವೆಯಂದು ವಧೂವರರು ಬೂಮ ಮಾಡುವಾಗ, ಅಳಿಯ ತನ್ನ ಎಂಜಲುಕೈಯಿಂದಲೇ ಅತ್ತೆಯ ಕೈ ಹಿಡಿದು ಅಕೆಯ ಗಂಡನ ಹೆಸರು ಹೇಳಿಸುವ ಪದ್ಧತಿಯಿದೆ (ಜಾಪ). ಬುವ್ವ : ೧. (ಎಷ್ಟು- III. ೬). ೨. (ಮಕ್ಕಳ ಭಾಷೆಯಲ್ಲಿ) ಅನ್ನ : ಬುವ್ವ ಬೇಕೆಂದು ಮಗು ಕಾಡುತ್ತಿತ್ತು (ಕಾಪ). ಬೂಪ : ೧. ಇದೆ ಕಂದು ಮುಂದಿಟ್ಟರಂದು ಬೂಪವನಲ್ಲಿ ಭರನ ಕಂಡಲ್ಲದಿನ್ನೆನಗೂಟವಿಲ್ಲೆಲ್ಲಿ ಎನುತ ನಡೆತ್ತಂದಳಾಮುವದಿಂದ ಶಿವನೆಡೆಗೆ (ಕಪಂ. ೨೬೨-೦೦೬); ತದನಂತರಂ

ಬೂಮಮನಭ್ಯಾಸದಿಂ ಬಲಿಯಮರೆಸವನರಲಸಜ್ಜೆಬನೆಯೊಳಿರಿಸಿ (೯೯೫೫-೦೬-೪ ೪) ; ಬೂವಕ್ಕವಸರಮಾಗಲ್ ಪಾವನತರಮಾದುದೊಂದು ಮಂಗಳಾಜವಮಂ ಪೀವರಮಂ ತಂದಿರಿಸೆ ವಧೂವರರ್ಗೊಂದಾಗಿ ಕೊಳ್ಳಿದರ್ ಮುದದಿಂದಂ (ಜಾತಕ. ೦೦-೦೬). ಬುವ್ವದ ಪೂಜೆ = ವಧೂವರರಿಗೆ ಸಿದ್ಧಪಡಿಸುವ ಭೋಜನ ಸಾಮಗ್ರಿಗಳಿಗೆ ಮಾಡುವ ಪೂಜೆ ಮತ್ತು ಅನಂತರದ ಊಟದ ಸಮಾರಂಭ : (೧೫೬೫. XVII. ೫೧). ಬುವ್ವದ ಪೆಟ್ಟಿಗೆ = ವಧೂವರರಿಗೆ ಕೊಡಬೇಕಾದ ಉಡುಪು ಮಂಂತಾದುವುಗಳನ್ನೊಳಗೊಂಡಿರುವ ಪೆಟ್ಟಿಗೆ : ವಸ್ತ್ರಗಾರಪೆಟ್ಟಿಗೆ ಬುವ್ವದ ಪೆಟ್ಟಿಗೆ ಅತ್ತಪೆಟ್ಟಿಗೆ ಇವುಗಳ ಮೆರವಣಿಗೆ ಆಗುತ್ತದೆ. ಈ ಪೆಟ್ಟಿಗೆಯಲ್ಲಿ ಗಂಡಿನ ಕಡೆಯವರು ಹೆಣ್ಣಿಗೆ ಕೊಡಬೇಕಾದ ಎಲ್ಲಾ ಉಡುಗೆರಗಳನ್ನೂ ಇಟ್ಟಿರುತ್ತಾರೆ (ಕರ್ನಾ. ೬೦). [< ಸಂ. ಭೂಮನ್./ತಮಿ. ಪುವ: ತೆಲು. ಬುವ್ವಮು./ಮರಾ. ಭೂಮ]

ಬೂರ, ಬೂರಗ, ಬೂರಗೆ, ಬೂರಲ, ಬೂರವ, ಬೂರುಗ, ಬೂರುಗೆ (ನಾ). ಒಂದು ಬಗೆಯ ಮರ ಮತ್ತು ಅದರ ಅರಳೆ; ದೂದಿ : ಶಾಲ್ಮಲಿ : ಸಸ್ಯ ಭಕ್ಷಿ ಎಲವದ ಕಾಯ ಫಲದಂತೆ ನೋಡಯ್ಯಾ ಹೊಱಗೆ ಹೆಂಪು ಒಳಗೆ ಬೂರವಯ್ಯ (೪೪೫೦. ೩೦೯-೧೦); ವೀರತಪ್ಪಿನಿಂದಿರುಳುಂ ಪಗಲುಂ ಹಿಮವೇಜಮುಂಗದೊಳ್ ಬೂರವಮನೊಟ್ಟಿದುಂತಲೆಯೆ . . . ಬೆಳ್ಳವಾಸದೊಳ್ (೪೪೫೪. ೯-೨೦); ಅರಯ್ಕ ಲಘು ವಪ್ಪದಾ ಹುಲ್ಲು ಹಲ್ಲಿಂದ ಬೂರವಱಿಲಘುವಲಾ ಬೂರವಿ ಲಘುವಪ್ಪ ರಾರಿನಲು ಯೂಚನೆನಲ್ಕೆ (೨೯೯೪. ೪-೨೫-೨೫). 'ಕೆಂಬೂರ' ಪರಾ. **ಬೂರಗ :** ಬೂರಗದ ಮರದ ಹುರುಪನ್ನೂ ಅರಿಸಿನ ನೀಲೀಬೀಜ ತ್ರಿಫಲಂಗಳನ್ನೂ ಜೊರ್ಣವಂ ಮಾಡಿ ಮದ್ಯವೆರಸಿ ಹತ್ತಿಯ ಗಿಡಕ್ಕೆ ಲೇಪನಂಗೈದು (೪೪೦೨. ೪೭೬-೦೬); ಬೂರಗದ ಮರದ ಕೆಳಗೆ ವಿಶ್ರಮಿಸಿ ಕೊಳ್ಳುತ್ತ . . . ಈ ಸುಪುತ್ರನನ್ನು ಪಡೆದಳು (೪೪೦೬. ೦); ಪೆಳಲು ಬೂರಗಕ್ಕಿಲ್ಲ ಕೂಗಿಗೆ ನೀತಿಮುಲ್ಲ (೧೪೮). **ಬೂರಗೆ :** 'ಬೂರಗೆಬಂಕೆ' ಪರಾ. **ಬೂರಲ :** ಪ್ರಯೋಜನವಲ್ಲದ ಬೂರಲದ ಮರದ ಹೂವ ನೋಡಿ ಗಿಡುಗಳ ಸಮೂಹ ಮುಂದಕ್ಕೆಯ್ದದೆ (೪೪೫೦. I. ೫೦೬-೬ ೪೪೯) ; ನಮ್ಮ ಉಪಾಧ್ಯಾಯರು ನನ್ನನ್ನು ಬೂರಲದ ಹೂವಿಗೂ ಸೊಟ್ಟ ಸೋರೆ ಗುಂಬಳಕಾಯಿಗೂ ಹೋಲಿಸಿ ಉಪಹಾಸ ಮಾಡುತ್ತಿದ್ದರು (೨೪೯೪. ೨೫೬). **ಬೂರವ :** ಎಲವದ ಬೂರವನೊರಳೊಳ್ ತುಂಬಿಡೆ ತವ್ಮರ್ಣ ಬಿಡದ ತೆಜದಿಂ (೪೪೫೦. ೫-೦೦೬). ಬೂರುಗ್ಕ: "ಜಿಚ್ಕಿಲಾ . . . ಶಾಲ್ಮಲೀ—ಜಿ ಬೂರುಗದ ಗಿಡ, ಚಕ್ಕಮುಕ್ಕೀ ಹತ್ತಿಗಿಡ, ಬೆಂಡುಹತ್ತಿಗಿಡ, ಎಲವದ ಮರ" (ಕಿರಾ.೦೬. ೬೫೫) ; ಜಗದೊಳಗೆ ಲಘು ತಿಷ್ಮಮದಱಿಂ ಲಘು ತೃಣಂ ತೃಣದಿಂದೆ ಲಘು ಪೆಱ ಲಘು ಶಿರೋಜ ಶಿರೋಜದಿಂ ಲಘು ಬೂರುಗ (೪೦೬೫. ೬-೫೫) ; ಬೂರುಗದ ಚಕ್ಕೆ, ಬೂರುಗದ ಎಲೆ ಇವುಗಳನ್ನು ನೀರಿನಲ್ಲಿ ಬೇಯಿಸಿ . . . ವಿಲಕ್ಕೆ ಪ್ರತಿಪಾಕವಿಕ್ಕೆ ಆರೆದು ಕೊಡಲು ಧಳ್ವರ ವಿಮುವುದು (೪೪೬. ೬೧) ; ಬೂರುಗದ ಮರ ಗಿಣಿ ಕಾದ ಹಾಗೆ (೧೪೮). **ಬೂರುಗೆ :** 'ಬೂರುಗೆಬಂಕೆ' ಪರಾ.

ಬೂರದ ಹಾಸು = ದೂದಿಮರವ ಅರಳೆಯಿಂದ ಮಾಡಿದ ಹಾಸುಗೆ : ಸುಡುವ ಬೆಂಕಿಯ ಕುದಿಯ ಮೊನೆಯಲ್ಲಿ ಒದರಿಸಿ ಪಾಣಿಮಾಡಿದ ಮನೆಯಲ್ಲಿ ಬೂರದ ಹಾಸು ಹಾಕಿ ನೀರಿನ ಮಂಚದ ಮೇಲೆ ನಾರಿಯರೆಲ್ಲರು . . . ಮಲಗಿರಲಾಗಿ (೪೦೪೫೫. ೫೦-೬೦೦). **ಬೂರಲ ಅರಳೆ, ಬೂರುಗದ ಅರಳೆ** = ದೂದಿಮರದ ಅರಳೆ.—**ಹಪ್ಪಿ :** ಬೂರಲ ಅರಳೆಯ ವಿದುಮಾದ ದಿಂಬಿಗೆ ಮಲಕನ್ನು ಆಸರೆಯಾಗಿರಿಸಿ ಮಲಗಿದ್ದೆ (೪೦೪೫. ೦೦) : ಅವರ ಮಹಾತ್ಮಿಗಳು ಬೂರುಗದ ಅರಳೆಯಂತೆ ಹಗುರವಾಗಿಲ್ಲ. ಮಪ್ಪುದಂತೆ ಘನವಾಗಿವೆ (ಶಾತಕ. ೫೦). **ಬೂರುಗದ ಹತ್ತಿ** = ಬೂರಲ ಅರಳೆ : ಬೂರುಗದ ಹತ್ತಿಯ ಮೃದುವಾದ ಹಾಸುಗೆಯ ಮೇಲೆ ಮಲಗಿದ ಕೂಡಲೆ ನಿದ್ರೆ ಹತ್ತಿತು (೪೫೨). [ದೇ.ಗ ತಮಿ. ಪೂಲ್, ಪೂರಾ. ಪೂಳ್ಕೆ ; ಮಲ. ಪುಲ ; ಕುಡು. ಬೂರಿಗ್, ಬೂರುಗ, ದೋರ ; ತೆಲು. ಬೂದಗ, ಬೂರುಗ, ಬೂರುಗು, ಬೂರುವು ; ಪಡೆ. ಬೂರು]

ಬೂರಗ 'ಬೂರ' ನೋ.

ಬೂರಗಬಂಕೆ 'ಬೂರಗೆಬಂಕೆ' ನೋ.

ಬೂರಗೆ 'ಬೂರ' ನೋ.

ಬೂರಗೆಬಂಕೆ, ಬೂರಗಬಂಕ, ಬೂರುಗಬಂಕ, ಬೂರುಗೆಬಂಕೆ (ನಾ). ಎಲವದ ವೇಣ ; ದೂದೀಮರದ ಹಗಿನು : "ಜಿಚ್ಕಿ. ಶಾಲ್ಮಲೀ. ವೇಷ್ಟಃ — ೩. ಬೂರಗೆಬಂಕೆ ಹೆಸರು ; ಎಲವದ ವ್ಯಾಣ" (ಕಿರಾ.೦೬. ೦೫೬). **ಬೂರಗಬಂಕ :** "ಜಿಚ್ಕಿ—ಗಂಜಿ, ಬೂರಗಬಂಕ" (ಕಿರಾ.೦. ೨೫೫). **ಬೂರುಗಬಂಕ :** (ಕ). **ಬೂರುಗೆಬಂಕೆ :** (ಕ).

[ಬೂರಗೆ (< ಬೂರ) + ಬಂಕೆ]

ಬೂರಣ, ಬೂರಣೆ (ನಾ). ಯಾವುದಾದರೂ ವಸ್ತುವಿಗೆ ಹುಳುಹಿಡಿದು ಜೊಳ್ಳಾದುದು : ಪಾಂದುವನಡಿಗುಟ್ಟಂ ಪುಲು ತಿಂದುವಪಡೆಯೊತ್ತಿ ದೆಂದುವಂ ಬೂರಣಮು(ದಿ)ಂ ಕಂವಿದುವಂ ಪೊಳೆಪೋದುವನೆಂದಂ ಕಟ್ಟಲ್ಕೈವೇಡ ಖಾ(ಬಾ)ಣದಿಗಳಂ (೪೪೫೫. ೬-೫೬). **ಬೂರಣೆ :** ಬೂರಣೆಯಾದ ಕತಲೆಯು ತಿಂವರೆ ನಾಯಿವ ನೀರ ಕುಡಿದರೆ ನಾಯಿವ ಕವಳವ ಕೊಂಡರೆ (೪೪೫೫. ೬೬-೬). 'ಬೂರಬೂರ್ಕಿ' ಪರಾ. [?]

ಬೂರಲ 'ಬೂರ' ನೋ.

ಬೂರವ 'ಬೂರ' ನೋ.

ಬೂರವಪ್ಪಟ್ಟಗೆ (ನಾ). ಮೇಲೆ ಹೊದ್ದುಕೊಳ್ಳುವ ವಸ್ತ್ರ : "ಬೂರವಪ್ಪಟ್ಟಗೆ ಬೃಹತಿಕಾಸಂಜ್ಞಿಕಂ" (೪೪೬.೫೫೮. ೬೬-೨೦). [< ಸಂ. ಬೃಹತಿಕಾ ?]

ಬೂಳವಡ (ನಾ). ದೂದಿಮರದ ಹತ್ತಿಯಿಂದ ಮಾಡಿದ ಬಟ್ಟೆ : ಅಂಬುಜವೇತ್ರದರ್ಶಳ ಘನಸ್ತನದೊತ್ತು ನಿತಂಬದೊತ್ತು . . . ದಿಂಕಂಬಡಿದಿರ್ದ ತೆಳ್ಗದಪಿನೊತ್ತು ವಿಟರ್ ಪೆಱ್ ಕಾವುವಲ್ಲದೀ ಕುಬಳ ದಟ್ಟ ಬೂರವಡವೆಂದಿವ್ ಕಾವುವೆ ತೀಚಕಾಲವುಂ (೪೦೬೫. ೦೦-೨೦೦). [ಬೂರ + ಪಡ್ಕ]

ಬೂಸಾ (ನಾ). ನಯವಾದ ಒಂದು ಬಗೆಯ ಬಿಳಿಸಕ್ಕರೆ : ಈ ಸ್ಥಳದಲ್ಲಿ ಬೂರಾಸಕ್ಕರೆ ತಯಾರಿಸುತ್ತಿದ್ದರು (ಕ್ರಾಚಾ. I. ೧೦೨) ; ಹನ್ನೆರಡುದಿನಗಳೂ ಬೂರಾಸಕ್ಕರೆ, ಹೂ, ಗಂಧವನ್ನು ಹೊತ್ತು, ಭಕ್ತಿಯಿಂದ ಬಾಬುದ್ಯುಪ ವಿಗ್ರಹದ ಮುಂದೆ ನಿಂತು ಪ್ರಾರ್ಥಿಸುತ್ತಿದ್ದಳು (ಪುಗಚಾಂ. ೦). [— ಹಿಂ. ಬೂರಾ, ಭೂರಾ]

ಬೂರುಗ್ಕ 'ಬೂರ' ನೋ.

ಬೂರುಗ್ಕ 'ಬುರುಗು' ನೋ.

ಬೂರುಗಬುಂಕ 'ಬೂರಗೆಬಂಕೆ' ನೋ.

ಬೂರುಗೆ 'ಬೂರ' ನೋ.

ಬೂರುಗೆಬಂಕೆ 'ಬೂರಗೆಬಂಕೆ' ನೋ.

ಬೂರುಡೆ (ನಾ). ಒಂದು ಬಗೆಯ ಮರ : ಭೂತಾಳೆ ಬೂರುಡೆ ವಿಟ್ಟುಲಿಯಂ ದಿಂಡ ಪಾತಂಗ ಮುಗುಳಿಯ ಪಾರನು . . . ಅಲ್ಲಿಹವು (೪೪೫೫. ೦-೫೦). [?]

ಬೂರ್ಜವಾ 'ಬೂರ್ಜ್ವಾ' ನೋ.

ಬೂರ್ಜ್ವಾ, ಬೂರ್ಜವಾ (ನಾ). ೧. ಮಧ್ಯಮ ವರ್ಗದ ಜನತೆ ಮತ್ತು ಆ ವರ್ಗಕ್ಕೆ ಸೇರಿದವನು : ನಮ್ಮ ದೇಶದ ಎಲ್ಲ ನಡವಳಿಕೆಗಳೂ

ಬೂರ್ಜ್ವಾ ಮಟ್ಟವನ್ನು ಮಿರಿಸೋಗಿಲ್ಲ (೧೯೨). ಬೂರ್ಜ್ವಾ : (ಗು). ವಿ. ಮಧ್ಯಮ ತರಗತಿಯ : ಈ ಬೂರ್ಜ್ವಾ ಗವರ್ನ್‌ಮೆಂಟು ಹೋಗಲೇಬೇಕು (೫೬೩೦೮- ೦೩). [<ಫ್ರಾ. Bourgeois]

ಬೂರ್ಜೀಸು 'ಬರ್ನಿಸ್' ನೋ.

ಬೂಲ, ಬೂಲು (ನಾ). ೧. ಶರೀರ; ದೇಹ : ಮೈ : ನಿನ್ನ ಈ ಕರೀ ಬೂಲಕ್ಕೆ ಯಾಕೋ ಈ ಬೆಳಬಟ್ಟೆ? (೫೮೫೦. ೧೨). ಬೂಲು : ವಿ. (ಕರಾ) ನಡು ; ಸೊಂಟ. [?. / ತೆಲು. ಬೂಲು=ಮರದ ಕಾಂಡದ ಮಧ್ಯದ ನಿಸ್ಸಾರವಾದ ಭಾಗ]

ಬೂಲು 'ಬೂಲ' ನೋ.

ಬೂವ 'ಬೂಮ' ನೋ.

ಬೂವಗಾವುಂಡ (ನಾ). ಒಬ್ಬಾತನ ಹೆಸರು : ಇನಿತು ಮಣ್ಣ ಬಿಮಿದ ಪ್ರಭುಗಳಂತನಾಮ ಬೂವಗಾವುಂಡ ಪಡಿಲುಮ್ಮ ಪಡುದೆಮ್ಮ (ಎಕ್ಷ. ೪- ೦೮೫. ೫೧-೦೭; ಕು. ೩೦೦). [ಬೂವ+ಗಾವುಂಡ (<ಗಾಮುಂಡ)]

ಬೂವಯ್ಯ (ನಾ). ಒಬ್ಬಾತನ ಹೆಸರು : ಪಂಚ್ಚಿಯರ ಬೂವಮ್ಮನ ಮಗಂ ಬಿದಿಯಾಯ್ತ ತುಜುವನ್ನಿಕ್ಕಿಸಿ ಕಾದಿ ಸತ್ತು (ಎಕ್. II. ೬೯೨-೬; ೫೬೯); ಪತ್ತುಗದ್ಯಾಣ ಪೊನ್ನುಂ . . . ಭತ್ತಮುಮಂ ಎಲ್ಲಾ ಕಾಲಕ್ಕಂ ಸಾಸನದಾಗೆ ಬಿಟ್ಟರ್ ಬೂವಯ್ಯನ್ಕೈರಂ (ಎಕ್.1(೩). ೧೭-೦೦; ೧೭೫ ೭೫). [ಬೂವ + ಅಯ್ಯ]

ಬೂವಿ, ಬುವಿ(ನಾ). ಧರಣಿ ; ಭೂಮಿ : "ಏಳೆ, ಪೊದವಿ, ತಿರೆ, ಧರೆ, ಧಾತ್ರಿಯಿಳೆ, ಬೂವಿ, ಬುವಿ-ಈ ೭ ಭೂಮಿ" (೪೫೫. ೫೫-೨೦೨); ಪುಣಾರಕ್ಕೆ ವಕಾರಂ . . . ಭೂವಿ-ಬೂವಿ (೪೫೮. ೫೭೭ ಕ್ರಿಯೆ): ಬೂವಿಯೊಳ್ಜಿ ನೀನೆ ಸಕಲಮಾವ್ಮೆ ಸುತನ್ನೇ (೫೫೦೭. ೨-೫-೧೦): ನಿನ್ನನ್ನರಂ ಬೂವಿ ಬಿರಿದಿನ್ನುವೇಕೆ ನುಂಗಲೊ ?(೪:೫೫. ೨೯_೦). ಬುವಿ: "ಧರೆಗಂ ತಾಂ ಬೂವಿಯುಂ ಬುವಿಯುಮೆಂದೆನುತುಂ" (೪೫೮. ೧೭); ದುಮತಿಜನಸಂಸ್ಪರ್ಶತನುಮೀ ಬುವಿಗೆ ಬಯಸುತೆ ಹಾಯೆನುತ ಜನನಿಪಹ ಪೆಱ್ ಮಱುಗಿತ್ತು ತದ್ರಾಜಾವಸಾನದಲಿ (೪:೫೦೫. ೩-೨); ಬುವಿಯುಲ್ಲಿ ಕಾಸುಮದೋಳ್ ರಿಂಗದಾಕೃತಿ ತಾಳ್ದು ತವೆ ಮೆಜ್ಜವಿತರ್ಪುದೀ ಕರವೀರ ಪುಷ್ಪವೃಕ್ಷವೆ (ಶ್ರೀಕೂ. ೩-೩೨): ಇಳೆಯೆ ನೀಧ ಆಳಿಯೆ ಪೋವ ಬುವಿಗೆ ದಿವಿದು ಶನ್ನಿ! (೪೫೯೮. ೫೦-೩). [<ಸಂ. ಭೂಮಿ]

ಬೂಷ್ಟು (ನಾ). (?): ತಂಬುವಿಗರೊಳ್ಕಣ ೦ ಶಬ್ದಿಗರೊಳ್ಕಣ ೦ ಜಗತಿದು ಬೂವುಗಳೊಳ್ಕಣ ೦ ಅವರೊಕ್ಕೆಲೊಳ್ಕೀಸ ೦೧ (ಎಕ್. VII. ೪೫೦೦. ೧೧-೩೫: ೧೦೧೪). [?]

ಬೂಷಲು 'ಬೂಜ್ಜು' ನೋ.

ಬೂಷ್ಟು 'ಬೂಜ್ಜು' ನೋ.

ಬೂಸ, ಬೂಸಿ (ನಾ) ೧. (ದನಕರುಗಳು ಕುಡಿಯುವ ಕಲಗಚ್ಚಿನೊಡನೆ ವಿಂಶ್ರ ಮಾಡುವ) ಧಾನ್ಯದ ಹೊಟ್ಟು; ತವುಡು; ಉಮ್ಮಿ : ಹೇರಿ ಕೊಮ್ಮ ಜಿನಿಸು ವಿದಳ ಬೂಸ ಅಕ್ಕಿ ಭತ್ತ ರಾಗಿ ಉಪ್ಪು ಬೆಲ್ಲ ಎಣ್ಣೆ ತುಪ್ಪ ಮುನ್ನಾದ ಜಿನಿಸುಗಳನೂ ಕಾಲಕಾಲಂ ಪ್ರತಿಪುಲ್ಲೂ ಪೇನಿ ತಮ್ಮ ಕೊಣ್ಣು (೦೪. VIII. ೬೯೫೫. ೮೨-೨೦ : ೧೮೭೭) : ಇಲ್ಲಿದು ಪೇಟೆಯಲ್ಲಿ ಬೂಸದ ವ್ಯಾಪಾರವಾದರೂ ತಕ್ಕಮಟ್ಟಿಗೆ ಸಡಯುತ್ತಿದೆ (೪೫೦೦೫. ೬-೦೫೭). ವಿ. ದಿನಸಿ : ಧಾನ್ಯ ; ಕಿರಾಣಿ : (೪). ಕಿ. (ಆಲಂ) ಸತ್ವವಿಲ್ಲದುದು ; ಹುರುಳಿಲ್ಲದುದು ; ನಿಷ್ಪ್ರಯೋಜಕವಾದುದು : ಈ ಬರವಣಿಗೆ ತೀರಾ ಬೂಸ ಎನಿಸಿತು (೭೫೫). ಬೂಸಿ : ಕಿ. ತಥ್ಯವಿಲ್ಲದುದು ; ಸತ್ಯಪೂರವಾದುದು ; ಜಳ್ಳು : ನೀನು ಹೇಳಿದ್ದೆಲ್ಲಾ ಬರೀ ಬೂಸಿ (೫೫೫).

[<ಹಿಂ. ಭೂಸಾ, ಭೂಸೀ; ಮರಾ. ಭುಂಶೀ, ಭುಂಸಾ. ಭೂಂಸ್; ಭೂಸ್; ಬಂಗಾಲಿ. ಭೂಶಿ; ಗುಜ. ಭುಸೋ, ಭುಸ; ಜಂಜಾಬಿ. ಭುಸ್./ ಸಂ. ಬುಷ. ಬುಸ./ತೆಲು. ಬೂಸ]

ಬೂಷಣ (ನಾ). ಅಲಂಕಾರ; ಭೂಷಣ: ಈಗಳ್ ರಾವಣನ ಬಲಮೊಳ್ ಮಲೆನಾಡ್ಗಿಗರ ವಂಡೊಂದುಬ್ಬಿದುದು ಇವರ್ಗಾಳ್ಕಲಕರ್ದಂತೆ ಕೈದುಗಳಂ ಬೂಷಣಂಗಳುಮಿಲ್ಲಂ (೭೮೫೫. ೫೬-೩೬). [< ಸಂ. ಭೂಷಣ]

ಬೂಸರು 'ಬೂಜ್ಜು' ನೋ.

ಬೂಸಲು 'ಬೂಜ್ಜು' ನೋ.

ಬೂಸಿ 'ಬೂಸ' ನೋ.

ಬೃಂದ (ನಾ). ೧. ಗುಂಪೆ ; ಸಮೂಹ : "ನಿಕುರುಂಬಂ ನಿಪಹಂ ವ್ರಜಂ ಸಮುದಯಂ ಬೃಂದಂ ಚಯಂ . . . ಸಮೂಹಂ ದ್ಯಾತಮೀಕಾರ್ಥಕಂ" (೫೮:೩೫೫. ೦೦೨-೩೬) ; ಅದೆಂತುಚಿತವಾಕ್ಕುವಾತ್ಮಗುಣಬೃಂದವಿಂತೀ ಜಗತ್ಕದೆಂತು ನಯನೋತ್ಸವಂ ಸತತವಾಕ್ಕುದುಣಾಗೆ ಪುತ್ರದಿಂ ನಿಜಶರೀರಮಂ ಸಲಿಸಲೆಯ್ದುದೀ ದೇವಿಯರ್ (೫೫೦೫೫. ೧೦೩). : ಅರಿ ಭೂಪಾಳತಿ(ತಿ)ರೀಟತಾಟಿತಪದ ಸ್ಫಾಲ್ಪಿಸನ್ಮೌದ್ರಿತೋರ್ವರೆಗೊರ್ವ್ವಾ ಪತಿ ಸಂದ ವಂದಿ ಬುಧ್ಯಂದಕ್ಕೆಂದುಪೊಂದಂದದಿಂ ಪಿರಿದೀಪಂ (೪೫. XXVIII. ೫೨-೦೦; ೧೦೫೭). 'ಬೃಂದಗಾನ' ಪರಾ. ವಿ. ರಾಶಿ ; ಒಟ್ಟಲು. [ಸಂ.]

ಬೃಂದಗಾನ (ನಾ). ಸಾಮೂಹಿಕವಾಗಿ ಹಾಡುವ ಹಾಡು: ವೃಂದಗಾನ: ಅವಳ ಸಂಗೀತ ಬೃಂದಗಾನರೂಪದಲ್ಲೇ ಪ್ರಗತಿಯೊಂದಿದೆ (೫೫೫೫೦. ೦೮೭). [ಸಂ.]

ಬೃಂದಾರಕ (ಗು). ೧. ದೇವಲೋಕಕ್ಕೆ ಸೇರಿದ; ಸ್ವರ್ಗದ : ಮರ್ತ್ಯದಿಂ ಸ್ವರ್ಗಕ್ಕೆ ಕೊಂಡೊಯ್ಯುವೊಂದು ಬೃಂದಾರಕವಿಮಾನವೆನೆ ಚಿತ ಹೂಡಿ ನಿಂದುದು ವಸಧವೇಲೆಯಲಿ (೫೫೨೦೫. ೬೯-೨೯೫೫). (ನಾ). ೨. ದೇವತೆ: ಅಮರ ; ಸುರ : "ಭುಭುಗಳುಂ . . . ಅಮರ್ತ್ಯ ಬೃಂದಾರಕ ಸುರರ್ವ ನಾಕಸದನಂ . . . ವಿಬುಧರ್ಗ್ ನಾಮಂ" (೫೫೦೫. ೩-೬); ಬೃಂದಾರಕ ರೋರೊರ್ವರ್ಗೊಂದುಕಸಸ್ಯಳರಸಿಕರವಮಂ ಕೆಯ್ಯೊಳ್ಳೀ ತಂದೀವ ಕೊಳ್ಳೆ ಸಂಭ್ರಮದಂದಂ ಪೋಲ್ತಪ್ಪು ಕಂದುಕಕ್ರೀಡಿತಮಂ (೫೦೨೫. ೦೩-೦೫೯); ನೈರಾತ್ಮದಿಂದಂ ವೃಷಿ ತೋರ್ಪಪೋಲಾಶಾಮರೀಟಿ ತಾಂ. ಬೃಂದಾರಕಂ ಮೈದೋರ್ದನೆಂಪರ್ದನ್ (೬೫೫೫೫. ೫೫೫-೭೦). [ಸಂ.]

ಬೃಂದಾರಕತರು (ನಾ). ದೇವಲೋಕದ ಮರ ; ಕಲ್ಪವೃಕ್ಷ : ತೀರ ಪಮೀರುಮಾಕರಂ ನೀರೊಳ್ಪತಿವಿಂಬಿಸಿದೊಡೆ ಪೋಲ್ತುದು ತತ್ಕಾಸಾರಂ ಬೃಂದಾರಕರುವಾರವನೊಳಕೊಂಡು ಪೆಂಪುವಡದಯುಧಿಯಂ (೫೫೫೭೮. ೨-೭೭). [ಸಂ.]

ಬೃಂದಾರಕಮುನಿ (ನಾ). ದೇವತೆಗಳ ಮುನಿ; ದೇವರ್ಷಿ: ನಾರದ: ಬೃಂದಾರಕಮುನಿ ಭಗವತ್ಪದಾರಜ್ಞಾನಿಗಳೊಳಗ್ಗಗಣ್ಯ ನೀನೇ (೫೫೦೭೮. ೬-೦೦). [ಸಂ.]

ಬೃಂದಾವನ (ನಾ). ೧. ಗೋಕುಲದ ಬಳಿಯ ಒಂದು ಪವಿತ್ರಕ್ಷೇತ್ರ: ವಿಷ್ಣುಭಕ್ತನಾದ ಕೇದಾರರಾಜನ ಮಗಳಾದ 'ಬೃ(ವೃಂ)ದೆ' ಎಂಬುವವಳು ಲಕ್ಷ್ಮಿಯ ಅಂಶದಿಂದ ಜನಿಸಿ, ದುರ್ವಾಸಮಹರ್ಷಿಯಿಂದ ವಿಷ್ಣುಮಂತ್ರವನ್ನು ಪಡೆದು, ವಿರಕ್ತಳಾಗಿ ಅರುವತ್ತು ಸಹಸ್ರವರ್ಷಗಳ ಕಾಲ ಅರಣ್ಯದಲ್ಲಿ ತಪಸ್ಸನ್ನಾಚರಿಸಿ, ಪ್ರಸನ್ನನಾದ ಶ್ರೀಕೃಷ್ಣನೇ ತನಗೆ ಪತಿಯಾಗಬೇಕೆಂದು ವರವನ್ನು ಕೇಳಿದಂದರಿಂದ ಅವಳ ಅಪೇಕ್ಷೆಯಂತೆ ಕೃಷ್ಣನು ಬಹಳ ಕಾಲ ಅರಣ್ಯದಲ್ಲಿ ಅವಳೊಂದಿಗೆ ಸುಖವಾಗಿದ್ದನೆಂದೂ, ಅವಳಿದ್ದ ವನಕ್ಕೆ 'ಬೃಂ(ವೃಂ)ದಾವನ' ಎಂದು ಹೆಸರಾಯಿತೆಂದೂ ಪುರಾಣಕಥೆಯಿದೆ: ಈ ವನವು ನೀಲಂ ನಾನಾವಿಧ ವಿಕಸಿತಮಶಯ್ಯೆಯೊಳ್ ರಮಿಯಿಸು

ಬೃಂದಾವನದೊಳಿಂದ್ರವನವಿಧಾವಿಯೊಳಗಲದೆ ಸುಗಂಧಜಾತಳಗಂಧಿ: (ಕಾಂಡಿಪು. ೫-೧೭೦); ದೂಡಬರಾಯ ಬೃಂದಾವನದೊಳು ವೇಣುನಾದವ ಮುಡುತಿರೆ (ಕಬ. ೨೦೦ ಪದ್ಯ); ಬೃಂದಾವನದೆದೆಯ ವಿಡಿದು ಬಾಹು ಕೊಳಲ ಮೆಲ್ಲುಲಿ (ಕಬಹು. ೬೪-೦೭). ೨. ಪೂಜೆಗಾಗಿ ತುಳಸಿಯು ಗಿಡವನ್ನು ಕಟ್ಟಿಕಟ್ಟಿ ಬೆಳೆಸುವ ಸ್ಥಳ: ತುಳಸೀಕಟ್ಟೆ: ಮಾಡೋದು ಅನಾಚಾರ, ದುನೇ ಮುಂದೆ ಬೃಂದಾವ (ಗಾಡಿ). ೩. ವೈಷ್ಣವ ಸಂನ್ಯಾಸಿಗಳ ಸಮಾಧಿಸ್ಥಳ: ಭಾರತೀಯ ಯತಿಗಳ ಇತಿಹಾಸದಲ್ಲಿ ಸಶರೀರರಾಗಿ ಬೃಂದಾವನಪ್ರವೇಶ ಮಾಡಿದವರಲ್ಲಿ ವಾದಿರಾಜರು ಮೊದಲನೆಯವರು (ಕಷಾ. ೦೬೨). [ಸಂ.]

ಬೃಂದಾವನಸ್ಥ (ನಾ). ಸಮಾಧಿಯಲ್ಲಿ ನೆಲಸಿದವನು: ಬೃಂದಾವನಸ್ಥರಾದ ಮೇಲೂ ಅಂದಿನಿಂದ ಇಂದಿನವರೆಗೆ . . . ಇಷ್ಟಾರ್ಥಗಳನ್ನು ಕೊಡುತ್ತಿರುವವರು ವಾದಿರಾಜರು (ಕಷಾ. ೦೬೨). [ಸಂ.]

ಬೃಂದಾವನಿ (ನಾ). [ಸಂಗೀತ] ಒಂದು ರಾಗದ ಹೆಸರು: ಬೃಂದಾವನಿಯು . . . ಸದಾಕಾಲದಲ್ಲಿಯೂ ಹಾಡುವಂತಹದು (ಪಾಪ್ರ. ೦೪೯). [ಸಂ. ಬೃಂದಾವನೀ ?]

ಬೃಂದಿಗ (ನಾ). (ಬಂಧುಗಳ) ಗುಂಪಿನಲ್ಲಿರುವವನು; ಕುಟುಂಬಿ: ಉಡುರಾಜಂ . . . ನೆಲಸೆ ವಿಶ್ವಾಸದೊಳ್ ವಿಶ್ವಮಾ ಪಡೆಗುಂ ಬೃಂದಿಗಸಖ್ಯಂ (ಪಾಕ. ೦೬-೬). [ಬೃಂದ + —ಇಗ]

ಬೃಂದಿಷ್ಠ (ನಾ). ೧. ಅತಿಶಯವಾದ ಮನೋಹರತೆಯನ್ನುಳ್ಳದ್ದು: "ಬಹಳ ದುನೋಹರವಾದುದು ಬೃಂದಿಷ್ಠವು ಎಂದರ್ಥವಾಗುತ್ತದೆ" (ಕಾಶಾ. ೦೬. ೨೫೬). ೨. ಅತ್ಯಂತ ಶ್ರೇಷ್ಠನಾದವನು: ಕಷ್ಟ ಭುಷ್ಟ ಕನಿಷ್ಠ ದಕ್ಷಿಣೇಸಮ್ಯೂಯಿಷ್ಟಬೃಂದಿಷ್ಠ ನಾದಿಷ್ಟೋತ್ಕೃಷ್ಟಸಿಷ್ಠದಾಧ್ವರಹರಂ . . . ರಕ್ಷಿಕೈ ವಿ.ರೇಶ್ವರಂ (ಪಾಪ್ರಶ್ವ. ೦-೬). [ಸಂ.]

ಬೃಂದೆ (ನಾ). ೧. ತುಳಸಿಯಂ ಗಿಡ. ೨ = ಬೃಂದಾವನ ೧: ಎರಡು ಎಲುಬಿನ ಗೂಡು, ಒಂದಾದೊಡನೆ ನೋಡು, ಹಿಂದಿನಾ ಬಡುಗಾಡು ಬೃಂದ ಮಾಯ್ತು (ಪಾಂಚಾ. ೬೪-೦೬). ೩. ಕಾಲನೇಮಿಯೆಂಬ ರಾಕ್ಷಸನ ಮಗಳು; ಜಲಂಧರ ರಾಕ್ಷಸನ ಹೆಂಡತಿ: ೪. ವಿಷ್ಣುಭಕ್ತನಾದ ಕೇದಾರರಾಜನ ಮಗಳು. ೫. ರಾಧೆಯ ಹದಿನಾರು ಹೆಸರುಗಳಲ್ಲಿ ಒಂದು. [ಸಂ. ಬೃಂದಾ]

ಬೃಂಹಿತ (ನಾ). ಆನೆಯ ಘೀಳು: "ಬೃಂಹಿತಮದು ವಾರಣಾ ಶಬ್ದಿತಂ" (ಜಿಪು. ೬೮. ೦೦-೬೬); ಆ ವಿಜಯಪ್ರಯಾಣಭೇರೀನಿನಾದಮುಂಭೋಧಾರಗಂಭಿ: ರಾಂಭೋಧರಸ್ತನಿತ ಬಹಳಸ್ಫೂರ್ಜಿಗಳಪ್ಪ ಮದಸ್ತಂಬೇರಮ ಬೃಂಹಿತಂಗಳಿಂದಂ . . . ಸಂದಣಿಸಿ (ಪಂಪ. ೦೬-೮೫ ಪ); ಕಾರಿ ಮುಂಗಿಲ ಮೊಳಗಂ ಮುಸುಳಿಸಿ ಘೀಳ್ಗೆತ್ತು ಬೃಂಹಿತಂ ಕಾಸಸದೊಳ್ (ಸಂಶಾಪಾ. ೦೦-೦೫೬): ಒಂದು ಕಡೆಯಲಿ ತಟಿಗಳ್ಬುರ ಒಂದು ಕಡೆಯಲಿ ರಥದ ಚೀತ್ಕೃತಿ ಕರಿಯ ಬೃಂಹಿತವೆ (ಕೌಶಾ. ೫೫-೦೦). [ಸಂ.]

ಬೃಂಹಿತಂಗೆಯ್ (ಕ್ರಿ). ಘೀಂಕಾರ ಮಾಡು; ಘೀಳಿಡು: ದಿಕ್ಕುಂಭಿಗಳ್ಬೃಂಹಿತಂಗೆಯ್ಯುಂಗುಡಿಗಳ್ಗಡದು ಪೊಯ್ದು ಮಾಮಸಂ ಮಸಗಿ ಕೋಲಾಹಲಂ ತನಿಸಗಿ . . . ದೆಟ್ಟ ಸಿಳ್ಳೆ ಕುಬ್ಜಬೆಮ ದುಷ್ಪ್ರಜಂಗಳಂ (ಪಾಪ್ರ. ೬-೨೦ ಪ). [ಬೃಂಹಿತ + ಕೆಯ್,]

ಬೃಂಹಿತಧ್ವನಿ (ನಾ). ಆನೆಯು ಘೀಳಿಡುವ ಶಬ್ದ: ಮದಗಜಬೃಂಹಿತಧ್ವನಿ ತುರಂಗಮ ಹೇಷಿತಘೋಷ[ಪೂರ]ದಮೊರ್ಮೆ ದಲೆ ಪರ್ಯೂಧಿವಿಂಧ್ಯಸಮಹಾ ರವಮುಂ ಗೆಲೆ (ಪಂಪಾ. ೬-೫೬); ರಣವಾದವಂತಿಗಳ ಹೇಷಾರವಂಗಳಂ ಬೃಂಹಿತಧ್ವನಿಗಳಂ . . . ರಣತಿಬಿರಮೆಸೆದತ್ತು (ಪಾಪ್ರ. ೦೬-೪೬). [ಸಂ.]

ಬೃಂಹಿತೆ (ನಾ). = ಬೃಂಹಿತ: ಕರಿಯ ಬೃಂಹಿತೆ ಕೇಳಿ ಮದದಿಕ್ಕರಿಗಳೆಲ್ಲಿ ದವೆ (ಕೌಶಾ. ೪೦-೪). [ಸಂ. ಬೃಂಹಿತ]

ಬೃಂಹಿಸು (ಕ್ರಿ). = ಬೃಂಹಿತಂಗೆಯ್: ಸಿಂಹನಾದಕೆ ಸೆಡೆದತ್ತಿಲ್ಲ ಕದಲುತ ಬೃಂಹಿಸುವಾನೆಯೊಡ್ಡಿನೊಳು ಸಿಂಹಪರಾಕ್ರಮನಿದಿರೆಮ್ದು ಕಂಡನು (ಪಚಿ. ೨೨-೨೬). [(ಸಂ. ಬೃಂಹಣ) + — ಇಸು]

ಬೃಗ 'ಭಿಕ್ಷ್' ನೋ.

ಬೃಸಿ (ನಾ). ಯೋಗಿಗಳ ಆಸನ: "ಪ್ರತಿಗಳ ಆಸನವು ಬೃಸಿ (ಬೃಸಿ) ಯೆಂಬುದು" (ಪಂಚಾಮು. ೬೬-೨೫೬); ಈ ವಿಧದಿ ರಘುವರನ ತಪ್ತನ ವಂಶೋತ್ಪನ್ನ ಪ್ರೀತಿಯಿಂ ಸಂಗ್ರಹಿಸಿ ಬೃಸಿಯ ಮಧ್ಯದಿ ಮಂಡಿಸಿ (ಪಂಗಾಪು. ೦-೦೩-೬೯). [ಸಂ. ಬೃಸಿ]

ಬೃಹಂದಳೆ (ನಾ). ಪಾಂಡವರ ಒಂದು ವರ್ಷ ಅಜ್ಞಾತವಾಸದ ಕಾಲದಲ್ಲಿ ವಿರಾಟರಾಜನ ಆಸ್ಥಾನದಲ್ಲಿ ನಾಟ್ಯಾಚಾರ್ಯನಾಗಿ ನಪುಂಸಕ ವೇಷದಲ್ಲಿದ್ದ ಅರ್ಜುನನ ಹೆಸರು: ರಂಭೆ . . . ಒಂಬತ್ತಂದೊಳೆ ಬೃಹಂದಳೆಯಾಗೆಂದು ಪಮನಿದು ಶಾಪವನಿತ್ತಳ್ (ಪಂಪಾ. ೫-೨೯); ಕೇಳಿರಿ ಕಂಕಭಟ್ಟನೆ ಯುಧಿಷ್ಠಿರಂ . . . ದಾಳಿಯರಂ ದಲಾಡಿಪ ಬೃಹಂದಳೆ ಫಲ್ಗುಣಂ (ಪಂಪಾ. ೯-೬). [< ಸಂ. ಬೃಹನ್ನಲಾ]

ಬೃಹಚ್ಚರಣ (ನಾ). ದೊಡ್ಡದಾದ ಪಾದವುಳ್ಳವನು: ಬೃಹಚ್ಚರಣಂ ಸ್ಥೂಲಾಂಗಂ ಸೂಕರವದನಂ ಕರ್ಕಟಾದಿಮದ್ರೇಕ್ಷಣಂ (ಪಾಪ್ರ. ೦೯-೦೦). [ಸಂ.]

ಬೃಹತಿ (ನಾ). ೧. ಅಧಿಕವಾದುದು: ಹೆಚ್ಚಾದುದು. ೨. ದೊಡ್ಡದಾದ ವೀಣೆ. ೩. ನಾರದನ ವೀಣೆ. ೪. ಹೆಗ್ಗುಳ್ಳದ ಗಿಡ: "ಗುಳ್ಳಂ ಬೃಹತಿಯಕ್ಕುಂ" (ಪಂಗಾಪು. ೬೯-೦೯). ೫. ಶಲ್ಯ; ಉತ್ತರೀಯ: "ಬೃಹತೀ. ೧ ರಾವುಗುಳ್ಳದ ಗಿಡ. ಪಾದ ೧ಕ್ಕೆ ೯ ಅಕ್ಷರಗಳುಳ್ಳ ಛಂದಸ್ಸು. ಅಧಿಕವಾದ್ದು. ಉತ್ತರೀಯ" (ಕಾಶಾ. ೦೬. ೨೯೩). ೬. ಮಾತಂ; ನುಡಿ. ೭. ವೇದ. ೮. [ಛಂದ] ಪ್ರತಿಯೊಂದು ಪಾದದಲ್ಲಿ ಒಂಬತ್ತು ಅಕ್ಷರಗಳಿರುವ ಒಂದು ಸಮವೃತ್ತ: ಇಷ್ಟತ್ಕಾರು ಬಗೆಯ ಅಕ್ಷರಛಂದಸ್ಸಿನಲ್ಲಿ ಒಂಬತ್ತನೆಯದು: ಉಕ್ಕೆ ಅತ್ಯುಕ್ಕೆ ಮಧ್ಯ ಪ್ರತಿಷ್ಠೆ ಸುಪ್ರತಿಷ್ಠೆ ಗಾಯತ್ರಿ ಉಷ್ಣಿಕ್ ಅನುಷ್ಟುವ್ ಬೃಹತಿ . . . ಉತ್ಕೃತಿ—ಎಂದಿವ್ಕಕ್ಷಾಖ್ಯ ಛಂದಂಗಳಕ್ಕುಂ (ಕಂದೋಗಾ. ೦-೪೬) ೯. [ತತ್ತ್ವಶಾ] ಪರಮಾತ್ಮ: ಪರಬ್ರಹ್ಮ: ಆದ್ಯಂತ ೭.೨ ಸಾವಿರ ನಾಡಿಗಳ ದೇವತೆಗಳಲ್ಲಿಯೂ ನಾಡಿಗಳಲ್ಲಿಯೂ ತಚ್ಛಬ್ದವಾಚ್ಯನಾಗಿದ್ದುದರಿಂದ ಬೃಹತೀ ಎಂಬ ನಾಮವು ಶ್ರೀಪರಮಾತ್ಮನಿಗೆ ಪ್ರಾಪ್ತವಾದುದು (ತತ್ತ್ವಶಾ. ೯-೬ ಶಾತ್ಪರ್ಯ). [ಸಂ. ಬೃಹತೀ]

ಬೃಹತಿಕೆ (ನಾ). ಹೊದೆಯುವ ವಸ್ತ್ರ; ಶಲ್ಯ; ಉತ್ತರೀಯ: "ವೈಕಕ್ಷ್ಯಂ. ಉತ್ತರಾಸಂಗಃ. ಬೃಹತಿಕಾ—ಈ ೩ ಉತ್ತರಾಸಂಗಂ" (ಪಾಶಾಮು. ೬೯-೨೩೬). [ಸಂ. ಬೃಹತಿಕಾ]

ಬೃಹತೀಫಲ, ಬೃಹತೀಳ (ನಾ). ಹೆಗ್ಗುಳ್ಳದ ಕಾಯಿ: ತೂರ್ಮನೆರ್ದೆಯೊಡೆದಂ ಬೃಹತೀಫಲಮನು ಪಜ್ಜಿದಾತಾಮಯಂ (ಶಿಪು. ೯೪-೨೦). ಬೃಹತೀಳಕ್ಕೆ: ಸ್ಫುರಾಂಪತಿತ ಸಾರವ ಸ್ಫಳಬೀಜವಂ ಕೊಂಡು . . . ಬೃಹತೀತ(ಫ)ಳ ಕ್ಷಾರದಾರಿಬೆಳ್ ಪದಿದುಕೊಡು ಧೂಪಿಸಿ ವಿಳಗದಿಂ ತಪ್ಪದಿಂ (ಪಚಿಳಿಪ. ೬-೬). [ಸಂ.]

ಬೃಹತೀಳ 'ಬೃಹತೀಫಲ' ನೋ.

ಬೃಹತ್ಕಥೆ (ನಾ). ೧. ದೊಡ್ಡ ಕಥೆ: ಈ ಮುಖ್ಯವಾದ ಆಖ್ಯಾನವೇ ಅನೇಕ ಉಪಾಖ್ಯಾನಗಳನ್ನೊಳಗೊಂಡು ಒಂದು ಬೃಹತ್ಕಥೆಯಾಗಿದೆ (ಕಾಪಿ. ೦೦೦). ೨. ಸಂಸ್ಕೃತದಲ್ಲಿ ಗುಣಾಢ್ಯನೆಂಬ ಕವಿಯಿಂದ ರಚಿತವಾದ ಒಂದು ಕೃತಿ: ಬೃಹತ್ಕಥೆಯ ಆಧಾರದ ಮೇಲೆ ಬರೆದುವು —ಸ್ವಪ್ನವಾಸವದತ್ತ, ಪ್ರತಿಜ್ಞಾಯೌಗಂಧರಾಯಣ (ಬಹುಶಃ) ಅವಿ ಮಾರಕ, ಚಾರುದತ್ತ (ಕಂಚಾಕಿ. ೬೬). [ಸಂ. ಬೃಹತ್ಕಥಾ]

ಬೃಹತ್ಕರಿಸು (ಕ್ರಿ). ದೊಡ್ಡದಾಗಿ ಮಾಡು : ಮ್ಯಾಕ್‌ಡೂಗ್ಲಮು ಹೇಳುವಂತೆ ಮಿದುಳನ್ನು ಬೃಹತ್ಕರಿಸಿ . . . ಆಧುನಿಕಯಂತ್ರಗಳ ಸಮೇತ ಇಟ್ಟು (ಮುಂ. ೨೩). [(ಸಂ. ಬೃಹತ್ಕರಣ) +—ಇಸು]

ಬೃಹತ್ತು (ಗು). ೧. ದೊಡ್ಡದಾದ : ಗಾತ್ರವಾದ : ಗುರುಗಾತ್ರ ಭವ್ಯದಿಂ ಪರ್ವತಸಹೋದರತೆಯನಾತುದು ವಿಯಚ್ಚುಂಬಿಭೈರವಬೃಹತ್ಕಾರವಂ (ಕ್ರೀಡಾಕಥಾ. ೨೫೬-೬೪). (ನಾ). ೨. ದೊಡ್ಡದಾದುದು; ಹಿರಿದಾದುದು: "ಬೃಹತ್. ಉರು, ಗುರು, ವಿಸ್ತೀರ್ಣಾ . . . ಭದ್ರಂ. ವರಿಷ್ಠಂ — ಈ ೧೨ ಹಿರಿದು" (ಹಲಾಯು. ೦೦೬-೦೮); ಮಹದಾದಿಗಣಕ್ಕೆ ನಪುಂಸಕಲಿಂಗದಲ್ಲಿ ಪ್ರಥಮೈಕವಚನದ ಮೇಲೆ ದ್ವಿತ್ವದಿಂ ಉತ್ವಪುಕ್ಕುಂ ಮಹತ್ತು, ಬೃಹತ್ತು, ಪ್ರಾಕ್ಕು, ಅವಾಕ್ಕು, ಸಮ್ಯಕ್ಕು—ಎಂಬಂತೆ (ಪಣಿ. ೫೬ ೦೫೭). ೩. ವಿಶಾಲವಾದುದು; ವಿಸ್ತಾರವಾದುದು. ೪. ಅಧಿಕವಾದುದು; ಹೆಚ್ಚಾದುದು. ೫. ಬಲವಾದುದು; ಶಕ್ತಿಯುತವಾದುದು. ೬. ಒತ್ತಾದುದು; ಸಾಂದ್ರವಾದುದು. ೭. ಪೂರ್ಣವಾಗಿ ಬೆಳೆದುದು. ೮. (ಶಬ್ದದಂತೆ) ಜೋರಾದುದು.

[ಸಂ. ಬೃಹತ್]

ಬೃಹತ್ಸಂಹಿತೆ (ನಾ). ಜ್ಯೋತಿಶ್ಶಾಸ್ತ್ರಕ್ಕೆ ಸಂಬಂಧಿಸಿದ ವರಾಹಮಿಹಿರನ ಒಂದು ಕೃತಿ : ಸ್ತ್ರೀಯರ ವಿಷಯದಲ್ಲಿ ಬಹುಉದಾತ್ತವಾದ ಭಾವನೆಯುಳ್ಳ ವ್ಯಕ್ತಪಡಿಸಿರುವವರಲ್ಲಿ ಬೃಹತ್ಸಂಹಿತೆಯ ಕರ್ತೃ ವರಾಹಮಿಹಿರನು ಅಗ್ರೇಸರನು (ಕರ್ನಾ. ೧೨೬). [ಸಂ. ಬೃಹತ್ಸಂಹಿತಾ]

ಬೃಹದಾಕಾರ (ನಾ). ದೊಡ್ಡ ಆಕಾರ; ಹಿರಿಯ ಗಾತ್ರ : ಬೃಹದಾಕಾರ ಉಳ್ಳವು . . . ಜಾಸಿಪ ನೇಲೆ ಹೊರಳಾಡುವುದು ಕಂಪಿಸುವುದು ಆದ ಪಗಡಿದಾಳಿಗಳು ನನ್ನನ್ನು ಸಂತೋಷಗೊಳಿಸುತ್ತವೆ (ಕುಗಾ. ೪೦೨) : ಹಲವಾರು ಪ್ರಶ್ನೆಗಳ ಮಾಲೆ ಒಮ್ಮೆಲೆ ಕಾಣಿಸಿಕೊಂಡು ಈ ಸಮಸ್ಯೆಯ ಬೃಹದಾಕಾರವನ್ನೂ ಜಟಿಲತೆಯನ್ನೂ ತೋರಿಸುತ್ತದೆ (ಪ್ರಾಪ್ರ. ೫೦).

[ಸಂ.]

ಬೃಹದಾರಣ್ಯಕ (ನಾ). ದಶೋಪನಿಷತ್ತುಗಳಲ್ಲಿ ಒಂದು; ಶತಪಥ ಬ್ರಾಹ್ಮಣದ ಕಡೆಯ ಆರು ಪ್ರಪಾಠಕಗಳೆಂಬ ಭಾಗಗಳನ್ನೊಳಗೊಂಡ, ಯಜುರ್ವೇದದ ಕಾಣ್ವಶಾಖೆಗೆ ಸಂಬಂಧಿಸಿದ ಉಪನಿಷತ್ತು : ಬೃಹದಾರಣ್ಯಕದಲ್ಲಿ ಯಾಜ್ಞವಲ್ಕ್ಯನಿಗೂ ಗಾರ್ಗಿಗೂ ನಡೆದ ಚರ್ಚೆ ಪ್ರಸಿದ್ಧವಾದುದು (ಕರ್ನಾ. ೨೬೯) ; ಯಜುರ್ವೇದದ ಕಾಣ್ವ ಶಾಖೆಯ ಶತಪಥಬ್ರಾಹ್ಮಣದ ಕಡೆಯ ಕೆಲವು ಅಧ್ಯಾಯಗಳೇ ಬೃಹದಾರಣ್ಯಕ (ಪಾಲಿ. ೬೮). 'ತೈತ್ತಿರೀಯ' ಪರಾ. [ಸಂ.]

ಬೃಹದ್ಗ್ರಂಥ (ನಾ). ದೊಡ್ಡ ಕೃತಿ.—ಹೊತ್ತಗೆ : ಎರಡು ಮೂರು ವರ್ಷಗಳ ಕೆಳಗೆ ಹೊರಬಂದ ಭದ್ರಿರಾಜು ಕೃಷ್ಣಮೂರ್ತಿಯವರು ಬರೆದ ತೆಲುಗುಭಾಷೆಯ ಮೂಲ ಧಾತುಗಳು ಎಂಬ ಬೃಹದ್ಗ್ರಂಥ ಅಮೂಲ್ಯ ಕಾಣಿಕೆ (ಜ್ಞಾವಿ. ೫). [ಸಂ.]

ಬೃಹದ್ಭಾಗ್ಯ (ನಾ). ಅತಿಶಯವಾದ ಐಶ್ವರ್ಯ : ಧರ್ಮಂ ವಿಶ್ವಾಸ ಸಶ್ರುತಾತಿಶಯಮಂ ಧರ್ಮಂ ಬೃಹದ್ಭಾಗ್ಯಮಾಂ . . . ಧರ್ಮಂ ಧಾರ್ಮಿಕನಪ್ಪವಂಗೆ ಕುಡುಗುಂ ನಿರ್ವಾಣಕಲ್ಯಾಣಮಂ (ಸುಖಚ. ೬-೮೨). [ಸಂ.]

ಬೃಹದ್ಭಾನು (ನಾ). ೧. ಬೆಂಕಿ: ಅಗ್ನಿ : "ಸಪ್ತಾರ್ಚಿಃ. ಬಹುಲಃ . . . ಬೃಹದ್ಭಾನುಃ. ಆಶ್ರಯಾಶಃ . . . ಪುರಾಶನಃ—ಈ ೪೦ ಹಿಡಿನ ಪೆಸರ್" (ಪಣಿಮು. ೦೩-೬೫): ಮಹಾತೇಜಸ್ವಾಗಿರ್ಪುದರಿಂದ ಬೃಹದ್ಭಾನುವೆಂಬುದು ಪೆಸರು (ಪಾಣಿಣಿ. ೧೩). ೨. ಸೂರ್ಯ. ೩. ವಿಷ್ಣುವಿನ ಹೆಸರು. ೪. ಹರಳುಗಿಡ. [ಸಂ.]

ಬೃಹದ್ರಥ (ನಾ). ೧. ದೊಡ್ಡ ರಥ : ರಥದಿಂದಂ ಮುಂಟಿ ಪುನೋರಥಂ ದುನೋರಥದಿಪೆತ್ತಲದು ದುಂಜಿ ಬೃಹದ್ರಥಮೀಂತು ಪೆರತರಾಜನ ರಥದ ಮುನೋರಥದ ವೇಗಮೊದವಿದುದಾಗಳ್ (ಆದಿಪ. ೮೨-೩೦). ೨. ಇಂದ್ರ. ೩. ಮಹಾಭಾರತದಲ್ಲಿ ಬರುವ ಒಬ್ಬ ರಾಜನ ಹೆಸರು; ಜರಾಸಂಧನ ತಂದೆ. ೪. ಶಕ್ತಿಶಾಲಿಯಾದ ನಾಯಕ. ೫. ಸಾಮವೇದದ ಒಂದು ಭಾಗ. [ಸಂ.]

ಬೃಹನ್ನಡೆ (ನಾ).=ಬೃಹಂದಳೆ : ನಾಸು ಕಿವಿಗಳ್ಗಿ ಕುಂಡಲಗಳನ್ನಿಟ್ಟು ಪಡೆ ಹೆಣ್ಣುಕೊಂಡು ಬೃಹನ್ನಡೆಯೆಂಬ ಹೆಸರಿನಿಂದ ರಾಜನ ಅಂತಃಪುರದ ಜನರಿಗೆ ಕಥೆಹೇಳುತ್ತ ಗೀತನೃತ್ಯಗಳನ್ನು ಹೇಳಿಕೊಡುತ್ತ ಕಾಲ ಕಳೆಯುತ್ತೇನೆ (ವಡಾ. ೦೮೭). [ಸಂ. ಬೃಹನ್ನಡ]

ಬೃಹನ್ನಳೆ (ನಾ).=ಬೃಹಂದಳೆ : ಪಿಂದುಗಳೆಪುದೆ ಕರಿಸು ನಮ್ಮ ಬೃಹನ್ನಳೆಯನು (ಕುಚಾಸಿ. ೩-೩೦).

[ಸಂ. ಬೃಹನ್ನಲ, ಬೃಹನ್ನಲಾ]

ಬೃಹಸ್ಪತಿವಾರ (ನಾ). ಬೃಹಸ್ಪತಿವಾರ : ಗುರುವಾರ : [ಶ್ರೀ][ನು] ಚ್ಚಾಳುಕ್ಯವಿಕ್ರಮ[ವ]ರ್ಷದ ೨೬ನೆಯ ವಿಜ[ಸಂ]ವತ್ಸರದ ಕಾರ್ತ್ತಿಕ ಸು ೮ ಬೃಹಸ್ಪತಿವಾರದಂದು (ಶಾಂಶಿ. ೦೨-೬ ; 1101).

[<ಸಂ. ಬೃಹಸ್ಪತಿವಾರ]

ಬೃಹಸ್ಪತಿ (ನಾ). ೧. ಅಂಗಿರಸನ ಮಗ; ದೇವತೆಗಳ ಗುರು; ವಾಚಸ್ಪತಿ: "ಏಜುಸ್ಪತಿಃ. ಅಂಗಿರಸಃ. ಬೃಹಸ್ಪತಿಃ. ಗುರುಃ···ಚಿತ್ರಶಿಖಿಂಡಿಪ್ರಸೂತಿಃ (ಕಥತೇ)—ಈ ೮ ಬೃಹಸ್ಪತಿಯ ಪೆರ್" (ಹಲಾಯು. ೯-೧೭) ; ಭಾರತೀಯಪುರಾಣಗಳಲ್ಲಿ ಬೃಹಸ್ಪತಿಯೇ ಸಲಹೆದೇವತೆಗಳಿಗೂ ಪುರೋಹಿತನೆಂದು ಹೇಳಿದೆ (ಕ್ಯಾಚಿಪ್ರ. ೦೫೮). ೨. ಮೂವತ್ತಾರು ಜನ ಸ್ಮೃತಿಕಾರರಲ್ಲಿ ಒಬ್ಬಾತನ ಹೆಸರು : ಈ "ಸ್ಮೃತಿಕಾರರು—೩೬ : ಮನು, ವಿಷ್ಣು, ಯಮ, ದಕ್ಷ, ಅಂಗಿರಸ್ಸು, ಅತ್ರಿ, ಬೃಹಸ್ಪತಿ, ಆಪಸ್ತಂಬ, ಉಶನಸ್ಸು, ಕಾತ್ಯಾಯನ, ಪರಾಶರ, ವಸಿಷ್ಠ, ವ್ಯಾಘ್ರ, ಸಂವರ್ತ, ಹಾರೀತ, ಗೌತಮ, ಪ್ರಚೇತ, ಶಂಕ, ಲಿಖಿತ, ಯಾಜ್ಞವಲ್ಕ್ಯ, ಕಾಶ್ಯಪ, ಶಾತಾತಪ, ಲೋಮಶ, ಜಮದಗ್ನಿ, ಪ್ರಜಾಪತಿ, ವಿಶ್ವಾಮಿತ್ರ, ಧೌಮ್ಯ, ಬೌಧಾಯನ, ಪಿತಾಮಹ, ಭಾಗಲೇಯ, ಜಾವಾಲೀ, ಮರೀಚಿ, ಚ್ಯವನ, ಭೃಗು, ಋಷ್ಯಶೃಂಗ, ನಾರದ" (ಕ್ರೀಚಕ್ಷ. ೩೦೩) : ಬೃಹಸ್ಪತಿಯ ಅಧಿಪ್ರಾಯಗಳೂ ಯಾಜ್ಞವಲ್ಕ್ಯನ ಅಧಿಪ್ರಾಯಗಳನ್ನೇ ಬಹುಮಟ್ಟಿಗೆ ಹೋಲುತ್ತವೆ (ಕರ್ನಾ. ೦೯). ೩. [ಜ್ಯೋತಿ] ಸೌರವ್ಯೂಹದಲ್ಲಿಯ ಅತಿದೊಡ್ಡ ಗ್ರಹ ; ಗುರುಗ್ರಹ : ಬೃಹಸ್ಪತಿಯು ಅತಿವೇಗದೊಡನೆ ತನ್ನ ಸುತ್ತಲೂ ತಾನೇ ಹತ್ತು ಗಂಟೆಗಳಿಗೆ ಕಡಿಮೆಯಾದ ಕಾಲದಲ್ಲಿ ತಿರುಗುತ್ತದೆ (ಕ್ಯಾಚಿಪ್ರ. ೦೩೦). ೪. [ಸಂಗೀತ] ಒಂದು ರಾಗದ ಹೆಸರು : ಕೌಶಿಕೆ, ವೇಳಾವಳಿ . . . ಬೃಹಸ್ಪತಿ . . . ಶಮಸೋದರಿಯೆಂಬ ಮೂವತ್ತಾಸಾಲ್ಕು ಭಾಷಾಂಗದಿಂದಾವ ರಾಗಂಗಳು (ಪಣಿ. ೦೬೮). [ಸಂ.]

ಬೃಹಸ್ಪತಿಮತ (ನಾ). ಬೃಹಸ್ಪತಿಯ ಮತ ; ಚಾರ್ವಾಕ ಮತ ; ನಿರೀಶ್ವರವಾದ: ಬೃಹಸ್ಪತಿಮತಾವಸಾರಿಯಪ್ಪ ಮಹಾಮತಿ ನುಡಿದು (ಆದಿಪು. ೨-೯ ಪ); ಆ ನೆವದಿಂದಂ ಶ್ರಾವಕಮಾನಿಗಳನೇಕವಿಧದಿನುಪಜೀವಿಪರಜ್ಞಾನಿಗಳ ಬುದ್ಧಿಪೌರುಷಹೀನನಮಜೇಯಕೃತಂ ಬೃಹಸ್ಪತಿಮತದೊಳ್ (ಶಾಂಪು. ೬-೦೩೦). 'ಲೋಕಾಯತಿಕ ಮತ' ಪರಾ. [ಸಂ.]

ಬೃಹಸ್ಪತಿವಾರ (ನಾ). ಬೃಹಸ್ಪತಿಯು ಅಧಿಪತಿಯಾಗಿರುವ, ವಾರದ ಐದನೆಯ ದಿನ ; ಗುರುವಾರ : ಪ್ರತಿ ಬೃಹಸ್ಪತಿವಾರ ಹುಣಸೂರಿನಲ್ಲಿ ವಿಶೇಷದಿನ (ಕರ್ನಾಮು. ೪೯). [ಸಂ.]

ಬೆ (ನಾ). [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ : ಬೆ. ವನ್ನಿ, ದುವು, ನಯನ . . . ದಂಪತಿ ಇಂತಿನಿತುಂ ೨ಕ್ಕೆ ಪೆಸರು" (ಕ್ಯಚಣಾ. ೦೦-೦೦). [?]

ಬೆಂ೧ 'ಬೆನ್' ನೋ.

ಬೆಂ೨ 'ಬಿಸಿಂ೨' ನೋ.

ಬೆಂಕಟ್ಟು (ನಾ). ಕಟ್ಟಡದ ಸೂರಿನ ಮೇಲುತುದಿ: ಎರಡೂ ಕಡೆಯಂ ಹೆಂಚುಗಳ ಹಂದರಗಳು (ಪಾರುಗಳು) ಕೂಡುವ ಭಾಗ : ಹುಲು ಹೊಚ್ಚಿ ಬೆಂಕಟ್ಟಿನ ಮೇಲೆ ತಲೆಹಂಚು ಹಾಕುತ್ತಾರೆ (ಮುಂಡಿಯ. ೭-೦೦೯).

[ಬೆಂ೧ (<ಬೆನ್) + ಕಟ್ಟು೨]

ಬೆಂಕಿ 'ಬೆಂಕೆ' ನೋ.

ಬೆಂಕೆಕಡ್ಡಿ (ನಾ). ಗೀರಿದರೆ ಉರಿ ಬರುವಂತೆ, ತುದಿಯಲ್ಲಿ ರಂಜಕಾಂತವನ್ನು ಪೆತ್ತಿರುವ ಕಡ್ಡಿ: ದೀಪದ ಕಡ್ಡಿ : ಬೆಂಕೆಕಡ್ಡಿ : ಒರಟು ಮೈಮೇಲೆ ತುಸು ಒತ್ತಡ ಹೇರಿ ಉಜ್ಜಿದಾಗ ಸುಲಭವಾಗಿ ಬೆಂಕಿ ಹೊತ್ತುವ ರಾಸಾಯನಿಕ ಲೇಪಿತ ತುದಿಯುಳ್ಳ ಮಾರದ ಕಡ್ಡಿ (ಕಾರ್ಕಳ. XII, ೦೮೧).

[ಬೆಂಕೆ (<ಬೆಂಕೆ) + ಕಡ್ಡಿ]

ಬೆಂಕೆಗಣ್ಣಿ 'ಬೆಂಕೆಗಣ್' ನೋ.

ಬೆಂಕೆಗೆಳೆಯ (ನಾ). ಬೆಂಕೆಯ ಸ್ನೇಹಿತ; ಅಗ್ನಿಸಖ : ವಾಯು: ಬೆಂಕೆಗೆಳೆಯನ ಸುತಂ ತನ್ನಿಷ್ಟಲಿಂಗದಿರವಂ ಕಾಣದಂಗದೊಳು ಸಾವೊಡುಮ್ಮುಗಿಸ (ಅಕಿಕ. ೬-೩೨). [ಬೆಂಕೆ (<ಬೆಂಕೆ) +ಗೆಳೆಯ (<ಕೆಳೆಯ)]

ಬೆಂಕೆಪಟ್ಟಣ 'ಬೆಂಕೆಪೊಟ್ಟಣ' ನೋ.

ಬೆಂಕೆಪೆಟ್ಟಿಗೆ (ನಾ). ಬೆಂಕೆಕಡ್ಡಿಗಳಿರುವ ಪೊಟ್ಟಣ : ಬೆಂಕೆಪೊಟ್ಟಣ; ಕಡ್ಡಿಪೆಟ್ಟಿಗೆ : ಅವರು ದೀಪಹಚ್ಚಲು ಬೆಂಕೆಪೆಟ್ಟಿಗೆ ತಂದರು (ಕೂಡ).

[ಬೆಂಕೆ (<ಬೆಂಕೆ) + ಪೆಟ್ಟಿಗೆ]

ಬೆಂಕೆಪೊಟ್ಟಣ, ಬೆಂಕೆಪಟ್ಟಣ (ನಾ).=ಬೆಂಕೆಪೆಟ್ಟಿಗೆ : ಸಮಯುಕ್ತಿ ಅಂತ ಮೋಂಬತ್ತಿ, ಬೆಂಕೆಪೊಟ್ಟಣ ಎರಡನ್ನೂ ಇರಿಸಿರುವರು (ಕಂಗೂಡ. ೦೮೦); ಬೆಂಕೆಪೊಟ್ಟಣದ ಕಾರ್ಖಾನೆಯೊಂದು ವಿಶೇಷಲಾಭ ಹೊಂದುತ್ತಿದ್ದರೂ ಕೆಲಸಗಾತಿಯರಿಗೆ ಬಹಳ ಕಡಿಮೆ ಸಂಬಳ ಕೊಡುತ್ತಿತ್ತು (ಶ್ರಾಕಾ. ೧೩). **ಬೆಂಕೆಪಟ್ಟಣ** : ಕಿಸೆಯಲ್ಲಿ ಬೀಡಿಪಟ್ಟು ಬೆಂಕೆಪಟ್ಟಣ ಬೇರೆ ಇಂಬಹುದೂ ಏನೋ! (ಕ್ರಕ್ಷ. ೫೫). [ಬೆಂಕೆ (<ಬೆಂಕೆ)+ಪೊಟ್ಟಣ (<ಪೊಟ್ಟಳ)]

ಬೆಂಕೆ, ಬೆಂಕೆ (ನಾ), ೧. ಉರಿ ; ಕಿಚ್ಚು; ಅಗ್ನಿ : "ನಿದಾಳಿಃ, ಘರ್ಮಃ— ಈ ೨ ಬೆಂಕೆಯ ಪೆಸರ್" (ಶಂಂಡು. ೬-೨೦); ಭಟರ್ . . . ಜ್ವೇಷ್ಮ ಮಾಸದ ಬಿಸಿಲುಂ ರುಳೆಯಮುಂ ಬೆಂಕೆಯುಂ ಕಿಚ್ಚುಮಂ ಸೈರಿಸಿ . . . ಮೋಕ್ಷಕ್ಕೆ ಪೋದರ್ (ಪಾಣ್ಣ. ೦೦೯-೦೬); ಕವಿಪರ್ವ ಬೆಂಕೆಯೊ[ಳಾ] ದಿಸಿದರ್ ಬೊಗವನವರಸುಂದರಿಯರ್ಕಳ್ (ಪಂಚಾ. ೮೮-೦೮೬); ಸುರ ಸಿಂಧುವಂ ತಳೆದ ಶಂಭು ನಿಜಾಕ್ಷಿಯ ಬೆಂಕೆ ಸೋಂದಿರ್ದೊಡೆ ... ಎಂತು ನಿಶ್ಚರಿಪರೆಂಬಿತಾದುದು ಮಾಘಡಂಬರಂ (ಕ್ರಕ್ಷ. ೬-೩೨). ೨. ಉಷ್ಣ; ತಾಪ : ತಚ್ಛಶಿಕಾಂತಶಿಳಾತಳಂ ಸಿಡಿಲ್ದಂಡೊಡದತ್ತಿದೇಂ ಬಿಸುಪೋ ಬೇಟದ ಬೆಂಕೆ ಮೃಗಾಂಕವಕ್ತ್ರಮುಂ (ಪಂಪಾ. ೩-೭): ಮುಖೇಂದು ಬಿಗುರ್ತಿರೆ ಸುಮ್ಮು ಬೆಂಕೆಯುಂ ನಿದುಪಮಳುಂಬುವಪ್ಪಿನಿಂ ... ಪಲವಾಡಿದರಂದಚಿತ್ತಾಂಗನಾಜನಂ (ಆಪು. ೬-೦೩೦); ಮಂದು ಬಿಸುಪಿಂ ಸುಮ್ಮಿಲಿತ ಬೆಂಕೆಯಿಂ ವನಂ ಕೊರೆಗುಂತ್ಕಮಿರೆ (ಪಂಪಪು. ೦೨-೦೦೬). **ಬೆಂಕೆ** : ೧. ಗಜದ ದಂತದಂತೆ ಬೆಂಕೆಯುಷ್ಣದಂತೆ ... ಪಜವಜಃಮೇಷಿಗಳೊಳಪ್ಪ ಪತ್ತುಗೆವೆರಸು (ಧರ್ಮಾಮೃ. ೩-೦೫೩); ವಾಪ್ಯಮಂ ಜಾಳಿಸಿ ಜಾರುವಂ ಬಿಲೆಲೊಳಿಕ್ಕುವ ಬೆಂಕೆಜೊಳಿಂ ಕಾಸಿಕೊಡಾಳಿಸಿ ಸಂದುಕೋಲ ಕುಡಿಗಟ್ಟುವ . . . ಶಬರರ್ಕಳಿಸೊಪ್ಪದುದೊಂದು ವಕ್ಕಣಂ (ಶಾಸುಚ. ೦೦-೦೧೮); ಅಂಕುರವಡೆದ ಪೂಗಿಡವ್ಯಕ್ಷಿ ಲತವೇರ್ಗ ಬೆಂಕೆಮಾ ಹರಿಂದಂತಾಯ್ತು (ಜೋತಪ. ೫೬-೨೦). ೨. ಕೊಳನಂ ಪುಗಿಸೆ ಮೆಯ್ಯ ಬೆಂಕೆಯಿಂ ಜುಯ್ಯೆಂದು ಪೊರೆಗಟ್ಟಿ ಬಿಸುಪು ತೆರೆ ತಾಮ್ಮುಟ್ಟಿ . . . ಕಾದ ನೀರ್ ಕಾಯಮಂ ಸುಡೆ (ಗಿಪು. ೨-೦೦೬ ಪ).

ಬೆಂಕೆ ಉಗುಳು= (ಆಲಂ) ಅತಿಯಾದ ಕೋಪವನ್ನು ತೋರು; ಬಹಳ ಕ್ರೋಧವನ್ನು ಸೂಚಿಸಂ : ಶಾನಭಾಗರು, ಶಾನಭಾಗರ ಮನೆಯವರು ಎಂದರೆ ಇಷ್ಟೊಂದು ಬೆಂಕೆ ಉಗುಳುತ್ತಾನಲ್ಲ ಮಾತಿನಲ್ಲಿ? (ಹೂಡುಂ. ೬೪). **ಬೆಂಕೆ ಕಾರು**=೧. ಬೆಂಕೆಯನ್ನು ಉಗುಳು,—ಹೊರಹಾಕು : ಅಗ್ನಿಪರ್ವತ ಬೆಂಕೆಕಾರಿ ನೂರಾರು ಜನರು ಸತ್ತರು (ಕಂಷ). ೨. (ಆಲಂ) ತಾಪವನ್ನು ಹೆಚ್ಚುಮಾಡು : ಹುಡುಕಿದರು ಕಂದ ಸಿಗದಲ್ಲಿ ಎಂಬ ಸುದ್ದಿ ಕಿಡಿಕಿಡಿ ಬೆಂಕೆ ಕಾರಿತ್ತು (ಸಿದ್ಧಕೃ. ೨-೧೧). ೩. ಬಹಳ ಕೋಪವನ್ನು ತೋರು; ಸಿಟ್ಟಗೇಳು : ತಪ್ಪು ಮಾಡಿದ ಹುಡುಗನ ಮೇಲೆ ಮಾಸ್ತರರು ಬೆಂಕೆಕಾರಿದರು (ಕೂಷ). **ಬೆಂಕೆಕೋಳಿ**= ಪಕ್ಷಿ ಜಾತಿಯಲ್ಲಿ ಅತಿ ದೊಡ್ಡದಾದ ಕೋಳಿ; ಉಷ್ಟ್ರಪಕ್ಷಿ ; P ಈ ಪಕ್ಷಿಯು ಬೆಂಕೆಯನ್ನು ನುಂಗಬಲ್ಲುದೆಂಬ ನಂಬಿಕೆ ಪ್ರಚಾರದಲ್ಲಿದೆ : "ಉಷ್ಟ್ರ ಪಕ್ಷಿ ... ಬೆಂಕೆಕೋಳಿ" (Ostrich, ೨೦೦೩). **ಬೆಂಕೆ ತೋರಿಸು** = ಬೆಂಕೆಯನ್ನು ಹುಟ್ಟಿಸಿ; ಅಗ್ನಿಸ್ಪರ್ಶ ಮಾಡಿಸು : ಭರಂಗಿಯ ದುದ್ದಿಗೆ ಬೆಂಕೆತೋರಿಸಿದ ಸಮಯವನ್ನೂ ಅದರ ಆಸ್ಫೋಟನೆಯಾ ತೀಳಿಬಂದ ಸಮಯವನ್ನೂ . . . ಪರಿಶೀಲಿಸಿ ಶಬ್ದದ ವೇಗವನ್ನು ಗಾಣಿತ ಮಾಡಿದರು (ಶಾಕಾ. ೦೮೦). **ಬೆಂಕೆ ಬೀಳು**=ಬೆಂಕೆ ತಗಲು : ಅಗ್ನಿಸ್ಪರ್ಶವಾಗಂ : ಹುಲ್ಲುಮಾದಗ ಬೆಂಕೆಬಿದ್ದು ಸುಟ್ಟುಹೋಯಿತು (ಕೂಷ). **ಬೆಂಕೆ ಹಚ್ಚಿಸು**=ಉರಿಯನ್ನು ಉಂಟುಮಾಡು : ಬೆಂಕೆಹಚ್ಚಿಸುವಿನ್ನು ನೀರಿಗೋಡಾಡುವಿರೆ? (ಕಕ್ಕಕ. ೧೦-೦೦). **ಬೆಂಕೆ ಹಚ್ಚು**=ಬೆಂಕೆ ಹಚ್ಚಿಸು : ಕಾಡಿ ಬೆಂಕೆಹಚ್ಚಲು ಹೃಗ್ಳೆ ಮಾಡರಿಲ್ಲ (ಕಾವಣ. ೫೫). **ಬೆಂಕೆಹತ್ತು**= ಉರಿತಗಲು; ಹತ್ತಿಕೊಳ್ಳು : ಗದ್ದಕ್ಕೆ ಬೆಂಕೆಹತ್ತಿದಾಗ ದಾವಿ ತೋಡುವು ಹೊರಟರು (ಗಾಪ). **ಬೆಂಕೆ ಹಾಕು**=ಬೆಂಕೆ ಹಚ್ಚಿಸು : ಅವರ ಮನೆಗ ಬೆಂಕೆ ಹಾಕೆ ಉರಿಸಿಬಿಡುತ್ತೇನೆ (ಅಮಗ. ೫೬).

[ದೇ.ತ ತಮಿ. ವೆಕ್ಕೈ; ಮಲ. ತೆಲು. ವೆಕ್ಕ ; ತುಳು. ಬೇಂಕೆ]

ಬೆಂಕೆಗಣ್, ಬೆಂಕೆಗಣ್ಣಿ (ನಾ). ಜ್ವಾಲೆಯನ್ನು ಸೂಸುವ ಕಣ್ಣು; ಅಗ್ನಿಯನ್ನು ಕಾರುವ ನೇತ್ರ : ತಳನ ಬೆಂಕೆಗಣ್ಣ ಬಾಂಧವನೆಸೆ ಕಾರಿ ದುರ್ದಿಸಿದವಪ್ರತಿಮಮಲ್ಲರನಿಷ್ಟ ಮಲ್ಲರಂ (ಪಾಂ. ೬-೭೩): ಆ ದಾವಾಗ್ನಿ ಬೆಂಕೆಗಣ್ಗಳೆನ ಸಿಡಿದೇಳ್ದ ಕೆಂಗಿಡಿಗಳಿಂ ಸೂಸಿಧುದು ತೋರ ಕಾರಯು ಕೆಂಡಧಾರೆಯಂ (ಶ್ರೀಧಾಪು. ೦೫೬-೬೨೨). **ಬೆಂಕೆಗಣ್ಣಿ** : ಕೈ ಪಂಜುಗಳನ ಬೆಂಕೆಗಣ್ಣಿ ನಂಜೊಜಿವಾಯ ಗೋದಣವಲ್ಲ ಭೂತಗಳ್ ಮುಂಜುಳವೆನ ನೆಗಹಿದುವು (ಕೂಷಕ. ೫೯-೦೦). [ಬೆಂಕೆ + ಕಣ್]

ಬೆಂಕೆಮೆಟ್ಟು (ನಾ). ಕುದಿಯುತ್ತಿರುವ ಲಾವಾರಸವನ್ನು ಉಗುಳುವ ಬೆಟ್ಟ; ಅಗ್ನಿಪರ್ವತ : ಬೆಂಕೆಮೆಟ್ಟುಗಳೊಕರಿಸಿದುವು ಭಯಂಕರ ಯುಗಾಂತಕಧ್ವಾಗ್ನಿಯಂ (ಶ್ರೀಧಾಪು. ೦೦೬-೦೧೬).

[ಬೆಂಕೆ + ಮೆಟ್ಟು೨ (< ಮೆಟ್ಟು)]

ಬೆಂಕೊಳ್ 'ಬೆಂಗೊಳ್' ನೋ.

ಬೆಂಕೊಳಿಸು (ಕ್ರಿ). ೧. ಹಿಂಬಾಲಿಸುವಂತೆ ಮಾಡು; ಅನುಸರಿಸುವಂತೆ ಮಾಡು : ಹರಣಮಂ ಕೂಡಿಕೊಂಡಿರ್ದಿನಂ ಕಳ್ಪರದಾತ್ಮಪ್ರಾಣಮಂ ಬೆಂಕೊಳಿಸಿ ಬರಿಸಿದ್ಪ (ಪ್ರಕಾ. ೫೯-೩೦). ೨. ಬೆನ್ನು ತೋರಿಸುವಂತೆ ಮಾಡು : ಓಡಿಹೋಗುವಂತೆ ಮಾಡು : 'ಆಹವದೊಳು . . . ಸಾಮಸದಿಂ ಪಡ್ಪಿಡಿಸಿ ದೆಂಕೊಳಿಸುವ ಸೋಹಿಲ್ಲದಂತೆಯುಮೇಳ್ (ಗೂಷ್ಕು. ೭-೦೦೨). [ಬೆಂಕೊಳ್ (< ಬೆಂಗೊಳ್) +—ಇಸು೨]

ಬೆಂಕೊಳು 'ಬೆಂಗೊಳ್' ನೋ.

ಬೆಂಗಟೆ (ನಾ). ಮನೆಯ ಮೇಲೆ ಹೆಚ್ಚು ಹೊದಿಸಲು ಸಿದ್ಧಪಡಿಸಿದ ಬಿದಿರಿನ ತಡಿಕೆ : ಕಾಣಸುತ್ತಿದೆ ಬಿಡಾರದ ಬೆಂಗಟೆಯಿಂದ ನೇತಾಡುತ್ತಿದ್ದ ಹಿಡಿಜಡ ನಿಶ್ಚಲ ಕೃಷ್ಣ-ಕಳೇವರ! (ಪುಕಾ. ೧೩೬). [?]

ಬೆಂಗಡೆ₁ (ನಾ). ೧. ಬೆನ್ನಿನ ಭಾಗ : ಹಿಂಭಾಗ : ಹಿಂಬದಿ : ಹೊಂಗಡ್ಜೆ ಬಡಮವಿಲ್ಲದ ಹೊನ್ನಂಡಗಾತಿಯರು ಬೆಂಗಡೆಯ ಸಾರಿದರು ರುಕ್ಮಿಣಿಯ (ಕೋಚಕ. ೦೪-೭೦). ೨. ಹಿನ್ನೆಲೆ : ಆಡುವ ಮಾತಿನ ಬೆಂಗಡೆಯಲ್ಲಿ ಏನೋ ಅಪೂರ್ವರಹಸ್ಯ ಹುದುಗಿದೆ (೬೦೫೮. ೨೫೫). ೩. (?). ರನ್ನನ ಪೆರ್ಮಾಡರ್ಗಳೋಲಗಳವಟ್ಟು ಬಿತ್ರಂಜ ಮಂತ್ರಿನ ಬೆಂಗಡೆಗಳ್ ಪೊದಳ್ದು ಕೋಳ್ಗಳೆ ನೆರೆಯಾಗಿ ಕಂಗೊಳಿಪುದು (೫೦೬೭೬. ೩-೦೨೦).

[ಬೆಂ₁ (<ಬೆನ್) + ತಡ್₂]

ಬೆಂಗಡೆ₂ (ನಾ). ದೋಣಿಯನ್ನು ನಡೆಸುವ ಹುಟ್ಟು : "ಅಂತ್ರಂ, ಕೇನಿವಾತಕ್ಕ—ನಾವೆನಡೆಸುವ ಹುಟ್ಟಿನ ಹೆಸರು. ಬೆಂಗಡೆಯಾ ಎಂಬರು" (೫೫೫೫. ೦೦೦). [ಬೆಂ₁ (<ಬೆನ್) + ಗಡ₁ (<ಗಡು³)]

ಬೆಂಗದನಾಥ (ನಾ). ಒಬ್ಬ ತಪಸ್ವಿಯ ಹೆಸರು : ಸತ್ಯಶೌಚೀಲಾಚಾರಸವ್ಯನ್ನ ಬೆಜ್ಜಗದಾಥ ಶ್ರೀಮ[ತ್] ಪೊಮ್ಮಲ್ಲಪೊಡೆಯಮ್ (೬೪. ೫, ೬೦೦೫೦. ೬೯-೪ ; ೫೦೦). [< ಸಂ. ವೇದನಾಥ]

ಬೆಂಗದಿರ್ 'ಬಿಸುಗದಿರ್' ನೋ.

ಬೆಂಗದಿಸ 'ಬಿಸುಗದಿರ' ನೋ.

ಬೆಂಗದಿರು 'ಬಿಸುಗದಿರ್' ನೋ.

ಬೆಂಗದಿರುಗಲ್ (ನಾ). ಸೂರ್ಯಕಾಂತ ಶಿಲೆ : ಸರಸಿಜಾಲಯೊಳು ಸೋಟಂ ಪ್ರತಿವಿರೋಧಕರೊಳಜಿ ಚಾಂತೆ ಪಾಂಸುಶಾಪಕ್ಕಿಯೋಳ್ ಸುಯ್ಯೆಂಗದಿರುಗಲ್ಲೊಳಂ ತಾಪ ವಿಳಾಶಯುಲೂಹದೊಳ್ (೫೦೦೫೫. ೫೫-೫೬). [ಬೆಂಗದಿರು (<ಬಿಸುಗದಿರ್) + ಕಲ್₂]

ಬೆಂಗರೆ (ನಾ). (ಕರಾ) (ಬಿಳಿಯ ಮರಳಿನ) ಕಡಲಿನ ಕರೆ ; ಸಮುದ್ರದ ದಂಡೆ : ಹೊಳೆಯಿಂದಂ ಬಡಗಲು ಬೆಂಗರೆಯಿಂದಂ ಮುಡಲು (೫೫೦. ೦೯೭೦. ೫೦೫೫. ೩೮೦-೦೯ ; ೧೨೮೦); ಬೆಂಗರೆಯ ಮೇಲೆ, ಕಡಲುಗಾಳಿಗ ಮಾಪಿ ಒಡ್ಡಿ. ನಡೆಯುವುದು ಸ್ಪಷ್ಟ ಆಟವಲ್ಲ (೫.೬೫೦. ೩); ಬೆಂಗರೆ ಮನೋಹರವಾಗಿ ತೋರುತ್ತಿತ್ತು (೫೦೫೬. ೩೨). [←ತುಳು. ಬೆಂಗರೆ. ಬೆಂಗ್ರೆ]

ಬೆಂಗಲ್ 'ಬಿಸುಗಲ್' ನೋ.

ಬೆಂಗಲ (ನಾ). ಸುಟ್ಟ ಮಜಕೆ ; ಬೆಂದ ಮಡಕೆ : ಬೆಂಗಲ. ಬೆಂಗದಿರ್; ಬೆಂದೊಳಲೆ. ಬೆನ್ನೀರ್ (೫೫೦೮. ೫. ೦೯೩ ಕ್ರಿಶೀ).

[ಬೆಂ₂ (<ಬಿಸುದು) + ಕಲ್₁]

ಬೆಂಗಲ್ಲಿ 'ಬೆನ್ನಲ್ಲಿ' ನೋ.

ಬೆಂಗಳೂರು 'ಬೆಂಗಳೂರ್' ನೋ.

ಬೆಂಗಱೆ (ನಾ). ಬೆನ್ನಿನಲ್ಲಿ ಸಾಗಿಸುವ ಬಾಣ : ನಿಜಂಬದ್ಧನಾಯು ತಮಮನೀಕ ಕಂತುಮಿಸೆ ಪಟ್ಟು ತುಜುಂಗಿದ ಬಾಣಬಾಲದೀ ಕ್ಷಿತಿಗೋಜಗಿತ್ತು ಬೆಂಗಱೆಗಳಮ್ಮೆದ ಕೂರ್ಮಸಮಾಜಮೆಂಬಿನಂ (೫೫೫೫. ೦೦-೭೦).

[ಬೆಂ₁ (<ಬೆನ್) + ಗಱ್]

ಬೆಂಗಾಡು, ಬೆಗ್ಗಾಡು, ಬೆಳ್ಳಾಡು (ನಾ). ೧. ಸುಟ್ಟುಹೋದ ಕಾಡು : ಅಗ್ನಿಸ್ಪರ್ಶವಾದ ಅರಣ್ಯ : ಕಾಳ್ಕಿಚ್ಚಿನಿಂದ ಆ ಪ್ರದೇಶವೆಲ್ಲ ಬೆಂಗಾಡಾಗಿದೆ (೭೫೨). ೨. ಬೆಳೆ ಬೆಳೆಯದ ಪ್ರದೇಶ: ಬರಡುಭೂಮಿ: ಸುವಮರು ಇಪ್ಪತ್ತು ಮೂವತ್ತು ಹಳ್ಳಿ ಬಂಗಾಡು ಸುಂಟೋಕೊಪ್ಪಾಗಿದೆ (೫೦೯೫. ೦೭೦) ; ಐದು ವರ್ಷಗಳೊಳಗೆ ೧೫ ಚದರಮೈಲಿ ವಿಸ್ತೀರ್ಣ ಬೆಂಗಾಡಾಗಿ ಬೀಳುಬಿದ್ದಿತು (೫೫೦೫. ೨೨). **ಬೆಗ್ಗಾಡು** ೨. ಬೆಗ್ಗಾಡು ಮೊರಡಿಯಲ್ಲಿ ಪಸುರೆರಚುವೆ ಸುರಾಹೊಗೆಯು ಕೆಳಲ ತಂಪಾವೆ (೧೯೫೫. ೦೦-೦). **ಬೆಳ್ಳಾಡು.** ೩. ಹೆಣವನ್ನು ಸುಡುವ ಜಾಗ ; ಶ್ಮಶಾನ : ಆಕೆಯಂ ಬೆಳ್ಳಾಡೊಳ್ ಮಸಣದೊಳ್ ಕೊಂಡುಪೋಗಿಕ್ಕಿಂ (೫೦೫೫. ೦೮೨-೩). [ಬೆಂ₂ (<ಬಿಸುದು) + ಕಾಡು₂]

ಬೆಂಗಾಣ್ (ಕ್ರಿ). (ಇತರರು ತನ್ನ) ಬೆನ್ನನ್ನು ನೋಡು ; ಓಡಿಹೋಗುವುದನ್ನು ಕಾಣು : ಪಚ್ಚವಡು ಬೆಂಗಾಣದ ನಿಚ್ಚಟಗಲಿ ಮಾನಹ ಬಿಟ್ಟ ದೇವಂ (೫೪. XII, ೪೯೫೫. ೪೯-೦೪ ; ೧೧೫೦). [ಬೆಂ₁ (<ಬೆನ್) + ಕಾಣ್]

ಬೆಂಗಾಣಿಸು (ಕ್ರಿ). ಬೆನ್ನನ್ನು ತೋರಿಸು ; ಹಿಮ್ಮೆಟ್ಟು ; ಓಡು : ಕಾಣುತ ಬೇಡರ ಪಡೆ ಹೆದರಿಲ್ಲಿಗೆ ಬಾಣವ ಹೂಡಿ ಬೊಬ್ಬಿಜ್ಜಿದು ಹೂಣಿಕವಿದೆಯಲು ಮಧವನು ಬೆಂಗಾಣಿಸಿ ದಾರಳಿದ ಪುರಿಗೆ (೫೫೦೫೫೦. ೬-೨೯). [ಬೆಂ₁ (<ಬೆನ್) + ಕಾಣಿಸು]

ಬೆಂಗಾವು. ಬೆಂಗಾಹು (ನಾ). ಬೆನ್ನಿನ ಹಿಂದೆ ಇದ್ದು ಕಾಯುವುದು ; ಬೆಂಗಾವಲು ; ಅಂಗರಕ್ಷಣೆ : ಆ ಕುದುರೆಯು ಬೆಂಗಾಪಿನ ದಿಕ್ಕಿಡದ ಗಂಡುಗಲಿಗಳ ಗಂಡು ರಾಘವಾವರಜನೆನ್ನನಿಂತು ಪೇಟ್ಟಟ್ಟಿದಂ (೫೫೫೫. ೦೪೨-೦೬) ; ಬೆಳ್ಳಿಯ ಕಟ್ಟಿನ ನೇಜಿಯುದವರು (ಭಕ್ತಿಯ ಸೈನ್ಯ) ಬೆಂಗಾಪಿನವರಿಗಾ ಬರುತ್ತಿದ್ದರು (೪೫೫೫. ೦೬೯). **ಬೆಂಗಾಹು** : ಸ್ಕಂಧಪನ ಬೆಂಗಾಹಿನ ಭುಟರು ಭಾರಣಿಯಲೊದಗಿದರಂ (೪೦೫.೮. ೨೨-೩೦).

[ಬೆಂ₁ (<ಬೆನ್) + ಕಾವು]

ಬೆಂಗಾರ್ (ನಾ). ಕಾರ್ಗಾಲದ ಅನಂತರದ ಸಮಯ : ಅಂಗಮ್ಮಂ ಗಯ್ . . . ಬೆಂಗಾರ್ ಬಂಬಿಲಿವ ಸ್ಯಯಿಭಾವಾಪ್ಕಂ (೫೫೫. ೫. ೦೬೬ ೦೫೫). [ಬೆಂ₁ (<ಬೆನ್) + ಕಾರ್₂]

ಬೆಂಗಾರಿಸು (ಕ್ರಿ). ಸುಡು : ತಾಪಗೊಳಿಸು : ಅಡಗಲ್ದಳು ಕಡುಮೋಪ ಮುಪವನು ಹಿಡಿದು ಬೆಂಗಾರಿಸುತ ಕಾಂತೆಯ ನುಡಿದು ಬಂಧನವಾಗಿ (೫೫೫. ೨೯-೦೬). [ಬೆಂ₂ (<ಬಿಸುದು) + ಗಾರಿಸು]

ಬೆಂಗಾಲ್ (ನಾ). ಕಾಲಿನ ಹಿಂಭಾಗ : ಪಜ್ಜೆಯ ಹಿಂಭಾಗ : ಅನ್ಯಯೋಭಾವಕ್ಕೆ . . . ಬೆಂಬಿಲಿಲ್, ಬೆಂಗಾಲ್, ಬಟ್ಟಿರಲ್ (೫೬:೮.೫- ೦೬೬ ಕ್ರಿಶೀ)- [ಬೆಂ₁ (<ಬೆನ್) + ಕಾಲ್₁]

ಬೆಂಗಾವಲ್. ಬೆಂಗಾವಲು. ಬೆನ್ನುಗಾವಲು (ನಾ). = ಬೆಂಗಾವು : ಜನ್ಮಗಾದುರೆ ಬೆಂಗಾವಲ್ಗೆ ಸೈನ್ಯಸಾಗರ ಸಹಿತ . . . ಪೊರಮಟ್ಟು (೫೫೨೦೫. ೫೦-೦೯೫). **ಬೆಂಗಾವಲು** : ಬೆಂಗಾವಲಾಗಿರ್ದ ಪಟುಭಟರ್ಮಿಜ್ಜಾದ ತುರಂಗಯುಗಮಂ ಕಾಣದೈತಂದು (೬೫೫೫. ೫೯-೬) ; ಪಸ್ತು ಒಡನೆ ಆ ಕುಟುಂಬದ ಬೆಂಗಾವಲಿಗೆ ನಿಂತವು (೦೬೪೫. ೪೬). **ಬೆನ್ನುಗಾವಲು** : ರಣೋತ್ಸಾಹವಳ್ಳ ಅರ್ಜುನನೂ ಮಹಾಬಲನಾದ ಭೀಮಸೇನನೂ ಬೆನ್ನುಗಾವಲಾಗಿರಲು (೬೫೫೫. ೩೨೮). [ಬೆಂ₁ (<ಬೆನ್) + ಕಾವಲ್₁]

ಬೆಂಗಾವಲು 'ಬೆಂಗಾವಲ್' ನೋ.

ಬೆಂಗಾವು 'ಬೆಂಗಾವು' ನೋ.

ಬೆಂಗಾಳು (ನಾ). ಬಿಸಿಯಾದ ಕಾಳು : ಒಂದು ಹಿಡಿ ಜೀರಿಗೆಯನ್ನು ನಸುಗೆಂಪಾಗಿ ಹುರಿದು ಬೆಂಗಾಳಾಗುವ ಹಾಗೆ ನೀರ ತಳದಲಿ (೫೪೬. ೦೩೦). [ಬೆಂ₂ (<ಬಿಸುದು) + ಕಾಳು₂ (<ಕಾಟು²)]

ಬೆಂಗಿ 'ವೆಂಗಿ' ನೋ.

ಬೆಂಗಿಮಂಡಳ (ನಾ). ಒಂದು ದೇಶದ ಹೆಸರು ; ವೆಂಗಿನಾಡು : ಆ ಮೇರುಮಹಾ ಹಿಮಗಿರಿಸೀಮಾವಸಿತಳ[ತ] ಬೆಂಗಿಮಂಡಳದೊಳ್ ಜೆಲ್ವಾ ವಗಮು ತನಗದೊಂದೂರ್ ನಾಮದೊಳಂ ವೆಂಗಿಪಟು (೫೦೫೫. ೦೪-೧೦). [ಬೆಂಗಿ (<ವೆಂಗಿ) + ಮಂಡಳ (=ಮಂಡಲ)]

ಬೆಂಗುಡಗಿ (ನಾ). ಗೊಂದಲ ; ಗಜಬಿಜ : ಏನು ಸಬಾನೋ ಸಬಾ. ಪಚ್ಚ ಬೈಗೋಳು—ಬಡಬಾಟ—ಬೆಂಗುಡಗಿ ! (೫೫೫೦. ೪೩). [?]

ಬೆಂಗುಡು 'ಬೆಂಗೊಡು' ನೋ.

ಬೆಂಗಳೂರ್. ಬೆಂಗಳೂರು (ನಾ). ಒಂದು ಊರಿನ ಹೆಸರು : ಕರ್ನಾಟಕದ ಈಗಿನ ರಾಜಧಾನಿ : ಶ್ರೀಮತ್ ನಾಗತರಸ ಮನೆವಗತಿ

ಪೆಬ್ಬೊಣಸಿಟ್ಟ ಬೆಂಗಳೂರ ಕಾಳಗದೊಬಿಳ್ಳಾಗತರನ ಮಗಂ ಬುಟ್ಟಣವತಿ ಸತ್ಯಂ (ಶ. IX (೩). ಕಂಗಳ. ೦೬೨-೪ ; ಸು. ೦೦೦). **ಬೆಂಗಳೂರು :** ಬಳರಾಪುರ ಬೆಂಗಳೂರು ಕೋಳಾಲದಿಳೆಯನ್ಕಾರುಜಿ ಕಂಗೆಟ್ಟು ಕಳತಂತ್ರವ ನೀಗಿ ತಮ್ಮಯ ಪುರಗಳ್ಗೆ ತಳುವದೆ ಸರಿದರು (ಕಂಚಿ. ೩-೨೨) ; ಭಗವನ್ನಗಿರಿ ಗೋಸಾವಿ ಬೆಂಗಳೂರು ವಳಗಡಿ ಬೇಗೂರುಹಾಲ್ಲುಕು ಪೈಕಿ ತಾಪರೇಕರೆಗ್ರಾಮಕ್ಕೆ ಪೂರ್ವದಿಕ್ಕಿನಲ್ಲಿಯಿರುವ ಧರ್ಮಾದೀಕ್ಷಿತರ ಭೂಮಾನ್ಯದ ಹೊಲ ಪಿ ೧–೦–೨ (ಶ. IX. ಮೈಗಂ. ೩–೬ ; 1855).

[? + ಊರ್]

ಬೆಂಗೂಮು (ನಾ). ಬೆನ್ನಿನ ಬಾಗು.—ಡೂಗಂ : ಮಿಗೆ ಕಾಸ್ಯ ತಿರ್ದಿದಂತೆ ಪೊಲಗಲದ ಬೆಂಗೂನುಮಳೆದು ಸುನಂದಳೆದಾ ಜಗತೀಪತಿಯಂಗಂ ಪೊಗರುಗೆ ಸೌಂದರ್ಯಮಪೆ ತಾಳ್ದಿ ಕಂಗೊಳಿಸಲಿರೋದಂ (ಕ್ರಷ್ಣ. ೫೨–೧೫).

[ಬೆಂ$_1$ (<ಬೆನ್) + ಕೂನು$_3$ (<ಕೂನ್$_2$)]

ಬೆಂಗೆದಿಸು (ಕ್ರಿ). ಹಿಂದಕ್ಕೆ ಓಡಲು ಅವಕಾಶವಿಲ್ಲದಂತೆ ಮಾಡು : ಅಪಕರ್ಗಳು ಅಚ್ಚರಿಯೊಳೊಡನೊಡನೆ ಕಂಗೆಡಿಸಿ ಬೆಂಗೆಡಿಸಿ ಕೊಚ್ಚಿ ಕೊಯ್ದು (ಶಾಕ್ಯ. ೪೯–೪). [ಬೆಂ$_1$ (<ಬೆನ್) + ಕೆದಿಸು$_1$]

ಬೆಂಗೊಡತಿ (ನಾ). ಬೆನ್ನಿನಲ್ಲಿ ಧರಿಸಿರುವ ಕೊಡತಿ : ಪಡದುದಲ್ಲಿಂ ಮೇಲೆ ಪೆಲ ದಡದಡಿಸಲಾನೆಗಳಂಕುಶದ ಬೆಂಗೊಡತಿಗಳ ಬಲುಪೊಮ್ಮು ಬೊಬ್ಬೆಯು . . . ಕಳಕಳಿಕೆ ಕೂಗಿತ್ತ (ಕೂಮಾ. ೫-೬-೦೦).

[ಬೆಂ$_3$ (<ಬೆನ್) + ಕೊಡತಿ (<ಕೊಡದಿ)]

ಬೆಂಗೊಡು, ಬೆಂಗಡು, ಬೆನ್ನುಕೊಡು (ಕ್ರಿ). ೧. (ಯುದ್ಧದಲ್ಲಿ ಶತ್ರುಗಳಿಗೆ) ಬೆನ್ನುತೋರಿಸು ; ಸೋತು ಓಡು : "ಅಕ್ಕುಳಿಸಿತೆಮಂ . . . ಬೆಂಗೊಟ್ಟುದೆಮಂ . . . ಪಾರಗೆಯ್ದೆಮಂ—ಈ ೧೩ ಅವ ಸರಣಕ್ಕೆ ಬೆಸರ್" (ಶಾಂ. ೬೨-೬೯೯) ; ಕಾದುನ್ಮತ್ತವಾಳನೊಡಿದನವಂ ಬೆಂಗೊಟ್ಟು ಕಾಳ್ಕಟ್ಟಿದುಂ (ಪಾ. XX. ೦೨-೫೬ ; 1167); ಮುವಿಸರ್ಗ ಬೆಂಗೊಡದ ದೆಸೆಯೊಳತಿಲೋಭಿ ದುರ್ಜನರ ಮಾತಂ ಕೇಳದೆಡೆಯೊಳತಿ ಮುಖ್ಯ (ಪಚಂ. ೨-೦೭) ; ನದುಗಿ ಸ್ಥಂಗರಭೀತಿಯಲಿ ಬೆಂಗೊಡುವ ನಾದುಷವಾದಿಗಳ ವಂಗಡವ ನೋಡುತ ಮಜಿಯ ಚಕ್ರವ ತಿರದನುರಾರಿ (ಕಾಣ್ಯಕ್ರಿ. ೦೪–೨೩). ೨. (ಬೆನ್ನನ್ನು ಬೀಡಿ) ಆಧಾರವಾಗು ; ಆಶ್ರಯವಾಗು : ವ್ಯಂದಾರಕರಾದಿಯಾದ ರಾಕ್ಷಿಸರಾಜರೊಂದಾಗಿ ಸೊದೆಗಡಲ್ಗುದೆಮು ದುಂದನಗಿರಿ ಮುಳುಗಿದಪೆ ಕಚ್ಚಿವರೂಪಿನಿಂದ ಬೆಂಗೊಟ್ಟಾತನೀತ (ಪೋಚಪ. ೩೭–೨೬). **ಬೆಂಗುಡು :** ೧. ಪೂಳೆವಿದುಗಳ್ಗೆ ಬೆಂಗುಡೆ ಬೆಸಿದುವ ಬೆನ್ನಿಂದಮರ್ದಗೆ ಕದಿರ್ದುಜುಗಲೆನಲ್ ತೊಳಗಿದುವ ದವಸಶಿಖಿ ವಿಷ್ಣಳಮ್ಮದವನ್ನಸ್ತಹಸ್ರಸುಬೀಧಿಗಳ್ (ಶಾಪಂಷಿ. ೧೦೬) ; ಕೋಡೇಜಂಗೆ ಮಾಜೂಪೆಗಳ್ ರಣದೊಳ್ ಬಂಗುಡೆ ಜೋದರೆಜ್ಜ ಪಲವುಂ ನಾರಾಜದೇಜಂಗೆ ಬಲ್ಲಣಿಗಳ್ ಬೆಂಗುಡೆ (ಪಂಗಾಪ. ೦೩-೨೦). **ಬೆನ್ನು ಕೊಡು :** ೧. ಅವರು ಬೆನ್ನುಕೊಡಲಾಗಿ ಬೆಟ್ಟಿ ಪೊಸಕೋಬೆವೇಟ ವಳಗೂ ಪೊಕ್ಕು ಕವದು ಬಹುಜನಕ್ಕೆ ಜಯಿಂ ಪಸರಿ . . . ದೆಗಳೂರಿಗೆ ಬಂದು ದಾಖಲಾದರು (ಕ್ರಪ. ೨೦). [ಬೆಂ$_3$ (<ಬೆನ್) + ಕೊಡು$_1$]

ಬೆಂಗೊಳ್, ಬೆಂಕೊಳ್, ಬೆಂಕೊಳು, ಬೆಂಗೊಳಂ (ಕ್ರಿ). ಬೆನ್ನಟ್ಟು ; ಹಿಂಬಾಲಿಸು ; ಅನುಸರಿಸು : "ಬೆಂಗೊಳ್—ಅನುಧಾವನೇ (ಬೆನ್ನಟ್ಟು)" (ಪಾಪಾ) : ಬೆಳ್ಳೆರಲೆಯಂ ಬೆಂಗೊಂಬಂತೆ ತಗುಳ್ದು (ಪರಿಕಾಕ್ಯ. ೪-೨೩೨). **ಬೆಂಕೊಳ್ :** ಆ ಅರಸು ಬನ್ದು ಎಳಬ್ಬೆಸಾಯ ಮುಟ್ಟುಪೋಗೆ ಬೆಂಕೊಂಡ್ಯು ಕ್ಕಳಕ್ಕಾಟ್ಟಿಯೊ ಕಾದಿ ಸತ್ತಂ (ಶ. XV. ೦೮೫. ೨೦೫-೬ ; ೦೦೦) : ನಿನ್ನನುಬುಗಿಸಲುಮಾಜೆಯೊಳಿಸ್ಸಂ ಬೆಕೊಂಡು ಕಾವಲು ಬಂದೆಗಳ್ . . . ದೀರರ್ ಬೆನ್ನಿತ್ತುದನಿಸು ನೋಡ (ಪಂಚಾ. ೩-೭೩) ; ಕ್ರೂರ ಮೃಗಂಗಳೆದಂ ಕಂಡು ಬೆಂಕೊಂದು (ಪಂಚಪಂ. ೨೨೦-೭). **ಬೆಂಕೊಳು :** ಕೆಲರು ಪೂಗೊಂಚಲಿನ ತುಂಬಿಯು ಬಳಗವನ್ನು ಬೆಂಕೊಂಡಳು (ಶಾಬ್ರಿ. ೦೪-೪) ; ಬಿತ್ತರದೊಳಿತ್ತರಿಸಿ ಪರಗಣಂ ಸುರಗಣದ ಬೆಂಕೊಂಡುದು (ಪಾಪು. ೩೦-೧೩). **ಬೆಂಗೊಳು :** ಪಲವು ಪರಿಯಲಿ ಬೇಡಿ ಬೆಂಗೊಳುವ ಪದನಲ್ಲ ಮಾಪಸಿನೊಂದೇ ಪೂಜೆ ನಿನ್ನ ಸೇವನೆಗೆ (ಕಾಶಾ. ೦೦೦-೭).

ಬೆಂಕೊಳ್ಳನ ಕೋಲ್ = ಭೂಮಿಯನ್ನು ಅಳೆಯುವ ಒಂದು ಬಗೆಯ ಕೋಲು.—ಗಳೆ : ಸಿ[ರಿ]ಗಳದ್ವೈ[ಯಾ] ಕೆಜಿಯಂ ಪಡುವಲು ಬೆಂಕೊಳ್ಳನ ಕೋಲಲು ಬಟ್ಟು ಕೆಯಿ ಮತ್ತರು ಹತ್ತು ೩೩ (XXVII. ೬೨-೫೦ ; 1114) ; ಪಡೂಡಲು ಪದಿಮೂಜು ಗೇಣ ಬೆಂಕೊಳ್ಳನ ಕೋಲ ಮತ್ತರು ಪೂಜಿ (ಶ. II. ೦೨-೧೫ ; 1114).

[ಬೆಂ$_1$ (<ಬೆನ್) + ಕೊಳ್$_1$]

ಬೆಂಗೊಳು ‘ಬೆಂಗೊಳ್’ ನೋ.

ಬೆಂಗೋಡೆ (ನಾ). ಹಿಂಬದಿಯ ಗೋಡೆ : ಒಂಭಾಗದ ಭಿತ್ತಿ : ಗಗನದೊಳಗೆ ಬಂದು ಸ್ಪಷವ ಬೆಂಗೋಡೆಯೊಳಗಣಾದಿಜಪಬಿಂಬದಿರ ಗಗನವುರುಜ ಸಿದ್ಧಬಿಂಬಗಳಿಗೆ ಕೈಯ ಮುಗಿದೀಂದರು ಗಮಕದೊಳು (ಪಚ. ೦೩–೦೯೦). [ಬೆಂ$_1$ (<ಬೆನ್) + ಗೋಡೆ]

ಬೆಂಗೋಲು (ನಾ). ಬೆನ್ನಿಗೆ ಹೊಡೆಯಲು ಎತ್ತಿರುವ ಕೋಲು : ಜಗದ ಜಂಗುಳಿಗೆ ಬೆಗೋಲನೆತ್ತಿ ಕಾಡಿತ್ತು ಮಾಯೆ (ಪಾಪಚ. ೪-೦೩-೨೩). [ಬೆಂ$_1$ (<ಬೆನ್) + ಕೋಲು$_1$ (< ಕೋಲ್$_1$)]

ಬೆಂಚ ‘ಬೆಂಚಿ’ ನೋ.

ಬೆಂಚಗ (ನಾ). ಒಂದು ಬಗೆಯ ಪಕ್ಷಿ : ಬೆಳುಪ ಬೆಂಚ [ಪಾಪಾ. ೫೫]ಗ . . . ಮಾಡಗೊಳಲೆ ಮುಟ್ಟಿವಿಹಂಗವಿಲೆ ಬೈದೇಟು ಪೋದು (ಕೂಮಾ. ೬-೦-೩೩). [?]

ಬೆಂಚಿಯಹಂಬು (ನಾ). ಒಂದು ಬಗೆಯ ಬಳ್ಳಿ : ಜಾಗಿಲಲ್ಲಿ ಕಟ್ಟಿದ್ದಿ ತ್ತೊಂದು ಬಲುಬಂಗೋದಗಕ್ಕೆ ಬಾಯ ಅಣಲಿನ ಸಜವ ಕೂಳು ಉಡಿಯೊಳಗಳ ಬೆಂಚಿ [ಪಾಪಾ. ೬]ಯ ಹಂಬು ಹಂದಿನೊಳಗಳ ಬಮುಧಾಸ್ಯದ ತನೆ (ಕುಪಪಾ. ೪. ೫೬೯-೦೦೦೬). [? + ಹೆಂಬು$_3$ (<ಪದ್ಮ)]

ಬೆಂಚು (ನಾ). ೧. (ಸಾಮಾನ್ಯವಾಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕೂರಲು ಇರುವ) ಸ್ವಲ್ಪ ಎತ್ತರದ ಕಾಲಿರುವ ಉದ್ದವಾದ ಮಣೆ : ದೊತ್ತಸೇಂಜಿ ತಮೇಲಿ ಮದ್ಯ ಬೆಂಚು ಹಾಕಿಸಿ ಕೊತ (ಕಂಪಂ. ೩೩) ; ಸಾಕಾದಮ್ಮ ಬೆಂಚುಗಳರಲಿಲ್ಲ. ಹಲಗೆಗಳರಲಿಲ್ಲ (ಕಂಪಂ. ೩೫). ೨. ಒಬ್ಬರಿಗಿಂತ ಹೆಚ್ಚಾಗಿ ನ್ಯಾಯಾಧೀಶರಿರುವ ನ್ಯಾಯಾಸ್ಥಾನ ಮತ್ತು ಇಂತಹ ನ್ಯಾಯಾಸ್ಥಾನದಲ್ಲಿ ಕೂರಲು ಅರ್ಹನಾದ ವ್ಯಕ್ತಿ.— ನ್ಯಾಯಾಧಿಪತಿ : ದಾವೆಗಳನ್ನು ವಿಚಾರಿಸುವ ಬಗ್ಗೆ ವಿಶೇಷ್ಟ ಬೆಂಚುಗಳಲ್ಲಿ ಕೂತುಕೊಳ್ಳಲು ಅರ್ಹರಾದ ಜನರ ಪಟ್ಟಿಯಲ್ಲಿ . . . ಹೆಸರುಗಳು ಸೇರಿರಕ್ಕದ್ದು (ಸ್ಯಾಮಾ. ೦೦).

[← ಇಂ. Bench]

ಬೆಂಚಿ, ಬೆಂಚ (ನಾ). ಸಣ್ಣ ಹೊಂಡ ; ಚಿಕ್ಕ ಜಲಾಶಯ ; ಕುಂಟೆ : "ವಿವಾಸಂ, ಉದಪಾನಂ, ಪಾಪೀ, ಆಹಾವಃ—ಈ ೪ ಬೆಂಚಿ" (ಅಕಾಮು. ೦೦೬-೬೩) ; ಪೂಗೊಳಂ ತಾಪರೆಯುಂ ಬಕನಿಕರಲುಳಿತಕಲಾಪೋದಕ ವಿರಳೆದೊಳಂಜೆ ಬೆಂಚೆಯೊಳ್ ಮುಬುಕುವೋ (ಕಾಶ್ಯಕ. ೬೦೩) ; ಅಂಚೆ ಗಲ್ಲದ ಬೆಂಚೆ ಬೇಟಮಿಲ್ಲದ ಬೆಲೆಮೆಣ್ಗಳಲ್ಲ ಪೆಸಲ್ಲದ ಮಾಮಸರಿಲ್ಲ ದೆಲ್ಲಿಯುಂ (ಕ್ರಿಶಾ. ೨೬) ; ಅರಸಂಬೆಗಳ ಸಂಚಯಂ ಬೆಂಚೆಗಳೊಳು ಸಂಚರಿಸಲು ವಿನೋದದಿಂ (ಪಾಂಪ್ರಷ್ಟ. ೦೦-೨). **ಬೆಂಚಿ :** ಬೆರೆಯ ಬೆನ್ನಿಗ ಬಲ್ಲ ವೆರೆಯುನಂಬಿಗ ಬಲ್ಲ ಮರೆಯ ಬೆಂಚಿದಿಂದಜೀವಂತೆ ಸೂಳೆ ನೆಜ್ ಪೊಲುಜಜಳಿಯಿತಳು (ಸರಕ್ಕ. ೦೧೦೩).

[ದೇ.ನಾ ತೆಲು. ಬೆಂಚ]

ಬೆಂಜನ (ನಾ). ೧. ನಂಜಿಕೊಳ್ಳುವ ಪದಾರ್ಥ; ಬಾಡಿಸಿಕೊಳ್ಳುವ ವಸ್ತು: ನಂಚಿಕೆ : ಬಾಡುಂ ಬೆಂಜನಮುಂ ಕೂಬಂ ರುಚಿಮಾಡುವನಿತಲ್ಲದೆ ತಾಂ ಬೇಱೆ ತಣಿಪಲ್ಕೆಜೆಗುಮೆ (ಸುಭಷಂ. ೬೬-೮). ೨. [ವ್ಯಾಕ] ಸ್ವರಗಳ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸಲಾಗದ ವರ್ಣ; ವ್ಯಂಜನ : ದುತ್ವಲೋಪಕ್ಕೆ ; . . . ವ್ಯಂಜನ-ಬೆಂಜನ (ಕಾಮದ. ೨೫೦ ಕ್ರಡೀ). [< ಸಂ. ವ್ಯಂಜನ]

ಬೆಂಜನಂಗೆಯ್ (ಕ್ರಿ). ಬಾಡಿಸಿಕೊಳ್ಳುವ ಪದಾರ್ಥವನ್ನು ತಯಾರಿಸು; ವ್ಯಂಜನಪದಾರ್ಥವನ್ನು ಸಿದ್ಧಪಡಿಸು: ಆತನ ಮನೆಯೊಳರ್ಜಿತಂಗೆಯ್ವ ಸಮಯದೊಳು ನೂತನದಲಾಬೂಫಲದಿ ಬೆಂಜನಂಗೆಯ್ದು ಸಾತಿಶಯದಿಂ ಬೀಡಲು (ಸಿದ್ಧಚ. ೦೦-೯೯). [ಬೆಂಜನ + ಕೆಯ್₁]

ಬೆಂಡ (ನಾ). ಒಂದು ಮನೆತನದ ಹೆಸರಂ (?) : ತುಜುವ ಮೊಜುಕ ಕ್ರೊಳಿ ಬೆಣ್ಣಾರ ಮೂಕ ಕಾದಿ ೧೩೬೫ ಸತ್ತು ಸರ್ಗ್ಗಸ್ತನಾವಂ (ಎಳ. ೩ (೩), ಪುಗಣ. ೩೦೬-೨ ; ೧೮೦). [?]

ಬೆಂಡಾಡು (ಕ್ರಿ). ಬೆಂಡಿನಂತೆ ಹಗುರವಾಗಿ ಜಲಿಸು,—ತೇಲು : ಬೆಳ್ದಿಂಗಳೆಂಬ ಪಾಲ್ಗಡಲೊಳ್ ಬೆಂಡಾಡುವ ಚಕೋರಂಗಳಂ ನೋಡುತ್ತಾಂ ಮೆಲ್ಲಮೆಲ್ಲನೆ ಬರೆವರೆ (ಕಾಕ್ಕಟಿ. ೩-೦೫ ಪ). [ಬೆಂಡು + ಆಡು₁]

ಬೆಂಡಿಗ, ಬೆಂಡುಗ, ಬೆಂಡುಳಿಗೆ (ನಾ). ಒಂದೆ ಬಗೆಯ ಮರ : ಜಳ್ಳದ ಜಡುವಣಾಕ್ಷಿನ ಬೆಂಡಿಗದ ತಾಳಿಗೆ ತೆಂಕಣ ನೈಸುಖ್ಯದ ಪಡುವೆ ನೆಟ್ಟ ಕಲ್ಲು (ಎಳ. ೩೨೪. ಕ್ರಿ.ಸಂಕ್ರಂ. ೦೦೯-೩೩೬ ; ೧೮೭೬). **ಬೆಂಡುಗ** : ಕಪಿವೆ ಬೆಂಡುಗ ಕಾವಮರ ಕಂಚಾಳೆವು ಎಡವಿಡದಿಹ ಪುತ್ರಜೀವಿ . . . ಎಸೆದಿಹವು (ಕವಲೋಣಾ. ೦-೩೪) ; **ಬೆಂಡುಗೆ, ಬೆಂಡುಳಿಗೆ** (ಕ್ರಿ.ಪಾ. ೬೯-೧೧೦). **ಬೆಂಡುಳಿಗೆ** : ಬೆಂಡುಗ, ಬೆಂಡುಳಿಗೆ, ಸಾದುಕಾಳಿ, ಬೋಡು ಳಿಹುಲ್ಲು (ಸಸ್ಯಸಂ. ೦೦೬). 'ಬಿಂಡಿಗ' ನೋ. [?]

ಬೆಂಡು (ನಾ). ೧. (ಜೋಳ ಮುಂತಾದುವುಗಳ) ದಂಟಿನ ಹಗುರವಾದ ಒಳಭಾಗ : ಕಾಲಲಿ ಕಟ್ಟಿದ ಗುಂಡು ಕೊರೆಲಿ ಕಟ್ಟಿದ ಬೆಂಡು ತೇಲುವೀಯದು ಗುಂಡು ಮುಳುಗಲೀಯದು ಬೆಂಡು (ಪಾಪ.ಪ. ೦೦೬-೩೩೦); ಬೆಂಡಿರಪ ಮುಳುಗಿದರು ಗುಂಡಿದ್ದು ತೇಲಿದರು . . . ಸಾಲಿಗನು ಕೊಂಡದ್ದು ಕೊಡನು (ಸಭಾಪ. ೦೩೮). ೨. ತಿರುಳಿಲ್ಲದಂದು; ಸತ್ತ್ವವಿಲ್ಲದುದು; ಜಡವಾದುದಂ: ಈ ಕಜ್ಜದೊಳ್ನೀಂ ತೊಡರ್ದು ಮರುಳೆ ಬೆಂಡಾಗದಿರ್ (ಗಣಿತು.೯-೦೩); ಬೆಂಡಾಗೆ ಮನಂ ಮೌನಂಗೊಂಡಿರೆ ವಲ್ಲಭನ ಮಸವನಱವಾಗ್ಗಹದಿಂ ಪುಂಡೋದರಿ ಮಾಣದ ಬಿಸುಗೊಂಡಳ್ (ಕಂಗಾಸಾ. ೯-೦೩೬); ತಪನನುಷ್ಣತೆಯಿಂದ ತನುಲತೆ ಬೆಂಡಾಗಿ ಲಪನಾಂ ಭೋರುಪ ಕೊರಗಿ ಅಪರಾಹ್ಣಕಾಲದಿ ರತಿ ಶಂಬಾಸುರಸಮವನಮನು ಪೊಕ್ಕಳಂದು (ಪೋಚರ. ೯-೩೯). ೩. (ಜೋಳದ ದಿಂಡಿನಾಕಾರದ) ಒಂದು ಬಗೆಯ ಸಿಹಿತಿಂಡಿ : ಅವರು ಮಂಡಕ್ಕಿ . . . ಬೆಂಡು, ಬತ್ತಾಸು ಕೊಂಡುತೆಂಕೊಂಡರು (ಕಪ್ಪ. ೩-೨೩); ಕರ್ಮಿರ್ನಾಸಾಬರು . . . ಮಿಠಾಯಿ, ಬತ್ತಾಸು, ಬೆಂಡು ಮೊದಲಾದ . . . ಪದಾರ್ಥಗಳನ್ನೂ ಮಾರಾಟಕ್ಕೆ ತರುತ್ತಿದ್ದರು (ಕುಕಟು. ೪೩೭).

ಬೆಂಡು ಬೆಣಗಾಗು, ಬೆಂಡು ಬೆರಗಾಗು=ಸತ್ತ್ವಹೀನವಾಗುವಷ್ಟು ಆಶ್ಚರ್ಯಪಡು : ನಿಬ್ಬೆರಗಾಗು ; ಮಿಡಿವಿಲ್ಲೊಳೆಚ್ಚೊಡೆಯೊಳ್ ಮುಯ್ದೇಕ್ಷುಮಂ ತಾಗೆ ಗಂಟೊಡೆದತ್ತಂ ರಸಮಿಚ್ಚಿ ಪಾಯೆ ಪಥಿಕರ್ ಪೊಕ್ಕೇಂಟುತುಂ ಕೈದು ಬಾಯೆಡೆಯೊಳ್ಪಾದ್ದುಗೆ ಕಂಡು ಬೆಂಡುಬೆಣಪ್ಪರ್ ಪಾಮರೀರದಕ್ಕೆ ಸಮಂ (ಕಪಂಪು. ೦-೪೦); ಬಂದವರು:—(ಬೆಂಡು ಬೆರಗಾಗಿ ಬಣ್ಣಗೆಟ್ಟು ಬಾಗಿಲೆಡೆಯಲ್ಲಿ ಒಗ್ಗಾಗಿ ನಿಂತು ನಿರೀಕ್ಷಿಸುತ್ತಿರುವರು) (ಮುಕ್ಕ. ೬೯-೩).

[ದೇ.॥ ತಮಿ. ವೆಣ್ಬು; ತುಳು. ವೆಂಪ್, ಬೆಂಡು, ಬೋಡು; ತೆಲು. ಬೆಂಡು]

ಬೆಂಡುಖಿರ್ಜೂರ (ನಾ). (ಸಾಮಾನ್ಯವಾಗಿ ಮರುಭೂಮಿ ಪ್ರದೇಶಗಳಿಂದ ಪಿಂಡಿಗಳಲ್ಲಿ ಆಮದಾಗಿ ಬರುವ) ಒಂದು ಬಗೆಯ ಖಿರ್ಜೂರ : ಅವರ ಮನೆಯವರು ಜಾತ್ರೆಯಿಂದ. ಬೆಂಡುಖಿರ್ಜೂರವನ್ನು ತಂದಿದ್ದಾರೆ (ಕಾಪ). [<ಸಂ. ಪಿಂಡಖರ್ಜೂರ]

ಬೆಂಡುಗ 'ಬೆಂಡಿಗ' ನೋ.

ಬೆಂಡುಗರೆ (ಕ್ರಿ). ಬೆಂಡಿನಂತಾಗು; ಸತ್ತ್ವವನ್ನು ಕಳೆದುಕೊಳ್ಳು; ನಿಸ್ಸತ್ತ್ವಗೊಳ್ಳು : ಮದಜುದ್ದಂಡದೇವಿಯೊ . . . ಪುಂದರೀಕಾಂಬಕಿಯೊಯಾವಲು ಗಂಡುಗರೆಂದೀಕ್ಷದಲಿ ಕಣ್ಗೆಂಡುಗರೆದೊರಗಿದರು ನೃಪಸುತರರ್ಧ ಮೂರ್ಛೆಯಲಿ (ಶಾಂಪು. ೨೦೬-೩೩); ಚಿಂತೆಯಿಂದ ನನ್ನ ಹೃದಯವು ಬೆಂಡುಗರೆದಿದೆ (ಕ್ರಿಲಾಪ. ೦೦). [ಬೆಂಡು + ಕರ್ಕ್ (<ಕೞ್₁)]

ಬೆಂಡುಗೞೆ (ಕ್ರಿ). ಬೆಂಡಿನಂತೆ ಸತ್ತ್ವಹೀನವನ್ನಾಗಿ ಮಾಡು,—ನಿಸ್ಸತ್ತ್ವಗೊಳಿಸು : ಕಂಡ ಕಜಿಗೆ ನಡೆನಡದಳುಕದೆ ಕಾಲುಗಂಡ ಕರಾಳವೆಣ್ಣುಗಳ ಅಂಡಲೆದವರೊಳು ಬಳೆದೊಳ್ಳೆಯವ ಬೆಂಡುಗೆದು ಬಿಡಿಸುವುದು (ಪಾಪ. ೬-೭೭). [ಬೆಂಡು + ಕೞ್₁]

ಬೆಂಡುನೆಗೆ (ಕ್ರಿ).=ಬೆಂಡುಗರೆ : ಆ ರಮಣಿ ಕೃತಕಶೋಕಾನಾರದ ಪೊನಲೊಳಗೆ ಬೆಂಡುನೆಗೆದಿರ್ದುಮದೇಂ ರಾರಾಜಸವಾರ್ಚಳಿಂ ತಿಳಿನೀರೊಳಗಣ ಚಂದ್ರಕಲೆಯ ನೆಬಲೆಂಬಿನೆಗಂ (ಕಂಗಾಸಾ. ೯-೩೭); ಕುಮುದ ಕೇಸರದ ರಜದೂಳರ್ದ ಚರಣಚಮುಮಂ ಕೀಲಾಜದೆ ಪಟವಂಡಿನೊಳ್ಬೆಂಡುನೆಗೆದು ಪೊಳ್ದು ಪರಳ್ದು ಪೊರೆವ ಮಜಿದುಂಬಿಗಳ್ ಗಜಿಯಂ ಗಿಜ್ಜಿಪ ತೆಗೆದು ನೆಗಪಮುಂ (ಕಂಗಾಸ. ೩-೨೦ ಪ). ೨. ಬೆಂಡಿನಂತೆ ಹಗುರವಾಗಿ ತೇಲು : ಪ್ರಧಾನಿ ಹರಿಯಾತಂ ಪೋಗುತಮೊಂದು ಸರಸಿಯೊಳ್ ಶಲಿಯಕುಳಂ ಏರೊಳಗೆ ಬೆಂಡುನೆಗೆದಿರೆ ಕಂಡಂ (ಧಕಾರಕ. ೩-೩). [ಬೆಂಡು + ನೆಗೆ₁]

ಬೆಂಡುಮಗುಬ್ (ಕ್ರಿ). (ನೀರಿನಲ್ಲಿ) ಬೆಂಡಿನಂತೆ ಅಡಿಮೇಲಾಗು; ಬೋರಲಾಗು : ಮುಂಡಿಯ ಪೂವಿನ ರಜದಿಂ ವಾಸಿಸಿದ ನೀರ ಕದಡಿಂ ದಾಸವದೊಳ್ ಸೊರ್ಕಿ ಬೆಂಡುಮಗುಬ್ಬುವ ಮಿಂಗಳ್ (ಪಂಪಣ. ೩-೩೩). [ಬೆಂಡು + ಮಗುಬ್]

ಬೆಂಡುಮರ 'ಬೆಂಡುವರ' ನೋ.

ಬೆಂಡುಮರಲ್ (ಕ್ರಿ). ಸತ್ತ್ವವನ್ನು ಕಳೆದುಕೊಳ್ಳು; ಜಡತ್ವವನ್ನು ಹೊಂದು : ನಿಷಾದಿತಿಯೆಂಬ ಬೇಡತಿಗವಯ್ವರ್ ಮಗಂದಿರ್ಗಮುಣಲಿಕ್ಕಿದೊಡೆ ತಣಿಯುಂಡು ಬೆಂಡುಮರಲ್ದು ಮಱುಸಂದಿದರ್ (ಪಂಪಭಾ. ೩-೯ ಪ). [ಬೆಂಡು + ಮರಲ್₂]

ಬೆಂಡುವರ, ಬೆಂಡುಮರ (ನಾ). ಪೊಳ್ಳಾದ ಮರ: ಹಗುರವಾದ ಮರ : ಗುಂಡಿಗೆಗೊಢ ಕೊಪ್ಪರಿಗೆ ಡೋಣಿ ಪಱುಗೋಲು ಬೆಂಡುವರ ಗಳನು ತರಿಸಿ ಮಂಡಲಪತಿ ಸುತರೊಡನೆಳ್ತರಲು (ಕಾಣಾಕಾಂ. ೫೭-೦೦೦). **ಬೆಂಡುಮರ** : ನರಸಿಂಹನ ಮೈಯಿಂದ ಬೆವರು ಬಸಿದು ತರೀರ ಬೆಂಡುಮರದಂತಾಯಿತು (ಕುಗಪಾಂ. ೯೯). [ಬೆಂಡು + ಮರ₁]

ಬೆಂಡುವಾಱಿಸು (ಕ್ರಿ). ಬೆಂಡಿನಂತೆ ಹಾರಿಸು ; ನಿಸ್ಸತ್ತ್ವಗೊಳಿಸು: ಶಿಖಿಕಲ್ಲಾಡುವೆನೋ ಶುಂಭಾದ್ರಿಚಯಮಂ . . . ಮೀರುವಂ ಪೆಱತೇನೂ ದಿಯೆ ಬೆಂಡುವಾಱಿಸುವೆನೋ ಬ್ರಹ್ಮಾಂಡಮಂ ಪೋಲ್ವೆನೋ (ಆಪ. ೬-೩೩). [ಬೆಂಡು + ಪಾಱಿಸು]

ಬೆಂಡುವೋಗು (ಕ್ರಿ). ಬೆಂಡಿನಂತೆ ಹಗುರವಾಗು; ನಿಸ್ಸತ್ತ್ವಗೊಳ್ಳು: ಬೆಂಡುವೋದುವೋ ಬಂಡೆ ಎವೆ ಮಪದ್ಯಾರದಾ ಪ್ರಾಕ್‌ಶಿಲಾಕಕುದಂಗಳಂ ತಬ್ಬಿ ಪಿಡಿದಲುಗಿ ಕಿತ್ತು ಪೊತ್ತೆತ್ತಿದರು (ಕ್ರಿಲಾಪ. ೬೯೦-೦೩೬). [ಬೆಂಡು + ಪೋಗು₁ (<ಪೋ₁)]

ಬೆಂಡುಳಗೆ 'ಬೆಂಡಿಗ' ನೋ.

ಬೆಂಡೆ (ನಾ)· ಒಂದು ಬಗೆಯ ಗಿಡ ಮತ್ತು ತರಕಾರಿಯಾಗಿ ಬಳಸುವ ಅದರ ಕಾಯಿ : "ಲೋಮಿಕೆಯೆನಲ್ ಬೆಂಡೆ" (ಮುಗಾ. ೪೩-೧೭) ; ಹುಸಿಯಲ್ಲಮಂ ಹಾಕಿ ಬೆಂಡೆಯು ಬೇರಿನಿಂದ ತಿರುಹಿ ಕಡಿದ ಪಾಪಿಯ ಸೇವಂತಿಗೆಯ ಹೂವಿಕ್ಕಿ (ಹೂಕಾ. ೨-೨೩) ; ಶತರು ತರಕಾರಿಗಳ ಜೊತೆಯಲ್ಲಿ ಬೆಂಡೆಕಾಯಿ ಬೆಳೆದರೆ ಮಿಶ್ರಬೆಳೆಯಿಟ್ಟಂತಾಗಿ ಬಗೆಬಗೆಯ ತರಕಾರಿ ಸಿಗುವುದು (ಹಪ್ರ. ೦೬).

[ದೇ.ಪ ತಮಿ. ವೆಣ್ಡೈ, ಮಲ್ಲೈ ; ಮಲ. ವೆಣ್ಣ ; ತುಳು. ಬೆಂತೆ ; ತೆಲು. ಬೆಂಡ. / ಸಂ. ಭಿಂಡ, ಭಿಂಡಕ, ಭಿಂಡಾ, ಭೇಂಡಾ, ಭೇಂಡೀ, ಹಿಂ. ಭಿಂಡೀ ; ಮರಾ. ಭೇಂಡೀ]

ಬೆಂಡೇರು (ಕ್ರಿ)· ಸತ್ತ್ವವನ್ನು ಕಳೆದುಕೊಳ್ಳು ; ದುರ್ಬಲವಾಗು : ಆ ಬಗೆಯ ಕಂಡು ಪರಿ ಮೊಗ್ಗಿದನು ಹರನೆದೆ ಬೆಂದೇರಿತು (ಪಾಗಣ. ೨೦-೦).

[ಬೆಂಡು + ಏರು$_1$ (< ಏಱ್$_1$)]

ಬೆಂಡೇಳ್ 'ಬೆಂಡೇಟು' ನೋ.

ಬೆಂಡೇಳು 'ಬೆಂಡೇಟು' ನೋ.

ಬೆಂಡೇಟು, ಬೆಂಡೇಳ್, ಬೆಂಡೇಳು (ಕ್ರಿ). ೧. (ನೀರಿನಲ್ಲಿ) ಬೆಂಡಿನಂತೆ ಹಗುರವಾಗಿ ಚಲಿಸು ; ತೇಲು : "ಬೆಂಡೇಟ್ಟುದೆಂದುಂ ತೇಂಡೆಂದುಂ ತೇಲ್ಟುದು" (ಶಾಕಾ. ೭೦-೬೨). ೨. ಸತ್ತ್ವಹೀನವಾಗು ; ದುರ್ಬಲವಾಗು ; ಜಡವಾಗು : ಎನಸುಂ ವಿಮಾನೇಕ್ಷಣಿ ಸೋಲದ ರಸದೊಡವಿ ಸೊರ್ಕಿ ಬೆಂಡೇಟ್ಟಿಸಂ . . . ಅನುನಯದಿಂದಾಕೆಯೊಳ್ ಕೂಡಿದಪ್ಪೆಂ (ಶಾಕಂಶಾ. ೩೫೩) : ಪೊಯ್ದುತ್ಪಲ್ಪಿಯಂಭೋರವಮೊಗೆಯೆ ಪ್ರಳಯಚಿತ್ತು ನಕ್ಷತ್ರಮಾರ್ಗಾಂತರಮಂ ಬೆಂಡೇಟ್ಟಿಸಿ ಪೋಗೊದೆದುವು ದಿವಮಂ . . . ರಾಮಕೃಷ್ಣಪ್ರಭಳತೆರಭಿಜಾಸ್ಫಾಲನಾಭೀಳನಾದಂ (ಪಗಂ. ೬-೬೨) : ಪ್ರಸೂನಾಂಬಕಂಗಳ್ ಸಲೆ ಬೆಂಡೇಲ್ದು . . . ನಲವಿಂದಂ ಕೂಡಿದಂ ಶಬ್ದನವನಿತೆಯೊಳಾತ್ಮೀಯಕಾಂತಂ ಪ ಸ ಂ ತ ಂ (ಕಾಚಿಪ. ೩-೨೯). **ಬೆಂಡೇಳ್** : ೨. ತಿಳಿನೀರಿನಂತೆ ನೆಳಲೊಳ್ ಪುಟ್ಟರ್ದು ಬೆಂಡೇಳ್ದ ಲೋಳೆ ಪಿಂಡಿಲ್ಗುಟ್ಟಿ ಮೇವಂ ಮಗುಳ್ದಿ . . . ಕಾಳರಕ್ಕಸರಂತಿರ್ದ ಕಾಳ್ಕೋಣಂಗಳಿಂ (ಗಿಂಗ. ೦-೦೫೦ ಪ) ; ರಣತದ ಕಡಲೊಳಗೆ ಬೆಂಡೆದ್ದು ನೆಗೆದುದು ಕೋಟಿಪಾಪದಲೆ (ಭಾಕ್ಕಾರ್ತ್ತ. ೬-೨೬) ; ಆರ ಸಂತೈಕೆಗುಂ ಮಳ್ಗಲಾರದಪಸಂತಾಪದಿಂದೆ ಬೆಂಡೇಳ್ದನೆಂ, ಭರತನಲಂ ಬಂದೆಳ್ದರಿಸಿದತ್ತು ಗುರುವಶಿಷ್ಯನ ವಾಣಿ (ಕ್ರಿಣಾಪು. ೩೦೬-೦೧೬). **ಬೆಂಡೇಳು** : ೨. ವಸುಧರಶ್ರೇಣಿ ಬೆಂಡೆದ್ದು ತೇಲಿದುವು (ಪೋಚಾ. ೦೯-೨೩) ; ಆ ತೆರೆನೊರೆಗಳ ನಲಿಯಲ್ಲಿ ಮೂಲೋಕವೇ ಪ್ರಾಳ್ದುಗಿ ಬೆಂಡೇಳಿಹುದು (ಮುಂಗಾಪ್ರ. ೨).

[ಬೆಂಡು + ಏಟು$_1$]

ಬೆಂಡೇಟಿಸು (ಕ್ರಿ). ಬೆಂಡಾಗುವಂತೆ ಮಾಡು : ನಿಸ್ಸತ್ತ್ವಗೊಳ್ಳುವಂತೆ ಮಾಡು : ಬಿವ್ಮನೆ ಬಿಗುಬೇಱ್ ಮಿಱುಗಿ ಪೊಣ್ಮುವ ಪೊಳೆಗಳ್ ಪಿಮ್ಮೊನೆದೋರ್ಪಿನೆಗಂ ಮಸದುಮ್ಮಹದಿಂ ಬಿಗಿದು ಬಿಗಿದು ಬೆಂಡೇಟ್ಪಿನೋ (ಶಿಪ. ೬-೨೦೮). [ಬೆಂಡೇಟು + —ಇಸು$_5$]

ಬೆಂಡೋಲೆ (ನಾ). ಒಂದು ಬಗೆಯ ಕಿವಿಯ ಆಭರಣ ; ಓಲೆ ; ಹಿಂದಿನ ಕಾಲದಲ್ಲಿ ಕಿವಿಗೆ ಬೆಂಡನ್ನೇ ಓಲೆಯಂತೆ ಧರಿಸುತ್ತಿದ್ದರು : ಬೆಂಡೋಲೆ ಮುಜುಮು ಪಾಗಾಯ್ . . . ಗೋಡೆಯಮದುಡಿದಾರಂ ಭೂಪಾಂಡಲಪತಿಯಾತ್ಮಜಂಗೆ ರಂಜಿಸುತಿರ್ಪರ್ (ಜಕಾ. ೨-೬೩) ; ಪಾಂಗಾಯಿ ಬಂದಿ ಬೆಂಡೋಲೆ ಸಿಂಗಾರಪಾಗಿ ಪುತ್ತಾ ವೀಲಕೇಶವ ನಂಗಣದೊಳಗಾಡುತಿರಲು (ಕೀಚಾಹಂ. ೦೨-೬೩). [ಬೆಂಡು + ಓಲೆ]

ಬೆಂತರ, ಬೆಂತರ (ನಾ). ಭೂತ ; ಪಿಶಾಚಿ : ಎಬಿಸಂಕಾಲ ನಿಮ್ಮ ಪೂಜಿಸಿ ಎವೆಸಯ್ಯಾ ಮಸದಲಿ ದೃಢವಿಲ್ಲದನ್ನಕ್ಕ ನಿಧಾನವ ಕಾಯ್ದಿರ್ದ ಬೆಂತರವಂತೆ ಅದಱ ವಿಧಿಯೆಸಗಾಯಿತ್ತು (ಪಪಪ. ೧೯) ; ಕರವೆಸಪಿಯ ಸವೆದು ಬಂದುದು ಚರಣಾಮುಧಯದಱ ಚಿತ್ರಪರಿಶೋಭೆಗೆ ಬೆಂತರನೊಂದಾಶ್ಚರ್ಯಮಿದುಂ (ಯಪೋಚ. ೩-೨೨) ; ಬೆಂತರ ದೈವಮೆಂಬವವ ವಸಿಲದಿಂದೊಂದೊಂದು ಕೆಲಸಕೆ ವಿಹಿತವಾಗಲು (ಬಸಪು. ೪೪-೩೦). **ಬೆಂತರ** : ನರ್ತಕಿಯರಾಟಗಳ ನೋಡಲು ಮುತ್ತುಶಿಹ ಬೆಂತರರ ಜಡಿಕ್ಕೆದತ್ತ ತೊಲಗಿಸಿ (ಹಾಕೃಭಾ. ೪೪-೪೬) : ಎಂದೆ ಕುಳಿತಪ ದಿನದಿ ಹಾದರದಿಂದ ರುದ್ರನ ಲಿಂಗಭೇದನವೆಂದುವಾಧರಿಸರ್ದು ಬೆಂತರನಾಗಿ ಪೂಜೆಯನು ನಿಂದು ತಾನೇ ಲಿಂಗನಾಗಿಪೆನೆಂದುದಾ ದಿನದಿಂದ (ಜೃತಿ. ೬೨-೪೯) ; ಸುರರು ಬೆಂತರಜ್ಯೋತಿರೇಂದ್ರರು ಉರಗ ವಿದ್ಯಾಧರರು ಸುರಕುಜಧರವು ಫಲಪುಂಜದಲಿ ಕಾಲತ್ರಯವು ಪೂಜಿಪರು (ಪಾಗಪ. ೦-೦೦೪). [<ಸಂ. ವ್ಯಂತರ]

ಬೆಂತರಬಲ್ಲಹ (ನಾ). ಪಿಶಾಚಿಗಳ ಒಡೆಯ ; ಭೂತನಾಥ : ಶಿವ : ಪಲುಗಣ್ಣಂ . . . ಬೆಂತರಬಲ್ಲಹನುಜ್ವಲಿಸುವ ಜೋಯಿಸರಾಣ್ಮಂ ವಿಗಡ ರಸಂ ಮೊದಲಾಗಿ ಸಲೆ ಸೊಗಬಿಸುವ ಶತೇಂದ್ರರ್ . . . ಜನವನ ಗಂಧಕುಟಿಯೊಳೆಡಗಿಜ್ಜಿದಿಮುವು (ಜಪಃಚಾ. ೦೩-೩೯).

[ಬೆಂತರ + ಬಲ್ಲಹ$_1$]

ಬೆಂತರಿ (ನಾ). ಹೆಣ್ಣುಭೂತ : ಪಿಶಾಚಿನಿ : ತಕ್ಕುರಾಪಮ್ಮಳಿ ಮಾಡಿದು ಬೆಂತರಿಯಾಗುವಬಿಳಿ ಕಾಲೆಸನಸಾಂತು ಕೆರಂ ಪಿಂತಣ ಭವಜನೆ ವೆಸಬುತ್ತು (ಜಾಮಾಗ. ೦೦-೪೨). [ಬೆಂತರ + —ಇ$_2$]

ಬೆಂದ 'ಬೇ$_1$' ಪರಾ.

ಬೆಂದಗುಳ್ (ಕ್ರಿ). ಬೆನ್ನಟ್ಟು ; ಓಡಿಸಿಕೊಂಡು ಹೋಗು : ಅಂದದು ದುಟಲೆಯೆ ದುಸಜನಂದಮನಳವಿಗಳೆದು ಕೇಸರಿಯಳವಂ ಬೆಂದಗುಳ್ದ ವಪ್ರದಾಹು ಪುವೆಂದರರ್ (ಪಂಗಾಪ್ರ. ೦-೦೩೬) ; ಜಾವುದತ್ತಂ ಜಾವ ಹಪ್ಪನಾಗಿ ಘೋರೆಂದಿಸಲವಂದಿರಂ ಬೆಂದಗುಳ್ದು ತಾನಂದು ಮಗುಬ್ಬಂತೆ ಪೋಗೆ (ಪಲಪ್ರ. ೪-೩೦ ಪ). [ಬೆಂ$_3$ (< ಬೆನ್) + ತಗುಳ್$_1$]

ಬೆಂದವಾಡಿ (ನಾ). ಒಂದು ನಾಡಿನ ಹೆಸರು : ದೇವಜ್ಞಯು ಮಜ್ಜಿ ಬೆಂದವಾಡಿಯ ಸೋಮಶಿವರಂ ಬರಿಸಕ್ಕೆ ಸಿವಸ್ಥಾನಕ್ಕೆ ಮುನ್ನ ಕೊಟ್ಟ ಭೂಮಿ (ಎಕ. III (೩). ಹುಚ್ಚುಪ್ರ. ೮೨-೬ : ೨೦೬). [? + ವಾಡಿ$_3$]

ಬೆಂದಿ (ನಾ). (?) : ಮಾಜುವಾರ್ತ್ತಗೊಳ್ಳನ್ ಬೆನ್ನಿಯುಂ ಕಳಚುವಮಾಜಿ ಯುವಾಗಳದನೆ ಕಾದಿ ತನ್ನಾಳ್ವಾತ ಸಯೆ ಬಾಟನ್ (ಪಿಪಚ. XI—i. ೦೦-೬ : ೨೦೬). [?]

ಬೆಂದು 'ಬೇ$_1$' ಪರಾ.

ಬೆಂದೊಗಲ್ 'ಬೆಂದೊವಲ್' ನೋ.

ಬೆಂದೊವಲ್, ಬೆಂದೊಗಲ್ (ನಾ). ಬೆನ್ನಿನ ಚರ್ಮ : ಮೃಗಳುಳಮಾಸನೆಮ್ಮೆ ಮೃಗಕೃಷ್ಣಿಕೆಯಂ ಜಳಮೆಂದು ತೃಷ್ಣಯಿಂ ಪಗಲಿಱಾವನ್ನೆಗಂ ಪರಿದು ಗಟಲುರದಬರಮಾಱಿ ಬೆಂದೊವಲ್ ತಗಳ್ದಿ ಬಿಃಬಿ . . . ನಡೆಗ್ಟುವನ ತೃಷ್ಣೆಯಿನಾರೋ ಬೇಯದರ್ (ಪಂಗಾಪ್ರ. ೭-೧೩) ; ತೊಡರ್ದೊಡರಾತಿ ಭೂಭುಜರ ಬೆಂದೊವಲಂ ಪಡಮಾಡಿಗೆತ್ತಿ, ಕೂಡಿಸದೆ . . . ಮಾಣ್ಬನೆ ಸಮರದೊಳ್ (ಎಕ. XI. ಪಾಪಪ. ೪೫-೫೬ : ೨೨೦೦) ; ಪಂದಲೆ, ಬೆಂದೊವಲ್ (ಕಣ್ಣಪು. ೮೦ ಕ್ರಪಡಿ). **ಬೆಂದೊಗಲ್** : ಬೆಂದೊಗಲ್ ಪೊರೆಪೊರೆಯೆರ್ದು ಸಾಯುವ ಮೃಗಪ್ರಜಮಿಲ್ಲ . . . ಆ ನಿದಾಘದೊಳ್ (ಸೂಪ್ರಪು ೦೭-೧೫). [ಬೆಂ$_1$ (< ಬೆನ್) + ತೊವಲ್$_3$ (< ತೋಲ್$_1$)]

ಬೆಂಪೂರ್, ಬೆಂಪೂರು (ನಾ). ಒಂದು ಊರಿನ ಹೆಸರು : ಎಜಿಯುವಂ ಮೆಚ್ಚಿ ಇನಗಜ್ಜಿ ಪಾಗತ್ಕರವಟ್ಟಂಗಟ್ಟಿ ಬೆಂಪೂರ್ವ್ವನ್ನೆರಡುಮಂ . . . ಇತ್ತನ್ (ಎಕ. IX. ಪೆಂಗಳೂ. ೩೩-೩ : ಸು. ೩೦೦). **ಬೆಂಪೂರು** : ಬೆಮ್ಮೂರು ತೊವಗೂರು . . . ಪರವೂರು ಕೂವಲೆ ಇನಿತುವಂ ಪೇಳಲಮೇರೆ ಸಹಿತ ವಿತ್ತನ್ (ಎಕ. IX. ಪೆಂಗಳೂ. ೩೩-೩ : ಸು. ೩೦೦). [? + ಊರ್]

ಬೆಂಪೂರು 'ಬೆಂಪೂರ್' ನೋ.

ಬೆಂಬಂಪಾಟ್ (ನಾ). ಒಂದು ಊರಿನ ಹೆಸರು (?) : ಉತ್ತರತಃ ಬೆಮ್ಮ ವ್ಯಾಬ್ ಪುಣುಸೆವಟ್ಟ ಸಹಿತಂ ಪಲ್ಲವತಟಾಕಮಿತಿಗ್ರಾಮಮ್ಮ ನಾಮಭೇಯಂ ಕೃತ್ವಾ (ಶ. III. ಹಂಪ್ಪ. ೦೦೬-೬೬ ; 713). [? + ಪಾಬ್]

ಬೆಂಬಡಿಗೆ (ನಾ). ಬೆನ್ನಿಗೆ ಬಾರಿಸುವ ಕೋಲು, – ಬಡಿಗೆ : ಬದದೆವ್ಮ ಕಂಡ ಜೀವರ ಭವವ್ರಜದ ಬೆಂಬಡಿಗೆ . . . ದುರಿತವನುರುಹಿ ಸುಡುವ ಕಟ್ಟೆಂದೆಸಪ ತುಂಗಭದ್ರಾನದಿಯನವನೀಶ ನೋಡು (ಹರಿಶ. ೩-೬೯) : ಸಂಶಯಪಿಶಾಚಕ್ಕೆ ಬೆಂಬಡಿಗೆಯಾಗಿ ಭತನ ಮನಸ್ಸು ಪ್ರಪುಲ್ಲಿತವಾಯಿತು (ಜಿಕಥ. ೨೦೦). [ಬೆಂ, (< ಬೆನ್) + ಬಡಿಗೆ,]

ಬೇವಾರಸಿಮಾಲು, ಬೇವಾರಸುಮಾಲು (ನಾ). ಒಡೆಯರಿಲ್ಲದ ಮನ್ಸು; ವಾರಸುದಾರರಿಲ್ಲದ ಪದಾರ್ಥ : ಬೇವಾರಸಿ (ಮಾಲು). ಅಸ್ವಾಮಿತ್ವ (ಮನ್ಸು) (wealf. ೨೦೪೩). **ಬೇವಾರಸುಮಾಲುಃ** (೧೨) ಬೇವಾರಸುಮಾಲಿನ ವಿವೆವಾರಿ . . . (೧೫) ನಾದಾರುಕಾಲಕ್ಕೆ ಶಕಾವಿ ಕೊಡುವುದು (ಪಾಚಾಪಂ. II, ೩೮); ಪರೇಕ್ಷನ ಪಾತ್ರೆ ಪರಟಿ ಮೊದಲಾದವುಗಳನ್ನು ಬೇವಾರಸು ಮಾಲೆಂದು ಮಜಬಿಸಿಕೊಂಡನು (೨೦೪೩. ೦೦೬). [ಬೇವಾರಸಿ (<ಬೇವಾರ್ಸಿ) + ಮಾಲು$_2$]

ಬೇವಾರಸು 'ಬೇವಾರ್ಸಿ' ನೋ.

ಬೇವಾರಸುಮಾಲು 'ಬೇವಾರಸಿಮಾಲು' ನೋ.

ಬೇವಾರ್ಸಿ, ಬೇವರ್ಸಿ, ಬೇವಾರಸಿ, ಬೇವಾರಸು (ಗು). ೧. ಯಾರೂ ದಿಕ್ಕಿಲ್ಲದ ; ವಾರಸುದಾರರಿಲ್ಲದ ; ಅನಾಥವಾದ : ಬೇವರ್ಸಿ ಹೆಣಕ್ಕೆ ರಣಹದ್ದು ಮುಕ್ತಿದ ಹಾಗೆ (ಗಾಸ. ೨೬) ; ಬೇವರ್ಸಿ ಹೆಣನ ಹೊತ್ತರು (ಶಿಮೂಕಾ. ೨). (ನಾ). ೨. ಯಾರೂ ದಿಕ್ಕಿಲ್ಲದ ವ್ಯಕ್ತಿ ; ಅನಾಥ ವ್ಯಕ್ತಿ : ನಾನು ನಿನ್ನ ಬೇವಾರ್ಸಿಯಾಗಿ ಮಾಡಿದೆ! (ಮುಸ್ಕಾ. ೦೨) ; ಏಪು ಸಂಸಾರವದಿಗಲು. ಸಪ್ಪಂಥ ಬೇವಾರ್ಸಿಗಳಲ್ಲ (ಜಾಕ. ೦೩೨). ೩. ಕೆಟ್ಟವನು, ಕೆಟ್ಟವ್ಯಕ್ತಿ ಎಂಬ ಹೀನಾರ್ಥವಲ್ಲಿ ಪ್ರಯೋಗವಾಗುವ ಒಂದು ಬಯ್ಗುಳ : ಸಮ್ಮ ಪಾಡಿಗೆ ನಾವು ರಾಜ್ಯ ಆಳೋಕೆ ಬಿಡೋಲ್ಲ ಬೇವಾರ್ಸಿ (ಪೃಪ್ರ. ೩೪); ಬೇವರ್ಸಿ . . . ಈ ಮನೆಗೆ ಕಾಲಿಟ್ಟರೆ ಜೋಕೆ (ಬಾಕೃ. ೨೩೦). **ಬೇವರ್ಸಿ** : ೨. ಸಂಬಳದ ವಾಕ ಇಟ್ಕೊಂಡಿರೋದಲ್ಲೆ ಬೇರ್ಯೊಗಳ ಘಾಗೊ ಇದ್ಯಾಪ್ಪ ನೋಡೊ ಈ ಗುರುಸಿದ್ದೇತ ನಾಟಕದುಂಡಲಿಗೆ ಸಲೋನ್ನಪುಜ (ಪಾಚಾಪಂ. ೨೩). **ಬೇವಾರಸಿ** : ೧. 'ಬೇವಾರಸಿಮಾಲು' ಪರಾ. **ಬೇವಾರಸು** : ೧. 'ಬೇವಾರಸು

ಮೂಲು ' ಪರಾ. ವಿ. ಹರೇಕೃಷ್ಣನು ಬೇವಾರನು ಅಲ್ಲ, ಕಲ್ಕತ್ತೆಯುಲ್ಲಿ ಅವನ ಮಗಳಿದ್ದಾಳೆ (೨೦೯೮. ೧೦೬).

[← ಮರಾ. ಬೇವಾರೀ. ಬೇವಾರಸಾ, ಬೇವಾರೀಸ್]

ಬೇವಿಗೆ (ನಾ). ಒಂದು ಊರಿನ ಹೆಸರು : ಶ್ರೀಬೇವಿಗೆ ಮುಕ್ತರಸರ ಮಗನು ಪೊಲೆಯಮ್ಮನ್ನವಕರಿರಿಲ್ಲನಾಳುತ್ತುಮ್ (೧೪. XI. ೪೪೬. ೫೫-೫೦ ; ಸು. ೩೦೬). [?]

ಬೇವು₁ (ನಾ). ಔಷಧೀಯಗುಣವುಳ್ಳ, ಕಹಿರುಚಿಯ ಎಲೆಗಳನ್ನು ಹೊಂದಿರುವ ಒಂದು ಬಗೆಯ ಮರ ; ನಿಂಬ ; ಅರಿಷ್ಟ : " ನೀಲ ಪುರಿಷ್ಟಂ ಪಿಚುಮಂದಂ ಬೇವು " (ಶಬ್ದಮ. ೩೪-೦೦); ಬೇವಿನ ಗೊಟ್ಟೆ ಯೊಳಿನಿದನರ್ಕನೊಳ್ ತಂಪು . . . ಅಸಿ ತೋಲುವಾತನೆ ಗಾಂಪಂ (ಕವಿಕಾಮ. ೬-೦೬೨) ; ಬೇವಂ ಮೆಚ್ಚಿದ ಕಾಗೆಗೆ ಮಾವಿಟಾಪವ್ಪಂತೆ ಪತಿಯೊಳ್‌ಬೆದಾಯ್ತು ಮನಂ (ಚಿಕೋಪ. ೨-೪೩); ಬೇಪ ಪಾ ಪರಿಪಕ್ವ ವಾದರೆ ಹಾವುಮೆಕ್ಕೆಗೆ ಸಾಕ್ಷಿ (ಕಾಣಾ. ೦೬-೦೨). ಬೇವಿನಕ್ಕ = ಪಿಚುಮಂದದ ಬೀಜದಿಂದ ತೆಗೆಯಲಾದ (ಔಷಧಿಗೆ ಉಪಯೋಗಿಸುವ) ಎಣ್ಣೆ ; ಕನಲ್ವ ಕಂಡದ ಮೇಲೆ ಪಟ್ಟಿಯ ಬೇವಿನೆಣ್ಣೆಯೊಳ್ ತೊಯ್ದುಕ್ಕಿದ ಬೆಳ್ಳುಳ್ಳಿಯ ಕಂಪಿನಂತೆ . . . ಬೇವ ಪೋಗಳ ಕ[ಂ]ಪು ನಾಜುವುದಕ್ಕೆ ಸೈರಿಸಲಾಜದೆ (೩೦೭೫. ೦೩-೭೦ ಪ). ಬೇವು ಇಸಿ ಕೊಳ್ಳು = ದೇಹಕ್ಕೆ ಉಂಟಾಗಿರುವ ವಿಷಪೂರಿತವಾದ ರೋಗಗಳನ್ನು ಬೇವಿನಿಂದ ನಿವಾರಿಸಿಕೊಳ್ಳು ; ℘ ಅರೆದ ಬೇವಿನ ಸೊಪ್ಪನ್ನು ನೀರಿನೊಡನೆ ಮಿಶ್ರಮಾಡಿ ದೇವರ ವಿಗ್ರಹವನ್ನು ವಿಶೇಷಿಸಿ ರೋಗಪರಿಹಾರಕ್ಕೆಂದು ಆ ನೀರನ್ನು ಮೈಮೇಲೆ ಹಾಕಿ ಕೊಳ್ಳುವಿಕೆ. ಮೈಮೇಲೆ ದೇವರು ಬಂದಿರುವ ಸಮಯದಲ್ಲಿ ದೇವರನ್ನು ಶಾಂತಗೊಳಿಸಲೆಂದು ಬೇವಿನ ಸೊಪ್ಪಿನಿಂದ ನಿವಾಳಿಸುವಿಕೆ ಮುಂತಾದುವು ಕೆಲವು ದೇವಾಲಯದ ಸ್ಥಳಗಳಲ್ಲಿ ಇರುವ ನಂಬಿಕೆ ಮತ್ತು ಪದ್ಧತಿ : ಆ ಖಾದದಲ್ಲಿ ಮೈದಿರೆತ ಅವರಿಗೆ . . . ಪಟ್ಟಿದ ಲ್ಲಿನ ಜನಸಮೂಹ ' ಬೇವು ' ಇಗಾಕೊಳ್ಳುತ್ತಿರುವ ಜೋಗಿತಿ ' ಯ ದನಿ ಕೇಳಿದಾಗಲೇ ಅವರಿಗೆ ಈ ಲೋಕದ ಸ್ಮೃತಿ ಬಂದುದು (೨೭೫. ೬೫). ಬೇವು ಬೆಲ್ಲ = ಬೇವು ಮತ್ತು ಬೆಲ್ಲ ; ℘ ಬೇವಿನ ಹೂವು, ಚಿಗುರುಗಳನ್ನು ಬೆಲ್ಲದ ಜೊತೆಗೆ ಮಿಶ್ರ ಮಾಡಿ ಸೇವಿಸುವುದು ಯುಗಾದಿ ಹಬ್ಬದ ಒಂದು ಆಚರಣೆ. ಬೇವು ಮತ್ತು ಬೆಲ್ಲಗಳ ಕಹಿ ಸಿಹಿಗಳಂತೆ ಬದುಕಿನ ಸುಖದುಃಖಗಳಲ್ಲಿ - ಸಮಾನಭಾಗಿಗಳಾಗಬೇಕೆಂಬ ತತ್ತ್ವವನ್ನು ಈ ಆಚರಣೆ ತಿಳಿಸುತ್ತದೆಂಬ ನಂಬಿಕೆಯಿದೆ : ಬೈತ್ತಿಯಲ್ಲಿ ಬೇವುಬೆಲ್ಲ, ಮುಖದಿಗಳ ಮೇಲೆ ಅದರ ಪ್ರಭಾವ, ಇವೆಲ್ಲ ಕಣ್ಣಿಗೆ ಕಟ್ಟಿದುವು (ಜಾಕೂ. ೪೩); ಬೇವು ಬೆಲ್ಲದ ಯುಗಾದಿಯ ಹಬ್ಬದ ಬಾಷ್ಯಾಚರಣೆಗಳವು (ಕಾಪ್ರಾ. ೬೦). [ದೇ.ತ ತಮಿ. ಮಲ. ವೇಮ್ಬು ; ತುಳು. ವೇವು ; ತೆಲು. ಪ್ರಚ. ವೇಮು ; ಕೋತ. ವೆಪ್ ; ಕುವಿ. ವೇಪ]

ಬೇವು₂ ' ಬೇಯು ' ನೋ.

ಬೇಶ್, ಬೇಷ್, ಭೇಷ್ (ನಾ). ಲೇಸು, ಒಳಿತು, ಸರಿಯಾಮದು, ಒಳ್ಳೆಯದು ಎಂಬ ಅರ್ಥವನ್ನೊಳಗೊಂಡ ಒಂದು ಕೊಂಡಾಟದ ಮಾತು : ಅದನು ಎಲ್ಲರಿಂದಲೂ ಬೇಶ್ ಎನ್ನಿಸಿಕೊಳ್ಳಬೇಕೆಂಬ ಆಸೆಯಿಂದ ಈ ಸಾರಿ ಚೆನ್ನಾಗಿ ಓದುತ್ತಿದ್ದಾನೆ (೬೩೨). ಬೇಷ್ : ಆ ಚಿಕ್ಕ ಮಾಹುಗಿ ಎಲ್ಲಾ ಉಪಾಧ್ಯಾಯರಿಂದಲೂ ಬೇಷ್ ಎನಿಸಿಕೊಂಡಿದ್ದಳು (೬೩೨). ಭೇಷ್ : ಪರಿಪುರಿಂದಾಗಲಿ ಕಕ್ಷಗಾರರಿಂದಾಗಲಿ ಒಂದು ದಾರಿಯಾದರೂ ಭೇಷ್ ಎನಿಸಿಕೊಂಡುದಿಲ್ಲ (೨೦೫೮. ೫೭); ಹುಡುಗರು ಗಳು ಚಪ್ಪಾಳೆಗಳನ್ನು ತಟ್ಟಿ . . . ಭೇಷ್ ಬಲದೇವ್ ಭೇಷ್" ಎಂದೂ ಕೂಗಿದರು (೪೦೫೩. ೪೫). [←ಪಾರ್ಸ. ಮರಾ. ಬೇಶ್]

ಬೇಷ್ ' ಬೇಶ್ ' ನೋ.

ಬೇಸಗೆ. ಬೇಸಿಗೆ, ವಬೆಸಾಖ. ವೈಶಾಗ (ನಾ). ೧. ಸೆಕೆಗಾಲ ; ಬಿಸಿಲುಕಾಲ : "ನಿದಾಘಃ. ಗ್ರೀಷ್ಮಃ—ಈ ೨ ಬೇಸಗೆ" (ಶಬ್ದಮ. ೨೦-೦೩೬); ವಿದ್ಯೆಗಳಿಂದಮೆ ಬೇಸಗೆಯಂ ಪಾಯಲಂ ಮಾಡಿ . . . ಪೊಲಂ ಪೊಜಮಟ್ಟು (ಕಬ್ಬಿಗಾ. ೦೩೯-೩); ವರಪಾರಾಯಣರಿರ್ವರುಂ ... ಬೇಂಟೆಯನಾಡಿ ಬಿಬಿಲ್ದು ಬೇಸಗೆಯ ಸಡುವಗಲೊಳ್ ವನಕ್ರೀಡಗಂ ಜಲ ಕ್ರೀಡಗಮಾಸಕ್ತರಾಗಿ ಯಮುನಾನದೀತಟನಿಕಟವರ್ತಿಗಳಾದರ್ (೪೦೬೫. ೩-೩೦ ಪ). ಬೇಸಿಗೆ : ೧. ಜವನಕೆಯಾಗಳೋಪನಿಸೆ ಬೇಸಗೆಯಂತೆ ವಯೋಧರಂ ಸಭೋವಿಪರಮವೆಯ್ದೆ ತೀವೆ. . .ನರ್ತಕಿ ನೀಡುಮೊಪ್ಪಿದಳ್ (ಪಾರ್ಶ್ವ. ೦೨-೨೪) ; ಉಗುಳ್ವುದು ಕೆಂಗಿಡಿಯುಂ ಬೇಸಗೆ ಬಿಸಿಟ್ಟಿಲುಸರ್ಕ ದವಣಿಗಣಮಾಗಲ್ (ಶಾಶಿ. ೧-೮೩) : ಧ್ವನಿಯುಂ ಸಣ್ಣಿದಾಗಿತ್ತು . . . ಬೇಸಗೆಯ ನದಿಯಂತೆ ಕೃಶವಾಗಿದ್ದರೂ ನಿರ್ಮಲವಾಗಿತ್ತು (ಶಾಖಾ. ೧೪). ವಬೆಸಾಖ : ೨. ಒಂದು ತಿಂಗಳಿನ ಹೆಸರು ; ವೈಶಾಖಮಾಸ : ಸಕಮಸಾಜ ೧೨೯೦ನೆಯ ಕೀಲಕಸಂವತ್ಸರದ ವಬೆಸಾಖ ಬ ೩೦ ನೋದುವಾರ . . . ದೇವರ ಪ್ರತಿಷ್ಠೆಯಾನೂ ಪಡಿ (ಶ್ರಾಂ. ೧೧೫೧. ೧೦೬-೦೦ ; ೧೨೮೮). ವೈಶಾಗ : ೧. ವಿಕಾರಕ್ಕೆ ಗಕಾರ : ಮಬಿ-ಮೊಗ; ವೈಶಾಖಿ-ವೈಶಾಗ (ಪಾಪ. ೨೫೩ ಕ್ರಿಯೋ).

ಬೆಬ್ಬೆಸಗೆ. ಬೆಬ್ಬೆಸಗೆ = ೧. ತೀಕ್ಷ್ಣವಾದ ಸೆಕೆಗಾಲ ; ಉಗ್ರವಾದ ಬೇಸಗೆ : ಬೆಬ್ಬೆಸಗೆಯ ಬಿಸಿಲ್ಗೆ ತೀಡಿದುದು ತಣ್ಣನೆ ಪಣ್ಣನೆ ಪಬ್ಬಿದಾಳಿಯ (ಪಂಚಾಮ. ೬-೦೩೯) ; ಒದವಿದ ಬೆಬ್ಬೆಸಗೆಯ ಕೂರ್ಮಿಸಿಲಬಿಸಿ ಬೆಟ್ಟಿ ಬಾಯುಬೇಜಿದ ಪರಿಣಾ ಸಮುತ್ಪನ್ನತಿ ನಿಬಂಬಬಿಬುವ ಮೋಡಿ ಪೊಕ್ಕು . . . ನೆಲಸರ್ಮದು (ಶಾಧ್ರ. ೯-೩೬); ಕಾಸನಮುರಿಮದು ರವಿಕಾಂತಾಸನಂ ನಗದ ಬಿಬರಮೊಡಿದುದು . . . ಬೆಬ್ಬೆಸಗೆ ಬಿಸಿಲೊಳ್ (೩೩೪. ೦೦-೦೪). ೨. ಸೆಕೆಗಾಲದ ಅತಿಯಾದ ತಾಪ : ಬೆಬ್ಬೆದೊಂದುರಿಗಳ ಬೆಬ್ಬೆಸಗೆ ಸುರಾಗರಸಂಗಳ ಕಾರ ಮಾಂಬು ತತ್ಪುರವರದಲ್ಲಿ ಸಾತ್ವಿಕದ ಮೈಸಡುಂಗಳ ಪೊಗಿಬೂಗಳಂ (೦೮೫೫. ೦-೩೮).

[<ಸಂ. ವೈಶಾವಿ. / ತುಳು. ಬೇಸಿಗೆ; ತೆಲು. ವೇಸಂಗಿ, ವೇಸಗಿ]

ಬೇಸಗೆಗಾಲ, ಬೇಸಿಗೆಕಾಲ (ನಾ). ಸೆಕೆಯ ಕಾಲ ; ಗ್ರೀಷ್ಮಋತು : ನೀಡುವಾಗೆ ಬಳ್ಕಿಗಿಡು ಪೆರ್ಮಾರಗಳ್ ಕರಮಂತ್ರಸಾರದಿಂ ಭೂರಸಮಿಲ್ಲದುಂ ತೃಣ ಭಾನು . . . ಬಂಬುದು ಬೇಸಗೆಗಾಲಂ (ಜಿಣಾಮ. ೬-೩೩); ಬೇಸಗೆಗಾ[ಣಾಂ- ಕಾ]ಲವೆಂಬುವಿಕೆ ಪೆಟ್ಟುಗೆಯೊಳಿಲ್ಲಗಳ್ಳಿ . . . ದೋಸೆಯಮಟ್ಟುವೋಲ್ ಮಳಲುರಾಶಿಗಳೊಪ್ಪಮನಾಳ್ದುವ(ಜಾಪ್ರ.೪-೭೦); ಧರದ ಬೇಸಗೆಗಾ[ಣಾಂ- ಕಾ]ಲದೊಣಗಿಲುಮಂರನ ವಿಪಿನದೊಳೆದ್ದ ವೈಶ್ವಾನರಪ್ರಭಾವಂ ಕೋವದಲಿ ಕಿಡಿಕಿದುಯೋಗಿ ಕಲಿತನುಮಂ ಧರೆಗೆ ಧೂಮ್ಮಿಕ್ಕಿದನು (ಪೊರಣ. ೪-೬-೦೪). ಬೇಸಿಗೆಕಾಲ : ಕಳೆದ ಸಲದ ಬೇಸಗೆಕಾಲ ಬಹಳ ತಾಪದಿಂದ ಕೂಡಿತ್ತು (೮೨೨).

[ಬೇಸಗೆ + ಕಾಲ]

ಬೇಸಗೆರಜ, ಬೇಸಿಗೆರಜ, ಬೇಸಿಗೆರಜೆ (ನಾ). ಶಾಲೆ, ಕಾಲೇಜು ಮೊದಲಾದುವುಗಳಿಗೆ ಸೆಕೆಗಾಲದಲ್ಲಿ ಕೊಡುವ ಬಿಡುವು. — ರಜೆ : ಕಂಡನು ಪರಿಯರಸೊಮ್ಮೆ ಪಾ ಮೊದಲಿಗೆ ಹೋದಾಗ ಬೇಸಗೆರಜಕೆ (ಜಂಗಾಕ. ೦೬-೪೯). ಬೇಸಿಗೆರಜ : ಈಗ ಶಾಲೆಗಳಿಗೆ ಬೇಸಿಗೆರಜ ಬಂದಿದೆ (೮೨೨). ಬೇಸಿಗೆರಜೆ : ಅವನು. . . ಮಾಷ್ಟ್ರಕ್ಕೆ ಒಂದು ಸಾರಿ ಬೇಸಿಗೆರಜೆಗೆ ಮನೆಗೆ ಬರುತ್ತಿದ್ದ (ನಂಜಾ. ೬೨). [ಬೇಸಗೆ + ರಜ್ಜ (< ರಜಸ್)]

ಬೇಸತ್ತ ' ಬೇಸಟ್ಟು ' ಪರಾ.

ಬೇಸತ್ತು ' ಬೇಸಟ್ಟು ' ಪರಾ.

ಬೇಸನ್. ಬೇಸಿನ್ (ನಾ). ಕಡಲೆಯ ಹಿಟ್ಟು. **ಬೇಸಿಗ್**.

ಬೇಸನ್ ಉಂಡೆ = ಕಡಲೆಹಿಟ್ಟಿನಿಂದ ಮಾಡುವ ಒಂದು ಬಗೆಯ ಸಿಹಿ ತಿಂಡಿ.—**ಉಂಡೆ** : ಮೆಲ್ಲನೆ ಒಂದರಡು ಬೇಸನ್ ಉಂಡೆಗಳನ್ನು ಎತ್ತಿಕೊಂಡು ಬಾಯಾಡಿಸಿದರೆ ಯಾರಿಗೂ ಕಾಣುವಂತಿರಲಿಲ್ಲ (ಕ್ಷ. ೦೦)-**ಬೇಸನ್‌ಲಾಡು, ಬೇಸಿನ್ ಲಾಡು = ಬೇಸನ್‌ಉಂಡೆ** : ಏನು ಕೊಡರಿ ಸಾರ್, ಜಾಮೂನ್, ಜಿಲೇಬಿ, ದಂರೋಟ್, ಬಾದಾಮಿಹಲ್ವ, ಬೇಸನ್ ಲಾಡು (ಕುತಾಂ. ೧೩); ಅವನ ಹೆಂಡತಿ ಮಾಡಿಕೊಟ್ಟಿದ್ದ ತೇಂಗೊಳಲು, ಚಟ್ಟುಲಿ ಹುಕ್ಕು ಬೇಸಿನ್‌ಲಾಡುಗಳು ಅದರಲ್ಲಿದ್ದುವು (ರಂಜಿ. ೬೦).

[←ಹಿಂ. ಮರಾ. ಬೇಸನ್]

ಬೇಸದ ‘ಬೇಸಱು೨’ ನೋ.

ಬೇಸರಗೊಳಿಸು (ಕ್ರಿ)- ಬೇಜಾರುಹೊಂದುವಂತೆ ಮಾಡು ; ಜುಗುಪ್ಸೆಯನ್ನು ಹುಟ್ಟಿಸು : ನಿಮ್ಮನ್ನು ಬೇಸರಗೊಳಿಸುವಂತೆ ಉಪನ್ಯಾಸ ಮಾಡುವ ಅಧ್ಯಾಪಕ ನನಗೆ ಇಲ್ಲವೇ ಇಲ್ಲವೆಂದು ಎದೆ ತಟ್ಟಿ ಹೇಳುತ್ತೇನೆ (ಡಾಹು. ೪೭).

[ಬೇಸರ (<ಬೇಸಱು೨)+ಕೊಳ್ + — ಇಸು]

ಬೇಸರಗೊಳ್ಳು ‘ಬೇಸಱುಗೊಳ್’ ನೋ.

ಬೇಸರಿ. ಬೇಸ್ರಿ (ನಾ). ಹೆಂಗಸರು ಮೂಗಿನಲ್ಲಿ ಧರಿಸುವ. ಅನೇಕ ಹರಳುಗಳುಳ್ಳ ಒಂದು ಬಗೆಯ ಆಭರಣ : ತಿಮಿಯ ಓಲೆ ಮೂಗಿನ ಬೇಸರಿಯನ್ನು ಬಿಟ್ಟರೆ ಮೈಮೇಲೆ ಬೆಲೆ ಬಾಳುವ ಯಾವ ಒಡವೆಯೂ ಇರಲಿಲ್ಲ (ಕರ್ಪೂ. ೫೯); ಮೂರುಹರಳಿನ ಬೇಸರಿ ಫಳಾ, ಫಳಾ ಎಂದು ಮಿಂಚುಗುತ್ತಿತ್ತು. ಅವಳ ವಾಸಿಕದಲ್ಲಿ (ಕುಂದಾಕ. ೦೩). **ಬೇಸ್ರಿ**: ಎಳಸಾದ ಮೂಗಿಗೆ ಒಪ್ಪೋಂಥ ಸೀದೆಕಮಲದ ಬೇಸ್ರಿ (ಜಾಸಾ. ೦).

[←ಹಿಂ. ಮರಾ. ಬೇಸರ್. / ತಮಿ. ಬೇಸರಿ ; ತೆಲು. ಬೇಸರಿ]

ಬೇಸರಿಕೆ ‘ಬೇಸಱಿಕೆ’ ನೋ.

ಬೇಸರಿಸು ‘ಬೇಸಱಿಸು’ ನೋ.

ಬೇಸರು೧ ‘ಬೇಸಱು೧’ ನೋ.

ಬೇಸರು೨ ‘ಬೇಸಱು೨’ ನೋ.

ಬೇಸರುಗೊಳ್ಳು ‘ಬೇಸಱುಗೊಳ್’ ನೋ.

ಬೇಸರ್ನುಡಿ (ನಾ). ಬೇಜಾರಿನಿಂದ ಕೂಡಿದ ಅಥವಾ ಬೇಜಾರನ್ನು ತರುವ ಮಾತು.—**ನುಡಿ** : ರೇಫಳ್ಕೆ-ತಿಸರ್ಮಳ್ಗಿಗೆ, ಸೇಸರ್ಮಯಣಾ, ಬೇಸರ್ನುಡಿ (ಕಬಾಪ. ೦೩೩ ಕ್ರಿಯೋ); ಬೇಸಱು+ನುಡಿ. ಬೇಸರ್ನುಡಿ (ಕಬಾಪ. ೮೩ ಕ್ರಿಯೋ). [ಬೇಸಱು (<ಬೇಸಱು೨)+ನುಡಿ೩]

ಬೇಸಱ್ (ಸಪೂರೂ). ‘ಬೇಸಱು’ ಎಂಬುದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : ‘ಬೇಸರ್ನುಡಿ’ ಪರಾ. [<ಬೇಸಱು೨]

ಬೇಸಱು ‘ಬೇಸಱು೨’ ನೋ.

ಬೇಸಱು೧. ಬೇಸರು (ನಾ). ಆಸಕ್ತಿಯಿಲ್ಲದಿರುವಿಕೆ ; ಜುಗುಪ್ಸೆ ; ಬೇಜಾರು : ಎಷ್ಟ ಚಿತ್ತದ ಬೇಸಱಿಕೆ ಬಯಲಾಯ್ತು (ಕಾಬಾ. ೪-೪೪); ದೇವಾರ್ಚನೆಯ ವಷಾದಿನನ್ನು ಸಾಕೆಂದೆನುತ ಬೇಸಱಿಕೆಯಲಿ ನುಡಿದಳು ವಿಮಳೆಗಾ ಮಾಯೆ (ಕ್ರಕೂಲೀ. ೬-೦೪) ; ಭಾಸಿಯಾದರು ಬಂದ ಬಟ್ಟೆಯು ದೈಸಿರಿಯು ಪಥವಱಿಯದಗ್ಗದ ಬೇಸಱಿಕೆಯರಿ (ಕೊಡಣಾ. ೪-೦೦-೪೪). **ಬೇಸರಿಕೆ** : ಮುಂಕುಮಾದಿಂದ ಕಲಸಮಾಡಿ ಬೇಸರಿಕೆ ಮತ್ತು ಆಯಾಸದಿಂದ ಮನೆಗೆ ಹೊರಡಲುದ್ದೇಶಿಸಿ . . . ಗ್ರಾಮಾಭಿಮುಖವಾಗುವುದು ಸಹಜ (ಕೂಟಾಂ. ೫೯) ; ಹಾಳುಸುರಿಯುತ್ತಿದ್ದ ಬೇಸರಿಕೆಯನ್ನು ವೀಣೆಯ ಸಲುವಾಗಿ ಯಾವುದಾದರೂ ಅಕ್ರಮಗಳು ನಡೆದಾವೆಯೆಂದು ಜಾಗರೂಕರಾಗಿದ್ದರು (ಕಪಾ. ೦೬೨).

[ಬೇಸಱು೨ + — ಇಕೆ]

ಬೇಸಱಿಸು. ಬೇಸರಿಸು (ಕ್ರಿ). ೧. ಆಸಕ್ತಿಯನ್ನು ಕಳೆದುಕೊಳ್ಳು ; ಬೇಜಾರು ಪಟ್ಟುಕೊಳ್ಳು ; ಬೇಸರಪಡು : ಧಾರದ ಶವಥಮೊ ಳರ್ಜುನವ ಸಂಗರಕೆ ಬೇಸಱಿಸಿದ ಪರಾಕ್ರಮಪರಿಗತರು ಪವಡಿಸಿದರಂದು ಧರಣಿಪಾಪ್ತದಲಿ (ಕುಣ್ಡಿಪ. ೨-೨೦) ; ಮೆಲ್ಲನೆ ಒತ್ತಿದಂತಾಯ್ತು ಪಗೆ ಕನವರಿಸುತ್ತ ಖಳ ಸುಮಸುಪ್ತವಾದಮ ಸೇನೆ ಬೇಸಱಿಸೆ (ಕಾಶಾ. ೫೪-೩). ೨. ಆಸಕ್ತಿಯನ್ನು ಕುಗ್ಗಿಸು ; ಜುಗುಪ್ಸೆಗೊಳ್ಳುವಂತೆ ಮಾಡು ; ಬೇಸರಪಡಿಸು ; ತನ್ನತನ ಕಟಕಕ್ಕೆ ನಿತ್ಯಕ್ಷಯವ್ಯಯ ಪ್ರತ್ಯವಾಯಂಗಳಂ ಮಾಡಿ ಬೇಸಱಿಸಿ ನೆಲದಿಂ ತೆರಳ್ಚುವಂ (ಪಾಪ್ತ. ೦೩-೫೬ ಪ) ; ಪಿರಿದುಂ ಬೇಸಱಿಸಿದುಪ್ಪ ಬಿರಯಿಯಂ ಜಳದಂಗಳ್ (ಕುಪ್ರಕೃ. ೯-೨೪). ೩. ದಣಿಯುವಂತೆ ಮಾಡು ; ಬಳಲಿಸು ; ಆಯಾಸಪಡಿಸು : ಬಜಱಿದಾಗಿ ಪೊಯ್ದ . . . ಕಬ್ಬಲೆಯಾಗಿ ಮುಸುಕ್ಕಿ ಬೇಸಱಿಸುಮಗುರ್ವ ಪರ್ವ ಕವಿದರ್ಜುನಾಜ್ಞಾಂಗತರ್ಕ್ಕವಿಕ್ರಮಾರ್ (ಅಸಕೃ. ೦೮-೯); ಬಿದ್ದ ವರನೊಡೆ ತುಂದು ಮೇಲುಬ್ಬೆದ್ದು ಕವಿಕವಿದಾಳು ಕುದುರೆಯ ಬಿದ್ದಿಸಲಿ ಬೇಸಱಿಸಿದನು ಪಿತೃಪತಿಯು ಪರಿಜನವ (ಕುಶ್ಯಕೃ. ೦೦-೭೦). **ಬೇಸರಿಸು** : ೧. ಸುಂದರರಾಯರು ಇನ್ನೂ ಮಲಗಿರುವುದಕ್ಕಾಗಿ ಬೇಸರಿಸಿಕೊಂಡು ತಾನೇನು ಮಾಡಲೂ ತೋರದೆ ಬಚ್ಚಲುಮನೆಗೆ ಹೊರಟಳು (ಅಮಕೃ. ೬). ೪. ವ್ಯಸನಹೊಂದು ; ಕನಿಕರಪಡು : ನೀನು ಕ್ಷೀಣಿಸಿರುವುದನ್ನು ಕಂಡು ಬೇಸರಿಸುತ್ತಾರೆ (ಶಕಾಂ. ೦೬). [ಬೇಸಱು೧ + — ಇಸು೩]

ಬೇಸಱು೨. ಬೇಸರು೨ (ಕ್ರಿ). ಬೇಸತ್ತ (ಭೂತಕೃ). ಬೇಸತ್ತು (ಭೂತತ್ನೊ). ೧. ಬೇಜಾರುಪಡು; ಜುಗುಪ್ಸೆಯನ್ನು ಹೊಂದು; ಆಸಕ್ತಿಯನ್ನು ಕಳೆದುಕೊಳ್ಳು : ದೋಸಮಿನಿತೆಂದು ಬಗೆದುದ್ಯಾಸಿ ತಜಿಸಂದು ಕನ್ನಡಂಗಳೊಳಿಂದುಂ ವಾಸುಗಿಯುಮಜಿಯಲಾಜದೆ ಬೇಸಱುಗುಂ ದೇಶಿ ಬೇಜಿವೇಜಪ್ಪದೆಜಿಂ (ಕಣಾ. ೨-೧೩) ; ಅವರುಂ ತಮ್ಮ ಕಂಡುದಂ ಬೇಱ್ಕೊಂಡೆ ಬೇಸಱದೆ ದಿವಸಕ್ಕಂ ಚರಿಗೆಯೊಗವುದೆಂದು ಭಟ್ಟಾರರ್ ಕಲ್ಪಿಸಿದೊಡೆ (ಕಣಾ. ೮೯-೦೦) ; ಲಲಿತಾಂಗಿಯ ಶಂಕೆಯಂ ಭಯಂಜೆರಸದ ನಾಣಾಮಂ ಕ್ರಮದೆ ಪಿಂಗಿಸು ಬೇಸಱದಿರ್ ಗುಣಾರ್ಣವಾ (ಶಂಪಾ. ೩-೩೬) ; ಕೊರೆಗೆ ಬೇಸಱಿರವರು ಇವುದುಳುಕದವದಿರು (ಕುಶ್ಯಕೃ. ೯-೦೭). ೨. ಆಲಸ್ಯವನ್ನು ಹೊಂದು ; ದಣಿ ; ಬಳಲು : “ ಬೇಸಱು — ಆಲಸ್ಯೇ ” (ಕಪಾಠ); ವಿಬುದಿವಸಮುಂ ದಿಡದಡವಿಗೆ ಬೇಂಟೆಯಾದಲ್ ಪೋಗಿ ಒಂದು ಮೃಗಮಪ್ಪೊಡಂ ಸಮನಿಸದೆ ಬೇಸತ್ತಬಲ್ಲು ಪೊಬಲ್ಗೆವೋಗಿ (ಕಣ್ಣಾ. ೧೩-೨೩) ; ಕಲಹದೊಳ್ ಕರಿಘಟೆಯಂ ಹೊಯ್ ಹೊಯ್ದಲಸಿ ಕೌರವನನುಜನನು ಮುಂಕೊಳಿಸಿ ಕೊಳ್ಳದೆ ಕಳುಹಿ ಬೇಸಱಾತನಿಲುಸುತ ಮಸಗಿ (ಕುಶ್ಯಕೃ. ೫-೬). **ಬೇಸರು**೨ : ೧. ಉರುತರಶ್ರಮದಿಂದ ನಿತೆಯೋ ನಗರಿಯೊಳ್ ತಿರುತಿರುಗಿ ಬೇಸರದೆ ನೋಡಿ ನಿಷ್ಪಲಮಾಯ್ತು (ಪಾಣಾ. ೫-೬-೪) ; ಅಪೇಕ್ಷಮುದ್ರದಲ್ಲಿ ಮುಳುಗುತ್ತಿರುವ ಸ್ನೇಹಿತನಿಗೆ ಬೇಸರದೆ ಮತ್ತು ಮತ್ತು ವಿವೇಕವನ್ನು ಹೇಳುತ್ತ (ಕೃಪಾಣಾ. ೨೨೨) ; ಈ ಮಗಳ ಮಾಂಗಲ್ಯತನಕ್ಕೆ ನಾನು ಬೇಸತ್ತಿದ್ದೇನೆ (ಪಾಪಾಪ್ರಾ. ೦೩೯).

[ದೇ.॥ ತಮಿ. ಬೇಚಱು ; ತೆಲು. ಬೇಸರು]

ಬೇಸಱು೩. ಬೇಸರ. ಬೇಸರು೩, ಬೇಸಱಿ (ನಾ). ೧. ಆಸಕ್ತಿಯಿಲ್ಲದಿರುವಿಕೆ ; ಬೇಜಾರು ; ಜುಗುಪ್ಸೆ : ಒಂದೆಡೆಯೊಳ್ . . . ಅಬ್ಬು ವೆತ್ತ ಪೊಳೆವುಲ್ಲೆಯಾಳ್ಕೆಯಾದ ಮಾತಂ ತನ್ನ ಸೂಳೆಯ ಬೇಸಱಿಂ ಕಳೆಯಂ ಗಿಂತೆಂದಂ (ಅಂತ್ಯ. ೦೨-೫೮ ಪ); ನಿಮ್ಮಡಿಗಳಂ ಕಾಣದಿಪ್ಪ ಕಡುಬೇಸಱಿಂದಿರೆ ಹರಂ ಮಾಹೇಶ್ವರಜ್ವರವನಬ್ಬದಂ (ಪಂಪ. ೧೬-೦೦೯); ಘನಸಂಗರಕೆ ಬೇಸಱ ತೋಱೆ ತನ್ನಾಣೆ ಹೇಳು (ಕುಶ್ಯಕೃ. ೩-೬೩). ೨. ಆಯಾಸ ; ಬಳಲಿಕೆ : ದಣಿವು : ಆ ಸುದತಿಯ ಮೃದುಪದವಿನ್ಯಾಸವಾಂಮಂ

ಶೇಷನಾಸರಾಜದೆ ಸುಯ್ವಂ ಬೇಸಱಿಸೆಂದೊಡೆ ಗರ್ಭಾವ ಕೂಸಿನ ಬಳಿದಳವಿಯಳವನಳವರುಮೊಳರೇ (ಹಂಕಥಾ. ೦-೦೩೬). **ಬೇಸರೆ** : ೧. ಪೊಲೆ ಪೊರ್ದ್ದಲ್ ಪೇಸಿ ಬೇಸರದಿವಳದ ಮಹೀಕಾಂತೆಯುಂ ರಕ್ಷಿಸಲ್ (ಶಿ. VII, ೫೪೫. ೩-೯ ; 1215) ; ಮಂಡಲಿಯಲ್ಲಿದ್ದವರಿಗೆಲ್ಲರಿಗೂ ಅವನನ್ನು ಕಂಡರೆ ಬೇಸರ (ಜಾಣಾ. ೩೦೪) ; ಮನಕೆಲಸವನ್ನು ಮಾಡುವುದಕ್ಕೆ ಅವಳಿಗೆ ಬೇಸರವಿಲ್ಲ (ಪುಷ್ಪಾಣ್ಣಾ. ೩೦). ೩. ವ್ಯಸನ ; ಕನಿಕರ : ಅವಳ ದೀನಸ್ಥಿತಿಯನ್ನು ಕಂಡು ತುಂಬ ಬೇಸರವಾಯಿತು (ಕೂಡ). **ಬೇಸರು**₂ : ೧. ಏಮಗೆ ಬೇಸರಾಗುವ ಕೆಲಸಾ ನಾವು ಜೇಳಲಾರೆವು (ಪುಂಜಯ. ೩-೦೩೪); ಈ ಜನರಿಗೆ ನೌಕರಿಯು ಬೇಸರಾಯಿತು (ಪ್ರಭುಲಿ. ೩೨೬) ; ಬೇಸರಿಗೆಂತ ಜೇಸರಕತ್ತೆ ಆಡಿಸಿದ (ಗಾಣಿ). **ಬೇಸಱಿ** : ೧. ಪಸಜವಮುಖಿ. . . ಸತಿಯರ ಮನ್ನಣೆಗೆ ಬೈಗೊಡಳು ಬಲುಬೇಸಱಿ ಬಳಲುವಳು (ಪಕ್ಷ. ೦-೩೦). 'ಬೇಜಾರು' ಪರಾ. [<ಬೇಸಱು₂ / ತುಳು. ಬೇಸರ್]

ಬೇಸಱುಗೊಳ್, ಬೇಸರಗೊಳ್ಳು. ಬೇಸರುಗೊಳ್ಳು (ಕ್ರಿ)-ಆಸಕ್ತಿಯನ್ನು ಕಳೆದುಕೊಳ್ಳು; ಬೇಜಾರುಪಡು ; ಜುಗುಪ್ಸೆಯನ್ನು ಹೊಂದು: ಬೇಸಱುಗೊಂಬ ತಕ್ಕುಪರಿಯ ಮನದೊಳಗಾಪಜಱ ಬಹಳ ವೆಗ್ಗಳಿಸಿ ಈಸಱಿಂದಿನ್ನು ಕಾಡುವುದೊಳ್ಳಿತಲ್ಲೆಂದು ನೇಸಱು ತಲೆಯೆ ತೋಱಿಸಿತು (ಪೋಷಕ. ೫೭-೬೩). **ಬೇಸರಗೊಳ್ಳು** : ಅವಳು ಎಷ್ಟೇ ಪ್ರಯತ್ನಿಸಿದರೂ ಕೆಲಸ ಸಿಗಲಿಲ್ಲವೆಂದು ಬಹಳ ಬೇಸರಗೊಂಡಿದ್ದಳು (ಪೂಜ್ಯ).**ಬೇಸರುಗೊಳ್ಳು**: ತನ್ನ ಉದ್ದೇಶವನ್ನು ಸಿದ್ಧಿಗೆ ಒಯ್ಯಬೇಕಾದರೆ ಎಷ್ಟೋ ಸಂಕಟಗಳು ತಟ್ಟಿದರೂ ಬೇಸರುಗೊಳ್ಳುತ್ತಿದ್ದಿಲ್ಲ (ಪುಂಜಯ. ೩-೨೦೬). [ಬೇಸಱು₂ + ಕೊಳ್₁]

ಬೇಸಱಿಯ್ದು (ಕ್ರಿ)-=ಬೇಸಱುಗೊಳ್: ಆ ರಾಜಯುತಂ. . . ಅಳವಿಸಂ ಬೆಬ್ಬಳಿಸಂ ಕಳವಳಿಸಂ . . . ಬೇಸಱಿಯ್ದು ಬೆಳ್ಕೊಗದಿನಿರಂ (೦೩೫. ೩.೧೦). [ಬೇಸಱು₂ + ಎಯ್ದು]

ಬೇಸಾಯ 'ಬೆವಸಾಯ' ನೋ.

ಬೇಸಾಯಗಾರ (ನಾ). ವ್ಯವಸಾಯವನ್ನು ಮಾಡುವವನು : ರೈತ; ಒಕ್ಕಲಿಗ : ಅರಸುಕುಲದವನಿಗೆ ಬೇಸಾಯಗಾರನ ಹೆಣ್ಣನ್ನು ತರುವುದೇ? (ಜಾಪುತ್ರ. ೬೭); ಆ ಊರಿನ ಮುಖ್ಯ ಮನೆಯೇ ತನ್ನ ಮೂರುಜೋಕ ಗಳೆಂದು ತಿಳಿದುಕೊಂಡಿದ್ದ ಕೊರಗು ಎಂಬ ಬೇಸಾಯಗಾರನಿದ್ದನು (ಗಾಜಾಪ್ರ. ೨ ಕಥಾಗಂ೮). [ಬೇಸಾಯ (< ಬೆಸಾಅಯ) + — ಗಾರ (<—ಕಾಱ)]

ಬೇಸಿಗೆ 'ಬೇಸಗೆ' ನೋ.

ಬೇಸಿಗೆಕಾಲ 'ಬೇಸಗೆಗಾಲ' ನೋ.

ಬೇಸಿಗೆರಜ 'ಬೇಸಗೆರಜ' ನೋ.

ಬೇಸಿಗೆರಜೆ 'ಬೇಸಗೆರಜ' ನೋ.

ಬೇಸಿನ್ 'ಬೇಸನ್' ನೋ.

ಬೇಸುಸ್ತು (ನಾ). ಶಿಸ್ತು ಇಲ್ಲದಿರುವಿಕೆ : ಬಹಾಳ ಬೇಸುಸ್ತ ಮಾಡಿದಳವಾ ಇದೊಂದು ರುಚ್ಚಿನಬಾಂಬಿ (ಪಜುಮ. ೬೭). [←ಹಾರ. ಪರಾ. ಬೇಶಿಸ್ತ್]

ಬೇಸು 'ಬೇಯಿಸು' ನೋ.

ಬೇಸುಕೆ, ಬೇಸೂರ, ಬೇಸೊರು (ನಾ)- ೧. [ಸಂಗೀತ] ಅಪಸ್ವರ. ೨. (ಆಲಂ) ಅಸಂಬದ್ಧವಾದುದು : ಪ್ರಳಯ ಪೂರ್ವವ ರೌದ್ರ. ಸದ್ದಿಲ್ಲದೀ ಸಂಚು ಯುದ್ಧಬಡಕರ ಶುದ್ಧಶಾಂತಕಾ ವಾದದೊಲು ಪರಿಣಾಮ ಬೇಸುರವಲಾ (ತೂರ್ಣಾ. ೦೦೦-೦೦). **ಬೇಸೂರ** : ೧. ಬೇಸೂರ ಹಾಡಿಕೊಂತ ತೇಲಗಣ್ಣು, ಮೇಲಗಣ್ಣು ಹಾಕತಾವೆ (ಗ್ರಾಪಾಡು. ೦೭೩). **ಬೇಸೊರು** : ೧. ಬೆನ್ನು ಚಪ್ಪರಿಸಿದರೆ ಬೆಳತನಕ ಬೇಸೂರು ಹಾಡಬಲ್ಲ (ತೆಕಾಮು. ೨೬-೦೩). [←ಹಿಂ. ಬೇಸುರ್; ದ್ರಾ. ಬೇಸೂರ್]

ಬೇಸುರಿ (ನಾ). ತೀವ್ರವಾದ ತಾಪ : ಬೇಸುರಿ. ಬೇಸೋಡು (ಕಣ್ಣಪು. ೩೫೭ ಪ್ರಯೋ) ; ನಿಟ್ಟುಸುರಿನ ಬೇಸುರಿಯಲಿ ಜೀವ ವಿಡುಕುತಿರುವುದು (ಜಾಠಂಗ. ೩೨-೬). [< ಬಸಿದು + ಉರಿ₂] '

ಬೇಸೂರ 'ಬೇಸುರ' ನೋ.

ಬೇಸೂರು 'ಬೇಸುರ' ನೋ.

ಬೇಸೋಡು (ನಾ). ಬೆಚ್ಚಗಿರುವ ಕಾವಲಿ ; ಕಾಯ್ದ ಹೆಂಚು : ಬೇಸುರಿ. ಬೇಸೋಡು (ಕಣ್ಣಪು. ೩೫೭ ಪ್ರಯೋ). [< ಬಸಿದು + ಓಡು₂]

ಬೇಸ್ತು (ನಾ). ೧. "ಒಂದು ತೆರವ ಇಸ್ಪೀಟಾಟ : 'ಬೇಸ್ತು' ಆಟ" (Baste- ೫೦೫೩). ೨. ಇಪ್ಪತ್ತೈಂಟರ ಇಸ್ಪೀಟಾಟದ ಮೂರು ಹಂತ ಗಳಲ್ಲಿ ಆಗುವ ಸೋಲು : ಇದು ಮೂರನೇ ಬೇಸ್ತು. ಕಡೆಯ ಆಟ (ಜಾಣಗ. ೦೦). ೩. (ಆಲಂ) ಮೋಸ : 'ಬೇಸ್ತುಬೀಳು' ಪರಾ. [← ಇಂ. Baste]

ಬೇಸ್ತುಬೀಳಿಸು (ಕ್ರಿ)- ಮೋಸಹೋಗುವಂತೆ ಮಾಡು ; ಪೆಚ್ಚು ಬೀಳಿಸು : ಅದಕ್ಕೇ ಮತ್ತೆ ನಮ್ಮ ಮುಳ್ಳುಮುಬಿದ ಸಂಪತ್ತು ಅವರಿಗೆ ಹಾಗೆ ಬೇಸ್ತು ಬೀಳಿಸಿದ್ದು (ಅಂಹೂ. ೫೮). [ಬೇಸ್ತು+ಬೀಳು + —ಇಸು]

ಬೇಸ್ತುಬೀಳು (ಕ್ರಿ). ಮೋಸಹೋಗು ; ಪೆಚ್ಚುಬೀಳು : 'ಬೇಸ್ತು ಬಿದ್ದ' ಗಂಡನನ್ನು ಕಂಡು ಜಂದಾವತಿಗೆ ಮೋಜೆನಿಸಿತು (ಕಂಗಪ. ೨೬೮); ಎಂದೂ ತಂತ್ರಿಯವರು ಅಷ್ಟು ಬೇಸ್ತು ಬಿದ್ದಿರಲಿಲ್ಲ (ಪಕ್ಷ. ೨೩೪). [ಬೇಸ್ತು + ಬೀಳು₂ (< ಬೀಟ್₂)]

ಬೇಸ್ರಿ 'ಬೇಸರಿ' ನೋ.

ಬೇಹ 'ಬೇಹ್ಯ' ಪರಾ.

ಬೇಹಕ್ಕುದಾರ (ನಾ). ಹಕ್ಕುಬಾಧ್ಯತೆಗಳಿಲ್ಲದವನು ; ಹಕ್ಕುದಾರನಲ್ಲದವನು : ಇಂತಹ ಬೇಹಕ್ಕುದಾರರಿಂದ ಪಟೇಲರು ಶಾಸನಭೋಗರುಗಳು ಕಂದಾಯದ ಹಣಗಳನ್ನು ಕೆಗೆದುಕ್ಕೊಳ್ಳಕೂಡದು (ಗ್ರಾಪಾಕಾ. ೬೯). [← ಅರ. ಬೇಹಕ್ದಾರ್]

ಬೇಹಣ (ನಾ). ಬೇಯುವಿಕೆ ; ಬೆಂದುಹೋಗುವಿಕೆ : ಲೋಪಕುಂಭ ದೊಳಿಕ್ಕಿಯಂ ಪೊಯ್ದು ಪಾಪಿಗಳನೋಪೋ ತುಂಬುತ್ತ ಮುಚ್ಚಳ ವನಿಟ್ಟೆಳಿಗಿಚ್ಚನಾ ಹದಂತಪ್ಪದಂದದೆ ಬೆಳಗಿ ಬೇಯಿಸಲು ನೂಱುಸಾವಿರ ವತ್ಸರಂ ಬೇಹಣಲ್ಲದೆ ಸಾಯಲಿಲ್ಲ (೦೭೫. ೩-೦೯-೧೦). [< ಬೇ₁ + — ಅಣ]

ಬೇಹಣಗಾಣ (ನಾ). ಗಾಯಕರಲ್ಲಿ ಒಂದು ವರ್ಗ (?) : ಆರಯ್ದು ಕೊಟ್ಟ ಶ್ರುತಿಯ ಹವಣಂ ತೊಟ್ಟು ಕೈಕೊಂಡೆಡಬಲನ ಬೇಹಣಗಾಣರ್ ಮಿಸುಕಿಸೆವ ಮಿಸುನಿಯಂ ಸರಿಗೆದೆಗೆದಂತೆ ಮಾಜಿದುಬಿಗಳ ಶುಣ್ಣರಮಂ ಸೂಜಿಗೊಂಡಂತೆ ಶಾರವಿಸುತಿರೆಯುಂ (ಜಾಣಕ್ಕ. ೭-೧೩೫). [ಬೇಹಣ್ಣ + ಗಾಣ್₃]

ಬೇಹರ₁ 'ಬೇಹುರ' ನೋ.

ಬೇಹರ₂ 'ಬೆವಹಾರ' ನೋ.

ಬೇಹರದರ (ನಾ). (?) : ಬೆಲ್ಲ ಹುಣುಸೇಹಣ್ಣು ಬೆಂಪಿನ ಫಲವ ಎಲ್ಲ ಬೇಹರದರವ ಬಲ್ಲನೊಬ್ಬ ಜಾಣ ಮಲ್ಲಿಕಾರ್ಜುನಸಟ್ಟಿ ಮನದೊಡೆಯ (ಶಿಪಾ. ೦೧೦-೧೩೨). [?]

ಬೇಹರಿ 'ಬೆವಹಾರಿ' ನೋ.

ಬೇಹರಿಸು, ಬೆವಹರಿಸು (ಕ್ರಿ). ವ್ಯಾಪಾರ ಮಾಡು : ಆ ಸಿಟ್ಟಿ ಬೇ [ಜಾಣಾ. ಬ್ಯವ]ಹರಿಸಿ ಬಹುಧನಮಂ ಪಡೆದು (ತಮಾಗಿ. ೦೦-೩೮ ಕ) ; ಕಡಲೊಳ್ಕಣ್ಕೊಳಿಸುವ ಪೆರ್ಮಜಗುಗಳಂ ಬಂದ ದೀವದೀವದ ಮೇಲಾ

ದೊಡಮೆಗಳಂ ಬೇಪರಿಸಲ್ಗಡಿಪ ವೀರಪುರುಷವಿಭ್ರಮಮಂ ಪೇಗುಂ (ಪುಣಾಪ. ೬-೨೫). **ಬೆವಹರಿಸು** : ಇವನೆಸ್ಮಂ ಬಿಟ್ಟು ಪೋಪಪಾಲ್ಲ ನಾನಾವಾವದೇಶಕ್ಕ ಬೆವಹರಿಸಲ್ ಪೋದಪಿವನೆನ್ನ ಕಡಿಯ ಬಾಗಿಲ ಕಾಪಾಗಿಪ್ಪಂ (ಕಬ್ಬಾಪ. ೬-೬೫). [ಬೇಹರ್ + (< ಬೆವಹಾರ) + — ಇಪ್ಪು]

ಬೇಹಾಗ್, ಬೇಹಾಗು (ನಾ). [ಸಂಗೀತ] ಒಂದು ರಾಗದ ಹೆಸರು : ಅವರು ಬೇಹಾಗ್‌ರಾಗದಲ್ಲಿ ಹಾಡಿದ ತಿಲ್ಲಾನ ತುಂಬ ಸೊಗಸಾಗಿತ್ತು (ರಸ). **ಬೇಹಾಗು** : ಯಮುನಾಕಲ್ಯಾಣ, ಹುಸೇನಿ- ಬೇಹಾಗು, ಹಮೀರು, ನವರೋಜು ಮುಂತಾದ ರಾಗಗಳು ಹಲವು ಪಟ್ಟಿಲ್ಲಿ ನಲಿಗೊಂಡು ಕರ್ನಾಟಕ ಗೌರವವನ್ನು ಪಡೆದಿರುವುದು ಈ ಮಾರ್ಗದಿಂದಲೇ (ಗಾಚಕ. ೫೫).

[←ಹಿಂ. ಮರಾ. ಬಿಹಾಗ್./ಸಂ. ಬಿಹಾಗ್]

ಬೇಹಾಗು 'ಬೇಹಾಗ್' ನೋ.

ಬೇಹಾರ 'ಬೆವಹಾರ' ನೋ.

ಬೇಹಾರಿ 'ಬೆವಹಾರಿ' ನೋ.

ಬೇಹಾರಿಗ (ನಾ). ವ್ಯಾಪಾರ ಮಾಡುವವನು ; ವ್ಯಾಪಾರಿ ; ವರ್ತಕ : ಅಂಗಡಿಯೊಳು ಮಾಜುತಿಹ ಬೇಹಾರಿ [ಶಾಕಾಂ- ವ್ಯವಹಾರಿ]ಗಳ್ ಕಂಗೊಳಿಸಿದರು ಒಂದೆಸೆಯ (ಪಾಭಾಕ. ೬-೬೬) ; ಸಂಜಶಟ್ಟಿ-ಮಹೀಕೂರಪುರದ ಬೇಹಾರಿಗ (ಪಟುಗಂ. ೦೦-೨). [ಬೇಹಾರ (< ಬೆವಹಾರ) + — ಇಗ]

ಬೇಹಿಗ (ನಾ). ಗೂಢಚಾರ ; ಬೇಹುಗಾರ : ಹೊತ್ತಿಳಿಯೆ ಪಂದಿದಪದಂತೆ ಕಣ್ಣಂ ಪರತಂ ಕಾಣಿಪಂತಿ, ನಿನ್ನಸನುಮೇಂ ಶೋರದಂತೆ ? ನಿನ್ನ ಬೇಹಿಗನೇನಿದು ? (ಗಿಶಾಂ. ೬೫-೬೯). [ಬೇಹು + — ಇಗ]

ಬೇಹು, ಬೇವು₂ (ನಾ). ಗುಪ್ತಚರ್ಯೆ : ಗೂಢಚರ್ಯೆ: ಬಿಟ್ಟಿಯ ಬಡಿದ ಕಳ್ಳಂಗೆ ಬೇಹುಸಂದು ಕಳವು ದೊರಕದಂತಾಯಿತ್ತು (ಆಪಾಂ- ೨೦೯-೧೧೦) ; ವನಚರರು ದೇಹಿನಲಿ ಭೂಸುರಜನವ ಬೆಂಬತ್ತಿದರು (ಶಾಣಾ. ೦೬-೦೯) ; ಕಟ್ಟಿತು ನನ್ನನು ಮುಕ್ತಯ ರಾಹು ಬಾಳನ ಬೆನ್ನೊಳೆ ಸಾವಿಪ ಬೇಹು ! (ಶಾಂಗಣ. ೫೯-೨೬). **ಬೇವ್ಕು**: ಕಲವು ಬೇವಿನ ಜನರನ್ನು ಟೀಪುಸಲ್ತಾನರ ಸೀಮೆ ವಳಗೆ ಕಳುಹಿಸಿ (ಆಚೀಂತ್ರ. ೬೮).

ಬೇವು ಸೋವು = ಗುಪ್ತವಾಗಿ ಹುಡುಕಿ ತೆಗೆಯುವಿಕೆ ; ಗೂಢಚರ್ಯೆಯಿಂದ ಶೋಧಿಸುವಿಕೆ : ಜಮೇದಾರ ಬಿಡೂರ ಬೈರೆಗೌಡ ಸಹಾ . . . ಆ ಕಳ್ಳನನ್ನು ಬೇವುಸೋವಿನಿಂದಾ ಭೃತ್ಯ ಹತ್ಸಿಸಿ ಹಿಡಿಯುವಂತೆ ಅಪ್ಪಣೆ ಕೊಟ್ಟ್ರೂ ಗರವಲೆಗೆ ಬಳುಹಿಸಿಕೊಟ್ಟರು (ಶಾಕೀಂಪ್ರ. ೨೬೬). **ಬೇಹಿನ ಚಾವಡಿ** = (ಮೈಸೂರುಸೀಮೆಯಲ್ಲಿ ಚಿಕ್ಕದೇವರಾಜಒಡೆಯರು ವಿಜೃಂಡಿಸಿದ್ದ ಎಂಭತ್ತ ನಾಲ್ಕು ಜಿಲ್ಲೆಗಳ) ಗುಪ್ತಚರ್ಯೆಯ ಕೆಲಸದ ಮೇಲ್ವಿಚಾರಣೆ ಮಾಡುತ್ತಿದ್ದ ಇಲಾಖೆ : ಬೇಹಿನ ಚಾವಡಿ—ಇದರಲ್ಲಿ . . . ಅರಮನೆಯಿಂದ ಗಡಿಗಳಿಗೆ ಬರೆಸಿದ ನಿರೂಪವನ್ನು ಕಳುಹಿಸುವಂತೆಯೂ ಕಟ್ಟಳೆಯನ್ನು ಮಾಡಿದರು (ಶುಚಾಪಂ. I, ೦೯೯). **ಬೇಹಿನ ಜನ** = ಗೂಢಚರ್ಯೆಯ ಕೆಲಸಕ್ಕಾಗಿ ನೇಮಿಸಲಾದ ಜನ; ಗೂಢಚಾರರು ; ಗುಪ್ತಚಾರರು : ಘನತನಯನು ಗಜಬೇಂಟೆಯೊಳು ಬಹುದಿನದು ಬಂದಪ ಸಮಯಮನ್ನುತ ಕ್ಷಣದಿ ಬೇಹಿನ ಜನ [ಶಾಕಾಂ. ಚರ]ರು ಪೇಳಲು (ಜಾಗಾ. ೦೦-೬೯). **ಬೇಹಿನವ** = ಗೂಢಚಾರ; ಗುಪ್ತಚಾರ ; ಬೇಹುಗಾರ : "ಪೇರಿಗಂ = ಬೇಹಿನವಂ" (ಶಪಾಪ. ಪಂ. ೨): ಕೃಷ್ಣನು . . . ದ್ವಾರಕಾಪಟ್ಟಣಕ್ಕೆ ಹೋದ ವೃತ್ತಾಂತವನ್ನೂ ಪಾಂಡವರ ಸಮಾಚಾರವನ್ನೂ ಬೇಹಿನವರ ದೆಸೆಯಿಂದ ಕೇಳಿ (ಕೃಪಾಲಾ. ೬) : ವಿವಾಹಸನ್ನಾಹಂ ಮೆರೆಯುತ್ತಿರ್ದಾ ಮಾರನಾಯಕಂ ಬೇಹಿನವರಿಂ . . . ಸುದ್ದಿಯಂ ಕೇಳ್ದು (ಪಾಣಕ. ೦-೬೬).

[ವೇ. ॥ ತಮಿ. ವೇ, ವೇವು ; ಮಲ. ವೇವು ; ತುಳು. ವೇವು ; ತೆಲು. ವೇಗು]

ಬೇಹುಕಾತಿ (ನಾ). ಗುಪ್ತಚರ್ಯೆ ಮಾಡುವವಳು ; ಗೂಢಚಾರಿಣಿ : ಈ ಸಮಯದಲ್ಲಿ ದೇವತೆಗಳ ಬೇಹುಕಾತಿಯಾದ ರಂಭೆಯಿಂದ ಸ್ವರ್ಗಕ್ಕೂ ಭೂಮಿಗೂ ನಿಕಟಸಂಬಂಧಪೊದಗುತ್ತದೆ (ಆಕಥ. XI, ಕ್ರಿಸ್ತಾಸ).

[ಬೇಹು + — ಕಾತಿ]

ಬೇಹುಕಾರ 'ಬೇಹುಗಾಱ' ನೋ.

ಬೇಹುಕಾಱ 'ಬೇಹುಗಾಱ' ನೋ.

ಬೇಹುಗಡಿ (ನಾ). ಗೂಢಚರ್ಯೆಯನ್ನು ನಡೆಸುವ ಸೀಮಾ ಪ್ರದೇಶ ; ಬೇಹಿನ ಎಲ್ಲೆ : ಇರ್ದುದು ಮಹೇಂದ್ರಾಚಲಂ ದಕ್ಷಿಣಾಂಬುಧಿಗೆ ಬೇಹುಗಡಿಯಂ ಕಟ್ಟಿ (ಕ್ರಿಣಾಪು. ೫೬೬-೬೦). [ಬೇಹು + ಗಡಿ₁]

ಬೇಹುಗಾರ 'ಬೇಹುಗಾಱ' ನೋ.

ಬೇಹುಗಾರಿಕೆ (ನಾ). ಗೂಢಚಾರನ ಕೆಲಸ ; ಗೂಢಚರ್ಯೆ : ಅಗ್ರಚಾರ . . . ಬೇಹುಗಾರಿಕೆಯಲ್ಲಿ ವಿಶೇಷವಾದ ಶಿಕ್ಷಣವನ್ನು ಪಡೆದ ಕಾರಣ ಆತನನ್ನು ಶತ್ರುವಿನ ಸಮಾಚಾರ ಸಂಗ್ರಹಿಸುವ ಕೆಲಸಕ್ಕೆ ಆಯ್ದುಕೊಳ್ಳುತ್ತಾರೆ (ಪಪಾಕ. I, ೦೬೬).

[ಬೇಹುಗಾರ (<ಬೇಹುಗಾಱ) + — ಇಕೆ]

ಬೇಹುಗಾಱ, ಬೇಹುಕಾರ, ಬೇಹುಕಾಱ, ಬೇಹುಗಾರ (ನಾ). ಗೂಢಚರ್ಯೆಯನ್ನು ಮಾಡುವವನು ; ಗೂಢಚಾರ : ಜೂಜುಗಾಱಂ ಬೇಹುಗಾಱಂ (ಶಾಕಾಪು. ೦೯೨ ಪ್ರಮೋ); ಬೇಹುಗಾಱರ ಮೊಗದಿಂದರಿ ರಾಯರ ಗಾಹುಗದುಂಗಳನಜಾತಾ (ಶಂಚಾಸಾ. ೬೦-೬೫). **ಬೇಹುಕಾರ** : ಬೇಹುಕಾರನ ತೆರದಿ ಬೆಳ್ಳಂ ಮೂಡಿದುದು (ಶಾಕಂಗ. ೬೨); ಬೇಹುಕಾರರು ಬಂದು ಹಿಂದಿನ ಪೊಕ್ಕಾವಿನಲ್ಲಿಯೇ ಈ ಆಶಿಷ್ಯದ ಇದ್ದತಿಯನ್ನು ಸೇನಾಪತಿಗಳಿಗೆ ಅರಿಕೆ ಮಾಡಿದರು (ಚಾಂಚಾ. ೫೫). **ಬೇಹುಕಾಱ** : ಎಲ್ಲಿಂದ ಬಂದೆಯೆಂಬರೊ ಕೊಲ್ಲಿವನಂ ಬೇಹುಕಾಱನೆಂಬರೊ . . . ಎಂದು ಚಿಂತಿಸುತಿರ್ದಂ (ದಪಚ. ೨-೦೬೬); ನಳನಮಿತ್ರನ ಬೇಹುಕಾಱರ ಸುಳಿವು ತಿಪ್ಪಿರದ ಪ್ರಳಯಪ್ರಭೆಯಂತೆ ನಿಳಯನಿಳಯದ ಸೂಡರು ತಳತುದು ಕೂಡೆ ಪಗರಿದುಲಿ (ಸಂಪಚ. ೬೨-೦೬). **ಬೇಹುಗಾರ** : ಸುಮತಿಯಂ ಬೇಹುಗಾರರ ಗೊತ್ತುಗಾರನಂ ನೋಡಿ (ಪಾಗಂಭಾ. ೦೬೬-೪) ; ಛಾತುರರನ್ನೂ ಬೇಹುಗಾರರನ್ನೂ ಒಳಗೇ ಸಂಭ್ರಮಮಾಡಿ ಕಳುಹಿಸಿರಿಸಕ್ಕದ್ದೂ . . . ಗೊತ್ತಾಗಿತ್ತು (ಪುಗಿಚ. ೦೬೬). [ಬೇಹು + — ಕಾಱ]

ಬೇಹುಗುಟ್ಟು (ಕ್ರಿ). ಗುಪ್ತವಾಗಿ ಮಾತನಾಡು,— ಹೇಳು : ಜನಾನ್ವಿತರಲ್ಲಿ ಸೈನ್ಯಾಧಿಪತಿಗೆ ಕ್ಷೀಣಸ್ವರದಿಂದ ಬೇಹುಗುಟ್ಟಿ, ವೀರವನ್ನನ ಮಾಡಿ ಹೊರಟುಹೋಗುವನು (ಜಚಂಂ. ೫೬.೬). [ಬೇಹು + ಕುಟ್ಟು₂]

ಬೇಹುಬರ್ (ಕ್ರಿ). ಬೇಹುಗಾರಿಕೆಯನ್ನು ನಡೆಸಲು ಬರು : ಪೂಲಾಪಿ ನವರ್ ಕಾಣಾತೆ ಪಲರುಂ ಪರಿತಂದು ಬೇಹು ಬಂದವನಿವನಂ ಕೊಲೆಗೆಯ್ದು ವಿನ್ನಂದೊಡೆ (ಜಚಕಂ. ೫೬-೬೯) ; ಏವ್ ತೊಲಗಿ ಛೀಪಾಪ ಬೇಹು ಬಹುದಿವಪೇಡ ಏಪಿಂದ (ಕಾಣಾಗೆ. ೨-೦೦). [ಬೇಹು + ಬರ್ (< ವರ್)]

ಬೇಹುರ, ಬೇಹರ₂ (ನಾ). ೧. ಗುಪ್ತಚಾರ ಜನ ; ಗೂಢಚಾರಮಂದಿ : ಏನು ಮಜುಗಿಡೊಡೇನು ಪಾಂಡವವಾನನಿಧಿಗಳ ಪುಣ್ಯದನುಸಂಧಾನ ದೇಪುರದಲ್ಲಿ ಬೈಚಿಡು ದೇವಲೋಕದಲಿ (ಸಂಪಚ.೦೬-೦೦೬). **ಬೇಹರ**₁ : ೧. ಹರಣದಾಸೆಯುಸುಳಿದು ಹರಿದೋಡುಮಹಿತಮೋಹರದೊಳಗೆ ಬೇಹ ಬೇಹರ ರೈದ ಸೆಣಸಿ ಸಂಹರಣಕಾಲದ ಕಾಲಹರನ ಕೋಪದೊಳಿಂವ ಹರಹನೇಂ ಬಣ್ಣಿಸುವೆನು (ಪಂಕ್ಷ.೫೫-೦೦). ೨. ಬಹಳ ಬುದ್ಧಿವಂತನಾದವನು,— ಬುದ್ಧಿಶಾಲಿ : "ಪೇಹರಮ್ ಬುದ್ಧಿನೆ ಪೂರಿ ಬುದ್ಧಿಬಲಯುತನಕ್ಕುಂ" (ಶಾಮಂ. ೫೦). [< ಬೇಹು]

ಬೇಹುವಳ (ನಾ). ಗೂಢಚರ್ಯೆಗಾಗಿ ನಿಯಮಿತನಾದವನು,—ನೇಮಿಸಲ್ಪಟ್ಟವನು : ಏಮ್ಮ ದ್ರೋಹದ ಗೆಯ್ಮೆಗಳನ್ನೆಲ್ಲಾ ವಿಚಾರಿಸಿ ವಿವರ

ಗಳನ್ನು ಮಹಾಸ್ವಾಮಿಯವರೆ ಒಳಿಲಗದ ಪರಿಚಿಲಕ್ಕೊಪ್ಪಿಸಲು ಶ್ರೀಮನ್ನರು ಅಧಿಕಾರಗೊಟ್ಟರುವ ಹೊಸ ಬೇಹುವಳ (ಪಟ್ಟಿ. ೫೦-೦೪).

[ಬೇಹು + — ವಳ]

ಬೇಹುಷಾರಿ 'ಬೇಹುಷಾರು' ನೋ.

ಬೇಹುಷಾರು, ಬೇಹುಷಾರಿ (ಗು). ೧. ಎಚ್ಚರಿಕೆಯಿಲ್ಲದ ; ನಿರ್ಲಕ್ಷ್ಯ ತನದ. (ನಾ). ೨. ಜಾಗರೂಕತೆ ಇಲ್ಲದಿರುವಿಕೆ ; ಎಚ್ಚರಗೇಡಿತನ ; ನಿರ್ಲಕ್ಷ್ಯ : ಅವನ ಕೂಡ ಹರಟುತ್ತ ಪರಟುತ್ತ ಪಾನು ಬೇಹುಷಾರಾದೆ (ಸಂಗಸಂ. ೪೨). **ಬೇಹುಷಾರಿ** ; ೧. ಬೇಹುಷಾರಿ ಪೋಲೀಸಿಂದ ಉಂಟಾದ ಕಳ್ಳತನದ ನಷ್ಟವನ್ನು ನಷ್ಟ ಹೊಂದಿದವರಿಗೆ ತಪ್ಪಿತಸ್ಥರಿಂದ ವಸೂಲುಮಾಡಿ ಕೊಡುತ್ತೇವೆ (ಶಾಶಾಪ್ರ. ೪೩). ೨. ಪಾಪೇನು ಅಮ್ಮ ಬೇಹುಷಾರಿ ಮಾತನಾಡಿದ್ಲಾ (ಕಮ್ಮಕ್ಕಿ. ೨೬).

[← ಪಾಕ. ಮರಾ. ಬೇಹುಶಾರ್. ಬೇಹುಶಾರೀ]

ಬೇಹ್ಯೆಸು (ಕ್ರಿ). ಬೇಕೆನಿಸು; ಬಯಸು; ಅಪೇಕ್ಷಿಸು : ತಾಪದಲವಡೆ ಬಳಲುತ್ತ ಬೇಹ್ಯಸಿಯಂದುದುಮಂ ಕಂಡಿಯಲು (ಸಿಪ್ಪ. ೯-೨೯).

[<ಬೇದು$_1$ + — ಇಸು$_3$]

ಬೇಳ್$_1$, ಬೇದು$_3$, ಬೇಳು$_1$ (ಕ್ರಿ). ಬೇಳ್ದ (ಭೂತಕೃ). ಬೇಳ್ದು (ಭೂತನ್ನೂ). ಬೇಳ್ವ$_2$ (ವರ್ತಕೃ). ಬೇಳ್ಪ$_2$ (ಭವಿಕೃ). ೧. ಹೋಮವನ್ನು ಮಾಡು ; ಪಮಿಸ್ಸನ್ನು ಅರ್ಪಿಸು: ಯಜ್ಞ ಮಾಡು : "ಬೇಳ್—ಹವಿಃಪ್ರಧಾನೇ (ಅಮರ ಕೊಡು). ನಿವ್ಯದ್ಯೊ ಜ (ಬೇವದಂಗೆ ಇಲ್ಲದಿರು)" (ಶಕುಂತ): ಮಹಾಸವಮಲಸರ್ಪಕೃತುಗಳನುವಾಗ [ತ]ರಮಾಗೆ ಬೇ[ಳ್ದ] ವಿಪ್ರೋತ್ತಮರಂ ಕರೆಯಿಸಿ (ಕೌಭಾ. XI–i.೦೪-೦೬; ೪೧೩) ; ರಾಜಸೂಯಮೆಂಬ ಯಾಗಮಂ ಬೇಳ್ಪಂತಿ ಮಾಡಿ ಬಿನ್ನಿಂ (ಸಂಪಕಾ. ೬-೦೭ ಪ) ; ಹೋಮಸ್ಫೋವಧೂಮಂ ನೆಗೆದುದು ಮುಸುಗಳ್ ಬೇಳ್ದ ಮಂತ್ರಾಗ್ನಿಯಿಂದಂ (ಗಿಂಕ. ೦-೬೬) . ೨. ಆಹುತಿಯಾಗು ; ಆಹುತಿಗೊಳ್ಳು : ಮಾರಿ ಹೊಡದುಗ್ಗೆ ಕನ್ನೆ ಕುಮಾರಿಗೆ ಕುಜಿಯಾಗಿ ಬೇಳ್ಗೆ ಸಿದಿಲೆಱಗೆ . . . ಮುದುಗುಂಟಣೆಯಂ (ಸಿಚಕ್ಕಸು. ೦-೬೦) ; ಸಯ್ದರಗಿನಿಂ ಬೋಳೆನೆಳೆದು ಕದುಳ್ ಸುಗಿದಂ ಬಯ್ದು ಹವಸುಗಳಿಂದ ಬೇಳ್ದ ಬಗೆ ದಳ್ಳಿಸಲ್ (ಶಾಂಪಸ. ೦೩೦-೩೬). **ಬೇದು$_3$** : ೧. ಜಗದಾಶ್ಚರ್ಯವಾದ ರಾಜಸೂಯಮಖವಿಧಿಯಂ ಬೇಡಲ್ಬಹರ್ತ್ಥಾಫಲವಾಗಮೆಮ್ಬು × × × ವಿಭೀಷಣನ ಮೇಗಾಕ್ಷೇಪದಿಂ ಪೋಗಿ ವಸ್ತುಗಳಂ ಕವ್ಪಮವಸ್ಸೆ ಕೊಣ್ಮಾ (ಪಂ. VII. ೪೫೦. ೦೫-೩ ; ೧೦೫೬). **ಬೇಳ್ವು$_1$** : ೧. ಬೇಡಿತಂ ಕೊಡುಬ್ಲು ಕೂಲಿ ಬಂದಿರೆ ಬಗೆದುದಕಟಟಟಿ ಬೂದಿದೊಳು ಬೇಳುವಂತ ಧಮಿದ್ಯೆವ ಮಾಡಿದಪರೆಂದು ಹೊಜಿವಂಟು ನಿಜಗೃಹವಸು(ಸಿಗ್ಗ. ೩-೩೫); ಏನೆಯೆನಾ ಹೋಮವ ಬೇಳುವೆಡೆಯೊಳು ಸಾಮಾರಾಗದೆ ಲಾಜೆಯುಸು ಭೂಸುತವೆನೆ ಬೇಳುತಿರೆ ಚಟಚಟೆರಂಬ ಧ್ವಾನವೆಸೆವುದು (ಶಂಪಾ. ೩-೨೨೬); ಬೇಳುತಿರ್ಪಾಹುತಿಯಿಟ್ಟು ಪಟ್ಟುರ್ಮಮಂ ಬಿಟ್ಟು ನೆಜೆ ವೆಜಗಾನಿಟ್ಟು (ಪಾಪ. ೫೦-೨೪). ೩. ಸುಟ್ಟುಹಾಕು ; ಸುಟ್ಟಪಡಿಸು ; ನಾಶಮಾಡು : ಒಂದುಮುಖದಲಿ ಜಗವ ಹೂಡುವನೊಂದುಮುಖದಲಿ ಜಗವ ಸಲಹುವನೊಂದುಮುಖದಲಿ ಬೇಳುವನು ಸಜನಾಗ್ನಿಯಲಿ ಜಗವ (ಕುಪಾ. ೪೮. ೩-೩೨) ; ಮುಕ್ಕಿ ರಾಹು ಪ್ರೌಮಜ್ವಾಲೆ ಪೃಕ್ಕಿರು ಸೃಕ್ಕಿಗೆ ಬೇಳುವ ಲೀಲೆ (ಪಾಂಚಿ. ೫೫ ೦೪). ೪. ಆಹುತಿಯಾಗಿ ಪಡೆ ; ಆಹುತಿ ತೆಗೆದುಕೊಳ್ಳು : ಹರಿಯ ಬಾಣವು . . . ತ್ರಿಪುರದೂಷುರ ಪರನ ತಲೆಗಳ ಬೇಳದುದು (ಕಾಶಿಖ. ೦೪-೩೩).

[ಪೇ.ಗೌ ತಮಿ. ವೇಳ್; ತುಲು. ವೇಲು]

ಬೇಳ್$_2$, ಬೇಳ್ವು$_2$ (ನಾ)- ೧. ದಿಗ್ಭ್ರಾಂತಿ; ಕಕ್ಕಾಬಿಕ್ಕಿ : (೪). ೨. ಮೋಹ; ಮರುಳು : 'ಬೇಳ್ಕೆ', 'ಬೇಳ್ವೆ$_2$' ಪರಾ- ೩. ಬೆಪ್ಪುತನ; ದಡ್ಡತನ. ೪. ಮೂರ್ಖನಾದವನು: ಅವಿವೇಕಿ ; ದಡ್ಡ : ಅವು ರೆಂದೋನ್ನತಿ ವಿಚಿರೇಂದ್ರವಿಭವಂ ಭೋಗೇಂದ್ರಭೋಗಂ ಪುಷೇಂದ್ರ ಪುಷ್ಕೆಶ್ವರ್ಯಸಿಂವೆಲ್ಲಮಧ್ರುವವಿಭವಂ ಬೇಜ್ಬಂತಾ- ಬೇಳ್ಪೆಸುತ್ತವಂ ದೀಕ್ಷಾವಿಧಿಯುಂ ಸಮಾಧಿಪರಣಂ ಕರ್ಮಕ್ಷಯಂ ಮೋಧಿಳಾಧಮೋಘಂ ದೊರೆಕೊಳ್ವುದಕ್ಕುಂ (ಜಾಷ್ಟ. ೦೦-೬೦); ಬೇಳಿನಿ ನೆಗಟ್ಕೆಗೆ ಬೆಂದುಬದೆ ತಲ್ಲಗೆಸದಾತರ್ಮ್ ಕೂರ್ತವಯವದಿಂ ಕೇಳ ಪ್ರಭಾವಪಾಂಗಮನೇಳಸ ದುಚ್ಚರ್ತಾ ತಾಪ್ಪವೇಬ್ಬುದು ಭವ್ಯಂ (ಪಜಾಕ್ಕು. ೯-೦೬). ೫. ದಂಬಿ : ಕಳವಳ : 'ಬೇಳ್ಕರೆ' ಪರಾ. **ಬೇಳ್ಕು$_2$** : ೨. "ಬೇಳೆಂದೆನೆ ಮರುಳು" (ಸಭಾಂ. ೨೫೪). ೫. 'ಬೇಳುಗೊಳ್' ಪರಾ. 'ಬೆಳ್$_2$' ನೋ.

ಬೇಳಾಗು—೧. ಕಕ್ಕಾಬಿಕ್ಕಿಯಾಗು; ತಬ್ಬಿಬ್ಬಾಗು : ಪರಿವರಜ್ಯಾದಿಗಳ್ ಬೇಳಾದಂತ್ಯರನ ನಿಲವನಜಿಯದೆ (೦೬೫೦. ೦೩-೦೦). ೨. ಹುಚ್ಚಾಗು; ಮರುಳಾಗು; ಮೋಹಗೊಳ್ಳು : ಆ ಕಾಂತೆ ಬೇಳಾದಳವನ ಚಿದ್ಭಿಕೆಗಂದು (ಕೃಪುಪ. ೫೦-೪೦); ಕುಮಾರರಾಜಗೆ ರತ್ನಿ ಬೇಳಾದಳು (ಕ.ರಾಜಾಂ. ೫೦-೦೩). ೩. ಮೂರ್ಖನಾಗು ; ಅವಿವೇಕಿಯಾಗು : ಪರಿದೊಂದಜ್ಞಾನದಿಂ ಭವೌದನವಿಳಕ್ಕೆ ಮೈದೋಱಿ ಕಾಂತಾನಿಪಾಸಾಂತರ ದೊಳ್ ಶಾಶ್ವತೆಂಗೆ ಹೀಪದಿಗೆ ಕಡಿಗೇಱುವಾಗಿರ್ದು ಬೇಳಾ[ಜಾಗಾ. ಬೆಳ್ಕಾ] ಗುತುಂ (ಕಗ್ಗ. ೪) : ಗುಣದ ಕಣೆ ದೇವೇಂದ್ರಚಿತಾಮಣಿಯೆನಿತ ಕಾಲ್ಕೆಡದು ಬೇಳಾದೆಡೆ ಸಾಕೆಂದನಳಬಲಿತೆಯನುಸುರಲೊಡರಿಸಿದೆ (ಪಾಕ್ಷಾ. ೦-೪೦) ; ಈಶಭಕ್ತಿಲಗತ್ಸಾರಸುಖಾಬ್ಧಿಯಂ ತೊಜಿದು ದರ್ಭೇಳಾಗದಿ ರ್ಸಾಱದೆಂ (ಕ್ಷಕ. ೫೬-೪೩). ೪. ತಳಮಳಗೊಳ್ಳು ; ಕಳವಳಿಸು ; ಪಾಂಚಾಳನಂದನೆಯಂ ಕಾಣದೆ . . . ನರಂ ಧೈರ್ಯಮನೊಳ್ಕು ಪಜ್ಜ ಹೃದಯಂ ಬೇಳದಂ (ಪಂಪಾ. ೦೦-೪೨) ; ಎಸಪ ಪುರಜನವಲ್ಲ ಗೋ ಳಿಡುತ ಬೇಳಾಗಿ (ಪಜಾತ. ೫೬. ೬೫-೫೦) ; ಶರಣಾಜನವಿಯೋಗವ್ಯಥೆಗೆ ಬೆಂದಿಳ್ದು ಬೇಳಾಗಿ ಪಂಬರಿಸಿ ಪುರಪಾ ವಿಶ್ವನಾಥಾಮಿನುತ್ತಾಂ (ಪಜ್ಞಾ. ೬-೦೦); ಈ ದುರಂತದ ಚಿಂತೆಯುರಿ ಬೇಳಾದುದೆನ್ನದು ಚಿತ್ತವದ್ದೆನು ಖೇದ ಪಂಕದೊಳು (ಕಂಜಾ. ೦೦.೭). ಬೇಳ್ಮಾಡು. ಬೇಳುಮಾಡು = ಪುರಿಳಾಗಿಸು ; ಮರುಳುಮಾಡು: ಎಡಗಾಲೊಳ್ ತೊಡರಿಂ ತೊಡರ್ದು ಪತಿಯುಂ ಬೇಳ್ಮಾಡಿ ನಿನ್ನೊಂದು ಪಿಂಡುಡಿಸೊಳ್ ನಿಲ್ಲ್ವಳಲ್ಲೆಪೆಂದು . . . ಆನ್ಯ ಕಾಮಿನಿಯರಂ ಅೋಡಾಡುವಂತಿಕ್ಕಿದಳ್ ತೊಡರಂ ಸುಗ್ಗಲವೇದಿ (ಪಜ. ೪, ೪೦೩೫. ೦೦೨-೦೦; ಸಾ- ೧೪೫೦); ದೇವ ನೀಮಲ್ಲಿಗೆ ಪದೆಂ ಬರಲ್ ತೋರ್ಪೆನೆಂದಂತವಳ್ ತಾಪಸನಂ ಬೇಳ್ಮಾಡಿ ವೇಗಂ ನಲವಿನೊಳೊಡ ಗೊಂಡುಯ್ದಳ್ (ದಶಕು. ೯-೩೬); ಜಾಲೆಗಾರನ ಕೈದು ಮಾಣಿಕ್ಯ ಸಿಕ್ಕಿದೆ ಆಳಿಗೆಂದಿತು ಜಗವ ಬೇಳು ಮಾಡಿ (ಸರಗ. ೪೪-೪೦೩).

[ಪೇ.ಗೌ ತುಲು. ಬೇಲ, ಬೇಲು./ಸಂ. ಭೇಲ]

ಬೇಳ್$_1$ 'ಬೆಳಲ್' ನೋ.

ಬೇಳ್$_2$ (ನಾ)- ೧. ಸ್ಪರ್ಶ ; ಸೋಂಕು : ಚಂಡಾಳಿಗನ ಬೇಳಮಾಂತರೆಯಂ ಗಳೆದೊಡ ಪಾಣಮದಲ್ಲು ಸುರಧಿಯುಂತಮಾಗಿಸಾಪಿದಲಾತ್ರವು ಮಲ್ಲದೆನೆ ರಂಜಿಸಿತ್ತು ತತ್ಪರಸ (ಪಚಕ್ಕಿ. ೦೩-೪೦). ೨. (?) : ಚಂದ್ರಾದಿತ್ಯರ್ಕ್ಕಳಿಣಾಗೆಯುಂ ಚಿತ್ರಪೆ ಬೇಳಮಾಗೆಯುಂ ಪದ್ಮ ಕಪಟಮೆ ಕಂಚುಳಿತೆಯಾಗೆಯುಂ . . . ಬಸರ್ಬಾ[ರು]ಸ್ತಾವಿಗಳ್ಗೆ ಸಾಷ್ಟಾಂಗಮರಗಿ ಪೊಡಮಟ್ಟು (ಕ್ಷ. ೨೯. ೫೫-೦೩ ; ೧೦೦೦ ?). [?]

ಬೇಳ್$_3$ 'ಬೇಳ್ಮು' ನೋ.

ಬೇಳಂಬ (ನಾ). ೧. ವಿಡಂಬನೆ ; ಅಣಕ : 'ಬೇಳಂಬಿಗ' ಪರಾ. ೨. ಕೇಡು ; ವಿಪತ್ತು : ಒಗೆನುದೀ ಬೇಳಂಬ ಹಸ್ತಿಸಸಗಂದುಲಿ ಶತ್ವಾರಿಜನ ಮನವುಗದು ಬಿದ್ದುದು ಶೋಕಮಯಾಸಾಗರವ ಮಧ್ಯದಲಿ (ಕಾಪ್ಪ. ೬-೧೦) ; ಕೇಳು ಧೃತರಾಜ್ಯಾಪೇಜ ನೀ ಕೋರು

ಪೋಪರೆ ಕೋಡದುಱುಬೆಗೆ . . . ಬೇಳುವೆಯ ಬೇಳಂಬಮದ ನೞಾದಾಳು (ಹಱ್ಕಿ೨೯. ೦-೨೪), ಬಿಳುನೆಲೆ ಉಪ್ಪರಿಗೆಯುತ್ತೀ ಕೀಳುದಿಪ್ಪೆಯಿದೆತ್ತ ಕರ್ಮವು ಮೇಳಿಸಿದ ಬೇಳಂಬವ್ವಲ್ಲದೆ ಬೇಱೆ ಪೆಜತಳ್ಳ (ಹಳ್ಳಿ. ೦೭-೭೯). ಪಿ. ಗೊಂದಲ ; ಗಲಿಬಿಲಿ : ಒಚ್ಚತ ಮಾಡಿ ಮಾಳ್ಪೆವ ಱಾಯಂ ಮತ್ತಾ ಪುರಂ ಚೆಲ್ಮವಾ ಪುರಮೊಂದಾ ಪುರಮೊಳ್ಮಿತಾ ಪುರಮದಂ ತೀತಂಬ ಬೇಳಂಬಮಾಂ (ಅಪಂಕ. ೦-೦೫೦). ೪. ಮರುಳು; ಆಕರ್ಷಣೆ; ಮೋಹ : ಧರೆ ವನಿತೆಯರ ಬೇಳಂಬಕೊಳಗಾಗದ ಜಾರ್ದಪವ ನಪೆಯ ಬೇಡಿದನೀವ (ಕ್ರಮ್ಮಿ. ೬-೭೭). ಪಿ. ಮೋಸ ; ವಂಚನೆ : ಪಾಡುವ ರಾಗದಂತೆ ಬೇಳಂಬದ ಪದಗಂತೆ . . . ಕಡೆಯೊಳ್ ಪೆಸುಪಥಮುಮ ಶೋಧಿಯುಮಾಗದೆ ಪೋಗದು (ಅಬರಹ್ಮ. ೭-೦೭೨); ಸೋಲದ ಗೆಲ್ದದ ಪಡಮಾತುಗಳುಮಂ ಬೇಳಂವಾದಿ ಪುಸಿಗಳುಮಂ ರಾಗಿಸಿ ತಾಂ ಕೇಳ್ದುದು ಪರಗೆ ಪೇಱ್ದುದು ಮೊದಲಾದುವೆಲ್ಲಂ ದುಃಶ್ರವಿದೆಂಬ ಪಾಲ್ಮನೆಯರ್ಥದಂಡಮಳ್ಮಂ (ಕ್ರಕಾ. ೦೭೦). 'ಬೇಳ್' ಸೋ.

[<ಪ್ರಾ. ವೇಲಂಬ. / ಸಂ. ವಿಡಂಬ]

ಬೇಳಂಬಿಗ (ನಾ). (ಹಾಸ್ಯಪರವಾದ) ಚಮತ್ಕಾರಗಳನ್ನು ಮಾಡುವವನು : ವಿದೂಷಕ : ದಂಡದ ಬೇಳಂಬಿಗರ ಬೆದಂಡೆಯ ತಳೆಗೆಯ ದುಃಶೇಂದ್ರಜಾಲಿಗಳ ಮುನಂಗೊಂಡೆಸೆವ ವೆಗ[ಬ್ಬಚಿ]ಯ ತಂಡಂಗಳವಾದ ದಸೆಯೊಳಂ ಕದುರಲ್ಕುಂ (ಹರಶಪ. ೦೦-೨೦).

[< ಪ್ರಾ. ವೇಲಂಬಗ. / ಸಂ. ವಿಡಂಬಕ]

ಬೇಳೆ (ನಾ). ಒಂದು ಬಗೆಯ ಸಸ್ಯ : "ಮೂಲಂತಃ—ವಿಶಾಖಾಲುಕ. ಬೇಳೆ. ಪಲ್ಲವತ್ಕ" (ಬಹು. ೨೨೪). [?]

ಬೇಳಲು 'ಬೆಳಲ್' ನೋ.

ಬೇಳಾವನ (ನಾ). ಸಮುದ್ರತೀರದಲ್ಲಿ ಳಿಯ ಅರಣ್ಯ.—ಕಾಡು : ಬೇಳಾವನಪರಿವೃತಶಶಾರದಧೀವಳಯವಳಯತಪಲಂಬಿಂದ್ವೀಪದ ಭರತ ಕ್ಷೇತ್ರದ ದಿಸೀತಾಖಿಂಡದೊಳ್ ಮಗಧೆಯೆಂಬುದು ವಿಷಯಂ (ಅಂಚಪ್ರ. ೦-೦೬ ಕ). [<ಸಂ. ವೇಲಾವನ]

ಬೇಳಿ 'ಬೇಬಿ' ನೋ.

ಬೇಳಿಡು (ಕ್ರಿ). (ಹಸು ಮುಂತಾದ ಪ್ರಾಣಿಗಳು) ಅರಚು : ಕೂಗು: ಳೀಡುತುರುಳ್ವ ಮೃಗರಾಜಯಿಂ ವಾಪಯಿಂ ಬೇಳಿಡುತೆ ಬೀಳ್ವ ಕಾರ್ಪಸುಗಳಿಂ ಮುಸುಗಳಿಂ . . . ಪಾಳಾದ ಸಕಲಶೋಣಗಳಿಂ ಕಂಗಳಿಂ ಪೋಡಲುರಿ ಭಪಮಾದುದು (ಕಬ್ಬ. ೧೬-೨೬). [ಬೇಳ್ + ಇಡು]

ಬೇಳಿಸು (ಕ್ರಿ). ೧. ಹೋಮ ನಾಡು : ಯಜ್ಞ ಮಾಡು : ಅಮಪತಿ ತಾಪ್ಪದಿಂ ಸಾಸಿವೆಯಂ ಪಾಲ್ಮರನ ಸಮಿಧೆಯಿಂ ಹುತವಹಮಂತ್ರ ವಿಧಾನದ ಬೇಂಗಿ ತಾಡ ಸುರ್ಮಾಮಂ ದ್ವಿಜರ್ಗ (ಧರ್ಮಕಿಪ. ೯-೧೬). ೨. ಸುಡು : ಪಗೆಯ ಬಿಳುವೆನದುರಂ ಸೀಳಿಸುವೆನಂಗಮಂ ಬೇಳಿಸುವೆನ್ನಿಯೊಳ್ ತಾಳಿ ಸುರರೆಂದು . . . ಪರಿ ನವದಮ (ಪಾಪ. ೩೦-೩೩). ಪಿ. (ಆಲಂ) ಪಡೆಸಿಕೊಳ್ಳು : ಅಂತಿತಗೊಳಿಸು : ತಾಜಮು ದೊರೆ ವೇದೋಜ್ಜಯುಮುಂ ಜಗದೊಳ್ ತನಗೆ ಸಾಟ್ರಯಿಲ್ಲಂಬಾರ್ಪಾ ತಂಜಾವೂರಂ ಮಧುರೆಯುನಂಜಿವ ದಾಮರ್ಲದೊರೆಯುಮುಂ ಬೇಳಿಸಿದಂ (ಕಪಂ. ೩-೩೮).

[ಬೇಳ್೧ + —ಇಸು]

ಬೇಳು೧ 'ಬೇಳ್೧' ನೋ.

ಬೇಳು೨ 'ಬೇಳ್೨' ನೋ.

ಬೇಳ್ಕು೩, **ಬೇಳ್ಕೆ** (ನಾ). ಒಂದು ಬಗೆಯ ಸಸ್ಯ : "ಶ್ಲೇಷ್ಮಾತಕಃ—ಬೇಳ್ಕು, ನವುಲು" (ಬಹು. ೩೦). ಬೇಳ್ಕ೪ : "ಬೇಳ ಪುಂಗಳ ತಿಳುವಮಯುನಿಳ್ಕ" (ಪುಂಗಣಾ. ೪೨-೩೦). [?]

ಬೇಳುಗೆ 'ಬೇಳ್ಗೆ' ನೋ.

ಬೇಳುಗೊಳ್, **ಬೇಳುಗೊಳ್ಳು** (ಕ್ರಿ). ತಾಪಕ್ಕೆ ಒಳಗಾಗು : ಸಂಕಟಪಡು : ವ್ಯಸನಪಡು : ಮಡದಿ ಕಾರುಣ್ಯದೆ ಮೇಳಸಹಿತ ಬಂದೆನ್ನ ಪಾಳದೆ ತಕ್ಕಸಲುಳವೆನ್ನಲ್ಲದೊಡಾಮ ಬೇಳುಗೊಂಡಳವೆ ನಿಶ್ಚಯವು (ಅಪಂಕ. ೦೩-೦೦೦). ಬೇಳುಗೊಳ್ಳು : ಈ ನಡುಗೋಳವಲಿ ನೀ ಸಿಲುಕಿ ಬಜೆದೇ ಬೇಳುಗೊಳ್ಳದಿರೆಂದು ಬೋಧಿಸಿದಳು ನಿಜಾತ್ಮಜನ (ಹರಾಪ. ೯-೦೪-೦೨).

[ಬೇಳು೨ (< ಬೇಳ್೨) + ಕೊಳ್೧]

ಬೇಳುಗೊಳ್ಳು 'ಬೇಳುಗೊಳ್' ನೋ.

ಬೇಳುನುಡಿ (ನಾ). ಮರುಳು ಮಾಡುವ ಮಾತು : ಆ ಬೇಳುನುಡಿಗೇಳ್ದು ಕಮ್ಮವೆ ಬೇಳಲ್ ನಿಮಗಂತು ರಾಜಸೂಯಂ ಬೊಗ್ಗೇ (ಹರಪಾ. ೬-೨೪).

[ಬೇಳು೨ (< ಬೇಳ್೨) + ನುಡಿ೨]

ಬೇಳುಮಾತು (ನಾ).=ಬೇಳುನುಡಿ : ಬೇಳುಮಾತಿದು ಕುವರಿಯ ಜಿನಗೀವುದು ಕಾಲಹರಣ ದೇಸೆಂದು (ಅಸಂಕ. ೬-೭೪).

[ಬೇಳು೨ (< ಬೇಳ್೨) + ಮಾತು೨]

ಬೇಳುರಿ (ನಾ). ಹೋಮದ ಉರಿ.—ಜ್ವಾಲೆ : ಜನ್ಮಗೊಂಡದ ಬೇಳುರಿ ಚುಬುಚುಬು ಕಿಡಿಕಿಡಿವೋವುದುಂ (ಅಪಪ್ರ. ೪೩-೨).

[ಬೇಳು೨ (< ಬೇಳ್೧) + ಉರಿ೨]

ಬೇಳುವಡು (ಕ್ರಿ). ಕಳವಳ ಪಡು ; ತಳಮಳ ಹೊಂದು : ನೃಪತಿ ವಿಸ್ಮಯವಟ್ಟು ಮಾರಮ್ಟು ಬೇಳುವಟ್ಟತಿಶಯ ಭಯವಟ್ಟು ಕೇಳಲದಱ ವೃತ್ತಾಂತವನು (ಕೃಭಾ. ೫೬-೦೪). [ಬೇಳು೨ (<ಬೇಳ್೨) + ಪಡು೧]

ಬೇಳುವಡೆ (ಕ್ರಿ).=ಬೇಳುವಡು : ಹೇಗಿದಾ ಕಪ್ಪವನು ತೆತ್ತೀ ತಲೆಯನುಳಿಸಿಹೊಳು ಬೇಳುವಡೆಯದಿರೆಂದು ದೂತನು ಹೇಳೆ (ಹಳ್ಳಿ. ೦೯-೦೦). [ಬೇಳು೨ (< ಬೇಳ್೨)+ಪಡೆ೧]

ಬೇಳುವೆ 'ಬೇಳ್ವೆ೧' ನೋ.

ಬೇಳುವೆ 'ಬೇಳ್ವೆ೨' ನೋ.

ಬೇಳುವೆಗೊಳ್, **ಬೇಳುವೆಗೊಳ್ಳು** (ಕ್ರಿ). ಕಳವಳಪಡು ; ತಳಮಳಿಸು: ಱಾಗದಂಗರಕ್ಷಕರು ಪಾಳದೆ ತಲೆನಮಿರ್ದಜ್ ಗೋಳಿಡುತಂದು ಬೇಳುವೆಗೊಂಡಯ್ದಂದರು (ಅಪಂಕ. ೦೩-೧೩). ಬೇಳುವೆಗೊಳ್ಳು: ಕಾಲಕಾಲನ ಬಲೆಯೊಳಗೆ ಸಿಕ್ಕಿ ಬೇಳುವೆಗೊಳ್ಳುತಿದ ಜಗವೆಲ್ಲ (ಪಪ್ರ. ೪೩).

[ಬೇಳುವೆ೨ (< ಬೇಳ್೨೨)+ಕೊಳ್೧]

ಬೇಳುವೆಗೊಳ್ಳು 'ಬೇಳುವೆಗೊಳ್' ನೋ.

ಬೇಳುವೆಳೆ (ಕ್ರಿ). = ಬೇಳುವೆಗೊಳ್ : ಕಳೆದು ಕಲಹೊತ್ತಿನ್ನು ನಿದ್ರಾಲಲವ ಬೇಳುವೆದಳೆಯಲದ ಪದಗೊಳಿಸಲಾರದೆ (ಪಪಾಂ. ೨೩-೭೦).

[ಬೇಳುವೆ೨ (<ಬೇಳ್೨೨) + ತಳೆ೧]

ಬೇಳುಮೆಬೂದಿ (ನಾ). ಮಂತ್ರಿಸಿದ ಬೂದಿ ; ಮರುಳು ಮಾಡುವ ಬೂದಿ ; ಮಂಕುಬೂದಿ : ಹಾಲ ಚಲ್ಲಿದ ಚಂದದೊಳು ಪುಷ್ಪಬಾಣವ ಬೇಳುಮೆಬೂದಿಯ ತೆರದಿ . . . ತೋರಿತು ಮೇರಾದ ಬೆಳುದಿಂಗಳಾಗ (ಪೌಗಂಚ. ೩-೪೩). [ಬೇಳುವೆ೨ (< ಬೇಳ್೨೨) + ಬೂದಿ]

ಬೇಳುವೆಮಾತು 'ಬೇಳ್ವೆಮಾತು' ನೋ.

ಬೇಳೆ೧ (ನಾ). ೧. (ಕಡಲೆ. ಹೆಸರು, ಉದ್ದು ಇತ್ಯಾದಿ) ದ್ವಿದಳ ಧಾನ್ಯದ ಹೋಳು.—ಭಾಗ : ಕಾಳಾಗ್ನಿರುದ್ರನ ಮೇಃಕಾಪವನಜೀಯ ದವರು ಕಾಳು ಬೇಳೆಯೆನುತಿಪ್ಪರಯ್ಯಾ (ಪಪ್ರ. ೨೩೭) ; ಬಂದಿಸಿದ ಕಣಕ ದುಂಡೆಗಳನೊಂದೊಂದ ತೆಗೆದೊಂದಕ್ಕೆ ಬೆಂದ ಕಡಲೆಯ ಬೇಳೆಗಳನು ಮತ್ತೊಂದಕ್ಕೆ ಸೊಜ್ಜಗೆಯನು . . . ಇಕ್ಕಿ (ಸೂಪಾ. ೦-೪೦) ; ದ್ವಿದಳ ಧಾನ್ಯಗಳನ್ನು ಇಡಿಯಾಗಿ ಅಥವಾ ಬೇಳೆ ಮಾಡಿ ಉಪಯೋಗಿಸಬಹುದು (ಅಪಾಶಾ. ೭೩). ೨. ತೊಗರಿಬೇಳೆ : ಆ ವೇಳೆಗೆ ಬೇಳೆ ಮಣ್ಣಾಗಾದ್ದರಿಂದ ಅದನ್ನು ತೆಳಗಿಳಿಸಿ ಅನ್ನಕ್ಕೆ ಎಸರಿಟ್ಟಳು (ಪುಟ್ಟಕ. ೨೩). ಪಿ. ಭಾಗ ;

ಹಿಳುಕು : ಆಗಳುಮುಂ . . . ನಾರಂಬೇಳೆಯ ಬೇರು· ಬೆಳ್ಳುಳಿ ದುಸುಲಿದ ಬೇಳೆ ಇವು ಪ್ರತ್ಯೇಕ ೧೦ ಹುಲವು ನಾಗಳ ನೀರಿನಲ್ಲಿ ಹಾಕಿ. ಕಷಾಯವಿಕ್ಕಿ (ಶಸ್ತ್ರ. ೨೫೪). ೪. (ದ್ರವಪದಾರ್ಥಗಳನ್ನು ಅಳೆಯುವ· ಸುಮಾರು ಅರ್ಧ ಸೇರುಗಳ) ಒಂದು ಅಳತೆ.—ಪ್ರಮಾಣ : ಒಳೆಯ ಒಂದು ಬೇಳೆ ತೆಂಗಿನೆಣ್ಣೆಯಿದೆ. ಕೊಟ್ಟು ಹೋಗುವ ಎಂದು ಬಂದೆ (ಕುಂಞ್ಞ. ೩೫). ೫. ಒಂದು ನಾಣ್ಯ; ಹಾಗದ ಅರ್ಧಭಾಗ : "ಸಿಕ್ಕಿಸಲ್ಬೇಳೆಯೆರಡನೊಂದು ಪಾಗಂ" (ಪಂಗಣ. ೦೮೪-೦೧); ಅಯ್ದುದಿಂ ಬರು ಸಾಸಿರ್ವರು(೦) ವಿದುರ್ ಜವರಿಕೇಬೆಂಗೆ ಕೊಟ್ಟರು [ಪೊ] ಕೈಲಲಾಂ ಹಾಗ ತಲೆವೊಂಜಿಗೆ ಬೇಳೆ (ಕಾಶಿ. IX-೬೦ ೩೩-೨೫; ೨೮೧); ಹಣವಿಗೊಂದೀಸವಿಪ್ಪಣಕೊಂದು ಬೇಳೆಯನು ಕ್ರಿಣಯನ ಮಕುಟವಾದರೂ ಅಕಸಾಲೆ ಬೊಣೆಯದೆ ಬಿಡನು (ಸರಣ್ಯ. ೦೮೦೦)· ೬. (ಆಲಂ) ಉಪಾಯ; ಯುಕ್ತಿ; ತಂತ್ರ : ಲೇ ನಿನ್ನ ಕನವೆ ಕಳಗಿಪ ಬೇಳೆ ಇಲ್ಲಿ ಬೇಯೊಲ್ಲವೇ ! (ಪಡಾ. I, ೩೦೬).

ಬೇಳೆಬೇಯಿಸು=೧. ತೊಗರಿಬೇಳೆಯನ್ನು ಪಕ್ವವಾಗುವಂತೆ ಮಾಡು : ಬೇಳೆಬೇಯಿಸುವಾಗ ಅವು ಬೇಗ ಬೇಯಲೆಂದು ಅಡುಗೆ ಸೋಡವನ್ನು ಬೇಳೆ ಎಸರಿಗೆ ಹಾಕುವರು (ಗೃಪ್ರ. ೩೦). ೨. (ಆಲಂ) ಯುಕ್ತಿ ಸಫಲವಾಗುವಂತೆ ಮಾಡು : ತಂಗ ನಿನ್ನ ಮಾತೊಂದು ನಡೆಯುಲಿಲ್ಲ. ಅವಳು ತನ್ನದೇ ಬೇಳೆ ಬೇಯಿಸಲು ಪ್ರಾರಂಭಿಸಿದಳು (ಕೂಂಬಾ. ೬೪). ಬೇಳೆ ಬೇಯುಂ = (ಆಲಂ) ಯುಕ್ತಿ ಸಫಲವಾಗು ; ಕಾರ್ಯಸಾಧನೆಯಾಗು : ಪೋರ್ಚುಗಲ್‌ನವರು ಇಲ್ಲಿಗೆ ಬಂದ ಮೇಲೆ ತಮ್ಮ ಬೇಳೆ ಬೇಯದೆ ಹೋದ್ದರಿಂದ ಈ ರಾಜ್ಯವನ್ನು ಬಿಟ್ಟು ಒಬ್ಬೊಬ್ಬರಾಗಿ ಹೊರಟು ಹೋದರು (ಕ್ರಪ್ರಾ. II- ೩೩೩); ಅವನ ಮುಂದೆ ಅವರ ಬೇಳೆ ಬೇಯುಲಿಲ್ಲ (ಪಮಾಕ. ೦೯). ಬೇಳೆಯು ಕಾಳು=ಎರಡು ಭಾಗವಾಗುವ ಪ್ರಾಪ್ತವಾದ ಕಾಳು; ದ್ವಿದಳಧಾನ್ಯ : ಬೇಳೆಯ ಕಾಳುಗಳು : ಕಡಲೆ, ಬಟ್ಟಾಗಡಲೆ, ತೊಗರಿ, ಹೆಸ್ಸಂಗಿ, ಉದ್ದು, ಹೆಸರು, ಅಲಸಂದಿ, ಅವರೆ (ಸ್ಯಶಾ. ೦೨೬). ಬೇಳೆಯ ಮಣೆ = ಬೇಳೆಮಣ್ಣೆ : ನಿನ್ನ ಬೇಳೆಯ ಮಣೆಯೊಳಗಿನ ಬಂಗಾರವಲ್ಲವೆ ನೀನು ? (ಶಾಮ್ಯಾಕ. ೧೪-೬).

[ಹೇ.॥ ಕೊಡ. ತುಳು. ಬೇಳೆ; ತೆಲು. ಬೇಡಲು]

ಬೇಳೆ₂ (ನಾ). ಒಂದು ಬಗೆಯ ಔಷಧೀಸಸ್ಯ: "ಬೇಳೆಯಿಪೆ ಮಜಿಪ ನಾಜಿಪವುಜಧ" (ಪಮಾಕ. ೦೫೪) ; ಬೇಳೆಯ ಪತ್ರಂಗಳೊಳಂ ಬೇಳೆ [ಪಾಣಂ. ಬಾಳೆ]ಯ ಗೆಡ್ಡೆಯನೆ ಕೂಡಿ ಮರ್ದಿಸಿ ಕುಡಲೇಂ ಪೇಬುಲರಿ ದೆಂಬ ಕೊಳಕನ ಚೇಟಿಸ ಪಾವರಣಿಮುಗ್ರನಿಪವಿಪದುಬ್ಬಿಗುಂ (ಪಮಾದ. ೦೦-೬೪). 'ನಾಯಿಂಬೇಳೆ' ಪರಾ. [ದೇ.॥ ತಮಿ. ವೇಳೈ; ಮಲ. ವೇಳ]

ಬೇಳೆಕಾಳು (ನಾ). ೧. ತೊಗರಿ ಮುಂತಾದ ದ್ವಿದಳಧಾನ್ಯಗಳ ಹೋಳು—ಭಾಗ. ೨. (ಆಲಂ) ಶಕ್ತಿ; ಸಾಮರ್ಥ್ಯ : "ವಾಳೆ ಗೊತ್ತಾಯ್ತದೆ ನಿನ್ನ ಬೇಳಕಾಳು" ಎಂದು . . . ಹೇಳಿ, ತಮ್ಮ ಮನೆಯ ಕಡೆ ತಿರುಗಿ ಆ ಮಬ್ಬುಗತ್ತಲಲ್ಲಿ ಕರಗಿ ಹೋದರು ಪಟೇಲರು (ಪಗಪಾಂ. ೫೬). [ಬೇಳೆ₁ + ಕಾಳು₂ (< ಕಾಟು₂)]

ಬೇಳೆಗೆಯ್ (ಕ್ರಿ). ಒಡೆದು ಭಾಗ ಮಾಡು.—ಜೊರು ಮಾಡು : ಒಗುಮಿಗೆ ಬೇಳೆಗೆದ್ದು ಮೆಳಸೂ ತಳಿವಲ್ಲದ ಚಿಲ್ಲುಮುಂ ಪವಣ್ಬುಗೆ ಕಲಸಿರ್ದ ಶಣ್ಣಲಸುಗೂಬುನಿಳಾವಪತಿಗಿಕ್ಕಪಟ್ಟುದಿಂ (೦೯೫೫. ೫-೬೨).

[ಬೇಳೆ₂ + ಕೆಯ್₂]

ಬೇಳೆಮಣೆ (ನಾ). ತಾಳಿಯ ಜೊತೆಗೆ ಹಾಕಿಕೊಳ್ಳುವ ಬೇಳೆಯಾಕಾರದ ಚಿನ್ನದ ಮಣಿ: ತಾಳದೋಲೆಯನಿಟ್ಟು ಬೇಳೆಮಣಿಯನು ಕಟ್ಟ ಬೇಳೆಯನು ಅಜಿತು ನಡವಳು ದೊರಕುವುದು ಶೂಲಿಯ ಕರುಣ (ಪಪಾ. ೦೪೭೭).

[ಬೇಳೆ₂ + ಮಣೆ₂]

ಬೇಳ್ಕಟ್ಟೆ (ನಾ). ಬಲಿಪೀಠ ; ಪರುವನ್ನು ಬಲಿಕೊಡಲು ರಚಿಸಿರುವ ಜಗಲಿ : ಬರ್‌ಬೆಂಕೆಯುರಿವ ಬೇಳ್‌ಕಟ್ಟೆಯೊಳ್ ಪರಿಕಿಸಲ್ ಬೇಳ್ವೆಯಾನ್, ಕೊಟ್ಟ ಬಲಿಯಿಂದ ಬೆಳಗಿದನ್ನಲ್ಲ ಕಾನ್ ಅಗ್ನಿದೇವನ್ (ಕಂತಿಪು. ೪೨-೧೫೬) ; ಅದುವರಂ ಶೂನ್ಯಾರ್ಥಮಾಗಿರ್ದ್ ಬೇಳ್‌ಕಟ್ಟೆಯುರಿಗಳ್ಗೆ ಸೂಪ್ಯಾರ್ಥಂಗಳನ್ ಸುಸ್ಪಷ್ಟಗೊಳಿಸಿದನ್ ಅವರ್ಗೆ (ಇತ್ಪ್ರ. ೨೩-೧೩೬).

[ಬೇಳ್₂ + ಕಟ್ಟೆ₂]

ಬೇಳ್ಕೆ (ನಾ). ಬೇಡುವಿಕೆ ; ಕೋರಿಕೆ (?) : ದ್ಯುಡನುಡುರಾಜ ಪನ್ನಗ ವಿರಾಜ . . . ಸುರಾಸುರ ಕದಂಬಕಸಂವ್ಯಪದಾಬ್ಜುಜದ್ವಯಂ ಅಡರೆ ವೃಡಾನಿಗನ್ಯಕುಳಶೈಲಕುಳಂಗಳ್ ಪಾಡಿರಯ್ಯಮವೆಬೆಗಳನೆಲ್ಲಪಂ ನೆಜಿಯಿ ತೋರ್ಪುದು ಬೇಳ್ಕೆಯಿ ಬಂದನೀಶ್ವರಂ (ಕಾಡ್ಯಕ. ೪೩೬) ; ಕೇಳುವರ ಗೊಂದಣಕೆ ಶಿಷ್ಯನ ಮೇಲುವಾಕಿನ ಬೇಳ್ಕೆಗೊಡನನುಕೂಲವಾದುತ್ತರವಿಗೆ ಗುರುಸೂಕ್ತಿಯಿಲ್ಲದಿರೆ (ಜಕಸ. ೩-೦೩). [< ಬೇಡು₁ + —ಕೆ]

ಬೇಳ್ಗರಿಕೆ. ಬೇಳುಗರೆ (ಕ್ರಿ). ೧. ಅರಚುವಂತೆ ಮಾಡು ; ಆಕ್ರಂದನ ಮಾಡಿಸು (?) : ನೆರೆದು ಪಾಲ್ದೆಸಯಂಬುಮಯ ದುಯುಗರೆದು ಬತ್ತಿಸೀ ನಾಯುಧದ್ದಿ ಬೇಳ್ಗರೆದು ಮುತ್ತಿದರದಸ ಚಕ್ರಿ ಸಾಗ ಬರ್ಬರನ (ಪಮಾಕಾ. ೪-೧೧). ಬೇಳುಗರೆ : ೨. ಆಕ್ರಂದನ ಮಾಡು : ಬೋಳೆಯಂಬಿನ ಗಾಯದ ಬಾಯ್ದೆಜೆಯಿಂದ ಬೀಳುತ ಗೋಣ್ಮಾರಿಗೊಂಡು ಬೇಳುಗರೆವ ಹುಳಿಯ ನಕ್ಕುವ ಹುಲ್ಲೆಯೋಲಿಯಿದವರೊಳಗೆ (ಪಪಾಸಂ. ೨-೩೩) ; ಒಬ್ಬೊಬ್ಬರು ಒಂದೊಂದು ಹುಲ್ಲೆಮರಿಯನ್ನು ಹಿಡಿದುಕೊಂಡು ಬಂದರು. ಅವುಗಳು . . . ತಮ್ಮ ತಾಯಿಗಳನ್ನು ಕಾಣದೆ ಬೇಳುಗನೆಯುತ್ತಿದ್ದವು (ಪಂಗಳ್ಳ. ೪೫೩). [ಬೇಳ್₂ + ಕರೆ₂]

ಬೇಳ್ಪು₁ 'ಬೇಡು₁' ಪರಾ.

ಬೇಳ್ಪು₂ 'ಬೇಳ್₂' ಪರಾ.

ಬೇಳ್ಪೊಲ (ನಾ). (?) : ಈಶಂಗೆ ಬೇಳ್ಪೊಲನಾವಂ ಶಿವಭಕ್ತನಾತನೆಲೆ ಸದ್ಭಕ್ತಂ (ಪಂಚಾ. ೩೪). 'ಬೆಳ್ಪೊಲ' ಹೋ. [? + ಪೊಲ]

ಬೇಳ್ಮೆ (ನಾ). ಮರುಳುಮಾಡುವಿಕೆ ; ಮೋಸಗೊಳಿಸುವಿಕೆ : 'ಬೇಳ್ಮೆ ಮಾತು' ಪರಾ. [ಬೇಳ್₂ + —ಮೆ₃]

ಬೇಳ್ಮೆಮಾತು (ನಾ). ಮರುಳುಮಾಡುವ ನುಡಿ : ನೀಚರ ಬೇಳ್ಮೆ ಮಾತನ್ನು ಕೇಳಿ ಕಿಡತಕ್ಕದ್ದೇ ಹೆಂಗಸರ ಹಣೆಯಲ್ಲಿ ಬರೆದಿದೆ (ಶಪಾಚ. ೦೬೩). [ಬೇಳ್ಮೆ + ಮಾತು₁]

ಬೇಳ್ವು₁ 'ಬೇಡು₁' ಪರಾ.

ಬೇಳ್ವು₂ 'ಬೇಳ್₂' ಪರಾ.

ಬೇಳ್ವೆ₂. ಬೇಳುವೆ, ಬೇಳುವೆ (ನಾ). ೧. ಹೋಮ ; ಯಜ್ಞ : ಸೊಗಯಿಸುವ ಗಂಗಾದ್ವಾರದೊಳ್ ಮುನಿಜನಂಗಳ ಬೇಳ್ವೆಗಳ್ಗಪದ್ರವಂಗೆಯ್ವ ನಿಸಾಟ ಕೋಟಿಯಂ ನಿಶಿತಶರಕೋಟಿಯಿಂದಮುಚ್ಚಾಟಿಸಿ (ಕಂಪಾ. ೪-೮೩ ಪ). ೨. ಆಹುತಿ ; ಬಲಿ : ಪೊಲಬ ಬೇಳ್‌ಕಟ್ಟಿಗಳ್ ಮನೆಯಂ ಬೇಳ್‌ಕಟ್ಟಿಗಳ್, ಎಲ್ಲಮುಮ್ ಪೊಲೆಗಲಸಿಯಿರ್ದತ್ತು . . . ದೇವತೆಗಳದಱಿಂದಮಿನ್ ಕೊಳ್ಳರೆವಿಲ್ಲೆತ್ತ ಬೇಳ್ವೆಯನ್ (ಕಂತಿಪು. ೪೩-೧೧೦). ಬೇಳುವೆ₁ : ೧. ಬೇಳುವೆಯ ನೋವೆನುತ ಮುನಿಗಳತಿಕೋಪದಿಂ ಸರ್ವಹೋಮವನು ಮಾಡೆ (ಅಪಾ. ೨೦-೬) ; ಅಶ್ವಮೇಧದ ಬೇಳುವೆಯ ಸಂಭ್ರಮದ ಧಾಳಿ ಧೂಳೆಯಂ ಶಿವಿದಾಡವಪ್ಪ ಜೆಸ್ತೆಗಳು ಪುಶವಹನ (ತೊಡಾ. ೦-೬-೪೪); ಬೇಳುವೆಗಳ ಭಸ್ಮದ ಕೊಪ್ಪರಿಗೆಯ ಸಾಲೊಟ್ಟಿದುವು ದುರ್ಗದೊಳಗೆ (ಕಂಪಾ. ೦೦-೦೩೪). [ಬೇಳ್₂ + —ವೆ]

ಬೇಳ್ವೆ₂. ಬೆಳುವೆ· ಬೇಳುವೆ₂ (ನಾ). ೧. ಮೆರುಳು ; ಮಾಯೆ ; ಮಾಟ : ಶಲೆಪೂಗಿ ಕೈರವಶ್ಯಾಮಳಂ ಬೇಳ್ವೆಯಿಂದಳವ್ದುದೋರದೆ ಮತ್ತ ನವ್ಮನೇ ನುಡಿಗೈದು ಸಳೆದು ತಳ್ಳೈಸುತ್ತ ಮಾತ್ರವೇ ಮರಸಿದಂ (ಪಪಾ. ೦೯-೨೦).

ಬೆಳುವೆ : ೧. ವಿಲಾಸದ ನಿವಾಸವು ಬೆಳುವೆಯ ಬೆಳಸಿರಿ . . . ಎಸವ ಬೆರವೆಣ್ಗಳ್ಕೆತಂದರು (ಕಾಂದಪ್ರ. ೬-೩೦). ‖ ಇದು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ. **ಬೇಳುವೆ**ಃ ಪಿ. ವಶೀಕರಣಮಾಡುವ ಉಪಾಯ,–ಸಾಧನ : ವೀಳೆಯದೊಳಗೆ ಮದ್ದುಂಟೊ ನಿನ್ನರಸೂ ತೋಳೊಳುಂಟೊ ಮತ್ತಯಂತ್ರ ಬೇಳುವೆಯುಂಟೊ ತಿಲಕದೊಳ್ಗಲ್ದರಿಂಚು ಬೇಳಾಗಿ ನೀನು ಸಿಕ್ಕುವೆಯು (ಪಪ್ರ. ೯-೦೦೦) ; ತಾಳಿ ಹೊನ್ನುಂಗುರದವ ಬರೆ ಮೋಹದ ಬೇಳುವೆಯಮು ಏ ತಳೆದು ಮೇಣಾದೊಡಪ್ಪಿಯ ಸಳಿ ಕೊಂಡಾತನ ಬಾಳಿಸಿ ಬಿಡು ವೀ ಮಗಳೆ (ಕಂದಿ. ೬-೦೦೭). ೪. ದಡ್ಡತನ; ಬೆಪ್ಪುತನ ; ಮೂರ್ಖತನ : ಸದ್ಗುರುಮುಖವಿನಜಯದಿಹ ಬೇಳುವೆಯ ಬುದ್ಧಿಯಲಿ . . . ಏಳ ತಮ್ಮೊಲಗಕೆ ಪಡೆತಂದು ಮಂತ್ರಿ ಪ್ರಕರಣಿತ್ತಂದ (ಅಕ್ಕ. ೬-೬). ೫. ಮೋಸ; ವಂಚನೆ : ಹೇಳುವೆನು ಕರ್ಣಂಗೆ ಶಲ್ಯನ ಬೇಳುವೆಗೆ ಸಿಲುಕದ ಪರಿಯನೆಂದಾಲಿಸುತ ರವಿಯದ್ದ ನಿತ್ಯಲು (ಭಾಷ್ಯ. ೬೩. ೫೬-೨); ಬಲಿಭೂಪತಿಯಾಳುವ ನಾಡೊಳೆಲ್ಲಿಯುಂ . . . ಬೇಳುವೆ ಕೈತವಂ ಕಳವು ಹಾದರವಿಲ್ಲನೃತಂಗಳಲ್ಲ (ದಾಶಿ. ೬-೮೬); ಪುಲಿಕೇಶಿಯು . . . ಲಾಟರ ಆಟವನ್ನು ನಿಲ್ಲಿಸಿ ಮಾಳವರ ಬೇಳುವೆಯನ್ನ ಮುರಿದು ಗುರ್ಜರರನ್ನು ಜರ್ಝರ ಮಾಡಿದನು (ಕರ್ನಾ. ೦೨೨) ೬. ವೈಪರೀತ್ಯ : ಎಚ್ಚರವಿಲ್ಲದಿರುವಿಕೆ: ಅವುಗಿದೇವಮ್ಮನರಸಿ ರುದ್ರಮ್ಮಗೆ ಕವಿಮುದು ನಿದ್ರೆ ಬೇಳುವೆಯು (ಪಾಬುಚಾ. ೪-೩೬). ೭. ಕಳವಳ ; ಸಂತಾಪ ; 'ಬೇಳುವೆಗೊಳ್' ಪರಾ. ೮. ಹಿಂಸೆ ; ಕಾಟ ; ಪೀಡೆ: ಕಾವನ ಬೇಳುವೆಗೆ ಬಂಡಾದುದಿಬ್ಬರ ಧೈರ್ಯವಡಗಿದಗೆ (ಭಾಷ್ಯ. ೪-೩೬)- **ಬೇಳುವೆಮಾಡು**=ಮಾಟಮಾಡು : ತೋಳ ಮೇಲೆಸೆವ ನರ್ತಕಿ ಸಹಸ್ರ ಗಳಾಗೆ ಬೇಳುವೆ ಮಾಡಿ ನೋಟೀರ ತಾಳದಾಡಿದನಾ ಶಕ್ರನ ವಿಕ್ರಿಯದಾ ಳಾಪನೇನ ಬೇಳುವೆಯು (ಅಪಂಪ. ೬-೦೩೭). **ಬೇಳ್ವೆಯ ಬೂದಿ** = ಬೇಳುವೆ ಬೂದಿ : ಅರಲು-ಪರಾಗಮೆಂಬ ಪೊಸ ಬೇಳ್ವೆಯ ಬೂದಿಯನುಟ್ಟು ಪುಲ್ಲಿತಾ ತರುಣಿಯ ಭೃಂಗನೀಲಮಣಿಮಾಲೆಯಪೊಯ್ಲರೆಂಬ ಜೋರನು ಪರ ಭೃತನಂದು ಕಂಡಾ (ಭಾಷಿ. ೦೦-೨೩). [ಬೇಳ್ + –ವೆ]

ಬೇಳ್ವೆಮಾತು, ಬೇಳುವೆಮಾತು (ನಾ). ಮರುಳು ಮಾಡುವ ಮಾತು; ಬಣ್ಣದ ಮಾತು : ಅವರ ಬೇಳ್ವೆಮಾತಿಗೆ ಮರುಳಾಗಿಬಿಟ್ಟು. ಆ ಹೆಳವನೇ ಹೆಂಡತೀಂದುಕೊಂಡುಬಿಟ್ಟರೆ. ಸ್ವಸ್ಥ ಮನೆ ಹಾಳಾಗಿಹೋಗಿ ಬಿಡುತ್ತಲ್ಲಯ್ಯಾ! (ಅಂಚಾಚ. ೬೨) ; ಸಾವಿತ್ರಮ್ಮ ವಿನೂ ಅರಿಯದವರು. ಬೇಳ್ವೆಮಾತಿಗೆ ಬಹಳ ಬೇಗ ಮೋಸಹೋಗುತ್ತಾರೆ (ಪಾಅಗೌ. ೪೨). **ಬೇಳುವೆಮಾತು** : ಈ ಬೇಳುವೆಮಾತಿಗೇನಂತೆ ? ನೀನು ಪಾರ್ಟು ಮಾಡಿದರೆ ಅವಳಿಗೆ ಸೊಸ್ಪೆ ಬಿದ್ದರೆ? (ಪಾಣಾಚ. ೬).

[ಬೇಳ್ವೆ + ಮಾತು]

ಬೇಳ್ವೊಲ (ನಾ). (ಯಪ್ಪಭೂಮಿಯಂತಿರುವ) ಮಟ್ಟಸವಾದ ಭೂಮಿ (?) : ಅಳ್ವಲಮುಳ್ಕೊಹತ್ಪಬಲಮಿಲ್ಲ ಭಟಾಶ್ವಬಲಂಗಳು ಳ್ಕೊಡಂ ತೋಳ್ವಲಮಿಲ್ಲ . . . ಅಳ್ವಿಸಗೆದ್ಮುದೇಕೆ ಬಲಿವರ್ ಮಲೆಪರ್ ವಾಲೆಯೆಂಬುದೇನದಂ ಬೇಳ್ವೊಲಮಾಗೆ ಮುಂ ತುಲುವನ್ನಲನ ಲಕ್ಷ್ಮಣನೆಂಬ ರಾವಣಾ (ಪಂ. VII. ೫೧೦. ೦೩೬-೩೭; ೧; ಶಾಸಮಾ. ೫೬ ನೋ). 'ಬೇಳ್ವೊಲ' ಜೋ. [ಬೇಳ್[1] + ಪೊಲ]

ಬೇಱ್, ಬೇರ್[2], ಬೇಱು (ಸಪ್ತಮೂರ್ತಿ). 'ಬೇಱು' ಎಂಬುದಕ್ಕೆ ಸಮಾಸ ಗಳಲ್ಲಿ ಬರುವ ಆದೇಶರೂಪ : 'ಬೇಱೂರ್', 'ಬೇರ್ಕೆಯ್' ಪರಾ. **ಬೇರ್[2]** : 'ಬೇರ್ಮನೆ' ಪರಾ. **ಬೇಱು** : ಒಂದಱಲ್ಲಿ ಒಂದು ಬಿಟ್ಟಿ ಬೇಱುಮಾಡಬಾರದೆಂದಾಗಿ ಪ್ರಾಣಲಿಂಗ ಒಂದೆ ಈಪದೇಶಪೊಂದ ಕ್ರಿಯಾಕರ್ಮ ಒಂದೆ ನೀವಿನ್ನಾವುವ ಬೇಱುಮಾಡಿ ನುಡಿವಿರಯ್ಯಾ (ಶಿಶ. ೪. ೨೦-೧೬); ಕುವಲಯವೈರಿ ಪಂಕರುಹವಿತ್ರನ ಶೇಷರನಾಪಹರ್ತರ್ ವೆಂದವನಿಜನಂ ಪಿಸುಗ್ಗೆಜೆದೆದೇ ಜಗದಂಬಿಕೆ ಬೇಱುಮಾಡಿದರ್ (ಅಪಂಪ್ರ. ೪-೦೦೬). 'ಬೇಱುದೋಱು', 'ಬೇಱುಪಡು' ಪರಾ.

[< ಬೇಱ್[1]. / ತಮಿ. ಮಲ. ವೇಱು: ತೆಲು. ವೇರು. ವೇಱು; ಕೋತ. ವೆರ್]

ಬೇಱಿಸು (ಕ್ರಿ). ಪ್ರತ್ಯೇಕವಾಗಿ ಇರಿಸು ; ಬೇರೆಯಾಗಿರಿಸು : ವ್ರತಹೀನರನಬುರುಮಂ ಕ್ಷಿತಿಪತಿ ಬೇಱಿಸಿ ಮಾನ್ಯರಂ ಮನ್ನಿಸ (ಅಜಿ. ೦೬-೦೩); ಕರಗಿ ಕಾಸಿದ ವಿದ್ಯೆಯನ್ನು ಬೇಱಿಸಿ ಶುದ್ಧಬ್ರಹ್ಮವನು ಕಂಡರಿಸಿದಂತಿರಲೆನವ ಶಿವನನು ಕಂಡನಬುಜಭವ (ಭಾಜ್ಞ. ೬-೦೬); ಸರ್ವಜ್ಞ ನರಸಿಜೋದರ ಕಂಠಾರತಿಗೆ ಗಾಂಧರ್ವವಿವಾಹವ ಮಾಡಿ ನಿರ್ವಾಣಗೊಟ್ಟು ಬೇಱಿಸಿಂದು ಮುನಿ ಗರ್ವದಿಂ ಬಿನ್ನಯಿಸಿದನು (ಕೋಚಪ. ೦೭-೬೨). [ಬೇಱ್[2] + ಇರಿಸು]

ಬೇಱು 'ಬೇಱ್' ನೋ.

ಬೇಱುಕೆಯ್ 'ಬೇರ್ಕೆಯ್' ನೋ.

ಬೇಱುಗಾಣ್ (ಕ್ರಿ). ಬೇರೆಯಾಗಿ ಕಾಣು ; ಪ್ರತ್ಯೇಕವಾಗಿ ಗಣಿಸು : ಛಂದಾರ ಜೊಕ್ಕಸ ಮನೆಗಳ ನೋಳ್ಪನಾ ಛಂದಾರಿಗಳು ಪೋಡುವಂತೆ ಕಂಡವರೆಲ್ಲರೀ ನೃಪನದೆಂಬರು ಬೇಱುಗಂಡಿಗಸುವನು ತಾನೊಳಗೆ (ಪಪ್ರ. ೬೨-೩೬). [ಬೇಱು (< ಬೇಱ್[1]) + ಕಾಣ್]

ಬೇಱುದೋಱು (ಕ್ರಿ). ಬೇರೆಯಾಗಿ ತೋರು.— ಕಾಣಿಸು ; ಪ್ರತ್ಯೇಕ ವಾಗಿ ನಿಲ್ಲು : ಗುರುಮಹಾತ್ಮೆಯೊಳಗೆ ಶಿಷ್ಯ ಬೆರಸಿ ಬೇಱುದೋಱದೆ ಗುರುವೆ ಶಿಷ್ಯ ಶಿಷ್ಯನೆ ಗುರುವಾದ ನಿತ್ಯಸೇವ್ಯನು (ಶಿಪುರ. ೧೬-೧೬೭). [ಬೇಱು (< ಬೇಱ್[1]) + ತೋಱು]

ಬೇಱುನುಡಿ (ಕ್ರಿ). ಪ್ರತ್ಯೇಕವಾಗಿ ಹೇಳು ; ಬೇರೆಯಾಗಿ ಹೇಳು : ಬೇಱುನುಡಿವೆಡೆಯೊಳಾ ವ್ಯತಿಪ್ಪಥಗ್ಗಿನಾಂತರಮೆಂಬ ಪೆಸರ್ಗಳಕ್ಕುಂ (ಶಂಗಣ. ೦೩೩-೬೦). [ಬೇಱು (< ಬೇಱ್[1]) + ನುಡಿ[1]]

ಬೇಱುಪಡು 'ಬೇರ್ಪಡು' ನೋ.

ಬೇಱುವೊಗು (ಕ್ರಿ). ಪ್ರತ್ಯೇಕವಾಗಿರು ; ಬೇಱುಮನವಾದೀತಂದು ಬೇಱುವೋದಳು ನೋಡಾ ಅವ್ವಾ ಕಮ್ಮುರವಱುವಳು ನೋಡಾ ಅವ್ವಾ (ಸಕ. II. ೨೦೨-೩೬). [ಬೇಱು (<ಬೇಱ್[1])+ಪೋಗು[1] (< ಪೋ[1])]

ಬೇಱೂರ್ (ನಾ). ಅನ್ಯಸ್ಥಳ; ಪರವೂರು : ನೋಂಬನಂ ಮೆಚ್ಚಿ ಬೇಱೂರ್ಗೆ ಪೋದ ಸೂಳೆಮಾತುಯ್ಕಂಡಾಡುವ ರಂಡದೇವತೆಯರಿಂ (ಶಾಕ್ಷಾ. ೩೨೯ ಓದ್ಯ.೪) ; ಬೇಱೂರ್ಗೆ ಪೋದ ನಲ್ಲರ ನೆಪದು ದೂಱಾಸುದ್ದ ನೀಱೆಯರ ನಿಡುಸುಯ್ಯ ಗದಗಾದಿಂ (ಅ.ಸಾ. ೩೪); ಮಗಳ್ಗೆ ಬುದ್ಧಿ ಹೇಳ್ದು ನಿಜರಮಣನೆಪರಸಿ ಬೇಱೂರ್ಗವಂ ಪೋದಾಗಳ್ (ಕ್ಷತ್ರ. ೯-೨೩ ಷ). [ಬೇಱ್ + ಊರ್]

ಬೇಱ್[1], ಬೇರ್[1] (ನಾ). ೧. ಪ್ರತ್ಯೇಕವಾದುದು : ಸಂಬಂಧವಿಲ್ಲದುದು: ದೂಱಲಱ್ದೆಸಿಪ್ಪ ಸುಭಟರಿಂಗೆ ಮುನ ಬೇಱ್ ನುಡಿ ಬೇಱಾಯ್ತು ಸಮರದೊಳು (ಭಾಷ್ಯ. ೬-೩). ೨. ವಿಶಿಷ್ಟವಾದುದು : ಆ ಕಾಂತಗಂದು ನಯಂ ಬೇಱ್ ಬೆದಂಗು ಬೇಱ್ ಪೊಳೆವಂಗಱ್ಪಾಯೆಯುಂ ಬೇಱ್ ತೊಟ್ಟನೆ ಮೆಯ್ದೋಱ್ (ಅಂಪ್ರ. ೭-೨೩) : ಸಿರಿ ಗಿರಿಜಾತೆ ಶಾರದೆ ರಮೆಮುಖ್ಯರು ಸರಿಯಲ್ಲವಿವಳ್ಚು ಬೇಱ್ (ಕೋಚಪ. ೦೦-೩). ೩. ಇನ್ನೊಬ್ಬ ವ್ಯಕ್ತಿ; ಅನ್ಯವ್ಯಕ್ತಿ : ನೀಂ ಬೇಱ್‌ಮಗೆ ಸುಯೋಧನನೇಂ ವೇಱಿಯೆ (ಕಂಪಾ. ೭-೩೩) ; ಇವಳೆನ್ನ ಶರೀರದಿಂ ಬೇಱಿಲ್ಲಳ್ (ಶಾರಂಭಿ. ೦೦೭) ; ನೀಂ ಬೇಱುಂ ಬೇಱ್‌ಂಬ ಭಿನ್ನಬುದ್ಧಿ ನಿನಗಂ ನಮಗೇಂ ಬೇಡ (ಕಂಪಕೃ. ೦೨೩-೪). (ಗು)- ೪. ಪ್ರತ್ಯೇಕವಾದ : ಮರಕತಮಣಿವಿರಚಿತ ವಿಮಲಭಿತ್ತಿ ಪೊಗಬಲ್ಮರಸಂರಿಡುವ ಬೇಱ್ ಭಿತ್ತಿ (ಅಂಪ್ರ. ೯-೩೦ ಪದ್ಯ) ; ಬೆವಂಗಂಗಳ ಬೇಱ್ ಭಂಗಿಗಳ ಲ.೪ ಗ ೪.ದೆ ೦ ಕಡುಜಾಣನೆ

(ಶಿ. II· ೦೬೩-೦೭೭; ೧೮೩); ಆನು ಚಿನ್ನಮಲ್ಲಿಕಾರ್ಜುನಂಗೆ ಮದುವಳಿಗೆ ಎನಗೆ ಬೇಱ್ ಶೃಂಗಾರವೇಕೆ (ಶಾಶಿ. ೮. ೩೭-೭೮) ; ದೇಹಮ್ಮಾಯೆ ಗುಂಟೇ ಬೇಱ್ ಬೆಚ್ಚ (ಶಾಬ್ಯ. ೦೨-೧೪)· ಬೇರೆ₁ : ೫. ಮಹತ್ ವರ್ಗದಲ್ಲಿ ಮೊದಲಿಂದಲೂ ಮೆರಯುತ್ತಿರ್ದ ಪ್ರತ್ಯಯಗಳಲ್ಲಿ ಜಾಗ ಬಿಟ್ಟು ಬೇರೆಡೆಗೆ ಹೋಗುವಂತೆ ಮಾಡಿತು ! (ಪ್ರಾಲಿ. ೩೭೭) ; ನೋಟಗಳ ಕಗ್ಗಟ್ಟು ಬಿಟ್ಟಿದಂತಾಗಿ ಮೇಣ್ ಆಟವಾಡುತಲಿಹುದು ಬೇರೆಡೆಯ ಬಿದು (ಶಾಬಿಚ. ೧೩-೩೫).

ಬೇಱ್‌ಬೇಱ್, ಬೇರೆಬೇರೆ, ಬೇಱ್‌ಬೇಱ್ (ದ್ವಿರುಕ್ತಿ) : ಪಾಸುಗಿಯು ಮಱಿಯಲಾಜದ ಬೇಸಱುಗಂ ಬೇಱೆ ಬೇಱ್‌ಬೇಱ್ವುದಱಿಂ (ಶಾಪಾ. ೦-೧೩); ದ್ವಾರವತಿಯಲ್ಲೂ ಹೋದಿದೇವಾಲಯಗಳು ಕಟ್ಟಲ್ಪಟ್ಟನ್ತಿ. ಆದರೆ ವೇಲಾಪುರಿಯಲ್ಲಿದ್ದಂತೆ ಬೇರೆಬೇರೆಯಾಗಿರದೆ, ಒಂದನ್ನೊಂದು ಅಂಟಿ ಇದ್ದವು (ಪಾಂಕಾ. ೦೩೮) : ಪಂಚೇಂದ್ರಿಯವೃತ್ತಿಗಳ ಬೇಱ್‌ಬೇಱ್ ರೂಪಂದಳೆದುಮೆಪಂಗುಳಗಂ ಮನಂಗೊಳಿಸುವ ಕರಕಮಲಂಗಳ್- ಇಂದ್ರಾಚೇದಂ ನೀಡೆ (ಶಾಸಂಶಾ. ೩೮).

[ದೇ.ಪ ಕೊಡ. ಬೋರೆ ; ತುಲು. ವೇರೆ]

ಬೇಱ್₂, ಬೇರೆ₂ (ಅ). ೧. ಪ್ರತ್ಯೇಕವಾಗಿ : ಪದಿನೆಂಟುತೋಟರಥಂ ಬೆಸಸು ಬೇಱ್‌ಬಿಡ್ಡಿ ನಿಂದರ್ (ಪಂಪಾಂ. ೦೦-೩೭ ೩) : ಎನಗೆ ಭೀಮಾರ್ಜುನರಪೊಲು ಜೀನಪಾಜನಲ್ಲದೆ ಬೇಱ್ ನಿನ್ನಲಿ ಮನವಿಭೇದವ ಬರ್ಪನೇ (ಶಾಶಾ. ೫-೦೯); ಕಟ್ಟೆಂಬ ಪಾಡಿ ಮಾರೆಗಾತಿಯರೆಲ್ಲಾ . . . ಕುಟ್ಟಿಯ ಪಾಡಿ ವ್ರೀಹಿಯೊಳಲ್ಲದೆ ಬೇಱ್ ದಿಟ್ಟಸರಾ ಪಾಡೊಳಿಲ್ಲ (ಶಾಚಿ. ೩-೦೩)· ಬೇರೆ₂ : ೨. ಕೂಡ ; ಜೊತೆಗೆ : ಆರ್ಯಾ :— ಆಯುಧಪಾಣಿಗಳಾ ಬೇರೆ (ಆರಾಗ. ೦೩). [<ಬೇಱ್₁]

ಬೇಟು ? (ನಾ)· (?) : ಸಸಗಪಳ್ಳಿಯಾಯ್ದಯ್ದಗಾವುಣ್ಣಾ ಗೋಸಾಸ ವಿಟ್ಟಂ ಅಮಿತ್ರರಿಗೆ ಬೇಟಂ ಕಾಲ ಕಬ್ಬಿ ಕೊಟ್ಟರ್ (ಪ್ರಾಲಿ. ೦೯೮೨. ೩೦-೦೩ ; ೧೦೭೨). [?]

ಬೇಟೆ, ದೇಳಿ (ನಾ). ೧. ಹೇಡಿ ; ಅಂಜುಪುರುಷ : ಕಾಳಾಂತಪಂತೆ ಸಾಡೆ ಪಳಯುಂ ಪರಿಯುಂ ಕಡುಕಯ್ದು ಪಾಯ್ದು ಮುಟ್ಟಾಂತಿಱ್ ದಲ್ಲಿ ಬೇಱ್ ಭಯದಿಂ ದಿಙ್ಮೋಢ[ನೆ] ನಿನ್ನಧೀಶ[ನುಂ](ಪಾಪಾ. ೯-೫೯). **ಬೇಳಿ** : ೨. ನಪುಂಸಕ ; ಷಂಡ : ತೊಳನಂ ಮೂಳನಂ ಬೋಟನಂ ಮುಕ್ಕನಂ ಕೀಳುಜಾತಿಯನುಂ ಪುರುಳಿಂದ ಮೆಯ್ಯಾದೊಡಂ ಬೇಳಿ ಬೆರೆಯುತ್ತೊಡವನಂ ಕಾಮನೆಂಬ ದುಶ್ಕೀರ್ತಿಯರು ಕಣ್ಗೆಸದರು (ಪಾಪಾ. ೯-೫೪).

[<ಬೇಡ₁]

ಬೇಟೂರ್ (ನಾ). ಒಂದು ಊರಿನ ಹೆಸರು : ಬೇಲೂರಾ ಮಗಂ ದೂವಪ್ಪನ್ ಪ್ರಭುಗೌಡಿ ಬೇಟೂರಾ ಎಮ್ಮೆಯ ತೊಳಕೊಳಿ ಗುದ್ದಿ ಅನ್ನಾಬದು ಸತ್ಯವ್ (ಶಿ. X· ೩೩೮೫. ೨೫೩-೨ ; ಮು. ೮೫೦೯).

[? + ಊರ್]

ಬೇಟ್ಟ 'ಬೇಡು₁' ಪರಾ.

ಬೈ₁ 'ಬಯ್₁' ನೋ.

ಬೈ₂ 'ಬಯ್₂' ನೋ.

ಬೈ₃ 'ಬಯ್₃' ನೋ.

ಬೈ₄ (ನಾ). (ಬತ್ತದ) ಒಣಹುಲ್ಲು : 'ಬೈಸೂಡಿ', 'ಬೈಹುಲ್ಲು' ಪರಾ. [←ತುಳು. ಬೈ. ಬಯಿ]

ಬೈಂಡು (ನಾ). ಪುಸ್ತಕಕ್ಕೆ ಹೊದಿಸಿದ ರಟ್ಟು,— ಮೇಲುಹೊದಿಕೆ : ಬಣಾರವಂಡು ಮೊರೊಕೊ ಬೈಂಡು (ಅಬೋ. ೩೩). [← ಇಂ. binding]

ಬೈಂದವ (ಗು). ೧. ಬಿಂದುವಿಗೆ ಸಂಬಂಧಿಸಿದ. (ನಾ). ೨. [ಶೈವ] ನಿರ್ಮಲತೆ ; ಶುದ್ಧತೆ : ಪಡಧ್ವಾತೀತವಾದ ಪಮಚಕ್ರೋರ್ಧ್ವಭಾಗದ ಪರಿಗ್ರಹಶಕ್ತಿಯ ಮಸ್ತಕಾಗ್ರದಲ್ಲಿ ನಿರ್ಮಲ ಪರಿಪೂರ್ಣ ಪರಪ್ರಕಾಶಮಹಾ ಶಕ್ತ್ಯವಿನಾಭೂತ ನಿಜವಸ್ತುವಿನಲ್ಲಿ ಬೈಂದವಾನಂದಾದಿ ವಿಲಕ್ಷಣತೆಯಿಂದಾದ ನಿಜತಿರೋಧಿತ್ಯಕ್ತಿಯಿಂದಾದ (ಷಣ್ಮ. ೦-೨); ಪರಮಾದ್ವಾತ್ಪರದಿ ವಿಕಲಸ್ವರಗಳಳಿಗೆ ಕರ ಕಂಜಸದಯಿರ್ಪ ಮಾಳ್ಕೆಯಿಂ ಬೈಂದವಂ ಪರಬಿಂದುವಾವಧ್ಯದೊಳಿರ್ದಂಗವಂದದಿ (ಶಪಾಷ. ೦೬-೧೩). 'ಬೈಂದವ ಶರೀರ' ಪರಾ. [ಸಂ.]

ಬೈಂದವಶರೀರ (ನಾ). [ಶೈವ] ಮಲರಹಿತವಾದ ಶರೀರವುಳ್ಳವನು ; ನಿರ್ಮಲದೇಹಿ : ಒಂದಾಣವ ಮಲವನುಳ್ಳ ವಿಜ್ಞಾನಕಲರೆಂದೆರಡು ಮಲದಿನಾ ಪ್ರಳಯಾಕಲರು ತೀಳ ಕಂದಾ ತ್ರಿಮಲದ ಸಕಲಾಕಲರು ಮೂವರಿಂಪರೊಳಗೆ ವಿಜ್ಞಾನಕಲರೂ ಬೈಂದವಶರೀರರುಮಾವಾದಿಮುಕ್ತರು ತಿವನೊಳೊಂದಿ ತಿದಸಮದ ಸಾಯುಜ್ಯಪದವಂ ಪಡೆವುತೇಂದೆಂದು ದುಃಕರ್ಮದೂರವಾಗಿರ್ಪರ್ಕೆ (ಶಪ್ರಕ. ೬-೬-೩೦) ; ಪೃಥಮಮರ್ದಲ್ಲಿ ರುವವರು ಪರಿಪಕ್ವಮಲರಾದರೆ ಬೈಂದವಶರೀರವೆಂಬ ಶುದ್ಧಸ್ಫಟಿಕಶರೀರವನ್ನು ಕೆಲವರಿಗೆ ಕೊಟ್ಟು . . . ಪಂಚಕೃತ್ಯಾಧಿಕಾರ ಮೊದಲಾದುವುಗಳನ್ನು ಅನುಗ್ರಹಿಸುವನು (ಶಂಪಾ. ೩೯೮). [ಸಂ.]

ಬೈಕ (ನಾ). ತಿರುಪೆ ; ಯಾಚನೆ ; ಭಿಕ್ಷೆ : "ಭೈಕ್ಷಮೊಳ್ ಬೈಕಂ" (ಶಾಸಾ. ೩೮); ಅವಜ್ಞೆಗೆಯ್ದು ಪಾಯ್ವುಗದಯೆಯಲ್ಲದಂ ಪುಗಿಸಿ ಬಯ್ಕ[ಬೈಕ]ದ ಧಾಜನಮಾಗೆ ಮಾಡಿ ಕೊಟ್ಟುಗೆ ವಿಧು ಪಾಯ ಪೊಯ್ದು ತಿವಿಯಂ ಪಿಡಿದೊಡರೊಡರ್ದು ಬಂದನೇ (ಪುಳುಚಾ. ೫-೬೩). 'ಬೈಕಂಗಳಿ'. 'ಬೈಕಂದಿರಿ' ಪರಾ. [< ಸಂ. ಭೈಕ್ಷ]

ಬೈಕಂಗಳಿ (ನಾ). ಭಿಕ್ಷೆ ಬೇಡುವುದೇ ವೃತ್ತಿಯಾಗುಳ್ಳವನು; ತಿರುಕ; ಯಾಚಕ : ಈಡಂ. . . ಬೈಕಂಗಳಿ ಬೇಡಿ ಪೊಬರೆಲ್ಲವಂ ತೊಟ್ಟು ಬಿಸುಟಾ ಪೊರೆವೊಂ (ಕಾಶಾ ೫೬-೬); ತಿಸುಗುಳ್ಳಪ್ಪ ಬೈಕಂಗಳಿ [ಪಾಪಾ. ಬಯ್ಕಂಗಳಿ, ಬಿಸನಂಗಳಿ, ಬೈಸಂಗಳಿ]ಯುಮಾಂ ಕಟ್ಟಪಟ್ಟ ಕಳ್ಳನುಮಾ ಕಂಡಿದು ಮುನ್ನಿಪ ಪಾವದ ಫಲಮಿದೀಗಳಿನ ದೋಷದ ಫಲಮೆಂದು ಬಗೆದಱಿದು ಪೆಗಟ್ಟುದು ಗತನಮೆ (ಪಾಪಾ. ೫೬-೬).

[ಬೈಕ + —ಕಾರಿ₂]

ಬೈಕಂಗೊಳ್ (ಕ್ರಿ)· ಭಿಕ್ಷೆಯನ್ನು ಪಡೆ : ಮುಂದಿಟ್ಟು ಚಿತ್ರವಾಂ ತಿರಿಂದುದುಮಂ ಪಾಳಮಿರ್ದಾ ಬೈಕಂಗೊಳ್ಕೊಂದಡದೆ ಕೊಂಡುದು ಮನದೇನೆಂದುನ್ನತಿ ಮಾಡಿ ಪೊಗಟ್ಟ್ (ಆಂಕ್ಷ. ೦೪-೬೬); ತಿರಿವುದು ಬೈಕಂಗೊಳ್ಳದು ಮೊರೆವುದು ಮಱುದಾಂದಿಯಲ್ಲಾ (ಶಾಪಾ. ೩೮೩). [ಬೈಕ + ಕೊಳ್₁]

ಬೈಕಂದಿರಿ (ಕ್ರಿ)· ತಿರುಪೆಗಾಗಿ ಸುತ್ತು ; ಭಿಕ್ಷೆಗಾಗಿ ಅಲೆದಾಡು : ಸರ್ವರುಂ. . . ಕಪ್ಪತಮಾಟ್ಟು ಬೈಕಂದಿರಿದಿನ್ನಪ್ಪುದೆಮೋದುವಮೆಂದು ಪಾಪ್ಪಿಗ ನುಡಿದೊಡಂ (ಷಣ್ಮಾ. ೬-೦). [ಬೈಕ + ತಿರಿ₁]

ಬೈಕಬೇಡು (ಕ್ರಿ)· ಭಿಕ್ಷಕೇಳು; ಯಾಚಿಸು : ಓದಿದ ಶಾಳಂ ತಿವಿದಿದಾದಿದ ಚೋಳಂ ವಿಸಪ್ಪರಾಜ್ಯಂ ಬೈಕಬೇಡಿದ ಕಳಂಗಂ (ಶಿ. VII· ೩೪೦. ೦೩೭-೫೦; 1114); ಕೆಲರ್ . . . ಪೆಱರ ಮನೆಗಳಂ ಪೊಕ್ಕಯ್ನೋಬೊಂದು ಬಯ್ಕಂ [ಬೈಕಂ] ಬೇಡಿ ಇಕ್ಕದ ಮನೆಯಂ ಬಯ್ದು . . .ಸತ್ತು ದುರ್ಗತಿಗಳ್ಗೆ ಸಲುವರ್ (ಷಣ್ಮ. ೦೩೨). [ಬೈಕ + ಬೇಡು₁]

ಬೈಕೆ 'ಬಯ್ಕೆ₁' ನೋ.

ಬೈಕೆಗೊಡು (ಕ್ರಿ)· ನಿಕ್ಷೇಪವಾಗಿಡು; ನ್ಯಾಸವಾಗಿರಿಸು : ನ್ಯಾಸಾಪಹಾರ ಬೈಕೆಗೊಟ್ಟರ್ಥಪ್ರಮಾಣಮಂ ಮಱೆದು ತಿಱಿದಂ ಪೇಟ್ದಡನತೆಯೆಂಬುದು (ಶಪ್ರಕ್ಷ. ೨೩೬) ; ಏನಂ ಬೇಡುವೆನೆಂದಬ್ಬಾನಕೆ ಬಗೆ ಬೆವಱ್ ಬಗೆಗೆ ಬಂದೊಡಮಯಮೊಲ್ಲಾ ಪೆರೆದಾಗಳೆ ಕುಡಿಮಂದಾ ನೃಪತಿಗ ಕೈಕೆ ಬೈಕೆ ಗೊಟ್ಟಳ್ ಮೆಚ್ಚಂ (ಪಂಪಾಪು. ೬-೬೭). [ಬೈಕೆ (<ಬಯ್ಕೆ₁) + ಕೊಡು₁]

ಬೈಗಳು 'ಬಯ್ಗುಳ್' ನೋ.

ಬೈಗು 'ಬಯ್ಗು' ನೋ.

ಬೈಗುಬೊಬ್ಬು 'ಬಯ್ಗುಬೊಬ್ಬು' ನೋ.

ಬೈಗುಗಣ್ಣಿ (ನಾ). ಸಾಯಂಕಾಲದ ಮಬ್ಬುಗತ್ತಲೆ; ಸಂಜೆಗತ್ತಲು: ಮತ್ತೊರ್ದಿವಂ, ಬೈಗುಗಣ್ಣಿಯಿಮ್ಮಿರೆ ಸೀತೆ ಮುರಿಸೊಳ್ ಕಂಡಳಾ ರನೊ ಕಲ್ಲ ನೆತ್ತಿಯೊಳ್ (ಶ್ರೀರಾಮ. ೨೧೫-೦೦೬); ಆ ವೇಳೆಗಾಗಲೆ ಬೈಗುಗಣ್ಣ ಪಾಸುಪೈಸ್ಪು (ಪುಷ್ಪ. ೪. ೧೦).

[ಬೈಗು (< ಬಯ್ಗು) + ಕಣ್ಣಿ (<ಕಣ್ಣು)]

ಬೈಗುನೆಯ್ಪು 'ಬಯ್ಗುನೆಯ್ಪು' ನೋ.

ಬೈಗುದಂಬು : (ನಾ). ಸಂಜೆಯ ತಂಪು.— ಶೈತ್ಯ ; ಬೈಗುದಂಬಲ ಗೊಳು ಸೊಗು, ಮಲಿವಲಿಗೊಡಿಸೊಂದರೆಯು ತುದಿಗೇರಿ ಕುಳಿತು ವಿಶ್ರಮಿಸಿಕೊಳ್ಳುತಿರ್ದೊರ್ಮಿಗಳಾಕ್ಷ್ಯದುಂ ಪಿರಿಗಾದಪೊಂದಲ್ಬೈತನನು ಧವಿಸಿ (ಶ್ರೀರಾಮ. ೨೦೯-೨೬೭).

[ಬೈಗು (<ಬಯ್ಗು) + ತಂಪು (<ತಣ್ಪು)]

ಬೈಗುದುಂಬೂ (ನಾ). = ಬೈಗುಗಣ್ಣಿ : ದಿಕ್ಕಕ್ಕುಮು . . . ನೋಡುತಿರೆಯರೆ ಬೈಗುದುಂಬೂ ತೀಪ್ತುಕ್ಕಿರ್ದ ದಿಕ್ಕೆವಿಸ್ತೀರ್ಣಾವಾಂ. ಕಂಡು ದೀನನೋ ! (ಶ್ರೀರಾಮ. ೨೧೬-೧೭).

[ಬೈಗು (<ಬಯ್ಗು) + ದುಂಬೂ (< ದುಮ್ಮೆ)]

ಬೈಗುದುಮ್ಮಿಗೆ (ನಾ). ಸಂಜೆಯಲ್ಲಿ ಮಾತ್ರ ಅರಳುವ ಒಂದು ಬಗೆಯ ದುಂಡಿಗೆ ; ಸಂಜೆದುಮ್ಮಿಗೆ : ಕಾಂತಾಜನಂ . . . ಅಲರ್ದ ಬೈಗು ದುಮ್ಮಿಗೆಯ ಜೊಲ್ಲಿಪುವಂತೆ ತುಟಿಯಂ ಕಣ್ಗೆಡ್ಪುಮಾದುದು (ಶಾಕುಂ. ೬-೦೦).

[ಬೈಗು (<ಬಯ್ಗು) + ದುಮ್ಮಿಗೆ./ಕನ್ನ. ದೈಯದುಮ್ಮಿಗೆ]

ಬೈಗುದೊಳ್ಳು 'ಬಯ್ಗುಬೊಬ್ಬು' ನೋ.

ಬೈಗುಳ್ 'ಬಯ್ಗುಳ್' ನೋ.

ಬೈಗುಳ 'ಬಯ್ಗುಳ್' ನೋ.

ಬೈಗುಳು 'ಬಯ್ಗುಳ್' ನೋ.

ಬೈಗೆ 'ಬಯ್ಗು' ನೋ.

ಬೈಗೆ (ನಾ). ಒಂದು ಬಗೆಯ ಮಿಸನು : ಮಾರ್ಕ್ಕಟಿಸಲ್ಲಿ ಪದಿಯ ಮಿಸಂ ಅಲ್ಲದೆ ಸಮುದ್ರದ ಆಣೆ, ಕುಚ್ಚಿ, ಬೈಗೆ, ಬೂತಾಯಿ ಎಲ್ಲಿ. . . ತಂದಿದ್ದರು (ಪೂರ್ಣ. ೩೫). [?]

ಬೈಜರು (ನಾ). (?) : ಗಂಧದ ಮಾಮಮಿಶ್ರೊಳ್ಳಿ ಕೈ ಹಗರು ಸೊಳ್ಳಂಧಿಸಿ ತಾಂಬೂಲಚಿತೆಂದ ಕಂದು ದಾಂಬಿಗಳಿಕ್ಕಿ ಕುಬಿಗರಿಗೊಯ್ದಾಗ ನಿಂದು ಬೈಜರಿಗೆ ಸೂಕಾವರು (ಶಾಮುಣಿ. ೬-೦೮). [?]

ಬೈಜಿಕ (ಗು). ಬೀಜದಿಂದ ಆಯಿತಾದ ; ರೇತಸ್ಸಿನಿಂದ ಹುಟ್ಟಿದ : 'ಬೈಜಿಕದೋಷ' ಪರಾ. [ಸಂ.]

ಬೈಜಿಕದೋಷ (ನಾ). "ಗರ್ಭಾಧಾನಾದಿ ಸಂಸ್ಕಾರಗಳಿಂದ ಗರ್ಭ ಮತ್ತು ಬೀಜಸಂಬಂಧವಾದ ದೋಷಗಳ ನಿವಾರಣವಾಗಿ ಜೀವನು ಪಾಪವಿಮುಕ್ತನಾಗುತ್ತಾನೆ. ಬೀಜವೆಂದರೆ ಶುಕ್ಲ ಶೋಣಿತಗಳು; ತತ್ಸಂಬಂಧವಾದ ನಿಷಿದ್ಧಕಾಲಮೈಥುನಾದಿ ಪ್ರಯುಕ್ತವಾದ ದೋಷವೇ ಬೈಜಿಕದೋಷ" (ಶಾಕಶ. ೩೫) : ಕಾಲೀನಮನೆಸಿದ ಹೆಣ್ಣಾಮಕ್ಕಳ ಜೀವನವನ್ನು ಹಾಳುಮಾಡುವಲ್ಲಿ ನಮ್ಮ ತಂದೆಯು ನಿಷ್ಣಾತನು . . . ಈ ಬೈಜಿಕದೋಷದ ಪರಂಪರೆಯನ್ನು ನಾವು ಪಡೆಯಲೇ ಬೇಕು (ಸಂಶಾ. ೩೫).

[ಸಂ.]

ಬೈಟಿಕ್ಕ 'ಬೈಠಕು' ನೋ.

ಬೈಠಕ್ 'ಬೈಠಕು' ನೋ.

ಬೈಠಕ್‌ಕೋಣೆ 'ಬೈಠಕ್‌ಕೋಣೆ' ನೋ.

ಬೈಠಕ್‌ಖಾನೆ 'ಬೈಠಕುಖಾನೆ' ನೋ.

ಬೈಠಕ್‌ಮುಷ್ಕರ (ನಾ). ಯಾವುದಾದರೊಂದು ಕೋರಿಕೆಯ ಪೂರ್ಯಕೆಗಾಗಿ ನೆಲದ ಮೇಲೆ ಪಟ್ಟುಹಿಡಿದು ಕುಳಿತು ಮಾಡುವ ಸಂಪು : "ಧರಣಿಸಿಪ್ಪ, ಬೈಠಕ್‌ಮುಷ್ಕರ" (stay-in-strike. ಪ್ರಿ.ಕ. ೬೬).

[ಬೈಠಕ್ (< ಬೈಠಕು) + ಮುಷ್ಕರ]

ಬೈಠಕ 'ಬೈಠಕು' ನೋ.

ಬೈಠಕ್‌ಕೋಣೆ. ಬೈಠಕ್‌ಕೋಣೆ (ನಾ). ಮನೆಗಳಲ್ಲಿ ಅತಿಥಿಗಳನ್ನು ಕೂರಿಸುವ ಸ್ಥಳ ; ದಿವಾನಖಾನೆ : ಪನ್ನಸ್ಸು ಬೈಠಕ್‌ಕೋಣೆಗೆ ಪುನಃ ಎಳೆದುತಂದು ಹೋದಳು (ಸಂಪಾ. ೦೨೦). ಬೈಠಕ್‌ಕೋಣೆ : ಬೈಠಕ್‌ಕೋಣೆಗಳಲ್ಲಿ ವಿಲಾಸವಿಷಿಗಳೂ ಪಳಗಳೂ ಇಟ್ಟಿವೆ (ಕ್ಯಾಂ. ೦೦೬).

[ಬೈಠಕ್ (< ಬೈಠಕು) + ಕೋಣೆ (<ಕೋಣ್)]

ಬೈಠಕುಖಾನೆ 'ಬೈಠಕುಖಾನೆ' ನೋ.

ಬೈಠಕೆ 'ಬೈಠಕು' ನೋ.

ಬೈಠಕು. ಬೈಟಿಕ್ಕು, ಬೈಠಕ್, ಬೈಠಕ, ಬೈಠಕೆ (ನಾ). ೧. ಕುಳಿತು ಕೊಳ್ಳುವಿಕೆ ; ಕೂರುವಿಕೆ : ಅರಸುಗಳ ಬೈಠಕಗೆ, ಇಮ್ಮೊಂದು ಎತ್ತರವಾದ ಮಂಚವಿಡುತ್ತಾರೆ (ಪಜ್ಞಾ. ೬೯). ೨. ಕುಳಿತುಕೊಳ್ಳುವ ಜಾಗ.— ಸ್ಥಳ. ೩. (ಸಂಘ, ಸಮಿತಿ ಮುಂತಾದುವುಗಳ ಸದಸ್ಯರು ಸೇರುವ) ಸಭೆ; ಅಧಿವೇಶನ : ಗಜೇಂದ್ರಸಿಂಹನ ಬೈಠಕನಲ್ಲಿ ಇಂದು ಮುಂಜಾನೆಯಿಂದ ಯುದ್ಧಸಮಿತಿಯ ಬೈಠಕು ಪಡೆದಿದೆ (ಪಜಾಪ್ರ. ೦೧೦). ೪. (ಸಂಗೀತ, ನೃತ್ಯ ಮುಂತಾದುವುಗಳ) ಕಚೇರಿ ; ಗೋಷ್ಠಿ : ಸುಂದ್ರಾಸಾಮಯ ಮನೆಯಲ್ಲಿ ಚಿಕ್ಕ ಬೈಠಕು ಕೂಡ ಆಗಿ ಪಸಂತನು . . . ಐದಾರೂಪಾಯಿಸೋಟನ್ನು ಆಕೆಯ ಕೈಗೆ ಹೊಡೆದನು (ಸಂಪಾಪ್ರ. ೨೦೬); ಆಕೆ ಅವೇಶ ಕಡೆ ಸಂಗೀತಬೈಠಕುಗಳಿಗೆ ಹೋಗಬೇಕಾಗುತ್ತಿತ್ತು, (ಪಾಪ್ರ. ೨೯). ಬೈಟಿಕ್ಕು : ೪. ವೇಷ ಭೂಷಣಗಳ್ಳದೆ ಒಬ್ಬೊಬ್ಬರು ಒಂದೊಂದು ಪಾತ್ರವನ್ನು ವಹಿಸಿ ಬಂಳಿತ ಬದಿಯಲ್ಲಿಯೇ ಈ ಪ್ರಸಂಗವನ್ನು ವಾಚನ ಮಾಡಬಹುದು . . . ಇದಕ್ಕೆ 'ಬೈಟಿಕ್ಕು' ಎಂದೂ ಹೆಸರಿದೆ (ಪಜ್ಞಾ. ೩೬); ನಮ್ಮ ಸಂಸಮವಾಗಿ ಪಾಡುಬ್ಲಿವನು ವಿದ್ಯುಲ್ಲಿ ಯಾರಿದ್ದಾರೆ . . . ಎಂದು ಗಂಭೀರವಾಗಿ ಹೇಳಿ ಅಲ್ಲೇ ಬೈಟಿಕ್ಕಿಗೆ ಕುಳಿತ (ಪಜ್ಞಾ. ೨, ೨೦೦). ಬೈಠಕ್ : ೪. ಅನೇಕ ಉತ್ತರಾಧಿಗಾಯಕರು, ತಮ್ಮ 'ಬೈಠಕ್' (ಕಚೇರಿ)ವಲ್ಲಿ, ತ್ಯಾಗರಾಜರ ಮತ್ತು ಪುರಂದರದಾಸರ ಕೃತಿಗಳನ್ನು ಹಾಡಲು ಮೊದಲುಮಾಡಿದ್ದಾರೆ (ಸಂಗೀಪ. ೦೩೩); ಪೆಟ್ಟಿಗೆಯನ್ನು . . . ಪಾವಾಸಾಹೇಬರು ಬೈಠಕಿನ ರಂತಿಯಲ್ಲಿ ಕುಳಿತು ಬಾರಿಸಲಿಕ್ಕೆ ಪ್ರಾರಂಭಿಸಿದರು (ಪಂಶಾ. ೮೯). ಬೈಠಕ್ : ೩. ಅ.ಭಾ.ರಾಷ್ಟ್ರೀಯಸಮಿತಿಯು ೧೯೨೦ ರ ಪಪ್ಪಂ ಬರವಣ್ಣಿ ದಿಲ್ಲಿಯಲ್ಲಿ ಕೂಡಿದ ಬೈಠಕ್‌ದಲ್ಲಿ . . . ಬಾರ್ಡೋಲಿ ಇದು ಒಂದು ವಿಷಪ್ಪ ತಾಲೂಕ ಎಂದು ನಿಶ್ಚಯಿಸಲ್ಪಟ್ಟಿತು (ಕಾಗ್ರೆಸ್. ೫೬). ೪. ಅದು . . . ಹಾಡುವ ಸಮಾರಂಭಕ್ಕೆ ಬೈಠಕಯೆಂದುಕ್ತಾರೆ (ಕಜಾಗೀ. ೦೧೬) : ಅವಳ ಒಂದು ಬೈಠಕನ್ನು ಎಲ್ಲರೂ ಕೇಳಲು ಸಾಧ್ಯವಿಲ್ಲ (ಪಾಶಕ್ಕ. II. ೦೦೦೬). ೫. ಬಿಡಾರ ; ವಿಕಾಣಿ; ಮೊಕ್ಕಾಂ : ಶಾಮಂಣಿಯು ಊರಿಗೆ ಬಂದು ಮಾಡಿಯಲ್ಲಿ ಬೈಠಕ ಹಾಕಿದ ದಿನವೇ, ರಂಭಪ್ಪ ಶಸ್ತ್ರಚಿಕಿತ್ಸೆಯನ್ನು . . . ಸ್ಥಳಾಂತರಿಸಿದ (ಪಾಶಕ್ಕ. II. ೫೬). ಬೈಠಕೆ : ೩. ಇದಿಪ ಬೈಠಕಯಲ್ಲಿ ಇದೇ ವಿಷಯದ ಚರ್ಚೆಗೆ ಆರಂಭವಾಗಿತ್ತು (ಪಾಪ್ರ. ೨). [←ಹಿಂ. ಮರಾ. ಬೈಠಕ್]

ಬೈಠಕುಖಾನೆ, ಬೈಠಕ್‌ಖಾನೆ, ಬೈಠಕಖಾನೆ (ನಾ). ಸಮಾರಂಭ, ಸಭೆ ಮುಂತಾದವುಗಳನ್ನು ನಡೆಸಲು ಅನುಕೂಲವಾಗಿರುವ

ವಿಶಾಲವಾದ ಹಜಾರ.– ಪಡಸಾಲೆ ; ದಿವಾನಖಾನೆ : ಕೆಂಪರ ಉನ್ನೀಸಯು ತನ್ನ ಸ್ವಂತ ಬೈತಕಖಾನೆಯಲ್ಲಿ ಕುಳಿತುಕೊಂಡು ಚಿತ್ರಪಟಗಳನ್ನು ಬರೆಯುತ್ತ ತಾಂಬೂಲಚರ್ವಣವನ್ನು ಮಾಡುತ್ತಿದ್ದಳು (ಕಾಸಂ. ೬೭). **ಬೈತಕ್‌ಖಾನೆ:** ತಮ್ಮ ಬೈತಕ್‌ಖಾನೆಯಾದ ಮಹಮಂಟಪದೊಳಗೆ ಆದರದಿಂದ ಕರೆದೊಯ್ದು ದಿವ್ಯಾಸನದಲ್ಲಿ ಕುಳ್ಳಿರಿಸಿ ಕುಶಲಪ್ರಶ್ನೆಗಳನ್ನು ಮಾಡಿದರು (ಕ್ರೀಡಾಭಿ. ೫೯); ಅತಿಥಿಗಳೆಲ್ಲರೂ ಬೈತಕ್‌ಖಾನೆಯಲ್ಲಿ ಸೇರಿದಾಗ ಆ ಬೇಹೂಗ್ ಹಾಡನ್ನು ಹಾಡುವಂತೆ ನಿಷ್ಕನ್ನು ಕೇಳಿಕೊಳ್ಳುತ್ತಿದ್ದಳು (ಪಾಂಡ. II. ೬೩). **ಬೈತಕಖಾನೆ :** ಎರಡು ಅಂತಸ್ತಿನ ಬೈತಕಖಾನೆ ; ದೊಡ್ಡ ದೇವರ ಮನೆ (ಕಂಪಾಕಾ. ೯) ; ಡಾಕ್ಟರ ರಂಗಣ್ಣನ ಮನೆಯ ಬೈತಕಖಾನೆ (ಸೂಸಂಜಾ. ೧೧೦).

[ಬೈತಕು + ಖಾನೆ. / ಹಿಂ. ಬೈತಕ್‌ಖಾನಾ]

ಬೈತ ' ಬಯ್ತ್ ' ಪರಾ.

ಬೈತಲಿಕ್ಕು (ಕ್ರಿ). ಬೈತಲೆ ತೆಗೆ : ಬೈತಲಿಕ್ಕಿದೆನು ನಾನೆ. ಪಸ್ಸ ಕೈಯಾರ (ಪಕಗು. ೨೬೨–೬). [ಬೈತಲೆ (< ಬಯ್ತಲೆ) + ಇಕ್ಕು]

ಬೈತಲೆ ' ಬಯ್ತಲೆ ' ನೋ.

ಬೈತಲೆದೆಗೆ ' ಬಯ್ತಲೆದೆಗೆ ' ನೋ.

ಬೈತಲೆಬಟ್ಟು, ಬೈತಲೆಮೊಟ್ಟು (ನಾ). ಬೈತಲೆಗೆ ಧರಿಸುವ ಆಭರಣ ; ಬೈತಲೆಮಣಿ : ಜಡೆಬಿಲ್ಲೆ ಬೈತಲೆಬಟ್ಟು (ಸಿಕ್ಕಾ. ೦೦–೦೩). **ಬೈತಲೆಬೊಟ್ಟು :** ಮುಂದಗಮನಿಗೆ ಮುಂದಾರದ ಬೈತಲೆಬೊಟ್ಟಂ . . . ಸಹುದು ಸಿಂಗರಿಸಲೊಡಂ (ಶಾಕಾಕ್ಕ. ೦೫೦–೦೦).

[ಬೈತಲೆ (< ಬಯ್ತಲೆ) + ಬಟ್ಟು]

ಬೈತಲೆಬಟ್ಟೆ ' ಬೈತಲೆವಟ್ಟೆ ' ನೋ.

ಬೈತಲೆಬೊಟ್ಟು ' ಬೈತಲೆಬಟ್ಟು ' ನೋ.

ಬೈತಲೆಮಾವು (ನಾ). ಒಂದು ಬಗೆಯ ಮಾವು : ಪುಂಮಾವು ಭಾಮಿಸ ಲಡಿಕಮಾವು ಗಿಳಿಮಾವು ಬೈತಲೆಮಾವು (ಹಪಪೋ. ೫೯–೨೪).

[ಬೈತಲೆ ? + ಮಾವು]

ಬೈತಲೆವಟ್ಟೆ, ಬೈತಲೆಬಟ್ಟೆ (ನಾ). ಬೈತಲೆ ತೆಗೆದಿರುವ ಸ್ಥಳ : ಪ್ರಸರಿಸಿದುನ್ನತತಿಮಿರಪ್ರಸರದೊಳೆದೆಲ್ಲಿ ವಿಜೃಂಭಿಸಿ ಕಸುಸಂಚಯವೊಲ್ ದಿಸುಗುವ ಬೈತಲೆವಟ್ಟೆಯೊಲೆಸೆದುದು ಸಿಂದೂರರೇಖೆ ತಮ್ಮಾಲಿಕೆಯಾ (ಅಜ್ಜಕಿ. ೩–೨೬). **ಬೈತಲೆಬಟ್ಟೆ :** ತೊಲಗದ ಕತ್ತಲೆಯಂ ಪೊಕ್ಕಲೆವಿಂದು ಮರೀಚಿಯಂತೆ ತಕ್ಕಾಂತೆಯಾ, ಬೈತಲೆಬಟ್ಟೆಯೊಳೆಸೆದುದು ಕೋಮಲೆ ಯೊರ್ಮೆಮರ್ಜಿದೆಳೆಯ ಮುತ್ತುಮಣಿಯ ಸಾಲ್ (ಅಜ್ಜಕಿ. ೬–೨೬).

[ಬೈತಲೆ (< ಬಯ್ತಲೆ) + ಬಟ್ಟೆ]

ಬೈತಲೆವಣೆ ' ಬಯ್ತಲೆವಣೆ ' ನೋ.

ಬೈತು ' ಬಯ್ತ್ ' ಪರಾ.

ಬೈತ್ರ 'ಬಹಿತ್ರ' ನೋ.

ಬೈದಿತಿ (ನಾ). ಗಿಡಮೂಲಿಕೆಯ ಔಷಧಿಯನ್ನು ಕೊಡುವವಳು : ದೇಯಿಬೈದಿತಿಯು ಕೂಡಲೆ ಎದ್ದು ತಾನು ತಂದಿದ್ದ ಔಷಧದ ಪೊಟ್ಟಣವನ್ನು ಬಿಚ್ಚಿ ಅವ್ಮಣ್ಣನು ಮೊದಲು ಹಚ್ಚಿದ್ದ ಮದ್ದನ್ನು ತೊಳೆದು ತೆಗೆದಳು (ಕೂಪಪ. ೬). [< ಬೈದ್ಯ + –ಇತಿ$_2$ (<–ಇತಿ$_1$)]

ಬೈದೆ ' ಬೈದ್ಯ ' ನೋ.

ಬೈದ್ಯ, ಬೈದೆ, ವಯಿದ್ಯ (ನಾ). ೧. ವೈದ್ಯ; ಡಾಕ್ಟರು : ವೈದ್ಯ ವೆಂಬುದರ ರೂಪವೇ ಬೈದ್ಯ (ಪಾಣಿ. ೨೨೨); ತಿಮ್ಮಣ್ಣ ಬೈದ್ಯನ ಮನೆಯೊಳಕ್ಕೆ ಹೋದನು (ಕಾಪ್ರ. ೬೩). ೨. ಒಂದು ಜಾತಿಯ ಹೆಸರು; ಮತ್ತು ಆ ಪಂಗಡದವರು ತಮ್ಮ ಹೆಸರಿನ ಕೊನೆಯಲ್ಲಿ ಸೇರಿಸಿಕೊಳ್ಳುವ ಶಬ್ದ : ಬಿಲ್ಲವರನ್ನು ಬೈದ್ಯ ಎಂದೂ ಕರೆಯುತ್ತಾರೆ (ಕುಳಾಜಾ. ೨೨೨); ಅವಳಿಗೆ ಏಳು ವರ್ಷ ಮಮಸ್ಸು ಎಂದಾಗ ಪಂಜದಲ್ಲಿನ ಪದ್ಮ ಬೈದ್ಯನಿಗೆ ಕೈ ಹಿಡಿಸಿ ಕೊಟ್ಟುಬಿಟ್ಟಿದ್ದೇವೆ (ಕೂಪಪ. ೩). **ಬೈದೆ :** ೧. ಇವರು . . . ಗಿಡಮೂಲಿಕೆಯ ಔಷಧಿಗಳನ್ನು ಕೊಡುವ ಉದ್ಯೋಗವನ್ನು ಮಾಡುತ್ತಿದ್ದುದರಿಂದಲೂ ಬೈದ್ಯ(ಬೈದೆ) ಎಂದು ಕರೆಯಲ್ಪಟ್ಟರು (ಕುಳಾಜಾ. ೨೨೨). **ವಯಿದ್ಯ :** ೨. ವಾಸ್ತೇವಯಿದ್ಯ ನಾರನವಯಿದ್ಯ . . . ಯಿಂತಿನಿಬರು . . . ಕೊಟ ಶಾಸನದ ಕ್ರಮ ವೆಂತೆಂದರೆ (ಕ್ಷಾವ. IX–II, ೧೩೦–೦೭ ; 1406); ನಾರಣಮಯಿದ್ಯನ ಹಾಳೆಯ × × × (ಎಕ. VIII, ೨೯೫ಸ. ೦೭೭–೦೦ ; 1424).

[< ಸಂ. ವೈದ್ಯ. / ತುಳು. ಬೈದ್ಯ]

ಬೈನಾಡು (ನಾ). ಬಯಲುಸೀಮೆ —ಪ್ರದೇಶ ; ಪಾಂಡಿ. ಕೊಂಗು, ವಯನಾಡು, ತುಳು ಮತ್ತು ಪುನ್ನಾಡು ಎಂಬ ಕೇರಳದ ಐದು ಸೀಮಾಪ್ರದೇಶಗಳಲ್ಲಿ ಒಂದು; ಈಗಿನ ವೈನಾಡು : ಬೈನಾಡ ಸೀಮೆ ತಮ್ಮ ಅಧೀನ ಎಂದು, ತಾವು ಧರಿಯಾದಿ ಪಾಡಿದ್ದು ನಾವು ವಿಚಾರಣೆ ಮಾಡಿದ್ದರಲ್ಲಿ. . . ನಕಲು ನಡುಗೆ ಬಂದು ಸೇರಿತು (ಶಾಸಂಪ್ರ. ೦೬೦). [←ತುಳು. ವಮುನಾಡು]

ಬೈನಿ 'ಬಯಿನೆ' ನೋ.

ಬೈಸೆ ' ಬಯಿನೆ' ನೋ.

ಬೈಪಣೆ (ನಾ). ಕೊಟ್ಟಿಗೆಯಲ್ಲಿ ದನಕರುಗಳಿಗೆ ಮೇವು ಹಾಕುವುದಕ್ಕಾಗಿ ಕಟ್ಟಿರುವ ತೊಟ್ಟಿ; ಗೋದಲಿ; ಗೊಂತು : ದನಗಳ ಮೇಲೆ ವಜಕುವಲ್ಲಿ ನೆಲವನ್ನು ಮಣ್ಣಿನಿಂದ ಏರಿಸಿ ಬೈಹುಲ್ಲು-ಹಾರಲು ಬೈಪಣೆ ಮಾಡಿರುವರು (ಪಾಗಿ. ೨೨). [←ತುಳು. ಬೈಪಣೆ]

ಬೈಬಲ್ 'ಬೈಬಲ್ಲು' ನೋ.

ಬೈಬಲ್ಲು, ಬೈಬಲ್ (ನಾ). ಕ್ರೈಸ್ತರ ಧರ್ಮಗ್ರಂಥ : ಪೂರ್ವೋತ್ತರ ಮಿಮಾಂಸೆಗಳೆರಡೂ. . . ಬೈಬಲ್ಲಿನ ಓಲ್ಡ್ ಟೆಸ್ಟ್‌ಮೆಂಟ್ ಮತ್ತು ನ್ಯೂ ಟೆಸ್ಟ್‌ಮೆಂಟ್ ಇದ್ದ ಹಾಗೆ (ಶಾಡಪ ೦೬೦) ; 'ಶತ್ರುವು ಬಲದ ಗಲ್ಲದ ಮೇಲೆ ಹೊಡೆದರೆ ಎಡಗಲ್ಲವನ್ನೂ ಮುಂದು ಮಾಡಿ'ಯೆಂದು ಬೈಬ್ಲು ಹೇಳುತ್ತದೆ (ಪಮಗಾ. ೦೫೮). **ಬೈಬಲ್ :** ಕ್ರೈಸ್ತರ ಒಂದು ಸಾಂಪ್ರದಾಯ . . . ಬೈಬಲ್‌ವಾಕ್ಯವನ್ನು ಪ್ರಮಾಣವಾಗಿ ತೋರಿಸಿ ಸ್ವೀಯರಲ್ಲಿ ಅತ್ಯ ವಿಲ್ಲವೆಂದು ವಾದಿಸುತ್ತಾರೆ (ಕಾಣಕ್ಕ. ೦೮೩). [←ಇಂ. Bible]

ಬೈದೂತು (ನಾ). ಬಯ್ಯುವ ಮಾತು; ತೆಗಳಿಕೆ; ನಿಂದೆ ; ಕನ್ನಡದಲ್ಲಿರುವ ನಮ್ಮ ಬೈಮಾತುಗಳನ್ನು ಸೊಡು. ತೀರಾ ಏಮು, ಸಪ್ಪೆ, ನೀರಸ ನಿಷ್ಪ್ರಯೋಜಕ (ಪಪಾ. II. ೦೬೩). [ಬೈ$_3$ (<ಬಯ್$_3$) + ಮಾತು$_1$]

ಬೈಮೂಗ 'ಭೈಮೂಗು' ನೋ.

ಬೆಯೆ 'ಬಯ್$_3$' ನೋ.

ಬೈಯು 'ಬಯ್$_3$' ನೋ.

ಬೈರ 'ಬೈರವ' ನೋ.

ಬೈರಗ (ನಾ). ಒಂದು ಬಗೆಯ ಪಕ್ಷಿ : ಆ ಪಸಂಗಳೊಳು ಶಾಕ. . . ಬೈರಗ . . . ವಾಸಕ ಮೊದಲಾದ ಚಿತ್ರರೂಪಶಕ್ಕಿಗಳಳ್ಳ ಪಕ್ಷಿಕುಲಂಗಳುಂ (ಪಪೀ. ೨೦೨). 'ಭೈರಿ' ಪರಾ. [?]

ಬೈರಗಿ 'ಬೈರಿಗೆ' ನೋ.

ಬೈರಗಿಬೀಟ್ (ಕ್ರಿ). (ರಂಧ್ರಮಾಡುವ ಸಾಧನದಿಂದ ಕೊರೆದಂತೆ) ತೂತು ಬೀಳು ; ರಂಧ್ರವಾಗು: ಧಾರಾಮದದಿಂದೆ ನೆಲಂ ಬೈರಗಿ ಬೀಟ್ಟುದೆದಿಂದೆ ಬಿಡುತಪ್ಪ ಮಹಾವಾರಣಘಟೆಯಿಂ ನಿಚ್ಚಂ ಕಾರಂ ಕೈಕೊಂಡು ಮೆಱೆವುವಾತನ ರಾಜ್ಯಂ (ಸೂಕ್ತಿ. ೩–೬).

[ಬೈರಗಿ (<ಬೈರಿಗೆ) + ಬೀಟ್$_1$]

ಬೈರವ. ಬೈರ (ನಾ). ೧. ಶಿವ; ಈಶ್ವರ: ಭಣಾಕ್ಕೆ ಬಣಾರಂ. . . ಭೈರವ ಬೈರವ, ಭೋಗ—ಭೋಗ (ಹಯ. ೩೫೫ ಕೃಷ್ಣ). ಬೈರ: ೨. ಒಬ್ಬಾತನ ಹೆಸರು: ಕಿಬ್ಬಂ ಬನ್ನವ ಬೈರನಯ್ದೆ ಜಯಮಂ...ಮಾಬ್ಬಂ (ಪಾ. IV (೩). ೪೬೪. ೪೦–೬: ೪೮೭). 'ಬೈರವೋಜ' ಪರಾ. [<ಸಂ. ಭೈರವ]

ಬೈರವಾಸ 'ಬೈರಾಸು' ನೋ.

ಬೈರವೋಜ (ನಾ). ಒಬ್ಬಾತನ ಹೆಸರು: ಗೋಪಾಲದೇವನ ಮಗ ಗಯಂಣನು ಬೈರವೋಜಂಗೆ . . . ಕೊಟ್ಟ ಭೂಮಿಯ ಕ್ರಮ (ಪಾ. VII. ೫೪೫೦. ೪೦–೩: ?). [ಬೈರ (<ಬೈರವ) +ಓಜ (<ಓವರ್ಳು)]

ಬೈರಾಗಿ (ನಾ). ಸಂಸಾರದಲ್ಲಿ ಅಸಕ್ತಿಯನ್ನು ಕಳೆದುಕೊಂಡವನು; ವಿರಕ್ತ; ವಿರಾಗಿ: "ಬೈರಾಗಿ—ವೈರಾಗಿನ್" (ಕ್ಯ.ಕೋ. ೩೨): ಕೆಲ ಬೈರಾಗಿಗಳೂ ಮಾಂತ್ರಿಕರೂ ನಾವು ಚಿನ್ನವನ್ನು ಮಾಡಬಲ್ಲವೆಂದು ಹೇಳುತ್ತಾರೆ (ಕುಂಬಾಯಿ. ೪-೨೦೬); ಬೈರಾಗಿಯು ಮಂಟಪದಲ್ಲಿ ಯೋಗಪಟ್ಟವನ್ನು ಹಾಕಿಕೊಂಡು ಕುಳಿತಿದ್ದನು (ಶ್ರೀಪಾಂಡು. ೧೨). [<ಸಂ. ವೈರಾಗಿನ್]

ಬೈರಾಗಿಣಿ (ನಾ). ವಿರಕ್ತೆ; ವಿರಾಗಿಣಿ: ಬೈರಾಗಿಣಿಯೂ ನಾನೂ ನಾಳೆ ನಗರಕ್ಕೆ ಹೊರಡುತ್ತೇವೆ (ಬೀಂಚ್. ೧೦೦). [< ಸಂ. ವೈರಾಗಿನೀ]

ಬೈರಾಗಿತನ (ನಾ). ವಿರಕ್ತಿ; ವೈರಾಗ್ಯ: ಬೈರಾಗಿತನಕ್ಕೆ ಮರುಳಾದವಂಗೆ ಮನೆಯ ಹೆಂಗಸಿನ ಹಂಗೆ ? (ಶಾಸ. ೪೪). [ಬೈರಾಗಿ + — ತನ]

ಬೈರಾವಳಿ (ನಾ). ಒಂದು ಬಗೆಯ ಬತ್ತ: ಕೊಡಗು ಮಳಲಕಂಚಿ ಹರಿಸಿನ ದುಣ್ಣಗಳೂಡನೊಪ್ಪುತಿಹ ಬೈರಾವಳಿಯು ಕಡುಸೊಬಗಾಂತಿಹ ಚಂದ್ರೋದಯಶಾಲಿಯೆಂಡಿವಿಡದೆಸೆವರ್ತಿಯಲಿ (ಕಂಚಿ. ೩-೭೦). [?]

ಬೈರಾಸ 'ಬೈರಾಸಂ' ನೋ.

ಬೈರಾಸು, ಬೈರವಾಸ, ಬೈರಾಸ, ಬೈರ್ವಾಸ (ನಾ). ೧. ಮೈಮೇಲೆ ಹೊದೆಯುವ ವಸ್ತ್ರ; ಉತ್ತರೀಯ: ಕಚ್ಚಿ, ಎಲೆಅಡಿಕೆ ಚೀಲ, ಒಂದು ಬೈರಾಸು. ಇಷ್ಟನ್ನು ತಾನೇ ಹುಡುಕಿ ತೆಗೆದುಕೊಂಡು ಗುಡಿಸಲಿನಿಂದ ಹೊರಬಿದ್ದ (ಕುಚಕ್ರ. ೨೫೬). ೨. ನೀರು ಹೀರಲು ಅನುಕೂಲವಾಗಿರುವಂತೆ ಜಾಳುಜಾಳಾಗಿ ಹೆಣೆದ ವಸ್ತ್ರ: ವಾಣಿಪಂಚೆ : ತಲೆಯೊರಸಲು ಬೈರಾಸನ್ನು ಹುಡುಕಿ ತಂದಿಟ್ಟು . . . ಕರೆಯುವಾಗ ಪಂಡಿತರು ಗಚ್ಚಲು ಮನೆಯೊಳಗೆ ಬಂದಿದ್ದರು (ಕಟು. ೪೧); ಕೊಳ್ಳಿವರೆಗೆ ಒಂದು ಅಂಗಿ. ಅರೇಳು ಮೊಳದ ಒಂದು ಜುಂಗು ಪಂಚೆ . . . ಹೆಗಲ ಮೇಲೊಂದು ಬೈರಾಸು (ಟಾವೆಲ್) (ಕ್ಯ.ಕೋ. ೦೫). ಬೈರವಾಸ : ೧. ಬಿದ್ದ ಮೋಕ್ಷವನ್ನೂ ಬೈರವಾಸವನ್ನೂ ಎತ್ತಬೇಕು (ಶಡ. ೬೬). ಬೈರಾಸ : ೧. ಪಪ್ಪ ವೈಯನನ್ನು ಒಂದು ಬೈರಾಸದಿಂದ ಮುಚ್ಚಿಕೊಂಡ (ಪಟ್ಟಿ. ೬೮); ಸೇವಕರುಪಂಚೆ ಮತ್ತು ಬೈರಾಸಗಳನ್ನು ತಂದು ಪ್ರಭುಗಳಿಗೆ ಕೊಟ್ಟ (ಹುಂಜಾ. ೭೯). ಬೈರ್ವಾಸ : ೨. ಹಚ್ಚಡ ಚಿಂದಿಕುಪ್ಪಸಗಳನಿಂಬಿಟ್ಟು ಸ್ವಚ್ಛದ ಬೈರ್ವಾಸದೊಡನೆ ಬೆಚ್ಚದೆ ವಿಂದರು (ಹೋಪ್ರ. ೩-೧೩).

[< ಸಂ. ಓವರ್ವಾಸ್ . / ತುಳು. ಬೈರಾಸ್, ಬಯಿರಾಸ್; ತೆಲು. ಬೈರವಾಸ, ಬಯಿರವಾಸ]

ಬೈರಿ, ಭೈರಿ (ನಾ). ಒಂದು ಬಗೆಯ ಮರ : ಅಜ್ಜಪ ಪಚ್ಚೆ, ಅರಂಜೆ, ಬೈರಿ, ಜಾಗುರಿ, ವಿಜಯಪ್ಪಕ್ಷ (ಪ್ಯಾಕಿ. ೬-೦೨೫). ಭೈರಿ : "ಅಜ್ಜಸ ಪಚ್ಚೆ, ಅರಣ್ಯಪಚ್ಚೆ, ಅರಣ್ಯೆ, ಅರುಜೆ, ಭೈರಿ . . . ವಿಜಯಪ್ಪಕ್ಷೆ" (ಪ್ಯಕ್ಷ. ೦೬). [?]

ಬೈರಿಗೆ, ಬೈರಗಿ (ನಾ). ೧. (ಭೂಮಿ, ಮರ ಮುಂತಾದುವುಗಳನ್ನು) ತೂತು ಕೊರೆಯಲು ಬಳಸುವ ಒಂದು ಬಗೆಯ ಉಪಕರಣ : ಬೈರಿಗೆ . . . ಮರದ ಒಳಕ್ಕೆ. ಹೋಗುವ ಆಯುಧ (ಪ್ರಮಾ. ೦೧೫); ಇದನ್ನು ಭೂಮಿಯಲ್ಲಿ ಸಾವಿರಾರು ಅಡಿಗಳ ಆಳಕ್ಕೆ ಕಂಡಿಗಳನ್ನು ಕೊರೆಯುವುದಕ್ಕಾಗಿ ತಯಾರು ಮಾಡುವ ಬೈರಿಗೆಗಳಿಗೆ ಉದಯೋಗಿಸುವರು (ಪಾಶ್ಚಾ. ೫೩). ೨. (ಆಲಂ) ಬೇಸರ ತರಿಸುವುದು; ತಲೆಚಿಟ್ಟು ಹಿಡಿಸುವುದು : ಅವನ ಬೈರಿಗೆ ಪ್ರಾರಂಭವಾಗಿ ಆಗಲೇ ತುಂಬಾ ಹೊತ್ತಾಯಿತು (ರೂಪ). ೩. ತಲೆಚಿಟ್ಟು ಹಿಡಿಸುವಮನು ; ಬೇಸರವನ್ನುಂಟು ಮಾಡುವಮನು : ಅವನೊಬ್ಬ ಬೈರಿಗೆ. ಅವನ ಸಹವಾಸ ಎಲ್ಲರಿಗೂ ಸಾಕಾಗಿದೆ (ರೂಪ). **ಬೈರಗಿ** : ೧. ಚುಂಬುಲ ನುಗ್ಗಾಯ್ದು ಬಲ ಮುಂಕೊಂಡು ಬರೆ ಬೈರಗಿಯಿನರೆದಂತಾಯ್ತು (ಸಂಚಹ. ೬-೪೭). 'ಬೈರಗಿಬೀಟು' ಪರಾ.

[ದೇ. ತುಳು. ಬೈರಿಗೆ, ಬೈರಯಿ, ಬೈರವು]

ಬೈರಿಗೆಕೊರೆ (ಕ್ರಿ). ೧. ರಂಧ್ರಮಾಡುವ ಸಾಧನದಿಂದ ತೂತು ಕೊರೆ : ಅವನು ಬಾಗಿಲಿಗೆ ಬೈರಿಗಕೊರೆದು ಅಗುಳಿಯನ್ನು ಆಳವಡಿಸಿದನು (ರೂಪ). ೨. (ಆಲಂ) ಇರಿ ; ಚುಚ್ಚು : ಬಾಲಕರೆಲ್ಲರ ಮನದಲ್ಲೂ ಭೀತಿ ಬೈರಿಗೆ ಕೊರೆಯುತ್ತಿತ್ತು (ಹೂಡ. ೦೬). [ಬೈರಿಗೆ + ಕೊರೆ (< ಕೊಱ್ಱು)]

ಬ್ಯಾಗು (ನಾ). ಜೇಲು; ಸಂಚಿ : ಇದೋ ನಿಮ್ಮ ಬ್ಯಾಗು. ನಿಮ್ಮ ಹಣ (ಪಧೀಃ. ೦೨). [← ಇಂ. Bag]

ಬ್ಯಾಟರಿ (ನಾ). ೧. ಒಣ ವಿದ್ಯುತ್‌ಕೋಶಗಳಿಂದ ಬೆಳಗಿಸಬಲ್ಲ ಸಣ್ಣ ಬಲ್ಬಿನ ದೀಪ; ಟಾರ್ಚು: ಅಲ್ಲೊಬ್ಬರು ಇಲ್ಲೊಬ್ಬರು ತಮ್ಮ ಕೈಯಲ್ಲಿದ್ದ 'ಬ್ಯಾಟರಿ'ಯನ್ನು ಹುಡುಗಿಯರ ಕಡೆ ತಿರುಗಿಸಿ ಬೆಳಕು ಚೆಲ್ಲಿದರು (ಪಾಕಷ. ೦೦); ಉಪಮೆ ಈ ದೃಷ್ಟಿಯಿಂದ ಕತ್ತಲಿದ್ದಲ್ಲಿ ಬೆಳಕು ಚೆಲ್ಲುವ ಬ್ಯಾಟರಿ (ಪಣಪಾಂ. ೦೪೭). ೨. ಒಣ ವಿದ್ಯುತ್‌ಕೋಶಗಳ ಶ್ರೇಣಿ : ಇನ್ನೆರಡು ವಿದ್ಯುತ್ಕನ್ನು ಸ್ಪಷಿಸುವ ಬ್ಯಾಟರಿ ಎಂಬ ಪೆಟ್ಟಿಗೆಗಳಿಗೆ ಹೊಗಿವೆ (ಪಾಪಕ. ೬೭). ೩. ತುಪಾಕಿದಳ; ತುಪಾಕಿ ಸೈನಿಕರ ತುಕಡಿ : ನಮ್ಮ ಬ್ಯಾಟರಿಯು ಸರದಿ ಬಂದಾಗ ರಣಭೂಮಿಗೆ ಹೋಗಲೇ ಬೇಕಲ್ಲ ? (ಪ್ರಾಸ. ೫೯). 'ಬತೇರಿ' ಹೋ. [← ಇಂ. Battery]

ಬ್ಯಾವ, ಬಿಯದ, ಬಿಯ್ಯದ, ಬೀಯದ (ನಾ). ಬೇಡ ; ಶಬರ : ಶೃಗಾಳ ಮಾತಪೆಂದೊಂ ಬ್ಯಾದರಾಜಂ ಧನಮಿತ್ರನುಂ ಸೆಟ್ಟಿಗೆ ತಂದು ಕೊಟ್ಟೊಡೆ (ಪಾಪುಂಕ್ತಿ. ೦೫೬). ಬಿಯದ : "ಬಿಯದರೆಂದುಂ. ಬಿಲ್ಲರೆಂದುಂ ವ್ಯಾಧರ್" (ಪಚಂ. ೩೨-೦೦೩) ; ಬೇಡಿದೊಡೀಯುದ್ಯದೆ ಬಿಯದರ್ ಮೃಗಮಾಂಸವ (ಪಾರಂಪು. ೦೬೩) ; ಮುನ್ನೋರ್ವ ಬಿಯದ ಪುಲ್ಲೆರು ಬಿಡಲು ಮುಖ ಗುನಿಸಿ ಮರಳಿ ತಾ ಬರಲಿಲ್ಲವೇ (ಶ್ರಾಕಣ. ೬-೧೩). ಬಿಯ್ಯದ : ಪಂಚಿತ್ತಗಮನು ಮಾಡಿದರು ವ್ಯಗಂಗಳ ಮೊಕ್ಕವನಲ್ಲಿ ಬಿಯ್ಯದರು (ಪಾಣಪಾಂ. ೫೭-೭೦). ಬೀಯದ : ಸಿಂಗಮಿಧಕಾಂಧಂಗೊಯ್ದುದಂ ಕಾಣುತ್ತಂ ಸಡುಕಂ ಕಮ್ಮಿಗೆ ಬೀಯದುಂ ಧರದ ನೋಡುತ್ತೊಂದು ಪಾಬ್ಬಿಯೊಳ್ ಕೆದಿದಾಗಳ್ (ಪಚಂ. ೪-೨೨೬) ; ಬೆದಱ್ ಪುರಿಯ ರಟ್ಟಿದರು ಬೀಯದರನರೆಬರು ಮಾರನನೇಱದರು (ಪಾಕ್ಷಣ. ೩-೬೨). ℙ ಬಿಯ್ಯದ, ಬೀಯದ—ಇವು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪಗಳಿರಬಹುದು. [< ಸಂ. ವ್ಯಾಧ]

ಬ್ಯಾದಿ, ಬಿಯದಿ, ಬೀಯದಿ (ನಾ). ರೋಗ ; ವ್ಯಾಧಿ : ಸೊಡರಂ ನೋಡಿದಾಗಳ್ ಕಣ್ಗೇರ್ಗಳ್ ಸುಂವುದುಮುಂ ಕಂಡೀಗಳೇತರಿಗೆ ಬ್ಯಾದಿಗಳೆಂದು ಬಗೆದಿರ್ಪನಂ (ಪಣ್ಣಾ. ೫೬-೦೭). ಬಿಯದಿ : ವ್ಯಾಧಿ—ಬಿಯದಿ (ಪಮಪ. ೨೫೪ ಕೃಪಾಠ) ; ವ್ಯಾಧಿ, ಬಿಯದಿ (ಪಣ್ಣಾಸಂ. ೦೬೦ ಕೃಪಾಠ) ; ಗೋವಾ ಪಾತ್ಕೈಯುಂ ಬಿನ್ನೆಪೊಡಸಗಮಳವೆ ! . . . ಶೃಂಗಂಗಳೆಡೆಯುಂ ತುಜ್ಜ, ಮನುಜಂಗೆ ಬಂವೆ ಬಿಯದಿ ತಪ್ಪುಗುಂ (ಪಣಪಾಕೃ. ೦೦೩-೦೩). [<ಸಂ. ವ್ಯಾಧಿ]

ಬ್ಯಾಪ್ತ (ಗು). ಆವರಿಸಿದ ; ತುಂಬಿದ ; ವ್ಯಾಪ್ತವಾದ : ಕೀರ್ತಿರ್ಬ್ಯಾಪ್ತ ದಿಶಂ ನವಗತಿನ್ಯಪಾಳನಿಂದುದಯಿಸಿದಂ (ಪಶ್ರ. XI. ಪಾಪಶ. ೪೨-೪೪ ; ೧೧೭೧). [< ಸಂ. ವ್ಯಾಪ್ತ]

ಬ್ಯಾಪ್ತಿ (ನಾ). ವಿಸ್ತಾರ; ಹರಹು : ಇಂದ್ರತ್ವಮಂ ಪಡ್ಕಿಗೆ ದಿವಸರಂಗಾ ದಿನವ್ಯಾಪ್ತಿಯ ಕೊಟ್ಟು (ಪಾತಾ. XX. ೦೦೩-೦ ; ೧೧೭೦). [< ಸಂ. ವ್ಯಾಪ್ತಿ]

ಬ್ಯಾಬ್ಯಾ (ನಾ). ಒಂದು ಅನುಕರಣ ಶಬ್ದ : ಒಮ್ಮೊಮ್ಮೆ ಕಳ್ಳ ಕೊದಾರಿ ಜೊಂಪ ಮುಂಪುಮುಂದ ತಪ್ಪಿಸಿಕೊಂಡು . . . 'ಬ್ಯಾ ಬ್ಯಾ' ಎನ್ನುತ್ತಾ ರೂಪ್ಪದ ಕೆಲ ಕತ್ತಲೆಯಲ್ಲಿ ಓಡಿ ಬರುವುದನ್ನು ಕೇಳಬಹುದು (ಪಪ್ಪಾಕು. ೦೬). **ಬ್ಯಾಮೋಹ** (ನಾ). ಅತಿಶಯವಾದ ಆಕರ್ಷಣೆ : ಕಾಮಬ್ಯಾಮೋಹ ವಿಸರ್ಮ್ಯಾಕ್ಷರು . . . ಮುಕ್ತಾ ಬ್ಜಿನಾರಾಧಕರ್ (ಪಶ್ರ. XI. ಪಾಪಶ. ೦೩೦-೪೦ ; ೧೧೦೧). [<ಸಂ. ವ್ಯಾಮೋಹ]

ಬ್ಯಾರ 'ಬೇರ್' ನೋ.

ಬ್ಯಾರಿ 'ಬೇರಿ' ನೋ.

ಬ್ಯಾಲ, ಬಿಯಳ (ನಾ). ೧. ಪಳಗದಿರುವ ಆನೆ ; ಕಾಡಾನೆ ; ಉಗ್ರವಾದ ಆನೆ : ಭುಳಲೋಚನ ವಾಹನೋಗ್ರಬ್ಯಾಳನಂ ತನ್ನ ಪ್ರಬಲ ಕುಂಡಾಲಪಥಮಂ ತನ್ನ (ಪಪಪ್ರ. ೪೯-೪೩). ಬಿಯಳ : ೧. ವ್ಯಾಳ—ಬಿಯಳ (ಪಪಪ. ೨೫೪ ಕೃಪಾಠ.). ೨. ಒಬ್ಬಾತನ ಹೆಸರು : ನಾಬ್ಯಾಗಮುಣ್ಣ ಬಿರ್ಯಾಸುಂ ಪಲಿಮ ಮುಗುಂಯ ಕೊಮಾರಯ್ಯನುಂ

(ಎಕೆ. VI. ೫೯ಮು. ೩-೦೩ ; ೨೦೦ ?) : ಜಕ್ಕಣಿಯ ಮಗಂ ಬಿಮಳ (ಶ್ರವ. ೦೯೭ಸಂ. ೫೩-೬; 1019). [<ಸಂ. ವ್ಯಾಲ]

ಬ್ಯಾಲೆ (ನಾ). ಮಾತುಗಳಿಲ್ಲದೆ, ಕೇವಲ ನರ್ತನದಿಂದಲೆ ಅಭಿನಯಿಸುವ ನಾಟಕ ; ನೃತ್ಯನಾಟಕ : ಶ್ರೀ ಉದಯಶಂಕರರು . . . 'ಬ್ಯಾಲೆ' ಪದ್ಧತಿಯನ್ನು ನಮ್ಮಲ್ಲಿ ಆಚರಣೆಗೆ ತರಲು ಮುನ್ನುಡಿ ಕೈಕೊಂಡರು (ಪ್ರಕಿ. ೫೩೨); ತಮ್ಮ ಗೆಲುವನ್ನು ಗಾಳಿಯಲ್ಲಿ ರೂಪಿಸುತ್ತ, ಬ್ಯಾಲೆ ಹುಡುಗಿಯರ ಹಾಗೆ ಹಗುರವಾಗಿ ತೇಲುತ್ತ . . . ನೆಲಕ್ಕೆ ಬಿದ್ದ ಎಲೆಗಳ ಮೇಲೆ ಎಮ್ವಿನ್ ಹೆಜ್ಜೆಯಿಟ್ಟ (ಮೂಸ್ಸಿ. ೫೬೭). [← ಇಂ. Ballet]

ಬ್ಯಾಮರ್ನೆಸು (ಕ್ರಿ). ಬಣ್ಣಿಸು ; ವರ್ಣಿಸು : ಸಮಸ್ತಸಾರಸೌಖಿಫಲಮನೆಲ [ಫು]ವಾಕ್ಯಂಗಳಿಂ ಬ್ಯಾವರ್ನಿಸಿ ದತ್ಪಚಿತ್ರೆಯಾಗಿ (ಕೌಶಿ. XX. ೨೦೬-೨೬: 1247). [<ವ್ಯಾವರ್ಣಿಸು]

ಬ್ಯೋಮ (ನಾ). ಆಕಾಶ ; ಗಗನ : ಸೋಮಸುತಾ ಗೌಜಾಬಲ ಬ್ಯೋಮಾಂತರ ಸೂರನನ್ನೆ ವರ್ತಿಸುತಿಪ್ಪರಿಂ (ಎಕೆ. XI. ಚಾಕಿ. ೦೩-೫೩: 1271). [< ಸಂ. ವ್ಯೋಮನ್]

ಬ್ರಜ (ನಾ). ಗುಂಪು ; ಸಮುದಾಯ ; ಸಮೂಹ : ಪರಸಾಮಸ್ತ ಕುರುಬ್ರಜೋಗ್ರ ನಿಧನಪ್ರೋದ್ಯೀಮನಂ . . . ಧರೆ ತೀರ್ತ್ರಿಪ್ಪುದೆ (ಎಕೆ. XI, ೫೬ಕು. ೫೭-೫೦; 1199). [< ಸಂ. ವ್ರಜ]

ಬ್ರಣ, ರಣ$_1$ (ನಾ). ಹುಣ್ಣು ; ವ್ರಣ : ನೋಸನೊಲ್ಲದೆ ಚಂದನಮಂ ಬ್ರಣದೊಳ್ಕಗ್ನತೆಯನುಳಿಗುಮೆ ಮುಱಿದೆಂದುಂ (ಅಜಿತ. ೫೬). ರಣ$_1$: "ರಣ-ವ್ರಣ = ಹುಣ್ಣು" (ಕಬ್ಬಕೋ. ೫೭). [< ಸಂ. ವ್ರಣ]

ಬ್ರತ, ಬತ್ಸ (ನಾ). ನೇಂಪು; ನಿಯಮ ; ವ್ರತ : ಧಾರಿಣಿಮಹಾದೇವಿ . . . ಗುರುಭಕ್ತಿಗೆಯ್ದು ಬಂದಿಸಿ ಶ್ರಾವಕಬ್ರತಂಗಳನೇಜಱಿಕೊಂಡು ಬಟ್ಟಿತಿಂತೆಂದರ್ (ಪಪ್ಪಣಾ. ೫೦-೦೫); ತನುಮಂ ತೆಯ್ದಪ್ಪಳಕ್ಕ ಬ್ರತದೂಳಿನುತೆ ಕನ್ಯಾಬ್ರತಕ್ಕಂತೆ ಪೂರ್ದೆರ್ದಂ (ಆದಿಪು. ೭೯); ಬಾರದು ಬಾರದು ವಿಷಯಿಗೆ ಪಶುಪತಿಯ ಬ್ರತವು (ಶಿಪ. ೭೭೦). ಬತ್ಸ : ಇಂತಿದೇ ಬತಮಿದೇ ಮತವಿಂತಿದೆ ಕಜ್ಜದುಜ್ಜುಗಂ (ಪ್ರಸಂ. ೫೭-೭೦). [< ಸಂ. ವ್ರತ]

ಬ್ರತಿ (ನಾ). ವ್ರತನಿಷ್ಠನಾದವನು ; ಮುನಿ ; ಯತಿ : ಇದು ವಿದ್ಯಾದಾನಂ ದೇವಾರಂಗೆಯ್ವ ಬ್ರತಿಗಳುಣ್ಬಿನ್ (ಎಕೆ. III. ಸಂಸಿ. ೦೫೫-೦; ಸು. ೪೧೦ ?); ಶ್ರೀಪುತ್ಪೂರೇಶ್ವರಬ್ರತಿ ಸೋಮೇಶ್ವರಚರಣಯುಗಳಸರಸಿಜ ಭೃಂಗಂ (ಎಕೆ. XXVIII, ೫-೬; 1068) ; ಬ್ರತಿಗಳರ್ಪ ಮನೆ ಮಕವೆಂಬುದು (ಪಶಾಮು. ೫೦-೦೫೬). [<ಸಂ. ವ್ರತಿನ್]

ಬ್ರಹ್ಮ (ನಾ). ೧. ಸೂರ್ಯ. ೨. ಮರದ ಬೇರು. ೩. ದಿನ; ದಿವಸ. ೪. ಎಕ್ಕದ ಗಿಡ. ೫. ಸೀಸ. ೬. ಕುಮರೆ. ೭. ಶಿವ. ೮. ಬ್ರಹ್ಮ. ೯. ಬಾಣದ ಮೊನೆ. ೧೦. ಒಂದು ರೋಗದ ಹೆಸರು. [ಸಂ.]

ಬ್ರಮಯತಿ 'ಬೊಮ್ಮಪತಿ' ನೋ.

ಬ್ರಯ 'ಬಿಯ' ನೋ.

ಬ್ರಶ್ಕು, ಬ್ರಷ್ಟು (ನಾ). (ಹಲ್ಲುಜ್ಜಲು, ಬಣ್ಣ ಬಳಿಯಲು, ದೂಳು ಹೊಡೆಯಲು, ಚಿತ್ರಬರೆಯಲು ಇತ್ಯಾದಿಯಾಗಿ ಅನೇಕ ರೀತಿಯಲ್ಲಿ ಉಪಯೋಗಿಸುವ) ಬಿರುಗೂದಲು, ಸಣ್ಣ ತಂತಿ ಮುಂತಾದುವುಗಳಿಂದ ಮಾಡಿದ ಕುಂಚ : ಹುಲ್ಲುಜ್ಜುವ ಬ್ರಶ್ಕು ಮತ್ತು ಸಾಬೂನಿನ ಪಟ್ಟಿಗೆ ಕೈಸೇರಿತು (ಬಣಾಂ. ೦೦೦). ಬ್ರಷ್ಟು : ಬ್ರಷ್ಟಿಗೆ ಪೇಸ್ಟ್ ಅಂಟಿಸುತ್ತಿದ್ದಂತೆ . . . ಹೊತ್ತಲ್ಲದ ಹೊತ್ತಿನಲ್ಲಿ ಯಾವ ಮಸಕು ಮಸಕು ಏನು ಅಸ್ಪಷ್ಟನಾಗಿ ಆಡಿತು ಎಂದು ಪುಡುಕತೊಡಗಿದ (ಪ್ರಕೃ. ೨). [←ಇಂ. Brush]

ಬ್ರಷ್ಟು 'ಬ್ರಶ್ಕು' ನೋ.

ಬ್ರಹ್ಮ (ನಾ). ೧. ಸಕಲಸೃಷ್ಟಿಗೂ ಮೂಲಕಾರಣವಾದ, ಗುಣಾತೀತವಾದ ಪರಾತ್ಪರ ತತ್ತ್ವ ; ಪರಮಾತ್ಮ : ಬ್ರಹ್ಮವೆನಲದ ಜಂದಧಿಕವೇನಿಲ್ಲವದು ತನ್ನಿಂದ ತಾನೆ ತೋಜುತಿರ್ಪುದು (ಆಮ್ಮ. ೦-೦೪); ಚೈತನ್ಯಸ್ವರೂಪವಾದ ಬ್ರಹ್ಮನೆಂಬ ವಸ್ತು ಪರಬ್ರಹ್ಮ, ಅಪರಬ್ರಹ್ಮನೆಂದು ಎರಡು ವಿಧ (ಓಂಣಾ. ೨೦೦); ಸತ್ಯವೆಂದರೂ ಜ್ಞಾನವೆಂದರೂ ಅನಂತ ವೆಂದರೂ ಬ್ರಹ್ಮವೆಂದರೂ ಒಂದೆ (ಆಕಕ. ೦೦೬). ೨. ವೇದಮಂತ್ರ. ೩. ವೇದಗಳು. ೪. ಆಗಮಂಗ್ರಂಥ ಸಮೂಹ. ೫. ಓಂಕಾರ; ಪ್ರಣವ. ೬. ಚತುರ್ವರ್ಣಗಳಲ್ಲಿ ಮೊದಲನೆಯದು ; ಬ್ರಾಹ್ಮಣ ವರ್ಣ. ೭. ವ್ರತಯೋಗ ; ತಪಸ್ಸು. ೮. ಬ್ರಹ್ಮಚರ್ಯ. ೯. ಮೋಕ್ಷ ; ಮೌಕ್ತಿ : "ಕೈವಲ್ಯವಪ್ಪನರ್ಘವಂ ಬ್ರಹ್ಮವಕ್ಷರಂ . . . ಎನೆ ಮೋಕ್ಷಕ್ಕೆ ಪೆಸರೆನಿಸ್ಕುಂ" (ಶುಂಗೂಂ. ೯-೩೬). ೧೦. ವೇದವೇದಾಂತ ಜ್ಞಾನ ; ತತ್ತ್ವಜ್ಞಾನ. ೧೧. ಬ್ರಹ್ಮನನ್ನು ಆರಿತವನು ; ಬ್ರಾಹ್ಮಣ : ಬ್ರಹ್ಮನಿದಮಾದಪನೇ ಬ್ರಹ್ಮನನ್ನು ಬಲ್ಲವನೇ ಬ್ರಹ್ಮನಾಗುತ್ತಾನೆ (ಜಾಡಿ. ೦೦೦). ೧೨. ಆತ್ಮ. ೧೩. ಗಾಯತ್ರೀಮಂತ್ರ. ೧೪. ಸೋಮಯಾಗದ ಹೋತೃ, ಉದ್ಗಾತೃ, ಬ್ರಾಹ್ಮ ಮತ್ತು ಬ್ರಹ್ಮ ಎಂಬ ನಾಲ್ವರು ಋತ್ವಿಜರಲ್ಲಿ ಒಬ್ಬ : ಅಗಸ್ತ್ಯಂ ಬ್ರಹ್ಮನಿರ್ದಂ . . . ಋಷಿಗಳ್ ಅಧ್ವರ್ಯುಾದ್ಗಾತೃ ಹೋತಾರರುಂ ಋತ್ವಿಜರುಂ ಸಾಮಾಜಿಕರುಮಾಗೆಸೆದರ್ (ರಾಪಾಪ್ರ. ೫೬-೨೬) ; ಯಾಗದಲ್ಲಿ ವಾಲ್ಮಿ ಋತ್ವಿಕ್ಕುಗಳು ಮುಖ್ಯವಾಗಿರಬೇಕು. ಹೋತನೆಂಬವನು ಋಗ್ವೇದವನ್ನು ಪೇಳುತ್ತಾನೆ . . . ಬ್ರಹ್ಮನೆಂಬವನು ಅಥರ್ವಣವೇದವನ್ನು ತಿಳಿದವನು, ಸರ್ವಜ್ಞನಾಗಿ . . . ತಪ್ಪಿದುದನ್ನು ತಿದ್ದುತ್ತ ಯಾಗವನ್ನು ಮುಖ್ಯವಾಗಿ ಪೂರ್ತಿಮಾಡಿಸುವವನು (ಓಂಣಾ. ೦೭೭). ೧೫. ತ್ರಿಮೂರ್ತಿಗಳಲ್ಲಿ ಒಬ್ಬ : ಸೃಷ್ಟಿಕರ್ತ ; ಪಿತಾಮಹ : "ಬ್ರಹ್ಮಾ, ಸೃಷ್ಟಾ, ಧಾತಾ . . . ಕವಯೋಪಸಃ — ಈ ೨೦ ಬ್ರಹ್ಮನ ಪೆಸರ್" (ಶಿಪುಮು. ೫-೬) ; ವಿಷ್ಣುಗೆಜಗಿ ಪುಡಿದಂ ಬ್ರಹ್ಮಂ (ಪಗಂ. ೦-೫೪). ೧೬. ಬ್ರಹ್ಮಲೋಕ : ಆತ್ಮದ ಬಯಕೆವಳ್ಳಿ ದಾಂಗುಡಿ ದಾಂಟಿ ಕಾಲದೇಶಾದುವ ನೊಡೆದು ಮಿಂಟಿ ಬ್ರಹ್ಮಮಂ ಪಟ್ಟುವುದು (ಪಪ್ರೌಂಗ. ೬೫-೦೭೬೬). ೧೭. ಬ್ರಹ್ಮಾಸ್ತ್ರ. ೧೮. ಐಶ್ವರ್ಯ ; ಸಂಪತ್ತು. ೧೯. ಆಹಾರ. ೨೦. ದಿಟ ; ಸತ್ಯ. ೨೧. ಬ್ರಾಹ್ಮಣತ್ವ. ೨೨. ಬೃಹಸ್ಪತಿ. ೨೩. ಸೂರ್ಯ. ೨೪. ಏಳುಜನ ಪ್ರಜಾಪತಿಗಳು. ೨೫. ರುದ್ರ. ೨೬. ಇಂದ್ರ. ೨೭. ಚಂದ್ರ. ೨೮. ಅಗ್ನಿ. ೨೯. ವಿಷ್ಕಂಭ ಮೊದಲಾದ ಇಪ್ಪತ್ತೇಳು ಯೋಗಗಳಲ್ಲಿ ಒಂದು. ೩೦. ಬುದ್ಧೀಜೀವಿ. ೩೧.ಒಂದು ಭೂತ : ಕ್ಷುದ್ರದೇವತೆ : ಅಂದಿನ ಮಲೆನಾಡಿನಲ್ಲಿ ಭೂತ, ಪ್ರೇತ, ಪಿಶಾಚಿ . . . ಜಟಿಗ, ಬ್ರಹ್ಮ, ಕಲ್ಲುಕುಟಿಗ ಮುಂತಾದ ಹಲವು ಪಸರಿನ ಹಲವು ಜಾತಿಯ ದೆವ್ವಗಳ್ದವು (ಕಂಶಪಂ. ೨). ೩೨. [ಛಂದ] ಅಂಶಗಣಗಳಲ್ಲಿ ಒಂದು ; ಎರಡು ಅಂಶಗಳ ಗಣ : 'ಬ್ರಹ್ಮಗಣ' ಪರಾ. ೩೩. [ಜ್ಯೋಷ]ಇಪ್ಪತ್ತೇಳು ಯೋಗಗಳಲ್ಲಿ ಒಂದು : ವಿಷ್ಕಂಭ . . . ಬ್ರಹ್ಮ . . . ವೈಧೃತಿಗಳೆಂಬ ಇಪ್ಪತ್ತೇಳುಯೋಗಂಗಳುಂ (ಜಯೇ. ೫೬೨).

ಬ್ರಹ್ಮತೌಚ=(ಆಲಂ) ಅತಿವಿಳಂಬವಾಗುವ ಶೌಚಕ್ರಿಯೆ : ಅವನ ಬ್ರಹ್ಮತೌಚ ಮುಗಿಯುವವರೆಗೆ ಸನಗೆ ಅವನನ್ನು ಕಾಯುವ ತಾಳ್ಮೆಯಿಲ್ಲ (ಕೂಪ). [ಸಂ. ಬ್ರಹ್ಮನ್]

ಬ್ರಹ್ಮಕಂಬಿ "ಬ್ರಹ್ಮಗಂಬಿ' ನೋ.

ಬ್ರಹ್ಮಕರ್ಮ (ನಾ). ೧. ಯಾಗದಲ್ಲಿ ಋತ್ವಿಜನಾದ 'ಬ್ರಹ್ಮ'ನು ಮಾಡುವ ಕಾರ್ಯ : ಬುನ್ನತವಂ ಬ್ರಹ್ಮಕರ್ಮಂ ಬೆಳೆವ ಪುಣ್ಯ

ಪೊಳಗಾದದಂ ತೊಜೆವು ಕಳೆವು . . . ತೆಂಕಮುಖಿನಾಗಿ ಹೋಪೆಂ (ಪಕಣಾ. ೨-೨೨). ೨. ಬ್ರಾಹ್ಮಣನು ಮಾಡುವ ಧಾರ್ಮಿಕ ಕ್ರಿಯಾಚರಣೆ. [ಸಂ. ಬ್ರಹ್ಮಕರ್ಮನ್]

ಬ್ರಹ್ಮಕಲ್ಪ, ಬ್ರಹ್ಮಕಲ್ಪ (ನಾ). ೧. ಬ್ರಹ್ಮನ ಪರಮಾಯುಷ್ಯ.—ಅಯುಃಕಾಲ. ೨. [ದ್ವೈತ] ಸೃಷ್ಟಿಕಾಲದ ಒಂದು ಭಾಗ : ಸೃಷ್ಟಿಕಾಲದಲ್ಲಿ ಮಹಾಕಲ್ಪ ಮತ್ತು ಬ್ರಹ್ಮಕಲ್ಪವೆಂದು ಎರಡು ವಿಧ . . . ಪ್ರತಿಬ್ರಹ್ಮಕಲ್ಪದಲ್ಲೂ ಸೀಲ ಬದ್ಧಜೀವರುಗಳಿಗೂ ಸೃಷ್ಟಿಯುಂಟು (ಹಿಂದಾ. ೨೫೮). ೩. [ಜೈನ] ಪದಿನಾರು ಕಲ್ಪಗಳಲ್ಲಿ ಒಂದು ; "ಬ್ರಹ್ಮ ಎಂಬ ಹೆಸರಿನ ಸ್ವರ್ಗ" (ಕೃಕೋ. ೦೪೭) : ದೀಕ್ಷೆಗೊಂಡು ಗ್ರೈಗ್ರತಪಂಗೆಯ್ದು ಬ್ರಹ್ಮಕಲ್ಪಕ್ಕೆ ಪೋಗಿ ಬಂದೀಗಳ್ ರಾವಮದೇವ ನಾದಂ (ಪಂಚಪು. ೦೩-೩೭ ಪ). **ಬ್ರಹ್ಮಕಲ್ಪ** : ೨. ಬ್ರಹ್ಮಕಲ್ಪ ನಿಳಯರಾದಿತ್ಯಾದಿಗಳವ್ವ ಲೋಕಾಂತಿಕರ್ . . . ಬಂದು (ಜಾಬಾಪ್ರ. ೯-೧೦೬ ಪ). [ಸಂ.]

ಬ್ರಹ್ಮಕವಿ (ನಾ). "ಬ್ರಾಹ್ಮಣ ಕವಿ : ಸಕಳಕಳಾಬ್ರಹ್ಮಂ ಶಬ್ದಕತಿಳಕಂ ಬ್ರಹ್ಮಕವಿಜೊಡಾಮಣಿ . . . [ಸಂ]ಧಿವಿಗ್ರಹಿ ಪದ್ಮರಸಂ ಸಿವಪಾದರೇಖಿರಂ (ಪೌಪು. XI-i, ೫೦-೨ ; 1005). [ಸಂ.]

ಬ್ರಹ್ಮಕಲ್ಪ 'ಬ್ರಹ್ಮಕಲ್ಪ' ನೋ.

ಬ್ರಹ್ಮಕಾಂತ (ನಾ). [ವಾಸ್ತು] ಕಂಬದ ಪ್ರಭೇದಗಳಲ್ಲಿ ಒಂದು : ಶಿಲ್ಪಶಾಸ್ತ್ರದಲ್ಲಿ ಬ್ರಹ್ಮಕಾಂತ, ವಿಷ್ಣುಕಾಂತ, ರುದ್ರಕಾಂತ ಇತ್ಯಾದಿ ಸ್ತಂಭಪ್ರಭೇದಗಳು ಉಕ್ತವಾಗಿವೆ (ಹೊಮ್ಮಣ. ೨೬). [ಸಂ.]

ಬ್ರಹ್ಮಗಂಟು (ನಾ). ೧. ಯಜ್ಞೋಪವೀತವನ್ನು ಧರಿಸುವಾಗ ಅದಕ್ಕೆ ಹಾಕುವ ವಿಧ್ಯುಕ್ತವಾದ ಗಂಟು.—ಪವಿತ್ರದ ಗಂಟು ; ಪೇದೋಕ್ತದಿಂ ಬ್ರಹ್ಮಗಂಟಿಕ್ಕಿ ಪರಸುತಲಿ (ಪಪಪೋ. ೪೪-೨೦) : ನಾನು ಜನಿವಾರದ ಬ್ರಹ್ಮಗಂಟನ್ನು ಚೆನ್ನಾಗಿ ಬಲಗೈಮುಲ್ಲಿ ಹಿಡದುಕೊಂಡು ಗಾಯತ್ರೀಮಂತ್ರವನ್ನು ಜಪಿಸುತ್ತ ಓಡಿ ಬಂದ (ಪಪಪೋ. ೨೬). ೨. (ಆಲಂ) ಶಾಶ್ವತವಾದ ಸಂಬಂಧ : ಪುದಿವಿ ಅಂದ ಮ್ಯಾಲೆ ಬ್ರಹ್ಮಗಂಟದು (ಪ್ರಕಿ. ೦೭೩). ೩. ಬಿಡಿಸಲಾಗದ ಸಮಸ್ಯೆ : ಆ ಸಂಸಾರದ ಸಮಸ್ಯೆ ಒಂದು ಬ್ರಹ್ಮಗಂಟು (ಕೂಪ). [ಬ್ರಹ್ಮ + ಗಂಟು]

ಬ್ರಹ್ಮಗಂಬಿ, ಬ್ರಹ್ಮಕಂಬಿ (ನಾ). ೧. ಧೋತ್ರದ ಕೊನೆಯಲ್ಲಿ ಇರುವ ಜುಂಗುಗಳನ್ನು ಕೂಡಿಸಿ ಸಣ್ಣ ಸಣ್ಣ ಗಂಟುಗಳಾಗಿ ಮಾಡಿ ಬಟ್ಟೆ ಪರಿಯದಂತೆ ಕಟ್ಟುವ ಕಂಬ್ಲಿ. ೨. (ಆಲಂ) ಬ್ರಾಹ್ಮಣನಿಗೆ ಅನೂಚಾನವಾಗಿ ಬಂದಿದ್ದ ಬಿಡತನವನ್ನು ಸೂಚಿಸುವ ಒಂದು ಪದ : ℙ ಇದು ಅವನ ಪರುಕಲ್ಲುಬಿಟ್ಟಿ ಹೊಲಿದಿರುವುದನ್ನು ಸೂಚಿಸುತ್ತದೆ : ಈ ಬ್ರಹ್ಮಗಂಬಿಯನ್ನು ಹೊದೆದು ದೊಡ್ಡವರ ಹತ್ತಿರ ಹೋಗಬೇಕೆಂದರೆ ನಾಚಿಕೆಯಾಗುತ್ತದೆ (ಕೂಪ). **ಬ್ರಹ್ಮಕಂಬಿ** : ೨. ಹೊದಿಯುವುದಕ್ಕೆ ಬ್ರಹ್ಮಕಂಬಿಯ ಪತಕುಬಿಟ್ಟಿ ಹೊರತು ಬೇರೆಯಿಲ್ಲ (ಅಮಪೆ. ೩೬). [ಬ್ರಹ್ಮ + ಕಂಬಿ]

ಬ್ರಹ್ಮಗಣ (ನಾ). [ಛಂದ]ಎರಡು ಅಂಶಗಳಿಂದಾದ ಗಣ : ಅಮಜೊಳಗೆ ಬ್ರಹ್ಮಗಣಮೆಂತೆಂದೊಡೆ ಬ್ರಹ್ಮಂ ದುರ್ಜಿಣಂ ಧಾತ್ರ ಸುರವ (ಕಂದೋಂಪ್ರ. ೨-೨೪೦ ಪ) : ಬ್ರಹ್ಮಗಣ ೪ ಬಗೆ, ವಿಷ್ಣುಗಣ ೮ ; ರುದ್ರಗಣ ೧೬ (ಕೃಪ್ರ. ೦೦೯); ಬ್ರಹ್ಮಗಣ ೩ ರಿಂದ ೪ ರವರೆಗೆ ಮಾತ್ರೆಗಳನ್ನು ಪಿಗೆ ಗೊಳ್ಳುತ್ತದೆ (ಕಂದೋಪ್ರ. ೨೩). [ಸಂ.]

ಬ್ರಹ್ಮಗ್ರಂಥಿ (ನಾ). = ಬ್ರಹ್ಮಗಂಟು ೧. [ಕಂ.]

ಬ್ರಹ್ಮಚಕ್ರ (ನಾ). ೧. ಬ್ರಹ್ಮಾಂಡ. ೨. ಮಂತ್ರವಾದಿಗಳು ಹಾಕುವ ಒಂದು ರೇಖಾವಿನ್ಯಾಸ.—ಮಂಡಲ. ೩. [ಯೋಗ] ಸ್ಥೂಲಶರೀರದ ಮಧ್ಯದ ಸ್ಥಾನ : ಸ್ಥೂಲದ ತನುವಿದು . . . ಅನುವಿಂದಿಹುದದರ ಮಧ್ಯದಪನೆ ತ್ರಿಕೋಣಾಕಾರದಿಂದಲ್ಲಿರುವುದದುವೆ ಬ್ರಹ್ಮಚಕ್ರವು ಬೋಗಿ ಕನುಮಧ್ಯ (ಗಗಣ. ೯-೩). [ಸಂ.]

ಬ್ರಹ್ಮಚರ್ಯ (ನಾ). ೧. ಇಂದ್ರಿಯನಿಗ್ರಹ : ತಪಂ ಭುವಂಕಿಂಚನ್ಯಂ ನಯುಂ ಬ್ರಹ್ಮಚರ್ಯಮೆ ಮನೋನ್ನತಿ ವರ್ಧಮಾನಮುನಿಗಲ್ಕಂ ಪೆಜರ್ಗಕ್ಕುಮೇ (ಪಾಚಾಪು. ೦-೨೩) ; ಹೃದಯ ವಾಕ್ಕು ನೇತ್ರ ರೇತಸ್ಸು ಅಂಗಗಳು ಪರಮ್ಮೆಷಿಪುದೊಯಂ ಸ್ವಸ್ತ್ರೀ ವಿಷಯದೊಳಶಾಸ್ತ್ರೀಯ ವಾಗಿಯುಂ ಚರಿಸದಂತೆ ನಿಗ್ರಹಿಸುವುದೇ ಬ್ರಹ್ಮಚರ್ಯವೆನಿಸುವುದು (ಪಪೀಕ. ೦೪೭) : ಬದುಕಿಂದ ಹೊಲಗೆ ನೀ ಬ್ರಹ್ಮಚರ್ಯದ ಧರ್ಮ ಖುದ್ದಿಸದ ಪುನ್ನ (ಶ್ರಣಾ. ೬-೦೪). ೨. ಚತುರಾಶ್ರಮಗಳಲ್ಲಿ ಮೊದಲನೆ ಯದು : ಇಪ್ಪತ್ತೈದನೆಯ ವಯಸ್ಸಿನವರೆಗೆ ಇರುವ ವೇದಾಧ್ಯಯನ ಮಾಡುವ ಕಟ್ಟುನಿಟ್ಟಾದ ಇಂದ್ರಿಯನಿಗ್ರಹದ ಕಾಲ : ಮೊದಲಲ ಮಳಬ್ರಹ್ಮಚರ್ಯವ್ವ ವಂದುವೆಯಾದುದು ಬಳಿಕ ಪೆವಾಸವಲಿ ವಾನಪ್ರಸ್ಥ ವೆಂಬಾಶ್ರಮಮಪೆವಳವಯಿ ತುದಿಗೆ ತಾ ಸಂನ್ಯಾಸವನು ಮಾಡಿದನು (ಶಾಕ್ಕಾ. ೨-೩೯). ೩. ಬ್ರಹ್ಮಚಾರಿಯಾದ ಶಿಷ್ಯ. [ಸಂ.]

ಬ್ರಹ್ಮಚರ್ಯ (ನಾ). ೧. = ಬ್ರಹ್ಮಚರ್ಯ ೧. ೨. = ಬ್ರಹ್ಮಚರ್ಯ ೨. ೩. [ಜೈನ] ಆಯ್ವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; ಜೈನಸಂಪ್ರದಾಯದಂತೆ ಮಾಡುವ ಬ್ರಹ್ಮಚರ್ಯಾನುಷ್ಠಾನ : ಬ್ರಹ್ಮ[ಚರ್ಯ]ವ್ರತ ವ್ರತಾವತರಣಮುಂ . . . . ಅಪ್ಪತ್ತುಮೂಱುಮಾಗರ್ಭಾನ್ವಯಕ್ರಿಯೆಯೊಳ್ (ಜಾಪುಂಪ್ರ. ೨೦೨) : ಏಳನೆಯ ನೆಲೆಯ ಶಾಮನು ವಿವಾಹಿತಸ್ತ್ರೀಯಲ್ಲಿಯೂ ಕಾಮವಾಸನೆ ಯುಮ್ಮ ತ್ಯಜಿಸಿ ಪೂರ್ಣಬ್ರಹ್ಮಚರ್ಯೆಯನ್ನು ಪಾಲಿಸುತ್ತಾನೆ (ಜಾಪ್ರ. ೦೬೪). [ಸಂ. ಬ್ರಹ್ಮಚರ್ಯ]

ಬ್ರಹ್ಮಚಾರಿ (ನಾ). ೧. ಬ್ರಹ್ಮಚರ್ಯವನ್ನು ಪಾಲಿಸುವವನು: ಸ್ತ್ರೀನಿಕರ ಸರ್ವಾಂಗರಾಗಿಯುಂ ಬ್ರಹ್ಮಚಾರಿಗಳು (ಪಕಣಾ. ೬-೩೨); ಮನಃಪವನಕ್ರಾಯ ಪೂರ್ವಕವಾಗಿ ಸ್ತ್ರೀಸಂಗವನ್ನು ತ್ಯಾಗಮಾಡಿದವನೇ ಬ್ರಹ್ಮಚಾರಿ (ಜಾಪ್ರ. ೦೬೪). ೨. ಬ್ರಹ್ಮಚರ್ಯಾಶ್ರಮದಲ್ಲಿರುವವನು : ಚತುರಾ ಶ್ರಮಶುದ್ಧಿಯೆಂಬುದಾರ್ಹತದೊಳು . . . ಬ್ರಹ್ಮಚಾರಿಯುಂ ಗೃಹಸ್ಥನುಂ ವಾನಪ್ರಸ್ಥಯಂ ಭಿಕ್ಷುಕರುಮೆಂದು ನಾಲ್ವರಪ್ಪರ್ (ಜಾಪುಂಪ್ರ. ೨೩೬). ೩. ಮದುವೆಯಾಗದವನು ; ಅವಿವಾಹಿತ ಪುರುಷ : ಇಬ್ಬರೂ ಧೀರರು ಸುಂದರರು : ಇಬ್ಬರೂ ಬ್ರಹ್ಮಚಾರಿಗಳು (ಹುರಣಾ. ೦೧೪). ೪. ಶಿವ ; ಈಶ್ವರ. ೫. ಸ್ಕಂದ ; ಷಣ್ಮುಖ. [ಸಂ. ಬ್ರಹ್ಮಚಾರಿನ್]

ಬ್ರಹ್ಮಚಾರಿಣಿ (ನಾ). ೧. ಬ್ರಹ್ಮಚರ್ಯವನ್ನು ಪಾಲಿಸುವವಳು : ನಲ್ಲನಿಗಾಗಿ ಆಕೆ ಆಜನ್ಮಬ್ರಹ್ಮಚಾರಿಣಿಯಾಗಿಯೇ ಉಳಿದಳು (ಕಾಬಣಾ. ೦೦೬). ೨. ದುರ್ಗಾದೇವತೆ. [ಸಂ. ಬ್ರಹ್ಮಚಾರಿಣಿ]

ಬ್ರಹ್ಮಜಾತಿ (ನಾ). (ರತ್ನಗಳಿಗೆ ಸಂಬಂಧಿಸಿದಂತೆ) ಅತ್ಯುತ್ತಮ ವರ್ಗ; ℙ ರತ್ನಶಾಸ್ತ್ರದಲ್ಲಿ ವಜ್ರದ ಬೆಲೆಕಟ್ಟುವಾಗ ಈ ಜಾತಿಗಳನ್ನು ಪರಿಶೀಲಿಸುತ್ತಾರೆ : ಅರುಂಧತಿಯು . . . ಬ್ರಹ್ಮಜಾತಿಯು ವಜ್ರದ ಓಲೆಗಳ್ನಿಟ್ಟು . . . ಮೆರೆಯುತ್ತಿದ್ದಾಳೆ (ಹುಜಾಪ್ರ. ೮೨). [ಸಂ.]

ಬ್ರಹ್ಮಜಿಜ್ಞಾಸೆ (ನಾ). ಬ್ರಹ್ಮವನ್ನು ತಿಳಿಯುವ ಬಯಕೆ ; ಬ್ರಹ್ಮಜ್ಞಾನದ ಕುತೂಹಲ : ಬ್ರಹ್ಮಜಿಜ್ಞಾಸೆಗೂ ಮೊದಲೇ ಯಾವುದು ಆಗಬೇಕೆಂದು ಅವಶ್ಯವಾಗಿ ಬೇಕಾಗುವುದೋ ಅದನ್ನು ಹೇಳಬೇಕಾಯಿತು (ಬ್ರಸೂಶಾ. ೦೦) ; ಬ್ರಹ್ಮಜಿಜ್ಞಾಸೆಯಲ್ಲಿ ಆಸಕ್ತರಾಗಿರು ವವರಿಗೆ ಅಶ್ವತ್ಥವೃ ಸತ್ಯವನ್ನು ಅರಿಯುವ ಸಂಕೇತವೂ ಸಾಧನವೂ ಆಗಿರುವಂತೆಯೇ ಜನಾಮಾವಸ್ಯಕ್ಕೆ ಜನ್ಮಸಾರ್ಥಕ್ಯದ ಕಾರುಹಾಗಿದೆ (ಕನುತೂ. ೫೬೮). [ಸಂ. ಬ್ರಹ್ಮಜಿಜ್ಞಾಸಾ]

ಬ್ರಹ್ಮಜ್ಞ (ನಾ). ೧. ಬ್ರಹ್ಮತತ್ತ್ವವನ್ನು ತಿಳಿದವನು; ಪರಬ್ರಹ್ಮವನ್ನು ಅರಿತವನು: ಸರ್ವಸಮರ್ ವಿನೋದಿವರವರ್ ಬ್ರಹ್ಮಜ್ಞರೆಲ್ಲಲ್ಲಿಯುಂ (ಶ್ರೀಸಂ. ೩-೦೮೬); ಬ್ರಹ್ಮಜ್ಞನಾದ ಆತನಿಗೆ ವ್ಯಥೆಯೆಲ್ಲಿಂದ ಬರಬೇಕು? (ಭುಜಾಬ. ೦೦೯). ೨. ಕಾರ್ತಿಕೇಯ; ಸ್ಕಂದ. ೩. ವಿಷ್ಣು. [ಸಂ.]

ಬ್ರಹ್ಮಜ್ಞಾನ (ನಾ). ಬ್ರಹ್ಮತತ್ತ್ವದ ಜ್ಞಾನ; ಪರಬ್ರಹ್ಮದ ಅರಿವು: ಎಲೆ ಮನವೇ ನಿನ್ನ ನಿಜವಱಿಯಬಲ್ಲಡೆ ಅದೇ ಬ್ರಹ್ಮಜ್ಞಾನ ಅದೇ ಕೇವಲ ಮುಕ್ತಿ (ಸರ್ವಜ್ಞ. ೩೩೬-೦೦೮); ಬ್ರಹ್ಮನಾದವನಿಗೇ ಬ್ರಹ್ಮಜ್ಞಾನ, ಬ್ರಾಹ್ಮೀಪ್ರಜ್ಞೆ ಅಳವಡುತ್ತದೆ (ಪಾಡಿ. ೦೦೦). [ಸಂ.]

ಬ್ರಹ್ಮಜ್ಞಾನಿ (ನಾ). ಬ್ರಹ್ಮಜ್ಞಾನವನ್ನು ಪಡೆದವನು; ಬ್ರಹ್ಮ ಸ್ವರೂಪವನ್ನು ತಿಳಿದವನು: ಈ ನಿಮಿತ್ತಾದಿಗಳು ಬ್ರಹ್ಮಜ್ಞಾನಿಗಳ ನಳಲಿಸದು (ಗಗಾಚಾ. ೦೩-೩೨). [ಸಂ. ಬ್ರಹ್ಮಜ್ಞಾನಿನ್]

ಬ್ರಹ್ಮಜ್ಯೋತಿ (ನಾ). ೧. ಬ್ರಹ್ಮನ ಪ್ರಕಾಶ—ತೇಜಸ್ಸು: ಸರ್ವವ್ಯಾಪ್ತವಾದಂಥಾ ಯಾವ ಬ್ರಹ್ಮಜ್ಯೋತಿವುಂಟೋ, ತತ್—ಆ ಬ್ರಹ್ಮಜ್ಯೋತಿಯು, ಪ್ರತಿಷ್ಠಿತಂ—ಪ್ರಕಾಶಿಸುತ್ತದೆ (ಶಾಕ್ತ. ೩೬-೦೦). ೨. ಶಿವ; ಈಶ್ವರ. [ಸಂ. ಬ್ರಹ್ಮಜ್ಯೋತಿಸ್]

ಬ್ರಹ್ಮಣಸ್ಪತಿ (ನಾ). ೧. ವಿಷ್ಣು; ನಾರಾಯಣ: ವಾಕ್ಪತಿಯು ಕೃಪೆ ಮಾಡಲಿ. ಬ್ರಹ್ಮಣಸ್ಪತಿಯು ದಯೆ ಮಾಡಲಿ (ಭುಜಾಬ. ೦೦೨). ೨. ಬೃಹಸ್ಪತಿ. [ಸಂ.]

ಬ್ರಹ್ಮಣ್ಯ (ಗು). ೧. ಬ್ರಹ್ಮತತ್ತ್ವಕ್ಕೆ ಸಂಬಂಧಿಸಿದ. ೨. ಸೃಷ್ಟಿಕರ್ತನಾದ ಬ್ರಹ್ಮನಿಗೆ ಸಂಬಂಧಿಸಿದ. ೩. ಬ್ರಾಹ್ಮಣನಿಗೆ ಯೋಗ್ಯವಾದ. (ನಾ). ೪. ವೇದಗಳನ್ನು ಚೆನ್ನಾಗಿ ಅಧ್ಯಯನ ಮಾಡಿದವನು. ೫. ಬ್ರಾಹ್ಮಣಪ್ರಿಯನಾದವನು: ವಿನಯಪ್ರನಿಧಿಯಂ ವಿವೇಕನಿಧಿಯುಂ ಬ್ರಹ್ಮಣ್ಯನಂ ಪೂರ್ಣಸ್ಫುಟಸನುದ್ದಾಮಪುಣ್ಯಕೋತ್ಪತ್ತಿಯುಂ . . . ಮನುಜೇಶರ್ ಮಲೆರಾಜರಾಜನನದೇಂ ಬಲ್ಲಾಳನು ಪೊಲ್ಲರೇ (ಪ್ರಭು. ೪. ೪೮೫. ೦-೦೩; ೨೨೦೨). ೬. ವಿಷ್ಣು. ೭. ಕಾರ್ತಿಕೇಯ. ೮. ಹೂವರಿಸೆ ಮರ: "ತೂದಃ, ಪೂಗಃ, ಕ್ರಮುಕಃ, ಬ್ರಹ್ಮಣ್ಯಃ, ಬ್ರಹ್ಮದಾರು, ತೂಲಂ – ೬ ಹುವ್ವರಿಸೆ ಗಿಡ . . . ಕಾಡಡಿಕೇಮರವೆಂದು ಕೆಲವರನ್ನುವರು" (ಶಿಶಾಂಶಿ. ೬೫೦). ೯. ಒಂದು ಬಗೆಯ ಹುಲ್ಲು; ಮುಂಜಹುಲ್ಲು. ೧೦. ತಾಡವೃಕ್ಷ. ೧೧. ಪತ್ನಿಗಿಡ. ೧೨. ಒಪ್ಪನೇರಳೆ ಗಿಡ. ೧೩. ಶನಿಗ್ರಹ. ೧೪. ಬ್ರಾಹ್ಮಣರಿಗೆ ಹಿತಕಾರಿಯಾದುದು: "ಬ್ರಹ್ಮಣ್ಯಂ, ಬ್ರಾಹ್ಮಣೇಹಿತಂ – ಈ ೨ ಬ್ರಾಹ್ಮಣರ್ಗೆ ಒಳ್ಳಿಕೆಯುಂದು" (ಹಲಾಯು. ೩೭-೨೩೨). 'ಬ್ರಹ್ಮದಾರು' ಪರಾ. [ಸಂ.]

ಬ್ರಹ್ಮತತ್ತ್ವ (ನಾ). ಪರಬ್ರಹ್ಮಜ್ಞಾನ; ಮೋಕ್ಷತತ್ತ್ವ: ಬ್ರಹ್ಮಸಭೆ ನೆಜೆದಲ್ಲಿ ಬ್ರಹ್ಮವಿತ್ತುಗಳು ಬ್ರಹ್ಮತತ್ತ್ವಪಡದು ತಮ್ಮ ಪಜೆನಬ್ರಹ್ಮರನ್ನು ಕೊಂಡು ನೆಮ್ಮುವರು ವಿಷ್ಣುವನು (ಭಾಷ. ೩೬೩). [ಸಂ.]

ಬ್ರಹ್ಮತಿ 'ಬೊಮ್ಮಹತಿ' ನೋ.

ಬ್ರಹ್ಮತಿಕಾಣಿ 'ಬೊಮ್ಮೇತಿಗಾಣಿ' ನೋ.

ಬ್ರಹ್ಮತೇಜ (ನಾ). ಬ್ರಾಹ್ಮಣತ್ವದ ತೇಜಸ್ಸು. – ಕಾಂತಿ: ವಿಮಲ ಕ್ಷತ್ರದೊಳು ತಾ ವಿದಿತವಿಮಲಬ್ರಹ್ಮತೇಜವಿದೆಂದನರ್ಜುನಗೆ (ಸಂಭಾ ೨೯-೩೬); ಬ್ರಹ್ಮತೇಜ ಆ ಮೊಗದಲ್ಲಿ ಉಕ್ಕುಕ್ಕಿರುವುದನ್ನು ಅವರು ಹಾಗೆಯೇ ನೋಡನೋಡುತ್ತಿದ್ದಂತೆ ಅವಪೇ ನುಡಿದಿದ್ದ (ಕೂಸಿ. ೩೩). [ಸಂ. ಬ್ರಹ್ಮತೇಜಸ್]

ಬ್ರಹ್ಮತೇಜಸ್ಸು (ನಾ). ೧. ಬ್ರಹ್ಮನ ತೇಜಸ್ಸು. – ಕಾಂತಿ. ೨. ಬ್ರಹ್ಮಜ್ಞಾನವನ್ನು ಪಡೆದ ವ್ಯಕ್ತಿಗೆ ಇರುವ ದೇಹಕಾಂತಿ: ಇರ್ದಂ ಜಗತ್ಪತಿಯೊಡ್ಡೋಲಗದೊಳ್ ಚತುರ್ಮುಖಸತರ್ಕಬ್ರಹ್ಮತೇಜಸ್ಕಿಯಿ (ಜಗನಾ. ೦-೩೬): ಬ್ರಹ್ಮತೇಜಸ್ಸು ಎಲ್ಲ ತೇಜಸ್ಸುಗಳಿಗಿಂತ ಹಿರಿಯದು (ಭುಜಾಬ. ೧೩). [ಸಂ. ಬ್ರಹ್ಮತೇಜಸ್]

ಬ್ರಹ್ಮತ್ತಿ (ನಾ). ಒಂದು ಬಗೆಯ ಅತ್ತಿಮರ: ಅಲವ ಅತ್ತಿ ಹೊರತ್ತಿ ಕಲ್ಲತ್ತಿ ವೇದಿನಿ ಬ್ರಹ್ಮತ್ತಿ ಮತ್ತಿ (ಶಿಣಾಂಪು. ೯-೩೬೦). [ಬ್ರಹ್ಮ + ಅತ್ತಿ]

ಬ್ರಹ್ಮತ್ವ (ನಾ). ೧. ಪರಬ್ರಹ್ಮದಲ್ಲಿ ಲೀನವಾಗುವಿಕೆ; ಮೋಕ್ಷ: "ಬ್ರಹ್ಮಭೂಯಂ, ಬ್ರಹ್ಮತ್ವಂ, ಬ್ರಹ್ಮಸಾಯುಜ್ಯಂ – ೨ ಬ್ರಹ್ಮಸ್ವರೂಪವಾಗುವಿಕೆ, ಜೀವ ಬ್ರಹ್ಮೈಕ್ಯಸ್ವರೂಪಾದ ಸ್ಥಿತಿ . . . ಮೋಕ್ಷ" (ಟಿಣ್ಣಂಕಿ. ೨೩೦). ೨. ಬ್ರಹ್ಮಪದವಿ. ೩. ಬ್ರಾಹ್ಮಣನಾಗಿರುವಿಕೆ; ಬ್ರಾಹ್ಮಣತ್ವ. ೪. ಯಾಗದಲ್ಲಿ ಬ್ರಹ್ಮನೆಂಬ ಋತ್ವಿಜನಾಗಿರುವಿಕೆ. [ಸಂ.]

ಬ್ರಹ್ಮದಂಡ (ನಾ). ೧. ಬ್ರಾಹ್ಮಣನ ಶಾಪ; ಮಹಾಶಾಪ. ೨. ಬ್ರಾಹ್ಮಣನಿಗೆ ಆರ್ಜಿಸುವ ಧನರೂಪವಾದ ಗೌರವ. ೩. ಶಿವ; ಈಶ್ವರ. ೪. ಋತುಗಳ ಕೈಯಲ್ಲಿರುವ ಯೋಗದಂಡ: ಆ ವಿವಿಧ ದುಂತ್ಕಾಸ್ತ್ರವನು ಶತಸಾವಿರವನಾ ಬ್ರಹ್ಮದಂಡದ ಧಾವರದಲೇ ಗೆಲಿದ ಸೊಬ್ಬ ಪಸಿಷ್ಠಮುನಿ (ಕುಣ್ಯಕ. ೦೦-೪೩); ಆಕೆಯು . . . ಆಥರ್ವಣದಲ್ಲಿರುವ ಕೆಲವು ಹುಕ್ಕುಗಳನ್ನು ಆರಿಸಿಕೊಂಡು ಸಾಮವಾಗಿ ಹಾಡಿ ಬ್ರಹ್ಮದಂಡವನ್ನು ಉಪಬ್ಯಂಹಣ ಮಾಡಿದಳು (ಭುಜಾಬ. ೧೩). ೫. ಬ್ರಹ್ಮಾಸ್ತ್ರ. ೬. ಬೆನ್ನೆಲುಬು: ದೇಹದ ಹಿಂಭಾಗವನ್ನು ಆಶ್ರಯಿಸಿಕೊಂಡು ಇರುವ ಯಾವ ಅಸ್ಥಿ ಉಂಟೋ ಆ ಅಸ್ಥಿಯು, ಬ್ರಹ್ಮದಂಡೇತಿ ಬ್ರಹ್ಮ ದಂಡವೆಂದು, ಕಥ್ಯತೇ– ಹೇಳಲ್ಪಡುತ್ತದೆ (ಶಾಕ್ತ. ೩೬. ೩೩-೩). [ಸಂ.]

ಬ್ರಹ್ಮದಂಡಿ (ನಾ). ೧. ಒಂದು ಬಗೆಯ ಔಷಧೀಸಸ್ಯ; ಅಜದಂಡಿ: ಬ್ರಹ್ಮದಂಡಿಯು ವೀರನು ಅಕ್ಕಗಚ್ಚಿನಿಂದ ಅರವು ಗಂಡಮಾರಿಗೆ ಲೇಪಿಸಲು ತತ್ಕ್ಷಣದಲ್ಲಿಯೇ ಒಡೆವದು (ಕ್ಕರ್ಣಾ. ೩೩. ೦೭೨). ೨. ಒಂದು ನಾಡಿನ ಹೆಸರು: ಬ್ರಹ್ಮೈಕಪ್ರತಿಪಾದಕವಾದ ಸುಷುಮ್ನಾನಾಡಿಗೆ ಆಧಾರವಾದ್ದರಿಂದ ಬ್ರಹ್ಮದಂಡಿಯೆಂದು ಹೇಳಲ್ಪಡುತ್ತದೆ (ಶಾಕ್ತ. ೩೬. ೩೩-೩). 'ಬ್ರಹ್ಮನಾಡಿ' ಪರಾ. [ಸಂ. ಬ್ರಹ್ಮದಂಡೀ]

ಬ್ರಹ್ಮದಂಡೆ, ಬೊಮ್ಮದಂಡೆ (ನಾ). = ಬ್ರಹ್ಮದಂಡಿ ೧: ಬ್ರಹ್ಮದಂಡಿ—ಬ್ರಹ್ಮದಂಡೆ (ಓಷ. ೦೦೩); ಪದನಱಿಮು ಪುರಿದು ತಿಲತೈಲದೆ ನಿಶೆ ಪೆಡಿಮುಕ್ಕಿಯಂಬಮಂ ಮೇಣ್ ಗೋಮೂತ್ರದೆ ಹಾವುಮೆಕ್ಕೆಯಂ ಬ್ರಹ್ಮದಂಡೆಯುಮನರೆದು ಪೂಸೆ ಪುಣ್ಗಳ್ ಕಿಡುಗುಂ (ಕೋಕೋಪ. ೯-೩೨); ಬ್ರಹ್ಮದಂಡೆಯ ಬೇರಂ ಆ ಕಾಲಲ್ಲಿಕ್ಕಿ ಅಱಿಸಿ ಕೊಂಡರೆ ಗುರುಗುರು ಪರ × × × ಹುಣಸೇಗೊಟ್ಟಿಯಮ್ಮ ಬಾಯಲ್ಲಿರಲು ಉರಿಕೆಯು ಹರ (ಅಕ್ಕ. ೦೧೩). **ಬೊಮ್ಮದಂಡೆ**: ಮುಂಗುರು ಬೊಮ್ಮದಂಡೆ [ಪಾಣಿ. ದೋಷಗಾರಿ] ಭಾಸ್ಕರ. . . ಎನಿಪ್ಪವೆಲ್ಲಮಂ ಬೆರಸಿರೆ (ಪಜಿವ. ೦೪-೦೩೪); ಬೇವು ಕನ್ನೆ ಕಾಮಾರಿಯಾಶ್ವರಿ ಬೊಮ್ಮದಂಡೆ ನಿಶಾಯುತಂ (ಪಾಕ್ಕಾಂ. ೩೬). [<ಸಂ. ಬ್ರಹ್ಮದಂಡೀ]

ಬ್ರಹ್ಮದರ್ಭೆ (ನಾ). ಅಜವಾನ; ಓಮ: "ಅಜಮೋದಾ, ಉಗ್ರಗಂಧಾ, ಬ್ರಹ್ಮದರ್ಭಾ, ಯವಾನಿಕಾ — ೪ ಅಜವಮೋದದ ಹೆಸರುಗಳು, ಓಮಃಕಾಳು" (ಶಿಣಾಂಶಿ. ೦೧೩). [ಸಂ. ಬ್ರಹ್ಮದರ್ಭಾ]

ಬ್ರಹ್ಮದರ್ಶಿ (ನಾ). = ಬ್ರಹ್ಮಜ್ಞಾನಿ: ಅಪ. ವಿನು ಲೆ ನಿನ್ನದಯಂ: ವಿಶ್ವತಾಸಂಸ್ಪರ್ಶಿ, ಮೇಣ್ ಬ್ರಹ್ಮದರ್ಶಿ! (ಅಗ್ನಿಪು.೩೮-೦). [ಸಂ. ಬ್ರಹ್ಮದರ್ಶಿನ್]

ಬ್ರಹ್ಮದಾಯ (ನಾ). ೧. ವಂಶಪಾರಂಪರ್ಯವಾಗಿ ಬ್ರಾಹ್ಮಣನಿಗೆ ಬಂದ ಬ್ರಹ್ಮಜ್ಞಾನ. ೨. ವೇದಾಧ್ಯಯನವು ಪೂರ್ಣವಾದ ನಂತರ ರಾಜನು ಬ್ರಾಹ್ಮಣನಿಗೆ ಕೊಡುತ್ತಿದ್ದ ಧನ ಮತ್ತು ಭೂರೂಪ

ವಾದ ಆಸ್ತಿ : ದೇವದಾಯ ಬ್ರಹ್ಮದಾಯ ಸೀಮೆಗಳಲ್ಲಿರುವ ದೇವರುಗಳ ಮಸ್ತಾಭರಣಗಳನ್ನು ತೆಗೆದುಕೊಂಡು ಆ ದೇವರುಗಳ ಅಂಗಭಂಗಗಳನ್ನು ಮಾಡಿ ಗುಡಿಗೋಪುರ . . . ಮುಂತಾದ ಅನೇಕ ಧರ್ಮಕಾರ್ಯಗಳನ್ನು ನಾಶಮಾಡಿದನು (ಕ:ಚಾಸಂ. I. ೨೩೫). [ಸಂ.]

ಬ್ರಹ್ಮದಾರು (ನಾ). ೧. ಹೂವರಿಸೆ ಮರ : " ತೂದಃ, ಭೂಗಃ, ಕ್ರಮುಕಃ, ಬ್ರಹ್ಮಣ್ಯಃ, ಬ್ರಹ್ಮದಾರು, ತೂಲಾ —ಓ ಹುವ್ವರಿಸೆ ಗಿಡ" (ಶಿಶ್ಯಾ. ೦೨. ೦೫೦). ೨. ಅಡಿಕೆಮರ : ಅಡಕೆ ಬಹುಕಾಲದಿಂದಲೂ ನಮಗೆ ಪರಿಚಿತವಾಗಿರುವ ಸಾಮಗ್ರಿ. ಇದಕ್ಕೆ ಸಂಸ್ಕೃತದಲ್ಲಿ ರೂಢಿಯಾಗಿರುವ ಹೆಸರುಗಳು ಅನೇಕ : ಕ್ರಮುಕ . . . ಬ್ರಾಹ್ಮಣ್ಯ, ಬ್ರಹ್ಮದಾರು ಇತ್ಯಾದಿ (ಪುಷೂ. ೪೧೦). ೩. ಹಿಪ್ಪನೇರಳೆ. ೪. ಅರಳಿಮರ; ಅಶ್ವತ್ಥವೃಕ್ಷ: (೬). ☞ ಈ ಪದದ ಅರ್ಥಗಳನ್ನು ಕೊಡುವಲ್ಲಿ ಕೋಶಕಾರರಲ್ಲಿ ಗೊಂದಲವಿರುವಂತಿದೆ. [ಸಂ.]

ಬ್ರಹ್ಮದೇಯ (ನಾ). ೧. = ಬ್ರಹ್ಮದಾಯ ೨: ಬ್ರಹ್ಮದೇಯ ಕೊಟ್ಟಮ್ ಅಪ್ಪೆರ್ಬಿ ಒಡೆಯ ಕೌಶಿಕಗೋತ್ರಂ ಪೆಣ್ಣಿಗೆ (೦೪. VI(೩). ಶ್ರೀಕಂ. ೦೬೬-೦೩ ; ಸು. ೩೦೨) : ಅದಮ್ಮ ಬ್ರಹ್ಮದೇಯದಾನವಾಗಿ ಕೊಟ್ಟ ಸಂದರ್ಭದಲ್ಲಿ ಆ ಭೂಮಿಯ ಮೇರೆಗಳನ್ನು ಕುರಿತ ವಿವರ ಹೀಗಿದೆ (ಪಾಡಿ. ೬). ೨. ಬ್ರಾಹ್ಮ, ಪ್ರಾಜಾಪತ್ಯ, ಆರ್ಷ, ದೈವ, ಗಾಂಧರ್ವ, ಆಸುರ, ರಾಕ್ಷಸ ಮತ್ತು ಪೈಶಾಚಗಳೆಂಬ ಎಂಟು ವಿವಾಹ ಪ್ರಕಾರಗಳಲ್ಲಿ ಒಂದು ; ಬ್ರಾಹ್ಮಣರೀತಿಯ ವಿವಾಹ. [ಸಂ.]

ಬ್ರಹ್ಮದ್ವೇಷ (ನಾ). ಬ್ರಾಹ್ಮಣರನ್ನು ದ್ವೇಷಿಸುವುದು : ಕಾಲಪ್ರೇರಿತರಾಗಿ ಜನರು ಬ್ರಹ್ಮದ್ವೇಷವನ್ನು ಅವಲಂಬಿಸಿ ತಾವೂ ಕೆಟ್ಟು ಇತರರನ್ನೂ ಕೆಡಿಸುತ್ತಿರುವರು (ಪುಪಾಣ. ೪೪). [ಸಂ.]

ಬ್ರಹ್ಮದ್ವೇಷಿ (ನಾ). ಬ್ರಾಹ್ಮಣರನ್ನು ದ್ವೇಷಿಸುವವನು : ಖಿರಮು ಧನುರ್ವಿದ್ಯೆಯಲ್ಲಿ ನಿಪುಣನಾಗಿ ಬ್ರಹ್ಮದ್ವೇಷಿಯೂ ಮಾಂಸಾಹಾರಿಯೂ ಆಗಿ ಸಿದ್ಧರಿಗೆ ವಿಘ್ನ ಮಾಡುತ್ತಿದ್ದನು (ಪಪಾಣ. ೧೦೬). [ಸಂ. ಬ್ರಹ್ಮದ್ವೇಷಿನ್]

ಬ್ರಹ್ಮಧರ್ಮ (ನಾ). ಬ್ರಹ್ಮನ ಸ್ವಭಾವ; ಬ್ರಹ್ಮನ ಗುಣ; ಅವಿಮರ್ಶನೀಯ ಮಹತ್ತುಗಳು ಸತ್ಯಾಸ್ವರೂಪವಾದ ಬ್ರಹ್ಮನಲ್ಲಿ ಅರೋಪಿತ, ಕಲ್ಪಿತ, ಅಧ್ಯಸ್ತವಾದುದರಿಂದ ಬ್ರಹ್ಮಧರ್ಮವಾಗಿ ತೋರಿ ಬರುವ ಸತ್ಕೃವೇ ಗವಾದಿಮುಖ್ಯಗಳಲ್ಲೂ ಸತ್ಯಾದಾತ್ಮ್ಯವೆಂಬ ಜ್ಞಾನಬೋಧದಿಂದ ಇರುವುದು (ಪಂಪಾ. ೦೧೨). [ಸಂ.]

ಬ್ರಹ್ಮನಂದನ (ನಾ). ಬ್ರಹ್ಮನ ಮಗ; ನಾರದ : ಬ್ರಹ್ಮನಂದನನಾನಂದದಿ ನಾಡೆಯುಂ ನೆಗಬ್ದುದಂದಾ ಭೂಮ ಕೃಷ್ಣಾವತಾರ (ಪಾಪಾ. ೦೩-೩೯). [ಸಂ.]

ಬ್ರಹ್ಮನಾಡಿ (ನಾ). ಸುಷುಮ್ನಾನಾಡಿಯ ಮಧ್ಯಭಾಗ : ಸುಷುಮ್ನಾನಾಡಿಯ ಹಿಂಭಾಗಕ್ಕೆ ' ವಜ್ರಿಕೆ ' ಎಂದು ಹೆಸರು. ಎಡಭಾಗಕ್ಕೆ 'ಆರ್ಯೆ' ಎಂದು ಹೆಸರು. ಮುಂಭಾಗಕ್ಕೆ ' ಪ್ರಕಾಶಿನೀ ' ಬಲಭಾಗಕ್ಕೆ ' ವೈದ್ಯುತಾ ' ಎಂಬ ಹೆಸರುಗಳು. ಮಧ್ಯಭಾಗಕ್ಕೆ ' ಬ್ರಹ್ಮನಾಡೀ ' ಎಂದು ಹೆಸರು (ಕಪಾಚ. ೪-೩ ಟೀಗಳು). [ಸಂ. ಬ್ರಹ್ಮನಾಡೀ]

ಬ್ರಹ್ಮನಾರಾಯಣ (ನಾ). ಶತೋಪನಿಷತ್ತುಗಳಲ್ಲಿ ಒಂದು : "ಬ್ರಹ್ಮನಾರಾಯಣ ಹಂಸ . . . ಮುಂಡಕವೆಂಬಿವು ಮೊದಲಾದವೇ ಶತೋಪನಿಷತ್ತುಗಳು (ಪಪೀಗೀ. ೩). [ಸಂ.]

ಬ್ರಹ್ಮನಾಳ (ನಾ). = ಬ್ರಹ್ಮನಾಡಿ : ಬ್ರಹ್ಮನಾಳದ ಗೊಕ್ಕು ಒಮ್ಮೆಲೇ ದೊರೆಯುವುದು (ಕರಾಕೃ. ೩೬೭). [ಬ್ರಹ್ಮ + ನಾಳ (= ನಾಲ)]]

ಬ್ರಹ್ಮಪಟ್ಟ (ನಾ). ಬ್ರಹ್ಮನ ಪದವಿ,—ಅಧಿಕಾರ : ಆನಂದವರ್ಧನ ಕವಿಗೆ ಬ್ರಹ್ಮಪಟ್ಟವನ್ನೇ ಕಟ್ಟಬಿಟ್ಟಿದ್ದಾನೆ (ಜಾಕವ. ೧೧೩). [ಸಂ.]

ಬ್ರಹ್ಮಪಾಶ (ನಾ). ೧. ಬ್ರಹ್ಮಾಸ್ತ್ರ : ಬ್ರಹ್ಮಪಾಶ ವಿಷ್ಣುಮಾಯವನತಿಗಳೆದ ಛಲದಲ್ಲಿ ಏನೆಂದಜಿಯದಿದ್ದೆನಾನು (ಆಪಾಂ. ೨೩೨-೦೦೬). ೨. (ಅಲಂ) ದೊಡ್ಡ ಬಂಧನ : ಇವರ ಹೇಳಿಕೆ ಪ್ರೇಮಶಂಕರರಿಗೆ ಬ್ರಹ್ಮಪಾಶವಾಗುತ್ತದೆಂದು ನಂಬಿದ್ದರು ಫೋಲೀಸರು (ಕ್ರಚಾತ್ರ. ೦೩೬). [ಸಂ.]

ಬ್ರಹ್ಮಪಿಶಾಚಿ (ನಾ). ಬ್ರಾಹ್ಮಣನಾಗಿದ್ದವನ ಪಿಶಾಚಿ ; ☞ ಬ್ರಾಹ್ಮಣನಾದವನನ್ನು ಯಾರಾದರೂ ಕೊಂದರೆ ಕೊಂದ ನಂತರ ಅವನು ವ್ಯಂತರನಾಗಿ ಕೊಂದವರನ್ನು ಹಿಂಸೆಪಡಿಸುವನೆಂಬ ನಂಬಿಕೆಯಿದೆ : ಆ ದೊಡ್ಡಮರದಲ್ಲಿ ಬ್ರಹ್ಮಪಿಶಾಚಿಯಿದೆ ಎನ್ನುತ್ತಾರೆ (ಕೃಚ). [ಸಂ.]

ಬ್ರಹ್ಮಪುತ್ರ (ನಾ). ೧. ಬ್ರಹ್ಮನ ಮಗ; ನಾರದ : ತರ್ದನಫಲತಾದಾತ್ರನಾ ಬ್ರಹ್ಮಪುತ್ರಂ (ಜಾಪಾ. ೫-೨೪). ೨. ಬ್ರಹ್ಮನ ಹತ್ತು ಮಂದಿ ಮಾನಸಪುತ್ರರು. ೩. ರುದ್ರ. ೪. ಭಾರತದ ಈಶಾನ್ಯದಿಂದ ಹರಿದು ಬಂದು ಬಾಂಗ್ಲಾ ಉಪಸಾಗರವನ್ನು ಸೇರುವ ಒಂದು ಹೊಳೆ : ☞ 'ಗಂಡುಹೊಳೆ.' 'ನದ' ಎಂದು ಹೆಸರಾಗಿರುವ ಹೊಳೆಗಳಲ್ಲಿ ಇದೊಂದು. ೫. ಒಂದು ಬಗೆಯ ವಿಷ : 'ತಾಕೋಲ, ಕಾಲಕೂಟ, ಹಾರಾಹಲ, ಸೌರಾಷ್ಟ್ರಕ, ಶೌಕ್ಲಿಕೇಯ, ಬ್ರಹ್ಮಪುತ್ರ, ಪ್ರದೀಪನ, ದಾರದ, ವತ್ಸನಾಭ — ೯ ವಿಷಭೇದಗಳು ಅಂದರೆ ಒಂಭತ್ತು ಬಗೆ ವಿಷಗಳು " (ಶಿಶ್ಯಾ. ೦೬. ೬೬). [ಸಂ.]

ಬ್ರಹ್ಮಪುರ (ನಾ). ೧. ಬ್ರಹ್ಮನ ನಿವಾಸಸ್ಥಾನ. ೨. ಬ್ರಾಹ್ಮಣರ ಕೇರಿ; ಅಗ್ರಹಾರ : ಎಳಸದು ಬ್ರಹ್ಮಪುರಂಗಳಿಂ ವಿವಿಧ ಕೂಟೋತ್ಸಂಗ ದೇವಾಲಯಂಗಳಿನತ್ಯಾದ್ಭುತರಮ್ಯಮಹರ್ಮ್ಯತತಿಯಿಂ ... ಅಮರಂ ನೊಗಯಿ[ಸಿರ್ಪಂ] ತತ್ಪುರಾಭ್ಯಂತರಂ (ಪಾಭಾ. IV. ೭೫೨-೦೪ ; ೧೨೦೬). [ಸಂ.]

ಬ್ರಹ್ಮಪುರಾಣ (ನಾ). ಪದಿನೆಂಟು ಪ್ರಸಿದ್ಧವಾದ ಪುರಾಣಗಳಲ್ಲಿ ಒಂದು : ಬ್ರಹ್ಮಪುರಾಣ, ಪದ್ಮಪುರಾಣ, ವೈಷ್ಣವಪುರಾಣ . . . ಗಾರುಡಪುರಾಣ, ಬ್ರಹ್ಮಾಂಡಪುರಾಣವೆಂಬೀ . . . ಪದಿನೆಂಟು ಮೂಲ ಪುರಾಣಂಗಳು (ಪಪೀ. ೬). [ಸಂ.]

ಬ್ರಹ್ಮಪುರಿ (ನಾ). ೧. ಬ್ರಹ್ಮಲೋಕವಲ್ಲಿಯ ಬ್ರಹ್ಮನ ನಿವಾಸಸ್ಥಳ : ಆ ಸೌಂದರ್ಯ . . . ಈ ದೇಹವನ್ನು ಪಾಪದೇಹವನ್ನಾಗಿಸದ 'ಬ್ರಹ್ಮಪುರಿ'ಯನ್ನಾಗಿಸುತ್ತದೆ (ಪೌಂಡಿ. ೦೦೩). ೨. ಬ್ರಾಹ್ಮಣರಿಗೆ ಮೀಸಲಾದ ಕೇರಿ; ಅಗ್ರಹಾರ : ಪುಲಿಗೆಱೆಯ ಬದ್ದಿಗ ಬ್ರಹ್ಮಪುರಿಯೆಂದು ಪೆಸರ್ (ಆಪು. XV. ೭೫-೯; ಸು. ೦೦೦); ಪ್ರತಿಪತ್ತಿವೆರಸು ಬ್ರಹ್ಮಪುರಿಗೆ ಕೇರಿಯುಂ [ಕೆ]ಮ್ಮುಮಂ ಶ್ರೀ[ಗು]ಣದಬ್ಬೇಶ್ವರಂ ಶ್ರೀಸೋಭನೇಶ್ವರಮನ್ನೆರಡುಂ [ಪುರದ] ಹಾರ್ವರ್ರುಂ ಪುರಸ್ಸರರಾಗಿ ಪಡಿದು (ಪೌಷಾ. XI-i. ೬೪-೦೯; ೧೦೨೨); ವಿಪ್ರಪುರೋಪಮಿಸರದ್ವೇದಸ್ವರದಿಂದಸೆದಿರ್ಕುಂ ಬ್ರಹ್ಮಪುರಿಯ ಸೌಧಸಮೂಹಂ (ಜಾಪಾ. ೯-೦೦೪). [ಸಂ. ಬ್ರಹ್ಮಪುರೀ]

ಬ್ರಹ್ಮಪ್ರಾಪ್ತಿ (ನಾ). ಬ್ರಹ್ಮಜ್ಞಾನವ ಗಳಿಕೆ ; ಪರಬ್ರಹ್ಮದಲ್ಲಿ ಐಕ್ಯವಾಗುವಿಕೆ : ನಾನು ಆ ಸಾಧನವನ್ನು ಬ್ರಹ್ಮಪ್ರಾಪ್ತಿಗೆ ಉಪದೇಶಿಸುತ್ತಿರುವೆನು (ಕ:ಚಾಸಂ. ೬೬). [ಸಂ.]

ಬ್ರಹ್ಮಬಂಧು (ನಾ). ಬ್ರಾಹ್ಮಣೋಚಿತವಾದ ಆಚಾರವಿಲ್ಲದೆ, ಹೆಸರಿಗೆ ಮಾತ್ರ ಬ್ರಾಹ್ಮಣನಾಗಿರುವವನು : ಬ್ರಾಹ್ಮಣಾಧಮ : "ಬ್ರಹ್ಮಬಂಧುಃ, ದ್ವಿಜಾಧಮಃ —ಈ ೨ ದ್ವಿಜಾಧಮಂ" (ಪಕಾಯು. ೬೬-೨೩೦); ಇಂತು ತಮ್ಮೊಂದಿರವಂ ಕೇಳಿದ ಬ್ರಹ್ಮಬಂಧುವಂ ರನ್ನಗೊರಲಂ ಮತ್ಸ್ಯಪುದೊರ್ಮ ಲೇಸುರೇಸಯ್ . . . ಆ ಕ್ಷೇತ್ರಮನೆಮಗಂ ತೋೞಿ ಎಂಬುವುಂ (ಜಾಕವ್ಯ. ೬೬-೨೬). [ಸಂ.]

ಬ್ರಹ್ಮಬಿಂದು (ನಾ). ೧. ಶತೋಪನಿಷತ್ತುಗಳಲ್ಲಿ ಒಂದು : ಬ್ರಹ್ಮಬಿಂದು ಅರುಣ . . . ಮುಂಡಕವೆಂಬಿವು ಮೊದಲಾದವೇ ಶತೋಪನಿಷತ್ತುಗಳು (ಪಪೀ. ೩). ೨. (ಅಲಂ) ವೇದಪಾಠ ಮಾಡುವಾಗ

ಬ್ರಾಹ್ಮಣರ ಬಾಯಿಂದ ಹೊರಸೂಸಂವ ಉಗುಳಿನ ಬಿಂದು.—ಹನಿ : "ಬ್ರಹ್ಮಬಿಂದುಃ— ವೇದವಾತ್ಸಮುಖದಲ್ಲಿ ಬಾಯಿಂದ ಹೊರಡುವ ಕುಂತುರುಗಳ ಹೆಸರು" (ಶಿಕ್ಷಾಶಿ. ೨೩೬). [ಸಂ.]

ಬ್ರಹ್ಮಬ್ರುವ (ನಾ). ಹೆಸರಿಗೆ ಮಾತ್ರ ಬ್ರಾಹ್ಮಣನಾಗಿರುವನು; ಅಯೋಗ್ಯನಾದ ಬ್ರಾಹ್ಮಣ : "ಬ್ರಹ್ಮಬ್ರುವಂ ಪಾರ್ವನೆನೆ ತನ್ನ ಜಾತಿಯಂ ತೋಱಿ ಬಾಬ್ವಂಗೆ ಪಾಮಂ" (ಪುಂಗಾಶಾ. ೬೩-೭). [ಸಂ.]

ಬ್ರಹ್ಮಮಾರ್ಗ (ನಾ). ಮೋಕ್ಷಮಾರ್ಗ; ಅಧ್ಯಾತ್ಮಮಾರ್ಗ : ಬ್ರಹ್ಮಮಾರ್ಗಕೆ ನಡಿಸಿದನು ವಾದುವ ವರಬ್ರಹ್ಮವ ಕಂಡ ತನ್ನೊಳಗೆ (ಭರತ. ೩-೧೦೩); ಹಾದಿಗಳನಾರೈದು ಯಾತ್ರೆಯನೈದುವರ ಮಳ್ಳೆಯಲಿ ಮೆಲ್ಲನೆ ಸಾಧನದೊಳಲ್ಲದೊಡೆ ಮೆರೆಯುದು ಬ್ರಹ್ಮಮಾರ್ಗವಿದು (ಗೂಢಾ. ೦೩-೨೬); ಯೋಗಪ್ರಶ್ನನಾಗಿ ಬ್ರಹ್ಮಮಾರ್ಗವಲ್ಲಿ (ಪಾದಿ) ತಪ್ಪಿದವನು . . . ಉಭಯಪ್ರಶ್ನನಾಗಿ ನಾಶವನ್ನು ಹೊಂದುವುದಿಲ್ಲವೆ ? (ಅಣಾಸ. ೪೦). [ಸಂ.]

ಬ್ರಹ್ಮಮೀಮಾಂಸೆ (ನಾ). ಬ್ರಹ್ಮಸ್ವರೂಪವನ್ನು ಕುರಿತು ಜಿಜ್ಞಾಸೆ ಮಾಡುವ ಬಾದರಾಯಣಸೂತ್ರ ಅಥವಾ ಬ್ರಹ್ಮಸೂತ್ರ; ವೇದಾಂತ ಶಾಸ್ತ್ರ; ಉತ್ತರಮೀಮಾಂಸೆ : ಜೈಮಿನಿಸೂತ್ರಕ್ಕೆ ಪೂರ್ವಮೀಮಾಂಸೆ. ಧರ್ಮಮೀಮಾಂಸೆಯೆಂದೂ. ಬಾದರಾಯಣಸೂತ್ರಕ್ಕೆ ಉತ್ತರಮೀಮಾಂಸೆ. ಬ್ರಹ್ಮಮೀಮಾಂಸೆಯೆಂದೂ ವ್ಯವಹಾರ (ಹಿಂದಾ. ೦೫೪). [ಸಂ. ಬ್ರಹ್ಮಮೀಮಾಂಸಾ]

ಬ್ರಹ್ಮಯಜ್ಞ (ನಾ). ೧. ಪಂಚಮಹಾಯಜ್ಞಗಳಲ್ಲಿ ಒಂದು ; ಪ್ರತಿನಿತ್ಯ ಮಾಡುವ ವೇದಪಠಣ.— ವೇದಾಧ್ಯಯನ : ವೇದಾಧ್ಯಯನರೂಪ ಬ್ರಹ್ಮಯಜ್ಞ ಅಗ್ನಿಹೋತ್ರರೂಪ ದೇವಯಜ್ಞ ಅತಿಥಿಪೂಜಾರೂಪ ಮನುಷ್ಯಯಜ್ಞ ಪಿತೃತರ್ಪಣರೂಪ ಪಿತೃಯಜ್ಞ ಭೂತಬಲಿರೂಪ ಭೂತಯಜ್ಞ ಎಂಬೀ ಪಂಚಮಹಾಯಜ್ಞಂಗಳಂ ನವೆಸುತ್ತೆ (ಪಚಿಕ. ೦೫೦); ಬ್ರಹ್ಮಯಜ್ಞ, ಪಿತೃಯಜ್ಞ, ದೈವಯಜ್ಞ, ಭೂತಯಜ್ಞ, ಮನುಷ್ಯಯಜ್ಞ—ಈ ೫ ಮಹಾಯಜ್ಞಗಳು, ವೇದಾಧ್ಯಯನವು ಬ್ರಹ್ಮಯಜ್ಞವು (ಅಮೃಗ. ೦೯೬). ೨. ವೇದಗಳನ್ನು ಹೇಳಿಕೊಡುವಿಕೆ ; ವೇದಾಧ್ಯಾಪನ. [ಸಂ.]

ಬ್ರಹ್ಮಯೋಗ (ನಾ). ೧. ಮೋಕ್ಷಸಾಧನೆಯ ಉದ್ಯೋಗ. — ಪ್ರಯತ್ನ : ಬ್ರಹ್ಮಯೋಗದೆಂಬ ಮುದೊರ್ತ ಸ್ನಿಧಿಯದು ಬ್ರಹ್ಮಯೋಗಕೆ ತಕ್ಕ ಕಾಲ (ಭರತ. ೦೩-೦೦೩). ೨. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಒಂದು : ಬರೆ ಚೈತ್ರಂ . . . ಅತಿಶುಭದಂ ಬ್ರಹ್ಮಯೋಗಂ ಮನಂಗೊಂಡಿರೆ ಭಾಸ್ವನ್ನಾಭರಾಜಾಂಗನೆ ವಿಜಯಯಶೋಭಾಗಿಯಂ . . . ಪುಟ್ಟುವಂ ಪೆಕ್ಕಳ್ (ಕಾವ್ಯ. ೭-೩೬) ; ಬ್ರಹ್ಮಯೋಗಕ್ಕೆ ಸಾಲ ೩೭ ಗಳಿಗೆ ಮೇಲೆ ತ್ಯಾಡ್ಯಾ (ಜಾತ್ಕ. ೭೦-೭). [ಸಂ.]

ಬ್ರಹ್ಮರಂಧ್ರ (ನಾ). ೧. ನೆತ್ತಿಯ ಮಧ್ಯದಲ್ಲಿರುವ ಸೂಕ್ಷ್ಮವಾದ ರಂಧ್ರ ; ಗರ್ಭದಲ್ಲಿ ಶರೀರ ರಚನೆಯೆಲ್ಲ ಆದ ಮೇಲೆ ಜೀವನ್ಮವು ಈ ಮಾರ್ಗದಿಂದ ಪ್ರವೇಶಿಸುವುದೆಂದೂ ಸಾಯುವಾಗ ಈ ಮಾರ್ಗದಿಂದ ಜೀವ ಹೋದವರಿಗೆ ಬ್ರಹ್ಮಲೋಕಪ್ರಾಪ್ತಿಯೆಂದೂ ಐತರೇಯ ಮತ್ತು ಕಠಶ್ರುತಿಗಳಲ್ಲಿ ಹೇಳಿದೆ : ಬುಟ್ಟ ಕಣ್ಣು ಬಿಗಿದ ಹುಬ್ಬು ಬ್ರಹ್ಮರಂಧ್ರದಲ್ಲಿ ಬಟ್ಟು ಗುತಿದು (ಪಪಪು. ೩೦೯) ; ಬ್ರಹ್ಮರಂಧ್ರದ ಗೊತ್ತು ಒಮ್ಮೆಲೇ ತೀಪುವೇ (ಸರಣ್ಯ. ೩೩೯) ; ಯೋಗ ಸಂಪ್ರದಾಯದಂತೆ ಮತ್ತು ಕಾಂತ್ರಿಸರ ಸಮ್ಮತಿಗೆ ಅನುಸಾರವಾಗಿಯೂ ತಲೆಯಲ್ಲಿ ಬ್ರಹ್ಮರಂಧ್ರವಿದೆ (ಶಾಶಕ್ತಿ. ೦೩೩). ೨. ನಡುನೆತ್ತಿ : ಪುಣೆಸುಚಿಕ್ಕೆ ಬೂದಿಮನ್ನು ಬ್ರಹ್ಮರಂಧ್ರದ ಮೇಲೆ ಇಟ್ಟು ನಿಮಿಷಾರ್ಧಮನ್ನು ಹಿಂಡುವುದು (ಸಶಕ್ತ. ೨೨೮ ಹಿ) : ಕಟ್ಟಿದರೆ ಬ್ರಹ್ಮರಂಧ್ರಕ್ಕೆ ವಿರುದ್ಧವಾಗಿ ಮಾದುಮಿಳಿತವಾದ ಹುರಿ (ಹಸುಪೂ. ೩೦೭). [ಸಂ.]

ಬ್ರಹ್ಮರಶ್ಮಿ (ನಾ). ಬ್ರಾಹ್ಮಣನಲ್ಲಿರಬೇಕಾದ ತೇಜಸ್ಸು : ಕುಂತೀ ನಂದನರು ಸೂಕ್ಷಾತ್ಮತೇಜೋವ್ಯಂದವನು ಪುಸುಕಿದರು ವಿಮಲಬ್ರಹ್ಮರಶ್ಮಿಯರಿ (ಭಾಗ್ಯಾ. ೦೨-೨). [ಸಂ.]

ಬ್ರಹ್ಮರಾಕ್ಷಸ (ನಾ). ಧರ್ಮಭ್ರಷ್ಟನಾಗಿ ಬ್ರಾಹ್ಮಣರ ಧನವನ್ನೂ ಪರಪತ್ನಿಯರನ್ನೂ ಅಪಹರಿಸಿದ ನೀಚಬ್ರಾಹ್ಮಣನಿಗೆ ಮರಣಾನಂತರ ಬರುವುದೆನ್ನಲಾದ ಪಿಶಾಚಿಜನ್ಮ ಮತ್ತು ಹಾಗೆ ಜನ್ಮತಾಳಿದವನು : ಸಂಗಾರ್ಜನಂ ಸಿದ್ಧನಂತಾ ಸಿದ್ಧಕ್ಷೇತ್ರಮಂ ಪುಗುತಂದನ ದೆಂತಪ್ಪ ದೆಂದೊಡೆ . . . , ನಾರಾಯಣನಂತೆ ಬಲಿಯಂ ಬೇಡುವ ಬ್ರಹ್ಮರಾಕ್ಷಸಂ . . . ಅತಿಭಯಂಕರಾಕಾರಮಪ್ಪುದು (ಕಾದ್ಯಾಣ. ೩೦೯ ೩೦೨೪); ಮೇದೋಹೋತನೆಂಬುದಂ ದಾನವೇಂದ್ರಂಗೆ ಪೌರೋಹಿತ್ಯಮಾ ಮಾಡುವಂ ಬ್ರಹ್ಮರಾಕ್ಷಸಂ ಕಂಡು ಪಾರ್ಥನ ಪಯಣವನು ಖಂಡಿಸಿದನು (ಕೃಪಾಶಾ.೦೩-೨೩) ; ಯಾರೋ ಅನ್ನುತ್ತಿದ್ದರು ಗುಡಿಯಲ್ಲಿ—ಕವ್ವಿಯುವರ ಮಗ ಸತ್ತ ಮೇಲೆ ಬ್ರಹ್ಮರಾಕ್ಷಸ ಆಗಿದ್ದಾನೆ ಎಂದು (ಪಚಪ್ರ. ೦೦೬). 'ಬೊಮ್ಮರಕ್ಕಸ' , 'ಬ್ರಹ್ಮಪಿಶಾಚಿ' ಹೋ. [ಸಂ.]

ಬ್ರಹ್ಮರ್ಷಿ (ನಾ). ಬ್ರಹ್ಮವನ್ನು ಅರಿತು ಆ ತಿಳಿವಿನಿಂದ ಋಷಿಯಾದವನು ; ಬ್ರಹ್ಮಜ್ಞನಾದವನು : ಬ್ರಹ್ಮರ್ಷಿ ಗುರುವಸಿಷ್ಠಂ ಬಂದು ತಾಮ್ಮನಕೆ ಪೇಳ್ದನಿಂತೆಂದು ಸಂತೈಕಮುಂ (ಕ್ಷತ್ರಾಪ್ರ. ೦೫-೧೭೬) ; ಇವೊತ್ತು ನಾವು ಸೇರಿರುವುದು ತಪೋಬಲದಿಂದ ಬ್ರಾಹ್ಮಣ್ಯ ಸಾಧಿಸಿ ಬ್ರಹ್ಮರ್ಷಿಯಾಗಿರುವ ವಿಶ್ವಾಮಿತ್ರರ ಬ್ರಹ್ಮರ್ಷಿತ್ವವನ್ನು ಒಪ್ಪಿಕೊಳ್ಳುವುದಕ್ಕೆ (ಪಾಪಾಶ. ೫೫೦). [ಸಂ.]

ಬ್ರಹ್ಮರ್ಷಿತ್ವ (ನಾ). ಬ್ರಹ್ಮರ್ಷಿಯಾಗಿರುವಿಕೆ ; ಬ್ರಹ್ಮರ್ಷಿಪದವಿ : ಬ್ರಹ್ಮರ್ಷಿತ್ವವ ಒಬ್ಬರ ಇಬ್ಬರ ಅಭಿಮಾನದಿಂದ ಬರುವ ಪದವಿಯಲ್ಲ (ಪಪಾಶ. ೫೫೦). [ಸಂ.]

ಬ್ರಹ್ಮಲಿಖಿತ (ನಾ). ಹಣೆಯ ಬರೆಹ ; ವಿಧಿಲಿಖಿತ ; ಪ್ರ ಮಾನವರ ಹಣೆಯಲ್ಲಿ ವಿಧಿಯು ಬರೆದಿರುವುದು ಮತ್ತು ಯಾರಿಂದಲೂ ಅದನ್ನು ಅಳಿಸಲು, ಬದಲಾಯಿಸಲು ಸಾಧ್ಯವಿಲ್ಲ, ಹಾಗೆಯೇ ನಡೆಯುವುದು ಎಂದು ನಂಬಲಾದ ಲೇಖ.—ಬರೆಹ : ಬ್ರಹ್ಮಲಿಖಿತವ ಮಿಟ್ಟು ಬಾಳ್ವರುಂಟು ನಿರ್ಮಳದಿ ವೈಷ್ಣವರ ಮನಮುಟ್ಟಿ ಭಜಿಸಿ (ಶಶಕ. ೫೫ ಕ್ಷ೦); ಬರೆದದ್ದೆಲ್ಲ ಬ್ರಹ್ಮಲಿಖಿತವೆಂದೂ ಸಾಹಿತಿಗಳೂ ತಿಳಿಯುವ ಕಾರಣವಿಲ್ಲ (ಪಾಪಾಶಿ. ೭). [ಸಂ.]

ಬ್ರಹ್ಮಲಿಪಿ (ನಾ). ೧. = ಬ್ರಹ್ಮಲಿಖಿತ : ಬ್ರಹ್ಮಲಿಪಿ ಬೇರೆಯಲ್ಲ, ಪಿಶಾಚ ಪರಿವಾರದವರ ಆದೇಶ ಬೇರೆಯಲ್ಲ (ಶಿಪಾಕ. ೦೦೨); "ನಿಮಗ ಒಂದು ಗಂಡು ಮಗ ಹುಟ್ಟಲಿ" ಅಂತ ಆವಾಗ ಅಂದೇ ಅಂವ್ರ ಬ್ರಹ್ಮಲಿಪಿ ಅಂತ ತಿಳಿರಿ (ಶಮೋ. ೦೩೦). ೨. (ಆಲಂ) ಓದಲು ಬಾರದ ಲಿಪಿ : ಆ ಷಣ್ಮಾತ್ಮನ ಬರಪಣಿಗೆ ಬ್ರಹ್ಮಲಿಪಿ (ಕೂಲ). [ಸಂ.]

ಬ್ರಹ್ಮಲೋಕ (ನಾ). ೧. ಸೃಷ್ಟಿಕರ್ತನಾದ ಬ್ರಹ್ಮನಿರುವನೆಂದು ನಂಬಲಾದ ಲೋಕ : ಸತ್ಯಲೋಕ : ನಾನು . . . ಇನ್ನೊಂದು ರೂಪದಿಂದ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ಬ್ರಹ್ಮನೊಡನೆ ಈ ವಿಚಾರವಾಗಿ ಮಾತನಾಡಿ ಗೊತ್ತು ಮಾಡಿರುವೆನು (ಪಪಾಶ. ೦೦೪). ೨. [ಜೈನ] ಹದಿನಾರು ಕಲ್ಪಗಳಲ್ಲಿ ಒಂದು ; ಲೋಕಾಂತಿಕದೇವರ ನಿವಾಸ : ಬ್ರಹ್ಮಲೋಕನಿಳಯರಪ್ಪ ಲೋಕಾಂತಿಕರುಂ (ಶಾಂಪ್ರ. ೦೨-೧೩ ಪ). [ಸಂ.]

ಬ್ರಹ್ಮವಂತ (ನಾ). ವೇದಾಧ್ಯಯನಸಂಪನ್ನನಾದ ಬ್ರಾಹ್ಮಣ : "ಬ್ರಾಹ್ಮಣಂ . . . ಬ್ರಹ್ಮವಂತಂ ಸೋಮಪಂ ವಿಪ್ರನೆಂದೆನಲು ಬ್ರಾಹ್ಮಣಗೆ ಪೆಸರಕ್ಕುಂ" (ಪುಂಗಾಶಾ. ೬೩-೦). [ಸಂ. ಬ್ರಹ್ಮವತ್]

ಬ್ರಹ್ಮವರ್ಚಸ (ನಾ). ೧. ವೇದಾಧ್ಯಯನದಿಂದ ಉಂಟಾಗುವ ಅಭಿವೃದ್ಧಿ.—ತೇಜಸ್ಸು : "ಆಚಾರದ ಓದಿನ ನಿಜಶಿಷ್ಯನಿಗೆ ಬ್ರಹ್ಮವರ್ಚಸ

ವೆಂಬುದು" (ಪಂಡಿತು. ೬೬-೫೭); "ಬ್ರಹ್ಮವರ್ಚಸಂ ಪ್ರತ್ಯಾಕ್ಷಮುನರ್ಧಿ —ವಳ್ಳೀ ನಡತೆ, ಅಧ್ಯಯನ, ವೇದವಾಕ್ಯ ಈ ಯೆರಡರ ಶುದ್ಧಿ, ಅಭಿವೃದ್ಧಿಗೆ ಹೆಸರು" (ಕಿಡ್ಕಾಂ. ೫೫೬). ೨. ಬ್ರಹ್ಮವರ್ಚಸ್ಸನ್ನು ಪಡೆದವನು : "ಆಚಾರಮಾರ್ಗ ತಂತುವನೀವನಾವನಿರ್ವಂ ಬ್ರಹ್ಮವರ್ಚಸನಕ್ಕುಂ" (ಪಂಗಣಾ. ೬೨-೦). [ಸಂ.]

ಬ್ರಹ್ಮವರ್ಚಸ್ಸು (ನಾ). ಬ್ರಹ್ಮತೇಜಸ್ಸು; ಬ್ರಹ್ಮಬಲ : ಋಷಿಗಳು ಈ ಪವಿತ್ರ ಕಾರ್ಯಗಳನ್ನೆಸಗುತ್ತಿದ್ದುದರಿಂದಲೇ ದೀರ್ಘಾಯುಸ್ಸು, ಪ್ರಜ್ಞೆ, ಕೀರ್ತಿ ಮತ್ತು ಬ್ರಹ್ಮವರ್ಚಸ್ಸುಗಳನ್ನು ಪಡೆದಿದ್ದರು (ಬಾಕಿ. ೫೦).

[ಸಂ. ಬ್ರಹ್ಮವರ್ಚಸ್]

ಬ್ರಹ್ಮವಾದಿ (ನಾ). ವೇದಗಳನ್ನು ಕಲಿಸುವವನು; ವೇದಾರ್ಥವನ್ನು ವಿವರಿಸುವವನು; ವೇದವಿದ : ಬ್ರಹ್ಮವಾದಿಗಳೆಲ್ಲಿ ಹಿಂಬರುಣ್ಣಿ ಕಂಡೆಗೆಣೆಯೆನ್ನುವರು (ಭಾಷಣ. ೬). [ಸಂ. ಬ್ರಹ್ಮವಾದಿನ್]

ಬ್ರಹ್ಮವಾದಿನಿ (ನಾ). ೧. ವೇದಾಂತ ತತ್ತ್ವವನ್ನು ಪ್ರತಿಪಾದಿಸುವವಳು; ವೇದಾಂತಪ್ರವೀಣೆ : ದನುಜೇಂದ್ರ ಕುಜಾಂಗಿಗರ್ ಸಮವಿಲಗ್ನಕ್ಷೇತ್ರದೊಳ್ ದಾಲ್ಕರಾಗಿ ನಿರಾಬಾಧದಿನಿರ್ದೊಡಾ ಸಕಲಶಾಸ್ತ್ರೋಪೇತೆಯುಂ ಬ್ರಹ್ಮವಾದಿನಿಯುಂ ಖ್ಯಾತೆಯುಮಕ್ಕುಂ (ಜಾಕಿ. ೩೨-೩೩); ಸ್ತ್ರೀಯರು ಬ್ರಹ್ಮವಾದಿನಿಗಳು, ಸದ್ಯೋದ್ವಹಗಳು ಎಂದು ಎರಡು ಬಗೆ. ಬ್ರಹ್ಮವಾದಿನಿಗಳಿಗೆ ಉಪನಯನ ವೇದಾಧ್ಯಯನ ಮೊದಲಾದ ನಿಯಮಗಳು . . . ಎಂದು ವಿಧಿಸುವರು (ಸಂಧಾ. ೦೫೯). ೨. ಗಾಯತ್ರೀದೇವಿ. [ಸಂ. ಬ್ರಹ್ಮವಾದಿನೀ]

ಬ್ರಹ್ಮವಿತ್ತು (ನಾ). =ಬ್ರಹ್ಮಜ್ಞಾನಿ : ನಿಷಿದ್ಧಕರ್ಮಗಳನ್ನು ತ್ಯಜಿಸಿ . . . ತೀವ್ರಮುಮುಕ್ಷುಗಳಾಗಿ ಬ್ರಹ್ಮವಿತ್ತುಗಳಲ್ಲಿ ಉತ್ತಮನಾದ ಗುರುವರ್ಯನ ಅಡಿದಾವರೆಗಳನ್ನಾಶ್ರಯಿಸಿ ವೇದಾಂತಶ್ರವಣ ಮಾಡುವೇಕು (ಭಾಕಥ. ೨೬೮). [ಸಂ. ಬ್ರಹ್ಮವಿದ್]

ಬ್ರಹ್ಮವಿದ (ನಾ). =ಬ್ರಹ್ಮಜ್ಞಾನಿ : ಬ್ರಹ್ಮವಿದೆನಾವವನೇ, ಬ್ರಹ್ಮವನ್ನು ಬಲ್ಲವನೇ ಬ್ರಹ್ಮನಾಗುತ್ತಾನೆ. ಬ್ರಹ್ಮವಾದವನಿಗೇ ಬ್ರಹ್ಮಜ್ಞಾನ, ಬ್ರಾಹ್ಮೀ ವೃದ್ಧಿ ಆಗಬಹುತ್ತದೆ (ಭಾಕಥ. ೦೦೬). [ಸಂ.]

ಬ್ರಹ್ಮವಿದ್ಯೆ (ನಾ). ವೇದಾಂತ ವಿದ್ಯೆ; ಮೋಕ್ಷಸಾಧಕವಾದ ವಿದ್ಯೆ; ಮೋಕ್ಷಜ್ಞಾನ : ಕೋಳುಗೊಂಡುದು ಬ್ರಹ್ಮವಿದ್ಯೆಯ ಮೂಲಧನಂ ತವ ಧರಿತಿ (ಸುಣ. ೬೩-೪); ಭಕ್ತಿಯಿಂದರೆ . . . ಪರಮಪುರುಷನ ಜಾದಾರವಿಂದಗಳ ಧ್ಯಾನ, ಅರ್ಚನೆ, ಪ್ರಣಾಮ ಮೊದಲಾದುವು. ಇವೇ ಉಪನಿಷತ್ತುಗಳಲ್ಲಿ ವೇದನ, ಉಪಾಸನ, ಬ್ರಹ್ಮವಿದ್ಯಾ ಮೊದಲಾದ ಶಬ್ದಗಳಿಂದ ಹೇಳಲ್ಪಡುವುವು (ಬೃಭಾ. ೨೫೩) [ಸಂ. ಬ್ರಹ್ಮವಿದ್ಯಾ]

ಬ್ರಹ್ಮವೀಣೆ (ನಾ). ಒಂದು ಬಗೆಯ ವೀಣೆ : ವಿವಂಚಿಕೆ ಚಿತ್ರಿಕೆ . . . ಬ್ರಹ್ಮವೀಣೆ ಸಾರಂಗವೀಣೆ ಸರವೀಣೆ ಆಕಾಶವೀಣೆ ಅಂತರ್ವೀಣೆ ರುದ್ರವೀಣೆಯೆಂಬ ಇಪ್ಪತ್ತೈರಡು ತೆಱದ ತಂತ್ರೀವಾದ್ಯಕ್ರಮವೆಂಬುದು (ಪಪಂ. ೦೯೦) ; ಆತನು ಬ್ರಹ್ಮವೀಣೆಯನ್ನು ಬಾರಿಸುವುದರಲ್ಲಿಯೂ ತಾಳವಿದ್ಯೆಯಲ್ಲಿಯೂ ಪ್ರವೀಣನಾಗಿದ್ದನು (ಕಾಮಂ. ೧೪). [ಸಂ. ಬ್ರಹ್ಮವೀಣಾ]

ಬ್ರಹ್ಮವೃಕ್ಷ (ನಾ). ೧. ಅತ್ತಿಮರ. ೨. ಮುತ್ತುಗ; ಪಲಾಶ : "ಬ್ರಹ್ಮವೃಕ್ಷಂ ಪಲಾಶಂ ಮುತ್ತುಗಂ" (ಪಂಗಣಾ. ೩೨-೦೩). [ಸಂ.]

ಬ್ರಹ್ಮವೇತ್ತ (ನಾ). = ಬ್ರಹ್ಮವೇತ್ತ್ರು : ಬ್ರಹ್ಮವೇತ್ತರು ದುರಿಳಕರ್ಮವನೆನೆವರೇ (ಗಗಣಾ. ೦೩-೨೦). [ಸಂ. ಬ್ರಹ್ಮವೇತ್ತೃ]

ಬ್ರಹ್ಮವೈವರ್ತ (ನಾ). ಪ್ರಸಿದ್ಧವಾದ ಹದಿನೆಂಟು ಪುರಾಣಗಳಲ್ಲಿ ಒಂದು : ಬ್ರಹ್ಮಪುರಾಣ ಪದ್ಮಪುರಾಣ. . .ಬ್ರಹ್ಮವೈವರ್ತವುರಾಣ . . . ಬ್ರಹ್ಮಾಂಡಪುರಾಣಮೆಂಬೀ . . . ಹದಿನೆಂಟು ಮೂಲಪುರಾಣಂಗಳು (ಪಪಂಕ. ೬); ಕ್ರಮವಾಗಿ ಹದಿನೆಂಟುಪುರಾಣಗಳ ಹೆಸರುಗಳು:— (೧) ಬ್ರಹ್ಮ (೨) ಪದ್ಮ (೩) ವಿಷ್ಣು. . . (೧೦) ಬ್ರಹ್ಮವೈವರ್ತ . . . (೧೮) ಬ್ರಹ್ಮಾಂಡ (ಶಾಕಥ. ೦೩೬). [ಸಂ.]

ಬ್ರಹ್ಮವ್ರತ (ನಾ). [ಜೈನ] ಬ್ರಹ್ಮಚರ್ಯವನ್ನು ಪಾಲಿಸುವ ವ್ರತ : ಪಂಚವಿಧಂ ಬ್ರಹ್ಮವ್ರತಂ ಜಿನೇಶ್ವರಮತದೊಳ್ (ಜಾಂಪು. ೬-೩೫). [ಸಂ.]

ಬ್ರಹ್ಮಶಿರ (ನಾ). ಒಂದು ಬಗೆಯ ಮಂತ್ರಾಸ್ತ್ರ ; ಈ ಬ್ರಹ್ಮನ ಸಕಲ ಶಕ್ತಿಗಳನ್ನು ಹೊಂದಿರುವುದೆಂದು ನಂಬಲಾದ ಅಸ್ತ್ರ: ದ್ರೋಣನು... ತನ್ನ ಪೆಜ್ಜಗೆಯನ್ನು ತೋರಿಸಲು ಅವನಿಗೆ ಬ್ರಹ್ಮಶಿರವೆಂಬ ಒಂದು ವಿಶಿಷ್ಟಾಸ್ತ್ರವನ್ನು ಕೊಟ್ಟು . . . ಅಲ್ಪಬಲಪುಳ್ಳವನ ಮೇಲೆ ಪ್ರಯೋಗಿಸಿದರೆ ಅದು ಪ್ರಪಂಚವನ್ನೇ ಸುಟ್ಟುಹಾಕಿಬಿಡುತ್ತದೆ ಎಂದನು (ಪಪಣಾ. ೨೩). [ಸಂ. ಬ್ರಹ್ಮಶಿರಸ್]

ಬ್ರಹ್ಮಶಿವ (ನಾ). ೧. ಒಬ್ಬಾತನ ಹೆಸರು : ಬ್ರಹ್ಮಶಿವಬುಬರರು ಪುನುಗೂರ ಅಳೆ (ಎಕ. ೪. ಕಿಕ್ಕಿ. ೫೯-೬ ; ಸು. ೦೦೦). ೨. 'ಸಮಯ ಪರೀಕ್ಷೆ' ಎಂಬ ಕಾವ್ಯವನ್ನು ಬರೆದ ಒಬ್ಬ ಕನ್ನಡಕವಿಯ ಹೆಸರು : ಈತನು ಹರಲೀಲೆಯೆಂಬ ಸಾವಿರ ಪದ್ಯವುಳ್ಳ ಒಂದು ಕಾವ್ಯವನ್ನು ಬರೆದು ದಾಗಿ ಬ್ರಹ್ಮಶಿವನ ಸಮಯಪರೀಕ್ಷೆಯಿಂದ ತಿಳಿಯುತ್ತದೆ (ಕಸ. ೬. ೨೫೨). [ಸಂ.]

ಬ್ರಹ್ಮಸಂಕಲ್ಪ (ನಾ). ವಿಧಿಯ ನಿಯಮ : ದೇಸಾಯರು ಬ್ರಹ್ಮ ಸಂಕಲ್ಪವನ್ನು ಒಂದು ನಿಮಿಷವಾದರೂ ತಿದ್ದಲು ಪ್ರಯತ್ನಿಸಿದರು (ಸಮಚಿ. ೨೦೩). [ಸಂ.]

ಬ್ರಹ್ಮಸಭೆ (ನಾ). ೧. ಬ್ರಹ್ಮನ ಸಭೆ. ೨. ಬ್ರಾಹ್ಮಣರ ಸಮುದಾಯ: ತೀನಪ್ಪವಮಯ್ಯರ ತೀವಿಯನ್ನು ಕಂಡೇ ಪಡುಮುನ್ಮೂರಿಪವರು ಮುಮ್ಮೂರು ಸೀಯಳೆ ಇಳಿದು, ಬ್ರಹ್ಮಸಭೆಗೆ ಕುಮಿಸಿದರು (ಶುಚಿ. ೦೩೩). ೩. ಬ್ರಹ್ಮವಾದಿಗಳ ಸಭೆ ; ಬ್ರಹ್ಮಜಿಜ್ಞಾಸುಗಳ ಸಭೆ : ಆ ಬ್ರಹ್ಮಸಭೆಯ ಇದಿರಿನಲ್ಲಿ, ಮಿತಪರಿವಾರದ ನಡುವೆ, ಜನಕರಾಜ ವ್ಯಾಖ್ಯಾಜಿವದ ಮೇಲೆ ಕುಳಿತಿದ್ದಾನೆ (ಪಪಂಚಾ. ೦೯೦). [ಸಂ. ಬ್ರಹ್ಮಸಭಾ]

ಬ್ರಹ್ಮಸಮಾಜ (ನಾ). ೧. ಬ್ರಾಹ್ಮಣರ ಸಮುದಾಯ. ೨. ಬಂಗಾಲದಲ್ಲಿ ಆರ್ಯಧರ್ಮದ ಪುನರುತ್ಥಾನಕ್ಕಾಗಿ ಕೇಶವಚಂದ್ರಸೇನರು ಸ್ಥಾಪಿಸಿದ ಒಂದು ಧರ್ಮಪಂಥ : ಚಾರುಬಾಲೆಯು ಮನೆಯವರು ಬ್ರಹ್ಮಸಮಾಜಕ್ಕೆ ಸೇರಿದವರು (ಹುಡೀ. ೦೬); ಬ್ರಹ್ಮಸಮಾಜವು ವಿಗ್ರಹಾರಾಧನೆ, ಅವತಾರವಾದ, ಜನ್ಮಾಂತರ ಮುಂತಾದುವನ್ನು ಖಂಡಿಸುತ್ತಿತ್ತು (ಶಾಕಥ. ೬೩೨). [ಸಂ.]

ಬ್ರಹ್ಮಸಾಕ್ಷಾತ್ಕಾರ (ನಾ). ಬ್ರಹ್ಮೈಕ್ಯ ; ಮುಕ್ತಿ ; ಮೋಕ್ಷ ; ಬ್ರಹ್ಮಸಾಕ್ಷಾತ್ಕಾರವೇ ಪೂಸಪಜ ಜರಮಗುರಿಯಾದರೆ ಲೋಕಸೇವೆಯೇ ಅದಕ್ಕೆ ಮುಖ್ಯಸಾಧಕ (ಪುಣ್ಯಾಸ್ರ. ೧೨ ೦೯೮). [ಸಂ.]

ಬ್ರಹ್ಮಸಾಯುಜ್ಯ (ನಾ). ಬ್ರಹ್ಮನಲ್ಲಿ ಐಕ್ಯವಾಗುವಿಕೆ ; ಮುಕ್ತಿ : "ಬ್ರಹ್ಮಭೂಯಂ, ಬ್ರಹ್ಮತ್ವಂ, ಬ್ರಹ್ಮಸಾಯುಜ್ಯಂ ಬ್ರಹ್ಮಸ್ವರೂಪವಾಗುವಿಕೆ . . . ಮೋಕ್ಷ " (ಕಿಡ್ಕಾಂ. ೫೩೦); ಜ್ಞಾನಿಗಳು ಮಾತ್ರ ಬ್ರಹ್ಮಸಾಯುಜ್ಯವನ್ನು ಹೊಂದುತ್ತಾರೆ (ಪುಣ್ಯಾ. ೨೮೨). [ಸಂ.]

ಬ್ರಹ್ಮಸಾವರ್ಣ (ನಾ). ಪದಿನಾಲ್ಕುಜನ ಮನುಗಳಲ್ಲಿ ಒಬ್ಬನು ; ಹತ್ತನೆಯ ಮನ್ವಂತರದ ಅಧಿಪತಿ : ಪದಿನಾಲ್ಕು ಮನುಗಳೊಳಗೆ ಧರ್ಮಸಾವರ್ಣಿಯೇ ವಿಷ್ಣುಸಾವರ್ಣಿಯಂತಲ್ಕೂ ದಕ್ಷಸಾವರ್ಣಿಯೇ ಬ್ರಹ್ಮಸಾವರ್ಣಿಯೆಂತಲೂ . . . ನಾಮಾಂತರಮುಂಟಾಗಿ (ಪಪಣ. ೨೦೫). ' ಚತುರ್ದಶಮನು ' ಪರಾ. [ಸಂ.]

ಬ್ರಹ್ಮಸೂತ್ರ (ನಾ). ೧. ಜನಿವಾರ : ಯಜ್ಞೋಪವೀತ ; "ಜನ್ಮವಾರಂ ಬ್ರಹ್ಮಸೂತ್ರಮುಪವೀತಮೆನಿಸಂ" (ಪಂಗಣಾ. ೬೬-೬) ; ಅವರವರ ನೆಲೆಗಳಿಂ ಬ್ರಹ್ಮಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾತ್ರ

ರ್ಮಾದಿ (ಅಷ್ಟ. ೦೩-೦೦ ೫); ದೇವ ವನಮಾಲಾಸ್ಮರದ್ ಬ್ರಹ್ಮಸೂತ್ರ ಜಯ ನಮಸ್ತೇ (ಹರಿ. ೩-೦೦೬ ೫೫೪). ೨. ಬಾದರಾಯಣ ಮುನಿಯು ರಚಿಸಿದ ವೇದಾಂತಸೂತ್ರ : ಬ್ರಹ್ಮಸೂತ್ರಕ್ಕೇ ಬಾದರಾಯಣ ಸೂತ್ರ, ವೇದಾಂತಸೂತ್ರ, ಶಾರೀರಕಮಿಮಾಂಸಾ, ಬ್ರಹ್ಮಮಿಮಾಂಸಾ ಎಂಬ ಹೆಸರುಗಳು ಬಂದಿವೆ (ಶಾಸ್ತ್ರ. ೩೭೦). [ಸಂ.]

ಬ್ರಹ್ಮಸ್ಥಾನ (ನಾ)· ೧. ಬ್ರಹ್ಮನ ಸ್ಥಾನ. ೨. [ವಾಸ್ತು] ದೇವಾಲಯದಲ್ಲಿ ಮೂರ್ತಿಯನ್ನು ಸ್ಥಾಪನೆ ಮಾಡಬೇಕಾದ ಸ್ಥಳ ; ವಾಸ್ತು ಮಂಡಲದ ಮಧ್ಯಭಾಗ : ದೇವರ ಪೀಠಿಕೆ (ಪೀಠ)ಯನ್ನು ಸ್ಥಾಪಿಸುವುದಕ್ಕೆ ಮುಂಚೆ ವಾಸ್ತುಮಂಡಲದ ಮಧ್ಯಭಾಗವಾದ ಬ್ರಹ್ಮಸ್ಥಾನದಲ್ಲಿ ಬೀಜಾವಾಪನ ಶಂಕುಸ್ಥಾಪನ ಮುಂತಾದುವನ್ನು ಮಾಡಿ . . . ರಹಸ್ಯವಾಗಿ ಮುಚ್ಚಬೇಕೆಂದು ಆಗಮಗಳಲ್ಲಿ ಹೇಳಿದೆ (ಪೂಜ್ಯಾಗ. ೦೯). [ಸಂ.]

ಬ್ರಹ್ಮಸ್ವ (ನಾ)· ಬ್ರಾಹ್ಮಣನ ಆಸ್ತಿ.— ಸ್ವತ್ತು. [ಸಂ.]

ಬ್ರಹ್ಮಸ್ವರೂಪ (ನಾ)· ಮೋಕ್ಷ ; ಮುಕ್ತಿ : ಮೋಕ್ಷಕ್ಕೆ ಕಡ್ಯಾವಾಪ್ತಿ ಎಂದೂ ಬ್ರಹ್ಮಸ್ವರೂಪಲಾಭ ಎಂದು ಹೆಸರುಗಳೂ(ಶಾಕ್ತ. ೬೧೫)- [ಸಂ.]

ಬ್ರಹ್ಮಹತಿ (ನಾ)· ಪಂಚಮಹಾಪಾತಕಗಳಲ್ಲಿ ಒಂದು ; ಬ್ರಾಹ್ಮಣನನ್ನು ಕೊಲ್ಲುವುದು ; ಬ್ರಾಹ್ಮಣವಧೆ : ರಾಘವ . . . ರಾಮಾವಧೆ ದೊಳಂದು ಬಂದಾ ಬ್ರಹ್ಮಹತಿ ತನ್ನನ್ನು ಅವಗಡಿಸಲದಕೆ ನಿಷ್ಕೃತಿ ಯಾವುದೆಂದು ಸಾರುವ ನಿಗಮವಧರ್ಮಂ ತಿಳಿದು ಹಯಮೇಧದಂ ಜವೆ ನೆಗಳ್ದ ಮಹಾನಿ ನಿಷ್ಕೃತಿ ಕರೆಸಿದಂ ವರಮಹ್ಮಾದಿಗಳನು (ಕೃಷ್ಣ·೨೦-೨); ಓನ್ನಮಶ್ಶಿವಾಯಾಯೆಂಬ ಮಂತ್ರಮನು ಸ್ಮರಿಸಿದೊಡೆ ಬ್ರಹ್ಮಹತಿ . . . ಪಾತಕಮೆನಿಪ್ಪ ಕೃಣವಾ ವುರುತಿ . . . ಸಾದುಜ್ಯಪದವಿಯ ಪದೆವರು (ಕಪಸಾ. ೨೦-೧೩). [ಸಂ.]

ಬ್ರಹ್ಮಹತ್ಯ (ನಾ)· = ಬ್ರಹ್ಮಹತಿ : ಎಲವೊ ಎಲವೋ ಬ್ರಹ್ಮಹತ್ಯವ ಪಡಿದಿದಪನೇ ಒಮ್ಮೆ ಶರಣೆನ್ನೆಲವೋ (ಪಸಾ. ೬೨೦); ಅವರಿಗೆ ಮೊದಲು ಅವರು ಕೇಳಿದ ವರವನ್ನು ಕೊಟ್ಟು ಅನಂತರ ಬ್ರಹ್ಮಹತ್ಯವ ಪಾಲನ್ನು ಕೊಡಬೇಕು (ಪಪಾ. II· ೦೪೯೩). [ಸಂ. ಬ್ರಹ್ಮಹತ್ಯಾ]

ಬ್ರಹ್ಮಹತ್ಯೆ (ನಾ)· = ಬ್ರಹ್ಮಹತಿ : ಇವಯ್ವರಸ್ಗೂ ಕೊಂದದ್ದರಿಂದ ಇಂದ್ರನನ್ನು ಬ್ರಹ್ಮಹತ್ಯೆಯು ಮೆಟ್ಟಿಕೊಂಡಿತು (ಪಪಾ. ೨೭೦); ಅಂತೂ ನನ್ನ ಪಾಲಿಗೆ ಬ್ರಹ್ಮಹತ್ಯೆ ತಪ್ಪಿದುದಲ್ಲ ಇನ್ನು (ಪಪಾ. II· ೦೪೯೪). [ಸಂ. ಬ್ರಹ್ಮಹತ್ಯಾ]

ಬ್ರಹ್ಮಹರಣ (ನಾ)· ಬ್ರಾಹ್ಮಣನ ಆಸ್ತಿಯ ಅಪಹರಣ : ಆ ದುರಾತ್ಮನಾ ಮಹಾತ್ಮನ ಧನಮಂ ಕೊಂಡು ಬ್ರಹ್ಮಹರಣಮಂ ಸುವರ್ಣ ಹರಣಮಂ ಗೆಯ್ದು (ಪಪಾ. ೭೦-೦೪). [ಸಂ.]

ಬ್ರಹ್ಮಾಂಜಲಿ (ನಾ)· ವೇದಪಠನದ ಸಮಯದಲ್ಲಿ (ಗೌರವದಿಂದ) ಕೈ ಮುಗಿದುಕೊಂಡಿರುವಿಕೆ : "ಬ್ರಹ್ಮಾಂಜಲಿ:—ವೇದಪಾಠಸಮಯದಲ್ಲಿ ದೇವರಿಗೂ ಗುರುಗಳಿಗೂ ನಮಸ್ಕಾರ ವಿನಯಭಾವಗಳನ್ನು ತೋರಿಸುವುದಕ್ಕೋಸ್ಕರ ಮುಗಿದ ಕೈಗಳ ಸೇರಿಗೆ ಹೆಸರು. ಬೊಗಸೆ ಹಿಡಿದ ಹಾಗೆ ಕೈಮುಗಿಯಃವಿಕೆ" (ಶಾಸ್ತ್ರ. ೦೦. ೨೭೭). [ಸಂ.]

ಬ್ರಹ್ಮಾಂಡ (ನಾ)· ೧. ವಿಶ್ವ ; ಜಗತ್ತು : ಪಾತಾಳದಿಂದತ್ಯತ್ಯ ವಿಮ್ಮ ಶ್ರೀಚರಣ ಬ್ರಹ್ಮಾಂಡದಿಂದತ್ಯತ್ಯ ನಿಮ್ಮ ಶ್ರೀಮಕುಟ (ಪಪಾ. ೭೫೬); ವಿವಿಧ ಬ್ರಹ್ಮಾಂಡಂ ಮಾಧವ ನಿನ್ನವಕಾಶಂ (ಪಗಪ. ೩-೦೦೭); ಬ್ರಹ್ಮಾಂಡ ಶತದಲಿ ಹೊಲಬುಗೆಡೆ ಹೊಕ್ಕಳಲಿ ಬ್ರಹ್ಮನೀತನುಗುಳಿದನು (ಕಭಾಗ. ೯-೫೫). ೨. ಪದಿನೆಂಟು ಪ್ರಸಿದ್ಧವಾದ ಪುರಾಣಗಳಲ್ಲಿ ಒಂದು : ವಾಮನ ಗಾರುಡ ಬ್ರಹ್ಮಾಂಡ . . . ಸಾಂಗದಿಂದಪ್ಪಾದಶ ಪುರಾಣಂಗಳೊಳ್ (ಪಪಪು. ೨೩-೫೭). ೩. [ದ್ವೈತ] ಇಪ್ಪತ್ತು ದ್ರವ್ಯಗಳಲ್ಲಿ ಒಂದು : ಪರಮಾತ್ಮ. ಲಕ್ಷ್ಮಿ . . . ಬ್ರಹ್ಮಾಂಡ. ಅವಿದ್ಯೆ. ಮೂರ್ತ . . . ಪ್ರತಿಬಿಂಬ ಎಂದು ದ್ರವ್ಯಗಳು ಇಪ್ಪತ್ತು (ತಂದಾಸಾ. ೨೭೩). ೪. (ಆಲಂ) ಅತ್ಯಧಿಕವಾದುದು; ಅತಿಶಯವಾದುದು : ಪಾಸ್ಪೆಲಿಸಲ್ಲಿ ದುಷ್ಟ ಬ್ರಹ್ಮಾಂಡ ಖರ್ಚಾಗುತ್ತೆ (ಪ:ಪಾಗ. ೨೩೩); ಪಸಂತನಿಗೆ ಬ್ರಹ್ಮಾಂಡ ಸಿಟ್ಟು ಬಂದಿತು (ಗಂಪಾದು. ೭೭). [ಸಂ.]

ಬ್ರಹ್ಮಾಂಡದಾನ (ನಾ). ಹದಿನಾರು ಮಹಾದಾನಗಳಲ್ಲಿ ಒಂದು : (೧) ತುಲಾಪುರುಷದಾನ, (೨) ಹಿರಣ್ಯಗರ್ಭದಾನ, (೩) ಬ್ರಹ್ಮಾಂಡದಾನ . . . (೧೬)ಮಹಾಭೂತಘಟದಾನ: ಈ ಮೇರೆಗೆ ಷೋಡಶ ಮಹಾದಾನಗಳನ್ನು ಶಾಸ್ತ್ರಕ್ಕೆ ಸ್ವಲ್ಪವೂ ಸ್ಖಾನತೆ ಇಲ್ಲದಂತೆ ಮಾಡಿ ಸತ್ಕೀರ್ತಿಯಂ ಪಡೆದರು (ಪುಣಾಸಂ. ೨. ೦೦೦). [ಬ್ರಹ್ಮಾಂಡ ? + ದಾನ]

ಬ್ರಹ್ಮಾಂಡಪುರಾಣ (ನಾ). ಪದಿನೆಂಟು ಪ್ರಸಿದ್ಧವಾದ ಪುರಾಣಗಳಲ್ಲಿ ಒಂದು : ಬ್ರಹ್ಮಪುರಾಣ ಪದ್ಮಪುರಾಣ ವೈಷ್ಣವಪುರಾಣ . . . ಗಾರುಡ ಪುರಾಣ ಬ್ರಹ್ಮಾಂಡಪುರಾಣವೆಂಬಿವೇ . . . ಪದಿನೆಂಟು ಮೂಲಪುರಾಣಂಗಳಂ (ಪಪಾಗ. ೬).

ಬ್ರಹ್ಮಾಂಧ (ನಾ).ಗೋಮೂತ್ರ: "ಬ್ರಹ್ಮಾ [ಹ್ಮಾಂ] ಭೇ–ಬ್ರಹ್ಮಾಬಂಬು? [ಬ್ರಹ್ಮಾಂಬು] . ಗೋಮೂತ್ರ" (ಪಿಪ್ರ. ೦೦೬). [ಸಂ. ಬ್ರಹ್ಮಾಂಧಸ್]

ಬ್ರಹ್ಮಾಣಿ (ನಾ). ೧. ಬ್ರಹ್ಮನ ಹೆಂಡತಿ ; ವಾಗ್ದೇವತೆ ; ಸರಸ್ವತಿ : ಶರಣುವೆ ವಾಣಿ ನೆರವೇ ಕಲ್ಯಾಣಿ ವಾಗೀಶ್ವರಿ ವರ ಬ್ರಹ್ಮಾಣಿ ಸುಂದರವೇಣಿ ಸುಚರಿತ್ರಾಣಿ (ಶ್ರೀಪಂ. ೫-೬-೦). ೨. ದುರ್ಗಾದೇವತೆ. ೩. ರೇಣುಕೆಯೆಂಬ ಸುಗಂಧದ್ರವ್ಯ. ೪. ಒಂದು ಬಗೆಯ ಹಿತ್ತಾಳೆ. [ಸಂ. ಬ್ರಹ್ಮಾಣೀ]

ಬ್ರಹ್ಮಾತಿ 'ಬೊಮ್ಮಹತಿ' ನೋ.

ಬ್ರಹ್ಮಾದಾಯ (ನಾ). ಬ್ರಾಹ್ಮಣನಿಗೆ ದಾನವಾಗಿ ಕೊಟ್ಟ ಭೂಮಿ : ಹಿಂದಿನ ಮಹಾಸ್ವಾಮಿಗಳು ಕೊಟ್ಟ ಬ್ರಹ್ಮಾದಾಯವನ್ನು ತಾವು ಈಗ ನಾಶಪಡಿಸುತ್ತೀರಿ (ಕಡೆ. ೨೫೮). [ಸಂ.]

ಬ್ರಹ್ಮಾದೇಯ (ನಾ). = ಬ್ರಹ್ಮದಾಯ ೨. : ಕೆಸುಗೊಳಮೊಡೆಯ ದಿಣಮ್ಮಜ್ಗ ಧಣ್ಣಗವಾಡಿಯಂ ಬ್ರಾಹ್ಮದೇಯಂಗೊಟ್ಟಮ್ (ಎಕ. IV. ಕೃಸ. ೯-೪ ; ಸು. ೭೫೦) : ಕೆಸುಗೊಳಮೊಡೆಯ ಮಹಾಜನಕ್ಕೆ ಪರ್ವ್ವಟ್ಟಮೂರುಂ ಮರ್ದ್ದೂರುಮುಂ ಬ್ರಾಹ್ಮದೇಯಂ ಪೊಯ್ದುಂ (ಎಕ. IV. ಕೃಸ. ೯-೨೨ ; ಸು. ೭೫೦). [ಫ ಇದು 'ಬ್ರಹ್ಮದೇಯ' ಎಂಬುವರ ಅಪಲಿಪಿತವಿರಬಹುದು]

ಬ್ರಹ್ಮಾನಂದ (ನಾ)· ೧. ಬ್ರಹ್ಮಸಾಕ್ಷಾತ್ಕಾರದಿಂದ ಉಂಟಾಗುವ ಆನಂದ : ಕರಣೇಂದ್ರಿಯುಂಗಳಿಂದು ಬ್ರಹ್ಮಾನಂದಘನಸೌಖ್ಯದಲಡಗಿ ಸುತ (ಗಗಾ. ೦೬-೭೦); ಆಸ್ತಿಕನಿಗೆ ನಿರ್ಗುಣವಾದ ದೈವೀತೇಜಸ್ಸು ಸಗುಣರೂಪದಲ್ಲಿ ಮೂರ್ತೀಭವಿಸಿದಾಗ ಆಗುವ ಆನಂದ ಬ್ರಹ್ಮಾನಂದ ವೆನಿಸುವುದು (ಶಾದೆ. ೯೨). ೨. ನಿದ್ರೆಯಲ್ಲಿ ವೈಮನಸ್ಯ ನಿರ್ವಿಕಾರವಾಗಿರುವ ಸುಖ : ವಿಷಯಾನಂದ ಬ್ರಹ್ಮಾನಂದ ಮುಖ್ಯಾನಂದ ವಾಸನಾನಂದ ನಿಜಾನಂದ ಆತ್ಮಾನಂದ ಅದ್ವೈತಾನಂದ ವಿದ್ಯಾನಂದ ವೆಂಬೀ ಆನಂದಪ್ರಭೇದಂಗಳವಜ್ಜಿ . . . ನಿದ್ರಾಸಮಯದಲ್ಲಿ ತೋರ್ಪುದೇ ಬ್ರಹ್ಮಾನಂದವೆನಿಸುವುದು (ಪಪಗ. ೨೪); ಸುಮಸ್ಪಿಕಾಲದಲ್ಲಿ ವ್ಯಪಂಚವೇನು ತೋರದೆ ಸುಖದಲ್ಲಿರ್ಪುದೇ ಬ್ರಹ್ಮಾನಂದವೆನಿಸುವುದು (ಜಾಜಾನು. ೫೬-೬). ೩. (ಆಲಂ) ಅತಿಶಯವಾದ ಸಂತೋಷ : ಮುದುಕಂಗಂತೂ ಬ್ರಹ್ಮಾನಂದವಾಯಿತು (ಕೂಗ್ಯು. ೦೬). [ಸಂ.]

ಬ್ರಹ್ಮಾನುಸಂಧಾನ (ನಾ)· ಪರಬ್ರಹ್ಮತತ್ತ್ವದ ಧ್ಯಾನ : ಯಮಗಳಲ್ಲಿ . . . ಐದನೆಯದು ಬ್ರಹ್ಮಚರ್ಯ. ಇದು ವಿಶ್ವಾತ್ಮಕವಾಗಿರುವ ಬ್ರಾನುಸಂಧಾನವನ್ನು ಒಗೆಗೊಂಡಿರುತ್ತದೆ (ಜಾಶಿ. ೨೬೬). [ಸಂ.]

ಬ್ರಹ್ಮಾಮ್ಲಿಕ (ನಾ). ಒಂದು ಬಗೆಯ ಸಸ್ಯ : ಮುಗಿಮಾಪ, ಆನೆಹುಣಿಸೆ, ಬ್ರಹ್ಮಾಮ್ಲಿಕ, ವೇಯೋಬಾಬ್ [ಪ್ರ] (ಪ್ರಾಶಿ. ೩-೩೬).

[ಬ್ರಹ್ಮ + ಆಮ್ಲಿಕ್ಕ]

ಬ್ರಹ್ಮಾಯು (ನಾ). ೧. ಬ್ರಹ್ಮನ ಆಯುಸ್ಸು : ℙ ನಾಲ್ಕುಯುಗಗಳು ಸಾವಿರ ಬಾರಿ ಬಂದರೆ ಬ್ರಹ್ಮನ ಒಂದು ದಿನದಷ್ಟು ಕಾಲವೆಂಬ ನಂಬಿಕೆಯಿದೆ. ೨. (ಅಲಂ) ದೀರ್ಘಾಯುಸ್ಸು : ಜೀಯ ಶತ್ರು ಪ್ರತತಿಸಂಹಾರಕ ಸಮಸ್ತಕ್ಷಿತಿಪತಿ ಬ್ರಹ್ಮಾಯುರಸ್ತುವೆನುತ್ತ ಕೈ ವೆಗಹಿ ನುತಗುಣನ ಬಿರುದಾವಳಿಯ ಸಂಗತಿಮಷಭರ್ಮಸುವ ಸಮಯೋಚಿತದ ಮನ್ನಣೆವಡದು ಮೆಱೆದುದು ಭಟ್ಟಸಂದೋಹ (ಕಾಶ್ಯಾ. ೬-೩೯).

[ಸಂ. ಬ್ರಹ್ಮಾಯುಸ್]

ಬ್ರಹ್ಮಾರ್ಪಣ (ನಾ). ೧. ಬ್ರಹ್ಮವಿದ್ಯೆಯ ಬೋಧನೆ. ೨. ಮಾಡಿದ ಕರ್ಮಗಳನ್ನು ಪರಮಾತ್ಮನಲ್ಲಿ ಅರ್ಪಿಸುವುದು. ೩. ಪರಬ್ರಹ್ಮ ವಸ್ತುವಿಗೆ ತನ್ನನ್ನೇ ಅರ್ಪಿಸಿಕೊಳ್ಳುವಿಕೆ. ೪. ಬ್ರಹ್ಮಕ್ಕೆ ಅರ್ಪಿಸುವ ಹವಿಸ್ಸು. ೫. ಒಮ್ಮು ಬಗೆಯ ಮಂತ್ರ. ೬. ಹಿಂಡ ಪ್ರದಾನವಿಲ್ಲದೆ ಮಾಡುವ ಶ್ರಾದ್ಧ. ೭. ಶ್ರಾದ್ಧದ ಅಂತ್ಯದಲ್ಲಿ ಹೇಳುವ ಎಲ್ಲವೂ ಬ್ರಹ್ಮನಿಗೆ ಅರ್ಪಿತವಾಗಲಿ ಎಂಬರ್ಥದ ಮಂತ್ರ. [ಸಂ.]

ಬ್ರಹ್ಮಾವರ್ತ (ನಾ). ಹಸ್ತಿನಾವುರದ ವಾಯವ್ಯಕ್ಕೆ ಇದ್ದ ಸರಸ್ವತೀ ಹಾಗೂ ದೃಷದ್ವತೀ ಎಂಬೆರಡು ನದಿಗಳ ನಡುವಿನ ಪ್ರದೇಶ : ಸರಸ್ವತೀ ದೃಷದ್ವತೀ ನದಿಗಳ ನಡುವೆ ಇದ್ದ ತಪೋವನಗಳ ಪ್ರದೇಶವು ಅತಿಪವಿತ್ರವೆನಿಸಿ ಬ್ರಹ್ಮಾವರ್ತವೆಂಬ ಹೆಸರನ್ನು ಪಡೆದಿತ್ತು (ಪಾಅಭ. ೩೩); ಬ್ರಹ್ಮಾವರ್ತದಲ್ಲಿ ನೆಲಸುತ್ತಿದ್ದ ಅವನ ದತ್ತಕಮಗ ನಾನಾಸಾಹೇಬನಿಗೆ . . . ಪಾರ್ಷಿಕವೆನ್ನಿಸಿ ೮ ಲಕ್ಷ ರೂಪಾಯಿಗಳನ್ನು ಬ್ರಿಟಿಷರು ನಿಲ್ಲಿಸಿ ಬಿಟ್ಟಿದ್ದರು (ಕೃಪಂಚ. ೩೩). [ಸಂ.]

ಬ್ರಹ್ಮಾಸನ (ನಾ). [ಯೋಗ] ಧ್ಯಾನಮಾಡುವುದಕ್ಕೆ ಯೋಗ್ಯವಾದ ಯೋಗಾಸನ: "ಬ್ರಹ್ಮಾಸನಂ_ಧ್ಯಾನಯೋಗಾಸನೇ—ಸ್ವಸ್ವರೂಪವನ್ನು ಗಲೀ. ಉಪಾಸ್ಯದೇವತಾಮೂರ್ತಿಯನ್ನಾಗಲಿ ಧಾಮಿಸುವುದಕ್ಕೋಸ್ಕರ ಸ್ವಸ್ತಿಕ, ಪದ್ಮ ಮುಂತಾದ ಯೋಗಾಸನಗಳ ಹೆಸರು" (ಶಿಶ್ಯಂಚಿ. ೨೩೩).

[ಸಂ.]

ಬ್ರಹ್ಮಾಸ್ತ್ರ (ನಾ). ೧. ಬ್ರಹ್ಮನಂ ಅಧಿದೇವತೆಯಾಗಿರುವ ಮಂತ್ರಾಸ್ತ್ರ : ಇಂದ್ರಜಿತುವಿನಿಂದು ಬ್ರಹ್ಮಾಸ್ತ್ರದಂಕೆಯಿಂ ನಿಂದು . . . ಬಂದೊಸಗೆಯೇಳ್ದನಿಲಜನನುಸಾರಿ ಮನ್ನಿಸಿದನು (ಕೃಜಾಭಾ. ೦೬-೩); ಅರ್ಜುನನು ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಬಿಟ್ಟನು (ಪರ್ವಾ. ೫೯೦). ೨. (ಅಲಂ)ಮಹಾ ಉಪಾಯ; ಅತ್ಯಂತ ಬಲಿಷ್ಠವಾದ ಉಪಾಯ; ವಿಜ್ಞಾನವ ಮಾತುಗಳನ್ನು ಅವಳು ಆಡಿದಾಗಲೇ ಒಳಗೆ ಬ್ರಹ್ಮಾಸ್ತ್ರವನ್ನು ಸರಿಪಡಿಸಿಕೊಳ್ಳುತ್ತಿದ್ದಾಳೆ ಎಂದು ಅಂದುಕೊಂಡ (ಮುಚಾಸ. ೦೭೭). [ಸಂ.]

ಬ್ರಹ್ಮಿ₁ (ನಾ). ೧. ಒಂದು ಬಗೆಯ ಸಸ್ಯ ; ಹೊನ್ನಗನ್ನೆ : " ಮತ್ಸ್ಯಾಕ್ಷೀ—ಬ್ರಹ್ಮಿ, ಹೊನ್ನಗನ್ನೆ " (ಓಪಾ. ೦೦೩); ಅಳಲೆಕಾಯಿ, ಕಾರೆಕಾಯಿ . . .ಬ್ರಹ್ಮಿ ಇವುಗಳನ್ನೆಲ್ಲಾ ಚೂರ್ಣಿಸಿ ಸಕ್ಕರೆ ಬೆರಸಿ ಹಸುವಿನ ತುಪ್ಪ, ಜೇನುತುಪ್ಪದಿಂದ ಕಲಸಿ ಸೇವಿಸಲು ಸ್ವರಭಂಗ ಪರಿಹಾರವಾಗಿ ವಾಗುವುದು (ಶಿಪ್ರ. ೦೨೨). ೨. ಒಂದು ಬಗೆಯ ವಿಮಾನ.

[ಸಂ. ಬ್ರಹ್ಮೀ]

ಬ್ರಹ್ಮಿ₂ (ಗು). ೧. ಬ್ರಹ್ಮನಿಗೆ ಸಂಬಂಧಿಸಿದ. (ನಾ). ೨. ವಿಷ್ಣು. ೩. ಬ್ರಹ್ಮವಾದಿ : ಋತ್ವಿಕ್ಕಿಯೆಬ್ರ ಬ್ರಹ್ಮನ ಬಲಿಯಲ್ಲಿ ಸಲಂತಿ ಮುಳುಗಿದರು ಬಲ್ಲಿವೆಬ ಬ್ರಹ್ಮಿಗಳು (ಶೀಗೀಪ್ರ. ೦೮೦-೭೦೦).

[ಸಂ. ಬ್ರಹ್ಮಿನ್]

ಬ್ರಹ್ಮೇತಿ 'ಬೊಮ್ಮಪತಿ' ನೋ.

ಬ್ರಹ್ಮೇತಿಕಾಖಿ 'ಬೊಮ್ಮೇತಿಗಾಖಿ' ನೋ.

ಬ್ರಹ್ಮೈಕ್ಯ (ನಾ). ಮೋಕ್ಷ ; ಮುಕ್ತಿ ; ಅವಿರಳವ ನಿಜವೇದತೇದಾಂತಾದಿ ಶಾಸ್ತ್ರಗಳ ಗುರುಕರುಣಾಕಟಾಕ್ಷವಳೆದು ತಾವಾಗಿರುವರಿಗೆ ತಾನವಿರಳ ಬ್ರಹ್ಮೈಕ್ಯಪದ ಪ್ರಾಪ್ತಿಯದು (ಗಪಾ. ೯-೩೭). [ಸಂ.]

ಬ್ರಹ್ಮೈಕ್ಯತೆ (ನಾ). = ಬ್ರಹ್ಮೈಕ್ಯ : ಬ್ರಹ್ಮೈಕ್ಯತೆಯ ಸದಾ ಪ್ರಭರಿತರ ಪದವನುಸುರುವೊಡೆ ಶಕ್ಯಮೆಂತು (ಗಪಾ. ೦೪-೩೦). [ಸಂ. ಬ್ರಹ್ಮೈಕ್ಯತಾ]

ಬ್ರಹ್ಮೋತ್ತರ (ನಾ).[ಜೈನ]ಪವಿನಾರು ಕಲ್ಪಗಳಲ್ಲಿ ಒಂದು: ಮುಂದೇಬ್ ದುಯ್ದಂ . . . ಆಯುಷ್ಯದಂತ್ಯದೊಳ್ ಕೊಲಿಗೆ ಮೊಗಂ ಮುರಿಯಂ ಬ್ರಹ್ಮಬ್ರಹ್ಮೋತ್ತರಕಲ್ಪಾಮರರನೇಂ ಜಪಂ ಜಿಟ್ಟಗನೋ (ಪ್ರಭಾಕ. ೦೩-೦೦೩). [ಸಂ.]

ಬ್ರಹ್ಮೋತ್ಸವ (ನಾ). ತಿರುಪತಿ, ಮೇಲುಕೋಟೆ ಮುಂತಾದ ಪವಿತ್ರ ಸ್ಥಳಗಳ ದೇವಾಲಯಗಳಲ್ಲಿ ಅತಿವಿಜೃಂಭಣೆಯಿಂದ ಆಚರಿಸುವ ಸಕಲಪೂಜೆಗಳಿಂದ ಕೂಡಿದ ಸೇವೆ : ಮೇಲುಕೋಟೆ ಚಲುವರಾಯ ಸ್ವಾಮಿಯವನಿಗೆ . . . ಬ್ರಹ್ಮೋತ್ಸವಕಾಲದಲ್ಲಿ ವಯಿತಮುಡಿಯುಂ ಧರಿಸಿ ತೆಗೆದ ಪಂತರ (ಶುಚಾಚ. I, ೪೦) ; ಗೋಪಾಲದಾಸರು . . . ಪ್ರತಿವರ್ಷವೂ ಬ್ರಹ್ಮೋತ್ಸವಕಾಲದಲ್ಲಿ ತಿರುಪತಿಗೆ ಹೋಗಿ ಬರುವುದರ ವಿನಾ ಮತ್ತೆಲ್ಲೂ ವಿಹೇಷಕುಂಚಾರ ಮಾಡುತ್ತಿರಲಿಲ್ಲ (ಕಚಿ. ೪೩೬). [ಸಂ.]

ಬ್ರಹ್ಮೋಪದೇಶ (ನಾ). ೧. ವೇದಮಂತ್ರಗಳನ್ನು ಹೇಳಿಕೊಡುವುದು ; ವೇದಾಧ್ಯಾಪನ. ೨. ಬ್ರಹ್ಮವಿದ್ಯೆಯನ್ನು ಕಲಿಸುವುದು; ಬ್ರಹ್ಮತತ್ತ್ವವನ್ನು ಹೇಳಿಕೊಡುವುದು : ಅವರಿವರುಗಳ ಮುಖದಲಿದು ಸಂಭವಿಸುವುದೆ ಬ್ರಹ್ಮೋಪದೇಶದ ಹಮಣ ಬಲ್ಲವನಾವನೈ (ಕಾಶ್ಯಾ. ೯-೩). ೩. ಉಪನಯನ ಮತ್ತು ಆ ಕಾಲದಲ್ಲಿ ಮಾಡುವ ಗಾಯತ್ರೀಮಂತ್ರೋಪದೇಶ : ಜಾಳಿ ಕುದರವಿಷ್ಣುವಿಜ ಬ್ರಹ್ಮೋಪದೇಶಮಹೋತ್ಸವಕ್ಕೆ ಸತಿ ಮಾಚಿಕಬ್ಬೆಯನ್ನೂ ಮಗಳು ಶಾಂತಳೆ ದುಸ್ಸೂ ತಪ್ಪದೆ ಕರತರಬೇಕು (ಶಾಂಕಣ. ೪) ; ಆ ರಾಮಭಟ್ಟರು ಅಂದೇ ಬೇಸಗೆಯೊಳು . . . ಬ್ರಹ್ಮೋಪದೇಶವನಿತ್ತರಾದರದೊಳು ವಿಧ್ಯುಕ್ತ ರೀತಿಯೊಳೆನಗೆ (ಶಾಅಚ. ೦೮ ೩೩). [ಸಂ.]

ಬ್ರಾಂದಿ (ನಾ). "(ದ್ರಾಕ್ಷಾರಸದಿಂದ ಬಟ್ಟಿಯಿಳಿಸಿ ತೆಗೆದ) ತೀಕ್ಷ್ಣ ಮದ್ಯ" (Brandy. ಇಂಗ್ಲಿ) : ನೆಕ್ಲುದೋವ್ ತನ್ನ ಚಿಕ್ಕಮ್ಮಂದಿ ರೊಡನೆ ಒಂದು ಲೋಟಿ ಬ್ರಾಂದಿಯನ್ನೂ ಸ್ವಲ್ಪ ದ್ರಾಕ್ಷಾರಸವನ್ನೂ ಸವಿದನು (ಪ್ರಹಾ. ೩೩). [← ಇಂ. Brandy]

ಬ್ರಾತ (ನಾ). ಸಮೂಹ ; ಸಮುದಾಯ : ಜಿನಪ್ರತ್ಯಬ್ರಾತವಂ ಬಂದಿಸು (ಅಷ್ಟ. ೩-೩) ; ಈತನೇ ಪ್ರತ್ಯಕ್ಷವಿವನೆಂದೋತು ಮನುಜ ಬ್ರಾತವದುಭುತಜಾತಮಾಸರಾಗಿ ಪೊಗಳಲು (ಪಚಿ. ೩೨.೧೩).

[< ಸಂ. ವ್ರಾತ]

ಬ್ರಾಹ್ಮ (ಗು). ೧. (ಸೃಷ್ಟಿಕರ್ತನಾದ) ಬ್ರಹ್ಮನಿಗೆ ಸಂಬಂಧಿಸಿದ : "ಬ್ರಾಹ್ಮಂ —ಬ್ರಹ್ಮಸಂಬಂಧವಾದ ತೀರ್ಥವು" (ಶಿಪ್ರಾಚಿ. ೨೩೧). ೨. ಪರಬ್ರಹ್ಮವಿಷಯಕವಾದ. ೩. ಬ್ರಾಹ್ಮಣನಿಗೆ ಸಂಬಂಧಿಸಿದ. ೪. ಆಗುಮೊಗಳು ಮೊದಲಾದುವುಗಳಿಗೆ ಸಂಬಂಧಿಸಿದ ; ವೇದ ಸಂಬಂಧವಾದ. ೫. ವೇದಗಳಲ್ಲಿ ನಿರೂಪಿತವಾದ ; ವೇದೋಕ್ತವಾದ. ೬. ಪವಿತ್ರವಾದ ; ದೈವಸ್ವರೂಪದ ; ದೈವಿಕ. ೭. ಆಪ್ತ. ಮುಹೂರ್ತ ಇತ್ಯಾದಿಯಾಗಿ ಬ್ರಹ್ಮನನ್ನು ಅಧಿದೇವತೆಯಾಗಿ ಉಳ್ಳವು. ೮. ಬ್ರಹ್ಮಲೋಕಕ್ಕೆ ಸಂಬಂಧಿಸಿದ. (ನಾ). ೯. ಬ್ರಾಹ್ಮಣ : ವಿಪ್ರ : ಆ ಬ್ರಾಹ್ಮರೊಳು ಕಮ್ಮೆ ಮೊದಲಾದೆಂಟು ಬಲವಱು (ಪಾಂಡಾ. ೭೫-೭) ; ಗೋ ಬ್ರಾಹ್ಮರಂ ನಾಡೆ ರಕ್ಷಸದಿರ್ಪನ್ನತ

ಪಾಪಿಗೆ (ಶಾಸ್ತ್ರ. ೮೮) ; ಒಮ್ಮನದಿ ದೇವ ಬ್ರಾಹ್ಮರ ಪೂಜೆ ಸಂತರ್ಪಣಾಜ್ಯ ಗೈವತ (ಪಾಪವಿ. ೨-೩೯). ೧೦. ನಾರದ. ೧೧. ಕೈ ಹೆಬ್ಬೆರಳಿನ ಬುಡದ ಕೆಳಗಿರುವ ಭಾಗ. ೧೨. ಒಂಭ ಪುರಾಣದ ಹೆಸರು. 'ಅಷ್ಟಾದಶ ಪುರಾಣ' ಪರಾ. ೧೩. ಎಂಟು ಬಗೆಯ ವಿವಾಹಪದ್ಧತಿಗಳಲ್ಲಿ ಒಂದು ; ವರನಿಂದ ಏನನ್ನೂ ಪಡೆಯದೆ ಸಾಲಂಕೃತ ಕನ್ಯಾದಾನಮಾಡುವ ವಿಧ್ಯುಕ್ತವಿವಾಹ. ೧೪. [ಜ್ಯೋತಿ] ಒಂದು ಮುಹೂರ್ತದ ಹೆಸರು : ಬೆಳಗಪ್ಪ ಜಾವದ ಬ್ರಾಹ್ಮಮೆಂಬ ಮುಹೂರ್ತದೊಳ್ (ಜಾಂಬಿ. ೯-೩೦೫ ಪ). ೧೫. [ನಾಟ್ಯ] ಇಪ್ಪತ್ತು ಮೂರು ದೇಶೀಯಸ್ಥಾನಕಗಳಲ್ಲಿ ಒಂದು : ☞ "ಒಂದು ಕಾಲನ್ನು ಸಮನಾಗಿರಿಸಿ ಇನ್ನೊಂದು ಕಾಲನ್ನು ಕುಂಚಿತವಾಗಿ ಮೊದಲ ಕಾಲಿನ ಮೊಳಕಾಲಿಗೆ ಸಮನಾಗುವಂತೆ ಹಿಂಬಗಡೆ ಮೇಲಕ್ಕೆತ್ತುವುದು" (ಅಕ್ಕ. ೫೫೦ ನಿರ್ಣಯಪಾಠ) : ಒಂದು ಪದಂ ಸಮದಿಂ ಮತ್ತೊಂದು ಪದಂ ನಿಂದ ಪದದ ಮೊಳಕಾಲ್ಗಂ ಸಮದಿಂವಂಬಡೆದುಂ ಮತಿಯುಂ ನಿಂದುಮ ಕುಂಚಿತವುದಾಗೆ ಬ್ರಾಹ್ಮಮೆಂಸಿಕ್ಕುಂ (ಶಾಸ್ತ್ರ. ೭-೧೫೩). [ಸಂ.]

ಬ್ರಾಹ್ಮಣ (ಗು). ೧. ಬ್ರಾಹ್ಮಣನಿಗೆ ಸಂಬಂಧಿಸಿದ. ೨. ಬ್ರಾಹ್ಮಣನಿಗೆ ಯೋಗ್ಯವಾದ. ೩. ಬ್ರಾಹ್ಮಣನು ಕೊಟ್ಟಿರುವ; ಬ್ರಾಹ್ಮಣನಿಂದ ಬಂದ. (ನಾ). ೪. ಬ್ರಹ್ಮನನ್ನು ಅರಿತವನು ; ಬ್ರಹ್ಮಜ್ಞಾನಿ : ಬ್ರಾಹ್ಮಣರು ಎಂಬ ಮಾತಿನಿಂದ ಬ್ರಹ್ಮಜ್ಞಾನಿಗಳು ಎಂದರ್ಥ (ಪಾಶಿ. ೯-೦೬ ಜಾತ್ಯರ್ಥ). ೫. ಚತುರ್ವರ್ಣಗಳಲ್ಲಿ ಮೊದಲನೆಯ ವರ್ಣ: 'ಬ್ರಾಹ್ಮಣ' ಎಂಬ ವರ್ಗದ ಎಲ್ಲರೂ ಮೂಲತಃ 'ಸ್ಮಾರ್ತರೇ' (ಕರ್ಣಪಿ. ೨೩೨). ೬. ಚತುರ್ವರ್ಣಗಳಲ್ಲಿ ಮೊದಲನೆಯ ವರ್ಣಕ್ಕೆ ಸೇರಿದವನು; ವಿಪ್ರ: "ಬ್ರಾಹ್ಮಣಂ ಬಾಡುಂ ಭೂಮಿದೇವಂ ದ್ವಿಜಂ" (ಕುಪಣ. ೭೬-೦); ಗುರುಕ್ಷೇತ್ರದೊಳು ಸಹಸ್ರಬ್ರಾಹ್ಮಣರ್ಗೆ ಸಹಸ್ರಕಪಿಲೆಯಂ ದಾನಂಗೊಟ್ಟ ಫಲ (ಕಾಶಿ. ೩೪-೧, ೦೬೨-೦೩ ; ೧೦೮೨); ಮುಳಿಯದಿರಿ ನಾವೆಂಬ ಮಾತಿಗೆ ತೀವು ಮೋಡಲು ಬ್ರಾಹ್ಮಣರೆ ನೀವಿಳೆಯೊಳಂ (ಪಾಪ. ೨೨-೩೯). ೭. ಸಂಹಿತೆ, ಬ್ರಾಹ್ಮಣ ಮತ್ತು ಆರಣ್ಯಕ ಎಂಬ ವೇದಗಳ ಮೂರು ವಿಭಾಗಗಳಲ್ಲಿ ಒಂದು ; ವೇದಗಳ ವ್ಯಾಖ್ಯಾನ ರೂಪವಾದ ಗದ್ಯಭಾಗ : ವೇದಗಳಲ್ಲಿ ಸಂಹಿತೆ, ಬ್ರಾಹ್ಮಣ, ಆರಣ್ಯಕವೆಂದು ಮೂರು ಭಾಗಗಳಿರುವುವು. ಪದ್ಯಗದ್ಯರೂಪಗಳಾದ ಮಂತ್ರಭಾಗಕ್ಕೆ ಸಂಹಿತೆಯೆಂದೂ, ಅವುಗಳಿಗೆ ವ್ಯಾಖ್ಯಾನರೂಪವಾದ ಗ್ರಂಥಗಳಿಗೆ ಬ್ರಾಹ್ಮಣವೆಂದೂ ಅರಣ್ಯದಲ್ಲಿರುವ ಋಷಿಗಳು ನಿಯಮಪೂರ್ವಕವಾಗಿ ಕಲಿಯುತ್ತಿದ್ದ ರಹಸ್ಯವಾದ ಭಾಗಕ್ಕೆ ಆರಣ್ಯಕವೆಂದೂ ವ್ಯವಹಾರ (ಒಂಧಾ. ೦೬೭); ಪ್ರಜಾಪತಿಯಾದ ಬ್ರಹ್ಮನನ್ನೇ ವಿಶ್ವಕರ್ಮನೆಂದು ಬ್ರಾಹ್ಮಣಗಳಲ್ಲಿ ಕರೆಯಲಾಗಿದೆ (ಕ್ರಾಂಚ. ೦೦೬). [ಸಂ.]

ಬ್ರಾಹ್ಮಣೇರಿ (ನಾ). ಬ್ರಾಹ್ಮಣರು ವಾಸಿಸುವ ಪ್ರದೇಶ; ಅಗ್ರಹಾರ: ಧೂರಿಭೂಪೋತ್ತಮರಲ್ಲದೆ ಬ್ರಾಹ್ಮಣೇರಿ ಕಣ್ಮನಕೆ ರಂಜಿಸಿತು (ಪಾಪಪು. ೬-೩೩). [ಬ್ರಾಹ್ಮಣ + ಕೇರಿ]

ಬ್ರಾಹ್ಮಣತ್ವ (ನಾ). ಬ್ರಾಹ್ಮಣನ ಧರ್ಮ: ಜ್ಞಾನ ದಯೆ ದಾಕ್ಷಿಣ್ಯ ಮೊದಲಾದ ಕಲ್ಯಾಣಗುಣಗಳು ಬ್ರಾಹ್ಮಣತ್ವ (ಸಿಂಪಾಪು. ೦೩೭). [ಸಂ.]

ಬ್ರಾಹ್ಮಣಬುವ (ನಾ). = ಬ್ರಹ್ಮಬುವ : "ಜಾತಿಮಾತ್ರದಿಂದೆ ತೋಱೆ ಬಾಬ್ಬ ಪಾರ್ವನಂ ಬ್ರಾಹ್ಮಣಬುವನೆಂಬುಮೆ" (ಕಣಾಪು. ೬೬-೨೩೨). [ಸಂ.]

ಬ್ರಾಹ್ಮಣಯಷ್ಟಿಕೆ (ನಾ). ಒಂದು ಬಗೆಯ ಮೂಲಿಕೆ: ಗಂಟುಭಾರಂಗಿ: "ಹೆಂಜಿಕಾ . . . ಬ್ರಾಹ್ಮಣಯಷ್ಟಿಕಾ. ಅಂಗಾರವಲ್ಲೀ. ಬಾಲೇಯಪಾಕಃ. ಬರ್ಬರಃ. ವಂಟಕಃ" ಭಾರಂಗೀ ಹೆಸರುಗಳು. ಗಂಟುಭಾರಂಗಿಃ ಎಂಬುವ ಗ್ರಂಥಿಕದ್ರವ್ಯವು ಪ್ರಸಿದ್ಧವಾದದ್ದು" (ಸಿಧಾ೦೬. ೦೬೨). [ಸಂ. ಬ್ರಾಹ್ಮಣಯಷ್ಟಿಕಾ]

ಬ್ರಾಹ್ಮಣವಾಡ (ನಾ). ಬ್ರಾಹ್ಮಣರ ನೆಲೆ,– ಕೇರಿ: ಮಂತ್ರಸಾಲೆಯು ಸೀಮೆಪಳಗಣ ಬ್ರಾಹ್ಮಣವಾಡದ ಪೊಟ್ಲು ಸರುಹಿನ ಗ್ರಾಮು (ಎಕ್ಷ. VIII. ೫೬ಪಾಡ. ೫೬-೦೦; 1631); ಬ್ರಾಂಹ್ಮಣವಾಡದಿಂದಲು ಗದ ತ್ರೋಟು ಸಹಾ (ಪ್ರಾಇ. ೦೯೫೬. ೫೯-೩೦; 1632). [ಬ್ರಾಹ್ಮಣ + ವಾಡ]

ಬ್ರಾಹ್ಮಣಾರ್ಥ (ನಾ). ಶ್ರಾದ್ಧದ ಕರ್ಮ ಮುಟ್ಟು ಪೂರ್ವಪಂಕ್ತಿ: ಬ್ರಾಹ್ಮಣಾರ್ಥದಿಂದಲೇ ಜೀವನ ನಡೆಯಬೇಕಾಗಿದ್ದು, ಭೋಜನವೆಂದರೆ ಪತ್ತು ಮೈಲಿ ಎಗ್ಗಿಲ್ಲದ ತಾಲಿ ಹಿಡಿದು ನಡೆದುಬಿಡುತ್ತಿದ್ದ ದಾಸಾಜಿಯ್ಯ ತನ್ನ ಕಷ್ಟವನ್ನು ತೋಡಿಕೊಂಡ (ಸಿಂಪಾ. ೦೦); ಇದ್ದಿಗಳು ಬ್ರಾಹ್ಮಣಾರ್ಥ ದವರಂತೆ ಗಡದ್ದು ತಿಂದು, ಪಾಲ್ಕು ಜೋಬಾಯಿಬೋಂಡ ಎರಡು ಚಿರೋಟಿ ಸುಂಗಿಪ್ಪರು (ಕುಪೋಪು. ೦೩೯). [ಸಂ.]

ಬ್ರಾಹ್ಮಣಿ (ನಾ). ೧. ಬ್ರಾಹ್ಮಣ ವರ್ಣದ ಸ್ತ್ರೀ : ಮಹಾದೇವ ಜಣಂಗಿಯರು ಬ್ರಾಹ್ಮಣ ಕಂಚಿಕಬ್ಬೆಗೆ [ತಂಬಿ] ಹದುಮಣ ಮಧ್ಯದ ಮನಿಯು . × × × ಬಿಟ್ಟರು (ತೌಷಾ. XX. ೪೫-೦೫ ; 1128). ೨. ಬ್ರಾಹ್ಮಣನ ಹೆಂಡತಿ : ಶ್ರೀಪತಿನಾಮಕರ ಬ್ರಾಹ್ಮಣಿ ಜಾಮಿಕಬ್ಬೆಗಳು . . . ಶ್ರೀ ಮೂಲಸ್ಥಾನದೀಪರ ನಿವೇದ್ಯಕ್ಕೆ . . . ಬಿಟ್ಟ ಮತ್ತರು ೧ (ಪಾಸಪ. ೫೯). ೩. ಬ್ರಹ್ಮನ ಹೆಂಡತಿ. ೪. ಬುದ್ಧಿ. ೫. ಒಂದು ಬಗೆಯ ಸಸ್ಯ ; ಗಂಟುಭಾರಂಗಿ : "ಹೆಂಜಿಕಾ, ಬ್ರಾಹ್ಮಣೀ. . . ಮದಕಃ - ೯ ಭಾರಂಗೀ ಹೆಸರುಗಳು" (ಸಿಧಾ೦೬. ೦೬೩). ೬. ಒಂದು ಬಗೆಯ ಹಿತ್ತಾಳೆ. ೭. ಒಂದು ಬಗೆಯ ಹಲ್ಲಿ. ೮. ಒಂದು ಬಗೆಯ ಕಣಜ, – ಕವಡೀರಿಗೆ ಹುಳು. [ಸಂ. ಬ್ರಾಹ್ಮಣೀ]

ಬ್ರಾಹ್ಮಣಿಕೆ (ನಾ). = ಬ್ರಾಹ್ಮಣತ್ವ ; ಬ್ರಾಹ್ಮಣಿಕೆಗೆ ನೆಲೆಗಟ್ಟಾವುದೆಂಬುದು ಬಲ್ಲಡೆ ನೀವು ಹೇಳಿರೆ (ಉಂಪಾ. ೪. ೦೬೦-೨೦೬) ; ಪ್ರಾಚೀನಕಾಲದಲ್ಲಿ ಸತ್ಕಾರ್ಯಗಳನ್ನಾಚರಿಸಿ ಶೂದ್ರನು ಬ್ರಾಹ್ಮಣಿಕೆಯನ್ನು ಪಡೆಯಲು ಅಭ್ಯಂತರವಿರಲಿಲ್ಲ (ಪಾಕವಿ. ೬). [ಬ್ರಾಹ್ಮಣ + – ಇಕೆ]

ಬ್ರಾಹ್ಮಣಿತಿ (ನಾ). ಬ್ರಾಹ್ಮಣ ಜಾತಿಯವಳು : ಜಾತಿ ಕಜ್ಜಾದಿತಿಃ – ಬ್ರಾಹ್ಮಣಿತಿ, ಶೂದ್ರಿತಿ (ಕಕಾ.ತು. ೫೬ ಕ್ರಿಯಾ). [ಬ್ರಾಹ್ಮಣ + – ಇತಿ$_1$ (<– ಇತ್ತಿ)]

ಬ್ರಾಹ್ಮಣೇತರ (ಗು). ೧. ಬ್ರಾಹ್ಮಣನಿಗೆ ಸಂಬಂಧವಿಲ್ಲದ. (ನಾ). ೨. ಬ್ರಾಹ್ಮಣನಲ್ಲದವನು : ತಮಿಳುದೇಶದ ಆಳ್ವರರು . . . ಇವರಲ್ಲಿ ಬ್ರಾಹ್ಮಣೇತರರೂ ಇದ್ದರು (ಇಂಶಾ. ೨೫೩). [ಸಂ.]

ಬ್ರಾಹ್ಮಣ್ಯ (ನಾ). ೧. ಬ್ರಾಹ್ಮಣತ್ವ ; ಬ್ರಾಹ್ಮಣನಾಗಿರುವಿಕೆ : ನಿಮಗೆ ತಾಂ ಬ್ರಾಹ್ಮಣ್ಯವೆಲ್ಲಿಯದು (ಜಪು. ೫೫-೬೯); ಅಶ್ವತ್ಥಾಮನ ಬ್ರಾಹ್ಮಣ್ಯವು, ಗೌರವವು, ಮಣಿಯೂ ಹೋಗಿ ಅವನ ದೇಹ ಮಾತ್ರ ಉಳಿದಿದೆ ! (ಪಜಾ.೬೨೦); ಬ್ರಾಹ್ಮಣ್ಯಕ್ಕೆ ದೇಹಾದಷ್ಟು ಗೌರವವಿದ್ದ ಕಾಲ ಅದು (ಕೃಷ್ಣ. ೬೬). ೨. ಬ್ರಾಹ್ಮಣರ ಸಮುದಾಯ : "ಬ್ರಾಹ್ಮಣ್ಯಂ. ಬಾಡಭ್ಯಂ . . . ಬ್ರಾಹ್ಮಣರ ಗುಂಪು" (ಸಿಧಾ೦೬. ೬೬೦). ೩. ಶನಿಗ್ರಹ. [ಸಂ.]

ಬ್ರಾಹ್ಮಧರ್ಮ (ನಾ). ವೈದಿಕಧರ್ಮ: ಆದ್ಯರಿಂದಲೇ ಹೇಳುತ್ತಿನೆ . . . ಬ್ರಾಹ್ಮಧರ್ಮದಿಂದಾಗಿ ಜಗತ್ತು ಭಾರತವರ್ಷಕ್ಕೆ ತುಂಬಾ ಋಣಿ ಎಂದು (ಟಾಪ. I. ೨೦). [ಸಂ.]

ಬ್ರಾಹ್ಮಮುಹೂರ್ತ (ನಾ). [ಜ್ಯೋತಿ] ಬೆಳಗಾಗುವುದಕ್ಕೆ ಮುಂಚೆ ಬರುವ ಒಂದು ವಿಶಿಷ್ಟವಾದ ಶುಭಮುಹೂರ್ತ : ಬ್ರಾಹ್ಮಮುಹೂರ್ತ ವೆಂದರೆ ಸೂರ್ಯೋದಯಕ್ಕೆ ಪೂರ್ವ ೪ ಗಳಿಗೆಗೆ ಆರಂಭವಾಗುವ ಮುಹೂರ್ತವೆ (ಆಚಾ:೨೦. ೯೨).

ಬ್ರಾಹ್ಮಿ (ನಾ). ೧. ಬ್ರಹ್ಮನ ಪರಾಶಕ್ತಿ ; ಆದಿಶಕ್ತಿ. ೨. ವಾಗ್ದೇವತೆ: ಸರಸ್ವತಿ : "ಬ್ರಾಹ್ಮೀ, ಭಾರತೀ, ಭಾಷಾ, ಗೀಃ, ವಾಕ್, ವಾಣೀ, ಸರಸ್ವತೀ . . . ಮಟಃ – ೧೩ ಮಾತಿನ ಹೆಸರುಗಳು . . . ಇವುಗಳಲ್ಲಿ ಬ್ರಾಹ್ಮೀ ಶಬ್ದವು ಮೊದಲುಗೊಂಡು ಸರಸ್ವತೀ ಶಬ್ದದವರೆಗೂ ೭ ಸರಸ್ವತಿಯ ಹೆಸರುಗಳಾಗಿವೆ" (ಶಿಬ್ಕಾಚಿ. ೧೯) ; ವರವದ್ವಾಸನದೊಳ್ ಕನನ್ಮಣಿಮಯಂ ಸಿಂಹಾಸನಂ ಬ್ರಾಹ್ಮಿಯೊಳ್ ಪರಮಶ್ರೀ ಗಣನಾಕ್ಷ ಸೂತ್ರಮಣಿಯೊಳ್ ರತ್ನೋಜ್ವಲಂ ಭೂಷಣಂ ದೊರೆಯಾಗಿರ್ಪಿನಂ. . . ಜಗದ್ಗುರುವಾದಂ ನಮಗೀಗ ಬೇಱ್ಪ ವರಮಂ ಶ್ರೀರಾಜಕಾಜ್ಞಾಸನಂ (ಸಣಮು.೦ ೩). ೩. ಮಾತು ; ನುಡಿ ; ವಾಕ್ಕಕ್ತಿ. ೪. ಬ್ರಾಹ್ಮರೀತಿಯಲ್ಲಿ ವಿವಾಹವಾದ ಸ್ತ್ರೀ. ೫. ಬ್ರಾಹ್ಮಣನ ಹೆಂಡತಿ. ೬. ಒಂದು ಬಗೆಯ ಸಸ್ಯ ; ಹೊನ್ನಗನ್ನೆ : "ಬ್ರಾಹ್ಮೀ, ಪುತ್ಕಾಕ್ಷೀ, ವಯಸ್ಯಾ, ಸೋಮವಲ್ಲರೀ – ೪ ಹೊನಗೊನೇಸೊಪ್ಪು" (ಶಿಬ್ಕಾಚಿ. ೦೧೨). ೭. ಸಪ್ತಮಾತೃಕೆಯರಲ್ಲಿ ಒಬ್ಬಳ ಹೆಸರು : "ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಮಾಯೇಂದ್ರೀ, ಚಾಮುಂಡಾ – ಈ ೭ ಸಪ್ತಮಾತೃಕೆಯರ ಪೆಸರ್" (ಸಣಮು. ೯-೦೬). ೮. ಒಂದು ಬಗೆಯ ಹಿಂತ್ಸಾಳೆ. ೯. ಒಂದು ನದಿಯ ಹೆಸರು. ೧೦. ಒಂದು ಬಗೆಯ ಲಿಪಿ: "ಬ್ರಾಹ್ಮೀಲಿಪಿ" ಪರಾ. [ಸಂ. ಬ್ರಾಹ್ಮೀ]

ಬ್ರಾಹ್ಮೀಮುಹೂರ್ತ (ನಾ). = ಬ್ರಾಹ್ಮಮುಹೂರ್ತ : ಬ್ರಾಹ್ಮೀ [ಜಾಣಂ. ಹ್ಮ]ಮುಹೂರ್ತಮೆಂಬ ಭೂಜಾಮುಹೂರ್ತದಲ್ಲಿ ಒಮ ಸಂಮಿಶ್ರಾಂಬುವಿಂ ಮಜ್ಜನಮನೊಲವಿಂ ಮಾಡಿ (ಜಾಪಚೇ. ೦೨-೦ ೫) ; ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಶೌಚವಿಧಿ ತೀರಿಸಿಕೊಂಡು ಶುಚಿಯಾಗಿ ಸ್ವಸ್ಥಾನನಾಗಿ ಕುಳಿತುಕೊಂಬುದು (ಶಶಕ್ಕ. ೨೮); ಇನ್ನೇನು ಆದುಕೋದವು ವಾಗುವುದರಲ್ಲಿದೆ. ಬ್ರಾಹ್ಮೀಮುಹೂರ್ತವಿದು (ಶಜಾಂ. ೪೦). [ಸಂ.]

ಬ್ರಾಹ್ಮೀಲಿಪಿ (ನಾ). ಈಗ ಬಳಕೆಯಲ್ಲಿರುವ ಭಾರತದ ಅನೇಕ ಲಿಪಿಗಳಿಗೆ ಮೂಲವೆನಿಸಿದ ಒಂದು ಪ್ರಾಚೀನ ಲಿಪಿ ; 𑀩 ಇದು ಅತಿ ಪ್ರಾಚೀನವೆಂಬುದನ್ನು ಸೂಚಿಸಲು, ಬ್ರಹ್ಮನಿಂದಲೇ ಉತ್ಪತ್ತಿಯಾಯಿತೆಂದು ಕೆಲವು ವಿದ್ವಾಂಸರ ವಾದವಿದೆ : ಭಾರತೀಯಭಾಷೆಗಳಲ್ಲಿರುವ ಅಕ್ಷರಸಂಜ್ಞೆಗಳಿಗೆ "ಬ್ರಾಹ್ಮೀಲಿಪಿ" ಮೂಲವೆಂದು ನಿರ್ಣಯವಾಗಿದೆ (ಸಂಶಾಲಿ. ೩). [ಸಂ.]

ಬ್ರಾಹ್ಮೀಸ್ಥಿತಿ (ನಾ). ೧. ಬ್ರಹ್ಮಾನಂದವನ್ನು ಹೊಂದಿದ ಸ್ಥಿತಿ ; ಸಮಾಧಿಸ್ಥಿತಿ : ತಾವು ಸದಾ ಬ್ರಾಹ್ಮೀಸ್ಥಿತಿಯಲ್ಲಿದ್ದು ಕೇವಲ ಲೋಕ ರಕ್ಷಣಾರ್ಥವಾಗಿ ಬುಮರ್ಮುಖರಾಗುವ ಮಹಾನುಭಾವರು (ಶಜಾಂ. ೩೪) ; ಬ್ರಾಹ್ಮೀಸ್ಥಿತಿಯನ್ನು ಮುಟ್ಟಿದ ಯೋಗಿ ಕೂಡ ಕರ್ಮವನ್ನಾಚರಿಸಲೇ ಬೇಕು (ಶಯೋಜಾ. ೦೩೯). ೨. (ಆಲಂ) ಮಂಕುಬಡಿದ ಸ್ಥಿತಿ : ತಿಪ್ಪನನ್ನು ರಮಿಸಿ ಅವನ ಹೃದ್ಗತವನ್ನು ತಿಳಿಯುವ ಹೊರತು ಅವನ ಈ ಬ್ರಾಹ್ಮೀಸ್ಥಿತಿಯು ರಹಸ್ಯವಾಗಿಯೇ ಉಳಿಯುವುದು (ಸಮಚೀ. ೧೬೩). [ಸಂ.]

ಬ್ರಾಹ್ಮ್ಯ (ಗು). ೧. ಬ್ರಹ್ಮನಿಗೆ ಸಂಬಂಧಿಸಿದ : ಪರಮಬ್ರಾಹ್ಮ್ಯ ಪ್ರಭಾವಾ ಮನುಜ ಪರಿವೃಢಾಕಾರಮಂ ತಾಳ್ದಿತು (ಪಕ್ಷ. ೪. ೫೦೩೮. ೭೭-೭೩ ; ೩೨೦). ೨. ಪರಬ್ರಹ್ಮವಸ್ತುವಿಗೆ ಸಂಬಂಧಿಸಿದ. ೩. ಬ್ರಾಹ್ಮಣನಿಗೆ ಸಂಬಂಧಿಸಿದ ; ಬ್ರಾಹ್ಮಣನಿಗೆ ಸೇರಿದ. (ನಾ). ೪. ಬ್ರಾಹ್ಮಣಿಕೆ ; ಬ್ರಾಹ್ಮಣತ್ವ : ತೋಜಮ್ಮು ಬ್ರಾಹ್ಮವೆಂಬುದು ಬೀಜ್ ದರ್ಶನವೀಶಭಕ್ತಿಯುಂ ಬೇಜ್‌ಮಿಂತಿದನೆರಡುಮಂ ನೀ ಕೂಡಿ ನುಡಿಯುದಿರಾ (ಬಸಪು. ೩-೬೨). ೫. ಈ ಬ್ರಹ್ಮಪುರಾಣ : ಪರಮ ಶಿಷ್ಯಂದ ಲ್ಕಂಗ್ಯಾ ವಿರಳ ನಾರದ . . . ಬ್ರಾಹ್ಮ, ಬ್ರಹ್ಮವೈವರ್ತ ಸಾಂಗದಿಂದಷ್ಟಾದಶ ಪುರಾಣಂಗಳೊಳು (ಬಸಪು. ೧೩ ೭೬). [ಸಂ.]

ಬ್ರಿಹವಾರ, ಬೃಹವಾರ (ನಾ). ಬೃಹಸ್ಪತಿವಾರ : ಗುರುವಾರ : ಸುಭಾನುಸಂವತ್ಸರದ ಕಾರ್ತ್ತೀಶುದ್ಧ ೫ ಬ್ರಿಹವಾರದನ್ದು ಲಿಂಗ ಪ್ರತಿಷ್ಠೆಯಂ ಮಾಡಿ (ಎಸಿ. VII, ೪೪೩.೦೪-೦೦ ; ೩೧೦೩) ; ಶುಭಾನು ಸಂವತ್ಸರದ ಪುಶ್ಯ ಸುದ್ದ ದಮವಾಸೆ ಬ್ರಿಹವಾರದಂದು . . . ಧಾರಾ ಪೂರ್ವಕಂ ಮಾಡಿ ಕೊಟ್ಟರು (ಎಸಿ. XI. ಚಿಕ್ಕ. ೧೩-೦೭ ; ೧೧೬೫). **ಬೃಹವಾರ** : ಶ್ರೀಜಯ ಸಂವತ್ಸರದ ಫಾಲ್ಗುಣ ಸುದ್ದ ಪಪ್ಪರ್ಣಮಿ ಬೃಹವಾರದಲಿ . . . ಧಾರೆಯ ಪೂಜೆಯಂ ಕೊಟ್ಟು ಶಾಸನ (ಎಸಿ. IX. ೯೩೪ನು. ೭೫-೩ ; ೧೧೭೪೨). [<ಸಂ. ಬೃಹಸ್ಪತಿವಾರ]

ಬ್ರೀಡ್ಯತ್ವ (ನಾ). (?) : ಬಳವದ್ವಿದ್ವಿಷ್ಟಭೂಪಾಳಕರಡಗೆಜಿಗಿ ಶರಣಂಬೋಗೆ ದುರ್ವಾರ ಬಾಹುಬಳವಂ ಮಾಣ್ಬೆಂಧು(ದ)ದಂ ತೊತ್ಕಳಿಸಿ ಬಳಿಕ ಬ್ರೀಡ್ಯತ್ವಮಂ ಪೂರ್ಣಾ (ಪಕ್ಷ. XVI. ೭೦-೨೨ ; ೧೦೭೬). [?]

ಬ್ರೂಹಿತಾತ್ಮ (ನಾ). ಪರಮಾತ್ಮ : ಬಿಂದುಸ್ವರೂಪನೇ ಕೋಟ್ಯಂಶ ಶುದ್ಧನೇ ತಂದೆಯಾ ಬ್ರೂಹಿತಾತ್ಮನೆ . . . ಸದಾಶಿವ ಪಂಚಿಪಕ್ಕನೇ . . . ನಿನಗೆ ವಂದಿಸುವೆನುಪಿದರ್ದು (ಅಕ್ಕಿಪ್ರ. ೩-೨-೯).

[< ಸಂ. ಬೃಂಹಿತಾತ್ಮನ್]

ಬ್ರೂಸಿ (ನಾ). ಯತಿಗಳ ಪೀಠ : ಅಲ್ಲಿ ಸಂಶ್ರಿತಬ್ರೂಸಿಗಳಂ ರಿಸಿಗಳಂ (ಪಜಾಂ. ೧೦-೩೦) ; ಒಸೆದು ಕರೆದುಯ್ದುದರಂ ವಿಗೆ ಬ್ರೂಸಿದು ನೊಲಿದಿತ್ತುವಚರಿಸಿ ಲಾಲಿಸಿ (ಸಂಜಾ. ೫೦೦). [< ಸಂ. ಬೃಸೀ]

ಬ್ರೆಡ್ಡು (ನಾ). " (ಧಾನ್ಯದ ಹಿಟ್ಟನ್ನು ಕಲಿಸಿ, ಪಾದಿ, ಸಾ. ಉದುಗು ಹಾಕಿ, ಒಲೆಯಲ್ಲಿಟ್ಟು ಸುಟ್ಟ) ರೊಟ್ಟಿ" (Bread. ೧೮೫೨) : ಬ್ರೆಡ್ಡಿಗೆ ಬೆಣ್ಣೆಯು ಸಾಲದೆಂದಳುವಳು (ಸಂಕ್ಷಪ್ರ. ೪೯-೩೩). [← ಇಂ. Bread]

ಬ್ರೆಹವಾರ 'ಬ್ರಿಹವಾರ' ನೋ.

ಬ್ರೇಕು (ನಾ). ಚಕ್ರದ ಚಲನೆಯನ್ನು ತಡೆಮಾಲು ಉಪಯೋಗಿಸುವ ಸಲಕರಣೆ ; ಬಿರಿ ; ತಡೆ : ರಸ್ತೆಮರಿ ಬದಿಗೆ ನಡೆದವರ ಮೈಮೇಲೆ ಕಾರು ಹಾಯಿಸಬಲ್ಲ ; ಆವಕೆ ಬ್ರೇಕಲ್ಲಿ (ಪಂಮು. ೨೮-೬).

[← ಇಂ. Brake]

ಬ್ರೇಲ್ (ನಾ). "ಕುರುಡರು ಕೈಆಡಿಸಿ ಓದುವುದಕ್ಕೆ ಅನುಕೂಲಿಸುವಂತೆ ರಚಿಸಿದ ಉಬ್ಬು ಬರವಣಿಗೆ ಅಥವಾ ಮುದ್ರಣ : ಬ್ರೇಲ್ ಲೇಖನ, ಮುದ್ರಣ (ಈ ಉಪಾಯವನ್ನು ಕಂಡು ಹಿಡಿದಾತನ ಹೆಸರಿನಿಂದ)" (Braille. ೧೯೫೨).

[← ಇಂ. Braille]

ಬ್ರೋಚು (ನಾ). ಸಾಮಾನ್ಯವಾಗಿ ಹೆಂಗಸರು ತಮ್ಮ ಕತ್ತಿನ ಬಳಿಯ ಉಡುಪಿನ ಭಾಗವನ್ನು ಭದ್ರಪಡಿಸುವುದಕ್ಕಾಗಿ ಉಪಯೋಗಿಸುವ ಮತ್ತು ಹುಡುಗಿಯರು ತಲೆಯಲ್ಲಿ ಧರಿಸುವ ಪಿನ್ನಿನಂತಹ ಒಂದು ಆಭರಣ : ದುಮುಸಿಗೆ ಏನಾದರೂ ರಿಬ್ಬನ್ನೋ ಬ್ರೋಚೋ ಕಂದುಕೊಡುತ್ತಿದ್ದ (ಅಜಾಂ. ೪೦). [← ಇಂ. Brooch]

ಬ್ಲೇಡು (ನಾ). ೧. ಪರಿತವಾದ ಅಂಚು. — ಅಲಗು. ೨. ಚಪ್ಪಟಿಯಾಗಿರುವ ಎರಡೂ ಬದಿಗಳಲ್ಲಿ ಹರಿತವಾದ ಅಲಗುಳ್ಳ ಲೋಹದ ತೆಳುವಾದ ಒಂದು ಸಾಧನ : ಬ್ಲೇಡು ಹಿಡಿದ ಕೈಗೆ ಬೇಡಿ ಬೀಳುವುದು ತಡವೆ ? ಜೇಬು ಕತ್ತರಿಸಿದ, ಜೇಲು ಕಂಡ (ಕಂಪ್ರ. ೩೭).

[← ಇಂ. Blade]

ಬ್ಲೌಜು 'ಬ್ಲೌಸು' ನೋ.

ಬ್ಲೌಸು, ಬ್ಲೌಜು (ನಾ). (ಹೆಂಗಸರ) ಕುಪ್ಪಸ : ರವಿಕೆ : ಇವಕ್ಕೆ ಮ್ಯಾಚು ಆಗೋ ಬ್ಲೌಸುಪೀಸು ತಂದುಕೊಡಿ (ಆಜಾಪ್ರ. ೩೦). ಬ್ಲೌಜು : ತರತರದ ಬ್ಲೌಜುಗಳನ್ನು ಹಾಕುತ್ತಿದ್ದಳು (ಪಂಸಂ. ೨೮).

[← ಇಂ. Blouse]

ಭ (ನಾ). ೧. ಕನ್ನಡವರ್ಣಮಾಲೆಯ ನಲವತ್ತುನಾಲ್ಕನೆಯ ಅಕ್ಷರ. ೨. ನಕ್ಷತ್ರ; ತಾರೆ: "ಭಂ, ನಕ್ಷತ್ರಂ . . . ಈಯು – ಈ ೯ ನಕ್ಷತ್ರದ ಪೆಸರ್" (ಪ್ರಣಮು. ೦೦-೨೦). 'ಭಗಣ' ಪರಾ. ೩. ಶುಕ್ರಗ್ರಹ. ೪. ಪ್ರಕಾಶ; ಕಾಂತಿ. ೫. ಭ್ರಮೆ; ಭ್ರಾಂತಿ. ೬. ಸಾಮ್ಯ; ಹೋಲಿಕೆ. ೭. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ: "ಳ ಧ ಭ ಷಂ ನೆಱೆ ನಾಲ್ಕು" (ಶಬ್ದಮ. ೦೦೯-೦೦). ೮. ಇಪ್ಪತ್ತೇಳು ಎಂಬ ಸಂಖ್ಯೆಯ ಸಂಕೇತ. ೯. [ಛಂದ] ಅದಿಯಲ್ಲಿ ಗುರುವೂ ಅನಂತರ ಎರಡು ಲಘುಗಳೂ (– ᴗ ᴗ) ಇರುವ ಮೂರು ಅಕ್ಷರಗಳ ಒಂದು ಗಣ: ನಭಭರಂಗಳುಮೊಂದಿರೆ ಪಾದದೊಳ್ . . . ದ್ರುತಪೂರ್ವ ವಿಲಂಬಿತಂ (ಛಂಸಾಂಶಾ. ೨-೦೨೩).

ಭಂಗ (ನಾ). ೧. ಮುರಿಯುವಿಕೆ; ಚೂರುಮಾಡುವಿಕೆ. ೨. ಭಾಗ ಮಾಡುವಿಕೆ; ಪಾಲುಮಾಡುವಿಕೆ: 'ಭಂಗಂಬಡೆ' ಪರಾ. ೩. ಮುರಿದುದು; ಮುರಿದು ಬಿದ್ದುದು: ತುಂಗವನ್ಮದತುಂಗಜದಂತಾ ಘಾತನಪಾತಿತಾಲ್ಲಕೀಭಂಗಮಂ . . . ನೃಪನೆಯ್ದಿದಸುದ್ಧೃಂಗಮನಾ ಶತಶೃಂಗಮಂ (ಪಂಪಭಾ. ೦-೦೦೩). 'ಭಂಗಂಬಡು' ಪರಾ. ೪. ಪುಂಡು; ಚೂರು. ೫. ಭಾಗ; ಪಾಲು. ೬. ಬಿರುಕು; ಒಡಕು; ಛಿದ್ರ. ೭. ನಾಶ; ಹಾಳು: ಈ ಪು ಕೊಲೆಗೆ ಭಂಗಕ್ಕೆ ನಿನ್ನ ಬರುದರು ಬಂದುದಿಲ್ಲ (ಶಬ್ದಾಕ್ಕ್ರಿ. ೦೬-೦೬); ಪಂಗುವಾದರೂ ಲಿಂಗಪೂಜೆ ಇದ್ದರೆ ಭಂಗವಾಗ (ಗದ). ೮. ಸೋಲು; ಪರಾಜಯ: ಭಂಗಮನಾಳ್ದುವೀಕೆಯರ ಕುಂತಳವೆಂಬುದದಿರ್ದ ತುಂಬಿಗಳ್ ಭಂಗಮನಾಳ್ದುವೀ ಮುನಿವಧೂಟಿ ಕುರುಳ್ಗಳ್ಗೆಂದು ಭಂಗಿಸಲ್ (ಜಗ. ೦೬-೮೪); ತುಂಬುರಂ ಬಂದು ಸೌಂದರನಡಿಗೆ ಬಳಲುತ್ಪಡೆಗಿದಂ ನಿಂದು ಬಿನ್ನಪಿಸಿದಂ ತನ್ನ ಭಂಗಮನದಂ (ಪಂಚಪ. ೦೫-೮೪); ಕುರುಬಲಜಾಲದಲಿ ಜಳ್ಕುಗರು ಬಿದ್ದುದು ಭಂಗ ಶರಧಿಯಲಿ (ಶಾಪ್ಕ. ೨೨-೪೬). ೯. ಮಾನಹಾನಿ; ಅಪಮಾನ; ತೇಜೋಹಾನಿ: ಭರತಾಮೀಶ್ವರಂ ಗುರು ಬಿಮುಣ್ಡಂ ಚಕ್ರವರ್ತಿ ಮಹಿಮೋದರನೀ ದೊರೆಯಸುಮಳವಲಿಯೆ ಮಾಂಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ (ಆಪ್ತ. ೦೪-೦೦೨); ಅಂತೆ ಓದಿದರೆ ಕೆತ್ತಿಗಂಗೆ ಭಂಗವಮ್ಮಾ (ಪಾಪ. ೨೦೪); ಎಲೆಲೆ ದೊದ್ದೆಗರಕೆ ಕೊಬ್ಬಿದರಳ ವನಜಿಯದೆ ಸುಗ್ಗಿ ಮುಱಿದರೆ ದಳದ ದೊರೆದು ಭಂಗವೇ (ಶಬ್ದಾಕ್ಕ್ರಿ. ೦೬-೨೮). ೧೦. ತೊಂದರೆ; ಕಷ್ಟ; ಕ್ಲೇಶಕರವಾದುದು: ದೂರ ದುರ್ಜನರ ಸಂಗ ಭಂಗವಯ್ಯಾ (ಬಸವ ೦೪೮); ಸಂಗದಿಂ ಕೆರೆಯಿಲ್ಲ ಭಂಗದಿಂ ಬೆಜಱಿಯಿಲ್ಲ ಗಂಗೆಯಿಂದಧಿಕ ಸಿದಿಯಿಲ್ಲ (ಸರ್ಪಜ್ಞ. ೨೭೦); ಸಹ್ಯವಲ್ಲದ ದುರುದ್ಯಮವೆಂದೆನುವುದು ಅದು ನಮಗೆಂದಿಗು ಒದದು ಈಯೊಂದು ಭರವಸೆಯೊಳು ನಾವು ನಡೆದಂದು ನಮಗಾವ ಭಂಗವು ಇರದು (ಪಂಪಾಪ. ೦೧೦-೧೨). ೧೧. ಅಲೆ; ತೆರೆ: "ವೀಚೀ, ಭಂಗಃ, ತರಂಗಃ – ಈ ೩ ತೆರೆ" (ಪ್ರಣಮು. ೦೦೬-೭೦); ಅತಳಂಕ ರತ್ನಂಗಳೋಳಿಯಿಂದೆತಪ್ಪ ಸಲಭಂಗ [ಪಾಪಾ. ಭೋಗದ್ಗಾಸುಳಿಯ ಸವ್ವಳಿಗಳಿಂದೆ . . . ಕಡಲ್ ಕಣ್ಗೆಸದುದು (ಪಾಪ. ೨-೬); ಭೃಂಗದ ಸಂಗೀತದ ಭಂಗಂಗಳು ಸುಳಿವುವು ಸುಳಿಗಾಳಿಯನೇರಿ (ಶಬ್ದಾ. ೨೪-೨೬). ೧೨. ಕುಂದು; ದೋಷ. ೧೩, ೧೪: ಕಾತ್ಮಮನಿಸಿದುರ್ ವಿಮುಧಸುಸೇವ್ಯಂ ಘನರಸ ವಿದನಿಸಿ ಭಂಗವಿರಹಿತಂ . . . ಮತ್ಕೃತಿ ಚಮತ್ಕೃತಿಪ್ರದಮಲ್ರೀ (ಪಾಪಪ. ೦-೧೦). 'ಭಂಗಸಮಿತಿ' ಪರಾ. ೧೫. ನಿರಾಶೆ. ೧೪. ಬಾಗು; ತಿರುವು. ೧೫. ಬಾಗುವಿಕೆ; ಸಂಕೋಚಗೊಳ್ಳುವಿಕೆ. ೧೬. ಹಾರುವಿಕೆ. ೧೭. ಚಲನೆ; ಅಲುಗಾಟ: 'ಭಂಗಂಬಿಜು' ಪರಾ. ೧೮. ಕೊಂಕು; ವಕ್ರತೆ: ಮಂಗಳ : ಭಂಗಮನಾಳ್ದುವೀಕೆಯರ ಕುಂತಳವೆಂಬುದದಿರ್ದ ತುಂಬಿಗಳ್ ಭಂಗಮನಾಳ್ದುವೀ ಮುನಿವಧೂಟಿ ಕುರುಳ್ಗಳ್ಗೆಂದು ಭಂಗಿಸಲ್ (ಜಗ. ೦೬-೮೪); ಭಂಗಮನುಂತುಂ ತಳೆದ ಲತಾಂಗಮನಿಂ ನಿನ್ನ ಕೋಮಳಾಂಗದ ಬೆಲ್ಮಂ ಗೆಲ್ದು (ಕಂಶ್ರೀ. ೭-೭೩). 'ಭ್ರೂಭಂಗ' ಪರಾ. ೧೯. ಬಟ್ಟೆಯ ಮಡಿಕೆ. ೨೦. ಕಪಟ; ಮೋಸ: 'ಭೃಂಗಗಾಜಿ' ಪರಾ. ೨೧. [ಗಣಿತ] ಒಂದು ಬಗೆಯ ಗಣಿತ; ವಿಕಲ್ಪಗಣಿತ: "ವಿಕಲ್ಪ" ಅಥವಾ "ಭಂಗ" ಎಂಬ ಗಣಿತಶಾಖೆಯು ವಿಷಯವಾಗಿ ಸ್ವಲ್ಪ ವಿಸ್ತರಿಸಿ ಹೇಳುವುದು ಅವಶ್ಯಕವಾಗಿದೆ (ಗಸಚ. ೨೦೬). ೨೨. [ನಾಟ್ಯ] ದೇಹವನ್ನು ನಿಲ್ಲಿಸುವ ರೀತಿ; ಭಂಗಿ: "ಭಂಗ" ಎಂದರೆ ಶರೀರವನ್ನು ನಿಲ್ಲಿಸುವ ರೀತಿ. ಶರೀರವ ಸಮರೇಪೆಯಲ್ಲಿ ಇದ್ದರೆ ಸಮಭಂಗವೆನಿಸುವುದು (ಶಾಶ್ರ. II, ೪೫೨). 'ತ್ರಿಭಂಗ' ಪರಾ. [ಸಂ.]

ಭಂಗಂಬಡು, ಭಂಗಪಡು, ಭಂಗಬಡು, ಭಂಗವಡು (ಕ್ರಿ). ೧. ಅವಮಾನಕ್ಕೊಳಗಾಗು; ಅಪಮಾನ ಹೊಂದು: ತಾರಕನಿಂದ ಭಂಗಾಬಟ್ಟು ದೇವೇಂದ್ರತ್ವವೇಕೆಮಗೆ (ಪಾಪ್ತ. ೦೬-೨೨). **ಭಂಗಪಡು**: ೧. ತುಂಗಬಲಸೌವಿತ್ರಿಯಿಂದುಱಿ ಭಂಗಪ[ಪಾಪ್ತ. ಬ]ಟ್ಟ ಮಹೋಗ್ರರಜನಿ ಚರಾಂಗನೆಯ ದೂಱಿನಲಿ ಬರನ್ಮೈತಂದನಾಹವಕೆ (ಕುಸೌಕಾ. ೩-೬ ಸಂಪಾ). ೨. ಅವರು ಗಂಡನ ಮನೆಗೆ ಹೋಗಬಾರದೇಕೆ? ಇಷ್ಟೊಂದು ಭಂಗಪಟ್ಟುಕೊಂಡೂ ಇಲ್ಲೇ ಇರಬೇಕೆಂದೇನು? (ಭಾಸಂಪ್ರ. ೧೩). ೨. ಕಷ್ಟಕ್ಕೆ ಗುರಿಯಾಗು; ತೊಂದರೆಗೊಳಗಾಗು: ಅಂಗಭೋಗಕೆ ಮುಟ್ಟಿ ಲಿಂಗಭಕ್ತಿಯ ಪಾಜ್ದೆ ಭಂಗಪಡುತಿಹನು (ಸರ್ಪಜ್ಞ. ೨೦೩); ಭ್ರಮರ ಭ್ರಮಿಸಿ ಬೇಗೂ ಭಂಗಪಟ್ಟು ಹಾಗೆ (ಗದ). **ಭಂಗಬಡು**: ೧. ಪಂಗಿವರವಂಸನಯಿಂದ ಮೀಗಡದ ಗುಡಿ ಲೇಸು ಭಂಗಬಟ್ಟುಂಬ ಬಿಸಿಯನ್ನ ಕ್ಕಂತಲಾ ತಂಗುಳವೆ ಲೇಸು (ಸರ್ಪಜ್ಞ. ೦೬೮). ೨. ಮುರಿದು ಹೋಗು; ಚೂರಾಗು: ಲೋಕದೊಳು ಮುಂಗೈಯ ಕಂಕಣಕೇಕೆ ಕನ್ನಡಿ ಭಂಗಬಟ್ಟು ಜಿನಾಲೆಯೆ ತಾಂ ಸಾಕ್ಷಿಯಲ್ಲಾ (ಶಬ್ದ. ೩೦-೬೬). **ಭಂಗವಡು**: ೨. ವಿಷ್ಣು ಬಲ್ಲಿದನೆಂಬೆನೆ ದಶಾವತಾರದಲ್ಲಿ ಭಂಗವ [ಪಾಪಂ. ಬ]ಟ್ಟುದಕ್ಕೆ ಕಡೆಯಿಲ್ಲ (ಬಸವ. ೪೩೨). [ಭಂಗ + ಪಡು-1]

ಭಂಗಂಬಡೆ, ಭಂಗವಡೆ (ಕ್ರಿ). ೧. ಸೋಲು; ಪರಾಜಯಗೊಳ್ಳು: ಯಮತಿಂಕರರು ಭಂಗಂಬಡಮು ಹರಿತಿಂಕರರ ಕೈಯಲಿ ಬಸುಟಿಪಾಮಿಳನನು ವಿಷಾದದಲಿ ವಾರಳಿ ಹೋದವರೇನನೆಂದರು (ಪಾಪಾ. ೬-೬-೦). **ಭಂಗವಡೆ**: ೧. ಲೋಕಮಾನ್ಯನು ಕರ್ಣ ಕುರುಬಲದ್ದಾತವಳನು ಭಂಗವಡದುದೆ ಸಾಕು ನೀ ಸಾರೆಂದು ಭೀಮನ ಪೂಕಿದನು ಶಲ್ಯ (ಭಾಷ್ಕಾ. ೦೨-೩೦); ಏಂಗಾಡಿಯಂದಿನ ಮಳೆಯುಱುಬಿಗೆ ಬಿಲು ಕಂಗಟ್ಟು ದೆನ್ನದಳಿಗೋಡಿ ಭಂಗವಡೆಯೆ (ಕಂಪಾ. ೦೦-೭೦). ೨. ವಿಭಾಗ ಹೊಂದು; ಬೇರೆ ಬೇರೆಯಾಗು: ಭಂಗವಡದೆಸಗುಮುವರ ಗೃಹಂಗಳ್ ಮಾಣಿಕದ ಸಂಜೆಯುಂ ನೀಲದ ಕರ್ದಂಗಳಿನೆಳಮುತ್ತಿನ ಬೆಳ್ದಿಂಗಳಿನುಜ್ವಲಿಸಿ ಪೊಳೆವ ಪಸ್ರದ ಬಿಸಿರಿಂ (ಸಚಿತ್ತ. ೪-೦೭೦). [ಭಂಗ + ಪಡೆ-1]

ಭಂಗಬೆಜು (ಕ್ರಿ). ಅಲುಗಾಡು : ಜಂಚಲತೆಯನ್ನು ಹೊಂದು : ಸ್ಥಿರತೆಯಿಲ್ಲದಾಗು : ಪಿರಿದುಮರ್ದಿಪವಕಿ ಮಾಜಿಸುತಿರೆ ಭಂಗಂಬೆತ್ತು ಹಾರಲತೆ ಘನಕುಚದೊಳ್ ಕರವಿಕ್ಷೇವರೆ ವರ್ತಿಸೆ ನರೇಂದ್ರನಂದನನ ನೆಲ್ಲು ನೋಡಿದಳೊರ್ವಳ್ (ಕಾಂಪ್ರ. ೪೦೦). [ಭಂಗ + ಪೆಜ್ಜು]

ಭಂಗಗಾಜ (ನಾ). ನಂಬಿಕೆಗೆ ದ್ರೋಹ ಬಗೆಯುವವನು : ವಿಶ್ವಾಸ ಘಾತುಕ ; ವಂಚಕ : ಲಿಂಗವ ತೋಜ್ ಉದರವ ಹೊರವ ಭಂ[ಜಗಾಂ. ಬಂ]ಗಗಾಜ ನಾವು ಕೂಡಲಸಂಗಮದೇವಾ (ಬಸವ. ೪೦೬) ; ಹಿಂದಾದ ಮುಕ್ಕದು ಮಾಜಿಕೊಂಡುಂಬ ಭಂಗಗಾಜರ ತೋಜದಿರಾ (ಜಕ್ಕಣ. ೪. ೦೨೦–೨೬೦). [ಭಂಗ + —ಕಾಜ]

ಭಂಗಗೊಳು (ಕ್ರಿ). ಕಷ್ಟಕ್ಕೆ ಗುರಿಯಾಗು ; ತೊಂದರೆಗೊಳಗಾಗು : ಕೆಡಕು ಕೂಡುಪದೆಂದು ಅಡವಿಗೋಡಲು ಬೇಡ ಕಡುಭಯದಿ ಭಂಗಗೊಳ್ಳಬೇಡ ವಿಧಿಯಜ್ಞೆಯದವವಿಮೊದುಂಬೆ (ಜಕ್ಕಣ. ೪೭೬). [ಭಂಗ + ಕೊಳು (<ಕೊಳ್೧)]

ಭಂಗಚಿಕಿತ್ಸೆ (ನಾ). ಅವಮಾನವನ್ನು ಹೋಗಲಾಡಿಸಲು ಮಾಡುವ ಪರಿಹಾರೋಪಾಯ : ಭಂಗಚಿಕಿತ್ಸೆಗೆಯ್ದುವುವಸರ್ ದುರಿತಾಪಹಮಪ್ಪ ಹೋಮಧೂಮಂಗಳ ಕಂಪನಾಂಬ್ಯವೀರಾಜಗಳಾ ಮುನಿಗೇಹರಾಜಿಯೊಳ್ (ಕಾಪ. ೦೭-೪೪). [ಭಂಗ + ಚಿಕಿತ್ಸೆ]

ಭಂಗತಾಳ (ನಾ). [ಸಂಗೀತ] ತಾಳದಲ್ಲಿ ಒಂದು ಪ್ರಭೇದ : ಭಂಗತಾಳ ಉಪಭಂಗತಾಳ ವಿಭಂಗತಾಳ ವಿತಾಳ ಶುದ್ಧತಾಳ ಅನುಪಾಳ ವೆಂಬಾಜು ವರ್ಗಸಂಖ್ಯಾಭೇದಮಾಗಿಹುವೆಂದು ಪೇಳ್ದ ಭರತಾಸ್ಯ ಪ್ರವೀಣರಪ್ಪ ತಾಳಧಾರಿಗಳಂ (ಕರ್ನ. ೫೫೬). [ಸಂ. ಭಂಗತಾಲ]

ಭಂಗಪಡಿಸು 'ಭಂಗವಡಿಸು' ನೋ.

ಭಂಗಪಡು 'ಭಂಗಂಬಡು' ನೋ.

ಭಂಗಬಡಿಸು 'ಭಂಗವಡಿಸು' ನೋ.

ಭಂಗಬಡು 'ಭಂಗಂಬಡು' ನೋ.

ಭಂಗವಡಿಸು, ಭಂಗಪಡಿಸು, ಭಂಗಬಡಿಸಂ (ಕ್ರಿ). ೧. ಸೋಲಿಸು; ಪರಾಜಯಗೊಳಿಸು : ಹಿಂಗದೆ ಕಾದಿದ ಕೆಂಗ ಹನುಮನನು ಭಂಗವಡಿಸಿ ಸಜ್ಜವಿಡಿದು (ಕಂಪ. ೦೬-೨೯). **ಭಂಗವಡಿಸು** : ೨. ಉಲ್ಲಂಘಿಸು; ಅತಿಕ್ರಮಿಸು : ಉಲ್ಲಂಘಿಸು ; ಭಂಗವಡಿಸು (violate. ಕ್ರಿಶಿ. ೬೭). **ಭಂಗಬಡಿಸು**: ೩. ಅವಮಾನಗೊಳಿಸು: ಹೆಂಗುಸಿವಾವಳಶುವನನುಚ್ಚುವ ದಂಗವೇ ಕ್ಷತ್ರಿಯರಿಂಗೆ . . . ಭಂಗಬಡಿಸಿಯೆ ಬಿಡುವುದೇ ಭುಜಂಗ (ಕೂಡಾ. ೦-೦೦-೯). [ಭಂಗವಡು (<ಭಂಗಂಬಡು) + —ಇಸು೨]

ಭಂಗಪಡು 'ಭಂಗಂಬಡು' ನೋ.

ಭಂಗವಡೆ 'ಭಂಗಂಬಡೆ' ನೋ.

ಭಂಗವಾದ (ನಾ). [ಜೈನ] ಜೈನ ಸಿದ್ಧಾಂತದಲ್ಲಿ ಪ್ರತಿಪಾದಿತವಾಗಿರುವ ಪ್ರಧಾನತತ್ತ್ವ; ವಿಳುಬಗೆಯ ಭಂಗವನ್ನು ವಿವರಿಸುವ ತತ್ತ್ವ; ಸಪ್ತಭಂಗಿ ; ಸ್ಯಾದ್ವಾದ : ಸ್ಯಾದ್ವಾದವು ಅನೇಕ ವಿರೋಧಿವಾದಗಳನ್ನು ಸಮಸ್ಯಯ ಮಾಡುವಾಗ ಅದರಲ್ಲಿ ನಮುವಾವ ಭಂಗವಾದಗಳು ತನ್ನಿಂದ ತಾನೇ ರೂಪಗೊಳ್ಳುತ್ತವೆ (ಕ್ರಿಪ. ೨೨೨). [ಸಂ.]

ಭಂಗವ್ಯಾಕುಳಿತ (ನಾ), ೧. ನಾಶದಿಂದ ಕಳವಳಗೊಂಡಿರುವುದು. ೨. ಅಲೆಗಳಿಂದ ಅಸ್ವವ್ಯಸ್ತವಾಗಿರುವುದು. ೧, ೨: ಆ ಮಹಾರ್ಣವಂ ಸಮುದ್ರಮಾಗಿಯುಂ ಅಪಾರವಿಸ್ತಾರಿಯುಂ ಭಂಗವ್ಯಾಕುಳಿತಮಾಗಿಯು ಮಜ್ಜುತಪ್ರಭಾವಭಾಸುರಮುಂ . . . ಎನಿಸಿರ್ದುದು (ಪಪಪ. ೦-೦೨ ಪ). [ಸಂ. ಭಂಗವ್ಯಾಕುಲಿತ]

ಭಂಗಶ್ಲೇಷ (ನಾ). [ಕಾವ್ಯಮೀಮಾ] ಒಂದು ಬಗೆಯ ಶಬ್ದಾಲಂಕಾರ; ಒಂದು ಪದವನ್ನು ಬೇರೆ ಬೇರೆ ರೀತಿಯಲ್ಲಿ ವಿಭಾಗ ಮಾಡಿದರೆ ಬೇರೆ ಬೇರೆ ಅರ್ಥವು ಹೊರಡುವ ಪದಸಂಯೋಜನೆ: ಪದವರ್ಣ ವಿಭಕ್ತಿವಿಭಾಗದಿಂ ದ್ವಿಧಾರೂಪಮಿಪ್ಪುವಂತಿಪ್ಪಂ ಶಬ್ದದೊಳಾಗಿ ತೊಂಬು ವಂದಂತದು ಭಂಗಶ್ಲೇಷಮೆಂದು ಪೇಬ್ಲಡೆಗುಂ (ಕಾಶ್ಯಾ. ೬೬೪). ಉದಾ: 'ಕಡಲಂ ಮಿಗೆವಂದಮರಗವೇಂದ್ರಂ ಸೊಗಯಿಸುವ್ವುದು ದಾನವಾರಿಲೇಖಾನುಗತಂ' ಈ ಪದ್ಯಭಾಗದಲ್ಲಿ 'ಅಮರಗವೇಂದ್ರವ್ವ (ಐರಾವತ) ಕಡಲಂ ಮಿಗೆವಂದು ಸೊಗಯಿಸುವುದು' ಎಂದು ಕಡಲಿಗೂ ಐರಾವತಕ್ಕೂ ಹೋಲಿಸುವಾಗ 'ದಾನವಾರಿಲೇಖಾನುಗತಂ' ಎಂಬ ಪದವನ್ನು 'ದಾನ+ವಾರಿ+ಲೇಖಾ+ಅನುಗತಂ' ಎಂದು ಒಡೆದರೆ, 'ಮದೋದಕದ ಗೆರೆಯಿಂದ ಕೂಡಿಕೊಂಡಿರುವ' ಎಂದು ಐರಾವತಕ್ಕೆ ಅನ್ವಯವಾಗುತ್ತದೆ. ಅದೇ ಪದವನ್ನು 'ದಾನವ+ಅರಿ+ಲೇಖಾ+ಅನುಗತಂ' ಎಂದು ಒಡೆದರೆ 'ರಾಕ್ಷಸರ ಶತ್ರುಗಳಾದ . ದೇವತೆಗಳಿಂದ ಆಶ್ರಯಿಸಲ್ಪಟ್ಟುದು' ಎಂದು ಕಡಲಿಗೆ ಅನ್ವಯವಾಗುತ್ತದೆ. ಇದಕ್ಕೆ ಭಂಗಶ್ಲೇಷವೆಂದು ಹೆಸರು. [ಸಂ.]

ಭಂಗಸಮಿತಿ (ನಾ). ೧. ಅಲೆಗಳ ಸಮೂಹ. ೨. ಕುಂದುಗಳ ಸಮೂಹ. ೧, ೨: ಕುಮುದದಿಂ ಪ್ರತಿಕೂಲದಿಂ ವಿಜಾತಿಗಳ ಸಂಗಮದಿಂದ ಜಡಜೀವನೋಪಾಯದಿಂ ಭಂಗಸಮಿತಿಯಿಂದರ್ಪ ತಾವರೆಗೊಳಂ (ಕಾಪಪಂ. ೬-೨೨). [ಸಂ.]

ಭಂಗಾರ 'ಬಂಗಾರ' ನೋ.

Δಭಂಗಾಜ 'ಬಂಗಾರ' ನೋ.

ಭಂಗಿ೧, ಬಂಗಿ (ನಾ). ೧. ಸೇವಿಸಿದರೆ ಅಮಲೇರಿಸುವ ಒಂದು ಬಗೆಯ ವನಸ್ಪತಿ; ಗಾಂಜಾ : ಎಲ್ಲಾ ಬಟ್ಟು ಭಂಗೀ ನಟ್ಟು (ಗಾಡ). ೨. ಗಾಂಜಾದಿಂದ ತಯಾರಿಸಿದ ಮಾದಕವಸ್ತು: ಅಡಗ ತಿಂಬರು ಕಣಕದಡಿಗೆ ಇರಲ್ಕೆ ಸುರೆಯ ಕುಡಿವರು ಹಾಲಿರಲ್ಕೆ ಮುಕ್ಕುವರು ಭಂಗಿಯ ಪಕ್ಕರೆ ಇರಲ್ಕೆ (ಕೀಡಾಕ. ೫೫-೫೬); ಇದುವೆ ಪಿತ್ಥದ ವಿಕಲಪೋ ಮದ್ಯದ ವಿಕಾರವಿಂ ಭಂಗಿ ತಲೆಗೇಱ್ದುದೂ (ಕುಪ್ರಾ. ೩-೬೦); ಭಂಗಿಯನು ಸೇದುವನ ಭಂಗವಮಾ ವನೆಂದೆ ಭಂಗಿಯ ಗುಂಗು ತಲೆಗೇಱಲಾಡುತಿಹ ಮಂಗನಂತಿಹನು (ಜಕ್ಕಣ. ೦೪೦೩). **ಬಂಗಿ** : ೧. "ವಿಜಯಿಯೆನೆ ಬಂ[ಜಗಾಂ.ಭಂ]ಗಿ" (ಪುಂಗಣ. ೪೫–೦೫) ; ೨. ಒಳ್ಳೆ ಬಂಗಿ ನುಗ್ಗೆ ಉಳ್ಳಿ ಮೊದಲಾದ ಇವನೆಲ್ಲವ ಬಿಸುಡೇಱ (ಜಡಕ್ಕ. ೬೯) ; ಹೇಸರಗತ್ತೆಯ ಮೇಲೆ ಬಂಗಿಯ ಹೇಱು ಸಾಸಿರ ಗಂಗ ಸಾರಗಳ ಸೂಸುವ ಸಾರಾಯದ ಪೀಪಗಳ ಲೆಕ್ಕವೀಸೆಂದು ಪೇಳ್ದರಾರದಸು (ಶಂಪ. ೦೦-೪೬); ಅಂಗಿ ಕೊಟ್ಟು ಬಂಗಿ ಸೇದಿ ಮಂಗನಾದ (ಗಾಡ). ೩. ಗಾಂಜಾಸೊಪ್ಪಿನಿಂದ ಮಾಡುವ ಪಾನೀಯ,—ಮದ್ಯ : (೫). ೪. ಗಾಂಜಾ ಸೇದುವ ಚಟಕ್ಕೆ ಬಿದ್ದವನು ; ಗಾಂಜಾ ಕುಡಿಯುವವನು : ಶುದ್ಧ ಬಂಗಿಯ ಹಾಗೆ ಆಡುತ್ತೀಯಲ್ಲ (ಕಾಗ).

ಭಂಗಿಪುಡಿ = ಗಾಂಜಾ ಸೊಪ್ಪನ್ನು ಒಣಗಿಸಿ ಮಾಡಿದ ಪುಡಿ.—**ಚೂರ್ಣ** : ಅರಳಂ ಸೂಸಲುಮಂ ಸಮಂತಕಮಿಯಮಂ ಭಂಗೀಪುಡೀ ಬೆಲ್ಲಮುಂ ಬೆರಸಿರ್ದಾ ತಿಲಪಿಷ್ಟಮಂ . . . ಮಾಡುವರ್ ಪ್ರತಿದಿನಂ ಮುದ್ಯಕ್ತಿಗಳ್ ಸಂತತಂ (ದಾಶಿ. ೫-೬೨). **ಭಂಗಿಸೊಪ್ಪು, ಬಂಗಿಸೊಪ್ಪು** = ಗಾಂಜಾಗಿಡದ ಸೊಪ್ಪು : ಉಮ್ಮತ್ತದ ಸೊಪ್ಪಿನ ರಸದಲ್ಲಿ ಒಂದು ಮದ್ದನ್ನೆ. ಭಂಗಿಸೊಪ್ಪಿನ ರಸದಲ್ಲಿ ಒಂದು ಭಾವನೆ (ಪಪ್ಪಿ. ೨೭); ತಂಬಕೋಲಗಳು, ತಪಸಿ, ಕೊಮ್ಮೆ . . . ಗುಗ್ಗುಳ, ವಿಜಯಾ (ಭಂಗಿಸೊಪ್ಪು) . . . ಪ್ರಯೋಗಿಸಲು ಶಾಸ್ತ್ರಸಾಸಗಳು . . . ಗುಣಾಢ್ಯಂದುವವು (ಕಣ್ಯ. ಪಂ- ೧೭೮); ಬಂಗಿಸೊಪ್ಪಿನಿಂದ ವಂದ್ಯ ಶಯಾನಿಸುತ್ತಾರೆ (ಕಾಗ). [<ಹ್ರಾ. ಭಂಗೀ, ಭಂಗಾ./ ಸಂ. ಭಂಗಾ-/ ತೆಲು. ಭಂಗಿ, ಬಂಗಿ./ ಹಿಂ. ಮರಾ. ಭಾಂಗ್]

ಭಂಗಿ೩ (ನಾ)- ೧. ಮುರಿಯುವುದು ; ಸೀಳುವುದು. ೨. ಒಡೆತ ; ಸೀಳು ; ಬಿರುಕು. ೩. ಬಾಗು ; ತಿರುವು : ನೆಲೆಪೆಲೆ ಭಂಗಿ ಭಂಗಿ ಪದವಣ್ ಬೆಳ್ವಾಯ್ ವೆಜತಲ್ಲಿದೆಂತೊ ಕೋಮಲಲತೆ ಬೇಱೆ ಮೆನ್ನಿನಿಯಳಂ ಮಱೆಗೊಂಡುದೊ ಸೂಱೆಗೊಂಡುದೋ (ಪಂಪಾ.೩-೦೨). ೪. ಅಸ್ಥಿರತೆ ; ಭಂಗುರತೆ. ೫. ಡೊಂಕಾದ ದಾರಿ.—ಹಾದಿ. ೬. ಅಲೆ ; ತೆರೆ. ೭. ಮೋಸ ; ವಂಚನೆ. ೮. ನೆಪ ; ವ್ಯಾಜ. ೯. ಬಗೆ ; ವಿಧಾನ ; ರೀತಿ : "ವ್ಯಾಕೂ(ಕೃ)ತಿಃ, ಭಂಗಿಃ —ಈ ೨ ಪರಿ" (ಶಬ್ದಮ. ೦೫೩-೭೭) ; ಅವ ಭಂಗಿಯಿಂ ನೋಡುವೊಡೆನ್ನೊಳ್ಳ ಗುಣಲೇಶಮುಮಿಲ್ಲ ತೆಱದಿನವನುಗ್ರಹಮಾಡುವುದರ್ಕ ದೇವಿಯರೆದೊಂದು ಋಜುತ್ವಮೆ ಮುಖ್ಯಕಾರಣಂ (ಕಾದಂಬ. ೦೫೦) ; ಪೋಲ್ದುಗುವ ಕಾರುಳಂ ತಿರ್ದುತ್ತುಮಿಂತೆಂದಳಿಂದಿನ ಭಂಗಿಯುಂ (ದಮಕೋಪ. ೨-೭೦). ೧೧. ದೇಹದ ನಿಲುವು.—ವಿನ್ಯಾಸ : ಅಂಗೋಪಾಂಗದೊಳ್ ಸಂಗಳಿಸುವ ಪಲವುಂ ಭಂಗಿಯಿಂ . . . ಎಸೆಪುದು ಭರತಾಂತಃಪುರಸ್ತ್ರೀಸಮೂಹಂ (ಅಪು. ೦೦ ೦೫೩) ; ಪೊಸಪಿನಸಂಯ್ಯಂ ಪಾಡುಱದ ಮೆಯ್ಯ ಕದಂಪಿನ ಕೆಯ್ಯ ಭಂಗಿ ಕಣ್ಗಸೆಯೆ (ಜಾಂಬಪು. ೯-೮೯) ; ಮುರಿಮುರಿದು ನೋಟ್ಟ ಭಂಗಿಯಿಂ ತಮ್ಮ ಕೊನೆಗಣ್ಗಳ ಕಾಂತಿಯಿಂ ದೆಸೆಯನೆತ್ತಂ ಬೆಳಗಿಯುಂ (ಶಾಪಾಕ್ಷ. ೩೯-೦೪). ೧೧. ಚರ್ಯೆ ; ಅಭಿವ್ಯಕ್ತಿ : ನಿಲುವಿನಲಿ ಸ್ವಸ್ಥಾನದಲಿ ಕೈಚಳದಲಿ ಭಂಗಿಯಲಿ ಭರದಲಿ . . . ಶ್ರಮವನು ತೋಜಿದನು ಪಾರ್ಥ (ಕ:ಪ್ರಾ.೦. ೬-೪೦) ; ಕಾಗದ ಕತ್ತರಿಸುವ ಚಾಕನ್ನು ತೆಗೆದುಕೊಂಡು ಅಲ್ಲಾಡಿಸುತ್ತ, ಒಗೆ ನಾನಾ ವಿಧವಾದ ಭಂಗಿಭಾಕ್ತೆಗಳಿಂದ ಮಾತಿನ ವೈಖರಿಯನ್ನು ತೋರಿಸುತ್ತಿದ್ದನು (ಕ್ಷಣ. ೩೭). ೧೨. ಪ್ರಕಾರಾಂತರದಿಂದ ಹೇಳುವ ಮಾತು ; ಉಕ್ತಿವೈಚಿತ್ರ್ಯ ; ಅಪ್ರಸಿದ್ಧ ಮಾತುಗಾರಿಕೆಗಳನ್ನೂ ಮಾತಿನ ಭಂಗಿಗಳನ್ನೂ ವಿದಗ್ಧರ ಗೋಷ್ಠಿಗಳಲ್ಲಿ ಪ್ರಾಪ್ತ ನೋಡಿಲ್ಲವೇ ? (ಕ್ಷಣ್ಣಾಕೋ. ೫೦೪). ೧೩. ಬೆಡಗು ; ಒಪ್ಪ ; ಒಯ್ಯಾರ : ನಿಲ್ವುವ ರಸಂಗಳಿಲ್ಲಿ ಮಡಲ್ಗನೆ ಭಂಗಿಯೊಳನಂಗಸಂಗಮಲತೆಪುಲ್ ನಿಲ್ವು (ಆಪು. ೯-೨೦) ; ಸೊತ್ತುವ ಸೋಗೆಯು ಸುತ್ತಿನೊಳಾಡುವ ಕೇಕಿಯು ಭಂಗಿ ಲೋಕಮಂ ಸೋಲಿಸುಗುಂ (ಹುಚೋಪ. ೬-೩೬). ೧೪. ಪ್ರೀತಿ ; ಗೆತ್ತು ; ಭಂಗಿ ಮನಸಿಜನ ಗಾಡಿಗೆ ಭಂಗಮನೊಡರಿಸೆ . . . ವಿದ್ಯುದಂಗಂ ಬಂದಂ (ಪಜಿಣಪು. ೬-೩೪). ೧೫. (?) : ಸ್ವಯಂಭುದೇವರ ಸ್ಥಾನಾಧಿಪರಪ್ಪ ದೇವರಾಸಿಜೇಯ್ಯರ ಸಿದ್ಧಂ ವಾಮ ದೇವ ಭಂಗಿಯಿನ್ದೊಳಿಗುಳ್ಕಂಗನೆಮರ ಪುತ್ರುಂ (ಪೌಚಾ. XX. ೨೯-೨೩ ; ೨೦೩೬). [ಸಂ.]

ಭಂಗಿ೪ (ನಾ)- ಬೀದಿಯ ಕಸ ಗುಡಿಸುವ ವೃತ್ತಿಯವನು; ಜಲಗಾರ ; ಜಾಡಮಾಲಿ : ಭಂಗಿಗಳು ಅಥವಾ ಹಲಾಲ್ಕರೋರರು . . . ಪಾಯಖಾನೆಗಳ್ಳಿಯಂ ಮಲಪಸ್ಸಂ ತೆಗಿದು ಸ್ವಚ್ಛಮಾಡುವರು (ಕಾಗಿ. ೨೨೦) ; ಮ್ಯುನಿಸಿಪಾಲಿಟಿಯ ಭಂಗಿಗಳು ಅದೇ ರಸ್ತೆಯನ್ನು ಗುಡಿಸಿ ಹೋಗಿದ್ದರು (ಪುಗಟಾ. ೦೩೬) ; ಈ ಇದೂರತಿಯನ್ನು ಒಬ್ಬ ಭಂಗಿಯು ಕಟ್ಟಿಸಿದ ಸಂತಲೂ ಕೆಲವರು ಹೇಳುತ್ತಾರೆ (ಬಪಾ. ೨೨).

[← ಹಿಂ. ಮಾಠಾ. ಭಂಗೀ]

ಭಂಗಿಗ (ನಾ)- ಗಾಂಜಾ ಸೇದುವ ಚಟವುಳ್ಳ ವನು : ಜಪ್ಪಳಿಗ ಭಂಗಿಗ ಕಳುಗುಂ ಜೂಜಿಗ ಸುಂಕಿಗ ತಲೆಬೋಳಿಸಿ ಭಾಜಿಮಾಡೆ ನಿರ್ಧರಪಿಲ್ಲ (ಕಾಳ. ೦೦೯-೦೦). [ಭಂಗಿ೧ + —ಗ೨]

ಭಂಗಿತ (ನಾ)- ೧. ಅವಮಾನಕ್ಕೆ ಒಳಗಾದ ವ್ಯಕ್ತಿ : ಒಲ್ಲೆನಾ . . . ಸಂಗನ ಶರಣರನಱಿಯದ ಉಳಿದ ಭಂಗಿತರ (ಶಿಪ. ೬೩) ; ಅಂಗ ದಾಪ್ಯಾಯನಕ್ಕೆ ಲಿಂಗವನಱಿಸುವ ಭಂಗಿತರನೇಂ ಪೆಱೆ (ಕವಪಂ. ೩೩-೦೨೨) ; ವಾದದಲಿ ತಲೆವಾಗಿ ಭಂಗಿತರಾದ ಜೈನರು ಮತ್ತೆಯುಂ ಸಂವಾದಿಸಿ ದರೀಯೂಲವೊಂದಿದ್ದಿಹುದು . . . ಎಪಲು (ಜಪ್ರ. ೩೦-೩೭). ೨. ಸೋತು ಹೋದವನು ; ಪರಾಜಿತ : ಇನ್ನು ಪುಟ್ಟದೆಯಿರಲಿ ನಾರಿಯರೆಷ್ಟ ಪೆಲು ಭಂಗಿತರು ಭುವನದೊಳಿನ್ನು ಜನಿಸಲು ಬೇಡ ಗಂಡರು ಭೀಮ ಸ್ಪರ್ಶರು (ಭಾಷ್ಯ. ೩-೩೭). [ಸಂ.]

ಭಂಗಿಪಟ್ಟಿ (ನಾ)- ಭಂಗಿಗಳಿಗೆ ವೇತನ ನೀಡಲು ವಸೂಲು ಮಾಡುವ ಸುಂಕ.—ತೆರಿಗೆ : ಜಕಾತಿ, ಭಂಗೀಪಟ್ಟಿ, ಮಾರ್ಕೇಟ್ ಫೀ, ಭಕಡೀಪಟ್ಟಿ ಇವೇ ಆದಾಯದ ಮುಖ್ಯಬಾಬುಗಳು (ಕಣಗೆ. ೪೯೩).

[ಭಂಗಿ೩ + ಪಟ್ಟಿ೩]

ಭಂಗಿಭಾಷಿತ (ನಾ)- ಪ್ರಕಾರಾಂತರದಿಂದ ಹೇಳುವ ಮಾತು ; ಉಕ್ತಿವೈಚಿತ್ರ್ಯ : ಭಂಗಿಭಾಷಿತದಿವಾತ್ಮನಂ ಪ್ರೀತನಂ ಮಾಡಿ (ಕ್ಷತ್ರ. ೬-೪೪ ಪ).

[ಸಂ.]

ಭಂಗಿಮುಕ್ಕ- ಬಂಗಿಮುಂಕ್ಕ (ನಾ).= ಭಂಗಿಗ : ಲಿಂಗಲಿಂಗದೊಳಗಿರುವ ಚಿನ್ಮಯವ ತಿಳಿಯದೆ . . . ಜಂಗಮ ಸ್ಥಾವರದ ಭಾವವನು ತಿಳಿಯದೆ ಭಂಗಿಮುಂಕ್ಕಗಳೆಲ್ಲ ಲಿಂಗಪಾತರರಪರೆ (ಶಪ. ೦೨೬-೭). ಬಂಗಿಮುಕ್ಕ : ನಾವು ಹೇಳಿ ಕೇಳಿ ನೆರೆಗೆಡುಕರು.ಬಂಗಿಮುಂಕ್ಕರು ! (ಶಂಪಾ. ೦೩).

[ಭಂಗಿ೧ + ಮುಕ್ಕ೧]

ಭಂಗಿವಡೆ (ಕ್ರಿ)- ಬೆಡಗನ್ನು ಹೊಂದು ; ವಿಲಾಸವನ್ನು ಪಡೆ : ಲತಾಂಗಿ ಭಂಗಿವಡೆದಿರ್ದಳ್ ಬೇಂಟೆವೇಡೊಂದು ಬಳ್ಗೆಗೆ ಪೊಯ್ನಾರಜಿ ವಂದದಿಂ (ಜಗಿ. ೦೦-೦೦) ; ಭಂಗಿವಡವಿನೆಗವೋದಿನ ಪಾಂಗಿನವಾರ ಪಟಿಯಲ್ಲಿ . . . ಪುಂಗಳಪಾಪ್ತರತೆಪಿಪ್ಪರರಿಬರಮರ್ಕ್ಕಿರ್ (ಕರ್ಣ. ೦೪-೯).

[ಭಂಗಿ೩ + ಪಡೆ೧]

ಭಂಗಿವೆಱು (ಕ್ರಿ).=ಭಂಗಿವಡೆ : ಸುಳಿಗುರುಳಿನೋಳಿ ಕಣ್ಗಳವರೆ ನೀಳ್ದಲರ್ಗಣ್ಣಿಯರುಯ್ಯಲಾಗೆ ಕೋಮಳತನು ಭಂಗಿವೆತ್ತಿರೆಸೆಯೆ (ರಚಾಗಜ್ಞ. ೬-೦೬೯) ; ದೇವಗಜದಂಗಮಾರಿಚ್ಛಿಯ ಭಂಗಿವತ್ತಿರಲ್ ಬಗೆಗೊಳಿಸುತ್ತು ಚಂದನ ರಸಂದೊಡದುದವೆ ಪೂರ್ವದಿಬ್ಬಿಖಂ (ಜಗಿ. ೦೬-೦೦೩).

[ಭಂಗಿ೩ + ಪೆಱು]

ಭಂಗಿಸು (ಕ್ರಿ)- ೧. ಮುರಿ; ಒಡೆ : ಬಂಡಿಯಂ ಭಂಗಿಸಿದ ಬಲ್ವಿಂದೆ . . . ಬೆಱಿದಿರ್ದೊಡೆ ಸಂಗರದೊಳಾಳಹನೆ (ಕ್ಷಣಾ. ೬-೩೯). ೨. ಧ್ವಂಸಗೊಳಿಸು ; ಹಾಳುಮಾಡು : ಬೆಂಗಳೂರಿನ ಪರಾಕ್ರಮವನು ಬೇಗ ಭಂಗಿಸಿ ಬಿಡುವೆನು (ಕಂಪ್ರ. ೦೦-೩೬) ; ಭಂಗಿಸಿತು ಭರತನಳವ ಸುಮ್ಮುಸಿರೊಂದೆ ಆ ವಸ್ತ್ರನೀರವತೆಯಂ (ಶ್ರೀರಾಮಾ. ೦೬೨-೩೧೦). ೩. ಸೋಲಿಸು ; ಪರಾಭವಗೊಳಿಸು : ಸಂದ ಕಾಮದೇವನಮಂ ರೂಪು ನೊಳಾದಂ ಭಂಗಿಸಿ (ಶಪ್ರಗಜ್ಞ. ೪-೨೦೬) ; ಇಂತು ಸಕಲಭುವನಮಂ ಭಂಗಿಸುವ ಚತುರಂಗಸೇನೆಯ ನಡುವೆ ಕಡುಪಿಂ ಸಡಿತಂದು (ಗಂಗ. ೬-೪ ಪ); ಕದನದೊಳಿವನ ಭಂಗಿಸಿ ಬಿಡುವೆನು (ಕಾಪ್ರಕ್ರಿ. ೩-೨೬). ೪. ತಡೆಗಟ್ಟು ; ನಿಗ್ರಹಿಸು : ಭಂಗಿಪೊಡೆಪೊಗೆದು ಸೂಸುವ ಶೃಂಗಾರ ರಸಕ್ಕೆ ಸೇತುಗಟ್ಟಿಪ್ಪವೋಲ್ ಚಿತ್ರಂಗೊಳಿಪ ರತ್ನಕಾಂಚಿಯನೆಂಗನೆಯ ನಿತಂಬದೊಳ್ ಪೊಪರ್ಚದಳೊರ್ವಳ್ (ಶಾಂಶಾಕ್ಷ. ೪-೨೬). ೫. ಅಭ್ಯಮೋನಗೊಳಿಸು : ನೀನೇಸು ಪರಿಯಲಿ ಬಯ್ದು ಭಂಗಿಸಿ ನಮ್ಮ ಪೂಜೆಗೆಡಿಸಿ ಆ ಸಿತಾತ್ಮನ ಬಲ್ಲನೊದೆದಾಕಾಶವ್ಯಳಿಸುವ ಶರಾಘಕೆ ಮಿಸಲಿಯೊ ಕರ್ಣ ನಿನ್ನೊಡಲು (ಕುಪಾ. ೯-೩೪) ; ಜನಕನ ನಂದನೆಯ ಪಮಿಲಸು ಬಿಟ್ಟರು ವೆರೆದಿಳಾಮಂಡಲದ ರಾಮರು ಬೈದು ಭಂಗಿಸುತಾ ವಿದೇಷಜನ (ತೊಪರ್ಣ. ೦-೦೫-೨೯) ; ಸಲೆ ನಾಚಿಕೆಯನು ತೊಱೆದು ಬಲಗ್ಗೈ ಬೆರಳನೊರ್ವನಗಿತ್ತೆ ಪೊಣ್ಣೆಯೆಂದುಲಿದು ಭಂಗಿಸರೆ ಕಂಡವರು (ಕಂಸಾ. ೬-೦೬೪). ೬. ಕಾಡು; ಹಿಂಸಿಸು : ಬಲುಬಿಸಿಲೊಂದು ಜಡಾಳಿಕೆ ಜಗವ

ಭಂಗಿಸಿತು (ಪೋಚಿಕ. ೦೯–೬೬) ; ವಿಸೊಂದು ಸಜಗರವಿಂದಲೆತ್ತರುವಳ್ ಹೊಸಸುಗ್ಗಿ ವಧುವಿನ ಹಾಗೆ ಎಜ್ಜೊಂದು ವಿಧವಿಂಬಲವಳ ಭಂಗಿಯುಳ್ ಮಳೆಗಾಲ ಅತ್ತೆಯ ಹಾಗೆ (ಜಾಣಾಚ. ೨೨೦–೧೦). [ಭಂಗ + –ಇಸು]

ಭಂಗುರ (ಗು). ೧. ಸುಲಭವಾಗಿ ಮುರಿದುಹೋಗುವ.– ಒಡೆದು ಹೋಗುವ : ಚಿಳದನಳಾಹತಕ್ಷುಭಿತಭಂಗುರತುಂಗತರಂಗಮಾಳಿಕಾವಳನ ಸಮುಚ್ಚಳನ್ನಿಗಣಾತ್ಮ . . . ಜಳಮಂ ಮನಂ ಬಯಸಿ ನೋಡಿದನರ್ಣವಮಂ ಗುಣಾರ್ಣವಂ (ಕಂಚಾ. ೪–೨೩). ೨. ಕ್ಷಣಿಕವಾದ; ಚಂಚಲವಾದ ; ಸ್ಥಿರವಲ್ಲದ ; ಭಂಗುರಮಿಘ್ನಾಜ್ಞಾನಂ ಪಿಂಗಲೊಡಂ ಹೃದಯದಮಳಸಮ್ಯಗ್‌ಜ್ಞಾನಂ ಕಂಗೊಳಿಸುವಂತಿರ್ದರ್ . . . ವೀರಸಳ ಭೂಪಾಲಂ (ವಕಂ. ೧೪೪) ; ಮಾಯೆಯೆಂಬುದು ಅಥವಾ ಪ್ರಭುವಿನ ಭಂಗುರಲೀಲೆಯೆಂಬುದು ಈ ಜಗತ್ತನ್ನು ಅವ ' ಅಲ್ಲಗಳೆದುಬ್ಬುವ (ಪಾಣಾಪೋ. ೨೩೧). ೩. ಕೊಂಕಿದ ; ಬಾಗಿದ :ಭಂಗುರ ಕರಾಳದಂಷ್ಟ್ರಂ ಪಿಂಗಳನಯನಂ ಮತಂಗಜುಂಗಳ ಮಿದುಳಂ ಸುರಿಗಿ ನಲಿಗೆಜ್ಜೆ ಶಿಖರಿಗೆ ಲಂಘಿಸುತಿರೆ ಸಿಂಗಮಂ ಜಿವಾಂಬಿಕೆ ಕಂಡಳ್ (ಸಚಿತ್ರ. ೬–೬೬). ೪. ಗಂಟುಹಾಕಿದ ; ಗಂಟಿಕ್ಕಿದ ; ಭಂಗುರಭೀಷಣಭ್ರುಕುಟಿದಂಷ್ಟ್ರಂ . . . ಪಿಂಗಳಂ ಮೃಗೇಂದ್ರನೊಸೆದಿರ್ಪುದತಕ್ಕ್ಯವರಾಕ್ರಮಾಕ್ರಮಂ (ಕಂಚಾ. ೨೬–೦೩). ೫. ಮೋಸದ ; ವಂಚನೆಯ. (ನಾ). ೬. ಚಂಚಲವಾದುದು: ಇಂದ್ರಿಯಸಂಗದುರುಳಂಗಳು ಭಂಗುರಂಗಳಸಂಗನೊಳಾಪತ್ಸಂಗಳು . . . ಪೆಣ್ಗಳ್ ಕಂಗಳವು ಮತ್ತೆ (ಪಚ. ೪೦–೬೯). ೭. ಕ್ಷಣಿಕವಾದುದು; ನಶ್ವರವಾದುದು : ಕರ್ಮಂಗಳ್ಗತ್ಕಣಂ ದೊರೆಕೊಳ್ವ ಸುಖಂ ಭಂಗುರ; ಮಲ್ಲೆ (ಜಾಪಾತ್ಮ. ೦೪೦–೪). ೮. ಕತ್ತರಿಸುವುದು; ನಾಶಮಾಡುವುದು : ಸಂಗತನಿಜಪಸ್ಯ ಕನಿಷ್ಠಾಂಗುಲಿದ್ಯುತಮಂ ಪ್ರಯಾಮನಃವೇದುಬಾ ಭಂಗುರಮಂ ರವಿಮಂಡಳದಂಗುರಮಂ ರಘುಜನಿತ್ಪನಾಪನ ಕೆಯ್ಯೊಳ್ (ಗಾಣ್ಮಕ. ೧೪೬). ೯. ಸದಿಯು ಬಾಗ್ಗು—ತಿರುವು. ೧೦. ಬಾಗಿದುದು : "ವಕ್ರಂ, ಪೃಥನಂ, ಭಂಗುರಂ . . . ಕುರ್ಮಿಮಾತ್—ಈ ೧೨ ಕೊಂಕುದುದು" (ಶಕಾಥು. ೦೦೬–೦೦). [ಸಂ.]

ಭಂಗುರಕೇಶಿ (ನಾ). ಗುಂಗುರು ಗುಂಗುರಾದ ಕೂದಲುಳ್ಳವಳು : ಭಂಗುರಕೇಶಿ ನಲ್ಲಪ ತಳಂಗಳೊಳೊಯ್ಯನೆ ಮೆಯ್ಮಸಿಕ್ಕಿ (ಜಾಣ್ಮಕ. ೧೧೩). [ಸಂ. ಭಂಗುರಕೇಶೀ

ಭಂಗುರವೇಣಿ (ನಾ). ಕೊಂಕಿದ ಕೂದಲು ; ಗುಂಗುರು ಕೂದಲು : ಭಂಗುರವೇಣಿಯೆಂಬ ಬಂಧುರನದಿ ರಂಜಿಸಿತ್ತು ಮುಖಾಂತೆಯು ಭಂಗುರವೇಣಿಯೆಂಬಿನಂ (ಪ್ರಕೃತಿ. ೬–೯). [ಸಂ.]

ಭಂಗುವಳಲ್ಲು ? (ನಾ). (?) : ಜೋಗಗ್ಗು ಕೆಲವಂತೆ ಅಧ್ಯಂತರ ಸಿದ್ಧಿ ಆಗುತ್ತಿರೆ ಜೋರಯ್ಯನ ಮೆದಿ ಭಂಗುವಳಲ್ಲು ಈ ಕಲ್ಲ ಮಜ್‌ಪೊಸ್ಸರ ಕೊಲಬಾಗದು (ಪ್ರಳ. ೦೮೨೮, ೩೩–೪ ೧೦೦). [?]

ಭಂಗ್ಯ (ನಾ). ಗಾಂಜಾ ಅಥವಾ ಸೆಣಬಿನ ಗಿಡಗಳು ಬೆಳೆಯಲು ಯೋಗ್ಯವಾದ ಭೂಮಿ : "ಭಂಗ್ಯಂ, ಭಾಂಗೀನಂ – ಈ ೨ ಸೆಣಬಿನ ಕಮ್" (ಶಕಾಥು. ೩೬–೬). [ಸಂ.]

ಭಂಜಕ (ನಾ). ೧. ಮುರಿಯುವಂತಹುದು. ೨. ಮುರಿಯುವವಿಕೆ. ೩. ನಾಶಪಡಿಸುವಂತಹುದು : ಅವರ ವಾದನೇ ಅವರ ಸಿದ್ಧಾಂತಕ್ಕೆ ಭಂಜಕ (ಜಾಪಾತ್ಮ. ೧೨೩). ೪. ನಾಶಪಡಿಸುವವನು : ಸಾಂಧಿಗಳೊಳಗೆನಿಸಿದನು ಭೂಭಾರಭಂಜಕನಸುರಹರನು (ಶಾಣ್ಮಗ. ೯–೨೪). [ಸಂ.]

ಭಂಜಣಗೆ (ನಾ). [ಅಶ್ವಶಾ] ಕುದುರೆಯ ನಡಗೆಗಳಲ್ಲಿ ಒಂದು ಪ್ರಕಾರ ; ಮಂದಗತಿ ; ಪೆಲುನಡೆ : ಭಂಜಣಗೆಯಲಿ ಮೆಲ್ಲಡಿಯ ವರಮರಾಳವ ಪೋಲ್ತುದೋಯೆನೆ . . . ಜಾತ್ಯಶ್ವಸಂಕುಳಮೆದು ಪೊಗ್ಗಿನಲಿ (ಪಚಂತ. ೨–೩೦). [←ತೆಲು. ಭಂಜಕ]

ಭಂಜನ (ಗು). ೧. ಮುರಿಯುವ. ೨. ತಡೆಯುವ ; ನಿಗ್ರಹಿಸುವ. ೩. ಹಿಂಸಿಸುವ ; ಬಾಧಿಸುವ. (ನಾ). ೪. ಹಾಳುಮಾಡುವುದು ; ನಾಶಪಡಿಸುವುದು. ೫. ಹಾಳು ; ನಾಶ : ಆರ ಸೆವಡೆಯೊಂದ್ರಕಾರದ ಭಾರವನು ರವಿ ಗಲುವ ನಿನ್ನೀ ವೈರಿಬಲಭಂಜನಕೆ ಗುರು ಹಂಗಪನೆ (ಶಾಣ್ಮಕ್ರಿ. ೦೬–೨೬). ೬. ದೂರಮಾಡುವುದು. ೭. ಪೀಡಿಸುವುದು. ೮. ನಾಶಪಡಿಸುವವನು : ಅಂತು ಸಮುದಕುಂಜರಘಟಾಪ್ರಭಂಜನಂ ಮೃಗಾಧಿರಾಜಂ ಕೈನೀಡಿ ... ಬಚ್ಚಿಕ್ಕಿಂತೆಂದಂ (ಕಂಚಾ. ೩೬–೨೫) ; ಪದಿಮೂಱುಂ ಪ್ರಕೃತಿಗಳುಬೊರ್ಮೆಯ ನಿರ್ಮೂಲಮಾಗೆ ಸಕಲಸಂಸಾರ ಭಾರದುಃಖಭಾರಭಂಜನನುಂ ನಿರಂಜನನುಮಾಗಿ (ಕಂಚಾಪೂ. ೦೭–೯೦ ಪ); ಜೈಸಮಗ್ರಗ್ರಾದ್ಯಾಂತಪಯೋಧಿಗಳ್ ವಿಷಮುಮೈರಿಗಳುದ್ಧತಮತ್ಯರ್ಘ್ಯಾಸರ್ . . . ಶುಭಚಿಂಪ್ರದೇವಸಿದ್ಧಾಂತಮುನೀಂದ್ರನಂ ಪೊಗಳ್ದುದು (ಎಳ್. II. ೦೦೬–೦೦೯ ; 1121). [ಸಂ.]

ಭಂಜನಿ (ನಾ). [ಜೈನ] ಒಂದು ಬಗೆಯ ವಿದ್ಯೆ ; ಬೇರೆಯವರನ್ನು ಸೋಲಿಸುವ ವಿದ್ಯೆ : ಅವಿಹತತೇಜಪಾಂ . . . ಪ್ರಜ್ಞಪ್ತಿ ಕಾಮರೂಪಿಣಿ . . . ಭಂಜನಿ . . . ಅಘೋಗಿನಿಯೆಂಬವು ಮೊದಲಾಗೆ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನನಾಗಿರ್ದು (ಪಾಪುಂ. ೦೬೩). [ಸಂ. ಭಂಜನೀ]

ಭಂಜಸಿ$_1$ (ಪಾ). ೧. ಸೋಲಿಸುವಿಕೆ ; ಅಡಗಿಸುವಿಕೆ : ಭಂಜಸೆಗೆ ಬಲುಹಾಳ್ಕಡೆಯು ವಿಮಗಂಜುವರು ಗುರುಭೀಷ್ಮರಾ ಪರಿರಂಜರು ತಾವಲ್ಲನುಕ ತಾಗಿದನು ಭೂಪತಿಯ (ಶಾಣ್ಮಕ. ೦೦–೨೨). ೨. ನಾಶ ; ಧ್ವಂಸ ; ವಂಜಿಸಂತಪ ರೋಷಕಂಟಕರ ಭಂಜನೆಯ ನಾಮೊಲಿದ ಕರ್ತವ್ಯ (ಪಣ್ಣಂ. ೦೩–೩೩೬). [ಸಂ. ಭಾಜನ]

ಭಂಜಸಿ$_2$ (ನಾ). ವಿವರಣೆ : ಬಸುರ ಭಂಜನೆ ಬೇಡ ದೂತರೊಂದು ಪ್ರತಿಜ್ಞೆ ದುರ್ಜಾಸಂ ನಿಷ್ಠ ಮುಂದೆ ಸೈರಿಸುವುದು (ಕೃಬಾ. ೦೩–೨೯). [ಸಂ. ಭಂಜನಾ]

ಭಂಜವಣೆ (ನಾ). ೧. ಬಾಗು ; ವಕ್ರತೆ: ಕಂಗಳಲಿ ಕುಡಿಮೀಳ ಹಬ್ಬಿನ ಹೊಂಗಿನಲಿ ಭಂಜವಣೆ ಭಾವದ ಭಂಗಿಯುಲಿ ಪತಿಕರಣ . . . ದ್ರೌಪದಿಯ (ಶಾಣ್ಮಂ. ೦೩–೨೩). ೨. ತಿರಸ್ಕಾರ ; ಹೀಯಾಳಿಕೆ : ಅಂಜುವರೆ ನಿಲು ಜೂಜುಗಾಱರ ಭಂಜವೇಗೊಳಗಪರೆ ಬಾ ನೃಪರೆಂಜಲಿಸಿ ಬಿಡಬಹುದೆ ಪರಾಮರ್ಶತರಸುಧಯು (ಶಾಣ್ಮ. ೦೬–೩೦). [ಭಂಜಿಸು + – ಅಣ್ಕೆ]

ಭಂಜಳಿ (ನಾ). = ಭಂಜವಣೆ : ಭಂಜಳಿ ಮುರಳಿ ರುಳಂಬಿ ಪಾಟಿಗೆ ರೂಪು ರಂಜಿಪ ರೇಬೆಯೆಂದೆಂಬು ಮಂಜುಳವಾದ ಪಡಂಗಬೊಳಾ ಹಯ ರಂಜನೆಪಡೆದುದು (ಕ್ರಿಚಾಂ. ೪–೦೩). [←ತೆಲು. ಭಂಜಳಿ]

ಭಂಜಿ (ನಾ). ಒಂದು ಬಗೆಯ ಸಸ್ಯ : "ತತ್ಕಾಲೀ – ಸಬುವಲು, ಭಂಜಿ. ಕುಂಬಳೆ" (ಬಸಂ. ೬೩). [?]

ಭಂಜಿಕೆ (ನಾ). ಮೂರ್ತಿ ; ವಿಗ್ರಹ : ಆ ತುರಂಗದ ಪುರಂ ಕೀಲಿಸಿತು . . . ನಿಜತನುವಿನ ಲೀಲೆಯುಡಗಿರ್ದುದಾಕೃತಿಪು ಭಂಜಿಕೆ ಬಿಸಲ್ (ಕೃಬಾ. ೦೦–೦೦). [ಸಂ. ಭಂಜಿಕಾ]

ಭಂಜಿತ (ಗು). ೧. ಅವಮಾನಗೊಳಿಸಲ್ಪಟ್ಟ; ಕೀಳುಮಾಡಲ್ಪಟ್ಟ; ತರ್ಜಿತವೀಣಾತಿಂಚಿತಂ ಭಂಜಿತರತತಿರದಾನೀರತ್ನಕಾಂಚೀಪ್ರಣಾದಂ . . . ಅ ಕನ್ನಿಕೆಯ ಪಧುರಸಪ್ತಸ್ವರೋತ್ಪತ್ತಿಗಾನಂ (ಕಂಚಾಪೂ. ೦೦–೦೦೦); ವಿಕ್ರಿಯಾಬಳದಿಂ ತಾಂ ಬಳಯುಲ್ಕೆ ಭಂಜಿತವಂಪಾಮಂತ್ರಿಶ್ರಯಂ ಶ್ರಿಕ್ರಯಂ (ಆಪಾಪು. ೬–೨೮). (ನಾ). ೨. ಅವಮಾನಕ್ಕೊಳಗಾದವನು ; ಶರಣಾಗತ ; ಆ ನೃಪತಿ ಭಂಜಿ [ಪಾಣಂ.ಗಿ]ಕನಾಗಿ ಬರುತೆ ನಾರದಮುನಿಪನಂ ಕಂಡನು (ಕೃಬಾಣ. ೩–೨೫). ೩. ಒಡೆಯಲ್ಪಟ್ಟಿದುದು; ಭಗ್ನವಾದುದು ;

ಇನ್ನೊಂದಿದೋ ! ಬುಧನ ಜೊತೆಗೆ ದಾಳ-ಲ್ಲ ಗ್ರಹವು ! ಅದರ ಶ್ರುತಿಯೊಳೆಂಥ ಜಲುವಮೂರ್ತಿಯು_ಭಂಜಿತವು (ಪಂಚಾ. ೩೨-೦೨). [ಸಂ.]

ಭಂಜಿಸು (ಕ್ರಿ)· ೧. ಒಡೆ ; ಮುರಿ : (೫)· ೨. ಕೀಳುಮಾಡು: ಅವ ಮಾನಗೊಳಿಸು: "ಭಂಜಿಸು_ಅಪಮಾನೇ"(ಕಾಯಿ); ಕೋಟಿಶಶಿಕಾಂತಿಯಂ ರಂಜಿಸುತ್ತ ಭಂಜಿಸುತೆ (ಇಷಲ. ಕ್ಷ. ೪೪-೦೦). ೩. ದಂಡಿಸು ; ಶಿಕ್ಷಿಸು: ಜಂಗಮಪ್ರಾಸಾದದೂಷರ ಭಂಜಿಸುತ (ಏಸಕೃ. ೫೬-೨೨) ; ಕರೆದುವನ ಮಿಗನನು ಭಂಜಿಸುವುದಿಲ್ಲಕಟ ಭೀಮಧನಂಜಯರು ಕೊಟ್ಟಪಯ ವೆಂದನು ಪಗಿತ ಪುರಪ್ಪೈರಿ (ಶಾಕ್ಕಸ. ೩-೩೨೨). ೪. ಸೋಲಿಸು ; ಪರಾಜಯಗೊಳಿಸು: ಸಜಾಯರ್ ರುಗಣರ್ಭುಗಣರನೆ ಬಳಸಿ ಭಂಜಿಸುವ ಐರಾವತಂ ಪಲ್ಲಪೇಜದೊಳವಿರಾದೊಡಂ . . . ಪೊಕ್ಕರಿಸಿ ಪಿಡಿವರಿಬರೆದಿಪ ಕಲ್ಲ ಮಾನಸರಂತಿರ್ಪ ಪಲ್ಲರ ಪೆರಮಿಗಳೊಳಂ (ಗಿಕೆ. ೩-೦೦೫೫); ಶಿಷ್ಟರುಗಳಂ ಕೃಪೆಮಾಡಿ ಸಲಹಲು ದುಷ್ಟರುಗಳಂ ಕಾದಿ ಭಂಜಿಸಲು (ಏಸಪು. ೫೬-೧೩); ನಿನಗಾಂತ ರಿಪುಗಳ ಭಂಜಿಸುವ ಸಾಮರ್ಥ್ಯದನುವನು ಕಳೆದು ರಂಜಿಸುವ ಅಂಜನಾಸ್ಮವನಿತ್ತೆ (ಶಾಕ್ಕಶ. ೬-೦೦೫). ೫. ಧ್ವಂಸಗೊಳಿಸು ; ನಾಶಮಾಡು ; ರಂಜಕದ ಮಾತಲ್ಲ ನಿನ್ನನು ಭಂಜಿಸಲು ಬಂದವನೆನ್ನುವೆ ನಿನ್ನ ರಕ್ಷಿಸುವೆ (ಕೂಗಡು. ೦೦-೫೬) ; ಅಂಜದಿರಿ ಚಕ್ರದಲ ಅಸುರರ ಭಂಜಿಸುವೆನು (ಶಾಕ್ಕಳ. ೩-೭೬). ೬. ತುಂಡರಿಸು ; ಕತ್ತರಿಸು : ಕರ್ಣಕುಮಾರನತಹಾಯಿದನು ಭೀಮನ ಭೂರಿಬಾಣದ ಪಂಜರದ ಭಂಜಿ [ಶಾಕಾಂ. ಪಿಂಡಿ] ಸುತ ವಜಿಬಲದಲಿ (ಶಾಪ್ಕಳ. ೦೦-೦೬). [ಭಂಜಿಪ + —ಇಸು]

ಭಂಟ 'ಬಂಟ್ಟ' ನೋ·

ಭಂಟಾಕೆ (ನಾ). ಒಂದು ಬಗೆಯ ಬಟನೆಗಿಡ ಮತ್ತು ಅದರ ಕಾಯಿ: ಮುಳ್ಳುಗಾಯಿ ; ಮುಳ್ಳುಬದನೆ : "ವಾರ್ತಾಕೀ, ಹಿಂಗುಳೀ, ಸಂಹೀ, ಭಂಟಾಕೀ, ದುಷ್ಪ್ರಧರ್ಷಣೀ_ಸಿ ಬದನೇಗಿಡವಲ್ಲಿ ಮುಳ್ಳುಜಾತಿ. ಗುಳ್ಳ, ಪಾದಿರಾಜಗುಳ್ಳ" (ಕಡಾಂಕ ೦೬೬). [ಸಂ. ಭಂಟಾಕೀ]

ಭಂಡ$_1$ (ನಾ). ಕ್ಷೌರಿಕ ; ನಾಪಿತ : ಕವಚಮಂ ಪಿಡಿಕರಿಸಿ ಭಂಡರಿಂ ಮುಂಡಮ ಕೀಲಿಸಿ ಕತ್ತಿಯಂಸೇಱಿಸಿ . . . ಪುರಮಂ ಪೊಱಮಡಿಸಿ (ಕಾಸ್ಕ್ರ. ೯-೧೦ ೫). [< ಪ್ರಾ. ಭಂಡ=ಮೋಸಗುವಿಕೆ, ಮೋಸಗಾರ ಕತ್ತಿ]

ಭಂಡ$_2$ (ನಾ). ೧. ಮಾರುವ ವಸ್ತು ; ಸರಕು ; ಸಾಮಾನು : ಧನದೇವಂ ಪರದೀಗೆಂದು ಪಿರಿಮಂ ಸಾರಮಪ್ಪ ಭಂಡಮಂ ತೀವಿಕೊಂಡು. . . ದಕ್ಷಿಣಮಧುರೆಗೆ ಪೋದೊಡೆ (ಕಪ್ಪಾಣ. ೬೦-೦೫); ಮಂಜಿಸ ಮಡಕೆಯೊಳಗೆ ರಂಜನೆಯ ಭಂಡದ ತುಂಬ ಅಂಜದೆ ಪಾಕವ ಮಾಡಿಕೊಂಡು ಭಂಡವ ಮಾಜುವಿಪ್ಪರು ನೋಡಾ (ಕಪಮಂ. ೦೦೩-೪೬೬); ಮಾಜುದ ತಲೆಯ ಭಂಡವ ಹೊತ್ತಿರದ ಕೈಕೋಳಿ ಕರ್ಣಾದಿಗಳು (ಶಾಪ್ಕಕ್ರೀ. ೫-೯). ೨. ಆಸಲು ; ಮೂಲಧನ ; ಭಂಡವಾಳ : "ಭಂಡ (ಬಂಡ) -ಭಾಂಡ=ಭಂಡವಾಳ" (ಕದ್ಯಕೋ. ೫೫); ಭಕ್ತಿಯ ಭಂಡ ಮೊದಲ್ ನಿಜಭಕ್ತಿಯೆ ಕೋಜಾಪು ಕೋಟಿ ರಾಭಂ (ಶಾಂಇ- IX-೨, ೨೯೭-೯೦: ೨೨೧೦). ೩. ಪ್ರಯೋಜನ ; ಲಾಭ : 'ಏಭಂಡೆ' ಪರಾ. ೪. ವಿದೂಷಕ ; ಪಾಸ್ಯನಟ. ೫. ನಾಚಿಕೆ ; ಲಜ್ಜೆ : 'ಭಂಡಗೇಡು', 'ಭಂಡತನ' ಪರಾ. ೬. ಮಾನವಿಲ್ಲದವನು ; ನಾಚಿಕೆಗೆಟ್ಟವನು ; ಲಜ್ಜೆಗೇಡಿ : ವಿಕ್ಕತ ವೇಷ ಧರಿಸುವನು ಭಂಡನು ಲಜ್ಜೆಭಂಡನು (ಏಸಕ. ೫೫೨); ಭಂಡರ ಬೈದು ಫಲವೇನು (ಶಾಬ್ಕಕ್ರೀ. ೫-೫೯) ; ಭಂಡನಾದೆನು ನಾನು ಸಂಸಾರದಿ ಕಂಡು ಕಾಣವ ಹಾಗೆ ಇರಬಹುದೆ ಹಿರಿಯ (ಕ್ಷೇಂಕ. ೦-೫೬-೦). ೭. ಮೊಂಡುವಾದ ಮಾಡುವವನು : ಕೊಂಚಿನೀರೊಳಗಾಳುತೇಳುತ ಜಲಧಿ ಕಾಲ್ಕೊಳೆಯುಂಬ ಭಂಡರ ಮುಂದು ಮಾಡುವೆವೇನು (ಶಾಬ್ಕಕ್ರೀ. ೫-೮೪). ೮. ಯಾವ ಕೆಲಸಕ್ಕೂ ಹೇಸದವನು ; ನೀಚ; ಅನ್ಯಾಯವ ಮಾಡುವವನು : ಊರಿಗೆ ದ್ರೋಹ ಬಗೆದ ಈ ಭಂಡಾಗೆ ನೆಪಪ್ಪಳಿಯಾ ವಂತೆ. ಇನ್ನೊಬ್ಬರು ಊರ ಒಕ್ಕಟ್ಟಿಗೆ ಕೊಡಲಿ ಮಿಟು ಹಾಕವಂತೆ, ಮೂಡಿರಿ (ಕುಕೆ. ೦೦೫). [ಸಂ.]

ಭಂಡಗೇಡು (ನಾ). ನಾಚಿಕೆಗೇಡು ; ಲಜ್ಜೆಗೇಡು: ಕಂಡಕಂಡಲ್ಲಿ ಎನ್ನ ಗಂಡವಂದದಲಿ ನೋಡಿ ಭಂಡಗೇಡು ಮಾಡಿದನು ಪುಂಡ ನಿನ್ನ ಮಗನಮ್ಮ (ಕ್ಷೇಂದ. ೬-೦೫೬-೪). [ಭಂಡ$_2$ + ಕೇಡು]

ಭಂಡಣ 'ಬಂಡಣ' ನೋ·

ಭಂಡಣಾಜಿರ (ನಾ). ಯುದ್ಧರಂಗ ; ರಣಭೂಮಿ: ಭರದಿಂ ರಾವಣಸೇನೆಯಂ ತಮಿಸಿ ಗೆಲ್ದಾ ಗಣ್ಣರುಂ ಧಣ್ಣಾಜಿರದೊಳ್ ಕಾರವ ಸೇನೆಯಂ ತುಂದು ಗೆಲ್ದಾ ಗ್ಗಾರುಂ (ಕಾಇಪ- XI-೨, ೩೨-೦೨; 1008). [< ಸಂ. ಭಂಡನಾಜಿರ]

ಭಂಡತನ (ನಾ)· ೧. ನಾಚಿಕೆಯಿಲ್ಲದಿರುವಿಕೆ ; ನಿರ್ಲಜ್ಜೆ ; ಉಂಡು ಮೇಣುಟ್ಟೊಲಿದು ಬದುಕುವ ಭಂಡತನವನೆನಗಿಲ್ಲ (ಶಾಕ್ಕಪ. ೬-೨೩); ಕೆಡು ಸೈರಿಸಿ ಬಿಡುವುದಕಟಾ ಭಂಡತನ ಬಲುವೀರರಿಗೆ (ಕೂಕರಾ. ೫-೬-೫೩) ; ಇದು ಭಂಡತನವ ಮಗ್ಗುಲೊಳಿದ್ದವನ ಕೂಟಕೊದಗರಾಜದೆ ನಿದ್ದೆಗರೆದು ಪದನಕ್ಕೆ ಮಸಿ ಸುಣ್ಣವ ಬರೆಯಿಸಿಕೊಂದ ಚದುರೆಮೆಣ್ಣಲ್ಲವೆ ನೀನು (ಕಂಪಾ. ೬-೦೫೬). ೨. ಅನ್ಯಾಯ ; ನೀವು ವಂಚನೆಯಿಂದ ಅಪಹರಿಸಿದ ರಾಜ್ಯವನ್ನು ಕೊಡದೇ ಭಂಡತನವನ್ನು ಮಾಡುತ್ತಿರುವಿರಿ (ಕೃಗಾಣ. ೮೨). ೩. ಬೂಟಾಟಿಕೆ ; ಮೋಸ ; ಕಪಟ ; ರಾಜ್ಯಮಂತ್ರವನ್ನು ಹೇಗೆ ಸಾಗಿಸಬೇಕೆಂಬ ಬಗೆಗೆ ಭಂಡತನದ ಉದ್ದೀಪನೆಲೇಖನಗಳನ್ನು ಬರೆಯಲಾಗುತ್ತಿದೆ (ಕ್ರಬಾ. ೫೫). ೪. ಪಟಮಾಯಿತನ ; ನಮ್ಮೊಡನೆ ಭಂಡತನವನ್ನು ಮಾಡಬೇಡ. ನಮ್ಮ ಯೋಗ್ಯತೆಯನ್ನು ನೀನರಿಯೆ (ಕಾಸಕ. ೦೯). ೫. ಕೆಟ್ಟನಡತೆ ; ಅಸಂಗತಿ : ಈ ಗಂಡಸರ ಭಂಡತನದಿಂದಾಗಿ ಮಾನಕ್ಕೆ ಸ್ವತಂತ್ರವಾಗಿ ಓಡಾಡಲೂ ಆಸ್ಪದವಿರಲಿಲ್ಲ (ಕೂಚಂಗ. ೫೭). [ಭಂಡ$_2$ + —ತನ]

ಭಂಡನ (ನಾ). ೧. ಕಾಳಗ ; ಯುದ್ಧ : ಸುರರಾಜ ಕಳುಹಿರ್ದ ಶರ ಚಾಪಧರಗಳಂ ದಯದಿಂದ ಕೈಕೊಂಡು ಭಂಡನವನೆಸಗಲು ಜಿಯ್ಯಾ (ಕಂಗಾಣ. ೬-೫೫-೫೬) ; ಚಂಡಭಂಡನಕೆಂದರಿರಾಜರೊಳಿತ್ತಿ ಸಜಿವ ಗಂಡುಗಲಿಯಂ ಕುಳ್ಳಿರಿಸಿ ಕೊಂಡುಯ್ವ ಸೈಪಳ್ಳಂಗೆ ನಿನಗಿಂದು ಪೆಣ್ಣಂ ಪೆಣ್ಣೊಲೆಗೆಂತಂತವನೆ ಕೊಡುಯೆಸಿದಾಯ್ತೇ ? (ಕಾಪಪ್ಕ. ೫೫-೫೦). ೨. ಕವಚ ; ಚಿಲುಖಿತ್ತು. ೩. ತುಂಟತನ ; ದುಷ್ಟತನ. [ಸಂ.]

ಭಂಡಬಾಳು (ನಾ). ಹೀನವಾದ ಬದುಕು ; ಕೀಳುಮಟ್ಟದ ಜೀವನ ; ಅವರ ಕೃಪಾಪುಷ್ಟಿಯಲ್ಲಿ ಹಲವು ಜೀವಗಳು ಭಂಡಬಾಳು ಬಾಳುತ್ತಿರುವ ನಿದರ್ಶನಗಳು ಅನೇಕವಿವೆ (ಪಾಸಂಗ. ೦. ಕುಂಹೊ) ; ಭಂಡಬಾಳು ಬಾಳೊಂತೀಯಾ ? (ಕಪಾ. II, ೦೦೭೦). [ಭಂಡ$_2$ + ಬಾಳು$_2$ (<ಬಾಳ್$_1$)]

ಭಂಡವಲ 'ಬಂಡವಾಳ' ನೋ·

ಭಂಡವಲು 'ಬಂಡವಾಳ' ನೋ·

ಭಂಡವಾನೆ ? (ನಾ)· ಸರಕು ; ಸಾಮಾನು ; ದೂರಾಟವ ವಸ್ತು (?) : ನಕರಂಗಳ್ ಪತ್ತಿ ಪಂಣ್ಯಾರ್ಜ್ಯ ಸಮಸ್ತಭಂಡವಾನ ಮಾಗೆಪ್ಪುಳಗಾಗಿ ತಾವು ಮಾಜುಗೊಂಡಂತಪ್ಪ ಭಂಡಕ್ಕೆ ಹೊಗರ ವೀಸಮಂ ಕೊಟ್ಟರು (ಎಇ. ೪. ೦೯-೬೫ ; ೧೧೬೬). [?]

ಭಂಡವಾಳ 'ಬಂಡವಾಳ' ನೋ·

ಭಂಡವಾಳಗಾರ 'ಬಂಡವಾಳಗಾರ' ನೋ·

ಭಂಡವಾಳಶಾಹಿ 'ಬಂಡವಾಳಶಾಹಿ' ನೋ·

ಭಂಡವಾಳಿಗ 'ಬಂಡವಾಳಿಗ' ನೋ·

ಭಂಡವಾಳು 'ಬಂಡವಾಳ' ನೋ·

ಭಂಡವಾಳುಗಾರ 'ಬಂಡವಾಳಗಾರ' ನೋ.

ಭಂಡವಿಕ್ರಯ (ನಾ). ಸರಕಿನ ಮಾರಾಟ : ಜಾರುದತ್ತಂ . . . ಹುರ ಶಿಬಿರದೊಳ್ ಕಾಚಮುಮು ಭಂಡವಿಕ್ರಯಮುಂ ಮಾಡಿ (ಪಂಪಭಾ. ೪-೧೩ ಪ). [ಸಂ.]

ಭಂಡವಿದ್ಯೆ (ನಾ). ವಂಚನೆ ; ಕಪಟ : ತಾನೆ ತನ್ನಸೆ ಹೊಗಳಿಕೊಂಬರೆ ಮಾನನಿಧಿಯಾದವರು ಸಾಕೀ ದಾನವರ ಗರುವಾಯಿ ಭಾರಿಯ ಭಂಡವಿದ್ಯೆಗಳು (ಕುಮಾಪ್ರೊ. ೦೬-೩೩). [ಸಂ. ಭಂಡವಿದ್ಯಾ]

ಭಂಡಸಾಲೆ (ನಾ). ಮಸ್ತುಗಳನ್ನು ಸಂಗ್ರಹಿಸಿಡುವ ಸ್ಥಳ : ಉಗ್ರಾಣ ; ಕೋಠಿ : ಪುರಿವರದ ಭಂಡಸಾಲೆಯ ಮಲ್ಲಿಸೆಟ್ಟಿ (ಶಾಸಾ. XX. ೦೦೦-೩೯ : ೧೧೨೨); ಭಂಡಸಾಲೆಯಲುಂ ನಾಗಂಡುಗದಲುಂ ಭತ್ತಮೂತೆಯೆಪ್ಪತ್ತು ಆಳಗೆ × × × ಅಸಿ ಕೊಂಡಲ್ಲಿ (ಶಾಸಾ. IX-ii. ೪೦೬-೦೮; ೧೨೮೧) ; ಆಗ್ನಿಪಮನ . . . ಭಂಡಸಾಲೆಗಳ ಸುತ್ತು ಕೋಟೆಗಳನ್ನು ಕಟ್ಟಿಸಿದರು (ಪಾಚಕ್ರ. III. ೦೩೩೨). [<ಸಂ. ಭಂಡಶಾಲಾ]

ಭಂಡಾಟ (ನಾ). ೧. ಜಗಳ; ಕಿಚ್ಚಿಗೇಡು : ಭಂಡಾಟದಿ ಮೈಗೊಟ್ಟ ಗೋಪಿಯರು ಪಾಪನ ನಿನ್ನಿಂದೆ (ಕೃರಂಪ. ೦-೦೩೩-೦) ; ದೊಡ್ಡಪನಾದಿದ್ದೇ ಅಟ ಜಡವನಾದಿದ್ದೇ ಭಂಡಾಟ (ನಾಗ). ೨. ಬೂಟಾಟಿಕೆ ; ಆಡಂಬರ : ಬೂಟಕದ ಮಾತುಗಳನುದಿದೇ ನಾಟಕವ ಪಟಿಸುವೆ ಕಣಾ ಭಂಡಾಟವಿದು ಗುಣವಲ್ಲ (ಕೀಗಾಪು. ೨೨-೧೦). ೩. ಕಷ್ಟ ; ತೊಂದರೆ : ತಾವತ್ಕಾರ್ಯ : ಶಿವಪಥದ ಶ್ರಿಪುಂಡ್ರವಂ ಬಿಟ್ಟು ಪುಣ್ಣೆಟ್ಟು ಕೆಟ್ಟು ಕೊಂಡಾಡುತಿರೆ ಜಗದ ಭಂಡಾಟವಂ ಮನಂಗೊಂಡ ಬ್ರಹ್ಮಾಂಡಪೌರಾಣಾದಿಯಂ (ಕಾಸಂಪ. ೩-೦೩೭); ವೃಥಾ ಸಂಭ್ರಮಿತರಿರ ಭಂಡಾಟವೇತಕೆ ರಣಕೆ ಹೆಜ್ಜೆಗಯ್ದು (ಭಾಕ್ಕೃಪ್ರೀ. ೦-೭೦) ; ಉಂಡು ಕೆಂಡದ ಕಾಸಿ ಉಂಡು ಶತಪದ ನಡೆದು ಉಂಡೆತ್ತದ ಮಗ್ಗುಲಲಿ ಮಲಗೆ ವೈದ್ಯನ ಭಂಡಾಟವಿಲ್ಲ (ಶರ್ಮಾ. ೫೦೦೪). [ಭಂಡು + ಆಟ]

ಭಂಡಾರ, ಬಂಡಾರ, ಬಂಡಾಜಿ (ನಾ). ೧. ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸಿಡುವ ಸ್ಥಳ ; ಬೊಕ್ಕಸ ; ಖಜಾನೆ : "ಭಂಡಾರವೆಂದು ಕೋತಗೃಹಂ" (ಶಬ್ದಾ. ೭೦-೪೦೬); ಮೇರು[ವ]ಪ್ಪೊನ್ . . . ಪರುಸಮೇರಿಯ ಕಣೆ ಭಂಡಾರದೊಳುಂಟಿನೆ ಕಾಡುವನಿವಾರಿತದಾನಕ್ಕೆ ಪೋಲ್ವರಾರ್ ಬಿದ್ದೆಗನಂ (ಪಂಚಾ. ೦-೨೮); ವಾಗ್ದೇವಿಯ ಭಂಡಾರದ ಮುದ್ರೆಯು ನೊಡವಂ ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ (ಗುಪಾಮು. ೦-೪೦); ಶೂರಸೇನನ ಸದದು ಸಿಜ್ ಭಂಡಾರವೆನ್ನಿವ ಕೊಂಡು . . . ಮುಂದೆ ನಡೆದನು (ಕುಮ್ಮಕ. ೬-೨). ೨. ಖಂಡೋಪಾ. ಎಲ್ಲಮ್ಮ ಮುಂತಾದ ದೇವತೆಗಳ ಪೂಜೆಮಾಡಿದ ಮೇಲೆ ಪ್ರಸಾದರೂಪವಾಗಿ ಹರಿಯುವ ಅರಿಸಿನ, ಕುಂಕುಮ ಮುಂತಾದುವು : "ಭಂಡಾರಂ=ಹೊನ್ನ ಸಂಜ್ಞೆಯುಂ, ಅರಿಸಿನದ ಪುಡಿಯುಂ" (ಶಾಶ್ಕ. ೨೭೦); ಧೂಳಿಯ ಭಂಡಾರ ಹಣೆಯೊಳಗಿತ್ತೋ (ಪಾಪಕಾ. ೪೬-೦೬) ; ಆವರ ಹಣೆಗೆ ಭಂಡಾರ, ಆಂದರೆ ಕುಂಕುಮ ಪಟ್ಟಿ, ತೀರ್ಥವನ್ನು ಮುಖಕ್ಕೆ ಮೂರುಸಲ ಎರಚುತ್ತಿವ್ರ (ಕಮ್ಮಕಾ. ೪೨). **ಬಂಡಾರ** : ೧. "ಬಂಡಾರಮೆನೆ ಕೋತಪಂಕ್ತಿ" (ಶಪ. ೭೩); ಜಪಾನೆ ಕುಮರೆ ಪೆತ್ತೆರ್ ಬಣ್ಣಾರಮಮ್ಮ ಕೊಣ್ಣಾ (ಪ್ರಕಾ. ೦೬೨೦, ೩೦-೩; ೧೦೫೦): ಅರಸನುಂ ಸಕಲಪರಿಜನಂ ಬೆರಸು ಪೂಜಿಸಿ ಬಂಡಾರವ ಪೊನ್ನಲ್ಲಿಯುಂ ಮುಂದೆ ರಾಸಿಮಾಡುವುದುಂ (ರಪಾಕೃ. ೩-೨೦೩) ; ಬಂಡಾರ ತುಂಬಿ ನೀ ಬಂದಿಯಲೆ ಹೇಜುಪರೆ ಮಂಡಲಮನಾಳಿ ಮೆಜೆಯುವರೆ ಒಕ್ಕಲನು ಕೊಂಡಾಡುವೇಕು (ಸರ್ಮಾ. ೭೨೦). ೨. (ಜಪಕ್ಕು. XIX. ೪). ೩. ಮೊಟ್ಟೆಯ ಒಳಗಿರುವ ಹಳದಿಬಣ್ಣದ ಲೋಳೆ; ಅಂಡಗಳ ಬೆಳವಣಿಗೆಯ ಪಕ್ಕದ ಪೋಷಣ ಜೀವಕಣಗಳು ಬಂಡಾರವನ್ನು (Yolk) ಸ್ರವಿಸುವುದರಿಂದ ಸಾಧ್ಯವಾಗಿದೆ (ಪಜೀವಿ. ೬೨). △ **ಬಂಡಾಜಿ** : ೧. 'ಬಂಡಾಜಿಕಾಱು' ಪರಾ.

ಭಂಡಾರ ಒಡೆ = ಭೀಮನ ಅಮಾವಾಸ್ಯೆಯಂದು ಪೂಜೆಯ ನಂತರ ಹೊಸ್ತಿಲ ಪೂಜೆ ಮಾಡಿ ಹೂರಣದೊಂದಿಗೆ ನಾಣ್ಯವನ್ನಿಟ್ಟು ಕರಿದ ಪೂರಿಯಂತಹ ಭಕ್ಷ್ಯವನ್ನು ಮೊಳಕ್ಕೈಯಿಂದ ಒಡೆ. — ಮುರಿ : ನನ್ನ ತಪ್ಪು ಈ ಸಾರಿ ಭಂಡಾರ ಒಡಿಯಲು ಊರಿನಿಂದ ಬಂದಿದ್ದಾನೆ (ದಾಪ). ಭಂಡಾರದ ಪೆಟ್ಟಿಗೆ = ಅರಿಸಿನ ಪುಡಿ, ಕೋಲು, ಗಂಟೆ ಮುಂತಾದುವುಗಳನ್ನು ಪುಂಬಿದ ಪೆಟ್ಟಿಗೆ (ಜಪಕ್ಕು. IX. ೦೦). ಭಂಡಾರದಾಟ = ಅರಿಸಿನ ವನ್ನು ಎರಚುತ್ತಾ ಸ್ವಾಗತಿಸುವುದು : ಸುರಭಯಭಿಷೇದಲಿ ದೇವಿಯ ವರಮಸಂತಸುಡಿಸಿ ಭಂಡಾರದಾಟವಿದು ಸುರರು ಕಣ್ತುಂಬಿದರು (ಜಪಂಕಾ. ೧೫ ಸಂಪ್ರ). [< ಪ್ರಾ. ಭಂಡಾರ, ಭಂಡಾಅರ, ಭಂಡಾಗ್ಗಾರ. / ಸಂ. ಭಾಂಡಾಗಾರ]

ಭಂಡಾರಕ (ನಾ). ಬೊಕ್ಕಸದ ಮುಖ್ಯಾಧಿಕಾರಿ : ತಪಃಕ್ಷೀರಾಯನ ಭಂಡಾರಕ ಶ್ರೀಮನ್ ಮಹಾನಾಯಕಾಚಾರ್ಯ್ಯ ಬಯಲ ಹುಲಿ ಅವರಗೆಜಿಯ ಗಿರಿಯಂಣನಾಯಕರ ಮಕ್ಕಳು ವಿರುಪಣನಾಯಕರು ಕೊಟ್ಟ ಧರ್ಮಶಾಸನವ ಕ್ರಮವೆಂತೆಂದರೆ (ಎಪಿ. VII (R). ಸಾಗರ:೦. ೧೫೨-೨: ೧೨೮೨). [ಭಂಡಾರ + — ಕ]

ಭಂಡಾರಗರಣತನ (ನಾ). ಬೊಕ್ಕಸದ ಅಧಿಕಾರ ; ವಿಜಾನೆಯ ಮುಖ್ಯಾಧಿಕಾರಿಯ ಹುದ್ದೆ. — ಪದವಿ : ಜಯಸಿಂಹಭೂಪನನ್ ತನ್ನಯದೊಂಮಪ್ರಧಾವಿಶುದ್ಧಿಯಿಂ ಮೆಚ್ಚಿಸಿ ತದ್ದಯೆಯಿಂ ಪಡದೊನೆಗಟ್ಟ್ಯಕ್ಷದುನಿಧಿಭಂಡಾರಗರಣತನದಾಸ್ಪದಮಂ (ಎಇ. XII. ೨೦೦-೦೪೬; ೧೦೭೭). [ಭಂಡಾರ + ಕರಣ + —ತನ]

ಭಂಡಾರಗವಿಟ್ಟಗೆ (ನಾ). ಒಂದು ಊರಿನ ಹೆಸರು: ಭೀಮರಕ್ಷೀನದ್ಮುತ್ತರ ತಟಸ್ಥ ಭಂಡಾರಗವಿಟ್ಟಗೆನಾಮಗ್ರಾಮಂ (ಎಇ. V, ೨೦೧-೬೭; ಸಂ. ೧೭೨). [?]

ಭಂಡಾರಸದನ (ನಾ). ನಿಧಿಯನ್ನಿಡುವ ಸ್ಥಳ ; ಭಂಡಾರ ; ಖಜಾನೆ : ಧನಪತಿಯೆನಿಪ ಪ್ರದೇಶದ ಧರಣಿಸುರರಿಂಗಿತ್ತು ಸಂತತವಿರಿಸುವನು ಬಜ್ಜಿಗೈಯಲಾ ಭಂಡಾರಸದನವನು (ಸಂಚಿ. ೨೫-೬೮). [ಭಂಡಾರ + ಸದನ]

ಭಂಡಾರಾಲಯ (ನಾ). = ಭಂಡಾರಸದನ : ನಾನಾಪ್ರಕಾರ ರತ್ನವಿಜಾನಂಗಳ ಬಿಹಳಿರಾಶಿಯು ತುಂಬಿ ಕರಂ ಭೂಸುತಭಂಡಾರಾಲಯವಾ ಪರಪ ನಿವಾಸದಲ್ಲಿ ರಂಜ್ರಾಂತಿಕರ್ಮಂ (ಪಾಪಕ್ಷ. ೦-೦೬೪):ಭಂಡಾರಾಲಯದೊಳುಳ್ಳ ಮಳವಾಕ್ಕಿಕಜಾಗೆಯು ಪಟ್ಟಿಗೆಯೊಳಾಯಿರು ವರಸುವರ್ಣಗಳ (ಕುಮ್ಮಂ. ೬-೦೬). [ಭಂಡಾರ + ಆಲಯ]

ಭಂಡಾರಿ, ಬಂಡಾರಿ (ನಾ). ೧. ವಿಜಾನೆಯ ಮುಖ್ಯಾಧಿಕಾರಿ; ವಿಜಾಂಚಿ; ಕೋಶಾಧಿಕಾರಿ : ಕೂಡಲಸಂಗನ ಪಾಪಾನೆಯೊಳು ಧರ್ಮಸಂತಾನ ಭಂಡಾರಿ ಬಸವಣ್ಣಮ (ಬಸ. ೪೧೬); ಶಿವಪಾದಪಂಕಜಭಕ್ತಿಯುಕ್ತನು ವೇಂದಿನಃಶ್ವರ ವಿಜ್ಞಳನ ಭಂಡಾರಿ ಬಲದೇವ (ಬಸಕ್ಕ. ೬-೮೩); ವಿಜ್ಞರಿಗು ಸುಗುತ ಬರುವ ಭಂಡಾರಿಯು ಸೊಲ್ಲ ಕೇಳಿದ ಬಸವಣ್ಣ (ಸಚಾಸಾ. ೦೩-೦೩೫). ೨. (ಕೊಪ್ಪಿಯ ರಾಜರ ಮತ್ತು ದೇವಸ್ಥಾನಗಳ) ಕೆಳದರ್ಜೆಯ ಸೇವಕವರ್ಗ . ಒಸ್ತಿಯಲ್ಲಿ ಊಳಿಗ ನಡಿಸುವ ಭಂಡಾರಿಗಳ ಜನ ೨ ಕ . . . ಆಕ್ಕಿ ಮು ೨೦ (ಇಂ. III-i. ೦೩.೭೦; ೧೮೮೦). **ಬಂಡಾರಿ** : ೧. ಇಂತಪ್ಪ ದಕ್ಕೆ ಸಾಕ್ಷಿಗಳು ಆತಿಶಿವಿ ಕಾಂತಸೆಟ್ಟಿ . . . ಬಂಡಾರಿ ಬೆಸಸಾವಾಣೆ (ಎಇ. XX. ೪ ೭೦; ೧೨೨೦). [< ಪ್ರಾ. ಭಂಡಾರಿ, ಭಂಡಾಗಾರಿ./ ಸಂ. ಭಾಂಡಾಗಾರಿನ್]

ಭಂಡಾರಿಗ, ಬಂಡಾರಿಗ (ನಾ). = ಭಂಡಾರಿ ೧ : ಕಾಮಪ್ಪಣ್ಣಿಯೆಂಬ ಭಂಡಾರಿಗಮಂ . . . ಪದಿನೆಣ್ಭಾಸಿರಪ್ಪೆಲ್ಲಚ್ಚರಾಜರುಮಾತ್ಮೀಯಸಾಮ್ರಾಜ್ಯ

ಪರಿಚ್ಛೇದಮಾಗೆ (ಜಯಪ್ರ. ೦೨–೬ ಪ); ಭಂಡಾರಿಗರ್ ವಿವಿಧಮುಖಕಂಗಳೊಳ್ ತಂದು ಮುಂದಿಟ್ಟಿದ ಸುಗಂಧಾನುಲೇಪನಕುಸುಮವಸನಭೂಷಣಾಂಗಳಿನರಸಿಯುಂ ತಾನುಂ ಶೃಂಗಾರಿಂಗೆಯ್ದು (ಕಂದ್ರಪ್ರ. ೬-೦೪೯ ಪ); ಬಾಗಿಲಿಗಂ, ದ್ವಾರಿಗಂ, ಭಂಡಾರಿಗಂ (ಕಬ್ಬಾಕು. ೧೦೬ ಕ್ರಮೋ). ಬಂಡಾರಿಗೆ : ಬಂಡಾರಿಗರ್ಪೊನ್ನಂ ಪೋಕ್ಷಿಸುವಂತೆ (ರಚಾಪ್ರ. ೬-೬೩). [ಭಂಡಾರ + —ಆಗ]

ಭಂಡಾರಿಸು. ಬಂಡಾರಿಸು (ಕ್ರಿ). ೧. ಆಯುಧವನ್ನು ಒರೆ. ಕೋಶ ಮುಂತಾದುವುಗಳ ಒಳಗಿಡು.–ಮುಚ್ಚಿಡು.–ಸೇರಿಸು: ಕಡುಮುನಿವು ಕೂರಲಗ ಭಂಡಾರಿಸಿ ಸಮಾಜೆಂದಿನಂತೆ ಪ್ರದಕ್ಷಿಣವನು ನೆನೆದು ಬರುತಿರ್ಪ ಸಿದ್ಧನ ಪದಾಬ್ಜದ ಮೇಲೆ . . . ಕೃಷ್ಣರುಸಕಂ ಬರ್ದುದು (ಕಬ್ಬಾಕ. ೬-೨೩); ಧುರವಿಲ್ಲಿದನು ಮಹಾರತಿ ಭಂಡಾರಿಸೆ ಭರದಿನೆಸಗಿತ ಜಯಜಾಯೆ ಅರಗಿನ ಮುದ್ರೆಯಿಟ್ಟಂತಾ ಗದೆಯೊಳು ಪೊರೆವ ರಕ್ತಾಯುಧಪ್ರಭಾವದು (ಪಂಪಾಂಭ. ೩೦-೦೨೩). ೨. ಆಯುಧವ ಒರೆ. ಕೋಶ ಮುಂತಾದುವುಗಳ ಒಳಗಿರು,–ಉಪಯೋಗವಿಲ್ಲದಾಗು : ವಿಮಲಕಲಾಜ್ಞೆಪ ಚಿತ್ರ ಭಂ[ಡಾರಿಸಿತು ಭಂ]ಡಾರಿಸಿತು ಭುಸ್ಸನೆ ಜಪ್ಪನದ ಬಲ ಪುಸುರ್ಕೆತು (ಕಬ್ಬಾಣ. ೦–೩೯): ಎನ್ನುದಯವಿಡಿದಿರಿತನಕ ಸಮಬುಲರ ಕಾಣದೆ ಕಲಹ ಸೆಜೆ ಭಂಡಾರಿಸಿರ್ದುದು (ಕೊಡಣ. ೬-೬-೩೯). ೩. ಮುದುರೆ; ಸಂಕೋಚಗೊಳಿಸು: ಕಾಯ್ದೊಂದು ದಂತಾವಳ ತೋರುದೆರೆ ಮುಜಿಜಿಂ ಪ್ರಮಿತಾಪ ವಾರಣಮಂ ಪೋಲ್ತುದಡಿಂ ನಿಡುಗಯ್ಯಂ ಭಂಡಾರಿಸಿ ಪೊಡಜಿದ ತಲ್ಲಯಂ ಬಾರಿಮುಮಂ ಮುಜಿಯೆ ಪೈಯ್ದು ಪೊಜಿಪಡುವಿಧಮಾ (ಶಾಗಡೆ. ೩-೦೦೩). ಬಂಡಾರಿಸು : ೧. ತನ್ನೆಡಗೆಯ್ಯನೆಡೆಗೊಂಡ ಬ್ರಹ್ಮನ ಶಿರಃಕಪಾಲವನ್ನಿ ಬಂಡಾ[ಡಾರಿಸಿ ಡಿ]ರಿಸಿ (ಪಶ್ವಾ. ೩-೦೯).

[ಭಂಡಾರ + — ಇಸು]

ಭಂಡಿ$_1$ 'ಬಂಡಿ' ನೋ.

ಭಂಡಿ$_2$ (ನಾ). ನಾಚಿಕೆಯಿಲ್ಲದವಳು: ನಾಚಿಕೆಗೇಡಿ: ಗಂಡನಂ ವಂಚಿಸುವ ವಿಂಡಿಯೊಳು . . . ಉಣಲಿಕ್ಕಿ ಪಂಗಿಸುವ ಭಂಡಿಯೊಳು ಸವತಿಯುಂ ಮಲಮಕ್ಕಳಿ ಬಳಲಲಂಡಲಿಪಳೊಳು ಕುಚರೆಯೊಳ್ಕುಟಿಲೆಯೊಳ್ಪುಟ್ಟಲಾಟಿ ವಿಗೆ ಕಾರುಣ್ಯವ (ಪಜ್ಞಪ. ೩-೩೬); ನೀನು ಭಂಡಿ, ಜಗಭಂಡಿ (ಪುಕಥ. ೩೬೦). [ಭಂಡ್$_2$ + —ಇ. /ಪ್ರಾ. ಭಂಡೀ = ಕುಲಟೆ]

ಭಂಡಿಕಾರ 'ಬಂಡಿಕಾರ' ನೋ.

ಭಂಡಿಕಾಱ 'ಬಂಡಿಕಾಱ' ನೋ.

ಭಂಡಿತೆ (ನಾ). ತುಚ್ಛಳಾವ ಹೆಂಗಸು ; ಮಾನಗೇಡಿ : ಶತದಿಕ್ಕೈದುರು ಭಂಡಿತಿ[ತೆ] [ಪಾಣಾ. ಬಂಡಿತಿ]ಯರಾಗಳು ಕೊಂಡೊಗಿತ್ತಿಯರು (ಪಸಂ. ೪೦-೩೨). [ಸಂ. ಭಂಡಿತಾ]

ಭಂಡಿದೆಜೆ (ನಾ). ಗಾಡಿಗಳ ಮೇಲೆ ಹಾಕುವ ತೆರಿಗೆ : ಕುಂಬಾಜದೆಜೆ ಅಸಗದೆಜೆ ತೊಕ್ಕುದೆಜೆ ಭಂಡಿದೆಜೆ . . . ಇನ್ನಿವಜ ತೆಱೆಯಪು ಧಾರಾಪೂರ್ವಕಂ ಮಾಡಿ ಬಿಟ್ಟರು (ಎಇ. IV (೩), ಕುಣಸಂ. ೫೨-೪೦; ೧೧೮೨). [ಭಂಡಿ$_1$ (< ಬಂಡಿ$_1$) + ಕೆಜೆ$_3$]

ಭಂಡಿಲ (ನಾ). ೧. ಅವೃಷ್ಟ. ೨. ದೂತ ; ಜಾರ. ೩. ಶಿಲ್ಪಿ. ೪. ಒಂದು ಬಗೆಯ ಮರ; ಬಾಗೆ; ಶಿರೀಷ. [ಸಂ.]

ಭಂಡಿವಟ್ಟೆ (ನಾ). ಗಾಡಿಗಳು ಹೋಗಲು ಅನುಕೂಲವಾಗಿರುವ ದಾರಿ; ಗಾಡಿರಸ್ತೆ : ಮನೆಮೆರೆಯಿಂ ಪಡುವಲಡ್ಡಮಿಱಾವಸ ಕೆಜೆಯಿಂ ಬಡಗ ಬರೆ ನೀರ್ಗುಂದದ ಭಂಡಿವಟ್ಟೆಯಿಂದಾನೆದೊಜೆವಿದಿಂತೆ ನಾರೇಕೋಸ್ಪುರ ಕೆಜೆಯು ಪುಸಿಡಣ ಕೋಡಿಮಂ ಕೂಡಿತ್ತು. (ಶಾಸಾ. IX-i, ೮೦-೩೦:೧೩೩). [ಭಂಡಿ$_1$ (< ಬಂಡಿ$_1$) + ಬಟ್ಟೆ$_1$]

ಭಂಡಿಸು (ಕ್ರಿ). ೧. ಅವಮಾನಪಡಿಸು ; ಹೀಗಳೆ : ಭಂಡಿಸಿ ಬೈದ ಬೈಗುಳನೆ ಲಾಲಿಸಿ (ಜಾವಪು. ೩೫-೪೭); ಗೃಹ ಹೊದೆದ ಕೋತಿಯಂತೆ ದೆಸೆದೆಸೆಗೆ ಪಿರುಗಿ ಭಂಡಿಸುವಸ್ಮಮೊಳಮಾನಿಸರೊಳಾಡಿ ಸ್ನೇಹಮುಂ ಮಾಪ್ಪೆನು (ಕಂಪ್ರ. ೦-೨೩). ೨. ನಾಚಿಕೆಗೊಳ್ಳುವಂತೆ ಮಾಡು : ಕಂಡು ಸಜ್ಜಾರ್ಜಿತೆ ತಾಂಬೂಲಖಂಡವ ಕೊಂಡು ಸುಗಂಧವಿದೆಂದು ಉಂಡೆಮುರೊರೆಸಲುವೇಂದ್ರನು ಹಾಸ್ಯದಿ ಭಂಡಿಸುತ ಸುಡಿದನು ಸಕ್ಕು (ಶಾಮಗ. ೦-೩೪). ೩. ಬಯ್ಯು: ತೆಗಳು : ಮಿಂದಮೆಗಳನಗಲಿದ ಚದುರರು ತಮ್ಮ ದಂಡಿಪ ಸ್ಮರಜಾಪವೆಂದು ಭಂಡಿರ್ದ[ಪ]ರ್ಗುಡುಗೋಲುಗಳಿಂದ ಲಪೆಳ್ಕೆ ಬಿಂಡಿಸುವರು ಕಬ್ಬುಗಳನು (ಕೋಕಶ. ೩-೪೧). 'ಬಂಡಿಸು' ಪರಾ.

[ಭಂಡ್$_3$ + — ಇಸು$_3$]

ಭಂಡೀರ (ನಾ). ೧. ಅಲವ ಮರ; ಪಟವೃಕ್ಷ. ೨. ಒಂದು ಬಗೆಯ ಸಸ್ಯ: ಮಂಜಿಷ್ಠೆ : "ಭಂಡೀರಃ–ಮಂಡೂಕಪರ್ಣಿ" (ಓಷಧಿ. ೦೦೦). [ಸಂ.]

ಭಂಡೀರಿ (ನಾ). = ಭಂಡೀರ ೨ : "ಮಂಜಿಷ್ಠಾ . . . ಭಂಡೀರೀ, ಭಾಂಡೀ, ದೋಜನವಲ್ಲಿ–ಕೆ ಮಂಜಿಷ್ಠೀ ಪೆಸರುಗಳು. ಇದು ಗ್ರಂಥಿಕ ದ್ರವ್ಯವು" (ಕಬ್ಬಾಂಚಿ. ೦೬೨). [ಸಂ. ಭಂಡೀರೀ]

ಭಂಡೀಲ (ನಾ). = ಭಂಡಿಲ ೪ : "ಶಿರೀಷಃ, ಕಟೀತನಃ, ಭಂಡೀಲಃ–ಸಿ ಬಾಗೇಮರದ ಪೆಸರು" (ಕಬ್ಬಾಂಚಿ. ೦೫೬). [ಸಂ.]

ಭಂಡು (ನಾ). ೧. ಅವಮಾನ : ಸಿಗ್ಗು : ಎಲೆ ಹೆಣ್ಣೆ . . . ದಂಡಿಗೆಯು ತರಿಸಿ ಕೊಂಡೊಯ್ವೆ ಸವ್ಮರವನಸಗೆ ಭಂಡು ಜನದೊಳು ಬೇಡ ಬೇಗ ಸಪೆ (ಜೈಕಥ. ೦೬-೦೬). ೨. ಅವಮಾನಕರವಾದ ಕೆಲಸ; ನಾಚಿಕೆಗೇಡಿನ ಕೆಲಸ : ಪೆಂಡಿರ ಪಿದಿವನಿರ್ಗೊಂಡು ಕೊಲಲಣ್ಣದಂಡಿಸಿ ಪುಜಿದೊಳು ಕೊಲುವ ಭಂಡು ಬೇಡಸಗೆ (ಭಾಪಾಂಭ. ೩೫-೨೮). ೩. ಬೂಟಾಟಿಕೆ; 'ಭಂಡಾಟ' ಪರಾ. (ಗು). ೪. ಅಶ್ಲೀಲವಾದ : ಭಂಡು–ಕವನಗಳನ್ನು ಹಾಡುವ ಹವ್ಯಾಸ ಅವಗಿರುವುದೇನೂ ನಿಜ (ಪಚಾ. II, ೩೬೩).

ಭಂಡಾಗು=ನಾಚಿಕೆಯಿಲ್ಲದಿರು ; ಲಜ್ಜಾಹೀನವಾಗು : ಸನ್ನೆಯ ಪೆಮಾನಜುಮುದೆ ತೊಡಬೆ ನೀ ಭಂಡಾದೆ ರೋಸದಲಿ (ಶಾಖಾ. ೪೨-೬). ಭಂಡುಮಾಡು = ಅವಹೇಳನ ಮಾಡು ; ನಾಚಿಕೆಗೊಳ್ಳುವಂತೆ ಮಾಡು : ನಿಜದನವ ಮುಂಕೊಂಡಿಡಮನು ತೂಲಗಿಸಿಯೆ ಭಂಡುಮಾಡಿ ಧೃಮೆಗೊಳಿಸುವೆ (ಕೃಕಣಾ. ೦೩–೦೬೯) ; ಭಂಡುಮಾಡಿದೆ ಪನ್ನಿನಿತು ನಿಮ್ಮಯ ಬಿರಿವು ಹೆಂಡತಿಯ ದೆಸೆಯಿಂದಂ (ಪಶ್ವಕಾ. ೫೩-೦೦).

[ಭಂಡ್$_3$ + — ಉ$_4$]

ಭಂಡುಗೆಯ್ (ಕ್ರಿ). ಅವಮಾನ ಮಾಡು : ಅವಹೇಳನ ಮಾಡು : ಎಮ್ಮ ಮನೆಯರ . . . ಲಜ್ಜೆಯು ಬಿಡಿಸಿ ಭಂಡುಗೆಯ್ವವನಾಕ್ಕುವೆವು (ಪಾಸಿಕಾ. ೦೨-೦೩೬). [ಭಂಡು + ಕೆಯ್$_1$]

ಭಂಡೆ$_1$ 'ಬಂಡೆ' ನೋ.

ಭಂಡೆ$_2$ (ನಾ). = ಭಂಡಿ$_2$: ಭಂಡೆಯುತಂ(ದು)ಡಯಿಂಡರುಧಿರಾದಿಗಳಂ ಬೆರಸಿಕ್ಕೆ ಭೋಜ್ಯದೊಳ್ ಕೊಂಡಿರದಾಗಳಂತೆ ತಲೆಗೇಜಿದೊಡಂ . . . ನೀರಿಯ ರಸಂಗಳನೊತ್ತುವುದು (ಪಪಾಂ.೦೪-೬೬); ಭಂಡೆ, ಪುಂಡೆ, ತುಂಟೆ (ಶಬ್ದಮ. ೦೧೭ ಕ್ರಮೋ); ಒರ್ವನ ಒರೆದಿರ್ವಗೆ ಕದನವ ಬಜಿದೆ ಗಂಟಿಕ್ಕಿದ ಭಂಡೆ (ಶಂಪಾ. ೩-೦೧೩). [ಭಂಡ್$_3$ + — ಎ$_3$]

ಭಂಭಾ (ನಾ). ಒಂದು ಬಗೆಯ ಚರ್ಮವಾದ್ಯ ; ಭೇರಿ ; ನಗಾರಿ : ಮುಮುಱಿಪ ತೂಣವ ಭಂಭಾ ಮರ್ದಳೆ ಝಲ್ಲರಿ ಮುಕುಂದ ತಾಳ ಕಾಹಳ ಶಂಖ ವಂಶವೀಣಾಸ್ವರಂಗಳೆಸೆಯೆ (ಕಬ್ಬಾಣ. ೩೩-೨೬). [ಸಂ.]

ಭಂಭಾರವ (ನಾ). ನಗಾರಿಯ ಸದ್ದು ; ಭೇರಿಯ ಶಬ್ದ : ರಾಮ ಲಕ್ಷ್ಮಣರುಂ ಪೊಕ್ಕರಬೋಧ್ಯರುಂ ಪುದಿವಿನಂ ಗಿಂಭೀರಭಂಭಾರವಂ (ಪಂಡಾಪು. ೦೫-೨೮) ; ಭುವರ ಭಾಷಾರವಂ ದಶದ ಭಂಭಾರವಂ ರಣಕೆಲ ಕಲಾರವಂ . . . ಕವಿಗತಿ ಕಠೋರವಂ ತೀವಿತಂದು (ಕೃಪಾಣ ೨೨-೪).

[ಸಂ.]

ಭಂಳಿ ? (ನಾ). (?) : ಬಾಡದ ಮಹಾಜನಂ ಪಿರಿಯ ಕೆಱಗೆ ಬಿಟ್ಟ ಧರ್ಮ್ಮ ಮೆನ್ದಂದಡೆ ಗ್ರಾಮದ ಅವುದೊಂದು ಪ್ರಾಯಶ್ಚಿತ್ತ ದಣ್ಡದೋಷ ತವಕುವಿ ತವುದಾಯ ಸ ತಿವ್ಪೆಸುಂಕವಿನಿತುಂ ಕೆರೆಯ ಭಂಳಗೆ ಬಿಟ್ಟ ಧರ್ಮ್ಮ (೨೪೦ XI. ೧೧೫೦. ೦೮೨-೦೨ ; ೯). [?]

ಭಕಾರ (ನಾ). 'ಭ' ಎಂಬ ಅಕ್ಷರ : ಭಕಾರಕ್ಕೆ ಬಕಾರಂ—ಆರಂಭ—ಅದಂಬ (೪೩೦೮. ೨೫೫ ಕ್ರಮೋ). [ಸಂ.]

ಭಕ್ಕರಿ, ಬಕ್ಕರಿ, ಭಾಕರಿ (ನಾ). (ಉತ್ತ) ಜೋಳ. ಸೆಜ್ಜೆ ಮೊದಲಾದುವುಗಳ ಹಿಟ್ಟಿನಿಂದ ಮಾಡುವ ರೊಟ್ಟಿ : ಬೆಣ್ಕ ಭಕ್ಕರಿ ಮಾಡ್ದುದ ಕಂಡೆ (೪೫೦೮. ೭-೦೨೬-೦); ಅಕ್ಕಿಯ ಭಕ್ಕರಿ ಮಾಡುವುದು ನನಗೆ ಅದೇ ಮೊದಲ ಪ್ರಸಂಗ (೧೯೭೫. ೫೦). **ಬಕ್ಕರಿ** : ಉಣ್ಣುವಾಗ ಬರೀ ಅನ್ನವಾಗಲಿ ಬರೀ ಬಕ್ಕರಿಯನ್ನಾಗಲಿ ಮೊದಲಿನಂದ ಕಡೆಯ ತನಕ ತಿಂದರೆ ನಮಗೆ ಸಮಾಧಾನವಾಗುವುದಿಲ್ಲ (ಕುಟಿಂಚಿ. ೫-೨೪೬); ಬಕ್ಕರಿಗಳನ್ನು ಸುಡುವ ಕೆಲಸ ಸಾಮಿತ್ರಿಯದು (೬೫೦. ೦೬). **ಭಾಕರಿ** : ಎರಡು ಭಾಕರಿಗಳನ್ನು ಸುಡುತ್ತೇನೆ (೭೦೪. ೦). [← ಮರಾ. ಭಾಕರೀ. ಭಾಕರ]

ಭಕ್ತ₁ (ಗು). ೧. ಹಂಚಿಕೊಟ್ಟ ; ಭಾಗಮಾಡಿಕೊಟ್ಟ. ೨. ಪಾಲು ಮಾಡಿದ ; ವಿಭಾಗಿಸಲ್ಪಟ್ಟ. ೩. ಭಕ್ತಿಯಿಂದ ಕೂಡಿದ ; ಶ್ರದ್ಧೆಯುಳ್ಳ. ೪. ಆಸಕ್ತಿಯುಳ್ಳ ; ಮಗ್ನವಾದ. (ನಾ). ೫. ಪೂಜಿಸುವವನು ; ಆರಾಧಕ : ತಂದೆಯ ಭಕ್ತಂ [ಬುಧಜನ]ವ್ಯಂದಾರಕನಿವ ನಾವೊನಾತನ ತಮ್ಮಂ . . . ವೆಗಟ್ಟಂ (೫೦೬೫೮. ೦೨-೬೨) ; ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ (೭೪೮. ೨೮೮); ಕೆಲವೆ ದಿನಂಗಳಲಿ ಮನವಲರಿ ಬಸವನದೊಂದು ಗೀತವನೊಲಿದು ಬೆಸಸಲು ಕಲಿತು ಭಕ್ತರು ತಮ್ಮಡೆಗೆ ಬಂದು (೭೪೮. ೨೭-೨೬) ; ಪಕ್ಕನು ಪೆಂಧು ಭಕ್ತಪ ಮನದ ಧೃತಿಯನು . . . ಭಾರ್ಮತಿಗೆ ತೋಱಿಸುತ (೪೦೫೩. ೬-೨). ೬. ಅಕ್ಕಿಯಿಂದ ಮಾಡಿದ ಅನ್ನ : "ಅಂಧಃ. ಕೂನಂ. ಭಕ್ತಂ. . . . ಆಹಾರಃ —ಱ್ ಕೂಬ್ " (೪೦೫೩೮. ೫೬-೦೬೯) ; "ಭಸ್ಸಾ. ಭಕ್ತಂ. ಅಂಧಃ. ಅನ್ನಂ. ಓದನಃ. ದೀದಿವಿಃ—ಓ ಅನ್ನದ ಹೆಸರು. ಜೋನ " (೪೦೫೩೮. ೫೫೮). ೭. [ವಿಶೇ೯] ಮುಕ್ತಿಸಾಧಕವಾದ ಆರುಸ್ಥಲಗಳಲ್ಲಿ ಮೊದಲನೆಯದಾದ ಭಕ್ತಿಸ್ಥಲವನ್ನು ಸಾಧಿಸಿದವನು : ಆಚಾರಲಿಂಗಭಕ್ತನಾದೊಡೆ ಸ್ವಕಾಯದಲ್ಲಿರಬೇಕು (೪೫೫. ೭-೦೨) ; ಭವಿ ಭಕ್ತರೊಳಗೆ ಕೂಡುಕೊಳಿಯುಂಟೆ (೪೨೪೫೦. ೦೩-೦೦) ; ಶುದ್ಧಾಂತಕರಣವಾದ ಜೀವನು ಶಿವನ ಉಪಾಸನೆ ಮತ್ತು ಧಾರಣೆಗಳಿಗೆ ಅರ್ಹತೆಯನ್ನು ಪಡೆದು ಭಕ್ತನೆನಿಸುವನು (೫೯೭. ೬೨). [ಸಂ.]

ಭಕ್ತ₂ (ನಾ). ಅಕ್ಕಿಯನ್ನು ಕೊಡುವ ಒಂದು ಬಗೆಯ ಧಾನ್ಯ ; ನೆಲ್ಲು : ಎರಡುಗದ್ಯಾಣಂ ಪೊನ್ನು ಇಪ್ಪತ್ತುಗಣ್ಣುಗಂ ಭಕ್ತಮುಂ ಇರ್ಪೋದಿ ಕೆಱಗೋಡು ಪುಟ್ಟಿಗೆಯುಂ ಪಸ ಸೀಮಾನ್ತರಂ (೫೪. XVII. ೫೫೩. ೭೭-೮೮ ; ೭೫೫); ಮೂಳ್ಕಣ್ಣುಗ ಭಕ್ತ ಪೋಲಿದು ಕೊಣ್ಡುಬ್ಬಪೊನ್ ಈ ಧರ್ಮ್ಮ (೫೪. X. ೪೦೯೫೮. ೬-೮ ; ೭೫೫); ಎಡೆವಾವಿಗೆ :—ಕಿಱುಕುಸಾಲೆ, ಭಕ್ತಕಾಳು, ಅಂದಿಲದೊಳಗಣ ಅಕ್ಕಿ. ಹೊಸ ಪೆಂಡು ಇವನ್ಕರೆದು ಪೂಸಲು ಎಡೆವಾವು ಮಾಣ್ಗುಂ (೭೬೬. ೭೭).

[ಶ್ರ ಇದು 'ಭಕ್ತ' ಎಂಬುದರ ಅಪಲಿಪಿತ]

ಭಕ್ತಕವಿ (ನಾ). ತನ್ನ ಕಾವ್ಯದ ಮೂಲಕ ಭಕ್ತಿಯನ್ನು ಬೋಧಿಸುವವನು ; ಸಂತಕವಿ : ಭಕ್ತಕವಿಗಳಲ್ಲಿ ಮೊಟ್ಟಮೊದಲನೆಯವನು ಕಬೀರ್ (೨೫೮೮. ೪೫೬). [ಸಂ.]

ಭಕ್ತಕುಟುಂಬಕ (ನಾ). ತನ್ನ ಭಕ್ತರನ್ನೇ ಸಂಸಾರವಾಗುಳ್ಳವನು : ಪರಮಭಕ್ತಕುಟುಂಬಕನು ನೀ ಕರುಣಯಿಲ್ಲದೊಡೀ ಕುಟುಂಬಕೆ ಶರಣಾರ್ಯೆ ಕೃಷ್ಣ (೪೦೫೩೮. ೦೮-೦೩೦). [ಸಂ.]

ಭಕ್ತಕುಟುಂಬಿ (ನಾ). = ಭಕ್ತಕುಟುಂಬಕ : ನಂಬಿದವರಿಗೆ ತನ್ನ ತೆತ್ತಿಪ ವೆಯ ಬಿರುದನು ಮೆಱೆದು ಭಕ್ತಕುಟುಂಬಿ ಸಾರಥಿಯಾದನೊಲಿದರ್ಜುನಗೆ ಮುರುಪ್ಪನಿ (೪೦೫೩೮. ೦ ೫೦೫೫); ಭಕ್ತಕುಟುಂಬಿ' ಭಕ್ತಜನವತ್ಸಲ . . . ಪೊರೆ (೪೦೫೦. ೫-೦೬). [ಸಂ. ಭಕ್ತಕುಟುಂಬಿನ್]

ಭಕ್ತತೆ (ನಾ). ಭಕ್ತಿ ; ಶ್ರದ್ಧೆ : ಭುವನದೊಳ್ನಿಯುಂ ಭವಿಗೆ ಭಕ್ತತೆಯಿಲ್ಲ ಬಿದಾ (೪೫೫. ೮೪). [ಸಂ. ಭಕ್ತಕಾ]

ಭಕ್ತಪರಾಧೀನ (ನಾ). ಭಕ್ತರಿಗೆ ಅಧೀನನಾಗಿರುವವನು ; ಭಕ್ತರ ವಶವರ್ತಿ : ಭಕ್ತಪರಾಧೀನನಾದ ಕಾವೆ ಭಕ್ತರ ಭಕ್ತಿಯಿಂದ ಸಂತುಷ್ಟನಾಗಿ ಸರ್ವಮನ್ನೂ ಮಾಡುವೆನು (೪೪೯೫೫. ೭೬) ; ದೈವವನ್ನು ಭಕ್ತಪರಾಧೀನ ಎಂದು ಹೊಗಳಿದ ಮೇಲೆ ಕಂಡ ಮೇಲೆ ಅವನ್ನು ಅನುಭವಿಸಿ ತೋರಿಸಬೇಡವೆ ಭಕ್ತನಾದವನು (೫೫೮೮. ೨೫೨). [ಸಂ.]

ಭಕ್ತವತ್ಸಲ, ಭಕ್ತವತ್ಸಳ (ನಾ). ಭಕ್ತರಲ್ಲಿ ವಾತ್ಸಲ್ಯವುಳ್ಳವನು : ಓಹಿಲನ ಮೆಱೆದ ಸ್ಪಾಪ್ಪನೆಂಬ ಮಂಡಪದಲ್ಲಿ ಕೂಡಲಸಂಗಮದೇವ ಭಕ್ತವತ್ಸಲನಾಗಿ (೫೫೮. ೬೭೫); ದೈತ್ಯಪ್ರಳಯಮಾವಕ ಭಕ್ತವತ್ಸಲ ಭಕ್ತಸುರಧೇನು. . . ಕೇಶವ ಕರುಣಿಸೆನಗೆ (೪೦೫೩೮. ೫-೬೯); ಭಕ್ತವತ್ಸಲ ಕೃಪಾಕರ ಮಹಾಭಯನಿವಾರಣ ಪ್ರಸಿದ್ಧ ಕಾಪಾಹಿ (೪೬೫೦. ೦೦-೫೬). **ಭಕ್ತವತ್ಸಳ** : ಭಕ್ತವತ್ಸಳಂ [೪೦೫೩೮. ಭಕ್ತಜನವತ್ಸಳಂ] ಮಗನ ಮಾತಂ ಮನ್ನಿಸಿ ಮಹಾಮಹಿಮೆಯೊಂದು ಗುಪ್ತವೇಷಮಂ ಕೈಕೊಂಡಧ್ವರಕ್ಕೆ ನಡೆತಪ್ಪಾಗಳ್ (೪೦೫೮. ೦೬-೦೬೨). [ಸಂ.]

ಭಕ್ತವತ್ಸಲತೆ (ನಾ). ಭಕ್ತರ ಮೇಲಿರುವ ಪ್ರೀತಿ.—ವಾತ್ಸಲ್ಯ : ಆತನ ಪೋಜವಮಂ ನೆನೆಯುದಾದಂ ಕೀರ್ತಿಸುತ್ತಿರ್ದಗಿನೀಶ್ವರಿಯೊಳ್ ಶಂಭುಗೆ ಭಕ್ತವತ್ಸಲತೆ ಸಲ್ಲುಂ ಮೇಣ್ ಪೆಜರ್ಗಕ್ಕುಮೇ (೪೫೬೫. ೯-೬೦). [ಸಂ. ಭಕ್ತವತ್ಸಲತಾ]

ಭಕ್ತವತ್ಸಲೆ (ನಾ). ಭಕ್ತರಲ್ಲಿ ವಾತ್ಸಲ್ಯವುಳ್ಳವಳು : ಎಲೆ ಮಾತೆ ! ನೀಂ ಭಕ್ತವತ್ಸಲೆ ಸಾಜಂ ! (೪೪೫೬. ೬೨-೦೦). [ಸಂ. ಭಕ್ತವತ್ಸಲಾ]

ಭಕ್ತವತ್ಸಳ 'ಭಕ್ತವತ್ಸಲ' ನೋ.

ಭಕ್ತವಾತ್ಸಲ್ಯ (ನಾ). = ಭಕ್ತವತ್ಸಲತೆ : ಒಂದು ವೇಳೆಯಾದರು ಮಾತನಾಡು. ನಿನ್ನ ಭಕ್ತವಾತ್ಸಲ್ಯವನ್ನು ತೋರು (೪೪೫೫. ೬೬). [ಸಂ.]

ಭಕ್ತವ್ಯಸನ (ನಾ). ಭಕ್ತರ ಮೇಲೆ ಇಟ್ಟಿರುವ ಅತ್ಯಾಸಕ್ತಿ.—ಮಮತೆ : ಕುಲರನ್ನಿಬರು ಜೀಯ ಭಕ್ತವ್ಯಸನಭಾರವು ನಿಮ್ಮಲಿರೆ ಜೀವಿಸುವುದರಿದೇ ಪಾಂಡುವಂದನರು (೪೫೫೬. ೦೦-೬೦). [ಸಂ.]

ಭಕ್ತವ್ಯಸನಿ (ನಾ). ಭಕ್ತರ ಮೇಲೆ ಬಹಳ ಆಸಕ್ತಿಯುಳ್ಳವನು.—ಮಮತೆಯುಳ್ಳವನು : ವನಜನಾಭ ಮುಕುಂದ 'ವಾಂಗಳನಿಳಯ ಭಕ್ತವ್ಯಸನಿ. . . ಕರುಣಿಸೆಗೆ (೪೪೫೩೮. ೬-೬೯). [ಸಂ. ಭಕ್ತವ್ಯಸನಿನ್]

ಭಕ್ತಸ್ಥಲ (ನಾ). [ವಿಶೇ೯] ಷಟ್ಸ್ಥಲಗಳಲ್ಲಿ ಮೊದಲನೆಯದು ; ಮುಕ್ತಿಸಾಧನೆಯ ಹಂತಗಳಲ್ಲಿ ಮೊದಲನೆಯದು : ಗುರುಲಿಂಗದಲ್ಲಿ ಕ್ರಿಯಾಶಕ್ತಿಯ ಪ್ರಭಾವದಿಂದ ಆಚಾರಲಿಂಗದುದಯವಾದುದು ಅದಱ ಉಪಾಸನೆಗಾಗಿ ಭಕ್ತಸ್ಥಲವುಂಟಾದುದು (೪೫೫೬. ೮೪-೭೨); ಪಿಂಡಸ್ಥಲ ಪಿಂಡಜ್ಞಾನಸ್ಥಲ . . . ಸಹಜಮುಖಸ್ಥಲ ಈ ೧೫ ಭಕ್ತಸ್ಥಲಂಗಳು (೪೦೦೫೮. ೨೫೦-೦೦೨); ಭಕ್ತಸ್ಥಲದಿಂದ ಐಕ್ಯಸ್ಥಲಕ್ಕೆ ದ್ವೈತಭಾವನೆಯಿಂದ ಅದ್ವೈತವೃದ್ಧಿಗೆ ಮುಂದುವರಿಯುವುದೇ ಸಾಧನೆ (೬೬೪೪. ೭ ೬೬೬).

[ಸಾ.]

ಭಕ್ತಾದಾಯ (ನಾ). ಭರ್ತೃದ ಮೇಲೆ ಹಾಕುವ ತೆರಿಗೆ : ಸಕಲ ಸುವರ್ಣಾದಾಯ ಭಕ್ತಾದಾಯಯೇನಂಟಾದ ಸಾಮ್ಯವನು ಆಗುಮಾಡಿ ಕೊಂಡು ತೆಱುವ ಗುತ್ತಿಗೆಯ ಹೊಂಮ ಗ ೩೦ (೪೪. III (R). ೫೫೫೫. ೬೮೯-೦೦; ೧೫೫೫). [ಭಕ್ತ + ಆದಾಯ]

ಭಕ್ತಾನುಕಂಪಿ (ನಾ). ಭಕ್ತರಲ್ಲಿ ಕನಿಕರವುಳ್ಳವನು,– ದಯೆಯಿರುವವನು : ಭಕ್ತಾನುಕಂಪಿ[ಪಾಠಾಂ. ಭಕ್ತಾನುಕಂಪ] . . . ವರವೆಯರೆ ಮುನಿಸ ತಿಳಿವುತ್ತಿರ್ದಂ (ಪಂಪ. ೦೬ ೩೦೬).

[ಸಂ. ಭಕ್ತಾನುಕಂಪಿನ್]

ಭಕ್ತಿ (ನಾ). ೧. ಭಾಗಮಾಡುವಿಕೆ. ೨. ಪಾಲು ; ಪಿಸ್ಸೆ : ಭಾಗ. ೩. ದೇವರು, ತಾಯಿ, ತಂದೆ, ಗುರು ಮೊದಲಾದವರಲ್ಲಿ ತೋರುವ ನಿಷ್ಠೆ, -ಶ್ರದ್ಧೆ.—ಪೂಜ್ಯಭಾವನೆ : ಸಿದ್ಧ ಭಕ್ತಿಪೂರ್ವಕಂ ಶ್ರಿಜಗದ್ಗುರು ವೆನಿಸಿದಸ್ಮದ್ಗುರುವೇ ಗುರುವೆಂದು ತತ್ಪದಸರೋಜಧ್ಯಾನಪರಾಯಣನಾಗಿ (ಶಂಭ. ೧೬-೬೨ ಪ); ದೇವರೊಳಂ ಗುರುಗಳೊಳಮಾಗಮದೊಳಂ ನಂಬುಗೆಯುಂ ನಲ್ಮೆಯುಂ ಭಕ್ತಿಯುಮಾನೂನಮಾಗೆ ಘೋರವೀರತಪೋ ನಿಯಮನಿಷ್ಠಿತನಾಗಿ (ಕುಳಾಚಾ. ೩-೧೭ ಪ); ಭಕ್ತಿಯೆಂಬುದ ಮಾಡುವಾರದು ಕರಗಸದಂತೆ ಹೋಗುತ್ತ ಕೊಯ್ಯುವುದು ಬರುತ್ತ ಕೊಯ್ವುದಕು (ಪಾಪ. ೨೦೨). ೪. ಸೇವೆ: ಉಪಚಾರ : "ಪರಿಷ್ಕಾ. . . ಭಕ್ತಿ: . . . ಉಪಚಾರಃ – ಈ ೧೧ ವಿಸಕಯ್ವುದರ್ಕೆ ಪೆಸರ್" (ಪಾಣಾಮು. ೨೦-೦೨೯). ೫. [ತತ್ಪ್ರಜಾ] ವ್ಯಂಗ್ಯಾರ್ಥವಿಲ್ಲದಿದ್ದರೂ ಹೇಳಬೇಕಾದುದನ್ನು ಬೇರೆ ರೀತಿಯಿಂದ ಹೇಳುವುದು: ಔಪಚಾರಿಕ ಪ್ರಯೋಗ; ಗೌಣ ಮತ್ತು ಲಾಕ್ಷಣಿಕ ಪ್ರಯೋಗ; ಅಲಂಕಾರಿಕ ಪ್ರಯೋಗ ; ಪ್ರ 'ಊಟ ಮಾಡಿಲ್ಲವೆಯಿದನ್ನು ನಿನ್ನ ವಂಖಿವೇ ಹೇಳುತ್ತದೆ' ಎಂಬ ವಾಕ್ಯದಲ್ಲಿ 'ತಿಳಿಸುತ್ತದೆ' ಎಂಬ ಅರ್ಥದಲ್ಲಿ 'ಹೇಳುತ್ತದೆ' ಎಂಬ ಪದವಿದೆ. 'ನಸ್ಮ ಮನ ಸ್ಸನ್ನು ಸೂರೆಗೊಂಡಿರುವೆ' ಎಂಬಲ್ಲಿ 'ವಶಪಡಿಸಿಕೊಂಡಿರುವೆ' ಎಂಬ ಅರ್ಥದಲ್ಲಿ 'ಸೂರೆಗೊಂಡಿರುವೆ' ಎಂಬ ಪದವು ಪ್ರಯೋಗಿಸಲ್ಪಟ್ಟಿದೆ. ಇದಕ್ಕೆ ಭಕ್ತಿಯೆಂದು ಹೆಸರು : "ಭಕ್ತಿ"ಯೇ ಧ್ವನಿಯೆಂದು ಹೇಳಲಾದ ಪೂರ್ವಪಕ್ಷಕ್ಕೆ ಕಳಗಿನ ಕಾರಿಕೆಯಲ್ಲಿ ಸಮಾಧಾನ ಹೇಳುತ್ತಾನೆ (ಕೃಷ್ಣಕೋ. ೪೦) : ಪದಪದಾರ್ಥಗಳ ಸಂಬಂಧ ಶಕ್ತಿ. ಭಕ್ತಿಯೆಂದು ಎರಡು ಪ್ರಕಾರ. ಶಕ್ತಿ ಸಾಕ್ಷಾತ್ಸಂಬಂಧ. ಭಕ್ತಿ ಪರಂಪರಾಸಂಬಂಧ. ಭಕ್ತಿಯೆಂದರೆ ಭಾಗವೆಂಬ ವಿಕಲ್ಪಶಬ್ದದಲ್ಲಿರುವ ದೆಂದರ್ಥ (ಪಂಚಾಸಾ. ೨೪೪). ೬. [ಜೈನ] ಸಮ್ಯಕ್ತ್ವದ ಎಂಟು ಗುಣಗಳಲ್ಲಿ ಒಂದು. [ಸಂ.]

ಭಕ್ತಿಕ (ಗು). ಭಕ್ತಿಗೆ ಸಂಬಂಧಿಸಿದ : ಆಗ ಸಂಗಮದೇವರಲ್ಲಿಗೆ ಹೋಗಿ ಬಸವನಸಮಭ[ಪಾಠಾಂ. ಭಾ]ಕ್ತಿಕವೋಗನಂ ಕಾಣುತ ಪದಿಸಿ ಬಿನ್ನೈಸಿದರು ಮುಂದೆ (ಬಸಪು. ೫-೬). [ಸಂ.]

ಭಕ್ತಿಕಂಪಿತ (ನಾ). ಭಕ್ತರ ಭಕ್ತಿಗೆ ಮಾರುಹೋಗುವವನು,–ಪರವಶನಾಗುವವನು : ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ (ಬಸವ. ೨೦೯). [ಸಂ.]

ಭಕ್ತಿಕಾಂಡ (ನಾ). ಭಕ್ತಿಯನ್ನು ಮೈಗೂಡಿಸಿಕೊಳ್ಳುವ ಘಟ್ಟ. — ಸ್ಮೃತಿ : ಕರ್ಮಕಾಂಡ ಭಕ್ತಿಕಾಂಡ ಜ್ಞಾನಕಾಂಡ ಇಂತೀ ತ್ರಿವಿಧವಲ್ಲಿ ಮುಂಚಣಾದರೆ ಈಸು ವಿಧದೊಳಗೆ ಅಂಗವಿಲ್ಲ (ಬಸವ. ೬೮೬) ; ಕರ್ತೃತ್ವ ಸಾಕ್ಷಿತ್ವಾಭಿಮಾನಗಳನ್ನು ಬಿಟ್ಟರುವುದೇ ಭಕ್ತಿಕಾಂಡವು (ಶಿಣಸೂ. ೦೨೯ ೦೩೮).

[ಸಂ.]

ಭಕ್ತಿಕಾಂಡಿ (ನಾ). ಭಕ್ತಿಕಾಂಡದಲ್ಲಿ ಸಿದ್ಧಿಯನ್ನು ಪಡೆದವನು ; ಭಕ್ತಿಯನ್ನು ಸಾಧಿಸಿದವನು : ಉತ್ಪತ್ತಿ ಸ್ಥಿತಿ ಭೋಗ ಭಕ್ತಕಾಮ ವುಳ್ಳನ್ನಕ್ಕ ಭಕ್ತಿಕಾಂಡಿಯಲ್ಲ (ಬಸವ. ೪೮೦) ; ಸಕಲಕ್ರಿಯೆಗಳನೀಶ್ವರಾರ್ಪಣಂಗೈವಾತನೇ ಭಕ್ತಿಕಾಂಡಿಯೆನಿಸುವನು (ಬಸೇ. ೦೩).

[ಸಂ. ಭಕ್ತಿಕಾಂಡಿನ್]

ಭಕ್ತಿಗೀತ (ನಾ). ಭಕ್ತಿಭಾವವೇ ಪ್ರಧಾನವಾದ ಹಾಡು ; ಭಗವಂತನ ಮಹಿಮೆ ಮೊದಲಾದುವನ್ನು ಕೊಂಡಾಡುವ ಹಾಡು : ದೇವರ ನಾಮ : ಎಂದಿನಂತೆ ಇಂದಾದರೂ ಆಕೆ ಕಟ್ಟಳೆ ಪ್ರಕಾರ ತನ್ನ ಭಕ್ತಿ ಗೀತವನ್ನು ಹಾಡಿದ್ದಳು (ಹಕ್ಕಜಾ. ೮೪) ; 'ಗೀತಾಂಜಲಿ'ಯು ಭಕ್ತಿಗೀತಗಳ ಸಂಗ್ರಹ (ರಜೋಜಾ. ೩೪). [ಸಂ.]

ಭಕ್ತಿತ್ರಯ (ನಾ). [ವೀಶೈ] ಗುರು, ಲಿಂಗ ಮತ್ತು ಜಂಗಮರಿಗೆ ಸಲ್ಲಿಸಲಾಗುವ ಭಕ್ತಿ : ಲೋಪೋಪಶಮಿಲ ಭಕ್ತಿತ್ರಯವಿಲೋಲ ವಿಧೂಕಭವಜಾಲ (ಚಕ್ಕಿ. ೨೦-೨). [ಸಂ.]

ಭಕ್ತಿದಾಸೋಹ (ನಾ). ಭಕ್ತಿಯಿಂದ ಮಾಡುವ ಸೇವೆ : ಭಕ್ತ ನಾಪುತ್ತೆ ಭಕ್ತಿದಾಸೋಹಮುಕ್ತನಾಯಿತ್ತೆ ಯುಕ್ತಿದಾಸೋಹ . . . ಈ ದಾಸೋಹದ ಅಮಲ ಕೂಡಲಸಂಗಮ್ಮ ತಾನೇ ಬಲ್ಲ (ಬಸವ. ೧೩೩).

[ಭಕ್ತಿ + ದಾಸೋಹ]

ಭಕ್ತಿಪಂಥ (ನಾ). ಭಗವಂತನ ಅನುಗ್ರಹಕ್ಕೆ ಭಕ್ತಿಯೇ ಮುಖ್ಯ ಸಾಧನವೆಂದು ಸಂಬಿರುವ ಸಂಪ್ರದಾಯ ; ರಾಮದಾಸ, ತುಕಾರಾಮ ಮೊದಲಾದ ಸಂತರಿಂದ ಪ್ರವರ್ತಿತವಾದ ಸಂಪ್ರದಾಯ : ಭಕ್ತಿಪಂಥ ಬಹಳ ಹಳೆಯದು. ಭಗವದ್ಗೀತೆಯಲ್ಲಿ ಅದರ ಸ್ವರೂಪವನ್ನು ಚೆನ್ನಾಗಿ ವಿವರಿಸಿದೆ (ಪಪಾಂ. ೬೨) ; ಸುಸಂಸ್ಕೃತರು ಆತ್ಮಶಕ್ತಿಯನ್ನು ಮರತು ಪೂರ್ಣವಾಗಿ ದೈವವನ್ನೇ ನಂಬಬೇಕಾಯಿತು. ಈ ಸ್ಪೂರ್ತಿಯೇ ಭಕ್ತಿಪಂಥಕ್ಕೆ ಪ್ರೇರಕವಾಯಿತು (ಪುಣ್ಯಕ. ೦೦೦ ೦೦೦). [ಸಂ. ಭಕ್ತಿ+ಪಂಥಾ]

ಭಕ್ತಿಪಥ (ನಾ). ಪರಲೋಕಸಾಧನೆಗಾಗಿ ಹೇಳಿರುವ ಕರ್ಮಮಾರ್ಗ, ಭಕ್ತಿಮಾರ್ಗ, ಜ್ಞಾನಮಾರ್ಗಗಳೆಂಬ ಮೂರುಪ್ರಕಾರಗಳಲ್ಲಿ ಒಂದು; ಭಗವಂತನ ಭಕ್ತಿಯಿಂದ ಆತ್ಮಕಲ್ಯಾಣವನ್ನು ಸಾಧಿಸಿಕೊಳ್ಳುವ ರೀತಿ : ಅಂಗದ ಮೇಲಣ ಲಿಂಗವ ಹಿಂಗಿ ಬಂದ ಸುಖವನಾರಿಗರ್ಪಿಸುವೆ ಹಿಂಗಲಾಗದು ಭಕ್ತಿಪಥಕ್ಕೆ ಸ್ಥಲದಾಗಿ (ಬಸವ. ೭೫೬). [ಸಂ.]

ಭಕ್ತಿಪೂರ್ವಕ (ನಾ). ಭಕ್ತಿಯಿಂದ ಕೂಡಿಕೊಂಡಿರುವುದು ; ಭಕ್ತಿಯುಕ್ತವಾದುದು : ತತ್ಸುರಾಧೀಶಂ ದೃಢ(ಧೃತ)ಸೇನಂ ನಿರಿಸಿ (ನಿರ್ಜಸಿ) ಭಕ್ತಿಪೂರ್ವಕದಿಂದಮಾಹಾರಂಗುಡೆ (ಕಾಸಪು. ೯-೨೦ ಪ) ; ಅವರಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ (ಸಂಕಾಪ್ರ. ೪. ೦೦೯). [ಸಂ.]

ಭಕ್ತಿಭಂಡಾರ (ನಾ). ಅತ್ಯಧಿಕವಾದ ಭಕ್ತಿ ; ನಿರತಿಶಯವಾದ ಭಕ್ತಿ : ಸಂಗನ ಶರಣರ ಭಕ್ತಿಭಂಡಾರವ ಎಷಗೆಂತು ಸಾಧ್ಯವಪ್ಪುದು ಹೇಳೆನ್ನ ತಂದೆ (ಬಸವ. ೩೦೨). [ಭಕ್ತಿ + ಭಂಡಾರ]

ಭಕ್ತಿಭಾವ (ನಾ). ಭಕ್ತಿಯಿಂದ ಕೂಡಿದ ಮನೋವೃತ್ತಿ ; ಭಕ್ತಿಯಿಂದ ಪರಿಪೂರ್ಣವಾದ ಮನಸ್ಸು : ಮನಸುಚ್ಚಿಗಿ ವಿನಿರ್ಮಲ ಭಕ್ತಿಭಾವದಿಂ ಜಾಂಜಲಿಪುಟಿಲಂ ನಿಗಮವಂದ್ಯನಂ ಕೀರ್ತಿಸಿದಂ (ಕಂಪಂ. ೪-೦೦೦); ಅವರ್ಯಾರೂ ಪರಮಾತ್ಮನ ಬಗೆಗೆ ಉತ್ಕಟವಾದ ಭಕ್ತಿಭಾವವನ್ನು ತಳೆದಿದ್ದರು (ಹರ. ೬). [ಸಂ.]

ಭಕ್ತಿಮಾರ್ಗ (ನಾ). = ಭಕ್ತಿಪಥ : ಭಕ್ತಿಮಾರ್ಗವಿದೆಮ್ಮ ಸೊಮ್ಮು ದುಃಕ್ಕವಂ ತಾನಿನ್ನು ಪರೌನತ್ಯಕ್ಕನಾಗಿದು ಒತವೆವಂಗೆ (ಬಸಪು. ೪೩-೫೬); ಪೂಜ್ಯರಂ ಪಿರಸ್ಕರಿಸದೆ ಭಕ್ತಿಮಾರ್ಗದೊಳೆ ಸಂಚರಿಸುತ್ತ (ಅಮಪ್ರ. ೬); ಎಲ್ಲ ಸಂಪ್ರದಾಯಿಗಳೂ ಇಂಥ ಆಧ್ಯಾತ್ಮಜ್ಞಾನದವೆಗೇ ನಮ್ಮನ್ನು ಕರೆದುಕೊಂಡು ಹೋಗುತ್ತವೆ. ಅವುಗಳಲ್ಲಿ ಮುಖ್ಯವಾದವು ಮೂರು : ಜ್ಞಾನ ಮಾರ್ಗ, ಭಕ್ತಿಮಾರ್ಗ, ಕರ್ಮಮಾರ್ಗ (ಪಪಾಂ. ೫೦). [ಸಂ.]

ಭಕ್ತಿಯುಗ (ನಾ). ಭಕ್ತಿಯೇ ಹೆಚ್ಚು ಪ್ರಚಾರದಲ್ಲಿದ್ದ ಯುಗ : ವಿದೇಶೀಯರ ಆಕ್ರಮಣದಿಂದ ಭಾರತಜನತೆಗೆ ಇಂಥ ಪರಿಸ್ಥಿತಿಯುಂಟಾದಾಗಲೇ " ಭಕ್ತಿಯುಗ " ಆರಂಭವಾಯಿತು (ಭಾರಪ್ರ. ೪೫೬). [ಸಂ.]

ಭಕ್ತಿಯೋಗ (ನಾ). ಭಗವಂತನಲ್ಲಿ ಎಡೆಬಿಡದೆ ಭಕ್ತಿಯನ್ನು ಹೊಂದಿರುವುದು : ವಸ್ತಿಪ್ರಪಸನು ನಂದನಗೆ ಕರಾಗ್ರವೆತ್ತಿಯೆ ಹೇಳ್ದ ವೇದಾಗ್ರ

ದೊಳಗಿಹ ಭಕ್ತಿಯೋಗವನೊರಿದು ಹಣ್ಮುಖಿಗೆ (ಶಾಕಪಿಂ. ೦೬ ಸಂಚಿ); ನವವಿಧವಾದ ಭಕ್ತಿಯೋಗಮಾರ್ಗವ ಬೋಧಿಸಿದನಾ ಗಗನಸದ್ಯೋರು (ಗಣಾ. ೬ ಸಂಚಿ) ; ಗೀತೆಯಲ್ಲಿಯ ಮೊದಲಿನ ಆರು ಅಧ್ಯಾಯಗಳನ್ನು ಕರ್ಮಯೋಗ, ನಡುವಣ ಆರು ಅಧ್ಯಾಯಗಳನ್ನು ಭಕ್ತಿಯೋಗ . . . ಹೀಗೆ ವಿಂಗಡಿಸಬಹುದು (ಶಬ್ದಾಶಾ. ೦೦೩). [ಸಂ.]

ಭಕ್ತಿಯೋಗಿ (ನಾ). ಭಕ್ತಿಯೋಗದಲ್ಲಿ ನಿರತನಾದವನು; ಭಕ್ತಿಯೋಗ ಸಾಧಕ : ಸತ್ಯಲೋಕಾಧಿಪನವಿಡಿದು ಶಕ್ರಾದೇವಗಣಾಂತ ಎಲ್ಲರು ಭಕ್ತಿಯೋಗಿಗಳೆಂದು ಕರೆಸುವರಾವ ಕಾಲದಲಿ (ಪಾಪ. ೨೬-೦೦).

[ಸಂ. ಭಕ್ತಿಯೋಗಿನ್]

ಭಕ್ತಿರತಿ (ನಾ). ಭಕ್ತಿಯಲ್ಲಿ ತೋರುವ ಆಸಕ್ತಿ. _ ವ್ಯಾಮೋಹ : ಭಕ್ತಿರತಿಯ ವಿಕಳತೆಯ ಯುಕ್ತಿಯನೇವ ಜಿಸಗೊಂಬರಯ್ಯಾ ಕಾಮಿಗುಂಟಿ ಲಜ್ಜೆ ನಾಚಿಕೆ (ಬಸಪು. ೫೦೬); ಮಾಟಕೂಟವಿದರಡಾಮುಮತದಿಂದವೆ ಭಕ್ತಿರತಿಯಯ್ಯಾ ಕೂಡಲಚೆನ್ನಸಂಗಮದೇವಾ (ಚನ್ನಬ. ೦೬-೩). [ಸಂ.]

ಭಕ್ತಿರಸ (ನಾ). = ಭಕ್ತಿಭಾವ : ವಿಷಯಾವಹಿತನ ಮಾಡಿ ಭಕ್ತಿರಸವ ದಯೆಯಿಮೇಣಿಸಿ ಸುಬುದ್ಧಿಯೆಂಬುದಕವನೆಱೆದು ನೋಡಿ ಸಲಹಯ್ಯಾ (ಬಸಪು ೫೦); ಭಕ್ತಿರಸಂ ಮುಸುಕುವುದನಾರಕ್ತಿರಸಿ ಮುಗಿವರ್ಪುದೇತಱಿದಿರ್ಪಂ (ಪಾಪ. ೬-೨೧೮). [ಸಂ.]

ಭಕ್ತಿಸಾರಾಯ (ನಾ). ೧. ಭಕ್ತಿಯ ಸಾರಾಂಶ, _ ತತ್ತ್ವ : ಎಸೆಗೆ ನಿನ್ನ ರೂಪು ನಿರೂಪಾದ ಬಳಿಕ ಭಕ್ತಿಸಾರಾಯದ ಪಥವಮೊಲ್ಲೆನಯ್ಯಾ (ಪಟಿಪ. ೬೪-೬೪). ೨. ಭಕ್ತಿಯ ರಹಸ್ಯವನ್ನು ತಿಳಿದುಕೊಂಡಿರುವವನು : ಭಕ್ತಿತತ್ತ್ವವನ್ನು ಆಳವಾಗಿ ಅಭ್ಯಾಸಮಾಡಿರುವವನು : ಭಾವ ಸಾರಾಯರ ಭಕ್ತಿಸಾರಾದರ ತೋಜಯ್ಯಾ ನಿಮ್ಮ ಧರ್ಮ (ಬಸಪು. ೫೦೬). [ಭಕ್ತಿ + ಸಾರಾಯ]

ಭಕ್ತಿಸ್ಥಲ (ನಾ). = ಭಕ್ತಸ್ಥಲ : ಭಕ್ತಿಯ ಮಹಿಮೆಯೆಂದು ಜಂಗಮ ನಡಿಮಾಬಂದಲ್ಲಿ . . . ತನು ಕರಗಿ ಮಿಸ ಕರಗಿ ನೋಡಿ ಮಾಡುವುದು ಭಕ್ತಿಸ್ಥಲ (ಬಸಪು. ೫೬೪); ಗುರುವಿಂಗೆ ತನು ಲಿಂಗಕ್ಕಿ ಮನ ಜಂಗಮಕ್ಕೆ ಧನವ ಕೊಟ್ಟೆನೆಂಬನ್ನಕ್ಕ ಭಕ್ತಿಸ್ಥಲ (ಪಡಗೂ. ೨-೦೦೮). [ಸಂ.]

ಭಕ್ತಿಹೀನ (ನಾ). ಭಕ್ತಿಯಿಲ್ಲದವನು : ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು (ಬಸಪು. ೬೦೬) ; ದೇವ ಇಂತಹ ಭಕ್ತಿಹೀನನ ಬಸುಱೊಳಿನ್ನುವನು ನೀವು ಹುಟ್ಟಿಸಲಹುದೆ (ಬಸಪು. ೫೦-೬೨). [ಸಂ.]

ಭಕ್ತಿಹೀನತೆ (ನಾ). ಭಕ್ತಿಯಿಲ್ಲದಿರುವಿಕೆ : ಅಕ್ಕಟಾ ಮೆಚ್ಚುವನ ಇಂತಹ ಅಕ್ಕರಿಗೆ ಕಲಿನಾಥನಿದನೆಂತಕ್ಕೆ ಕೇಳ್ದೆವೆ ಭಕ್ತಿಹೀನತೆಯಾದ ವಾರ್ತೆಯನು (ಬಸಪು. ೬೬-೦೬). [ಸಂ. ಭಕ್ತಿಹೀನತಾ]

ಭಕ್ತೆ (ನಾ). ಭಕ್ತಿಯುಳ್ಳವಳು ; ಭಕ್ತಿಯಿಂದ ಕೂಡಿರುವವಳು : ಗಂಡ ಶಿವಲಿಂಗದೇವರ ಭಕ್ತ ಹೆಂಡತಿ ಮಾರಿಮಸಣಿಯ ಭಕ್ತೆ (ಬಸಪು. ೦೦೪); ಅವಳು ಭಕ್ತೆ (ಬಸಪು. ೪೦-೪). 'ಪತಿಭಕ್ತೆ' ಪರಾ. [ಸಂ. ಭಕ್ತಾ]

ಭಕ್ಷ (ನಾ). ೧. ತಿಂಡಿ ; ಭಕ್ಷ್ಯ : "ತೈಲಾದಿ ತುಪ್ಪದೊಳ್ ತಾಳಿಸಿದು ವೈದೆ ಭಕ್ಷಮೆನಿಕ್ಕು" (ಜುಂಗಂ. ೬೪-೬); ಹಜಿದ ಭಕ್ಷವನುಂಡು ಕೇರಿಗೆ ಮಣ್ಣನು ಪೂಜುವರ ಕಾಡಿ ಕರಿತಾಲಚೋಳ ಭರದಲ್ಲಿ ಪೊಯ್ಯಲು ಹರಿದಾಡಿದಂದದಿ ಕರುಣದಿ ಕುಣಿ ನೀ (ಕೇತಪ್ರ. ೨೫೨೦. ೫೦-೦೦೦); ಪಕ್ಷವಿಲ್ಲದಿದ್ದರೂ ಭಕ್ಷಕ್ಕೆ ಕಡಿಮೆಯೆ ? (ಗಾದೆ). ೨. ಆಹಾರ; ಊಟಿಸು : ನಡಿಯರ್ ಬಲ್ಲಿದರ ಬಲ್ಲುಡಿಗರ್ ವಂದಿರ್ದರಯ್ಯರಾಲದ ಕೆಲಗಿಂ ಕೊಡರ್ದನ್ ನಮ್ಮಯ ಭಕ್ಷದೂಳ್ (ಪಂಪಾ. ೬-೦೨); ಕೂಳಿಗಾಗಿಯ ರೆಡೆಯಸಾಸಿರದಾಳು ಗೈವರು ಭಕ್ಷಗಳನಾ ಕೂಳ ಬಡಿಸುವಳೋರ್ವಳ್ (ಜಿಪು. ೬೪-೦೬). [ಸಂ.]

ಭಕ್ಷಕ (ಗು). ೧. ತಿನ್ನುವ; ಕಬಳಿಸುವ. (ನಾ). ೨. ತಿನ್ನುವವನು ; ಕಬಳಿಸುವವನು : 'ನರಭಕ್ಷಕ' ಪರಾ. ೩. ಹೆಚ್ಚು ತಿನ್ನುವ ಸ್ವಭಾವದವನು ; ಹೊಟ್ಟೆಬಾಕ : "ಭಕ್ಷಃ, ಘಸ್ಮರಃ, ಅದ್ಮರಃ—ಈ ೩ ತಿನ್ನಾಳಿ" (ಪಾಶಾಮು. ೫೦-೦೬೩). [ಸಂ.]

ಭಕ್ಷಕಾರಿ (ನಾ). = ಭಕ್ಷಕ ೩ : "ಅದ್ಮರಂ ಘಸ್ಮರಃ ಭಕ್ಷಕಾರಿ ತಿನ್ನಾಳಿಯಕ್ಕುಂ" (ಪೂಜಗಣ. ೬೪-೦೦). [ಸಂ. ಭಕ್ಷಕಾರಿನ್]

ಭಕ್ಷಣ (ನಾ). ೧. ತಿನ್ನುವುದು. ೨. ಆಹಾರ : "ಪಲ್ಯನಂ . . . ಭಕ್ಷಣಂ . . . ಸ್ವದನಂ—ಈ ೧೧ ಊಟಂ" (ಪೂಜಾಮು. ೫೪-೦೬೦). ೩. ಲಾಡು ಮೊದಲಾದ ಭಕ್ಷ್ಯ—ತಿಂಡಿ. [ಸಂ.]

ಭಕ್ಷಣೆ (ನಾ). ೧. = ಭಕ್ಷಣ ೨ : ಎಲ್ಲಿಗಲ್ಲೂ ಹೋಗದಿರು ಕಪಿಸಲ್ಲು ಬಂದವಳಾವಕಂಬುದ ಬಲ್ಲುವೀಯಲಿ ನೋಡು ಭಕ್ಷಣೆಗಾದೆ ನೀನೆನಗೆ (ಕೊಡಣ. ೩-೦-೨); ಹಸಿನಾಡ ರಾಕ್ಷಸಿಯ ಭಕ್ಷಣೆಗೆ ಹೊರಗಾಗಿ ತೃಪ್ತಿಯಲಿ ಕಳೆದಿರುವೆಯಾ ? (ಜಪಟ. ೧೧೨-೦೦); ದಾಕ್ಷಿಣ್ಯವಂತನು ದಕ್ಷಿಣಕ್ಕೆ ಹೋದರೆ ಭಕ್ಷಣೆ ಸಿಕ್ಕೀತೇ ? (ಗಾದೆ). ೨. ಆಹಾರವನ್ನು ರುಚಿಕರವಾಗಿ ಮಾಡುವ ವ್ಯಂಜನ : "ಉಪದಂಶಃ, ಅವದಂಶಃ, ಭಕ್ಷಣಂ—ಈ ೩ ಕುಡಿವುತ್ತ ಬಾಡಿಸುವುದು" (ಪೂಜಾಮು. ೫೪-೦೬೩). [ಸಂ. ಭಕ್ಷಣ]

ಭಕ್ಷಿ 'ಬಕ್ಷಿ' ನೋ.

ಭಕ್ಷಿತ (ಗು). ೧. ತಿನ್ನಲ್ಪಟ್ಟ ; ನುಂಗಿದ : ದಕ್ಷಮಖಿಕ್ಷಯಕ್ಷಮ ಭಕ್ಷಿತಕ್ಷೀಡ . . . ಅಕ್ಷಯ ರಕ್ಷಿಸೆಮ್ಮುವಮ (ಪಟಿಪ್ರ. ೬೦-೧೩). (ನಾ). ೨. ತಿಂದುದು : "ಭಕ್ಷಿತಂ, ಜರ್ಜಿತಂ . . . ಭುಕ್ತಂ—೧೪ ಭುಜಸ್ಪಲ್ಪಟ್ಟದ್ದು" (ಶಬ್ದಾಶಾ. ೬೬೩). [ಸಂ.]

ಭಕ್ಷಿಸು (ಕ್ರಿ). ತಿನ್ನು; ಕಬಳಿಸು; ಸೇವಿಸು : ನೀವು ಮಾಡಿದ ಬಯಲು ಭಕ್ಷಿಸಿತ್ತು ಅನಂತ ಹಿರಿಯರನು (ಬಸಪು. ೬೬೭); ತಾನೇಂ ಮನುಜವರನು ಭಕ್ಷಿಸಲು ರಾಕ್ಷಸನೇ (ಪಟಿಪ್ರ. ೨೫-೦೬); ರಕ್ತಬೀಜಾಸುರನಂ ಭಕ್ಷಿಸುವಡೆ ಬಾಯ್ದೆಱೆದಿರ್ದಾ ವರದುರ್ಗೆಯು ಪಲ್ಲಳವೊಲ್ ಪಿರಿದಾಪ್ಪರಗೆಂಟೆನೆಗಳೊಳ್ಪಿದವೊಲ್ (ಪಾಪ್ರ. ೦-೬೦). [ಭಕ್ಷಣ + — ಇಸು]

ಭಕ್ಷೀಸ್ 'ಬಕ್ಷೀಸು' ನೋ.

ಭಕ್ಷೀಸು 'ಬಕ್ಷೀಸು' ನೋ.

ಭಕ್ಷ್ಯ (ಗು). ೧. ತಿನ್ನಬಹುದಾದ ; ತಿನ್ನತಕ್ಕ. (ನಾ). ೨. ತಿನ್ನಲು ಯೋಗ್ಯವಾದುದು; ತಿನ್ನತಕ್ಕುದು : ಗುರುಶಿಷ್ಯ ಪಾತ್ರಾಪಾತ್ರ ಪೇಯಾಪೇಯ ಭಕ್ಷಾಭಕ್ಷ್ಯ ಗಮ್ಯಾಗಮ್ಯ ವಧ್ಯವಧಾದಿ ವಿಧಾನ ವಿಚಾರಮನೊಡಂಬಡದೆ (ಪಾಶಾ. ೦೦೦). ೩. ತಿಂಡಿ; ತಿನಿಸು; P "ಭಕ್ಷ್ಯ—ಶೀ : (ಅ) ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ, ಪಾನೀಯ (ವಿದ್ಯಾಕ. ೫೦). (ಅ) ಅತಿರಸ, ಹೋಳಿಗೆ, ಲಡ್ಡು, ಜಿಲೇಬಿ, ಅಪೂಪ (ಅಪ್ಪಂ) (ಸಾಂಖ್ಯ. ೪೫೫)" (ಕ್ರಿಚಕ್ಯ. ೬೦೦): ಪದಿನೆಂಟುಂ ತೆಱದಿ ಭಕ್ಷ್ಯರೂಪಂಗಳುಮಂ ಪಾನಾಪ್ಯಕಾರದ ಪಾನಂಗಳುಮಂ ಭಿಕ್ಷಾರ್ಥಿಗೆ ಬಡ್ಡಿಸಿ (ಪಾಶಾ. ೬೬-೦೬) ; ಭಕ್ಷ್ಯಾದಿಗಳಂ ಬೇಡುವ ಮಕ್ಕಳ ಬಾಳ ಕ್ರೀಡೆಗಳಂ ನೋಡುತಿರ್ಪುದೊಂದಿರವಲ್ತೇ (ಪಳುಮು. ೫-೦೦೦); ಪಲನಳಿಪ ಬಹುವಿಧದ ಭಕ್ಷ್ಯಾವಳಿಯ ಹೆತ್ತಿಗೆಗಳೋರಣಿ ಮಂಡಳಿಸಿ (ಶಾಬ್ದಾ ೦೦-೨೩). ೪. ಲಾಡು, ಹೋಳಿಗೆ ಮುಂತಾವ ಸಿಹಿತಿಂಡಿ : ಸಾಮಾನ್ಯವಾಗಿ ದೇವರ ಸಮಾರಾಧನೆಯಂದು ಭಕ್ಷ್ಯಕ್ಕೆ ಹೋಳಿಗೆಯನ್ನು ಮಾಡಿಸುತ್ತಾರೆ (ಜೂಪ). [ಸಂ.]

ಭಕ್ಷ್ಯಕಾರ (ನಾ). ಸಿಹಿತಿಂಡಿಯನ್ನು ಮಾಡುವವನು ; ಭಕ್ಷ್ಯವನ್ನು ಮಾಡುವವನು : "ಅಪೂಪಿಕಃ, ಕಾಂದವಿಕಃ, ಭಕ್ಷ್ಯಕಾರಃ—೩ ಬಜ್ಜಾಯ ಮುಂತಾದ ಭಕ್ಷ್ಯಗಳನ್ನು ಮಾಡುವವನಿಗೂ ಹೆಸರುಗಳು"(ಶಬ್ದಾಂ. ೨೬೨).

[ಸಂ.]

ಭಗ (ನಾ)- ೧. ಸೂರ್ಯ : "ಆದಿತ್ಯ . . . ಭಗಃ . . . ತ್ರಯಸ್ತ್ರಿಂಶತ್ತು— ಈ ೪೭ ಆದಿತ್ಯನ ಹೆಸರ್" (ಹರಿವಂ. ೬-೩೭); ದೆಳ್ಳಕರಗಿ ದೆಳಗಾಯ್ತು ಏಳು ಹಗಲಾಗಿ ಭಗವೆ ಸುಡಿಸೆ ? (ಶಾಂ. ೨೦೦-೪). ೨. ದ್ವಾದಿಶಾದಿತ್ಯರಲ್ಲಿ ಒಬ್ಬ : ಅವಲಸ ಭುಜಬಲದೊಳು ಜಿಷ್ಣುಯಂ ಕೊಯ್ದು ಪೂಷನ ಪಲ್ಗಳನುದಿರ್ದ್ ಭಗನ ಕಣ್ಣಂ ಕಡಿದು . . . . ನೋಯಿಸಿ (ಕರ್ಣಾ. ೦೦-೨೪೦) ; ಭಗನ ಕಣ್ಣಂ ತಿರ್ಪನೆಂದು ಪೇಳ್ದಂ ಮತ್ತೆ ಭಗನೇತ್ರ ಎನುತುಂ (ಶಾಕಾ. ೬-೦೬_೦೪). 'ಭಗಳ್ಳ್' ಪರಾ. ೩. ಕೀರ್ತಿ; ಯಶಸ್ಸು : ಪೊಗಬ್ ಜಗತೀಚಕ್ರಂ ದಿಕ್ಕಕ್ರದೊಳ್ [ಭ]ಗಮಾವಾಗಂ ಪೊಗಬ್ ವಿಜಯೋದ್ಯೋಗವ್ಯಾಘಸಮಾನಮಹೋದಯಂ ಮಗುಬ್ಬು (ಪಾರ್ಶ. ೨-೩೦). ೪. ಸ್ತ್ರೀಯ ಗುಹ್ಯ; ಯೋನಿ : "ಭಗಃ, ಯೋನಿಃ, ಉಪಸ್ಥಃ, ವರಾಂಗಂ, ಸ್ಮರಮಂದಿರಂ—ಈ ೫ ಉಪಸ್ಥಂ" (ಪಾಶಬ್ದ. ೦೩-೭೬೦); ಭಗಮಲರ್ದುರ್ ಕೆತ್ತುಗುಂ ಗುದಮಗಿಗುಂ ಕೊಡೆ ನಡುಗುಗುಂ ಲತಾಂಗಿಗೆ (ಪಂಡಿ. ೦೦-೩೭) ; ಬಿಸುನೀರಿಂ ಪೂಸುಗೆ ತಾಂ ಕಿಸುಗುಳಿಯಪ್ಪವಳ ಭಗದ ಗಂಧಂ ಕಿಡುಗುಂ (ಶಾಸ್ತ್ರಸಾರ. ೯-೭೬) . ೫. ಜನ್ಮಾಂತರಗಳಲ್ಲಿ ಮೂಡಿರುವ ಪಾಪ ಮತ್ತು ಪುಣ್ಯಕಾರ್ಯಗಳ ಪರಿಣಾಮ.— ಫಲು. ೬. ಭಾಗ್ಯ; ಅದೃಷ್ಟ. ೭. ಸಂಪತ್ತು; ಐಶ್ವರ್ಯ. ೮. ಏಳಿಗೆ; ಅಭ್ಯುದಯ. ೯. ಘನತೆ; ಹಿರಿಮೆ. ೧೦. ಉತ್ಕೃಷ್ಟತೆ; ಶ್ರೇಷ್ಠತೆ. ೧೧. ಬಲ; ಶಕ್ತಿ; ಸಾಮರ್ಥ್ಯ. ೧೨. ಮಹಾತ್ಮೆ. ೧೩. ಪ್ರಯತ್ನ; ಸಾಹಸ. ೧೪. ತೇಜಸ್ಸು; ಕಾಂತಿ. ೧೫. ಒಲುಮೆ ; ಪ್ರೀತಿ. ೧೬. ಪವಿತ್ರತೆ ; ಪರಿಶುದ್ಧತೆ. ೧೭. ಅಂವು ; ಜ್ಞಾನ. ೧೮. ಧರ್ಮ. ೧೯. ವಿರಕ್ತಿ; ವೈರಾಗ್ಯ. ೨೦. ಸಂಯಮಿ; ಯತಿ. ೨೧. ಮುಕ್ತಿ; ಮೋಕ್ಷ. ೨೨. ಜಪ; ಸ್ತುತಿ. ೨೩. ಭವಿಷವ್ಯ. ೨೪. ದೇವತೆ : "ಸೂರ್ಯನೊಳು ಧರ್ಮದೊಳು ಯೋಗಿಯೊಳು ಮುಕ್ತಿಯೊಳು ಜ್ಞಾನದೊಳು ವೈರಾಗ್ಯದೊಳು ದೇವವೀರ್ಯದೊಳು ಮುಕ್ತಿಯೊಳು ಶ್ರೀಯೊಳು ಮಹಾತ್ಮೆಯೊಳು ಭರ್ಗನೊಳು ಭಗಮೆನಿಸ್ಕಂ" (ಪುಂಗಣ. ೦೩೦-೭೦); "ತಪಂ ಸಂಯಮಿ ಧರ್ಮ ಕೀರ್ತಿ ವೈರಾಗ್ಯ ಜ್ಞಾನಮೈಶ್ವರ್ಯ ಯೋನಿ ಪವಿತ್ರಂ ಭವಿತವ್ಯ ಶಕ್ತಿ ಕಿರಣಂ ಗೀರ್ವಾಣರುಂ ಮುಕ್ತಿಯುಂ ಜಪ ಮಹಾತ್ಮ್ಯಂಗಳುಂ ಭಗಾಖ್ಯಂ". (ಜಾಪಾಶ. ೩೩). [ಸಂ.]

ಭಗಂದರ (ನಾ). ೧. ಗುಹ್ಯಪ್ರದೇಶದಲ್ಲಿ ಉಂಟಾಗುವ ಒಂದು ಬಗೆಯ ವ್ರಣರೋಗ : "ಭಗಂದರಃ—ಶಿಶ್ನೋತ್ಥಸ್ಥಗಳ ಬಳಿಯಲ್ಲಿ ಹುಟ್ಟುವ ಹುಣ್ಣು" (ಶಿವಾ.೩೨. ೦೮೪) ; ಪಿಟಿಕಂ ಪೊಲ ಭಗಂದರಂ ಕುಷ್ಠ ಕ್ಷಯ ಗಂಡಶಿರೋವೇದನ ಮೊದಲಾಗೊಡೆಯವೇಟುಸೊಱುವ್ಯಾಧಿಗಳೊರ್ಮೊದಲೆ ಮೆಯ್ಯೊಳ್ ಪುಟ್ಟದೊಡೆ (ಹಸ್ತಾ. ೬೯-೭೦) ; ಸತಿಯಂ ವಿಚಾರಿಪಾಗಳು ಧೃತಿಗಂಗೆಯೊಳವನಿಪತಿ -ಭಗಂದರದೊಳು ಮುಂ ಪ್ರತಿದಿನಮಿಟ್ಟನ್ನಮನುಂಡ ತೆಱಂ ತಪಗಕ್ಕುಂ (ಪುರಾ. ೬-೨೦) ; ಬಾಯಿಂದ ಬಂತು ಭಗಂದರ (ಗಾಡ). ೨. ಒಬ್ಬ ಋಷಿಯ ಹೆಸರು. [ಸಂ.]

ಭಗಳ್ಳಿ (ನಾ)- ಭಗನೆಂಬ ಆದಿತ್ಯನನ್ನು ಅಡಗಿಸಿದವನು ; ವೀರಭದ್ರ : ರತ್ನಮಯದಂಡಮಂಡಪದನೆಯ್ದಿ ಪಿಡಿದು ಬರಲಾ ಭಗಳ್ಳಿಂ . . . ನಡದ ಸಭವಂ (ವೀಕೃತ. ೨-೪-೧೨). [ಸಂ.]

ಭಗಣ (ನಾ)- ೧. ನಕ್ಷತ್ರಗಳ ಗುಂಪು. — ಸಮೂಹ : ಭಗಣದ ಲೆಕ್ಕಮಂ ಮಱಿಯ ನೀರ್ವಿನಿಯಂ . . . ಪಮಹೇಸರ್ ಬಗೆದರ್ಪನೆ ಗಾಂಪನಾಗನೇ (ಶ್ರೀಪಾಪು. ೦೩-೦೦); ನೆಗಟ್ಟುದ್ವೀಪದ ಮಧ್ಯದಲ್ಲಿ ಕಲಶಂ ಚಂಡಪ್ರಭಂ ಪಂಜರಂ ಭಗಣಂ . . . ಗಗನಸ್ಪೃತ್ರದ ಹೇಮದಂಡಮೆನಿಸಲ್ ಸಾಲ್ದತ್ತು ಹೇಮಾಚಲಂ (ಜಗಪ. ೦-೨೩) ; ಮುತ್ತಿನ ಬಿಂಬದ ಜಾರದೆ ಮುತ್ತಿನ ವಿಧ್ಯಮಂದಿನೆಸವ ಬೆಳ್ಗೊಡೆ ಭಗಣಂ ಸುತ್ತಿರೆ ಮಿಸುಗುವ ಶಶಿಯೆನಿಸುತ್ತಿರೆ (ಕಪ್ಪ. ೦೦-೨೬). ೨. [ಧಂದ] ಮೊಪಲನೆಯ ಅಕ್ಷರ ಗುರುವು ಉಳಿದೆರಡು ಲಘುಗಳೂ ಆಗಿರುವ (⏑–⏑) ಒಂದು ಅಕ್ಷರಗಣ : ಆದಿ ಗುರುವಾಗೆ ಭಗಣಂ (ಕಂದೋಬ್ರ. ೦-೪೪ ೦೩೫೬). [ಸಂ.]

ಭಗಣಮಂಡಲ (ನಾ)- ನಕ್ಷತ್ರಗಳ ಗುಂಪು : ತಾರಾಮಂಡಲ : ಒಡಿದು ಸರ್ವನೆ ತಿರುಹುಲುಮರರು ನಡುಗಿ ಕಂಗೆಟ್ಟೋಡಿತತ್ಕಲು ಬಿಡದೆ ಸುಂಟರಗಾಳಿಯುಬ್ಬತು ಭಗಣಮಂಡಲಕೆ (ಶಾಂಪು. ೨೬-೪೩). [ಸಂ.]

ಭಗದಾಳ, ಬಗದಳ, ಬಗದಾಳ (ನಾ)- ೧ ಭಗಂದರ ೧ : ಹೆಗ್ಗುಳ್ಳದ ಬೇರು ತೊಕ ೭, ಲಿಯಉಮ್ಮತ್ತಿಯ ಎಲೆ ತೊಕ ೭, ಕುಪ್ಪ ತೊಕ ೭ ಇವ ಅರೆದು ಪೂಸೆ ಭಗದಾಳ ಮಾಣ್ಗುಂ (ಪಥ್ಯ. ೬೩). ಬಗದಳ : ಕರಸ್ಥಲವೆಂಬುದು ಕೈಕಟ್ಟ ಪುಣ್ಣು ಅಮುಳೋಕ್ಕವೆಂಬುದು ಬಾಯಿ ಬಗದಳ ಅಂಗಸೋಂಕೆಂಬುದು ಪಾಪದ ತವರ್ಮನೆ (ಶರಪ. ೦೦೪-೨೭೪) ; ಬಾಯೊಳಗಣ ಬಗದಳಕ್ಕೆ ಎನ್ನ ಕೇಳಬೇಡ (ಪಸಪ. III. ೬೫-೦೬೫) ; ಶರಣ್ಗೆ ಸರಿ ಸುರಸರರೊಳಿಲ್ಲೆನಲು . . . ಸರಿಯೆಂಬ ಬಾಯ್ಗು ಬಗದಳ ವಾಗದಿರ್ಪುದೇ (ಪಂಪಪ. ೦೬-೦೯೨). ಬಗದಾಳ : ಬಾಯಿಗೆ ಬಂತು ಬಗದಾಳ ಬೆನ್ನಿಗೆ ಬಂತು ಭೇತಾಳ (ಗಾಡ).

[←ಮರಾ. ಭಗದಳ. ಭಗದಡ, ಭಗದಾಡ. /ಹಾ. ಭಗಂದಲ]

ಭಗಭಗ (ನಾ). ಒಂದು ಅನುಕರಣ ಶಬ್ದ : ಅವರು ಮಾಡಿದ ಅನ್ಯಾಯ ನೆನೆಸಿಕೊಂಡರೆ ಹೊಟ್ಟೆ ಭಗಭಗ ಎಂದು ಉರಿದುಹೋಗುತ್ತೆ (ಪಾಡ).

ಭಗವ (ನಾ)- (ಉಪವಾಸದ ದಿನ ಅಲ್ಪಾಹಾರಕ್ಕೆ ಬಳಸುವ) ಒಂದು ಬಗೆಯ ತೃಣಧಾನ್ಯ : ಅಳಯುಳ ೮ ಭರ್ಜಾದ ಖಂಡಿಗದ ಮೇಲೆ ಧಾರಣೆ. ಇರತಕ್ಕ ಜೀನಸುಗಳು ೧. ಹವೀಜ ; ೨. ಅವಲಕ್ಕಿ; ೩. ಭಗರ (ವರಯದ ಅಕ್ಕಿ) (ಜೀಲಂಪ್ರಾ. ೦೩೦). [←ಮರಾ. ಭಗರ]

ಭಗರಿ 'ಬವರಿ' ನೋ.

ಭಗವ (ನಾ)- ವೈಷ್ಣವ ಸಂನ್ಯಾಸಿ : ಭಗವರೊಳಂ ಗೊರವರೊಳಂ ಸುಗತರೊಳಂ ಭುವಿಯರೊಳವುದೆಂದುಂ ಪಾಪಂಡಿಗಳಿಂದೆ ವಿಜ್ಞರುಂ ನಲ್ಕೆಗಳವರಾದನೆಂದುಮಿಲ್ಲ ಪಾರ್ವರಿಗೆಂದುಂ (ಪಪ:ಕ. ೦೩೦೫- I. ೦೦-೪೪). [<ಸಂ. ಭಗವತ್?]

ಭಗವಂತ (ನಾ)- ೧. ದೇವರು ; ಪರಮಾತ್ಮ : ಭಗವಂತನೆ ಕವಿ ಸಹೃದಯ ನಾಂ (ಅಷ್ಟ. ೩೦-೨) ; ಈ ಈಶ್ವರನು ಮಹದೈಶ್ವರ್ಯಗುಣ ಪೂರ್ಣವಾದ ಭಗವಂತಮು ; ಏಮೇವಾದ್ವಿತೀಯಮು (ಪಾಶಭ. ೦೫೭) ; ಆರ್ಜವನನು ಮಪಾಸಂಗ್ರಿಮಕ್ಕೆ ಅಣಿಯಾಗುತ್ತಾನೆ. ಹೀಗೆ ಭಗವಂತನ ಕಾರ್ಯ ಫಲಿಸುತ್ತದೆ (ಪಭಾಗ. ೦೫೩). ೨. ವಿಷ್ಣು. ೩. ಶಿವ ; ಈಶ್ವರ. ೪. ಜಿನ ; ಅರ್ಹಂತ. ೫. ಗೌತಮ ; ಬುದ್ಧ ; ಆನಂದನವರನೆಬ್ಬಿಸುತೊಡನೆ ಮರಳಿ ಬರೆ, ಭಗವಂತ ಮೆಲ್ಲನಿಂತೆಂದ (ಕ್ಷಣ. ೬೬-೩); ಭಗವಂತಮು ಒಂದು ಸಲ ಶ್ರಾವಸ್ತಿಯ ಜೇತವನದಲ್ಲಿ ಅನಾಥಪಿಂಡಿಕವ ಆರಾಮದಲ್ಲಿ ತಂಗಿದ್ದಪು (ಪಾಶ್ವ. ೦೫೫). ೬. ಪೂಜ್ಯರನ್ನು ಉದ್ದೇಶಿಸುವಾಗ ಬಳಸುವ ಶಬ್ದ : ಆಸ್ಥಾನಾಚಾರ್ಯ ಭಗವನ್ಮರಾಸ್ಥಾನಮಾನ್ ದೇವಾಚಾರ್ಯಭಗವನ್ಮಗ್ಗೆ ಕೊಟ್ಟು (ಪಶ. I. ೦೫೬-೩; ೨೫೫). [ಸಂ. ಭಗವತ್]

ಭಗವತಿ (ನಾ). ೧. ಗೌರಿ ; ವಾರ್ವತಿ : "ರುದ್ರಾಣೀ . . . ಭಗವತೀ, ದುರ್ಗಾ' . . . ಮೇನಕಾತ್ಮಜಾ—ಈ ೨೧ ಗೌರೀದೇವಿಯ ಪೆಸರ್" (ಪಾಶಬ್ದ. ೯-೦೫); ಮರಿಯಸೆಯೊಳ್ ಭಗವತಿಯಂ ಪದಿಪ್ಪೆಗೆಯ್ದುಡಿಪ (ಪ್ರಾಚ. ೦೬೫, ೭೯-೩; ೭೫೮ ೫೫) ; ಆ ಭಗವತಿ ಕೊರ್ಕು ಬೀರುವಿಯಾಗೆ ಭೂಜಾಸಿಗೆ ನಾಗವರ್ಮಾವಾ (ಕಂದೋಬ್ರ. ೦-೮). ೨. ಲಕ್ಷ್ಮಿ, ಸರಸ್ವತಿ ಮೊದಲಾದ ಸ್ತ್ರೀದೇವತೆ. ೩. ತಪಸ್ವಿನಿ, ಋಷಿಪತ್ನಿ, ಮೊದಲಾದ ಪೂಜ್ಯಸ್ತ್ರೀಯರನ್ನು ಕುರಿತು ಹೇಳುವಾಗ ಬಳಸುವ ಪದ : ಎಲೌ

ಭಗವತಿಯರಿಂ, ಮಹಾದೇವಿಯರಿಂ ಇತ್ತ ಕಡೆಗೆ ಬರಬೇಕು (ಅಣಿಮ. ೯-೩ ಪ).

ಭಗವತಿಅಂಕಣಾಜಿ = ದೇವಿಯ ಭಕ್ತನೆಂದು ಪ್ರಸಿದ್ಧನಾದವನು: ಒಂದು ಬಿರುದು : ಸ್ವಸ್ತಿಶ್ರೀಮನುಮಹಾಮಂಡಳೇಸ್ವರಂ ಜೋಳರ ಭೀಮ ಚೋಳನಾರಾಯಣ ಭಗವತಿಅಂಕಕಾಜಿ ನಾಗರಸನ ಕುಮಾರವೀರ ಬೊಮ್ಮಸಂಗೆ ಬಸುರುಕೊಡನು . . . ಕೊಟ್ಟನು (ಕೌಇ. IX-i, ಪಟ್ಟಿ-೧೨; 1278). **ಭಗವತಿಯೇಱು** = ದುರ್ಗೆಯ ಯುದ್ಧ : ದೇವೀ ಸಂಗರ : ' ಭಗವತಿಯೇಱುವೇಳ್ವ ಕೆಜಿದಿಂ ಕಥೆಯಾಯ್ತುವೇಱು (ಪಂಚಾ. ೦೦-೦೬)ಃ ಗಣ್ಡಪ್ರತಾಪಗಿಬಗಿ ಕೀರ್ತ್ಯಿಕುವ್ಪ ಬಿಜಿಘಾತ್ತರಂ ಮೂದಲೆ ಪೆಂಪು ವಿಕ್ರಮಂ ಭಗವತಿಯೇಱು ಕೌಜಗುಣಮತ್ತಿಯ ಪಣ್ಣನಿಪೇಳ ಪುಣ್ಡರಂ ತೆಗಳ್ದುದಾದಾರಚಾರುಚರಿತಪ್ರಭೆಯಿಂ ಪಡೆವಳ್ಕೆ ಕೈಲಾ (ಕೌಇ. XI-i, ೩೩-೩೯; ಪು. 1807); ಕ್ಷ 'ಭಗವತಿ'ಯು ಪರಾಶಕ್ತಿಯ ಒಂದು ಸ್ವರೂಪ. ಪಾರ್ವತಿಯಾಗಿ, ದುರ್ಗೆಯಾಗಿ ಅವಳು ದುಷ್ಟಶಕ್ತಿಯನ್ನು ನಾಶಮಾಡಿದ ಕಥೆ ಪ್ರಸಿದ್ಧ. ಅದುದರಿಂದ ದೇವಿಯ ಯುದ್ಧ, ದೇವೀಸಂಗರ, ಭಗವತಿಯೇಱು ಎಂಬ ಪದಗಳಲ್ಲಿ ಈ ದೇವಿಯು ಮಾಡಿದ ಯುದ್ಧದ ಕಥೆ ಅಥವಾ ಪುರಾಣದ ಕಥೆ ಸೂಚಿತವಾಗುತ್ತದೆ. [ಸಂ. ಭಗವತೀ]

ಭಗವತ್ಪಾದ (ನಾ). ಶುತಾಚಾರ್ಯರೇ ಮೊದಲಾದ ಪೂಜ್ಯರನ್ನು ಸಂಬೋಧಿಸುವಾಗ ಹೇಳುವ ಒಂದು ಗೌರವಾರ್ಥಕಶಬ್ದ : ಶಂಕರಭಗವತ್ಪಾದರು ಜಗನ್ಮಿಥ್ಯಾವಾದಿಗಳಾದರೂ ಅವರ 'ವಿಘ್ನಾ' ಪದ ಪ್ರಯೋಗದ ಅರ್ಥವೇ ಬೇರೆ (ಶಾಸಂ. ೦೨೨ ಆಪಿ). [ಸಂ.]

ಭಗವತ್ಪಾದಿ (ನಾ). (ವಿಷ್ಣುವಿನ ಪಾದದಿಂದ ಹುಟ್ಟಿದುದೆಂದು ಹೇಳುವ) ಗಂಗಾನದಿ : ಸುತ್ತ ಬಳಗದ ಕೂಡೆ ಕುಳಿತು ಭಗವತ್ಪಾದಿ ಪೆತ್ತ ದೇವನ ಸ್ಮರಣೆಮಾಡಿಕೊಳ್ಳುತ (ಅಣಿಕ್ಷೇ. ೩೫-೦). [< ಸಂ. ಭಗವತ್ಪದೀ]

ಭಗವದಿಚ್ಛೆ (ನಾ). ದೈವೇಚ್ಛೆ ; ಈಶ್ವರಸಂಕಲ್ಪ : ಪ್ರಕಟಣೆಗಾಗಿ ಒಂದೆರಡು ಪ್ರಯತ್ನಗಳು ನಡೆದುವಾದರೂ ಪ್ರಕಟವಾಗಲಿಲ್ಲ. ಭಗವದಿಚ್ಛೆ ಹಾಗಿತ್ತು (ಕಜಾ. XV-೬೬೨ಪಟ); ಭಗವದಿಚ್ಛೆಯಿದ್ದರೆ ಶಿಕ್ಷೆ ರದ್ದಾಗುತ್ತದೆ (ಕುಚಂ. ೨೩೬). [ಸಂ. ಭಗವದಿಚ್ಛಾ]

ಭಗವದ್ಗೀತೆ (ನಾ). ಹಿಂದುಗಳ ಸುಪ್ರಸಿದ್ಧವಾದ ಧರ್ಮಗ್ರಂಥ: ಮಹಾಭಾರತದ ಭೀಷ್ಮಪರ್ವದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶ ಮಾಡಿದ ತತ್ತ್ವವನ್ನು ವಿವರಿಸುವ ಹದಿನೆಂಟು ಅಧ್ಯಾಯಗಳನ್ನೊಳಗೊಂಡ ಗ್ರಂಥಭಾಗ : ವೇದಗಳ ಸಾರಸರ್ವಸ್ವ ಉಪನಿಷತ್ತುಗಳಾದರೆ, ಉಪನಿಷತ್ತುಗಳ ಸಾರಸರ್ವಸ್ವ ಭಗವದ್ಗೀತೆ (ಶಾಪಿ. ೦೦೯); ಉತ್ತಮಸಂದೇಶವನ್ನು ನೀಡುವ ಭಗವದ್ಗೀತೆಯೊಡನೆ ಕೂಡಿದ ಮಹಾಭಾರತವು ಪಂಚಮವೇದವೆನ್ನಿಸಿಕೊಂಡಿತು (ಪಣ್ಣಿ. ೦೦೨ ಪಂ೫೪). [ಸಂ. ಭಗವದ್ಗೀತಾ]

ಭಗವನ್ 'ಭಗವಾನ್' ನೋ.

ಭಗವಾ (ಗ). ಕಾವಿ ಬಣ್ಣದ : ತಿರುಮಲೆಯ ಕಾದುಕಕ್ಕೂ. ವೇದಾಂತ ಮಾರ್ಗದ ಹೆಸರಿನಲ್ಲಿ ಗುಂಪುಕಟ್ಟಿಕೊಂಡು ತಿರುಗುವ ಭಗವಾ ವೆಷ ಧೂಜಣವಲ್ಲಿರುವ ಗಾಂಜಾಮೇಳದವರಿಗೂ ಹೇರುಕ್ತಿರಲಿಲ್ಲ (ಪಂಚಾ. ೬೩ ಕೊಗತ್ಯಕಂಚಿಯ) ; ದುಡ್ಡಿನ ಜಾಡಮಿದ ಬಳಕರು ಭಗವಾಕವಿ ಧರಿಸಿ ಹಕ್ಕಿದರು (ಕ್ಷ ೦೫- ೧೩೩) ; ಭಗವಾ ರೆಂಡಾ ಸುಟ್ಟು ಬೂದಿಮಾಯಿತು (ಶಾಸಂ. ೨೦). [←ಹಿಂ. ದೇಶಾ. ಭಗವಾ]

ಭಗವಾನ್, ಭಗವನ್ (ನಾ). ೧. ಗುರುಹಿರಿಯರನ್ನು ಸಂಬೋಧಿಸುವಾಗ ಬಳಸುವ ಗೌರವಸೂಚಕವಾದ ಒಂದು ಶಬ್ದ : " ತತ್ಪ್ರಭಾವ್, ಭಗವಾನ್—(ಇವರಿಂದು) ಈ ೨ ಪೂಜಾವಚನಂ" (ಕಜಾಯು. ೨೬-೦೩). ೨. ಬುದ್ಧ : "ಸರ್ವಜ್ಞಸ್ಸುಗತಃ, ಬುದ್ಧಃ, ಧರ್ಮರಾಜಃ, ತಥಾಗತಃ, ಸಮಂತಭದ್ರಃ. ಭಗವಾನ್. . . ಮುನಿಃ—ಇರೆ ಬುದ್ಧದೇವರ ಹೆಸರುಗಳು" (ಸಿಶ್ಯಾಂ. ೦೬). **ಭಗವನ್**. ೧. ಭಗವನ್, ನಾನು ವಿಜಾರ (ಪಪ್ರಾಚಾ. ೨೨). [<ಸಂ. ಭಗವತ್]

ಭಗಾಂಕುರ (ನಾ). "ಗಂಡಸಿನ ಶಿಶ್ನಕ್ಕೆ ಸರಿಹೋಲುವ ಹೆಂಗಸಿನ ಜನನೇಂದ್ರಿಯ ಭಾಗ; ಭಗಾಂಕುರ" (clitoris. ೨೦೪೨). [ಸಂ.]

ಭಗಿನಿ (ನಾ). ೧. ಒಡಹುಟ್ಟಿದವಳು; ಸಹೋದರಿ : "ಭಗಿನೀ, ಜಾಮಿಃ, ಸ್ವಸಾ—ಈ ೩ ಒಡಹುಟ್ಟಿದವಳ್" (ಪಣಾಪ್ರ. ೫೨-೪೩೬) ; ತಿನೆಯು ಮಾಧವನು ಅಶ್ವಮೇಧಯಜ್ಞಮಾಡಿ ಕದಂಬಕೃಷ್ಣವರ್ಮನ ಭಗಿನಿಯನ್ನು ವಿವಾಹ ಮಾಡಿಕೊಂಡಿದ್ದನು (ಕಚ್ಚಾರ. ೫೦). ೨. ಮಹಿಳೆಯರನ್ನು ಸಂಬೋಧಿಸುವಾಗ ಬಳಸುವ ಒಂದು ಶಬ್ದ: ಭಗಿನಿಯರೆ, ನಿಮ್ಮ ಸಮಾಜಕ್ಕೆ ನನ್ನನ್ನು ಆಹ್ವಾನಿಸಿ ಗೌರವಿಸಿದುದಕ್ಕೆ ನಾನು ಕೃತಜ್ಞನಾಗಿದ್ದೇನೆ (ಜಜ). ೩. ಪುಣ್ಯವಂತೆ: ಭಾಗ್ಯವಂತೆ. [ಸಂ. ಭಗಿನೀ]

ಭಗಿನಿಜ (ನಾ). ಸೋದರಿಯ ಮಗ ; ಸೋದರಳಿಯ : "ಭಗಿನಿಜಂ ಸ್ವಸ್ರೀಯಂ ಸೋದರಳಿಯಂ" (ಪಂಗಣ. ೧೩-೦೪). [<ಸಂ. ಭಗಿನೀಜ]

ಭಗಿನೀಪತಿ (ನಾ). ಸೋದರಿಯ ಗಂಡ; ಅಕ್ಕ ಅಥವಾ ತಂಗಿಯ ಗಂಡ. [ಸಂ.]

ಭಗೀರಥ (ನಾ). ಸ್ವರ್ಗಲೋಕದಲ್ಲಿದ್ದ ಗಂಗಾನದಿಯನ್ನು ತನ್ನ ಅಸಾಧಾರಣ ಪ್ರಯತ್ನದಿಂದ ಭೂಮಿಗೆ ತಂದನೆಂದು ಪಂಬಲಾದ ಸೂರ್ಯವಂಶದ ಒಬ್ಬ ಚಕ್ರವರ್ತಿ: ದೀಕ್ಷಾಗ್ರಹಣಮನೋರಥಂ ಮಹಾರಥಂ ಭಗೀರಥಂಗೆ ಸಾಮ್ರಾಜ್ಯಪದವಿಯಂ ದಯೆಗೆಯ್ದು (ಅಕ್ಕ. ೦೦-೦ ಪ); ಇದು ಭಗೀರಥರಥವ ಬೆಂಕೊಂಡು ಪರಿವ ಸುರನದಿಯ ಪ್ರವಾಹಮೆಸಲ್ . . . ಬಿತಪ್ಪ ಚತುರಂಗದ ಪದಪತಿಗೆ ಧರೆ ನಡುಗುತಿರೆ (ಕೃಬಾಪಾ. ೪-೨೮).

ಭಗೀರಥಪ್ರಯತ್ನ = ವಿಶೇಷವಾದ ಪ್ರಯತ್ನ : ಗಾವಯೋಗದಾಧ್ಯಂತಮಾಂ ಆಹಂಕೃತಿಗೊಡರ್ವದಲ್ಲಂ. . . ಭೀಗೀರಥಪ್ರಯತ್ನಕವೊಳಗಾಗದು (ಅಭ್ಯಾ. ೨೯-೦೩); ಆ ಹುಡುಗಿಗೆ ಗಂಡು ಗೊತ್ತುಮಾಡುವುದಕ್ಕೆ ಭಗೀರಥಪ್ರಯತ್ನ ಮಾಡಬೇಕಾದಿತು (ಕಜಾ). [ಸಂ.]

ಭಗ್ನನೆ (ಅ). ಒಂದು ಅನುಕರಣಾವ್ಯಯ ; ಕೂಡಲೆ ; ತಟ್ಟನೆ : ಒಗ್ಗೊಡೆಯದೊತ್ತಿ ಪಡತಪನು ಭಟರಿದಿಸಲುಗಿ ರುಗಿದರು ಹಿಂದೆ ಹಿಂದೆ ನಿಂದೆ ಸೈನ್ಯ ಭಗ್ನನೊಡೆದುದು (ಪಾಂಪ. ೦೦-೦೬). [ಭಗ್+—ಅನ್ನೆ]

ಭಗ್ನ (ಗು). ೧. ಮುರಿದ; ಒಡೆದ : ಈ ಭಗ್ನಜೋಪಾಯವು ನಿನ್ನದೇ (ಪಚ್ಚಕ್ಷ. ೩೩). ೨. ಸೋತ; ಸೋಲಿಸಲ್ಪಟ್ಟ. ೩. ಹಾಳುಮಾಡಲ್ಪಟ್ಟ; ನಾಶಗೊಂಡ. ೪. ಎದೆಗುಂದಿದ ; ನಿರಾಶೆಗೊಂಡ. (ನಾ). ೫. ಮುರಿದಿರುವುದು : ನಂಬಿಗೋಪಂ ಪ್ರಜಿಪ್ಪುಬಲಿಂ ಬಂದು ಭಗ್ನವಾಗಿರ್ದಾ ಪಾಷಾಸ್ಕಂಧಶಾಖಾರ್ಜುನವಿಟಪಿಯನುಮಂ. . . ಕಂಡು (ಕಗಾ. ೩-೪೯ ಪ); ೬. ಎರಡಾಗಿ ಒಡೆದುದು ; ಹೋಳಾದುದು : "ಭಗ್ನಂ ಭಂಗುರ ಭಗ್ನಂ . . . ಛಿತವಾಚ್ಯಂ" (ಪಚ್ಚಕ್ಷ. ೦೩೬-೪೬); ಭಗ್ನವಾದ ಮೂರ್ತಿಗೆ ಭಂಗವೆದ ಗುಡಿಯಿಂದೇಪು ? (ಪಚ್ಚಕ್ಷ. ೨೩೬). [ಸಂ.]

ಭಗ್ನಪಾಠ (ನಾ). ಪ್ರಾಚೀನಗ್ರಂಥಗಳಲ್ಲಿ ಕಂಡುಬರುವ ತ್ರುಟಿತ ಭಾಗ ; ನಷ್ಟಪಾಠ : ಭಗ್ನವಾಕ್ಯಂತ ತಾತ್ಕಾಲಿಕಪೂರ್ಣವಿರಾಮ (stop gap) ಉತ್ತಮ ಎಂಬುದು ಅವರ ನೀತಿ (ಶಾಸಂ. ೧೯). [ಸಂ]

ಭಗ್ನಮಂದಿರ (ನಾ). ಮುರಿದು ಬಿದ್ದ ಮನೆ ; ನೆಲಸಮವಾದ ಮನೆ : ಆ ಭಗ್ನಮಂದಿರವನ್ನು ಜೀವಪೂರ್ಣದೇಗುಲವನ್ನಾಗಿಸುವ ಕೆಲಸ ಹರಿಯಕ್ಕೆ ಬಂದ ಪಾಗ ಈರನದಾಗಿತ್ತು (ಪುಂಗಣಮು. ೬೯). [ಸಂ.]

ಭಗ್ನಮನ (ನಾ). ನಿರಾಶೆಗೊಂಡ ಮನಸ್ಸು : ಭಗ್ನಮನಮಲ್ಲದಚಲಿತಲಗ್ನಪ್ರತಿಯಾಗಿ . . . ಪಂಡಾಗ್ನಿಯ ನಡುವಾಜಿ ವಿಪುಳತಪಮೊಳ್ ನಿಂದಳ್ (ಗಿಶಿ. ೯-೯). [ಸಂ. ಭಗ್ನಮನಸ್]

ಭಗ್ನಮನೋರಥ (ನಾ). ಕೈಗೂಡದ ಆಸೆಯುಳ್ಳವನು ; ನಿರಾಶನಾದವನು : ಭಗ್ನಮನೋರಥಂ ರತಿಸುಪ್ತಾಸವೇವೆಗೆ ಪಂಚಬಾಣ ಪಂಚಾಗ್ನಿತಪಕ್ಕೆ ನಿಲ್ಲ ವಿರಹಾತುರನಂತಿರೆ (ಅಭಿನ. ೪-೦೨೬) ; ಅರಮನೆಗೆ ಪಡೆಯೆನಲು ತಂದೆಯು ಪರಮವಜ್ರವಲಂಘ್ಯಮೆವೆ ಕಾತರಿಸಿ ಭಗ್ನಮನೋರಥನು ಮರಳಿದನು ಮಂದಿರಕೆ (ಕುಮ್ಮಿ. ೨-೨೫). [ಸಂ.]

ಭಗ್ನಲತಾವೇಷ್ಟನ (ನಾ). [ಕಾಮಶಾ] ಆಲಿಂಗನದಲ್ಲಿ ಒಂದು ಪ್ರಕಾರ: ನಿಂದಿರ್ದ ಪುರುಷನ ಮುಂದಲೆಯ ಹೆಡಗಯ್ಯಂ ಬರತೆಗೆದು ಅತ್ಯಂತ ಬಾಗಿಸಿ ಆತನ ಕೊರಳು ದೆನ್ನಂ ತೊಡಗಳಿಂದಾಲಿಂಗಿಸಿ ಆತನ ಶಿಕದಲ್ಲಿ ಕಪೋಲಗಳನ್ನಿಕ್ಕಿಕೊಡುಯಿಂತಿಪ್ಪಳು. ಆತನ ಕೈಗಳಿರಡುತೊಡೆಗಳಂ ಪಿಡಿದು ಇರುತಿರ್ಪನು. ಇದು ಭಗ್ನಲತಾವೇಷ್ಟನವೆಂಬುವರಿದು (ಕಾಪುಶಾ. ೩೫೬). [ಸಂ.]

ಭಗ್ನಾಂಗ (ನಾ). ೧. ಮುರಿದ ಅವಯವ. ೨. ಅಂಗವಿಕಲನಾದವನು : ರಿಕ್ತಕುಂಭಂ ವಿಲಾಪಿಜ ಭಗ್ನಾಂಗನ ಕೃತ್ಯಯಂ ವಿಧಿಯಂ ಕೊಂದಿತಮಂ ಧೂಮಮಂ ನಿಷ್ಕಾರ್ ಕಂಡರೆ ಪೋಗರ್ಕೆ (ಸೋಮೇಶ. ೬೮). [ಸಂ.]

ಭಗ್ನಾವಶೇಷ (ನಾ). ಬಹು ಭಾಗ ಹಾಳಾಗಿ, ಉಳಿದಿರುವ ಅಂಶ : ನಮ್ಮ ಸುತ್ತಮುತ್ತಲಿರ್ಪಾ ಹಳೇ ಸಂಪ್ರದಾಯದ ಭಗ್ನಾವಶೇಷವನ್ನೇ ನೋಡುತ್ತಿದ್ದೇವೆ (ಶಾಕಪ. ೩೩೪). [ಸಂ.]

ಭಗ್ನಿಸು (ಕ್ರಿ). ಮುರಿ ; ಛೇದಿಸು : ಭಗ್ನಿಸಿ ಜೀವವಱವು ಬೆಳೆನೆ ಮೂಱು ನಗ್ನಾತ್ಮನೆಂಬಾಗಳೊಂದೆ (ಪಪಪ. ೩೬-೩೮). [ಭಗ್ನ + —ಇಸು]

ಭಗ್ನೋತ್ಸಾಹ (ನಾ). ಉತ್ಸಾಹವನ್ನು ಕಳೆದುಕೊಂಡವನು : ನಿರುತ್ಸಾಹಿ : ಕ್ಷತಿಪ್ರಮಾಣತೀತಾಪ ಪ್ರಮುಖವಿರೀಜಹಂಗಳಂ ಸೈರಿಸಲಾಱದೆ ಭಗ್ನೋತ್ಸಾಹರುಂ ದೂರೋತ್ಸಾರಿತಾಭಮಾನಿಗಳುಮಾಗಿ (ಅಂಪ್ರ. ೯-೧೪೫). [ಸಂ.]

ಭವ್ಯ (ಗು)· ೧. ಮುಂದೆ ಆಗುವ ; ಆಗಲಿರುವ. ೨. ಸರಿಯಾದ ; ಯೋಗ್ಯವಾದ: ಅರ್ಹವಾದ. ೩. ಮಂಗಳಕರವಾದ: ಶುಭವಾದ. ೪. ಶ್ರೇಷ್ಠವಾದ ; ಲೋಕೋತ್ತರವಾದ : ಭವ್ಯಗುಡಿಯೊಳಗಿಪ ದಿವ್ಯಲಿಂಗದ ಮುಂದೆ ಅವ್ಯ ಕರದೊಯ್ದು ತೋರಿದರು (ಚಿಕ್ಕಪ್ಪ. ೩-೬೭): ಜಗದೀಶ್ವರನ ಪೂಜೆಯ ಸಂದೇಶವಹುದಿಲ್ಲಿ ಭವ್ಯಸೌಂದರ್ಯಶೀಲದ ವನ್ಯ ಶಾಂತಿಯಲಿ (ಕ್ಷೀಣಪಾ. ೬೬-೦೦೬). (ನಾ)· ೫. ಮುಂದೆ ಆಗಬೇಕಾದುದು ; ಆಗಲಿರುವುದು : ವಸ್ತುವನ್ನು ಭೂತ, ಭವ್ಯ (ಆಗುವುದು, ಇನ್ನು ಮುಂದೆ ಆಗಬೇಕಾದ್ದು) ಎಂದು ಎರಡು ಬಗೆದಾಗಿ ವಿಂಗಡಿಸಬರು. ಧರ್ಮಾಧರ್ಮಗಳು ಕರ್ಮವನ್ನು ಮಾಡಿದ ಮೇಲೆ ಆಗತಕ್ಕವುಗಳಾದ್ದರಿಂದ ಅವುಗಳು ಭವ್ಯವೆನಿಸುವುವು (ಶ್ರಕ್ಷಾ. ೩೨ ೨೦೩). ೬. ಒಳ್ಳೆದು ; ಮಂಗಳ ; ಶುಭ : "ಸ್ವಃ(ಸ್ವ)ಶ್ರೇಯಸಂ· ಕಲ್ಯಾಣಂ· ಶ್ರೋಷೀಯಂ· ಶಿವಂ· ಶುಭಂ· ಭವಿಷ್ಕಂ· ಭಾವುಕಂ· ಶ್ರೇಯಃ· ಭವ್ಯಂ· ಭದ್ರಂ· ಮಂಗಳಂ – ಈ ೧೧ ಒಳ್ಳಿತರ್ಥ ಪೆಸರ್" (ಸಣಾಹು. ೨೦-೬೨೨) : ಭವ್ಯಕ್ಕೆ ಪಟ್ಟಿಲ್ಲ ಸಿದ್ಧನಾಗೆಲ್ಲಕಂ (ಜೂಳುಶ. ೭೬೬). ೭. ದೊಡ್ಡದು : ವಿಶಾಲವಾದುದು : ಗ್ರಂಥಗಳು ವಾಸವಾಗಿರಬೇಕಾದ ಭವನವು ಭವ್ಯವು ಭದ್ರವೂ, ಮನೋಹರವೂ ಆಗಿರಬೇಕು (ಗ್ರಂಚಾಂ. ೩). ೮. ಅಮೃತ : ಸೌಂದರ್ಯಮಿಮಾಂಸೆಯಲ್ಲಿ ಚರ್ಚೆಗೆ ಅರ್ಹವಾದ ಮತ್ತೊಂದು ವಿಚಾರವೆಂದರೆ . . . ಭವ್ಯ ಮತ್ತು ಕ್ಷುದ್ರಗಳ (Rediculous) ಪರಸ್ಪರ ಸಂಬಂಧ ಮತ್ತು ಅವುಗಳ ವಿವರಣೆ (ಸೌಂಪ್ರ. ೫೪). ೯. ವಿದ್ವಾಂಸ ; ಪ್ರಾಜ್ಞ : ಭವ್ಯರ್ ಸತ್ಯಪಿವೇಶ್ವರ್ ಕಾವ್ಯಾಲಾವಂಶ್ಚ ವರ್ಜಯೇದೆಂಬುದಸತ್ಕಾವ್ಯನಿಬಂಧನ (ಜಾಪ್ರ. ೦-೩೮). ೧೦. ಅತರ್ಕ್ಯವಾದುದು; ಗೆಲಲಾರದುದು : "ಕಲ್ಯಾಣಮತರ್ಕ್ಯ ಮೋಕ್ಷಗತಜೀವಿಗಳಂತಿವ ಭವ್ಯವಾಚಕಂ" (ಜಾಗಪ್ರ. ೪೦). ೧೧. [ಜೈನ]ಮೋಕ್ಷಕ್ಕೆ ಅರ್ಹತೆಯನ್ನು ಹೊಂದಿರುವ ಸಂಸಾರಿಯಾದ ಜೀವ; ಸಮ್ಯಗ್ದರ್ಶನ ಮೊದಲಾದ ಭಾವಗಳನ್ನು ಪ್ರಕಟಿಸುವ ಯೋಗ್ಯತೆಯುಳ್ಳವನು : ಆಮೇನೊ ಭವ್ಯರೆಮೊ ಅಭವ್ಯರೆಮೊ ಎಂದು ಬೆಸಗೊಂಡೊಡೆ (ಜಕ್ಕಣ. ೦೦೬-೩೪); ನೀಂ ಭವ್ಯನೆಯಜ್ಞಾನಿಯಪೆಯ್ ಬಿನ್ನಂ ಮಱೆದೇನೀ ವಿಷಯವ ಸುಬಿಕ್ಕೆ ಲಂಜಟುಸಪ್ಪೋ (ಜಪಕ್ಷ. ೬-೭೬) ; ಈ ಶುಭಕಥನದುಸತ್ಕಾನಂದದಿಂ ಕೇಳ್ದ ಭವ್ಯಪ್ರಭುಸಭೆಯೆಸಿಕ್ಕಾಂ ದುಂಗಳ ಶ್ರೀವಿಲಾಸಂ (ಪಾಪಾಕ. ೦-೭೨).

ಭವ್ಯಚಿಂತಾಮಣಿ = ಭವ್ಯರ ಇಷ್ಟಾರ್ಥಗಳನ್ನು ನೆರವೇರಿಸುವಮನು. ಗುಣವೆಂಬುಂ ಬಂದು ತನ್ನೊಳ್ ವೆಸೆದಿರೆ . . . ಭವ್ಯಚಿಂತಾಮಣಿಯುಂ ಪೊಸಾಗಿ (ಜಲತಿ. ೦೬-೩೦): ಭವ್ಯಚಿಂತಾವನಿಯೆ ಸಕಳಕಲಾಕೋವಿದಂ ಕಾವ್ಯಕಳಾಶಾಸನನೆನ್ದಾಪನ್ದಂದಿಂದಂ ಪೊಗಳೆ ಪೆಗಳ್ದನೀ ಗೋಪಮ್ಮಿ ಬ್ರತೀಂದ್ರಂ (ಎಳ. ೧೬, ೬೯-೭೩; ಸು. 2100). [ಸಂ.]

ಭವ್ಯಜನ (ನಾ)· [ಜೈನ] ಮುಮುಕ್ಷುಗಳ ಸಮೂಹ : ಲಸದ್ರತ್ನತ್ರಯಂಗಳ್‌ಸುಖೋಪಾದಂಗಳ್ ಗಡಮೆಂದು ಭವ್ಯಜನಂ ಕರ್ಣಾಜಿ ಕಲ್ಪಿಸ್ಪ ಪಾಥ್ಯಮಮ್ಮೋರ್ತಿಸುಗೆಮ್ಮ ಚಿತ್ರಗೃಹದೊಳ್ರತ್ನತ್ರಯಜ್ಯೋತಿಯಂ (ಜಪ್ರ. ೦-೨): ಭವ್ಯಜನಹೃದಯಾನಂದರುಂ ಕೊಣ ಕುಂದಾನ್ವಯಾಗಣ ಮಾರ್ತ್ತಾಂಡರುಂ (ಎಕ. ೧೧, ೬೬-೬೩ ; ೧೨೨೦). [ಸಂ.]

ಭವ್ಯಜೀವ (ನಾ). ಮೋಕ್ಷಕ್ಕೆ ಯೋಗ್ಯವಾದ ಜೀವ : ಭವ್ಯಾರಾ ಅದೆಂ ಭವ್ಯಜೀವನೊ ಅಭವ್ಯಜೀವನೊ ಎಂದು ಬೆಸಗೊಂಡೊಡೆ (ಪಜಾ.೦೦-೯).

[ಸಂ.]

ಭವ್ಯತೆ (ನಾ)· ೧. ಹಿರಿಮೆ ; ಶ್ರೇಷ್ಠತೆ : ಶೂನ್ಯಸಂವಾದನೆ ಮತ್ತು ಪ್ರಭುವಿಂಗಲೀಲೆಗಳಲ್ಲಿ ಬರುವ ಅಲ್ಲಮನ ಚಿತ್ರ ಮೆಚ್ಚು ಕಾಣಿಸೆ ಒಂದೇ ಅದೇ ಭವ್ಯತೆ. ಅದೇ ದಿವ್ಯತ್ವ ವಿವರಲ್ಲೂ (ಕೂಪ್ರ. ೦೬೯); ಆ ತಿವಸ ಸ್ಪಷ್ಟಿಯಲ್ಲಿ ಭವ್ಯತೆ. ವಿಷ್ಣು ಇರುವುದೋ ವೈವಿಧ್ಯತೆಯೂ ಅಷ್ಟೇ ಇರುವುದು (ಪಂಗೂ. ೨೦). ೨. [ಜೈನ] ಮೋಕ್ಷಕ್ಕೆ ಅರ್ಹತೆಯನ್ನು ಪಡೆಯುವಿಕೆ; ರತ್ನತ್ರಯಾಪ್ತಿಪ್ರಾಪ್ತವಾಗುವ ಯೋಗ್ಯತೆ : ಇಂತು ಭವ್ಯತೆ ಜಗಕ್ಕಾರ್ಜ್ಜರ್ದುರ್ಮಾರ್ಗಾಶ್ರಿತನಾ (ಅರಿಪು. ೦೬-೬೬) ; ಆಮರೇಂದ್ರನುಂ ಶಚಿಯುಮಿಂ ಮರಣಾ ವಮಾಗಾಡೊಡಲ್ಕೆ ಭವ್ಯತೆ ಬಳಿರ್ಕುಮೆಂದು ಬಯಸುತ್ತಿರೆ (ಶಾಂತಿಪು. ೬-೧೦) ; ಆ ಮುನೀಂದ್ರರ್ ನಾಗಶರ್ಮನ ಭವ್ಯತೆಯ ಕಾಲಲಬ್ಧಿಯುಮಾಸನ್ನಭವ್ಯತೆಯಾ ವಿನೇಯಜನಂಗಳ್ಗೆಮಿಂತಲ್ಲದೆ ಸಪ್ಪರ್ಮಕ್ಕೆ ಪಾತರೆಂಬ ಮಾರ್ಗಪ್ರಭಾವಮುಮಂ ದಿವ್ಯಜ್ಞಾನದಿಂದ ಮುಪಲಕ್ಷಿಸಿ (ಸುಳುಪು. ೬-೪೯ ಪ). [ಸಂ. ಭವ್ಯತಾ]

ಭವ್ಯತ್ವ (ನಾ)· ೧. ಹಿರಿಮೆ; ಔನ್ನತ್ಯ. ೨. =ಭವ್ಯತೆ ೨ : ಜಡ್ಡಿದಲೇಶ್ಯಮುಂ ದ್ವಿವಿಧ ಭವ್ಯತ್ವಮುಂ . . . ದ್ವಾದಶವಿಧೋಪಯೋಗಮುಂ ಎಂಬಿಪ್ಪತ್ತು ಪ್ರರೂಪಣೆಗಳುಮಂ . . . ಪೇಳ್ದು (ಜಾಳುಪು. ೪೯); ಜೀವತ್ವಮುಂ ಭವ್ಯತ್ವದುಂ ಅಭವ್ಯತ್ವಮುಂ ಎಂಬ ಪಾರಿಣಾಮಿಕ ಭಾವತ್ರಯಂ ಜೀವಸ್ವಭಾವಮಕ್ಕುಂ (ಕಕ್ಕ್ರ. ೬೯). [ಸಂ.]

ಭವ್ಯಪ್ರಬೋಧಬೋಧಿ (ನಾ). [ಜೈನ] ದ್ವಾದಶಾನುಪ್ರೇಕ್ಷೆಗಳಲ್ಲಿ ಒಂದು ; ಬೋಧಿದುರ್ಲಭ : ಅಭಿನುತಧರ್ಮರತಿಯು ಸ್ವಭಾವ ವೈರಾಗ್ಯಭಾವಮುಂ ಸರ್ವಭವಾನುಭವವಿರಕ್ತತೆಯುಂ ದುರ್ಲಭಮಾದು ಭವ್ಯಪ್ರಬೋಧಮೀಯಿನಕ್ಕುಂ (ಜಗಃಪು. ೦೨ ೭೬). 'ದ್ವಾದಶಾನುಪ್ರೇಕ್ಷೆ' ಪರಾ. [ಸಂ.]

ಭವ್ಯಮಾರ್ಗಣೆ (ನಾ)· [ಜೈನ] ಹದಿನಾಲ್ಕು ಮಾರ್ಗಣಾಸ್ಥಾನಗಳಲ್ಲಿ ಒಂದು ; ಭವ್ಯಜೀವರನ್ನು ಹುಡುಕುವುದು : ಗತೀಂದ್ರಿಯ ಕಾಯ ಯೋಗ ವೇದ ಕಷಾಯ ಜ್ಞಾನ ಸಂಯಮ ದರ್ಶನ ಲೇಶ್ಯಾ ಭವ್ಯ ಸಮ್ಯಕ್ [ಕ್ವ] ಸಂಜ್ಞಾಹಾರಿಗಳೆಂಬ ಚತುರ್ದಶಮಾರ್ಗಣೆಗಳೊಳಂ . . . ಚತುರ್ಗತಿಗಳೊಳಂ ಸುಲಭ ಜೀವಂಗಳೆಲ್ಲಂ ಸಂಸಾರಿಜೀವಂಗಳೆಂಬುದುಮ್ಮಂ (ಜಕತಂ. ೬-೭ ಪ) : ಭವ್ಯಮಾರ್ಗಣೆಯೊಳು ಬಂದ ಜೋಗ್ಯ ಪ್ರಕೃತಿಗಳು ೧೦೭ ವಿಷ್ಠಾದ್ಯಷ್ಟಿಗುಣಸ್ಥಾನ ನಿಯಮದಿಂದಮೊದಯಿಪ್ಪುಂ (ಗೊಮ್ಮ. ಜೀ-೬). 'ಚತುರ್ದಶ ಮಾರ್ಗಣೆ' ಪರಾ.

[ಸಂ. ಭವ್ಯಮಾರ್ಗಣಾ]

ಭವ್ಯಾವಲಿ, ಭವ್ಯಾವಳಿ (ನಾ)· [ಜೈನ] ಭವ್ಯರ ಸಮೂಹ.–ಗುಂಪು : ತ್ರಿದಶಸ್ತುತ್ಯಮಿದಾವಿದೇವಚರಿತಂ ಕರ್ಣಾಮೃತಾಖ್ಯಂದಿಯಿಕ್ಕಿದು ಭವ್ಯಾವಲಿ [ಪಾಣಂ. ೪] ಗೆಂದು ಪೇಟಿಸೆ ಬುಧರ್ . . . ಪೇಳ್ದಂ . . . ಸಂಸಾರ ಸಾರೋದಯಂ (ಅಪ್ಪ. ೦೬-೭೬). **ಭವ್ಯಾವಳಿ** : ಜಿನಪತಿಗಳ್ಗವ್ಯಾವಳಿಗೆ ಚತುರ್ವಿಂಶತಿ ದೇವರ್ಪಯೆಗೆಯ್ದಿ ವಿದುರತ್ನತ್ರಯಮಂ (ಜಾಳುಪು. ೦) ; ಅಂತೇವಾಸಿ ಭವ್ಯಾವಳಿಗತುರತಪಃಶೀಲಮಂ ಮಾಡಿ ಲೋಕೋತ್ತರ ದಾಚಾರ್ಯರೆಮ್ಮಂ ನಿಯಮಿಸುಗೆ (ಜಕ್ಕ್ರ. ೦-೩). [ಸಂ.]

ಭವ್ಯಾವಳಿ 'ಭವ್ಯಾವಲಿ' ನೋ.

ಭವ್ಯಾಳಿ (ನಾ)· = ಭವ್ಯಾವಲಿ : ಪೆಗಬ್ದಜಿತನಜೇಯುಂ . . . ಜಿನಶ್ರೀ ಸೇವ್ಯನಪ್ಪಂದು ಭವ್ಯಾಳಿಗೆ ಹಿತಕರನಾದಂ (ಅಪ್ಪ. ೦-೦೦) ; ಅನವದ್ಯರ್ ದಯೆಗೆಯ್ದರಕ್ಕಿ ದಯೆಯಿಂ ಭವ್ಯಾಳಿಗೆ (ಕಂಗಾಪು. ೦-೩). [ಸಂ. ಭವ್ಯಾಲೀ]

ಭವ್ಯೋತ್ಸವ (ನಾ). ೧. ಅತ್ಯುತ್ಸವವಾದ ಸಂತೋಷ ; ಲೋಕೋತ್ತರವಾದ ಆನಂದ. ೨. [ಜೈನ] ಮುಮುಕ್ಷುಗಳ ಸಂತೋಷ.–ಆನಂದ. ೧ . ೨ : ಆಚಾರ್ಯಪರಂಪರೆಯು ಕಂಡುಗೆ ಭವ್ಯೋತ್ಸವಮುಂ (ಆಪ್ರ. ೦-೦೨) ; ಶ್ರೀಯಂ ತಳೆದಂ ಶ್ರೀಜಗಜ್ಜಾಯಂ . . . ಭವ್ಯೋತ್ಸವ ದಾಯಿನಿಯಂ ಜೈನಸಮಾಸೋಹರಚರಿತಂ (ಪಂಪ್ರ. ೦೬–೦). [ಸಂ.]

ಭಜಕ (ನಾ). ಬೊಗಳುವ ಪ್ರಾಣಿ ; ನಾಯಿ : "ಕೌಲೇಯಃ, ಸಾರಮೇಯಃ, ತೌನಪಃ, ಶ್ವಾ, ಔರ್ವರೇಃ, ಭದ್ರಃ, ವ್ಯಗದಂಶಃ, ಶಾಲಾ

ವೈಕಃ—ಈ ರಿ ನಾಯಿ°(ಯಿ)" (ಜೂಡಾಮು. ೪೬-೬೫);ಬಳಿಕೆಯ್ಯರ್ದುಪಲ್ಲಿ [ಲ್ಗಿ]ಱಾದೊಳವಾಲಂಗೊಂಡು ಮೊಱೆವ ಭಷಕನ ತೆಱದಿಂದೊಳಪೊ ಗೃದುರ್ಗಮಾ ಸಂಚಳಚಿತ್ತ ನುಡಿಗುಮೆವಗೆ ಬಲ್ಗಂಡಿಕೆಯಾ (ಶಾಶ್ಮ.೨-೨೫೪); ವಿಜವಮೃತವಾಗದಿಹುದೇ ಶಿವನ ಭಕ್ತರಿಗೆ ಭಷಕನಂ ಕರೆತಂದು ವೇದವೇದಿ ಸರೆ (ಅಚಾಂ.೪೬-೨೬); ಕರಿ ಮೆಕರಂ ಮಹಿಲಮಾಮೆ ಭಷಂ . . . ಪಂಚ ಪಖಿಂಗಳ್ (ಶಬ್ದಮ. ೨-೦-೨೦೦). [ಸಂ.]

ಭಷಣ (ನಾ). ೧.ನಾಯಿಯಂ ಬೊಗಳುವಿಕೆ. ೨. ನಾಯಿ; ಶ್ವಾನ. [ಸಂ.]

ಭಸಣಿಗೆ 'ಬಯಿಸಣ್ಣಿಗೆ' ನೋ.

ಭಸಿತ (ನಾ). ೧. ಬೂದಿ; ಭಸ್ಮ: "ಭೂತಿಃ, ಭಸಿತಂ, ಭಸ್ಮ, ಕ್ಷಾರಂ, ರಕ್ಷಾ – ಈ ೫ ಬೂದಿ" (ಹಜಾಮು. ೦೩-೬೯) ; ನಾಮೊಮ್ಮೆ ಬೇಂಟೆಯ ಪೋದರೆ ಭಸಿತಕ್ಕಾಹುತಿಯನಿಕ್ಕಿಹೆನೆಂದು ಸಾಸಿರವೇಳಾನೂಱುವರುಷ ಒಬ್ಬ ರಾಜನ ಕೊಂದೆನು (ಪಪಪ. ೧೩). ೨. ಗೋವಿನ ಸಗಣಿಯನ್ನು ಸುಟ್ಟು ಶಿವಭಕ್ತರು ಹಣೆ ಮೊದಲಾದ ಅಂಗಗಳಲ್ಲಿ ಧರಿಸುವ ಭಸ್ಮ: ವಿಭೂತಿ : ಅಂಗಸಂಗತಲಸದ್ಭಸಿತಂ . . . ಫಣಿವಿಭೂಷಣಮಾಗೆ . . . ಸೆಗಟ್ಟುದಾರಮಹೇಶ್ವರಂಗೆ ಭೋಗಮಂ (ಹಂಪಾ. ೦-೨); ಆದ ಖರೋಧದ ನಿಂದೆಯನಾದರಿಸದೆ ಭಸಿತದಿಂದೆ ವಿಪ್ರನಿವಹೆ ತಾಂ ಪೋದುದು ಪಟು ವೇಷಂ (೧೦೪. ೯-೦೦೭) ; ಪಾರ್ವತಿಗೆ ಶಿವನಿಂದೆಯನ್ನು ಕೇಳಿ ಮನಸ್ಸು ನೊಂದಿತು . . . ಭಸಿತದಿಂದ ಈ ವಿಪ್ರನನ್ನು ಹೊಡೆದಳು (೨೪೫. ೦೭). [ಸಂ.]

ಭಸಿತಧರ (ನಾ). ವಿಭೂತಿಯನ್ನು ಧರಿಸಿರುವವನು ; ಪರಮೇಶ್ವರ : ಕರಗೊರಲನು ಬಂದ ಭಸಿತಧರನು ಬಂದ ರಕ್ತಜಟಾಜೂಟ ಬಂದ (೩೦೫೩. ೨೪೪-೦೦). [ಸಂ.]

ಭಸಿತವಿಲೇಪನ (ನಾ). ವಿಭೂತಿಯನ್ನು ಬಳಿದುಕೊಳ್ಳುವುದು : ಭಸ್ಮವನ್ನು ಧರಿಸುವುದು ; ಭಸ್ಮಧಾರಣೆ : ಭಸಿತವಿಲೇಪವಪ್ರಮುಖ ದೆಂತು ಮೃಗೋದ್ಭವಪಂಕಮಾಪು (೪೩೩. ೨೦-೪೦). [ಸಂ.]

ಭಸಿತಾಂಗ (ನಾ). ೧. ವಿಭೂತಿಯ ಲೇಪನವುಳ್ಳ ಶರೀರ ; ಭಸ್ಮವನ್ನು ಧರಿಸಿರುವ ದೇಹ : ಸಂಗಮೇಶ್ವರಂ ಬಸವನ ಚಿತ್ತಮಂ ಪರೀಕ್ಷಿಪನೆಂದು ಕೆಜಿಡೆ ಕಂಡಲಂ . . . ಪುರಿದೊವಲು ಭಸಿತಾಂಗಂ ಸಮುದಾಯಮಾಗಿ ಗಳಗಳನೆ ನಡತಂದು (೨೫೫. ೦೩-೨೦). ೨. ವಿಭೂತಿಯನ್ನು ಮೈಗೆ ಲೇಪಿಸಿಕೊಂಡವನು ; ಶಿವ : ಪಂಪಾಪುರದ ಲಿಂಗ ಭಪಭಸಿತಾಂಗ ಸಂಪ್ರಲ್ಲೇಕ್ಷಣನ ತೋರೋ ಭಕ್ತಕ್ಕಪಾಂಗ (೨೦೫೯. ೬೪ ೪೨೩). [ಸಂ.]

ಭಸಿತೋದ್ಧೂಳಿತ (ಗು). ವಿಭೂತಿಯನ್ನು ಧರಿಸಿದ : ಭಸಿತೋದ್ಧೂಳಿತ ತನುವಿಂ . . . ವಿಶ್ವಾಧಿನಾಥನಿರದೇಳ್ದಂದಂ (೬೪೫. ೨೭-೨೦) ; ಮಾಗೆಯ ದಿಳ್ಳುಗಿಲಾಗಪದಂತಿರೆ ಭಸಿತೋದ್ಧೂಳಿತಲಸಿತಲಲಾಟಂ ಕಣ್ಗೊಳಿಸ (೧೩೭೬. ೧೦-೦೪). [ಸಂ. ಭಸಿತೋದ್ಧೂಳಿತ]

ಭಸ್ಮ (ನಾ). ಚರ್ಮದ ಚೀಲ: ನೆಲದೊಳ್ ಬರ್ದಾಕ್ಷಣದೊಳ್ ಭಸ್ಮಮಾ ಕೊಯ್ದು ಪೊಱಮಟ್ಟೊಂದು ಕಾಸಾರದೊಳ್ ತರಿಸಪ್ರಕ್ಷಾಲನವಂ ಮಾಡಿ . . . ಚಾರಣಮುಖೀಂದ್ರರಂ ಕಂಡಾ (೩೩೩೫. ೨-೦೩೨ ಪ). [ಸಂ. ಭಸ್ಮಾ]

ಭಸ್ಮಿ (ನಾ). ೧. ಚರ್ಮದ ತಿದಿ: ಭಸ್ಮಿಯ ತೆಱನಂತಲಸದೆ ಕಪಳೆಯ ಮೊತ್ತುವ ಜಾವದ ಹೊಲೆಯನ ಪರಿಯಂ ತೊತ್ತಿಸಿ (೪೫೩೫. ೫೮). ೨. ಚರ್ಮದ ಚೀಲ. [ಸಂ.]

ಭಸ್ಮಿಕೆ (ನಾ). ೧. ಚರ್ಮದ ಚೀಲ: ಜಪಳಕವಿ ವನಮದಾನೇಕಪಕ್ಕೆ ವಕ್ಕಾಗೆ ಪೊಳ್ಕು ತಾಂ ಭಸ್ಮಿಕಮಂದಪಸ್ತವಿಱಿಯ ಕೈಪಿಡಿಗೆ ಪೊಸ್ತ ಗುಬ್ಬಿವೊಲುರುಳ್ದು ನಗಿವುದು ನಗದೊಳ್ (೫೩೭೪. ೫-೦೦೦). ೨. ಚರ್ಮದ ತಿದಿ ; ತಿಪ್ಪಿ. ಹಿ. ಚರ್ಮದ ಜಲವಾತ್ರೆ. [ಸಂ. ಭಸ್ಮಿಕಾ]

ಭಸ್ಮಿಕೆ (ನಾ). ೧. = ಭಸ್ಮಿಕ ೨ : ಈ ಭವನುಬಂಬಮಂ ಲೀಲಾಭಸ್ಮಿಕೆಯಂದು ಪೊಯ್ವೊಲ್ ವಿಳ್ಸುವ ಪಸ್ಮಾಭೋಗದಿಪೆರೆದತ್ಯಚರಾಭಂ ತಾನೆನಪ ಕುದಲಿಯಾಪೀಡೆಂ (೫೫೩. ೬-೫೯). ೨. [ಯೋಗ] ಅಷ್ಟವಿಧವಾದ ಕುಂಭಕಗಳಲ್ಲಿ ಒಂದು : ಸೂರ್ಯಭೇದನ ಉಜ್ಜಾಯಿ ಸೀತ್ಕಾರಿ ಸೀತಳ ಭಸ್ತ್ರಿಕೆ ಭ್ರಮರಿ ಮೂರ್ಛೆ ಕೇವಲವೆಂಬ ಅಷ್ಟಕುಂಭಕಪ್ರಕಾರಂಗಳಂ (೩೫೫೪. ೦೩೦). [ಸಂ. ಭಸ್ತ್ರಿಕಾ]

ಭಸ್ಮೆ (ನಾ). ೧. ತಿದಿ ; ತಿಪ್ಪಿ : "ಭಸ್ತ್ರಾ, ಜರ್ಮಪ್ರಸೇವಿಕಾ – ೨ ತಿದಿಯ ಪೆಸರು" (ಸಿಂಕ್ಷ.೩೩. ೩೦೩). ೨. ಚರ್ಮದ ಚೀಲ. [ಸಂ. ಭಸ್ತ್ರಾ]

ಭಸ್ಮ (ನಾ).೧.=ಭಸಿತ ೧: "ಭೂತಿಃ, ಭಸಿತಂ, ಭಸ್ಮ, ಕ್ಷಾರಂ, ರಕ್ಷಾ–ಈ ೫ ಬೂದಿ" (ಹಜಾಮು. ೦೩-೬೯); ಅಯ್ದುಂದೇ ಕಾವಣ ಸುಟ್ಟ ಭಸ್ಮ ಮೈಯಲ್ಲಿ ಮುಖಿವುದಲೆ ವಿಕಯ್ಯಾ (೨೫೫. ೫೩೮). ೨.=ಭಸಿತ ೨: ಭಸ್ಮ ಪುತ್ಥ ರುದ್ರಾಕ್ಷಿಗಳನ್ನು ಧರಿಸುವುದರಲ್ಲಿ ಅವರಿಗೆ ಒಂದು ಆನಂದ (೬೫೫). ೩. [ವೈದ್ಯಶಾ] ಸುವರ್ಣ ಮೊದಲಾದ ಧಾತುಗಳನ್ನು ಪುಟಕ್ಕೆ ಹಾಕಿ ತಯಾರು ಮಾಡುವ ಒಂದು ಬಗೆಯ ರಾಸಾಯನಿಕ ಪುಡಿ.—ಔಷಧ: ಹತ್ತಿಕಾಯಿರಸ ಅರ್ಧಸೇರಿನಲ್ಲಿ ಬೀಗಾರದ ಭಸ್ಮ ಗದ್ಯಾಣ ೩ ತೊಕ, ಸೌಶೀಜೀಜ ಗ ೨ ತೊಕ, ಸಹ ಕೂಡಿಸಿ ಕೊಡಲು ಮೂತ್ರವಿಸರ್ಜನೆಯಾಗುವುದು (೪೪೬. ೫೫. ೪೭೫); ಆಗ ಒಗ್ಗಾಲಿ ಒಂದು ಭಸ್ಮವನ್ನು ಎಲ್ಲರಿಗೂ ಒಂದೊಂದು ಸಾಸಿವೆಯ ಕಾಳಿನಷ್ಟು ಪ್ರಮಾಣದಲ್ಲಿ ತನ್ನ ಸಂಗಡಿಗರಿಗೆ ಕೊಟ್ಟು . . . ಹೇಳಿದ್ದು–ಆ ಮಾದಿಕನ ತಿವಿಗೆ ಬಾಣದಂತೆ ಹೋಗಿ ಸುಟ್ಟಿತು (೪೦೩೫. ೦೭).

ಭಸ್ಮವಾಗು=ಸುಟ್ಟು ಬೂದಿಯಾಗು ; ಸಂಪೂರ್ಣವಾಗಿ ಸುಟ್ಟು ಹೋಗು ; ನಾಶವಾಗು : ಇದ್ದಿದ್ದದೃಶ್ಯವಾಗೆಸೆ ಭಸ್ಮವಾಗೆನೇ, ಇದ್ದ ನೆಲನೊಳಕೊಳ್ಳದೆ ಜೀರ್ಣವಾಗೆನೇ (೬೫೫. ೫೮. ೨೦-೩) ; ಉರಿ ಪತ್ತಿತಂ ಯಮಭಟ್ಟರನ್ನೆಣ್ಣಗಳ್ ಮಯಿಯುಂ ಭಸ್ಮವಾಯಿತ್ತು. (೨೫೪೫.೫೬-೨೪); ಸುಟ್ಟ ಸಗಣಿ ಕುದ್ದವಾಗಿ ಭಸ್ಮವಾಗುತ್ತದೆ (೪೦೫.೦೦. ೦೬-೦). [ಸಂ. ಭಸ್ಮನ್]

ಭಸ್ಮಕ (ನಾ). ೧. ಜಠರಾಗ್ನಿಯಲ್ಲಿ ತೀವ್ರವಾಗುವುದರಿಂದ ತಿಂದು ದೆಲ್ಲ ಭಸ್ಮವಾಗಿ, ಯಾವಾಗಲೂ ಅತಿಯಾದ ಹಸಿವಾಗುವ ಮತ್ತು ತಿಂದ ಆಹಾರ ಮೈಗೆ ಹತ್ತದ ಒಂದು ಬಗೆಯ ವ್ಯಾಧಿ: ಭಸ್ಮಕರೋಗ ಮಂನಿಗಾವರಿಸೆ ಕವಟದ ತಪಸ ಸಾಡುಸುವಶೆಂದು ಬಿಸುಸುಯ್ದ (೫೮೦೫. ೨-೨೦); ಅಂತವಗೆ ದುಃಕರ್ಮೋದಯದಿಂದ ಎರಿತಂದು ಭಸ್ಮಕವ್ಯಾಧಿ ಭರದಿಂದಡಸಲು ನಾಲ್ಕುವರ್ಣದೊಳಂಡು ತಿರುಗುತಿರ್ದನು ಲೋಕದಲಿ (೫೮೦೦೦. ೬-೨೬). ೨. ಒಂದು ಬಗೆಯ ಕಣ್ಣಿನ ವ್ಯಾಧಿ. [ಸಂ.]

ಭಸ್ಮಗಂಟಿಕೆ (ನಾ). ವಿಭೂತಿಯಿರುವ ಜೋಳಿಗೆ (?): ಶಿರದಲ್ಲಿ ಜಟಾಬಂಧವಿಲ್ಲ ಕಕ್ಷೆಯಲ್ಲಿ ಭಸ್ಮಗಂಟಿಕೆ [ಜಾಂಪ. ಗುಂಡಿಗೆ] ಇಲ್ಲ (೫೫೪೫೫. ೦೫೫-೬೬೫). [<ಸಂ. ಭಸ್ಮಗ್ರಂಥಿಕಾ]

ಭಸ್ಮಗಂಧಿನಿ (ನಾ). ಒಂದು ಬಗೆಯ ಸಸ್ಯ ಮತ್ತು ಅದರಿಂದ ತಯಾರಿಸುವ ಪರಿಮಳದ್ರವ್ಯ : "ದ್ವಿಜಾ . . . ಭಸ್ಮಗಂಧಿನಿ–ಓ ರೇಣುಕ ಎಂಬುವ ಗ್ರಂಥಿದ್ರವ್ಯದ ಹೆಸರು" (ಸಿಂಕ್ಷ.೩೩. ೦೩೦). [ಸಂ. ಭಸ್ಮಗಂಧಿನೀ]

ಭಸ್ಮಧಾರಿ (ನಾ). ವಿಭೂತಿಯನ್ನು ಧರಿಸಿರುವವನು: ಕೂಡಲಸಂಗಮ ದೇವ ಭಸ್ಮಧಾರಿಯಾದ (೪೪೦. ೬೩೦). [ಸಂ. ಭಸ್ಮಧಾರಿನ್]

ಭಸ್ಮಪುಟ (ನಾ). [ವೈದ್ಯಶಾ] ಸುವರ್ಣ ಮೊದಲಾದುವುಗಳ ಭಸ್ಮವನ್ನು ಮಾಡುವುದಕ್ಕಾಗಿ ಅಗ್ನಿಯನ್ನು ಆಳವಡಿಸುವುದು: ವೈದ್ಯರು ಸುವರ್ಣಭಸ್ಮವನ್ನು ತಯಾರಿಸಲು ಭಸ್ಮಪುಟ ಹಾಕಿದ್ದಾರೆ (೬೫೫). [ಸಂ.]

ಭಸ್ಮರಸ (ನಾ). [ವೈದ್ಯಶಾ] ಪಾದರಸದ ಭಸ್ಮ.—ಪುಡಿ (?): ಪೊಸತಪ್ಪ ಸುಣ್ಣಮಂ ಸೋದಿಸಿ ಕಿಱಿದಂ ಕೊಂಡು ಭಸ್ಮರಸದೊಳಿದಂ ಯೋಜಿಸಿ (೩೫೫. ೦೫-೬). 'ರಸಭಸ್ಮ' ಪರಾ. [ಸಂ.]

ಭಸ್ಮಸ್ನಾನ (ನಾ). ವಿಭೂತಿಯು ಲೇಪನ : ಲಿಂಗಧ್ಯಾನದಿಂದಲಿ ಭಸ್ಮಸ್ನಾನವ ಮಾಡುವುದು ಜ್ಞಾನಪಾದೋದಕವು (ಪ್ರಾಣ. ೬೭-೩೬). 'ಆಗ್ನೇಯ ಸ್ನಾನ' ಪರಾ. [ಸಂ.]

ಭಸ್ಮಾಭ್ಯಂಗ (ನಾ). ವಿಭೂತಿಯನ್ನು ಲೇಪಿಸಿಕೊಂಡಿರುವವನು; ಶಿವ: ಭಸ್ಮಾಭ್ಯಂಗ ಅರಿಲಿಂಗ ಸುಜನಸಂಗ . . . ಪಾರ್ವತೀಶ ಪಾಲಿಪುದನ್ನ (ತ್ರಿಕಣ.೦೬-೦). [ಸಂ.]

ಭಸ್ಮಾವಶೇಷ (ನಾ). ೧. ಉಳಿದಿರುವ ಬೂದಿ: ಮೇಣನ್ನ ಭುಜವಿಕ್ರಮ ತೀರ್ಥದಲಿ ನಿನ್ನ ಭಸ್ಮಾವಶೇಷಮಂ ತೂಳೆಯಲೆಂದಿರ್ದನ್ನನಾ ದೋಳ್ಬಲದಳ್ ತಿಯ! (ಕಬ್ರಾಅ. ೭೯-೨೦೩). ೨. ಭಸ್ಮವಾಗಿ ಮಾತ್ರ ಉಳಿದಿರುವುದು: ಮಹಾತ್ಮರ ದೇಹ ಭಸ್ಮಾವಶೇಷವಾಯಿತು (ಕೂಡ). [ಸಂ.]

ಭಸ್ಮೀಕರಣ (ನಾ). ಬೂದಿ ಮಾಡುವುದು ; ಸುಟ್ಟು ಹಾಳುಮಾಡುವುದು: ಮನುಷ್ಯರ ಮಾಡಲಿ, ದೇಶದ ಆಸ್ತಿಯಾದ ವಾಹನಗಳ ಭಸ್ಮೀಕರಣ ಮಾಡಬಹುದು? (ಕೂಡ). [ಸಂ.]

ಭಸ್ಮೀಕರಿಸು (ಕ್ರಿ). ಸುಟ್ಟುಹಾಕು ; ನಾಶ ಮಾಡು : ಹಿಂದಣ ಹಿತತನದಿಂದೀ ವಿರಹದೊಳೊಂದಿದ ಬಲ್ಗಿಚ್ಚಿಗೆ ವೇದನೆಯಂ ತಂದಿಪ್ಪಂ ಭಸ್ಮೀಕರಿಸದೆ ತಾಂ ನಿರ್ವೆರವಿಮಹುದಲ್ಲ (ಜಯಾಕಾ. ೯-೩೦). [ಭಸ್ಮೀಕರಣ+—ಇಸು]

ಭಸ್ಮೋದಕ (ನಾ). ಭಸ್ಮದಿಂದ ಕೂಡಿರುವ ಉದಕಃ ವಿಭೂತಿಯನ್ನು ಕದಡಿರುವ ನೀರು,-ಜಲ; ವಲಿದು ಭಸ್ಮೋದಕವ ಮಂತ್ರವಾರಿದು . . . ಶಾಂತಿಯಪ್ಪವರಿಯೂ ಜಲದ ಪೋಪಾತ್ರೆಯಿಂ (ಪಪಪೋ. ೦೯-೧೦). [ಸಂ.]

ಭಸ್ಮೋದ್ಧೂಳ (ನಾ). ವಿಭೂತಿಲೇಪನ ಮಾಡಿಕೊಂಡಿರುವವನು : ಭಸ್ಮಧಾರಿ : ಮಹಾವೀರಭಟರು ಭಸ್ಮೋದ್ಧೂಳರಸವ ಜಡಿಯರ್ಭರ್ಗಳು (ಪಚ್ಚಪ್ಪ. ೯-೬-೦೦). [ಸಂ. ಭಸ್ಮೋದ್ಧೂಲ]

ಭಸ್ಮೋದ್ಧೂಳಿತ (ಗು). ವಿಭೂತಿಯನ್ನು ಪಡೆದುಕೊಂಡ,—ಲೇಪನ ಮಾಡಿಕೊಂಡ : ಪಾದಪ್ರಕ್ಷಾಳನಂಗೆಯ್ದು ಭಸ್ಮೋದ್ಧೂಳಿತಗಾತ್ರನಾಗಿ ದೇವತಾಸಮಾರಾಧನೆಗೆ ಕಳ್ಪಿರ್ದ್ (ಹಂಕಕಾ. ೭೦-೩). [ಸಂ. ಭಸ್ಮೋದ್ಧೂಲಿತ]

ಭಸ್ಸುಟಿ (ನಾ). (?) : ಕಡುಭಯಂಕರವೆಸರು ಭಸ್ಸುಟಿ[ಪಾಣಾಂ. ದೊಸರಿ, ಭಸ್ಮಟ, ಭಸ್ಸುಟಿ] ಕಡೆಗೆ ರಕ್ಕಸಿವದಿರುಂ ಕಳುಗುಡುಪಿಂಗಳಾಯನುತ ತಿವಿದನು ಮಾತ್ಸ್ಯ ರಕ್ಕಸನ (ತೊಡಾ. ೬-೩೭-೨೨). [?]

ಭಳರಿಯೂರ್ (ನಾ). ಒಂದು ಊರಿನ ಹೆಸರು: ಅಸ್ಮಾತ್ಸದೃಮಂ ಭಳರಿಯೂರಂ ಬನ್ದಪಿಳಕಿದ್ಪಾಯಂ ಚಿಕ್ಕೆಃಶ್ವತ್ಥಕ್ಕೆ ಈಶಾನ್ಯದ ಪೊಳಲುಂ ಪದಿಕ್ಕೋಳಂ ಭಕ್ತವುಂ ವಿಸಲುಂ ಬಳಿವಕ್ತಮುಂ ಸಲ್ವದು (ಎಶ. III, ಕಂಚಿ. ೦೩೩-೪: ೪೧೨). [? +ಊರ್]

ಭಳಾರ 'ಭಟಾರ' ನೋ.

ಭಳಾರಿ 'ಭಟಾರಿ' ನೋ.

ಭಳಿರೆ (ಅ). ಮೆಚ್ಚಿಗೆಯನ್ನು ಸೂಚಿಸುವ ಒಂದು ಭಾವಸೂಚಕ ಕಾವ್ಯಲಯ : "ಅರರೆ ಧಣಾ ಭಾವು ಭಳಿರೇ ಧರುರೇ . . . ಸುಂಪುರೆಯೆನೆ ಕೊಂಡಾಟದ ನುಡಿ" (ಜಾಕಥ. ೫೬); ಗಾಯರೀರು ಪಾಪಕರಿಗೊಡವೆಯು ಬೀಯಮಾಡಿದು ಭಳಿರೆ ಭಾಮೆಂದಾಯತಿಕೆ ರಾಪವೆನ್ನುತುಜುಬಿದನು ಕಲಿ ಭೀಮ (ಕುಡ್ಮಕ್ರೀ. ೫೦. ೨೮೩) ; ಧರಣಿಪಾಲಕ ಕಂಡು ಮೆಚ್ಚುತ ಪರವ ನೀವೆನು ಭಳಿರೆ ಮೆಚ್ಚಿದೆನರುಸಿ ವೇಷನಲುಂ (ಶಾಣಾ. ೦-೨೬). 'ಭಲರೆ' ಪರಾ.

ಭಳಿಭಳಿರೆ (ದ್ವಿರುಕ್ತಿ): ಫಳಿಲುಫಳಿಲುಫಳಿಲಂ ಗೆಜ್ಜೆಯ ನಾದ ಭಳಭಳಿರೆ ನಿಮ್ಮ ಹೊಳೆವ ಬೆರಳುಂಗುರ ಕಿಣಕಿಣಿನಾದ (ಪ್ರಕಂ. ೦-೦೧೦-೦). [?]

ಭಳಿರಿ 'ಭಟಾರಿ' ನೋ.

ಭಳೂರ 'ಭಟಾರ' ನೋ.

ಭಾಂಕರಿಸು (ಕ್ರಿ). ಭಾಂ, ಭಾಂ ಎಂಬ ಧ್ವನಿಯನ್ನು ಮಳಿಡು : ಗದ್ದಲ ಮಾಡು ; ಕೋಲಾಹಲ ಮಾಡು : ಸನಗೆ ನೆಗಡಿ ಹಿಡಿದಾಗ ಭಾಂಕರಿಸುವ ಸೀನುಗಳ ಲೆಕ್ಕ ಇದು ! (ಕಂಡು. ೬೬). [ಭಾಂಕರಣ್ + — ಇಸು]

ಭಾಂಕಾರ (ನಾ). ಭಾಂ, ಭಾಂ ಎಂಬ ಧ್ವನಿ ; ಗದಾಟಿ ; ಗದ್ದಲ; ಕೋಲಾಹಲ : ಆ ಪ್ರಯಾಣಭೇರೀಭಾಂಕಾರಮೆಂಬ ಹೂಂಕಾರದೊಳೆ . . . ಪುರಬಹಿರ್ವಣದ ಪರಿಸರಪ್ರದೇಶದೊಳ್ ಎಡದೊಳ್ಬಿಂಗಲಿ ಮುಟ್ಟು ಮೇಲ್ದುಬ್ಬದುದು (ಅಕಂಪ್ರ. ೦೩-೭೩ ಪ); ಆಗಳ್ ಶಕ್ರುಹನ ಸೇನೆಯೊಳ್ ಹಾಹಾಕಾರಂ ಪರಬಲದೊಳ್ ಭಾಂಕಾರಮುಂ ಪೆರ್ಚಲೊದಂ (ಕಾಪಪ್ರ. ೧೩೦-೫೩). [ಸಂ.]

ಭಾಂಕಾರಂಗುಡು (ಕ್ರಿ). ಭಾಂಕಾರ ಮಾಡು; ಅರ್ಭಟಿಸು; ಕೋಲಾಹಲ ಮಾಡು : ಸಂಗರಾರ್ಜುನಂ ಸಿದ್ಧನಂತಾ ಸಿದ್ಧಕ್ಷೇತ್ರಮಂ ಪುಗುಕಂದಪದೆಂ ತಪ್ಪದೆಂದೊಡೆ . . . ಭೈರಪನಂತೆ ಭಾಂಕಾರಂಗುಡುತಿರ್ಪ್ ಸಾಧಕರಿಂ ಗೋದಾಮಯಂತೆ ಬೆಗೆದ ಬ್ಬಣ್ಣಮಪ್ಪ ರಣಚಿಚ್ಚಗರಿಂ . . . ಅತಿ ಭಯಂಕರಾಕಾರಮಪ್ಪುದು (ಅಕ್ಷಾ. ೩೫೯ ಕೂಡ್ಲ೪). [ಭಾಂಕಾರ + ಕುಡು, (<ಕೊಡು,)]

ಭಾಂಕಿ (ನಾ). ಕಹಳೆಯಂತಹ ಒಂದು ಬಗೆಯ ವಾದ್ಯ : ನಗಾರಿ ಭಾಂಕಿ ತುತ್ತೂರಿ ತಂಬಿ ಜಾಗಟೆ ಇವುಗಳ ವಾದ್ಯಗಳೊಡನೆ ಐದಣೆ (ಐದು ಕಲಶಗಳು) ಮೆರವಣಿಗೆಯಾಗುತ್ತವೆ (ಪ್ರಾಚಾ. ೩೩); ದಾಸನ ಸರಕುಗಳು . . . ಕಡಾಸು, ಬಸವಾಸಿ, ತುತ್ತೂರಿ, ಭಾಂಕಿ, ಹೃದಯದಲ್ಲಿ ಆಂಜನೇಯನ ವಿಗ್ರಹ (ಗರುಚಾ. ೦೫ ಬೀಚಿ); ದಾಸಯ್ಯನೂ ಅವನ ನಾಯ್ಕಾರು ಜನ ಅನುಚರರೂ ನಗಾರಿ, ಭಾಂಕಿ, ತುತ್ತೂರಿ, ಶಂಖ, ಜಾಗಟೆ ಧ್ವನಿಗಳಿಂದ . . . ಧ್ವನಿಮಾಡುತ್ತಾ ಬರುವರು (ಪ್ರಾಕ. ೯). [←ಹಿಂ. ಬಾಂಕಿಯಾ ; ಮರಾ. ಬಾಂಕಾ]

ಭಾಂಗಣ (ನಾ). ನಕ್ಷತ್ರಗಳು ಇರುವ ಸ್ಥಳ.— ಪ್ರದೇಶ ; ಆಕಾಶ : ಮಂಗಲಾಕ್ಷತೆಯನಣ್ಣನಿಗಿಟ್ಟು . . . ಭಾಂಗಣದೊಳು ಪೋದರಣ್ಣಾರೊಡನೆ ಸಿಂಧುಗಂಗಾದೇವಿಯರತ್ತ (ಪಚ. ೧೪-೨೯). [ಸಂ.]

ಭಾಂಗಿ, ಬಾಂಗಿ (ನಾ). ೧. ಅಂಚೆಯ ಮೂಲಕ ಕಳುಹಿಸುವ ಗಂಟು : ಪಾರ್ಸಲ್ಲು : ಒಂದು ದಿನ ಆ ಜಾಲಿಕೆಗೆ ಅಂಚೆಯಲ್ಲಿ ಭಾಂಗಿ ಬಂದಿತು (ಪಚಿತ್ರ. II, ೬೫); ಕರುಣಾಕರತ್ನಮ್ಮನವರ ವಿಳಾಸಕ್ಕೆ ಒಂದು ರಿಜಿಸ್ಟರ್ ಭಾಂಗಿ ಬಂದಿತು (ಹಂಚಿ. ೬೦) ; ಯುದ್ಧಕಾಲಗಳಲ್ಲಿ ತಮಗೆ ಬರತಕ್ಕ ಭದ್ರವಾಗಿರುವ ಭಾಂಗಿಗಳೊಳಗೆ ಅಪಾಯಕರವಾದ ಸಿಡಿಮದ್ದಿನ ಗುಂಡುಗಳು . . . ಇರುವವೋ ಎಂಬುದನ್ನೂ ಎಕ್ಸರೇ ಮೂಲಕ ಪರೀಕ್ಷಿಸಿ ನೋಡುವರು (ಅಕ್ಷಕ. ೩೩). ೨. ಮೂಟೆ ; ಹೊರೆ : ಇಷ್ಟು ಸಾಮಗ್ರಿಗಳನ್ನೂ . . . ಕಟ್ಟಿದಾಗ ಸುಮಾರು ನೂರು ದೊಡ್ಡ ಭಾಂಗಿಗಳಾದುವು (ಪಚಿತ್ರ. ೦೩೩). ಬಾಂಗಿ : ೧. ಈಗ ಹಾನಿ ಅಡ್ಡಕ್ಕಸ ಕಡೆಯಿಂದ ಪುಟ್ಟದೊಂದು ಬಾಂಗಿ ಬಂತು (ಪಚಿತ್ರ. ೧೩). [←ಹಿಂ. ಬಂಗೀ ; ಮರಾ. ಬಂಗೀ, ಬಹಂಗೀ]

ಭಾಂಗೀನ (ನಾ). ಸೆಣಬಿನ ಹೊಲ : "ಭಂಗ್ಯಂ. ಭಾಂಗೀನಂ — ಈ ೨ ಸೆಣಬಿನ ಕಿಯ್" (ಮಣಮು. ೩೭-೪). [ಸಂ.]

ಭಾಂಡ (ನಾ). ೧. ವಸ್ತುಗಳನ್ನು ತುಂಬಲು ಮತ್ತು ಅಡಿಗೆ, ಊಟ ಮೊದಲಾದ ಎಲ್ಲ ರೀತಿಯ ಕೆಲಸಗಳಿಗೆ ಉಪಯೋಗಿಸುವ ಮಣ್ಣಾ, ಲೋಹ, ಮರ ಮುಂತಾದುವುಗಳ ಪಾತ್ರೆ,— ಭಾಜನ : "ಸ್ಥಾಲಿ ಭಾಂಡಂ ಮಾಡಕೆಯೆಂದನಿಕ್ಕುಂ" (ಮಂಗಣಾ. ೬೨-೩೨) ; ಚಂಡಾಲ

ಭಾಂಡದಿಂ ಭೂಮಿವತಿತಮಾದಂಬುವುಂ ಪವಿತ್ರಮೆಂಬುದುಂಟು (ಕಾದಂಬ. ೬೫೩); ಪಾಕಮಾಡುವ ಭಾಂಡ ಸೊಣಗನ ಹೊವಿಗೆಯಯ್ಯಾ (ಚಾಸ. ೬೮೪); ಭಾಂಡ ತುಂಬಿತು ಮತ್ತೆ ನದಿಯುತ ಚಂಡಹೃದಯನ ನುಡಿಯ ವಿಷವನು ಏಂಡಿಸಿದೆಲಾಯೆನುತ ಕೊಂಡಾಡಿದನು ಕೋವಲೆಯ (ಕರ್ಣಾ. ೬೦೬ · ೦೭-೧೦). ೨. ಸಲಕರಣೆ ; ಉಪಕರಣ. ೩. ಒಂದು ಬಗೆಯ ವಾದ್ಯ. ೪. ಕುದುರೆಯ ಸಜ್ಜು.—ಅಲಂಕಾರ : "ಭಾಂಡಂ — ೧ ಕುದುರೆಗೆ ಅಲಂಕರಿಸುವ ವಡಿವೆ" (ನಿಘಂ೦೩. ೭೮೫). ೫. ಒಡವೆ ; ಆಭರಣ. ೬. ಆಸಲು ; ಮೂಲಧನ. ೭. ನದಿಯ ಪಾತ್ರ. ೮. ಸಾಮಾನು, ಸರಂಜಾಮು ಮೊದಲಾದ ಸಾಮಗ್ರಿ. ೯. ಸರಕುಗಳ ಗಂಟು,—ಮೂಟೆ. ೧೦. ವ್ಯಾಪಾರಿಗಳ ಸರಕು,—ದಾಸ್ತಾನು. ೧೧. ಭಂಡಾರ; ನಿಧಿ. ೧೨. ಹಾಸ್ಯ; ನಕಲಿ.

ಭಾಂಡ ಭಾಜನ = ಪಾತ್ರೆಪರಟೆ : ಭಾಂಡಭಾಜನ ಶುದ್ಧವಲ್ಲಿದವರ ಭಕ್ತಿ ಹೊದ ಮಡಕೆಯ ಹೊಜ್ಜೆ ತೊಳೆದುತ ಕೂತಲಸೆಂಗಮದೇವಾ (ಬಸವ. ೦೦೪). [ಸಂ.]

ಭಾಂಡಕ (ನಾ). ೧. ಸಣ್ಣಪಾತ್ರೆ. ೨. [ನಾಟ್ಯ] ನೃತ್ಯದ ಒಂದು ಭಂಗಿ (?) : ಭರತಮಾತಂಗದ ತಿರುಪು ಭಾಂಡ [ಜಾನಂ. ಡು]ಕ ಕಾಹಳರ [ದ್ಧ]ಪರಿಯಿಂದಾಡುತಿರಲು . . . ಸುರಿದರ್ಪುಮಳೆಯ ನಿರ್ಜರರು (ಕೃಷ್ಣ. ೦-೬೮೩). [ಸಂ. ?]

ಭಾಂಡಕರ್ಪೂರ (ನಾ). ಒಂದು ಬಗೆಯ ಕರ್ಪೂರ : ವಿಪ್ರನು ರಾಯನು ದೊರೆಯ ಪೆಸರಿನಲ್ಲಿ ಒಂದು ಸುಳ್ಳುರಾಜಸವನ್ನು ಸೃಷ್ಟಿಸಿ ಆದರ ಬಲದಿಂದ ದಳವಾಯಿಯನ್ನು ಬಂಧಿಸಿ, ಅವನಿಗೆ ಭಾಂಡಕರ್ಪೂರದ ಶಿಕ್ಷೆಯನ್ನು ವಿಧಿಸುವನು (ಸಂಗ್ರ. ೦೦೯); ರಾಜನು . . . ಅವರನ್ನು ಕರೆಯಿಸಿ, ಕಣ್ಣಿಗೆ ಭಾಂಡಕರ್ಪೂರವನ್ನು ಕಟ್ಟಿಸಿ ಕಣ್ಣುಗಳನ್ನು ಕೀಳಿಸಿ . . . ಕಠೋರವಾಗಿ ವಂಡಿಸಿ ಬಿಟ್ಟರು (ಚತ್ರ. ೪೮). [ಭಾಂಡ್ + ಕರ್ಪೂರ]

ಭಾಂಡವಲ 'ಬಂಡವಾಳ' ನೋ.

ಭಾಂಡವಲದಾರ 'ಬುಡವಾಳದಾರ' ನೋ.

ಭಾಂಡವಲಶಾಹಿ 'ಬಂಡವಾಳಶಾಹಿ' ನೋ.

ಭಾಂಡವಲು 'ಬಂಡವಾಳ' ನೋ.

ಭಾಂಡವಳು 'ಬಂಡವಾಳ' ನೋ.

ಭಾಂಡಸಂಕರ (ನಾ). ಪಾತ್ರೆಗಳನ್ನು ಅಪವಿತ್ರಗೊಳಿಸುವುದು; ಮಡಿ ಪಾತ್ರೆಗಳನ್ನು ಮೈಲಿಗೆ ಮಾಡುವುದು : ಅದು ಗಂಡು ನೆರೆದುಕೊಂಡು ತುಡುಗುಣಿಯಾಗಿ ಭಾಂಡಸಂಕರಂಗೆಯ್ಯಾತ್ಮಿರ್ಪದುಂ (ಪಂಚತಂ. ೨೬೦-೨೦). [ಸಂ.]

ಭಾಂಡಾಗಾರ (ನಾ). ಉಗ್ರಾಣ; ಭಂಡಾರ; ಕೋಶ : ಶ್ರೀಗಂ ರಾಜ್ಯ ವಿಭೂತಿಗಂ ವೆರೆಯನಿಪ್ಪುತ್ಪಿತ್ಪೀಯಮಾಣಕ್ಕಭಾಂಡಾಗಾರಂ ಮೊದಲಾಗೆ ಮಿಕ್ಕ ಬೆಸನಂ ತೈ ಳೋಕ್ಯವಲ್ಲಂ ಜಯಶ್ರೀಗೇಪಂ ಕಡೆ (ಪಾಂಡೀಕ. ೩-೦೨; 1047). [ಸಂ.]

ಭಾಂಡಾರ (ನಾ).=ಭಾಂಡಾಗಾರ : ಜಾರು ತನ್ನ ಸೆರಗಿನ ತುದಿಯಿಂದ ಭಾಂಡಾರದ ಕೀಲಿಯ ಕೈಗೊಂಬಲನ್ನು ಬಿಚ್ಚಿ. . . ಒಗೆದು ಬಿಚ್ಚಳು (ಇತ್ಯ. ೫೬೩); ಮಹಾನುಭಾವರಾದ ನಮ್ಮ ಪೂರ್ವಜರೂ, ಪುರಾಣದ ವಿಭೂತಿಗಳೂ ಯಾವ ಕಕ್ಷಸಾರದ ಭಾಂಡಾರವಾಗಿದ್ದರೋ, ಅದರ ಲವಲೇಶವನ್ನಾದರೂ ಉಳಿಸಿಕೊಳ್ಳಲಾರದ ಅವಿವೇಕಿಗಳೆಂದು ನಮ್ಮನ್ನು ತೆಗಳುವುದಕ್ಕೆ ಪ್ರತಿಯೊಬ್ಬ ಪ್ರವಚನಕಾರನೂ ಸಮಯ ಸೋಡುತ್ತಿರುತ್ತಾನೆ (ಪಲ್ಲಕ್ಕ. ೧೦). [ಸಂ.]

ಭಾಂಡಿ 'ಭಾಂಡೆ' ನೋ.

ಭಾಂಡಿಕ್ಕ₁ (ಗು). ನಗೆಗೀಡಾದ ; ಹಾಸ್ಯಾಸ್ಪದವಾದ : ಸುರಪಗಾ ಮುನೀಂದನ ಪಕ್ಷಿಗಳುವೆ ಭಾಂಡಿಕದೇಹಮಾಯಿತು (ಭಾಷಾಂ. ೬-೦೪); P ಇಂದ್ರನು ಗೌತಮಮುನಿಯ ಶಾಪದಿಂದ ವೃಷಣರಹಿತನಾದ ನೆಂದು ಪುರಾಣಕಥೆಯಿದೆ. [<ಸಂ. ಭಂಡ]

ಭಾಂಡಿಕ್ಕ₂ (ನಾ). ಕ್ಷೌರಿಕ ; ನಾಯಿಂದ ; ನಾಪಿತ. [ಸಂ.]

ಭಾಂಡೀರ (ನಾ).೧. ಆಲ, ಗೋಣಿ ಮುಂತಾದ ಜಾತಿಗೆ ಸೇರಿದ ಒಂದು ಬಗೆಯ ಮರ : ಪಣ್ಣಳ ಕೆಂಪಿಂ ಸೊಗಯಿಸಿತುದ್ದಂಡಕಾಂಡಭಾಂಡೀರ ವಟಂ (ಪಾರ್ಶ್ವ. ೧-೧೩); ಆ ಭಾಂಡೀರಮೆಂಬ ಮಹಾವಟವಿಟಪಿಯೊಳ್ (ಪಾರ್ಶ್ವ. ೧-೧೩ ಟಿ). ೨. ಒಂದು ಪ್ರಾಚೀನ ಭಾಷೆ : ಸಂಸ್ಕೃತ ಪ್ರಾಕೃತ ವೈಶಾಚಿಕ ಮಾಗಧ ಶೌರಸೇನ ಭಾಂಡೀರ ಅವಭ್ರಂಶ ವೈಕೃತ ಶುದ್ಧ ಮಿಶ್ರಾದಿ ಭಾಷಾಭಿದಗಳಿಂ ಪೇಳ್ದ ಲಾಕ್ಷಣಿಕರಪ್ಪ ಕವಿಗಳಿಂ (ಪಾರ್ಶ್ವ. ೨೯). [ಸಂ.]

ಭಾಂಡು (ನಾ). (ಉಕ) (ಕಡಮೆ ಬೆಲೆಯ) ನೂಲಿನ ಸೀರೆ : ಬರಿಯು 'ಭಾಂಡು' ಗಳೇ ನಿತ್ಯದ ಉಡಿಗೆಯಾಗಿದ್ದ ಅವರು ಅಂದು ಪೈಸೂರು ಮಾದರಿಯ ಸೀರೆಯೊಂದನ್ನುಟ್ಟು ಅದಕ್ಕನುರೂಪವಾದ ಕುಪ್ಪಸವನ್ನು ತೊಟ್ಟರು (ಸಮಾ. ೨೫೬); ಬೆಳೆದ ದಂಗಳು ಲಕ್ಷಣವಾಗಿ ಕಾಣಬೇಕೆಂದು ಭಾಗೀರಥಿ ತನ್ನ ಜೀವವನ್ನೇ ಒತ್ತೆ ಇಟ್ಟು ಒಳ್ಳೆಯ ಭಾಂಡನ್ನು ಉಡಿಸಿದರೆ ಅದಕ್ಕೊಂದು ಬೇರೆ ಭಾಷ್ಯವನ್ನೇ ಬರೆಯುತ್ತಿತ್ತು ಸಮಾಜದ ಜನ (ಕಾಡ. ೦೦೬); ನಮ್ಮ ಅವ್ವನಿಗೆ ಇರಲೆಂದು. ರಂಗಕ್ಕ ಎರಡು ಭಾಂಡು ಕೊಡಿಸಿ ಕೊಟ್ಟರು (ಪಾಸಕ. II, ೪೩). [← ಮರಾ. ಭಾಂಡ್]

ಭಾಂಡೆ, ಭಾಂಡಿ(ನಾ). (ಉಕ) ಪಾತ್ರೆ ; ಭಾಜನ : ಭಾಂಡೆಗಳು ಒಂದಕ್ಕೊಂದು ಹೊಂದಿಕೆಯಾಗುವಂತಹ ಬೇರೆ ಬೇರೆ ಗಾತ್ರದವು ಇರಬೇಕು (ಅಮಾ. ೫೩). **ಭಾಂಡಿ** : ಬಾಯಿಯು ಒಮ್ಮೆ ಪಾತ್ರೆ ತಿಕ್ಕಿ ಹೋದಳು. ಎರಡನೆಯ ಸಲ ಬಂದು ಭಾಂಡಿ ತಿಕ್ಕಲು ಬರಲಾರೆ ಎಂದು ಪೇಳಿ ಹೋದಳು (ಕ್ಷ೦೫. ೨೫೬) ; ಹತ್ತು ಹೊಡೆದರೂ ಭಾಂಡಿ ತಿಕ್ಕಾಕ ಬರೂ ಹಾಗಿಲ್ಲ (ಕಾಳಮು. ೦೪) ; ಸತ್ಯನಾರಾಯಣನನ್ನು ಕೂಡಿಸಿ ಎರಡೂ ಕಡೆಗೆ ತುಪ್ಪದ ದೀಪಗಳನ್ನು ಹಚ್ಚಿದ್ದಾರೆ. ಬೆಳ್ಳಿಯ ಭಾಂಡಿಗಳು ಎಲ್ಲ ಕಡೆಗೆ ಲಟಲಟಿಸುತ್ತವೆ (ಇತ್ಯ. ೪೫). [←ದುರಾ. ಭಾಂಡೇ. / ಸಂ. ಭಾಂಡ]

ಭಾಕರಿ 'ಭಕ್ಕರಿ' ನೋ.

ಭಾಕ್ಕ (ಗು). ೧. ತಿನ್ನಲು ಯೋಗ್ಯವಾದ ; ತಿನ್ನತಕ್ಕ. ೨. ಆಶ್ರಿತವಾದ ; ಪರಾಧೀನವಾದ. ೩. ಗೌಣವಾದ ; ಅಪ್ರಧಾನವಾದ : ಮುಕ್ತಿಸುಖವಾಂತರೀಯದು ನಿರವಧಿಸುಖ ಭಾಕ್ತಪ್ರಪಂಚ ಸುಖವೆಂ ತವರಿಮಿತವಹುದು (ಪುಂಗಳ. ೧೫೩). (ನಾ). ೧. ಅನ್ನ ; ಆಹಾರ : ಭಾಕ್ತವಾರಾರ ದುಡಿತದಿನೊ ನಿಸರ್ಗಾಗಿಹುದು ಗುಪ್ತಗಾಮಿನಿಯೊ ಭುಗ್ನ (ಪುಂಗಳ. ೧೩೨). ೫. ಆಶ್ರಿತವಾದುದು ; ಪರಾಧೀನವಾದುದು. ೬. ಪುನುಕ್ತವಲ್ಲದುದು ; ಅಪ್ರಧಾನವಾದುದು. ೭. [ಕಾವ್ಯವಿ] ಗೌಣವಾದುದು ; ಲಾಕ್ಷಣಿಕ ; ಔಪಚಾರಿಕ ; P ಯಾವುದಾದ ರೊಂದು ಪದವು ತನ್ನ ಮುಖ್ಯಾರ್ಥವನ್ನು ಬಿಟ್ಟು ಬೇರೊಂದು ಅರ್ಥದಲ್ಲಿ ಸಂದರ್ಭಾನುಸಾರವಾಗಿ ಪ್ರಯೋಗಿಸಲ್ಪಟ್ಟಿದ್ದರೆ ಅದು ಭಾಕ್ತವೆನಿಸುವುದು. " ಬಿಸಿನೀಪತ್ರದ ಶಯ್ಯೆ ತಾನೆ ತರುಣೀ ಸಂತಾಪಮಂ ಪೇಳುಗುಂ " ಎಂಬಲ್ಲಿ ' ಪೇಳುಗುಂ ' ಎಂಬುದು ಭಾಕ್ತಪದ. ಏಕೆಂದರೆ ಅಚೇತನವಾದ ಶಯ್ಯೆಯು ಮಾತನಾಡುವುದಿಲ್ಲ. ಆದುದರಿಂದ 'ಪೇಳುಗುಂ' ಎಂದರೆ 'ಸ್ಪಷ್ಟಪಡಿಸುತ್ತದೆ' ಎಂದು ಅರ್ಥ. ಇಲ್ಲಿ ಮುಖ್ಯಾರ್ಥವನ್ನು ಬಿಟ್ಟು ಬೇರೊಂದು ಅರ್ಥವನ್ನು ಹೇಳಿದಂತಾಯಿತು. 'ಧ್ವನಿ' ಯೆಂದು ಕಾವ್ಯದ ಆತ್ಮವನ್ನು ವಿದ್ವಾಂಸರು ಹಿಂದೆಯೇ ಹೇಳಿದ್ದರಷ್ಟೆ . . . ಮತ್ತೆ ಕೆಲವರು ಅದನ್ನು ' ಭಾಕ್ತ ' (= ಲಾಕ್ಷಣಿಕ) ವೆಂದರು (ಧ್ವಕೋ. ೧). [ಸಂ.]

ಭಾಕ್ತಿಕ (ಗು). ೧. ಭಕ್ತಿಯಿಂದ ಕೂಡಿದ; ಶ್ರದ್ಧಾವಂತನಾದ: ಇದಮೋದುವ ಕೇಳ್ದ ಕಲ್ದ ಭಾಕ್ತಿಕಜನಕಾಗಳಂ ಸಮಾನಿಸರ್ಕೆ ಮನೋರಥ ಕಾರ್ಯಸಿದ್ಧಿ (ಜಾತಕ. ೨೪-೪೩). (ನಾ). ೨. ಭಕ್ತ; ಆಶ್ರಿತ: ಭಾಕ್ತಿಕನ ಪೊಲ್ ಬಲವಂದುದು ವಹ್ನಿ (ಪಪಚತಿ. ೩-೬). [ಸಂ.]

ಭಾಗ (ನಾ). ೧. ಪೂರ್ಣವಾದ ಒಂದು ವದಾರ್ಥದ ಭಿನ್ನಭಿನ್ನವಾದ ಅಂಶ.—ಪಾಲು: ಕ್ರಮದಿಂ ದ್ವಾದಶಭಾಗವೊಂದು ಗೃಹಕ್ಕುಂ (ಜಾತಕ. ೦-೩೬); ಎನ್ನಲ್ಲಿ ಭಕ್ತಿ ಸಾಸವೆಯ ಪಡ್ಯಾಗದನಿತಿಲ್ಲ (ಪಪಚ. ೬೫೩). ೨. ಹಂಚಿಕೆ; ವಿಭಾಗೆ; ಹಿಸ್ಸೆ: ಅವರು ತಮ್ಮ ಮಕ್ಕಳಿಗೆ ಆಸ್ತಿಯನ್ನು ಭಾಗ ಮಾಡಿಕೊಟ್ಟರು (೬೮೨). ೩. ಕರ್ತವ್ಯ; ಹೊಣೆ: ಅಪಾಯಕರವಾದ ಕೆಲಸವನ್ನೇ ನಿನ್ನ ಭಾಗಕ್ಕೆ ಅರಿಸಿಕೊಂಡಿದ್ದಿಯೇ (೪೮೫. II, ೯೦೩). ೪. ದಿಸೆ; ದಿಕ್ಕು: ಪೌರ್ವಭಾಗಮಾಗ್ನಾಮ ಪಶ್ಚಿಮಭಾಗ ಕೃತಾಕೃತಕ್ಷೇತ್ರಂ (೪೪. XI. ೫೦೮೮. ೬೬-೩೦; ೬೩೬); ದಕ್ಷಿಣದಿಶಾಭಾಗದೊಳ್ಕೋನಸಮುದ್ರದ ಕೃತ್ರಿಮಪರ್ಬತಮನಿಪಿದರಿ (೪೪. VIII, ೩೫೫. ೦೦೯-೬೦; ೧೦೭೦). ೫. ಕೆಲವು ಗ್ರಾಮಗಳ ಗುಂಪು; ಪ್ರಾಂತ; ಆಡಳಿತಕ್ಕಾಗಿ ಮಾಡಿರುವ ನಾಡಿನ ವಲಯ: ವನವಾಸಿ ವಾಣ್ಣಲೇ ಎಡವೊಳಲ್ಗಾಗೆ ಕಿಱುಕಾಗಾನಮಾಸಿ ನಾಮಗ್ರಾಮ (೪೪.XI. ೫೫೫. ೬೬-೨೬; ೬೬೬). ೬. ಅದೃಷ್ಟ; ಭಾಗ್ಯ; ಸುದೈವ. ೭. ಒಂದು ವಸ್ತುವಿನ ನಾಲ್ಕನೆಯ ಒಂದು ಅಂಶ; ಪಾವಾಂಶ; ಕಾಲುಭಾಗ. ೮. ಸ್ಥಳ; ಅವಕಾಶ; ಸ್ಥಾನ. ೯. [ಗಣಿತ] ಒಂದು ಅಪೂರ್ಣ ಸಂಖ್ಯೆಯ ಅಂಶ. ೧೦. ಭಾಗಲಬ್ಧ. ೧೧. [ರೇಖಾಗ] ಒಂದು ವೃತ್ತದ ಸುತ್ತಳತೆಯಲ್ಲಿ ಮುನ್ನೂರ ಅರವತ್ತನೆಯ ಒಂದು ($\frac{1}{360}$); ಅಂಶ ಒಂದು: ಡಿಗ್ರಿ. ೧೨. [ಜ್ಯೋತಿ] ಒಂದು ರಾಶಿಯ ಮೂವತ್ತನೆಯ ಒಂದು ($\frac{1}{30}$) ಅಂಶ. [ಸಂ.]

ಭಾಗಂಗೊಳ್, ಭಾಗಂಗೊಳು (ಕ್ರಿ). ಭಾಗವಹಿಡು; ವಿಭಾಗಿಸು: ಮಧ್ಯಮಪದಾಕ್ಷರಸಂಖ್ಯೆಯಂ ಆ ನಿಲಿಶುತ್ರಾಕ್ಷರಂಗಳಂ ಭಾಗಂಗೊಂಡೊಡಂಗಪೂರ್ವಮವಂಗಳವ್ವುವ (ಕಬ್ಬ ಕ್ರ. ೬೬); ಭಾಗಃ ಎಂಬುದಕ್ಕೆ ಪೆಸರು_ತವಿಸು, ಭಾಗಿಸು, ಉಗಿ, ಎತ್ತ್ರ . . . ಭಾಗಂಗೊಂಬುದಕ್ಕೆ (ಕ್ರಕಣಾ. ೦೫-೦೫). ಭಾಗಂಗೊಳು: "ಭಾಗಂ ಎಂಬುದಕ್ಕೆ ಪೆಸರು _ ತವಿಸು ಭಾಗಿಸು. . . ಭಾಗಂಗೊಳು ಸೆಳೆ. . . ಇಂತಿವಿತಂ ಭಾಗಂಗೊಂಬುದಕ್ಕೆ ಪೆಸರು" (ಕ್ರಕಣಾ. ೦೫-೦೫). [ಭಾಗ + ಕೊಳ್]

ಭಾಗಂಗೊಳು 'ಭಾಗಂಗೊಳ್' ನೋ.

ಭಾಗಂಬೋಗು (ಕ್ರಿ). ಭಾಗವನ್ನು ಹೊಂದು: ಭಾಗಂಬೋಗದ ಉಳಿದಕ್ಕರಂಗಳೆಲ್ಲಂ ಪ್ರಕೀರ್ಣಕಪ್ರಮಾಣಮಕ್ಕುಂ (ಕಬ್ಬ ಕ್ರ. ೬೬).

[ಭಾಗ + ಪೋಗ್ (< ಪೋ)]

ಭಾಗಧೇಯ (ನಾ). ೧. ಪಾಲು; ಅಂಶ; ಭಾಗ. ೨. ಭಾಗ್ಯ; ಅದೃಷ್ಟ: "ಭಾಗಧೇಯಂ. ಭಾಗ್ಯಂ, ವಿಧಾನಃ, ಭವಿತವ್ಯತಾ_ಈ ೪ ಭಾಗ್ಯದ ಪೆಸರ್" (ಪಪಪು. ೨೦-೦೨); ಅಗಣಿತ ಭಾಗಧೇಯಕ್ಕತ ಮೂಲಗುಣಂಗಳನೆಂದಣು ಬ್ರತಾದಿಗಳನನಾಕುಲಂ ಬೆಸಸಿದಂ ಮುನಿವುಂಗಪಂ (ಸುಚಮಾ. ೩-೪೬); ಭರತಕುಲದಲಿ ಭಾಗಧೇಯಸ್ಫುರಣಿಸಲರನೆಮ್ಮನುಜ್ ಧಿಕ್ಕರಿಸಿದಾದಡಿ ಮುನಿದು ಮಾಡುವುದೇನು ವಿಧಿಯೊಡನೆ (ಕುಪ್ಪಾ. ೪೬-೪೦); ಭವ್ಯವಿದ್ವನ್ನಿ ಮಹಕ್ಕಾನಂದದಿಂದಂ ಮಸುಮನಸಮಣಿಕ್ರೀಣಯಂ ಮಾಡಿದೀವ್ರತ್ರವಾರ್ದ್ಧಂ . . . ಭಾರತೀಭಾಗಧೇಯಂ (ಜಾಪಪು. ೭-೦೦೩); ತೆಮ್ಮ ಭಾಗಧೇಯಮೇ ತಮ್ಮನ್ನು ರಕ್ಷಿಸುವುದು (ಜಾಪಪು. ೦೩೨). ೩. ಆಸ್ತಿ; ಐಶ್ವರ್ಯ. ೪. ಸುಖ; ಸೌಖ್ಯ. ೫. ತೆರಿಗೆ; ಸುಂಕ: "ಆರ್ಥಾಗಮಃ, ಅದಾಃ, ಭಾಗಧೇಯಂ, ಕರಃ, ಬಲಿ_ಈ ೫ ಸಿದ್ಧಾಯಂ" (ಪಣಾಮು. ೭೦-೨೭೯). ೬. ಹಕ್ಕುದಾರ; ಬಾಧ್ಯಸ್ಥ. ೭. ಅದೃಷ್ಟವುಳ್ಳ ವ್ಯಕ್ತಿ; ಭಾಗ್ಯವಂತ: ಕುಮಾರಿಗುಚಿತೋದ್ಯಾಹವೈಭವದ ಸ್ವಯಂವರಕೆ ಭೂರಿ ಭುವನದ ಭಾಗಧೇಯರ ಭೂರಮಣರನು ಬರಿಸಿದನು (ಕೊಡಣ. ೦-೦೨-೨೪)

[ಸಂ.]

ಭಾಗಲಬ್ಧ (ನಾ). [ಗಣಿತ] ಒಂದು ಸಂಖ್ಯೆಯನ್ನು ಮತ್ತೊಂದು ಸಂಖ್ಯೆಯಿಂದ ಭಾಗಿಸಿದರೆ ಉತ್ತರರೂಪವಾಗಿ ಬರುವ ಸಂಖ್ಯೆ: ಭಾಜ್ಯವೆ ಭಾಜಕದಿಂದ ಕಡಮೆಯಾದಲ್ಲಿ, ಮೊದಲನೆಯ ಭಾಗಲಬ್ಧವನ್ನು ಎಂದು ತೆಗೆದುಕೊಳ್ಳಬೇಕು (ಗಪಪ. ೨೧೭). [ಸಂ.]

ಭಾಗಲಾಂಬಿಕೆ (ನಾ). ಒಬ್ಬಾಕೆಯ ಹೆಸರು: ಕಾರ್ಕ್ಕವೀರ್ಯಾರ್ಗ್ಗ ಕಾನ್ತಯಾಶ್ರೀ ಭಾಗಲಾಂಬಿಯಾ ದೇವ್ಯಾ (೧) ನಮಸ್ಕೃ ಕೃತಮಳ್ಳಸಾ (ಪಾಪಚ. XII. ೦೩-೨೦; ೪೭೬). [<ಬಗಲೆ ? + ಅಂಬಿಕೆ]

ಭಾಗವಂತ (ನಾ). ಪಾಲುದಾರ; ಪಿಸ್ಸೆದಾರ: ಎನ್ನ ಸುವಿದುಃವಿಕ್ಕೆ ಭಾಗವಂತರು ನೀವಲಾ (೨೬೬೫. ೬-೨೦-೨೦). [ಸು. ಭಾಗವತ್]

ಭಾಗವಡೆ (ಕ್ರಿ). ಬೇರ್ಪಡು; ಬೇರೆಯಾಗು: ಆ ನಿರಿಯಂಬ ದೇವನ ಪಚ್ಚೆಯಂತೆರಡಾಗಿ ಕಾ ನದಿಯಿಂದ ಭಾಗವಡೆದು ಪೂರ್ವವಿದೇಹವಿಹುದಾ ಶ್ರೀಗೆ ನಿವಾಸವೆಂದನಿ (ಕೃಚಾಣ. ೦-೨೮). [ಭಾಗ + ಪಡ್]

ಭಾಗವತ (ಗು). ೧. ಭಗವಂತನಿಗೆ ಸಂಬಂಧಪಟ್ಟ; ದೇವರಿಗೆ ಸಂಬಂಧಿಸಿದ. ೨. ವಿಷ್ಣುವಿಗೆ ಸಂಬಂಧಿಸಿದ. (ನಾ). ೩. ದೇವ ಭಕ್ತ; ಹರಿದಾಸ; ಕೃಷ್ಣಭಕ್ತ: ಕೌರವಭವನವನು ಹೊಱಪಡಟು ವರಭಾಗವತಮಸ್ಕರಕ್ಕ ವಿದುರನ ಮನೆಗೆ ನಡತಂದ (ಕುಪಾ. ೧. ೬-೪); ಪೋಗದಿರೆಂ ರಂಗ ಬಾಗಿಲಿಂದಾಚೆಗೆ ಭಾಗವತರು ಕಂಡರೆತ್ತಿಕೊಂಡೊಯ್ಯರೊ (ಪ್ರಹಂಪ. ೨-೦೦೦ ಅಷಷ್ಠಪ); ಯವ್ವಜ್ಞಾವದರಣಿ ಭಾಗವತ ಮಸ್ತಕಮದ ಬ್ಯಂದಾರಕೋಪಮಂ ಸತ್ಯಸಂಧಂ ಭೀಷ್ಮಂ (ಕೃಪಣ. ೪-೩೦). ೪. ಪುರಾಣದ ಕತೆಗಳನ್ನು ಯಕ್ಷಗಾನ, ಬಯಲಾಟ ಮೊದಲಾದ ನಾಟಕರೂಪಗಳಿಗೆ ಅಳವಡಿಸಿ ಅಡಿಸುವವನು ಮತ್ತು ಹಿಮ್ಮೇಳವನ್ನು ಹಾಡುವವನು: ಹಳೇಕಾಲದಿಂದ ಹಳ್ಳಿಗಳಲ್ಲಿ ಆಟ ಕಲಿಸುವ ಯಜಮಾನಿಗೆ ಭಾಗವತನೆಂದು ಹೆಸರು (ಹುಳ್ಳಿ. ೬೩); ರಂಗಸ್ಥಳಕ್ಕೆ ಬರುವವರೆಲ್ಲರೂ ಭಾಗವತರನ್ನೂ ರಂಗಸ್ಥಳವನ್ನೂ ವಂದಿಸಿ ಕಾಲನ್ನಿರಿಸಬೇಕು (ಹುಳ್ಳಿ. ೫೧); ಯಕ್ಷಗಾನದಲ್ಲಿ . . . ಭಾಗವತನು (ಹಾಡುಗಾರನು) ಅದನ್ನು . . . ಎಲ್ಲ ತಾಳಗಳಲ್ಲಿಯೂ ಸಂದರ್ಭಪರತು ಹಾಡುತ್ತಾನೆ (ಸಂಪ್ರದ. ೦೩೬). ೫. ಕೆಲವರು ಕೀರ್ತನಕಾರರು, ಸಂಗೀತಗಾರರು ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳುವ ಪದ: ಅನಂತರಾಮಭಾಗವತರಿಗೆ ಮಧುರವಾದ ಮನಮುಟ್ಟುವಂತಹ ಶಾರೀರಸಂಪತ್ತು ದೈವದತ್ತವಾಗಿ ಬಂದಿತ್ತು (ಸಂಗೀ. ೬೦); ಇವನು ಸಂಗೀತ ಕಲಿತಿದ್ದು ಯಾವ ಭಾಗವತರಲ್ಲಿ ? (ಜಾಪಚ. ೦೩೨). ೬. ಪ್ರಸಿದ್ಧವಾದ ಹದಿನೆಂಟು ಪುರಾಣಗಳಲ್ಲಿ ಒಂದು: ಭಾಗವತ ಪುರಾಣ . . . ಬ್ರಹ್ಮಾಂಡ ಪುರಾಣ ಮೆಂದಿವೇ . . . ಹದಿನೆಂಟು ಮೂಲ ಪುರಾಣಂಗಳು (ಪಪಚ. ೬); ವಿಷ್ಣು, ಭಾಗವತ, ನಾರದ, ಗಾರುಡ ಈ ನಾಲ್ಕು ಪುರಾಣಗಳು ವೈಷ್ಣವಗಳು (ಜಾರಿ. ೦೩೬).

ಭಾಗವತರ ಆಟ = ಯಕ್ಷಗಾನ, ಬಯಲಾಟ ಮೊದಲಾದ ನಾಟಿಕ ರೂಪ: ಕರ್ನಾಟಕದ ಬಯಲಾಟ ಇಲ್ಲವೆ ಭಾಗವತರ ಆಟಗಳೂ ತಿದ್ದಿದ ನರ್ತನೇಲಗಳೇ (ಜಾಂಕ್ರ. II, ೯೨೦). [ಸಂ.]

ಭಾಗವತಧರ್ಮ (ನಾ). ಭಗವಂತನಾದ ವಿಷ್ಣುವೇ ಪರದೈವ ಮತ್ತು ಅವನಲ್ಲಿಡುವ ನಿರತಿಶಯವಾದ ಭಕ್ತಿಯೇ ಮೋಕ್ಷಕ್ಕೆ ಕಾರಣ ವೆಂದು ಬೋಧಿಸುವ ಮತ; ವೈಷ್ಣವಮತ: ಇದೇ ಭಗವದ್ಗೀತೆ ಮೊದಲಾದ ಶಾಸ್ತ್ರಗಳಲ್ಲಿರುವ ಭಾಗವತಧರ್ಮ. ವಿಶಿಷ್ಟಾದ್ವೈತಸಿದ್ಧಾಂತ (ಸಂಪಪ್ರಾ. ೨೩೯) ; ಈ ನಾರಾಯಣನ ಆರಾಧಕರ ಒಂದು ಪಂಥವೇ ಬೆಳೆದು

ಮುಂದೆ ಅದು ಭಾಗವತಧರ್ಮದಲ್ಲಿ ಒಂದಾಗಿ ಬೆರೆತಿರುವುದು ಗೋಚರವಾಗುತ್ತದೆ (ಶಾಕಟ. ೫೯೩). [ಸಂ.]

ಭಾಗವತ ಸಂಪ್ರದಾಯ (ನಾ). ವಿಷ್ಣುವೇ ಸರ್ವೋತ್ಕೃಷ್ಟನೆಂದು ಪ್ರತಿಪಾದಿಸಲು ಹೊರಟ ವೈಖಾನಸ, ಪಾಂಚರಾತ್ರ, ಭಾಗವತಸಂಪ್ರದಾಯವೆಂಬ ಮೂರು ಆಗಮಶಾಖೆಗಳಲ್ಲಿ ಮೂರನೆಯದು; ಈ 'ಶಕ್ತಿಭಾಗವತ', 'ಶಿವಭಾಗವತ' ಮುಂತಾದ ಸಂಪ್ರದಾಯಗಳೂ ಇವೆ: ಶ್ರೀಶುಕಭಾಷ್ಯಾನುಸಾರಿಯಾದ ದರ್ಶನದ ಅನುಯಾಯಿಗಳಾಗಿ ಶ್ರೀಗೋಪಚಂದನದಿಂದ ಊರ್ಧ್ವಪುಂಡ್ರಾದಿಗಳನ್ನೂ ಧರಿಸಿ ಉಪಾಸಿಸುವ ವೈದೀಸಂಪ್ರದಾಯವು "ಭಾಗವತಸಂಪ್ರದಾಯ"ವೆಂದೂ . . . ಆಚರಣೆಯಲ್ಲಿದೆ (ಶಾಕಟ. ೬೬); ಅವರ ಮನೆತನದವರೆಲ್ಲ ಭಾಗವತಸಂಪ್ರದಾಯಕ್ಕೆ ಒಲಿಸಿದ್ದುದರಿಂದ ಎಲ್ಲರಿಗೂ ಸಂಗೀತದಲ್ಲಿ ಸಾಮಾನ್ಯವಾದ ಜ್ಞಾನವಿದ್ದೇ ಇತ್ತು (ಸಂಗೀತ. ೧೬). [ಸಂ.]

ಭಾಗವತಿಕೆ (ನಾ). ಯಕ್ಷಗಾನ, ಬಯಲಾಟ ಮುಂತಾದುವುಗಳನ್ನು ಕಲಿಸುವಿಕೆ: ಸಂಯ್ಯಭಾಗವತರೆಂಬುವರು . . . ಭಾಗವತಿಕೆಗೂ ಅಸಮರ್ಥರಾಗಿ ಆ ಉದರಶೂಲೆಯಿಂದಲೇ ಪರಲೋಕವಾಸಿಗಳಾದರು (ಶಾಕಟ. ೬). [ಭಾಗವತ+—ಇಕೆ]

ಭಾಗವಹಿಸು (ಕ್ರಿ) ಸೇರು; ಭಾಗಿಯಾಗು; ಪಾಲುಗೊಳ್ಳು: ಇಂದಿನ ಕವಿಗೋಷ್ಠಿಯಲ್ಲಿ ನಾಡಿನ ಹಿರಿಯಾಂತ ಕವಿಗಳು ಭಾಗವಹಿಸಿದ್ದರು (ಪ್ರಜಾ). [ಭಾಗ+ವಹಿಸು]

ಭಾಗಶಃ (ಅ). ಕೆಲವು ಭಾಗ ಮಾತ್ರ; ಭಾಗಭಾಗವಾಗಿ; ಅಸಂಪೂರ್ಣವಾಗಿ: ಸಾಮಾನ್ಯವಾಗಿ ಮಾನವಕೋಟಿಯ ಜೀವನವೂ ಜೀವನವ್ಯವಹಾರಗಳೂ ಭಾಗಶಃ ಸ್ವಂತ ಅಭಿಪ್ರಾಯಗಳಿಂದಲೂ ಭಾಗಶಃ ಪರರ ಅಭಿಪ್ರಾಯಗಳಿಂದಲೂ ರೂಪುಗೊಳ್ಳುತ್ತವೆ (ಕ್ರಮ. ೧೯೨). [ಸಂ.]

ಭಾಗು (ನಾ). ಹಣ; ಧನ; ದ್ರವ್ಯ: ನಿನಗಾನಾಟಿಸಿದನೆನಗೆ ನೆಲೆಯಂ ತಾಡುಗೆಯಂ ಮಾಡಿಸಲ್ ಭಾಗಸ[ಜಾತಿಂ. ಭಾಗವಸ]ಮುಳ್ಳೊಡೆ ನಿನಗಾಂ ಪೆಂಡತಿಯಂ (ಕಣ್ಣಾ. ೮೬-೦೪); ಕೋವಣಕ್ಕಳ್ಪೆಡಂ ಭಾಗಸ ಮಿಲ್ಲದೂಂ (ಕಬ್ಬಾ. ೧೬-೬). [<ಸಂ. ಭಾಗಸ್ವ ?]

ಭಾಗುಸ್ತ (ನಾ). = ಭಾಗಸ್ಥ ೧: ಆ ನಿಮ್ಮ ಭಾಗುಸ್ತರೇನಾದರು? (ಜಾಪಾಕ್ಕೆ. ೦೩೦). [<ಸಂ. ಭಾಗಸ್ಥ]

ಭಾಗಸ್ಥ (ನಾ). ೧. (ಪಿತ್ರೋಪಾರ್ಜಿತ ಉದ್ಯಮ ಮೊದಲಾದುವುಗಳಲ್ಲಿ ಬಂಡವಾಳವನ್ನು ಹಾಕಿ) ಲಾಭನಷ್ಟಗಳಲ್ಲಿ ಸಮಾನಾಧಿಕಾರವುಳ್ಳವನು; ಪಾಲುಗಾರ: ಆ ಇಬ್ಬರು ಕಿಟ್ಟಿರೂ ವ್ಯವಹಾರದಲ್ಲಿ ಭಾಗಸ್ಥರು (ಕೃಷಿ). ೨. ಪಿತ್ರಾರ್ಜಿತವಾದ ಆಸ್ತಿಯಲ್ಲಿ ಮಗ. ಸಹೋದರ ಮೊದಲಾಗಿ ಪಾಲಿಗೆ ಅರ್ಹನಾದವನು; ದಾಯಾದ: "ದಾಯಾದಃ—ಸಿ ಮಗನು, ಬಂಧು, ಭಾಗಸ್ಥ" (ಕಣ್ಣಂತಿ. ೪೯೬). [ಸಂ.]

ಭಾಗಹಾರ (ನಾ). [ಗಣಿತ] ಒಂದು ಸಂಖ್ಯೆಯನ್ನು ಮತ್ತೊಂದು ಸಂಖ್ಯೆಯಿಂದ ಭಾಗ ಮಾಡುವುದು,—ಭಾಗಿಸುವುದು: ಈ ಮಾರ್ಗದಿಂ . . . ಭಾಗಹಾರಂ ಹೇಳಲ್ಪಟ್ಟುದು (ಕ್ಷೇತ್ರಾ. ೦೨-೨೪); ಭಾರತೀಯವಿಧಾನಗಳು ಸಾಮಾನ್ಯವಾದ ಗುಣಕಾರ ಭಾಗಹಾರಗಳ ಆಧಾರದ ಮೇಲೆ ಇದ್ದು, ಹೈಸ್ಕೂಲು ವಿದ್ಯಾರ್ಥಿಗಳಿಂದ ಅರ್ಥಮಾಡಿಕೊಳ್ಳಲು ಸಾಧ್ಯ (ಗಣಿ. ೨೧೩). [ಸಂ.]

ಭಾಗಾಹಾರ 'ಭಾಗಹಾರ' ನೋ.

ಭಾಗಾದಿ (ನಾ). ೧. ಪಾಲುಗಾರ; ಭಾಗಸ್ಥ: ಅವನ ಗೊಡವೆಯೇಕೆ ಅವಾರು ನೀನಾರು ಅವನ ಪಾಪಕ್ಕೆ ನೀ ಭಾಗಾದಿಯೆ (ಪಾಕ್ಕೆ. ೩೭-೦). ೨. ದಾಯಾದಿ: ಭಾಗಾದಿ ಬಲಿತರಲಿ ವೈರಿ ತಾ ಪಿಡಿತರಲಿ . . . ಬಲ ಭೀಮುದೇವ ನಿನ ದ್ಯೂಲ ದಮಯಿತರಲಿ (ಗುಪ. ೦೦೩); ಮುಲಸಂಬಂಧವ ಭಾಗಾದಿ ಹಬ್ಬಿಗೆ ಹಳೆಹಾದಿ (ಜಾಪೀ. ೫೯-೦೭). ೩. (ಆಲಂ) ಶತ್ರು; ದ್ವೇಷಿ: ಯಾರೋ ಸುಳ್ಳು ಹೇಳಿದ್ದಾರೆ ನಮ್ಮ ಭಾಗಾದಿಗಳು (ಜಾಪೀಲೀ. ೨೦೬); ಹುಟ್ಟುತ್ತಾ ಬಂದು ಬೆಳೆಯುತ್ತ ಭಾಗಾದಿ (ಪುಂರಚ. II, ೩೨). [ಸಂ. ಭಾಗಾದಿನ್]

ಭಾಗಾರ 'ಭಾಗಾಹಾರ' ನೋ.

ಭಾಗಾರ್ಹ (ನಾ). ೧.ಭಾಗವನ್ನು ಪಡೆಯಲು ಅರ್ಹನಾದವನು; ವಾರಸುದಾರ; ಉತ್ತರಾಧಿಕಾರಿ. ೨. ಪಂಚಬೇಕಾದುದು; ಭಾಗ ಮಾಡಬೇಕಾದುದು. [ಸಂ.]

ಭಾಗಾವಳಿ (ನಾ). ಪಾಲು; ಭಾಗ: ಮಂಚಿಗಾವುಂಡನ ಕುಲಸ್ತ್ರೀ ಸಾನ್ತಿಅಬ್ಬೆಗಾಡಿ ಸ್ವರ್ಗಸ್ಥೆಯಾಣಾಗಳುಂ ನಲ್ಲೂರ ಭೂಮಿ ಆಕಲ ಗೌಸೋಮಯನ ಭಾಗಾವಳಿ ಕೊಟ್ಟಲ್ಲಿ ಕೆಳಗುಂದಣಿ ಭೀಮಯ್ಯ ಹರಿಆಸೆ (ಶಿ. VIII, ೩೭೮. ೪೨-೦೦ ; ೧೨೬೮). [<ಭಾಗ + — ವಳಿ]

ಭಾಗಾಹಾರ, ಭಾಗಾರ, ಭಾಗಾಕಾರ, ಭಾಗಾರ (ನಾ). [ಗಣಿತ] ಒಂದು ಸಂಖ್ಯೆಯನ್ನು ಮತ್ತೊಂದು ಸಂಖ್ಯೆಯಿಂದ ಭಾಗಿಸುವುದು; ಭಾಗಹಾರ: ಶಾಲೆಯಿಲ್ಲಿ ಇಂದು ಉಪಾಧ್ಯಾಯರು ಭಾಗಾಹಾರದ ಲೆಕ್ಕಗಳನ್ನು ಕೊಟ್ಟಿದ್ದರು (ಪ್ರಜಾ). **ಭಾಗಾರ**: ಗಣಿತ ಭಾಗಾರಗಳ ಲೆಸ್ಸವ ಗುಣಿಸಿ ಭಾಗಿಸಿ ಹೇಳಿದರೆ ಲೆಕ್ಕಣಿಕೆಯನು ಪಿಡಿದಜನ ತಂದೆಯು ರೂಪವನು ಬರದು ಮಣಮು (ಕ್ರಕ್ಕಾ. ೭೨). **ಭಾಗಾಕಾರ**: ಪ್ರತಿವಿನ್ಯಾಸವನ್ನೂ ಬರೆಯುತ್ತ ಹೋಗಿ ಉತ್ತರ ಪಡೆಯುವ ಭಾಗಾಕಾರ; ದೀರ್ಘಭಾಗಾಕಾರ (Long-division. ೧೯೫); ಭಾಗಾಕಾರ ತಿಳಿಯದಿದ್ದರೂ ಹಾಗದ ಲಕ್ಷಣ ತಿಳಿಯದೆ? (ಗಣಿ). **ಭಾಗಾರ**: ಆಳು ಭಾಗಾರ ವಿಷಮಭಾಗಾರ . . . ಇವು ಮೊದಲಾದ ಲೆಕ್ಕಾಚಾರಗಳು (ಶಾಸ್ತ್ರ. ೦-೬). [< ಸಂ. ಭಾಗಹಾರ]

ಭಾಗಿ (ನಾ). ೧. ಭಾಗಕ್ಕೆ ಪಾತ್ರನಾದವನು; ಪಾಲುದಾರ; ಹಿಸ್ಸೆದಾರ. ೨. ಯಾವುದಾದರೂ ಫಲವನ್ನು ಪಡೆಯಂಬವನು: ಅಕ್ಷಯತೀರ್ತ್ರ ತುನ್ನಕದ ವಾರ್ದ್ಧಿಯ ಮೇಲದು ನೋನ್ಪ ಭಕ್ತಿಯಿಂ ಲಕ್ಷಿಮಣಕ್ಕೆ ರಮ್ಯಪುರಲೋಕಸುಕಕ್ಕೆ ಭಾಗಿ (ಅ, II, ೨೦-೪; ಸು. ೭೦೦). ೩. ಪುಣ್ಯವಂತ; ಅದೃಷ್ಟಶಾಲಿ; ಭಾಗ್ಯಶಾಲಿ. ೪. ಸಮಾನವಾದ ಉತ್ತರಾಧಿಕಾರವುಳ್ಳವನು; ಸಮಭಾಗಿ; ದಾಯಾದ. ೫. ಸ್ವಾಮ್ಯವನ್ನು ಪಡೆದವನು; ಮಾಲೀಕ; ಒಡೆಯ. ೬. ಯಾವುದಾದರೂ ಕಾರ್ಯಭಾರ, ಸಮಾರಂಭ, ಸಾರ್ವಜನಿಕಕಾರ್ಯಗಳಲ್ಲಿ ಸೇರಿರುವವನು,—ಮಿಳಿತಭಾಗುವವನು: ಆ ಉತ್ಸವದಲ್ಲಿ ನಾನೂ ಭಾಗಿಯಾಗಿದ್ದೆನು (ಪ್ರಜಾ). [ಸಂ. ಭಾಗಿನ್]

ಭಾಗಿತ್ವ (ನಾ). ಭಾಗಿಯಾಗುವಿಕೆ; ಭಾಗವಹಿಸುವುದು; ಪಾಲುಗೊಳ್ಳುವುದು: ಒಂದು ಅಕಾರ್ಯದಲ್ಲಿ ಭಾಗವಹಿಸುವುದು; ಭಾಗಿಯಾಗುವುದು. ಭಾಗಿತ್ವ (complicity. ೬೦೪೭). [ಸಂ.]

ಭಾಗಿನೇಯ (ನಾ). ೧. ಅಕ್ಕ ಅಥವಾ ತಂಗಿಯ ಮಗ; ಸಹೋದರಿಯ ಪುತ್ರ; ಸೋದರಳಿಯ: "ಸ್ವಸ್ರೀಯಃ, ಜಾಮೇಯಃ, ಭಾಗಿನೇಯಃ—ಈ ೩ ಒಡಹುಟ್ಟಿದವಳ ಮಗಂ" (ಶಬ್ದಮ. ೯೪-೩೩೬); ನಿನ್ನ ನಲ್ಲನೆ ಗಡಂ ಮದ್ಭಾಗಿನೇಯಂ (ಅಜಿ. ೩-೦೪); ಕ್ಯದೀಯ ಭಾಗಿನೇಯಂ ಮುನ್ನ ಮುಳ್ಳ ಭಾಗಾಂಶಮೆಲ್ಲಮಂ ತ್ಯಾಗಭೋಗೋಪಭೋಗಾದಿ ವ್ಯಸನಕ್ಕ ಸದ್ವ್ಯಯಂ ಮಾಡಿ ಕಿಡಿಸಿಯುಂ (ಪುಪಪ್ರ. ೨-೩೨ ಪ). ೨. ದಾಯಾದಿ (?): ಶತಕ್ರತು ಮುಕುಳಿತಾಂಜಲಿಪುಟನಾಗಿ ಜನ್ನಪಂ ಜಗನ್ನಾಥ ಪಾಂಡವ ಮಧ್ಯಮಸಹರ್ಜುನನೆಂಬನಿನಗತಿಪ್ರಿಯತನಯಂ ದುರ್ಯೋಧನಂಗೆ ಭಾಗಿನೇಯಂ ನಿಮಗೆ ಮೈದುನನುಮಪ್ಪಂ . . . ಎನೆ (ಪಾಡಿ. ೪-೦೦೬ ಪ).

[ಸಂ.]

ಭಾಗಿಸು (ಕ್ರಿ). ೧. ಪಾಲುಮಾಡು ; ಭಾಗಮಾಡು ; ವಿಭಾಗಿಸು : ಭಾಮಿಸಿದಂ, ಭಂಗಿಸಿದಂ, ಭಾಗಿಸಿದಂ (ಕಮಾ. ೭೨ ಕ್ರಿಯೆ). ೨. [ಗಣಿತ] ಭಾಗಾಹಾರ ಮಾಡು: ಭಾಗಂ ಎಂಬುದಕ್ಕೆ ಪೆಸರು—ತವಿಸು, ಭಾಗಿಸು, ಈಗೆ (ಕ್ರಿಪಣಾ- ೮೨-೦೨) ; ಧನದೆ ಗುಣಕಾವ ಭಾಗಹಾರಂಗಳವವರ್ತಿಸಿ ಭಾಗಿಸಿ (ನೂಪ್ರು.ಶಾ. ೧೬-೦೦) ; ೧೨೦ನ್ನು ಎರಡರಿಂದ ಭಾಗಿಸಬೇಕು (ಶಾಕಪು. ೦೦೩).

ಭಾಗಿಸಿಕೊಳ್ಳು = ಹಂಚಿಕೊಳ್ಳು ; ಪಾಲು ಮಾಡಿಕೊಳ್ಳು : ಇಬ್ಬರೂ ಒಂದೇ ಹೊಟ್ಟೆಯ ರಕ್ತಮಾಂಸಗಳನ್ನು ಭಾಗಿಸಿಕೊಂಡು ಬೆಳೆದವರಾಗಿರುವಾಗ ಪ್ರೇಮಾತಿಶಯವು ಅವರಿಬ್ಬರಲ್ಲಿ ತೋರದೆ ಮತ್ತೆಲ್ಲಿ ತೋರೀತು ! (ಜಗಚ್ಚಿ. ೦೨). [ಭಾಗ + -ಇಸು]

ಭಾಗಿಸುಹ (ನಾ). [ಗಣಿತ] ಭಾಗಿಸುವುದು ; ಭಾಗಾಹಾರ : ಎತ್ತು ಪೆಗೆಯನಲು ಭಾಗಿಸುಹಮಕ್ಕುಂ (ಪುಂಗಣ. ೦೦೯-೦೦).

[ಭಾಗಿಸು + — ಪ್ಪ (< — ಪ್ಪ)]

ಭಾಗೀದಾರ, ಭಾಗೇದಾರ (ನಾ). ಪಾಲುಗಾರ; ಭಾಗಸ್ಥ . ಈ ಕಂಪನಿಗಳು ಭಾಗೀದಾರರಿಗೆ ವರ್ಷಕ್ಕೆ ಶೇ.೦೦ ೬ ರೂಪಾಯಿಯಂತೆ ಲಾಭವನ್ನು ಸಾಮರೀವಾನದಿಂದ ಕೊಡುತ್ತವೆ (ಕಾಗ. ೩೦೬) ; ಭಾಗೀದಾರರು ಪ್ರಾರಂಭದ ಬಂಡವಲಕ್ಕೆ (Paid-up Capital) ಹಣವನ್ನು ಪೂರ್ತಿಸಿದವರು (ಜ್ಯೋಕ್ಕೆ. ೬). **ಭಾಗೇದಾರ** : "ಭಾಗೇದಾರ—ಪಾಲುಗಾರ" (ಜಾಪಕೋ. ೨೫). [← ಮರಾ. ಭಾಗೀದಾರ]

ಭಾಗೀರಥಿ (ನಾ). ಭಗೀರಥನೆಂಬ ಮಹಾರಾಜನಿಂದ ಭೂಮಿಗೆ ಇಳಿದು ಬಂದುದೆಂದು ಹೇಳಲಾದ ನದಿ ; ಗಂಗಾನದಿ : "ಭಾಗೀರಥೀ, ಸುರ ಸರಿತ್, ವಿಷ್ಣುಪದೀ, ಜಾಹ್ನವೀ, ಗಂಗಾ—ಈ ೫ ಗಂಗೆ" (ಪಣಾಮು. ೦೦೦-೨೦) ; ಬಾರಪ್ಪ ಭಾಗೀರಥಿ ತೋಜವ್ಪ ಜನರಿಗೆ ನಾ ಸ್ನಾನ ಮಾಡುವುದು ತೋಜವ್ಪ ಜನರಿಗೆ (ಕೃಕಂದ. ೪-೨೨ ಕ್ಷಂ); ಕೆರಳ್ದು ಭಾಗೀರಥಿ ಸಮಸ್ತನ್ಯಪಮ್ಮಂದಮೊಳ್ಕನ್ನ ದುಗನುದ್ದಾಮನಾಗಿರ್ಪನೆಂದುಮಾಳಿವ ನಲ್ಲವು. . . ನೀನೆನೆಗೆ ಸುತರಿಲ್ಲೆನಲ್ಬಹುದೆ ಪೋಗೆಂದೊಡೆ (ಕೃಬಾಣ. ೯-೩೦); ಭಗೀರಥ ಯತ್ನ ಮಾಡಿ ಭಾಗೀರಥಿ ತಂದ. ನಗರದವ ಯತ್ನ ಮಾಡಿ ನಗಾ ಕಳಕೊಂಡ (ಗಾಡ).

ಭಾಗೀರಥೀನಂದನ = ಗಂಗೆಯ ಮಗ: ಗಾಂಗೇಯಂ; ಭೀಷ್ಮ : ಸಾರಿದನು ಶರಮಂಚವನು ಭಾಗೀರಥೀನಂದನನು (ಭಾಷ್ಯರತ್ನಾ. ೦೬-೩೬).

[ಸಂ. ಭಾಗೀರಥೀ]

ಭಾಗುರೆ (ಅ). ಮೆಚ್ಚುಗೆಯನ್ನು ಸೂಚಿಸಿಂವ ಒಂದು ನಿಪಾತಾವ್ಯಯ: ಜಯ ಮರ್ಧಿಯು ಭಾವರರೆ ಭಾಗುರೆ ರಾಜುತೊ ರಾಜುತೊ. . . ಕಲು ಸಿಂಗ ಬೋಳೆಯನಾದುಂ (ಎಕ. VIII. ಇಗಳ- ೩೨-೦೩ ; ೧೩೮). [?]

ಭಾಗೆ (ನಾ). ೧. ಪಾಲು; ಭಾಗ: ಅಂಶ: ಹೋದ ಮೃಗಮಂ ಕಂಡೊಡೆ ನಗೆ ನೀನೊಳ್ಳಿದಂ ಆದಲ್ಲಿ ಭಾಗೆಯಂ ವಂಚಿಸೆಂ ಕೊಳ್ಳದಂ (ಕ್ಷತ್ರ. ಚೆ. ೦೩೦-೯); ಅಕ್ಷರಂ ಧರೆಯೊಳೊಬ್ಬರ ಭಾಗೆಗೆ ಬಂದುದಲ್ತು· (ಪಳಮೂ. ೭); ಇನಿತುವಂ ಮೂಜುಭಾಗೆಯಂ ಮಾಡಿ ಕುಡುವುದು (ಕಾಂದಪು. ೦೯-೩). ೨. ಹಂಚಿಕೆ ; ವಿಭಾಗಿಸುವಿಕೆ ; ವಿಂಗಡಣೆ : ಮೂಪಿಗಿಂತು ನಾಲ್ಕಜ ಪರಿಗಣಿತ ಪದಮಾನ್ಯ ಸಂಘಟಿಸಿದುದು ಭಾಗೆಯಲಿ (ಕೂಕಣ. ೦-೭-೩೮). ೩. ಐಶ್ವರ್ಯ; ಸಂಪತ್ತು: ಭಾಗೆ ಈಕ್ಷ್ವರ ಪುನಿಯಾಗ ಶುಭಕಾರ್ಯ ಆಗ ಹುಟ್ಟಿ ಆಗ ಬೆಳದಾವ (ಕ್ಷತ್ರ.೩೩). ೪. ಎಡೆ; ಸ್ಥಳ: ವಂಭಾಗ ಯೆಂಬುತ್ತುನಾಲ್ಕುಸಾಸಿರಪೋಜನಂ ಬಾಹುಲ್ಯಮುಪಪತ್ಯಂ (ಜಾತ್ಕ್ರ.ಜೀ. ೨೨-೦೦) ; ಗುರುರವಿಗಳೆತ್ತುಂಗಭಾಗೆಯಲಿರಲು . . . ಪುತೆಸ್ರೀದಹು ಗಳಾದವು ಭೂಪ ದಶರಥಗೆ (ಕೌಶಾ. ೦-೩೩).

ಭಾಗೆ ಮಾಡಿಕೊಳ್ = ಹಂಚಿಕೊಳ್ಳು: ಅವ್ಯತಮಥನಮಂ ಮಾಡುತೀ ತ್ರಿದಶಾಳಿಗಳ್ ನುಡಿದಂತೆ ಪುಟ್ಟಿದ ವಸ್ತು ಮೊದಲಾದುದನು ಭಾಗೆ ಮಾಡಿ ಕೊಂಡರ್ ತಮ್ಮೊಳಗೆ ತಾವೆ ನಿಮಗೆನ್ನದೆ (ಅಕೂಪು. ೦೨-೦೨). [ಸಂ. ಭಾಗ]

ಭಾಗೆಗಾಱ (ನಾ). ಭಾಗವಹಿಸುವವನು; ಪಾಲುಗೊಳ್ಳುವವನು; ಭಾಗಿ: ಆಗದಿರದೀಯಬ್ಬರವ್ವ ಕವಿಮೂಗು ಮುಸುಳಿಸಿದವಳ ಬವರದ ಭಾಗೆಗಾಱರ ಬವ್ವ ಭರತಾವತಿಜ ನೋಡೆನಲು (ಕೂಕಣ. ೬-೫-೦೦). [ಭಾಗೆ+—ಗಾಱ]

ಭಾಗೆಗೊಡು (ಕ್ರಿ). ಭಾಗವನ್ನು ಕೊಡು ; ಪಾಲುಕೊಡು: ಪಿತನಲಿದೊಡ ನುಜಂಗೆ ಭಾಗೆಗೊಟ್ಟುರ್ದರ್ಧತತಿಯೊಳನುಜೆಯ ಜಂಗಮಾರ್ಜನೆವು ಮಾಡೆಂದು ಸಿತಗಳನ ವಶಕಿತ್ತು ಪಡಗೊಜುತಗ್ರಜಂ ಶರಧಿಯೊಳು ಮಿಂದಿಯ (ಣಾಪಾ. ೬-೬). [ಭಾಗೆ + ಕೊಡು]

ಭಾಗೇದಾರ 'ಭಾಗೀದಾರ' ನೋ.

ಭಾಗ್ಯ (ನಾ). ೧. ಶುಭಃಶುಭಕರ್ಮಗಳ ಫಲ ; ವಿಧಿ ; ಹಣೆಬರಹ : "ಭಾಗಧೇಯಂ, ಭಾಗ್ಯಂ, ವಿಧಾತೃ, ಭವಿತವ್ಯತಾ—ಈ ೪ ಭಾಗ್ಯದ ಪೆಸರ್" (ಪಣಾಮು. ೨೦-೦೩); ಎಮಗೆ ತಂದೆಯುತ್ಪನ್ನತಳಂ ಪುರೆಯುಂಟೆ ತವಗೆ ಭಾಗ್ಯಾನುರೂಪದಿಂ ಬಾಬ್ಬಿಮೆಜಗಮೆಂಬಿತಿ ಮವದಿಂ ನಿಸ್ಸನಜರನಿಬರುಂ ಮಾನೋನ್ನತರೆಂಮೆಜಗರ್ (ಜಪು. ೦೪-೦೩) ; ಬಗೆದೆಗೆಯದೆ ತನ್ನ ಭಾಗ್ಯದ ಫಲವೆಂದು ಬಗೆದು ಭಕ್ತಿಯೊಳೆಸಗುವುದು (ಪಂಂ. ೩-೯); ಪಳೆಯುಂತೆ ನಿಜಭಾಗ್ಯವನಾ ಯೆಳೆದುಳ್ ತೋಳೆತ್ತಿ ಗೋಡಲ್ಬುಜ್ಜುಗಿಸಲ್ (ಜಪಾಂಚ. ೬೪-೦೩೦). ೨. ಅದೃಷ್ಟ ; ಸುದೈವ : ವಾರಿಯುರಿವ ಪುರುಷ ಭಾಗ್ಯದೇವತೆಯೊಲಿವ ಕಾಲವಸು . . . ವಿಚಿಸುವೊಡೆ ವಿಧಾತೃಗಳವಲ್ಲ (ಭಾಬ್ಯಾಗ. ೩-೩೩); ಇದು ಭಾಗ್ಯವಿದು ಭಾಗ್ಯವಿದು ಭಾಗ್ಯವಮ್ಮ ಪದುಮನಾಭನ ಪಾವಳಜನೆ ಸುಖವಯ್ಯ (ಕೃಕಂದ. ೦-೦೩೨ ಕ್ಷಂ); ನಮ್ಮ ಭಾಗ್ಯವಶದಿಂದ ನೀನು ಬಂದು ಮಾನ ಉಳಿಸಿದೆ (ಪಣಾ. ೫೪). 'ಭಾಗ್ಯವಂತ' ಪರಾ. ೩. ಸುಖ; ಶ್ರೇಯಸ್ಸು. ೪. ಸಿರಿ ; ಐಶ್ವರ್ಯ ; ಸಂಪತ್ತು : ಈತಿಯಿಂ ಸೌಂದರ್ಯಸೌಭಾಗ್ಯಮನೊಸಗೆ[ಯ] ಪೌಲೋಮಿಯಿಂ ಭಾಗ್ಯವಂ ಭಾರತಿಯಿಂ ನಾನಾಕಲಾಕೌಶಲಮನತಿಶಯಂಬೆತ್ತಿರಲ್ . . . ದುಹಾರೇವಿ ಕಣ್ಗಡ್ಡಮಾದಳ್ (ಪುಸ್ತ. ೬-೦೩); ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ (ಕೃಕಂದ. ೦-೨೦೦ ಕ್ಷಂ); ಯೋಗ್ಯತೆವಜಸೆಡೆಸುವೊಡೆ ನಿಜವೈರಾಗ್ಯದಿಂದಾಧಿಕ್ಯಮನಿಸುವ ಭಾಗ್ಯ ಮಿರದ್ದೆ ಕಂದ (ಸಣಾ. ೦೬-೩೬); ಭಾಗ್ಯ ಬರುವಂಪಾದ್ದು ಭಾಗಮ್ಮ ತಪ್ಪದಾಳೇ ? (ಗಾಡ). [ಸಂ.]

ಭಾಗ್ಯದೈವ (ನಾ). ಅದೃಷ್ಟವನ್ನು ಕೊಡುವ ದೈವ; ಭಾಗ್ಯದೇವತೆ : ಕಾಯೆ ವಳೆಯ ಭಾಗ್ಯದೈವ ಗೆಲುವ ಸಿರಿಯ ಪಡೆಯನು (ಜಾಚಿ. ೬-೦೩೦). [ಸಂ.]

ಭಾಗ್ಯಲಕ್ಷ್ಮಿ (ನಾ). ೧. ಭಾಗ್ಯವನ್ನು ಕೊಡುವ ದೇವತೆ ; ಧನಲಕ್ಷ್ಮಿ. ೨. ಐಶ್ವರ್ಯ ; ಸಿರಿ; ಸಂಪತ್ತು : ಸೇರಲ್ ಬರೆ ಭಾಗ್ಯಲಕ್ಷ್ಮಿ ಬಿಡುವನೆ ಬಡವಂ (ಜಾಸಂಚ. ೩೬-೩೩). [ಸಂ. ಭಾಗ್ಯಲಕ್ಷ್ಮೀ]

ಭಾಗ್ಯವಂತ (ನಾ). ೧. ಪುಣ್ಯವಂತ; ಅದೃಷ್ಟಶಾಲಿ : ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು (ಕೃಕಂದ. ೦-೭೯ ಕಸುಪದ್ಯ); ಅವರು ತುಬ ಭಾಗ್ಯವಂತರು, ಒಳ್ಳೆಯ ಕೆಲಸ ಸಿಕ್ಕಿದೆ (ಮಾಂ). ೨. ಸಿರಿವಂತ ; ಐಶ್ವರ್ಯವಂತ : ಇವಳು ಭಾಗ್ಯವಂತರ ಮಗಳೆ? (ಜಾಸಂಚ. ೬). [ಸಂ. ಭಾಗ್ಯವತ್]

ಭಾಗ್ಯವಂತೆ (ನಾ). ೧. ಪುಣ್ಯವಂತೆ; ಅದೃಷ್ಟಶಾಲಿನಿ : ಅನ್ನೆನಿಸಿದಾಚ ಭೂಪನ ಕಾನ್ತೆ ದಯಾವಂತೆ ಭಾಗ್ಯವಂತೆ ನಿತಾಂತಂ ಶಾನ್ತೆ . . . ಮಹಾ ದೇವಿಯೆಂಬ ಪೆಸರಿಂದಸೆವಳ್ (ಎಕ. XX. ೦೨-೦೩; ೧೧೯೨); ಆ ಗುಣ ಶಾಲಿಯ ಕೈಹಿಡಿಯಬ ಪುಜಂಗಿ ತಂಬು ಭಾಗ್ಯವಂತೆ (ಪಣಾ). ೨.

ಸಿರಿವಂತೆ; ಧನವಂತೆ : ಆ ಬಡಹುಡುಗಿ ಸಿರಿವಂತರ ಮನೆಗೆ ಸೇರಿ ಭಾಗ್ಯವಂತೆಯಾದಳು (ಪೂರ್ಣ). [ಭಾಗ್ಯವಂತ + — ಎ]

ಭಾಗ್ಯಶಾಲಿ (ನಾ). = ಭಾಗ್ಯವಂತ ೧ : ಎಲೆಲೆ ಬಕುತರ ಭಾಗ್ಯಶಾಲಿಯ ಬೆಳಗಿಂವೆಲಾ ಶಿವಯನುತ ಪದನಳನಯುಗಳದಲೊಡಲನೀಡಾಡಿದನು ಹರುಷದಲಿ (ತೀರ್ಥಾ. ೯-೦೦). [ಸಂ. ಭಾಗ್ಯಶಾಲಿನ್]

ಭಾಗ್ಯಹೀನ (ನಾ). ಅದೃಷ್ಟವಿಲ್ಲದವನು; ದುರದೃಷ್ಟಶಾಲಿ; ನಿರ್ಭಾಗ್ಯ: ಅವನು ದೂರ ಪ್ರೀತಿ ವಿಶ್ವಾಸಗಳೂ ಇಲ್ಲದ ಒಬ್ಬ ಭಾಗ್ಯಹೀನ (ಕೂಡ). [ಸಂ.]

ಭಾಗ್ಯಾಧೀನ (ನಾ). ಹಿಂದಿನ ಜನ್ಮದ ಪುಣ್ಯಕ್ಕೆ ಅನುಸಾರವಾಗಿ ನಡೆಯುವುದು : ದೈವೇಚ್ಛೆ; ದೈವಾಯತ್ತ : ಪಂಡಿರೊಳ್ ಸರಿಗಂ ದೀಕೆಯ ನೀಂ ಬರ್ದುಂಬಿಪುದು ಭಾಗ್ಯಾಧೀನಂ (ಜಾತಿತ. ೩೬-೧೩). [ಸಂ.]

ಭಾಗ್ಯೋದಯ (ನಾ). ಅದೃಷ್ಟ; ಸುದೈವ : ಭಾಗ್ಯೋದಯವಿಹೀನನು ತಾನೆನುತ ಕುರುರಾಯ ವಿಷಸುಯ್ದ (ಕರ್ಣಾ. ೦-೨೮). [ಸಂ.]

ಭಾಜಕ (ಗು). ೧. ಭಾಗ ಮಾಡುವ; ವಿಭಾಗಿಸುವ : 'ಸಮಭಾಜಕ ವೃತ್ತ' ಪರಾ. (ನಾ). ೨. ಭಾಗಮಾಡುವವನು. ೩. [ಗಣಿತ] ಒಂದು ಸಂಖ್ಯೆಯನ್ನು ಯಾವುದರಿಂದ ಭಾಗಿಸಬೇಕೋ ಆ ಸಂಖ್ಯೆ : ಮೇಲಿನ ಉದಾಹರಣೆಯಲ್ಲಿ ೧೦೦ ಭಾಜ್ಯವೆಂದೂ ೬೩ ಭಾಜಕವೆಂದೂ ಕರೆಯಲ್ಪಡುತ್ತದೆ (ಗಣಿ. ೨೧೭). [ಸಂ.]

ಭಾಜನ (ನಾ). ೧. ಭಾಗಿಸುವುದು; ವಿಭಾಗ ಮಾಡುವುದು. ೨. ಶಬ್ದ, ಬಟ್ಟಲು ಮುಂತಾದ ಯಾವುದೇ ಪಾತ್ರೆ; ಭಾಂಡ : " ಅಮತ್ರಂ, ಭಾಜನಂ, ಪಾತ್ರಂ, ಸ್ಥಾಲಂ — ಈ ೪ ತಳಿಗೆ " (ಅಭಿಧಾ. ೪೪-೦೬೨) ; ಇದಿರೊಳ್ ಸೂಸುವ ಹೆಮಭಾಜನಚಯಕ್ಕತ್ಯಂತ ದಸ್ಯಕ್ಕೆ ಮೆಚ್ಚದನರ್ಘ್ಯಭರಣಕ್ಕಿ ಲೆಕ್ಕಮಣಮಿಲ್ಲ (ಅಜಿತ. ೯-೩೩) ; ಮುಂಜಗದೆಯಿಯವ ಕಾಲ್ದೊಳೆದಳು ಹೊನ್ನ ಭಾಜನ ಗಂಧವಾರಿಯಲಿ (ಪೊಟಾಚ. ೯-೨೮) ; ಪರಿಮಳಪತ್ರಕರಪರಿಮಿತಭಾಜನಂಗಳನೋಜೆಯಿಂ ತಿದಿದು . . . ಬರ್ಪ ಮಂದಿಯರಿಂದತಿಸಂಭ್ರಮಂ ಪೆಗಳೆ (ಜಾನಕೀ. ೪-೩೩ ಪ). ೩. ಪಾತ್ರನಾದವನು ; ಅರ್ಹ : ಮನುಜಂ ವಜ್ರಸಮುದ್ಭವಂ ಶಿಶುತೆಯೊಳ್ ವೃದ್ಧತ್ವದೊಳ್ ಸೌಖ್ಯಭಾಜನಕ್ಕುಂ . . . ಸ್ವಲ್ಪಸೌಖ್ಯಕ್ಕೆ ಭಾಜನಕ್ಕುಂ ಬಹುಯೋಗದೊಳ್ ವೆಗ್ಗವಾಪಯೋಗದೊಳ್ ಪುಟ್ಟದಂ (ಜಾತಿತ. ೦೩-೦೭) ; ಪುಣ್ಯಾತ್ಮರಿರ್ಪತಿಗಂ ರಾಜ್ಯಕ್ಕಮೆಷ್ಟೆ ಭಾಜನಮಾದರು (ಪಾ. ೪. ಆದಿ. ೦೦೬-೦೦ ; ೧೬೨) ; ಅನಾಕುಲೋಜ್ವಲಭೋಗ್ಯಸಂಗ್ರಹಂ ಗೃಹಮಖಿಲಸುಖಿಭಾಜನಂ ಜನಂ ತದ್ದೇಶದ (ಪದ್ಮಪು. ೬-೦೬) ; ಭರತಂ ಮಹಾತ್ಮನೆನಿಪನು . . . ಬಾಲ ಋಷಿಯೆಂಬುತೆ ಭಾಜನನಾಗಿ ರಾಮಗೌರವಕೆ (ತ್ರಿಪುರಾ. ೫೬-೬೮೦).

ಭಾಜನವಾಗು = ಈಡಾಗು ; ಗುರಿಯಾಗು ; ಪಕ್ಕಾಗು : ನರನ ಪಾತಿಗೆ ದ್ರೌಪದಿಯ ತೊತ್ತಿರುಗಳುಪಹಾಸ್ಯಕ್ಕೆ . . . ಭಾಜನವಾದನ್ಯೆ (ಭಾರತ. ೦೨-೯). [ಸಂ.]

ಭಾಜನಾಂಗ (ನಾ). [ಜೈನ] ಪತ್ರುಬಗೆಯ ಕಲ್ಪವೃಕ್ಷಗಳಲ್ಲಿ ಒಂದು : ಆತ್ಯವೆಂಬೊಲ್ಯವಾದ ಪಾತ್ರೆಗಳನ್ನು ಕೊಡುವ ಮರ : ಭಾಜನಾಂಗ ತರುವಂ ಪೋಲ್ವಂ ಸುರಾಧೀಶ್ವರಂ (ಅಜಿತ. ೬-೩೬) ; ಬಹುಭಾಜನಂಗಳಂ ನಿರ್ಪಹಿಸುವುದವರವರ್ಗೆ ಭಾಜನಾಂಗಮಹೀಜಂ (ಶಾಂತಿಪು. ೬-೦೦೪) ; ಭಾಜನಾಂಗಮೆಂಬುದು ಕನತ್ಕನಕಮಣಿಖಚಿತ ವಿವಿಧಭಾಜನವಿಶೇಷಂಗಳ ನೀವುದು (ಜಿನಪಂಚ. ೯). [ಸಂ.]

ಭಾಜ್ಯ (ನಾ). ೧. ಭಾಗಮಾಡಬೇಕಾದುದು ; ಭಾಗ ಮಾಡಲ್ಪಡುವುದು ; ಹಂಚಲ್ಪಡುವುದು : ವಿಕಪ್ರದೇಶಾದಿಷು ಲೋಕಾಕಾಶಕ ಪ್ರದೇಶಾದಿಗಳೊಳ್ ಭಾಜ್ಯಃ ಪರಿಸಲ್ಪಡುವುದು (ತತ್ತ್ವಪ್ರ. ೨೩೩). ೨. (ಪಿತ್ರಾರ್ಜಿತವಾದ ಭೂಮಿ ಮೊದಲಾದುವುಗಳ) ಪಾಲು : ಭಾಗ. ೩. [ಗಣಿತ] ಭಾಗಿಸಲ್ಪಡುವ ಅಂಕಿ, — ಸಂಖ್ಯೆ : ಮೇಲಿನ ಉದಾಹರಣೆಯಲ್ಲಿ ೧೦೦ ಭಾಜ್ಯವೆಂದೂ ೬೩ ಭಾಜಕವೆಂದೂ ಕರೆಯಲ್ಪಡುತ್ತದೆ. ಭಾಜ್ಯವು ಭಾಜಕದಿಂದ ಕಡಮೆಯಾದಲ್ಲಿ, ಮೊದಲನೆಯ ಭಾಗಲಬ್ಧವನ್ನು ೦ ಎಂದು ತೆಗೆದುಕೊಳ್ಳಬೇಕು (ಗಣಿ. ೨೧೭). [ಸಂ.]

ಭಾಟ$_1$ (ನಾ). ೧. ಕೂಲಿ ; ಮಜೂರಿ. ೨. ಮನೆ ಮೊದಲಾದುವುಗಳ ಬಾಡಿಗೆ. [ಸಂ.]

ಭಾಟ$_2$ (ನಾ). ಹೊಗಳುಭಟ್ಟ ; ಸ್ತುತಿಪಾಠಕ : ವೈಭವವು . . . ಉತ್ಸಾಹಿಯ, ಉದ್ಯೋಗಿಯ ಮುಂದೆ, ಭಾಟನಂತೆ ಸ್ತುತಿಪಾಠವನ್ನು ಹಾಡುತ್ತ ಸಿಂಹಾಸನದ ಹಾದಿಯನ್ನು ತೋರಿಸುವವಲ್ಲವೇ? (ಅಜಿತ್. ೭೩) ; ಈ ಭಾಟನ ಮಾತುಗಳನ್ನು ದಿಙ್ಮೂಢರಂತೆ ತನ್ನ ಪಕ್ಷದವರು ಕೇಳುತ್ತ ಕುಳಿತದ್ದು ವೇಣೂಬಾಯಿಗೆ ಸಹನವಾಗಿಲ್ಲ (ಗಂಜಿಹಾ. ೦೦೩).

[← ಹಿಂ. ಭಾಟ್ ; ಕುಡಾ. ಭಾಟ./ಸಂ. ಭಟ್ಟ./ಪ್ರಾ. ಭಟ್ಟ]

ಭಾಟಕ (ನಾ). ಬಾಡಿಗೆ : "ಭಾಟಕಃ, ಆವಕ್ರಯಃ — ಈ ೨ ಬಾಡಿಗೆ" (ಅಭಿಧಾ. ೧೪-೨೦೯). [ಸಂ.]

ಭಾಟಾ, ಬಾಟಾ, ಬಾಟೆ, ಭಾಟಿ (ನಾ). ದಾರಿ ; ಮಾರ್ಗ ; ರಸ್ತೆ : 'ಭಾಟಾಮಾರ್ಗ' ಪರಾ. **ಬಾಟಾ** : 'ಬಾಟಾಮಾರ್ಗ' ಪರಾ. **ಬಾಟೆ** : ಆ ಭಾರಕ್ಕೆ ಮುರಿಯದಂತಹ ಬಲವಾದ ಶಕ್ತವಾಗಬೇಕು. ಹಳ್ಳ ತಿಟ್ಟುಗಳಲ್ಲಿ ಚಕ್ರಗಳೂ ಆಚ್ಚುಗಳೂ ಮುರಿಯದಂಥಹದ್ಧೃಢವಾದ ಬಾಟೆಯನ್ನು ನಿರ್ಮಾಣಮಾಡಿಕೊಳ್ಳಬೇಕಾಗುವುದು (ಕಾಂಚಿ. ೩೦೬). **ಭಾಟಿ** : 'ಭಾಟಿಮಾರ್ಗ' ಪರಾ. [← ತೆಲು. ಬಾಟ./ಸಂ. ಬಾಟ./ಹಿಂ. ಬಾಟ್]

ಭಾಟಾಮಾರ್ಗ, ಬಾಟಾಮಾರ್ಗ, ಭಾಟಿಮಾರ್ಗ (ನಾ). ಹೆದ್ದಾರಿ; " (ದೇಶದ) ಮುಖ್ಯರಸ್ತೆ ; ಭಾಟಾಮಾರ್ಗ " (Trunk-Road ೨೦೪೬): ಕುಡುಕನಿಗಿರುವ ಲೈಸನ್ಸ್ ಯಾರಿಗಿದೆ ? . . . ಬಟ್ಟೆಯ ಪರಿವಿಲ್ಲದೆ ಭಾಟಾಮಾರ್ಗಗಳಲ್ಲಿ ಅಲೆಯುತ್ತಾನೆ (ಕಣ್ಣಿ. ೦೩); ಸಂಚಾರ ಮಾಡುವುದಕ್ಕೆ ಭಾಟಾಮಾರ್ಗವಾದ್ದರಿಂದ. . . ಚತ್ರವನ್ನೂ ವಿಸರ್ಜಿಸಿದರು (ಪುಜಾಕ. II, ೦೩೪). **ಬಾಟಾಮಾರ್ಗ** : ದಾರೀನು ಬಾಟಾ ಮಾರ್ಗವ್ವಾ ? ಕಾಡುದಾರಿ (ಕಂಗಳ್ಳ. ೩೩೦); ಜಾನುಭೋಗರು . . . ಬಾಟುಮಾರ್ಗದಲ್ಲಿ ಅವರ ಊರಾದ ತಳ್ಳೂರಿಗೆ ಹೋಗುತ್ತಿದ್ದರು (ಪಜ್ಜೂರು. ೦೩೦). **ಭಾಟಿಮಾರ್ಗ** : ಭಾಟಿಮಾರ್ಗಕ್ಕೆ ಪಾರ್ಶ್ವದಲ್ಲಿ ದುರ್ಗಾದಾಸನು ಮಾರ್ಗಾಯಾಸದಿಂದ ಕ್ಷಾಂತನಾಗಿ ಮಲಗಿಕೊಂಡು ನಿದ್ರೆಹೋಗುತ್ತಿದ್ದನು (ಕೋಟಿವಿ. ೩೩). [ಭಾಟಾ + ಮಾರ್ಗ]

ಭಾಟಿ (ನಾ). ೧. ಕೂಲಿ ; ಮಜೂರಿ. ೨. ಬಾಡಿಗೆ. ೩. ವೇಶ್ಯೆಯು ಸಂಪಾದಿಸುವ ಹಣ. [ಸಂ.]

ಭಾಟಿಗೆ 'ಭಾಟ್ಟಿಗೆ' ನೋ.

ಭಾಟೆ 'ಭಾಟಾ' ನೋ.

ಭಾಟೆಮಾರ್ಗ 'ಭಾಟಾಮಾರ್ಗ' ನೋ.

ಭಾಟ್ಟ (ಗು). ೧. ಕುಮಾರಿಲಭಟ್ಟನಿಗೆ ಸಂಬಂಧಿಸಿದ : 'ಭಾಟ್ಟಮತ' ಪರಾ. (ನಾ). ೨. ಕುಮಾರಿಲಭಟ್ಟನ ಅನುಯಾಯಿ. [ಸಂ.]

ಭಾಟ್ಟದರ್ಶನ (ನಾ). ಕುಮಾರಿಲಭಟ್ಟನು ಪ್ರತಿಪಾದಿಸಿದ ಮಿಮಾಂಸಾ ತತ್ತ್ವ : ಆ [ಹೊ]ಲಂ ನಾಗವಾಯಿಯ [ದಿ]ಗ್ಭಾಗೆಯ ಅಜಿಲೂರ ಎಡವಾ ಅನದ [ಕ][ಳ]ಗೆ ಭಾಟ್ಟದರ್ಶನವ್ಯಾಖ್ಯಾತೃಗೆ ಮತ್ತರು ೩೫ (ಕಣ್ಣ. ೬-೨-೨೦೪ ; ೧೦೬೦). [ಸಂ.]

ಭಾಟ್ಟಮತ (ನಾ). ಕುಮಾರಿಲಭಟ್ಟನೆಂಬ ಮಹಾವಿದ್ವಾಂಸನಿಂದ ಪ್ರಚುರವಾದ ಮತ ; ಪೂರ್ವಮಿಮಾಂಸಾಶಾಸ್ತ್ರದ ಒಂದು ಅವಾಂತರಭೇದ : ಶಿವನಿಗೆ ಕರ್ಮಾಧಿಕಾರಂ ಭಾವಮೆಂಬುದು ಭಾಟ್ಟ

ಘತವು (ಪಪಚ. ೯-೬); ಜೈಮಿನೀಯಮಿಮಾಂಸಾಶಾಸ್ತ್ರಕ್ಕೆ ಪ್ರಮುಖ ಪ್ರಚಾರಕನು ಕುಮಾರಿಲಭಟ್ಟ . . . ಇವನ ಮತಕ್ಕೇ ಭಾಟ್ಟಮತವೆಂದು ಹೆಸರು (ಜಾಪ್ರ. ೦೫೯). [ಸಂ.]

ಭಾಡಿಗೆ 'ಬಾಡಗ' ನೋ.

ಭಾಣ (ನಾ). [ಕಾವ್ಯವಿಶಾ]ದಶರೂಪಕಗಳಲ್ಲಿ ಒಂದು; ವಿಕಟಾತ್ಮಾ ಭಿನಯದಿಂದ ಕೂಡಿರುವ, ವಿಟನಿಂದ ವರ್ಣಿಸಲ್ಪಡುವ ಧೂರ್ತ ಚರಿತ್ರೆ.—ವಿಶ್ವಾಂಕರೂಪಕ : ವ್ಯಾಕರಣಕ್ಕೆ ಭಾಣಕ್ಕೆ ಪ್ರಹಸನಕೆ ನವರಸಗಳಿಗೆ ತನ್ನೊಳು ಧಿಕ್ಕರಿಪ ಕವಿಯಿಲ್ಲದಿರೆ ನೋಡಿ ಮತ್ಕರ್ತೃಲೋಕಕ್ಕಿವನ ಕವಿಶರಭಭೇರುಂಡನೆಂದು ಪೆಸರಿಕ್ಕಿ ಕರೆವುದು ಕವಿನಿಕರವು (ಶಾಶಕ. ೩-೩೬); ಇದರಲ್ಲಿ ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥಿ, ಅಂಕ, ಈಹಾಮೃಗ—ಎಂಬ ಹತ್ತು ವಿಧಗಳವೆ (ಜಾಂಕ್ರ. I, ೩೫೬); ಭಾಣ—ಕಲ್ಪಿತ; ಕಳ್ಳಕಾಕರ ಧೂರ್ತಚರಿತ್ರೆ (ಕೃಚಿ. ೨೦೯). [ಸಂ.]

ಭಾಣಸವೆರ್ಗಡೆ 'ಬಾಣಸವೆರ್ಗಡೆ' ನೋ.

ಭಾಣಸಿಗೆ 'ಬಾಣಸಿಗೆ' ನೋ.

ಭಾಣಸುವೆರ್ಗಡೆ 'ಬಾಣಸವೆರ್ಗಡೆ' ನೋ.

ಭಾತಿ (ನಾ). ಬೆಳಕು ; ಪ್ರಕಾಶ; ಕಾಂತಿ : ಭಾತಿ ಮಿಗೆ ಉತ್ತುಂಗವೃಷಭ ಸಮೇತವಾಗಿಸೆವ ಕೇತನಾನೀಕಪ್ರಕೀರ್ಣದೊಳು . . . ರಾಜಿಸಲು (ಜಪಚ. ೩-೨೦) ; ಜ್ಯೋತಿ ಕತ್ತಲೆಯಲ್ಲಿ ಭಾತಿಯಿಂದುದಿಸಿದಂತೆ ಪ್ರೀತಿಯಿಂದೆಸವ ಶಿವಯೋಗಿ ಜಗಕೆಲ್ಲ ಜ್ಯೋತಿ ತಾನಕ್ಕು (ಪಪಗ. ೩೨೦); ಬಸವ ಶರಣನೆ ಪಾಪವಳಿವುದು . . . ಬಸವ ಶರಣನೆ ಪರಮಪಾವನಭಾತಿ ಸಂದಿಸುಗು (ಜಪಚ. ೩-೦). [ಸಂ.]

ಭಾತಿಸು (ಕ್ರಿ). ಶೋಭಿಸು; ಪ್ರಕಾಶಿಸು: ಈ ತೆರದೊಳಾ ಕಾಶಿ ಸಾತಿಶಯದಿಂದ ಭಾತಿಸುತಲಿರುತಿರಲು (ತಪುಚ. ೭೬). [ಭಾತಿ + —ಇಸು]

ಭಾತು (ನಾ). ೧. ಭತ್ತ; ನೆಲ್ಲು : (೪). ೨. ಕುದುಪಲಕ್ಕಿ; ಕುಸುಬಲಕ್ಕಿ : (೪). ೩. ಅನ್ನ; ಬೋನ; ಆಹಾರ. ೪. ವಿಶೇಷವಾಗಿ ಕೇಸರಿಭಾತು, ವಾಂಗೀಭಾತು ಮುಂತಾಗಿ ತುಪ್ಪ, ಸಕ್ಕರೆ ಅಥವಾ ತರಕಾರಿ, ಮಸಾಲೆ ಮುಂತಾದ ರುಚಿಕರವಾದ ಪದಾರ್ಥಗಳಿಂದ ಸಂಸ್ಕರಿಸಿದ ಅನೇಕ ಬಗೆಯ ಕಲಸನ್ನಗಳ ಹೆಸರಿನ ಕೊನೆಯಲ್ಲಿ ಸೇರುವ ಪದ : ಇಂದು ಊಟಕ್ಕೆ ಯಾವುದಾದರೂ ಭಾತು ಮಾಡಬೇಕು (ಡಿಜ). 'ಭತ್ತ' ಪರಾ. [← ಹಿಂ. ತುರಾ. ಭಾತ್. /ಸಂ. ಭತ್ತ./ಪ್ರಾ. ಭತ್ತ]

ಭಾತ್ಕೃತಿ (ನಾ). ಭಾ ಭಾ ಎಂಬ ಧ್ವನಿ ; ಭಯಂಕರ ಧ್ವನಿ ; ಗರ್ಜನೆ: ಜರದಜಗರಭೂತ್ಕೃತಿ ಕೇಸರಿಭಾತ್ಕೃತಿ . . . ವಿಹಗಸಮುತ್ಕರಚೀತ್ಕೃತಿ ತಿದಿ ವಿಪಿನದೊಳ್ ಬಿಡದೆಸೆಗುಂ (ಜಾಪಚ.೩-೬೨). [ಸಂ.]

ಭಾದು (ನಾ).=ಭಾದ್ರಪದ : "ನಭಸ್ಯಃ, ಪ್ರೌಷ್ಠಪದಃ, ಭಾದ್ರಃ, ಭಾದ್ರಪದಃ – ಈ ೪ ಭಾದ್ರಪದಮಾಸದ ಹೆಸರುಗಳು" (ಸಿಶ್ಲೋ. ೧೦). [ಸಂ.]

ಭಾದ್ರಪದ (ನಾ). ಚಾಂದ್ರಮಾನದ ಹನ್ನೆರಡು ತಿಂಗಳುಗಳಲ್ಲಿ ಆರನೆಯದು : "ಭಾದ್ರಪದಮಾಸಮಂ ಷಷ್ಠಮೆಂಬುದು" (ಕಣಾಮು. ೦೯-೦೦೪) ; ಸ್ಥಿರಭಾದ್ರಪದಸಿತಾಷ್ಟಮಿಗಿರದೊಪ್ಪಿರೆ . . . ಪುಷ್ಪದಂತ ಜಿನಪತಿ ಪರಮಶ್ರೀಮುಕ್ಕಿಲಕ್ಷ್ಯಿಯಂ ಕೆಯ್ಕೊಂಡಂ (ಶಿಪ್ರ. ೦೯-೩೬); ಪಂಚಾಕ್ಷರಿಯವಿಯರಿರುಮಿಳಪಾತ್ರಗಳ ಜಪ . . . ಸ್ತುತಿ ಸುಡುವುದು ಭಾದ್ರಪದದರಿ (ಗಗಾ. ೯-೬೯); ಒಂದು ಕಡೆಯಿಂದ 'ಚೈತ್ರ. . . ಭಾದ್ರಪದ . . . ಫಾಲ್ಗುಣ' ಎಂದು ಒಬ್ಬೊಬ್ಬರನ್ನಾಗಿ ತೋರಿಸಿದರು (ಕಂಚಿ. ೩೨). [ಸಂ.]

ಭಾದ್ರಪದೆ (ನಾ). ಪೂರ್ವಾಭಾದ್ರಪದೆ ಮತ್ತು ಉತ್ತರಾಭಾದ್ರಪದೆ ಗಳೆರಡನ್ನೂ ಕುರಿತಂತೆ ಒಟ್ಟಿಗೆ ಸೇರಿಸಿ ಹೇಳುವ ಶಬ್ದ : ಇಪ್ಪತ್ತೈದು ಮತ್ತು ಇಪ್ಪತ್ತಾರನೆಯ ನಕ್ಷತ್ರ. [ಸಂ. ಭಾದ್ರಪದಾ]

ಭಾನ (ನಾ). ೧. ಕಾಣಿಸುವುದು ; ಗೋಚರಿಸುವುದು ; ಭಾಸವಾಗುವುದು : ಭಾಳದೊಳೆಮಳಭೂತಿಯ ಭಾನಾ ಪೊಲಗೆಯೊಳು ನಾಮಾಮೃತಪಾನಾ (ಆಪರೂ. ೬೬); ಮಾನಸವ ಚಿಂತಿವಿಡಿದಂದೊರ್ವನೆರಡಾಗಿ ತಾನದಾರೊಳು ವಾದಿಸುವನಂತೆ ಬಾಯಿಂದೇನನೋ ನುಡಿಯುತ್ತ ಕೈಸನ್ನೆ ಗೈಯುವನು ಭಾನಪೊಂದರೊಳೆರಡು (ಪುಂಚಾಶ. ೩೩). ೨. ಅರಿವು ; ಜ್ಞಾನ ; ತಿಳಿವಳಿಕೆ. ೩. ಪರಿವೆ; ಪ್ರಜ್ಞೆ : ಸೂನುಗಳ ಗಾನವನು ಕೇಳುತ . . . ಸಭೆಯರು ಭಾನವನು ಮರೆತಂದದಿಂ ಕಣ್ಣೀರ ಸುರಿಸಿದರು (ತಪುಚ. ೦೩-೩೩); ಜೋಶಿಯವರು ಹುಟ್ಟಿನ ಭರದಲ್ಲಿ ಮೈಮೇಲಿನ ಭಾನವನ್ನೇ ಮರೆತಂತಿತ್ತು (ಪುಚರಿತ. ೪೦); ದಾದಲ್ಯಾ . . . ಭಾನರಹಿತಶಿಲಾಪ್ರತಿಮೆಯಾಗಿದ್ದ (ಲಚಪ್ರ. II. ೨೮೨). ೪. ನೆನಪು: ಜ್ಞಾಪಕ; ಸ್ಮರಣೆ: ಕಾಸದೆ ತಮಗಾದ ದುಃಖದ ಭಾನವನು ಮಾನಿನಿಗೆ ಮೇಣಾ ಜ್ಞಾನವರನಿಗೆ ಪರಮ ಪರುಷವೆ ಯುಂಟು ಮಾಡಿಹುದು (ಶಕುಚ. ೦೩-೨೩). ೫. ಹೊಳಪು ; ಪ್ರಕಾಶ.

ಭಾನತಪ್ಪು = ಜ್ಞಾನತಪ್ಪು: ಪ್ರಜ್ಞಾಹೀನನಾಗು ; ಮೈಮರೆ : ಅವನ ತಂದೆ ಅಜ್ಜ ಎಲ್ಲ ಕಳ್ಳು ಕುಡಿಯುವುದರಲ್ಲಿ ಭಾರೀ ಹೆಸರು ಹೋದವರು. ಎಷ್ಟು ಕುಡಿದರೂ ಭಾನತಪ್ಪುವರಲ್ಲ (ತಾಯ. ೧೩). [ಸಂ.]

ಭಾನಗಡಿ. ಬಾನಗಡಿ (ನಾ). ೧. ತೊಡಕು ; ಗೊಂದಲ ; ಜಟಿಲತೆ : ಆಕ್ಷಿಂದ ಪತ್ರಗಳು ಯಾವಾಗ ಬರತೊಡಗಿದವೋ ಆಗ ನಮಗೆ ಈ ಭಾನಗಡಿ ಲಕ್ಷ್ಯಕ್ಕೆ ಬಂತು .(ಸ್ವ.ಚಿ. ೦೪೨). ೨. ಆಚಾತುರ್ಯ ; ಮಾಡಬಾರದ ಕಾರ್ಯ ; ದುರ್ಘಟನೆ : ಬೆಳೆದ ಹೆಣ್ಣನ್ನು ಮನೆಯಲ್ಲಿಟ್ಟುಕೊಂಡು ಬಳಿತರು. ನಾಳೆ ಏನಾದರೂ ಏನ್ತರಿಸಲು ಬಾರದ ಭಾನಗಡಿಯಾದರೆ ? (ರಚಪ್ರ. ೦೬); ಮತ್ತೇನರೆ ಭಾನಗಡಿ ಮಾಡಿರುವರೇನು ? (ಕಾಗಿ. ೭೬); ಯಾಕಪ್ಪಾ ಸುರುಮಾಡಿದೆ ಭಾನಗಡಿ .. ಕಾಮಿಣಿಯ ಜೊತೆಗೆ ? (ಹುಚ್ಚಿ. ೬). **ಬಾನಗಡಿ** : ೩. ಕುತ್ಕಂತ್ರ ; ಕಿತಾಪತಿ : ನೀಲೀದೇ ಏನಾದ್ರೂ ಬಾನಗಡಿ ಇದ್ದಿರಬೇಕು (ಕಮ್ಮ.೩. ೦೬); ಅವನು ದಂಯನನ್ನು ತಪ್ಪಿ ಕ್ರಿಶ್ಚಿಯನ್ ಜಾತಿಗೆ ಸೇರಿಸಲು ನಡಸಿರುವಂಥ 'ಬಾನಗಡಿ'ಗಳೆಲ್ಲ ಭಟ್ಟರಿಗೆ ಹೊಸವಲ್ಲ (ಕಂಬಾಣ. ೩೦).

[←ಮರಾ. ಭಾನಗಡ]

ಭಾನಗೇಡಿ (ನಾ). ಬುದ್ಧಿ ಇಲ್ಲದವನು ; ಅವಿವೇಕಿ : 'ಭಾನಗೇಡಿತನ' ಪರಾ. [ಭಾನ + ಕೇಡಿ]

ಭಾನಗೇಡಿತನ (ನಾ). ವ್ಯವಹಾರಜ್ಞಾನವಿಲ್ಲದಿರುವಿಕೆ ; ಅವಿವೇಕ : ಪೆಟ್ಟಿನ ಕೈಚಳಕ ಉಮೇಶನಿಗೆ ಬಾರದಿದ್ದರೂ ನ್ಯಾಯಾನ್ಯಾಯವನ್ನು ತಿಳಿದು ಹುಮಾನಿಯಾಗಿ ಸತ್ಯವನ್ನೇ ಸಾಧಿಸಲು ಮಾತ್ರ ಕಲಿತಿದ್ದನು. ಇವನ ಈ ಭಾನಗೇಡಿತನವೇ ಭಟ್ಟರಿಗೆ ಗಂಟಲ ಗಾಣವಾಗಿದ್ದಿತು (ಬಾಕಪ್ರ. ೩೬). [ಭಾನಗೇಡಿ + — ತನ]

ಭಾನವ (ಗು). ೧. ಸೂರ್ಯನಿಗೆ ಸಂಬಂಧಿಸಿದ. (ನಾ). ೨. ಸೂರ್ಯನ ಮಗ. ೩. ಶನಿ : ಭಾನವನುಂ ಮಾಹೇಯನುಂ ತವೋಗ್ರಹವೆನಿವರ್ (ಜಾಪಚ. ೯-೦). [ಸಂ.]

ಭಾನವಿ (ನಾ). ೧. ಸೂರ್ಯನ ಮಗ. ೨. ಶನಿ : ಆದಿತ್ಯನಿಪ್ಪತ್ತು ಭಾನವಿಯಯ್ವತ್ತು ನಿಸರ್ಗಭಾವದ ದಶಾಸಂವತ್ಸರಕ್ಕೀಶರಪ್ಪವರ್ (ಜಾಪಚ. ೯-೦೪). [ಸಂ.]

ಭಾನಾಳಿ (ನಾ). ತೇಜಸ್ಸಿಗೆ ಕೇಂದ್ರವಾಗಿರುವವನು ; ತೇಜೋನಿಧಿ : ನಮುನಂ ವೀಲಸರೋಜಮಂ ಸೊಸುಗುಂ . . . ಊನಮ್ಮಾಡುಗುಂ ಡಾಪು ಬಾಬಿಯ ಕಂಭಂಗಳನೆಂದೊಡೆಂಪೊಗಟ್ವಿನೋ ಭಾನಾಭಿಯುಂ ನಾಭಮುಂ (ಕಂಣಮಾ. ೦-೧೩). [ಸಂ.]

ಭಾನಾಮತಿ (ನಾ). ಯಕ್ಷಿಣಿ, ಮಾಟ ಮೊದಲಾದ ತಾಂತ್ರಿಕವಿದ್ಯೆ : ಜಾದೂಗಾರಿಕೆ : ಗುಲ್ಬರ್ಗಜಲ್ಲೆಯಲ್ಲಿ ಭಾನಾಮತಿ ತಾಂತ್ರಿಕವಿದ್ಯೆ ಅಷ್ಟೇನೂ ಹೊಸವಿಷಯವಲ್ಲ (ಪ್ರಜ್ಞೆ). ¶ ವಿಕ್ರಮಾದಿತ್ಯರಾಜನ ಹೆಂಡತಿಯಾದ 'ಭಾನುಮತಿ' ಎಂಬುವಳು ಪ್ರಸಿದ್ಧ ಜಾದೂಗಾರಿಣಿ ಯಾಗಿದ್ದಳೆಂಬ ಐತಿಹ್ಯವಿದೆ.

[← ಹಿಂ. ಭಾನಮತೀ, ಭಾನುಮತೀ = ಜಾದೂಗಾರಿಣಿ ; ದುರ್ಗಾ. ಭಾನಾಮತೀ, ಭಾನುಮತೀ]

ಭಾನು (ನಾ). ೧. ಹೊಳಪು ; ಪ್ರಕಾಶ. ೨. ರಶ್ಮಿ ; ಕಿರಣ : "ಉಸ್ರಃ . . . ಭಾನುಃ, ಕರಃ, ಪಾದಃ, ವಿರೋಚಃ, ಗೌಃ – ಈ ೩೨ ರಶ್ಮಿಗಳ ಪೆಸರ್" (ಶಾಂಶಾ. ೬-೭೯); ಮಡದೀ ನೀಂ ಪಡೆವಾ ಸುತಂ . . . ಬಿಡಿಸುಂ ತನ್ನಯ ತೇಜದಿಂದೆ ಮಿಗುವುದ್ಯಾಸಾಪಂ ಭಾನುವಂ (ಜಜ. ೨-೮೩). ೩. ಸೂರ್ಯ ; ಆದಿತ್ಯ : "ಆದಿತ್ಯಃ, ಸವಿತಾ . . . ಭಾನುಃ, ಬ್ರಧ್ನಃ . . . ತ್ರಯಾತನುಃ – ಈ ೪೭ ಆದ್ಯಿತನ ಪೆಸರ್" (ಶಾಂಶಾ. ೭-೩೬); ಚಿಕೋರಂಗೆ ಚಂದ್ರಮನ ಬೆಳಗಿನ ಚಿಂತೆ ಅಂಬುಜಕ ಭಾನುವಿನುದಯದ ಚಿಂತೆ (ಜಜ. ೩೬೪); ಭಾನು ಶಶಿಕೋಟಿತೇಜೋಗಾತ್ರ ತ್ರೈನೇತ್ರ (ಕ್ರಿಕಾ. ೨-೧೩); ಪೊಡವಿಗೆ ಮಂಗಳಂ, ದಾಂಗೆ ಭಾನು ಪುಟ್ಟಿ ದಂತಿರೆ ದಶರಥಂ ಪುಟ್ಟಿ (ರಾಪಾಕ್ಷ. ೭-೦೦). ೪. ರಾಜ ; ಚಕ್ರವರ್ತಿ. ೫. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ : ಭಾನು ಲಭಗಳೆನೆವ ಚರಣ ತಾಮರೆದಱಕ್ಕು . . . ಭೋಗನಾಮ ಸಾನುರಾಗ ಮಪ್ಪದಿಂದು (ಕಂದಪದ್ಯಾ. ೪- ೩-೩೭); ಆ ವಿಕೇತನ ಸುತ್ತ ದ್ವಾರವು ಭಾನುಸಂಖೆಯೊಳಿಹವು (ಜ್ಞಾಕ್ಷ. ೨-೩೭). ೬. [ಛಂದ] ಎರಡು ಲಘುಗಳ ಮಧ್ಯೆ ಒಂದು ಗುರುವಿರುವ ಗಣ ; ಜಗಣ (ು ಾ ು) : ಪ್ಯೋನಮದ್ಯಯಂ ಭಾನುಕಪರ್ದಿಯುಗ್ಮಂ ತಾಮಾಗಿರಲ್ಕೆ (ಕಂದಪದ್ಯಾ. ೨-೦೦೩). [ಸಂ.]

ಭಾನುಜ (ನಾ). ೧. ಸೂರ್ಯನ ಮಗ. ೨. ಶನಿ. ೩. ಯಮ : ಆ ಭಾನುಜನೊಳು ಈಪೇಶನೊಳು ಲಿದುಱೊಳು ಮೃತ್ಯುವಿನೊಳಂ ಕಾಲ ನಾಮಮಕ್ಕುಂ (ಪಂಗಣಾ. ೦೫೬-೩೮). ೪. ಸಂಗ್ರೀವ. ೫. ಕರ್ಣ : ವೀರರಿನಿಬರು ಪೆರ್ದು ರಿಪುವಿಗಂ ಭಾನುಜನ ಸೂರೆಗೊಟ್ಟರು (ಪಜ್ಞಗ. ೬೬-೦೩). [ಸಂ.]

ಭಾನುಜೆ (ನಾ). ಸೂರ್ಯನ ಮಗಳು ; ಯಮುನೆ : ಜಿತಭಾನುಜೆ ಗೋಮತಿ ಧೂತಪಾಪೆ ಭಾಸುರತರ ಲೋಕಪಾವನೆ . . . ಕವೇರಜೆ (ರಾಪಕ್ಷ. ೫-೬). [ಸಂ. ಭಾಪುಜಾ]

ಭಾನುತನುಜ (ನಾ). ೧. ಸೂರ್ಯನ ಮಗ. ೨. ಕರ್ಣ. ೩. ಸಂಗ್ರೀವ. [ಸಂ.]

ಭಾನುತನೂಜ (ನಾ). ೧. ಸೂರ್ಯನ ಮಗ. ೨. ಕರ್ಣ : ನೀನು ಳ್ಕೊಡುಂಟು ಬೆಳ್ಕೊಡ ನೀನಿಲ್ಲದಿರ್ಪೆಲ್ಲಮೊಳವೆ ಭಾನುತನೂಜಾ (ಕಪುದ. ೦೫೬ ಕೃಡೀ). [ಸಂ.]

ಭಾನುದಾಸ (ನಾ). ಓಬ್ಬಾತನ ಹೆಸರು: ಆಳು ಎಱಿದು ಸಱೊನ್ ಭಾನು ದಾಸನ್ ಜಯಮಿತ್ರುವ್ (ಕ್ರಿಪು. ೦೯೩೯,೨೨-೩ ; ಸು. ೭೬೦). [ಸಂ.]

ಭಾನುನಂದನ (ನಾ). ೧. ಸೂರ್ಯನ ಮಗ. ೨. ಸಂಗ್ರೀವ : ಆ ಭಾನು ನಂದನ ಕವಿದು ಹಳಚಿದ ದಾನವರ ಪಡೆಯಾ (ಕಾಚಾ. ೩೭-೨೩). ೩. ಶನಿ : ಭಾನುನಂದನ ಬುಧ ಮಂಗಳರಾ ಬಲವ್ ತಪ್ಪಿದರೇನು ದೀನನಾಥ ಶ್ರೀ ಪತಿಂದರವಿತಲನ ಧ್ಯಾನವೆಳ್ಕ ಪರಿದಾಸರಿಗೆ (ಪ್ರಥಿಪ. ೦-೦೩೯-೩). [ಸಂ.]

ಭಾನುಬಿಂಬ (ನಾ). ಸೂರ್ಯಮಂಡಲ : ಉದ್ಗತಭಾನುಬಿಂಬಮಂ . . . ನಿಜಮುಖದೊಳ್ ಪಗುವ ಮತಂಗಜಪತಿವೆರಸಿಂತು ಕನಸು ಪದಿನಾಱು ಮನಂಬುಜವದನೆ ಕಂಡಳ್ (ತೀತ್ಥ. ೯-೧೯); ಭಾನುಬಿಂಬವ ಮೊಗೆವ ಲೊಡೆಯು ಮಾನಸದ ಧಕ್ಕಡರು ಕಲಿ ಪವಮಾನತನಯನ ಮುಂತ್ತಿಕೊಂಡರು ರಾಯರಾವುತರು (ಶಾಂಪ. ೦೯-೦೩). [ಸಂ.]

ಭಾನುಮಂತ (ನಾ). ಕಿರಣಗಳುಳ್ಳವನು ; ಸೂರ್ಯ : ಮಾನವಮಾನಸ ಕಂದ ಭಾನುವ[ಮ]ತ್ಪ್ರಭೆಯನೋತ್ಪಲೇಂದುಕಿರಣಪ್ರಭೆಯುಪ್ಪುದು ತಪ್ಪದೊಪ್ಪಗುಂ (ಪಾಂಪು. ೩-೦೭). [ಸಂ. ಭಾನುಮತ್]

ಭಾನುಮತಿ (ನಾ). ೧. ತೇಜಸ್ಸುಳ್ಳವಳು ; ಕಾಂತಿವಂತೆ. ೨. ದುರ್ಯೋಧನನ ಹೆಂಡತಿ.—ರಾಣಿ : ಪೆತ್ತಮನಾಡಿ ಭಾನುಮತಿ ನೋಲ್ಪೊಡೆ ನೋಲವಾನೀವುದೆಂದು ಕಾಡುತ್ತಿರೆ ಲಂಬಣಂ ಪಱಿಯೆ (ಕೃಶಾ. ೯-೩೪); ನೀನೊಲಿದು ಸಲಹೆಂದು ಮುದದಲಿ ಭಾನುಮತಿ ಮೈಯಿತ್ತಿದಳು ಮುರಹರನ ಚರಣದಲಿ (ಶಾಣ್ಮಾ. ೯-೭೭).

[ಸಂ. ಭಾನುಮತೀ]

ಭಾನುಮೊಮ್ಮ (ನಾ). ಸೂರ್ಯನ ಮೊಮ್ಮಗ ; ಕರ್ಣನ ಮಗನಾದ ವೃಷಸೇನ : ಪುರುಹೂತಸುತ ಭಾನುಮೊಮ್ಮನ ತರುಬಿ ನಿಲ್ಲರಾಗು ಸುರಿದಂ ವೃಷಸೇನನು (ಹರಿಪ. ೬೬-೦೩). [ಭಾನು + ಮೊಮ್ಮ]

ಭಾನುರಿಪು (ನಾ). ಸೂರ್ಯನ ಶತ್ರು ; ರಾಹು : " ಭಾನುರಿಪು ಸಿಂಹಿಕಾಪ್ರಿಯಸೂನು ತಮಂ ರಾಹು ಗಗನಚರಭುಜಗಂ ಸ್ವರ್ಭಾನು ವಿಧುಂತುದನಂತದು ತಾನಲ್ಕಂ" (ಪಪು ಕೋ. ೦೬-೬೬). [ಸಂ.]

ಭಾನುರೋಚಿ (ನಾ). ಸೂರ್ಯನ ಪ್ರಕಾಶ.— ಕಾಂತಿ : ಭಾನು ರೋಚಿಯಿಂ ಬಸವಳಿದೀ ಧರಾಂಗನೆಗೆ ಚಂದನಲೇಪನದಾದುದು . . . ಕಾಂತಿ ಸುಧಾಮಯಾಕೃತಿನಾ (ರಾಚಕೇ. ೦೦-೬೬). [ಸಂ.]

ಭಾನುವಂಶ (ನಾ). ಸೂರ್ಯನಿಂದ ಪ್ರವೃತ್ತವಾಯಿತೆಂದು ಹೇಳಲಾದ ಒಂದು ರಾಜಮನೆತನ.— ರಾಜಕುಲ; ರಾಮನು ಅವತರಿಸಿದ ವಂಶ : ಪರಭಾನುವಂಶಲಲಾಮ ನೀ ರಾಮಂಗೆ ಸರಿಯೆಂದ (ಶಾಣ್ಮಾ. ೦೦-೪).

[ಸಂ.]

ಭಾನುವಾರ (ನಾ). ಒಂದು ವಾರದ ಏಳು ದಿನಗಳಲ್ಲಿ ಮೊದಲನೆಯ ದಿನ ; ಸೂರ್ಯನು ಅಧಿಪತಿಯಾಗಿರುವ ವಾರ; ಆದಿತ್ಯವಾರ : ದೇವರಾಜನನ್ನು ಕರೆದುಕೊಂಡು ಮುಂದಿನ ಭಾನುವಾರ ಧಾತುಪುರಿಗೆ ಹೋಗಬೇಡಾ (ಪಂಗಾಕ್ಷ. ೬). [ಸಂ.]

ಭಾನುಸುತ (ನಾ). ೧. ಸೂರ್ಯನ ಮಗ. ೨. ಕರ್ಣ : ಪೃಥಿವಿಪತಿ ಮಾದ್ರೇಶನನು ಸಾರಥಿಯು ಮಾಡಿದನೊಲವು ಮಿಗಲುತಿರಥಭಯಂಕರ ಭಾನುಸುತನಾಹವಕೆ ನಡತಂದ (ಶಾಣ್ಮಾ. ೯ ೩೩೪೪). [ಸಂ.]

ಭಾನೆ 'ಬಾನ್ಕಿ' ನೋ.

ಭಾಪು 'ಬಾಪ್ಪು' ನೋ.

ಭಾಪುಗೊಳ್ (ಕ್ರಿ). ಮೆಚ್ಚಿಕೆಯನ್ನು ಪಡೆ : ಕವಿಯುಂ ಮೆಚ್ಚಿಸಿ ಭಾಪುಗೊಳಲೆ ಬಾಳ್ದಂ (ಪಂಗಸಾ. ೩೬-೦೦).

[ಭಾಪು (<ಬಾಪ್ಪು) + ಕೊಳ್$_1$]

ಭಾಪುರೆ 'ಬಾಪ್ಪುರೆ' ನೋ.

ಭಾಪ್ಪು 'ಬಾಪ್ಪು' ನೋ.

ಭಾಮ (ನಾ). ೧. ಹೊಳಪು; ಪ್ರಕಾಶ. ೨. ಸೂರ್ಯ; ರವಿ. ೩. ಸಿಟ್ಟು; ಕೋಪ; ಭಾವೋದ್ರೇಕ. ೪. ಸಹೋದರಿಯ ಗಂಡು ; ಭಾವ. [ಸಂ.]

ಭಾಮಂಡಲ, ಭಾಮಂಡಳ (ನಾ). ೧. ಬೆಳಕಿನ ವಲಯ; ತೇಜೋಮಂಡಲ. ೨. [ಜೈನ] ಅರ್ಹಂತನಿಗಿರುವ ಅಪ್ರಪ್ರಾತಿಹಾರ್ಯಗಳಲ್ಲಿ ಒಂದು ; ಪ್ರಭಾವಲಯ : ಇರೆ ಭಾಮಂಡಲದೀಪ್ತಿಯ ಪರೆಪುಂ . . . ದಿವಾಕರಹಿಮಾಕರಕರನಿಕರಪ್ರಚುರರುಚಿಗಳಂ ಮಸುಳಿಸುಗುಂ (ಆಂಪು. ೦೦-೩೯) ; ಪೂಮಟ್ಟೆ ಕೇಸರಿಪೀಠಂ ಭಾಮಂಡಲ [ಪಾಕಾಂ. ೪]

ಮೆಸೆಯೆ ನೆಗಟ್ಟಮೊಸೆದಾದಿಜನಂ (ಜಾತಿಂತ. ೨) ; ಭೂಮಂಡಲದೊಳ್ ನಿನ್ನಿಂ ಭಾಮಂಡಲಮೆಸೆದು ಪೊರಿಸಿರೆ (ಪಾಶ್ವ. ೬-೦೨). ಭಾಮಂಡಳ : ೨. ಸುರಭೇರೀಧ್ವನಿ ಭಾಮಂಡಳಸ್ಫೋಟಮಂ ಭಾಸ್ವದನಂತಪೋಧ ಬಳ ದ್ಯತ್ಸೌಖ್ಯಕ್ಕಿತ್ತ ಲಕ್ಷ್ಮೀಸಮುದ್ಭಾವಂ ಮಾಟ್ಕೆಮಗಟ್ಟುಯಿಂ ಶುಭಮಂ ಶ್ರೀವರ್ಧಮಾನಂ ಜಿನಂ(ಪರ್ಶ್ವ. ೦-೦). 'ಪ್ರಾತಿಹಾರ್ಯ' ಪರಾ. [ಸಂ.]

ಭಾಮಂಡಳ 'ಭಾಮಂಡಲ' ನೋ.

ಭಾಮಟ್ಟ 'ಭಾಮಟ್ಟಾ' ನೋ.

ಭಾಮಟ್ಟಾ ಭಾವಂಟ್ಟ (ನಾ). (ಉಕೆ) ಮೋಸಗಾರ ; ವಂಚಕ; ಧೂರ್ತ : ಇವನು ಯಾವಮೋ ಪರಿಚಯವ ಭಾಮಟ್ಟಾ ಇರಬೇಕು (ಕೃಷ್ಣ. ೨೬೬). ಭಾಮಟ್ಟ : ನೀ ಒಬ್ಬನ ಸಭ್ಯಗ್ಯಹಸ್ಥ.. ಕಾಣೆಯಿ ಭಾಮಟ್ಟಿಂದ್ನೀನೆಂ ! (ದಾಂಪಾಯ. ೬೦). [←ಮರಾ. ಭಾಮಟ್ಯಾ]

ಭಾಮಿನಿ (ನಾ). ೧. (ಕೋಪಸ್ವಭಾವದ) ಸುಂದರ ಸ್ತ್ರೀ : "ಕೋಪ ವೆಸಸಿರ್ದ ಸ್ತ್ರೀ ಭಾಮಿನಿಯೆನಿಸುವಳು". (ಜಾತಕ. ೦೦೬) ; ಜಯಿಸುವಿದು ಜಾಣಿಗೆ ಭಾಳತಳದ ಭಾಮಿನಿಗೆ ಶ್ರೀರೋಚನದ ಲಲನೆಗೆ . . . ರತ್ನಾರ್ಥಂ ತಂದೆ ನಿಮ್ಮಾಮಿಸಿಕೊಟ್ಟ . . . ಜೋಡಶಾಪ್ಸರವಿಳಾಸಿನಿಯರ್ಮೆಯು ಪಡ ತಂದು (ಗಿಳಿ. ೬-೪೦ ೪) ; ಭಾಮಿನಿ ಕೇಳ್ಸೌರಾಜ್ಯದ ಸೋಮೇಶ ಭೃತ್ಯ ನಿರ್ಪಮೋಹಿಲನು (ಕೃಷ್ಣ. ೫೯-೬೯) ; ತಿಂಗಳಾರಕೆ ಮರಳಿ ಬಹೆನೆಂಬ ಭಾಷೆಯಂ ಭಾಮಿನಿತ ಭಾಮಿನಿ ಸಮಾಧಾನಮುದ್ದಿಯಿಂ ಮೇಣೇಳುತ್ತಲಿಂ ಪಡದು (ಜಾತ್ರಿಗ. ೫೬-೦೬೪೪). ೨. ಹೆಂಗಸು ; ಸ್ತ್ರೀ ; ಮಹಿಳೆ : "ರಾಮಾ, ವಾಮಾ . . . ಭಾಮಿನಿ, ಕಾಮಿನೀ . . . ಯುವತಿ:—ಈ ೨೮ ಸ್ತ್ರೀಯರ್" (ಪಣಾಮು. ೬೯-೬೫). ೩. = ಭಾಮಿನೀಷಟ್ಪದಿ : ಶರ ಕುಸುಮ ಭೋಗ ಭಾಮಿನಿ ಪರಿವರ್ಧಿನಿ ವಾರ್ಧಕಗಳೆಂದಾಯು ತೆಜಾ. . . ಷಟ್ಪದಿ ಪಡಿಗುಂ (ಕಂದೋಅಂ. ೩-೬೯ ಹಂ೮) ; ಭೂವಿಸುತ ಜೀವಂಧರನ ಚರಿತವನು ವೇದಿಸುವೆನಿರು ಭಾಮಿನಿಯ ಷಟ್ಪದಿಂ ಕನ್ನಡದೊಳೊಲಿದು (ಜೀವಂತ. ೦-೬೪) ; ಇದು ಶರ, ಬಾಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂದಾರು ವಿಧವ (ಕೃಷ್ಣ. ೧೩). [ಸಂ. ಭಾಮಿನೀ]

ಭಾಮಿನಿವೃತ್ತ (ನಾ). = ಭಾಮಿನೀಷಟ್ಪದಿ : ಈ ತೆಜದೊಳ್ಚುತ್ತಿಸನ ನಾಮವ ಸೂತನದಿ ವಸುಧಾತಳದ ವಿಖ್ಯಾತಿ ಬಯಸದೆ ಬಣ್ಣಿಸಿದ ಭಾಮಿನಿ ವೃತ್ತದಲಿ ನಾನು (ಪಾಣ. ೦೦೬). [<ಸಂ. ಭಾಮಿನೀವೃತ್ತ]

ಭಾಮಿನೀದೀರ್ಘದ್ವಿಪದಿ (ನಾ). [ಛಂದ] ಭಾಮಿನೀಷಟ್ಪದಿಯ ಲಯವನ್ನು ಅನುಸರಿಸಿ ರಚಿಸುವ ಎರಡು ಸಾಲಿನ ಪದ್ಯ : ಭಾಮಿನೀ ದೀರ್ಘದ್ವಿಪದಿಯ ಬಂಧ ಸಾಧ್ಯ (ಛಂಪೋಂ. ೫೬೬). [ಸಂ]

ಭಾಮಿನೀವೇದ (ನಾ). [ಜೈನ] ಪುರುಷವೇದ, ಸ್ತ್ರೀವೇದ ಮತ್ತು ನಪುಂಸಕವೇದವೆಂಬ ಮೂರು ಬಗೆಯ ವೇದಗಳಲ್ಲಿ ಒಂದು ; ಸ್ತ್ರೀವೇದ ; . ಚಾರಿತ್ರ್ಯಮೋಹನೀಯಕರ್ಮವಿಶೇಷ : ಅಭಿಧಮಿಸಿ ನಪುಂಸಕವೇದ ಭಾಮಿನೀವೇದಮುಗಳದೊಡನೊಡನೆ ಜಗದ್ವಿಭು ಹಾಸ್ಯ ರತ್ಯರತಿಶೋಕಭಯಮುಗುಪ್ಸೆಗಳನಾಜುಮಂ ದಂಕಿಂದಂ (ಕ್ಷತ್ರಿ. ೦೯-೬೪) [ಸಂ.]

ಭಾಮಿನೀಷಟ್ಪದಿ (ನಾ). [ಛಂದ] ಆರು ಬಗೆಯ ಷಟ್ಪದಿಗಳಲ್ಲಿ ಒಂದು: ಪ್ರತಿಪಾದದಲ್ಲಿ ಹದಿನಾಲ್ಕು ಮಾತ್ರೆಗಳಿರುವ ಆರು ಸಾಲಿನ ಮಾತ್ರಾ ಗಣ ಛಂದಸ್ಸು ; ಪ್ರ "ಮೂರು ಮಾತ್ರೆಯ ಗಣವ ಮುಂದೆ ನಾಲ್ಕು ಮಾತ್ರೆಯ ಗಣವು ಬರುವ ಹಾಗೆ ಈ ಗಣಗಳು ಒಂದೆರಡು ನಾಲ್ಕೆ ೃದನೆಯ ಪಾದಗಳಲ್ಲಿ ಎರಡೆರಡೂ ಮೂರಾರನೆಯ ಪಾದ ಗಳಲ್ಲಿ ಮೂರು ಮೂರೂ ಒಂದು ಗುರುವೂ ಇರುವುದು ಭಾಮಿನೀ ಷಟ್ಪದಿ ಎನಿಸುವುದು" (ಕೃಷ್ಣ. ೧೬) : ಸಾಜಕವಿ ಕರ್ಣಾಟಲಕ್ಷಣ ದೊಜಿಗನು ಕವಿಸಾರ್ವನಿಂ ಕಿನರಾಜಚರಿತೆಯ ಭಾಮಿನೀಷಟ್ಪದಿಮಯಿಸು ರೆಂದು . . . ಬೆಸಸಿದನು (ಜಾಕೃಣಾ. ೦-೬೪) ; ಕುಮಾರವ್ಯಾಸಭಾರತ ಮತ್ತು ತೊರವೆರಾಮಾಯಣಗಳು ಭಾಮಿನೀಷಟ್ಪದಿಯಲ್ಲಿ ರಚಿತವಾಗಿವೆ (ಕೃಷ್ಣ). [ಸಂ. ಭಾಮಿನೀಷಟ್ಪದೀ]

ಭಾಮೆ (ನಾ). ೧. ಕೋಪಸ್ವಭಾವದ ಹೆಂಗಸು. ೨. ಹೆಂಗಸು ; ಮಹಿಳೆ : "ಭಾಮಾ, ಭಾಮಿನೀ, ಈ ೨ ಪೆಣ್". (ಜಾಪ್ರ. ೦೦೬). ೩. ಸುಂದರಿಯಾವ ಸ್ತ್ರೀ : ಸ್ವಾಮಿ ಸದ್ಗುರು ಸಾಂಪ್ರದಾಯದ ಭಾಮೆಯರು ಶ್ರೀಪರ್ವತಂ ಮೊದಲೀ ಮಹಿಯೊಳೊಳಗು (ಜಿಪು. ೦೪-೬೫) ; ಜೋಳಧೂಭಾಮಾಧಿಪತಿ ಮನೋಜ್ಞಶ್ರೀಮಹಿತಂ ಪೃಥುಳ ಭಾಗ್ಯಮಂ ಪದೆದಿತ್ತಂ (ಜಾಪು. ೬-೨೬) ; ಬೆರಗು ಹೊದದರ್ಜುನಂ ನೋಡುತಿರಲಾ ಭಾಮೆ ಬಂದವ್ಗೊಲೆ ಹಿಂದಿರುಗಿ ಏಬಡಕಾಂತಾದಲಿ ತರುಗುಲ್ಮಪಣ್ಗಗರ್ಭಂಬೊಕ್ಕ . . . ಮಾರೆಯಾದಳಿರದೆ (ಜಾತ್ರಿಗ. ೬೪-೧೦೬). ೪. ಹೆಂಡತಿ ; ಪತ್ನಿ : ಈ ಭೂಮಿ ಈ ಭಾಮೆ ಈ ಭೋಗ ಈ ರಾಗ ಬಾರವು ಜತೆಯೊಳು ಬಲ್ಲೆ (ಪಂಪಾಕ. ೪೪೨-೦೦೦). ೫. ಕೃಷ್ಣನ ಪತ್ನಿಯರಲ್ಲಿ ಒಬ್ಬಳು ; ಸತ್ಯಭಾಮೆ : ಇಂತಾ ಭಾಮೆಯಾ ದುಃಖಿಪನಾಂತರೆ ಕಂಡು . . . ಪೇಳ್ದಳು (ಶ್ರೀಕೃಷ್ಣ. ೬). [ಸಂ. ಭಾಮಾ]

ಭಾಯಿ (ನಾ).ಭ್ರಾತೃಭಾವನೆಯಿಂದ ಒಬ್ಬರನ್ನೊಬ್ಬರು ಸಂಬೋಧಿಸುವ ಶಬ್ದ : ಸಮಾಜವಾದಿಗಳು ತಮಗೆ 'ಭಾಯಿ' ಎಂದು ಕರೆದು ಕೊಳ್ಳುತ್ತಾರೆ (ಜಾಪಂ. ೪) ; ಭಾಯಿಃ ಇಂದೋ ಪಾಳೆಯೋ ನಿಮ್ಮ ದಿಡುಗಡೆಯಾಗಬಹುದು (ಜಾಸ್ವ. ೦೧೦).

[← ಹಿಂ. ಮರಾ. ಭಾಈ./ಪ್ರಾ. ಭಾಇ./ಸಂ. ಭ್ರಾತೃ]

ಭಾರ (ನಾ). ೧. ಹೊರೆ ; ಹೊಕ್ಕ : "ತಿನ್ನಾಮೆವಲ್ಯಾರು" (ಪಚಂ. ೩೦); ಮಾತಿಂದ ಬರ್ದು ಭವಭಾರಭೋರ (ಪಚಂ. ೦೨೪); ಭೂಭಾರಚ್ಛೇದವಿನೋದಿ ಕೃಷ್ಣನೆವಮಿಗಿಗಾನಂದಸಂದೋಹಮಂ (ಪಾಪು. ೦-೦) ; ಆ ಹೊಹಗರು ಏಸುವಿದ್ದಕ್ಕಿದ್ದಂತೆ ಗಿರಿಭಾರವಾಗಿ ಬರೆ (ಶ್ರೀಆಪು. ೦೪-೪೬) ; ಇರುವೆ ಭಾರ ಇರುವಗೆ, ಆನೆ ಭಾರ ಆನೆಗೆ (ಗಾಪ). ೨. ತಲೆ, ಹೆಗಲು ಮೊದಲಾದವುಗಳ ಮೇಲೆ ಹೊರುವ ಹೊರೆ ; ಮೂಟೆ ಮೊದಲಾದುವು: "ವಿವಿಧಃ , ವೀವಧಃ , ಭಾರಃ , ಪರ್ಯಾಹಾರಃ— ಈ ೪ ತಲೆಹೊಜೆ" (ಪಣಾಮು. ೦೨೬-೬೨). ೩.ಹೊಣೆಗಾರಿಕೆ: ಜವಾಬ್ದಾರಿ; ಕರ್ತವ್ಯ ; ಅಂಜದಿನು ಅಳುಕದಿರು ಪರದೈವಕ್ಕೆಱಗದಿರು ಕೂಡಲಸಂಗನ ಕೈಯಲು ಈಸುವುದೆನ್ನ ಭಾರ (ಬಸ. ೬೨೨); ಮನೆ ಬಿಡಕವಾಗಿ ಕೆಜ್ ತುಂಬಿ ಪೊತವರು ಎಂದೆಂದೂ ಕೆಜ್ ವಿಂದು ಭಾರವಾಗಿ ಕಟ್ಟಿಕೊಂಡು ಮಾನ್ಯಗದ್ದ ಯನೂ ಬಿತ್ತಿ ಬೆಳೆದುಕೊಯ್ದುದು (ಪಪ್ರ. ೩(೩), ಕೋಗಾಸ್ಥ. ೩೦೬-೦೪ ; ೧೨೬೫ ೫೫); ರಕ್ಕಾವಳೀನಾಟಕದ ಅಭಿನಯದ ಭಾರ ನನ್ನ ಮೆ ಲೆ ಬಿತ್ತು (ಜಾಪಾ. ೬೮೬). ೪. ಕಷ್ಟಕರವಾದುದು ; ಕಠಿಣವಾದುದು : ಈ ತೀರ್ಥಕ್ಕೆ ಅನೇಕ ಕೋಟಿ ಉಪವಾಸಗಳು ಪರಿಹರಿಯುವದು ಯೇನು ಭಾರವಾದೀತು (ಅಕಾಪ. ೫೫). ೫. ಮಹತ್ವ ; ಗುರುತ್ವ ; ಪ್ರಾಮುಖ್ಯತೆ : ಧೀರ ಬಿನ್ನವಿಸಿದನು ಕಾರ್ಯದ ಭಾರವನು (ಕಾಪ್ರ. ೪-೩೦). ೬. ಅಧಿಕವಾದುದು ; ಹೆಚ್ಚಾದುದು ; ಗುರುತರವಾದುದು : ಕದಱುದಲಿಗಳ ತೋರಭಾರದ ಮದದ ಮೈಯುಬ್ಬುಗಳ ಬಳಿಂದ್ದುದು (ತೊಪಾ. ೬-೬-೪) ; ಭಾರವಾದ ಪಾಪಕ್ಕೆ ಘೋರವಾದ ನರಕ (ಗಾಪ). 'ಭಾರಸಂಖ್ಯೆ' ಪರಾ. ೭. ಪ್ರಭಾವ ; ವರ್ಚಸ್ಸು. ೮. ಪಂಗು ; ಋಣ. ೯. ಹೊರೆಯನ್ನು ಹೊರಲು ಉಪಯೋಗಿಸುವ ಕೋಲು.— ಆಡ್ನೆ. ೧೧. [ಗಣಿತ] ಇಪ್ಪತ್ತು ತೊಲೆಗಳ ತೂಕ : " ತೊಲೆಯುಂತಿವಿಪ್ಪತ್ತಿರಲ್ಕೆ ಭಾರಂ" (ಶುಂಗಣ. ೦೮೪-೦೦); ಭಾರಕ್ಕೆ ಪತ್ತು ತೊಲೆಮುಂ ಭಾರಕ್ಕಂ ಸೂಱುಸಂಪೆ ಬೀಸಗರುಬಕ್ಕುಂ

ಭಾರಕ್ಕೆ ಮಣವು ಹತ್ತುಂ ಭಾರಕ್ಕಂತಾಗ ದಡಿಯು ತಪ್ಪದು ಗಣಕ ಭಾರಕ್ಕರ್ಥಸಿರ ತೊಲೆಯುಂ ಭಾರಕ್ಕಂ ಕರುಷಮೆಂಟುಸಾಸಿನಮಕ್ಕುಂ ಭಾರಕೆ ಕಾಲ್ಕರುಷ ಬತ್ತಿಸಾವಿರ ಭಾರಕ್ಕಂ ಮೂವತೆರಡು ಸಹಸ್ರಪ್ಪಿನ ತೂಕಂ ಭಾರಕ್ಕೆ ತೊಲೆಯು ವಿಂಶತಿ (ಕ್ಕಕಣಾ. ೩-೦೦); ☞ 'ವ್ಯವಹಾರ ಗಣಿತ'ದ ಈ ಭಾಗದಲ್ಲಿ 'ಭಾರ'ಕ್ಕೆ ಆಸ್ಪಪ್ಪವಾದ ಅನೇಕ ತೂಕದ ಅರ್ಥಗಳನ್ನು ಹೇಳಿದೆ : ಇಪ್ಪತ್ತು ತೊಲೆಗಕ್ಕುಂ ಭಾರಂ (ಕ್ಕಕಣಾ. ೩-೨೫); ಪೂಜಿಸುತ್ತಿರಲು ದಿನದಿನದಲೆಂಟೆಂಟು ಭಾರದ ಕನಕವನು ಮನೆ ಕೊಡುವುದು (ಬಣಾಗ. ೦೦-೬೬-೬); ಆ ವಿಪ್ರರನ್ನು ಪೂಜಿಸಿ . . . ಒಂದೊಂದು ಭಾರ ಹೊನ್ನನ್ನು ಕೊಡಬೇಕು (ಜಮಿ. ೯). ೧೧. ಒಂದು ರೂಪಾಯಿಯ ತೂಕ ; ಒಂದು ತೊಲ : (೬).

ಭಾರ ಬರು = (ಉಕ) ದೆವ್ವಹಿಡಿ ; ಭೂತಾವೇಶವಾಗು : ತುಸ ಹೊತ್ತಿನ ಮೇಲೆ ನನ್ನ ಮಾತು ಪೂರ ಕೇಳಿಕೊಳ್ಳುವ ಮೊದಲೇ ಭಾರ ಬಂದವರ ಹಾಗೆ . . . ಒದರಾದಿದರಂತೀ (ಜಮಿಯಣಾ. ೭೩). ಭಾರವಾಗು = ಹೊರೆಯಾಗು ; ಒಜ್ಜೆಯಾಗು : ಮಕ್ಕಳು ದುರಿಗಳು ಚಿಕ್ಕ ವರಿರುವಂದು ಸೊಟಕೆ ಭಾರವಾಗುವರು (ಜಣಕ. ೩೪೯-೬) ; ಪಾನಾ ಬಗೆಯ ವಾಸನೆಗಳು ಹುಟ್ಟಿದ ಜಾಗಗಳಲ್ಲಿಯೇ ಭಾರವಾಗಿ ಕುಳಿತವು (ಕಸುಹೂ. ೭೦೦). ಭಾರಹಾಕು = ಜವಾಬ್ದಾರಿಯನ್ನು ಹೊರಿಸು ; ಹೊಣೆಯನ್ನು ಒಪ್ಪಿಸು : ದೇವರ ಮೇಲೆ ಭಾರಹಾಕಿ ನಿಶ್ಚಿಂತೆ ಯಿಂದಿರುವುದು ಆವರ ಸ್ವಭಾವ (ಕೂಅ). [ಸಂ.]

ಭಾರಂಕ (ನಾ). ೧. ಘೋರವಾದ ಯುದ್ಧ ; ಭಯಂಕರವಾದ ಕಾಳಗ : "ಭಾರಂಕಮೆನಲ್ಕೆ ದಂಡಿ" (ಶಾಕಿ. ೫೯) ; ಕದನವಿದ ಭಾರಂಕವಾರಧ್ಯದಯ ತಲೆದೋಱುವುದೊ ನಮಗೇಕದಱ ಚಿಂತೆ ಮುಂದಾಲಿ ಬ್ಲನು (ಶಾಕ್ಕಾಂ. ೩-೨೦) ; ಜರಡನ್ನೆ ಭಾರಂಗದಾಳಿವ ತರಳನೇ ಸುರ ಗಿರಿಯನಾನುವ ಕೊರಳೆ ಸತ್ಯವೆ' ತಿಮಿದೆಂದುದು ಮೇಲೆ ಸುರಕಟಕ (ಶಾಕ್ಕಳ. ೫೦-೩೩). ೨. ವೀರಯೋಧ,— ಸೈನಿಕ : ವೀರ ರಾವಣ ಕುಂಭ ತಿಶ್ರಿರನು . . . ಜೂರಿಸುವ ಖಡ್ಗಯುದ ಕಡುಹಿನ ಭಾರಂಕನು ಭಾರಂಗರಿದ್ದುದು ಭೂರಿಭೂಷಾಭರಿತ ವೀರಾವೇಶದುನ್ನಿನಲಿ (ಕೂಅಣಾ. ೬-೦೦-೬). [<ಸಂ. ಭಾರಾಂಕ]

ಭಾರಂಗಿ (ನಾ). ಒಂದು ಬಗೆಯ ಗ್ರಂಥಿಕದ್ರವ್ಯವನ್ನು ಕೊಡುವ ವನಸ್ಪತಿ : "ಹಂಜಿಕಾ ಬ್ರಾಹ್ಮಣೀ, ಪದ್ಮಾ, ಭಾರ್ಗೀ, ಬ್ರಾಹ್ಮಣ ಯಷ್ಟಿಕಾ, ಅಂಗಾರವಲ್ಲೀ, ಬಾರೇಯತಾರಕಃ, ಬರ್ಬರಃ, ಪಂದಕಃ— ☞ ಭಾರಂಗೀ ಹೆಸರುಗಳು, ಗಂಟುಭಾರಂಗೀ ಎಂಬುವ ಗ್ರಂಥಿಕದ್ರವ್ಯವು ಪ್ರಸಿದ್ಧವಾದದ್ದು, ಕಿರುದೇಗುಗಿಡವೆಂದು ಕೆಲವರೆನ್ನುವರು. ಖಾಯಿ ಖ್ಯಾಗದ ಮರ" (ಕಣ್ಣಂಕ. ೦೬೩) ; ಪಲಾಶಾಲಂ . . . ಭಾರಂಗಿ ನೇಳಲೆರಂ ಪಾದರಿ ತಾಜಿತಂಡಮು (ಜಕ್ಕರಣ. ೦೨-೩೬).

ಭಾರಂಗ್ಯಾದಿ ಕಷಾಯ = ಒಂದು ಬಗೆಯ ಕಷಾಯ: ಭಾರಂಗ್ಯಾದಿ ಕಷಾಯ, ಗಂಟುಭಾರಂಗಿ, ಪುಷ್ಕರಮೂಲ . . . ನೀರಿನಲ್ಲಿ ಕಷಾಯ ವಿಕ್ಕಿ ಅಷ್ಟಾವಶೇಷವಾಗಿ ಕಷಿ ಬಂಡಿಯೆ ತಾಂಡ್ರಿಕಸನ್ನು ಗುಣಮಕ್ಕುಂ (ವಕ್ಕ. ೦೩೭). [ಸಂ. ಭಾರಂಗಿ]

ಭಾರಕ (ನಾ). ೧. ಭಾರವನ್ನು ಹೊರುವ ವ್ಯಕ್ತಿ : ಕಲರು ಚತುರ್ವೇದ ಭಾರಕರಾದರು (ಅಪಕ. ಭು. ೧-೦೬); ಮನುಜಾಯಕನಾ ನಿಧಾನದ ಕನಕಗಳನ್ನೆಲ್ಲವನು ಭಾರಸಜನದ ಶಿರವಲಿ ಹೊಜ್ಜಿಸಿ ಪಡುಬಸದನವನು ರಕ್ಷಿಸುತ (ತಮ್ಮಕ್ಕ. ೪-೨೪). ೨. ಹೊಣೆಯನ್ನು ಹೊತ್ತವನು ; ಹೊಣೆಗಾರ : ಧರ್ಮಪನ ವರಮುಖದನು ನಂದು ಮಾಡಿಸುವ ಭಾರಕ ನುರಹರನಾ ಮುಕಂಬವಂ ಕಾಣ್ಬುದುಗ್ರೊಡೆ ತಪ್ಪ ಕೂಡೆ ನೀಂ ಬಂದು ಸೇವಿಪುದು (ಕ್ಕಜಣಾ. ೪-೬೪). ೩. ಹೊರೆ ; ಭಾರ. ೪. ಭಾರವಾದವನು ; ಹೊರೆಯಾದವನು : ನಿನ್ನ ಮರೆದಜ್ಞತೆಯಿಂ ಚರಿಸುತ್ತ ಗರ್ವಾಂತಾ ಮಹಿತಾತ್ಮರಂ ಜರಿದು ಭೂಮಿಗೆ ಭಾರಕನಾದೆನಕ್ಕಟ (ಅಪಕ. ೭೦). ೫. ಸೈನಿಕ ; ಯೋಧ : ಊರೊಳೀ ಕಪಿವಾರ್ತೆಯಗಲಕ ಬೇರುವರಿದುದು ಬೆಜಗುಬಂಕದ ಭಾರಕರು ಭಾರಿಸಿತು ಕೋಟಾವಳಯದ ಗ್ರುದಲಿ (ಕೂಅ. ೩-೩-೦). [ಸಂ.]

ಭಾರಕರ್ತ (ನಾ). (ಜಗತ್ತಿನ) ಹೊಣೆಯನ್ನು ನಿರ್ವಹಿಸುವವನು ; ದೇವರು ; ಭಗವಂತ : ಭಾರಕರ್ತನು ನೀನು ಬಹುಸಂಸಾರಿಯೆಂಬುದ ನಿಗಮತತಿ ಕೈವಾರಿಸುತ್ತಿದೆ (ಹಂಪಾ. ೩೩). [ಸಂ. ಭಾರಕರ್ತೃ]

ಭಾರಕಾರಕ (ಗು). ತೂಕವನ್ನುಂಟುಮಾಡುವ ; ಭಾರವನ್ನುಂಟು ಮಾಡುವ : ಈ ಸಾಂದ್ರತೆಯು ನೀರಿನ ಸಾಂದ್ರತೆಯನ್ನು ತುಸು ಮಿಗುವ ತನಕ, ನೀರು ಭಾರಕಾರಕ ಕುಂಡಿಗಳ ಒಳಗೆ ಬರುತ್ತಲೇ ಇರುವುದು (ಜಣ್ಣಾ. ೦೦೩). [ಸಂ.]

ಭಾರಕ್ಷಮ (ಪಾ)- ಭಾರವನ್ನು ಹೊರಲು ಶಕ್ತವಾದುದು.— ಸಮರ್ಥವಾದುದು : "ಧೂರ್ವಹಃ, ಧುರ್ಯಃ, ಧೌರೇಯಃ ಧುರೀಣಃ, ಧುರಂಧರಃ— ಭಾರಕ್ಷಮಗಳಿಗಾಗಿ ಹೇಜುವ ಎತ್ತು" (ಣಕಣಾ. ೬). [ಸಂ.]

ಭಾರಣಿ₁ 'ಭಾರವಣಿ' ನೋ.

ಭಾರಣಿ₂ (ನಾ). ಮಾಟ ; ಮೋಡಿ ; ಮಶೀಕರಣವಿದ್ಯೆ : ನೀವೇ ಲಿಂಗಜಂಗಮವಾಗಬಲ್ಲಡೆ ನಿಮಗಾರೆಂಬುದ ವಿಚಾರಿಸಿಕೊಳ್ಳಿರಣ್ಣಾ . . . ಪೂಜೆಯ ಮಾಡುವ ಭಕ್ತಂಗೆ ಭಾರಣೆಯು ವಿದ್ಯವ ಹೊತ್ತ ವಿಧಾತನಂತಿರ ಬೇಡ (ಕೂಅಕಾ. ೦೮೩-೭೫); ಭಾರಣೆ ವರನಾಳಿ ಕಡಲೋಟ ಮುಂತಾದ ಜಾದುಶಾಸ್ತ್ರಗಳನ್ನು ವಿದೆಗಳ . . . ಪೇರ್ಪೇರಾಜಾರ್ಯರ ಜಾರುಚರಣ ಶರಣನಗ (ಜಣಗು. ೦-೦೪); ಚಾರಣೆಯು ವಿದ್ಯಮಾಂ ಸಮರದೊಳ್ ತೋಱಿದೊಡೆ ಧೀರರೇಂ ಮೆಚ್ಚುವರೆ (ಕಂಪ್ರ. ೫೫-೨೮). ☞ 'ಭಾನುಮತಿ' ಪರಾ.

[← ಪೂಜ್ಯ. ಭಾರಣೇ=ಮಶೀಕರಣವಿದ್ಯೆ ; ಭಾರಣೇ=ಮಾಟ್ರಮಾಟ ಗಳಿಂದ ವಶವಡಿಸಿಕೊಳ್ಳು]

ಭಾರತ (ನಾ). ೧. ಭರತವಂಶಕ್ಕೆ ಸಂಬಂಧವಟ್ಟಿದ್ದು : ಚಾರುಚರಿತ್ರಂ ಭರತನವಾರಗುಣಂ ತನ್ನ ಪೆಸರೊಳವರ್ದಿಸಲೆಂ ಪುಜೋಭಾರಂ ಬಲಮುಂ ಕಥೆಯುಂ ಭಾರತಮೆನೆ ಪೆಗಟ್ಟಿಂ (ಹಂಚಾ.೦-೬೬). ೨. ಭರತ ವಂಶದಲ್ಲಿ ಹುಟ್ಟಿದವನು. ೩. ಹಿಂದೂದೇಶ ; ಭರತಖಂಡ ; ಭಾರತವರ್ಷ : ಭಾರತಕ್ಕೆ ಒಂದು ಸ್ವಪ್ನ ವ್ಯಕ್ತಿತ್ವವಿದೆ ; ತನ್ನದೇ ಎನ್ನುವ ಶ್ರೇಷ್ಠವಾದ ಸಂಸ್ಕೃತಿ ಇದೆ (ಕ್ಕಕಪ. ೬) : ಭಾರತದ ರೈಲುದಾರಿ ಬೇರೆಬೇರೆ ಅಳತೆಯವು (ಕೂಅಕ. ೨೦೩). ೪. ಭರತವಂಶಕ್ಕೆ ಸೇರಿದ ಪಾಂಡವ ಕೌರವರ ಚರಿತ್ರೆ ಮತ್ತು ಅದನ್ನು ವರ್ಣಿಸುವ, ಸಂಸ್ಕೃತ ಭಾಷೆಯಲ್ಲಿ ವ್ಯಾಸಮಹರ್ಷಿಗಳಿಂದ ರಚಿಸಲ್ಪಟ್ಟ ಸುಪ್ರಸಿದ್ಧವಾದ ಇತಿಹಾಸಮಹಾಕಾವ್ಯ ; ಮಹಾಭಾರತ : ಒಳಪೊಕ್ಕು ನೋಡ ಭಾರತ ದೊಳಗಣ ಕಥೆಯಲ್ಲವಿಂ ಗವಾಯುದ್ಧದೊಳಂತೊಳಕೊಂಡತ್ಯಪೆ ಸಿಂಹಾ ವಳೋಕನಕ್ರಮದಿನೆಱಿದಂ ಕವಿರನ್ನಂ (ಗಣಯು. ೦-೧೩) ; ಭಾರತ ವನ್ನು ಬರೆಯಬೇಕೆಂದು ವ್ಯಾಸರಿಂದ ಪ್ರಾರ್ಥಿಸಲ್ಪಟ್ಟ ಗಣೇಶನು . . . ನಿಬಂಧನೆಯನ್ನು ಮಾಡಿದನು (ಶಾಕಪ. ೧೩). ೫. ಹಳಗನ್ನಡದಲ್ಲಿ ಪಂಪಕವಿಯು ರಚಿಸಿದ 'ವಿಕ್ರಮಾರ್ಜುನವಿಜಯ'ವೆಂಬ ಚಂಪೂ ಕಾವ್ಯ ; ಪಂಪಭಾರತ : ಚಲದೊಳ್ ದುರ್ಯೋಧನಂ ನನ್ನಿಯೋಳ ತನಯಂ . . . ಧರ್ಮದೊಳ್ ನಿರ್ಮಲಚಿತ್ರಂ ಧರ್ಮಪುತ್ರಂ ಮಿಗಿಲಿ ವರ್ಗಳೇ ಭಾರತಂ ಲೋಕಪೂಜ್ಯಂ (ಪಂಕಣ. ೦೪-೬೪). ೬. ಕನ್ನಡ ಭಾಷೆಯಲ್ಲಿ ಗದುಗಿನ ನಾರಣಪ್ಪನೆಂಬ ಕವಿಯಿಂದ ರಚಿತವಾದ, ಮಹಾಭಾರತದ ಕಥೆಯನ್ನು ವಿವರಿಸಿರುವ ಪ್ರಸಿದ್ಧವಾದ ಹಳ್ಳಿದೀ ಕಾವ್ಯ; ಕರ್ಣಾಟಭಾರತಕಥಾಮಂಜರಿ : ಕಾವ್ಯಕೆ ಗುರುವೆನಲು ರಚಿಸಿದ

ಕುಮಾರವ್ಯಾಸ ಭಾರತವ (ಕುಚ್ಕಾ.೨-೦-೦೯). ೭. ಕುರುಕ್ಷೇತ್ರದಲ್ಲಿ ಕೌರವ ಪಾಂಡವರಿಗೆ ನಡೆದ ಯುದ್ಧ ; ಮಹಾಭಾರ ತಯುದ್ಧ : ಮಿಕ್ಕ ತೋಳ್ವಲದ ಪೊಡವಿ ಕರ್ಣ ನಿನಗುಳ್ಳನಿತೇನೆನಗುಂಟಿ ಭಾರತಂ ಕಲಹಮಿದಿರ್ಪುವಂ ಹರಿಗನಪ್ಪೊಡೆ ಮೋಳ್ಕೆಯೇಕ ನೀಂ ಪಳಂಚಲೆದಪೆಯಣ್ಣ (ಸಂಚಿಹಾ. ೦೦-೨೩) ; ಮಾನಿಗೌಶಣವಾಯ್ತು ಪಾಳಿನ ಭಾರತವ್ವ . . . ರಣದಲಿ ಸುಭಟಕೋಟಿಯಮ ತೀರಿಸಿಯು ವತಿಯವಸರಕ್ಕೆ ಪೋರವನು ಮೊಳಪೆನು (ಕುಚ್ಕಾ. ೦೦-೨೦). ೮. ಮಹಾಭಾರತಯುದ್ಧವು ನಡೆದ ಪ್ರದೇಶ ; ಭರತಕ್ಷೇತ್ರ ; ಕುರುಕ್ಷೇತ್ರ : ಅಂತು ಭಾರತಂ ಸಮರಭಾರಾವತಾರಮಾಗೆ (ಸಂಚಿಹಾ. ೯-೩೭ ಪ). ೯. ಭರತಮುನಿಯಿಂದ ರಚಿತವಾದ ನಾಟ್ಯಶಾಸ್ತ್ರ. ೧೦. ನಟ : " ಶೈಲಾಲೀ, ಶೈಲೂಷಃ . . . ಭಾರತಃ, ನಟಃ — ಒ ನಟ್ಟುವನ ಹೆಸರು" (ಕಿಶಾ.೦೬. ೬೦೦) ; ಭಾರತನಿಯೋಗಾಳಿ ಜನಪದಪಾರವಿಭವಗಳಿಂದ ಜಾರಾವಾರ ಗಂಭೀರಗಳಿಸಿವ ನೃಪಸಭೆ ಮೆಚ್ಚುತಿರಲು (ಜಷ. ೬೦-೨೯). ೧೧. [ದ್ವೈತ] ವಾಯು : ಭ—ಅಂದರೆ ಪರಮಾತ್ಮ, ಅವನಲ್ಲಿ ರತರಾಗಿರುವುದರಿಂದ ಭಾರತಯೆಂದು ವಾಯುದೇವರಿಗೆ ಹೆಸರು (ಪಣಿ. ೬-೬ ತಾತ್ಪರ್ಯ).

ಭಾರತದ ಹುಣ್ಣಿಮೆ = ಭಾರತಹುಣ್ಣಿಮೆ : ಈ ಅಳ್ಳಿಕೆಯುಳ್ಳಿ ಅದನ್ನು ತಪ್ಪಿಸಿ ಆ ಸ್ಥಳಕ್ಕೆ ಭಾರತದ ಹುಣ್ಣಿಮೆಯಲ್ಲಿ ಹೋಗಲು ಆರಂಭ ಮಾಡಿದರು (ಪ್ರಕಾ. ೨೬). [ಸಂ.]

ಭಾರತವರುಷ (ನಾ). = ಭಾರತವರ್ಷ : ಹಿಮದ ಹೊಯ್ದಿನ ಸರಿಜಕ ರವಿಯಂತೆ . . . ಸುರವಿಮಾನಶ್ರೇಣಿಗಳ ನಭಪರಿಮಳದ ಪೂರದಲಿ ಭಾರತ ವರುಷಕೀಂದನು ಪಾರ್ಥ ಬಂದನು ಧರ್ಮಜನ ಪೊರೆಗೆ(ಕುಚ್ಕಾ. ೦೦-೦೬). [<ಸಂ. ಭಾರತವರ್ಷ]

ಭಾರತವರ್ಷ (ಪಾ). ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ವ್ಯಾಪಿಸಿರುವ ಹಿಂದೂದೇಶ ; ಭಾರತ ; ಇಂಡಿಯಾ : ವಿಷ್ಣು ಪುರಾಣದಲ್ಲಿ ಪ್ರಶಂಸಿತವಾಗಿರುವ 'ಭಾರತವರ್ಷ'ದ ಪ್ರಭಾವ ಕಾಂಭೋಜಾದಿ ಪ್ರದೇಶಗಳಿಗೂ ಪ್ರಸರಿಸಿತು (ಪುಶಾ.೪- ೦೦೮ ಪಾಟ್ಟಿ). [ಸಂ.]

ಭಾರತಹುಣ್ಣಿಮೆ, ಭಾರತಹುಣ್ಣಿವೆ (ನಾ)·ಮಾಘಮಾಸದ ಹುಣ್ಣಿಮೆ; ವ್ಯಾಸಪೌರ್ಣಮೆ: ಆದಿಮ ಭಾರತಹುಣ್ಣಿಮೆ.ಇನ್ನು ಫಾಲ್ಗುಣದ ಆರಂಭ ಆಗಲಿದೆ (ಜಷ್ಟ. ೧೦೨). **ಭಾರತಹುಣ್ಣಿವೆ** : ಭಾರತಹುಣ್ಣಿವೆ ಓರಣದಲಿ ವಿಂದು ಹೊರಣದ್ಹಾರತಿ ಮನೆಯೊಳಗೆ (ತೆಕೆಂ.ರಾ- ೩-೦೫೭-೪); ಸಿಕ್ಕಾಗ ಶಿವರಾತ್ರಿ ಇದ್ದಾಗ ಯುಗಾದಿ ಬಂದಾಗ ಭಾರತಹುಣ್ಣಿವೆ (ಕೃಚಾ. ೪೬); ಮಾಘಶುದ್ಧ ಗಿಸಿನೆಯ ದಿವಸ ಭಾರತಹುಣ್ಣಿವೆ. ವ್ಯಾಸರಚಿತವಾದ ಮಹಾಭಾರತವ ಪೂಜಾ–ಪಠನಗಳೂ ವ್ಯಾಸಪೂರ್ಣಿಮೆಯಂದೂ ಈ ದಿವಸ ದೇವಾಲಯಗಳಲ್ಲಿ ಪಡೆಯುತ್ತವೆ. ಈ ಕಾರಣದಿಂದ ಇದು ಭಾರತಹುಣ್ಣಿವೆ (ಕಾಚಾ. ೦೬೩).

[ಭಾರತ + ಹುಣ್ಣಿಮೆ (<ಪೂರ್ಣಿಮೆ)]

ಭಾರತಹುಣ್ಣಿವೆ 'ಭಾರತಹುಣ್ಣಿಮೆ' ನೋ.

ಭಾರತಾಹವ (ನಾ)· ಮಹಾಭಾರತದ ಯುದ್ಧ : ವಾರಣದ ಕುಂಭ ಸ್ಥಳಂಗಳ ಚಾರುಮೌಕ್ತಿಕನಿಕರವೋ ಮೇಣ್ ಭಾರತಾಹವ ಕೌತುಕೋದಯರಸಕೆ ನೆಲೆಯಾಯ್ತೊ (ಕುಚ್ಕಾ.೧೮. ೨-೮೬). [ಸಂ.]

ಭಾರತಿ (ನಾ)· ೧. ಭಾಷೆ ; ಮಾತು ; ನುಡಿ. ೨. ವಾಣಿ; ಸರಸ್ವತಿ : "ವಾಕ್(ಗ್), ವಾಣೀ, ಭಾರತೀ, ಭಾಷಾ, ಗೌಃ,ಗೀಃ, ಬ್ರಾಹ್ಮೀ,ಸರಸ್ವತೀ ಈ ೮ ಸರಸ್ವತಿಯ ಹೆಸರ್" (ಪಣಿಯ. ೩-೪) ; ರತಿಯಂ ಕಳೆಗುಂದಿಪ ಭಾರತಿಯಂ ಜಾನಿಪೆದೆ ಪಟ್ಟವ . . . ಆಗ್ಗದ ಸತಿಯರ್ (ಪಗಂ. ೨-೩೦); ಪೌಲೋಮಿಯಾಂ ಭಾಗ್ಯವಂ ಭಾರತಿಯಂ ನಾನಾರಣಾಶೌಲಮಸಶಿಲಾ. ಬೆಸ್ಕಿರಲ್ . . . ಮಹಾದೇವಿ ಕಣ್ಗಡ್ಡ ಮಾದಳ್ (ತೆಕೃತಿ. ೩-೨೪) ; ಭಾರತಿಯ ಪದ್ಮಪೀಠದೊಲ್ ಮುಖಕಮಲಮೊಪ್ಪರೆ . . . ವಾಲ್ಮೀಕಿ ತಾನಾ ಬಟ್ಟೆಯೊಳ್ ಬರುತುಮಿರ್ದಂ (ರಾಪತ್ಕೃ. ೦೦-೨೩೬). ೩. ಪಂಡಿತ; ವಿದ್ವಾಂಸ : "ಭಾರತಿಯನಲ್ಕೆ ವಿದ್ವಾಂಸನೆಮಿಸಿಕ್ಕು" (ಹುಂಗಾ. ೩೩-೨). ೪. ಆದಿಶಂಕರಾಚಾರ್ಯರ ಪರಂಪರೆಗೆ ಸೇರಿದ ಕೆಲವು ಜಗದ್ಗುರುಗಳು ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳುವ ಉಪಪದ: ಶೃಂಗೇರಿಯ ರಾಮಚಂದ್ರಭಾರತಿ ೧೫೦೮ ರಿಂದ ೧೫೬೦ ವರೆಗೆ ಪಟ್ಟದಲ್ಲಿದ್ದಂತೆ . . . ತೋರುತ್ತದೆ (ಶಚಿ. ೫೫. ೨೦೦). ೫. ಒಂದು ಬಗೆಯ ಸಪ್ಪ ; ಒಂದೆಲಗ ; ಬ್ರಾಹ್ಮೀ. ೬. [ಕಾವ್ಯಮೀಮಾ] ನಾಟಕಲಕ್ಷಣ ಪ್ರಕರಣದಲ್ಲಿ ಹೇಳಿರುವ ನಾಲ್ಕು ವೃತ್ತಿಗಳಲ್ಲಿ ಒಂದು : ಭಾರತಿ ಸಾತ್ವತಿ ಕೈಶಿಕಯಾರಭಟಿಯುಮೆಂಬ ವೃತ್ತಿಯೊಳ್ ರಸಮಂ ಸಜೀವಿಸುವ ಭಾವಮಂ ವಿಸ್ತಾರಿಸುವ ಬೆಡಂಗು ಬೇಱ್ ನೀರಾಂಜನೆಯೂ (ಕಾಪ್ರ. ೯-೩೬); ಭಾರತಿ ಸಾತ್ವತಿ ಕೈಶಿಕಿಯಾರಭಟಿಯೆಂಬಪ್ಪ ವೃತ್ತಿಗಳ್ ವಾಲ್ಮಕ್ಕುಂ (ಕಾಪ್ರ. ೬೬) ; ವೃತ್ತಿ ಎಂದರೆ ನಾಟಕದಲ್ಲಿ ಅಭಿನಯಿಸತಕ್ಕ ವಿಷಯುಗಳ ಸ್ವರೂಪ ವಿಶೇಷ ; ಇದು ಕೈಶಿಕೀ, ಸಾತ್ವತೀ, ಆರಭಟೀ, ಭಾರತೀ ಎಂದು ನಾಲ್ಕು ವಿಧ (ಸಂಚಿಹಾ. ೦೬). ೭. [ಸಂಗೀತ] ತಂತ್ರೀವಾದ್ಯಗಳಲ್ಲಿ ಒಂದು : ತಂತ್ರೀವಾದ್ಯಂಗಳು :—ಬೀಣ ವಿಪಂಚಿಕೆ . . ., ಬ್ರಹ್ಮ ವೀಣೆ ಸ್ವರವೀಣೆ ಭಾರತಿ ಅಲಾಬುವಲ್ಲಕಿ ಆಕಾಶವೀಣೆ . . . ಎಂಬ ಮೂವತ್ತಾಮೂರು ತಂತ್ರೀವಾದ್ಯಂಗಳಲ್ಲಿ (ಅಚಗ. ೨೩೬). ೮. [ದ್ವೈತ] ಮುಖ್ಯಪ್ರಾಣದೇವರ ಪತ್ನಿ ; ವಾಯುದೇವರ ಪತ್ನಿ : ಶರಣು ಭಾರತಿದೇವಿಗೆ ಶರಣು ವಾಯುರಮಾಣಿಗೆ (ಪ್ರಸೂ. ೦-೦೦೮ ಪ್ರಸ್ತಾ) ; ಭಾರತಿ ವಾಣಿ ಶಚಿಮಾರಿಗೆ ಮರುತ ಬ್ರಹ್ಮರು ಉತ್ಸವಮರು (ಪಚಿದ. ೨೬-೦೨).

ಭಾರತೀಕಣ್ಣಾಪುರ = ೧. ಸರಸ್ವತಿಯ ಓಲೆ. — ಕಾಟುಂಕ. ೨. ಕವಿ ನಾಗಚಂದ್ರನ ಒಂದು ಬಿರುದು : ಆನಂದಾಶ್ಚರ್ಯಮಂ ಕುಂದಿದವ ವಿಲಾಸಂ ಭಾರತೀಕಣ್ಣಾಪುರಂ (ಪಣಿಕಾ. ೨-೩೬). **ಭಾರತೀಭಾಗ್ಯದೇವಿ** = ಸರಸ್ವತಿಯಂ ಭಾಗ್ಯದಂತಿರುವವನು ; ಸರಸ್ವತಿಯನ್ನು ಅಭಿವೃದ್ಧಿ ಪಡಿಸುವವನಂ ; ವಿದ್ವಾಂಸ : ದಾನೋತ್ಕರದೊಳ್ಕಂದಾತ ಮೆಂತಂತಸದನಭವಂ ಭಾರತೀಭಾಗದೇಯಂ (ರಾಪತ್ಕೃ. ೨-೦೨೪). **ಭಾರತೀಭಾಳೇಶ್ವ**= ವಿದ್ಯೆಯಲ್ಲಿ ಪರಮೇಶ್ವರನಂತಿರುವವನು ; ಉದ್ದಾಮ ಪಂಡಿತ : ಪಂದನಂ ತದ್ಭರಣೀಶಾವಾಸದೊಳ್ ಶೋಭಿಸುತಿರೆ ಒರ್ವಂ ಭಾರತೀಭಾಳನೇತ್ರಂ (ಪಂಪ್ರಪು. ೪-೦೦೨). [ಸಂ. ಭಾರತೀ]

ಭಾರತಿಕ (ಗು). ೧. ಭರತಮುನಿಗೆ ಸಂಬಂಧಪಟ್ಟ ; ಭರತಮುನಿಯಿಂದ ಪ್ರವೃತ್ತವಾದ : 'ಭಾರತಿಕವಿದ್ಯೆ' ಪರಾ. (ನಾ). ೨. ನಾಟ್ಯಕಲಾವಿದ ; ನಟ : ಪೆಸಸಿಂ ಭಾರತಿಕಂಗೆ ನಾಟ್ಯಘಟನ ವ್ಯಸ್ತಾವಧಾನೋಪಮಂ (ಆಪ್ರ. ೯-೦೨) ; ನೀವಾಣವಂಗಳಾಯ್ತರೆ ಸಂಗೀತಗಾಮೋರಾಗೆ ನೀಂಪ ಭಾರತಿಕರೆ ಪಟ್ಟುವರಾಗೆ ಸನ್ಮಾರ್ಗನಾಟಕಾರಂಭಪ್ರಸ್ತುತಪವಿತ್ರಸೂತ್ರಧಾರನೆ ಮುಂದೆ ನಿಂದು ಪುಷ್ಪಾಂಜಲಿಯಂ ಕೆದಱ್ (ಶಾಂಶಕೃ. ೦೦-೬೦ ಪ) ; ಭಾರತಿಕನಾಗೆ ಮಂದಸಮೀರಂ ಕೈನೀಡುವುತ್ಸವಧ್ವಜತತಿಗಳ್ (ಪಣಿಕಾ. ೯-೨೬). [ಸಂ.]

ಭಾರತಿಕವಿದ್ಯೆ (ನಾ)· ಭರತಮುನಿಯಿಂದ ಪ್ರವೃತ್ತವಾದುದೆನ್ನಲಾದ ವಿದ್ಯೆ ; ನಾಟ್ಯಶಾಸ್ತ್ರ ; ನಾಟ್ಯಕಲೆ : ಭಾರತಿಕವಿದ್ಯೆಯೊಳ್ ತೂರ್ಯಶ್ರಿತರುಮಾಧರ್ಯಮಾನಭಾವಭಂಗಿಯುವಂ ನೀತಿಶಾಸ್ತ್ರದೊಳ್ ಧರ್ಮಾರ್ಥಕಾಮೋಪಲಬ್ಧಿತಾತ್ಪರ್ಯಮುಮಂ ಪ್ರತ್ಯೇಕಮಾಧಿವ್ಯಂಜನಮುಮಂ ಮುಟ್ಟುಂ (ಆಪಂಪ್ರ. ೬-೯ ಪ). [ಸಂ. ಭಾರತಿಕವಿದ್ಯಾ]

ಭಾರತೀಪತಿ (ನಾ)· ಸರಸ್ವತಿಯ ಗಂಡ; ಬ್ರಹ್ಮ : ಭಾರತೀಪತಿ ಚತುರವರಿಮಿತೋದಾರ ಗಂಭೀರಭಾವಿತಕಂಗಳಿಂ ವಿನ್ನಪಂಗೆಯ್ಯ (ಜಗಪ. ೨-೬೬ ಪ). [ಸಂ.]

ಭಾರತೀಯ (ಗು). ೧. ಭಾರತಕ್ಕೆ ಸಂಬಂಧಪಟ್ಟ; ಭಾರತದೇಶಕ್ಕೆ ಸೇರಿದ : 'ಭಾರತೀಯ ಸಂಪ್ರದಾಯ' ವರಾ. (ನಾ). ೨. ಭರತ ಖಂಡದಲ್ಲಿ ಹುಟ್ಟಿದವನು; ಭಾರತರಾಷ್ಟ್ರದ ಪ್ರಜೆ : ಭಾರತವೆಲ್ಲ ಒಂದೇ ದೇಶ, ಭಾರತೀಯರೆಲ್ಲ ಒಂದೇ ಜನಾಂಗವೆಂಬುದು ಈ ದೇಶದಲ್ಲಿ ಈ ಜನದಲ್ಲಿ ಒಂದೇ ಸಂಸ್ಕೃತಿ ಇರುವುದರಿಂದ ಇದಕ್ಕೆ ಸಂದೇಹವೇ ಇಲ್ಲ (ಪಾರಥ. ೪); ಪ್ರಾಜ್ಞಭಾರತೀಯರ ತತ್ತ್ವವಿಚಾರಗಳ ಭಾಷಾಂತರ ಅಥವಾ ಸಂಗ್ರಹವು ಸ್ವಾಭಾವಿಕವಾಗಿಯೇ ಒಹು ವ್ಯತ್ಯಾಸವಾಗಿರಬಹುದು (ಡಾಕಶ್ರೀ. ೦೦ ಪುಟ್ಟು೩). [ಸಂ.]

ಭಾರತೀಯತೆ (ನಾ). ಭಾರತೀಯನಾಗಿರುವಿಕೆ; ಭಾರತೀಯತ್ವ : ಈ ತೆರನಾದ ದೇಶಪ್ರೇಮ ಮತ್ತು ಭಾರತೀಯತೆ ಆತನ ವೇಷಭೂಷಣದಲ್ಲಿಯೂ . . . ಎದ್ದು ಕಾಣುತ್ತಿದ್ದವು (ಸ್ವಕೃ. ೦೩೦).

[ಸಂ. ಭಾರತೀಯತಾ]

ಭಾರತೀಯತ್ವ (ನಾ). = ಭಾರತೀಯತೆ : ಒಮ್ಮೊಗೇ ಪಾತಿವ್ರತ್ಯ, ಉದ್ದೀಪನ, ಮೃದುತ್ವ – ಲಕ್ಷಣಗಳನ್ನು ವ್ಯಕ್ತಪಡಿಸುವ ಅಜಂತಾ ಹೆಣ್ಣುಗಳಲ್ಲಿ ಒಂದು ವಿಶಿಷ್ಟ ಭಾರತೀಯತ್ವವನ್ನು ಕಾಣಬಹುದು (ಚಾರಚಿ. ೩೨೬). [ಸಂ.]

ಭಾರತೀಯಸಂಪ್ರದಾಯ (ನಾ). ಭರತಖಂಡದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿರುವ ಪದ್ಧತಿ. – ಪದ್ಧತಿ. – ಆಚಾರ : ಸಂಸ್ಕೃತಿಯ ದೃಷ್ಟಿಯಿಂದ ಹಿಮವತ್ಸೇತುವರ್ಯಂತ ಒಂದೇ ವಿಧವಾದ ಭಾರತೀಯಸಂಪ್ರದಾಯ ಸ್ಥಿರವಾಯಿತು (ಪುಣ್ಯಾ. ೦೦೮ ಪೀಠಿ). [ಸಂ.]

ಭಾರತೀಯಸಂಸ್ಕೃತಿ (ನಾ). ಭರತಖಂಡದ ಜನತೆಯ ಮಾನಸಿಕ ಸಾಧನೆ ; ಭಾರತೀಯರ ಬೌದ್ಧಿಕಸಿದ್ಧಿ : ಭಾರತೀಯಸಂಸ್ಕೃತಿಯನ್ನು ವೈದಿಕಸಂಸ್ಕೃತಿ ಎಂದು ಹೇಳುವುದರಲ್ಲಿ ಔಚಿತ್ಯವಿದೆ (ಪುಣ್ಯಾ. ೧೩ ಪೀಠಿ). [ಸಂ.]

ಭಾರತೇಯ (ನಾ). = ಭಾರತೀಯ ೨ : ಪ್ರಾಣಿವಧಾಶ್ರದಲ್ಲಿ ಜೀವವನ್ನು ಆದಿಯಿಂದ ಒಪ್ಪಿಕೊಂಡು ಬಂದಿರುವವರು ಭಾರತೇಯರು (ಜಡಾಕ್ಷ. ೦೯೦). [ಸಂ.]

ಭಾರದಡಿ (ನಾ). (ಉಕ) ದೊಡ್ಡತನ; ಗೌರವ : ಸಾಮಂತನು ಏನಾದರೂ ಕೃಷ್ಣತನಯನ ಮೇಲೆ ಅವಸಂಬಿ ಮಾಡತಕ್ಕ ಮನುಷ್ಯನೇ ಇದ್ದಿಲ್ಲ. ಮೇಲಾಗಿ ಅವರ ತಾಯಿಯು 'ಭಾರದಡಿ 'ಯ ಹೆಣ್ಣುಮಗಳು (ಶಿಪಣಾ. ೨೦೨).

[←ಪುರಾ. ಭಾರಧಡೀ = ಭಾರವಾದ ಮಣ್ಣು; ದೊಡ್ಡಸಾಮಾನು]

ಭಾರದ್ವಾಜ (ನಾ). ೧. ಭರದ್ವಾಜನೆಂಬ ಮಹರ್ಷಿಗೆ ಸಂಬಂಧಿಸಿದುದು: ಭಾರದ್ವಾಜಿಕಾಲಗೋತ್ರಮನುದಂಚದನ್ಯಾರತಕ್ಷೇತ್ರವಂ . . . ಸಾರಚಿ ಕೈಶವಂತಲಂತರಿಸಿತೆಂಬಾಗಳ್ (ಕಬೀಚಾ. ೨–೦೦). ೨. ಭರದ್ವಾಜ ಮುನಿಯಿಂದ ಪ್ರವೃತ್ತವಾದ ಗೋತ್ರದಲ್ಲಿ ಹುಟ್ಟಿದವನು. ೩. ಭರದ್ವಾಜನ ಮಗ; ದ್ರೋಣ : ಅಂತು ಭಾರದ್ವಾಜನಾಗಾಮಿಕ ಸಂಗ್ರಾಮರಂಗಕ್ಕೆ ಪಾತ್ರಂಗಳಂ ಸಮಯಿಸುವ ಸೂತ್ರಧಾರನಂತೆ ಶಸ್ತ್ರವಿದ್ಯಾಧ್ಯಾಸಂಗಮುತ್ತಿರೆ (ಪಂಚಾ. ೨–೨೯ ಪ); ಓದಂ ಗಡ ಜಿಃ ಭಾರದ್ವಾಜಂ ಗಡ ಬಿಲ್ಲ ಬಿಲ್ಲೆಯುಂ ಕುಲಮುಂ ವಿದ್ಯಾಜಂ ಮಸುಟ್ಟುವ್ವ ಪಾಂಡುತನೂಜರ ಪಕ್ಕಮೊಳೆ ಪಾಲ್ಗೊಡೆ ಪೇಗಟ್ಟುದಱಿಂ (ಗಣಾಯು. ೨–೦೬); ನೃಪಾಲಶ್ರೇಣಿಯನು ಶ್ಯಾಸ್ತ್ರ ಕಳೆಯಲಿ ಜಾಣರನು ಮಾಡಿದನು ಭಾರದ್ವಾಜಮುನಿಯಂದು (ಕುಪ್ರಾ. ೬–೩೨). ೪. ಸಪ್ತರ್ಷಿಗಳಲ್ಲಿ ಒಬ್ಬ; ಭರದ್ವಾಜ. ೫. ಒಂದು ಬಗೆಯ ಹಕ್ಕಿ; ಹೆಗ್ಗಾರ : ವಲಿಯ ಭಾರದ್ವಾಜ ಪಿಕ ಪಿಂಗಲಿ . . . ಶಿಖಿ ಮದ ಗೊಳಲೆ ಮುಖ್ಯವಿಹಂಗವಿವೆ ವೈದೇಹಿ ನೋಡೆಂದ (ಕೊಡಣಾ. ೩–೦–೩೩); ಹರಿಣ ಭಾರದ್ವಾಜ ಪಿಂಗಂಗಳು ಕಡಿಯ ವರಿ ನವಿಲು ನಕುಳ ವಾಯಸಂಗಳು ತಿರ್ದಿ ಶುಭಶಕುನಂಗಳು (ಜಡಗಿ ೦೨೩); ಕಂಗೊಳಿಪ ಕೊಂಚೆ ಭಾರದ್ವಾಜ ಜೀಮೋತ . . . ಪಿಂಗಳಕ ಸಾಲ್ವ 'ನರಳಿಗನಸುಗಮ್ಮಿಗಳ ಸಂಗಮೊಪ್ಪಿರ್ದವಲ್ಲಿ (ಹುಣ್ಯಾಗ. ೦೦–೩). ೪. ಹೆ: ಬಂಧುರ ಭಾರದ್ವಾಜ ಶಾಂಡಿಲ್ಯಕ ಶುಕ ವಿಮದಾಗಸ್ತ್ಯಕಂ ತಾಮಸಪ್ರೋತ್ಕರಮಂ ಸೋಮಾರ್ಕ ರುಕ್ಷಾಂಚಿತಮದು ನಭಮಂ ಪೋಲ್ತು ಬೆರ್ಮಾಯ್ತುರಣ್ಯಂ (ಜಾಹೀ. ೫–೭೩). ೬. ಅಗಸ್ತ್ಯ. ೭. ಅಂಗಾರಕಗ್ರಹ. [ಸಂ.]

ಭಾರದ್ವಾಜತನೂಜ (ನಾ). ಭಾರದ್ವಾಜಋಷಿಯ ಮಗ; ದ್ರೋಣ : ಭಾರದ್ವಾಜತನೂಜಂ ಜಾತುಗುಣಂ ದ್ರೋಣನೆಂಬಂ. . . ಜನವಿನುತ ಜಾಮದಿಗ್ಯಾಧಾರಂ (ಪಂಪಾಂ. ೦೦–೩೩). [ಸಂ.]

ಭಾರದ್ವಾಜಿ (ನಾ). ಕಾಡುಹಕ್ಕಿಗಿಡ : "ಆ ಹಕ್ಕಿಯು ಗಿಡು ಅಡವಿಯಲ್ಲಿ ಹುಟ್ಟಿದರೆ ಭಾರದ್ವಾಜಿಯೆನಿಸುಗು" (ಪಾಜಾಹಾ. ೦೦೦). [ಸಂ. ಭಾರದ್ವಾಜೀ]

ಭಾರಯಷ್ಟಿ (ನಾ). ಭಾರವನ್ನು ಹೊರುವ ಕಂಬಿ.–ಆಡ್ಜ : "ಭಾರ ಯಷ್ಟಿಃ. ವಿಹಂಗಿಕಾ—ಈ ೨ ಕಾ(ಜಿ)ಸಿನ ಕಂಬಿ" (ಪಠಾಯಾಂ. ೦೨೩–೬೬). [ಸಂ.]

ಭಾರಯಿಸು 'ಭಾರಿಸು' ನೋ.

ಭಾರವಡ್ಡಿಗೆ 'ಬಾರವಟ್ಟಿಗೆ' ನೋ.

ಭಾರವಣೆ. ಭಾರಣ್ಕೆ (ನಾ). ೧. ಹೊರೆ; ತೂಕ; ಭಾರ. ೨. ಹೆಚ್ಚಳ; ಆಧಿಕ್ಯ; ಅತಿಶಯ: ಶಿವನರ್ಚನೆಯು ಹರಿವರಿಯು ಶರಣರ ತಿರಿತಿನಿಯು ಭಾರವಣೆಯ ಮೇಲೆ ಮೆಲ್ಲನೆ ಸರ್ತನದ ನಟನೆ ಮೈ ಸಂದು ಕೈವೀಸಿ ನಡೆದು ಬರೆ (ಕಚಿಪ. ೦೦೦–೦); ಘುಂಘಿಷ್ಕರ ವೀರನಂದಿವಿಕ್ರಮಿಯ ನೇಜದ ಭಾರ ಮಣೆ ತೋಱುವಿದೇನೆ ಕರ್ಣನಾರೆಂದ (ಕುಣ್ಯ. ೫೬–೨೮) ; ಬರುತ ಕಂಡನು ತೊಳಗಿ ತೋಱುವ ಶಿರದ ಸಿರಿವಾದುಱಿಯ ಪೊಳಕಾಂಬರದ ಭಾರ ಮಣಿಯುರಿ ಬಳುಕುವ ಭದ್ರಕಾಯನನು (ಜಪಾಪ. ೬–೦–೬೬). ೩. ಹಿರಿಮೆ; ಪೆಂಪು; ಘನತೆ; ಔಚಿ : ಕಡುವಾಪದ ಕಲಿ ರಾಜಪುತ್ರರ ಪಡುವಣೆ ಮೈ ಪರಿಯಳದಿ ದೆಸೆ ಕಂಪಡಲು ಭಾರವಣೆಯಲಿ ಬಂದನು ಕರ್ಣನೋಲಗಕೆ (ಕುಣ್ಯಕ್ರೀ. ೦–೦೪). ೪. ಆಡಂಬರ; ಅಟ್ಟಾಟೋಪ; ಕೋಲಾಹಲ : ಬವರಿಯಲಿ ಜಯವಾಡಿನಲಿ ಮೈಲುಮನೆಯಲಿ ಬಿನ್ನಾಣದಲಿ ಭಾರವಣೆಯಲಿ. . . ಕೌರವಮಹೀಪತಿ ತೋಱಿದನು ಶ್ರವಣನು ಕಥಾರಿಯಲಿ (ಪಂಪಕ. ೦೬–೨೯); ಪ್ರತಿಭಟನಭಾರವಣೆ ಲೇಸ್ಯೆ ಕರ್ಣ (ಕುವ್ಯಾ. ೫–೦೩). ಭಾರಣೆ, : ೧. "ಭಾರಣೆಯನೆ ಬಲುಭಾರಂ" (ಶಾಪಾ. ೫೪); ಸಾರಪರಿವಾಳ ಮಣ್ಣುಗಳ ಬಲುಭಾರಣೆಯ ಪಿಟ್ಟಿಗೆಗಳೊಟ್ಟಿತು (ಕುಬ್ಯಾ. ೦೬–೨೮); ಜಗತಿ ಜರಿದುದು ತಣದ ಹೊಮಟ್ಟಿಗಳ ಭಾರಣಿಗೆ (ಕೊಪಣಾ. ೬–೦೬–೨); ಭಾರಣೆಯ ಗಂಡಶೈಲಗಳೆಲ್ಲ ಗಮನದುರು ಮಾರುತನ ಗತಿವಿಡಿದು ಪಡಿಬಲವ ಪುಗುಂಕೊಂಡು ಧಾರಿಣೇಶನ ಸುತ್ತಿ ಪೋವಂತದೇಂ ಬೆಡಗ ತೋರುವುದೊ ತತ್ಸಮಯದು (ಪಂಗಾಣಾ. ೬–೦–೨೦). ೨. ಕುಣವ ಕುಮರೆಯ ಮದದ ಬಲುಭಾರಣೆಯಲೊಲೆವಾನೆಗಳ. . . ತಿವಿದಗಿವ ಭುಟೆಯೊಡ್ಡಣೆ ಸಘಾಡಿಸಿತೆರಡು ಬಲದಲಿ (ಕುಬ್ಯಾ. ೫–೬); ಅಧಿಕಭೀತಿಯ ಭಾರಣೆಯಲಿರಲುರಿ ಧಡಾಲಿಸಿ ಭೋರೆಮತ ಹಬ್ಬಿದುದು (ಕೊಪಣಾ. ೬–೬೬–೦೦); ಭಾರಣೆಯ ಬಲದೊಡನೆ ಕುದುರೆಗಾವಲೊಳರ್ದ ವೀರತಾಮ್ರಧ್ವಜನ ಮಂತ್ರಿ ನಕುಲದ್ವಜಂ ದೂರದೊಳ್ ಕಂಡನು (ಕೃಬಾಣಾ. ೨೫–೧). ೩. ಅದಟಿನೊಳ್ವೀರದೊಕ್ಕಾರಣೆಯೊಳು . . . ಕಾಣನ ವರಿರ್ಗ್ಗೆ ಸಮಾದ ಕಲಿಗಳಂ (ಕೃಬಾಣಾ. ೨೨–೦೨); ವಿಚಾರವಳಿದಾರೂಢ ಯೋಗಿಯ ಭಾರಣೆಯಲಕ್ಕೂರವೆಸೆದನು ಭಕ್ತಕೇಳಿಯಲಿ (ಕಚಿಪ್ರ. ೨–೩೬). ೪. ಭೈರವನ ಭಾರಣೆ ರಸ್ಸಸಮರ್ಜ್ಯ ವಿಜ್ರು ಮೊತ್ತಂ ಗಣನಾತಿರೇಕವೆನ ಲೊಪ್ಪವವೋರ್ ಪೆರೆದಿರ್ದುದಾಕ್ಷಣಂ ಸಂಗರದಮ್ಮುಗಕ್ಕೆ ಚತುರಂಗಬಲಂ

(ಪಚಳು. ೬-೧೯); ಕಾಳಗದೊಳಿದಿರಾರು ಭೀಮಾರ್ಜುನರ ಭಾರಕ್ಕೆ (ಭಾಗ್ಯಸ. ೩-೨೦) ; ಆರು ಮುರಹರನಲ್ಲದಸುವನು ಹೀರುವರು ಪೂತನಿಯ ಶಕಟನನಾರೊದೆದು ಹುಡಿಹುಡಿಯು ಮಾಳ್ಪರು ಮಾರುತಾಸುರನ ಭಾರಕೆಯ ಬಿಜ್ಗೆವ ವೀರರದಾರು (ಪಣಾ. ೨-೩-೦೭). ೫. ಹೊಣೆಗಾರಿಕೆ ; ಕಾರ್ಯನಿರ್ವಹಣೆಯ ಜವಾಬ್ದಾರಿ ;. ತಿಳಿಯಲಟ್ಟಿದ ಸಾತ್ಯಕಿಗೆ ಕೊಳುಗುಳದ ಭಾರಣೆಯಾಯ್ತು (ಭಾಗ್ಯಕ್ರೀ. ೦೨-೩) ; ಈರ ನೇಣುಗಳು ದರವೇಷ್ಯನಧಾರಕಿಗೆ ಬಾರದುದನೊಂದೇ ಸೇರಿದುದನರ್ಜುನ ಮಹಾ ವಿಟ್ಟಿಗನೇ ಧರಿಗೆ ಬೇರುಸುಹಿಡಗೆಡಹುವುದ . . . ನೆಟ್ ಕಂಡೆ ನಾನೆಂದ (ಕಣಾಗ. ೦೦-೬೨-೨೮).

[<ಸಂ. ಧಾತ. /ತುಣಾ. ಭಾರಾವಣೇ=ಬಹಳ ಭಾರವಾಗು]

ಭಾರವಹ (ನಾ). ೧. ಹೊರೆಯನ್ನು ಹೊರುವವನಂ. ೨. ಹೊಣೆಯನ್ನು ಹೊರುವವನು ; ಹೊಣೆಗಾರ : ತುರಗವಾರಗಜಶಿಕ್ಷಾಭಾರವಹಂ ವಿಳದಬಾರಧನರಿಂ ಭೂಜಿಗುಮಾ ರುಚಿರಪ್ಪುಣಮಿಳಾರಮಣಯುಕ್ತಂ (ಕಾಹರಿ. ೩-೧೨). [ಸಂ.]

ಭಾರವಾಸಿ (ನಾ). ಹೆಚ್ಚು ಭಾರ ; ಅಧಿಕವಾದ ತೂಕ : ಪಾರಜಾಗೀರು ಹೊನ್ನಿನ ಜೀಲಜೀಲುಗಳು ಭಾರವಾಸಿಯ ಸ್ವರ್ಣರಜತದಿಂ ಅಂಬಾರಿಸಹ ಅಶ್ವಗಜಸಮೂಹ . . . ಧವಳಧಶ್ರಗಳನಾರಾರಿಗೀವುದೀವುತ್ತಿರಲು ರಾಜ ಚೂಡಾಮಣಿಯ ಸಭೆಯೊಳಾಲವಿಂ (ಶ್ರಕ್ರ. ೩-೩೩). [ಭಾರ + ವಾಸಿ]

ಭಾರವಾಹ (ನಾ). ಭಾರವನ್ನು ಹೊರುವವನು ; ಹೊರೆಯಾಳು : "ಭಾರವಾಹಃ ಭಾರಿಕಃ—೨ ಹೊರೆ ಹೊರುವವನ ಪಾರು" (ಸಿಶ್ರಾ. ೩೩. ೩೮). [ಸಂ.]

ಭಾರವಾಹಕ (ನಾ). = ಭಾರವಾಹ : ಯುವರಾಜಂಗರಸಂ ರಾಜ್ಯವಿಳಾಸ ಮನಿತ್ತು . . . ಭಾರವಾಹಕಂ ಭೋಜ್ಯಯಾನಿಟ್ಟಿಳಿದಂತೆಪೊಲಾದಂ (ಜೂಭ್ಯ. ೯-೦೩೦). [ಸಂ.]

ಭಾರವಾಹಿ (ನಾ). = ಭಾರವಾಹ : ಕರ್ತೃಶಾಲಿಯಾದ ಪುರುಷನು. "ಯಃಕ್ರಿಯಾವಾನ್ ಸ ಪಂಡಿತಃ", ಈಳದವರೆಲ್ಲರೂ ಭಾರವಾಹಿಗಳು (ಶ್ರಕ್ರ. ೦೨೬). [ಸಂ. ಭಾರವಾಹಿನ್]

ಭಾರವಿಸು 'ಭಾರಿಸು' ನೋ.

ಭಾರಸಂಖ್ಯೆ (ನಾ). ಅಧಿಕ ಸಂಖ್ಯೆ ; ಬಹುಸಂಖ್ಯೆ : ಮಾರಕತದ ಮಧುಪಾತ್ರೆ ನೀಲದ ಕರಗ ವೈಡೂರಿಯದ ಪಡಿಗವ ಚರರು ತಂದೊಟ್ಟಿದರು ಬಂಡಿಗೆ ಭಾರಸಂಖ್ಯೆಯಲಿ (ಭಾಗ್ಯ. ೪-೦೩) ; ತಂದು ಬಳಿಕೊಟ್ಟಿದರು ಪರಿಮಳಚಂದನದ ನೀರಸಕಾಜಂಗಳನಂದಮಿಗೆ ಮಾಧ್ಯದಲಿ ಸುರಿದನು ಭಾರಸಂಖ್ಯೆಯಲಿ ಒಂದು ಕಾಳುಖ್ಯೇಧದಲಿ ಹಳುಕೊಂದಿದುತ್ತಮಕರ್ಪೂರವನು (ತೂಣಾ. ೩-೩೩-೨೬). [ಸಂ. ಭಾರಸಂಖ್ಯಾ]

ಭಾರಾಂಕ (ನಾ). ೧. ಅತಿಶಯವಾದ ಯುದ್ಧ, -ಕದನ : ಬಾರದೊಳು ಹರಿಪಾಂಚಜನ್ಯದ ಶಬ ಭಯಂಕರವಾಯ್ತು ಬಹಳಾಹವದೊಳಗೆ ಪಾರ್ಥಂಗೆ ಬಿದ್ದುದು ಭಟರ ಭಾರಾಂಕ (ಭಾಗ್ಯಕ್ರೀ. ೦೦-೦). ೨. ಯೋಧ ; ಪರಾಕ್ರಮಿ: ನೀರಜಭವನ ಮಾನಸಪುತ್ರ ನೀನಲ್ಲದಾರಾದೊಡೀ ಮಾತುಗಳ ಭಾರಾಂಕವಾಗಿಯೊಪ್ಪೊಡನೆ ಪೋಕ್ಕೊಡೆ ಸೀಳಿ ತೋರಣಗಟ್ಟಪೆನೆಂದ (ಕೋಚಕ. ೦೨-೩೦). [ಸಂ.]

ಭಾರಾಮಾರ್ಗ 'ಬಾರಾಮಾರ್ಗ' ನೋ.

ಭಾರಾವತಾರ (ನಾ). ಹೊರೆಯನ್ನು ಇಳಿಸುವಿಕೆ ; ಕಷ್ಟವನ್ನು ಪರಿಹರಿಸುವಿಕೆ : ಪುಣ್ಯಂ ಕೃತಯುಗದೊಳ್ . . . ನೆಗಟ್ಟಿಯ ದೈತ್ಯರೆಲ್ಲರ ಮೆನ್ನ ಚಕ್ರಘಾತದೊಳಟ್ಟಿ ಮಲ್ಗಿದಂತಾದರದೊಂದು ಧರಾವನ[ತ]ಯ ಭಾರಾವತಾರದೊಳೆನಿಶಾನಂ ಘಸಣೆ ಪೋದುದು (ಹಂಹಾಕ. ೬-೨೦ ಕ)-

[ಸಂ.]

ಭಾರಾಳಸ (ನಾ). ಭಾರದಿಂದ ಉಂಟಾಗುವ ಅಲಸ್ಯ; ತೂಕದಿಂದ ಉಂಟಾಗುವ ಜಡತ್ವ : ತನ್ನ ಸಡಿಯಿಂ ನಡೆಗಡ್ಡೊಡವರ್ಪ ಕೀಳ ಹಂಸಾಳಿಯ ದೆನ್ನೊಳ್ಕೆದೆ ಮತಿಯಲ್ ಬಸವಲ್ಲದೆ ಏಂದು . . . ಭಾರಾಳಸದಿಂದವಾದ ಗಮನಾಲಸವ್ಯತ್ಕಿಯನೇನನೆಂದಪೆಂ (ಜಗಣ. ೨-೪೭).

[ಸಂ. ಭಾರಾಲಸ]

ಭಾರಿ$_1$ (ಗು). ೧. ಹೆಚ್ಚಾದ ; ಅತಿಶಯವಾದ ; ಅಧಿಕವಾದ : ಭಾರಿ ಧನವನು ತಂದು ಧರೆಗಳುಪಿದರು (ಭಾಗ್ಯ. ೦೯-೬); ನನಗೆ ಬಲು ಭಾರಿ ದಾನ ಮಾಡಿದಿ (ಹುಚರಾ. ೫೪). ೨. ದೊಡ್ಡದಾದ ; ಗಾತ್ರವಾದ : ಜಾಲಿ ಜೇನೊಡವಿಪ್ಪ ಹಿಪ್ಪಲಮಾದಿಯವ ನೋಡಬಲೆ ಲತೆಗಳ ಮೇಲು ಹೊದಕೆಯ ಬಂದಣಿಗಳ ಭಾರಿವೊಜ್ಜಿಗಳಲಿ (ತೂಣಾ. ೩-೨-೨೪). ೩. ಕಟ್ಟುಮಸ್ತಾದ; ಸ್ಥೂಲವಾದ : ಅವರು ಭಾರಿ ಆಳುಗಳಾಗಿದ್ದಾರೆ (ಜೀಪಣಾ. ೨೦). ೪. ಬೆಲೆ ಬಾಳುವ ; ಅತಿ ಬೆಲೆಯ : ಆಕೆ ದಿನವೂ ಭಾರಿ ಸೀರೆಯನ್ನೇ ಉಡುತ್ತಾಳೆ (ಹೊಣ). ೫. ತೀಪ್ರವಾದ; ಅತಿಯಾದ : ಮೈಯಲ್ಲಿ ಭಾರಿ ಜ್ವರ. ಪೂರಾ ನಿಶ್ಯಕ್ತಿ (ಜಪ್ರಚೀಣ. ೦೦೩). ೬. ಭಯಂಕರವಾದ; ಭೀಕರವಾದ: ಭಾರಿಯಾಹವವಾದೆಡಗೆ ನಿವ್ಮನಿದಾರು ಬಿಟ್ಟಿರುವಾಯದಲಿ (ಭಾಗ್ಯ.೪-೦೦). ೭. ಪರ್ಯಾಪ್ತವಾಗುವಷ್ಟು; ಸಿರಿಯುಳ್ಳ: ಆತ ಹಲವಾರು ಜನರನ್ನು ತನ್ನ ಕೈಕೆಳಗೆ ಸಂಬಳಕ್ಕಿಟ್ಟುಕೊಳ್ಳಬಹುದು ಎನ್ನುವಷ್ಟು ಭಾರಿ ಮನುಷ್ಯ (ಹೊಣ). (ನಾ). ೮. ಭಾರವಾದುದು; ತೂಕವಾದುದು. ೯. ದೊಡ್ಡದಾದುದು ; ಗಾತ್ರವಾದುದು : ಭಾರಿಯ ತಲೆವರಿಗೆಗಳೊತ್ತಿದರು ಹೊಗಿಸಿದರು ದುರ್ಗವನು (ಭಾಗ್ಯ. ೬-೩೦); ಭಾರಿಯ ದಂತಿ ಮಹದಾಹವದೊಳಿದುದು (ಭಾಗ್ಯಕ್ರೀ. ೬-೦೦), ೧೦. ಹೆಚ್ಚಾದುದು ; ಅತಿಶಯವಾದುದು : ಭಾರಿಯ ಭಟರ ಗಡಣದಲಿ ಭಾರಣಮುಲ್ಕೆತಪ್ಪ ನಿಜಪರಿವಾರವನು ಬೋಳ್ಕೆಸಿ (ಭಾಗ್ಯಕ್ರೀ. ೦೦-೯); ಬಳೀಲಾ ದಮಯಂತಿ ಭಾರಿಯ ಬಳಲಿಕೆಯನನುಭವಿಸಿ ತಂದೆಯ ನಿಳಯವನು ಭಾರಿದಳು (ತೂಣಾ. ೩-೨-೦೩). ೧೧. ದಷ್ಟವಾದುದು ; ಸ್ಥೂಲವಾದುದು : ಕರವ ಸೊಸಲಲಿ ಜಾಜಿ ಭಾರಿಯ ಭುಜವನೊದೆಜಜಿಸುತ ಅರಸಗಭವಂದಿಸುತ (ಭಾಗ್ಯಕ್ರೀ. ೪-೩೦). ೧೨. ಪ್ರಶಸ್ತವಾದುದು ; ಶ್ರೇಷ್ಠವಾದುದು : ಇತ್ತ ಭೂರಿಶ್ರವನು ಭಾರಿಯ ಹಕ್ಕುಸಾವಿರರಥ ಸಹಿತ ಕೈಗುತ್ತಿದವು ರಣವಿಜಯಲಕ್ಷ್ಮಿಯ ಲಲಿತಬಲಿಯಲಿ (ಭಾಗ್ಯಕ್ರೀ. ೪೦-೦); ಈರೇಳುಲೋಕದ ವರಗಂಡನೆಂದೆಂಬ ಭಾರಿಯ ಬಿರುದಿನ ಕಡಿಯ ವೀರದಾನವಪೆಜಾಲಿನೊಳಗೆ . . . ಒಪ್ಪುತಿಹುದು (ಪ್ರತೆಣಾ. ೬-೬೩).

ಭಾರಿಯಾಳು=ಮಹಾಶೂರ; ಅತಿ ಪರಾಕ್ರಮಿ; ಶ್ರೇಷ್ಠ ಯೋಧ: ಭಾರಿಯಾಳ್ಕೆ ದ್ರೋಣನಾತನು ತೀರಿದನು (ಭಾಗ್ಯಕ್ರೀ. ೦೩-೩೩); ವೀರ ವಿಸ್ಮಯ ಶೌರ್ಯದಾಗರ ಭಾರಿಯಾಳಧಟುಗಳ ಬಂಟಂ . . . ಮಾರಿಮುಖಿ ವೆಜವನು ಬಂದವ ರಾವಣನ ಮಂತ್ರಿ (ಶಾಚಂ. ೩೩-೦೦).

[< ಸಂ. ಭಾರ. / ತೆಲು. ಭಾರೀ. / ಹಿಂ. ತುಣಾ. ಭಾರೀ]

ಭಾರಿ$_2$ (ನಾ). ಸಿಂಹ.

ಭಾರಿನಿಗಳಾಂಕ=ಸಿಂಹಕ್ಕೆ ಬೇಡಿಯನ್ನು ಹಾಕಿದವನು ; ಮಂಚಕರಿನಾಯಕನ ಒಂದು ಬಿರುದು : ಆಗ ಭಟರು "ಮಹಾರಾಜ ಭಕ್ತಪತಿ ಖಡ್ಗಮಲ್ಲ ಭಾರಿನಿಗಳಾಂಕ ಜಯ ಜಯ" ಎಂದು ಹೊಗಳಿದರು (ಜಕ್ಕಣ. ೧೮). [ಸಂ.]

ಭಾರಿಕ (ನಾ). ಹೊರೆಯನ್ನು ಹೊರುವವನು : "ಭಾರವಾಹಃ. ಭಾರಿಕಃ—೨ ಹೊರೆ ಹೊರುವವನ ಪೆಸರು " (ಸಿಶ್ರಾ. ೩೦೨.) [ಸಂ.]

ಭಾರಿಮಾಡು (ಕ್ರಿ). (ವ್ಯವಸ್ಥೆಯಿಂದ ನಿಂತು) ಮುಜರೆ ಮಾಡು ; ಗೌರವ ಸೂಚಿಸು : ಕರಿಯ ಕುಂಭಸ್ಥಳಕುಂಚಕಗಳನೊತ್ತಿ ಭರದಲಿ ವಮಿಸಿ ತಂದಾಗ ಪರಸೇಂದ್ರನಂಚ್ಯಗೆ ನವಿಸಿ ಜೋದರ್ಬಗಳು ಪರುಷದ

ಭಾರಿಮಾಡಿದರು (ಕೃಷ್ಣ. ೨೦.೩೩); ತುರಗಾರೋಹಕರ್ಕೈತಂದು ಕುದುರೆಯ ಬಿರುದಿನೇಱುವ ತೋಱಿ ದೊರೆರಾಯ ಕಂಠೀರವಗೆ ಕೈಮುಗಿದಾಗ ಹರುಷದ ಭಾರಿಮಾಡಿದರು (ಕಂಪ. ೨೦–೩೬). 'ಬರಾಬರಿ', 'ಭರಾಭರಿ ಗೊಡು' ಪರಾ. [ಭಾರಿ ? + ಮಾಡು]

ಭಾರಿಸು, ಭಾರಯಿಸು, ಭಾರವಿಸು, ಭಾರ್ಯೆಸು (ಕ್ರಿ)- ೧. ಭಾರವಾಗು; ಹೊರೆಯಾಗು; ತೂಕವಾಗು. ೨. ಜಡವಾಗು; ಚೈತನ್ಯಹೀನವಾಗು; ಚುರುವಟಿಕೆಯಿಲ್ಲದಾಗು : ಭಾರಿಸಿತು ಮೈ ಮುಕ್ಕಿಯಲಿ ಲಂಘಿ ಜರತರ ಲಂಬಿಸಿತು (ಕಾಡ್ಯಕ್ರೀ. ೦೦೨೬). ೩. ಹೊರೆಯನ್ನು ಹೇರು; ಭಾರವನ್ನು ತುಂಬು : ಭಾ[ಜಾಣಂ. ಬಾ]ರಿಸಿದ ಬಲುಜೊಱೆಯ ಭಂಡಿಗಳೋರಣಿಸಿದವು ಪಯಾಣದಲಿ (ಕೃಷ್ಣ. ೦–೬–೬). ೪. ಹೆಚ್ಚಾಗು; ಅಧಿಕವಾಗು: ನಮಗೀಯರಿಯ ಭಯ ಭಾರಿಸಿತಿದೇನು ವಿಮಿಶ್ರವಿದಕೆನಲು (ಕಾಡ್ಯಗ.೯–೩೦); ಪುಡುಪುಡಿವ ಕೋವದಲಿ ದುರ್ಗದ ಹಡಪರಿಯಂತೇಱಿ ಪುರ ಗದುಬಡಿಸಿ ಬೆಚ್ಚಿತು ಭಾ[ಜಾಣಂ. ಬಾ]ರಿತು ಭಯವಿನತನೂಜಂಗೆ (ಕೃಷ್ಣ. ೯–೬–೨೦) ; ಕೌರವಂ ಮುನ್ನಿರ್ದ ಸರಸ್ಯೈತಂದು . . . ಭಾರಿಸಿದ ಬೳಲಿಕೆಯ ನೀಗಿ ಸರಸಿಯಲಿ (ಕುಪೌಗ. ೬೬–೨೦). ೫. ಗುಂಪುಗೂಡು ; ಸೇರು ; ನೆರೆ : ಊರೋಳೀ ಕಪಿವಾರ್ತೆಯಗಲಕೆ ಬೇರುವರಿದುದು ದೇಗುಬುಂಡದ ಭಾರಕರು ಭಾರಿಸಿತು ಕೋಟಾವಳಿಯದಗ್ಗದಲಿ (ಕೃಷ್ಣ. ೩–೩–೨); ಭಾರಿಸಿದುದೆಡಬಲಕೆ ಸಾಂಬಾಕ್ಯೂರ ಸಾತ್ಯಕಿ . . . ಪ್ರವೀರಕರು (ಕರ್ಣ. ೦೦–೮೦–೨೬). ೬. ಹರಡು ; ವ್ಯಾಪಿಸು : ತಿವಿಶೆಂದುದು ನಿಱಿಳಜಗ ಕೌರವರು ಕಂಪಿಸಿ ಛಿಟ್ಟುಗೆದರು ಧುವನವಲಿ ಭಾರಿಸಿತು ಜಯಜಯ ಜಯೆ ಮಹಾಧ್ವನಿ (ಕುಕ್ಕಾಲ. ೬–೩೬) ; ಫಲುಗುಣಂ ಬಿದ್ದನೆಂದು ಭಾರಿಸಿತು ವಾರ್ತೆಗಳ್ಪರದೊಳಗೆ ದಳದೊಳಗೆ (ಕುಪೌಗ. ೮೨–೨೯). ಭಾರಯಿಸು : ೨. ಕುರುಬಲದ ಹತ್ತಿರಕ್ಕೆ ಸದಿದಂತೆಲ್ಲ ಕುಮಾರನಿಗೆ ತನು ಭಾರಯಿಸಿತು (ಕರ್ಣ. ೮೪) ; ಹೃದಯ ಸರ್ವಸುವುದಿಲ್ಲ –ಭಾರಯಿಸದೆ. ಇನ್ನೂ ಭಾರಯಿಸುತ್ತದೆ (ಪಂಪಭ-II, ೦೬೮). ೭. ತೀವ್ರವಾಗು; ಅತಿಶಯವಾಗು: ಇದೆತ್ತಣವಾದ್ಯ ಇದೆತ್ತಣಗಾನ ಎಮ್ಮ ವಂತೆ ಸೈತ್ಯರಸಾನುಭವ ಭಾರಯಿಸಿತು (ಜಾಪುಪ. ೦೦೨). ಭಾರವಿಸು: ೧. ನೆಲ ಭಾರವಿಸಿತಹಿಪನ ಶಿರಕೆ (ಕೃಷ್ಣ. ೬–೬೯–೦೯). ೨. ಅವನಯಿಡೆಗಡೆ ಭಂಡಿಗಳು ಭಾರವಿಸಿ ನೂಕಿತು (ಪಣಪ. ೦೦–೪೪–೦೪). ೮. ಒಟ್ಟುಗೂಡಿಸು; ಸೇರಿಸು : ಕ್ರೂರಕರ್ಮರು ತುದುಕಿ ದ್ರೌಪದಿಯನಾ ಪೆಣೆ ಭಾರವಿಸಿ ಬಿಗಿದು ಕಟ್ಟಿದರಾಗಲು (ಕರ್ಣ. ೪೫–೬೨). ಭಾರ್ಯೆಸು : ೨. ಪರನ ಕರುಣಕ್ಕೆ ಪಾರ್ಯೆಸಿ ಭಕ್ತಿಭರದಿಂ ಭಾರ್ಯೆಸಿ ಪುನದ ಮೊಲೆಯಂ ಕೋರ್ಯೆಸಿ (ಜೈಮ. ೯–೬೦); ಮೂರವಿಜಯನ ಕಾಣುತ ಭಕ್ತಿ ತಲೆಗೇಱಿ ಭಾರ್ಯೆಸಿ ಬೇಳುವಂದದೊಳು ಧಾರುಣಿಯೊಳು ಸಾಷ್ಟಾಂಗನಮಿತನಾದನಾ ರಾಯರ ದೇವನಂದು (ಕೃಷ್ಣಾಶ್ವ. ೬–೬೨). ೪. ಮೇರೆಯಿಲ್ಲದ ರಾಜ್ಯ ಮಗನೆ ನಿನಗೆ ವ್ಯತಭೂರವಗ್ಗಳವೆಂಬ ಜಿಂತೆ ಭಾರ್ಯೆಸಿ ಪವಗಿದ್ದುದಿಂದು ಹೋಯ್ತೆಂದು ಕುಮಾರನ ಕೂಡೆ ನುಡಿದಳು (ಕರ್ಣ. ೦೯–೦೦೪); ಮಡಿ ಮೆಲ್ಲನಾಗೆ ಬಡನಡು ದೊಡ್ಡಿತಾಗೆ ತವೆ ಬಿಡುವ ಏಟ್ಟುಸಿರು ಭಾರ್ಯೆಸೆ (ಕ್ರಾಶಂ. ೯–೦೫); ತನ್ನ ಕೆಲಸವೆ ತನಗೆ ಭಾರ್ಯೆಸಿ. ಆಕಳಿಕೆ ಮೈಮುರಿತವೆಡೆಗೊಳಲು (ಜಾಪುಕು. ೪೫). ೯. ದೊಡ್ಡದಾಗು; ದಪ್ಪವಾಗು : ಸಾರಿ ಸಂಸರ್ಗಪೂಜೆಯ ನನುಗೊಳಿಸೆ ಪಾತ್ರಾ ರಾಯ ಕೈಕೊಳುತಿರ್ದ ಭಾರ್ಯೆಸಿ ಬೆಳೆದೊಂದು ಕುರುವನತ್ಯಿತ್ತೊತ್ತಿ ಧೀರಪೊಬ್ಬನು ಸೋರಿವಂತೆ (ಪಪ. ೩೩–೩೬).

[ಭಾರ + — ಇಸು]

ಭಾರುಂಡ (ನಾ). ಒಂದು ಬಗೆಯ ಕಾಲ್ಬನಿಕ ಪಕ್ಷಿ; ಎರಡು ತಲೆಯುಳ್ಳ ಹಕ್ಕಿ ; ಗಂಡಭೇರುಂಡ : 'ಭಾರುಂಡವನ', 'ಭೇರುಂಡ' ಪರಾ.

[ಸಂ.]

ಭಾರುಂಡವನ (ನಾ). ೧. ಭಾರುಂಡ ಪಕ್ಷಿಗಳ- ವಿಶೇಷವಾಗಿ ವಾಸಿಸುವ ಕಾಡು.–ಅರಣ್ಯ. ೨. ಒಂದು ಅರಣ್ಯದ ಹೆಸರು : ಗಂಗಾಸರಸ್ವತಿಗಳ ಪೊಲಬಂಟುತುತ್ಕರದ ವೀರಮಹ್ಮಾದಿಗಳ ಚೆಲುವ ಭಾರುಂಡವನ ವಸುಮತಿಯ ಕುಳಿಂಗಾಖ್ಯ ವಲಿತಹ್ಲಾದಿನೀಶೈಲಯುತಮಾದ ಕಾಳಿಂದಿಯಡಿಗ್ಯೆ ತಂದನು (ಪಂಗಾಣ. ೨–೨೦–೦೪). [ಸಂ.]

ಭಾರ್ಯೆಸು 'ಭಾರಿಸು' ನೋ.

ಭಾರೋಪಜೀವಿ (ನಾ). ಹೊರೆಯನ್ನು ಹೊತ್ತು ಜೀವಿಸುವವನು ; ಭಾರವಾಹಿ : " ಭಾರೋಪಜೀವಿ = ಹೊರೆಯನ್ನು ಹೊತ್ತು ಜೀವಿಸುವವನು". (ಪಾಶಾಶ. ೩೭ ಬೀಗಿ). [ಸಂ. ಭಾರೋಪಜೀವಿನ್]

ಭಾರ್ಗವ (ನಾ). ೧. ಭೃಗುವಂಶಜರ್ಷಿಯ ಮಗ; ಚ್ಯವನಮಹರ್ಷಿ : ಭಾರ್ಗವನು ನಾನು. ಚ್ಯವನನೆಂದು ಕರೆಯುವರು (ಪಪಾ. II, ೦೧೧೩). ೨. ಶುಕ್ರಾಚಾರ್ಯ : "ಉಶನಾ, ಶುಕ್ರಃ, ಕಾವ್ಯಃ, ದೈತ್ಯಗುರುಃ, ಭಾರ್ಗವಃ, ಕವಿಃ, ಧಿಷ್ಣ್ಯಃ — ಈ ೭ ಶುಕ್ರನ ಪೆಸರ್" (ಪಂಚಮು. ೯–೮೮); ಪೋದುದು ಬೊಮ್ಮಂಗೆ ಶಿರಸ್ಸು ಭಾರ್ಗವನು ಕಣ್ಣಾಗಿಂ . . . ವಿಧಿಯಂ ಮೀಱುವನಾವನೆ (ಪೋಪೋಪ. ೫೬). ೩. ಶುಕ್ರಗ್ರಹ : ದಿವಸಕರಂಗೆ ಭಾರ್ಗವ ದಿನೇಶಸುತರ್ . . . ಪೆರವರ್ ನಿರಂತರಂ (ಪಾಪಪ. ೫–೦೩). ೪. ಭೃಗುವಂಶದಲ್ಲಿ ಹುಟ್ಟಿದವನು ; ಪರಶುರಾಮ : ವಾಯುಪಥದೊಳ್ ಶಿಕಾಸ್ಯಂಗಳ್ ಪೋ[ಕ]ಂಗಿಸಿ ಸುಗಿದಂ ಭಾರ್ಗವಂ (ಕಂಪಾ. ೦–೦೦): ಕಲಿವೀರವೈರಿಭಟ ಭಾರ್ಗ್ಗವನೀ ನರಸಿಂಹನೆಂದು ಕಾದದೆ ಸರಣೆಂದು ಬಂದಮಿತವರ್ಗ್ಗಮ ಜೇಳದೆ ವೀರದೇರ್ಕ್ಕಯಂ (ಪಪ. XII. ಕಪಟಿ. ೦೨೬–೨೬; ೧೨೫೦); 'ಮುನ್ನಂ ಭಾರ್ಗವಂ ತಂದೆಯ ನನ್ನಿಗೆ ಮಾತ ರೇಣುಕೆಯಂ ಕೊಲ್ಲನೆ! (ಜಾಪಪ್ರ. ೫೬–೦೯). ೫. ಬಿಲ್ಲುಗಾರ; ಧನುರ್ಧರ : ಅಂತು ಕಲ್ತು ಮುನ್ನಮೆ ಜಾಪವಿದ್ಯೆಯೊಳಿರಿಂದಮಿತನೆ ಭಾರ್ಗವನೆನಿಸಿದ ಭಾರ್ಗವಂಗೆ ತಾನೆ ಭಾರ್ಗವನಾಗಿ (ಪಂಪಾ. ೦–೬೮ ಬ); ಸಿಡಿಲ ಬಳಗವಿದೆಂಬಿನೆಗಂ ತಾಗಿದತ್ತು ಭಾರ್ಗವಸೈನ್ಯಂ (ಪಂಪಭಾ. ೦೬–೦೪) ; ಬಿಲ್ಲ ಬಲ್ಲಣೆಯ ತೆರಳ್ಕೆ ಭಾರ್ಗವರ ಮೊಗ್ಗರದೊಬ್ಬುಳಿ ಕುಂತದಾಳ್ ತಿಂತಿಣಿ ಪೆಱೆ ತಮ್ಮ ತಮ್ಮ ದಿರುದಂ . . . ಇಳಾವಳಯಕ್ಕಱ ಪ್ರತ್ಯುರ್ವಿಸಿದಂ (ಕಪ್ರತಿ. ೫–೦೨). ೬. ಶಿವ ; ಪರಮೇಶ್ವರ. ೭. ಗಜ ; ಆನೆ. ೮. ಕುಂಬಾರ ; ಕುಲಾಲ. ೯. ಬಾಣ ; ಶರ : ಬಾಳ್ಗಡಿಯಂ ಸಿಡಿಲ್ವ ಕಿಡಿಯುಂ ವೆಸ್ಟಿಸೆ ನೋಟ್ಟಂಬರೇಚರರಂ ತಾಗಿದುದುಗ್ರಭಾರ್ಗವಶಯಂ ವಿತ್ರಸ್ತಲೋಕತ್ರಯಂ (ಪರಪ್ರ. ೦–೧೬). [ಸಂ.]

ಭಾರ್ಗವಪುರಾಣ (ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದು ; ಭೃಗುಮಹರ್ಷಿಯಿಂದ ಪ್ರೋಕ್ತವಾದ ಪುರಾಣ: ಸನತ್ಕುಮಾರಪುರಾಣ ನಾರಸಿಂಹಪುರಾಣ . . . ಭಾರ್ಗವಪುರಾಣವೆಂಬುವೇ ಆಯು ನಾಮಧೇಯ ಮುಳ್ಪದಿಂ ವಿರೂಪಿತಮಾದ ಹದಿನೆಂಟು ಉಪಪುರಾಣಂಗಳು (ಪಪಗೀ. ೬).

[ಸಂ.]

ಭಾರ್ಗವಿ (ನಾ). ೧. ಲಕ್ಷ್ಮಿ : "ಇಂದಿರಾ, ಲೋಕಮಾತಾ, ಮಾ, ರಮಾ, ಮಂಗಳದೇವತಾ, ಭಾರ್ಗವೀ, ಲೋಕಜನನೀ, ಕ್ಷೀರಸಾಗರಕನ್ಯಕಾ –ರ ಲಕ್ಷ್ಮಿಯ ಹೆಸರುಗಳೆಂತಲೂ ಅಧಿಕಪಾಠ ಹೇಳುವರು" (ಸಿಶಾ ೦೬. ೦೮). ೨. ಪಾರ್ವತಿ. ೩. ಗರಿಕೆ. [ಸಂ. ಭಾರ್ಗವೀ]

ಭಾರ್ಗವೀಪತಿ (ನಾ). ಲಕ್ಷ್ಮೀಪತಿ ; ವಿಷ್ಣು : ಭಾರ್ಗವೀಪತಿಗಮಳ ಸತ್ವಾಂತರ್ಗತಮದಾಗಿಹುದು (ಕಂಪಾ. ೦೨–೪೨). [ಸಂ.]

ಭಾರ್ಯೆ (ನಾ). ೧. ಭಾರವನ್ನು ವಹಿಸಿಕೊಳ್ಳಬೇಕಾದುದು ; ಆಶ್ರಯ ನೀಡಬೇಕಾದುದು. ೨. ಸೈನಿಕ ; ಯೋಧ. ೩. [ಗಣಿತ] ಒಂದು ಅಳತೆ : ದ್ರೋಣದಿ ಪೋಡಶಭಾಗವ ಕಾಣುತಲಂ

ಭಾರ್ಯಮೆನ್ನುತದು . . . ದ್ರೋಣದಲಿ ಹದಿನಾಲ್ಕುಳಿಗೆಗೆ ವಂದು ಭಾಗೆ ಭಾರ್ಯವೆನಿಸಿಕೊಂಬುದು (ಜೈಕ. ೬೯-೦). [ಸಂ.]

ಭಾರ್ಯಾದೂತಿ (ನಾ). ನಾಯಕ-ನಾಯಿಕೆಯರ ಸಮಾಗಮಕ್ಕೆ ಸಾಧಕರಾದ ದೂತಿಯರಲ್ಲಿ ಒಬ್ಬಳು : ದೂತಿಯ ಪ್ರಯತ್ನದಿಂದ ನಾಯಕನ ಹೆಂಡತಿಯಂ ವಂದಿಸಿ ಆ ಗಂಡನ ಅರಿಕೆಯಿಂದಲೆ ಮೊದಲಲ್ಲಿ ಅಭಲಾಮೆಯ ಕರುಹಾದರೆ ಆ ಬಟ್ಟೆಯಿಂ ನಾಯಕಿಯ ಜಾದರಕ್ಕೆ ಪಡಿಸುವಳು. ಅವಳು ಭಾರ್ಯಾದೂತಿಯನಿಸಿಕೊಂಬಳು (ಶಾಕುಶಾ. ೨೫೯). [ಸಂ. ಭಾರ್ಯಾದೂತೀ]

ಭಾರ್ಯೆ (ನಾ). ಹೆಂಡತಿ ; ಪತ್ನಿ : "ದಾರಾಃ, ಕ್ಷೇತ್ರಂ. ಕಳತ್ರಂ. ಭಾರ್ಯಾ . . . ಗೃಹಾಃ _ ಈ ೧೩ ಹೆಂಡತಿ" (ಪಣಾಶು. ೩೦-೬೪೦): ಆರ್ಯಮನ ಬಳಿಗ್ಕೆದಿದನು ಭಗವರ್ದುನೆಂದಾದರಿಸಿ ನಿನ್ನಯ ಭಾರ್ಯೆ ಸುಡಿಯಲು ನಿಂದೋ ವನದಲ್ಲಿ ಪಾನೀಗ (ತಿಪು.ಚಾಂ. ೦೦-೬೪); ನಿನ್ನ ಕೀರ್ತಿಯನ್ನು ಏನು ಮೆಚ್ಚಿಕೊಂಡರೆ, ನಿನ್ನ ಭಾರ್ಯೆಯು ಸುಮ್ಮನಿರುವು ದಕ್ಕಾದೀತೆ ? (ಅರ್ಜು. ೩೨). [ಸಂ. ಭಾರ್ಯಾ]

ಭಾಲ, ಭಾಳ (ನಾ). ಹಣೆ ; ನೊಸಲು : ತನ್ನ ದೈವರೇಜೆ ಬರೆಯುವಂತೆ ಕಾನೆ ಭಾಲಾ (ಜಾಪರ. ೫೫-೦೦). 'ಭಾಲ', 'ಭಾಲಪಟ್ಟ' ಪರಾ. **ಭಾಳ** : "ಏಟಳಂ ಭಾಳಪಳಿಕಮಜ್ಜಗೆ ಲಲಾಟಂ" (ಪಜ್ಜಕೋ. ೭೦-೦೫); ಅಗಣಿತಶೋಭೆವೆತ್ತ ಪುರಲಕ್ಷ್ಮಿಯು ಭಾಳದ ಲೋಚನಾಂಶುಮಾಲೆಗಳಿಂ ಕಾಂತಿಸಂತತಿ ದಿಶಾವಳಿಯೊಳ್ ಕುದಿಯಿಟ್ಟು . . . ಅಗ್ಗಳಿಸಿ ತೋರ್ಪುದು ತತ್ಪುರವೀಧಿವೀಧಿಯೊಳ್ (ಕುಚಪ್ರ. ೨-೦೦೦) ; ಸರಸಿಜಾರಿಯ ಕಿರಣ ದೋಳಿಯ ವಿರಚಿಸಿವ ಸಿಂಧೂರಭಾಳದಿ ಕುಣಿವ ಕುಂತಳವ . . . ಗಣಪತಿ ಮಾಡಿಮಗೆ ನಿರ್ವಿಘ್ನವಾಯಕವ (ಕುಣ್ಯ. ೦-೩) : ಭಸ್ಮತ್ರಿಪುಂಡ್ರಂ ಕೊಳಪುದ್ಯಾಳಂ . . ವಿನುಗೆ ಚರಿಯಿಪುಲ್ ಪಪ್ಪಲೊಳ್ ತಾಪಸೇಂದ್ರರ್ (ಕಾಚೇ. ೦-೦೩). [ಸಂ.]

ಭಾಲಪಟ್ಟಿ, ಭಾಳಪಟ್ಟ (ನಾ). ೧. ಹಣೆ ; ನೊಸಲು ; ನೆತ್ತಿ : ರಾಜ್ಯ ನಿರ್ಮಾಣದಲ್ಲಿ ಕವಿಯ ಕಾರ್ಯವಿದೆ. ವಿಶ್ವದ ಭಾಲಪಟ್ಟದಲ್ಲಿ ಅವನ ಸಾಲುಗಳೂ ಇವೆ (ಜಾಸಂ. ೩೬). **ಭಾಳಪಟ್ಟ** : ೧. ಅವರ ಭಾಳಪಟ್ಟದ ಮೇಲೆ ಮೂಡಿ ನಿಂತ ಗೆರೆಗಳು ಇದನ್ನು ತುಂಬಾ ಸೂಚಿಸುವು (ತುಗಸು. ೬). ೨. (ಸಂಚಾರದ ಬಗೆಗೆ ವಿವರಣೆಯಿರುವ) ಯಜ್ಞಾಶ್ವದ ಹಣೆಪಟ್ಟಿ.—ಲಲಾಟಪಟ್ಟಿ : ಕುದುರೆ ತನ್ನಿಚ್ಛೆಯಿಂದೈದೆ ಕಂಡು ಭಾಳಪಟ್ಟದ ಲೇಖನವನೋದಿಕೊಂಡು ಏಲಾಳಕಯರಾಗಿ ಸಡಿತಂದು . . . ಸಂಭ್ರಮದೊಳಿಂತೆಂದರು (ಕೃಪುಕಾ. ೦೬-೦). [ಸಂ.]

ಭಾಲಾಂಬಕ, ಭಾಳಾಂಬಕ (ನಾ). ೧. ಹಣೆಗಣ್ಣು. ೨. ಹಣೆಯಲ್ಲಿ ಕಣ್ಣುಳ್ಳವನು ; ಹಣೆಗಣ್ಣ; ಶಿವ : ಭಾಲಾಂಬಕ ದುಷ್ಪಕಾಲಾಖಿಡ್ಡಾದಿ ಶೂಲಾಯುಧ ತ್ರಿಪುರಕೋಲಾಹಲ (ಜಿಕೃತಿ. ೯-೦೬-೦). **ಭಾಳಾಂಬಕ** : ೨. ವಿಕಳಬಲನಿವನೇನು ಭಾಳಾಂಬಕನೊ ಬಲಿಬಂಧನೊ ಸುರಪಾಲಕನೊ ಫಡಫಡ ಎನುತ ಕವಿದುದು ಕರ್ಣನಿದಿರವಲಿ (ಕುಣ್ಯ. ೦೨-೩); ತರಣಿಯುಜ್ಜುಗೆ ಧರಣಿ ಕಲ್ಪದ ಹರನ ಭಾಳಾಂಬಕದ ತ್ರಿಣಿ ಸೀವರಿಸಿದಂತಾಯ್ತೇನೆಂಬೆನು ಪವಗ್ರಹಾಗಮವ (ಕೊಡಾ. ೦-೩-೦೫); ಬೂಟಕದಿಂದ ಭಾಳಾಂಬಕವ ಭಜಿಸಿಯಾಡಂಬರಂ ಮೆಱೆವರೊಳು ಕೂಡದಿರು (ಸಮಂ. ೩-೨೪). [ಸಂ.]

ಭಾಲಾಕ್ಷ, ಭಾಳಾಕ್ಷ (ನಾ). ೧.=ಭಾಲಾಂಬಕ ೧. ೨.=ಭಾಲಾಂಬಕ ೨ : ಆಲಿಸೈ ಸಿದ್ಧರಾಮೇಶ ಕಪಿಕಾಂಬಕಂ ಭಾಲಾ[ಕಾಂ. ಕಾ]ಕ್ಷನಂ ಕುಱಿತು ಪುತ್ರನಂ ಬೇಡಿ ಬಹುಕಾಲಮಖಿಯಂತರಂ ತಪಮನಾಚರಿಸಲು (ಕಂಪ್ರ. ೧೭-೨). **ಭಾಳಾಕ್ಷ** : ೦. ಮೃಡನ ಭಾಳಾಕ್ಷದಸಲಮೊಳಿಟ್ಟು ಕಾಸಿ ಗಿರಿಯಡಿಗಲ್ಲ ಮೇಲಿಟ್ಟ ಕೆಂಡಗೆದಱಿನ ಬಟ್ಟೆದೆ ದಿವಸನಿಸ್ತುಂದನು (ಪಚಂಪ. ೪-೩೭); ಹೆಱಿದುಱುಬಿನಿಂದೆ ಶೃಂಗಾರ . . . ತಡಿಗದಱುವ ಭಾಳಾಕ್ಷದಿಂ ರೌದ್ರ . . . ಕ್ಷಮತ್ವದಿ ಶಾಂತ ಮೆಱೆಯೇ ಶ್ರೀಕೃಷ್ಣ ನಿದಿರಿನಲಿ ನವರಸಭರಿತನಾಗಿರ್ದನಗಜೇಶನು (ಕಣ್ಣಕ. ೬-೮೨). ೨. ಭಿಕ್ಷಾನ್ನಮಮಂಡಾ ಭಾಳಾಕ್ಷಂ ಸೌರಾಷ್ಟ್ರವತಿಗತುಳಗೆಗುಗ್ಗಳಮಂ ಸುಕ್ಷವಾಯಿಂರ್ಮಸುತೊಳ್ದಕ್ಷಯಸುಖದೊಳ್ಪನೋಱಲಂ ಪಡೆದಿರ್ದಂ (ಉಪ್ರಕ. ೦೦-೧೦); ಭದ್ರಾರೂಢ ಭಸಾರಿ ಭರ್ಗ ಮೃಡನಂ ಭಾಳಾಕ್ಷ ಪಾದಾಕ್ಷನಂ . . . ಹೃದ್ರಾಜೀವದೊಳಿಟ್ಟು ನಾಡೆ ನೆನೆದಂ ಮದ್ರಾಜನುರ್ವೀಶ್ವರಂ (ಪಜ್ಜಕೋ. ೨-೭); ಭಾಳಾಕ್ಷನ ಮೂಲಮಂತ್ರವೊಂದೇ ಸಾಲದೆ (ಆಕಾಂಡೇ. ೩೦-೭). [ಸಂ. (ಭಾಲ + ಅಕ್ಷಿ +-)]

ಭಾಳೆ 'ಬಲ್ಲೆಯ' ನೋ.

ಭಾಲ್ಲೂಕ (ನಾ). = ಭಾಲ್ಲೂಕೆ : "ಭಲ್ಲೂಕಮಚ್ಛಭಲ್ಲ[ಮೆನೆ ಕರಡಿ] ಭಾಲ್ಲೂಕಮಕ್ಕುಂ" (ಪಜ್ಜಕೋ. ೪೦-೭). [ಸಂ.]

ಭಾಲ್ಲೂಕ (ನಾ). ಕರಡಿ : ಭಲ್ಲೂಕೆ : "ಋಕ್ಷಃ, ಅಚ್ಛಃ. ಭಲ್ಲಃ, ಭಾಲ್ಲೂಕಃ, ಭಲ್ಲೂಕಃ – ಈ ೫ ಕರಡಿ" (ಪಣಾಶು. ೩೮-೭೩). [ಸಂ.]

ಭಾವ, ಬಾವ (ನಾ). ೧. ಸೋದರಿಯ ಗಂಡ ; ಅಕ್ಕ ಅಥವಾ ತಂಗಿಯ ಪತಿ : ನಿಮ್ಮ ಭಾವಂ ಕುಬೇರಪ್ರಿಯಯು ಉಪವಾಸಪೂರ್ವಕಂ ರಾತ್ರಿ ಪ್ರತಿಮೆ ನಿಲೆ (ಜಾಪುಕ. ೬೯); ಭಾವನೀಗಳೆ ಹೋಗಿ ಬೇಡಿದಡಿದ ನಾಗಳೆ ಬಸವರಾಜಮ (ಚಾಪ್ರ. ೦೦-೨೬); ಓತಳ್ಳೆ ಶ್ರೀದೇವಿ ಹರಿಯಲ್ಲೋತು ತೊತ್ತಾಗಿಹಳಧಿನಲಿಕ್ಕಾತವಂದತ್ಯಧಿಕಸಮಬಲರಿಲ್ಲ. . . ದಿನಕರ ಶೀತಕರರಿಗೆ ಭಾವ ವರುಣಾನಿಗಳೆಯ ಕೇಳೆಂದ (ಸಂಭಕ. ೬-೧೬). ೨. ಗಂಡನ ಅಣ್ಣ : ಅವ ಚೆನ್ನಿಗನೀತನಾವನೀ ಜಾಣನಿವನಾವನೀ ಗಾಡಿಕಾಱಿ ಶಿವಾಯೆಂದಜ್ಜೆ ಮಾವ ಮೈದುನ ಭಾವ ಗಂಡರಿರೆ ಮನೆಗಳಂ ಬಿಟ್ಟು. . . ಪರಿತಂದದೇವೇಳ್ವೆನಜ್ಞಾಕ್ಷಿಯರ್ ಮುದಸಲಕ್ಷ್ಮಿಯರ್ ನಿಟ್ಟಿಸಿದರೀಕ್ಷಣರವ (ಕಣ್ಣ. ೫೦-೦೬). ೩. ಸೋದರಮಾವನ ಮಗ : ಸುದಾಮೆಯೆಂಬ ಕತ್ತೆ. . . [ಗ]ಂಗೆಯಂ ವಿವಾಗಳ್ ನೆಗಟ್ಟ್ ಬುದು ಕಾಲಂ ಪಿಡಿದೊಡೆ . . . ತಮ್ಮ ಭಾವನಂ ಧನದೇವನಂ ಕರೆದೀ ನೆಗಚಂ ಬಿಸಿಪೆಂಬುದುಂ (ಸುಚಾಪ್ರ. ೬-೦೬ ಬಿ). ೪. ಹೆಂಡತಿಯ ಅಣ್ಣ : ತಮ್ಮ ಭಾವಂ ಕೃಪನ ಮನೆದೊಳಗತಕರಿಶ್ರಮನಾಗಿರ್ದೊಂದು ದಿವಸಂ ಪಾಂಡವರುಂ ಕೌರವರುಂ ಪೂಜಿಪೊಟಲೊಳ್ ನೆರೆದಿಸುತಿರೆ. . . ಕಂಡು ಸಕ್ಕಂ ದ್ರೋಣಂ (ಕಃಚಣ. ೨೩-೦ ಬಿ); ರಾವು ಫಲುಗುಣಯೆನುತ ಪಾರ್ಥನ ಭಾವ ಕುಡಿ ಮಮ್ಮಟಗಮುಲಿ ತುರಗಾವಳಿಯನದುಹಿದನು ಸುಳಿಸಿದನಾಹವಕೆ ರಥವ (ಕುಣ್ಯಕ್ರೋ. ೯-೩೬). ೫. ಸೋದರತ್ತೆಯರ ಮಗ : ಅವನು ನಮ್ಮ ಸೋದರತ್ತೆಯ ಮಗ, ನನಗೆ ಭಾವನೇ ಆಗಬೇಕು (ಜಾಪ್ರ). ೬. ಬಂಧುತ್ವ ವಿಲ್ಲದಿದ್ದರೂ ಆತ್ಮೀಯತೆಯನ್ನು ಸೂಚಿಸಲು ಬಳಸುವ ಶಬ್ದ : ಆ ಜಂಬುಕನೋದುದೆವಂ. . . ವಾಯಸನರ್ದಲ್ಲಿಗೆ ಬರ್ಪುದುವು ವಾಯಸು ಇದಿರ್ವಂದು ಎಲೆ ಭಾವ ಏಂ ಬಡವಾದಿರೆನೆ (ಕಂಪಂ. ೪೦-೩೦); ಭಾವಿತ್ರ ತೆಗೆಯುವಷ್ಟರಲ್ಲಿ ಸಾರ್ವಜನಿಕ ಭಾವಂದಿರು ಅವರನ್ನು ಸುತ್ತುಮುದಿದ್ದರು (ದೇಚದೂ. ೨೦೬). **ಬಾವ** : ೧. ಪುನುವಲಳ್ಳಿಯ ಗಾವುಣ್ಣಸ್ಯಸೆರ್ ಎಳವರಿ ತಮ್ಮ ಬಾವಂಗೆ ಪರೋಕ್ಷವಿನಯಂಗೆಯ್ದು ಕೊಲ್ಲಾ ನಿಜುಸಿದಂ (ಎಕ್. VIII, ಶಿಂದಿ. ೩೩೦-೦೦; ೪೨೨).

ಬಾವಕ ಬಂಟ = ಒಂದು ಬಿರುದು ; ಭಾವನಾದ ರಾಜನಿಗೆ ನೆಚ್ಚಿನ ಸಹಾಯಕ : ಪರನಾರೀಪುತ್ರಕ . . . ಬಾವನ ಬಣ್ಣ ಗುಣ್ಣ ಚಕ್ಕಜಿಮ್ಮುಗಿ (ಎಕ್. II, ೩೦೬; ಸಂ. ೨೬೦). **ಭಾವನ ಕೇಸರಿ** = ಒಂದು ಬಿರುದು : ಸತ್ಯಯುಧಿಷ್ಠಿರಂ ಪ್ರತಿಪನ್ನಮೇರು ಭಾವನ ಕೇಸರಿ ನಾಮಾದಿ ಸಮಸ್ತಪ್ರಸಸ್ತಿ (ಕೃ. IV. ೩೦-೦೦; ಸಂ. ೧೨೫ು ೫೪). **ಭಾವನ ಗೇಧವಾರಣ** = ಚಾಲುಕ್ಯ ತ್ರೈಲೋಕ್ಯಮಲ್ಲದೇವನ ಕಾಲದ

ಒಬ್ಬ ಮಾಂಡಲಿಕನ ಬಿರುದು : ದಿಶಾಗಜವ್ರಜಾ ಬೆದಱೆ ವಿರೋಧಿಯಂ ಕುಳಿದು ಕೊಲ್ವುದು ಭಾವನ ಗನ್ನವಾರಣಾ (ಕಾಇ-ಪಾ-೫, ೦೦೬-೫; ೨). ಭಾವಕ ಸಿಂಗ = ಭಾವನ ಕೇಸರಿ : ಶ್ರೀಸೋಮೇಸ್ವ[ರ] ದೇವ ಪಾದಾರವಿಂದ × ×××ಣ ಕಮಳಳ್ಳಿಂಗಂ ಭಾವಕ ಸಿಂಗಂ ಶ್ರೀಮತ್ಪೆರ್ಗ್ಗಡೆ ಜಿಂಗದೇವಯ್ಯ (ಶಾಇ. ೪೪, ೬೨-೦೨; ೧೦೬೬).

[< ಸಂ. ಭಾವ]

ಭಾವ್ಯ (ನಾ). ೧. ಇರುವಿಕೆ ; ಇರುವುದು; ಅಸ್ತಿತ್ವ; ಸತ್ತೆ : ಮತ್ತು ಸತ್ಯವೇ ಭಾವವೆಂದು ಹೇಳಲ್ಪಡುವುದು (ಕಾಪ್ರಸೂ. ೧೩); ಅಭಾವದಿಂದ ಭಾವ ಹೊರಡದು (ಕುಲ್ಲಾ. ೯ ೫೬೪); ಪ್ರಪಂಚದಲ್ಲಿರುವ ಮತ್ತುಗಳು ಭಾವ, ಅಭಾವ ಎಂದು ಎರಡು ವಿಧ (ಜಂದಾಪು. ೦೩೦). ೨. ಆಗುವುದು; ಸಂಭವಿಸುವುದು; ಉಂಟಾಗುವಿಕೆ. ೩. ಹುಟ್ಟು; ಜನ್ಮ. ೪. ನಿಜಸ್ಥಿತಿ ; ಸತ್ಯ. ೫. ಪರಮಾತ್ಮ : ದೇವನಾರೆಂದೆಲು ಬುದ್ಧಿಯ ಭಾವದಲಿ ಭಾವಿಪನೀವ ಸದ್ಭಾವರೂಪನು (೪೩೬. ೩-೦೩೬). ೬. ಮನಸ್ಸು; ಅಂತರಂಗ ; ಚಿತ್ತ : "ಬಗೆಯೊಳಾತ್ಮನೊಳು ಘೋರ ಜನ್ಮದೊಳು ಜೀಪ್ಸೆಯೊಳು ಭಾವಮೆನಲ್ಕಂ" (ಪಾಂಚಾ. ೦೧೨-೭೦); ಭಾವಶುದ್ಧವಿಲ್ಲದವಂಗೆ ಭಕ್ತಿ ಫಲಗೊಳ್ಳದು ಕೂಡಲಸಂಗಯ್ಯನೊಲಿದಂಗಲ್ಲದೆ (೦೪೫ ೬೫೬); ಅವ ಪರಿಯ ದೇಸಿಯಣ್ಣಂಗೆ ಬಗೆವರ್ಪುದಾ ವಿಧಗಳ ನಾರೈದು. . . ಭಾವವ ಬಂದಿಗೊಳುವುದು (ಪಾಂಚ. ೩-೦೬). ೭. ಪ್ರಾಣಿಗಳ ಸ್ವಭಾವ.—ಪ್ರಕೃತಿ; ಜೀವಿಗಳ ನೈಸರ್ಗಿಕ ಗುಣ.—ಪ್ರವೃತ್ತಿ. ೮. ಮನೋಧರ್ಮ; ಭಾವನೆ; ಚಿತ್ತವೃತ್ತಿ; ಸಂವೇದನೆ : ಮರುಳು ತಲೆ ಹುರುಳುತಲೆ -ನೀನೇ ದೇವಾ. . . ಕೂಡಲಸಂಗಮದೇವಾ ಭ್ರಾಂತಳೆದು ಭಾವ ನಿಂದುದಾಗಿ (೦೪೫. ೧೦೬); ಭಾವಂ ಭಾಸುರತತ್ಪ್ರಗರ್ಭಮಯವೆಂ ಚಾರಿತ್ರಗರ್ಭಂ (ಜಂಪ್ರತಿ. ೦-೨೪); ಭಾವದಿಂ ತಲ್ಲಣಿಸಿತೆದೆಯುರ್ವಿ ಕಣ್ ತೊಯ್ದುದಿಳ್ಗಾಂ (ಪಾಜಿಂ. ೭೮-೦೦೩೦). ೯. ಅಭಿಪ್ರಾಯ ; ಆಶಯ ; ಇಂಗಿತ : ಭಾವಮೆಂಬುದಕ್ಕುಂ ಕವಿಗಳಾ ಧಾಮಿಸಿ ಮನದ ಬಗೆಯೊಂದಿದರ್ಥಂ (ಕಜಾ. ೬-೨೦೮) ; ಪದಮೆ ಪದಂ . . . ಭಾವಂ ಪೊಣ್ಮಿದ ಸದ್ಯಾವಂ ದನಿಯಿಂಪೊದವಿದ ದನಿಯೆನಿಪೆ ಪೇಳ್ದಪಂ ಕವಿತಿಲಕಂ (ಕುತ್ರಿ. ೦-೩೨) ; ಈ ಸಹದೇವನೀ ಸಾತ್ಯಕಿಯುಭಾವಮನ್ಕೃಷ್ಣಮೌಜ್ಞಸರ ಭಾವಮೆಮ್ಮದು (ಕಾಪ್ಪಾ. ೬-೦). ೧೦. ಕಣ್ಣಿಗೆ ಗೋಚರಿಸುವ ವಸ್ತು ; ಪ್ರತ್ಯಕ್ಷ ವಿಷಯವಾಗುವ ಪದಾರ್ಥ : ಪ್ರಪಂಚದಲ್ಲಿರುವ ಮತ್ತುಗಳು ಭಾವ, ಅಭಾವ ಎಂದು ಎರಡು ವಿಧ. ಭಾವಗಳಾದ ಘಟಪಟಾದಿಗಳು ಹೇಗೆ ಪದಾರ್ಥಗಳೋ ಅವುಗಳ ಅಭಾವಗಳೂ ಪದಾರ್ಥಗಳು (ಜಂದಾಪು. ೦೩೦). ೧೧. ಸ್ವರೂಪ ; ಚರ್ಯೆ ; ತೋರಿಕೆ : ಆ ಚಿತ್ರದಲ್ಲಿ, ಹುಡುಗಿಯ ಮುಖದ ಭಾವ ತುಂಬ ಚೆನ್ನಾಗಿ ಮೂಡಿಬಂದಿದೆ (೬೦೨). ೧೨. ಅಂಗಿಕ ಚಲನೆ. —ಕ್ರಿಯೆ : ಅವರ ಮುಖದ ಭಾವದಿಂದ ಅವರಿಗೆ ಕೋಪ ಬಂದಿರುವುದು ಎದ್ದು ಕಾಣುತ್ತಿದೆ (೬೦೨). ೧೩. ಅರುವತ್ತು ಸಂವತ್ಸರಗಳಲ್ಲಿ ಎಂಟನೆಯದು : ಮತ್ತಮಾ ಮನುಷೇ ಪ್ರಭವ ವಿಭವ ಶುಕ್ಲ ಪ್ರಮೋದೂತ ಪ್ರಜೋತ್ಪತ್ತಿ ಆಂಗಿರಸ ಶ್ರೀಮುಖ ಭಾವ . . . ಅಕ್ಷಯವೆಂದಿಪತ್ತು ತೆಱನಾಗಿಪುದು (೦೪೫. ೬೨೦); ಶಾಲಿವಾಹನ ಶಕ ೧೨೫೩ನೆಯ ಭಾವಸಂವತ್ಸರ ಕಾರ್ತಿಕಮಾಸ. ಅಂದು ಪೂರ್ಣಿಮೆಯ ಸಂಜೆ (ಶ್ರೀಚಾ. ೦). ೧೪. [ವ್ಯಾಕ] ಕ್ರಿಯೆ ನಡೆದುಬರುವುದರಿಂದ ಉಂಟಾಗುವ ಸ್ಥಿತಿ : ತನಮಿಕೆಯುಮೆಂದಿವುಂ ಚೇತನಭಾವದೊಳ್ಕುಂ (ಕಾದ್ಯಪ. ೧೧೩). ೧೫. ಭಾವನಾಮ : ಜಡಮಕ್ಕುತ್ತದ ವಿಧಿಯುಂ ಧಾತುಗೆ ಭಾವದೊಳ್ಕುಂ ಧಾತು ನಿಜದೆ ಭಾವಮವಕ್ಕುಂ (ಕಬುದ. ೨೦೩). ೧೬. [ಗಣಿತ] ಒಬ್ಬತ್ತು ಎಂಬ ಸಂಖ್ಯೆಯ ಸಂಕೇತ : "ಪಸುಧಾ ಭಾವಂ ಕೇಶವದಿಶವಂಕಂ ಭಾವರಂಧ್ರ . . . ಏಧಿ ರತ್ನ ನವಮವೆಂಭತ್ತೆನಿಸಂ (ಕ್ಷಣಾ. ೯-೪). ೧೭. [ನಾಟ್ಯ] ಸೂತ್ರಧಾರನನ್ನು ಸಂಬೋಧಿಸುವಾಗ ಪ್ರಯೋಗಿಸುವ ಶಬ್ದ : "ಸೂತ್ರಧಾರಂ ಭಾವ ಎಂಬುದು" (ಕಣಾಚು. ೬೭-೧೪) ; "ಶಿಕ್ಷಕಂ ಭಾವನಕ್ಕುಂ" (ಕುಂಗಣಾ. ೫೫-೪). ೧೮. [ಕಾವ್ಯಮೀ] ಶೃಂಗಾರ ಮೊದಲಾದ ರಸಗಳನ್ನುಂಟುಮಾಡುವ ರತಿ, ಶೋಕ ಮೊದಲಾದ ಚಿತ್ತವೃತ್ತಿ ; ವಿಶೇಷ ರಸ ನಿಷ್ಪಾದನೆಗೆ ಕಾರಣಗಳಾದ ಸ್ಥಾಯಿಭಾವ ಮತ್ತು ಸಂಚಾರಿಭಾವ : "ಬಾಹ್ಯಮಪ್ಪರ್ಥವಂ ಆಶ್ರಯಿಸಿ ಪುಟ್ಟುವ ಮಾನಸ ವಿಕಾರಮಂ ಭಾವಮೆಂಬುದು" (ಪಣಾಚು. ೧೩-೧೦) ; ಭಾವಿಸಲನುಬಾಧ ದೆನಿವ ವಿಭಾವದ ಪಸುಗೆಗಳೊಳೊಸರ್ವ ರಸದಭಿನವಮುಮಂ ಭಾವಿಸುವುದಾದಿದೇವನ ದೇವೇಂದ್ರನ ಬಗೆಗಮಸದಳಂ ಸರ್ವಜ್ಞಯಾ (೦೦೪. ೯-೨೬) ; ರಸಭಾವವಿಳಾಸದಿಂ . . . ಸರಸ್ವತಿ ದಯೆಗೆಯ್ದು (ಕಾರಂಚಿ. ೨) ; ಹಾದಭಾವವಿಲಾಸವಿಪ್ರಮವಿಲಾಸನಿಯರಾ ವಿಚ ವಿದೂಷಕಂ ಪಾಗರಿಕಪೀಠಮರ್ದಾವಳಯವೆಂದು . . . ಬರಿಸಿದಂ (ಪಚಾ. ೨೦೬. ೫೨). ೧೯. (ಪ್ರಾಚೀನರ ಮತದಂತೆ) ಅರ್ಥಾಲಂಕಾರಗಳಲ್ಲಿ ಒಂದು ; ಒಬ್ಬರು ಹೇಳಿದ ಮಾತಿಗೆ ಸಂದರ್ಭ ಪರ್ಯಾಲೋಚನೆಯಿಂದ ಬೇರೊಂದರ್ಥವು ತೋರುವುದು : ವಿತರ್ಕ್ಯಮಾದಿಂದರ್ಥಾಂತರಮಂ ಸವಾನಿಸುವೊಂದುಕ್ತಿ ಭಾವಮೆಸೆ ಪೆರ್ವಡೆಗುಂ (ಕಾಕ್ಕಾಪ. ೬೦೬). ೨೦. [ಜ್ಯೋತಿ] ಜಾತಕನಿಗೆ ಸಂಭವಿಸುವ ಫಲ ವಿಚಾರವನ್ನು ತಿಳಿಸುವ ಸ್ಥಾನ : ಕ್ರಮದಿಂ ತನು ಧನ ಸಹಜಾತ ಮಿತ್ರಪುತ್ರಾರಿ ಯುವತಿ ನೈಧನ ಧರ್ಮೋದ್ಯಮ ಲಾಭವ್ಯಯಮೆಂದಿಂತಾ ಮಿವಕ್ಕುಂ ಲಗ್ನಭಾವನಾಮಫಲಂಗಳ್ (ಜಸಂ. ೦-೩೩) ; ಲಗ್ನದಿಂದ ಕ್ರಮವಾಗಿ ತನು, ಧನ, ಸಹಜ (ಸಹೋದರ), ಮಿತ್ರ, ಪುತ್ರ, ಅರಿ (ಶತ್ರು), ಯುವತಿ (ಕಳತ್ರ), ನೈಧನ (ಮೃತ್ಯು), ಧರ್ಮ, ಉದ್ಯಮ (ಉದ್ಯೋಗ), ಲಾಭ, ವ್ಯಯ (ಖರ್ಚು) ಇವು ಹನ್ನೆರಡು ಭಾವಗಳ ಹೆಸರು ; ಈ ವಿಚಾರಗಳ ಫಲವನ್ನು ಅರುಹಾ ಭಾವಗಳು ತಿಳಿಸುತ್ತವೆ (ಜಾತಿ. ೦-೩೩ ೫೯೯). ೨೧. [ಜೈನ] ಜೀವನ ಪರಿಣಾಮ ; ಔಪಶಮಿಕ, ಕ್ಷಾಯಿಕ, ಕ್ಷಯೋಪಶಮಿಕ, ಔದಯಿಕ ಮತ್ತು ಪಾರಿಣಾಮಿಕ ಎಂಬ ಮುಖ್ಯವಾದ ಐದು ಭೇದಗಳುಳ್ಳುದು : ಭಾವಮೆಂಬುದು ಕರ್ಮಂಗಳ ಕ್ಷಯದಿಮುಪಶಮದಿಂ ಕ್ಷಾಯೋಪಶಮದಿನಪ್ಪಾತ್ಮನ ಪರ್ಯಾಯಂ (ಜಾಕೃಪ್ರ. ೬). [ಸಂ.]

ಭಾವಂಜೆ 'ಬಾಗುಜೆ' ನೋ.

ಭಾವಕ (ಗು)- ೧. ಆಗಲು ಕಾರಣವಾಡೆ ; ಉಂಟುಮಾಡುವ. ೨. ಶ್ರೇಯಸ್ಸನ್ನುಂಟು ಮಾಡುವ ; ಶ್ರೇಯಸ್ಕರವಾದ. ೩. ಕಲ್ಪನೆ ಮಾಡುವ ; ಊಹಿಸುವ. ೪. ಸೌಂದರ್ಯದಲ್ಲಿ ಆಸಕ್ತಿಯನ್ನುಹೊಂದಿರುವ;ಸುಂದರವಸ್ತುಗಳನ್ನು ಅಭಿಲಾಷಿಸುವ. ೫. ರಸಾಸ್ವಾದನೆಯಲ್ಲಿ ಅಭಿರುಚಿಯುಳ್ಳ. (ನಾ). ೧. ಮನೋಭಾವ ; ಚಿತ್ತವೃತ್ತಿ. ೨. ಸೊಗಸಾದುದರಲ್ಲಿ ಅಭಿರುಚಿಯುಳ್ಳವನು ; ಕಲಾಭಿರುಚಿಯುಳ್ಳವನು ; ರಸಿಕ ; ಸಹೃದಯ : ಭಾವಕ ನೆಂದೊಡಂ ಚದುರನೆಂದೊಡಮಾರ್ ಪೆಜ್ಜಾರೊ ನೀನೆ (ಜಂಪಕ್ಷಾ. ೪-೧೬) ; ಈವ ಗುಣಂ ಬೇಡಲೆಂದಂ ಕಾವ ಗುಣಂ ಭೀತಿಯಿಂದ ಮಜ್ಜಿವುಗಲೆನಿಸುಂ ಭೂವಿನುತಮಾಗಿ ತೋರ್ಪ್ಪವ್ ಭಾವಕನಿಧಿ ನಾರಸಿಂಹಗೊಂಡನೊಳನಿಸುಂ (ಎಳ್. ೪. ೦೦೫. ೬೨-೭೭ ; ೧೧೧೨) ; ತೀವಿದರು ಹೊರವಳಯದಲಿ ನಾನಾ ವಿಧದ ನಾಟಕದ ವರ್ತನ ಭಾವಕ. . .ಮಲ್ಲಚಿತ್ರಕರು (ಕಾಣ್ಯ. ೦೨-೨೦) ; ಭಾವಕರ ಕವಿದೊಡವಿಗೊಮವಿದ ಪಿರಣ್ಮಮಿದುಭೂತಳದೊಳೆನೆ ವಿರಾಜಿಪುದು ಲಕ್ಷ್ಮೀಪತಿಯ ಕಾವ್ಯರಚನೆ (ಕ್ಷಚಾ. ೬೪-೧೬) [ಸಂ.]

ಭಾವಕತ್ವ (ನಾ). ೧. ಭಾವಕನ ಧರ್ಮ; ಭಾವಕತೆಯ ೨. [ಕಾವ್ಯಮಿಮಾ] ಸಹೃದಯರು ರಸಾಸ್ವಾದನೆ ಮಾಡಲು ಸಹಾಯಕವಾದ ಒಂದು ವ್ಯಾಪಾರ್ಯ—ಕ್ರಿಯೆ; ☞ ಕಾವ್ಯಾರ್ಥಬೋಧೆಯಾದ ಮೇಲೆ ಸೀತೆಯೆಂಬ ರಮಣಿಯು ರಾವಣನೆಂಬ ರಮಣನಲ್ಲಿ ಪ್ರಣಯವುಳ್ಳವಳು ಎಂಬ ಅಂಶದಲ್ಲಿ ಸೀತಾಂಶವನ್ನೂ ರಾಮಾಂಶವನ್ನೂ ನಿವಾರಿಸಿ ಕೇವಲ ಕಾಮಿನೀತ್ವ—ಕಾಮುಕತ್ವ ಭಾವನೆ ಬರುವಂತೆ ಮಾಡಿ ಕಾಮಿನಿಯು ಕಾಮುಕನಲ್ಲಿ ಪ್ರಣಯವುಳ್ಳವಳೆಂಬ ಭಾವನೆಯುಂಟು ಮಾಡುವ ಸಾಧಾರಣೀಕರಣ; ಇದು ಭಟ್ಟನಾಯಕನ ಮತ: ಕಾವ್ಯ ನಾಟಕಗಳಲ್ಲಿ ವರ್ಣಿತವಾಗಿರುವ ವಿಭಾವಾದಿಗಳಿಗೆ ಸಾಧಾರಣತ್ವವನ್ನುಂಟು ಮಾಡಿ ಅವು ರಸವಿಷಯವಾಗುವಂತೆ ಮಾಡುವುದು ಭಾವಕತ್ವ (ಶಾಕುಂ. ೭೭); ಕಾವ್ಯನಾಟಕದಲ್ಲಿ . . . 'ಭಾವಕತ್ವ', 'ಭೋಜಕತ್ವ' ಎಂಬ ಮುಕ್ತರಡು ಶಕ್ತಿಗಳವೆ (ಕ್ರಿಪ. ೧೯). [ಸಂ.]

ಭಾವಕಿ (ನಾ). ೧. ಜೆಲುವೆಯಾದ ಸ್ತ್ರೀ; ಸುಂದರಿ: ಗೀಯೊಡನೋದಿ ಯೋದಿ ನುಡಿಗಲ್ತು . . . ಕಳಾಗುಣಂ ಪೊದಬ್ಬಳವಡೆ ಬಾಲಭಾವಕಿಯೊ ಭಾವಕಿಯರು ಬಳೆವರ್ ನಿರಂತರಂ (ಹರಿ. ೧೧೩ ಕ್ರಿಯೋ); ಭಾವಕಿಯೆನ್ನನೊರ್ವೋದಲೆ ಕಾಣಲೊಡಂ ಜೆಮರುಣ್ಮೆ ವಿಸ್ಮಯಂ ಪೀವಿ . . . ಮರಪಟ್ಟಪೊರಿದರ್ಗಳ್ (ರಣ. ೦೦-೭೪); ಸುರಿಯೆ ಮುತ್ತುಗಳರರೆ ಮುಂಬರಿದಿ ಪರಿಪರಿಯು ಚಾರಿಗಳ ತಂದಚ್ಚರಿಯೆನಿಸಿ ನಟಿಸಿದಳು ಭಾವಕಿ ನಾಟ್ಯರಂಗವಲಿ (ಕಪಟ್ಯ. ೪-೦೪). ೨. ರಸಿಕಳಾದ ಸ್ತ್ರೀ: ಪಾಂಥರಿರಪಜಾ ದೀಯುಕುಂ ಜರಾಭೀರುಪಂ ಕಾಣಿಸಿ ೭೪ವೃತಪೆದರೇಂ ಜಾತಿಭಾವಕಿಯರೋ (ಕನ್ನಣ. ೬-೦೩); ಮುಂದುಮೊಗದ ಭಾವಕಿಯರ ಬಲ್ಲೆಸುಡಿಯೆಂಬ ನಯಗಿತ್ತಿ ಎಲ್ಲರ ಹೃದಯವ ಕೊಜ್ಜಿವ್ವತ್ತಿದ ನೋಡಾ (ಸಿಪ್ರಚಿ. ೧೦-೦೩೬); ಭಾವಕಿಯರ್ ತೊಡಗಿದರತಿಕೋವಿವಿಯರ್ . . . ಜಲಕೇಳಿಗೆ (ಕಬ್ಬಾಕ. ೪-೨೨). [ಭಾವಕ + ಇ]

ಭಾವಕೃದಂತ (ನಾ). [ವ್ಯಾಕ] ಧಾತುವಿನಿಂದ ಹುಟ್ಟುವ ಭಾವನಾಮ; ಕೃದಂತಭಾವನಾಮ; ಕೆಲವು ಧಾತುಗಳು ನಿಜರೂಪದಿಂದಲೇ ಭಾವ ಕೃದಂತಗಳಾಗುವುವು. ಉದಾ:—ಆಗು, ಉರ್ಮೆ, ಓದು (ಕ್ರಿಪ. ೦೭). [ಸಂ].

ಭಾವಗಮ್ಯ (ನಾ). ಮನಸ್ಸಿಗೆ ಗೋಚರಿಸುವುದು; ಊಹೆಯಿಂದ ತಿಳಿಯತಕ್ಕುದು: ವಿಚಿತ್ರರತಪ್ರಾಪ್ತಿತೆ ಭಾವಗಮ್ಯಮೆನಿಕುಂ ಶ್ರೀರೂಪ ಕಂದರ್ಪನಾ (ಶಾಕ್ಯಾಂ. ೬೩೩). [ಸಂ.]

ಭಾವಗರ್ಭಿತ (ನಾ). ಅಭಿಪ್ರಾಯದಿಂದ ಕೂಡಿರುವುದು; ಇಂಗಿತದಿಂದ ಕೂಡಿರುವುದು: ಹುಡುಗಿಯರು ಒಬ್ಬರನೊಬ್ಬರು ಭಾವಗರ್ಭಿತವಾಗಿ ನೋಡಿಕೊಂಡು ಗುಸುಗುಸುಮಬ್ಬುಕೊಂಡರು (ಹುಚಕ. ೨೧೮). [ಸಂ.]

ಭಾವಗೀತ (ನಾ). ಕವಿಯ ಆತ್ಮೀಯವಾದ ಭಾವನೆಗಳನ್ನು ಚಿತ್ರಿಸುವ ಹ್ರಸ್ವವಾದ ಕವನ; ☞ ಹಾಡಲು ಅನುಕೂಲವಾಗಿದ್ದು, ಸಾಮಾನ್ಯವಾಗಿ ಒಂದು ಭಾವಗೀತೆಯಲ್ಲಿ ಒಂದೇ ಭಾವನೆ ನಿರೂಪಿತವಾಗಿರುತ್ತದೆ. ಇದು ಇಂಗ್ಲಿಷಿನ 'Lyric' ಎನ್ನುವ ಪದದ ಅನುವಾದ: ಭಾವಗೀತ, ಅಷ್ಟಪಟ್ಟದಿ . . . ಎಲ್ಲವೂ ಇಂದು ಕನ್ನಡದಲ್ಲಿ ನೆಲೆಗೊಂಡಿವೆ (ಕಕ್ಕಾ. ೫೯); ನಿಬ್ಬಣಿಗೆ ಹೊರಟಂತೆ ಹಾಡುಗಬ್ಬುಗಳ ಕೊಲ್ಲಾರಿ ಬಂದಿ. ಭಾವಗೀತ ಒಬ್ಬರಿಗೆ ಚಂದ ವಧೂವರ ಜೋಡಿ (ಕೆಲಮು. ೩೩-೪); ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸಾ ಮಾತು ಮಾತು ಮುಗಿಸಿ ಬಂದ ನಾವದ ನಮೀತಾ . . . ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ (ಜಾಕಂಜ. ೩೩-೦೦). [ಸಂ.]

ಭಾವಗೀತೆ (ನಾ). = ಭಾವಗೀತ: ಭಾವಗೀತೆಯ ಹಾಗೆ ಹ್ರಸ್ವಯ ಜೀವನ ದೇವನೆ ಈ ಗೀತಕಾರ (ಜಾಜಾಕ. ೦೨೦-೨೪); ಕವಿಯು ಭಾವಪ್ರಧಾನವಾದ ಕಾವ್ಯ ಭಾವಗೀತೆ ಎಂದೆವು (ಜಾಕಂಗ. ೦೩); ಭಾವಗೀತೆಯಲ್ಲಿ ಕೇವಲ ರಸ ಮಾತ್ರ ಇರುತ್ತದೆ (ಜಾಕಜ. ೧೬೯). [ಸಂ. ಭಾವಗೀತಾ]

ಭಾವಚಿತ್ರ (ನಾ). ೧. ಒಬ್ಬ ವ್ಯಕ್ತಿಯ ಆಕಾರವನ್ನು ತೋರಿಸುವ ಚಿತ್ರ: ಪ್ರತಿಕೃತಿ: ಮನದಿ ಯೋಚಿಸುತ [ಯ್ತ] ವನ ಭಾವಚಿತ್ರ ಮನೊಲಿದು ಫವಪ್ರಚುರವಾಗಿ ಚಿತ್ರಿಸಿಕೊಂಡು (ಜಜಮೋ. ೨೬-೨೮); ನನ್ನ ಕೈಯ್ಯಿಂದ ಬರೆದ ಪೂಜ್ಯಳಾದ ಶಕುಂತಳೆಯ ಭಾವಚಿತ್ರವನ್ನು ತೆಗದು ಕೊಂಡು ಬಾ (ಶಾಕುಂತ. ೪೪-೩); ಪ್ರೀತಿಯಿಂದೈತಂದು ನೀನಂದು ನನಗಿತ್ತ ನಿನ್ನ ಆ ಭಾವಚಿತ್ರವನು ನೋಡುತ್ತ (ಕಂಪ್ರಸೀ. ೦೦೯-೦೬). ೨. ಕ್ಯಾಮರಾ ಎಂಬ ಯಂತ್ರದ ಮೂಲಕ ಗ್ರಹಿಸಿದ ಪ್ರತಿಬಿಂಬ; ಛಾಯಾಚಿತ್ರ: ಫೋಟೊ: ಮೇಜಿನ ಮೇಲಿದ್ದ ಭಾವಚಿತ್ರ ತನ್ನ ಕಣ್ಣಿಗೆ ಸ್ಪಷ್ಟವಾಗಿ ಕಂಡಿತ್ತು (ಮೂಸಕ್ಕ. ೦೩೮). [ಸಂ.]

ಭಾವಜೀಷ್ಮೆ (ನಾ). ಮನಸ್ಸಿನಲ್ಲಿ ತೋರುವ ಭಾವಗಳ ನಿರೂಪಣೆಗೆ ಬಹಿರಂಗವಾಗಿ ತೋರುವ ಶಾರೀರಿಕಕ್ರಿಯೆ; ಶೃಂಗಾರಜೀಷ್ಮೆ: ಆತನಿನಾದ ಬೇಟಮಭಿಜಾತಿಯಿಂ ಪೆಗಬ್ಗೊಂದು ಧೈರ್ಯವಂತು . . . . ಜೀತದೊಳಗ್ಗಿಸಿ ಕನ್ನೆ ತಳೆದಳ್ ಕಲಿಕಿಂಚಿತ ಭಾವಜೀಷ್ಮೆಯಂ (ಕ-ಕ್ರಿತ. ೩-೦೨೨). [ಸಂ. ಭಾವಜೀಷ್ಮಾ]

ಭಾವಜ (ನಾ). ೧. ಮನಸ್ಸಿನಲ್ಲಿ ಹುಟ್ಟುವುದು. ೨. ಮನಸ್ಸಿನಲ್ಲಿ ಜನಿಸಿದವನು; ಮನ್ಮಥ; ಕಾಮ: ಮೂವತ್ತಾಱುಂ ಗಾಣದಿಂ ಭಾವ ಜನಂ ಕಟ್ಟಿ ಪೆಟ್ಟವಬದರ್ ವ್ಯವದಿಂ (ಪಂಪಭಾ. ೦-೨೦); ಭಾವತಪದಿಂದೆ ಬೆದಱಿಸಿ ಭುವಜನಂ ಪರಮಸಂಯಮೋಪಾಯವನುಜ್ಜೀವಿಸಿದ ವಾಸು ಪೂಜ್ಯತ್ರೈ ವಿದ್ಯಪದಂಗಳೆಲ್ತ ಲೋಕನುತಂಗಳ್ (ಜಾಕ್ಕಗಿ. ೦-೭೦); ಜಾತಿ ಜಾನ್ಪದೆಯ ಭಾಮ ಭಾವಜವ ಹೂವಿನಂಬಿನಂತೆ ಮನಮಂ ವಾಂಟೆ (ಜಾಪಜೀ. ೩-೦೯ ೫).

ಭಾವಜನಯ್ಯ = ಮನ್ಮಥನ ತಂದೆ; ವಿಷ್ಣು: ಭಾವಜವಯ್ಯನ ದಿನದಿ ಉಂಡವರನು ಕೀವಿನೊಳಗೆ ಹಾಕಿ ಕುದಿಸುವ ಯಮನು (ಕ್ಷೇಂಪ. ೦-೦೩೪-೦); ಬಾರೊ ಬಾರಯ್ಯ ಮನೆಗೆ ಭಾವಜನಯ್ಯ (ಶಿಪ. ೧೩ ಕ್ಷೇ೩). ಭಾವಜವರಸಿ = ಮನ್ಮಥನ ರಾಣಿ; ರತಿ: ಅಂಗಲತೆಯು ಅತಿ ಬೆಂದು ಭಾವಜವರಸಿ ಬರಬರಲು ತದ್ಮನಂ ಕಂಗೊಳಿಸಿತ್ತೀವೇಳ್ದೆನೊ (ಜಜಮೋ. ೪-೨೮). [ಸಂ.]

ಭಾವಜಜನಕ (ನಾ). ಮನ್ಮಥನ ತಂದೆ; ವಿಷ್ಣು: ದ್ವಾವಾರದಲಿ ಭಾವಜಜನಕನಾಗುವಮಿದನು ತ್ರಿಜಗವಜಯಲು ಬಾದರಾಯಣನೆಂಬ ನಾಮದಲಿ (ಬಸಪು. ೫೫-೬೨). [ಸಂ.]

ಭಾವಜಾಂತಕ (ನಾ). ಮನ್ಮಥನನ್ನು ನಾಶವಡಿಸಿದವನು; ಶಿವ: ಭಾವಜಾಂತಕ ಜಯವೆಮತ . . . ಪೊಂದೊಟ್ಟಲಂ ತವಿಗಿ ತಿಶುವನಿತ್ತಿ ಪಿಡಿದು (ಕ್ರಿಶಾ. ೭-೧೭). [ಸಂ.]

ಭಾವಜಾರಿ (ನಾ). = ಭಾವಜಾಂತಕ: ಭಾವಜಾರಿಯು ಹರಿಯು ಕಮಲಜರಾಮರಾದರು ಪೂಜಿಸಲುಮೇಕೇ ಮಹಾಗಣಪತಿಯ (ಪಗಣ. ೩-೦೦). [ಸಂ.]

ಭಾವಜೀವಿ (ನಾ). ಮಾನಸಿಕ ಕಲ್ಪನೆಗಳಲ್ಲಿ ತನ್ಮಯತೆಯನ್ನನುಭವಿಸುವ ವ್ಯಕ್ತಿ: ವಾಸ್ತವತೆಗಿಂತಲೂ ಕಾಲ್ಪನಿಕಭಾವನೆಗಳಿಗೇ ಹೆಚ್ಚು ಮೂರುಹೋಗುವ, ಕಾವ್ಯ ನಾಟಕಾದಿಗಳಲ್ಲಿ ತೋರಿ ಬರುವ ಉದಾತ್ತಧ್ಯೇಯಗಳನ್ನು ಆದರ್ಶವಾಗಿಟ್ಟುಕೊಳ್ಳುವ ವ್ಯಕ್ತಿ: ಹೀಗೆ ಮನದಲ್ಲಿಯೇ ಎಣಿಕೆ ಪಾಕುತ್ತಿದ್ದರು ಆ ಭಾವಜೀವಿಯಾಗಿದ್ದ ಬಾಲಕಿ (ಹಕ. ೦೪); ಬುದ್ಧಿನಿಷ್ಠನು ಭಾವಜೀವಿಯನ್ನು ಬೈದು ಪುಚ್ಚುತ್ತಾನೆ (ಪತ್ರಾ. ೦೪); ಕನ್ನಡಿಗರು ಭಾವಜೀವಿಗಳು, ಬುದ್ಧಿಜೀವಿಗಳಲ್ಲ (ಜಾಪಾ. ೦೦). [ಸಂ. ಭಾವಜೀವಿನ್]

ಭಾವಜ್ಞ (ನಾ). ಇತರರ ಮನಸ್ಸಿನ ಭಾವನೆಗಳನ್ನು ತಿಳಿಯಬಲ್ಲವನು: ರಸಿಕ ; ಸಹೃದಯ : ಬಲ್ಲಿಂದುಬ್ಬು ಅದೆಲ್ಲಿದ್ದರು ತನ್ನ ವೇದನೆಯ ಬಿಡದು ಭಾವಜ್ಞರ ಮನೆಯ ಬಾಗಿಲಲ್ಲಿದ್ದರೂ ಸ್ವಜಾತಿಯ ಗುಣವಲ್ಲದೆ ನೀತಿಯ ಗುಣವಿಲ್ಲ (ಕೋಗಪ್ರ. ೫೫-೨೨೬); ಭೂಪಾಲನನು ಸಾಮದಲಿ ಮುರರಿವು ದೋಳವಿಸಿ ಭಾವಜ್ಞ ವಂದಿಸಿದನು ಮನೋವ್ಯಥೆಯ (ಕಾಣ್ಮಕ. ೦೯-೦); ಸೋತಡೆಯು ಸುಖಿಪ್ಪದಲಿ ಧೈರ್ಯಾತಿಶಯದಲಿ ಕಾಡಿ ಕೀರ್ತಿಯ ಬೈತಲೆಯನಪ್ಪುವುದೆ ಭಾವಜ್ಞರಿಗೆ ಗುಣ (ಕೃಕರಾ. ೬-೪೪-೦೩). [ಸಂ.]

ಭಾವತೀವ್ರತೆ (ನಾ). ಆಲೋಚನೆಯ ಗಾಢತೆ; ಭಾವನೆಯ ತೀವ್ರತೆ: ಆವನ ಭಾವನಾವಿವೇಕಶಕ್ತಿಯು ಭವಿತವ್ಯ ಕರಾಕೃತಿಯ ರಪಡುಕೂರಡಿಗೆ ಬಣ್ಣವಿಡುತ್ತದೆ. ಮತ್ತು ಭಾವತೀವ್ರತೆಯನ್ನೊದವಿಸುತ್ತದೆ (ಕವ್ಕಾ ೦೫೦). [ಸಂ. ಭಾವತೀವ್ರತಾ]

ಭಾವತ್ರಯ (ನಾ). [ವೀಶೈ] ಭಾವ. ಸದ್ಭಾವ ಮತ್ತು ನಿರ್ಭಾವ ಎಂಬ ಮೂರು ಭಾವಗಳು : ಭಾವತ್ರಯಾಂಗಳು ತಾಪತ್ರಯಾಂಗಳು ಪುಷ್ಕರಣಾಂಗಳು ಇಂತಿವು ಆದಿಯಾಗಿ ತೋಱುವ ತೋಱಿಕೆಯ ನಾಸಲ್ಲ ಎಸ್ಸವೆ ಅಲ್ಲ (ಪಚಾರೀ. ೨. ೦೦೦-೨೩೫) ; ಭಾವಸದ್ಭಾವ ನಿರ್ಭಾವ ಎಂಬ ಭಾವತ್ರಯಾಂಗಳುಳ್ಳವರ ದೇವರೆಂದನ್ನೆ (ಒಕ್ಕೀಪ್ರ. ೯-೩೩) : ಭಾವತ್ರಯಾಂಗಳ ಬಣ್ಣಗೆಡಿಸಿ ದುರ್ಭಾವತ್ರಯಾಂಗಳ ದೂರಮಾಡಿ ಮನತ್ರಯಾಂಗಳ ಮರ್ದನ ಮಾಡಿ (ಕಾಂಪೀ. ೦೯೨-೦೪). [ಸಂ.]

ಭಾವದ್ಯೋತಕ (ನಾ). ಭಾವದ ಅರ್ಥವನ್ನು ಪ್ರಬಿರಗೊಳಿಸುವುದು : ಮುದ್ರೆಗಳು ಭಾವದ್ಯೋತಕ ; ಆನನಗಳು ರಾಮಾಯಣಕ (ಕಾಕಥ. ೩೦೩). [ಸಂ.]

ಭಾವಧ್ವನಿ (ನಾ). [ಕಾವ್ಯಮೀ] ಕಾವ್ಯದಲ್ಲಿ ದೇವತೆ. ಗುರು ಮೊದಲಾದವರಲ್ಲಿ ಇಟ್ಟಿರುವ ರತಿಯೂ ಮತ್ತು ವ್ಯಭಿಚಾರಿ ಭಾವಗಳೂ ಪ್ರಧಾನವಾಗಿ ತೋರುವುದು ; ಭಾವವೆ ಮುಖ್ಯವಾಗಿ ವ್ಯಂಗ್ಯವಾಗಿರುವುದು : 'ಉದ್ರಿಕ್ತಾವಸ್ಥೆಯನ್ನು ತಳೆದ ವ್ಯಭಿಚಾರಿ ಭಾವವು ಚಮತ್ಕಾರಕಾರಿಯಾದಾಗ 'ಭಾವಧ್ವನಿ' (ಧ್ವಶ್ಯಾರೂ. ೫೬). [ಸಂ.]

ಭಾಷನ (ನಾ). [ಜೈನ] ನಾಲ್ಕು ಬಗೆಯ ದೇವಸಮೂಹದಲ್ಲಿ ಒಂದು ವರ್ಗಕ್ಕೆ ಸೇರಿದ ದೇವತೆ ; ಭವನವಾಸಿದೇವ : ನಿಮತಂ ಭಾವನರುಂ ವ್ಯಾವಸಥರುಂ ಜ್ಯೋತಿಷ್ಕರುಂ ಕಲ್ಪವಾಸನುಮಾಗಿರ್ಪ ಚತುರ್ನಿಧಾಮರರು ದಾರರ್ ಸ್ತೋಮದೊಳ್ ಕೂಡೆ (ಪ್ರಶ್ನ್ತಿ. ೦೦-೦೩). [ಸಂ.]

ಭಾವನಾಜೀವಿ (ನಾ). = ಭಾವಜೀವಿ : ನಿನ್ನ ವ್ಯವಹಾರದಿಂದ ನೀನು ಭಾವನಾಜೀವಿಯೆಂದು ಕಂಡುಬರುವುದು (ಪಚಾಂತ. ೨೫೦). [ಸಂ. ಭಾವನಾಜೀವಿನ್]

ಭಾವನಾಮ (ನಾ). [ವ್ಯಾಕ] ಭಾವವನ್ನು ತಿಳಿಸುವ ನಾಮಪದ : ಒಂದು ಕ್ರಿಯೆ ಪಡೆಯುವುದರಿಂದ ಉಂಟಾಗುವ ಸ್ಥಿತಿಯನ್ನಾಗಲಿ ಒಂದು ವಸ್ತುವಿನ ಸ್ಥಿತಿ ಸ್ವಭಾವಗಳನ್ನಾಗಲಿ ತಿಳಿಸುವ ನಾಮಮಾತಕ್ಕೆ ಭಾವ ನಾಮವೆಂದು ಹೆಸರು (ಪುಕ್ಕಕು. ೫೬). [ಸಂ.]

ಭಾವನಾಮಯ (ನಾ). ೧. ವಾಸ್ತವತೆಯ ಜಗತ್ತಿನಿಂದ ಬೇರೆಯಾದ ಕಲ್ಪನಾಲೋಕದಲ್ಲಿ ವಿಹರಿಸುವ ವ್ಯಕ್ತಿ : ಅಕಿ ತುಂಬ ಭಾವನಾಮಯಿ (ಕೂಲ). ೨. [ಬೌದ್ಧ] ಸಂಸಾರನಿವೃತ್ತಿಗೆ ಕಾರಣವಾದ ಪ್ರಜ್ಞಾ ಪಾರಮಿತಾ ಎಂಬ ಸದಾಚಾರದ ಮೂರು ಭೇದಗಳಲ್ಲಿ ಒಂದು : ಈ ಸಾಕ್ಷಾತ್ಕಾರಮೆಂಬ ಭಾವನೆಯು ಮೇದಾತಿಗಳ ಶ್ರಮಣ ಮನಸ ನಿದಿಧ್ಯಾಸಗಳಂತೆ ಶ್ರುತಿಮಯಿಯಾ, ಚಿಂತಾಮಯಿಯಾ, ಭಾವನಾಮಯಿಯಾ ಎಂಬ ಕ್ರಮದಿಂದ ಪ್ರಜ್ಞಾಪಾರಮಿತಾ ಎಂಬ ನಾಮಧೇಯದಿಂದ ಪ್ರಸಿದ್ಧ ವಿಂಗಿರುವುದು (ಪಂರಹಾ. ೪೦). [ಸಂ. ಭಾವನಾಮಯಿನ್]

ಭಾವನಾಲವಣ (ನಾ). [ವೈದ್ಯಶಾ] ಒಂದು ಬಗೆಯ ಔಷಧ : ಔಷಧಿದ್ರವ್ಯಗಳೊಡನೆ ಭಾವನೆ ನೀಡಿದ ಉಪ್ಪು : ಭಾವನಾಲವಣ– ಅಡುಸೋಗೆ, ಎಲಚುರಿ . . . ಲೋಳಸದ – ಈ ರಸಗಳಲ್ಲಿ ಮಾಡಿ ಕೇರಿದ ಚೊಕ್ಕಟವಾದ ಲವಣ ಸೇರು ಳನ್ನು ಪ್ರತ್ಯೇಕವಾಗಿ ಒಂದೊಂದು ದಿನ ಭಾವನೆಯಂ ಕೊಟ್ಟು ನೆಳಲ್ಲಿ ಒಣಗಿಸಿ ಇರಿಸಿಕೊಂಡು . . . ಸೇವಿಸಲು ಹುಟ್ಟುಗೂರಲು, ಪುಟ್ಟುಶ್ವಾಸವು ಪರಿಹರವಹುದು (ಸಕವೈ. ೩೭೬). [ಸಂ.]

ಭಾವನಾಲೋಕ (ನಾ). ಭಾವನಾಪ್ರಪಂಚ : ಮಾನಸಿಕ ಕಲ್ಪನೆ : ಆವಳ ಮಾತು ಭಾವನಾಲೋಕಕ್ಕೆ ಇಳಿಯತೊಡಗಿತು (ಕ್ಕಾಣಾ. ೬೨). [ಸಂ.]

ಭಾವನಾವಾದಕ್ಕ (ನಾ). [ವೈದ್ಯಶಾ] ಒಂದು ಬಗೆಯ ಔಷಧ ; ಭಾವನೆ ಕೊಟ್ಟ ಓಮ. – ಅಜಮೋದ : ಭಾವನಾವಾದಕ್ಕ – ಕಳು ಮೂಡಿದ ವಾದಕ್ಕ ಸೇರು ಳನ್ನು ಆಡಿನ ಮೂತ್ರದಲ್ಲಿ ಭಾವನೆಯಂ ಮಾಡಿಕೊಟ್ಟು . . . ಸೇವಿಸೆ ಪ್ರಾಸರೋಗಶ್ವಾಸ . . . ಅಗ್ನಿಮಾಂದ್ಯ ಮುಂತಾದ ರೋಗಗಳು ಪಹ . . . ತೀಕ್ಷ್ಣವಾಗಿ ಗುಣಮಕ್ಕುಂ (ಸಕವೈ. ೩೭೬). [(ಸಂ. ಭಾವನಾ) + ವಾದಕ್ಕ]

ಭಾವನಾಶಕ್ತಿ (ನಾ). ಊಹಿಸುವ ಸಾಮರ್ಥ್ಯ : ನಮಗೆ ಭಾವನಾಶಕ್ತಿ ಸ್ವಲ್ಪವೂ ಇಲ್ಲ (ಪಸಂಪ್ರ. ೭೭). [ಸಂ.]

ಭಾವನಿರ್ದ್ವಂದ್ವ (ನಾ). ೧. ಪ್ರೀತಿಯ ಅಭೇದ ; ಅಭಿನ್ನ ಪ್ರೀತಿ : ಆತ್ಮೀಯತೆಯಲ್ಲಿ ಏಕರೂಪತೆ. ೨. ಸಮಭಾವನೆಯುಳ್ಳವನು ; ಸಮಾನಪ್ರೀತಿಯುಳ್ಳವನು : ತನಯಂ ಪೆತ್ತಳ್ ಗಡಂ ನಿನ್ನ ಪತ್ನಿಯಶೋದಾವಧು ತತ್ತನೂಜನೊಡನಿಂದಿಂ ಭಾವನಿರ್ದ್ವಂದ್ವನಾಗಿಯೆ ನೀಂ ರಕ್ಷಿಸು ರೌಹಿಣೇಯನೆನಿಪಸ್ಮತ್ಪುತ್ರನಂ (ಪಗಿ. ೬-೨೩). [ಸಂ.]

ಭಾವನಿಷ್ಠ (ಗು). ಒಬ್ಬ ವ್ಯಕ್ತಿಯ ಭಾವವನ್ನು ಆಶ್ರಯಿಸಿಕೊಂಡಿರುವ ; ಭಾವಕ್ಕೆ ಅಧೀನವಾದ ; ಭಾವಪ್ರಧಾನವಾದ : ಮಾನಸ್ಸಿನ ಮತ್ತು ಭಾವನೆಯ ಪರಿಣಾಮಗಳನ್ನು ದರ್ಶಿಸುವ ಭಾವನಿಷ್ಠಕಲ್ಪನೆ (subjective imagination) ಹೀಗೆ ಇವೆಲ್ಲ ಕವಿಯ ಕಾವ್ಯಸೃಷ್ಟಿಯ ಉಪಕರಣಗಳು ಮಾತ್ರ (ಕ್ಕಾಂಪ್ರ. ೩೦). 'ಭಾವನಿಷ್ಠಕಾವ್ಯ' ಪರಾ. [ಸಂ.]

ಭಾವನಿಷ್ಠಕಾವ್ಯ (ನಾ). ಆಧುನಿಕ ಸಾಹಿತ್ಯವಿಮರ್ಶಕರು ಸೂಚಿಸಿರುವ ವಸ್ತುನಿಷ್ಠಕಾವ್ಯ, ಭಾವನಿಷ್ಠಕಾವ್ಯ ಎಂಬ ಕಾವ್ಯಭೇದಗಳಲ್ಲಿ ಒಂದು ; ಭಾವವೇ ಪ್ರಧಾನವಾಗಿರುವ ಕಾವ್ಯ ; ಕವಿಪ್ರಜ್ಞೆ ತನ್ನ ಕಾವ್ಯವಸ್ತುವಿಗಾಗಿ ಬಾಹ್ಯಜಗತ್ತಿನ ವಸ್ತುಗಳನ್ನು ವಿಶೇಷವಾಗಿ ಆಶ್ರಯಿಸದೆ, ಆಶ್ರಯಿಸಿದರೂ ನಿರ್ವಾರ್ಯವಾದ ಉಪಲಂಬನವನ್ನಾಗಿ ಮಾತ್ರ ಮಾಡಿಕೊಂಡು, ತನ್ನ ಅಂತರಂಗದ ಆಳಕ್ಕೆ ಇಳಿದು, ತನ್ನ ಅನುಭವ, ಆಲೋಚನೆ, ಭಾವ ಇವುಗಳಿಗೆ ಅಭಿವ್ಯಕ್ತಿಯನ್ನು ನೀಡುವುದು. ಇದನ್ನು 'ಭಾವನಿಷ್ಠ' ಕಾವ್ಯ ಎಂದು ಕರೆಯಬಹುದು (ಕಾಕಗೀ. ೦). 'ವಸ್ತುನಿಷ್ಠ ಕಾವ್ಯ' ಪರಾ. [ಸಂ.]

ಭಾವನಿಷ್ಠುರ (ನಾ). ಕ್ರೂರವಾದ ಅಭಿಪ್ರಾಯವುಳ್ಳದು : ಮುರ ಮಥನ ಚಿತ್ತಸ್ಥಿದೈ ತರುವರಿಯ ಸಾಭಿಪ್ರಾಯವಾಕ್ಯಸ್ಫುರಣವನು ಸಭ್ಯಾಂಗಭಾಷಿತಭಾವನಿಷ್ಠುರವ (ಕಾಣ್ಮಕ. ೨೦-೨೬). [ಸಂ.]

ಭಾವನೆ (ನಾ). ೧. ಮನಸ್ಸಿನ ಅಭಿಪ್ರಾಯ.–ಆಶಯ ; ಅಂತರಂಗದ ಆಲೋಚನೆ. – ಅನಿಸಿಕೆ : ವರಗುಣಾಂಗಳನೊಂದನೊಂದಂ ಪರಿಪಿಡಿ ಮೋೀಶ್ವರನೊಳರ್ಚಿಸಿ ವರಿಪೆಡೆ ಕಾನೆಂಬ ಭಾವನೆಯಿಲ್ಲದೆ (ಪಸಪ್ರ. ೬೫-೨೦) ; ಈ ಪೂಜ್ಯಭಾವನೆಗೆ ಅನುಗುಣವಾದ ಪುರಾಣಗಳೂ ಕಥೆಗಳೂ ಪುಟ್ಟಿಕೊಳ್ಳುವುದು ಸಹಜವಷ್ಟೆ (ಪಕಥ. ೯) ; ಅವರ ಮುಖಗಳಲ್ಲಿ . . . ಇನ್ನಾವ ಭಾವನೆಯೂ ಬೆಳಗುತ್ತಿರಲಿಲ್ಲ (ಪಹಣಿಕ್ಕಾ. ೦೫೦).

೨. ಧ್ಯಾನ ; ಪದೇಪದೇ ಮಾಡುವ ಅನುಸಂಧಾನ : ತನು ತನುವಾಗೆ ನೋಂತು ಪರಮಾಗಮಭಾವನೆಯೊಳ್ ನಿರಂತರಂ ಮನಮಿರೆ (ಶಾಪ. ೬-೨) ; ನಿನ್ನ ರೂಪುಭಾವನೆಯೊಳೆ ಕೂಡಿ ನಿನ್ನತುಳನಾಮಜಪಕ್ರಿಯೆಯಲ್ಲಿ ನಿಟ್ಟಿವಟ್ಟು (ಕಂದ್ರಪ್ರ. ೯-೮೬). ೩. ಅಲೋತ್ಪರ ; ಅಭಿಲಾಷೆ : ಉಮೆಯ ಭಾವನೆಯನೊಡಗೂಡಿಸುವ. . . ದೇವ ಗಂಗಾಧರಂ ಪೊರೆಗೆ ನಿಚ್ಚಂ ನಮ್ಮನು (ಕೃಷ್ಣಾ. ೦-೨). ೪. [ವೈದ್ಯಶಾ] ಯಾವುದಾದರೂ ಚೂರ್ಣವನ್ನು ದ್ರವದಲ್ಲಿ ಕಲಸಿ ಒಣಗಿಸುವುದು : ವಾಸನೆ ಕಟ್ಟುವುದು : ಲೋಹದ ಅರಹುತಿಯನ್ನು . . . ಮೂಲಲಿಂಗರದಿಂದ ಭಾವನೆಯನ್ನು ಮಾಡಿ . . . ಚೂರ್ಣಮಾಡಲು ಶುದ್ಧಸಿಂಧೂರವಾಗುವುದು (ಸಕ್ಕ. ೧೩) ; ಜೇನುಮೇಣಮಿಕ್ಕದ ಹಾಲು ಮುಂಡಗಳೈದಾಲುಗಳಿಂದ ಏಳು ಬಾರಿ ಭಾವನೆಮ ಮಾಡಿ ಕಾಸಿ ವೃಶ್ಚಿದಂಶಕ್ಕೆ ಕಾಸಿ ಮತ್ತಲು ವಿಷಹರ (ಪಸ. ೩೬-೦) ; ವಿಲಚಿಮರದ ಸೊಪ್ಪನ್ನು ಚೂರ್ಣಮಾಡಿ ಹಾಲಿನಿಂದ ಅನೇಕಸಾರಿ ಭಾವನೆ ಮಾಡಬೇಕು (ಚೂರ್ಣವನ್ನು ದ್ರವದಲ್ಲಿ ಕಲಸಿ ಒಣಗಿಸುವುದಕ್ಕೆ ಭಾವನೆಯೆಂದು ಹೆಸರು) (ಲಿಪಸಾ. ೬ ೪೩೮). 'ಭಾವನೆಗೆಯ್' ಪರಾ. ೫. [ದ್ವೈತ] ಜೀವರುಗಳಲ್ಲಿರುವ ಒಂದು ಸಂಸ್ಕಾರ : ಸರ್ವಜೀವರಿಗೂ ಸಂಸ್ಕಾರವೆಂಬ ಭಾವನೆಯಿರುವುದು. ಸಾಮಾನ್ಯವಾಗಿ ಸಂಸ್ಕಾರವು ಧಾರಣಾ, ವೇಗ, ಪಕಾಖ್ಯಯೋಗ್ಯಕಾಸ್ಥಿತಸ್ಥಾಪಕಗಳೆಂದು ನಿಲುಕ್ಕ ಪ್ರಕಾರವಾದ ಮನಃಪರಿಣಾಮವು . . . ಭಾವನೆ ಅನುಭವದಿಂದುಂಟಾಗಿ ಸ್ಮೃತಿಹೇತುವಾಗಿರುವುದು (ಶಿಂಶಾ. ೨೯೯).

[ಸಂ. ಭಾವನಾ]

ಭಾವನೆಗೆಯ್, ಭಾವನೆಗೈ (ಕ್ರಿ). ೧. ನೆನೆಯಿಸು ; ದ್ರವಪದಾರ್ಥದೊಂದಿಗೆ ವಿಶ್ರಮಾಡು : ತಾವಾಲಿಸೊಗೆ ಭಾವನೆಗೆಯ್ದು ಸೊಜ್ಜಿಗೆಯನಿಸು ಕೆನೆವರಿ ಬೆಣ್ಣೆಯನಿಕ್ಕಿ ಪುತ್ತ ಕಿವುಚನುಗೆದ್ದು ಹಂಚಿನೊಳು ನಸುತುಪ್ಪವೇರಿದು ಬೆಯಿಸಲುದುವೆ ಕಿವುಚುರೊಟ್ಟಿ (ಸೂಪಶಾ. ೦-೦೮). ೨. ದ್ರವದ್ರವ್ಯದಲ್ಲಿ ನೆನೆಸಿ ಒಣಗಿಸು ; ವಾಸನೆ ಕಟ್ಟು : ಲಸದ್ದಿವ್ಯದ ರುಚಿಯನೊತ್ತಿ ಬರುವಿಂದದ ರಂಗಂ ಭಾವನೆಗೆಯ್ವರ್ಲಂಬಿಸ ಶೇಜಡೊಳಿದ್ದ ಕರಂ ಹರಿಸದಿ ಬಿದಿ ನಿರ್ಮಿಸಿದಂದದಿನೊಪ್ಪಿದುವವಳಂಘ್ರಿಗಳ್ಗು (ಸಚಾಗಾ. ೩-೨೬). **ಭಾವನೆಗೈ** : ೨. ಭಾಮಿಯಿಲ್ಲದ ಮಾಣಿಕ್ಯಮಾದಳೆರಸದಿ ಪ್ರಯದೀದಲಕಿಗೆಮ ರಸದಿ ಭಾವನೆಗೆಯ್ಯಲಾಯತದಿ ಗಜನಿಂಬೆ ಮುಳಿಯುಲೇಳುಂವೇಳೆ ಭಾಷನೆಗೈಮಲದವಂ (ಪಕ್ಷಾ. ೨೩-೦).

[ಭಾವನೆ + ಕೆಯ್]

ಭಾವನೆಗೈ 'ಭಾವನೆಗೆಯ್' ನೋ.

ಭಾವಪರವಶ (ನಾ). ಭಾವೋದ್ರೇಕದಿಂದ ಮೈಮರೆತವನು ; ಭಾವಾವೇಶಕ್ಕೆ ಒಳಗಾದವನು : ಪ್ರತಿಸಾರಿಯೂ ಭಾಷಣ ಮಾಡುವಾಗ ಪ್ರಕೃತಪಟ್ಟ ತಲುಪಿದ ಕೂಡಲೆ ಅವನು ಭಾವಪರವಶನಾಗುತ್ತಿದ್ದನು (ಕಪಸು. ೩೫೬). [ಸಂ.]

ಭಾವಪರವಶತೆ (ನಾ). ಭಾವೋದ್ರೇಕದಿಂದ ಮೈಮರೆಯುವಿಕೆ : ವ್ಯಕ್ತಿನಿಷ್ಠವಾದ ದೃಷ್ಟಿಕೋನದ ಮೂಲಕ ಬಂದ ಭಾವಪರವಶತೆಯಿಂದ . . . ಮುಳುಗೇಳುವ ಕೃತಿಗಳಿಗೆ ಲೆಕ್ಕವೇ ಇಲ್ಲ (ಕೃಚಿ. ೨೬೦).

[ಸಂ. ಭಾವಪರವಶತಾ]

ಭಾವಪರಿವರ್ತನ (ನಾ). ೧. ಅಭಿವ್ಯಾಯವು ಪ್ರತ್ಯಾಸವಾಗುವುದು. ೨. [ಜೈನ] ಜೀವಗಳ ಭಾವವು ಕ್ರಮವಾಗಿ ಬದಲಾವಣೆಯಾಗುವಿಕೆ; P ಇದರಲ್ಲಿ ಸ್ಥಿತಿಸ್ಥಾನ, ಕಷಾಯಾಧ್ಯವಸಾಯಸ್ಥಾನ, ಅನುಭಾಗಾಧ್ಯವಸಾಯಸ್ಥಾನ ಮತ್ತು ಯೋಗಸ್ಥಾನ ಎಂಬ ನಾಲ್ಕು ಪ್ರಕಾರಗಳಿವೆ : ಮೂಲೋತ್ತರಪ್ರಕೃತಿಗಳೊಳ್ ಸರ್ವಜಘನ್ಯ ಸ್ಥಿತಿಯಂ ಮೊದಲ್ಗುಟ್ಟಿ ತತ್ಸಾನ್ಯಶ್ರ ಸಂಪರಾಯ ಪ್ರಸ್ಥಾಯ ಯೋಗದಿಂ ಪ್ರಪ್ರದೇಶಾನುಭಾಗ ಬಂದಸ್ಥಾನಂಗಳೊಳಗಲಿಸಿ ಸಮಯೋತ್ಕರಾನುಕ್ರಮದಿನುತ್ಕೃಷ್ಟಸ್ಥಿತಿವರಂ ಪರಿವಡಿದಪ್ಪದೆ ಜಿಜ್ಞುವುದಂ ಭಾವಪರಿವರ್ತನಮೆಂಬುದು (ತುಗಾವಾ. ೬-೩ ಪ್ರ) ; ಇವೀ ಸರ್ವಸಮುದಾಯಂ ಭಾವಪರಿವರ್ತನಂ . . . ಭಾವಪರಿವರ್ತನಕಾಲಂ ಅನಂತಗುಣಂ ಅತೀತಕಾಲದೊಳ್ ಭಾವಪರಿವರ್ತನವಾರಂಗಳನಂತಂ (ಕಕ್ಷ್ಕ್ರಿ. ೧೦). [ಸಂ.]

ಭಾವಪುಷ್ಪ (ನಾ). ಭಾವನೆಯ ಅಧಿಕ್ಯ ; ಆಳವಾದ ಭಾವನೆ : 'ಅತ್ತತ್ತಾಮನ್' ನಾಟಕದಲ್ಲಿ ತೋರುವ ಭಾವಪುಷ್ಪ, 'ಪಾರಿಜಾತ' ನಾಟಕದಲ್ಲಿಲ್ಲ (ಕೃಚಿ). [ಸಂ.]

ಭಾವಪೂರ್ಣ (ಗು). ೧. ಭಾವನೆಯಿಂದ ತುಂಬಿದ; ರಸಭರಿತವಾದ. (ನಾ). ೨. ಭಾವನೆಯಿಂದ ಕೂಡಿದುದು ; ರಸಭರಿತವಾದುದು : ಅವರ ಹಾಡುಗಾರಿಕೆ ಭಾವಪೂರ್ಣವಾಗಿತ್ತು (ಕೃಚಿ). ೩. ಅಸ್ತಿತ್ವದಿಂದ ತುಂಬಿರುವುದು ; ಸತ್ಪಾಭರಿತವಾದುದು ; ಸ್ಥಿರವಾದುದು : ಅಲೋಕನ ಪರಮತಪರಿಜ್ಞಾತಯ ಸೇತಿ ಅಭಾವಸೂಚಕವಾದುದಲ್ಲ. ಭಾವಪೂರ್ಣವಾದುದು (positive) (ಜಾಲಿ. ೩೭೦). [ಸಂ.]

ಭಾವಪ್ರಧಾನ (ಗು). ಚಿತ್ತವೃತ್ತಿ, ಅಥವಾ ಮನೋಧರ್ಮಗಳ ನಿರೂಪಣೆಯನ್ನೇ ಮುಖ್ಯವಾಗುಳ್ಳ : ನವೋದಯಕವಿಗಳು ಅಧಿಕವಾಗಿ ಭಾವಪ್ರಧಾನ ಕವನಗಳನ್ನು ಬರೆದರು (ಕೃಚಿ). [ಸಂ.]

ಭಾವಫಲ (ನಾ). ೧. ಮನಃಕಲ್ಪನೆಯ ಪರಿಣಾಮ ; ಮನೋವೃತ್ತಿಯ ಪರಿಣಾಮ. ೨. [ಜ್ಯೋತಿ] ಲಗ್ನವೇ ಮೊದಲಾದ ಏಳೆರಡು ಭಾವಗಳಲ್ಲಿ ಶುಭಾಶುಭಗ್ರಹಗಳಿದ್ದಾಗ ಅವು ಜಾತಕನಿಗೆ ಕೊಡುವ ಫಲ : ಮಿತ್ರಾರಿ ಪರೋಪ್ಯ ಸ್ವಕ್ಷೇತ್ರಸ್ಥಿತರಾಗೆ ಶುಭ ಶುಭಾನ್ವಿತ್ ಲಗ್ನಕ್ಷೇತ್ರಾದಿ ಭಾವಫಲಮಂ . . . ಅಱಿವುದು (ಜಾತಕ. ೦೪-೦೬) ; ಯಾವ ಭಾವಫಲವನ್ನು ನಿರ್ಣಯಿಸಬೇಕಾದರೂ ಆ ಭಾವವನ್ನೇ ಲಗ್ನವೆಂದು ಭಾವಿಸಿ ಅಯಾ ಭಾವದ ಫಲವನ್ನು ವಿವರವಾಗಿ ತಿಳಿಯಬೇಕು (ಜಾತಕ. ೦೪-೦೬ ಪ್ರಿ). [ಸಂ.]

ಭಾವಬಿದಿಗೆ (ನಾ). (ಉಕ) ಕಾರ್ತಿಕ ಶುದ್ಧ ಬಿದಿಗೆಯಂದು ಸೋದರಿಯರು ಅಣ್ಣತಮ್ಮಂದಿರನ್ನು ಬರಮಾಡಿಕೊಂಡು ಸತ್ಕರಿಸುವ ಹಬ್ಬ ; ಸೋದರಬಿದಿಗೆ ; ಯಮದ್ವಿತೀಯೆ ; P ಯಮನು ತನ್ನ ತಂಗಿಯಾದ ಯಮುನೆಯ ಮನೆಗೆ ಹೋಗಿ ಬಂದನೆಂದು ನಂಬಲಾದ ಈ ದಿನ ಸಹೋದರರು, ಸಹೋದರಿಯರ ಮನೆಗೆ ಹೋಗಿ ಮಂಗಳದ್ರವ್ಯಗಳನ್ನು ಕೊಟ್ಟು ಊಟಮಾಡಿಕೊಂಡು ಬರುವ ಪದ್ಧತಿಯಿದೆ : ಕಾರ್ತಿಕಶುದ್ಧದ್ವಿತೀಯೆಗೆ ಭಗಿನಿಯರು ತಮ್ಮ ಸೋದರರನ್ನು ಬರಮಾಡಿಕೊಂಡು ಅರತಿ ಅಕ್ಷತೆಗಳಿಂದ ಸತ್ಕರಿಸುತ್ತಾರೆ, ಸವಿಯೂಟವಿಂದ ಸಂತೋಷಪಡಿಸುತ್ತಾರೆ. ಈ ಸಮಯದಲ್ಲಿ ಬಂಧುಗಳು ತಮ್ಮ ಅಕ್ಕ-ತಂಗಿಯರಿಗೆ ಬೆಲೆಯುಳ್ಳ ಜಾಡುಗರೆಗಳನ್ನು ಕೊಡುವ ರೂಢಿಯುದೆ . . . ಈ ಹಬ್ಬ ಭಾವಬಿದಿಗೆಯಾಗಿದೆ (ಜಾಪಕ್ಷಿ. ೦೫೦) ; ಪಾನು ಅವನಿಗೆ ಭಾವಬಿದಿಗೆಯ ದಿನ ಬಂಧುತಿಲಕವನ್ನು ಸಹ ಮಂದಿಯ ಮುಖಾಂತರ ಕಳಿಸುತ್ತಿದ್ದೆ (ಇಪ್ರ. ೧೧೨).

[ಭಾವ್ಯ (P ← ಮರಾ. ಭಾವ = ಭ್ರಾತೃ) + ಬಿದಿಗೆ]

ಭಾವಭವ (ನಾ). ಮನಸ್ಸಿನಲ್ಲಿ ಹುಟ್ಟುವವನು ; ಮನಸಿಜ ; ಕಾಮ ; ಮನ್ಮಥ : ಭಾವಭವಧ್ವಂಸನಾಭೂವಿಶ್ರುತ ಭೂಧರೇಂದ್ರದಗ್ರದ ಸದ್ವೇಶಾವನಿಜದಧ್ವಮಂಗಳ್ಯಾವದ ಯೋಗಚರಯೋಗದಿಂದಂ ನಿಂದಂ (ಪಚಾಪ್ರ. ೦೬-೬೯) ; ಭಾವಭವನೆನಗೆ ಮುಳಿದು ನಿಶಿತಾಕಾಸುಮ ಬಾಣಾವಳಿಗಳನೆಸುತಿರ್ದಪಂ ನಿರ್ದಯಂ (ಶಃಚುಶಾ. ೨೪-೬೦) ; ಬುಧಾಪಾಸ್ಯ ಪತಭವಜನ್ಯ ನಿರ್ಜಿತಭಾವಭವಸ್ಯೆನ್ಯ (ಜಾಪ್ರ. ೪೬-೬೦).

[ಸಂ.]

ಭಾವಮೈದ ' ಭಾವಮೈದುನ ' ನೋ.

ಭಾವಮೈದುನ. ಭಾವಮೈದ (ನಾ). ಗಂಡನ ಅಥವಾ ಹೆಂಡತಿಯ ಅಣ್ಣ ಅಥವಾ ತಮ್ಮ. – ಸಹೋದರ : ಭಾವಮೈದುನನಣ್ಣನೀತೆನೆ ಭಾವನಿಗೆ ನೀನಂಜುವೇಡಂದೋವಿ ಕರುಣಾಸಿಂಧು ಸಂತೈಸಿದನು ಧರ್ಮಜನ (ಕುಸ್ಮಾಕ. ೬೭೩. ೭–೧೭). ಭಾವಮೈದ : ಕೊಡತಿಯು ದಾಗಿಲನ್ನು ತೆರೆದು ಕೊಂಡು ಅವನ ಭಾವಮೈದ ರಘು ಒಳಗೆ ಬಂದು . . . ಹೇಳಿದನು (ಕುಚಾಗ. ೦೫). [ಭಾವ + ಮೈದುನ (< ಮೆಯ್ದುನ)]

ಭಾವಮೋಕ್ಷ (ನಾ). [ಜೈನ] ಸರ್ವಕರ್ಮನಿವೃತ್ತಿಯನ್ನುಂಟು ಮಾಡುವ ಆತ್ಮನ ಶುದ್ಧಸ್ವರೂಪ ; " ಮೋಕ್ಷಭೇದ – ಘಾತಿಕರ್ಮ ಕ್ಷಯ : ಅರ್ಹಂತಾವಸ್ಥೆ : ಆತ್ಮನಿಗೆ ಸಂಬಂಧವಾಗಿರುವ ಸಮಸ್ತ ಕರ್ಮಗಳ ನಾಶಕ್ಕೆ ಕಾರಣವಾದ ಆತ್ಮನ ಪರಿಣಾಮ " (ಕ್ರಿಪ್ರಟೀ. ೦೮೨) : ಆತ್ಮನಲ್ಲಿ ಉಂಟಾಗುವ ರಾಗದ್ವೇಷಾದಿ ಭಾವನೆಗಳಾ ಸಹ್ಯವಾಗುವುದೇ ಭಾವಮೋಕ್ಷವು (ಕ್ರಿಪ್ರ. ೩೦೦). [ಸಂ.]

ಭಾವಯಿತ್ರೀ (ನಾ). [ಕಾವ್ಯಮೀ] ಕಾವ್ಯದ ಸ್ವಾರಸ್ಯವನ್ನು ತಿಳಿಯಲು ಸಹೃದಯನಲ್ಲಿರಬೇಕಾದ ಪ್ರತಿಭೆ : ಸಹೃದಯನಿಗೆ ಆವಶ್ಯಕವಾದ ಪ್ರತಿಭೆಗೆ ರಾಜಶೇಖರನು " ಭಾವಯಿತ್ರೀ " ಎಂದು ಹೆಸರು ಕೊಡುತ್ತಾನೆ (ಕಾರಮೀ. ೩೨೨). ' ಕಾರಯಿತ್ರೀ ' ಪರಾ. [ಸಂ.]

ಭಾವಯೋಗ (ನಾ). ೧. [ಜೈನ] " ಮನೋವಚನಕಾಯವರ್ಗಳನ್ನು ಅವಲಂಬಿಸುವ ಸಂಸಾರಿಜೀವಿಗೆ ಪ್ರಿಕರಣಗಳಿಂದ ಬೇರೆ ಕರ್ಮಾಣುಗಳನ್ನು ಎಳೆದುಕೊಳ್ಳುವ ಸಾಮರ್ಥ್ಯವಿರುತ್ತದೆ. ಇಂಥ ಸಾಮರ್ಥ್ಯವು ಭಾವಯೋಗ ಎನಿಸುವುದು " (ಕ್ರಿಪ್ರ. ೨೯೬). ೨. [ಯೋಗ] ನಿದಿಧ್ಯಾಸಯೋಗದ ಒಂದು ಬಗೆ : ಸ್ವರ್ಗವೇ ದೂರ್ಧ್ವ ದಿಕ್ಕೇ ಶ್ರೋತ್ರ ಚಂದ್ರಾರ್ಕರೇ ನೇತ್ರ ಅಗ್ನಿಯೇ ಮುಖ ಅಂತರಿಕ್ಷವೇ ನಾಭಿ ಭೂಮಿಯೇ ಪಾದಂಗಳಾದೀಶ್ವರನ ವಿರಾಡ್ರೂಪವಂ ನೆನೆದು ಅಲ್ಲದೆ ಭುಜಾಸ್ಫಾಭರಣಾದಿಸಹಿತನಾದೀಶ್ವರನ ದಿವ್ಯಮೂರ್ತಿಯಂ ಪರಿಭಾವಿಸಿ ಬಳಿಕ್ಕಜಜಮುವಂಗಳೊಂದೊಂದಂ ಬಿಬ್ಬುಗೆ ಅವಯವ ಮಾತ್ರಮಾದ ಸದ್ರೂಪುಪ್ಪದಲ್ಲಿ ಮನೋಲಯಮಪ್ಪಂತೆ ಭಾವಯೋಗ ಮೆನಿಸುವುದು (ಚಚಿಸಾ. ೩೩). [ಸಂ.]

ಭಾವರತಿ (ನಾ). ಮನಸ್ಸಿನಲ್ಲಿ ಉಂಟಾದ ಪ್ರೀತಿ ; ಮನಃಪ್ರೀತಿ : ಮೃಡನ ನಿಡುದೋಳ ಬಾಳನ ಕಡುಮೊಗದಿನ ಪೊಳಪನುರಗಿಗೆತ್ತುರಗೇಂದ್ರಂ ತೊಡರ್ದಲ್ಲಿ ಭಾವರತಿಯಿಂದೊತನೊಗೆದಂ ಸಿನ್ನಸುಳಿಭುವನವನಂದು (ಪಜೈ. XIV, ೨೭೦–೨೭ ; 1173). [ಸಂ.]

ಭಾವಲಹರಿ (ನಾ). ಮನಸ್ಸಿಗೆ ಹೊಳೆಯುವ ಭಾವನೆಗಳ ಪ್ರವಾಹ ; ಒಂದರ ಮೇಲೆ ಒಂದಾಗಿ ಬರುವ ಭಾವನೆ : ಅವರು ತಮ್ಮ ಆಲೋಚನೆಗಳನ್ನು, ಅಧ್ಯಾತ್ಮಿಕ ಚಿಂತನೆಗಳನ್ನು, ಭಾವಲಹರಿಗಳನ್ನು ವಚನರೂಪಕ್ಕಳಿಸುವಾಗ...ಉಪಮೆಗಳನ್ನೂ ಬಳಸಿದ್ದಾರೆ (ಶಾಸಾಂ. ೯). [ಸಂ.]

ಭಾವಲಿಂಗ (ನಾ). [ವೀಶೈ] ಮಾನಸಿಕಪೂಜೆಗಾಗಿ ಮನಸ್ಸಿನಲ್ಲಿ ಕಲ್ಪಿಸುವ ಲಿಂಗ ; ಕ್ರಿಯೆಯಂತೆ ಭಾವವೂ ಕೂಡ ಯಾವ ಲಿಂಗದಲ್ಲಿ ಲಯವನ್ನು ಹೊಂದುವುದೋ ಅದು : ಭಾವ ಸದ್ಭಾವ ನಿರ್ಭಾವ ವೆಂಬ ಭಾವತ್ರಯಂಗಳಲ್ಲಿ ಘನತವಾಗಿ ಭಾವಬ್ರಹ್ಮವೆಂಬ ಭೇದವಿಲ್ಲದೆ ಸನ್ನಿಹಿತಭಾವದಿಂದಿರ್ಪ್ಪುದೆ ಭಾವಲಿಂಗ (ಶರಪ. ಪು. ೦೫೯-೨೭೨); ಲಿಂಗ ಸ್ಥಲವು ಮೂರು ಪ್ರಕಾರವಾಗಿರುವುದು. ಎಂದರೆ — ಒಂದನೆಯದು ಭಾವಲಿಂಗವು . . . ಭಾವಲಿಂಗವು ನಿಷ್ಕಳವು. ಅದು ಭಾವದಿಂದ ಗ್ರಹಿಸತಕ್ಕುದಾಗಿ ಭಾವಗ್ರಾಹ್ಯ ಮೆನಿಸುವುದು (ಶಾಸಾಂ. ೩೯–೩ ೫೯); ಭಾವ ಲಿಂಗವು ನಿಷ್ಕಳವು ವರಕ್ಕೆ ಪರವು. ಇದು ಸದ್ಭಾವದಿಂದ ಗ್ರಹಿಸಲು ಯೋಗ್ಯವಾದುದು (ಶಾಸಾಂ. ೨). [ಸಂ].

ಭಾವಲಿಪಿ (ನಾ). ಒಂದು ಬಗೆಯ ಲಿಪಿ. – ಅಕ್ಷರ : " ವಸ್ತುವಿನ ಹೆಸರನ್ನು ವ್ಯಕ್ತಪಡಿಸದೆ ಕೇವಲ ಭಾವವನ್ನು ಮಾತ್ರ ಸೂಚಿಸುವ ಲಿಪಿ: ಭಾವಲಿಪಿ (ಉದಾ. ಜೀನಾಲಿಪಿ) " (Ideograph. ೨೦೫೩). [ಸಂ.]

ಭಾವಲೇಶ್ಯೆ (ನಾ). [ಜೈನ] ಕಷಾಯದಿಂದ ಅನುರಂಜಿತವಾದ ಮನಸ್ಸು, ವಚನ, ಕಾಯಗಳ ಪ್ರವೃತ್ತಿ: ಕಷಾಯಗಳ ಉದಯದಿಂದ ಅನುರಂಜಿತವಾಗುವ ಮನೋವಾಕ್ಕಾಯ ಪ್ರವೃತ್ತಿ; ℙ ಇದರಿಂದಲೇ ಸಂಸಾರಿಯಾದ ಜೀವವು ಪಾಪಪುಣ್ಯಗಳಿಂದ ಬಂಧಿತವಾಗುತ್ತದೆ.– ಲೇವನಹೊಂದುತ್ತದೆ : ಭಾವಲೇಶ್ಯೆಯು ಕಲ್ಪನೆಯು ಪ್ರಾಜೀವವಾಗಿದ್ದು ಆದಕ್ಕೆ ಹಿಂದಿನಿಂದ ದ್ರವ್ಯಲೇಶ್ಯೆಯು ಕಲ್ಪನೆಯನ್ನು ಜೋಡಿಸಲಾಗಿದೆ (ಕ್ರಿಪ್ರ. ೩೧೦). [ಸಂ.ಭಾವಲೇಶ್ಯಾ]

ಭಾವವಚಿಪ (ನಾ). [ವ್ಯಾಕ] ಒಂದು ವಸ್ತುವಿನ ಧರ್ಮವನ್ನು ಅಥವಾ ಧಾತ್ವರ್ಥವನ್ನು ತಿಳಿಸುವ ಪದ: ಭಾವವನ್ನು ಅಥವಾ ಕ್ರಿಯೆಯ ಸ್ಥಿತಿಯನ್ನು ತಿಳಿಸುವ ಪದ : ಭಾವನಾಮ : ವಿನುತ ಕ್ರಿಯಾತ್ಮಕಂಗಳುಮೆನಿಸುವ ಸಂಸ್ಕೃತದ ಭಾವವಚಿಪಂಗಳನಾಯ್ದನಿತರ್ಕ ಮಿಸುಪ್ರತ್ಯಯವನೆ ಪತ್ಕೃತಿ ನಿಜಸೆ ಬರ್ಕುಮಾ ಕೃದ್ಲಿಂಗಂ (ಕುಪ. ೬೪); ಬೆಳೆಯೆಂಬ ಧಾತುವಿನ ಭಾವವಚನಂ ಬೆಳೆಯೆಂದುಂ ಬೆಳೆಸೆಂದುಮಿರ್ಪುದು (ಕುಪ. ೨೦೫ ಕೃತ್ರಿ). [ಸಂ.]

ಭಾವವಾಚಿ (ನಾ). = ಭಾವವಚನ : ಸಂಸ್ಕೃತದ–ಸ್ಕ್ಯದ, ಭಾವವಚನಂಗಳು = ಭಾವದಾಚಿಗಳು, ಅಯ್ದುಂ=ಅಯ್ದುಕೊಂಡು (ಕುಪ. ೬೪ ೬೭೫). [ಸಂ. ಭಾವವಾಚಿನ್]

ಭಾವವಿದ (ನಾ). = ಭಾವಜ್ಞ : ವಿವಿಧಕಳಾಭಿಜ್ಞಂ ಭಾವವಿದಂ ರಸರಸಿಕಂ . . . ಸೃಪತಿಮಹಿತಂ (ಕ್ಷತ್ರ. ೦–೭೫). [ಸಂ. ಭಾವವಿದ್]

ಭಾವಶಬಲತೆ (ನಾ). [ಕಾವ್ಯಮೀ] ಅನೇಕ ವ್ಯಭಿಚಾರಿಭಾವಗಳು ಒಟ್ಟಿಗೆ ಸೇರುವುದು ; ℙ ಈ ವ್ಯಭಿಚಾರಿಭಾವಗಳ ಮೇಳನವು ಕಾವ್ಯದಲ್ಲಿ ಪ್ರಧಾನವಾಗಿ ವ್ಯಂಗ್ಯವಾದರೆ ' ಧ್ವನಿ ' ಎಂಬ ಹೆಸರನ್ನು ಪಡೆಯುವುದು: ಆಸ್ವಾದ್ಯವಾಗುವ ಭಾವದಲ್ಲಿ ಅಲಂಕಾರಿಕರು ಭಾವೋದಯ, ಭಾವಶಾಂತಿ, ಭಾವಸಂಧಿ ಭಾವಶಬಲತೆ ಎಂಬ ನಾಲ್ಕು ದತೆಗಳನ್ನು ವಿಂಗಡಿಸುತ್ತಾರೆ. . .ಒಂದನ್ನು ಒತ್ತರಿಸಿ ಮತ್ತೊಂದರಂತೆ ಅನೇಕ ಭಾವಗಳು ಒದಗುವುದು ಭಾವಶಬಲತೆ (ಜಾಅಚಾ. ೪೨೯); ಹಿಂದೆ ಇದ್ದ ಒಂದೊಂದು ಭಾವವನ್ನು ಹೊಸಹೊಸದಾಗಿ ಹುಟ್ಟಿದ ಮತ್ತೊಂದೊಂದು ಭಾವವು ಮುಚ್ಚುವಂತೆ ನಾನಾಭಾವಗಳನ್ನು ಚಿತ್ರಿಸಿದರೆ ಅದಕ್ಕೆ 'ಭಾವಶಬಲತೆ' ಯೆಂದೂ ಹೆಸರು (ಕ್ರಿಪ್ರ. ೨೦೪); ℙ 'ಎಲ್ಲಿಯ ಕಾರ್ಯಮೆಲ್ಲಿ ಶಶಿಯಾ ಸಕುಲಂ ಪ್ರಿಯೆ ಮತ್ತೆ ಕಾಂಬಳೇ! ಪೊಲ್ಲದ ನೊತ್ತಲಲ್ತೆ, ತಿಳಿವೀ ವೆಗಳೇಂ ಮುನಿದುಂ ಮನೋಹರಂ । ಬಲ್ಲರಕಲ್ಕಷರ್ ನುಡಿವರೇಂ ಕನಸಲ್ಲಿಯುಮಿಂತಿ ಕಾಣಳಿ!ನಿನ್ನಲ್ಲಿ ಸುಧೀರನಾಗು ಮನವೇ ಮಿಗೆ ಜುಂಬಿಪ ಧನ್ಯನಾವನೋ' (ಧ್ವನ್ಯಾಲೋ. ೧೭೦). ವಿಕ್ರಮೋರ್ವಶೀಯದ ನಾಲ್ಕನೆಯ ಅಂಕದ ಈ ಪದ್ಯದಲ್ಲಿ ಊರ್ವಶಿಯನ್ನು ಮೋಹಿಸಿ ಕಾಮವಶವಶನಾದ ಪುರೂರವಸ್ಸಿನ ಸ್ಥಿತಿಯ ವರ್ಣನೆಯಲ್ಲಿ ಮೊದಲಿಂದ ವಿಜರ್ಕ–ವಿತ್ಸುಕ್ಯ, ಮತಿ–ಸ್ಮೃತಿ, ಶಂಕೆ–ದೈನ್ಯ, ಧೃತಿ–ಚಿಂತೆ ಈ ಸಂಚಾರಿ ಭಾವಗಳು ಕ್ರಮವಾಗಿ ಹಿಂದಿನದನ್ನು ಮುಂದಿನ ಭಾವವು ಬಾಧಿಸುತ್ತಾ ಒಟ್ಟಿಗೆ ಸೇರಿ ಚಮತ್ಕಾರವನ್ನು ಕೊಡುತ್ತವೆ. ಇದು ಧ್ವನಿಯ ಒಂದು ಪ್ರಭೇದ. [ಸಂ. ಭಾವಶಬಲತಾ]

ಭಾವತಬಲತ್ವ. ಭಾವತಬಲತ್ವ (ನಾ). = ಭಾವಶಬಲತೆ: ಇಲ್ಲಿ ಜೈತಜಿಯ ವೃತ್ತಾಂತಮು ಕೇಳ್ದವಂಗೌತ್ಸುಕ್ಯ ಧೈರ್ಯ ನಿರ್ವೇದಾಸಂದಭಾವಂಗಳ್

ತಱುವಾಯಿಂದೊಂದಱ ಮೇಲೊಂದು ಉದಿಸುವದು ಭಾವಶಬಲತ್ವಂ (ಅಕ್ಕಕ. ೦೪೭-೦೦). **ಭಾವಶಬಳತ್ವ** : ಪೂರ್ವಪೂರ್ವಭಾವಂಗಳನುತ್ತರೋತ್ತರಭಾವಂಗಳುಪಮರ್ದಿಸೆಯದು ಭಾವಶಬಳತ್ವಂ (ಅಕ್ಕಕ. ೦೪೭-೦೪). [ಸಂ.]

ಭಾವಶಬಲಾಲಂಕಾರ (ನಾ). [ಕಾವ್ಯಮಿಮಾ] ಒಂದನ್ನೊಂದು ಉಪಮರ್ದಿಸುತ್ತಾ ಸೇರಿರುವ ಅನೇಕ ಭಾವಗಳು ವ್ಯಂಗ್ಯವಾದರೂ ಪ್ರಧಾನತೆಯನ್ನು ಹೊಂದದೆ ಮತ್ತೊಂದು ರಸ ಅಥವಾ ಭಾವಕ್ಕೆ ಅಂಗವಾಗಿರುವುದು: ಇಲ್ಲಿ ಜೈತಜಿಯ ವೃತ್ತಾಂತಮಂ ಕೇಳ್ದವಂಗೌತ್ಸುಕ್ಯ ಧೈರ್ಯನಿರ್ವೇದಾನಂದಭಾವಂಗಳ್ ತಱುವಾಯಿಂದೊಂದಱ ಮೇಲೊಂದು ಉದಿಸುವದು ಭಾವಶಬಲತ್ವಂ ಇಮ ಕವೀಶ್ವರರ ಪ್ರಭುವಿಷಯಮಾದ ಪ್ರೀತಿಭಾವಕ್ಕಂಗಮಾಗಿರ್ಪುದಱಿಂದಿಮ ಭಾವಶಬಲಾಲಂಕಾರಂ (ಅಕ್ಕಕ. ೦೪೭-೦೪). [ಸಂ.]

ಭಾವಶಬಳತ್ವ 'ಭಾವಶಬಲತ್ವ' ನೋ.

ಭಾವಶಬಳತ್ವಾಲಂಕಾರ (ನಾ). = ಭಾವಶಬಲಾಲಂಕಾರ : ಪೂರ್ವಪೂರ್ವಭಾವಂಗಳನುತ್ತರೋತ್ತರ ಭಾವಂಗಳುಪಮರ್ದಿಸೆಯದು ಭಾವಶಬಳತ್ವಂ ಒಂದು ರಸಕ್ಕಾದೊಡಂ ಭಾವಕ್ಕಾದೊಡಮಂಗಮಾಗೆಯದು ಭಾವಶಬಳತ್ವಾಲಂಕಾರಂ (ಅಕ್ಕಕ. ೦೪೭-೦೪). [ಸಂ. ಭಾವಶಬಲತ್ವಾಲಂಕಾರ]

ಭಾವಶಾಂತಿ (ನಾ). [ಕಾವ್ಯಮಿಮಾ] ಒಂದು ಧ್ವನಿಪ್ರಭೇದ : ಉತ್ಪನ್ನವಾಗಿದ್ದ ಒಂದು ಭಾವವು ಶಾಂತವಾದಂತೆ ವರ್ಣಿಸುವುದು; ℙ ಉದಾ: ಕಾಂತನು ವಿಲಂಬ ಮಾಡಿದನೆಂದು ಮುಟ್ಟುಗೋಲು ಹಾಕಿದ್ದ ಕಾಂತೆಯು, ನಾಯಕನು ಬಂದು ಕಾಲಿಗೆರಗಿದ ಕೂಡಲೆ ಮಂದಹಾಸದನ್ನು ಬೀರುವಳು. ಇಲ್ಲಿ ಮೊದಲು ಕೋಪ (ಅಮರ್ಷ) ವೆಂಬ ಭಾವವಿದ್ದು ಅದು ಶಾಂತವಾಯಿತೆಂದು ನಿರೂಪಿತವಾಗಿದೆ. ಅದ್ದರಿಂದ ಭಾವಶಾಂತಿಯಾಗುತ್ತದೆ : ಒಂದು ಭಾವವು ಶಾಂತ (ಅದೃಶ್ಯ) ಪಾಯಿತು ಎಂದು ವರ್ಣಿಸಿದರೆ ಅದಕ್ಕೆ 'ಭಾವಶಾಂತಿ'ಯೆಂದೂ . . . ಹೆಸರು (ಕೃಬಿ. ೫೦೪); ಆಸ್ವಾದ್ಯವಾಗುವ ಭಾವದಲ್ಲಿ ಆಲಂಕಾರಿಕರು ಭಾವೋದಯ, ಭಾವಶಾಂತಿ, ಭಾವಸಂಧಿ, ಭಾವಶಬಲತೆ ಎಂಬ ಪಾಲ್ಕು ದಶೆಗಳನ್ನು ವಿಂಗಡಿಸುತ್ತಾರೆ. . . ಏರಿದ್ದ ಭಾವಲಯ ಹೊಂದುವುದು ಭಾವಶಾಂತಿ (ಶಾಕಬಾ. ೮೨೩). [ಸಂ.]

ಭಾವಶುದ್ಧ (ನಾ) = ಭಾವಶುದ್ಧಿ ೧ : ಭಾವಶುದ್ಧವಿಲ್ಲದವರಲ್ಲಿ ಭೂತವಸೊಳ್ಳೆಯಯ್ಯ ನೀನು (ಬಾಬಾಚೀ. ೨- ೦೨-೯). [ಸಂ.]

ಭಾವಶುದ್ಧಿ (ನಾ). ೧. ಮನಸ್ಸಿನ ಸ್ವಚ್ಛತೆ : ಹೃದಯಚೈರ್ಮಲ್ಯ : ಚಿತ್ಶುದ್ಧಿ : ಸ್ಕಂದನು ರಾಘವನು ಹನುಮನ ಭೀಮಸೇನ ವಿನತ ದೂತ್ಯದನಿಂತಿದ್ದೆವರ ಭಾವಶುದ್ಧಿಯಲಿ ನೆನೆದವರ ದುರಿತಂಗಳೋಡುವವು (ಕುಲ್ಕಾಂ. ೬-೦೬೨); ಬಸವಣ್ಣನರ ಭಕ್ತಿಭಂಡಾರಕ್ಕೆ ಭಾವಶುದ್ಧಿಯೇ ದಾಗಿಲು (ಬಾಬಸಂ. ೨). ೨. [ಜೈನ] "ಅಷ್ಟಶುದ್ಧಿಗಳಲ್ಲೊಂದು: ದೇಹ ಭೋಗದಲ್ಲಿ ವೀತರಾಗನಾದಾಗ ರಾಗದ್ವೇಷಾದಿ ಮಲಗಳು ನಿರ್ಮೂಲವಾಗಿ ಮನಸ್ಸು ಶುದ್ಧವಾಗುವುದು" (ಕ್ರಿಕಚಿಸಾ. ೦೪೨) : ಭಾವಶುದ್ಧಿ ವಿಶೇಷದಿಂದಮನಿಂದಿತೆಯುಮಾರ್ಯನಾಗೆ ಸತ್ಯಭಾಮೆ ತದಾರ್ಯದೂದಾದಳ್ (ಕಾಂಶಾಪ್ರ. ೬-೦೨೯ ಪ); ಜ್ಞಾನದಿಂದ ಸಂಸಾರ, ದೇಹಗಳ ಭೋಗದ ವಿಷಯದಲ್ಲಿ ಉತ್ಪನ್ನವಾದಂಥ ವೀತರಾಗತ್ವವೇ ಸಂಪೂರ್ಣರಾಗ-ದ್ವೇಷಾದಿ ಮಲಗಳನ್ನು ಇಲ್ಲದಂತೆ ಮಾಡಿ ಮನಸ್ಸನ್ನು ನಿರ್ಮಲಗೊಳಿಸುತ್ತದೆ. ಈ ನಿರ್ಮಲತೆಗೇನೇ ಭಾವಶುದ್ಧಿ ಎನ್ನುವರು (ಶ್ರಪಣಾ. ೧೦೦). 'ಶುದ್ಧಿ' ಪರಾ. [ಸಂ.]

ಭಾವಶುದ್ಧಿಗೆಡು (ಕ್ರಿ). ಚಿತ್ಶುದ್ಧಿಯನ್ನು ಕಳೆದುಕೊಳ್ಳು; ಮನಸ್ಸಿನ ನಿರ್ಮಲಿನತೆಯೆಂನು ಕಳೆದುಕೊಳ್ಳು : ಗುರೂಪದೇಶಂಗೊಳ್ದದೆ. . . ಆನುಮೀತೆ ತಪಂಗೆಬ್ಬಿಸೆಂದು ಪಂಪಾಗ್ನಿಶಾಪತಪ್ತನಾಗಿ ಭಾವಶುದ್ಧಿಗೆಟ್ಟು ಕೋಪಾಗ್ನಿ ಪೆರ್ಚಿ (ಪಂಕಥಂ. ೬೦-೦೨). [ಭಾವಶುದ್ಧಿ + ಕೆಡು,]

ಭಾವಸಂಧಿ (ನಾ). [ಕಾವ್ಯಮಿಮಾ] ಧ್ವನಿಯ ಒಂದು ಪ್ರಭೇದ; ಪರಸ್ಪರ ವಿರುದ್ಧವಾದ ಅಥವಾ ಅಲ್ಲದ ಎರಡು ಭಾವಗಳು ಒಟ್ಟಿಗೆ ಸೇರಿರುವುದು; ℙ ಹರ್ಷವಿಷಾದಗಳು ಅನೇಕ ಸಂದರ್ಭಗಳಲ್ಲಿ ಏಕಕಾಲದಲ್ಲಿ ಬರುವುದುಂಟು. ಅವು ಪ್ರಾಧಾನ್ಯದಿಂದ ವ್ಯಂಗ್ಯವಾದರೆ ಭಾವಸಂಧಿ ಎನಿಸಂತ್ತದೆ : ಭಿನ್ನಕಾರಣಗಳಿಂದ ಉಂಟಾದ ಎರಡು ಭಾವಗಳ ಮಿಲನ ಭಾವಸಂಧಿ (ಶಾರಬಾ. ೨೨೪); ಪರಸ್ಪರ ವಿರುದ್ಧವಾದ ಎರಡು ಭಾವಗಳು ಏಕಕಾಲದಲ್ಲಿ ಇದ್ದುವು ಎಂದು ವರ್ಣಿಸಿದರೆ ಅದಕ್ಕೆ ಭಾವಸಂಧಿಯೆಂದೂ. . . ಹೆಸರು (ಕೃಬಿ. ೫೦೪). [ಸಂ.]

ಭಾವಸಂಧ್ಯಲಂಕಾರ (ನಾ). [ಕಾವ್ಯಮಿಮಾ] ಒಂದು ಅಲಂಕಾರ; ಎರಡು ಭಾವಗಳ ಮೇಳನವು ತನ್ನ ಪ್ರಾಧಾನ್ಯವನ್ನು ಬಿಟ್ಟು ಮತ್ತೊಂದಕ್ಕೆ ಅಂಗವಾಗಿರುವುದು : ಪೆಜಪೆಱತಪ್ಪ ಭಾವಂಗಳ ಸಂಧಿ ಒಂದು ರಸಕ್ಕಾದೊಡಂ ಭಾವಕ್ಕಾದೊಡಮಂಗವಾಗೆಯದು ಭಾವಸಂಧ್ಯಲಂಕಾರಂ (ಅಕ್ಕಕ. ೦೪೩-೦೪). [ಸಂ.]

ಭಾವಸಂವರೆ (ನಾ). [ಜೈನ]ಕರ್ಮಗಳನ್ನು ಉಂಟುಮಾಡುವ ಭಾವಗಳನ್ನು ತಡೆಯುವುದು; ಸಂಸಾರವನ್ನು ಪರ್ಧಿಸುವ ಕ್ರಿಯೆಗಳನ್ನು ತಡೆಯುವುದು : ಕರ್ಮಸ್ಕಂದ ಪರಿಣಾಮಂ ಶಗರಕ್ಕೆ ಕಾರಣಮಪ್ಪಂ ಪರಿಣಾಮಂ ಭಾವಸಂವರೆಯೆಂಬುದು (ಜಸ್ಕಪೀ. ೦೪೨-೦). [ಸಂ. ಭಾವಸಂವರ]

ಭಾವಸಮಾಧಿ (ನಾ). ಮನಸ್ಸಿನ ವಿಕಾಗ್ರತೆ ; ವಿಕಾಗ್ರಚಿತ್ತದಿಂದ ಮಾಡುವ ಧ್ಯಾನ : ಕಾಯಸಮಾಧಿ ಕರಣಸಮಾಧಿ ಭಾವಸಮಾಧಿಯಾದ ಬಳಿಕ ಗೊಹೇಶ್ವರಲಿಂಗದಲ್ಲಿ ಬಯಲುಭ್ರಮೆಯಳಿದು ಜ್ಞಾನಶಸಮಾಧಿಯನೆಯ್ದಬಲ್ಲಡೆ ಅದೇ ನಿಜಸಮಾಧಿ (ಅಪಮಂ. ೦೬೨-೬೬). [ಸಂ.]

ಭಾವಸಾರಾಯ (ನಾ). ೧. ಭಾವದ ತಿರುಳು. ೨. (ಪರಮೇಶ್ವರನಲ್ಲಿ) ಚಿತ್ಪ್ರವೃತ್ತಿಯುಳ್ಳ ವ್ಯಕ್ತಿ : ಭಾವಸಾರಾಯರ ಭಕ್ತಿಸಾರಾಯರ ತೋಜಯ್ಯಾ ನಿಮ್ಮ ಧರ್ಮ (ಜಷಪ. ೫೦೬). [ಭಾವ್ಯ + ಸಾರಾಯ್ಯ]

ಭಾವಸೂಚಕಾವ್ಯಯ (ನಾ). [ವ್ಯಾಕ] ಸುಖ, ದುಃಖ, ಸಂತೋಷ ಮೊದಲಾದ ಭಾವಗಳನ್ನು ಸೂಚಿಸುವ ಅವ್ಯಯ ; ಅಹುದ, ಅಯ್ಯೋ, ಛಲಾ ಮೊದಲಾದ ಉದ್ಗಾರ : ಆಶ್ಚರ್ಯ, ಸಂಭ್ರಮ, ಪ್ರಶ್ನೆ, ಸಂಶಯ ಮೊದಲಾದ ಮನಸ್ಸಿನ ಭಾವಗಳನ್ನು ತೋರಿಸುವ ಅವ್ಯಯಗಳಿಗೆ ಭಾವಸೂಚಿಕಾವ್ಯಯಗಳೆಂದು ಹೆಸರು (ಶುಕ್ಲಶ. ೦೪೬). [ಸಂ.]

ಭಾವಸೂತಕ (ನಾ). [ವೀಶೈ] ಭಾವಲಿಂಗೋಪಾಸನೆಗೆ ಪ್ರತಿಬಂಧಕವಾದ ಚುಂಚಲುಚಿತ್ತತ್ವವೇ ಮೊದಲಾದ ಮೈಲಿಗೆ.—ಅಡ್ಡಿ ; ಮನಸ್ಸಿನ ಅನಧಿಕಾರತ್ವ : ಎನ್ನ ತನುಸೂತಕವ ಕಳೆದ ಬಸವಣ್ಣ. . . ಭಾವಸೂತಕವ ಕಳೆದ ಬಸವಣ್ಣ (ಪಚಸಂ. ೫೮೨-೨೬). [ಸಂ.]

ಭಾವಳಯ (ನಾ). ಕಾಂತಿಯ ವಲಯ,—ವರ್ತುಲ : ಭಾವಳಯ ವಿಲಸಿತಾಕೋಕಮಂದಾರ ವರ್ಷಾಭ್ಯುಪಚ್ಛನ್ನಾಂಗನಾದ್ಯಂ ತ್ರಿಭುವನ ವಿಭುತಂ ನೇಮಿ ರಕ್ಷಿಕ್ಕೆ ವಮ್ಮಂ (ಅರಪ್ರ. ೦-೦). [ಸಂ. ಭಾವಲಯ]

ಭಾವಾಜಿ (ನಾ). ಭಾವನನ್ನು ಗೌರವದಿಂದ ಕರೆಯುವಾಗ ಅಥವಾ ನಿರ್ದೇಶಿಸುವಾಗ ಉಪಯೋಗಿಸುವ ಮಾತು : ಅಕ್ಕ ಭಾವಾಜಿಯಿಂದಮ್ಮ ಮನೆಗೆ ಬಂದು ಹೊಕ್ಕಾಗ ಗಿಳಿಯಿಂದ ಪಾನು ಮಿಕ್ಕು ಸಱು ಪಾಡಿಸುವೆನೇಗ ಜಾಣ್ನುಡಿ ಲೆಕ್ಕದೋಜುವೆನು (ಕಚಿ. ೯-೫೬); ನಮ್ಮ ಭಾವಾಜಿಯಮ್ಮೂ ಸ್ವಲ್ಪ ಜೈನಸಂಪ್ರದಾಯದವರು (ತೀಂಗಾಕೃ. ೬). 'ಅಕ್ಕಾಜಿ', 'ಅಕ್ಕಾಜಿ' ಪರಾ. [< ಭಾವ + -ಜಿ]

ಭಾವಾತಿರೇಕ (ನಾ). ಮನಸ್ಸಿನ ಉದ್ರೇಕ; ಉದ್ವೇಗ; ಭಾವಗಳ ಉಜ್ಜ್ವಲತೆ: ಭಾವಾತಿರೇಕದಿಂದ ಅವರು ಬಿರುಸಾಗಿ ಮಾತನಾಡಿದರು (ಕೂಡಿ). [ಸಂ.]

ಭಾವಾತ್ಮ (ನಾ). ತತ್ತ್ವವಿಚಾರಗಳನ್ನು ತಿಳಿದವನು; ತತ್ತ್ವಜ್ಞ: ಜೀವಂ ಬೇಱೆ ಶರೀರಂ [ಭಾವಿ]ಸೆ ಬೇಱೆಂಬ ಪರಮತತ್ಪಾರ್ಥವ ಸದ್ಭಾವ ವಿಚಾರಮನಱಿವಾ ಭಾವಾತ್ಮಂ ಮೆಯ್ಯನೋವನೇನಱಿವಪನೇ (ಶಬರಶಾ. ೬೫-೫೬). [ಸಂ. ಭಾವಾತ್ಮನ್]

ಭಾವಾತ್ಮಕ (ನಾ). ಚಿತ್ತವೃತ್ತಿರೂಪವಾದುದು; ಭಾವಪ್ರಧಾನವಾದುದು: ಕಾವ್ಯಾತ್ಮಕವೆಂದರೆ ಭಾವಾತ್ಮಕ ಮತ್ತು ಕಲ್ಪನಾತ್ಮಕ ಎಂದು ನಮ್ಮ ಅರ್ಥ (ಜಾಶಿಪ್ರ. ೬೨). [ಸಂ.]

ಭಾವಾನುಗುಣ (ನಾ). ಮನಸ್ಸಿಗೆ ಅನುಸಾರವಾಗಿರುವುದು: ಅವರವರ ನಂಬಿಕೆಗೆ ಅನುಸಾರವಾಗಿರುವುದು; ಭಾವನೆಗೆ ತಕ್ಕಂತಿರುವುದು: ದೈವವು ಮಂತ್ರವು ತೀರ್ಥವು ವೈದ್ಯನ ದ್ವಿಜನು ದೈವಜ್ಞನು ಗುರುವು ಲೋಗರಿಗಿವು ದಿಟ ಸಿದ್ಧಿಯನೀವುವ ಆ ಸಿದ್ಧಿ ಭಾವಾನುಗುಣವ (ಜಂಜಾಕ. ೬೬-೬೬). [ಸಂ.]

ಭಾವಾನುವಾದ (ನಾ). ೧. ಕಾವ್ಯ ಅಥವಾ ಹಿಂದಿನ ಗ್ರಂಥದ ಭಾವವನ್ನು ಆಧುನಿಕ ಸರಳಗದ್ಯದಲ್ಲಿ ಬರೆಯುವುದು: ಗದ್ಯಾನುವಾದ: ಪರಿಷತ್ತು ಅನೇಕ ಹಳಗನ್ನಡಕಾವ್ಯಗಳನ್ನು ಭಾವಾನುವಾದದ ಸಮೇತ ಪ್ರಕಟಿಸಿದೆ (ಕೂಡಿ). ೨. ಒಂದು ಭಾಷೆಯ ಕಾವ್ಯ ಅಥವಾ ಯಾವುದೇ ಗ್ರಂಥದ ಭಾವವನ್ನು ಇನ್ನೊಂದು ಭಾಷೆಯಲ್ಲಿ ಬರೆಯುವುದು: ಈ ರೀತಿಯ ಭಾವಾನುವಾದ ಮಾಡುವಲ್ಲ ಮೂಲದ ಮನ್ನಿನ ರಸ, ಗುರಿ ಇವುಗಳಿಗೆ ಧಕ್ಕೆಯುಂಟಾಗದಿರುವುದು ಮುಖ್ಯ (ಟೀಶಿಪೋ. xii, ೫೬೫); ಸಂಸ್ಕೃತಸಾಹಿತ್ಯದ ಅನೇಕ ಕೃತಿಗಳ ಭಾವಾನುವಾದ, ಭಾಯಾನುವಾದ ಮತ್ತು ಅನುವಾದಗಳೂ ಬಂದವು (ಕಾಚರ. ೪೭೭). [ಸಂ.]

ಭಾವಾನುಸಾರ (ನಾ). ಭಾವನೆಗೆ ಅನುಸಾರವಾದುದು: ಅವಿದ್ಯೆಯು ದಿಟ್ಟಿಪರ ಭಾವಾನುಸಾರದಿ ತೋರುತಿಹಳು (ಪಗಣಾ. ೦೪-೦೪). [ಸಂ.]

ಭಾವಾಭಾಸ (ನಾ). [ಕಾವ್ಯಮಿ] ಉಚಿತವಲ್ಲದ ಸ್ಥಾನದಲ್ಲಿ ಪ್ರವರ್ತಿಸುವ ಸಂಚಾರಿಭಾವ; ಪ ಮುನಿಪತ್ನಿ, ಗುರುಪತ್ನಿಯರನ್ನು ಅಥವಾ ಒಲ್ಲದ ತರುಣಿಯರನ್ನು ಕಾಮಿಸಿ ಚಿಂತೆ. ದೈನ್ಯ ಮೊದಲಾದ ಚಿತ್ತವೃತ್ತಿಗಳನ್ನು ತಳೆಯುವಂತೆ ವರ್ಣಿಸುವುದು. ಸಾತ್ವಿಕರಾದ ಹಾಗೂ ಶಾಂತರಾಗಿರುವ ವ್ಯಕ್ತಿಗಳ ಮೇಲೆ ಬಲಪ್ರದರ್ಶನೋತ್ಸುಕ್ಯ, ಗುರುಗಳ ಮೇಲೆ ಉಗ್ರತೆ ಇವುಗಳು ಭಾವಾಭಾಸವೆನಿಸುತ್ತವೆ; ರಾವಣನು ಸೀತೆಗಾಗಿ ಸಂತಾಪಗೊಂಡಂತೆ ವರ್ಣಿಸುವಾಗ ಭಾವಾಭಾಸವಾಗುತ್ತದೆ. ಈ ಭಾವಾಭಾಸವು ಪ್ರಾಧಾನ್ಯದಿಂದ ಅಭಿವ್ಯಕ್ತವಾದರೆ ಭಾವಾಭಾಸಧ್ವನಿಯಾಗುತ್ತದೆ: ಭಾವವು ಅನೌಚಿತ್ಯದಿಂದ 'ಭಾವಾಭಾಸ' ವಾಗಬಹುದು (ಕೃಶಾ. ೨೦೪); ರಸ, ಭಾವ, ರಸಾಭಾಸ, ಭಾವಾಭಾಸ, ಭಾವಶಾಂತಿ ಇವು ಎಂದೂ ವಾಚ್ಯವೇ ಅಲ್ಲ (ಕೃಜ್ಞಾ೧೦೦. ೦೬); ಭಕ್ತಿಯೆಂಬುದೊಂದು ಉಚ್ಚತರಗತಿಯ ಭಾವಾಭಾಸ (Pathetic Fallacy)ವೆನಿದು ತಿಳಿದಿದ್ದರೋ ತಿಳಿಯದು (ಜಾಟಿಪ. ೧೭). [ಸಂ.]

ಭಾವಾಭಿನಯ (ನಾ). ಮನಸ್ಸಿನ ಹರ್ಷ, ವಿಷಾದ ಮೊದಲಾದ ಚಿತ್ತವೃತ್ತಿಗಳನ್ನು ಕಣ್ಣಿನ ಚಲನೆ, ಮುಖವಿಕಾರ ಮೊದಲಾದ ಶಾರೀರಿಕಚೇಷ್ಟೆಗಳಿಂದ ಪ್ರದರ್ಶಿಸುವುದು: ಮನುಷ್ಯ ಹೃದಯದಲ್ಲಿನ ಭಾವೋದ್ರೇಕಗಳನ್ನು . . . ಅಂಗವಿನ್ಯಾಸ ಭಾವಾಭಿನಯಗಳ ಮೂಲಕ ತೋರ್ಪಡಿಸುವುದನ್ನು ಕಲಿತ (ಜಾಕವ. ೫೫೮). [ಸಂ.]

ಭಾವಾಭಿವ್ಯಕ್ತಿ (ನಾ). ಅಂತರಂಗದ ಆಶಯವನ್ನು ಪ್ರಕಾಶಪಡಿಸುವುದು: ತನ್ನ ಭಾವಾಭಿವ್ಯಕ್ತಿಗೆ ಸರಿಯಾದ ಪದ ಹೊಳೆಯದಿಲ್ಲವಾದ್ದರಿಂದ ಅವನು ಕೋವಾರೂಢನಾದನು (ಕಥಾಬಿ. ೪೨೬); ಶಿಲ್ಪಿಗೆ ಕಲ್ಲು, ವರ್ಣಶಿಲ್ಪಿಗೆ ಬಣ್ಣಕಾಗದ, ಕವಿಗೆ ಭಾಷೆ, ಇವೆಲ್ಲವೂ ಅವನ ಭಾವಾಭಿವ್ಯಕ್ತಿಯ ಮಾಧ್ಯಮಗಳು (ಸಾಂವಿಚ. ೬೨). [ಸಂ.]

ಭಾವಾರ್ಥ (ನಾ). ೧. ಕಾವ್ಯ ಮೊದಲಾದುವುಗಳ ತಾತ್ಪರ್ಯ; ಯಾವ ಉದ್ದೇಶವನ್ನಿಟ್ಟುಕೊಂಡು ಕವಿಯು ಪ್ರಯೋಗ ಮಾಡಿದ್ದಾನೋ ಆ ಉದ್ದೇಶ.—ಆಶಯ: ಸಮ್ಯಗ್ದರ್ಶನಾದಿ ಗುಣಾಧಾರ ನಿಜಶುದ್ಧಾತ್ಮಂ ಉಪಾದೇಯಮೆಂಬುದು ಭಾವಾರ್ಥಂ (ಕಬ್ಬ ಕ್ರಿ. ೬); ಮುನ್ನ ತಾಂ ಬರೆಸಿ ಕಳುಹಿವ ಪತ್ರಮಂ ತರಿಸಿ ನೋಡಿಕೊಂಡ ದಬ್ಬೊಳಿರ್ದ ಭಿನ್ನಿಸಿದ ಭಾವಾರ್ಥಮಂ ತಿಳಿದು (ಕೃಬಾಚಾ. ೩೦-೩೩). ೨. [ವ್ಯಾಕ]ಒಂದು ವಸ್ತುವಿನ ಭಾವವನ್ನಾಗಲಿ, ಧಾತ್ವರ್ಥವನ್ನಾಗಲಿ ತಿಳಿಸುವ ಅರ್ಥ: ಈ ಸಾಪೇಕ್ಷಕ್ರಿಯಾರೂಪಗಳಿಗೆ ಕಾಲಭೇದ ಅರ್ಥ ಭೇದಗಳು ಮಾತ್ರ ಉಂಟು. . . 'ಹೊರಟರೆ' ಎಂಬುದಕ್ಕೆ ಪಕ್ಷಾರ್ಥದ ರೂಪವೆಂದೂ, 'ಹೊರಡಲಿ' ಎಂಬುದಕ್ಕೆ ಭಾವಾರ್ಥದ ರೂಪವೆಂದೂ ಹೆಸರು (ಹಾಕೃಪ್ರ. ೬೬). [ಸಂ.]

ಭಾವಾರ್ಪಿತ (ನಾ). [ವೀಶೈ]ಮನಃಪೂರ್ವಕವಾಗಿ ಶಿವನಲ್ಲಿ ಸಮರ್ಪಣೆ ಮಾಡಲ್ಪಡುವುದು: ಶ್ರೇಷ್ಠವಾದ ಅವುವಾಸೊಂದು ಪರಮಾತ್ಮಸ್ವರೂಪವಾದ ಶಿವಂಗೋಸುಗ ಮೊದಲಲ್ಲಿ ಸಮರ್ಪಿಸಲ್ಪಡುತ್ತಿಹುದು ಅದು ಭಾವಾರ್ಪಿತವೆಂದು ಇಚ್ಛೈಸಲ್ಪಡುತ್ತಿಹುದು (ಕೃಕಣ. ೧೫). [ಸಂ.]

ಭಾವಾವಿಷ್ಟ (ನಾ). ಮನಸ್ಸಿನಲ್ಲಿ ಹುಟ್ಟುವ ಹರ್ಷ, ಶೋಕ ಮೊದಲಾದ ಭಾವಗಳಿಂದ ಪರವಶನಾದವನು; ಭಾವಪರವಶ: ಅವರು ಭಾವಾವಿಷ್ಟರಾಗಿ ಕೋಡುಗಲ್ಲಿನ ಬಳಿ ವಿಂತುಕೋಡು ನೋಡಿದರು (ಜಾಕ್ಕೃಚಿ. ೦೬೩); ಆಶುಬಾಯುಗಳು ಇದಕ್ಕೇನುತ್ತರ ಕೊಟ್ಟಾರು? ಅವರು ಭಾವಾವಿಷ್ಟರಾಗಿ ಕುಳಿತುಬಿಟ್ಟರು (ಪಕ್ಷಕ್ಷ. ೨೬೦). [ಸಂ.]

ಭಾವಾವೇಗ (ನಾ). ಮನಸ್ಸಿನ ಭಾವಗಳ ಉತ್ಕಟತೆ.—ತೀವ್ರತೆ: ಆ ಭಾವಾವೇಗದ ಪರಿಣಾಮವಾಗಿ ಅವನ ಮುಖದ ಮೇಲೆ ನಗು ಹಸರಿಸಿತ್ತು (ಕೃಪಠ. ೨೦೦). [ಸಂ.]

ಭಾವಾವೇಶ (ನಾ). ಮನಸ್ಸಿನ ಭಾವದ ಉದ್ವೇಗ. —ಉದ್ರೇಕ: ಹ್ಲು ವೇಶ ಅಂಥ ಭಾವಾವೇಶವನ್ನು ಉಂಟುಮಾಡಿದ್ದರಿಂದ ಹಾಗೂ ಆಗಬಹುದು ಎಂದು ಸಮಾಧಾನಮಾಡಿಕೊಳ್ಳಬಹುದು (ಟೀಶಿಪೋ. VIII, ೫೫೬); ಭಾವಾವೇಶದಲ್ಲಿ ಮುಳುಗಿದ್ದ ಅವನಿಗೆ ಬಾಹ್ಯಪ್ರಪಂಚದ ಅರಿವೇ ಇರಲಿಲ್ಲ (ಪಕ್ಷಕ್ಷ. ೨೬೦); ವಿರ್ವಾಟಿಲ್ಲ ನಸಿಗರಲಿ ಎಂದು ಜಾಮುಂಡರಾಯ ಭಾವಾವೇಶದಿಂದ ಮಾತಾಡಿದನು (ಜಾಪಚಂ. ೨೩). [ಸಂ.]

ಭಾವಾಶ್ರಿತ (ನಾ). [ತತ್ತ್ವಶಾ]ಸಾಂಖ್ಯಮತದಂತೆ ಬುದ್ಧಿಗೆ ಇರುವ ಎಂಟುಭಾವಗಳು: ಬುದ್ಧಿಗೇ ಸುಖ ದುಃಖ ಜ್ಞಾನ ಇಚ್ಛಾರಾಗ ದ್ವೇಷ ಮೊದಲಾರುವೆ; ಅದಕ್ಕೇನೆ ಪುಣ್ಯ ಪಾಪ ಸ್ವರ್ಗ ನರಕ ಬಂಧ ಮೋಕ್ಷ; ಇದರಲ್ಲೇ ಧರ್ಮ ಅಧರ್ಮ ಜ್ಞಾನ ಅಜ್ಞಾನ ಐಶ್ವರ್ಯ ಅನೈಶ್ವರ್ಯ ವೈರಾಗ್ಯ ಅವೈರಾಗ್ಯವೆಂಬ ಭಾವಾಶ್ರಿತವಿರುವುದು (ಹಿಂದಾ. ೫೯). [ಸಂ.]

ಭಾವಿ 'ಭಾವಿ' ನೋ.

ಭಾವಿ (ಗು). ೧. ಮುಂದೆ ಆಗುವ; ಅನಂತರ ಉಂಟಾಗುವ; ಮುಂದಿನ ಕಾಲದ: ಭಾವಿಭರತೇಶರಪದಮುಮಿಳಾವಿಳುಪ್ಪೇಮಭರಮುಂ ಪೆರ್ದಗೊಂಡಿರೆ ಸದ್ಭಾವದಿನಿಟ್ಟುದು ಬಂಧುಜನಾವಳಿ ಕೂಸಿಂಗೆ ಭರತ ನೆಬೀ ಪೆಸರಂ (ಆಂಪ. ೬-೩೭); ಆದಿಜನೇಶ್ವರಂ ಮೊದಲ ಚಕ್ರಿಗೆ ಭಾವಿಜನೇಂದ್ರನಾಮತೀರ್ಥೋದಯಮಾಳಿಯಂ ಪೆಸಸೆ (ಣಂಚರಿ. ೦೨-೭೯); ಭಾವಿ ಉಷ್ಣತೆಗಾಗಿ ಶುಭಪ್ರಸಂಗಕ್ಕಾಗಿ . . . ಒಂದು ಮಾತು ಕೇಳ

ಬೇಕಾದ್ದರಿಂದ ಕೇಳಿದೆವು ಅಷ್ಟೆ (ಕುಟಾ. ೦೫೩). (ನಾ). ೨. (ಕರ್ಮವಶದಿಂದ ಅಥವಾ ಕಾರಣಾಂತರದಿಂದ) ಆಗಿಯೇ ತೀರಬೇಕಾದುದು.—ನಡೆಯಲಿರುವುದು : ಭಾವಿಯಿನಿರ್ದ ಭೋಗದೊಳಾವುದು ನಿಶ್ಚಯಮತೀತಮದತೀತಮೆನರ್ (ಶಂಕ್ರತ. ೨-೫೬); ಭಾವಿಯೆನಿರ್ದುದು ಪರಿಭಾವಿಸಿ ಕಳಿಯಲ್ಕೆ ಸಾಧ್ಯಮಾಗದು ಜಗದೊಳ್ (ನಾಕಾ. ೦೭-೦೦). ೩. ಭಾವನೆಯನ್ನು ಹೊಂದಿರುವವನು ; ಭಾವನೆಯುಳ್ಳವನು; ಭಾವಿಸುವವನು : ನಿನಗೆ ಮುಜ್ಜನವ ಮಾಡುವಲ್ಲಿ ನಾನು ಮಲದೇಹಿ ನೀನು ನಿರ್ಮಲದೇಹಿ . . . ನಿನಗೆ ಧೂಪವನಿಕ್ಕುವಲ್ಲಿ ನಾ ಭಾವಿ ನೀ ನಿರ್ಭಾವಿ (ಪೋಗಚಂ. ೩೬-೦೩೦); ಶ್ರವರೊಳು ಲಿಂಗಾವಧಾನದ ಭಾವಿಯಾದಡೆ ಹೊಲುಬುಗೆಟ್ಟ ಮನೋವಿಕಾರವ ಮಾತುಗಳನಾಡಲಿಕುಚಿತವಹುದ (೦೫ಪು. ೪೦-೨೬). ೪. [ವ್ಯಾಕ] ಮುಂದೆ ಬರುವ ಕಾಲ: ಭವಿಷ್ಯತ್ಕಾಲ: ನೆಗಬ್ಗುಂ ಸಂಪ್ರತಿಗಂ ಭಾವಿಗಮನ್ನೆಗಮನ್ನಮಿನೆಗಮಿನಮೆಂಬಿವು ಸೂರಿಗಳಿಂ (ಕವಿಪ. ೨೫೭). [ಸಂ. ಭಾವಿನ್]

ಭಾವಿಕ (ಗು)- ೧. ನೈಜವಾದ ; ಸ್ವಾಭಾವಿಕವಾದ ; ವಾಸ್ತವವಾದ. ೨. ಭಾವಾತಿರೇಕವುಳ್ಳ ; ಭಾವಪೂರ್ಣವಾದ ; ಭಾವಪ್ರಧಾನವಾದ. (ನಾ). ೩. ಒಳ್ಳೆಯದು; ಶುಭವಾದುದು; ಮಂಗಳಕರವಾದುದು : "ಶ್ರೋಪೇಯಂ ಶಿವಂ ಶ್ವಶ್ರೇಯಸಂ ಶುಭಂ ಭಾವಿಕಂ ಮಂಗಳಂ ಭವ್ಯವಾ ಭದ್ರಂ . . . ಕಲ್ಯಾಣಮೆಂದಿನಲ್ಕೊಳ್ಳಿತಕೆ ಪೆಸರಿನಕ್ಕುಂ" (ಶುಂಗಣ. ೦-೩೬). ೪. ಅರಿತವನು; ತಿಳಿದವನು; ಬಲ್ಲವನು : ರಾವಣನ ಮಗವಿವನು . . . ಶಾಸ್ತ್ರಸ್ತದಲಿ ಪರಿಣತನು ಭಾವಿಕನು ಕವಿ ತುರಗರಥದಲಿ (ಅಣಿಗ. ೫೬-೦೩); ಭಾವಿಕನೇ ಅವರ ಸ್ವರೂಪವನ್ನು ಬಲ್ಲನು, 'ಭಾವಿಕ ಬಲ್ಲನು ಅವರ ಪುಟಿಲಾ ! ಎಂದು ಕವಿಯು ಹೇಳುವನು (೫೫೫. ೩೫೦). ೫. [ಕಾವ್ಯಮೀ] ಪ್ರಬಂಧವನ್ನೆಲ್ಲ ವ್ಯಾಪಿಸುವ. ಹಿಂದಿನ ಮತ್ತು ಮುಂದಿನ ಸಂಗತಿಗಳನ್ನೆಲ್ಲ ಕಣ್ಣಿದುರಿಗೆ ಈಗ ನಡೆಯುವಂತೆ ವರ್ಣಿಸುವ ಒಂದು ಗುಣ : ಭಾವಮೆಂಬುದಕ್ಕುಂ ಕವಿಗಳಾ ಭಾವಿಸಿ ಮನದ ಬಗೆಯೊಂದಿದರ್ಥಂ ಕೇವಲಮದಱೊಳ್[ಳ]ರಂಕ್ಷತಿ ಭಾವಿಕಮೆಂಬುದಕ್ಕುಂ ನೃತುಂಗದೇವಮತದಿಂ (ಕಣಾ. ೩-೨೦೯) : ಭಾವಿಕದೆಂದರೆಬರ್ ಕವಿ ಭಾವಗತಾರ್ಥಮವೆ ತಾಮಲಂಕೃತಿಗಳೊಳುದ್ಭಾವಿಸಿ ಪೇಬ್ದರ್ ಶಕ್ತಿಸಮಾವಿರ್ಭೂತ ಪ್ರಬಂಧವಿಷಯಮದಕ್ಕುಂ (ಕಾಶ್ಯಾತ. ೬೬೬); ಭಾವಿಕಮೆನಿಕುಂ ಸತ್ಕವಿಭಾವಗತಾರ್ಥಂ . . . ಕವಿಗಳ್ ತಾವ್ ಭಾವನೆಯೆ ಭಾವಿಕಮೆಂಬುದದುಂ ಪ್ರಬಂಧವಾಸ್ತವವಿಷಯಂ (ಕಾಲಂಚಾ. ೬೪). ೬. ಅರ್ಥಾಲಂಕಾರಗಳಲ್ಲಿ ಒಂದು ; ಹಿಂದೆ ಅನುಭವಿಸಿದ ಅಥವಾ ಮುಂದೆ ನಡೆಯಬಹುದಾದ ವಿಷಯವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವುದು : ಹಿಂದೆ ಪೋದುದಂ ಮುಂತೆ ಬರ್ಪುದನಾವುದನಾದೊಪೊಂದು ರಸಾವೇಶದಿಂ ಪ್ರತ್ಯಕ್ಷದಂತೆ ಕಾಣ್ಬುದು ಭಾವಿಕಮೆನಿಪುದು (ಅತ್ಯತಿ. ೦೬೬-೨೬). 'ಭಾವಿಕಾಲಂಕಾರ' ಪರಾ. [ಸಂ.]

ಭಾವಿಕತನ (ನಾ)- ಆಸ್ತಿಕತನ ; ಭಾವನೆಯ ಆಧಾರದ ಮೇಲೆ ಪರಲೋಕವಿದೆಯೆಂಬ ನಂಬಿಕೆ : ವೈಜ್ಞಾನಿಕಯುಗ ಉದಿಸುವ ಮುನ್ನ ಜನತಾಯುಗದಲ್ಲಿಯೇ ಮನುಷ್ಯನ ಭಾವಿಕತನ ಕೊನೆಗೊಂಡಿತ್ತು (ಕಾಲಚಾ. ೦೦೨). [ಭಾವಿಕ + —ತನ]

ಭಾವಿಕತೆ (ನಾ)- = ಭಾವಿಕತನ : ತೀರ್ಥಪ್ರಸಾದರು ಮೊಗ್ಗಾವಿಗೆ ಬಂದಂದಿನಿಂದ ಅವರ ಭಾವಿಕತೆಗೆ ಸೀಮೆಯೇ ಇರಲಿಲ್ಲ (ಕಪುಚ. ೦೦). [ಸಂ. ಭಾವಿಕತಾ]

ಭಾವಿಕಾಲ (ನಾ)- ಭವಿಷ್ಯತ್ಕಾಲ ; ಮುಂದೆ ಬರುವ ಕಾಲ : ಭೂತವರ್ತಿ . . . ಅವ್ಯಾತವಿಭಕ್ತಿಗಳಕ್ಕುಮತೀತಭವದ್ಭಾವಿಕಾಲವಿವ್ಯಾದಿಗಳೊಳ್ (ಕಾಬ್ಯಸ. ೬೬೪). [ಸಂ.]

ಭಾವಿಕಾಲಂಕಾರ (ನಾ)- = ಭಾವಿಕ ೬ : ಭೂತಭವ್ಯಾರ್ಥಸಾಕ್ಷಾತ್ಕಾರ ಪೇಳ್ ಭಾವಿಕಾಲಂಕಾರ . . . ಭೂತ ಭಾವಿಕವಾದರ್ಥವನು ಸಾಕ್ಷಾತ್ಕಾರವಾಗಿ ಪೇಳಲ್ಕೆ ಭಾವಿಕಾಲಂಕಾರ (ಕಜಲಂ. ೦೬೯-೦.) ; ಪೀದೆ ನಡೆದ ವೃತ್ತಾಂತವನಾದೊಡಂ ಮುಂದಾಗುವ ವೃತ್ತಾಂತವನಾದೊಡಂ ಈಗಳ್ ವೃತ್ಯಕ್ಷವಾಗಿ ಕಾಣುವಂತೆ ಪೇಳ್ವುದೇ ಭಾವಿಕಾಲಂಕಾರಮಪ್ಪುದು (ಚಚಂ. ೩೦೯ ಪ್ರತಿ). [ಸಂ.]

ಭಾವಿಕೇವಲಿ (ನಾ)- [ಜೈನ] ಮುಂದೆ ಕೇವಲಿಯಾಗಲಿರುವವನು : ಸುಧರ್ಮಶ್ರುತಕೇವಳಿಗಳು ಜಂಬೂನಾಮ ಭಾವಿಕೇವಲಿ[ಜಾಹಂ. ೪] ಗ್ಳ್ಗೆ ಪೇಬ್ದ ತ್ರಿಷಷ್ಟಿಲಕ್ಷಣಮಹಾಪುರಾಣಮೊಳಾದಿಪುರಾಣಕಥಾನಿಬಂಧಂ (ಕಾತ್ರಂಕ. ೪). [ಸಂ. ಭಾವಿಕೇವಲಿನ್]

ಭಾವಿತ (ಗು)- ೧. ಸೃಷ್ಟಿಸಿದ ; ಉಂಟುಮಾಡಿದ ; ಉತ್ಪಾದಿಸಿದ. ೨. ಪಡೆದ ; ಹೊಂದಿದ ; ಪ್ರಾಪ್ತವಾದ. ೩. ತೋರ್ಪಡಿಸಿದ ; ಪ್ರದರ್ಶಿಸಿದ. ೪. ಊಹಿಸಿದ; ಕಲ್ಪಿಸಿದ. ೫. ಒಪ್ಪಿರುವ ; ಅಂಗೀಕೃತ. ೬. ಚಿಂತಿಸಿದ; ವಿಚಾರಮಾಡಿದ; ಧ್ಯಾನಮಾಡಿದ. ೭. ಸ್ಫೂರ್ತಿಗೊಂಡ; ಉತ್ತೇಜಿತವಾದ. ೮. (ದೃವದಲ್ಲಿ) ನೆನೆಯಿಸಿದ; ನೆನಪಾಡಿದ. ೯. ಮಿಶ್ರಿತವಾದ; ಬೆರೆತ. ೧೦. ವಾಸನೆ ಕಟ್ಟಿದ; ಸುವಾಸಿತ. (ನಾ). ೧೧. ಪಡೆಮದು ; ಪ್ರಾಪ್ತವಾದುದು : "ಲಬ್ಧಂ, ಪ್ರಾಪ್ತಂ, ವಿನ್ನಂ, ಭಾವಿತಂ, ಆಸಾದಿತಂ, ಭೂತಾ – ಈ ಹೊಂದಲ್ಪಟ್ಟಿರುವುದು, ಪಡೆಯಲ್ಪಟ್ಟಿರುವುದು, ಆಗಿ ಬಂದಿರುವುದು" (ಕಣ್ಣಂಚಿ. ೫೫೦). ೧೨. ವಾಸನೆ ಕಟ್ಟಿದುದು ; ಸುವಾಸನೆ ಗೊಳಿಸಿದುದು: "ಭಾವಿತಂ, ವಾಸಿತಾ – ೨ ವಾಸನೇ ಕಟ್ಟಿದ ಮನ್ಮುವಿನ ಪೆಸರುಗಳು" (ಕಣ್ಣಂಚಿ. ೫೦೯). ೧೩. [ಗಣಿತ] ಗುಣಾಕಾರ ಮಾಡಿ ಪಡೆದ ಸಂಖ್ಯೆ; ಗುಣಲಬ್ಧ. [ಸಂ.]

ಭಾವಿತಾತ್ಮ (ನಾ)- ಸ್ಫೂರ್ತಿಗೊಂಡ ಮನಸ್ಸುಳ್ಳವನು ; ಪರಿಪಕ್ವವಾದ ಮನಸ್ಸುಳ್ಳವನು ; ವಿಚಾರಶೀಲ : ಅಂತು ಭಾವಿತಾತ್ಮನ ಧ್ಯಾತ್ಮವಿಚಾರದನಾಗಿ ಪರಮಾತ್ಮನೊಳ್ ಕೂಡಿದಂ (ಶಂಕಥಾ. ೦೨-೫೯ ಪ) ; ರಾಜರಾಜಂ ನದೀತನೂಜನಂ ಮಾಣಿಸಿ ನೀವಪ್ಪೊಡೆ ವಿದಿತವೇದಿತಜ್ಞರುಂ ಭಾವಿತಾತ್ಮರುಮಾಗಿರ್ದ ಜ್ಞಾನಿಗಳ್ ಅಂತೆ ನಗಬಲಾಗದೆಂದು ಅಜ್ಞಪಿದೊಡೆ (ಗಾಹಮು. ೩-೪೪ ಪ) ; ದೃಢಚಿತ್ತನಾಗಿ ಭಾವಿಸಿದನೊ ಭಾವಿತಾತ್ಮನೆನೆ ಪೋಡಶಭಾವನೆಯಿಂ ಮುನೀಶ್ವರಂ (ಕುಶಿ. ೦೦-೫೬). [ಸಂ. ಭಾವಿತಾತ್ಮನ್]

ಭಾವಿಸು (ಕ್ರಿ). ೧. ತಿಳಿ ; ಗೊತ್ತುಪಡಿಸಿಕೊಳ್ಳು : ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಳಯವಿಲೀನವಿಶದವಿಷಯವಿಶೇಷಂ (ಕಜಾ. ೦-೫೬) ; ತನ್ನ ಮನಮುಮನರ್ದೆಯುಮನುಜೆ ನೆಜ್ಜಿವಿಡಿದಿರ್ದಪೂರ್ವರೂಪೆಯು ರೂಪುಮಂ ಮನದೊಳೆ ಬಗೆದು ಭಾವಿಸಿ ಮತ್ತಮಿಂತೆಂದಂ (ಪಂಕಥಾ. ೪-೬೦ ಪ) ; ಡನ್ಯೆಯದೊಂದು ಭಕ್ತಿಯಂ ಭಾವಿಸಿ ವೀನಿದಂ ಸ್ವಪತಿ ಕೈಕೊಳವೇಬ್ದುದು ರಾಜಕೀರಮಂ (ಕಾಜಂಥಾ. ೫೬). ೨. ಆಲೋಚಿಸು : ವಿಚಾರಮಾಡು : ಮಹಾಹಾರಂಬೋಲ್ ಸೊಗಯಿಸುವ ಮಹಸವಿರಚನೆ ವೆಗಬ್ಗುಂ ಭಾವಿಸುವೊಡದಱ ಪೆಂಪತಿಸಾಲಭಂ (ಕಜಾ. ೦-೦೩) ; ಆಗಮಮಂ ಪವಿವಿಡಿಗೆಯ್ಯುತ್ತುವರ್ಥಮಂ ಭಾವಿಸುತ್ತಂ (ಪತ್ಯಾಂ. ೫೬-೩) ; ಸೆಟ್ಟಿನೆ ಮನದೊಳ್ ಭಾವಿಪೊಡಸಾರಮಿ ಸಂಸಾರಂ (೦೩೪. ೨-೫೬). ೩. ನೆನಪು ಮಾಡಿಕೊಳ್ಳು ; ಜ್ಞಾಪಿಸಿಕೊಳ್ಳು ; ಸ್ಮರಿಸು : ನಭೋಮಧ್ಯದೊಳಿರ್ದಾನಂದೆ ಪೇಬ್ದನ್ನಯ ನುಡಿಯನದು ಭಾವಿಪಂಧೋಜನೇತ್ರೇ (ಕಾಜಂಯಾ. ೬೯೦) ; ತಿಂಗಳಾರಕೆ ಬಹನೆಂಬ ಭಾವೆಯುಂ ಭಾವಿಸುತೆ (ಕಾಶ್ಯಾಪ. ೫೫-೦೫೬೪). ೪. ಧ್ಯಾನಿಸು ;

ಅನುಸಂಧಾನ ಮಾಡು : ಪುಣ್ಯೋತ್ಪಿಂದಮೋರಂತೆ ಭಾವಿಸಿ ಕಾಂತನ್ಮಯನಾಗಿ ಶಚ್ಚರಿತಮಂ ಕಾವ್ಯಂಗಳೊಳ್ಮಾಡೆ ಬಣ್ಣಿಸಿ ವೇಲ್ಮಾತಿನ ಕರ್ಮನಿರ್ದರೆಯನಂತಿಂತುತನೆಲ್ಬರ್ಕುಮೇ (ಅಂತ. ೦-೭೬) ; ಧರೆಯಂ ನೋಯಿಸದಿರ್ ಜಿನೇಶ್ವರಪದಾಂಭೋಜಾತಮಂ ಭಾವಿಸುತ್ತಿರು (ಪಮಾಕ್ಕು. ೪-೩೭) ; ಜೌತಿಯ ದಿನದೊಳು ಬೆನಕನ ಭಾವಿಸೆ ನನ್ನ ಬಳಿಗೊಂದು ಮೂಷಿಕ ಧಾವಿಸೆ (ಗಣೇಶ. ೦-೦೭). ೫. ಗಮನಿಸಿದು ; ಲಕ್ಷ್ಯಕೊಡು ; ಆಸಕ್ತಿಯಿಡು : ಧೂವಲ್ಲಭಸೋತ್ಕ್ಷೇಪಭೂವಿಲಸಿತದತ್ಪತಾಚಿನಾ ದೇಶಮಿದಂ ಭಾವಿಸಮಂದತ್ರಿಮಧುರೋದ್ಭಾವಿಪಗಂಭೀರನಾದದಿಂ ಬಾಜಿಸಿದಂ (ಆದಿ. ೦೪-೭೬) ; ಕೊಳ್ ನಿನ್ನ ನಜ್ಜನ ಪಾಂಡವರ ಕಲಿಗಳವೆಯೆಂದು ದುರ್ಯೋಧನನ ಮುಂದಿಕ್ಕಿದೊಡಾ ಮಹಾಸುಭಾವನಾ ಕರಿಗಳಂ ನೀಡುಂ ಭಾವಿಸಿ ನೋಡಿ (ಗಣಾಮು. ೯-೩೨ ಪ) ; ಇರದದಸಬ್ಬರಿಂದಡರೆ ಭಾವಿಸಿ ಭಾವಿಸಿ ನೋಡಿ ನೋಡಿ ಚಿಚ್ಚರಮವನೀತಳಂ ತಸಗೆ ಸಾರ್ದಪೊಲೊರ್ವೋದಲುಂಕ್ಕೆ ಪೋಗ್ಕಿದಂ (ಪಮಾಕ್ಕು. ೩-೦೦). ೬. ಗೌರವಿಸು ; ಆದರಿಸು : ಕರ್ಪೂರಿಕೆಯು . . . ಪರವಾಪನದತ್ರಸನ್ನು ಸ್ನಾನಾದಿ ಉಪಚಾರಗಳಿಂದ ಭಾವಿಸಿದನು (ಕಸಂ. ೦೪೨). ೭. ಮಾಡು; ರಚಿಸು; ನಿರ್ಮಿಸು : ಕರಿಯ ನೆಯ್ದುಲ ಕವಿನೊಳ್ ಭಾವಿಪ ನೂಪುರಮುಮುಂ . . . ಕೊಟ್ಟು (ಕಂಚಣ. ೩-೬ ಪ) ; ಬೆಗುವ ಕವ್ಮಡಿಯ ತೀವುವ ಕಳಶದ ಭಾವಿಸುವ ಬ್ಬಾವುರದ . . . ಕೋಳಾಹಳಮೆಸೆದು (ಅಪಂಪ. ೪-೫೯ ಪ). ೮. ವಾಸನೆ ಕಟ್ಟು ; ಭಾವನೆ ಕೊಡು : ವಿಲಾಸೀವೀಚರಿಕಾ ಬಂಧಂಗಳಂ ಪೊಸತ್ತು ಮಲ್ಲಿಗೆಯೊಳ್ ಭಾವಿಸಿ ಧೂಪದೊಳ್ ಪೊರೆದು (ಕಂಚಣ. ೪-೦೦) ; ಹಿಮರೋಚಿಃ–ಕಳಿಕಾಕದಂಬಕಮನಿಂದಂ ಶಿರ್ದಿ ನೇಳ್ಪಿಸಿ ಕುಂಕುಮದಿಂ ಭಾವಿಸಿ (ಆದಿಪು. ೪-೦೪). ೯. ನೆನೆಯಿಸು ; ನೆನೆಹಾಕು ; ಅರಿದಪಮೂತ್ರದೊಳೊಂದಿರೆ ಸುರಧಾರಮನೆಚ್ಚದಂದು ವೀಗಳೆಯುದಿನಂ ಸುರಭಿಯಾ ಜಳದೊಳ್ ಭಾವಿಸಿ ಪರೀಕಕಿಯನೆಪ್ಪಿ ಧದಂಡಂಗಳ್ ಕಿಡುಗುಂ (ಮೋಕಮಾಪ. ೪-೬೫) ; ಮಾವಿನ ಬಿತ್ತಳೆಯ ಕರಿಕರ್ಕರೆಯಿನಿತಂ ಭಾವಿಸುವುದಕ್ಕಿಗಚ್ಚಿಂ (ಕಜ್ಜಾ. ೩-೦೩).

[(ಸಂ. ಭಾವನಾ) + — ಇಸು]

ಭಾವಿ (ನಾ). (ಉಕ) ಬಂಧು ; ಭ್ರಾತೃ ; ಅಣ್ಣ ಅಥವಾ ತಮ್ಮ : ಭಾವಿ, ಭಾವೂರಾಯ ರಾಮಾ ! ಏಕೆ ಓಗೊಡಲಾರೆಯೋ ? (ಜಾಮಣಾ. ೫೫-೦೩). 'ಭಾವೂರಾಯ' ಪರಾ.

[← ಮರಾ. ಭಾಉ, ಭಾವು./ಸಂ. ಭ್ರಾತೃ./ಪ್ರಾ. ಭಾಉ]

ಭಾವುಕ (ಗು). ೧. ಆಗುವ ; ಇರುವ. ೨. ರಸಾಸ್ವಾದನೆ ಮಾಡಬಲ್ಲ ; ರಸಿಕನಾದ ; ಸಹೃದಯನಾದ ; ರಸಜ್ಞನಾದ. ೩. ಆತ್ಮೀಯವಾದ ; ಪ್ರೀತಿಪೂರ್ವಕವಾದ ; ಹಾರ್ದಿಕವಾದ: ಅಂತಹ ಒಂದು ಭಾವುಕಪ್ರೇಮ ತನ್ನ ಮತ್ತು ಇಂದುಮತಿಯಲ್ಲಿ ಇದೆ (ಅಪಜ. ೨೧೩). ೪. ಸುಖಿಕರವಾದ ; ಒಳ್ಳೆಯ ; ಮಂಗಳಕರವಾದ. (ನಾ). ೫. ಮಂಗಳ ; ಶುಭ ; ಶ್ರೇಯಸ್ಸು : "ಶ್ವಃ(ಸ್ವ)ಶ್ರೇಯಸಂ, ಕಲ್ಯಾಣಂ, ಶ್ರೈವತೀಯಂ, ಶಿವಂ, ಶುಭಂ, ಭವಿಕಂ, ಭಾವುಕಂ, ಶ್ರೇಯಃ, ಭವ್ಯಂ ಭದ್ರಂ, ಮಂಗಳಂ—ಈ ೧೧ ಒಳ್ಳಿತರ್ಕ ಪೆಸರ್" (ಅಚಾಮು. ೫೦-೦೩೨); "ಶ್ವಶ್ರೇಯಸಂ . . . ಭಾವುಕಂ, ಭವುಕಂ, ಭವ್ಯಂ, ಶುಭಲಂ, ಕ್ಷೇಮಂ, ಶಸ್ಯಂ—ಈ ೧೨ ಶುಭದ ಪೆಸರುಗಳು" (ನಿಘಂ. ೦೪. ೪೫). ೬. ರಸಿಕ; ಸಹೃದಯ; ರಸಜ್ಞ : ಪ್ರಕಟಶರಂ ಶಬ್ದಂ ಶಾಬ್ದಿಕಸಮ್ಮತಮರ್ಥದೃಷ್ಟಿ ಮನಃಕೌತುಕಜನಕಂ ಭಾವಂ ಭಾವುಕಭಾವ್ಯಂ ಕಾವ್ಯತತಿಯೊಳ್ಗಗ್ಗಳ ನಿನ್ನಾ (ಕಂದ್ರಕೃ. ೦-೫೩); ಬಲ್ಲವರು ಭಾವುಕರು ಭಕ್ತಿಯು ಬಲ್ಲಿದರು ಲಾಲಿಸುವುದೀ ಪ್ರಭುಲಿಂಗಲೀಲೆಯಲಿ (ಕ್ರಕುಚ. ೦-೪). ೭. ಸಂಪ್ರದಾಯ ಶ್ರದ್ಧೆಯುಳ್ಳ ವ್ಯಕ್ತಿ: ಆಳಿಲಿನ ದೆನ್ನ ಮೇಲೆ ಮೂರು ಗೆರೆಗಳು ಬಂದಿವೆಯೆಂದು ಭಾವುಕರು ನಂಬುತ್ತಾರೆ (ಕಂಚಚ. I. ೬-೪೪); ಭಾವುಕರ ಜಾಲಿಗೆ ದುಷ್ಟರು ಕಲಿಯುಗದಲ್ಲಿ ಹುಟ್ಟಿದ ರಾಕ್ಷಸಸಂತಾನವೇ ಆಗಿದ್ದರು (ಜಾಕ್ಕೋಚ. ೨); ತುಂಬ ಭಕ್ತರೂ ಭಾವುಕರೂ ಇರುವ ನಾಡಿನಲ್ಲಿ ಒಂಟಿಒಂಟಿಯಾಗಿ ಯಾತ್ರ ಮಾಡಲಾರದ ಜನರು . . . ಯಾತ್ರಾಸ್ಪೆಶಲ್ ಬಂಡಿಗಳನ್ನು ನುಗ್ಗುಕ್ತಾರೆ (ಆಚಾ. ೨). ೮. ಅಕ್ಕ ಅಥವಾ ತಂಗಿಯ ಗಂಡ ; ಭಾವ : "ಒಡಹುಟ್ಟಿದಳ ಮದವನಂ ಭಾವಕನೆಂಬುದು" (ಕಬಾಮು. ೦೬-೧೯). [ಸಂ.]

ಭಾವುಕತೆ (ನಾ). ಭಾವನಾಮಯತೆ : ಪುತ್ರಿನ್ನೇನು ? ಭಾವುಕತೆಗೂ ಮಿಶಾರಕ್ಕೂ ನಡೆಯುವ ಸಂಘರ್ಷ (ಕಚಸಿ. ೨೬); ರೂಪುಹೊದನು . . . ಭಾವುಕತೆಯಿಂದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದ (ಕಾಮಾಗ್ರ. ೦೩೦).

[ಸಂ. ಭಾವುಕತಾ]

ಭಾವುಕಸಾಹಿತ್ಯ (ನಾ). ರಸಪ್ರಧಾನವಾದ ಸಾಹಿತ್ಯ ; ಕೇವಲ ಆನಂದವನ್ನುಂಟುಮಾಡುವ ಸಾಹಿತ್ಯ : ಮಾಪಾಯುದ್ಧದಿಂದಾದ . . . ರಾಷ್ಟ್ರೀಯಜಾಗೃತಿಗಳಿಂದಾಗಿ ಭಾವುಕಸಾಹಿತ್ಯಸೃಷ್ಟಿಗಿಂತ ಜನಜಾಗೃತಿಯುಂಟುಮಾಡುವ ಸಾಹಿತ್ಯಸೃಷ್ಟಿ ಅಗತ್ಯವೆಂಬ ಮನೋಭಾವ ಸಾಹಿತಿಗಳಲ್ಲಿ ಉಂಟಾಯಿತು (ಜಾಚರ. ೧೬೦). [ಸಂ.]

ಭಾವುಕಿ (ನಾ). ಸಹೃದಯವುಳ್ಳವಳು; ರಸಜ್ಞೆ : ವಾಸುದೇವನನ್ನು ಹಡೆದ ವಸುದೇವನ ದೇವಕಿ ಭಗವಂತನ ಲೀಲೆಗಾಗಿ ದೇಹಮೆತ್ತ ಭಾವುಕಿ (ಕಗೀಮ. ೨೧೬-೬). [ಭಾವುಕ + —ಇ]

ಭಾವೂಕಿ (ನಾ). = ಭಾವುಕಿ : ಭಾವಕಿ ನೀಂ ಪೇಳ್ದುದಿನಾ ವನದೊಳಗಿರ್ದಂ ತದುರ್ವಿಪಚಿತಂ ಜಾವಜಚರಿತಂ ಬರಲೆಲ್ಲಾ ವಿವರಮನಳ್ದಂ (ಕಾಕೃಶಿ. ೭-೩೨). [ಭಾವುಕ + —ಇ]

ಭಾವೂರಾಯ (ನಾ). (ಉಕ) ಪ್ರೀತಿಯಿಂದ ಕರೆಯುವಾಗ ಬಳಸುವ ಶಬ್ದ : ಬಂಧು ; ಅಣ್ಣ ಅಥವಾ ತಮ್ಮ : ಭಾವಿ ಭಾವೂರಾಯ ! ಏಕೆ ಓಗೊಡಲಾರೆಯೋ ? (ಜಾಮಣಾ. ೫೫-೦೩). [< ಭಾವು + ರಾಯ]

ಭಾವೆ (ನಾ). ೧. ಬೆಲುವೆಯಾದ ಹೆಣ್ಣು ; ಸುಂದರಸ್ತ್ರೀ : ಭಾವ ಭಾವಿತನೂಭವಾನುಕ್ರಮ ಪ್ರಭವಭಾವಂಗಳಂ ಭಾವಿಸಿ ಪಲುಂಬ ಪಂಬಲಿಯುಮಂ (ಸಂದ್ರಕೃ. ೩-೩೦ ಪ); ಭಾವೆ ನೂಕದಿರೆನ್ನ ವರರಾಜೀವಮುಖಿ ಕೃಪೆಮಾಡು (ಕುಣ್ಮಾ. ೫-೩೬); ಬಿಟ್ಟ ಬಲ್ಮೊಲೆಯ ಭಾವೆಯರಾಯತಿ ಮತ್ತು ಪುಟ್ಟಣದಿಂ ಪೊಜಿಮಟ್ಟು (ಮೋಕಕ. ೫-೩೯); ದೇವದುಂದುಭಿ ಮೊಳಗೆ ಸ್ವರ್ಗದ ಭಾವೆಯರು ನರ್ತಿಸಲು (ಕಾಗಗಯ. ೫೭-೧೬). ೨. [ಕಾವ್ಯಮಿ] ಚಿತ್ರಕಾವ್ಯಕ್ಕೆ ಸೇರಿದ ಪ್ರಹೇಳಿಕೆಗಳಲ್ಲಿ ಒಂದು : ಭಾವೆಯುಂ ಸುಸುಳಂ . . . ಕೇವಲಮವಜ ಭೇದಮಂ ಸುಸಮಸ್ತಮಂ . . . ಅವಯವದೇಕೆ ಕಳೆಯಿವೇಬ್ದಿಂ ಪ್ರಿಯಮುಂ (ಕಂಚಣ. ೩-೦೧೪).

[< ಸಂ. ಭಾಮಾ]

ಭಾವೇಂದ್ರಿಯ (ನಾ). [ಜೈನ] ದ್ರವ್ಯೇಂದ್ರಿಯ ಮತ್ತು ಭಾವೇಂದ್ರಿಯ ಎಂಬ ಎರಡು ಬಗೆಯ ಇಂದ್ರಿಯಗಳಲ್ಲಿ ಒಂದು; ☞ ಇವರಲ್ಲಿ ಎರಡು ವಿಧ: "ಲಬ್ಧಿ ಮತ್ತು ಉಪಯೋಗ (ಜ್ಞಾನಾವರಣೀಯಕರ್ಮದ ಕ್ಷಯೋಪಶಮವಿಶೇಷ ಮತ್ತು ಆತ್ಮನು ದ್ರವ್ಯೇಂದ್ರಿಯದಿಂದಾಗಿರುವ ನಿರ್ವೃತ್ತಿಯ ಕಡೆಗೆ ಪ್ರವರ್ತಿತನಾದಾಗ ಅದರಿಂದಾಗುವ ಆತ್ಮನ ಪರಿಣಾಮ)" (ಕ್ಷಕಚೂ. ೦೧೩) : ದ್ರವ್ಯೇಂದ್ರಿಯಮುಂ ಭಾವೇಂದ್ರಿಯಮುಂ ಎಂದಿಂತು ಇಂದ್ರಿಯಂಗಳ್ಕೈಜಂ (ಕಕ್ಷಕ್ಷ. ೧೩) ; ಮತಿಜ್ಞಾನಾವರಣಕರ್ಮವು ಕಡಿಮೆ ಆದಂತೆ ಆತ್ಮನಲ್ಲಿ ಉಂಟಾಗುವ ವಿಶುದ್ಧಿಗೆ ಈ ವಿಶೆ ಹಶುದ್ಧಿಯಿಂದ ಉತ್ಪನ್ನವಾಗುವ ಉಪಯೋಗಾತ್ಮಕ ಜ್ಞಾನಕ್ಕೆ ಭಾವೇಂದ್ರಿಯವೆಂದು ಕರೆಯಲಾಗುತ್ತದೆ (ಕ್ಷಕಚೂ. ೨೧೩). [ಸಂ.]

ಭಾವೋದಯ (ನಾ). ೧. ಸುಖ, ದುಃಖ ಮೊದಲಾದ ಭಾವಗಳ ಉತ್ಪತ್ತಿ.–ಮುಟ್ಟು. ೨. [ಕಾವ್ಯಮಿ] ಧ್ವನಿಯಲ್ಲಿ ಒಂದು ಭೇದ ;

ಯಾವುದಾದರೂ ಒಂದು ಸಂಚಾರಿಭಾವವು ಹೊಸದಾಗಿ ಹುಟ್ಟಿ ಅದು ಕಾವ್ಯದಲ್ಲಿ ಪ್ರಧಾನವಾಗಿ ವ್ಯಂಗ್ಯವಾಗಿ ತೋರುವುದು : ಆಸ್ವಾದ್ಯವಾಗುವ ಭಾವದಲ್ಲಿ ಆಲಂಕಾರಿಕರು—ಭಾವೋದಯ, ಭಾವಶಾಂತಿ ಭಾವಸಂಧಿ, ಭಾವಶಬಲತೆ ಎಂಬ ನಾಲ್ಕು ದಶೆಗಳನ್ನು ವಿಂಗಡಿಸುತ್ತಾರೆ . . . ಹೊಸದಾಗಿ ಒಂದು ಭಾವ ಉದಿಸುವುದೇ ಭಾವೋದಯ (ಶಾಕುಚಾ. ೪೫); ಒಂದು ಭಾವವು . . . ಹೊಸದಾಗಿ ಹುಟ್ಟಿತು ಎಂದು ವರ್ಣಿಸಿದರೆ ಅದಕ್ಕೆ 'ಭಾವೋದಯ'ವೆಂದೂ . . . ಪೆಸರು (ಕೃಚಂ. ೨೦೯). ೩. ಒಂದು ಅಲಂಕಾರ : ಹೊಸದಾಗಿ ಹುಟ್ಟುವ ಒಂದು ಭಾವವು ರಸಕ್ಕಾಗಲಿ, ಭಾವಕ್ಕಾಗಲಿ ಅಂಗವಾಗುವುದು : ಒಂದು ರಸಕ್ಕೆ ಮತ್ತೊಂದು ಭಾವಕ್ಕಾದೊಡಂ ಭಾವೋದಯಮಂಗಮಾಗೆಯದು ಭಾವೋದಯಾಲಂಕಾರಮೆನಿಪುದು (ಅಕ್ಷತಿ. ೦೮೨-೫೦). [ಸಂ.]

ಭಾವೋದ್ದೀಪನ (ನಾ). ಮನಸ್ಸಿನ ಭಾವನೆಗಳನ್ನು ಉಜ್ವಲಗೊಳಿಸುವುದು.—ಶೀಘ್ರಗೊಳಿಸುವುದು : ಇಲ್ಲಿ 'ಭಾವ' ಐಷ್ಟಪಟ್ಟಾಗಿಯೂ ಲೋಕಭಾವದ ಅತಿಶಯದ ರೂಪವಲ್ಲದಿದ್ದ ಪಕ್ಷದಲ್ಲಿ ಅದಕ್ಕೆ ಹೃದಯಸ್ಥ ಭಾವೋದ್ದೀಪನಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ (ಶಾಂಪ್ರ. ೭೪). [ಸಂ.]

ಭಾವೋದ್ಭವ (ನಾ). ೧. ಮನಸ್ಸಿನಲ್ಲಿ ಹುಟ್ಟಿದವನು ; ಮನಸಿಜ ; ಕಾಮ ; ಮನ್ಮಥ : ಸಪಯೌವನದೊಳ್ಗುಣದೋಷವಿಚಾರಮಾನಿತು ಮಾಡಲೀಯದ ಭಾವೋದ್ಭವನಿಂ ಪರವಶೆಯಾದೆಂ (ಶಾದಂಪು. ೭೧೬); ಕುಸುಮಾಸ್ತ್ರಾವಳಿಯಿಂದೋಲ್ಕೆಸಿದ ಭಾವೋದ್ಭವನೀಗೆ ಸಮಗೆ ಸುಖ ಸಂಪದಮಂ (ಕುಪಡಿ ೦-೦); ಅವಗ್ಗೆಗ್ಗಸೂನು ಭಾವೋದ್ಭವಮೂರ್ತಿ ಸುಧಾಂಶುವಿಶದತೀರ್ತಿ ಜಯಶ್ರೀದೇವಂ. . . ಸಗರಮಾರ್ಪ್ಪಣ್ಣಿನ್ನಿಪಂ (ಶಾಇಪ. XX. ೧೭-೦೧ ; ೨೦೧೨). ೨. ತನ್ನ ಇಚ್ಛೆಯಿಂದಲೇ ಹುಟ್ಟಿರುವವನು ; ಸ್ವಯಂಭೂ ; ಬ್ರಹ್ಮ ; ವಿಧಿ : ಮರಣಂ ಲಗ್ನಭವಂಗೆ ಸಂಭವಿಸುಗುಂ ಭಾವೋದ್ಭವಂ ಕಾವುದಂ (ಶಾಕಪ. ೦-೦೨). [ಸಂ.]

ಭಾವೋದ್ವಿಗ್ನತೆ (ನಾ). ಮನಸ್ಸಿನ ಕಳವಳ ; –ವ್ಯಾಕುಲತೆ : ಮುಪ್ಪೋವ ಅವನ ಭಾವೋದ್ವಿಗ್ನತೆಯನ್ನು ಗಮನಿಸಿ, ಅವನನ್ನು ಗುರುತಿಸಿದಳು (ಕ್ಷಚಂ. ೦೧೦). [ಸಂ. ಭಾವೋದ್ವಿಗ್ನತಾ]

ಭಾವೋನ್ಮತ್ತ (ನಾ). ಭಾವನೆಯಲ್ಲಿ ಪರವಶನಾದವನು: ಕವಿ ಉನ್ಮತ್ತ। ಭಾವೋನ್ಮತ್ತ ! (ಶಾಚಿ. ೧೯-೦೦). [ಸಂ.]

ಭಾವೋನ್ಮೇಷ (ನಾ). ಭಾವನೆಗಳು ಹೊರಹೊಮ್ಮುವಿಕೆ : ಮನುಷ್ಯ ಹೃದಯವಲ್ಲಿನ ಭಾವೋನ್ಮೇಷಗಳನ್ನು . . . ಅಂಗವಿನ್ಯಾಸ ಭಾವಾಭಿನಯಗಳ ಮೂಲಕ ತೋರ್ಪಡಿಸುವುದನ್ನು ಕಲಿತ (ಶಾಪ್ರ. ೨೨೮). [ಸಂ.]

ಭಾವ್ಯ (ಗು). ೧. ಜರುಗಲಿರುವ ; ನಡೆಯಲಿರುವ. ೨. ಯೋಚಿಸಲು ತಕ್ಕುದಾದ ; ಊಹಿಸಲು ಯೋಗ್ಯವಾದ. (ನಾ). ೩. ಆಗತಕ್ಕುದು ; ಆಗಬೇಕಾದುದು : ಸುಸ್ಥಿರಂ ಶ್ರೀವಿಭವಂ ಜೀವಕ್ಕೆ ಸಮನಿಸುಂ ದುದ್ಭಾವ್ಯಂ ಶದ್ಭವಿತೆಯೆಂಬ ಸುದಿಯುಳ್ಳುದಱಿಂ (ಶಾಕೃತಿ. ೬-೨). ೪. ಸವಿಯಲ್ಬಡತಕ್ಕುದು ; ಆಸ್ವಾದ್ಯವಾದುದು : ಭಾವಂ ಭಾವಕ ಭಾವ್ಯಂ ಕಾವ್ಯತತಿಯೊಳಗ್ಗಳ ನಿನ್ನಾ (ಶಂತ್ರತಿ. ೦-೫೮) ; ರಾಮಾಯಣ ಕಾವ್ಯವು ಅಜರ ಅಮರ ಧರಯೊಳು ಬಹುಭಾವ್ಯನೆ! (ಶ್ರೀಂಕಕೃ. ೫೪-೦೯). ೫. [ಕಾವ್ಯವಿ] ಪ್ರಹೇಳಿಕೆಗಳಲ್ಲಿ ಒಂದು ವಿಧ : ಸುಸುರೊಸರ್ಸುದಿ ಭಾವ್ಯ [ಶಾಣಿ. ಪೆ] ಮನಕ್ಕೆಸೆವ ಸ್ವಪ್ನಾರ್ಥಮುಬ್ಬುವ ನಾಮಾಂತರಿತಂ ಕುಸುರಿಯ ನುಡಿಯೆಂಬಿವ ಭಾವಿಸೆ ಬೇಳಕೆಗಳೊಳ್ ಪೇಳ್ದ ಭೇದಮಾಪತ್ಯಂ (ಕಾವ್ಯಸ. ೫೧೧). [ಸಂ.]

ಭಾಷಣ (ನಾ). ೧. (ಸಭೆ ಮೊದಲಾದ ಕಡೆಗಳಲ್ಲಿ) ಮಾತನಾಡುವುದು ; ಉಪನ್ಯಾಸ : ವೇದಿಕೆಯ ಮೇಲೆ ನಿಂತು ಭಾಷಣ ಮಾಡಲು ನನಗೆ ಸುಸಮಯ ಕೊಟ್ಟದ್ದಕ್ಕಾಗಿ . . . ವಂದನೆಗಳನ್ನರ್ಪಿಸುತ್ತೇನೆ (ಶಾಹುಳ. ೧೩) ; "ಶ್ರೀ" ಯವರನ್ನು ಸ್ಮರಿಸಿಕೊಂಡಾಗ ಭಾಷಣದ ಸ್ವರೂಪ . . . ಬೇರೆಯಾಗಿ, ನನ್ನ ಸಂದೇಶ ಶಿಥಿಲವಾಗುತ್ತದೆ (ಕಬಾಸಾ. XIV, ೨೦೦೪). ೨. ಮಾತು ; ಉಕ್ತಿ ; ಸಲ್ಲಾಪ ; ಸಂಭಾಷಣೆ : "ಮಿಥಃ, ಭಾಷಣಂ—ಪ್ರೀತಿಯಿಂದ ಅನ್ಯೋನ್ಯವಾಗಿ ಮಾತಾಡುವುದಕ್ಕೆ ಹೆಸರು" (ಶಬ್ದಂಚಿ. ೫೪). [ಸಂ.]

ಭಾಷಣಕಲೆ (ವಾ). (ಸಭೆ ಮುಂತಾದ ಕಡೆಗಳಲ್ಲಿ) ಮಾತನಾಡುವ ಚಾತುರ್ಯ : ಭಾಷಣಕಲೆ ಎಲ್ಲ ಭಾಷಣಕಾರರಿಗೂ ಸಿದ್ಧಿಸಿರುವುದಿಲ್ಲ (ಸಂಪ್ರ). [ಸಂ. ಭಾಷಣಕಲಾ]

ಭಾಷಣಕಾರ (ನಾ). ಭಾಷಣ ಮಾಡುವವನು ; ಉಪನ್ಯಾಸಕ : ಸಭಾಂಗಣದ ಮಧ್ಯ ಭಾಷಣಕಾರರಿಗಾಗಿ ತೋಳುಳ್ಳ ಕುರ್ಚಿಯೊಂದನ್ನಿರಿಸಲಾಗಿತ್ತು (ಕ್ಷಚಂ. ೭೧೩) ; ಅವನು ಭಾಷಣಕಾರರಂತೆ ಒಂದೇ ರಾಗದಲ್ಲಿ ದೀಸದ ಬರುವಂತೆ ಹೇಳುತ್ತಿದ್ದಾಗ (ಶಾಕಚಿ. ೮೨). [ಸಂ.]

ಭಾಷಾಂಗ (ನಾ). [ಸಂಗೀತ] ರಾಗಗಳಲ್ಲಿ ಒಂದು ಪ್ರಭೇದ : ಲಿಂಗವ ನೋಂಪಿದ ಮನಕ್ಕೆ ಲಿಂಗಾಭಿಮಾನವಾವುದೆಂದಡೆ ಶೇಷವ ಅದಸಾನ ದಂತಿರಬೇಕು ಶ್ವಾಸನ ವಾಸದ ಭಾಷಾಂಗದಂತಿರಬೇಕು (ಷಡಸ್ಥಲ. ೦೫೫-೭೦೫) ; ಸರಸಭಾಷಾಂಗಕ್ರಿಯಾನೋತ್ಕರದ ನಾಟಕ ಗದ್ಯ ಪದ್ಯ ವಿಸರ ಮಧುರಗೀತೋಕ್ತಿಯಂ . . . ಸವಿಯಾಳ್ದರಿತೆಯುಮೊರೆದೊರೆದು ವಿರಚಿಪರು ಭಕ್ತಸಭಾಂತರಂಗಗಳೊಳು (ಪಷ್ಟ. ೫೫-೫೦) ; ಭಾಷಾಂಗರಾಗ — ಜನಕರಾಗಗಳಲ್ಲಿಲ್ಲದ ಅನ್ಯಸ್ವರಗಳನ್ನು ತಮ್ಮ ಆರೋಹಣದಲ್ಲಾಗಲೀ, ಅವರೋಹಣದಲ್ಲಾಗಲೀ ಅಥವಾ ವಿಶೇಷ ಪ್ರಯೋಗಗಳಲ್ಲಾಗಲಿ ಹೊಂದುವ ರಾಗಗಳು (ಸಂಗೀಶ. ೭೬). [ಸಂ.]

ಭಾಷಾಂಗರಾಪಿ (ನಾ). [ಸಂಗೀಶ] ಒಂದು ರಾಗದ ಹೆಸರು : ಕರ್ನಾಟಕಸಂಗೀತದ ಲಕ್ಷ್ಯದಲ್ಲಿ ಮೂರು ಬಗೆಯ ಕಾಪಿರಾಗಗಳಿವೆ . . . ಮೂರನೆಯದು ಭಾಷಾಂಗಕಾಪಿರಾಗ (ಸಂಗೀಶ. ೩೦).

[ಭಾಷಾಂಗ + ಕಾಪಿ]

ಭಾಷಾಂಗಿ (ನಾ). [ಸಂಗೀತ] ಒಂದು ಶ್ರುತಿಯ ಹೆಸರು : ಧೈವತದ ಎರಡನೆಯ ಶ್ರುತಿ : ಸ್ವರದಿಂ ಶ್ರುತಿ ಸಮುತ್ಪತ್ತಿ . . . ಭಾಷಾಂಗಿ ವರ್ತಕಿ ಸಂಪೂರ್ಣೆಯೆಂಬ ಮೂಱು ಶ್ರುತಿಗಳೇ ಧೈವತಸ್ವರದಿಂದುದ್ಭವಿಸಿದವು (ಕಪಾಶ. ೦೬೬). [ಸಂ. ಭಾಷಾಂಗೀ]

ಭಾಷಾಂತರ (ನಾ). ೧. ಭಾಷೆಗಳ ನಡುವಿನ ಅಂತರ, –ವ್ಯತ್ಯಾಸ: ಉಭಯ ಭಾಷಾಂತರವ ತೆಱಿದು ಪ್ರಸಿದ್ಧದಿಂದಭನವನಿಭೃಂಟನಭನವಮಂಗನುಸಿರ್ದನು (ಪುಂಗಣ. ೨-೩). ೨. ಬೇರೆ ಭಾಷೆ ; ಪರಭಾಷೆ ; ಅನ್ಯಭಾಷೆ. ೩. ಒಂದು ಭಾಷೆಯಲ್ಲಿರುವುದನ್ನು ಬೇರೆಭಾಷೆಗೆ ಮಾಡುವ ತರ್ಜುಮೆ.—ಅನುವಾದ : ದುರ್ಗೇಶನಂದಿನಿಯು 'ಏವನ್‌ಹೋ' ವಿನ ಭಾಷಾಂತರವೆಂದಾಗಲಿ ಭಾವಾಂತರವೆಂದಾಗಲಿ ಯಾರೂ ಹೇಳುವಂತಿಲ್ಲ (ಪಂಕಾಮು. ೦೫೦). ೪. ಬೇರೆಯ ಶಬ್ದ ; ಪ್ರತಿಶಬ್ದ : ಭಾರತದೊಳ್ಪಿನ ನುಡಿಯಂ ಜಾರು ಸುದೇಶೀಯವೆಂಬ ಭಾಷಾಂತರಮಂ ಸೂರಿಜನ ವೆಚ್ಚೆ ಪೇಳ್ದಂ (ಶಾಪ್ರ. ೨).

ಭಾಷಾಂತರ ಮಾಡು = ಬೇರೆ ಭಾಷೆಗೆ ತರ್ಜುಮೆ ಮಾಡು,—ಅನುವಾದ ಮಾಡು : ಗುರುಗಳು ಪಂಚತಂತ್ರದೊಳಗಿನದೊಂದು ಕಥೆಯನ್ನು ಭಾಷಾಂತರ ಮಾಡಲಿಕ್ಕೆ ಕೊಟ್ಟಿದ್ದಾರೆ (ಪುಂತಮು. ೪-೦೩೨).

[ಸಂ.]

ಭಾಷಾಂತರಿಸು (ಕ್ರಿ). ಬೇರೆಭಾಷೆಗೆ ಪರಿವರ್ತಿಸು. — ಅನುವಾದ ಮಾಡು : ಅವರು ಇಂಗ್ಲಿಷಿನ ಕೆಲವು ಕವನಗಳನ್ನು ಭಾಷಾಂತರಿಸಿದ್ದಾರೆ

(ಸಮಾಪೋ. ೦೦); ಸಕಾಶಗಳ ಸಹಾಯದಿಂದ ಅವರು ಹಲವು ಹೆಯು ಲೇಖನಗಳನ್ನು ಭಾಷಾಂತರಿಸಿದರು (ಕ್ಯಗೋ. ೦೦).

[ಭಾಷಾಂತರ + — ಇಸು]

ಭಾಷಾಧೀಶ (ನಾ). ಸರಸ್ವತಿಯ ಗಂಡ ; ಬ್ರಹ್ಮ : ಶ್ರೀಶ ಭಾಷಾಧೀಶರುಂ . . . ದೇವೇಶಮುಖ್ಯಾಧೀಶರುಂ ನೆನೆದೋಲಯಿಸುತಿರಲು (ಪಸಕ್ಕಿ. ೨೪-೧೬). [ಸಂ.]

ಭಾಷಾಪತ್ರ (ನಾ). ಪ್ರತಿಜ್ಞೆಮಾಡಿದುದನ್ನು ನಡಸಿಕೊಡುವುದಾಗಿ ಬರೆದುಕೊಟ್ಟ ಪತ್ರ ; ಪ್ರತಿಜ್ಞಾಪತ್ರ : ಮಜ್ಜಸಕ್ಕೆಜೆಳ್ದುದು ಲಿಂಗ ಅದು ಲಿಂಗಕರಸ್ಥಲದ ದಿವ್ಯ ಗುರುವಚನ ಭಾಷಾಪತ್ರ ಶಿವಕರದಲ್ಲಿ (ಪಸಕ. ೬೪೪) ; ಈ ಅರ್ಥದ ಅತನ ಸ್ವಹಸ್ತಾಕ್ಷರದ ಭಾಷಾಪತ್ರಕ್ಕೆ . . . ಕಯ್ಯರೆಹದ ಸಾಕ್ಷ್ಯಗಳನ್ನೂ . . . ತೋರುವಪನಾಗು (ಪಚಗಂ. ೩೬-೦). [ಸಂ.]

ಭಾಷಾಪತ್ರಿಕೆ (ನಾ). = ಭಾಷಾಪತ್ರ : ಮೊದಲು ತೊಡಗಿನ ಮಹಾರಾಜರ ಕಡೆಯಿಂದ ಮಿಶ್ರತ್ವವಾಂಧಲ್ಯವಿಟ್ಟು ಶಾಶ್ವತವಾಗಿ ನಡಪು ಬರಬೇಲಿ ಎಂಬುದಾಗಿ ಭಾಷಾಪತ್ರಿಕೆ ಬರೆಸಿ (ಜಶಂಲ್ರ. ೪೪). [ಸಂ. ಭಾಷಾಪತ್ರಿಕಾ]

ಭಾಷಾಪರ್ಯಾಪ್ತಿ (ನಾ). [ಜೈನ] ಆರಂಭಗೆಯ್ದ ಪರ್ಯಾಪ್ತಿಗಳಲ್ಲಿ ಒಂದು ; ವಚನರೂಪವನ್ನುಂಟು ಮಾಡಲು ಕಾರಣವಾದ ಜೀವನ ಪರಿಪೂರ್ಣತೆ ; ಪ್ರ ಸ್ವರವೆಂಬ ಕರ್ಮದ ಉದಯದಿಂದ ಭಾಷಾವರ್ಗಣಾರೂಪವಾದ ಪುದ್ಗಲಸ್ಕಂಧಗಳಿಗೆ ಸತ್ಯ, ಅಸತ್ಯ, ಉಭಯ, ಅನುಭಯ ಎಂಬ ಭಾಷಾರೂಪವಾದ ಪರಿಣಾಮದ ಶಕ್ತಿಯ ನಿಷ್ಪತ್ತಿ : ಯದುದಯಾದಾಹಾರಾದಿ ಪರ್ಯಾಪ್ತಿ ವಿವೃತ್ತಿ ಸತ್ಪರ್ಯಾಪ್ತಿನಾಮ ತತ್ ಪಟ್ಟಿಧಮಾಹಾರಪರ್ಯಾಪ್ತಿನಾಮ . . . ಭಾಷಾಪರ್ಯಾಪ್ತಿನಾಮ ಮನಃಪರ್ಯಾಪ್ತಿನಾಮ ಚೇತಿ (ಗೊಕ್ಕಾ. ೬-೨). 'ಪರ್ಯಾಪ್ತಿ' ಪರಾ. [ಸಂ.]

ಭಾಷಾಪ್ರೌಢಿ (ನಾ). ಭಾಷೆಯಲ್ಲಿಯ ಪಾಂಡಿತ್ಯ, — ವಿಶೇಷಜ್ಞಾನ, — ಪಾರಂಗತತ್ವ : ಅವುಗಳ ವರ್ಣಪಯಲ್ಲಿ ಭಾಷಾಪ್ರೌಢಿಯೂ, ಕಾವ್ಯಮಯವಿವೇಚನೆಯೂ . . . ಪರಿತು (ಜಸಚ. ೧). [ಸಂ.]

ಭಾಷಾಮರ್ಯಾದೆ (ನಾ). ಭಾಷೆಯ ರೀತಿ. — ಸ್ಥಿತಿ : ಪ್ರಥಮಾವಿಭಕ್ತಿಗೆ ಪ್ರತ್ಯಯ ಹೇಳಿರುವುದು ಕೇವಲ ಸಂಸ್ಕೃತ ಭಾಷಾಮರ್ಯಾದೆಯನ್ನು ಅನುಸರಿಸಿ (ಪ್ರಾಪ್ರ. ೨೦೬). [ಸಂ. ಭಾಷಾಮರ್ಯಾದಾ]

ಭಾಷಾರೂಢಿ (ನಾ). ಭಾಷೆಯ ಬಳಕೆ. — ಪ್ರಯೋಗ : ಇವುಗಳ ಪ್ರಯೋಗವು ತೊಡಕಾಗಿರುವುದರಿಂದ ಭಾಷಾರೂಢಿಯನ್ನು ನೋಡಿ ತಿಳಿದುಕೊಳ್ಳಬೇಕು (ಪುಕ್ಕಪ್ರ. ೩೦). [ಸಂ.]

ಭಾಷಾವಿಜ್ಞಾನ (ನಾ). ಭಾಷೆಯ ಉತ್ಪತ್ತಿ, ಬೆಳವಣಿಗೆ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಶಾಸ್ತ್ರ ; ಭಾಷಾಶಾಸ್ತ್ರ : ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳು ಕನ್ನಡಪತ್ರಿಕೆಗಳಲ್ಲಿ ಆಗಾಗ್ಗೆ ಬೆಳಕು ಕಾಣುತ್ತಿದ್ದರೂ ಈವರೆಗೆ ಪ್ರಕಟವಾಗಿರುವ ಗ್ರಂಥಗಳು ಕೇವಲ ಮೂರೇ ಮೂರು (ಪ್ರಾಪ್ರ. IV, ಪುಕ್ಕಪ್ರ). [ಸಂ.]

ಭಾಷಾವಿಜ್ಞಾನಿ (ನಾ). ಭಾಷಾವಿಜ್ಞಾನವನ್ನು ಬಲ್ಲವನು ; ಭಾಷಾಶಾಸ್ತ್ರಪಂಡಿತ : ಕನ್ನಡದಲ್ಲಿ ಭಾಷಾವಿಜ್ಞಾನಿಗಳು ಪ್ರಥಮಾವಿಭಕ್ತಿಯಿಲ್ಲ ವೆನ್ನಲು ಕೊಡುವ ಕಾರಣಗಳನ್ನು ಕೆಳಗಿನಂತೆ ಸಂಕ್ಷೇಪಿಸಬಹುದು (ಸಂಕೋಲ. ೩೨). [ಸಂ. ಭಾಷಾವಿಜ್ಞಾನಿನ್]

ಭಾಷಾವಿದ (ನಾ). ಭಾಷೆಯನ್ನು ಬಲ್ಲವನು ; ಭಾಷೆಯಲ್ಲಿ ಪಾಂಡಿತ್ಯ ವುಳ್ಳವನು ; ದೋಷಗುಣಂಗಳಂತು ಮಿಗೆ ಸಂಕ್ಷೇಪಮೊಳಾದಂದು ಸಲಲವಿದ್ವ ತ್ಸ್ಪಭೆಯೊಳ್ ದೂಷಿಸುಗುಂ ಕೃತಿವಧುವಂ ಭಾಷಾವಿದರ್ (ಕಜಾ ೦ ೦೦೦); ಭಾಷಾವಿದರ್ಕವಿತ್ವವಿಶೇಷಜ್ಞರ್ನಿಕಷರಪ್ಪೆಡಪ್ಪದು ಸುಪಿಯೊಳ್ (ಕಾಪ್ರ. ೦-೨೦) ; ಇಂಥ ಸಂದರ್ಭಗಳಲ್ಲಿ ಮೂಲಗ್ರಂಥಗಳ ಭಾವವು ದೇಶಭಾಷೆಗಳಲ್ಲಿ ಹೇಗೆ ವ್ಯಕ್ತವಾಗಿದೆಯೆಂಬುದನ್ನು ಭಾಷಾವಿದರು ತುಲನಾತ್ಮಕ ದೃಷ್ಟಿಯಿಂದ ಅರಿಯಬೇಕು (ಪಮಾಶಾ. ೦೦೬). [ಸಂ. ಭಾಷಾವಿದ್]

ಭಾಷಾಶಾಸ್ತ್ರ (ನಾ). = ಭಾಷಾವಿಜ್ಞಾನ : ಅಲ್ಲಿಂದ ಮುಂದೆ . . . ಅದರೀ ಭಾಷಾಶಾಸ್ತ್ರವನ್ನು ಬೋಧಿಸಿದರು (ಪ್ರಾಸಂ. ೩. ಪುಮ್ಮಂ) ; ಸ್ವರೂಪಜ್ಞಪ್ತಿಜ್ಞಾನವನ್ನು ಸಾಹಜಿಕವಾಗಿ ವಿವೇಚಿಸುವ ಭಾಷಾಶಾಸ್ತ್ರದಲ್ಲಿಯೂ ವಿಳಕ್ಕಿಗಳ ವಿವರಣವು ಅವಿವಾರ್ಯವಾಗುತ್ತದೆ (ಸಂಕೋಲ. ೩೬). [ಸಂ.]

ಭಾಷಾಸುಸ್ಥರಣ (ನಾ). ಭಾಷೆಯುಲ್ಲಿರುವ ತಪ್ಪುಗಳನ್ನು ತಿದ್ದಿ ಶುದ್ಧಿಗೊಳಿಸುವಿಕೆ ; ಭಾಷೆಯ ಪರಿಷ್ಕಾರ : ಭಾಷಾಸಂಸ್ಕರಣಪ್ರಮಾಣ ಸಮನಿಕ್ಷೇಪರ್ ಜನೇಂದ್ರಾಗಮಾಲೀಪಜ್ಞರ್ ವಿಪಜ್ಞರ್ವ್ಯದುಚಿತಂ ವಿದ್ವತ್ಸಭಾಮಧ್ಯದೊಳ್ (ಕ.ಶಾಸಂ. ೦-೪೬). [ಸಂ.]

ಭಾಷಾಸಮಿತಿ (ನಾ). [ಜೈನ] ಸಾಧುಗಳು ಆಚರಿಸಬೇಕಾದ ಐದು ಸಮಿತಿಗಳಲ್ಲಿ ಒಂದು; ಪ "ದೂಷಿತ ಭಾಷೆಯನ್ನು ಪರಿತ್ಯಜಿಸಿ ಸದಾ ಸತ್ಯಪ್ರಿಯಕಲ್ಯಾಣಕಾರಿಯಾದ ವಾಣಿಯನ್ನೇ ಉಪಯೋಗಿಸಬೇಕೆಂಬ ಪ್ರತಿಜ್ಞೆ ; ದುರ್ಭಾಷಣ ರಹಿತನಾಗಿರುವುದು" (ಕ್ರಿಕೋ. ೦೦೨); ಕರ್ಮಕ್ಷಯನಿಮಿತ್ತಂ ಅನರ್ಥಕ ಬಹುಪ್ರಲಾಪವಿರಹಿತಮುಂ ಸ್ಪುಟಾರ್ಥಮುಂ ವ್ಯಕ್ತಾಕ್ಷರಮುಮಾಗಿ ಮಾತ್ಸರ್ಯಾನೃತಭ್ರಾಂತಿ ರಹಿತಾಯೋಪಾಸ್ಯಾಸಭ್ಯನಿಷ್ಠುರಧರ್ಮವಿರೋಧೀ ದೇಶಕುಲವಿರೋಧ ಕೃತಿ ಸಂಸ್ತವಾದಿ ವಾಗ್ದೋಷವಿವರ್ಜಿತಮಾಪ್ತ ನುಡಿ ಭಾಷಾಸಮಿತಿ (ಕಲ್ಪಕ್ಕಿ. ೬೫); ನಿರ್ಗ್ರಂಥಸಂಪ್ರದಾಯದಲ್ಲಿ ಭಾಷಾಸಮಿತಿಗೆ ಬಹಳ ಮಹತ್ತ್ವದ ಸ್ಥಾನವಿದೆ (ಕ್ರಿಪ್ರ. ೫೭೭). 'ಪಂಚಸಮಿತಿ' ಪರಾ. [ಸಂ.]

ಭಾಷಿಕ (ಗು). ೧. ಭಾಷೆಗೆ ಸಂಬಂಧಿಸಿದ. (ನಾ). ೨. ಮಾತನಾಡುವವನು; ಹೇಳುವವನು : ಭಾಷೆಯೊಳಗಿನ ಪದಗಳಿಗೆ ಐತಿಹ್ಯವಾದ ಅರ್ಥ–ಭಾವಗಳಿಂದ ಆಯಾ ಭಾಷಿಕರ ಮನಸ್ಸಿನ ಸಂಸ್ಕಾರ—ಸಂಸ್ಕೃತಿಯು ವ್ಯಕ್ತವಾಗುತ್ತಿರುತ್ತದೆ (ಕರ್ಗಿ. ೦೩). [ಸಂ.]

ಭಾಷಿತ (ನಾ). ೧. ಹೇಳಲ್ಪಟ್ಟುದ್ದು; ಮಾತು ; ವಚನ : "ಉಕ್ತಂ, ಭಾಷಿತಂ, ಆದಿತಂ . . . ಲಪಿತಂ – ೭ ಹೇಳಲ್ಪಟ್ಟದ್ದು, ನುಡಿಯಲ್ಪಟ್ಟದ್ದು" (ಜಾಗ್ರಂ. ೬೩) ; ತಜ್ಜನಭಾಷಿತಮಾತ್ಮಚಿತ್ತಮಂ ಭೇದಿಸಿದಂತ ಲೋಕಪತಿಗಿಟ್ಟುಂ . . . ಪರಿ ಶಾತಿಪಾಮುಮಂ (ಜಾಂಶಾಪು. ೦೦-೬೯); ತದೀಯ ಪರುಷಭಾಷಿತಂ ತನಗೆ ಕರ್ಣಶೂಲಮಾಗೆ . . . ನೀಡುಂ ನೋಡುತ್ತುಮಿರೆ (ಪಗೂ. ೬-೦೪ ಪ). ೨. ಭಾಷೆ : "ಬ್ರಾಹ್ಮೀ, ಭಾರತೀ, ಭಾಷಾ . . . ಭಾಷಿತಂ, ವಚನಂ, ವಚಃ – ೧೫ ಮಾತಿನ ಪರುಗಳು, ಅಂದರೆ ನುಡಿಯ ಪರು" (ಸಿಂಶಾಪ. ೪೪). [ಸಂ.]

ಭಾಷಿಪು (ಕ್ರಿ). ಮಾತನಾಡು; ನುಡಿ ; ಹೇಳು : ತಾ ಮುಸುಡನೆತ್ತೀಗ ಭಾಷಿಪನೋ (ಪಸಕ್ಕಿ. ೩೭-೦೨). [ಭಾಷಣ + —ಇಸು]

ಭಾಷೆ (ನಾ). ೧. ಮಾತು ; ನುಡಿ ; ಜನರು ತಮ್ಮ ಅಭಿಪ್ರಾಯವನ್ನು ಇತರರಿಗೆ ತಿಳಿಸಲು ಉಪಯೋಗಿಸುವ ಸಾಧನ; ಪದಪ್ರಯೋಗ : ತಿಳಿವಪನ ಮತಿವಿದನ ಭಾಷಾವಳಿ ಲಿಪಿಜ್ಞನ ಸಾಕ್ಷರನ . . . ಸುಂದರಾಕ್ಷರ ತಿಳಿದ ಹೃದಯನ ಸಂಧಿಗ್ರಪರಿನಿಸಬೇಕೆಂದ (ಕಾಣ್ಯಾ. ೬-೮೯) ; ಭಾಷೆದುಲ್ಲಿರುವ ಪದಗಳು ಹಲವು ; ವರ್ಣಗಳು ಕೆಲವು (ಪುಕ್ಕಪ್ರ. ೦೦); ಅಕ್ಷರರೂಪದಿಂ ಅಭಿವ್ಯಕ್ತವಾದ ಮನೋಭಾವನೆಯೇ ಭಾಷೆ (ಸಂಕೋಪ್ರ. ೦). ೨. ಕನ್ನಡ, ತಮಿಳು, ಸಂಸ್ಕೃತ ಮೊದಲಾದ ಬೇರೆಬೇರೆಯ ಮಾತು.–ವಾಚ್ಯಯ : ಸಂಸ್ಕೃತಂ ಪ್ರಾಕೃತಂ ಅಪಭ್ರಂಶಿಕಂ ಪೈಶಾಚಿಕ ಮೆಂಬ ಪೂರ್ವಿದರೆ ಭಾಷೆಗಳೊಳ್ ಪುಟ್ಟುವ ದ್ರವಿಡಾಂಧ್ರ ಕರ್ಣಾಟಕಾದಿ ಪುಟ್ಟುಜಾತಕ್ ಸರ್ವವಿಷಯಭಾಷಾಜಾತಿಗಳಕ್ಕುಂ (ಕಂಗೋಂಪ್ರ. ೦-೨೬ ಪ):

ಕನ್ನಡದೊಳ್=ಕನ್ನಡ ಭಾಷೆಯಲ್ಲಿ (ಪುರು. ೯. ೪೯). ೩. ವಿದ್ಯಾಭಿಮಾನಿಯಾದ ದೇವತೆ: ಸರಸ್ವತಿ; ವಾಣಿ: "ವಾಕ್(ಗ್), ವಾಣಿ, ಭಾರತೀ, ಭಾಷಾ. . .ಸರಸ್ವತೀ–ಈ ೮ ಸರಸ್ವತಿಯ ಪೆಸರ್" (ಪಾಣಿನಿ. ೬-೮); ಶ್ರುತದೇವಿ ವಾಣಿ ವಾಗ್ಭಾರತಿ ವಚನಂ ಭಾಷೆ ಮಾತೆ ಗೀರ್ ಬ್ರಾಹ್ಮಿ ಸರಸ್ವತಿ ವರದೆಯಾಗಿ . . . ತಿರ್ದುಗೆ ದಯೆಯಿಂ (ಪಂಪ.೪೯. ೨-೬); ದೂಷಿಸಿದೊಡಾ ವೀರಭದ್ರನು ಪೂಷನೆಂಬನ ಹಲ್ಲನುದುರ್ಚನೆ ಭಾಷೆ ಮುಖಿಕೆಯತಂದಡಾಕೆಯು ನಾಸಿಕವನರಿದ (ಪಂಪ. ೪೪-೪೨). ೪. ಆಣೆ; ಶಪಥ; ಪ್ರತಿಜ್ಞೆ: ಹಣ ಬಂಗಾರವಸ್ತ್ರ ಕವ್ವಡ ಬಟ್ಟೆಮುಲ್ಲಿ ಪೆಟ್ಟನೆ ಬಿದ್ದಿರಲು ಕಂಡು ಕಾತರಿಸಿ ಕೈಮುಟ್ಟಿ ಎಪ್ಪದ ಭಾಷೆ (ಆದಿ. ೨೦-೪೨); ವಿಪ್ರರ ಕರಸಿ ವೈದಿಕದಿಂದ ಧರಿಸಿದರಗ್ನಿಯನು ಮಾಡಿದರು ಭಾಷೆಗಳ (ಕುಮಾ.೬೪. ೨-೩); ಪರಾವಣನು ಕಂಟಕವೆತ್ತಿ ಬಂದರೆ ತನ್ನ ನೆನೆಯೆಂದಿತ್ತ ಭಾಷೆಯ ನೆನಪು ಬಂದುದನಜಿತು ಚಿಂತಿಸಿದ (ಕಾಶಿಖ. ೪೯-೨೦); ತಿಂಗಳಾರಕೆ ಮರಳಿ ಬಹೆನೆಂಬ ಭಾಷೆಯಂ ಭಾಮಿನಿತ್ತೆ ಭಾಮಿನಿ ಸಮಾಧಾನಬುದ್ಧಿಯಿಂ. . . ಪಡೆದಳ್ ಪಿರಿದರಿವೆಱಗೆ (ಕಬ್ಬಾಲ. ೩೩-೦೫೫). ೫. [ಜೈನ] ಪಾರಿವ್ರಾಜ್ಯಲಕ್ಷಣಗಳನ್ನು ತಿಳಿಸುವ ಇಪ್ಪತ್ತೈದು ಸೂತ್ರಪದಗಳಲ್ಲಿ ಒಂದು: ಭಾಷೆಯೆಂಬುದು ಪರಮಭಾಷಾಸುಂದರ ಪದನಾರವಿಂದನಪ್ಪ ಜಿನಪತಿಯಾರಾಧಿಸಿ ವಾಕ್‌ಸಮಿತಿಯಿಂ ತಪದೊಳ್ ನೆಗೞ್ದೊಡೆ ದಿವ್ಯಾದಿ ಭಾಷೆಗಳು ಪಡೆಗುಂ (ಜಾಪಪು. ೩೬).

ಭಾಷಾ ಚತುರ್ಭುಜ=ವಾಲ್ಮೀಕಿಭಾಷೆಗಳಲ್ಲಿ ಪಾರಂಗತನಾದವನು: ಒಂದು ಬಿರುದು: ದಿಗ್ವಾಸಾಯಸಿಖಾಮಣಿ ಭಾಷಾ ಚತುರ್ಭುಜಂ ಸುಜನಮಖಿರಧ್ವಜಂ [ಶಾ]ನ್ತಾಕೌನ್ತೇಯಂ . . . ಶ್ರೀಮದ್ದಿಗ್ವಾಸಾಯಕ ದಾವುಪಯಂ ಉಱಂಗಿ ಮೂವತ್ಮುಮನಾಲುತ್ಸವಿಟ್ಟು (ಶಾಂಭ. ೪೭. ೩೭೦-೭೩; ೧೦೮೦). **ಭಾಷಾದಾರು**=ಭಾಷೆಗೆ ಅನುಸಾರವಾದ; ಭಾಷೆಯನ್ನು ಆಧಾರವಾಗಿ ಪಡಿಗನೆಸಿದ: ನಾವು ಈಗ ತಾನೆ ಭಾಷಾವಾರು ಪ್ರಾಂತರಚನೆಯು ಫಲವಾಗಿ ವಿಶಾಲಮೈಸೂರುಪ್ರಾಂತವನ್ನು ಗಳಿಸಿಕೊಂಡಿದ್ದೇವೆ (ಗೃತಾ. iii, ಮುಖ್ಯಾ). **ಭಾಷೆಗಳನ್ನೊದಗಿಸು**=ಪ್ರತಿಜ್ಞೆಗಳನ್ನು ಪೂರ್ಣಗೊಳಿಸು; ಶಪಥಗಳನ್ನು ನೆರವೇರಿಸು: ಭಾಷೆಗಳನೊದಗಿಸಲಸಮಭಕ್ತಿಯನು ನೇದಿಸಲು . . . ಈ ಮಣಿಪವಾಗಿಳೆಗೆ ಬಂದ ಮುಮಾ ಮಹಿಮ ಹರಮೂರ್ತಿ. . . ಮಾಚಯ್ಯ (ಪಪ್ರ. ೩೬-೨೨). **ಭಾಷೆ ತಪ್ಪು**= ಆಡಿದ ಮಾತನ್ನು ನಡೆಸದಿರು; ಕೊಟ್ಟ ಮಾತಿಗೆ ತಪ್ಪು: ಅವರ ಎಂದೂ ಭಾಷೆಗೆ ತಪ್ಪುವದರಲ್ಲ (ಮಾಪ). **ಭಾಷೆಗೆ ತಪ್ಪುವ ರಾಯರ ಗಂಡ**= ವಚನಭ್ರಷ್ಟರಾದ ರಾಜರನ್ನು ದಂಡಿಸಿಂವವನು; ಒಂದು ಬಿರುದು: ಶ್ರೀಮನ್ಮಹಾಮಂಡಲೇಶ್ವರಂ ಅರಿರಾಯವಿಭಾಡ [ಭಾಷೆಗೆ ತಪ್ಪುವ ರಾ]ಮರ ಗಂಡ ಶ್ರೀ ವೀರಬುಕಣಾಪೊಡೆಮರ ರಾಜ್ಯಾ[ಭ್ಯು]ದಯದಲೂ (ಶಾಂಭ. IX–ii, ೪೦೬–೭; ೧೨೭೨); ಭಾಷೆಗೆ ತಪ್ಪುವ ರಾಯರ ಗಂಡಃ ದೋಷಕ್ಕದರ್ಥಿಜನಯೋ ರಣಚಂಡಃ (ಅಳ. VII, ೩೮೫. ೦-೭೩; ೧೫೧೬). **ಭಾಷೆ ಮುಟ್ಟಿಸು**=ಪ್ರತಿಜ್ಞೆಯನ್ನು ನೆರವೇರಿಸು; ವಾಗ್ದಾನವನ್ನು ನಡೆಸು: ಅವಸು ಭಾಷೆ ಮುಟ್ಟಿಸಿ ಎಲ್ಲರಿಂದಲೂ ಭರಾ ಎನ್ನಿಸಿಕೊಂಡ (ಕೂಡ). **ಭಾಷೆಯಂ ಕೊಡು**= ಮಾತು ಕೊಡು; ವಚನ ನೀಡು: ಭಾಷೆಯಂ ಕೊಟ್ಟು ತಪ್ಪುವನಲ್ಲ ನೀವಾ ವಿಶೇಷಮಂ ಕಂಡು ಬಲ್ಲವ (ಕೃಷ್ಣಾ. ೨-೭೦). **ಭಾಷೆಯಂ ನೀಗು**=ಪ್ರತಿಜ್ಞೆಯನ್ನು ಕೆಳೆ; ಶಪಥಕ್ಕೆ ಭಂಗವನ್ನು ತರು; ಮಾತಿಗೆ ತಪ್ಪು: ಆದರ ನಿಮಿತ್ತಕೆ ಭಾಷೆಯಂ ನೀಗಿ (ಪಪ್ರ. ೩೯-೦೭). **ಭಾಷೆಯಂ ಪ್ರತಿಪಾಲಿಸು**= ಕೊಟ್ಟ ಮಾತಿನಂತೆ ನಡೆ; ಕೊಟ್ಟ ಮಾತನ್ನು ನಡೆಸು: ಜಿನಸಮಯ ದುರುತಿರವನರಿಪೆನು ಭಾಷೆಯಂ ಪ್ರತಿಪಾಲಿಸುವೆನು (ಪಪ್ರ. ೨೯-೦೩). **ಭಾಷೆಯಂ ಸಲಿಸು**= ಕೊಟ್ಟ ಮಾತನ್ನು ಉಳಿಸು; ಶಪಥವನ್ನು ನಡೆಸು.– ಪೂರ್ಣಗೊಳಿಸು: ನಿನ್ನ ಅಂದಿನ ಭಾಷೆಯಂ ಸಲಿಸಿನ್ನು ತದ್ರೋಹಿಯನಪಹರಿಸಿ ನನ್ನಿಯಂ ಮೆಱೆ [illegible] (ಪಪ್ರ. ೬೦-೭). **ಭಾಷೆಯಾನುಳಿ**=ಭಾಷೆಗೆ ತಪ್ಪು: ನಾಂ ಬೇಡಿಂಮ ನಿಲಿಸಲು ದುರಿಸಿ ಭಾಷೆಯನುಳಿದು ಕೈದುವಪೆನ್ನ ಮೇಲುರ್ಚ ಗದಱಿದನ ತರೆಯಂ ಜಱಿದು ಹಾಯ್ದಿದನು (ಪಪ್ರ. ೨೯-೧೩). **ಭಾಷೆಯುಸೊದಮಿಸು** = ಭಾಷೆಯಂ ಕೊಡು: ಎನ್ನ ಸ್ವಾಮಿ ಸಂಗಯ್ಯ. . .ಜಿಕ್ಕದ ಮಲಿನಮಂ ಕಳೆದು ಭಾಷೆಯನೊದಮಿಸಿದನೆನಗೆಮತ ಪ್ರಾಣವನಂತು ಬಿಡಲು (ಪಪ್ರ. ೪೭-೨೦). **ಭಾಷೆಯ ಬಟ್ಟು**=ಪ್ರತಿಜ್ಞೆಗೆ ದಾಸನಾಗಿರುವವನು; ಶಪಥವನ್ನು ನೆರವೇರಿಸಲು ಶ್ರಮಿಸುವವನು: ಮನೆಯಲ್ಲಿ ವೀರ ಧೀರ ರಣದಲ್ಲಿ ಒಸರಿಸದ ಮತ್ತೆ ಭಾಷೆಯು ಬಂಟನಲ್ಲ (ಪೃಥ್ವಿರಾ. ೨೪೨-೪೬). **ಭಾಷೆ ಯಾಡು**=ಮಾತನಾಡು: ನಮ್ಮ ದೇಶದಲ್ಲಿ ಬೇರೆ ಬೇರೆ ಕಡೆ ಬೇರೆ ಬೇರೆ ಭಾಷೆಯಾಡುವ ಜನವಿದ್ದಾರೆ (ಕೂಡ). **ಭಾಷೆಯಿಡು**=ಆಣೆಯಿಡು; ವಾಗ್ದಾನ ಮಾಡು; ಪ್ರತಿಜ್ಞೆಮಾಡು: ಭಾಷೆಯಿಟ್ಟು ಹೇಳಿದ್ದೇನೆ ಕೇಳು, ನಿನ್ನನ್ನು ಮನೆಗೆ ಸೇರಿಸುವುದಿಲ್ಲ (ಕೂಡ). **ಭಾಷೆಯೋರು**= ಕೊಟ್ಟ ಮಾತಿಗೆ ಬದ್ಧನಾಗಿರು; ಆಡಿದ ಮಾತಿಗೆ ತಪ್ಪದಿರು: ತ್ಸುದಿರೊಳಾದಪ್ಯಶ್ಚಪನು ಜಸರುಗೊಂಡವನಂ ಕೊಲುಮೆನೆಂಬಸಮ ಭಾಷೆಯೊಳಿರುತಿರಲು ಭಾಂದುಸನದೊರ್ಜುನ . . . ಮನೆಗೆಯ್ದರಲು (ಪಪ್ರ. ೩೩-೭೯). [ಸಂ. ಭಾಷಾ]

ಭಾಷೆಕಾಱ (ನಾ). ಪ್ರತಿಜ್ಞೆ ಮಾಡಿದವನು; ಆಣೆಯಿಟ್ಟುಕೊಂಡವನು: ತೆಜಪ ಕೊಡು ಕೊಡು ಭಾಷೆಕಾಱನು ಮೆಱೆದು ಹೋಗಲಿ ದೃಷ್ಟಕಂಡ ದೊಳೊಱಗುವುದ ಕೋಡುವವೆನುತ ತನಿಗೆದಱಿಕೊಡಿಸಿದನೆ (ಕುಮಾ.೬೪. ೦೪-೭೯). [ಭಾಷೆ + — ಕಾಱ]

ಭಾಷೆಕೊಡು 'ಭಾಷೆಗೊಡು' ನೋ.

ಭಾಷೆಗಳ್ಕ (ನಾ). ಕೊಟ್ಟ ಮಾತಿಗೆ ತಪ್ಪುವವನು: ಕೆಲವೆಡೆಯೊಳಂ ಪುಗಲರುರುಭಾಷೆಗಳ್ಕರಂ ಕೆಲವೆಡೆಯೊಳಂ ಸದಾ ಪರವಧೂಸಂಗದಲಿ ಹೃನ್ಮಗ್ನರಾಗಿರ್ಪರು (ಪುರು. ೨-೦೨). [ಭಾಷೆ + ಕಳ್ಕ]

ಭಾಷೆಗೆಡು (ಕ್ರಿ). ಕೊಟ್ಟ ಮಾತಿಗೆ ತಪ್ಪು: ಭಾಷೆಗೆಟ್ಟರ್ದನ ಸಭೆಯಲಿ ದೋಷವಲ್ಲಾ ಕುಳ್ಳಿತಿದ್ದಡೆ ಶೇಷಭೂಷಣಭಕ್ತರಿದ್ದಂಹರವರೆ ಸಾತಿನ್ನು (ಪಪ್ರ. ೪೭-೦೨). [ಭಾಷೆ + ಕೆಡು]

ಭಾಷೆಗೊಡು, ಭಾಷೆಕೊಡು (ಕ್ರಿ)- ಮಾತುಕೊಡು; ವಾಗ್ದಾನ ಮಾಡು: ಏಂದಱುತೆ ಭಾಷೆಗೊಟ್ಟವಚಂಮೀರಂ (ಪಂಪ. ೬-೨೩). **ಭಾಷೆಕೊಡು**: ಭಾಷೆಕೊಟ್ಟವನು ಪೋದಣೆ ಮಾಡನೆ ? (ಗದ). [ಭಾಷೆ + ಕೊಡು]

ಭಾಷೆತಪ್ಪುಕ (ನಾ). = ಭಾಷೆಗಳ್ಕ: ಆತ ದ್ರೋಹಿ ಭಾಷೆತಪ್ಪುಕ ನವಮ ಭವದಲ್ಲಿ ಬಳಲುವನು (ಪೀಠಾಕ್ಷ. ೦೨೨-೦೦೩). [ಭಾಷೆ + ತಪ್ಪುಕ]

ಭಾಷೆವಂತ (ನಾ). ಕೊಟ್ಟ ಮಾತನ್ನು ಪಾಲಿಸುವವನು; ಆಡಿದ ಮಾತಿಗೆ ತಪ್ಪದಿರುವವನು; ಲೇಸಾದ ಪಾಲಂಕಲು೪ವಂ ಭಾಷೆವಂತನು ಬಂಕಿದೇವನು (ಪಪ್ರ. ೯-೩೮). [ಭಾಷೆ + —ವಂತ]

ಭಾಷ್ಪಿಗೆ, ಬಷ್ಪಿಗೆ, ಭಾಟಿಗೆ (ನಾ)- (ಉಕ) ನಿಷ್ಟ್ರಯೋಜನ: ಅದೇ ಮುಂಜಾವ ಪಾಲ್ಮನಾಲ್ಕ ಸಾರೆ ಎಡತಾಕಿದರೂ ಭಾಷ್ಪಿಗೆಗೆ ಸೆಟ್ಟಿಯೂ ಇಲ್ಲ ಮಗದುಮವೂ ಇಲ್ಲ (ಚಿಕಿಗೆ. ೨). **ಬಷ್ಪಿಗೆ**: ಬಷ್ಪಿಗೆದು ಹಾಕಿ ಕನ್ನಡಿಯನ್ನು ನಿಶ್ಚಯಮಾಡಿದ ಮೇಲೆ ವೇದೋಕ್ತ ಸಮ್ಮತ ಪ್ರಕಾರ ಲಗ್ನವಾಯಿತೇ ಹ್ಯಾಗೇ ? (ಗೃಪ್ರ. ೬೬೦). **ಭಾಟಿಗೆ**: ಪೆಗಿಯಾಣೆ ಒರಕೊಡದು ಪಾಲವ ಭಾಟಿಗ್ಗೆ ಒರಬೇಕ (ಪುಗೆ. ೫೦) ; ಆ ಕಾಲದ ನೈಮಿತ್ತಿಕಕಾರ್ಯಕ್ಕೆ ಭಾಟಿಗೆ ಅಥವಾ ಭಾಷ್ಪಿಗೆ ಹಾಕುವುದು ಎನ್ನುವರು (ಪುಗೆ. ೦೨೭ ಪೀಠಿ). 'ಭಾಸದಿ' ಪರಾ. [?]

ಭಾಷ್ಯ (ನಾ): ೧. ವ್ಯಾಕರಣ, ವೇದಾಂತ ಮೊದಲಾದ ಶಾಸ್ತ್ರಗಳ ಮೂಲಭೂತವಾದ ಸೂತ್ರಗಳ ಅರ್ಥವನ್ನು ವಿವರಿಸುವ ಗ್ರಂಥ; ಸೂತ್ರಾನುಸಾರವಾದ ಪದಗಳಿಂದ ಸೂತ್ರಾರ್ಥವನ್ನು ವಿವರಿಸುವ ಹಾಗೂ ವಿವರಣೆಗಾಗಿ ಕೊಟ್ಟ ಪದಗಳನ್ನು ಮತ್ತೆ ವಿಸ್ತಾರವಾಗಿ ವಿವರಿಸುವ ಸೂತ್ರವ್ಯಾಖ್ಯಾನ: ಈ ವಿಚಾರದಲ್ಲಿ ವ್ಯಾಸರು ಒಂದು ಸೂತ್ರವನ್ನು ಸಿದ್ಧಾಂತರೂಪಕವಾಗಿ ಬರೆದಿರುತ್ತಾರೆ . . . ಈ ಸೂತ್ರಕ್ಕೆ ಶ್ರೀ ಶಂಕರರ ಭಾಷ್ಯವು ವಿಚಾರಣೀಯವಾಗಿದೆ (ಪ್ರಣಾಕ್ಕ. ೩೪); ಪೂರ್ವಕಾಲದಲ್ಲಿ ಈ ರೀತಿ ಸ್ಪಷ್ಟವಾಗಿತ್ತು ಎಂಬುದು ಭಾಷ್ಯಗಳ ಮೇಲೆ ಹೊರಟಿರುವ ವಾರ್ತಿಕವೆಂಬ ಗ್ರಂಥದ ಅರ್ಥದಿಂದಲೇ ಸ್ಪಷ್ಟವಾಗುತ್ತದೆ (ಕೀಂಪ್ರಾ. ೧೫೬)- ೨. ತತ್ತ್ವವಿಚಾರಗಳನ್ನು ಪ್ರತಿಪಾದಿಸುವ ಉಪನಿಷತ್ತು, ಗೀತೆ ಮೊದಲಾದ ಉದ್ಗ್ರಂಥಗಳ ಪ್ರೌಢವಾದ ವ್ಯಾಖ್ಯಾನೆ ಯಾವುದೇ ಗಹನವಾದ ಮೂಲಗ್ರಂಥದ ವಿವರಣ ಗ್ರಂಥ: ಪಟಗಾಂಪರ ಮಡಿ ಮುತ್ತುಂಮಟಸುಂಗೋದಂದದಕ್ಕೆ ಭಾಷ್ಯಮನೊರ್ಮಂ ತಟಿಯೋದಿದಾತನಲ್ಲದೆ ಬಚಿವಚಿಯಂ ಬಂದು ಬರೆಯಲಾಗದಗ್ಗುಂ (ಜಾಂಬಪು. ೦೦-೦೦೦); ಭಗವತ್ಪಾದರಾದ ಶ್ರೀ ಶಂಕರರೇ ಭಗವದ್ಗೀತೆಗೆ ಭಾಷ್ಯ ಬರೆದವರಲ್ಲಿ ಪ್ರಥಾತನರು (ಶಾಕಂ. ೦೦೯). ೩. ಪಾಣಿನಿಯ ಸೂತ್ರಗಳಿಗೆ ಪತಂಜಲಿಯು ಬರೆದಿರುವ ಪ್ರಸಿದ್ಧವಾದ ವ್ಯಾಖ್ಯಾನ. [ಸಂ.]

ಭಾಷ್ಯಕಾರ (ನಾ). ೧. ಯಾವುದೇ ಸೂತ್ರಗ್ರಂಥದ ವ್ಯಾಖ್ಯಾನವನ್ನು ರಚಿಸಿದವನು.—ಭಾಷ್ಯವನ್ನು ರಚಿಸಿದವನು: ತಮ್ಮ ಸಿದ್ಧಾಂತದಲ್ಲಿ ಭಾಷ್ಯಕಾರರ ಅಭಿಪ್ರಾಯಗಳನ್ನು ವಾರ್ತಿಕಕಾರರು ನಿರಾಕರಿಸಿ ಭಾಷ್ಯಕಾರರ ಅರ್ಥವನ್ನು ಆದರಿಸದಾರದೆಂದು ಬರೆಯುತ್ತಾರೆ (ಕೀಂಪ್ರಾ. ೬೫೦); ನಿರುಕ್ತಕಾರರಾದ ಯಾಸ್ಕರೂ, ನಿರುಕ್ತದ ಭಾಷ್ಯಕಾರರಾದ ಸ್ಕಂದಸ್ವಾಮಿ ಮತ್ತು ದುರ್ಗಾಚಾರ್ಯರೂ . . . ಉಲ್ಲೇಖಿಸಿದ್ದಾರೆ (ಶಾಕಿ. ೪೬). ೨. ಪಾಣಿನಿಯ ಸೂತ್ರಗಳಿಗೆ ಭಾಷ್ಯವನ್ನು ಬರೆದ ಪತಂಜಲಿ. ೩. ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದ ಶಂಕರ, ರಾಮಾನುಜ ಮತ್ತು ಮಧ್ವ ಆಚಾರ್ಯರು: ಪಾಣಿ ರಾಮಾನುಜರ್ಗಿಂತಿರದತಿಸಾನಂಗೆಯ್ದು . . . ತಳ್ಕೈಸಿ ಭೂಮಿಯಲ್ಲಿ ವಿಮಗಿಂ ಶ್ರೀ ಭಾಷ್ಯಕಾರಾಶ್ರಯಂ ಸವಸ್ಕೆಂದತಿಹೃಷ್ಟೆಯಾದಳ್ (ಪಜ್ಞ.೮೬-೩೩೮); ದ್ವೈತವೇದಾಂತಮತವನ್ನು ಸ್ಥಾಪಿಸಿ ಭಾಷ್ಯಕಾರರೆನಿಸಿದ ಶ್ರೀಮನ್ಮಧ್ವಾಚಾರ್ಯರವರು ಭರತಖಂಡದಲ್ಲೆಲ್ಲಾ ತಮ್ಮ ಮತವನ್ನು ಪ್ರಚುರಗೊಳಿಸಿ ಪ್ರಸ್ಥಾತರಾದರು (ಈಂ. ೦೦) [ಸಂ.]

ಭಾಷ್ಯ (ನಾ). ವಿವರಣೆ; ವ್ಯಾಖ್ಯಾನ: ನಿನಗೆ ಸೂಚನೆ ಮಾತ್ರ ಬೇಕಾಗಿತ್ತಲ್ಲವೆ? ಸೂಚನೆ ಕೊಟ್ಟರುವೆ. ಅದರ ಭಾಷ್ಯ ಹೇಳಲು ನಮಗೆ ಸಾಧ್ಯವಿಲ್ಲ (ಚುಸ್ತ. ೨೦೬). [ಸಂ. ಭಾಷ್ಯ]

ಭಾಸ (ನಾ). ೧. ಹೊಳಪು; ಪ್ರಕಾಶ; ಕಾಂತಿ. ೨. (ಮನಸ್ಸಿಗೆ) ತೋರಂವುದು; ಹೊಳೆಯುವುದು: ಇಲ್ಲಿ ತನ್ನ ಅಧಿಷ್ಠಿಕ್ಕಿಂತ ಅನ್ಯಪ್ರಯೋಜನವನ್ನು ಅದು ಕಾಣದು. ತನ್ನ ಅನುಭವಗಳಲ್ಲದ ಅನ್ಯಾನುಭವಭಾಸಗಳಿಗೆ ಇಲ್ಲಿ ಎಡೆಯಿಲ್ಲ (ಪಾಕೀ. ೩). ೩. ಒಂದು ಬಗೆಯ ಪಕ್ಷಿ; ಹಾಲಕ್ಕಿ: "ಶಕುಂತಃ, ಭಾಸಃ—ಈ ೨ ಪಿಂಗಲಿ" (ಪಾಕಶು. ೪೦-೧೪); ದ್ರೋಣನು . . . ಶಿಲ್ಪಿಯಿಂದ ಒಂದು ಕೃತ್ರಿಮವಾದ ಭಾಸಪಕ್ಷಿಯನ್ನು ಮಾಡಿಸಿ ಅದನ್ನು ಅವಿಗೆ ತಿಳಿಯದಂತೆ ಒಂದು ಮರದ ತುದಿಗೂದಿಗೆ ಕಟ್ಟಿಸಿ (ಪಪಕಾ. ೨೦)- ೪. ಹದ್ದು; ಗೃಧ್ರ: ಈಸು ದೊಡ್ಡಿತು ಮಾಡಲೇನಾ ಭಾಸನು ಸಾಕಂದು ವಾಲಿ ಹುಕಾಪನರ ನಂದವರು ಕದಬ್ದರುರುಪಾಕ್ಯಮವ (ಕೂಕಾ. ೬೯-೨೬). ೫. ಹುಂಜ; ಕುಕ್ಕುಟ. ೬. ದಾನಗಳ ಕೊಟ್ಟಿಗೆ; ಗೋಪ್ಯ. ೭. ಒಬ್ಬ ಸಂಪ್ರಸಿದ್ಧನಾದ ಸಂಸ್ಕೃತ ನಾಟಕಕಾರ: ವಿದ್ವಾಂಸರು ಭಾಸನ ನಾಟಕಗಳನ್ನು . . . ಬೆಂಕಿಯಲ್ಲಿ ಹಾಕಲು ಅವುಗಳಲ್ಲಿ ಸ್ವಪ್ನವಾಸವದತ್ತವನ್ನು ಬೆಂಕಿ ಸುಡಲಿಲ್ಲ (ಸಮಾ. ೭೦).

ಭಾಸವಾಗು = ಕಾಣು; ತೋರು: ಒಬ್ಬರಿಗೆ ಅಮೃತದಂತೆ ಕಂಡದ್ದು ಇನ್ನೊಬ್ಬರಿಗೆ ವಿಷದಂತೆ ಭಾಸವಾಗಬಹುದು (ಸುಚಸಂ. ೩); ಬಾಡ ಮೊದಲಿನಿಂದ ಕೊನೆಯವರೆಗೂ ಮಕ್ಕಳಿಗೆ ರೀಲಿಯಂತೆ ಭಾಸವಾಗ ಬೇಕು (ಕಿಪ್ರದ. ೨೪೯). [ಸಂ.]

ಭಾಸಕ (ಗು). ೧. ಬೆಳಕು ಬೀರುವ; ಪ್ರಕಾಶಪಡಿಸುವ. ೨. ತೋರಿಸುವ: ಸ್ಪಷ್ಟಪಡಿಸುವ. ೩. ಸ್ಪಷ್ಟವಾದ; ತಿಳಿಯಲಾಗುವ; ಸುಗಮವಾದ; ಸರಳವಾದ. (ನಾ). ೧. ತೋರಿಸುವುದು; ಪ್ರಕಾಶಪಡಿಸುವುದು: ಇದೇ ರೀತಿ ಪದವ್ಯಂಗ್ಯವೆಂಬ ಧ್ವನಿಯಲ್ಲಿ ಯಾದರೂ ಅನ್ಯನಿರಪೇಕ್ಷವಾದ ಪದವೇ ಸ್ವಾರ್ಥವನ್ನು ತನಗೆ ತಾನೆ ಕರುವ ಮೂಲಕ ರಸಾನುಭವಕ್ಕೆ ಯೋಗ್ಯವಾದ ಅರ್ಥಕ್ಕೆ ಭಾಸಕವಾಗಬಹುದು (ಧ್ವಕಾ.ಲೋ. ೨೩೫ ಚಾಪ). [ಸಂ.]

ಭಾಸದಿ (ನಾ). (?): ಅರಸನನುಮತಿಯಿಂದ ದೃಢರಥಿ ತನುಜೆಗೆಣ್ಣೆಯನೆನ್ನಿತ್ತಿಸಿದ ಬಂಧುರವಿ ವಿಷ್ಣಾಸ್ಪನಿಗೆ ಭಾಸದಿಯಿಕ್ಕುವೆದಲಿ ಸುರಸತಿಗೆ ನವದಿವ್ಯವಸ್ತ್ರವನೆರೆವ ಸುರಕಾಂತೆಯರ ತೆರದೊಳಾ ಹರುಷದೊಳು ಮಜ್ಜನವ ವಿರಚಿಸಲಾಳರನ್ನೆಯರು (ಕಾಪು. ೦೯-೨). 'ಭಾಷ್ಟಿಗೆ' ಪರಾ. [?]

ಭಾಸಾಧಿಪ (ನಾ). ಪ್ರಕಾಶಕ್ಕೆ ಒಡೆಯನಾದವನು; ಸೂರ್ಯ: ದಾಶರಥಿಗಳ್ ಸ್ನಾನಮಂ ಮಾಡಿ ಬೇಗದಿಂ ಭಾಸಾಧಿಪಂಗರ್ಘ್ಯಮಿತ್ತಾಹ್ನಿಕ ಕ್ರಿಯೆಯ ರಚಿಸಿ (ಪಂಆಣಾ. ೦-೦೨-೨). [ಸಂ.]

ಭಾಸಿಸು (ಕ್ರಿ). ೧. ಹೊಳೆ; ಪ್ರಕಾಶಿಸು. ೨. ಶೋಭಿಸು; ಕಂಗೊಳಿಸು: ಭಾಸಿಸುವ ಪಿಜ್ಞೇಂದ್ರಿಯದೊಳೆ ಗುರುವಿಂಗೆ ಕಂಭೋ ಮುಖದ ರಸವಿತ್ತು (ಪಜ್ಞ. ೦೨-೩೩); ಭಾಸಿಪ ರಂಭಯೂರ್ವತಿ ತಿರೋತ್ಥಮೆ . . . ಈ ಸಂದರಿಗೇನು ಸಾಟಿ (ಪೂಚಕ. ೦೦-೯); ಕಾಪ ಗಲ್ಲದನವರತ ಭಾಸಿಸುವ ಮುನಿಜನೋಪಾಸಿತದಲಿಂದತೆಜೋರಾಶಿ . . . ಬೆರಗಿತಾ ಮುನಿಯ ಕಣ್ಸಿ (ಪಂಆಣಾ. ೦-೨-೩೯).

[(ಸಂ. ಭಾಸನ) + — ಇಸು]

ಭಾಸುರ (ಗು). ೧. ಹೊಳೆಯುವ; ಪ್ರಕಾಶಮಾನವಾದ. ೨. ಅಂದವಾದ; ಶೋಭಿಸುವ; ಭವ್ಯವಾದ: ಆಣುವಂ ಕಂಡಂ ಪರಮಾನುಭಾವಭಾಸುರ ಸುರಂಜೋಪಮಿತ ವಿವಿಧವಿಧೋದಯನಂ (ಪಪಾ. ೨-೪೨); ಪ್ರಾಸಾಭಾಸಂ ಮೂಱುಂ ಭಾಸುರಕಜ್ಜಾಯತಾಕ್ಷಿ ಕೇಳದ ನೊರೆಂ (ಪಂರಾಂಪಾ. ೦-೪೬ ಆಚಪ್ರ); ಭಾಸುರ ವಾರಣಾಸಿಯಂ ಪೊಕ್ಕನುತ್ಸವಮನ್ಯಪಂ (ಪಪಾ. ೦೦-೪೬); ಭಾಸುರಕುಸುಮಗಳಂದೆ ಹರನಂ ಯಜಿಪಂ (ಪಾಪ್ರೀ. ೨-೩೦). (ನಾ). ೫. ಅಂದ; ಶೋಭೆ; ಸೌಂದರ್ಯ: ಪಜ್ಜಳನ್ಮಪಿಯಲ್ಲಾಸದಿಂ ಭಂಡಾರಿ ಬಸವೇಶನಂ ನಮರತ್ನಮಯಸಿಂಹಾಸನದ ಮೇಲೆ ಭಾಸುರಂ ನಿಗೆ ಕುಳ್ಳಿರಿಸಿ (ಪಪ್ರ. ೪೯-೩೭). ೪. ಶೂರ; ಕಲಿ. [ಸಂ.]

ಭಾಸೆ 'ಬಾಸ್ಕೆ' ನೋ.

ಭಾಸ್ಕರ (ಗು). ೧. ಬೆಳಕನ್ನುಂಟುಮಾಡುವ; ಹೊಳೆಯುವ; ಪ್ರಕಾಶಿಸುವ. (ನಾ). ೨. ಕೇಸರು; ರವಿ; ಸೂರ್ಯ: "ಆದಿತ್ಯಃ, ಸವಿತಾ . . . ಭಾಸ್ಕರಃ, ತಿಗ್ಮಾಂಶುಃ, ದ್ವಾದಶಾತ್ಮಾ, ತ್ರಯೀತನುಃ _ ಈ ೧೭ ಆದಿತ್ಯನ ಪೆಸರ್" (ಪಣಾಮು. ೭-೪೫); ಸಿತಮಂ ಭಾಸ್ಕರನಂ ನಿಲೆ ಚತುರ್ಥದೊಳ್. . . ಜನಪತಿಯಕ್ಕುಂ (ಜಾತಿ. ೮೨-೨೩); ಮನದೊಳ್ ಭಾಸ್ಕರನಂ ಬೇಡಿ ಮತ್ಸಂ ಪ್ರಕಾಶದೊಳ್

ಇದೆ ರಥಂ ಸಿದ್ಧಮಡಲಿಮೆನೆ (ಜಾಪಕ್ಕ. ೫೯-೩೨). ೫. 'ಜೀವಂಧರ ಚರಿತೆ' ಎಂಬ ಪದ್ಯದಿ ಕಾವ್ಯವನ್ನು ರಚಿಸಿದ ಕನ್ನಡದ ಒಬ್ಬ ಕವಿಯ ಹೆಸರು: ಈ ಕೃತಿರಚಿತ ಕವಿವರನು ವಿತತ ವಿಶ್ವಾಮಿತ್ರ ಗೋತ್ರಾನ್ವಿತ ಸರಸಿಸವಾಂಕಸುತವಿಶ್ರುತನು ಭಾಸ್ಕರನು (ಜೀಚಂಕ. ೦-೫೬); ಭಾಸ್ಕರನು ಕಾಮರಾಮ್ಯಾಹಾರತದಿಂದ ಕಾವ್ಯಭಾಗಗಳನ್ನು ಒಂದೆರಡು ಕಡೆಗಳಲ್ಲಿಯಾದರೂ ಎರವಲಾಗಿ ತೆಗೆದುಕೊಂಡಂತಿದೆ (ಕಾಸಾ. ೨೫೬). ೪. 'ಬೇಹಾರಗಣಿತ' ವೆಂಬ ಗ್ರಂಥವನ್ನು ರಚಿಸಿದ ಕನ್ನಡದ ಒಬ್ಬ ಕವಿಯ ಹೆಸರು: ಭಾಸ್ಕರ. ಸು. ೧೬೫೦– ಈತನು ಬೇಹಾರಗಣಿತವನ್ನು ಬರೆದಿದ್ದಾನೆ (ಕವ. II. ೨೭೦). ೫. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ: ಇಂದುಗಣಂ ಶರಸಂಖ್ಯೆ ಯೊಳೊಂದಿರೆ ಜಾದ್ರಧರಂ ಬಂದು ಪದಾಂತದೊಳಿರ್ದೊಡೆ ಭಾಸ್ಕರಮೊಳ್ ಯತಿಯುಂ ನಿಂದು ವಿರಾಜಿಸೆ ಪಾಕಗನಿಂ ಪಡದತ್ತು ಜಗದ್ವಂದಿತಂ (ಜಿಸಂಚಂ. ೨-೦೬೦). ೬. [ಧಂದ] ಎರಡು ಲಘುಗಳ ಮಧ್ಯೆ ಒಂದು ಗುರುವಿರುವ ಗಣ; ಜಗಣ (ು–ು): ಉರ್ವೀಮಾರುತ ಭಾಸ್ಕರಾ ನಿಲವಿಯದ್ವಂದ್ವಂ ಪದಾಂತಂಗಳೊಳ್. . . ಪಾರ್ದೂಲವಿಕ್ರೀಡಿತಂ (ರಂಮೋಅಂ. ೨-೦೭೩). [ಸಂ.]

ಭಾಸ್ಕರನಂದನ (ನಾ). ೧. ಸೂರ್ಯನ ಮಗ. ೨. ಕರ್ಣ: ಹಿಂದಣಿಗೆ ತಿರುಗಿದನು ಭಾಸ್ಕರನಂದನನು ಬಲವಂಕದಲಿ (ಕಾಹ್ಯಕ್ರಿ.೮. ೬-೩೦). ೩. ಯಮ. ೪. ಶನಿ. ೫. ಸುಗ್ರೀವ. [ಸಂ.]

ಭಾಸ್ಕರವಾರ (ನಾ). ಸೂರ್ಯನು ಅಧಿದೇವತೆಯಾಗಿರುವ ವಾರ; ಭಾನುವಾರ; ಆದಿತ್ಯವಾರ: ಕೃಷ್ಣಸಪ್ತಮಿಯೊಳ್ ಭಾಸ್ಕರವಾರದಂದು (ಶಿ.VI. ಕಚಸಂ. ೫೦-೫೯; ೧೧೮೦). [ಸಂ.]

ಭಾಸ್ಕರಸುತ (ನಾ). =ಭಾಸ್ಕರನಂದನ ೨: ಭಾಸ್ಕರಸುತನಂ ಪಾಲ್ವುದಿ ಮುರಹರನಿಂದೈವಡಿ ಪೆಗಬ್ಬಿಯದುಚಿರ ಭೀಮುಂ (ಕಮಾ. ೬೭ ಕ್ರ.ಮೂ೮). [ಸಂ.]

ಭಾಸ್ಕರಸ್ವರ (ನಾ). ಸೂರ್ಯಸ್ವರ; (ಮನುಷ್ಯನ) ಬಲಭಾಗದ ಮೂಗಿನ ಹೊಳ್ಳೆಯಿಂದ ಹೊರಡುವ ವಾಯು: ಒಂದು ದಿನ ತಮ ವಿನಲಿ ನಡವುದು ಇಂದುಭಾಸ್ಕರಸ್ವರಗಳಪ್ಪತ್ತೊಂದು ಸಾವಿರದಾಱನೂಱುಮ ಯೇಳುಭಾಗದಲಿ ಬಂದುದನು . . . ತಂದು (ಹಂಪ. ೧೪); ಇಂದು ಭಾಸ್ಕರ=ಸೂರ್ಯ ಚಂದ್ರರ, ಸ್ವರ=ಶ್ವಾಸಗಳು. (ಒಳಹೊರಶ್ವಾಸಗಳು) (ಹಂಪ. ೧೪ ೩೮). [ಸಂ.]

ಭಾಸ್ಕರಾಪತ್ಯ (ನಾ). [ಜ್ಯೋತಿ] ಶನಿಗ್ರಹ: ಭಾಸ್ಕರಾಪತ್ಯನುಮಂಗಾರಕನುಂ ಬೇಣ್ ಕೂಡಿರೆ ದಾರಕಬ್ಬುದ್ಧಯಕ್ಕಿ ಲಯಮಾಗದಿರಂ (ಜಾಪಪ. ೬-೦೯). [ಸಂ]

ಭಾಸ್ಕರಿ (ನಾ). =ಭಾಸ್ಕರಾಪತ್ಯ: ಇರೆ ನೀಚಾಂಶಕದೊಳ್ ಹಿಮಾಂಶು ಮೃಗಕುಂಭಕ್ಷೇತ್ರದೊಳ್ ನೋಡೆ ಭಾಸ್ಕರಿ (ಜಾಪ. ೯-೩೬). [ಸಂ.]

ಭಾಸ್ವರ (ಗು). ೧. ಹೊಳೆಯುವಂಥ; ಪ್ರಕಾಶಮಾನವಾದ. ೨. ಭವ್ಯವಾದ; ಉಜ್ಜ್ವಲವಾದ: ಭಾಸ್ವರಭಕ್ತಿಯಿಂದೆಱಗಿ ದೇವಗಣಂ (ಶ್ರೀಪ್ರ. ೦೦-೦೯). (ನಾ). ೨. ಒಂದು ಮೂಲಧಾತು: ರಂಜಕ: "ಸಾಮಾನ್ಯ ಶಾಖದ ವಾತಾವರಣದಲ್ಲಿ ಅವ್ಯಜನಕದೊಡನೆ ಸಂಯೋಗ ಹೊಂದಿ ನಿಧಾನವಾಗಿ ಸುಡುತ್ತ. ಈ ಕಾರಣದಿಂದ ಕತ್ತಲೆಯಲ್ಲಿ ಹೊಳೆಯುವ ಹಳದಿ ಛಾಯೆಯ, ಮೇಣದಂಥ, ಒಂದು ಅಲೋಹವಮೂಲಧಾತು: ರಂಜಕ; ಭಾಸ್ವರ" (Phosphorus. ೫೦೫೩). [ಸಂ.]

ಭಾಸ್ವರಜ್ಞೋಧ (ನಾ). ೧. ದಿವ್ಯಜ್ಞಾನ. ೨. ಭವ್ಯವಾದ ಜ್ಞಾನವನ್ನು ಪಡೆದಿರುವವನು; ದಿವ್ಯಜ್ಞಾನಿ: ಭಾಸ್ವರಜ್ಞೋಧ ನೀನಱಿಪಿದೈ ನುಡಿಯೊಳ್ ನೃಪನೀತಿಸಾರಸರ್ವಸ್ವಮಾ (ಜಾಅಕ್ಷ. ೨-೩೪). [ಸಂ.]

ಭಾಸ್ವರರೂಪ (ನಾ). ಪ್ರಕಾಶಮಾನವಾದ ಆಕಾರ; ಕಾಂತಿಯುಕ್ತವಾದ ಸ್ವರೂಪ: ಶುಕ್ತಿಯಲ್ಲಿ ರಜತಜ್ಞಾನವು ಹುಟ್ಟುವ ಕ್ರಮ ಹೇಗೆಂದರೆ—ಇಂದ್ರಿಯಸಂಪ್ರಯೋಗದಿಂದ ಶುಕ್ತಿಯು ವ್ಯಕ್ತಿಯೂ ಭಾಸ್ವರ ರೂಪದಿಂದ ಸಹಜವಾಗಿ ಗೃಹೀತವಾಗುವುದು (ಜಾಪಕ್ಕ. ೬೮೯). [ಸಂ.]

ಭಾಹದರು 'ಬಹಾದುರ್' ನೋ.

ಭಾಹೂ (ಅ). ಮೆಚ್ಚುಗೆ, ಹರ್ಷ ಮೊದಲಾದ ಭಾವಗಳನ್ನು ಸೂಚಿಸುವ ಒಂದು ಅವ್ಯಯ: ದಕ್ಕೀಶ ಚಲದಂಕಮಲ್ಲ . . . ಭಾಹೂಯೆಂಬ ವಕ್ಯವಿಲ್ಲದೆ ಬರುತಿರ್ದ (ಹಸ. ೫೦-೩೭).

ಭಾಳ 'ಭಾಲ' ನೋ.

ಭಾಳನಯನ (ನಾ). ಹಣೆಯಲ್ಲಿ-ಕಣ್ಣಿಳ್ಳವನು; ಹಣೆಗಣ್ಣ: ಶಿವ: ಭಾಳನಯನಪ್ರತಿಮರುಣಾಲೋಲಮಾನಸ (ಪಚ್ಚ. ೨೨-೩೨).

[ಸಂ. ಭಾಲನಯನ]

ಭಾಳನೇತ್ರ (ನಾ). ೧. (ಶಿವನ) ಹಣೆಗಣ್ಣು: ಆ ಗಣಂಗಳ ನಡುವೆ ಮೆಱೆಮಿಂದನೊಪ್ಪಿದಂ . . . ಭರ್ಗನ ಭಾಳನೇತ್ರದಂತೊಪ್ಪಿದಂ (ಪಂಶಿ. ಚಿ. ೬೨-೦೦); ಮುಚ್ಚಿದಭದವ ಭಾಳನೇತ್ರದ ಪಂಚ್ಚಳದ ತೆಱದಿರವಿ ಕಿಜ್ಜನು ಬಿಚ್ಚಿ ಬೀಸಿದ ತೆಱದಬುಜ ಅಚ್ಚರಿದನು ಮರ್ಕಟರ (ಶಾಜಾ. ೫೦-೬೯). ೨. = ಭಾಳನಯನ: ಭಾಳನೇತ್ರಂಗೆ ತಾಂ ಸದೃಶನೀ ಲೌಕಿಕಂ (ತ್ರಿಜಾಪ್ರಾ. ೪೦-೭೦). [ಸಂ. ಭಾಲನೇತ್ರ]

ಭಾಳಪಟ್ಟಿ 'ಭಾಲಪಟ್ಟಿ' ನೋ.

ಭಾಳಲಾಂಛನ (ನಾ). ಹಣೆಯಲ್ಲಿ ಧರಿಸುವ ವಿಭೂತಿ ಮೊದಲಾದ ಗುರುತು.–ಚಿಹ್ನೆ: ಬೀರಯ ಕೆಲವರು 'ಭಸಿತ–ಗಂಧಾಕ್ಷತೆ'ಗಳನ್ನೂ 'ಭಾಳಲಾಂಛನ'ವನ್ನಾಗಿ ಮಾಡಿಕೊಂಡರು (ಕಾಬಸ. ೧೭).

[ಸಂ. ಭಾಲಲಾಂಛನ]

ಭಾಳಲಿಪಿ (ನಾ). ಹೀಗೆ ಹೀಗೆ ಆಗಬೇಕೆಂದು ಬ್ರಹ್ಮನು ಹಣೆಯಲ್ಲಿ ಬರೆದಿರುವನೆಂದು ನಂಬಲಾದ ಅಕ್ಷರ.— ಬರವಣಿಗೆ; ಹಣೆಯ ಬರಹ; ವಿಧಿಬರಹ: ಕಾಳಗದಲಿಂದಮಿತರಾಯರ ಭಾಳಲಿಪಿಗಳ ನೊರಸುವೆನು (ಕುಶ್ಯಕ. ೫೦-೨); ತೊಡೆಮೇ ತೋರ್ಪೀ ವಿಶಾಚರಪಡೆಯು ಭಾಗ್ಯದ ಭಾಳಲಿಪಿಯನು (ಕೂಪಂ. ೬-೬-೨). [ಸಂ. ಭಾಲಲಿಪಿ]

ಭಾಳಲೋಚನ (ನಾ).=ಭಾಳನಯನ: ಭಾಳಲೋಚನನಾದೊಡಂ ಕಾದಿ ತಂದಪೆವು (ಜಾಪ. ೫೬. ೩೬-೬); ಬರಹೇಳಲಾಪರೆ ಕರೆ ಸಹಾಯಕೆ ಭಾಳಲೋಚನನ (ಕಾಬ್ಯಕ್ರಿ.೨. ೨-೦೩); ಅಂಗದನು ತಿರುಗಲು ಭಾಳಲೋಚನ ಮೆಚ್ಚು ತಿರೆ ಭೂಪಾಲ ರಾಘವನಂಗಚಿಹ್ನವನ್ನು ಮನ್ನಿಸಿದ (ಶಾಜಾ. ೫೦-೩೯); ಕೋಳಿ ಕೂಗದ ಮುನ್ನ ಏಳುವದು ವಿಕ್ಕದಲಿ ಭಾಳಲೋಚನನ ಭಕ್ತಿಯುಂ ನವೆದರೆ ಅಳನುಳಯ್ಯ (ಸಕಾಕ್ಕ. ೨೧೩). [ಸಂ. ಭಾಲಲೋಚನ]

ಭಾಳವಿಲೋಚನ (ನಾ). = ಭಾಳನಯನ: ಸನ್ನುತಕಾಮಳಸುಚರಿತಂ ಪ್ರಚ್ಛನ್ನಭಾಳವಿಲೋಚನನು (ಪಚ್ಚ. ೫೦-೨). [ಸಂ. ಭಾಲವಿಲೋಚನ]

ಭಾಳಾಂತರ (ನಾ). ಹಣೆಯ ಮಧ್ಯಭಾಗ.–ಮಧ್ಯ: ಬರೆಯಬಲ್ಲನು ಬರೆದ ಬರಹವನೊರಸಲಱಿಯೆನು ಜಗದ ಭಾಳಾಂತರದಲೀ ಸುಕೃತಾಚರದ ಶತ್ಕರ್ಮಫಲವಿದು (ಕೂಪಂ. ೦-೮-೩೦); ಶಿಶುವಿನ ಭಾಳಾಂತರ ದೊಳ್ಬಳ್ಳು ಮಂತ್ರಿಸಿದ ವಿಭೂತಿಯ ಬೊಟ್ಟು (ಜೀಚಚಕ. ೪-೩೬).

[ಸಂ. ಭಾಲಾಂತರ]

ಭಾಳಾಂಬಕ 'ಭಾಲಾಂಬಕ' ನೋ.

ಭಾಳಾಕ್ಷ 'ಭಾಲಾಕ್ಷ' ನೋ.

ಭಾಳಾಕ್ಷರ (ನಾ). = ಭಾಳಲಿಪಿ: ಬರೆಯಬಲ್ಲೆನು ಬರೆದ ಬರಹವ ನೊರಸಲಱಿಯೆನು ಜಗದ ಭಾಳಾಂತರದಲಿ . . . ನಿಧಾರದ ಭಾಳಾಕ್ಷರದ ವಿಧಿಗೆ ವಿಧಾತ್ರ ನೇನೆಂದ (ಕೂಪಂ. ೦-೮-೩೦). [ಸಂ. ಭಾಲಾಕ್ಷರ]

ಭಾಳಾಕ್ಷಿ (ನಾ)· [ಜೈನ] ಪಣೆಯಲ್ಲಿ ಕಣ್ಣುಳ್ಳವಳು; ಜ್ವಾಲಾಮಾಲಿನಿ: ಚಳದ್ಭಾಳಾಕ್ಷಿ ಸಂಪ್ರೀತಿಯಿಂ ಹ್ವಾಳಾಮಾಳಿನಿ ಮಾಬ್ಕೆ ಮತ್ಕೃತಿಗೆ ನಿರ್ವಿಘ್ನಕ್ರಿವರ್ವಾಹಮಂ (ಶಂಪ್ರಕ್ರಿ. ೦-೯).

[ಸಂ. ಭಾಲಾಕ್ಷೀ (ಭಾಲ + ಅಕ್ಷಿ + —)]

ಭಾಳೇಕ್ಷಣ (ನಾ). ೧. ಹಣೆಗಣ್ಣು : ಶಿವನಿಂತೇಳ್ದಂದು ಭಾಳೇಕ್ಷಣಜಮು ನೆರೆಯೆ ತಾಂ ಕೊಟ್ಟು ಪನ್ಮಾಯಯಂ ತೂಳ್ದು . . . ಗೆಲ್ದೊಪ್ಪಿದಂ (ಕ್ರಕಂ. ೬-೭೭). ೨. = ಭಾಳನಯನ : ಬಿನ್ನೈಸಿದಳು ಭಾಳೇಕ್ಷಣಂಗಾ ವಾಸುದೇವಸ್ತುತಿಪಾಯಣಕ್ಕೆ ಗೆರಿದಿವಿಯರು ಭಾಸುರಾನುಗ್ರಹ ರಹಸ್ಯವಱಬುಪಬೇಕೆಂದು (ತ.ಸಂಧಾ. ೦-೨-೬). [ಸಂ. ಭಾಲೇಕ್ಷಣ]

ಭಿಂಗಾರಿ 'ಬಿಂಗಾರ' ನೋ.

ಭಿಂಡಿಮಾಲ (ನಾ). = ಭಿಂಡಿವಾಲ. [ಸಂ.]

ಭಿಂಡಿವಾಲ, ಭಿಂಡಿವಾಳ (ನಪು). ಕೈಯಿಂದ ಎಸೆಯುವ ಸಣ್ಣ ಭಲ್ಲೆಯಂತಹ ಆಯುಧ: ಶಕ್ತಿ, ಪ್ರಾಸ, ಪಾಟಿಕ, ಭಿಂಡಿವಾಲ, ಶೂಲ . . . ಮೊದಲಾದ ಆಯುಧಗಳಿಂದ ತಂದಿರುವ ಈ ಸಮಂತಪಟಚಕವು ಎಷ್ಟು ಭಯಂಕರವಾಗಿರುವುದು ! (ಶಾಪಾ. ೦೦೨) ; ತೋಮರ ಭಿಂಡಿವಾಲ ಗಳ್ ಯುದ್ಧ ಗಜಗಜಗಳ ಪೋರಾಟ . . ಅನಂತಾನಂತವಾಗಿ ಕೆತ್ತಲ್ಪಟ್ಟಿದ್ದುವ (ಚಾಂಪಾ. ೦೯೦). **ಭಿಂಡಿವಾಳ** : ತೋಮರಮುಸಲ ಮುಸುಂಡಿಭಿಂಡಿವಾಳವುದ್ದಂಡದಂಡಿವಿಧಾಯುಧಾಂಗಳೊಳಮಿತಪ್ರವೀಣ [ನು]ಂ . . . ಆಗಿ (ಶಂಪಾ. ೨-೩೪ ಪ) ; ಕುದುರೆಯ ಮೇಲೆ ಬಿಲ್ಲರಸು ಸೂಲಿಗೆ ತೀರಿತ್ತಿ ಭಿನ್ನೈವಾಳಮತ್ತಿದ ಕರಮಾಳು (ಪ್ರ. VII. ೨೫೦. ೦೩೬-೩೯ ; ೨೦೦೨) ; ಪರಿಘಚಕ್ರಮುಸುಂಡಿತೋಮರಭಿಂಡಿವಾಳಚಯ . . . ವರಧನುರ್ದಂಡಾದಿ ಶಸ್ತ್ರೋತ್ಕರದಲಸಿಬರು ಕುಶಲರಾದರು ಪುನಿಯ ಗರುಡಿಯಲಿ (ಸಂಪಪ. ೦೭-೦೦೪). [ಸಂ.]

ಭಿಂಡಿವಾಳ 'ಭಿಂಡಿವಾಲ' ನೋ.

ಭಿಂದಪಾಲ (ನಾ). = ಭಿಂಡಿವಾಲ. [ಸಂ.]

ಭಿಂದಿಸು (ಕ್ರಿ). ಭೇದಿಸು ; ಪೇಧೆಯನ್ನೆಱಟುವಾಡು : ಸೋಲ್ತುದು ಗೆಲ್ದುದು ಮಗುಟ್ಟುಂ ಸೋಲ್ತುದು ಭಿಂದಿಸಿದುದು . . . ಗ್ರಹಂಗಳೆಂದಲಿ ಮುನ್ನಂ (ಅಶ್ವಕ ೭-೫೯). 'ಭೇದಿಸು' ಪರಾ. [ಭಿಂದು + —ಇಸು]

ಭಿಂದು (ನಾ). ೧. ಮುರಿಯುವಿಕೆ ; ಹುಳುಮಾಡುವಿಕೆ ; ನಾಶ ಪಡಿಸುವಿಕೆ : 'ಭಿಂದಿಸು' ಪರಾ. ೨. ಹಾಳುಮಾಡುವವನು ; ನಾಶಪಡಿಸುವವನು. ೩. ಗರ್ಭದಲ್ಲೇ ಸತ್ತ ಮಗುವನ್ನು ಪಡೆಯುವವಳು ; ಮೃತಜಾತ ಶಿಶುವಿನ ಜನನಿ : "ಪಶ್ಚಪ್ಪಸೂತಿ, ಭಿಂದುಃ — ಈ ೨ ಮಕ್ಕಳ್ ಬಾಜದವಳ್" (ಶಂಆಮು. ೩೦-೩೪೪) ; "ಮಕ್ಕಳುಱ್ ನಾವ ಸತಿ ಭಿಂದುವಕ್ಕುಂ" (ಪುಗಾಂ. ೫೯-೩). [ಸಂ.]

ಭಿಕಾರಿ 'ಬಿಕಾರಿ' ನೋ.

ಭಿಕ್ಕನೆ (ಅ)· ರೆಪ್ಪೆ ಮೊವಲಾದುವುಗಳನ್ನು ಸಜಿಚಿಸುವ ಒಂದು ಅನುಕರಣಾವ್ಯಯ : ಸರಸರಿಯಪರ್ಚಾಂಡ ಭಿಕ್ಕನೆ ಬಿಯಿ ಪ್ರಳಯಾಂತಕನ ಕೋಪಮಸ್ಫುರಣಕಿಂ ಮಿಗಿಲೆಂದನೆಲಂ ಬೀಸುವುದು ಬಿರುಘೋಷ (ಅಸಂಗಾ. ೦-೬-೩೩). [ಭಿಕ್ಕ್ + —ಅನೆ]

ಭಿಕ್ಷ (ನಾ). ೧. ಇನ್ನೊಬ್ಬರನ್ನು ಬೇಡುವುದು ; ತಿರುವೆ ; ಯಾಚನೆ : ಮೃಡದೇವಾ ಶರಣೆಂದು ಭಿಕ್ಷಕ್ಕೆ ಹೋದರೆ ಅಲ್ಲಿ ನಡೆ ದೇವಾ ಎಂದೆನಿಸು ಕೂಡಲಸಂಗಮದೇವಾ (ಬಸವ. ೧೩೭) ; ಆಕಾರಮೆಂತಪ್ಪುದು ಆಕಾರಮುಮಾಮಾರ್ಪ — ಗ್ರೀವಾ. ಭಿಕ್ಷಾ—ಎಂಬೆರಡು ಶಬ್ದಂಗಳ್ಗೆ ಗ್ರೀವ. ಗ್ರೀವೆ ; ಭಿಕ್ಷ, ಭಿಕ್ಷೆ — ಎಂದು ನಿಱುಪುವುದು (ಕಪುತ. ೪೫ ಕ್ರಿಯಾ) ; ದ್ವಾರಾವತಿಯ ಪೊಱ್ಮ . . . ಭಿಕ್ಷವ ಬೇಮುತೆಯ್ದಿ ಮುವನಾರಿಯಪ್ಪಿಂದ ಶ್ರೀಕೃಷ್ಣನರಮನೆಯ ಪೋಡುವೆನೆಂದು ನಡೆತಂದನು (ಭಕ್ತಿ. ೨ ಸಂಪ). ೨. ಬೇಡಿದಾಗ ಕೊಡುವ ಅನ್ನ, ಆಹಾರ ಇತ್ಯಾದಿ : ಅಕ್ಷಯುವ ಭಕ್ಷಗೆ ಒಕ್ಕೈ ಭಿಕ್ಷಮಂ ತಂದಿಕ್ಕಿದು ತ್ಪಮನಕ್ಷಯುದ ಫಲಕೇಂ ಸಮವಹುದೇ (ಬಸಪು. ೭೦ ಸಂ) ; ರಾಗಿ ತಂದಿರ್ಯಾ ಭಿಕ್ಷಕೆ ರಾಗಿ ತಂದಿರ್ಯಾ (ಶಿಸಂಚ. ೦-೭೯ ಪ್ರಾಂ) ; ರಾವಣನು ಸನ್ಯಾಸಿಯ ವೇಷವನ್ನು ಹಾಕಿಕೊಂಡು ಈ ವರ್ಣಶಾಲೆಗೆ ಬಂದು ಭಿಕ್ಷವನ್ನು ಕೇಳಿದನು. ಈ ತಂತ್ರವನ್ನರಿಯದ ಸೀತೆ ಭಿಕ್ಷವನ್ನು ನೀಡಿದಳು (ವೀಪಾ. IV. ೨೩). ೩. ಸಂನ್ಯಾಸಿಗಳಿಗೆ ನೀಡುವ ಭೋಜನ, — ಊಟ: ಸ್ವಾಮಿಗಳನ್ನು ಈ ದಿನ ಭಿಕ್ಷಕ್ಕೆ ಕರೆದಿದ್ದೆವೆ (ಕ.ಚ).

[ಸಂ. ಭಿಕ್ಷಾ]

ಭಿಕ್ಷಾಂದೇಹಿ (ಅ). ೧. 'ಭಿಕ್ಷೆಯನ್ನು ಕೊಡಿ' ಎಂಬರ್ಥದಲ್ಲಿ ಬಳಕೆಯಾಗುವ ಸಂಸ್ಕೃತದ ವಾಕ್ಯ : 'ಭವತಿ ಭಿಕ್ಷಾಂದೇಹಿ' ಎಂಬುದಿದಾವೆ ಕಬ್ಬಿಗರ್ಗೂ ಸಿದ್ಧಿಸದ ಪೆರ್ಮೆಯ ಸಪ್ತಾಕ್ಷರೀಮಂತ್ರಂ (ಜಾಪಾಕ್ಕ. ೦೦೫-೦೯). ೨. (ಆಲಂ) ಭಿಕ್ಷೆಯನ್ನು ಕೊಡಿ ಎಂದು ಬೇಡುವಮನು ; ತಿರುಕ ; ಭಿಕ್ಷುಕ : ಅತನ ದೊರೆದಡೆ ಉಪವಾಸಿ ತಾನೆಂದೆಂದು . . . ದೆನೆ ದೆನೆಗಳು ತಿರುಗಿ ಭಿಕ್ಷಾಂದೇಹಿಯಾದ ಸಂದೇಹಿಗಳ ಶಿವನೊಲ್ಲಮು (ಚಪ್ರಗೀ. ೫೫-೫೬) ; ಪನಗೆ ಭಾಮೈದನಾಗಿ ಭಿಕ್ಷಾಂದೇಹಿಯಾಗದಾರದೆಂದು ಅಧಿಕಾರವನ್ನು ಕೊಡಿಸಿದರೆ ಹೀಗೆ ಹೀನಪನಾಶ್ರಿತನಾಗಿ ಉಭಯಭ್ರಷ್ಟತ್ವವನ್ನು ಪೊಂದಿದನೆ (ಜೈಕೃ. ೬ ಜಾಸಂ). 'ದೇಹಿ' ಪರಾ. [ಸಂ.]

ಭಿಕ್ಷಾಟನ (ನಾ). ಭಿಕ್ಷೆಗಾಗಿ ತಿರುಗಾಡುವುದು ; ಭಿಕ್ಷೆ ಬೇಡುವುದು : ನಿಮ್ಮ ಮನೆ ಜಜ್ಜಿದೆನರಿದ ತಲೆಯು ಬಾಯೊಳಗೆ ರಕ್ತವನೆ ಬರೆಯಿಸುವಂದದಿಂದ ಭಿಕ್ಷಾಟನವನೆಸಗುವೇಕಭವ (ಜೈಕೃ. ೫-೨-೩೬); ದೇವನುತ್ಸವದಿಂದ ಭಿಕ್ಷಾಟನಕ್ಕೆ ನಡೆದ ಶಿವಯವದೇವೊಗಳ್ವೆನು (ಜಾಪಾ. ೦-೦೨). [ಸಂ.]

ಭಿಕ್ಷಾಟನಂಗೆಯ್ (ಕ್ರಿ). ಭಿಕ್ಷೆಗಾಗಿ ತಿರುಗು; ಯಾಚನೆಗಾಗಿ ಮನೆಮನೆಗೆ ಹೋಗು ; ತಿರುವೆ ಬೇಡು : ಭಿಕ್ಷಾಟನಂಗೆಯ್ಯಬೇಕೆಂದು ಮನಸಂದು ಗುಹ ಗಣಪರುಗಳಯ್ಯ ಸಿಂಗರವಾದವರ (ಭಕ್ತಿ. ೦-೦೨).

[ಭಿಕ್ಷಾಟನ + ಕೆಯ್]

ಭಿಕ್ಷಾಟನೆ (ನಾ).= ಭಿಕ್ಷಾಟನೆ : ಐಶ್ವರ್ಯ ಕಳೆದುಕೊಂಡವರಿಗೆ, ನಿರ್ಗತಿಕರಾದವರಿಗೆ ಈ ಭಿಕ್ಷಾಟನೆಯೇ ಆಶ್ರಯ (ಜೈಸಾ. ೨ ಕ್ರಮಾ.೫೫).

[ಸಂ. ಭಿಕ್ಷಾಟನ]

ಭಿಕ್ಷಾನ್ನ (ನಾ). ೧. ಭಿಕ್ಷೆಯಿಂದ ದೊರಕುವ ಅನ್ನ ; ಮನೆಮನೆಗೆ ಹೋಗಿ ಬೇಡಿ ತರುವ ಅನ್ನ.—ಆಹಾರ: ಭಿಕ್ಷಾನ್ನಮನುಂಡಾ ಭಾಳಾಕ್ಷಂ ಸೌರಾಷ್ಟ್ರಪತಿಗತುಃಗಃಗ್ಗಳಮಂ ಸುಕ್ಷಮೆಯಿಂದರ್ಪಿಸುತೊಳ್ಳಕ್ಷಯಸುಖ ದೊಳ್ಪನೋಹಿಲಂ ಪಡೆದಿರ್ದಂ (ಅಕ್ಕಪ. ೦೦-೯೦) ; ಇವಂಗೆ ಭಿಕ್ಷೆಯನಿಕ್ಕ ದೊಡೆ ಪಾವೆ ಪೂಜಮಟ್ಟು ಪೇಪನೆಂದು ಭಿಕ್ಷಾನ್ನಂ ಪುಟ್ಟದಂತೆಸಗಲು (ಕ್ರಪು. ೨೯-೬೬ ಪ) ; ಈ ಪಜ್ರವನ್ನು ಕೊಂಡುಕೊಂಡರೆ ನನಗೆ ಮುಂದೆ ಭಿಕ್ಷಾನ್ನವೇ ಗತಿ (ಪುಪಪ. ೩೬). ೨. ಬೇಡಿದವರಿಗೆ ನೀಡುವ ಅನ್ನ,— ಆಹಾರ : ನಿಜವೆಂಬೊರ್ವಳಪುರಾಗದಿಂ ಭಿಕ್ಷಾನ್ನಮಂ ತಂದು ನಿಂದಾರ್ (ಜಾಸಾ. ೨-೩೬); ಅಲ್ಲಿ ನಮ್ಮ ಜನ ಬೇಕಾದಷ್ಟು ಇರಬೇಕಲ್ಲವೆ ಭಿಕ್ಷಾನ್ನ ಹಾಬುವುದಕ್ಕೆ ? (ಪೂಸಾಕ್ಷ. ೩೯). [ಸಂ.]

ಭಿಕ್ಷಾಪಾತ್ರ (ನಾ). ೧. = ಭಿಕ್ಷಾಪಾತ್ರೆ. ೨. ಭಿಕ್ಷಾಪಾತ್ರೆಯನ್ನು ಹಿಡಿದವನು: ಶಿವ : ಎಲ್ಲಿಂದ ಬಂದನೋ ಈ ಮೋಹಸದ ಸಿದ್ಧಂ . . . ಪಾನೆಲ್ಲಿಂದ ಬಂದನೋ ವಿಸ್ಮಯಾಕಾರ ಕಾರುಣಿಕ ಭಿಕ್ಷಾಪಾತ್ರನು (ಜಾಸಾ. ೨ ೩೬). [ಸಂ.]

ಭಿಕ್ಷಾಪಾತ್ರೆ (ನಾ)· ಭಿಕ್ಷೆ ಬೇಡಲು ಉಪಯೋಗಿಸುವ ಪಾತ್ರೆ ; ತಿರುವೆಗಾಗಿ ಹಿಡಿದುಕೊಂಡು ಹೋಗುವ ಪಾತ್ರೆ : ಭಿಕ್ಷಾಪಾತ್ರೆ ಹಿಡಿಯುವ ಜನ ಇನ್ನೂ ನಮ್ಮಲ್ಲಿ ಇಡಮೆಯಾಗಿಲ್ಲ (ಕ.ಚ). [ಸಂ. ಭಿಕ್ಷಾಪಾತ್ರ]

ಭಿಕ್ಷಾಶನ (ನಾ). = ಭಿಕ್ಷಾನ್ನ ೧: ತಂದ ಭಿಕ್ಷಾಶನವನ್ನೆಲರು ನಂದನರು ತಾಯಿಗೆ ವಿವೇದಿಸಲು (ಶಂಬ್ಯಾಕ. ೦೦-೪): [ಸಂ.]

ಭಿಕ್ಷಿಸು (ಕ್ರಿ). ತಿರುಪೆ ಬೇಡುಂ; ಯಾಚಿಸು: ಭಿಕ್ಷೆಬೇಡು: ಆಜನ ಕಪಾಲವಂ ಪಿಡಿದಸಮನೇಶ್ವನು ಭಿಕ್ಷಿಸುವನೆಂದುಸುರ್ವನು (ಬಸಪ್ರ. ೩೭-೩೨).

[ಭಿಕ್ಷ + -ಇಸು]

ಭಿಕ್ಷು (ನಾ). ೧. ಭಿಕ್ಷೆ ಬೇಡುವವನು; ಯಾಚಕ; ಭಿಕ್ಷುಕ: ಮಿಱುಪ ಪಳಂಚಿನ ಕುಂಡಲದ ಕಿವಿಯೊಳಿಂಬಿಟ್ಟು . . . ಮೆಱೆಯೆ ಭಿಕ್ಷುವೊಳು ತ್ರಿರೇಖೆಯ ಬೊಟ್ಟು ಭಿಕ್ಷುವೇಷದ ತಾಳ್ದನಳ್ಳಿಪಟ್ಟು (ಶಶಾಸ. ೧-೦೦). ೨. ಸಂಸಾರದಲ್ಲಿ ವಿರಕ್ತನಾಗಿ ಭಿಕ್ಷೆಯಿಂದ ಪ್ರಾಣಧಾರಣೆ ಮಾಡಿಕೊಂಡು ಮೋಕ್ಷಕ್ಕಾಗಿ ಪ್ರಯತ್ನಿಸುವ ಸಂನ್ಯಾಸಿ; ನಾಲ್ಕನೆಯ ಆಶ್ರಮವನ್ನು ಕೈಗೊಂಡಿರುವ ತಪಸ್ವಿ: "ಪರಾಶರೀ, ಬ್ರಹೀ, ಭಿಕ್ಷುಃ . . . ತಾಪಸಃ—ಈ ೯ ತಪಸ್ವಿ" (ಪಂಚಮು. ೬೮-೨೩೨). ೩. ಬೌದ್ಧ ಸಂನ್ಯಾಸಿ: ನಾವು ತಂದೆಯ ಬಲಾತ್ಕಾರಕ್ಕಾಗಿ ಭಿಕ್ಷು ಆಗಿಲ್ಲ (ಕ್ರಚಾಳ. ೩. ೦೩೭); ಆನಂದ ಬೀಳ್ಮ ಭಿಕ್ಷುಗಳನೆಚ್ಚರಿಸು (ಕ್ರಚಾಸ. ೬೩-೦); ಸ್ತೂಪಗಳಲ್ಲಿ ಭಿಕ್ಷುಗಳು . . . ಮೆರವಣಿಗೆಯಲ್ಲಿ ಹೋಗುತ್ತಿರುವ ಶಿಲಾಶಿಲ್ಪಗಳು ದೀಣವಪ್ಪ ದೊರೆತಿವೆ (ಇಷಸಂ. ೪೪). ೪. ಜೈನ ಸಂನ್ಯಾಸಿ: ಪ್ರ "ಸನ್ಯಾಸಿ. ಇವರಲ್ಲಿ ನಾಲ್ಕು ವಿಧ:— ೧. ಅನಗಾರ. ೨. ಯತಿ. ೩. ಮುನಿ. ೪. ಋಷಿ" (ಕ್ರತತಪ್ರ. ೦೮೪). [ಸಂ.]

ಭಿಕ್ಷುಕ (ನಾ). ೧. ಭಿಕ್ಷೆಯನ್ನು ಬೇಡಿ ಜೀವಿಸುವವನು; ತಿರುಕ; ದೀನಚಕ: ಪುರಹರನು ಭಿಕ್ಷುಕನಾಗಿ ದ್ವಾರಾವತಿಗೆ ಬಂದ ಪರಿಯಂತದ ವರ್ತಸುವನಾ (ಶಭ್ಯಸ. ೦ ೫೫೭). ೨. ವಿರಕ್ತ; ಸಂನ್ಯಾಸಿ: ಈ ದೇಗುಲಮಮೊಳಪುಗಲ್ಲೇಡ ನೀನೆಂದೊಡಂ ಗರ್ವಂ ಪಕ್ಕಾಮೆಂದುದಂ ಲೆಕ್ಕಿಸದೊಳಪುಗುವಂ ಭಿಕ್ಷುಕಂಗೇಕವಂಗೀ ಪಂತಂ (ಕ್ರಚಸ. ೨೯-೮೩). ೩. ಜೈನಯತಿ; ಸಂನ್ಯಾಸಿ; ಶ್ರಮಣ: ಆರ್ಹತದೊಳ್. . . ಬ್ರಹ್ಮಚಾರಿಯುಂ ಗೃಹಸ್ಥನುಂ ವಾನಪ್ರಸ್ಥನುಂ ಭಿಕ್ಷುಕನುಮೆಂದು ನಾಲ್ವರಪ್ಪರ್ (ಜಾತ್ಕಂತ್ಯ. ೨೨೭): ತದಾಶ್ರಮಿಯಪ್ಪ ಲೋಹಿತಾಶ್ವನೆಂಬ ಭಿಕ್ಷುಕಂ ಬಂದು ಜಾರುದತ್ತನ ಸಮಕ್ಷದೊಳಿರ್ದೆತ್ತಣಂ ಬಂದಿರಿತ್ತ ಪೋದಪ್ಪಿರ್ ಎಂಬುದುಂ (ಕಬುತ್ತಿ. ೪-೮೪ ೪). [ಸಂ.]

ಭಿಕ್ಷುಕಿ (ನಾ). ೧. ಭಿಕ್ಷೆಯನ್ನು ಬೇಡಿ ಜೀವಿಸುವವಳು; ಯಾಚಕಿ: ತೆಗೆದುಕೋ! ಭಿಕ್ಷುಕಿ! (ಬೀಬಿಕ್ ೨೨೬.); ತಿಂಮನ ಮನೆಯ ಬಾಗಿಲಲ್ಲಿ ಭಿಕ್ಷುಕಿಯೊಬ್ಬಳು ಕೂಗುತ್ತಿದ್ದಳು (ತಿಂಮ್ಮಕ ೦೦೬). ೨. ಜೈನ ಸಂನ್ಯಾಸಿನಿ: ಕಂತಿ: "ಶ್ರವಣಾ. ಭಿಕ್ಷುಕೀ. ಮುಂಡಾ—ಈ ೩ ಕಂತಿ" (ಪಣಾಪ್ರ. ೦೦-೪೩೩). [ಸಂ. ಭಿಕ್ಷುಕೀ]

ಭಿಕ್ಷುಣಿ (ನಾ). ಬೌದ್ಧಸಂನ್ಯಾಸಿನಿ: ಇಂತ ದಿವ್ಯವಾದ ದೃಷ್ಟಿಯ ಭಗವಂತ ಪಾನು ತನ್ನ ಶಿಷ್ಯರ ಸಂಗವನ್ನು ಸ್ಥಾಪಿಪ ಬಹುಕಾಲಕ್ಕಾದರೂ ಸ್ತ್ರೀಯರನ್ನು ಭಿಕ್ಷುಣಿಯರನ್ನಾಗಿ ಸ್ವೀಕರಿಸಿರಲಿಲ್ಲ (ಇಷಮಾ. ೦೬); ಬುದ್ಧ, ಧರ್ಮ, ಸಂಘಗಳಿಗೆ ಶರಣಾಗುವುದರಿಂದ ಭಿಕ್ಷುಗಳೂ ಭಿಕ್ಷುಣಿಯರೂ ಮುಕ್ತಿ ಪಡೆಯಬಹುದೇ ಹೊರತು ಅದನ ಸ್ತ್ರೀವಮ್ಮ ಪಡೆಯುವುದು ಸಾಧ್ಯವಿಲ್ಲವೆಂಬ ಭಾವವೆ (ಕ್ಯಾಕ್ರಾ. ೦೬೩); ಪ್ರಾಯಶಃ ಇದು ಭಿಕ್ಷುಣಿ ಮತ್ತು ದೇವದಾಸಿಪದ್ಧತಿಯಿಂದ ಪ್ರಾರಂಭಿಸಿರಬಹುದು (ಇತಿಹಾಕ. ೬೦).

[ಸಂ. ಭಿಕ್ಷುಣೀ]

ಭಿಕ್ಷೆ (ನಾ). ೧. ತಿರಿಯುವುದು; ಬೇಡುವುದು; ತಿರುಪೆ; ಯಾಚನೆ: "ಯಾಚ್ನಾ, ಭಿಕ್ಷಾ. ಅರ್ಥನಾ. ಆರ್ದನಾ—೪ ಬೇಡುವಿಕೆ. ಕೇಳುವಿಕೆ. ತಿರಿದಾಡುವಿಕೆ" (ಶಿಕ್ಕಾಂಕ. ೩೩೩); ಗ್ರೀವಾ. ಭಿಕ್ಷಾ—ಎಂಬೆರಡು ಶ್ಲುಂಗಗಳ್ಗ ಗ್ರೀವ. ಗ್ರೀವೆ. ಭಿಕ್ಷೆ. ಭಿಕ್ಷೆ ಎಂದು ನಿಜಿಸುವುದು (ಶಮಾವ. ೩೨ ಕ್ರಟೀ). ೨. ಬೇಡಲು ಬಂದವರಿಗೆ ಕೊಡುವ ದಾನ.—ಅನ್ನ. ವಸ್ತ್ರ. ಹಣ ಮೊದಲಾದುವು: ಕರೆದು ಭಿಕ್ಷೆಯ ನೀಡ ಗೋಪ್ಯಮ್ಮ ನಿಮ್ಮ ತವಳ ಗೋವಾಲನಿಗೆ (ಕ್ಷಸಂಪ. ೩-೦೩೨ ಪದ್ಯ). ಇವಂಗೆ ಭಿಕ್ಷೆಯನಿಕ್ಕದೊಡೆ ತಾನ ಪೊಡಮಟ್ಟು ಪೋಪನೆಂದು ಭಿಕ್ಷಾನ್ನಂ ಪುಟ್ಟದಂತೆಸಗಲು (ಕ್ಷಕಂ. ೨೯-೩೩ ಸ). ೩. ಸಂನ್ಯಾಸಿಗಳು ಮತ್ತು ಮಹಾಧಿಪತಿಗಳಿಗೆ ನೀಡುವ ಭೋಜನ: ಇಂದು ಸ್ವಾಮಿಗಳನ್ನು ಮಮ್ಮ ಮನೆಗೆ ಭಿಕ್ಷೆಗೆ ಕರೆದಿದ್ದವ್ವ (ಪಾಸ್ವ).

ಭಿಕ್ಷೆನೀಡು=ಬೇಡಲು ಬಂದವರಿಗೆ ಏನನ್ನಾದರೂ ಕೊಡು; ತನ್ನ ಹೃದಯವನ್ನೇ ತಂಡುಲರೂಪವಾಗಿ ಭಿಕ್ಷೆನೀಡಿದಳು (ಪಣಂಪಾ. ೦೦೬). **ಭಿಕ್ಷೆ ಬೇಡು**=ಯಾಚನೆ ಮಾಡು; ತಿರಿ: ಮುಂದಿನ ಮನೆಗೆ ಹೋಗಿ ಭಿಕ್ಷೆಬೇಡು (ಜ್ಞಪ್ರ. ೨೭). [ಸಂ. ಭಿಕ್ಷಾ]

ಭಿಡಿಯ 'ಬಿಡಯ್ಯ' ನೋ.

ಭಿಡೆಯ 'ಬಿಡೆಯ್ಯ' ನೋ.

ಭಿತ್ತ (ನಾ). ಜೊರು; ಪಿಂಡ: "ಭಿತ್ತಂ. ಶಕಲಂ. ಖಿಂಡಂ. ಅರ್ಧ—೪ ಮುರುಕು ಜೊರುಗಳ ಹೆಸರು" (ಶಿಕ್ಕಾಂಕ. ೨೯). [ಸಂ.]

ಭಿತ್ತರಿ (ನಾ). ಖಿಡ್ಗಯುದ್ಧದಲ್ಲಿ ಒಂದು ವರಸೆ: ಬಂಡಿಕೋಲಿನ ಕೆಳಗಡೆಯಲ್ಲಿ ಬಂಡಿಕೋಲಿನಿಂದ ಮುಟ್ಟಿಸಿ ಭ್ರಮಣವನ್ನು ಮಾಡಿ ತೊಡೆಯಲ್ಲಿ ಏಟು ಆವದು ಅದು ಭಿತ್ತರಿಯೆಂದು ಸವ್ಯತವ್ಯ (ಪಕ್ಕಥ. ೪-೬೦). 'ತಳಭಿತ್ತರಿ' ಪರಾ. [?]

ಭಿತ್ತಿ (ನಾ). ೧. ಮುರಿಯುವುದು; ಒಡೆಯುವುದು; ಬೇರ್ಪಡಿಸುವುದು. ೨. ಜೊರು; ಮುರುಕು; ತುಂಡು. ೩. ಒಡೆದು ಹೋಗಿರುವ ಅಥವಾ ಭಾಗವಾಗಿರುವ ಯಾವುದಾದರೂ ವಸ್ತು. ೪. ಬಿರುಕು: ಸೀಳು; ಛಿದ್ರ. ೫. ಗೋಡೆ; ಕುಡ್ಯ: "ಭಿತ್ತಿ. ಕುಡ್ಯಂ—೨ ಗೋಡೆಯ ಹೆಸರುಗಳು" (ಶಿಕ್ಕಾಂಕ. ೧೯); ಇದಿರೊಳ್ ಪೊಳೆವ ಪಳುಕಿನ ಭಿತ್ತಿಯಂತೆ ಸುತ್ತಿದ ನೇತ್ರದುಕೂಲದೊಳಂ (ಕಾಪಂಪು. ೬೯); ಭಿತ್ತಿ ಮೂಜಿ ಮೇಲೆ ಚಿತ್ರ ಬರೆಯಿತ್ತು (ಇಷಸಂ. ೪೨-೧೦೯). ೬. ಚಿತ್ರವನ್ನು ಬರೆಯುವ ಮೂಲ ಆಧಾರ; ಹಲಗೆ. ಬಟ್ಟೆ. ಗೋಡೆ ಮೊದಲಾದ ಸಾಧನ: "ಭಿತ್ತಿಯನೆ ಪುಸ್ತಕಂ" (ಜುಂಗಾ. ೦೩೬-೦೩); ಭಿತ್ತಿಯಿಲ್ಲದೆ ಬರೆಯಬಹುದ ಚಿತ್ರಾರವ ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ (ಇಷಸಂ. ೪೧೬): ಭಿತ್ತಿಯೊಂದಿಲ್ಲದಿರೆ ಚಿತ್ರದೆಂತಿರಲಹುದು ? ಚಿತ್ರವಿಲ್ಲದೆ ಭಿತ್ತಿ ಸೊಗಸಹುದೊತು ? (ಜುಂಗಾಸ. ೦೦೩). ೭. ಮೂಲ; ತಳ: ಆರ್ಚನೆಯಾವನರ್ಚಿಸಿದಲ್ಲಿ ಪುಣ್ಯದ ಫಲ ಭಕ್ತಿಯಿಂ ದ್ರವ್ಯವ ಕೊಡುವುದು ಪಯಿಕ್ಕಿರೋಕದೊಳಗು ಈ ಉಭಯದ ಭಿತ್ತಿಯನಱಿದು ನಿತ್ಯವ ತಿಂದವಂಗೆ ಏಱೂ ಎವರಿಲ್ಲ (ಜಿಸಂಕಾ. ೦೬-೩೦). ೮. ಜೀವನ ನಡೆಸಲು ಅಥವಾ ದೇವಕೋತ್ಸವಾದಿಗಳು ನಡೆಯಲು ಸ್ಥಾಪಿಸುವ ಆಧಾರಭೂತವಾದ ಶಾಸನವುಳ್ಳ ಭೂಮಿ. ಇಡುಗಂಟು ಮೊದಲಾದುವು: ಆಶ್ರಯನಿಧಿ: ಉತ್ಸವಗಳು ನಡೆಯತ್ಕ್ಕ ಬಗೆ ನಮ್ಮ ಹತ್ತು ಮಂದಿ ಒಪ್ಪಿ ಭಿತ್ತಿ ಮಾಡಿ ಕೊಟ್ಟಿರುವುದೆ:ನೆಂದರೆ (ಎಸ್. IX (೩), ೦೩೫. ೦೦೬ ಬಿ: ೧೯೦೭). ೯. ಹಿನ್ನೆಲೆ: "ಮುಂದುಗಡೆ ಇರುವ ಮುಖ್ಯ ವ್ಯಕ್ತಿಗಳಿಗೆ ಅಥವಾ ವಸ್ತುಗಳಿಗೆ ಪ್ರಾಧಾನ್ಯಕೊಡುವಂಥ ದೃಶ್ಯ. . . . ಹಿನ್ನೆಲೆ; ಭಿತ್ತಿ; ಮೆರೆ; ಅಪ್ರಸಿದ್ಧಿ" (Back-ground—ಇಂಗ್ಲಿ). [ಸಂ.]

ಭಿತ್ತಿಚಿತ್ರ (ನಾ). ಗೋಡೆಯ ಮೇಲೆ ಬರೆದಿರುವ ಚಿತ್ರ: ಭಿತ್ತಿ ಚಿತ್ರಾಕೋಕೇವಿನೋದದಿಂ. . . ರಯ್ಯಮೆನಿಸ್ಪುರ್ವಿ(ಶಶಯ್ಯಾಗೃಹಂ (ಕ್ಷತ್ರಕ. ೯-೪೬); ಪ್ರಕೃತ ಅವಲೋಕನದಲ್ಲಿ . . . ಚೋಳರ ಕಾಲಗಳ ವರೆಗೆ. ಆ ಮೇಲೆ ತಿರುವಾಂಕೂರು—ಕೊಚ್ಚಿ ಭಿತ್ತಿಚಿತ್ರಗಳಿಂದ ಲೇಖಾಕ್ಷರಕೆಯ ವರೆಗೆ. . . ಪರಿಚಯ ಮಾಡಿಕೊಡಲು ಉದ್ದೇಶಿಸಲಾಗಿದೆ (ಭಾಶದ. ೩೨೨): ಅಜಂತಗುಹಾಲಯದಲ್ಲಿ ಭಿತ್ತಿಚಿತ್ರಗಳಿರುವ ಸಂಗತಿ ಅನೇಕರಿಗೆ ತಿಳಿದದ್ದೇ (ಇಷಸಂ. ೦೨). [ಸಂ.]

ಭಿತ್ತಿದೋಷ (ನಾ). [ಕಾವ್ಯಮೀ] ಒಂದು ಬಗೆಯ ಕಾವ್ಯದೋಷ ; ಸಂಧಿ ಮಾಡಬೇಕಾದ ಸ್ಥಳದಲ್ಲಿ ಸಂಧಿಯನ್ನು ಮಾಡದಿರುವುದು; ವಿಸಂಧಿ : ಮುನ್ನಂ ಪೇಳ್ದುರ್ದರ್ಥಂ ಭಿನ್ನಪ್ರಸ್ತಾರ ಭಿತ್ತಿದೋಷವಿವಾ ಗತಂ (ಕಾಣಾ. ೦-೯೭). ℙ "ಜನಪತಿಗೆ ಒಸಗೆಯಂ ಪುರಜನಮೆಲ್ಲಂ ಬೀಡುತಿರ್ಪರಾಗಳ್ ತಾಮುಂ" ಎಂಬಲ್ಲಿ 'ಜನಪತಿಗೊಸಗೆಯಂ' ಎಂಬುದನ್ನು, ಒಂದು ಮಾತ್ರೆ ಕಡಮೆ ಬೀಳುವುದೆಂದು ಕವಿ 'ಜನಪತಿಗೆ ಒಸಗೆಯಂ' ಎಂದು ಬಿಡಿಸಿದ್ದಾನೆ. ಹೀಗೆ ಒಡೆಯ ಬಾರದ ಸ್ಥಳದಲ್ಲಿ ಒಡೆದರೆ ಭಿತ್ತಿದೋಷ. [ಸಂ.]

ಭಿತ್ತಿಪತ್ರ (ನಾ). ಯಾವುದಾದರೂ ಒಂದು ವಿಷಯವನ್ನು ಪ್ರಚಾರ ಮಾಡುವುದಕ್ಕಾಗಿ ಜನರಿಗೆ ಚೆನ್ನಾಗಿ ಕಾಣಲೆಂಬ ಉದ್ದೇಶದಿಂದ ಗೋಡೆಗಳಿಗೆ ಅಂಟಿಸುವ ಪತ್ರ; ಪ್ರಚಾರಪತ್ರ : ಆಕಾಶದ ಬೆನ್ನ ಮೇಲೆ ಭಿತ್ತಿಪತ್ರ ಓದಿದೆ (ಅಚಿಸಂ. ೦೯); ಸಾಂಡರ್ಸ್ ಕೊಲೆ ಸಂಬಂಧದ ಭಿತ್ತಿಪತ್ರಗಳನ್ನು ಭಗತ್‌ಸಿಂಗ್ ಬರೆದುದೂ ತಿಳಿಯಬಂತು (ಆತ್ಮಚ. ೦೦೪); ಈ ಕಾಯಿಲೆಯ ವಿಚಾರವನ್ನು ಭಿತ್ತಿಪತ್ರಗಳ ಮೂಲಕವಾಗಲಿ. . . ನಾಗರಿಕರಿಗೆ ಅರಿವಾಗುವಂತೆ ವಿವರಿಸೇಳು (ಕಂಬಿಚ. ೫೦). ℙ ಇದು ಇಂಗ್ಲಿಷಿನ 'Wall Poster' ಎಂಬುದರ ಕನ್ನಡ ಅನುವಾದ. [ಸಂ.]

ಭಿದುರ (ಗು). ೧. ಮುರಿಯುವ; ಒಡೆಯುವ : ಸೀಳುವ. (ನಾ). ೨. ಮುರಿಯುವವನು ; ಒಡೆಯುವವನು : ಮದವದರಿಂಹ್ಯಮಸ್ತಕಭಿದುರಂ [ಭಯ]ವಿಧುರನನ್ಯಬಾಣಚ್ಛಿದುರಂ. . . ವೃಷಸೇನಂ (ಗದಾಯು. ೯-೬೬). ೩. ಇಂದ್ರನ ವಜ್ರಾಯುಧ; ಅಶನಿ : "ಪವಿಃ, ಅಶನಿಃ. . . ಗೌಃ, ಭಿದುರಂ. . . ಭೂಮಿಃ —ಈ ೧೨ ಇಂದ್ರನ ವಜ್ರಾಯುಧದ ಪೆಸರ್" (ಹೇಚಂಮು. ೦೦-೬೩) ; ಅರಿಭೂಭೃದ್ದಿಗಿದುರ್ಗ್ಗಸಂಭಿದುರ ಜ್ಯಾಳಾಸಳಂ . . . ಬಲ್ಲಾಳನ್ಮಪಾಲ ಧೈರವತರಪ್ರೌದ್ಯತ್ಪ್ರತಾಪಾನಳಂ (ಎಳ. ೪೭, ೪೬೩೬. ೦೫೯-೨೨ ; ೧೨೫೬) ; ಕಾವು ಗೋಚರಮಾಗದಿರೆ ಕೋಪ ಪೆಗ್ಗಳಿಸೀವಿ ಭಿದುರರೂಪಮಿತಶಬ್ದವೇಧಿಯ ತೆಗೆದು ಕಾವನ್ನರಿದು ಕೊಂದಪೆ ನೆನಲು (ಪಂಡಾಣ. ೦-೦೨-೧೨). ೪. ವಜ್ರಾಯುಧವನ್ನು ಳ್ಳವನು; ಇಂದ್ರ; ದೇವೇಂದ್ರ: ಅರಿರಾಯಗರ್ವಪರ್ವತದಳನಭಿದುರನುರುತರವಿಪಕ್ಷ ಪ್ರಬಲಸೇನಾಬ್ಧಿಬಾಡುಂ (ಆಣಾ. ೦-೦-೧೪). ೫. ಸುಲಭವಾಗಿ ಒಡೆಯುವಂತಹುದು; ಭಂಗುರವಾದುದು. ೬. ಬೆರಕೆಯಾದುದು ; ಮಿಶ್ರವಾದುದು. ೭. ಆನೆಯ ಕಾಲಿನ ಸರಪಳಿ. ೮. ಸಿಡಿಲು. [ಸಂ.]

ಭಿದೆ (ನಾ). ೧. ಒಡೆಯುವುದು; ಮುರಿಯುವುದು : "ಭಿದೆ ಸ್ಫುಟ ನಮಕ್ಕುಂ" (ಪಜ್ಜಳಚ. ೦೦೪-೨೨). ೨. ವ್ಯತ್ಯಾಸ ; ಭೇದ : ರೂಪಮಾದುಪಿಡಿದು ಭಿದೆಯಂ ಸ್ಥಾಪಿಸಲು (ಪಪಂಪ. ೦೫-೧೦). ೩. ರೀತಿ; ವಿಧ; ಬಗೆ. [ಸಂ. ಭಿದಾ]

ಭಿದ್ಯ (ನಾ). ದಂಡೆಯನ್ನು ಭೇದಿಸಿಕೊಂಡು ರಭಸದಿಂದ ಹರಿಯುವ ಹೊಳೆ ; ಗಂಡುಹೊಳೆ ; ನದ : "ಭಿದ್ಯಃ, ಉದ್ಯಃ, ನದಃ —ಈ ೩ ಗಂಡುದೊಜೆ" (ಪಪಂಮು. ೦೦೦ ೪೪). [ಸಂ.]

ಭಿನ್ನ (ಗು). ೧. ಒಡೆದ ; ಮುರಿದ. ೨. ವಿಭಾಗಿಸಿದ ; ಬೇರ್ಪಡಿಸಿದ. ೩. ಬಿಡಿಸಿದ ; ತೆರೆದ. ೪. ಅರಳಿದ ; ವಿಕಾಸಹೊಂದಿದ. ೫. ಬೇರುಬೇರೆಯಾದ ; ಪ್ರತ್ಯೇಕವಾದ : ಭಿನ್ನ ಅಂಕಿ ಅಂಕಗಳನ್ನು ಹೋಲಿಸುವಾಗ ಪ್ರಶ್ನೆಗಳು ತುಂಬಾ ಸಹಾಯವಾಗುತ್ತವೆ (ಶಿಶಿ. ೩೬೯). ೬. ವ್ಯತ್ಯಾಸಗೊಂಡ ; ವ್ಯತ್ಯಯಹೊಂದಿದ. (ನಾ). ೭. ಒಡೆದಂಹೋದುದು ; ಸೀಳಿಹೋದುದು ; ಹಾಳಾದುದು : "ಭಗ್ನಮೆನೆ ರುಗ್ಣಮೆನೆ ತಿನ್ನಮೆನೆ . . . ಭಿನ್ನಮೆನೆ ಕೆಟ್ಟುದು" (ಸಂಗೀಶಾ. ೦೩೨-೨೬) ; ಜಲಭ ನುಂಗಿತ್ಯಯ್ಯಾ ಎನ್ನ ಕರವು ಪತ್ರೆಯ ಮುಂಗಿತ್ಯಯ್ಯಾ ಶಿವಿ ಎನ್ನಯ ಮಂತ್ರ ಭಿನ್ನವಾಯಿತ್ತು (ಬಸವ. ೧೫೬) ; ಭಿನ್ನವಾದ ಗಡಿಗೆ ಹೊನ್ನು ಕೊಟ್ಟರೆ ಸುನಾದೀತೆ ? (ಗಪ). ೮. ತುಂಡು ; ಚೂರು ; ಶಕಲು. ೯. ಬೇರೆಯಾದುದು ; ಪ್ರತ್ಯೇಕವಾದುದು ; ಅನ್ಯ : ನೀನೆ ಸರ್ವೇಶ ಸರ್ವಗುಪರ್ವಾತ್ಮಕ ಸರ್ವಭೂತಮಯ ನಿನ್ನಿಂ ಭಿನ್ನಹಾಗಿರ್ಪ ವಸ್ತುಗಳಲ್ಲ (ಪಪಂ. ೩-೨೯) ; ಅಭವನೊಳ್ಪೆರೆದಾ ಮನವುಂ ವೆನಹುಂ ವಾಂಛೆಯುಮನ ವರತಂ ಭಿನ್ನಮಿಲ್ಲದಿರ್ಪುಂ ನಿಜದಿಂ (ಹಬಾಕ. ೩-೩೯). ೧೦. ಅರ್ಧಭಾಗ : "ಖಂಡಃ, ಅರ್ಧಃ (ರ್ಧಂ). ನೇಮಃ, ಶಕಲಂ, ಭಿನ್ನಂ, ಸಾಮಿ—ಈ ೬ ಅರ್ಧಂ" (ಪಕಾಪಮು. ೦೦೦-೨೪) ; "ಶಕಲಮೆನೆ ನೇಮಮೆನೆ ಭಿನ್ನಮೆನೆ ಖಂಡಮೆಂಬರ್ಧಕ್ಕೆ ನಾಮಂ" (ಕುಂಪಾ. ೦೫೯-೦೪). ೧೧. ಕುಂದು ; ಕೊರತೆ ; ದೋಷ : ತನ್ನ ಭಿನ್ನವನಱಿಯದೆ ಅನ್ಯರವೆಂಬ ಕುನ್ನಿಯನೇನೆಂದೆ . . . ದೇವಾ (ಬಸವ. ೦೦೩) ; ದೇವಗೊಂದಿಷ್ಟೂ ಭಿನ್ನವಾದರೆ ಭಾಮಿಸರು (ಪಜ್ಞಕ. ೭೫-೧೦). ೧೨. ಸೀಳಲ್ಪಟ್ಟವನು ; ಭೇದಿಸಲ್ಪಟ್ಟವನು ; ನಾಶವಾಡಲ್ಪಟ್ಟವನು : ನಿನ್ನಿಂ ಭಿನ್ನವಾಗಿರ್ಪ ವಸ್ತುಗಳಲ್ಲೀ ರಿವು ಭಿನ್ನನಾದವನಿದು ಚಿತ್ರಂ ಪದ್ಮಪತ್ರಾಂಬಕಾ (ಪಪಂ. ೩-೨೯). ೧೩. ಬೇರೆಯಾದವನು ; ಬೇರೆಯಾದ ವ್ಯಕ್ತಿ: ಭಿನ್ನಸಂತಿಸೆ ತೋಜು ಭಿನ್ನಾಭಿನ್ನವಹಿಯೆ ಪೊಜವಿ ತಿಳಿಯಲುಭಿನ್ನಸ್ಯೆ ಮುಂದಮ್ಮೆರಿ (ಭಾಜ್ಞಾಗ. ೯-೭೦). ೧೪. [ಗಣಿತ] ಭಾಗಿಸುವುದು ; ಭಾಗಾಹಾರ ; ಸತ್ತು ತಗೆಯಂ ಸಂಖ್ಯಾತಂ ತವೆ ಭಕ್ತಿ ಭಿನ್ನ ಜಿನ್ನದಿತಂ ದಾಪ್ತಭಾಷೆಗಳ್ ಭಾಗಿ ಸೂವೆಂದಜ್ ನೀನವಂ ಬುಧಾ ? (ಕ್ಷಕಣಾ. ೦೫-೦೫). ೧೫. [ಸಂಗೀತ] ರಾಗ ಜಾತಿಗಳಲ್ಲಿ ಒಂದು : ರಾಗಜಾತಿಗಳು ಶುದ್ಧ ಭಿನ್ನ ಗೌಡ ಅಚ್ಚ ಸಾಧಾರಣ ಸಪ್ತಸಾಧಾರಣ ಪುಟ್ಟಿರವೆಂಬಾಱುಜಾತಿಗಳು (ಶಪಾಗೀ. ೭೭). [ಸಂ.]

ಭಿನ್ನಂಗೆಯ್. ಭಿನ್ನಗೈ (ಕ್ರಿ). ೧. ಸೀಳು ; ನಾಶಮಾಡು : ಲೋಕಾಳಿ ಸಂತಾಪಮಂ ಭಿನ್ನಂಗೆಯ್ಯಲೊಡರ್ಚಿ ಪಾಲ್ಗಡಲನೆಯ್ದಾಲೋಡನಂಗೆಯ್ದು (ಪಪಂಕ. ೩-೦೯). **ಭಿನ್ನಗೈ** : ೨. ಭೇದಮಾಡು : ಪಕ್ಷಪಾತವನ್ನು ಮಾಡು : ತನ್ನಿನಿಯಳ ತನ್ನೊಡವೆ ಮೈ ಬಳಗವೆ ಭಿನ್ನಗೈಯದೆ ಬೆರಸುವುದು (ಪಪಂ. ೬-೧೩). [ಭಿನ್ನ + ಕೆಯ್]

ಭಿನ್ನಕರ್ತೃ (ನಾ). [ವ್ಯಾಕ] ಕ್ರಿಯಾಪದ ವಾಚ್ಯವಾದ ಕ್ರಿಯೆಯನ್ನು ಮಾಡುವ ವ್ಯಕ್ತಿಯಂನ್ನು ಪ್ರೇರಿಸುವವನು ; ಕ್ರಿಯೆಯನ್ನು ನಿರ್ವಹಿಸುವ ವ್ಯಕ್ತಿಯಿಂದ ಬೇರೆಯಾದ ವ್ಯಕ್ತಿ ; ಪ್ರಯೋಜಕ ಕರ್ತೃ ; ಪ್ರೇರಕ ಕರ್ತೃ : ಭಿನ್ನಕರ್ತೃವಿನೊಳಸುವಿಲ್ಲ (ಕಾಪ. ೨೬೦. ಕ್ರಿಪ್ರ). [ಸಂ.]

ಭಿನ್ನಕರ್ತೃಕ (ನಾ). ೧. = ಭಿನ್ನಕರ್ತೃ : ಅಥ ಭಿನ್ನಕರ್ತೃಕ ಪ್ರಯೋಗೇ _ ಪರ್ಚಿಸು _ ವರ್ಧವೇ. ಬರ್ಚಿಸು – ಭಯೇ (ಕಾಪಾ. ೪). ೨. ಪ್ರಧಾನ ಕ್ರಿಯೆಯ ಕರ್ತೃವಿನಿಂದ ಭಿನ್ನವಾವ ಕರ್ತೃವನ್ನು ಹೊಂದಿರುವ ಅಪೂರ್ಣಕ್ರಿಯಾಪದ : ಅಪೂರ್ಣಕ್ರಿಯಾವದಗಳು . . . ಇವುಗಳಲ್ಲಿ ಏಕಕರ್ತೃಕ, ಭಿನ್ನಕರ್ತೃಕ ಎಂದು ಎರಡು ವಿಧಗಳವೆ . . . ಕಡೆದೊಡೆ ಪಾಲ್ಗಡಲ್ ವಿವಿಧ ಮನ್ಮವನೀಯವೆ ಎಂಬಲ್ಲಿ ಕಡೆವ ಕ್ರಿಯೆಯೂ ಈವ ಕ್ರಿಯೆಯೂ ಒಂದೇ ಕರ್ತೃವಿನಿಂದ ಆದುವಲ್ಲ ; ಭಿನ್ನಕರ್ತೃಕವಾದುವು (ಕ್ರಿವಿ. ೧೯). [ಸಂ.]

ಭಿನ್ನಕುಂಭ (ನಾ). ಒಡೆದ ಗಡಿಗೆ,– ಮಡಕೆ : ಭಿನ್ನಕುಂಭದೊಳಿಜ್ದುದಕದಂತೆ ನೆಲ್ಲುಗೆಟ್ಟು ಮಹೀಜದಂತೆ (ಪಪಪು. ೬೦-೪೦). [ಸಂ.]

ಭಿನ್ನಕೌಶಿಕ (ನಾ). [ಸಂಗೀತ] ಒಂದು ರಾಗದ ಹೆಸರು : ಭಿನ್ನಷಡ್ಜ ಭಿನ್ನಕಾವ ಭಿನ್ನಕೌಶಿಕ ಮಧ್ಯಭಿನ್ನವೆಂದು ನಾಲ್ಕು ರಾಗಂಗಳು ಗೌಡ ಜಾತೀಯಂಗಳು (ಶಪಾಗೀ. ೨೩೩). [ಸಂ. ಭಿನ್ನಕೌಶಿಕೀ]

ಭಿನ್ನಗಣ್ಣು (ನಾ). ಕಪ್ಪುದೃಷ್ಟಿ ; ಸರಿಯಲ್ಲದ ನೋಟ : ತನ್ನಲ್ಲಿ ತಾ ಸುವಿಧಾನಿಯಾಗಿ ನೋಡಲಱಯದೆ ಭಿನ್ನಗಣ್ಣಿಲಿ ನೋಡಿಪೆನೆಂದು ತಮ್ಮ

ಮಟ್ಟಿದು ಇನ್ನುಳಿದುಂ ಅಜುವ ಅಣ್ಣಗೀರಾ ನೀವ್ ಕೇಳಲೋ (ಅಂಗಕ. ೦೭-೩೨). [ಭಿನ್ನ + ಕಣ್ಣ (< ಕರ್ಣ)]

ಭಿನ್ನಗ್ಗೈ 'ಭಿನ್ನಂಗೆಯ್' ನೋ.

ಭಿನ್ನತಾನ (ನಾ)- [ಸಂಗೀತ] ಒಂದು ರಾಗದ ಹೆಸರು : ಭಿನ್ನಷಡ್ಜ ಭಿನ್ನತಾನ ಭಿನ್ನಕೌಶಿಕ ಮಧ್ಯಭಿನ್ನವೆಂದು ನಾಲ್ಕು ರಾಗಂಗಳು ಗೌಡ ಜಾತೀಯಂಗಳು (ಅಕೇ. ೨೫೬). [ಸಂ.]

ಭಿನ್ನತೆ (ನಾ)- ಬೇರೆಬೇರೆಯಾಗಿರುವಿಕೆ ; ವ್ಯತ್ಯಾಸ : ಮನುಷ್ಯನಲ್ಲಿ ಸಾಹಸ, ಪೇಡಿತನ ಮುಂತಾದುವು ಸ್ವಾಯುಸಂಸ್ಥಾನದ ಭಿನ್ನತೆ ಯಿಂದುಂಟಾಗುತ್ತವೆ (ಕಾಣಾಕ್ಷ. ೩೭) ; ಕಲಿಯುವ ಭಾಷೆಗೂ ಆಡುವ ಭಾಷೆಗೂ ತುಂಬ ಭಿನ್ನತೆ ಇದೆ (ಬೃಸ. ೦೫೯). [ಸಂ. ಭಿನ್ನತಾ]

ಭಿನ್ನಪಂಚಮ (ನಾ)- [ಸಂಗೀತ] ಒಂದು ರಾಗದ ಹೆಸರು : ಗಾನ ಸಾಮವರಾಲಿಯು ಮೇಳದಲ್ಲಿ ಪೂರ್ವವಂಶಿ(ಕಾ). ಭಿನ್ನಪಂಚಮರಾಗ ಹೀಗೆ ಎರಡು ರಾಗಗಳನ್ನು ಹೇಳಿದೆ (ಕಮಾಶ್ರ. ೦೫೯). [ಸಂ.]

ಭಿನ್ನಪದ (ನಾ)- [ವ್ಯಾಕ] ಸಮಾಸವಾಗದೆ ಇರುವ ಬೇರೆಬೇರೆ ಪದ : ವ್ಯಸ್ತಪದ : ಭಿನ್ನಪದದೊಳಂ ಸಮಾಸಪದದೊಳಂ ಣಕಾರಕ್ಕೆ ಪರಮಾದ ನಕಾರಂ ಣಕಾರಮನೆಯ್ದುಗುಂ (ಕಶಾ. ೦೫೮ ಕ್ಕಿ). [ಸಂ.]

ಭಿನ್ನಪಾಠ (ನಾ). ಸಂಪಾದಿತ ಗ್ರಂಥಗಳಲ್ಲಿ ಸೂಚಿಸಿರುವ ಬೇರೆ ಪಾಠ : ಪಾಠಾಂತರ : ಇಲ್ಲಿ ನವುಗೆ ಎರಡು ಪಾಠಗಳಲ್ಲಿ ಒಂದನ್ನು ಆಯುವ ಅವಕಾಶವಿದೆ. ಇವುಗಳನ್ನು ಭಿನ್ನಪಾಠಗಳು (variants) ಎಂದು ಕರೆಯುತ್ತಾರೆ (ಪಾರಿಚ. ೩೬). [ಸಂ.]

ಭಿನ್ನಪಾಠವಾಹಕ (ನಾ). ಒಂದು ಮೂಲಪ್ರತಿಯಿಂದ ಜನ್ಯವಾಗಿರ ಬಹುದಾದ ಪಾಠಾಂತರಗಳನ್ನುಳ್ಳ ಹಸ್ತಪ್ರತಿಗಳಲ್ಲಿ ಒಂದು : ಇವರೆಡರಲ್ಲಿ ಒಂದು 'x' ಪಾಠವಾಗಿರಬಹುದು. ಇಂಥ ಸಂದರ್ಭಗಳಲ್ಲಿ 'X', 'Y' ಮತ್ತು 'A' ಗಳನ್ನು 'x' ಮೂಲಪ್ರತಿಯ ಭಿನ್ನಪಾಠವಾಹಕಗಳು (variant bearers) ಎಂದು ಕರೆಯಬಹುದು (ಪಾಪಾ. ೩೬). [ಸಂ.]

ಭಿನ್ನಭಾಷನ (ನಾ)- ೧. ಮಡಕೆಯ ಚೂರು ; ಓಡು ; ಬೋಕೆ : ಎಷ್ಟಾನವಾತ್ಮಮ ತತ್ಪ್ರಮಾತ್ಮಾದಿ ತತ್ಪ್ರಮಿಲ್ಲೆಂಬ ನಿನ್ನ ಮಾತು ಭಿನ್ನಭಾಷನಮುಮಾನವೆಂದು ಸಂಭಿನ್ನಮತಿಗಂ ಪ್ರತಿಭಾಭಂಗವಂ ಮಾಡಿ (ಪಾಪ್ರ. ೩-೦೦ ಪ). ೨. (ಆಲಂ) ಅಪ್ರಯೋಜಕ ವ್ಯಕ್ತಿ : ಪೃತದಾಂ ಕೈಕೊಡೆಡೆಯೊಳ್ ಬಿಟ್ಟವನೆ ಭಿನ್ನಭಾಜನಮಲ್ತೆ (ಪಂಚಾಮೃ. ೦೦-೦೭೦). [ಸಂ.]

ಭಿನ್ನಭಾವ (ನಾ). ಬೇರೆಯ ಭಾವನೆ ; ಅನ್ಯಭಾವ : ಅಮುಂಧಿಯೊಳಗೆ ಬಿದ್ದ ಆಲಿಕಲ್ಲಂತೆ ಭಿನ್ನಭಾವವಱಿದುದೆ ಶಿವಾಶಿವಾ ಎನುತಿರ್ದನು ನಾನು (ಬಸವ. ೧೪೦) ; ಭಿನ್ನಭಾವವ್ಯಕ್ತಿಕೃತೋತ್ಪನ್ನಘೂತಂಗಳು . . . ಪಾರಸಿತಿಯರ ಪ್ರಾಸಪುಗಳು ಮತ್ತೆ (ಪಪ್ರ. ೧೦-೭೨) ; ಭಿನ್ನಭಾವಗಳಲ್ಲಿ ಸಹಾನುಭೂತಿ ಇದ್ದ ಕಾಲದಲ್ಲಿ ಭಾರತದ ಸಂಸ್ಕೃತಿ ಸರ್ವತೋಮುಖವಾಗಿ ಬೆಳೆಯಿತು (ಭಾರತ. ೨೫೪). [ಸಂ.]

ಭಿನ್ನಮುಖ (ನಾ). ವಿರೋಧ : ತನ್ನ ಚಿಂತನೆಯೊಂದು ದೈವವ ಗನ್ನಗತಕವದೆರಡು ಭಾವವ ಮನ್ನಣೆಯು ಬಗೆ ಮೂಱು ದೈವದ ಭಿನ್ನಮುಖ ನಾಲ್ಕು (ಕಾಣಾಳು. ೨-೩). 'ಅಭಿಮುಖ' ಪರಾ. [ಸಂ.]

ಭಿನ್ನಮುಹೂರ್ತ (ನಾ). [ಜೈನ] ಒಂದು ಮುಹೂರ್ತ ಅಥವಾ ಎರಡು ಘಳಿಗೆಯಿಂದ ಅತ್ಯಲ್ಪ ಕಡಮೆಯಾಗಿರುವ ಕಾಲ : ಒಂದು ಮುಹೂರ್ತದಲ್ಲಿ ಒಂದು ಸಮಯದವ್ಕೆ ಕಡಮೆಯಾಗಿರುವ ಕಾಲ : ಒಂದು ಮುಹೂರ್ತದೊಳಗಿಂದ ಒಂದು ಸಮಯವು ಕಡಿಮೆಯಾದರೆ. ಅದು ಭಿನ್ನಮುಹೂರ್ತಮೆನಿಸುವುದು (ಕೃಕಾ. ೨೦೬). [ಸಂ.]

ಭಿನ್ನಯಿಸು 'ಭಿನ್ನಿಸು' ನೋ.

ಭಿನ್ನರಾಶಿ (ನಾ). ೧. [ಗಣಿತ] ಒಂದು ಪೂರ್ಣಾಂಕವನ್ನು ಒಡೆದರೆ ಬರುವ ಭಾಗ ; ಒಂದು ಎಂಬ ಸಂಖ್ಯೆಗಿಂತ ಕಡಮೆಯಾದ ಭಾಗ: ಕಾಲು. ಅರ್ಧ ಮೊದಲಾದುವು ; ಅಪೂರ್ಣಾಂಕ ; ಭಿನ್ನಾಂಶ : ಸುಮಾರು ಕ್ರಿ.ಪೂ. ೨೪೦೦ಕ್ಕೆ ಸೇರುವ ಶಾಸನಗಳಲ್ಲಿ ಪದಾರ್ಥಗಳ ಅಳತೆ, ತೂಕ ಮುಂತಾದುವುಗಳೂ, ಬಡ್ಡಿಯ ವ್ಯವಹಾರವೂ ೪, ೫, ೬ ಎಂಬ ಭಿನ್ನರಾಶಿಗಳೂ ಕಂಡುಬರುತ್ತವೆ (ಗಚಿತ. ೫). ೨. ಅಪೂರ್ಣಾಂಕ ಲೆಕ್ಕ : ಭಿನ್ನರಾಶಿಗೆ ಸಂಬಂಧಿಸಿದ ಸಂಕಲನ, ವ್ಯವಕಲನ ಮೊದಲಾದ ಲೆಕ್ಕಗಳು : ಸ್ವಾಮಿನಾಥ ಅರ್ಧಗುಟಿಹೊತ್ತು ಕುಂತು ಭಿನ್ನರಾಶಿ ಲೆಕ್ಕ ಮಾಡಿದ (ಸ್ವಾಜಾಕ್ಷೇ. ೩೪). [ಸಂ.]

ಭಿನ್ನರುಚಿ (ನಾ). ೧. ಬೇರೆಬೇರೆ ರೀತಿಯ ರುಚಿ – ಸ್ವಾದ : ಸ್ವಕೃತ ಉಪ್ಪು ಎರಡೂ ಭಿನ್ನರುಚಿಯ ಪದಾರ್ಥಗಳು (ಕಾಪ). ೨. ಬೇರೆಬೇರೆ ರೀತಿಯ ಅಭಿರುಚಿ. – ಆಸಕ್ತಿ. – ಅಪೇಕ್ಷೆ : ಅವರಿಬ್ಬರೂ ಅಣ್ಣತಮ್ಮಂದಿರಾದರೂ ಭಿನ್ನರುಚಿಯುಳ್ಳ ವ್ಯಕ್ತಿಗಳು (ಕಾಪ). ೩. ಬೇರೆ ಬೇರೆ ರೀತಿಯ ಅಭಿರುಚಿಯುಳ್ಳ ವ್ಯಕ್ತಿ : ಭಿನ್ನರುಚಿಗಳಾಗಿ ತಂತಮ್ಮ ಮೆಚ್ಚಿನಚ್ಚಿಯ ಪೂಗಳನ್ನ ಪೂಗಳ್ (ಅಭಿ. ೦೦-೦೫೨ ಪ). [ಸಂ.]

ಭಿನ್ನಲಿಂಗ (ನಾ). [ವ್ಯಾಕ] ಬೇರೆಬೇರೆಯ ಲಿಂಗ : ಭಿನ್ನಲಿಂಗದ ಅನೇಕ ಕರ್ತೃಪದಗಳಿರುವಲ್ಲಿ ಕ್ರಿಯಾಪದಕ್ಕೆ ಕಡೆಯ ಕರ್ತೃಪದದ ಲಿಂಗವು ಬರುವುದು. ಉದಾ :—ಅನೆಯುಮಾರಸುಮಾರಸಿಯುಂ ಬಂದರ್ (ಕ್ರಿವಿ. ೨೪). [ಸಂ.]

ಭಿನ್ನವಿದ್ಯ (ನಾ)- ವಿದ್ಯಾಬಲವನ್ನು ಕಳೆದುಕೊಂಡಿರುವನು : ಬಹು ರೂಪದಿಂ ಕಾಡುತ್ತಿರ್ದಪುದಂ ದೀನಜನಪಕಾಲ್ಯಾಂಭ್ರಪನಿಂ ಭಿನ್ನವಿದ್ಯ ನುಮಭಿನ್ನಸನ್ನಾಹಮುಮಾಗಿ ಪೋಗಿ (ಜಾಂತಿಪು. ೬-೪೬ ಪ).

[ಸಂ. (ಭಿನ್ನ + ವಿದ್ಯಾ + –)]

ಭಿನ್ನವಿಸು 'ಭಿನ್ನಿಸು' ನೋ.

ಭಿನ್ನವೃತ್ತ (ನಾ)- [ಛಂದ] ಕಾವ್ಯಗಳಲ್ಲಿ ಉಂಟಾಗುವ ಒಂದು ಬಗೆಯ ವಾಕ್ಯದೋಷ ; ಒಂದು ವೃತ್ತದಲ್ಲಿ ನಿಯಮಿತವಾಗಿರುವ ಗುರು ಲಘುಗಳು ವ್ಯತ್ಯಾಸವಾಗಿ ಅಕ್ಷರವಾಗಲಿ ಮಾತ್ರೆಯಾಗಲಿ ಹೆಚ್ಚು ಕಡಮೆಯಾಗುವಿಕೆ : ಛಂದೋಭಂಗ : ಸುವಿದಿತ ಯತಿಭಂಗಂ ಭಿನ್ನವೃತ್ತಮೆಂದಿಂತು ವಾಕ್ಯದೋಷಮಿದಕ್ಕುಂ (ಕಾಜ್ಞಾಕ. ೧೩೩) ; ಗುರು ಲಘುರಚನೆಗೆ ನಿರ್ದಿಷ್ಟರೂಪಹೀನಾಧಿಕಾಕ್ಷರಂ ಛಂದದೊಳೊಂದಿರೆ ಭಿನ್ನ ವೃತ್ತಮೆಂಬುದು ಮಿರುತ್ತಮತ್ಯಂತ ದೋಷಮಕ್ಕುಂ ಕೃತಿಯೊಳ್ (ಕಾಜ್ಞಾಕ. ೧೩೮). [ಸಂ.]

ಭಿನ್ನಷಡ್ಜ (ನಾ). [ಸಂಗೀತ] ಒಂದು ರಾಗದ ಹೆಸರು : ಭಿನ್ನಷಡ್ಜ ಭಿನ್ನತಾನ ಭಿನ್ನಕೌಶಿಕ ಮಧ್ಯಭಿನ್ನವೆಂದು ನಾಲ್ಕು ರಾಗಂಗಳುಂ ಗೌಡ ಜಾತೀಯಂಗಳು (ಅಕೇ. ೨೫೬) ; ಭಿನ್ನಷಡ್ಜವೆಂಬ ರಾಗವು ಭೂಪಾಲ ಮೇಳದಿಂದ ಪುಟ್ಟಿದೆ (ಕಮಾಶ್ರ. ೬೦). [ಸಂ.]

ಭಿನ್ನಾಭಿಪ್ರಾಯ (ನಾ). ವಿರುದ್ಧಾಭಿಪ್ರಾಯ ; ಅಭಿಪ್ರಾಯಭೇದ : ಈ ವಿಷಯಕ್ಕೆ ಇಬ್ಬರಿಗೂ ಭಿನ್ನಾಭಿಪ್ರಾಯ ಬಂದು ಕೊನೆಗೆ ಇಬ್ಬರಿಗೂ ಮಾತು ಕೊಡ ನಿಂತುಹೋಗಿತ್ತು (ಸಂಗಚ. ೦೬) ; ಈ ಬಗೆಯ ಉಚ್ಚ ಭಿನ್ನಾಭಿಪ್ರಾಯದಲ್ಲಿ ಯಾವದೇ ನಿರ್ಣಯವನ್ನು ಕೊಡುವುದು ಕಠಿಣ ವಾಗುವುದು (ರಘಾಣಾ. ೦೫೯). [ಸಂ.]

ಭಿನ್ನಿಸು, ಭಿನ್ನಯಿಸು, ಭಿನ್ನವಿಸು (ಕ್ರಿ)- ೧. ಬೇರ್ಪಡು; ಸಡಿಲವಾಗು: ವಿಪ್ರನುನ್ನತತಪೋಬಲದೊಳಂಭ್ರಯಂ ಬಿದಿರಲ್ಕೆ ಭಿನ್ನಿಸದೆ ಬಾಗಿದರ್ ಬಲ್ಕೆಗಳ ದಂತಂಗಳುಧಿದಂವದನೇಸೆಂದಮ (ಕೃಬಣಾ. ೦೫-೩೮) ; ಶೋಯದದ ಕಪ್ಪಸೊಳು ವಿದ್ಯುತ್ತು ಭಾಯಿ ಭಿನ್ನಿಸಿ ತೋರುವೋಲ:

(ಜಾಗಸ. ೦೨-೬೨). ೨. ಪ್ರತ್ಯೇಕವಾಗು; ಬದಲಾಗು; ವ್ಯತ್ಯಾಸವಾಗು; ಭಿನ್ನವಾಗು: ಮುನ್ನ ತಾಂ ಬರಿಸಿ ಕಳುಹಿದ ಪತ್ರಮಂ ತೆರಸಿ ನೋಡಿಕೊಂಡದಱಿಂದ ಭಿನ್ನಿಸಿದ ಭಾವಾರ್ಥಮಂ ತಿಳಿದು (ಕೃಷ್ಣಾ. ೭೦-೭೫); ನನ್ನ ಅಭಿಪ್ರಾಯವು ಭಿನ್ನಿಸುತ್ತದೆ (ಪಡೀಶಾ. ೦೦೯). ೩. ಭಗ್ನವಾಗು; ಜೊರಾಗು: ಭಿನ್ನಿಸದೆ ಕಟ್ಟಿದೆಯು ಸತಿಯರಾಸುವಿಡಿದವೆ (ಕೃಷ್ಣಾ. ೫೩-೫೯). ೪. ಜೊರುಮಾಡು: ತೆಂಗಾಯ ಬಲುಹಿಂದ ಭಿನ್ನ ಕೃಸ್ನೆಯೀರ ಸೇವಿಸಬೇಕು (ಪಜ್ಜೋಷ. ೫೬-೬). ೫. ಮುರಿದು ಹಾಕು: ಹಾಳುಮಾಡು; ನಾಶಮಾಡು: ಮನ್ನಿಸಲಿ ವಿಧಿ ನಿನ್ನ ಬೇಡಿಕೆಯ, ಭಿನ್ನಿಸಲಿ. ನಿನ್ನ ಬಲವನು ಮೆರಸೊ (ಪುಂಚಾಕ. ೫೫೦). ಭಿನ್ನಯಿಸು: ೨. ಒಂದೇ ಮರದಲ್ಲಿ ಅಮ್ಲಾಭೇದದಿಂದ ಬರುವ ರಸವೈವಿಧ್ಯ. ಗುಣವೈವಿಧ್ಯಗಳನ್ನು ಬೀಜವೂ ಕ್ಷೇತ್ರಬಲದಿಂದ ರಸ, ಪಾಕ ಮೊದಲಾದುವುಗಳಲ್ಲಿಯೂ ಭಿನ್ನಯಿಸುವುದನ್ನೂ ಗಮನಿಸಿ (ಪುಜಾಂ. ೭೦೪ ಸಂಜ್ಞಾಖಂಡ). ೬. ಬೇರೆಮಾಡು; ಪ್ರತ್ಯೇಕಿಸು: 'ಪಾಪು ಇದ್ದೇನೆ' ಎಂಬ ವಿಷಯವನ್ನು ಎಲ್ಲರೂ ಒಪ್ಪಿಕ್ಕಾರಾಗಲಿ ನನ್ನ ಸ್ವರೂಪದ ವಿಷಯದಲ್ಲಿ ಭಿನ್ನಯಿಸುತ್ತಾರೆ (ಪಣಾಕ್ಕ. ೦೬). ಭಿನ್ನವಿಸು: ೨. ಮನುಷ್ಯನು ಕರ್ಮಯೋನಿ ಭೋಗಯೋನಿ ಎರಡೂ ಆಗಿರುವುದಾದರೆ ಕರ್ಮ ಮತ್ತು ಭೋಗಗಳ ಅನುಪಾತವು ಒಂದೇ ಆಗಿರದೆ ಭಿನ್ನವಿಸುತ್ತದೆ (ಪಣಾಕ್ಕ. ೨೬೫).

[ಭಿನ್ನ + — ಆಮ್ಮ]

ಭಿನ್ನೋದರ (ನಾ). ಮಲತಾಯಿಯ ಮಗ; ಮಲಅಣ್ಣ ಅಥವಾ ಮಲತಮ್ಮ: ರಾಜಒಡೆಯರ ಕಾಲದಲ್ಲಿ ಆ ಗ್ರಾಮವನ್ನು ಲಕ್ಷ್ಮೀ ಕಾಂತಯ್ಯನವೆಂಬಾತನು ಅನುಭವಿಸುತ್ತಾ ಭಿನ್ನೋದರರಾದ ತನ್ನ ಸಹೋದರರನ್ನು ಸೋಸಿಸುತ್ತಿದ್ದನು(ಚಚ. ೦೯). 'ಏಕೋದರ' ಪರಾ.

[ಸಂ.]

ಭಿನ್ನೋಪಪಾಠ (ನಾ). ಗ್ರಂಥಸಂಪಾದನೆಯಲ್ಲಿ ಒಂದೆರಡು ಮಾತ್ರಕೆಗಳ ಆಧಾರದಿಂದ ಕಲ್ಪಿಸಿರುವ ಪೂರಕ ಪಾಠಾಂತರ: ಇವುಗಳಲ್ಲಿ ಒಮ್ಮತವಿಲ್ಲದಾಗ ಈ ಭಿನ್ನೋಪಪಾಠ (Sub-Variant) ಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳಬೇಕಾಗುತ್ತದೆ (ಪಾಪ. ೩೩); ಈ ಪ್ರತಿಗಳನ್ನು ಭಿನ್ನೋಪಪಾಠವಾಹಕಗಳೆಂದು (Sub-Variant Carriers) ಉಪವೃಧಾವಮಾತ್ಯತೆಯ ದೃಷ್ಟಿಯಿಂದ ಕರೆಯಬಹುದು (ಕನ್ನಸಂ. ೦೩೩). [ಸಂ.]

ಭಿಮ್ಮಿನು (ಕ್ರಿ). ಶಬ್ದದಿಂದ ತುಂಬು; ಪ್ರತಿಧ್ವನಿಸು: ಜಿನಪೂಜೆಗೆಂದು ಮುನ್ನವೆ ಬುಜಮತ್ತರ ಹುನೆಯಿಂದ ಬಂದಿರ್ದಾರ್ತ್ತೆ ಅನುಪಮ ಪೂಜೆಗೈದರು ಪಾನ್ಕಕೋಟಿ ಭೋರೆನೆ ದಶದಿಕ್ಕು ಭಿಮ್ಮಿನಲು (ಪಚಕ. ೫೯-೬೦). [ಭಿಂ + ಎಮ್ಮ (< ಎಸ್ಸ್)]

ಭಿಮ್ಮಿಸ್ (ನಾ). ಒಂದು ಅನುಕರಣ ಶಬ್ದ: ಅಯ್ಯದೆ ಬಂದವು ಕಿಮ್ಮಿಸ್ ಪರಿಹರಿಸಯ್ಯ ಭಿ [ಪಾಣಿ. ಭ] ಮ್ಮಿಸ್ (ಪ್ರಂಚ. ೨-೩೩ ಪದ್ಯ); ಮತ್ಸ್ಯಾವತಾರಗೆ ಕಿಮ್ಮಿಸ್ ಕೂರ್ಮಾವತಾರಗೆ ಭಿ [ಪಾಣಿ. ಭ] ಮ್ಮಿಸ್ (ಪ್ರಂಚ. ೩-೩೭-೦). ☞ ಮಹಮ್ಮದೀಯರು ತಮ್ಮ ಮತದ ಉತ್ಸವಗಳಲ್ಲಿ ಕ್ಯಾ ಹುಸೇನ್, ಬಾ ಹುಸೇನ್ ಎಂಬ ಶಬ್ದಗಳನ್ನು ಮತ್ತೆ ಮತ್ತೆ ಉಚ್ಚರಿಸುವುದನ್ನು ಮೋಡಿ ಈ ರೀತಿಯಲ್ಲಿ ಕನ್ನಡ ಪದಗಳನ್ನು ಸೃಷ್ಟಿಮಾಡಿಕೊಂಡಿರಬಹುದೆಂದು ಕೆಲವರು ಊಹಿಸುತ್ತಾರೆ. 'ಕಿಮ್ಮಿನ್' ಪರಾ. [?]

ಭಿರಂಗನೆ (ಅ). ಒಂದು ಅನುಕರಣಾವ್ಯಯ; ಕಟ್ಟನೆ; ಕೂಡಲೆ; ಇದ್ದಕ್ಕಿದ್ದಂತೆ; ಧಿಡೀರನೆ: ಸಿಟ್ಟಿಗೆದ್ದು ಭಿರಂಗನೆ ಇನ್ನೊಂದು ಮಾತಿಗೆ ಯಾರೂ ಇಲ್ಲವೆಂದು ಹೊಗಿ ಕೂಡುವಳು (ಕಾಮ. ೬೭).

[? + — ಅನ್ನೆ]

ಭಿರ್ಕಾ$_1$ (ನಾ). ಬುರುಡೆಮಾತು; ಪೊಳ್ಳುಮಾತು: ಅದಕ್ಕೆ ಸರಿಯಾಗಿ ಏನು ಹೇಳಬೇಕೋ ತಿಳಿಯಲಿಲ್ಲ. ಅದರೂ ಅವ್ಲಿಗೇ ಬಿಟ್ಟರೆ ತಪಗೆ ಅವಮಾನ ಎಂದು, ಏನೋ ಒಂದು ಭಿರ್ಕಾ ಹೊಡೆದ (ಹುಣ್ಣಿ. ೦೦೪).

[← ಮರಾ. ಭರಕಾ]

ಭಿರ್ಕಾ$_2$, ಬೈಗ (ನಾ). [ಸಂಗೀತ] ರಾಗಾಲಾಪನೆಯಲ್ಲಿ ದ್ರುತ (ಕಾಲ)ದಲ್ಲಿ ಹಾಡುವಿಕೆ: ಒಮ್ಮೊಮ್ಮೆ ಒಂದೇ ಸಮನಾಗಿ ೨ ಸ್ಥಾಯಿಗಳ ವ್ಯಾಪ್ತಿಯುಳ್ಳ ಬೈಗಳನ್ನು (ಭಿರ್ಕಾ) ಅದ್ಭುತವಾದ ವೇಗ ಮತ್ತು ಸುಲಭ ರೀತಿಗಳಲ್ಲಿ ಹಾಡುತ್ತಿದ್ದರು (ಸಂಗೀಶ. ೩). ಬೈಗ: ಕೇಳುವವರಿಗೆ ದೀಪಾವಳಿಯ ಮದ್ದು ಮತಾಪುಗಳ, ಬಾಣಬಿರುಸುಗಳ ಮಿಣುಕು ದೆಸೆಯ ಕಣ್ಣು ಕೋರೈಸುವ ಸೌಂದರ್ಯ ಸೊಗಸುಗಳು ಈ ಬೈಗಳಲ್ಲಿ ಕಾಣುತ್ತಿದ್ದವು (ಸಂಗೀಶ. ೩). [?]

ಭಿರ್ರನೆ (ಅ). ಒಂದು ಅನುಕರಣಾವ್ಯಯ; ವೇಗದ; ಜರುಕಾಗಿ: ಭಿರ್ರನೆ ಸಮಸ್ತ ಕುರುಸೇನೆಗಳ್ಳೆಲ್ಲ ಗಜ ಕರ್ಮೆಸರ್ (ಕುಪ್ರ. ೩೦-೩೦).

[? + — ಅನ್ನೆ]

ಭಿಲ್ಲ (ನಾ). ಬೇಡ; ವ್ಯಾಧ: "ಬಿಯುದರ್ ಭಿಲ್ಲರ್ ವ್ಯಾಧರ್ ಪಯುದಿಂ" (ಶಾಕಾ. ೩೦); ಒಂದೊಂದೆಡೆಯ ಮುಳ್ಳಿಡುಗಳೊಳ್ ತೊಡರ್ದ ಮೆಯ್ಮನಿರ್ ಪಱಿಗುಮೆಂದು ಮಿಡುಕಲೊಲ್ಲದಲ್ಲಿಯು ನಿಂದು ಬಿಲ್ಲಭಿಲ್ಲರ್ಗೆ ತಮ್ಮಿಂ ತಾಮೆ ಪಡುಮಿಗಂಗಳುದುವ ಚಮರೀಮೃಗಂಗಳಂ (ಪಂಪ್ರಭ. ೪-೬೬ ಪ); ಭಿಲ್ಲಗಾದುದೇ ಗೋಪುರಂ (ಕೋಪು(ಕ. ೩೦).

[ಸಂ.]

ಭಿಲ್ಲಜಕರ (ನಾ). [ಸಂಗೀತ] ಒಂದು ರಾಗದ ಹೆಸರು: ಸಾಳಗ ನಾಟ ಭಿಲ್ಲಜಕರಮುಂಬಿರಡುಂ ರಾಮಕ್ರಿಯಾರಾಗಕ್ಕೆ ಉಪಾಂಗಗಳು (ಪಡೀಶ. ೨೩೮).

[?]

ಭಿಲ್ಲಪಲ್ಲಿ (ನಾ). ಬೇಡರು ವಾಸಿಸುವ ಗ್ರಾಮ: ಬೇಡರ ಹಳ್ಳಿ; ಸೊಗಯಿಪುದೀ ಕಾನನೋದ್ದೇಶಮೋರಂತಿರೆ ನಾನಾಭಿಲ್ಲಪಲ್ಲೀಪಥಿಗಮ್ಯಗಲತಿಕಾವ್ಯಕ್ಷೆಗುಲ್ಮಾವಕಾಶಂ (ಕೃಪ್ರ. ೩-೬೯). [ಸಂ. ಭಿಲ್ಲವಲ್ಲೀ]

ಭಿಲ್ಲಪಳ್ಳಿ (ನಾ). = ಭಿಲ್ಲಪಲ್ಲಿ: ದರಿಸರಿಯಾನೆಗಳ್ ಗಜ್ಜಿಕೆ ಮೇವ ಮುಂಗಿಲ್ ದೊಣೆ ಭಿಲ್ಲಪಳ್ಳಿ ಕನ್ನರವಿಷ್ಠಾನಾಳಿಗಳ್ ವಿಷಯವಾಗಿರೆ ತೀರ್ವುದು ಶೈಲವರ್ಣನಂ (ಕೃಪ್ರಸಂ. ೩-೦). [ಭಿಲ್ಲ + ಪಳ್ಳಿ$_1$]

ಭಿಲ್ಲಿ (ನಾ). ಬೇಡರ ಹೆಂಗಸು; ಬೇಡಿತಿ: ವನವನದಿ ಬನದಿವ ಭಿಲ್ಲಿಯರ ಬಸ್ಮಣವ ತೋಱಿದುದು (ಪುಪ್ರಚ. ೩-೩); ಭಿಲ್ಲಿಮಿ ವಿಳಾಸ ಮನಾಳ್ದೆಸೆದಂದು ಸರ್ವಮಂಗಳೆ ನಿಜಕಾಳಂತಾಪ್ತಿಯೆಸರಂ ಮಿಗೆ ಸಾರ್ಥಕಮಂ ನೆಗಳ್ದುದಳ್ (ಪಂಪ. ೩-೬); ಆ ಶಿವದೀಕ್ಷಾಪರಾಯಣೆಯು ಯಾರಿರ ಬೇಱಂ? ಭಿಲ್ಲಿಯ ವೇಷಧಾರಿಯಾದ ದಾಕ್ಷಾಯಣಿಯಾಗಿರಬೇಕು (ಕೃಣಾಮು. ೩೭). [ಸಂ. ಭಿಲ್ಲೀ]

ಭಿವೊಮ್ಮ (ನಾ). ಒಬ್ಬಾತನ ಹೆಸರು (?): ಸ್ವಸ್ತಿಶ್ರೀ ಭಿವೊಮ್ಮ ಕೂರಾಳಿಗದ ಅಲರೊಳೆ ಕೊಣವಿರುಗಂಗ ದುರದುಳ್ ದುಗ್ಗಮಾರರ ಪಡೆಒಟ್ಟಿ ಎಱಿದು ಬ್ದು (ಎಕ. IX, ಚಿಕಪ. ೩೬-೦; ಶಾ. ೭೫೦).

[? + ಅಮ್ಮ$_1$]

ಭಿಷಗ್ವನ (ನಾ). ವೈದ್ಯರ ಗುಂಪು: ಶರೀರರಕ್ಷಣೆಗಂ ಪರಿಚರ್ಯೆಗಂ ಸಮಯೋಚಿತಕುಶಲರಪ್ಪ ಗುರುಜನ ಭಿಷಗ್ವನ ಗಣಜನ ಗಣಿಕಾಜನ ಧಾತ್ರೀಜನ ಬಲಮಿತ್ರವರ್ಗಾಜನಮಂ ಸಮರ್ಪಿಸುವುದುಂ (ಪುಪ್ರಚ. ೯-೧೩). [ಸಂ.]

ಭಿಷಗ್ದೋಷ (ನಾ). ವೈದ್ಯನ ತಪ್ಪು: ಮತ್ತಮಾತುರವೌಷಧಭೀರು ವಾದೊಡಂ ಭಿಷಗ್ದೋಷಮಾಗದಂತೆ ನಿಮ್ಮ ಬೇಟ್ಟುದನುಪೇಕ್ಷಿಸಿದೊಡೆನ್ನ ದೋಷಂ (ಪಾಂಚಾಖ್ಯ. ೯-೨೦೦ ಪ). [ಸಂ.]

ಭಷಗ್ವರ (ನಾ)· ೧. ಶ್ರೇಷ್ಠನಾದ ವೈದ್ಯ. ೨. ಉತ್ಕೃಷ್ಟವಾದ ಮದ್ದು.— ಔಷಧ : ಮಮೋರೋಗಣಾ ಶ್ರೇಷ್ಠಮೇ ಭಷಗ್ವರಂ (ಕೃಷ್ಣಚ. ೩೭-೪೦೬)· [ಸಂ.]

ಭಷಜ (ನಾ)· ವೈದ್ಯ : "ದೋಷಜಿತ್ ಭಿಷಜಂ ಚಿಕಿತ್ಸಕಂ ವೈದ್ಯನಕ್ಕು" (ಶುಂಗಣ. ೦೦೫-೬); ಶಾಕುಬಡನವಮಿಯಿ ನರಳುವಾತನ ಮನೆಗೆ ಜೋಯಿಂ ನಧಿ ತಾನೆ ಬಂದಮೇಲ್ ರಂಜಿಸುರೆ ನೋಕರಳುವನ ಮನೆ ಗಾರ್ಯೆದು ಭಿಷಜ್(ಜ)ನಂದೆಯ್ತುಂದ ಮೇಲ್ಕೆಯಂತೆ . . . ಶಿವಮಂತ್ರ ಮೆನಗೀಗ ದೊರೆಕೊಂಡುದು (೫೬೫೫. ೬-೦೦)· [ಸಂ. ಭಷಜ್]

ಭಸ್ಮಟೆ (ನಾ)· ಸೀದುಹೋದ ಅನ್ನ : "ಭಸ್ಮಟ, ದಗ್ಧಾನ್ನ-ನಿ ಅನ್ನದ ಸೀಕು; ಸೀದುಹೋದ ಅನ್ನ" (ಕಣ್ಣಿ. ೨೬೦)· [ಸಂ. ಭಸ್ಮಟಾ]

ಭಸ್ಮೆ (ನಾ)· ಬೋನ; ಅನ್ನ : "ಅಂಧಃ, ಕೂರಂ, ಭಕ್ತಂ· ದೀದಿವಿಃ, ಅನ್ನಂ· ಓದನಂ, ಭಸ್ಮಾ· ಅಶನಂ· ಆಹಾರಃ _ ಈ ೯ ಕೂಬು" (ಶಣಮು. ೩೩-೩೪೨)· [ಸಂ. ಭಸ್ಮಾ]

ಭೀ (ನಾ)· ಹೆದರಿಕೆ; ಭಯಂ; ಭೀತಿ : ವರ್ಣಾಕ್ಷರಕ್ಕೆ _ ಜ್ಞಾ· ಮಾ· ವ್ಯಾ· ಶ್ರೀ· ಸ್ಮೀ· ಭೀ· ಭ್ರೂ· ಕೃ _ ಎಂಬಿವು ಮೊದಲಾದ ವರ್ಣಾಕ್ಷರ ಶಬ್ದಂಗಳರ್ದ ತೆಜದಿಂ ವಿಧಕ್ಕೆಯಂ ಪಡೆವುದು (ಕವಿಚ. ೩೩ ಕೃಮೊ); ಆನೇಕ ಸ್ವರಸ್ಯೇತಿ ಕಿಂ? ಶ್ರೀ· ಹ್ರೀ· ಭೀ· ಧೀ (ಶಬ್ದಾಮ. ೦೦೫ ಕೃಕೋ); ಕೋಡಿ ಖರದೂಷಣರ ಭೀಯಿಂದೋಡಿ ಪೋದಂಥೆಲ್ಲ ಮುನಿಗಳು ಕೂಡಿ ಪುನರಪಿ ಬಂದು . . . ಸೌಖ್ಯದಿಂದಾವಾಸ ಮಾಡಿಪರು (ಶಭಃಸಂ. ೦೩-೩೪)· [ಸಂ.]

ಭೀಂಕೃತ (ನಾ)· ಬಾಣದ ಧ್ವನಿ : ಭೀಂಕೃತಂ ಬಾಣದೊಳು ಫೀತ್ಕೃತಂ ಕಲಭದೊಳು ಬ್ಯುಂಹಿತಂ ಮದಗಜದೊಳು (ಶುಂಗಣ. ೫೬-೬)· [ಸಂ.]

ಭೀಂಕೃತಿ (ನಾ)· = ಭೀಂಕೃತ : ಕುಗಿವುತಿರೆ ರಣಭೂತ ರಾಮನ ಕಣೆಯು ಭೀಂ[ಣಾಂ. ರೆಭೀಂ]ಕೃತಿರವಕ್ಕೆ ಪಧರಲಿ (ಕವಿಚಂ ೩-೬-೩೬); ಬಿಲ್ಲಾಜರ ಗುಣಕಂಕೃತಿ ಜಾವಪ್ರಯುಕ್ತ ಶರವಿಕರ ಮಹಾಭೀಂಕೃತಿ ನೋಳ್ಪವರರ್ಗೆ ಭಯಂಕೃತಿಗಳಯ್ದುದು (ಜಾಹಃ. ೬-೦೩)· [ಸಂ.]

ಭೀಕರ (ಗು)· ೧. ಭಯವನ್ನುಂಟುಮಾಡುವ ; ಹೆದರಿಕೆಯನ್ನುಂಟುಮಾಡುವ : ಭೀಕರಕರಿಮಕರನಿಕರಭಿನ್ನತರಂಗಾನೀಕಲವಣಾಂಬು ರಾಶಿವೃತಾಕೃತಿ ಕವನೀಯಮುಂಟು ಜಂಬೂದ್ವೀಪಂ (ಜಾಂತ್ರಿ. ೦-೫೫); ಪೃಥರಂ ಪೊಡಯೆ ತೋಳ್ಬೆಳೆದ ಭೀಕರಗಜಾಸುರಮೊ . . . ಎಂದೆಂಬ ಸಂದೇಹಕಡೆಯಾದ ಸೊಕ್ಕಿದೆಕ್ಕಲನನೊಂದಂ ಕಂದಂ (ಕಶಾಂ. ೬-೨೦); ಉರವಣಿಸಿ ನಾವೆಸುವ ಭೀಕರ ಸರಕ್ಕಳಿಂ ತಪ್ಪಿಸಿಕೊಳುತ (ಜಸಪ್ರ. ೪೪-೫೭). (ನಾ)· ೨. ಭಯವನ್ನು ಉಂಟುಮಾಡುವಂಥದು ; ಹೆದರಿಕೆಯನ್ನುಂಟುಮಾಡುವಂಥದು : ಭೀಕರಮಪ್ಪ ತೂಲಿಯಬಲಾಹಿಯೊಳ: ತಪವಾತನೇಕ ವೀನೇಕೆ ಕೃಪಾಣವೇಕೆ . . . ಸಿರೀಕ ಮರಾಳನದೇಕೆ ಲೋಕದೊಳ್ (ಗಣಿ. ೯-೦೦೩); ಕುಸುಮಾಧವರೋಮಂಥವೇನಂ ಕರಂ ಭೀಕರಮಾಗಲೊಷ್ಟಗುಂ ಕಾಪನದೊಳಭಿಮಾವಕ ಬಲಾಯಪ್ರತಾಪಂ (ಜಕಃ. ೯-೨೯); ತರಳನ ಕೂರ್ಗಣಿಯಿಂದೆ . . . ಕೊರಲರಗಡಿದು ಕತ್ತರಿಸಲು ತಲೆ ಬಿದ್ದು ಹೊರಳಲು ಭೀರವಾಯ್ತು (ಜೀಚಕ. ೪೫-೦೪). ೩. ಭಯಾನಕತೆ : ಸರಹರಿಯು ವೇಷಂದರೆದು ಭೀಕರದೊಳಂದು ಓರಣ್ಯಕನ ಸಂಹರಿಸಿದನು (ಜಸಪ್ರ. ೫೬-೨೫). [ಸಂ.]

ಭೀಕರವಡೆ (ಕ್ರಿ)· ಭಯಂಕರತೆಯನ್ನು ಹೊಂದು ; ಭಯಂಕರವಾಗು: ಹೊಡೆದರೆ ಹೊಡೆದು ದೊಕ್ಕರಿಸಿ . . . ಭೀಕರವಡೆದು ಹೊಯ್ದಾಡಿದು ವೆರಡು (ಜೀಚಕ. ೪೯-೨೬). [ಭೀಕರ + ಪಡೆ]

ಭೀಕರಿಸು (ಕ್ರಿ)· ಭಯವನ್ನುಂಟುಮಾಡು ; ಹೆದರಿಸು : ಬಿಡದೆ ಭುಸ್ಸನೆ ಫೂತ್ಕರಿಸುತಡಿಗಡಿಗೆ ಕೋಪಾಟೋಪದಲಿ ಭೀಕರಿಸು[ಸಿ]ತಾ ಶಯ್ಯೆ (ಜಾಕೃಚ. ೩೨-೨೪); ಅಕಾಶದೊಳು ಭಣಾ ಚುಮ್ಮು ಭೋಚುರ್ಯೆಂದು ಭೀಕರಿಸುತ ಹೋದುದತ್ತ (ಕಥಸ. ೨೪-೪೪); ರಣವಂದು ಭೀಕರಿಸಿದುದು ಸುರಪನ್ನಪಾಲ ಕೇಳೆಂದ (ಕಃಚಿಮು. ೬-೨೩).

[ಭೀಕರ + — ಇಸು]

ಭೀತ (ಗು)· ೧. ಭಯಗೊಂಡ ; ಹೆದರಿದ. (ನಾ)· ೨. ಅಂಜು ಬುರುಕ; ಹೇಡಿ ; ಪುಕ್ಕ : " ದರಿತಃ· ಚಕಿತಃ, ಭೀತಃ . . . ತಂಕಿತಃ ಈ ೮ ಪ(ಹ)ಂದ " (ಶಣಮು. ೫೮-೦೫೪) ; ಭೀತನೆನಲಿಸಿದನಂ ಕಾರ್ಯಾತುರಂ ಮಿಸದನಂ . . . ಅಜಿದೊಳ್ದು ಬಿನ್ನವಿಪ್ಪಂ ಗಾಂಜಂ (ತಂಚಂ. ೨೭-೦೨)· ಭೀತಂ ಲೋಡಂ ತರಂ ನಿರ್ಗುಣಿ ಕ್ಷಮಗುಳಿಗಂ ನಿರ್ಲಜ್ಜಂ ಪಾಪಿ ಕಳ್ಳಂ (ಪಚಂ· ೬-೦೧). ೩. [ಸಂಗೀತ] ಹೆದರಿಕೆಯಿಂದ ಹಾಡುವವನು : ಭೀತ/ = ಭಯದಿಂದ ಹಾಡುವವನು (ಸಂಗೀಚಂ. ೦೦೫). [ಸಂ.]

ಭೀತಿ (ನಾ)· ೧. ಹೆದರಿಕೆ ; ಅಂಜಿಕೆ ; ಭಯ ; ಜಗತ್ಕಯ ರಕ್ಷಾಪ್ರಯತ್ನಪ್ರಕೃತ್ಯನ ಚಿತ್ರಂ ಭೀತಿಯಂ ಮಾಟ್ಟುಮೇ (ಜಗಃ. ೬-೬೯); ಭೀತಿಯನುಂಟುಮಾಡುಗುಮಿವಕ್ಕೆ ಶರಾಸನ ಬಾಣಜಾಲಂ (ಶಃಚಚಾ· ೦೦-೩೦); ಕರುಣದಲಿ ಬಿಟ್ಟಾತನು ಮುಂದರುಣಪಟ್ಟಧರಿಧಾಪ ಶ್ರೌರ್ಯ ಭರಣ ಧಾಳಯನಿಕ್ಕಲೋಡಿದನನಿಲ ಭೀತಿದುರಿ (ಕಃಚಿಂ. ೦-೦-೩೬). ೨. ಅಪಾಯ. ೩. ನಡುಕ; ಕಂಪನ. [ಸಂ.]

ಭೀತಿಗೊಳಿಸು (ಕ್ರಿ)· ಅಂಜಿಸು; ಹೆದರಿಸು : ದ್ವಿತಯ ಕಾರ್ಮುಗ ನಿಮ್ಮುರದಿಂದಬಳದೇವತಿಗಳ್ಳಿರ ಭೀತಿಗೊಳಿಸಿ (ಕೀಚಚಿ. ೨೨-೩೪); ಪಾತಾಳಗಡಿಯದಗಳು ದಿಟ್ಟಿಗೆ ಬೆಜ್ ಭೀತಿಗೊಳಿಸುವ ಕೊಳ್ಳವು (ಕಃಚಿ· ೦೦-೨೩). [ಭೀತಿಗೊಳು + — ಇಸು]

ಭೀತಿಗೊಳು (ಕ್ರಿ)· ಹೆದರು; ಅಂಜು; ಗಾಬರಿಯಾಗು; ಭಯಗೊಳ್ಳು: ಮಾಂದಿಸ್ಮಿತಮುಖಾಂಬುಜನಾಗಿ ಭೀತಿಗೊಳುತ್ತಮಿತ್ರವರ ವಿತತಭುಯಮಂ ಪರಿಹರಿಸಿ (ಜಸಪ್ರ. ೨-೨೬) ; ಭೀತಿಗೊಂಡನು ದ್ರೋಣ ಸೂಲಕೆ ಕೇತ್ರವಾದನು ಶಬ್ದ (ಕಬ್ಬಾಕ್ರಾ· ೦೬-೦೬); ಪದ್ಧಿಯ ಹುರ್ಮೊಳಡಗಿ ಭೀತಿಗೊಂದಾಗ ನಿಲ್ಲದೆ ದೆಸೆಯಂ ನಿಟ್ಟಿಸುತ (ಕಂಚಂ. ೦೫-೧೦).

[ಭೀತಿ + ಕೊಳು (<ಕೊಳ್)]

ಭೀತಿಯುಕ್ತ (ನಾ)· ಹೆದರಿದವನು ; ಅಂಜಿದವನು : ಭೀತಿಯುಕ್ತನಾಗಿ ಆತ ಯೋಚಿಸಿದ (ಅಕ್ಷಚ. ೦೩೧). [ಸಂ.]

ಭೀತಿವಡಿಸು (ಕ್ರಿ)· = ಭೀತಿಗೊಳಿಸು : ವರ ದುರ್ಗಾದ್ವಿಂಧ್ಯ ಮಹನದಿಂ ತುಮುಮಾತ್ರ ಗರಳವ ಬಿಡಲಾಕ್ಷಣದಿ ಸುರಮುಖ್ಯರ ಭೀತಿವಡಿಸಿದ ಧರಣೀಧರ ಭೀಕರಾಜ ರಕ್ಷಿಪುದು (ಜಃಚಚ. ೦-೦೪). [ಭೀತಿವಡು + — ಇಸು]

ಭೀತಿವಡು (ಕ್ರಿ)· = ಭೀತಿಗೊಳು : ಪೂಸಿದ ಸಿರಿಗಂಧ ಕರಿಕಾದುದು ಸದ್ವಿಳಾಸಿನಿಯರು ಭೀತಿವಡಲು (ಜೀಚಚ. ೨೮-೦೬); ರಣದೊಳ್ ಕಲಿಬಾಳ್ದಂ ಭೀತಿವಟ್ಟು ದೆನ್ನೊಟ್ಟಪನೇ (ಕಚಚಂ· ೦-೬೮). [ಭೀತಿ + ಪಡು]

ಭೀತಿಸು (ಕ್ರಿ)· = ಭೀತಿಗೊಳು : ನೆಲೆಯನಿಷದನಗೆ ಶಿವಾಂಶ್ರಯೆಂದು ಭೀತಿಸಿ ಬೇಡಿಕೊಳುವೆ (ಕೃಚಂ· ೦೩-೦); ಮದ್ದಾನೆಗೆ ಸಿಂಹ ಮಲಿತಂತೆ ಸುಭಟಾನಿರುದ್ಧ ನಿಂದಿರ್ದ ಭೀತಿಸಿದೆ (ಜೀಚಚ. ೩೫-೦೮).

[ಭೀತಿ + — ಇಸು]

ಭೀತೆ (ನಾ)· ಹೆದರಿದ ಹೆಂಗಸು : ವಿವಾಹಭೀತೆ ಸುಚರಿತ್ರ ಗುಣವತಿ ಮಾನಿನಿ ಜಾಪವಾದವಿರಹಿತೆಯೆನಿಪ ವಾರಿ ನನ್ನಜನಾರ್ದನಾವಿನಿರ್ಜರ ವರ್ಯವಿನುತೆಯಾಪಳು (ಕೃಚಾಂ. ೩-೩೦). [ಸಂ. ಭೀತಾ]

ಭೀಮ (ಗು)· ೧. ಹೆದರಿಕೆಯನ್ನುಂಟುಮಾಡುವ; ಅಂಜಿಕೆಯನ್ನುಂಟುಮಾಡುವ ; ಭೀಕರವಾದ : ಜವಂ ಕೊಲ್ವವೊಲೆಯ್ದೆ ಬಂದು ಜವನಿ

ಗಂಧಾಂಧನಾ ಭೀಮಸಾಮಜಮುಂ ವಿಸ್ಮಯವುಟ್ಟಿಪಂ ಭರತನಂ ಕಂಡಾಯ್ತು ಜಾತಿಸ್ಮರಂ (ಸಂಪಾಮು. ೦೩-೩೦). (ನಾ). ೨. ಹೆದರಿಕೆಯನ್ನುಂಟುಮಾಡುವುದು; ಭಯಂಕರವಾದುದು; ಭೀಕರವಾದುದು: "ಘೋರಂ. ಪ್ರುತಿಭಯಂ. ಭೀಮಂ . . . ಭಯಾನಕಂ—ಈ ೧೦ ಭಯಂಕರಂ" (ಪಾಪಾಮು. ೦೭೬-೨೨); ಭೀಮಂ ಭಯಂಕರಂ ಬೆಜೇ ಮಾತೀ ಕೂಸಿನಂದಮಿತನ ಮೆಸರುಂ ಭೀಮವೆ (ಸಂಪಾಪಾ. ೭-೦೨೬). ೩. ಶಿವ; ಶಂಭು; ಈಶ್ವರ: "ಈಶಾನಃ . . . ಭೀಮಃ, ಭರ್ಗಃ, ಕೃತ್ತಿವಾಸಾಃ. : . ಮಹಾದೇವಃ, ಮೃಡಃ (ಸ್ಯಾತ್). ಏಲಲೋಹಿತಃ—ಈ ೪೫ ಮಹಾದೇವರ ಪೆಸರ್" (ಪಾಪಾಮು. ೩-೦೨); ಭಿಮ . . . ವಿರೂಪಾಕ್ಷ ಕರುಣಿಸುವುದೆಮಗೆ (ಪಾಪಾ. ೫-೩). ೪. ಪಾಂಡುರಾಜನ ಮಗ; ಯುಧಿಷ್ಠಿರನ ತಮ್ಮ: "ಕುರುವೈರಿ ವಾಯುಪುತ್ರಂ ವ್ಯಕೋದರನೆಲು ಭೀಮನಕ್ಕುಂ" (ಪಾಪಾ. ೭೫-೩); ಆಗಳ್ತತ್ಕಾಮಂ ಜೀಮಪುಂಜಾಂತಿತ ಭೀಮಸಾಯಕನಿರ್ಘಾತದಿಂದಬಿಯೆ ನೊಂದು (ಪಾಪಾ. ೦೨-೭೪ ೪); ಕುರುಮಂಕಾಧೀಶನಂ ಪ್ರುಂದಲಿಪಿದನದಟಿಂ ಭೀಮನಾದ್ಯಾಮಭೀಮಂ (ಗಜಾಮು. ೩-೦೪). ೧. ೪: ಮತ್ತಮಾ ಮಹಾವನಂ . . . ಪಾಂಡವಪ್ರಕರದಂಕಾತ್ಮಭೀಮನಕುಲದ್ರುಪದಮುಂ ಅರ್ಜುನೋರ್ಜಿತಮುಂ (ಪಂಪ್ರತಿ. ೫-೩೨ ೫). ೫. ಯಮ. ೬. ೪. ೫: ಭೀಮ ಬಲವದಂತಿಸೇನಾಭೀಮ ಕುರುಕುಲಕುಸುಮ ಮಾರ್ಗಣಾಭೀಮ ಮಜ್ಜಿದ್ಯ ಮಾನಿನಿಯ ಮಾನಾಪಮಾನಗಳ (ಭಾಪ್ರಾ.ಗಾ. ೩-೨೬). ೬. ವಿದರ್ಭದೇಶವನ್ನು ಆಳಿದ ಒಬ್ಬ ರಾಜ; ದಮಯಂತಿಯ ತಂದೆ: ಭೀಮನ್ಯಪಾಲಕಂ ಪೆರೆದ ವಿಬ್ಬಣಿಗರ್ಗ್ ವಿಚಿತ್ರವಸ್ತ್ರ ಮುಖ್ಯಾಮಯಭೂಷಣಂಗಳವಶೇಷವನಿತ್ತು (ಪಾಪಾ. ೨೩೨) ; ಎಸೆದುದ್ದಿ ವಿದರ್ಭನಗರವದು . . . ಅಲ್ಲಿಗಧಿಪತಿ ಭೀಮನೃಪ (ಪಾಪಾ. ೦-೨೦). ೭. 'ಭವಪುರಾಣ' ಎಂಬ ಕಾವ್ಯವನ್ನು ರಚಿಸಿದ ಕನ್ನಡದ ಒಬ್ಬ ಕವಿಯ ಹೆಸರು: ಒದವಿದಬಿಳಕಳಾಪ್ರಸೂರಿತಹೃದಯ ಭೀಮಕವಿ ಪ್ರಣೀತಾಭ್ಯುದಯ ಬಸವಪುರಾಣಾಖ್ಯಯೊಳು (ಪಾಪಾ. ೭೦-೧೭). ೮. ಸಂಸ್ಕೃತದಲ್ಲಿ ಧಾತುಪಾಠವನ್ನು ಬರೆದ ಒಬ್ಬ ವೈಯಾಕರಣನ ಹೆಸರು: ವೇದಸಮಾನಾಗಿ ಭೀಮನಿಪಾದುದು ಸಂಸ್ಕೃತದ ಧಾತು (ಕಾಪಾ. ೬-೦). ೯. ಒಂದು ನರಕದ ಹೆಸರು: ಘೃತಿವಕ್ತ್ರ ರಕ್ತಪೂತಿ ಧ್ಮಾಕ್ಷಿಕ ಕಣಧೂಮವೆಂಬೈದು ಮಂತ್ರಿನೆರಕಂಗಳಿಂ ಸುತ್ತಿ ಭೀಮವೆಂಬರಸುನರಕ ವಿಹುದು (ಪಾಪಾ. ೦೮೨). ೧೦. (ಅಲಂ) ಹೆಚ್ಚಾಗಿ ಊಟಮಾಡುವವನು: ಹೊಟ್ಟೆಬಾಕ: ಭೀಮನಿಗೆ ಧಾನುವಾರವಾದರೇನು? ಭೌವಾರವಾದರೇನ: ? ಭೋಜನ ಕ್ಕಿದರೆ ಸೈ. (ಗಾಪ).

ಭೀಮಗದೆ = ಭೀಕರವಾದ ಗದೆ: ದುರ್ಯೋಧನಾಮಜ ದುಶ್ಶಾಸನ ಭೀಮ ಭೀಮಗದೆಯಿಂ ಪಂಚತ್ವಮಂ ಪೊರ್ದಿದ್ದೆ (ಗಜಾಮು. ೩-೩); ಪಂದಿ ಪೋಟ್ಟು ಸುಳ ಭೀಮಗದೆ ಕೊಂಕ ಮುಂದುಗಡಿಸುವ ಕೈದುಗಳ ಸಂದಣಿ ಖಂಡಿಬಲೆ (ಕಾಪಾಪಾ. ೦೦-೪೨). ಭೀಮನ ಅಮಾವಾಸ್ಯೆ = ಆಷಾಢಮಾಸ ವುಗಿದು ಶ್ರಾವಣಮಾಸ ಆರುಭವಾಗುವಾಗ ಬರುವ ಅಮಾವಾಸ್ಯೆ: ಇಂದು ಭೀಮನ ಅಮಾವಾಸ್ಯೆಯಾದ್ದರಿಂದ ಶಾಲೆಗೆ ರಜ (ಮಾಪ್ರ). ಭೀಮನ ಬಿಲ್ಲು = ಕಾಮನ ಬಿಲ್ಲು: ರಾಮನು ಹೊರಗೆ ಬಂದು ಪಡುವಿನಲ್ಲಿ ಉಂಟಾದ ಭೀಮನ ಬಿಲ್ಲನ್ನು ಕಂಡು 'ಅಮ್ಮ, ಅಮ್ಮ, ಇಲ್ಲಿ ಪೋಡು!' ಎಂದು ಕೂಗಿ ಹೇಳಿದನು (ಮಪಾಪ್ರ. ೧೨೨). [ಸಂ.]

ಭೀಮಕಾಯ (ನಾ). ದಪ್ಪವಾಗಿಯೂ ಎತ್ತರವಾಗಿಯೂ ಇರುವ ದೇಹವುಳ್ಳವನು: ಒಪ್ಪುವ ಸಾರಾಯಜ್ಞಚರ್ಮಾಸನಂ ಭೀಮಕಾಯನುಂ (ಪಾಪಾ. ೫-೨-೨೦); ಭೀಮಕಾಯನಾದರೂ ಕೌಶಿಕನು ಆ ರುದ್ರ ಮೂರ್ತಿಯ ಮುಂದೆ ಮಗುವಿನಂತಿದ್ದಾನೆ (ಪಾಪಾಪಾ. ೭೪). [ಸಂ.]

ಭೀಮಗಾಮುಂಡ (ನಾ). ಒಬ್ಬಾತನ ಹೆಸರು: ಮರವ್ಪುರೆ ಉಕ್ಕಗಾಕ ಗಾಮುಣ್ಡರುಂ ಭೀಮಗಾಮುಣ್ಡರುಂ . . . ಎನೆಬ್ಬರುಂ ನರಸಾತ್ಮಿಯಾಗೆ ಪಡೆದಾವ್ (ಪಾ. VI (೩), ಕ್ರಿಚೆಂಗ. ೩೩-೦೯ ; ಸಂ. ೩೦೦).

[ಭೀಮ + ಗಾಮುಂಡ]

ಭೀಮನಕಡ್ಡಿ (ನಾ). ಒಂದು ಬಗೆಯ ಸಸ್ಯ: ವಿಷಬೊದ್ದಿ, ವಿಷಕಡ್ಡಿ, ಭೀಮನಕಡ್ಡಿ (ಪ್ರ್ಯಾಸಿ. ೭೦-೦೪೨೬). [? + ಕಡ್ಡಿ]

ಭೀಮನಸೊಪ್ಪು (ನಾ). ಒಂದು ಬಗೆಯ ಸೊಪ್ಪು: (ಪ್ರ್ಯಾಸಿ. ೩೫-೦೩೩೩). [? + ಸೊಪ್ಪು]

ಭೀಮನಹಂಚಿ (ನಾ). ಒಂದು ಬಗೆಯ ಹುಲ್ಲು: ಬೆಟ್ಟಂಚಿಹುಲ್ಲು. ಭೀಮನ ಹಂಚಿ. . . . ಗಂಟುಕಾಚಿ (ಪ್ರ್ಯಾಸಿ. ೭೪-೦೩೦೪). [? + ಹಂಚಿ]

ಭೀಮಪರಾಕ್ರಮ (ನಾ). ೧. (ಶತ್ರುಗಳಿಗೆ) ಭಯವನ್ನುಂಟುಮಾಡುವ ಶಕ್ತಿಯುಳ್ಳವನು. ೨. ಭೀಮನಂತೆ ಶಕ್ತಿಯುಳ್ಳವನು: ಊರ್ಜಿತತೇಜಂ ಭೀಮಪರಾಕ್ರಮವೆನಿಪಂಗೀ ಮಹಿಯೊಳ್ ಪೃಥ್ವೀರಾಮನಸುಮಮರೂಪಂ (ಕಾಶಾ. XX. ೦೪-೦೦ ; ೦೫೦). [ಸಂ.]

ಭೀಮಭಾಕ (ನಾ). (ಅಲಂ) ಅತ್ಯಂತ ರುಚಿಕರವಾದ ಅಡುಗೆ; ℙ ಭೀಮನು ರುಚಿಕರವಾದ ಅಡುಗೆ ಮಾಡುವುದರಲ್ಲಿ ತುಂಬಾ ಸಮರ್ಥನಾಗಿದ್ದನೆಂದು ಪ್ರಸಿದ್ಧವಾಗಿದೆ: ಹಪ್ಪಸಗಳಮ್ಮ ಸೇರಿಸಿ ನಳಪಾಕ ಭೀಮಪಾಕಗಳನ್ನು ಇಳಿಸುವುದರೇ ಪಾಕಕಲಾನಿಪುಣರು (ಕಣಾಕ್ಕ.೦೬೨). 'ನಳಪಾಕ' ಪರಾ. [ಸಂ.]

ಭೀಮಬಲ (ನಾ). (ಅಲಂ) ಅತಿಶಯವಾದ ಬಲ.-ಶಕ್ತಿ: ಭೀಮಬಲದಿಂದ ತನ್ನ ಮುಂದಿರುವ ಒಂದು ವಿದ್ಯುತ್ ಬಳ್ಳಿಯನ್ನು ಕಟ್ಟಿಗೆಯ ಕವಚ ಹೊದ್ದುಕೊಂಡದ್ದನ್ನು ಹಿಡಿದು ಬಿಳಿದಳು (ಪ್ರ್ಯಾಪಾ. ೦೨೦). [ಸಂ.]

ಭೀಮಭೀಷಣ (ನಾ). ಒಂದು ನರಕದ ಹೆಸರು: ತುಷಾಗ್ನಿ ಕ್ರಿಮಿ ಸಂಘ ಅಮೇಧ್ಯ ಪ್ರತಿಷ್ಠೆ ಮೂತ್ರಕೂಪ ದುರ್ಗಂಧವಾಸಗಳೆಂಬೈದು ಮಂತ್ರಿವರಕಂಗಳಿಂದೊಡಗೂಡಿ ಭೀಮಭೀಷಣವೆಂಬರಸುನರಕವಿಹುದು (ಪಾಪಾ. ೦೩೦).

ಭೀಮಯ್ಯ (ವಾ). ಒಬ್ಬಾತನ ಹೆಸರು: ಭೀಮಯ್ಯನ ಮಗಂ ಪೆರ್ಗ್ಗಡೆ ಬೇಳಯ್ಯಂ ಗಂಗರಾವಯ ಕುಮ್ಮಸ್ಥಳಕ್ಕೆ ಕುದುರೆಯಂ ಪಾಯ್ಚಿ ಸತ್ತೊಡೆ (ಪಾ. XII, ಹಾಸ್ಯ. ೭೦-೭ ; ಸಂ. ೦೫೦); ದಿಟ್ಟಿಗನ ಪೆರ್ಗ್ಗಡೆ ದಾಸಯ್ಯನ ಮಗಂ ಭೀಮಯ್ಯಂ ಬರೆದ (ಪಾ. VIII. ಸೊಡ್ಡ. ೩೭೦-೬ ; ೦೭೨).

[ಭೀಮ + ಅಯ್ಯ]

ಭೀಮರ (ನಾ). ಕಾಳಗ; ಯುದ್ಧ. [ಸಂ.]

ಭೀಮರಕ್ಷೆ (ನಾ). ಯಾವ ಭೀತಿಯೂ ತಟ್ಟದಿರಲೆಂದು ದೇಹದಲ್ಲಿ ಲೇಪಿಸುವ ಕಾಡಿಗೆ. ಕಟ್ಟುವ ಯಂತ್ರ ಮೊದಲಾದುವು: ರೋಮ ರೋಮಗಳಲ್ಲಿ ಭೀಮರಕ್ಷೆಯ ಬಲ ಕೊರಳಾಗಿ ಕಟ್ಟಿರಿ ಒಂದಾವ (ಸೊಡುಗಾ. ೫೯-೦೩). [ಸಂ. ಭೀಮರಕ್ಷಾ]

ಭೀಮರಥಿ (ನಾ.) ೧. ದಕ್ಷಿಣ ಭಾರತದಲ್ಲಿ ಹರಿಯುವ ಒಂದು ನದಿ; ಕೃಷ್ಣಾನದಿಯ ಉಪನದಿ; ಭೀಮಾನದಿ. ೨. ಒಬ್ಬ ಮನುಷ್ಯನ ಜೀವಮಾನದಲ್ಲಿ ಬರುವ ಒಂದು ದುಷ್ಕಾಲ: ಎಪ್ಪತ್ತೇಳನೆಯಂ ವರ್ಷದ ವಸನೆಯ ತಿಂಗಳ ವಿಳನೆಯ ದಿನದ ರಾತ್ರಿ; ℙ ಇದು ಬಹಳ ಅನಿಷ್ಟಪ್ರದವಾದ ಕಾಲವಾದುದರಿಂದ ಶಾಂತಿಯನ್ನು ಮಾಡಬೇಕೆಂದು ಶಾಸ್ತ್ರಗಳಲ್ಲಿ ಹೇಳಿದೆ. ಆ ಶಾಂತಿಗೆ ಭೀಮರಥಿಶಾಂತಿ ಎಂದು ಹೇಳುತ್ತಾರೆ. [ಸಂ. ಭೀಮರಥೀ]

ಭೀಮರಾಜ (ನಾ). ಪಶ್ಚಿಮಸಮುದ್ರತೀರದ ಕಾಡುಗಳಲ್ಲಿ ವಾಸಿಸುವ, ಕಪ್ಪುಬಣ್ಣದ 'ನೀಳವಾದ ರೆಕ್ಕೆಗಳುಳ್ಳ' ಮಧುರವಾದ ಕಂಠಧ್ವನಿಯುಳ್ಳ ಒಂದು ಬಗೆಯ ಹಕ್ಕಿ: (೫). [ಸಂ. ?]

ಭೀಮಸೇನ (ನಾ). ೧. = ಭೀಮ ೪ : ಭೀಮಸೇನಚರಣಪ್ರಹರಣಗಳತಶೋಣಿತಾರ್ದ್ರಮಾಳೆಯುಮಾಗಿ (ಕುಷ್ಣ. ೦೭-೦೦ ೫); ಭೂಮಿಪತಿ ಹೇಳುವೆನದೇನನು ಭೀಮಸೇನನ ಜನನದದ್ಭುತವ (ಕುಮ್ಮಾ. ೪-೨೯). ೨. ಒಂದು ಬಗೆಯ ಕರ್ಪೂರ. [ಸಂ.]

ಭೀಮಸೇನಕ (ನಾ). =ಭೀಮಸೇನ ೨ : ಅಡುಗಿದ ಪಾರಿಜಾತಕದ ಕಪ್ಪುರ ವಳ್ಳಿಯ ವೇಲವತ್ತಿಯಾಪ್ಪುಡಕೆಯಾ ಭೀಮಸೇನಕದ ಪುಲುಬಲದಿಂ (ಜಾಂಬ. ೦೦-೧೩). [ಸಂ.]

ಭೀಮಾಟವಿ (ನಾ). ಭಯಂಕರವಾದ ಕಾಡು ; ಮಹಾರಣ್ಯ : ಆ ಭೀಮಾಟವೀಪರ್ಯ್ಯಂತದೊಳಿರಿಸಿ ಪೋವುದುಂ ನಾಮಲ್ಲಿ ಧೈರ್ಯಮನೆ ಮನದೊಳವಲಂಬಿಸಿ ಚತುರ್ವಿಧಾಹಾರ ಶರೀರಪ್ರತ್ಯಾಖ್ಯಾನಪೂರ್ವಕಂ ಸನ್ಯಸನದಿಂ ಮುಡಿಪಿ (ಜಾಂಬ. ೪-೧೬ ಪ); ರಾಮಂ ಕಲಿಪಿದ ತೆಱದಿಂ ರಾಮೆಗೆ ಪುಸಿ ನುಡಿದು ರಥಮನೇಱಿಕೊಂಡಾ ಭೀಮಾಟವಿಯಂ ಕರಿಹಂ ಭೀಮಾಟವಮಂ ಕೃತಾಂತಮುಎನೆಸ್ಸುಂದಂ (ಪಂಚಾಖ್ಯಾ. ೦೫-೭೫)- [ಸಂ.]

ಭೀಮಿ (ನಾ). ೧. ದುರ್ಗೆಯ ಒಂದು ಹೆಸರು. ೨. ಭೀಮಾನದಿ: ಸೋಪಾನ ಕಟ್ಟಿ ಭೀಮೆಯೊಳು ಇಳಿಯುವಡೆ ಸೋಪಾನಮಾಪೆ ವತನಿತ್ತ (ಕಪ್ಪಣ. ೩೦೬). [ಸಂ. ಭೀಮಾ]

ಭೀರು (ನಾ). ೧. ಅಂಜಿಕೆಯುಳ್ಳ ವ್ಯಕ್ತಿ : "ಜರಿತಃ, ಜಕಿತಃ, ಭೀತಃ, ತ್ರಸ್ತಃ, ಭೀರುಃ, ಕಾತರಃ, ಕ್ಷುಭಿತಃ, ಶಂಕಿತಃ—ಈ ೮ ಪ(ಹ)ಂದೆ" (ಶಬ್ದಮ. ೫೮-೦೧೪); ಭೀರುಗಳಂ ಶರಣ್ಯಾಗುವರಂ. . . ಆಜಿಯಲ್ಲಿ ವೇಸಿ (೩೪· ೪೭· ೦೩-೨೩ ; ೧೨೮೧) ; ನೀನಿರಿಯಳ್ ವಿಷಮಾತಂ . . . ನೀನುರುತರ ಭೀರು ಸರ್ವಭೂಷಣನಾತಂ (೧೦೪. ೯-೦೦೩). ೨. ನರಿ. ೩. ಹುಲಿ. ೪. ಒಂದು ಬಗೆಯ ಕಬ್ಬು. ೫. ಬೆಳ್ಳಿ. ೬. ಅಡು. ೭. ನೆರಳು ; ಛಾಯೆ. ೮. ಸಾವಿರಕಾಲಿನ ಹುಳು ; ಜರಿ. [ಸಂ.]

ಭೀರುಕ (ಗು). ೧. ಅಂಜುವ ; ಹೆದರುವ. (ನಾ). ೨. =ಭೀರು ೧: "ತ್ರಸ್ನುಃ, ಭೀರುಃ, ಭೀರುಕಃ, ಭೀಲುಕಃ—೪ ಹೆದರುವವನ ಹೆಸರು. ಭಯಪಡುವ ಪರಿಕಿ" (ಕಬ್ಬಾ. ೬೫). ೩. ಹುಲಿ. ೪. ನರಿ. ೫. ಕರಡಿ. ೬. ಗೂಬೆ. ೭. ಒಂದು ಬಗೆಯ ಕಬ್ಬು. [ಸಂ.]

ಭೀರುತನ (ನಾ). ಹೆದರಿಕೆ; ಹೇಡಿತನ : ಆರು ಕಲಿಸಿದರೆಲವೊ ಸಂಗರ ಭೀರುತನವನು ನಿನಗೆ ಯಾದವವೀರರಲಿ ಮುನ್ನಿಲ್ಲವಯಶವಾಯ್ತು (ತಣಾ. ೦೦-೪೦-೩೪). [ಭೀರು + —ತನ]

ಭೀರುತೆ (ನಾ). = ಭೀರುತನ : ಕೈವಾಲವಾವರಿಸಿದೆಳೆಯ ತಾವರೆಯಂತೆ ಜಾರುಭೀರುತೆ ಮೆರೆಯೆ ನಾರಿಯ ದುಕೂಲಮುಂ ತಳೆದು (ಕಬ್ಬಾಂಗ. ೦೪-೩೦೦). [ಸಂ. ಭೀರುತಾ]

ಭೀರುತ್ವ (ನಾ).=ಭೀರುತನ : ಭೀರುತ್ವಮೇಗೆಯ್ಯದೋ (ಜಾಂಖ್ಯ. ೬-೩೮); ಅಂತುಪತಪಭಾವಮುಂ ಪಾಪಭೀರುತ್ವಮುಂ ತನಗೆ ತೊಟ್ಟನೆ ಪುಟ್ಟಿ (ತಣಾಪು. ೪-೦೪ ಪ). [ಸಂ.]

ಭೀರುತ್ವಪ್ರತ್ಯಾಖ್ಯಾನ (ನಾ). [ಜೈನ] ಸತ್ಯವ್ರತದ ಐದು ವಿಧವಾದ ಭಾವನೆಗಳಲ್ಲಿ ಒಂದು; ಭಯವನ್ನು ಬಿಡುವುದು: ಕ್ರೋಧಪ್ರತ್ಯಾಖ್ಯಾನ, ಲೋಭಪ್ರತ್ಯಾಖ್ಯಾನ, ಭೀರುತ್ವಪ್ರತ್ಯಾಖ್ಯಾನ, ಹಾಸ್ಯಪ್ರತ್ಯಾಖ್ಯಾನ ಮತ್ತು ಅನವೀಚಿಭಾಷಣ—ಇವು ಸತ್ಯವ್ರತದ ಐದು ಭಾವನೆಗಳು: ಭೀರುತ್ವಪ್ರತ್ಯಾಖ್ಯಾನ—ಭಯಮುಂ ತೊಱೆವುದು . . . ಈಯಯ್ದುಂ ಸತ್ಯವ್ರತದ ಭಾವನೆಗಳಪ್ಪುವು (ಕಪ್ಪ್ರಕ್ರ. ೩೭೦). [ಸಂ.]

ಭೀಲುಕ (ನಾ).=ಭೀರು ೧: "ತ್ರಸ್ನುಃ, ಭೀರುಃ, ಭೀರುಕಃ, ಭೀಲುಕಃ—೪ ಹೆದರುವವನ ಹೆಸರು. ಭಯಪಡುವ ಪರಿಕಿ" (ಕಬ್ಬಾ. ೬೫). [ಸಂ.]

ಭೀಷಣ (ಗು). ೧. ಭಯವನ್ನುಂಟುಮಾಡುವ ; ಭಯಂಕರವಾದ : ಪ್ರಳುಪ್ತಿತ ವ್ಯಗಪತಿ ಶಿಶುಸನ್ನಿಕಾಶ ರತಿವಿಕಟಿ ಭೀಷಣಭ್ರೂಭಂಗರ್ ನಕುಲ ಸಹದೇವರ್ (ಪಂಪಭಾ. ೬-೪); ಭೀಷಣಬಲರಸ್ಪೃಹ್ಯದ್ಬಲಕೋಷಣ ದಕ್ಷರ್. . . ಕುಂಭಕರ್ಣ ವಿಭೀಷಣರೆಂಬರ್ (ಪಂಚಾಖ್ಯಾ. ೦೦-೨೨೫); ಅದರ ಭೀಷಣ ಪರಿಣಾಮವನ್ನು . . . ಕಾಣಲು ನಾವು ಐದನೆಯ ಅಂಕಕ್ಕೆ ಹೋಗಬೇಕು (ಕುಮಾಣಾ. ೭೦). (ನಾ). ೨. ಭಯಂಕರವಾದುದು: ದಾರುಣವಾದುದು : "ಘೋರಂ. . . ಭೀಷಣಾ, ಭೀಷ್ಮಂ, ಭೈರವಂ, ಭಯಾ(ಭಹ)ನಕಂ—ಈ ೧೦ ಭಯಂಕರಂ" (ಪಣಾಮು. ೦೦೬-೨೦). ೩. ಭಯಂಕರನಾದವನು : ಸಂಸ್ಫಾಳಿತೋದ್ದತ ಚಪಲಘಾಪಕಕಾಳಮೌರ್ವೀನಾದಭೀಷಣನಾದನಾ ಭೀಮ (ಕುಮ್ಮ. ೦೩-೦೩). ೪. ರುದ್ರ; ಶಿವ.ಜಿ. 'ತಾಸೆ' ಎಂಬ ಒಂದು ವಾದ್ಯ: ಭದ್ರಕವೆಂಬ ಕರಾಡಿ ಶಾಸಕವೆಂಬ ಪನಾರಿ ಭೀಷಣವೆಂಬ ತ್ರಾಸಾ . . . ಘೋರಘೀಟಿಕೆಯಂಬ ಘಂಟೆ ಇತ್ಯಾದಿ ದಶವಾದ್ಯಂಗಳಂ ಬಾರಿಸಲುಳ್ಳ ವಿಚಕ್ಷಣರಿಂ ವಿನುತರಾಗಿ (ಪಣಿಕ. ೫೩೬). 'ಪಂಚಮಹಾವಾದ್ಯ' ಪರಾ. ೫. [ಕಾವ್ಯಮೀ] ಎಂಟುರಸಗಳಲ್ಲಿ ಒಂದು ; ಭಯಾನಕರಸ : ಬಳಿಕ ಹಸಿತವ್ಯ ಕೋಷ್ಯ ದ್ವೇಷ್ಯ ಪ್ರತಿಭು ಭೀಷಣ ಜುಗುಪ್ಸನೀಯ ಅಶ್ಲಾರ್ಯ ಸಾಮ್ಯಸ್ಪದಂಗಳೆಂಬ ರಸಾಷ್ಟಕರೂಪವಾಗಿ ತತ್ಪದ್ಯಾಭ್ಯಮಹುದು (ಪಣಿಕ. ೨೧೨). [ಸಂ.]

ಭೀಷ್ಮ (ಗು). ೧. ಭಯವನ್ನುಂಟುಮಾಡುವ ; ಭಯಂಕರವಾದ : ಜಾಜ್ವಲ್ಯಮಾನಾವರಾಭ್ಯರ್ಣಸ್ಥಂ ಬಹುಬಂಧನಂಬಡೆದು ಭೀಷ್ಮಧ್ವಾನರ್ದಂಬರಂ (ಹರಿವಂ. ೦೨-೪) ; ಕೃಷ್ಣಜಠರದ ಭೀಮಭೀಷ್ಮಬಲ್ಲುಕವೊಂದು ಜಠಿಸುತ್ಪತಂದು (ಕಬ್ಬಾಂಗ. ೦೪-೬೧೪). (ನಾ). ೨. ಭೀಕರವಾದುದು; ಭಯಂಕರವಾದುದು : "ಘೋರಂ . . . ಭೀಷ್ಮಂ, ಭೈರವಂ ಭಯಾ(ಭಹ)ನಕಂ—ಈ ೧೦ ಭಯಂಕರಂ" (ಪಣಾಮು. ೦೦೬-೨೦) ; ಮುತ್ತುಗಳ್ ಸುತ್ತಲುಂ ಸಿಡಿಯಂತಿರ್ಪಸಮಿರ್ದುಮೊಂದತಿಮಂದೇಭಂ ಭೀಷ್ಮದೊಳ್ ಗ್ರೀಷ್ಮದೊಳ್ (೧೦೪. ೯-೨೪); ಮೇಘಮುಂದಿತ ಗಿರಿಯೆ ಜೂಡಿದಿಂದಾರ್ಭಟಿಸಿ ದುಷ್ಕಿಳ್ಕುವರ್ಬಿಯಾಘಾತದಿಂ ಭೀಷ್ಮವಜ್ರ ಜಲಪಾತವ್ಯಾತಂಗಳಿಂ ಭೀರಮರಣ್ಯಂ! (ಕ್ರಿಣಾಪು. ೦೪-೨೧೦). ೩. ಭಯ ; ಭೀತಿ : ದೊರೆಕೊಳ್ಗುಂ ಯಾಮಿನೀ ಸ್ವಾಮಿಯಿನೊಗೆದ ದುಹಾರಿಷ್ಟ ಭೀಷ್ಮ [ಪಣಾಂ. ಭೀಷ್ಟ· ಭೀಷ್ಮ]ಕ್ಕಭಂಗಂ (ಪಾಕ. ೬-೦೦). ೪. 'ಶಂತನು' ಎಂಬ ರಾಜನಿಗೆ ಗಂಗಾದೇವಿಯಲ್ಲಿ ಹುಟ್ಟಿದವನು ; ಪಾಂಡವ, ಕೌರವರ ಅಜ್ಜ ; ಗಾಂಗೇಯ : "ಗಾಂಗೇಯನೆನೆ ಭೀಷ್ಮನಕ್ಕುಂ" (ಪೊಗಣಾ. ೭೫-೨); ತಂದನಂದಂಬೆಯಂಬಿಕೆಯಂಬಾಲೆಯರೆಂಬ ಬಾಲೆಯ[ರನೇಂ] ಭೀಷ್ಮಂ ಯಶೋಭಾಗಿಯೇ (ಪಂಚಾ. ೦-೭೪) ; ಕೌರವೇಂದ್ರನ ಮೋಹರದ ಗುರುಭಾರ ಭೀಷ್ಮಂಗಾಯ್ತು (ಕುಮ್ಮಭ. ೦-೪೩); ಯದೃಚ್ಛಾಮಾತ್ರದೆ ಭಾಗವತಮಸ್ತಕಮಣಿ ಬೃಂದಾರ ಕೋವಿದಮಂ ಸತ್ಕಸಂಧಂ ಭೀಷ್ಮಂ (ಕೃಷ್ಣ. ೧-೩೦). ೫. (ಅಲಂ) (ಒಂದು ಮನೆತನ ಅಥವಾ ಒಂದು ಊರು ಮುಂತಾದ ಕಡೆಗಳಲ್ಲಿ) ಬಹಳ ವಯಸ್ಸಾದವನು ; ಹಿರಿಯ ವ್ಯಕ್ತಿ : ರಾಜಮಾತ್ಯಯವರ ಕರ್ಮಾಂತರಗಳಾ ಮುಂಗಿಯಾತ್ಪಿದ್ದಂತೆಯೆ ಭೀಷ್ಮರ ಆರೋಗ್ಯ ಕೆಟ್ಟಿತು (ಜಾಂಖಾ. ೦೫೬). [ಸಂ.]

ಭೀಷ್ಮತೆ (ನಾ). ಭಯಂಕರತೆ : ಭೀಕರತೆ : ಬಲಶಾಲಿಗಳ್ ತಿನಿಕಂದಿಟ್ಟ ಕಾರ್ಮುಗದ ಭೀಮ ಭೀಷ್ಮತೆಯುಜ್ಜಲಿಸಿದತ್ತು (ಕ್ರಿಣಾಪು. ೪೬-೧೧೨). [ಸಂ.]

ಭೀಷ್ಮಪ್ರತಿಜ್ಞೆ (ನಾ). (ಅಲಂ) (ಮಹಾಭಾರತದ ಭೀಷ್ಮನು ಮಾಡಿದ ದೃಢ) ಪ್ರತಿಜ್ಞೆ : ಅಚಲವಾದ ಪ್ರತಿಜ್ಞೆ : ದೃಢಪ್ರತಿಜ್ಞೆ : ಗೌರು ಈ ಪಟ್ಟಿಯಲ್ಲಿ ಭೀಮಪ್ಪನಿಗೆ ಶಿಕ್ಷೆಮಾಡಿಸುವ ಭೀಷ್ಮಪ್ರತಿಜ್ಞೆಮಾಡಿ ನಿಂಕರು (ಕುಚ. ೬). [ಸಂ. ಭೀಷ್ಮಪ್ರತಿಜ್ಞಾ]

ಭೀಷ್ಮಪ್ರಯತ್ನ (ನಾ). (ಆಲಂ) ಅಚಲವಾದ ಪ್ರಯತ್ನ : ವಿಷ್ಣೋ ಕಷ್ಟ ಬಂದರೂ ಬಿಡದೆ ಸಾಧಿಸಂವಿಕೆ : ಹುಟದಿಂದ ಕಾರ್ಯವನ್ನು ಮುಂದುವರಿಸಂವಿಕೆ : ಸರ್ವಾವರಾಧವನ್ನು ಸನ್ನ ತಲೆಯ ಮೇಲೆ ಹೊರಿಸಿ ಅವಳನ್ನು ಏರವರಾಧಿಯನ್ನಾಗಿ ಮಾಡುವ ಈ ನಿನ್ನ ಭೀಷ್ಮ ಪ್ರಯತ್ನವೇಕೆ ? (ಕ್ಷತ್ರ. ೨೬). [ಸಂ.]

ಭೀಷ್ಮಾರಿ (ನಾ). ಭೀಷ್ಮನ ವೈರಿ : ಶಿಖಂಡಿ : ಬೊಬ್ಬಿರಿವುತಂ ಬಂದು ಭೀಷ್ಮಾರಿಯಂ ಮನೆಯನೊಳಪೊಕ್ಕನು ಧಡಯಿಸುತಲರಿದನು ಶಿಖಂಡಿಯುಂ (ಕುಟು೪. ೭೭-೧೭). [ಸಂ.]

ಭೀಷ್ಮಿಸು (ಕ್ರಿ). ಉಗ್ರವಾಗು : ಉರ್ದಂ ಮಸುದೇವಂ ಭೀಷ್ಮಿಸ ಕೋಪಾರಕ್ತನೇತ್ರನವಿಬಳಜ್ಯತ್ರಂ (ಕೀಮುಕ್ತ. ೩-೩೪) ; ಇಸೆ ಪರಿಯ ರಥ ಹರಿಗಳ್ ಮಿಸುಗುವ ಸಂಕಲೆಯು ಕಣ್ಣಿಗಳ್ ಭೋಂಕನೆ ಭೀಷ್ಮಿಸೆ ದೆಸೆಗೆ ಹರಿಗಳೋಡರ್ ಪೊಸಥಮುಮಪೇಱು ಮತ್ತೆ ಏಲೆ ಸೀಪರಥಂ (ಕೀಮುಕ್ತ. ೫-೮೬). [ಭೀಷ್ಮ + — ಇಸು]

ಭು (ನಾ). ಒಂದು ಅನುಕರಣ ಶಬ್ದ ; ಶಂಖ ಮೊದಲಾದ ವಾದ್ಯಗಳ ಧ್ವನಿಯಂನ್ನು ಅನುಕರಿಸುವ ಶಬ್ದ : ಭು ಭೂ ಭೂ ಎಂದು ಪೂರಯಿಸಿದುದು ಶಂಖಂ (ಕಮಿ. ೦೦ ೪ ಪದ್ಯ).

ಭುಂಕರಿಸು (ಕ್ರಿ). ೧. ಭುಂ ಎಂದು ಶಬ್ದಮಾಡು. ೨. ಸಶಬ್ದವಾಗಿ ಬಂಧಿಸು : ಸಂಕಲೆಯಸಳವಡಿಸಿಯುಗಳಮು ಭುಂಕರಿಸಿದನು (ಕ್ಷತ್ರಚೂ. ೬-೧೦). [ಭುಂಕರಣ + — ಇಸು]

ಭುಂಕಾರ (ನಾ). ಭುಂ ಎಂಬ ಧ್ವನಿ : ಭೋರಂಗಿಗಳ ಭುಂಕಾರ (ಕೀಪರ್ವ. ೬೦-೦೦). .[?]

ಭುಂಗಾ 'ಭೋಂಗಾ' ನೋ.

ಭುಂಜನ (ನಾ). ತಿನ್ನುವವನು ; ಉಣ್ಣುವವನು ; ಭಕ್ಷಿಸುವವನು : ಆತ ಪ್ರಸಾದವಿಡಿದು ಭುಂಜಿಸುವ ಭುಂಜಕನಾಗಿ ವೇಶವಿಡಿದು ರಂಜಿಸುವ ರಂಜಕನಲ್ಲ (ಕವಗೋ. ೦೦೬-೧೭); ನೆರೆ ಹೊಲ್ಲ ಚಾರ ಚೋರಕರ ನೆರೆ ಹೊಲ್ಲ ಬ್ರಹ್ಮೇತಿಕಾರರ ನೆರೆ ಹೊಲ್ಲ ಸುರೆಯ ಭುಂಜಕರ (೧೮೦೫. ೦೫೦-೧೨). [<ಸಾ. ಭುಂಜಗ. / ಸಂ. ಭೋಜಕ]

ಭುಂಜನ (ನಾ). ತಿನ್ನುವುದು: 'ಭುಂಜಿಸು' ಪರಾ.

[< ಸಾ. ಭುಂಜಣ. / ಸಂ. ಭೋಜನ]

ಭುಂಜಿಸು, ಭುಜಿಸು (ಕ್ರಿ). ೧. ಆಹಾರವನ್ನು ಸೇವಿಸು ; ತಿನ್ನು; ಊಟ ಮಾಡು : ವಿಕೃತದ ಭೂಸುರರು ಬಿಣಾಂತನಿಳಯದೊಳೇಕವಾಗಿರೆ ಸ್ವಯಂಪಾಕವ ಮಾಡಿ ಭುಂಜಿಪರು (ಕೀಪರ್ವ. ೬-೩೩); ಭುವನಜನವಂದದಿ ನೋಟಕರ್ ಭು[ಜಾಂ. ಭೋ]ಜಿಸುವೀ ಕಾಳಕೂಟಮಂ ನಾನೆನುತೆ ಶರಮೆತ್ತಿ ಬಾರನೆಲ್ಲ (ಪಂಪ. ೨೨-೦೧) ; ಸ್ವಾದುವಾದ ಫಲವಂ ಭುಂಜಿಸಿ (ಹಾಗಚಿ. ೨೮೩-೪). ೨. ಸುಖವನ್ನು ಅನುಭವಿಸು ; ಸವಿ : ನನೆಯುಮಿರದ ಪೊಸ ಕಮ್ಮಂಗಳೆವೆಯ ಕೆನೆಯ ಕುದಿಯ ತನಿಗಂಪಂ ಭುಜಿಸಲೆಸುತನುರಾಗ ದಿನವಜೊಳ್ಳುಳ್ಳಿರ್ದಾಜಿವಸುಳಿಗಳು (ಜಜಿಪು. ೦-೭೯) ; ಜಗದುದರ ಕೊಟ್ಟುದನು ಭುಂಜಿಪು (ಕಗಪಾ. ೦೧೩) ; ಹಾನಿ ವೃದ್ಧಿ ಜಯಾಪ ಜಯಗಳು ಏನು ಕೊಟ್ಟುವ ಭುಂಜಿಸುತ ಲಕ್ಷ್ಮೀನಿವಾಸನ ಕರುಣವನೆ ಸಂಪಾದಿಸಸುದಿನು (ಕುಪಾಂ. ೦೦೯). **ಭುಜಿಸು:** ೧. ಮುಡಿಯಿಕ್ಕಿ ರಾಘವನ ಚರಣದೆಡೆ ಕಾಣಿಕೆಯ ನೀಡಿದಮು ಶರತರದ ಪಣ್ಣಂ, ಪೂಗಳಂ ಮಾಂಸಾನ್ನಮಂ ಭುಜಿಸಿ ಸರ್ವರುಂ ತಣಿಯುತಂ . . . ಕಳೆದರಾ ರಾತ್ರಿಯಂ ಸುಖಿತ ನಿದ್ರೆಯಲಿ (ಕ್ರಿರಾಪಾ. ೪೭-೩೭೬). 'ಭೋಜಿಸು' ಪರಾ.

[ಭುಂಜನ + — ಇಸು. / ತೆಲು. ಭುಜಿಂಚು]

ಭುಂಭುಕ 'ಬುಂಭುಕ' ನೋ.

ಭುಕ್ತ (ಗು). ೧. ತಿಂದ ; ಊಟಮಾಡಿದ. ೨. ಅನುಭವಿಸಿದ.

(ನಾ). ೩. ತಿಂದುದು ; ಊಟಮಾಡಿದುದು : "ಭಕ್ಷಿತಂ, ಚರ್ವಿತಂ . . . ಅಶಿತಂ, ಭುಕ್ತಂ–೦೪ ಭುಜಿಸಲ್ಪಟ್ಟದ್ದು, ತಿನ್ನಲ್ಪಟ್ಟದ್ದು, ಅಗಿಯಲ್ಪಟ್ಟದ್ದು, ನುಂಗಲ್ಪಟ್ಟದ್ದು, ದೊಡ್ಡದ್ದು" (ನಿಘಂ೦೪. ೩೩೩). ೪. ತಿನ್ನುವಿಕೆ ; ಊಟಮಾಡುವುದು : "ಭುಕ್ತಿಃ, ಭುಕ್ತಂ . . . ಭೋಜನೀಯಂ–ಈ ೭ ಹೊರೆತವೂ, ಊಟವೂ" (ಶಾಕ್ಷ. ೨೩೫). ೫. ಅನ್ನ ; ಆಹಾರ : "ಕೂರವನ್ನಂ ಭುಕ್ತವೋ[ಜಾಂ. ಭಕ್ತವೋ]ದನಂ ಭಕ್ತಮಾಹಾರಮಶನಂ ಬಲಿಯೆನಲ್ಕೆ ಪೋಗರಮಕ್ಕುಂ" (ಸುಗಣಾ. ೬೭-೮). ೬. (ಆಲಂ) ಸಾಂಸಾರಿಕ ಸುಖಗಳನ್ನು ಅನುಭವಿಸುವವನು ; ವಿಷಯಲಂಪಟ : ತವಭಕ್ತಿಯಂದಿ ಭುಕ್ತಂಗೆ ಎಂದೆಂದು ಭವಮುಕ್ತಿಯಿಲ್ಲ (ಪಜಿಶ. ೨೬೯). [ಸಂ.]

ಭುಕ್ತಶಾಲೆ (ನಾ). ೧. ಊಟದ ಮನೆ ; ಭೋಜನಗೃಹ. ೨. ಪ್ರಯಾಣಿಕರಿಗೆ ಧರ್ಮಾರ್ಥವಾಗಿ ಊಟಕ್ಕೆ ಏರ್ಪಾಡು ಮಾಡುವ ಮನೆ ; ಅನ್ನಸತ್ರ : ಮಱ ಭುಕ್ತಶಾಲೆ ಕಂಪೆಸೆವ ಘಟಪೂರಿತ ಗಂಧ ಶೈತ್ಯೋದಕದಿಟಗೆಯು ಮನೆಗಳೊಪ್ಪಿಸುವುದು (ಕೀಚಕ. ೨-೨೬). [ಸಂ. ಭುಕ್ತಶಾಲಾ]

ಭುಕ್ತಶೇಷ (ನಾ). ಉಂಡು ಮಿಕ್ಕ ಅನ್ನ; ಎಂಜಲು ; ಉಚ್ಛಿಷ್ಟ; "ವಿಘಸಃ, ಭುಕ್ತಶೇಷಃ–ಈ ೨ ಉಂಡು ಮಿಕ್ಕುದು" (ಪಲಾಮು.೫೪-೦೭೦); ಕೊಳೆತ ಬೆರಳನು ಭುಕ್ತಶೇಷದೊಳಿಳುಹಿದರೆ ಕಂದಿಕೆ ಚಿತ್ತದೊಳಿಳುಹದುಪ ಭೋಗಿನಿ (ಭಾಷ್ಯ. ೦೦-೧೩). [ಸಂ.]

ಭುಕ್ತಿ (ನಾ). ೧. ಊಟ ಮಾಡುವುದು; ಊಟ ; ಭೋಜನ : "ಭುಕ್ತಿಃ, ಭುಕ್ತಂ . . . ಭೋಜನೀಯಂ–ಈ ೭ ಹೊರೆತವೂ ಊಟವೂ" (ಶಾಕ್ಷ ೨೩೫); ಕೃಷ್ಣಿಯರಿಯದ ವಾಂಛೆ ಜೀರ್ಣಸದ ಭುಕ್ತಿಯೊಲು ಗುಪ್ತದಲಿ ಕೊಳೆಯುತ್ತೆ ವಿಷಬೀಜವಾಗಿ (ಕ್ಷುತ್ರಸಾ. ೫೬೯); ಪುರುಷನ ಒಕ್ಕಲು ಮದುವೆಯಲ್ಲೂ ಅದ ಮೇಲೆ ಜಾತಿವದ್ದತಿಯನ್ನನುಸರಿಸಿ ಊಟಪಾಕಸುತ್ತಿದ್ದರು. ಇದಕ್ಕೆ 'ಭುಕ್ತಿ' ಎಂದು ಹೆಸರು (ಪಾಶ್ಮಕ. ೦೮). ೨. ಸುಖಾನುಭವ : ಭೋಗ ;"ಕಾಮದೊಳು ಭುಕ್ತಿಯೊಳು ಸಂಭೋಗಮೆಂದನಿಸು" (ಪುಗಣಾ. ೦೪೬-೨೦); ಕರ್ಣನನಜಿಯದವನು ವಿಪ್ರನಾದರೇನು ಚತುರ್ವೇದಿಯಾದವ ರೇನು ಭುಕ್ತಿಕಾರಣ ಲೋಕದ ಇಚ್ಛೆಗೆ ನುಡಿದು ನಡೆದರಯ್ಯಾ (ಜಪಪ. ೬೫೪); ಮಲಕ್ರಯಂಗಳಿಗೆ ತಲೆಗೊಡು ಭೋಗಮಂ ನೀಗಿ ಭುಕ್ತಿಯಂ ತೊಕ್ಕಳ ದುಳಿದು (ಶಪಪ. ೨೬-೨೨). ೩. [ಜ್ಯೋತಿ] ಸೂರ್ಯಾದಿ ಗ್ರಹಗಳು ಯಾವುದಾದರೂ ರಾಶಿಯನ್ನು ಪ್ರವೇಶಿಸಿ ಮುಂದುವರಿಯುತ್ತಿರುವಾಗ ಅತಿಕ್ರಮಿಸಿದ ಕಾಲ : ಆಯುದನು . . . ರಿವುಭಟನಾಯುಷದ ಉಡಗಲು ಭುಕ್ತಿಯ ಶಕ್ತಿಯಿಂದಂ ಸ್ಮರಿಪ (ಕಾಪ್ರಾ. ೪-೬೩). ೪. ವ್ಯಕ್ತಿಯ ಜೀವಮಾನದಲ್ಲಿ ಯಾವ ಕಾಲದಲ್ಲಿ ಯಾವ ಫಲ ನಡೆಯುವುದೆಂಬುದನ್ನು ಕಂಡುಹಿಡಿಯಲು ಜ್ಯೋತಿಃಶಾಸ್ತ್ರಜ್ಞರು ನಿರ್ಣಯಿಸಿರುವ ಸೂರ್ಯಾದಿಗ್ರಹಗಳು ಫಲಕೊಡುವ ಕಾಲ ವಿಶೇಷ : ℙ ಒಬ್ಬ ಮನುಷ್ಯನು ೧೨೦ ವರ್ಷಗಳ ಕಾಲ ಬದುಕುವುದಾದರೆ ಅತನ ಜೀವಮಾನದಲ್ಲಿ ಒಂಭತ್ತು ಗ್ರಹಗಳ ದೆಶೆಗಳೂ ನಡೆಯಬೆತ್ತವೆ. ಪ್ರತಿಯೊಂದು ದೆಶೆಯಲ್ಲೂ ಒಂಭತ್ತು ಗ್ರಹಗಳ ಭುಕ್ತಿಗಳು ನಡೆಯುತ್ತವೆ. ಪ್ರತಿಯೊಂದು ಭುಕ್ತಿಯಲ್ಲೂ ಬೇರೆ ಬೇರೆ ಫಲಗಳು ನಡೆಯುತ್ತವೆ. ಈ ದೆಶೆ ಮತ್ತು ಭುಕ್ತಿಗಳ ಕಾಲನಿರ್ಣಯಕ್ಕೆ ನಿರ್ದಿಷ್ಟವಾದ ಗಣಿತವಿದೆ. ಉದಾಹರಣೆಗೆ ಕೃತ್ತಿಕಾನಕ್ಷತ್ರದಲ್ಲಿ ಒಬ್ಬನು ಜನಿಸಿದರೆ ಅವನಿಗೆ ಜನನಕಾಲದಲ್ಲಿ ರವಿದಶೆಯು ಪ್ರಾರಂಭವಾಗುತ್ತದೆ. ಬಳಿಕ ಚಂದ್ರದಶೆ ಇತ್ಯಾದಿ. ರವಿದಶೆಯು ಆರುವರ್ಷಗಳು ನಡೆಯುತ್ತದೆ. ಆಗ ರವಿ, ಚಂದ್ರ, ಕುಜ, ರಾಹು, ಗುರು, ಶನಿ, ಬುಧ, ಕೇತು, ಶುಕ್ರ

ಗ್ರಹಗಳ ಭುಕ್ತಿಗಳು ಕ್ರಮವಾಗಿ ಲೆಕ್ಕಾಚಾರದಂತೆ ನಡೆಯುತ್ತವೆ ; ಯುಕ್ತಿವಂತನು ಕುಕ್ಕನ ಭುಕ್ತಿಯಲ್ಲಿ ಮುಕ್ತಿ ಪಡೆದನಂತೆ (ಗಾಡಿ): ಮಾಘಮಾಸದ ಹೊಕ್ತಿಗೆ ಶಕ್ರಭುಕ್ತಿ ಪ್ರಾರಂಭವಾಗುತ್ತದೆ. ಆಗ ಮದುವೆಮಾಗುತ್ತದೆ (ಜಾತ). [ಸಂ.]

ಭುಕ್ತಿಗೆಯ್ (ಕ್ರಿ). ಊಟಮಾಡು : ವರಮತಮಂ ಪುಗುತಂದಲ್ಲಿರುತಂ ಸದೆ ಭುಕ್ತಿಗೆಯ್ದು ಶಯನಂಗೊಂಡಿರೆ (ಹಾಹಾಕೃ. ೪-೦೪-೦೬).

[ಭುಕ್ತಿ + ಕೆಯ್]

ಭುಕ್ತಿಗೆಯ್ಸು (ಕ್ರಿ). ಊಟಮಾಡಿಸು ; ಭೋಜನ ಮಾಡಿಸು : ಸಡಗರದಿಂದುಪಚರಿಸುತೆ ಮಿಲ್ಲನೆ ಪಡೆದಳಾ ರತಿಯ ಚಿತ್ರವನು . . . ಮಜ್ಜನ ಭುಕ್ತಿಗೆಯ್ಸು (ಕೋಚಕ. ೦೦-೨೦). [ಭುಕ್ತಿ + ಕೆಯ್ಸು]

ಭುಕ್ತಿದ (ನಾ). ಸಂತಿವನ್ನು ಕೊಡುವವನು; ಐಹಿಕಸಂತಿವನ್ನೊಟ್ಟು ಮಾಡುವವನು : ಭುಕ್ತಿದರು ದೇವತೆಗಳಲ್ಲದೆ ಮುಕ್ತಿದರು ತಾವಾಗರು (ಏಪಕಳ. ೬-೩೦). [ಸಂ.]

ಭುಕ್ತೋಚ್ಛಿಷ್ಟ (ನಾ). ಊಟಮಾಡಿ ಬಿಟ್ಟ ಎಂಜಲು ಅನ್ನ : "ಭುಕ್ತೋಚ್ಛಿಷ್ಟಂ. ಭೋಕ್ತಾ—ಈ ೨ ಮಡಗೂಲು" (ಹೊಯಸ. ೫೯-೦೬೦). [ಸಂ.]

ಭುಗ್ (ನಾ). ಒಂದು ಅನುಕರಣ ಶಬ್ದ.; ಬೆಂಕಿಯು ತಟ್ಟನೆ ಪತ್ತಿಕೊಳ್ಳುವುದನ್ನು ಸೂಚಿಸುವ ಶಬ್ದ : ಒಮ್ಮೆ ಹೊಗೆಗಟ್ಟುವುದೊಮ್ಮೆ ಭುಗ್ಗೆನುವುದು ಬರ್ಕರು ಕೆಟ್ಟು ಲಾಟೀನು (ಜಂಗಸ. ೨೦೦-೨೨).

ಭುಗಭುಗ (ನಾ). ಒಂದು ಅನುಕರಣ ಶಬ್ದ : 'ಭುಗಭುಗನೆ' ಪರಾ.

ಭುಗಭುಗನೆ (ಅ). ಒಂದು ಅನುಕರಣಾವ್ಯಯ : 'ಭುಗಭುಗ ಎಂದು ಧ್ವನಿಯಾಗುವಂತೆ : ಭುಗಭುಗನುರ್ಚಿ ಪಾಯ್ದ ಬಿಸುನೆತ್ತರ ಸುಟ್ಟುರೆಯಂ ನೆಲಕ್ಕೆ ಪರ್ವಗಳುಗಲೀಯದವ್ವಳಿಸಿ ಬೀರ್ದಿಸಂ (ಪಂಪಭಾ. ೦೦-೦೦). [ಭುಗಭುಗ + —ಅನ್ನೆ]

ಭುಗಿಭುಗಿ (ನಾ). ಒಂದು ಅನುಕರಣ ಶಬ್ದ : ಭಟಿ ಭಟೀ ಭಟಿ ಭುಗಿಲು ಭುಗಿಭುಗಿ (ಅಷ್ಟ. ೫೬-೬೨) ; ಭುಗಿಲು ಭುಗಿಭುಗಿ ಧಗಿಲು ಧಗಿಲೆಂದೊಗೆದು ದಳ್ಳುರಿಯುಗುಳಲು (ಶಾಣಿ. ೫೬-೭೪).

ಭುಗಿಭುಗಿಸು (ಕ್ರಿ). ಭುಗಿಭುಗಿ ಎಂದು ಧ್ವನಿ ಬರುವಂತೆ ಉರಿ. — ಜ್ವಲಿಸು ; ಹೆಚ್ಚಾಗಿ ಜ್ವಾಲೆಗಳನ್ನು ತೋರ್ಪಡಿಸುತ್ತಾ ಜ್ವಲಿಸು ; ಹೆಚ್ಚಾಗಿ ಉರಿ : ಭುಗಿಭುಗಿಸಿ ರಿಪುವನಾಕರದಲಿ ಸಲೆ ಬೀದಿವರಿದುದು ಭೀಮದಾವಾಗ್ನಿ (ಶಾಣ್ಮಕ್ರೌ. ೦೨-೨೪) ; ಭುಗಿಭುಗಿಸೆ ಕೋಪಾಗ್ನಿ ಪೊಂಡಿಗೆಯಂ ಕೋಲ್ಗಳಂ ತೆಗೆತೆಗೆದು . . . ಬಿಲ್ಲನಕ್ಕಡಿಗೈದು ಬೊಬ್ಬಿಱಿದನು (ಕೃಷ್ಣಾ. ೦೨-೨೨). 'ಭುಗುಭುಗಿಸು' ಪರಾ.

[ಭುಗಭುಗಿ + —ಇಸು]

ಭುಗಿಲ್, ಭುಗಿಲು (ನಾ). ೧. ಒಂದು ಅನುಕರಣ ಶಬ್ದ : ಅನುಕರಣಾವ್ಯಯಗಳು . . . ನಟಿಲ್, ಪಠಿಲ್, ಭುಗಿಲ್, ಭೋರ್ . . . ಇತ್ಯಾದಿ (ಕೃಷ್ಣ. ೩೨). ಭುಗಿಲು : ೧. ಭಟಿ ಭಟೀ ಭಟಿ ಭುಗಿಲು ಭುಗಿಭುಗಿ (ಏಪಕ್ಷ. ೫೬-೬೨); ಭುಗಿಲು ಭುಗಭುಗಿ ಧಗಿಲು ಧಗಿಲೆಂದೊಗೆದು ದಳ್ಳುರಿಯುಗುಳಲು (ಶಾಣಿ. ೫೬-೭೪). ೨. ತಾಪ; ಝಳ : ಎರಡುಹನಿಯಾದರೂ ಕಣ್ಣೀರು ಉದುರುವಾರದೆ ? ಆ ಒಳಗಣ ಭುಗಿಲು ಸ್ವಲ್ಪವಾದರೂ ಹೊರವಮ್ಮಿವಾಗಬಾರದೆ ? (ಜಾಂತೆಕಾ. ೭೦೩); ತಲೆಯಲ್ಲಿ ಹುಯಿಲು ಎದೆಯಲ್ಲಿ ಭುಗಿಲು (ಪಂಪ್ರಪ್ರ. ೬-೩).

ಭುಗಿಭುಗಿಲ್, ಭುಗಿಭುಗಿಲು, ಭುಗಿಲ್ಬುಗಿಲ್, ಭುಗುಭುಗಿಲ್, ಭುಗ್ಗುಗಿಲ್, ಭುರ್ಭುಗಿಲ್ (ದ್ವಿರುಕ್ತಿ) : ದೆಸೆಗಳಂ ದೆಸೆಯಿಂ ರಸೆಯನಲ್ಲಾಡಿಸುತೆ ಭುಗಿ[ಜಾಹಾಂ. ಗು]ಭುಗಿಲ್ ಭೀಭುಲನೊಗೆದುದು ಮಹಾವಿಷಂ (ಸಂಪಿ. ೦-೦೪) ; ಉರಿಗೆ ಹವಿಯಂ ಕೊಡಲೊಡನೆ ಸಿಡಿದು ಭುಗಿಭುಗಿಲೆನುತ (ಜಷ್ಣು. ೫೬-೦೬) ; ಬಸುನೆತ್ತರ ಧಾರೆಗಳ್ ಭುಗಿಲ್ಬುಗಿಲೆ ಪಾಯ್ದುವು ಪೊಣ್ಮಿದುವು (ಪಂಜಪರ್ವ. ೦೩-೨೦) ; ಭುಗ್ಗು ಭುಗಿಲ್ ಭುಗಿಭುಗಿಲು ಧಗಧಗ ಧಗಿಧಗಿಲುಧಲೆಂದೊದಲ್ದುರಿ ಜಾಲಿಗೆ ಗಳವು ನೀಡಿದುವು (ಕೃಷ್ಣಾ. ೩-೬.೨೯) ; ದಳ್ಳೆಂಬ ಭೋರೆಂಬು ಭುಗ್ಗು ಗಿಲೆಂ[ಜಾಹಾಂ. ಭುರ್ಭುಗಿಲೆಂ]ಬೇಲ್ಗುಯನಾಂತು ಕೇಸುರಿಗಳಂ ಸೂಸುತ್ತ ಗುರ್ವಪ್ಪಿನಂ (ಜಷ್ಣ. ೦೫-೨೦) ; ಮೆಗಿದುರಿ ಭುರ್ಭುಗಿಲ್ ಭುಗಿಲೆನುತು ಮಗುರ್ವಿಸಿ ಪರ್ವ (ಶುಜಾಕೇ. ೦೩-೨೬).

ಭುಗಿಲನೆ (ಅ). ಒಂದು ಅನುಕರಣಾವ್ಯಯ ; ಭುಗಿಲ್ ಎಂದು ಧ್ವನಿಯಾಗುವಂತೆ : ಧಿಗಿಲನೆ, ಭುಗಿಲನೆ, ಭೋರನೆ ಎಂಬಿವನುಕರಣ ಪದಂಗಳ್ . . . ಅವ್ಯಯಪದಂಗಳವ್ವು (ಕಬಾ. ೭೦೦ ಕ್ಕಿ).

ಭುಗಿಭುಗಿಲನೆ (ದ್ವಿರುಕ್ತಿ) : ಧಗಧಗಸ್ವನಂ ವಿಮಿರೆ ದಿಶಂ ಭುಗಿಭುಗಿಲ ಮರಿದುದು [ಜಾಹಾಂ. ಭುಗಿಲನುರಿದುದು] (ಜಾಹಾ. ೫-೭೭).

[ಭುಗಿಲ್ + —ಅನ್ನೆ]

ಭುಗಿಲಿಡಿ (ಕ್ರಿ). ತಳಮಳವು ತುಂಬು. — ವ್ಯಾಪಿಸು : ರಾಗದಿಂ ಬಂಕಾರಗ್ಯೆಯ್ದ ದಹದಿಕಿ ಬೆಸುಗೆ ಬಿಚ್ಚಿತ್ತು ತನ್ನಾದಿಂ ಶ್ರೀಗರೀಕನ ಹೃದಯ ಭುಗಿಲಿಡಿದು ಭಮತಾಪನಾಗಿ ಜರ್ಝರಿಸಿ ತಲ್ಲಣಗೊಳುತಿರಲು (ಪಪಪೋ. ೬-೧೬). [ಭುಗಿಲ್ + ಇಡಿ]

ಭುಗಿಲಿಡು (ಕ್ರಿ). ೧. ಉರಿ ; ಜ್ವಲಿಸು ; ಧಗಧಗಿಸು : ಹುಟ್ಟಿದುರಿ . . . ಭುಗಿಲಿಟ್ಟು ಕವಿದುದು ತುದಿಗೆ ಬಹುಶಾಖೋಪಶಾಖೆಗಳ (ಶಾಕೃ. ೫೦-೨೩) ; ಅದು ಬಳಿಕ ಭುಗಿಲಿಡುತ ದೆಯುತ್ತಿದುದು ಬಿಡದಾ ಕಾಕನನು (ಕೃಷ್ಣಾ. ೨-೬-೦೦). ೨. ಬಹಳ ಶಬ್ದವನ್ನು ಮಾಡು ; ಭೋರ್ಗರೆ : ಕಹಳೆಗಳ ಕಳಕಳದ ಬೊಗ್ಗುಗಳ ಮೇಳವಕ್ಕೆ ಭುಗಿಲಿಡಲು (ಶಾಣ್ಮಂ. ೬-೯). ೩. ತಟ್ಟನೆ ಹೊರಸೂಸು.—ಚಿಮ್ಮು ; ಮೇಲಕ್ಕೆ ಉಕ್ಕು : ತಗರಾಗಿ ಕಾದಿ ಪೆತ್ತರ್ ಭುಗಿಲಿಡೆ ತಲೆಯೊಡೆದು ಸತ್ತು ಗಂಗಾತಟದೊಳ್ ಸೂಗಯಿಪ ವೃಷಭಂಗಳಾಗಿಯೂ ಮಿಗೆ ಕ್ರೋಧ ಗೊಂಡು ಕಾದಿಯಬುದು (ಕೃಷ್ಣಾಕೃ. ೨-೭). ೪. ಸುಟ್ಟುಗೊಳ್ಳು ; ಕೋಪವನ್ನು ತೋರಿಸು : ಎನ್ನ ಕಂಡರೆ ಭುಗಿಲಿಡಲದೇಕಯ್ಯ ಶರಣರ ಮಿಗಿಲು ನುಡಿಗಾನವೆಮ್ಮ (ಕ್ರಶುಚ. ೦೬-೪); ತಿದಿಯೂದುಗಿಚ್ಚನ ಹೊದಱಿಸಂತಿರೆ ಬಿಡದೆ ಭುಗಿಲಿಡುತ(ಶಾಣ್ಮ. ೬-೨೬). [ಭುಗಿಲ್+ಇಡು]

ಭುಗಿಲು 'ಭುಗಿಲ್' ನೋ.

ಭುಗಿಲೆನ್(ಕ್ರಿ). ಭುಗ್ಗನೆ ಹತ್ತಿಕೊಳ್ಳು; ತಟ್ಟನೆ ಉರಿಯೇಳು; ಜ್ವಲಿಸು : ಕೆಣಕಿದರೆ ಭುಗಿಲೆಂದುದೀತನ ರಣಪರಾಕ್ರಮಮಮ್ಮ (ಶಾಣ್ಮ. ೬-೬); ಪಶು ಹವಿಗೆ ಭುಗಿಲೆಂದುರಿದು ಪಲಿದಾಡಿದನು ಹುತವಹನಶ್ವ ಮೇಧದಲಿ (ಕೃಷ್ಣಾ. ೦-೬-೨೯); ಬುತದುರಿ ಮಸಗಿದುದು ಭುಗಿಲೆಂದು ವೀರನವರಿದು ಮನದಿ (ಶಾಣ್ಮ. ೦೨-೬೫). [ಭುಗಿಲ್+ಎನ್]

ಭುಗಿಲ್ಗರೆ (ಕ್ರಿ). ಭುಗಿಲೆಂದು ಶಬ್ದಮಾಡು : ದನುಜಾರಿಯುಂ ದನುಜನುಂ . . . ಭುಗಲ್ಗರೆವಿನಂ ಪೊಯ್ದರ್ ಗದಾದಂಡದಿಂ (ಪಗಾ. ೯-೬೩). [ಭುಗಿಲ್ + ಕರ್]

ಭುಗುಭುಗಿಸು (ಕ್ರಿ). ಭುಗುಭುಗು ಎಂದು ಶಬ್ದಮಾಡು : ಸಗಾಢದ ಲುಚ್ಚಿ ಭುಗುಭುಗಿಸಿ ಉಚ್ಚಳಿಸಿದವು ಪರಪಿಲಿ ನಾಲಗೆ ಹವ್ಯವಾಹನನ (ಶಾಣ್ಮ ೦೨-೨). ರವಿಗಿರಿಯೊಳು ದಗದಗಿಸಿ . . . ಭುಗುಭುಗಿಸಿ ಬಿರುದಿನ ಮನ್ನೆಯ ಭಟರ ಪ್ರತಾಪಾಗ್ನಿ ಮೇಱೆದುದು ರಿಪುವನದೊಳಗೆ (ಕಂಪಾ. ೦೩-೩೩). 'ಭುಗಿಭುಗಿಸು' ಪರಾ. [ಭುಗುಭುಗು + —ಇಸು]

ಭುಗುಭುಗು (ನಾ). ಒಂದು ಅನುಕರಣ ಶಬ್ದ : ಭುಗುಭುಗು ಭುಭುಭು ಲೆಂದು ಲೋಚನದಿಂದೊಗೆದ ದಳ್ಳುರಿ ಸುತ್ತಿ ಸ್ಮರನ ಬಿಗಿದ ಬಳ್ಳಿಲೆ ಕರ್ವಿಲ್ಲಾಸಹಿತೆ ಸುಟ್ಟುಗಿದುದು ಉರಿ ನಭ್ಯಳಕೆ (ಪೋಚಕ. ೬-೪೪);

ಧಗಧಗಧಗಿ ಹೊತ್ತುವ ಜ್ವಾರಿಗಳ ಮೂಲೆ ಭುಗುಭುಗು . . . ಎಂಬು ಡಾವರಿಸೆ (ಕೈಲಾಸ. ೪-೪೯).

ಭುಗ್ನ (ಗು)- ೧. ಬಗ್ಗಿದ ; ಡೊಂಕಾದ : ವಕ್ರವಾದ. (ನಾ)- ೨. ಬಗ್ಗಿರುವುದು; ಡೊಂಕಾದುದು; ಬಾಗಿರುವುದು; ವಕ್ರವಾದುದು : "ವಕ್ರಂ ... ಭುಗ್ನಂ, ಅರಾಳಂ, ಕುಟಿಲಂ, ವ್ಯಾಕುಂಚಿತಂ, ಊರ್ಮಿಮತ್ — ಈ ೧೨ ಕೊಂಕಿದುದು" (ಶಬ್ದಮ. ೨೦೩-೦೦) : "ಭುಂಗುರ ದುರಾಳಂ ಭುಗ್ನಮಾವಿದ್ದಂ . . . ಪೃಜಿನಮೆನಲು ಪೊರೆದ ಕೊಂಕಕ್ಕು" (ಜಾಜಾ. ೦೩೬-೬). ೩. [ಕಾಮಶಾ] ರತಿಬಂಧದಲ್ಲಿ ಒಂದು ಬಗೆ : ತೋರಮೊಲೆಗಳನೊತ್ತಿ, ಕೂರಿ ಕೂಡುವನೊಯ್ಯೋರಂತಿ[ರಿ] ಭುಗ್ನಕರಣ ಮೆಂಬುದು (ಕಾಶ. ೯-೨೦). ೪. [ನಾಟ್ಯ] ಮುಖದ ಒಂದು ಅಭಿನಯ : "ಲಜ್ಜೆಯಿಂದ ಮುಖವನ್ನು ಕೆಳಕ್ಕೆ ಮಾಡುವುದು" (ಜಾಕ್ಕಂ. ೨೯೯ ಗದ್ಯಾನುವಾದ) : ವ್ಯಾಭುಗ್ನ ಭುಗ್ನ ಉದ್ಭಾಹಿತ ವಿಧುತ ವಿಪ್ರತ ವಿನಿವೃತ್ತ —ಈ ಆಱು ಮದನಭೇದಂಗಳ್ (ಜಾಕ್ಕಂ. ೩-೦೦೪ ಪ). [ಸಂ.]

ಭುಜ (ನಾ). ೧. ತೋಳು; ಬಾಹು : "ದೋಃ- ಪ್ರವೇಷ್ಟ್ರಃ. ಭುಜಃ, ಬಾಹುಃ. ಭುಜಾ—ಈ ೫ ತೋಳ್" (ಶಬ್ದಾನು. ೩೬-೩೭೬); ಪ್ಪತ್ತರ ನಡುವನುಡಿಯಲ್ಕೆನ್ನ ಭುಜಾರ್ಗಳಮ ನಾಲ್ಗಂ (ಪಂಪಭಾ. ೩-೨೬) ; ಭುಜಕೆ ಜಯವೇಜ್ ರಿಪುಭೂಭುಜಗರ್ಗಾ ಭಯವೇಜ್ (ಕೃಷ್ಣ. ೨೪-೨೪೯). ೨. ಹೆಗಲು : ಜಾನು ಎರಡು ಮೂರು ಮಜ್ಜಾದ ಎಳೆಯ ದಾಲಚಿನಿದ್ದಾಗ ನರೆಹಲ್ಲಿಯ ಒಂದು ಬಯಲಾಟಕ್ಕೆ ಯಾರದೋ ಭುಜವನ್ನೇರಿಕೊಂಡು ಹೋಗಿದ್ದೆ (ಪೂರ್ಣ. ೦೪೦). ೩. ಆನೆಯ ಸೊಂಡಿಲು. ೪. ಡೊಂಕು; ವಕ್ರತೆ. ೫. (ಅಲಂ) ಪರಾಕ್ರಮ : 'ಭುಜಾಕ್ರಾಂತ' ಪರಾ. ೬. [ರೇಖಾಗ] ಎರಡು ಕೋನಗಳನ್ನು ಸೇರಿಸುವ ರೇಖೆ : ಆ. ಆ ಎಂಬುವುದ ತಾನು ನಡೆಯುತ್ತಿರುವ ಸರಳರೇಖೆಯಾ. ಇ ಈ ದುಂಬುವುದು ಆ ಸರಳರೇಖೆಗೆ ಭುಜಗಳಾಗಿರುತ್ತ್ (ಕೂಮೀ. ೦೬). ೭. ದೂರದ ಒಂದು ಅಳತೆ: ಹತ್ತುಯೋಜನ(?) : ದಂಡಮೆಂದೆಂಬ ಸಾವಿರದ ನೆರ ಕೂಡೆ ತೋಱುವ ಕ್ರೋಶ ಚಿತುರುಸ್ರತೆ ಯೋಜನವಪ್ಪೀರ್ದ ಕಜ್ಜ ಭುಜವ (ಜಾಕ್ಕಂ. ೩೭-೦).

ಭುಜ ತಟ್ಟಿಕೊಳ್ಳು = ಜಂಭ ಕೊಚ್ಚಿಕೊಳ್ಳು : ಆತ್ಮಪ್ರಶಂಸೆ ಮಾಡಿಕೊಳ್ಳು : ಊನ್ನತಾಧಿಕಾರದಲ್ಲಿರುವ ಜನ ಏಂಸಾತ್ಮಕವಾದ ತಮ್ಮ ಅಧಿಕಾರದ ಬಗ್ಗೆ ಭುಜತಟ್ಟಿಕೊಳ್ಳುವಾಗ ನಾವು ಅಂಥದೇ ವಿಚಿತ್ರ ವ್ಯಾಪಾರವನ್ನು ಗಮನಿಸಬಹುದಲ್ಲವೆ ? (ಕ್ಷಣ. ೦೪೭). [ಸಂ.]

ಭುಜಂಗ (ನಾ). ೧. ಹಾವು; ಸರ್ಪ : "ಭುಜಂಗಕ್ಕೆಲರೊಳ್" (೪೭೨. ೩೩೩); ಅಂತಜಾತತತ್ತು ಶತ್ರುಪಕ್ಷಕ್ಷಯಕರಕರವಾಳವಂಶ್ಯಾಳ ಭುಜಂಗ ಮೂರ್ತಿ ವಿಶ್ವವಿಶ್ವಂಭರಾಧಾರಪುಪ್ರರೋಪಮಿಯು ತೋಳ್ವಲದೊಳ್ ರಾಜ್ಯರಂಗೆಮುತಿರ್ಪನ್ನಗರ (ಪಂಪಭಾ. ೪-೦೦ ಪ). ೨. ವಿಟ; ಜಾರ : "ಜಾರಃ ಪತಿ, ಭುಜಂಗಃ, ವಿಟಃ, ಪಲ್ಲವಿಕಃ —ಈ ೪ ಮೊಜಗಂ" (ಶಬ್ದಾನು. ೬೩-೬೩೬); ತಿಸುಳಿಯಂ ರೇಚಿಪುದುಮೆಶ್ಯಾಭುಜಂಗಮಂ . . . ನಾಶಿಸಿದು (ಕಾಂಡ್ರೇ. ೩-೩೦); ವೀಣಾಸದಿಂ ಸುಳಿದೊಡಿನ್ನು ಮಿವಳ್ಳುಳಿದ್ದೆ ದಳೇಯೆನುತ್ತಾಡ ಭುಜಂಗರು (ಜಾಜಿ. ೦೦-೦೦೦). ೩. ಪತಿ; ಒಡೆಯ. ೪. ಪಂಡಿತ ; ವಿದ್ವಾಂಸ : ಮೆಸರ್ವೆತ್ತಿರ್ದಾದಿರಾಜರ್ಕಳುಮನಿಟುಸಿದರ್ ರಾಜವಿದ್ಯಾಭುಜಂಗರ್ ಮಾದ್ಯಾಕ್ಷೀಭುಜಂಗ. . . ಸಹಜ ಪುಧುರ ಸಂಗೀತಗೋಷ್ಠೀಭುಜಂಗ ರುವಿದ್ಯಾಣೀಭುಜಂಗ ವೈಪಗುಣಿಳಯಂ (ಜಾಕಪಂ. ೪೯-೨೦೦ ; ೧೧೭). ೫. ತಪಸ್ಸು ಮಾಡುವವನು : ಋಷಿ : ಮುನಿ : " ವಿಟ ತಪೋನಿಧಿ ಭೋಗಿಗಳುಂ ಭುಜಂಗಮುಕ್ಕುಂ" (ಜಾಜಾ. ೩೭) ; . "ವಾಮನಮುನಿ ವಿಟ ಸರ್ಪಂ ತೀವಿವ ಮೂರುಂ ಭುಜಂಗಶಬ್ದಂ ಜಗದೊಳ್" (ಜಾಜಾಂ. ೩೭). [ಸಂ.]

ಭುಜಂಗತ್ರಾಸ (ನಾ)- [ನಾಟ್ಯ] ಹದಿನಾರು ವಿಧವಾದ ಮೂರ್ಗದ ಆಕಾಶಚಾರಿಗಳಲ್ಲಿ ಒಂದು; ☞ "ಒಂದು ಕಾಲನ್ನು ಕುಂಚಿತ [ಚರಣ ೩] ಮಾಡಿ ಹಿಮ್ಮಡಿಯನ್ನು ನಿತಂಬಕ್ಕೆದುರಾಗಿರಿಸಿ ಮೊಣಕಾಲನ್ನು ತನ್ನ ಪಾರ್ಶ್ವಕ್ಕೆ ತಿರುಗಿಸಿ ಅಂಗಾಲನ್ನು ಮೇಲಕ್ಕೆ ಮಾಡಿ ಸೊಂಟದಿಂದ ಮೊಳಕಾಲವರೆಗೂ ಅಡಿಯನ್ನು ಚಲಿಸುವುದು. [ಅಂಗಾಲನ್ನು ಮೇಲಕ್ಕೆ ಮಾಡಿ ಸೊಂಟ ಮೊಳಕಾಲು ಇವೆರಡನ್ನೂ ಚಲಿಸುವುದು. ಎಂದಂ ಭರತನಾಟ್ಯ ಮತ್ತು ಸಂಗೀತ ರತ್ನಾಕರದಲ್ಲಿದೆ]" (ಜಾಕ್ಕಂ. ೩೦೯ ಗದ್ಯಾನುವಾದ) : ಅತಿಕ್ರಾಂತ, ಅಪಕ್ರಾಂತ, ಪಾರ್ಶ್ವಕ್ರಾಂತ, ವ್ಯುಗವ್ಲಿತ, ಊರ್ಧ್ವಜಾನು, ಅಲಾತ, ಸೂಚೀ, ಸೊವೂರಪಾದ, ಡೋಲಪಾದ, ದಂಡಪಾದ, ವಿದ್ಯುದ್ಭ್ರಾಂತ, ಪ್ರವನಿ, ಭುಜಂಗತ್ರಾಸ, ಅಕ್ಷಿಪ್ತ, ಅವಿದ್ಧ, ಉದ್ವೃತ್ತ ಈ ಪದಿನಾಱು ಮೂರ್ಗದ ಆಕಾಶಚಾರಿಗಳು (ಜಾಕ್ಕಂ. ೬-೦೭ ಪ). [ಸಂ.]

ಭುಜಂಗತ್ರಾಸಿತ (ನಾ)- [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು: ☞ " ಭುಜಂಗತ್ರಾಸಿತ ಚಾರಿಯನ್ನು ಮಾಡಿ. ಕುಂಚಿತ ಪಾದವನ್ನು ಎತ್ತಿ, ಸೊಂಟ ತೊಡೆ ಮತ್ತು ಮೊಳಕಾಲುಗಳಿಂದ ತ್ರಿಸ್ಕಾರವನ್ನು ಮಾಡಿ ತಿರುಗಿಸಿ [ಸುತ್ತಿ] ಒಂದು ಕೈಯನ್ನು ವ್ಯಾವರ್ತ ಮತ್ತು ಪರಿವರ್ತ ಮಾಡಿ ದೋಲಹಸ್ತದಲ್ಲೂ ಇನ್ನೊಂದನ್ನು ಕಟಕಾಮುಖ ಹಸ್ತದಲ್ಲೂ ಹಿಡಿಯುವುದು" (ಜಾಕ್ಕಂ. ೩೦೦ ಗದ್ಯಾನುವಾದ) : ತಲಪುಷ್ಪಪುಟ. . . ಭುಜಂಗತ್ರಾಸಿತ. . . ಗಂಗಾವತರಣ—ಈ ಪೂರ್ಣಂಟು ಕರಣಂಗಳ್ (ಜಾಕ್ಕಂ. ೪-೦೨ ಪ). [ಸಂ.]

ಭುಜಂಗನಿಲಯ (ನಾ). ೧. ಹಾವುಗಳ ವಾಸಸ್ಥಾನ; ಹಾವಿನ ಹುತ್ತ; ಗೆದ್ದಲುಹುತ್ತ. ೨. ಪಾತಾಳಲೋಕ : ಭುಜಗನಿಲಯಂ [ಜಾಜಾ. ಭವನಂ]ಕ್ರೂರಾ ತ್ರಿಶೂಲಾಪ್ತಯಂ (ಜಾಜಾ. ೧೩). [ಸಂ.]

ಭುಜಂಗಪ್ರಯಾತ (ನಾ). [ಛಂದ] ವರ್ಣಛಂದಸ್ಸಿನಲ್ಲಿ ಹನ್ನೆರಡನೆಯದಾದ ಜಗತಿಯಲ್ಲಿ ಒಂದು ವೃತ್ತ: ಪ್ರತಿಪಾದದಲ್ಲೂ ನಾಲ್ಕು ನಾಲ್ಕು ಯಗಣವಿರುವ ವೃತ್ತ : ಕುಶಂ ವಾರ್ಧಿವರ್ಯಾಯಮಕ್ಕುಂ ವಿರಾಮಂ ದಿಶಾಸಂಖ್ಯೆಯಕ್ಕುಂ ಪಯೋಜಾಯತಾಕ್ಷೀ ವಿಶೇಷಂ ಕವೀಂದ್ರ ಸ್ತುತಂ ಪಾಕಿಗಂಬೋಲ್ ಪ್ರಸಿದ್ಧಂ ಸವಸ್ತ್ರಂ ಭುಜಂಗಪ್ರಯಾತಂ (ಕಂಮೋಂಪಾ. ೩-೦೩೬). [ಸಂ.]

ಭುಜಂಗಭೋಗ (ನಾ). ೧. ಹಾವಿನ ಶರೀರ. ೨. ಹಾವಿನ ಹೆಡೆ : 'ಭುಜಂಗಭೋಗಾಶ್ರಿತ' ಪರಾ. [ಸಂ.]

ಭುಜಂಗಭೋಗಾಶ್ರಿತೆ (ನಾ). ೧. ಆದಿಶೇಷನ ಹೆಡೆಗಳನ್ನು ಆಶ್ರಯಿಸಿಕೊಂಡಿರುವವಳು; ಆದಿಶೇಷನ ಹೆಡೆಗಳ ಮೇಲೆ ಇರುವವಳು. ೨. ಜಾರರೊಂದಿಗೆ ಸುಖಿಸುವವಳು. ೧, ೨ : ಸತತಂ ಭುಜಂಗ ಭೋಗಾಶ್ರಿತೆ ನಿನ್ನ ಕಳತ್ರಮಿಂ ಧರಾವಧು ಮತ್ತಂತಪಿರಯದೆ ಮಹಾ ಪುರುಷಪ್ರತಮಂ ತಾಳ್ದುವೆಳಾರಚಿತತ್ರಪುದಿಂ [ಇಂತು] ವ್ಯಾಪಿಸ್ತುತ್ಯ ಲಂಕಾರಂ (ಕಬಿ- ೩-೦೩೩)- [ಸಂ. ಭುಜಂಗಭೋಗಾಶ್ರಿತಾ]

ಭುಜಂಗಮ (ನಾ). ೧.= ಭುಜಂಗ ೧: "ವಿಷಧರಃ . . . ದರ್ವೀಕರಃ, ದೃಕ್ಪ್ರತಿಃ, ಭುಜಂಗಮಃ — ಈ ೨೫ ಪಾವಿನ ಪೆಸರ್" (ಶಬ್ದಾನು. ೦೦೩-೦೬); "ಶಾರಗಂ ಸರಿಸೃಪಂ ಕುಂಭೀನಸಂ ಭೋಗಿ ಪುರುತಾಪನಂ ದಂದಶೂಕ ಭುಜಂಗಮಾ . . . ಸರ್ಪಂಗೆ ನಾಮಂ" (ಶುಂಗಣ. ೦೦೬-೦). ೨. ಪಾತಾಳವಾಸಿಯಾವ ನಾಗ : ಸಿದ್ಧ ವಿದ್ಯಾಧರರು ಮನುಗಳು ಮನುಗಳಾವಿತ್ಕರು ಭುಜಂಗಮರು . . . ಎಸೆದರು ರೋಮ ರೋಮದ ಕಾಂತಿಯ ಚೌಕದಲಿ (ಜಾಜಾ. ೯-೩೯). ೩. ರಾಹು. ೪. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ. ೫. [ಜ್ಯೋತಿ] ಇಪ್ಪತ್ತೈಳು ನಕ್ಷತ್ರರಾಶಿಗಳಲ್ಲಿ ಒಂಬತ್ತನೆಯದು: ಅಶ್ಲೇಷ. [ಸಂ.]

ಭುಜಂಗಯಾಗ (ನಾ)· ಸರ್ಪಗಳನ್ನು ಹವಿಸ್ಸನ್ನಾಗಿ ಹೋಮ ಮಾಡುತ್ತಿದ್ದ ಯಾಗ ; ಸರ್ಪಯಾಗ : ತಂದೆಗಂ ಸರ್ಪದಪ್ಪಮಿರ ದಾದುದೆನುತ್ತ ಭುಜಂಗಯಾಗಮಂ ಕುಂದಿನಿತಿಲ್ಲದಂತೆ ರಚಿಸುತ್ತಿರಲಾಗ (ಕಬ್ಬಿಗ. ೨೮). [ಸಂ.]

ಭುಜಂಗಲೋಕ (ನಾ)· ನಾಗಲೋಕ ; ಪಾತಾಳ : ರಂಗನಾಥನ ಪದಪಹಿಗೆ ರಣರಂಗಭೀತನಾ ಬಿದ್ದನಿರದೆ ಭುಜಂಗಲೋಕಕೆ (ಪಾಶಾ. ೦೨-೩೬-೬೦). [ಸಂ.]

ಭುಜಂಗವಳಿ (ನಾ)· [ಶೈವ] ಕಾಳಾಮುಖ ಸಂಪ್ರದಾಯದ ಒಂದು ಶಾಖೆ ; ಸಮುದ್ರದ ಬಲಗೆನೊಪ್ಪ ಗದ್ದೆ ಬಯಿವುದನಿತುಮಂ ಕೊಟ್ಟರೀ ಸ್ಥಾನಕ್ಕೆ ಭುಜಂಗವಳಿ ಕಾಳಾಮುಖಿಂ ಸೈಕ್ಯಕತಪೋಧನನೆ ಸಜೆಯಿಸುವ . . . ಈ ಧರ್ಮ್ಮಮಂ ಪ್ರತಿಪಾಳಿಸಿದವಂಗೆ ವಾರಣಾಶಿಯೊಳ್ಕೋಟಿ ಚತುರ್ವೇದಪಾರಗರ್ಗ್ಗೆ ಕವಿಲೆಯಂ ಕೊಟ್ಟ ಫಲಮಕ್ಕುಂ (ಕವಿ. ೨೨-೬-೩೭ ; ೧೦೬೩). [ಭುಜಂಗ ? + ವಳ್ಳಿ (<ಬಲ್ಲೀ)]

ಭುಜಂಗವಿಜೃಂಭಿತ (ನಾ)· [ಛಂದ] ಅಕ್ಷರಛಂದಸ್ಸಿನಲ್ಲಿ ಇಪ್ಪತ್ತಾರನೆಯ ಉತ್ಕೃತಿಯಲ್ಲಿ ಒಂದು ವೃತ್ತ : ಪ್ರತಿಪಾದದಲ್ಲೂ ಇಪ್ಪತ್ತಾರು ಅಕ್ಷರಗಳು ಇರುವ ನಾಲ್ಕುಪಾದಗಳುಳ್ಳ ವೃತ್ತ : ಅರಿಷ್ಟಾಯುಗ್ಮಾಶಾಗ್ರಂ ಪುರಮಿತಸುರವುಯುತಂ . . . ಸ್ವನಧರ ವಿನಮಿತ ಪೆಸರಿಂ ಭುಜಂಗವಿಜೃಂಭಿತಂ (ಛಂದೋಣಾ. ೨-೦೧೭). [ಸಂ.]

ಭುಜಂಗವೀಣೆ (ನಾ). ಒಂದು ಬಗೆಯ ವೀಣೆ : ಇವಲ್ಲದೆ ಪ್ರಾಚೀನ ಗ್ರಂಥಗಳು- ತಿಮ್ಮರಿ- ಪಿಪಾಕಿ- ರುದ್ರವೀಣೆ, ಆಜಾಪವೀಣೆ, ಬ್ರಹ್ಮವೀಣೆ, ಭುಜಂಗವೀಣೆ, ರಾವಣಾಸ್ತ್ರ ಮುಂತಾಗಿ ಜಾತಾ ರೀತಿಯ ವೀಣೆಗಳನ್ನು ನಮೂದಿಸುತ್ತವೆ (ಸಂಗೀತ. ೬೦೦). [ಸಂ. ಭುಜಂಗವೀಣಾ]

ಭುಜಂಗಶಯನ (ನಾ)· ಆದಿಶೇಷನನ್ನು ಹಾಸಿಗೆಯಾಗಿ ಉಳ್ಳವನು : ವಿಷ್ಣು : ಮತಿಂಗವರದ ವಿಹಂಗಗಮನ ಭುಜಂಗಶಯನ (ಜಾಕ್ಷ. ೧೬-೦). [ಸಂ.]

ಭುಜಂಗಾಂಚಿತ (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು : P "ಬಲಗಾಲಿನಿಂದ ಭುಜಂಗತ್ರಾಸಿತಚಾರಿಯನ್ನು ಮಾಡಿ ಬಲಗೈಯಿಂದ ರೇಚಿತವನ್ನೂ ಎಡಗೈಯಿಂದ ಲತಾಕರವನ್ನೂ ಮಾಡುವುದು" (ಜಾಕ್ಷಂ. ೨೫೪ ಸೂತ್ರಾಖಂಡ) : ಭುಜಂಗಾಂಚಿತಮೊದಲು ಭುಜಂಗತ್ರಾಸಿತಮದು ಬಲಗಾಲೊಂದಿ ಮಗುಳ್ದು ಬಲಗೈ ರೇಚಿತಮೊವಲೆ ಲತಾಕರಮುಮಂ ಬಾಮುಮೊಳರೆ ಭುಜಂಗಾಂಚಿತಾಖ್ಯಕರಣಮಿನಕ್ಕುಂ (ಜಾಕ್ಷಂ. ೯-೧೨). [ಸಂ.]

ಭುಜಂಗಾಂಚಿತಕ (ನಾ)· =ಭುಜಂಗಾಂಚಿತ : ತಲಪಷ್ಟ ಪುಟ ಲೀನ. . . ಭುಜಂಗಾಂಚಿತಕ . . . ಗಂಗಾವತರಣ — ಈ ಸೂಜ್ಞಂಬು ಕರಣಂಗಳ್ (ಜಾಕ್ಷಂ. ೯-೧೨ ಪ). [ಸಂ.]

ಭುಜಂಗಾಕ್ಷಿ (ನಾ)· ಒಂದು ಬಗೆಯ ಸಸ್ಯ : ಸರ್ಪಾಕ್ಷಿ ಗಿಡ : "ನಾಲಿಲೀ, ಸುರಸಾ, ನಾಗಬುಗಂಧಾ, ಗಂಧನಾಕುಲೀ, ವಕುಲೇಷ್ಟಾ ಭುಜಂಗಾಕ್ಷೀ, ಛತ್ರಾಕೀ, ಸಾವಹಾ, ೮ ಸರ್ಪಾಕ್ಷಿಗಿಡದ ಹೆಸರುಗಳು" (ಚಿಣ್ಣಂ. ೧೪೬). [ಸಂ. ಭುಜಂಗಾಕ್ಷೀ]

ಭುಜಂಗಾಧಿಪ (ನಾ)· ಹಾವುಗಳ ಒಡೆಯ : ಸರ್ಪರಾಜ ; ಆದಿಶೇಷ : ಉರುಭುಜಂಗಳ್ ಭುಜಂಗಾಧಿಪಂಗೆ ಪಡಿವನ್ನಂ ಸೋಲಮಂ . . . ಬನ್ನೆವನಶ್ರೀ ಪಡೆಗುಮು ಸ್ವವಪುತ್ಸಾಂಗದೊಳ್ ನಾಡೆ ಜೆಲ್ವಂ (ಪಂಪಭಾ. ೪-೨೮). [ಸಂ.]

ಭುಜಂಗಾಸ್ತ್ರ (ನಾ)· ಒಂದು ಬಗೆಯ ಮಂತ್ರಾಸ್ತ್ರ : ಸರ್ಪಾಸ್ತ್ರ : ಏಗೇಂದ್ರಾಸ್ತ್ರಂ ಭುಜಂಗಾಸ್ತ್ರಮಂ ಗೆಲೆ ಗೆಲ್ದಾಸಯಿಸಂದು ಕೇಶವ ನಿಕಾಯರ್ಂ ಕಸ್ಮೊಳೆಚ್ಚಾವಿದರ್ (ಪಾಪ. ೦೮-೩೦). [ಸಂ.]

ಭುಜಂಗಿ (ನಾ)· ೧. ಹೆಣ್ಣುಹಾವು : ವೀರಶ್ರೀ ಭುಜಂಗೀಸಮಾಶ್ರಯ ಶ್ರೀಕಿಂಡಕಾಂಡಂಗಳುಮಪ್ಪ ದೋರ್ದಂಡಂಗಳಿಂದಮವನಿನಿಬಡಾಲಿಂಗನಂ ಗೆಮ್ಮು (ಪಾಪ. ೦೪-೧೬ ಪ). ೨. ನಾಗಸ್ತ್ರೀ. ೩. ಸೂಳೆ ; ವೇಶ್ಯೆ : ಇಂತನಂತಚರಿತ್ರದಿಂ ಲಂಡಣಿ ತಾಟಿತಿ ಪಾಪಪತ್ಯ ರತಿ ಭಾರತಿ ಸಾಗರ ಸುತೆಯುಮಂತೊಪ್ಪುವ ಭುಜಂಗಿಪುರಂ . . . ನೋಡಿ (ಪಾಪ್ಕ. ೨-೧೨). [ಸಂ. ಭುಜಂಗೀ]

ಭುಜಂಗೇಂದ್ರ (ನಾ)· ೧. ಶ್ರೇಷ್ಠವಾದ ಸರ್ಪ. ೨. ಆದಿಶೇಷ : ತನುತೋತ್ಸಂಗ ಶಶಾಂಕಮಿಂದಮೆ ಸುಧಾಭೀಜಂ ಭುಜಂಗೇಂದ್ರನಂಕುರಂ . . . ಶಂಕರ ಕಲ್ಪದ್ರುಮನೀಗಭೀಷ್ಟಫಲಮಂ ಬಾಳುತ್ಕನಾರಾಯಣಾ (ಗದಾಮಾ. ೦-೨). [ಸಂ.]

ಭುಜಕೀರ್ತಿ (ನಾ)· ತೋಳಿನಲ್ಲಿ ಧರಿಸುವ ಒಂದು ಬಗೆಯ ಆಭರಣ : ನಮ್ಮ ಕರ್ಣಾಂಡಲ- ಭುಜಕೀರ್ತಿ, ಅಲಂಕಾರಗಳ ರೀತಿ ಹಾಗಿಲ್ಲ (ಹುತ್ತಲ. ೦೩೮). [ಸಂ.]

ಭುಜಕೀರ್ತಿ (ನಾ)· = ಭುಜಕೀರ್ತಿ : ಸಲತೋಳೆಂಬಹಿಗಳ ಪೆಡೆಯೊಳು ಪೊಳಪೊಸವ ರತ್ನಗಳಂತೆ ಲಸಕುಚಿಗೆ ರನ್ನದ ಭುಜಕೀರ್ತಿಯನಳವಡಿಸಿದರು ನಾರಾಯರು (ಪಾಪಪು. ೧೦-೦೪); ಮುತ್ತಿನ ದೂಗುತಿ ಮಾಂಕಮುಪ್ಪು ಭುಜಕೀರ್ತಿ ಪೃತ್ಕಕುಚದ ನಡುವೆಸೆವ ಕತ್ತೂರಿಯಗ್ಗಿನ ಕಾಂತಿಸೊಲಿಯದವ ವೃತ್ತಾಂತವನುಸುರುವಿನು (ಶಾಂಪು. ೦-೦೦೬) ; ಭುಜವಲ್ಲರಿಯು ಮಂಜರಿಯು ಸಿರಿಯಾಂ ಭುಜಕೀರ್ತಿ ಕಳೆದು ತೆರಂಬೊಳೆದು (ಪಾಪಕೇ. ೬-೦೦ ಪ). [ಭುಜ + ಕೀರ್ತಿ. / ತೆಲು. ಭುಜಕೀರ್ತಿ]

ಭುಜಗ (ನಾ)· = ಭುಜಂಗ ೧ : "ವಿಷಧರಃ . . . ಭುಜಗಃ. . . ಭುಜಂಗಮಃ -ಈ ೨೫ ಪಾವಿನ ಪೆಸರ್" (ಶಾಂಪು. ೦೦೩-೦೪) ; ಭುಜಗನ ಫಣಾಮಣಿನಿವಾಳಿ ಬೇಕೆಂದದಂ ಕೊಂಡಿದಪೆ ಕೊಂಕಿದನೆ ಕಂದಿದನೆ ಕುಂದಿದನೆ (೦೪೮. ೬-೨೪) ; ಕೊಡಹಿದರ ಕಟ್ಟಿಜುಬೆಗಳು ಬೆಂಬಿಡದೆ ಭುಜಗನ ನಳಲಿಪುವಪೋಲ್ (ಶಾಂಕ್ರೀ. ೦೬-೩). ೨. =ಭುಜಂಗ ೨ : ಪುರವ ಪೊಗುವನಿತಃಕೊಳಗಧ್ವಿಪ್ಪ ಭುಜಗ[ಜಾಣಾ. ಭುಜಂಗ]ನೀ ತೆಜವಜ್ಞಾದು ತನ್ನ ಪಾಪಿಂದು ಹುಸ್ಸವ ಪಿಡಿಯೆ (ಪ್ರೌಕಾ. ೨-೦೩). ೩. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ. [ಸಂ.]

ಭುಜಗತ್ರಸ್ತ (ನಾ)· [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು : P "ಭುಜಂಗತ್ರಾಸಿತಚಾರಿಯನ್ನು . . . ಮಾಡಿ ಎರಡು ಕೈಗಳಿಂದಲೂ ಎಡಪಾರ್ಶ್ವದಲ್ಲಿ ರೇಚಿತ ಮಾಡುವುದು" (ಜಾಕ್ಷಂ. ೨೫೪ ಗದ್ಯಾಖಂಡ) : ಭುಜಗತ್ರಾಸಿತಚಾರಿಯ ಭುಜುವಿದಂ ಮಾಡುತೆರಡು ಕೈಗಳನೆಡದೊಳ್ ನಿಜದಿಂ ರೇಚಿತಮಾಗಲ್ ಭುಜಗತ್ರಸ್ತಾಖ್ಯಮೆಂಬ ಕರಣಮೆನಿಕ್ಕುಂ (ಜಾಕ್ಷಂ. ೯-೧೦). [ಸಂ.]

ಭುಜಗದ್ವೇಷಿ (ನಾ)· ೧. ಹಾವುಗಳ ವೈರಿ ; ಗರುಡ. ೨. ವಿಟರನ್ನು ದ್ವೇಷಮಾಡುವವಳು : ವಾರಶತ್ರು. ೧. ೨ : ವೈನತೇಯನ ಚಿತ್ರಪ್ರತಿಯಂತೆ ಭುಜಗದ್ವೇಷಿಯಾರ್ದಂ(ದ)ನಜಿದುರಗವನಿತೆಯಂತೆ ಕೋಳ್ದಪ್ಪ ಮಂಚಿದರ್ಮಳಂ (ಜಾಬಿತ್ತಿ. ೯-೬೬ ಪ). [ಸಂ. ಭುಜಗದ್ವೇಷಿಣೀ]

ಭುಜಗಧಾರಿ (ನಾ)· ೧. ಹಾವನ್ನು ಆಭರಣವನ್ನಾಗಿ ಧರಿಸಿರುವವನು; ನಾಗಭೂಷಣ ; ಶಿವ. ೨. [ಛಂದ] ರುದ್ರಗಣಪ್ರಸ್ತಾರದ ಪದಿನಾರುಭೇದಗಳಲ್ಲಿ ಒಂದು : ೧. ಗಂಗಾಧೀಶಂ . . . ೧೨. ಭುಜಗಧಾರಿ (ಛಂದೋಜಾ. ೫-೩೮ ಪ). [ಸಂ. ಭುಜಗಧಾರಿನ್]

ಭುಜಗಧ್ವಜ (ನಾ)· ೧. ಹಾವಿನ ಚಿಹ್ನೆಯಿರುವ ಬಾವುಟ. — ಧ್ವಜ ; ಸರ್ಪಧ್ವಜ. ೨. ಹಾವಿನ ಚಿಹ್ನೆಯಿರುವ ಬಾವುಟವನ್ನುಳ್ಳವನು ; ದುರ್ಯೋಧನ : ಒದವಿದರುಷ್ಟತಮರ್ಕಿಗಳೊದವಿ ಗದಾಘಾತದಿಂ ಭೀಮ ಭುಜಗಧ್ವಜರಂ (ಗಜಾಪ. ೬-೬). [ಸಂ.]

ಭುಜಗನಾಯಕ (ನಾ). ೧. ಸರ್ಪಗಳ ನಾಯಕ. ೨. [ಜೈನ] ನಾಗಕುಮಾರರಲ್ಲಿ ಅಗ್ರಗಣ್ಯನಾದವನು : ವಂದನಾಭಕ್ತಿಗೆ ವಂದನಂ ಭುಜಗನಾಯಕನಂ ಪಡೆನೋಡಿ (ಣಂಪಪು. ೦-೩೬). [ಸಂ.]

ಭುಜಗಪುರಿ (ನಾ). ನಾಗಲೋಕದ ರಾಜಧಾನಿ : ಭೋಗವತಿ : ಭುಜಗಪುರಿಧನದ[ವ ಪುರಿ ದಿತಿಜ]ವುರಿ ಪಡೆದೊಗೞಂತಿವೆಂಬಂತಿರೆ(ಜಾಂಭೇಕ. ೧೬-೦೫೬). [ಸಂ.]

ಭುಜಗಬಂಧ (ನಾ). ಮಲ್ಲಯುದ್ಧದಲ್ಲಿ ಒಂದು ಪಟ್ಟು : ನಾಗಬಂಧ : ತಳಹತ್ಥಂ ದಣುವಟ್ಟಿ . . . ಭುಜಗಬಂಧಂ ತೋರಹತ್ಥಂ ಶಿರೋವಳಯಂ ಬಾಹುತರಂ ಚಮತ್ಕರಿಸೆ ನಾನಾ ಕೌಶಲಂದೋಱಿದರ್ (ಪಜಿಂ. ೪-೭೩). [ಸಂ.]

ಭುಜಗಭೂಷ (ನಾ). ಸರ್ಪಗಳನ್ನು ಆಭರಣವಾಗಿ ಧರಿಸಿರುವವನು ; ಸರ್ಪಭೂಷಣ ; ಶಿವ ; ತಾಪತ್ರಯಾಪಹಾರಿ ವಿರೂಪಾಕ್ಷಂ ಭುಜಗಭೂಷಂ . . . ಕಣ್ಗೞೆದಂ (೪೦೫೦. ೦-೭೩). [ಸಂ. (ಭುಜಗ + ಭೂಷಾ + –)]

ಭುಜಗಭೋಜನ (ನಾ). ಹಾವಿಗೆ ಆಹಾರವಾದುದು ; ಇಲಿ : 'ಭುಜಗ ಭೋಜನಗಮನ' ಪರಾ. [ಸಂ.]

ಭುಜಗಭೋಜನಗಮನ (ನಾ). ಇಲಿಯ ಮೇಲೆ ಸಂಚರಿಸುವವನು ; ಮೂಷಕವಾಹನ ; ಗಣಪತಿ : ಚರಣಮಂ ಮಾಳ್ಕೆ ಭುಜಭೋಜನ ಗಮನಂ (ಪಂಪಭಾ. ೦-೪). [ಸಂ.]

ಭುಜಗಮರ್ದನ (ನಾ). (ಕಾಳಿಂಗ) ಸರ್ಪವನ್ನು ಹಿಂಸಿಸಿದವನು ; ಶ್ರೀಕೃಷ್ಣ ; ಕಾಳಿಂಗಮರ್ದನ : ಕಡಿಕಿಯುದು ಖಾದಲೆಂದೊಡರಿಸುವಾತನೇಂ ಭುಜಗಮರ್ದ್ದನನೇ ಕಲಿಗೋನಭೂಪನೊಳ್ (ಪಾ. VIII, ಪಾಗ. ೦೦೯-೩೬ ; ೧೦೩೨). [ಸಂ.]

ಭುಜಗರ್ಬ್ಬ (ನಾ). ತೋಳಿನ ಮದ.—ಕೊಬ್ಬು.—ಗರ್ವ : ಕರಮಿದ ಸಾಧ್ಯವೆಂಬ ಕೊಳನಂ ಭುಜಗರ್ಬ್ಬದೆ ಕೊಂಡನುಗ್ರಸಂಗರಜಯ ನಾಗವರ್ಮ್ಮವಿಭು (ಜಾಂಹೆಚಕ್. ೩-೦೮ ; ೧೦೭೬). [ಭುಜ + ಗರ್ಬ (< ಗರುವ)]

ಭುಜಗಲೋಕ (ನಾ). ನಾಗಲೋಕ ; ಪಾತಾಳ : ಬಿದಿ ಮನದಬ್ಬಿಯಿಂ ಭುಜಗಲೋಕದ ಮಾನವಲೋಕದಿಂದ್ರಲೋಕದ ಬಹುಸಾರವಸ್ತುಗಳ ನೊಂದಡಗೆಯ್ದಿ ತರಲ್ಕಿ ತಂದು (ಜಗಿ. ೨-೦೨). [ಸಂ.]

ಭುಜಗಶಯನ (ನಾ). ಹಾವನ್ನು ಹಾಸಿಗೆಯಾಗಿ ಉಳ್ಳವನು ; ಶೇಷಶಾಯಿ ; ವಿಷ್ಣು : ಎನಗೊಬ್ಬ ದೊರೆಯು ದೊರಕಿದನು . . . ಭುಜಗಶಯನನಾದ ಶ್ರೀಜಗವಂದಿತನಾದ (ಪ್ರಭಾ. ೦-೦೪೯-೨). [ಸಂ.]

ಭುಜಗಶಿಶುಸೃತ (ನಾ). [ಛಂದ] ಅಕ್ಷರಛಂದಸ್ಸಿನಲ್ಲಿ ಒಂಬತ್ತನೆಯದಾದ ಬೃಹತಿಯಲ್ಲಿ ಒಂದು ವೃತ್ತ : ಸೃಜಿಸಿಸೆ ನನಮುಂ ಮತ್ತಂ ಗಜಪತಿಗಮನೇ ವೃತ್ತಂ ಶ್ರೀಜಗದೊಳಿದು ಸಂಸಿದ್ಧಂ ಭುಜಗಶಿಶುಸೃತಂ ನಾಮಂ (ಕಂವಿಗುಂಜ. ೨-೦೦೪). [ಸಂ.]

ಭುಜಗಾಭರಣ (ನಾ). ಹಾವನ್ನು ಆಭರಣವಾಗಿ ಉಳ್ಳವನು ; ಶಿವ : ಶರಣಸಂಗವ್ಯಸನ ಭುಜಗಾಭರಣನವರಕಿರೀಟಮಂಡಿತಚರಣ . . . ಸಲಹುಗೆ ಭಕುತಜನರನು ಪಾರ್ವತೀರಮಣ (ಶಾಣ್ಮಾ. ೦-೨). [ಸಂ.]

ಭುಜಗಾರಿ (ನಾ). ಹಾವುಗಳ ಶತ್ರು ; ಗರುಡ : ಕಾರುಕುಲಮಂ ಬಱವಿ ಭುಜಗವ್ರಜಮಂ ಭುಜಗಾರಿ ದಾನವೇಶ್ವರಕುಲಮಂ ಮುರಾರಿ . . . ಕೊಂದ ಮೊಬ್ಕೆಯಿಂ (ಪಂಪಭಾ. ೩೩೪-೦೩). [ಸಂ.]

ಭುಜಗೇಂದ್ರ (ನಾ). ೧. ನಾಗರುಗಳ ಒಡೆಯ ; ಹಾವುಗಳ ಒಡೆಯ; ನಾಗೇಂದ್ರ: ಘನಪರಾಕ್ರಮಿ ಭೀಮಸೇನಗೆ ವಿನುತ ಭುಜಗೇಂದ್ರಂಗೆ ದುಶ್ಶಾಸನನ ಜೀವಾನಿಳನ ಪಾರಣೆ ಸಮರಭೂಮಿಯಲಿ (ಕಾಶ್ಯಾ. ೦೯-೩೨); ಎಚ್ಚು ಕೆಡಪಿದನಾತನುರುಭುಜವನ್ಯವೆಡೆಯ ಭುಜಗೇಂದ್ರನಂದದಿಂ ಧರೆಯೊಳ್ ಪೊರಳ್ದು (ಕೃಬಾಣ. ೦೯-೦೪). ೨. = ಭುಜಗನಾಯಕ ೨ : ಭುಜಗೇಂದ್ರರ್ ಭವಪ್ರಕಾಸದಿನನೂನವ್ಯಂಕರರ್ (ಕಂವ್ರತ್ತ. ೦೩-೦೩). [ಸಂ.]

ಭುಜಪತ್ರ. ಭುವಪತ್ರೆ, ಭೋಜಪತ್ರೆ (ನಾ). ಒಂದು ಬಗೆಯ ಮರ ; ಭೂರ್ಜವೃಕ್ಷ : "ಭೂರ್ಜ, ಚರ್ಮೀ, ಮೃದುತ್ವಕ್—೩ ಭುಜಪತ್ರಗಿಡದ ಹೆಸರುಗಳು" (ಶಾಬ್ದಾ. ೦೩೨). ಭುಜಪತ್ರೆ: "ಭೂತಪ್ಪಿ—ಭುಜಪತ್ರೆ" (ಬಿಪಾ. ೦೦೩) ; ದೇವದಾರು, ಭುಜಪತ್ರ, ರಾಸ್ನೆ . . . ಇವುಗಳ ಕಷಾಯವನಿಕ್ಕಿ ತೆಗೆದುಕೊಳ್ಳಲು ವಾತಜ್ವರಂ ಕೆಡುಗುಂ (ಪಥ್ಯ. ೬೫). ಭೋಜಪತ್ರೆ : (ಬೃತಿಗ. ೦೩-೨೨೨).

[<ಪ್ರಾ. ಭುಜ್ಜಪತ್ರ. / ಸಂ.ಭೂರ್ಜಪತ್ರ./ಮರಾ. ಭುಜಪತ್ರ]

ಭುಜಪತ್ರೆ ' ಭುಜಪತ್ರ ' ನೋ.

ಭುಜಬಲ, ಭುಜಬಳೆ (ನಾ). ೧. ತೋಳಿನ ಕಸುವು, – ಶಕ್ತಿ : "ತೋಳ್ವಲಂ ಭುಜಬಲಂ" (ಕಬ್ಬ. ೧೫) : ಭುಜಬಲಮಂ ಘವಣ್ಣಡಿಪೊಡ ಪ್ರತಿಮಾ . . . ಮತ್ತೆ ಸಾಧಿಸಿದವಂ ಬಹುರೂಪಿನೆಯುಂ ದಾನನಂ (ಜಂಶಾಪ್ರ. ೦೯-೦೩) ; ಆ ಸುಧನ್ವಂ ತನ್ನ ಭುಜಬಲದೊಳಾರ್ದು ವಿಜಯಮುವ ಮೊದರಿಭುತರ್ದನು (ಕೃಬಾಣ. ೦೬-೧೩). ೨. ಶೂರ ; ಪರಾಕ್ರಮಿ : ಕಳಕಳವಿದೇನೆಮತ್ತಂ ಭುಜಬಲರು ದೌವಾರಿಕರು ಹೋ ಎಮತ ವಾರಿಸಲು (೦೩ಕ್ಷ. ೦-೧೧). ಭುಜಬಳೆ.

ಭುಜಬಳಮಲ್ಲ = ಪರಾಕ್ರಮದಲ್ಲಿ ಜಟ್ಟಿಯಂತಿರುವವನು ; ಶೂರ ; ಒಂದು ಬಿರುದು : ರಿಪುಮದನಮಹೇಶ್ವರ ರಾಯಮುರಾರಿ ಭುಜಬಳಮಲ್ಲ ಶ್ರೀಸೋವಿದೇವರಸರು (ಶಾಲ. ೬೧-೦೩-೦೧; ೧೧೧೦). [ಸಂ.]

ಭುಜಬಲಿ (ನಾ). ೧. ಪರಾಕ್ರಮಶಾಲಿ ; ಶೂರ. ೨. [ಜೈನ] ಆದಿತೀರ್ಥಂಕರನ ಎರಡನೆಯ ಮಗ ; ಬಾಹುಬಲಿ : ಪುರುತನಯರ್ ಭುಜಬಲಿಯುಂ ಭರತವಾಮೆಪೆ ದೊರೆಗೆವಂದೊಡೆ (ಆಪ್ತ. ೦೪-೦೦). [ಸಂ. ಭುಜಬಲಿನ್]

ಭುಜಬಳೆ ' ಭುಜಬಲ ' ನೋ.

ಭುಜಭವ (ನಾ). ವರಬ್ರಹ್ಮನ ತೋಳಿನಿಂದ ಉತ್ಪತ್ತಿಯಾದವನೆಂದು ಹೇಳಲಾದ ವ್ಯಕ್ತಿ : ಕ್ಷತ್ರಿಯ : ಭುಜಭವರ್ಗುಚಿತಂ ಶಿಷ್ಟವ್ಯಜ ಪಾಲನೆ (ಪಮ್ಮ. ೬-೨-೭೦). [ಸಂ.]

ಭುಜಮಧ್ಯ (ನಾ). ತೋಳುಗಳ ಮಧ್ಯಭಾಗ ; ಎದೆ : " ಭುಜ ಮಧ್ಯಂ, ಉರಃ. ವಕ್ಷಃ, ಹೃದಯಂ, ವಕ್ಷಸ್ಸ್—ಈ ೫ ಉರಂ" (ಕಶಾಮು. ೦೬-೦೬೩). [ಸಂ.]

ಭುಜವಲಯ (ನಾ). ತೋಳುಗಳಿಗೆ ತೊಡಿಸುವ ಆಭರಣ ; ತೋಳುಬಳೆ : ಲಲನೆಗೆ ಮಿಸುವ ಭುಜವಲಯ [ಜಾಣಾ. ಭುಜವಳೆಯು, ಭುಜವಳಿಯ] ಭುಜಕೀರ್ತಿಗಳವಂತಿಸಿ ಕಡಗ ಕಂಕಣ ಸೂಡಗವನಿಕ್ಕೆ (೦೩ಕ್ಷ. ೪-೪೬). [ಸಂ.]

ಭುಜವಿಕ್ರಮ (ನಾ). = ಭುಜಬಲ ೧. ಕಳಾವಿಭವದೊಳ್ ಭುಜ ವಿಕ್ರಮದೊಳ್ . . . ನಿಮಗಾರ್ ದೊರೆ ಮಾನವರೀ ಧರಿತ್ರಿಯೊಳ್ (ಕೃಕೃ. ೦-೬೬). [ಸಂ.]

ಭುಜವಿಕ್ಷೇಪ (ನಾ). ೧ ತೋಳುಗಳನ್ನು ಕೊಡಹುವಿಕೆ ; ತೋಳುಗಳನ್ನು ಒದರುವುದು. ೨. [ನಾಟ್ಯ] ನೃತ್ಯದಲ್ಲಿ ನಿರ್ದಿಷ್ಟ ರೀತಿಯಿಂದ ಮಾಡುವ ಬಾಹುಚಲನೆ : ಈರಯ್ದೆನಿಸಿದ ಭುಜವಿಕ್ಷೇಪದಿಂ ದಿಗ್ವಿಭಾಗಂ ಪರಭಾಗಂಬೆತ್ತುಪೊಂಭತ್ತೆನಿಪ ವಯನಭೇದಗಳಿಂದಂಬಿನಂ ನಿರ್ಧರಹರ್ಷಾಯತ್ತಚಿತ್ತಂ ದಿವಿಜಪರಿವೃಢಂ ತಾಂಡವಪ್ರೌಢಿವೆತ್ತಂ (ಪುಭ್ರತಿ. ೦೩-೧೩). [ಸಂ.]

ಭುಜಪೊಯ್ (ಕ್ರಿ)· ತೋಳುಗಳನ್ನು ತಟ್ಟಿಕೊಳ್ಳು; ಬಾಹುಗಳನ್ನು ಅಪ್ಪಳಿಸು; ಸಡ್ಡು ಹೊಡೆ: ಬಳಿಕ್ಕೀವೇಳುವೆನು ಬರಿದಂಭ್ರಯಸಾ ಭುಜಪೊಯ್ದು ಬೊಬ್ಬಿಟ್ಟಿದ (ಕೊಡಗ. ೪-೦೨-೨೭). [ಭುಜ + ಪೊಯ್₁]

ಭುಜಶಿಖರ (ನಾ). ತೋಳಿನ ಮೇಲುಭಾಗ; ಹೆಗಲು: ಕುಲಶಿಖರಿ ಶಿಖರೋತ್ಪುಂಗಗಳಾದ ಭುಜಶಿಖರಂಗಳಂ . . . ಆತ್ಮೀಯಯೌವನ ವ್ಯಾದುರ್ಭಾವಮಂ ಪ್ರಕಟಂ ಮಾಡೆ (ಆಂಪ. ೩-೯ ಪ); ಭುಜಶಿಖರಾಗ್ರದಲ್ಲಿ ಘನತುಂತುಮಂದಿಂ ಬರಿದಿರ್ದ ಪತ್ರಕವ್ರಜದಿಂ (ಚಾಪ್ರ. ೬-೦೦೨). [ಸಂ.]

ಭುಜಶಿರ (ನಾ)· = ಭುಜಶಿಖರ: "ಸ್ಕಂಧಃ. ಭುಜಶಿರಃ. ಅಂಸಃ— ೩ ಹೆಗಲು ಪೆರರು, ಭುಜಶಿರಸ್ಸು" (ಕರ್ಣಾ. ೦೮೨); ಹೊಯ್ದಸು ಪವಜಜನ ಭುಜಶಿರವ ಸೀಗಡಿಸವಿಜಿಜಿಯಾಗೆ ಬೀಳೆನುತಿರಸ ಬೊಬ್ಬಿಟ್ಟಿದ (ಭುಜ್ಞ. ೬-೩೩); ಗುರುತಂಬುಜಂ ಮುಸುಕುತಿ ಭುಜಶಿರದೊಳ್ ಕಾರು ಗಂಟನಾಂತ ಪಲ್ಮಲದಿಂ (ಜಾಸಾಚ. ೯-೦೯). [ಸಂ.]

ಭುಜಶಿರಸ್ಸು (ನಾ)· = ಭುಜಶಿಖರ: "ಸ್ಕಂಧಃ. ಭುಜಶಿರಃ. ಅಂಸಃ— ೩ ಹೆಗಲ ಪೆರರು, ಭುಜಶಿರಸ್ಸು" (ಕರ್ಣಾ. ೦೮೨). [ಸಂ. ಭುಜಶಿರಸ್]

ಭುಜಾಕ್ರಾಂತ (ಗು)· (ಆಲಂ) ಪರಾಕ್ರಮದಿಂದ ಅಧೀನ ಮಾಡಿಕೊಂಡಿರುವ: ಅಜಿತಂಜಯವುಮಹಾಂಬುಧಿ ಯುಂಪರಾಮುಂಬೆರಸು ನಿಜ ಭುಜಾಕ್ರಾಂತಪ್ರತ್ಯಂತರಾಜಸಮಾಜಂಬೆರಸು . . . ಅಖಿಲಪ್ರಧಾನ ಪರಿವಾರಮಲಂಕೃತವಮಾಗಿರೆ (ಪಂಕ್ರಿ. ೩-೨ ಪ). [ಸಂ.]

ಭುಜಾಗ್ರ (ನಾ). = ಭುಜಶಿಖರ: "ಭುಜಾಗ್ರಃ. ಅಲಸಂ— ೩ ಮುಯುಮ್ಬು" (ಕರ್ಣಾ. ೮೬-೩೭೮); ವಾಭಿಯಲಭವ ಪರಭುಜಾಗ್ರದೊಳಿರ್ದಿಗ್ಗಜಾಲಂಗಳಂ ರಂಜಿಸಿತು (ಭುಜ್ಞ. ೯-೩೮). [ಸಂ.]

ಭುಜಾಸ್ಫಾಲನ, ಭುಜಾಸ್ಫೋಟನ (ನಾ). ತೋಳನ್ನು ತಟ್ಟಿಕೊಳ್ಳುವುದು: ಅಂತು ಬಿಸುಟ್ಟು ದುರ್ಜಯುದ್ಧಸನ್ನದ್ಧರಾಗರ್ದರುಂ ಭುಜಾಸ್ಫಾಲನಂ ಮಾಡಲೊಡಂ (ಪಂಕ್ರಿ. ೩-೩೩ ಪ); ಅವನ ಪ್ರದರ್ಶನಕಾರ್ಯಾವ್ಯಮುಗಿಯುತ್ತ ಬರಲು . . . ಬಾಗಿಲ ಹತ್ತಿರ ಹೊತ್ತಾಗಿ ನಿಡಿಲಿನಂಥ ಭುಜಾಸ್ಫಾಲನವು ಕೇಳಬಂತು (ಪಪಾ. ೨೪). ಭುಜಾಸ್ಫಾಲನ: ಭಟಭುಟ ಭಟಭುಟನೆ ಭುಜಾಸ್ಫಾಲನಂ ಮಾಡಿ (ಇಚ. ೮೬. ೨೦-೦೩). [ಸಂ.]

ಭುಜಾಸ್ಫಾಲನ ' ಭುಜಾಸ್ಫಾಲನ ' ನೋ.

ಭುಜಿಷ್ಯ (ನಾ). ೧. ಆಳು; ಸೇವಕ: "ಚೇಟಃ. ಭುಜಿಷ್ಯಃ. ಕಿಂಕರಃ — ಈ ೩ ಧಟಂ" (ಕರ್ಣಾ. ೬೦-೨೦೦); "ಭೃತ್ಯಃ. ದಾಸೇರಃ. ಭುಜಿಷ್ಯಃ. ಪರಿಜಾರಕಃ—ಈ ೧೧ ಬಗೆಯ ಪೆರರು, ಜುತ್ತರಿಯವನು" (ಕರ್ಣಾ. ೬೦೨). ೨. ದಾಸ್ಯದಿಂದ ಬಿಡುಗಡೆಯೊಂದಿದವನು: ಪಂಚನಿವಾರಣಗಳು ಹೋದ ಮೇಲೆ, ತಾನು ಅವ್ಯಕ್ತ, ಆರೋಳ್ಗ, ಬಂಧಮೋಕ್ಷ, ಭುಜಿಷ್ಯ, ಕ್ಷೇಮಾಶಭೂಮಿಗಳಲ್ಲಿ ಇದ್ದಂತೆ ಕಾಣುವನು (ಜಾಸ್ತ. ೦೧೩). ೩. ಜೊತೆಗಾರ. ೪. ಪಸ್ತಸೂತ್ರ; ಕಂಕಣ. ೫. ರೋಗ; ಪಾಯಿಲೆ. [ಸಂ.]

ಭುಜಿಷ್ಯ (ನಾ). ೧. ದಾಸಿ; ಸೇವಕಿ: ಕಳಿಂಗೇಶನ ಮುಂದ ನಿಜಾಸ್ವಪಕನ್ನೆಮಾನಿಂತೆಂಗುಂ ಭುಜಿಷ್ಯೆ ಮದನನ ಭೃಂಗೀಧ್ವಜ ಶಸ್ತ್ರ ದನಗೆ ಸಮ್ಮನೆನಿಸುವಸಂ (ಜಾಸಾಚ. ೩-೦೩೨). ೨. ಸೂಳೆ; ಗಣಿಕೆ. [ಸಂ.ಭುಜಿಷ್ಯಾ]

ಭುಜಿಸು ' ಭುಂಜಿಸು ' ನೋ.

ಭುಜೆ (ನಾ). ೧. ತೋಳು; ಭುಜ: "ದೋಃ. ಪ್ರದೇಷ್ಟಃ. ಭುಜಃ. ಬಾಹುಃ. ಭುಜಾ—ಈ ೫ ತೋಳ್" (ಕರ್ಣಾ. ೫೬-೩೬೨). ೨. ಹಾವಿನ ಪೆಕ್ಕೆ,-ಮಂಡಲ. ೩. ಕ್ಷೇತ್ರದ ಅಳತೆಯ ಒಂದು ಪ್ರಮಾಣ (?): ಧಾರಾಪೂರ್ವಕಂ ಮಾಡಿ ಕುಡಲು ಮಾರ್ಕ್ಕಂಡಯ್ಯನಾಯಕಂ ಪಡೆದು ಬಿಟ್ಟ ಸ್ಥಳಂ ಕುರವಸೆ ಕೇರಿಯಸಾದಿತ್ಯದೇವರ ಕಯ್ಯಂ ಪತ್ತಿರ ಬಾಗ ತೋರಣಗಾವುಂಡಗೆಯಿ ನವಿಲಮತ್ತರು ಹತ್ತುವ್ಯ ಳಿಲಿಜ ಭುಜೆ ಮಡುವ ೨೭ ಬಡಗ ೧ ॥ ಮೂಡ ೨೪ ॥ ತೆಂಕ ೨೭ ॥ ಮೆಕ್ಕರು (ಶಾಸಾ. IX–೫, ೦೯೬–೯೭ : ೧೧೨) ; ಪೂಜೆ ವುನಸ್ಕಾರ ನಿವೇದ್ಯಕ್ಕಂ ಜೀರ್ಣೋದ್ಧಾರಕ್ಕ ಮಂದು ಬಿಟ್ಟ ಭೂಮಿಯಯ್ದುತ್ತಾಜು ಗೇಣ ಳೆಳೆಯು(೦) ನೀಳದ ಭುಜಿಯಂ ದ್ವಿಗುಣಿಸಿಯಗಲದೊಳೊಂದ ಕೂಡಿ ಗುಣಿಸುವೀ ಕ್ರಮದಳತೆಯಲು (ಶಾಸಾ. IX – ೫. ೨೯೯–೩೩ ; ೧೧೪೨) ; ಭುಜಿಗಳನಿಜಾದನಿತಜ್ಞಳಂ ಭುಜದೊಂದುಮನುಳಿದು ಕೂಡಿ ಭುಜಿಸಂಖ್ಯೆಯೊಳಂ ನಿಜದಿಂ ಪ್ರತಿಗಳ ಕೂಡಿಯೆ ಭುಜಿಸಂಖ್ಯೆಯೊಳೊಂದ ಕಳೆಯಲುಳಿದುದು ಹಾರಂ (ಕ್ಷೇತ್ರಗ. ೩೬-೦೦). [ಸಂ. ಭುಜಾ]

ಭುಜಿಂಗನೆ (ಅ)· ಒಂದು ಅನುಕರಣಾವ್ಯಯ: ಫಟ್ಟನೆ; ಫಕ್ಕನೆ; ಇದ್ದಕ್ಕಿದ್ದಂತೆ: 'ಕಾಪ್ಪ–ನೀರಿ'ನಲ್ಲಿ ಭುಜಿಂಗನೆ 'ಹಿಮಗಿರಿ ತಿಮಿಂಗಲ' ಬಂದು 'ತಪ್ಪೆ ಯಾರದು ?' ಎಂದು ಕೇಳುವಂತಾಗಿದೆ (ಪಂಪಾ. VIII, ಪುಟ್ಟಸ್ವ). [? + – ಅನೆ]

ಭುರ್ರನೆ (ಅ)· ಒಂದು ಅನುಕರಣಾವ್ಯಯ: ಭುರ್ ಎಂದು ಶಬ್ದವಾಗುವಂತೆ: ಭರಭರನೆ ಹೋಗಿ ಭುರ್ರನೆ ಹಾರಿ ಬಂದ ಹಾಗೆ (ಗಪ), [ಭುರ್₈ + – ಅನೆ₁]

ಭುಲತಾಪಿ, ಭುಲತಾಪೆ (ನಾ). ಸುಳ್ಳು ಭರವಸೆ: ಮೋಸದ ಆಶ್ವಾಸನೆ: ಪಡದಪ್ಪನ ಭುಲತಾಪಿಯಿಂದ ಬಾಪೂಸಾಹೆಬ ಆವರಿಗೆ ಭೂಮಿ ಮತ್ತು ವಾಡೇದ ಕುಡಾ ಕೊಡಲಿಕ್ಕೆ ಸಾಫ ಒಲ್ಲೆಂದಾಗಿ, ಆ ಹೆಣ್ಣು ಮಗಳು ಏನು ಮಾಡಬೇಕು ? (ಗ್ರಾಕಾಡು. ೩೦೪). ಭುಲಭಾಪೆ.

ಭುಲತಾಪಿ ತುಂಬು, ಭುಲತಾಪೆ ತುಂಬು = ಸಂಳ್ಳು ಭರವಸೆಯನ್ನುಂಟುಮಾಡು: ಸುಳ್ಳು ನಂಬಿಕೆಯನ್ನು ಹುಟ್ಟಿಸು: ಇಲ್ಲದ ಭುಲತಾಪಿ ತುಂಬಿ ಈ ಕೆಲಸಾಗ ನಿನ್ನ ತಂಗಿಷ್ಟ ಗಂಟು ಹಾಕಿ ಅವನ ತಲಿ ಕೆಡಿಸಿಟ್ಟಿ (ಸಚಾ. ೧೬೨) ; ಲಗ್ನ ಆಗತೀನಿ ಅಂತ ಭುಲತಾಪಿ ತುಂಬಿ (ಗ್ರಾಕಾಡು. ೦೯) ; ಯಾರಾದರೂ ಭುಲತಾಪಿ ತುಂಬಾರು ಜೋಕೆ (ಗಂಡಾಮ. ೨೦). ಭುಲತಾಪಿ ಹೊಡೆ = ಸುಳ್ಳು ಹೇಳು; ಬುರುಡೆ ಹೊಡೆ: ಅವರಿಗೆ ಭುಲತಾಪೀ ಹೊಡದು ನಿನ್ನ ಊರಿಗೆ ಕರಕೊಂಡು ಹೋಗತಾನ (ಬಸಪ್ರ. II. ೨೦೬).

[← ಮರಾ. ಭುಲತಾಪ, ಭುಲಥಾಪ, ಭೂಲತಾಪ, ಭೂಲಥಾಪ]

ಭುಲತಾಪೆ 'ಭುಲತಾಪಿ' ನೋ.

ಭುಲ್ಲಣೆ 'ಬುಲ್ಲವಣೆ' ನೋ.

ಭುಲ್ಲಯಿಸು 'ಬುಲ್ಲವಿಸು' ನೋ.

ಭುಲ್ಲವ (ನಾ). ೧. ಸಡಗರ; ಸಂಭ್ರಮ: ಎಲ್ಲಾ ಶಸ್ತ್ರಮನಾಂತತಿ ಭುಲ್ಲವದಿಂ ವೀರರಥಚಿನಂ ಪರಿಯಿಟ್ಟರ್ (ಕ್ರಿಶಂ. ೬-೬). ೨. ಅಧಿಕ್ಯ; ಅತಿಶಯ: ಎಲ್ಲಿ ಕೋಡಲು ರೋದನದ ಪೆಚ್ಚಲ್ಲಿ ನೋಡಿದಡಲ್ಲಿ ಚಿಂತಾ ಭುಲ್ಲವವು ಯೆಲ್ಲಲ್ಲಿ ನೋಡಿದೊಡಲ್ಲಿ ಸಂತಾಪವು (ಕಪ್ಪಕ್ಕಿ. ೦-೦೬).

[< ಬುಲ್ಲವಣೆ / ತೆಲು. ಬುಲುವು]

ಭುಲ್ಲವಣೆ 'ಬುಲ್ಲವಣೆ' ನೋ.

ಭುಲ್ಲವಣೆ 'ಬುಲ್ಲವಣೆ' ನೋ.

ಭುಲ್ಲವಿಸು 'ಬುಲ್ಲವಿಸು' ನೋ.

ಭುಲ್ಲಿಸು 'ಬುಲ್ಲವಿಸು' ನೋ.

ಭುಲ್ಲೈಸು 'ಬುಲ್ಲವಿಸು' ನೋ.

ಭುವ (ನಾ). ೧. ಬೆಂಕಿ. ೨. ಭೂಮಿ: ಭೂರ್ಭುವಂ ಸ್ವರ್ಮಹಂ ಜನತಪಂ ಸತ್ಯಮೆಂದೇಳು ಮೇಲಣ ಲೋಕಮಲ್ಲಂ" (ಮುಂಡಣ. ೦೦-೩೨). ೩. ವಾಯುಮಂಡಲ. [ಸಂ.]

ಭುವನ (ನಾ). ೧. ಜಗತ್ತು; ಪ್ರಪಂಚ; ಲೋಕ: ಭುವನಂ, ವಿಷ್ಟಪಂ. ದೋಃ. ಜಗತ್ – ಈ ೪ ಜಗದ ಪೆರ್" (ಕರ್ಣಾಮ. ೨೨–೦೩೩);

ಭುವನಂಗಳ್ ಪದಿನಾಲ್ಕುಮಂ ನಡುಗಿಸಲ್ ಸಾಮರ್ಥ್ಯಮುಳ್ಳನ್ನ ಕೆಯ್ದುವಿನೊಳ್ ತೀರದುದಾವ ಕೆಯ್ದುವಿನೊಳಂ ತೀರ್ದವುದೇ (ಜಂಪಣ. ೮-೧೨); ಭುವನಂಗಳ್ ಪದಿನಾಲ್ಕು ನಾಲ್ಕು ಪೆಸರಿಂ ಪಾರಾಶಿಗಳ್ . . . ಎಲ್ಲಿ ಪೊಕ್ಕು ಬರ್ದುಕಲ್ಕುಕ್ಕುಂ ಭುಜಂಗಧ್ವಜಂ (ಗಣಿತು. ೬-೨೦); ಭುವನಂ ಸಹಸ್ರಶತವಾದವೆಂಬಿವು ನಿಲ್ವಾ ಹಿರಣ್ಮಗರ್ಭನಮಂ ಮಂಗುವ . . . ಹರಿಗರಿದುಂಟೇ (ಜಿಪಾ. ೪-೮೦). ೨. ಮನುಷ್ಯರು ವಾಸಮಾಡುವ ಲೋಕ; ಭೂಮಿ : ಭುವನದ ಕನ್ನತ ಸಕ್ಕದಗವಿಗಳ್ ಸರೆ ಸಾಲೆ ಸೋಲೆ (ಜಾಂಬಪ. ೦-೯); ಭುವನಜನಮೆಲ್ಲಮೊರ್ವನೆಯಿ ರವಿದುದೆಲ್ (ಶಾಂಭವ. ೪೬); ಭುವನಜನವಿಸುತಪಾದಂ ದಿಮಕರಂ . . . ದಿವಿಜಾಶಾಶಿಖರಿಶಿಖರ ಶೇಖರನಾದಂ (ಹರಿವಂ. ೬೯-೦೬೬). ೩. ಮನುಷ್ಯವರ್ಗ; ಜನತೆ : ನೀವಧಾರ್ಮಿಕರು ಮುಯ್ವುಸಾಮುವುದರ್ಗ್ ಭುವನವ ದೈವೈದ್ಯ ನಿಮ್ಮಿನುರನು(ಭುಜ್ಞಾ. ೦-೨೬). ೪. ನೀರು ; ಜಲ : "ಆಪ.(ಪ್ರ). ತೋಯಂ . . . ನೀರಂ, ಭುವನಂ, ಅಮೃತಂ, ಜೀವನಂ. ಜೀವನೀಯಂ – ಈ ೨೬ ನೀರ್" (ಹರಿಶಿ. ೦೦೬-೨೬). ೧. ೪ : ಶ್ರೀವಾರೀಜನ್ಮಗೇಹಂ ಭುವನವಿನುತ ಮುದ್ದಾಮಮತ್ಸ್ಯಪ್ರಯುಕ್ತಂ ವಾಸಾರತ್ನಪ್ರಕೀರ್ಣಂ. . . ಪೊಯ್ಸಳೋರ್ವೀಶವಂಶಂ (ಪಾ. ೪, ೫೫. ೨೦೯-೬; ೨೧೭೮); ರಭದಂತ ಜಿಹ್ವ ವಿಸ್ತಶಮುರುಜದ್ಭಾಂಡಪೊಲಾತ್ಮಲಘುವನಾಶ್ರಯಂ . . . ಕೊಳಂ (ಗಿರಿ. ೨-೮೪). ೫. ವಾಸಿಸುವ ಮನೆ, – ಗೃಹ. ೬. ಅಭಿವೃದ್ಧಿ ಹೊಂದುವಿಕೆ ; ಏಳಿಗೆಯಾಗುವಿಕೆ. ೭. ಸಮುದ್ರ; ಸಾಗರ. ೮. ಬಾನು; ಆಕಾಶ : "ಲೋಕದೊಳು ಸಭದೊಳಂಬುಧಿಯೊಳುದಕದೊಳ್ ಭುವನಾಖ್ಯಮಕ್ಕುಂ" (ಜಿಪಾ. ೦೦೦-೨೨). ೯. ಕಾಡು; ಅರಣ್ಯ. ೧೦. ಯುದ್ಧ : "ಲೋಕಂ ರಾವಿಸಿನೋದಕವಾಕಾಶವೆಂಬುದು ಭುವನ ಶಬ್ದಂ" (ಜಾಣಕೀ. ೨೩). ೧೧. [ಗಣಿತ] ಪದಿನಾಲ್ಕು ಎಂಬ ಸಂಖ್ಯೆಯ ಸಂಕೇತ : "ಮಾಭು ಭುವನ ಪದಿನಾಲ್ಕು" (ಹುಂಗೆಂ. ೦೦೯-೪); ಪಪಪುರ ಪರಿಗಣಿತ[ಕ್ಕ]ವನಿಂ ಪದಕೊಡಿದ ಪಕ್ಷದಿಂದ ಗುಣಿಸಲು ಮಿಶ್ರಾ ಭುವನಂ ಪರ ಪಕ್ಷಿ ಕುಸುಮಂ ಪವಣಿಸಿ ಧರಯೆಂಬ ಲಬ್ಧ ತಪ್ಪದೆ ಬಕ್ಕುಂ (ಜಾಸ್ಕ. ೧೩-೦).

ಭುವನಕಮ್ಮಮಲ್ಲ = ಜಗತ್ತಿನಲ್ಲಿ ಬಹಳ ಶೂರನಾದವನು; ಲೋಕೈಕ ವೀರ : ಆತನ ತಮ್ಮಂ ಭುವನಮ್ಮಮಲ್ಲನೆನಿಸಿದ ದಸಮ್ಮಾದೇವ (ಶಿಇಇ. XX. ೦೯-೫೫ ; ೧೦೬). ಭುವನೈಕ ಮಾಣ್ಯ = ಜಗತ್ತಿನಲ್ಲಿ ಮನ್ನಾರೂ ಸಮಾನರಿಲ್ಲದಂತಹ ಗೌರವಸ್ಥ : ಶಿಶಿವಾ ಭುವನೈಕ ಮಾಣ್ಯರನವಗಡಿಸಲಂಗ್ಗೆಸಿದ್ಧ ಮೋಕುದನಾ ಶಾನಿ (ಶಾಣ್ಮ. ೮೫-೦೨). ಭುವನೈಕಾಮ -ಅದ್ವಿತೀಯವಾದ ಸುಂದರ : ಆನೆಯ ಮೇಲೆಯುಂ ಅಳ ಮೇಲೆಯುಂ ಕುದುರೆಯ ಮೇಲೆಯುಂ ಪರಿದುದೊಂದೆ ಗಜಂ ಭುವನೈಕರಾಮನಾ (ಜಿಪಾ. ೦೫೦ ಪ್ರ.೫೬). ಭುವನೈಕವೀರ = ಜಗತ್ತಿನಲ್ಲಿ ತನ್ನ ಸರಿಸಮಾನರಿಲ್ಲದ ಶೂರ.— ಬಲಶಾಲಿ ; ಲೋಕದಲ್ಲಿ ಅಪ್ರತಿಮಸುಶೂರ; ಅಸಹಾಯಶೂರ: ಮಂಡಳಿಕಮಕುಟಘಟ್ಟಿತಪಾದಾಂಬುಜ ಶ್ರೀವಲ್ಲಭ × × × ಪೆರ್ಮಾಡಿ ಭುವನೈಕವೀರನೆಂದೆಯಾದಿತ್ಯಸಂ (ಪಾ. VII, ೫೫೦. ೨೨೦-೨೬; ೨೦೭೬). [ಸಂ.]

ಭುವನಕಂಟಕ (ನಾ). ೧. ಪ್ರಪಂಚಕ್ಕೆ ಆಗಿಬರದವನು. ೨. ನೀರಿನಲ್ಲಿ ಇರುವ ಮುಳ್ಳು; ತಾವರೆದಂಟಿನ ಮುಳ್ಳು. ೧. ೨ : ಸಕಲಂಕತ ಚಂದ್ರಮನೊಳ್ . . . ಭುವನಕಂಟಕಂ ಬಿಸದೊಳ್ಗಲಿರ್ದಾ ನಾಡೊಳ್ (ನಿಚಿ. ೨-೬). [ಸಂ.]

ಭುವನಾಕ್ಷಿ (ನಾ). ೧. ನೀರನ್ನು ಒಳಗೊಂಡಿರುವುದು ; ಸರೋವರ : ವನಮಾಲಿಯಂದದಿಂ ಪದ್ಮಿ ಪದ್ಮಿಯುಮೊಲ್ಲುವನ್ನಳಾಕ್ಷಿ ಭುವನಾಕ್ಷಿಯ ತೆಜದ ಹಂಸಲೋಭಪೋಪಿ. . .ವಿವೆ ರಂಜಿಸುವ ಕಾಸಾರಮಂ (ಕೃಪಾಂ. ೦೫-೦೨). ೨. ಜಗತ್ತುಗಳನ್ನು ಗರ್ಭದಲ್ಲಿ ಹೊಂದಿರುವವನು ; ವಿಶ್ವಂಭರ; ನಾರಾಯಣ. [ಸಂ.]

ಭುವನಖ್ಯಾತಿ (ನಾ). ಲೋಕದಲ್ಲಿ ಹೆಸರುವಾಸಿಯಾಗಿರುವಿಕೆ ; ಲೋಕಪ್ರಸಿದ್ಧಿ : ಭುವನಖ್ಯಾತಿಯ ಜಾತರೂಪಧರದಿಂ . . . ನಮೇರು ವನಿಪ್ಪಂ ಶ್ರುತಕೀರ್ತಿಸನ್ನುನಿವರಂ (ಜಾಬಿಕ್ಕ. ೦-೨೪). [ಸಂ.]

ಭುವನಗರ್ಭಿತ (ನಾ). ೧. ಜಗತ್ತಿನ ಒಳಭಾಗದಲ್ಲಿ ಆವರಿಸಿಕೊಂಡಿರುವುದು. ೨. ಪ್ರಪಂಚವನ್ನೆಲ್ಲಾ ತನ್ನಲ್ಲಿ ಅಳವಡಿಸಿಕೊಂಡಿರುವುದು. ೧. ೨ : ಭುವನಗರ್ಭಿತವಾದುದಾ ಮಾಧವನ ಜಠರದವೋಲು ಪರಭಾಗ ವತನಂತಿರೆ ವಿಷ್ಣುಪದಸಂಸ್ಪರ್ಶನುವಾಯ್ತು (ಕುಚ್ಚಾ. ೬೬. ೬-೦೩). [ಸಂ.]

ಭುವನಜ (ನಾ). ನೀರಿನಲ್ಲಿ ಹುಟ್ಟಿದುದು ; ತಾವರೆ ; ಕಮಲ : ಕಾಂತಿ ಜನರ ಪಾದಭುವನಜಗಳಿಗೆಱುವೆನು [ಜಾಣಿಂ. ಪಾದಕವನತನಾಗುವ ಮುದದಿ] (ಕ್ರಿತಾಂ. ೦-೭). [ಸಂ.]

ಭುವನಜನಕ (ಪಾ). ೧. ಜಗತ್ತಿನ ಸೃಷ್ಟಿಗೆ ಕಾರಣನಾದವನು; ಬ್ರಹ್ಮ. ೨. ಜನರಿಗೆ ತಂದೆಯಂತಿರುವವನು ; ರಾಜ: ಘನರಥನರನಾಥನ ಬವನೆಯೊಳ್ ತಾವ್ಪುಟಿಳಿಯಂಗಳಾಗಿ ಪೋರುತ್ತುದುಮಿರೆ ಭುವನಜನಕಂ ಬೆಗೞೆ ನೀಂ ಪೋಬ್ (ಜಾಂಪಿ. ೯-೬೦ ಪ). [ಸಂ.]

ಭುವನಜಭವ (ನಾ). (ವಿಷ್ಣುವಿನ ನಾಭಿ)ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ.

ಭುವನಜಭಾಂಡ = ಬ್ರಹ್ಮಾಂಡ : ಭುವನಜಭಾಂಡಭವನಕ ಸವೆದುರು ರವಿಬಿಂಬಮೆಂಬ ಬಾದಣದೊಳಪ್ಪೊಳ್ಕೆವರೆಕಡಂದದ ಬಹಿ ಸುವರ್ಣರುಚಿ ಪರ್ದಂತೆ ಕೆಂಬುಲೆಸಗುಂ (ಜಾಬಿಕ್ಕ. ೪-೨೪). [ಸಂ.]

ಭುವನೆಜ್ಯಾಯ (ನಾ). ಪ್ರಪಂಚಕ್ಕೇ ಹಿರಿಯನಾದವನು.–ಶ್ರೇಷ್ಠನಾದವನು : ಭುವನಜ್ಯಾಯನ ತಂದೆ ತಜ್ಜಿಭುವ ತಾಯೆಂದೋದು ಸಜ್ಜುಂಗೆ ನೋಂತವರಾರ್ ನಿಮ್ಮವೊಲು (ಹಂಪ್ರಕ್ಷ. ೨೨-೦೬೪).

[ಸಂ. ಭುವನಜ್ಯಾಯಸ್]

ಭುವನತ್ರಯ (ನಾ). (ಸ್ವರ್ಗ, ಮರ್ತ್ಯ, ಪಾತಾಳವೆಂಬ) ಮೂರು ಲೋಕಗಳು : ಭುವನತ್ರಯ ದುರ್ಲಭಮುನಿಸುವ ಮನ್ನುಗಳನ್ನುಮೊಳವೆ (ಕಾಂಪಿ. ೪೫೯); ಭುವನತ್ರಯಂಗಳೊಳಗುಳ್ಳ ದೆನ್ನುಗಳ್ ದೇವ ಕರತಳಾ ಮಳಕಮಾಮವೆ ನಿಶ್ಚಯಮಾದವು (ಹುಚಿಪ್ರ. ೨-೩೦). [ಸಂ.]

ಭುವನತ್ರಿನೇತ್ರ (ನಾ). ಲೋಕಕ್ಕೆ ರುದ್ರನಂತಿರುವವನು ; ಜನರಿಗೆ ಭಯವನ್ನುಂಟುಮಾಡುವವನು : ಭುವನತ್ರಿನೇತ್ರರುಚಿಯಂ ಕೈ ಕೊಂಡನಾ ಪಾಂಡವಂ (ಜಪಾಕ. ೨೦೦ ಪ್ರ.೦೫). [<ಸಂ. ಭುವನತ್ರಿನೇತ್ರ]

ಭುವನದೆಯಿತ (ನಾ.) ಲೋಕಕ್ಕೆ ಒಡೆಯನಾದವನು : ಅದ್ವಯತಂಗಜತಂಗೆ ಭುವನದಯಿತಂಗಾಗಳ್ ದ್ವಿತೀಯಂದ್ರರೆಲ್ಲಮೆಜಗಿದರ್ (ಅಷ್ಟ. ೩-೩). [ಸಂ.]

ಭುವನದಲ್ಲಣ (ನಾ). ೧. ಪ್ರಪಂಚದ ಭಯ ; ಜನರ ಗಾಬರಿ ; ಒಜರಿದುದು ಜನನಿವಸದೆ ಬಾಯಜಿತು ಬಸದೊದುಳಿ ಸಚರಾಚರ ನಿರೋಧ ವನೇನನೆಂಬೆನು ಭುವನದಲ್ಲಣವ (ಜಿಪಾಗ. ೩-೩-೦೪). ೨. ಪ್ರಪಂಚಕ್ಕೆ ಭಯವನ್ನುಂಟುಮಾಡುವವನು : ಸುರನರ ಭುಜಂಗಮ ಭುವನದಲ್ಲಣ ದಶವದನನುತ್ಸವದಿಮೊಡ್ಡೋಲಗದೋಳಿದ್ದನು (ಹೊಪಾ. ೩-೬೩).

[ಭುವನ + ಶಲ್ಲಣ (<ತಲ್ಲಟ)]

ಭುವನನಯನ (ನಾ). ಲೋಕಕ್ಕೆ ಕಣ್ಣಾಗಿರುವವನು ; ಸೂರ್ಯ: ನಯನಹಾರಾಹಾರವಾಹನನಯನ ಭುವನೇಶಯನನ ಭುವನನಯನ (ಅಷ್ಟ. ೩೦-೩೦). [ಸಂ.]

ಭುವನನಾಥ (ನಾ). ಭೂಮಿಗೆ ಒಡೆಯನಾದವನು; ಅರಸು ; ರಾಜ: ಜಗಂವಿಗೆ ಬೋಧನಿಧಿ ದಮವರಮುನಿಯಂ ಭುವನನಾಥನಿದಿರ್ಗೊಂಡು . . . ಕಂಡೆ (ಜಾಂಬಪ. ೯-೮೫). [ಸಂ.]

ಭುವನಪ್ರಾಣ (ನಾ). ಜಗತ್ತಿಗೆ ಪ್ರಾಣಸ್ವರೂಪನಾದವನು; ವಾಯು : ಮೂಣು ಭಯವನು ಭೀಮ ಭೂವನ ಕಾಣಾ ಹೋಗೆನೆ ಪಡುಗಿ ಭುವನ ಪ್ರಾಣನಾತ್ಮಜ ಬದ್ದನಾ ಧೃತರಾಷ್ಟ್ರನಂಪ್ಪಯಲಿ (ಕುಣ್ಮಾ. ೦೮-೧೦). [ಸಂ.]

ಭುವನಬುಂಭುಕ, ಭುವನಭುಂಭುಕ (ಗು). ೧. ಜಗತ್ತಿನಲ್ಲಿ ಹೆಸರು ವಾಸಿಯಾದ ; ಲೋಕಪ್ರಸಿದ್ಧವಾದ : ಭುವನಬುಂಭುಕದೇವಿ ಮಹಿದೆಯನಿವಹವಾರರುಹಕ್ಕು (ಜಜಾ. ೦-೦೬). (ನಾ). ೨. ಜಗತ್ತಿನಲ್ಲಿ ಹರಡಿರುವುದು,—ವ್ಯಾಪಿಸಿರುವುದು : ಭುವನಬುಂಭುಕವಾಗಿ ಶಿವಿ ತದ್ಭವನವೆಲ್ಲವ ದಹಿಸಲು (ಜಪಾ. ೦೩-೩೦). ೩. ಜಗತ್ತಿನಲ್ಲಿ ಪ್ರಸಿದ್ಧನಾದವನು,—ಕೀರ್ತಿವಂತ : ತದನುಜನಪರಿಮಿತ ಗುಣಾಸ್ಪದ ನೆನೆವೆಂ ಭುವನಬುಂಭುಕಂ . . . ದೋಣಂ (ಪಜ. XVI. ೨೦-೦೯, ೧೮೮); ಭೀಷ್ಮನು ಭುವನಬುಂಭುಕನೈದಿ ಪೊಕ್ಕನು ಹಸ್ತಿನಾಪುರವ (ಜಪಾ. ೯-೩೯). **ಭುವನಭುಂಭುಕ** : ೧. ಏಸೂವರೆ ಧಾತ್ರಿಯೊಳು ಭುವನಭುಂಭುಕ ದಾನಿಗಳುರ್ವೀರಾಗ್ರುದೊಳು ಪೂವರೆ ರಾಜನಿಃಶಿನಿಳಯರ್ಧುರೆಯೊಳು ಸುಚರಿತ್ರಪಾತ್ರರುಂ (ಪಕ. VIII. ೫೧೫. ೦೩೯-೦೩; ೧೨೦೨); ಎಸೆದುದು ವಸುಧಾಧರನ ಭುವನಭುಂಭುಕತೇದಂ (ಕುಗಾ. ೩-೦೪); ಕವಿಜನವಿತತಿ ಕೋಕಲ ಮುಕುಂದಂಗ[ಮುಕುಂದ]ಭೂಭುವನಭುಂಭುಕ ಕೀರ್ತಿಯುತನು (ತ್ರಿಜಾಂ. ೩-೦೩). ೨. ಜಗತ್ಪ್ರಿಂತನೇ ಕೀರ್ತಿಯಂ ಭುವನಭುಂಭುಕನೆ (ಪಕ. XIII. ೩೦೯-೩೩; ೧೨೩೩) ; ಭುವನಭುಂ [ಜಾಜಾ.ಬುಂ]ಭುಕಮೊದ ತನ್ನ ಮಗಳ ವಿಚಿತ್ರಸೃತ್ಯ ವಿದ್ಯಾವಿಳಾಸಮಂ ಕಂಡು ಚಿತಶಕ್ರು ಮಹಾರಾಜಂ . . . ಬರಿಸಿ (ಅರಗೇ. ೩-೧೩ ಪ); ಅದುದೇನೋ ಭುಃಭುವನಭುಂ[ಭು]ಕಮಾದುದು[ದು]ಕೀರ್ತಿ (ಕಾಇಪು. IV. ೨೩೭-೩೨; ೧೩೦). ೩. ಉನ್ನತಕೀರ್ತಿ ಭುವನಭುಂಭುಕನೊಪ್ಪಿರದನು (ಜಜಾ. ೬-೩೦).

[ಭುವನ + ಬುಂಭುಕ]

ಭುವನಭುಂಭುಕ 'ಭುವನಬುಂಭುಕ' ನೋ.

ಭುವನವಾಸ (ನಾ). [ಸಂಗೀತ] ಹದಿನೆಂಟು ಬಗೆಯ ಕೊಳಲುಗಳಲ್ಲಿ ಒಂದು : ಹದಿನೆಟುಂಗುಳ ಮೊದಲಾಗಿ ಒಂದೆಂಗುಳ ಪರ್ಯಂತಮಪ್ಪ ಪರಿಣಾಮಕ್ರಮವಿಡಿದು ಜಾತಿವಾಸ . . . ಭುವನವಾಸ . . . ಭುವನಾಧಿಪವಾಸವೆಂಬ ಹದಿನೆಂಟು ತೆಱದ ವಾಸಂಗಳ ಲಕ್ಷಣವಱಿತು (ಶಶಗೀ. ೫೩೭). [ಭುವನ + ವಾಸ]

ಭುವನಾಂತರ (ನಾ). ೧. ಭೂಮಿಯ ಮಧ್ಯಪ್ರದೇಶ,—ಒಳಭಾಗ. ೨. ಭೂಮಿಯ ಎಲ್ಲಾ ಭಾಗ : ಕಾಂತಿಕಥೆಯಂ ಭುವನಾಂತರದೊಳ್ ನಿಮಿರ್ಚಿದೊಂದದಮನೊಂದೆ ಪಾಲಿಗಯೋಳ್ಪೊಗಬ್ಬಿಂ ಪೆಗಬ್ಬಿತ್ತಿ ಮುಚ್ಚೆಯಾ (ಜಂಚಕ್ಷ. ೦-೪ ೫೦); ಭುವನಾಂತರಮುಂ ಸಿಂಪಿಸುವವೊಲ್ . . . ನಿಜರಾಮಣ್ಯರಸದ ಪೆರ್ಮೊನಲಿಂದಂ (ಜಪಾಂಪು. ೧೮೪); ಭುವನಾಂತರಮಂ ಭೀರೀರಮಮದು ತೀವಲ್ಕೆ (ತ್ರಿಷ್ಟಿ. ೨-೨೦). ೩. ಬೇರೆಲೋಕ : ಲೋಕಾಂತರ. [ಸಂ.]

ಭುವನಾದಿತ್ಯ (ನಾ). ೧. ಭೂಮಿಗೆ ಸೂರ್ಯನಂತಿರುವವನು. ೨. ಒಬ್ಬಾತನ ಹೆಸರು : ಕಿಜಿಂಮ ರಾಚಮಲ್ಲ ಮನ್ನೆ ಬೇಡಿದೊಳರಿನೆಲನುಂ ಭಗ್ನಾರವಮಂ ಕೊಟ್ಟಾನೆನ್ದು ಬನ್ದು ಭುವನಾದಿತ್ಯಂ ಬರೆ (ಎಕ. IV. ಹೊಸ. ೦೧೬-೫; ಸು. ೦೨೦). [ಸಂ.]

ಭುವನಾಧಿಪ (ನಾ). ಭೂಮಿಯ ಒಡೆಯ; ರಾಜ : ಭುವನಾಧಿವನಂ ಮೆಚ್ಚಿಸಿ ಜವದಿಂ ಕೈಲಾಸಕೊಲ್ದು ತಳರ್ವೋಹಿಲನಂ ಸವಿಲಾಸಂಬಡೆದೀಕ್ಷಿಸಿ (ಆದಪ. ೦೩-೬). [ಸಂ.]

ಭುವನಾಧಿಪತ್ಯ (ನಾ). ೧. -ಪ್ರಪಂಚದ ಒಡೆತನ,—ಪ್ರಭುತ್ವ. ೨. ಜಗತ್ತಿನ ಪ್ರಭುತ್ವವನ್ನು ಹೊಂದಿರುವವನು ; ಪರಮೇಶ್ವರ : ಶರಣ[ಸಾ]ಂಗಕ್ಕಂಗೆ ಭುವನಾಧಿಪತ್ಯಂಗೆ ಸುರಗಣಾದಿತ್ಯಂಗೆ . . . ಮಯ್ಯಿಕ್ಕಿ ನಂದಿರೆ ವಿರೂಪಾಕ್ಷಲಿಂಗಕ್ಕೆ (ಪಂಚಕ. ೦೯-೦೩೯). [ಸಂ.]

ಭುವನಾಧಿವಾಸ (ನಾ). [ಸಂಗೀತ] ಹದಿನೆಂಟು ಬಗೆಯ ಕೊಳಲು ಗಳಲ್ಲಿ ಒಂದು : ಬಳಿಕ ಹದಿನೆಂಟುಂಗುಳ ಮೊದಲಾಗಿ ಒಂದೆಂಗುಳ ಪರ್ಯಂತಮಪ್ಪ ಪರಿಣಾಮಕ್ರಮವಿಡಿದು ಜಾತಿವಾಸ. . . ಭುವನಾಧಿವ ವಾಸವೆಂಬ ಹದಿನೆಂಟು ತೆಱದ ವಾಸಂಗಳ ಲಕ್ಷಣವಱಿದು (ಶಶಗೀ. ೫೩೬). [ಭುವನಾಧಿಪ + ವಾಸ]

ಭುವನಾಧೀಶ (ನಾ). ಭೂಮಿಪ; ರಾಜ : ಭುವನಾಧೀಶನನೀಕ್ಷಿಪೊಂದು ತವಕಂ ಕಿಯ್ಯುಕ್ಕೆ (ಕಭಾಗಾ. ೪-೦೬). [ಸಂ.]

ಭುವನಾಧ್ವ (ನಾ). [ವೀಶೈ] ಮಂತ್ರ, ಪದ, ವರ್ಣ, ಭುವನ, ತತ್ತ್ವ, ಕಲಾ ಎಂಬ ಆರು ಮಾರ್ಗಗಳಲ್ಲಿ ಒಂದು : ತತ್ತ್ವಾಧ್ವ, ಕಲಾಧ್ವ, ಭುವನಾಧ್ವ (ಇವು ಮೂರು ಅರ್ಥಾಧ್ವಗಳು) (ಶಿಆಸಂ. ೫-೦ ೦೩೫). [ಸಂ. ಭುವನಾಧ್ವನ್]

ಭುವನಾಭಿರಾಮ (ನಾ). ಲೋಕಕ್ಕೇ ಅತ್ಯಂತ ಸುಂದರನಾಗಿರುವವನು: ರಾಮನಂ ಭುವನಾಭಿರಾಮನಂ ಗುಣರತ್ನಧಾಮನಂ. . . ನಂತತಂ ನಾ ಮುನಂದಿನಿಯೆಂ ರಮಿಸಿದೆ ಬಾಳ್ವೆನೆಂತೆಂದಳು (ಕೃಜಾಜಾ. ೮೯-೫೫). [ಸಂ].

ಭುವನಾಯ್ಯ (ನಾ). ಒಬ್ಬಾತನ ಹೆಸರು : ರಾಚಮಲ್ಲಂಗಲ್ಲದೆ ರಾಜ್ಯದುಂ ಗೆಯ್ಯಲೀಯಮೆನ್ದು ಭುವನಾಯ್ಯನ ಮಾಗುಣ್ಡಯೊಳ್ಕಾದಿದನ್ದು (ಎಕ. IV. ಹೊಸ. ೦೦೬-೬; ಸು. ೦೨೦). [?]

ಭುವನಾರಾಧ್ಯೆ (ನಾ). ಜಗತ್ತಿನ ಜನರಿಂದ ಪೂಜಿಸಲ್ಪಡತಕ್ಕವಳು : ಲೋಕಪೂಜ್ಯೆ : ಶ್ರೀಮತ್ಪಾಲೇಯಶೈಲೋದ್ಭವೆ ಶಿವೆ ಭುವನಾರಾಧ್ಯೆ ಕಲ್ಯಾಣಿ (ಜಜಾ. ೬-೦೬೮). [ಸಂ. ಭುವನಾರಾಧ್ಯಾ]

ಭುವನಾಲಯ (ನಾ). ನೀರಿಗೆ ವಾಸಸ್ಥಾನವಾದುದು ; ಸಮುದ್ರ : ಶಿವದೇವರ ವರಸದಮಂ ಭುವನಾಲಯಮಬ್ಬಗೇಹ . . . ಶರಧಿ ಮಹಿಮಾ ವಾಸಂ (ಪಜ್ಮಾ. ೦-೪೮). [ಸಂ.]

ಭುವನಾಶ್ರಯ (ನಾ). ೧. ಪ್ರಪಂಚಕ್ಕೆ ಆಶ್ರಯನಾಗಿರುವವನು. ೨. ನೀರಿಗೆ ಆಶ್ರಯವಾಗಿರುವುದು. ೧. ೨ : ಪುಂಕರುಹಭವನಂತೆ ಸಕಲ ಭುವನಾಶ್ರಯಂ ಶಕ್ರಸಂತತನಿವಿಜನಿಕರಕಾಂತನು . . . ತಾನೆಂದುದಧಿ ಪೊಜಿದುದು (ಕೃಜಾಜಾ. ೬-೩). [ಸಂ.]

ಭುವನೇಜ (ನಾ). ನೀರಿನಲ್ಲಿ ಹುಟ್ಟಿರುವುದು; ತಾವರೆ ; ಕಮಲ : ನದುನಭುವನೇಜಾರ್ಚಿತಕ್ರಮದು ನಯನೇರ್ಣವಿಶಕ್ಷಲಕ್ಷಣ ಜಯತು ಸಿದ್ಧೇಶ (ಜಪು. ೨೦-೪೭). [ಸಂ.]

ಭುವನೇತ (ನಾ). ೧. ರಾಜ ; ಅರಸು : ಭುವನೇತಂ ಬೆಸಗೊಳೆ ವಿನಯ ವಚಃಪ್ರಸರಂಗಳೆಸೆದೊಡಂಬಡೆ ನುಡಿದಂ (ಅಂಪ್ರ. ೦೩-೫೯); ಈ ಭುವನೇಶಂ ದಾಯ್ಕೀಳೆದೊಡವಂ ತಡೆಯದೊಂ ತ್ರಿವಿಷ್ಟನಂ:ಧಿಶಯದೊಳ್ (ಜಂಚಕ್ಷ. ೩-೦೩೯). ೨. ಶಿವ; ಪರಮೇಶ್ವರ : ಭುವನೇತಂ ಭೂತಿಯುಕ್ತ ಭುಜಗಧರನಜೇಯಂ (ಕಂಚಂ. ೩-೦೮). [ಸಂ.]

ಭುವನೇಶಯನ (ನಾ). =ಭುವನೇಜ : ನಯನತರ್ಣಾಪಾರವಾಹನನಯನ ಭುವನೇಶಯನ ನಯನಾನಯನ ಭುವನಕ್ರಯನಯನ (ಶಕ್ಷ. ೨೦-೩೬). [ಸಂ.]

ಭುವನೇಶ್ವರ (ನಾ). =ಭುವನೇಶ ೧: ಹರನೊಡನೆ ಹೊಯ್ದಾಡಿದಗ್ಗದ ಸರನು ತಂದೆ ಸಮಸ್ತ ಭುವನೇಶ್ವರರಲ್ಲಿ ಮುಂಬೈರಿ ಮಾಮನ ನಿನ್ನ ತನಯನಿಗೆ (ಕುಣ್ಮಾಕ್ರೌ. ೭-೩೩). [ಸಂ.]

ಭುವನೇಶ್ವರಿ (ನಾ). ೧. ಜಗತ್ತಿಗೆಲ್ಲ ಒಡೆಯಳಾದ ಶಕ್ತಿದೇವತೆ ; ಆದಿಶಕ್ತಿ. ೨. [ವಾಸ್ತು] ದೇವಸ್ಥಾನದ ಶಿಖರಗಳ ಒಳಮೈ,—ಒಳಭಾಗ: ಫಲಕವಿಮಾನದ ಎತ್ತರದ ಪರಮಾವಧಿ : ಮನೆ

ಮನೆಯು ಮೇಲೆ ಗೋಪುರದ ಭುವನೇಶ್ವರಿಯು ಪರಿಜನಾವರಿಸಿ (ಕ್ರೀಡಾಪ್ರ. ೫೫೬-೬೦); ಈ ರೀತಿಯ ಕಟ್ಟಡಗಳಲ್ಲಿ ಆಶ್ಚರ್ಯದಿಂದ ಪೆರಗುಮಾಡುವ ಭಾಗವೆಂದರೆ ಅವುಗಳ ಭುವನೇಶ್ವರಿಗಳು (ಕ್ರಿಪ್ರ. ೮೦).

[ಸಂ. ಭುವನೇಶ್ವರೀ]

ಭುವರ್ಲೋಕ (ನಾ). ಭೂಮಿಯೇ ಮೊದಲಾದ ಮೇಲಿನ ಏಳು ಲೋಕಗಳಲ್ಲಿ ಎರಡನೆಯದು: ಭುವರ್ಲೋಕದ ಸ್ವಾವರಕ್ಕೆ ಸತ್ಯ ಲೋಕದ ಅಗ್ರಪಣಿಯಲ್ಲಿ ಮಜ್ಜನಕ್ಕೆಳಿದು (ಅಪರಂ. ೫೬-೦೬೬). ಪರವು ಜಂಗಮದಲ್ಲಿ ಪವಿಸಾಲ್ಕು ಲೋಕಂಗಳಡಗಿರ್ಪವು . . . ಕಾಕ್ಷಿಯಲ್ಲಿ ಭುವರ್ಲೋಕ (ಅಂಪೋ. ೦೮೨-೦೮೪); ಈ ಮಹಾಪುರುಷನ (ವಿರಾಟನ) . . . ಕಾಕ್ಷಿಯುಗ್ಮ ಭುವರ್ಲೋಕವಿರುವುದು (ಗಣಿತಾ. ೯-೦೩). [ಸಂ.]

ಭುಸ್ (ನಾ). ಒಂದು ಅನುಕರಣ ಶಬ್ದ: ಹಾವಿನ ಫೂತ್ಕಾರ. ದೀರ್ಘನಿಶ್ವಾಸ ಮೊದಲಾದುವನ್ನು ಅನುಕರಿಸುವ ಶಬ್ದ: ಅಲಗು ಭುಸ್ಸೆಂಬ ಘನಗಳಾಧರಣಮವು ತೊಳಗೆ . . . ವಿರೂಪಾಕ್ಷನರ್ದಂ ವಿಲಾಸದಿಂದೆ (ಪಾಷ್ಟ. ೨-೨೨); ನಪಿಮದಿ ತಡಂ ಲಕ್ಷೋಪಲಕ್ಷ ಹೆಡಗಳ್ನೆತ್ತಿ ಭುಸ್ಸೆಂಬ ಸಾಸಿರಶಿರದ ಮಹಾಫಣಿಯಂತೆ (ಶಾ೨ಗ. ೬೬-೦೦೩).

ಭುಸುಂಡಿ (ನಾ). ಒಂದು ಬಗೆಯ ಆಯುಧ: ಮಿಸುಪ ಚಕ್ರ ಭುಸುಂಡಿ ಲಂಡಿಗಳ ಸರಳ ಸಮಕ್ಕೈದುಗಳಿಂದ ದಾನವ ಮಾಯಾಬಲನು ಬೊಬ್ಬಿಡುತ ರಿಪುಸಂಹಾರಭೈರವಮಿಯೂ (ಪೀಷಾ. ೦-೦೨). [< ಸಂ. ಭುಶುಂಡೀ]

ಭುಸುಗುಟ್ಟು (ಕ್ರಿ). ೧. (ಹಾವು) ಭುಸ್ ಎಂದು ಶಬ್ದ ಮಾಡು. ೨. (ಆಲಂ) (ರೋಷದಿಂದ) ವೇಗವಾಗಿ ಉಸಿರುಬಿಡು; ಉದ್ವೇಗವನ್ನು ತೋರಿಸು: ಕೆಂಪುಸೀರೆಯ ಹುಡಿಗೆ, ಹೆಡೆಯನ್ನು ತುಳಿಸಿಕೊಂಡ ನಾಗರಹಾವಿನಂತೆ ಭುಸುಗುಟ್ಟಿದಳು (ತಂಡಾತ. ೧೦); ಗೆಲುವಾದ ಗಂಡುಕುದುರೆಯು . . . ಒಂದು ಸಲ ಭುಸುಗುಟ್ಟಿ ಕತ್ತನ್ನು ಗಂಭೀರವಾಗಿ ಅಲುಗಿಸಿ, ಅನಂತರ ಚಲಿಸಿದ ಸುಮ್ಮನೆ ನಿಂತುಬಿಟ್ಟಂತೆ ತೋರುತ್ತಿದ್ದಿತು (ಪೀಕಾ. ೭೦). [< ಭುಸ್ + ಕುಟ್ಟು$_1$]

ಭುಸುಗುಡು (ಕ್ರಿ). = ಭುಸುಗುಟ್ಟು ೨: ಅವರೂ ಗೋಪಾಲನು ಭುಸುಗುಡುತ್ತಾ ಅನಂತನ ಮೇಲೆ ಏಗಿದು ಬಿದ್ದಿದನು (ಪಾಗ. ೦೫೬); ಗೆಲುವಾದ ಮನಸ್ಸು . . . ಎಲ್ಲ ಬಿಟ್ಟು ಪೆರ್ಮನೆಯ ಪಾರ್ವತ್ಯನ ಮಾತನ್ನು ನೆನೆದು ಭುಸುಗುಡಹತ್ತಿತು (ಕುಪಾಯ. ೨೬೯).

[< ಭುಸ್ + ಕುಡು$_1$ (< ಕೊಡು$_1$)]

ಭೂ (ನಾ). ೧. ಭೂಮಿ; ಧರಣಿ; ನೆಲ: "ಭೂ, ಭೂಮಿ, ವಸುಧಾ, ಅವನಿ . . . ಧರಾ, ಆಧಾರಾ – ಈ ೩೭ ಭೂಮಿಯ ಪೆಸರ್" (ಪಂಡಿಪ. ೫೬-೭). ೨. ಭೂಲೋಕ: "ಬಿತ್ತರವ ಭೂರ್ಭುವಂ ಸ್ವರ್ಮಹಂ ಜನತಪಂ ಸತ್ಯಮೆಂದೇಳು ಮೇಲಣ ಲೋಕಮೆಕ್ಕು" (ಪುಗೀಗಾ. ೦೦-೬೨). ೩. ಪಂಚಭೂತಗಳಲ್ಲಿ ಒಂದು: ಪೃಥ್ವಿ: ಭೂ ತೋಯ ವಾಯ ಸಮೀರಣ ಆಜಬಂದಿಗಳೆಲ್ಲ ಆದಿಸುಧಾರದ ಪರಮಾತ್ಮಲಿಂಗವಲ್ಲಿ (ಬಸವ. ೧೫೧) ೪. [ಭುವ] ಮೂರುಗುರುಗಳನ್ನು ಹೊಂದಿರುವ ಗಣ: ಮಗಣ (— — —): ಬರಿದೆ ಭೂ ದುರ್ಗ್ಗಂ ಪೆಸರಿದುದಕ್ಕಂ ಜಲಜವಕ್ತ್ರಾಕ್ಷೀ ಸಂಲಲಿತವೃತ್ತಂ (ರುಪೋಂಪಾ. ೨-೦೦); ಭೂ ನಾಕಾಂತದೊಳೆರೆ ತೋಯೇಶಂ ತಾನೆಂಬುಂ ಪವನಕ ನಾಮಂ (ಕುಪೋಂಪಾ. ೨-೦೦೬). [ಸಂ.]

ಭೂಂಕೃತಿ (ನಾ). ಹಾವಿನ ಫೂತ್ಕಾರದ ಶಬ್ದ: ಅಘಳ ಭೂಂಕೃತಿ ಪೊಕ್ಕ ಮೊರೆವುತ್ತೇಳುತ ವಿಜೃಂಭಿಸುವ ಸರ್ಪಾವರ್ಪನಂ ನೋಡಿ (ಪಾಷ್ಟ. ೫೦-೫೯). [ಸಂ.]

ಭೂಕಂದಾಯ (ನಾ). ಜಮೀನಿನ ಮೇಲೆ ಹಾಕುವ ಕಂದಾಯ.— ತೆರಿಗೆ: ಭೂಕಂದಾಯ ಕಂದಾಯವ ನಿರ್ಧಾರವೂ ವಸೂಲಿಯೂ ಭೂಅಭಿವೃದ್ಧಿಗಳನ್ನು ಗುತ್ತಿರುವುದೂ . . . ಕಂದಾಯದ ಪರಭಾರೆಯೂ ಸೇರಿ (ಜಾಗತ. ೨೯೦). [ಭೂ + ಕಂದಾಯ]

ಭೂಕಂಪ (ನಾ). ಭೌತಿಕಕಾರಣದಿಂದ ಆಗುವ ಭೂಮಿಯ ಕಂಪನ: ಭೂಮಿಯು ನಡುಗುವುದು: ದೊಡ್ಡದೊಡ್ಡ ದ್ವೀಪಗಳಲ್ಲಿ ಎತ್ತರವಾದ ಪರ್ವತಗಳಿವೆ . . . ಅನೇಕ ಜ್ವಾಲಾಮುಖಿಗಳಿವೆ. ಆಗಾಗ್ಗೆ ಭೂಕಂಪಗಳಾಗುತ್ತವೆ (ಭೂಗೋ. ೦೨೨); ಕಾಲಸೆಂಬುವ ಪ್ರಾಣಿ . . . ಆಹವಲ್ಲಿ ಎಂಬಿ, ಭೂಕಂಪವಲ್ಲಿ ಗದಗದ ನಡುಗಿ, ಜ್ವಾಲಾಮುಖಿಯೊಳಗೆ ಸಿಡಿದು ನುಚ್ಚುನೂರಾಗಿ . . . ನಮ್ಮೆದೆಯಲ್ಲಿ ತುಡಿವ ತಲಲವಾಗಿದ್ದಾನೆ (ಶಂಹುಬ. ೩೦-೩). [ಸಂ.]

ಭೂಕಂಪನ (ನಾ). = ಭೂಕಂಪ: ಇದೆ ಭೂಕಂಪನವಿದೆ ರಕುತದ ಮಳೆ . . . ಇದೆ ಧೂಮಕೇತು ಮಂಗಡಪೊಳಗಾ ರಾಮುನಿದಿರಾಗದಿರ ನೆಮುಗೆದ (ಶಾಂಶಾಂ. ೪೦-೯). [ಸಂ.]

ಭೂಕದವ (ನಾ). ಒಂದು ಬಗೆಯ ಸಸ್ಯ: "ಭೂಮಿಣಾ—ಭೂಕದವ" (ಲಪೂ. ೦೦೩). [ಭೂ + ಕದವ$_1$ (< ಕಡಾಬು)]

ಭೂಕಾಂತ (ನಾ). ಭೂಮಿಯ ಪತಿ; ರಾಜ: ಉಪವಾಸವಿನರಕ್ಕಾ ಪುಣ್ಯಾತಿಥ್ಯತ್ಕರಂ ತಾನೆಯ್ದುತ್ತಮಿಲ್ಲದೇಂ ನಿಂತರೋ ಭೂಕಾಂತನುಂ ಕಾಂತೆಯುಂ (ಪಂಪ್ರಕೃ. ೩-೮೨); ಜನಪಂಬೆಸೆದ ಹಸ್ತಿನಾಪುರವುಲ್ಲಿ ಗರುಸಸುವ ಭೂಕಾಂತ ಜನಮೇಜಯಂ (ಕೃಜಾಭಾ. ೨-೩). [ಸಂ.]

ಭೂಕಂಡ (ನಾ). ಭೂಮಿಯ ಭಾಗ: ಭೂಖಂಡಗಳ ಸಮೀಪದಲ್ಲಿಯೂ ಅವುಗಳ ಪಕ್ಕಗಳಲ್ಲಿರುವ ದ್ವೀಪಗಳ ಸಮೀಪದಲ್ಲಿಯೂ ಸಾಗರದ ನೀರಿನ ಆಳ ಕಡಮೆ (ಭೂಕಡೆ. II, ೩೩); ನಮ್ಮದು ಬಹಳ ದೊಡ್ಡ ಭೂಖಂಡ (ಪುಗೀ. ೨). [ಸಂ.]

ಭೂಖರ್ಜೂರ (ನಾ). ಒಂದು ಬಗೆಯ ಸಸ್ಯ: "ಭೂಮಿಖರ್ಜೂರೀ — ಭೂಖರ್ಜೂರ" (ಲಪೂ. ೦೦೩). [ಸಂ.]

ಭೂಗತ (ಗು). ೧. ಭೂಮಿಯ ಒಳಗಿರುವ: ಯಾವುದೇ ನಾಡಿನಲ್ಲಿ ಭೂಗತ ಬಸಿಯುಸಂಪತ್ತನ್ನು ಕಂಡುಹಿಡಿಯುವುದು ದುಃಖ್ಕರವಾದುದು (ಕಪ್ರ). ೨. ಬಹಿರಂಗವಾಗಿ ಕಾಣಿಸಿಕೊಳ್ಳದ: ಅನೇಕ ರಾಜ್ಯಗಳಲ್ಲಿ ಭೂಗತನಾಯಕರು ಸರ್ಕಾರಕ್ಕೆ ಕರುಂಬಳವನ್ನು ಕೊಡುತ್ತಿದ್ದಾರೆ (ಕಪ್ರ). (ನಾ). ೩. ಭೂಮಿಯಲ್ಲಿ ಮುಂಚ್ಚಿಹೋದುದು.— ಹೊಕ್ಕುಹೋದುದು: ಆದರೆ ಹತ್ತಿರವಲ್ಲಿದ್ದ ಊರುಗಳೆಲ್ಲವು ಭೂಗತವಾದವು (ಗಪ್ರ-೬-೦೧೬). ೪. ಹಾಳು; ನಾಶ: ಜೀವ ಹಾಳಾಯಾಮು ಕೆಡೆದು ಭೂಗತವಾಗಿ ವಾಯುಪ್ರಾಣಿಯಾಗಿ ಹೋಪಾಗ ಆಗ ಮುಕ್ಕಿಯು ಬಯಸಿದರುಂಬೆ (ಶಿಲೆ. ೩೦೬-೬೫); ಒಂದೇ ದಿನದಲ್ಲಿ ಐದುಸೂರು ಮೊಯಿಸಳಸೇನೆ ಭೂಗತವಾಯಿತು (ಶಾಂಚಿ. ೩೩೦). ೫. ನಾಪತ್ತಾವನು: ಲೆಕ್ಕದಲ್ಲಿ ಲೇಖಿತವಾ.ಹಿರಿಗೇಕೆ ಅಜಾತನ ಸುದ್ದಿ . . . ಇವರೆಲ್ಲರು ಈಶನ ಭಾಷೆಯಲ್ಲಿ ಸಿಕ್ಕಿ ಭೂಗತರಾದರು (ಪೋಪಾ. ೩೫-೪೪).

ಭೂಗತ ಮಾಡು = ೧. ನೆಲದೊಳಗೆ ಮುಚ್ಚಿಡು; ಹೂತಿಡು: ಅವನು ಹಣವನ್ನೆಲ್ಲ ಭೂಗತ ಮಾಡಿ ಪಕಾತ್ಮಾಗಿ ಸತ್ತುಹೋದುದರಿಂದ ಅದು ಮಕ್ಕಳಿಗೆ ಸೇರದಂತಾಯಿತು (ಕಪ್ರ). ೨. ಹಾಳುಮಾಡು: ಅವಸ್ಥಲ್ಲಿದ್ದ ಪಾಶವೀಶಕ್ತಿ . . . ಆ ದಿವ ಸುಳಿಹುದೋರಿದ್ದ ದೈವೀ ಪ್ರವೃತ್ತಿಯನ್ನು ಮೆಟ್ಟಿ ತುಳಿದು ಭೂಗತಮಾಡಿತು (ಕೃಸಂ. ೭೫).

[ಸಂ.]

ಭೂಗರ್ಭ (ನಾ). ಭೂಮಿಯ ಒಳಭಾಗ: ಭೂಗೋಳದ ವ್ಯಾಸವು ಅಥವಾ ಭೂಗರ್ಭದ ಪಾರಳತೆಯು ೭೯೧೨ ಮೈಲುಗಳುಳ್ಳದ್ದಾಗಿದೆ (ಭೂಗೋ. ೩); ಭೂಗರ್ಭವನ್ನು ಸೀಳಿ ನೋಡಿದರೆ ಅಲ್ಲೂ ಅದೇ ಹಾಡು (ಪಾಶ್ರ. ೧. ೦೨೦). [ಸಂ.]

ಭೂಗರ್ಭಜಲ (ನಾ). ಭೂಮಿಯ ಒಳಗಿರುವ ನೀರು : ಭೂಗರ್ಭಜಲ (ಗುಪ್ತ ಜಲ) (ಕೂಪಕ. ೦೫೬). [ಸಂ.]

ಭೂಗರ್ಭಶಾಸ್ತ್ರ (ನಾ). ಭೂಮಿಯ ಒಳಗಿರುವ ವಸ್ತುಗಳ ವಿಷಯವನ್ನು ತಿಳಿಸುವ ಶಾಸ್ತ್ರ : ಭೂಮಿಯ ಚಿಪ್ಪಿನ ವಿಚಾರವನ್ನು ಪರಿಶೀಲಿಸುವ ಶಾಸ್ತ್ರ ಭೂಗರ್ಭಶಾಸ್ತ್ರ (ಕೂಪಕ. ೦೦೭); ಭೂಗರ್ಭಶಾಸ್ತ್ರ ಪ್ರವರ್ತಕನಾದ ಲಿಲಿ ಮತ್ತು ಅರ್ಥವಾದಿಯಾದ ಮಾಲ್ಥ್ಯೂಸ್ ಮುಂತಾದವರ ಸಂಶೋಧನೆಗಳೂ ಪರಿಣಾಮವಾದಕ್ಕೆ ಪುಷ್ಟಿಯನ್ನು ಕೊಟ್ಟುವು (ಹುಗ್ಗಾಡ. ೩೩ ಬೀಚಿ). [ಸಂ.]

ಭೂಗರ್ಭಶಾಸ್ತ್ರಜ್ಞ (ನಾ). ಭೂಗರ್ಭ ಶಾಸ್ತ್ರವನ್ನು ಬಲ್ಲವನು : ಭೂಗರ್ಭಶಾಸ್ತ್ರಜ್ಞರು ಭೂಮಿಯ ಪದರಗಳ ವಿಷಯವನ್ನು ಚೆನ್ನಾಗಿ ಪರಿಶೀಲಿಸಿ . . . ನಿರ್ಧರಿಸಿದ್ದಾರೆ (ಕ.ಚಾಬುಬ್ಬಿ. ೧೪). [ಸಂ.]

ಭೂಗುಗ್ಗಳ (ನಾ). ಒಂದು ಬಗೆಯ ಸಸ್ಯ : "ಭೀಮಜಃ_ಭೂಗುಗ್ಗಳೌ" (ಓಷಧಿ. ೦೨೯). [ಸಂ. ಭೂಗುಗ್ಗುಲ]

ಭೂಗುಗ್ಗಳು (ನಾ). =ಭೂಗುಗ್ಗಳ : "ಅಸುರಸಂಭವಾ-ಭೂಗುಗ್ಗಳು" (ಓಷಧಿ. ೯). [ಸಂ. ಭೂಗುಗ್ಗುಲು]

ಭೂಗುಣ (ನಾ). ನೆಲದ ಸತ್ತ್ವ.—ಗುಣ: ಪೂರ್ವಕಡೆಯಲ್ಲಿರುವ ಬೆಂಗಳೂರು . . . ಇದರ ಭೂಗುಣವು ಇಂಡಿಯಾದಲ್ಲಿ ಅತ್ಯಂತ ಉತ್ತಮವಾದದ್ದು (ಕೂಗುಚಿ. ೮೯). [ಸಂ.]

ಭೂಗೃಹ (ನಾ). ನೆಲದೊಳಗೆ ಕಟ್ಟಿರುವ ಮನೆ ; ನೆಲಮನೆ : ನೆಲ ಮಾಳಿಗೆ : ಭೂಗೃಹದೊಳ್ ಮಾಡಿನಟ್ಟು ಮೇಣ್ ಸುದತಿರ್ಯಾಳ ರೂಪಿನೊಳಂ ಮೆಯ್ಯೊಳ್ ಮೇಣ್ಮಿಂಚಿಸಿ ಪಾಣ್ಯನೊಣಾಮುವಂ (ಕ.ಚಾ. ೯-೨೬). [ಸಂ.]

ಭೂಗೋಚರ (ನಾ). ಭೂಮಿಯ ಮೇಲೆ ವಾಸಮಾಡುವವನು; ಮನುಷ್ಯ : ತಕ್ಕುಗಿಡೆ ಕಿಂಕರಭಾವಂ ನಿನಗೆ ಸುಮನಸಿಸ್ತ್ರು . . . ನಿನ್ನ ಭೂಗೋಚರರೊಳ್ (ಕಂಗಪಪ. ೮೪-೦೦). [ಸಂ.]

ಭೂಗೋಲ, ಭೂಗೋಳ (ನಾ). ೧. ಗೋಲಾಕಾರವಾದ ಭೂಮಿ: ಭೂಮಂಡಲ : ಆವ ದೇವಿ ರವಿಯ ಸುತ್ತ ಭೂಗೋಲವ ತಿರುಗಿಸುತ್ತ ತನ್ನ ರುಂದ್ರಲೀಲೆಯುತ್ತ ಸಾಗುತಿರುವಳೋ (ಅಪೀ. ೮೨ ೦೦). ೨. =ಭೂಗೋಳಶಾಸ್ತ್ರ : ಅರ್ಥಶಾಸ್ತ್ರ . . . ಭೂಗೋಲ, ಗಣಿತ . . . ಅನುಭವಶಾಸ್ತ್ರ, ಇತ್ಯಾದಿ ವಿಷಯಗಳ ಮೇಲಿನ ಮೂಲಭೂತತತ್ತ್ವಗಳನ್ನೊಳಗೊಂಡ ಗ್ರಂಥಗಳನ್ನು ಅರಿಸಿಕೊಳ್ಳಬೇಕು (ಶ್ರಶಾಲಿ. ೯).

ಭೂಗೋಳ: ೧. ಆದಿವರಾಹರೂಪದೊಳ್ ನೀವಂದೆತ್ತಿದ್ದೆ ಗೋಮಿನೀಧವ . . . ಭೂಗೋಳಮುಂ (ಪಗಿ. ೦-೩೭) ; ಭೂಗೋಳದ ಮೇಲ್‌ಭಾಗವು ಭೂಗೋಳಪದಲ್ಲಿ . . . ಎರಡು ಗೋಳಗಳಾಗಿ ವಿಂಗಡಿಸಲ್ಪಟ್ಟಿವೆ (ಕೂಗುಚಿ. ೦೨). ೨. ಭೂಗೋಳಶಾಸ್ತ್ರವ ಪಾಠ.— ಬೋಧೆ : ದೂರನೆಯ ಘಂಟೆ ಸಮಗೆ ಭೂಗೋಳವಿತ್ತು (ಚಾಂಹಾ. ೦೦) . [ಸಂ.]

ಭೂಗೋಳ 'ಭೂಗೋಲ' ನೋ.

ಭೂಗೋಳಶಾಸ್ತ್ರ (ನಾ). " ಭೂಮಿಯ ಮೇಲ್ಮೈ, ಆಕಾರ, ಪ್ರಕೃತಿ ಲಕ್ಷಣಗಳು, ಸ್ವಾಭಾವಿಕ ಮತ್ತು ರಾಜಕೀಯ ವಿಭಾಗಗಳು, ವಾಯುಗುಣ, ಉತ್ಪನ್ನಗಳು, ಜನಸಂಖ್ಯೆ, ಮೊ. ವಿಷಯಗಳನ್ನೊಳಗೊಂಡ ಶಾಸ್ತ್ರ ; ಭೂಗೋಳಶಾಸ್ತ್ರ : ಭೂವಿವರಣೆ" (Geography. ೦೦೬): ಭೂಮಿಯನ್ನು ವಿವರಿಸುವ ಗ್ರಂಥಕ್ಕೆ ಭೂಗೋಳಶಾಸ್ತ್ರವೆಂದು ಹೆಸರು (ಕೂಗುಚಿ. ೦); ಭೂಗೋಳಶಾಸ್ತ್ರದ ಅಭ್ಯಾಸಕ್ಕೆ ತೊಡಗುವ ಮೊದಲು ಭೂಮಿಯ ಆಕಾರದ ವಿಷಯವನ್ನು ವಿಚಿತವಾಗಿ ತಿಳಿದುಕೊಂಡಿರಬೇಕು (ಕೂಗುಚಿ. ೦). [ಸಂ. ಭೂಗೋಲಶಾಸ್ತ್ರ]

ಭೂಚಕ್ರ (ನಾ). ೧. ಚಕ್ರಾಕಾರವಾದ ಭೂಮಿ; ಭೂಮಂಡಲ: ಪೆಂಪಚ್ಚರಿಯಾವ ದೇವಗಣಂ ರಕ್ಷಿಕ್ಕೆ ಭೂಚಕ್ರಮಂ (ಜಗಂ. ೯-೩); ಚಕ್ರಸಹಾಯನಾಕ್ರಮಿಸಿದಂ ಭೂಚಕ್ರಮಂ ಪಾದದಿಂ (ಶ್ರೀಶ್ರೀ ೯-೨೬); ಧರ್ಮಾಜನ ಕೀರ್ತಿ ಭೂಚಕ್ರಮಂ ಮುಸುಕಿದಂತೆ ಬೆಳ್ದಿಂಗಳಿರೆ (ಕೃಭಾ. ೯-೨೬). ೨. ಭೂಮಧ್ಯರೇಖೆ : ಸುಮಭಾಜಕವೃತ್ತ. ೩. ಅರಸುಗಳಿಗೆ. ದೇವರುಗಳಿಗೆ ಉತ್ಸವಕಾಲದಲ್ಲಿ ಎತ್ತಿಹಿಡಿಯುವ ನೀಳವಾದ ದಂಡವನ್ನು ಹೊಂದಿರುವ ಹೆಚ್ಚು ಅಗಲವಾದ ಕೊಡೆ.—ಛತ್ರಿ: ಭೂಚಕ್ರಗಳನ್ನು ಭೂಪತಿಗಳಾದ ಅರಸುಗಳು ಹಿಡಿಸಿಕೊಳ್ಳುವುದರಿಂದ ಐಶ್ವರ್ಯವೆಂಬಾಗಿ ಪುಚ್ಛವನ್ನು ಕೊಡುತ್ತ ಮಹಾಮೋಹನಕರವಾಗಿರುವುದು(ಸಚ್ಛ. ೩೩). ೪. ರಥ. ಸಿಂಹಾಸನಗಳಿಗೆ ಅಳವಡಿಸುವ ಛತ್ರಿ: ನವರತ್ನ ರಚಿಪ ಛಾವಿಗಂದ ಪೊಳೆಯುವ. . . ಭೂಚಕ್ರ ಕೊಡೆಯಿಂದ ಪೊಳೆವ ಕಂಶುಗಳ ಸೋಪಿಗದಿರುತಿರ್ಪ ರಥವು (ಜಾಪಚಂ. ೨೩). ೫. ಪತ್ತಿಸಿದಾಗ ಕಿಡಿಗಳನ್ನು ಕಾರುತ್ತಾ ಚಕ್ರವಂತೆ ವೃತ್ತಾಕಾರವಾಗಿ ನೆಲದ ಮೇಲೆ ಸುತ್ತುವ ಒಂದು ಬಗೆಯ ಪಟಾಕಿ: ಮಕ್ಕಳು ಭೂಚಕ್ರ, ವಿಷ್ಣುಚಕ್ರ, ಮತಾಪು ಮುಂತಾದ ಹಲವಾರು ಬಗೆಯ ಪಟಾಕಿಗಳನ್ನು ಆನಂದದಿಂದ ಸುಟ್ಟರು (ಕ.ಪ). [ಸಂ.]

ಭೂಚಕ್ರಬಳ್ಳಿ (ನಾ). ಒಂದು ಬಗೆಯ ಬಳ್ಳಿ: ಸರಂಜುಳ್ಳಿ, ಅಸುರಾಣಿ ಬಳ್ಳಿ - ಭೂಚಕ್ರಬಳ್ಳಿ (ಪ್ರಕಿನಿ. ೨೪-೧೨೪). [ಭೂಚಕ್ರ + ಬಳ್ಳಿ]

ಭೂಚಕ್ರಿ (ನಾ). ಭೂಮಿಯನ್ನೆಲ್ಲ ಆಳುವವನು : ಚಕ್ರವರ್ತಿ : ನಿಜಾಯುಷ್ಯಾಂತದಿಂದಂ ಪ್ರಜಾಪತಿ ಭೂಚಕ್ರಿಗೆ ಬಂದು ಪುಟ್ಟಿ ಬಲದೇವಂ ವಾಸುದೇವಂ (ಪಾಂಪಪು. ೭-೬೨). [ಸಂ. ಭೂಚಕ್ರಿನ್]

ಭೂಚರ (ನಾ). ೧. ಭೂಮಿಯ ಮೇಲೆ ನೆಡೆಯುವಿಕೆ; ಭೂಸಂಚಾರ : ಆಜಾದಿಯಿಹುದೆಂದು ಲೋಚಗುಂಡಿಗೆವಿಡಿವು ಭೂಚರದಿ ಸತ್ಯ ನವಿಲ ಗರಿ ತಿಡಿಪುವುದು ನೀಚವಲ್ಲೇನು (ಸರಾಕ್ಕ. ೦೦೦೯). 'ಭೂಚರತ್ವ' ಪರಾ. ೨. ಭೂಮಿಯ ಮೇಲೆ ಚಲಿಸುವ ಪ್ರಾಣಿ. ೩. ಮನುಷ್ಯ; ಮಾನವ: ಪುಟ್ಟದಳ್ ಸ್ವಯಂಪ್ರಭೆ ಮಗಳಾಕೆ ಪಾರ್ಶ್ವಚರ ಭೂಚರ ಖೇಚರ ನೇತ್ರ ಪುತ್ರಿಕಾನಿಭೆ (ಪಾಂಪಪು. ೩-೦೭): ಈಗಳಿನ ಪೊತ್ತಪ್ಪದು ಖೇಚರನಿಪಾಚರ ದ್ಯುಚರಸಂಚಾರಮಪ್ಪುದೆ ಭೂಚರ ಗೋಚರಮಲ್ಲೆಂದು ಮಾಚ್ಛಿವರ್ಯದಂ (ಸುಚರಿತ. ೭-೦೮ ೪): ಪುರಾಜನನಾವಿಯಾಗೆ ಜನಪುಂಗವರುಂ. . . ಚಕ್ರಿಗಳು ಮೇಗಳ ಭೂಚರರಲ್ಲವಾರೊ ಖೇಚರರ್ ? (ಕಂಗಪಪು. ೩-೨೪). [ಸಂ.]

ಭೂಚರತ್ವ (ನಾ). ೧. ಭೂಮಿಯ ಮೇಲೆ ಸಂಚರಿಸುವಿಕೆ. ೨. ಭೂಮಿಯಲ್ಲಿ ಸಂಚಾರ ಮಾಡುವ ವಿಷಯದಲ್ಲಿ ವಿಶೇಷ ಪ್ರಾವೀಣ್ಯವನ್ನು ಹೊಂದುವ ಕಲೆ : ಮೂಲಿಕಾಸಿದ್ಧಿ ಭೂಚರತ್ವ ಖೇಚರತ್ವ . . . ಘಟಿಸಿದ್ದಿ ಮಂತ್ರತಂತ್ರ ಸಿದ್ಧಿ ಇವೆಲ್ಲವ ಕಲಿತವೇನೋ (ಪಾಪಪು. ೪೬-೬೦): ಭೂಚರತ್ವದಿ ಪೊರಳ್ದು ಪೊರಳ್ದು ತಿರಳ್ದ ಲಿಂಗೋತ್ಕರವನಿಲ ವೇಗದೊಳೆಡೆವಿಡದೆ ಸಡಿವ ಲಿಂಗಚಯ (ಜಪಪು. ೩೭-೧೩). [ಸಂ.]

ಭೂಚಿಕ್ಕೆಗೆಡ್ಡೆ (ನಾ). ಒಂದು ಬಗೆಯ ವನಸ್ಪತಿ: ಮೂಲವ್ಯಾಧಿಗೆ:—ಭೂಚಿಕ್ಕೆಗಡ್ಡೆ ಪುಡಿಮಾಡಿ ಗುಳಿಯುಸಗೆದು ಬಂದಾಗಿ ಇದಕ್ಕೆ ಕೆಂದವನ್ನು ಮಾಡಿ ಅವರ ಮೇಲೆ ಈ ಪುಡಿಯನ್ನು ಹಾಕಿ ಆ ಹೊಗೆಯನ್ನು ಅಸನಕ್ಕೆ ಹಿಡಿಸಿದರೆ ಮೊಳೆರಗಿ ಹೋಗುವುದು (ಅಕ್ಕ. ೦೬೭). 'ಭೂಮಿಚಕ್ಕಗಡ್ಡೆ' ಹೋ. [ಭೂಚಿಕ್ಕೆ + ಗೆಡ್ಡೆ (<ಗಡ್ಡೆ)]

ಭೂಚ್ಛಾಯ (ಪಾ). ೧. ಕತ್ತಲೆ ; ಇರುಳು : "ಧ್ವಾಂತಂ. ಅಂಧಕಾರಂ . . . ತಮಿಸ್ರಂ. ಭೂಚ್ಛಾಯಂ _ಈ ೭ ಕ್ಲೀಲೆ" (ಪಾಂಪಮು. ೦೮.೦೦೦). ೨. ರಾಹು. [ಸಂ.]

ಭೂಚ್ಛಾಯೆ (ನಾ). ಭೂಮಿಯ ನೆರಳು : ಭೂಚ್ಛಾಯೆಯು ಚಂದ್ರನ ಮೇಲೆ ಬೀಳುವದರಿಂದ ಚಂದ್ರಗ್ರಹಣಗಳುಂಟಾಗುತ್ತವೆ (ಕೂಗೋಳ. ೨). [ಸಂ. ಭೂಚ್ಛಾಯಾ]

ಭೂಜ್ಯೇದಕ (ನಾ)· (ಗಾಡಿ, ರಥ ಮೊದಲಾದ ವಾಹನಗಳು ಮುಂದೆ ಹೋಗಲು ಅನುಕೂಲವಾಗುವಂತೆ) ನೆಲವನ್ನು ಕೆತ್ತುವವನು : ಎತ್ತ ನೋಡಲು ಮದ್ದುಗುಂಡಿನ ಪೇರುಗಳ್ ಎತ್ತ ನೋಡಲು ಭೂಜ್ಯೇದರು (ಜಕ್ಕಣ· ೦೫-೨೨). [ಸಂ.]

ಭೂಜ$_1$ (ನಾ)· ಒಂದು ಬಗೆಯ ಮರ : ಭೂರ್ಜ : ದಂಡ್ಯಂಡಿಯಾ ದಂತ್ಯ ಉತ್ತರ ಇಂಡಿಯಾದಲ್ಲಿ ಜನರು ಭೂಜವೃಂದ ತೊಗಟೆಯ ಮೇಲೆ ಬರೆಯುತ್ತಾರೆ (ಕ್ರಣಾ· ೩, ೨೫೫).

[< ಪ್ರಾ· ಭೂಜ, ಭುಜ್ಯ·/ಸಂ. ಭೂರ್ಜ]

ಭೂಜ$_2$ (ನಾ)· ಭೂಮಿಯಲ್ಲಿ ಹುಟ್ಟುವುದು : ದಂರ : ಗಿಡ : ವೃಕ್ಷ : "ಗಿಡು ಬಳ್ಳಿ ಪುಲನೆಲ್ಲ ಭೂಜಮುಲ್ಕುಂ" (ಪುಂಗಣಾ· ೧೩-೨೮) : ಕಲಿಭಾ ಶೋಕ ಕದಂಬಲುಂಗಲುವರೀಭೂಜಾರ್ಜುನಾನೋಕಪಪ್ಪುರಂ (ಪಂಚಭಾ ೩-೩೨) ; ಬಳ್ಳಿತ್ತ ಮುವನನಿತವನಿ ಮಿಸಂತಜ ಬೀಡುಮೆಳಲತೆಗಳ್ಕಿ ನಾನಾಭೂಜದಾಗರಂ (ಪಚಾ· ೩-೨೬) ; ಇದು ಶೈವಶಾಸ್ತ್ರಭೂಜದ ಫಲ ಮೂಲಂ . . . ಪಡ್ಯರ್ಣಮಂತ್ರಂ (ಚಾಸಚ. ೪ ೪೨). [ಸಂ.]

ಭೂಜಟೆ (ನಾ)· ಒಂದು ಬಗೆಯ ಗಿಡ ; ಗೌರಿಜಟೆ : "ಭೂಜಟೆಯೆಸಲು ಗೌರಿಜಟೆ" (ಪುಂಗಣಾ· ೪೦-೩೩). [ಸಂ. ಭೂಜಟಾ]

ಭೂಜಾಂಗವೃತ್ತಿ (ನಾ)· ಪ್ರವಾಹಕ್ಕೆ ಸಿಕ್ಕಿದ ನದಿಯ ದಡದ ಮರವಂತೆ ವರ್ತಿಸುವುದು : ℙ ನದಿಯ ದಡದಲ್ಲಿ ಬೆಳೆದಿರುವ ದೊಡ್ಡ ಮರವು ಪೂರ್ಣಪ್ರವಾಹ ಬಂದಾಗಲೂ ಯಾವ ರಕ್ಷಣೆಯನ್ನೂ ಮಾಡಿಕೊಳ್ಳದೆ ನಿತ ಹಾಗೆಯೆ ನಿಂತಿರುತ್ತದೆ. ಆಗ ಜೋರಾಗಿ ಬೀಸಲಾಗಿ ನದಿಯ ವೇಗವಲ್ಲಿ ಕೊಚ್ಚಿಹೋಗುತ್ತದೆ. ಹಾಗೆಯೇ ಪ್ರಬಲವಾದ ಶತ್ರು ಮೇಲೇರಿಬಂದಾಗ ಸಮಯೋಚಿತವಾಗಿ ವರ್ತಿಸದೆ ಇದ್ದಂತೆಯೆ ಅವನನ್ನು ಪ್ರತಿಭಟಿಸುವ ರಾಜನು ಸೋತು ಹೋಗುತ್ತಾನೆ. ಇಂತಹ ವರ್ತನೆಗೆ ಭೂಜಾಂಗವೃತ್ತಿಯೆಂದು ಹೇಳಲಾಗುತ್ತದೆ : ಭೂಜಾಂಗವೃತ್ತಿಯಂ ವಿಸುಟಾ ಜಗದಧಿಪಂಗೆ ವೈತಸಾವಳಿ ಪರಿವಂತಾ ಜಳಕಲ್ಲಿಗುಪ್ಪೋಲ್ ಸಮಭೂಜನ ನೆಲ್ಲಿದರಜ್ಜಿಪನೆನಿಸಿಪ ಸುಮ್ಮರ್ (ಜಾಂತಪು· ೦೦-೦೫೯). [ಸಂ.]

ಭೂಜಾತ (ನಾ)· = ಭೂಜ$_2$: ಪಲ್ಲವಿತ ಕುಸುಮಿತ ಮುಕುಲಿತ ಫಲಿತ ವಿಂಜಿರೀರಜಿತ ಜೂತ ಭೂಜಾತಂಗಳಂ . . . ಅಲ್ಲಲ್ಲಿಗೆ ನಿಂದು ಮೆಲ್ಲ ದೆಲ್ಲನೆ ನೋಡುತ್ತಂ (ಪಾಂಡವ· ೯-೦೦೬ ೩) ; ಕದ್ದನಂ ಪಣ್ಣಿಂದ ಪೊಗಳಿಂ ತಳ್ಳ ಭೂಜಾತನಿಕರಂಬಸಡ್ಡಾಯದಿಂದಂ ತ್ಯಾಗಿರನಂತೆ ಸೌಮ್ಯದನೀಬುಲ್ (ಪಾಚಾ· ೮೨-೩). [ಸಂ.]

ಭೂಜಾತೆ (ನಾ)· ಭೂಮಿಯಲ್ಲಿ ಹುಟ್ಟಿದವಳು : ಭೂಮಿಯ ಮಗಳು ; ಸೀತೆ : "ಏರುಸ್ಸಾತೆ ! ಭೂಜಾತೆ ! ರಾಕ್ಷಸಸ್ತ್ರೀಯುತೆ ! ಅಲುಂಕೃತೆ!" ಎನುತ್ತೆನುತೆ . . . ಕೋಮಲೆಯು ಹೃದಯವಂ ಜಗಂದ್ರ ಗೆಯ್ಯೆ ಪರಮೋಪಣನಿಸೂದನಂ (ಕ್ರಣಾಪಚ. ೯೮೨-೯೩೦).

[ಸಂ. ಭೂಜಾತಾ]

ಭೂಜಾನಿ (ನಾ)· ಭೂಪತಿ; ರಾಜ : ಆ ನಿರಿಂಭೋದ್ಭೂತ ಪರಮಾನ್ನ ವನ್ನು ಭೂಜಾನಿ ಕೊತಲತಿಮುದದಿ ಪ್ರಾತನಂಗೈದರಾ ಮಾನಿನಿಯರು (ಪಂಕಾಡಾ· ೦-೯-೩೯) ; ಮತ್ಪಮನಿತಜ್ಞಿಂಗಳ್ ಸುಗ್ರೀವಾದಿ ಮರ್ಕಟರುಂ ಸುಗುಣಭೂಜಾನಿಯುಂ ಬಂದೊದವಿದರ್ (ರಾಚಪ್ರ· ೦೩೩-೦೦).

[ಸಂ. (ಭೂ + ಜಾಯಾ +—)]

ಭೂತ (ಗಬ)· ೧. ಆದ; ಆರುವ. ೨. ಉಂಟಾದ. ೩. ನಷ್ಟವಿರುವ; ಸಂಭವಿಸಿರುವ. ೪. ಸರಿಯಾದ; ಉಚಿತವಾದ; ಯೋಗ್ಯವಾದ. ೫. ಕಳೆದ; ಅತೀತವಾದ : 'ಭೂತಕಾಲ' ಪರಾ. ೬. ಸೇರಿಕೊಂಡಿರುವ; ಕೂಡಿರುವ. ೭. ಸಮಾನವಾದ; ಸದೃಶವಾದ· (ನಾ)· ೮. ನಿಜ; ಸತ್ಯ. ೯. ಕಳೆದುಹೋದುದು : ಒಂದೆ ಆದುದು: ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಗೋಚರವಾದ ವಸ್ತುಗಳು ಪ್ರಮಾಣವ್ಯಾಪಾರ ಕ್ಕಿಂತ ಮೊದಲೇ ಇರುವುದರಿಂದ ಅವು ಭೂತವೆನಿಸುವುವು (ಪ್ರಸ್ತಾ. ೩೨ ೩೩). ೧೦. ಪಡೆದುದು : "ಲಬ್ಧಂ. ಪ್ರಾಪ್ತಂ. ವಿನ್ನಂ. ಭಾವಿತಂ. ಆಸಾದಿತಂ. ಭೂತಂ—ಇ ಮೊದಲ್ಪಟ್ಟವೆಲ್ಲಮುಂ. ಪಡೆದುಲ್ಪಟ್ಟವೆರುವುದು. ಆಗಿ ಬಂದಿರುವುದು" (ಶಬ್ದಾ· ೦೬. ೪೩೦). ೧೧. ಶಿವ : ಪರಮೇಶ್ವರ. ೧೨. ಶಿವಗಣ ; ಪ್ರಮಥಗಣ. ೧೩. ಜಗತ್ತಿನ ಪ್ರಾಣಿ ವರ್ಗ : ಚರಾಚರಾತ್ಮಕ ಜೀವರಾಶಿ : ಸಲಭೂತಂಗಳಲಿ ನೆಜಿ ಕೃಪೆಯು ಸವಸಲು ನೀನಾರು (ಪಂಚಾಸ, ೦೦-೬೩-೦೦) ; ಸಕಲಭೂತಂಗಳ ಪುಣ್ಯಸ್ಸನ್ನು ಪೆರದು . . . ಮತ್ತೊಬ್ಬ ಮನುಷ್ಯನ ಉಪಾಯವನ್ನು ತೀರದಜನೂ ಪಂಡಿತನೆನಿಸಿಕೊಳ್ಳುವನು (ಕ್ರಣಾ· ೧೩); ಚರಾಚರಭೂತ ಗಳಲ್ಲಿ ಕದಾಮರುವ ಜನನಮರಣಗಳ ವ್ಯವಹಾರ ಆತ್ಮನ ವಿಚಾರವಲ್ಲಿ ಬಾಯ್ಬಿಚ್ಚಲ್ಲ : ಗೌಣ (ಜಿಣಾಕ್ಷ· ೦೬೮). ೧೪. (ಕಣ್ಣಿಗೆ ಗೋಚರವಾಗದೆ ಮನುಷ್ಯರನ್ನು ಕಾಡಿಸುವ) ದೆವ್ವ : ಪಿಶಾಚಿ : ಲೋಕದವರನೋದು ಭೂತ ಹಿಡಿದಿತ್ತೆ ಆ ಭೂತದಿಚ್ಛೆಯಲ್ಲಿ ನುಡಿಪುತಿವ್ವರು (ಆಪಾಚ. ೦೦೬-೪೪೪) ; ಭೂತಪತಿಯೊಗವುದುಂ ತನ್ನಾತ ವಲಂ ಮಡಿದಳ್ಳುಮಲ್ಲದೊಡಾತಂ ಪ್ರೇತವಾಸದೊಳಾಡುಪ ಭೂತಂಗಳ ಕೂಡೆ ವಿಪರಣಂಗೆಯ್ಯಾಪನೆ (ಕ್ಷತ್ರ. ೯-೦೦೨) ; ಶಂಕ್ರಿಯವರು ಕೂಡ ಹೇಳುತ್ತಾರೆ. . . ನಾನೇ ನಾಲ್ಕು ಭೂತ ಗಳನ್ನು ಬಂಧಿಸಿ ಆ ಜಾಗಕ್ಕೆ ಕಳುಹಿಸಿದ್ದೇನೆ ಎಂದು (ಪಲ್ಲ· ೫೭) ; ಪ್ರೇತಕ್ಕೆ ಪೆರರುವ ಭೂತಕ್ಕೆ ಪೆರರೇ ? (ಗಾದೆ). ೧೫. ನಿಜವಾಗಿಯೂ ನಡೆದುದು: ವಸ್ತುಸ್ಥಿತಿ; ವಿಷಯ. ೧೬. ಜಗತ್ತು: ಪ್ರಂಪಂಚ; ಲೋಕ. ೧೭. ಕಲ್ಯಾಣ : ಕ್ಷೇಮ. ೧೮. ದೇವತೆಗಳಲ್ಲಿ ಒಂದು ವರ್ಗ : "ಯಕ್ಷಃ, ರಾಕ್ಷಸಃ. . . ಭೂತಃ, ಪೈಶಾಚಃ. . . ದೇವ ಯೋನಿಃ—ಇಂತಿವೆಲ್ಲಂ ದೇವಜಾತಿವೆಂಬುದು" (ತಂಡಾಯು· ೦೩-೦೩). ೧೯. ಕೈವಿನಲಿ ಹೋದುದು : "ವಿಜಿಲೆದಾದಜಿಳಲು ದೇವಯೋನಿ ದೊಳು ಜಾತಿ(ಜೊಳು) ಭೂತದೊಳು ಭೂತಮಕ್ಕುಂ" (ಪುಗಣಾ. ೦೫೫-೩೦). ೨೦. ಸಮಗ್ರಪಗಳು. ೨೧. ಅರ್ಯರ್: ಪೂಜ್ಯ : "ಗ್ರಪ ಸೀರ ಮ ರು ಳ್ ಪಂಚಭೂತಾತ್ಮಮುಂ ಮಿರಿಮದುಂ ಜಾತಾ ಸದೂಹಾದ್ಯರು ಜನಿತಮಿವುಂ ಭೂತಶಬ್ದಂ ಪ್ರಸಿದ್ಧಂ" (ಜಾಚಾ ೭೯). ೨೨. ಪ್ರಪಂಚದ ಸೃಷ್ಟಿಗೆ ಮೂಲವೆನಿಸಿದ ಪೃಥ್ವಿ, ಆಪ್ಪು, ತೇಜಸ್ಸು, ವಾಯು ಮತ್ತು ಆಕಾಶ ಎಂಬ ಐದು ಪದಾರ್ಥಗಳು : ಭೂತ ದೈದಜಿಂದ ಸ್ಥೂಲತನು (ಅಪಾಚ· ೯· ೨೯೨ ೦೫೩); ಭಾವಿಸಲು ಭೂಮ್ಯಾದಿ ಭೂತಜನ್ಯತೆಯೆನಿಸುವುದು (ಗಣಾ· ೬-೩೩); ಸಾಲ್ಕು ಭೂತಗಳ ಜೊತೆಗೆ ಐದನೆಯ ಭೂತವಾದ ಆಕಾಶವಿದೆಯೆಂತಲೂ ಇವರ ವಾದ(ಪ್ರಪಾಚ·೩-೩೦). ೨೩. (ಆಲಂ) ದೊಡ್ಡದು ; ಗಾತ್ರವಾವುದು : 'ಭೂತಗನ್ನಡಿ'. 'ಭೂತಾಕಾರ' ಪರಾ. ೨೪. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ಕಾದಿರಲ್ಕತಿ ಭೂತದೊಳರ್ದಂದೋದೆ ಲಲ್ಲಮೆಲೇ ಮಾಸರುಂಗಂ (ರಂಪಚಂಪೂ. ೩-೦೦೨) ; ಪುರಪರ ವಕ್ತ್ರಂ ಪಂಚಂ ಪರಮ ಪ್ರತಭೂತ ಮಿಂದ್ರಿಯಂ. . .ವದಜ ನಾಮಂ (ಕ್ರಪಚಾ· ೯-೩) ೨೫.=ಭೂತಕಾಲ ೨ : ದವಪಚಾರಂಗಳ್ ಮೂಲದೊಳಕ್ಕುಂ ಭೂತ ವರ್ತಮಾನ ಭವಿಷ್ಯದ್ವಿದಿತವಿಳಿಕ್ರಿತವಾಕ್ಯದೆಲ್ಲ ಪಚನಂಗಳೊಳಮಿಪಾಗವಂಮಕ್ಕುಂ (ಕಾಮ್ಯಕ, ೪೫೩) ;ರೇಫಾಂತಗೆರವ್ಪನೇಕಾಕ್ಷರಧಾತುಗಳ್ಗೆ ಭೂತ ವರ್ತಮಾನ ಭವಿಷ್ಯಂತಿಗಾನ ವ, ದಪ, ವ ಎಂಬಿವು ಪರವಾಗೊಡು(ಕವಾಪ್ರ· ೪. ೩೨ ಕೃ.ಪ್ರ.).

ಭೂತ ಬಡಿ = ಪಿಶಾಚಿ ಮೆಟ್ಟಿಕೊಳ್ಳು : ವಿನೋ ಭೂತ ಬಡಿದವರಂತೆ ವಿದಾಸ್ಯಳಾಗಿದ್ದವಳು . . . ಬೆಳಗಾಮಿಗೆ ಬಂದು ಅಲ್ಲಿಯು ವಾತಾಪಿ—ಇ. ಘರ್ಜಯೇದ್ಯಸಂತಾದಗಳು (ಕವಾಪ್ರ· ೧೨). ಭೂತ ಹಿಡಿ :

ಭೂತ ಬಿಡಿ : ನನಗೆ ಭೂತ ಬಿಡಿದಿದೆ . . . ಎಂದು ಅವನು ಹೆದರಿದ ಹಾಗೆ ಕಾಣುತ್ತದೆ (ಪುಣಕ್ಕ. ೭೫).

ಭೂತಕರುಳು (ನಾ). ಒಂದು ಬಗೆಯ ಗಿಡ : ಎಡಮುರಿ, ಮುರುಗಿ ಕಾಯಿ, ಭೂತಕರುಳು, ಕಾಮಲ್ಲಾರು, ಕೌರಿ, ಕಪರ್ಗಿ (ಕ್ಯಾಶಿ. ೪೨-೫೩). [?]

ಭೂತಕಾಲ (ನಾ). ೧. ಕಳೆದುಹೋದ ಕಾಲ : ಭವಿಷ್ಯ ಹಾಗಾದರೂ ಭೂತಕಾಲ ಹಾಗಲ್ಲವಲ್ಲ. ನಮ್ಮ ಅನುಭವದಿಂದ ಕೇಳಿದ್ದನ್ನು ಅದು ನಡೆದಿದೆ ಅಥವಾ ಇಲ್ಲ — ಎಂಬುದನ್ನು ಸ್ಪಷ್ಟವಾಗಿ ತಿರ್ಮಾನಿಸುವುದು (ಪುಣಕ್ಕ. ೧೩೦) : ಭೂತಕಾಲದಲ್ಲಿ ಅನೇಕ ವಿಷಯಗಳು ನಮ್ಮ ಗಮನಕ್ಕೆ ಬಂದಿದೆ (ಶಕ್ಷಪ. ೩೨೩). ೨. [ವ್ಯಾಕ] ವರ್ತಮಾನಕಾಲ, ಭೂತ ಕಾಲ, ಭವಿಷ್ಯತ್ಕಾಲಗಳೆಂಬ ಮೂರು ಕಾಲಗಳಲ್ಲಿ ಒಂದು : ಹಿಂದೆ ನಡೆದುದನ್ನು ಸೂಚಿಸುವ ಕಾಲ : ಕೊಳ್, ಉಣ್, ಕಾಣ್- ಧಾತುಗಳಲ್ಲಿ ಭೂತಕಾಲದಲ್ಲಿ ಡ ಪ್ರತ್ಯಯವು ಸೇರುವುದು (ಕ್ರಿಪ್ರ. ೫೩) ; ಕಳೆದುಹೋದ ಕಾಲಕ್ಕೆ ಭೂತಕಾಲವೆಂದೂ ಈ ಕ್ರಿಯಾಪದರೂಪಕ್ಕೆ ಭೂತಕಾಲದ ರೂಪವೆಂದೂ ಹೆಸರು (ಪುಗ್ಯಾಹು. ೭೨). [ಸಂ.]

ಭೂತಕಾಲಕ್ರಿಯೆ (ನಾ). [ವ್ಯಾಕ] ಭೂತಕಾಲದ ಅರ್ಥವನ್ನು ತಿಳಿಸುವ ಕ್ರಿಯಾಪದ: ಭೂತಕಾಲಕ್ರಿಯೆಯೊಳ್ ಪ್ರತಿಷೇಧವಮುರ್ವ ಅದೆ ಎಂಬುವು ಪರಮಾದೊಡಂ ವ ಣ ಲ ದು ಈಗಳ್ಗೆ ದ್ವಿತ್ವವ್ಯತ್ಯಿನಿತ್ಯಂ (ಶಬ್ದ. ೭೦ ಪೃ೬). [ಸಂ. ಭೂತಕಾಲಕ್ರಿಯಾ]

ಭೂತಕೇಶ (ನಾ). ಒಂದು ಬಗೆಯ ಹುಲ್ಲು : "ಗೋಬೋಮಿ. ಭೂತ ಕೇಶಃ — ೨ ಜಟಾಮಾಂಸಿಯ ಪರ್ಯಾಯಗಳು. ಭೂತಕೇಶವೆಂಬ ಹುಲ್ಲಿಗೆ ಪೆಸರೆಂದು ಕೆಲವರನ್ನುವರು" (ಶಿಷ್ಟಾಶ. ೩೦೬). [ಸಂ.]

ಭೂತಕೇಶಿ (ನಾ). ಒಂದು ಬಗೆಯ ಗಿಡ : "ಭೂತಕೇಶೀ = ಬೀಯಲೊಕ್ಕೆ" (ಶಿಷ್ಟಾ. ೧೦೨). [?./ಸಂ. ಭೂತಕೇಶೀ = ತುಳಸೀಗಿಡ]

ಭೂತಕೋಲ (ನಾ). (ಕರಾ) ಭೂತದ ವೇಷವನ್ನು ಹಾಕಿಕೊಂಡು ಕುಣಿಯುವ ಒಂದು ಹಬ್ಬ : ಭೂತಕೋಲ ಮೊದಲಾದ ವರ್ಷಾವಧಿ ನಡೆಯತ್ಕ್ಕ ಕ್ರಿಯೆಗಳಿಗೆ ವಂತಿಗೆ ಸಂತಿಗೆ ಮೊದಲಾದುವು ಸಲ್ಲಬೇಕು (ಕಾರುಣ. ೪೪) ; ಹರಿಜನರ ವರ್ಗವಾದ 'ಪಳಿ' ಜಾತಿಯವರು ಈ ಭೂತ ಕೋಲವನ್ನು ಕಟ್ಟುತ್ತಾರೆ (ಕಷ. ೧೧೦). [ಭೂತ + ಕೋಲ್]

ಭೂತಗಣ (ನಾ). ೧. ದೆವ್ವಗಳ ಗುಂಪು ; ಪಿಶಾಚಿಗಳ ಸಮೂಹ : ಎಲವೋ ನಿನ್ನಸ್ಥಾನಸಹಿತೀ ಹೊಲ ನಾಡುವೆನು ನಿನ್ನ ಸೀಳಿದು ಬಲಿಯ ಕೊಡುವೆನು ಭೂತಗಣಕೆ (ಶಾಬ್ಯಾ. ೬-೩೩). ೨. ಪರಮೇಶ್ವರನ ಪರಿವಾರದೇವತೆಗಳ ಗುಂಪು ; ಪ್ರಮಥಗಣ : ಭೂತಗಣಂಗಳಿರ್ಪರ್ ಪರಿಭೂತರ್ ಪ್ರಮಥೇಂದ್ರರಿರ್ಪರಿನ್ನಂ ಕೇಳ್ ವಿಖ್ಯಾತರ್ ನಂದೀಶಾದಿಗಳ್ (ಪಾಣಕ್ಕ. ೦-೬-೫೬). [ಸಂ.]

ಭೂತಗಣೇತ (ನಾ). ೧. ಪ್ರಮಥಗಣಗಳಿಗೆ ಒಡೆಯ : ಶಿವ. ೨. [ಛಂದ] ಗುರು ಎಂಬುದರ ಸಂಕೇತ : ಭೂತಗಣೇಶಂ ಭೂತರಾಜಾಗಮಮೊಳ್ ಅಂತಿಗಣಮೆನಿರೆ . . . ಕ್ರಿಯಾಚಮಂ (ಕರ್ಣಾಟಕಾ. ೦-೦೫೨). [ಸಂ.]

ಭೂತಗನ್ನಡಿ (ನಾ). ವಸ್ತುಗಳನ್ನು ಇರುವುದಕ್ಕಿಂತ ದೊಡ್ಡದು ಮಾಡಿ ತೋರಿಸುವ ಕನ್ನಡಿ ; ರಾವುಗನ್ನಡಿ : ಆಗ ಭೂತ ಗನ್ನಡಿಯೊಳಗಿನಂದ ಹಾದು ಬರುವ ಬೆಳಕಿನ ಕಿರಣವಂತೆ, ನಿನ್ನ ಬಯಕೆಯೂ ಪ್ರಭಾವಶಾಲಿಯಾಗುತ್ತದೆ (ಹೂಗೀ. ೬೬) ; ಸಾಧನವು ತನೆಯಲ್ಲಿರುವ ಭೂತಗನ್ನಡಿಯಲ್ಲಿ ಒಂದು ಕಣ್ಣಿಗೆ ಇಟ್ಟುಕೊಂಡು, ರತ್ನ ಪರೀಕ್ಷೆಯನ್ನು ನಿಧಾನವಾಗಿ ಹಿರಕಣ್ಣಿಂದ ಮಾಡುತ್ತಾ ನಿದ್ದನು (ಕಾವ್ಯ. ೨೯). [ಭೂತ + ಕನ್ನಡಿ]

ಭೂತಚತುಷ್ಟಯ (ನಾ). ಪೃಥ್ವಿ, ಅಪ್ಪ, ತೇಜಸ್ಸು, ವಾಯು ಎಂಬ ನಾಲ್ಕು ಬಗೆಯ ಮೂಲವಸ್ತುಗಳು : ಈ ನಿಮ್ಮ ಜೀವಮತದ ಜೀವ ಸಂಧಾನವೆಯೊಳ್ ಪೃಥಿವ್ಯಪ್ತೇಜೋವಾತಾಭಿಧಾನ ಭೂತಚತುಷ್ಟಯದಿಂದಂ ಬೇಱೆ ಜೀವತ್ಪದಾರ್ಥಾಭಿಧಾನಮಿಲ್ಲಂ (ಪಾಂಚಾ. ೬-೦೨೪ ಪ) ; ಭೂತಚತುಷ್ಟಯಯೋಗದೆ ಜೀವನನುದಯಿಸುಗುಂ (ಕರ್ಣಾ. ೫-೦೨೦). [ಸಂ.]

ಭೂತಚಿಕಿತ್ಸೆ (ನಾ). ದೆವ್ವ, ಪಿಶಾಚಿಗಳು ಹಿಡಿದಿರಬಹುದೆಂದು ನಂಬಿ ಮಾಡುವ ಚಿಕಿತ್ಸೆ : ಯಂತ್ರ ಮಂತ್ರಗಳನ್ನು ಮಾಡುವುದು: ಇಂಡಿಯಾ ದೇಶದಲ್ಲಿ ವಿಷಧಿಚಿಕಿತ್ಸೆ ಎಂತು ವಿಧ : ಒಂದನೆಯದು ಹುಣ್ಣುಗಳ ಚಿಕಿತ್ಸೆ . . . ಪಾಲ್ಕನೆಯದು ಭೂತಚಿಕಿತ್ಸೆ (ಕ್ರಪಾಶ. ೨, ೨೬೭).

[ಸಂ. ಭೂತಚಿಕಿತ್ಸಾ]

ಭೂತಬೇಷ್ಟೆ (ನಾ). ಪಿಶಾಚಿಗಳಿಂದಾಗುವ ತೊಂದರೆ. — ಕಾಟ : ಈ ಭೂತಬೇಷ್ಟೆ ನಿಜವಾಗಿಯೂ ಹಾಸ್ಯಮಯವಾಗಿತ್ತು (ಹಪಾಚ. ೯೮).

[ಸಂ. ಭೂತಬೇಷ್ಟಾ]

ಭೂತದಯೆ (ನಾ). ಪ್ರಾಣಿಗಳ ಬಗೆಗೆ ಇರುವ ಕರುಣೆ. — ದಯೆ : ಸರ್ವಜೀವದಯಾಪ್ರಭಾವಿಯೆಂದು ಭೂತದಯಕ್ಕೆಯ್ವನ ಮನೆ ಸಯಿಧಾನದ ಕೇಡು (ಶಾಚ. ೨೫೩) ; ಯಾವ ಕಾರಣದಿಂದಲಾಗಲೀ ಪ್ರಾಣಿಗೆ ಹಿಂಸೆಯು ಪ್ರಾಪ್ತವಾದರೆ ದುಃಖಾಶಕ್ತನಾಗಿ ಅವರ ದುಃಖವನ್ನು ನಿವಾರಿಸಬೇಕೆಂದು ಹೃದಯದಲ್ಲಾಗುವ ಪ್ರೇರಣೆಯು ಭೂತದಯವು (ಅಷಾಗ. ೬೨).

[ಸಂ. ಭೂತದಯಾ]

ಭೂತದಯೆ (ನಾ). = ಭೂತದಯ : ಹರುಷದಿಂ ಶಾಂತಿ ಸತ್ಯಂ ಭೂತ ದಯೆಗಳಂ ದೊರಕುಯ್ಯೆ . . . ಮುನೀಶ್ವರರೆನಿಸಿ (ಆಪಾ. ೯-೦೬) ; ಭೂತ ದಯೆಯಿಲ್ಲದನ ಮಾತುಂ ಶಾಂತಿಯಿಲ್ಲದ ತಾಪಸನ ತಪವು . . . ಭಕ್ತಿ ಪ್ರವರ್ಧಸಮಹುದೆ (ಶಸ್ತಿ. ೩೭-೩೪) ; ದುರಭಿಮಾನವಿಲ್ಲದಲ್ಲಿಯೇ ವಿದಾರ್ಯ ನೆಲಸುತ್ತದೆ- ಅಲ್ಲಿಯೇ ಭೂತದಯೆ ಇದೆ (ಕಾಗಾಕ. ೪೦).

[ಸಂ. ಭೂತದಯಾ]

ಭೂತದೇಹ (ನಾ). ಪಂಚಭೂತಾತ್ಮಕವಾದ ಶರೀರವೆಳ್ಕವನು ; ಮನುಷ್ಯ : ಭೂಮಿಯ ಮೇಲೆ ಹುಟ್ಟಿದ ಕಲ್ಲು ತಂದು ಭೂತದೇಹಿಗಳ ಕೈಯಲ್ಲಿ ಕೊಟ್ಟು ಕೊಟ್ಟ ಕೂಲಿಯು ತೆಕ್ಕೊಂಡು ಹೊಟ್ಟೆಯ ಹೊರೆವ ಪ್ರಶ್ನೆಗೆ ಪ್ರಸಾವನ್ನಲ್ಲಿಯದೋ (ನಿಕ್ಷಪ. ೦೬೯-೧೦೬).[ಸಂ. ಭೂತದೇಹಿನ್]

ಭೂತಧಾತ್ರಿ (ನಾ). ಭೂಮಿ ; ಧರಣಿ : " ಭೂ, ಭೂಮಿಃ . . . ಭೂತಧಾತ್ರೀ, ರತ್ನಗರ್ಭಾ, ಪೃಥುಂಧರಾ, ಧರಾ, ಅಧರಾ—ಈ ೩೭ ಭೂಮಿಯ ಪೆಸರ್" (ಅಕಾಯು. ೨೬-೨) ; ಭೂ[ತ್ರ]ಧಾತ್ರಿಯೊಳೋರಂತ ಪೆಗಟ್ಟಿ . . . ಸಟ್ಟಿಯ ಬಳ್ಕಂ ಕಿಱಿದೆಂಬುದೊಂದು ಪಥಿಯಂ ನೀಂ ಪಿಕ್ಕುವಂ ಮಾಡಿದ್ಯೆ (ಸಂಕಜ. ೦೪-೦೩೨); ದಾಡೆಯಲಿ ದಾನವನ ಕೋದು ಪಾರೇ ಭೂತಧಾತ್ರಿಯು ಕಾದಿರಾ ಕಾರುಣ್ಯಸಿಂಧುವೆ (ಕಾಶ್ಯಾ. ೦೪-೦೦೩).

[ಸಂ. ಭೂತಧಾತ್ರೀ]

ಭೂತನಾಥ (ನಾ). ಪ್ರಮಥಗಣಗಳ ಅಧಿಪತಿ; ಶಿವ : ಕರ್ಣಾರ್ಜುನರೀಱುಂ ನೋಡಲ್ಕೆ ಭೂತನಾಥಂ ಬಂದಂ (ಸಂಪಾ. ೦೪-೦೪೯)) ; ವಾತಜನ ಮೂರಿಗೆ ಕಪಿಬಲ ಜೀರಿಸಿದುದು ಬೇಡ ತತ್ಪರೆ ಭೂತನಾಥನ ತತಿವನೆಂದನು ದನುಜ ರಘುಪತಿಗೆ (ಕೌಶಾ. ೩೬-೨೦). [ಸಂ.]

ಭೂತನುಜೆ (ನಾ). ಭೂಮಿಯಲ್ಲಿ ಜನಿಸಿದವಳು ; ಸೀತೆ : ಪೂರ್ಣಗರ್ಭಿಣಿಯಾವ ಭೂತನುಜೆಯುಂ ತಾನನಿಲ್ಲೊರಿಸಿ ಬಂದೆನಲ್ಲದ ಮುಂದಲ್ಯೆಯನೆಂದನು (ಕೃಬಾ. ೫೦-೩೫). [ಸಂ. ಭೂತನುಜಾ]

ಭೂತಸ್ಕೂನ (ನಾ). [ವ್ಯಾಕ] ಒಂದು ಪ್ರಧಾನಕ್ರಿಯೆ ನಡೆಯುವುದಕ್ಕೆ ಮೊದಲು ನಡೆದಿರುವ ಮತ್ತೊಂದು ಕ್ರಿಯೆಯನ್ನು ತಿಳಿಸುವ ಅಪೂರ್ಣಕ್ರಿಯಾರೂಪ ; ಸಾಪೇಕ್ಷ ಕ್ರಿಯಾವಾಚಕರೂಪ : ಅತ್ತು

ಅತ್ತು ಅವಳ ಕಣ್ಣು ಕೆಂಪಗಾಯಿತು . . . ಹೀಗೆ ಅರ್ಥಪೂರ್ತಿಗಾಗಿ ಬಂದಿರುವ ಕ್ರಿಯಾಪದದ ಕಾರ್ಯ ನಡೆಯುವುದಕ್ಕೆ ಮುಂಚೆ ಸಾಪೇಕ್ಷ ಕ್ರಿಯಾಪದದ ಕಾರ್ಯ ನಡೆದಿರುತ್ತದೆಂಬುದನ್ನು ತೋರಿಸುವ ರೂಪಗಳಿಗೆ ಭೂತಸ್ಯೂಸರೂಪಗಳೆಂದು ಹೆಸರು (ಪುಣ್ಯಪು. ೦೦೨).

ಭೂತಪಂಚಕ (ನಾ). ಪೃಥ್ವಿ, ಆಪ್ಪು, ತೇಜಸ್ಸು, ವಾಯು, ಆಕಾಶ ವೆಂಬ ಐದು ಪದಾರ್ಥಗಳು ; ಪಂಚಮಹಾಭೂತಗಳು : ಧರಣಿ ಮೊದಲಪೆ ಭೂತಪಂಚಕ ಮರುತಪಂಚಕ ವಿಷಯವಿಂದ್ರಿಯ ಕರಣ ವಿಪ್ಪತ್ತೈದು ತತ್ತಾತ್ಮಕನ ತಿರಿಸಿದ (ಭುಜ್ಞಾ. ೩-೦) ; ಭೂತಪಂಚ ಬುದ್ಧ್ಯಹಂಕೃತಿ ಸಾತಿಶಯಪ್ರಧಕ್ಕ ದಶವಿಧ ಹಾತವಾದೀಂದ್ರಿಯನಿಚರ ಪ್ರಾಣಾದಿವಾಯುಗಳು (ಅಮೃತ. ೩-೬೩) ; ಇವನ್ನು ಭೂತಪಂಚಕ, ತನ್ಮಾತ್ರಪಂಚಕ . . . ಎಂದು ಏನು ಪಂಚವಾಗಿ ವಿಭಜಿಸುವರು (ಹಿಂದಾ. ೫೩).

ಭೂತಪತಿ (ನಾ). = ಭೂತನಾಥ : ಭೂತಪತಿಗಾನಾದಮಂ ಬಿಡಮಾತೆ ಯಾಗಿ ಸಮುದ್ಧರಿಸುವೆನು (ಬಸ್ತ. ೦೩-೭). [ಸಂ.]

ಭೂತಪದಿ (ನಾ). ಹದಿನಾರು ಬಗೆಯ ರೂಪಾಯಿ ವಾಣ್ಯಗಳಲ್ಲಿ ಒಂದು : ೧. ಗಜಪತಿ . . . ೧೦. ಭೂತಪದಿ (ಕಣಗ. ೨೪೦).

[?]

ಭೂತಪುಣ್ಯ (ನಾ). ಹಿಂದೆ ಮಾಡಿದ ಸತ್ಕರ್ಮಗಳ ಫಲ ; ಸಂಚಿತ ಪುಣ್ಯ : ಇತ್ತ ಶ್ರೀವೇಣುಗೋಪಾಲಮೂ ಪೂರ್ವಪುಣ್ಯಂಗಳೋತ್ಪಮೆಯುರ್ಗ ಮುತ್ತಮಪಾತ್ರದಾನದ ದಾನಾನುಮೋದದ ಭೂತಪುಣ್ಯದಿಂ (ಜಾಂಭ. ೬-೧೭ ೬).

ಭೂತಪೂಜೆ (ನಾ). ೧. (ಕರಾವಳಿಯಲ್ಲಿ ಆಚರಣೆಯಲ್ಲಿರುವ) ದೆವ್ವಗಳ ಆರಾಧನೆ : ಭೂತಪೂಜೆ ಎಂದರೆ ಪ್ರಕೃತಿಯ ಮತ್ತು ಸಂಸಾರದಲ್ಲಿಯ ವಿಶೇಷದರ್ಜನಗಳನ್ನು ಅಥವಾ ಸಂಭವಗಳನ್ನು ಇಲ್ಲವೆ ಕೆಲವೊಮ್ಮೆ ವ್ಯಕ್ತಿ ಗಳನ್ನು, ಏವಂಚ ಕಣ್ಣಿಗೆ ಕಾಣುವ ಹಾಗೂ ಮನಸ್ಸಿನಲ್ಲಿ ಒತ್ತುವ ವಿಷಯ ಗಳನ್ನು, ವ್ಯಕ್ತೀಕರಿಸಿ ಹಾಗೂ ಅವನ್ನು ದೇವೀಕರಿಸಿ ಆರಾಧಿಸುವಿಕೆ (ಕಾಅಜ್ಞಾ. ೨೩೦). ೨. ಪಂಚಭೂತಗಳ ಹಾಗೂ ನದಿ, ಪರ್ವತ ಮೊದಲಾದ ಪ್ರಕೃತಿವಸ್ತುಗಳ ಪೂಜೆ.— ಆರಾಧನೆ : ವೇದದಲ್ಲಿ ಮೊದಲು ಭೂತಪೂಜೆ (Nature worship) ಆಯಿತು. ಭೂತ ಪೂಜೆಯಿಂದ ವಿವಿಧ ಭೂತಗಳಿಗೆ ನಿಯಾಮಕವಾದ ವಿವಿಧದೇವತೆಗಳ ಪೂಜೆ (Polytheism) ಪ್ರಸಕ್ತವಾಯಿತು (ಜಾಪ್ರ. ೩೩).

[ಸಂ. ಭೂತಪೂಜಾ]

ಭೂತಬಲಿ (ನಾ). ದೇವತೆ, ಭೂತ, ದೈವ ಮೊದಲಾದವುಗಳ ತೃಪ್ತಿ ಗಾಗಿ ಕೊಡುವ ಬಲಿ.— ಆಪುಜಿ :ಣಜಿಯ ಹಣಿದವ . . . ದಂಡ ಯಲಿ ಕಲಸಿದ ಕೂಳ ಮುದ್ದೆಗಳ ಹೊಜಗೆ ಬಡಿಸಿದ ಭೂತಬಲಿ ಬೊಬ್ಬಿಟ್ಟ ದೊಡಮದ್ದೇಳ್ಳ ಲಗ್ಗೆದು ಪಜಿಗಳ್ಳುರವಾದುವು ಟರ್ಣನ ಪಶ್ಚಪೂಜೆಯಂ (ಭುಜ್ಞಾ. ೬-೬).

ಭೂತಭಾಗ್ಯ (ನಾ). ಅದೃಷ್ಟಶಾಲಿ ; ಭಾಗ್ಯವಂತ : ಆತಂಕೊಳ ಲಿಂದೀ ಸುಯೋಧನ ಜಾತವೂಣ್ಯನೊ ಧರ್ಮಪುತ್ರನೆ ಭೂತಭಾಗ್ಯನೊ ಕಾಣಲಹುದೈ ಶಲ್ಯ ಕೇಳೆಂದ (ಭಾಣ್ಯ. ೫೦-೦೦).

ಭೂತಯಜ್ಞ (ನಾ). (ಗೃಹಸ್ಥನು ಪ್ರತಿದಿನವೂ ಆಚರಿಸಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಿರುವ) ಪಂಚಯಜ್ಞಗಳಲ್ಲಿ ಒಂದು : ವ್ಯಾಣಿಗಳನ್ನು ಉದ್ದೇಶಿಸಿ ಕೊಡುವ ಬಲಿ : ಶ್ರುತಿಪಥಣವೋ ಶರ್ಮ ಣವೋ ಮೇಣತಿಥಿಪೂಜೆಯೊ ಭೂತಯಜ್ಞವೊ ಮಹಮಾರಾಧನೆಯೊ ರಣವೀಯ್ಯರೊಳಗೇನು (ಭುಜ್ಞಾಕಪ್ರ. ೦೫-೩೬); ಬಳಿಕ ದೇವಯಜ್ಞ ಋಷಿಯಜ್ಞ ಮನುಷ್ಯಯಜ್ಞ ಭೂತಯಜ್ಞ ಬ್ರಹ್ಮಯಜ್ಞಾದಿಗಳಂ ಮಾಳ್ಪಾತಪಾಗಿ (ಪಪಳೆ. ೦೩೪); ಪ್ರಹ್ಮಯಜ್ಞ, ಪಿತೃಯಜ್ಞ, ದೈವಯಜ್ಞ, ಭೂತಯಜ್ಞ, ಮನುಷ್ಯಯಜ್ಞ —ಈ ಐದು ಮಹಾಯಜ್ಞಗಳು . . . ಬಲಿಪರಣವು ಭೂತಯಜ್ಞವು (ಅಜಂಪ. ೦೩೭). [ಸಂ.]

ಭೂತರೂಪ (ನಾ). [ವ್ಯಾಕ] ಭೂತಕಾಲದ ರೂಪ : ಬಸುಮು ಎಂಬ ಧಾತುವಿಗೆ ಭೂತರೂಪವಲ್ಲಿ ಬಿಸುಟ್ಟುಂ, ಬಿಸುಟು ಎಂಬ ರೂಪಗಳು ಬರುವುವು (ಕ್ರಿವಿ. ೪೭).

ಭೂತಲ, ಭೂತಳ (ನಾ). ೧. ಭೂಮಿಯ ಮೇಲ್ಮೈ : ಭೂಮಿಯ ಮೇಲುಭಾಗ. ೨. ಭೂಮಿ : ಭೂತಲಸಮಾನಾ ತರಲಾದಿದೆಂಬಾಹ ನಾದೆಂ (ಹಂಚಾ. ೦೦-೭೬) ; ಈ ಸುಂದರವಾದ ಭೂತಲದ ಮೇಲೆ ಅವನು . . . ಮಯ ಒಂದು ಕರ್ಕಶ ಪುಚ್ಚವಂತಿದ್ದ ! (ಪಳಹೊಸ. ೫೩). **ಭೂತಳ** : ೨. ರಸಿಯಿಂ ಭೂತಳದಿಂ ಕುಳಾದ್ರಿಕುಳದಿಂ . . . ಅಚಾಂಡತುದಿಂದತ್ತೆಲ್ಲ ಪೊಕ್ಕಿರ್ದಮಿಂ ವಿಸುಲ್ ತಿರ್ಗುಮೆ (ಪಂಚಾ. ೦೦-೦೦೬) : ನಿಮ್ಮಯ ಭೂತಳವನಾಳುವಿರೆ ನೀವೆಂದಿಚ್ಛಿಸಾ ಭೀತ್ಯ (ಭುಜ್ಞಾ. ೯-೩೩). ೩. ಲೋಕದ ಜನ ; ಮಾನವಸಮೂಹ : ಸೀತ ಭೂತಳವಜಿಯ ಪರಿಯದ್ದೆ (ಕೃಚಾ. ೫೦-೬೩). [ಸಂ.]

ಭೂತಲಪತಿ (ನಾ). ಭೂಮಿಯ ಒಡೆಯ; ಅರಸು; ರಾಜ : ನಿಲಿಲೊಡ ಮನಿಮಲುಮಂ ಭೂತಲಪತಿ ಬಟ್ಟಿದುಣ್ಣಿ ಬರಿಸೆ (ಜಪಕ್ಷ. ೦೩-೦೦); ಭೂತಲಪತಿ ಬಂದವಣ್ಣಿ ತಪತಾತಪವಾರಣಪುಷ್ಪಶಾಂಬರಂ (ಪಂಪ್ರಕ್ಷ. ೩-೩೦). [ಸಂ.]

ಭೂತಲೀಲೆ (ನಾ). ೧. ದೆವ್ವದ ಆಟ. ೨. (ಅಲಂ) ಗೊತ್ತುಗುರಿ ಯಿಲ್ಲದೆ. ವಿಚಾರಶೂನ್ಯವಾದ ವ್ಯವಹಾರ : ಸುಣ್ಣಸುಣ್ಣ ಮಾತಿನ ಸಲುವಾಗಿ ವಾದವಿವಾದದ ಭೂತಲೀಲೆ ನಡೆದು ಜೀವದ ಸಂವಾದವು ಪರೆತುಮೋಗಿ ಹೃದಯವು ರಣರಂಗವಾಗುತ್ತದೆ (ಗೂಹುಗು. ೦೩೪).

[ಸಂ. ಭೂತಲೀಲಾ]

ಭೂತಲೇಶ, ಭೂತಳೇಶ (ನಾ). ಭೂಮಿಯ ಒಡೆಯ; ಅರಸು; ರಾಜ : ಶೀತಕರಧರನೊಂದ ಭೃಸು ಭೂತಲೇ [ಜಾಣಾ. ೪೬]ರನು ನಗರೊಡನ ತಸ್ಸೇನಮುಖಿ ಮೋದಿ (ಬಸ್ತ. ೪೩-೯). **ಭೂತಳೇಶ** : ಪುತುರೆಯೆಂದು ಕೊಂಡಾಡಿ ತನ್ನಮ ತನುಜಾತರುಗಶನಾಜವಕೆ ಭೂತಳೇಶ[ಜಾಣಾ. ಧಾತ್ರೀಶ್ವರ]ನು ಬೀಳ್ಕೊಡಲು (ಕೃಕಣಾ. ೦೩.೦೮೯); ಪ್ರಾತಿಕಾಮಿಕ ಬಾ ಯುಧಿಷ್ಠಿರ ಭೂತಳೇಶನ ಏರಿದು ತಾರ್ಕ್ಷ್ಯ (ಭುಜ್ಞಾ. ೦೬-೨೬). [ಸಂ.]

ಭೂತವತಿ (ನಾ). [ವ್ಯಾಕ] ಭೂತಕಾಲ : ಭೂತವತಿ ವರ್ತಮಾನಂ ಭವ್ಯತ ಭವಿಷ್ಯಂತಿ 'ಸರ್ವಸಾಧನಿಯೆಂಬಾಖ್ಯಾತವಿಭಕ್ತಿಗಳಕ್ಕುಮತೀತಭವ ದ್ಭಾವೋಕಾಲ ವಿದ್ಯಾದಿಗಳೊಳ್ (ಕಾಶ್ಯಕ. ೪೭೯); ಭೂತವತಿಯ ಕೃತ್ತಿಗೆ 'ನಲಿಂ' ವಿಂಬಲ್ಲಿ ಅವರ್ ಎಂಬ ವಿಭಕ್ತಿಯಂ ಕಳೆದು, ನಲಿದ ಎಂಬ ಕೃತ್ತನಿಯಿಸಿ, ನಾಮವಿಭಕ್ತಿಯಂ ಪತ್ತಿಸಿ, ನಲಿದಂ, ನಲಿದನಂ, ನಲಿದನಿಂ ಎಂದು ಮಾಜ್ಪುದು (ಪಣಂ. ೬೩ ಕ್ರಮೋ).

[ಸಂ. ಭೂತವತೀ]

ಭೂತವಾದಿ (ನಾ). [ತತ್ತ್ವಶಾ] ಭೂಮಿ, ಜಲ, ತೇಜಸ್ಸು, ವಾಯು, ಆಕಾಶವೆಂಬ ಭೂತಗಳ ಸಂಯೋಗದಿಂದ ಉಂಟಾಗುವ ಚೈತನ್ಯವನ್ನೇ ಜೀವವೆಂದು ವಾದಿಸುವವನು ; ನಾಸ್ತಿಕ ; ಚಾರ್ವಾಕ : ಪೃಥ್ವಾದಿಭೂತಂಗಳ್ ಚೈತನ್ಯವೃದ್ಧಿಯೊಳ್ ಚೈತನ್ಯವೃದ್ಧಿಯೆಂಬುದುವೃದ್ಧಿ ಯೊಳ್ ಅಂತರಪ್ಪುದ್ಧಿಯಿಂತಂತೆ ಸಪಕಾರಿಕಾರಣಮೆಂದನೇಯುಕ್ಕೊಕ್ಕ ಗಳಂ ಭೂತವಾದಿಯಪ್ಪ ಮಹಾಮತಿಯಂ ನಿರಿ.ಕರಿಸಿ (ಪಾಪ್ರ. ೩-೦೦ ೪).

[ಸಂ. ಭೂತವಾದಿನ್]

ಭೂತವಾಸ (ನಾ). ಐದು ಬಗೆಯ ಮರ ; ತಾರೆ : 'ಭೂತಾವಾಸ' ಪರಾ. [ಸಂ.]

ಭೂತವೇಶಿ (ನಾ). ಒಂದು ಬಗೆಯ ಸಸ್ಯ ; ನಿರ್ಗುಂಡಿ : "ಶ್ವೇತಸುರಸಾ-ಭೂತವೇತಿ-ಸಿತಾಸಾ- ಬೀಳಿಹುವ್ವೆಗಳುಳ್ಳ ಲಕ್ಷಿಲಿ" (ಚಿಣ್ಮಂತಿ. ೦೫೬). [ಸಂ. ಭೂತವೇಶೀ]

ಭೂತಶಂಕೆ (ನಾ). ದೆವ್ವಗಳಿಂದಾಗುವ ಭಯ ; ದೆವ್ವ, ಪಿಶಾಚಿಗಳ ಭಯ : ಅವಳಿಗೆ ಭೂತಶಂಕೆಯಾಗಿರಬೇಕು. ಒಂದು ಪುಂಶ್ಚ ಕಟ್ಟಿಸಬೇಕು (ಜಾಪ). [ಸಂ. ಭೂತಶಂಕಾ]

ಭೂತಶುದ್ಧಿ (ನಾ). [ಶೈವ] ಶಿವೋಪಾಸನೆಯ ಅಂಗವಾಗಿ ಮಾಡುವ ಸಂಸ್ಕಾರ ; ಪೂಜಾದಿಗಳ ಪ್ರಾರಂಭದಲ್ಲಿ ದೇಹಾರಂಭಕವಾದ ಪಂಚಭೂತಗಳನ್ನು ಶೋಧಿಸುವುದು, ಬೀಜಮಂತ್ರಪೂರ್ವಕವಾಗಿ ಎಡಹೊಟ್ಟೆಯಲ್ಲಿರುವ ಪಾಪಪುರುಷನನ್ನು ಸುಟ್ಟು ಶರೀರವನ್ನು ಶುದ್ಧಿಗೊಳಿಸುವುದು. ಇದರ ಕ್ರಮವು ಆಗಮಗ್ರಂಥಗಳಲ್ಲಿ ನಿರೂಪಿತವಾಗಿದೆ : ಭೂತಶುದ್ಧಿಯೇ ಮೊದಲಾದ ಭಾವನಾಸಂಸ್ಕಾರಗಳಿಂದ ಪರಿಶುದ್ಧವಾದ ದೇಹದಲ್ಲಿ ಮಾನಸಿಕವಾಗಿ ಧ್ಯಾನಯೋಗದಿಂದ ಮಾಡುವ ಉಪಾಸನೆಯು "ಅಂತರ್ಯಾಗ" ವೆಂದೂ . . . ಉಕ್ತವಾಗಿದೆ (ಶಾಸಂ. ೬೨). [ಸಂ.]

ಭೂತಸಂಜ್ಞೆ (ನಾ). ಪದಾರ್ಥಗಳ ಸಂಕೇತ : "ಮನು ಭುವನ ಪದಿನಾಲ್ಕು . . . ದಂತ ಮೂವತ್ತೆರಡುಮಿಂತಿವೆಲ್ಲಂ ಭೂತಸಂಜ್ಞೆಯಕ್ಕುಂ" (ಕುಂಗಣಾ. ೦೮೯-೪). [ಸಂ. ಭೂತಸಂಜ್ಞಾ]

ಭೂತಸಂತುಷ್ಟಿ (ನಾ). ದೆವ್ವ, ಪಿಶಾಚಿ, ಕ್ಷುದ್ರಶಕ್ತಿಗಳೇ ಮೊದಲಾದ ಅಮಾನುಷಸತ್ವಗಳ ತೃಪ್ತಿ ; ಕ್ಷುದ್ರಶಕ್ತಿಗಳ ತೃಪ್ತಿ : ಭೂತಸಂತುಷ್ಟಿಯಪ್ಪಂತೆ ಕುಜಿ ಕೋಣಂಗಳಂ ಪೊಯ್ಸಿ ಬಿಣ್ಣಗೂಳಂ ಪಸರಿಸಿ (ಕೃಪುಣಾ. ೩-೬೨). [ಸಂ.]

ಭೂತಸಂಹಾರಿ (ನಾ). ಒಂದು ಬಗೆಯ ಸಸ್ಯ : "ಭೂತಾಂಕುಶಂ ಭೂತಸಂಹಾರಿಯಕ್ಕುಂ" (ಕುಂಗಣಾ. ೩೩-೦೫). [ಸಂ. ಭೂತಸಂಹಾರಿನ್]

ಭೂತಸಿದ್ಧಿ (ನಾ). ಪಂಚಮಹಾಭೂತಗಳನ್ನು ವಶಪಡಿಸಿಕೊಳ್ಳುವ ಒಂದು ಬಗೆಯ ಯೋಗಸಿದ್ಧಿ : ಧರ ಜಲಾನಲ ಮಾರುತಾಂಬರವಿರುವ ತತ್ವಗಳಿವನು ಜಯಿಸಲು ದೊರೆಯುತಿಹುದಾ ಭೂತಸಿದ್ಧಿಯು ಪವಿ ಪವಿಪುವಲುವೆ (ಗಗಣಾ. ೯-೦೨೬). [ಸಂ.]

ಭೂತಸ್ಥಾನ (ನಾ). (ಕರಾ) ಭೂತಗಳ ಪೂಜೆ ನಡೆಯುವ ಸ್ಥಳ. — ಬೀಡು : ತುಳುರಾಜ್ಯದಲ್ಲಿ ಬ್ರಾಹ್ಮಣರ ಅನಂತರ ನೀನೇ ಮರ್ಯಾದೆಯು ಎಲ್ಲಾ ದೇವಸ್ಥಾನಗಳಲ್ಲಿಯೂ ಭೂತಸ್ಥಾನಗಳಲ್ಲಿಯೂ ಇವರಿಗೆ ಸಲ್ಲುತ್ತದೆ (ತುಳುಜ. ೩೦). [ಸಂ.]

ಭೂತಹಿತ (ನಾ). ಜನತೆಯ ಕ್ಷೇಮ : ಭೂತಹಿತಕಾರುಣ್ಯಸುಧೆಗದರ್ಪಾತ ದುರ್ಧರಕರ್ಪೂಕೋಟಿವಿಘಾತನಂ (ಜಾಗಪ. ೦೯-೪೦); ಒಂದಾನೊಂದು ದಿನಮುಮಾ ದೇವಿಯು . . . ತಾನೆಸಗಿದ ಭೂತಹಿತಪ್ರಯೋಜನವನ್ನು ಆ ಪರಮೇಶ್ವರನಿಂದಲೇ ತಿಳಿಯೆ ಕೇಳ್ದೆನೆಂದಿನ್ನೈಯಿಂದ . . . ವಿಜ್ಞಾಪನಂಗೆಯ್ದಲ್ಲಿ (ಕಳಕೃ. ೩). [ಸಂ.]

ಭೂತಳ ' ಭೂತಲ' ನೋ.

ಭೂತಳೇಶ ' ಭೂತಲೇಶ ' ನೋ.

ಭೂತಾಂಜನ (ನಾ). ದೆವ್ವ, ಪಿಶಾಚಿ ಮೊದಲಾದ ಕಣ್ಣಿಗೆ ಕಾಣದ ವಸ್ತುಗಳನ್ನು ಕಾಣುವಂತೆ ಮಾಡುವ ಸಾಮರ್ಥ್ಯವನ್ನು ಹೊಂದಿರುವುದೆಂದು ನಂಬಲಾದ ಕಾಡಿಗೆ : (ಕಿ). [ಸಂ.]

ಭೂತಾಕಾರ (ನಾ). ದೊಡ್ಡ ಆಕಾರ,—ಗಾತ್ರ : ಹೇಗುಸಾದ ಚಿಕ್ಕಿಯು ಮನಸ್ಸನ್ನು ಅದು ಹೊಕ್ಕ ಮೇಲೆ ಕೇಳಬೇಕೆ ? ಕ್ಷಣದಲ್ಲಿ ಭೂತಾಕಾರವನ್ನೇ ತಾಳಿತು ಅದು ! (ಕುಚಕ. ೩೭). [ಸಂ.]

ಭೂತಾಗ್ರಣಿ (ನಾ). ೧. ಶಿವ. ೨. [ಛಂದ] ರುದ್ರಗಣಪ್ರಸ್ತಾರದ ಪದಿನಾರು ಭೇದಗಳಲ್ಲಿ ಒಂದು: ರುದ್ರಗಣಮಮಂತೆಂದೊಡೆ :—೧. ಗಂಗಾಧೀಶಂ ... ೦೩. ಭೂತಾಗ್ರಣಿ (ಛಂದೋಂಬು.೩-೨೪೦೪). [ಸಂ. ಭೂತಾಗ್ರಣೀ]

ಭೂತಾಡನಂಗೆಯ್ (ಕ್ರಿ). ನೆಲವನ್ನು ಒದೆ.—ಪುಟ್ಟಿಸಲ್: ವಪ್ಪಳಣದೊಳ್ ಕೆಂದಳೆಂ ಕೆಂದಳಿರಂತೆ ತೊಳಗೆ ದೀರ್ಘಾಂಗುಳಿಯಿಂ ಪಿಡಿದು ಗರುಡ ನೊಪ್ಪಮಂ ಗಾಳಿಯು ನುಸುಳಿಮಂ ಕೈಕೊಂಡು ಕೊಂಡಾಡಿ ಮನವೆ ಮಾನಸವಾದಂತೆ ಪರಿದು ಪರಿಯೂಳ್ ಬಳಲ್ದಿ ಕುಡಂಬ ತೀರ್ಮೊಳಗಿಂ ಬೆಂಗೆ ಬಾ ಎಂಬಂತೆ ಭೂತಾಟ[ಡ]ನಗೆಯ್ದು ಗಜದ ಬೆಂಗೆ ಸಿಂಗದಂತೆ ಲಂಘಿಸಿಯಾಪೆಯ ಪೊರಜಿಯೂಗೆ ಪೂರ್ವಾಸನದೊಳ್ ಪದುಳಮಿರ್ದು (ಅರ್ಧನ�ೇ. ೩-೦೦೩ ಪೆ). [ಭೂ + ತಾಡನ + ಕೆಯ್]

ಭೂತಾತ್ಮ (ನಾ). ೧. ಪಂಚಭೂತಸ್ವರೂಪವಾದುದು ; ದೇಹ ; ಶರೀರ: 'ಭೂತಾತ್ಮ', 'ಇಂದ್ರಿಯಾತ್ಮ', ಎಂದು ಪ್ರಯೋಗ ಮಾಡಿರುವುದು ಕಂಡುಬರುತ್ತದೆ(ಯಾದ್ದರಿಂದ ಮುಖ್ಯವ್ಯಕ್ತಿಯಿಂದಲೇ ಅಚೇತನವನ್ನು ಆತ್ಮಬಲದಿಂದ ಕರೆಯಬಹುದೆಂದು ಗೊತ್ತಾಗುತ್ತದೆ) (ಪ್ರತ್ಯಕ್ಷ. ೧೦). ೨. ಎಲ್ಲಾ ಭೂತಗಳಲ್ಲೂ ಆತ್ಮರೂಪದಿಂದ ಇರುವವನು ; ಪರಮಾತ್ಮ ; ಶಿವ : ಎನಗೆ ನೈಜಾತ್ಮನಾಗುತ್ತಾ ಸಮಸ್ತ ಭೂತಾತ್ಮನಾಗುತ್ತ ಮಿರ್ಪಾ ಅನಘಗುರುವೇ ನಿನಗೆ ವಂದಿಸುವೆ (ಅಚ್ಯಪು. ೦-೦-೦೪). ಪಿ. ವಿಷ್ಣು. ೪. ಜೀವಾತ್ಮ ; ಜೀವ. [ಸಂ. ಭೂತಾತ್ಮನ್]

ಭೂತಾಪಕಾರಿ (ನಾ). ೧. ಜಗತ್ತಿಗೆ ಧಗೆಯನ್ನುಂಟುಮಾಡುವುದನ್ನು—ತಾಪವನ್ನುಂಟುಮಾಡುವವನು. ೨. ಪ್ರಾಣಿಗಳಿಗೆ ಕೆಡುಕನ್ನುಂಟುಮಾಡುವವನು. ೧, ೨ : ಪೊಸಲೊಳ್ ಮುಬ್ಬುಗಿಸಿ ಹಿಮಕರ ದಿನಕರರಂ ಮುಸುಳಿಸಿತ್ತು ಜನಸವನಪ್ರಯೋಂಬುನಿಕಾಯಂ ದೋಷಾಕರನೆನಿಪನ ಭೂತಾಪಕಾರಿಯೆನಿಪನ ನಿರಿಯೇಂ (ಧರ್ಮಪ್ರ. ೦೦-೩೬). [ಸಂ. ಭೂತಾಪಕಾರಿನ್ (ಭೂ + ತಾಪಕಾರಿನ್ ; ಭೂತ + ಅಪಕಾರಿನ್)]

ಭೂತಾಮರ (ನಾ). [ಜೈನ] ವ್ಯಂತರದೇವತೆಗಳಲ್ಲಿ ಒಂದು ಪಂಗಡ,-ಭೇದ : ನೆನೆದ ಮನದಿಂ ಮುನ್ನಂ ಭೂತಾಮರರ್ ಬರೆ (ಶಾಂತಿಪು. ೯-೩೦). [ಸಂ.]

ಭೂತಾರಾಧನೆ (ನಾ). = ಭೂತಪೂಜೆ ೧ : ಹೀಗೆ ಭೂತಾರಾಧನೆಯು ಕ್ರಮಬದ್ಧ ಜೀವನದ ಮೊತ್ತ ಮೊದಲಿನ ವ್ಯವಸ್ಥೆಯೆಂದೂ . . . ಎಣಿಸಬಹುದು (ತುಳುಜಾ. ೫೩೦); ಇದೇನು ಭೂತಾರಾಧನೆ ? ಇದಾವ ಬಗೆಯ ಪೂಜೆ ಎಂಬುದು ಅವನಿಗೆ ಹೊಳೆಯದೆ ಹೋಯಿತು (ಕೃಕ್ಷಕೂ. ೨೮೨). [ಸಂ. ಭೂತಾರಾಧನಾ]

ಭೂತಾವಾಸ (ನಾ). ೧. ಶರೀರ. ೨. ಶಿವ. ೩. ವಿಷ್ಣು. ೪. ಒಂದು ಬಗೆಯ ಮರ; ತಾರೆಮರ: "ಪಥೀತಕಃ। ಅಕ್ಷಃ. ತುಷಃ, ಕರ್ಷಫಲಃ ಭೂತಾವಾಸಃ, ಕಲಿದ್ರುಮಃ- ಓ, ತಾರೇಗಿಡದ ಹೆಸರುಗಳು " (ಚಿಣ್ಮಂತಿ. ೦೫೬). ' ಭೂತವಾಸ ' ಪರಾ. [ಸಂ.]

ಭೂತಾಳ (ನಾ). ಒಂದು ಬಗೆಯ ಮರ : ತಮಾಳ ಭೂತಾಳ ತಾಳ ವೃಕ್ಷವನರನೆಲ್ಲಿಯ ಕರ್ಪೂರವಾಳೆಯನೆವ ಕಂಡನಲ್ಲಿ (ಜಾಪುಪ. ೦೦-೦೦೬). [ಸಂ. ಭೂತಾಲ]

ಭೂತಾಳಕ್ರಿಯೆ (ನಾ). [ಸಂಗೀತ] ಒಂದು ಉಪಾಂಗರಾಗದ ಹೆಸರು : ದೇವಕ್ರಿಯೆ ಶ್ರೀಕೇತ್ರಕ್ರಿಯೆ ಭೂತಾಳಕ್ರಿಯೆಯೆಂಬ ಮೂಱುಂ ಕೋಲಾಹಲರಾಗಕ್ಕುಪಾಂಗಂಗಳು (ಜಪಚಿ. ೩೬೪). [ಸಂ. ಭೂತಾಲಕ್ರಿಯಾ]

ಭೂತಾಳಿ (ನಾ). ಒಂದು ಬಗೆಯ ಮರ : "ಭೂತಾಳಿ – ನೆಲದಾಳಿ, ನೆಲಹಾದನಿ" (ಓಷ. ೦೦೩) ; ಗೊರಟಿಹೂಗಳ ಹಳದಿಯ ನಡುವೆ . . . ಭೂತಾಳಿಯ ರಕ್ತವರ್ಣದ ಎಲೆಯ ರೂಪದ ಹೂಗಳೂ ರಂಜಿಸಿದ್ದುವು (ವಂಶಾ. ೧೬). [ಸಂ. ಭೂತಾಲೀ]

ಭೂತಾಳೆ (ನಾ). ೧. = ಭೂತಾಳ : ಭೂತಾಳೆ ಬೂರುಜೆ ವಿಟ್ಟುಲಿಯುದಿಂ ಪಾತಂಗ ಮುಗುಳ್ದು ಮರನು . . . ಅಲ್ಲಿಹುವು (ಪಜಾಂ. ೦-೫೩): ಕೆಂಪಡಸ ಭೂತಾಳೆ . . . ಜಾಲೆ ಬಿಳ್ಪಾಲೆ (ಕಾಗ್ಕಂಗ. ೦೦-೨). ೨. ಜೇಲಿ. ಸರಯದ್ದು ಮೊದಲಾದುವುಗಳಿಗಾಗಿ ಬೆಳೆಸುವ, ನಾರನ್ನು ತೆಗೆಯಲು ಬರುವ, ತಾಳೆ ಜಾತಿಗೆ ಸೇರಿದ ಒಂದು ಬಗೆಯ ಗಿಡ : ನಪ್ಪ ತೋಟದ ಬೇಲಿಯುವ್ದಕ್ಕೂ ಭೂತಾಳೆಗಿಡಗಳೆವೆ (೮೩೨)

[ಸಂ. ಭೂತಾಲ]

ಭೂತಿ (ನಾ). ೧. ಇರುವಿಕೆ ; ಅಸ್ತಿತ್ವ. ೨. ಹುಟ್ಟು ; ಜನ್ಮ. ೩. ಏಳಿಗೆ ; ಅಭ್ಯುದಯ ; ಅಭಿವೃದ್ಧಿ. ೪. ಐಶ್ವರ್ಯ ; ಸಂಪತ್ತು : ಭೌತಮಿಜ್ಯಾಸವಾ ರಾಷ್ಟ್ರಸಂಸ್ಥೆಗಳಾ ಸೂತನವಿವೇಕಪ್ರಯೋಗ ಗಳನಾದೀತು ಭೂತಿ ಸಂಪದ ಜಗಿಕೆ (ಬಂಳಿ ೬೬೬). ೫. ಘನತೆ ; ಗೌರವ : ಬೆಳಗುವುದಿಂದ್ರಲೋಕದೊಳಗಯ್ಯನ ಭೂತಿ ದಲೆ[ಣಾಃ ಮಾತಿನೊಳ್]ಮ್ಮ ಸಾಹಸಂ ಬೆಳಗುವುದೀ ಧರಾವಳಯದೊಳಿ (ಸಂಕಣ ೬-೦೯). ೬. ಬೂದಿ ; ಭಸ್ಮ ; ವಿಭೂತಿ : "ಭೂತಿ_ನಿ. ಬೂದಿ. ಸಂಪತ್ತು ೨." (ಸಿಣ್ಕಂತಿ. ೬೧೦) ; ಸುರರಲ್ಲ ಮೇಣಾ ಸಂತ್ಯಕ್ತವಪ್ಪ ದ್ದಿಜರು ಪಿರಿಯಾಗಿ ಭೂತಿಯು ಧರಿಸಿಹರು (ಸರಗತ. ೦೬೩-೬೬೩) : ತುಂಗಭದ್ರಾನದೀತೀರದೊಳಿರ್ದುತ್ತುಂಗಸ್ಥಂ ಮುಕುರಿತನಬುನಂ ಭೂತಿ ಸರ್ವಾಂಗನಾಗಿರ್ದು (ಕರ್ಣಾ. ೬೦) : ಪಾತಕವ ಪರಿಹರಿಸಿ ಪರಮಪದವಿಯ ಕೊಡುವ ಭೂತಿಯನು ಧರಿಸದಿಪ ಮನುಜನಂ (ಚ್ರಿಕಾ. ೦೩-೬). ೭. ಆನೆಗಳ ಮೈಮೇಲೆ ಬಣ್ಣದ ಪಟ್ಟಿಗಳಂತೆ ಮಾಡುವ ಅಲಂಕಾರ. ೮. ತಪಸ್ಸು. ಯೋಗ ಮುಂತಾದುವುಗಳಿಂದ ಪಡೆದು ಕೊಂಡ ಅತಿಮಾನುಷಸಾಮರ್ಥ್ಯ : ಅಣಿಮಾದಿ ಸಿದ್ಧಿಗಳು : "ವಿಭೂತಿ, ಭೂತಿ, ಐಶ್ವರ್ಯಂ – ೩. ಅಷ್ಟಧಾ . . . ಅಣಿಮಾದೀಂ ಎಂಟುಬಗೆಯಾಗಿರುವ ಅಣಿಮಾದಿ ಸಿದ್ಧಿಗಳು" (ಸಿಣ್ಕಂತಿ. ೦೯). ೯. ಸಂಭ್ರಮಾಸಕ್ತ : "ಸುಟ್ಟಡಗು ಭೂತಿಯೆಂಬುದು" (ಹಂತಮು. ೫೫-೦೬೬). ೧೦. ಶಿವ. ೧೧. ವಿಷ್ಣು. [ಸಂ.]

ಭೂತಿಕ್ಕ$_1$ (ನಾ). ೧. ದೆವ್ವ, ಭೂತಗಳನ್ನು ವಶಪಡಿಸಿಕೊಂಡಿರುವವನು ; ದೆವ್ವ, ಪಿಶಾಚಿಗಳ ಉಪಾಸಕ. ೨. ಕಣ್ಣುಕಟ್ಟು ವಿದ್ಯೆ ಮಾಡುವವನು ; ಇಂದ್ರಜಾಲ ಮಾಡುವವನು ; ಐಂದ್ರಜಾಲಿಕ : ಭೂತಿಕನ ಸೀರೆಯ ಸಾತ್ವಿಕ ನೆಱೆಪುಟ್ಟರೆ ಭೂತಿಕ ಸಾತ್ವಿಕನಾದ ಸಾತ್ವಿಕ ಭೂತಿಕನಾದ (ಪಸಪು. ೧೦೦) ; ಭೂತಿಕಗೆ ಸಾಹಸ್ರವರಪದ ಭೂತಳವನಿಪ್ಪನಗೆ ಸರಿ ದುನ್ನೀ ತಳದೊಳೆಲ್ಲಿಂದುಯಿಸದ ಪ್ರಧಾನಿ ಬಸವಣ್ಣ (ಅಸ್ಕ. ೧೨-೦೬). ೩. [ವೈಶ್ಯ] ಭೂತಿಕ, ನೈಷ್ಠಿಕ ಎಂಬ ಎರಡು ಬಗೆಯ ಶಿವಧರ್ಮ ಗಳಲ್ಲಿ ಒಂದು : ಶಿವಧರ್ಮವಾ ಭೂತಿಕಂ ನೈಷ್ಠಿಕಮುಮೆನಿಪ್ಪವ ದುಗ್ಗದಲ್ಲಿ ಭೂತಿಕವೆ ಸುವ್ರತ ಮೋಕ್ಷವಿವು ದುಗಳಯುಕ್ತವಾ ವ್ರತಮು (ಅಸ್ಕ. ೬-೬-೬೨). [< ಸಂ. ಭೌತಿಕ]

ಭೂತಿಕ್ಕ$_2$ (ನಾ). ೧. ಒಂದು ಬಗೆಯ ಸಸ್ಯ ; ನೆಲಬೇವು. ೨. ಒಂದು ಬಗೆಯ ಹುಲ್ಲು ; ಕಾಚಿ ಹುಲ್ಲು : "ಭೂತಿಕಂ – ನೆಲಬೇವು. ಕಾಚೀ ಹುಲ್ಲು. ಪಂಚೀಹುಲ್ಲು" (ಸಿಣ್ಕಂತಿ. ೬೬೩) : "ಭೂತಿಕಂ – ಗಂಜಳಿಕೆಯ ಹುಲ್ಲು" (ಚಿಪಂ. ೦೦೨). ೩. ಕರ್ಪೂರ. ೪. ಗಂಧದ ಮರ. [ಸಂ.]

ಭೂತಿಪಟ್ಟ (ನಾ). [ವೈಶ್ಯ] "ಆಗಮೋಕ್ತಿಸ್ನಾನಂಗಳಲ್ಲಿ ಅಯಾಯ ಮಂತ್ರಗಳಿಂದ ಭಸ್ಮಧಾರಣವನ್ನು ಮಾಡುವುದೇ ಭೂತಿಪಟ್ಟ ವೆನಿಸುವುದು" (ಅಣ್ಣಾ. ೦). "ವಿಭೂತಿಪಟ್ಟ" ಪರಾ. [ಸಂ.]

ಭೂತೃಣ(ನಾ). ಒಂದು ಬಗೆಯ ಹುಲ್ಲು : "ಗವಿದಃ – ಭೂತೃಣ" (ಚಿಪಂ. ೨೩); "ಭೂತಿಕಾ – ಭೂತೃಣ" (ಚಿಪಂ. ೦೦೨). [ಸಂ.]

ಭೂತೇಶ (ನಾ). ೧. ಜೀವಿಗಳ ಒಡೆಯ. ೨. ಬ್ರಹ್ಮ. ೩. ವಿಷ್ಣು. ೪. ಪ್ರಮಥಗಣಗಳ ಅಧಿಪತಿ; ಶಿವ : "ಈಶಾನಃ, ಶಶಿಶೇಖರಃ . . . ಭೂತೇಶಃ, ಪರಮೇಶ್ವರಃ . . . ನೀಲಲೋಹಿತಃ —ಈ ೪೫ ದಮಾ ದೇವತ ಪೆಸರ್" (ಹಾಹಾಮು. ೩-೦೦) ; ಧರೆಯೊಳಗೀ ಭಕ್ತಗಾನರ್ ದೊರೆಯೆಸಿಸುತಂ ನುಡಿವನಾಗಳಾ ಭೂತೇಶಂ (ಕ್ರಿಭಾ. ೦೬-೩೨) ; ಭೂತೇಶಗೆ ಜಗುವಪಸು ಜಾತಿಮಾದಿಗಸಲ್ಲ ಜಾತಿಯಲಿ ಪುಟ್ಟಿ ಶಿವನಿಗೆ ಶರಣೆನ್ನದಾತ ಪನಾದಿಗನು (ಶರ್ಣಾ.೧೩೩). ೫.[ಜ್ಯೋತಿ]ರುದ್ರನು ಅಧಿಪತಿಯಾಗಿರುವ ನಕ್ಷತ್ರಃ ಆರಿದ್ರಾನಕ್ಷತ್ರ : ಸ್ವಾತಿ ಪೂ ಭರಣಿ ಶತಭಿಷ ಭೂತೇಶಂ ಜ್ಯೇಷ್ಠೆ ಮುಂಚೆ ಕಜಿದೊಡೆ ಮಬ್ ಧಾತ್ರೀತಳಕೆ ನೆಜೆಯೆ ಕಜಿಯದು (ಜಕ್ಷಕು. ೪-೦೦೩). [ಸಂ.]

ಭೂತೊಳಸಿ (ನಾ). ಒಂದು ಬಗೆಯ ತುಳಸಿ : ಕಷಾಯಗಳು— ಭೂತುಳಸಿಬೇರು, ವಿಷ್ಣುಕ್ರಾಂತಿ, ರುಂತಿ ಇವಂ . . . ಓಪ್ಪಲಿಪ್ರತಿ ವಾಕವಿಶ್ಕಿ ಕೊಡಲು ತೀತಪ್ಪರಂ ಮಾಣ್ಗುಂ (ಶಕ್ಕ. ೬೪). [ಭೂ + ತೊಳಸಿ]

ಭೂತೋಚ್ಚಾಟನೆ (ನಾ). ದೆವ್ವದ ಕಾಟದಿಂದ ತೊಂದರೆಗೊಂಡಿರುವ ಸ್ಥಳ ಅಥವಾ ವ್ಯಕ್ತಿಯನ್ನು ಬಿಟ್ಟು ದೆವ್ವವು ಓಡಿಹೋಗುವಂತೆ ಮಾಡುವುದು : ಪದೂಪದಿಗೆ ಬರುವ ಭೂತೋಚ್ಚಾಟನೆ ಮುದದಿಂದ ಉದಕ ಸ್ಪರ್ಶ ಪ್ರಣವ ಮಿಗಿಲಾದ ವಿಧಿಗಳು ತಿಳಿದು (ಪಸಾಮು. ೦೦೬೪) ; ಭೂತೋಚ್ಚಾಟನೆ. ರೋಗನಿವಾರಣೆಗಾಗಿ ಅಥರ್ವವೇದದಲ್ಲಿ ಉಕ್ತವಾದ ಮಂತ್ರಗಳು ಈ ತಾಯತಿಗಳ ಮೇಲೆ ಬರೆಯಲ್ಪಟ್ಟವೆ ಎಂಬ ಸಿದ್ಧಾಂತವೇ ನಮಗೆ ಸೂಕ್ತವೆಂದು ಕಂಡುಬರುತ್ತದೆ (ಜಾಪದ. ೫೬).

[ಸಂ. ಭೂತೋಚ್ಚಾಟನ]

ಭೂದಾನ (ನಾ). ಭೂಮಿಯನ್ನು ದಾನವಾಗಿ ಕೊಡುವುದು ; ದಶದಾನಗಳಲ್ಲಿ ಒಂದು : ಭೂದಾನಂ ಧನದಾನಂ ಶ್ರೀದಾನಂಗುಡುತು ಪೊಪ್ಪಿದಂ ನಿರಿರಾಜಂ (ನಂಗ. ೩-೬೬) ; ರಾಜನು ಕೌಂಡಿನ್ಯಗೋತ್ರದ ಕೊಂಡಮಾಪನೆಂಬ ಬ್ರಾಹ್ಮಣನಿಗೆ ಭೂದಾನ ಮಾಡುವಂತೆ ದುಷ್ಕಾವಲ್ಲಭ ನೆಂಬ ತನ್ನ ಅಧಿಕಾರಿಗೆ ಅಪ್ಪಣೆಕೊಟ್ಟನೆಂದು ತಿಳಿಯುತ್ತಿದೆ (ಶಾಗಾಶ. ೬) ; ಭೂದಾನಕ್ಕಿಂತಲೂ ಶ್ರೇಷ್ಠವಾದ ದಾನ ಬೇರೊಂದಿಲ್ಲ (ಪಸಾಂ. ೩). 'ದಶದಾನ' ಪರಾ. [ಸಂ.]

ಭೂದಾರ (ನಾ). ೧. (ಕೊನ್ನಿರಿಗೆಡ್ಡೆಗಾಗಿ ಮೂತಿಯಿಂದ) ಭೂಮಿ ಯನ್ನು ಅಗಯುವ ಪ್ರಾಣಿ ; ಹಂದಿ ; ವರಾಹ : "ಭೂದಾರಃ – ಕಾಡುಹಂದಿ" (ಸಿಣ್ಕಂತಿ. ೦೩೬); ವಾಳಗಜ ಭೂದಾರ ವ್ಯಕ ಶಾರ್ದೂಲ ಸಿಂಹಾದಿಗಳ ಭಯವಾ ತೀಳ್ ದೈತ್ಯಸ್ಪರಪಹುದೆನ್ನ ಮಣಿವೆಜುಲಿ (ಶಾಣ್ಮಂ. ೯-೪) ; ಆ ರವ ಧ್ವನಿಗೊಡುವುದನು ಭೂದಾರವೇದೇ ಬಗೆದು ಹೂಡಿದ ಕತಿರುಗಂ ಬಿಡೆ ಬಿದ್ದುದುರದಲಿ ವೈಶ್ಯಮುನಿವರನ (ತೊಣಾ. ೩-೩-೦೨). . ೨. ವರಾಹಾವತಾರವನ್ನೆತ್ತಿದ ವಿಷ್ಣು : ದಾನವಪ್ರತ ಮೇದಿನಿಯಂ ದಂಷ್ಟಾಗ್ರದೊಳಿರಿಸಿ, ಭೂದಾರಂ ಪಾತಾಳವನುಳಿದದ್ದನೊ ವನಿಸಿ ದೂರವಿಗಂಪದೊಳ್ಪಿದೆ ರವಿಮಂಡಿತಶೃಂಗಂ (ಪಜಾಂ. ೮೨-೩).

[ಸಂ.]

ಭೂದಿವಿಜ (ನಾ). ಬ್ರಾಹ್ಮಣ ; ಭೂಸುರ : ಬವರಮುಖದಲಿ ವೈರಿ ರಾಜರನರ್ಗಡಿಸಿ ತಂದಾ ಧನವ ಭೂದಿವಿಜಾಂತತಿಗಿತ್ತ ಫಲವಿನಿತೆಂದು ಗಣಿಸುವಡೆ ದಿವಿಜಪತಿಗಾಗದು ಕಣಾ (ಶಾಣ್ಮಂ. ೩-೦೦). [ಸಂ.]

ಭೂದುರ್ಗ (ನಾ). ಶತ್ರುಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಕಾಡಿನ ಮಧ್ಯದಲ್ಲಿ ಕಟ್ಟುತ್ತಿದ್ದ ಕೋಟೆ ; ನೆಲಗೋಟೆ : ಪರಂಪರೆಯು ಹೇಳಿಕೆಯಂತೆ ದುರ್ಗಗಳು ಮೂರು ಬಗೆಯವಿರುವುವು ; ಗಿರಿದುರ್ಗ, ಜಲದುರ್ಗ, ವನದುರ್ಗ ಅಥವಾ ಭೂದುರ್ಗ (ಕರ್ಣಾ. ೪). [ಸಂ.]

ಭೂದೇವ (ನಾ). =ಭೂದಿವಿಜ : "ದ್ವಿಜಾತಿ, ಅಗ್ರಜನ್ಮಾ, ಭೂದೇವಃ, ವಾಮಃ, ವಿಪ್ರಃ, ಬ್ರಾಹ್ಮಣಃ – ೩ ಬ್ರಾಹ್ಮಣನ ಹೆಸರುಗಳು"

(ಕಬ್ಬಿಗ. ೨೦೩); ಭೂದೇವನಾತ್ಮಜನಂ ಹೊಯಿದವಾ ಜ್ಞಾವಾರವರಿ (ಪಾಪು. ೩೦-೬); ದೇವಪಿತೃತರ್ಪಣವನಾ ಭೂದೇವತುಷ್ಟಿಯನಾ ಯತೋದಾದೇವಿ ವಿರಚಿಸಿ (ಕಥಾಗ. ೦೦-೬-೩೩). [ಸಂ.]

ಭೂಧರ (ನಾ). ೧. ಬೆಟ್ಟ; ಪರ್ವತ: ಸಕಲಗಜರಥಭೂಧರಾಧಿತ್ಯಕೆ ದೊಳಗೆ ಭುಗಿಭುಗಿಸಿ ರಿಪುವನಿಕರದಲಿ ಸಲೆ ಬೀದಿಪಾದುದು ಭೀದು ದಾವಾಗ್ನಿ (ಕುಣ್ಮಕ್ಕೋ. ೮೫-೨೪); ಮೇವ ಮುಗಿಲ್ಗಳಿಂ ಮುಸುಕಿ ಮೋಹಿಪ ಭೂಧರಮೊಂದು ಪಕ್ಕದೊಳ್ ಕಾವರೆಗ್ಗುನ್ನನಂತಿರೆ (ಪಾಪು. ೦-೦೦೬); ಭೂಧರಮೆ ಶಿರಮೆಲೆದುದೆನೆ ವಿಪಿನಾಂ ತೂಗಿದತ್ತೆತ್ತುಲಕೆ (ಪಜ್ಜಾ.೧೧. ೪೪-೦೩೦). ೨. (ವರಾಹಾವತಾರದಲ್ಲಿ ಕೋರೆದಾಡೆಗಳ ಮೇಲೆ) ಭೂಮಿಯನ್ನು ಹೊತ್ತವನು; ವಿಷ್ಣು: ಮಾಧವಮಹನೀಯ ವಾದ ಮಂದರಧರಸಾಧಿತ ಸರ್ವಶಾಸ್ತ್ರಾರ್ಥಭೂಧರ ಭುವನೈಕವೀರ . . . ಸಲಹೆನ್ನ (ಪಚಾಂ. ೬೭-೪). ೩. ಕೃಷ್ಣ: ಕೂರ್ಮೆಯೆ ವಿಸ್ಮಿ ಬಂದ ಪುದಿರ್ದರ್ಗಳೆಗೆಯ್ವೆನೇನೆಂದೆನಾಂ ಮುಱಿದೆಂ ಮುನ್ನಿಸದೋಂದು ವೈರ ಮನಿಂದಿತೇಕಾರಣಂ ಭೂಧರಾ (ಪಂಚಪಾ. ೦೨-೨೦೭). ೪. ಶಿವ. ೫. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ. ೬. [ವೈದ್ಯಶಾ] ರಾಸಾಯನಿಕ ಅಥವಾ ವೈದ್ಯಕೀಯಪ್ರಯೋಗಗಳಿಗೆ ಬಳಸುವ ಒಂದು ಬಗೆಯ ಉಪಕರಣ: 'ಭೂಧರಯಂತ್ರ' ಪರಾ. [ಸಂ.]

ಭೂಧರಧರ (ನಾ). ಗೋವರ್ಧನಪರ್ವತವನ್ನು ಎತ್ತಿ ಹಿಡಿದವನು: ಕೃಷ್ಣ: ಅಂತು ಭೂಧರವಿರೋಧಿ ಭೂಧರಧರಂಗೆ ಕ್ರುದ್ಧನಾಗಿ (ಪಸಾಂ. ೯-೮೪ ಪ). [ಸಂ.]

ಭೂಧರಯಂತ್ರ (ನಾ).. = ಭೂಧರ ೬: ಪರಾಮೆಯ ಮುಟ್ಟಿ ಸಂಧಿಲೇಪವಂ ಮಾಡಿ ಒಣಗಿಸಿ ಭೂಧರಯಂತ್ರದಲ್ಲಿ ಪಾಕವ ಮಾಡುಪದು. ಭೂಧರಯಂತ್ರವೆಂತೆಂದರೆ ಭೂಮಿಯಲ್ಲಿ ಗೇಣು ಆರಂಗುಲ ಉದ್ದ ಚೌಕವಾಗಿ ಹಳ್ಳವ ತಗೆದು ಆ ಹಳ್ಳದಲ್ಲಿ ಸಂಪುಟಿಸಿದ ಶಾಸ್ತ್ರವಯನಿಸಿ ಆ ಪರಾವೆ ಮುಳುಗಿಯುಂ ಮೇಲೆ ಎರಡಂಗುಲ ಪ್ರಮಾಣ ಪರ್ಯಂತ ಮಳಲ ತುಂಬಿ ಮೇಲೆ ಕಾಡ ದೆರಣಿಯ ತುಂಬಿ ಪುಟ ಹಾಕುವುದು. ಇದು ಭೂಧರಯಂತ್ರ ಮೆನಿಸಿಕೊಂಬುದು (ಕೃಕ್ರಿ. I, ೪೬). [ಸಂ.]

ಭೂಧವ (ನಾ). ಅರಸ; ರಾಜ: ಅವನಿಪತಿ ಕೇಳ್ವನ್ನ ನಿಜಭಾಗ್ಯವನು ರಕ್ಷಿಸಿಕೊಂಬುದಕೆ ಭೂಧವರ ವಿಶ್ವಾಸತ್ವ ವೇಕಲ್ಲರಿಗೆ (ಕಮೃಣಾ. ೯-೨೦). [ಸಂ.]

ಭೂಧ್ರ (ನಾ). ಬೆಟ್ಟ; ಪರ್ವತ: ತತ್ಕತಾಪವಲ್ಲರಿ ರವಿರೋಚಿಯೆಂಬ ವಿಪದಿಂ ದಶದಿನ್ನನ ಪರ್ಬು ಪೆತ್ತುದೋ ಖರತರವೃಷ್ಟಿಮಂ ಕನಕಭೂಧ್ರ ಬೃಹತ್ಕಳಭಂ ಮಹೀಶನಾ (ಪ.ಭಾ. ೩ ಪ). [ಸಂ.]

ಭೂನಾಗ (ನಾ). ೧. ಭೂಮಿಯಲ್ಲಿರುವ ಒಂದಂ ಬಗೆಯ ಹುಳು; ಎರೆಹುಳು: ಭೂನಾಗನಾಕೃತಿಯನು ವ್ಯಾಕೇಶನ ಹೋಲಿಸಿಪರೆ ವ್ಯಾಕೇಶನಾಗಲಜ್ಜೆವುದೆ (ಪಪಪ. ೩೫೯); ತಂಬೂಳಿ ಪಾತ್ರಪಾಜಿ ರಂಬಿಶುಕ್ಲ ಗಂಡುವಾಳ ಜಲೂಕ ಭೂನಾಗ ಪಾದೋದರಕ್ರಿಮ್ಯಾದಿ ದ್ವೀಂದ್ರಿಯಗಳ್ (ಕಕ್ರಕ್ರ. ೪೧). ೨. ಒಂದು ಬಗೆಯ ಮರ: "ಭೂಮಿಲತಾ–ಭೂನಾಗ" (ಚಪಂ. ೦೦೩); ಬೆಟ್ಟದಾವರೆಮರಂ ಭೂನಾಗ ಜಾಜೀಯಮುಂ . . . ಇರ್ಕುಂ (ಪಮೃಕ. ೬-೧೩). ೩. ಪಾದರಸದಂತಿರುವ ಒಂದು ಬಗೆಯ ಧಾತು; ಕ್ಷಿತಿನಾಗ: "ಭೂಜಂತು – ಭೂನಾಗ" (ವಚಿ. ೦೦೦).

ಭೂನಾಗಕಲ್ಕ = ಭೂನಾಗವನ್ನು ಸೇರಿಸಿ ಮಾಡಿರುವ ಗಚ್ಚಿನಂತಹ ಔಷಧದ್ರವ್ಯ: ಭೂನಾಗಕಲ್ಕ ಒಮ್ಮ ಪಲು, ಮೆಣಸು ನಾಲ್ಕು ಪಲ, ಬೆಳ್ಳುಳ್ಳಿ ವಂದು ಪಲು ಪೂರಸು ಕಲ್ಕವ ಮಾಡಿ (ಪಪಪ. ೫೦). [ಸಂ.]

ಭೂನಾಗಸತ್ವ (ನಾ). ೧. ಎರೆಹುಳುವಿನ ಸಾರ. ೨. ಪಾದರಸದಂತಹ ಒಂದು ಬಗೆಯ ಧಾತುವಿನ ಸತ್ವ: ಗರುಡಪಂಚಾಕ್ಷರಿಯು ಮಂತ್ರೋಚ್ಚರಣೆಯಲಿ ಭೂನಾಗಸತ್ವದ ವೆರಳ ಮುದ್ರಿಕೆಗಳಲಿ . . . ವಿಷಸಂಹರಣ ವಿವಿಧೋಪಾದುದಲಿ ಸೃಪರರು ನಿಂದುದು (ಕಾಪ್ರ. ೫೬-೨೨): P ಎರೆಹುಳುವನ್ನು ಸುಟ್ಟು ಆ ಭಸ್ಮವನ್ನು ಹಾವಿನ ವಿಷದ ಪರಿಹಾರಕ್ಕಾಗಿ ಔಷಧೋಪಯೋಗಿಸುತ್ತಾರೆ ಎಂದು ಹೇಳಲಾಗುತ್ತದೆ. ಭೂನಾಗವೆಂದರೆ ಭೂಮಿಯಲ್ಲಿ ಸಿಗುವ ಪಾದರಸದಂತಹ ಒಂದು ವಸ್ತು. ಇದಕ್ಕೆ ವಿಷವನ್ನು ನಾಶಪಡಿಸುವ ಗುಣವಿದ್ದು, ಇದರ ಸತ್ವವು ನಾಗರಹಾವಿನ ವಿಷವನ್ನು ಪರಿಹರಿಸುತ್ತದೆ ಎಂಬ ವೇರೆ ರೀತಿಯ ವಿವರಣೆಯೂ ಇದೆ. [ಸಂ.]

ಭೂನಾಥ (ನಾ). ಭೂಮಿಯ ಒಡೆಯ; ಅರಸ; ರಾಜ: ಭೂನಾಥಂ ಮದ್ರರಾಜನನಿಂತೆಂದಂ (ಪಂಕಥಾ. ೦೩-೨೮ ಪ): ಇಳೆಯ ಭೂನಾಥರೊಳು ಸತ್ಕರಾರಂದು ದೆಸಗೋಂಡಡೀ ನಾಡ ಮಾತು ಬಾಜುತ್ತರವೆ (ಪಪಾ.೨-೦೩). [ಸಂ.]

ಭೂನಿಂಬ (ನಾ). ಒಂದು ಬಗೆಯ ಸಸ್ಯ: ನೆಲಬೇವು: "ಕಿರಾತತಿಕ್ತ:. ಭೂನಿಂಬಃ. ಆಜಾರ್ಮತಿಕ್ತಃ —ಸಿ ನೆಲಬೇವು. ಇದರಲ್ಲಿ ದೇಶವರವನ್ನೇ ಚಿರಂಯಿತವೆನ್ನುವರು" (ಕಬ್ಬಿಂಔ ೨೦೩); ಭೂನಿಂಬ . . . ಕಷಾಯವಿಕ್ಕಿ ಕೊಡಲು . . . ವುರಾಣಜ್ವರ ಸಹ ದೂರ್ಸ್ಯಂ (ಪಕ್ಕ. ೦೨೬). [ಸಂ.]

ಭೂನೆಲ್ಲಿ (ನಾ). ಒಂದು ಬಗೆಯ ಗಿಡ: ನೆಲನೆಲ್ಲಿ ಗಿಡ: "ಕಾಮಲೆಚಿ – ಭೂನೆಲ್ಲೀಗಿಡ" (ಗಣಾಪು. ೦೩೦). [ಭೂ + ನೆಲ್ಲಿ]

ಭೂಪ (ನಾ). ೧. ಭೂಮಿಯನ್ನು ಪಾಲಿಸುವನು; ದೊರೆ; ಅರಸ: "ರಾಜಾ . . . ಭೂಪಃ. ಮಹೀಕ್ಷಿತ್ —೭ ಪ್ರಜೆಗಳನ್ನು ಸಲಹುವ ಕ್ಷತ್ರಿಯನಾದ ಅರಸಗೂ. . . . ದಿವಾನ ಮುಂತಾದವರಿಗೂ ಹೆಸರುಗಳು" (ಕಬ್ಬಿಂಔ. ೨೪೯): ನಿಸಗವಾಯಿಂತವಾದುದೆ ವೈರಿಭೂಪರಿಂ (ಪಂಚಪಾ.೦೩-೬೯); ಭೂವನಿಗೆ ಬಡಪಾರಂಬರಿಗೆತ್ತಾನದು ಸಲಿತನವೆಂದನಾ ದ್ರುಪದ (ಕುಪ್ಪ. ೬-೬೪); ಭಾವುರೇ ಜಗದೀಶ ತಪಿಯ ರೂಪದರಿ ತಲೆಗಡಿದೆಯೆಂದಾ ಭೂಪರೆಲ್ಲರ (ಕೃಶಾ. ೪೩-೪೭). ೨. (ಆಲಂ) ತನ್ನ ಇಚ್ಛೆಯಂತೆ ನಡೆಯುವವನು: ನಿರಂಕುಶವ್ಯಕ್ತಿ: ಅವನು ಭೂಪ. ಕುಡಕ, ಕಳ್ಳ, ಘಾಟಿ, ಬೇಟೆಗಾರ (ಪಂಕಾ. ೬೪); ಋಣ ತೆಗೆದುಕೊಂಡೇ ಬಂದಿದ್ದ ಭೂಪ (ಪಾಪುಲೀ. ೨೦೩) ೩. [ಗಣಿತ] ಹದಿನಾರು ಎಂಬ ಸಂಖ್ಯೆಯ ಸಂಕೇತ.

ಭೂಪಮಾಧಾತ=ರಾಜರ ಮಧ್ಯದಲ್ಲಿ ಮಾಂಧಾತಚಕ್ರವರ್ತಿಯಂತೆ ಹೆಸರಾಂತವನು: ಬಹಳ ಪ್ರಸಿದ್ಧನಾದವನು; ಒಂದು ಬಿರುದು: ತದಗ್ರಜಂ ಸಮಸ್ತಭುವನಜನಮಿಷ್ಟಾತಂ ಜಾಳುಕ್ಯಾನ್ವಯ ಪ್ರಸೂತಂ ಪರಿಜನಪಾರಿಜಾತಂ · ಭೂಪಮಾಧಾತಂ (ಕೀವಿಚ. XX, ೬೦-೯; 1109). [ಸಂ.]

ಭೂಪಟ (ನಾ). ಭೂಮಿಯ ಪ್ರಕೃತಿಲಕ್ಷಣಗಳನ್ನು, ರಾಜಕೀಯ ವಿಭಾಗ ಮೊದಲಾದ ವಿವರಗಳನ್ನು ಗುರುತಿಸಿರುವ ನಕ್ಷೆ.—ಪಟ: ಭೂಪಟಗಳಲ್ಲಿ ಒಂದು ಖಂಡದ ಅಥವಾ ದೇಶದ ಆಕಾರವನ್ನು ಸಾಕಾದಷ್ಟು ದೊಡ್ಡದಾಗಿ ಬರೆದು ಬೇಕಾದಷ್ಟು ವಿಷಯಗಳನ್ನು ಗುರುತು ಮಾಡಿ ವಿಕ ಕಾಲದಲ್ಲಿ ಕಣ್ಣಿಗೆ ಕಾಣುವಂತೆ ತೋರಿಸಬಹುದು (ಕೂಪ್ರ. II. ೫೬); ಈ ರೇಖೆಗಳನ್ನು ನೋಡಿದ ಕೂಡಲೆ ಭೂಪಟವನ್ನು ನೋಡಿರುವ ದೂರಿಗಾದರೂ ಆಕ್ಷಾಂಶ ರೇಖಾಂಶಗಳ ಹೆಸರು ಬರುತ್ತದೆ (ಪಕ್ಕ್ರ. ೬೨). [ಸಂ.]

ಭೂಪತಿ (ನಾ). ೧.=ಭೂಪ ೧: ಮಗನಬರೊಂದು ಭೂಪತಿಯು ತನ್ನನೊಳಾದಬರೊಂದು . . . ತನ್ನನಾವಗೆಯುಂರಿಯಬ್ಬನೋಲಳುರೆ (ಹಂಪಾ. ೦೨-೦೬೦): ಈತ ಧನುವಿಸರೀತ ವಿದ್ಯದರೀತ ಪರಿಘದರೀತ ಕುಂತದರೀತ ಒಲಬುದಂದಂಧಭೂಪತಿಗಜುಹಿದನು ವಿದುರ (ಕುಪ್ಪ.೮-೬-೨೪);

ಪುಟಿಯುವವ ಭೂಪತಿಯಾದಾನೇ ? (ಗಪ). ೨. = ಭೂಪ ೨ : ಆ ಭೂಪತಿ ಎಲ್ಲಿಗೆ ಹೋಗಿದ್ದಾನೆಂಬುದು ಅವನ ತಾಯಿಗೂ ಗೊತ್ತಿರಲಿಲ್ಲ (ಹುಗಳ್ಕ. ೨೦೪). ೩. ಹಿಮಾಲಯ ಪರ್ವತದಲ್ಲಿ ದೊರಕುವುದೆನ್ನಲಾದ ಗಡ್ಡೆಯುಳ್ಳ ಒಂದು ಬಗೆಯ (ದಿವ್ಯಔಷಧೀಯಗುಣವುಳ್ಳ) ಸಸ್ಯ : 'ಭೂಪತಿಮಾತ್ರೆ' ಪರಾ. [ಸಂ.]

ಭೂಪತಿಮಾತ್ರೆ (ನಾ). [ವೈದ್ಯಶಾ] ಭೂಪತಿ ಎಂಬ ಸಸ್ಯದಿಂದ ತಯಾರಿಸಿದ ಒಂದು ಬಗೆಯ ಗುಳಿಗೆ : ಭೂಪತಿಮಾತ್ರೆಯನು ಮೊಸರು ಚಮ್ಮ ಜೇನುತುಪ್ಪಗಳಲ್ಲಿ ಸೇವಿಸಲು ಮಾಣ್ದು (ನಾಭವತಾಲಕ್ಷಣ) (ಚಾಶಾಸ. ೦೩-೬).

[ಸಂ. ಭೂಪತಿಮಾತ್ರಾ]

ಭೂಪಥ (ನಾ). ಭೂಮಿಯನು ಸೂರ್ಯನನ್ನು ಸುತ್ತುವ ಮಾರ್ಗ : ಭೂಮಿ ಸೂರ್ಯನ ಸುತ್ತಲೂ ಸುತ್ತಿ ಬರುವ ದಾರಿಗೆ ಭೂಪಥವೆಂದು ಹೆಸರು (ಕಖಪ್ರ. ೦೩); ಸೂರ್ಯನನ್ನು ಬಳಸಿನುವ ಭೂಪಥ ಒಂದೇ ಸಮತಲದಲ್ಲಿದೆ (ಆಗಸ. ೦೩).

[ಸಂ.]

ಭೂಪದಿ (ನಾ). ಒಂದು ಬಗೆಯ ಮಲ್ಲಿಗೆ : "ತೃಣಶೂನ್ಯಾ. ಮಲ್ಲಿಕಾ. ಭೂಪದೀ. ಶೀತಭೀರುಃ– ೪ ಮಲ್ಲಿಗೇಗಿಡದ ಹೆಸರುಗಳು" (ನಿಘಂ೦೩. ೦೫೮).

[ಸಂ. ಭೂಪದೀ]

ಭೂಪಾಲ, ಭೂಪಾಳ (ನಾ). ೧. ಭೂಮಿಯನ್ನು ಕಾಪಾಡುವವನು : ಅರಸು ; ರಾಜ : ಜಾತಮಾತ್ರಕೆ ಜನನ ಮರಣದ ಭೀತಿ ಬೆಂಬಡದಂತೆ ಗೋತ್ರಜಭೀತಿ ಭೂಪಾಲರಿಗೆ ಪಿರಿದಹುದೆಂದನಾ ಶಕುನಿ (ಕುಪಾ.೨-೧೯). **ಭೂಪಾಳ** : ೧. ವಿಶಾಕೆಯೆ ಆಗಿ ದೇವ ರಿಪುಭೂಪಾಳ್ಗಳೊಳ್ ಕಾದುದ್ದೆ (ಕುಪಣ. ೦೩-೩೦). ೨. [ಸಂಗೀತ]ಒಂದು ರಾಗದ ಹೆಸರು: ಭೂಪಾಳಾದಿ ರಾಗಂಗಳ್ (ಚಾಗಚಂ. ೦೮೩-೦೩).

[ಸಂ.]

ಭೂಪಾಳ 'ಭೂಪಾಲ' ನೋ.

ಭೂಪಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಮನುಜರು ಭೂಪಾಳಿ ಧನ್ಯಾಸಿಗಳ ಪಾಡ ಇನ ಮೂಡಮೆಟ್ಟಿನೊಳ್ ಮೂಡೆ (ಕಚಂಪಾಂ. ೦೩-೩೪) ; ಬಳಿಕ ಸಮಸ್ತರಾಗಂಗಳೊಳಗೆ ರಾಮಕ್ರಿಯೆ ಭೂಪಾಳಿ . . . ಮಧ್ಯಮಾವತಿಯೆಂಬ ಮೂಱವತ್ತಾಱು ರಾಗಂಗಳೇ ಮುಮ್ಮಿಮಾಗಿ (ಪಪಗ. ೨೩೪) ; ಸಂಗೀತಚಯದಿಂದೊರಿದು ರತಿಮತ್ತು ಭೂಪಾಳಿಯಂ ಪಾಡೆ (ಪಪಪ್ರ. ೦೪-೩೦) .

[ಸಂ. ಭೂಪಾಲೀ]

ಭೂಪುಟ (ನಾ). [ವೈದ್ಯಶಾ] ಔಷಧಿಗಳನ್ನು ಮೆಲುವಲ್ಲಿ ಪುಟಕ್ಕೆ ಹಾಕುವುದು : ಪಾವುಮೆಕ್ಕಾಯಿಗಳನ್ನು . . . ಎಳು ದಿನ ಭೂಪುಟದಲ್ಲಿರಿಸಿ ತೆಗೆದು . . . ಒಂದೊಂದು ಹೋಳೆ ಮೆಲ್ಲಲು ಕಿಮ್ಮು ಅಚ್ಚುಸ ಪರಿಹರ (ಗಶಕ್ಕ. ೨೦೬) ; ತಾಪಸುತೆ ತಾಪಿಯಸುತೆ ಕಲುಷಿಸುತೆ ಮತುಮೈದ್ಯ ಭೂಪುಟದಿ ಜೀವರಸಗಳ ಪಚಸುವಂತೆ (ಕುಂಕುಳ. ೦೫೯).

[ಸಂ.]

ಭೂಪುತ್ರಿ (ನಾ.) ಭೂಮಿಯ ಮಗಳು ; ಸೀತಾದೇವಿ : ಭೂಪುತ್ರಿ ಸಂನ್ಯಾಸಿಯೆಂದಡಿಯಿಟ್ಟುರ್ ದಶಕಂಠನುಯ್ದಿವಳನೆಂದಾಯುಷ್ಯಮಂ ನೀಗಿದಂ (ಚಾಪಾಗಚ. ೧೩).

[ಸಂ. ಭೂಪುತ್ರೀ]

ಭೂಪೇಂದ್ರ (ನಾ). ರಾಜರುಗಳ ಒಡೆಯ ; ಚಕ್ರವರ್ತಿ : ಭೂಪೇಂದ್ರ ಬೆಸಸು ಬೆಸಸಮ್ಮಂ ನೀನೆಂದುದನೆ ಬಯಸಿ ತೀರ್ದರ್ ಬಂದವು (ಜಾಂಕಥ. ೯-೭೦); ಮಾತೃನಿಕಟದರ್ಭಕನಾದಂ ಸಾಂದ್ರಾನಂದವನಾ ಭೂಪೇಂದ್ರನ ಪ್ಪನ್ನಪುನಜಲರುಹಕ್ಕೊದಮಿದಂ (ಚಂಪ್ರಕ್ರ. ೩-೧೪).

[ಸಂ.]

ಭೂಪ್ರದಕ್ಷಿಣ (ನಾ). ಭೂಮಿಯನ್ನು ಸುತ್ತು ಹಾಕುವುದು : ನೂಱಪ್ಪತ್ತು ಬೇಳೆ ಭೂಪ್ರದಕ್ಷಿಣವ ಮಾಡಿದರಿಲ್ಲ ಕಾಣರಣ್ಣ (ಸಿದ್ಧೇಶ. ೦೫-೨೪೪).

[ಸಂ.]

ಭೂಪ್ರದಕ್ಷಿಣೆ (ನಾ). = ಭೂಪ್ರದಕ್ಷಿಣ : ದೇವಸ್ಥಾನವನ್ನು ಮೂರು ಸಲ ಪ್ರದಕ್ಷಿಣೆ ಮಾಡಿದರೆ ಪುಣ್ಯ ಬರುತ್ತದೆ ಎಂದು ಜೇಳುತ್ತಾರೆ (ಪೂಗ).

[ಸಂ. ಭೂಪ್ರದಕ್ಷಿಣ]

ಭೂಬಲ (ನಾ). ೧. ರಾಜನಿಗಿರುವ ರಾಜ್ಯದ ಬಲ, — ಶಕ್ತಿ : ಬಲಕ್ಕೆ — ಆಳ್ವಲ . . . ಭೂಜಬಲ- ಭೂಬಲ (ಪಪಪ. ೨೪೭ ಕ್ರಿಮಿ). ೨. [ಜ್ಯೋತಿ] ಜಾತಕನ ಅಧೀನಕ್ಕೆ ಬರುವ ನಿವೇಶನ, ಜಮೀನು ಮುಂತಾದುವುಗಳಿಂದ ಒದಗುವ ಸುಖ ಇತ್ಯಾದಿ : ಆ ಪ್ರತಾಪ ಚಕ್ರವರ್ತಿ ನಿಂಹಣರಾಯನೆಂಬ ಯಾದವನಾರಾಯಣನ ಅವತಾರಕ್ಕೆ ತಾರಾಬಲಂ ಅಯಿಶ್ವರ್ಯಕ್ಕೆಯಾದಿತ್ಯಬಲಂ ಚತುರೋಪಾಯಕ್ಕೆ ಚಂದ್ರಬಲಂ ಭೋಗಕ್ಕೆ ಭೂಬಲಂ ದಿಗ್ವಿಜಯೋದ್ಯೋಗಕ್ಕೆ ಯೋಗಿಗೇಯಲಂ (ಪೌಚಾ. XX. ೨೨೨-೦೦; 1244).

[ಸಂ.]

ಭೂಭರ (ನಾ). ೧. ಭೂಮಿಯ ಹೊರೆ. — ಭಾರ : ದಿತಿಸುತರಂ ಕಂಸಾದ್ಯರನತಿಬಲರಂ ಕೊಲ್ದೆನಿಲಿಪುವೆಂ ಭೂಭರಮಂ (ಜಗ. ೦-೭೯). ೨. ರಾಜ್ಯವನ್ನು ಆಳುವ ಹೊಣೆ; ರಾಜ್ಯಭಾರ : ಸುತನೊಳಜಿತಂ ಜಯಂ ವಿಸ್ತೃತಮಂ ಭೂಭರಮನೆಯ್ದೆ ಯೋಜಿಸಿ ನಿಶ್ಚಿಂತತೆಯ ನೊಳೆಯೆಮ್ಮಂ (ಚಂಪ್ರಕ್ರ. ೭-೩).

[ಸಂ.]

ಭೂಭಾಗ (ನಾ). ಭೂಮಿಯ ಭಾಗ,— ಪ್ರದೇಶ : ಭೂಭಾಗ ಸಭೋಮಿಭಾಗವರಮುಳ್ಕುಜಿ ಕಲ್ಪಜಾದರ್ ವಿರೋಧಿಗಳ್ (ಪಂಕಣ. ೦೦-೦೧೦); ಪ್ರುವಿಲಸದ್ಭಾಕ್ಷಿಂದರೀಕುಂಕುಮಾಂಕತಕೇಳೀಭವನಾಱಿರೋ ವಮುಮುಖಂ ಭೂಭಾಗದೊಳ್ ನಾಕಿಗಂ (ಗಾಚಾ.೪. ೬೬೪) ; ಭೂಭಾಗದ ಕೆಲವು ಕಡೆಗಳಲ್ಲಿ ತುಂಬಾ ಶೀತ (ಜಂಪ್ರ. ೨. ೨೦).

[ಸಂ.]

ಭೂಭಾರ (ನಾ). = ಭೂಭರ ೧ : ಭೂಭಾರಚ್ಛೇದವಿನೋದಿ ಕೃತ್ಸ್ನನಿವಾರೀಗಾನಂದನಂದೋಹಮಂ (ಜಗ. ೦-೦).

[ಸಂ.]

ಭೂಭಾರಕ (ನಾ). ಭೂಮಿಗೆ ಭಾರವಾಗಿರುವವನು : ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನೆಯಮ್ಮಾ . . . ನಿಚ್ಚನಿಚ್ಚ ಪ್ರಾಯಶ್ಚಿತ್ತರಪೊಲ್ಲ ಕೊಡಲುಸಂಗಮದೇವ ಭೂಭಾರಕರ (ಪಗಿ. ೬೩೨).

[ಸಂ.]

ಭೂಭಾರಕತನ (ನಾ). ಭೂಮಿಗೆ ಭಾರವಾಗುವಿಕೆ : ಪೊಡವಿಪನ ರಾಘವನ ಧನುಮಿಂ ಕಡಿವಡೆದುಳಿದ ಗಂಧವಾದನದಡರುವಿಕೆ ತಾನೆನಿತು ಭೂಭಾರಕತನದ ಮಾತು (ಪಪಕ್ಷ. ೦೯-೩೦). [ಭೂಭಾರಕ + — ತನ]

ಭೂಭುಜ (ನಾ). ದೊರೆ; ಅರಸು; ರಾಜ : ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ದೊದಲ್ಗಿಡೆ ಮುನ್ನಮೇಕವಿಂಶತಿ ಪರಿಸಂಖ್ಯೆಯಿಂ ತಮಿಸಿ (ಪಂಕಣ. ೫-೪೩); ಚತುರಬ್ಧಿ ಮೇಖಿರಾವಳಯಿತ ಭೂಮಿಗಾವನೆಜಿಯಂ . . . ಕೂರ್ಮಕನೆಂಬ ಭೂಭುಜಂ (ಜಾಂಕಥ. ೬); ರಾಜ್ಯಮನಾರಾಳ್ದರೊ ಪದ್ಮ ರಾಜವಮೊಲುರ್ವಿಭಾಗದೊಳ್ ಭೂಭುಜರ್ (ಪಕ್ಷ. ೫-೨೦).

[ಸಂ. ಭೂಭುಜ್]

ಭೂಭೃತ್ತು (ನಾ). ೧. ಬೆಟ್ಟ; ಪರ್ವತ : ಎತ್ತಲೆಂದಜಯದು ಮಹಾಗಜ ಮುತ್ತಿದಾ ದ್ವಿವಕರಗಳನು ಭೂಭೃತ್ತಿದ ಹೆಬ್ಬಾವುಗಳ ಹೋಲಿಕೆಯೊಳೊಪ್ಪಿದುವು (ಕಪ್ರ. ೫-೬೬). ೨. ಅರಸು; ರಾಜ : ಅಂತು ಪಾಂಡುರಾಜನಧಿಕೇವನುಮನತವೈರಿಭೂಭೃತ್ತಮಾಜನುಮಾಗಿ ನೆಗಟ್ಟುತ್ತಿರ್ದಂ (ಕಪ್ರ. ೦-೦೦೦ ಪ). ೩. ವಿಷ್ಣು. ೪. [ಗಣಿತ] ವಿಳಿ ಎಂಬ ಸಂಖ್ಯೆಯ ಸಂಕೇತ.

[ಸಂ. ಭೂಭೃತ್]

ಭೂಭೃದ್ವರ (ನಾ). ೧. ರಾಜರಲ್ಲಿ ಶ್ರೇಷ್ಠನಾವನು; ರಾಜಶ್ರೇಷ್ಠ : ಅಂತಿರ್ದ ಭೂಭೃದ್ವರನೊಳ್ ಸೈಪಿನ ಬಿತ್ತಿನಂತೆ ಶ್ರೀಮತಿಯೆಂಬೊಂದು ಪೆಣ್ಣಾಣಿ ಪುಟ್ಟಿದುದು (ಅಮ್ಮ. ೭-೨೩). ೨. ಬೆಟ್ಟಗಳಲ್ಲಿ ಶ್ರೇಷ್ಠ ವಾದುದು. ೧, ೨ : ಪದುಮದ ಸರಿದುನು ದೊರಕೊಳುತ ಮತ್ತದ ಸರಿಯನೆ ಸೋಲಿಸುತ ಭೂಭೃದ್ವರರಾ ತಲೆಯಲೆ ಮೆರೆಯುತ ಮೇಣವರರ ಶಿರಭಾಗದಲಿ ಆ ಎರಡೂ ದಿನಪನ ಪಾದಗಳು ಸೌಖ್ಯವ ತರಲೆಮಗನವರತ (ಧ್ಯಾಶ. ೧೩).

[ಸಂ.]

ಭೂಭೃನ್ನಾಥ (ನಾ)· ೧. ರಾಜರುಗಳ ಒಡೆಯ : ಚಕ್ರವರ್ತಿ. ೨. ಪರ್ವತಗಳ ಒಡೆಯ ; ಹಿಮಾಚಲ. ೧ . ೨ : ವಿಪುಳತರಕಟಕ ನುನ್ಮದ್‌ದ್ವಿಪಹ[ರಿ] ಮಹಿಷೀನಿವೇವ್ಯನುನ್ನತವಾಂ ವ್ಯಪನೀತ ಶ್ರೀಫಲದಂ ವಿವನೀತಕನಪ್ಪನಂತು ಭೂಭೃನ್ನಾಥಂ (ಕಂಪಾ. ೬-೦೦೦). [ಸಂ.]

ಭೂಭ್ರಮಣ (ನಾ). ೧. ಭೂಮಿಯನ್ನು ಸುತ್ತುವುದು; ದೇಶಸಂಚಾರ ಮಾಡುವುದು. ೨. ಭೂಮಿಯು ತನ್ನ ಅಕ್ಷದ ಮೇಲೆ ತಿರುಗುವಿಕೆ: ಇದನ್ನು ಒಂದು ದಿನಕ್ಕೆ ೨೪ ಘಂಟೆಗಳು, ಒಂದು ಭೂಭ್ರಮಣದ ಕಾಲ ಇವಕ್ಕಿಂತ ಸುಮಾರು ೪ ನಿಮಿಷಗಳು ಕಡಮೆ ಎಂಬ ವಾಕ್ಯಗಳಲ್ಲಡಗಿರುವ ಸಂಬಂಧವನ್ನು ತಿಳಿದುಕೊಳ್ಳಬೇಕಾಗಿದೆ (ಕ್ಷಕ್ರ. ೬೯). [ಸಂ.]

ಭೂಮಿ (ಗು). ೧. ಅತಿಶಯವಾದ ; ಮಹತ್ತರವಾದ : ಕೈಕೊಳ್ಳ ನೊಂದನೀ ಭೂಮಿಸಾಧನೆಗಳಲಿ ಮೇಲಾದುದಂ ! (ಶ್ರೀರಾಮಾ. ೬೪-೪೨೬). (ನಾ). ೨. ಹೆಚ್ಚಳ ; ಅತಿಶಯ ; ಸಮೃದ್ಧಿ : ಅಲ್ಪಮೊ ಭೂಮಿಯೊ ಹಿರಿದೋ ಕಿರಿದೋ ಸಿಹಿಯೋ ಕಹಿಯೋ (ಜಾಕೀ. ೩೦-೦): ಶ್ರೀಗುರುವಿನ ಐಹಿಕವ್ಯಾಪಾರದ ತ್ಯಾಗದಲ್ಲಿಯೂ ಭೂಮವಾದ ದರ್ಶನವನ್ನೇ ಪಡೆದಿದ ಕವಿಯ ಹೃದಯ (ಜಾಕೀ. ೬೬). ೩. ಮದುವೆಯ ದಿನದಂದು ವಧೂವರರೂ ಎರಡುಕಡೆಯ ಬೀಗರೂ ಒಂದೇ ಪಂಕ್ತಿಯಲ್ಲಿ ಕುಳಿತು ಮಾಡುವ ಭೂರಿಭೋಜನ.–ಮೃಷ್ಟಾನ್ನದ ಊಟ : ಈರ್ವರನು ಸ್ಥಿರದಂಪತಿಗಳೆನಿಸಿ ನಿಜಮಂದಿರಕ್ಕೆ ಕರೆದೊಯ್ದು ಸಡ್ಗೋತ್ರ ಮುತ್ಕೃದೆಯರ್ವೆರಸಿ ಭೂಮಾದಿಗಳಮ ತೀರ್ಚ್ (ಜಕರೋ. ೩೯-೦೦); ಭೂಮ ಮಾಡುವ ಲಗ್ನದ ನೆವವ ಮುಂದೊರಿಸೆ ಕಾಮಿನಿಯರು ತಂದರು ಸಾಹಿತ್ಯಪದಗಳ ಪ್ರೇಮದಿ ಹಾಡಿ ಪರಸಿದರು (ಸಿಕೃಕಿ. ೨೦-೦೩) ; ಓಲಗ ಊಡಿಸಿ ಭೂಮ ಹಾಕಿದ್ದು ಮುಗಿದು ಹೋಯಿತು ! (ಜಂದಪ್ರ. ೧೮). ೪. ಆಹಾರ : ಹೋದು ಸಾಕು ಭೂಮು ಬೇಕು ಭೂದೇವಿಯು ಬೇಡಿಕ (ಜಕಉ. ೨೯೦-೯). ೫. ವಿರಾಟ್ಪುರುಷ ; ಪರಮಾತ್ಮ: ಪರಬ್ರಹ್ಮ: ಎಲ್ಲಿ ಮತ್ತೊಂದನ್ನು ಕಾಣುವುದಿಲ್ಲವೋ . . . ಮತ್ತೊಂದನ್ನು ಅರಿಯುವು ದಿಲ್ಲವೋ ಅದು ಭೂಮವು (ಶ್ರಷ್ಣಾ. ೦೧೨) ; ವ್ಯಕ್ತಿಯೊಪವನು ತನ್ನ ಜೀವನದ ಎಲ್ಲ ವ್ಯವಹಾರಗಳಲ್ಲೂ ಭೂಮದರ್ಶನವ ಸಾಧಿಸ್ಕೆ ಪ್ರಯತ್ನಿಸ ಬೇಕು (ಪುಣ್ಯಕ. ೩ ೬೦೫); ಅವರು ಭೋಗವೈಭವಗಳ ನಡುವೆ ಬಾಳಿದರೂ ಅವರ ದೃಷ್ಟಿ ಅವರಾಚಿಗಿರುವ ಭೂಮದೆತ್ತಗೆ (ಜಂಬೀ. ೬೮). ೬. ಭೂಮಿ: ಧರಣಿ.

ಭೂಮದ ಪದ=ಭೂಮದ ಊಟ ಮಾಡುವಾಗ ಎರಡು ಕಡೆಯ ಬೀಗರು ವಿನೋದಕ್ಕಾಗಿ ಪರಸ್ಪರರ ಮೇಲೆ ದೋಷಾರೋಪಣೆ ಮಾಡುತ್ತಾ ಹಾಡುವ ಹಾಡು.– ಪರಿಯುವ ಹಾಡು : ಕಲ ರಸೀದವಳೆಯರು ಮರೆತಿರುವ ಊಟದ ಹಾಡುಗಳನ್ನು ಭೂಮದ ಪದಗಳನ್ನು ನೆನಪು ಮಾಡಿಕೊಳ್ಳುವುದರ ಸಲುವಾಗಿ (ಪೀಜಾಚ. ೦೩೨). **ಭೂಮದ ಹಾಡು**=ಭೂಮದ ಪದ ; ☞ ಪಧೂವರರಿಗೆ ಭೂಮದ ಸಂದರ್ಭದಲ್ಲಿ ಆರತಿ ಎತ್ತುವಾಗ ಕೃಷ್ಣ–ರುಕ್ಮಿಣಿ, ಶಿವ–ಪಾರ್ವತಿ ಮೊದಲಾದ ದೇವತೆಯರಿಗೆ ಹೊಂದಿಸಿದಂತೆ ಹೇಳುವ ವಿವರಣೆ ಗಳಿವೆ. ಆಧುನಿಕಸಮಾಜದಲ್ಲಿ ಮದುವೆಯ ಸಂದರ್ಭದಲ್ಲಿ ಹೇಳುವ 'ಬೀಗರಹಾಡಿ' ಗೂ 'ಭೂಮದ ಹಾಡು' ಎಂದು ಕರೆಯುವು ದ್ಕಾರೆ : ಭೋಜನ ದಾಡುತ್ತಿರುವಾಗ ಎರಡೂ ಪಕ್ಷದ ಸ್ತ್ರೀಯರು ಪರಸ್ಪರರ ಮೇಲೆ ಕೋಟಗಳನ್ನು ಮುಡಿ ಭೂಮದ ಹಾಡು ಹಾಡಹತ್ತಿದರು (ತುಗಚ. ೬೨); ಸುಂದರಕ್ಕ ಇವ್ವರೆಂದೇ ಭೂಮದ ಹಾಡಿದ್ದಿಲ್ಲಿ ಗಂಡಿಸದಲ್ಲದ್ದೇ ನೇಳುಗೈ ಅಯಿತು (ಕ್ಷಿ. ೫೬). **ಭೂಮದೂಟ**= ಮದುವೆಯ ಸಂದರ್ಭದಲ್ಲಿ ವಧೂವರರೂ ಎರಡು ಕಡೆಯ ಬೀಗರೂ ಒಂದೇ ಪಂಕ್ತಿಯಲ್ಲಿ ಕುಳಿತು ವಿನೋದದಿಂದ ಮಾಡುವ ಊಟ.–ಭೋಜನ: ☞ ಈ ಸಂದರ್ಭದಲ್ಲಿ ವಧೂವರರ ಮುಂದೆ ಅಗ್ರದ ಬಾಳೆಯೆಲೆ ಗಳನ್ನು ಜೋಡಿಸಿ ರಂಗವಲ್ಲಿ ಮುಂತಾದುವುಗಳಿಂದ ಅಲಂಕರಿಸಿ, ಎಲೆಗಳಿಗೆ ಅನೇಕ ಬಗೆಯ ಅಡುಗೆಗಳನ್ನು ಬಡಿಸಂಕ್ತಾರೆ. ಈ ಸಮಯದಲ್ಲಿ ಎರಡು ಕಡೆಯವರೂ ವಧೂವರರಲ್ಲಿ ಸಲಿಗೆಯನ್ನು ಹೆಚ್ಚಿಸಲು ಪರಸ್ಪರರ ಎಂಜಲು ತಿನ್ನಿಸುವ ವಿನೋದ ನಡೆಯುತ್ತದೆ. ಆಗ ಹಾಡುವ ಹಾಡುಗಳಲ್ಲಿ 'ಬೀಗರ ಹಾಡು'ಗಳನ್ನು ಹೇಳುವುದೂ ಉಂಟು : ಪಾನಿನ್ನು ಬರ್ತೀನಿ ದೇವರೂ . . . 'ಉಂಟೇ, ರಾತ್ರಿ ಭೂಮ ದೂಟ ನೋದಕೊಂಡು . . . '(ಜಕರೆ. ೩೩). [ಸಂ. ಭೂಮನ್]

ಭೂಮಂಡಲ, ಭೂಮಂಡಳ (ನಾ). ೧. (ಮಂಡಲಾಕಾರವಾದ್ದ) ಭೂಮಿ : ಧರಣಿ : ಪಾಂಡುತನಯನ ಭೃತ್ಯರು ಭೂಮಂಡಲದೊಳಗೆ ಸುಳಿವ ಜನಮಮುಂಡಳಗಳು ಕರುಸಿದವು (ಜಷ್ಣ. ೯-೩); ಮಗನೆ ಸಲ ಭೂಮಂಡಲಂ ದ್ವಿಪದಲ್ಲವೆ (ಕೃಬಾಣಾ. ೨-೩೩) ; ಈ ಭೂಮಂಡಲದ ಸುತ್ಸಳತೆ ೨,೫೨,೦೦೦ ಸ್ಕೇಡಿಯಂ ಎಂದು ಅವನು ಕಂಡುಹಿಡಿದ (ಜಜಪ-೭). **ಭೂಮಂಡಳ** : ೨. ಸ್ಥಳ ; ಎಡೆ ; ಜಾಗ ; ಪ್ರದೇಶ : ಭೂನಾಥಂ ಪೊಕ್ಕಂ ಭವ್ಯನಂದನಸಮಾಪರಣಭೂಮಂಡಳಮಂ (ಕಾಂಕಪ್ರ. ೯-೦೩೩). [ಸಂ.]

ಭೂಮಂಡಳ ' ಭೂಮಂಡಲ ' ನೋ.

ಭೂಮಂಡಳಪತಿ (ನಾ). ಭೂಮಿಯ ಒಡೆಯ ; ರಾಜ; ಭೂಮಂಡಳಪತಿ ಬುಧಚಿಂತಾಮಣಿ ಜನಚಂದ್ರನಿರೆ ಸಭಾಮಂಡಳದೊಳ್ (ಕಾಂಕಪ್ರ. ೯-೦). [ಸಂ. ಭೂಮಂಡಲಪತಿ]

ಭೂಮತೆ (ನಾ)· ಹಿರಿಮೆ ; ಉದಾತ್ತತೆ ; ಮಹತ್ತ್ವ : ನಿಸ್ಸ ಈ ದಿವ್ಯ ನಿರ್ಲಕ್ಷ್ಯತಾಸ್ಥಿರತೆಯಂ ಭೂಮತೆಯ ಭವ್ಯತೆಯ ಬ್ರಹ್ಮಗಾಂಭೀರ್ಯಮಂ ದಯಪಾಲಿಸೆನಗೆ (ಅಗ್ನಿಹೋ.೬೬). [ಸಂ. ಭೂಮತಾ]

ಭೂಮಧ್ಯಪ್ರದೇಶ (ನಾ)· ಭೂಮಿಯ ಮಧ್ಯಭಾಗ : ಅಫ್ಘಾನಿಸ್ತಾನ, ನೇಪಾಳ, ಲಾವೋಸ್ ಸೆಂತಹ ಭೂಮಧ್ಯಪ್ರದೇಶಗಳಿಗೇ(Land Locked Countries) ಇತರ ರಾಷ್ಟ್ರಗಳ ಮೂಲಕ ರೇವುಪಟ್ಟಣಗಳಿಗೆ ಹಾದು ಹೋಗುವ ಅನುಕೂಲ ಒದಗಿಸುವುದರಲ್ಲಿ ಇಜಾಫೆಯು ವಿಶೇಷ ಆಸಕ್ತಿ ವಹಿಸಿದೆ (ಅಇಸಂ. ೫೩). [ಸಂ.]

ಭೂಮಧ್ಯರೇಖೆ (ನಾ). ಭೂಗೋಳವನ್ನು ಪೂರ್ವಪಶ್ಚಿಮವಾಗಿ ಎರಡು ಸಮಭಾಗಗಳಾಗಿ ವಿಭಜಿಸುವಂತೆ ಮಧ್ಯದಲ್ಲಿ ಕಲ್ಪಿಸಿರುವ ರೇಖೆ ; ಸಮಭಾಜಕವೃತ್ತ : " ಭೂಮಿಯ ಎರಡು ಧ್ರುವಗಳಿಗೂ ಸಮಾನಮೂರವಲ್ಲಿರುವ ಭೂಮಿಯ ದೊಡ್ಡವೃತ್ತ ; ಸಮಭಾಜಕವೃತ್ತ; ವಿಷುವದ್ವೃತ್ತ : ನಿರಕ್ಷರೇಖೆ; ಭೂಮಧ್ಯರೇಖೆ " (Equator. ೧೦೫೩) ; ಭೂಮಧ್ಯರೇಖೆಯಿಂದ ಬಡಗಕ್ಕೂ ತೆಂಕಣಕ್ಕೂ ಹೋದ ಹಾಗೆ ಗುರುತಿಸ ಬಿಕ್ಕೆಗಳು. . . ದೃಷ್ಟಿಗೆ ಬೀಳಹತ್ತುತ್ತವೆ (ಪುಂಂಶಾ. ೪-೬೬); ಭೂಮಿಯಂತೆ ಮೇರುಭಾಗದಲ್ಲಿ ಸ್ವಲ್ಪ ಚಪ್ಪಟೆಯಾಗಿಯೂ, ಭೂಮಧ್ಯರೇಖೆಯು ಸಮಿಪದಲ್ಲಿ ಸ್ವಲ್ಪ ಉಬ್ಬಿಕೊಂಡೂ ಇದೆ (ಕೂಸಪ-೩). [ಸಂ. ಭೂಮಧ್ಯರೇಖಾ]

ಭೂಮಧ್ಯರೇಖೆ (ನಾ). = ಭೂಮಧ್ಯರೇಖೆ : ಭೂಮಧ್ಯರೇಖೆಯ ಮೇಲೆ ಯಾವಾಗಲೂ ಹನ್ನೆರಡು ತಾಸಿನ ದಿನಮಾನವಿರುತ್ತದೆ (ಪುಂಂಶಾ. ೪-೬೬). [ಸಂ. ಭೂಮಧ್ಯರೇಖಾ]

ಭೂಮಾನ (ನಾ). ೧. ಭೂಮಿಯ ತೂಕ : ಓಜಾಯಿತರೋಜೆಯೊಲವರದ ಭೂಮಾನಕ್ಕಂ ಸಕ್ಕಸಮನಾಗಿ ತೂಗುವಂತೆ (ಅಪಂಕ್ತಿ. ೩-೩೦ ಪ). ೨. ಮಲ್ಲ ಯುದ್ಧದ ನಿರ್ದಿಷ್ಟವಾದ ಎಲ್ಲೆಯುಳ್ಳ ಸ್ಥಳ ; ಕಂಸ್ತಿಯಂ ಕಣ : ಅಖಾಡ: ಒರ್ವೊರ್ವರಂ ಮೂವರಿಸಿ ನುಡಿಯುತ್ತುಮಿರ್ವರುಂ ಭೂಮಾನದಳವಿಜೊಳ್ ಪರಿಯಲನುಗೆಯ್ವಾಗಳ್ (ಅಪಂಕ್ತಿ. ೧೦-೩೩ ಪ). [ಸಂ.]

ಭೂಮಾನುಭೂತಿ (ನಾ). ಬ್ರಹ್ಮಸಾಕ್ಷಾತ್ಕಾರ : ಬ್ರಹ್ಮಾನಂದದ ಅನುಭವ : ಜೈಕ್ಯರವಿಯ ಸೌಂದರ್ಯವು ತಿಮ್ಮಿಯುಂತಹವಳಿಗೂ ಹೃದಯದಲ್ಲಿ ಭೂಮಾನುಭೂತಿ ಸಂಚಾರವಾಗುವಂತೆ ಮಾಡಿತ್ತು (ಪುಕಟು.೫೭೦) ; ತನಗೆ ಆಧ್ಯಾತ್ಮಿಕಭೂಮಾನುಭೂತಿಯನ್ನು ನೀಡಿದ ಶ್ರೀಗುರುವಿನ ಐಹಿಕವ್ಯಾಪಾರದ ತ್ಯಾಗದಲ್ಲಿಯೂ ಭೂಮವಾವ ದರ್ಶನವನ್ನೇ ಪಡೆದಿದೆ ಕವಿಯ ಹೃದಯ (ಶಾಪ್ರೀ. ೭೭). [ಸಂ.]

ಭೂಮಾಲೀಕ (ನಾ). ಜಮೀನಿನ ಪೂರ್ಣಾಧಿಕಾರವನ್ನು ಹೊಂದಿರುವವನು : ಭೂಸ್ವಾಮ್ಯವುಳ್ಳವನು : ಭೂಮಾಲೀಕರು ಜೀತದಾಳುಗಳಿಗೆ ಈಗಲೂ ಸ್ವಾತಂತ್ರ್ಯ ನೀಡಲು ಇಷ್ಟಪಡುವುದಿಲ್ಲ (ಕೃಪ್ರ).

[ಭೂ + ಮಾಲೀಕ]

ಭೂಮಿ (ನಾ). ೧. ಮನುಷ್ಯರು ವಾಸಮಾಡುತ್ತಿರುವ ಲೋಕ ; ಭೂಲೋಕ : ನಾನು ಭಕ್ತನಾದಡೆ ನೀನು ದೇವನಾದಡೆ . . . ಭೂಮಿಯಾಕಾಶವನೊಂದುಮಾಡಿ ಚಂದ್ರ ಸೂರ್ಯರಿಬ್ಬರ ಕಾಳವ ಮಾಡಿ ಆಡುವೆ (ಅಕಪ್ರ. ೫೪-೫೫) ; ಭೂಮಿಗೆ ಶರಸಿಧಿ ಸಱಗೆಂಬಾ ಮಾತಂತಿರ್ಕೆ (ದಶಮು. ೨-೫೭) ; ಭೂಮಿ ಒದು ದೊಡ್ಡ ಗೋಳದ ಹಾಗೆ, ಚಂಡಿನ ಹಾಗೆ ಇದೆ (ಕೂಪ್ರ. ೦). ೨. ನೆಲ : ವಿಮಾನ ಭೂಮಿಗಿಳಿಯಲು ಇನ್ನೂ ಇಪ್ಪತ್ತು ನಿಮಿಷಗಳಿವೆ (ಕೂಪ್ರ). ೩. ಹೊಲ, ಗದ್ದೆ, ತೋಟ ಮೊದಲಾದುವು; ಜಮೀನು : ಕಪ್ಪು ಮಣ್ಣಿನ ಭೂಮಿಯನ್ನು ವರ್ಷ ವರ್ಷ ಉಳುವ ಅಗತ್ಯವಿರುವುದಿಲ್ಲ (ಕೃಪ್ರಮು. ೪) ; ಭೂಮಿ ಮಾರಿ ನಾಮ ಪಾಕ ಕೊಂಡ (ಗಾಪ್ರ). ೪. [ಛಂದ] ಮೂರು ಗುರುಗಳುಳ್ಳ ಗಣ ; ಮಗಣ (— — —) : "ಗುರು ಮೂರಾರಲ್ ಭೂಮಿಯಕ್ಕುಂ" (ಕಂಗಣ ೧೫೬-೬೦) ; ಮಗಣಂ ಭೂಮಿಯೆನಿಸ್ಕುಂ (ಕರ್ನಾಗಣ. ೦-೭೬ ಕಾಪದ್ಯ).

ಭೂಮಿಕಾಣಿ = ಹೊಲಗದ್ದೆ ಮೊದಲಾದ ಜಮೀನು. — ಆಸ್ತಿ : ಅವನನ್ನು ರಾಜ ತನ್ನ ಆಸ್ಥಾನಿಕನಾಗಿ ಮಾಡಿ ಬೇಕಾದಷ್ಟು ಭೂಮಿ ಕಾಣಿಗಳನ್ನು ಕೊಟ್ಟನು (ಕ್ರಪ್ರಾ. II. ೩೫೬); ನನಗೆ ಅನೇಕ ಗ್ರಾಮಗಳೂ ಭೂಮಿಕಾಣಿಯೂ ದಾನವಾಗಿ ದೊರಕಿದ್ದುವು (ಕೃಪ್ರಾಪ್ರ. ೦೭). ಭೂಮಿಗಿಳಿ = (ಆಲಂ) ಬಿಂತೆ ಮೊದಲಾದ ಕಾರಣದಿಂದ ಕುಸಿ; ಎದೆಗುಂದು: ಈಗ ಅವನ ನಡತೆಯನ್ನು ನೋಡಿದೊಡನೆ ಸುಂದರಿ ಭೂಮಿಗಿಳಿದು ಬಿಟ್ಟಳು (ಹಳ್ಳಾ. ೩೨). ಭೂಮಿಗೆ ಭಾರ = ಉಪಯೋಗವಿಲ್ಲದ ಹೊರೆ; ಅಪ್ರಯೋಜಕವಾದುದು : ದೂರದಲ್ಲಿಯೆ ಸಾಲು ನಿಂತ ಪರ್ವತಶಿಬಿರ ಅಗಿಲ್ಲ ಭೂಮಿಗೆ ಭಾರ (ಪಂಚು. ೩೦-೨೦). ಭೂಮಿ ತೂಕದ ಮನುಷ್ಯ = ದೊಡ್ಡ ವ್ಯಕ್ತಿ: ಉದಾತ್ತಸ್ವಭಾವವವನು: ಭೂಮಿ ತೂಕದ ಮನುಷ್ಯರಾದ ಅವರನ್ನು ಕಂಡರೆ ಎಲ್ಲರಿಗೂ ಗೌರವ (ಕೃಪ್ರ). [ಸಂ.]

ಭೂಮಿಕಂಪ (ನಾ). ಭೂಮಿಯಲಿ ನಡುಗುವುದು : ಭೂಕಂಪ : ಕಲಿರಾಧೇಯ ಬರುತಿರೆ . . .ವಾಯಸದ ತಡೆ ಭೂಮಿಕಂಪ . . . ಗಜಾಶ್ವ ನಿಕಾಯ ರಥವಾಜಿಗಳ ಕಂಬನಿ ಕಾಣಲಾಯ್ತು (ಕಜಾಕೃ. ೯-೫೬). [ಸಂ.]

ಭೂಮಿಕಾಶ್ರಯ (ನಾ). ೧. ಉಬ್ಬರಿಗೆಯ ಮನೆಗಳಿಂದ ಕೂಡಿಕೊಂಡಿರುವುದು. ೨. ವೇಷಾಂತರಗಳಿಂದ ಕೂಡಿರುವುದು : ಪಾತ್ರಗಳುಳ್ಳುದು. ೧. ೨ : ಆ ಪುರಂ . . . ಅನೇಕಭೂಮಿಕಾಶ್ರಯಮಾಗಿಯುಂ ಕ್ಷಣಭಂಗಿಭೋಭಾಸಂಗತವಾಲ್ಲು (ಶಂಪ್ರಕೃ. ೦-೦೫೬). [ಸಂ.]

ಭೂಮಿಕೆ (ನಾ). ೧. ನೆಲ ; ಭೂಮಿ. ೨. ಮನೆಯ ಅಂತಸ್ತು: ಉಬ್ಬರಿಗೆ: ದಿವಿಜೇಂದ್ರಾರ್ಚಿತವುಚ್ಚಗಂ ದಶಮದೊಳ್ ನಿಂದಂದದೊಲ್ಮೂಱು ಸಾಲ್ವು ವಲಂ ಭೂಮಿಕೆಯಿಂ ಮುಚ್ಚವಕದಿಂ ಗೇಹಕ್ಕೆ (ಶಾಕಥ. ೪-೦೮); ರಾಜಮಂದಿರಮಂ ಪೊಕ್ಕು ಕರುಮಾಡದ ಮೊದಲ ಭೂಮಿಕೆಯೊಳ್ಕಿದ ವಿಶಾಲಹಂಸತೂಲದೊಳರಿಯುಂ ಪಾಪಂ ಕುಳ್ಳಿರ್ದುರ್ (ಶಂತ್ರಕೃ. ೬-೫೬ ಪ). ೩. ಹಂತ ; ಮಟ್ಟ ; ಮೆಟ್ಟಿಲು : ಗೀತೆಯ ಕಾರ್ಯ ಆಜ್ಞಾನಗಳನ್ನು ವ್ಯಾಖ್ಯಾನಿಸುವ ಭೂಮಿಕೆಗೇರಿಸುವುದಕ್ಕಿಂತ . . . ಭಗವಲ್ಲೀಲೆಯಲ್ಲಿ ಭಕ್ತರ ಕರ್ಮಯೋಗಕ್ಕೆ ಇಂಬು ಮೂಡಿಕೊಡುವುದಾಗಿದೆ (ಕುಗೀಸಾ. ೦೫); ಇಲ್ಲಿಲ್ಲಾ ಲಾಲಿತ್ಯದಿಂದ ಭವ್ಯತೆಯವರೆಗೆ ವಿವಿಧ ಭೂಮಿಕೆಗಳಲ್ಲಿ ವ್ಯಾಪಿಸುವ ದೇವತೆಯ ಚಿತ್ರಗಳಿವೆ (ಕೃಸಾದೇ. ೯೯). ೪. ಮುನ್ನುಡಿ ; ಪ್ರಸ್ತಾವನೆ. ೫. ನಿಲುವು : ತನ್ನ ಭೂಮಿಕೆಯನ್ನು ಕುಮಾರಿಯು ಸ್ಪಷ್ಟಗೊಳಿಸಿದಳು (ಸುಚಂ. ೭೪೦). ೬. ಹಿನ್ನೆಲೆ ; ತಳಹದಿ : ಅದಕ್ಕೆ ಬೇಕಾದ ಭೂಮಿಕೆಯನ್ನು ನಿರ್ಮಿಸಿ ಆ ವಿಚಾರವನ್ನು ರಾಜನ ಕಿವಿಯವರೆಗೆ ಹಾಕಿದರೆ ಕಾರ್ಯಕಾರಿಯಾಗಬಹುದೋ ? (ಪಚಂಕಾ. ೭೪). ೭. ಶಾಸನ ಮುಂತಾದುವನ್ನು ಬರೆಯುವ ಶಿಲಾಫಲಕ : ಕೀರ್ತಿ ಪ್ರಶಸ್ತಿಯುಂ ಸ್ಫಟಿಕಭೂಮಿಕೆಯುಂತೆ (ಕ್ರಚಾ. ೧೦-೬೫). ೮. [ಕಾವ್ಯಮೀ] ನಾಟಕಾದಿ ರೂಪಕಗಳ ಪಾತ್ರ. —ವೇಷ : ಭಕ್ತನು ಕಲ್ಪಿಸಬಹುದಾದ ತಂದೆ, ತಾಯಿ, ಬಂಧು, ಒಡೆಯ, ಸಖ, ನಲ್ಲ ಈ ಮುಂತಾದ ಯಾವ ಬೇಕಾದ ಅಥವಾ ಎಲ್ಲ ಭೂಮಿಕೆಗಳನ್ನು ಪರಮಾತ್ಮನು ಕೈಕೊಳ್ಳಬೇಕಾಗುವುದು! (ಪಕಥ. ೭೦); ದೈವಪುರಾಣಗಳಲ್ಲಿ ಕಾಮನ ಭೂಮಿಕೆಯು ಬೇರೆ ವಿಧವಾಗಿದೆ (ಪಾಕಸ. ೦೬೬). ೯. [ವೇದಾಂತ] ಮೋಕ್ಷಸಾಧಕನಿಗೆ ಹೇಳಿರುವ ಸುಖೇಚ್ಛೆ, ಸದಾತ್ಮವಿಚಾರ, ನಿಸ್ಸಂಗ, ವಾಸನಾಕ್ಷಯ, ಆನಂದಿನಿ, ತುರೀಯ, ತುರೀಯಾತೀತವೆಂಬ ಏಳುಸ್ಥಲಗಳು ; ' ಪೇಳುವೆ ನಿನಗೆ . . . ಭೂಮಿಕೆಗಳಭ್ಯಾಸದಿರವುಗಳ (ಅಮೃಕ. ೦-೦೬). ೧೦. ಮೋಕ್ಷಸಾಧನೆಯ ಬಾಲಲೀಲೆ, ಅಕ್ಷರಾಭ್ಯಾಸ, ಕಾವ್ಯನಾಟಕಾದಿ ಸಾಹಿತ್ಯಾಭ್ಯಾಸ, ದರ್ಶನಾಭ್ಯಾಸ, ಶಾಸ್ತ್ರಾಭ್ಯಾಸ, ಪೂರ್ವಮೀಮಾಂಸಾಧ್ಯಯನ, ವೇದಾಂತಾಧ್ಯಯನ, ವಿವಿಧಾ ವಿಚಾರಣಾ, ತನುಮಾನಸಾ, ಸತ್ತ್ವಾಪತ್ತಿ, ಅಸಂಸಕ್ತಿ, ಪದಾರ್ಥಭಾವಿನೀ ಮತ್ತು ತುರ್ಯಗಾ ಎಂಬ ಹದಿನಾಲ್ಕು ಹಂತಗಳು: ಆಧ್ಯಾತ್ಮಸಕ್ತಿಯವರೆಗೆ ಏಳು ಭೂಮಿಕೆಗಳು ಸಾಧಾನುಷ್ಠಾನಗಳಲ್ಲಿ. ಜ್ಞಾನಭೂಮಿಕೆಗಳೇಳು ಒಟ್ಟು ಹದಿನಾಲ್ಕು ಭೂಮಿಕೆಗಳು (ಜ್ಞಾಕಿ. ೨೩೬). [ಸಂ. ಭೂಮಿಕಾ]

ಭೂಮಿಗೃಹ (ನಾ). ನೆಲದೊಳಗೆ ಕಟ್ಟಿರುವ ಮನೆ; ನೆಲಮನೆ; ನೆಲಮಾಳಿಗೆ : ಮಹಾತನಿರಕ್ಷೋಪಾಯಮುಂ ಬೆಸಗೊಳೆ ಭೂಮಿಗೃಹ ಪ್ರವೇಶ ಮುಜೂಹಿ ಜಯಾ[ಮುಜೂಹಾಜಲಾ] ಭಗಾಹಾದಿ ರಕ್ಷೋಪಾಯಂಗಳನೇಕಂಗಳಂ ಮುಂತ್ರಿಗಣಂ ಪುಡಿದು ತೋಱೆ (ಪಾಂಕಪು. ೬-೨೫ ಪ). ' ಭೂಗೃಹ' ಪರಾ. [ಸಂ.]

ಭೂಮಿಗೋಚರ (ನಾ). ಮನುಷ್ಯ ; ಮಾನವ : ವಿಶ್ವವಿದ್ಯಾಧರ ಭೂಮಿಗೋಚರಕಿರೀಟಶಿಖಾಮಣಿ ಜಂಬಿತಕ್ರಮಾ (ಪಾಂಕಪ್ರ. ೧-೬) ; ವಿಯಚ್ಚರಪತಿಯಪ್ಪ ರಾವಣನಿರಲ್ ಕರವೇಳೀದರಪ್ಪ ಭೂಮಿಗೋಚರ ರೊಳಸೇವ್ಯರೊಳ್ ತನಗೆ ತಂಕರಭಾವಮನಪ್ಪ ಕೆಯ್ದಂ(ಪಂಗಾಪು. ೦೦-೦೦೪). 'ಭೂಗೋಚರ' ಪರಾ. [ಸಂ.]

ಭೂಮಿಚ್ಛಿದ್ರನ್ಯಾಯ (ನಾ). ಭೂಮಿಯನ್ನು ಹಂಚುವ ಬಗ್ಗೆ ರಾಜನು ಅನುಸರಿಸಬೇಕಾದ ನಿಯಮ. —ವಿಧಾನ : (ಕೂಆಸ. ೦೪೨). ಪ 'ಭೂಮಿಚ್ಛಿದ್ರ' ಎಂದರೆ ಕೃಷಿಗೆ ಅನರ್ಹವಾಗಿರುವ ಭೂಮಿ ಎಂದರ್ಥ. ಈ ವಿಷಯವು ಕೌಟಿಲ್ಯನ ಅರ್ಥಶಾಸ್ತ್ರದ ೨ನೆಯ ಅಧಿಕರಣದಲ್ಲಿ 'ಭೂಮಿಚ್ಛಿದ್ರವಿಧಾನಂ' ಎಂಬ ೨೦ನೆಯ ಪ್ರಕರಣದಲ್ಲಿ ಸೂಚಿತವಾಗಿದೆ. ಅದರಲ್ಲಿ ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಯನ್ನು ಗೋಮಾಳ, ತಪೋವನ, ಹೂದೋಟ, ಮೃಗವನವಾಗಿ ಪರಿವರ್ತಿಸುವ ವಿಧಾನ, ಬೇಡರ ಕಾಟದಿಂದ ನುಸುಳಿಕೊಂಡು ಬರುವ ಜಿಂಕೆಗಳಿಗಾಗಿ "ಸರ್ವಾತಿಥಿಮೃಗ" ಎಂಬ ವನವೊಂದನ್ನು ನಿರ್ಮಿಸುವುದು ಮೊದಲಾದ ಭೂಮಿಯಂ ಹಂಚಿಕೆಗೆ ಸಂಬಂಧಪಟ್ಟ ರಾಜನು ಅನುಸರಿಸಬೇಕಾದ ವಿಧಾನಗಳ

ವಿವರಣೆ ಇದೆ. ಇದಲ್ಲದೆ 'ಭೂಮಿಚ್ಛಿದ್ರಾಪಿಧಾನನ್ಯಾಯ' ಎಂಬ ಮತ್ತೊಂದು ನ್ಯಾಯವೂ ಇದೆ. [ಸಂ.]

ಭೂಮಿಜ (ನಾ). ೧. ಭೂಮಿಯಲ್ಲಿ ಹುಟ್ಟುವಮು ; ಮರ : ಪಾರಿಜಾತಕ್ಕೆ ಭೂಮಿಜಂಗಳು ಸಲೆ (ಶಪು. ೪೪-೩೨); ಗಿರಿಗಳಿಂ ಭೂಮಿಜಗಳಿಂ ತಳ್ಕ ಬನಂಗಳಿಂ (ಭುಜಬಲ. ೨-೪). ೨. ಭೂದೇವಿಯ ಮಗ ; ಕುಜ ; ಭೌಮ. ೩. ನರಕಾಸುರ. ೪. ಮನುಷ್ಯ. ೫. [ಅಶ್ವಶಾ] ಕುದುರೆಗಳಲ್ಲಿ ಒಂದು ಬಗೆ : "ಭೂಮಿಜಂಗಳಂ ಆಜಾನೇಯಂಗಳೆಂಬುದು" (ಪಣಿಮು. ೬೨-೨೮೩). ೬. [ವಾಸ್ತು] ಒಂದು ಬಗೆಯ ಶಿಲ್ಪಶೈಲಿ (?) : ವಿಶ್ವಕರ್ಮ ಸಭವಂಗೊಂಬಿಲಿದು ಸವ್ಯಕ್ತಿಯೊಳ್ ಭರದಿಂ ಕಂಡರಿಸಿಚ್ಚನೆಂಬಿನೆಗನೇಕ ದ್ರಾವಿಡಂ ಭೂಮಿಜಂ ಖರಿದುಂ ವಾಗಜೆಯಂ ಬಹುವಿಧದ ಭದ್ರೋ ವೇತದಿಂ ಕಣ್ಗೆಸಂದಿರೆ ಕೋಟೀಶಭವಾಲಯಂ ಸುಲಲಿತಂ ಸೌಷ್ಮಂ ಸ್ಫೋಷ್ಮವಂ (ಪಂ. VIII, ಕೀರ್ತಿ. ೨೭೫-೭೫ ೨೭೫). [ಸಂ.]

ಭೂಮಿಜಂಬುಕೆ (ನಾ). ಒಂದು ಬಗೆಯ ನೇರಳೆ ; ನೆಲನೇರಿಳೆ : "ನಾದೇಯಾ- ಭೂಮಿಜಂಬುಕಾ—೨ ನೆಲನೇರಳೆ ಹೆಸರುಗಳು" (ಕರ್ಣಾಂ. ೦೩೯). [ಸಂ. ಭೂಮಿಜಂಬುಕಾ]

ಭೂಮಿಜೆ (ನಾ). ಭೂಮಿಯಲ್ಲಿ ಜನಿಸಿದವಳು; ಸೀತೆ : ಆ ಕಪಿಗ್ಳಿಗಳ್ . . . ಭೂಮಿಜೆಯಂತೆ ಕುಶಲವಾಧಿಸ್ಮಿತರುಂ . . . ಎನಿಸಿದರ್ (ಗಿರಿಕ. ೦-೩೯ ೫); ಬೆರೆಸಿದುದು ಲಜ್ಜೆ ಭೂಮಿಜೆಗಂದು (ಕೈಟಾ. ೦೯-೪೦). [ಸಂ. ಭೂಮಿಜಾ]

ಭೂಮಿತಿ (ನಾ). [ಗಣಿತ] ರೇಖೆ, ಕ್ಷೇತ್ರ, ಘನಾಕೃತಿ—ಇವುಗಳ ಲಕ್ಷಣಗಳ ಮತ್ತು ಪ್ರಮಾಣಸಂಬಂಧಗಳ ಪರಿಚಯವನ್ನುಂಟುಮಾಡಿಕೊಡುವ ಗಣಿತಶಾಸ್ತ್ರ ; ರೇಖಾಗಣಿತ : ಇಂದು ಕಾಮಿನಿಗೆ ಭೂಮಿತಿ ಕರಿಸುವಾಗ ಅವಳ ಕೈಯ ಮೇಲೆ ನನ್ನ ಕೈಯನ್ನಿಡಮೇಕು (ಭುಕ್ಕೆ. ೬೯); ಹೊಲಸುಗೋಡೆಯ ಮೇಲೆ ಇದ್ದಲಿಯುಂದ ತಗೆದ ಭೂಮಿತಿಯ ಆಕೃತಿ ರೇಖೆಗಳು ಇನ್ನೂ ಕಾಣುತ್ತಿವೆ (ಅಪ್ರ. ೪೯೬). 'ಜ್ಯಾಮಿತಿ' ಪರಾ. [ಸಂ.]

ಭೂಮಿದುಂದುಭಿ (ನಾ). ಒಂದು ಬಗೆಯ ವಾದ್ಯ : ಭೂಮಿದುಂದುಭಿ ಪಳ್ಳ ತೋಡಿ ಅದರ ಬಾಯಿಗೆ ಚರ್ಮ ಬಿಗಿದು 'ಭೂಮಿದುಂದುಭಿ' ಎಂದು ಹೆಸರು ಹೇಳಿ ಈ ವಾದ್ಯ . . . ತಾಳವಾದ್ಯವಾಗಿ ಪ್ರಯೋಗದಲ್ಲಿತ್ತೆಂದು ಕೃಷ್ಣಯಜುರ್ವೇದ ಸಾಹಿತ್ಯ ತಿಳಿಸುತ್ತದೆ (ಸಂಗೀತ. ೬೦೯). [ಸಂ.]

ಭೂಮಿದೇವ (ನಾ). ಬ್ರಾಹ್ಮಣ ; ಭೂಸುರ : ಕಾಮಧೇನು ಸಪ್ತಸ್ವಕಪಿಲೆಯ . . . ಶತಭೂಮಿದೇವರಿಗಿತ್ತ ಫಲಮಪುದೀ ಮಹಾಭಾರತ ದೊಳೊಂದಕ್ಷರವ ಕೇಳ್ದರಿಗೆ (ಭಾಗ್ಯ. ೦-೩೦); ಆ ವೇಳೆಯಲ್ಲಿ ಕೃತಕದ ಮಾಯಾ ಭೂಮಿದೇವರೆಲ್ಲರೂ ಕೂಡಿ ರಚಿಯಾಪನ ಪೊಲದ ಹಾವಿಸೊಳಗಿರಿಸಿದರು (ಪಕೃ. ೯-೩-೬). [ಸಂ.]

ಭೂಮಿಧರ (ನಾ). ೧. ಬೆಟ್ಟ ; ಪರ್ವತ : ಪರಮಂಗಂಭೀರೆ ಸದ್ವಟ ಫಲಾಧರೆ ಭೂಮಿಂಧರಷ್ಠನೆ . . . ಕರುಮಿಟ್ಟಿಜ್ಜೆದ ಸುವರ್ಣದ ಬೊಂಬೆಯಂತೆ ನಂದಿರೆ ಕಂಡಪರಸನಾಗ (ಶ್ರೀಕಾಂ. ೩-೨೬). ೨. ರಾಜ; ಅರಸ. ೩. [ಗಣಿತ] ವಿಳಿ ವಿಲಿ ಸಂಖ್ಯೆಯ ಸಂಕೇತ : 'ಭೂಧರ' ಪರಾ. [ಸಂ.]

ಭೂಮಿಪ (ನಾ). ೧. ಭೂಮಿಯನ್ನು ಪಾಲಿಸುವವನು; ದೊರೆ; ರಾಜ : ಭೂಮಿಪಸುಸ್ಥಿತನ ಶರಸ್ಫೋಮವಿಷನಿಪೆಯಲ್ಲಿ ಕಡಿದು . . . ಪೆರ್ಬಾಡಸಸಾರಂ (ಅಂಕಿ. ೪-೧೩); ಏನಗೆ ಭೀಮಾರ್ಜುನರ ಕೊಡು ರಿಪುರವಣಿಯಿಂದ ಸೀಮಂತವಣಗಳ ನಿವಿಷವರಿ ತವಿಸುವೆನು ಪಜಿಸುವೆ ನಿಜಿತಭೂಮಿಪರ (ಭುಜ್ಜಿ. ೨-೩೨). ೨. ಕ್ಷತ್ರಿಯ : ಭೂಮಿಪರನುಜ್ಞೆ ಜಜೆದ ಭಾರ್ಗವರಾಮನು ಗೆದಿದು (ಕೀರ್ತಿ. ೦-೦೭ ೫೨೫). [ಸಂ.]

ಭೂಮಿಪತಿ (ನಾ). ಭೂಮಿಯ ಒಡೆಯ ; ದೊರೆ : ಕೌರವ ಭೂಮಿಪತಿಯೊಡ್ಡಿದನು ಧರ್ಮಜ ಪೆಸರಿಸಿದ ಧನವ (ಭಾಗ್ಯ ೦೩-೯೯); ಭೂಮಿಪತಿ ಕೇಳ್ದಳಿಕ ಸೌರಾಷ್ಟ್ರದಿಂದೆ ಸುತ್ಪಾಮಸುತನು ನಡತರುಪಿರ್ದನು (ಕೃಪಾಂ. ೨೬-೦). [ಸಂ.]

ಭೂಮಿಪಾಲ (ನಾ). = ಭೂಮಿಪ ೧ : ಕನಕಶೈಲಮೆನಿಸಿ ಪೆಗಟ್ಟ ಭೂಮಿಪಾಲಭವನದಿಂ ಸಮಸ್ತವಸ್ತುಪವನದಿಂ (ಪಂಚಾ ೦-೩೯ ೧೫೧); ಕರುಣಿಸು ಭೂಮಿಪಾಲಯಿಂದಗಿಗಣಿ ಬೀಳ್ಕೊಂಡು ನಿಂದಳಾಪುರಿ ಯವಿರೊಳು (ಪಚಾ. ೦೦-೨೩). [ಸಂ.]

ಭೂಮಿಪಾಲಕ (ನಾ). = ಭೂಮಿಪ ೧ : ಜಿನೇಶ್ವರಂ ಬೆಸಸೆ ಕೇಳ್ದ ಜಿತಾಜಯ ಭೂಮಿಪಾಲಕಂ ... ದೀಕ್ಷೆಗೆ ಮನಂದಂದಂ (ಶಾಪ್ರಕೃ. ೭-೨೮); ಭೂಮಿಪಾಲಕ ಕೇಳು ಪೇಳ್ದೆನು (ಪಚಕ್ರ. ೩೩-೨). [ಸಂ.]

ಭೂಮಿಭೃತ್ತು (ನಾ). ೧. ದೊರೆ ; ಅರಸ; ರಾಜ : ಜೇರುವಿಂ ಭೂಮಿಭೃದ್ವರಭಾಟ್ಟಿಂತನಿಂ ಕಳಾನಿಧಿಮಾರಂ ಪುಟ್ಟುವಂ ನಿಶ್ಚಯಂ (ರಾಚಕೇ. ೪-೨೯). ೨. ಬೆಟ್ಟ ; ಪರ್ವತ. [ಸಂ. ಭೂಮಿಭೃತ್]

ಭೂಮಿರುಹ (ನಾ). ಭೂಮಿಯಲ್ಲಿ ಬೆಳೆಯುವುದು ; ಗಿಡ, ಮರ ಮುಂತಾದುವು : ಈವ ಬೆಗಟ್ಟಿ ಕಲ್ಪಭೂಮಿರುಹದಿನಗ್ಗಳಂ (ಪಚ. II, ೦೩೩-೩೬ : ೨೩೫). [ಸಂ.]

ಭೂಮಿರೇಖೆ (ನಾ). ಲೋಹದ ಕಗಡಿನಲ್ಲಿ ಯಂತ್ರಗಳನ್ನು ಲಿಖಿಸುವಾಗ ಹಾಕುವ ಗೀರು. — ಗೆರೆ : ಗಳರೇಖಾಕೃತಿ ಭೂಮಿರೇಖೆ . . . ಕಾಮ್ಮೀರಾದಿ ಲಿಪ್ತೂ ಮನಂಗೊಳಿ ಕಂದರ್ಪನ ವಶ್ಯಯಂತ್ರವೆನಿಸಿತ್ತಾಸ್ಯಂ ಸರೋಜಾಸ್ಯೆಯಾ (ಸಾಚಿಮು. ೦-೩೩). [ಸಂ. ಭೂಮಿರೇಖಾ]

ಭೂಮಿಲಂಬ (ನಾ). ಭೂಮಿಯಷ್ಟು ದೊಡ್ಡದಾದುದು : ಭೂಮಿಯ ಅಗಲವನ್ನು ವ್ಯಾಪಿಸಿಕೊಂಡಿರುವುದು ; ರಾಮನೀಯಕದಲ್ಲಿ ಸುಶಕುನಸೂಚನೆಯನು ವಿವರಿಸುತ ಹೇಳಿಕ್ಕರು ಭೂಮಿಲಂಬದ ನೃಪರ ನೆರವಿಯ ದ್ಯುಮಪಟ್ಟಣವ (ಭಾಗ್ಯ. ೦೨-೦) ; ಮಗಧನೃಪಾಲನಾಪುರಿ ಭೂಮಿಲಂಬದ ಬಲಸಹಿತ ಸಂಗ್ರಾಮಧೀರನು ಬರುತ (ಪಚಾಗ. ೦೨-೨೫-೨೬). [ಸಂ.]

ಭೂಮಿವಲ್ಲಭ (ನಾ). = ಭೂಮಿಪತಿ : ಈ ಮಹಾರಾಷ್ಟ್ರಕ್ಕೆ ಕಾನೀ ಭೂಮಿವಲ್ಲಭನಲ್ಲದೇ ಮತ್ತೀ ಮುಖವೊಳಗೆ ಮೇಳಲಿಲ್ಲೆಂದೆಂಬ ಬುದ್ಧಿಯದು (ಅಪ್ರ. ೩೦ ೦೭). [ಸಂ.]

ಭೂಮಿವಿಲಗ್ನ (ನಾ). [ನಾಟ್ಯ] ಅಂಗಾಲಿನ ಅರು ಭೇದಗಳಲ್ಲಿ ಒಂದು ; ನೆಲದ ಮೇಲೆ ಪಾದವನ್ನು ಸರಿಯಾಗಿ ಊರಿರುವುದು : ಪತಿತಾಗ್ರ, ಉಚ್ಛ್ರಿತಾಗ್ರ, ಭೂಮಿವಿಲಗ್ನ, ಉದ್ವೃತ್ತ, ಕುಂಚಿತ್ಪಕ್ಷ, ತಿರಶ್ಚೀನ — ಈ ಆಜಾ ಅಂಗಾಲ ಭೇದಂಗಳ್ (ಅಸ್ಕಶಿ. ೩-೦೨೦ ೫). [ಸಂ.]

ಭೂಮಿಸ್ಪರ್ಶ (ನಾ). ಮಗು ಹುಟ್ಟಿ ಭೂಮಿಗೆ ತಗುಲುವುದು ; ಶಿಶುವಿನ ಜನನ : ಜಾತಕನ ಭೂಮಿಸ್ಪರ್ಶವಾದುದು ಪ್ರಾತಃಕಾಲ ಎಟು ಗಂಟೆಗೆ (ಕೃಷ). [ಸಂ.]

ಭೂಮಿಸ್ಪೃತ (ನಾ). ೧. ಮನುಷ್ಯ. ೨. ವೈಶ್ಯ : "ಆರ್ಯಾಃ, ಭೂಮಿಸ್ಪೃಶಃ, ವೈಶ್ಯಾಃ, ಊರವ್ಯಾಃ, ವಿಶಃ — ಈ ೫ ವೈಶ್ಯಂ" (ಪಣಾಮು. ೪೪೯-೦೬). ೩. ಕುರುಪ; ಅಂಧ. ೪ ಕುಂಟ ; ಹೆಳವ. [ಸಂ. ಭೂಮಿಸ್ಪೃಶ್]

ಭೂಮಿಹುಣ್ಣಿಮೆ (ನಾ). ಭಾದ್ರಪದ ಶುದ್ಧ ಹುಣ್ಣಿಮೆ : ಭೂಮಿ ಹುಣ್ಣಿಮೆ ಹುಬ್ಬದಲ್ಲಿ ಸೂಲೆಗೊನಸು, ಉಗನಿಕಾಯಿ, ಬಿರಕಸೊಪ್ಪು ಇತ್ಯಾದಿ

ಗಳನ್ನು ಸಂಗ್ರಹಿಸುವಾಗಲೋ . . . ಗುತ್ತಿಗೆ ಸಹ್ಯಾದ್ರಿಯ ಆ ಅರಣ್ಯ ಪ್ರದೇಶ ಸುಪರಿಚಿತವಾದದ್ದೆ ಆಗಿತ್ತು. (ಹಸಬು. ೩೩).

[ಭೂಮಿ + ಹುಣ್ಣಿಮೆ (< ಪೂರ್ಣಿಮೆ)]

ಭೂಮಿಜ (ನಾ)· = ಭೂಮಿಜ ೧ :ಭೂಮಿಜದಿಂ ತಣ್ಣರಿಂ ಮಾರ್ಗ . . . ಎಸೆಗುಂ ದೇಶದೊಳ್ನಿಂದಜಸ್ರಂ (ಣಾಪೇ. ೨-೩೬). [ಸಂ.]

ಭೂಮಿಧ್ರ (ನಾ)· ಬೆಟ್ಟ ; ಪರ್ವತ : ತುಹಿನಭೂಮಿಧ್ರಕ್ಕೆ ಸಾರ್ದಾ ಹರಪ್ರಿಯಮನಾವರ್ತಿಸೆ ತಳ್ದು ನಾಲ್ಕೆಸಮುಮಂ ಗ್ರೀಷ್ಮಪ್ರತಾಪೋದಯಂ (ಶಂಪ್ರಕೃ. ೯-೩೭) ; ತಾಮರಸಮಿತ್ರ ಶುಚಿ ತಾಮರಸೈರಿನಯನಾ . . . ರುಂದ್ರು ಭೂಮಿಧ್ರ ಭಿನ್ನಭಿಮರಾ ಪಾಲಿಸೆಮ್ಮುವಂ ಪ್ರೇಮದಿಂ (ಅಣಾಕ. ೦-೦-೦)· [ಸಂ.]

ಭೂಮಿನಾಥ (ನಾ). = ಭೂಮಿಪತಿ : ಈ ಸಮಂಜಸದಿಮಸದಲಿ ಸಿಂಹಾಸನದಲಭಿಷೇಕವನು ಭೂಮಿನಾಥ ವಿಸ್ತರಿಸುವೆನು (ಕುಪ್ಯಾ. ೦೦-೩೨) ; ಆ ಮಾಧವಂ . . . ಭೂಮಿನಾಥದರ್ಶನೋತ್ಸವಕ್ಕೆ ಬಿಜಯಂಗೈದನು (ಕೃಬಣಾ. ೬-೦೬)· [ಸಂ.]

ಭೂಮಿನಾಥ್ವರ (ನಾ)· = ಭೂಮಿಪತಿ : ಗುರುಶಿಕ್ಷಿತಮಚನಂಗಳಂ ಹೃದಯದೊಳ್ . . . ತಾಳ್ದಿದನುತ್ಕರೋತ್ಸರತೆಯಿಂ ಶ್ರೀವರ್ಮ ಭೂಮಿಧ್ವರಂ (ಶಂಪ್ರಕೃ. ೯-೩೫) ; ತಿರಿಪ ಹಾರುವರೊಡನೆ ಭೂಮಿನಾಥ್ವರಿಗೆತ್ತಣ ಮೈತ್ರಿ (ಕುಣ್ಯಾ. ೬-೩೦)· [ಸಂ.]

ಭೂಮಿಷ್ಠ (ಗು). ೧. ಹೆಚ್ಚಾದ ; ಅತಿಶಯವಾದ : ಕಷ್ಟಪುಷ್ಟ ಕನಿಷ್ಠ ದಕ್ಷವಿಳಸದ್ಯೌಯಷ್ಠ ಬ್ರುಂವಿಷ್ಠನಾದಿಷ್ಠೋತ್ಕೃಷ್ಟನೀಷ್ಟದಾದ್ಯರ ಹರಂ (ಕಬ್ಯಾ. ೬-೭). (ನಾ). ೨. ಅಧಿಕವಾದುದು ; ಪ್ರಜೆರವಾದುದು : "ಪ್ರಭೂತಂ . . . ಭೂಯಿಷ್ಠಂ. ಸ್ಫಾರಂ. ಭೂಯಃ. ಭೂರಿ – ೧೨ ಅಧಿಕವಾದದ್ದರ ಹೆಸರುಗಳು "·(ವಿಜ್ಞಾ. ೩೦೦) ; ತುಂಗ ತುರಂಗಮ ಭೂಯಿಷ್ಠಂಗಳ್ ಕೊಟ್ಟಜದ ಕೊಟ್ಟ ಕಪ್ಪದ ಭಂಡಾರಂಗಳ್ ನಿಂದುವು ರಾಜಗೃಹಾಂಗಣದೊಳ್ ' (ಜಾಬಿಪ್ರ. ೦೦-೨೬) : ತತ್ಪ ನಿರೂಪಣೆಯು ಇಲ್ಲಿ ಭೂಯಿಷ್ಠವಾಗಿದ್ದರೂ ಇದು ತತ್ಪಪ್ರಧಾನ ಕಾದಂಬರಿಯಲ್ಲ (ಸಬಜ. ೩೩ ಪೀಠಿ). ೩. ಪರಿವಾರ ; ಬಳಗ : ಮಮಾ ಸ್ವಾಮಿಯು ಪಾದಸ್ಪರ್ಶದ ಐಶ್ವರ್ಯಸುಖಕ್ಕೆ ಪ್ರಸ್ತವ ಮನೆಯ ಭೂಯಿಷ್ಠನ ಪಾತ್ರವಾಗದೇ ಇರುವುದೇ ದೊಡ್ಡ ಲೋಪವಲ್ಲವೆ ಮಹಾ ಪ್ರಭು ? . . . ನಿಮ್ಮ ಮನೆಯ ಭೂಯಿಷ್ಠ ಪರಿಶುದ್ಧವಾಗುವುದೆಂಬ ಮಾತು ಉಪಚಾರೋಕ್ತಿ (ಚಾಪಣಾ. ೩೩). [ಸಂ.]

ಭೂಯುಗ (ನಾ)· ಭೂಮಿಯ ಪ್ರಾಕೃತಿಕ ಸ್ವರೂಪ ಹಾಗೂ ಸ್ಥಾವರ ಜಂಗಮ ವಸ್ತುಗಳು ಬದಲಾವಣೆಯಾಗುವ ಕಾಲ : ಭೂಮಿಯ ಪರಿವರ್ತನಕಾಲ : ಭೂಮಿಯ ಮೇಲೆ ಮನುಷ್ಯನು ಮೊದಲು ಕಾಣಿಸಿಕೊಂಡಿದ್ದು ಸುಮಾರು ಐದುಲಕ್ಷ ವರುಷಗಳ ಹಿಂದೆ ಎಂದು ತೋರುತ್ತದೆ. ಈ ಕಾಲವನ್ನು ಭೂಗರ್ಭಶಾಸ್ತ್ರಜ್ಞರು ಪ್ಲೀಸ್ಟೊಸೀನ್ ಭೂಯುಗ (Pleistocene) ವೆನ್ನುತ್ತಾರೆ (ಜಲ್ಲಾ. ೦೮)· [ಸಂ.]

ಭೂಯೋನುಗ್ರಹನ್ಯಾಯ (ನಾ)· ಕಡಮೆಯಾಗಿರುವ ದೋಷಗಳನ್ನು ಗ್ರಹಿಸದೆ ಹೆಚ್ಚು ಗುಣಗಳುಳ್ಳ ವ್ಯಕ್ತಿ ಅಥವಾ ವಸ್ತುವಿಗೆ ಪುರಸ್ಕಾರವನ್ನು ಕೊಡುವ ದೃಷ್ಟಾಂತ : ಲೋಕದಲ್ಲಿ ಪ್ರಾಯಃ ಪ್ರತಿಯೊಂದು ವಿಷಯವೂ ಸರಿಯಾಗಿರುವುದು ಹೆಚ್ಚು. ಕೆಟ್ಟು ಹೋಗುವುದು ಕಡಿಮೆ . . . ಹೀಗೆ ಸಕಲವಿಷಯಗಳಲ್ಲೂ ಸರಿಯಾಗಿರುವುದು ಹೆಚ್ಚು ಎಂಬುವಕ್ಕೆ ಭೂಯೋನುಗ್ರಹನ್ಯಾಯವೆಂದು ಹೆಸರು (ಸಂವಾ. ೦೩೬)· [ಸಂ.]

ಭೂಯೋಭಾಧ್ಯ (ನಾ)· ಅನೇಕ ವಿದ್ಯೆಗಳನ್ನರಿತವನು ; ಮಹಾ ವಿದ್ವಾಂಸ : ಬಗೆಯುವನ್ಯಾಸದ ಸುಶಾಖಾಳಗಳ ಜೀಳಲು ಬೆಳೆದ ಗಡ್ಡದ ವಿಗಡಭೂಯೋಭಾಧ್ಯರಿದ್ದುದು [ಣಾಣಾ. ವಿದ್ಯರಿದ್ದರು] ರಾಜ ಸಭೆಯೊಳಗೆ (ಕುಣ್ಯಾ. ೬-೩೬). [< ಸಂ. ಭೂಯೋಭಾಧ್ಯಾಯ]

ಭೂಯೋವಿದ್ಯ (ನಾ)· = ಭೂಯೋಭಾಧ್ಯ : ಬಗೆಯುವನ್ಯಾಸದ ಸುಶಾಖಾಳಗಳ ಜೀಳಲು ಬೆಳೆದ ಗಡ್ಡದ ವಿಗಡಭೂಯೋವಿದ್ಯರಿದ್ದರು [ಣಾಣಾ. ವಿದ್ಯರಿದ್ದುದು] ಸೈವವ ಸಭೆಯೊಳಗೆ (ಕುಣ್ಯಾ. ೬೭೨. ೬-೩೬)· [ಸಂ.]

ಭೂರಣ (ನಾ)· ವಿಡ್ಡಯುದ್ಧದ ಒಂದು ವರಸೆ (?) : ಸೈಪಂಗಿಸೆ ಕಂಡ ಭೂರಣವ ರೂಮಿಸಿದಂ ಪೊಯ್ಕೆ ಕಾಳವಟ್ಟಿದಿಂ (ಚಕಂಪ್ರ. ೦೦-೬೦)· [?]

ಭೂರಥ (ನಾ)· ಭೂಮಿಯನ್ನೇ ರಥವಾಗಿ ಮಾಡಿಕೊಂಡವನು ; ಶಿವ : ಅಭಕಾಸುರಮೇಭವಮಾಸ ಭೂರಥ ಜಲಂಧ್ರಾಸುರಕುಜಕುಂಠಾರ (ಬ್ರೌಣಾ. ೦೬-೦)· [ಸಂ.]

ಭೂರಮಣ (ನಾ)·=ಭೂಮಿಪತಿ : ಭೂರಮಣೋದ್ಭಟಾಂಕ ನೃಪಕುಜರ ಸೊಯ್ಯನೆ ತುಂಬಿದಚ್ಛಕಸ್ತೂರಿಯ ಭಾರಿಯಂ ನೆನೆದು (ಕಾವ್ಯಶಿ. ೯-೦೦೪) ; ಭೂರಮಣನೈತಂದು ಪೊಕ್ಕನು ಪ್ರಸ್ತಾವರವ (ಕುಣ್ಯಾ. ೬೨-೦೦೦). [ಸಂ.]

ಭೂರಿ (ಗು). ೧. ಹೆಚ್ಚಾದ : ಅಧಿಕವಾದ ; ಅತಿಶಯವಾದ : ಸಮುಚ್ಚಯಜಾತಶೋಪಮುಂ ಭೂರಿವಿಕಲ್ಪದೋಷಮುಂ . . . ವಿಶಂಕಾ ರಚಿತೋರುದೋಷಮುಮನೀ ತೆಱದಿಂ ತಜಿಸರ್ಗ್ಗ ಪಂಡಿತರ್ (ಕವಿಗ. ೦-೦೦೬) ; ಇತ್ತ ವಿಶಾಖಭೂತಿಯುಂ ಭೂರಿತಪೋಭೂರಿಯಂ ನಿರ್ವಹಿಸಿ ಶತಾರಕಲ್ಪದೊಳ್ ಸಾಮಾನಿಕದೇವನಾದೊಂ (ಪಾಂಚಾ. ೭-೫೯ ಪ) ; ಪಾಂಡುನ್ಯಪಾಲಕರ ದಳ ನಡೆದು ಬಂದುದು ಭೂರಿರಭಸದಲಿ (ಕುಣ್ಯಾ. ೬೫-೦)· ೨. ಅಧಿಕ ಸಂಖ್ಯೆಯ ; ಅಸಂಖ್ಯಾತವಾದ : ಮನುದ ಸೇಜದಲಿ ಭೂರಿವನಿಜರನೊರೆಸಿದನು ಕೈಯಾರ (ಕುಣ್ಯಾ. ೩-೨೦) ; ಭೂರಿಭೂರಿಪುಂಭಸಂಹೃತಿಶಕ್ತಿ ಶಕ್ತಿಸವನ್ವಿತೇ (ಣಾಪೇ. ೩-೦೦೪). ೩. ವಿಶಾಲವಾದ ; ವಿಸ್ತಾರವಾದ : ಅತ್ಯುದಾರತರ ನೂತಪ ಗುಣಾನ್ವಿತ ಚಂದ್ರಕೀರ್ತಿಭಟ್ಟಾರಕರಂದು ಬಣ್ಣಿಪುದು ಮಾರಿದಿವೇಷ್ಟಿತ ಭೂರಿಭೂತಳಂ (ಶುಚರಿತ. ೦-೨೨). (ನಾ). ೪. ಹೆಚ್ಚು : ಅಧಿಕ ; ಅತಿಶಯ : "ಪ್ರಾಜ್ಯಂ. ಭೂರಿ. ಪ್ರಭೂತಂ . . . ಆದಭ್ರಂ —ಈ ೧೫ ಮೊತ್ಕಳಂ"(ಪಣಾಹು. ೦೦೬-೦೭) ; ಬಸವರಸನಾಗ ಸ್ಕೇರಮುಖ ಖಾಗಾಜ್ಞ ಕೂಡಿದಪಾರಪಟುಗರಳಂಗಳ್ಗಿಂ ಭೂರಿಯಾಗಲು ಪೊಸ್ಸ ಕೊಪ್ಪರಿಗಗಳೊಳಗೆ ತೀವಿ (ಬಸಪು. ೩೮-೩೭) ; ಭೂರಿಯಲಿ ಮಿಗೆ ಭರಿತ ದಕ್ಷಿಣೆ ಮೃಷ್ಟಭೋಜನವುಂಟು ಮನುಗೆ (ಕುಣ್ಯಾ. ೦೦-೭). ೫. ವಿಷ್ಣು. ೬. ಬ್ರಹ್ಮ. ೭. ಶಿವ. ೮. ಇಂದ್ರ. ೯. ಚಿನ್ನ ; ಸುವರ್ಣ : "ಮೇದು. ಸ್ವರ್ಣ. . . . ಭೂರಿ. ಚಂದ್ರಂ . . . ತವನೀಯಂ — ಈ ೨೫ ಹೊನ್(ಪೊನ್)" (ಪಣಾಹು. ೩೯-೦೫) ; ಬೇರುಮಂ ಸೋಂಕಿದ ಡರಾ ತಮ್ಮೊರಿವರ್ಣದೋಳಹುದು ಕಾಗೆ ವಿಚಾರಿಸಲು ಲಿಂಗೈಕ್ಯಧಾವರ ಕುಲವನಱಸುವರೆ (ಜಪೃ. ೩೩-೩೮). ೧೦. ಬಹುಜನಕ್ಕೆ ಕೊಡುವ ದಾನ ; ಸಾಮೂಹಿಕ ದಾನ ; ಭೂರಿದಕ್ಷಿಣೆ : ಮುತ್ತುಮಾಣಿಕಂಗಳಂ ಚಿಲ್ಪಾಡಿ ಮೊಗೆಮೊಗೆದು ವಿತ್ತಪಂ ಭೂರಿಯಂ ಮಾಡಿ (ಪಚಂ. ೩೭-೦೬); ಭೂಮಿಸುರಚಯಕೆ ಭೂರಿಯನ್ನತ್ತು ಶುಭವಾದ್ಯಗಜಘಟಮಂ ಮೊಳಗಿಸುತ್ತೆ (ಪಚಂ. ೧೫-೩೩). ೧೧. ಕಟ್ಟಿಗೆ : ಕಾಷ್ಠ. ೧೨. ಅವಜ್ಞೆ ; ಉದಾಸೀನ ; ತಿರಸ್ಕಾರ : "ಕಾಷ್ಠಮನೇಕಕಾಂಚನಮುವಜ್ಞೆಯು ಭೂರಿ ಸಮಾಜ್ಞೆ" (ಜಜಕ. ೭೦). ೧೩. [ಗಣಿತ] ವಿಕಸ್ಥಾನದಿಂದ ಹಿಡಿದು ಪರಾರ್ಧಮಂಬು ಪದಿನೆಂಟನೆಯ ಸಂಖ್ಯೆಯಾದ ಮೇಲೆ ಹೇಳುವ ಪದ ; ಅಸಂಖ್ಯೇಯವೆಂಬ ಅರ್ಥವನ್ನು ತಿಳಿಸುವ ಪದ ; ಹತ್ತೊಂಬತ್ತನೆಯ ಸ್ಥಾನ : ಕೆಲವು ಹಿಂದೂಗಳು ಹತ್ತೊಂಬತ್ತನೆಯ

ಶ್ರೇಣಿಯೂ ಇದೆಯೆಂದು ಹೇಳುತ್ತಾರೆ. ಅದನ್ನು ಭೂರಿ ಎಂದು ಕರೆಯುತ್ತಾರೆ (ಕ್ರಿಪಾಇ. I. ೩೩೬). ☞ "ಏಕಂ, ದಶಂ. ಶತಂ, ಸಹಸ್ರಂ, ಅಯುತ, ಲಕ್ಷ, ಪ್ರಯುತ, ಕೋಟಿ, ನ್ಯರ್ಬುದ, ಪದ್ಮ, ಖರ್ವ, ನಿಖರ್ವ, ಮಹಾಪದ್ಮ, ಶಂಖ, ಸಮುದ್ರ, ಮಧ್ಯ, ಅಂತ್ಯ ಮತ್ತು ಪರಾರ್ಧ" (ಪ್ರವಾಇ. I. ೩೫೭) ಎಂದು ದಶಕವ್ಯವಸ್ಥಾನಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಬೇರೆ ಗ್ರಂಥಗಳಲ್ಲಿ ಹೆಸರು ಮತ್ತು ವ್ಯವಸ್ಥಾನಗಳಲ್ಲಿ ವ್ಯತ್ಯಾಸವು ಕಂಡುಬರುತ್ತದೆ. [ಸಂ.]

ಭೂರಿಗುಡು (ಕ್ರಿ)- ಎಲ್ಲರಿಗೂ ಹಂಚು.—ವಿತರಿಸು : ಕುಸುಮಶರಂಗಳ ತೋಳ್ಗಂದಿ ಮೊದಲಾದ ಪೂದೊಡವುಗಳು. ಇದನ್ನು ಹೂದಟ್ಟಿಗಳ ರಾಶಿಗಳಂದ ಎಲ್ಲರಿಗೂ ಭೂರಿಗುಡುತ್ತಿರುವ . . . ಸುನ್ದರೀಚೇಟಿಯರು ಎದೆಯಾಡುತ್ತಿರುವರು (ಪಜ್ಞ. ೬೨-೬೩). [ಭೂರಿ + ಕುಡು$_1$ (<ಕೊಡು$_1$)]

ಭೂರಿದಕ್ಷಿಣೆ (ನಾ). ವೆರೆದಿರುವವರಿಗೆಲ್ಲ ಕೊಡುವ ದ್ರವ್ಯದಾನ : ಸಾಮೂಹಿಕದಾನ : ಕೃಪಾಚಾರ್ಯನು ಧರಾಧ್ಯಕ್ಷನಾಗಿ ಭೂರಿದಕ್ಷಿಣೆಯನ್ನು ಕೊಡುವ ಕಾರ್ಯವನ್ನು ವಹಿಸಿದನು (ಕಉಕ್ಷ. ೦೦೦): ಬ್ರಾಹ್ಮಣರು ಭೂರಿದಕ್ಷಿಣೆಗಳನ್ನು ಪಡದು ಹರಸಿದರು (ಪಚಂ. ೬೩೦) ; ಭೂಮಿ ಇದ್ದವನಾದರೆ ಭೂರಿದಕ್ಷಿಣೆ ಕೊಟ್ಟಾನೆ ? (ಗಪ). [ಸಂ. ಭೂರಿದಕ್ಷಿಣಾ]

ಭೂರಿದಕ್ಷಿ (ನಾ). ದೊಡ್ಡ ಕೊಡುಗೆ.—ಉಂಬಳಿ : ಆ ಬಸದಿಗೆ ಅರಮನೆಯಿಂದ ಭೂರಿದಕ್ಷಿಗಳನ್ನು ಕೊಟ್ಟು, ಸತ್ಕ ಗಂಗಂಜನ ಆತ್ಮವನ್ನು ತೃಪ್ತಿಗೊಳಿಸಿದರು (ಪಂಂಚಂ. ೧೦೨) [ಸಂ.]

ಭೂರಿದಾನ (ನಾ). ಸಾಮೂಹಿಕವಾಗಿ ವಸ್ತ್ರ, ಧನ ಮೊದಲಾದುವುಗಳನ್ನು ಕೊಡುವ ದಾನ : ಕರಕರದು ಗಜತುರಗಭೂಕನ್ಯಧನವಸ್ತ್ರ ಮಿರದೆ ಬ್ರಾಹ್ಮಣರಿಗೆ . . . ಭೂರಿದಾನ . . . ಇತ್ತು (ಪಪಚಂ. ೦೩-೩೬); ಮಧುವೆ ಮುಂಜಿಗಳಾದರೆ ಹಾರುವರಿಗೂ, ವಸ್ತ್ರಮದ್ಯ, ಆಚಾರ್ಯ ಮುಂತಾದವರಿಗೂ ಭೂರಿದಾನ ಮಾಡುತ್ತಿದ್ದರು (ಪಪ್ಪ. ೮೨೦). [ಸಂ.]

ಭೂರಿನಯನ (ನಾ). ಅನೇಕ ಕಣ್ಣುಗಳನ್ನುಳ್ಳವನು : ಸಹಸ್ರಾಕ್ಷ : ಇಂದ್ರ : ಭೂರಿನಯನನ ಮನೆಗೆ ಹೋಗಿರಲಾರಾ ತಾನೆಂದುನ್ನತನ ಖಾನಿ ಪರಿಭವಿಸಿದಳು ಗರ್ವದಲಿಂದಳುಜಾಕ್ಷಿ (ಪಪಚಂ. ೦೦-೬೦-೬೫). [ಸಂ.]

ಭೂರಿಪು (ನಾ). ಭೂಮಿಯ ಜನಸಮೂಹದ ವೈರಿ; ರಾಕ್ಷಸ : ಭೂರಿ ಭೂರಿಪುಂಭಸಂಪ್ಲೋಷಕ್ಕಿ ಕಕ್ಕಸವನ್ನಿತೇ (ಜಜಪಚಂ. ೩-೦೦೦). [ಸಂ.]

ಭೂರಿಭೇನ (ನಾ). ಒಂದು ಬಗೆಯ ಗಿಡ : " ಸಪ್ತಲಾ, ವಿಮಲಾ, ಸಾತಲಾ, ಭೂರಿಫೇನಾ, ಚರ್ಮಕಷಾ — ೫ ಸಮ್ಮಾರಮೆಂಬುವದು" (ಸಿಂಗಿಔ. ೦೫೩). [ಸಂ. ಭೂರಿಫೇನಾ]

ಭೂರಿಬಲ (ನಾ). ಮಹಾ ಪರಾಕ್ರಮಶಾಲಿ : ಭೂರಿಬಲ ಗುರುಸೂನು ಶಲಾವಿ ಪಾಪಾರಥಾದಿಯು ಕೂಡಿಕೊಂಡನು ಪರಪ ಸಂಗರಕೆ (ಜಾಗಿಂ. ೬-೩೬). [ಸಂ.]

ಭೂರಿಭೋಜನ (ನಾ). ಅನೇಕ ಜನರಿಗೆ ಮಾಡಿಸುವ ಸಂತರ್ಪಣೆ : ಯಾವು ಬೇಕಾದರೂ ಬಂದು ಊಟ ಮಾಡಬಹುದಾದ ಸಾಮೂಹಿಕ ಸಂತರ್ಪಣೆ : ಹೀರೆ ಕುಪ್ಪಸ ಬೇಡ ಹಾರ ಓಲೆಯೂ ಬೇಡ ಭೂರಿ ಭೋಜನ ಬೇಡ ನಾವು ದಿನರಮ್ಮಾ (ಕಾಪ್ರ. ೩೩-೩); ಆ ಹದಿನೆಟ್ಟು ದಿನಗಳೂ ಭೂರಿಭೋಜನಾದಿಗಳು ಪಡದುವು (ಪಂಂಚಂ. ೨೩೭). [ಸಂ.]

ಭೂರಿಮಾಮ (ನಾ). ಹೆಚ್ಚು ಮೋಸ ಮಾಡುವ ವ್ಯಾಪಾರಿ ; ಬಳ್ಳಿ : ನರಿ : " ಗೋವಮಾಯುಃ • ಭೂರಿಮಾಯುಃ — ಈ ೨ ಬಳ್ಳಿ" (ಪಜಾಪ್ರಾಂ. ೩೯-೩೩). [ಸಂ.]

ಭೂರಿಮಸರ (ನಾ)- ಅನೇಕ ಸಾಮಾನುಗಳಿಂದ ಕೂಡಿದ ಅಂಗಡಿ : ದೊಡ್ಡ ಅಂಗಡಿ : ಒರಂತೆ ಕಣ್ಣಿಸದುವು ರಂಜುಗಾಜಿನ ಭೂರಿಮಸರಗಳು (ಪಜಾಪ್ರಾಂ. ೩-೩೫). [ಭೂರಿ + ಮಸರ]

ಭೂರುಂಡಿ (ನಾ)- ಒಂದು ಬಗೆಯ ಗಿಡ ; ಅನೇಕವಿ ಗಿಡ ; ಪಣ್ಣಗಿಡ : " ಶ್ರೀಹಸ್ತಿನೀ, ಭೂರುಂಡೀ—೨ ಹಣ್ಣಗಿಡದ ಹೆಸರುಗಳು. ಗುರು ಗಲಗಿಡ " (ಸಿಂಗಿಔ. ೦೩೬). [ಸಂ. ಭೂರುಂಡೀ]

ಭೂರುಗ ' ಬುರುಗು$_3$ ' ನೋ.

ಭೂರುಹ (ನಾ)- = ಭೂಮಿರುಹ : ನಿಶ್ಚೇತವಂಗಳುಮಿರ್ದಪ್ಪುವ ವಾರ್ತ್ತೆದೊಳ್ ನಿಯುಮಮುಂ ಕಾಣ್ದಿರ್ದಪೋಲ್ ಭೂರುಹಂಗಳವೆಂದಂದು ಮುನೀಂದ್ರಮನ್ನತಿಯನುತಿಂತುಂತಿನೆಲ್ ಬರ್ಮುಮೇ (ಕಉಪ್ಪು. ೫೫೯); ಕುಬೇರನ ಗರ್ವಭೂರುಹನ ಬೇರುಳಿಯುವೆ ಕಿತ್ತು ಬಿಸುಡುವೆನು (ಕೃಪ್ರಶಾ. ೦೦-೦೫೬). [ಸಂ.]

ಭೂರೆಗ 'ಬುರುಗು$_3$' ನೋ.

ಭೂರ್ಜ (ನಾ). ಒಂದು ಬಗೆಯ ಮರ; ಭುಜಪತ್ರೆಮರ: "ಭೂರ್ಜಃ, ಚಿರ್ಮಿ, ಶ್ಮುದ್ಯುತ್ಕ- ೩ ಭುಜಪತ್ರೆಗಿದರ ಹೆಸರುಗಳು" (ಸಿಂಗಿಔ. ೦೩೨); ವಿಳಾಲುಂಗುವಂಗಭೂರ್ಜಲದಲೀನಾರಂಗಜಂಬೀರಹಿಂತಾಳಾನೋಹ ಸಂಕುಲಂ ಬಳಸಿ ತಟ್ಟು (ಪಾಂಚಿಪ್ರ. ೦-೦೦೩); ಹರುರು ತಾಗಿದಾಗಿದ್ದ ಕಾಂವೌಡಿಪ ಆಚೆಗೆ ಭೂರ್ಜವೃಗಳ ತೋಪು (ಜಗಪ. ೬೬). [ಸಂ.]

ಭೂರ್ಜತ್ವಕ್ಕ (ನಾಪ್ರ). ಭೂರ್ಜವೃಕ್ಷದ ತೊಗಟೆ : ಪ್ರಾಚೀನಗ್ರಂಥವಾವುದಾದರೂ ತಾಳಪತ್ರವೋ ಭೂರ್ಜತ್ವಕ್ಕೋ ದೊರೆತ ಕೂಡಲೆ . . . ವಿಷಯವನ್ನು ಅದರಿಂದ ಹೀರಿ ಅಪಯೋಗಿಸುವರು (ಶಾಪ್ರ. ೦೦).

[ಸಂ. ಭೂರ್ಜತ್ವಚ್]

ಭೂರ್ಜಪತ್ರ (ನಾ).—ಭೂರ್ಜತ್ವಕ್ಕು : ಆಗ ಚಿಂತೆಯಿಂದ ಅದರ ಹರುರು ಎರೆಗಳು ಭೂರ್ಜಪತ್ರದಂತೆ ಬಿಳಿಚಿಕೊಂಡುಹೋಗುತ್ತವೆ (ಜಂಆಕ. II. ೧೦೩); ಬುಖಾರಿ ಎಂಬಲ್ಲಿ ದೊರೆತ ಭೂರ್ಜಪತ್ರ ಹಸ್ತಪ್ರತಿ ೭" × ೪" ಅಂಗುಲಗಳ ಅಳತೆಯುದೆ (ಕಕ್ಷಿ. ೭೭). [ಸಂ.]

ಭೂರ್ಜಾರ (ನಾ). ಒಂದು ಬಗೆಯ ಮರ : "ಧುಕ್ತಾ—ಭೂರ್ಜಾರ" (ಓಪ್ರ. ೦೦೦). [?]

ಭೂಲೋಕ, ಭೂಳೋಕ (ನಾ)- ಮನುಷ್ಯರು ವಾಸಿಸುತ್ತಿರುವ ಲೋಕ; ಭೂಮಿ: ಭೂಲೋಕವದಿರಿತು ಸರ್ವಜೀವಿಗಳವನಿಗೊಜಿಗಿದವು (ಜಪ್ಪ. ೫೮-೬೦); ದೇವಲೋಕಕ್ಕೆ ಹೋದರೂ ಭೂಲೋಕ ತಪ್ಪದು (ಗಪ). ಭೂಳೋಕ : ಭೂಳೋಕಾದನೇಕದ್ರ × × × (ಜಕ್ಷ. II. ೫೯-೪೦; ೪೫೪ ೨). [ಸಂ.]

ಭೂಲೋಲ (ನಾ). ರಾಜ : ಅರಸು : ಕಿಷ್ಕಿಂಧಕ್ಕೆಲದ ಮಹಾಮರ್ಕಟಾಧಿಪರ ಪೋಡುತ್ತ ಭೂಲೋಲನಿರಲು (ಜಕಾ. ೬-೩೦); ಭೂಲೋಲ ಕೇಳ್ಕಕ್ಕಮಾಗಿರ್ದುದಾ ಕಲ್ಮೊಳಾ ಲಲಿತವಾಜಿ (ಕೃಪ್ರಶಾ. ೦೦-೦೦): [ಸಂ.]

ಭೂವರ (ನಾ). ದೊರೆ ; ರಾಜ; ಅರಸು: ಭೂವರರೊಳ್ ತ್ಯಾಗಿಗಳ್ಳವೇ ಕವಿಗೆ ವಿದ್ಯಾಮಾತೃವೇ ಬಂಜೆಯೇ: (ಜಜಪಚಂ. ೬೫); ಭೋಜ್ಯಭೋಜ್ಯವನು ತೀದು ಪರಿಹರಿಸುಲ್ಲವರುಗಳು ಘನತರದ ಸುಕೃತವನ್ಯೆದುವರು ಭೂವರರೊಳಗೆ (ಭಾಗಿ. ೩-೩೩). [ಸಂ]

ಭೂವಲಯ, ಭೂವಳಯ (ನಾ). ಭೂಮಿ: ಧರಣಿ : ಭೂವಲ [ಜಾಣ. ೪]ಯದೊಳು ಕೇಳು ಮತ್ಸ್ಯಯು ಭೂವರೇಣ್ಯಂ . . . ಅಗ್ರಹಿಸಿ (ಜಪ್ಪ. ೫೯-೮೦). ಭೂವಳಯ : ಇದೇವೆದೊ ಪಟ್ಟಂಡವಂದಿತಂ ಭೂವಳಯಂ (ಜಂಪ್ರ. ೦೯-೨೮). [ಸಂ.]

ಭೂವಲ್ಲಭ (ನಾ).= ಭೂವರ : ಭೂವಲ್ಲಭ ಸೋಪ್ಪೇಪ ಭೂವಿಲಸಿತ ದತ್ತ ವಾಚನಾದೇಶವಿಂದಂ ಧಾಮಿಮೆಂದಶಿವಮಧುರೋಧ್ಯಾವಿತಗಂಭೀರನಾದಧಿಂ ಬಾಜಿಪುದಂ (ಜಪ್ಪ. ೦೯-೮೩). [ಸಂ.]

ಭೂವಳಯ 'ಭೂವಲಯ' ನೋ.

ಭೂವಿಕ್ರಮ (ನಾ). ಒಬ್ಬಾತನ ಹೆಸರು : ನಿರವದ್ಯಚರಿತಃ ಪ್ರತಿದಿನಮಭವದ್ಭೂವಿಕ್ರಮಾಭಿಧಾವೋ ಭೂವಿಕ್ರಮಾಖ್ಯಾಮಧೇಯಃ ಅಪಿ (ಶ. XII. ಸಂಚಿ. ೨೬೯-೦೩; ೪೦೫). [ಸಂ.]

ಭೂವಿಜ್ಞಾನ (ನಾ). ಭೂಮಿಯ ಸ್ತರಗಳಂ, ಅವುಗಳಲ್ಲಿರುವ ಸಂಬಂಧ ಹಾಗೂ ಅವುಗಳಲ್ಲಿ ಉಂಟಾಗುವ ಮಾರ್ಪಾಡುಗಳನ್ನು ಕುರಿತ ಶಾಸ್ತ್ರ : ಭೂವಿಜ್ಞಾನ . . . ಭೂಮಿಯ ಜೀವನವೃತ್ತಾಂತ, ಇತಿಹಾಸಗಳ ಸಮಗ್ರಅಧ್ಯಯನ ಇದರಲ್ಲಿ ಮಾಡಲಾಗುತ್ತದೆ (ಕಂತೆ. XII. ೧೦೨). [ಸಂ.]

ಭೂವಿಬುಧ (ನಾ). ಬ್ರಾಹ್ಮಣ ; ಭೂಸುರ : ದೈವಾಧೀನದಲಿ ಜಗವಾ ದೈವ ಮಂತ್ರಾಧೀನ ಮಂತ್ರವು ಭೂವಿಬುಧರಾಧೀನವಾಗಿಹುದಾಗಿ ಲೋಕದಲಿ ದೈವವೇ ಬ್ರಾಹ್ಮಣನು (ಕಾಪ್ರಾ. ೯-೫೦). [ಸಂ.]

ಭೂವಿಶ್ರುತ (ಗು). ೧. ಭೂಮಿಯಲ್ಲಿ ಹೆಸರುವಾಸಿಯಾದ; ಪ್ರಸಿದ್ಧನಾದ; ಕೀರ್ತಿವಂತನಾದ : ಆತಾವಾತೆಗೆ ಶಿಬಿರಮನೆ ಭೂವಿಶ್ರುತ ವಿಭವನಾದಭಿಜಪಂ (ಪಾಪ್ರ. ೩-೨) ; ಭೂವಿಶ್ರುತ ಯೋಗಿಪಾಥ ಯೋಗಾಹ್ವಾದಂ (ಶಾಕೃ. ೩-೨೪). (ನಾ). ೨. ಭೂಮಿಯಲ್ಲಿ ಹೆಸರುವಾಸಿಯಾದವನು,—ಪ್ರಸಿದ್ಧನಾದವನು : ಆ ವಿಪ್ರೋತ್ತಮನ ಪಾಗಂ ಭೂವಿಶ್ರುತನೀಶ್ವರಾರ್ಯಂ (ಸಂಚಿ. ೧-೦೧) ; ಭೂವಿಶ್ರುತನೆನೆ ಸಂತೋಷಲ ಪ್ರತಿಪತಿ ತಪದಿಂ ಶ್ರುತದಿನಾರುಮಂ ಗೆದೆವಾದಂ (ಪಂಣಚಂ. ೩-೩೦). [ಸಂ.]

ಭೂವೇಷ್ಟಿ (ನಾ). ಜಾಯಿಕಾಯಿ (?) : ಒಪ್ಪುವ ಲವಂಗ ಭೂವೇಷ್ಟಿ ಜಾತಿಫಲಸಹೋದ್ಭವಕ್ಕೋಲಜಂ ಕರ್ಪೂರವುಂ ಹಿಂಗೆಯಾ ಪಂಚಸುಗಂಧಿಯಂ ಮುಖವಾಸನಂಗಳೇ ಶ್ರೇಷ್ಠ (ಅಕೃ. ೬-೦೦-೦೪). [?]

ಭೂಶಯ್ಯೆ (ನಾ). ನೆಲದ ಮೇಲೆ ಮಲಗುವಿಕೆ : ಸುಃಮಾತಶ್ರೀಯಂ ನಾಳ್ದಾ ವಿತಂಬಿನಿ ಭೂಶಯ್ಯೆಗೆ ಜಾಗರಕ್ಕನಶಪಕ್ಕೆ . . . ಒಡಲಂ ನಿಯೋಜಿಸಿದಳ್ (ಪಾಪ್ರ. ೩-೧೬). [ಸಂ. ಭೂಶಯ್ಯಾ]

ಭೂಶಾಯಿ (ನಾ). ನೆಲದ ಮೇಲೆ ಮಲಗುವುದು ; ಭೂಮಿಯ ಮೇಲೆ ಒರಗುವುದು.

ಭೂಶಾಯಿಯಾಗು := ಸತ್ತುಬೀಳು : ಕನ್ನಡ ಕಟ್ಟಾಳುಗಳು ಬೊಬ್ಬಿರಿದು ರಣಕೋಲಾಹಲಮೆಸಗಲು ಇಸ್ಸೂ ಪಾಲ್ಬು ಸಹಸ್ರ ಶತ್ರು ಪಟು ಭೂಶಾಯಿಯಾದವು (ಅಶಾ. ೩೨). [ಸಂ. ಭೂಶಾಯಿನ್]

ಭೂಶಾಯಿತ (ನಾ). ಭೂಮಿಯ ಮೇಲೆ ಮಲಗಿರುವಂತಹುದು : ಈಗ ಅವೆಲ್ಲ ಭೂಶಾಯಿತವಾಗಿವೆ (ಸಂಚಿತ್ಕೃ. ೨೬). [ಸಂ. ಭೂಶಾಯಿತಾ]

ಭೂಶಿರ (ನಾ). ಸಮುದ್ರದೊಳಗೆ ಚಾಚಿಕೊಂಡಿರುವ ಭೂಭಾಗ : ಭೂಶಿರ_ಪ್ಪ್ರದೆಲ್ಲಿರುವ ಪ್ರದೇಶಗಳಿಗಿಂತ ಹೆಚ್ಚಾಗಿಯೂ, ಇತ್ಯಾಗಿಯೂ, ಸಮುದ್ರದೊಳಕ್ಕೆ ಚಾಚಿಕೊಂಡಿರುವ ಭೂಮಿ (ಉದಾ. ಕನ್ಯಾಕುಮಾರಿ) (ಕೋಪ. ೧, ೫೭) ; ಸಮುದ್ರದೊಳಕ್ಕೆ ಚಾಚಿಕೊಂಡಿರುವ ಭೂಭಾಗವು "ಭೂಶಿರವು ಅಥವಾ ಕೇಪ್" . . . ಎಂದು ಕರೆಯಲ್ಪಡುತ್ತದೆ (ಕೂಗೋಪ. ೦೮). [ಸಂ.]

ಭೂಶುದ್ಧಿ (ನಾ). ಮನೆಯನ್ನು ಕಟ್ಟುವಾಗ ಪ್ರಾರಂಭದಲ್ಲಿ ಶಂಕುಸ್ಥಾಪನೆ ಕಾಲದಲ್ಲಿ ನೆರವೇರಿಸಬೇಕಾದ ಸ್ಥಳಪರಿಶುದ್ಧಿ ; ೨ ದೇವತಾವಿಗ್ರಹ ಪ್ರತಿಷ್ಠೆ, ಪೂಜೆ, ಜಪ ಮೊದಲಾದುವಕ್ಕೆ ಕುಳಿತುಕೊಳ್ಳುವ ಸಂದರ್ಭ, ಧ್ವಜಸ್ಥಾಪನೆ ಮೊದಲಾದುವುಗಳಿಗೂ ಭೂಶುದ್ಧಿಯು ಅವಶ್ಯಕ : ಭೂಶುದ್ಧಿಯಂ ಪಿನಾಡಿ ಪುಟ್ಟಿಯಿಂ ಪೆಗಲಿ (ಕಾಪ್ರಾ. ೨-೩೬). [ಸಂ.]

ಭೂಶೋಧನೆ (ನಾ). ನೆಲವನ್ನು ಅಗೆದು ಪರೀಕ್ಷಿಸುವುದು : ಅರಮನೆಯ ನಿರ್ಮಾಣದಲ್ಲಿ ಪಡೆದ ಭೂಶೋಧನೆಯ ಫಲವಾಗಿ ಒಂದು ಶ್ರೇಷ್ಠರ ಹಜಾರವು . . . ಸಿದ್ಧಿತು (ಜಕವ. ೧೧೪) ; ಹುಷ್ಣಾಗಿ ಭೂಶೋಧನೆ ನಡೆದರೆ ಕೆಲವು ಕುರುಹುಗಳು ಕಂಡುಬರಬಹುದು (ಪೊಜ್ಞಾ. ೬). [ಸಂ. ಭೂಶೋಧನ]

ಭೂಷಣ (ನಾ). ೧. ಅಂದವನ್ನುಂಟುಮಾಡುವಿಕೆ ; ಅಲಂಕರಣ : "ಭೂಷಣಾ, ಅಲಂಕ್ರಿಯಾ—೨ ಅಲಂಕರಿಸುವಿಕೆ, ಅಲಂಕಾರಮಾಡುವಿಕೆ" (ಕಾಪ್ರಾಕೆ. ೦೮೬). ೨. ಅಲಂಕಾರ ; ಶೃಂಗಾರ : "ಪರಿಷ್ಕಾರಃ, ಭೂಷಣಾ – ತೀ ೨ ಅಲಂಕಾರಂ" (ಹಜಾಪ್ರ. ೯೯-೬೬೩) ; ಗಣನಾಕ್ಷಿ ಸೂತ್ರಮಣಿಯೊಳ್ಪತ್ತೊಗ್ಜಲಂ ಭೂಷಣಂ (ಗಾಶಾಪ್ರ. ೦-೭) ; ಗುಣ ಗಳಿಗೆಲ್ಲಕೆ ಭೂಷಣ ರೂಪವು ಶೀಲಕೆ ಭೂಷಣ ಕುಲವು (ಜಾಣಾಕ. ೪೦-೭೩). ೩. ಒಡವೆ ; ತೊಡವು ; ಆಭರಣ : "ಭೂಷಣಃ, ಅಳಂಕಾರಃ, ನೇಪಥ್ಯಂ. ಆಭರಣಂ – ತೀ ೪ ತೊಡುಗೆ" (ಹಜಾಪ್ರ. ೯೯-೬೬೩) ; ಇದು ಕೊರಲಿಂತಿದಾರಮಿದು ಭೂಷ್ಮಮಿದರ್ಕಮು ಭೂಷಣಂ ದಲೆಂಬುದನೆನವೇಡ (ಜಾಅಕೃ. ೬-೯೦) ; ಒಂದು ಸ್ವರ್ಣವೆ ಕೃತನ ಚತುರತೆಯಿಂದ ಬಹುಭೂಷಣ ಗಳಾದಂತೆ (ಪಗಾ. ೦೯-೬). [ಸಂ.]

ಭೂಷಣಾಂಗ (ನಾ). [ಜೈನ] ಹತ್ತು ಕಲ್ಪವೃಕ್ಷಗಳಲ್ಲಿ ಒಂದು : ನಾನಾತರದ ಆಭರಣಗಳನ್ನು ಕೊಡುವ ಕಲ್ಪವೃಕ್ಷ : ಜಂಗಮ ಕಲ್ಪವೃಕ್ಷಮಿನೆ ಕೊಟ್ಟೀ ದುಬ್ಬೆಯಿಂ ಭೂಜನಾಂಗದ ಮಾಲ್ಯಾಂಗದ ಭೂಷಣಾಂಗದಳವಂ ಚಕ್ರೇಶ್ವರಂ ತಾಳ್ದಿದಂ (ಪಾಪ್ರ. ೯-೬೬) ; ಭೂಷಣಾಂಗಮೆಂಬುದು ಕಟಿಸೂತ್ರ ಕುಂಡಲ ಕೇಯೂರ ಹಾರ ಸೂಪುರಾದಿ ಪುರುಷರ್ಯೋಗ್ಯಭೂಷಣವಿಶೇಷಂಗಳನೀವುದು (ಜಾಕೃಪ್ರ. ೯). 'ದಶಾಂಗಕಲ್ಪಕುಜ' ಪರಾ. [ಸಂ.]

ಭೂಷಿತ (ಗು). ೧. ಅಲಂಕೃತವಾದ. (ನಾ). ೨. ಅಲಂಕೃತನಾದವನು : "ಮಂಡಿತಃ, ಪ್ರಸಾಧಿತಃ, ಅಲಂಕೃತಃ, ಭೂಷಿತಃ, ಪರಿಷ್ಕೃತಃ – ೫ ಅಲಂಕರಿಸಲ್ಪಟ್ಟವನ ಹೆಸರುಗಳು" (ಕಾಪ್ರಾಕೆ. ೦೮೮) ; ದೈವ ಹೊಡೆದಂದದಲಿ ಬೆಜತು ಸುಧಾವಲಯದಲಿ ಗರ್ವವಿಧ್ವಸುಧಾವಭೂಷಿತನಾಗಿ ವೈಹಾಯಸಮಾಕ್ಷಿಸುತ (ಕಾಪ್ರಾ. ೯-೪೬). [ಸಂ.]

ಭೂಷಿಸು (ಕ್ರಿ). ೧. ಚೆನ್ನಾಗುವಂತೆ ಮಾಡು : ಮನುಷ್ಯನನ್ನು ಭೂಷಿಸುವುದು ಒಡವೆಗಳಲ್ಲ, ಗುಣಗಳು (ಜಾಪ್ರ). ೨. ಹೊಗಳು ; ಪ್ರಶಂಸಿಸು : ದೂಷಿಸಲಿ ಅಥವಾ ಭೂಷಿಸಲಿ ಧೀರರಾದವರು ನ್ಯಾಯ ಮಾರ್ಗದಲ್ಲಿಟ್ಟ ಹೆಜ್ಜೆಯನ್ನು ಎಂದಿಗೂ ಜಲಿಸುವುದಿಲ್ಲ (ಪಾಪ್ರ. XI. ೪ ೩೩೮) ; ನೀನು ಯಾವಾಗಲೂ ನಮ್ಮನ್ನು ದೂಷಿಸಿ ನಮ್ಮ ಹಗೆಗಳನ್ನು ಭೂಷಿಸುತ್ತೀಯೆ (ಜಾಕೃ. ೦೦೬). [ಭೂಷಣ + – ಇಸು]

ಭೂಷೆ (ನಾ). ಒಡವೆ ; ಆಭರಣ : ಆರ್ಯಂತ್ಯಧರ್ಮಂ ತನಗಾರ್ಯಂ ಭೂಷೆ ರತ್ನತ್ರಯಮಾನ ನೆಗ್ಪಂ ಧಾತ್ರಿಯೊಳ್ ಶಾಂತಿನಾಥಂ (ಸಂಚಿ. ೦-೩೩) ; ಕರ್ಣಪೂರತೆಗೆ ಕೆಂದಳೆವೈತಂದುವು ಹಾರಂ ಕಣ್ಣಿಯಿಂದಾ ದಕ್ಕುಬಾದ ಭೂಷೆಯಂ ದೂಷಿಪೆವೋ? (ಪಂಶ್ರೀ. ೩-೦೫೬).

[ಸಂ. ಭೂಷಾ]

ಭೂಷ್ಣು (ನಾ). ೧. ಬಾರಿಬಾರಿಗೂ ಹುಟ್ಟುವ ಸ್ವಭಾವವುಳ್ಳದು : "ಭೂಷ್ಣುಃ, ಭವಿಷ್ಣುಃ, ಭವಿತಾ – ತೃ . . . ಬಾರಿಬಾರಿಗೂ ಹುಟ್ಟುವ ಸ್ವಭಾವವುಳ್ಳ ಶೇಷಮಾದಿಗಳ ಹೆಸರೆಂದು ಕೆಲವರನ್ನುವರು" (ಕಾಪ್ರಾಕೆ. ೭೭೦). ೨. ಚೆನ್ನಾಗಿ ಬದುಕಿ ಬಾಳಬೇಕೆಂಬ ಅಭಿಲಾಷೆ ; ಪುರೋಭಿವೃದ್ಧಿಗೆ ಬರಬೇಕೆಂಬ ಇಚ್ಛೆ. ೩. ವಿಷ್ಣು ; ನಾರಾಯಣ: ಭಗವಂತ ಸಿಂಗತ ಶುದ್ಧಾತ್ಮ ಸುಶ್ರುತ ಸರ್ವದರ್ಶನ ಭಗವನ್ ಭೂಷ್ಣು ವಿಭೂಷ್ಣು (ಜಾಸ್ತ. ೧೧-೦೦೨). [ಸಂ.]

ಭೂಷ್ಯ (ಗು). ೧. ಅಲಂಕರಿಸಲು ಯೋಗ್ಯವಾದ ; ಶೃಂಗರಿಸಲು ಅರ್ಹವಾದ : ನೋತಿದರ್ ಘಟಕುಚಿಯರ್ ಸಮುದರುತುಮಾಕಿಜು

ಭೂಷ್ಯವಿಭೂಷಣಂಗಳಂ (ಹಂಪ್ರಕೃ. ೬-೬೬). (ನಾ). ೨. ಅಲಂಕರಿಸಬೇಕಾದುದು : ಇದು ಕೊರಲಿಂತಿದಾರವಿದು ಭೂಷ್ಯಮಿದರ್ಕದು ಭೂಷಣಂ ದರೆಂಬುದನೆನವೇಡ (ಜಾಂತಕ. ೬-೪೦). ೩. ಹೊಗಳಿಕೆಗೆ ಪಾತ್ರವಾದುದು ; ಸ್ತುತ್ಯವಾದುದು... ೪. ಹೊಗಳಿಕೆ ; ಸ್ತುತಿ : ಜನದ ಪರಿಪರಿ ದೂಷ್ಯ ಭೂಷ್ಯವ ನೆನೆನೆನೇ ತಮ್ಮುಡಿಯ ಸಂಭಾವನದ ಬಲುಬಿರಿಲಾವ ಧಯವೇಕೆ (ಗಗಣಾ. ೦೬-೬೪). [ಸಂ.]

ಭೂಸಕ್ಕರೆ (ನಾ). ಒಂದು ಬಗೆಯ ಸಸ್ಯ ಮತ್ತು (ಔಷಧಿಗೆ ಬಳಸುವ) ಅದರ ಗೆಡ್ಡೆ : ಭದ್ರಮುಸ್ತೆ. ಕೋಷ್ಠ. ಭೂಸ್ಕರೆ. ತಾವರೆನಾಳ . . . ಇಷ್ಟು ಔಷಧಗಳನ್ನು ಸರಿಯಾಗಿ ಕೂಡಿ . . . ಮಜ್ಜಿಗೆಯಲ್ಲಿ ಕದಡಿಕೊಡುವುದು (ಪಥ್ಯ. ೮೪); ಚೆನ್ನೆಗ್ಗಿಲು . . . ತಾಪ್ಪ ಉಳಿದಂತೆ ಕಾಸಿ ಅದರಲ್ಲಿ ಭೂಸಕ್ಕರೆ ಕಲ್ಲ ವಾರು . . . ಜೋರ್ಣವ ಮಾಡಿ ಹಾತೆ . . . ಜೇನುತುಪ್ಪವ ಪನಸಿ ಸೇವಿಸಲು ಅಸ್ಮಾಪ್ರಾವ ಪಮರ (ಸಕ್ಕ. ೩೦೩). [<ಸಂ. ಭೂಸರ್ಕರಾ]

ಭೂಸಪೆತ (ನಾ). ಭೂಮಿಯು ಸಪೆಮ ಹೋಗುವುದು : ಕತ್ತಾಳೆ ಗಳನ್ನು ಮಟ್ಟುವಲ್ಲದ ಭೂಮಿಯು ಬದುಗಳಲ್ಲಿವ ಭೂಸಪೆತವನ್ನು ತಡೆಯುವುದಕ್ಕೂ ಬೆಳಸುತ್ತಾರೆ (ಕರ್ಷ. ೨. ೦೬೪). [ಭೂ + ಸಪೆತ]

ಭೂಸಾರ (ನಾ). ನೆಲವಲ್ಲಿರುವ ಸಸ್ಯಗಳು ಬೆಳೆಯಲು ಕಾರಣವಾದ ರಾಸಾಯನಿಕ ವಸ್ತು ; ಗೊಬ್ಬರ. [ಸಂ.]

ಭೂಸಾರತೆ (ನಾ). ನೆಲದ ಸಾರ,–ಸತ್ತ್ವ : ತಿಳಿದ ತಜ್ಞದಿಯು ವಂಡಿಗಳ ಜಳದೊಳ್ ರಂಜಿಸುವ ಧಾನ್ಯಮಂಜರಿಯ ನೆಲಲ್ ಪೂಳೆಯ ತೆನೆನೋಮುವಿವು ಬೇರ್ಗಳಿನೆನಿಪುವು ಬೆಳೆದ ಕಬದೆ ಭೂಸಾರತೆಯಿಂ (ಹಂಪ್ರಕೃ. ೦-೮೨). [ಸಂ. ಭೂಸಾರತಾ]

ಭೂಸುತೆ (ನಾ). ಭೂಮಿಯ ಮಗಳು ; ಸೀತೆ : ಭೂಸುತೆಯಣ್ಣಾ ನೊಲ್ದು ಬೆಸಂ ಕುಡೆ ಲಂಕೆಗೆ ಪೋಗಿ ದಾನವಾಧೀಶನ ರಾಜಮಂದಿರ ವನಂಜದೆ ಪೊಕ್ಕು (ಪಜಗಣ. ೯-೮೨). [ಸಂ. ಭೂಸುತಾ]

ಭೂಸುರ (ನಾ). ೧. ಬ್ರಾಹ್ಮಣ : ಮಹಿಯೊಳ್ ಭೂಸುರವೇಷದಿಂದ ಕಲಿಯುರ್ ಕರ್ಣಂ ಧನುರ್ವೇದಮಂ ರಹಿಗಟ್ಟಂ (ಕೋಗುಪ. ೮೨); ನೀ ನೆನೆದುದು ಭಗೀರಥಪುತ್ರನೆಂದುದು ಭೂಸುರವ್ರಾತ (ಜಾತ್ಕಾ. ೦೩-೦೦) ; ಭೂಸುರರ್ ದಾನ ದಕ್ಷಿಣೆಗಳಿಂ . ತಣಿವರ್ (ಜಾಪತ್ಕ. ೨೦-೭೬). ೨. ಒಂದು ಬಗೆಯ ರತ್ನ : ಪಳುಕನಂದದಿ ನಿರ್ಮಲತ್ವದಿಂ ತೋರಿ ಶಕ್ತಿಕೆಯಿ ತೋರುವದು ಭೂಸುರಜಾತಿಯುಕ್ತಂ (ಕಕ್ಷಾ. ೯). [ಸಂ.]

ಭೂಸ್ಪೃಣ (ನಾ). = ಭೂತೃಣ : "ಮಾಲಾತ್ಪೃಣಕಂ. ಭೂಸ್ಪೃಣಂ–೨ ಮಾವನೀ ಹುಲ್ಲಿನ ಹೆಸರು" (ಅಮ್ಮಾಚಿ. ೮೭೨). [ಸಂ.]

ಭೂಸ್ಥಾಪನೆ (ನಾ). ಭೂಮಿಯಲ್ಲಿ ಹೂಳಿಟ್ಟುದು ; ಭೂಮಿಯ ಒಳಗೆ ಇರುವುದು : ಬ್ರಾಹ್ಮಣನೊಬ್ಬನು . . . ಭೂಸ್ಥಾಪನೆಯಾದ ನಿಧಾಸನ ವನ್ನು ಪೋಡಿ ಅಲ್ಲಿಂದ . . . ದಕ್ಷಿಣದೇಶಕ್ಕೆ ಹೊರಟುಹೋದನು (ಶಾಲುಣಿ. ೦೬೫). [ಸಂ. ಭೂಸ್ಥಾಪನ]

ಭೂಸ್ಥಿತಿ (ನಾ). ೧. ಭೂಮಿಯ ಲಕ್ಷಣ,– ಸ್ಥಿತಿ : ಪಾವಿ ಪ್ರವಾಚದ ಸಮಗ್ರಭೂಸ್ಥಿತಿಯನ್ನು ಸ್ಥೂಲವಾಗಿ ವಿಮರ್ಶ ಮಾಡಿದೆವು (ಜಾಂಕ್ರ. III, 1748). ೨. ಹೊಲಗದ್ದೆ ಪೊದಲಾದ ಸ್ಥಿರವಾದ ಸ್ವತ್ತು: ಸ್ಥಿರ ಆಸ್ತಿ: (೬). [ಸಂ.]

ಭೂಸ್ವಾಮ್ಯ (ನಾ). ಭೂಮಿಯ ಒಡೆತನ,—ವಸಾಲೀಕತ್ವ : ಅತ್ಯಂತ ವಿಸ್ತಾರವಾದ ಆಸ್ತಿಪಾಸ್ತಿಗಳಿಗೆ ಅವನು ವಾರಸುದಾರನಾಗಿದ್ದರೂ, ಭೂಸ್ವಾಮ್ಯಸಂಬಂಧವಾದ ಸೈನ್ಸರ್‌ನ ಅಧಿಕಾರ್ಯಗಳು ಅವನ ಮಮ್ಮಿಯ ಮೇಲೆ ತುಂಬ ಪ್ರಭಾವಕಾರಿಯಾದವು (ಪಜಗಿ. ೫೯). [ಸಂ.]

ಭೂಳೋಕ 'ಭೂಲೋಕ' ನೋ.

ಭೃಂಗ (ನಾ). ೧. ತುಂಬಿ ; ಬಂಡುಣಿ : "ಅಳಿ ಚಿಂಚರಿಂಗಮಿಂದಿಂದಿರಂ ತುಂಬಿ ಪುಷ್ಪಲಿಹಂ ಮಧುವ್ರತಂ ಭೃಂಗಂ . . . ಮಧುಪಮಾ ಭ್ರಮರ ಮಕ್ಕುಂ" (ಶಂಗಣಾ. ೩೨-೦೦) ; ಯಾಚಕಭೃಂಗಕೋಟಿ ಕೈಕೊಂಡು ನಿನಂತರಂ ತಗಳ್ದು ಕೀರ್ತಿಸೆ . . . ಪ್ರಚಂಡಮಾರ್ತಾಂಡನಲರ್ಚುಗೆನ್ನ ಹೃದಮಾಂಬುಜಮಂ ವಿಜವಾಜ್ಞಾರೀಚಯಂ (ಹಂಚಾ. ೦-೬) ; ಪುಷ್ಪ ಮೊಂದು ಬಟಲಲ್ ಭೃಂಗಕ್ಕೆ ಪೂವಿಲ್ಲದೇ(ಹೋಹಾಚ. ೨೬); ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ (ಜಾದೋ. ೮೪-೦). ೨. ಒಂದು ಬಗೆಯ ಕಡಜದ ಹುಳು: 'ಭೃಂಗಕೀಟನ್ಯಾಯ' ಪರಾ. ೩. ಒಂದು ಬಗೆಯ ಪಕ್ಷಿ : "ಕಳಿಂಗಃ, ಭೃಂಗಃ, ಧೂಮ್ರಾಟಃ — ೩. ಕುಕ್ಕುಟಿಯೆಂಬ ಹಕ್ಕಿಯ ಹೆಸರುಗಳು" (ಶಿಕ್ಕಾಂತಿ. ೦೫೬). ೪. ವೈಭಿಚಾರಿ ; ಸ್ವೈಚ್ಛಾಚಾರಿ. ೫. ಬಂಗಾರದ ಕಳಶ. ೬. ಒಂದು ಬಗೆಯ ಸಸ್ಯ ; ಗರುಂಗ: "ಗರುಂಗ ಮಂಗಾರಕಂ ಭೃಂಗಮದು" (ಶಂಗಣಾ. ೪೯-೨೪). ೭. ಒಂದಂ ಬಗೆಯ ಸಸ್ಯ : (ಪ್ರಾಔ. ೨೦-೪೮) ೮. ಕಾಗೆಬಂಗಾರ ; ಅಭ್ರಕ : "ಭೃಂಗಮಭ್ರಕಮಕ್ಕುಂ" (ಶಂಂಗಣಾ. ೪೦-೬) ; ದಂತದ ಪಾವುಗೆ ಭೃಂಗ ದೋಲೆ ಪೆಯ್ದುತ್ತಿರೆ ರಾತ್ರಿಯೊಳು ಸುಳಿವ ಬ್ರಹ್ಮಯನೀಗಕುಗಿಪ್ಪ ಸಿದ್ಧಿಯಾ (ಎಚ. ೪, ೦೦೫. ೮೦-೨ ; ೨೨೬). ೯. ಮೋಡ ; ಮೇಘ. ೧೦. ಕಪ್ಪಲೆ : ಅಂಧಕಾರ. ೧೧. ಕಪ್ಪುಬಣ್ಣ ; ಕೃಷ್ಣವರ್ಣ : "ಭೃಮರಾಭ್ರಂ ಗರುಗಾಭ್ರಕಂ ತಿಮಿರಮುಂ ಕೃಷ್ಣಾದಿ ಭೃಂಗಾಹ್ವಯಂ" (ಪಜಗ. ೪೬). ೧೨. [ನಾಟ್ಯ] ವೃತ್ತದ ಒಂದು ಭಂಗಿ : ಒಂದು ಕಾಲನೆತ್ತಿಕೊಂಡು ಒಂದು ಕಾಲ ನೆಲದಲ್ಲಿಟ್ಟುಕೊಂಡು ಚಿತ್ರದೋಪಾದಿ ತಿರುಗುವಣ ಇದು "ಭೃಂಗ"ವೆನಿಸಿಕೊಂಬುದು (ಪಜಗ. ೪೩). [ಸಂ.]

ಭೃಂಗಕೀಟನ್ಯಾಯ (ನಾ). ಕಡಜವು ತನ್ನ ಗೂಡಿನಲ್ಲಿ ಕೀಟವೊಂದನ್ನು ತಂದಿಟ್ಟುಕೊಂಡು ಅದರ ಸುತ್ತಲೂ ಗುಯ್‌ಗುಡುತ್ತ ಸುತ್ತುತ್ತಿದ್ದರೆ, ಆ ಕೀಟವು ಕಡಜ ತನ್ನನ್ನು ಚುಚ್ಚಿ ತಿಯುವುದೆಂದು ಇದರತ್ತಲೇ ಲಕ್ಷ್ಯವನ್ನಿಟ್ಟುಕೊಂಡಿದ್ದು ಕಡೆಗೆ ತಾನೂ ಕಡಜದ ಆಕಾರಕ್ಕೆ ಪರಿವರ್ತನೆಗೊಳ್ಳುವ ದೃಷ್ಟಾಂತ : ಯುವತಿಯೊರ್ವಳ್ಳು ಳಿಮ ತೊಲ್ಗಿದಾತ್ಮೇಶ್ವರನ ತವದಿಂದಾವಗಂ ಮನಮಂಟಿ ನೆನೆಯಲ್ಕೆ ಯುವತಿತ್ವಮುಡುಗಿ ಪುರುಷತ್ವಮೆಯ್ದುಗುಮಂತೆ ಭೃಂಗಕೀಟನ್ಯಾಯದಿಂ (ಕಾಪ. ೦-೦೩.೪೭). 'ಭೃಮರಕೀಟನ್ಯಾಯ' ಪರಾ. [ಸಂ.]

ಭೃಂಗಕುಂತಳೆ (ನಾ). ತುಂಬಿಯಂತೆ ಕಪ್ಪಾದ ತಲೆಗೂದಲುಳ್ಳವಳು: ಚಲಮಿನೇಕ್ಷಣಯರ್ ಮೃಣಾಳಭುಜಿಯರ್ ಪದ್ಮಾಸ್ಯೆಯರ್ ಭೃಂಗ ಕುಂತಳೆಯರ್ (ಕಕ್ಷಪ್ರ. ೦೨-೦೦೨). [ಸಂ. ಭೃಂಗಕುಂತಲಾ]

ಭೃಂಗಗಾವುಂಡ (ನಾ). ಒಬ್ಬಾತನ ಹೆಸರು : ಸಕಕಾಲಂ ಎಣ್ಬುಸೂಜಿ ಕೊಂಬತ್ತಾಸ್ಯವೆಮ ಪ್ರಜಾಪತಿಸಂವತ್ಸರಂ ಪ್ರವರ್ತಿಸೆ ಭೃಂಗಗಾವ್ಣುಂಡ ಮುರ್ಮ್ಮಂ ಗಾವ್ಣುಂಡಯ್ಯನ ಕಲ್ಲು (ಎಕ. XI, ಹಿರಿಯೂ. ೦೦-೦ ; ೪೭೨). [ಭೃಂಗ + ಗಾವುಂಡ (<ಗಾಮುಂಡ)]

ಭೃಂಗಗುಣ (ನಾ). ತುಂಬಿಗಳೇ ಬಿಲ್ಲಿನ ಹೆದೆಯಾಗಿ ಉಳ್ಳವನು ; ಕಾಮ; ಮನ್ಮಥ ; P ಮನ್ಮಥನಿಗೆ ತುಂಬಿಗಳೇ ಹೆದೆಯೆಂಬುದು ಕವಿಸಮಯ.

ಭೃಂಗಗುಣಪರ = ಮನ್ಮಥನನ್ನು ಸಂಹರಿಸಿದವನು : ಶಿವ : ಭೃಂಗಗುಣಪರ [ಜಾಹಂ. ತಂಗವಿರಹರ] ಕೊಡುವನೆಂದು ಬಲುಸೊಕ್ಕಿಂದ ಪೊಂಗಳಂ ಕೊಡ ಬಂದ ಗಂಧರ್ವಧಾರಕಿಮ ಜಜ್ಞಾದು (ಪ್ರಿಕಾ. ೦೫-೨೬). [ಸಂ.]

ಭೃಂಗಗುರುಳೆ (ನಾ). =ಭೃಂಗಕುಂತಳೆ : ಅದಣವ ಕವಿಯು ಬಣ್ಣಿಸುವನ್ನೆ ಭೃಂಗಗುರುಳೇ (ಜಪಮಾ. ೬-೨೨).

[ಭೃಂಗ + ಕುರುಳ್೨ (< ಕುರುಳ್೧) + – ೨]

ಭೃಂಗಬೋದಿಗೆ (ನಾ). ಕಾಗೆಬಂಗಾರದಂತೆ ಹೊಳೆಯುವ ಬೋದಿಗೆ : ಅಂಗಡಿಯ ಬೀದಿಗಳು ರಂಗಶಾಲೆಗಳು ಶೃಂಗರದೊಳ್ಪೆಸೆವ ಭೃಂಗ ಬೋದಿಗೆಯುಂ (ಪಪು. ೬೬). [ಭೃಂಗ + ಬೋದಿಗೆ]

ಭೃಂಗರಾಜ (ನಾ). ೧. ಒಂದು ಬಗೆಯ ಸಸ್ಯ; ಗರುಗೆ : "ಮಾರ್ಕವಃ. ಭೃಂಗರಾಜಃ—೨ ಗರಗದ ಸೊಪ್ಪು" (ಶಿಷ್ಯಾ. ೦೫೬); "ಭೃಂಗರಾಜಃ—ಹೊಂಗರುಗ" (ವೈಧ. ೦೦೩). ೨. ಒಂದು ಬಗೆಯ ದೊಡ್ಡ ದುಂಬಿ. [ಸಂ.]

ಭೃಂಗವಲ್ಲಿ (ನಾ). = ಭೃಂಗರಾಜ ೧ : "ಭೃಂಗಪರ್ಣಾ—ಗರುಗ. ಭೃಂಗವಲ್ಲಿ" (ವೈಶಂ. ೦೦೩). [ಸಂ. ಭೃಂಗವಲ್ಲೀ]

ಭೃಂಗಾಯಿ (ನಾ). ಒಂದು ಬಗೆಯ ಗಿಡ ಮತ್ತು ಅದರ ಫಲ : ತೆಂಗಾಯಿ ಪಲಸು ಕಿತ್ತಳೆ ಮುಸು ಮಾದಲ ಭೃಂಗಾಯಿಮ್ಗಳು ಸೊತ ಹಿಂಗದ ಬಹುಫಲಾದಿಗಳ ತೋಂಟಿಗರು ಸಾನಂಗಪಾಣಿಗೆ ಸಾರ್ಚಿದರು (ಪ.ಚರಿತ. ೪-೬೨). [?]

ಭೃಂಗಾರ (ನಾ). ೧. ಚಿನ್ನದ ಗಿಂಡಿ; ಸುವರ್ಣಕಲಶ: ℙ ರಾಜರ ಮುಖ್ಯ ಭಿಷೇಕದಲ್ಲಿ ಉಪಯೋಗಿಸುತ್ತಿದ್ದ ಕಲಶವು ಚಿನ್ನ. ಬೆಳ್ಳಿ. ಮಣ್ಣು. ತಾಮ್ರ. ಸ್ಫಟಿಕ. ಗಂಧದ ಮರ. ಕಬ್ಬಿಣ ಮತ್ತು ಕೊಂಬು ಎಂಬ ಎಂಟು ಪದಾರ್ಥಗಳಿಂದ ನಿರ್ಮಿತವಾಗಿದ್ದು ಆಕಾರ. ಅಳತೆಗಳಲ್ಲೂ ಭೇದವಿರುತ್ತಿತ್ತೆಂದೂ ಹೇಳಲಾಗಿದೆ : "ಭೃಂಗಾರಃ. ಕನಕಾಳುಕಾ—ಈ ೨ ಬಂಗಾರಿ" (ಪಣಾಮು. ೩೪-೦೬೦); ಧ್ವಜ ದರ್ಪಣ ಚಂಚಿಟ್ಟಮರಜ ಮಣಿ ಭೃಂಗಾರ ಸುಪ್ರತಿಷ್ಠಿತ ತಾಳವೃಜನ ಕಳಶಾತಪತ್ರಂ ತ್ರಿಜಗತ್ಪತಿ ಗಪ್ಪಮಂಗಳ ಸೊಗಯಿಸುಗುಂ (೨೩೪. ೪-೧೦); ಹನಿಲಸ್ಪಂಭಮಂ ಜಾಗದ ಪಡಲಿಗೆಯುಂ ತುಂಗಭೃಂಗಾರಮುಂ ನಿರ್ಮಿರೆ . . . ಪಡಂಗಾದು ದುದ್ಯಾಹಗೇಹಂ (ಪಂಗಪು. ೬-೦೦೨). ೨. ಪಾತ್ರೆ; ಕಲಶ : ತುಂಗ ಕನಕಭೃಂಗಾರವಿರಾಜಿ ರಾಜನ್ಮರಕತಮಯತುಕವಿರಾಜಿ (ಅಂಪು. ೪-೪೦ ೧೧೪); ಗಂಧಧರಿಲಸಂಭೃತ ವಿಶಾಲಹಂನೀಲಭೃಂಗಾರಂಗಳಿಂ. . . ಮನಂ ಗೊಳಿಪ ದೇವಪೂಜಾಗೃಹಮುಂ ಪೊಕ್ಕು (ಪಂಗಪು. ೦೨-೨ ೪); ಪಳಿಕನ ಭೃಂಗಾರದ ಬೆಳ್ಳಗುಂ ಜಾಗಂಗಳಿಸೆವ ಪಸರ್ನೆಳಗುಂ. . . ಮಸಂಪ್ಪವ್ಪ ಸುರಪರಾಸನಶತಮುಂ (ಪಂದ್ರ. ೬-೨೦). ೩. ಚಿನ್ನ : ಬಂಗಾರ : "ಭೃಂಗಾರವನೆ" ಪರಾ. [ಸಂ.]

ಭೃಂಗಾರವನೆ (ನಾ). ಚಿನ್ನದಿಂದ ನಿರ್ಮಿಸಿರುವ ಮನೆ; ಬಂಗಾರದ ಮನೆ : ಭೃಂಗಾರವನೆಯು ಭೋಗಂ ಪುಂಗಳಕಳಂ . . . ಸಮಸ್ತರ ಕಂಗೆಸೆಯಲ್ ಪೆಜ್ಜಿದುದಾ ಸ್ವಯಂವರಗೇಹಂ (ಪಪು. ೨೭೮). [ಭೃಂಗಾರ + ಮನೆ]

ಭೃಂಗಾರಿ (ನಾ). ೧. = ಭೃಂಗಾರ ೨ : ತೋರೆಮೊಲಗಳ ಮೊಗಂಗಳ್ ರಾರಾಜಿಸೆ ಕರ್ಪುವೆತ್ತು ಮೋಹನಧೂಪೋದ್ಗಾರಿಗಳಂ ಕಾಂಚನಭೃಂಗಾರಿಗಳಂ ಪೋಲ್ತು ವರಿಗಂದೇಗಮಿಜೊಳ್ (ಪಣಾಮು. ೩-೧೩) : ಪೂಬಾಸಿಗವಂ ಬಿಸುಯತೆ ವಿಸುನಿಯು ಭೃಂಗಾರಿಗಳ ಭಟಿಂಗಳನೊಪೆವೆತ್ತ ಸಮಾದ ಕರ್ಮಮುಂ ತಾಪಸನುರು ಮುಳಿಸಿಂದೆ ಮಾಡುತಿರಲ್ (ಕೃಭಾ. ೨-೧೭). ೨. ರೆಕ್ಕೆ ಇರುವೆ ; ಜೀರುಂಡೆ : "ಭೃಂಗಾರೀ. ಜೀರಿಕಾ. ಚೀರೀ. ರಿಳಿಲ್ಲಿಕಾ—ಳಿ ರೆಕ್ಕೆಗಳುಳ್ಳ ಇರುವೆಗಳ ಹೆಸರುಗಳು. ಚಿಮ್ಮಾಡಿ ಹುಳ ವೆನ್ನುವರು" (ಪಣಾಮು. ೩೬). [ಸಂ. ಭೃಂಗಾರೀ]

ಭೃಂಗಾರು (ನಾ). = ಭೃಂಗಾರ ೧ : ಗೃಹೀತಚಾವರತಾಳವೃಂತ ಭೃಂಗಾರುವಾರಿಂಗನಾಸಹಸ್ರಸಂಗತವುಂ . . . ಅಪ್ಪ ರಾಜಮಂದಿರಮಂ ಪೊಕ್ಕು (ಶಾಪಂಗ. ೪೫೪); ಪಿರದಂಡಾಂಕುಶ ರುಷಜಮರದರ್ವಣ ಕಲಶ ಶಂಖ ಭೃಂಗಾರು ನಿಶಾಕರತಕ್ಕ ಪಿಟ್ಟಗ ಮುಸರೋತ್ಕರಮಂ ಪಾಜಿಗಳ ಪೊಡ್ರವುದನುಂಕರಿಸೆ ಶುಭಂ (ಅಪ್ಪ. ೩-೪). [ಸಂ.]

ಭೃಂಗಾರುಧಾರಿ (ನಾ). ಚಿನ್ನದ ಕಲಶವನ್ನು ಹಿಡಿಯುವ ವ್ಯಕ್ತಿ : ವಿಜಯ . . . ಸಂವಿವರ್ಧನೆಯೆಂಬೆರ್ವರುಂ ದಿಗ್ವನಿತೆಮುರಂ ಪರಮಜಿನ ಜನ್ಮೋತ್ಸವದೊಳ್ ಶೃಂಗಾರಂಬೆರಸು ಭೃಂಗಾರುಧಾರಿಗಳಾಗಲುಂ . . . ಬೆಸಸುವುದುಂ (ಅಂಶ. ೬-೩ ೪). [ಸಂ. ಭೃಂಗಾರುಧಾರಿನ್]

ಭೃಂಗಾರುಧಾರಿಣಿ (ನಾ). ಚಿನ್ನದ ಕಲಶವನ್ನು ಹಿಡಿಯುವವಳು : ಶಾಂಬೂಲತಾಳವೃಂತಾಂಗರಾಗ ಭೃಂಗಾರುಧಾರಿಣಿಯರಪ್ಪ ವಾರವಿಳಾಸಿನಿಯರೊಳಂ (ಶಾಂಪು. ೨೧೩); ಜನೇಂದ್ರಜನ್ಮಕಲ್ಯಾಣದೊಳ್ ಭೃಂಗಾರುಧಾರಿಣಿಯಾಗಿಂ (ತಂದ್ರಪು. ೦೦-೦೨೩ ೪). [ಸಂ. ಭೃಂಗಾರುಧಾರಿಣೀ]

ಭೃಂಗಾಲಕ, ಭೃಂಗಾಳಕ (ನಾ). ತುಂಬಿಯಂತೆ ಕಪ್ಪಾದ ಮುಂಗುರುಳು; ನೀಲಕುಂಪಲ : ಒಬ್ಬ ಉತ್ತಮ ದೇವಶಿಲ್ಪಿ ಕೊರೆದ ಕಣ್ಣು-ಮೂಗಿನ ಮಾಟ; ಕಣ್ಣನ್ನು ಸೆರೆಹಿಡಿಯುವ ಭೃಂಗಾಲಕಗಳು (ಪಜಿಚ. ೬೫೬). ಭೃಂಗಾಳಕ : ನವಕನಕಮಣಿಬಂಧನಿಗಳಿಂಗಳಿಂ ಭೃಂಗಾಳಕಂಗಳಿಂದೆ . . . ಎಸವ ಪೆಣ್ಗಳಾಸೆಗಳ ಮೇಲ್ಕೆತಂದರು (ಕೃಪುಣಾ. ೦೬-೬): ಸುರಿಪಲ್ಕೆಂಬುವಳಂ ಬೊರೊವ್ವುವಧರಂ ಭೃಂಗಾಳಕಂ . . . ಪದಾಬ್ಜಂ ಮಂಜುಳಂ ಕಾಂತಮೂ (ಣಪಚಿ. ೪-೦೭). [ಸಂ.]

ಭೃಂಗಾಳಕ 'ಭೃಂಗಾಲಕ' ನೋ.

ಭೃಂಗಿ$_1$ (ನಾ). ೧. ಪರಮೇಶ್ವರನ ಪ್ರಮುಖರುಗಳಲ್ಲಿ ಒಬ್ಬ : ಆವರಿಸಿರಾಗಿ ಬಹ ಭೃಂಗಿಯುಂ ಕಂಡು ನಮನಕ್ಕರಂ (ಶಿಪ್ಪಣಾ. ೦-೨೪); ಆದ್ಯರೊಳ್ದೆದ್ದು ಕೋಡಗದಾಟವಾಡುವ ಭೃಂಗಿಯೆಯ್ತಂದ (ಪಪು. ೨೯-೬). ೨. ಅಂಜೂರಪ್ಪಕ್ಷ. [ಸಂ. ಭೃಂಗಿನ್]

ಭೃಂಗಿ$_2$ (ನಾ). ಹೆಣ್ಣುದುಂಬಿ; ಭೃಮರಿ : ಸರಸಕಿಂಶುಕಕುಟ್ಮಳಸಂಗಿ ಭೃಂಗಿಯಂಗಳೆ (ಪಗಪ. ೨-೩೬). [ಸಂ. ಭೃಂಗೀ]

ಭೃಂಗಿನರ್ತನ (ನಾ). ೧. (ಪರಮೇಶ್ವರನ ಸಭೆಯಲ್ಲಿ) ಭೃಂಗೀಶ್ವರನು ಮಾಡುವ ನರ್ತನ. ೨. [ವೀಶೈ] ವೀರಶೈವ ಮಠಗಳಲ್ಲಿರುವ ಪರಂಪರಾಗತವಾದ ಒಂದು ಬಿರುದಂ (?) : (ಸಾಧಾರಣ ಬಿರುದುಗಳು)—ಉಡುಕುವಾದ್ಯ. ಭೃಂಗಿನರ್ತನ. ದುಂದುಭಿ. ಭೇರಿ. ಕಹಳೆ. ಕರ್ನಾ (ಸಚಿರ. ೦೧). [ಸಂ.]

ಭೃಂಗಿಪ (ನಾ). = ಭೃಂಗಿ$_1$ ೧ : ಗರುಡನ ಗಱಿಯು ಗಾಳಿಯೊಳ್ಸಿಕ್ಕಿ ಬೆಡಾಗಿ ತಿರುಗಿ ಬಂದಭಪಂಗೆ ಭೃಂಗಿಪಂ ಬಿನ್ನೈಸುತಿರೆ ಕೇಳ್ದು (ಕೃಪುಣಾ. ೦೪-೨೦). [ಸಂ.]

ಭೃಂಗಿರಿಟಿ (ನಾ). =ಭೃಂಗಿ$_1$ ೧ : ಭೃಂಗಿರಿಟಿಯು ಮಲ್ಲಡಿಗಳೆನ್ನಯ ಮುಖಗ ಸಕತಮಿವುತ್ಪಿರ್ಕೆ ನಿರ್ಮಳತ್ವಮಂ (ಅಂಶ. ೦-೦-೦೬). ℙ ಭೃಂಗಿಗೆ ಶಿವಗಣದಲ್ಲಿ ಬಹಳ ಉನ್ನತಸ್ಥಾನವಿದೆ. ಭೃಂಗಿರಿಟಿ. ಭೃಂಗೇರಿಟಿ. ಭೃಂಗಿರೀಟಿ. ಭೃಂಗರಿಟಿ. ಭೃಂಗರೀಟ. ಭೃಂಗಿರೀಟಿ. ಭೃಂಗೀರಿಟಿ ಎಂಬ ವ್ಯತ್ಯಾಸವು ಹೆಸರಿನಲ್ಲಿ ಕಂಡುಬರುತ್ತದೆ. ಇವನು ದುಂಬಿಯಂತೆ ಧ್ವನಿ ಮಾಡುತ್ತಿದ್ದುದರಿಂದ (ಭೃಂಗ ಇವರಟಿತಿ ಎಂದು) ಇವನಿಗೆ ಈ ಹೆಸರುಗಳು ಬಂದಿವೆ. ಪರಮೇಶ್ವರನು ಪಾರ್ವತಿಯೊಂದಿಗೆ ಬೆರೆತಾಗ ತನ್ನ ವೀರ್ಯವನ್ನು ಅಗ್ನಿಯಲ್ಲಿ ಬಿಟ್ಟನು. ಆಗ ಅದರ ಎರಡು ಕಣಗಳು ಬೆಟ್ಟದ ಮೇಲೆ ಸಿಡಿದು ಬಿದ್ದುವು. ಆದರಿಂದ ಇಬ್ಬರು ಮಕ್ಕಳು ಹುಟ್ಟಿದರು. ಬ್ರಹ್ಮನು ಆ ಮಕ್ಕಳಲ್ಲಿ ದುಂಬಿಯಂತೆ ಕಪ್ಪುಬಣ್ಣವುಳ್ಳ ಒಬ್ಬನಿಗೆ ಭೃಂಗೀ ಎಂದು ಹೆಸರಿಟ್ಟನು. ಕಾಡಿಗೆಯಂತೆ ಬಹಳ ಕಪ್ಪಾಗಿದ್ದ ಮತ್ತೊಬ್ಬನಿಗೆ ಮಹಾಕಾಲನೆಂಬ ನಾಮಕರಣ ಮಾಡಿದನು. ಪಾರ್ವತೀ ಪರಮೇಶ್ವರರು ಆ ಮಕ್ಕಳನ್ನು ಬಹಳ ಪ್ರೀತಿಯಿಂದ ಸಲಹಿದರು. ಶಿವನು ಅವರನ್ನು ಗಣಾಧಿಪತಿಗಳನ್ನಾಗಿ ಮಾಡಿದನು. ಅವರಿಬ್ಬರೂ

ದ್ವಾರಪಾಲಕರಾಗಿದ್ದು ಶಿವಸೇವೆಯನ್ನು ಮಾಡುತ್ತಿದ್ದರೆಂ ಎಂದು ಕಾಳಿಕಾಪುರಾಣದ ೪೫ನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. [ಸಂ.]

ಭೃಂಗೀಶ (ನಾ)- = ಭೃಂಗಿ ೧ : ಭೃಂಗೀಶ ವೀರಗಣೇಶರುಂ ರುದ್ರೇಶ ಯೋಗಾಚಾರ್ಯರುಂ ಪೆರ್ದೋಲಯಿಸುತಿರಲು (ಪಾಪ. ೫೯-೨೬) : ಗಗನ ವಪಡೆಯೊಳ್ ಪಿನಾಕಿ ಕಂಡಲ್ಕಿಯಿಂದಾ ತಲೆಗೆ ಕಳುಹಿದಂ ಭೃಂಗೀಶನಂ ಮುದದೊಳು (ಕೃಪುಣಾ. ೦೯-೦೫). [ಸಂ.]

ಭೃಗು (ನಾ). ೧. ಬ್ರಹ್ಮನ ಹೃದಯದಿಂದ ಜನಿಸಿದವನು : ಒಬ್ಬ ಬ್ರಹ್ಮರ್ಷಿ : ಪರಮಳಯದೊಳು ಹುಗುವ ಪಂಡಿತ್ವರಸೊ . . . ಮರಮುನಿಪ ದೂರ್ವಾಸನೋ ಭೃಗುವೋ (ಪಾಪ. ೧೩-೧೦) ; ರಕ್ಷೋಘ್ನ ಮಂತ್ರದಿಂದೆಂಟುಬಾಗಿಲ್ಗಳಂ ರಕ್ಷಿಸುವರಾಗಿ ವಿಶ್ವಾಮಿತ್ರ ಭೃಗು . . . ಅಕ್ಷಯತಪೋಧನದ ವರಮುನಿಗಳೆಲ್ಲರುಂ ಲಕ್ಷಿತಪ ಪುಜೆಗೈಪನುಕಂಪಿಸಲು (ಕೃಪಾ. ೩೩-೧೦) ; ಭೃಗುವಮುನಿಯು ಶಾಪದಿಂ ಪನ್ನಗಪುಪಂ ಪತ್ನಿ ಯೋನಿಯೊಳ್ ಪುಟ್ಟಿದನು (ಕೃಪ. ೩೭-೧೦). ೨. ಪರಶುರಾಮನ ತಂದೆ: ಜಮದಗ್ನಿ: 'ಭೃಗುಸುತ' ಪರಾ. ೩. ದೈತ್ಯಗುರು ; ಶುಕ್ರ : "ರಂಗವಾನ್ ಕಾವ್ಯನಾ ಕವಿ ಭಾರ್ಗವಂ ಭೃಗು ಸಿತಾಂಗನುಶನಸುರಗುರು ಬೆಂದನಲು ಶುಕ್ರನು" (ಜೈಗಾ. ೩೨-೬) ; ಕವಿನಿಪು ಗುರು ಗುರುವಿಪ ಭೃಗುವಮರೇಜರೆಸಲ್ ಧರಿತ್ರಿ ಕವಿಗುರು ಜನತೋದ್ಭವಮೊವ ಮಂತ್ರ ಗುಣಮೊಪ್ಪುವುದು ಮಹಾದೇವರಣ್ಣನಾಹೋತ್ಪಪಂಪೊಳ್ (ಪಂ. ೪೧೧೦. ೫೫-೧೬ ; ೧೫೦೯). ೪. ಬೆಟ್ಟದ ಇಳಿಜಾರು. — ಕಡಿದಾದ ಭಾಗ : " ಸಾನುಕಟಕ ಭೃಗು ಪ್ರಸ್ಥಂ ತುಂ ವಿತಂಬಂ ಗಿರಿಯ ಹೊರಯಕ್ಕು " (ಜೀಗಣಾ. ೩೦-೨). ೫. ಶುಕ್ರವಾರ. ೬. ಶುಕ್ರನೀತಿ ಶಾಸ್ತ್ರ : ವರಸೂಪಶಾಸ್ತ್ರ ಭೃಗು ಚಿತ್ರ ರಸಾಳಂಕಾರ ಗಣಿತ ಗಜ ಹಯ ವೈದ್ಯಂ ಸ್ವರ ಶಕುನ ಕಾವ್ಯನಾಟಕ ಧರರಿ ಕಳಾವಿದನೆನಿಪ್ಪುದತಿ ಚಮತವಿಟಂ (ಜುಪ. ೦೦-೦೮). ೭. [ಜ್ಯೋತಿ] ಶುಕ್ರನು ಅಧಿದೇವತೆಯಾದ ಗ್ರಹ ; ಶುಕ್ರಗ್ರಹ. [ಸಂ.]

ಭೃಗುಜ (ನಾ). ೧. ಭೃಗುಋಷಿಯ ಮಗ : ಶುಕ್ರಾಚಾರ್ಯ. ೨. [ಜ್ಯೋತಿ] ಶುಕ್ರಗ್ರಹ : ಭೃಗುಜನಿಪ್ಪತ್ತೋಜಿಸೊಳ್ ನಿಂದೊಡಲ್ಲಿ ನಿಜೋಚ್ಚಾಲಯಭಾಗದಲ್ಲಿ ಪರಮೋಚ್ಚಸ್ಥಾಯಿ ತಾನಾ ಗ್ರಹಂ (ಜಾತ. ೦-೪೦). [ಸಂ.]

ಭೃಗುಜೆ (ನಾ). ೧. ಭೃಗುಋಷಿಯ ಮಗಳು ; ಲಕ್ಷ್ಮಿ ; ಭಾರ್ಗವಿ. ೨. ಒಂದು ಬಗೆಯ ಮರ ; ಕಿರುದೇಗು : "ಸ್ವಸು ಭೃಗುಜೆ ಕಾಷ್ಠ ಕಿಜುಪೆಗೆನೆಯ್ಮಂ" (ಪುಗಣಾ. ೪೭ ೦೫). [ಸಂ. ಭೃಗುಜಾ]

ಭೃಗುಪತನ (ನಾ). ಬೆಟ್ಟದ ಕಡಿದಾದ ಪ್ರದೇಶದಿಂದ ಕೆಳಕ್ಕೆ ಬೀಳುವುದು ; ಮಹಾಪಾತಕವಾದ ಪಾಪವನ್ನು ಮಾಡಿದವರು ಬೆಟ್ಟದಿಂದ ಧುಮುಕಿ ಆತ್ಮಹತ್ಯೆ ಮಾಡಿಕೊಂಡರೆ ಪಾಪಪರಿಹಾರವಾಗುವುದೆಂದು ಧರ್ಮಶಾಸ್ತ್ರಗಳಲ್ಲಿ ಹೇಳಿದೆ : ಬದುಕು ದುರ್ಭರವಾದಾಗ ಬೆಟ್ಟದ ಶಿಖರದಿಂದ ಹಾರಿ ಪ್ರಾಣವನ್ನು ಕಳೆದುಕೊಳ್ಳುವ ಭೃಗುಪತನವು ಪುರಾಣೇತಿಹಾಸಕಾಲಗಳ ವೀರರ ಆತ್ಮಾರ್ಪಣೆಯ ಉದಾಹರಣೆಗಳು (ಪಾಂಕಣ. ೪೧೨ ಪಕ್ಷ). [ಸಂ.]

ಭೃಗುವಾರ (ನಾ). ಶುಕ್ರವಾರ : ಅಂದಿಂದೊ ವಸಂತಪೂರ್ಣಮಿಯ ಭೃಗುವಾರದಾ ನಡುಹಗಲ ಸಿರಿ ಹೊತ್ತು (ಗೂಡ್ಕೂಕಾ. ೦೦-೩೭೦). [ಸಂ.]

ಭೃಗುವಿದ್ಯೆ (ನಾ). (?) : ಚಿತ್ರಮೆಂಬ ಭೃಗುವಿದ್ಯೆಯೊಳಾರ್ದೊರೆ ರೇಚಕೂಪನೊಳ್ (ಕುಪ. ೦-೨೦). [?]

ಭೃಗುಸುತ (ನಾ). ೧. ಜಮದಗ್ನಿಯ ಮಗ ; ಪರಶುರಾಮ : ಬಲವಂತಂ ಭೀಮನಿಂದಂ ಧರಿ ಭೃಗುಸುತನಿಂದಂ . . . ಸಮರವಿಜಯದು ವಿಖ್ಯಾಂತರಂಪಂ ವ್ಯಸಿಪಂ (ಪಂ. XI. ಜಪಪ. ೫೫-೫೭ ; ೧೨೭೫) ; ಇಪ್ಪತ್ತೊಂಭತ್ತು ದಿನ ಭೃಗುಸುತನೊಡನೆ ಕಾದಿದನು ವಿರಥನ ಮಾಡಿದನು ಭೀಷ್ಮ (ಕುಣ್ಡ. ೨-೪೬). ೨. ಶುಕ್ರಾಚಾರ್ಯ. ೩. [ಜ್ಯೋತಿ] ಶುಕ್ರಗ್ರಹ : ನಿಶಾಪತಿಸುತನಂ ಮಲ್ಲಂ ಭೃಗುಸುತನಂ ಪರದಾರಶೀಲ ನೆನಿಕುಂ ಮಮಜಂ (ಜಾತ. ೦೮-೬). [ಸಂ.]

ಭೃಗುಸೂನು (ನಾ)- = ಭೃಗುಸುತ ೩ : ಸೋಮಸೂನು ಭೃಗುಸೂನು ಸುಧಾಕರರೇಣಾದಭದೊಳ್ ನಲೆ ಪುರಾಕ್ರಮೋನ್ನತಿಯೆನಿಪ್ಪ ಭೂಪತಿಯಕ್ಕುಂ (ಜಾತ. ೩೨-೪). [ಸಂ.]

ಭೃತ (ಗು)- ೧. ಕಾಪಾಡಿದ ; ರಕ್ಷಿಸಿದ : ಧಾರಿಣಿ ಬಚ್ಚೆಕುಂ ನಿಜ ಯಶೋವಲ್ಲೀ ಭೃತಾಂಭೋದಮರ್ಗನಾರಾಧಿತ ಭರ್ಗನುಂ ಭೃತವಿಪಕ್ಷಿದ್ವರ್ಗನಂ ದುರ್ಗನುಂ (ಪಂಕಪಂ. ೦೦-೦೬) ; ಭೃತರಿಪುಖಿಂಡ ಜಿತಸುಪಣಾಂಡ ವಿತರಣಶೌಂಡ ಭೃತಜಗದಂಡ ಪಾಲಯ . . . ಮಹೇಶ (ಜಾಳಂಕ. ೦೬೬ ೦೦೫). ೨. ತುಂಬಿರುವ ; ತುಂಬಿದ. (ನಾ)- ೩. ಕೂಲಿಯ ಆಳು: ಸೇವಕ. ೪. ಅರ್ಥಪೂರ್ಣವಾದುದು ; ಗಜಿ ಗರ್ಜಿಸುವುದು ಮುಮ್ಮಳುಮಿ ಬೇಳ್ದೆದು ಮಾತಂ [ತ]ಮಳೆ ನುಡಿದೊಡಮ್ಮ ಗಂದ[ವಾ] ತುಮಳುಂಬಂ ಭೃತಮಕ್ಕುಮೆಂದು ಮೆಯ್ಯಂಮೆಯ್ಗಿ ಬಿಸುಂಬುದುಂ (ಪಂಪಣಾ. ೬-೫೬ ಬ) ; "ಭೃತಮಕ್ಕುಂ – ಹೀನಮಾಗುತ್ತದೆ" (ಪಂಪಪು.೨೨೨). [ಸಂ.]

ಭೃತಕ (ಗು)- ೧. ಪೊರೆದ ; ಪೋಷಿಸಿದ. ೨. ಕೂಲಿ ತೆಗೆದುಕೊಳ್ಳುವ; ಸಂಬಳವನ್ನು ಪಡೆಯುವ. (ನಾ)- ೩. ವೇತನವನ್ನು ತೆಗೆದು ಕೊಂಡು ಸೇವೆ ಮಾಡುವವನು; ಸೇವಕ : "ಭೃತಕಃ, ಭೃತಿಭುಕ್, ಕರ್ಮಕರಃ, ವೈತನಿಕಃ – ೪ ಕೂಲಿಯವನ ಪೆಸರು" (ಕಣ್ಣಕ. ೩೦೨) ; ಭೃತಕಂ ಕೃತಕಪ್ರಣಯಮೆಂದೆಱಿಯದೆ ನೆಱೆ ಕೂರ್ತಳೆಗೆತ್ತು (ಪಂಚಪಾ. ೬-೨೮ ಪ) ; ಕೂಲಿಕಾಱರೆಱೆಯದನಂದು. . . ಭೃತ್ಯರಿರ್ದ ನೆಲೆಗೆ ಗಜಿಯ ಯಬ್ಬೆಗೆ ಭೃತಕನಿರ್ಪಯಿರ್ದೊಡಮಿರ್ವರದನಿಗೆ ಸಮಮಾದಾಗೆ ಪೂರ್ಣೆ ನಾನೆ ಕೂಲಿಯಂ ದಿಟಂ ಸಮಂತು ಎನೆ (ಜಾಣಾಕ್ಕ. ೪-೦೬-೦ ಪದ್ಯ). [ಸಂ.]

ಭೃತದಂತ (ನಾ)- ೧. ಕೊಳಲನ್ನು ಹಿಡಿದಿರುವವನು. ೨. ಕುಲವನ್ನು ಪೋಷಿಸುವವನು ; ಕುಲರಕ್ಷಕ. ೧, ೨ : ಭೃತವದಶಜಾಗಿಯು.೦ ವೃಷಗತಶಾಣಾಸಕ್ಕ ಸಿಂಹವಂದ್ಯಾಚಾರ್ಯವೃತಿಪತಿ ಸಪ್ತಕ್ಷಸಮನ್ವಿತ ಜಾಗಿಯುಮಾತ್ಮತತ್ತ್ವಚಯಜಾತುರ್ಯಂ (ಪಂಪ್ರಕೃ ೦-೦೯). [ಸಂ.]

ಭೃತಿ (ನಾ)- ೧. ರಕ್ಷಣೆ; ಪೋಷಣೆ. ೨. ಕೂಲಿ; ವೇತನ; ಸಂಬಳ : "ಕರ್ಮಣ್ಯಾ, ವಿಧಾ, ಭೃತ್ಯಾ, ಭೃತಿಃ . . . ಪಣಃ – ೧೧ ಕೂಲಿಯ ಪೆಸರುಗಳು" (ಕಣ್ಣಕ. ೩೦೬). ೩. ಅಸಲು ; ಮೂಲಧನ ; ಬಂಡವಾಳ. ೪. ಆಹಾರ. ೫. ಕೂಲಿ ಪಡೆದು ಮಾಡುವ ಸೇವೆ. ೬. ಕೊಡುವುದು ; ದಾನ : " ವಿಶ್ರಾಣನಂ, ವಿಹಾಯನಂ, ಭೃತಿಃ . . . ದಾನಂ — ಈ ೧೦ ಕುಡುವುದು" (ಹಣಾಮು. ೬೯-೨೬೩). ೭. ಸಂಪಾದನೆ ; ಗಳಿಕೆ : ಶತಲಕ್ಷಧನವ ಲೆಕ್ಕವ ಬಾಯಿ ನುಡಿದೊಡೇಂ? ಭೃತಿಯೆಷ್ಟು ವೆಚ್ಚಕ್ಕೆ ? (ಜುಣಾಳ. ೭೫೩). [ಸಂ.]

ಭೃತಿಭುಜ (ನಾ). ಕೂಲಿಯನ್ನು ಪಡೆಯುವವನು ; ಸೇವಕ : "ಭೃತಕಃ, ಭೃತಿಭುಕ್, ಕರ್ಮಕರಃ, ವೈತನಿಕಃ – ೪ ಕೂಲಿಯವನ ಪೆಸರು " (ಕಣ್ಣಕ. ೩೦೬). [ಸಂ. ಭೃತಿಭುಜ್]

ಭೃತ್ಯ (ನಾ). ೧. ಆಳು ; ಸೇವಕ : "ಭೃತ್ಯಃ, ದಾಸೇರಃ . . . ಪರಿಚಾರಕಃ — ೧೧ ಬಂಟನ ಪೆಸರು" (ಕಣ್ಣಕ. ೩೦೬) ; ಈ ವರ್ಣಮಿಶ್ರ ವರ್ಣಶೂನ್ಯನ ಭೃತ್ಯಂಗಳೆಂದಮಾತ್ಯರ್ ೧ (ಜಗ. ೦-೩೦) ; ಒಲಿಸಕೀರದು ಸ್ವಪರ ಸೇವೆಯು ಮಾತಿ ಭೃತ್ಯರಿಗೆ (ಕಾಕಾ. ೩೮-೩೬) ; ಬುದ್ಧಿ ಪರಾಕ್ರಮ ವಿರದೇಕು ಭೃತ್ಯಗೆ ಭಕ್ತಿಯೊಂದಿರದೇಕು ಜೊತೆಗೆ (ಜಾಣಾಕ. ೦೩೯-೦೦).

೨. ಸಚಿವ; ಮಂತ್ರಿ. ೩. ಪ್ರಜೆ.

ಭೃತ್ಯಜೀಂತಾಮಣಿ=ಸೇವಕರ ಇಷ್ಟಾರ್ಥಗಳನ್ನು ಪೂರೈಸುವವನು: ಒಂದು ಬಿರುದು : ಸುಭಟಚೂಡಾಮಣಿ ಭೃತ್ಯಚಿಂತಾಮಣಿ (ಶಾಆ-XX: ೦೩-೦೭: ೪೭೬). [ಸಂ.]

ಭೃತ್ಯತೆ (ನಾ)· ಆಳುತನ ; ದಾಸ್ಯ : ಎನ್ನದು ಭೃತ್ಯತೆ ಪೋದೊಡೆ ಮೆನ್ನರಸನಾಜ್ಞೆಯಲ್ಲದೊಡಲೀಂ . . . ಮಾದೇವನೊಳ್ಕೆವ್ಯವೃತ್ತಿಯೇಂ ಸಮನಿಕುಮೇ (ಕಾಪಪು· ೦೪-೫೫). [ಸಂ. ಭೃತ್ಯತಾ]

ಭೃತ್ಯತ್ವ (ನಾ)· ೧. = ಭೃತ್ಯತೆ : ದಾಸತ್ವ ವೀರದಾಸತ್ವ ಭೃತ್ಯತ್ವ ವೀರ ಭೃತ್ಯತ್ವ . . . ಎಂಬ ಪದ್ಧಿಧ ಸಜ್ಜನತ್ವಯುಕ್ತನಾಗಿ (ಬಪಚ· ೧೭). ೨. ವಿನಯ : ದಾಸಭಾವ ಇಂತೆಂದು ಖಿಳರಾಯನಧಿಕದೈನ್ಯದಲಿಯತ್ಯಂತ ಭೃತ್ಯತ್ವದಿಂ ಬೇಡಿಕೊಳ್ಳಲು (ಚಾಪಪು· ೯-೨೬). [ಸಂ.]

ಭೃತ್ಯಭಾವ (ನಾ)· = ಭೃತ್ಯತೆ : ಅವರ ದೀಪಮಮಕಾಲಗೋಪ್ರಂಗಳಂ ನೆಱೆಯ ತಿಳಿಯ ಬಿನ್ನಪಂಗೆಯ್ದು ಭೃತ್ಯಭಾವಮಂ ಪುಗಿಸಿ (ಅಭ· ೦೩-೪೦ ಪ). [ಸಂ.]

ಭೃತ್ಯಾಚಾರ (ನಾ). [ವೀಶ್ಯ] ಪಂಚಾಚಾರಗಳಲ್ಲಿ ಒಂದು ; ಭೃತ್ಯನ ನಂತೆ ಸೇವೆ ಸಲ್ಲಿಸುವುದು : ಲಿಂಗ ಜಂಗಮವ ಪೂಜಿಸಿ ಭಕ್ತಸಾದ ವೆಂದರೆ ಭೃತ್ಯಾಚಾರ ಸದಾಚಾರವೆ ಮೊದಲು ನೋಡಾ (ಅಪಸ್ಥ· ೨೫೫-೦೦೨೦) ; ಭಕ್ತರೆಲ್ಲರೂ ಕೂರ್ತು ಜಪ್ತೆ ಕರೆಯುತಿರೆ ಮತ್ತೆ ಕೆಲಕ್ಕೆ ಹೋಗಿ . . . ಭೃತ್ಯಾಚಾರದ ಪಾಡಿದು (ಪಪ· ೨೦೫) ; ಬಸವಣ್ಣನವರ ಬಾಳಿನ ಘನತೆಯು ಗುರುತು . ಅವರ ಭೃತ್ಯಾಚಾರ (ಜಚ· ೦೨೪). 'ಪಂಚಾಚಾರ' ಪರಾ. [ಸಂ.]

ಭೃತ್ಯಾಚಾರಿ (ನಾ)· [ವೀಶ್ಯ] ಭೃತ್ಯಾಚಾರವನ್ನು ಪಾಲಿಸುವವನು : ಇಷ್ಟಂಳ ಕೈವಂಗಿದರೇನು ಭೃತ್ಯಾಚಾರಿಯಾಗಬಲ್ಲುದೆ (ಪಪ· ೦೫೫); ಲಿಂಗಕ್ಕೆ ಕೊಟ್ಟು ತೋಡಿದ ಪ್ರಸಾದಿ ಇದು ಕಾರಣ ಇಂತಪ್ಪ ಭೃತ್ಯಾಚಾರಿಗಲ್ಲದೆ ಪ್ರಸಾದವಿಲ್ಲ ಗುಪೇಶ್ವರ (ಅಪಪ· ೪೯-೦೫೬). [ಸಂ. ಭೃತ್ಯಾಚಾರಿನ್]

ಭೃತ್ಯೆ (ನಾ)· ೧. ಪೋಷಿಸುವುದು ; ಸಲಹುವುದು. ೨. ಆಧಾರ; ಬೆಂಬಲ. ೩. ಆಹಾರ. ೪. ಕೂಲಿ ; ಸಂಬಳ ; ವೇತನ : "ಭೃತಿಃ, ಭೃತ್ಯಾ . . .ವೇತನೇ—ಈ ೬ ದೆಲೆ" (ಪಾಅಮ. ೦೫೦-೧೬)· ೫. ಸೇಮೆ [ಸಂ. ಭೃತ್ಯಾ]

ಭೃಶ (ಗು). ೧. ಪ್ರಬಲವಾದ ; ಪ್ರಚಂಡವಾದ : ಭೃಶವಿಶ್ವ ಜೀವಿತ ಗಭೀರತೆಯ ದರ್ಶನದ ರಭಸದದ್ಭುತ ಮೌನ (ಪಂಗೀಕ· ೧೬). (ನಾ). ೨. ಆಧಿಕ್ಯ; ಅತಿಶಯ : "ಅತಿಶಯಃ, ಭರಃ, ಅತಿಪೇಲಂ, ಭೃಶಂ . . . ದೃಢಂ — ೦೪ ಅತಿಶಯದ ಪರುಗುಗಳು" (ಪಾಅಕಿ· ೫೫)· ೩. ದೊಡ್ಡದಾದುದು; ಅತಿಶಯವಾದುದು : "ಕಾಮಂ. ಪ್ರಕಾಮಂ. ಪರ್ಯಾಪ್ತಂ. ನಿತಾಂತಂ, ಭೃಶಂ . . . ಅತಿಮೇಲಂ—ಈ ೮ ಪಿರಿದಾಗಿರ್ದುವು" (ಪಾಅಮ. ೦೫೯-೪೪). ೪. ಸಂಕಟ : "ಭೃಶದೊಳಂ ನೆಗಟ್ಟು ಸಂಬಾಧಮೆಂದನಿಸು" (ಪುಂಚಾ. ೦೩೨-೨೦). ೫. ಆಣೆ ; ಪ್ರತಿಜ್ಞೆ : "ಭೃಶ=ಸಂಬಾಧ, ಸೂರುಳು" (ಪಾಅಕಿ· ೦೫೫ ೪). [ಸಂ.]

ಭೃಷ್ಟ (ಗು). ಪುರಿದ; ಸುಟ್ಟ: ಸೊಗಯಿಸುವ ದೇಹಾದಿ ನಿಷಹಂಗಳೆಯ್ದು ತೊಟ್ಟಿಗೆ ದಗ್ಧಮಟಿ ಭೃಷ್ಟಬೀಜಂಗಳಂತೆ ಕೆಮ್ಮಗೆ ಕೆಟ್ಟು ಪೋಕುಂ (ಅಪಪ· ೩-೨-೩೯)· [ಸಂ.]

ಭೆಂಡವಾಡ (ನಾ). ಒಂದು ಊರಿನ ಹೆಸರು: ಪಶ್ಚಿಮತಃ ಭೆಂಡಿವಾಡೋ ನಾಮಗ್ರಾಮಃ (ಇಆ. XVI. ೨೪-೩೩ ; ೧೦೦೮). [?]

ಭೆಟ್ಟಿ 'ಭೇಟಿ' ನೋ.

ಭೇಕ (ನಾ). ೧. ಕಪ್ಪೆ; ಮಂಡೂಕ : "ಮಂಡೂಕಃ, ಪ್ಲವಗಃ, ಭೇಕಃ. . . ಪ್ಲವಂಗಃ—ಈ ೮ ಕಪ್ಪೆ" (ಪಾಅಮ. ೦೦೯-೪೦); ಕಂಕಾವೀ ಬಂದನೆನುತ್ತುಂ ಗರ್ಜಿಪಂತಾಮದು ವಿರಹಿಗಳಂ ಕೀಕ ಭೇಕಪ್ರಣಾದಂ (ಪಾಸಂ. ೪-೨೦), ಕಾಳಸರ್ಪನ ಹೆಡೆಯು ನೆಳಲಲಿ ಬಾಳಲಲಸಿದ ಭೇಕಸಂತತಿಹುದನ್ಯಸತಿ ಬೇಟ (ಶಾಆಂ. ೩೮-೪). ೨. ಪುಕ್ಕಲ ; ಭೀರು. ೩. ಮುಗಿಲು ;ಮೋಡ. [ಸಂ.]

ಭೇಕವೈರಿ (ನಾ)· ಕಪ್ಪೆಯ ಶತ್ರು : ಹಾವು : ಸೂಕರನ ತುಂಬಿಯ ಮರಾಳನ ಭೇಕವೈರಿಯ ಕಾರುರಗ ರಕ್ಷಿ ಕೋಟಿಲನ. . .ಒದು ಗುಣವಿರ ಬೇಕು ಪ್ರಭುವಿಗೆ (ಶಾಪ್ರ. ೦-೩೨). [ಸಂ. ಭೇಕವೈರಿನ್]

ಭೇಕಾಸನ (ನಾ)· [ಯೋಗ] ಒಂದು ಬಗೆಯ ಆಸನ : ಭೇಕಾಸನ . . . ಈ ಆಸನದಲ್ಲಿಪ ಚಲುವಲನಗಳು ಕಪ್ಪೆಯನ್ನು ಹೋಲುವುದರಿಂದ ಇದಕ್ಕೆ ಈ ಹೆಸರು (ಪೋಗಾ· ೦೦೦). 'ಮಂಡೂಕಾಸನ' ಪರಾ. [ಸಂ.]

ಭೇಕಿ (ನಾ)· ಹೆಣ್ಣು ಕಪ್ಪೆ : "ಭೇಕಿ ವರ್ಷಾಧುಯೆಪೆ ಹೆಣ್ಣಾಬ್ಬೆಯಕ್ಕುಂ" (ಪಾಗಣಾ· ೦೨೨-೨). [ಸಂ. ಭೇಕೀ]

ಭೇಕಿಸು (ಕ್ರಿ). (ಅಲಂ) ವಟಗುಟ್ಟುವ; ಅರಚು: ಹುಲುಗೊದ್ದು ದೋಡ ಪುಸಿಗುಡುಗಿದಾಗ ಕೆಲ ಜೀವ ಭೇಕಿಸುವುವು (ಅಚಾ. ೩೯-೬). [ಭೇಕ + — ಇಸು]

ಭೇಟ. ಬೆಟ್ಟಿ, ಭೆಟ್ಟಿ (ನಾ). ಒಬ್ಬರನ್ನೊಬ್ಬರು ಸಂಧಿಸಿ ಮಾತನಾಡುವುದು ; ಸಂದರ್ಶನ : ಇನ್ನು ಕಡಯ ಭೇಟಿದುಮ್ಮ ದಸಗೊಮ್ಮೆ ಕೊಟ್ಟು ಅಮೇಲೆ ವಿಷು ಮಾಡಬೇಕಂದು ಹೇಳು (ಪುಂಅಮ. ೬-೦೬೮); ಸ್ಟಾಲಿನ್ ಟ್ರೂಮನ್ ಭೇಟಿಗೆ ಸೂರ್ಮಾಡಿ ಭುಂಪಿಂ ಭವ್ಯಂ ತವಿಗೀ ನೀರ್ಮಿಡಿ! (ಅಗೀ· ೫೫-೦೩). ಬೆಟ್ಟಿ: ಮೂರು ಕುರ್ಚಿಗಳು ಒಂದು ಮೇಜಿನ ಪಕ್ಕಿರವಿದೆ; ಮಹತ್ಕೊಂದನ್ನು ಆದರ ಮುಂದುಗಡೆ ಮುಖ್ಯೋಪಾಧ್ಯಾಯರ ಬೆಟ್ಟಿಗೆಂದು ಬಂದವರು ಕೂಡುವುದಕ್ಕಾಗಿ ಇಟ್ಟಿದೆ (ಕ್ರತಿಂ· ೫೫); ಬೆಟ್ಟಿಯ ಅವಶ್ಯಕತೆಯು ತಿಳಿಯುಲಿಲ್ಲ. ಬೆಟ್ಟಿಯು ಅನುಚಿತವೆಂದೂ ತಿಳಿದನು (ಸಚಿಂ· ೦೦೦). ಭೆಟ್ಟಿ: ಒಡೆಯದೇವರಿಗೆ ಕೊಟ್ಟಲ್ಲದೆ ಕೊಳ್ಳೆನೆಂಬ ಮೃಡನ ಭಕ್ತರ ಪೋಡಾ ಒಡೆದುಂಗೆ ಭಿಟ್ಟಿ ಮನೆಯೊಡೆಯಂಗೆ ಕುಪ್ಪ ಕಟ್ಟುವೆಪರು ಮ್ಯಾಪ್ಸ್ನ (ಪೂಗಕಪ· ೨೨-೦೩); ಕಬ್ಬಿಗೆ ದಯವಿಟ್ಟ. . . ಪದಯಂಗೆ ಭಿಟ್ಟಿಯವೆ ಕೊಟ್ಟ (ಕ್ರಿಳ್ಳಜಾ· ೫೫) ; ಪುನೆಯು ಒಳಗೇ ಕುಳಿತು ಕಾಶಂಬಿಪೆನು ಗೆಳೆಯರ ಭಿಟ್ಟಿಗೆ (ಕಂಮು· ೦೪-೪).

[<ಹ್ರಾ. ಭಿಟ್ಟಿ, ಭಿಟ್ಟಿಣ-/ಹಿಂ. ಭೇಂಟ್; ಮರಾ. ಭೇಟ-/ತೆಲು. ಭೇಟಿ]

ಭೇಣ (ನಾ)· ಸಮತಟ್ಟಾದ, ಗಿಡಮರಗಳಿಲ್ಲದ ಬರಿದಾದ ನೆಲ: ಹಳ್ಳಲು ಪಳಗಾದು ಭೇಣ ಭೀರು ಭಟ್ಟು ಚಟ್ಟಿ ಮುಂತಾದ ಸೀಮೆ ಸಾಮ್ಯ (ಕಾ. III-i. ೯-೨೨; ೧೮೫೬). [ಪ ಇದು 'ಬೆಣ' ಎಂಬುದರ ಅಪಲಿಖಿತ]

ಭೇದ (ನಾ). ೧. ಮುರಿಯುವುದು; ಒಡೆಯುವುದು. ೨. ಹರಿಯುವುದು ; ಸೀಳುವುದು. ೩. ಭಾಗ ಮಾಡುವುದು; ಬೇರ್ಪಡಿಸುವುದು. ೪. ಬಿರುಕು : ಛಿದ್ರ. ೫. ಗಾಯ ; ಪೆಟ್ಟು. ೬. ವಿಂಗಡಣೆ; ವಿಂಡಿಕೆ. ೭. ವ್ಯತ್ಯಾಸ ; ಅಂತರ ; ಬೇರೆಯಾಗಿರುವುದು : ಕಾಯವ ಜೀವದ ಹೊರಿಗೆಯ ಅಳದ ಭೇದವ ತಿಳಿಯಬಲ್ಲಡೆ ನಮ್ಮ ಗುಪೇಶ್ವರಲಿಂಗದ ಅಜಿವ್ಯ ಸಾಧ್ಯವಪ್ಪುದು ಕಾಣಾ (ಅಪಪ· ೫೬೨-೦೫೬); ಇನ್ನದರ ಪಂಡಿಯೆಂದುಮೇಕ್ಷಿಸಲಿನ್ನು ಹಿರಿಯರಿಗಂಜಿ ನುಡಿವೆನು ಕನ್ನಡಿಯ ದರ್ಪಣವಿದಲ್ಲವೆ ಭೇದವೇನಿದಕೆ (ಅಮ್ಮಾ. ೦-೪); ಪಿರಿದು ಕಿಱಿದುಗಳ ಭೇದವನೇಗೆಸೆದೆ ನಿರಮಿಸುದನೆನಗುವುದು (ಪಣಿ. ೩-೩೩). ೮. ಬಗೆ ; ವಿಧ; ಪ್ರಕಾರ: ವೇದಾಂಗಂ ಸ್ಮೃತಿ ಭೇದಮೆಂದಿನಿತುಮಂ ಪೂರ್ವೋದಿದಂ ಸತ್ಯಲಾಭೇದಗಳ್ ಪದಿನೆಟ್ಟುಮಂ ತಿಳಿದಂ (ಪುಂಚಾ. ೩-೪೩). ೯. ಗುಟ್ಟನ್ನು ರಟ್ಟುಮಾಡುವುದು ; ರಹಸ್ಯವನ್ನು ಬಹಿರಂಗ

ಪಡಿಸುವಿಕೆ. ೧೦. ಪರಿವರ್ತನೆ; ಬದಲಾವಣೆ. ೧೧. ಭಿನ್ನಾಭಿಪ್ರಾಯ; ವಿರಸ್ಯವಿರೋಧ: ಇಂದಿರಮ್ಮನವರ ಕೈಲಿ ಭೇದದ ಬೀಡ ಬಿಕ್ಕಿಸಬೇಕೆಂದು ಹಾದಿದ್ದ ಧಾಗೀರತಮ್ಮನಿಗೆ ಸದವಕಾಶ ಸಿಕ್ಕಿತು (ಕೃಷ್ಣಕೋ. ೬೫). ೧೨. ಪಗೆ; ಶತ್ರುತ್ವ. ೧೩. ಎರಡು ಎಂಬ ಭಾವ: ದ್ವೈತ. ೧೪. ಮಲವಿಸರ್ಜನೆ. ೧೫. ಕ್ಷೋಭೆ. ೧೬. ನೋವು: ಅಪಜಯ. ೧೭. (ಕೈ, ಕಾಲುಗಳಲ್ಲುಂಟಾಗುವ) ನೋವೆ. – ಬೆಳಕು. ೧೮. ಪಾರ್ಶ್ವವಾಯು: ಲಕ್ವ. ೧೯. ಕುಗ್ಗುವಿಕೆ: ಸಂಕೋಚನ. ೨೦. ಗ್ರಹಗಳ ಕೂಟ,–ಸೇರುವೆ. ೨೧. ನೀರು: ಜಲ: "ತಂತ್ರಂ ಗಜಸಂತ್ರಾಸಂ ಸಪತ್ನಾಂಬುಗಳವ ಚತುರಂ ಭೇದಮಮ್ಮಂ" (ಕಾಮಾ. ೬೩); ೨೨. [ರಾಜನೀ] ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಬಗೆಯ ಪ್ರಸಿದ್ಧವಾದ ಉಪಾಯಗಳಲ್ಲಿ ಒಂದು: ತನಗೆ ಶತ್ರುಗಳಾದವರಲ್ಲಿ ಪರಸ್ಪರ ಜಗಳ ತರುವುದು; ಶತ್ರುಪಕ್ಷದವರಲ್ಲಿ ಒಡಕು ಹುಟ್ಟಿಸಿ ಒಳಜಗಳವನ್ನುಂಟುಮಾಡುವುದು: "ಉಪಜಾಪಃ-ಭೇದಃ–ಈ ೨ ಒಳಗುಗುಡುವುದು" (ಪಾಣಿನಿ. ೦೫೪-೧೩); ಭೇದಂ ಕೃತ್ಯಮೇಕ್ಷೋಣೇತ ಭೂಪಾಲಪ್ರಾಪ್ತಂ (ಶಾಂತಿಪ. ೬-೧೩ ೪); ತನ್ನ ಪಗೆಯಾತನ ಪಿತಗುರ್ವನ್ನತಿಯಂ ಭಿನ್ನಮೆಸಗೆ ತಾನದು ಭೇದಂ (ಹರಿವಂ. ೫-೦೨೨). "ಚತುರುಪಾಯ ಪರಾ. ೨೩. [ಸಾಂಖ್ಯ]ಮೂಲಭೂತವಾದ ಹತ್ತು ಬಗೆಯ ಪ್ರಕೃತಿಧರ್ಮಗಳಲ್ಲಿ ಒಂದು: ಮೂಲಭೂತಗಳಾದ ಪ್ರಕೃತಿಧರ್ಮಗಳು ಹತ್ತು:–ಅಸ್ತಿತ್ವ, ಒತ್ತು, ಆರ್ಥವತ್ತ್ವ, ಅನ್ಯತ್ವ, ಪರಾರ್ಥತ್ವ, ಭೇದ, ಸಂಯೋಗ, ವಿಯೋಗ, ಶಷ್ಟತ್ವ, ಅಕರ್ತೃತ್ವ-ಇವುಗಳು (ಸಿಂಪಾ. ೩೭). ೨೪. [ತತ್ತ್ವಶಾ] (ಮರಕ್ಕೂ -ಕೊಂಬೆಗೂ ಇರುವಂತೆ) ದೊಡ್ಡ ವಸ್ತುವಿಗೂ ಆದರೆ ಅಂಥವಾದ ಸಣ್ಣವಸ್ತುವಿಗೂ ಇರುವ ವ್ಯತ್ಯಾಸ: ಅಚ್ಛೇದ, ಅವಚ್ಛೇದಕ, ಅವಚ್ಛಿನ್ನವೆಂಬ ಪದಗಳಿಗೆ ಪರ್ಯಾಯಪದಗಳಾಗಿ . . . ಭೇದ, ಭೇದಕ, ಭೇದ್ಯ . . . ಎಂದು ವ್ಯವಹರಿಸುವರು (ಸಿಂಪಾ. ೦೮೪). ೨೫. [ಜ್ಯೋಸ] ಪುಷ್ಪಲಸ್ಕಂಧಗಳು ವಿಘಾತವಾಗುವಿಕೆ: ಪುಷ್ಪಲಸ್ಕಂಧವು ಒಡೆದು ಅಣುಗಳು ಚಿದುರುವುದು 'ಭೇದ' ಪೆಸರೂ ಹೇಳಲ್ಪಟ್ಟಿದೆ (ಕೃಪ ೧೨೬). ೨೬. [ವೇದಾಂತ] ನಿಷ್ಕರ್ಷಿತವಾದ ವಿರುದ್ಧ ಪದಾರ್ಥಗಳಲ್ಲಿ ಒಂದಕ್ಕೊಂದಕ್ಕೆ ಒಂದು ವ್ಯತ್ಯಾಸದಿಂದ ಇರುವ ಪರಸ್ಪರ ವ್ಯತಾಸ: ಜ್ಞಾನಕ್ಕೂ ಜೀವನಿಗೂ ಭೇದ. ಅಭೇದ ಭೇದಾಭೇದಗಳೆಂಬ ಮೂರರ ಪಕ್ಷಗಳು ಸಮ್ಮತವಾಗಿವೆ (ಬಂಡಾ. ೬೩). 'ಭೇದಾಭೇದ' ಪರಾ. ೨೮. [ನಾಟ್ಯ] ಇಪ್ಪತ್ತು ಬಗೆಯ ಕರಕರ್ಮಗಳಲ್ಲಿ ಒಂದು: ಘೂಸನ . . . ಭೇದ, ಕ್ಷೋಟನ, ದೋಷಿನ, ವಿಸರ್ಜನ, ಆಸ್ಫಾಲ, ತರ್ಜನ ಈ ಇಪ್ಪತ್ತು ಕರಕರ್ಮಭೇದಂಗಳ್ (ಅಸ್ಕ. ೧-೦೩ ೭). [ಸಂ.]

ಭೇದಂಬುಡು (ಕ್ರಿ). ಬೇರೆಯಾಗು; ದೂರವಾಗು: ದುರ್ಮಾದಿಂದಿನ್ನೆಗಂ ಭೇದಂಬಟ್ಟಿರ್ದಗೆಟ್ಟು ಕಟ್ಟಿನಿತುಂ ಕಾಲಂಗೇಂ ಬರ್ಮಡೋ (ಕುಶವಿ. ೩-೧೩). [ಭೇದ + ಪಡು]

ಭೇದಂಬಡೆ (ಕ್ರಿ). ಬೇರೆಬೇರೆ ವಿಧಗಳನ್ನು ಹೊಂದು: ಪಾದ ವಿಜರ್ಯಾಸದೋಳ್ ಭೇದಮಂಬಡೆದೇಕವರ್ಣಹೀನಾಧಿದಿವಾದಂದರ್ಧಸಮಂ ಪೊರಾದುಮಂ (ಲಂಪೋಜಾ. ೩-೨೦೦). [ಭೇದ + ಪಡೆ]

ಭೇದಕ (ಗು). ೧. ಮುರಿಯುವ: ಸೀಳುವ: ಒಡೆಯುವ. ೨. ಪ್ರತ್ಯೇಕಿಸುವ; ವಿಂಗಡಿಸುವ; ವೇರ್ಪಡಿಸುವ. ೩. ನಿಷ್ಕೃಷ್ಟವಾಗಿ ತಿಳಿಸುವ. (ನಾ). ೪. ಮುರಿಯುವುದು: ನಾಶಪಡಿಸುವುದು. ೫. ಮುರಿಯುವವನು: ನಾಶಪಡಿಸುವವನು. ೬. (ಪದಾರ್ಥಗಳನ್ನು) ವಿಶ್ಲೇಷಣೆಮಾಡುವಿಕೆ: ಪದಾರ್ಥಗಳ ಒಳಹೊಕ್ಕು ತತ್ತ್ವವನ್ನು ಗ್ರಹಿಸುವುದು: ಜ್ಞಾನಕ್ಕೆ ಲೇಪವಾದವನುವೆ ಕುಪ್ಪಪ ನಂಬಿದ ಜಕ್ಕಿಯಂತೆ ಕಾದ ಲೋಹದ ಜಲದಿರವನಂತೆ. . . ಇದಾರಿಗೆ ಭೇದಕ ಇದ ಕೋಧಿಸೇಕಾ (ಕೋಸಾ. ೯-೦೦). ೭. (ಪದಾರ್ಥಗಳನ್ನು ವಿಶ್ಲೇಷಣೆ ಮಾಡಿ ತತ್ತ್ವವನ್ನು ಗ್ರಹಿಸುವವನು.–ವಿಚಾರ ಮಾಡುವವನು: ಆ ಶರಣನು. . . ವೇದ ಶಾಸ್ತ್ರ ಪುರಾಣ ಧಂದಸ್ಸು ವಿಘಟಿಗಳೆಲ್ಲಕ್ಕೆ ಭೇದಕನಲ್ಲ (ಅಪಚಿ. ೨೫೦–೦೦೩). ೮. [ವ್ಯಾಕ] ಒಂದು ವಸ್ತುವನ್ನು ಬೇರೆ ವಸ್ತುವಿನಿಂದ ಬೇರ್ಪಡಿಸಬೇಕಾದಾಗ ಪ್ರಯೋಗಿಸುವ ಗುಣ ವಿಶಿಷ್ಟ ಪದ: ℙ ಒಂದು ಕೊಟ್ಟಿಗೆಯಲ್ಲಿ ಬೇರೆ ಬೇರೆ ಬಣ್ಣದ ಕರೆಯುವ ಹಸುಗಳಿದ್ದುವು. ಕೆಂಪುಹಸುವಿನ ಹಾಲನ್ನು ಕರೆದು ಕೊಡು ಪಾ ಎಂದು ಹೇಳಿದರೆ, ಆಗ ಕೆಂಪು ಎಂಬ ಪದವು ಭೇದಕ. ಏಕೆಂದರೆ ಅದು ಕರೆಯಬೇಕಾದ ಹಸುವನ್ನು ಅಲ್ಲಿದ್ದ ಕರಿಯ ಮತ್ತು ಬಿಳಿಯ ಹಸುಗಳಿಂದ ಬೇರ್ಪಡಿಸುತ್ತದೆ: ಅಲ್ಲದೆ ಕರೆಯ ಬೇಕಾದ ಹಸುವನ್ನು ನಿರ್ದಿಷ್ಟವಾಗಿ ತಿಳಿಸುತ್ತದೆ: ಭೇದ್ಯಂ ವಿಶೇಷ್ಯಂ; ಭೇದಕಂ ವಿಶೇಷಣಂ (ಕಣ್ಣಾಪ. ೦೦೦ ೬೬). ೯. [ತತ್ತ್ವಶಾ] ಒಂದು ದೊಡ್ಡ ಪದಾರ್ಥವನ್ನು ಚಿಕ್ಕದನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಉಪಯೋಗಿಸುವ ಸಾಧನ: ℙ ಬ್ರಹ್ಮವಸ್ತು ಸರ್ವವ್ಯಾಪಿ. ಇದು ಒಂದರಲ್ಲಿ ಅಡಕವಾಗಿಲ್ಲವಾದುದರಿಂದ ಅಪರಿಚ್ಛಿನ್ನ. ಇದು ಪರಿಚ್ಛಿನ್ನವಾದರೆ ಜೀವವಸ್ತುವಾಗಿಬಿಡುತ್ತದೆ. ಸರ್ವವ್ಯಾಪಿಯಾದ ಬ್ರಹ್ಮ ಪ್ರಾಣಿಗಳ ಅಂತಃಕರಣವಸ್ತುವೂ ಆಗಲೇಬೇಕಷ್ಟೆ. ಆ ಅಂತಃಕರಣದಲ್ಲಿ ಇರುವ ಬ್ರಹ್ಮವೇ ಜೀವ. ಈಗ ಅಂತಃಕರಣವು ಬ್ರಹ್ಮನನ್ನು ವಿಶಿಷ್ಟವಾಗಿಸಿದೆ. ಇಂಥ ವಿಶಿಷ್ಟತೆಯಿಂದ ಪ್ರತ್ಯೇಕಿಸಿ ತನ್ನೊಳಗಿರುವ ಅವನಿಗೆ ಜೀವವೆಂಬ ಹೆಸರನ್ನು ಕೊಟ್ಟಿತು. ಹೀಗೆ ಪ್ರತ್ಯೇಕಿಸಿದ್ದು ಆ ಅಂತಃಕರಣ. ಇದನ್ನು ಭೇದಕ ಅಥವಾ ಅವಚ್ಛೇದಕ ಎಂದು ಶಾಸ್ತ್ರಗಳು ಹೇಳುತ್ತವೆ: ಅವಚ್ಛೇದಕ, ಅವಚ್ಛಿನ್ನವೆಂಬ ಪದಗಳಿಗೆ ಪರ್ಯಾಯಪದಗಳಾಗಿ . . . ಭೇದ, ಭೇದಕ, ಭೇದ್ಯ . . . ಎಂದು ವ್ಯವಹರಿಸುವರು (ಸಿಂಪಾ. ೦೮೮). [ಸಂ.]

ಭೇದಕಾತಿಶಯೋಕ್ತಿ (ನಾ). [ಕಾವ್ಯಮೀ] ಎಂಟುಬಗೆಯ ಅತಿಶಯೋಕ್ತಿಗಳಲ್ಲಿ ಒಂದು: ℙ ವರ್ಣಿಸಬೇಕಾದ ವಸ್ತುವು ಜಗತ್ತಿನಲ್ಲಿರುವ ಒಂದು ವಸ್ತುವಾಗಿದ್ದರೂ ಅದು ಲೋಕಾತೀತವಾದುದು. ಅಂದರೆ ಪ್ರಪಂಚದ ವಸ್ತುಗಳಿಗಿಂತ ಬೇರೆಯಾದುದು ಎಂದು ವರ್ಣಿಸುವುದು: ಪದ್ಯಮಾವ ವಸ್ತುದಂ ಲೋಕಮೋರ್ವ ಪುಸ್ತುಮ್ಮನಂ ಬೇಱೆಂದು ಪೇಱ್ದುರಿ ಭೇದಕಾತಿಶಯೋಕ್ತಿಯನಿಪುದು (ಅಕ್ಕ. ೩೩–೦೩); ಲೋಕಪ್ರಸಿದ್ಧ ಪದಾರ್ಥಕ್ಕಿಂತಲೂ ಬೇರೆಯಾಗದೆ ಇದ್ದರೂ ಬೇರೆಯೆಂದು ತೋರುವಂತೆ ವರ್ಣಿಸುವುದೇ ಭೇದಕಾತಿಶಯೋಕ್ತಿ (ಕೃಬಾ. ೨೭೦). [ಸಂ.]

ಭೇದಗೆಡು (ಕ್ರಿ). ವ್ಯತ್ಯಾಸವು ಇಲ್ಲವಾಗು; ಅಭೇದವುಂಟಾಗು: ಗುಹೇಶ್ವರನ ಪೆರಸಿ ಭೇದಗೆಟ್ಟು ಬಳಿಕ ಮತ್ತೆ ಸಂಗವ ಮಾಡಿಹೆನು ತವಕವೇಕವ್ಯ (ಶ್ರಕಚಿ. ೨೦೩). [ಭೇದ + ಕೆಡು]

ಭೇದತಂತ್ರ (ನಾ). ಒಡಕನ್ನು ಹುಟ್ಟಿಸುವ ಉಪಾಯ: ಶ್ರೀರಾವಣನಿಗೆ ಭೇದತಂತ್ರವನ್ನಿಟ್ಟಿಸುವ ಹಾಗೂ ಕೈಯಿಪಿದೇವಿಗೆ ಅತ್ಯಂತ ಮನೋವ್ಯಥೆ ಪುಟ್ಟುವ ಹಾಗೂ ಆಕೆಯನ್ನು ಕುರಿತು. . . ಮುದಿಯಳು (ಕಗಾ. ೬೬). [ಸಂ.]

ಭೇದದರ್ಶನ (ನಾ). ವಸ್ತುತಃ ಒಂದೇ ಆದರೂ ಬೇರೆಯಾಗಿ ಕಾಣುವುದು: ಈ ಅವಿದ್ಯೆಗೆ ಆವರಣಶಕ್ತಿ, ವಿಕ್ಷೇಪಶಕ್ತಿ ಎಂದೆರಡು ಸ್ವಭಾವಗಳು ಇರುವುವು. ಆವರಣಶಕ್ತಿಯಿಂದ ವಸ್ತುಸ್ವರೂಪವು ಮುಚ್ಚಲ್ಪಡುವುದು. ವಿಕ್ಷೇಪಶಕ್ತಿಯಿಂದ ವಸ್ತು ವಿಚಿತ್ರವಾಗಿ ಕಾಣುವುದು. ಇದಕ್ಕೆ: ಭೇದದರ್ಶನವೆಂಬ ಹೆಸರು (ಪಂಚಾ. ೨೦೯). [ಸಂ.]

ಭೇದದೃಷ್ಟಿ (ನಾ). ಜೀವಾತ್ಮ ಮತ್ತು ಪರಮಾತ್ಮನು ಬೇರೆ ಬೇರೆ ಎಂಬ ಭಾವನೆ; ದ್ವೈತ: ಜೀವನು . . . ಭಕ್ತನಾದ ಮೇಲೆ . . .

ದ್ವೈತವೇದಾಂತದ ಭೇದದೃಷ್ಟಿ ಜೀವನದಲ್ಲಿ ಸಹಜವಾಗಿ ಬೆಲೆಸಿರುತ್ತದೆ (ಪ್ರಬ. ೦೦೦). [ಸಂ.]

ಭೇದನ (ನಾ). ೧. ಒಡೆಯುವುದು; ಮುರಿಯುವುದು; ಸೀಳುವುದು. ೨. ಬೇರೆ ಮಾಡುವುದು; ವಿಂಗಡಿಸುವುದು. ೩. ಮನಸ್ಥಾಪವನ್ನುಂಟುಮಾಡುವುದು; ಭಿನ್ನಾಭಿಪ್ರಾಯ ಬರುವಂತೆ ಮಾಡುವುದು. ೪. ಶಿಥಿಲಗೊಳಿಸುವುದು; ಸಡಿಲಗೊಳಿಸುವುದು. ೫. ಗುಟ್ಟನ್ನು ಬಿಟ್ಟುಕೊಡುವುದು. ೬. ಭೇದ; ಒಡಕು; ವೈಮನಸ್ಯ. ೭. ಅಂಗು. ೮. ಭೇದಿಯಾಗುವುದು. ೯. ಭೇದಿ ಮಾಡಿಸುವ ಔಷಧ; ವಿರೇಚಕ. ೧೦. ಹಂದಿ. [ಸಂ.]

ಭೇದಬುದ್ಧಿ (ನಾ). ಒಬ್ಬರಿಗೊಂದು, ಮತ್ತೊಬ್ಬರಿಗೊಂದು ಮಾಡುವ ಮನೋಭಾವ; ಪಕ್ಷಪಾತಭಾವನೆ: ಈ ಪ್ರಕಾರ ಪ್ರತ್ಯಕ್ಷ ತಮ್ಮ ಹೊಟ್ಟೆದುಕ್ಕಳಲ್ಲಿ ಭೇದಬುದ್ಧಿ ಮಾಡುವುದರ ಕಾರಣವನ್ನು ದೇವರೇ ಬಲ್ಲನು (ಕುಟುಂಬು. ೪-೦೦೮). [ಸಂ.]

ಭೇದಭಾವ (ನಾ). ಬೇರೆಬೇರೆ ಎಂಬ ಭಾವನೆ: ಶಿವನು ಪ್ರೇರಕನೂ. ಜೀವನು ಪ್ರೇರ್ಯನೂ ಆದ ಮೇಲೆ ಶಿವ – ಜೀವರಿಗೆ ಭೇದಭಾವ ಸಹಜವಾಗಿ ಇರುವುದರಿಂದ ಅದ್ವೈತವನ್ನು ಭಾವಿಸುವುದು ಯುಕ್ತವಾಗದು (ಪ್ರಬ. ೦೦೬); ಭಾವನೆ ಸಂಕುಚಿತವಾಗಿದ್ದಾಗ ತನ್ನದು ಪರರದು ಎಂಬ ಭೇದಭಾವ ಇದ್ದದ್ದೇ (ಕೃಷ್ಣ. ೭೦). [ಸಂ.]

ಭೇದಶ್ರುತಿ (ನಾ). [ವೇದಾಂತ] "ಚಿತ್ತು, ಅಚಿತ್ತು, ನಾರಾಯಣ ಈ ಮೂರಕ್ಕೂ ಇರುವ ಪರಸ್ಪರ ಭೇದಸ್ವರೂಪವನ್ನು ತಾತ್ತ್ವಿಕವಾಗಿ ಬೋಧಿಸುವುದಕ್ಕೋಸ್ಕರ ಹೊರಟಿರುವುದಕ್ಕೆ 'ಭೇದಶ್ರುತಿ' ಎಂದು ಹೆಸರು" (ಪ್ರತಿ. ೦). [ಸಂ.]

ಭೇದಾಭೇದ (ನಾ). [ವೇದಾಂತ] ವಿವಕ್ಷಿತವಾದ ಎರಡು ಪದಾರ್ಥಗಳಲ್ಲಿ ಒಂದಕ್ಕೊಂದಕ್ಕೆ ಒಂದು ದೃಷ್ಟಿಯಿಂದ ಪರಸ್ಪರ ಭೇದವೂ ಮತ್ತೊಂದು ದೃಷ್ಟಿಯಿಂದ ಅಭೇದವೂ ಇರುವಿಕೆ: ಈ ಉದಾಹರಣೆಗೆ ಚಿನ್ನವ ಸರ ಮತ್ತು ಡಾಬು – ಈ ಎರಡು ಪದಾರ್ಥಗಳಲ್ಲಿ ಸರವನ್ನೂ ಡಾಬನ್ನೂ ಆಕಾರದೃಷ್ಟಿಯಿಂದ ನೋಡಿದರೆ ಸರವೇ ಬೇರೆ, ಡಾಬೇ ಬೇರೆ— ಹೀಗೆ ಭೇದವಿದೆ. ಆದರೆ ಎರಡೂ ಚಿನ್ನದಿಂದಲೇ ಆಗಿವೆ. ಕರಗಿಸಿದಾಗ ಆಕಾರ ನೋಡಿದರೆ ಎರಡೂ ಚಿನ್ನವೇ ಆಗಿಬಿಡುತ್ತವೆ. ಆದ್ದರಿಂದ ಮೂಲದ್ರವ್ಯದ ದೃಷ್ಟಿಯಿಂದ ಎರಡಕ್ಕೂ ಅಭೇದವೇ ಇರುತ್ತದೆ: ಜ್ಞಾನಕ್ಕೂ ಜೀವನಿಗೂ ಭೇದ, ಅಭೇದ, ಭೇದಾಭೇದಗಳೆಂಬ ಮೂರು ಪಕ್ಷಗಳೂ ಸಮ್ಮತವಾಗಿವೆ (ಪಂಚಮ. ೬೫); ಶಿವ ಜೀವರಿಗೆ ಭೇದಾಭೇದಗಳೆರಡೂ ಕಾಲಭೇದದಿಂದಲೂ ಅವಸ್ಥಾಭೇದದಿಂದಲೂ ಯಥಾರ್ಥವಾಗಿ ಅನ್ವಯಿಸುತ್ತವೆ (ಪ್ರತಿ. ೨೦). [ಸಂ.]

ಭೇದಿ (ಗು). ೧. ಒಡೆಯುವ; ಸೀಳುವ; ಭಾಗ ಮಾಡುವ. (ನಾ). ೨. ಹೊಲವ ನೀರಾಗಿ ಗುದ್ದಾಡಿರದಿಂದ ಹರಿಯುವುದು: ವಿರೇಚನ; ಜುಲಾಬು: ಇದ್ದಕ್ಕಿದ್ದ ಹಾಗೆ ಅನೇಕ ಸಲ ಭೇದಿಯಾಗಲು ಆರಂಭವಾಗುತ್ತದೆ (ಗೃಹಪ. ೦೦೨).

ಭೇದಿ ಕಟ್ಟು = ಜುಲಾಬಾಗುವುದು ನಿಲ್ಲು: ಭೇದಿ ಕಟ್ಟುವದಕ್ಕೆ ಬೇರೆ ಚೂರ್ಣವನ್ನು ಕೊಟ್ಟಿದ್ದೇನೆ (ಪ್ರಾಣ). ಭೇದಿಗೆ ಕೊಡು = ೧. ಜುಲಾಬಾಗುವಂತೆ ಔಷಧಿಯನ್ನು ಕೊಡು: ವೈದ್ಯನು ಮಗುವಿಗೆ ಭೇದಿಗೆ ಕೊಟ್ಟನು (ಪ್ರಾಣ). ೨. (ಆಲಂ) ಭಯವನ್ನುಂಟುಮಾಡು; ಗಾಬರಿಪಡಿಸು: ಅವನಿಗೆ ಸುಮ್ಮನೆ ಭೇದಿಗೆ ಕೊಟ್ಟಿದ್ದೇನೆ (ಪ್ರಾಣ). ಭೇದಿಮಾತ್ರೆ = ಭೇದಿಯನ್ನು ಮಾಡಿಸುವ ಜಾಪಾಳ ಮೊದಲಾದುವುಗಳಿಂದ ಮಾಡಿರುವ ಮಾತ್ರೆ. – ಗುಳಿಗೆ: ಪಂಡಿತರು ಭೇದಿ ಮಾತ್ರೆಯನ್ನು ಕೊಟ್ಟು ಕಳುಹಿಸಿದರು (ಪ್ರಾಣ). [ಸಂ. ಭೇದಿನ್]

ಭೇದಿಗ (ನಾ). ಒಡಕನ್ನು ಹುಟ್ಟಿಸುವವನು; ಜಗಳ ತಂದುಹಾಕುವವನು: ಹಾದಿಯ ಮನೆ ಹೊಲ್ಲ ಬೀದಿಯ ಸುಳಿ ಹೊಲ್ಲ ಹಾದರದ ಹೆಣ್ಣ ನೆರೆ ಹೊಲ್ಲ ಪಕ್ಕಯಂಬಿ ಭೇದಿಗನೆ ಹೊಲ್ಲ (ಸರ್ವಜ್ಞ. ೦೦೦೦).

[ಭೇದ + -ಇಗ]

ಭೇದಿತ (ಗು). ೧. ಮುರಿದ; ಒಡೆದ; ಸೀಳಿದ; ಭಿನ್ನವಾದ. (ನಾ). ೨. ಒಡೆದುಹೋದುದು; ಸೀಳಿದುದು: "ದಾರಿತಃ, ಭಿನ್ನಃ, ಭೇದಿತಃ—ಮೂರು ಸೀಳುವುದಕ್ಕೆ ಬೋಗ್ಯವಾಗಿರುವುದು, ಕಡಿದುಬ್ಬಟ್ಟದ್ದು" (ಸಿದ್ಧಾಂತ. ೪೩೦). [ಸಂ.]

ಭೇದಿಸು (ಕ್ರಿ). ೧. ಒಡೆ; ಮುರಿ; ಸೀಳು; ಭಾಗ ಮಾಡು: ಬೆಸಸಿದೊಡದು ಮಾರ್ಕೊಳ್ಳದೆ ಬೆಸಸಂ ಬಲವಂದು ಬಾಹುಬಲಿಯನಣಂ ಭೇದಿಸಲಾಱದು ದೞನಿರ್ದುಮು. . .ಕೆಲದೊಳ್(೩೩೪. ೦೯-೦೦೬); ಬೆಟ್ಟತಪ್ಪ ಕಲ್ಲುಗಳುಳ್ಳ ಬೆಟ್ಟಮಂ ಸಿಡಿಲುಂ ನೀರುಂ ಭೇದಿಸುವಪರೆ (೩೦೪೦. ೦೩೬-೨೦); ಪೊನ್ನ ಪೆಟ್ಟಿಗೆಯ ಭೇದಿಸಿ ತೆಗೆದು ನಾನಾ ಮಸ್ತ್ರಗಳನು ಸಂಪಾದಿಸಿಕೊಂಡನರ್ಜುನಂ (೩೦೪೦. ೦೯-೨೦). ೨. ಸೋಲಿಸು; ಪರಿಭವವನ್ನುಂಟುಮಾಡು: ರಥೌಘದಿಂ ಭೇದಿಪ ಭಿನ್ನಾನೀಕ ಪತಾಕಾಂತಕನೊಳ್ . . . ಚಿತ್ರಮಲ್ಲಪೇ (೩೦೪೦. ೯-೦೩೦). ೩. ಪರಿಹರಿಸು; ನಿವಾರಿಸು: ಕಯ್ದಿ ಏಗಳ ಬೆಳಗಿಂ ಕಾಪಿದ್ದೆಸಪ ಸಹಸ್ರಕಿರಣನಿಂ ಭೇದಿಸಲೇಗೆಯ್ದುಂ ವಾರದುದಲ್ ತವೆ ಮಾಯ್ದಾ ಜ್ವಸನದೊಳೊಡಲೊಳಿದರ್ ತಮಂ (೩೦೦೦. ೩೨). ೪. ಅಭಿವ್ಯಾಪ್ತಿಯನ್ನು ಖಂಡಿಸು: ನಿರಾಕರಿಸು: ಲೋಕಾಯುಕ್ತದಿನಿಸಿದ ಜಾವಾಕೋಕ್ಕಿಯಂ . . . ಜಿನಚಂದ್ರಭೂಭುಜಂ ಭೇದಿಸಿದಂ (೩೦೦೪. ೦-೦೩೩). ೫. ಛಿದ್ರಿಸಿ ಒಳಹೊಗು: ಸೀಳಿಕೊಂಡು ಒಳನುಗ್ಗು: ಆಮಮವಜ್ರವ್ಯೂಹವನು ಭೇದಿಸುವನಾಜವನೆನಲು ಕೀಳದು ಶಿಖಾತನದಲಾಯಕೆ ಪಡದನು (೪೦೦೦೦೦. ೦-೨೨); ಭೀಮಸೇನ, ನಕುಲ, ಸಹದೇವರು ಹೂರೂ ಪದ್ಮವ್ಯೂಹವನ್ನು ಭೇದಿಸಿ ಒಳಗೆ ನುಗ್ಗಲಾರದ ಹಿಂತಿರುಗಿದ್ದು (೩೦೦೪. ೨೦). ೬. ಗುಟ್ಟನ್ನು ಕಂಡುಹಿಡಿ; ರಹಸ್ಯವನ್ನು ತಿಳಿ; ಪತ್ತೆ ಮಾಡು: ಭೇದಿಸಿ ಸಹದೇವಗೆ ಮಗನಾದುದನೊರ್ದಂ ಧನಾರ್ಥ ವೆಚ್ಚಂ ಪಡವೋದಾದರದಿನಲ್ಲಿಪೆ (೩೦೦೪೦. ೨-೨೩); ಕೃಷ್ಣನ ಸೊಗಸುಮಾಡುವ ಮುದದಿ ಬಂದನು ಕೌರವೇಂದ್ರನು ದ್ವಾರಕಾಪುರಿಗೆ ಇದನು ಭೇದಿಸಿ ಬೇಸಿಸವರಜ್ಞಾಪಿಸರು ಕುಂತೀಸುತರಿಗೆ (೪೦೦೦೦. ೦-೦೭); ಅದಿದೈವವನು ತಾ ಭೇದಿಸಲಿಕಱಿಯದಲೆ ಹಾದಿಯ ಲಲ್ಲಿಗೆಯಮಾಡಿ ನಮಿಸುವ ಮಾದಿಗರ ನೋಡು (೪೦೦೦. ೦೧೪). ೭. ಭೇದೋಪಾಯಕ್ಕೆ ಒಳಗು ಮಾಡು; ಪಕ್ಷಾಂತರ ಮಾಡಿಸು: ಈ ವ್ಯೂಹದುಪ್ಪಿದಯನಪ್ಪ ಸಂಜ್ಞೀವ ಕನಂ ಭೇದಿಸುವುದಾಪ ಗದನಾ(೩೦೪೦೦. ೦೩೨-೦೪). ೮. (ಒಂದು ವಿಷಯವನ್ನು) ಚೆನ್ನಾಗಿ ಆಲೋಚನೆಮಾಡು, – ವಿಚಾರಿಸು: ಇದಱೊಳಗೊಂದು ಕುಂದಿಲ್ಲ ಭೇದಿಸುವುದೀ ಕೃತಿಗೆ ಪ್ರತಿಯಿಲ್ಲ (೪೦೦೦. ೦-೦೪); ಪರಗೆಟ್ಟು ತನುಸುಖಿಕೊಲಿಯದೆ ಕೆಲರು ಭೇದಿಸಿ ನಿಜಸುಖವ ಭೋಗಿಪರು (೪೪೪. ೦-೦೦೬); ವೇದದೊಳು ಮನ್ವಾದಿ ಧರ್ಮಶಾಸ್ತ್ರದೊಳು ಭೇದಿಸಿ ಪಿರಿಯರು ಪೇಳಿದುದನೆ ಕೃತಿಗೈದನು ತಿಮಿಗೊಳಿಸಿದನು (೪೦೦. ೦-೩೦). ೯. ಪ್ರತ್ಯಾಸವನ್ನು ಗ್ರಹಿಸು; ಭೇದವೆನ್ನು ಕಾಣು: ದೆಸೆಯಿದಾಗಸ ಭೂಮಿಭಾಗವೆನುತ ಭೇದಿಸದಾದವರನಕರತೆ ಮುಸೆದ ಕೂರ್ಗಣೆಯಲಿ ಭುವನವ ಕೊಡೆ ಮುದ್ರಿಸಿದರು ಕೈಚಳಕದಲಿ (೩೦೦೪. ೭-೦೫). ೧೦. ಬೇರೆಯಾಗು: ಪಾದದೆ ಹೋದಶಹೋದಶ ಮಾತ್ರೆಯು ಭೇದಿಸಿ ಮೂಜನೆಯಾಜನೆಯಾಧಿಯೊಳ್ ಲಘುವಿರ್ವತ್ತಾಱು ಸಾವರಮಿಂತಾಜಡಿಯೊಳ್ ಗುಣಿಯಿಸೆ (೦೦೦೦೦. ೫-೨೫೯ ಕ ೦೦೪೮೮).

[ಭೇದ + -ಇಸು]

ಭೇದಿಸೊಪ್ಪು (ನಾ). (ಭೇದಿಯಾಗುವುದಕ್ಕೆಂದು ಕಷಾಯಮಾಡಲು ಬಳಸುವ) ಒಂದು ಬಗೆಯ ಸೊಪ್ಪು : (ಪ್ರಾಣಿ. ೩೫-೬೨).
[ಭೇದಿ + ಸೊಪ್ಪು]

ಭೇದೋಪಾಯ (ನಾ). = ಭೇದ ೨ಬಿ : ರಾಜ್ಯವನ್ನು ಪುನಃ ಪಡೆಯಲು ಸಾಮ, ದಾನ ಮತ್ತು ಭೇದೋಪಾಯಗಳನ್ನು ಬಳಸಿ ವಿಫಲವಾದ ಮೇಲೆ . . . ಯುದ್ಧಸನ್ನಾಹವಾಗುತ್ತದೆ (ಜಾಪಂ. ೯೪). [ಸಂ.]

ಭೇದ್ಯ (ಗು). ೧. ಒಡೆಯಲು ಯೋಗ್ಯವಾದ : ಮುರಿಯಬಹುದಾದ. ೨. ಒಳನುಗ್ಗಬಹುದಾದ ; ಪ್ರವೇಶಿಸಲು ಸಾಧ್ಯವಾದ. 'ಅಭೇದ್ಯ' ಪರಾ. ೩. ಸುಲಭವಾಗಿ ಒಡೆಯುವ ; ಭಂಗುರವಾದ. ೪. ತಪ್ಪು ದಾರಿಗೆ ಎಳೆಯಲು ಸಾಧ್ಯವಾದ ; ದುಷ್ಪ್ರೇರಣೆಗೆ ಒಳಗಾಗುವ. (ನಾ). ೫. ಭೇದಿಸಲು ಸಾಧ್ಯವಾಗಿರುವುದು. ೬. [ವ್ಯಾಕ] ವಿಶೇಷಣವನ್ನು ಹೊಂದುವ ನಾಮಪದ ; ವಿಶೇಷ್ಯ : ಭೇದ್ಯಂ ವಿಶೇಷ್ಯಂ. ಭೇದಕಂ, ವಿಶೇಷಣಂ(ಕಣ್ಣಕು. ೦೦೦ ಕ್ಕಿ). ೭. [ತತ್ತ್ವಶಾ] ಭೇದ, ಭೇದಕ, ಭೇದ್ಯವೆಂಬ ತ್ರಿಪುಟಿಯಲ್ಲಿ ಒಂದು ; ಪ್ರತ್ಯೇಕಿಸಿ ಗುರುತಿಸಬೇಕಾದುದು ; ಈ ಉದಾಹರಣೆಗೆ ಕೆಂಪು ಹೂವು ಎಂಬಲ್ಲಿ ಹೂವು ಎಂಬುದು ವಿಶೇಷ್ಯ ಅಥವಾ ಭೇದ್ಯ, ಕೆಂಪು ಎಂಬ ಪದಾರ್ಥದ ಸಂಬಂಧದಿಂದ ಹೂವು ಬಿಳಿಹೂವು ಮೊದಲಾದುವುಗಳಿಂದ ಬೇರ್ಪಡುತ್ತದೆ : ಅಮಿಶ್ರೀದ, ಅಪಚ್ಛೇದಕ, ಅಪಚ್ಛೇದ್ಯವೆಂಬ ಪದಗಳಿಗೆ ಪರ್ಯಾಯಪದಗಳಾಗಿ ವ್ಯಾವೃತ್ತಿ, ವ್ಯಾವರ್ತಕ, ವ್ಯಾವರ್ತ್ಯ. ವಿಶೇಷ, ವಿಶೇಷಣ, ವಿಶೇಷ್ಯ, ಭೇದ, ಭೇದಕ, ಭೇದ್ಯ . . . ಎಂದು ವ್ಯವಹರಿಸುವರು (ಜಿಪ್ರಸಾ. ೦೯೯). [ಸಂ.]

ಭೇನ (ನಾ). ನಕ್ಷತ್ರಗಳ ಒಡೆಯ ; ಚಂದ್ರ : ಸೇನಾಧಿಪತಿಜನಕ ಭೇನಾನಲಾರ್ಕಾಕ್ಷಿ ಕೇನಾಶದರ್ಪಹರ (ಗುಚಾ. ೩-೪). [ಸಂ.]

ಭೇನಜೂಡ (ನಾ). ನಕ್ಷತ್ರಗಳ ಒಡೆಯನಾದ ಚಂದ್ರನನ್ನು ತಲೆಯಲ್ಲಿ ಧರಿಸಿದವನು ; ಚಂದ್ರಮೌಳಿ ; ಶಿವ : ಅನರಲು ವಿಭು ಸಂಶಯ ಬೇಡ ನಿನಗೆಂದು ಬೇ(ಭೇ)ನಜೂಡಂ ನಂದಿದ ಮಹಾನೀಶಾಮಗಣನಂಬು ಮಾಯೆಯೆಂದು ವಿಮಲಿ ಪೇಳಲು (ಕ್ರಶಾಪ್ರ. ೫-೦೭೮). [ಸಂ.]

ಭೇರ (ನಾ). ಒಂದು ಬಗೆಯ ಚರ್ಮವಾದ್ಯ ; ನಗಾರಿ ; ದುಂದುಭಿ : ಗಾಳಿಪಟಕ್ಕೆ ಭೇರಬಿರಿಕಯು ಕಟ್ಟಿ ನುಡಿಸುವ ತೆಱದಂತೆ ತೇಜವಾಗಿ (ಶಾಸಂಪ. ೩೫೯-೬೯). [ಸಂ.]

ಭೇರಿ (ನಾ). = ಭೇರ : "ವಿಸ್ತರ ಭೇರಿ ದುಂದುಭಿಯೆನಿಸ್ಕಂ" (ಪಂಗಣಾ. ೪೪-೭); ಧರ ನಡುಗೆ ಪೊಡವ ಭೇರಿಯ ಘನಧ್ವನಿಯೊಳಗೆ (ಹೊಚಿ. ೭-೦೩೦); ಧರಧುರದ ನಿಸ್ಸಾಳಸೂಳಿನ ಪೊಱಿಪ ಭೇರಿಯ ರಾಯಗಿಡಿಗನ ಜಡಿವ ಚಂಬುಕನ (ಕುಣ್ಯ. ೦೯-೨೩) ; ತಂಬಟೆ ಹೋಗಿ ಭೇರಿಗೆ ದೂರು ಪೇಳಿದ ಹಾಗೆ (ಗಾದೆ). [ಸಂ. ಭೇರೀ]

ಭೇರುಂಡ (ಗು). ೧. ಭಯಂಕರವಾದ ; ಕ್ರೂರವಾದ; ಭೀಷಣವಾದ. (ನಾ). ೨. ಎರಡು ತಲೆಗಳುಳ್ಳ, ಭಯಂಕರವಾದುದೆಂದು ತಿಳಿಯಲಾದ ಒಂದು ಬಗೆಯ ಕಾಲ್ಪನಿಕ ಹಕ್ಕಿ ; ಗಂಡಭೇರುಂಡ : "ಬಿಡದಮಳ್ಳರೆಮಕ್ಕೆಯುಮೆಂದೊಡೆ ಭೇರುಂಡಕ್ಕೆ ನಾಮಂ" (ಸಮಂ. ೬೦); ಸಕಲ ಶಕುನಿಗಣಂಗಳೊಳಗೆ ಸತ್ತ್ವದೊಳಂ ಸಾಹಸದೊಳಮಧಿಕವಪ್ಪ ಭೇರುಂಡಮಾಂಡಳೆಯುಂ . . . ಆರ್ದಂತೆ (ಶಾಶಾ. ೨೨೯-೨೦); ಸವ್ಯ ದುಂದಿಗಳಂ ಸಿಂಹ ಶರಭ ಭೇರುಂಡ ಶಂಡಾಲ . . . ರೂಪಂಗಳಿಂ ಬಾಧಿಸದಂತು ಶಾಂತಿಯುಂ ಮಾಡಲ್ಕೇಱ್ದುದು (ಜಾಪ. ೪-೬೭ ಪ). [ಸಂ.]

ಭೇರುಂಡಗಳೆ (ನಾ). (ಬಳ್ಳಿಗಾವೆಯ ಭೇರುಂಡೇಶ್ವರದಂತಹ ಅಧಿಕಾರದಲ್ಲಿ ಸ್ಥಾಪಿತವಾಗಿದ್ದ) ಭೂಮಿಯನ್ನು ಅಳೆಯುವ ಒಂದು ಅಳತೆ ಮತ್ತು ಅಳತೆಗೋಲು (?) : ಈವಿಂ ಮೂಡಣ ಭೇರುಂಡೇಶ್ವರದ ತಳವೃತ್ತಿ ವುಲ್ಲೆಯ ಬಯಲ ಮೂಡಣಪತ್ತುಗೆಯಲೆ ಭೇರುಂಡಗಳೆಯು ರ್ಕೊಟ್ಟ ಗಬ್ದಿ (ಶಿ. VII. ೫೫೦. ೦೫೦-೦೦೬ ; 1047) ; ಬಳ್ಳಿಗಾವೆಯ ವುಲ್ಲೆಯ ಬಯಲೊಳ್ ಭೇರುಂಡಗೆಯೊಳ್ ಕೊಟ್ಟ ಗಬ್ದಿ ಮತ್ತರಯುಂ (ಶಿ. IV. ೦೫೦-೦೬; 1048). [ಭೇರುಂಡ + ಗೆಳೆ (<ಗಬ್ದಿ)]

ಭೇರುಂಡವಕ್ಕಿ (ನಾ). = ಭೇರುಂಡ ೨ : ಭೇರುಂಡವಕ್ಕಿಯಾಗಿ ಪುಟ್ಟಿ ಸತ್ತು (ಪಜ್ಞಾ. ೦೬೯-೨೬); ಶರಭಂ ಬೆಂಕೊಳ್ಳ ಭೇರುಂಡವಕ್ಕಗಳಂ ನೋಡಿದ ನೋಟದಾಸಱುಗಿವನ್ನಂ ಕಂಡಂ (ಹರಿಹರ. ೦೦-೬೪).
[ಭೇರುಂಡ + ಪಕ್ಕಿ]

ಭೇಲ್, ಭೇಳೆ (ನಾ). ಒಂದು ಬಗೆಯ ತಿಂಡಿ ; ಎರಡು ಮೂರು ತಿಂಡಿಗಳನ್ನು ಸೇರಿಸಿರುವ ಮಿಶ್ರಣ; ಚೌಚೌ; ಮಿಸಳ (ಉಡು): ಇನ್ನೊಂದು ಕಡೆ ಕಡಲೆಕಾಯಿ, ಭೇಲ್, ಮಿಠಾಯಿ ಮಾರುವ ಹುಡುಗರು ಬಂದು ಕೊಳ್ಳಿರೆಂದು ಎಲ್ಲರನ್ನು ಬಲವಂತ ಪಡಿಸುತ್ತಿದ್ದರು (ಸಣಕುಗ ೭೦). ಭೇಳೆ : ಆರ್ದರ್ ದೊರೆಕೊಡನೆ ಸಂತುಷ್ಟನಾದ ಭಯ್ಯ . . . ಓಡುತ್ತ ಹೋಗಿ ಭೇಳ (ಬೌಜೌ)ನ್ನು ಎರಡು ಎಲೆಗಳಲ್ಲಿ ತಂದು ಅವರ ಮುಂದಿರಿಸಿದ (ಜಚಿ. ೨೪). [← ಪುರಾ. ಭೇಲ್. / ಪ್ರಾ. ಭೇಲ್. ಭೇಳ್]

ಭೇಶ (ನಾ). ೧. ನಕ್ಷತ್ರಗಳ ಒಡೆಯ ; ಚಂದ್ರ : ದುರಿತವಾರಿಜಭೇಶ ಜಗದೀಶ (ಶ್ರೀಕಂ. ೯-೦). ೨. ಕಾಂತಿಯ ಒಡೆಯ ; ತೇಜಸ್ಸಿಗೆ ಒಡೆಯನಾದವನು : ಭೂವಂದ್ಯ ಭೇಶ ಭೈಷಜ್ಯ . . . ಎನೆ ಕಾಯ್ದೆ ಹರಿಯ (ಪಚಾಂ. ೭೭-೮೨). [ಸಂ.]

ಭೇತಜೂಡ (ನಾ). ಚಂದ್ರನನ್ನು ತಲೆಯಲ್ಲಿ ಧರಿಸಿರುವವನು ; ಚಂದ್ರಜೂಡ ; ಶಿವ : ಬಸವ ಭೇಷ(ಶ)ಜೂಡನ ಧ್ಯಾನದೊಳು ರಾಜ್ಯವೈಭವದಿ ಮೋಸಹೋಗದೆ (ಕ್ರಶಾಪ್ರ. ೭-೩೦). [ಸಂ.]

ಭೇಷ್ 'ಬೇಶ್' ನೋ.

ಭೇಷಜ (ನಾ). ೧. ಮದ್ದು; ಔಷಧಿ : "ಭೈಷಜ್ಯಂ. ಭೇಷಜಂ, ಜಾಯುಃ, ಅಗದಂ, ತಂತ್ರಂ, ಔಷಧಾ— ಈ ೬ ಮದ್ದುಗ್" (ಕಲಾಮು. ೦೦೦-೪೬೯); ನಿನ್ನೀ ಸ್ರವಭೇಷಜದಿಂದಳ ಕರಗುವುದಲ್ತೆ (ಕಾಗಿ. ೫೫); ದಿವ್ಯಶಸ್ತ್ರಪ್ರಹರಣ ಭರಮನಪಹರಿಸುವ ಭೇಷಜಪ್ರಯೋಗಮನೊಡರಿಸುವಮೆಂದು ಕೋಕೋದ್ರೇಕಮನುಪಶಮಿಸುವುದುಂ (ಶಾಂಶಾ. ೦೯-೪೯ ಪ). ೨. ಪರಿಹಾರೋಪಾಯ ; ನಿವಾರಣೆ : ಕಾಮಿನಿಯರ ಕುಚಾಲಿಂಗನವನುಳಿದೊಡತ್ಯಣದು ಹಿಮತಿ ಭೇಷಜವೆಂದು ವಿರಹಿಗಳ್ಕೊರ್ಪರನಜಸುತಿರ್ದರು (ಕೃಶಾಪ್ರ. ೫೫-೬); ಪ್ರೀತಿಯುಳ್ಳದೆ ಬೇರೆ ಭೇಷಜಂ ಪ್ರೇ ಭ್ರಾಂತಿಯಂದಿನಂ. ಕೇಳುರ್ಕೆತೆ ಮಾಡಿದಳೊ (ತ್ರಿಶಾಪ್ರ. ೩೬೯-೩೦೩). [ಸಂ.]

ಭೇಷಜನಿವಾಸ (ನಾ). ಔಷಧಗಳು ಸಿಗುವ ಸ್ಥಳ ; ಆರೋಗ್ಯಗೃಹ : "ಭೇಷಜನಿವಾಸಮೆನಲುಂ ಆರೋಗ್ಯಗೃಹಮುಕ್ಕುಂ" (ಪಂಗಣಾ. ೪೯-೦೦).
[ಸಂ.]

ಭೇಳೆ 'ಭೇಲ್' ನೋ.

ಭೈ (ನಾ). ಒಂದು ಅನುಕರಣ ಶಬ್ದ : ಪುರಿತ ರಣಕಂಬಿ ಗಭೀರಾರಾವಂ ದಿಸೆಯ ಕೋಣ ಕುಸುಕುಜ ಗಜಘಂಟಾರವಮನುಜಿದೆ ವೆಱಗಿಡೆ ಭೈ ದವ ಮೆಸೆದತ್ತು ಚೆರದ ಬಲಜಲನಿಧಿಯೊಳ್ (ಶಾಂಶಾ. ೩-೫೩).

ಭೈಭೈ (ದ್ವಿರುಕ್ತಿ) : ದೋರ್ಗರ್ಬ್ಬದಗುರ್ವಾರ್ಭಿ ಮೆಱೆವೆಂ ಭೈಭೈ ಎನುತ್ತಾಗಳೇಱಿದ ಮತ್ತದ್ವಿಪಮಂ ನೃಸಿಂಹಮಹಿಪಂ (ಜಿ. ೪೩. ೪೯೫. ೫೦-೦೦; 1348) ; ಒದದಿರ್ದ್ದಿಕ್ಷಿತಿಸಂಧಿ ಪತ್ತುವಿಡೆ ಭೈಭೈಯೆಂಬಿನಂ ಕೆಟ್ಟು (ಕವಾದ. ೫೩ ಕ್ರಶಾ).

ಭೈಕಾರ (ನಾ). ಭೈ ಎಂಬ ಅಕ್ಷರ : ಬತ್ತದ ಭೈಕಾರಕ್ಕೆ—ಬಹಿಶ್ರ—ಭೈತ್ರ (ಕವಾದ. ೩೭೩ ಕ್ರಶಾ).

ಭೈಭೈಕಾರ (ದ್ವಿರುಕ್ತಿ) : ಆ ಕುವಲಯಾಪೀಡಗಜಮಂ ಕಂಡು

ಗಜಾಸುರಸಂ ಕಂಡ ಖಂಡಪರಶುವಿಪಂತುದ್ಭಟಾರಭಟಿಯಿಂದಾರ್ಮೆ ಭೈಭೈ ಕಾರದಿಂದಾ ದ್ವಿರದದಿರಂ ನಡುಗು (ಪಂಪ. ೬-೫೦ ೪). [ಸಂ.]

ಭೈಕೃತ (ನಾ)· ಭೈಯೆಂಬು ಕೂಗು : ದಿಙ್ಮಾರಿಯ ಭೈಕೃತದೊಡನೆ ತಗುಳ್ದುನ್ಮೈದುಮು ಕೆಳರ್ದಿಭೇಂದ್ರದ ಗಳಬ್ಬುಂಹಿತಮುಂ . . . ಮದಗಂಧ ವಿಚಲದಳಿಯುಂಕೃತಮುಂ (ಪಂಪ. ೬-೫೦). [ಸಂ.]

ಭೈಕ್ಷ (ನಾ)· ೧. ಭಿಕ್ಷೆ ಬೇಡುವುದು ; ಭಿಕ್ಷಾಟನೆ ; ತಿರುವೆ. ೨. ಭಿಕ್ಷೆಯಿಂದ ತಂದ (ಆಹಾರ) ಪದಾರ್ಥ : "ಭೈಕ್ಷಂ· ಭಿಕ್ಷಾ ಕದಂಬಕಂ — ೨ ತಿಂದು ತಂದ ಪದಾರ್ಥಗಳ ಗುಂಪಿನ ಹೆಸರುಗಳು" (ವಿಡ್ಕಾಂಡ. ೨೫೯). ೩. ಕರುಣೆಯಿಂದನ್ನು ಯಾಚಿಸುವುದು : ಕೈಪೆಗಾಗಿ ಪ್ರಾರ್ಥನೆ ಮಾಡುವುದು : ಸೊರ್ಕ್ಕಿಟ ಮುಕ್ಕುಪೋಗಿ ಕಡೆಯೊಳ್ ಭೈಕ್ಷಕ್ಕೆ ಪಕ್ಕಾದಿರೇ (ಸುಭದ್ರಾ. ೪-೨೬). ೪. ಭಿಕ್ಷಾದಾನ : 'ಪುರುಷಭೈಕ್ಷ' ಪರಾ. [ಸಂ.]

ಭೈಕ್ಷಶುದ್ಧಿ (ನಾ)· [ಜೈನ] ಆಚಾರ್ಯವ್ರತದ ಐದು ಭಾವನೆಗಳಲ್ಲಿ ಒಂದು ; ಆಹಾರಶುದ್ಧಿ : ಆಚಾರಸೂತ್ರೋಕ್ತಮಾರ್ಗದಿಂ ಭೈಕ್ಷ ಶುದ್ಧಿಯುಂ . . . ಆಸ್ತೇಯವ್ರತದ ಭಾವನೆಗಳೆಪ್ಪವು (ಪಜ್ಞ ಶ್ರಾ. ೨೭೦) ; ಅನ್ಯಾಯ ಮತ್ತು ಅಭಕ್ಷ್ಯಗಳನ್ನು ತ್ಯಾಗಮಾಡಿ ಭೋಗಾಂತರಾಯದ ಕ್ಷಯೋಪಶಮಕ್ಕನುಸರಿಸಿ ಲಭಿಸುವಂಥ ಸರಸವಾಗಿರದೆ ನೀರಸವಾಗಿರಲಿ . . . ಅದನ್ನೇ ಸ್ವೀಕರಿಸುವದಕ್ಕೆ ಭೈಕ್ಷಶುದ್ಧಿಭಾವನೆ ಎನ್ನುವರು (ಶ್ರಾಕಾಚಾ. ೬೧೪). [ಸಂ.]

ಭೈಕ್ಷಾಕ (ನಾ)· ಭಿಕ್ಷುಕರ ಗುಂಪು. — ಸಮೂಹ : ಭೈಕ್ಷಾಕ್ಕಂಜಿ ಅಟ್ಟುಂಬುವಂ ಮೂಜೇಡ (ಶಾಪಾ. ೦-೩೦ ೪). [ಸಂ.]

ಭೈಕ್ಷೆ (ನಾ)· ಯಾಚನೆ ; ಭಿಕ್ಷೆ : 'ಪುರುಷಭೈಕ್ಷೆ' ಪರಾ. [ಸಂ. ಭೈಕ್ಷ]

ಭೈತು (ನಾ)· ನೃತ್ಯದಲ್ಲಿ ಒಂದು ಬಗೆ : ಚಿಂದು ಜಕ್ಕಡಿ ಕವಿಲು ಗಜಲು ಭೈತು ತುರಿಗೆ ಆಂದೋಳಿತ ಮೊದಲಾದ ಆಟಗಳಂ ನೋಟಕರ ದಿಟ್ಟಿಗೆ ಮಧುರಮಾಗೆ ಪೆಜ್ಜೆನಟ್ಟುತ್ತಿರ್ದಳ್ (ಪಮಾಶಾ. ೪೦). [?]

ಭೈತ್ರ 'ಬಹಿತ್ರ' ನೋ.

ಭೈತ್ರಕಾಣಿ (ನಾ)· ಹಡಗನ್ನು ನಡೆಸುವವನು ; ನಾವಿಕ : ಭೈತ್ರ ಕಾಜರಿಂ ದ್ವೀಪಗಳಂ ಜೋಯಿಸರಿಂ ಗ್ರಹಣಮುಜ್ಜೀವಂತೆ (ಪಪಾಚ. ೪-೨೬). [ಭೈತ್ರ (<ಬಹಿತ್ರ) + —ಕಾಜ]

ಭೈತ್ಯ (ನಾ)· = ಭೈಕಾರ : ಅದಿಸು ಬತ್ಯಂ ಭೈತ್ಯ ವೈತ್ಯ ವಿಧಿಯತ್ಯ ವಾತ್ಯದೊಳ್ ದೊರೆಕೊಳ್ಗುಂ (ಪಪುರಾ. ೩೭೩).

ಭೈಮುಂಗ 'ಭೈಮೂಗು' ನೋ.

ಭೈಮುಂಗು 'ಭೈಮೂಗು' ನೋ.

ಭೈಮೂಗು, ಬೈಮೂಗ, ಭಯಿಮೂಗ, ಭೈಮುಂಗ, ಭೈಮುಂಗು (ನಾ)· (ಉಕ) ನೆಲಗಡಲೆ ; ಶೇಂಗಾ : ಇಲ್ಲಿ ಭತ್ತ, ಜೋಳ, ಸಜ್ಜೆ, ಕುಸುಬೆ, ಭೈಮೂಗು ಚನ್ನಾಗಿ ಬೆಳೆಯುತ್ತವೆ (ಮುಂಶಬ್ದ. ೦೩೦). **ಬೈಮೂಗ** : ಎಣ್ಣೆಯ ಪ್ರಕಾರವು . . . ಕುಸುಬಿ, ಬೈಮೂಗ, ಗೆಣಜಲ (ಪಾಂಜಾಣ್ಣ. ೦೬೨). **ಭಯಿಮೂಗ** : ಬಿಜ, ಭಯಿಮೂಗದ ಕಾಯಿ (ಶೇಂಗಾದ ಕಾಯಿ) ಈ ಮೂಲಿಸ ಕಿಮ್ಮತ್ತು ಸೂರ್ತಿ ಚಪಾಳಿ ೨೦ ಮಣವ ಬಿಂಡುಗಪ ಮೇಲೆ ಇರುತ್ತದೆ (ಮುಂಕಾಣ್ಣ. ೦೦೩). **ಭೈಮುಂಗ** : ಭೈಮುಂಗ ಪಲಾಟಾದ ಪಣ ಬೆಳಗಾಂವಿಯ ಅಡತಿಯಲ್ಲಿತ್ತು (ರೀಪಚ. ೧೧. ೨೪೭). **ಭೈಮುಂಗು** : ಅನೇಕ ದಿನ ಬಿಟ್ಟು ಹಾಲು ಕುಡಿಯದ ಭೈಮುಂಗು ತಿಂದಿದ್ದೆ ನಾನು (ಪಮಾಚ. ೪೭೭). [← ಮರಾ. ಭುಯಿಮುಗ್]

ಭ್ರಮಿಸು, ಭ್ರಮಿಯಿಸು (ಕ್ರಿ). ೧. ಅಲೆದಾಡು; ಸುತ್ತಾಡು : ತಿರುಗಾಡು : ಭ್ರಮರದಂತೆ ಕುಸುಮಮಂಜರೀರಂಜಿತಲತಾಭವನಂಗಳೊಳ್ ಭ್ರಮಿಸಿಬುಂ (ಗಾಪಂಕ್ಷ. ೬೫೮); ಓರೊಮ್ಮೆ ಸುಭ ಪರಿಮಳೋದ್ಗಾರಿಸ್ಕೇರ ಕುಸುಮದಂಜರೀನಿಕರಭರವಿನತಲತಿಕಾಗ್ರಹಂಗಳೊಳ್ ಭ್ರಮರವಿಘುನದಂತೆ ಪುಷ್ಪಾಪಚಯದಿಂ ಭ್ರಮಿಸಿದುಂ (ಶಬ್ದಕ. ೬-೫೫ ೭): ಸರಸಿಜದೊಳ್ಭ್ರಮಿಸುವ ಮಜ್ಜುಮಂಬಿಗಳ ದ್ವಂದಮಂ ಕೂಡಿ ಕೊಂಡೆಳವೆಲ್ಲರ್ಬಂದುದು (ಕೃಬಾಣ. ೬-೨). ೨. ಆಸೆ ಪಡು : ಮರುಳಾಗು ; ಮೋಹಗೊಳ್ಳು : ಭಾವಲಿಂಗವಾದರೆ ಸಲಲವಿಜುಂಗಳಗೆ ಭ್ರಮಿಸುವುದ (ಅಪ್ರ. ೬೨-೧೨); ಭ್ರಮಿಸಿ ಮಗಳಂ ಹರಿಗಾರೂಪವಿರವಿಸುವಾ ನೀರೇಜಭವನಂ ನಿಮಿಷದಲಿ ಪಲಿಸಿದಡಿ ಪ್ರಗಭ್ಯಾಧರುಭ್ರಸಲು (ಧರ್ಮ. ೫೦-೪೬): ಇಂತಾ ದೋಜಗಂಧಿಯರೆ ಬೇಟಗೆ ತಂದು ಶಂತನುವರ್ಂ ಕಂಡು ಭ್ರಮಿಸಿ ಕರೆಯುತ್ತೆ (ಭಾಷ. ೫೦-೯). ೩. ಭ್ರಾಂತಿಗೆ ಒಳಗಾಗು: ಸರಿಯಲ್ಲದುದನ್ನು ಸರಿಯೆಂದು ತಿಳಿದುಕೊಳ್ಳು : ತಪ್ಪಾಗಿ ಭಾವಿಸು : ಭ್ರಮಿಸಿ ಸುಸಿ ಇದ್ದಂತಿರ್ದ ತುಂಬಿದ್ದಸಮಸುಧೆಯೊಳು ಆಂಜಧಿರುಬೆಂಬನತೊಸೆದು ತೋಳ್ಗಳಿನ್ನಿ ನೀಡುತ ಹಿಡಿಮಬೇನೆಸಲು (ಶಾಪು. ೨೮-೬). ಲೋಕಪೊಬುದು ಪುಣ್ಯಧರ್ಮದಿಂದೆಕೆ ಪಡೆವುದು ವೈದಿಕ ನಾವಾತಿವಾಗರಂ ತಪ್ಪಿ ಶಡೆದರೆ ಭ್ರಮಿಸುವರು ಬುಧರು (ಭಾಷ್ಯಕ್ಕೆ. ೦೯-೩೬): ಕೆಟ್ಟದ್ದನ್ನು ಒಳ್ಳೆಯದೆಂದು ಭ್ರಮಿಸುತ್ತಿದೆ (ಪಾಂಡವ. ೮೭). ೪. ದಿಗ್ಭ್ರಮೆ ಹೊಂದು : ತಬ್ಬಿಬ್ಬಾಗು : ಭ್ರಮಿಸಿ ನುಡಿಯಂದೆ ಸುಮ್ಮನಿರ್ಪ್ ಪರಿಯೇ ಕೆಂಡು ಕ್ಷಮಿಸಿ ನುಡಿದರ್ (ಪಾಪು. ೫೫-೪): ಎನಿತೊ ಅರಸರ ಗೆಲ್ಲಾವಿದರೂ ಒಮ್ಮೆಯೂ ಕೌರ್ಮಾಪಂ ಕ್ಷಾತ್ರವೆಂದಪ್ಪು ಭ್ರಮಿಸಲಿಲ್ಲ (ಪಂಪ್ಯ. ೫೦-೨). ೫. ಬೆರಗಾಗು : ಆಶ್ಚರ್ಯಗೊಳ್ಳು : ಆದೇ ತೆರನಾದ ತಪಸ್ಸನ್ನು ಆಚರಿಸುತ್ತಿದ್ದ ಋಷಿಗಳೂ ಬೆಸಗಗಳೂ ಪಾರ್ವತಿಯರು ಉಗ್ರತಪಸ್ಸನ್ನು ಕಂಡು ಭ್ರಮಿಸುತ್ತಿದ್ದರು (ಲಂಕಾ. ೭೨).

ಭ್ರಮಿಯಿಸು : ೧. ಎಮ್ಮಗೆ ಬೆಟ್ಟದೊಳ್ ಸಜ್ಜಂ ಭ್ರಮಿಯಿಸಿ . . . ಗ್ರಾಸಮೊತ್ಸವಿಲ್ಲಾಮ್ಮೆ ಸೂರ್ಯಮಿತ್ರಸ್ವಾಮಿ (ಶಾಂಭವ. ೨-೩೬). ೬. ಭವಾಳಿಯಲ್ಲಿ ತಿರುಗು: ಸಂಸಾರಚಕ್ರವಲ್ಲಿ ತೊಳಲು : ರತ್ನಕಂಚಕನಂ ರತ್ನಾಯುಧನುಮೆಲಬರ್ ಸಂಸಾರದೊಳ್ ಭ್ರಮಿಯಿಸಿ ಮತಾಬಲ ಅಮಲರೆಂಬ ಅಸುರರಾಗಿ ಪುಟ್ಟಿ (ಶಾಂತಿ. ೨೦೩); ಸಮಾನಿಸಿದ ನಿಷ್ಪಸಂಯೋಗಮನಿಷ್ಟ ವಿಯೋಗಮುಂ ಚತುರ್ಗತಿಗಳೊಳಂ ಭ್ರಮಿಯಿಸಿ ಕೈಕೊಳ್ಳುಂ (ಶಾಂಶಾಪ. ೨-೦೨೬). [ಭ್ರಮ + — ಇಸು]

ಭ್ರಮೆ (ನಾ). ೧. ಇದ್ದುದನ್ನು ಇದ್ದ ಹಾಗೆ ಗ್ರಹಿಸದೆ ಬೇರೆ ರೀತಿಯಲ್ಲಿ ಗ್ರಹಿಸುವುದು; ಮಿಥ್ಯಾಸ್ಥಿತಿಗೆ ವ್ಯತಿರಿಕ್ತವಾದ ಜ್ಞಾನ ; ಭ್ರಾಂತಿ : ಈ ಮನದ ಭ್ರಮೆಯನೆಲ್ಲವ ಮಜ್ಜಿಸಿ ನಿಮ್ಮ ಶರಣಿಗೆ ಶರಣೆಂಬುದ ಕರುಣಿಸಿ (ಬಸ. ೨೫೯); ಭಾವವಿಲ್ಲದ ಭ್ರಮೆಯ ಭ್ರಮೆಗೊಳಿಸಿ ಭಾವಕ್ಕೆ ತಂದಾತ ನಮ್ಮ ಬಸವಯ್ಯನು (ಪ್ರಂಶ. ೪. ೬-೬): ಅವಳ ಭ್ರಮೆಯನ್ನು ಮತ್ತಷ್ಟು ಉಲ್ಬಣಗೊಳಿಸುವ ಘಟನೆಯೊಂದು ನಡೆಯಿತು (ಕಥೆ. ೬೦). ೨. ಹುಚ್ಚು : ಉನ್ಮಾದ : ಅಲೆಕಾಯಿ, ಪರ್ಪಾಟಕ . . . ಕಷಾಯ ಪಾಕ ಶೋಧಿಸಿ ದ್ರಾಕ್ಷಿಹೆಣ್ಣು ಪಾಕ ಕೊಡಲು ಪ್ರಲಾಪ. ಮೂರ್ಛೆ, ಭ್ರಮೆ . . . ಪೈತ್ಯಜ್ವರ ಮಾಣುವುವೆ (ಗಣಿ. ೮೨). ೩. ಮೋಹ; ವಾಂಛೆ; ಆಕ್ಕರೆ. [ಸಂ. ಭ್ರಮ]

ಭ್ರಮೆಗವಿ (ಕ್ರಿ). ಭ್ರಾಂತಿಯು ಆವರಿಸು : ದಿಕ್ಕು ತೋಚದಂತಾಗು : ಎಲೆಯುಣ್ಕದ ಸೋಡುತಂ ಭ್ರಮೆಗವಿದೆದಗಳುಜಿ ರಭುಲ್ಲೆಸುತ್ತ (ಜಿಷ್ಣು. ೯-೩). [ಭ್ರಮೆ + ಕವಿ]

ಭ್ರಮೆಗೊಳ್ (ಕ್ರಿ). ದಿಗ್ಭ್ರಾಂತವಾಗು : ಕರ್ತವ್ಯವಿಕ್ಕಿಯಾಗು : ಭಯಂಕರ ಭ್ರಮೆಗೊಂಡಿಕ್ಕು ಮುಂತ್ರ ತಂತ್ರ (ಧರ್ಮ. ೫೦). [ಭ್ರಮೆ + ಕೊಳ್]

ಭ್ರಮೆಗೊಳಿಸು (ಕ್ರಿ). ಭ್ರಾಂತಿಯನ್ನುಂಟುಮಾಡು : ದಿಕ್ಕು ತೋಚದಂತೆ ಮಾಡು : ಅಮರಾಧಿಪಪ ವಜ್ರಾಯುಧ ಸುರನಿಕರವ ಭ್ರಮೆಗೊಳಿಸಿಯೆ . . . ಕಾಡುತಿರ್ಪನು (ಕ್ಷತ್ರಾಂ. ೬-೩೬). [ಭ್ರಮೆಗೊಳ್ + — ಇಸು]

ಭ್ರಷ್ಟ (ಗು). ೧. ಕೆಳಗೆ ಬಿದ್ದ. ೨. ದಾರಿತಪ್ಪಿದ ; ಪತಿತ. ೩. ಧರ್ಮವನ್ನು ಬಿಟ್ಟ ; ಧರ್ಮಹೀನವಾದ : ಇಷ್ಟಲಿಂಗದಲ್ಲಿ ಅವಿಶ್ವಾಸ ಮಾಡುವ ಭ್ರಷ್ಟಭವಿಗಳ ಮುಖವ ನೋಡಲಾಗದಯ್ಯ (ಅಂಬಿ. ೦೦೯-೩೦); ಶಿಷ್ಟ ಸಾತ್ವಿಕತೆ ಸಡಿಲುವುದೆ ಭ್ರಷ್ಟ ರಾಕ್ಷಸ ನೀತಿ ? (ಶ್ರೀರಾಮಾ. ೨೦೦-೦೫೬); ಪುಷ್ಪೆ ಋಷಿಯೆ ಎಲ್ಲರಿಗೂ ವೇದವ ಓದಬೆಯೆ ಬರಬೇಕೆಂದು ನೀನ್ತು ತಪಸ್ಸು ಮಾಡಿದರೆ ಅದು ಸಾಗಿತೆ ? (ಪಂಡಿತ. ೦೬-೦೬). ೪. ಹಾಳಾದ. ೫. ಕಳೆದುಹೋದ; ನಷ್ಟವಾದ. ೬. ಅಗಲಿದ ೭. ಕೆಟ್ಟತನದಿಂದ ಕೂಡಿದ; ನೀಚವಾದ. (ನಾ). ೮. ಕೆಳಗೆ ಬಿಮ್ಮ ಹೋದುದು : "ಭ್ರಸ್ಯಂ. ಧ್ವಸ್ಯಂ. ಭ್ರಷ್ಟಂ . . . ಗಳತಂ —ಲಿ ಹಾರಿ ಬಿತ್ತಮ್ಮಾ" (ಶಿವಾ. ೬೫೦); ೯. ನಾಶ ; ಹಾಳು : ಹುಟ್ಟಿಸಿದವನು ಭ್ರಷ್ಟ ಮಾಡಾವರೇನೊ (ಕೃಂದ. ೬-೦೯-೨): ಪಪ್ಪು ಹೊಲ. ನಮ್ಮ ಮನೆ . . . ನಮ್ಮ ಪುತ್ರರು ಎಲ್ಲರನ್ನೂ ಎಲ್ಲವನ್ನೂ ಭ್ರಷ್ಟ ಮಾಡಿದ್ದೀರಿ (ಶಾಲಿಪು. ೩೮). ೧೦. ಹಪ್ಪಿಹೋಗಿರುವುದು ; ಕಳೆದುದು : ಆಯುಷ್ಯ ಕುಟಿಲಪಥದಲಿ ಪಪಾತ್ಮನಲ್ ಭ್ರಷ್ಟವಾದುದು ಪರಿಚಿಪಾದ್ಯಂ (ಕ್ರಿಶಾಪ. ೩೫-೨೦೬). ೧೧. ಧರ್ಮಹೀನನಾದವನು : ಹರಿಣಾಮನು ದಿನದಿ ಸ್ಮರಿಸಿದಾತನು ಭ್ರಷ್ಟ (ಕ್ರಕಂದ. ೯-೦೫೬-೩). ೧೨. (ಗೌರವ, ಅಧಿಕಾರ, ಜಾತಿ, ಧರ್ಮ ಮೊದಲಾದವುಗಳಿಂದ) ಹೊರಗೆ ಹಾಕಲ್ಪಟ್ಟವನು : ಮಿಕ್ಕೀಗಳವುಗಳಂ ಬೇಡಬೆಂಬುವ ನೆವದ ಪಠಿಸ್ಭ್ರಷ್ಟನಂ ಮಾಡಿರವಿಬಲಯಶೋದೀಪ್ತಿಯಂ ನನ್ನಿಂದೆ ಮುಸುಳಿಸುವ ಪ್ರಯತ್ನಂ ನೆನವೆ! (ಕ್ರಿಶಾಪ್ರ. ೩೩-೧೫೩). 'ಜಾತಿಭ್ರಷ್ಟ', 'ದೇಶಭ್ರಷ್ಟ' ಪರಾ.

ಭ್ರಷ್ಟಳಾಗು = ಪತಿತಳಾಗು ; ದಾರಿತಪ್ಪು : ವಿಷ್ಣುಯಿಂದಿರುವರಿಂಥ ಸತಿಯು ಭ್ರಷ್ಟಳಾಹುವುದಿಲ್ಲವಿದನು ನೀನರಿತಿರು (ಭೂಪಾ. ೦೦೦-೦೬).

[ಸಂ.]

ಭ್ರಷ್ಟಗೊಳಿಸು (ಕ್ರಿ)· ಹೊರತುಗೊಳಿಸು ; ಹೊರತು ಮಾಡು: ನನ್ನನ್ನು ಯಾವ ಗೃಹಿಣೀಪದದಿಂದ ನೀವಿನಾದ ನೀನು ಒಮ್ಮೆ ಭ್ರಷ್ಟಗೊಳಿಸಿದು ಮೆಯೋ ಆ ಪೂಜ್ಯಪದವು ಜನ್ಮಜನ್ಮಾಂತರದಲ್ಲಿಯೂ ನನಗೆ ದುರ್ಲಭವಾಗಿ ಬಿಟ್ಟಿತು (ಅಂಬಿ. ೦೬).

[ಭ್ರಷ್ಟ + ಕೊಳು (< ಕೊಳ್) + — ಇಸು]

ಭ್ರಷ್ಟತೆ (ನಾ). ಧರ್ಮದ ಲೋಪ : ಕರ್ಮಗಳ ಸಮುಮತದರಾಜ್ಞಸಲು ಶಿಷ್ಟತೆ ಜನಕೆ ಕರ್ಮವಿಲೋಪ ಭ್ರಷ್ಟತೆ ಎಮತ ವಿಧಿಯಿರಲು (ಗಣಾ. ೦೬-೩೦). [ಸಂ. ಭ್ರಷ್ಟತಾ]

ಭ್ರಷ್ಟಾಚರಣೆ (ನಾ)· ಧರ್ಮವಿರುದ್ಧವಾದ ಕೆಲಸವನ್ನು ಮಾಡುವಿಕೆ: ದುರಾಚಾರ; ನೀತಿಬಾಹಿರವಾದ ಆಚರಣೆ : ಸಮಾಜದೇ ಭ್ರಷ್ಟಾಚರಣೆ ದಿಂದ ಕೂತಿರುವಾಗ ಸರ್ಕಾರೀನೌಕರರು ಅದರಿಂದ ವಿರಹಿತರಾಗಿರುವುದು ಕಷ್ಟವೇ ಸರಿ (ಪ್ರಜಾಪ್ರ. ೦೩೪). [ಸಂ. ಭ್ರಷ್ಟಾಚರಣ]

ಭ್ರಷ್ಟಾಚಾರ (ನಾ)· ೧. = ಭ್ರಷ್ಟಾಚರಣೆ : ಗ್ರಂಥಾಲಯದ ಕಾರ್ಯವಾಹಕರು ಈ ಬಗೆಯ ಭ್ರಷ್ಟಾಚಾರಗಳನ್ನು ತಡೆಯುವಲ್ಲಿ ಬಹು ಎಚ್ಚರಿಕೆ ವಹಿಸಬೇಕು (ಗ್ರಂಥಾ. ೬೬); ದೇವರ ಹೆಸರಿನಲ್ಲಿ ಭ್ರಷ್ಟಾಚಾರ. ಜಾತಿಯ ಬೆಲೆಕೊಂಡ ಸ್ವಾನಗೌರವ (ಪೂರ್ಣಾ. ೨ ಭಾಷ್ಯ.೬). ೨. ಧರ್ಮವಿರುದ್ಧವಾದ ಕೆಲಸಗಳನ್ನು ಮಾಡುವವನು : ದುರಾಚಾರಿಯಾದವನು : ನೀನೆತ್ತಲೀ ಚಂಡಾಲಕರ್ಮದೊಳ್ ತೊಡರ್ದು ಸಂತು ಭ್ರಷ್ಟಾಚಾರನಾದೆ ನಿನ್ನಂ ಮುಟ್ಟಲಾಗದೆಂದವರ ಕಟ್ಟಿದು ಪೋಪುದುಂ (ಹಂಪಣ. ೦೫೬-೨೦). ೩. ಲಂಚ ತಿನ್ನುವುದು ; ಲಂಚಗಂಬಿತನ. [ಸಂ.]

ಭ್ರಷ್ಟಾಚಾರನಿರೋಧ (ನಾ). ಅನೀತಿಯುತವಾದ ಲಂಚ ಮೊದಲಾದ ಕೆಟ್ಟ ನಡವಳಿಕೆಗಳನ್ನು ಪ್ರತಿಬಂಧಿಸುವುದು. — ಕಪ್ಪಿಸುವುದು : "ಭ್ರಷ್ಟಾಚಾರನಿರೋಧ, ಲಂಚನಿರೋಧ" (Anti – corruption· ಪ್ರಕ. ೩) ; ಭ್ರಷ್ಟಾಚಾರನಿರೋಧವನ್ನು ಕೈಗೊಳ್ಳದಿದ್ದರೆ ದೇಶವು ಹಾಳಾಗುತ್ತದೆ (ಲಾಪ್ರ). [ಸಂ.]

ಭ್ರಷ್ಟೆ (ನಾ)· ಪತಿತೆ ; ನೀಚಗೆಟ್ಟವಳು : ವಿಶ್ವಕೆ ನಾನೇಕಾಂತಿ . . . ಆಸತಿ ಅಕಾತ್ಮೆ ಭ್ರಷ್ಟೆ ಜೀವಕೆ ಎಲ್ಲರ ಮನಕು (ಅಷ್ಟ. ೦೦೬-೭)·

[ಸಂ. ಭ್ರಷ್ಟಾ]

ಭ್ರಷ್ಟೆಬ್ಬಿಸು (ಕ್ರಿ)· ಭ್ರಷ್ಟವನ್ನಾಗಿ ಮಾಡು ; ದಾರಿ ತಪ್ಪಿಸು : ಪರಸಿದ್ಧ ಸಾಧಕರ ಮುನಿ ತಪೋಧನರುಗಳಮಲರಂದಿಂದೆಚ್ಚು ವಿರಹಾಗ್ನಿಯಿಂದವರ ದೇಗುದಿಗೊಳಿಸಿ ಭ್ರಷ್ಟೆಬ್ಬಿಸಿ ತರುಣಿಯರ ತೋಳ್ತೊಡೆಯನಿರಿಮರೆಯೊಳಂ ಪೊಗಿಸಿ (ಪಜಿಪ್ರ. ೦೫-೧೦)·

[ಭ್ರಷ್ಟ + ಎಬ್ಬಿಸು (< ಎಬ್ಬಿಸು)]

ಭ್ರಾಂತ (ಗು)· ೧. ಅಲೆದಾಡಿದ· ೨. ಗುಂಡಗೆ ತಿರುಗಿದ.—ಸುತ್ತಿದ. ೩. ಕಂಗೆಟ್ಟ; ದಿಕ್ಕುತೋಚದಂತಾದ : ಭ್ರಾಂತಚಿತ್ತನಿ ನಾಮೊಬ್ಬ ನಿಲವೇ ಸ್ವೀಯಾಲರೆಂತಾದಡಂ ನಂಡಿವರಮಿಚ್ಛೆಯೇ (ಪಚಾ. ೯-೧೩). (ನಾ). ೧. ತಿರುಗುವವನು ; ಸಂಚರಿಸುವವನು : "ಭ್ರಮಣ್ . . . ಭ್ರಾಂತಃ—ಈಳಿ ತಿರುಗುವಂ" (ಗಣಿತ್ಯ. ೦೮೨). ೨. ಭ್ರಮೆಗೊಂಡವನು ; ತಪ್ಪಾಗಿ ತಿಳಿದುಕೊಂಡವನು : ಇಷ್ಟಲಿಂಗ ಪ್ರಾಣಲಿಂಗ ಒಂದೇ ಯೆಂದಱಿಯದೆ ಭಿನ್ನವಿಟ್ಟು ನುಡಿವ ಭ್ರಾಂತರ ಮಾತ ಕೇಳಲಾಗದು (ಷಟ್ಸ್ಥ. ೦೦೯-೩೦). ೩. ರಥದ ಚಲಸೆಗಳಲ್ಲಿ ಒಂದು : ಅಗಲ್ ಪ್ರವ್ಯಾಪಸವ್ಯ ಪ್ರಸ್ಫುಂತೋದ್ಯಾಂತಂಗಳೆಂಬ ರಥಕಲ್ಪವಿಶೇಷಮಿವ್ವಾಸಂಗಳ ನಜ್ಞಿದು (ಹಂಪಣ. ೦೩-೭೫ ಪ). ೪. ದಕ್ಕುಂಠಿಗಿಡ. ೫. ಮದಿಸಿದ ಆನೆ. ೬. [ಕಾಮಶಾ] ಒಂದು ಬಗೆಯ ಚುಂಬನ : ಓವಳಂ ಕರ(?) ದಿಂ ತುಟಿವಿಡಿಸುತ್ತೆ ಚುಂಬಿಸಲ್ ಭ್ರಾಂತಾಖ್ಯಂ (ಪುಷ್ಪ. ೭೨-೦೦). ೧೦. [ನಾಟ್ಯ] ಅಭಿನಯದಲ್ಲಿ ಉಪಾಂಗವಾದ ಉಸಿರಿನ ಒಂದು ಭೇದ ; "ಒಳಗೊಳಗೇ ಉಸುರಾಡುವುದು" (ಜಾಕ್ಷ. ೫೭ ಪ್ರಾಸಾಮಾ). : ಸಮ. ಭ್ರಾಂತ· ವಿಲೀನ . . . ಸೀತ್ಕೃತ – ಈ ಹತ್ತು ಮೊದಲು ಒಂಬತ್ತುಗೂಡಿ ಒಟ್ಟು ಹತ್ತೊಂಬತ್ತು ಭೇದಂಗಳ್ (ಜಾಕ್ಷ. ೬-೭೯ ಪ). [ಸಂ.]

ಭ್ರಾಂತಕ (ನಾ). [ಕಾಮಶಾ] ಚುಂಬನದ ಒಂದು ಪ್ರಕಾರ ; ಬಂದಣ ಮೆಯ್ಯಂ ಬಂದಿವೆಯಂ ತಲೆಯಿಂದ ಮೊಗಂಗುಡ ಮೊಗಮಿತ್ತಿ ನಂದುಱಿ ಚುಂಬಿಸುವಂದಂ. . . ಭ್ರಾಂತಕಂ (ಪಪಪ. ೬-೦೬) ; ನಿಮಿತ್ತಕ ಸಂಘಟಕ ಸ್ಪುರಿತಕ ಭ್ರಾಂತಕ . . . ಜಿಹ್ವಾಯೋಗಮೆಂಬ ದ್ವಾದಶಚುಂಬನ ಸಂಪ್ರಯೋಗಂ (ಅಪೇ. ೦೫೬). [ಸಂ.]

ಭ್ರಾಂತಚಿತ್ತ (ನಾ)· ಭ್ರಮೆ; ಭ್ರಾಂತಿ : ಇರದಧಿಕಭ್ರಾಂತಚಿತ್ತಯಂ ಧರಿಯಿಸಿ ಕಡುಗಂದಿ ಜನುಗುವಾಜಡಿಯಾದಂತಿರೆ ತೋರ್ದೀ ಪರಿಜನಮಂ ಹರಿಸದೊಳೊಡಗೂಡಿ ತೋಱು ಚರಣಾಂಬುಜಮಂ (ಹಂಪ್ರಕ. ೩-೦೩).

[ಸಂ. ಭ್ರಾಂತಚಿತ್ತ]

ಭ್ರಾಂತಾತ್ಮ (ನಾ)· ಭ್ರಾಂತಿಗೊಂಡ ಮನಸ್ಸುಳ್ಳವನು ; ಮರುಳ : ಅಶ್ವಗ್ರೀವನೆಬ್ರಂದಹಿತನ ಮೊನೆಯತ್ಕತ್ಪಣಂ ಪೋಲ್ದ ತ್ರಿಪೃಷ್ಠಂ ಭ್ರಾಂತಾತ್ಮಂ ತೋಱು ತೋಱಿಂದೊದಱಿ (ಗಾಂಪು. ೩-೩೬).

[ಸಂ. ಭ್ರಾಂತಾತ್ಮನ್]

ಭ್ರಾಂತಿ (ನಾ)· ೧. ತಿರುಗುವಿಕೆ ; ಸುತ್ತುವಿಕೆ· ೨. ತಿರುಗಾಟ; ಸಂಚಾರ : ಅರಿಸೇನಾಚಕ್ರಜಕ್ರಂ ಪೊರಳೆ ರಿಪುಕುಭೃತ್ಪಂಗಭ್ರಾಂತಿ ತಳ್ಕೊಪ್ಪಿರೆ . . . ಪವಳೋಟಯಂಶ್ಯದಿಂ ವಿಷ್ಣು ಯುದ್ಧಾಜಿರವಾಟೀ ವೈರಿಕ್ಷ್ವಾಬುವೆ ನಿಜಯಶೋವಲ್ಲಿಗೆತ್ತುತ್ತುಮಿರ್ಪಂ (ಎಳ. ೪. ಪಾಸಾ. ೦೦೦-೦೦ ; ೧೨೯). ೩. ಒಂದನ್ನು ಮತ್ತೊಂದೆಂದು ತಿಳಿದುಕೊಳ್ಳುವುದು ; ತಪ್ಪುತಿಳಿವಳಿಕೆ ; ಭ್ರಮೆ : ಅಂಬುಗದ ಮಗನೆಂಬ ಭ್ರಾಂತಿಯು ಕೃಷ್ಣನಿಂ ಕೇಳಿ ವಂದಿ ಕರ್ಣಗೆ ಬಿಟ್ಟ ಪರಿ (ಗಣಾ. ೦೩-೨೦); ಒಂದು ವಸ್ತುವನ್ನು ಮತ್ತೊಂದೆಂದು ತಪ್ಪಾಗಿ ತಿಳಿಯುವುದೇ ಅಧ್ಯಾಸವು. ಅಧ್ಯಾಸ, ಭ್ರಾಂತಿ, ವಿಭ್ರಾಜ್ಞಾನ, ವಿಭ್ರಾಪ್ರತ್ಯಯ ಇವೆಲ್ಲ ಪರ್ಯಾಯ ಶಬ್ದಗಳು (ಕೃಪ್ರತಾ. ೩-೦೦) ; ಸರ್ವತ್ರ ಚೆನ್ನಾಗಿ ತಿಳಿಯದಿರುವಿಕೆಯೇ ಭ್ರಾಂತಿ (ಪಂಪಾ. ೨೦೦). ೪. ಜಲೆ ತಿರುಗುವುದು ; ತಲೆ ಸುತ್ತುವುದು : ಸುರಯಾಂವಿಕಸೊಪ್ಪಿನ ರಸದಲ್ಲಿ ಜೀರಿಗೆಯಂ ಭಾವನೆ ಮಾಡಿ ವಿಲಿಕ್ಕೆ ಸಕ್ಕರೆವೆರಸಿ ಸೇವಿಸೆ ಭ್ರಾಂತಿ ಪೋಗ್ಗುಂ (ಪಪಕ್ಕ. ೦೩೮). ೫. ದಿಕ್ಕು ತೋಚದಿರುವಿಕೆ ; ದಿಗ್ಭ್ರಾಂತಿ : ಪವಭಯಭ್ರಾಂತಿಯಿಂದಂ ಶರಣ್ಯೊಕ್ಕುಮಾ ತಪ್ಪಂ ಗೋತ್ರಭಿತ್ಪೀಧರತತಿಯನೆ ಪೊಪಣ್ವಕ್ಕೇನೊ ಚೋದ್ಯಂ (ಪಪಂ. ೦-೧೩). ೬. ಸಂದೇಹ ; ಸಂಶಯ ; ಅನಿಶ್ಚಿತತೆ : ಭ್ರಾಂತಿಯಮಲ್ಲಿದಂತಿಂತಂತೆಂದಿವ್ವ ಕಾಂ ಪ್ರಕಾರ ಕಾರ್ಯಾರ್ಥಂಗಳ್ (ಪಪಪ. ೩೨೦). . ೭. = ಭ್ರಾಂತಿಮದಲಂಕಾರ : ಒಂದನ್ನು ಬೇರೊಂದನ್ನಾಗಿ ತಿಳಿಯುವುದೇ ಭ್ರಾಂತಿ. ಸಾದೃಶ್ಯಮೂಲಕವಾಗಿ ಉಕ್ತವಾಗಿರುವ ಭ್ರಾಂತಿ ಭ್ರಾಂತ್ಯಲಂಕಾರ (ಕೃಪಾ. ೨೬೬). ೮. [ಸಾಂಖ್ಯ] ಒಂದು ವಸ್ತುವಿಷಲ್ಲಿ ಮುಖ್ಯಾಂಶವನ್ನು ಗ್ರಹಿಸದೆ ಸಾಧಾರಣಾಂಶವನ್ನು ಮಾತ್ರ ಗ್ರಹಿಸುವುದು : ಎದುರಿಗಿರುವ ವಸ್ತುವಿಗೆ ಸಮಾನವಾದ ಬೇರೊಂದು ವಸ್ತುವಿನ ಸ್ಮರಣೆ ಬೆರತು ಭ್ರಾಂತಿ ಎಂದು ವ್ಯವಹರಿಸಲ್ಪಡುವುದು (ಪಂಕಾ. ೫೦). ೯. [ಕಾಮಶಾ] ಚುಂಬನದಲ್ಲಿ ಒಂದು ಬಗೆ : ಪುರುಷಂ ಸ್ತ್ರೀಕುಂದಲ ಚುಬುಕಮಂ ಎರಡು ಕೈಗಳಿಂ ಪಿಡಿದು ಅವಳ ಹಿಂದೆ ನಿಂದಿರ್ದು ಮೋರೆಯ ಸ್ವಲ್ಪ ತಿರುಗಿಸಿ ಪಿಡಿದು ಅವಳ

ಕೆಳಗಣ ತುಟಿಯಂ ತಾಂ ಕಡಿದು ಅವಳ ಕೈಯಿಂದ ತನ್ನ ಕೆಳಗಣ ತುಟಿಯಂ ಅಂಗುಷ್ಠ ತರ್ಜನಿಗಳಿಂ ಪಿಡಿಸಿ ಚುಂಬಿಸುವ ಭಾವಂ ಭ್ರಾಂತಿಯೆಂಬ ಚುಂಬನಂ (ಕಾಮಚಾ. ೩೫). [ಸಂ.]

ಭ್ರಾಂತಿಗೊಳ್ (ಕ್ರಿ). ದಿಕ್ಕು ತೋಚದಂತಾಗು : ಕಂಗೆಡು : ಮುಂತೆ ಗೌರೀಶನ ಶರೀರದೊಳೆಂತು ಮಾಡಿದಂತಲಾ ನಾಂ ಭ್ರಾಂತಿಗೊಂಡಡಿದು (ಪಾಪ. ೦೬-೪) ; ತನ್ನ ಪ್ರಾಣೋಪನ . . . ಕಾಣದೆ ಕಂಗೆಟ್ಟಳು ಭ್ರಾಂತಿಗೊಂಡಳು ಮಾಣದೆ ಮಗುಳಱಿದಳು (ಪೋಚಪ. ೨೭-೧೩).

[ಭ್ರಾಂತಿ + ಕೊಳ್[1]]

ಭ್ರಾಂತಿಗೊಳಿಸು (ಕ್ರಿ). ಅಜ್ಞಾನವನ್ನುಂಟುಮಾಡು : ಭ್ರಮಿಸುವಂತೆ ಮಾಡು : ಶಂಬರಾಸುರನ ಭ್ರಾಂತಿಗೊಳಿಸಿ ಮಹದಾದಿವಿಸ್ತರ ಸೃಷ್ಟಿಂ ತೋಱಿಪವನು ಕಂತುವಿಗೆ (ಪಾಪಚ. ೦೦-೭೦). [ಭ್ರಾಂತಿಗೊಳ್ + — ಇಸು[3]]

ಭ್ರಾಂತಿಜನ್ಯ (ನಾ). ಭ್ರಾಂತಿಯಿಂದ ಉಂಟಾದುದು ; ಅಜ್ಞಾನದಿಂದ ಉಂಟಾದುದು : ಸರ್ವಾಧಿಷ್ಠಾನವಾದಂಥಾ ಆತ್ಮಸ್ವರೂಪವನು ತಿಳಿಯದ್ದರಿಂದಾ ಬಂದದ ಆಗಲಾಗಿ ಇದಕ್ಕೆ ಭ್ರಾಂತಿಜನ್ಯವೆಂದು ಹೆಸರು (ತ್ರಿಸ್ಥ. ೨೯-೦೦). [ಸಂ.]

ಭ್ರಾಂತಿಮದಲಂಕಾರ (ನಾ). [ಕಾವ್ಯಮಿ] ವಸ್ತುಗಳಲ್ಲಿ ಒಂದು ವಸ್ತುವನ್ನು ನೋಡಿ ಆ ಬೇರೊಂದು ವಸ್ತುವೇ ಇದು ಎಂಬ ಭ್ರಾಂತಿಯನ್ನು ಉಂಟು ಮಾಡುವ ಅಲಂಕಾರ : ಈ ಉದಾಹರಣೆಗೆ — ' ಈ ದುಂಬಿಯೆ ನಿನ್ನ ಮುಖವನ್ನು ಕಮಲವೆಂದು ತಿಳಿದುಕೊಂಡು ಬಿಟ್ಟಿದೆ ' — ಎಂಬ ಈ ವಾಕ್ಯದಲ್ಲಿ ಸುಂದರಿಯೊಬ್ಬಳ ಮುಖಕ್ಕೂ ಕಮಲಕ್ಕೂ ಸಾದೃಶ್ಯವಿರುವುದರಿಂದ ದುಂಬಿಗೆ ಮುಖವಿದಲ್ಲಿ ಕಮಲವೆಂಬ ಭ್ರಾಂತಿಯುಂಟಾಯಿತು ಎಂದು ವರ್ಣಿಸಿರುವುದರಿಂದ ಇದು ಭ್ರಾಂತಿಮದಲಂಕಾರ : ಒಂದು ಮಸ್ತುವ ಪೋಲುವೊಂದು ಮಸ್ತುವೆಂದು ಭ್ರಮಿಸುವುದು ಭ್ರಾಂತಿಮದಲಂಕಾರಂ ಎಂದುಂ (ಅಲ್ಲಂ. ೧೩-೦೫) ; ಸಾದೃಶ್ಯಮೂಲಕ ಸೃತಿ ಸಂದೇಹ ಭ್ರಾಂತಿಗಳಿಂ ಪೃತ್ಯೇಕಮಾಗಿ ಸೃತಿಮದಲಂಕಾರಂ ಸಂದೇಹಾಲಂಕಾರಂ ಭ್ರಾಂತಿಮದಲಂಕಾರಂ ಎಂದಿವಱ್ಕುಂ (ಚಜ. ೫೪). [ಸಂ.]

ಭ್ರಾಂತಿಯೋಗ (ನಾ). (ಅಲಂ) ಇತರರಿಗೆ ಭ್ರಮೆಯನ್ನುಂಟುಮಾಡುವ ಸ್ಥಿತಿ : ಸೊಗಸು ಮಿಗಲಲ್ಲಿಯೆ ಲೋಚನಯುಗಳ ಸಮತಳಿಸಿದ ಸುಮುಖ್ಯಯ ಬಿಗುಹಿನಲಿ ಪರಮಾತ್ಮನೆಸೆದನು ಭ್ರಾಂತಿಯೋಗದಲಿ (ಕುಚ್ಚಾ. ೦-೨೩). [ಸಂ.]

ಭ್ರಾಂತಿವಡೆ (ಕ್ರಿ). ಭ್ರಾಂತಿಯನ್ನು ಹೊಂದು : ಎಂತು ಸ್ಮರಿಪೆ ಕಸವಲ್ಲಿ ಕಂಡ ವಿಷಯ ಭ್ರಾಂತಿವಡೆದ ನೀಱೆ ತನ್ನ ಅಂತ್ಯಕಾಲದ ವೀ ಜೀವಿಸಲಾಱೆಯು ಸಂತಮಿಪನು ಮಾನಿನಿಯ (ಪೋಚಪ. ೫೬-೩೦).

[ಭ್ರಾಂತಿ + ಪಡೆ[1]]

ಭ್ರಾಂತಿವಿಡಿ (ಕ್ರಿ). ಭ್ರಾಂತಿಯನ್ನು ಹೊಂದು ; ತಪ್ಪು ತಿಳಿವಳಿಕೆಯನ್ನು ತಾಳು : ಅರಿಯದೆ ಭ್ರಾಂತಿವಿಡಿದೇ ತೀರ್ಥಯಾತ್ರೆಗಳಂತವಿಲ್ಲದ ತಿರುತಿರುಗಿ ಬೇಸತ್ತು ಬೆಂಡಾಗಿ (ಗಗಚಾ. ೧-೨೪). [ಭ್ರಾಂತಿ + ಪಿಡಿ[1]]

ಭ್ರಾಂತಿಸು (ಕ್ರಿ). ತಪ್ಪಾಗಿ ತಿಳಿ ; ಭ್ರಮೆಗೆ ಒಳಗಾಗು ; ಪ್ರಿಯಾಲಾಪಾ ಭ್ರೂವಿಭ್ರಮಗ್ರಹಾಗ್ರಹವಶದಿಂ ಭ್ರಾಂತಿಸದುಪಕಾಂಕಮನಂ ತಂತನು ನಿತ್ಯಂ ಸಮಸ್ತರಾಜ್ಯಶ್ರೀಯಂ (ಪೂಚಾ. ೨-೨೩) ; ಗ್ರಂಥಕಾರವ ಸಂಕಲನೆಯೊಳು ವಿರೋಧಿಸಲ್ಪಡುಗುಮೆಂದು ಭ್ರಾಂತಿಸಲ್ಕೇಡ (ಗೀಪ್ರಾತಿ. ೨೮-೬). [ಭ್ರಾಂತಿ + — ಇಸು[3]]

ಭ್ರಾಂತು (ನಾ). ೧. ತಪ್ಪು ತಿಳಿವಳಿಕೆ ; ಭ್ರಮೆ : ಪಾವನ ವೇಷಂಬು ಭ್ರಾಂತುಳ್ಳನ್ನಕ್ಕ ವಾನು ಭಕ್ತವೆಂತಪ್ಪೆನು (ಪಾಪ. ೧೦೩) ; ಅವನಿಯೊಳಾಂ ಕ್ಷುಲ್ಲಕಂ ಶಪ್ಪದೆಂಬೀ ಭ್ರಾಂತಂ ಬಿಟ್ಟರ್ಪುದಿನ್ನಾದಪೆ ನಿಬಿಳಜನಾನೀಕದಿಂ ಪೂಜ್ಯನುಂ (ಅಚಕ್ಷ.೨-೬೨) ; ವಿರಕ್ತನಾದ ಬಳಿಕೆ ಭ್ರಾಂತಿ ಭ್ರಾಂತುಗಳನಳದು . . . ಮಹಾಬುಧರುಂ ನಿಜವಾಸಿಯೊಗಿರಬೇಕು (ಅಬಚಿ. ೦೩೯-೦೨೧). ೨. ಸಂದೇಹ ; ಸಂಶಯ : ಭ್ರಾಂತೇಂ ಜಗತ್ಪ್ರಸಿದ್ಧ ಚಿರಂತನ ನೂತನ ಮಹಾಶಯೀಶ್ವರಕೃತಿ ಶಾಸ್ತ್ರಾಂತರಸ್ಮಾರತೆ ನಿನ್ನೆ ನಿರಂತರ ಮನುಷ್ಯ ನೇತ ಜಾತಕಕೃತಿಯೊಳ್ (ಜಾತಕ. ೨-೩) : ಮಿನಕ್ಕಂ ಕೂರ್ಮಕ್ಕಂತೇನೊಂದಂ ಪೂಡರೆಪೆ ಪೋಲ್ವೊಡಮಿರ್ಪತ್ತಾನಾಲ್ಕು ಮರ್ಮದೊಳ್ ಸಾವಾನುಂ ಭ್ರಾಂತಿಲ್ಲದಱ್ಕು (ಜಕ್ಕಣ. ೩-೩೦). ೩. ಭ್ರಮೆಗೊಳಗಾದವನು ; ಮರುಳ : ಭ್ರಾಂತುಗಳಿರಾ ಶಿವಮಥನಸುಖವೇಹುದು ನಿಮಗೆ (ಪಪಚ. ೫೦-೫೫). [< ಸಂ. ಭ್ರಾಂತಿ]

ಭ್ರಾಂತುಮಾರಿ (ನಾ). ಭ್ರಮೆಗೊಂಡವನು ; ಭ್ರಾಂತಿಶೀಲ : ಜಗದ ಪಾತಕರ ಧಾತಿಸದೆ ವಿಷಯವನಱಿಯದ ಆಶಯಲ್ಲಿ ಸುಳಿವ ಭ್ರಾಂತು ಮಾರಿಗಳನೇನೆಂದಱಿಯದೆ (ಪೋಚಪ. ೨೯-೦೮). [ಭ್ರಾಂತು + — ಮಾರಿ[1]]

ಭ್ರಾಂತುಮಿಡಿ (ಕ್ರಿ). ಭ್ರಮೆಯನ್ನು ಹೊಂದು ; ಅಜ್ಞಾನದಿಂದ ಕೂಡಿರು ; ಭ್ರಾಂತುಮಿಡಿದು ಲಿಂಗತೋಗರವನಱಯುವ ಜಾತಕರ ಪೆಱ್ಚ ಕೂಡಲಸಂಗಮದೇವ (ಜಪಚ. ೬೭೨). [ಭ್ರಾಂತು + ಪಿಡಿ[1]]

ಭ್ರಾಜಿತ (ಗು). ೧. ಹೊಳಪುಗೊಂಡ ; ಪ್ರಕಾಶಮಾನವಾದ ; ಕಾಂತಿಯುಕ್ತವಾದ : ಮುಂದೊಂದಿಡೆಯೊಳ್ [ದ] ಭ್ರಾಭ್ಯವಿಭ್ರಮಭ್ರಾಜಿತೋತ್ಸಂಗಶ್ರೀಲಮಂ ಕಂಡು (ಪೂಪಚಾ. ೧-೨೫ ಪ) ; ಅಭ್ರಂಕಷಹರ್ಮ್ಯಾಗ್ರಗಳ ಭ್ರಾಜಿತ ಮತ್ತವಾರಣಸ್ಥಿತ ಕಾಂತಾವಿಭ್ರಮನಿರೀಕ್ಷಣೋಪಗತಭ್ರಮದಿಂದಮರಪತಿಗಿಂತಾಯ್ತನಿಮೇಷಂ (ಪೂಪ್ರ.೩.೦-೨೩೬). (ನಾ). ೨. ಪ್ರಕಾಶಮಾನವಾದುದು ; ಕಾಂತಿಯುಕ್ತವಾದುದು : ಅನತಿಪಿಪ್ಪೋತ್ಪಭ್ರಾಜಿತ ಮಾಯ್ತನಸ ಶುಭ್ರಾಂಬುಜಮಾತ್ಮ ಭವನಾತತ್ಪರನಾ (ಪೂಪ್ರ. ೩೯-೦೯). ೩. ಪ್ರಕಾಶಮಾನನಾದವನು ; ಕಾಂತಿಯುಕ್ತನಾದವನು : ಭವಳ್ಕ ಕಾತವತ್ಪಸಾರಯಮಾಮರಚಿತಾಂಭ್ರಯಭ್ರಾಜಿತನುಂ (ಸಚಾಪ. ೨-೬೯ ಪ). [ಸಂ.]

ಭ್ರಾಜಿಷ್ಣು (ಗು). ೧. = ಭ್ರಾಜಿತ ೧. (ನಾ). ೨. = ಭ್ರಾಜಿತ ೩ : "ವಿಭ್ರಾಟ್, ಭ್ರಾಜಿಷ್ಣುಃ, ರೋಚಿಷ್ಣುಃ—೩ ಭೂಷಣಾದಿಗಳಿಂದ ಪ್ರಕಾಶಿಸುತ್ತಿರುವವನ ಹೆಸರುಗಳು" (ಶಿಶ್ಯಾ.೩೬. ೦೧೬) ; ಬಂದಾಕ್ಷಿಸುವ ಲಂಪಿಂ ವಜ್ರ ಗೋದರ್ಧನಾಚಳಧಾರ್ಮಕಸಹಿಷ್ಣುವಂ ಜಳಧಂಭ್ರಾಜಿಷ್ಣುವಂ ವಿಷ್ಣುವಂ (ಪಾಪ. ೧-೧೪) ; ಸುತಿಗೆಯ್ದಂ . . . ಸಿತ ಶೂಲಿಜಟನಾಗನಾಗ ಭರಣ ಭ್ರಾಜಿಷ್ಣುವಂ ವಿಷ್ಣುವಂ (ಜಾಪಚ. ೩-೪೫). ೩. ಶಿವ : ಭ್ರಾಜಿಷ್ಣು ಭದ್ರಂ . . . ರಕ್ಷಿಕ್ಕೆ ವೀರೇಶ್ವರಂ (ಜಪ್ಕಾ.೪. ೦-೬). ೪. ವಿಷ್ಣು. [ಸಂ.]

ಭ್ರಾತೃ (ನಾ). ೧. ಅಣ್ಣ ಅಥವಾ ತಮ್ಮ ; ಒಡಹುಟ್ಟಿದವನು : "ಸಹಜಾತಂ ಸಹೋದರಂ ಸೋದರಂ ಭ್ರಾತೃವೆನಲೊಡಪುಟ್ಟಿದಂ" (ಜುಂಗಾಂ. ೧೨-೦೦) ; ಅಂತಃಕಲಹದಿಂದಾಗಿ ಭ್ರಾತೃಗಳಲ್ಲಿ ಯುದ್ಧ ಪ್ರಾರಂಭವಾಯಿತು (ಕೃಗಂಚಾ. ೩೫). ೨. [ಜ್ಯೋತಿ] ಲಗ್ನದಿಂದ ಮೂರನೆಯ ಸ್ಥಾನ ; ಸಹೋದರಸ್ಥಾನ : ಲಗ್ನದಿಂ ಚತುರ್ಥನು ದಶಲಾಭಂಗಳ ಭ್ರಾತೃವಿ ಮೊಳ್ [ಜಾತಕಾ. ತ್ರಿರಾಶಿಯೊಳ್] . . . ಶುಭಪ್ರದನಸಿತಂ (ಜಾತಕ. ೦೦-೦೩). [ಸಂ.]

ಭ್ರಾತೃಜ (ನಾ). ಅಣ್ಣನ ಅಥವಾ ತಮ್ಮನ ಮಗ ; ದಾಯಾದಿ : "ಭ್ರಾತ್ರೀಯಃ. ಭ್ರಾತೃಜಃ—೨ ಒಡಹುಟ್ಟಿದವನ ಮಗ. ಅಣ್ಣನ ಮಗ. ತಮ್ಮನ ಮಗ" (ಶಿಶ್ಯಾ.೩೬. ೦೭೭). [ಸಂ.]

ಭ್ರಾತೃಜಾಯೆ (ನಾ). ಸಹೋದರರನ ಹೆಂಡತಿ : "ಪ್ರಜಾವತೀ. ಭ್ರಾತೃಜಾಯಾ—೨ ಒಡಹುಟ್ಟಿದವನ ಹೆಂಡತಿ" (ಶಿಶ್ಯಾ.೩೬. ೦೭೩).

[ಸಂ. ಭ್ರಾತೃಜಾಯಾ]

ಭ್ರಾತೃದ್ರೋಹ (ನಾ). ಒಡಹುಟ್ಟಿದವರು ಪರಸ್ಪರರಿಂಗೆ ಮಾಡುವ ಮೋಸೆ.-ವಿಶ್ವಾಸಘಾತ : (ಕ). [ಸಂ.]

ಭ್ರಾತೃಪುತ್ರ (ನಾ). = ಭ್ರಾತೃಜ : "ಭ್ರಾತೃವ್ಯಃ, ಭ್ರಾತೃಪುತ್ರಃ, ಭ್ರಾತ್ರೀಯಃ, ಭ್ರಾತೃಜಃ — ಈ ೪ ಒಡಹುಟ್ಟಿದವ ಮಗಂ" (ಶಬ್ದಮ. ೬೩-೪೩೨); ಧರ್ಮರಿಗೆ ಶ್ರೀಮಾನ್ ಎಸ್. ಜಿ. ವರಹಿಯ್ಯಾಚಾರ್ಯರು ನನ್ನ ಸಮಿಪಬಂಧು. ಭ್ರಾತೃಪುತ್ರರು ಎಂಬಂಶವು ತಿಳಿದಿರ್ಪಾರದು (ಭಾಷ. III. XXXVII. ೨೮೪೫೫). [ಸಂ.]

ಭ್ರಾತೃರೇಖೆ (ನಾ). [ಸಾಮುದ್ರಿ] ಅಣ್ಣ ತಮ್ಮಂದಿರ ವಿಚಾರವನ್ನು ತಿಳಿಸುವ ಅಂಗೈಯಲ್ಲಿರುವ ಗೆರೆ : ಕರುಬೆರಳ ತಾಳಿನಲ್ಲಿ ಭ್ರಾತೃರೇಖೆ ಯಿರುವುದು (ಜಾಯೋ. ೧೬-೬). [ಸಂ. ಭ್ರಾತೃರೇಖಾ]

ಭ್ರಾತೃವಧು (ನಾ). = ಭ್ರಾತೃಜಾಯೆ : "ಪ್ರಜಾವತೀ, ಭ್ರಾತೃವಧೂಃ — ಈ ೨ ನಾ(ದಿ)ದುನಿ" (ಶಬ್ದಮ. ೬೬-೬೫೦). [ಸಂ.]

ಭ್ರಾತೃವ್ಯ (ನಾ). ೧. = ಭ್ರಾತೃಜ : "ಭ್ರಾತೃವ್ಯಃ, ಭ್ರಾತೃಪುತ್ರಃ, ಭ್ರಾತ್ರೀಯಃ, ಭ್ರಾತೃಜಃ—ಈ ೪ ಒಡಹುಟ್ಟಿದನ ಮಗಂ" (ಶಬ್ದಮ. ೬೩-೪೩೨). ೨. ಶತ್ರು ; ಹಗೆ. [ಸಂ.]

ಭ್ರಾತ್ರೀಯ (ಗು). ೧. ಸಹೋದರನಿಗೆ ಸಂಬಂಧಿಸಿದ ; ಸಹೋದರನಿಗೆ ಸೇರಿದ. (ನಾ). ೨. = ಭ್ರಾತೃಜ : "ಭ್ರಾತೃವ್ಯಃ, ಭ್ರಾತೃಪುತ್ರಃ, ಭ್ರಾತ್ರೀಯಃ, ಭ್ರಾತೃಜಃ—ಈ ೪ ಒಡಹುಟ್ಟಿದನ ಮಗಂ" (ಶಬ್ದಮ. ೬೩-೪೩೨). [ಸಂ.]

ಭ್ರಾಮ (ನಾ). ೧. ಅಲೆದಾಟ ; ತಿರುಗಾಟ. ೨. ಭ್ರಾಂತಿ ; ಭ್ರಮೆ. [ಸಂ.]

ಭ್ರಾಮಕ (ಗು). ೧. ತಿರುಗುವಂತೆ ಮಾಡುವ : ಸುತ್ತಿಸುವ. ೨. ಭ್ರಮೆಯನ್ನುಂಟುಮಾಡುವ ; ತಪ್ಪು ತಿಳಿವಳಿಕೆಯನ್ನು ಕೊಡುವ ; ಮಿಥ್ಯಾಜ್ಞಾನವನ್ನುಂಟುಮಾಡುವ : ಅತುರಾತುರದೊಳು ಮದುವೆ ನಿಂದನು ಅದು ಭ್ರಾಮಕಸುಖದೊಳು ಸಂದು (ಶಂಕಾಪ. ೨೫೬-೪೨) ; ಅನೇಕ ಭಾಷೆಗಳ ಲಿಂಗವಿಂಗಡಣೆಯಲ್ಲಿ ಚಂಚಲ ಹಾಗೂ ಭ್ರಾಮಕ ಅಂಶ ಗಳು ಇರುವುದೇ ಈ ಅಪಹಾಸ್ಯಕ್ಕೆ ಕಾರಣವಿದ್ದಿರಬೇಕು (ಪ್ರಾ.ಕ. ೨೮೬). ೩. ಮೋಸದ ; ಕಪಟದ. (ನಾ). ೪. ತಪ್ಪು ತಿಳಿವಳಿಕೆ : ಭ್ರಾಂತಿ ; ಭ್ರಮೆ : ಭ್ರಮೆಯೊಳಗೆ ತನ್ನಯ ಭ್ರಾಮಕ ಹಿಂಗಿದಲ್ಲದೆ ಕಂಡುದ ಕಾಣ ಬಾರದೆಂಬುದಕ್ಕೆ ಸೂಚನೆ (ಕೋಚಪ. ೨೯೦-೬೫೦); ಪಾಶವಮತು ಗುರು ಮಾಗಬೇಕು ವೇಷವಮತು ಚರವಾಗಬೇಕು ಭ್ರಾಮಕವಮತು ಲಿಂಗವಾಗಬೇಕು (ಕವಸೋ. ೫೦-೦೧೩). ೫. ಮೋಹ ; ವಾಂಛೆ : ಪರಮಪತಿವ್ರತೆ ಯಾಗಿರ್ಪ ತನಗೀ ತರಳನ ಮೇಲೆ ಭ್ರಾಮಣವ ಇರಲೀಯದೊಡಲನೀಡಾಡು ವೆನು (ಕೋಚಪ. ೨೦-೮೬). ೬. ಭ್ರಮೆಯನ್ನುಂಟುಮಾಡುವುದು ; ಸುಳ್ಳನ್ನು ನಿಜವೆಂದು ನಂಬಿಸುವುದು ; ಮೋಸ : ಭೂಮಿಪತಿವ್ರತೆ ತನ್ನ ತನುಭೋಗಮಂ ಭ್ರಾಮಕವಿಂದೆಂದು ಜಜಿದು (ಕೃಯಾ. ೫೬-೧೨). ೭. ಸೂಜಿಗಲ್ಲು ; ಅಯಸ್ಕಾಂತ : "ಚುಂಬಕಃ, ಭ್ರಾಮಕಃ ಮೊದ ಲಾದುವು ಅಯಸ್ಕಾಂತದ ಭೇದಂಗಳ್" (ಶಬ್ದಮ. ೫೮-೦೫) ; ತಪ್ಪ ರಿಸದು ಭೂಪಮಾಯಂ ಪತಿ . . . ಮುನಿವಂ ಭ್ರಾಮಕದತ್ತೆಳಸುವ ಪಚ್ಚಿಗರ್ಬ್ಬನಕ್ಕೆಯಾದಂ (ಪಂಚಪ. ೪-೬೬) ; ಇವೆಂತ್ರನ ವಿದ್ಯುಜ್ಜನಕ ಗಳಲ್ಲಿ ಒಂದೇ ಜಾಲಕದಂಡವ (Driving shaft) ಮೇಲೆ ಅನೇಕ ಭ್ರಾಮಕ ಗಳನ್ನು ಜೋಡಿಸಿರುತ್ತಾರೆ (ಶಬ್ದಾ. ೨೮೨). ೮. ಧೂರ್ತ ; ಮೋಸ ಗಾರ. ೯. ನರಿ. ೧೦. ಸೂರ್ಯಕಾಂತಿ ಹೂವು. [ಸಂ.]

ಭ್ರಾಮಕಗೊಳ್ಳು (ಕ್ರಿ). ಮರುಳಾಗು ; ಮೋಹಗೊಳ್ಳು : ಸಹ್ಯೋಮ ಲಾಂಗಿಯ ಪೇರುರದಿ ಹೇಮಾಬ್ಜಮುಖಸ್ಪನ ಬಗಿವಡೆದಿರೆಭ್ರಾಮಕಗೊಂದು ವೀಕ್ಷಿಸಿದ (ಕೋಚಪ. ೮೬-೪೭). [ಭ್ರಾಮಕ + ಕೊಳ್ಳು (<ಕೊಳ್)]

ಭ್ರಾಮಕರತಿ (ನಾ). [ಕಾಮಶಾ] ಒಂದು ಬಗೆಯ ರತಿ : ಪ್ರವಂಚದಲ್ಲಿ ಸ್ತ್ರೀಯರೆ ಅವರ ಮನಃಪೂರ್ವಕ ಮನಸ್ಸಿಟ್ಟು ರಮಿಸಿದರೆ ಮಹಾರತಿ. ಆಕೆ ಮನಸ್ಸಿಲ್ಲದೆ ರಮಿಸುವದು ಭ್ರಾಮಕರತಿ ಎಂದು ತಿಳಿಯುವದು (ಶಕುಶಾ. ೨೩೦). [ಸಂ.]

ಭ್ರಾಮಕವಡಿಸು (ಕ್ರಿ). ಮೋಹಗೊಳಿಸಂ : ಮರುಳುಮಾಡು : ನಿನ್ನನ್ನು ಕಾಮರಾಸ್ಯದೊಳಿಟ್ಟು ಭ್ರಾಮಕವಡಿಸಿದನಿವೀಗ ಮೋಡಂದು ಕಾಮನ ರೂಪ ತೋಜಿದಳು (ಕೋಚಪ. ೬೦-೬೦). [ಭ್ರಾಮಕ + ಪಡಿಸು]

ಭ್ರಾಮಕವಡೆ (ಕ್ರಿ). ಮರುಳಾಗು ; ಮೋಹಗೊಳ್ಳು ; ಕಾಮನ ತರಳ ವಿಗ್ರಹವ . . . ಮಾನಿನಿ ಕಂಡು ಭ್ರಾಮಕವಡೆದಳಾಕ್ಷಣದಿ (ಕೋಚಪ. ೦೬-೮೬). [ಭ್ರಾಮಕ + ಪಡ್ಕ]

ಭ್ರಾಮಕಾಸ್ತ್ರ (ನಾ). ದಿಗ್ಭ್ರಮೆ ಹಿಡಿಸುವ ಅಸ್ತ್ರ ; ಸಮ್ಮೋಹನಾಸ್ತ್ರ : ಭ್ರಾಮಕಾಸ್ತ್ರಗಳಂ ಸಂಧಿಸುಯುಂ ಕಡುತಿಕ್ಷ್ಣ ಪುಷ್ಕಲಸೊಳ್ ಚಿತ್ರಂ ಚಿತ್ರತರಮಾಗೆ ಕೈಗಮ್ಮುತಿರ್ದಂ (ಜಾಮಕ್ಕ. ೧೬-೯). [ಸಂ.]

ಭ್ರಾಮರ (ನಾ). ೧. ದುಂಬಿಯಿಂದಾದುದು ; ದುಂಬಿಗೆ ಸಂಬಂಧ ಪಟ್ಟುದು. ೨. ಜೇನುತುಪ್ಪ. ೩. ಸತ್ಪುವಿಕೆ ; ತಿರುಗುವಿಕೆ. ೪. (ಅಲಂ) ಮನಸ್ಸಿನ ಅಲೆದಾಟ ; ಭ್ರಾಂತಿ ; ಅಜ್ಞಾನ : ತ್ಯಾಗಾಂಗ ಭೋಗಾಂಗ ಯೋಗಾಂಗ ಸ್ವರ್ಗಸಮಾಧಾನ ಸುಚಿತ್ತವಿದ್ಯಾ ಮತ್ತೆ ಇತ್ಯಾದಿಗಳಲ್ಲಿ ನೋಡಿಜನೆಂಬ ಭ್ರಾಂತಾ ಭ್ರಾಮರವೇತಕ್ಕೆ (ಕೋಚಪ. ೦೧೦-೬೦೨). [ಸಂ.]

ಭ್ರಾಷ್ಟ್ರ (ನಾ). ೧. ಹುರಿಯುವ ಓಡು ; ಬಾಂಡಲೆ : "ಅಂಬರೀಷಃ, ಭ್ರಾಷ್ಟ್ರಂ—ಈ ೨ ಹುರಿಗಾಪಲಿ" (ಶಬ್ದಮ. ೬೨-೦೫೮); "ಭ್ರಾಷ್ಟ್ರ ಮಂಬರೀಷಂ ಹುರಿವ ಹುಚ್ಚಣ್ಣ" (ಕುಂಚಾ. ೬೨-೨೮). ೨. ಬೆಳಕು ; ಪ್ರಕಾಶ. ೩. ಆಕಾಶ. [ಸಂ.]

ಭ್ರಾಷ್ಟ್ರಕ (ನಾ). = ಭ್ರಾಷ್ಟ್ರ ೧. [ಸಂ.]

ಭ್ರುಕುಂಸ (ನಾ). ಹೆಂಗುಸಿನ ವೇಷಧಾರಿಯಾದ ನಟ : "ಭ್ರುಕುಂಸಃ, ಭ್ರುಕುಂಸಃ, ಭ್ರೂಕುಂಸಃ— ೩ ಸ್ತ್ರೀವೇಷಧಾರೀ— ಹೆಣ್ಣುವೇಷವನ್ನು ಧರಿಸಿದ, ನರ್ತಕಃ, ಪುರುಷಃ, ಕುಣಿಯುವ ಗಂಡಿನ ಹೆಸರುಗಳು" (ಕಣ್ಣಂ. ೬೨). [ಸಂ.]

ಭ್ರುಕುಟಿ (ನಾ). ೧. (ಕೋಪ ಮೊದಲಾದ ಕಾರಣದಿಂದ ಉಂಟಾ ಗುವ) ಹುಬ್ಬುಗಂಟು ; ಭ್ರೂಭಂಗ : ತಿರಿದುಂ ಪ್ರದುತ್ಪದಿಂದಮ ವಿರತಿಂ ಲಕ್ಷ್ಮಸವ ಭೀಷಣಭ್ರುಕುಟಿ ಪೊದಟ್ಟಿರೆ (ಶಾಕಂಭ. ೬೦೦); ಭ್ರುಕುಟಿ ಪೊದೆಳ್ದಡೆಯೊಂದಿರೆ ಕೋಪಾಗ್ನಿದು ಪೊದರ್ವ ರೂಪಾಂತ ತೆಜದ ಳುಡುಪಡಿಸುತ್ತುಂ (ಶಾಕಂ. ೦೧-೬). ೨. [ನಾಟ್ಯ] ಅಭಿನಯದಲ್ಲಿ ಹುಬ್ಬಿನ ವಿಳು ಭೇದಗಳಲ್ಲಿ ಒಂದು : "ಎರಡು ಹುಬ್ಬುಗಳನ್ನು ಜಾಗ್ರತೆ ಮೇಲೆತ್ತುವುದು" (ಶಾಸ್ತ್ರ. ೬೬ ಗಣ್ಯಕೂಡಾದ) : ಸಹಜ, ಪತಿತ, ಆಕೃಷ್ಟ, ರೇಚಿತ, ಕುಂಚಿತ, ಭ್ರುಕುಟಿ, ಚತುರ—ಈ ವಿಳು ಹುಬ್ಬಿನ ಭೇದಂಗಳ್ . . . ಳಿಲನೆಯತ್ತಲ್ಕೆರಡುಂ ಜಲಜಾಕ್ಷೀ ಭ್ರುಕುಟಿ ಯೆಂಬ ಪೆರ್ಸೆದಿರ್ಕುಂ (ಶಾಸ್ತ್ರ. ೬-೨೬). [ಸಂ.]

ಭ್ರೂಕುಂಸ (ನಾ). = ಭ್ರುಕುಂಸ : "ಭ್ರುಕುಂಸಃ, ಭ್ರುಕುಂಸಃ, ಭ್ರೂಕುಂಸಃ— ೩ ಸ್ತ್ರೀವೇಷಧಾರೀ — ಹೆಣ್ಣುವೇಷವನ್ನು ಧರಿಸಿದ ನರ್ತಕ, ಪುರುಷ, ಕುಣಿಯುವ ಗಂಡಿನ ಹೆಸರುಗಳು" (ಕಣ್ಣಂ. ೬೨). [ಸಂ.]

ಭ್ರೂಕೋಟಿ (ನಾ). = ಭ್ರುಕುಟಿ ೧ : "ಭ್ರುಕುಟಿಃ, ಭ್ರೂಕುಟಿಃ — ೨ ಹುಬ್ಬು (ವುರ್ವು) ಗಂಟಿಕ್ಕುವುದು" (ಶಬ್ದಮ. ೦೨೮-೧೦). [ಸಂ.]

ಭ್ರೂಕೋಟಿ (ನಾ). ಹುಬ್ಬಿನ ಕೊನೆ.— ತುದಿ : ಈ ಜಗದೊಳ್ ಬದ್ಧೆಗ ನನ್ನನಾತನಿಚ್ಛಿಸುಂ ಭ್ರೂಕೋಟಿಯುಂ ಕೋಟಿಯುಂ (ಕಂಪಣಾ. ೨-೨೬);

ಕಾರುಣ್ಯದೃಷ್ಟಿಯೊಳಿತ್ತಂ ಧರಣೀಶ್ವರು ತನಯಮಂ ಭ್ರೂಕೋಟಿಯಿಂ ಕೋಟಿಯುಂ (ಪ್ರಭು. ೩-೯೨). [ಸಂ.]

ಭ್ರೂಣ (ನಾ). ೧. ಗರ್ಭಸ್ಥ ಶಿಶು ; ಪಿಂಡ : " ಗರ್ಭಃ, ಭ್ರೂಣಃ —ಈ ೨ ಗರ್ಭಂ " (ಪಣಾಮು. ೩೨-೪೫); ತಾಯಿಯು ಗರ್ಭದಲ್ಲಿ, ತಾಯಿಯಿಂದಲೇ ಆಹಾರವನ್ನು ಪಡೆದು ಬೆಳೆಯುವ ಮನುಷ್ಯನ ಭ್ರೂಣವು (Embryo) ಕೂಡ ಶಾಸ್ತ್ರೀಯವಾಗಿ ನೋಡಿದರೆ ಪರತಂತ್ರಜೀವಿಯೇ (ಪಜ್ಞೇ. ೭). ೨. ಕೂಸು ; ಶಿಶು ; ಮಗು. ೩. ಹುಡುಗ ; ಬಾಲಕ. ೪. ಬಸುರಿ ; ಗರ್ಭಿಣಿ ; " ಬಸುರಿ ಸತಿಯೊಳ್ ಭ್ರೂಣಮೆಂಬುದು " (ಪುಂಗಾ. ೦೫೦-೦೨). ೫. ಸಸ್ಯದ ಅಂಕುರ ; ಮೊಳಕೆ : ಈ ಅಂಡವು ಪರಾಗನಳಿಕೆಯ ದ್ರವದೊಂದಿಗೆ ಸ್ಪರ್ಶವಾದ ಮೇಲೆಯೇ ಭ್ರೂಣವು ತಯಾರಾಗುವುದೆಂದೂ ವಿದಿತವಾಗಿ ನಿರ್ಧರಿಸಲ್ಪಟ್ಟಿತು (ಸ್ಯ. ೦೮) ; ಭತ್ತದ ಉಮಿ ಅಥವಾ ಹೊರಕವಚವನ್ನು ತೆಗೆದರೆ ಬರುವ ಅಕ್ಕಿಯಲ್ಲಿ ಮೇಲ್ಭಾಗದಲ್ಲಿ ಭ್ರೂಣ . . . ಮತ್ತು ಒಳಗೆ ವಿಪ್ಪದ ಭಾಗ ಇರುತ್ತವೆ (ಜಪಾ. ೬೨). ೬. ಮೂಲಾವಸ್ಥೆಯಲ್ಲಿರುವ ಮನುಷ್ಯ ; ಮೂಲವಸ್ತು ; ಈ ಹಂತದಲ್ಲಿ ರೂಪುಗೊಂಡ ಮನುಷ್ಯಗಳನ್ನು ಸೌಲಭ್ಯಹೀನ ಗ್ರಹಗಳ ಮತ್ತು ಇತರ ಮನುಷ್ಯಗಳ ಭ್ರೂಣಗಳೆಂದು ಪರಿಗಣಿಸಬಹುದು (ಕೂಮನು. ೩೯). ೭. (?) : "ಗರ್ಭಿಣೀ ಜ್ಞಾರೆಯತೀವ ಬಾಲಕರುಮಿಂತಿವ್ವ ಭ್ರೂಣಮೆನಿಸ್ಮ" (ಜಾಪಾಕ. ೦೩೯). [ಸಂ.]

ಭ್ರೂಣಹತ್ಯ (ನಾ). ಗರ್ಭದಲ್ಲಿರುವ ಶಿಶುವನ್ನು ನಾಶಪಡಿಸುವುದು.—ಕೊಲ್ಲುವುದು : ಅಂದು ಕಣ್ಣಪ್ಪನ ನಯನವಿರೆ ಇಂದುಜೂಟಂ ಭ್ರೂಣ ಹತ್ಯಕೆ ಬಂದು ನಿಲುವನೆ (ಪಪ್ರ. ೦೬-೧೦); ಆತ್ಮಹತ್ಯ ಭ್ರೂಣಹತ್ಯದೋಷಂಗಳೊರ್ಮೊದಲೊಳೆ ಬಂದೊದವುಗುಮುಂದೆ ಮಾಣ್ದಿಂ (ಜಪಾಕ. ೮೨-೩). [ಸಂ.]

ಭ್ರೂಣಹತ್ಯಾಪಾತಕ (ನಾ). ೧. ಗರ್ಭದಲ್ಲಿರುವ ಶಿಶುವನ್ನು ಕೊಂದುದರಿಂದ ಬರುವ ಪಾಪ. ೨. ಹಸುಳೆಯನ್ನು ಕೊಂದುದರಿಂದ ಉಂಟಾಗುವ ಪಾಪ ; ಬಾಲವಧೆಯಿಂದ ಬರುವ ದೋಷ : ಕರೆ ವಿಮ್ಮತಗಳಿನೇ ಭ್ರೂಣಹತ್ಯಾಪಾತಕಕ್ಕಂಜುವೆನು (ಭಾಗ್ಯಲ್ಕ್ಷ್ಮೀ. ೩-೨೬) ; ಈ ತರಳನ ಮರ್ದಿಸಿ ಭ್ರೂಣಹತ್ಯಾಪಾತಕವನು ಕಟ್ಟಿಕೊಳಲು ವಿತಕ (ಕೀಗೀಪ. ೦೦-೨೬). [ಸಂ.]

ಭ್ರೂಣಹತ್ಯಾಪಾತಕಿ (ನಾ). ಬಾಲಕನನ್ನು ಕೊಂದ ಪಾಪಿ : ಆತುಕೊಳ್ಳೆಂ ಭ್ರೂಣಹತ್ಯಾಪಾತಕಿಯೆ ಪಡಿತಲಿಸು ವಿಖ್ಯಾತವಿದೆಯೆಮತಜ್ಞ ನಿನ್ನ ಸುತನಿಲುನಂದನನ (ಭಾಗ್ಯ. ೦೬-೦೦). [ಸಂ. ಭ್ರೂಣಹತ್ಯಾಪಾತಕಿನ್]

ಭ್ರೂಣಹತ್ಯೆ (ನಾ). =ಭ್ರೂಣಹತ್ಯ : ಭ್ರೂಣಹತ್ಯೆ ನಮ್ಮ ಮೊದಲನೆಯ ಹೆಜ್ಜೆ (ಕಂದ್ರಕಾ. ೧೩-೨೦). [ಸಂ. ಭ್ರೂಣಹತ್ಯಾ]

ಭ್ರೂಭಂಗ (ನಾ). = ಭ್ರುಕುಟಿ ೧ : ಪ್ರಕಟಿತಮಪ್ಪಗವಪತಿಶಿಶುವನ್ನು ಕಾಶರತಿವಿಶುದ್ಧೀಪಣಭ್ರೂಭಂಗರ್ ನಕುಲ ಸಹದೇವರ್ (ಪಂಕಾ. ೬-೬) ; ವಿಮುಗಿಪತು ಭಂಗಮುಂ ಮಾಡಿದಂಗದಾದಿಗಳಂ ಭ್ರೂಭಂಗಮಾತ್ರದೊಳೆ ಸೆಲೆಗೆಯ್ದು ತಂದು . . . ಪಂಧವಿಸುವೆಂ (ತಂಯಶಾ. ೦೪-೦೦೬ ಪ); ಓಂಗಳಿಂದನುಯೋಗ ವಿಜಿಹಸ್ಯಾಂಗುಲಿಯೊಳುತ್ತರ ಲಸದ್ಭ್ರೂಭಂಗದರಿ ಸಂದೇಪ ಮುಖವಿಕೃತಿಯಲಿ ದುರ್ನೀತಿ (ಭಾಮ್ಯಕ. ೦೪-೮೬). [ಸಂ.]

ಭ್ರೂಭ್ರುಕುಟಿ (ನಾ). =ಭ್ರುಕುಟಿ ೧ : ಕೃತಾಂತಭ್ರೂಭ್ರುಕುಟಿಕುಟಿಲಮಂ ಜಯಲಕ್ಷ್ಮೀತಾತಂ ಕಾರ್ಮುಕಮಂ ಕಳೆದು (ಪಂಪ್ರ. ೬-೩೦). [ಸಂ.]

ಭ್ರೂಮಧ್ಯ (ನಾ). ಎರಡು ಹುಬ್ಬುಗಳ ಮಧ್ಯಪ್ರದೇಶ : ಮೂಲ ನಾಭ್ಯುತವೆ ಕಂಠಪುಯಿನಾಸಾಗ್ರಲೋಲನೇ ಭ್ರೂಮಧ್ಯವಾದ ಮಧ್ಯಸ್ಥನೆ (ಪಚ್ಚ. ೪-೦೬-೬೨) ; ದ್ವಾರಗಳೊಂಭತ್ತು ಮುಚ್ಚಿ ನಿಲ್ಲಿಸಿ ಧ್ಯಾನ ಭ್ರೂಮಧ್ಯದಿ (ಪ್ರಭಂಪ. ೬-೩೦ ಚಕ್ರಸ್ತುತಿ). [ಸಂ.]

ಭ್ರೂಲಾಸ್ಯ (ನಾ). ಹುಬ್ಬನ್ನು ಆಡಿಸುವುದು ; ಹುಬ್ಬನ್ನು ಕುಣಿಸುವಿಕೆ : ಇದು ನಿನ್ನರ್ಜಿಸುವಿಕ್ಷಿಂಚಾಮಂ . . . ಎಂದು ತೋರ್ದ ತೆಱದಿಂ ಭ್ರೂಲಾಸ್ಯಮಂ . . . ತೋರ್ದಾದಳ್ (ಅಷ್ಟ. ೧೦-೦೬). [ಸಂ.]

ಭ್ರೂಲೇಖೆ (ನಾ). ಹುಬ್ಬಿನ ರೇಖೆ.—ಗೆರೆ : ಮುಂದೆ ನಿಂದ ಸಕಲಮಕುಟ ಬದ್ಧರನುನ್ನತಿತಭ್ರೂಲೇಖೆಯಿಂ . . . ದೀಡಿಂಗೆ ಬೆಸಸೆ (ಪ್ರಭು. ೯-೩೨). [ಸಂ. ಭ್ರೂಲೇಪಾ]

ಭ್ರೂವಿಕ್ಷೇಪ (ನಾ). = ಭ್ರೂಲಾಸ್ಯ : ಆ ಪುರಸ್ತ್ರೀಭ್ರೂವಿಕ್ಷೇಪಕ್ಕೆ ಸೇವಾವತಿಪದವಿಯನಿತ್ತಂ ಮನೋಜಾತಂ (ಪ್ರಭು. ೩-೩೩). [ಸಂ.]

ಭ್ರೂವಿಕ್ಷೇಪಣ (ನಾ). = ಭ್ರೂಲಾಸ್ಯ : ತದ್ಭ್ರೂವಿಕ್ಷೇಪಣಪ್ರೇರಿತಂ ಮೀಳನಾದವಾದರದಿಂ ಬಂದು (ಜಾಪಾ. ೬-೮೨ ಪ). [ಸಂ.]

ಭ್ರೂವಿಭ್ರಮ (ನಾ). ಹುಬ್ಬಿನ ರಮಣೀಯವಾದ ಚಲನೆ.—ವಿಲಾಸ : ಕಂತುಶರಭವ[ಪ]ನಾ ಪ್ರಯಾಣಾಂತಾಭ್ರೂವಿಭ್ರಮಗ್ರಹಾಗ್ರಹದಶದಿಂ ಭ್ರಾಂತಿಸದುಪಶಾಂತಮನಂ ತಂತಮಗಿತ್ತಂ ಸಮಸ್ತರಾಜ್ಯಶ್ರೀಯಂ (ಪಂಪಶಾ. ೦-೩೬) ; ಆಕೆಯರ ಸಪ್ತವಿಧಭ್ರೂವಿಭ್ರಮದಿಂ ಮುದನವ ಪದ ವಿಲ್ಲಂ ಕಿದಱಿದಂತೆಯುಂ . . . ಅತಿ ಮನೋಹರಮಾಗೆ (ಪಂಪ್ರ. ೦೨-೦೧೪ ಪ). [ಸಂ.]

ಭ್ರೂವಿಲಾಸ (ನಾ). = ಭ್ರೂವಿಭ್ರಮ : ಭ್ರೂವಿಲಾಸಸ್ಖಲಿತಯೋ ನುತ್ಪತ್ತಿಯಾಗದೆ ಬ್ರಹ್ಮಕೋಟಿಗಳು . . . ದೇವ (ಭಾಪ್ರ. ೩-೧೨). [ಸಂ.]

ಭ್ರೂಸಂಜ್ಞೆ (ನಾ). ಹುಬ್ಬಿನಿಂದ ಮಾಡುವ ಸನ್ನೆ : ವಿವಾಹಪುಂಗಳಿದೇ ಭ್ರೂಸಂಜ್ಞೆಯಂಬಂತೆ ಚಿಲ್ಲುಸದೇಂ ಶ್ರಮ್ರುವಿಲಾಸರೇಖೆ ತಳೆದತ್ತೀಗಳ್ ಕುಮಾರಾಸ್ಯದೊಳ್ (ಗಾಪಾ. ೧೦೦). [ಸಂ. ಭ್ರೂಸಂಜ್ಞಾ]

*

ಮು

ಮು (ನಾ). ೧. ಕನ್ನಡ ವರ್ಣಮಾಲೆಯ ನಲವತ್ತೈದನೆಯ ಅಕ್ಷರ : ಪಳುಭಮಯುರಲವಶಷಸಹ (ಶಾಶಾಭ. ೬ ೪,೬) ; ಅಚ್ಚಗನ್ನಡದಲ್ಲಿ ೪೭ ಅಕ್ಷರಗಳಿವೆಯೆಂದು ಕೇಶಿರಾಜನು ಹೇಳಿರುತ್ತಾನೆ . . . ವ್ಯಂಜನಗಳು . . . ಪಳುಭಮ (ಕೃಶಾ. ೨). ೨. ಚಂದ್ರ. ೩. ಬ್ರಹ್ಮ. ೪. ವಿಷ್ಣು. ೫. ಶಿವ. ೬. ಯಮ. ೭. ಸಮಯ ; ಕಾಲ. ೮. ವಿಷ. ೯. ನೀರು. ೧೦. ಸುಖ ; ಕ್ಷೇಮ. ೧೧. [ಛಂದ] ಮೂರು ಗುರುಗಳನ್ನು ಒಳಗೊಂಡಿರುವ ಒಂದು ಅಕ್ಷರ ಗಣ ; ಮಗಣ (— — —) : ಮಯುರಸತಜಭನತಿ ಗುನಿಚಯುಮೆಂಬಿವು ನಿಯಮದಿಂ ಗಣಾಕ್ಷರಮಕ್ಕುಂ (ಕಂದೋಂಜ. ೦-೪೬). ೧೨. [ಸಂಗೀತ] ಸರಿಗಮಪಧನಿ ಎಂಬ ಸಪ್ತ ಸ್ವರಗಳಲ್ಲಿ ನಾಲ್ಕನೆಯದು ; ಮಧ್ಯಮ : ಅದಱಲ್ಲಿ ತೋಱುವಕ್ಷರಾದಿ ಸಂಜ್ಞೆಗಳು ಪುಟ್ಟುದುವು ಸರಿಗಮಪಧನಿಯೆಂಬಿವು (ಶುಂಗಣ. ೨೬-೩) ; ಸಪ್ತಸ್ವರ ಕ್ರಮವಾಗಿ ಸ. ರಿ. ಗ. ಮ. ಪ. ಧ. ನಿ ಎಂಬ ಸಂಕೇತಾಕ್ಷರಗಳಿಂದ ಪ್ರಯೋಗವಲ್ಲಿವೆ (ಸಂಗಸಾ. ೦೩). ೧೩. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ ; ☞ ಜ್ಯೋತಿಷ್ಯದಲ್ಲಿ ಅಕ್ಷರ ಗಳಿಂದ ಸಂಖ್ಯೆಯನ್ನು ಗುರುತಿಸುವ ಒಂದು ಕ್ರಮವಿದೆ. 'ಪಾದಿ ಪಂಚ' ಎಂದರೆ–ಪ ಎಂದರೆ ೧, ಫ = ೨, ಬ = ೩, ಭ = ೪, ಮ = ೫ — ಈ ರೀತಿ ಲೆಕ್ಕ ಮಾಡುತ್ತಾರೆ. [ಸಂ.]

ಮುಂದ 'ಮೆಯಿಂದ' ನೋ.

ಮುಂದು 'ಮೆಯ್ದುನ' ನೋ.

ಮುಂಕ (ನಾ). ೧. ಕಳಿಗುಂದಿದವನು ; ಪೆಚ್ಚುಮೋರೆ ಹಾಕಿ ಕೊಂಡಿರುವವನು ; ಯಾಕೆ ಮುಂಕನಾಗಿ ಕುಳಿತುಕೊಂಡಿದ್ದೀಯ ? (ಕಂಪ). ೨. ದಡ್ಡ ; ತಿಳಿಗೇಡಿ ; ಮೂಢ : ಕುರುಬನೆಂಬ ಮಾತು ಮುಂಕನೆಂಬ ಅರ್ಥದಲ್ಲಿ ರೂಢಿಯಾಗಿರುವುದು (ಕಥಾಮಂ. ೨೪. ೨೬) ; ಆಗ ನಾನು ಮುಂಕನಂತೆ ಕುಳಿತು ಬಿಡುತ್ತೇನೆ (ಜಾಪ್ರ. ೫೩).

[ಮುಂಕು + — ಅ]

ಮುಂಕಡ 'ಮುಕ್ಕಡ' ನೋ.

ಮುಂಕಣೆ 'ಮುಕ್ಕಿರಿ' ನೋ.

ಮುಂಕಬ್ಬೆ (ನಾ). ಒಬ್ಬಾಕೆಯ ಹೆಸರು : ಪಮ್ಮಣ್ಣಿಭಟ್ಟಾರರ ಮಾಳವ ಕನ್ನಿಯರ ಸಿಸಿತ್ಕಿಯರಪ್ಪ ಮುಂಕಬ್ಬೆಕನ್ನಿಯರ್ (ಪಾ. IX (೩). ಶಾಪ್ರಸಾ. ೧೨-೩; ಸು. ೨೦೦೨). [ಮುಂಕ ? + ಅಬ್ಬೆ]

ಮುಂಕರಿ 'ಮುಕ್ಕಿರಿ' ನೋ.

ಮುಂಕೆ (ನಾ). ಬುದ್ಧಿಯಿಲ್ಲದವಳು ; ದಡ್ಡಿ : ಕಂಕಿ ಹೋಹುವಱಿಂದ ಮುಂಕೆ ಹೋಹುವು ಲೇಸು (ಪಡ್ಡಾ. ೦೪೨). [ಮುಂಕ + — ೪]

ಮುಂಕು (ನಾ). ೧. ಮುಸುಕು ; ಮಬ್ಬು : ಅವಳ ಕಣ್ಣ ಬೆಳಕಿನಲ್ಲಿ ಪಗಲು ಮುಂಕು ಚಿಮುರಿತು (ಜಾಪ್ರ. ೩೦೯). ೨. ಜಡತೆ ; ಆಲಸ್ಯ ; ನಿರುತ್ಸಾಹ : ಗೆಲವು ಹೋಗಿ ಮುಂಕು ಕವಿಯಿತು (ಕುಸಾಮ. ೩) ; ನಿವಾಸಿಲಾಗದ ಮುಂಕು ಬಳಸುವುರವನ್ನು ಕವಿದಂತೆ ಅವರಿಗೆ ತೋರಿತು (ಚಳಾ. ೧೦). ೩. ದಿಗ್ಭ್ರಮೆ; ಕಕ್ಕಾಬಿಕ್ಕಿ : ಅರಿವೊ ಮರವೆಯ ಮುಂಕೊ (ಪಟ್ಟಣ. ೦೨-೦). ೪. ಮಂದಬುದ್ಧಿ ; ಅಜ್ಞಾನ : ಮುಂಕಿನ ಜಡ್ಡು ಕವಿದರೆ ಮಱೆಸಿದರೇ ಮಾಡಿವ ಮಹಾತ್ಮಕರೆ (ಮುಚ್ಚಾಕಂ. ೪-೫೪). ೫. ತಿಳಿವಳಿಕೆ ಇಲ್ಲದ ವ್ಯಕ್ತಿ; ಬುದ್ಧಿಗೇಡಿ : ಕೊಂಕುಗುರುಳಿನ ರಂಭೆ ಕಂಕಣವ ಕಟ್ಟೂತ್ರ ಪಂಕಜಮುಖಿಯು ಎನಬೇಡ ತಾನೊಲಿದ ಮುಂಕ ಮಾಣಿಕವು (ಪಡ್ಡಾ. ೦೬೦). (ಗು). ೬. ಬುದ್ಧಿಯಿಲ್ಲದ; ದಡ್ಡತನ ದಿಂದ ಕೂಡಿದ : ಮುಂಕು ಜೀವನಾಗಿ ಮುಕ್ತಿ ದೇವಚಾರದು (ಪ್ರಬೆ. ೩-೫೬-೨); ಎಲೆ ಮುಂಕುಮದವ ನಿನ್ನರಳಂಬು . . . ಎನ್ನ ಕಲುವಕ್ಷದೊಳ್ ನಾಂಟಲರಿಯವು ಹೋಗು (ಪಚಾಪ. ೦೩-೫೬).

ಮುಂಕಾಡು = ಹುಡುಗಾಟಿಕೆ ಮಾಡು ; ಹುಡುಗಾಟವಾಡು : ತಾಯ ಮುಂದೆ ಮಗು ಮುಂಕಾಡಿದೋಪಾದಿಯಲ್ಲಿ (ಜಾಪ್ರಸಾ. ೧೨). ಮುಂಕುಮಾಡು = ೧. ಮರುಳುಮಾಡು; ಮೋಹಗೊಳಿಸು : ಬಂಕದ ಗಿಳಿಯ ಕೇಳೆಮ್ಮ ನಾಯಕ ಕನ್ನ ಸೋಂಕಿದಾಕ್ಷಣವೆ ಪೀಜಿಯರ ಮುಂಕು ಮಾಡುವ (ಪಚ. ೬-೦೩). ೨. ಕಳೆಗುಂದಿಸು : ಕಾಂತಿಹೀನನನ್ನಾಗಿ ಮಾಡು : ಪ್ರಬಿರತೇಜಸ್ಸುಳ್ಳ ಸೂರ್ಯ. . . ಶಾಂತಪ್ರಕಾಶನಾದ ಚಂದ್ರನನ್ನು ಮುಂಕು ಮಾಡಿ ಲೋಕದ ಕಣ್ಣಿಗೆ ಅವನ ಇರವೇ ಗೊತ್ತಾಗದಂತೆ ಮಾಡಿಬಿಡುತ್ತಾನೆ (ಜಾಕ್ಕಾ. ೦೦೩). [ದೇ.ಕ ತಮಿ. ಮುಕ್ಕು; ಮಲ. ಮುಂಙ್ಙುಕ ; ತುಳು. ಕೊಲು. ಮುಂಬು./ಜಾಲಿ. ಮುಂಕು]

ಮುಂಕುಗೊಳಿಸು (ಕ್ರಿ). ೧. ಮರುಳುಮಾಡು ; ವಿಸ್ಮಯಗೊಳಿಸು : ಭಾರತದ ಸಣ್ಣಸಿರೊಬ್ಬ ಅಮೇರಿಕೆಯ ಜನವನ್ನು ಮುಂಕುಗೊಳಿಸಿದ (ಕಚಾಗಾ. ೩೦). ೨. ಹೆಚ್ಚದಂತೆ ಮಾಡು ; ಕುಂಠಿತಗೊಳಿಸು : ಆ ಹುಡುಗಿದುಲ್ಲಿ ಅಡಕವಾಗಿರುವ ಪ್ರತಿಭೆಯನ್ನು ತಾಯಿ ತಂದೆ ಮುಂಕು ಗೊಳಿಸುತ್ತಾರಲ್ಲಾ ಎಂದು ಸುನುದಳಿಗೆ ವ್ಯಥೆಯಾಯಿತು (ಜಾಪ್ರಕ್ಕ. ೦೦೦). ೩. ಮುಸಕಾಗುವಂತೆ ಮಾಡು ; ಮಬ್ಬಾಗಿಸು.

[ಮುಂಕು + ಕೊಳ್ + — ಇಸು]

ಮುಂಕುತನ (ನಾ). ತಿಳಿವಳಿಕೆಯಿಲ್ಲದಿರುವಿಕೆ ; ದಡ್ಡತನ ; ಬೆಪ್ಪುತನ : ನಿನಗೀ ಮುಂಕುತನವೇಕೆಂದರಾ ಸುಖರು (ಕ್ರಕಾ.ಕ. ೬-೬) ; ಏ ಚೆನ್ನಾ ಇದೇನೋ ನಿನ್ನ ಮುಂಕುತನ ? (ಕಂದಾಮಾ. ೫೯). [ಮುಂಕು + — ತನ]

ಮುಂಕುದಿಣ್ಣೆ (ನಾ). ದಡ್ಡತನದ ರಾಶಿಯಂತಿರುವವನು ; ಬಹಳ ಪೆದ್ದ : ನೀನು ಬೆಳೆದ ಮೇಲೆ ಕುದ್ದ ಮುಂಕುದಿಣ್ಣೆ ಆಗುತ್ತೀಯ ನೋಡು ಕಿರು (ಜಾಪ್ರಸಾ. ೦೬) ; ಮುಂಕುದಿಣ್ಣೆ ಮುದುಸೆಗೆ ಹೋದರೆ ವಾಲಗ ದವರೆಲ್ಲಾ ಉಟ್ಟುಡಿಕೊಂಡು ಹೊಡೆದರಂತೆ (ಗಾಪ್ರ). [ಮುಂಕು + ದಿಣ್ಣೆ]

ಮುಂಕುಬಡಿ (ಕ್ರಿ). ಏನೂ ತೋಚದಿರು ; ದಿಗ್ಭ್ರಮೆಯಂಟಾಗು : ಮುಂಕುಬಡಿದವರಂತೆ ಕುಳಿತುಬಿಟ್ಟವರಂ ಒಮ್ಮೆಲೇ ಚೇತರಿಸಿ ಛಟಪಟನೆ ಆಂಗ್ಯದಿಂದ ಹಣೆ ಬಡಿದುಕೊಳ್ಳಪತ್ತಿದರು (ಪ್ರಬೆಪ್ರಾ. ೨೩೨); ಚಿಮಂಬರ ನಂತೂ. . . ಮುಂಕುಬಡಿವಸಂತೆ ನಿಂತುಬಿಟ್ಟ (ಪಕುಹೊ. ೬೩).

[ಮುಂಕು + ಬಡಿ]

ಮುಂಕುಬೂದಿ (ನಾ). ತಾಂತ್ರಿಕಸಿದ್ಧಿಯನ್ನು ಪಡೆದವರು ಜನರ ಮನಸ್ಸನ್ನು ವಶವಡಿಸಿಕೊಳ್ಳಲು ಪ್ರಯೋಗಿಸುವರೆಂದು ನಂಬ ಲಾದ ಮಂತ್ರದ ಬೂದಿ : ವಶೀಕರಣ ಭಸ್ಮ : ಮುಂಕುಬೂದಿ ಯನ್ನೆರಚಿದ ಮಾಟಗಾರನಿಗೆ ಶರಣು ಹೊಂದಿದವರಂತೆ ಈ ದೇಶದ ಜನರು ಪವಾಡಪುರುಷರಾದ ಮಹಾತ್ಮರನ್ನು ಹಿಂಬಾಲಿಸಿದರು (ಕಂಪಕಂ. ೭೫). ಮುಂಕುಬೂದಿಯನ್ನೆರಚು = (ಅಲು) ಮೋಸಮಾಡು ; ವಂಚನೆ ಮಾಡು : ವೃದ್ಧತೀರ್ಥಯಾತ್ರಿಗಳ ಮೇಲೆ ಮುಂಕುಬೂದಿಯನ್ನೆರಚುವ ದಂತೂ ಪಾಪ ಅವರಿಗೆ ಗೊತ್ತೇ ಇಲ್ಲ ! (ಜಾಪ್ರ. ೩೨) ; ಈ ವಿಷಯಕ್ಕೆ

ರುದ್ಯಾಕ್ಷಿಗಳು ಅವನ ಕಣ್ಣಿಗೆ ಮಂಕುಬೂದಿಯನ್ನೆರಚಿದಾರವು (ಶ್ರೀರಾಮಾ. ೫೬೩). [ಮಂಕು + ಬೂದಿ]

ಮಂಕುಮಳೆ (ನಾ). ದಿಗ್ಭ್ರಮೆಗೊಳಿಸುವ ಮಳೆ ; ಭಯಂಕರವಾದ ಮಳೆ: ಕೆಂಕಣಗಾಳಿ ಮಂಕುಮಳೆ ಬರಲೀತು (ಗಿರಿ).

[ಮಂಕು + ಮಳೆ (< ಮಟ್)]

ಮಂಕುರ (ನಾ). ಕನ್ನಡಿ ; ದರ್ಪಣ. [ಸಂ.]

ಮಂಕುಪೊಯ್ (ಕ್ರಿ). ಮಂಕು ಆವರಿಸು : ಭ್ರಾಂತಿಯುಂಟಾಗು ; ದಿಗ್ಭ್ರಾಂತನಾಗು : ಝೇಂಕರಿಸುವ ತುಂಬಿಗಳ ಕಂಡು ಪಮರಾಜ ಮಂಕುವೊಯ್ದಂಕಾದನೊಡನೆ (ಪಂಪ. ೬೯-೬೬). [ಮಂಕು + ಪೊಯ್]

ಮಂಕುಹಿಡಿ (ಕ್ರಿ). ಪೆಚ್ಚುತನ ಆವರಿಸು ; ಪೆಚ್ಚಾಗು ; ಬೆಪ್ಪಾಗು : ಅದೆಲ್ಲವನ್ನೂ ನೋಡಿ ಶ್ರೀನಿವಾಸರಾಯನು ಮಂಕುಹಿಡಿದವನಾಗಿ "ಸುಬ್ಬಣ್ಣವರೇ, ಇದೇನು ಮಸಿಯೋ, ಇಲ್ಲವೆ ದೆವ್ವದ ಗುಹೆಯೋ ?" ಎಂದು ಕೇಳಿದನು (ಕ.ಕೈ. ೦೩೬). [ಮಂಕು + ಹಿಡಿ$_1$ (<ಪಿಡಿ$_1$-)]

ಮಂಕ್ರಿ 'ಮಕ್ಕರಿ$_1$' ನೋ.

ಮಂಗ$_1$ (ನಾ). ೧. (ಮನುಷ್ಯನನ್ನು ಹೋಲುವ ಹಾಗೂ ಬಾಲವುಳ್ಳ) ಒಂದು ಬಗೆಯ ಪ್ರಾಣಿ; ಕೋತಿ: ಕಪಿ; ☞ ವಿಕಾಸವಾದದ ಪ್ರಕಾರ ಮಾನವಜನಾಂಗದ ಮೂಲಪ್ರಾಣಿ: ಮಾಡಿದ ಗಣಪತಿ ಮಂಗನಾದ ಮೇಲಿನ್ನೇನನ್ನೇನು (ಕುಂಬ. ೨-೩೭-೩); ಮಂಗನ ಕೈಗೆ ಮಾಣಿಕ್ಯ ಸಿಕ್ಕಿದ ಹಾಗಾಗಿದೆ (ಪೀಪಾ. ೬); ಮಂಗನ ಕೈಯಲ್ಲಿ ಕೊಳ್ಳಿ ಕೊಟ್ಟ ಹಾಗೆ (ಗಾದೆ). ೨. (ಆಲಂ) ಕುರೂಪಿ ; ಅಂದಗೇಡಿ : ಆ ಮಂಗನನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೆ ? (ಡಿಂಡಿ).

ಮಂಗನ ಕಾಯಿಲೆ = ಸತ್ಯ. ಕೋತಿಯಿಂದ ಹರಡುವ ಒಂದು ಬಗೆಯ ಸಾಂಕ್ರಾಮಿಕರೋಗ : ಸಾಗರ, ಸೊರಬ ಮುಂತಾದ ಕಡೆಗಳಲ್ಲಿರುವ ಮಂಗನ ಕಾಯಿಲೆಗೆ ಅನೇಕರು ಬಲಿಯಾಗಿದ್ದಾರೆ (ಡಿಂಡಿ). ಮಂಗನ ಕೆಮ್ಮು = ಸಣ್ಣಮಕ್ಕಳಿಗೆ ಬರುವ ಒಂದು ಬಗೆಯ ಕೆಮ್ಮು; ಕೋಡಗಕೆಮ್ಮು ; ನಾಯಿಕೆಮ್ಮು : ಸಣ್ಣ ಹುಡುಗರ ಮಂಗನ ಕವಿನ್ನಲ್ಲಿ ಪ್ರವಾಳಭಸ್ಮವು ಬಹಳೇ ಉತ್ತಮ ಔಷಧವಾಗಿರುವುದು (ಶಿಷ್ಟೋ. ೬೨). ಮಂಗನ ಕೈ = ಅನ್ನ ಮೊದಲಾದುವನ್ನು ತೋದಲು ಉಪಯೋಗಿಸುವ ಸಲಕರಣೆ. ಮಂಗನ ಜಾತ್ರೆ = ಕೆನ್ನೆ ಹಾಗೂ ಕೊರಳು ಊದಿಕೊಳ್ಳುವ ಒಂದು ಬಗೆಯ ರೋಗ; ಕೆಪ್ಪಟರಾಯ (ಕರಾ); ಗದ್ದಕಟ್ಟು : "ಗದ್ದಕಟ್ಟು; ಮಂಗನ ಜಾತ್ರೆ" (Parotitis. ಆಂಗ್ಲ). ಮಂಗಮಾಯ = ಕಣ್ಣಿಗೆ ಕಾಣದಂತಾಗುವಿಕೆ ; ಅದೃಶ್ಯವಾಗುವಿಕೆ : ಎಷ್ಟೆಷ್ಟು ತಡಕಿದರೂ ಅದು ಮಂಗಮಾಯವಾಗಿದಯಲ್ಲೇ! (ಕಡಣ. I, ೨೦೩).

[ದೇ.॥ ತುಲ. ಮೊಣ್ಣ ; ತುಳು. ಮಂಗ]

ಮಂಗ$_2$ (ನಾ). ೧. ದೋಣಿಯ ಮೇಲುಭಾಗ ; ನಾವೆಯ ಅಗ್ರಭಾಗ; ನೌಕಾಶಿರ : "ಪುಳಿಂದ, ಮಂಗಃ— ಈ ೨ ನಾವೆಯ ಬಿಸುಱು" (ಕಣಾಯು. ೦೦೦-೩೦). ೨. ಹಡಗಿನ ಪಕ್ಕ,—ಪಾರ್ಶ್ವಭಾಗ. [ಸಂ.]

ಮಂಗಚೇಷ್ಟೆ (ನಾ). ಕಪಿಯಂತೆ ಹುಬ್ಬು ಕುಣಿಸುವುದು, ಹಲ್ಲು ಕಿರಿಯುವುದು ಮೊದಲಾದ ಅಂಗಚಲನೆ : ಒಗೆ ಪಾಪಾತರದ ಮಂಗಚೇಷ್ಟೆಗಳಿಂದ ತನ್ನ ಸೌಂದರ್ಯವನ್ನು ತಾನೇ ಪ್ರಶಂಸಿಸಿಕೊಂಡು ಕನ್ನಡಿಯಿಂದ ಈಚೆಗೆ ಸರಿದಳು (ಚಿಕಾ. ೦೬೨). [ಮಂಗ$_1$ + ಚೇಷ್ಟೆ]

ಮಂಗಟ್ಟೆ (ನಾ). ಒಂದು ಜಾತಿಯ ಪಕ್ಷಿ : ಒಂದೆಡೆ ಮಂಗಟ್ಟೆಪಕ್ಷಿಗಳ ವಿಕಟನಾದವು ಕಾಡನ್ನು ಭಯಗೊಳಿಸುವಂತಿತ್ತು (ಕಾಸಂಯ. ೧೩).

ಮಂಗತಂಡಬೂಕಳಿ (ನಾ). ಒಂದು ಕೆರೆಯ ಹೆಸರು : ಮಂಗತಣ್ಣಟ್ಟು ಕೆಱೆಯೊಳ್ ದಿಕ್ಕು ಜೀಱು ಮಾಗೊಬಗಟ್ಟಿಯುಂ ಮಾಗೊಬ ವಾಳ್ಗಂ ಬಿಟ್ಟರ್ (ಅ೪. ೩. ಶಂಕಾಚ. ೦೩೩-೯; ಸು. 1000). [? + ಕೆಱೆ^{1}]

ಮಂಗತನ (ನಾ). ೧. ಕಪಿಯ ಮೂಲಸ್ವರೂಪ.—ಪ್ರಕೃತಿ : ಮನುಷ್ಯನು ವಿವೇಕವಂತನೂ ವಿಕಾಸಶೀಲನೂ ಆದ ವ್ಯಾಪಿಯೆಂದು ಕೇಳುತ್ತೇವೆ. ಮಂಗತನದಿಂದ ಮನುಷ್ಯತ್ವಕ್ಕೆ ಬಂದಿದ್ದಾನೆ (ಪೀಕೈ. ೦೦೯). ೨. (ಆಲಂ) ಕುಚೇಷ್ಟೆ; ಅಧಿಕಪ್ರಸಂಗ ; ಹಣ್ಣುಹುಡುಗೇರ ತಂದೆ ಅಂದರೆ ದೇವರ ಗುಡಿ ಅಂತ ತೀರಾಸೇನೋ, ಮನಸಿಗೆ ಬಂದ್ಹಾಂಗ ಮಂಗತನ ಮಾಡಲಿಕ್ಕೆ ? (ಅಕ್ಕಮ. ೦೩). ತಿಪ್ಪನಲ್ಲಿ ವೈದಿಕವ್ಯಕ್ತಿಯ ಹುಡುಗರ ಮಂಗತನವೆಲ್ಲ ತುಂಬಿಕೊಂಡಿತ್ತು (ಸಣ್ಣ. ೦೨).

[ಮಂಗ$_1$ + — ತನ]

ಮಂಗತೋರಣ (ನಾ). ಒಬ್ಬಾತನ ಹೆಸರು: ಶ್ರೀಮಂಗತೋರಣನಾ ಪೃಥುವಿಯೆಮ್ಬ ಸಂವತ್ಸರದಾ[ಜಾಥ]ಸುದ್ಧಸಪ್ತಮಿ ಆದಿತ್ಯವಾರದನ್ದು ಬೆಳ್ಕೊಲವಾಡನಾಳ್ದಿರ್ (ಪೀಕೈ. ೩೬-೬, ೨೦-೪ ; ೫೫). [?]

ಮಂಗನಉಡಿದಾರ (ನಾ). ಒಂದು ಬಗೆಯ ಬಳ್ಳಿ : ಆಕಾಶಬಳ್ಳಿ, ಮಂಗನ ಉಡಿದಾರ (ಪ್ರಾಶಿ. ೦೯-೩೨೨). [?]

ಮಂಗನಬಳ್ಳಿ (ನಾ.) = ಮಂಗನಉಡಿದಾರ : ಇದಕ್ಕೆ ಆಕಾಶಬಳ್ಳಿ ಅಥವಾ ಮಂಗನಬಳ್ಳಿ (Cissampelos) ಎಂದು ಕರೆಯುತ್ತಾರೆ (ಪ್ರಾಶಿ. ೦೦೯). [? + ಬಳ್ಳಿ]

ಮಂಗಪರಸ (ನಾ). ಒಬ್ಬಾತನ ಹೆಸರು : ಶ್ರೀಸ್ತ್ರೀ ವಿಜಿರಮನ ಮಂಗವರ್ ಮಙ್ಗಪರಸರ ಅಟ್ಟಿಯ ತುಜುಗೋಳೊರಬಮಿನೊಲೆಬಡೆ ಪಿರಿಯಟ್ಟು ×× ಸತ್ಯ (ಶಿ. XII. ಕುಮಾಳಿ. ೬೯-೨ ; ಸು. ೧೦೦ ?).

[ಮಂಗ$_1$ + ಅಪ (< ಅಪ್ಪ$_1$) + ಅರಸ$_1$]

ಮಂಗಪ್ಪೆ (ನಾ). ಒಂದು ಬಗೆಯ ಸಸ್ಯ : (ಪ್ರಾಶಿ. ೬೬-೦೩೬). 'ಅಪ್ಪೆಯಸೊಪ್ಪು' ಪರಾ. [?]

ಮಂಗಮಾರಿ (ನಾ). ಒಂದು ಬಗೆಯ ಸಸ್ಯ : ಮಂಗದಮಾರಿಸೊಪ್ಪು, ಹೆಣ್ಣುಕರೀತುಂಬೆ, ಹುಚ್ಚುಮುಟ್ಟೀಗಿಡ (ಪ್ರಾಶಿ. ೬-೦೦೬); ಮಂಗಮಾರಿ, ತುಂಬೆ, ತಿರಳೊಟ್ಟಿಲಿ (ಪಚ್ಯಚಿ. ೨೩೬). 'ಮಂಡಳಮಾರಿ' ಪರಾ. [?]

ಮಂಗಮುಷ್ಟಿ (ನಾ). ೧. ಕಪಿಯ ಮುಷ್ಟಿ,—ಹಿಡಿತ. ೨. (ಆಲಂ) ಹಿಡಿದ ಹಟವನ್ನು ಬಿಡದಿರುವುದು ; ಹಟಮಾರಿತನ : ಹಣ್ಣುಹಿಸೂ ಅಷ್ಟಿಷ್ಟರವಲ್ಲ, ತುಂಬ ಹಟಮಾರಿ ! ಉಡದ ಹಿಡಿತ ಅವನದು, ಅದಕ್ಕೆ 'ಮಂಗಮುಷ್ಟಿ' ಎಂದು ಹೇಳಿದರೆ ಸರಿಹೀತು (ಕೂಬಾಶಾ. ೧೫). ೩. ಜಿಪುಣ ; ಲೋಭಿ : ಅವನು ಬಹಳ ಮಂಗಮುಷ್ಟಿ, ಅವನನ್ನು ಸಾಲ ಕೇಳಲೇ ಬೇಡ (ಡಿಂಡಿ). 'ಕಪಿಮುಷ್ಟಿ' ಪರಾ.

[ಮಂಗ$_1$ + ಮುಷ್ಟಿ]

ಮಂಗಯ್ಯ (ನಾ). ಒಬ್ಬಾತನ ಹೆಸರು : ತೋಟಯ್ಯನ ಮಗ ಮಙ್ಗಯ್ಯಂ . . . ಕಾಳೆಗದೊಳ್ ಅವೆಯ ಮುಂದೆ ಸತ್ಯಂ ಸರ್ಗ್ಗಕ್ಕೆ ಸಂದೊಂ (ಶಿ. XII, ಚಿಕ್ಕಮ. ೬೯-೦೩ ; ಸು. ೧೧೦). [ಮಂಗ$_1$ + ಅಯ್ಯ$_{21}$]

ಮಂಗರವಳ್ಳಿ 'ಮಾಂಗುಬಿಳ್ಳಿ' ನೋ.

ಮಂಗರೆ 'ಮಗ್ಗಾರೆ' ನೋ.

ಮಂಗಲ, ಮಂಗಳ (ಗು). ೧. ಶುಭಕರವಾದ ; ಕಲ್ಯಾಣಕರವಾದ : ಶಕಿಯು ಪೋಲ್ವ ಮುಖಮೆಯ್ದೆ ಕೊರಗಿತ್ತೆ ಮಂಗಲಸೌಮ್ಯವಜಿತುದೇ . . . ಗೃಹಬಲಂ ತಪ್ಪಿತಕಟಾಯಂದಳು (ಕಾಸಂಯ. ೩-೨೯). (ನಾ). ೨. ಏಳಿಗೆ ; ಅಭಿವೃದ್ಧಿ. ೩. ಅದೃಷ್ಟ ; ಭಾಗ್ಯ ; ಮೇಲ್ಕೆ. ೪. ಕುಶಲ; ಕ್ಷೇಮ. ೫. ಸುಖ ; ಸಂತೋಷ. ೬. ಶುಭ ; ಕಲ್ಯಾಣ ; ಒಳ್ಳಿತು ; ಶ್ರೇಯಸ್ಸು : "ಶ್ರೀ(ಸ್ಮ)ಶ್ರೇಯಸಂ, ಕಲ್ಯಾಣಂ . . . ಮಾಂಗಳಂ— ಈ ೧೧ ಒಳ್ಳಿತಕ್ಕೆ ಪೆಸರ್" (ಪೀಡಾಮು. ೨೦-೦೨೨) ; ಬೆಳಗಾದುದಾ ದಿನಂ ಪುಜೆಗೈದಂಗಜಾರಿಗೆ, ಮಧುರ

ಮಂಗಲದ ಸಂಗೀತದಿ ಸ್ತುತಿಸಿ (ಹರ್ಷಾ. ೬೨-೧೬೬). ೭. ಕಾವ್ಯ, ಗೀತ, ಶಾಸನ ಇತ್ಯಾದಿಗಳ ಆರಂಭ ಅಥವಾ ಅಂತ್ಯದಲ್ಲಿ ಬರುವ ಇಷ್ಟದೇವತಾಪ್ರಾರ್ಥನೆ ಅಥವಾ ಶುಭವನ್ನು ಕೋರುವಿಕೆ ;—ಶುಭದ ಹಾರೈಕೆ : ಮಂಗಲವು ಕರುಣಾಂತರಂಗ ಶ್ರೀರಂಗಗೆ ಮಂಗಲವು ಸಿಂಹಾದ್ರಿ ವರಸಿಂಹಗೆ (ಕೃಷ್ಣ. ೬-೨೫೦ ಉಪಸ್ತುತಿ). 'ಜಯಮಂಗಲ'ಹೋ. ೮. ಶುಭಶಕುನ,—ವಿಮಿತ್ರ. ೯. (ಶುಭ ಕಾರ್ಯಗಳಿಗೆ ಸಂಬಂಧಪಟ್ಟಂತೆ ಮಾಡುವ) ಶುಭಾರಂಭ. ತಲವಜ್ರಘಾತದಿಂ ಮರ್ದಿಸಿ ರಜಕವಾತ್ಸಪ್ರವೇಶಕ್ಕಿದೇಮಂಗಲ ಮೆಂಬಂತಾ ಪುರದ್ವಾರದೊಳವನಿಪಗಿಂ ಬುತ್ತಿಯಿಟ್ಟು . . . ಪೊಕ್ಕಂ ದನುಜನ ಪೊಲಬಂ (ಪಂಪ. ೬-೦೦). ೧೦. ಮದುವೆ ಮೊದಲಾದ ಶುಭಕಾರ್ಯ, – ಉತ್ಸವ, – ಸಮಾರಂಭ : 'ಮಂಗಲಕಾರ', 'ಮಂಗಲವಮನೆ' ಪರಾ. ೧೧. ಅನೂಚಾನವಾಗಿ ಬಂದ ಆಚಾರ, –ಪದ್ಧತಿ, –ಪಂಪ್ರದಾಯ. ೧೨. ನವಗಪ್ರಗಳಲ್ಲಿ ಒಂದು : ಕುಜ. ೧೩. ಸೈನ್ಯವು ನೆಲಸಿರುವ ಸ್ಥಳ : ವಾಸ್ತುಶಾಸ್ತ್ರದ ಪ್ರಕಾರ " ಮಂಗಲ " ಎಂದರೆ ದುರ್ಗರಕ್ಷಣಾರ್ಥವಾಗಿ ನಗರದ ಸೈನ್ಯವು ವಿಡಿಗೊಂಡಿರುವ ಸ್ಥಳವೆಂದರ್ಥ (ಶುಂಗಾ. ೨೦೦). ೧೪. ಕೋಟೆ ; ದುರ್ಗ : ಮಂಗಲ–ವಾಸ್ತುಶಾಸ್ತ್ರದಲ್ಲಿ ಕೋಟೆ ಎಂಬರ್ಥ (ಶುಂಗಾ. ೨೩). ೧೫. ಕೆಲವು ಊರುಗಳ ಹೆಸರಿನ ಕೊನೆಯಲ್ಲಿ ಸೇರುವ ಪದ : ಉದಾಹರಣೆಗೆ–ನಾಗಮಂಗಲ, ನೆಲಮಂಗಲ, ಸತ್ಯಮಂಗಲ ಇತ್ಯಾದಿ. ೧೬. ಒಂದು ಊರಿನ ಹೆಸರು : ಮಂಜ್ಗಲಳ್ಳಿ ಅಪ್ಪಶತ್ತು ಕ್ಷೇತ್ರ (೦) ಗೊಟ್ಟಳ್ (ಇ. ಸಂ. ೦೦೬-೮; ೦೦೮ ?) ; ಮಂಗಲದ ಗರಡೊಜ ಆರ × × ಕೊಟ್ಟ (ಎಕ. IV. ನುಲ್ಮಡಿ. ೭೬-೦೦ ; ಸಂ. ೨೫೦). ಮಂಗಳೆ : ೧. ಮಂಗಳ ಮಣಿಪೀಠಂ ವಿಜಯಾಂಗನೆಗೆನೆ . . . ಭುಜಶಿಖರಮಂ ರತ್ನಾಂಗದಮಂ ಸಾರ್ದುವೊಂದು ನೆವದಿಂ ಮೆಱೆದಂ (ಪಂಚಷ. ೩-೩೬) ; ತುಂಗೆ ಮಂಗಳ ತರಂಗೆ (ಕೃಷ್ಣ. ೨-೧೦ ಪದ್ಯ). ೨. ತ್ರಿಜಗವಂದಿತ ಗಣಪ ಮಾಳ್ಪುದು ಮತಿಗೆ ಮಂಗಳವ (ಕಾಣ್ಯ. ೦-೪). ೩. " ಶ್ವೋವಶೀಯಂ ಶಿವಂ . . . ಮಂಗಳಂ . . . ಕಲ್ಯಾಣಮೆಂದಿನಲ್ಕೊಳ್ಳಿತಕೆ ಪೆಸರಿಸಕ್ಕುಂ " (ಶುಂಗಾ. ೩-೩೬) ; ಮಂಗಳಮಪ್ಪ ಪಾಲ್ಗುಡಲೊಳಾ ಹರಿಯುಂ ಸಿರಿಯುಂ . . . ಮಿಸೆವಂತೆ (ಭುಜಬ. ೦-೩೬). ೩. ಮನದೊಳಾಟಿಸುವುದಂ ಪಡೆವರೀ ಹೋದ ಶಸ್ಯಪ್ಪದ ಫಲಂಗಳಂ ಪಡೆಯಲ್ಪಣಮಾಗದ ಸುವಿಂಗಳಂ ಮಂಗಳಂ (ಅಜಿತ. ೩-೩೩ ಪಗಳ್) ; ಮಂಗಳಂ ಮೈತ್ರಿಗೆ ಅಂಗುಲಿಯನಿತ್ಪಮಗೆ (ಪ್ರಭಂದ. ೦-೨೩೦ ಉಪಸ್ತುತಿ) ; ಇಂತು ಶ್ರೀರಾಘವಂ ಸೀತಾಸಮೇತಂ ಜನ್ಮಮಂ ಬೇಳ್ದು . . . ಅರಸುಗೆಯುತ್ತುಮಿರ್ದನವಂಗಂ ಮಂಗಳಂ (ರಾಮಚಂ. ೧೩೩-೨೪). ೧೦. ಮಂಗಳ ಹಸ್ತಿರವಾದ್ಯೂ ಸಂಗಳ ತೂಳೀಲಿಲ್ಲಿಂತ (ಪಾರ್ಶ್ವ. ೦೦೩). ೧೧. " ಪೂರ್ವಪದ್ಧತಿಯ ತೆಱನುಸಿರ್ವಲ್ಲಿಯುಂ . . . ಮಂಗಳಾಖ್ಯಂ" (ಶುಂಗಾ. ೦೩೯-೩೩). ೧೨. "ಅಂಗಾವತಂ ವಕ್ರನವನಿಜಂ ಭೌಮನೆನೆ ಮಂಗಳಾಖ್ಯಂ" (ಶುಂಗಾ. ೦೦-೩) ; ಲಿಂಗದ ಸ್ಥಲ ಲೇಸು: ಮಂಗಳನ ಬಲ ಲೇಸು . . . ಶರಣರ ಸಂಗವೇ ಲೇಸು (ಸರ್ವಜ್ಞ. ೨೩೩). ೧೭. ಶುಭವನ್ನು ಕೋರುವ ಹಾಡು : ಮಂಗಳವಾವೆ ಪಾಡುತ್ತುಂ,ಮಾಂಗಲಧಾರಿಣಿಯುಂಗಿ ಮುಂದಂ ನಡೆವಾಕಾಂಗನೆಯುರಿಂದೆ ದಿವಿಜೇಂದ್ರುಂಗನೆ ಕರಮೆಸಮು ಹಂಸಗತಿಯೊಳ್ ಬಂದಳ್ (ಆದಿಪು. ೬-೧೮). ೧೮. ಒಂದು ಬಗೆಯ ಕಾಳುಗಳು : "ಕಾಲ್ಕೊಗವೆಯ್ದೆ ಬೆಳ್ಪದೋಱಿನೆ ಮಂಗಳಂ " (ಶುಂಗಾ. ೩೨-೦೩) ; ಬಾಲದೊಳುರದೊಳ್ ಹಾಂ ಕೇಸರದೊಳಮಿತಯ ಬೆಳ್ಪದಾಗೆ ಮಂಗ(ಕ)ಳನಕ್ಕುಂ (ಅಶ್ವಶಾ. ೨-೦೩). ೧೯. ಸೊಬಗು ; ಚೆಲುವು : 'ಮಂಗಳವಡೆ' ಪರಾ. ೨೦. ಕ್ಷೌರಮಾಡುವ ವೃತ್ತಿಯವನು ; ನಾಯಿಂದ : ನಿಲಿಸಿ ಕುರುಳನು ತೆಗವನಗೆ ಮಂಗಳನುಯೆಂಬಾಖ್ಯದಲಿ (ಕಪಿಷ್ಠ. ೦೯-೩೩). ೨೧. ಕೇಡನ್ನು ಸೂಚಿಸುವ ಸಂದರ್ಭದಲ್ಲಿ ಬಳಸುವ ಸೌಮ್ಯೋಕ್ತಿ : "ನಿಷ್ಠುತ ಶ್ವುವನು ಪೇಳ್ವಲ್ಲಿಯುಂ ಮಂಗಳಾಖ್ಯಂ" (ಶುಂಗಾ. ೦೩೯-೩೩). ೨೨. (ಆಲಂ) ಯಾವುದಾದರೂ ಉತ್ಸವ ಸಮಾರಂಭದ ಮುಖ್ಯಾಯದಲ್ಲಿ ಮಾಡುವ ಆರತಿ. ನೈವೇದ್ಯ ಇತ್ಯಾದಿ ವಿಧಿ: ಅಯ್ಯಾಮ್ಮ ವೇಳ್ದ ಕತೆಗೆ ಮಂಗಳಮಂ ಪಾಡಿ (ಜಾಪಾತ್ಯ. ೦೩೨-೩). ೨೩. [ಛಂದ] ನಾಲ್ಕು ಪಾದಗಳಂಳ್ಳ ಒಂದು ಅಕ್ಷರಗಣದ ಸಮವೃತ್ತ: ಪ್ರತಿ ಸಾಲಿನಲ್ಲೂ ಹದಿನಾರು ಅಕ್ಷರಗಳಿರುವ ಅಷ್ಟಛಂದಸ್ಸಿನ ಒಂದು ವೃತ್ತ : ದಂತಿಯೊಳಿಷ್ಟ ಪದ್ಧತಿಯೊಳಲ್ಲಿ ಯತಿಯುಂ ನಿಲೆ ಮಂಗಳಮೆಂಬುದೀ ಕ್ಷಿತಿಗೆ ಸಂದುದು (ಕಂಠೀರಾಜ. ೩-೦೩೯) ; ಪಥಜಂ ಜಗಮುಮೊಂದಿರಲಪ್ಪುದು ಮಂಗಳಂ (ಕೃವಿ. ೬೪).

ಮಂಗಲಮಾಡಿಕೊಡು = ಮುದುವೆ ಮಾಡಿಕೊಡು : ನಿನ್ನಂತಹ ಸಾಮಾನ್ಯನಿಗೆ ಅವನು ಮಗಳನ್ನು ಹುಂಗಲ ಮಾಡಿಕೊಡರಾರ (ಶುಂಗಾ. ೦೦೪). ಮಂಗಳಹಾಡು = ಪರಿಸಮಾಪ್ತಿಗೊಳಿಸು ; ಮುಕ್ತಾಯಮಾಡು : 'ಶಾಕುಂತಲ' ನಾಟಕವನ್ನು ಹಲವಾರು ಬಾರಿ ಆಡಿ ಕಡೆಗೆ ಮಂಗಳ ಹಾಡಿದರು (ಸಂಜ್ಞ). [ಸಂ.]

ಮಂಗಲಂಬಾಡು, ಮಂಗಳಂಬಾಡು (ಕ್ರಿ). ಶುಭವನ್ನು ಕೋರುವ ಹಾಡನ್ನು ಹಾಡು : ಮುನಿವ್ಯಂದಾರಕನ ಬರವಿನೊಸೆಂಯೊಳ್ ಮಂಗಲಂ [ಪಾಪಾ. ೪೦]ಪಾಡುವಂತಿನಿಯ ದನಿಯಂ ನೆರೆದು ಪೊರೆವ ಪೆಣ್ಣಿಂದಿಗಳುಂ (ಕಂಪ್ರಕೃ. ೩-೦೦೩). **ಮಂಗಳಂಬಾಡು** : ನೆರೆದೊಡನೆ ಮಂಗಳಂ ಬಾಜೆ ಗಾದುಱಗಣಂ ಕರಮೆ ಕಣ್ಗಸೆದಮು ಪರೇಂದ್ರಭವಾಂಗಣಂ (ಅಜಿತ. ೨-೭ ಗದ್ಯ). [ಮಂಗಲ + ಪಾಡು]

ಮಂಗಲಕಾರ (ನಾ). ಮದುವಣಿಗ ; ವರ : ಮಂಗಲಕಾರನನ್ನು ಈ ಮೊದಲು ಪಾನು ನೋಡಲೇ ಇಲ್ಲವಲ್ಲ ? (ಶುಂಗಾ. ೫೦೩).

[ಮಂಗಲ + — ಕಾರ (< — ಕಾಱ)]

ಮಂಗಲಕಾರ್ಯ, ಮಂಗಳಕಾರ್ಯ (ನಾ). ಮಂಗಲಕರವಾದ ಸಮಾರಂಭ ; ಶುಭಕಾರ್ಯ : ಬಂದವರು ಯಾವ ಆತಂಕವೂ ಇಲ್ಲದೆ ಮಂಗಲಕಾರ್ಯಗಳನ್ನು ನೋಡಿ ಅನುಭವಿಸಲಿ ಎಂದು ವಿಧಿಪೂರ್ವಕ (ಪಕ್ಷಿ. ೨೮). **ಮಂಗಳಕಾರ್ಯ** : ಸ್ವಸ್ತಿಶ್ರೀ ಲಕ್ಷ್ಮೀಸೇನಭಟ್ಟಾರಕ ಸ್ವಾಮಿಗಳವರು . . . ಮಂಗಳಕಾರ್ಯವನ್ನು ನೆರವೇರಿಸಿಕೊಟ್ಟರು (ಪಟ್ಟಾಣಾ. III. ೦೦೪). [ಸಂ.]

ಮಂಗಲಕಾಲ (ನಾ). ಶುಭ ಸನ್ನಿವೇಶ ; ಒಳ್ಳೆಯ ಕಾಲ : ಎಲೆ ಸಖಿ, ಮಂಗಲಕಾಲದಲ್ಲಿ ನೀನಿಂತು ರೋದನ ಮಾಡುವುದು ಉಚಿತವಲ್ಲ (ಜಾಭಾರ. ೩೦-೨೦). [ಸಂ.]

ಮಂಗಲಗಾತ್ರ (ನಾ). ಮನೋಹರವಾದ ದೇಹವುಳ್ಳವಳು ; ಸುಂದರಿ : ಕಲಹಂಸಗಮನೆ ಪೂರ್ಣೇಂದುಮುಖಿ ಚಾರುಮಂಗಲ[ಪಾಣಾ. ೪]ಗಾತ್ರ [ಜಾಣಾ. ೨] ಘನ ಶ್ಯಾಮ ಸುಂದರವಿಲಾಸಿ . . . ಕೇಳ್ನಿನ್ನ ದೆಸೆಗಿದೆ ನಮಸ್ಕಾರಗಳ ಪೆರ ಬಲಂ (ಕೃಬಾಣಾ. ೬-೨೯).

[ಸಂ. ಮಂಗಲಗಾತ್ರಾ (ಮಂಗಲ + ಗಾತ್ರ + —)]

ಮಂಗಲತೋರಣ, ಮಂಗಳತೋರಣ (ನಾ). ಮದುವೆ, ಹಬ್ಬ ಮೊದಲಾದ ಶುಭಸಮಾರಂಭಗಳಲ್ಲಿ ಅಲಂಕಾರಕ್ಕಾಗಿ ಬಾಗಿಲು, ಬೀದಿ ಮುಂತಾದೆಡೆಗಳಲ್ಲಿ ಕಟ್ಟುವ ತಳಿರು, ಹೂವು, ಬಟ್ಟೆ ಮೊದಲಾದುವುಗಳ ಮಾಲೆಕೆ : ಶ್ರಿಭುವನಮಂಗಲತೋರಣನಿಭಮಂ ಪ್ರವಚನಮನೆಯ್ದಿ ರೈಸ್ವಂಭರಮಪ್ರಭರಂಕರ್ನಭ್ಯ ತೋನ್ನತವಿಭವರ್ ಭೂತಬಲಿಪುಪ್ಪದಂತಾಚಾರ್ಯರ್ (ಕಂಪ್ರಕೃ. ೦-೦೩).**ಮಂಗಳತೋರಣ** : ಉತ್ಸವದ ಸಮಯದಲ್ಲಿ ಊರ ಬಾಗಿಲಿಗೆ ಮಂಗಳ ತೋರಣ ಕಟ್ಟಿ ಅಲಂಕರಿಸಿದ್ದರು (ಕಾಖ). [ಸಂ.]

ಮಂಗಲಪಾಠಕ. ಮಂಗಳಪಾಠಕ (ನಾ)· ಬಿರುದಾವಳಿಯಂನ್ನು ಹೇಳುವವನು; ಹೊಗಳುಭಟ್ಟ; ವಂದಿ : ಅಗಳ್ ಮಜ್ಜನಾಮರಮಂಗಲ [ಶಾಙಂ. ೪]ಪಾಠಕಮಧುರಗಂಭೀರನಿನದಮಾಲಿಸುತ್ತುಂ(ಜಾಪ್ತಿ. ೭-೩೨ ಪ)· **ಮಂಗಳಪಾಠಕ :** "ಪ್ರಬೋಧಕಾಃ, ಮಗಧಾಃ . . . ಮಂಗಳಪಾಠಕಾಃ _ಈ ೬ ಮಂಗಳಪಾಠಕರ್" (ಜಾಹಮು. ೭೦-೨೯೦); ಮಂಗಳಪಾಠಕರವ ವಾದ್ಯಂಗಳ ರವಮಖಿಳಕಂಚುಕಿಗಳ ವಿಷಾದಂ ಪೊಂಗೆ . . . ಎಸೆದನುದ್ಯ ಟ್ಟಕ್ಷಿತಿಪಾಲಂ (ಜಾಪ್ತಿ. ೨-೨೯); ಒಡನೆ ಮಂಗಳಪಾಠಕರು ಸಂಗಡಿಸಿ ಬಿರಿದುಗಳಂ ಪೊಗಳುತಂ ನಡಯ (ಜಾಪ್ತಿ. ೩೦-೧೩). [ಸಂ.]

ಮಂಗಲಪ್ರಸಾಧನ. ಮಂಗಳಪ್ರಸಾಧನ (ನಾ)· ಶುಭಪ್ರದವಾದ ಅಲಂಕಾರಸಾಮಗ್ರಿ : ಪರಪದಂ· ತದ್ಭವಮಾದ ಸಮಾಸಕ್ಕೆ . . . ಮಂಗಲ[ಶಾಙಂ.೪]ಪ್ರಸಾಧನ _ ಮಂಗಳಮಪನ (ಶಮುಪ್ರ ಕ್ರಮಣಿ). **ಮಂಗಳಪ್ರಸಾಧನ :** ಮುನ್ಮಥನ ಮೋಹನಯಂತ್ರಮಿ ದಪ್ಪ ದಲ್ಲದಂದಿವಿತುವರಂ ಮನಂಗೊಳಿಸದೆಂದಿನಮುಜ್ಜ್ವಳಮಂಗಳ [ಶಾಙಂ.೮]ಪ್ರಸಾಧನಮೆ ಮನೋಜಪಾಣಜಯಸಾಧನಮಾದುದು ಪದ್ಮ ಜಂಭನಾ (ಜಾಪ್ತಿ. ೨-೨೩); ಮಂಗಳಪ್ರಸಾಧನಸಮಾಪನಂ ವಿನೀತನುಂ (ಜಾಂಪ್ತಿ. ೦೦-೧೪ ಪ). [ಸಂ.]

ಮಂಗಲಬೀವಣ್ಣ (ನಾ)· ಒಬ್ಬಾತನ ಹೆಸರು : ಪಾಗತ್ತರನಳಿ ಮಂಗಲ ಬೀವಣ್ಣನೆಮ್ಬೋನು ನಾಗದೇವಮೆಮ್ಬೋನು × × × ಕದಮ್ಬಾರ್ ತುಱುಗಳ್ನೊಳ ಕಾದಿ ಸತ್ಪ (ಎಕ. IX· ಅಕ್ಕ. ೬೩-೬; ಸಂ. ೨೦೦).

[ಮಂಗಲ + ಬೀವ (< ಬೀಮ) + ಅಣ್ಣ.]

ಮಂಗಲಮಣಿ (ನಾ). ಮದುವೆಯಲ್ಲಿ ವರನು ವಧುವಿನ ಕೊರಳಿಗೆ ಕಟ್ಟುವ ಮಾಂಗಲ್ಯದ ಬೆಸ್ತುಬ್ಬ– ತಾಳಿ : ನಿನ್ನ ಕೊರಳಿಗೆ ಮಂಗಲ ಮಣಿಯನ್ನು ಕಟ್ಟಿದ ಗುಂಡಭಟ್ಟ ನಾನು (ಜ.ಪ್ರಲಿ. ೫೦).

[ಮಂಗಲ + ಮಣಿ. / ತಮಿ. ಮಞ್ಞಲಮಣಿ]

ಮಂಗಲವತಿ (ನಾ). ಮುತ್ತೈದೆ: ಸಮಂಗಲಿ : 'ಚಿರಮಂಗಲವತಿ' ಪರಾ. [ಸಂ. ಮಂಗಲವತೀ]

ಮಂಗಲವರಿಗೆ (ನಾ). ಶುಭಸ್ಸೂಚಕ ಶಬ್ದಲ್ಲಿ ಬಾರಿಸುವ ಹಲಗೆ : "ಮಂಗಲದ ವಾದ್ಯದೊಳಗೆ ಮಂಗಲವರಿಗೆಯೆಂಬ ವಾದ್ಯಂ" (ಕಪ್ರ. ೮೩).

[ಮಂಗಲ + ಪರಿಗೆ]

ಮಂಗಲವಾದ್ಯ, ಮಂಗಳವಾದ್ಯ (ನಾ). ಶುಭಸಂದರ್ಭಗಳಲ್ಲಿ ಬಾರಿಸುವ ವಾದ್ಯ ; ಮಂಗಳವನ್ನು ಸೂಚಿಸುವ ವಾದ್ಯ : ಎಸೆದುದು ವಿಜಯಮಂಗಲವಾದ್ಯಮೆತ್ತಲುಂ (ಜಾಭಾ. ೧೦-೧೦೦೬). **ಮಂಗಳವಾದ್ಯ:** ಮಂಗಳವಾದ್ಯದಿಂ ಕಳಸ[ನ್ನಡಿಯಂ . . . ಇದಿರ್ಗೊಳ್ಳುತ್ತಂಗಜ ರೂಪಸ್ಸನ್ನಿಧರನುರ್ವಿಪರಂ ಸ್ವಪುರಪ್ರವೇಶಮಂ ಕಂಗೊಳಿಪಂತು ಮಾಡಿಸಿದಂ (ಕಕಪ್ರ. ೩೦೬); · ತಪ್ಪದೆ ಮಂಗಳವಾದ್ಯದ ಬಲುರವಪ್ಪಸ್ಸಂಪಿದುವೆಂಬು ದಿಸೆಗೆ (ಕಾಸಾ. ೨-೧೦೮). [ಸಂ.]

ಮಂಗಲಸೂತ್ರ, ಮಂಗಳಸೂತ್ರ (ನಾ). ವಿವಾಹಕಾಲದಲ್ಲಿ ವಧುವಿನ ಕೊರಳಿಗೆ ವರನು ಕಟ್ಟುವ ತಾಳಿಯನ್ನು ಪೋಣಿಸಿರುವ ದಾರ : ಹಱ್ಱುದಿನ್ನಸುರೇಂದ್ರವನಿತೆಯ ಮೆಱೆವ ಮಂಗಲಸೂತ್ರ (ಕೃಪಾಂ. ೫-೨-೦೦). **ಮಂಗಳಸೂತ್ರ :** ಭಾಸುರಜ್ಯೋತಿಗಂಗರ್ಘವನೋಸರಿ ಸದಿಂತಿಱಸುತ್ತಿರೆ ವೈಸಜಲಿ ಪೆಂಡಿರಿಯ ಮಂಗಳಸೂತ್ರವದು ಮೊದಲು (ಜಾಪ್ತಿ. ೫೭-೯) ; ಬೇಸರಾಗದೆ ಬಾಳ್ವುದೆಂದು ಮಂಗಳಸೂತ್ರ ಲೇಸಿಪಲಿ ಕಂಠದಲಿ ಬಂಧಿಸುತ ($ಕಕೃಪ್ರ. ೦೩-೫೭). [ಸಂ.]

ಮಂಗಲಾಗುರು (ನಾ). ಒಂದು ಬಗೆಯ ಸುಗಂಧದ್ರವ್ಯ : "ಮಲ್ಲಿಕಾ ಗಂಧ_ ಮಂಗಲಾಗುರು" (ಬಿಕ. ೦೨೦). [ಸಂ.]

ಮಂಗಲಾತ್ರಯೋದಶಿ (ನಾ)· ಒಂದು ಬಗೆಯ ವ್ರತ : ಈ ವಾರಂಗಳಲ್ಲಿ ಮಂಗಲಾತ್ರಯೋದಶಿ ಬಹಾಗ ಆ ಮಂಗಲಾತ್ರಯೋದಶಿ ನಡವ[ದ್ದ]ಂದು ವಿಶೇಷವಾಗಿ ಯಿರಿಸಿದ ಅಕ್ಕಿಮುಡಿ ೨ (ಎಇ· XX· ೪೪-೫೦; ೧೬೬). [ಸಂ. ಮಂಗಲಾತ್ರಯೋದಶೀ]

ಮಂಗಲಾನಕ. ಮಂಗಳಾನಕ (ನಾ). ಮದುವೆ ಮೊದಲಾದ ಶುಭ ಸಮಾರಂಭಗಳಲ್ಲಿ ಬಾರಿಸುವ ತಮಟೆ. _ ಭೇರಿ : ಆಶೀರ್ನಿನಾದ ವಾಕಾದೇಶಮನೆಯ್ದುದುಂ ಮಂಗಲಾನಕರವಮಾಶಾಶಮನಡರ್ದುದುಂ (ಕಂಪಾಪು. ೦೪-೭೨). **ಮಂಗಳಾನಕ :** ಜಿನಪೂಜೋತ್ಸವಮಂಗಳಾ [ಶಾಙಂ· ಲಾ]ನಕಮ್ಮಮುಪ್ರಧ್ವಾನದೊಳ್ . . . ಪೊಂಪುಟಿಪೋಗುತಿರ್ಪ ವೆರಡುಂ ವಿದ್ಯಾಧರಶ್ರೇಣಿಗಳ್ (ಜಾಪ್ತಿ. ೦-೭೦) ; ಮಂಗಳಾನಕರಗಳುಂ ಭೋರ್ಗರೆಯ ಪೊಯಿಮುಟ್ಟು ಬರ್ಪಲ್ಲಿ (ಕೃಕೃತಿ. ೦೪-೦೬ ಪ). [ಸಂ.]

ಮಂಗಲೀಶ (ನಾ)· ಒಬ್ಬಾತನ ಹೆಸರು : ಸ್ವಸ್ತಿಶ್ರೀ ಮತ್[ಪ್ರ(ಪೃ)ಥಿವಿ ವಲ್ಲಭ ಮಂಗ(ಲೀ)ಸ(ಶ)ನಾ ಕಲ್ಪಿಸಿಗೆ ಇತ್ತೊದು (ಜಾ· ೩, ೦೦-೦; ೬೬ಮು ೫೪). [ಸಂ.]

ಮಂಗಲೋತ್ತರ (ನಾ)· ಮೋಕ್ಷವನ್ನು ಪಡೆದವನು ; ಮುಕ್ತ : ನಿರಂಗಸಂಗವನ್ನೆದಿದ ಮಂಗಲೋತ್ತರನಂತೆ ಇದಱಿಂದದ ಸಂಗ ಇದೇ ಹಿಂಗದ ಲಿಂಗೈಕ್ಯ (ಪೋಇಪ್ರ. ೦೨೯-೧೬೨). [ಸಂ.]

ಮಂಗಲ್ಯಕ, ಮಂಗಳ್ಯಕ (ನಾ)· ಒಂದು ಬಗೆಯ ಕಡಲೆ; ಕಾಡುಗಡಲೆ ; ಸಣ್ಣಗಡಲೆ. **ಮಂಗಳ್ಯಕ :** "ಮಂಗಳ್ಯಕಃ, ಮಸೊರಃ ___ ೨ ಚ್ಚಾಂಗಿ ಹೆಸರು, ಸಣ್ಣಬಟ್ಟಗಡಲೆ. ಕರಿಗಡಲೆ ; ಕಾಡುಗಡಲೆ" (ಕರ್ನಾಶ. ೨೬೪).

[ಸಂ.]

ಮಂಗಲ್ಯೆ (ನಾ). ೧. ಬಹಳ ಸುವಾಸನೆಯುಳ್ಳ ಒಂದು ಬಗೆಯ ಗಂಧದ ಮರ. ೨. ಶಕ್ತಿದೇವತೆ ; ದುರ್ಗೆ. ೩. ಒಂದು ಬಗೆಯ ಸುಗಂಧ ದ್ರವ್ಯ. [ಸಂ. ಮಾಂಗಲ್ಯಾ]

ಮಂಗಸಮುದ್ರ (ನಾ). ಒಂದು ಊರಿನ ಹೆಸರು : ಮಂಗಸಮುದ್ರ × × × ಗಣ್ಯಾಗ್ರಣ್ ಕಳನಿಗೆಯ್ದು ಕಾಸಿಯ × × × ಜೀವಿಟ್ಟಿಗೆಯ್ದು ಈವೆ × × × (ಕ್ಯಾಂ. ೦೯೨೩, ೦೫೦-೧ ; ೧೬೬). [?]

ಮಂಗಳ 'ಮಂಗಲ' ನೋ.

ಮಂಗಳಂಬಾಡು 'ಮಂಗಲಂಬಾಡು' ನೋ.

ಮಂಗಳಕರ (ಗು). ಶುಭವನ್ನುಂಟುಮಾಡುವ ; ಶ್ರೇಯಸ್ಕರವಾದ : ಮಂಗಳಕರ ಭುವನಾಧಿಕ ಮಂಗಳನನಂತಮೋಘಾಧಿಯಂ ನಿಧಿಗಳ್ ಸಂಗಡಮೋಲಗಿಸುವುದುಚಿತಂ ಗಡಮೆನೆ ನೆಲಸಿ ಗೋಪುರದೊಳೋಲಗಿಕುಂ (ಜಾಕೃಪು. ೦೬-೬೦). [ಸಂ. ಮಂಗಲಕರ]

ಮಂಗಳಕಷ್ಟ (ನಾ). [ಜ್ಯೋತಿ] ಕುಜಗ್ರಹವು ವಿರುದ್ಧಸ್ಥಾನದಲ್ಲಿರುವಾಗ ಜಾತಕನಿಗೆ ಉಂಟಾಗುವ ತೊಂದರೆ : ಅಂಗಳದಲ್ಲಿ ಜೇತು ಮಂಗಳಕಷ್ಟ ಅದ ಹಾಗೆ (ಗದ). [ಸಂ. ಮಂಗಲಕಷ್ಟ]

ಮಂಗಳಕಾಂಕ್ಷಿ (ನಾ). ಶುಭವನ್ನು ಬಯಸುವ ವ್ಯಕ್ತಿ : ನೀವು ಅವರ ಮಂಗಳಕಾಂಕ್ಷಿಗಳಾಗಿದ್ದರೆ ಅವರಿಗೆ ಸತ್ಪಲಾಮರ್ಶವನ್ನು ಕೊಡುತ್ತಿದ್ದಿರಿ (ಕಕ್ಷಿ. ೬೩). [ಸಂ. ಮಂಗಲಕಾಂಕ್ಷಿನ್]

ಮಂಗಳಕಾರಣ (ಗು). ೧. ಶುಭಕ್ಕೆ ಕಾರಣವಾದ : ಶ್ರೇಯಸ್ಸನ್ನುಂಟು ಮಾಡುವ : ಮಂಗಳಕಾರಣಪಂಚಪದಂಗಳಂ . . . ಅಕ್ಷಯಮಾತ್ರ ಪದಂಗಳನೋದುವುದು ನೆಱಿಯೆ ನಿಶ್ಚಲಮತಿಯಿಂ (ಅಪ್ರ. ೨-೪೪). (ನಾ). ೨. ಶುಭಕಾರಿಯಾದುದು ; ಶ್ರೇಯಸ್ಕರವಾದುದು : ಚಂದನದೆಳಕಲಿರ್ದೋರಣಾಂಗಳವು ಸೂಚಿತ ಮಂಗಳಕಾರಣಂಗಳವು (ಅಪ್ರ. ೧-೩೦ ಕಗ); ಪುರುಷೋತ್ತಮನೀ ಚಳುಕ್ಯವಾರಾಯಣದೇವನೀಗಮಗೆ ಮಂಗಳಕಾರಣಮುತ್ಸವಂಗಳಂ (ಗದಾಮು. ೦-೦). [ಸಂ. ಮಂಗಲಕಾರಣ]

ಮಂಗಳಕಾರ್ಯ 'ಮಂಗಲಕಾರ್ಯ' ನೋ.

ಮಂಗಳಕೇತು (ನಾ). ೧. ಉತ್ಸವಕಾಲದಲ್ಲಿ ಏರಿಸುವ ಶುಭಸೂಚಕವಾದ ಬಾವುಟು. ೨. ನವಗ್ರಹಗಳಲ್ಲಿರುವ ಕುಜ ಮತ್ತು ಕೇತು ಎಂಬ ಎರಡು ಗ್ರಹಗಳು. ೧, ೨ : ಮಂಗಳಕೇತುವಿರಾಜಿತಮಂಗಿಕ್ಯತನೀಲ ಭಾಮು ತಮಸಂ ಪರಿಪಕ್ಷಂಗಳಬುಧಗುರುಶುಕ್ರವಿರಾಜಂಗತಿಪವಗ್ರಹರೀತ ಮುದ್ಯಾಹಗ್ಯಹಂ (ಆಪಂಪ. ೬-೮೫). [ಮಂಗಳ (= ಮಂಗಲ) + ಕೇತು]

ಮಂಗಳಕ್ರಿಯೆ (ನಾ). ಶುಭಸಮಾರಂಭಗಳಲ್ಲಿ ನಡೆಸಬೇಕಾದ ಕೆಲಸ.—ಕಾರ್ಯ್ಯ : ಜನಂಗಳೆಲ್ಲಂ ಮಂಗಳ್[ಕಾಣಂ. ಲ]ಕ್ರಿಯೆಗಳೊಳು ನಂದನ ಮಾಲೆಗಳೊಳು ಮಾಡಲು ತಗುಲ್ದರು (ಕಾಪಂಪು. ೫೪).

[ಸಂ. ಮಂಗಲಕ್ರಿಯಾ]

ಮಂಗಳಗಾಯಕ (ನಾ). ಶುಭಸೂಚಕವಾದ ಹಾಡನ್ನು ಹಾಡುವವನು : ಗೀರ್ವಾಣಮಂಗಳಗಾಯಕರೆ. ಸಂಗೀತಜಾಯಕರಾಗೆ ನಿಳಿಂಪಭಾರತಿಕರ ವಟ್ಟುವರಾಗೆ (ಕಾಪಂಪು. ೦೦-೩೦ ಪ); ಮಂಗಳಗಾಯರ್ . . . ಮಂಗಳ ಪಾಠಕರ್ ಗಣಕಸಂತತಿ ಸಂಭ್ರಮದಿಂ ಪುಗುತ್ತಿರಲ್ ಮಂಗಳಗೇಹಮಂ (ಕಪಂಪು. ೯-೨೨೬). [ಸಂ. ಮಂಗಲಗಾಯಕ]

ಮಂಗಳಗಾಯಿಕೆ (ನಾ). ಶುಭಸೂಚಕವಾದ ಹಾಡನ್ನು ಹಾಡುವವಳು: ಮಂಗಳಗಾಯಿಕಾಮುಖಸರೋರುಹಗೀತಮಧುಪ್ರಸೇವನಾ ಸಂ ಗ ತರಾ ಜ ಧ್ವಂಗತುಳದಿಂ . . . ಒಪ್ಪಿತಿರ್ದುದು ಸರೋವರದಂತೆ ಗೃಹಂ ಮಹೇಶನಾ (ಜಪ್ರಕೃ. ೦೯-೦೦೯) : ಮಂಗಳಗಾಯಿಕಾಮಧುರಗಾನದಿ ನೆಟ್ಟಜನೆಯ್ದೆ ನಿತ್ಯಕೃತ್ಯಂಗಳ ಮಂಗಳಾಚರಣಮಂ ನೆಗಟುಮ್ಪೆ (ಜಪ್ರಕೃ. ೬-೦೫೦). [ಸಂ. ಮಂಗಲಗಾಯಿಕಾ]

ಮಂಗಳಗಾಯಿನಿ (ನಾ). = ಮಂಗಳಗಾಯಿಕೆ : ಮಂಗಳಗಾಯಿ[ಕಾಣಂ. ಖ]ನಿಯತ ಗೀತತಂಗಳನುಪಹಾರಕಂಸುಮವಧುಪಾನವಾ ಸಂಗ ದೊಳರ್ದಳಿಯಂಬಿಗಳಂಗೊರೆರಿಹುರ್ಮಿಡಿಸುತ್ತು ರಾಜಾಂಗಣದೊಳ್ (ಕೃಣಪ. ೩-೦೦೭). [ಸಂ. ಮಂಗಲಗಾಯಿನೀ]

ಮಂಗಳಗೀತ (ನಾ). ಶುಭಕರವಾದ ಹಾಡು : ಯುಗಪದುನ್ಮಿತ ಮಂಗಳ [ಕಾಣಂ. ಲ]ಗೀತೋನ್ಮಿಶ್ರಿತಾನೇಲಯಮಾಗತವೀಲಾಲಾಸ್ಯಪ್ರಸಕ್ತ ಕಾಮಿನೀಕಮನೀಯಮುವಾಗಿ (ಕಂಪ್ರ. ೯-೩೩ ಪ); ಮಂಗಳಗೀತವಾದ್ಯ ನಿನದಂಗಳಶೇಷದಿಶಾಪಟಂಗಳೊಳ್ ಪೊಂಗಿರೆ (ಪರಕೃ. ೦೯-೩೯). [ಸಂ. ಮಂಗಲಗೀತ]

ಮಂಗಳಗೀತಿ (ನಾ). = ಮಂಗಳಗೀತ : ಮಂಗಳಗೀತಿಗಳೊಳ್ಪುಗೆ ಮಂಗಳ ಪಾಠಕರವಂಗಳಿಂಪೆಸೆದಿರೆ. ರಾಜಾಂಗಣದೊಳ್ (ಆಪಂಪ. ೦೨-೨೯). [ಸಂ. ಮಂಗಲಗೀತಿ]

ಮಂಗಳಗುಣ (ನಾ). ೧. ಒಳ್ಳೆಯ ಗುಣ.— ನಡತೆ ; ಸದಾಚಾರ : ಮಾಂಗಳಗುಣಾಪ್ತಿತ ರಘೂಂಗಧರಸೇವಿತ . . . ದಯಾರ್ದ್ರಾಪಾಂಗ ಪೊರೆಯೆನ್ನನು (ಕೃಪಂ. ೧-೦೫೬). ೨. ಒಳ್ಳೆಯ ಗುಣವುಳ್ಳವನು ; ಸದಾಚಾರವುಳ್ಳವನು : ಮಂಗಳಗುಣರೇಃಲಂ ಪರಕಂಗಳ ಹಾರಕರ ದಂಡನಾದಿಗಳಂ ದುಃಖಂಗಳನಳಿವರ್ಪಿಸದೊಡೆ (ಆಪಂ. ೦೦-೦೬). [ಸಂ. ಮಂಗಲಗುಣ]

ಮಂಗಳಗೌರಿವ್ರತ (ನಾ). ಶ್ರಾವಣಮಾಸದ ಪ್ರತಿ ಮಂಗಳವಾರ ಪಡೆಸುವ ಗೌರೀದೇವಿಯ ವ್ರತಾಚರಣೆ : ಅವರ ಮನೆಯಲ್ಲಿ ಮಂಗಳ ಗೌರಿವ್ರತವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ (ಸಂಪ). [ಮಂಗಳ (=ಮಂಗಲ) + ಗೌರಿ+ವ್ರತ]

ಮಂಗಳಚರಿತ (ನಾ). ಪುಣ್ಯಕರವಾದ ನಡವಳಿಕೆಯುಳ್ಳವನು ; ಶುಭ ಚರಿತನಾದವನು : ಕಣ್ಣಬೆರೊಳ್ ಗೋಕುಳಿಮಂ ನಿಲಿಸುತ್ತುಂ ಮಂಗಳ ಚರಿತಂ ಕ್ರೀಡಮಾನನೆನೆದಂ ಕೃಷ್ಣಂ (ಜಗಕೃ. ೮-೪೩). [ಸಂ. ಮಂಗಲಚರಿತ]

ಮಂಗಳತಾಳಿ (ನಾ). ಮದುವೆಯಲ್ಲಿ ವರನು ವಧುವಿನ ಕೊರಳಿಗೆ ಕಟ್ಟುವ ತಾಳಿ.—ಮಾಂಗಲ್ಯ : ಸದಮಲಾರಕ್ಷಸರಿಜಪ್ಪಿ ಮೇಣ್ ಪ್ರಾಗ್ದಿಶಾಸುದತಿ ಧರಿರ್ದ ಮಂಗಳತಾಳಿಯಂತೆ . . . ದಿಗಿದಿರಬಿಂಬಂ ಕಾಣಿಸಿತು ಪ್ರಭಾತದೊಳ್ಕೌತುಕನೆನೆ (ಪಂಪಭಾ. ೨೨-೮೪).

[ಮಂಗಳ (=ಮಂಗಲ) + ತಾಳಿ$_1$ (=ತಾಳಿ$_1$)]

ಮಂಗಳತೂರ್ಯ್ (ನಾ). ಶುಭಸಂದರ್ಭದಲ್ಲಿ ಮಿಡಿಸುವ ವಾದ್ಯ : ಮೊಳಗುವ ಮಂಗಳತೂರ್ಯ್ಯಂಗಳೆಸಿಯೆ (ಜಯಪು. ೬-೮೫ ಪ) ; ಪುಗ್ಗೆ ಕೃತಮಂಗಳತೂರ್ಯ್ಯನಾದಮೆಶ್ಚಲುಂ (ಜಪ್ರಕೃ. ೯-೩೦). [ಸಂ. ಮಂಗಲತೂರ್ಯ]

ಮಂಗಳತೆ (ನಾ). ಸಮೃದ್ಧಿ : ಸಂತೋಷ : ತಿಳುಹಿ . . . ಸಕೃತಿಯ ಮಂಗಳತೆಯನು ಕೈಕೊಂಡು ಹಾಯ್ದನು ಹಂಸೆಯಲಿ ಮುನಿಪ (ಕಪಂಪಾ. ೯-೩-೨೩). [ಸಂ. ಮಂಗಲತಾ]

ಮಂಗಳತೋರಣ 'ಮಂಗಲತೋರಣ' ನೋ.

ಮಂಗಳದ್ರವ್ಯ (ನಾ). ೧. ಶುಭಸಮಾರಂಭಗಳಲ್ಲಿ ಉಪಯೋಗಿಸುವ ಅರಿಸಿನ, ಕುಂಕಮ, ಗಂಧ, ಹೊದಲಾದ ಪದಾರ್ಥಗಳು : ಅಮಲ ರಿಂದ್ರರುಮಭಿಷೇಕಮಂಗಳದ್ರವ್ಯಂಗಳಂ ಕೂಡಿ ಶಚೀದೇವಿ (ಶಕ್ರ)ಕರತಳ ಕ್ಕಮಂ ನೋಡಿ ನೀಡ (ಜಾಪು. ೦೦-೩೬ ಪ); ಕೊರಳೊಳಾಭರಣಮೊಳು . . . ಹುಂಗಳದ್ರವ್ಯದೊಳು ಮಾತಾಳಂಗದೊಳು ಪಿರುತದಿಂ ರಚಿಕದುಬ್ಬು (ಪುಂಗಾ. ೦೩೨-೩೪). ೨. ಹೆಣ್ಣುಮಕ್ಕಳಿಗೆ ಗೌರಿಹಬ್ಬ, ಮೊದಲಾದ ಶುಭಕಾರ್ಯಕ್ಕೆ ಪೂಜಾದ್ರವ್ಯ ತರಲು ತೌರುಮನೆಯವರು ಕೊಡುವ ಹಣ : ತಂಗಿಗೆ ಗೌರೀಹಬ್ಬದ ಮಂಗಳದ್ರವ್ಯ ೧೫ರೂಪಾಯಿ ಗಳನ್ನು ಕಳುಹಿಸಿರುತ್ತೇನೆ (ಪಜಪ). [ಸಂ. ಮಂಗಲದ್ರವ್ಯ]

ಮಂಗಳಧಾರಿಣಿ (ನಾ). (ಶುಭ ಸಂದರ್ಭಗಳಲ್ಲಿ) ಮಂಗಳದ್ರವ್ಯಗಳನ್ನು ಹಿಡಿದಿರುವವಳು ; ಸುವಾಂಗಲಿ : ಮಂಗಳ[ಕಾಣಂ. ಲ]ಮನೆ ಪಾಡುತ್ತುಂ ಮಂಗಳ[ಕಾಣಂ. ಲ]ಧಾರಿಣಿಯರಾಗಿ ಮುಂದಂ ಪಡ ವಾಶಾಂಗವೆಯರಿಂದೆ ದಿವಿಜೇಂದ್ರಾಂಗನೆ ಕರಮೆಸದು ಹಂಪಗತಿಬೆರೊಳ್ ಬಂದಳ್ (ಆಪಂ. ೬-೨೬) ; ಆರ್ಚಾಸಿದರಷ್ಟವಿಧದರ್ಚನೆಯಿಂ ಮಂಗಳ ಧಾರಿಣಿಯರ್ ಶಕ್ರಾಂಗನೆಯುಂ . ನೆಗಟ್ಟ ನಾಗದೇವತಾಂಗನೆಯುಂ (ಜಪ್ರಕೃ. ೯-೬೪). [ಸಂ. ಮಂಗಲಧಾರಿಣೀ]

ಮಂಗಳನಿಲಯ, ಮಂಗಳನಿಳಯ (ನಾ). ಶ್ರೇಯಸ್ಸಿಗೆ ನೆಲೆಯಾಗಿರುವವನು : ಸುಶ್ರಾವ್ಯಚರಿತ್ರನುಳಮಂಗಳನಿಲಯಂ (ಜಪ್ರಕೃ. ೬-೨೦). ಮಂಗಳನಿಳಯಂ : ಮಂಗಳನಿಳಯಪ ಪದಪದ್ಮಂಗಳನರ್ಚಾಸಿದರಷ್ಟವಿಧ ದರ್ಚನೆಯಿಂ (ಜಪ್ರಕೃ. ೯-೬೪). [ಸಂ. ಮಂಗಲನಿಲಯ]

ಮಂಗಳನಿಳಯ 'ಮಂಗಳನಿಲಯ' ನೋ.

ಮಂಗಳಪಾಠಕ 'ಮಂಗಲಪಾಠಕ' ನೋ.

ಮಂಗಳಪ್ರಸಾಧನ 'ಮಂಗಲಪ್ರಸಾಧನ' ನೋ.

ಮಂಗಳಬೇರ (ನಾ). ಹವಳದ ಬಣ್ಣ ಮತ್ತು ಬಿಳುಪು ಮಿಶ್ರವಾದ ಬಣ್ಣದ ಒಂದು ಜಾತಿಯ ಕುದುರೆ : ಪವಳಾಂಗ ತನುಚ್ಛವಿ ಬೆಳ್ಪಿರದೆ ಮಾದುದು ನೋಡೆ ಮಂಗಳಬೇರಂ (ಜಪ್ರಾ. ೩-೦೩). [ಮಂಗಳ (= ಮಾಂಗಲ) + ಬೇರ್]

ಮಂಗಳಭೂಷಣ (ನಾ). = ಮಂಗಲಪ್ರಸಾಧನ : ಮಂಗಳಭೂಷಣಂ ಗಳಿನಲಂಕರಿಸಿರ್ದಿಡೆಯೂಡುತಿರ್ಪವಳ್ . . . ನಿಜೇಕಂಗಿದಿರೆಬ್ಬು ಬಂದು ಮಜಿರಿಲ್ ಧವಳೇಕ್ಷಣೆ ತನ್ನ ನಲ್ಮೆಯಂ (ಕೃಂಗಣ. ೯-೬೪).

[ಸಂ. ಮಂಗಲಭೂಷಣ]

ಮಂಗಳಮಂಡನ (ನಾ). = ಮಂಗಲಪ್ರಸಾಧನ : ಮಂಗಳಮಂಡನಕ್ಕೆ ನೆಲೆಯಾದ ಕುಮಾರನ ಭೂಷಣಾಂಶು ದಿವ್ಯಾಂಗದ ಕಾಂತಿಯೊಳ್ ತೊಡದುಳ್

ರಂಜಿಸಲಾಜವೆ (ಕ್ಷತ್ರಿ. ೦೨-೦೦೯). [ಸಂ. ಮಂಗಲಮಂಡಪ]

ಮಂಗಳಮಜ್ಜನ (ನಾ). ಶುಭಕಾರ್ಯದ ಅಂಗವಾಗಿ ಮಾಡುವ ಸ್ನಾನ: ಶ್ರೀರಮೇಶಪ್ರಿಯಂಗಮ್ಮುತಮಂಗಳಮಜ್ಜನಮಂ ಜನಂಗೆ ವಿಸ್ತಾರಿಸಿ (ಗುಣಭ. ೦೦-೮೫); ಪರಮಮಂಗಳಮಜ್ಜನವಾಭರಣವಸನಾದಿಗಳ ನೀ ಸ್ವೀಕರಿಸುವೇಹುದು (ಕಾಂಡ. ೧೧-೦). [ಸಂ. ಮಂಗಲಮಜ್ಜನ]

ಮಂಗಳಮುಖಿ (ನಾ). ಶುಭಕರವಾದ ಮುಖವಿಳ್ಳವಳು; ಕಲ್ಯಾಣಿ : ಮಂಗಳಮುಖಿ ಮಾನಿನಿ . . . ಗಿರಿಸುತೆಯೆಸೆದಳ್ (ನಂಳ. ೩-೦೦).

[ಸಂ. ಮಂಗಲಮುಖೀ (ಮಂಗಲ + ಮುಖ + —)]

ಮಂಗಳಮುಹೂರ್ತ (ನಾ). ಶುಭಗಳಿಗೆ ಮತ್ತು ಆ ಗಳಿಗೆಯಲ್ಲಿ ನಡೆಸುವ ಶುಭಕಾರ್ಯ : ಹರುಷದಲಿ ಮಂಗಳಮುಹೂರ್ತವ ಮಾಡಿಯೆಂದನು (ಕಾಮ್ಯ. ೦೦-೭೭); ಮಂಗಳಮುಹೂರ್ತವನು ಜನಕತಿಗೆ ತಿಳುಹಿಸುತ . . . ಬರುತಿಹುದು (ಜೈಮಿ. ೨-೦೨). [ಸಂ. ಮಂಗಲಮುಹೂರ್ತ]

ಮಂಗಳಮೂರುತಿ (ನಾ). ಶುಭಕರವಾದ ಸ್ವರೂಪವುಳ್ಳವನು : ಗಂಗೆ ನೀ ಪಾತಾಳಕೆ ಹೊಗ ಬಂದಿದಿ ಹೀಗೆ ಮಂಗಳಮೂರುತಿ ಮಹರಾಯನ ಜಡೆ ಭಟ್ಟು (ಸಿದ್ಧ. ೨-೭೩). [ಮಂಗಳ (=ಮಂಗಲ) + ಮೂರುತಿ]

ಮಂಗಳಮೂರ್ತಿ (ನಾ). ೧. ಶುಭಕರವಾದ ಆಕಾರ.—ಸ್ವರೂಪ : ದೇವರ ಮಂಗಳಮೂರ್ತಿಯನ್ನು ಹೋಗಿ ಅನಂದಪರವಶನಾದನು (ಕ.ಚ). ೨. ಶುಭಕರವಾದ ಸ್ವರೂಪವುಳ್ಳ ವ್ಯಕ್ತಿ : ಸಂಗವೆರಡುಂಟು ಒಂದ ದಿಡು ಒಂದ ಹಿಡಿ ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ (ಬಸ. ೨೭೮); ಮಂಗಳಮೂರ್ತಿ ತಾಪಸಿರೂಪಿನಿಂ . . . ತಿವಧೋಯೆಸಲ್ ತಿರ್ದಪೆಂಬರ್ ಭೂಸುರಂ (ಜೈಮಿ. ೩-೪೬); ಇದುಮಂಗಳಂ . . . ಮೂರನ್ನ ಪಡೆದ ಮಂಗಳಮೂರ್ತಿಗೆ (ಕೃಷ್ಣ. ೦-೨೬೩-೨).

[ಸಂ. ಮಂಗಲಮೂರ್ತಿ]

ಮಂಗಳವಡೆ (ಕ್ರಿ). ಸೊಬಗನ್ನು ಹೊಂದು ; ಚೆಲುವಾಗು : ಸಕಯಿಲ್ಲ ದಾವಗಮುರಿದ ಕೆಂಗಿಡಿಯು ಮಾಲಿಕೆಯಂತೆ ಮಂಗಳವಡದ ನಿಖರಕ್ಷಂಗಳ ರಚಿಸಿದ ಮುದ್ರಿತೆ ಮಂಚಿಕೆಯಿಟ್ಟಿರು ಬೆರಲ್ಗಳಗೆ (ಕೋಡಿ. ೨೬-೨೬).

[ಮಂಗಳ (= ಮಂಗಲ) + ಪಡ್]

ಮಂಗಳವರೆ ' ಮಂಗಳವಜೆ ' ನೋ.

ಮಂಗಳವಸದನ (ನಾ). = ಮಂಗಲಪ್ರಸಾಧನ : ಓರೊರ್ವರಾತಿಯ ರೂಪಂ ವಕ್ಕೊಕ್ಕಿಯೊಳ್ ಪೊಗಲ್ದು ಮಂಗಳವಸದನಮಿತ್ತಿಯುಂ (ಜೈಮಿ. ೬-೨೬ ಪ) ; ಮಂಗಳವಸನದಿಂದ ಮವಂಗೊಳಿಸುತಮಿರ್ದು ಪಡೆಯ ಕಾಪಂ ಪಡವಳ್ಳಂಗೆ ಸಮರ್ಪಿಸಿ (ಜಾಕ್ಷ. ೦೦-೧೮).

[ಮಂಗಳ (= ಮಂಗಲ) + ಪದನ]

ಮಂಗಳವಸದನಂಗೊಳ್ (ಕ್ರಿ). ಶುಭಪ್ರಸಂಗಕ್ಕೆ ಉಚಿತವಾದ ವೇಷ ಭೂಷಣಗಳನ್ನು ಧರಿಸು : ಪಾಂಡವರಯ್ವರುಮುನ್ಮೀಲಿತನಯನರಾಗಿ ವಿಶ್ವವಿಯಮಂಗಳಂ ನಿರ್ವರ್ತಿಸಿ ಮಂಗಳವಸದನಂಗೊಂಡು • (ಕೃಷ್ಣ. ೨-೧೬ ಪ) ; ಸಾಜಿಸ್ಯಕಂದಾಂತರಂ ವಿಜಯಪ್ರಸ್ಥಾನೋದ್ಯುಕ್ತಂ ಮಂಗಳವಸದನಂಗೊಂಡು (ಗುಣಭ. ೦೦-೦೮೨ ಪ).

[ಮಂಗಳವಸದನ + ಕೊಳ್]

ಮಂಗಳವಸ್ತು (ನಾ). = ಮಂಗಳದ್ರವ್ಯ ೧ : ಮಂಗಳವಸ್ತುಗಳಂ ದೇವಾಂಗನೆಯರ್ಮಾಡಿ ಗರ್ಭಕೋಧಸಮಂ (ಕುಶ. ೦೦-೧೪); ಗೌರಿಯು ಮುಪ್ಪಿಯ ಮಗಳೆಂದು . . . ಆದರದಿಂದ ಪೂಜಿಸುಳ್ಳ. ಕುಂಭಮ, ಅಂಜಿಣ, ಪತ್ಯಲ ಮೊದಲಾದ ಮಂಗಳವಸ್ತುಗಳನ್ನ ಇಡಿಸಹೋಗಿದ್ದಾರೆ ನಮ್ಮ ಹೆಣ್ಣುಮಕ್ಕಳು (ಕ್ಷತ್ರಿ. ೦೬೮). [ಸಂ. ಮಂಗಲವಸ್ತು]

ಮಂಗಳವಜೆ, ಮಂಗಳವರೆ (ನಾ). = ಮಂಗಲಾನಕ : ಮಂಗಳವಜೆಗಳ್ . . . ಶ್ವೇತಚ್ಛತ್ರಂಗಳಮರ್ದಿಸೆಯ ಕರ್ಣಂಗೊಂಗಮಹೀತಳ ವಿಭೂತಿಯಂ ನೆಱೆಯಿಸುತ್ತಂ (ಜೈಮಿ. ೩-೪೧) ; ಪೊಂಗಳಿದ ವೀರಂ ತಮಿ ಮಂಗಳವಜೆಗಳಿಸೆಯೆ ಧಾರೆಯನೆಱೆಯಲೆಂದಿರ್ದುದುಂ (ಪಜಿತ್ರ. ೯-೩೩೭). **ಮಂಗಳವರೆ** : ಮಂಗಳವರೆಯ ನಾದಕ್ಕೆ ನಡನಡಯು ನಡುವಿನಗೆ (ಕೃಷ್ಣಚ. ೨೦-೬೪೬). [ಮಂಗಳ (= ಮಂಗಲ) + ಪಜ್]

ಮಂಗಳವಾಚಕ (ನಾ). ಶುಭದ ಅರ್ಥವನ್ನು ಸೂಚಿಸುವ ಶಬ್ದ : ಓಂ, ಶ್ರೀ ಇತ್ಯಾದಿ ಶಬ್ದಗಳು : ಭಾರತೀಯರ ಪ್ರಕಾರ ಯಾವ ಕೃತಿಯೇ ಆಗಲಿ ಮಂಗಳಶ್ಲೋಕದಿಂದ, ಅಥವಾ ಮಂಗಳವಾಚಕದಿಂದ ಆರಂಭವಾಗಬೇಕು (ಕಾಂಡ. ೧೬). [ಸಂ. ಮಂಗಲವಾಚಕ]

ಮಂಗಳವಾದ್ಯ 'ಮಂಗಲವಾದ್ಯ' ನೋ.

ಮಂಗಳವಾರ (ನಾ). ವಾರದ ಏಳುದಿನಗಳಲ್ಲಿ ಮೂರನೆಯ ದಿನ ; ಕುಜನು ಅಧಿದೇವತೆಯಾಗಿರುವ ವಾರ ; ಕುಜವಾರ : ಆ ದಿನವೇ ಆದಿತ್ಯವಾರ ಸೋಮವಾರ ಮಂಗಳವಾರ . . . ಶನಿವಾರವೆಂದೇಳು ತೆಱ ನಾಗಿಹುದು (ಜೈಮಿ. ೫೦). ; ಹೇವಿಳಂಬಿನಾಮಸಂವತ್ಸರದ ಜ್ಯೇಷ್ಠ ಬ ಳ. ಮಂಗಳವಾರಕ್ಕೆ (ಪ್ರಾಚ. ೦೬೪೧, ೩೬-೨ ; ೧೫೧). [ಸಂ. ಮಂಗಲವಾರ]

ಮಂಗಳವಿಧಿ (ನಾ)- ವಿಯುಮಿತ ಕಾಲದಲ್ಲಿ ಮಾಡಬೇಕಾದ ಶುಭಕಾರ್ಯ; ಸ್ನಾನ, ಪೂಜೆ ಮೊದಲಾದುವು : ಕನಕಾದ್ರಿಪಿಪಾವಳಪರ್ವತಸ್ಥಲಯಮೆಳೆ ದಿವಿಜದುಂದುಭಿ ಶಂಖಿಸ್ವನದೊಡನೆ ಮೊಬಗಿರುವು ಜಿನಜಾ ಭಾಧಮವಪ್ರಸಂಗಮಂಗಳವಿಧಿಯೊಳ್ (ಜಾಂಡ. ೦೦-೪೧); ನೃಪನೊಡರಿಸಿದಂ ದೇಗಂ ಪ್ರತ್ಯೂಷಸ್ಯತ್ಯಮಂಗಳವಿಧಿಯಂ (ಕೃಷ್ಣ. ೯-೨೯).

[ಸಂ. ಮಂಗಲವಿಧಿ]

ಮಂಗಳವೇದಿ (ನಾ)- ಶುಭಕಾರ್ಯಕ್ಕಾಗಿ ನಿರ್ಮಿಸಿದ ಜಗಲಿ_ಕಟ್ಟೆ : ಸುತ್ತಿದ ಚಿತ್ರಕಾಂಡಪಮಿಕ್ಕಿದ ಮಂಗಳವೇದಿ . . . ಕನ್ಯೆಯಂ ತಿರ್ದುವಾ ಮಂಟಪದೊಳ್ (ಕೃಷ್ಣ. ೯-೬೨). [ಸಂ. ಮಂಗಲವೇದಿ]

ಮಂಗಳಸಿಖಿ (ನಾ)- ಮದುವೆ ಮೊದಲಾದ ಶುಭಕಾಲದಲ್ಲಿ ಹೋಮ ಕ್ಕಾಗಿ ಸಿದ್ಧಪಡಿಸಿದ ಅಗ್ನಿ : ಮಂಗಳಸಿಖಿಗಳ್ ಜಾತ್ಯಶ್ವಂಗಳ ಪೊಲ್ಲರೆದು ದಕ್ಷಿಣಾಮರ್ತವಿಕಾಸಂಗಳನೇಂ ಧನದಪ ರತ್ನಂಗಳ ಪರಂಗಳಂತೆ ಜಲಜಲಿಸಿದುವೋ (ಕುಶ. ೦೦-೯೯). [ಸಂ. ಮಂಗಲಸಿಖಿನ್]

ಮಂಗಳಶ್ಲೋಕ (ನಾ). ಕಾವ್ಯ. ನಾಟಕ ಮೊದಲಾದುವುಗಳ ಪ್ರಾರಂಭದಲ್ಲಿ ಅಥವಾ ಮುಕ್ತಾಯದಲ್ಲಿ ಮಾಡುವ ದೇವತಾಸ್ತುತಿರೂಪವಾದ ಪದ್ಯ : ಅಂತು ಸೂಕ್ಷ್ಮಧಾರನು ಈ ಮಂಗಳಶ್ಲೋಕಮನ್ನು ಹೇಳಿ . . . ಹೋಗುವನು (ಕೃಷ್ಣ. ೨೮೨) ; ಭಾರತೀಯರ ಪ್ರಕಾರ ಯಾವ ಕೃತಿಯೇ ಆಗಲಿ ಮಂಗಳಶ್ಲೋಕದಿಂದ ಅಥವಾ ಮಂಗಳವಾಚಕದಿಂದ ಆರಂಭವಾಗಬೇಕು (ಕಾಂಡ. ೧೬). [ಸಂ. ಮಂಗಲಶ್ಲೋಕ]

ಮಂಗಳಸಮಜ್ಜನ (ನಾ). = ಮಂಗಳಮಜ್ಜನ : ಮಳಯಜಮಿಶ್ರತೀರ್ಥ ಜಲಧಾರೆಗಳಂ ಶತಶಾಂತಶಾಂತಮಂಗಳಕಲಶಾಶುಧಾರೆಗಳಿನಿರ್ಮಾಡಿಸಿತ್ತು ವಿವಾಹಮಮ್ಮಿಮಂಗಳಸಮಂ (ಹರಿವಂ. ೪-೪೯) ; ಮಂಗಳಸಮಜ್ಜನಾನಂತರ ಮಂಗಿಕ್ಯಶಶುಭವಿಭೂಷಣಂ ಮಾಡಿ (ಪಾಂಡ್ಯ. ೨-೦೬೯).

[ಸಂ. ಮಂಗಲಸಮಜ್ಜನ]

ಮಂಗಳಸಾಧನ (ನಾ)-= ಮಂಗಳದ್ರವ್ಯ ೧ : ನೆರೆದ ಮಂಗಳಸಾಧನಂಗಳಂ ಸರಸಗೀತಮಂ ಪಾಡುವ ಗಾಯಕರಿಂ. . . . ಪಸದನಂಬಡೆದ ಪೊಸ ಪುಪರ್ವದರೊಸಗೆ ಮಿಗೆ ಮಿಸುಗುತ್ತಿರ್ದುದು (ಜಾಮಿ. ೩-೭ ಪ).

[ಸಂ. ಮಂಗಲಸಾಧನ]

ಮಂಗಳಸೂಕ್ಷ್ಮ (ನಾ)- ಶುಭವನ್ನು ಕೋರುವ ಮಂತ್ರ : ವೀರ ಸೇನೆಯನಿಕ್ಕೆ ರಾಯನ ನಾರಿ ಪರಿಪರಿಯಳಿಪವಿಪ್ರರ ಚಾರು ಜಾತರ್ವೇದ ಮಂಗಳಸೂಕ್ಷ್ಮಘೋಷದಲಿ ಕೇರಡೇಜಾದಸುರಾಧಿ (ಭಾಷ್ಯ. ೦೦-೦೨).

[ಸಂ. ಮಂಗಲಸೂಕ್ಷ್ಮ]

ಮಂಗಳಸೂತ್ರ ' ಮಂಗಲಸೂತ್ರ ' ನೋ.

ಮಂಗಳಾಂಗ (ನಾ). ಶುಭಕರವಾದ ದೇಹವುಳ್ಳವನು ; ಪವಿತ್ರವಾದ ಶರೀರವುಳ್ಳವನು : 'ಮಂಗಳಾಂಗನು ಮತ್ತೆ ಕರುಣಾಪಾಂಗದಲಿ ನೋಡುತ್ತ ವಿಸ್ಮಿತಾಂಗಭಕ್ತಿಗೆ ಮೆಚ್ಚಿದೆನು ಎನಲು (ಪಡ್ಡಿ.೨೭-೩೭) ; ಗವಸಾವನು, ಕಬ್ಬದ ರಕ್ಷಣೆಯಿಂದ ಮಂಗಳಾಂಗನಾದ ನನ್ನ ಮಗನನ್ನು ಮುಟ್ಟಿ, ಅವರಿಬ್ಬದ್ದನನ್ನು ಮಾಡುವನು ? (ಪಕ್ಷಾಂ. ೧೦೯-೨). [ಸಂ. ಮಂಗಲಾಂಗ]

ಮಂಗಳಾಂಗಿ (ನಾ). ಶುಭಲಕ್ಷಣಗಳಿಂದ ಕೂಡಿದ ದೇಹವುಳ್ಳವಳು : ಸುಂದರಿ : ಮಂಗಳಾಂಗಿ ಮಂಜುಳಾಂಬುಜಾಸ್ಯೆ . . . ರಕ್ಷಿಸೆನ್ನನದ್ರಿರಾಟ್ಸುತೇ (ಕ್ಷತ್ರ. ೨೬-೩೦). [ಸಂ. ಮಂಗಲಾಂಗೀ (ಮಂಗಲ + ಅಂಗ + —) .]

ಮಂಗಳಾಚರಣ (ನಾ). ಶುಭಕಾರ್ಯ ; ಮಂಗಳಕಾರ್ಯ : ಮಂಗಳ ಗಾಯಿಕಾಮಧುರಗಾನದಿವೆಜ್ಜ ಜನಯ್ದಿ ನಿಕ್ಕಳ್ಕಿಕ್ಕಂಗಳ ಮಂಗಳಾಚರಣಮಂ ಸೆಗುತ್ತೆ (ಕುಕ್ಷ. ೬-೦೫೭). [ಸಂ. ಮಾಂಗಲಾಚರಣ]

ಮಂಗಳಾಚ್ಚಾರ (ನಾ). = ಮಂಗಳಾಚರಣ : ಆಗಳಾ ಗರ್ಭಸ್ಖಲನ ಸಮಯದೆ ಭಾತುಸದಮುಮಾಗೆ ಚತುರ್ಥದಿವಸಮನಂತರ ಮಜ್ಜನಂ ಬೊಳ್ಕು ಮಂಗಳಾಚಾರಮನಪ್ಪುಕೆಯ್ದು (ಪಗಾ. ೬-೬೦ ೪).

[ಸಂ. ಮಂಗಲಾಚಾರ]

ಮಂಗಳಾನಕ 'ಮಂಗಲಾನಕ' ನೋ.

ಮಂಗಳಾಮುಲೇಪ (ನಾ). ಶುಭಕರವಾದ ಲೇಪನದ್ರವ್ಯ ; ಅಕ್ಷರಶ್ಲಿ ನಾನೂ ಕೂಡ ಶಂಖಕ್ಕೆಗೋಸ್ಕರ ಗೋರೋಚನ, ತೀರ್ಥಮೃತ್ತಿಕೆ, ದೂರ್ವಾತಿಸಲಯಗಳ ಮಂಗಳಾನುಲೇಪಗಳನ್ನು ಮಾಡುವೆನು (ಪಕ್ಷಾಂ. ೪೯-೫೦). [ಸಂ. ಮಂಗಲಾನುಲೇಪ]

ಮಂಗಳಾರತಿ (ನಾ). ೧. ದೇವರ ಪೂಜೆಯ ಕಾಲದಲ್ಲಿ ಬತ್ತಿ, ಕರ್ಪೂರ ಗಳನ್ನು ಹಚ್ಚಿ ಬೆಳಗುವುದು : ಚತ್ಯದೊಳು ಪೂಜೆಯಚ್ಚೊತ್ತಿ ದಂತರ್ಜುಸುತೆ . . , ಮಂಗಳಾರತಿಯಿತ್ತು ಭವರ ಸೀಗುರಿಯಿತ್ತ (ಪಜ. ೦೬-೦೦); ಕಲು ಬಗೆ ಪಂಚವುಂವ ಜ್ಯೋತಿಯ ಮಂಗಳಾರತಿಯುವಿಡಲು (ಪಪಂಚ. ೫೦-೫೪). ೨. ಶುಭೋತ್ಸವಗಳಲ್ಲಿ ಮುತ್ತೈದೆಯರು ಹಿಡಿದುಕೊಳ್ಳುವ ದೀಪಾರತಿ : ತಮತಮಗೆ ಫಳವಿಡಿದು ಮಂಗಳಾರತಿ ವಿಡಿದು ಸೇಸೆವಿಡಿದಮರಕಾಮಿನಿಯರ್ಕೆದೆ (ಕಕ್ಕಣ. ೬-೩೬). ೩. (ಅಲಂ) ಅಪಮಾನ ; ಮುಖಭಂಗ : ರಾಯರಿಗೆ ಮಂಗಳಾರತಿಯಾಗಿಬ್ಬಂ ವಿನಾಶ್ಚರ್ಯ ? (ಪಪ:೫. ೬); ಕೆಣಕಿದರೆ ಮಾಡುತೀನಿ ಅವಾಗೆ ಮಂಗಳಾರತಿ ! (ಪಪಥಗಣ. ೨೦೬). [ಮಂಗಳ (= ಮಂಗಲ) + ಆರತಿ]

ಮಂಗಳಾಲಂಕಾರ (ನಾ). ಶುಭಸನ್ನಿವೇಶಕ್ಕೆ ಉಚಿತವಾದ ವೇಷ ಭೂಷಣ : ಆನಂತರಂ ಭಗವಜ್ಜನೇಂದ್ರಪೂಜಾವಿವಿಧಮಂಗಳವಾದ್ಯಾರಂಭಿಸಿ ಮಂಗಳಾಲಂಕಾರಾಲಂಕೃತೆಯಾಗಿ (ಕುಕ್ಕ. ೬-೦೦೭ ೪).

[ಸಂ. ಮಂಗಲಾಲಂಕಾರ]

ಮಂಗಳಾಷ್ಟಕ (ನಾ). ಮದುವೆ, ಮುಂಜಿ ಮೊದಲಾದ ಶುಭ ಮುಹೂರ್ತದಲ್ಲಿ ಸಾಂಪ್ರದಾಯಿಕವಾಗಿ ಹೇಳುವ ಶುಭವನ್ನು ಕೋರುವ ಎಂಟು ಶ್ಲೋಕಗಳು ; ಪ್ರ ತಿವು 'ಕುರ್ಯಾತ್ ಸದಾ ಮಂಗಳಂ' ಎಂದು ಕೊನೆಗಾಣುತ್ತವೆ : ಮಾಂಗಲ್ಯಧಾರಣೆಯು ಸಮಯದಲ್ಲಿ ಮಂಗಳಾಷ್ಟಕ ಹೇಳುವುದು ಪದ್ಧತಿ (ಪಟಿ).

[ಸಂ. ಮಂಗಲಾಷ್ಟಕ]

ಮಂಗಳೆ (ನಾ). ದುರ್ಗೆ; ಪಾರ್ವತಿ : ಮಾನ್ಯ ಮೂನಿನಿ ಮಹನೀಯು ಮಂಗಳೆ ಮಹೇಶ್ವರಿ (ಪಾಪಪ. ೫೩-೦೬). [ಸಂ. ಮಂಗಲಾ]

ಮಂಗಳ್ಯಕ 'ಮಂಗಲ್ಯಕ' ನೋ.

ಮಂಗಳ್ಳಿ 'ಮಂಗುಳಿವಳ್ಳಿ' ನೋ.

ಮಂಗಾಟ (ನಾ). ೧. ಕಪಿಯ ಆಟ ; ಕೋತಿಚೇಷ್ಟೆ. ೨. (ಅಲಂ) ಬುದ್ಧಿಹೀನತೆಯಿಂದ ಮಾಡಿದ ಕೆಲಸ ; ವಿವೇಕವಿಲ್ಲದ ಮೂಡುವ ಕಾರ್ಯ: ಪ್ಯಾಂಗಾರೆ ಕುಣಿಕುಣಿದು ಮಂಗಾಟ ನಡದಾಗ ಅಂಗಾತ ಬಿಕ್ಕೋ ಪೆಗಲಲಿ ಎತ್ಕೋ (ಪಾಪಲೀ. ೬೪-೨೬) ; ಕಾಯಿದೆ ನಮ್ಮ ಕಡೆಗೆ ಇರುವುದೆಂದು ಮಂಗಾಟ ನಡಸುವಾರದು (ಪಜ್ಞಪ್ರ. ೨೧೧).

[ಮಂಗ + ಆಟ]

ಮಂಗಾಟಿಕೆ (ನಾ). = ಮಂಗಾಟ ೨ : ಆತ ಮಂಗಾಟಿಕೆ ಮಾಡದೆ ಹಳೆಯ ಸಂಪ್ರದಾಯವನ್ನು ಉಳಿಸಿಕೊಂಡು ಬರಬೇಕಾದುದು ಅನಿವಾರ್ಯವಾಗು ತ್ತದೆ (ಪಜ್ಞಪ್ರ. ೦೧೦). [ಮಂಗ + ಆಟಿಕೆ]

ಮಂಗಾಡಿಸು (ಕ್ರಿ). (ಅಲಂ) ಕಪಿಯಂತೆ ಕುಣಿಸು ; ತನಗೆ ಇಷ್ಟಬಂದಂ ದನ್ನು ಮತ್ತೊಬ್ಬರಿಂದ ಮಾಡಿಸು : "ನನ್ನನ್ನು ಮಂಗಾಡಿಸಿ ಬಿಟ್ಟ" ಎಂದು ಕಿಟ್ಟಪ್ಪ ಮಾನ್ಯರು ನಾಲ್ಕು ಜನರ ಮುಂದೆ ದೂರಿ, ತಮ್ಮ ಮರ್ಯಾದೆಯನ್ನು ಉಳಿಸಿಕೊಂಡರು (ಪಜಾಪಾ. ೦೩). [ಮಂಗ + ಆಡಿಸು]

ಮಂಗಾರೆ 'ಮಗ್ಗಾರೆ' ನೋ.

ಮಂಗಾರೆಮುಳ್ಳು (ನಾ). (ದಟ್ಟವಾಗಿಯೂ ಒರಟಾಗಿಯೂ ಇರುವ ಮುಳ್ಳುಗಳುಳ್ಳ) ಒಂದು ಬಗೆಯ ಪೊದರು ಗಿಡ : (೬).

[ಮಂಗಾರೆ (< ಮಗ್ಗಾರ) + ಮುಳ್ಳು (< ಮುಳ್)]

ಮಂಗಿ (ನಾ). ೧. ಹೆಣ್ಣುಕಪಿ : ಆ ಮಂಗಿ ಮರಿಯನ್ನು ಎತ್ತಿಕೊಂಡು ಕೊಬೆಯಿಂದ ಕೊಂಬೆಗೆ ನೆಗುಮುತ್ತಿದೆ (ಪಜ್ಞ). ೨. (ಅಲಂ) ತಿಳಿವಳಿಕೆ ಇಲ್ಲದವಳು : ಅವಳು ಶುದ್ಧ ಮಂಗಿ, ಹೊಲಮನೆಯನ್ನೆಲ್ಲಾ ಅಡ್ಡಾದಿಡ್ಡಿಯಾಗಿ ಮಾಡಿಬಿಟ್ಟಿಳು (ಪಜ್ಞ). [ಮಂಗ + — ೀ]

ಮಂಗಿನಿ (ನಾ). ಹಡಗು; ನೌಕೆ. [ಸಂ. ಮಾಂಗಿನೀ]

ಮಂಗುರವಳ್ಳಿ 'ಮಂಗುಜುವಳ್ಳಿ' ನೋ.

ಮಂಗುಜಿವಳ್ಳಿ 'ಮಂಗುಜುವಳ್ಳಿ' ನೋ.

ಮಂಗುಜುವಳ್ಳಿ, ಮಂಗರವಳ್ಳಿ, ಮಂಗಜಿವಳ್ಳಿ, ಮಂಗುರವಳ್ಳಿ, ಮಂಗುಜಿವಳ್ಳಿ, ಮೊರಿಗರವಳ್ಳಿ (ನಾ). (ಚಕ್ಕುಲಿ ಮೊದಲಾದ ಭಕ್ಷ್ಯಗಳಿಗೆ ಸೇರಿಸುವ, ಚಟ್ನಿ ಮೊದಲಾದ ಅಡಿಗೆಗೂ ಮತ್ತು ಔಷಧಗಳಿಗೂ ಉಪಯೋಗಿಸುವ) ಒಂದು ಬಗೆಯ ಬಳ್ಳಿ ; ನಾಲ್ಕು ಏಣುಗಳುಳ್ಳ ಒಂದು ಬಗೆಯ ಹುಸಿರು ಬಳ್ಳಿ; ನರಳೆ : ತುಜುವೆಯ ಕಾಮ್ಬುಳುಮಂ ಮಂಗುಜುವಳ್ಳಿಯನಿದಿವ ಚೂರ್ಣಮುಂ ಶರ್ಕರೆಯುಂ ನೆಜಿತಿಂದು ಬಿಡು ನೀರಂ ಕಿಜಿದುಗೊಳ್ಳುಬುವುದುಬ್ಬಿಗುದುಮೇ ಕೆಯ್ಮಸಕಂ (ಪಜಾದ. ೦೪-೧೨). **ಮಂಗರವಳ್ಳಿ** : ಅಮೃಸೋಗೆಯಲೆಯು ಕಬ್ಬಿ, ಬಜೆ, ಮಂಗರವಳ್ಳಿ, ರಾಮಗುಳ್ಳ, ಶುಂಠಿ, ಕಟುಕರೋಹಿಣಿ ಇವು ಗಳನ್ನು ಸಮಭಾಗ ಕಷಾಯ ಕಾಯಿಸಿ ಕೊಡುವು ಶ್ಲೀಪ್ಮಜ್ವರವು ಗುಣ ವಾಗುವೆದು (ಪಕ್ಕ. ೦೦). **ಮಂಗಜಿವಳ್ಳಿ** : ಮಂಗಜಿವಳ್ಳಿರಸ, ಕಳ್ಳಿರಸ ಎಲಹುಂ, ಈ ಮೂಜು ರಸಗಳ್ಲಿ ಪೋದಶಾಕ ಕೋಧಿಸಿದ ಗಂಧಕವನ್ನಿಕ್ಕಿ (ಪಜ್ಞ. ೨೬); ಒಳ್ಳಸುಂಡಮು ಸಮಮೂಲವು ' ಮಂಗಜಿವಳ್ಳಿ ರಸಂಗಳು ಸಹಿತ (ಪಾಕ್ಷಾಂ. ೦೩). **ಮಂಗುರವಳ್ಳಿ** : "ಅಸ್ಮಿಸಂಘಾತಃ — ಮಂಗುರ ವಳ್ಳಿ" (ಪಷ್ಠ. ೬). **ಮಂಗುಜಿವಳ್ಳಿ** : "ಅಸ್ಮಿವಳ್ಳಿ ಮುಂಗುಜುವಳ್ಳಿ" (ಪಾಂಗಾ. ೧೨-೧೪). **ಕೊಂಗರವಳ್ಳಿ** : ಮೊಂಗರವಳ್ಳಿಬೇರು, ಉದ್ದರಣಿಯ ಬೇರು, ವೆಲಗುಳ್ಳದ ಬೇರು, ಹೆಗ್ಗುಳ್ಳದ ಬೇರು (ಪ್ರಾಕ್ಷಾ. ೬-೪).

[ಮಂಗಜು + ಬಳ್ಳಿ]

ಮಂಗುಳಿಅಳತೆ (ನಾ). [ಗಣಿತ] ಒಂದು ಅಳತೆ : ಕ್ಷೇತ್ರಗಣಿತ, ಮಂಗುಳಿ ಅಳತೆ. ರಾಜೀತಿ . . . ಉತ್ಕೃಷ್ಟತಗುಣಿ ಮುಂಕ್ತಿನ ಚಿಲ್ಲನ ಗುಣಿಶವುಂ ಅಪ್ಪಾದಶ ಗುಣಿತಂಗಳು (ಕ್ಷೇತ್ರಗ. ೨-೩). [? + ಅಳತೆ]

ಮಂಗೇಶ (ನಾ). ಶಿವ : (೨). P ಇದು ದಕ್ಷಿಣಕನ್ನಡ, ಉತ್ತರಕನ್ನಡಪಲ್ಲಿ ವಾಸಿಸುವ ಕೊಂಕಣಭಾಷೆಯನ್ನಾಡುವ ಅನೇಕರ ಮನೆದೇವತೆಯ ಹೆಸರು. [< ಮಂಗಳ ? + ಈಶ]

ಮಂಚ (ನಾ). ೧. ಮಲಗಲು ಉಪಯೋಗಿಸುವ, ಪಾಲ್ಕುಕಾಲುಗಳುಳ್ಳ ಮರ ಅಥವಾ ಬೋಹದ ಸಾಧನ : ಪರ್ಯಾಯ : "ಶಯನವುಂ ಪರಿಯಂಕಮುಂ ಶಯ್ಯೆಯೆನೆ ಮಂಚಮೆನಿಸುತ್ತುಂ" (ಪಾರ್ಶ್ವ. ೬೦-೦೫) ; ನೀಂ ಮಹಾದೇವಿಯ ಮಂಚಮನಂಜದೇಱಿ ಆಕೆಯೊಡನೆ ನಗುತ್ತುಂ ತೆಗಲುತ್ತಮಿರೆಂದು ಕಲ್ಪಿಸಿದಂ (ಪಜ್ಜಾ೮. ೦೭೭-೦೫) ; ದುಃಪದನಂ ತನ್ನ ಮಂಚದ ಕಾಲೊಳ್ ಕಟ್ಟವೇಟ್ಟು (ಪಂಪಭಾ. ೨-೬೨ ಪ) ; ಭಾಲಾಕ್ಷಿಯರ ಮನೆಯೊಳಾಳ್ಗಳ ದಳ್ಳುರಿಯ ಮಂಚದೊಳ್ ಪವಡಿಸಿದಯ್ (ನಿಂಪ. ೨-೬೬). ೨. ಉತ್ತಮವಾದ ಪೀಠ ; ಉನ್ನತವಾದ ಆಸನ : ಮಣಿ ಮಂಚಂ ಪಟ್ಟಂ . . . ಗಲ್ಲಂ ಮಲ್ಲಂ ತಳಮಿತೆಲ್ಲಂ ತತ್ಸಮಮುಂ (ಪಜಿತ. ೨೬೭) ; ಜ್ಯೋತಿಷ್ಪಣವರ್ ಬಂದು ಪೊಕ್ಕಲ್ಲಿ ಮಂಚೋತ್ತರದೊಳ್ ಕುಳ್ಳಿರ್ದರ್ (೨೭೬ಕ್ಷ. ೩-೨-೨೩). ೩. ವೇದಿಕೆ ; ರಂಗಸ್ಥಳ : ಪ್ರೇಕ್ಷಕರಲ್ಲಿಂದ ಸುಮಾರು ೨೫ ವಯಸ್ಸಿನವಳೊಬ್ಬನು ಮಂಚದ (ವ್ಯಾಸಪೀಠ) ಕಡೆಗೆ ಬರಹತ್ತಿದನು (ಜಾಪು. ೩೩). ೪. ಹೊಲ, ಗದ್ದೆಗಳನ್ನು ಕಾಯಲು ಎತ್ತರವಾಗಿ ಕಟ್ಟಿರುವ ಬಿದಿರು ಮೊದಲಾದುವುಗಳಿಂದ ಮಾಡಿರುವ ಅಟ್ಟಣಿಕೆ : ಮಂಚಿಕೆ. [ಸಂ.]

ಮಂಚಕ (ನಾ). ೧. = ಮಂಚ ೧ : ನಿನ್ನ ನಾಲಗೆಯನ್ನು ತನ್ನ ಮಂಚಕ ಮಾಡಿ . . . ಚಿನ್ನೆ ಸರಸತಿ ನಿತ್ಯ ಪದಮಿಸುವಳಾಡಿ (ಗಿ. ೨೩-೦). ೨. = ಮಂಚ ೨ : ಒಂದು ಉತ್ಕೃಷ್ಟವಾದ ಮಂಚಕದ ಮೇಲೆ ಕುಳಿತು ಕೊಳ್ಳುವಷ್ಟರಲ್ಲಿ ಅವನ ಅಣ್ಣನಾದ ಶಶಿಯಾವನು ಅಲ್ಲಿಯೇ ಬಂದು ಕುಳಿತುಕೊಂಡನು (ಕಾಕ್ಷ. II. ೦೬). [ಸಂ.]

ಮಂಚಟಿಕೆ 'ಮಂಜಿಟ್ಟಿಗೆ' ನೋ.

ಮಂಚದಕಾಲಹುಲ್ಲು, ಮಂಚದಕಾಲುಹುಲ್ಲು (ನಾ). ನಾಲ್ಕುದಳಗಳಿರುವ ಒಂದು ಬಗೆಯ ಹುಲ್ಲು : (೪). **ಮಂಚದಕಾಲುಹುಲ್ಲು** : ಮಂಚದಕಾಲುಹುಲ್ಲು, ಉಪ್ಪಗಡ್ಡಿ (ಪ್ರಾಔ. ೨೦-೬೬೮). [< ಮಂಚ + ಕಾಲು$_1$ (< ಕಾಲ್$_1$) + ಹುಲ್ಲು (< ಪುಲ್)]

ಮಂಚದಕಾಲುಹುಲ್ಲು 'ಮಂಚದಕಾಲಹುಲ್ಲು' ನೋ.

ಮಂಚಯ್ಯ (ನಾ). ಒಬ್ಬಾತನ ಹೆಸರು : ಪಟ್ಟಣ ಪಸನ್ನರ ಮಾಚ್ಚಯ್ಯನು ಇಪ್ಪತ್ತಅಯ್ನೂರು ಕೆಜಿದು ×× ಮಸಕ . . . ದ್ರವ್ಯಮ ಕೊಟ್ಟು (ಎಕ. XIV. ೫೮ಮು. ೨೦೦-೬ ; ಮು. ೨೨೨). [ಮಂಚ ? + ಅಯ್ಯ$_1$]

ಮಸ್ಕರಿ$_1$ (ನಾ). ಬಿದಿರಿನ ದಂಡವನ್ನು ಹಿಡಿದ ಸಂನ್ಯಾಸಿ.— ಯತಿ : "ತಾಮಸಂ ಕರ್ಮಂದಿ ಮಸ್ಕರಿ ವೃತಿ ಭಿಕ್ಷುವಾ ವರಾಹು ತಮ್ಮಿಚಿನಿಕ್ಕು" (ಪುಗೊಂ. ೫೬-೯). [ಸಂ. ಮಸ್ಕರಿನ್]

ಮಸ್ಕರಿ$_2$, **ಮಸ್ಕಿರಿ** (ನಾ). ತಮಾಷೆ : ಗೇಲಿ : ಎಲ್ಲಿ ಕೂತ ಮರಯೇರಿ ಮಾಡಲಿಕ್ಕೆ ಮಸ್ಕರಿ . . . ಗೋವಿಂದ ಅನಿಸಿದ ಗೋವರ್ಧನಾ (ಜಾಪಂಗ. ೦೦೦); ಎಂಥ ಮಸ್ಕರೀ ದೂತ ಇದು (ಗಂಪ. ೩೦೦). **ದುಷ್ಕಿರಿ**: ಇದೇನು ಕ್ಲೇಷಮೋ ಮಷ್ಕಿರಿಯೋ ! (ಅಕು. ೩೬) ; ನನ್ನ ಜೊತೆ ಮಷ್ಕಿರಿ ಮಾಡ ಬೇಡ (ಪ.೩೮).

[←ಅರ. ಮಸ್ಕರಾ; ಹಿಂ. ಮಸ್ಕರೀ, ಮಸಖರೀ; ಮರಾ. ಮಸ್ಕರೆ]

ಮಸ್ಕರಿಮಾರ್ಗ (ನಾ). ಸಂನ್ಯಾಸಿಯ ಸಂಪ್ರದಾಯ : ಆ ದ್ವಿಜಾನ್ವಯಮು ನಜುವುಂ ವಿಸುಮಧುಂ ತನ್ನೊಡವುಟ್ಟಿ ಪುಟ್ಟಿ ಬಳೆದು ಘಾರ್ಷ್ಟಿತಿಯೊಳೆ ಮಸ್ಕರಿಮಾರ್ಗದೊಳಿಸಗಿ (ಜಾಗತ. ೬-೦೬ ಪ). [ಸಂ.]

ಮಸ್ಕರಿಸಮಯ (ನಾ). = ಮಸ್ಕರಿಮಾರ್ಗ : ಅತನ ಮೆಂಡತಿ ದುರ್ಮನಸ್ಕೆ ಮಸ್ಕರಿಸಮಯಭಮಂ ಪಿಡಿದಿರ್ಪಳ್ (ಕಂಚಾಪ. ೯-೬ ಪ). [ಸಂ.]

ಮಸ್ಕಾ (ನಾ). ಬೆಣ್ಣೆ : ನವನೀತ.

ಮಸ್ಕಾಹೊಡೆ = (ಆಲಂ) ಬೆಣ್ಣೆಹುಟ್ಟು : ಓಲೈಸು : ಯಾವ ಕೆಲಸ ವಾಗಬೇಕಾದರೂ ಅವನಿಗೇ ಮಸ್ಕಾಹೊಡೆಯಬೇಕು (ಕೂಪ).

[←ಪಾರ. ಮುಸ್ಕ್, ಮಸ್ಕಹ್; ಹಿಂ. ಮಸ್ಕಾ, ಮಸಕಾ; ಮರಾ. ಮಸಕಾ]

ಮಸ್ತ (ನಾ). ತಲೆ ; ಶಿರಸ್ಸು : ನಾಭಿಯಿಂದುರಂಬರೆಗಂ ಪಿತ್ತದ ತಾಣಮುಂದಿನಾ ಮಸ್ತದ ವರೆಗಂ ಕಫದ ಹಾಣಮಕ್ಕುಂ ನಿರುತಂ (ಕೀಲಕೀಪ. ೯-೨) : ಪೃಥಿತಗುಣಗಣಾವಾಸನಮ್ಮೀಶಮಸ್ತಸ್ತಾಂಛ್ರದ್ಧೆಂದ್ಯನೇಂ ರಾಜಿಸಿದನೋ (ಶಾಂ. ೨೯-೦೨-೯ ; ೨೨೨೦) ; ತತ್ಪುಣ್ಯಾಂಬುವಂ ಪೊತ್ತು ಮಸ್ತದೊಳ್ (ಅಪಂಪ್ರ. ೯-೬೬). [ಸಂ.]

ಮಸ್ತಕ (ನಾ). ೧. ತಲೆ ; ಶಿರಸ್ಸು : "ಮುಂಡಃ, ಉತ್ತಮಾಂಗಃ, ಮಸ್ತಕಃ . . . ಮೂರ್ಧಾ. ಕಂ—ಈ ೮ ಮುಂಡೆ" (ಪಣಾಮು. ೩೫-೨೨೨); ತೀರ್ಥೋದಕಂಗಳಿಂದಯ್ದುರಂ ಪವಿತ್ರೀಕೃತಮಸ್ತಕರಾಗಿರ್ದ್ (ಜಂಪಾ. ೬-೦೦ ಪ); ರವಿತೂಲದ ರಾಯಂ . . . ನಿಜಸಚಿವ ತೋರ

ದೊಡಿಗಳ ಮೇಲೆ ಲಲಿತಮಾನಮಾಕುಟಮಂಡಿತಮುಸ್ಕಕವಸನಂ ಮಗ್ನಂ ಲಿಕ್ಕಿದನಾಗಳು (ಪಚಾ. ೬-೩೦); ಅವನ ಮುಸ್ತಕ ಬರಿದು ಬೀಳಲಿ (ಶಾಬ್ಕಾತ್ಪ್ರ. ೦೪-೩೨); ಪುಸ್ತಕದಿ ದೊರೆತಿವೆ ಮುಸ್ತಕದಿ ತಳೆದ ಮಣಿ (ಪಾಚಾಶ. ೬೩). ೨. ತುದಿ; ಶಿಖರ: ಸಂಜೆಯೊಳಿನಮುಸ್ತಾದ್ರಿಯ ಮಂಜುಳಮುಸ್ತಕ ದೊಳೊವ್ವಿವಂತತಿಪರಿಯದಿಂ ಕಂಜಾಸ್ಯನಿಯ ಮಂಡಿಯೊಳ್. . . ಮಾಪಮಣಿ ನೆರೆಸಿರ್ದಂ (ಪಚಾ. ೨-೩೩); ಪೋಡುತ್ತ ನಡದ ವಿಪುಲಾಚಲದ ಮುಸ್ತಕದಿ (ಶುಚಾ. ೨-೨). [ಸಂ.]

ಮುಸ್ತಕಸ್ನೇಹ (ನಾ). ೧. ಮೆದುಳು: "ತಲೆಯ ಮೆದುಟೊಂಗೆ ಮುಸ್ತಿಷ್ಕಮು ಮುಸ್ತಷ್ಕೇಹಮೆಂದಾಮ್ನಿಮಕ್ಕುಂ" (ಶಂಗಾಶ. ೦೭೭-೩). ೨. ಮೆದುಳಿನಲ್ಲಿರುವ ನೆಣ. [ಸಂ.]

ಮುಸ್ತಕಾಭಿಷೇಕ (ನಾ). [ಜೈನ] ಜಿನವಿಗ್ರಹದ ತಲೆಯ ಮೇಲೆ ನೀರು, ಹಾಲು ಮುಂತಾದ ದ್ರವಪದಾರ್ಥಗಳನ್ನು ಎರೆದು ವಿಧಿಪೂರ್ವಕವಾಗಿ ಮಾಡಿಸುವ ಸ್ನಾನ: ಶ್ರವಣಬೆಳ್ಗೊಳದಲ್ಲಿ ಗೋಮಟೇಶ್ವರನ ಮುಸ್ತಕಾಭಿಷೇಕವು ಹನ್ನೆರಡುವರ್ಷಗಳಿಗೆ ಒಂದು ಬಾರಿ ನಡೆಯುವುದು (ಶ್ರವ. ೦೪-೦೪). [ಸಂ.]

ಮುಸ್ತಿ (ನಾ). ೧. ಸೊಕ್ಕು: ಗರ್ವ: ಮದ: ಇಷ್ಟು ಮುಸ್ತಿ ತುಂದಿದ ಹೆಣ್ಣಿಗೆ ಅಂತಿಂತಹ ಹುಡುಗ ಉಚಿತೋಗದವನೆ? (ಶುಚಾ. ೨೩೦); ಅವನ ಮುಸ್ತಿ ಎಷ್ಟಿದೆಯೆಂಬುದನ್ನು ನಾಳೆಯೇ ನೋಡುತ್ತೇನೆ (ಪಾಚಾ. ೬೬). ೨. ಆನೆ, ಒಂಟೆ ಮೊದಲಾದ ಪ್ರಾಣಿಗಳ ಮದಾವಸ್ಥೆ: ಮಗನೇ ಮುಸ್ತಿಯ ಹುಸ್ತಿ ಮುಮತೆಯ ಮಗನೆ ಶಿವನಂದೊಗೆದ ಸಿಂಹದ ಮರಿಯೆ ಕೇಳು (ಶುಚಾ. ೩-೨೦); ಮುಸ್ತಿಂದ ಹುಸ್ತಿದೊಲು ಕಣ್ಣರೆದು (ಪಚಾ. ೨೨-೨). [←ಪಾರ. ಹಿಂ. ಮಸ್ತಾ. ಮುಸ್ತಿ]

ಮುಸ್ತಿಷ್ಕ (ನಾ). ಮೆದುಳು: "ತಲೆಯ ಮೆದುಟೊಂಗೆ ಮುಸ್ತಿಷ್ಕಮು ಮುಸ್ತಷ್ಕೇಹಮೆಂದಾಮ್ನಿಮಕ್ಕುಂ" (ಶಂಗಾಶ. ೦೭೭-೩); ಗಜಮಸ್ತಕ ಮುಸ್ತಿಷ್ಕದಿನಜ್ಞೋರ್ಜಮಾಯ್ತೆಂದು ಲಂಘನಂಗೆಯ್ದುರ್ವೀಶಂ ಗಜದಿವ ಲಂಘಿಸಿದುದೊ (ಆಚಾ. ೯-೩೭); ಲಕ್ಷ್ಮಣಂ ರಾಜ್ಯಕಂಟಕನಂ ಬಾಣ್ದಲೆ ಗೊಂಡನುಮ್ಮನಿಧಮಂ ಪಂಚಾನನಂ ಹಸ್ತಿಮುಸ್ತಕಮುಸ್ತಿಷ್ಕರಸಾನುರಕ್ತ ರಸ್ಸಂ ಮಾಡೋಲಾಡು ಕೊಡುಯ್ದುಪೋಲ್ (ಶಾಂಶಾ. ೭-೩೨). [ಸಂ.]

ಮುಸ್ತಿ೧ (ನಾ). ಮುಷ್ಟಿಗೆ: "ಪದಿವಂ(ತ)ಳ್ತಂ. ಮುಸ್ತಿ—ಈ ೨ ಮುಷ್ಟಿಗೆ" (ಶಾಂಶಾ. ೩೭-೩೬). [ಸಂ.]

ಮುಸ್ತಿ೨ (ನಾ). ಏಪಲ: ಅಧಿಕ; ಹೇರಳ: ಕೈದುಗಳ ಮುಸ್ತಾಗಿ ತೊಸಾದುದಂ ತರಿಸಿ ಮುಗ್ಗಾದುದಂ ಕಳುಪಿ ಪಮಾಡಲು (ಶಾಂಶಾ. ೩೭-೩೨); ಮುಸ್ತಾಗಿ ಹೂ ಉಂಟಾ? (ಅಚಾ. ೩); ಮಳೆಯ ಜೋರಿಗೆ ಕೂಡಿಗೆ ಮುಸ್ತಾಗಿ ಬಿದ್ದಿದ್ದುವು ಹಸ್ಸು ಮಿಸುಗಿ (ಪಚಾ. ೩೩). [←ಪಾರ. ಹಿಂ. ಮುಸ್ತ್]

ಮುಸ್ಲಿನ್ (ನಾ). ಒಂದು ಬಗೆಯ ತೆಳುವಾದ ಬಟ್ಟೆ; ಬಹು ಸೂಕ್ಷ್ಮವಾದ ನೆಯ್ಗೆಯ ಹತ್ತಿಯ ಬಟ್ಟೆ: ℙ ಹಿಂದೆ ಮೆಸೊಪೊಟೇಮಿಯಾ ದೇಶದ ಮೊಸಲ್ ಎಂಬಲ್ಲಿ ಈ ಬಟ್ಟೆ ನೇಯುತ್ತಿದ್ದುದರಿಂದ ಈ ಹೆಸರು ಬಂದಿದೆ: ಏಷು ಬೆಳ್ಗೆಗೆ ಎಷ್ಟು ತೆಳ್ಗೆಗೆ ಮಳೆಯ ಮುಸ್ಲಿನ್ ಪರದೆಯಂ (ಶಂಚಾ. ೦೦-೬); ಚೀಟಿ, ವಾಯಿಲ್, ಮುಸ್ಲಿನ್, ಮಲ್ ಇವನ್ನು ಸಾದಾನೇಯ್ಗೆ ಉಪಯೋಗಿಸಿ ನೇಯುವರು (ಕ್ಷಕಾ. ೭೩). 'ಮಲ್ಲು' ಪರಾ. [←ಇಂ. Muslin]

ಮುಸ್ಲಿ (ನಾ). ಒಂದು ಬಗೆಯ ಮರ: ಮುಸ್ಲಿ, ಹುವಾಡಿ, ವೇರಲುತಾರ (ಪ್ರಸಿ. ೩-೩೨). [?]

ಮುಸ್ಲಿವಾಳ 'ಮುಸಿವಾಳ' ನೋ.

ಮುಸ್ಲೀವಾಳ 'ಮುಸಿವಾಳ' ನೋ.

ಮುಹ೧ (ನಾ). ಏಳು ಲೋಕಗಳಲ್ಲಿ ನಾಲ್ಕನೆಯದು: "ಜಿಕ್ಕರದ ಭೂರ್ಭುವಂ ಸ್ವರ್ಮಹಂ ಜನ ತಪಂ ಸತ್ಯಮೆಂದೇಬು ಮೇಲಣ ಲೋಕಮಕ್ಕುಂ" (ಶುಂಗಣಾ. ೦೦-೩೩). [ಸಂ. ಮಹಸ್]

ಮಹ೨ (ನಾ). ೧. ಓಸಗೆ: ಉತ್ಸವ: ಹಬ್ಬ: "ಉತ್ಸವಃ- ಮಹಃ, ಕ್ಷಣಃ—ಈ ೩ ಓಸಗೆ" (ಕಣಾಮು. ೦೩೬-೩೬); ಹುಲವಿನೇಯಜಪಂಗಳ್ ಮುಟ್ಟ ಮಹಮೆಂಬ ಪೂಜೆಯುಮಂ (ಶಾಚಾಪು. ೬-೨೩ ಪ); ಗೋವಪ್ಪದ್ದರ್ ಮಹೇಂದ್ರಮಹಮಂ ಮಾಣ್ದು ಗಿರೀಂದ್ರಮಹಮನೊಡಂಬಟ್ಟರ್ (ಪಗಾ. ೪-೭೯ ಪ). ೨. ಯಾಗ; ಯಜ್ಞ. ೩. ತೇಜಸ್ಸು; ಕಾಂತಿ. ೪. ಎಮ್ಮೆ: ಮಹಿಷ. ೫. ಶ್ರೇಷ್ಠವಾದ ತತ್ತ್ವ; ಪರತತ್ತ್ವ: ಅಜೀವು ಮಹದಲ್ಲಿ ದಿಂಸುವಾಗ ವಾಸಿಲೆ ಪೋಡಮೋಡಲಿಕ್ಕ ವೀರಾದಿಂತ (ಕೋಗಾಶಾ. ೨೬೦-೩); ಮಹವು ಮಹದಲ್ಲಿ ನಿಂದುದೆ ಲಿಂಗ (೦೦ಗಶ. ೬೩-೩೦). [ಸಂ.]

ಮಹಂತ (ನಾ). ೧. ಆದರಕ್ಕೆ ಪಾತ್ರನಾದ ವ್ಯಕ್ತಿ: "ಮಹಂತಃ = ಪೂಜ್ಯಂ" (ಶಾಬ್ಕ. ೨೦೩); ಧಾಸುರತೇಜ[ರು] ಮಹಂತರೆನಿಸಿದ ಸೂರ್ಯರ್ ಶೇಷವಮಹೇಶರೇಶ್ವರ ಲೇಸಿನಿಸಿದ ಪೂಜಿತ್ತರುಪೂಜ್ಯರ್ ಧರೆಯಂ (ಪಾ. XVIII. ೦೦೩-೨೦; ೨೦೦೭); ನಿಜವಪುಜಿದ ವಿಶ್ಮಿಂಕನೆ ಮರಣವ ಗೆದಿದ ಮಹಂತನೆ (೦೪೬೦. ೦೪೯-೬೩೬); ಅಪರೆಗಜಿವನೀವ ಮಹಂತನೆನಿಸಿದ ಸಿದ್ಧರಾಮಯ್ಯಂಗೆ ಶರಣಾರ್ಥಿ (ಕ್ರಶೂಲ. ೦-೨). ೨. ದೇವಸ್ಥಾನ, ಮಠ ಮೊದಲಾದುವುಗಳ ಮೇಲ್ವಿಚಾರಕ; ಧರ್ಮಾಧಿಕಾರಿ: ಈ ವೃದ್ಧದಃಪಾಪುರುಷನಾರು ಎಂಬುದಾಗಿ ದೇವಾಲಯದ ಮಹಂತರನ್ನು ಕೇಳಿದನು (ಕ್ರಕಾಮು. ೬). 'ಮಹಾಂತ' ವರಾ. ℙ ಪಂಸ್ಕೃತದ 'ಮಹತ್' ಶಬ್ದವು ವ್ಯಾಕರಣಸೂತ್ರಗಳ ಪ್ರಭಾವದಿಂದ ಅನೇಕ ಬೇರೆ ಬೇರೆ ರೂಪಗಳನ್ನು ಪಡೆಯುವುದರಿಂದ ಇಲ್ಲಿ ಅನುಕೂಲಕ್ಕಾಗಿ ಅವೆಲ್ಲವನ್ನೂ ಬೇರೆ ಬೇರೆ ಮುಖ್ಯ ಉಲ್ಲೇಖಗಳಾಗಿ ಕೊಡಲಾಗಿದೆ. ಉದಾ: 'ಮಹಂತ', 'ಮಹತ್ತಿ', 'ಮಹತ್ತು', 'ಮಹಾ', 'ಮಹಾಂತ' ಇತ್ಯಾದಿ. [< ಸಂ. ಮಹತ್]

ಮಹಂತು. ಮಾಹತ್ತು (ನಾ). = ಮಹಂತ ೧: 'ಮಹಂತುಭೋಗು' ಪರಾ. ಮಾಹತ್ತು.

ಮಾಹತ್ತಿಕ ಪುತ = ವೀರಶೈವಮಹಾಮುಭಾವಿಗಳಿರುವ ಮಠ: ಶಿವನಸಮುದ್ರದ ವೀರೇಶ್ವರನ ಗುಡಿ ದುತಿಮಹವನು ಮಾಹತ್ತಿನ ಮುಠದ ಮಾಡಿ (ಎಕ್. XIV, ಕುಣ. ೦೦೦-೦೯ 1904). [< ಮಹಂತ]

ಮಹಂತುಭೋಗು (ಕ್ರಿ). ಮಹಂತನಾಗು; ಪೂಜ್ಯನಾಗು: ಮೂಬು ಉಂಡವರೆಲ್ಲಾ ಮಹಂತುಭೋದರು ದೇಪ ಉಂಡವರೆಲ್ಲಾ ಜೀದರ ಪೂಜಿದರು (ಸಾಸ. ೫೯-೦೧೩). [ಮಹಂತು + ಪೋಗ್ಗು (<ಪೋ೧)]

ಮಹಂತೆ (ನಾ). ಶ್ರೇಷ್ಠಳಾದವಳು; ಪೂಜ್ಯಳಾವವಳು: ಆತ್ಮಾಯತ ಪತಿಭಕ್ತೆ ಸಾಗಿವೆ ವಿಶೇಶ್ಯೀಯುಂತೆ ಮಹನ್ಯೆ ನಿ[ಶ್ಚಿಂ] ಶ್ರೇಯಸ್ಸ್ರರ] ಮೂರ್ತಿ (ಪಾಚಾ. ೪. ೦೦೦-೦೩; ೨೦೦೭). [ಮಹಂತ + — ಎ೩]

ಮಹಚ್ಚರಿ (ನಾ). ಅತಿಯಾದ ಸೋಜಿಗ; ಆತ್ಮಾಶ್ಚರ್ಯ: 'ಮಮಚ್ಚರಿಪಡು' ಪರಾ. [< ಮಹಾ + ಆಚ್ಚರಿ೩]

ಮಹಚ್ಚರಿಪಡು (ಕ್ರಿ). ಅತಿಯಾಗಿ ಸೋಜಿಗಪಡು; ಆತ್ಮಾಶ್ಚರ್ಯ ಪಡು: ಸುದತಿ ಬಳಿಕಾ ವೃದ್ಧಸಮ ಕಾಣದೆ ಮಹಚ್ಚರಿಪಡಲು (ಪಾಚಾ. ೦೨-೩೦). [ಮಹಚ್ಚರಿ + ಪಡು೧]

ಮಹಜರ್ 'ಮಹಜರು' ನೋ.

ಮಹಜರು, ಮಜಿಜರ್, ಮಾಜರು (ನಾ). (ಕೊಲೆ, ಕಳವು ಮುಂತಾದ ಅಪರಾಧಗಳ ವಿಚಾರದಲ್ಲಿ) ತಪಾಸಣೆ ಮಾಡಿದವರೆಲ್ಲರೂ ಸಹಿ ಮಾಡಿದ ವಿವರವಾದ ವರದಿ: ಪಂಚನಾಮೆ: ಆ ಮಹಜರಿಗೆ

ಪುಟೇಲನು ರನ್ನವಿತ್ತನ್ನು ಹಾಕಿ ಅಲ್ಲಿ ಹಾಜರಿದ್ದವರ ದನ್ನವಿತ್ತುಗಳನ್ನು ಪಾತಿ . . . ರವಾನಿಸುವೇಕು (ಕ್ರಾಪತ್ರ- ೫೯) : ಶಮವ ಮಹಜರುಕ್ರಮವ ನಡೆಯಬೇಕಾಗಿತ್ತು (ಪಾಪೂರಾ. ೨೦೭). **ಮಹಜರ್** : ಈ ದಿನ ಮಹಜರ್ ಸಹಿಸುತ್ತಾರೆ (ಕ್ರಕೃಚ- ೧೩೦). **ಮಾಜರು** : ಮಾಜರು ಮಾಡಲು ಫೋಲೀಸಿನವರು ಬರುತ್ತಾರೆಂಬ ಸುದ್ದಿ ಕಾಗೆಬೊಡಿಗೆಸದ ಕಲ್ಪಾಗಿತ್ತು (ಕಾಚಿಯು- ೧೩೩).

[<-ಅರ. ಮಹಜರ್, ಮಹಝರ್; ಹಿಂ. ಮರಾ. ಮಹಜರ್]

ಮಹಜೆದಿ 'ಮಹೀದಿ' ನೋ.

ಮಹಡಿ 'ಮಾಡ್' ನೋ.

ಮಹಡಿಮನೆ 'ಮಾಡಿಮನೆ' ನೋ.

ಮಹತಾಪು. ಮತಾಪು (ನಾ)· ೧· ಪ್ರಕಾಶಮಾನವಾಗಿ ಕಿಡಿಗೆದರಿ ಉರಿಯುವ ಒಂದು ಬಗೆಯ ಸುಡುಮದ್ದು: ಬೆಳಿದವಪ ಶತಕೋಟಿ ಪಂಜಿನ ಹೊಳಪಿನೊಳು ಮಹತಾಪುಗಳ ಪಡ್ಡೆಗಿನೊಳು (ಪಪು. ೧೩—೨೪); ಹಗಲುಬತ್ತಿಯು ಬಾಣ ಬಿರಿಸು ಮಹತಾಪುಗಳು ಭಗೆಗೆಯುಲಾಲುಗಳು ಸಾಲುದೀವಟಿಗೆ (ಕೃಕೃಚ. ೬—೦೨). **ಮತಾಪು** : ೧· ಹೊರಗೆ ಮಹತಾಪಿನ ಬೆಳಕಿನ ಜತೆಯೊಳು ಹೊರೆದುವು ತಾರೆಗಳೊಳಗೆ (ಪಂಕ್ರಪ್ರ- ೬—೩೦)· ೨· ಒಂದು ಬಗೆಯ ಯುದ್ಧದ ಸಾಧನ : ಸಣ್ಣ ತೋಪುಗಳು, ರಾಮಬಾಣಗಳು, ರಾಮಬಾಣಗಳು, ಮತಾಪುಗಳು· ತಾರಾಮಂಡಲು, ಭೂಚಕ್ರ, . ರಣಗಾಡಿಗಳು ಮೊದಲಾದ ಯುದ್ಧೋಪಕರಣಗಳೆಲ್ಲ ಎಣಿಸಿದುವಾಯಿತು (ಪಕೃರಾ. ೦೨).

[<-ಪಾರ. ಹಿಂ. ಮಹತಾಬ್; ಪರಾ. ಮಹತಾಪ್, ಮಹತಾಬ್]

ಮಹತಿ$_1$ (ನಾ). ೧· ಹಿರಿಮೆ ; ಘನತೆ ; ಮಾನತ್ವ: ಕಡುತಪದನ್ನು ಮಾಡಿದ ಪುಣ್ಯಫಲವಿಂದು . . . ಪೂಜಗ್ಗದೊಡೆಮನೇ ನಿನ್ನಡಿದು ದರುಶನ ಪದದ ಮೂಲಕ ನಮಗೆ ದೊರೆದುತು ಮಹತಿ ವೆರ್ಚಿದುದು (ಪಾರ್ಶ- ೬—೦೬) ; ಕಾಯಕದ ಮಹತಿಯೂ ಇದೇ ಮಾತನ್ನು ಹೇಳಿದೆ (ಕಾಗಳ. ೪೨೨)· ೨· ಒಂದು ಬಗೆಯ ಬಿಕ್ಕುಳರೋಗ : ಬಿಕ್ಕುಳು ರೋಗವು ಅಸ್ಸಜಿ, ಕ್ಷುದ್ರಜಿ, ಮಹತಿ, ದುಮಲೆ, ಗಂಭೀರೆ ಎಂದು ಪದು ತೆರನು . . . ಮಹತಿ ಎಂಬ ಬಿಕ್ಕುಳು ಬರುತ್ತಿರೆ ಎಚ್ಚರಮಂ ತಪ್ಪಿಸಿ ದಾಕ್ಷನು ಸ್ಪಂಧಿಸುವುದು (ಸಚಿ- ೨೦೦). [<ಸಂ. ಮಹತ್]

ಮಹತಿ$_2$ (ನಾ).೧.ಒಂದು ಬಗೆಯ ವೀಣೆ. ೨·ಏಳೆಂತಂತಿಗಳೆಲ್ಲ ನಾರದನ ವೀಣೆ : ಮಹತೀ-ನಿ ನಾರದನ ವೀಣೆ. ಅಧಿಪವಾದ್ದು ೨ (ಕಣ್ಣಾ- ೬೧೦) : ಸರಸ್ವತಿ 'ಕಚ್ಛಪಿ' ಎಂಬ ವೀಣೆಯನ್ನೂ ನಾರದರ 'ಮಹತೀ' ಎಂಬ ವೀಣೆಯನ್ನೂ ನುಡಿಸುತ್ತಿದ್ದರೆಂದು ಇತಿಹಾಸ ಪುರಾಣಗಳು ತಿಳಿಸುತ್ತವೆ (ಸಂಗೀಸಂ- ೬೦೦). ೩· ಒಂದು ಬಗೆಯ ಸಸ್ಯ : ಹೆಗ್ಗುಳ್ಳೆಯ ಗಿಡ.

[ಸಂ. ಮಹತೀ]

ಮಹತೋಮಹೀಯ (ನಾ)· ಪೂಜ್ಯರಲ್ಲಿ ಪೂಜ್ಯನಾದವನು : ಸರ್ವ ಶ್ರೇಷ್ಠ : ಆವನೊಬ್ಬನಕೋರೆಯಿಂನವಾವನುರುಮಹತೋದಾಹೀಯನು (ಶಾಬ್ಭಾ- ೬—೬೩) : ಅಣೋರಣೀಯಸು ಮಹತೋಮಹೀಯಸು ಅಪ್ಪ ಮೀಯನ ಆಡಿಸಿದಳೆಶೋದೆ (ಕೃಕಂತ- ೪—೦೩೩-೨)·

[ಸಂ. ಮಹತೋಮಹೀಯಸ್]

ಮಹತ್ಕಾರ್ಯ (ನಾ)· ದೊಡ್ಡ ಕೆಲಸ ; ಭಾರಿಕಾರ್ಯ : ಅವನ ಮಹತ್ಕಾರ್ಯಗಳೆಲ್ಲವನ್ನೂ ಹೊಟ್ಟಮಾಡಿ ಹೇಳುವುದು ಸಾಧ್ಯವಿಲ್ಲ (ಪೀಚಿ- ೨೯). [ಸಂ.]

ಮಹತ್ತತ್ತ್ವ (ನಾ). ೧· [ತತ್ತ್ವಶಾ] ಸಾಂಖ್ಯರು ಹೇಳಿರುವ ಇಪ್ಪತ್ತೈದು ಪದಾರ್ಥಗಳಲ್ಲಿ ಎರಡನೆಯದು : ಮೂಲಪ್ರಕೃತಿ ಯಿಂದ ಹುಟ್ಟುವ ತತ್ತ್ವ : ತತ್ತ್ವನಿಷ ವಾಸ್ಯದರಿ ಶುಲತೆವತ್ತ ಬ್ರಹ್ಮದಲಾಮ್ತು ಸದಸದ್ವ್ಯಕ್ತಿಯಾದಪ್ಪಕ್ತವದಜಂದೀ ಮಹತ್ತತ್ತ್ವ (ಶಾಸ್ತ. ೧-೦೦) ; ಅಹಂಕಾರತತ್ತ್ವವುಂ ಮಹತ್ತತ್ತ್ವವುಂ ಕೂಡಿ ಇರ್ಪತ್ತುಮೂಜುಂ ತತ್ತ್ವಂಗಳುಂ ಪ್ರಕೃತಿಯೊಳಿದಂಗಿ (ಪಕಂ. ೦೦)· ೨· [ವಿಶಿಷ್ಟಾ] ಇಪ್ಪತ್ತುದ್ರವ್ಯಗಳಲ್ಲಿ ಒಂದು : ಗುಣತ್ರಯ, ಮಹತ್ತತ್ತ್ವ, ಅಹಂಕಾರ . . . ಪೃಥಿವಿಬ ಎಂದು ದ್ರವ್ಯಗಳು ಇಪ್ಪತ್ತು (ತಂದೀ- ೨೭೩). [ಸಂ.]

ಮಹತ್ತಮ (ನಾ)· ೧· ಅತ್ಯಧಿಕವಾದುದು : ಇದು ಭಕ್ತಸುಂಗ ಕ್ಕಗಲ್ಬಲಿಕ್ಕದ ತಿಸರ್ಮಕ್ಕೆ ಕರ್ವೊಗೆಬೆನಿಪ್ಪಸಮಾಪ್ತಿ ಮಹತ್ತಮಂ ತಮಂ (ಸಂಪ್ರಕೃ. ೬-೦೯)· ೨· ಹಿರಿಯ : ಶ್ರೇಷ್ಠ : ಪ್ರತ್ಯಯವನಿನ್ನಸಲೇಕೆ ಮಹತ್ತಮನವರ ಪುಣ್ಯನಾಮದ ತೀರ್ತನದ ಮಹಾತ್ಮೆಯನು ದಿಟ ನೀವೆ ಕಂದಿಪರ್ಕೆ (ಚಾಗೆ. ೬-೬-೩೦)·

ಮಹತ್ತಮಾಪವರ್ತನ = [ಗಣಿತ] ಎರಡು ಅಥವಾ ಅಧಿಕ ದತ್ತಸಂಖ್ಯೆಗಳೆಲ್ಲವನ್ನೂ ಭಾಜಿಸತಕ್ಕ ಅತ್ಯಧಿಕ ಅಪವರ್ತನ : ಎರಡು ಅಥವಾ ಅಧಿಕ ದತ್ತಸಂಖ್ಯೆಗಳೆಲ್ಲವನ್ನೂ ಭಾಜಿಸತಕ್ಕ ಅತ್ಯಧಿಕ ಅಪವರ್ತನಕ್ಕೆ ಅವುಗಳ ಮಹತ್ತಮ ಸಾಮಾನ್ಯ ಅಪವರ್ತನ (ಮ.ಸಾ.ಅ.) ಎಂದು ಹೆಸರು (ಇಪಗಣಿ. ೨. ೩). [ಸಂ.]

ಮಹತ್ತರ (ಗು)· ೧· ಅತಿಶಯವಾದ ; ಮಿಗಿಲಾದ : ಪಾರ್ಸೀಯಮಂ ದಾಟುತಾ ಮಹತಕಾಂಕ್ಷೆಯ ಮಹತ್ತರಪ್ರಾರ್ಥನಾಪ್ರದಂ ದೀರ್ಘಭವ ಪ್ರವಾಹದ ಪೌನಮಾತ್ಯವರಿ ಪರಿಣಮಿಸಿದತ್ತು! (ಶಾಪ್ರಹ. ೨೬—೨೦೦); ಪತಿಯ ಮಹತ್ತರ ಬದಲಾವಣೆ ಅವಳಗೊಂದು ದೊಡ್ಡ ಸವಾಲೆ (ಕಾಪ್ರಕೆ.೭೬). (ನಾ)· ೨· ಹಿರಿದಾದುದು ; ಶ್ರೇಷ್ಠವಾದುದು : ದೇಶವ್ಯಾಪ್ತಿಯಿಂದ ಅಣು, ದುಷತ್, ಮಹತ್ತರ ಮೊದಲಾದ ವ್ಯಮಾಗಳು ಕೂಡುವವು (ಸಂದಸಾ. ೦೦); ಅವರು ಸಾಧಿಸಿದ ಕಾರ್ಯ ಅತಿ ಮಹತ್ತರವಾದುದು (ಕಚಿಗಾ. ೦೩೯). ೩· ಗೌರವಕ್ಕೆ ಪಾತ್ರನಾದವನು ; ಶ್ರೇಷ್ಠ ; ಹಿರಿಯ : ಸುಮತಿಯೆಂಬ ಮಂತ್ರಿಮಹತ್ತರನಂತೆಂದಂ (ಪಾಚಂಪು. ೬-೬೨ ಶ) : ಕೂಡೆ ಶಾಶಾಂತಿಮಂದಿರದೊಳ್ ಪೂರ್ಣಸುಪ್ತಸೂಪ ಪರಿವಾರಂ ಸೌಖ್ಯಯುಕ್ತಂ ದುಹತ್ತರಂ . . . ಅಕ್ಕಂ ನರಂ (ಜಾಪಂ. ೦೩-೩೭). ೪· ಮುಖ್ಯಾಧಿಕಾರಿ ; ಹೆಗ್ಗಡೆ : 'ಮಹತ್ತರಿಕೆ$_1$' ಪರಾ.

[ಸಂ.]

ಮಹತ್ತರದೇವಿ (ನಾ). [ಜೈನ] ಹದಿನಾರು ಕಲ್ಪಗಳಲ್ಲಿದ್ದು, ಆಯಾ ವಿಮಾನಗಳಲ್ಲಿ ಹುಟ್ಟುವ ಭವ್ಯಜೀವಿಗಳಿಗೆ ತಿಳಿವಳಿಕೆಯನ್ನು ಕೊಡುವ ಹದಿನಾರು ಜನಸಾಮಾನಿಕದೇವತೆಯರಲ್ಲಿ ಪ್ರತಿ ಯೊಬ್ಬಳು . ಪಿಡುಮುತ್ತಿನ ಸೇಸೆಗಳುಂಬೆರಗು ದುಮತ್ತರದೇವಿಯರ್ ಒಂದು ಪೊಜೆಮಟ್ಟು (ಅಪ್ರ. ೩-೬೬ ಶ). [ಸಂ. ಮಹತ್ತರದೇವೀ]

ಮಹತ್ತರಿ (ನಾ). ಆಲೋರ್ವಾದ. ಸ್ವಸ್ತಿವಾಚನೆಗಳನ್ನು ತಿಳಿದಿರುವ ವೃದ್ಧಸ್ತ್ರೀ : ಕೆಲರಂ ದೌಪಾಸಿಕಸ್ಯಾಸದೊಳ್ ಕೆಲರಂ ಜಾಣ್ಮಿಡಿಯೊಳ್ ಮಹತ್ತರಿಯರಿರ ಮಾದೇವಿಯಜ್ಜಿಸಿಳ್ (ಜಾರಪ್ರ. ೬-೬೩).

[ಸಂ. ಮಹತ್ತರೀ]

ಮಹತ್ತರಿಕೆ$_1$ (ನಾ). ಮುಖ್ಯಾಧಿಕಾರಿಯ ಪದವಿ ; ಹೆಗ್ಗಡಿತನ : ದಂಡ ನಾದುಕಂಭೂಸಾತನಸ್ವವರ ಮಹತ್ತರಿಕೆಯ ಸಮ್ಮತಸಂ (ಜಾಸಪ. ೪೯-೦೪; ೨೨೬೬). [ಮಹತ್ತರ + —ಇಕೆ]

ಮಹತ್ತರಿಕೆ$_2$ (ನಾ)· = ಮಹಜ್ಜನೇವಿ : ವಿಸುಟಕೂಟಾಧೀಶೆಯರಪ್ಪ ರುಚಕರುಚಕಾಸ್ಯೆ ರುಚಿರಾಂತರುಚಕಪ್ರಭೆಯೆಂಬಿ ನಾಲ್ವರುಂ ದಿಕ್ಕುಮಾರಿಕಾ ಮಹತ್ತರಿಕೆಯರುಮಂ ಧರ್ಮಾನುರಾಗದಿಂ ಸೌಧರ್ಮೇಂದ್ರಂ . . . ಮಹತ್ತರಿಯರಾಗಲು ವೆಸಸುವುದುಂ (ಆದಪು. ೬-೩ ಶ).

[ಸಂ. ಮಹತ್ತರಿಕಾ]

ಮಹತ್ತು (ಗು)· ೧. ಹಿರಿಯದಾದ : ಶ್ರೇಷ್ಠವಾದ· (ನಾ)· ೨. ಹಿರಿದು : ಶ್ರೇಷ್ಠವಾದುದು : ಅಣುವಿಂಗೆ ಅಣು ಮಹತ್ತಿಂಗೆ ಮಹತ್ತಾದ ಮಹಾಲಿಂಗದೊಳಗೆ ಶರಣಾರ್ಪನು (ಅಕಂಡೇ. ೩೩೭–೪೭) : ಮಹತ್ತು ಮಹತ್ತನ್ನು ಗುರುತಿಸುತ್ತದೆ (ಕೂಷ್ಮಳಿ· ೦೦೮)· ೩. ಶಾಕ್ತ ಮತದ ಇಪ್ಪತ್ತು ನಾಲ್ಕು ತತ್ತ್ವಗಳಲ್ಲಿ ಒಂದು : ಐದು ಭೂತಗಳು . . . ಅಪಂಕಾರ, ಮಹತ್ತು· ಮೂಲಪ್ರಕೃತಿ – ಇವೇ ಇಪ್ಪತ್ತನಾಲ್ಕು ತತ್ತ್ವಗಳು (ಕಾಕಕ. ೨೨೩)· [ಸಂ. ಮಹತ್]

ಮಹತ್ತ್ವ (ನಾ)· ೧. ಹಿರಿಮೆ : ಘನತೆ ; ಶ್ರೇಷ್ಠತೆ : ಅಜಂಗಂ ಘನಕಂ ರಕ್ಷಕವಂತಱನ್ತಿಪೆ ಕೇಳ್ ಪೊಗಟ್ಪರಲ್ತೆ ನಿನ್ನ ಮಹತ್ತ್ವಂ (ಜಗಂ. ೪-೧೭)· ೨. ಸಾಮರ್ಥ್ಯ· ೩. ಪ್ರಾಮುಖ್ಯತೆ : ಆ ಸಣ್ಣ ವಿಷಯಕ್ಕೆ ಯಾಕೆ ಮಹತ್ತ್ವ ಕೊಡಬೇಕು ? (ಕೂಪ)· [ಸಂ.]

ಮಹತ್ಪಂಚಮೂಲ (ನಾ)· [ವೈದ್ಯಶಾ] ಬೆಲ್ಲವತ್ತ, ನರುವಲ, ಶಿವನಿ, ಪಾದರಿ ಮತ್ತು ಹೆಮ್ಮರ ಈ ಐದು ಬಗೆಯ ಮರಗಳ ಔಷಧೀಯ ಗುಣವುಳ್ಳ ಬೇರುಗಳು : ಬೆಲ್ಲವತ್ತದ ಬೇರು, ನರುವಲದ ಬೇರು, ಶಿವನಿಬೇರು, ಪಾದರಿಬೇರು ,ಹೆಮ್ಮರದ ಬೇರು ಇವು ಮಹತ್ಪಂಚಮೂಲ ವೆನಿಸಿಕೊಂಬುವು (ಕೃಕಚಾ. ೨. ೬೬)· 'ಮಹಾಪಂಚಮೂಲ' ಪರಾ. [ಸಂ.]

ಮಹತ್ತ್ವ (ನಾ)· ೧. = ಮಹತ್ತ್ವ ೧ : ವೇದೋಪನಿಷತ್‌ಕಾಲದ ಸಂಸ್ಕೃತಕ್ಕೂ ಆನಂತರದ ಸಂಸ್ಕೃತಕ್ಕೂ ಹೋಲಿಸಿದಾಗ, ಈ ಮಾತಿನ ಮಹತ್ತ್ವ ಮನವರಿಕೆಯಾಗುತ್ತದೆ (ಕ್ರಾಪ್ರ· ೪೩೫)· ೨. ದೊಡ್ಡದು : ಹಿರಿದು : ನಾವೊಂದು ಮಹತ್ತರ ಕೆಲಸದಲ್ಲಿ ತೊಡಗಿದ್ದೇವೆ (ಕೂಪ)· ೩. = ಮಹತ್ತ್ವ ೨ : ದೇವತಾತ್ಮನಾದ ಸವಿತೃವಿನ ಸಂಚಾರಮಾರ್ಗವನ್ನೇ ಅನುಸರಿಸಿ ಇತರ ದೇವತೆಗಳೆಲ್ಲರೂ ಶಕ್ತಿಯೊಡಗೂಡಿದ ಮಹತ್ತ್ವವನ್ನು ಪಡೆಯುತ್ತಾರೆ (ಪುಣ್ಯಕ· ೩೭೦)· ೪. ಪ್ರಾಮುಖ್ಯತೆ : ಅವರು ಅವಳ ಮಾತಿಗೆ ಹೆಚ್ಚಿನ ಮಹತ್ತ್ವ ಕೊಡಲಿಲ್ಲ (ಕ್ಯಾಣಿ· ೦೦೯)· [<ಸಂ. ಮಹತ್ತ್ವ]

ಮಹತ್ತ್ವತೆ (ನಾ)· ಹಿರಿಮೆ ; ಘನತೆ : ದೇವ ನಿಮ್ಮ ಮಹತ್ತ್ವತೆಯಪಾ ದೇವದೇವನೆ ಬಲ್ಲನು (ಜಸಾ· ೪೯-೬೨)· [<ಸಂ. ಮಹತ್ತ್ವ+ತಾ]

ಮಹತ್ತ್ವಾಕಾಂಕ್ಷಿ (ನಾ)· ಹಿರಿದಾದ ಆಸೆಯುಳ್ಳವನು ; ಮಹತ್ತರವಾದ ಆಕಾಂಕ್ಷೆಯುಳ್ಳವನು : ಅವರನ್ನೆಲ್ಲಾ ಪಾನು ಅರಿಯುವೆಱು ಎನ್ನವಪ್ಪು ಮಹತ್ವಾಕಾಂಕ್ಷಿ ನಾನಲ್ಲ (ಪೂಆಣಿ· ೨೬೧)· [<ಸಂ. ಮಹತ್ವಾಕಾಂಕ್ಷಿನ್]

ಮಹತ್ವಾಕಾಂಕ್ಷೆ (ನಾ)· ಮಹತ್ವಪೂರ್ಣವಾದ ಆಸೆ ; ದೊಡ್ಡ ಅಪೇಕ್ಷೆ : ನನ್ನ ಮಹತ್ವಾಕಾಂಕ್ಷೆಯು ಇಷ್ಟು ದೂರ ಎಂದೆಂದಿಗೂ ಓಲಾರದು (ಸ್ಮಶ· ೦೨)· [< ಸಂ. ಮಹತ್ವಾಕಾಂಕ್ಷಾ]

ಮಹದುದ್ಯಮ (ನಾ)· ೧. ದೊಡ್ಡ ಪ್ರಯತ್ನ ; ಮಹಾಯತ್ನ· ೨. ಮಹಾಸಾಹಸಿ : ಮಹಾಪ್ರಯತ್ನಶೀಲ : ಆಕಮ. ಸುತರು ಮಹದುದ್ಯಮರು (ಕುಪಾಗಾ. ೬-೨೦)· [ಸಂ.]

ಮಹದ್ಬ್ರಹ್ಮಚರ್ಯ (ನಾ)· ೧. ಶ್ರೇಷ್ಠವಾದ ಬ್ರಹ್ಮಚರ್ಯ· ೨. [ಜೈನ] ಉಪಾಸಕಗುಣಸ್ಥಾನಗಳೆಂದು ಪ್ರಸಿದ್ಧವಾಗಿರುವ ಹನ್ನೊಂದರಿ ಬಗೆಯ ಸಾಧನೆಗಳಲ್ಲಿ ಒಂದು : ಸವ್ಯಕ್ತಂ ಸದ್ವ್ರತೌಘಂ . . . ಮಹದ್ಬ್ರಹ್ಮಚರ್ಯಾ . . . ಭೂಮ್ಯುದ್ದಿಷ್ಟಪ್ರದೇಶತ್ಯಜನಮಜಘನ್ಯದೇಕಾದಶಂ ಪೇಚರೇಂದ್ರಾ (ಜಿಂಪು· ೬-೨೨)· [ಸಂ.]

ಮಹನವಮಿ 'ಮಾನಾಮಿ' ನೋ·

ಮಹನೀಯ (ಗು)· ೧. ಗೌರವಕ್ಕೆ ಪಾತ್ರವಾದ : ಸುಪ್ರಸಿದ್ಧವಾದ : ಅಂತಮೇೞಮಹನೀಯಮಹಿಮನುಂ ಕುಂತಳರಾಜ್ಯಲಕ್ಷ್ಮೀ ಲತಾವಸಂತನುಂ . . . ಎನಿಪೆ . . . ಪುಣ್ಯಪರಿಣಂ ನಿಜಜನಕನೆನಿಸಿದ (ಧಪ. ೫-೨-೦೪೨ ; ೨೦೫೭) ; ನಿನ್ನ ಮಹನೀಯಪ್ರಬಲಿತೋತ್ಪನ್ನನಿಜ ಗುರುಭಕ್ತ್ಯುಪಚಿತಪುಣ್ಯಮಹಿಮೋನ್ನತಿಕೆದುನಿದಾರು ಬಲ್ಲರೆ (ಜಿಪ್ರ· ೩೯-೩೩)· (ನಾ)· ೨. ಮನ್ನಣೆಗೆ ಪಾತ್ರನಾದವನು ; ಕೀರ್ತಿವಂತ· [ಸಂ.]

ಮಹಪ್ಪತಿ (ನಾ)· ಮಹಾರಾಜ ; ದೊಡ್ಡ ಅರಸ : ಆ ನಾಚಿದ್ದನ್ನ ಸಾಧನೊನಗುಣಂ ಚಕ್ರವರ್ತ್ತಿ ದಯೆಯುಂ ಬೆಸಸಲು ತಾನೇಯುಂ[ಮಾ] [ಮಹ]ಪ್ಪತಿಗೆ ಮಾನಸನವೆ ನಿಜಿಳವಂತ್ರಿಪದಮಂ ತಳೆದ (ಅ. XXVIII. ೪೪-೨೯; ೧೦೭೨). [< ಸಂ. ಮಹಾಪ್ಪತಿ]

ಮಹಬೂಬಿ (ನಾ)· ಒಂದು ಚಿನ್ನದ ನಾಣ್ಯ : "ಐದುನಾವಿರ ಮಹಬೂಬಿ. ಕೊಡುವೆಯಾ ?" ಎಂದನು. (ಮಹಬೂಬಿ ಎಂದರೆ ಚಿನ್ನದ ನಾಣ್ಯ· ಸುಮಾರು ಹತ್ತು ರೂ. ಬಾಳುವುದು) (ಕಃಜಾಅಳ· ೪೯).

[← ಅರ. ಹಿಂ. ಮಹಬೂಬಾ = ಪ್ರೇಯಸಿ]

ಮಹಮನೆ 'ಮಹಾಮನೆ' ನೋ·

ಮಹಮೇರು (ನಾ)· ದೊಡ್ಡದಾದ ಮೇರುಪರ್ವತ ; ಮಹಾಮೇರು : ಅಂದು ಮಹಮೇರುಶೃಂಗದ ಕೆಳಗಣಂತರದೊಳೊಂದುಗುಹೆಯೊಳಗಿರ್ದು ಮಾತಾಡುತಿರೆ ಪಂಚಸುರವರರು ತಂತಮ್ಮೊಳು (ಕುಗಂ. ೧೩-೦೩)·

[< ಸಂ. ಮಹಾಮೇರು]

ಮಹಮ್ಮದೀಯ 'ಮುಹಮ್ಮದೀಯ' ನೋ·

ಮಹರಾಜ (ನಾ)· ೧. ದೊಡ್ಡರಾಜ : (ಅ)· ೨. ಅಡುಗೆಮಾಡುವವನು ; ಅಡುಗೆಭಟ್ಟ : ದೇಸಾಯರಿಗಾಗಿ ವಿಮಲೆಯು ಮಹರಾಜನನ್ನು ಕರೆದು ಅಂಗೆ ಮಾಡಿಸಿಳು (ಸಂಬಿ· ೩೨೯).

[←ಹಿಂ. ಮಹರಾಜ್, ಮಹಾರಾಜ್. / ಸಂ. ಮಹಾರಾಜನ್]

ಮಹರಾಯ 'ಮಹಾರಾಯ' ನೋ·

ಮಹರಾಯತಿ 'ಮಹಾರಾಯಿತಿ' ನೋ·

ಮಹರ್ಧಿಕ (ನಾ)· ತುಂಬ ಪ್ರಭಾವವುಳ್ಳವನು : ಭಾಸುರದೇವಕೋಟಿ ವಿಭುವವ್ವ ಮಹರ್ಧಿಕನವ್ವ ವಾಸವಂಗಾಸನಕಂದಮಂ ಪಡದು (ಅಪ್ಪ· ೦೬-೩೦) ; ನಿಧಿಗನುಂ ರಾಜಕನ್ಯೋತಮುಂ . . . ಮುಡುಪಿ ಭವನಾಮಕ ಲೋಕದೊಳ್ ಮಹರ್ಧಿಕರವರಾದರ್ (ಜಿಪ್ರ· ೯-೨೪ ೪). [ಸಂ.]

ಮಹರ್ಲೋಕ (ನಾ)· ಏಳು ಊರ್ಧ್ವಲೋಕಗಳಲ್ಲಿ ನಾಲ್ಕನೆಯದು : ಪರಮಜಂಗಮವಲ್ಲಿ ಹದಿನಾಲ್ಕುಲೋಕದಗಳದಂಗಿದವಪ್ಪ. . . . ವಕ್ಷದಲ್ಲಿ ಮಹರ್ಲೋಕ (ಅಂಪೇ. ೦೪೨-೦೩೯). [ಸಂ.]

ಮಹರ್ಷಿ (ನಾ)· ಶ್ರೇಷ್ಠನಾದ ಋಷಿ : ಪಂಪಾತಪಸ್ವಿ : ಶ್ರೀರಾಮ ಕಥೆಯಂ ಮಹರ್ಷಿ ನಾರದವೀಣೆಯಿಂ ಕೇಳ್ದು (ತ್ರೀಣಾಚ. ೦-೦): ಮಹರ್ಷಿಗಳ ಸಂದೇಶವನ್ನು ಲೋಕಕ್ಕೆ ಪ್ರಕಾಶಪಡಿಸುವವರಾದ್ದರಿಂದ ವ್ಯಾಖ್ಯಾಕಾರರ ಪ್ರಭಾವವೂ ಅತಿಶಯವಾದದ್ದೆ (ಪುಗ್ಯಕ· ೪೪ ೨೦೦೪). [ಸಂ.]

ಮಹಲ್ 'ಮಹಾಲು' ನೋ·

ಮಹಲಕರಿ 'ಮಹಾಲಕರಿ' ನೋ·

ಮಹಲುದಾರ (ನಾ)· ಮಹಲಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಅಧಿಕಾರಿ : ಜೋಪದಾರ, ಮಹಲುದಾರ, ನಭೂಟ . . . ಸಂಗೀತಗಾರ ಮುಂತಾದವರು (ಕಃಜಾಕಂ· ೨. ೨೨೭) : ಒಂದು ದಿನ ಅರಿಅರಿಲ್‌ಪಾಷನ ಮಹಲುದಾರನು . . . ತಾನು ಬಂದಿರುವ ವಿಷಯವನ್ನು ಅರಸರಿಗೆ ಹೇಳಿ ಕಳುಹಿಸಿದನು (ಜಿಪ್ರ· ೦).

[ಮಹಲ್ (< ಮಹಾಲು) + – ದಾರ್]

ಮಹಲು 'ಮಹಾಲು' ನೋ·

ಮಹವುರುಮೆ (ನಾ)· ಒಂದು ಬಗೆಯ ದೊಡ್ಡವಾದ್ಯ : ಸುಸ್ವರಪೂರಿತ ಮಹವುರುಮೆಗಳಬ್ಜಿಮಾಗ(ಕೂಪಕಥ· ೬-೦೭)· [< ಮಹಾ + ಉರುಮೆ]

ಮಹಸೂಲು (ನಾ)- ೧. ಕಂದಾಯ ; ತೆರಿಗೆ ; ಸುಂಕ : ಈ ಮಹಸೂಲಿನಲ್ಲಿ ಸ್ಥಳ ಖರ್ಚು ಹೋಗಲಾಗಿ ಬಾಕಿ . . . ಮಸೂಲು ಮಾಡಿಕ್ಕೊಂಡು (ಶಾಸನಂ. ೫೯, ೬೬); ಸರಕುಗಳ ಮೇಲೆ ಸುಂಕ ತೆಗೆದುಕೊಳ್ಳಬೇಕೆಂಬ ಅರ್ಥವುಳ್ಳ ರೆವಿನ್ಯೂ—ಆಕ್ಟ್ (ಮಹಸೂಲು ಖಾತೆಯ ಸಂಬಂಧದ ಆಕ್ಟ್) (ಆಂಗ್ಲ. ೨೦೬). ೨. ಜಮೀನಿನಿಂದ ಬರುವ ಆದಾಯ,—ಹುಟ್ಟುವಳಿ: ಕೋರುಪಾಲನ್ನು ಗೌಡನಿಗೆ ಪಂಚ್ಚಿಸಿ ತನ್ನ ಖಾಲಿಜ ಮಹಸೂಲಿನಲ್ಲಿ ಮಿತವ್ಯಯದಿಂದ ಜೀವನ ಸಾಗಿಸಿ ಪಾಯಪ್ಪ . . . ಖಾತೇದಾರನಾಗಿದ್ದ (ಶುಕ. ೦೦೯). [←ಆರ್. ಹಿಂ. ಮರಾ. ಮಹಸೂಲ್]

ಮಹಸೂಲುದಾರ (ನಾ). ಕಂದಾಯವನ್ನು ವಸೂಲು ಮಾಡುವವನು : (ಅ). [ಮಹಸೂಲು + —ದಾರ್ಃ/ ಹಿಂ. ಮಹಸೂಲದಾರ್ =ಕಂದಾಯವನ್ನು ತೆರುವವನು]

ಮಹಳ, ಮಾಹಳ, ಮಾಳ್ಕ, ಮಾಳಯ (ನಾ). ೧. ಭಾದ್ರಪದ ಕೃಷ್ಣ ಅಮಾವಾಸ್ಯೆ ಮತ್ತು ಅಂದು ಸರ್ವಪಿತೃಗಳಿಗೆ ಮಾಡುವ ಶ್ರಾದ್ಧ : "ಮಹಳ—ಮಹಾಲಯ = ಒಂದು ಪಿತೃಪಿಣ್ಡ" (ತಕ್ಕಟೀ. ೩೪) ; ಮಹಳದ ಪಕ್ಷದೊಳೊಂದುದಿವಸಂ . . . ಆಕಂಠೋಪ್ಯಂಬರ ಮುಂಡೊಯ್ಯನೆ ಪಾರ್ವಂ ಬಂದಾ ಕೊಡನ ಕೆಟಗೆ ಪಟ್ಟಿರ್ದಾಗಳ್ (ಹುಚ್ಚಟೀ. ೦೮೫-೨೬) ; ಎರ್ಮೆಯ ಪೋರಿಯನಿಕ್ಕಿದನೂರ್ಮಾರಿಗೆ ಮತ್ತ ಮುದನೆ ಮಹಳಕ್ಕಿತ್ತಂ (ಹುಚ್ಚಟೀ. ೬-೩೭). **ಮಾಹಳ** : ೧. ಮಾಹಳ ಪಿತೃಕಾರ್ಯಂ ಮೊದಲಾದ ನಿಮಿತ್ತಂಗಳಂ ಮಾಬ್ಬರ್ಲ್ಲಿ (ಕಬಕ. ೪). ೨. ಅಮಾವಾಸ್ಯೆಯ ಸಮಯ (?) : ನೆಲಲೊಳ್ ತಲೆಗಾಣದೊಡಂ ನೆಲಲೊಳ್ ಲೌ(ಳಿ)ದ್ಯಂಗಳಾಗಿ ತೋಱುವೊಡಂ ಮಾಹಳವಲ್ಲದೆ ಕುಂದು ಪೊಡಂ ಕಟಿಯೆ ಕರಂ ರೂಪುಗೊಟ್ಟರಲ್ ಮರಣಭಯಂ (೦೪೬ಣ. ೬-೩೩). **ಮಾಳ್ಕ** : ೧. "ಮಾಳ-ಮಹಾಲಯ" (ತಕ್ಕಟೀ. ೩೩) ; ಸೂಳೆಯ ಮಗ ಮಾ[ಣಾಂ. ಮಹ]ಳವ ಮಾಡಿದರೆ ತಾಯ ಹೆಸರಾಯಿತ್ಕಲ್ಲದೆ ತಂದೆಯ ಹೆಸರಿಲ್ಲ (೨೫೮. ೨೨೬) ; ಹಾರುವ ಮಾಳವ ಕಂಡಂತೆ . . . ತಾನು ಚೆನ್ನಬಸವಣ್ಣನ ಪಾದಕಮಲವ ನೋಡಿ ಹರುಷಿತನಾದೆ (೬೭೪. ೨೦-೦೦೪) ; ಮರುಳಯಾರುವರು . . . ಮಾಳದ ಮನೆಯ ಬಿದಿು ಚೌದ ಮನೆಯು ಕುಂತಃಂಬ ವಿದ್ಯೆಯನ್ನರಿವಿಲ್ಲದೆ ನಿಮಗೆ ತೀಯುದೀ ಸಂಗರವ ಮಾತು (೩೫೬೫. ೪೬-೦೬). **ಮಾಳಯ** : ೧. ಭುವನಲ್ಲು ಭಟ್ಟಂ ; ಕೊಂದುದು ಬಿಲ್ಲುಲ್ಲು ಪುರ್ ; ಬಂದುದು ಕಾಳೆಗದ ಮೊಸೆಗಲ್ಲು ಮಾಳದುದ ಮನೆಗೆಂದಂ (ಶಾಖಾಕ್ಕ. ೮೨-೦೬). [< ಸಂ. ಮಹಾಲಯ]

ಮಹಳಪಕ್ಷ, ಮಾಳಪಕ್ಷ (ನಾ). ಭಾದ್ರಪದ ಬಹುಳಪಕ್ಷ.– ಕೃಷ್ಣಪಕ್ಷ: ಮುನ್ನಮೆ ಸತ್ವರಂ ಪಿತರ ಪಿತಾಮಹರ್ಕಳೆಂದವರ್ಗೆ ಮಹಳ [ಶಾಣಾಂ.ಮಹಾ] ಪಕ್ಷದೊಳ್ಪಂಬಳಕ್ಷ ಪಾಯಸತುಪ್ಪಮಂ ಕೆಲರ್ಗಿಕ್ಕೆ ಸ್ವರ್ಗಮಾದನೇಕ ಗತಿಗಳೊಳಿರ್ದ ಪಿತಾಮಹಾಪಿತರ್ಕಳ ಬಸಿರ್ತೀವಲಕ್ಕು ಗಡಂ (ಕಬಾಕ. ೯-೬೨ ೫) ; ಬೌದ್ಧಂ . . . ಜುಜ್ಞವಿಧಿಯೊಳಂ ಮಹಳಪಕ್ಷದೊಳಂ ಪಿತೃಕಾರ್ಯದೊಳಂ ವಿವಾಹೋತ್ಸವದೊಳಂ- ಪಶು ಮೊದಲಾಗೊತೆಯ ಪ್ರಾಣಿಗಳಂ ಕೊಂದವಶ್ಯಂ ತಿನಲಕ್ಕುಂ (ಕಬ್ಬ. ೦-೦೦ ೫). **ಮಾಳಪಕ್ಷ** : ಭಾದ್ರಪದಕೃಷ್ಣಪಕ್ಷವನ್ನು 'ಮಾಳಪಕ್ಷ' ಎಂದು ಕರೆಯುವರು (ಹುಚ್ಚಟೀ. ೬೨). [ಮಹಳ + ಪಕ್ಷ]

ಮಹಾ (ಗು). ೧. ದೊಡ್ಡ ; ಹಿರಿಯ : 'ಮಹಾಪರಿವೆ', 'ಮಹಾಮಂಗಳಾರತಿ' ಪರಾ. ೨. ಶ್ರೇಷ್ಠ ; ಉತ್ಕೃಷ್ಟ : 'ಮಹಾವಾರುವ' ಪರಾ. ೩. ಸಮೃದ್ಧವಾದ ; ಹೆಚ್ಚಾದ : 'ಮಹಾಬೆಳಗು' ಪರಾ. (ನಾ). ೪. ದೊಡ್ಡದು ; ಮಹತ್ತ್ವವಾದುದು : ಇದೇನು ಮಹಾ ! ಅನ್ನು ಹೋಗುವುದಕ್ಕೆ ಆಗದಿದ್ದರೆ ನಾನೇ ಹೋಗುತ್ತೇನೆ (ತಂಜಾಪ್ರ. ೬); ಅದೇನು ಮಹಾ ! ಯಾವು ಬೇಕಾದರೂ ಆ ಕೆಲಸವನ್ನು ಮಾಡಬಹುದು (ಗ್ರಾಪ). ೫. ಬಹಳ ; ತುಂಬ ; ಹೆಚ್ಚು : P ಈ ರೂಪವು ಕೆಲವು ಸಲ ಕನ್ನಡಶಬ್ದಗಳೊಡನೆ ಕೂಡಿದಾಗ ಅವ್ಯಯದಂತೆ ಪ್ರಯೋಗವಾಗುತ್ತದೆ : ತಾನು ಮಹಾ ತಿಳಿವಳು ಅಂತ ಅವಳು ಅಂದುಕೊಂಡಿದ್ದಾಳೆ (ಗ್ರಾಪ). ೬. ದೊಡ್ಡ ಮನುಷ್ಯ : ಶ್ರೇಷ್ಠ ವ್ಯಕ್ತಿ : ಅವನು . . . ಮೇಷ್ಟರುಗಳಿಗೆ ಕಾಣಹೊಡದು ಪ್ರಶ್ನೆಗಳನ್ನೆಲ್ಲ ಮೊದಲೇ ತಿಳಿದುಕೊಂಡು ಬಿಟ್ಟು ಮಹಾ ಅಂತ ನಮ್ಮೆದುರಿಗೆಲ್ಲ ಪೋಜು ಮಾಡ್ತಾನೆ (ಜ್ಞಾಬಿಚ್ಚೆ. ೯). P ಸಂಸ್ಕೃತದ 'ಮಹತ್' ಎಂಬ ಶಬ್ದವು ಸಮಾಸಗಳ ಮೊದಲಲ್ಲಿ ಕೆಲವು ಸಲ 'ಮಹಾ' ಎಂಬ ರೂಪವನ್ನು ಹೊಂದುತ್ತದೆ.

[< ಸಂ. ಮಹತ್]

ಮಹಾಂಗ (ನಾ)- ೧. ಒಂಟೆ : "ಉಷ್ಟ್ರಃ . . . ಮಹಾಂಗಃ ವಂಟೆಯು ಹೆಸರುಗಳು" (ನಿಘಂ೦೬. ೫೧೬). ೨. ಒಂದು ಬಗೆಯ ಇಲಿ. ೩. ಶಿವನ ಒಂದು ಹೆಸರು. [ಸಂ.]

ಮಹಾಂತ (ಗು)- ೧. ಅಧಿಕವಾದ ; ಹೆಚ್ಚಿನ ; ಅತಿಶಯವಾದ : ಅಭಮನ್ಯು ಮಹಾಂತಪರಾಕ್ರಮದಿ . . . ಸೂರೆಗೊಂಬೆನು ನಿಮ್ಮ ಜಾರ್ದಂದಿ ಮರ್ಗವ ವೌರುಜಿವ ನೋಡಂದಾ (೦೦೧. ೯). ೨. ವಿಶಾಲವಾದ ; ವಿಸ್ತಾರವಾದ : ಆತತೋನಮಹಾಂತಸಂತತಮವಿಶ್ರಾಂತ ಜಲಧಿಯ ಬೃಹನ್ನೀಲಾವಿರಾಡ್ರಂಗದೊಳ್ . . . ಗಿರಿಯ ಪಕ್ಕಿಗಳ್ ಪರ್ವದುವ (ಕೃಣಕಾ. ೦೧೦-೬೨೯). (ನಾ). ೩. ವಿಶಾಲವಾದುದು ; ವಿಸ್ತಾರವಾದುದು : ನಿಶ್ಚಲಮುಂ ಮಹಾಂತಮುಮಮಾಹಿತ ಸಮಸ್ತಪದಾರ್ಥಮುಮಾವ ಗಗನಮಂಡಲಮಂ . . . ನೋಡುತ್ತಿರ್ಪನ್ನೆಗಂ (ಕಂವ್ರಕ್ಷ. ೯-೧ ಪ). ೪. ಹೇರಳ ; ಯಥೇಚ್ಛ ; ಸಮೃದ್ಧಿ : ಧೃತರಾಷ್ಟ್ರನ ಮಹಾಂತವಾದ ಭೋಗವನ್ನು ನೋಡು. ಸಮ್ಮ ಬದುಕನ್ನೂ ನೋಡು (೦೪೬ಣ. ೦೧೩). ೫. ಮಹಾತ್ಮ ; ಶ್ರೇಷ್ಠ ; ಪೂಜ್ಯವ್ಯಕ್ತಿ : ಇದು ಕಾರಣ ಗುಹೇಶ್ವರಲಿಂಗವ ತನ್ನೊಳಱಿದೆನೆಂಬ ಮಹಾಂ[ಣಾಂ. ಹಂ]ತಂಗೆ ಸಕ್ಕಿಯಾಚಿರಗೆಯೇ ಸಾಧನೆ ಕಾಣೆ ಭೋ (೦೪೪೦. ೦೬೯-೬೬೧) ; ಕೇಶಿರಾಜಯ್ಯಂ ಮಹಾಂತನು ಮಾದಿರಾಜಯ್ಯಂ ಮೊದಲಿವ್ವಾ ಕಟಕ ದೊಳಗಿರುತಮಿಪ ಸರ್ವಲಿಂಗದಂತರು . . . ಬರೆ (೦೪೪. ೬೦-೯) ; ಎಸ್ಟೆಯ ಭಾಗ್ಯವೇ ತನುವ ಪುಟಿತೆ ಕೈಕೊಂಡವೊಲು ಬಂದೆ ಮಹಾಂತ (೦೦೧೧. ೯-೬-೬೬). [<ಸಂ. ಮಹತ್]

ಮಹಾಂತು (ನಾ)- ಅತ್ಯಂತ ಶ್ರೇಷ್ಠವಾದುದು : ನಾದಬಿಂದುಕಳಾತೀತವಾದ ಪರವಸ್ತುವೆ ಮಹಾಂತು ನೋಡಾ ಶ್ರುತಿತತಿಗಸಾಧ್ಯವಾದ ಪರವಸ್ತುವೆ ಮಹಾಂತು ನೋಡಾ (೦೦೦೯. ೭೦೦-೭೬). [<ಮಹಾಂತ]

ಮಹಾಂಧಕಾರ (ನಾ)- ಕಗ್ಗತ್ತಲೆ ; ಗಾಢಾಂಧಕಾರ : ಕಲ್ಪಾಂತದವರಿ ಬಿಡುಬಿದುದೀ ಬ್ರಹ್ಮಾಂಡ . . . ಇನಶಶಿಕಿರಣವಿಲ್ಲ ಮಹಾಂಧಕಾರ ಸಭಾರ ವಾಯ್ತು (ಕಾಣ್ಯ. ೦೯-೨೨) ; ದಿಕ್ಕಕ್ರದೊಳ್ ಕಾಳಾಭೀಳಮಹಾಂಧಕಾರಮೆಸಗುಂ ಕಣ್ಗಾಲ್ಗೆ ತಾನೀಯದೇ (ಪಾಪ್ಯ. ೭-೦೬). [ಸಂ.]

ಮಹಾಂಬುಜ (ನಾ). ೧. ಒಂದು ನರಕದ ಹೆಸರು ; ರೌರವ ಧ್ವಾಂತ . . . ಮಹಾಯುಜ ಕಾಲಸೂತ್ರಗಳೆಬುವೇ ಎಂಬು ನರಕಂಗಳು (೦೪೯. ೦೬೧). ೨. [ಗಣಿತ] ಒಂದು ದೊಡ್ಡ ಸಂಖ್ಯೆ ; ಒಂದು ಲಕ್ಷ ಕೋಟಿ. [ಸಂ.]

ಮಹಾಕಂದ (ನಾ)- ಬೆಳ್ಳುಳ್ಳಿ, ಹಸಿತುಂಬಿ ಮುಂತಾದ ಗಡ್ಡೆ ಮತ್ತು ಅದರ ಸಸ್ಯ : "ಮಹಿಷೀಕಂದಃ—ಮಹಾಕಂದ" (ಓಷ. ೦೫೫). [ಸಂ.]

ಮಹಾಕಲ್ಪ (ನಾ). ೧. ಅತಿದೀರ್ಘವಾದ ಒಂದು ಕಾಲಚಕ್ರ ; ಬ್ರಹ್ಮನ ಆಯುಸ್ಸಿನ ನೂರು ವರ್ಷಗಳಷ್ಟು ಕಾಲ. ೨. ಶಿವನ ಹೆಸರುಗಳಲ್ಲಿ ಒಂದು. ೩. [ದ್ವೈತ] ಸೃಷ್ಟಿಕಾಲದ ಒಂದು ಭಾಗ ; ಅಣುವಿನಿಂದ ಹಿಡಿದು ವಿಯತ್ಪನ ವರೆಗೆ ಸೃಷ್ಟಿಸುವ ಕಾಲ : ಸೃಷ್ಟಿ

ಕಾಲವಲ್ಲಿ ಮಹಾಕಲ್ಪ ಮತ್ತು ಬ್ರಹ್ಮಕಲ್ಪವೆಂದು ಎರಡುವಿಧ. ಮಹವಾದಿ ಅಂಡಪರ್ಯಂತ ಸೃಷ್ಟಿಕಾಲವೆ ಮಹಾಕಲ್ಪ (ಓಂಕಾ. ೨೬೪). 'ಬ್ರಹ್ಮ ಕಲ್ಪ' ಪರಾ. [ಸಂ.]

ಮಹಾಕಲ್ಯಾಣ (ನಾ). ೧. ಅತ್ಯಂತ ಮಂಗಳಕರವಾದುದು. — ಶುಭಕರವಾದುದು. ೨. [ಜೈನ] ಜಿನರಿಶವು ಭೂಮಿಯಲ್ಲಿ ಹುಟ್ಟಿ ದಾಗಿನಿಂದ ನಿರ್ವಾಣ ಹೊಂದುವವರೆಗೆ ಆತನ ಜೀವನದಲ್ಲಿ ನಡೆಸುವ ಐದು ಬಗೆಯ ಮಂಗಳಕರವಾದ ಉತ್ಸವಗಳಲ್ಲಿ ಪ್ರತಿಯೊಂದು : ಚತುರ್ನಿಧದೇವನಿಕಾಯಂ. ಪುರುದೇವಪರಿನಿರ್ವಾಣಮಹಾಕಲ್ಯಾಣಪೂಜಾ ನಿರ್ವರ್ತನಾಭಿಲಾಷಿಯಾಗಿ . . . ಆರ್ಪಿ (ಆದಿ. ೦೬-೩೦ ಶ). 'ಪಂಚ ಕಲ್ಯಾಣ' ಪರಾ. [ಸಂ.]

ಮಹಾಕವಿ (ನಾ). ಮಹಾಕಾವ್ಯವನ್ನು ರಚಿಸಿಬಹುದು : ಸಜ್ಜನಮನ್ಮಂ ಸುಗಂ ಮಹಾಕವಿ . . . ಮೃಗಪ್ಪೋದ್ಯವಂ (ಜಾತಕ. ೦೬-೦೦) : ಬಹುಶಾಸ್ತ್ರಪ್ರಜ್ಞನಪ್ಪಾ ಮಹಾಕವಿಯಂ ಕಂಡೊಡೆ ದಗ್ಧವಾಕ್ಸಿಬುದನೆಂದಿಂ ತಾರ್ದು ಹಾಸ್ಯೋಕ್ತಿಯಿಂ ಕವಿಗಳ್ ಪರ್ತಿಪರ್ಲದಾದ ಪೊಜೆ ಮುಟ್ಟೋದಂತವರ್ ಪರ್ತಿಪರ್ (ಸಿತ್ಕ. ೦-೪೬): ಆವನು ಉಳಿದೆಲ್ಲ ವಿಷಯಗಳಲ್ಲಿ ಮಹಾಜ್ಞನೂ ಮಹಾಕವಿಯೂ ಆಗಿ ಈ ವಿಷಯದಲ್ಲಿ ಅಜ್ಞನೆ, ಅಸೂಯೆ, ಆಕ್ರೋಶಗಳನ್ನು ತೋರಿದ್ದರೆ ಅದು ಅವನ ಅಧಃ ಪಾತವಾಗದೇ ? (ಕಡ. ೩೨). [ಸಂ.]

ಮಹಾಕಾಯ (ಗು). ೧. ಭಾರಿದೇಹವುಳ್ಳ : ದೊಡ್ಡ ಶರೀರದ : ಅನುಕುಪ್ಯರೂಪ್ಯ ಕನಕಾಂಬರರತ್ನಾಭರಣಭಾರಧಾರಣಧೌರೇಯಮಹಾ ಕಾಯದೈವಧಿಕನಿಕರಮುಖಂ . . . ಬಲಿಸಿ ಕುಳ್ಳಿರಿಸಿ (ಪಂಪಭಾ. ೬-೨೫ ಶ). (ನಾ). ೨. ದೊಡ್ಡ ಶರೀರವುಳ್ಳವನು : ಒತ್ತಾಯತಿವೇಕವಿಳತಯಿಂ ತಮ್ಮಂ ತಾಮೆ ಕಟ್ಟಿಸಿಕೊಳ್ವ ಮಹಾಕಾಯಂಗಳಪ್ಪ ಕರಿಪತಿಗಳಿಂದಂ (ಆಂಪು. ೨-೦೦ ಬ); ಅಸುಪಮುಬಲಂ ಮಹಾಕಾಯನೆನಿಗೆ ಪಿರಿದುಂ ಸಹಾಯ ನೆಂದೇನಾನುಂ ಪುನದೊಳ್ ನೆನೆವೆ (ಪಜಪಂ. ೦೦೦-೯). ೩. ದೊಡ್ಡ ಶರೀರವುಳ್ಳವನು. ೪. ಆನೆ : ಗಜ. ೫. ಈಶ್ವರನ ಅನುಚರರಲ್ಲಿ ಒಬ್ಬ : ನಂದಿ. [ಸಂ.]

ಮಹಾಕಾರ್ಪಾಸಚೂರ್ಣ (ನಾ). ಹುರಿದ ಹತ್ತಿಯ ಕಾಳು ಮೊದಲಾದುವುಗಳಿಂದ ಮಾಡುವ ಒಂದು ಬಗೆಯ ಚೂರ್ಣ : ಹುರಿದ ಹತ್ತಿಸರಳ ಬೀಜ ಗ ೩ ಕೂಷ . . . ಮಾವಳದ ಹಣ್ಣಿನ ಕೇಸರ ಗ ೧ ತೂಕ. ಸಪ ಚೂರ್ಣಂ ಮಾಡಿ . . . ಸೇವಿಸಲು ಪ್ರೇತ್ಯರೋಗ . . . ಅತಿಸಾರ ಮುಂತಾದ ಸಕಲರೋಗವು ಗುಣವಪ್ಪುಂ (ಶಿಚ್ಚಿ. ೦೫೩). [ಸಂ.]

ಮಹಾಕಾಲ. ಮಹಾಕಾಳಿ (ನಾ). ೧. ಶಿವನ ರೂಪಗಳಲ್ಲಿ ಒಂದು: ಲಯಕಾರಕನಾದ ಶಿವ : "ಅಷ್ಟಮೂರ್ತಿ, ಅಭಿರ್ಭದ್ರಃ. ಮಹಾ ಕಾಲಃ . . . ಅಗ್ನಿರೋಚಿಷಃ-ಇತಿ ಶಿವನ ಪೆಸರುಗಳ್" (ಪ್ರಾಸಂ. ೦೯). ೨. ಶಿವನ ಪ್ರಮಥಗಣದಲ್ಲಿ ಒಂದು ವರ್ಗ ಮತ್ತು ಆ ವರ್ಗಕ್ಕೆ ಸೇರಿದವನು. ೩. ಅತ್ಯಧಿಕವಾದ ಕಪ್ಪುಬಣ್ಣ. ೪. ಸೂರ್ಯನು ಕಾಣದಂತೆ ಮೋಡ ಮುಚ್ಚಿಕೊಂಡಿರುವ ದಿನ: ದುರ್ದಿನ. ೫. ಕಟು ಹೃದಯವುಳ್ಳವನು: ಕ್ರೂರಿ. ೬. ಒಂದು ಬಗೆಯ ಮರ: ಗೇರು. ಫಲ್ಗುತಕ. ೭. ವಿಷದ ಹಣ್ಣುಗಳನ್ನು ಬಿಡುವ ಒಂದು ಬಗೆಯ ಮರ : ಕೆಂಪಾಕ : ಕಾಂಜೀರ : "ಫಲ್ಗುತಕಂ ದುರ್ದಿನಂ ಶಿವಪುಂ ತಕ್ಷ್ರಮಥಾಧಿಭೇದವನಿತು ಕ್ರೂರಂ ಮಹಾಕಾಲ[ಪಾಠಾಂ- ಳ]ಮಕ್ಕುಂ" (ಶಾಸಾ. ೧೮). ೮. ಉಜ್ಜಯಿನೀಕ್ಷೇತ್ರದಲ್ಲಿರುವ ಪ್ರಸಿದ್ಧವಾದ ದ್ವಾದಶಜ್ಯೋತಿರ್ಲಿಂಗಗಳಲ್ಲಿ ಒಂದು : ಉಜ್ಜಯಿನಿಯ ಮಹಾಕಾಲ ದೇವಸ್ಥಾನದಲ್ಲಿ. ವರ್ತಕಯವಿದ್ಯ 'ವಿಜಯವಸ್ತು ಕಾಳಿದಾಸನ ನಿರೂಪಿಸುತ್ತಾನೆ (ಶಾಶಾ. ೦೬೦). ೯. ವಿಷ್ಣುವಿನ ಪೆಸರುಗಳಲ್ಲಿ ಒಂದು ೧೦. ಈಶ್ವರನ ಅನುಚರರಲ್ಲಿ ಒಬ್ಬ : ನಂದಿ. ೧೧. "ಭೂತ. ವರ್ತಮಾನ. ಭವಿಷ್ಯತ್ ಏಂಬ ವಿಭಾಗವಲ್ಲದ ಅವಿಚ್ಛಿನ್ನಕಾಲ" (ತ್ರಿಸ. ೪- ೪೫೬) : ಮಹಾಕಾಲದಲ್ಲಿ ನಮ್ಮಿಂದ ನೀವ ಸ್ವಯಂಭುವಾರ್ಗೊರಯ್ಯಾ ಒಬನಂತಕಾಲ (ಪಜಸ. ೪- ೬-೦೩). **ಮಹಾಕಾಳಿ** : ೧. "ಪಸುಪತಿ ಪ್ರಮಥರ್ ಕಪ್ಪಂ ಸುನಿದಿ ಗೆಜ್ ಕ್ರೂರರ್ಕೈದು ಮಹಾಕಾಳಂ" (ಪಾಪ್ರಾಂ. ೦೨೩). ೨. ವಾತಾಲಾಗದುವನೆ: ಮೊಲಲು ಶಿವರುದ್ರನು ಮತ್ತವನಿಂ ಮಹಾಕಾಳನೈದಿದಂ (ಪಪಗ. ೬೪) ; ಪುಟ್ಟಿಸುತ್ತುಂ ದೇಕ್ರದಿಂದಿಬ್ಬನಪ ದನುಜರಂ . . . ಗೀತನೃತ್ಯ ಕ್ರೀಡೆಯುಸ್ಪಂತಲ್ಲಿ ಕೋಲಾಹಲದುನುಡುಗಿಸುತ್ತುಂ ಮಾಹಾಕಾಳನೆರ್ದಂ (ಪಾಪಪ. ೦೪-೦೩೩). ೩. ಎರಡುಂ ಭಾಗದೋರ್ವ ದುಷಾಕಾಳರೂಪಮಂ ನಿಂದು ನೋಡುತ್ತುಂ (ಪಂಪಕೃ-೩-೦೯ ಪ). ೪. "ಕೆಂಪಾಕ್ಷ ದುಮಾಕಾಳ:-ಈ ೨ ಕಾಂಜೀರಂ" (ಶಬ್ದಮ. ೪೪-೩೦). ೧೨. ಕಗ್ಗತ್ತಲೆ: ಗಾಢಾಂಧ ಕಾರ : ಭೂತಗಣದ ಮೇಳವಲ್ಲಿ ಮಹಾಕಾಳವಾಳವಲ್ಲಿ ಸತಿಪತಿಯರ ಜೋಡಿಜೊದು ಕಾಣಿಮುಪುದನು ಕಂಡಿತು (ಗು. ೦೦೬-೬). ೧೩. ಅಗಮಗಳಲ್ಲಿ ಒಂದು : ಕಾಲಮಹಾರೌರವೋತ್ಕರೌಪಾರ ಕಾಳ ಮಹಾಕಾಳ ಇಂದ್ರಾಗಮವೆಂದು ರೌದವಾಗಮವಾಜುಧೇದಂಗಳು (ಪಪಗ. ೪೩). ೧೪. [ಜೈನ] ಚಕ್ರವರ್ತಿಯ ಬಳಿಯಿರುವ ನವನಿಧಿಗಳಲ್ಲಿ ಒಂದು : ಶ್ರೀಗೃಹದೊಳ್ ಪುಟ್ಟಿದ ಕಾಳ ಮಾಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳಂ (ಆಂಪ್ರ. ೦೩-೬ ಪ) : ಕಾಳ ಮಹಾಕಾಳ . . . ಶಂಖ ಸರ್ವರತ್ನಂಗಳೆಂಬೊಂಬತ್ತು ನಿಧಿಗಳುಮಾನನುಕ್ರಮದೋರ್ಪಿಸಿ (ಪಂಪ್ರ. ೬-೦೦೦ ಪ). [ಸಂ.]

ಮಹಾಕಾಲಿ. ಮಹಾಕಾಳಿ (ನಾ). ೧. ಆದಿಶಕ್ತಿಯ ರೂಪಗಳಲ್ಲಿ ಒಂದು: ದುರ್ಗೆ. ೨. [ಜೈನ] ಹದಿನಾರು ಜನ ವಿದ್ಯಾದೇವತೆಗಳಲ್ಲಿ ಒಬ್ಬಳು. **ಮಹಾಕಾಳಿ** : ೧. ಮಹಾಕಾಳಿಯೆಂಬ ಶಕ್ತಿಮ್ಮಳಿನಿಂ . . . ಈಶಾನ್ಯದ ಬಾಗಿಲ್ಗೆ ಸಂಹಾರಭೈರವನರ್ಪಂ (ಪಪಗ. ೨೩೪) ; ಲಲಿಸಿಸುರ ದೃಮುಖವಾದ ಕೈವೆರಳುಗಳನ್ನು ಕತ್ತರಿಸಿ . . . ಹೊತ್ತು ಬರುತ್ತಿರುವ ಮಹಾಕಾಳಿಯೆಂದು ವರ್ಗಸುತ್ತಿದ್ದರೋ ಏನೋ (ಹಬಲಿ. ೪೧೩). [ಸಂ. ಮಹಾಕಾಲೀ]

ಮಹಾಕಾವ್ಯ (ನಾ). ೧. ಶ್ರೇಷ್ಠವಾದ ಕಾವ್ಯ : ವ್ಯಾಸ ವಾಲ್ಮೀಕಿ ಕಶ್ಯಪಪ್ರಭೃತಿವನೆಚಿತಂಗಳಪ್ಪ ಮಹಾಕಾವ್ಯಂಗಳೊಳಂ . . . ವಿವಿಧಾ ಮುಧ್ಯಂಗಳೊಳ್ಮಮತಿಪ್ರವೀಣ[ನು]ಂ . . . ಆಗಿ (ಜಿಂದಪು. ೨-೪೪ ಪ) : ಮಹಾಕಾವ್ಯಕ್ಕೆ ಒಪ್ಪುವ ಫಲವಾವ ಫಲನಿಗಳೇ ರಾಮಾಯಣದ ಕಥಾ ವಸ್ತುವಾಗಿದೆ (ಜಾಕಥ. ೫೬) : ಮಹಾಕಾವ್ಯ – ೫ : ಕಾಳಿದಾಸನ ರಘುವಂಶ ಮತ್ತು ಕುಮಾರಸಂಭವ. ಭಾರವಿಯ ಕಿರಾತಾರ್ಜುನೀಯಂ. ಮಾಘನ ಶಿಶುಪಾಲವಧ. ಶ್ರೀಹರ್ಷನ ನೈಷಧಚರಿತ (ಶ್ರಿಚಕ್ರ. ೨೨೬). ೨. ಅಪ್ಪಾ ದಶ ವರ್ಣನೆಗಳಿಂದ ಕೂಡಿರುವ ಕಾವ್ಯ: P ಆಧುನಿಕವಿಮರ್ಶಕರು ವಿಶ್ವದ ಮಹಾಕಾವ್ಯಗಳನ್ನು ಅಭ್ಯಸಿಸಿದಾಗ ಅಂತಹ ಕಾವ್ಯರೀತಿಯನ್ನು ಬೇರೆಯ ರೀತಿಯಲ್ಲಿ ವಿವರಿಸುತ್ತಾರೆ. EPIC ಎಂಬ ಹೆಸರುಳ್ಳ ಅಂತಹ ಕಾವ್ಯದಲ್ಲಿ ಸಾಹಸಮಯವಾದ ಕ್ರಿಯೆಯೂ ವ್ಯಕ್ತಿಗಳೂ ತಮ್ಮುಕ್ತವಾದ ಭಾಷಾಪ್ರಯೋಗವೂ ದೀರ್ಘ ಕಥೆಯೂ ಇವೆ. ಅವರ ಅಪರಣ ಪ್ರಾಜೇನವಾದುದಾಗಿರಬೇಕು. ಉದ್ದೇಶ ಉದಾತ್ತವಾಗಿಯೂ ವಸ್ತುಸಂವಿಧಾನವು ಸರಳ ವಾಗಿಯೂ ಇದ್ದು. ಪೌರಾಣಿಕ ಸಾಂಪ್ರದಾಯಿಕ ವಿವರಣೆಗಳು ತುಂಬಿರಬೇಕು. ಧೀರೋದಾತ್ತನಾಯಕನಿದ್ದು. ಅವನಿಗೆ ಅತಿ ಮಾನವ ದೈಹಿಕಶಕ್ತಿಯೋ , ಶೀಲಸ್ವಭಾವವೋ ಮಾನಸಿಕ

ಉದಾತ್ತತೆಯೋ ಪ್ರಕೃತಿಸಿದ್ಧವಾಗಿರಬೇಕು. ಕಥೆಯಲ್ಲಿ ಅತಿ ಭೌತಿಕಪ್ರಭಾವಗಳು ಕ್ರಿಯಾಮುಖವಾಗಿರಬೇಕು. ಇಲಿಯಡ್, ಒಡಿಸ್ಸಿ, ಅಯಾವತ, ಫ್ಯಾರಡೈಸ್ ಲಾಸ್ಟ್ ಮುಂತಾದ ಕಾವ್ಯಗಳು ಈ ರೀತಿಯಲ್ಲಿ ಪ್ರಸಿದ್ಧವಾಗಿವೆ. ಕನ್ನಡದಲ್ಲಿ ಶ್ರೀರಾಮಾಯಣ ದರ್ಶನಂ, ಭಾರತಸಿಂಧುರಶ್ಮಿ ಮೊದಲಾದುವುಗಳನ್ನು ಈ ದೃಷ್ಟಿ ಯಲ್ಲಿ ಪರಿಶೀಲಿಸಬಹುದು : ಕೀರ್ತಿ ನೆಗಟ್ಟಂತೀ ಲೋಕದೊಳ್ ಬಲ್ಕೆ ರಂಜಿಸೆ ಬಲ್ಗೊಡಗೊಂಡು ಬಣ್ಣಿಸೆ ಮಹಾಕಾವ್ಯಂಗಳೊಳ್ ಮೆಟ್ಟಿ ಬಣ್ಣಿಸುವೆಂ ಪುಣ್ಯಪುರಾಣಮಂ ಜಿತಮನೋಜಾತಾಜಿತಸ್ವಾಮಿಯಾ (೧೮೫. ೦-೧೩). 'ಅಷ್ಟಾದಶವರ್ಣನೆ' ಪರಾ. [ಸಂ.]

ಮಹಾಕಾಳ 'ಮಹಾಕಾಲ' ನೋ.

ಮಹಾಕಾಳಿ 'ಮಹಾಕಾಲಿ' ನೋ.

ಮಹಾಕುಲ (ನಾ). ೧. ಶ್ರೇಷ್ಠವಾದ ಮನೆತನ ; ದೊಡ್ಡ ಪೀಳಿಗೆ : ಅವರು ಮಹಾಕುಲದವರು. ಅವರನ್ನು ಕದಲಿಸಲು ಪನ್ನ ಕೈರಾಗದು (೫೪೨ಖ. ೧೯). ೨. ಶ್ರೇಷ್ಠವಂಶದಲ್ಲಿ ಹುಟ್ಟಿದ ವ್ಯಕ್ತಿ. [ಸಂ.]

ಮಹಾಕ್ರತು (ನಾ). ೧. ದೊಡ್ಡ ಯಾಗ ; ಯಜ್ಞ : ನಿತ್ಯ ಮಾಡುವರಗ್ನಿ ಹೋತ್ರಂಗಳ ಮಹಾಕ್ರತುವ . . . ನಿಚ್ಚೆಯುಲಿ ರಾಕ್ಷಸಮಪ್ರಗೃಹಗಳಲಿ (ಕೌಶಿ. ೩೯-೬). ೨. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಮೂವತ್ತಾರನೆಯ ಸ್ಥಾನ ಮತ್ತು ಮೂವತ್ತಾರು ಅಂಕೆಗಳುಳ್ಳ ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ಕ್ರತು, ಮಹಾಕ್ರತು . . . ಮಹಾಪರಿಮಿತ – ಈ ೪೦ ಸ್ಥಾನದ ಉಗ್ಗಡಣೆ (ಕ್ಷತ್ರಚೂ. ೯-೩೬); ಕ್ರತು ಮಹಾಕ್ರತುವೆಂದಿವೇ ಉಗ್ಗಡಣೆಗಳು (೦೮೫೪. ೬). [ಸಂ.]

ಮಹಾಕ್ಷಪಟಲಿಕ (ನಾ). (ತನ್ನ ಕೈಕೆಳಗೆ ಅನೇಕ ಕರಣಿಕರನ್ನು ಹೊಂದಿರುವ) ನ್ಯಾಯ ಮತ್ತು ಆಯವ್ಯಯಗಳಿಗೆ ಸಂಬಂಧಿಸಿದ ದಾಖಲೆಗಳಿರುವ ಇಲಾಖೆಯ ಮುಖ್ಯಸ್ಥ : (೮೫೫೫. ೦೩). [ಸಂ.]

ಮಹಾಕ್ಷಿತಿ (ನಾ). [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಇಪ್ಪತ್ತೈರಡನೆಯ ಸ್ಥಾನ ಮತ್ತು ಇಪ್ಪತ್ತೈರಡು ಅಂಕೆಗಳುಳ್ಳ ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ಕ್ಷಿತಿ, ಮಹಾಕ್ಷಿತಿ . . . ಮಹಾಪರಿಮಿತ – ಈ ೪೦ ಸ್ಥಾನದ ಉಗ್ಗಡಣೆ (ಕ್ಷತ್ರಚೂ. ೯-೨೩). [ಸಂ.]

ಮಹಾಕ್ಷೋಣಿ (ನಾ). [ಗಣಿತ]ಸಂಖ್ಯೆಯ ಸ್ಥಾನಗಳಲ್ಲಿ ಹದಿನೆಂಟನೆಯ ಸ್ಥಾನ ಮತ್ತು ಹದಿನೆಂಟು ಅಂಕೆಗಳುಳ್ಳ ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ಕ್ಷೋಣಿ, ಮಹಾಕ್ಷೋಣಿ . . . ಮಹಾಪರಿಮಿತ ಈ ೪೦ ಸ್ಥಾನದ ಉಗ್ಗಡಣೆ (ಕ್ಷತ್ರಚೂ. ೯-೨೬). [ಸಂ.]

ಮಹಾಕ್ಷೋಭ (ನಾ). [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಇಪ್ಪತ್ತನಾಲ್ಕನೆಯ ಸ್ಥಾನ ಮತ್ತು ಇಪ್ಪತ್ತುನಾಲ್ಕು ಅಂಕೆಗಳಿರುವ ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ಕ್ಷೋಭ, ಮಹಾಕ್ಷೋಭ . . . ಮಹಾಪರಿಮಿತ–ಈ ೪೦ ಸ್ಥಾನದ ಉಗ್ಗಡಣೆ (ಕ್ಷತ್ರಚೂ. ೯-೩೬). [ಸಂ.]

ಮಹಾಖರ್ವ (ನಾ). [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಹದಿನಾಲ್ಕನೆಯ ಸ್ಥಾನ ಮತ್ತು ಹದಿನಾಲ್ಕು ಅಂಕೆಗಳುಳ್ಳ ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ಖರ್ವ, ಮಹಾಖರ್ವ . . . ಮಹಾಪರಿಮಿತ—ಈ ೪೦ ಸ್ಥಾನದ ಉಗ್ಗಡಣೆ (ಕ್ಷತ್ರಚೂ. ೯-೨೯). [ಸಂ.]

ಮಹಾಗಣ (ನಾ). ೧. ದೊಡ್ಡಗುಂಪು.—ಸಮೂಹ. ೨. [ಗಣಿತ] ಒಂದು ದೊಡ್ಡಸಂಖ್ಯೆ. ೩. [ವೀಶೈ] ಶ್ರೇಷ್ಠನಾದ ಜಂಗಮ.—ಶರಣ : ಎನಗೆ ಮರ್ತ್ಯಲೋಕದ ಮಹಾಗಣಗಳುಂಟು ಇದುಕಾರಣ ಕೂಡಲಸಂಗಮದೇವರ ಲೋಕವ ಹಂಚಿಕೊಳ್ಳಿ ನಿಮಗೆನಗೆ (೧೫೫. ೭೬೦); ಇದಂ ಚೋಳದೇಶದ ಮಹಾಗಣಂಗಳಱಿವುದು (೫೦೮೯. ೩-೦೦೯). [ಸಂ.]

ಮಹಾಗನಿ (ನಾ). ಒಂದು ಬಗೆಯ ಮರ; ₱ ಕಂದುಬಣ್ಣದ ಛಾಯೆಯುಳ್ಳ ಈ ಮರವನ್ನು ಪೀಠೋಪಕರಣಗಳನ್ನು ಮಾಡಲು ಹೆಚ್ಚಾಗಿ ಬಳಸುತ್ತಾರೆ : ಪಚ್ಚೇವು. ಮಹಾಗನಿ (ಪ್ರಾಶಿ. ೭೩-೦೧೫೫) ; ಅವುಗಳ ಪೈಕಿ . . . ಉಡುಪಿನ ಬೀರುವೊಂದಿತ್ತು. ಅದನ್ನು ಮಹಾಗನಿ ಮರದಿಂದ ಮಾಡಿತ್ತು (ಕ್ಷಹು. ೭೦೬). [← ಇಂ. Mahogany]

ಮಹಾಗಾರೆ (ನಾ). ಒಂದು ಬಗೆಯ ಮರ : ಮಹಾಗಾರೆ. ಬೆಟ್ಟಮಂಗರೆ (ಪ್ರಾಶಿ. ೭೩-೦೧೫೫). [ಮಹಾ + ಕಾರೆ]

ಮಹಾಗ್ರಹ (ನಾ). ೧. ಪ್ರಬಲವಾದ ಭೂತ,ಪಿಶಾಚಿ ಮುಂತಾದ ದುಷ್ಟ ಶಕ್ತಿ : ಇದು ಜಗಮುದ್ರಾಮುದ್ರಿತಮಿದು ನಿಬಿಡಸ್ಮೃತಮಿದು ಮಹಾ ಗ್ರಹಧೃತಮಿಂತಿದು ಲೋಹಪಿನದ್ದಮೆನಿಪ್ಪುದು ಪರಕೃತಿನುತಿಯೊಳಖಿಳ ಖಿಳಜನವಕ್ಕಂ (೫೦೮೫. ೯-೧೦) ; ಈ ಮಹಾಗ್ರಹಗಳು ತಮಗೆ ಇಷ್ಟ ಬಂದ ಹಾಗೆ ಲೋಕಗಳಲ್ಲಿ ಕೋಟಿ ತೆಱಂಗಳು ಉಳ್ಳವುಗಳಾಗಿ ಕ್ರೀಡಿಸುತ್ತಲಿರುವವು (ಕ್ಷದ್ಮಸಾ. II. ೮೨). ೨. ಸೂರ್ಯ. ೩. ಶನಿಗ್ರಹ. ೪. ರಾಹು. [ಸಂ.]

ಮಹಾಗ್ರೀವ (ನಾ). ಉದ್ದವಾದ ಕುತ್ತಿಗೆಯುಳ್ಳದು ; ಒಂಟೆ. [ಸಂ.]

ಮಹಾಘಟಿಕಾಸ್ಥಾನ (ನಾ). ಉನ್ನತವ್ಯಾಸಂಗಕ್ಕಾಗಿ ಸ್ಥಾಪಿಸಿದ ದೊಡ್ಡ ವಿದ್ಯಾಪೀಠ.—ವಿದ್ಯಾಸಂಸ್ಥೆ : ಶ್ರೀಮತು ಹೆಂಜೀಱ ಪಟ್ಟಣದ ಮಹಾ ಘಟಿಕಾಸ್ಥಾನ ಶ್ರೀನೊಣಂಬೇಶ್ವರದೇವರ ಸನಿಧಾನದಲಿ (೮೪. XII. ೫೫. ೨೩-೦೦೦; 1167). [ಸಂ.]

ಮಹಾಘನ (ನಾ). ಪರವಸ್ತು ; ದೇವರು : ನೀನರಿಸಿದ ಮನದಲ್ಲಿ ಜಾನಂಜಿ ನಯ್ಯಾ ಮನವು ಮಹಾಘನಕ್ಕೆ ತರಣಗತಿವೊಕ್ಕುದಾಗಿ (೫೫೪. ೬೫೯); ಮಹಾ ಘನವನಱಿದಲ್ಲಿಯೇ ತ್ರಿವಿಧವೂ ಪ್ರಮರ್ಪಣ (೫೦೯೫೫. ೩೭-೦೫೫). [ಸಂ.]

ಮಹಾಚಂಡ (ನಾ). ೧. ಅತಿಯಾದ ಉದ್ವೇಗವುಳ್ಳವನು. ೨. ಯಮನ ಇಬ್ಬರು ಅನುಚರರಲ್ಲಿ ಒಬ್ಬ. ೩. ಶಿವನ ಒಬ್ಬ ಅನುಚರನ ಹೆಸರು. ೪. ಒಂದು ನರಕದ ಹೆಸರು : ಸಕಲಶಲ್ಯಸಿಂಹಗಜಾಘನವ್ಯಾಪ್ತವೆಂಬೈದು ಮಂತ್ರಿನರಕಂಗಳ ಮೇಳದಲ್ಲಿ ಮಹಾಚಂಡವೆಂಬುರಸುನರಕವಿಹುದು (೦೮೫೪. ೦೩೨). [ಸಂ.]

ಮಹಾಚೀನ (ನಾ). ಚೀನಾದೇಶದಲ್ಲಿ ತಯಾರಾದ ಒಂದು ಬಗೆಯ ಉತ್ಕೃಷ್ಟವಾದ ರೇಷ್ಮೆಬಟ್ಟೆ ; ಚೀನಾಂಬರ : ಪವನಪರಿಸಂಚಳ ಸಮಿಚೀನ ಚೀನಮಹಾಚೀನಾದಿ ಪೀವರಶ್ಲೀವರಂಗಳೆಂಬ ಕರತಳಂಗಳಂ ಕೆಯ್ಯಾಸಿ . . . ಕರವಂತಿರ್ಪುದುಂ (೫೫೮೪. ೦೨-೨೦೫). [ಸಂ.]

ಮಹಾಚೀನ (ನಾ). = ಮಹಾಚೀನ : ಲಿಂಗಕ್ಕೆ ಪರಿಪರಿಯ ಪೂಜೆಗೆಂದನು ಮಾಡಿ ತರಿಸಿದ ಮಹಾಚೀನಿಯೆನಿಪ ವಸ್ತ್ರಾಳಿಯಂ. . . ತರಿಸುತಂ (೫೫೮೪. ೫೮-೩೦). [< ಸಂ. ಮಹಾಚೀನ]

ಮಹಾಚೂರ್ಣ (ನಾ). ಒಂದು ನರಕದ ಹೆಸರು : ಮಹಾಚೂರ್ಣ. . . ತಪ್ತಕ್ಕೆಲಮಯವೆಂಬೈದು ಮಂತ್ರಿನರಕಂಗಳ ಸಹಚರ್ಯದಿಂ ಪಂಚಕೋಣ ವೆಂಬುರಸುನರಕವಿಹುದು (೦೮೫೪. ೦೩೫). [ಸಂ.]

ಮಹಾಛಂದಸು (ನಾ). [ಛಂದ] ದೀರ್ಘಕಥನಕಾವ್ಯಕ್ಕೆ ಹೊಂದುವಂತೆ ರೂಪುಗೊಂಡಿದ್ದು, ಐದುಮಾತ್ರೆಯ ಗಣಗಳ ಪ್ರಯೋಗದಲ್ಲಿ ವೈವಿಧ್ಯವನ್ನು ಪಡೆದಿರುವ ಸರಳರಗಳೆಯ ಅನ್ಯರೂಪ : ₱ ಶ್ರೀ ಕೆ. ವಿ. ಪುಟ್ಟಪ್ಪನವರು ತಮ್ಮ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ಉಪಯೋಗಿಸಿರುವ ಈ ಛಂದಸ್ಸನ್ನು 'ಮಹಾ ಛಂದಸ್ಸು' ಎಂದು ಕರೆದು ಅದರ ವೈವಿಧ್ಯವನ್ನು ವಿವರಿಸಿದ್ದಾರೆ : ಶ್ರೀ ಕುವೆಂಪುವ ಸ್ವಜಿಸೀ ಮಹಾಛಂದುಸಿನ ಮೇರುಕೃತಿ, ಮೇಣ್ ಜಗದ್ವೈವ್ಯ ರಾಮಾಯಣಂ ! (ಶ್ರೀರಾಪ್ರ. IV. ೨೬). [ಸಂ. ಮಹಾಛಂದಸ್]

ಮಹಾಛಂದಸ್ಸು (ನಾ). = ಮಹಾಛಂದಸು : ಕುವೆಂಪು ಅವರು ಮಹಾ ಛಂದಸ್ಸಿನಲ್ಲಿ ತಮ್ಮ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯವನ್ನು ಬರೆದಿ ದ್ದಾರೆ (೮೫೫). [ಸಂ. ಮಹಾಛಂದಸ್]

ಮಹಾಜನ (ನಾ) ೧. ಜನಸಾಮಾನ್ಯರ ಗುಂಪು ; ಜನಸಮೂಹ : ದುರಾತ್ಮವಾತ್ಮೀಯಭವನದೊಳ್ ಸದಾಕಾಲಂ ಮಹಾಜನಕ್ಕೆ ಸಪ್ರಘೋಜನ ಮುನಿಕ್ಕುವಂ (ಶಾಃಚಾ. ೨-೬೯ ಪ). ೨. (ಊರಿನ) ಪ್ರಮುಖ ಜನ; ಹಿರಿಯ ಜನ : ಈ ಮಹಾಜನಮವರ ಕೈಯೊಳು ಗ್ರಾಮವಱಿಯುಮು ಕ್ಕಿ ಕೇಡಂ. . . ಪೇಳ್ದೆನು (ಶಕ್ಕ. ೩೩-೨); ತಿರುವಂಜಿಕಳನಾಥನೊಲವಿಂದೆ ಬರಲುತ್ಸವದೊಳ್ಗಿನ ಮಹಾಜನ ನೆರೆದಿದಿರ್ವಂದತಿಪಸುಪದೆ ಪರಸಿ ಮಂತ್ರಾ ಕ್ಷತೆಗಳ ನೀಡೆ (ತ್ರಿಪು. ೦೦-೩). ೩. ಊರಿನ ಪಂಚರು.— ಪಂಚಾಯಿತಿ ಸದಸ್ಯಮಂಡಲಿ : ಇಂತಿನಿತುಮಂ . . . ಲ್ಲಿರೊಡೆಸು ಪ್ರಮುಖ ಮಹಾಜನಮುಂ ರಕ್ಷಿಸುವರ್ (ಪಾಂಚಾ. XX. ೪೩-೩; ೧೦೧); ಮಹೇಶ್ವರ ಹಾಗು ಮಹಾಜನರೊಂದಿಗೆ ಸಮಾನವಾದ ಅಧಿಕಾರಗಳಾಗಿದ್ದ ಸ್ಥಾನಿಕರು ಅವರೊಂದಿಗೇ ದೇವಸ್ಥಾನಕ್ಕೆ ಬರುತ್ತಿದ್ದ ಹಣದ ಹಾಗೂ ಬೆಳೆಯ ಕಾಣಿಕೆ ಗಳನ್ನು ಸ್ವೀಕರಿಸುತ್ತಿದ್ದರು (ಶಾಣಾ. ೦೦೩). ೪. ಅಗ್ರಹಾರದಲ್ಲಿಯ (ಆದಾಯದಲ್ಲಿ ಪಾಲನ್ನು ಪಡೆಯುವ) ವೇದಶಾಸ್ತ್ರಪಾರಂಗತರಾದ ಬ್ರಾಹ್ಮಣವಿದ್ವಾಂಸರು : [ಗಾ]ವಡಿವಾಡದ ಮಹಾಜನ (ಅ) ಖವ [ರಿ]ನ್ಸ × [ಕಾ]ಲಂ ಕಟ್ಟಿ ತುಪ್ಪದ [ತೆ]ಱೆಯು . . . ದಾನಗೊಟ್ಟ (ಶಾಶಾ. XI-i. ೦೩-೦೦; ೩೦೦); [ಸಿ]ಸುಳಹಾಬಯ್ವುದಿಂಬರು ಮಹಾಜನ ಮಹದರಿ × × × (ಪಾಶಾ XI-i. ೦೯-೦೦; ೩೩). ೫. ಧರ್ಮದಲ್ಲಿ ಆಸಕ್ತಿಯುಳ್ಳ ಜನ : ಮಹಾಜನವೆಂದರೆ ಕ್ಷುದ್ರಪ್ರಯೋಜನದಲ್ಲಿ ದೃಷ್ಟಿಯಿಲ್ಲದೆ ಧರ್ಮದಲ್ಲೇ ದೃಷ್ಟಿಯುಳ್ಳವರೆಂದರ್ಥ (ಕಂಚಾ. ೦೩೨). ೬. ವ್ಯಾಪಾರಿ ; ವರ್ತಕ. ೭. ಒಂದು ಜನಾಂಗದ ಅಧಿಪಾ ವ್ಯಮಹಾರದ ಮುಖಂಡ. [ಸಂ.]

ಮಹಾಜವ (ನಾ)· ೧. ಬಹಳ ವೇಗವುಳ್ಳದು. ೨. ಜಿಂಕೆ. [ಸಂ.]

ಮಹಾಜಾಲಿ (ನಾ). ಹಳದಿಯ ಹೂಗಳನ್ನು ಬಿಡುವ ಒಂದು ಬಗೆಯ ಸಸ್ಯ : "ಮಹಾಜಾಲೀ, ಪೀತಕಃ – ಹಚ್ಚಗಿರುವ ಹುವ್ವಗಳುಳ್ಳ ಕಾಡು ಹೀರೇಗಿಡ" (ಶಿಬ್ಧಾ. ೨೩೯. ೦೩೯). [ಸಂ. ಮಹಾಜಾಲೀ]

ಮಹಾಜ್ಞಾನ (ನಾ). ಅಪಾರವಾದ ತಿಳವಳಿಕೆ; ಅತಿಶಯವಾದ ಅರಿವು : ಜ್ಞಾನ ವಿಜ್ಞಾನ ಸುಜ್ಞಾನ ಮಹಜ್ಞಾನ ಆಪರಜ್ಞಾನ ಇಂತೀ ಪಂಚ ಜ್ಞಾನವ ದಹ್ಮಮಾಡಿ ಬ್ರಹ್ಮಲಿಪಿತವ ತೊಡೆವಂತೆ ಧರಿಸುವದೆ ತ್ರಿವೆಂಡ್ರ (ಪೀಚಾಮಾ. ೦೩೯-೩೬೦); ಜ್ಞಾನ ಸುಜ್ಞಾನ ಮಹಾಜ್ಞಾನ ಎಂಬ ವೃತ್ತಿ ಜ್ಞಾನಂಗಳು ಇಲ್ಲದಂದು . . . ನಿಜಜ್ಞಾನಮೂರ್ತಿ ನೀನೆಯಂಬ್ಯಾ (ಸಿಪ್ರಚಿ. ೬-೩೬). [ಸಂ.]

ಮಹಾಜ್ಞಾನಿ (ನಾ). ೧. ಅಪಾರವಾದ ತಿಳವಳಿಕೆಯುಳ್ಳವನು; ಮಹಾ ವಿದ್ವಾಂಸ : ಸಾಕ್ಯಟೀಸನು ಮಹಾಜ್ಞಾನಿಯೆಂದೆನಿಸಿಕೊಳ್ಳುವನು (ಪ್ರಾಲಂಬಿ. ೪-೦೦೨). ೨. ಮಹಾಮುನಿ. ೩. ಶಿವ; ಮಹಾದೇವ [ಸಂ. ಮಹಾಜ್ಞಾನಿನ್]

ಮಹಾಜ್ವರ (ನಾ). ಒಂದು ಬಗೆಯ ತೀವ್ರವಾದ ಜ್ವರ : "ಧರ್ಮ ದುಷ್ಟಂ ಮಹಾಜ್ವರವೆಂದೆನಿಕ್ಕು" (ಪಂಗಣಾ. ೦೦೪-೪); ಮಹಾಜ್ವರಕೆ:— ದೆಲ್ಲವತ್ಸದೆ ಹಣ್ಣುಂ. ಶ್ರೀಗಂಧ, ಯಷ್ಟಿಮಧುಕ ಇವಮ್ಮ ಹೇಳೀಸರ್ಪ್ಪ ತೇದು ಕುಡಿಯೆ ಜ್ವತ ಬವರುವದು (ಪಚಿಕಿ. ೦೦೦). [ಸಂ.]

ಮಹಾಜ್ವಾಲ (ಗು)· ೧. ಅಧಿಕವಾಗಿ ಜ್ವಲಿಸುತ್ತಿರುವ.— ಪ್ರಕಾಶಿಸು ತ್ತಿರುವ. (ನಾ)· ೨· [ಜೈನ] ಒಂದು ಬಗೆಯ ಮಂತ್ರವಿದ್ಯೆ : ಅಮಿತ ತೇಜಂ . . . ಮಹಾಜ್ವಾಲಮುಂ ಸರ್ವವಿದ್ಯಾಚ್ಛೇದನಮುಮೆಂಬೆರಡು ವಿದ್ಯೆಯುಮಂ ಸಾಧಿಸಲೆಂದು ಪೋದಂ (ಪಾಪುಚ. ೦೧೨). [ಸಂ.]

ಮಹಾತರು (ನಾ)· ೧. ದೊಡ್ಡ ಮರ ; ಎತ್ತರವಾದ ಮರ. ೨. ಒಂದು ಬಗೆಯ ಮರ: ಚಂದನವೃಕ್ಷ : "ಸರಳಂ ಪೀತದ್ರು ಮಹಾ ತರುವಕ್ಕುರ್" (ಪಜ್ಞಾ. ೩೩-೨೦). ೩. ಕಳ್ಳಿಗಿಡ. [ಸಂ.]

ಮಹಾತಲ, ಮಹಾತಳ (ನಾ)· ವಿಳು ಅಧೋಲೋಕಗಳಲ್ಲಿ ಆರನೆ ಯದು : "ಅತಲಃ, ವಿತಲಃ, ಸುತಲಃ, ಮಹಾತಲಃ, ರಸಾತಲಃ, ತಳಾತಲಃ, ಪಾತಾಲಃ, ಈ ೭ ಅಡಿಯಣ ಲೋಕಂ" (ಶಾಶ್ಯ. ೨೬೦). **ಮಹಾತಳ** : ಪಾದತಳದಲ್ಲಿ ಅತಳಲೋಕ . . . ಜಾನುವಿನಲ್ಲಿ ಮಹಾತಳ ಲೋಕ . . . ಪೂರ್ಣಿಯಲ್ಲಿ ಸತ್ಯಲೋಕ ಇಂತೀ ಈರೇಳುಲೋಕಂಗಳ ತೊಳ್ಗಳಿಗಿಬ್ಬುಗಿಕೊಂಡು (ಅಜಪು. ೦೧೨-೦೩೪). [ಸಂ.]

ಮಹಾತಳ ' ಮಹಾತಲ ' ನೋ.

ಮಹಾತಾರಕ (ನಾ). ಮೋಕ್ಷದಾಯಕವಾದ ಒಂದು ಮಂತ್ರ : ತಾರ ಕದ ಟೊಂಗಬಿಚಾರದ ಸಾರಸಂಗ್ರಹವೆನಿಸಿದ ಮಹಾತಾರಕವ ಬೋಧಿಸಿದ ಗಗಭಾತಾರ ಗುರುಸುತರ್ಗೆ (ಗಗಣಾ. ೨೦ ಸೂ೩೪). [ಸಂ.]

ಮಹಾತಾಮ (ನಾ)· ಶ್ರೇಷ್ಠನಾದವನು ; ಘನವಂತ : ಹರಿನಂದನಂ ಸಪದೇಶ ಸಾತ್ಯಕಿ ಮಹಾತಾಮ ಘಟೋತ್ಕಚಾ ದ್ರುಪದಸುತನಿವ ಯುಧಿಷ್ಠಿರನೆಂದು ಭ್ರಾಂತಿಯಿಂದ ಅತು ಶಮ್ಮೊಳು ತಾವೆ ಕಡುಮುಳಿದು . . . ನೀಗಾಡಿದರು ನಿಜಬಲವನು (ಶಾಸಂಗ. ೩೩-೩೩).

[< ಸಂ. ಮಹಾತ್ಮನ್]

ಮಹಾತೇಜ (ಗು). ೧. ಬಹಳ ತೇಜಸ್ಸುಳ್ಳ. ೨. ಅಧಿಕವಾದ ಪರಾ ಕ್ರಮದಿಂದ ಕೂಡಿದ. (ನಾ). ೩. ಅಗ್ನಿ. ೪. ಪಾದರಸ. ೫. ಅಧಿಕವಾದ ಕಾಂತಿ. ೬. ಶೂರ ; ಪರಾಕ್ರಮಿ. ೭. ಪಣ್ಮುಖ ; ಕಾರ್ತಿಕೇಯ : "ಗೌರೀಪುತ್ರಃ . . . ಮಹಾತೇಜಾಃ, ಶರಜನ್ಮಾ(ಚ ಕಥ್ಯತೇ) – ಈ ೨೦ ಕಾರ್ತಿಕೇಯನ ಪೆಸರ್" (ಪಂಚಾಮಾ. ೩-೨೦). ೮. ವಿಷ್ಣು. ೯. ಶಿವ. ೧೦. ಹರಳುಗಿಡ. ೧೧. ಚಿತ್ರಮೂಲದ ಗಿಡ. [ಸಂ. ಮಹಾತೇಜಸ್]

ಮಹಾತ್ಕೈಲ (ನಾ). ೧. ಅಮೂಲ್ಯವಾದ ತೈಲ.—ಎಣ್ಣೆ. ೨. ಮನುಷ್ಯನ ಶರೀರದ ಕೊಬ್ಬಿನ ಸಾರ : ಸರತ್ಕೈಲಮುಂ ಮಹಾತ್ಕೈಲಮೆಂದು ಪರ ಮಾಂಸುಲಿಯಂ ಮಹಾಮಾಂಸುಲಿಯಂದು . . . ನುಡಿವಂತೆ ಭೀಮನಂ ಮಹಾರಥನೆಂದು ನುಡಿಯಲ್ಕುಕ್ಕುದೆ ವಲಂ (ಗಡಾಯು. ೩-೩೩ ಪ). [ಸಂ.]

ಮಹಾತ್ಮ (ನಾ). ೧. ಶ್ರೇಷ್ಠವಾದ ಆತ್ಮವುಳ್ಳವನು ; ಸತ್ಪುರುಷ ; ಘನವಂತ : "ಉದಾತ್ತಃ, ಉದೀರ್ಣಃ, ಮಹಾತ್ಮಾ, ಉದಾರಃ – ಈ ೪ ಪಿರಿಯಂ" (ಪಜಾಯು. ೩೯-೨೦೦); ಸಮಕೊಂಡ ಪುಣ್ಯಮುಂ ಪಾಪ ಮುಮಿಲ್ಲದೊಡಾತ್ಮನಾಳ್ ಸರೋಗನರೋಗಂ ಶ್ರವಿರಹಿತಂ ಕ್ಲೇಶಕೃತ ಶ್ರವಮೆಂದೀ ಲೋಕಯಾತ್ರೆ ಕೆತದೆ ಮಹಾತ್ಮಾ (ಶಾಂಚಾ. ೬-೦೧೦); ಆ ಮಹಾತ್ಮರ ಪೆಸ್ಸಲಿಗಳಿಗೆ ಭೂಮಿತಳವೊಂದಲು ಸಮಿಸುತಂ (ಪಚಿ. ೨೫-೨); ಭರತಂ ಮಹಾತ್ಮನೆಸೆದನು ದಿವ್ಯತೇಜಸ್ಸು, ತ್ಯಾಗಬುದ್ಧಿಯಲಿ, ನರ್ಮಗದರಿ (ತ್ರಿಗಣಾ. ೫೬-೬೯೩). ೨. ಪರಮಾತ್ಮ. ೩. ಬುದ್ಧ, ಗಾಂಧಿ ಮುಂತಾದ ಕೆಲವೇ ಶ್ರೇಷ್ಠವ್ಯಕ್ತಿಗಳಿಗೆ ಅನ್ವಯಿಸುವಂತೆ ಬಳಸುವ ಗೌರವಸೂಚಕವಾದ ಶಬ್ದ : ಮಹಾತ್ಮರು ಇಂದು ಅಮರ ರಾಗಿದ್ದಾರೆ (ಪಮಣಂ. ೬೩); ಸಿದ್ಧಾರ್ಥನು ಜ್ಞಾನೋದಯವನ್ನು ಹೊಂದಿ ಮಹಾತ್ಮಬುದ್ಧನಾದನು (ಕೃಪ). [ಸಂ. ಮಹಾತ್ಮನ್]

ಮಹಾತ್ಮಕ (ನಾ). ಉದಾತ್ತನಾದ ವ್ಯಕ್ತಿ : ಶ್ರೇಷ್ಠನಾದವನು : ಸಂಧಿತ್ರಯದೊಳಗಭವಗೆ ವಂದಿಸುವ ಮಹಾತ್ಮರ್ಗೆ ಬಹುಕರ್ಮಂಗಳ್ ಬೆದು ಕೈವಲ್ಯಪದಂ ಸಂದಿಹರ್ (ಪಪ್ರಾ. ೬-೧೦). [ಸಂ.]

ಮಹಾತ್ಮೆ (ನಾ). ೧. ಹಿರಿಮೆ ; ಘನತೆ. ೨. ಉದಾತ್ತವಾದ ಮನಸ್ಸು : ಅಸವಂಭಕ್ತಮಹಾತ್ಮೆಯಂ ಭಾವಿಸಿ ಶರಣುವೊಗುವರ್ಗಳಂ ಐಲಿಸದಿಹುದೆ ಕುಂದೀಶಭಕ್ತಿಗೆ (ಪಪ್ರಾ. ೫೬-೩೦). [< ಸಂ. ಮಾಹಾತ್ಮ್ಯ]

ಮಹಾದಂಡನಾಯಕ (ನಾ). ಮುಖ್ಯಸೇನಾಧಿಪತಿ.—ದಳಪತಿ : ಇದಮ್ಮ ಹೊಯಿಸಳಸೇನೆಯ ಮಹಾದಂಡನಾಯಕ ಗಂಗರಾಜನ ಮಗ ಬಮ್ಮ

ಚಮೂವನು . . . ಕಟ್ಟಿಸಿದುದಾಗಿ ಹೇಳಿದೆ (ಕವಿ. ೪೫, ಶ್ರಮ ೫೫); ವೈಧದೇವರಾಯನು ರಾಜ . . . ಲಕ್ಷ್ಮಣದಂಡೇಶ, ಜಕ್ಕಣಾಚಾರ್ಯರು ಪ್ರಧಾನಾಮಾತ್ಯ ಮೆತಪ್ಪ ಮಹಾದಂಡನಾಯಕರು (ಪಡ. ೫೫೬). [ಸಂ.]

ಮಹಾದಣ್ಣಾಯಕ (ನಾ)- = ಮಹಾದಂಡನಾಯಕ : ನಾಡಿನೊಡೆಯ ಭರಮಹೆಗ್ಗಡೆ ರಾಜ್ಯದ ಮಹಾದಣ್ಣಾಯಕನಿಗಾಗಿ ಸರ್ವಸಿದ್ಧತೆಗಳನ್ನೂ ಮಾಡಿದ್ದನು (ಸಪಿ. ೬೩). [< ಸಂ. ಮಹಾದಂಡನಾಯಕ]

ಮಹಾದಾನ (ನಾ)- ೧. ಶ್ರೇಷ್ಠವಾದ ದಾನ. ೨. ಹದಿನಾರು ಬಗೆಯ ಶ್ರೇಷ್ಠವಾದ ದಾನ ; ಷೋಡಶದಾನ ; P ಮಹಾದಾನದ ಹೆಸರು ಪತ್ತು, ಸಂಖ್ಯೆಗಳಲ್ಲಿ ಬೇರೆ ಬೇರೆ ಅಭಿಪ್ರಾಯಗಳಿವೆ. "ಮಹಾದಾನಗಳು – ೮ : ತಿಲ, ಜೋಹ, ಹಿರಣ್ಯ, ಕಾರ್ಪಾಸ, ಲವಣ, ಸಪ್ತಧಾನ್ಯ, ಕ್ಷಿತಿ (ಭೂ), ಗೋ (ಗರುಡ. ೮-೨೨, ೩೪). ಮಹಾದಾನಗಳು–೧೦ : ಕನಕ, ಅಶ್ವ, ತಿಲ, ಹಸ್ತಿ, ದಾಸಿ, ರಥ, ಭೂಮಿ, ಗೃಹ, ಕನ್ಯಾ, ಕಪಿಲಾಧೇನು (ಅಗ್ನಿಪು. ೨೦೯-೨೪). ಮಹಾದಾನಗಳು—೧೬ : (ಅ) ತುಲಾಭಾರ, ಹಿರಣ್ಯಗರ್ಭ, ತಿಲಪರ್ವತ, ಸುವರ್ಣಮೇದಿನಿ, ಕಲ್ಪಪಾದಪ, ಗಣೇಶೇಶ, ಸುವರ್ಣಧೇನು, ಲಕ್ಷ್ಮೀ, ತಿಲಧೇನು, ಗೋಸಹಸ್ರ, ಹಿರಣ್ಯಾಶ್ವ, ಕನ್ಯಾ, ಹಿರಣ್ಯವೃಷಭ, ಗಜ, ಲೋಕಪಾಲಾಷ್ಟಕ, ತ್ರಿಮೂರ್ತಿಪ್ರತಿಮಾದಾನ (ಲಿಂಗಪು. ಉಪ್ರ. ೨೮-೪೪). (ಆ) ತುಲಾಪುರುಷ, ಹಿರಣ್ಯಗರ್ಭ, ಬ್ರಹ್ಮಾಂಡ, ಕಲ್ಪವೃಕ್ಷ, ಗೋಸಹಸ್ರ, ಸ್ವರ್ಣಕಾಮಧೇನು, ಸ್ವರ್ಣಾಶ್ವ, ಸ್ವರ್ಣಗಜ, ಸ್ವರ್ಣರಥ, ಪಂಚಲಾಂಗಲ, ಭೂವಿಶ್ವಚಕ್ರ, ಕಲ್ಪಲತಾ, ಸಪ್ತಸಾಗರ, ರತ್ನಧೇನು, ಮಹಾಭೂತಘಟ (ಹೇಮಾದ್ರಿ, ವತ್ಸಪು. ಸಂಖ್ಯಾರ. ೨೨೭). " (ಶ್ರೀಪ. ೩೫) : " ಪ್ರವಾರಣವೆಂಬುದು ಮಹಾದಾನಂ " (ಹರಿಶ. ೦೫೭-೫೮); ಪಲವೆಡೆಗಳೊಳಂ ಮಹಾಧ್ವಜವನೆತ್ತಿಸಿ ಮಹಾದಾನಂಗೆದ್ದು ನೆಗಟ್ಟಿ ಗಂಗವಿದ್ಯಾಧರಂ (ಪಂ. ೩೫, ೫೯-೦೦; ೪೭೫); ಸೋಮಗ್ರಹಣ ಉಕ್ಷರಾಯಣಸಂಕ್ರಾಂತಿಯೆನ್ನು ಮಹಾದಾನನಿಮಿತ್ತಂ . . . ಸರ್ವನಮಸ್ಯವಾಗಿ ದೇವಗ್ಗೆ ಬಿಟ್ಟರ್ (ಕೌಸ. ೫೫. ೬೦-೨೦ ; ೧೧೦೨) ; ಮೆಂಡಕಶ್ರೇಷ್ಠಿ . . ಅರ್ಧಮಾಸದ ಕಾಲ ಮಹಾದಾನವನ್ನು ನಡಸಿದನು (ಪಚ್ಚ. ೦೫). [ಸಂ.]

ಮಹಾದಾನಿ (ನಾ)- ಉದಾರವಾಗಿ ದಾನಮಾಡುವವನು ; ಅತ್ಯಂತ ದಾನಶೀಲನಾದವನು : ಅಂದಿಂಗೆಯು ನೀನು ಪಳೆಯ ಸಾಸು ಮಹಾದಾನಿ ಕೂಡಲಸಂಗವದೇವಾ (ಬಸ. ೨). [ಸಂ. ಮಹಾದಾನಿನ್]

ಮಹಾದಾಹ (ನಾ). ೧. ಅತಿಯಾದ ಬಾಯಾರಿಕೆ. ೨. ಒಂದು ನರಕದ ಹೆಸರು ; ತೀಕ್ಷ್ಣವಾದ ದಾಹವನ್ನುಂಟುಮಾಡುವ ನರಕ : ಸೂಚೀಮುಖ . . . ಮಹಾದಾಹ ಸಂತಾಪಂಗಳೆಂಬವೇಳ್ಪಟ್ಟು ಮಹಾನರಕಂಗಳು (ಪಪಕ. ೦೫೦). [ಸಂ.]

ಮಹಾದುಃಖ (ನಾ). ೧. ಹೆಚ್ಚಾದ ಸಂಕಟ : ಅತಿಯಾದ ಶೋಕ.– ಅಳಲು : ತಂದನೂರಿಗವಳಂ . . . ಮುಂದಣ ಮಹಾದುಃಖಿಸಾಪಾನಕ ಕನ್ನ ಕರುಗಜ್ಜರಾ ಒಂದೆ ಕಿಡಿಯಂ ಮುನ್ನಡಿಯಿಡುವ ವಿಧಿ ವಿಲಾಸದಲಿ ! (ಶ್ರೀಪಾಚ. ೫೫-೪೬). ೨. ಒಂದು ನರಕದ ಹೆಸರು : ಅಸ್ಥಿಭಂಗ . . . ಮಹಾದುಃಖಿ [ಪಾಶ್ವ. ಮಹಾದುಃಖಿಜ]ವೆಂಬೈದು ಮಂತ್ರಿ ನರಕಂಗಳಂ ರಂಜಿಸಿ ಅಪ್ಪಳೌವುಮೆಂಬರಸುನರಕವಿಪ್ಪುದು (ಪಪಕ. ೦೫೩). ೩. [ಜೈನ] ಶಾರೀರಿಕ, ಮಾನಸಿಕ, ಕ್ಷೇತ್ರಜ, ಅನ್ಯೋದೀರಿತ ಮತ್ತು ರಾಕ್ಷಸೋದೀರಿತ ಎಂಬ ಐದು ಬಗೆಯ ದುಃಖಗಳು. [ಸಂ.]

ಮಹಾದೇವ (ನಾ)- ೧. ಎಲ್ಲ ದೇವರುಗಳಿಗೂ ದೇವನಾಗಿರುವವನು; ಪರಮಾತ್ಮ. ೨. ಶಿವನ ಹೆಸರುಗಳಲ್ಲಿ ಒಂದು: "ಈಶಾನಃ . . . ಮಹಾದೇವಃ, ಮೃಡಃ, ನೀಲಲೋಹಿತಃ—ಈ ೮೫ ಮಹಾದೇವರ ಪೆಸರ್" (ಹರಿಶ್ರು. ೪-೦೬); ಶ್ರೀವಧುವಂ ಪಯೋಧಿಮಥನೋದ್ಭವವಸ್ತುಸಮೂಹದೊಳ್ ಮಹಾದೇವಸಮೇತಮಿರ್ದಸುರರುಂ [ಸುರರುಂ] ಕುಡೆ ತನ್ನ ಮೆಚ್ಚುಗೊಂಡಾವನಶೇಷಭೂಭುವನಮಂಡಲವಲ್ಲಭವಾದ ದೇವನೀಗಾವಗಮೆಮ್ಮ ಬೇಜ್ಜ ವರದುನ್ನತಿಯಂ ಸುಕವೀಂದ್ರವಲ್ಲಭಂ (ಧಂಕೋಂಪಾ. ೦-೦); ಅವರ ಪ್ರಸಾದವ ಘನಮಹಿಮೆಯಲಿ ಮುನ್ನೆ ಕೊಂಡೊಯ್ಯನೆ ಮಹಾದೇವನ ಪುರಕಿ ಭಕ್ತಿಸನಗರಿಗಳ (ಕಪ್ರ. ೫೭-೪) ; ನಿಮ್ಮ ಇಷ್ಟದಂತೆಯೇ ಮಹಾದೇವನು ನಡಸಿಕೊಡುವನು (ಪಾಂಕಥಾ. ೦೪೩). ೩. ವಿಷ್ಣು. ೪. ಒಬ್ಬ ಜೈನಯತಿಯ ಹೆಸರು : ಮಹಾದೇವನ್ಮುನಿಪು[ಂ]ಗವನ್ಮದರ್ಪ್ಪಿ ಕಳುಪೆರ್ದಪಂ ಮಹಾತವನ್ಮರಣಮುಪ್ಪೆ (ಎಕ. ೫೫ (೫). ೧೦–೦ ; ೭೫ಮು ೫೫). [ಸಂ.]

ಮಹಾದೇವಿ (ನಾ). ೧. ಶಿವನ ಪತ್ನಿಯಾದ ಪಾರ್ವತಿಯ ಹೆಸರುಗಳಲ್ಲಿ ಒಂದು : "ರುದ್ರಾಣೀ . . . ಮಹಾದೇವಿ ಗಿರಿಜಾ. ಮೇಸಕಾತ್ಮಜಾ –ಈ ೨೧ ಗೌರೀದೇವಿಯ ಪೆಸರ್" (ಹರಿಶ್ರು. ೪-೦೬) ; ಪರವಧುವನು ಮಹಾ[ಪತಿಯಂ. ಮಹಾ]ದೇವಿಯೆಂಬೆ (ಪಪಕ. ೪೧೫). ೨. ಲಕ್ಷ್ಮಿ. ೩. ರಾಜನ ಪಟ್ಟದ ರಾಣಿ.–ಅಗ್ರಮಹಿಷಿ ; ಮಹಾರಾಣಿ : ದುರ್ಗ್ಗಮಾರ ಎಱಿಅಪ್ಪೋ ಕುವಳಾಲನಾಡು ಮೂನೂಱುಮಾಮ್ ಗಜ್ಜುಜುಸ್ಸಾಸಿರ ಮುಮೂಳೆ ಅವರಾ ಮಹಾದೇವಿ ಕಳ್ಳಾಱಬ್ಬೆ ಆಗಳಾಳೆ (ಎಕ. ೫. ಕುಳಿಶಾ. ೫೦-೫ ; ೭೫೭) ; ಅದನಾಳ್ವೊಂ ಪ್ರಜಾಪಾಳನೆಂಬೊನದಯವಾತನ ಮಹಾದೇವಿ ಸುಪ್ರಭೆಯಂಬೊಳ್ (ಪಜ್ಜಾಶಾ. ೫೦-೦೩); ಆತನ ಮಹಾದೇವಿ ನಯವಿನಯನೀಯಪಿ ಮನೋಹರಿಯೆಂಬಳ್ (೦೭ಪ್ರ. ೦-೫೦ ೫). [ಸಂ. ಮಹಾದೇವೀ]

ಮಹಾದ್ವಾರ (ನಾ). (ದೇವಸ್ಥಾನ, ಕೋಟೆ, ಅರಮನೆ ಮುಂತಾದುವುಗಳ) ಹೆಬ್ಬಾಗಿಲು: ಮುಖಿದ್ವಾರ : ಪುರಮಹಾದ್ವಾರಾಗ್ರಿಮಸ್ಥಾನದೊಳ್ ಲೋಕಕ್ಕೀತುಚಯಂ ವಿಮಾನನಿಚಯಂ ನಿಂದತ್ತಿರ್ತ್ತೆಸ್ಸಲಂ (ಶಂತ್ರಕೃ. ೬-೦೬); ಮಹಾದ್ವಾರ : ಇದು ದೇವಾಲಯದ ಕಟ್ಟಡವನ್ನು ಪ್ರತ್ಯೇಕಿಸಿ ಪ್ರಾಕಾರದ ಗೋಡೆಗೆ ಹೊಂದಿಕೊಂಡು ಇರುತ್ತದೆ. ಇದು ಭವ್ಯವಾಗಿದ್ದೂ ಇವರ ವೇಲ್ಲಡಿ ಎತ್ತರವಾದ ಗೋಪುರವನ್ನು ಳ್ದಾಗಿದ್ದೂ ಇರುತ್ತದೆ (ಪ್ರಾಚಾಸ್ಮ. ೫೪) [ಸಂ.]

ಮಹಾಧೇನು (ನಾ). ಯಾಗದ ಹಸು : "ಮಾಪೇಯಿಯೆನೆ ಮಹಾಧೇನು" (ಕುಬಕಾ. ೫೭-೭). [ಸಂ.]

ಮಹಾಧ್ವಕೃತಿ (ನಾ). ಮಹಾಕಾವ್ಯ ; ಶ್ರೇಷ್ಠವಾದ ಕೃತಿ : ತಡಯದ ಮಹಾಧ್ವಕೃತಿಗಳನೊತರಿಸಲಾರ್ಪಾತನೆಲ್ಲರಿಂದಂ ಬಲ್ಲಂ (ಧಂಕಾ. ೦-೦೭). [ಸಂ.]

ಮಹಾಧ್ವಜ (ನಾ.) ೧. ಮುಖ್ಯವಾದ ಬಾವುಟ.—ಧ್ವಜ : ಪಾರ್ಶ್ವಸಿರದ ಮೂನೂಱುರ್ಪತ್ತು ಮಹಾಧ್ವಜಂಗಳಿಂದಂ . . . ಪರಿವಾರಧ್ವಜಂಗಳಿಂದ ಮೆಸೆವ ಪತಾಕಾಮನೆಗಳಮೊದು ಯೋಜನಮಗಲಂ (ಪಪಕೃ. ೦೦–೫೫ ೫) ; ಮುಸಾಧ್ವಜದೊಜ್ಜಿರದೇಕಶಂಖಿರವಿಪಶಿಬಿಂಬಧ್ವಜದ ಧವಳಾತಪತ್ರವ್ರಜದೊಳಗನೆ ನಡೆಯೆ (ಪಾಂಕೃಪ. ೦೦–೦೫೦). ೨. ಒಂಟೆ. [ಸಂ.]

ಮಹಾನಂದ (ನಾ). ೧. ಅತ್ಯಧಿಕವಾದ ಸಂತೋಷ.—ಹಿಗ್ಗು : ಮಹಾಕಾಲದಲ್ಲಿ . . . ಮಹದ ಮಹಾನಂದದಲುಕ್ಕಾಡಿ ಮತ್ಕಲ್ಲಿಯೇ ಲಯವಾಗಿರಿ (ಪಚ್ಚ. ೪. ೬-೦೩). ೨. ಮುಕ್ತಿ ; ಮೋಕ್ಷ : "ಕೈವಲ್ಯಂ, ನಿರ್ವಾಣಂ . . . ಮೋಕ್ಷಃ, ಮಹಾನಂದಃ – ಈ ೧೧ ಮೋಕ್ಷದ ಪೆಸರ್" (ಹರಿಶ್ರು. ೫೦-೧೫೪). [ಸಂ.]

ಮಹಾನಕ (ನಾ)- ಪೊಡ್ಡನಗಾರಿ ; ಐದುಬಗೆಯ ಮಹಾವಾದ್ಯಗಳಲ್ಲಿ ಒಂದು : ನೆಗಳ್ತ್ತು ಮಹಾನಕಸ್ವನಾಡಂಬರಮೊಪ್ಪೆ

ಸೂಸಿದುದು ಪುಮಳೆ ಶಂಕರನಂಘ್ರಿಯೊಳ್ (ಹರಿಹ. ೩-೫೩). 'ಪಂಚ ಮಹಾನಕ' ಪರಾ. [ಸಂ.]

ಮಹಾನಕ್ಷತ್ರ (ನಾ). ಮೃಗಶಿರ, ಮಖಿ, ಸ್ವಾತಿ ಮತ್ತು ಅನುರಾಧಾ ಎಂಬ ನಾಲ್ಕು ನಕ್ಷತ್ರಗಳು. [ಸಂ.]

ಮಹಾನಿರ (ನಾ). ವರ್ತಕರ ದೊಡ್ಡ ಸಂಘ. – ಸಂಸ್ಥೆ : ಪೆಳ್ಪುಱುವಿನ ಪಳ್ಪಮಟುಸ್ಥಾನಮುಂ ಮಹಾನಿರಮು ಸಱಯಾಗಿ (ಪೆಳ್. XII. ೮೫. ೪೯-೫೩ ; ೧೮೦). [ಮಹಾ + ನಿಗಮ, (< ನಕರ,)]

ಮಹಾನಗ (ನಾ). ೧. ದೊಡ್ಡ ಬೆಟ್ಟ ; ಅಗಾಧವಾದ ಪರ್ವತ. ೨. ಕುಲಪರ್ವತಗಳಲ್ಲಿ ಒಂದು : ಕೆಂಬಿಕೂಟ ಮಹಾನಗ . . . ಶ್ರೀದೇಂದ್ರನೆಂಬ ಹದಿನೇಳು ಕುಲಗೋತ್ರಂಗಳೇ ಪೂರ್ವೋಕ್ತ ಸುಪಾರ್ಶ್ವಮೆಂಬ ತೀಳಕಪರ್ವತಕ್ಕೆ ಬಡಗಣದಿಕ್ಕಿನಲ್ಲಿಹವು (ಜೀಗ. ೦೬೩). ೩. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಇಪ್ಪತ್ತೆಂಟನೆಯ ಸ್ಥಾನ ಮತ್ತು ಇಪ್ಪತ್ತೆಂಟು ಅಂಕೆಗಳಿರುವ ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ನಗ, ಮಹಾನಗ . . . ಮಹಾಪರಿಮಿತ — ಈ ೪೧ ಸ್ಥಾನದ ಉಗ್ಗಡಣೆ (ಕ್ಷತ್ರ. ೬-೫೬). [ಸಂ.]

ಮಹಾನಗರ (ನಾ). ೧. ದೊಡ್ಡಪಟ್ಟಣ : ಪಮ್ಮ ಮುಂಡೂರು ಹಿಂದೆ ಒಂದು ಮಹಾನಗರವಾಗಿತ್ತು (ಪಾರ್ಶ್ವ. ೦೦೧). ೨. ಸ್ವಕೀಯ ಆಡಳಿತಾಧಿಕಾರವನ್ನು ಹೊಂದಿರುವ ಪುರಸಭೆ. – ಪೌರಸಂಸ್ಥೆ : ಶ್ರೀಮದ್ಧರ್ಮವೊಳಲ ಪದಿನಱುರ್ಸ್ಪೆಟ್ಟಿಯರ್ಗ್ಗೆ ಮಹಾನಗರಂಗಳ್ಗಂ ಪಾದಪೂಜೆಯಂ ಕೊಟ್ಟು (ಶ್ರೀಪಾ. XI-ii. ೦೬೬-೬೫; ೧೧೫೬). [ಸಂ.]

ಮಹಾನಟ (ನಾ). ೧. ಒಳ್ಳೆಯ ಅಭಿನಯ ಮಾಡುವ ವ್ಯಕ್ತಿ ; ಅಭಿನೇತೃ ; ಶ್ರೇಷ್ಠನಟ : ರಂಗಭೂಮಿಯುದ್ದಾಗಲೀ ಜಲಸಾಹ್ರಂಗದಲ್ಲಾಗಲೀ ಮಹಾನಟನೊಬ್ಬನು ಕಾಣಿಸಿಗುವುದು ಆಗೊಮ್ಮೆ ಈಗೊಮ್ಮೆ ಮಾತ್ರ (ಕಾಪ). ೨. ಶಿವನ ಹೆಸರುಗಳಲ್ಲಿ ಒಂದು : "ಆಷ್ಟಮೂರ್ತಿ: . . . ಮಹಾನಟಃ . . . ಅಗ್ನಿರೋಜಸಃ – ೧೨ ಶಿವನ ಹೆಸರುಗಳು" (ಶಿಪ್ರಾ. ೦೦. ೦೯). [ಸಂ.]

ಮಹಾನದ (ನಾ). ೧. ದೊಡ್ಡನದಿ.—ಹೊಳೆ. ೨. (ಪಶ್ಚಿಮಾಭಿಮುಖವಾಗಿ ಹರಿಯುವ) ದೊಡ್ಡ ಗಂಡುಹೊಳೆ : ಮಹಾನದಾಮಾಹನಸಮಯಸೌದ್ಯೋಗಸಂಕ್ರಮಾದಿವಿಧಾನಪ್ರಾಗಲ್ಭ್ಯನುಂ (ಅಪ್ಪ. ೦೦-೬೫). [ಸಂ.]

ಮಹಾನದಿ (ನಾ). ೧. ದೊಡ್ಡಹೊಳೆ : ನದಿ : ☞ ಭಾರತದ ಹಲವು ನದಿಗಳನ್ನು (ಪವಿತ್ರವಾದ) ಮಹಾನದಿಗಳೆಂದು ಪರಿಗಣಿಸಲಾಗಿದೆ. ಇವುಗಳ ಬಗೆಗೆ ಭಿನ್ನಾಭಿಪ್ರಾಯಗಳಿವೆ: ಪೆಱಗುದಿಯಾಗಿ ಮುಂತಗಲಿತಪ್ಪ ದಱಂದೆ. . . ಸಪ್ತಮುಖದಿಂದೆ ವಿಷೋನ್ನತಿಯಿಂದೆ ಭೋಗದೊಳ್ ತುಱ್ಪಿಗಿರವಿಂದೆ ಪೋಲ್ತುದು ಮಹಾನದಿ ರುಂದ್ರಪುರೇಂದ್ರರಾಜನಂ (ಅಜಿತ. ೬೮೬ ೫೦೨ಳ). ೨. ಒಂದು ನದಿಯ ಹೆಸರು : ಮಹಾನದಿಗೆ ಪಿರಿಕ್ಕುಡ್ ಬಳಿ ೧೭ ಮೈಲಿಗಳ ಉದ್ದದ ಅಣೆಕಟ್ಟು ನಿರ್ಮಾಣವಾಗಿದೆ (ಕಪ್ರ. ೫೨) ; ಮಹಾನದಿ-ಮಧ್ಯಪ್ರಾಂತಗಳಲ್ಲಿ ಹುಟ್ಟಿ ಮೊದಲು ಉತ್ತರಕ್ಕೂ ಅನಂತರ ಪೂರ್ವಕ್ಕೂ ಹರಿದು . . . ಬಂಗಾಳಕೊಲ್ಲಿಗೆ ಬೀಳುತ್ತದೆ (ಕಪ್ರ. ೦೦೦). ೩. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಇಪ್ಪತ್ತಾರನೆಯ ಸ್ಥಾನ ಮತ್ತು ಇಪ್ಪತ್ತಾರು ಅಂಕೆಗಳುಳ್ಳ ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ಮಹಾನದಿ . . . ಮಹಾಪರಿಮಿತ —ಈ ೪೧ ಸ್ಥಾನದ ಉಗ್ಗಡಣೆ (ಕ್ಷತ್ರ. ೬-೫೭). [ಸಂ. ಮಹಾನದೀ]

ಮಹಾನರಕ (ನಾ). ೧. ದೊಡ್ಡನರಕ. ೨. ಎಂಟು ನರಕಗಳ ಒಂದು ಗುಂಪಿನ ಹೆಸರು ; ☞ ಈ ನರಕದ ಗುಂಪು ಮತ್ತು ಸಂಖ್ಯೆಗಳ ಬಗೆಗೆ ಭಿನ್ನಾಭಿಪ್ರಾಯಗಳಿವೆ : ರೌರವಾದಿ ಮೂವತ್ತೆರಡು ಮುಖ್ಯ ನರಕಂಗಳೆಪ್ಪವವಾವೆಂದೊಡೆ ನಾಲ್ಕು ನಾಲ್ಕು ಭಾಗದಿಂದೆಂಟೆಂಟಿನಿ ನರಕ ಮಹಾನರಕ ರಾಜನರಕ ರಾಜರಾಜೇಶ್ವರಪರಕಂಗಳೆನಿಸಿಪ್ಪವು (ಪಪಃ. ೦೩೦). [ಸಂ.]

ಮಹಾನವಮಿ (ನಾ). ನವರಾತ್ರಿಯ ಒಂಬತ್ತನೆಯ ದಿನ ಮತ್ತು ಅಂದು ಆಚರಿಸುವ ಹಬ್ಬ ; ಆಶ್ವಯುಜ ಶುದ್ಧ ನವಮಿ : ಹಾಳು ಗೆಡ್ಕೋಡುವ ಅಳು ಪಾವಲ್ಲಯ್ಯ ಕೇಳು ಕೂಡಲಸಂಗಮದೇವಾ ಪುರಾಣದೆ ಮಹಾನವಮಿ (ಪಪಕ. ೬೯೬); ಯಾ ಹಾವಿನ ಬಡ್ಡಿಯಲ್ಲಿ ಮಹಾನವಮಿಯ ಹತ್ತುದಿನದ ಸೇವೆಯನು ನಡಸಿಕೊಂಡು ಬರಲುಳ್ಳವರೂ (ಪಳ್. IV (೩). ೨೯೦ಪ. ೧೪೬-೫೬ ; ೧೪೯) ; ಈ ದಿನ ಮೊದಲು ಮಹಾನವಮಿಯ ಸಾಯಂಕಾಲದವರೆಗೂ ಓಲಗವು ದೇವಂತಿಯೂ . . . ಕಟ್ಟುಮಾಡಿಸಿದರು (ಪಾಚಪಂ. ೬. ೭೬). ☞ ನವರಾತ್ರಿಯ ಹಬ್ಬದ ಸಂದರ್ಭದಲ್ಲಿ ಒಂಬತ್ತನೆಯ ದಿನದಂದು ಯುದ್ಧೋಪಕರಣಗಳಿಗೂ ಕೆಲಸಗಾರರು ಉಪಯೋಗಿಸುವ ಸಲಕರಣೆಗಳಿಗೂ ಪೂಜೆಮಾಡುವ ರೂಢಿ ಇದೆ. ಇದನ್ನು 'ಆಯುಧಪೂಜೆ' ಎಂದೂ ಕರೆಯುತ್ತಾರೆ.

ಮಹಾನವಮಿ ದಿಬ್ಬ = ಹಿಂದೆ ಹಂಪೆಯಲ್ಲಿ ಆಯುಧಪೂಜೆಯನ್ನು ಮಾಡುತ್ತಿದ್ದ ಒಂದು ಸ್ಥಳ : ಹಂಪೆಯಲ್ಲಿರುವ ಮಹಾನವಮಿ ದಿಬ್ಬವು ಹಿಂದೆ ಸಿಂಹಾಸನದ ಜಗತಿಯಾಗಿತ್ತೆಂದೂ . . . ಹೇಳುತ್ತಾನೆ (ರಾಸಂ.೨೦೬). ಮಹಾನವಮಿಮಂಟಪ = ಮೈಸೂರರಸರು ಮೈಸೂರಿನಲ್ಲಿ ಆಯುಧಗಳನ್ನಿಟ್ಟು ಪೂಜೆಮಾಡುತ್ತಿದ್ದ ಒಂದು ಮಂಟಪ : ಹೈದರನು ಸ್ವಲ್ಪ ಸೈನ್ಯದೊಡನೆ ಮಹಾನವಮಿಮಂಟಪದ ಬಳಿ ಇದ್ದನು (ಒಚ್ಚ. ೦೩). [ಸಂ. ಮಹಾನವಮಿ]

ಮಹಾನಸ (ನಾ). ೧. (ಹೊರೆಯನ್ನು ಸಾಗಿಸುವ) ದೊಡ್ಡ ಬಂಡಿ.—ಗಾಡಿ. ೨. ಅಡುಗೆಮನೆ ; ಪಾಕಶಾಲೆ : "ಪಾಕಸ್ಥಾನಂ, ರಸವತೀ, ಮಹಾನಸಂ – ಈ ೩ ಬಾಣಸನ ಮನೆ" (ಜಣಚು. ೧೯-೨೦೦) ; ನಿರಂತರವಾಗಿ ಮೇಲಕ್ಕೆ ಹೋಗುತ್ತಿರುವ ಧೂಮವು ಅಗ್ನಿಸಂಬಂಧವಳ್ಳದು ಎಂದು ಮಹಾನಸ ಮೊದಲಾದುವುಗಳಲ್ಲಿ ನಿಶ್ಚಯಿಸಿ . . . ಅಗ್ನಿ ಇರುವುದು ಎಂದು ತಿಳಿಯುವುದು (ಜಾಪ್ರ. ೪೮೨). [ಸಂ.]

ಮಹಾನಸಿಕ (ನಾ). ಅಡುಗೆಯವನು ; ಬಾಣಸಿಗ : ಗೀರ್ವಾಣಮಹಾನಸಿಕವಿಕರಮುಮಂ ದೇವಸ್ಮಪನಕಾರಿಕಾನಿಕಾಯಮುಮುಂ ನಿಯೋಜಿಸಿ (ಜಾಂಪು. ೦೦-೦೦ ೪). [ಸಂ.]

ಮಹಾನಸುಗುನ್ನಿ (ನಾ). ದೊಡ್ಡಜಾತಿಯ ಒಂದು ಬಗೆಯ ನಸುಗುನ್ನಿ : "ಕಂ–ಮಹಾನಸುಗುನ್ನಿ, ಕೋಚಿಕುಟುಮು" (ಒಪ್ರಾ. ೫೪). [ಮಹಾ + ನಸುಗುನ್ನಿ]

ಮಹಾನಾಟ್ಯ (ನಾ). ಪ್ರಳಯತಾಂಡವ : ಕೇಳು ಮತ್ಪತಿಯು ಪೂರ್ವದಿ ಮಹಾಪಾಟ್ಯವಾದುತಾವೇಶದಿಂದಪಲಾಂಬಕ ತೆರೆಯಲು (ಪಪಪಂ. ೬-೪೬). [ಸಂ.]

ಮಹಾನಾಡು (ನಾ). ಪುರಸಭೆ ; ಪೌರಸಂಸ್ಥೆ : ಯಿಂತು ಸಮಸ್ತತಳ ಮುಖ್ಯವಾಗಿ ಸೆದಂದುಳಲು ಮಹಾನಾಡಾಗೀ (ಗಿ) ಪರ[ದು] (ಪಪ. XIX, ೪೬-೯೯ ; ೧೨೪೬) ; ಸೆಟ್ಟಿಯರುಂ ಸೆಟ್ಟಿಗುತ್ತರು ಮುಂಮುರಿದಂಡ ಸಾಗರಂಗಳುಂ ಕೂಡುಮತ್ತಿಯಲ್ಲಿ ಮಹಾನಾಡಾಗಿದ್ದರ್ (ಶ್ರೀಪಾ. IX-೬ ೪೧೦-೪ ; ಪು. ೧೧೯೬). [ಮಹಾ + ನಾಡು]

ಮಹಾನಾಮ್ನೀವ್ರತ (ನಾ). ವೇದಾಧ್ಯಾಸದ ಕಾಲದಲ್ಲಿ ಸಾಮವೇದದ ಒಂದು ಪರಿಶಿಷ್ಟವಾದ 'ಮಹಾನಾಮ್ನೀ' ಎಂಬಲ್ಲಿನ ಋಕ್ಕುಗಳನ್ನು ಪಠಿಸುವ ಒಂದು ವ್ರತ : ಮಹಾನಾಮ್ನೀವ್ರತ, ಮಹಾವ್ರತ. ಉಪನಿಷದ್ವ್ರತ. ಗೋದಾನವ್ರತ ಈ ನಾಲ್ಕೂ ವೇದವ್ರತಗಳು. ಇವನ್ನು ಕ್ರಮವಾಗಿ ಹದಿಮೂರನೇ ಹದಿನಾಲ್ಕನೇ ಹದಿನೈದನೇ ಹದಿನಾರನೇ ವಯಸ್ಸಿನಲ್ಲಿ ಮಾಡುವುದು (ಜಾಗಾ. ೦೩೭). [ಸಂ.]

ಮಹಾನಾಯ್ಗ (ನಾ)· ಶ್ರೇಷ್ಠನಾದ ಮುಖಂಡ ; ಮಹಾನಾಯಕ : ಶ್ರೀಗಂಗವಮಹಾನಾಯ್ಗರಾ ಮಗನ್ಸಾದೆಯನ್ನಿರಟ್ಟ ತುಜುಗೊಳೊಳ್ಳಾದಿ ತುಜುಮನಿಕ್ಕಿಸಿ ಸುರಲೋಕದ ಭೋಗಿ ಆದವ್ (ಚ. IX. ಹರಿವಂ: ೯೫-೦ ; ಸು. ೭೫೦) ; ಪೃಥುವೀಪರಮೇಶ್ವರಮಹಾನಾಯ್ಗರ ರೇಚಯ್ಯನ ಮಗನ್ (ಚ. XV. ಹರಿವಂ. ೬೮-೪; ಸು. ೮೫೦). [< ಸಂ. ಮಹಾನಾಯಕ]

ಮಹಾನಾವಿ 'ಮಾನಾಮಿ' ನೋ.

ಮಹಾನಿದ್ರೆ (ನಾ)· ಸಾವು ; ಮರಣ : ದೀರ್ಘನಿದ್ರೆಯಂ ಮಹಾನಿದ್ರೆಯೆಂದು ದೀರ್ಘವ್ಯಾಧಿಯಂ ಮಹಾವ್ಯಾಧಿಯೆಂದು . . . ಪಡಿವಂತೆ ಭೀಮನಂ ಮಹಾರಥನೆಂದು ಪಡಿಯಲ್ಬಕ್ಕುದೆ ವಲಂ (ಗದಾಯು. ೬-೫೬ ಪ). 'ದೀರ್ಘನಿದ್ರೆ' ಪರಾ. [ಸಂ. ಮಹಾನಿದ್ರಾ]

ಮಹಾನಿಧಾನ (ನಾ)· ೧. ವಿಪುಲವಾದ ಸಂಪತ್ತು; ಮಹದೈಶ್ವರ್ಯ : ದಿವ್ಯಮಹಾನಿಧಾನವಿದಿರೊಳ್ ಕೋಳ್ಪೋದುದೋ ಪೇಚುಮೆಂಬುದನೆಂ ಬನ್ನೆಗಂ . . . ಕೊಟ್ಟಳ್ಗಡಂ (ಭಾಷಾ. ೦೦-೧೩). ೨. ವಿಪುಲವಾದ ಸಂಪತ್ತನ್ನು ಹೊಂದಿದವನು : ಆ ತಂದೆಯು ಭಕ್ತನ ವಿದ್ಯಾತಿಶಯ ಮಹಾನಿಧಾನನನ್ನಯಮುಪಮಾತೀತಂ (ಭಾಂತ್ಯ. ೦-೨೦). [ಸಂ.]

ಮಹಾನಿಧಿ (ನಾ)· [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಇಪ್ಪತ್ತಾರನೆಯ ಸ್ಥಾನ ಮತ್ತು ಇಪ್ಪತ್ತಾರು ಅಂಕೆಗಳುಳ್ಳ ಒಂದು ದೊಡ್ಡ ಸಂಖ್ಯೆ : ಎಕ್ಕಂ ದಹಂ . . . ನಿಧಿ ಮಹಾನಿಧಿ . . . ಮಹಾಕ್ರತುವೆಂದಿನೇ ಉಗ್ಗ ಡಣೆಗಳು (ಜಿಚಕ್ರ. ೭). [ಸಂ.]

ಮಹಾನಿನದ (ನಾ)· ೧. ದೊಡ್ಡ ಶಬ್ದ; ಅತಿಶಯವಾವ ನಾದ-ಧ್ವನಿ. ೨. ಪಂಚಮಹಾವಾದ್ಯಗಳ ನಾದ : 'ಪಂಚಮಹಾನಿನದ' ಪರಾ. [ಸಂ.]

ಮಹಾನಿಲ (ನಾ)· ೧. ರಭಸವಾದ ಗಾಳಿ; ಸುಂಟರಗಾಳಿ. ೨. [ಜೈನ] ಭೂಲೋಕವನ್ನು ಸುತ್ತಿರುವ ವಾಯು : ಎಂಟುಂ ಪೊಡವಿಗಳಂ ತಾಳ್ದಿದಾಭೋಗದಿಸಿದೆ ಮೂಱುಂ ಮಹಾನಿಲಂಗಳ್ ಕ್ರಮದಿಂ (ಭಾಂತ್ಯ. ೮೫-೩೦). [ಸಂ.]

ಮಹಾನೀಲ (ನಾ)· ೧. ಗಾಢವಾದ ನೀಲಿಯ ಬಣ್ಣ : ಕಡುನೀಲಿಬಣ್ಣ. ೨. ಒಂದು ಬಗೆಯ ನೀಲರತ್ನ; ಇಂದ್ರನೀಲಮಣಿ. [ಸಂ.]

ಮಹಾನೀಲಿ (ನಾ)· ಒಂದು ಬಗೆಯ ಗಿಡ ಮತ್ತು ಅದರ ಬೇರು : ದಾನಾಳದ ಹೂ, ಅದರ ಬಿಗುರು, ಮಹಾನೀಲಿ ಇವಂ ಸಮಭಾಗವಾಗಿ ಅಂಬಿಲದಲ್ಲರೆದು ಕೊಡಲು ಹೆಣ್ಣೆತ್ತರು ನಿಲ್ಗುಂ (ಸಣ್ಣ. ೦೫೬). [ಸಂ. ಮಹಾನೀಲೀ]

ಮಹಾನು (ನಾ)· ಮೆಹತ್ತ್ ; ಮಹಾತ್ಮಾವ ; ಪೂಜ್ಯ ; ದುಃಖಾತಿರೇಕದ ಹೇಯದೊಡಲನು ಜಾತಮಾಡುವರೇನು ಮಹಾನುಗಳೆಂದೊಂದು ಮುಖಿ (ಜಜಾಗ. ೦೦-೦೩-೦೩). [< ಸಂ. ಮಹಾನ್]

ಮಹಾನುಭಾವ (ನಾ)· ೧. ಹಿರಿಮೆ; ಶ್ರೇಷ್ಠತೆ; ದಿವ್ಯತ್ವ : ಧರಣೇಂದ್ರ ನವರ ಮಹಾನುಭಾವಮುಮನಾದೀವನೊಳಾದುದೊಂದು ನಿರ್ಭರ ಧಕ್ಕಿಯುವಂ ಮೆಚ್ಚಿ ವಿಭರೂಪವಂ ತೋಱಿದಾಗಳ್ (ಶಾಪ. ೬-೦೦೪ ಪ); ಮಹಾನುಭಾವದಿನೇದಿಂತಱಪೆಯುಮಱಿವಂ ಕೆಯ್ಕೊಳಲಱಿಯ (ಯ)ರಿ ಬಱಿಯಂ ವಿವೇಕವಪದಿಂ ಕೆಜಿಯರ್ (ಜಜಚಂ. ೦೩೭-೩); ಈ ತನುವಿಂದು ಮಂತ್ರದ ಮೂಲವ ಕಂಡೆ ಈ ತನುವಿಂದು ನಿಮ್ಮ ಶರಣರ ಮಹಾನುಭಾವವ ಕಂಡೆ (ಕೆಂಂಚೆ. ೦೦೯-೦೧೭). ೨. ಅತಿಶಯವಾದ ಅನುಭಾವ ; ಪರಮಾತ್ಮನ ಸಾಕ್ಷಾತ್ಕಾರ : ಗುರುಲಿಂಗಜಂಗಮದಿಂದೆ ಪಾದೋದಕಪ್ರಸಾದವಾಯಿತ್ತು ಆ ಭಾವವೆ ಮಹಾನುಭಾವವಾಗಿ ಎನಗೆ ಮತ್ತೆ ಬೇಱೆ ಪ್ರಸಾದವೆಂಬುದಿಲ್ಲ (ಜಚಪ. ೬೭೩); ಅಂಗಕ್ಕೆ ಆಚಾರವೆ ಜೀವವು ಮನಕ್ಕೆ ಮಹಾನುಭಾವವೆ ಜೀವವು ಆತ್ಮಂಗೆ ಅಱಿವೆ ಜೀವವು (ಜಂಂಚೆ- ೨೯೦-೨೫). ೩. ಮಹಾವ್ಯಕ್ತಿ; ಮೆಹಾವುರುಷ : ಆ ಮಹಾನುಭಾವಂ ತನ್ನ ರಾಜ್ಯಾಭಿವೃದ್ಧಿಯೊಳ್ ಕಸವರದೊಳ್ ಜಸಮಂ . . . ಕೊಳ್ವವೊಲಾರದೊಳ್ ಸಾರಮಂ ಮಹೀಪತಿ ಕೊಂಡಂ (ಜಾಂತ್ಯ. ೯-೦೫೯ ಪ) ; ಮಹಾನುಭಾವರ ತೋಱಾ ಎಸಗೆ (ಜಚಪ. ೦೫೦); ಮಹಾನುಭಾವನ ದರುಶನದಿ ಮಜ್ಜನ್ಮ ಸಫಲಮೆಮ್ಮಕ್ಕ ಕ್ಕಮಾಗಿದು (ಭಾಬಾ. ೪-೬೨). [ಸಂ.]

ಮಹಾನುಭಾವಿ (ನಾ)· ಮಹಾ ಅನುಭಾವವನ್ನು ಪಡೆದವನು : ಅಜ್ಞಾನಸುಜ್ಞಾನಗಳೆರಡೂ ಶಿವನೆಂದರೆ ಶಿವಜ್ಞಾನಗಳು ಮೆಚ್ಚುವನೆ. ಶಿವ ಶಕ್ತಿಗಳೆರಡೂ ನೀನೆ ಎಂದರೆ ಮಹಾನುಭಾವಿಗಳು ಪರಿಣಾಮಿಸುವರೆ (ಅಪಚಂ. ೫೦೦-೦೦೧). [ಸಂ. ಮಹಾನುಭಾವಿನ್]

ಮಹಾನೈವೇದ್ಯ (ನಾ)· ೧. ಪಂಚಪಕ್ವಾನ್ನ ಮುಂತಾದುವನ್ನು ದೇವರಿಗೆ ಅರ್ಪಿಸುವುದು : ದೇವರಿಗೆ ಮಹಾನೈವೇದ್ಯವಾದ ಮೇಲೆ ಮಂಗಳಾರತಿಯ ಹೊತ್ತಿಗೆ ಎಲ್ಲರೂ ಅಲ್ಲಿ ಸೇರಿದ್ದರು (ಕಾಪ್ರ). ೨. ದೇವರಿಗೆ ಅರ್ಪಿಸುವ ಪಂಚಪಕ್ವಾನ್ನ ಮುಂತಾದುವು. [ಸಂ.]

ಮಹಾನೈಷ್ಠಿಕ (ನಾ)· ಬ್ರಹ್ಮಚರ್ಯವೇ ಮೊದಲಾದ ತಪೋನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವನು ; ಅತ್ಯಂತ ನಿಷ್ಠಾವಂತ : ಕರ್ಮಠ : ಈ ತಪೋಧನವಪ್ಪೊಡ ಮಹಾನೈಷ್ಠಿಕಂ ಮತ್ತಮಿಱಿದಂಗೀ ಕನ್ನೆಯಂತುಂ ಮಗಳಾಗಳ್ (ಕಾಪಚಂ. ೨೫೮-೩). [ಸಂ.]

ಮಹಾಪಂಚಮೂಲ (ನಾ)· [ವೈದ್ಯಶಾ]ಬೆಲ್ಲವತ್ತ, ನರುವಲ, ಗುಳ್ಳ, ಪಾದರಿ ಮತ್ತು ಶಿವನ್ನಿ ಎಂಬ ಐದು ಬಗೆಯ ಔಷಧದ ಬೇರುಗಳು : ಬೆಲ್ಲವತ್ತದ ಬೇರು, ಪರುವಲದ ಬೇರು, ಗುಳ್ಳದ ಬೇರು, ಪಾದರಿ ಬೇರು, ಶಿವನ್ನಿಬೇರು __ ಇಂತೆಂಬ ಮಹಾಪಂಚಮೂಲ . . . ಲಘುಪಂಚಮೂಲ ಕೂಡ ದಶಮೂಲವೆಂಬ ಈ ಬೇರುಗಳನ್ನು . . . ಸಜ್ಜ ನಾಗರೆದು ನಶ್ಯಂ ಘಾಡೆ ಸ್ನಿಪಾತಂ ಮಾಣ್ಗುಂ (ಸಣ್ಣ. ೦೦೨). 'ದಶಮೂಲ'· 'ಪಂಚಮೂಲ' ಪರಾ. [ಸಂ.]

ಮಹಾಪಥ (ನಾ)· ೧. ಹೆದ್ದಾರಿ; ರಾಜಮಾರ್ಗ : ಮಹಾಪಥ—ಮಹಾಪಥ (ಸಣಪ. ೫೧೦ ಕ್ರಿಯೋ). ೨. ಸ್ವರ್ಗದ ದಾರಿ : 'ಮಹಾಪಥಗಮಪ' ಪರಾ. ೩. ಸಾವು ; ಮರಣ : 'ಮಹಾಪಥಂಬೋಗು' ಪರಾ. ೪. ಶಿವ; ಈಶ್ವರ. [ಸಂ.]

ಮಹಾಪಥಂಬೋಗು (ಕ್ರಿ)· ಸಾಯು ; ಮರಣಹೊಂದು : ಎನಗೀ ಬನಮಂ ಕುಡಲ್ವೇಬ್ಕುಮಿಯದಂದು ಆಂ ಮಹಾಪಥಂಬೋಪೆಂ (ಜಾಪಂಪ. ೦೯೭). [ಮಹಾಪಥ + ಪೋಗ್ವ (< ಪೋ)]

ಮಹಾಪಥಗಮನ (ನಾ)· ಸ್ವರ್ಗಕ್ಕೆ ಮಾಡುವ ಪ್ರಯಾಣ : ವಿಮಲ ಮಾನಸರಾಗಿ ಮೋಹಭ್ರಮೆಗಳನು ತೊಲಗಿಸಿ ಮಹಾಪಥಗಮನವನು ಮಾಡಿದರು ಪಾಂಡುನೃಪಾಲನಂದನರು (ಹಚ್ಚು. ೦ ಸಚಪ). [ಸಂ.]

ಮಹಾಪದ (ನಾ)· (?) : ಮುಂಪದ ಮಹಾಪದಂಗಳವೆಱೆಯ ಪದಿನೆಂಟುತೆಱದ ಧಾನ್ಯಗಳರ್ವಾ ಕಣಜಂಗಳ ಸಾಲುಗಳಂ ಗಣಿಸುವಱಿದೆನಿಸಿ ಮೆಱೆವವಾ ಪುರದೆಡೆಯೊಳ್ (ಚಣಾ. ೫-೬೬). "ಒಂದು ಬಗೆಯ ಧಾನ್ಯ (?)" (ಚಣಾ. ೫೦೭). [?]

ಮಹಾಪದ್ಮ (ನಾ)· ೧. ಬೆಳಿಯ ತಾವರೆ. ೨. ಕುಬೇರನ ನವನಿಧಿಗಳಲ್ಲಿ ಒಂದು : ಆ ದಿಕ್ಪಾಲಕರೊಳಾ ಕುಬೇರನೇ ಪದ್ಮ ಮಹಾಪದ್ಮ ಶಂಖ ಮಕರ ಚ್ಛಪ ಮುಕುಂದ ಕುಂದ ನೀಲ ವರ್ಚಂಗಳೆಂಬ ನವನಿಧಿಗೊಡೆಯನಾಗಿ ತೀರ್ಥರನಿಗೆ ಸವಿಪಾಗಿರ್ಪಂ (ಜಚಪ. ೦೬೬). ೩. ಪ್ರಸಿದ್ಧವಾದ ಎಂಟುಬಗೆಯ ಹಾವುಗಳಲ್ಲಿ ಒಂದು : "ಭಗದನಂತಂ ವಾಸುಕಿ ಕ್ಷುಲ ತಕ್ಷಕಾಖ್ಯನು ಸುಕಾರ್ಕೋಟಕಂ ಪದ್ಮಂ ಮಹಾಪದ್ಮವೆಸೆ ತಂತಿ ಹಾಳಂ ಕುಳಕವೆಂದು ನಾಗರಕುಲಂಗಳೆಂಟಕ್ಕೆ ನಾಮಂ" (ಜಂಂಗಾ. ೦೦೯-೪); ಪದ್ಮ ಮಹಾಪದ್ಮ ಕಾಳಿಂದಿ ಕಾಳಕ ಕಾಳಕೂಟ ಕಾಳಿಯ ಕಾಳಸರ್ಪ ಕಾಳಾಂತಕ ಕಾಳಾಗ್ನಿ ಕಾಳಾಂಜನ ಕಾಳಾಂಬುದ ಕಾಳಾಂಬುಜ ಕಾಳಾಂಬುಧಿ ಕಾಳಾಂಬುಧರ ಕಾಳಾಂಬುಪ ಕಾಳಾಂಬುಪಾಲ ಕಾಳಾಂಬುಪಾಲಕ ಕಾಳಾಂಬುಪಾಲಕಾಳಾಂಬುಪಾಲಕಾಳಾಂಬುಪಾಲ

ರಾಜಾವರ್ತದ ಬೀದಿಗಳು ಬೆನ್ನಿನಲ್ಲಿ ಉಳ್ಳದು ಮಹಾಪದ್ಮ ನೆನಿಸಿಕೊಂಬುದು (ಪಾಪ. ೨-೩). ೪. ಅಪ್ಪದಿಗ್ಗಜಗಳಲ್ಲಿ ಒಂದು. ೫. ಕುಬೇರನ ಒಬ್ಬ ಕಿನ್ನರ ಅನುಚರ. ೬. ಒಂದು ನರಕದ ಹೆಸರು : ಜಲೂಕ ಮಹಾಮ್ಶಾಶ್ರು ಮರ್ಕಟ ಕರ್ಕಟ ಗಂಡಕವೆಂಬ್ಕದು ಮಂತ್ರಿನರಕಂಗಳ ಸಹಾಯದಿಂ ಮಹಾಪದ್ಮವೆಂಬರಸುನರಕವಿಪುದು (ಪಾಪ. ೦೫೩). ೭. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಹದಿಮೂರನೆಯ ಸ್ಥಾನ ಮತ್ತು ಹದಿಮೂರುಅಂಕೆಗಳಿಂದ ಕೂಡಿದ ಒಂದು ದೊಡ್ಡ ಸಂಖ್ಯೆ : ಎಕ್ಕಂ. ದಾಹಂ . . . ಪದ್ಮ. ಮಹಾಪದ್ಮ . . . ಮಹಾಪರಿಮಿತ–ಈ ೪೦ ಸ್ಥಾನದ ಉಗ್ಗಡಣೆ (ಕ್ಷತ್ರಚೂ. ೯-೨೨) ; ಎಕ್ಕಂ ದಾಹಂ . . . ಪದ್ಮ ಮಹಾಪದ್ಮ . . . ಮಹಾಕ್ರತುವೇಂಬಿವೇ ಉಗ್ಗಡಣೆಗಳು (ಪಾಪ. ೭). [ಸಂ.]

ಮಹಾಪರಾಧ (ನಾ). ದೊಡ್ಡತಪ್ಪು : ಎಲೆ ದುರಾತ್ಮ, ಮಹಾಪರಾಧವ ಬಳಿಕುವರೆ (ಗುಣ್ಮ. ೨-೨೨) ; ನಾನು ಮಾಡಿದ ಮಹಾಪರಾಧವೇನು ? (ಪಾರ್ಶ್ವ. ೨೨೬). [ಸಂ.]

ಮಹಾಪರಾಧಿ (ನಾ). ದೊಡ್ಡತಪ್ಪನ್ನು ಮಾಡಿರುವವನು : ನಾನು ಮಹಾಪರಾಧಿ (ಪಾರ್ಶ್ವ. ೨೬೦). [ಸಂ. ಮಹಾಪರಾಧಿನ್]

ಮಹಾಪರಿಮಿತ (ನಾ) [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ನಲವತ್ತನೆಯ ಸ್ಥಾನ ಮತ್ತು ನಲವತ್ತುಅಂಕೆಗಳಿಂದ ಕೂಡಿದ ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ಪರಿಮಿತ. ಮಹಾಪರಿಮಿತ–ಈ ೪೦ ಸ್ಥಾನದ ಉಗ್ಗಡಣೆ (ಕ್ಷತ್ರಚೂ. ೯-೨೭). [ಸಂ.]

ಮಹಾಪರಿಷೆ (ನಾ). ದೊಡ್ಡಜಾತ್ರೆ ; ಮಹೋತ್ಸವ : ಇದಕ್ಕ ಸಕ್ಕಿಳೆ ಬೆಳ್ಗುನ್ದೂರುಂ ಕಿಜುಬೆಳ್ಗುನ್ದೂರುಂ . . . ಪೆಗರಲ ಪನ್ನಿರ್ವ್ವರು ಮಹಾಪರಿಷೆಯೊಳ್ ಎಡೆಸಾಡ ಮುವರ್ಶ್ಶಿಬ್ಭೂಮುಣ್ಡುಗಳುಂ ಸಕ್ಕ (ಪಾ. III (೩). ೪೦೫೫. ೨೪೯-೫೦; ಸಾ. ೧೦೬೫; ೫೬).

[ಮಹಾ + ಪರಿಷ (< ಪರಿಷ್)]

ಮಹಾಪರೂಷ (ನಾ). ದೊಡ್ಡಬೆಟ್ಟ ; P ಇದು ಈಗಿನ ಶ್ರವಣಬೆಳಗೊಳದ ಚಂದ್ರಗಿರಿ : ಈ ಮಹಾಪರೂಷದಿಂ ಅಕ್ಷಯಕೀರ್ತ್ತಿ ತನ್ನಕೆದ ಪಾರ್ದ್ದಿಯು ಮೇಲದು ನೋನ್ತು ಭಕ್ತಿಯಿಮ್ ಅಕ್ಷಿಮಣಿಕ್ಕೆ ರಮ್ಯಸುರ ಲೋಕಸುಕ್ಕೆ ಧಾಗಿಲಿ × × × (ಪಾ. II, ೨೦-೨ ; ಸಾ. ೭೦೦).

[< ಸಂ. ಮಹಾಪರ್ವತ]

ಮಹಾಪಸಾಯತ 'ಮಹಾಪಸಾಯ್ತ' ನೋ.

ಮಹಾಪಸಾಯಿತ 'ಮಹಾಪಸಾಯ್ತ' ನೋ.

ಮಹಾಪಸಾಯ್ತ, ಮಹಾಪಸಾಯತ, ಮಹಾಪಸಾಯಿತ (ನಾ). ಹಿಂದೆ ರಾಜನ ಬಳಿ ಇರುತ್ತಿದ್ದ ಒಬ್ಬ ಅಧಿಕಾರಿ ; ಸ್ವಸ್ತಿಶ್ರೀಮನುಮಹಾಪಸಾಯ್ತುರುವುಪ್ಪ ವಾಮಣಮಂಲ್ಲಣನವರು ಕೊಂಗಿಂಗೆ ಧಾಳಿಯು ಹರಿವಲ್ಲಿ (ಶ್ರವ. ೦೯೩೦. ೪೫-೪ ; ೧೧೫೭). **ಮಹಾಪಸಾಯತ** : ಶ್ರೀಮನುಮಹಾಪಸಾಯತ ತಿರುಮಪ್ಪ × × ಧೀಕಾರಿ ಸಂಭುದೇವಣಸವರ × × (ಪಾ. II (೩). ೨೯೯-೨; ೧೨೧೦). **ಮಹಾಪಸಾಯಿತ** : ಕಂನಡ ಪೆರಿಲಾಳ ಸಂಧಿವಿಗ್ರಹಿ ಮಹಾಪಸಾಯಿತಂ ಬಾಹತ್ತರಾಯೋಗಾಧಿಪತಿಯುಪ್ಪ ಬನವಸೆನಾಡ ದಣ್ಡನಾಯಕಂ ಚೊಳಿಕೆಯ ಕೇಸಮುಯ್ಯಂಗಳ ಭೆಸದಿಂ (ಶಾ. IV, ೦೯-೯ ; ೧೧೭೭); ಶ್ರೀಮನ್ಮಹಾಪಸಾಯಿತಂ ಮೈಯಿಲರದೇವರ ದಿವ್ಯಶ್ರೀಪದಾರಾಧಕ (ಶಾ. XVI, ೫೬೬. ೦೩೭-೦೦ ; ೭). [ಮಹಾ + ಪಸಾಯ್ತ]

ಮಹಾಪಾತಕ (ನಾ). ೧. ಘೋರವಾದ ಪಾಪ.–ದೋಷ; ಪಂಚಮಹಾಪಾತಕಗಳಲ್ಲಿ ಯಾವುದಾದರೂ ಒಂದು : ಅದಾವಳಿಪ್ಪೆನ್ಗೆ ಮಹಾಪಾತಕಮಂ (ಶ್ರವ. ೦೯೩೦. ೦೫-೦೬; ಸಾ. ೫೨೦); ಪಾತಕಮಹಾ [ಪಾಣಿ. ಪಹ್ನು] ಪಾತಕವ ಮಾಡಿದವನು ಸಗ್ಗಕ್ಕರ ಮನೆಗೆ ಹೋಗಿ ಅವರೊಕ್ಕ ಪ್ರಸಾದವನಾವುಂಡರೆ ಸಕಲಬ್ರಹ್ಮಹತ್ಯಾದಿಪಾತಕ ಪರಿಹಾರವೆ (ಪಾಪ. ೧೨೯) ; ಎಲೆ ತಾಯೆಯಿ ದುಸ್ತರಮಹಾಪಾತಕವನೆಂತುತ್ತರಿಸುವೆನು ಮುಂದ (ಪಾಪ್ರ. ೧೫-೨೬). ೨. ಘೋರವಾದ ಪಾಪಕಾರ್ಯವನ್ನು ಮಾಡಿದವನು : ಪಂಚಮಹಾಪಾತಕಗಳಲ್ಲಿ ಯಾವುದಾದರೊಂದು ಪಾತಕವನ್ನು ಮಾಡಿದ ವ್ಯಕ್ತಿ : ಬಟಾರಿಕುಲದೊಳಗು ಕದಮ್ಬಸ್ಯಕ್ಕೊಂಣ್ ಮಹಾಪಾತಕನ್ (ಪ್ರಾಜ. ೦೯೩೦. ೦೬-೦೬ ; ಸಾ. ೫೬೦); ಯಿಂ ಧರ್ಮವ ಕಿಡಿಸಲು ಮಾನವದಂದ ಮಹಾಪಾತಕಗೆ ಸಹಸ್ರಕವಿಲೆಯ ಬ್ರಾಹ್ಮಣರ ಗಂಗೆದು ತಡಿಯ ಕೊಂದ ಪಾತಕಿ (ಪಾ. VI, ೪೫೩ರು. ೦೫೪-೬ : ೧೨೦೬). 'ಪಂಚಮಹಾಪಾತಕ' ಪರಾ. [ಸಂ.]

ಮಹಾಪಾತಕಿ (ನಾ). = ಮಹಾಪಾತಕ ೨ : 'ಪಂಚಮಹಾಪಾತಕಿ' ಪರಾ. [ಸಂ. ಮಹಾಪಾತಕಿನ್]

ಮಹಾಪಾತ್ರೆ (ನಾ). ಮಹಾಮಂತ್ರಿ ; ಪ್ರಧಾನ ಹೆಗ್ಗಡೆ : ಶ್ರೀತೆಱುಡಾಬಿಪಾರ ಮಹಾಪಾತ್ರೆ ಶ್ರೀಸೋಮತಿಲಾದೆಱುರಾಪುತ್ತುಂದು ಮಹಾಪಾತ್ರೆ (ಪಾ. XIV, ಗುಂಡ್ಕಲ್ಲು. ೦೬೬-೬ ; ೧೫೪೦). [ಸಂ. ಮಹಾಪಾತ್ರ]

ಮಹಾಪಾಪ (ನಾ). = ಮಹಾಪಾತಕ ೧ : ನೀವು ಮಾಡಿದ ಮಹಾಪಾಪವನ್ನು ನಾನೇಕೆ ವಿವರಿಸಬೇಕು ? (ಗಾಪ್ರ. ೨೦೬); ಅದು ಮಹಾಪಾಪವೆಂದು ನಮಗೆ ಭಾಸವಾಗುತ್ತದೆ (ಪಾಪ್ರ. ೦೬). ' ಪಂಚಮಹಾಪಾಪ ' ಪರಾ. [ಸಂ.]

ಮಹಾಪಾಪಿ (ನಾ). = ಮಹಾಪಾತಕ ೨ : ಕೀಚಕ ಅನ್ನೋನು ಒಬ್ಬ ಮಹಾಪಾಪಿ (ಪಾಭಾ. ೨೦೬). [ಸಂ. ಮಹಾಪಾಪಿನ್]

ಮಹಾಪಾರುವ (ನಾ). ಶ್ರೇಷ್ಠನಾದ ಬ್ರಾಹ್ಮಣ : ಯಿಂ ಧರ್ಮವ ನಾವನಾನುಂ ಪ್ರತಿಪಾಳಿಸಿದ ಮಹಾಪಾರುವರ್ಗ್ಗೆ ಸಹಸ್ರಕವಿಲೆಯ ಕೋಡು ಕೊಳಗಂ ಸುವಂನದಲ್ಲಿ ಕಟಿಸಿ ಗಂಗೆಯ ತಡಿಯ ದಾನ ಮಾಡಿದ ಫಲ (ಪಾ. VI, ೪೫೩ರು. ೦೫೪-೬ ; ೧೨೦೬). [ಮಹಾ + ಪಾರುವ (< ಪೂರ್ವ)]

ಮಹಾಪುರಾಣ (ನಾ). ೧. ಸೃಷ್ಟಿ, ದೇವತೆ ಹಾಗೂ ಪಿತೃಗಳ ವಂಶದ ವಿವರ, ಮನ್ವಂತರ ಮುಂತಾದ ವಿಷಯಗಳ ನಿರೂಪಣೆಗಳನ್ನೊಳಗೊಂಡ, ಸಂಸ್ಕೃತದಲ್ಲಿ ರಚಿತವಾದ (ಹದಿನೆಂಟು) ಮುಖ್ಯ ಪುರಾಣ: ಮಹಾಪುರಾಣಗಳಿಗೆ ಹತ್ತುಲಕ್ಷಣಗಳಿರುತ್ತವೆ (ಶಾಸ್ತ್ರ. ೦೫೬). ೨. [ಜೈನ] ಜಿನಸೇನಾಚಾರ್ಯ ಮತ್ತು ಗುಣಭದ್ರಾಚಾರ್ಯರಿಂದ ರಚಿತವಾದ ತ್ರಿಷಷ್ಟಿಶಲಾಕಾಪುರುಷರನ್ನು ಕುರಿತ ಸಂಸ್ಕೃತಪುರಾಣಗ್ರಂಥ : ಜಿನಗ್ರಂ ತ್ರಿಕಾಲಯೋಗಂ ಜಿನಗ್ರಂ ಸ್ವಾಧ್ಯಾಯಮಮ್ದುಪವಾಸವಿಧಿಗಳುಂ ಜಿನರ್ಗ್ಗಮೊಳವುಳ್ಕೊಡಂ ನೆಜಿಲಿಯೆ ನೋಡಿ ಸಂಬುಗೆ ಮಹಾಪುರಾಣದೊಳ್ ಬುಧರ್ (ಶಾಸ್ತ್ರ. ೦೨-೩೦). [ಸಂ.]

ಮಹಾಪುರುಷ (ನಾ). ೧. ಮೇಲ್ಪತ್ತೆರಡುಲಕ್ಷಣಗಳಿಂದ ಕೂಡಿದ ಶ್ರೇಷ್ಠನಾದ ಮನುಷ್ಯ; ಮಹಾತ್ಮ : ಪಟ್ಟಾವರುಮಂ–ತಮಿಸಿ ಕಟ್ಟಿಯದುಟ್ಟಿಪೆನಾದಂ ಪಟ್ಟಾಕಯ್ದು ಕೊಟ್ಟನುಟ್ಟಿದಂತುಟ್ಟಿದ ಮಹಾಪುರುಷ ರಟ್ಟಿಯದುಟ್ಟಿದರೆ ಸಿರಿಯಂ (ಕಂಣಾ. ೩-೦೭೭); ಚಿಕ್ರವರ್ತಿಪದಮುಂ ತನಗಾವಗಮಾದೊಡಾ ಮಹಾಪುರುಷನದಂ ಪರಕ್ಕ್ಯಣಗಣಾನುಗುಣಂ ವಲಮೆಂದೆ ಪೇಸಿದಂ (ಪಾಪ್ರ. ೩-೭೭); ಭಾರತದ ಇತಿಹಾಸ ಮಹಾಪುರುಷರ ಅವಿರ್ಭಾವವನ್ನು ಪ್ರಕಾಶಪಡಿಸುತ್ತಿದೆ (ಪುಣ್ಯಕ್ಷೇ. ೦೦೫ ೫೦೪). ೨. ಮಹಾತ್ಮನಾದ ಋಷಿ : ಹಿರಿದು ಬಿನುದಿನ ಮುದ್ರೆಯಿದು. . . . ಮೇಲುಳ್ಳ ಸರ್ವಸ್ವವಿದು ಕೋಡಿಕೋ ಮಹಾಪುರುಷ ಎಂದು ವರಕೊಶಿಕಂ ಗೊದ್ದಗೊಟ್ಟು (ಕಣ್ಣ. ೯-೨). ೩. ವಿಷ್ಣು. [ಸಂ.]

ಮಹಾಪುರುಷ (ನಾ). ಶ್ರೇಷ್ಠಳಾದವಳು : ಎಲ್ಲಿಯದು ಪೇಳಾ ಮಹಾಪುರುಷ ಈ ಫಲಂ (ಗಾಪ್ರ. ೫೦. ೨೩೨-೩). [ಸಂ. ಮಹಾಪುರುಷ:]

ಮಹಾಪೂಜೆ (ನಾ)- ವ್ರತಸಮಾಪ್ತಿಯಂಥ ವಿಶೇಷಪ್ರಸಂಗದಲ್ಲಿ ಅತ್ಯಂತಸಂಭ್ರಮದಿಂದ ಮಾಡುವ ಪೂಜೆ : ಸಪ್ತಸ್ಕೂಟಮೆಂಬ ಜಿನಾಲಯಮಂ ಮಾಡಿಸಿ ಅದರ್ಕನವರತಂ ಮಹಾಪೂಜೆಯುಮಂ ಮಹಿಮೆಯುಮಭಿಷೇಕಂಗಳುಮಂ ಸಲಿಸುತಿರ್ಪೆಂ (ಕಬ್ಬಿಣ. ೩.೨-೨೦); ಭರತೇಶ್ವರ ಚಕ್ರವರ್ತಿ ವಿನಯಜನಸಮೇತಂ ಬಂದು . . . ಮಹಾಮಹಮೆಂಬ ಮಹಾ ಪೂಜೆಯಂ ಮಹಾವಿಭೂತಿಯಿಂ ಪದಿನಾಲ್ಕುದಿವಸಂಬರಂ ನಿರಂತರಂ ಮಾಡೆ (ಆದಿಪು. ೧೬-೯೯ ಪ). [ಸಂ. ಮಹಾಪೂಜಾ]

ಮಹಾಪೂರ (ನಾ). (ಅತಿವೃಷ್ಟಿಯಿಂದಾಗಿ ನದಿಯಲ್ಲಿ ಉಂಟಾಗುವ) ಉಬ್ಬರ; ನೆರೆ; ಪ್ರವಾಹ : ಈ ಕಾಲನೆಂಬುವ ಪ್ರಾಣಿ . . . ನದಿನದಿಯ ಗರ್ಭದ ಹೊಕ್ಕು, ಮಹಾಪೂರದಲಿ ಹೊರಬಂದು ನಮ್ಮೆದೆಯಲ್ಲಿ ತುಡಿವ ಕಲಿಲವಾಗಿದ್ದಾನೆ (ಪಂಪು. ೩೦-೬); ಆ ಮಾತಿನಲ್ಲಿ . . . ಪ್ರೀತಿಯು ಮಹಾ ಪೂರವೇ ಹರಿದುಬರುವಂತಿತ್ತು (ಚಾಸ್ವ. ೭೯). [ಸಂ.]

ಮಹಾಪ್ರತೀಹಾರ (ನಾ). (ಅರಮನೆಯ) ಪ್ರಧಾನದ್ವಾರಪಾಲಕ : ಹಿರಿಯ ದ್ವಾರಪಾಲಕ : ಆಗಳ್ ಮಹಾಪ್ರತೀಹಾರಂ ಪಾಸಿದುತ್ತರೀಯ ವಸನದೊಳ್ ಕುಳ್ಳಿರ್ದು (ಸಂದ್ರ ತ್ರಿ. ೩-೨೪ ಪ). [ಸಂ.]

ಮಹಾಪ್ರಧಾನ (ನಾ). ರಾಜನಿಗೆ ಸಹಾಯಕನಾಗಿರುತ್ತಿದ್ದ ಒಬ್ಬ ಹಿರಿಯ ಅಧಿಕಾರಿ : ಶ್ರೀಮನ್ಮಹಾಪ್ರಧಾನ ಹಿರಿಯ ದಂಡಾಧಿಪ (ಎಕೆ. II (೩). ೩೬೯-೭೬; ೧೦೭೬); ಶ್ರೀಮನ್ಮಹಾಪ್ರಧಾನಂ ಸರ್ವಾಧಿಕಾರಿ ಹಿರಿಯ ದಂಡನಾಯಕಂ ಭರತಿಮಯ್ಯಂಗಳುಂ (ಎಕೆ. II (೩). ೭೦-೦೦೦; ೧೧೮೬). [ಸಂ.]

ಮಹಾಪ್ರಬಂಧ (ನಾ). ೧. ದೊಡ್ಡದಾದ ಸಾಹಿತ್ಯಕೃತಿ; ಮಹಾ ಕಾವ್ಯ : ಮುಷ್ಕಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿಮವು ಸಮಸ್ತಭಾರತಮು ಮಾದಿಪುರಾಣಮಹಾಪ್ರಬಂಧಮುಂ (ಪಂಪಭಾ. ೧೪-೪೪); ಪಲಬಗ್ಗಮೆಲ್ಲಮಂ ಶಕ್ತಿಸಿ ತಿಂದು ಕಾಂಬರೆದ ಮಾಟ್ಕಿಯು ಮಾಡುವೆನೆಂಬ ಸಾಸಿಗಂಗಕ್ಕಟ ಪುಣ್ಣು ನಿರ್ವಹಿಪುದೇನರಿದಾಯ್ತೆ ಮಹಾಪ್ರಬಂಧಮುಂ (ಸೂಕ್ತಿ ಸು. ೦-೩೬). ೨. ಅಭ್ಯರ್ಥಿಯು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪ್ರದಸ್ತಿಗಾಗಿ ಒಂದು ನಿರ್ದಿಷ್ಟ ವಿಷಯದ ಬಗೆಗೆ ಬರೆದು ಸಲ್ಲಿಸುವ ಸಂಶೋಧ ನಾತ್ಮಕ ಬರವಣಿಗೆ.–ಗ್ರಂಥ ; ನಿಬಂಧ : ಇತಿಹಾಸದ ಬಗೆಗಿನ ಅವರ ಮಹಾಪ್ರಬಂಧಕ್ಕೆ ಮೈಸೂರುವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪ್ರಶಸ್ತಿ ದೊರೆತಿದೆ (ಪ್ರಾಂ). [ಸಂ.]

ಮಹಾಪ್ರಭು (ನಾ). ೧. ಹಿರಿಯ ಯಜಮಾನ.–ಒಡೆಯ. ೨. ರಾಜ : ಅರಸು. ೩. ಮುಖ್ಯಾಧಿಕಾರಿ ; ಪ್ರಧಾನಾಧಿಕಾರಿ : ಮಹಾಪ್ರಭು ಮಾದಿರಾಜಪ್ರಮುಖಮಹಾಜನಂಗಳ್ಕೆನೂರ್ವರನುಮತದಿಂ ವಿನ್ನಪಂ ಗೆಯ್ಯಲ್ (ಎಕೆ. ೪. ೧೮-೪೭; ೧೧೮೧). ೪. ಶಿವ. ೫. ವಿಷ್ಣು. ೬. ಇಂದ್ರ. ೭. ದೊಡ್ಡಸಾಧು. ೮. ರಾಜರು, ಹಿರಿಯರು ಮುಂತಾದವರನ್ನು ಸಂಬೋಧಿಸುವಾಗ ಬಳಸುವ ಒಂದು ಗೌರವ ಸೂಚಕ ಪದ : ಮಹಾಪ್ರಭುಗಳೇ ! ನಮಗೊಂದು ಸಂಶಯವೆ ಬಂದಿದೆ (ಕ್ರೀಡಾಮು. ೨೪೯). [ಸಂ.]

ಮಹಾಪ್ರಲಯ, ಮಹಾಪ್ರಳಯ (ನಾ). ಕಲ್ಪದ ಕೊನೆಯಲ್ಲಿ ಆಗುವು ದೆಂದು ನಂಬಲಾದ, ಜಗತ್ತಿನ ಸಂಪೂರ್ಣನಾಶ : ಸಕಳಮುಂ ಸಂಹರಂ ಮಾಡಿ ಬಿಂಕದುನ್ನತಿಯುಂ ಪ್ರಕಟಿಪ ಭಯಂಕರಂಗೆ ಮಹಾಪ್ರಲ[ಪಾಠಾಂ.ಳ್]ಯ ಭಯದಿಂ ಕೆಡೆವುತಂ ಕೆಡೆವುತಿಪ ಬಡದೈವಗಳು ಸುರಿಯೆ (ಪಾಪ. ೪೪-೨೩); ಪ್ರಪಂಚದ ಸಂಹಾರವೇ ಪ್ರಲಯ. ಮಹಾಪ್ರಲಯ ಮತ್ತು ಅವಾಂತರ ಪ್ರಲಯವೆಂದು ಪ್ರಲಯ ಎರಡು ವಿಧ. ಬ್ರಹ್ಮಾಂಡ ಮೊದಲು ಶ್ರೀಗುಣ ಪರ್ಯಂತ ಪ್ರಲಯವು ಮಹಾಪ್ರಲಯ (ಒಡಿಣಾ. ೨೯೯). **ಮಹಾಪ್ರಳಯ :** "ಸಂವರ್ತಃ . . . ಸಂಹಾರಃ, ಮಹಾಪ್ರಳಯಃ– ಈ ೯ ಪ್ರಳಯಕಾಲಂ" (ಪಡಾಡಾ. ೩೦-೦೦೬); ಕಸಾಯಸಪೋಗರಂಗಳು ನಿಮ್ಮ ಭಾಗವಿವಾಗಿ ಹಾಲಾಹಲ ಮಹಾಪ್ರಳಯದ ಗರಳವೆಮ್ಮ ಭಾಗವೇ (ಪಾಪ. ೩೭ ಪ); ಜಗಕ್ಕೆ ಪ್ರಳಯ ಮಹಾಪ್ರಳಯಂಗಳಾಂಟು (ಆಂಪ್ರ. ೦೦೩-೭೦). [ಸಂ.]

ಮಹಾಪ್ರಸಾದ (ನಾ). ೧. ಅತಿಶಯವಾದ ದಯೆ.– ಕರುಣೆ ; ಅಧಿಕವಾದ ಅನುಗ್ರಹ : ಚರಣಭಜಕಕುಟುಂಬನೆಂದೀ ಭಿಕ್ಷದ ಪಾಲಿಸಿ ಬನ್ನಹವನವಧರಿಸಿ ಕಾಣಿಸಿಕೊಡುವುದೆಮಗೆ ಮಹಾಪ್ರಸಾದವನು (ಕುಡ್ಕಾ. ೦೦-೭೬). ೨. ದೇವರಿಗೆ ಅರ್ಪಿಸಿದ ಅನ್ನ ಮೊದಲಾದುವು: ಗುರುಲಿಂಗ ಜಂಗಮದಿಂದ ಪಾದೋದಕಪ್ರಸಾದವಾಯಿತ್ತು, ಆ ಭಾವವೇ ಮಹಾಪ್ರಸಾದ ವಾಗಿ ಎನಗೆ ಬೇಱೆ ಪ್ರಸಾದವಂಬುದಿಲ್ಲ (ಶಸ. ೧೭೦). ೩. ಹಿರಿಯರು, ಪೂಜ್ಯರು ಅನುಗ್ರಹಿಸಿ ಕೊಟ್ಟ ಪವಿತ್ರವಾದ ವಸ್ತು : ದೇವ ಭೂದೇವಭಾಗ್ರಜಂ ರಾಜಾಧಿಂಜಂ ನಿಮಗಟ್ಟಿದ ಮಹಾಪ್ರಸಾದಂ ಬನ್ನಪಮೆಂದು ಮುಂದಿಟ್ಟು (ಆದಿಪು. ೦೪-೪೩ ಪ); ಈ ಆವಶ್ಯಾಲದಲ್ಲಿ ಇದೇ ಒಂದು ಮಹಾಪ್ರಸಾದವೆಂದು ಆತನು ಅದರ ಪ್ರಚಾರಕ್ಕೆ ನಿಂತನು (ಜಸ. ೧೦). ೪. ಹಿರಿಯರು ಹಾಗೂ ಪೂಜ್ಯರ ಮಾತಿಗೆ ಒಪ್ಪಿ ಗೌರವಸೂಚಕವಾಗಿ 'ಹಾಗೆಯೇ ಆಗಲಿ', 'ತಮ್ಮ ಚಿತ್ರ' ಎಂಬರ್ಥ ದಲ್ಲಿ ಬಳಸುವ ಒಂದು ಶಬ್ದ : ವಿಭು ನಿಸ್ಯಶ್ಚಾರ್ಥನಾಸಾಪದೊಳ್ ಕುಳ್ಳಿರಿಮೆಪೆ ದೂತನುಮೊಸೆದು ಮಹಾಪ್ರಸಾದಮೆಂದಭಿಪಾತಂ ಕುಳ್ಳಿರ್ದು (ಪಾಂತಿಪು. ೩-೭೨); ದೇವ ಮನಮಪತ್ರರಂ . . . ಬಾಗಿಲೊಳಿರ್ದವ ನೆಂಬುದುಂ ಬರವೇಟ್ಟನೆ ಮಹಾಪ್ರಸಾದಮೆಂದೊಡಗೊಂಡು ಬಂದೊಡೆ (ಸಂಧ್ರ ತ್ರಿ. ೨-೭೨). [ಸಂ.]

ಮಹಾಪ್ರಸಾದಿ (ನಾ). [ವೀಶೈ] ಪಟ್ಟಿಹಲಗೆಗಳಲ್ಲಿ ಮೂರನೆಯದಾದ ವ್ರಸಾದಿಸ್ಥಲವನ್ನು ಸಾಧನೆಯಿಂದ ಪಡುಟ್ಟಿದವನು : ಅಲ್ಲಲ್ಲಿ ತಾಗಿದ ಸುಖವನಲ್ಲಲ್ಲಿಯೆ ಲಿಂಗಾರ್ಪಿತವ ಮಾಡಬಲ್ಲನಾಗಿ ಕೂಡಲಚನ್ನಸಂಗಯ್ಯಾ ಆತನೆ ಮಹಾಪ್ರಸಾದಿ (ಪಸ್ವ. ೪. ೩೨೪-೩೩೦). [ಸಂ. ಮಹಾಪ್ರಸಾದಿನ್]

ಮಹಾಪ್ರಸ್ಥಾನ (ನಾ). ೧. ಸಾವು ; ಮರಣ. ೨. ಮರಣದೀಕ್ಷೆ ಯನ್ನು ಕೈಗೊಂಡು ಉತ್ತರದಿಕ್ಕಿಗೆ ಮಾಡುವ ದೀರ್ಘಪ್ರಯಾಣ : ಅದನು ಕೇಳುತ ಧರ್ಮಜನು ಶೋಕದಲಿ ಮಮ್ಮಲಮಱುಗಿ ವೈರಾಗ್ಯದಿ ಮಹಾಪ್ರಸ್ಥಾನವನು ವಿರಚಿಸುವೆನೆಂದೆನಿ ತ್ರಿದಶಪತಿಯ ಕುಮಾರನನು ನುಡಿಸಿದನು(ಕುಮ್ಮಭಾ. ೦-೨); ಯುಧಿಷ್ಠಿರನು ತನ್ನ ಸಹೋದರರು ಮುಪ್ಪು ಪಕ್ಷಿಯೊಡನೆ ಮಹಾಪ್ರಸ್ಥಾನ ಮಾಡುತ್ತಾನೆ (ಕಾಕಥ. ೦೦೦). [ಸಂ.]

ಮಹಾಪ್ರಳಯ 'ಮಹಾಪ್ರಲಯ' ನೋ.

ಮಹಾಪ್ರಾಣ (ನಾ). ೧. ಕಾಗೆಯ ಜಾತಿಗೆ ಸೇರಿದ ಒಂದು ಬಗೆಯ ದೊಡ್ಡ ಪಕ್ಷಿ.— ಜೊಂಬಕಾಗೆ. ೨. ಅತಿಶಯವಾದ ಶಕ್ತಿ.– ಸತ್ವ : 'ಮಹಾಪ್ರಾಣತೆ' ಹೋ. ೩. ಶರೀರದಲ್ಲಿರುವ ಒಂದು ಬಗೆಯ ಪ್ರಾಣವು : "ಮೇಲು ಕೆಲಗೀ ನೋಡುವುದು ದೇವದಕ್ಕವಳ್ಳ . . . ಕೈಕಾಲ ಗಡಿಯಲ್ಲಿಪುದು ವಿಶ್ವವಕ್ಕೊತ್ತಿ ಹಿಡಿಯುವುದು ಮಹಾ ಪ್ರಾಣವಕ್ಕುಂ" (ಪಂಗಣಾ. ೦೬-೦೬). ೪. [ವ್ಯಾಕ] ಉಚ್ಚಾರಣೆಗೆ ಹೆಚ್ಚು ಉಸಿರು ಬೇಕಾಗುವ ಖಿ, ಘಿ, ಛ, ಝ, ಠ, ಢ, ಥ, ಧ, ಫ, ಭ–ಎಂಬ ಅಕ್ಷರಗಳು : ಪೀಡನಪ್ರಯತ್ನಾಶ್ರಯದಿಂ **ದೊರೆಕೊಂಡ** ಸಂಖ್ಯೆಯೊಳಮನುಕರಣದೊಳಂ ವರ್ತಿಸುಂ ಮಹಾಪ್ರಾಣಂಗಳ್ (ಕಾಕ್ಯಾತ. ೨೨) ; ವರ್ಗದ್ವಿತೀಯವರ್ಣಂ ವರ್ಗಚತುರ್ಥಾಕ್ಷರಂ ಮಹಾ ಪ್ರಾಣಂ (ಶಬ್ದಮ. ೦೪). ೫. ಮಹಾಪ್ರಾಣಾಕ್ಷರಗಳನ್ನು ಉಚ್ಚರಿಸಲು ಬೇಕಾಗುವ ಹೆಚ್ಚು ಉಸಿರು : ದೀರ್ಘಪ್ರಾಣಮಂ ಮಹಾಪ್ರಾಣ ಮೆಂದು ಸ್ಮೃಹಿವೃಕ್ಷವುಂ ಮಹಾವೃಕ್ಷಮೆಂದು ನುಡಿವಂತೆ ಭೀಮನೂ ಮಹಾರಥನೆಂದು ನುಡಿಯಲ್ಬಕ್ಕುದೆ ವಲಂ (ಕಬ್ಬಿಣ. ೩-೩೩ ಪ). [ಸಂ.]

ಮಹಾಪ್ರಾಣತೆ (ನಾ). ಅತಿಶಯವಾದ ಬಲ.— ಕೆಸುವೆ; ಮಹಾ ಸಾಮರ್ಥ್ಯ : ಸಕಳಶ್ರಮುಂಗಳಿಂದಂ ವ್ಯಕೋದರನ ತಜದಿನಂದು ಶ್ವಶದೊಳ್ [ರೋಚಕೆ ಚಿತ್ರಮುಪ್ಪಿನಂ] ರಾಜಕುಮಾರಂ ತಾಳ್ದಿದಂ ಮಹಾಪ್ರಾಣತೆಯುಂ (ಕಾದಂಬ. ೪೭೬). [ಸಂ. ಮಹಾಪ್ರಾಣತಾ]

ಮಹಾಪ್ರಾತಿಹಾರ್ಯ (ನಾ). [ಜೈನ] ಜಿನನ ಎಂಟು ಮಂಗಳಕರವಾದ ಲಾಂಛನಗಳು : 'ಅಷ್ಟಮಹಾಪ್ರಾತಿಹಾರ್ಯ' ಪರಾ. [ಸಂ.]

ಮಹಾಫಣಿ (ನಾ) [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಮೂವತ್ತು ನಾಲ್ಕನೆಯ ಸ್ಥಾನ ಮತ್ತು ಮೂವತ್ತುನಾಲ್ಕುಅಂಕೆಗಳಿಂದ ಕೂಡಿದ ಒಂದು ದೊಡ್ಡ ಸಂಖ್ಯೆ : ಎಸ್ಂ. ದಾಹ . . . ಮಹಾ ಫಣಿ. ಕೃತು . . . ಮಹಾಪರಿಮಿತ-ಈ ೪೦ ಸ್ಥಾನದ ಅಗ್ಗಡಣೆ (ಕೃಕಾ. ೯-೩೭) ; ಎಸ್ಂ . . . ಫಣಿ ಮಹಾಫಣಿ ಕೃತು ಮಹಾಕೃತು ಎಂಬವೇ ಅಗ್ಗಡಣೆಗಳು (ಅಮೇ. ೭). [ಸಂ. ಮಹಾಫಣಿನ್]

ಮಹಾಫಲ (ನಾ). ೧. ದೊಡ್ಡ ಗಾತ್ರದ ಹಣ್ಣು. ೨. ಒಳ್ಳೆಯ ಪ್ರಯೋಜನವುಳ್ಳದು ; ಹೆಚ್ಚು ಉಪಯೋಗಕರವಾದುದು : ಅರಿಯಿರ್ಕೆ ಆ ಪಿಂಡಪಾತದ್ವಯುಂ ಪಿಂಡಪಾತಾಂತರದಿನಿತೂ ಆಯುಷ್ಕರಂ. ಯಶಸ್ಕರತರಂ. ಸುಖಕರಂ. ಸ್ವರ್ಗಂಕರಂ. ಮಹಾಫಲತರಂ ! (ಕೃಶಾ. ೬೫-೨೫೬). ೩. ಒಂದು ಬಗೆಯ ಸಸ್ಯ ಮತ್ತು ಅದರ ಹಣ್ಣು : ಮಾದಳ, ಅರೆಮಾದಳ, ಮಾವವಾಳ, ಮಹಾಫಲ (ಪ್ರಾಶಾ. ೨೩-೨೦೬). ೪. ಒಂದು ಬಗೆಯ ಮರ ; ಬಿಲ್ವವೃಕ್ಷ. [ಸಂ.]

ಮಹಾಬಲ (ಗು). ೧. ಬಹಳ ಶಕ್ತಿಶಾಲಿಯಾದ ; ಅತ್ಯಂತ ಸಾಮರ್ಥ್ಯ ಉಳ್ಳ. (ನಾ). ೨. ಗಾಳಿ ; ವಾಯು : "ಪವನಃ. ಶ್ವಸನಃ . . . ಜಗಃ. ಮಹಾಬಲಃ—ಈ ೨೦ ಗಾಳಿಯ ಪೆಸರ್" (ಕಂಠಾಭ. ೦೪-೭೬). ೩. ದೊಡ್ಡ ಸೈನ್ಯ ; ಅಪರಿಮಿತವಾದ ಸೇನೆ : ಅಗಿವ ಮಿಹ ಮೃದಂಗ ಕಹಳಾದಿಗಳ ಕಳಕಳರಭಸ ದಶದಿಕ್ಕುಗಳ ಮಾತಾಡಿಸೆ ಮಹಾಬಲ ತೆರಳಿತಿಭಪುರಿಯ (ಕಾಕ್ಷಾ. ೭-೪೬); ನಿರಾಯುಧ ಲತಾಂಗಿಯರ ಲಾವಣ್ಯವಿಕ್ರಮವನುಬಲಾ ಮಹಾಬಲವನುರೆ ಹಾರಿ ಚೈತ್ರವಾಹಿನಿ ಬರುತಲಿರೆ (ಜಾಬಾ. ೦೭-೪೦). ೪. ಶಿವ: ಅತಿಬಲಂ ಮಹಾಬಲ . . . ಭೂತಾಂತಕಂ (ಅಷ್ಟಕ. ೬-೪-೩೨). ೫. ಬುದ್ಧ. [ಸಂ.]

ಮಹಾಬಲೆ (ನಾ). ಒಂದು ಬಗೆಯ ಸಸ್ಯ : "ರಾಜಬಲಾ—ಮಹಾಬಲೆ, ಪ್ರಸಾರಿಣಿ" (ಓಷಧಿ. ೦೪೬). [ಸಂ. ಮಹಾಬಲಾ]

ಮಹಾಬಿಲ (ನಾ). ೧. ದೊಡ್ಡ ಗುಹೆ ಅಥವಾ ದೊಡ್ಡ ಹಳ್ಳ. ೨. ಆಕಾಶ ; ಅಂತರಿಕ್ಷ : "ವಿಪಾಯಸಃ . . . ಮಹಾಬಿಲಂ—೭ ಆಕಾಶದ ಹೆಸರುಗಳು" (ಅಣ್ಣಂ. ೫೬); ಅವಿತಾಮುಷ್ಯಂ ದೊರೆಕೊಂಡ ಮನುಷ್ಯಂಗಱಿಪಮಂತ್ರ ದಿವ್ಯೌಷಧಿಸಿದ್ಧಿ ಮಹಾಬಿಲಪ್ರವೇಶಂ . . . ದೊರೆಕೊಳ್ಗುಂ (ಜಾತಿ. ೯-೦೬). [ಸಂ.]

ಮಹಾಬೆಳಗು (ನಾ). ೧. ಹೆಚ್ಚಾದ ಪ್ರಕಾಶ ; ಅಧಿಕವಾದ ಕಾಂತಿ.— ಬೆಳಕು. ೨. [ವೀಶೈ] ಚೈತನ್ಯಸ್ವರೂಪನಾದವನು ; ಪರಮಾತ್ಮ : ಸ್ಥೂಲ ಸೂಕ್ಷ್ಮದೊಳಗೆ ಬೆಳಗು ಮಹಾಬೆಳಗಾಗಿ ಹೊಳೆವ ಜ್ಞಾನಜ್ಯೋತಿ ದಳಗಳೆಲ್ಲವ ವಿಜಯ ನೆಳಲ ನುಂಗಿವ ಬಿಸಿಲಿನೊಳಗೆ ಚಂದ್ರಮನುದಯ (ಶಪಂ. ೦೭೦-೭೭೯). [ಮಹಾ + ಬೆಳಗು]

ಮಹಾಬ್ರಾಹ್ಮಣ (ನಾ). ೧. (ವೇದಾಭ್ಯಾಸ ಮಾಡಿರುವ) ಧರ್ಮಿಷ್ಠನಾದ ಬ್ರಾಹ್ಮಣ : ಇದನಳಿದಂಗನಿತು ತೀರ್ಥದೊಳಂ ಸಾಸಿರವಿಲೆಯಂ ಸಾಸಿರಮಹಾಬ್ರಾಹ್ಮಣರುಮಂ ಸಾಸಿರದಿವ್ಯತಪೋಧನರು ಮನೆದ ಪಂಚಮಹಾಪಾತಕನಕ್ಕುಂ (ಕೌತಾ. XX. ೫೯-೮೨ ; ೧೦೩೭). ೨. (ಅಲಂ) ಬ್ರಾಹ್ಮಣನ ಹೆಸರಿಗೆ ಕಳಂಕಪ್ರಾಯನಾದವನು. [ಸಂ.]

ಮಹಾಭಾಗ (ಗು). ೧. ಬಹಳ ಅದೃಷ್ಟದಿಂದ ಕೂಡಿದ : ಸುದೈವ ವುಳ್ಳ . ೨. ಶ್ರೇಷ್ಠವಾದ : ಬಹಳ ಉತ್ಕೃಷ್ಟವಾದ. ೩. ಪವಿತ್ರವಾದ ; ಶುದ್ಧವಾದ ; ನಿರ್ಮಲವಾದ. (ನಾ). ೧. ಬಹು ಅದೃಷ್ಟವಂತ : ಸುದೈವಿ. ೫. ಅತ್ಯಂತ ಶ್ರೇಷ್ಠನಾದವನು ; ಮಹಾನುಭಾವ ; ಘನವಂತ : ಸ್ವಾಗತಮೇ ನಿನಗೆ ಮಹಾಭಾಗನೆ ಮದ್ಭೂಮಿಗಂತು ಬಂದಯ್ (ಕಾದಂಬ. ೬೫೯); ಆಕೆಯು ಬೇಟ್ಟುದ ನಾಗಳೆ ಕತಿಪಯವಿಬುಚ್ಚರವೆರಸು ಮಹಾಭಾ [ಹಾಣಾ. ಭೋ]ಗಂ ಪೊಕ್ಕಂ ಪುರಮಂ (ಪಂಡಾಪು. ೦೦-೭೬) ; ಅಂತಹ ಮಹಾಭಾಗರ ಕೈಹಿಡಿಯುವ ದೆಂದರೆ ಎಷ್ಟು ನೋಂಪಿಗಳ ಫಲವೋ ! (ಜಾಂತಾ. ೬೫). [ಸಂ.]

ಮಹಾಭಾರತ (ನಾ). ೧. ಭರತವಂಶದ ಪಾಂಡುಪುತ್ರರಿಗೂ ಧೃತರಾಷ್ಟ್ರಪುತ್ರರಿಗೂ ಕುರುಕ್ಷೇತ್ರದಲ್ಲಿ ಹದಿನೆಂಟು ದಿನಗಳವರೆಗೆ ನಡೆದ ಮಹಾಯುದ್ಧ : ಮಹಾಭಾರತಕ್ಕಾದಿಯಾಯ್ತಬ್ಬದಳಾಕ್ಷೀ ವೇಂ ಸಾಮಾನ್ಯಮೆ ಬಗೆಯೆ ಭವತ್ಕೀರ್ತಿಪ್ರಪಾಶಪ್ರವಂಚಂ (ಕುಪಶಾ. ೦೨-೦೩೬); ಕೇವಲ ಹದಿನೇಳುವರ್ಷದ ಬಾಲಕ ಶತ್ರುಗಳ ಈ ಮಹಾಸೇನೆಯನ್ನು ಸೋಲಿಸಿ, ಅದ್ಭುತಜಯ ಗಳಿಸಿದ್ದು ಪ್ರಭುಗಳಿಗೆ ಮಹಾಭಾರತದ ವೀರ ಅಭಿಮನ್ಯುವನ್ನು ಜ್ಞಾಪಕಕ್ಕೆ ತಂದಿತು (ಕಾಕಾ. ೦೬೬). 'ಭಾರತ' ಪರಾ. ೨. ಭರತವಂಶದ ಪಾಂಡು ಮತ್ತು ಧೃತರಾಷ್ಟ್ರನ ಮಕ್ಕಳಾದ ಪಾಂಡವ, ಕೌರವರ ನಡುವಿನ ದ್ವೇಷ, ಸ್ಪರ್ಧೆ ಮತ್ತು ಯುದ್ಧ ಮೊದಲಾದುವನ್ನು ಕುರಿತು, ಹದಿನೆಂಟುಪರ್ವಗಳಲ್ಲಿ ವೇದವ್ಯಾಸರು ಬರೆದ ೨೫,೧೫,೦೨೦ ಸಾಲುಗಳಿರುವ ಸಂಸ್ಕೃತದ ಒಂದು ಮಹಾಕಾವ್ಯ : ಮಹಾಭಾರತವು ಭಾರತೀಮುವಾಮ್ಯಾಯದಲ್ಲಿ ಅಸದೃಶವಾದ ಒಂದು ಮಹಾಗ್ರಂಥ (ಜಾಕಥ. ೧೩). ೩. ವೇದವ್ಯಾಸರು ರಚಿಸಿದ ಮಹಾಭಾರತದ ಪ್ರೇರಣೆಯಿಂದ ಕನ್ನಡದ ಮಹಾಕವಿಯಾದ ಕುಮಾರವ್ಯಾಸನು ರಚಿಸಿದ 'ಕರ್ನಾಟಕಭಾರತಕಥಾಮಂಜರಿ' ಎಂಬ ಕಾವ್ಯ ; ಗದುಗಿನ ಭಾರತ : ಶ್ರೀ ಮುಕುಂದಾರ್ಪಣವೆನಿಸಿ ಶತಭೂಮಿ ದೇವರಿಗಿತ್ತ ಫಲವಹುದೀ ಮಹಾಭಾರತದೊಳೊಂದಕ್ಷರವ ಕೇಳ್ದರಿಗೆ (ಕಾಪ್ಯಾ. ೦-೨೦). ೪. ಮಹಾಭಾರತದ ಕರ್ತೆಯ ಪ್ರಶಂಸನ : ದೇವರಾಜವಧೆಯರವರು ಪಮ್ಮ ಕೈಯ್ಯ ಮಹಾಭಾರತವ ಕೇಳಿ . . . ಧಾರೆಯೆನೆಜರು ಕೊಟ್ಟ ನರಸೀಪುರದ ಜೋಳಿ ಮಂದಗೆರೆಸ್ಥಳ ನಾಟಿನ ಹಳ್ಳಿ (ಪಣ. VI (೩). ಕೃಕಾ. ೦೬-೦೭ ; ೧೦೭೮). ೫. (ಆಲಂ) ದೊಡ್ಡಕತೆ : ಆವರದ್ದೇ ಒಂದು ಮಹಾಭಾರತ (ಮಾಬಳ್ಳಿ. ೧೪). [ಸಂ.]

ಮಹಾಭಾಷ್ಯ (ನಾ). ೧. ದೊಡ್ಡ ವ್ಯಾಖ್ಯಾನ. ೨. ಪಾಣಿನಿಯ ವ್ಯಾಕರಣಸೂತ್ರಗಳಿಗೆ ಪತಂಜಲಿಯು ಬರೆದಿರುವ ವಿವರವಾದ ವ್ಯಾಖ್ಯಾನ : ಅತ ಏವ ಮಹಾನ್ ಪತಂಜಲಿರಪಿ ಮಹಾಭಾಷ್ಯ (ಕಾಶಾ. ಕೃಕಿ. ೦೫) ; ಪತಂಜಲಿಮಹರ್ಷಿಯ ಮಹಾಭಾಷ್ಯದಲ್ಲಿ ಅಕ್ಷರದ ಪ್ರಸ್ತಾವವಿದೆ (ಪ್ರಾವಿ. ೧೫). [ಸಂ.]

ಮಹಾಭೂತ (ನಾ). (ಜಗತ್ತಿನ ನಿರ್ಮಾಣಕ್ಕೆ ಸಾಧನವಾದ) ಮೂಲ ವಸ್ತು : ಗುದಸ್ಥಾನದಲ್ಲಿ ಆಧಾರಚಕ್ರ ಪೃಥ್ವಿಯೆಂಬ ಮಹಾಭೂತ ಚತುಃಕೋಣ ಚಾದಳಪದ್ಮ ಅಕ್ಷಿಪ ಅಕ್ಷರ ನಾಲ್ಕು ದಶಪಸ (ಅಮೃ. ೪೭-೦೦೬). 'ಪಂಚಮಹಾಭೂತ' ಪರಾ. [ಸಂ.]

ಮಹಾಭೋಗ (ನಾ). ೧. ಅಧಿಕವಾದ ಸಂತೋಷದಿಂದ ಕೂಡಿದುದು: ಅತ್ಯಾನಂದದಿಂದಿರುವುದು. ೨. ವಿಶಾಲವಾದ ಪ್ರಾಂಗಣವನ್ನು ಹೊಂದಿರುವುದು. ೧. ೨: ಬಗೆಯೆ ಬಹುಭೂಮಿಕಂ ಮಾನೆ ಗುಣೋನ್ನತಿಸಂಯುತಂ ಮಹಾಭೋಗಂ ತನ್ನ ಗರಜನಾವಳಿಯುಂ ಹರ್ಮ್ಯಗೃಹಾವಳಿಯುಮೆಂದೊಜೊಳ್ಪವೇಮಣ್ಣೆನುದೋ (ಕಂಧ್ರಕೃ. ೩. ೦೬).

೩. ಅತ್ಯಂತ ಸಂತೋಷದಿಂದ ಕೂಡಿರುವವನು ; ಪರಮಸುಖಿ. ೪. ದೊಡ್ಡ ಹೆಡೆಯನ್ನು ಹೊಂದಿರುವಿಕೆ ; ವಿಶಾಲವಾದ ಹೆಡೆಯುಳ್ಳದು. ೫. ೪: ಸುಭೋಗ್ಯಮಮಹಾಭೋಗಂ ಸುಭೋಗೀಂದ್ರ ನೋರ್ ಪ್ರಾತಂ ನಾಲ್ವಡಿ ಕೃಷ್ಣರಾಯನರಪಂ (ಪ್ರಸಾಪ. ೩-೩೨).

[ಸಂ. (ಮಹಾ + ಭೋಗ ; ಮಹಾ + ಅಭೋಗ)]

ಮಹಾಭೋಗಿ (ನಾ). ಅತ್ಯಂತ ಸುಖಿಯಾದವನು ; ಪರಮಸುಖಿ : ಆ ಮಹಾಯೋಗಿ ಗುಣಂಗಳಂ ಪಾಲಿಸಿದಂ ಈ ಮಹಾಭೋಗಿ ಲೆಲನಂ ಪರಿಪಾಲಿಸಿದಂ (ಅಷ್ಟ. ೬-೨೮ ೫). [ಸಂ. ಮಹಾಭೋಗಿನ್]

ಮಹಾಮಂಗಲ, ಮಹಾಮಂಗಳ (ನಾ). ಅತ್ಯಂತ ಮಂಗಳಕರವಾದ ಕೆಲಸ ; ಶುಭಕಾರ್ಯ : ಇಳುಂಬಿದುದು ಕಮ್ಮಿಣ್ಣ ಪಾಯ್ಕುತು ಹೊಳೆವ ಮನೆವಂದಿಸೆ ಮಹಾಮಂಗಲದ ಪುಣ್ಯನಕುಷ್ಪಜಲ ಹೊಂಗೊಡದ ಲಿಳುಹಿದವು (ಕವಿಚ. ೭-೬-೩೨). **ಮಹಾಮಂಗಳ** : ಉಪ್ಪವಡಿಸುವುದು ಮಜ್ಜಿಗೆಯ ಪಕ್ಷಕರೊತನಾಡಿಗಳ್ ಪ್ರದೋಧಿಸಿದರ್ ಮೇಲಪ್ಪ ಪದರಚಿನೆಯಂ ದೊರೆಯಪ್ಪ ಮಹಾಮಂಗಳಪ್ರದೋಧನೆಯಿಂದಂ (ಪಾಂಚಾಪ. ೭-೮೩). [ಸಂ.]

ಮಹಾಮಂಗಳ 'ಮಹಾಮಂಗಲ' ನೋ.

ಮಹಾಮಂಗಳಾರತಿ (ನಾ). ದೇವಸ್ಥಾನಗಳಲ್ಲಿ ಎಲ್ಲ ಪೂಜೆಗಳೂ ನಡೆದ ನಂತರ ದೇವರ ವಿಗ್ರಹಕ್ಕೆ ಮಾಡುವ ದೊಡ್ಡ ಮಂಗಳಾರತಿ ಅಥವಾ ಮನೆಗಳಲ್ಲಿ ವ್ರತಾದಿಗಳ ಕೊನೆಯಲ್ಲಿ ದೇವರಿಗೆ ಮಾಡುವ ದೊಡ್ಡ ಆರತಿ : ಮಹಾಮಂಗಳಾರತಿಯಾಗುತ್ತಿರುವಾಗ . . . ರಾಜಮಾತೆಯ ಕಣ್ಣೊಸರಿಗಳ್ ಬೀಳ್ತಿತು (ಪಾಂಕಾಪ. ೫೪). [ಮಹಾ + ಮಂಗಳಾರತಿ]

ಮಹಾಮಂಡಲ. ಮಹಾಮಂಡಳ (ನಾ). ೧. ವಿಸ್ತಾರವಾದ ಪ್ರದೇಶ ; ವಿಶಾಲವಾದ ಎಡೆ : ಶಾಂತಗಾಂಭೀರ್ಯದಲಿ, ಧರ್ಮರೂಪದಲಿ, ತನುಕಾಂತಿಯಲಿ ಮೆರೆದಪಾ ಶ್ರೀರಾಮಚಂದ್ರನಂಬರಮಹಾಮಂಡಲಮ ಮೂರ್ತಿವತ್ಯಂತೆ (ಶ್ರೀರಾಪು. ೫೬-೨೬೨). ೨. ದೊಡ್ಡ ಪ್ರಾಂತ್ಯ : 'ಮಹಾಮಂಡಲೇಶ್ವರ' ಪರಾ. **ಮಹಾಮಂಡಳ** : ೨. 'ಮಹಾಮಂಡಳಪತಿ', 'ಮಹಾಮಂಡಳೇಶ್ವರ' ಪರಾ. [ಸಂ.]

ಮಹಾಮಂಡಲೇಶ್ವರ, ಮಹಾಮಂಡಳೇಶ್ವರ (ನಾ). (ರಾಜನಿಗೆ ಮಿತ್ರ ಅಧೀನನಾದ) ಪ್ರಮುಖ ಆಡಳಿತಾಧಿಕಾರಿ ; ದೊಡ್ಡ ಪ್ರಾಂತ್ಯಾಧಿಕಾರಿ ; ಮಹಾಮಂಡಲಿಕ : ಶ್ರೀಮನ್ಮಹಾಮಂಡಲೇಶ್ವರ ಚಂಗಾಳ್ವಶ್ರೀಕಂಠರಸುಗಳು . . . ಭೂಮಿಯನು ಸರ್ವಮಾನ್ಯವಾಗಿ ಕೊಟ್ಟರು (ಎಸ. ೨ (೩). ೩೨-೨ ; ೧೨೬೬). **ಮಹಾಮಂಡಳೇಶ್ವರೆ** : ಮಹಾಮಂಡಳೇಶ್ವರರ್ಮಾಲ್ಪಿಂದ್ರುಕೀರ್ತಿಯೆಂಬ ಪೂಜೆಯಾಂ (ಪಾಶ್ವಚಾ. ೬-೫೩ ೫); ಶ್ರೀಮನುಮಹಾಮಂಡಳೇಶ್ವರ ತ್ರಿಭುವನಮಲ್ಲ (ಎಸ. ೨(೩). ೮೦-೩೦; ೧೨೫೩ ೫೬) ; ಶ್ರೀಮನ್ಮಹಾಮಂಡಳೇಶ್ವರ ಶ್ರೀವೀರವಂಬರಾಯ ಪೃಥಿವೀಪರ ನಿರೂಪದಿಂ . . . ಕೊಟ್ಟ ಸಿಲಾಸಾಸನ (ಪ್ರಸಾ. ೦೧೫. ೫೮-೪ ; ೧೨೫). [ಸಂ.]

ಮಹಾಮಂಡಳ 'ಮಹಾಮಂಡಲ' ನೋ.

ಮಹಾಮಂಡಳಪತಿ (ನಾ). = ಮಹಾಮಂಡಲೇಶ್ವರ : ಏ ಮಾಡೊ ಕೋಟಿಕೋಟಿಗ್ರಾಮಾಧಿಪರೆಱಗೆ ಮುಂದೆ ನುಡಿದು ಜಗಜ್ಜೋಡಾಮಣಿಗೆ ಮಕುಟುಬದ್ಧಮಹಾಮಂಡಳಪತಿಗಳಾದರೆಣ್ಣಾಸಿವರ್ (ಪಾಂಚಾಪ. ೦೦-೦೦೩). [ಸಂ. ಮಹಾಮಂಡಲಪತಿ]

ಮಹಾಮಂಡಳಾಚಾರ್ಯ (ನಾ). [ಜೈನ] ಜೈನಸಂಘದ ಮುಖ್ಯಸ್ಥ : ಜೈನ ಮಠದ ಪ್ರಮುಖ ಅಧಿಕಾರಸ್ಥಾನದಲ್ಲಿರುವ ವ್ಯಕ್ತಿ. ಆಚಾರ್ಯ : ಆದರ್ಶ ಪಯಃಕೀರ್ತಿಸಿದ್ಧಾನ್ತಚಕ್ರವರ್ತಿಗಳಂ ಮಹಾಮಂಡಳಾಚಾರ್ಯರೆನಾಚಾರ್ಯಮ್ಮಾರ್ದಿ (ಎಸ. ೩೫ (೩). ೧೨೬-೩೦ ; ೧೧೬೦) : ಶ್ರೀಮತು ಮಹಾಮಂ(ಂ)ಡಳಾಚಾರ್ಯರು ಕಮಳದೇವರ ಸಿಷ್ಯ ಕುಲೋಚಾರ್ಯರ್ಕಳರು (ಎಸ. ೪ (೩). ೩೮೫. ೦೯೦-೪: ಸಾ. ೧೪೫೫ ೫೯). [ಸಂ. ಮಹಾಮಂಡಲಾಚಾರ್ಯ]

ಮಹಾಮಂಡಳಿಕ (ನಾ). = ಮಹಾಮಂಡಲೇಶ್ವರ : ಚಕ್ರವರ್ತಿಗಳ್ ಮಾಟ್ಟ ಕಲ್ಪವೃಕ್ಷಮುಂ ಮಹಾಮಂಡಳಿಕಪ್ರಮುಖಮಹಾಬದ್ಧರ್ ಮಾಟ್ಟ ಚಿತಾರ್ಜಿತಮುಂ . . . ಬೆರಸಾರ್ಯ ಪಟ್ಟುರ್ಮಾಂಗಳಂ ನಿಮಗಿವ್ವ ಕುಲಾಚಾರಂಗಳಿಂದಱಯೆ ಪೇಟ್ದು ಕೈಕೊಳಿ(ಪಾಪ್ರ. ೦೫-೦೬ ೫); ಸುಳಿದು ಹರಿಮೇಖಲೆಯ ಮೋಹರದೊಳಗೆ ಮುಗ್ಗಿದಿರ್ಕ್ಕ ಮಹಾ ಮಂಡಳಿಕರ ಘಡ ಹೋಗಿರೆ ನೀವೆ (ಶಾಕೃಕ್ರೀ. ೪-೨೦).

[ಸಂ. ಮಹಾಮಂಡಲಿಕ]

ಮಹಾಮಂಡಳೇಶ್ವರ 'ಮಹಾಮಂಡಲೇಶ್ವರ' ನೋ.

ಮಹಾಮಂಡಳೇಸ್ವರ (ನಾ). = ಮಹಾಮಂಡಲೇಶ್ವರ : ಶ್ರೀಮನು ಮಹಾಮಣ್ಣಳೇಸ್ವರ ತ್ರಿಪುರಾಧೀಸ್ವರ . . . ಅನೇಕ ನಾಮಾವಳೀ ಮುಖ್ಯಿನಪ್ಪ ದುದ್ದರಸಂ . . . ಶಿವಲೋಕಪ್ರಾಪ್ತನಾಗಲ್ (ಎಸ. ೩(೩). ೬೨-೩ ; ೧೦೭೬); ಶ್ರೀಮನ್ಮಹಾಮಣ್ಣಳೇಸ್ವರಂ ವೀರಚೋಳಕೊಂಗಾಳ್ವ ದೇವ ಪೃಥಿವೀರಾಜ್ಯಂಗ್ಯೆಯುತ್ತಿರೆ (ಎಸ. ೩ (೩). ೮೩-೦ ; ೧೧೭೬).

[< ಸಂ. ಮಹಾಮಂಡಲೇಶ್ವರ]

ಮಹಾಮಂತ್ರ (ನಾ). ೧. (ವೇದ, ಆಗಮ ಮುಂತಾದ) ಪರಮ ಪವಿತ್ರವಾದ ಮಂತ್ರ : ಕೇಳಿಸಿಕೊಂಡ ಆ ಮಹಾಮಂತ್ರಗಳನ್ನು ಪಟು ಸ್ವರೋಚ್ಚಾರಪೂರ್ವಕ ಸಿದ್ಧಿಸಿಕೊಂಡನು (ಪಾಂಕಾಪ. ೩೩). ೨. [ವೀಶೈ] 'ನಮಃಶಿವಾಯ' ಎಂಬ ಮಹಾಮಂತ್ರ; ಪಂಚಾಕ್ಷರಿಮಂತ್ರ : ಮಹಾಮಂತ್ರಾಂತರಂಗಂ ಸಮುಚಿತವಿಧಿಯಿಂ ಪೂಸುತ್ತಿರ್ದನಪದ ಮಪ್ಪಾದಂ ಪೊರ್ದ್ ಗೌರೀರಮಣನಡಿಗಳಂ ಶೈವವಿದ್ಯಾಸಮುದ್ರಂ (ಪಾಪ್ರ. ೦೨-೨). [ಸಂ.]

ಮಹಾಮಂತ್ರಿ (ನಾ). ಸಚಿವಶ್ರೇಷ್ಠ ; ಮಹಾಪ್ರಧಾನ ; ಮಹಾ ಮಂತ್ರಿಯ ಮಗಂ ಅರಸರ ಮೈದುಱಂ ಸ್ವಭುವನೆಂಬವರ್ಗೆಗೆ ವರೆ (ಪಾಪ್ರ. ೬೪). ೧೪): ಗುರುತನುಜ . . . ಕೃತವರ್ಮ್ ಭಗದತ್ತರು ಮಹಾ ಮಂತ್ರಿಗಳು ಬಂದರು ಕಾಯಸೋಲಗಕೆ (ಶಾಕೃಕ್ರೀ. ೨-೩೩). [ಸಂ. ಮಹಾಮಂತ್ರಿನ್]

ಮಹಾಮಕ್ಷ್ಮ (ನಾ). ದೊಡ್ಡ ಗಾತ್ರದ ಮೀನು : ಮೀಂಗಳಳತಿ ಯೋಜನದಗಲಂಗಳವಂ . . . ಸುಂಗುವಳೊಳ್ಳದಧಿಯೊಳ್ ಮಹಾ ಮಕ್ಷ್ಯಂಗಳ್ (ಗಿಕೃಪಾ. ೭೭). [ಸಂ.]

ಮಹಾಮನೆ, ಮಹಮನೆ, ಮಾಮನೆ (ನಾ). ೧. ದೊಡ್ಡಮನೆ; ಭವ್ಯವಾದ ಸೌಧ ; ಅರಮನೆ : ಎಮಗೆ ಪಾಲ್ಮಡಿಯಾದ ಜೀವಿತ ವನಿತ್ತು ಸರ್ವಮಹಾಮನೆಯ ಮೆಟ್ಟಿಕಾದಾಯಕೊಡತನವ ಸಮನಿಸಿದಿ ರೆಂದು ಮಹಿಂತು ಸರಿಗಾಣಿಪುವನು (ಪಾಪ್ರ. ೦೫-೨೪); ಭಾರತ ಸಂಸ್ಕೃತಿಯ ಮಹಾಮನೆಯಲ್ಲಿ ತಮ್ಮ ಕೆಲಸ ಎಷ್ಟು ಮುಖ್ಯತ್ವ ದ್ದೆಯುವನ್ನು . . . ಕಲೆ, ಸಂಸ್ಕೃತಿ, ದಾನ – ಎಲ್ಲವೂ ಒಂದೇ ಕೊರಳಿಂದ ಸಾರುತ್ತಿವೆ (ಶ್ರೀಪಾ. ೦೦೬). ೨. [ವೀಶೈ] ಅತಿಪವಿತ್ರ ವಾದ ಕ್ಷೇತ್ರ: ಮಹಾಪುಣ್ಯಸ್ಥಳ : ಚೆನ್ನಮ್ಮನ ಮಗ ಜಾನು ಕೂಡಲಸಂಗನ ಮಹಾಮನೆಯೊಳು ಧರ್ಮಸಂತಾಪ ಭಂಡಾರಿ ಬಸವಣ್ಣನು (ಬಸ. ೪೫೬); ಮತ್ತೆಲೋಡದ ಮಹಾಮನೆ ಜಾಳಿಗಿ ಹೋದಾರ ದೆಂದು ಕರ್ತನಟ್ಟಿದವಯ್ಯ ಒಪ್ಪು ಶಿವಶರಣ (ಅಪಾ. ೩೫೨-೦೦೭). ೩. ಕಲ್ಯಾಣಪಟ್ಟಣದಲ್ಲಿದ್ದ ಬಸವಣ್ಣನವರ ಮನೆ.—ನಿವಾಸ ; ೪ ದೇಶದ ವಾನಾಧಾಗಳಿಂದ ಕಲ್ಯಾಣಕ್ಕೆ ಬರುತ್ತಿದ್ದ ಶರಣ ಸಮೂಹಕ್ಕಾಗಿ ದಾಸೋಹಕಾರ್ಯ. ಶರಣರ ಪೂಜಾಕಾರ್ಯ

ಮುಂತಾದುವು ನಡೆಯುತ್ತಿದ್ದ ಸ್ಥಳ : ಗುಹೇಶ್ವರಪ ಶರಣ ಸಂಗನ ಬಸವಣ್ಣನ ಮಹಾಮನೆಯ ಕಂಡು ಧನ್ಯನಾದನು ಕಾಣಾ (೧೮೮೮. ೨೨೮-೦೦೦೮) ; ನಿಮ್ಮ ಶರಣ ಸಂಗನ ಬಸವಣ್ಣನ ಮಹಾಮನೆಗೆ ನಮೋ ನಮೋ ಎಂದು ಬದುಕಿದೆನು (೨೮೪. ೪. ೩೪೪-೧೩). ೪. (ಆಲಂ) ಅರಿವಿನ ಮನೆ,—ನೆಲೆ ; ಜ್ಞಾನದ ಸ್ಥಾನ : ಮಹಾಮನೆಯ ಮುಂಚಾಪದಲ್ಲಿ ಹಾಲ್ಕು ನಡುಮಣ ಕಂಭವ ಪತುಮಣ ಕಂಭದಲ್ಲಿ ಒಂದೊಂಬಲಿ ಮನೆಯ ಮಾಡಿತ್ತು (೧೮೮೮. ೩೩೨-೦೮). **ಮಹಮನೆ** : ೨. ಮಲ್ಲಿಕಾರ್ಜುನನ ಮಹಮನೆಯ ಶೋಭನಕೆ ತಳುವಿಲ್ಲದೀ ವೈಶಾಖಪೌರ್ಣಮಿಗೆ ಬೇಗ ದಿಂದಲ್ಲಿವಳಮಜಬೇಹುದು (೨೮೪. ೬-೧೧) ; ಮತ್ಕಾಮ್ನೆ ಮಹಮನೆಯ ಗೈದ ಮೃತ್ಯುಂಜಯನ ಚರಣ (೬೦೮೮. ೪೬-೯). ೩. ಆರಮನೆಯಂ ಪೊಱವಟ್ಟು ತನ್ನ ಮಹಮನೆಗೆ ಬಪ್ಪಲ್ಲಿ (೨೮೪. ೬-೪೪) ; ಈ 'ಮಹ ಮನೆ'ಯು ಬಸವಣ್ಣನವರ ಪ್ರಸಾದನಿಲಯವಿರಬೇಕು (೪೪೦. ೦೩೩). **ಮಾಮನೆ** : ೩. ಚೆನ್ನಮಲ್ಲಿಕಾರ್ಜುನನ್ನು ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರವೇ ಅವಿಮುಕ್ತಕ್ಷೇತ್ರವಯ್ಯ ಆದು ಕಾರಣ ನಿಮ್ಮ ಶರಣ ಬಸವಣ್ಣನ ಮಾಮನೆಗೆ [ಪಾಠಾ. ಶ್ರೀಪಾದಕ್ಕೆ] ನಮೋನಮೋ ಎಂದು ಬದುಕುವ ನಯ್ಯಾ (೪೪೦೦. ೦೩-೧೩). [ಮಹಾ + ಮನೆ]

ಮಹಾಮಹ (ಗು). ೧. ಬಹುಬಲೆಯುಳ್ಳ ; ಅತ್ಯಂತ ಶ್ರೇಷ್ಠವಾದ : ಅಲ್ಲಿಯ ಮಹಾಮಹಮಂಪದಂ . . . ಮಿಳಿರ್ದ ಕೇತನರಾಜಿ ಶರಂ ವಿರಾಜಿಸಲ್ (೪೪. XIII. ೪೪೦-೪೧ ; ೦೦೦) ; ಮಹಾಮಹಚಿತ್ರಪ ಪನ್ನಹರಿ ರೂಪಸ ಚಿತವೀರದೇವನ . . . ಕೊಂಡಾಡಿ ಕೊರ್ಮೆಯಿಂದಿಂತೆಂದರ್ (೧೪೪೮. ೦-೬೬). (ನಾ). ೨. ದೊಡ್ಡ ಉತ್ಸವ,—ಹಬ್ಬ. ೩. [ಜೈನ] "ಚತುರ್ಮುಖಿಮಂಟಿಪದಲ್ಲಿ ಮಕಚಟಬದ್ಧರಾಜನು ಮಾಡುವ ಜಿನೇಶ್ವರನ ಮಹಾಪೂಜೆ" (೧೮೪. ಕೃಷ್ಣರಾಜಕಾ ೫೦೪೮) : ಜಿನಪವನಮೋಳೆಂಬುದಿವಸಂಬರಂ ಮಹಾಮಹಮೆಂಬ ಜಿನಮಹಿಮೆಯಂ ಮಹಾವಿಭೂತಿಯಿಂ ಮಹಾಬಲಂ ಮಾಡಿದಿಂಬುಗುಂ (೧೦೪. ೨-೧೪ ೪) ; ದುಃಖಿ ಸೌಖ್ಯಧಾಜನಮವರಂ ತ್ರಿಲೋಕತಿಲಕಂಗೆ ಮಹಾಮಹಮಂ ಪೊಸೆದಂ (೪೦೦೪. ೬-೪೦) ; ಜನ್ಮನಕ್ಷತ್ರವು ವರ್ಜವರ್ಧನಮಾ ಮಹವು ಕೂಡಿದಾಗ ಪುದಲ್ಲಾಡಾತ್ಯದಲ್ಲಿ ಕೋದಂಡೆರುವ ಎಂಬ ಗ್ರಾಮ ವನ್ನು . . . ಕೊಟ್ಟನು (೪೪೦೦. ೦೧೩). [ಸಂ.]

ಮಹಾಮಹಿಮ (ನಾ). ೧. ಅತಿಶಯವಾದ ಮಹತ್ತ್ವ, — ಘನತೆ : ಸಮಸ್ತಲೋಕಹಿತಾಯಣೆ ಮಹಾಮಹಿಮಪ್ರಾಪ್ತರೆಂಬುವು ಲೋಕಂ (೪೪೮. ೦-೦). ೨. ಬಹುಶ್ರೇಷ್ಠನಾದವನು ; ಮಹಾಘನಮಂತ್ರ : ಶಂಕಯಿಲ್ಲದ ಮಹಾಮಹಿಮ ನೋಡಯ್ಯಾ ಕೂಡಲಸಂಗನ ಶರಣನುಪಮಾ ತೀತ ನೋಡಯ್ಯಾ (೪೪೮. ೦೭೪) ; ದುರ್ವಾರಸಂಸಾರಾಗರಮಂ ದಾಂಟಿಸುವಾ ಮಹಾಮಹಿಮನಂ ಪೆತ್ಪಂಗಿದೇಂ ಚಿತ್ರಮೇ (೪೪೦. ೬-೦೦).

[ಸಂ. ಮಹಾಮಹಿಮನ್]

ಮಹಾಮಹಿಮೆ (ನಾ). = ಮಹಾಮಹ ೨ : ಜಗಜ್ಜನಿಜಂಗಮಲಿಲ್ಪ ವೈಕ್ಷಂ ಕಲ್ಪವೈಕ್ಷಮೆಂಬ ಮಹಾಮಹಿಮೆಯಂ ಮಹಾಪುರುಷಜಾಲಯದೊಳ್ ಮುನ್ನಂ ಮನಿ (೪೦೪. ೪-೪೦ ೪). [<ಸಂ. ಮಹಾಮಹ]

ಮಹಾಮಹೋಪಾಧ್ಯಾಯ (ನಾ). ೧. ಹಿರಿಯ ಅಥವಾ ಶ್ರೇಷ್ಠನಾದ ಬೋಧಕ. — ಶಿಕ್ಷಕ. ೨. ಹಿಂದಿನ ಕಾಲದಲ್ಲಿ ರಾಜ್ಯದ ಆಡಳಿತ ಗಾರರು ಭರತಖಂಡದಲ್ಲಿ ಉದ್ದಾಮ(ಸಂಸ್ಕೃತ)ವಿದ್ವಾಂಸರಿಗೆ ಕೊಡುತ್ತಿದ್ದ ಒಂದು ಬಿರುದು : ಇಪ್ಪತ್ತು ವಿದವಾದ ಮಹಾ ಮಹೋಪಾಧ್ಯಾಯವನ್ನು ಪೊಂದಿದೆ ! (೪೪೦೦೮. ೪೮೦). [ಸಂ.]

ಮಹಾಮಂಡಳೇಶ್ವರ (ನಾ). = ಮಹಾಮಂಡಲೇಶ್ವರ : ಸಗರಂ . . . ಜಾವಿಶಕರುವರ್ಣಮೆಮಿಳಿ ಪದಿವೆಂಟುಲಕ್ಷಪೂರ್ವಂ ಕುಮರಕಾಲಂ ಪೋಗೆ ಮಹಾಮಂಡಳೇಶನಾಗಿ ಮತ್ತಂ ಪದಿವೆಂಟುಲಕ್ಷಪೂರ್ವಮಿಂ ಸಕಲಚಕ್ರವರ್ತಿ ಯಾಗಿದ್ದಾ (೪೦೪೮. ೦೩-೯). [ಸಂ. ಮಹಾಮಂಡಲಿಕ]

ಮಹಾಮಾಂಸ (ನಾ). ೧. ಮನುಷ್ಯದೇಹದ ಮಾಂಸ ; ನರಮಾಂಸ : ನಿಜಜೀವಂ ಪರಲೋಕರೊಳ್ನಿಜಮಪಾಮಾಂಸಂ ಪಿಶಾಚಾಸ್ಯದೊಳ್ . . . ನಿಜಕಾಯಂ ಕುರುಧೂಮ್ರಿಯೊಳ್ನಿಲಸೆ (೧೪೦೮. ೬-೩) ; ಅಗ್ನಿಕುಂಡದಲ್ಲಿ ಸುಡುತ್ತಿದ್ದ ಮಹಾಮಾಂಸದ ವಾಸನೆ ಎಲ್ಲೆಲ್ಲೂ ಹರಡಿ, ರಾಜಧಾನಿಯೆಲ್ಲ ಶ್ಮಶಾನಧೂಮವ್ಯಾಪ್ತವಾಯಿತು (೨೦೮೮. ೭೧೦). ೨. ನರಮಾಂಸವೆನ್ನು ವುದನ್ನು ತಿಳಿಸಲು ವ್ಯಂಗ್ಯವಾಗಿ ಉಪಯೋಗಿಸಿರುವ ಪರ್ಯಾಯ ಪದ : ಅಂತು ನರಮಾಂಸಮುಂ ಮಹಾಮಾಂಸಮೆಂದು ನರಮಾಂಸ ಬರಿಯುಂ ಮಹಾಮಾಂಸುಲಿಯೆಂದು ದೀರ್ಘನಿದ್ರೆಯುಂ ಮಹಾನಿದ್ರೆ ಯೆಂದು ದೀರ್ಘಪ್ರಾಣಮುಂ ಮಹಾಪ್ರಾಣಮೆಂದು ಸ್ನುಹಿವೃಕ್ಷವುಂ ಮಹಾವೃಕ್ಷಮೆಂದು ಮಹಿವತಿ ಭೀಮನಂ ಮಹಾರಥನೆಂದು ಪೊಡ ಯಲ್ಬಕ್ಕುದೆ ವಲಂ (೧೪೦೮. ೬-೩೭ ೪). [ಸಂ.]

ಮಹಾಮಾತುಶ್ರೀ (ನಾ). ರಾಜಮಾತೆ ಮುಂತಾದವರನ್ನು ಸಂಬೋಧಿ ಸುವಾಗ ಗೌರವಸೂಚಕವಾಗಿ ಬಳಸುವ ಶಬ್ದ ; ಕಳಲೆ ಶ್ರೀ ಲಕ್ಷ್ಮೀ ಕಾಂತಸ್ವಾಮಿಯವರ ದೇವಸ್ಥಾನಕ್ಕೆ ಮಹಾಮಾತುಶ್ರೀ ಲಕ್ಷ್ಮಿಅಮಣಿಯವರ ಸೇವೆ (೪೪೦. ೦೯೦. ೪೬-೦; ೧೭೨೦).

[<ಸಂ. ಮಹಾಮಾತು+ಶ್ರೀ, ಮಹಾಮಾತೃಶ್ರೀ]

ಮಹಾಮಾತೃಶ್ರೀ (ನಾ). = ಮಹಿಮಾಮಾತುಶ್ರೀ : ಸಿಂಹಾಸನದಲ್ಲಿ ಮುಹೂರ್ತಮಾಡಿರುವ ದೊರೆಗಳವರಂ ನೋಡಬೇಕೆಂಬ ಇಚ್ಛೆಯಿಂದ ಮಹಾಮಾತೃಶ್ರೀಯವರು ಮೊದಲಾದ ಅಂತಃಪುರಸ್ತ್ರೀಜನರೆಲ್ಲರೂ ತಮ್ಮ ತಮ್ಮ ಮರ್ಯಾದಾನುಸಾರವಾಗಿ ಸಿಂಹಾಸನಕ್ಕೆ ಪಮಸ್ಸಂಯಿ ಅಂತಃಪುರಕ್ಕೆ ತೆರಳಲು (೪೪೦೦. ೨. ೪೪). [ಸಂ.]

ಮಹಾಮಾತೃಶ್ರೀ (ನಾ). = ಮಹಾಮಾತುಶ್ರೀ : ಮಹಾಮಾತೃ ಶ್ರೀಯವರಿಗೆ ಈ ಪತ್ರ ಭಕ್ತಿಪೂರ್ವಕ ವಿಜ್ಞಾಪನೆಯನ್ನು ತಿಳಿಸಬೇಕು (೧೦೮. ೧೩೭). [ಇದು 'ಮಹಾಮಾತೃಶ್ರೀ' ಎಂಬ್ಪುದರ ಆಕೃತ್ಯರೂಪ]

ಮಹಾಮಾತ್ಯ (ನಾ). ಪ್ರಧಾನನಾದ ಅಮಾತ್ಯ ; ಸಚಿವಶ್ರೇಷ್ಠ : ಹೊಯ್ಸಳರಾಜ್ಯದ ಮಹಾಮಾತ್ಯನಾಗಿ ನೆನೆಗೆ ಇಲ್ಲಿ ಕುಳ್ಳಿರುವ ಅರ್ಜುನಗೆ ಇರುವಷ್ಟೇ ಗೌರವ ನಿಮ್ಮಂದೂ ಅಲ್ಲವೆ ? (೪೪೮. ೦೬೨) ; ಮಹಾಮಾತ್ಯರು ಮಾತನಾಡಲು ಇಚ್ಛಿಸುತ್ತಿರುವರೆಂದು ತಿಳಿದ ಸಭೆ ನಿಶ್ಶಬ್ದವಾಯಿತು (೧೦೦೮. ೧೩). [ಸಂ.]

ಮಹಾಮಾತ್ರ (ಗು). ೧. ಅಳತೆಯಲ್ಲಿ ದೊಡ್ಡದಾದ. ೨. ಅತಿ ಶ್ರೇಷ್ಠವಾದ : (ನಾ). ೩. ಪ್ರಧಾನನಾದ ಅಮಾತ್ಯ : "ಮಹಾ ಮಾತ್ರನೆನಲುಂ ಪ್ರಧಾನನಕ್ಕುಂ" (೪೦೦೮. ೬೯-೩); ರಾವಣನ ಸಾವಂತ ಯೋಧಮಹಾಮಾತ್ರಾದಿಗಳ್ ರಾವಲಕ್ಷ್ಮಣರಂ ಬಂದು ಕಾಣ್ (೪೪೦೪. ೬೦೨). ೪. ಗಜಶಾಲೆಯಂ ಮುಖ್ಯಸ್ಥ ; ಮಾವಟಿಗರ ಯಜಮಾನ : ತದೀಯಾವೇಕಪವಮಹಾಮಾತ್ರಂ ರಾಜಗುಪ್ತನೆಂಬೊನಾತನಧೀತ ಸಳಕಾಸ್ಯಸಾಗಿಯುಂ ವಿತ್ರಹೀನಂ (೪೪೦೪. ೬-೬೬ ೪). ೫. ಮಾವುತ ; ಮಾವಟಿಗ : "ಗಜಾಜೀವಃ, ಮಹಾಮಾತ್ರಃ – ಈ ೨ ಅನೆಯ ವೈದ್ಯಂ" (೪೦೦೮. ೪೪-೬೨) ; ₱ 'ಹಲಾಯು' ಟೀಕಿನಲ್ಲಿರುವ 'ಅನೆಯ ವೈದ್ಯ' ಎಂಬ ಅರ್ಥ ತಪ್ಪಾಗಿದೆ. 'ಗಜಾಜೀವ' ಹೋ ; ಕಡಿಯುಂ ಪೊಡಮಟ್ಟು ಮಹಾಮಾತ್ರಂ[ಪಾಠಾ. ಶ್ಯಂ] ಬಾಗಿಲೊ ಳ್ಪಂದಿರ್ದಪನೆಂ ಬರವೇಚಿಂಬುದುಮಾರೋಹಕಂ ಬಂದು (೪೪೦೪. ೬-೪೪ ೪). ೬. ಹಿ: ಪ್ರಧಾನಂ ನಾನೆಯೋ, ರುಕ್ಷಮಾಕತೆ ಮಹಿಯೊಳ್ ಮಹಾಮಾತ್ರವರ್ತನಂ ಸ್ಥಿತಿಯೊಳ್ನಿಲ್ಲದಿಲ್ಲವೆಲ್ಲಿಯುಂ (೪೪೨೬. ೬-೧ ೪).

[ಸಂ.]

ಮಹಾಮಾಯೆ (ನಾ). ೧. ಹೆಚ್ಚಾದ ಭ್ರಮೆ.—ಭ್ರಾಂತಿ. ೨. ಪ್ರಪಂಚವು ವಾಸ್ತವಿಕವೆಂಬಂತೆ ಸೃಷ್ಟಿಸಲು ಕಾರಣವಾದ ಮಾಯೆಯ ಶಕ್ತಿ : ಹರಿ ಮಹಾಮಾಯೆ ತಾನೆಂದು ಒಲವನಲ್ಲದೆ ವಿಜವನೊರೆಯನು (ಶಿಷ್ಟ. ೫೬-೫೬). ೩. ದುರ್ಗೆಯ ಹೆಸರುಗಳಲ್ಲಿ ಒಂದು.

[ಸಂ. ಮಹಾಮಾಯಾ]

ಮಹಾಮಾರಿ (ನಾ). ೧. ದುರ್ಗೆಯ ಒಂದು ಹೆಸರು. ೨. ಸಾವನ್ನು ಉಂಟುಮಾಡುವಂಥ ಪ್ಲೇಗು, ಕಾಲರಾ ಮುಂತಾದ ಭಯಂಕರವಾದ ಅಂಟುರೋಗ : ತಂಗಳ ಅಥವಾ ಹಳಸಿದ ಅನ್ನವನ್ನು ತಿನ್ನುವ ಮನುಷರೂ ಮಹಾಮಾರಿಯೂ ಮತ್ತೊಳಿದ ರೋಗಗಳೂ ಬೇಗನೆ ಬರುತ್ತವೆ (ಶ್ರೀಕೃ. ೧೫೬).

[ಸಂ. ಮಹಾಮಾರೀ]

ಮಹಾಮುದ್ರೆ (ನಾ). [ಯೋಗ] ಪೂಜೆ ಮತ್ತು ಜಪಾನುಷ್ಠಾನದಲ್ಲಿ ಬಳಸುವ ಒಂದು ಬಗೆಯ ಹಸ್ತ ಮತ್ತು ಪಾದವಿನ್ಯಾಸ ; ಮಂತ್ರಶಾಸ್ತ್ರಪ್ರಸಿದ್ಧವಾದ ಒಂದು ಬಗೆಯ ಹಸ್ತ ಮತ್ತು ಪಾದಮುದ್ರೆ: ಅಸ್ತ್ರಮುದ್ರೆ ಜಪ್ರಮುದ್ರೆ ಮಹಾಮುದ್ರೆ . . . ಸಂಹಾರದುಂದ್ರೆಯೆಂಬ ಸಕಲಮುದ್ರಾಲಕ್ಷಣವನರಿದು (ಪಶಿಚ. ೧೩); ಆಸನಗಳಲ್ಲದೆ ಆಸನಗಳಿಂದ ಬೇರೆಯಾಗದೆ ಇರುವ ಕೆಲವು ಕ್ರಿಯೆಗಳುಂಟು. ಅವುಗಳನ್ನು ಮುದ್ರೆಗಳೆಂದು ಹೇಳುತ್ತೇವೆ. ಅಶ್ವಿನೀಮುದ್ರಾ, ಭುಜಾಮುದ್ರಾ ಮೊದಲಾದುವುಗಳು ಕ್ರಮವಾದ ಅಭ್ಯಾಸದಿಂದ ವಿಚಿತ್ರಫಲಗಳನ್ನು ಕೊಡುವವುಗಳಾಗಿರುತ್ತವೆ (ಹಠಪ್ರ. ೦೩೮).

[ಸಂ. ಮಹಾಮುದ್ರಾ]

ಮಹಾಮುನಿ (ನಾ). ೧. ಶ್ರೇಷ್ಠನಾದ ಋಷಿ : ಮಾರ್ಕಂಡೇಯ ಮಹಾಮುನಿ ಸ್ವೇಚ್ಛಾವತರಣೆಯನಿಸಿಕೊಂಡನಲ್ಲದೆ ಲಿಂಗದ ವಿಜವನರಿಯನು (ಚಿಚ. ೦೩೬). ೨. ಬುದ್ಧ. ೩. ಅಗಸ್ತ್ಯಋಷಿ. ೪. ಕೊತ್ತಂಬರಿ ಗಿಡ ಮತ್ತು ಅದರ ಧಾನ್ಯ.

[ಸಂ.]

ಮಹಾಮುಸ್ತೆ (ನಾ). ಒಂದು ಬಗೆಯ ಸಸ್ಯ ; ಭದ್ರಮುಸ್ತೆ : "ಭದ್ರಮುಸ್ತಾ—ಮಹಾಮುಸ್ತೆ" (ಚಿಪ್ರ. ೦೦೦). [ಸಂ. ಮಹಾಮುಸ್ತಾ]

ಮಹಾಮೆಕ್ಕೆ (ನಾ). ಒಂದು ಬಗೆಯ ಮೆಕ್ಕೆಗಿಡ : ಕಕ್ಕೆಯೊಳಗಾಗ ಮಹಾ[ಜಾಣಂ. ಮಹರ]ಮೆಕ್ಕೆ . . . ಲೊಕ್ಕೆಯನಿಪ್ಪವಜಿ ಬೇಗ್ಗಳಂ ಕೊಂಡು (ಜಪಚ. ೫೬-೫೬). [ಮಹಾ + ಮೆಕ್ಕೆ]

ಮಹಾಮೇದ (ನಾ). = ಒಂದು ಬಗೆಯ ಔಷಧೀ ಸಸ್ಯ : ಮಹಾಮೇದ (ಶ್ರೀಚಿ. ೫೦-೧೧೩). [ಸಂ.]

ಮಹಾಮೇದೆ (ನಾ). = ಮಹಾಮೇದ : " ಮಹಚ್ಛಿದ್ರಾ—ಮಹಾಮೇದೆ " (ಚಿಪ್ರ. ೦೧೪): ಕಾಕೋಳಿ, ಕ್ಷೀರಿ, ಮಹಾಮೇದೆ . . . ಜೋರ್ಗಸಿ ಹಾಕಿ ಕಾಸಿ ಹದವಲ್ಲಿ ಇಳುಹಿ . . . ಸೇವಿಸಲು . . . ಉಣ್ಣಾದ ಪರಿಹರವಪ್ಪುದು (ಕೈಕಿಚಿ. ೫೫, ೫೪).

[ಸಂ. ಮಹಾಮೇದಾ]

ಮಹಾಮೋಹ (ನಾ). [ತತ್ತ್ವಶಾ] ಅಜ್ಞಾನದ ಐದುವಿಧಗಳಲ್ಲಿ ಒಂದುಬ್ಬಕಾರ : ಅಜ್ಞಾನವು ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಎಂದು ಐದು ವಿಧ . . . ವಿಷಯಗಳಲ್ಲಿರುವ ಅಸ್ಥೈರ್ಯವೇ ಮಹಾಮೋಹ (ಜ್ಞಾಕ್ರ. ೬೨).

[ಸಂ.]

ಮಹಾಯಜ್ಞ (ನಾ). ೧. ದೊಡ್ಡ ಯಜ್ಞ. ೨. ಗೃಹಸ್ಥನು ದೇವತೆಗಳ ಪ್ರೀತ್ಯರ್ಥವಾಗಿ ಪ್ರತಿದಿನವೂ ಮಾಡಬೇಕಾದ ಧಾರ್ಮಿಕ ಕೃತ್ಯ : ' ಪಂಚಮಹಾಯಜ್ಞ ' ಪರಾ.

[ಸಂ.]

ಮಹಾಯಾತ್ರೆ (ನಾ). (ವಾರಣಾಸಿ ಮುಂತಾದ ಕಡೆಗಳಿಗೆ ಮಾಡುವ) ಪವಿತ್ರವಾದ ಯಾತ್ರೆ.—ಪ್ರಯಾಣ : ಅವರು ಮಾಡುವ ಭೋಜನವು ಆ ಪರಮಾತ್ಮನಿಗೆ ನೈವೇದ್ಯವು ; ತಿರುಗುವುದೆಲ್ಲಾ ಮಹಾಯಾತ್ರೆ (ಕಾಂ. ೫೧೬).

[ಸಂ. ಮಹಾಯಾತ್ರಾ]

ಮಹಾಯಾನ (ನಾ). ೧. ದೊಡ್ಡ ವಾಹನ. ೨. [ಬೌದ್ಧ] ಬೌದ್ಧಮತದ ಒಂದು ಶಾಖೆ : ಈ ಮಾಧ್ಯಮಿಕಸಂಪ್ರದಾಯಕ್ಕೆ ಮಹಾಯಾನವೆಂದೂ ಯೋಗಾಚಾರ ಸಂಪ್ರದಾಯಕ್ಕೆ ಹೀನಯಾನವೆಂದೂ ಹೆಸರುಗಳು ಉಂಟಾದುವು (ಬಂಬಾ. ೫೫) ; ಮಹಾಯಾನದಲ್ಲಿ ಐತಿಹಾಸಿಕಪುರುಷ ಗೌತಮಬುದ್ಧನನ್ನು ಅವತಾರಪುರುಷನೆಂದು ಪರಿಗಣಿಸಿ ಅವನಿಗೆ ದೇವತ್ವದ ಪಟ್ಟವನ್ನು ಕಟ್ಟಲಾಯಿತು (ಕಾಣಂ. ೦೦೯); ನಿರ್ವಾಣಕ್ಕೆ ಹೆಚ್ಚು ಜನರನ್ನು ಒಯ್ಯುವ ಯಾನವಾದ್ದರಿಂದ ಇದಕ್ಕೆ 'ಮಹಾಯಾನ'ವೆಂದೂ ಕೇವಲ ಕೆಲವೇ ಜನರನ್ನು ನಿರ್ವಾಣಕ್ಕೆ ಒಯ್ಯುವ ಯಾನವಾದ್ದರಿಂದ ಅದಕ್ಕೆ 'ಹೀನಯಾನ'ವೆಂದೂ ವ್ಯವಹರಿಸುವುದು ರೂಢಿ (ಶಾಹಿ. ೫೨೨). [ಸಂ.]

ಮಹಾಯುದ್ಧ (ನಾ). ರಾಷ್ಟ್ರ, ರಾಷ್ಟ್ರಗಳಿಗೆ ನಡೆಯುವ ಘೋರವಾದ ಯುದ್ಧ.— ಕಾಳೆಗ : ಜಗತ್ತು ಮಹಾಭೀತಿ ಕಳವಳಗಳಿಂದ ಎದುರು ನೋಡುತ್ತಿದ್ದ ಪೀಡೆ- ದ್ವಿತೀಯ ಮಹಾಯುದ್ಧವೆಂಬ ಹೆಸರಿನಿಂದ ಅಂದು, ಹೀಗೆ ಆರಂಭವಾಯಿತು (ಕುಚಾಮು, ೭೦).

[ಸಂ.]

ಮಹಾಯೋಗ (ನಾ)- ಸ್ಥಿರವಾದ ಧ್ಯಾನ : ತನಗಾವ ಹಾನಿಯು ಇಲ್ಲದೊಂದೇ ಪ್ರಕಾರವಾದ ಪ್ರತ್ಯಗಾತ್ಮಬ್ರಹ್ಮದಲ್ಲಿ ಮನೋಲಯವು ಮಹದೇ ಮಹಾಯೋಗವೆನ್ಕುಂ (ಶಪಚ. ೩೦).

[ಸಂ.]

ಮಹಾಯೋಗಿ (ನಾ). ೧. ಶ್ರೇಷ್ಠನಾದ ಯೋಗಿ : ಆ ಮಹಾಯೋಗಿ ಗುಣಂಗಳಂ ಪೊಲಿಸಿದನೀ ಮಹಾಭೋಗಿ ನೆಲನಂ ಪರಿಪಾಲಿಸಿದಂ (ಆಪ್ರ. ೬-೫೪ ಪ) ; ಸನಕ . . . ಸನತ್ಕುಮಾತರೆಂಬ ಬ್ರಹ್ಮನ ಮಾನಸಪುತ್ರರಾದ ಮಹಾಯೋಗಿಗಳು ವೈಕುಂಠಕ್ಕೆ ಬಂದರು (ಶಭಾಷ. IV. ೦೨). ೨. ಶಿವ. ೩. ವಿಷ್ಣು. ೪. ಕೋಳಿ. [ಸಂ. ಮಹಾಯೋಗಿನ್]

ಮಹಾರಜತ (ನಾ). ೧. ಚಿನ್ನ ; ಬಂಗಾರ : "ಗೈರಿಕ ನಿಷ್ಕ ಹಿರಣ್ಯ ಮಹಾರಜತ ಸ್ವರ್ಣ ಕರ್ಬುರ ರಾಜ್ಯಾಪದಮಿನ್ನೋರಂತಱ ಹಾಬೂನದವಾಗುಯ ಗಾಂಗೇಯ ಶಿದ್ಧತಂ ಕಲ್ಯಾಣಂ" (ಹಚ್ಚಿಕಾ. ೫೪-೬). ೨. ಭಾರವಾದ ಒಂದು ಬಗೆಯ ಬಿಳಿಯ ಲೋಹ ; ಪ್ಲಾಟಿನಂ : ಮಹಾರಜತ (ಪ್ಲಾಟಿನ)ವೆಂಬ ಧಾತುವು ಎಂಥಾ ತೀಕ್ಷ್ಣಸೋಳಗೂ ಕರಗುವುದಿಲ್ಲ (ಪ್ರಾಂಶಾ. ೬-೦೦). [ಸಂ.]

ಮಹಾರಜಸ (ನಾ). ೧. ಕುಸುಬೆಯ ಗಿಡ ಮತ್ತು ಅದರ ಹೂವು : "ಮಹಾರಜಸ[ನ್]ಂ. ಕುಸುಂಭಂ—ಈ ೨ ಕುಸುಂಬೆ"(ಚಿಕಾಯಿ. ೦೦೦-೧೬); "ಹವುಲೋತ್ಪರಂ, ಕುಸುಂಭಂ, ವಹ್ನಿಶಿಖಂ, ಮಹಾರಜನಂ-ಳಿ ಕುಸುಂಬಾ ಬ್ಬಾದ ಹುವ್ವ" (ಚಿಕಾ. ೦೨. ೨೦೬). ೨. ಚಿನ್ನ. [ಸಂ.]

ಮಹಾರತ್ನ (ನಾ). ಶ್ರೇಷ್ಠವಾದ ಹವಣ : ಅಮೂಲ್ಯವಾದ ರತ್ನ.

[ಸಂ.]

ಮಹಾರಥ (ನಾ). ೧. ದೊಡ್ಡರಥ. ೨. ರಥದಲ್ಲಿದ್ದುಕೊಂಡೇ (ತನ್ನನ್ನೂ ತನ್ನ ಸಾರಥಿಯನ್ನೂ ಕುದುರೆಗಳನ್ನೂ ರಕ್ಷಿಸಿಕೊಂಡು) ಏಕಾಂಗಿಯಾಗಿ ಹತ್ತುಸಾವಿರ ಯೋಧರೊಡನೆ ಯುದ್ಧ ಮಾಡುಮಪನು : ರಥಿಗಳನಗ್ರಸ್ಥಿತಸಾರಥಿಗಳನಿಸೆ ಸೀರಐಾನಿ ಸಲೆ ರಥದ ಮನೋರಥದ್ವೊಡನೆ ಮಡಿದರಂದತಿರಥ ಸಮರಥರಾ ಮಹಾರಥಾರಾರ್ಧರಥ ರ್ಗಳಾ (ಜಾಕಥ. ೯-೩೨); ಅನಿಲಜನುಂ ಧೃಷ್ಟದ್ಯುಮ್ನನುಪಾಂತಕನಕುಲಯಮಂ ಮಹಾಸಾತ್ಯಕಿ ಮತ್ಸ್ಯವ ಸೂನು ಶಿಖಂಡಿ ವ್ಯಾಘ್ರದತ್ತರಿಂದಜುವರುಂ ಮಹಾರಥರಲ್ಲೇ (ಪಂಚಾ. ೬-೨೦) ; ಭೀಷ್ಮ . . . ವೀರಕರ್ಣ ದ್ರೋಣ ಗೌತಮ ಭೂರಿಬಲ ಗುರುಸೂನು ಶಕುನಿ ಮಹಾರಥಾದಿಯ ಕೂಡಿಕೊಂಡನು ನರನ ಸಂಗರಕೆ (ಭಾಗ್ಯ. ೬-೩೬). ೩. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ನಲವತ್ತನೆಯ ಸ್ಥಾನ ಮತ್ತು ನಲವತ್ತು ಅಂಕೆಗಳಿಂದ ಕೂಡಿದ ಒಂದು ದೊಡ್ಡ ಸಂಖ್ಯೆ : ಎಕ್ಕ, ದಾಹಂ . . . ರಥ, ಮಹಾರಥ . . . ಮಹಾಪರಿಮಿತ – ಈ ೪೦ ಸ್ಥಾನದ ಉಗ್ಗಡಣೆ (ಕ್ಷೇಚಾ. ೬-೫೬).

[ಸಂ.]

ಮಹಾರಾಜ (ನಾ). ೧. ರಾಜಶ್ರೇಷ್ಠ ; ಅನೇಕ ರಾಜರಲ್ಲಿ ಮುಖ್ಯನಾದವನು ; ಚಕ್ರವರ್ತಿ ; ಸಾಮ್ರಾಟ : ಸ್ವಸ್ತಿಶ್ರೀಗೊಂಗುವೆ ಮಹಾರಾಜ ಶ್ರೀಪುರುಷ ಪೃಥುವೀರಾಜ್ಯ ವಿಜಯಂವರ್ತಿಸುತ್ತಿರೆ ಯಿಪ್ಪದಾ ಎಬ್ಬಾಪೆಯೊಳು ಶಿವಮಾರ ಕದಮ್ಬರಂ ಅಳೆ (ಪ್ರ. ೪. ಕೀರ್ತಿಸ. ೬-೦ : ೧೬೨) ; ಮಹಾರಾಜನೆಲ್ಲರೂ ಬಲ್ಲರು ಆ ರಾಜನು ಅರಮೊ ಅಂಬುಜನು (ಗಂಧಪು. ೪. ೦೬-೨೪) ; ಯದುವಂಶಯರು ಕರ್ನಾಟದೇಶಾಧೀಶ್ವರರಾದ ಈ ಮೈಸೂರು ಮಹಾರಾಜರವರ ವಂಶಕ್ಕೆ ಮೂಲಪುರುಷರಾದರು (ಮಹಾಪು. ೧. ೩). ೨. ಗುಜರಾಥೀ, ಜೈನ ಮುಂತಾದ ಮತದ ಸಾಧುಗಳು ಮೊದಲಾದ ಹಿರಿಯರನ್ನು ಸಂಬೋಧಿಸುವಾಗ ಬಳಸುವ ಒಂದು ಗೌರವಸೂಚಕವಾದ ಶಬ್ದ : 'ಮಹಾರಾಜ'ರೆಂಬುದು ಮಹಾರಾಷ್ಟ್ರದಲ್ಲಿ ಸಾಧು ಸಂತರಿಗಿರುವ ಬಿರುದಾವಳಿ (ದೇಹಪ್ರ. ೬೭). ೩. ಅಡುಗೆಯವನು ; ಬಾಣಸಿಗ : ಬಾನು ಮಮ್ಮ ಮಹಾರಾಜನೆನ್ನ ಕಳಿಸಿ ಕೊಟ್ಟಿದ್ದೇನೆ. ಅವನೇ ಅವರ ವಸತಿಯಲ್ಲಿ ಅಡಿಗೆ ಮಾಡುತ್ತಾನೆ (ಪಂಚತಂ. ೦೨) ; ದೇಸಾಯರಿಗಾಗಿ ವಿಮಲೆಯು 'ಮಹಾರಾಜ' (ಅಡಿಗೆಯವ) ನನ್ನು ಕರೆದು ಅಡಿಗೆ ಮಾಡಿಸಿದಳು (ಪಾಂಡು. ೨೦೯). [ಸಂ. ಮಹಾರಾಜನ್]

ಮಹಾರಾಜಯ್ಯ (ನಾ). ಒಬ್ಬಾತನ ಹೆಸರು : ಬಮ್ಮಜೂರ ಮಹಾರಾಜಯ್ಯನುಂ ದೊಳಮುಖರ ದೇವಯ್ಯನುಂ . . . ಧರ್ಮರಾಸಿಧುರರ ಕಾಲಂ ಕಳ್ದಿ ಕೊಟ್ಟು ಸ್ವಸ್ತಿ ಯುವತಿಸ್ಕೊಡೆ (ಪ್ರ. ೪. ಶಕ್ರಪ್ರ. ೫೫-೫೦ ; ೦೭೯). [ಮಹಾರಾಜ + ಅಯ್ಯ]

ಮಹಾರಾಜರಾಜಶ್ರೀ (ನಾ). = ಮಹಾರಾಜಶ್ರೀ. [ಸಂ.]

ಮಹಾರಾಜಶ್ರೀ (ನಾ). ಗೌರವಾಸ್ಪದರನ್ನು ಕುರಿತು ಬರೆಯುವಾಗ ಬಳಸುವ ಸಾಂಪ್ರದಾಯಿಕ ಹಾಗೂ ಗೌರವಸೂಚಕವಾದ ಮಾತು : ಕನ್ನಡದಲ್ಲಿ . . . ಮಹಾರಾಜಶ್ರೀ ಮೊದಲಾದ ಪ್ರಾಗ್ಗಳನ್ನೂ . . . ಪಶ್ಚಾತ್ಪ್ರಯೋಗಸಂಖ್ಯೆಗಳ ಹೆಸರಿನ ಹಿಂದೆ ಹೋಗಿಸಿ ಬರೆಯುವ ಸಂಪ್ರದಾಯ ಉಂಟು (ಮೀಮಾಕಾ. ೧-೪೪). [ಸಂ.]

ಮಹಾರಾಜೆ[1] (ನಾ). ೧. ವಿಷ್ಣು. ೨. (ಪಾತಾಳಲೋಕದಲ್ಲಿ ವಾಸ ಮಾಡುವ) ಉಪದೇವತೆಗಳ ಒಂದು ವರ್ಗ : "ಅದಿತ್ಯಾಃ . . . ಮಹಾರಾಜೇಃ, ಸಾಧ್ಯಾಃ, ರುದ್ರಾಃ, ಗಣದೇವತಾಃ — ಗಣದೇವತೆಗಳ ಹೆಸರುಗಳು" (ಶಿಷ್ಟಾ. ೦೫). [ಸಂ.]

ಮಹಾರಾಜೆ[2] (ನಾ). ದೊಡ್ಡಗೊಂದಲ. – ದೊಂದಿ. – ಮುಟ್ಟಿಗೆ : ಸಿರುಮಿಷ್ಟಯವರು . . . ದೇವರಾಯ ಮಹಾರಾಯರು ಆಸ್ಥಾನಕ್ಕೆ ಸಂದು ಮಹಾರಾಜಿಕವಾದಲ್ಲಿ ಗೂಳಿಯವಾಗಿ ಕೊಡಬೇಕಿಗೆ ಬಂದು (ಪ್ರ. ೪೧೮. ಕೀರ್ತಿಸ. ೦೮-೯; ೨೪೮) ; ಶ್ರೀ ವೀರಪ್ರತಾಪ ಅಚ್ಯುತರಾಯ ಮಹಾರಾಯರೂ ಸುಖಸಂಕಥಾವಿನೋದದಿಂ ಪೃ(ಪೃ)ಥ್ವೀರಾಜ್ಯಂಗೆಯು ಅ(ಪ್ಪು)ತ್ಯಂ ಶುರಲು ಮಹಾರಾಜಿಕದಿಂದಲೂ ಬಾದಾವಿಯ ದುರ್ಗವೂ (ವ್ಯ) . . . ಖಿಲವಾಗಿ ಯರಲಾಗಿ (ಪ್ರ. ೪. ೦೯-೯ : ೧೪೭). [ಮಹಾ + ರಾಜಿಕ]

ಮಹಾರಾಜ್ಞಿ (ನಾ). = ಮಹಾರಾಣಿ ೧ : ಮಹಾರಾಜ್ಞೀ ಮಹಾದೇವಿಯವರ ಸ್ವಾಧೀನದಿಂದ ಒಸಗೆ (ಶಾಸನ. ೦). [ಸಂ. ಮಹಾರಾಜ್ಞೀ]

ಮಹಾರಾಣಿ (ನಾ). ೧. ಪಟ್ಟಾಭಿಷಿಕ್ತಳಾದ ರಾಜನ ಪತ್ನಿ ; ಪಟ್ಟಮಹಿಷಿ : ತಮ್ಮ ಮಹಾರಾಜಗೆ ತಲೆ ದಾಗಿ ಧಣಿ ವಿಜ್ಞಾಸಗಳಂದ ಸಮಸ್ಕರಿಸಿದರು (ಶಾಸನ. ೦೬೬). ೨. ಒಡತಿ ; ಮುಖ್ಯಾಧಿಕಾರಿಣಿ : ಯಾವ ರಾಜ್ಯದಲ್ಲಿರಲಿ, ಯಾವ ರಾಜರ ರಾಜ್ಯದಾಗಿರಲಿ, ಅಲ್ಲಿರುವ ಮಾಹೇಶ್ವರರಿಗೆಲ್ಲಾ " ನೀನು " ಯೇ ಮಹಾರಾಣಿ ! (ಶಿಶಾಂ. ೨೦೦). [<ಸಂ. ಮಹಾರಾಜ್ಞೀ]

ಮಹಾರಾಣುವೆ (ನಾ). ದೊಡ್ಡಪರಿವಾರ ; ಹಿರಿಯ ಪರಿವಾರ : ಮಹಾರಾಣುವೆಯ ಬಿಟ್ಟು ಬಂದು ಮತ್ತೆ ಒಡಿಯರು ಭೃತ್ಯರಲ್ಲಿ ರಾಣವಾಸ ವೆಂದು ಬಿಟ್ಟುವೆಟ್ಟುಂಟೆ (ಹೋಳಿಹ. ೩೭-೨೯೦). [ಮಹಾ + ರಾಣುವೆ]

ಮಹಾರಾಯ. ಮಹರಾಯ, ಮಾರಾಯ (ನಾ). ೧. ಮಹಾರಾಜ ; ದೊರೆ : ವೀನವಧರಿಸಿ ವಿಷ್ಣುಮಹಾರಾಯ ಬಲ್ಲಿದಂ ಬಸವಯ್ಯ ಗಂಜುವುವು (ಬಪ್ರ. ೩೮-೨೦) ; ಈ ಪ್ರಕಾರವಾಗಿ ಹರಿಶ್ಚಂದ್ರಮಹಾರಾಯನು ಕೇಳಲು (ಹಹಾ. ೦೪). ೨. (ಆಲಂ) ದೊಡ್ಡಮನುಷ್ಯ ; ಗೌರವಾರ್ಹ ವ್ಯಕ್ತಿ ; ಸಂಭಾವಿತ ; ℘ ಸಾಮಾನ್ಯವಾಗಿ ವ್ಯಂಗ್ಯ, ಸಲುಗೆ, ಗೌರವ ಇತ್ಯಾದಿ ಭಾವನೆಗಳನ್ನು ಸೂಚಿಸಿ, ಸಂಬೋಧಿಸುವಾಗ ಬಳಸುವ ಪದ : ಮಹಾರಾಯ, ಆ ಸುರಳಿಮುನ್ನು ಗೋದಗೆ ಒರಗಿಸಿ ಇಡಬೇಡ (ಸಂಪಿಯ. ೧೩) ; ಒಂದಲ್ಲಾ ಎರಡಲ್ಲಾ ಮೂರು ಬಾರಿ ತಿರುಪತಿ ತೋರಿಸಿದ್ರು ಮಹಾರಾಯ ಅಳಿಯಾ (ಹಹ್ಕೃಚ. ೨೨) ; ನಿನ್ನ ಚರ್ಮಾ ಎಲ್ಲಾದರೂ ಹೋಗಲಯ್ಯಾ ಮಹಾರಾಯಾ. ಆ ಸಮುದ್ರದ ವಿಷಯ ಮೊದಲು ಹೇಳು (ಪಂಪಿಮ. ೬). ಮಹರಾಯ : ೨. ಎಲ್ಲಾ ವಿಮರ್ಶಕರ ಖಲೆ ವೇಲೆ ಹಕ್ಕಿ 'ಆತ್ಮತಿಷ್ಠದ್ಧಕಾಂಗುಲಂ' ಆಗಿರುವೆಯಂತೆ. ದೇವ ಮಹರಾಯಾ (ಪಂಪಿಯ. ೫೫-೫೬) ; ಬರುವುದಿಲ್ಲ ಮಹರಾಯಾ (ಪಂಪಿಯ. ೬೮). ಮಾರಾಯ : ೧. ರಾಜೇಂದ್ರಜೋಬ್ಬಪ್ಪಮಾರಾಯರ್ ೧ ಯೂರ ಸೋಮೇಶ್ವರದೇವರ್ಗ್ಗೆ . . . ಧರ್ಮಾದಿಯಾಗೆ ಬಿಟ್ಟರ್ (ಪ್ರ. ೪. ಕಾಶಾಸ. ೩೦-೩೨ ; ೨೦೭) ; ಮಾರಯ್ಯರೆಮ್ಮ ಕೇರಿಯ ದಾರಿ ದೊಳಂ ಬರ್ಪ್ಪಾದಮ್ಮ ಭಾಗ್ಯೋದಯಂ (ಪಾಲ. ೬-೦೦೬) ; ಮಾರಾಯ್ತಂ ಮೊದಲಿಂ ಸಾಲ್ಗಡಿಯಾಗಿ ದಾನಧರ್ಮಾದಿ ಸತ್ಕಾರ್ಯಂಗಳನೆಸಗಿದಂ (ಅಮ್ಮ. ೩-೦೨)- ೨. ಬಾರದಮ್ಮುವಿ ಮಾರಾಯ ಬಂದೀದ (ಹೋಪಜ. ೦೦-೬) ; ಈ ಒಲ್ಲೆ ಮಾರಾಯಾ ನಿನ್ನ ಕಾಫೀ (ಪಜಹ. ೩೫. ೨೫೬) ; ಮಾರಾಯನಾಗಿ ಹೋಗಿ ದಾರಕ್ಷ (ಪುಚಾಗ. ೦೭೭). ೩. ಗಂಡ ; ಪತಿ : ಮಾರಾಯರು ವೈದರ ಬಾರಾವು ಕಣ್ಣೀರ್ಗು ಮಾರಾಯರ ತಮ್ಮ ವೈದುವ ವೈದರ ಮಾಡಿಲ್ಲದ ಪುಳಿಯು ಸಂದಿಂಗ (ಕ್ಷತ್ರ. ೧೪). [<ಸಂ. ಮಹಾರಾಜ]

ಮಹಾರಾಯತಿ ' ಮಹಾರಾಯಿತಿ ' ನೋ.

ಮಹಾರಾಯತಿ, ಮಹರಾಯತಿ, ಮಹಾರಾಯಿತಿ, ಮಹಾರಾಯ್ತಿ, ಮಾರಾಯಿತಿ, ಮಾರಾಯ್ತಿ (ನಾ). ೧. (ಆಲಂ) ದೊಡ್ಡ ಮನುಷ್ಯಳು ; ಸಂಭಾವಿತೆ ; ℘ ಸಾಮಾನ್ಯವಾಗಿ ವ್ಯಂಗ್ಯ, ಸಲುಗೆ, ಗೌರವ ಇತ್ಯಾದಿ ಭಾವನೆಗಳನ್ನು ಸೂಚಿಸಿ, ಸಂಬೋಧಿಸುವಾಗ ಬಳಸುವ ಪದ : ಇಷ್ಟು ಮೊದಲೇ ಏಕೆ ಹೇಳಿ ಬಿಡಲಿಲ್ಲ, ಮಹಾರಾಯಿತಿ? (ಕಪಾಕ. ೧೮). ಮಹರಾಯತಿ : ೧. ಹೋಗೇ ಮಹರಾಯತಿ, ಅವನೇ ಸಾದರೂ ಕೋಪಿಸಿಕೊಂಡಾನು ಸದ್ಯ (ಪಜಹ. ೩೭೭). ಮಹಾರಾಯತಿ : ೧. ಹಾಗೆ ಬಾ ಮಹಾರಾಯತಿ. ಕಾರಣ್ಣ ಹೋದುವದಕ್ಕಾದರೂ ಹೋಗೋಣ (ಪಜಹ್ಕಂ. ೪೪). ಮಹರಾಯ್ತಿ : ೧. ಏ! ಮಹಾರಾಯ್ತೀ ತಾನು ತಡೆ (ಕಾಮಾ. ೦೩). ಮಾರಾಯಿತಿ : ೧. ನಿನ್ನ ಮಮ್ಮಯ್ಯ ಕಾಡಿಯೇ ಮಾಲಾಯಿತಿ (ಪಜಹ. ೩೩). ೨. ಮಹಾರಾಣಿ : ಆ ಮಾರಾಯಿತಿಯಾಂ . . . ಶಾರಾಯಣನಂ ಮಹೋವಾತ್ಸಾಯತ್ಯಕ್ಷಿಗಳಂ ಧಭಗಂತಿರ್ದಳ್ (ಅಮ್ಮ. ೪-೦೬). ಮಾರಾಯ್ತಿ : ೧. ಹೋ ಸೂರ್ಯಾ, ಇದೆಂಥಾದ್ದು ಮಾರಾಯ್ತಿ (ಪಜಹ್ಕ. ೩೩). [ಮಹಾರಾಯ + — ಆತಿ (< — ಆತಿ)]

ಮಹಾರಾಯ್ತಿ 'ಮಹಾರಾಯಿತಿ' ನೋ.

ಮಹಾರಾಷ್ಟ್ರ (ನಾ). ೧. ದೊಡ್ಡದೇಶ : ಈ ಮಹಾರಾಷ್ಟ್ರಕ್ಕೆ ತಾನೇ ಭೂಮಿವಲ್ಲಭನಲ್ಲದೇ ಮತ್ತೇ ಮಹಿಂಯಂಗೆ ಹೇಳಿರಿಲ್ಲ (ಪಜಹ. ೫೦-೫೬).

೨. ಧಾರತದಲ್ಲಿ ಪಶ್ಚಿಮಭಾಗದಲ್ಲಿ ಇರುವ ಮರಾಠಿದೇಶ ಮತ್ತು ಅಲ್ಲಿಯ ಜನ : ಮಹಾರಾಷ್ಟ್ರದ ಸಂಬಂಧವು ಕರ್ನಾಟಕಕ್ಕೆ ಅತಿ ನಿಕಟವಾಗಿದೆ (ಕರ್ನಾ. ೦). [ಸಂ.]

ಮಹಾರಾಷ್ಟ್ರಕ (ನಾ). = ಮಹಾರಾಷ್ಟ್ರ ೦ : ೯೯೦೦೦ ಗ್ರಾಮಗಳನ್ನೊಳಗೊಂಡ ಮೂರು ಮಹಾರಾಷ್ಟ್ರಗಳಿಗೆ ಅಧಿಪತಿಯಾದವನು (ಕರ್ನಾ. ೩೩). ೨. ಮರಾಠಿದೇಶಕ್ಕೆ ಸಂಬಂಧಿಸಿದುದು. [ಸಂ.]

ಮಹಾರಾಷ್ಟ್ರೀ (ನಾ). ಪ್ರಾಕೃತ ಭಾಷೆಗಳಲ್ಲಿ ಒಂದು : ಮಹಾರಾಷ್ಟ್ರದ ಭಾಷೆ ; ಮರಾಠೀಭಾಷೆ : ಆ ಅಪಭ್ರಂಶ 'ಮಹಾರಾಷ್ಟ್ರೀ' ಎಂದರೆ ಇಂದಿನ 'ಆರಿಯ' ಮಾತಿನ ತಾಯಿ (ಕರ್ನಾಟ. ೦೦೭). [ಸಂ.]

ಮಹಾರುದ್ರ (ನಾ). ೧. ಶಿವನ ಒಂದು ಹೆಸರು : ಕಾವೇರಿ ತೀರದಲ್ಲಿ ಮಹಾರುದ್ರಹೋಮವು ನಡೆಯಿತು (೬೩೭). ೨. ಅಗ್ನಿಗೆ ಹೋಮ ಮಾಡುವಾಗ ಅಥವಾ ಶಿವಲಿಂಗಕ್ಕೆ ಅಭಿಷೇಕ ಮಾಡುವಾಗ ರುದ್ರಾಧ್ಯಾಯವೆಂಬ ವೇದಭಾಗವನ್ನು ಹನ್ನೊಂದು ಸಲ ಪುನರುಚ್ಚರಿಸುವುದು : ಶಾತಾತಪಸ್ಮೃತಿ—೨೭೧ ಶ್ಲೋಕಗಳು ಅತಿರುದ್ರ, ಮಹಾರುದ್ರ ವಿಧಾನಗಳು, ಪ್ರಾಯಶ್ಚಿತ್ತ (ಶಾಸ್ತ್ರ. ೬೬). [ಸಂ.]

ಮಹಾರುದ್ರಾಭಿಷೇಕ (ನಾ). ಶಿವರಾತ್ರಿ ಮೊದಲಾದ ಪುಣ್ಯದಿನಗಳಲ್ಲಿ ರುದ್ರಸೂಕ್ತವನ್ನು (ಏಕಾದಶ ವಾರ) ಪಠಿಸುತ್ತ ಶಿವಲಿಂಗಕ್ಕೆ ಮಾಡುವ ಅಭಿಷೇಕ : ಅವರು ಶಿವರಾತ್ರಿಯಂದು ಮಹಾರುದ್ರಾಭಿಷೇಕವನ್ನು ಬಹಳ ವಿಜೃಂಭಣೆಯಿಂದ ಮಾಡಿಸಿದರು (೬೩೭). [ಸಂ.]

ಮಹಾರೋಗ (ನಾ). ಭಯಂಕರವಾದ ರೋಗ : ಮಹಾವ್ಯಾಧಿ : ಡಾಕ್ಟರರು ಆಚಾರ್ಯರ ಬೆನ್ನನ್ನು ಪರೀಕ್ಷಿಸಿದರು, ಅದು ಮಹಾರೋಗವಲ್ಲ, ಬರಿ ಚರ್ಮರೋಗ (ಸಮು. ೧೧೩). 'ದೊಡ್ಡರೋಗ' ಪರಾ. [ಸಂ.]

ಮಹಾರೌಪ್ಯ (ನಾ). ಚಿನ್ನ : ಬಂಗಾರ : "ಮಹಾರೌಪ್ಯಂ=ಚಿನ್ನಂ" (ಶಾಸ್ತ್ರ. ೨೧೦). [ಸಂ.]

ಮಹಾರೌರವ (ನಾ). ಒಂದು ನರಕದ ಹೆಸರು : "ತಪನಃ . ಅವೀಚಿಃ, ಮಹಾರೌರವಃ . . . ಕಾಲಸೂತ್ರಂ—ಇವು . . . ಆ ನರಕಭೇದಂಗಳ ಹೆಸರುಗಳು" (ಶಿವಾ. ೬೧); ರೋಷಾನ್ಮಂಭ . . . ಮಹಾರೌರವ ಮಹಾ ಪದಾನುಗವೀಚಿಗಳೆಂಬೀ ರಾಜರಾಜೇಶ್ವರನರಳಂಗಳಕ್ಕುಂ (ಚಿಕ್ಕ. ೦೩೨).

[ಸಂ.]

ಮಹಾರ್ಬುದ (ನಾ). [ಗಣಿತ] ಹತ್ತು ಅರ್ಬುದ ; ನೂರು ಕೋಟಿಯ ಸಂಖ್ಯೆ. [ಸಂ.]

ಮಹಾಲಕರಿ, ಮಹಲಕರಿ (ನಾ). ಹೋಬಳಿಗೆ ಸಂಬಂಧಿಸಿದ ಜಮಾಬಂದಿ, ಬಂಧೋಬಸ್ತು ಸಂಬಂಧಾದಮಗಳನ್ನು ನೋಡಿಕೊಳ್ಳಲು ಸರ್ಕಾರದಿಂದ ನಿಯುಕ್ತನಾದ ಅಧಿಕಾರಿ : ಮಹಾಲಿಪ ಮುಖ್ಯಾಧಿಕಾರಿಯು ಮಹಾಲಕರಿಯು (ಕರ್ನಾ. ೩೩೩) ; ತಾಲ್ಲೂಕುಗಳಿಗೆ ಮಾಮಲೇದಾರರಿರುವಂತೆ ಪೇಟೆಗೆ 'ಮಹಾಲಕರಿ' ಎಂಬ ಅಧಿಕಾರಸ್ಥನಿರುವನು (ಏಣಗಿ. ೨೦) ; ತಾಲೂಕಿನಲ್ಲಿ ಮಾಮಲೇದಾರನು ಮಾಡುವ ಕೆಲಸಗಳನ್ನೇ ಮಹಾಲಿನ ಮಹಾಲಕರಿಯು ಮಾಡುತ್ತಾನೆ (ಕೀಳ. ೬). **ಮಹಲಕರಿ** : ವಿಜಯನಗರಸಾಮ್ರಾಜ್ಯದ ಉನ್ನತಸ್ಥಿತಿಯಲ್ಲಿ ಆಚ್ಚಂಗಿಯು ಉರ್ಜಿತ ಸ್ಥಿತಿಯಲ್ಲಿತ್ತು. ಅಲ್ಲಿ ಮಹಲಕರಿ ಕಚೇರಿಯಿದ್ದು ಸುತ್ತಲೂ ಭದ್ರವಾದ ಕೋಟೆಯಿತ್ತು (ಗ್ರಾಪಟಂ. ೨). [←ಮಹಾ. ಮಹಾಲ್‌ಕರಿ]

ಮಹಾಲಕ್ಷ್ಮಮಿ, ಮಾಲಕ್ಷಮಿ (ನಾ). = ಮಹಾಲಕ್ಷ್ಮಿ ೦ : ಮಹಾಲಕ್ಷ್ಮಮಿದೇವಿಯರ ಮುಂದುವೊಂದು ವಂದಾದಿಪ (ಶಿ. ೪೭. ೪೬೫೮. ೦೬-೭ ; ೧೭೭೭). **ಮಾಲಕ್ಷಮಿ** : "ಅಂಗಡಲಣಾಗಿ. ಸಿರಿ. ಮಾಲಕ್ಷಮಿ—ಈ ೩ ಲಕ್ಷ್ಮಿಗೆ ಪೆಸರ್" (ಕರ್ನಾ. ೪೭-೦೦) ; "ಸಿರಿಯೆಸೆ ಮಾಲಕ್ಷಮಿಯೆಸೆ ಮಹಾಲಕ್ಷ್ಮಿಯೊಳ್ಂ" (ಕರ್ನಾಟ. ೭). [<ಸಂ. ಮಹಾಲಕ್ಷ್ಮೀ]

ಮಹಾಲಕ್ಷ್ಮಿ (ನಾ). ೧. ವಿಷ್ಣುವಿನ ಹೆಂಡತಿಯೂ, ಐಶ್ವರ್ಯದ ಅಧಿದೇವಿಯೂ ಆದ ದೇವತೆ : ಮಹಾಲಕ್ಷ್ಮೀಲಬ್ಧವರಪ್ರಸಾದ [ಮ್ಯೂಜುರಾಯಸ್ವಾಮಿ ಭಮತ್ಕಾರ ಬಗುಂಜಿ (ಕೌಶಾ. XX. ೭೬-೭ ; ೧೮೮೬) ; ಮಹಾಲಕ್ಷ್ಮೀ— ಮಾಲಕುಮಿ (ಹುಚ. ೨೧೩ ಕ್ರಿಯೆ). ೨. ಸರಸ್ವತಿ. ೩. ದುರ್ಗೆ. ೪. ಐಶ್ವರ್ಯ ; ಸಿರಿ ; ಸಂಪತ್ತು. ೫. ನವರಾತ್ರಿಯ ಪೂಜೆಯ ವೇಳೆಯಲ್ಲಿ, ದುರ್ಗೆಯ ಅವತಾರವೆಂದು ಸಾಂಕೇತಿಕವಾಗಿ ಕೂರಿಸುವ ಮೈನೆರೆಯದ ಹುಡುಗಿ.

[ಸಂ. ಮಹಾಲಕ್ಷ್ಮೀ]

ಮಹಾಲತಾಂಗ (ನಾ). [ಜೈನ] ಕಾಲವನ್ನು ಸೂಚಿಸುವ ಒಂದು ಪ್ರಮಾಣ ; ಕಾಲಗಣನೆಯಲ್ಲಿ ಒಂದಂ ಪ್ರಕಾರ : ಎಂಬತ್ತುವಾಲ್ಕು ಲಕ್ಷ ಪೂರ್ವಾಂಗಗಳಿಂದ ಸಯುತಾಂಗವು . . . ಮಹಾಲತಾಂಗ, ಮಹಾಲತಾ ಎಂಬಿವು ಕ್ರಮದಿಂದ ಆಗುತ್ತವೆ (ಕ್ಷೇತ್ರ. ೩೦೬). [ಸಂ.]

ಮಹಾಲತೆ (ನಾ). [ಜೈನ] ಕಾಲವನ್ನು ಸೂಚಿಸುವ ಒಂದು ಪ್ರಮಾಣ : ಇದೇ ರೀತಿ ಎಂಬತ್ತು ಪಾಲ್ಕು ಮತ್ತು ಎಂಬತ್ತು ನಾಲ್ಕು ಲಕ್ಷಗುಣಿತಕ್ರಮದಿಂದ ಕ್ರಮಾಂದಾಗಿ . . . ಮಹಾಲತಾ ಎಂಬಿವು ಕ್ರಮದಿಂದ ಆಗುತ್ತವೆ (ಕ್ಷೇತ್ರ. ೩೦೬). [ಸಂ. ಮಹಾಲತಾ]

ಮಹಾಲಯ (ನಾ). ೧. ದೇವಸ್ಥಾನ; ಗುಡಿ. ೨. ಆಶ್ರಯಸ್ಥಾನ. ೩. ದೊಡ್ಡಮನೆ ; ಭವನ ; ಸೌಧ. ೪. ಬ್ರಹ್ಮಲೋಕ. ೫. ಪರಮಾತ್ಮ. ೬. ಮಹಾಪ್ರಳಯ ; ವಿಶ್ವಪ್ರಳಯ. ೭. ೬ : ಸೆಗಬ್ಬ ಮಹಾಲಯಮಲ್ಲದೆ ಸೆಗಬ್ಬ ಮಹಾಲಯಮಿದಿಲ್ಲ (ಕೃಷ್ಣ. ೨-೧). ೮. ಭಾದ್ರಪದ ಬಹುಳ ಅಮಾವಾಸ್ಯೆ ; ಸರ್ವಪಿತೃಅಮಾವಾಸ್ಯೆ : ಮಹಾಲಯ ಪುಣ್ಯದಿವಸ . . . ಪುರಂದರವಿಠಲ ಇಲ್ಲಿ ಒಲಿವ ಇದ ಜಿರಿಸೆ (ಪುರಂ. ೩-೦೭೦-೧೯); ೦ ವರ್ಷದಲ್ಲಿ ೯೬ ತಾ.ದ್ಧಗಳು ಬರುವವು. ಅವು ಯಾವುವೆಂದರೆ ಮನ್ವಾದಿಗಳು ೧೪, ಯುಗಾದಿಗಳು ೪, ಭಾದ್ರಪದ ಬಹುಳ ಪ್ರತಿಪದ ಮೊದಲು ಬಹುಳ ಅಮಾವಾಸ್ಯೆಯವರೆಗೂ ಮಹಾಲಯ ಶ್ರಾದ್ಧ ೧೫ . . . ಮೃತತಿಥಿ ೦ (ಚಾಣ. ೧-೩೨ ಶಾಸ್ತ್ರಚೂ).

ಮಹಾಲಯಅಮಾವಾಸ್ಯೆ = ಮಹಾಲಯ ೭ : ಭಾದ್ರಪದ ಬಹುಳ ೩೦ನೆಯ ತಿಥಿಯನ್ನು ಮಹಾಲಯಅಮಾವಾಸ್ಯೆ, ಸರ್ವಪಿತೃ ಅಮಾವಾಸ್ಯೆ, ಪವರಾತ್ರಿಅಮಾವಾಸ್ಯೆ ಮುಂತಾಗಿ ಹೆಸರಿಸಿದೆ (ಚಾಣ್ಯ. ೦೭೯).

[ಸಂ. (ಮಹಾ + ಆಲಯ ; ಮಹಾ + ಲಯ)]

ಮಹಾಲಿಂಗ (ನಾ). ೧. ಶಿವನ ಹೆಸರುಗಳಲ್ಲಿ ಒಂದು : ಕಟ್ಟೆಯಲ್ಲಿ ಕೈವಿಡಿಮ ನಿಮ್ಮಲಿ ನೆರೆದು ಮನ್ನಿಸು ಕಂಡಾ ಮಹಾಲಿಂಗವೇ (ಚಾಸ. ೩೦೬). ೨. [ವೀಶೈ] ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಎಂಬ ಅರು ಬಗೆಯ ಲಿಂಗಗಳಲ್ಲಿ ಒಂದು : ಆಚಾರಲಿಂಗವಿಡಿದು ಗುರುಲಿಂಗವ ಕಾಣಬೇಕು . . . ಪ್ರಸಾದಲಿಂಗವಿಡಿದು ಮಹಾಲಿಂಗವ ಕಾಣಬೇಕು (ಅಪಾಲಿ. ೦೬೭-೬೭೭) ; ಮಹಾಲಿಂಗವು ಹೃದಯಾಕಾಶವನ್ನು . . . ಆಚಾರಲಿಂಗವು ಪ್ರಾಣೇಂದ್ರಿಯವನ್ನೂ ಆಶ್ರಯಿಸುವವು (ಶಾಸ್ತ್ರ. ೨೫೩).

ಮಹಾಲಿಂಗ ಜಡಾ = "ವಿರಕ್ತರು ಹಾಕಿಕೊಳ್ಳುವ ಕಾವಿಯ ನಿಲುವಂಗಿ" (ಚಾಣ. ೨೪-೩). [ಸಂ.]

ಮಹಾಲಿಂಗಗಬಳ್ಳಿ (ನಾ). ಒಂದು ಬಗೆಯ ಬಳ್ಳಿ : "ಮಹಾಲಿಂಗನ ಬಳ್ಳಿ . . . ಲಿಂಗಕೊಂಡಬಳ್ಳಿ, ಪಚಗುರಿಯಾ" (ಪಸ್ಯ. ೩೩). [<ಮಹಾಲಿಂಗ + ಬಳ್ಳಿ]

ಮಹಾಲು, ಮಹಲ್, ಮಹಲು, ಮಾಲ್ಯು (ನಾ). ೧. ಅರಮನೆ, ದೇವಾಲಯ ಮುಂತಾದುವುಗಳಂತಿರುವ ವಿಶಾಲವಾದ ಕಟ್ಟಡ ; ಭವನ ; ಹರ್ಮ್ಯ : ಮಹಾಲಿನೊಳಗಿನ ದೊಡ್ಡಕನ್ನಡಿ ಒಡೆದವು

(ಪುಟಿತ. ೪-೦೫) ; ಇಲ್ಲಿಯ ಗುಡಿಗೋವುರಗಳೂ ಮಹಾಲು ಮಂದಿರಗಳೂ ಕಿರೆಕ್ಕೆಗಳೂ ಕರ್ಮಕೌಶಲದ ಪ್ರದರ್ಶಕ (ಪಾಷಾಯ. ೦೨). ೨. ತಾಲ್ಲೂಕಿಗಿಂತ ಸಣ್ಣದಾದ ಒಂದು ಆಡಳಿತವಿಭಾಗ ; ಹೋಬಳಿ : ಕೆಲವು ಹಳ್ಳಿಗೆ ಕೂಡಿ ಮಹಾರೆಂಬ ಹೆಸರಿಟ್ಟು ಆ ಮಹಾಲಿನ ಮುಖ್ಯಸ್ಥಳದಲ್ಲಿ ಮಹಾಲಿನ ಒಬ್ಬಿವಂತನನ್ನು ಗೊತ್ತುಮಾಡುವರು (ಕಾಗ. ೨೩೦) ; ತಾಲ್ಲೂಕು ದೊಡ್ಡದಿದ್ದಲ್ಲಿ ಅದರೊಳಗೆ ಮಹಾಲು ಎಂಬ ವಿಭಾಗವನ್ನು ಮಾಡಿರುತ್ತಾರೆ (ಕಾಕ. ೬೨). ೪. ಕಂದಾಯ : (ಕೊಣ್ಣಾ. ೦೫೬). **ಮಹಲ್** : ೧. ಇತರಮನೆಯಂ ರಚಿಸಿಗ್ಗೆಸಿ ಪದುವಯುಕ್ತಮಾದ ಬೊಕ್ಕಸ ಭಂಡಾರ ಲಾಯ ಗಜಾಶ್ವಶಾಲೆಯುಗ್ರಾಣ ಪಣತ ಮುಂತಾದ ಮಹಲ್ಗಳಂ ನಿರ್ಮಾಣಂಗ್ಗೆಸಿ (ಕಾಕ. ೨-೦೦೩). **ಮಹಲು** : ೧. ರಾಜ ಕಾರ್ಯದಲ್ಲಿ ಮಹಲಿಗೆ ಬರುವುದು ಹೊತ್ತಾಗಿ ಹೋಯಿತು (ಕೌಆ. ೦೦೮) ; ನಾನೂ ಮಸಲುಗಳಲ್ಲಿ ವಾಸಿಸುತ್ತಿದ್ದೆ (ಕ್ರಕಾ. ೦೬೫). ೨. "ಪಾದು, ಬೀದು, ಹುಟ್ಟಿ (ಪಟ್ಟಿ, ಪೇಠ), ಮಹಲು, ದೇಶ ವಿಷಯ, ಸೀಮೆ" (ಸಂಪಾಪ. ೩೩). **ಮಾಲ್ಯ** : ೧. ಸೆಲ್ಯ ಸಃಟ್ರಾಂಗಾತು ಕೋಲು ಮುಂದಿಂಗಾತು ಕಟ್ಟಿಸಿದ ಮಾರೆಲ್ಲ ತಟ್ಟನೆ ಬಿದ್ದಂಗಾತು (ಕಕ್ಷಾ. ೧೦) ; ರಂಗ ಕತ್ತೂರ ಮಾಲ ಹೊಕ್ಕು ನೋಡುಣ ಬಾರ ಮಾಲ ಮೂಲೆಲ್ಲ ಕನ್ನುಡಿ ಮಲಸರ್ಜ ಮಾಲ ಕಟ್ಟಿಸಿ ಇರಲಿಲ್ಲೊ (ಪಪಾಗ. ೫೩); ನೀಲಮಾಣಿಕ್ಯ ಬಿಗಿದ ಗೋಪುರ ಆಸಮುತ್ತಿನ ಕಲಶ ಕನ್ನಡಿ ಮಾಲ್ಯಂಗಳ ನಿರ್ಮಿಸಿದ ಮನೆಗಳ ನೋಳಸಾಸಿರವ (ಕಾಗಳ. ೨೩೩).

[← ಪಾಕ. ಮಹರ್; ಅಕ. ಮಹಲ್ಲ್; ಹಿಂ. ಮಹರ್, ಮಹಲ್ಲ್, ಮಹಾರ್ ; ಮರಾ. ಮಹಲ್, ಮಹಾಲ್]

ಮಹಾವರ್ತಕ (ನಾ). ಹಿರಿಯವ್ಯಾಪಾರಿ ; ದೊಡ್ಡವರ್ತಕ : ಮಹಾವರ್ತಕರಿಗೆ, ಶ್ರೇಷ್ಠಿಗಳಿಗೆ, ಪುರಪ್ರಮುಖರುಗಳಿಗೆ, ಅರಮನೆಗಳಂತಹ ನಿವಾಸಗಳು ಮೊದಲುಗೊಂಡು . . . ನಿರ್ಮಾಣವಾದುವು (ಪಾಂಕಾ. ೧೧).

[ಸಂ.]

ಮಹಾವಲಿ (ಗು). ಮಹಾಪರಾಕ್ರಮಿಯಾದ : ಸ್ವಸ್ತಿಶ್ರೀಮಹಾವಲಿ ವಾಣರಸಮ್ ಪ್ರಿಥುವೀರಮ್ಮಜ್ಞೆಯೆ (ಪಪ. ೩ (೩), ಪಾಪಾಶಾ. ೦೩೯-೦ ; ಸು. ೫೦೦).

[<ಸಂ. ಮಹಾಬಲಿವ್] .

ಮಹಾವಾಕ್ಯ (ನಾ). ೧. ದೀರ್ಘವಾದ ವಾಕ್ಯ ; ದೊಡ್ಡವಾಕ್ಯ. ೨. [ತತ್ತ್ವಶಾ] ಬ್ರಹ್ಮತತ್ತ್ವವನ್ನು ಗರ್ಭೀಕರಿಸಿಕೊಂಡಿರುವ, ತತ್ತ್ವಮಸಿ ಮುಂತಾದ ಉಪನಿಷದ್ವಾಕ್ಯಗಳಲ್ಲಿ ಒಂದು : ಮಹಾವಾಕ್ಯವೆಂಬ ವೇದಾಂತವಾಕ್ಯಗಳ ಉಪದೇಶದಿಂದ ಬ್ರಹ್ಮಸಾಕ್ಷಾತ್ಕಾರವು ಲಭಿಸುವುದೆಂದು ಸಿದ್ಧಾಂತ (ಸಿಂದಾಂ. ೩೨೦) ; "ತತ್ತ್ವಮಸಿ" ಮುಂತಾದ ವಾಕ್ಯಗಳು ತತ್ತ್ವವನ್ನು ತಿಳಿಸುತ್ತವೆ. ಇವು ಬ್ರಹ್ಮಸ್ವರೂಪವನ್ನು ತಿಳಿಸುವ ದರಿಂದ ಮಹಾವಾಕ್ಯವೆನ್ನುತ್ತಾರೆ (ಕಾಪ್ರ. ೨೩೭). [ಸಂ.]

ಮಹಾವಾತ (ನಾ). ೧. ಬಿರುಗಾಳಿ. ೨. = ಮಹಾನಿಲ ೨ : ನಿಗೋದಂಬೆರಸು ಸಪ್ತಭೂಮ್ಯಾದಿಪರ್ಯಂತಮಪ್ಪ ಗತಿಪಂಚಸ್ಥಾನಂ ಲೋಕಾಕಾಶಂಗಳ್ ಸಂಗತ್ತಂಗಳಾಗಿಯದಂವಂ ಧರಿಯಿಸಿ ನಿಂದ ಮಹಾವಾತಂಗಳ್ ಮೂಱಕ್ಕುಂ (ಜಾಂತಿ. ೦೨-೦೦ ಪ). [ಸಂ.]

ಮಹಾವಾತ್ಯೆ (ನಾ). = ಮಹಾವಾತ ೧ : ದುರ್ಯೋಧಪಾಂಶುಪ್ರಸರ ಮಹಾವಾತ್ಯೆ [ಪಾಪಾ. ತ]ಯುಮಪ್ಪ ಪಾತಕಯೋಳ್ ಲಕ್ಷ್ಮಿಯೊತಿಕಾಶರ ಕಾವುರುಷಗಣನೆಯೊಳ್ ನೆರೆಯಲ್ಕಿಂತೀತನೆ ಬಗೆಗಾಂ ಪುರುತನುಜಾತರ ಬಗೆದುದನೆ ಬಗೆವೆನಬ್ಜಪಂ ಬಗೆಯೆಂ (ಜಾಪ್ರ. ೦೪-೦೨೨ ಪ).

[ಸಂ. ಮಹಾವಾತ್ಯಾ]

ಮಹಾವಾದ್ಯ (ನಾ). ರಾಜಮರ್ಯಾದೆಯನ್ನು ಸೂಚಿಸುವ ಸಲುವಾಗಿ ಬಾರಿಸುತ್ತಿದ್ದ ದೊಡ್ಡ ಅಥವಾ ಶ್ರೇಷ್ಠವಾದ ವಾದ್ಯ; ಭೇರಿ, ಶಂಖ, ಕಹಳೆ, ಗಂಟೆ ಮತ್ತು ವೀಣೆಯೆಂಬಿವು ಐದು ಬಗೆಯ ವಾದ್ಯಗಳು : 'ಪಂಚಮಹಾವಾದ್ಯ' ಪರಾ. [ಸಂ.]

ಮಹಾವಾಹಿನಿ (ನಾ). ೧. ದೊಡ್ಡನದಿ ; ಮಹಾನದಿ : ಚತುರ್ದಶ ಮಹಾವಾಹಿನಿಗಳಿಂದಮಸದು . . . ನೆಗಟ್ಟುದಿಳೆಗೆ ಜಂಬೂದ್ವೀಪಂ (ಅಪು. ೦-೨೪ ಪ); ಬೆಳ್ಳೂರಿಂದಂ ತಾಳ್ದಿದ ಪರ್ದೆರೆವಿಂಡುಗಳಿಸುವುದಾ ಮಪಾವಾಹಿಯೊಳ್ (ಸಂಪ್ರತಿ. ೦೦-೪೦). ೨. ದೊಡ್ಡಸೈನ್ಯ ; ಮಹಾ ಸೇನೆ : ಬಳವತ್ಪತ್ಯಂತಭೂಪಾಳನಿಕರ ಮಹಾವಾಹಿನೀವಾಹಿನೀಸಂಕುಳ ಮತ್ಮುತ್ಸಾಹದಿಂದಂ ಪೊಗೆ (ಅಪು. ೦೬-೪೫) ; ಮಹಾವಾಹಿನೀಸಮೇತರಾದ ಕೃಷ್ಣದೇವರಾಯರು ತಟ್ಟನೆ ಬಂದು ರಾಯದ್ರೂರನ್ನು ಪುಚ್ಚಿದಾಗ (ರಾಪಾ. ೦೬೨). [ಸಂ. ಮಹಾವಾಹಿನೀ]

ಮಹಾವಿದ್ಯಾಲಯ (ನಾ). ಉಚ್ಚಶಿಕ್ಷಣದ ವಿದ್ಯಾಸಂಸ್ಥೆ ; ಕಾಲೇಜು : ನಮ್ಮ ಆಪ್ತಬಂಧುಗಳೊಬ್ಬರು ಮಹಾವಿದ್ಯಾಲಯದ (College) ಪ್ರಾಚಾರ್ಯರು (ಕಪಗ. ೦೬). [ಸಂ.]

ಮಹಾವಿದ್ಯೆ (ನಾ). ೧. ಅಸಾಧಾರಣವಾದ ವಿದ್ಯೆ ; ಅತಿಶಯವಾದ ಜ್ಞಾನ.—ತಿಳಿವಳಿಕೆ : ಮುನ್ನಿನ ತಮ್ಮ ವಿದ್ಯಾಧರರಾದಂದಿನ ಮಹಾ ವಿದ್ಯೆಗಳ್ ಮುಂ ನೆರಪಿದಗಣ್ಯಪುಣ್ಯಮುಂ ತನ್ನ ಪೊರ್ದುವಂತಾನುಂ. . . ಸಮನಿಸೆ (ಪಾಂತಿ. ೫-೨೬ ಪ). ೨. ಲಕ್ಷ್ಮಿ. ೩. ದುರ್ಗೆ.

[ಸಂ. ಮಹಾವಿದ್ಯಾ]

ಮಹಾವಿಭೂತಿ (ನಾ). ೧. ಅತಿಶಯವಾದ ವೈಭವ : ಸತತಂ ಪರ್ಚುತ್ತು ನಿಜಾಯತಿಯೊಡನೆ ಮಹಾವಿಭೂತಿ ಪರಮೋದಯನಾ (ಕಾಪಾ. ೫-೦೫೫) ; ಮಹಾವಿಭೂತಿಯಿಂದಂ ಪಾಣಿಗ್ರಹಪುರಸ್ಸರಂ ಸಂಧ್ಯಾವಳಯಂ ಕುಮಾರಂಗೆ ಕೊಟ್ಟಳ್ (ಕಪಾ. ೫೦-೨೮) ; ಭರತೇಶ್ವರಚಕ್ರವರ್ತಿಯುಂ . . . ಮಹಾದುಪಮೆಂಬ ಮಹಾಪೂಜೆಯುಂ ಮಹಾವಿಭೂತಿಯುಂ ಪದಿನಾಲ್ಕುದಿವಸಂ ಬರಂ ನಿರಂತರಂ ಮಾಡೆ (ಅಪು. ೦೬-೪೪ ಪ). ೨. ಅಸಾಧಾರಣ ಸಾಮರ್ಥ್ಯವನ್ನು ಪಡೆದ ವ್ಯಕ್ತಿ ; ಮಹಾತ್ಮ ; ಮಹಾನುಭಾವ : ಜಗತ್ರಿತಯ ಉದ್ಧಾರಕ್ಕಾಗಿ ಮಹಾವಿಭೂತಿಗಳು ಶ್ರವಿಸುತ್ತಾರೆ(ಪಪಾ). [ಸಂ.]

ಮಹಾವಿಷ (ನಾ). ೧. ತೀಕ್ಷ್ಣವಾದ ನಂಜು ; ಭಯಂಕರವಾದ ವಿಷ : ಅವ್ಯತಮಥನಂ ಮಾಡುತಿರಲು . . . ಭುಗ್ಗುಭುಗಿಲ್ ಭಿಳಿಭಟಲ ನೊಗೆದುದು ಮಹಾವಿಷಂ (ಪಂಪಾ. ೦-೦೩). ೨. ಎರಡು ಬಾಯಿಗಳುಳ್ಳ ಒಂದು ಬಗೆಯ ಹಾವು ; ಎರಡು ತಲೆಯ ಹಾವು. ೩. ಒಂದು ಬಗೆಯ ವಿಷ ; ℙ ಕೆಲವು ವಿಷಗಳು ಭಯಂಕರವಾದ ವಿಷಗಳೆಂದು ಪರಿಗಣಿತವಾಗಿವೆ : "ಮಹಾವಿಷ ೫. ಸೋಮಲ, ಹರತಾಳ, ಮನಶಿಲೆ, ವತ್ಸನಾಭ, ಸರ್ಪವಿಷ (ಶಾಲಿನಿ–ಸಂ. ೭೩) ; ಮಹಾವಿಷ– ೯. ಕಾಲಕೂಟ, ಬಚನಾಗ, ಶೃಂಗಿಕ, ಪ್ರದೀಪನ, ಪಲಾಹಲ, ಬ್ರಹ್ಮಪುತ್ರ, ಹರಿದ್ರ, ಸಕ್ತಕ, ಸೌರಾಷ್ಟ್ರಿಕ (ಯೋಗ ರತ್ನಾಕರ–ಸಂ. ೭೩)" (ಕ್ರಿಜಕ್ರ. ೪೪೪). [ಸಂ.]

ಮಹಾವಿಷ್ಣು (ನಾ). ಶ್ರೀಮೂರ್ತಿಗಳಲ್ಲಿ ಒಬ್ಬನಾದ ವಿಷ್ಣು : ಮೂಯೆ ಕೋರ್ದುದೆಂ ಮಹಾವಿಷ್ಣುವಿಂಗಾದೊಡಂ ಮಾನುಷಜನ್ಮಮಾವುದು ಗಡ (ಅಭ್ಯು. ೦೬-೪) ; ಮಹಾವಿಷ್ಣುವಿನಂತೆ ನೀನಾಗು (ಪಾಂತಿಪು. ೩೭).

[ಸಂ.]

ಮಹಾವೀರ (ನಾ). ೧. ಬಹಳಶೂರ ; ಅಧಿಕವಾದ ಶೌರ್ಯವುಳ್ಳವನು: ತನ್ನಲ್ಲಿರುವ ಅಮೂಲ್ಯತವುವಾದ ವಸ್ತುವೊಂದನ್ನು ಕೌಶಿಕನು, ಆದರಲ್ಲೂ ಪ್ರಬಲನಾಗಿ ಇತರರು ಯಾರಿಗೂ ಸಿಗ್ಗದ ಮಹಾವೀರನು ಕೇಳುತ್ತಿರುವನಲ್ಲ (ಕಾಪಾ. ೦). ೨. ಒಬ್ಬಾತನ ಹೆಸರು : ಸ್ವಸ್ತಿಶ್ರೀ ಮಹಾವೀರ ಅಬ್ಬುಅತ್ಮಜಿಗಳ ಸನ್ಮಸದನಿತಮ್ಮಜ್ಞಯಾ ನಿಃಧಿಗೆ (ಪಪ. II, ೦೩-೦ ; ಸು. ೫೫೦ ಪ). ೩. [ಜೈನ] ವರ್ತಮಾನಕಾಲದ ಇಪ್ಪತ್ತುನಾಲ್ಕು

ತೀರ್ಥಂಕರರಲ್ಲಿ ಒಬ್ಬ ; ಇಪ್ಪತ್ತನಾಲ್ಕನೆಯ ತೀರ್ಥಂಕರ : ಶ್ರೀವರ್ಧಮಾನ ಸನ್ಮತಿದೇವ ಮಹಾವೀರ ವೀರಮುಖ್ಯ ಸಮ್ಯಕ್ಕೀರ್ತಿ ವಳಯವಿನುತ ದಶಶತಪ್ರಾವನನಾಪ್ತಂಗಳಂ ಜಿನ ತಳೆದಿನೆದಂ (ಪರ್ಶ. ೧೬-೩೦). [ಸಂ.]

ಮಹಾವೃಕ್ಷ (ನಾ). ೧. ದೊಡ್ಡ ಮರ ; ಹೆಮ್ಮರ : ಪೀರಶೈವಮತವು ಶೈವಮತವೆಂಬ ಮಹಾವೃಕ್ಷದಿಂದೊಡಮೂಡಿದ ಪ್ರಧಾನಶಾಖೆಯಾಗಿರು ತ್ತದೆ (ಶಾಕಕ. ೨೯೦) ; ನೆಟ್ಟ ಆಲದ ಕೋವೆ ಬಿಗುರಿತು. ಇನ್ನು ಇದು ಮಹಾವೃಕ್ಷವಾಗಬೇಕು (ಬಿಹಾಶಾ. ೪೦). ೨. ಒಂದು ಬಗೆಯ ಸಸ್ಯ ; ಮುಂಡಗಳ್ಳಿ : '' ಮಹಾವೃಕ್ಷಃ. ಸ್ನುಹಿ — ಈ ೨ ಮುಂಡಗಳ್ಳಿ '' (ಹಡಾಥು. ೩೩-೮೪) ; ಸ್ನುಹಿವೃಕ್ಷಮಂ ಮಹಾವೃಕ್ಷಮೆಂದು ನುಡಿವಂತ ಭೀಮನಂ ಮಹಾರಥನೆಂದು ಪಡಿಪುಲ್ ತಕ್ಕುದೆ ವಲಂ (ಹಡಾಥು. ೬-೩೭ ಪ). [ಸಂ.]

ಮಹಾವೃದ್ಧಿ (ನಾ). ೧. ಅತಿಶಯವಾದ ಏಳಿಗೆ.— ಅಭ್ಯುದಯ. ೨. ಒಂದು ಬಗೆಯ ದಿವಿಧಮೂಲಿಕೆ : "ವೃದ್ಧಿಯಂತಲೂ ಮಹಾವೃದ್ಧಿಯೆಂತಲೂ ಪ್ರಸಿದ್ಧಮೂಲಿಕೆ" (ಶಿಶ್ಮಾಂಚಿ. ೧೩೭). [ಸಂ.]

ಮಹಾವ್ರತ (ನಾ). ೧. ದೊಡ್ಡವ್ರತ ; ಶ್ರೇಷ್ಠವಾದ ವ್ರತ : ಮಹಾಣುವ್ರತ. ಮಹಾವ್ರತ. ಉಪಸಹದ್ಧವ್ರತ. ಗೋದಾನವ್ರತ ಈ ನಾಲ್ಕು ದೇವವ್ರತಗಳು (ಅಚಾಗ. ೧೩೬). ೨. ಶ್ರೇಷ್ಠನಾದ ಋಷಿ ; ಮಹಾಮುನಿ : ಸಂದ ಭುವನಪ್ರಾಪ್ತಿಯಿಂದಾನಂದದಿಂದಿಹರಾ ಮಹಾವ್ರತರೊಂದುವರು ಆ ಶುದ್ಧವಿದ್ಯಾತತ್ವಪದವ (ಪಗಣಾ. ೪-೬೩). ೩. [ಜೈನ] ಸಾಧುಗಳು ಪಾಲಿಸಬೇಕಾದ ಮುಖ್ಯವಾದ ನಿಯಮ ; ಅಹಿಂಸೆ. ಸತ್ಯ. ಅಸ್ತೇಯ. ಬ್ರಹ್ಮಚರ್ಯೆ ಮತ್ತು ಪರಿಗ್ರಹ ತ್ಯಾಗವೆಂಬಿವು ಐದು ಬಗೆಯ ಮುಖ್ಯವಾದ ನಿಯಮಗಳು : ಮಹಾಬಲಂ ಮಹಾವ್ರತದಿಂದನ್ವಿತಮತಿ ಸಮಾಧಿಗುಪ್ತವ್ರತಿಯುಪದೇಶದೊಳ್ ಪುಟ್ಟದಂ ಪ್ರಾಣತದೊಳ್ (ಜಿಪು. ೩-೬೬) ; "ಹಿಂಸಾದಿ ಐದು ಪಾಪಗಳನ್ನು ಸ್ವತಃ ಮನಸ್ಸಿನಿಂದ ಮತ್ತು ಮಾತಿನಿಂದ ಮಾಡದಿರುವುದು. ಮಾಡಿಸದಿರುವುದು ಮತ್ತು ಒಪ್ಪಿಗೆ ಕೊಡದಿರುವುದು. ಹೀಗೆ ಒಂಬತ್ತು ಪ್ರಕಾರದ ಹಿಂಸಾದಿ ಪಾಪಗಳ ತ್ಯಾಗವು ಮಹಾವ್ರತವು" (ಜಿಪು. ೪೫೭) : ಈ ವ್ರತಗಣಮಣಮಾದೊಡಣುವ್ರತಮಾ ಶ್ರಾವಕಂಗೆ ಗುರುತರವಿಧಿಯಿಂ ಪ್ರಸ್ತುಜಿಪದೆ ನಿಲೆ ನೆಲಸೆ ಮಹಾವ್ರತ ದುಕ್ತಂ ಜಿನಾಗಮಾಂಭೋನಿಧಿಯೊಳ್ (ಜಾಂಪು. ೭-೬) ; 'ಪಂಚಮಹಾವ್ರತ' ಪರಾ. 'ಅಣುವ್ರತ' ಹೋ. ೪. [ಶೈವ] ವಾಮಾಚಾರಪಂಥದಲ್ಲಿ ಒಂದು ಪ್ರಭೇದ : ಸ್ಮಿರುದ್ರರಿಂ ರಚಿತಂಗಳಾದ ಪಾಶುಪತ ಕಾಪಾಲಿಕ ಮಹಾವ್ರತಂಗಳೆಂಬವೇ ಅತಿಮಾರ್ಗಕಪಾಶ್ಯತ್ರಯಂಗಳವಜ್ಜಿ . . . ಮಹಾವ್ರತದೇ ಅಸ್ಮಿದಾರಣಾದಿಗಳಂ ವಿಮರ್ಶಿಸುತ್ತಿರ್ಕುಂ (ಪಶೇ. ೦೩). [ಸಂ.]

ಮಹಾವ್ರತಿ (ನಾ). ೧. = ಮಹಾವ್ರತಿ ೧. ೨. ಶರಣ : ಭಕ್ತ : ಅದ್ಯೂ ನಮ್ಮ ಮಹಾವ್ರತಿಗಳನಗಲಿ ಬರ್ದುಂಕರಲಾಜಿಸಿನು (ಬಸಪು. ೪೭೮). ೩. ಶಿವ. ೪. [ಜೈನ] ಅಹಿಂಸೆ. ಸತ್ಯ. ಅಸ್ತೇಯ. ಬ್ರಹ್ಮಚರ್ಯೆ ಮತ್ತು ಪರಿಗ್ರಹತ್ಯಾಗಗಳೆಂಬ ನಿಯಮಗಳನ್ನು ಪಾಲಿಸುವವನು : ಸಲೆ ಮಹಾವ್ರತಿ ಐದಣುವ್ರತಗಳನೊಸೆದು ಕುಡೆ ಎಂದ್ಕಕವ ಮನವೊಲಿದು ನಲಿದು ಮಹಾವ್ರಸಾದವೆನುತ್ತ ಕೈಕೊಂಡ (ಜಕ್ಕಣಾ. ೭-೨೩). ೫. [ಶೈವ] ವಾಮಾಚಾರಪಂಥದ ಮಹಾವ್ರತ ಎಂಬ ಪ್ರಭೇದಕ್ಕೆ ಸೇರಿದವನು : ಕಾಳಾಮುಖಿ ಕಂಗೆಟ್ಟ ಮಹಾವ್ರತಿ ಮದವೇಜಿದ (ಶಕ್ಕತ. ೪. ೨೩೦-೩೧೩) ; ಕಾಪಾಲಿಕರಿಗೆ 'ಮಹಾವ್ರತಿ' ಎಂಬುದು ಮತ್ತೊಂದು ಹೆಸರು ಅಷ್ಟೆ (ಕಣಕ. ೦೩೨). [ಸಂ. ಮಹಾವ್ರತಿನ್]

ಮಹಾಶಂಖ (ನಾ). ೧. ಶ್ರೇಷ್ಠವಾದ ಶಂಖ ; ದೊಡ್ಡ ಶಂಖ : ಮಯಸತಿಮುಂದಿ ಬಳಿಕಾ ದೇವದತ್ತಾಖ್ಯದ ಮಹಾಶಂಖವನು ಪಾರ್ಥಗೆ ಕೊಟ್ಟು ಕೈಮುಗಿದ (ಕಾವ್ಯಕ. ೦-೦೩). ೨. ಪಣೆ ; ಲಲಾಟ. ೩. ಮನುಷ್ಯನ ಮೂಳೆ. ೪. ಕುಬೇರನ ನವನಿಧಿಗಳಲ್ಲಿ ಒಂದು. ೫. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಇಪ್ಪತ್ತನೆಯ ಸ್ಥಾನ ಮತ್ತು ಇಪ್ಪತ್ತು ಅಂಕೆಗಳಿಂದ ಕೂಡಿದ ಒಂದು ದೊಡ್ಡ ಸಂಖ್ಯೆ : ಎಕ್ಕಂ. ದಾಪಂ . . . ಶಂಖ. ಮಹಾಶಂಖ . . . ಪರಿಮಿತ. ಮಹಾಪರಿಮಿತ— ಈ ೪೦ ಸ್ಥಾನದ ಖಾಗ್ಗಡಣೆ (ಕ್ಷಸಕಾ. ೪-೨೫). [ಸಂ.]

ಮಹಾಶಬ್ದ (ನಾ). ೧. ದೊಡ್ಡ ಶಬ್ದ.—ಸದ್ದು. ೨. ಶ್ರೇಷ್ಠವಾದ ವಾದ್ಯಧ್ವನಿ : 'ಪಂಚಮಹಾಶಬ್ದ' ಪರಾ. [ಸಂ.]

ಮಹಾಶಯ (ನಾ). ೧. ದೊಡ್ಡ ಮನಸ್ಸುಳ್ಳವನು ; ಉದಾರ ಹೃದಯಿ ; ಮಹಾತ್ಮ : ''ಮಹೇಚ್ಛಃ, ಮಹಾಶಯಃ — ೨ ಧನವಾದ ಮನಸ್ಸುಳ್ಳವನ ಹೆಸರು" (ಶಿಶ್ಮಾಂಚಿ. ೩೫೬). ೨. ಪುರುಷರನ್ನು ಸಂಬೋಧಿಸುವ ಒಂದು ಗೌರವಸೂಚಕ ಪದ : ಸುಮ್ಮನೆ ಯಾಕೆ ನಿಂತಿದ್ದೀರಿ ಮಹಾಶಯ ! (ಮುಕ್ಕ. ೫. ೨೬೬). ೩. ಸಮುದ್ರ. [ಸಂ.]

ಮಹಾಶಾಲಿ, ಮಹಾಶಾಳಿ (ನಾ). ಸುಮಾಸನೆಯಿಂದ ಕೂಡಿರುವ ಒಂದು ಬಗೆಯ ದಪ್ಪ ಬತ್ತ : ಹುರುವ್–ತ್ಸಾಂಗನು (ಕ್ರಿ.ಶ. ೬ನೇ ಶತಮಾನ) 'ಮಹಾಶಾಲಿ' ಎಂಬ ಭತ್ತದ ಜಾತಿಯನ್ನು ಬೇಳುವಾಗ ಅದರ ಅಕ್ಕನ್ನು ಸುವಾಸನೆಯುಳ್ಳದೂಗಿತ್ತೆಂದೂ . . . ಬರೆದಿದ್ದಾನೆ (ಜಾಸಗ. ೦೪). ಮಹಾಶಾಳಿ : '' ರಕ್ತಶಾಳಿ, ಮಹಾಶಾಳಿ, ಕಳಮಃ — ಇವು ಮೊದಲಾಗುಳ್ಳವು ಕಟಮೆಯ ಭೇದಂ" (ಕಣಆಮು. ೧೩-೨೨). [ಸಂ.]

ಮಹಾಶಾಳಿ 'ಮಹಾಶಾಲಿ' ನೋ.

ಮಹಾಶಿವರಾತ್ರಿ (ನಾ). ಮಾಘಬಹುಳ ಹದಿನಾಲ್ಕನೆಯ ತಿಥಿಯುಂದು ಆಚರಿಸುವ ಶಿವಪೂಜೆಯ ಉತ್ಸವ.—ಶಿವರಾತ್ರಿ : ಮಹಾಶಿವರಾತ್ರಿಯು ಮುಮೆಯ ಬಗೆ ಶಿವಲಿಂಗಾಮೃತದಲ್ಲಿ ಒಂದು ಕಕಯಿದೆ (ಶಾಹಬ್ಬ. ೦೩೭). [ಸಂ.]

ಮಹಾಶೀರ್ವಾದ (ನಾ). ಯಾಗ. ವ್ರತ. ಉತ್ಸವ. ವಿವಾಹ ಮುಂತಾದ ಸಂದರ್ಭಗಳಲ್ಲಿ ಕಾರ್ಯಕ್ರಮದ ಕೊನೆಯಲ್ಲಿ ಪುರೋಹಿತಾದಿಗಳು ಸಂಬಂಧಪಟ್ಟವರಿಗೆಲ್ಲ ಪಾಡುವ ಮಂತ್ರಪೂರ್ವಕ ಆಶೀರ್ವಾದ : ಬಳಿಕ ಶೇಷಹೋಮ ಮಹಾಶೀರ್ವಾದಗಳು ನಡೆದವು (ಕಾಂಕಾ. ೦೦೪). [ಸಂ.]

ಮಹಾಶುಕ್ಲ (ನಾ). [ಜೈನ] ಸೌಧರ್ಮ. ಈಶಾನ. ಸನತ್ಕುಮಾರ. ಮಾಹೇಂದ್ರ. ಬ್ರಹ್ಮ. ಲಾಂತವ. ಮಹಾಶುಕ್ರ. ಸಹಸ್ರಾರ. ಆನತ. ಪ್ರಾಣತ. ಆರಣ ಮತ್ತು ಅಚ್ಯುತ ಎಂಬ ಹನ್ನೆರಡು ಕಲ್ಪಗಳಲ್ಲಿ ಏಳನೆಯದು : ತನುವಂ ತಂದು ಮಹಾವ್ರತುಚಿತ ಕಾಯಕ್ಲೇಶದಾಹಾಪ್ಯವರ್ಧನಮಂ ಪೋಂತು ಸಮಾಧಿ ಕೈಕೊಳೆ ಮಹಾಶುಕ್ರಕ್ಕೆ ಸಂದೀತನಿಂದ್ರನಿವಂ ತತ್ಕಥಿತಮಂ ಪ್ರತೀಂದ್ರನೆವೆ (ಜಿಪು. ೫-೬೬). [ಸಂ.]

ಮಹಾಶೂದ್ರ (ನಾ). ೧. ಒಳ್ಳೆಯ ಸ್ಥಿತಿವಂತನಾದ ಶೂದ್ರ. ೨. ದನಗಾಹಿ ; ಗೊಲ್ಲ. ೩. ಒಕ್ಕಲಿಗರಲ್ಲಿ ಒಂದು ಪಂಗಡ ಮತ್ತು ಆ ಪಂಗಡಕ್ಕೆ ಸೇರಿದವನು : "ಆಭೀರಃ. ಮಹಾಶೂದ್ರಃ — ಈ ೨ ಕುಡಿಯೊಕ್ಕಲಿಗಂ" (ಕಣಆಮು. ೧೩-೨೬). [ಸಂ.]

ಮಹಾಶೂದ್ರಿ (ನಾ). ೧. ದನಕಾಯುವವಳು ; ಗೊಲ್ಲತಿ. ೨. ದನಕಾಯುವವನ ಅಥವಾ ಗೊಲ್ಲನ ಹೆಂಡತಿ : " ಆಭೀರೀ, ಮಹಾಶೂದ್ರೀ -- . . . ಗೊಲ್ಲನ ಹೆಂಡತಿಯಾದವಳಿಗಾದರೂ ಹೆಸರುಗಳು" (ಶಿಶ್ಮಾಂಚಿ. ೦೬೦). [ಸಂ. ಮಹಾಶೂದ್ರೀ]

ಮಹಾಶ್ಮಂಗಿ (ನಾ). ಒಂದು ಕುಲಪರ್ವತದ ಹೆಸರು : ಸುಗಂಧಿ ಶಿಖಿ . . . ಮಹಾಶ್ಮಂಗಿ . . . ಪಾರಿಜಾತವೆಂಬ ಪದಿನಾಲ್ಕು ಕುಲಾಚಲಂಗಳೇ ಪೂರ್ವಾಶ್ರವಿಳುಳೆಂಬ ಕೀಲಕಪರ್ವತಕ್ಕೆ ಪಶ್ಚಿಮದಿಕ್ಕಿನಲ್ಲಿಹವು (ಪಪೀಕ. ೨೦೭). [ಸಂ. ಮಹಾಶ್ಮಂಗಿನ್]

ಮಹಾಶೈಲ (ನಾ). ೧. ದೊಡ್ಡ ಬೆಟ್ಟ. ೨. ಒಂದು ಕುಲಪರ್ವತದ ಹೆಸರು : ಮಹಾಶೈಲ . . . ಹಿಮವದ್ವಿಗಳೆಂಬ ದಕ್ಷಕುಲಪರ್ವತಂಗಳೇ ಪೂರ್ವಾಶ್ರ ಗಂಧಮಾದನವೆಂಬ ಕೀಲಕಪರ್ವತಕ್ಕೆ ತೆಂಕಣದಿಕ್ಕಿನಲ್ಲಿಹವು (ಪಪೀಕ. ೦೭೨). [ಸಂ.]

ಮಹಾಶೈವ (ನಾ). [ಮೀಶೈ]ಅನಾದಿ, ಆದಿ. ಮಹಾ. ಅನು. ಅವಾಂತರ, ಪ್ರವರ ಮತ್ತು ಅಂತರಗಳೆಂಬ ಏಳು ಬಗೆಯ ಶಿವವಾರಮ್ಮತತ್ತ್ವ ಗಳಲ್ಲಿ ಒಂದು; ಪ "ದೀಕ್ಷೆ ಹೊಂದಿದ ಶಿವದ್ವಿಜರು ಮಹಾ ಶೈವರು" (ಪಪಂಕೋ. ೨೦೭): ಆ ದೀಕ್ಷಾವಿಶೇಷಯುಕ್ತವಾದ ಅನಾದಿಶೈವ ಆದಿಶೈವ ಮಹಾಶೈವ . . . ಅಂತರಶೈವವೆಂಬುದೇ ಸಜ್ಜಶೈವಂಗಳು (ಪಪೀಕ. ೭೭). [ಸಂ.]

ಮಹಾಶೋಕ (ನಾ). ೧. ಅಧಿಕವಾದ ದುಃಖ : ಹೆಚ್ಚಾದ ಅಳಲು,— ಸಂಕಟ : ಹಂದ್ರುಸುರಿಯು ಇದರಿಂದ ಮಹಾಶೋಕಸಂತಪ್ತಳಾಗಿ ಪತಿಯಾದ ಖರನೊಂದಿಗೆ ದೊರ್ಪುವಳು (ಪಪಪಿ. ೧೧). ೨. ದೊಡ್ಡದಾದ ಅಶೋಕ ವೃಕ್ಷ. ೧. ೨ : ಭೂರುಹದೊಳಶೋಕಾಗ್ರತೆ ಸಮಾರಾಮದೊಳ್ಕಹಾಶೋಕಂ ವಸಂತದೊಳ್ಕಾರಹಿತಮುಂಟಲ್ಲದಿಲ್ಲಮಿವು ಮುತ್ಕಿಯುಂ ಧರ್ಮಾಪ ಪೆಲದೊಳು (ಕೃಪುಣ. ೨-೨).

[ಸಂ. (ಮಹಾ + ಶೋಕ; ಮಹಾ + ಅಶೋಕ)]

ಮಹಾಶ್ವೇತೆ (ನಾ). ೧. (ಬಿಳಿಯ ಹೂವುಗಳನ್ನು ಬಿಡುವ) ಒಂದು ಬಗೆಯ ಸಸ್ಯ : "ಕ್ಷೀರವಿದಾರೀ, ಮಹಾಶ್ವೇತಾ . . . ಕೋಸೆಲಗುಂಬಳದ ಹೂಗುಗಳು" (ಪಂಪ್ರಂಕಿ. ೦೪೭). ೨. ದುರ್ಗೆ. ೩. ಸರಸ್ವತಿ. ೪. ಬಿಳಿಯ ಸಕ್ಕರೆ. ೫. ಸಂಸ್ಕೃತದಲ್ಲಿ ರಚಿತವಾದ ಬಾಣನ ಕಾದಂಬರಿಯಲ್ಲಿ ಬರುವ ಸುಪ್ರಸಿದ್ಧವಾದ ಒಂದು ಪಾತ್ರದ ಹೆಸರು : ತಾತಂ ಮಹಾ ಶ್ವೇತೆಯೆಂದೆಮಗಾಗಂ ಬೆರಟ್ಟಪ್ಪ ಪುರಂ ಗಂಧರ್ವೇಶ್ವರಂ (ಕಾಪಂಪು. ೨೦೭). [ಸಂ. ಮಹಾಶ್ವೇತಾ]

ಮಹಾಸಂಧಿವಿಗ್ರಹಿ (ನಾ). ಪರರಾಷ್ಟ್ರಗಳೊಂದಿಗೆ (ಯುದ್ಧ, ಶಾಂತಿ ಸನ್ನಾಹ ಮೊದಲಾದುವುಗಳ ಬಗೆಗೆ) ವ್ಯವಹರಿಸುವ ಅಧಿಕಾರವುಳ್ಳ ಮಂತ್ರಿಗಳಲ್ಲಿ ಹಿರಿಯನಾದವನು : ಬಾಹುಬಲಿಕುಮಾರಂಗೆ ರೇಖಿ ಮನಸ್ಕಯೂಖಿರತ್ನಾಧರಣಾಪ್ಯಧೃತಸಮೇತಂ ಆಟ್ಟುವಂತು ಮಹಾಸಂಧಿ ವಿಗ್ರಹಿಂಗೆ[ಜಾಪಾಂ. ವಿಗ್ರಹಾಧಿಪತಿಗೆ] ಬೀಡುವಾಗಳ್ (೦೦೪. ೦೮-೧೨ ಪ).

[ಸಂ. ಮಹಾಸಂಧಿವಿಗ್ರಹಿನ್]

ಮಹಾಸಚಿವ (ನಾ). ಮಂತ್ರಿಯಾದ ಮಂತ್ರಿ : ಪ್ರಧಾನನಾದ ಸಚಿವ : ಆಗ ಪಂಚಪ್ರಧಾನರಲ್ಲಿ ಗಂಗರಾಜರೇ ಮಹಾಸಚಿವರಾದರು (ಜಾಂಕಥಾ. ೦೮).

[ಸಂ.]

ಮಹಾಸತಿ (ನಾ). ೧. ಮಹಾಪತಿವ್ರತೆ.— ಸಾಧ್ವಿ : ನಿನ್ನನ್ನರ್ ಮಹಾ ಸತಿಯರಾರುಮಿಲ್ಲ (ಜಗಚಾ. ೩-೨೪ ಪ); ಇವರೆಲ್ಲರೂ ಮಹಾಸತಿಗಳು ಮತ್ತು ವೀರಾಗ್ರಣಿಗಳು (ಕುಚಾಕ. ೦೭). ೨. ಪತಿಯು ಚಿತೆಯಲ್ಲಿ ಸಹಗಮನವನ್ನು ಮಾಡಿದವಳು : ಮಾರದೇವನ ರಮಣೀಮನೋಹರಿ ಮಹಾಸತಿ ಶೀಲಗುಣಾಢ್ಯೆ ಭೂಮಿತಾಮಿವಿ ಮಹಾದೇವಿ ತಂನ್ನ ವರಸೊಳು ಪ್ರತಿಪನ್ನದಿ ಸಂದಳಾ ದಿವಂ (ಪಪ. VII(೩)· ಜಾಗುಂ. ೦೭೦-೯; ೧೭೫೦ ಪ).

ಮಹಾಸತಿಯಾಗು = ಪತಿಯ ಚಿತೆಯಲ್ಲಿ ಸಹಗಮನ ಮಾಡು : ಪೋಚಿದೇವನು ಕೇತವಮಲ್ಲ ಶುಂಭಳದೇಶದ ಗಜ್ಜುನಿಯಾದ ಪಟ್ಟುಯ ಮೇಲೆ ಬಿದ್ದು . . . ಕಾದಿ ಸತ್ತೊಡೆ ಆತನ ಸತಿ ವಿಜಯು × × × ಮಹಾಸತಿ ಯಾದಳು (ಪ್ರಚಾ. ೦೪೫, ೫೦-೦೦; ೧೩೦೦). [ಸಂ. ಮಹಾಸತೀ]

ಮಹಾಸನ (ನಾ). ೧. ಅತ್ಯಮೂಲ್ಯವಾದ ಪೀಠ : ಶ್ರೇಷ್ಠವಾದ ಆಸನ : ಮಹಾಬಲನುಂ . . . ತನ್ನ ವರ್ಷವರ್ಧನದಿನದೊಳು ಮಹಾಸನಾ ಸೀನಮೋಲಗಂಗೊಟ್ಟರ್ಘ್ಯದುಂ (ಜಾಪುಪು. ೦೩). ೨. ಆನೆಯ ಮೇಲೆ ಕುಳಿತುಕೊಳ್ಳಲು ಹಾಕುವ ಭದ್ರಾಸನ ; ಅಂಬಾರಿ ; ಹೌದಾ : "ಅಂಬಿಕೆ ಮಹಾಸನಮನ್ನು" (ಪುಂಚಾ. ೪೭-೩). [ಸಂ.]

ಮಹಾಸನ್ನಿಧಾನ (ನಾ). ರಾಜರು, ಮಹಾಧಿಪತಿಗಳು ಮುಂತಾದ ಹಿರಿಯ ವ್ಯಕ್ತಿಗಳನ್ನು ಕುರಿತು ಹೇಳುವಾಗ ಗೌರವಸೂಚಕವಾಗಿ ಬಳಸುವ ಪದ : ಪನಗೆ ಜ್ಯಾಗತಯಾಗಿ ಊರಿಗೆ ಹೋಗಬೇಕಾದ ಕಾರ್ಯವಿರುವುದರಿಂದ, ಮಹಾಸನ್ನಿಧಾನದಲ್ಲಿ ಪನಗೆ ಅಮೃಷ್ಯಯನ್ನು ದಯಪಾಲಿಸಿ ನನ್ನನ್ನು ಕಳುಹಿಸಿಕೊಡಬೇಕು (ಪಪ. ೨೦). [ಸಂ.]

ಮಹಾಸಭೆ (ನಾ). ೧. ವಿಶಾಲವಾದ (ಊಟದ) ಹಜಾರ.— ಶಾಲೆ. ೨. ದೊಡ್ಡ ಸಭೆ.— ಗೋಷ್ಠಿ. ೩. ರಾಜನ ಆಸ್ಥಾನ : ದರ್ಬಾರು : ಶುಭದಿನ ಭ್ರಮಣೀಯಂಬಲ್ಲಗ್ಗದಲಿ ಹೊಕ್ಕನು ಮಹಾಸಭೆಯ (ಗಜಾಕ. ೦-೦೯). ೪. ಯಾವುದಾದರೊಂದು ಸಂಸ್ಥೆಯ ಎಲ್ಲ ಸದಸ್ಯರು ಸೇರುವ ಸಭೆ : "ಸರ್ವಸದಸ್ಯಸಭೆ, ಮಹಾಸಭೆ, ಜನರಲ್ ಅಸೆಂಬ್ಲಿ" (General Assembly· ಪ್ರಕ. ೬). [ಸಂ. ಮಹಾಸಭಾ]

ಮಹಾಸಮ (ನಾ). ಒಂದು ಬಗೆಯ ಸಸ್ಯ : "ತೊಂಡೆ . . . ಮಹಾಸಮ, ಪೆಲರುದ್ರಾಕ್ಷಿ, ಬೀಳರುದ್ರಾಕ್ಷಿಪೂ" (ಪ್ರಕ. ೬೬). [ಸಂ. ಮಹಾಸಮಾ]

ಮಹಾಸಾಂಖ್ಯ (ನಾ). [ಬೌದ್ಧ]ಬೌದ್ಧಮತದ ಒಂದು ಶಾಖೆ ಮತ್ತು ಆ ಶಾಖೆಗೆ ಸೇರಿದ ವ್ಯಕ್ತಿ : ಬುದ್ಧನು ಪರಿನಿರ್ವಾಣ ಪಡೆದ ನೂರು ವರುಷಗಳ ನೇಳಿಗೆ ಮೂಲಸಂಘವು ಎರಡಾಗಿ ಒಡೆಯಿತು. ಅವರಲ್ಲಿ ಸಂಪ್ರದಾಯವನ್ನು ಪಾಲಿಸಿದವರು "ಸ್ಥವಿರವಾದಿ"ಗಳೆಂದೂ ಸಂಪ್ರದಾಯ ದಲ್ಲಿ ಕಿಲವು ಮಾರ್ಪಾಟುಗಳನ್ನು ಮಾಡಿಕೊಂಡವರು "ಮಹಾ ಸಾಂಖ್ಯರೆಂದೂ" ಹೆಸರಾದರು (ಜಾಪದ. ೨೦೨). [ಸಂ.]

ಮಹಾಸಾಗರ (ನಾ). ೧. ಅತ್ಯಂತ ವಿಶಾಲವಾದ ಸಮುದ್ರ : ದೊಡ್ಡ ಕಡಲು : ನೀನು ನಿನ್ನ ಸಂಸಾರವೆಂಬ ಮಹಾಸಾಗರದೊಳಗಿಂದ ದಾಟ ಹೋಗತಕ್ಕವನು (ಜಾಬಾಮು. ೨-೩೯); ಪುಕ್ಕಿಂಬ್ದವಾದ ಮಹಾಸಾಗರದಂತೆ ಮೆರೆಯುತ್ತ ಬಂದ ಸೈನ್ಯವು ನಿರ್ಮೂಲವಾಗಿ, ಕೌತಿಕವ ಜೀವವುಳಿಯುವುದು ಕಷ್ಟವಾಯಿತು (ಜಾಪಾಪ. ೫೬). 'ಹಿಂದೂಮಹಾಸಾಗರ' ಪರಾ. ೨. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಮೂವತ್ತೈಂಟನೆಯ ಸ್ಥಾನ ಮತ್ತು ಮೂವತ್ತೈದು ಅಂಕೆಗಳಿಂದ ಕೂಡಿದ ಒಂದು ದೊಡ್ಡ ಸಂಖ್ಯೆ : ಎಸ್ಕಂ. ದಾಹಂ . . . ಸಾಗರ, ಮಹಾಸಾಗರ, ಪರಿಮಿತ, ಮಹಾಪರಿಮಿತ – ಈ ೪೦ ಸ್ಥಾನದ ಉಗ್ಗಡಣೆ (ಕ್ಷಣಾ. ೭-೦೭); ಎಸ್ಕಂ ದಹಂ . . . ಸಾಗರ ಮಹಾಸಾಗರ . . . ಮಹಾಕ್ರುತುವೆಂದಿವೇ ಉಗ್ಗಣೆಗಳು (ಜಾಗ. ೭). [ಸಂ.]

ಮಹಾಸಾಮಂತ (ನಾ). (ಒಬ್ಬ ರಾಜನ ಕೈಕೆಳಗಿರುವ) ಅಧೀನ ರಾಜಬಲ್ಲಿ ಮುಖ್ಯನಾದವನು : ಸಾಮಂತ ಮಹಾಸಾಮಂತರ್ಗೆ ಸ್ವಾಮಿಯಪ್ಪೀ ಪೃಥ್ವೀಶ್ವರಂ ಬಂದನ್ನವಂಚರ್ಕಿಸಿ ಬಂದಿಸಿ ವೀಜಪೃತ್ಯಯಂ ತಂಕಾವಾಣಂಗಯ್ದಪ್ಪಂ (ಜಾಪು. ೦೦. ೫೯-೨೦); ಸ್ವಸ್ತಿಸಮಧಿಗತಪಂಚ್ಯ ಮಹಾಶಬ್ದ ಮಹಾಸಾಮಂತ ಅಗ್ರಗಣ್ಯ (ಅಶ. II. ೫೬-೦ : ಪ. ೨೦೦); ಮಹಾಸಾಮಂತ–ಮಾಸಾವಂತ (ಪಪಪ. ೨೧೦ ಕ್ರಡಣ); ಮಹಾಸಾಮಂತ ಸಾಮಂತರುಗಳೂ . . . ಅಧಿಕಾರಿಗಳೂ ಲಗ್ಗಕ್ಕೆ ದಯಮಾಡಿಸಿ ವಧೂವರರನ್ನು ಹರಸಿದರು (ಜಾಪಂಕಾ. ೨೦೦). [ಸಂ.]

ಮಹಾಸಾವಂತ, ಮಾಸಾವಂತ (ನಾ). = ಮಹಾಸಾವಂತ : ಮಹಾ ಸಾವಂತಂ–ಮಾಸಾವಂತಂ (ಪಪಪ. ೨. ೨೦೩ ಕ್ರಡಣ). **ಮಾಸಾವಂತ** :

ಮನ್ನೆಯರ ಮಾಸಾವಂತರ ಪಸಾಯ್ತರ ಬಲಿಸಲ್ವ ತುಜಿಲಾಳ್ಗಳತ್ಯಣ ದೊಳಿದ್ದಣಮಾಗೆ ಕೀಲಿಸಿದ ಕಿಱುಗೆಜ್ಜೆಯ ದಿನಗಳೊಳಂ (ಕ್ಯಾಸಾ. ೯೪); ಮಹಾಸಾಮಂತ-ಮಾಸಾವಂತ (ಹಮು. ೨೯೦ ಪೃಹೋ); ಮಾಸಾವಂತರ ಬೆನ್ನ ಮುನ್ನ ಕೆಲದೊಳ್ಕೋಬಾಯ್ಲರೆತ್ತಲುಂ (ಪ್ರಸಾಮು. ೯-೫೯).

[<ಸಂ. ಮಹಾಸಾಮಂತ]

ಮಹಾಸಿರಿವಂತ (ನಾ). ೧. ಬಹಳಶ್ರೀಮಂತ. ೨. ಒದ್ಯಾತನ ಹೆಸರು: ಬೆಳ್ಳೊಲಂ ಮೂಸುಜುಮಂ ಮಹಾಸಿರಿವನ್ನನಾಳೆ (ಪಾಪು. XXVI. ೬೨-೦೦; ೧೦೬). [ಮಹಾ + ಸಿರಿವಂತ]

ಮಹಾಸೇನ (ನಾ). ೧. ದೊಡ್ಡ ಸೈನ್ಯವನ್ನು ಹೊಂದಿರುವ ಸೇನಾಪತಿ. ೨. ಷಣ್ಮುಖನ ಹೆಸರುಗಳಲ್ಲಿ ಒಂದು: "ಗೌರೀಪುತ್ರಃ . . . ಮಹಾಸೇನಃ, ಮಹಾತೇಜಾಃ, ಶರಜನ್ಮಾ (ಚ ಕಥ್ಯತೇ) – ಈ ೨೦ ಕಾರ್ತಿಕೇಯನ ಪೆಸರ್" (ಜಾಅಮು. ೩-೨೦). ೩. ಉದಯನ ಕಥಾಪ್ರಪಂಚದ ಪ್ರಸಿದ್ಧರಾಣಿಯಾದ ವಾಸವದತ್ತೆಯ ತಂದೆಯ ಹೆಸರು: ಇವಳೇ ಮಹಾಸೇನನ ಪುತ್ರಿಯೂಪ ವಾಸವದತ್ತೆ! (ಸ್ವಪ್ನಾ. ೬೨).

[ಸಂ.]

ಮಹಾಸೌಖರೆ (ನಾ). ಹಲ್ಲಿಗೆ ಉಂಟಾಗುವ ಒಂದು ಬಗೆಯ ರೋಗ: ಒಂದು ಬಗೆಯ ದಂತರೋಗ: ಮಹಾಸೌಖರ ಎಂಬ ದಂತರೋಗದಲ್ಲಿ ಹಲ್ಲುಗಳು ಅಲ್ಲಾಡುವುವು. ಕುವಾಯಿಗಳು ಒಡೆವವು. ಕೀವು ರಕ್ತ ಸುರಿವದು (ಕೃದೃಚಿ. II. ೦೨೪). [ಸಂ.]

ಮಹಾಸ್ತ್ರ (ನಾ). ಅತ್ಯಂತ ಶಕ್ತಿಯುಂತವಾದ ಅಸ್ತ್ರ. – ಆಯುಧ. – ಬಾಣ: ಖಿತಿಯಿಂದೆ ಫಲುಗುಣಂ ಪೂಡಿದ ಮಹಾಸ್ತ್ರಮಂ ಶತಪತ್ರ ಲೋಚನಂ ಕಂಡು . . . ಬೆಸಸಲುನ್ನತಪ್ರಾಕ್ಪ್ರಮಿ ಧನುರ್ಜಟಾಸ್ಥಾರ್ಮಿ ಕಿವಿರಿಗೆ ತೆಗೆದೆಚ್ಚನಾ ಶರವನು (ಕೃಮಟಾ. ೦೬-೭೭). [ಸಂ.]

ಮಹಾಸ್ರಗ್ಧರ (ನಾ). [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರುಬಗೆಯ ಛಂದಸ್ಸುಗಳಲ್ಲಿ ಇಪ್ಪತ್ತೆರಡನೆಯದಾದ ಅಕೃತಿ ಎಂಬ ಛಂದಸ್ಸಿನ ವೃತ್ತ: ಲಘುದ್ವದು ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ (ರಂಡೋಟಾಮು. ೨-೨೦೦ ಕಾಪದ್ಯ). [ಸಂ. ಮಹಾಸ್ರಗ್ಧರಾ]

ಮಹಾಸ್ರಗ್ಧರೆ (ನಾ). = ಮಹಾಸ್ರಗ್ಧರ: "ಎರಡು ಲಘು ಮೂರು ಗುರುವಿರೆ ಮಹಾಸ್ರಗ್ಧರಾಖ್ಯಂ" (ಮಂಗಾಸಾ. ೧೦೬-೩೨); ಮರುದಾಶಾಶ ದ್ವಯೋಂದ್ರಾಗ್ನಿಸಹಿತವಸಯುಗ್ಮಾಂಗಜಾರಾತಿದುರ್ಗಳ್ ಬರೆ ಪಕ್ಷಸ್ಥಾನ ದೊಳ್ ನಿಲ್ಕಿರೆ ವಿರತಿ ಮಹಾಸ್ರಗ್ಧರಾ ಜಾಮುಪ್ಪತ್ತಂ (ರಂಡೋಟಾಮು. ೨-೨೧೨); ಜಾರ್ದೂಲವಿಕ್ರೀಡಿತ . . . ಸ್ರಗ್ಧರೆ, ಮಹಾಸ್ರಗ್ಧರೆ – ಎಂಬ ಅತುಪ್ಪತ್ತಗಳೇ ಕರ್ನಾಟಕ ಕಾವ್ಯರಂಗದಲ್ಲಿ ನರ್ತಿಸಲು ನಿಂತ ಸಂಸ್ಕೃತ ಜನ್ಯ ವೃತ್ತಗಳು (ಕವಾಕೋಟಾ. ೦೬೦). [ಸಂ. ಮಹಾಸ್ರಗ್ಧರಾ]

ಮಹಾಸ್ವಾಮಿ (ನಾ). ೧. ಮಹಾಪ್ರಭು; ಮಹಾರಾಜ: ಆಳ್ದ ಮಹಾಸ್ವಾಮಿಯವರಿಗೆ ಈ ವಿಷಯವನ್ನು ಶ್ರುತಪಡಿಸಿ ಇದಕ್ಕೋಸ್ಕರ ತಮಗುಂಟಾದ ಸಂತೋಷವನ್ನೂ ತಿಳಿಸಿದರು (ಮಹಾಪಂ. II. ೦೨೨). ೨. ರಾಜರು, ಗುರುಹಿರಿಯರನ್ನು, ಅಧಿಕಾರಿಗಳು ಮಂತಾದವರನ್ನು ಸಂಬೋಧಿಸುವಾಗ ಬಳಸುವ ಒಂದು ಗೌರವಸೂಚಕಪದ: ನಾನು ಬಳ್ಳ ಅಕ್ಕಿ ಅನ್ನ ಉಂಟಿ-ಮಾಡುತ್ತೇನಂತೆ, ಮಹಾಸ್ವಾಮಿ (ಕಂಕಿ. ೭೯).

[ಸಂ. ಮಹಾಸ್ವಾಮಿನ್]

ಮಹಾಹವ (ನಾ). ಭಾರಿಯುದ್ಧ; ಘೋರಕದನ: ಪೊಕ್ಕಪ ಮಿಂಚ್ಗುಗಳಂತಿರೆ ಕೇತುಗಳ್ ಜಳದವ್ಯಂದಪಪೋಲಿರೆ ಹಸ್ತಿಗಳ್ ಗಾತ್ರಧರೆ ಗಳಂತಿರೆ ಪತ್ತಿಗಳ್ ಬಳಿಸಿ ಕಾರ್ಗ(ಗೆ)ಯಮ್ಮಿ ಮಹಾಹವಂ (ಕಬಾ. ೩-೦೯೪). [ಸಂ.]

ಮಹಾಹವಧ್ವನಿ (ನಾ). ೧. ಉಗ್ರವಾದ ಕದನದ ಸದ್ದು. ೨. ಯಾಗದಲ್ಲಿ ದೇವತೆಗಳನ್ನು ಆಹ್ವಾನಿಸುವ ಧ್ವನಿ. ೧, ೨: ವೆರೆದ ವಿಸಂವಾದಂ ಪಂಜರಶುಕತತಿಯೊಳ್ ಕುಲಾಲಗೇಹಂಗಳೊಳಂ ಪರಚಕ್ರ ಭ್ರಾಂತಿಗಳಧ್ವರದೊಳ್ ಪೆಗಬ್ಬುಂ ಮಹಾಹವಧ್ವನಿಯಂತಂ (ಕಬಾ. ೬-೦೦೦). [ಸಂ. (ಮಹಾ + ಆಹವ + ಧ್ವನಿ; ಮಹಾ + ಹವ + ಧ್ವನಿ)]

ಮಹಾಹಿತ (ನಾ). ೧. ಅಪ್ಪಗೆಳೆಯ; ಪರಮಸ್ನೇಹಿತ. ೨. ಕಡುಪಗೆ; ಪರಮಶತ್ರು. ೧. ೨: ಈ ಚಂದ್ರಹಾಸಂ ಮಹಾಹಿತನೆವುಗೆ ಮೇಲೆ ನಮ್ಮ ಸೀಮೆಗೆ ಅರಸಾದಪಂ (ಕೃಪಾಶಾ. ೩೦-೨೩). [ಸಂ. (ಮಹಾ + ಹಿತ; ಮಹಾ + ಅಹಿತ)]

ಮಹಾಳಿ (ನಾ). (ಕರಾ) ಅಡಕೆಮರಕ್ಕೆ ತಗುಲುವ ಒಂದು ಬಗೆದು ರೋಗ: ಸಾವಿರಮೊಭೈನ್ನೂರ ಮೂವತ್ತನಾಲ್ಕರಲ್ಲಿ ಪ್ರಾರಂಭವಾದ ಅಡಿಕೆ ಮಹಾಳಿ ಕೊಳೆರೋಗದಿಂದಾಗಿ ಅಡಿಕೆ ಬೇಸಾಯಗಾರರು ಜರ್ಝರಿತರಾಗಿದ್ದರು (ಕಜಾಚಾ. ೦೩೬). 'ಕೊಳೆರೋಗ' ಪರಾ. [?]

ಮಹಿ (ನಾ). ೧. ಭೂಮಿ; ಪೃಥ್ವಿ: "ಸ್ಮರೆ ಧರಣಿ . . . ಮಹಿ ಜಗತಿ . . . ಭೂ ಗೋತ್ರ ನೆಲಂ" (ಪಚ್ಚಕಾ. ೫೬-೦); ಮುನ್ನಿನ್ನು ಚಕ್ರೇಶ್ವರರಾಕ್ ನಿಷ್ಕಂಟಕಂಮಾಡಿದರೆನೆ ಮಹಿ ನಿಷ್ಕಂಟಕಂ. ಮಾಡಿ ಚಕ್ರೇಶ್ವರರತ್ನಂ ಸಪ್ತತಂ ಪಾಳಿಪದನತಿಬಿಳಂ ವಿಕ್ರಮಾದಿತ್ಯದೀಪಂ (ಚಾ. XVI. ೫೯-೭ ; ೧೦೫೫); ಅಹಿರಾಜಂ ದ್ವಿಸಪ್ತಸಜಿಷ್ಣುವಿಭುಯಂ ವ್ಯಾಮರ್ದಸೆಸಲ್ ಬಲ್ಲನೇ ಮಹಿಯೊಳ್ ಮಾನವನೊಂದೆ ನಾಲಗೆಯೊಳಂತಾ ಭೂಭುಜಾಗಾರಮಂ (ಜಗಾ. ೨-೩೬). ೨. ರಾಜ್ಯ; ದೇಶ.

[ಸಂ. ಮಹಿ, ಮಹೀ]

ಮಹಿಕೆ (ನಾ). ಹಿಮ; ಮಂಜು: "ಮಹಿಕೆ–ಬರ್ಫ, ಮಂಜು" (ಗಂಗಾಚಾ. ೨೩೨). [ಸಂ. ಮಹಿಕಾ]

ಮಹಿಚಕ್ರ (ನಾ). ಭೂಮಂಡಲ; ಪೃಥ್ವಿ: ಮಹಿಚಕ್ರಕ್ಕಿದು ಜೋಡ್ಯ ಮಲ್ತಿನಿಸುಮಂತ್ರಾರ್ತೀವುದುಂ ಕಂಡು ಸಪ್ಪ ಹರೆಲ್ಲಂ ಗೆಲೆಗೊಂಡು ಬಣ್ಣಿಸುವರ್ (ಅಪ್ಪ. ೦೨-೦೨). [ಸಂ.]

ಮಹಿಜ (ನಾ). [ಜ್ಯೋತಿ] ಅಂಗಾರಕ; ಮಂಗಳಗ್ರಹ: ತಾರೆ ಸಪ್ತಮಿದಿನದಿ ತಾರೇಶ ಮಹಿ[ಜಾಣಾ. ಮಪ] ಜಂಗೆ ಘೋರದಲೆ ಹೋದಡವರ್ವ ಜಗಕೆ ಹೆಮ್ಮಾರಿ ಕಾಣಾಯ್ತು (ಸರಾಸ್ಮ. ೦೩೮೩). [ಸಂ.]

ಮಹಿತ (ಗು). ೧. ಗೌರವಾರ್ಹನಾದ; ಪೂಜ್ಯನಾದ: ಇಚ್ಛಾ ಮಾತ್ರದಿಂದಂ ವಿಕೃತಿಗಳನೆಯ್ದಿಸುವ ಮಹಿತಮಹಾಪುರುಷನೀತ (ಜಸಾ. ೩೦-೮೩); ದನುಜಸಂಹೃತಿಶಕ್ತಿಧರಂ ಪ್ರಭಾಕರಂ ಮಹಿತ ಮಹೋದಯಂ (ಜಜಪ್ರ. ೦-೯). ೨. ಶ್ರೇಷ್ಠವಾದ; -ಹಿಂಮೆ ಯುಳ್ಳ; ಘನತೆಯಿಂದ ಕೂಡಿದ: ಮಹಿತಭಕ್ತಿಯು ಸಹಜಮುಗ್ಧೆಯು ನೀಶ್ವರಂ ತಾಂ ವೆಜಿಯಿಸುವೆನೆಂದು (ಜಸಾ. ೦೫-೦೩); ತೊಂತಗವಿತೆಯು ಗುರ್ಜ್ಜರಂ ಮಿಂತನಿಜಲಲಿತಮಂಜುಲವಹಿತಾತುಳಸಪ್ರಬಂಧದೊಳ್ಪಿಂಗಳೆಯ (ಜಪಾಸ್ತ. ೦-೨೩). (ನಾ). ೩. ಪೂಜ್ಯವ್ಯಕ್ತಿ: ಮನ್ನಣೆಗೆ ಯೋಗ್ಯನಾದವನು: ಅಪ್ರತಿಮತಪಶ್ರೀಮಹಿತನಯಸೇನಮಹಾವಃನಿವತಿ ಶಪ್ಯರಚಿತಸೇನಾಪಾರ್ಯರ್ (ಜಾಪಂಪು. ೩); ಜನಪತಿಪೂಜೆಯಂ . . . ಜನಿತಪೂಜೆ ಪೇಬ್ದ ತೆಱದಿಂ ನೆಗಟ್ಟಿಂದು ಪುರೋಹಿತಂಗೆ ಸಜ್ಜನಮಹಿತಂಗೆ ಪೇಬ್ದಂ (ಜಣಾಪು. ೦೩-೬೪). [ಸಂ.]

ಮಹಿತನಯ (ನಾ). ೧. ಭೂಮಿಯ ಮಗ. ೨. [ಜ್ಯೋತಿ] ನವಗ್ರಹಗಳಲ್ಲಿ ಒಂದು; ಅಂಗಾರಕ: ಮಹೀಶ್ವರಂ ಮೇಣ್ ಮಹೀಶ್ವರಾಧೀಶ ಸಮಂ ಮಹಿತನಯಂ ನೆಲಸಿರೆ ಮೃಗಗೃಹದೊಳ್ ತನ್ನನುಜನೆನಿಸುಗುಂ (ಜಾಕಪ. ೦೬-೫೦). [ಸಂ.]

ಮಹಿತಳ (ನಾ). ೧. ಭೂಮಂಡಲ: ಸೋಮೆಶ್ವರನವತರಿಸಿದನೀ ಮಹಿತಳತೀರ್ಥಮೆನಿಪಲಂದಾಪುರದೊಳ್ (ಜಾ. XXVIII. ೫೫-೨ ; ೧೦೫೨).

೨. ನೆಲ ; ಭೂಮಿ : ಮಹಿತಳಲುಂಬಿತೋತ್ತಮಂ . . . ಆ ಮಹಿಪಂ ಪೀಠಾಂಬುವನಂದು ಹುಯವನಾಸನ್ನವಿಟಪಿದೊಳ್ ನಿಯಮಿಸಿದಂ (ಕಾದಂಪು. ೬೧). [ಸಂ. ಮಹಿತಲ]

ಮಹಿಧರ (ನಾ). ೧. ಭೂಮಿಯನ್ನು ಹೊತ್ತಿರುವುದು : ಪರ್ವತ : ಕಾಂಚನಶೈಲಾಧೀಶನೋ ಹೈಮವತವಮಹಿಧರಾಧೀಶನೋ ಪೇಟಿಂ (ಆಪ್ತ. ೧-೭೬) ; ಹಿಮವತ್ಕುತ್ಕಿಳದೊಳ್ ಬಂದರಮಹಿಧರದೊಳ್ . . . ಚೈತ್ಯಾವಾಸಪೂಜೋತ್ಸವದಿನಗಲನಲ್ಲಿಂದಮಂದುಂ ಸುರೇಂದ್ರಂ (ಶಾಂತಪು. ೧-೪೦). ೨. (ಕೂರ್ಮಾವತಾರರೂಪದಿಂದ) ಭೂಮಿಯನ್ನು ಹೊತ್ತವನು ; ವಿಷ್ಣು : ಎಳೆಯಂ ವಿಕ್ರಮದಿಂ ತರಲ್ ಮಹಿಧರಂ ಮುನ್ ಪಂದಿಯಾದಂತೆ ಪೋದೆಳೆಯುಂ ದಾಯಿಗರಂ ಪಡಲ್ದಡಿಸಿ ಕೊಂಡಾಳ್ಮಮಾದೇವದಿಂ . . . ಬೃಹಂದಳೆಯಾದಂ ನರಂ (ಹಂಪಣಾ. ೪-೫೩).

[ಸಂ.]

ಮಹಿಧ್ರುಜ (ನಾ). ಭೂಮಿಯನ್ನು ಅನುಭವಿಸುವವನು ; ರಾಜ : ಸೊಗಯಿಸೆ ಸಿಂಹಸನಂದಿಯುಮನಿಂದಿತೆಯುಂ ತದಜನ್ಮಭೂಮಿ ಗಳವರಿಂದಮಾ ಮಹಿಧ್ರುಜಂ ಕದಪೊಕ್ಕಿವಂ (ಜಾಂಬಪು. ೬-೩೦).

[ಸಂ. ಮಹಿಧ್ರುಜ್]

ಮಹಿಮ (ನಾ). ೧. ಹಿರಿಮೆ ; ಘನತೆ : ಸಾಮರ್ಥ್ಯ. ೨. ಹಿರಿಮೆಯುಳ್ಳವನು ; ಘನವಂತ ; ಮಹಾತ್ಮ : ಇಂತಪ್ಪ ಮಹಿಮನುಂಟಿ (ಸಿಕ್ಕಣ. ೦-೫೯) ; ರುದ್ರನೆನಿಪ್ಪ ಮಹಿಮಂಗೆ ಹುಟ್ಟಿಸುವ ರಕ್ಷಿಸುವ ಭಕ್ಷಿಪ ಕಟ್ಟಳೆಯನಳವಡಿಸಿ ಪುಟ್ಟಿಪ ಕಟ್ಟಿ ಕರುಣಿಸಿ ಮೆಱೆದ ಗುರು ಗುರೇಶ್ವರನು (ಕ್ರಿಶಬೀ. ೦-೨೦) ; ಯೋಜಿಸಲ್ಲದ ಮಹಿಮಂ . . . ನಿನಗೆ ಪುತ್ರನಾದಪನು (ಕಬ್ಬಿರ. ೨-೦೩). [ಸಂ. ಮಹಿಮನ್]

ಮಹಿಮಾಕರ (ನಾ). ಹಿರಿಮೆಗೆ ನೆಲೆಯಂತಿರುವವನು ; ಮಹಿಮೆಯುಳ್ಳವನು : ಘನವಂತ : ಭವತಾವನೀಶ್ವರಂ ಗುರು ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರಂ (ಆದಿಪು. ೦೮-೦೦೨) ; ನಿನ್ನಿದಕಾರಕ್ಕೆತಿಯನರ್ಚಿವರ್ ಮಹಿಮಾಕರ ಪರಮಾರ್ಥವಾರ್ಗೇ ಲಕ್ಷ್ಯಂ ನಿನ್ನಾ (ಜಾಣ. ೬-೦೦೬). [ಸಂ.]

ಮಹಿಮಾನತೆ (ನಾ). ಲೋಕಪೂಜ್ಯತೆ : ಮಾನನಿಧಿಗಳು ಸುಕೃತಿಗಳು ಮಹಿಮಾನತೆಯಲಿರುತಿಪ್ಪರದನಾನೇನ ಪೇಳುವೆ ಮಾದರಸ ಮಾದಾಂಬಿಕೆಯು ರಿರವ (ಕ್ರಿಶಬೀ. ೧-೦೦). [ಮಹಿ + ಮಾನ + ___ತೆ]

ಮಹಿಮೆ (ನಾ). ೧. ಹಿರಿಮೆ ; ದೊಡ್ಡತನ ; ಮಹಾತ್ಮೆ : "ಮೆಟ್ಟಿಮೆಯೆಂಬೆಲ್ ಮಹಿಮೆ" (ಭಾಷಾ. ೮೮) ; ಮಹಿಮೆ ಜಗತ್ಪ್ರಮಪ್ರಭುಶಾಸ್ತವಮಾದುದಿದರ್ಪಮಗ್ಗಳಂ ಮಹಿಮೆಯನಾಧೂ ಮಾಚ್ಚರ್ (ಜಾಜಪ್ರ. ೦೦-೦೦೩) : ಸಿದ್ಧರಾಮತಂದೆಗಳ ಮಹಿಮೆ . . . ಎನ್ನೊಳಗೆಂದಿಪ್ಪುದೊ (ಅಪಾ. ೦೭-೪೯). ೨. ವೈಶಿಷ್ಟ್ಯ : ಆ ಸಾಮಾನ್ಯ ಅನ್ನವನ್ನು ಬಡಿಸುವುದರಲ್ಲಿಯೇ ಭಿನ್ನಿಸಿಯು ಮಹಿಮೆ ತಾಣಿಸುತ್ತಿತ್ತು (ಜಾಜಾ. ೭೩). ೩. ಅಷ್ಟಸಿದ್ಧಿಗಳಲ್ಲಿ ಒಂದು ; ತನ್ನ ಇಚ್ಛೆಯಂತೆ ಆಕಾರವನ್ನು ದೊಡ್ಡದಾಗಿ ಪರಿವರ್ತಿಸಿ ಕೊಳ್ಳುವ ಒಂದು ಬಗೆಯ ವಿದ್ಯೆ : ಅಣಿಮಾ ಮಹಿಮಾ . . : ದಶೈಶ್ವರ್ಯಾಪ್ರತಿಹತತ್ವ ಕಾಮರೂಪತ್ವಾದಿಭೇದದಿಂ ಕ್ರಿಯಾಗೋಚರರ್ಧಿ ಬಹುವಿಧಂ (ಪಜ್ಞ. ೦೭೯) ; ಅವಧಿಜ್ಞಾನಿಯುಮಣಿಮಾ ಗರಿಮಾ ಮಹಿಮಾ . . . ಎಂಬಷ್ಟಗುಣಮಣಿಭೂಷಿತನುಮಾಗಿ (ಜ್ಞಾಚಾ. ೦೦೯); ಬ್ರಹ್ಮಾಂಡಾದಿ ಶಿವಾಂತಮಾದ ಮೂರವತ್ತಾಱುತತ್ವಂಗಳಂ ಪೆಱಗೆ ವ್ಯಾಪಿಸಿ ವರ್ತಿಸುವದೇ ಮಹಿಮೆ (ಪಶಾ. ೨೭೨). ೪. [ಜೈನ] ಪೂಜೆ ; ಅರ್ಚನೆ ; ಆರಾಧನೆ : ನಿನಗ್ಯಹೋದ್ಯಾನದ ಜಿನಭವನದೊಳಿಂತುದಿಮಸಂಭರಂ ಮಹಾಮಹಮೆಂಬ ಮಹಿ[ಜಾಜಾಂ. ಜಿನಮಹಿ] ಮೆಯಂ ಮಹಾವಿಭೂತಿಯಿಂ ಮಹಾಬಲಂ ಮಾಡಿದಿಂ ಬಲಿಯಿಂ (ಅಪಾ. ೨-೧೧೪) : ಮಹಿಮೆಯನಾ ಮಹೀತಳದಕೃತ್ರಿಮ ಕೃತ್ರಿಮ ಚೈತ್ಯಗೇಹದೊಳ್ ಮಹಿತಮೆಸಲ್ ಮಹಾಮುಪದ ಪೂಜೆಯ ನೋಜೆಯಿಸಂದು ಮಾದಲ್ (ಪಚಪು. ೦-೦೩೬).

[ಸಂ. ಮಹಿಮನ್- ಮಹಿಮಾ]

ಮಹಿಮೆಮಡೆ (ಕ್ರಿ). ಘನತೆಯನ್ನು ಹೊಂದು; ಹಿರಿಮೆಯಿಂದ ಕೂಡಿರು: ಮಹಿಮೆವಡದಿಂತು ಸೊಗಯಿಸುವ ಹೇವಳಕ್ಕೀಳದಿಂದ ತೆಂಕಣಬಸೆಯೊಳ್ ಮಹಿ ಭರತಂ ಪಟ್ಟಂಡಾವಹಂ (ಶಾಂಚಪು. ೦-೬೮).

[ಮಹಿಮೆ + ಪಡ್]

ಮಹಿಮೆವೆಱಿ (ಕ್ರಿ). = ಮಹಿಮೆವಡೆ : ಆ ವಿಯತ್ಕಳವದಿರೆ ನೆಗೆದು ಮಹಾವಿಭವದಿಂದೊಪ್ಪಿ ಪಡೆಯಲು ದೇವಸಮಿಚಯಂ ಪೊಗಳಲುದ್ದೀಪಿತ ಮಹಿಮೆವೆತ್ತು ಹರಗಣಾವಳಿಯಾಜ್ಞೆಯಂ ತಳ್ತಿರದೊಳಾಂತು . . . ಪೋದಮ (ಆಪ್ತ. ೪೪-೬೨) : ಬಹುಕಾಲಕಾಗಿ ನನ್ನೊಡೆಯನ ಕಂಡನೊ ಮಹಿಮೆವೆತ್ತನೊಯನುತಯ್ದಿ ಮುಪ್ಪಿಸ ಪುಂದುಡುಗೊಯ್ಯನಿರಿಸಿ ಗಸಗಸವಜಿಗದಳು ಕಾಳಿಂದಿ (ಪಚಕ. ೪೬-೪೬). [ಮಹಿಮೆ + ಪೆಱ್]

ಮಹಿಮೊರು 'ಮಂಯ್ಮೊರ್' ನೋ.

ಮಹಿಷ (ನಾ). ೧. ಕೋಣ : "ಮಹಿಷಂ, ಸೈರಿಭಃ, ರಕ್ಷಾಕ್ಷಿಃ- ಕಾಸರಃ, ಲುಬಾಮಃ – ಈ ೫ ಕೋಣಂ" (ಶಶಾಯು. ೪೯-೪೨); ಕರಿ ಮಹಿಷ ಮೇಷ ಮಲ್ಲಿಸ್ವರೂಪದಿಂ ತವಗೆ ತಾಮೆ ಪೋರೆ ಸೂರರ್ಕಳ್ (ಆಪ್ತ. ೩-೮೦). ೨. ದುರ್ಗೆಯಿಂದ ಹತನಾದ ಒಬ್ಬ ರಾಕ್ಷಸನ ಹೆಸರು ; ತಾರಕನ ಕೈಟಭನ ಮಹಿಷನ . . . ಜಜ್ಞಾ ರಕ್ಷಸವಿವಕೊಬ್ಬನಲಿ ಕೈವಾರವೇ ನೆಱೆ ಕಾಣಲಾಪ್ಪೆಂದುದು ಸುರಸ್ತೋಮ (ಕಾಕ್ಕಾಕ್ಕ. ೦೬-೩೭). ೩. ಒಂದು ನರಕದ ಹೆಸರು : ಶುನಕ ಶೂಕರ ಅಜ ಮಹಿಷ ಅವಿಗಳೆಂಬೈದು ಪುಂತ್ರಿನರಕಂಗಳ ನಡುವೆ ಚಂಡಕೊಳ್ಳಾಹಳವೆಂಬರಸುನರಕವಿಪ್ಪುದು (ಪಚೀ. ೦೩೩).

ಮಹಿಷಶತ್ರ = (ಅಲಂ) ದಡ್ಡ ; ಬೆಡ್ಡ : ಚಿತ್ರಗುಪ್ತರು . . . ನಿನ್ನ ಪತ್ರ ಕರದಲಿ ಪಿಡಿದು ಈ ಪೂರ್ವಿಸರ ಮಹಿಷಪುತ್ರನೆಂದು ಪುಸಗುಪರಲ್ಲೋ ಜ್ಞಾಣ (ಪಜಕ್ಕ. ೪೦-೦೬). [ಸಂ.]

ಮಹಿಷನಾಥ (ನಾ). ದಿಕ್ಪಾಲಕರಲ್ಲಿ ಒಬ್ಬ ; ಕೋಣವನ್ನು ವಾಹನವನ್ನಾಗಿ ಉಳ್ಳವನು ; ಯಮ : ಪ್ರಥಮಪ್ರಾಕಾರದೊಳಗಣ ಪೂರ್ವಾದಿಧ್ವಾಗದೊಳಮರನಾಥಮಹಿಷನಾಥರಿನ್ನಿಥ ಧನನಾಥನಾಥಮಪ್ಪ ದಿಕ್ಪಾಲರ ಕೇಳೀಪ್ರಾಸಾದಂಗಳಿಂದಂ (ಆಪ್ತ. ೬-೨೦೬). [ಸಂ.]

ಮಹಿಷಮಂಡಲ (ನಾ). = ಮಯ್ಮೊರ್ : 'ಎರುಮೈ_ನಾಡು' ಎಂಬುದು ಮಹಿಷ-ಮಂಡಲವಾಗಿ ಪರಿವರ್ತನವಾಯ್ತೆಂದು ಹೇಳಲಾಗುತ್ತದೆ (ಕರ್ಣಾಬಿ. ೦೩೨). [ಸಂ.]

ಮಹಿಷಯುದ್ಧ (ನಾ). ಕೋಣಗಳನ್ನು ಹುರಿದುಂಬಿಸಿ ಹೋರಾಡಿಸುವ ಒಂದು ಬಗೆಯ ಪಂದ್ಯ : ಮಲ್ಲಮೇಷಾದಿಯುದ್ಧಂಗಳಂ ನೋಡುತುಂ . . . ರಂಜಿಸುವ ಮಹಿಷಯುದ್ಧಂಗಳಂ ಕಾಣುತುಂ. . . ಪುರಮಂ ಸರ್ವಸಂಭ್ರಮದೊಳಂ ಪೊಕ್ಕು (ಪಂಪ. ೩-೩೬). [ಸಂ.]

ಮಹಿಷಾಕ್ಷ (ನಾ). ಒಂದು ಬಗೆಯ ಮರ ಮತ್ತು ಅದರ ಅಂಟು; ಲೋಬಾನ : "ಪುರುಷ್ಕಂ, ಮಹಿಷಾಕ್ಷಿಃ, ಗುಗ್ಗುಳಃ, ಫಲಂಕಷಃ–ಈ ೪ ಗುಗ್ಗುಳಂ" (ಜಾಅಯು. ೦೦೦-೧೩೬); ಹೇಮಮಾಕ್ಷಿಕ. . . ಮಹಿಷಾಕ್ಷ, ಗುಗ್ಗುಳ, ಮಣಿಶಿಲೆ, ಪಾದಪ ಇವಕ್ಕನು ಸಮಾಂಶವಾಗಿ ಎಮ್ಮೆಯ ಹಾಲಿಂದ ಪರಿದಿಸಿ ಎಳುರಿನ ಮುಖಿಕ್ಕೆ ಲೇಪವು ಮಾಡಲು ಮುಖದ ಕಪ್ಪು ತೀವದು (ಕ್ರಿಕಾ- II. ೦೧೬). [ಸಂ.]

ಮಹಿಷಾಕ್ಷಿ (ನಾ). = ಮಹಿಷಾಕ್ಷ : "ಗುಗ್ಗುಳಂ ಮಹಿಷಾಕ್ಷಿ ಕೌಶಿಕಾಖ್ಯಂ" (ಶುಗಣಾ. ೨೬-೮೨); ಮಹಿಷಾಕ್ಷಿಯೊಪ್ಪಲವ ತಂದು ಮೀಜಮರದೊಳಂ ಬಾಲೇಂದುವರ್ಗೊಳಿಗೆ ಕೊಡುತಿರಲು (ಪಚಕ್ಕ. ೧೪-೨೪).

[<ಸಂ. ಮಹಿಷಾಕ್ಷ]

ಮಹಿಷಾಸುರ (ನಾ)· = ಮಹಿಷ ೨: ಮೊಗ್ಗಳಂತೆ ಗಾಳಿದೊಳ್ ತೋರ್ದಿರ್ದ ಪಾದರಿಂದಂ ಮಹಿಷಾಸುರನಂತೆ ಸೂಲದೊಳ್ ನೊಂದು ನೆರಳ್ದ ಕಳ್ಳರಿಂ . . . ಅತಿಭಯಂಕರಾಕಾರಮಪ್ಪುದು (ಶಾಕ್ಷಾ. ೩೫೯ ಟಿಪ್ಪ್ರ); ಮೇಲೆವಯ್ದು ಮಹಿಷಾಸುರನಂ ತವೆ ಕೊಂದಳಾವಳಾ ಭಗವತಿ ಕೂರ್ತು ಬೇರಸಿರಿಯಾಗೆ ಭುಜಾಸಿಗೆ ನಾಗವರ್ಮನಾ (ಕಂದೋಂಬಾ. ೦–೪)· [ಸಂ.]

ಮಹಿಷಾಸುರಮರ್ದಿನಿ (ನಾ)· ಮಹಿಷಾಸುರನನ್ನು ಕೊಂದವಳು; ದುರ್ಗೆ; ಚಾಮುಂಡಿ : ನವರಂಗವಲ್ಲಿರುವ ಗೂಡುಗಳಲ್ಲಿ ಲಕ್ಷ್ಮೀ ನಾರಾಯಣ . . . ಮಹಿಷಾಸುರಮರ್ದಿನಿ ಮಗ್ರಹಗಳು ಇರಿಸಲ್ಪಟ್ಟಿವೆ (ಪ್ರಾಣಾಸ್ತ್ರ. ೦೦೩). [ಸಂ. ಮಹಿಷಾಸುರಮರ್ದಿನೀ]

ಮಿಣುಕುಹುಳು, ಮಿಣಕುಪುಳೆ (ನಾ). ಮಿಂಚಿನಂತೆ ಕ್ಷಣ ಬಿಟ್ಟು ಕ್ಷಣ ಬೆಳಕು ಬೀರುವ ಒಂದು ಬಗೆಯ ಹುಳು ; ಮಿಂಚುಹುಳ : ಮಿಣುಕುಹುಳು ಒಂದೇ ಆದರೆ ಹೆಚ್ಚು ಬೆಳಕು ಕೊಡಲಾರದು (ಮುರುಕ. ೫೦). **ಮಿಣಕುಹುಳ** : "ಖದ್ಯೋತಃ, ಜ್ಯೋತಿರಿಂಗಣಃ— ೨ ಕತ್ತಲೆಯಲ್ಲಿ ದೀಪದ ಹಾಗೆ ಹೊಳೆಯುವ ಕ್ಕಿಕ್ಕೆಗಳುಳ್ಳ ಮಿಣಕುಹುಳ್" (ಶಿದ್ಯಂಚಿ. ೦೬೨); ಮಿಣುಕುಹುಳ ತಿಣಕಿದರೆ ಜೇನು ಬಂದೀತೆ ? (ಗಾಗ).

[ಮಿಣುಕು₂ (< ಮಿನುಕು₃) + ಹುಳು (< ಪುಲು)]

ಮಿಣುಗುಟ್ಟು 'ಮಿನುಗುಟ್ಟು' ನೋ.

ಮಿಣ್ಣಗೆ (ಅ). ಅಲುಗಾಡದೆ ; ನಿಶ್ಚಲವಾಗಿ : ಎರಡು ಮೂರ್ತಿಗಳ ನಡುವೆ ಮಿಣ್ಣಗೆ ಉರಿಯುವ ಕಾಲುದೀಪ (ಸಚಸ ೭೭).

ಮಿಣ್ಣಗಿರು = ಸುಮ್ಮನೆ ಇರು ; ಮಿಸುಕದಂತಿರು : ಕಣ್ಣೆತ್ತಿ ನೋಡರಾ ಕತೆಯು ಕೌರವರಲ್ಲಿ ಮಿಣ್ಣಗಿರುವುದೊಂದು ವರುಷ (ಪಃಖಚ. ೨); ನಾಳೆ ಹೆಂಡತಿಯನ್ನು ಕಟ್ಟಿಕೊಂಡು ಬೇರೆ ಹೋದಾಗ ಎಲ್ಲಪೂ ತಿಳಿಯುತ್ತದೆ—ಮಿಣ್ಣಗಿದ್ದವರ ಬಣ್ಣ ! (ಒಡ್ಡಳು ೦೦೪).

[ಮಿಣ್ಣ + —ಅಗೆ₂./ತೆಲು. ಮಿನ್ನಕ]

ಮಿಣ್ಣನೆ₁ (ಗು). ಚಿಕ್ಕದಾದ ; ಸಣ್ಣದಾದ : ಗಳೆಯರ ಕಯ್ಯಲ್ಲಿಯ ಮಿಣ್ಣನೆ ನೆಲ್ಲಿಯನಸಿಯಲಿ ಕಯ್ತುಗಲದೆ ಕೊಯ್ವೆ ! (ಹಜ್ಜಿರ, ೦ ೦೩).

[ಮಿಣ್ಣ + —ಅನೆ (< —ಅಸೆಯ್)]

ಮಿಣ್ಣನೆ₂ (ಅ). ೧. ಸದ್ದಿಲ್ಲದೆ ; ಮೌನವಾಗಿ : ನೂಜ್ಯೆವರನು ಕೊಂದನು ಮರನ ಹಾಯಿಕೆ ಮರಳಿ ಮಿಣ್ಣನೆ ಬಂದು ಹೊಕ್ಕನು ಜಾಣನದ ಮನೆಯ (ಳುಣ್ಣಂ. ೩-೦೦೩) ; ಇಂದಿನಿತಿಂತೇಂ ಜಿಲ್ಪನೊಂದು ಬಿತ್ತರದ ಭಂಗಿಯ ಪೊಸ ಬಣ್ಣನೆ ಮಿಣ್ಣನೆ ನಿನ್ನ ನಜ್ಜುಮೆಚ್ಚಿನ ಕಾವುಸೊಂದು ಜಾನದೊಳೆ ಬೆರೆತುದು ? (ರಾಚಶ್ಯ. ೦೩೪-೪). ೨. ಏನೂ ತಿಳಿಯದ

ಹಾಗೆ ; ನಿರ್ವಿಕಾರವಾಗಿ : ಎಲ್ಲವನ್ನೂ ಶಾಂತರಾಗಿ ಮಿಣ್ಣಸೆ ಹೇಳುತ್ತಿದ್ದೀರಲ್ಲ ! (ಕುಚಾಗ. ೨೬೦).

ಮಿಣ್ಣನಿರ್ = ಏನೂ ತಿಳಿಯದಂತಿರು ; ಮುಗ್ಧವಾಗಿರು : ಬೇಡವೇಡೆಂದೊಡಂ ಬಲದಿಂ ಪಿಡಿದು ಕಟ್ಟಿ ಮಿಣ್ಣನಿರ್ಪಂ (ಗಾಪಾಕ್ಕ. ೩೩೬-೦೯); ವೀನಱಿಯದವರಂತೆ ಮಿಣ್ಣನಿರ್ದುಮೆನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ (ಗಾಪಾಕ್ಕ. ೧೬೭-೦). [ಮಿಣ್ಣ್ + —ಅಸ್ಸ್]

ಮಿಣ್ಣಿಸು 'ಮಿಳ್ಳಿಸು' ನೋ.

ಮಿಣ್ಣೆ 'ಮಿಟ್ಟೆ' ನೋ.

ಮಿತ್ತ (ಗು). ಸತ್ತುಹೋದ ; ಗತಿಸಿದ : "ಮಿತ—ಮ್ಯತ=ಸತ್ತು ಹೋದ, ವಿಫಲ" (ಕಪ್ರಕೋ. ೪೫) ; ಋತ್ವಕ್ಕೃತ್ವಂ . . . ಮ್ಯತ — ಮಿತ (ಕಮರ. ೨೬೬ ಕೃಯೂ). [< ಸಂ. ಮೃತ]

ಮಿತ್ತ (ಗು). ೧. ಅಳೆದ ; ಅಳತೆಮಾಡಿದ. ೨. ಮಿತಿಗೆ ಒಳಪಟ್ಟ ; ಸೀಮಿತವಾದ : ಮಿತನವಿಕೇಸಕೋಭಿತಕನುತ್ಥಂ . . . ಪುಟೀತದೇಹದಿಂಬತೆವೆರಸಿಂತು ಪತ್ಮತಿಪಜಿಂಗಳವೇಂ ಜಿನನೊಳ್ ಪೊದ್ದುವೋ (ಅಂತ. ೧೦-೧೩). ೩. ಚಿಕ್ಕದಾದ; ಸಂಗ್ರಹವಾದ; ಸಂಕ್ಷಿಪ್ತವಾದ: 'ಮಿತನುಡಿ' ಪರಾ. ೪. ಕಡಮೆಯಾದ; ವಿರಳವಾದ. ೫. ಪರೀಕ್ಷಿಸಿದ ; ಪರಿಶೀಲಿಸಿದ. (ನಾ). ೬. ಅಳತೆ ಮಾಡುವುದು. ೭. ಮಿತಿಗೆ ಒಳಪಟ್ಟಿದ್ದು ; ಸೀಮಿತವಾದಂಥಾ ; ಮಿತವಾದ್ದು ಬಾಳುವುದು. ಹಿತವಾದ್ದು ಫಲಿಸುವುದು (ಗಾಡ). [ಸಂ.]

ಮಿತಂಪಚ (ಗು). ೧. ಜಿಪುಣತನದಿಂದ ಕೂಡಿದ: ಕೃಪಣತನದ. (ನಾ). ೨. ಜಿಪುಣ ; ಲೋಭಿ : "ಕದರ್ಯಃ . . . ಕಂಪಣನಃ. ಮಿತಂಪಚಃ — ಈ ೫ ಲೋಭಿ" (ತಣಾಹಿಂ. ೩೬-೦೬೨), ೩. ಪರಿಣತ ನಲ್ಲಿದವನು ; ಪಕ್ವತೆಯಿಲ್ಲದವನು : ಚತುರಕವಿಯೊಳ್ಪನತಿಮಿಶ್ರುತ ವ್ಯಾಕರಣರೊಲ್ದು ತಿಳಿವಂತಿರೆ ಮೂರ್ಖತೆಯಿಂದಮುರ್ವಿ ಕೂರ್ಮಿದ ಮಿತಂಪಚರ್ ತಿಳಿವಳ್[ಡ]ರಿದು ಪೊಸಬಗೆಯಿಂದಂ (ಹಸ್ತಿಪ. ೦-೦೬). ೪. ಪರಿಮಿತವಾದ ಪ್ರಮಾಣದಲ್ಲಿ ಆಹಾರವನ್ನು ತಯಾರಿಸುವುದು: ಕಡಮೆಪ್ರಮಾಣದ ಅಡುಗೆಯನ್ನು ಮಾಡುವುದು. [ಸಂ.]

ಮಿತಕುಕ್ಷಿ (ನಾ). ಹೊಟ್ಟೆಗೆ ಪರಿಮಿತವಾದ ಆಹಾರವನ್ನು ತೆಗೆದು ಕೊಳ್ಳುವವನು : ಮಿತಕುಕ್ಷಿ ಮಿತಭುಕ್ಕ ; ಮತ್ಕಾರ್ ಜಿತೇಂದ್ರಿಯನು ? ಅತಿಚರ್ಚೆ ಸಲದಲ್ಲಿ (ಪುಂಕಃ. ೨೫೧). [ಸಂ.]

ಮಿತನುಡಿ (ನಾ). ಅಗತ್ಯಕ್ಕೆ ತಕ್ಕಷ್ಟು ಆಡುವ ಮಾತು; ಸಂಕ್ಷಿಪ್ತವಾದ ಮಾತು : 'ಮಿತನುಡಿಯು ಬಾಲೆಯರು ರತಿಗೆ ಮಿಗೆ ಚೆಲ್ವೆಯರು (ಪಪುಚ. ೨-೫೩). [ಮಿತ್ತ + ನುಡಿ]

ಮಿತಪರಿಗ್ರಹ (ನಾ). [ಜೈನ] ಶ್ರಾವಕನ ವ್ರತಗಳಲ್ಲಿ ಒಂದು: ಆವಶ್ಯಕತೆಗೆ ಬೇಕಾದಷ್ಟು ಮಾತ್ರ ಧನ, ಧಾನ್ಯ ಇತ್ಯಾದಿಗಳ ನ್ನಿಟ್ಟುಕೊಂಡು ಉಳಿದುವನ್ನು ತ್ಯಾಗಮಾಡುವ ಒಂದು ಬಗೆಯ ವ್ರತ : ದಿನಪ್ರತ ಧಿಗ್ವ್ರತ ಮಿತಪರಿಗ್ರಹವ ಮತ್ತನರ್ಥನಶನವ್ರತವ ಕೈಕೊಂಡು ವನಜಮುಖಿಯರು ಕೈಕೊಂಡರು ವ್ರತಗಳ ಜಿನಮುನಿಗಳ ಸಮಕ್ಷದೊಳು (ಚಿತ. ೦೬-೬೦). [ಸಂ.]

ಮಿತಭಾಷಿ (ನಾ). ಅಗತ್ಯಕ್ಕಿಂತ ಹೆಚ್ಚು ಮಾತನ್ನಾಡದವನು; ಕಡಮೆ ಮಾತನ್ನಾಡುವವನು : ಸ್ವಭಾವತಃ ಅವರು ಮಿತಭಾಷಿಗಳೆಂದು ಎಲ್ಲರ ನಂಬಿಕೆಯಾಗಿದ್ದಿತು (ಸಪಚಕಃ. ೧೩) ; ಸಭೆಯೊಳು ಮೇರೆದ್ದು ಕುಣಿವನು ಬಹುಭಾಷಿ ಒಂದುಳಿವನು ಮಿತಭಾಷಿ (ಹಂತಾಕ. ೨೦೫-೬೩). [ಸಂ. ಮಿತಭಾಷಿನ್]

ಮಿತಭಾಷೆ (ನಾ). = ಮಿತನುಡಿ : ಹೋದಿರುಳು ತಾಂ ಬಾರದಿರೆ ಈಬ್ಗೆಗಂಬಡುತಿರ್ಪಳಿಗೆ ನೆಪಮಸೊರೆಯುತ್ತ ಮಿತಭಾಷೆಯುರಿ . . . ಪೊಳ್ಕಳಾ ರಾಜ್ಞಿ . . . ಪಟುಹರ್ಮ್ಯಮಂ (ಶಾಶ್ರಂಗೆ. ೧೬-೧೬೬). [ಸಂ. ಮಿತಭಾಷಾ]

ಮಿತಭುಕ್ಕ (ನಾ). = ಮಿತಕುಕ್ಷಿ : ಮಿತಕುಕ್ಷಿ ಮಿತಭುಕ್ಕ; ಮತ್ಕಾರ್ ಜಿತೇಂದ್ರಿಯನು ? ಅತಿಚರ್ಚೆ ಸಲದಲ್ಲಿ (ಪುಂಕಃ. ೨೫೦). [ಸಂ.]

ಮಿತವಚನ (ನಾ). ೧. = ಮಿತನುಡಿ : . . . ಜನಯುತಂ ಕೀರ್ತಿಕಾಂತಿಸಮೇತಂ . . . ಬುಧಜನಕುಮುದಾನಂದಚಂದ್ರಂ ಸಭೇಂದ್ರಂ (ಕಾಸ್ಕರೇ. ೦-೨೩). ೨. = ಮಿತಭಾಷಿ : ಕ್ಷಿತಿಪತಿಯುಂ ಬರಿಸಿ ಜಗಸ್ಮತನಂ ಸಂತೈಸಿ ಕುಶಲವಾರ್ತಾಂತರಮಂ ಮಿತವಚನಂ ಬೆಸಗೊಂಡತಿವಿತೀರ್ಣ ಮುದನಾಸವನಾತನೆಂಬುದು ಮಾರ್ಗಂ (ಕಾಗಾ. ೨-೩). [ಸಂ.]

ಮಿತವಾಕ್ಯ (ನಾ). ೧.= ಮಿತನುಡಿ. ೨. = ಮಿತಭಾಷಿ : ಮಿತವಾಕ್ಯಂ ಸದ್ಬುದ್ಧಿಕ್ಯಂ . . . ನೆಗಬ್ದಿತಿಬಳಭೂಪಾಲಮಂತ್ರಿಪ್ರಧಾನಂ (ಶುಕುಪ್ರ. ೨-೫೦). [ಸಂ.]

ಮಿತವ್ಯಯ (ನಾ). ಪಣ, ಪದಾರ್ಥ ಮುಂತಾದುವುಗಳನ್ನು ಹಿಡಿತದಿಂದ ಖರ್ಚು ಮಾಡುವಿಕೆ.—ಮಿತಿಯಲ್ಲಿ ಬಳಸುವಿಕೆ : ಬಂಡವಾಳಕ್ಕೆ ಮುಖ್ಯಕಾರಣವೆನ್ನಿಸುವ ಮಿತವ್ಯಯವನ್ನು ನಮ್ಮ ಅರ್ಥಶಾಸ್ತ್ರವು ಒಂದು ಪ್ರಮುಖವಿಧರ್ಮವಾಗಿ ಉಪದೇಶಿಸಿದೆ (ಪಾಹಿ. ೨೩೭); ಅಕ್ಕಾಜಿಯು ತನ್ನ ಬಳಿಯಲ್ಲಿ ಸಂಗ್ರಹಿಸಿಟ್ಟುಕೊಂಡ ನೂರುರೂಪಾಯಿಗಳನ್ನು, ಮಿತವ್ಯಯ ದಿಂದ ನನ್ನ ಕಲಿಸಕ್ಕಾಗಿ ಪೆಚ್ಚಮಾಡುವಂತೆ ತಿಳಿಸಿ ಕಳಿಸಿದ್ದಳು (ಪೀಮುಂತ. ೦೬೯). [ಸಂ.]

ಮಿತಸಂಖ್ಯೆ (ನಾ). ಕಡಮೆ ಅಂಕಿ; ಅಲ್ಪಸಂಖ್ಯೆ : ಮನುಷ್ಯನ ವಿಚಾರಗಳನ್ನು, ಭಾವನೆಗಳನ್ನು ತೋಡಿಕೊಳ್ಳುವ ಜನವರ್ಗಕ್ಕೆ, ಅವರು ಕೇವಲ ಮಿತಸಂಖ್ಯೆಯವರು, ಸಂಬಂಧಿಸಿದ ಈ ಬರಹವು ಸದ್ಯಕ್ಕೆ ಮಾತು, ಲೇಖನ, ಗೀತ, ನೃತ್ಯಗಳನ್ನು ಆಶ್ರಯಿಸಿದ ವ್ಯಕ್ತಿಗಳಿಗೆ ಅನ್ವಯಿಸುತ್ತದೆ (ಒಂಸಿವ. iii, ಪೀಠಿಕೆ ೩೩೬). [ಸಂ. ಮಿತಸಂಖ್ಯಾ]

ಮಿತಸಂತಾನ (ನಾ). ಒಂದು ವ್ಯವಸ್ಥೆಗೆ ಒಳಪಟ್ಟ ಸಂತತಿ; ಕಡಮೆ ಮಕ್ಕಳನ್ನು ಪಡೆಯುವಿಕೆ : ಮಿತಸಂತಾನದ ಕತ್ತಿಗೆ ಗಮನವಿತ್ತು ತಿರುಗಿದೆ (ಶಿಶಾ. ೦೬೬). [ಸಂ.]

ಮಿತಾಹಾರ (ನಾ). ಪರಿಮಿತವಾಗಿ ಮಾಡುವ ಊಟ; ಹಾಳತವಾದ ಆಹಾರಸೇವನೆ : ಅಲ್ಪವಲ್ಲದೆ ಯಥೇಷ್ಟವಲ್ಲದೆ ಯೋಗಾನುಗುಣ್ಯಮಾಗಿ ಭೋಜನಂಗೈವುದೇ ಮಿತಾಹಾರವೆನಿಸುವುದು (ಪಚೇಳ. ೦೯೦). [ಸಂ.]

ಮಿತಿ (ನಾ). ೧. ಅಳತೆ : ಪ್ರಮಾಣ : ಮಿಣುಕಿತು ಧುಜಕ್ಕೆ ಮಿತಿಯಿಲ್ಲ ತನುಕಾಂತಿದೋಱಿತು ಕಂತುನಂದನಗೆ (ತೋಷಪ. ೩೯-೦೯). ೨. ತೂಕ : ಭಾರ. ೩. ಮೇರೆ : ಎಲ್ಲೆ : ಮಿತಿ ಮೇರೆಯಿಲ್ಲದ ನೃಪರು ನೆರೆದುದು ಜನಕನಗರಿಯಲಿ (ಕೂರಾಣ. ೦-೦೩-೨೬); ಸುಳ್ಳಿಗಿದರೂ ಒಂದು ಮಿತಿಯಿರಬೇಕು (ಪೀಗಕ್ಕ. ೧೨). ೪. ಕಟ್ಟು ; ಕಟ್ಟಳೆ ; ನಿಯಮ : ಈ ರೋಗಂಗಳಿಗೆ ಈ ಔಷಧಮೆಂಬ ಮಿತಿಯನ್ನುಂಟುಮಾಡಿ ಮಿಕ್ಕಿನವರು ಈ ಕಟ್ಟಳೆಯಂ ತಿಳಿದು ನಡೆಸುವುದು (ಶಶವೃ. ಒ) ; ಊಟ ವಲ್ಲಿ ಬಹಳ ಮಿತಿಯಿರಬೇಕು (ಹುಂಅಂಪಾ. ೧-೨೩). ೫. ಅವಧಿಯ ಮೊದಲು ಅಥವಾ ಕೊನೆ : ಮಾರಾಟದ ರಕ್ಕಮು ಜಮಾ ಆದ ಮಿತಿಗಾಂದ ಮೂರುದಿವಸಗಳು ಕಾದು ಆಮೆ ಮಾಡಿ ಬಡ್ಡಿದು ಲೆಖ್ಖಕ್ಕೆ ಹಿಡಿಯೋಣದರಲ್ಲಿ ಬಂದೀತು (ಹುಂಅಂಪಾ. ೨೬) ; ಅಂಗಡಿಯ ಬಾಕಿಯು ಬರುವದಿದ್ದರೆ, ಬಾಕಿ ಇದ್ದ ಮಿತಿ ಹಿಡಿದು ಬಡ್ಡಿ ಆಕಾರಿಸಲ್ಪಡುವದು (ಸುಂಅಪಾ. ೩೦೬). ೬. ಉಚಿತವಾದ ಪೇಳಿಕೆ. ೭. ಸಾಕ್ಷಿ. ೮. ದೃಢತೆ. [ಸಂ].

ಮಿತಿಗೆಯ್ (ಕ್ರಿ). ಮಿತಿಗೆ ಒಳಪಡಿಸು ; ಮೇರೆ ಮೀರದಂತೆ ಮಾಡು : ರತಿದೇವಿ ಬಸಿಱಾಂತು ಪಡೆದ ದುಕ್ಕವ ಸಂತವತಿಯಾಗಿ

ನೋಳ್ಪ ಸಂತಸವ ಮಿತಿಗೆಯ್ದೆಪೆನೆಂದು ಕೊಟ್ಟಲ ಕೂಗಿದಳೆತಿಶಯದಿಂದೆ ಕುಮರನ (ಪೋಷ. ೦೭-೪೯). [ಮಿತಿ + ಕಯ್]

ಮಿತಿಮೀರು (ಕ್ರಿ). ೧. ಎಲ್ಲೆಯನ್ನು ದಾಟು ; ಮೇರೆಮೀರು : ಸಣ್ಣ ಮೀನುಗಳನ್ನು ದೊಡ್ಡ ಮೀನುಗಳು ನುಂಗುತ್ತವೆ . . . ಇಲ್ಲದಿದ್ದರೆ ಅವು ಮಿತಿಮೀರಿ ಬೆಳೆಯುತ್ತಿದ್ದವು (ಪುಟಿಬದು. ೪-೧೦೫); ಮೈಲೇಜ್ ಹುಡುಗನಿದು ಮೇಲೆ ಅವನಿಗಿದ್ದ ಸಿಟ್ಟು ಮಿತಿಮೀರಿತು (ಅಣಕ. ೬೯). ೨. ಪ್ರಮಾಣದ ಸೀಮೆಯನ್ನು ಕುಲ್ಲುಂಘಿಸು ; ನಡವಳಿಕೆಯನ್ನು ಮೀರು : ಈ ಬೆದುಳ್ಳಿ ನಾಚಿಕೆಗೆಟ್ಟು ಮಿತಿಮೀರಿಯಿರುಪುದು ನನ್ನಂತಹ ಕುಲಮ್ಮಗೆ ಕರವಲ್ಲ (ಪಚಾ. ೦೬). [ಮಿತಿ + ಮೀರು (<ಮೀಱು)]

ಮಿತಿಲಿ 'ಮಿಟಲಿ' ನೋ.

ಮಿತು 'ಮಿದು' ನೋ.

ಮಿತುವಾಸಿಕೆ (ನಾ). ವ್ಯಾಮವಾದ ಹಾಸುಗೆ.--ರಮ್ಮೆ : ಮಿತುವಾಸಿಕೆಯು ಮೇಲೆ ತನುತಾಪದೊಡೆನೆ ಹೊರಳುತಂ (ಶಕಟೂ. ೯-೨೨).

[ಮಿತು (<ಮಿದು) + ವಾಸಿಕೆ]

ಮಿತ್ತು 'ಮಿಚ್ಚು' ನೋ.

ಮಿತ್ತುಗರೆ 'ಮಿಟ್ಟುಗರೆ' ನೋ.

ಮಿತ್ರ (ನಾ). ೧. ನೇಸರು ; ಸೂರ್ಯ : "ಆದಿತ್ಯಃ . . . ಮಿತ್ರಃ, ಚಿತ್ರಭಾನುಃ . . . ತ್ರಯಿತನುಃ —ಈ ೪೭ ಆದಿತ್ಯನ ಪೆಸರ್" (ಹಲಾಯು. ೩-೩೬) ; ಮಿತ್ರಂ ಪ್ರತಾಪಸಹಿತಚರಿತ್ರಂ ಪರ್ಯಾಯಬರುತುಮಿರೆ ಘನಪಥನಕ್ಷತ್ರಪ್ರಸೂನಮಂ ದ್ಯುತಪತ್ರಂಗಳನರುಣನುಜುಗಿದಂ (ಕೀರ್ತಿ. ೮೯-೦೩೩). ೨. (ಸಾಮಾನ್ಯವಾಗಿ ವರುಣನ ಜೊತೆ ವರ್ಣಿತವಾಗಿರುವ) ದ್ವಾದಶಾದಿತ್ಯರಲ್ಲಿ ಒಬ್ಬ : ಧಾತ ಆರ್ಯಮಾ ಮಿತ್ರ ವರುಣ ಇಂದ್ರ ವಿವಸ್ವಾನ್ ಪರ್ಜನ್ಯ ಪೂಷ ಅಂಶು ಭಾಸ್ ಗಭಸ್ತಿಮಾನ್ ತ್ವಷ್ಟ್ರ ವಿಷ್ಣುಗಳೆಂಬವರೇ ಕ್ರಮದಿಂ ಪ್ಪಾದ ಶಾದಿತ್ಯರು (ಹರಿವಂ. ೨೦೬) ; ಗಣದ ಮಿತ್ರರು ಸಪ್ತಯುತಿಗಳಲ್ಲಿ ಮೂರನೆಯ ವರ್ಣನು ಇನಜಗೆ ಸಮ ಚಂದ್ರ ಸೂರ್ಯರು ಮನುಸುತಯುಮೆಚ್ಚು ಪ್ರಜಪನು (ಕುರಂಜಿ. ಭಾ. ೦-೩-೩). ೩. ಗೆಳೆಯ ; ಸ್ನೇಹಿತ : "ಮಿತ್ರಂ, ಸುಖಾ . . . ಸ್ನಿಗ್ಧಃ—ಈ ೫ ಕೆಳೆಯಂ" (ಅಮರ. ೭೮-೩೭೮) ; ಮಿತ್ರ ವ್ಯಸನತ್ರಾಣಪವಿತ್ರೀಕೃತಗಾತ್ರನಪ್ಪ ನಿನ್ನಂ ಕಂಡಾ ಮಿತ್ರವಿಜೀನೇನೀಗಳ್ ಮಿತ್ರತ್ವಕ್ಕಾಸೆಪಟ್ಟು ಬಂದಾ ನಿನ್ನೊಳ್ (ಕಂಚಿಕಾ. ೦೭೬) ; ಚಿತ್ರವಾಹನಪುತ್ರಿಯುಂ ವಕ್ರತನಯನುಂ . . . ಭೋಗಿಸಿದರನುದಿನಂ ಗೃಹುಂಧುಮಿತ್ರರಂ ಮರೆದು, ಕರ್ತವ್ಯಮಂ ತೊರೆದು (ಪಾಶ್ವ. ೧೦. ೪೦-೨೦೩೪). ೪. [ರಾಜನೀ] ರಾಜನ ಸಪ್ತಾಂಗಗಳಲ್ಲಿ ಒಂದು ; ಇವರಲ್ಲಿ ಸಹಜಮಿತ್ರ ತಾಯಿಯ ಅಥವಾ ತಂದೆಯ ಮೂಲಕ ನಂಟುತನವುಳ್ಳವನು; ಪ್ರಾಕೃತಮಿತ್ರ—ನೆರೆಯ ಶತ್ರುರಾಜ್ಯದ ಅಚ್ಚೆಯಿರುವ ರಾಜ್ಯದ ಅರಸು ಮತ್ತು ಕೃತ್ರಿಮಮಿತ್ರ—ಕಾರ್ಯದ ಪಮೂಲಕ ಮೈತ್ರಿಯನ್ನು ಗಳಿಸಿದವನು ಎಂಬುದಾಗಿ ಮೂರು ಪ್ರಕಾರದ ಸ್ನೇಹಿತರಿರುತ್ತಾರೆ : "ಮಿತ್ರಂ . . . ಶತ್ರುಪೇರ್ಕ್ಕೊತ್ತಲೂ ಆಟೇಯೆಸ್ಸ ಅರಸನ ಸೀಸ." (ಸಂಗಿ. ೨೩೭).

[ಸಂ.]

ಮಿತ್ರಕಾರ್ಯ (ನಾ). ೧. ಸ್ನೇಹಿತನ ಕರ್ತವ್ಯ. ೨. [ರಾಜನೀ] ಸ್ನೇಹಿತನನ್ನಾಗಿ ಮಾಡಿಕೊಳ್ಳುವುದು : ಅನ್ಯರೆಲ್ಲರುಮನತಿಸ್ನೇಹದಿಂ ತನ್ನವರಂ ಮಾಡಿಕೊಳ್ವುದು ಮಿತ್ರಕಾರ್ಯಮೆಂಬುದು (ಕಂಚಿಕಾ. ೭ ೦೯-೦೦). ೩. ಕನ್ನಡದ ಪ್ರಸಿದ್ಧಗ್ರಂಥವಾದ 'ಪಂಚತಂತ್ರ'ದಲ್ಲಿ ಬರುವ ಐದನೆಯ ಪ್ರಕರಣ. [ಸಂ.]

ಮಿತ್ರಕುಲ (ನಾ). ೧. ಸೂರ್ಯವಂಶ ; ಇನಕುಲ : ಪತ್ತುವಿದು ದುಗುಡಮಂ, ಮಿತ್ರಕುಲ ಮಿತ್ರಪರ್ಯ (ಶ್ರೀಧಾಪು. ೩೭೬-೨೭೬). ೨. ಗೆಳೆಯರ ಗುಂಪು ; ಸ್ನೇಹಿತರ ಸಮೂಹ : ಮಂತ್ರಿಯುಂ ಪೆಜಿವ ತುಂಬುರನೆಂಬನಂ ಕೊಟ್ಟು ವಮಂತೆ ತನ್ನೊತನಿರ್ದ ಮಿತ್ರ ಕುಲಮಂ ಕೊಟ್ಟು (ಪಂಚಿ. ೩-೩೪). [ಸಂ.]

ಮಿತ್ರಗುಣ (ನಾ). ಸ್ನೇಹಿತನಲ್ಲಿರಬೇಕಾದ ಗುಣ. ಸ್ವಭಾವ : ಸ್ವಚ್ಛತಪಂ ತ್ಯಾಗಂ ಶೌರ್ಯಂ ಸಮಾಸಹಸಿಷ್ಣುವೆಂಬೀ ಸ್ನೇಹಂ ದಾಕ್ಷಿಣ್ಯಂ ಸತ್ಯಂ ಶೌಚಮೆಂಬಿವು ಮಿತ್ರಗುಣಂಗಳ್ (ಕಂಚಿಕಾ. ೨೦೭-೦೯). [ಸಂ.]

ಮಿತ್ರಘ್ನ (ಗು). ಮಿತ್ರದ್ರೋಹಿಯಾದ. [ಸಂ.]

ಮಿತ್ರಜ (ನಾ). ೧. ಸೂರ್ಯನ ಮಗ. ೨. ಯಮ : ಮೃತ್ಯುಂಜಯನ ವಾಕ್ಯ ತಪ್ಪದೆಂದಾನುಂಡೆ ಮಿತ್ರಜನ ದಯಿಸಿದಾಗಲೆ ವಳಹಲ್ಲಿವ (ಕಪಪಚ. ೯-೩೬). [ಸಂ.]

ಮಿತ್ರತ್ವ (ನಾ). ಗೆಳೆತನ ; ಮೈತ್ರಿ ; ಸ್ನೇಹ : ನಿನ್ನಂ ಕಂಡು . . . ಮಿತ್ರತ್ವಕ್ಕಾಸೆಪಟ್ಟು ಬಂದೆಂ ನಿನ್ನೊಳ್ (ಸಂಚಿಕಾ. ೫. ೨೦೬ ೧೩೩) ; ಪೂಣ್ದೆವಾ ರವಿತನೂಜನುಂ ನಾನಾವುಮಗ್ನಿಯೆ ಸಾಕ್ಷಿಯಾಗೆ ಮಿತ್ರತ್ವಮಂ (ಶ್ರೀಧಾಪು. ೩೦೬-೩೭). [ಸಂ.]

ಮಿತ್ರದ್ರೋಹ (ನಾ). ಸ್ನೇಹಿತನಿಗೆ ಬಗೆಯುವ ಕೇಡು ; ಗೆಳೆಯನಿಗೆ ಮಾಡುವ ವಂಚನೆ : ಅದನಾಂ ಕೇಳ್ದುಸಿರದಿರ್ದಪ್ಪೊಡೆ ವಿಶ್ವಾಸ ಘಾತುಕತ್ವಮುಂ ಮಿತ್ರದ್ರೋಹ [ಣಾಣಂ. ಮಿತ್ರದ್ರೋಹತ್ವ, ಮಿತ್ರೋದ್ರೋಹಾಸೀನ]ಮುಮಪ್ಪ ದೆಂದಱಿಪಲ್ಬಂದೆಂ (ಪಾಪಂ. ೦೦೦-೯) ; ಅರಿತನವರಿಂದಾ ನಮಗೆ ಪ್ರಾಣೋಪಕಾರವಾದ್ದಕ್ಕೆ ಅವರಿಗೆ ನಾವೂ ಸ್ವಾಮಿದ್ರೋಹ ಮಿತ್ರದ್ರೋಹ ದಮಾಡಬಾರದು (ಕೃಚ. ೫೯) ; ಅಮೃತ ಪತಿಯೆದು ಪತಿದ್ರೋಹವಾದೆ, ಚಂಡತಾಪನನಮ ಮಿತ್ರದ್ರೋಹ (ಗಾಕ್ಷಸ. ೭೭).

[ಸಂ.]

ಮಿತ್ರದ್ರೋಹಿ (ನಾ). ಸ್ನೇಹಿತನಿಗೆ ಕೇಡನ್ನು ಬಗೆಯುವವನು : ಗೆಳೆಯನಿಗೆ ವಂಚನೆಯನ್ನು ಮಾಡುವವನು : ಮಿತ್ರದ್ರೋಹಿ ಯಾದವನಿಗೆ ಕಾಣುವವರಿಲ್ಲ ಶತ್ರುಗಳೇ (ಗಾಡಿ). [ಸಂ. ಮಿತ್ರದ್ರೋಹಿನ್]

ಮಿತ್ರದ್ವಿಷ (ನಾ). ೧. ಸೂರ್ಯನ ಹಗೆ : ರಾಹು. ೨. ಸ್ನೇಹಿತನನ್ನು ದ್ವೇಷಿಸುವವನು : ಗೆಳೆಯನಲ್ಲಿ ಶತ್ರುತ್ವವನ್ನು ಹೊಂದಿದವನು. ೧, ೨ : ದ್ವಿಸನಂ ಮಿತ್ರದ್ವಿಷಂ ವಕ್ರಗಾಮಿ . . . ಅಶಾಶ್ವಮಿಷ ದತ್ಯಚಿತ್ಯನೆನೆ ಪಾವಂ ಪೋಲ್ತು ಲೋಕಕ್ಕೆ ಪರ್ತಿಪ ದುರ್ಭೋದನನುಗ್ರನಂ ಕಪಿಬಿಯೆಂಬರ್ಭೂಧರ್ (ಪಪಚ. ೦೯-೦೨). [ಸಂ.]

ಮಿತ್ರದ್ವೇಷ (ನಾ). ಸೂರ್ಯನೊಡನೆ ಇರುವ ಹಗೆತನ. —ವೈರ : ದೋಷದೊಡತನವೊಂದು ಮಿತ್ರದ್ವೇಷವೊಂದು . . . ಅಬಲೆಯರಾಸ್ಯದಲಿ ಸಂಕ್ಲೇಶಯಾಗಿಹುದೊಂದೆನುತೆ ಶಶಿ ಹೇಸಿ ಮೆಲ್ಲನೆ ಜಾಜಿವನು ಪಡುವಣ ಸಮುದ್ರವಲಿ (ಅಣಕ. ೩-೩೦). [ಸಂ.]

ಮಿತ್ರಪಂಚಕ (ನಾ). [ವೈದ್ಯಶಾ] ಔಷಧಕ್ಕಾಗಿ ಬಳಸುವ ಬೆಲ್ಲ, ತುಪ್ಪ, ಗುಂಜಿ, ಜೇನುತುಪ್ಪ ಮತ್ತು ಬಿಳುಗಾರ ಎಂಬ. ಪರಸ್ಪರ ಸಹಾಯಕಗಳಾದ ಐದು ಬಗೆಯ ಪದಾರ್ಥಗಳು : ಆ ಭೃಷ್ಟದಮ್ಮ ಮಿತ್ರ ಪಂಚಕದಿಂದ ಕರಗಿಸುವುದು. ಮಿತ್ರಪಂಚಕವೆಂದರೆ ಬೆಲ್ಲ. ತುಪ್ಪ,/ಗುಂಜಿ, ಜೇನುತುಪ್ಪ, ಬಿಳುಗಾರ (ಪಥ್ಯ. ೩೬). [ಸಂ.]

ಮಿತ್ರಪುತ್ರ (ನಾ). ೧. ಸೂರ್ಯನ ಮಗ. ೨. ಶನಿ : ಕ್ಷಿತಿಜನೊಳುದಿಸಿದ ಗುಸುವಿಂ [ನೇತಾರಂ] ಮಿತ್ರಪುತ್ರನಿಂ ದುಃಖಿ . . . ವನಿಸಲಂ ಮನಸುಂ (ಜಾಕಟ. ೦೬-೬). ೩. ಯಮ.

ಮಿತ್ರಪುತ್ರಸಂಹರ = ಸೂರ್ಯನ ಮಗನಾದ ಯಮನನ್ನು ನಾಶ ಪಡಿಸಿದವನು : ಶಿವ : ತುಂಗಮಹಿಮಾಕರ ಭೀಕರ ವಿಕೃವುತ್ಪ್ರಸಂಹರ . . . ಜಂಪ್ಪ ಶರಪಸೆ (ಜಾಕಟ. ೦೬-೩೬). [ಸಂ.]

ಮಿತ್ರಬಲ (ನಾ). ಸ್ನೇಹಿತರಾಜರ ಬಲ : ಆಪಿಲ ಕಾರ್ದೂಲಂಗಳೇ ಮಿತ್ರ ಬಲಮಾಗಿಯುಂ ನಿಸರ್ಗದುರ್ಗನಿರಿಗುಹಾಗಹ್ವರಂಗಳೇ ದುರ್ಗಂಗಳಾಗಿಯುಂ . . . ಮೃಗಾಧಿರಾಜಪದವಿಯೊಳಾಧಿತಕ್ಕಮನಾತ್ಮಸ್ವೀಕೃತಂ ಮಾಡಿ(ಕಂಚಿಕಂ. ೪. ೨೨-೦೦). [ಸಂ.]

ಮಿತ್ರಭಾವ (ನಾ). ಗೆಳೆತನ ; ಮೈತ್ರಿ : ಅವರಲ್ಲಿ ಪರಿಚಯಾಭ್ಯಾಸ ವೆಂಬುದಿಲ್ಲ ಮಿತ್ರಭಾವಪೂರ್ವಮಿಲ್ಲ (ಪಂಚತಂ. ೨೦೦-೬). [ಸಂ.]

ಮಿತ್ರಭೇದ (ನಾ). ೧. ಸ್ನೇಹಿತರಲ್ಲಿ ಉಂಟಾಗುವ ಒಡಕು. — ವ್ಯತ್ಯಾಸ. ೨. ಕನ್ನಡದ ಪ್ರಸಿದ್ಧಗ್ರಂಥವಾದ 'ಪಂಚತಂತ್ರ'ದ ಮೊದಲನೆಯ ಭಾಗ. [ಸಂ.]

ಮಿತ್ರಮಂಡಲ, ಮಿತ್ರಮಂಡಳ (ನಾ). ೧. ಸೂರ್ಯಮಂಡಲ. ೨. ಸ್ನೇಹಿತರ ಗುಂಪು. ೧, ೨ : ಪುಸಿಕರಮಂಡಲಮಿಂದು ಪತ್ಯಮಂಡಲಾಭಂ ಸ್ಪಷ್ಟೇಂದ್ರ ಮಸುಳ್ದುದು ವೇಗಂ ನಿಮಿರಲ್ ಬಗೆದಪುದೀ ಮಿತ್ರಮಂಡಲಂ ಮಿತ್ರಮಂಡಲಾಭಂ ನಿಪ್ಪಾ (ಜಪ. ೦೨-೩೨). **ಮಿತ್ರಮಂಡಳ** : ೧, ೨ : ರವಿರಾಜಮಂಡಳಂ ಕಾಂದಿ ಪವ್ಮತೇಜವಿಭವದೊರ್ಮೆಯುಂ ಪೆರ್ಚದು ಧಾವಿಪೊಯ್ದಿ ಮಿತ್ರಮಂಡಳಮುಚಿತಮುಮಂ ತಾಳ್ದುದಂತ ದುಚಿತಂ ಚಿತ್ರಂ (ಕಿಸ್ಕಿ. ೬-೬). [ಸಂ.]

ಮಿತ್ರಮಂಡಳ 'ಮಿತ್ರಮಂಡಲ' ನೋ.

ಮಿತ್ರಲಕ್ಷಣ (ನಾ). ಸ್ನೇಹಿತನಲ್ಲಿರಬೇಕಾದ ಗುಣ. — ಲಕ್ಷಣ : ಶೀಲಂ ಮಹಾಸ್ನೇಹಂ ಇವು ಮೊದಲಾವ ಮಿತ್ರಲಕ್ಷಣಂಗಳಾವನಲ್ಲಿಯುಂಟು ಆ ಮಿತ್ರನಲ್ಲಿ ತಾನಿಹುದು (ಪಂಚತಂ. ೨೧೬-೨೨). [ಸಂ.]

ಮಿತ್ರಲಾಭ (ನಾ). ೧. ಸ್ನೇಹಿತರನ್ನು ಗಳಿಸಿಕೊಳ್ಳುವಿಕೆ ; ಗೆಳೆಯರನ್ನು ದೊರಕಿಸಿಕೊಳ್ಳುವಿಕೆ. ೨. ಸಂಸ್ಕೃತದ ಪ್ರಸಿದ್ಧಗ್ರಂಥವಾದ 'ಹಿತೋಪದೇಶ'ದ ಮೊದಲನೆಯ ಭಾಗ. [ಸಂ.]

ಮಿತ್ರವಿಯೋಗ (ನಾ). ೧. ಸೂರ್ಯನ ಅಗಲಿಕೆ. — ವಿರಹ : ಮಂಥರನಂ ವ್ಯಾಧನುಯ್ದನೆಂದು ಮಿತ್ರವಿಯೋಗದಿಂ ಕಿಜ್ಜಿಮುಂ ಭೀಗಂ ದುಃಖಿತರಾಗಿರ್ದಗೆಯ್ವಿಮನೆ (ಪಂಚತಂ. ೨೭೬-೨). ; ಮಿತ್ರವಿಯೋಗದೊಳೀ ಶತಪತ್ರಂ ಕಡುಗಂದಿ ಕುಂದುಗೊಂಡಿರ್ಪುದು (ಪಂಭಾ. ೬-೬). ೨. ಸ್ನೇಹಿತನ ಅಗಲಿಕೆ. — ವಿರಹ : ಮಿತ್ರವಿಯೋಗದೊಳೀ ಶತಪತ್ರಂ ಕಡುಗಂದಿ ಕುಂದುಗೊಂಡಿರ್ಪುದೇಂ ಚಿತ್ರಮೆ ದೇಹಿಗೆ ಮಾಟ್ಟುಂ ಮಿತ್ರವಿಯೋಗಂ ವಿಶೇಷಮಾಪ್ತ ದಪಟಲಂ (ಪಂಭಾ. ೬-೬). [ಸಂ.]

ಮಿತ್ರವಿರಹ (ನಾ). = ಮಿತ್ರವಿಯೋಗ ೧ : ವಿಮಲದಿವಸಾನದೊಳ್ ಕಮಳವನಂ ವೀರೊಡಿ ನಾಡೆ ಬಾಡಿದುದೇಂ ಚಿತ್ರಮೊ ಮಿತ್ರವಿರಹದೊಳ್ ಕೊರಗುತ್ತುದೆವೆ ರಜೋಧಿಕಂ ಜಡಾಶಯನಿಳಯಂ (ಕಿಸ್ಕಿ. ೦೬-೨೦). [ಸಂ.]

ಮಿತ್ರಸಮ್ಮಿತ (ನಾ). [ಕಾವ್ಯಮೀ] ಪ್ರಭುಸಮ್ಮಿತ. ಮಿತ್ರಸಮ್ಮಿತ ಮತ್ತು ಕಾಂತಾಸಮ್ಮಿತವೆಂಬ ಮೂರು ಬಗೆಯ ಅಲಂಕಾರಪ್ರಕಾರಗಳಲ್ಲಿ ಒಂದು : ಪ್ರ"ಸಮ್ಮ ಕರ್ತವ್ಯಾಕರ್ತವ್ಯಗಳಿಗೆ ಸಾಧಕಬಾಧಕಗಳು ಕಡುಬಿರುವಂಥ ಕಥೆಗಳನ್ನು ರಸಪ್ರಾಧಾನ್ಯವಿಲ್ಲದೆ ಹೇಳಿ ನೀತಿಯನ್ನು ಸೂಚಿಸುವ ಪುರಾಣಾದಿಗಳು 'ಮಿತ್ರಸಮ್ಮಿತ' (ಕೃಬ. ೦೬೮ ೩೩೬) : ಪ್ರಭುಸಮ್ಮಿತ ಮಿತ್ರಸಮ್ಮಿತ ಕಾಂತಾಸಮ್ಮಿತ ಎಂಬ ಮೂರು ಜೋಲಿಕೆಗಳು ಈ ಮೂರರ ಪಾಲಿಪುದನ್ನು ಸೂಚಿಸುತ್ತದೆ (ಜಾಕವಿ. ೨೬೪). [ಸಂ.]

ಮಿತ್ರೆ (ನಾ). ಗೆಳತಿ : ಸ್ನೇಹಿತೆ : "ಸಾರಜ್ಞೆ ಮಿತ್ರೆ ಸಖಿಯಾಳ್ ಸಹಜೀವಿತವಯಸ್ಯೆಯೆಂಸೆ ಕೆಲವಿಪುರ್ಕುಂ" (ಪಾಂಗಣಾ. ೧೦-೩) ; ಏಮಿತ್ರೆ ನೋಡೆ ! ನೋಡೆ ! ನೀಡುಂ ನೀಡದ ಪಕ್ಕಿಯುಮೆನ್ನಂ ಬಂಜೆಯೆನುತೇಡಿಪಂತಿರೆನ್ನಿದಿರೊಳ್ ಬಿಳ್ದಪುಂ ಪುಯ್ದಗೆಯ್ದುಂ (ರಾಮಾಶ್ವ. ೦೬-೪) : ಮಿತ್ರೆಯರು ನಡಗೂಡಿಯೂ ಸುಬಿಕ್ಕಿ . . . ಒಪ್ಪಿರೆ ತೊಗುದುಂಬಿಡೊಳು (ಜಾಗಣ. ೨೫-೦೦). [ಮಿತ್ರ + — ಎ]

ಮಿಥ (ಅ). ೧. ಪರಸ್ಪರವಾಗಿ ; ಒಂದಕ್ಕೊಂದು ಪೂರಕವಾಗಿ. ೨. ರಹಸ್ಯವಾಗಿ ; ಗುಟ್ಟಾಗಿ. ೩. ಪರ್ಯಾಯವಾಗಿ ; ಬದಲಾಗಿ. [ಸಂ. ಮಿಥಸ್]

ಮಿಥಸ್ಸ್ಪರ್ಧೆ (ನಾ). ಪರಸ್ಪರ ಮಾಡುವ ಹುರುಡು. — ಪೈಪೋಟಿ : ಬಿಸಿಲುಂ ಬಿರ್ದಿಂಗಳುಂ ಕಟ್ಟುಲೆಯುಮಿವೆ ಮಿಥಸ್ಸ್ಪರ್ಧೆಯಂ ಮಾಣ್ದು ಪೂಣ್ದೊಂದು ಸವಿತ್ರಂ ಪೆರ್ಚ್ ನಿಚ್ಚಂ ನೆಲೆಸಿದುವ್ (ಕಂಕ್ರಕ್ಕೆ. ೦೦-೪೦). [ಸಂ. ಮಿಥಸ್ಪ್ಪರ್ಧಾ]

ಮಿಥುನ (ನಾ). ೧. ಜೋಡಿ ; ಯುಗ್ಮ ; ಜುಗಳ : ಶ್ರೀವಸ್ಯಹಾನೇತ್ರವೆನಿಸುವ ಚಕೋರತತಿ ರಾಮಣೀಯಕಮಿಥುನಮೇಂ ಚಕೋರಕಗಳು ನಲಿಯೆ (ಚಾಪಂ. ೪-೬). ೨. ಹೆಣ್ಣು ಮತ್ತು ಗಂಡಿನ ಜೋಡಿ ; ದಂಪತಿ : "ಸ್ತ್ರೀಪುರುಷರಿರ್ವರುಮಂ ಮಿಥುನಮೆಂಬುದು" (ಹರಿಹರ. ೦೦೬-೦೩) ; ರಾಜಹಂಸವಾರಾವತಮಿಥುನಂಗಳುತ್ತುಂಗಪ್ರಾಸಾದಶಿಖರವರ್ತಿಂತರಾಳವಿವಿಧಗೃಹೂತರಗತಾಂಗಳಾದುವು (ಪಂಕಚಾ. ೪-೪೫) ; ಅಂತಲ್ಲಿ ಜಿನ ಚಂದ್ರ(ವಿನವ) ಶ್ರೀಪೋಣನುಂ ಸಿಂಹನಂದಿಯುಂ ಮಿಥುನರಾದರ್ (ಜಾಂಚಕ್ಕ. ೬-೦೨೪ ಪ) ; ಮನೋಜಸುಖಿಕ್ಕಳವಳಿಸುವಾಗಳ್ ರಥಾಂಗಮಿಥುನಶತಂಗಳ್ (ಪಾರ್ಶ್ವ. ೭-೦೦೬). ೩. ಅವಳಿ ಜವಳಿ ; ಯಮಳ. ೪. ಕೂಟ ; ಸಂಭೋಗ ; ಮೈಥುನ. ೫. [ಜ್ಯೋತಿ] ಜ್ಯೋತಿಶ್ಚಕ್ರದ ಹನ್ನೆರಡುರಾಶಿಗಳಲ್ಲಿ ಮೂರನೆಯದು ; ಭಮು ಭುಜಂ ಸಂದಂ ಮಿಥುನಂ ದ್ವಿಸ್ವಭಾವರಾಶಿಗಳೆನಿಕುಂ (ಜಾಕ. ೦-೨೬) : ಮೇಷ ಪ್ರಜಭ ಮಿಥುನ . . . ಮಾನಮೆಂಬ ಹನ್ನೆರಡುರಾತಿಗಳುಂ . . . ತಮ್ಮ ಅಧಿಕಾರಮಂ ಮಾಡುತ್ತಿರ್ಪವು (ಶಿವೀ. ೨೦೦). [ಸಂ.]

ಮಿಥುನತ್ವ (ನಾ). ದಂಪತಿಗಳಾಗಿರುವಿಕೆ : ಪುಟ್ಟಿದ ಜೀವರಾಶಿ ಮಿಥುನತ್ವದೂಳಲ್ಲದೆ ಪುಟ್ಟದು (ಜಾಂಚಕ್ಕ. ೬-೦೦೬). [ಸಂ.]

ಮಿಥುನರ್ಕ್ಷ (ನಾ). = ಮಿಥುನ ೫ : ದಿನನಾಥಂ ಮಿಥುನರ್ಕ್ಷದೊಳ್ ನೆಲಸೆ ವಿಧ್ಯಾಪಾರಗಂ ಜ್ಞಾನಿ ಧನ್ಯನಿಕ್ಕುಂ . . . ನರಂ (ಜಾಕ. ೦೬-೦೩). [ಸಂ.]

ಮಿಥುನೀಕರಿಸು (ಕ್ರಿ). (ಸಂಭೋಗದಲ್ಲಿ) ಸೇರಿಸು : ಸುರಸರೋವರಗರ್ಭದೊಳ್ ಮಿಥುನೀಕರಿಸಿಕೊಂಡಿಹರ್ಪೆಸೆ ಗುಹ್ಯವ ಲಂಪಟದ ಬದುಕು (ಅಮ್ಮಕ. ೨-೭೬) ; ಕುಸುಮಲತಾವಾಪ್ತಿಗಳಂ ಅಲ್ಲಿಯಲ್ಲಿಯ ಕ್ರೀಡಾಪರ್ವತದ ಗುಹಾಂತರದೊಳ್ ಮಿಥುನೀಕರಿಸಿ (ಪಾಗಂದಿ. ೨೯೦-೦೦). [ಸಂ. ಮಿಥುನೀಕರಣ + —ಇಸು]

ಮಿಥೋಯುಂಕ್ತ (ನಾ). [ನಾಟ್ಯ] ಎಂಟು ಬಗೆಯ ಹೆಜ್ಜೆಗಳ ಚಲನೆಗಳಲ್ಲಿ ಒಂದು : ಪರಸ್ಪರ ಕೂಡಿಕೊಂಡಂತಿರುವ ಹೆಜ್ಜೆಗಳ ಚಲನೆ : ಉತ್ಕ್ಷಿಪ್ತ, ಪತಿತ, ಉತ್ಕ್ಷಿಪ್ತಪತಿತ, ಅಂತರ್ಗತ, ಬಹಿರ್ಗತ, ಮಿಥೋಯುಂಕ್ತ, ವಿಯುಂಕ್ತ, ಅಂಗುಲಿಸಂಗತ — ಈ ಎಂಟು ಪಾರ್ಶ್ವಯ ಭೇದಂಗಳ್ (ಜಪ್ರಹಂ. ೬-೦೦೦ ಪ). [ಸಂ.]

ಮಿಥ್ಯ (ನಾ). ೧. ಸುಳ್ಳು ; ಹುಸಿ ; ಸಟೆ : ಕ್ರೋಧಾಹರ್ಷಾದ್ರಮಿಥ್ಯಂಗಳಂ ಪರಿಹರಿಸಿ ಪ್ರಾಹ್ಮಣೋತ್ತಮನುನೀಶ್ವರನಿಸಿ ನೀವೆ . . . ಮೂಜಗವ ನಿಬ್ಬೆರಸಿ ದೇವರ ಪಿಂಡಿ ಪೀಯಲು (ಪಚಾ. ೬-೦೬). 'ಮಿಥ್ಯವಂತ' ಪರಾ. ೨. ಮಾಯೆ ; ಭ್ರಮೆ : ಮಿಥ್ಯವನೇ ಪಿಡಿದು ಮಿಥ್ಯವನೇ ಪೂಜಿಸಿ ಪಂತರ್ಕ್ಕೋಕವ ಭೃತ್ಯರೆಲ್ಲ ವೃಥಾವಾದರಲ್ಲ (ಕವಾಂ. ೨೭೭-೦೨೬). [ಸಂ. ಮಿಥ್ಯಾ]

ಮಿಥ್ಯವಂತ (ನಾ). ಸುಳ್ಳುಗಾರ ; ಅಸತ್ಯವಾದಿ : ಜಗವಲ್ಲಿ ಹೊತ್ತು ಹೋರುವ ಮಿಥ್ಯವಂತರಿಗೆ ತತ್ತ್ವದ ಸುದ್ದಿಯು ಹೇದರೆ ನಿತ್ಯರುಗಳಾದರೂ ಕಪ್ಪನಸಾರನೀವೆ (ಹೋಗಪ. ೨೬-೬೯). [ಮಿಥ್ಯ + ವಂತ]

ಮಿಥ್ಯವಾದಿ (ನಾ). = ಮಿಥ್ಯವಂತ : ಒಡೆಯನತಿಕೋಪಿ ಪೇಡತಿ ಮಹಾಮೂಢಿ . . . ನೆರೆಮನೆಯವರು ಮಿಥ್ಯವಾದಿಗಳು (ಪಡಣ. ೦೨-೩).

[< ಸಂ. ಮಿಥ್ಯಾವಾದಿನ್]

ಮಿಥ್ಯಾಚತುಷ್ಟಯ (ನಾ). ಇದು ಸುಳ್ಳು, ಇದರ ಪರಿಚಯ ನನಗಿಲ್ಲ, ಆಗ ಅಲ್ಲಿ ನಾನಿರಲಿಲ್ಲ ಮತ್ತು ಆ ಕಾಲಕ್ಕೆ ನಾನು ಹುಟ್ಟಿರಲಿಲ್ಲ ಎಂಬ ನಾಲ್ಕು ಬಗೆಯ ಸುಳ್ಳುಗಳು : ತದ್ಭಾವಾನಸನದೊಳ್ ನಿಂದು ಮಿಥ್ಯಾಚ[ತು]ಷ್ಟಯಾಲಂಕಾರವಮಾಗಿರ್ದ ಚತುಃಪಥಸ್ಥಾಮಂಟಪದೊಳಿರ್ದ ವಿಟಕೋಟಿಯಂ ಕಂಡು (ಜಾಂತಿಪು. ೬-೧೦ ಪ).

ಮಿಥ್ಯಾಚರಣ (ನಾ). ಬೂಟಾಟಿಕೆ ; ಕಪಟಾಚರಣೆ ; ಸೋಗು : ಮಿಥ್ಯಾಜ್ಞಾನತೆಯಿನಸ್ಮತ್ಸ್ಥಾಚರಣಕ್ಕೆ ನಂಮ ಸಲೆ ಸತ್ಪಥಮಂ ತಪ್ಪಮೆನೊಲ್ಲದೆ ರೋಗಿಗವಧ್ಯಕ್ರಿಯೆಯಂತಾದ ತೆಱದೆ ಕಿಡುವರ್ ಪಲರುಂ (ಸಂವೃತ್ತ. ೦೦-೦೩).

[ಸಂ.]

ಮಿಥ್ಯಾಚರ್ಯೆ (ನಾ). ೧.=ಮಿಥ್ಯಾಚರಣ. ೨. ಸುಳ್ಳು; ಅಸತ್ಯ : "ಈರ್ಷ್ಯಾ, ಕುಪನಾ- ಡಂಭಃ- ಮಿಥ್ಯಾಚರ್ಯಾ . . . ಶಕ್ತಕಲ್ಪನಾ — ಈ ೧೨ ಮಾಯೆ" (ಹರಿಶಮು. ೦೨೨-೩೬).

[ಸಂ. ಮಿಥ್ಯಾಚರ್ಯಾ]

ಮಿಥ್ಯಾಚಾರ (ನಾ). = ಮಿಥ್ಯಾಚರಣ : ನಾರೀಸಹಜವಾದ ಅಸೂಯೆ ಮತ್ತು ಪತಿಯ ವಿಶ್ವಾಸಘಾತದ ಹಾಗು ಮಿಥ್ಯಾಚಾರದ ಆರಂಕೆ . . . ಚೆನ್ನಾಗಿ ಮೂಡಿಬಂದಿದೆ (ಇಪ್ಪಳ. XIX- ಮುಃಪ್ರ).

[ಸಂ.]

ಮಿಥ್ಯಾಚಾರಿ (ನಾ). ಬೂಟಾಟಿಕೆ ಮೂಡುವವನು ; ಕಪಟವಾದ ಆಚರಣೆಗಳಲ್ಲಿ ತೊಡಗುವವನು : ಸನಾತನಧರ್ಮವನ್ನು ಒಪ್ಪದವರೂ ವಿರೋಧಿಸುವವರೂ ಸನಾತನಿಗಳೇ ಆದರೂ ಅಂಥವರಿಗೂ ನಿರ್ಬಂಧವಿಲ್ಲ. ಅಂಥಾದರು ನಟನೆ ಮಾಡಿ ಮಿಥ್ಯಾಚಾರಿಗಳಾಗಬೇಕಾದುದಿಲ್ಲ (ಆಡುಗ. ೩೦).

[ಸಂ. ಮಿಥ್ಯಾಚಾರಿನ್]

ಮಿಥ್ಯಾಜ್ಞಾನ (ನಾ). [ತತ್ತ್ವಶಾ] ತಪ್ಪು ತಿಳಿವಳಿಕೆ; ಅಜ್ಞಾನ: ಶತಮಿತಿ ಮಿಥ್ಯಾಜ್ಞಾನಾಮೃತಮಿತಿ ಸದಂ ದ್ವಿತೀಯಸನಕಕ್ಕೀ ಸಂಸೃತಿಯೊಳ್ ಧರ್ಮಾಧರ್ಮಸ್ಥಿತಿಯೆ ವಲಂ ಸ್ವರ್ಗನರಕಸುಖವಿದುಃಖಕರಂ (ಅಪು. ೩-೭೭); ಈತನಟ್ಟಿತನರ್ಪಿಸಿ ವಿಪರೀತ ಮಿಥ್ಯಾಜ್ಞಾನ ತೋಜೆದಿತನಲಿ ತಪ್ಪನು (ಕುಣ್ಯಾಸ. ೯-೦೦) ; ಒಂದು ವಸ್ತುವನ್ನು ಮತ್ತೊಂದೆಂದು ತಪ್ಪಾಗಿ ತಿಳಿಯುವುದೇ ಅಧ್ಯಾಸವು. ಅಧ್ಯಸ — ಭ್ರಾಂತಿ. ಮಿಥ್ಯಾಜ್ಞಾನ. ಮಿಥ್ಯಾಪ್ರತ್ಯಯ— ಇವೆಲ್ಲಾ ಪರ್ಯಾಯಪದಗಳು (ಪ್ರಜ್ಞಾಶಾ. ೦೦).

[ಸಂ.]

ಮಿಥ್ಯಾಜ್ಞಾನಿ (ನಾ). ೧. [ತತ್ತ್ವಶಾ] ಸರಿಯಾದ ತಿಳಿವಳಿಕೆಯಿಲ್ಲದವನು : ಅಜ್ಞಾನಿ : ವಂತ್ತಿನ ಮಿಥ್ಯಾಜ್ಞಾನಿಯೋಲ್ ನೀಂ ಪರಿತೆ ವೆಸಿಂತೇಕೆ ವಿಭ್ರಾಂತನಪ್ಪೆ (ಆದಿಪು. ೬-೬) ; ಗರ್ವಿತರು ಮಿಥ್ಯಾಜ್ಞಾನಿಗಳು ಕಲಿಮುಗವ ಮಾನುಜರು (ಕುಣ್ಯಾಶ. ೦೦-೭೪). ೨. ತಾನು ಜ್ಞಾನಿಯೆಂಬ ತಪ್ಪು ತಿಳಿವಳಿಕೆಯುಳ್ಳವನು : ಮಾನಸಮಂತುಂ ಮಿಥ್ಯಾಜ್ಞಾನಿಗಳೆರ್ದೆಯೊಳಗೆ ಪೆಲಸಲೀಯದು ನಾಲ್ಕುಂ ಮಾನಸ್ತಂಭಂಗಳ್ ಶತ್ರಾನದ್ವಂಗಳ್ ನಿರಂತರಂ ಸೊಗಯಿಸುಗುಂ (ಆಪು. ೦೦-೨೪) ; ಪ್ರಪಸಿತನೆಂಬೊಂ ಪುಂಗನಾತನ ಕೆಳೆಯುಂ ವಿಕಸಿತನೆಂಬಿರ್ವರುಂ ಮಿಥ್ಯಾಜ್ಞಾನಿಗಳು ಶೂನ್ಯವಾದಿಗಳು (ಜಾಪುಂಪು. ೨೦).

[ಸಂ. ಮಿಥ್ಯಾಜ್ಞಾನಿನ್]

ಮಿಥ್ಯಾತಪಸ್ವಿ (ನಾ). [ಜೈನ] ತೋರಿಕೆಗಾಗಿ ತಪಸ್ಸನ್ನಾಚರಿಸುವವನು: ವಂಪಾವೀರನು . . . ಕೇವಲ ದೇಪದವಂನ ಮಾಡುವುದು ಮಿಥ್ಯಾತಪಸ್ಸೆಂದು ಒತ್ತಿಹೇಳಿದನು. ಹಾಗೆ ತಪಸ್ಸುಮಾಡುವವರನ್ನು ಮಿಥ್ಯಾತಪಸ್ವಿಗಳೆಂದು ಹೇಳಿದನು (ಕೃಪಪ. ೩೩೦). [ಸಂ. ಮಿಥ್ಯಾತಪಸ್ವಿನ್]

ಮಿಥ್ಯಾತಪಸ್ಸು (ನಾ). ತೋರಿಕೆಗಾಗಿ ಮಾಡುವ ತಪಸ್ಸು ; ಮಹಾವೀರನು . . . ಕೇವಲ ದೇಪದವುವ ಮಾಡುವುದು ಮಿಥ್ಯಾತಪಸ್ಸೆಂದು ಒತ್ತಿಹೇಳಿದನು (ಕೃಪಪ. ೩೩೦) [ಸಂ. ಮಿಥ್ಯಾತಪಸ್]

ಮಿಥ್ಯಾತ್ವ (ನಾ). ೧. ಸುಳ್ಳು : ಮುಸಿ. ೨. ಅಜ್ಞಾನ: ಭ್ರಾಂತಿ: ಮಾಯೆ : ಸುಕವಿ ಸುಕರಕವಿ ಮಿಥ್ಯಾತ್ವಪ್ರಪರಕವಿ ಸುಭಗಕವಿ ನುತಮಹಾ ಕವೀಂದ್ರಂ ಸರಸ್ವತೀಮುಖವಿಮುಂಕುರಂ (ಕ.ಗ.ಪ್ರಾ. ೦-೩೪). ೩. [ಜೈನ] ತತ್ತ್ವಾರ್ಥದಲ್ಲಿ ಶ್ರದ್ಧೆಯಿಲ್ಲದಿರುವಿಕೆ; "ದರ್ಶನಮೋಹನೀಯವಲ್ಲಿ ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ ಮತ್ತು ಸಮ್ಯಕ್‌ಪ್ರಕೃತಿ ಎಂದು ಮೂರು ವಿಧಗಳು. ನಿಜವಾದ ತತ್ತ್ವಜ್ಞಾನವನ್ನು ಸಂಬದಿರುವುದು ಮಿಥ್ಯಾತ್ವವು" (ಕೃಪಪ ೩೩೦) : ಎಂತಂತೆ ಕೇಳ್ದುಮಂತಂತೆ ಮಿಥ್ಯಾತ್ವಮಿನಿಸಿನಿಸು ಪಿಂಗೆ (ಪಡ್ಮಾಪು. ೩-೦೩) ; ತಮುಮುಂ ದ್ಯುಮಣಿ ಮಯೂಖೋದ್ಗಮಮವರೆವೊಲಲಿಗೆ ಜಗದ ಮಿಥ್ಯಾತ್ವತಮಸ್ತಮಮನಳಂತದೇವ ಪ್ರಮಾಣರತ್ನಪ್ರದೀಪರಶ್ಮಿಕಲಾಪಂ (ಅಪು. ೦೦೩).

[ಸಂ.]

ಮಿಥ್ಯಾದರ್ಶನ (ನಾ).= ಮಿಥ್ಯಾತ್ವ ೨ : ಮಿಥ್ಯಾದರ್ಶನಾವಿರತಿಪ್ರಮಾದ ಕಷಾಯಯೋಗಗೋಪಾರ್ಜಿತಜ್ಞಾನಾವರಣೀಯಾದಿ ಕರ್ಮಂಗಳ್ ಸಂಸಾರ ಕಾರಣಂಗಳ್ (ತಪು. ೦೦-೬೬ ಪ).

[ಸಂ.]

ಮಿಥ್ಯಾದೃಷ್ಟಿ (ನಾ). ೧. ಇರುವುದನ್ನು ಇಲ್ಲವೆನ್ನುವ ವಾದ : ಪಾಷಂಡವಾದ: ನಾಸ್ತಿಕತೆ : "ಮಿಥ್ಯಾದೃಷ್ಟೀ, ನಾಸ್ತಿಜಾ — ೨ ಪರಲೋಕವಿಲ್ಲವೆಂಬ ಅಪ್ರಮಾಣಕಬುದ್ಧಿಯ ಹೆಸರುಗಳು. ಅಂದರೆ ವ್ಯಾವಹಾರಿಕವೇ ಇಲ್ಲವೆನಿಪ ಬೌದ್ಧಭ್ರಾಂತಿ" (ಸಿಡ್ಕಾಂತಿ. ೧೩); ಸಂಯ್ಮ ಮಿಯ ವರ್ತನೆ ಲೋಕವಿಲಕ್ಷಣವಾವುದು. ಅವನು ತತ್ತ್ವದೃಷ್ಟಿಯಲ್ಲಿ ಸದಾ ಜಾಗರೂಕನಾಗಿಯೂ, ಮಿಥ್ಯಾದೃಷ್ಟಿಯಲ್ಲಿ ವಿಮುಖನಾಗಿಯೂ ಇರುವನೆಂಬುದನ್ನು ವಾಕ್ಯ ಧ್ವನಿಸುತ್ತದೆ (ಕೃಪ್ರಾಕೋ. ೦೨೦). ೨. [ಬೌದ್ಧ] "ಇಹವನ್ನೂ ಪರವನ್ನೂ ಕುರಿತು ತಪ್ಪುಭಾವನೆಗಳುಳ್ಳವನು" (ಹಕ್ಕುಶು. ೦೩ ಟಿಕ್ಕ ೫) : ಹೇಗುಸಾಗಿ ಇದ್ದು. ಮಿಥ್ಯಾದೃಷ್ಟಿಯವರ ಮನೆಯಲ್ಲಿ ವಾಸಮಾಡಿಯೂ, ಧರ್ಮಕ್ಕಾಗಿ ಹೀಗೆ ಪರಿತ್ಯಾಗ ಮಾಡಿದವರು ಬೇರೆ ಇನ್ನೊಬ್ಬರಿಲ್ಲ (ಹಕ್ಕುಪ್ರಾ. ೩೪).

[ಸಂ.]

ಮಿಥ್ಯಾದೃಷ್ಟಿ (ನಾ). [ಜೈನ] ಮಿಥ್ಯಾದರ್ಶನಸಹಿತನಾದ ಜೀವಿ ; ಸಮ್ಯಕ್ತ್ವಜ್ಞಾನವಿಲ್ಲದವನು; ಅಭವ್ಯ : ಮಿಥ್ಯಾದೃಷ್ಟಿಗಳಶಕ್ಯವರ್ ಶ್ರಾವಕಬ್ರುತಂಗಳಂ ಕೈಕೊಂಡರ್ (ಪಡ್ಮಾಪು. ೬೭-೬); ಮಿಥ್ಯಾದೃಷ್ಟಿಯಪ್ಪಂ ತನ್ನನೆಂತುಂ ಸಮಾಜಿ ನೆಗಟ್ಟ್ಕೊಡ ಮಾತನಾಪತ್ರಮೆ (ಅಂಕ. ೦೦ ೯ ಪ) ; ಜನಾಪವಾದಭಯದಿಂದೆನ್ನಂ ಬಿಸುಟ್ಟುಂತೆ ಮಿಥ್ಯಾದೃಷ್ಟಿಗಳ ಸಂಡಿಯಂ ಕೇಳ್ದರ್ಹತ್ಪರದೇಶ್ವರ ಶ್ರೀಧರ್ಮಮಂ ಬಿಸುಡದಿರ್ಪುದು (ಸಂಂಪಪ. ೦೫-೭೩ ಪ).

[ಸಂ.]

ಮಿಥ್ಯಾಧರ್ಮ (ನಾ). ನೈಜವಲ್ಲದ ಧರ್ಮ; ಕಪಟದಿಂದ ಕೂಡಿದ ಧರ್ಮ : ಮಕ್ಕಳಿಲ್ಲದವಗೂ ಮುಮುಕನೂ ಅದೆ ನೀನು ಮಿಥ್ಯಾಧರ್ಮವನ್ನು ಜೋಗಿಸಿ, ಮುದಿಪಾಸದಾತ ಜ್ಞಾತಿಗಳಂತ ಕೂಲಿಗೆ ಗುರಿಯಾಗುತ್ತೀಯೆ (ವಣಿ- ೮೭).

[ಸಂ.]

ಮಿಥ್ಯಾಧ್ಯವಸಿತಿ (ನಾ). [ಕಾವ್ಯಮೀ] ಒಂದು ಬಗೆಯ ಅಲಂಕಾರ; ಪ್ರ "ಒಂದು ಅರ್ಥವ ಸುಳ್ಳೆಂದು ಸಾಧಿಸಲು ಅಪ್ರಕೃತವಾದ ಮತ್ತೊಂದು ಸುಳ್ಳನ್ನು ಕಲ್ಪಿಸಿ ಹೇಳುವುದಾದರೆ ಮಿಥ್ಯಾಧ್ಯವಸಿತಿ" (ಕಾವಲಂ. ೨೫೯ ಟಿಪ್ಪ ೨): ಪ್ರಯೋಜನಾರ್ಥ ಸಿದ್ಧಿಗಾಗಿ ಪ್ರಸಿಯಿಂದರ್ಥಾಂತರ ಕಲ್ಪನೆ ಮಾಡಿ ಪೇಳಲ್ ಮಿಥ್ಯಾಧ್ಯವಸಿತಿಯೆನಿಪುವೆದು (ಕ.ಕಲಂ. ೦೨೨).

[ಸಂ.]

ಮಿಥ್ಯಾಪವಾದ (ನಾ). ಇನ್ನೊಬ್ಬರ ಮೇಲೆ ಹೊರಿಸುವ ಅಸತ್ಯವಾದ ಆರೋಪ ; ಸುಳ್ಳುಪಾದನೆ : ಮಿಥ್ಯಾಪವಾದದಲ್ಲಿ ಮಾನಸಚ್ಯುತ, ಮಾನಸಚ್ಯುತದಲ್ಲಿ ಮಿಥ್ಯಾಪವಾದ ಇವು ಹೇಗೆ ಪರಸ್ಪರಾಂತರ್ಗತವಾಗುತ್ತವೆ? (ಕ್ಷಕರು. ೬೬೧); ಮೂರ್ತಿವಂತದೈನ್ಯವೇ ಅವಳಾಗಿ ನಿಂತಿರುವುದನ್ನು ಕಂಡಾಗ ಎಂಥ ಮಿಥ್ಯಾಪವಾದ ಎಂದಿದ್ದರು ಮನಸ್ಸು (ಕೃಚಕ್ಷ. ೨೨).

[ಸಂ.]

ಮಿಥ್ಯಾಪವಾದಿ (ನಾ). ಇನ್ನೊಬ್ಬರ ಮೇಲೆ ಅಸತ್ಯವಾದ ಆರೋಪವನ್ನು ಮಾಡುವವನು : ಸ್ವಾಮಿಕಾರ್ಯವಿಘಾತಕಂಗತಿಕಾಮುಕಗೆ ಮಿಥ್ಯಾಪವಾದಿಗೆ. . . ಪರಲೋಕವಿಲ್ಲ (ಕುಪ್ಪಾಕ. ೪-೩೬).

[ಸಂ. ಮಿಥ್ಯಾಪವಾದಿನ್]

ಮಿಥ್ಯಾಪ್ರತ್ಯಯ (ನಾ). = ಮಿಥ್ಯಾಜ್ಞಾನ : ಒಂದು ವಸ್ತುವನ್ನು ಮತ್ತೊಂದೆಂದು ತಪ್ಪಾಗಿ ತಿಳಿಯುವುದೇ ಅಧ್ಯಾಸವು. ಅಧ್ಯಾಸ, ಭ್ರಾಂತಿ. ಮಿಥ್ಯಾಜ್ಞಾನ, ಮಿಥ್ಯಾಪ್ರತ್ಯಯ _ ಇವೆಲ್ಲಾ ಪರ್ಯಾಯಶಬ್ದಗಳು (ಕೃಷ್ಣಾ. ೦೦).

[ಸಂ.]

ಮಿಥ್ಯಾಭಾವನೆ (ನಾ). = ಮಿಥ್ಯಾದೃಷ್ಟಿ ೩ : ಸಾಗರದತ್ತನೆಂಬ ವರದಂಗೆ . . . ಗುಣವತಿಯೆಂಬ ಮಗಳಾಗಿ ಮಿಥ್ಯಾಭಾವನೆಯಿಂ ಕಾಲಂ ಗೆಯ್ದನಿತಾನುಂ ಕಾಲಂ ತಿರ್ಯಗ್ಗತಿಯೊಳ್ ತಿರಿತಂದು (ಪಂಚಮಿ. ೦೬-೭೯ ಪ).

[ಸಂ. ಮಿಥ್ಯಾಭಾವಾ]

ಮಿಥ್ಯಾಭಿಯೋಗ (ನಾ). = ಮಿಥ್ಯಾಪವಾದ : "ಮಿಥ್ಯಾಭಿಯೋಗ್ಯಾಭ್ಯಾಖ್ಯಾನಂ–ವಿ ಇಲ್ಲದ್ದನ್ನು ಕಲ್ಪಿಸಿ ಆಕ್ಷೇಪಿಸುವುದಕ್ಕೆ ಪೆಸರುಗಳು" (ತಿಣ್ಣಂ. ೩೨): ಮಳಯಕೀತುವೆಂಬ ರಾಜತನೂಜನತಿತೇಜಷ್ಮನಾಗಿ ತನ್ನ ಮಂತ್ರಿ ಮುದ್ರಾರಾಕ್ಷಸಂಗೆ ತಥ್ಯಾಭಿಯೋಗಮಾದೊಡಂ ಮಿಥ್ಯಾಭಿಯೋಗಮೆಂದು ನಿಶ್ಚೈಸಿ (ಪಂಚಮಿ. ೫೮-೦೫). [ಸಂ.]

ಮಿಥ್ಯಾವಾದ (ನಾ). ಸುಳ್ಳುಮಾತು; ಹುಸಿನುಡಿ. [ಸಂ.]

ಮಿಥ್ಯಾವಾದಿ (ನಾ). ೧. [ಅದ್ವೈತ] ಶಂಕರಾಚಾರ್ಯರ ಅನುಯಾಯಿ; ಅದ್ವೈತಿ; ಪ ಅದ್ವೈತಮತದಲ್ಲಿ ಬ್ರಹ್ಮವೇ ಸತ್ಯ, ಜಗತ್ತು ಮಿಥ್ಯೆ ಎಂದು ಹೇಳುವುದರಿಂದ ಆ ಪಂಥಕ್ಕೆ ಸೇರಿದವನಿಗೆ ಮಿಥ್ಯಾವಾದಿಯೆಂದು ಪೆಸರು. ೨. [ಬೌದ್ಧ] ಬೌದ್ಧರಲ್ಲಿ ಒಂದು ಪಂಗಡದವನು : ವಿಜ್ಞಾನವಾದವನ್ನು ಆಶ್ರಯಿಸಿದವನು : ಈ ಸ್ವಸಂವಿತ್ಪರಂಪರೆ ಪೋಕುಂ ಪ್ರಳಯಕ್ಕೆ ತತ್ಕ್ಷಣಿಕ ಮಿಥ್ಯಾವಾದಿ ವಾದೀಂದ್ರರಿಂ (ಪಾಂಪು. ೯-೦೪೩).

[ಸಂ. ಮಿಥ್ಯಾವಾದಿನ್]

ಮಿಥ್ಯಾವಿನಯ (ನಾ). ಕಪಟದಿಂದ ಕೂಡಿರುವ ನಮ್ರತೆ; ಸೋಗಿನ ಸೌಜನ್ಯ : ಕೆಮ್ಮನೆ ನಿಮ್ಮನಚ್ಚಿಗಂಬಡಿಸಿದವೆಂದು ಚಾಟುವಚನಂಗಳಂ ಮೆಜ್ಜಿದುಂ ಮಿಥ್ಯಾ ವಿನಯವಿನೋದೋಪಗೂಹಿತಸ್ವಾ ದತಚಿಂತಿತಚಿತ್ತನಾಗಿರ್ದಂ (ಪಚಂ. ೬-೨೬ ಪ).

[ಸಂ.]

ಮಿಥ್ಯಾಶಲ್ಯ (ನಾ). [ಜೈನ] ವ್ರತಿಕನಿಗೆ ಬಾಧಿಸುವ ಮಾಯೆ, ಮಿಥ್ಯೆ ಮೃತ್ಯು ನಿದಾನ ಎಂಬ ಮೂರು ಬಗೆಯ ಶಲ್ಯಗಳಲ್ಲಿ ಒಂದು : ಮಿಥ್ಯಾದೃಷ್ಟಿಯನ್ನು ಹೊಂದಿರುವುದು : ಪೊಲ್ಲಮೆಯಂ ಮಾಡುವ ಮಿಥ್ಯಾಶಲ್ಯಂ ಮಾಯಾಶಲ್ಯಂ ನಿದಾನಶಲ್ಯಮೆಂಬ ಮೂಱುಂ ಶಲ್ಯಂಗಳಂ ಪಿಂಗದಂ (ಧರ್ಮಾಮೃ. ೫-೦೬೦) ; ಮಿಥ್ಯಾದೃಷ್ಟಿಗಳೊಳಂ ರಾಗಿಸಿದುದು ಮಿಥ್ಯಾಶಲ್ಯಮಕ್ಕುಂ (ಕ್ರಿಪಾಣಿ. ೦೨೬-೩).

[ಸಂ.]

ಮಿಥ್ಯೆ (ನಾ). ೧. ಅಸತ್ಯ ; ಸಟೆ ; ಸುಳ್ಳು : "ಅಳೀಕಂ, ವಿತಥಂ, ಮಿಥ್ಯಾ, ವ್ಯಲೀಕಾ, ಅನೃತಂ – ಈ ೫ ಅಸತ್ಯದ ಪೆಸರ್" (ಕಲಾಮು. ೨೬-೦೧೨): ಪದಪದ್ಮಾನತನಾದ ಕಾದಲವ ಸೋಂಕಿಂದಾದ ರೋಮೋದ್ಗಮಂ ವಿದಿತಂ ಮಾಡೆ ಮಸಃಪ್ರಸಾದವಿದನೇನೆಂದೀರ್ಷ್ಯೆಯಿಂ ಪದುಳಂ ಮಾಡುವೆ ಮುಗ್ಧೆ (ಪುಷ್ಪಕ.೭-೩೬)- ೨. [ತತ್ತ್ವಶಾ] ಅಜ್ಞಾನ : ಮಾಯೆ : ಭ್ರಮೆ : ಮಿಥ್ಯೆಯನಳಿದುಳಿದ ಸತ್ಯಪ್ರಸಾದಿ . . . ಕೂಡಲ ಸಂಗಮದೇವರಲ್ಲಿ ತಾನೇ ಪ್ರಸಾದಿ (ಶಸ. ೧೮೨) : ಮಿಥ್ಯೆಯೆಂಬೊಡೆ ಗಗನಕುಸುಮದೊಲಿತ್ತ ಭಾವಿಪುದುಂ (ಗಗಾಾ. ೨೦-೭೪): ಈ ಜಗತ್ತು ಸತ್ಯವಾದುದು (ಮಿಥ್ಯೆಯಲ್ಲ. ಸುಳ್ಳಲ್ಲ) (ಜಾಕಪ. ೨೬೫). ೩. ಸತ್ತು ಮತ್ತು ಅಸತ್ತುಗಳೆಂಬ ಎರಡು ವರ್ಗಕ್ಕೂ ಸೇರದುದು ; ಸದಸದ್ವಿಲಕ್ಷಣವಾದುದು : ಮಿಥ್ಯೆ, ಸುಳ್ಳು ಎಂಬ ಪದಕ್ಕೆ ಈಗ ಜನರು ಯಾವ ಅರ್ಥವನ್ನು ತಿಳಿಯುವರೋ ಶಾಸ್ತ್ರದಲ್ಲಿ ಆ ಅರ್ಥವಲ್ಲ. ಅದು ಎಂತಹುದೆಂದರೆ ಸದಸದ್ವಿಲಕ್ಷಣವು. ಸತ್ತೆಂದರೆ ಪರಬ್ರಹ್ಮನು. ಅಸತ್ತೆಂದರೆ ಶಶ್ವಂಗ ಮೊದಲಾದ ತುಚ್ಛಪದಾರ್ಥಗಳು. " ಇಂತಹ ಎರಡು ವಿಧವಾದ ಮಾರ್ಗದಲ್ಲೂ ಸೇರಿದುದೆಲ್ಲವೆಂದು ನಿರ್ಣಯವೇ ಮಿಥ್ಯಾಪದದ ಅರ್ಥ (ಪಿಂದಾಾ. ೨೨೪). ೪. = ಮಿಥ್ಯಾಜ್ಞಲ್ಯ : ಶಲ್ಯಗಳು ಮೂರು ಮೂಯ್ತು, ಮಿಥ್ಯಾ ಮೃತ್ಯು ನಿದಾನ . . . ಮಿಥ್ಯೆ ಎಂಬುದು ದೃಷ್ಟಿ ವಿಕಾರವು. ಇದು ತತ್ತ್ವಶ್ರದ್ಧೆಯ ಅಭಾವವೂ ಆಗಿದೆ (ಕ್ರಿಪಾಣಿ. ೨೨೬-೨೬).

[ಸಂ. ಮಿಥ್ಯಾ]

ಮಿದಿ$_1$ (ಕ್ರಿ). ೧. ಬತ್ತ ಮುಂತಾದ ಧಾನ್ಯವನ್ನು ಒನಕೆಯಿಂದ ಕುಟ್ಟು,– ತಳೆಸು,– ತೊಳಸು : "ಮಿದಿ – ಮುಸಲಕ್ಕಿಯಾಯಾಂ (ಕುಟ್ಟು). ಘಾತೆ. ಮರ್ದನಯೋಃ (ಆರಯು. ಜಜ್ಜು)" (ಧಾಮಂ): ಕೊಟ್ಟ ನಿತು ಬತ್ತವ ಮಿದಿದು . . . ಕಾಲವನು ಸವೆಯಿಸುತಿರ್ದನು (ಪಚಂ. ೦೨ ೪): ಲೆಕ್ಕಪರಾರು ಲಲ್ಲಜೆಗಳ ಮೇಲೆ ಧುಮ್ಮಿಕ್ಕಿ ನೃತ್ಯವನಾಡುವಂತೆ ಸೊಕ್ಕಿದ ಗಜದಂತಸುಸಲದಿ ಪೆರ್ಬಿದರಿಕ್ಕಿಯ ಮಿದಿವ ಹೆಣ್ಣುಗಳ (ಪೂಚತ. ೦೯-೬೨). ೨. (ಹಿಟ್ಟಿನಂತೆ) ನಾದು; ಮಿಸ್ದಿ : ಕುಮುಕರು ಬಿಲ್ಲ ಒಲ್ಲಣಿಯು ಕೀಲಿಯನಲ್ಲಿ ಕೆಲರ್ ನಿಶಾಟರುಣ್ಣಿದ ಬಿಸುನೆತ್ತರೊಳ್ ಮಿದಿದು ನುಣ್ಣನೆ ನುಂಗಿದರ್ (ಪಂಪಣಾ. ೦೨-೩) ; ಶಾರಭಾಭ್ರ ಸಂಕುಳೆವನ್ತುಱೆ ಮಿದಿದು[ಣಾಾ. ಮಿದ್ದು] ಮುದ್ದೆಯನಾಗಿಸಿದಲೆಜನೆವಲ್ ಬೆಳ್ಳದೆಟ್ಟಿಸದುದು (ಪಂಪಮ. ೨-೩೯). ೩. ಹಿಸುಕು : ಅಮುಕು : ಮಲ್ಲನ ನಡಸಿ ಪಿವಿದು ಕಡುಖಂ ಕೆಡೆ ಪಿ ಕೊಪ್ಪರದೊಳ್ ಕುಮ್ಮಿ ಮುಂಡಿಯೊಳ್ ಮಿದಿದು ಕುದಿಮ ಸದದು ಸುನ್ನಿಸುವ ಜೊಕ್ಕೆಯದಾಳೆಗೆ ಪೊಕ್ಕ ಮಲ್ಲನಕ್ಕೆ ಮೆಟ್ಟಿ (ಗಿಳ. ೨-೦೦೩ ಪ); ನೆಲೆಗಳ ಸಂದಣಿತ್ತಿ ವಿಂದಿರಾರ್ದಿಱುಮುಣ್ಮುವ ನೆತ್ತರಿಂದೆ ಕೊಪ್ಪರಿಗವೊಳೆರ್ದ ಬತ್ತಿಗಳ ರಾಸಿಗಳಂ ನೆನೆಯಿಕ್ಕಿ (ಕೃಷ್ಣ. ೧೭-೦೨). ೪. ಅರೆ : ನುಣ್ಣಗಾಗಿಸು : ಮರ್ದಿಸು : "ಸಮ್ಮರ್ದ:, ಪರಿಮರ್ದ:–ಈ ೨ ಮಿದಿವುದು" (ಹಲಾಮು. ೦೨೬-೮೪) : ಮಿದಿದಿಂದಾಗಿರೆ ಬಿರ್ದೂರದ ಪಣ್ಣಂ ನಾರಿಕೇಳಮಂ ಶರ್ಕರೆಯಂ ಪದಿದಡುಗೆ ಕಣಿಕದೊಳ್ (ಕೋಕಾಚ. ೬-೬). ೫. ಉಜ್ಜು ; ತಿಕ್ಕು : (ಕ). ೬. ತುಳಿ ; ಮೆಟ್ಟು : 'ಮಿದಿತ' ಪರಾ. ೭. ಕೊಲ್ಲು ; ಸಂಹರಿಸು ; ಬಿರಯಿಯ ಮಿಟ್ಟು[ವ]ಂ ಮಿದಿದೊಡಲ್ಲಿದಣಂ ಮುಳಿಸಾಜಿದೆಂದು ಪಲ್ಕೊರೆದಪನಲ್ಲಿ ಮನ್ಮಥಂ (ಪಂಪಣಾ. ೨-೦೩). ೮. ಅಂಕೆಯಲ್ಲಿರಿಸು ; ದಮನ ಮಾಡು ; ನಿಗ್ರಹಿಸು : ಈ ಸಂಸಾರಿಗಳ ಸುಖಮಾತ್ರವಿದ್ದೆಂದು ಮಿದಿದು ಮನವನು . . . ಪಮರ್ಗವನು ಗೆಲಿದೆನು (ಕಣಗ. ೬-೦೬-೨೬). ೯. ಕೂಡಿಸು ; ಹೊಂದಿಸು : ಪಂಪನು ಅರಿಕೇಸರಿಯ ಸೈನ್ಯಾಧಿಪತಿಯಾಗಿ . . . ಉನ್ನತಿಯ ಮೆಟ್ಟಿಲುಗಳ ತುತ್ತತುದಿಯನ್ನೇರಿದ್ದನೆಂಬುದರಿಂದಲೇ ಆ ಅರಸುದೆಯ ಪದವನ್ನು ಮಿದಿವು ಮೋಡಿಕೊಳ್ಳಬಹುದು (ಕಾಕೋಚ. ೧೧) ; ಪಟ್ಟದಿಯನ್ನೂ ಕನ್ನಡನಾಡಿಯನ್ನೂ ಅವನು ಮಿದಿದು ಪದಗೊಳಿಸಿದ್ದಾನೆ (ಕಾಸಾ. ೦೬೨). [ದೇ.ಗೆ ತಮಿ. ಮಿತಿ; ಮಲ. ಮೆತಿ; ತುಳು. ಮೆದ್, ಮೆದಿ, ಮೆದು; ತೆಲು. ಮೆದುಗು, ಮೆದುಚು, ಮೆದುಪು]

ಮಿದಿ$_2$ (ನಾ). ೧. ಒನಕೆಯಿಂದ ಕುಟ್ಟುವುದು. . ೨. ಸಂಹಾರ ; ನಾಶ : "ಮುಸಲಘಾತದೊಳು ಸಂಹಾರದೊಳು ಮಿದಿ" (ಪಕ್ಷಾಂ. ೧೯).

[<ಮಿದಿ$_1$/ತಮಿ. ಮಿತಿ]

ಮಿದಿಕೂಲಿ 'ಮಿದಿಗೂಲಿ' ನೋ.

ಮಿದಿಗೂಲಿ, ಮಿದಿಕೂಲಿ (ನಾ). ಬತ್ತವನ್ನು ಕುಟ್ಟಿದುದಕ್ಕಾಗಿ ಕೊಡುವ ಮಜೂರಿ ; " ಮಿದಿಗೂಲಿ – ಭತ್ತ ಕುಟ್ಟಿದ ಕೂಲಿ " (ಜಾಪಕೋ. ೩೦). **ಮಿದಿಕೂಲಿ** : ಈ ದೇವರುಗಳ ಅಮೃತಪಡಿ ದಿವ್ವೊದಕ್ಕೆ ನಿತ್ಯಪಡಿ ಅಕ್ಕಿ . . . ಮಿದಿಕೂಲಿ ಸಹಿತ ಸಲಗೆ ಹದಿನಾಲ್ಕು ಕೊಳಗ ಪಸ್ನೂರೆಂದು ಬಳ್ಳ

ಮೂಜಿಲಿ ಲೆಕ್ಕದೆ (ಎಕೆ. V (೬), ೫೮೫. ೫೬-೧೦; 1269).

[ಮಿದಿ$_1$ + ಕೂಲಿ$_1$]

ಮಿದಿತ (ನಾ). ಮೆಟ್ಟುವಿಕೆ ; ತುಳಿತ : ಕಲಹ, ಕಪಟ, ಕುದಿತ, ಮಿದಿತ . . . ಇವಕೆ ಇಗೋ ಹೇಸಿದೆ (ಕಾರಂಗ. ೭೬-೦೬). [ಮಿದಿ$_1$ + — ತ$_3$]

ಮಿದಿಪ, ಮಿದಿಹ (ನಾ). ೧. ಕುಟ್ಟುವಿಕೆ . ಮಿದಿಪಂ, ಮಿದಿಪಂಗಳ್; ತಳಿಪಂ, ತಳಿಪಂಗಳ್ (ಕಣ್ಣಪ್ಪ. ೭೬೨ ಕ್ರಿಯೋ). ಮಿದಿಹ : ೨. ಚೆನ್ನಾಗಿ ಕಲಸುವಿಕೆ : ನಾದುವಿಕೆ : ಕುಂಬಾಜಿನ ಮಣ್ಣ ನಂತೆ ಮಿದಿಹಕ್ಕೆ ವಂದು ಧಾನ್ಯದಂತೆ ಜಗೇವಕ್ಕೆ ವಂದು (ಪಜಾಗಾಖ್ಯ. ೬-೭೭). [ಮಿದಿ$_1$ + — ಪ್ಪ$_3$]

ಮಿದಿಲ್ (ಕ್ರಿ). (?) : ಆ ಮದಕಳಕ್ಕೂರಕೊರತಸೌರಭೇಯಂಗಳ್ . . . ಭೂತಳವಮಂ ಕೊಳಗಿಂ ಪರಡುತ್ತುಮನುಮಾಯ್ಗುಗೆ ಮಿದಿಲ್ದು ಕೆಯ್ಮಿಕ್ಕುವ ಸೊಕ್ಕಾನೆಗಳಂತೆ ತಲೆಯಿಕ್ಕಿ ತೊಲಗದ ಮನದ ಕನಲಿಕೆಯುಂ ಕಾದಿ (ಅರಣ್ಯ. ೪-೦೨೬ ೫). [?]

ಮಿದಿಸು (ಕ್ರಿ). ಧಾನ್ಯವನ್ನು ಒನಕೆಯಿಂದ ಕುಟ್ಟಿಸು : ಎದ್ದು ಮುನ್ನಿನ ದಿವಸದಲಿ ಬಿತ್ತಿದ್ದ ಬೀಜವನಾಯ್ದುಕದಿಂದದ್ದಿ ತೊಳೆತಂದಾಗ ಹುರಿಯಿಸಿ ಮಿದಿಸಿ ಬೋನಮನು ಇಪ್ಪ ಪೆರಿಯಲಿ ಮಾಡಿ ಗಡಣಿಸಿ (ಪಪ್ಪ. ೫೬-೫೯). [ಮಿದಿ$_1$ + — ಇಸು$_5$]

ಮಿದಿಹ ' ಮಿದಿಪ ' ನೋ.

ಮಿದು, ಮಿತು, ಮೆತು, ಮೇದು (ಗು). ೧. ಮೃದುವಾದ; ಮೆತ್ತಗಿರುವ: "ಮಿದು (ಮೆದು, ಮೆಲ್). ಮೃದು=ಮೆತ್ತನೆ" (ಕಡ್ಡಕೋ. ೩೫). ೨. ನಿಧಾನ ಸ್ವಭಾವವುಳ್ಳ. ೩. ಹಿತವಾದ; ಕೋಮಲವಾದ. (ನಾ). ೪. ಮೃದುವಾದುದು ; ಮೆತ್ತಗಿರುವುದು : ಹೊಳೆವ ಮಿದುಮಹ ಹಂಸತೂಲಿದಿ ಮಲಗುತಿಹ ಸತಿಗೀ ವಿಧಿಯೆ (ಕಸ. ೩-೨); ಮೀದು ನಸುಗೆಂಪು ದುಮ್ಮದು ಶೋಭಿಪ ಪಾದತಳಂಗಳಾ ಸುದತಿಗೆ ತೋರ್ದೊಡಾಕೆ ಸೊಬಗಂ ಪತಿಗೊಂದಿಪಳ್ (ಜಾಜಾಸ್ಕ. ೦-೦೩-೩೦); ಹತ್ತಿಯು ಉಣ್ಣೆಯು ಹಾಗೆ ಮಿದುವಿರುತ್ತದೆ (ಕುಂಬಾಜಿ. ೪-೨೬). ೫. ಹಿತ ; ಕೋಮಲ : ಮಿದುವಾಗಿ ಹದಗೊಂಡು ಹರಿವುದೀ ಹಾಡು (ಪಂಪಾ. ೩-೨). **ಮಿತು** : ೪. 'ಮಿತುವಾಸಿಕೆ' ಪರಾ. **ಮೆತು** : ೨. 'ಮೆತುಮನುಷ್ಯ' ಪರಾ. **ಮೆದು** : ೨. ಏನೋ ಮುಂಗಿದಿದೆ ಏನೋ ಬರಲಿದೆ, ರಾಗವಲ್ಲಿ ಮೆದು ಹುಬಗಾಲ (ಅಚಂ. ೫೬೫-೨). ೫. ಆಕೆ " ಮಗುವಿನ ಮೇಲೆ ಇಷ್ಟೊಂದು ಸಿಟ್ಟೇಕೆ? " ಎಂದು ಮೆದುವಾಗಿ ಪತಿಯನ್ನು ಪ್ರಶ್ನಿಸಿದಳು (ಪಾಪುಕ್ಷ. ೨೭). [<ಹಳೆ. ಮೃದು-/ತಮಿ. ಮೆತು; ತುಳು, ಮೆದು; ತೆಲು. ಮೆತ್ತಕ, ಮೆತುಕ, ಮೆತ್ತ; ಕೊಡ. ಮೆತ್ತ್]

ಮಿದುಗ, ಮೆದುಗ (ನಾ). ಮೃದುಸ್ವಭಾವವನ್ನು ಹೊಂದಿರುವವನು ; ನಿಧಾನಸ್ಥ :"ನರಃ . . . ಸರ್ವಾ, ಈ ಳ ಮಿದುಗಂ" (ಕಾಪಕ್ಷ. ೦೪೨). **ಮೆದುಗೆ:** ನಿನ್ನಂತಹ ಹುಡುಗಿಯ ಸ್ವಾತಂತ್ರ್ಯವನ್ನು ಅಂತಹ ಮೆದುಗನು ಹೇಗೆ ಸುಲಭವಾಗಿ ವಶಪಡಿಸಿಕೊಂತನೆಂಬುದೇ ಆಶ್ಚರ್ಯದ . ಸಂಗತಿ (ಅಣಪ. ೩೫೦). [ಮಿದು + —ಗ$_2$]

ಮಿದುಡಿಸು (ಕ್ರಿ). ಚೆನ್ನಾಗಿ ಕಲಸು. —ಮಿಶ್ರಮಾಡು : ತುಪ್ಪದೊಳಗೆ ಮಿದುಡಿಸಿದ ಹುರಿಯೆಳ್ಳು ಹುರಿದ ಹಾಲಿನ ದುದ್ದಿನುದುರೆ ಹಪ್ಪಳದ ಹುಡಿ ಬಡಗಂಡಿಗೆ ಮುಗ್ಗುಳ್ವದದ ಸೊಜ್ಜಿಗೆ ಹುರಿದ ಕೆಂಗಾಯಿ ಕುಸುರೆಯುಂ ಪುದಿದಿಕ್ಕಿ (ಸೂಪಶಾ. ೫-೩೬). [ಮಿದುಡು$_1$ + —ಇಸು$_5$]

ಮಿದುಡು$_1$ (ಕ್ರಿ). ಚೆನ್ನಾಗಿ ಕಲಸು ; ನಾದು ; ಮಿದ್ದು : ಹದವಾಗಿ ಕಾಯ್ದು ಹಾಲಿಸ ಗಟ್ಟಿ ಕನೆಬೆಗವುತದವೊಂದು . . . ತಳಿಗೆಯೊಳಗೆ ಹರಿಹಿ ಕೊಂಡರ್ಧಮಂ ಮಿದುಡಿ ಕಜ್ಜಾಯ ಮಾಡುವುದು (ಸೂಪಶಾ. ೦-೫೯); ಅದು ಬೇಯದುದುರಿದೊಡೆ ಮತ್ತೊಮ್ಮೆ ಚೆನ್ನಾಗಿ ಮಿದುಡಿ ಗೋಳಿಗಳಂ ಮಾಡಿ ತುಪ್ಪದೊಳು ಪುಡಲದು ತಾನೆ ನಕ್ಷತ್ರಪೋಸ (ಸೂಪಶಾ. ೦ ೬೪).

'ಮಿದ್ದು' ಪರಾ. [<ಮಿದಿ$_1$]

ಮಿದುಡು$_2$ ' ಮಿದುಳ್ ' ನೋ.

ಮಿದುದನಿ (ನಾ). ಮೃದುವಾದ ಧ್ವನಿ : ಕೋಮಲಸ್ವರ : "ಸ್ವಲ್ಪ ಹೊರಗೆ ಬರತೀರಾ?" ಎಂದು ಮಿದುದನಿಯಿಂದ ಅಂದಳು (ಗಂಗಾಜಾ. ೫). [ಮಿದು + ದನಿ$_1$]

ಮಿದುನಗೆ (ನಾ). ಮೃದುವಾದ ನಗೆ ; ಮಂದಹಾಸ : ಜೆಲುವೆದು ಮೊಗದೊಳು ವಿಧುನಗೆ ಮೊಳೆದಂದು ದಿಸದಿಸ ಬೆಳಗಿತೋರಂತೆ (ಜಾಜಾಸ್ಕ. ೦೬೬-೩೦). [ಮಿದು + ನಗೆ]

ಮಿದುನುಡಿ (ನಾ). ಇಂಪಾದ ಮಾತು ; ಮೃದುವಚನ : ಪುಲ್ಲಿ ಮಿದುನುಡಿಯಿಂದೆಂದಳು (ಪಪ್ಪ. ೨೬); ಅವರು ಜೀವಂತರಾಗಿರುವರೇಬುದನ್ನು ಕೇಳಿಯೇ ನನಗೆ ಪರಮಾನಂದವಾಗಿ ಹೋಗಿರುವುದು ಎಂದು ಮಿದುನುಡಿಗಳನ್ನಾಡಿದಳು (ಪಪ್ಪ. ೦೩೪). [ಮಿದು + ನುಡಿ$_3$]

ಮಿದುಪು (ನಾ). ಮೃದುವಾಗಿರುವುದು : ಮದನಸುಕಲುಪೂರ್ಣ ಪೀಯೂಷ ಕರಣನಿಂದುದಿತಾಮೃತಂ ತಕ್ಕನುಜಿ ತೀವುತುಳಯಪಾರ್ಶ್ವದೊಳೆಯೆ ತತ್ಪಸಾದವ ಸವಿಯಲೆಂದು ಶ್ರೀಭೂದೇವಿಯರ್ಕಳೊಲ್ದು ಮಿದುಪಾದ ಪೆಚ್ಚೆರೆ [ಪೊಚ್ಚೆರೆ] ಗಳಾಂತಂತೆ ಕಣ್ಗೆ ಚೆಲ್ವುದಮಿದುವು . . . ಕರ್ಣದ್ವಯಂ (ಪಂಪಪು. ೪-೧೪). [ಮಿದು + — ಪ್ಪು]

ಮಿದುಬೆಲ್ಲ (ನಾ). ಮೃದುವಾಗಿರುವ ಬೆಲ್ಲ : ಜಗವೆಲ್ಲವು ಮಿದುಬೆಲ್ಲವು ಅಗೊ ಮಲ್ಲಿಗೆಮೊಗ್ಗೆ (ಪಂಪಾ. ೬-೦೪). [ಮಿದು + ಬೆಲ್ಲ]

ಮಿದುಳು ' ಮಿದುಳ್ ' ನೋ.

ಮಿದುಳ್, ಮಿದುಡು$_2$, ಮಿದುಲು, ಳಿದುಳು, ಮೆದಡು, ಮೆದುಳು (ನಾ). ೧. ಮನುಷ್ಯನ ಮತ್ತು ಇತರ ಕಶೇರುಕಪ್ರಾಣಿಗಳ ತಲೆ ಬುರುಡೆಯೊಳಗೆ ಸುತ್ತುಸುತ್ತಾಗಿ ಬಳಸಿಕೊಂಡು ಮುದ್ದೆಯಂತಿರುವ, ಬುದ್ಧಿಶಕ್ತಿಗೆ ಆಧಾರವಾಗಿರುವ ಒಂದು ಅವಯವ : ಮನುಷ್ಯ:"ಮನುಷ್ಯಜೀಂಬುದು ತಲೆಯ ಮಿದುಳ್" (ಪಠಾಯು. ೦೦೪-೦೬); ಮಿದುಳುಗ್ಗಿ ಪಪ್ಪಕ್ಕತಕೇಬರದಂತಿರೆ ಕೊಂಡುಪೋದರೆಚ್ಚರಸಿಯರೆಗ್ಗಿ ಸತ್ತ ಭಟರಂ ಕೊನೆಮಿಸೆಯ ಚಿಪ್ಪ ಗಂಡರಂ (ಗದಾಯು. ೪-೨೨) ; ಬೀಸಿ ಕರವೆತ್ತಿ ಪೊಯ್ದಡೆ ಸೂಸಿ ಮಿದುಳ್ ಪೊಟ್ಟನೊಡೆಯೆ ತಲೆ (ದೀಪಾ. ೬-೫೬) ; ಮಿದುಳ್ಬೆಣಪಸೆ ಕರುಳ್ಗಳಿಂ ಕಟ್ಟುಗ್ರಪಾದ ರಣರಂಗ ದೊಳ್ಪಾಲಿಕಮುನಿ ರಾಮನಂ ಕಂಡನು (ಕೈವಾಣಾ. ೫೦-೪೬). ೨. ಮೇದಸ್ಸು ; ಕೊಬ್ಬು ; ನೆಣ : ಳುದುಳ್(ಡು= ಮಿದುಳ್ಳು) — ಮೇದಸಂ = ಮೆದುಳು, ಕೊಬ್ಬು " (ಕಡ್ಡಕೋ. ೩೫) 'ಕೊಬ್ಬಿದ್ದುಳ್' ಪರಾ. **ಮಿದುಡು$_2$** : ೧. ಸಿಂಗನೆಬಿಗಿ ಮಿದುಡುಂಡು ಕೆಲಕೊಕ್ಕ ಮುತ್ಸಾನೆಮ ಆಣಮುತ್ಸಗಳಂ . . . ತಿಜ್ಜೊಟ್ಟ (ಪಾಪಾಕ್ಷ. ೬೭-೦೩) ; ತಲೆಯೊಳಗಿನ ಮಿದುಳು ಶುದ್ಧವಾಗಿದ್ದರೆ, ಯಾವತ್ತು ಮನೋವ್ಯಾಪಾರಗಳು ಪ್ರತಿಬಂಧವಿಲ್ಲದೆ ಸಾಗುವೆವು (ಕುಂಬಾಯು. ೪-೨೪). **ಮಿದುಲು** : ೧. ಮಿದುಲಿದಗು ತೊರಳೆ ನೆಣ ಮಸೆ ಪೆತ್ತರ್ಗೊಂಡ ಕಾಳಜಗಳಿಂ ಜವನುಂಡೊಗತಿಯಿದಿಳೆಯ ಪೋಲ್ತುದಾರಣದ ಕಳಂ (ಕಪ್ಪ. ೨-೧೬). **ಮಿದುಳು** : ೧. ರಣದೊಳಿತರ ಶಿರದ ಮಿದುಳೊತ್ತಣವು ಶಸ್ತ್ರಕೆ (ಕುಣ್ಯಕ. ೦೪-೪೦) ; ಖಾನಖಾನರ ಕೆಡಿದು ತಲೆಯ ಮಿದುಳುಗಳ ಬಿತ್ತಿಗಾಗ ರಣಭೂತಗಳಿಗೆ ದಂಡಿಗಳನು ಮುಡಿಸಿದನು (ಕಂಪಪು. ೦೬-೦೩) ; ಕೊಂಚ ಭೀತಿಯ ಎಳೆಯೂ ನನ್ನ ನಿದುರಿನಾಳದಲ್ಲಿ ಸುಳಿದಂತಾಯಿತು (ಕುಗತಾಂ. ೩೩). **ಮೆದಡು:** ೧. ಮೆದಡು ತಲೆಯಲ್ಲಿರುತ್ತದೆ (ಅಪಂಕ. ೦೨). ೨. "ಮೇದಸ್ — ಹೃದಯದಲ್ಲಿಯೂ ಎಲುಬುಗಳಲ್ಲಿಯೂ ಇರುವ ನೆಣ. ಇದನ್ನು ಮೆದಡುಯೆನ್ನುವರು" (ಸಿಪ್ರಾಳಿ. ೦೪೬). ೫. ಕಂಠ ; ಕುತ್ತಿಗೆ : ಕತ್ತು : ತುಡುಗ ನಾಯ್ ಕೊರಳಲ್ಲಿವೊಡೆದ ಗಡಿಗೆಯ ಕಂಠ

ಪಿಡದಿರುವೊರಾ ದ್ವಿಜನ ಮೆಯಪಲ್ಲಿ ಕುಜುಬಿರೆಲು ಕಡೆಗೆ ತೆಗೆಯೆಲ್ ಬಾರದೊಡೆ (ಗುರುಚ. ೦೫-೬೨). **ಮೆದುಳು** : ೧. "ಮಸ್ತಿಷ್ಕಂ. ಗೋರ್ದಂ — ೨ ಎಲುವುಗಳ ಗೂಡಿನಲ್ಲಿರುವ ಮೆದುಳ ಹೆಸರುಗಳು" (ಸಿಕ್ಕಾಂತ. ೦೬೬) ; ಅವರ ಮೆದುಳನ್ನು ಬಿಲಿ ಮಾಡಬಹುದೆಂದು ನನ್ನ ಅಭಿಪ್ರಾಯ. (ಡಾಹುಗ. ೬೩) ; ನಿಮ್ಮ ಮೆದುಳಿಗೆ ಬಹಳ ಗಂಭೀರ ಸ್ವರೂಪವಾದ ತೊಂದರೆಯಾಗಿದೆ (೦೬೫೫. ೨).

[ದೇ.॥ ತಮಿ. ಮಿತುಟು, ಮಿತಟು ; ತೆಲು. ಮೆದಡು ; ಕೋಲಾ. ನಾಯ್ಕ. ಮಿತಿಕ್ ; ಕೋತ. ಮೆದ್ಸ್ ; ಗೊಂಡಿ. ಮದ್ದುರ್, ಮೆದುರ್ ; ಕುರುಖ್. ಮೆಂಡ್ಡೀ ; ಮಲ್ತೊ. ಮೆಂದೊ]

ಮಿದುಳು ' ಮಿದಂಳ್ ' ನೋ.

ಮಿದುಳ್ಗೆಸಜ್ಜು (ನಾ). ಕೆಸರಿನಂತೆ ಅಜಿಗಿಜಿಯಾದ ಮೆದುಳು : ಕುಲಿಶವಿಘಾತಮೆಂಬ ದೃಢಮುಷ್ಟಿವಿಘಾತದಿಸುಗ್ಗೆ ಪಾಯ್ದುನಂ ತಲೆಯ ಮಿದುಳ್ಗೆಸಜ್ಜು. . . ಮುನಲಾಯುಂಘಾಸ್ಯಿದನಾ ವ್ರಳಂಬನಂ (ಹಗರಿ. ೪-೩೬).

[ಮಿದುಳ್ + ಕೆಸಜ್ಜು]

ಮಿದ್ದಿಗೆ ' ಮಪದ್ದಿಗೆ ' ನೋ.

ಮಿದ್ದು (ಕ್ರಿ). ೧. ಜೆನ್ನಾಗಿ ಕೆಲಸು : ನಾದು ; ಮಿದಿ : ಆರಲು ತುಳಿಯುತ ಮಿದ್ದಿ ಪದಗೊಳಿಪ ಕುಂಬಾರ (ಕಾಪಚ. ೬-೦೩೦) ೨. ತಿಕ್ಕು ; ಮರ್ದಿಸು : ಮಸ್ತಕದ ಪರಮಂಡಲವನ್ನೆಲ್ಲ . . . ಮಿದ್ದಿ. ಪಾದಿ. ಗಿರಾಃ ಗೋಣಂ ಬೆಲ್ಲವೆದೆಂದು ಪಾಕ್ರಿಯಾವಾಗ ಕೈತೊಳೆದುಕೊಳ್ಳುತ್ತಾನೆ (ಕಗಕ್ಕ. ೬೨). ೩. ಹದಮಾಡು ; ಹದಗೊಳಿಸು : ಹಗೆಯ ತಿದ್ದಿ ಜನಮನವ ಮಿದ್ದಿ ನಮ್ಮಸ್ಪಿಗ್ಗೆದ ಬಾಷೆ (ಅಕಾಚಂ. ೩೭-೬). 'ಮಿದುಡು' ಪರಾ. [<ಮಿದ್ದಿ]

ಮಿದ್ದೆ (ನಾ). ಮೆಹಡಿ ; ಮಾಳಿಗೆ : ಪೃಥುಶಿಟ್ಟಯ ಮಿದ್ದೆಯೊಳು ದ್ರೋಣಕುಸುಮದ ಮಂಲೆಯಂ ಕಜ್ಜಿಸಿದಂ (ಗುರುಚಾ. ೦೬-೬೬).

[ದೇ.॥ ತಮಿ. ಮೆತ್ತೈ ; ಮಲ. ಮೆತ್ತ ; ತುಳು. ಮೆತ್ತಿಗೆ; ತೆಲು. ಮಿದ್ದೆ. ಮಿದ್ದಿಯ; ಕೋತ. ಮೆಪ್ ; ಕೊದ. ಮಿದ್ಕ್]

ಮಿನ್ (ಸಪೂರೂ). 'ಮಿಂಚು' ಎಂಬ ನಾಮಪದಕ್ಕೆ ಸವಾಸಗಳಲ್ಲಿ ಬರುವ ಆದೇಶರೂಪ : 'ಮಿಂಜೊಡರ್' ಪರಾ. [< ಮಿಂಚು]

ಮಿನಾರ್ 'ಮಿನಾರು' ನೋ.

ಮಿನಾರ 'ಮಿನಾರು' ನೋ.

ಮಿನಾರು, ಮನಾರ್, ಮಿನಾರ್, ಮಿನಾರೆ, ಮಿನಾರ್ (ನಾ). ೧. ಪ್ರಾರ್ಥನೆಗೆ ಜನರನ್ನು ಎಚ್ಚರಿಸಲು ಮುಸ್ಲಿಂ ಧೋಪಕನು ನಿಲ್ಲುವುದಕ್ಕಾಗಿ ಮಸೀದಿಗೆ ಸೇರಿದಂತೆ ಕಟ್ಟರುವ ಎತ್ತರವಾದ ಸ್ತಂಭಗೋಪುರ ; ಬುರುಜು : ಗುಮ್ಮಟ: ಅವುಗಳಲ್ಲಿ ಯಾವ ವಿಧವಾದ ಪ್ರತಿಮಾಚಿತ್ರಗಳಾಗಲಿ ವಿಗ್ರಹಗಳಾಗಲಿ ಇಲ್ಲದೆ . . . ಮಿನಾರುಗಳೂ (ಗುಮಟಗಳೂ) ಲಿಪಿಲೇಖಾಚಿತ್ರಗಳೂ ಕಂಡುಬರುವುದು (ಭಾಸ್ಕಂಥಿ. ೦೬೭) ; ಸ್ತಂಭಗಳಂತೆ ಕಟ್ಟಿದ ಮಿನಾರುಗಳು ದಾಹಮವೀಯ ಕಟ್ಟಡಗಳ ವಿಶಿಷ್ಟಮಾದರಿಗಳಾಗಿರುತ್ತವೆ (ಕಾಇದ. ೪೦೦). ೨. ಸಮುದ್ರದಲ್ಲಿ ಹಡಗುಗಳಿಗೆ ದೀಪದ ಮೂಲಕ ದಾರಿ ತೋರಿಸುವುದಕ್ಕಾಗಿ ತೀರದಲ್ಲಿ ಕಟ್ಟರುವ ಗೋಪುರಾಕಾರದ ಕಟ್ಟಡ : "(ಕೆಲಲ) ದೀಪದ ಮನೆ ; (ಎತ್ತರವಾದ) ಸ್ತಂಭಗೋಪುರ : ಮಿನಾರು" (Minar.. ೬೦೪೬). **ಮನಾರ್** : ೧. ಮಿನಾರ್ ಅಥವಾ ಮನಾರ್ ಎಂದರೆ ಜ್ಯೋತಿರ್ಪುಂದಿರ ಅಥವಾ ಅಗ್ನಿಮಂದಿರ ಎಂದರ್ಥ (ಇಜ್ಞಾಂಸಂ. ೦೬೬). **ಮಿನಾರ್** : ೧. ಮಿನಾರ್ : ಕಟ್ಟಡದ ಎರಡುಕಡೆಗಳಲ್ಲಿಯೂ ದುಂಡಗೋ ಅಥವಾ ಅಷ್ಟಕೋಣಾಕಾರವಾಗಿಯೋ ಎತ್ತರವಾಗಿ ಹೋಗಿರುವ ಬುರುಜು (ಕೃಶಾಸ್ತ್ರ. ೦೬೬). **ಮಿನಾರ** : ೧. ರಣರಂಗದಲ್ಲಿ ಮಡಿದ ಸಿಪಾಯರ ರುಂಡಗಳೆಲ್ಲ ಕೊಯ್ದು ತಂದು ಒಂದು ಮಿನಾರವನ್ನು ಕಟ್ಟಿದರಂತೆ ! (ಹಂಪಾನ. ೦೭೦). **ಮಿನಾರ್** : ೧. ದಿಲ್ಲಿಯಲ್ಲಿ ಕುತುಬ್‌ಮಿನಾರ್ ಪತ್ತಿರ ಇರುವ ಮಸೀದಿಯಪ್ಪು ಮುಂಪ್ಪಾರು ಜೈವದೇವಾಲಯಗಳನ್ನು ಕೆಡವಿ ಅವುಗಳ ಕಂಬಗಳನ್ನು ಉಪಯೋಗಿಸಿ ಕಟ್ಟಿದ್ದಿರಿಂದು ಹೇಳುತ್ತಾರೆ (ಪ್ರಾಣಾಭ್ಯು. ೦೭೫);

[← ಅರ. ಮನಾರ್. ಮನಾರಹ್ : ಪಾರ. ಮನಾರ್, ಮನಾರ, ಮನಾರತ್ : ಹಿಂ. ಮನಾರ್, ಮನಾರಾ, ಮಿನಾರಾ, ವಿಮಿನಾರ್, ಮಿನಾರಾ]

ಮಿನಾಹಿ (ನಾ). ೧. ಒರಬೇಕಾದ ಹಣವನ್ನು ಯಾವುದಾದರೂ ಲೆಕ್ಕಕ್ಕೆ ಹಿಡಿದುಕೊಳ್ಳುವಿಕೆ.—ಮುರಿದುಕೊಳ್ಳುವಿಕೆ ; ಉತ್ತಾರ : ವೆಂಕಪ್ಪಯ್ಯನ ಕೈಯಲ್ಲಿ ಓರಿನಾವಿರವರಹವನ್ನು ದಂಡ ತೆಗೆದುಕೊಂಡು ಇವನಿಗೆ ಇದ್ದ ದರಮಾಹೆ ಸಾವಿರರೂಪಾಯಿಯನ್ನು ಮಿನಾಹಿ ಮಾಡಿಸಿ . . . ಆ ಅಧಿಕಾರವನ್ನು ಪೊಖೊಫ್ ಮಾಡಿಸಿದರು (ಕುಕಾಸಂ. ೧೨೫೯). ೨. ಕೆಲಸದಲ್ಲಿ ಉಂಟಾದ ಕಡಿತ : ನಿರುದ್ಯೋಗ ; ಅಂತ್ಯಕಾಲದಲ್ಲಿ ಸನ್ಯಾಸವನ್ನು ತಕ್ಕೊಂಡುಬಿಟ್ಟರೆ ಯಮಸದನಕ್ಕೆ ಯಾರೊಬ್ಬರೂ ಹೋಗಲಾರರು. ಹಾಗಾದರೆ ಯಮನ ಉದ್ಯೋಗ ಮಿನಾಹಿಯಲ್ಲಿ ಬರುವುದಲ್ಲದೆ ಲೋಕದಲ್ಲಿ ಪಾಪಿಗೊಬ್ಬನಾದರೂ ಪಾಪಭಯ ಲೇಶವಾದರೂ ಇರದು (ಪಾಗೃಚ. ೫೯). [← ಅರ. ಮಿನ್‌ಹಾ : ಹಿಂ. ಮಿನ್‌ಹಾಈ./ ತುಳು. ಮಿನಾಯಿ, ಮಿನಾಪಿ]

ಮಿನಿಕೆ. ಮಿಣಕೆ. ಮಿಣಕೆ. ಮಿನಿಕೆ (ನಾ). (ಸೌತೆಯ ಜಾತಿಗೆ ಸೇರಿದ) ಒಂದು ಬಗೆಯ ಬಳ್ಳಿ ಹುತ್ತು ಅದರ ಹಣ್ಣು : "ಕರ್ಣಟಕಿಮೆನೆ ಮಿನಿಕೆ" (ಪುಂಗಡಾ. ೪೦-೬೬); ಎಕ್ಕೆ ಮಿಣಕೆ ಮೊದಲಾಗಿ ಅವು ಪಕ್ಷಕ್ಕೆ ಬಂದಡೆ ವಿಷ ಬಿಡುಪುದೆ (ಸಮಾಕ. ೩-೦೬). **ಮಿಣಕೆ** : "ಕಾಳಿಂಗದ . . . ಮಿನಕೆ. ಮಿಣಕೆಹಣ್ಣು . . . ಹರ್‌ಘುಜಸೌತೆ" (ಪಕ್ಷಿ. ೮೨). **ಮಿಣಕೆ** : ಕಕ್ಕರಿಕೆ ಮಿಣಕೆ ಚಕ್ಕೊತ್ತ . . . ಮುಂತಾದ ಮಧುರಫಲಂಗಳ್ (ತಾಗಂಧಿ. ೩೭-೪). **ಮಿನಿಕೆ** : "ವೃತ್ತಫಲಾ — ಬದನೆ. ವಿನಿಕೆ. ನೆಲ್ಲಿಯ ಕಾಯ್" (ಟಿಪಂ. ೦೫೬). 'ಮೆಳ್ಕೆ' ಪರಾ. [?]

ಮಿನಿಕೆಬಳ್ಳಿ (ನಾ). = ಮಿನಿಕೆ : 'ಕಾಮುಮಿನಿಕೆಬಳ್ಳಿ' ಪರಾ.

[ಮಿನಿಕೆ + ಬಳ್ಳಿ]

ಮಿನಿಟು, ಮಿನೀಟು (ನಾ). ೧. ಒಂದು ಗಂಟೆಯ ಅರುವತ್ತನೆಯ ಭಾಗ ; ಒಂದು ನಿಮಿಷ : ಇಬ್ಬರೂ ಇನ್ನೈವು ಮಿನಿಟಿನಲ್ಲಿ ಪತಿಪತ್ನಿಯು ರಾಗುವರು (ಕಕ್ಷ. ೫೦೩) : ರಾತ್ರಿ ಎಂಟು ಬಡಿದು ಮಿನಿಟಿನ ಮುಳ್ಳು ಇನ್ನೊಂದು ಸುತ್ತು ಬರುವಲ್ಲಾಯಿತು (ಸಚಿ. ೩೦). **ಮಿನೀಟು** : ೨. ಅತ್ಯಲ್ಪಕಾಲ : ನಾ ಒಂದು ಮಿನೀಟಿನ್ಯಾಗ ಸ್ವಚ್ಛ ಮಾಡ್ತೀನಿ (ಭಕ್ತ. ೩೬) ; ಒಂದು ಮಿನೀಟು! ಚಹ ತಗೊಂಡು ಹೋಗಬಹುದಲ್ಲ ? (ಬಂಳ. ೩೦೬).

[← ಇಂ. Minute]

ಮಿನಿಮಿನಿ (ನಾ). ೧. ಕಾಂತಿ ; ಪ್ರಕಾಶ : 'ಮಿನಿಮಿನಿಸು' ಪರಾ. ೨. ಮಂದವಾದ ಪ್ರಕಾಶ ; ನಸುಬೆಳಪು : 'ಮಿನಿಮಿನಿಸು' ಪರಾ. ೩. (ಆಲಂ) ಅಸ್ಪಷ್ಟವಾಗುದು; ಅವ್ಯಕ್ತವಾಗುದು; ಎಷಗಜಿಗರೆಂದು ಕಮ್ಮಸಿ ಪಾಸಮಂ ಮಸಿಮಾಡಿಕೊಳಲೊಡಂ ಮುಸ್ಸುಣ್ಣ ಮಿನಿಮಿನಿಯೆನಿಪ್ಪ ಗುಣಪಾ ಮುಖಿಯಿಂ ಪೆಜಪ್ಪಂಗಿ ಭೋಪುದೊಪಚ್ಚರಿಯೇ (ಅಜಾಕ. ೩೯-೨೩೪). [ದೇ.॥ ತಮಿ. ಮಿನುಮಿನುಪ್ಪು = ಹೊಳೆ ; ತುಳು. ಮಿನಿಮಿನಿ. ಮಿಣಿಮಿಣಿ = ಹೊಳೆಯುವ]

ಮಿನಿಮಿನಿಗಣ್ (ನಾ). ಹೆಚ್ಚು ಹೊಳಪಿಲ್ಲದ ಕಣ್ಣು ; ಮೆಂಕಾಗಿರುವ ಕಣ್ಣು: ಮಿನಿಮಿನಿಗಣ್ ತುಂಟದಲೆ ಜೋಲ್ದಿಹ ಮೈ . . . ಸರಿಸೊಂಡ ಕಾಲ್ಗಳಿ ಮನಕೆ ವಿರಕ್ತಿಯಂ ಪಡವ ಮುಪ್ಪಿನ ಪೂರ್ವನಡೊರ್ಬನೊಪ್ಪಿದಂ (ಕಣ್ಣಸ್ತ್ರ. ೩-೦೦). [ಮಿನಿಮಿನಿ + ಕಣ್]

ಮಿನಿಮಿನಿಸು (ಕ್ರಿ). ೧. ಹೊಳೆ ; ಪ್ರಕಾಶಿಸು ; ಕಾಂತಿಯನ್ನು ಬೀರು : ತೊಳತೊಳಗಿ ಬೆಳಗಿ ಮಿನಿಮಿನಿ[ಸಾಗಿ, ಮಿನುಮಿನು]ಸುತ್ತುಂ ಪಲವುಂ ದೀವಿಗೆಗಳ್ ಕಳ್ತಲೆ ಪೊತಂತೊಪ್ಪುತಿರ್ದುವಾ ಮನೆಪನೆಯೊಳ್ (ಗದ್ಯ. ೪–೧೦). ೨. ಮುಂದವಾಗಿ ಪ್ರಕಾಶಿಸು ; ನಸುಬೆಳಕು ಚೆಲ್ಲು : ಎನಿತು ಪನಿತೆಯುರ್ದೞಂ ತಾರಗೆಗಳುತ್ತ ಮಿನಿಮಿನಿಸುತಿರ್ಪಿರಾ ಚಂದ್ರಮದನೆಯ ಪುಂತೆ (ಇಷ. ೪೮. ೨೯–೨). [ಮಿನಿಮಿನಿ + –ಆಸ್ಯಾ]

ಮಿನೀಟು 'ಮಿನಿಟು' ನೋ.

Δಮಿನುಂಗು 'ಮಿನುಕ್ಕು₂' ನೋ.

ಮಿನುಕ್ಕು₁, ಮಿಣುಕು₁, ಮಿನುಂಗು, ಮಿನುಗು₁ (ಕ್ರಿ). ವಿನುಪ (ವರ್ತಕೃ). ೧. ಹೊಳೆ ; ಬೆಳಗು ; ಪ್ರಕಾಶಿಸು : "ಮಿನುಕು – ಅಂತರ್ಗತಸ್ವನೇ (ಪಿನುಗುಟ್ಟು). ಕಾಂತೌ ಚ (ಪ್ರಕಾಶಿಸು)" (ಶಬ್ದಾ). ೨. ಕ್ಷಣ ಬಿಟ್ಟು ಕ್ಷಣ ಹೊಳೆ : ಎಸೆದುವು ಮುಗಿಗಳ್ ಬೆಳ್ದಿಂಗಳ ಪೊರೆ ಪೊರೆಯೊಳ್ ವಲ್ಲಣಿದ ಮಿನುಕುತಿರ್ಪ ತಾರಾಳಿಯುಪೂರ್ (ಅಜಿಪು. ೩–೭೭); ತೆಳುಪುಬೆಳಕನು ಕೆದರಿ ಮಿನುಕುವ ಮಿಂಚುಹುಳುವೆಂದೆಣಿಸಲೋ ! (ಶಾಂಭ. ೦೩–೩). ೩. ಗೋಚರಿಸು : ತೋರು ; ಸ್ಫುರಿಸು : ಭೂತಳಾಧೀಶ್ವರನ ಮನದೊಳಗೀತ ಕಾರಣಪುರುಷನಹ ಸಂಕೇತ ಮಿನುಕಲು ಕೊಟ್ಟನಂದು ಮಹಾಪ್ರಧಾನಿಕೆಯ (ಕ್ರಕೋ. ೯–೨೨). ಮಿಣುಕು₁: ೨. ಚಿಕ್ಕ ಮಿಣುಕಲಿ ಬೆಳ್ಳ ಕಿಣುಕಲಿ ಒಂದೆ ಎಂಬೆಯಾ ಎರಡನೂ ? (ಅಶಂ ೦೫–೦೦). ೪. ಮಂಕಾಗಿ ಬೆಳಕು ಬೀರು ; ಮುಂದವಾಗಿ ಪ್ರಕಾಶಿಸು: ನೂರಾರು ದೀವಗಳು, ಮಿಣುಕುತಿಹ ಸೊಡರುಗಳು . . . ತೆಕ್ಕನೆಯೆ ಹುಟ್ಟಿ ಬರೆ (ಕಟ್ಟಿ. ೦೪–೬೬); ನಮ್ಮ ಸೊಡರಿಲ್ಲುರಿಸುವೆನೇಂ ಮಿಣುಕೆಲಿಂತು ಬರಿಯೆ (ಗಿಂಪು. ೧೩–೨). Δಮಿನುಂಗು: ೫. ಶೋಭಿಸು ; ಒಪ್ಪು : ನಸುನಗೆ ವಿನುಂಗೆ ಮೊಗದೊಳ್ ಪಸರಿಸೆ ನಿಜದಂತಕಾಂತಿ ಸ್ವಚ್ಛವರಸಭೆಯೊಳ್ (ಪಚಕ. ೩–೧೦). ℙ ಇಪು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ. ಮಿನುಗು₁ : ೧. ಮರಕತಕಾಂತಿಯಂ ತಳೆದು ನುಣ್ಗಾಜಿಗಳ್ವಿನುಗಲ್ಕೆ ವಿದ್ರುಮಾಂಕುರದವೊರೊವ್ವೆ ಚಂಚುಪುಟ ಪೊಯ್ಯನೆ ಬಂದುದು . . . ಶುಕಂ (ಶಾಪಂಕಾ. ೬೦); ಳಿಸವಿಕ್ರಮ ಶಿಖಿಯುತನೂತನಮಿಲದ್ಧೂಮಲೇಖೆಯೊಳ್ಪೆಂಬಿನಗಂ ಜನನುತನಾರ್ದ್ರಚಿದೇವನ ವಿನುವ ಕರಾಬ್ಜಸ್ಪತಾಸಿಲತೆ ಸೊಗಯಿಸುಗುಂ (ಕಾರ್ಕಳ. ೦–೬೬). ೨. ಕೌಲ್ಬರನು . . . ಅಲ್ಲಿಯ ವಿಜ್ಞಾನಜಗತ್ತಿನಲ್ಲಿ ನಕ್ಷತ್ರದಂತೆ ವಿನುಗುವಂತಿದ್ದನು (ಕಸ್ಮಳ. ೪೦) ; ವಿನುಗಲೆ ವಿನುಗಲೆ ಎಲೆ ನಕ್ಷತ್ರ (ರಾಚಾಸಾ. ೦೦೬). ೩. ಇಬ್ಬೆಲ್ಲವಗಳು . . . ಹೊಸಉರ್ಷದಿಂದ ತುಂಬಿಕೊಂಡು ವಿನುಗುತಿತ್ತೊಡಗಿದವು (ಗಂಪಾಪು. ೦೨೩). ೪. ವಿನುಪಿನ ಕೃತಿಗಾವುದು ಪೊದಲ್ (ಶಾಪ್ರಶಿ. ೦–೬೬); ಸಲೆ ವಿನುಪ ಕೊರಲ ಕರ್ಪರ ತಗೆವವರ್ದುಗಜೀವವೋಲ್ಕಾಡಿ ತುಟಿಯೊಳಿಂತು (ಪದ್ಮಣಾ. ೪–೩೦); ಬಾಲವಿಮಲಕರಕರಣಸೊಡನೆ ಪಮೇಳವಪ ನೆಗೆ ವಿನುಗೆ (ಶಾಣ್ಮಥ. ೪–೨೨).

ವಿನುವಿನುಗು, ವಿಣುವಿಣುಗು (ದ್ವಿರುಕ್ತಿ) : ಕತ್ತಲೆಯ ಪಡುವ ವಿನುವಿನುಪ [ಶಾಪಾಂ. ವಿನುವಿನುಪ] ಜ್ಯೋತಿಯ ಕೆಲವಿ (ಶಾಸಾಂಪ್ರ. ೫. ೨೦೦–೭); ವಿನುವಿನುಪ ಪೊಂಬಲಿಪಾಣಗಳೊಳೆದ್ದು ನೀಡಿದರ್ ಪರಿಪರಿಯ ಪರಿಕರವಸು (ತಿಪ್ಪ. ೪-೩೯); ಇರುಳು ಕತ್ತಲೆಯಲ್ಲಿ ವಿಣುವಿಣುಕಿ ಮೆರೆವರೆದ ವಿಂಚುಹುಳು . . . ಕಣ್ಕಟ್ಟುಹುತಿದೆ (ಪಟ್ಟಿಣ. ೩೩ ೦).

[ಪೇ.ತ ತಮಿ. ವಿನುಜ್ಜು, ವಿನುಂಕ್ಕು; ಮಲ. ಮಿನುಕ್ಕು; ಮಿನ್ನುಕ, ಮಿನ್ನಿಕ್ಕ; ತುಳು. ವಿನುಕು, ವಿಣುಕು, ವಿಣ್ಣು, ಮೆಣಕು, ಮೆಣ್ಣು; ತೆಲು. ವಿನುಕು, ವಿನ್ನು, ವಿಣುಕು]

ಮಿಸುಕ್ಕು, ಮಿನುಗ್ಗು, ಮೊಸಗು (ಕ್ರಿ). ೧. ತನ್ನಷ್ಟಕ್ಕೆ ತಾನು ತಗ್ಗಿದ ಧ್ವನಿಯಲ್ಲಿ ಮಾತನ್ನಾಡು ; ಗೊಣಗುಟ್ಟು : "ವಿನುಕು – ಅಂತರ್ಗತಸ್ವನೇ (ಪಿನುಗುಟ್ಟು). ಕಾಂತೌ ಚ (ಪ್ರಕಾಶಿಸು)" (ಶಬ್ದಾ); ತದಾಮ್ಯುವನದೊಳೊರ್ವಂ ವೈಯೊಳೆಲ್ಲಂ ಕನಜನೊಟ್ಟಕೊಂಡು ಬತ್ತಲೆ ಪುರುಳಂತೆ ತನ್ನೊಳ್ ವಿನುಕುತ್ತುಂ ಪೋನದೊಳಿರ್ವಂ (ಕರ್ಣಾಭ್ಯು. ೬–೨೬); ಪುಣ್ ಕೊಯ್ಯುರ್ಲಿರ್ಜಂದು ಮಂತ್ರಪುನ್ ವಿನುಕುವನ್ ಅವನ್ ಪುರುಳ್ವೈದ್ಯನ್ (ಅಕ್ಕಣ್ಣ. ೨೮–೩೦). ವಿನುಗ್ಗು : ೨. ತಗ್ಗಿದ ಸ್ವರದಲ್ಲಿ ಮಂತ್ರವನ್ನು ಹೇಳು.— ಜಪಿಸು : ವಿನುಗುಗುದುಟಗಳ ವೀಲಮಂತ್ರದ ವಿನುಗುಗಳ ಕ್ರಿಯಾಹುತಿಗೆ ಭರೆದನಿಮಿಷರ ವಲ್ಲಟರ ವಿಚಲಿತ ಸೂಕ್ರಿಮಯನಿನವ ತನಿಭಯದ ತರಳಾಕ್ಷಿಗಳ . . . ಗಡ್ಡದ ಮುನಿಗಳಿದ್ದರು ಬರಿದ ಬೆಡಗಾಲಿ (ಭಾಷ. ೦೦–೫೯). ಮೊಸಗು : ೧. ರೋ. ಬಸವ. ಅಮ್ಮ ನೀರು ತಾರೋ . . . ಎಂದು ಮೊಸಗಿ ಮುಗಿಸಿದನು (ಚರಿತ. ೦೬೬). [ದೇ.ತ ತಮಿ. ಮುಣಜ್ಜು: ಮಲ. ಮಿಣುಮಿಣುಕ್ಕೆ. ವಿಣ್ಣಾರ್; ತುಳು. ಮುಣ್ಣು; ತೆಲು. ವಿನುಕು, ವಿನ್ನು, ಪುನುಮಕು, ಮುನ್ನು]

ಮಿನುಕ್ಕು, ಮಿಣುಕ್ಕು, ವಿನುಗ್ಗು (ನಾ). ೧. ಹೊಳಪು ; ಕಾಂತಿ ; ಪ್ರಕಾಶ ; ನೆನೆಯಿಸುತಿರ್ದುದು ತುಂತುರ್ವನಿ ಮುಸುಕಿದ ದುರ್ಗ ವಾರ್ಧಿಯುಂ ತಾನೆನಸುಂ ತನಿಸ್ಪೊಂಗಳ್ ಮುಸುಱುಪ ವಿನುಕ್ಕಿದೊಪ್ಪುವ ನಭೋಂಗಣಂ ಧೃತಭಗಣಂ (ಶಾಂಭಾ. ೦೦–೦೩). ೨. ತಾಳ ; ಮಾಂಗಲ್ಯ : ಕಟಸೂತ್ರಂ ಪ್ರಹ್ಮಸೂತ್ರಂ ಸರಿಗೆ ವಿನುಕು ಕೊಪ್ಪಂಗುನಂ ಕರ್ಣಪೂರಂ . . . ಕೇಯೂರಮುಂಬನ್ನವಂ ಪ್ರಸ್ಫುಟರತ್ನೊಂಭಾಶ್ರಯಂ ರಂಜಿಸುವಿನಮಲರಿಂ ಕಾಂತೆಯರ್ ಮಾಡಿ ಕೊಟ್ಟರ್ (ಸೂಕ್ತಿ. ೦೦–೪೯). ಮಿಣುಕ್ಕು : ೩. ಮಂಕುಃ ಮಸುಕು : 'ಮಿಣುಕೆಂದೀಜ', 'ಮಿಣುಕು ಬೆಳಕು' ಪರಾ. ವಿನುಗ್ಗು : ೧. "ತೊಳಗು, ಬೆಳಗು, ವಿನುಗು . . . ಮಸೆ – ಈ ೧೪ ಕಾಂತಿ" (ಶಾಣ. ೩೭–೩೦೨); ಕಣ್ಣ ವಿನುಗಿಂ ಹೊಳಗು ವುಂಗುಟುವ ಗಾಡಿಯಿಂ . . . ಬಿಡುಗಣ್ಣರೆಜೆಯಂ ವಿಶ್ವನಾಥಂ ಪ್ರಸನ್ನನಾದಂ (ಕಟ್ಟಾ. ೭–೩೩). ೨. 'ಅಯ್ದೆ ವಿನುಗು' ಪರಾ. ೪. ಕ್ಷಣ ಬಿಟ್ಟು ಕ್ಷಣ ಹೊಳೆಯುವ ಹೊಳಪು : ಹಿಂಗಿರು ಕವಿದವು ಭಟನ ಕೈ ಮೈಗಳಲಿ ವಿನುಗಿದವರೆಳ ಪರಪಲಿ ಹೊಳೆದು ಪುಟ್ಟಿದ ವಿಂಚು ಬುಳುವಿನ ವಿನುಗಿನಂವದಲಿ (ಶಾಬ್ಧಾಲ್ಯ. ೫–೩೬) ; ನಳಪಬಾಂಧವನ ವ್ಯುಂದೆಯೊಳು ವಿಗೆ ವಿಂಚುಬುಳುವಿನ ವಿನುಗು ರಂಜಿಪುದೇ (ಕೋಚಕ. ೦೫–೦೦) ; ಒಂದು ನಕ್ಷತ್ರವೂ ವಿನುಗು ತೋರದು (ಸುಗುಣಾ. ೫೯–೩).

ವಿಣುಕುವಿಣುಕು (ದ್ವಿರುಕ್ತಿ) : ಗೋಡೆಯ ಮೇಲೆ ಕವ್ವುಗಟ್ಟಿ ಕೂಂಡು ವಿಣುಕುವಿಣುಕುತಾಗಿ ಉರಿಯುತ್ತಿದ್ದ ದೀಪದಿಂದ ಸಾಕಷ್ಟು ಬೆಳಕುರುತ್ತಿತ್ತು (ಪಾರ್ಥ. ೦೯).

[< ವಿನುಕು₁. / ತಮಿ. ಮಲ. ವಿನುಕ್ಕುಪ್; ತುಳು. ವಿಣುಕ್ಕು, ವೀಣುಕು, ವೆಣುಂಕು ; ತೆಲು. ವಿನುಕು. ವಿನ್ನು. ವಿಣುಕು]

ವಿನುಕುಗಲೆ (ನಾ). ಕಣ್ಣಿಗೆ ಗೋಚರಿಸುವ ಗಾಯದ ಗುರುತು.— ಕಲೆ : ವಿನುಕುಗಲೆ ಭೂಷಣಂ ಸುಭಟನಿಕಾಯದ ಕಾಯತತಿಗೆ (ಪಾಂಡವೇ. ೬–೩೯). [ವಿನುಕು₂ + ಕಲೆ]

ವಿನುಗಿಸು, ವಿಣುವಿಸು (ಕ್ರಿ). ೧. ಕಾಂತಿಯನ್ನು ಸೂಸು ; ಬೆಳಕನ್ನು ಚಿಮ್ಮಿಸು : ಅಳನು ವಿಡುಪಿನು ವಿನುಗಿಸನು ಕಣ್ಗಳಿನು (ಕ್ರಕೋ. ೯–೦೨). ೨. ಹೊಳೆಯುವಂತೆ ಮಾಡು ; ಧಳಧಳಿಸುವಂತೆ ಮಾಡು : ಸೂರ್ಯನ ಕಿರಣ ನೀರಿನ ಮೇಲೆ ಬಿದ್ದು ತೆರೆಗಳನ್ನು ವಿನುಗಿಸುತ್ತಿದೆ (ಕೂಪ್ರ). ವಿಣುವಿಸು : ೩. ಉದ್ದೀಪಿಸು : ದೀಪ್ತಗೊಳಿಸು ; ಆ ತೇಜಗಳ ಘುಣುಕು ಎಂಬೆಯ ವಿಣುವಿಸಲಿಲ್ಲಿ ಮುಗಿಲ ಮಲ್ಲಿಗೆಯಂತೆ ಅಲ್ಲೆ ಬೆಳಗಿ (ವಿಕಾಚೆ. ೦–೦೭). [ವಿನುಗು₂ (< ವಿನುಕು₂) + –ಇಸು]

ವಿನುಗು₁ 'ವಿನುಕ್ಕು₁' ನೋ.

ವಿನುಗು₂ 'ವಿನುಕ್ಕು₂' ನೋ.

ಮಿನುಗು₃ 'ಮಿನುಕ್ಕು₃' ನೋ.

ಮಿನುಗುಂಗುಡಿ (ನಾ)- ಮುಂದವಾದ ಪ್ರಕಾಶವನ್ನು ಬೀರುತ್ತಿರುವ ದೀಪದ ಕುಡಿ. — ತುದಿ : ದೀವಿಗೆಯಂಡದಲ್ಲಿ ನಿಂತು, ಅಧ್ಯಾಸಬಲದ ದುನ್ಮತ್ಕರ್ಮದಿಂದ ಮಿನುಗುಂಗುಡಿಯನ್ನು ಮಿಂಟಿ ಉಜ್ಜುಳಿಕೆ ಮಾಡಿ (ಶಬ್ದ. ೦೦೫-೦೭). [ಮಿನುಗು₁ (< ಮಿನುಕ್ಕು₁) + ಕುಡಿ₂]

ಮಿನುಗುಟ್ಟು₁, ಮಿಣುಗುಟ್ಟು (ಕ್ರಿ)- ೧. ಕ್ಷಣ ಬಿಟ್ಟು ಕ್ಷಣ ಹೊಳೆ : ನಕ್ಷತ್ರಗಳು ಮಿನುಗುಟ್ಟುತ್ತವೆ. (ಅಣಿ. ೦೭). **ಮಿಣುಗುಟ್ಟು** : ೨. ಹೊಳೆ ; ಬೆಳಗು ; ಪ್ರಕಾಶಿಸು : ಚಕ್ರೇಶ್ವರಿಗೆ ಪುನಃ ಆರಾಧನೆಯವು ಮಿಣುಗುಟ್ಟಲಾರಂಭಿಸಿತು (ತ್ರಿಣಾಮು. ೩೮). [<ಮಿನುಗು₁ + ಕುಟ್ಟು₁]

ಮಿನುಗುತಾರೆ (ನಾ)- ಥಳಥಳಿಸುವ ನಕ್ಷತ್ರ : ತವರುಬಳಗದ ಮಾರ್ಗದರ್ಶನೆ ಮಿನುಗುತಾರೆಯು ತೆರದೊಲು ಒಲಿದ ಗಂಡನ ಸಾಹಚರ್ಯವ ಪೂರ್ಣಚಂದ್ರನ ಬೆಳಕೊಲು (ಶಂಪ್ರತಿ. ೪೦-೬).

[ಮಿನುಗು₁ (< ಮಿನುಕ್ಕು₁) + ತಾರೆ₂]

ಮಿನುಗುವಡೆ (ಕ್ರಿ)- ಕಾಂತಿಯಂನ್ನು ಹೊಂದು ; ಪ್ರಕಾಶವನ್ನು ಪಡೆ : ನಾಗಂಗಳಂ ಕೊನೆಗೊಂಬುಗಳೊಳ್ ತಾಳ್ದಿ ಮಿನು[ಮಾಂ. ಮಿನುಗಿಗು ವಡೆದ ಪಡಿವಣಿದುಜುಗಲಿಂ ತಳ್ದು ಮಾಣಿಕ್ಯದ ಮರಂಗಳಂತಿರಂದಂದಿತ್ತ ಚಂದನಧಾರಾಹಂಗಳಂ (ಶಾಂಂ. ೪-೪೫ ಕ).

[ಮಿನುಗು₃ (<ಮಿನುಕ್ಕು) + ಪಡೆ₁]

ಮಿನುಚ 'ಮಿಮಕ್ಕು₁' ಪರಾ.

ಮಿನುಪು (ನಾ)- ಒಂದು ಬಗೆಯ ಧಾನ್ಯ ; ಉದ್ದು : ಪೆಸಱುಪ್ಪು ಕಡಲೆ ಗೋಧುವೆ ಮಿನುವೆಳ್ಳಂಬವಱ ಪೇಱು ಮೂವತ್ತಕ್ಕೊನ್ದಿಸೆವ ದವಸಕ್ಕಮಾಪ್ಪರ್ನೊಂದಿಪ್ಪತ್ತಕ್ಕೆ ಕೊಟ್ಟರೊನ್ದಮ್ಮುದಿ (ಶಿಇಇ-IX-i, ೦೬೫-೬೪ ; ೧೦೫೫). [ದೇ.ಪ್ರ. ತೆಲು. ಮಿನುಮು, ಮಿನ್ನು]

ಮಿನುಮಿನಿಸೆ (ಅ)- ಪ್ರಕಾಶಮಾನವಾಗಿ, ಥಳಥಳಿಸೆ ಎಂಬ ಅರ್ಥವನ್ನು ಸೂಚಿಸುವ ಒಂದು ಅನುಕರಣಾವ್ಯಯ : ಮಿಸು[ಮಾಂ. ನ] ಮಿನಿಸೆ ತೋಱೆ ತಾನಗೆ ಘನತರತಿಮಿರಾಪಹಾಶಮಾಕಾಶಮದೇಂ ನೆನೆಯಿಸಿ ದುದೊ ಕಡಲೊಳ್ ಸೀರ್ಪಧಿ ತನುವಂ ಧರಿಯಿಂ ತೋರ್ದ ಕೃಷ್ಣನ ತನುವಂ (ಕಂಂತಾ. ೭-೭) ; ಮಿನುಮಿನಿಸೆ ಮಿನುಗುತಿರ್ದುವು ನನೆದೀವಿದ ಪಾಟಲೀ ದ್ರುಮಂಗಳ ಕೊನೆಗಳ್ (ಕಬ್ಬ. ೦-೮೬). [ಮಿನುಮಿನು + — ಅಿ₁]

ಮಿನುಮಿನು (ನಾ)- ಹೊಳೆಯುವುದನ್ನು ಸೂಚಿಸುವ ಒಂದು ಅನುಕರಣಶಬ್ದ : 'ಮಿನುಮಿನಿಸೆ' ಪರಾ.

ಮಿನ್ನಲ್ (ನಾ)- ಮಿಂಚು : ಅರ್ಜುನವಶಯನನ ಕರ್ಣಯೊಗದಿ ಸವರನ್ನ ಕಂಡಬಗೆಗೊಪ್ಪಿರಲು ಕನ್ನಡಿಗದಲಿನೊಳಗೆ ಬಿಂಬಿಸುತಲಿ ಗನ್ನಮಿನ್ನಲೆನೆ ಶೋಭಿಸಿತು (ಕ್ಷತ್ರಗೋ. ೪-೬೩). [ಮಿನ್ನು₁ + — ಅಲ್₂ / ತಮಿ. ಮಲ. ಮಿನ್ನಲ್ ; ಹಪೆ. ಮಿನ್ನಲ್ = ಕಿಡಿ]

ಮಿನ್ನು₁ (ಕ್ರಿ)- ಹೊಳೆ ; ಪ್ರಕಾಶಿಸು : ಎನ್ನ ಮುಖವೀ ದ್ವಾರವನ್ನ ದಂತವೆ ಅದಕೆ ಮಿನ್ನುತಿಹ ದೌತ್ಕಳದ ಸೂಸಕಗಳು (ಹರಾಶ. ೪-೨). [ದೇ.ಪ್ರ. ತಮಿ. ಮಲ. ಮಿನ್ನು ; ತುಳು. ಮೆಣ್ ; ಕೊಡ. ಮಿನ್ನ್]

ಮಿನ್ನು₂ (ನಾ)- ೧. ಹೊಳಪು ; ಪ್ರಕಾಶ : ' ಮಿಮ್ಮನವಡೆ ' ಪರಾ. ೨. ಮಿಂಚು : ಮಿನ್ನುಗಳಿಸೆದವು ಪಿಮ್ಮುನ್ಮಾಲೆಯಂತೆ ರನ್ನವಳಲು ಸಿರಿಯ ಸಾಂತು (ಶಬ್ದಾ. ೦೦-೬೯) ; ರನ್ನತೊಡವಂ ತೊಟ್ಟು ಮಿನ್ನಿನಪಸೀಮಂತದಲಿ ಸಿಂದುರವನ್ನಿಟ್ಟು . . . ಕನ್ನಿಕೆಯರೆಸೆದರು (ಕಂಂಾಂ. ೦-೪-೬೭). ೩. ಹೊಳಪನ್ನುಂಟುಮಾಡುವ ಪದಾರ್ಥ : ಮಿನ್ನಿಂ ಸಾರಣೆಗೆಯ್ದಿಹ ಸನ್ನುತಭೂಮಿಯೊಳ್ ಕಳವೆಯಕ್ಕಿಯ ಪಿಟ್ಟಿಂ ಬಿನ್ನಣದಳೆ ಪದಿನೇಳಾಗುನ್ನತ ಪೋಡಶಪುಂಪಕ್ತಿಗಳ್ ತೋಳಿಸುಗುಂ (ಪಾಶ್ವ. ೪-೦೬-೩೦).

[< ಮಿನ್ನು₁-/ ತಮಿ. ಮಿನ್. ಮಿನ್ನು : ಮಲ. ಮಿನ್ನಿ, ಮಿನ್ನು]

ಮಿನ್ನುವಡೆ (ಕ್ರಿ)- ಹೊಳಪನ್ನು ಪಡೆ ; ಕಾಂತಿಯುಕ್ತವಾಗಿರು : ಪೊನ್ನ ಜನ್ನಿವಾರ ನೊಸಲ ಬಾಪರನಾವು ಮಿನ್ನುವಡೆದ ಸುಲಿಪಲ್ಲು (ಧಾಪು. ೦೨-೦೩) ; ಮಿನ್ನುವಡದಾ ನಿಡುಗೇಶವಪಾ ಧೂಳಿಂ ನಾಂದಿದಬೆಂದಿತ್ತ ಕೊಡಿಂ (ಪಾರೇ. ೫೭-೨೮). [ಮಿನ್ನು₂ + ಪಡೆ₁]

ಮಿಯಾವ್ (ನಾ). ಬೆಕ್ಕಿನ ಕೂಗನ್ನು ಸೂಚಿಸುವ ಒಂದು ಅನುಕರಣ ಶಬ್ದ : ಮಿಯಾವ್ ಎಂದು ಅಟ್ಟದಿಂದ ಬೆಕ್ಕು ಕೆಳಗೆ ಜಾರಿತು (ಕ್ರಿ.ಕೃ. ೧೩).

ಮಿರಡಿ, ಮಿಂಡಿ₂ (ನಾ). ಒಂದು ಬಗೆಯ ಸಸ್ಯ : "ನಾಯಿಬೇಲಿ . . . ಮಿರಡಿ. ಮಿಂಡಿ, ಎಂರ್ಜ್" (ಸಸ್ಯಂ. ೬೦) ; ಮಿರಡಿ, ಮಿಂಡಿ (ಪ್ರಾಹಿ. ೭೭-೭೪೦). **ಮಿಂಡಿ₂** : ಮೇಲಿನ ಪ್ರಯೋಗಗಳನ್ನು ನೋಡಿ.

[?]

ಮಿರಾಬು (ನಾ)- ದೇವಸ್ಥಾನದಲ್ಲಿ ದೇವರ ಉತ್ಸವಕಾಲದಲ್ಲಿ ಬಳಸುವ (ಕುದುರೆಯೊಕಾರದ) ಒಂದು ಬಗೆಯ ಅಲಂಕಾರಸಾಧನ : ಹುಬ್ಬು ಹುದಿನಗಳಲ್ಲಿ ದೇವರನ್ನು ಹೊರುವ ಭಾರೆ ಇವನಿಗಿರಲಿಲ್ಲವಾದರೂ ನಂದೀ ಧ್ವಜ, ಚೌರಿ, ಚಾಮರ, ಮಿರಾಬು, ಅಬ್ಬಾನಿಗಿಗಳನ್ನು ಅಗ್ರಾಣದಿಂದ ಹೊರಕ್ಕೆ ತಂದು ಧೂಳು ಕೊಡಬೇಕು (ಶಬ್ದ. ೪).

[?-/ ಪರ್ಷಾ. ಮುರಾಪಾ]

ಮಿರಾಸದಾರ 'ಮಿರಾಸಿದಾರ' ನೋ.

ಮಿರಾಸಿ, ಮಿರಾಸು, ಮಿರಾಸೆ, ಮಿರಾಸೆ (ನಾ). ೧. (ಹಳ್ಳಿಯಲ್ಲಿ) ರೈತರು ಸಾಗುವಳಿಮಾಡುವುದಕ್ಕಾಗಿ ಭೂಮಿಯ ಮಾಲೀಕನಿಗೆ ಕೊಡಬೇಕಾಗುವ ಧಾನ್ಯ, ಹಣ ಮೊದಲಾದುವು ಮತ್ತು ಆ ಮಾಲೀಕನು ಅದನ್ನು ಪಡೆಯಲು ವಂಶಪಾರಂಪರ್ಯವಾಗಿ ಹೊಂದಿರುವ ಹಕ್ಕು : ಸ್ವಳದ ಹಂಸಿರತು ಮುಂದಿ ಅಯ್ಯಗಾರರ ನಿದಾಸಿ ಯಥಾಪ್ರಕಾರ ನಿಮ್ಮ ಸ್ವಳ ಮಿರಾಸಿ ನಿಮಗೆ ಕೊಟ್ಟು ತಾಮ್ರಶಾಸನದ ರಿತಿ ಬರಸಿ ಕೊಟ್ಟು ಯಿದೇವೆ (ಪಳೆ. XII, ಕಾಂ. ೦೦೨-೩೨ ; ೧೧೨೦) ; ಬ್ರಾಮಣಕವಾಗಿ ಬಾರಿಸಿ ಗೌಡಿಕೆ ವಿರಾಸಿ ತಂಸದೆಂದು (ಷಾ. ೦೧೪೭, ಚಾಪಪತ್ರಿಂ. ೨೪೮-೦೪೫ ೪). ೨. ಗ್ರಾಮಸೇವಕರಿಗೆ ಊರಿನ ಮುಖ್ಯಸ್ಥರು ಮತ್ತು ರೈತರು ಹಣ ಅಥವಾ ಧಾನ್ಯದ ರೂಪದಲ್ಲಿ ಕೊಡುವ ವಾರ್ಷಿಕ ಅಥವಾ ಮಾಸಿಕವಾದ ವಿಶೇಷಸಂಭಾವನೆ. — ಭೃತ್ಯ : ನಿಬಂಧನೆಗಳ ಮೇರೆಗೆ ಸಲ್ಲಿಸಬೇಕಾದ ಮಿರಾಸಿಯನ್ನು ಸಲ್ಲಿಸಲಿಲ್ಲವೆಂತ ನೀರಗಂಟಿಯಿಂದ, ತೋಟಿಯಿಂದ ಅಥವಾ ತಳಾರಿಯಿಂದ ಛಿರ್ಯಾದು ಬಂದರೆ (ಗ್ರಾಪಾಚ. ೯೩). ೩. (ಪ್ರಾಂತ್ಯದ ಪದ್ಧತಿಯ ಪ್ರಕಾರದ) ಗೇಣಿಯನ್ನು ಸಲ್ಲಿಸುತ್ತಿರುವ ತನಕ. ಗೇಣಿದಾರನಿಗೆ ಮತ್ತು ಅವನ ಉತ್ತರಾಧಿಕಾರಿಗೆ ಸಾಗುವಳಿಮಾಡಲು ಇರುವ ವಂಶಪಾರಂಪರ್ಯವಾದ ಹಕ್ಕು. — ಸ್ವಾಮ್ಯ : (ಕ್ಯಾಡೆ. IV, ೭೭೯). **ಮಿರಾಸು** : ೨. ಅವನಿಗೆ ನಾಲ್ಕಾಣೆ ಮಿರಾಸು ಕೊಡುವರು (ಹುಬ್ಬಿಪ. ೯); ಆ ಊರಿನ ದೇವರ ಒಕ್ಕಲಿಗೆ ಸೇರಿದ ಪಕ್ಕದ ಊರುಗಳ ಒಕ್ಕಲುಗಳಿಂದಲೂ ಈಗ 'ಮಿರಾಸು' (= ಜಪಮೂಲು) ಪಡೆಯುವ ಹಕ್ಕು ಅರ್ಚಕನಿಗಿದೆ (ಜೂಣಪಂ. ೦೨). **ಮಿರಾಸೆ** : ೨. ಸುಗ್ಗಿಯ ವೇಳೆಗೆ ಅವನು ಮತ್ತ ಹಿಂದಕ್ಕೆ ಬಂದು ತನ್ನ ಮಿರಾಸೆಯಾದ ರಾಗಿ ಭತ್ತವನ್ನು ಪೂರೈ ಮಾಡಿಕೊಂಡು ಹೋಗುತ್ತಾನೆ (ಹ್ಯಾಣ. ೪೯) ; ಅವರಿಗೆ ಪ್ರತಿ ಮನೆಯಲ್ಲೂ ವರ್ಷಕ್ಕೆ ಒಂದು ಗೊತ್ತಾದ ಪ್ರಮಾಣದಲ್ಲಿ ಮಿರಾಸೆ ಕೊಡುತ್ತಿದ್ದರು (ಕಳಪು. ೧೩). **ಮಿರಾಸಿ** : ೨. ಅವನ ಮಕ್ಕಳು . . . ತಳಾರಿಕೆ ಹಾಗೂ ನೀರಗಂಟಿತನವನ್ನು ನೋಡಿಕೊಂಡು, ಧಾನ್ಯದ ಮಿರಾಸಿಯನ್ನು ತೆಗೆದುಕೊಂಡು ನೆಮ್ಮದಿಯಿಂದ ಬದುಕುತ್ತಿದ್ದರು (ಆಚಿಗೆ. ೬೬).

[<- ಅರೆ. ಮಿರಾಸ್ ; ಹಿಂ. ಮಿರಾಸ್, ಮಿರಾಸ್ = ಪಿತ್ರಾರ್ಜಿತ ಆಸ್ತಿ ; ಪರ್ಷಾ. ಮಿರಾಸ್ = ವಂಶಪಾರಂಪರ್ಯವಾದ ಸಂಪತ್ತು]

ಮಿರಾಸಿದಾರ. ಮಿರಾಸದಾರ (ನಾ)· ಸಾಗುವಳಿದಾರರಿಂದ ಮಿರಾಸಿಯನ್ನು ಪಡೆಯುವ ಹಕ್ಕನ್ನು ಹೊಂದಿದವನು : (೫)· **ಮಿರಾಸದಾರ :** ಒಂದು ಪ್ರಾಂತದ ಆಡಳಿತಗಳೆಲ್ಲವೂ ದೇಶಾಧಿಕಾರಿಯಾದ ದೇಶಮುಖಿ . . . ಮಿರಾಸದಾರ, ಜಮೀನ್‌ದಾರ ಎಂಬೀ ಅಧಿಕಾರಿಗಳ ಅಧೀನವಾಗಿದ್ದುವು (ಶಕ್ತ. ೦೫೬)·

[← ಪಾರ. ಮಿರಾಸೀದಾರ್ : ದ್ರಾ. ಮಿರಾಸ್‌ದಾರ್]

ಮಿರಾಸು 'ಮಿರಾಸಿ' ನೋ·

ಮಿರಾಸೆ 'ಮಿರಾಸಿ' ನೋ·

ಮಿರಿ (ನಾ)· ಕಾಳುಮೆಣಸು ; ಕರಿಮೆಣಸು : ಪಿಪ್ಪಲಿ ವಿವಿ(ಳಿ)ನಾಗರಂ ಬಳಿವೆನಪ್ಪ ಪುನರ್ನವಯಂಬಿವೆಲ್ಲವುಂ ಜಲದೊಳಿ ಕೂಡಿಕೊಂಡರೆಮುದಂ ಕುಡಿಸಲ್ . . . ಪೆರ್ಗಣಂಗಳ ವಿಷಂಗಳುಪಾಂ ಕಳೆಗುಂ (ಐಷುವ· ೦೨-೯)·

[ದೇ.॥ ತಮಿ. ಮಿರಿಯಮ್ : ತೆಲು. ಮಿರಿಯಮು. ಮಿರಪು./ಪ್ರಾ. ಮಿರಿಅ-/ಪಾಕೃ. ಮಿರೀ ; ಗುಜ. ಮಾರ್ಚ್-/ಸಂ. ಮರಿಚ]

ಮಿರಿದೆ (ನಾ)· ಒಂದು ಸ್ಥಳದ ಹೆಸರು : ℙ ಇದು ಈಗಿನ ಮೈಸೂರು ಜಿಲ್ಲೆಯ ಕೃಷ್ಣರಾಜನಗರದ ಮಿರ್ಲೆ ಗ್ರಾಮ : ಮಿರಿದೆಯ ಉಮ್ಮಾದಗಾಮುಣ್ಡರುಂ . . . ತನನ್ಮಾಕರುಂ ಕೊಳನೆಲ್ಲೂರ ಸಾಲತ್ತರುಮ್ ವಾರದರುಂ ಎನೆವ್ವರುಂ ನರಸಾಕ್ಷಿ (ಎಳ· V (೩), ಕ್ಕ.ಸ. ೧೦೬-೬೯ ; ಶಾ. ೫೫೦)· [ℙ ಇದು 'ಮಿರಿಲೆ' ಎಂಬುದರ ಆಪಲಿಖಿತ]

ಮಿರಿಮಿರಿ 'ಮಿಜಿಮಿಜಿ' ನೋ·

ಮಿರಿಳೆ, ಮುರಳ್ಳಿ (ನಾ)· ಹೊಲ, ಗದ್ದ ಹಾಗೂ ಸದೀತೀರವೆಲ್ಲಿ ಬೆಳೆಯುವ ಒಂದು ಬಗೆಯ ಹುಲ್ಲು ಮತ್ತು ತಿನ್ನಬಹುದಾದ ಅದರ ಬೀಜ : ಕೀಳುಮರ ಕಾವಾಗಿ ಕೊಡಲಿಗೆ ಏಳಿಗೆಯ ತನ್ನಿಬಿಳಕುಲ ಜಾಲಕಂ ಕಡುಮ್ಬಿತ್ತುವಾದಂತಸುರಸಂತತಿಗೆ ಖೂಳನೈರುತಿ ಮೃತ್ಯು ವಾದನು ಹೇಳಲಿನ್ನೇನವರಸ ದಿಕ್ಕಟಪಾಲಕರೂಪವೆರೆದು ಏಂಬಿಳೆಯ ಬೀಜ ದಂದವರಿ (೬೦೦೫. ೭೬-೭೬)· **ಮುರಳ್ಳಿ :** ಎಳ್ಳಂತು ಬಿಸಿಲಿಗೆ ಒಣಗುತ್ತದೆ. ನೀನು ಯಾಕೆ ಒಣಗುತ್ತೀ ಮುರಳೀಬೀಜವೇ ? (ಗಪ) ; ಎಳ್ಳೂಣಿದರೆ ಎಣ್ಣೆ ಬರುತ್ತದೆ. ನೀನು ಯಾಕೆ ಒಣಗುತ್ತೀ ಮುರಳೀ ಬೀಜವೇ ? (ಗಪ)· [← ತುಡಾ. ಮುರಲ್]

ಮಿರುಗಿಸು 'ಮಿಟುಗಿಸು' ನೋ·

ಮಿರುಗು$_1$ 'ಮಿಟುಗು$_1$' ನೋ·

ಮಿರುಗು$_2$ 'ಮಿಟುಗು$_2$' ನೋ·

ಮಿರುಗುಕೊಡು (ಕ್ರಿ)· ಹೊಳಪನ್ನು ಕೊಡು ; ಪೆರುಗು ನೀಡು : ಚಂದ್ರಿಕೆಯಲ್ಲಿ ಆ ಬಣ್ಣಕ್ಕೆ ಮಿರುಗುಕೊಟ್ಟಂತಾಗಿತ್ತು (ಶಾಣಾ. ೦೦೩)·

[ಮಿರುಗು$_2$ (< ಮಿಟುಗು$_2$) + ಕೊಡು$_1$]

ಮಿರುಗುಹುಟ್ಟು (ಕ್ರಿ)· ಹೊಳೆ ; ಪ್ರಕಾಶಿಸು : ಅಲ್ಲಿ ಮಿರುಗುಹುಟ್ಟುತ್ತ ಬಿದ್ದಿದ್ದ ಒಂದು ದೊಂಡೂಕಲ್ಲನ್ನು ಲಕ್ಷ್ಮಿಯ ಕೈಯಲ್ಲಿಟ್ಟು (ಶಾಣಾ. ೦೬೨)·

[< ಮಿರುಗು$_2$ + ಹುಟ್ಟು$_{1,1}$]

ಮಿರುಗುಹುಳ (ನಾ)· ಮಿಂಚಿನಂತೆ ಹೊಳೆಯುವ ಒಂದು ಬಗೆಯ ಹುಳು ; ಮಿಂಚುಹುಳು ; ಮಿಣುಕುಹುಳು : ತರಣಿಯಂಬರ ಬಿಳಗುವಂದದಿ ಮಿರುಗಹುಳ ಬೆಳಗುವವೆ (ಶಾಮಾ. ೦೬೯-೦೨)·

[ಮಿರುಗು$_1$ (< ಮಿಟುಗು$_1$) + ಹುಳ (< ಪುಳು)]

ಮಿರುತಾರಗೆ (ನಾ)· ಹೊಳೆಯುವ ನಕ್ಷತ್ರ : ಗೋವುರದ ತುದಿಯಲ್ಲಿ ಬಾನನೆತ್ತುತ ನಿಂತು ಸಾರುಳಿನೊಳು ಮಿರುತಾರೆಗಳು ಮಾಲೆಗೊಳುತ (ಶುಚಿ· ೦೨-೬)· [< ಮಿರುಗು$_1$ + ತಾರಗೆ]

ಮಿರುವರಿಕೆ (ನಾ)· "ಮಿರ್ರೆನೆ ಓಡುವಿಕೆ" (೧೯೭೦. ೦೩೨ ಪಾದ್ಯ) : ನಲಿನಮಂ ನನೆಮುನಿಸಿನ· ಕೋಗಿಲೆಯ ಕೊರಳ ಕನಸಿನ· ಮುಂಗಿಲಿನ ಮಿರ್ರೆಮರಿಕೆಯಂ ಸಲ್ಲುಟಿದೆ ನೋಡ ಹರಕೆಯು ! (೧೯೭೦. ೫೯-೦೯)·

[ಮಿರ್ರು + ಪರಿಕೆ$_1$]

ಮಿರ್ಜಾಯಿ (ನಾ)· ಉದ್ದವಾದ ತೋಳುಗಳುಳ್ಳ ಒಂದು ಬಗೆಯ ಅಂಗಿ ; ಕುಡತಾ : ಶ್ರೀಆರವಿಂದನು . . . ಭಾರತದೇಶದ ಗಡಿಯು ಉರುಟುಬಟ್ಟೆಯ ಸಾಧಾರಣ 'ಮಿರ್ಜಾಯಿ'ಯನ್ನು (ಕುಡಕಾ) ಧರಿಸುತ್ತಿದ್ದರು (ಕುಜಾಹೋ· ೬೬)·

[← ಪಾರ. ಮಿರಜಾ, ಮಿರಜಾಈ ; ಹಿಂ. ಮಿರ್ಜಈ, ಮಿರಜಾಈ ; ಮರಾ. ಮಿರಜಾಈ]

ಮಿರ್ಚು 'ಮಿಟ್ಟು' ನೋ·

ಮಿರ್ಲೆ (ನಾ)· ಒಂದು ಬಗೆಯ ನೀರುಹಕ್ಕಿ : (೫)· [?]

ಮಿಲನ, ಮಿಳನ (ನಾ)· ೧· ಸೇರುವುದು ; ಸೇರಿಕೆ ; ಸಂಯೋಗ· ೨· ಒಬ್ಬರನ್ನೊಬ್ಬರು ಸಂಧಿಸುವಿಕೆ : ಸಮಾಗಮ : ಮೊದಲ ಮೋಹದ ಬಲಯ ನಮ್ದುದಯ ತೀಗೊಳ್ಂ, ಮೊದಲ ಮಿಲನದ ಮತ್ತ ವಿರಹದ ಶಿಖಾಲಯಂ ! (ಶಾಖ್ಯಂಗ. ೬೨-೦೬೬) ; ಮಿಲನದ ಕರುವಾಯ ದುಃಖಿಗಳಲ್ಲಿ ವಿಯೋಗವುಂಟಾದರೆ· ಅವರಲ್ಲುಂಟಾಗುವ ವಿರಹದಲ್ಲಿ ವೇದನೆಯು ಶ್ರುತಿಯಿರುವುದು (ಶಾಒ· ೯೨)· **ಮಿಳನ :** ೧· ಇಬ್ಬರ ಹೃದಯಗಳ ಮಿಳನವಾಗುವುದು (ಧ್ವಾಲೋ· XX· ೦೬೫) ; ವೈದಿಕ ಯಾಗ ಮತ್ತು ಕಾಡಿನಲ್ಲಿನ ಭಗವದಾರಾಧನೆ — ಇವೆರಡೂ ಅಂತರಗಳ ಮಿಳನವು ಉಪನಿಷತ್ತುಗಳಲ್ಲಿ ಸಹಗೆ ಗೋಚರವಾಗುತ್ತದೆ (ಸಜ್ಞಾ· ೨೦)·

[ಸಂ.]

ಮಿಲಾಖಿತು 'ಮುಲಾಖಿತ್ತು' ನೋ·

ಮಿಲಾಖಿತ್ತು 'ಮುಲಾಖಿತ್ತು' ನೋ·

ಮಿಲಾಯಿಸು(ಕ್ರಿ)· ೧· ಸೇರಿಸು ; ಕೂಡಿಸು : ಎಲ್ಲರನ್ನೂ ಒಟ್ಟಿಗೆ ಮಿಲಾಯಿಸಿ ಅವರೆಲ್ಲರ ತಲೆಗೆ ಒಂದೇ ಹೆಸರಿನ ಜೀಟಿಯನ್ನಂಟಿಸುವುದು ತರವಲ್ಲ (ಸಾಚಕ್ರ· ೪೩, ಕ್ರಸ್ಕಾ·೦೫)· ೨· ಬೆರಸು ; ವಿಶ್ರಮಿಸಾಡು : ಕೊಳವಳಕೆ ಬೀಜ ಒಂದು ಸೇರು ಮೆಂತ್ಯ ಒಂದು ಸೇರು ಉದ್ದಿನ ಹುಟ್ಟು ಒಂದು ಸೇರು ಇವನ್ನು ಮಿಲಾಯಿಸಿ ನೆರಳಲ್ಲಿ ಒಣಗಿಸಿ . . .ಇರವತ್ತು ದಿನ ತೆಗೆದು ಕೊಂಡರೆ ವೀರ್ಯವೃದ್ಧಿಯಹುದು (ಕಾಮಚಿ· ೨೬೬)· ೩·ಭೇಟಿ ಮಾಡಿಸು; ಪರಿಚಯ ಮಾಡಿಸು : (೫)· ೪· ತಿರುಗಿ ಬೀಳು; ದಬಾಯಿಸು : ಪುರೋಹಿತೆಶಾಸ್ತ್ರಿಗಳಿಗೇ ಮಿಲಾಯಿಸುತ್ತಿರುವ ಮುತ್ಸದ್ದಿಯರನ್ನು ಟಿಸ್ಸುವುದಕ್ಕಂತೂ ಆ ಅದೇಷನೇ ಬರಬೇಕು (ಕುಪಶ್ಯ· ೧೪)· ಅಮಿರ ಸಾಬಿಯು ಕೈಯಲ್ಲಿದ್ದ ದೊಣ್ಣೆಗೆ ಭೀಷಣವಾಗಿ ಮಿಲಾಯಿಸಿ ಕಣಕದ ಸಿಪಡಂತೆ ನಿಂತಿದ್ದಾನೆ· ಕಾಳ್ಗೆ ವೇಂಕಟಣ್ಣ ! (ಹುಗಮಾ· ೦೧) ೫· ಹೊಡೆ: ಬಡಿ : ಇಬ್ಬರು ಪ್ರತಿಸ್ಪರ್ಧಿಗಳಿಗೆ ಕೈಕ್ಕೆ ಮಿಲಾಯಿಸುವ ಹೊತ್ತು ಬಂತು (ಅದ್ಭಾರ· ೭೫) ; ಅವರು . . . ಕೈಕ್ಕೆ ಮಿಲಾಯಿಸುವ ಕಾರವಾರ ನಡೆಸಿರುತ್ತಾರೆ (ಕಾಂಶ· II, ೨೬೦)·

[ಮಿಲ್ಲಾ (ℙ ← ಹಿಂ. ಮಿಲನಾ ; ಪುಪಾ. ಮಿಳಣೇ. ಮಿಳವಣೇ) + — ಇಸು$_3$/ತುಳು. ಮಿರಾಯಿಸು, ಮಿಲಾವ್ವ, ಮಿಲಾಸು]

ಮಿಲಾವ್, ಮಿಲಾವೆ (ನಾ)· ಸೇರಿಸುವುದು; ಕೂಡಿಸುವುದು : ಆ ಭೂಮಿಯನ್ನು ಸಂಬರಿಸೋಕ್ಕೆ ಮಿಲಾವ್ ಮಾಡಿಕೊಳ್ಳಲೂ ಬಹುದು (ಕೂಪಾ. ೭೭)· **ಮಿಲಾವೆ :** ಕೋಟೆಯಳಗಣ ಮುದಿಯೆಲ್ಲಾ ಹೊರಳಗೆದು ಪರಸ್ಥಳದ ಮುಂದಿ ಕೋಟೆಯಳಗೆ ಕಾಯಾಮಾದ ಸ್ಥಳದ ಮುಂದಿ ಜೈತಿಗೆ ನಿಲಿಸಿ ಪರಸ್ಥಳದ ಮುಂದಿ ಮಿಲಾವೆ ಮಾಡಿ ಪೇಟಿಕಾವಲಲ್ಲಿಯಿಟ್ಟು (ಕೃಪ· ೫೭)· [← ಹಿಂ. ಮಿಲಾವ್; ಮರಾ. ಮಿಳಾವೂ]

ಮಿಲಾವಣೆ (ನಾ)· ೧· ಸೇರುವುದು; ಕೂಡುವುದೂ : (೫)· ೨· ಹೊಡೆದಾಟ ; ಬಡಿದಾಟ : ಇನ್ನೇನು ರಣಕಹಳೆ ಊದುವುದೊಂದು ಉಳಿದಿತ್ತು

ಕೈಕೈ ವಿಲಾಪಪಡಿಪುಗುವುದಕ್ಕೆ (ಶುಮೊ. ೩೭). [ಮಿಲಾಪ್ + —ಅಣ್ಕೆ. / ಹಿಂ. ಮಿಲವಾನಾ, ಮಿಲಾನೆ; ಮರಾ. ಮಿಳವಣೇ]

ಮಿಲಾವೆ 'ಮಿಲಾಪ್' ನೋ.

ಮಿಲಿಟರಿ. ಮಿಲಿಟರಿ (ಗು). ೧. ಸೈನ್ಯಕ್ಕೆ ಸಂಬಂಧಿಸಿದ: ಸೇನೆಯ : ದಂಡಿನ, ಮಿಲಿಟರಿ (Military· ಕಪ್ರಿ. ೩೩). (ನಾ). ೨. ಸೈನ್ಯ: ದಂಡು : ದೇವಾಲಯವು ಮಿಲಿಟರಿಯವರ ವಶದಲ್ಲಿದೆ (ಪ್ರಾಚೀ. ೦೫೯). **ಮಿಲಿಟರಿ :** ೧. ಮೈಸೂರು ಮಿಲಿಟರಿ ಫೌಜಿಗೆ ಸೇರಿರುವಂಥವರ ಸಂಬಳ ಮತ್ತು ಅರೋಮೆನ್ಸ್‌ಗಳು (ಸ್ಯಾಮಾಳ. ೭೫). ೨. ಆ ದಾರಿಯತ್ತ ಬ್ರಿಟಿಶರ ಮೂರುಮಿಲಿಯ ಮಿಲಿಟರಿಯಲ್ಲಿ ಕಣ್ಣಲ್ಲಿ ಕಣ್ಣಿಟ್ಟು ಸಹಾಯವನ್ನು ನಿರೀಕ್ಷಿಸುತ್ತಿದ್ದಿತು (ಕ್ರಾಪ್ರ. ೬೦). [← ಇಂ. Military]

ಮಿಲಿಟರಿ 'ಮಿಲಿಟರಿ' ನೋ.

ಮಿಲಿತ, ಮಿಳಿತ (ಗು). ೧. ಸೇರಿದ: ಕೂಡಿದ : ಹೃದಯ ಹೃದಯ ಮಿಲಿತೈಕ್ಯಮಂಥದಿದೆ ಒಂದೆ ಹೃದಯಮೊಲೋಕ (ಅಭಿಜ್ಞಾ. ೦೮೩-೩). ೨. ಜೊತೆಗೂಡಿದ ; ಹೊಂದಿಕೆಯಾದ. ೩. ಬೆರಸಿದ ; ಮಿಶ್ರಣ ಮಾಡಿದ : ಅವನ ತಲೆಯ ಮೇಲೆ ಮೋಜಿಯೊಳಿಪ್ಪಡೆಲೊಳಂತುದ್ದೂಳಿಸಂತ ಜಲಮಿಲಿ [ಪಾಣಾಂ. ೪] ತಥಸಿತವನು (ಜೈಮಿ. ೩೯-೦೪)· ೪. ಭೆಟ್ಟಿಯಾದ; ಕಂಡ. 'ಮಿಳಿತ : ೧. ಮಿಳಿತ ಬಾಧಾಳಿ ಭದ್ರಸುಮುಹೂರ್ತಮದಾಯ್ತೆನಲ್ (ಕ್ರೀಪು. ೦೬-೩೬) ; ರತ್ನಾವಳಿಯ ಮಕುಟದ ಮಿಳಿತ ರಶ್ಮಿಗಳ ಅಷ್ಟದಿಗಧೀಶ್ವರರು ಭಾವಿಸಲು . . . ಅಪ್ಪಮೂರ್ತಿಪ್ರಿಯನು ಮೈದೋಜಾದನು ಮುನಿವರಗೆ (ವಿಜಾಗ·೩-೨-೨೮). (ನಾ). ೫. ಸೇರುವಿಕೆ; ಸಂಯೋಗ: ತಿಲಯುಲಿದು ಸುಭಾಜನಸ್ಥಲಂ ಭಕ್ತಾದಿ ಮಿಳಿತಮೈಕ್ಯಾಂತ ಪಟುಸ್ಥಲಗಳಿವು (ಬಸಕಾಕಿ. ೦೦-೯೬). [ಸಂ.]

ಮಿಲುಕಾಟ (ನಾ). ಒದ್ದಾಟ; ಚಡಪಡಿಕೆ : ಬಂಡಿಯ ಮೇಲಿನ ಜೀವಿಯ ಮಿಲುಕಾಟ ಮಿತಿ ಮೀರಿತು (ಅಮೂಗ. ೩೦).

[ಮಿಲುಕು (< ಮಿಲುಗು) + ಆಟ]

ಮಿಲುಕಾಡು 'ಮಿಲುಗಾಡು' ನೋ.

ಮಿಲುಕು 'ಮಿಲುಗು' ನೋ.

ಮಿಲುಗಾಡು, ಮಿಲುಕಾಡು (ಕ್ರಿ). ೧. ಅಲುಗಾಡು ; ಅಲ್ಲಾಡು: ನಾಯಕ ಅದರ ಮುಖವನ್ನೇ ನೋಡಿ ಮೈಸವರುತ್ತಾನೆ. ಮಗು ಮಿಲುಗಾಡುತ್ತದೆ (ಕಪಡಾ. I. ೩೩೩); ಬಂಗಾರಿಗೆ ಮೈ ನಡುಕ ಬಂತು. ಮಗು ಮಿಲುಗಾಡಿತು (ಬಸಕೀ. ೬). **ಮಿಲುಕಾಡು :** ೨. ಒದ್ದಾಡು ; ಚಡಪಡಿಸು : ಮಳೆಯ ಪಂಜರಕ್ಕೆ ಸಿಲುಕಿ ಮಿಲುಕಾಡುವ ಜೀವಕ್ಕೆ ಕೇಳಿತೊ ಇಲ್ಲವೊ ! (ಅಮುಗ. ೩೩). [ಮಿಲುಗು + ಆಡು]

ಮಿಲುಗು, ಮಿಲುಕು (ಕ್ರಿ). ೧. (ನೀರು ಹೆಚ್ಚಾಗಿ ಅನ್ನವು ಗಂಜಿಯೊಡನೆ) ಸೇರು; ಬೇರೆ : ಹೊತ್ತು ವುದು . . . ಮಿಲುಗಿ [ಪಾಣಾಂ. ಗಿಲಿ, ಲಿಗಿ, ರಿಗಿ]ಹುದು ಪೊಡೆದಿಹುದು ನುಸುಗಂಜಿ ಸುತ್ತಿಹುದು ಪೊಣಗಿಹುದು ದೋಷಮಶನಕ್ಕೆಂಟುತೆಱನಪ್ಪದು (ಸೂಕಣಾ. ೬-೦). ೨. ಕೊಡಿಸು: ಬೆರಸು : ತೊಳೆದ ಗೋಧುವೆಗೆ ಜೀರಿಗೆಯೆರಡ ಪೊಯೊತ್ತಿ ಕಳಿಯರ್ಧ ನೀರರ್ಧವಾದೆಸಜನೆತ್ತಿಯದಜೊಳಗಿಕ್ಕಿ ಮಿಲುಗಿ ನೀರಿಂಗುವಂದದಿನಟ್ಟು ಕೊಂಡಿಳಿಸಿ (ಸೂಪಣಾ. ೩-೪೦). ೩. ಅಲುಗು; ಅಲ್ಲಾಡು : 'ಮಿಲುಗಾಡು' ಪರಾ. **ಮಿಲುಕು :** ೪. ಒದ್ದಾಡು; ಚಡಪಡಿಸು: ಮಿಡುಕು: 'ಮಿಲುಕಾಟ', 'ಮಿಲುಕಾಡು' ಪರಾ.

[ದೇಶೀ. ತೆಲು. ಮೆಲಗು, ಮೆಲಯು, ಮೆರಿಯು]

ಮಿಶಿನ್ನು 'ಮಿಷನ್ನು' ನೋ.

ಮಿಶ್ರ (ಗು). ೧. ಸೇರಿಸಿದ; ಬೆರಸಿದ. ೨. ಕೊಡಿಕೊಂಡ; ಬೆರೆತ : ಆ ಗಂಧಸ್ಪರ್ಶಮೋದಕಂ ವೇರುಮಹೀಧರಜಾಂಬೂನದಸಿತಂಬುಬಿಡಿದಿಟ್ಟಿದು ಕಾಳಾಗ್ನಿರುದ್ರಮಿಶ್ರವಯಸ್ಸೊಪ್ಪಿತಸ್ಪರ್ಶವುದಿತಂ ಸೌಮನಸಾನೆಲ್ಲಿ (ಕಾಂಶಿ. ೦೦-೩೪ ಪ); ಮುಕ್ತಮಿಶ್ರ ಧರ್ತಕ್ಕೆ ದರ್ಶಂ (ಕಪಾರ. ೫೭). ೩. ನಾನಾ ಬಗೆಯ: ವಿವಿಧ ರೀತಿಯ : ಅವನ ಹೃದಯ ಮಿಶ್ರ ಭಾವಗಳ ತುಮುಲರಂಗವಾಗಿತ್ತು (ಕುವಿ. ೦೬೩). (ನಾ). ೪. ಸೇರಿಕೆ; ಮಿಶ್ರಣ : ಗುರುಲಘುಮಿಶ್ರಂ ಸಮೂಜ್ಯರದಿಂ ಗಣಮಿಡು ಲಘಾಂಗಿ (ಛಂದೋಂಜಾ. ೦-೩೭). ೫. ಗೌರವಾನ್ವಿತವ್ಯಕ್ತಿಗಳನ್ನು ಕುರಿತು ಹೇಳುವಾಗ ಬಳಸುವ ಒಂದು ಪದ. ೬. ಒಂದು ಬಗೆಯ ಮೂಲಲಂಗಿ. ೭. [ಸಂಗೀತ] ವಿಳಂಬಲಘುಗಳ ಕಾಲವ ವಿಭಿಯುಳ್ಳ ಒಂದು ಬಗೆಯ ತಾಳ : ಜಾತಿ . . . ಇದು ಐದು ವಿಧವಾಗಿದೆ. ಅವು ಕ್ರಮವಾಗಿ (೧) ತ್ರಿಶ್ರ (೨) ಚತುರಶ್ರ (೩) ಖಂಡ (೪) ಮಿಶ್ರ (೫) ಸಂಕೀರ್ಣ. ಈ ಐದು ಜಾತಿಗಳೂ ಲಘುವಿಗೆ ಮಾತ್ರ ಸಲ್ಲುತ್ತವೆ . . . ತ್ರಿಶ್ರ ಚತುರಶ್ರಗಳ ಕೂಡಿಕೆಯಿಂದ ಮಿಶ್ರವೂ . . . ಪುಟ್ಟುವ (ಸಂಗೀಸಂ. ೩೩) : ವರ್ಣತ್ರಾವು ತ್ರ್ಯಶ್ರ, ವ್ಯಶ್ರ, ಚತುರಶ್ರವೆಂದು ಮೂರು ರೀತಿ (ಪಾಚಕ್ರ. ೯೭). ೮. ನಾಲ್ಕು ಬಗೆಯ ಧ್ವನಿಭೇದಗಳಲ್ಲಿ ಒಂದು : ದಿವಿಜನಾಯಕಗಾಯಕಂ . . . ಪಾವುಳ ಮೊಂಬಳ ನಾರಾಟ ಮಿಶ್ರಮೆಂಬ ನಾಲ್ಕುಂ ಧ್ವನಿಯು ಭೇದಮನಡ್ದು . . . ಪಾಡುತ್ತಿರೆಯುಂ (ಶಾಂಶೀಕೃ·೦೬-೩೩ ಪ); ತಾಳಲಯು ಮೊಂಬಾಳ ವಿಸ್ರಮದ ಮೇಳವದು ಪಾರಾಗ (ಭಾಬಾಕೃ. ೬೭). ೦-೩೭); ಆ ರಾಗಂಗಳಂ ಪಾಡುವಲ್ಲಿ . . . ಪಾವುಳ ಬಬ್ಬೋಳಿ ನಾರಾಟ ಮಿಶ್ರವೆಂಬ ಚತುರ್ವಿಧ ಸಂಸ್ಕಾರಗಳಿಂದುರುಳಿಸಿ ಕರ್ಣರಸಾಯನಮಾಗಿ ಪಾಡಿ (ಶಿವೇಗೀ. ೨೩೦). ೯. ಸ್ವರ. ಪಾಟಿ. ಬಂಧ, ಪದ, ತೇನ, ಬಿರುದು, ಚಿತ್ರ ಮತ್ತು ಮಿಶ್ರಗಳೆಂಬ ಎರಿಟು ಬಗೆಯ ಕರಣಗಳಲ್ಲಿ ಒಂದು : ರಾಸವು ತಾಳ. ದ್ರುತವೆಂಬ ಲಯ-ಇವುಗಳಿಂದ ಕೂಡಿರುವುದು ಕರಣದ ಸಾಮಾನ್ಯಲಕ್ಷಣವೆಂದು ತಿಳಿಯಬೇಕು. ಅದು ಎಂಟು ವಿಧವೆಂದು ಸಮ್ಮತಿಸಿದೆ. ಸ್ವರ, ಪಾಟಿ, ಬಂಧ, ಪದ, ತೇನ, ಬಿರುದು, ಚಿತ್ರ, ಮಿಶ್ರ (ಚತುಕ್ಷ. ೩೩). ೧೦. [ಕಾವ್ಯಮೀ] ರೂಪಕಗಳಲ್ಲಿನ ಮೂರು ಬಗೆಯ ಕಥಾಂಶಗಳಲ್ಲಿ ಒಂದು: ಪ್ರಸಿದ್ಧವಾದ ಕಥಾವಸ್ತುವಿನಲ್ಲಿ ಬದಲಾವಣೆಯನ್ನು ಮಾಡಿರುವಂಥದು : 'ಮಿಶ್ರ' ಎಂದರೆ ಪ್ರಸಿದ್ಧವಾದ ಕಥೆಯಲ್ಲಿ ಬದಲಾವಣೆಗಳನ್ನು ಮಾಡಿದ್ದು (ಕೈವಿ. ೨೦೬). ೧೧. [ಗಣಿತ] ಕೂಡುವುದು : ಯುತಂ. ಯುಕ್ತಂ, ಮಿಶ್ರಂ, ಸಮ್ಮಿಶ್ರಂ . . . ಒತಂ ಇಂತಿನಿತುಂ ಕೂಡೂದಕ್ಕೆ ಹೆಸರು (ಕ್ಷಚಿಾ· ೦೦-೦೩ ಪ). ೧೨. [ಜೈನ] ಆತ್ಮನ ಐದು ಭಾವಗಳಲ್ಲಿ ಒಂದು; ಕರ್ಮದ ಕ್ಷಯೋಪಶಮದ ಭಾವ : ಆತ್ಮನಲ್ಲಿ ಪಾರಿಣಾಮಿಕ್ಕ ಔದಯಿಕ· ಮಿಶ್ರ, ಕ್ಷಾಯಿಕ, ಔಪಶಮಿಕಗಳೆಂದು ಐದು ಭಾವಗಳುಂಟು (ಕ್ಷತಕ· ೨೩೬); ಬಾಕಿ ನಾಲ್ಕು ಪರಿಣಾಮಗಳು ಔಪಶಮಿಕ, ಕ್ಷಾಯಿಕ, ಮಿಶ್ರ, ಔದಯಿಕಗಳು . . . ಬಾವಿಯ ನೀರಿನ ಕಶ್ಮಲದಂತೆ ಎರಡಾ ವಿಧವಾಗಿಯೂ ಇರುವುದು ಮಿಶ್ರ (ಪಿಂದಣಾ. ೩೩). [ಸಂ.]

ಮಿಶ್ರಕಾಪಿ (ನಾ). [ಸಂಗೀತ] ಒಂದು ರಾಗದ ಹೆಸರು : ಈ ಭಾಷಾಂಗ ಕಾಪಿರಾಗಕ್ಕೆ ಹಿಂದೂಸ್ಥಾನಿಕಾಪಿ, ದೇಶ್ಯಕಾಪಿ ಮತ್ತು ಮಿಶ್ರಕಾಪಿ ಎಂಬ ಹೆಸರುಗಳೂ ಪ್ರಚಾರದಲ್ಲಿವೆ (ಸಂಗೀಶ. ೩೦).

[ಸಂ. ಮಿಶ್ರಕಾಪೀ]

ಮಿಶ್ರಕಾವ್ಯ (ನಾ). [ಕಾವ್ಯಮೀ] ಚಂಪೂಕಾವ್ಯ. ನಾಟಕ ಮುಂತಾದವುಗಳಂತೆ ಗದ್ಯ ಮಾತ್ರವೂ ಪದ್ಯಗಳೆರಡೂ ಸೇರಿಕೊಂಡಿರುವ ಸಾಹಿತ್ಯರಚನೆ : ಗದ್ಯ ಪದ್ಯಗಳೆರಡೂ ಇರತಕ್ಕ 'ಮಿಶ್ರ' ಕಾವ್ಯವು 'ಚಂಪು' ಎನ್ನಿಸುತ್ತದೆ. ನಾಟಕಾದಿ ದೃಶ್ಯಪ್ರಬಂಧಗಳಲ್ಲಿಯೂ ಗದ್ಯಪದ್ಯಗಳೆರಡೂ ಬರುವುದರಿಂದ ಇವುಗಳನ್ನೂ ಮಿಶ್ರಕಾವ್ಯಗಳಲ್ಲಿಯೇ ಸೇರಿಸಬಹುದು (ಕೈವಿ. ೦೬೦). [ಸಂ.]

ಮುಂದೆಯ್ದು, ಮುಂದೈದು (ಕ್ರಿ). ಮುಂದಕ್ಕೆ ಸಾಗು ; ಮುಂದುವರಿ : ನಡೆ ಸಾರ್ ಮುಂದೆ[ಣಾಶಾ. ದ]ಮ್ಮಿ ಬೆಳ್ಳಾದಮನೆ ಬಿಗಿ ನಿಳಂಜಂಗಳಂ ಸೋದಿಸು (ಜಾಪಂ. ೩-೨೯). **ಮುಂದೈದು** : ಮುಂದೈದುವ ತುರಂಗವುಧ ಕೂಡೆ ನಡಯಾತ್ತೆ (ಕೃಬಾಣ. ೦೩-೨೦) ; ಮುಂದೈದಲಾ ಗಿರಿದು ಸಾರವತ್ತಾದ ಪ್ರತ್ಯಕ್ಷಗಳೆಲ್ಲ ಬಂದೈದುತೋರಂತೆ ನಿಜಬುದ್ಧುಗಳನು ಬೀಳ್ಕೊಡುವಂತೆ ಮನೋಹರ್ತಮಮನುಸರಿಸಲು (ತೆಂಚಾರಾ. ೩-೦-೨೦).

[ಮುಂದು೨ (< ಮುಂತು೨) + ಏಯ್ದು]

ಮುಂದೆಸೆ (ನಾ). ಮುಂದುಗಡೆ ; ಎದುರು : ಸ್ಥೂಲ ಸೂಕ್ಷ್ಮ ಕಾರಣ ಈ ಮೂಱು ಮುಂದೆಸೆಯಲ್ಲಿ ಕಂಡೆ (ಪೋಚಪ್ರ. ೦೪೯-೨೬೬) ; ಬಸವನಂ ಬರಸೇಳ್ದು ಕಳುಹಲು ಬಸವಣಗಳ ಕೇಳ್ದು ಬಂದಾ ವಸುಮತೀಶನ ಮುಂದೆಸೆಯೊಳಿರಲು (ಪಚಪ್ರ. ೨೬-೨೯) ; ಪಳಿನವಾಂಧವನ ಮುಂದೆಸೆಯೊಳುಮಿಗೆ ಮಿಂಚುಬ್ಬುಳುವಿನ ಮಿನುಗುಂ ರಂಜಿಪುದೇ (ಪೋಚಪ್ರ. ೦೪-೦೦). [ಮುಂ೨ (< ಮುನ್‌೨) + ದೆಸೆ]

ಮುಂದೆಜಪ್ಪು (ನಾ). ಮುಂಭಾಗದಲ್ಲಿರುವ ಖಾಲಿಯಾದ ಪ್ರದೇಶ : ಮುಂದುಗಡೆಯ ಬಯಲು : ಸಜ್ಜಾಪ್ಪನೆಯೊರ್ವಳ್ ಪೌಧದ ಮುಂದೆಜಪ್ಪೊಳ್ಕೆಯಿದಳ್ (ಶಾಪ್ರಥೀ. ೧೩-೨೩).

ಮುಂ೧ (< ಮುನ್‌೧) + ತೆಜಪ್ಪು]

ಮುಂದೈದು ಮುಂದೆಯ್ದು ' ನೋ.

ಮುಂದೊತ್ತು (ಕ್ರಿ). ಮುಂದುವರಿ ; ಮುನ್ನುಗ್ಗು : ಭರದಿಂ ಬಂದೊತ್ತಿ ಮುಂದಮ್ಮಸಕದೆಸಕದಿಂ ಪೀವಿ ಮುಂದೊತ್ತಿ ಗೋದಾವರಿ (ಸಚಾಕ. ೦-೩೯); ಮುಂದೊತ್ತುವ ನಾಯ್ಗಳ ಬೊಗಳುವ ಬಾಯ್ಗಳ ಗೇಣಂಬುಗಳ ಕಚ್ಚಿ ಪನು (ಪಕ್ಕಥ. ೨೯-೭). [ಮುಂದು೨ (< ಮುಂತು೨) + ಒತ್ತು೨]

ಮುಂದೊದಗು (ಕ್ರಿ). ೧. ಮುಂದೆ ಹೋಗು : ಮುಂದಾಗು : ಶಚಿಯುಪೂಲಿದು ಕೈಗೊಟ್ಟು ಕರೆತರೆ ಜಿನನ ಕಾಣುತ್ತಲೆ ಮುಂದೊದಗಿ ಪೊಜೆವರ್ಚ್ಯಮೆತ್ತಿ ಜಯೇಂದು ಭಕ್ತಿಯಿಲೆಜಗಿ (ಪಾರ್ಶ್ವನಾ. ೩೩-೯೦). ೨. ಅನಂತರದಲ್ಲಿ ಉಂಟಾಗು ; ತರುವಾಯದಲ್ಲಿ ಸಂಭವಿಸು : ಮುಂದೊದಗಬಹುದಾದ ತೊಂದರೆಗಳಿಗೆ ಈಗಲೇ ಪರಿಹಾರವನ್ನು ಕಂಡುಕೊಳ್ಳಬೇಕು (ಕೂಲ್ಲ). [ಮುಂದೆ೨ (< ಮುಂದೆ೨) + ಒದಗು೧]

ಮುಂದೋಳು (ನಾ). ತೋಳಿನ ತುದಿ : ತನ್ನ ನಿತಂಬವು ನೀರಿನೊಳಲುಗಲು ಮುಂದೋಳು ದವಮೊಳಗಿರಲು ಮಂಡೂಕ ಪುರುಷಾಯುತಾಸಕ್ತ ಳೆಂಬಂತೆ ಪ್ರತಿಬಿಂಬದೊಳು ತೋರ್ಪಳಲ್ಲೆ (ಣಾಶಾ. ೪-೪೦).

[ಮುಂ೧ (< ಮುನ್‌೧) + ತೋಳು (< ತೋಳ್)]

ಮುಂಧಾಳಿ (ನಾ). ಮುಂದೆ ಧಾವಿಸಿ ಮಾಡುವ ಮುತ್ತಿಗೆ : ಸುತ್ತಿಗೆ ಮಾಡುವ ಧಾಳಿ : ಮೇಲು ಮುತ್ತಿಗೆಯಾಯ್ತು, ಯವನರ ಧಾಂ ಗಂಧರ್ವಾವಳಿಯ ಮುಂಧಾಳಿಗುರಗಾಧಿಪತಿಯೊಬ್ಬನೆ ನಿಂದನಿದಿರಾಗಿ. (ಜಜಗ. ೯-೦೮-೦೬). [ಮುಂ೧ (< ಮುನ್‌೧) + ಧಾಳಿ (< ದಾಳಿ)]

ಮುಂಧೋರಣ (ನಾ). ಮುಂದಾಗುವುದರ ಬಗೆಗಿರುವ ಗಮನ : ಮುಂದಿನ ಯೋಚನೆ ; ಮುಂದಾಲೋಚನೆ : ನಾನು ಸುಮ್ಮನಿದ್ದು, ಪರಾವಲಂಬಿಯಾಗಿ, ಮುಂಧೋರಣವಿಲ್ಲದ ಲಗ್ನಮಂಟಪದಲ್ಲಿ ಅವಮಾನಿತನಾಗಬಕ್ಕಿದ್ದಲ್ಲ (ಗಂಪಾಹಿ. ೦೩೪).

[ಮುಂ೨ (< ಮುನ್‌೨) + ಧೋರಣ]

ಮುಂಧೋರಣೆ (ನಾ). = ಮುಂಧೋರಣ : ಪಾನು ಮುಂಧೋರಣೆಯವಳು. ಮುಖ್ಯ ಮುಖ್ಯ ಸಾಮಾನುಗಳನ್ನು ಬದಿಗೆ ಸರಿಸಟ್ಟುಕೊಂಡು ಉಳಿದ ಶಿಸುವನ್ನು ದಾನಧರ್ಮಕ್ಕಾರಂಭಿಸಿದೆ (ಸ್ಮಶಾ. ೨೭೯) ; ಪ್ರೇಮ ಭಂಗದಿಂದ ಸಾಯುವವರು ಜೀವಘಾತಕರೇ ಸರಿ. ; ಅದರಲ್ಲಿ ಧ್ಯೇಯವೂ ಇರುವುದಿಲ್ಲ . . . ಮುಂಧೋರಣೆಯೂ ಇರುವುದಿಲ್ಲ (ಕಾಪಂತ. ೨೩೭).

[ಮುಂ೨ (< ಮುನ್‌೨) + ಧೋರಣೆ]

ಮುಂಪಥ (ನಾ). ಮುಂದಿನ ಮಾರ್ಗ : ಮುರಾಳರ್ದ್ದಜಂ . . . ಹರಿಯ ಮುಂಪಥದೊಳಡಗೆಡೆಯುತ . . . ಕೈಗಳ ಮುಗಿದನು (ಕೈಪಾಣಾ. ೦೪-೨೬).

[ಮುಂ೨ (< ಮುನ್‌೨) + ಪಥ]

ಮುಂಪಾಲು (ನಾ). ಮೊದಲೇ ತೆಗೆದಿಟ್ಟ ಭಾಗ ; ಮಿಸಲು : ಮಿಂದು ಪೂಜ್ಯರ್ಗೆ ಮುಂಪಾಲು ನೀಡದೇನನುಮುಣ್ಣನುಂ ಅಧರ್ಮದಿಂ ಪಾಲ್ಗೆ ಗೋವಂಬೊಲ್ ಗೋವಂ ಕರೆಯಂ ದಿಟಂ (ಕಾಸಂಪ. ೨-೦೪).

[ಮುಂ೨ (< ಮುನ್‌೨) + ಪಾಲು೨ (< ಪಾಲ್‌೨)]

ಮುಂಪುದಿ (ನಾ). ಮುಂಬಾಗಿಲಿನ ಪಕ್ಕ, -ಪಾರ್ಶ್ವ : ಬರವ ಸೂಚ್ಯಿ ಬಾರದಿರೆ ಎಟಂ ಮುಂಪುದಿಗೆ ನೆಜಿ ಪೆಮ್ಮೆ ನಿಂದು . . . ಮೈಮಜಿ ವ್ಯತರಿಪ್ಪಳಿಗೆಗಚ್ಚಿಉತೆ ಸಪಿಯರುಪಚರಿಸಲೊಂದೆಡೆಯೊಳಿರ್ದಳದೊರ್ವಳಾ (ಣಾಶ. ೬-೩೬). [ಮುಂ೨ (< ಮುನ್‌೨) + ಪುದಿ೨]

ಮುಂಪೇಳ್ ' ಮುಂಪೇಟ್ ' ನೋ.

ಮುಂಪೇಟ್, ಮುಂಪೇಳ್ (ಕ್ರಿ). ಮುಂಚಿತವಾಗಿ ಹೇಳು; ಮೊದಲೇ ಹೇಳು : ಜಾಂಬೂನದಂ . . . ಪೇಟಲಾತುರನಾದಂ ದನುಜಂಗೆ ದಿವ್ಯ ಮುನಿಗಳ್ ಮುಂಪೇಳ್ದ ವೃತ್ತಾಂತಮಂ (ಪಂಚಾಚಾ. ೦೦-೬) ; ಎಂತುಂ ಮುಂ[ಣಾಶಾ. ಎಂತುಮು ಮುನ್ನಂ] ಪೇಟ್ದಿರ್ಪಾಂತರಮಿಂತುಟನೆ ಬಲ್ಕಿಕ ತೋಜುವುದದು ವೈಜ್ಞಾಂತು (ಣಾಶಾ. ೬೦೪). **ಮುಂಪೇಳ್** : ಮುಂಪೇಳ್ದ ಬಂಧನಿಯಮಸೂತ್ರಮಂ ಲೇಸಾಗಿ ಭಾವಿಸಿ ತೀರ್ಥಬಂಧಮ

ಸಂಮುಖಾದಿ ಚತುರ್ಗುಣಸ್ಥಿತನೆಯೊಳೆಯಕ್ಕುಂ (ಸೊಮ್ಮ. ೦೫-೦೦).
[ಮುಂ೨ (< ಮುನ್ ೨) + ಪೇಟು]

ಮುಂಪೋಗು (ಕ್ರಿ). ೧. ಮುಂದಕ್ಕೆ ಹೋಗು ; ಮುಂದೆ ಸಾಗು : ತೇಜಾಢ್ಯರುಗಳು ಮುಂಪೋಗಿ ವಿಪುಲಸದೊಜಪತ್ರಿಕೆಯ ಪೊಟ್ಟಣದಿ ರಾಜಾಮ್ಯಪವೆನೆ ಪಣ್ಣೀರ ತಂದಿತ್ತರಾ ಜಿತಕಂತುನಂದನಗೆ (ಪೂಜಕ. ೦೯-೩೬). ೨. ಮುಂಚಿತವಾಗಿ ಹೋಗು ; ಮೊದಲು ಹೋಗು : ಪ್ಯವದೇಶಂ ಮುಂಪೋದುದನಪೂರ್ವಮಂ ಕಂಡು ನೆನೆವುದು ತಾಂ ಸ್ಮರಣಂ (ಶಾಕ್ಯಕ. ೬೦೩).
[ಮುಂ೨ (< ಮುನ್ ೨) + ಪೋಗು೧ (< ಪೋ೧)]

ಮುಂಪ್ರತಿ (ನಾ). "ಪ್ರಕಟನೆಯಾಗುವ ಮೊದಲು ಕಳುಹಿಸಿದ ಪುಸ್ತಕದ ಪ್ರತಿ: ಮುಂಪ್ರತಿ "(Advance copy of a book. ೨೦೪೨).
[ಮುಂ೨ (< ಮುನ್ ೨) + ಪ್ರತಿ]

ಮುಂಬಕ್ಕಿ (ನಾ). ಸೂರ್ಯೋದಯಕ್ಕೆ ಮೊದಲು ಧ್ವನಿಮಾಡುವ ಹಕ್ಕಿ : ದಿವಕೆಂದು ದೇವಳುದರಂ ಮುರಿಗೆ ಬಪಕೆಂಬ ಗೆಲುವಿಂದ ದೇವ ದೂತರೆ ಬಾರಿಸುವರೊ ಮಂಗಲವಾದ್ಯವೆನಲು ಮುಂಬಕ್ಕಿಗಳ ಮೇಳವಂ ಮೊಳಗಾಡೆ (ಗೊಲ್ಲಕಾ. ೩೬-೯). [ಮುಂ೨ (< ಮುನ್ ೨) + ಪಕ್ಕಿ]

ಮುಂಬಗಲ್, ಮುಂಬಗಲು (ನಾ). ಹಗಲಿನ ಮೊದಲ ಭಾಗ ; ಬೆಳಗ್ಗೆ ; ಪ್ರಾತಃಕಾಲ : "ಮುಂಬಗಲ್, ನಡುವಗಲ್, ನಡುಗಲ್ — ಇವು ಸಿ ತ್ರಿಕಾಲಂಗಳ್ " (ಕಬಾ. ೩೬-೨೩೦) ; ಅಂತು ಮುಂಬಗಲ್ವರಿಂ ತುಮುಲಿಟ್ ಕಾದುವ ಸಮು[ಭರಂ] ಮನೋರಾಗಮಂ ಮಾಡಯುಂ (ಪಂಪಭಾ. ೦೩-೩೬ ಪ) ; ರಾಳಿಪನೆನ್ನಂ ತ್ಯಜಿದಿಂ ಲಾಕ್ಷವಮೆನೆ ಬಗೆವನೆಂಬ ಮನಮುಮ್ಮಳಿಂದಾಳಮನೊಳಕೊಂಡಂತೆ ವಿದಾಳಿದ ಮುಂಬಗಲೆ ತಳೆದುದಿಳೆ ಕಡುಗಾಯ್ದುಂ (ಪಂಭಾಪ್ರ. ೩-೨೦೦) ; ಪಲ್ಲದಿಗುಟ್ಟುತ್ಪತ್ತಮ ವಾಸರಾಳ ನಡುಗುತ್ತಿರ್ದತ್ತು ಶಾಖಾಗ್ರದೊಳ- ನೆಜೆಗೆಯ್ದಂದದೆ ಮುಂಬಗಲ್ವರಮದೆತ್ತಂ ಪೋಗದಾ ಮಾಗೆದೊಳ್ (ಕಾಮಚ. ೩-೦೩). **ಮುಂಬಗೆಲು** : "ಇನಸುದಯಕಾಲದೊಳ್ ಮುಂಬಗೆಲಿನಿಕ್ಕು " (ಕಚ. ೧೧) : ಇಂದಿನ ಮುಂಬಗಲೊಳಗೀ ಕಾಂತೆ ನಾವೆಲ್ಲರು ಸಹಿತ ಕಂತುನಿವಾಸವೆಂದೆಂಬ ನಂದನಕತಿಸಂತೋಷದಿಂದಿಪ್ಪಿದಳು (ಕ್ರಿಚಾಂ. ೩-೦೩) ; ಮುಂಬಗಲಿತ್ತು ಲೀಲೆಯೊಳು ಸಾಗಿತು (ಪಚ. ೦೦-೩೬) : ಮೊದಲ ದಿನದ ಮುಂಬಗಲಿನಲ್ಲಿ ಪಾಂಡವಸೇವೆ ಭೀಷ್ಮರ ಡಾಳಿಯಿಂದ ನಡುಕಮೊಂದಿತು (ಪಾಸಿ. ೩೫೩).
[ಮುಂ೨ (< ಮುನ್ ೨) + ಪಗಲ್]

ಮುಂಬಗಲು 'ಮುಂಬಗಲ್' ನೋ.

ಮುಂಬಗೆ೧ (ಕ್ರಿ). ೧. ಮುಂದಾಲೋಚಿಸು ; ಪೂರ್ವಭಾವಿಯಾಗಿ ಗ್ರಹಿಸು : ಬೀರಮನಿದಪಾಪೆ[ಂ] [ಮು]ಮ್ಬಗೆದು ಪೊಗಬಲಜುಪೆಂ (ಇಕ- XX. ೭೦-೦೦; ೪೫ಪ ೫೪). ೨. ಮೊದಲು ಲಕ್ಷಿಸು,—ಗೆಮನಿಸು : ಪಲರುಂ ವಿದ್ಯಾಧರಸ್ತ್ರೀಯರುಮಮರಿಯರುಂ ಮಾನವಸ್ತ್ರೀಯರುಂ ತಮ್ಮೊಲವಿಂ ಮೇಲ್ವಾಯ್ದೊಡಂ ಮುಂಬಗೆದುದ ಬಗೆಯೇನಾಪೆದು (ಕಚಾಕಾ. ೯-೩೭). [ಮುಂ೨ (< ಮುನ್ ೨) + ಬಗೆ೧]

ಮುಂಬಗೆ೨ (ನಾ). ಪೂರ್ವದ ಹಗೆ : ಹಿಂದಿನ ದ್ವೇಷ : (೧).
[ಮುಂ೧ (< ಮುನ್ ೧) + ಪಗೆ೧]

ಮುಂಬಜ್ಜೆ (ನಾ) ಮುಂದಿನ ಹೆಜ್ಜೆ ; ಮುಂದಿನ ಹಾದಿ,— ಡಾಡು : ಎಡಬಲನತ್ಕೃತ್ಯ ನೋಡದೆ ಮುಂಒಜ್ಜವಿಡಿಮು ನಿಟ್ಟಿಸುತೊಯ್ಯನೈದಿ (ಕಚ. ೬-೦೬). [ಮುಂ೧ (< ಮುನ್ ೧) + ಪಜ್ಜೆ]

ಮುಂಬಟ್ಟೆ (ನಾ). ಮುಂದಿನ ದಾರಿ ; ಮುಂದಿರುವ ಮಾರ್ಗ : ತಂತಮ್ಮ ಮೇರೆಯಂ ತಪ್ಪಿದೊಡೆ ದಂಡಮಂ ಕೊಳ್ಳ ಭೂಪಾಲರೆ ನಾಡ ಪರ ಮಾಟದಿಂದೆ ಮುಂಬಟ್ಟೆಗಳೂರಂ ಪೊರ್ದಿ ಪೋದಂತೆ (ರಕಾಕ್ಕ. ೯-೬೬): ಕಂಬನಿದುಂಬಿದನೊಡನೆದ್ದು ದಕ್ಷಿಣ ಮುಂಬಟ್ಟೆಯೊಳಗದ್ದಪೆದ್ದು ಸಂಬುಗೊಳ್ಳಲಿ ಸ್ವಾಮಿ ನಿಮ್ಮ ನೋಯಿಸಿಪೆನೇನೆಂಬೆ ನಾನತಿಕ್ರೂರನು (ಕಚ. ೪೬-೬೨). [ಮುಂ೧ (< ಮುನ್ ೧) + ಬಟ್ಟೆ೧]

ಮುಂಬಡಿಸು (ಕ್ರಿ)- ಮುಂದ ನಡೆಯುವಂತೆ ಮಾಡು ; ಮುಂದು ವರಿಸು : ಬಿನ್ನನಿರ್ದಾರಿಪ ಪೊರೆಗೆಯ್ಕೆಳ್ದು ಪಾಗೆಪೋಲಲುಗುಗೋಡೆನ್ನ ನಿನ್ಗಿಷದಿಂದೆ ಮುಂಬಡಿಸೆ ತೀಂಕುಮ್ಮುಗಿಲ್ಗೆ ಕಾಲ್ಕೊಳೆತಂತೆ ಕನಸಿಮೊಳ್ (ಸಂಚಿಪ. ೬೬-೬). [ಮುಂಬಡು + — ಇಸು೫]

ಮುಂಬಡು (ಕ್ರಿ). ಮುಂದಕ್ಕೆ ಸಾಗು ; ಮುಂದೆ ನಡೆ : ಈ ಪರಿಯೊಳ್ ಸುಮಿತ್ರಾಪುತ್ರಂ . . . ದಮನನಂ ಸಂತವಿಟ್ಟುಂ ಮುಂಬಟ್ಟು ಪಡವೆರಸು ಪಯದ ಬೆಸ್ಸೊಳೆ ನಡೆಯುತಿರೆಯುರೆ (ರಾಚಕ್ಕ. ೦೦೦-೫೬). [ಮುಂ೧ (< ಮುನ್ ೧) + ಪಡು೧]

ಮುಂಬಡೆ (ನಾ). ಮುಂಭಾಗದಲ್ಲಿರುವ ಸೈನ್ಯ : ಕಡಲು ಮೇರೆಯು ತಪ್ಪಿದೊಲು ಮುಂಬಡೆಗಳಸುರರ ಬಲವ ಮುಸುಗುತ ಒಡಿಲು ಬಿದವಂದದಲಿ ಕಡಿದೊಟ್ಟಿದರು ಬೊಬ್ಬಿಡುತ (ಆಹಂಡಾ. ೦-೦೦-೨).
[ಮುಂ೧ (<ಮುನ್ ೧) + ಪಡೆ೨]

ಮುಂಬಣ್ಣ (ನಾ). ಮೊದಲು ಕಾಣುವ ಬಣ್ಣ : ಪೊಜವ್ವನದ ಮುಂಬಣ್ಣದಂತೆ ಕರ್ಪಂ ಕೈಕೊಂಡು ಕತ್ತುರಿಯಲ್ ಬರೆದಂತಪ್ಪ ವಿಕ್ರಾಂತ ತುಂಗನ ಮಿಸೆಗಳಾತನ ತೀವ್ರಪ್ರತಾಪಾನಳಧೂಮಲೇಖೆಯಂತಾದುವು (ಪಂಪಭಾ. ೨-೩೯ ಪ). [ಮುಂ೧ (<ಮುನ್ ೧) + ಬಣ್ಣ]

ಮುಂಬಿಡೆ, ಮುಂಬಿದನ್ (ನಾ). ರತಿಕ್ರೀಡೆಯ ಆರಂಭದಲ್ಲಿ ಸೂಸುವ ಸುರತದ್ರವ : ಬೆಂಜೇಲ್ವಿ ಕಣ್ ಬೀಯದಬ್ಬುಱೂಳಂ ಪಾಗೆ ನಾಬಿ ಮುಂಬಿದಮಳುಂಬಿ ಕೂಟದೊಳ್ ನಲ್ಲರಾ (ಕಬ್ಬ.ಪ್ರ. ೯-೩೬) ; ಮುಂಬಿದಂ ಗೆಲಿಯಾಸೆ ಕೂಡಿ ಗದ್ಗದದ ಕಂಠದಿ ಕೂಜಿತಮಂ ನೆಗಳ್ದುದಳ್ (ಪಾಪಕ. ೦೦-೦೦೩). **ಮುಂಬಿದನ್** : ಅಬ್ಬರಿಪುವ ಮೆಯ್ಗವಿರ್ಪಾನವ ಮುಂಬಿದನೊಪ್ಪಿರೆ ದೀವದೊಳ್ಕರ್ದಲೆಯ ಭಾಪಮಬ್ಬರಿದುನಬ್ಬಿ ಗೂಡರ್ಚಿದುದಾ ನೃಪೇಂದ್ರನಾ (ಅಪಪ್ರ. ೦೦-೩೦); ಒಂದರಡೊಳ್ನುಡಿ ತವಕದೊಳೊಂದೆರಡಾಲಿಂಗನಂ ಮುಗುಳ್ನಗೆ ಜೋಟಂ ಸಂದಣಿಸುವ ಮುಂಬದನೊಳಗಿಂದಿಳವರಸನನೆ ಪಾಣ್ಬನಂ ಬೀಬ್ಯೊಂಡಳ್ (ಸಚಪ್ರಸು. ೬-೦೫೬).
[ಮುಂ೧ (< ಮುನ್ ೧) + ಪದ೧]

ಮುಂಬದಂಗೂಡು (ಕ್ರಿ). ರತಿಕ್ರೀಡೆಯ ಆರಂಭದಲ್ಲಿ ಸುರತದ್ರವ ವನ್ನು ಸ್ರವಿಸು : ಮುಂಬದಂಗೂಡದಿರ್ವಳ ಕೂಟಂ ಬಿಡದೇಳದುಂಟಮಾದವಾವಂ ನಟ್ಟುವಂ ಮೆಚ್ಚುವಂ (ರಾಚಕ್ಕ. ೦೦-೦೬೪).
[ಮುಂಬದ + ಕೊಡು೧]

ಮುಂಬದನ್ 'ಮುಂಬಿದ' ನೋ.

ಮುಂಬದಿ (ನಾ)- ಮುಂಭಾಗ : ಮುಂದುಗಡೆ : ಇದೇ ಗೋಡೆಯಲ್ಲಿ ರಂಗಸ್ಥಳದ ಮುಂಬದಿಗೆ ಇನ್ನೊಂದು ಬಾಗಿಲಿದೆ (ಶಕುಪ್ರ. ೨); ಸುಮಾರು ಐವತ್ತುವರ್ಷದ . . . ರೈತನೊಬ್ಬ ಗುಂಪಿನ ಮುಂಬದಿಗೆ ಬಂದನು (ಕ್ಷಚಿಪ. ೨೬೪) [ಮುಂ೧ (<ಮುನ್ ೧) + ಬದಿ೧]

ಮುಂಬಸ (ನಾ). ವನೆದ ಮುಂಭಾಗ ; ತೋಟದ ಮುಂದುಗಡೆ : ಬಲಗೂಡಿ ತರಳ್ದ ರಸಿಕರಾಜೇಂದ್ರ ಮುಂಬಸದಲ್ಲಿ ಕಂಡು ರೆಂದುಸುವ ಚೇಚಿತಿಯರಾಟಗಳ (ಪಚಪ್ರ. ೦೯-೩೦). [ಮುಂ೧ (< ಮುನ್ ೧) + ಬನ್೨]

ಮುಂಬಿನಿ (ನಾ). (ನೆಲದ ಮೇಲೆ ಬೀಳುವ) ಮೊದಲ ಮಳೆಯ ಹನಿ : ಮುಂಬಿನಿಯಂ ಜಾದಗೆವಕ್ಕಿ ಹಂಸೆ ಕೊಳನಂ ಪದ್ಮಂಗಳಾದಿತ್ಯನಂ ನೆನವಂತಾಂ ನೆನೆವಂ ಸರೋಜಮುಖಿಯಂ (ಅಪ್ರ. ೦೪-೩೦); ಮುಂಬಿನಿಯಂ ಜಾದಗೆಯಾಂಟಿ ತನ್ನಯ ಪಪಣ್ಗಳಂ ತುಷ್ಟಿಯಂ ಮಾಡದೇ

(ಶಾಂಟಕ್ಕ. ೦-೬೩); ಕಾವರ್ಮಗಿಲ ಮುಂಬವಿಗಳೊಳು . . . ಜನುಗಿನಲಿ ಬಹುಮಳೆಗಳಲಿ ವೆನೆನೆನೆದು ಸಾಗರತೀರದಲಿ ಬಂದನು ಕರೀಟಿ (ಕುಪ್ಪಾ.೦-೬೯-೨೦). [ಮುಂ೨ (< ಮುನ್) + ಪಬ್]

ಮುಂಬಯಣ (ನಾ). ಮುಂಚಿತವಾಗಿ ಮಾಡುವ ಪ್ರಯಾಣ : ' ಮುಂಬಯಣಂಬೋಗು 'ಪರಾ.

[ಮುಂ೨ (< ಮುನ್೨) + ಪಯಣ]

ಮುಂಬಯಣಂಬೋಗು (ಕ್ರಿ). ೧. ಮುಂಚಿತವಾಗಿ ಪ್ರಯಾಣ ಮಾಡು. ೨. (ಆಲಂ) ಮುಂಚಿತವಾಗಿ ಸಾಯುವು.—ಮಾಡಿ : ಇಂಬಿ ದನುವರದೊಳವಂ ಮುಂಬಯಣಂಬೋದಂ (ಪಂಚಭಾ. ೦೨-೨).

[ಮುಂಬಯಣ + ಪೋಗು೧ (< ಪೋ೧)]

ಮುಂಬಯಸು (ಕ್ರಿ). ಮುಂಚಿತವಾಗಿ ಬಯಸು.— ಅಪೇಕ್ಷಿಸು : ಮುಂಬಯಸಿ ಕೈಗೈವ ಸೊಬಗಿನ ಕೆಂಬರಲ ಮೈವಚ್ಚೆ ಕೆಂಬಲು ತುಂಬು ಗುಂಕುವ ತಿವಿರು ಬೆಂದುಟಿಯುಟ್ಟರುಣಪಸನ (ಶಾಕ್ಕಾ. ೬-೩೯).

[ಮುಂ೨ (< ಮುನ್೨) + ಬಯಸು೧]

ಮುಂಬರ್, ಮುಂಬರು (ಕ್ರಿ). ೧. ಮುಂಭಾಗಕ್ಕೆ ಬರು ; ಮುಂದಕ್ಕೆ ಬರು : ಮನಮೆನ್ನಂ ಮುಂಬರಲ್ ಮುಂದುಂಪಿವುದನೆ ತೊರ್ಪಂತೆ ನೀಳ್ದತ್ತು ಸುಯಶ (ಶಾಂಪು. ೬೩೬); ಮುಂಬರ್ದ ತನ್ನ ಮೊಮ್ಮವ ಕಾಲ ಸೊಪ್ಪಳಂ ಕೇಳ್ದಂ (ಗಣಿಮು. ೩-೮೦ ಪ); ಮುಂಬಂದೆಜ್ಜೊಡೆ ನಡು ದಾಯಂ ಬಗಿದೊಳಪೊಕ್ಕ ವಾಯುರಂಧ್ರದೊಳಂ ಬೀಳ್ಗುಂ ಕದುವರು ಗುಜಿ ಕೂರ್ಕೊಂಬಿಂದು ಕದಿರುದುದು ಪುಂಕಿಟಯವಮಮ (ಹಕ್ಕಾಶ. ೯-೧೩). **ಮುಂಬರು** : ೨. ಅನಂತರದಲ್ಲಿ ಬರು ; ಮುಂದೆ ಒದಗು : ತವುಗೆ ಮುಂಬಹ [ಪಾಣಾ. ದಾಹ] ಸುಖದುಃಖಿಂಗಳನಱಿಯದೆವು ಮತ್ತೊಬ್ಬರ ಸುಖದುಃಖಗಳ ಮೊದಲೆ ಱಿಯರು (ಪಪ್ಪಪ. ೪. ೨೩೨-೧೩); ರಾಜ್ಯದ ಮಹಾದಣ್ಡನಾಯಕನು ನಾಡಿನ ಮೇಲೆ ಹೀಗೆ ಸಂಚರಿಸಿದುದರಿಂದ ಮಂದಿಯು ಮನಸ್ಸು ಮುಂಬರುವ ಕಾಳೆಗದತ್ತ ತಿರುಗಿತು (ಪಪ್ಪ. ೬೨). [ಮುಂ೨ (< ಮುನ್೨) + ಬರ್ (< ಪರ್)]

ಮುಂಬರಪ (ನಾ). ಮುಂಚಿತವಾಗಿ ಬರೆದ ಬರವಣಿಗೆ ; ಮೊದಲೇ ಬರೆವ ಬರಹ : ಸಿರಿಯಡಿಸೋಂಕಿನಿಂ ಪಣಿಮು ಮುಂಬರಪಂ ಪುಸಿಗೆ ಸೈಪ ಬೇರ್ವಾಂಬೆ . . . ನಿಂದಳವ್ಯಾಪ್ತಿಪರಂಗದೆ ತೇಂಕುಪಂದದಿಂ (ಶಾಪು. ೬-೨೯೪). [ಮುಂ೨ (< ಮುನ್೨) + ಬರಪ (< ಬರೆಪ)]

ಮುಂಬರಿ೧ (ಕ್ರಿ). ೧. ಮುಂದೆ ಚಲಿಸು ; ಮುಂದೆ ನಡೆ ; ಮುಂದಕ್ಕೆ ಸಾಗು : ಸುಪ್ರಭಮುನೀಶನಮಳತನುಪ್ರಭೆ ಮುಂಬರಿದು ಬೆಳಗಿದತ್ತು ಶಿವಜ್ಞಾನಪ್ರಭೆ ದಯಾಮೃತಾಸಾರಪ್ರಭೆಯನೆ ತನ್ನನೀಶಸೊದ್ದೂಲಗವಂ (ಶಾಸುಪು. ೬-೧೦೬); ಗೋಮುಖವಿವ್ಯಾಪ್ತಿಲಿಂಗಳಿಂದದ ಕಾಮ ಪೊದಲಾವವಿಳವಿಷಯಸ್ತೋಮಮಮ ಪುಂಜಿಸಿದಿಕ್ಕಿ ಮುಂಬರಿದಂತ ರಂಗದಲಿ ಆ ಮಹಾಶಿವಲಿಂಗಸಂಗಪ್ರೇಮಿಭೂತಾಗಿ ಶಿವೈಕ್ಯಪದವನು ನೆಮಿಸಿದ ಮಹದೇವಿಯಕ್ಕಗೆ ಶರಣು ಶರಣಾರ್ಥಿ (ಪ್ರಭೋ. ೦-೩): ಅಂಬರ ಚರಿಯರನೇ ಪಟ್ಟಣದೊಂದು ' ಸಂಭ್ರಮವನು ನೋಡಿಯೆನುತ ಕಾಂಭಿನಿ ಕೈನೀಡಿ ಕರೆವೋಲು ಡೊಂಕಣೆ ಮುಂಬರಿದೆಸೆಮುರ್ತಿಯಲಿ (ಶಂಪ. ೬-೬). ೨. ಮುಂದಕ್ಕೆ ಪರಿ.— ಪ್ರವಹಿಸು : ನಿಂದಿವನು ನಿಮ್ಮಿಯ್ಯನಿರಲಿ ಸಂಧಿಸುವ ರಣಗಲಿಗಳಾಗ್ರಸ್ಕಂದನದ ಮುಂಭಾಗದಲಿ ಮುಂಬರಿವ ಹೆದ್ದೂಱಿಯ ಮುಂದೆ ನಿಲ್ಪಂವ ಮಾಪಾದ್ರಿಯೆನ್ನೆಲು . . . . ನಲವೇಱುವನು ಕಲಿ ಹನುಮ (ತಿಪಾ. ೬-೪೦-೦೬). ೩. ಮುಂದುವರಿ ; ಬೆಳೆ ; ಅಭಿವೃದ್ಧಿ ಹೊಂದು : ಈಗ ಸುಮಾರು ಮೂವತ್ತು ಪಲವತ್ತು ವರ್ಷಗಳಿಂದಲೂ ನಮ್ಮ ಸಾಹಿತ್ಯ ನಾನಾಶಾಖೆಗಳಲ್ಲಿ ಮುಂಬರಿದು ಹಬ್ಬಿ ಹರಡುತ್ತಿದೆ (ಬಿಚಾಪ್ರ IX. ಕುಪ್ಪ೩). ೪. ಅಧಿಕವಾಗು ; ಹೆಚ್ಚಾಗು ; ವಿಶೇಷವಾಗು : ಅಂಬರಚರಿಯರ ತನುಗಂಪಿಱಿಗಂಪ ತುಂಬಿಯು ಬಳಗದಂದದಲಿ ಮುಂಬರಿದಪ್ಪ ಕಪ್ಪಿಡಿದ ಪುಳಾಳಿಯಂ ಜಂಬುನೇಱುಲೆಗಳೊಪ್ಪಿಸುವ (ಕಂಪ. ೨-೧೪); ಬೆರಲಂ ಕೂಟ್ಟೊಡೆ ಬೇಟಮೇ ಕ್ರುರಿಳುಮಂ ಕೊಯ್ದು ತ್ತೊಡೇ ಕೂರ್ಮೆ ಕೇಳರವಿಂದಾನನೆ ಮನ್ಮನಃಪ್ರಿಯಮಿದಲ್ತೀ ದೇಹಮಂ ನಲ್ಕೆ ಮುಂಬರಿವುತ್ತಿತ್ತೊಡಿವೆಲ್ಲಮೆಂ ಪೆಜತೆ (ರಾಚಂ. ೦೦-೦೩೬). ೫. ಪರಡು : ವ್ಯಾಪಿಸು ; ಪಸರಿಸು : ತನ್ನ ತೇಜದೊದವಿಂ ಹಾರಂಗಳೆಂಬಂತೆ ಧಾಸುರದಂತಮ್ಮುಮಾಲೆ ಮುಂಬರಿಪಿನಂ ವ್ಯಾಖ್ಯಾನಮಂ ಮಾಡುತಚ್ಚರಿಪತ್ರಿದ್ದ ಸುಧರ್ಮದೋಗಿವರನಂ ಕಂಡೆಂ ಧರಾಧೀಶ್ವರಂ (ಶಾಸುಪು. ೪-೧೯); ಮಣಿಭೂಷಣಮ್ಮತಿ ಮುಂಬರಿವುತಿರೆ ಬಂದನಾಕಯು ಪರಣ ಬಂದಂತೆ (ಶಾಕ್ಕಾ. ೬-೦೬); ಬಿಂಬಾಧರದ ಕೆಂಬೆಳಗು ಮುಂಬರಿದು ಕುಂಭಕುಚಕ್ಕೆ ಕೆಂಬರಲ ಸರಮಂ ಕೆಳಗೊಳಸ (ರಾಚಕೃ. ೪-೦೪ ಪ). ೬. ಉಂಟಾಗು ; ಒದಗು : ಬಳಲಿದೆನು ಬಲುಪಾಗಿ ಸಾಕಿನ್ನೆಳತುವ ತನಗೆಂಬ ಬಗೆ ಮುಂಕೊರಿಸಿದುವು ಮುಂಬರಿದುದಗ್ರಾಹ್ಯೋಪಕೋಪಶಿಖಿ (ಕೂಪರಾ. ೬-೬-೬೯). ೭. ಪರಿಣತವಾಗು ; ಪಕ್ವಗೊಳ್ಳು : ಪ್ರಾಚೀನ ಬೌದ್ಧಧರ್ಮವು . . . ಮುಂಬರಿದ ಚೇತನಗಳ ವಿಶಾಂತತೆಯಪ್ಪ ಹೊರಗಿನ ನೆರವನ್ನೂ ಬಯಸದೆ . . . ಸ್ವಂತಪರಿಶ್ರಮದಿಂದ ಮೋಕ್ಷವನ್ನು ಗಳಸಬೇಕೆಂಬುದನ್ನೂ ಒತ್ತಿ ಹೇಳಿತು (ಕಕ್ಕಾಸ್ಫ್ರ. ೦೭೬).

ಮುಂಬರಿ ಬೀಳು=ಮುಗ್ಗರಿಸಿ ಬೀಳು : ಭಗ್ನ ಹೊಡೆದಳ್ಳೆ ಹೊಯ್ಲುಂಕೆ ಬಸಿಲಿಂಗೆ ನಾಲಗೆನೀರು ತಟಗುಟ್ಟಿ ಸುರಿಯ ಮಿಗೆ ಪಿಡಿವಳನ ಮುಂಬರಿ ಬೀಳಲೆಳವ ನಾಯ್ಗಳಪಿಸಿದೆಪೆಡಬಲದೆ (ಕೊಚಕ. ೦೪-೦೪).

[ಮುಂ೨ (< ಮುನ್೨) + ಪರಿ೨]

ಮುಂಬರಿ೨ (ನಾ). ಮುಂದಕ್ಕೆ ಚಲಿಸುವಿಕೆ ; ' ಮುಂಬರಿವರಿ ' ಪರಾ.

[ಮುಂ೨ (< ಮುನ್೨) + ಪರಿ೨]

ಮುಂಬರಿತ (ನಾ). ಮುಂದುವರಿಕೆ ; ಅಭಿವೃದ್ಧಿ : ಇದುವರೆಗಿನ ಎಲ್ಲ ವಿವರಣೆಗಳಂದ್ಯಸುಮಾರು ಕ್ರಿ. ಶ. ೧೨ನೆಯ ಶತಮಾನದ ಆರಂಭದಿಂದ ಕ್ರಿ. ಶ. ೧೬ನೆಯ ಶತಮಾನದ ವರೆಗಾದ ಕೋಟೆಗಾಳೆಗದ ' ಸಂಪೂರ್ಣ ' ಯ ಮುಂಬರಿತವನ್ನು ಕಂಡುಕೊಳ್ಳಬಹುದಾಗಿದೆ (ಕಚಾಸ. ೨೭). [ಮುಂಬರಿ೨ + — ತ್ತ]

ಮುಂಬರಿವರಿ (ಕ್ರಿ). ಮುಂದಕ್ಕೆ ಹೋಗು. ಚಲಿಸು : ವಿಕ್ಕು ಮುಂಬರಿವರಿದು ನೀಡಿದನಕ್ಕೆಲದ ಕೋಲಗಳ ಕಿಡಿ ಸಿಡಿದಿಕ್ಕಿ ಬಾಲದ ಜಿಯು ಸೀಪರಿಸುವ ಶಿವಾಳಿಗಳ (ಕಪಾಂ. ೫-೦-೧೭). [ಮುಂಬರಿ೨ + ಪರಿ೨]

ಮುಂಬರು ' ಮುಂಬರ್ ' ನೋ.

ಮುಂಬರೆಯು (ನಾ). ಹರೆಯದ ಆರಂಭ ; ನವಯೌವನ : ಸಿರಿ ಬೆಲ್ವಂ ಸಿರಿಯಲ್ಲಿ ರೂಪು ಮಿಗೆ ಚೆಲ್ವಂ ರೂಪಿನೊಳ್ ಮತ್ತೆ ಮುಂಬರೆಯಂ ಬೆಲ್ವ ನಿನಿತ್ಕುಮೆಯ್ದೆ ಕಡುಚೆಲ್ವಂ ಬೇಟದಿಂ ಬೇಟಮೆಂಬರಸಂ ಮನ್ನಿಸದಂದ ನಾಯತಶಮಂ (ಶಾಂಪು. ೬-೩೬); ಮುಜುಕದ ಗಾಡಿ ಮುಂಬರೆಯು [ಪಾಣಾ. ರಿಯ]ದೊಟ್ಟಿದೆ ರಂಜಿಸ ದೇಸೆ ಸೌಷ್ಠವಂ ಮೆಜಿರಿರೆ (ಕಕ್ಕಾಸ್ತ್ರ. ೭-೨); ಧರಿಸಿದ ಕನಕಾಂಬರದವಿರಶೋಭಾವೈಭವಮಂ ಮುಂಬರೆಯಂದ ಮೆಯ್ಸಿರಿಯಂ ಪರಿಯುತ್ತುಂ (ಪಂಚಾಕ. ೭-೬೯ ಪ).

[ಮುಂ೧ (< ಮುನ್೧) + ಪರೆಯ್೨ (< ಪರಯ)]

ಮುಂಬಲ್, ಮುಂಬಲ್ಲು (ನಾ). ಮುಂಭಾಗದ ಹಲ್ಲು ; ಮುಂದಿನ ಹಲ್ಲು : ಸಂಧಿಸಿ ಮಾತ್ರದೆ ಮುಂಬಲ್ಲಿಂದರೆಯು ಮುಗುಳವನಿಗಿವೃತಂ ಭೂಭೃಯೆಂದಂದಭಮಂತ್ಯಸಿ ಭಸ್ಮಮನಂದಿಬಾವಲಿ ತೇಟು ವಿಷಮವಾಕ್ಷಣ ಮಿಟಿಗಿಂ (ಪಪಾಪ. ೦೦-೦೨); ಮುಂಬಲ್ಲಂ ಸಾಲ್ಕಳ್ಕಪಮದೆಂಬುದು ಸಂದಂರಮೆಂಬ ಪೆಸರುಂ ಮೇಗಣ ಕೆಂಬಲ್ಲಂಮಗ್ರದಂತವದೆಂಬುದು (ಅಕ್ಕಣ. ೬-೬). **ಮುಂಬಲ್ಲು** : ಕುರುಳು ಬೆರಳು ಮುಡುಹು ಮುಂಬಲ್ಲ

ಕೊಳ್ಳಾ ನಿಜಾಯನಿಕ್ಕಿ ದಾಂಟಿದರೆ ಅಂತೆಸ್ಸ ನಂಪಾ (೧೫೮. ೩೦೦); ಮುಂಬಲ್ಲಂ ಬಿದ್ದು ಭೀಕೆಯಪ ಕಲ್ಲೊಳು ಜೆಜ್ಜಿ ತಿಂಬರೆಲ್ಲದೆ ಬಿಟ್ಟರಾರು (ರಚಿ. ೬೦-೦೨); ಪಗೆಮುಖಿ ಮುಂಬಲ್ಲೆಲ್ಲ ಚನ್ನೆ ಕಾಣೆ ಗೆರೆ ಬರದಾ ವಿಭೂತಿ ಕಪ್ಪುಗೊರಳ ಕಾಣೆ (೧೫೮. ೨೦೬).

[ಮುಂ₁ (<ಮುನ್₁) + ಬಲ್]

ಮುಂಬಲ (ನಾ). ಮುಂಭಾಗದ ಸೈನ್ಯ;—ದಂಡು ; ಮುಂಚೂಣಿ : " ಮುಂಗುಡಿಯನೆ ಮುಂದುಚೂಣಿಯನೆ ಮುಂಬಲಮುಂ " (೫೪೮. ೦೬೬); ಮುಲಮುಮಾರುತನ ದೆಂಬಲಮುಮುಂ ಬೈತ್ರಮಿತ್ರನ ಮುಂಬಲ ಮುಮುಂ . . . ದರ್ಪಕನ ದರ್ಪಂಬೆರಸೆಟಕಳಿಗೊಂಡು ಗಂಡೇಱಿದ ಗಂಡಗಾಡಿ ರೂಢಿವಡೆಯೆ (೫೫೦. ೬-೨೫ ೪); ಚಂಡ ಕೋದಂಡನ ದಂಡಾಧಿನಾಯಕಂ ವೀರಜಂಭರಾಜಂ ಮುಂಬಲದೊಳ್ ಕದನಕ್ಕೆ ಕಡಂಗಿ ಕದುಂಬ ಸನ್ನದ್ಧನಾಗಿ (೫೬೨. ೬-೪೫ ಕ); ಅಲುದುಬ್ಬಿದ ಬೆಂಬಲಂ ಮುಂಬಲವಾಗೆ ಬೆಂಗೊಟ್ಟೋಡಿ ತಮ್ಮುಣ್ಣಂಗಿಂತಿದಂ ಕೇಳಿ ಸಿದರ್ (೧೫೩೫. ೦೪೬-೦). [ಮುಂ₁ (<ಮುನ್₁) + ಬಲ್₂]

ಮುಂಬರಿ (ಕ್ರಿ). ಮೊದಲು ವ್ಯಾಪಿಸು : ಬಿರಿದಾದ ಚಿತ್ರಾರಂಗದ ಪದಪತಿಯುಲಿ ಮುರಿದೇಳ್ದ ಕಿಂದೂಳ್ಗಳಾಗ ತರಣಿಮಂಡಲವ ಮುಂಬರಿದು ಮುಂಕೊಳುತಂದು ಕಿರಣದೇಳಿಗೆಯ ತಗ್ಗಿಸಿತು (೪೦೫೬. ೦೭ ೪೮).

[ಮುಂ₂ (<ಮುನ್₂) + ಬರಿ₁ (<ಬರ್₁)]

ಮುಂಬಲ್ಲು ಮುಂಬಲ್ ನೋ-

ಮುಂಬಸಿಜು (ನಾ). ಗರ್ಭ ಧರಿಸಿದ ಪ್ರಾರಂಭದ ಕಾಲ : ಬಿಸುಗದಿರಿನ ಮುಂಬಸಿಜುಂಗಳು ಮೂಡಣ ದಿಸೆಮ್ಣಿ ಸೀಮಂತದ ಒಸಗೆಯ ವಾವ್ಯ ಗಳಿನೆ ದೀಗುಲಗಳೊಳಿಸವು ಶುಂಖನಿನಾದಂ (೪೬೫೦. ೩-೨೬)

[ಮುಂ₁ (<ಮುನ್₁) + ಬಸಿಜು (<ಬಸಿಜ್)]

ಮುಂಬಳಿ (ನಾ). ಕೈಯ ಮುಂಭಾಗದಲ್ಲಿ ಧರಿಸುವ ಬಳೆ : ಬಾಜಿ ಬಂದು. ಹಿಂಬಳೆ. ಮುಂಬಳೆ. ದೋರ್ಯ. ಪೌಂಚಿ . . . ಡಾಬು ಮೊದಲಾದ ಆಭರಣಗಳನ್ನು ಧರಿಸಿಕೊಂಡು (೫೪೮೦. ೪೬).

[ಮುಂ₁ (<ಮುನ್₁) + ಬಳೆ₂]

ಮುಂಬಾಗಿಲ್. ಮುಂಬಾಗಿಲು (ನಾ). (ಕಟ್ಟಡದ) ಮುಂಭಾಗದಲ್ಲಿರುವ ಬಾಗಿಲು; ಮುಂದಿನ ದ್ವಾರ; ತಲೆಬಾಗಿಲು: ಪೊಗಿ ನೀಂ ಗಿಳಿಯಮ್ಮ ದೇಗುಲದೊಪ್ಪುವ್ನತವಾದ ಮುಂಬಾಗಿಲಲ್ಲಿ ಕೊಳಪ್ಪ ಪೂಗೊಳದೊಳ್ಕು ಟುಂಗೆಲು (ಕಾವ್ಯಕ. ೬-೦೦೦); ಆಗರನೂಪಸಂಪ್ರಮಪರಿಭ್ರಮ ದಂಗನೆಯರ್ . . . ಮುಂಬಾಗಿಲೊಳುನ್ನತಧ್ವಜಚಯಾಂಗಳನೆತ್ತಿಸಿ ರಂಗ ವಾಲಿಯಂ ರಾಗದೊಳಕ್ಕಿ ಬೀದಿಯಿ ನಂದುಲ್ ನೂಡಿದರಪ್ಪಶೋಭೆಯಂ (೫೪೮೦. ೩-೦೩). ಮುಂಬಾಗಿಲು: ಇಂದ್ರಿಯದ ಜಾಗಿಲಲ್ಲಿ ಮನಪಿಪ್ಪುದು ಮನದ ಮುಂಬಾಗಿಲಲ್ಲಿ ಭೋಗಲಿಂಗವಿದ್ದು ಸಲಲಭೋಗಂಗಳ ಭೋಗಿ . . . ಸೌರಾಷ್ಟ್ರಸೋಮೇಶ್ವರಲಿಂಗವ ಬಲ್ಲರೆ ಬಲ್ಲೆ (೪೮೫. ೫೫-೬೦) ; ಕಸಕಾಂಬುಜಮುಖಿಯಾ ಗೃಹದ ಮುಂಬಾಗಿಲ ಗೋಪುರದ ಚಿತ್ರದ ಭಿತ್ತಿ ಯಾಗಿಕೆ ನೋಡಿದಳು (೪೬೫೦. ೬-೦೩) : ದಮಯಂತಿ ಗಂಡನನ್ನು ಎದುರುಸೋಡುತ್ತಾ ಮುಂಬಾಗಿಲಿನಲ್ಲಿ ನಿಂತಿದ್ದಳು (೫೫೬೬. ೭೯).

[ಮುಂ₁ (<ಮುನ್₁) + ಬಾಗಿಲ್]

ಮುಂಬಾಗಿಲು ' ಮುಂಬಾಗಿಲ್ ' ನೋ.

ಮುಂಬಾಗು (ಕ್ರಿ). ಮುಂದುಗಡೆಗೆ ಬಾಗು ; ಮುಂದಕ್ಕೆ ಓಲು : ಒಂಬತ್ತುತಿಂಗಳು ಹೊತ್ತ ಮಾತ್ಕಕೆಯ ಪಾದಾಂಭೋಝಹಕಲರ್ಗರೆದು ಮುಂಬಾಗಿ ಕೈನೀಡಿ ಶರಣೆಂಬ ರೀತಿಯೊಳ್ ಪೊಂಬಾಳೆ ಬನದೊಳೊಪ್ಪಿ ದುವು (೫೫೬೪. ೨೪-೩೦). [ಮುಂ₂ (<ಮುನ್₂) + ಬಾಗು₁]

ಮುಂಬಾಯ್₁ (ಕ್ರಿ). ೧. ಮುಂದಕ್ಕೆ ನುಗ್ಗು : ಅವ ಪೆರ್ಗಡಲ್ ಅಗಳು ಅಪ ಮಲೆ ಬಲ್ಲೋಂಟಿ. ಅದರ ಮುಂಬಾಯ್ವರಿವು ಮೊಗಗೆಟ್ಟು ನಿಲಲು (೫೫೬೬. ೬-೦೩೯). ೨. ಮುಂದಕ್ಕೆ ಹಬ್ಬು, – ಹರಡು : ಚಂದ್ರಧ್ವಜಾ ವನಿಪಂ...ಮೇಧಾವಿಳಾಂಕನ ವಕ್ತ್ರೀಂದುವನೊಮ್ಮನೀಕ್ಷಿಸುತುಮತ್ಕೌತ್ಸುಕ್ಯ ದಿಂಬೊಂದನೆಂದೆನಲುದ್ಯೋಗಿಸಿದಂ ದ್ವಿಜಮ್ಮತಿನಿಕಾಯಂ ನೀಲ್ದು ಮುಂಬಾ ಯ್ದುನಂ (೪೫೬೫೫. ೦೭-೭೬). ೩. ಮುಂದಕ್ಕೆ ಹರಿ, – ಪ್ರವಹಿಸು : ಸೂರ್ವಾ ವಾರಿಧಾರಾವಳಿಯನಿರದೆ ಮುಂಬಾಯ್ವ ವಾರಿಪ್ರವಾಹಾವಳಿಯಾ ವಾರಿಪ್ರವಾಹಾವಳಿಯಿನಿಕೆ ಪಯೋರೂಪವಮಾದತ್ತದಿತ್ತಂ (೪೨೫೫೫. ೬-೪೦). [ಮುಂ₂ (<ಮುನ್₂) + ಪಾಯ್₂]

ಮುಂಬಾಯ್₂ (ನಾ). ಬಾಯಿಯ ಮುಂಭಾಗ ; ತುಟಿ : ಮುಂಬಾಯ ಪೂರ್ಣರವೀಳೆಯದಿಂದ ಕಣ್ಗಿಂಬಾದನಾ ಗಾಡಿಕಾಜ (೪೫೬. ೦-೪೩).

[ಮುಂ₁ (< ಮುನ್ ₁) + ಬಾಯ್]

ಮುಂಬಾರೆಕಾಜ (ನಾ). ಸೈನ್ಯದ ಮುಂಭಾಗದಲ್ಲಿ ಕರ್ತಾರಿಯನ್ನು ಹಿಡಿದು ಯುದ್ಧಮಾಡುವ ಸೈನಿಕ ; ಮುಂಚೂಣಿಯ ಭಟ : ತಿಳುಹಿ ದಿಸುಟುವ ಕಾಲುಗಾಹಿನ ತುರಗವನು ಮುಂಬಾರೆಕಾಜರ ಶಿರವನ್ಕೈದಾಜೇಳ ನಡಸಿದಮಣಲ ಜೊಳಲಿನೊಳು (೪೫೫೬. ೪-೭೭).

[ಮುಂಬ್ಬು₂ + ಆರ್ಕ್ + – ಕಾಜು]

ಮುಂಬಾಲೆ (ನಾ). ಕವಿಯ ಹಾಲೆಯ ಮುಂಭಾಗ : ಮೇಲುದಂ ಮಾಜ್ದು ಮೆಯ್ಯಾಜ್ದೆರ್ವಳೊಜಲ್ದು ಮುಂಬಾಲೆಯಂ ತಿರಿಪಿ ನೂಂಕಿ ಪವಿತ್ರವನಿಟ್ಟು ಪಚ್ಚೋರೆವಚ್ಚದೊಳೊದಂಬಡೆ ಬಂದೆಂ ವಿಧ್ದೆ ಭೂಪಾಲ ನಂದನನನಂದರುಣಾಧರೆ ನೋಡಿಡಳ್ (೫೫೦೬. ೨೨೦).

[ಮುಂ₁ (< ಮುನ್₁) + ಪಾಲೆ₂]

ಮುಂಬಾಳು (ನಾ) ಮುಂದಿನ ಬಾಳು ; ಭವಿಷ್ಯದ ಜೀವನ : ಹಿಂದೆ ಮಾಡಿದ ತಪ್ಪುಗಳನ್ನು ಇನ್ನು ಮುಂದೆ ಮಾಡದೆ, ಮುಂಬಾಳನ್ನು ಹಸನಾಗಿಸಿಕೊಳ್ಳುತ್ತೇನೆ ಎಂಬ ವಿಶ್ವಾಸವು ಉಂಟಾಗಿರುತ್ತದೆ (೫೫೬೦೦೦. ೨೫೪). [ಮುಂ₁ (< ಮುನ್₁) + ಬಾಳ್₂ (< ಬಾಳ್₂)]

ಮುಂಬಿಗೆ (ನಾ). ೧. (ಸೈನ್ಯದ) ಮುಂಭಾಗದಲ್ಲಿರುವವನು : ಮುಂಚೂಣಿಯಲ್ಲಿರುವವನು : ಸೂತಸುತ ದಳಪತಿಯಿಂ ಘಡ ಮುಯ್ಯಾಂತರೇ ಮುಂಬಿಗರು (೪೫೬೫. ೨-೪) ; ಅನಿತಱೊಳೆ ಗದೆಯಂ ಸದೆದು ಮೇಗೆರ್ದಡಂಬಿ ಮುಂಬಿಗನಂ ನಿರಾಯುಧನಂಗೆಯ್ದು . . . ಕಣದೊಳ್ ಕೆಡೆಪಿದಂ (೫೫೬೫. ೦೧೬-೨೯). ೨. (ಸಾಹಿತ್ಯಕ್ಷೇತ್ರದಲ್ಲಿ) ಪ್ರತಿಪ್ಪಿತನಾಗಿರುವ ವ್ಯಕ್ತಿ : ಮುಂಬಿಗರಿದನಂತೆ ನೂಕಿ. ಬಿನ್ನಿ ಬರಿದೆ ಕೊರಗರೇಕೆ ? ಹೆತ್ತಳ್ಳಿಸೆ ಫಲಮಾನಾಕೆ ಕಡುಸಾಜತೆಗೆ ? (೧೪೫೦.೦೦೪-೪೭).

[ಮುಂಬ್ಬು₂ + – ಇಗ]

ಮುಂಬಿದು (ಕ್ರಿ). ೧. ಮುಂದಕ್ಕೆ ಬರುವಂತೆ ಮಾಡು : ಕಱಿಯಂ ಪುಟ್ಟಿಂ ಧನಂ ಬಜಿಯಂ ತೊಜೆಂದಂ ಗೃಹಸ್ಥನೆನ್ನದೆ ಮುಂಬಿಟ್ಟಱಸಿ ಕೊಲುತಿರ್ಪ ಜವನೆಂಬಜುಕೆಯಿ ಪಗೆವಂಗದಂತಂ ಪಂಗಿಗನಪ್ಪೆಂ (೪೦೪೫. ೪-೭೭) ; ಏಂ ನಿಷ್ಕರುಣಿಯೊ ಪಸುಮಗನೆನ್ನದೆ . . . ಮರುಳ್ಕಟ ಮಾಡೆನ್ನದೆ ಮುಂಬಿಟ್ಟು ಕೊಂದಪಂ ಯಮರಾಜಂ (೪೪೫. ೦೦-೪೫) ; ರಟ್ಟರ ಕೈಗೆ ವಿರ್ದ್ದೆಳೆಯುಂ ಪಟ್ಟಮುಮುಂ ರಟ್ಟರಾಜ್ಯದರಸುಗಳಂ ಮುಂಬಿಟ್ಟು ಕಱದೊಟ್ಟಿ ರಟ್ಟಳರಟ್ಟಂ ಚಾಳುಕ್ಯರಾಜ್ಯಪಟ್ಟಮನಾನ್ತಂ (೨೪. VII. ೪೧೩೦. ೦೨೬-೦೭ ; ೨೦೭೨). ೨. ಎದುರಾಗು ; ಅಭಿಮುಖವಾಗು : ಮುಂಬಿಟ್ಟು ಪನವ ಕಟ್ಟರೆಯಂ ಬೆದಜಿ ತರಲ್ಕಿ ಬೆಕಪಂ ಬೆಳಗಿಂದೆಸೆದಿರ್ಪಂಬುಜಸವಿನಂತಿರೆ ಮಾನಂಬುಟು ಬೆಳಗಿದವುದಬಿಳ ಗಗನಾಂತರಮಂ (೪೫೬೫. ೬೬೨). ೩. ಮುಂದಕ್ಕೆ ಹರೆದು : ಶೋಣಾಬ್ಜದೊಳ್ ಕಟಿಗೊಂಡಿಂದುಶಲಾಂಕುರಚ್ಛವಿಯುಮೊಲಂ ಬಂಬೋಷ್ಮ ವಿಂಬಾದ ಬೆಂಬಟಿಯೊಳ್ ಮುಂಬಿಡೆ ದಂತಕಾಂತಿ ಬಟ್ಟಿಕಿತೆಂದಳ್

ಮುಖೇಣತನೊಳ್ (ಕರ್ಣಾ. ೨-೩೫)- [ಮುಂ೨ (< ಮುನ್³) + ಬಿಡು೧]

ಮುಂಬಿಡುವಲೆ (ನಾ)- (ಮುಂಭಾಗದಲ್ಲಿ ಅಗಲವಾಗಿ ಹಾಸುವಂಥ) ಒಂದು ಬಗೆಯ ಬಲೆ : ಗೂಟವಲೆ ಪೊಣರ್ಚುವ ಬಲೆ ಮುಂಬಿಡುವಲೆ ಸುಡುವಲೆ. . . ನಿಡುವಲೆಗಳೊಟ್ಟಿದವು ಲಂಬ್ಬಕೆರೊಳ್ (ನಂಗಿ. ೦-೯೦).

[ಮುಂ೨ (< ಮುನ್²) + ಬಿಡುವಲೆ]

ಮುಂಬಿಸಿಲ್, ಮುಂಬಿಸಿಲು (ನಾ)- ಪ್ರಾರಂಭದ ಬಿಸಿಲು : ಬೆಳಗಿನ ಬಿಸಿಲು : ಎಳೆಬಿಸಿಲು : ಊರಿಂ ಪೊಜಮಟ್ಟು ಗಾವುದದೊಳ್ ಮುಂಬಿಸಿಲಂ ಮೂಡಿಸಿದಂ (ಶಾಪ. ೩೭೬ ಚಾ.ಚ.); ಹೊಂಬಿಣ್ಣವೆರಚುವುದು ಮುಂಬಿಸಿಲ್ (ಚಾಸ್ವಂಗ. ೩೩ ೦೫೯). **ಮುಂಬಿಸಿಲು** : ಇಂದಾಗಿ ನಗುನಗುವ ಮುಂಬಿಸಿಲ ಮೋರೆಯಲ್ಲಿ ಅಂಬುಜಮುಖಂ ಬಂದನಬುರದೆಲ್ (ಶಾಪು. ೨೬-೦).

[ಮುಂ೧ (<ಮುನ್¹) + ಬಿಸಿಲ್]

ಮುಂಬಿಸಿಲು ' ಮುಂಬಿಸಿಲ್ ' ನೋ.

ಮುಂಬು೧ (ಕ್ರಿ)- ೧. ಮುಂದಕ್ಕೆ ಬರು ; ಮುಂದೆ ಬರು : ಒದವಿದ ಮಾನಸಿಕ್ಕೆ ತಲೆಮೋಱುವ ಮಾನ್ಮಮ ಮುಂಬಿ ಮೂರ್ಕ್ಷಿಗೊಂಡುದು ಸಿರಿ ಕಿಚ್ಚುಗೊಂಡುದು ಮನಂ . . . ರಾಗಿಗೊಂಡುದು ನೆಗರ್ಕೆಯ ತೇಜಮನಸ್ಪಾಳನ (ಚಾಸಾ. IXಂ. ೨೦೩-೫೬ ; ೩೨೭). ೨. ಮೊದಲು ಬರು ; ಮುಂಚೆ ಬರು : ತೋಬಕ್ರೀಬಜೊಳ್ ಪರಿವೇಷಮಾದೊಡಂ . . . ನೂಱು ನಾಲ್ವತ್ತೇಟುಂ ದಿನದೊಳೆತ್ತ ಮುಂಬಿ ನಲಿ ಮುಗಿಲ್ ಕರ್ಗಿಕೊಂಡಿರ್ದೊಡಂ ಮೇಘಸಂತತಿಗಾದ ಗರ್ಭವೆಲ್ಲಂ ತುಂಬಿಲ್ ಮಾತೇನೊ ಗಾಳಿನ ರಂದಜ್ಗೆ ಜಟ್ಟಿಕಂದರ್ಪನ ಸೂತ್ರೀಷ್ಮದಿಂ (ಜಟ್ಟಿಪು. ೯-೬೦).

[ಮುಂ೧ (< ಮುನ್¹) + < - ಪ್ರ೧]

ಮುಂಬು೨ (ನಾ)- ೧. ಮುಂಭಾಗ; ಮುಂದುಗಡೆ ; ಎದುರು : ಅರಿಭಟರು ಪವನಜನನಾಮತ ಮರಳುತಾಬ್ಬರಭವವನು ತಂದರನಲಿಗೆ ಹಾಯ್ದುದರು ಕರ್ಣಾದಿಗಳ ಮುಂಬಿವಲಿ (ಕುಚಾ.ಕ್ರೀ. ೦೩-೦೯) ; ದೇಶಿಯ ನಾಡಿದಳು ವರವೆಸಾಚ ಪರ್ಯೀತನಾಥನ ಮುಂಬಿನೊಳು (ಪಾ೦ಚಪು. ೩-೦೦); ಉಲುಹುಬೆದಗದಿಂಗುವ ಸಮುದ್ರದ ಸಲಿಲವಲೊಲಾಯ್ತುಖಿಳಸೇನಾಜಲಧಿ ಕೊಕ್ಕನು ಮಲಿವ ಮಹಿಪತಿ ಮುನಿಯ ಮುಂಬಿಸಲಿ (ತೊಚಾ. ೦-೦೩-೪) ; ಮುಂಬಿನೊಳಿನಿರುದ್ಧ ಪೊಜಮಟ್ಟ ನಿಖಿಳವಿತಂಬಿಯರ ಸಮುದಯಮದಿ (ಕೋಚಕ. ೪೦-೩೪). ೨. ಸೈನ್ಯದ ಮುಂಭಾಗ ; ಮುಂಬೊಣೆ : ಬಪರಕೆ ನಿಲುವ ಜೂಣಿಗರಿಲ್ಲ ಮುಂಬಗ ಹೊಳಕ ಬಲ್ಲವರಿಲ್ಲ ನಮ್ಮಯ ಬಲದ ನಾಯಕರು (ಚಾಪಾ.ಕ್ರೀ. ೫೦. ೨೪೮-೬) ; ಕಲಕಲದ ಬೊಪ್ಪೆಗಳ ಕೈಮಾನಡುಭಯಬಲ ಮೋಪಿವುದು ಮುಂಬಿಸಲಿ (ಕೊಚಿಪ. ೬-೩೬-೦). ೩. ಮೊದಲು ; ಪ್ರಾರಂಭ ; ಸುರತದ ಸುಗ್ಗಿ ಕಾಮನೆ ಸರಲ್ಗಳ ಪೂವಿನ ಪೆಱ್ಚು . . . ಸುರಾಗರಸಂಗಳ ಕಾರ ಮುಂಬು ತತ್ಪುರವರದಲ್ಲಿ ಸಾಕ್ಷಿಕದ ಮೈನಡುಕಂಗಳ ಮಾಗಿಯಾಗಳಂ (ಅಗಪ್ರ. ೦-೩೮) ; ಮತ್ತ ಭಾನು ಮೂಡುವ ಪದದೊಂದು ಮುಂಬಿನೊಳೆ ಬೆಳ್ಕರಿಪಂತಿರೆ ಕೂಡೆ ಪಾಂಡುರಚ್ಛವಿಯೊಳಗೊಂದುದೊಂದು ದಿನಮಿಂತಾಬುದು ಚಿಂತೆ ನರೇಂದ್ರದೇವಿಯಾ (ಕಚ್ಚಿ. ೩-೩೦೮) ; ವನಿತೆಯರ್ವರಂ ಚಲದಿಲೋಚನಮಿಂದುಕಳಾವಿಲಾಸಮಂ ಜನಿಯಿಸೆ ತನ್ನಿವಾಸ ದೊಳಳಂಕೃತಿಮುಂಜುಗಳಂತವಕ್ಕೆ ಮುಂಬಿನ ತೆಱದಿಂದೆ ಮುಂದುವರಿಯಲ್ ಬರೆ (ಜಚಾಪ್ರ. ೭-೭೬). ೪. ವೆನದಲು ಕಾಣಿಸಿಕೊಳ್ಳುವ ಗುರುತು: ಮುನ್ನೂಬನೆ : ಉದಯಿಸಿತು ಕೇವಲಜ್ಞಾನದ ಮುಂಬಿದು ನೋಱೊಡೆಂಬಿನಂ ತಪಮಂ ಕೊಳ್ವುದುಮೊಡನೆ ಮನಃಪರ್ಯಯ ಮುದಾತ್ತ ಮನನಿನಿಪ ತಮ್ಮನೀಂದ್ರೋತ್ತಮನೊಳ್ (ಕಂದ್ರಪ್ರ. ೦೩-೦೦೨). ೫. ಮುಂದಿರುವವನು ; ಮುಂದಾಳು : ಹೆಂಚನನದಂತೆ ಗರ್ಜಿಸಿ ದಶಾನನನೆಯ್ದರೆ . . . ಕಾಗಿದಂ ದಾನವರಾಘಸಂ ಜವನ ಮುಂಬಿದನೆಂದಿನೆಗಂ ವಿಘೋಷಣಂ (ಕೆಂಗಮ. ೦೪-೦೦). ೬. ಮುಂದಿನದು : ಮುಂಚಿನದು : (೧)- ೭. ಮುಂದಿನದು ; ಅನಂತರ ಒದಗುವುದು : ಭವಿಷ್ಯ : ' ಮುಂಬುಗಳೆ ' ಪರಾ- ೮. ಗುರಿ ; ಉದ್ದೇಶ : ಲಕ್ಷ್ಯ : ಮಕ್ಕಳು ನಿರ್ದಿಷ್ಟ ಮುಂಬಿನಲ್ಲಿ ಬೆಳವಣಿಗೆ ಸಾಧಿಸುವಂತೆ ಕಲ್ಪಿಸಬೇಕು (ಶಿಪ್ರ. ೨೬) . ೯. (ಜವಿಾನಿನಲ್ಲಿ) "ಕೊಯ್ಯುವ ಸಾಲು : ಆಕ್ಕಡಿ" (ಜಾಪಗೀ. ೪೬) ; " ಹೊಲಗದ್ದೆ ಕೊಯ್ಯುವವರು ತಮತಮಗೆ ಕೊಯ್ಯಲಾಗುವಷ್ಟು ಜಾಗದಲ್ಲಿ ಅಥವಾ ಮೊದಲೇ ಇರುವ ಸಾಲಿನಲ್ಲಿ ಕೊಯ್ಯುತ್ತ ಮುಂದುವರಿಯುವುದು" (ಪಹೃಶಬ್ದ-ಕೋಶ) : ಗದ್ದೆ ನಾಟಮಾಡುವಾಗ . . . . ಹಾಡುತ್ತಾ ನಾಟಿಮಾಡುತ್ತಿದ್ದರೆ ಮುಂಬು ಹತ್ತುವುದೇ ಗೊತ್ತಾಗುವುದಿಲ್ಲವಂತೆ (ಪಹೃಶಬ್ದ-ಕೋಶ).

[<ಮುಂಬು೧. / ಕವಿ. ಮುಂಬ್ಬ ; ಮಲ. ಮುಂಬ್ಬು ; ತೆಲು. ಮುನುವು]

ಮುಂಬುಗಳೆ (ಕ್ರಿ)- ಮುಂದಾಗುವುದನ್ನು ಅಲಕ್ಷಿಸು : ಮುಂದೆ ಒದಗುವ ಅಪಾಯವನ್ನು ನಿರ್ಲಕ್ಷಿಸು : ಮುಂಬುಗಳೆದು ಕಾದಿದರಂ ಬಿರುದರ್ ಕಾದುವಂತೆ ಕುರುಪಾಂಡುಸುತರ್ (ಗಕಾಪು. ೦-೦೧).

[ಮುಂಬು೨ + ಕಳ್೩]

ಮುಂಬುಗೊಳ್ (ಕ್ರಿ)- ಮುಂದೆ ಹರಡು, —ಅಪರಿಸು, — ವ್ಯಾಪಿಸು- ಅದೆ ಪೂರ್ತ್ಯಾರೋಚ್ಚಕ್ಷ್ಯೀಕರತಿವಿತಕಮೂರೀಣಾ ದಿಗ್ವಿತ್ರಿಯಂ ಮತ್ತಿ ದೆದತ್ರಂ ಮುಂಬುಗೊಂಡಂಬರಮನಿತು ಮನುದ್ಭತ್ಪತಾಕಾಂಬರಂ ನುಂಗಿದುದು . . . ಎಂಬನ್ನಂ ಜಗೆಕ್ಕಂಡಳೆವೆತಗಿಡ'ಬಂದತ್ತೆ, ಮತ್ತೇಭವ್ಯೂಹಂ (ಪರ್ಶಪು. ೦-೯).

[ಮುಂಬು೨ + ಕೊಳ್೧]

ಮುಂಬುಟ್ಟು (ನಾ)- ಮುಂದಿನ ಹುಟ್ಟು ; ಮುಂದಿನ ಜನ್ಮ ; ಭವಿಷ್ಯಜ್ಜನ್ಮ : ಗಂಡುಗಿಳಿ ಮಾರುಕವೆತ್ತದಂ ವಿರುಕಿಸುತೆ ಮುಂಬುಟ್ಟಿ ನೊಳಗಿವಳನಂತು ನಾಂ ತೊರೆಯಿಸುವೆನವನನೆಂದೊರೆದು ಗಲಗಾವರ್ತ ದೊಳ್ಕೆಡಹು ಮಡಿದುದು (ತೀಪಣ. ೫-೨೬).

[ಮುಂ೧ (< ಮುನ್¹) + ಪುಟ್ಟು೨]

ಮುಂಬೆಚ್ಚು (ಕ್ರಿ)- ಅತಿಶಯವಾಗಿ ಹೆಚ್ಚು : ವಿಶೇಷವಾಗಿ ವೃದ್ಧಿಯಾಗು : ಬೆಚ್ಚನಾದೆಡೆಯಂಡೆ ಕಾತರಿಸಿ ಮುಂದುಡಗೊಂಬೆಚ್ಚಜ್ಜಿಂದೇಳ್ದ ರೋಮಾಂಚನದೊಳಾಸೆ ಮುಂಬೆಚ್ಚಿ ಬೆಮರುವ ಜಾಲೆ ಬೇಸಱದೆ ನಿಂದು ನಿಟ್ಟಿಸುತಿರ್ದಳು (ಕೃಬಾಣ. ೩೦-೨೨).

[ಮುಂ೨ (<ಮುನ್²) + ಬೆಚ್ಚು೨ (<ಪರ್ಚು¹)]

ಮುಂಬೆದೆ (ನಾ)- ಮೊದಲ ಬಿತ್ತನೆಯ ಕಾಲ ; ಬಿತ್ತನೆಯ ಪ್ರಾರಂಭದ ಕಾಲ : ಶೈಕನಾಡವನು ಭೂಮಿಯ ಒಂಬೆದೆ ಮುಂಬೆದೆಗಳ ಹದವನ್ನು ತಿಳಿದು ಬಿತ್ತನೆ ಮಾಡಿದರೆ ಒಳ್ಳೆಯ ಬೆಳೆಯನ್ನು ತೆಗೆಯಬಹುದು (ಕೃಪ).

[ಮುಂ೧ (<ಮುನ್¹) + ಬೆದೆ]

ಮುಂಬೆಳಕು ' ಮುಂಬೆಳಗು ' ನೋ.

ಮುಂಬೆಳಗು, ಮುಂಬೆಳಕು (ನಾ)- ೧. ಮುಂಜಾನೆಯ ದೊಡಲ ಬೆಳಕು; ಉಷಃಕಾಲದ ಬೆಳಕು : ಪುಸ್ತುತದೊಳಗೆದ ಮುಂಬೆಳಗಮಲ ದಂತದ- ಗಭಸ್ತಿನವಪೂರ್ವಸಂಧ್ಯಾರುಣಾಂ ಭಾಳವಿನ್ಯಸ್ತಸಿಂಧೂರಂ (ಕೃಬಾಣ. ೦-೩) : ೦ಂಜಾದ ದೇಹಕ್ಕೆ ಮುಂಬೆಳಗು ಸಂಭ್ರಮಿಸಿ ತುಂಬಿ ನೇರಾದ ಮಧ್ಯದ ಪುರುಷನು ಶಂಖಿನಿಗೆ ಮೇಳ (ಸರಾಕ್ಷಿ. ೦೬೩೪); ಮೂಡಲೊಳು ಮುಂಬೆಳಗು ತೋರಿದ್ದುದು (ಸೆಗಾಣಿ. ೩-೩-೨೪). ೨. ಮುಂಜಾನೆ ; ಉಷಃಕಾಲ ; ಅರುಣೋದಯ ಕಾಲ : ಅನಿತಜೊಳ್ ಮುಂಬೆಳಗಿನ ಕೋಳಿ ಕೂಗಿತು ಮೂಡದಿಸೆಗೆಂಪಡರ್ದುದು (ತಬಪ್ರ. ೪೯-೪೩) ; ಇಂದೆ ಮುಂಜಾನೆ ಕನಸಾಂತು ನಾನತಿ ಸುಕಟಂಬಟ್ಟೆ : ಮುಂಬೆಳಗ ಕನಸು ಬರಿದಾಗದೀ ಪರಪರಾಧಿಯ ತಂಟೆ ಬೇಡಮಗ

(ಸೊಪ್ಪಿಣಾ. ೪೩-೦೬೨). ಮುಂಬೆಳಕು : ೧. ಮತ್ತೆ ಕತ್ತಲಳದುದಲು ದೆ ಮುಂಬೆಳಕು ಮೈದೋರಿದುದು ಮಳೆಭ್ರ ಮರ್ಬಿನಲಿ (ಶಾಕ್ರಾಂಗ. ೪೩-೨೫೭); ಈಗಿನ ಬತ್ತಲೆ ಹರಿದು ಮುಂಬೆಳಕು ತೋರಿಯೇ ತೋರುತ್ತದೆ (ಕಗಾಬ. ೦೨೨). [ಮುಂ₁ (< ಮುನ್¹) + ಬೆಳಗು₂]

ಮುಂಬೆಳಸು (ನಾ). ಮುಂದಿನ ಬೆಳೆ.– ಫಸಲು : ಚೈತ್ರನ ರಥದ ಮುಂಬೆಳಸು ಮೆಚ್ಚಿದರ ಮನಮೆಚ್ಚು. . . ಎನಿಪ ಮಲ್ಲಿಗೆಗಳೇಂ ಬಿರಿದುವೋ (ಕಂಕಿ. ೪೩-೨೬) ; ಎಂಬತ್ತು ನಾಲ್ಕುಲಕ್ಷದ ಜೀವರುಗಳೆಂದೆಂಬ ಬೀಜದ ಸೃಷ್ಟಿಕರ್ತ 'ಮುಂಬೆಳಸಿಗೆ ಪಣತವ ಕಟ್ಟಿದಂದದಿ ಪೊಂಪೆಚ್ಚಿ ಕಣ್ಗೆ ರಂಜಿಸಿತಾ (ಕೋಚಕ. ೨-೦೨). [ಮುಂ₂ (< ಮುನ್¹) + ಬೆಳಸು₂]

ಮುಂಬೆಱಗು (ನಾ). ದೇಹವು ಮುಂದಕ್ಕೆ ಬಾಗಿ ಸೆಟೆದುಕೊಳ್ಳುವ ಒಂದು ಬಗೆಯ ಅಪಸ್ಮಾರ : ಶೀರ್ಷದ ಬಿಲ್ಲಿನ ಹಾಗೆ ಮುಂದ ಕ್ಕಾಗಿ ಬಗ್ಗಿಸಿ ನೋಯಿಸುವುದು . . . ಇದನೇ ಮುಂಬೆಱಗು ಎಂಬರು (ಕೃಕ್ರಹಾ. ೨. ೧೨೫). [ಮುಂ₂ (< ಮುನ್¹) + ಬೆಱಗು]

ಮುಂಬೊಗು (ಕ್ರಿ). ಮುಂದಕ್ಕೆ ಪ್ರವೇಶಿಸು : ಮುನ್ನುಗ್ಗು : ಪಡಗೊಡನೆ ಪಡಗು ಹಿತ್ತಳೆಯ ಮುಂತಿ ಮುಖಿಗಳಮರಿ ತೊಡರಿದುವು ; ಹಲವರದು ಕೊಕ್ಕು ಮುಂಬೊಕ್ಕು ಛಿನಿಪಿಯರ ಕಪ್ಪಲಿಂದೆಗರಿಸಿತು ಮುಂಬುಬ್ಬೊಟೆಯನು (ಪಾಪಕಿ. ೦೭-೫೭೭).

[ಮುಂ₂ (< ಮುನ್¹) + ಪೊಗು]

ಮುಂಬೊಳೆತ್ತು, ಮುಂಬೊಳ್ತು ' ಮುಂಬೊಱ್ತು ' ನೋ.

ಮುಂಜೊಟ್ತು, ಮುಂಬೊಳ್ತು (ನಾ). ಬೆಳಗಿನ ಮೊದಲನೆಯ ಜಾವದ ಸಮಯ : ಮುಂಜಾನೆ ; ಪ್ರಾತಃಕಾಲ : "ಮುಂಜೊಟ್ಟಿಂದು ಮುನ್ನೇಸಜಾ" (ಕಸಾಸಾ. ೩೭ – ೨೪೨). ಮುಂಬೊಳ್ತು : ವಿಪಿನಾಂತರದಿ ಇಹುದು ಮುಂಬೊಳ್ತಿನೊಳಗೇಂಗೆಯುಂ ತಿರುಗುತಿಪೆ ? (ಪಾಶ್ರಾಂಗ. ೦೨-೩೨೦).

[ಮುಂ₂ (< ಮುನ್¹) + ಪೊಱ್ತು]

ಮುಂಭಾಗ (ನಾ). ಮುಂದಿನ ಭಾಗ ; ಮುಂದುಗಡೆ : ಶಂಬರಾಸುರ ನೋಲಗ ನೀರೊಟ್ಟಿಲಿಯೆಂಬಂತೆ ರಾಜಿಸುತಿರಲು ಕುಂಭಸಂಭವನಂತೆ ನಾರದಮುನಿರಾಯ ಮುಂಭಾಗದಲಿ ಬಂದಿಳಿವ (ಕೋಚಕ. ೦೦–೭೯); ಮುಂಭಾಗಂಬಡಿದೆಮ್ಮುಂಪಿರ್ ದಡಿಗರ್ ಮುಂಗಾಣದರ್ ದಿಂಡಿಮರ್ ಶಂಭುಸ್ಕಾರಮಹತ್ವಸಿದ್ಧಪರ್ಸನಂ ಕಾಣುತ್ತೆ (ಪಾಪಾಕ್ಕ. ೨–೫–೦೨) ; (ಪ್ರೇಕ್ಷಕರು) ಬಲಬದಿಗೆ ಒಂದು ಗುಡಿಸಲಿನ ಮುಂಭಾಗವೂ ತೆರೆದಿಟ್ಟ ಬಾಗಿಲೂ ಕಾಣಿಸುವುದು (ಕಕ್ರಮೋ. ೬೨).

[ಮುಂ₁ (< ಮುನ್¹) + ಭಾಗ]

ಮುಂಭಾರ (ನಾ). ಮುಂದುಗಡೆ ಹೆಚ್ಚು ಭಾರವಾಗಿರುವಿಕೆ : ಮುಂಭಾಗದಲ್ಲಿ ಹೆಚ್ಚು ತೂಕವಿರುವಿಕೆ : ಮೂಗುತಿ ಮುಂಭರೆ ತಾರುಬೀನ ಹೊಭಾರ ಸೇರಿನ ಒಂಕಿ ಕೈಭಾರ (ಹಕ್ರಥ. ೪೭) ; ಗಾಡಿಯಲ್ಲಿ ಮುಂಭಾರವಾಗಿದೆ, ಹಿಂದಕ್ಕೆ ಒಂದಿಬ್ಬರು ಕುಳಿತುಕೊಳ್ಳಬೇಕು (ಕೋಶ).

[ಮುಂ₁ (< ಮುನ್¹) + ಭಾರ]

ಮುಂಱ ' ಪೊಗ ' ನೋ.

ಮುಂಱದಮಿ ' ಪೊಕದ್ದಮೆ ' ನೋ.

ಮುಂಱರು ' ಮುಂಕ್ಕುಱು₁ ' ನೋ.

ಮುಂಱಾದವಂ (ನಾ). ಗ್ರಾಮದ ಪಟೇಲ.—ಮುಖ್ಯಸ್ಥ : ಅವನು ನನ್ನ ಕೈಕಳಿಗೆ ಕಟ್ಟಗೆಯನ್ನೊಡೆಯಲು ಬಂದಿದ್ದನು ಏಂಬ ಸಂಗತಿಯನ್ನು ಒಬ್ಬ ಮುಱಾದವನು ಅವಳಿಗೆ ವಿಶದಪಡಿಸಿದನು. (ಮೋಚಾಕ. ೦೦).

[← ಅರ. ಮುಕದ್ದಮ್; ಹುರಾ. ಮುಖಾದಮ್]

ಮುಕುಂದ (ನಾ). ೧. ವಿಷ್ಣುವಿನ ಹೆಸರುಗಳಲ್ಲಿ ಒಂದು: ಕೃಷ್ಣ : "ವಿಷ್ಣುಃ ಕೃಷ್ಣಃ ಕೇಶವಃ ...ಮುಕುಂದಃ, ಗೋವಿಂದಃ... ಗದಾಧರಃ– ಈ ೪೫ ನಾರಾಯಣನ ಪೆಸರ್" (ಹಂಪಾಮು. ೩–೨೨); ಮುಕುಂದನನೇಕ ಮುಕುಂದಬ್ಬಂದಂಗಳ್ ಮೋಟಗೆ ಶುಭಮುಹೂರ್ತದೊಳಂಕೇಸರಿಯಂ ಮುಂದಿಟ್ಟು ಹಸ್ತಾನಪುರೋಪವನಮನೆಯ್ದಿ ವಂದಾಗಳ್ (ಪಂಪಭಾ.-೦೪-೦೦ ಪ); ಕಾವ್ಯಸಮಾಧಿಯಂ ಪರಂಜ್ಯೋತಿ ಮುಕುಂದನೆನ್ನ ಬಗೆಯೊಳ್ ನಿಲೆ (ಜಗಂ. ೦-೦೭) : ಮುರಹರ ನಗಧರ ಮುಕುಂದ ಮಾಧವ . . . ನಮೋ ನಮೋ ನಮೋ (ಕೃಪಂಪ. ಭಾ. ೨-೪೬-೦). ೨. ಒಂದು ಬಗೆಯ ವಾದ್ಯ : ಮರ್ದಳೆ ರುಂಜಲರಿ ಮುಕುಂದ ತಾಳ ಕಾಹಳ ಶಂಖ ವಂಶ ವೀಣಾಸ್ವರಂ ಗಳೆಸೆಯೆ (ಕಕ್ಕಾಣಾ. ೪೩-೨೪) : ' ಸುರವ್ಯವಂಗಳವಮೊಂದೆಡೆಯೊಳ್ ನೆಗಟ್ಟುದು ರಾಜ್ಯಸಮರ್ಪಣಾಯುಗಪಶ್ಚಿತಹತ ಮುಕುಂದ [ಪಾಣಾ. ಮಪುಂದ್ರಾರವಮೊಂದೆಡೆಯೊಳ್ (೦೦೪. ೯-೪೬); ಪಕಳಗಣಸಂದೋಹ ನಂದಿತನಂದೀಶ್ವರ ಮುಕುಂದಹಸ್ತಾಹತವಿತತಮ್ಯದುಮ್ಯದಂಗಮಂಗಳರವ (ಪಾಪಕಿ. ೦೩.೩೦ ಪ). ೩. ಒಂದು ಬಗೆಯ ಸುಗಂಧದ್ರವ್ಯ : ಕುಂದುರುಷ್ಕ ; "ಹೇಲಾಮ್ಮಂ, ಮುಕುಂದಃ, ಕುಂದಃ, ಕುಂದುರುಃ– ಈ ೪ ಕುಂದುರುಷ್ಕ" (ಪಾಪಾರಾ. ೦೦೨) ; "ಪಾಲಂಕ್ಯಾ, ಮಕುಂದಃ, ಕುಂದಃ, ಕುಂದುರು – ೪ ಕುಂದುರುಷ್ಕವೆಂಬುವ ಗ್ರಂಥ್ಯದ್ರವ್ಯವು" (ಸಿಧ್ಯಂತಿ. ೦೫೦); "ಮುಕುಂದಃ – ಕುಂದುರುಷ್ಕ" (ಲಿಪಿ. ೦೫೬). ೪. ಕುಬೇರನ ನವನಿಧಿಗಳಲ್ಲಿ ಒಂದು : ದಿಕ್ಪಾಲಕರೊಳಾ ಕುಬೇರನೇ ಪದ್ಮ ಮಹಾಪದ್ಮ ಶಂಖ ಮಕರ ಕಚ್ಛಪ ಮುಕುಂದ ಕುಂದ ನೀಲ ಜರ್ಜಂಗಳೆಂಬ ನವನಿಧಿಗೊಡೆಯನಾಗಿ ಈಶ್ವರನಿಗೆ ಸಖನಾಗಿರ್ಪಂ (ಪಪೀಕ. ೦೬೭). ೫. ಒಂದು ಬಗೆಯ ಪಕ್ಷಿ : ಕಾಗೆ ಪೊಣರ್ವಕ್ಕಿ ಪೊಂಗುರು ಗೂಗೆ ಮುಕುಂದಂ ಬಲಾಕೆ ಲಾವುಗೆ ಸೇನಂ (ಶಾಕ್ಕಣಾ. ೦೦೫೪ ೫೦೨೪). [ಸಂ.]

ಮುಕುಟಿ₁ ' ಮುಕುಡಕೆ ' ನೋ.

ಮುಕುಟಿ₂ (ನಾ). ಕಿರೀಟ; ಮಕುಟಿ : "ಮುಕುಟಂ ಕೋಟೀರಂ ವಮೌಳಿ ಕಿರೀಟಂ ತಾನೆನಿಕ್ಕುಮುಷ್ಣೀಷಂ" (ಪಾಪ್ರಕಿ. ೭೫ ೨); ಅದುರಿತು ಪಾದಾಘಾತದಿಂದೆ. ಧರೆ ಬಿದಿರಿದುವು ಮುಕುಟ, ತಾಗಿ ತಾರಕೆಗಳು ಉದುರಿದುವು ಕೈತಾಗಿ ಲೋಕಂಗಳೆಲ್ಲಾ . . . ನಮ್ಮ ಕೂಡಲಸಂಗನು ದೇವನಿಂದು ನಾಟ್ಯವನಾಡೆ (ಬಸವ. ೫೫೦); ಉಜ್ವಲಿಪ ವಿದ್ಯುಮ್ಮಾಲತಾಂ ಕುರಿದಂತೆ ಕೆಂದಳಿರ ತೊಂಗಲಂತೆ ಪರಿಸುವ ಪದ್ಮರಾಗಮುಕುಟಮುಂ (ಕಕ್ಕಥಿ. ೫–೦೩ ಪ). [ಸಂ.]

ಮುಕುಟೆ ' ಮುಕುಡಕೆ ' ನೋ.

ಮುಕುಡಕ, ಮುಕುಟ್ಟು₂, ಮುಕುಟೆ, ಮುಕುತೆ, ಮುಕ್ಕಡಕ (ನಾ). ಒಂದು ಬಗೆಯ ಸಸ್ಯ : ರಾವಿ, ಮುಕುಡಕ, ಮುಕುತೆ, ಏನುಜಾವಿಗ (ಪ್ರತಿನಿ. ೪೯-೯೦). ಮುಕುಟಿ₂ : "ಕೋಟೀರಃ – ಮುಕುಟ, ಗೋರ, ಗದುಗು, ಛತ್ರಿ, ಕೋಟಿ, ಗಂಧ, ನುಮಿ" (ಲಿಪಿ. ೦೦); ಅದಱ ತದನಾಪ್ತರ ಮುಕುಟ ಅಲದ ಹಾಳೆ ಅದಱ ತದನ್ಯರ ಚೈಕೋಲ ತಾಪಮರ (ಪಾಭಾ. IX-i. ೦೦-೫೫; ಮು. ೧೫ಪದ್ಯ ೫೫). ಮುಕುಟೆ : "ಏಣಾಜಾವಿಗ, ರಾವಿ, ಮುಕುಟಿ, ಮುಕುತೆ, ಮುಕುಡಕೆ" (ಕಸ್ಯ. ೪೨). ಮುಕುತೆ : ಮೇಲಿನ 'ಸಸ್ಯನಿ' ಪ್ರಯೋಗವನ್ನು ನೋಡಿ. ಮುಕ್ಕಡಕ : ಕೆಲವು ಕಡೆಗಳಲ್ಲಿ ಗುರಗಿ, ಬಿದಿರು ; . . . ಜೊಂಡರಗಿ, ಮುಕ್ಕಡಕ, ಮುಂಪಾದ ನಿಡಬಿಳ್ಳಿಪೊದಗಳಿದ್ದವು (ಕಂಚಾಂ. ೨).

[< ಸಂ. ಮುಕುಷ್ಕ = ಒಂದು ಬಗೆಯ ಹುಲ್ಲು]

ಮುಕುಂದೆಱೆ¹ (ನಾ). ಒಂದು ಬಗೆಯ ತೆರಿಗೆ : ಕಳುವ ಸಾಯಣ್ಣನವರಿಗೆ ಆ ಶ್ರೀವೀರಬಲ್ಲಿಳದೇವರಸರು ಆ ಸ್ಥಳದ . . . ವ್ಯಾಪಾರಕ ಆಲೆದೆಱೆ ಮುಕುಂದೆಱೆ ಚಿಟ್ಟೆದೆಱೆ ಕೊಸೆದೆಱೆ ಪಾಣ ಸಂಬಳವೊಳಗಾದ

ಪೂರ್ವಾಯ ಅಪೂರ್ವಾಯ ಯೆಲ್ಲವನೂ ಕಾರುಣ್ಯಂ ಮಾಡಿ ಧಾರಾ ಪೂರ್ವಕಂ ಮಾಡಿ ಕೊಟ್ಟರು (ಪಂ. VI. ೪೩೮ನು. ೪೯–೭೨; 1891).

[ಮುಕುಡಿ + ತೆಱೆ]

ಮುಕುತ (ಗು). ೧. (ಬಾಣ ಮುಂತಾದುವನ್ನು) ಪ್ರಯೋಗಿಸಿದ; ಬಿಟ್ಟ : ನೆಕುಲ . . . ಯುಯುತ್ಸು ಸೈಂಜಯರು ಸಕಲಸನ್ನಾಹದಲಿ ಯುದ್ಧೋದ್ಯುಕ್ತರಾದರು ಚಿಡತಚಾಪರು ಮುಕುತ ಶಸ್ತಾವಳಿಯ ಮಳೆಗಾಲವನು ನಿರ್ಮಿಸುತ (ಕುಶ್ಯಾಖ್ಯ. ೬–೨೪). (ನಾ). ೨. ಬದುಕಿನ ಬಂಧನವನ್ನು ಕಳೆದುಕೊಂಡವನು ; ಮರಣಹೊಂದಿದವನು : ಭಟುತವತ್ಸಲನಾಳ ಕೈಯಲಿ ಮುಕುತರಾದರು ಮೂಜುಸಾವಿರ ಮುಕುಟ ವರ್ಧನರು (ಕಾಶಿಂ. ೪೪–೦೬). ೩. ಲೌಕಿಕಬಂಧನಗಳಿಂದ ಬಿಡುಗಡೆಯನ್ನು ಹೊಂದಿದವನು; ಪ್ರಾಪಂಚಿಕವಿಷಯಗಳಿಂದ ಮುಕ್ತನಾದವನು : ನೀವನ್ಯರುಗಳಲ್ಲಿ ಯುಕುತಿಯಿಂದಜೆ ತಿಳಿದು ನಡೆಯಲು ಮುಕುತನಹೆ [ಕಾಶಿಂ. ಯುಕುತಿಯಿಂದಳೆ ಮಾಡಿದರೆ ನಿರ್ಮುಕುತನಹ, ಯುಕುತಿಯಿಂದದ ಮಾಡಿದರು ನಿರ್ಮುಕುತನಹೆ] (ಕುಶ್ಯಾಖ್ಯ. ೪–೦೬); ಮುಕುತ ನಾನಾವೆಂ ಪ್ರಕಟಮಾರ್ಗಕ್ಕಂ ಮುಕುತಿಯಿಂ ಭುಸ್ಮಂ ಸುಕರ ಕೇಳೆಂದುಂ (ಕಾರಾಕ್ಯ. ೪–೦೦–೨೪). [< ಸಂ. ಮುಕ್ತ]

ಮುಕುತಿ (ನಾ). ವಿಮೋಚನೆ; ಮೋಕ್ಷ : ; ಮುಂಕ್ತಿ : ಅವಿರಳಮು ಮುಕುತಿ ಗಿಕುತಿಯು ಸುಖಿಂಗಳ ಪಮಣೆ (ಕಬರ. ಕಿಃ. ೪ ೦೪); ಧೂರ್ತತನದಿಂ ಕಾದಿ ಕೂಡುವೆನಾರ್ತು ಪರಿಯಂತರದಲಾ ತ್ರೈಮೂರ್ತಿಯನು ಮೂದಲಿಸಿದಲ್ಲದೆ ಮುಕ್ತಿಯಿಲ್ಲೆಂದ (ಕಾಶಿಂ. ೨೬–೦೬); ಗೆರೆಂವಿನ ಗುಲಾಮನಾಗುವ ತನಕ ದೊರೆಯದಣ್ಣಾ ಮುಕುತಿ (ಭುಕಂದ. ೬–೦೪೯ ಪದ್ಯ).[<ಸಂ. ಮುಕ್ತಿ]

ಮುಕುತಿವಚ್ಚೆ (ನಾ). ಮುಕ್ತಿಯನ್ನು ಸಾಧಿಸುವ ದಾರಿ ; ಮೋಕ್ಷ ಮಾರ್ಗ : ಎಱಗುವೆನೆಲವರ್ತಿಯೊಲು ಧರ್ಮಕರ್ಮದ ತೆಱವನೆಲ್ಲವ ಭವ್ಯ ತತಿಗೆ ಅಱುಪಿ ಮುಕುತಿವಚ್ಚೆದೋಱುವಾರ್ಧರ ಮಿಱುಪಂಭ್ರಯರುಣಾಂ ಬುಜಕೆ (ಶ್ರೀಪಾಂ. ೦–೬). [ಮುಕುತಿ + ಬಚ್ಚೆ]

ಮುಕುತೆ ' ಮುಕುಡಕ ' ನೋ.

ಮುಕುರ[1], ಮುಕ್ಕರ, ಮುಖರ[1] (ನಾ). ಒಂದು ಬಗೆಯ ನಾಸಿಕಾಭರಣ ; ಮೂಗುತಿ ; ಮೊಗುಬೊಟ್ಟು ; ನತ್ತು : ಪರವಾಸೊಜಿಗಿಂದೆಸವ ಆ ದೇಶವೆಣ್ಣಿನ ಮುಕುರದಂತೆ ಒಪ್ಪಿ ವಿದ್ಯಾನಗರವೆಸೆಯೆ (ಶ್ರೀಕಾ. ೦–೭೬) ; ಮುತ್ತುಗೊಂಚಲು ಬಿಗುಡಿ ಮುಕುರ ಚಳತುಂಬುಗಳು (ಪಾಣಾಳ. ೦೦). ಮುಕ್ಕರ : ಯುದ್ಧರಂಗಕ್ಕೆ ಬಂದ ಭಾಮನು ರಾಮಬಾಣದಂತೆ ಆ ಪ್ರಬಲಸೈನ್ಯದೊಳಕ್ಕೆ ಮುಗ್ಗಿ. ಮಾತಂಗಿಯೊಜಸೆ ಕಾದಿ. ಅವಳ ಮುಕ್ಕರವನ್ನು ಹಿಡಿದರೆಯುತ್ತ . . . ಧಿಕ್ಕರಿಸಿ ಅವರನ್ನು ಪ್ರಾಣಸಹಿತವಾಗಿ ಬಿಟ್ಟು ಬಿಟ್ಟನು (ಕಾಶಿ. ೦೦೦). ಮುಖರ[1] : ನಿನ್ನ ಮೂಗಿನಲ್ಲಿ ಧರಿಸಿರುವ ಮುಖರವು ನಿನ್ನ ತೌರುಮನೆಯ ಕೊಡುಗೆಯಷ್ಟೆ (ಕಥಾ. ೦೯೧) ; ಗೃಹಿಣಿಯು ಒಮ್ಮಿಂದೊಮ್ಮೆ ಮೂಗಿನ ಮುಖರವನ್ನು ಅಲುಗಾಡಿಸುತ್ತ . . . ಪ್ರಫುಲ್ಲೆಯೂ ಅವಳ ತಾಯಿದೂ ಬಂದ ಸಮಾಚಾರವನ್ನೆಲ್ಲಾ ಆದ್ಯೋಪಾಂತವಾಗಿ ಹೇಳಿದಳು (ದೀಂಪ್ರಾ. ೯).

[ದೇ.ಕ ತೆಲು. ಮುಕ್ಕಡಿ. ಮುಂಗರ : ಕೋಲಾ. ಮುಕ್ಕರ, ಮೊಕರ್ತ]

ಮುಕುರ[2] (ನಾ). ೧. ಕನ್ನಡಿ ; ದರ್ಪಣ : "ಅದರ್ಶಃ. ದರ್ಪಣಃ. ಮುಕುರಃ—ಈ ೩ ಕನ್ನಡಿ" (ಪಡಾಮು. ೪೦–೧೦೨) ; " ಸೈರ್ಮಲ್ಯಶೋಭಾ ಕಲಿತಂ ತ್ರೈಲೋಕ್ಯಲಕ್ಷ್ಮೀಮಣಿಮುಕುರವಮಲಲ್ ಬೆಲ್ವದಾಪ್ತುಬ್ಬಪಂದಂ (ಕಾದಂಪ. ೬೪೪); ಮುಕುರಂ ಕೈಯೊಳಿರಲ್ಕೆ ನೀರ ನೆಳಲೇಕ್ಕೆ (ಸೋಮೇಶ. ೪.); ಮಸುಱ್ದು ಮಾಸಿದ ಮುಕುರಂಬೊಲಂತೆ ವಿಗತಪ್ರಭವಾಯ್ತು ತಾಂಶು ಮಂಡಲಂ. (ಕುಮಪ. ೯-೭೬) : ಆನೆ ಮುಕುರದೊಳಡಗಿ ಭಾವ ಸರಸಿಯೊಳಡಗಿ ಅನನ್ನ ಗುರುವಿನೊಳಡಗಿ ಸಂಸಾರ ತಾನತ್ಕೃಣಮು (ಸರ್ವಜ್ಞ. ೪೬೪)- ೨. ಕುಂಬಾರನ ಚಕ್ರದ ಹಿಡಿ,–ತಿಗುರಿಯ ಹಿಡಿಕೆ- [ಸಂ.]

ಮುಕುರಂದೋಱು (ಕ್ರ). (ಪ್ರತಿಬಿಂಬವನ್ನು ನೋಡಿಕೊಳ್ಳಲು) ಕನ್ನಡಿಯನ್ನು ತೋರಿಸು ; ಮಂಗಳಾರತಿಯಿತ್ತು ಚವರ ಸೀಗುರಿಯಿಕ್ಕಿ ಅಂಗಡಿಯರಂಗೆ ಮುಕುರಂದೋಱು ಮೈಯಿಕ್ಕಿ ನಿಂದಿರ್ದು (ಜಪ ೪–೩೨).

[ಮುಕುರ್ + ತೋಱು]

ಮುಕುರತೋರಣ (ನಾ). ಕನ್ನಡಿಗಳಿಂದ ತಯಾರಿಸಿದ ತೋರಣ ; ಕನ್ನಡಿಗಳ ಸಾಲುತೋರಣ : ಮುಕುರತೋರಣಮೊಪ್ಪಿರೆ ಮಂಗಳ ಧ್ವಜಂ ಕುಣಿಯೆ . . . ಗುರುಪ್ರಣತಿಸಮುತ್ಸುಕಂ ಮುದದಿನಂದಿದಿರ್ಗೊಡಸುವಂ ನರಾಧಿಪಂ (ಜಾಜಿ. ೪–೬೦). [ಮುಕುರ್ + ತೋರಣ]

ಮುಕುರಿಕ್ಕು ' ಮುಕ್ಕುಱಿಕ್ಕು[1] ' ನೋ.

ಮುಕುರಿಸು[2] ' ಮುಕ್ಕುಱಿಸು[2] ' ನೋ.

ಮುಕುರು[3] ' ಮುಕುಱ್ಕು[3] ' ನೋ.

ಮುಕುಲ[1]. ಮುಕುಳ (ನಾ). ೧. ಅರಳುತ್ತಿರುವ ಮೊಗ್ಗು ; ಮುಗುಳು : ಕುಟ್ಮಲ : ಗಿರಿಶಿಖರ ಮುಕುಲದೊಲು ಮೊಗವನೆತ್ತಿವ ನಭದಲಲ್ಲಲ್ಲಿ (ಆಹ್ನಾ. ೫೦-೩). ೨. ಮೊಗ್ಗಿನಂತೆ ಮುಗಿದ ಕೈ,—ಜೋಡಿಸಿದ ಹಸ್ತ- **ಮುಕುಳ** : ೧. "ತೋರಕಃ. ಜಾಲಕಃ. ಕಳಿಕಾ. ಕುಟ್ಮಳಃ. ಮುಕುಳಃ—ಈ ೫ ಪೂವಿನ ಮೊಗ್ಗು" (ಪಡಾಮು. ೪೦–೩೨) ; ಅತನ ಕರತಲಸ್ಪರ್ಶಸುಖಿಂ ಕಪೋಲತಲಕದಂಬವ್ಯುಕುಳಕರ್ಣಪೂರದಂತು ರ್ಣ್ಮದ ಪುಳಕಮುಂ ಬೆರಸು (ಈಡಂಪು. ೬೧೦) ; ಮುಕುಳಂ ಮಾದಲರಾಯ್ತು ಮೆಯ್ಯರಿಸಿನಂ ಕಂಪೋಡಿತು (ಲೀಜಾತ. ೨-೪೪) ; ಸರೆ ಏರೆ ಮಾವು ಪೂವು ವಕುಳಂ ಮುಕುಳಂ . . . ಕಂಪು ಸೊಂಪಗಂದರೆಯೆನೆ ರಮ್ಯಮಾ ವಿಷಯದೂರ್ಗಳ ನಂದನವ್ಯಂದವೆತ್ತಲುಂ (ತಿಸ್ಕ. ೪-೨೬). ೩. [ಛಂದ] ಕನ್ನಡಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಗಳಲ್ಲಿ ಆರನೆಯದಾದ ಗಾಯತ್ರಿಛಂದಸ್ಸಿನ ಒಂದು ವೃತ್ತ : ಉರ್ವ್ಯಗ್ರಂ ಮರುತಂ ಪರ್ವಿರ್ದಂದುವೇ ಸರ್ವಾದ್ಯಂತಜೊಳಂ ನಿರ್ವ್ಯಪಂ ಮುಕುಳಂ [ಕಾಣಾಂ. ಕಪುಳಂ. ಕುವ್ಯುದಂ] (ಕಂದೋಟಂ. ೨–೫೦). ೪. [ನಾಟ್ಯ] ನಾಟ್ಯಶಾಸ್ತ್ರದಲ್ಲಿ ಹೇಳಿರುವ ಅಸಂಯುತಹಸ್ತಗಳಲ್ಲಿ ಒಂದು : ನಾಟ್ಯಶಾಸ್ತ್ರದಲ್ಲಿ ಹೇಳಿರುವ ಅಸಂಯುತಹಸ್ತಗಳು ಯಾವು ವೆಂದರೆ — ೧. ಪತಾಕ. ೨. ತ್ರಿಪತಾಕ . . . ೨೨. ಮುಕುಳ, ೨೩. ಊರ್ಣನಾಭ. ೨೪. ತಾಮ್ರಚೂಡ. (ಕಣಾಕ್ಷ. ೪೮). ೫. ಇಪ್ಪತ್ತು ಬಗೆಯ ಸಂಚಾರಿದೃಷ್ಟಿಗಳಲ್ಲಿ ಒಂದು ; ಆಲಿಗಳನ್ನು ಚಲಿಸದೆ ರೆಪ್ಪೆಗಳನ್ನು ಮುಚ್ಚುವುದು : ಕೂನ್ಯ. ಮಲಿನ. ಶ್ರಾಂತ. ಲಜ್ಜಿತ. ತಂಕಿತ. ಮುಕುಳ (ಅರ್ಧಮುಕುಳ). ಗ್ಲಾನ . . . ಮಬಿರೆ – ಈ ಇಪ್ಪತ್ತು ಸಂಚಾರಿದೃಷ್ಟಿಗಳು (ಶಾಕ್ಯಶಿ. ೪-೬ ಪ) ; ಸೋಗಸಿಂದಂ ಕಣ್ಣಮೆಗಳ್ ಮುಗುಳ್ದಿರ್ದುಂ ತಿರದ ತಾರೆ ಮುಕುಳಮೆನಿಕ್ಕುಂ (ಶಾಕ್ಯಶಿ. ೪–೪೦). [ಸಂ.]

ಮುಕುಲತೆ (ನಾ). ಮೊಗ್ಗಿನಂತೆ ಸೇರಿಕೊಂಡಿರುವ ಸ್ಥಿತಿ. – ಕೂಡಿಕೊಂಡಿರುವ ಸ್ಥಿತಿ : ಕ್ಷಿತಿಪತಿಯು ಕರಸರೋಜದ್ವಿತಯಮನದಿಗಡಿಗ ಮುಕುಲತೆಯನೈದಿಸಿ ತದ್ಯಶಿಮತಿ ನಿಜಕುವಲಯಚಂದ್ರತೆಯಂ ಪ್ರಕಟಿಸಿದನಾ ಸಭಾಭ್ಯಂತರದೊಳ್ (ಕಂಕ್ರಶ್ವ. ೪–೪). [ಸಂ. ಮುಕುಲಕಾ]

ಮುಕುಲನ (ನಾ). ಕಣ್ಣನ್ನು ಮೊಗ್ಗಿನಂತೆ ಮುಚ್ಚಿಕೊಳ್ಳುವಿಕೆ : ಮುಕುಲನ ನಿಮಿಳನಂಗಳಾ ವಿಕಾಸಹಾಸಪ್ರಬೋಧನೋನ್ಮೇಷಂಗಳ ಪ್ರಕಟಿಸುಗುಮ್ಮೈಕ್ಯವಂ ನಿರ್ಮಿಕಲ್ಪದಿಂ ಗೌಣಮುಖ್ಯವೃತ್ತಿಕೃತಂಗಳ್ (ಕಾಪ್ಯಾಕ. ೧೦೪). [ಸಂ.]

ಮುಕುಲಿತ, ಮುಕುಳಿತ (ಗು). ೧. ಮೊಗ್ಗಾದ ; ಮೊಗ್ಗನ್ನು ತಳೆದ : ಬಾರುವಿಟಪಾವಲೀವ್ಯತಕೋರಕಾಂಕುರಿತ ಪಲ್ಲವಿತ ಮುಕುಲಿತ [ಪಾಣಾಂ. ಮುಕುಳಿತ. ರುಚಿರ]ವಿನ್ಯಾಸಿತ ರಮ್ಯಾಶೋಕಮಹೀರುಹವುಮನಭವನಯ

ರುಚಿ ಪದಿದಿರ್ದುಂ (೧೦ಪ್ರ. ೦೦-೪೦). ೨. ಮೊಗ್ಗಿನಂತೆ ಮುಚ್ಚಿ ಕೊಂಡಿರುವ – ಸೇರಿಕೊಂಡಿರುವ ; ಮುಂಗಿದ : 'ಮುಕುಲಿತಕರ', 'ಮುಕುಲಿತಾಂಜಲಿ' ಪರಾ. **ಮುಕುಳಿತ** : ೧. ಪುರಬಹಿರ್ಭಾಗವಿಸ್ತರಿತನಂದನದೊಳ್ಕುರಿತ ಪಲ್ಲವಿತ ಮುಕುಳಿತ ಕುಸುಮಿತಾಪರಿಮಿತ ಫಲಿತ ತರುಗಳ ಅಂತಶಯವಿಲಾಸಕ್ಕೆ ನಿವಾಸಮುಂ (ಶುಕಸ-ತಿ- ೨-೧೭) ; ಮುಕುಳಿತ ನೀಲೋತ್ಪಲಮಮೃತಕರೋದಯದೊಳಗಲರ್ದು ಪೊಜಸೂಸುವ ಪೊಲ್ಕರಂದವುನಿನೆಂ ಬಾಲಿಕೆ ನೋಡುತೆ ತಳೆದಳೊಗುವ ಹರ್ಷಾಶ್ರುಗಳಂ (ಅಧ್ಯಪಿ. ೪-೧೧). ೨. ಮುಕುಳಿತಪಾಣಿಪಲ್ಲವಪುಟರ್ನಮಿತಾನನ ಪದ್ಮರೆಂದೆರಂತಕನಳಮಂ ಶ್ರೀಕೋಲವಲ್ಲಂ ಪರಿಭಾವಿಸಿ (ಪಾರ್ಶ್ವ. ೧೪-೦೬). ೩. ಅರೆಮುಚ್ಚಿದ ; ಅರ್ಧವುಚ್ಚಿದ : ಮುಕುಳಿತವಿಲೋಚನಂ ಕಂಟಕಿತಾಂಗಂ ಸ್ವೇದಬಿಂದುದಂತುರಿತಮುಖಿಂ - ಪ್ರಕಟಿತ್ಪಸಿತೋತ್ಪಂಪಂ ನಿಸಾವ್ಯಕಮಾನೀಯಮಾದುದಿಂತು ರತಾಂತಂ (ಆಣಾಪ್ರ- ೪೦೩)₂ (ನಾ). ೪. ಮೊಗ್ಗುಗಳುಳ್ಳುದು ; ಮುಗುಳುಗಳುಳ್ಳುದು : ಸಮಾಪದ ಸ್ಖಲನಸುಖನಿಮಿಗ್ನತೋನ್ಮೀಲಿತನಘನಂಗಳಿಂ ಮುಕುಳಿತಮುಂ ಕುಸುಮಿತ ಮುಮಾದ ನಿಷ್ಪಾಸಪವನನಿಂ ಪರಿಮಳಮುಂ ಬೀಱುವ ವಧೂವರರಾಗ ವಿಷಯವಲ್ಲರಿ ಫಲಿತವಮಾದುದೆನಿಸಿ (ಜಸಿ. ೨-೩೨ ಪ). [ಸಂ.]

ಮುಕುಲಿತಕರ, ಮುಕುಳಿತಕರ (ನಾ). ಮುಗಿದ ಕೈ ; ಜೋಡಿಸಿದ ಕೈ : ಮಾರುತಿ ಮೇಘರುತಿಯಿನುದಾತ್ತರಾಘವಗೆ ಮುಕುಲಿತಕರಸರೋಜ ನಾಗಿ (ತಂರಾಪ್ರ- ೦೦-೪೨ ಪ); **ಮುಕುಳಿತಕರ** : ಅನಂತರಂ ವಿಶ್ವಸೇನಾವನೀ ನಾಥನುಮೈರಾ - ಮಹಾದೇವಿಯುಂ ಕುರುಕುಳಾಗ್ರಗಣ್ಯಾರಪ್ಪ ಬಂಧು ಗಳುಂ ಮುಕುಳಿತಕರಕಮಳರ್ ಬಳಸಿಯುಮಿರೆ (ತಂರಾಪ್ರ- ೦೦-೬೬ ಪ) ; ವಂದಿಸುತ ಮುಕುಳಿತಕರಂಗಳ ಸಂದಿಸಲು ಭಾಳಸ್ಥಳಗಳಿಂ ನಂದಿಕೇಶನ ನಂಕಿಸುತ ಕೀರ್ತಿಸಿದರರ್ಕಿಯಲಿ (ರಾಪ್ರ. ೨-೫೬). [ಸಂ.]

ಮುಕುಲಿತಾಂಜಲಿ, ಮುಕುಳಿತಾಂಜಲಿ (ನಾ). ೧.=ಮುಕುಲಿತಕರ : ಅಂತು ವಿನತನಾದನಂತರಂ ಸುರೇಂದ್ರಮನ್ಮು ಪ್ರಬಾಹು ಪುರಂದರರೊಳಂ ವಿನಯವೃತ್ತಿಯಿಂ ಮೆಱೆದು ಸಮುಚಿತಾಸನದೊಳ್ ಕುಳ್ಳಿರ್ದು ಮುಕುಲಿತಾಂಜಲಿಪುಟನಾಗಿ . . . ಬಿನ್ನವಿಸೆ (ತಂರಾಪ್ರ. ೨-೨ ಪ). ೨. ಕೈಗಳನ್ನು ಮುಗಿದವನು.—ಜೋಡಿಸಿದವನು : ಹರ್ಮುಜಚಿತ್ತಂ ಮರುತ್ಸನಘಂ ರಾಮಚಂದ್ರಂಗೆ ಮುಕುಲಿತಾಂಜಲಿಯಾಗಿ . . . ಬಿನ್ನವಿಸೆ (ತಂರಾಪ್ರ. ೦೦-೪೬ ಪ) ; ಅಂತು ಪೊಕ್ಕು ಮುಕುಲಿತಾಂಜಲಿಯಾಗಿ ಮುಂದೆ ನಿಂದಿರ್ದ ಮೇದಿನೀದೇವಿಯ ದೈನ್ಯಭಾವಮಂ ವಿರಿಂಚಿ ಕಾರುಣ್ಯ ಚಿತ್ತದಿಂ ನೋಡಿ (ಜಸಿ. ೦-೨೬ ಪ). **ಮುಕುಳಿತಾಂಜಲಿ** : ೧. ಅಂತು ಬಿಸುಗೊಳ್ತುದುಂ ಮುಕುಳಿತಾಂಜಲಿಪುಟನಾಗಿ ವಿಪುಲಮತಿ . . . ಆಗಳುದ್ಯತನಾದಂ (ತಂರಾಪ್ರ- ೦೦-೬೫ ಪ) ; ತ್ರೇತೆಯೊಳಿಂದ್ರಂ . . . ಬಂದಾತುರನಾಗಿ ವಾರಿರುಹಸಂಭವನಂ ನುತಿಗೆಯ್ದು ಭಕ್ತಿಯುಕ್ತಾತಿಶಯೋ ಕ್ತಿಯಿಂ ಮುಕುಳಿತಾಂಜಲಿಯುಂ ಪಣೆಗಿಟ್ಟು ನಿಂದು (ರಾಸ್ಕಂ. ೦-೨). ೨. ಆ ವ್ಯಕ್ತಿಕರಮಂ ಭಗೀರಥು ಕೇಳ್ದು . . . ತಾನುಮಾವರಲ್ಲಿಗೆ ಬಂದು ಪಂಚಮುಷ್ಟಿಯಿಂ ಬಂದಿಸಿ ಕುಳ್ಳಿರ್ದು . . . ಬೆಸಸುವುದೆಂದು ಮುಕುಳಿ ತಾಂಜಲಿಯಾಗಿ ಬಿನ್ನಪಂಗೆಯ್ದೊಡಗೆ (ಅಪ್ರ. ೦೦ ೨ ಪ). [ಸಂ.]

ಮುಕುವಾಡು (ನಾ). ಒಂದು ಬಗೆಯ ಹಾಡು.—ಗೀತೆ : ಕುಣವರ ಕಂಡು ತಾನುಂ ಮಗುಳ್ದು ಸತಿಸುತಲಣಿಯರದಿ ಮುಕುವಾಡುಗಳ ತಾನು ಪಾಡುತಂ . . . ಪ್ರಭುದೇವ ಬರಲು (ಕ್ರಶಾ- ೯-೪೯). [? + ಪಾಡು]

ಮುಕುಳೆ "ಮುಕುಲ" ನೋ.

ಮುಕುಳಿ (ನಾ). ೧. ಸ್ತ್ರೀಯೆ ಜನನಾಂಗ ; ಯೋನಿ : (೬). ೨. ಆಸನದ್ವಾರ : ಪೃಷ್ಠ ; ಪುಕ್ಕಳ ಮುಕುಳಿಯ ವರಸಿದ ಕೋರಿಯ ಸಿಕ್ಕಿಲ್ಲದ ಪೆಗಲೊಳಗೆ ಹೊತ್ತು ತಿರುಗುವ ಪಂದಿಗಳ ಮುಕ್ಕಣ್ಣನ ಭಕ್ತ ರೆಂದು . . . ಕೊಂದಾಡುತಿರುವೆ ನೀ ಬಸವ (ಬಸ್ಕಾಚ ೯-೬೦) ; ಬಯಸಿಬಿನಿಂದ ತಿವಿರಿ ಆತನ ಮುಕುಳಿಗೆ, ಆವನ ಗುಟಿಲುಸ್ಸರ ಸ್ವಲ್ಪ ಕೇಳೋಣ (೩೦ಪ್ರ. ೩೨೦). 'ಪ್ರಕುಳಿ' ಪರಾ. [?]

ಮುಕುಳಿತ 'ಮುಕುಲಿತ' ನೋ.

ಮುಕುಳಿತಕರ 'ಮುಕುಲಿತಕರ' ನೋ.

ಮುಕುಳಿತಹಸ್ತ (ನಾ). ೧.=ಮುಕುಲಿತಕರ : ಎದ್ದು ಮುಕುಳಿತ ಹಸ್ತಗೂಡಿ ರಾಮಾಚಾರ್ಯರೊಲ್ದು ವಂದಿಸಿಯುನ್ನತಾಸನವನಿಕ್ಕೆ . . . ಶಂವಿಕರ್ಷಾಚಾರ್ಯರ ಕ್ಷೇಮಮಂ ಬೆಸಗೊಂಡು (ಬಕಾಪ್ರ. ೬-೩೬). ೨. ಕೈಮುಗಿದಿರುವವನು : ಸಾಷ್ಟಾಂಗ ದಂಡಪ್ರಣಾಮಂಗಂ ಮಾಡಿ ಮುಕುಳಿತಹಸ್ತನಾಗಿ ನಿಂದಿರ್ದ ನಿಜರಿಷ್ಯನಂ ನೋಡಿ (ಜಾಪಾಗು. ೬-೦೦).

[ಸಂ. ಮುಕುಲಿತಹಸ್ತ]

ಮುಕುಳಿತಾಂಜಲಿ 'ಮುಕುಲಿತಾಂಜಲಿ' ನೋ.

ಮುಕುಳಿಸು (ಕ್ರಿ). ೧. ಮೊಗ್ಗಾಗು ; ಮೊಗ್ಗು ಬಿಡು : ಮುಕುಳಿಸಿ ತಿಲರೆಳಸಿದ ಚಂಪಕ ಮುಕುಳದ ಚಿಲ್ವನೆನೆವ ಲಸಿತಸ್ವಾಭಾವಿಕನತಮಂದೋ ಚ್ಚಾಪ್ರಸಪ್ರಕರ್ಷನಾಸಾವಿಳಸಮಾ ನರ್ತಕಿಯಾ (ಅಣಾಪ್ರ. ೪-೦೦೬). ೨. (ಕಣ್ಣಿನ) ಮುಚ್ಚು : ಮುಚ್ಚಿಕೊಳ್ಳು : ಆತನ ಕುಡುವಿಲ್ಲ ಜೀವಡೆಗೆ ಬಿಗುರ್ತಂತೆ ಕಣ್ ಮುಕುಳಿಸಿದವು (ಕಾದಂಬಾ- ೬೬೬) ; ಮೊದಲೆವೆಗಳನು ಮುಕಳಿಸೆನ್ನ ಸಿರಿಯೇ ! ತೊದಲನ್ನು ನಿಲ್ಲಿಸೆನ್ನಯ ಹೊನ್ನ ಮುರಿಯೇ ! (ಕಂಪು. ೨೪-೦).

[ಮುಕುಳ (= ಮುಕುಲ) + —ಇಸು]

ಮುಕುಳೀಕೃತ (ಗು). ೧. (ಮೊಗ್ಗಿನಂತೆ) ಮುಚ್ಚಿರುವ ; ಜೋಡಿಸಿದ ; ಮುಗಿದ : ಸುಬಳಧರಾಧೀಶ್ವರಂ . . . ಸಮುದಾಯಮಮಂ ಬಂದಿಸಿ ಸಮುಚಿತೋದ್ದೇಶವಾಸನದೊಳ್ ಕುಳ್ಳಿರ್ದು ಮುಕುಳೀಕೃತ ಕರಕಮಲಯುಗಲನಾಗಿ (ಸುಕಾಪ್ರ- ೪-೨೪ ಪ). (ನಾ). ೨. (ಮೊಗ್ಗಿನಂತೆ) ಮುಚ್ಚಿಕೊಂಡಿರುವುದು ; ಮುಕುಳೀಕೃತಂ ಲಲಿತ ಮಧುರಂ ಲಜ್ಜಾಳೋಳಂ ಸ್ಮರಾಕುಳಿತಂ ಮನಂ ದಳಿತಮಾವಸನ್ಮುಗ್ಧಂ ಸ್ನಿಗ್ಧಂ ವಿಳೋಕನಮೋಪಲಾ (ಪಂಕಥಾ- ೪-೭೭). [ಸಂ. ಮುಕುಲೀಕೃತ]

ಮುಕುಟು 'ಮುಕ್ಕುಟಿ₁' ನೋ.

ಮುಕೂಡಲ್ 'ಮುಕ್ಕೂಡಲ್' ನೋ.

ಮುಕೋಪು 'ಮೋಕೂಫ್' ನೋ.

ಮುಕ್ಕ₁ (ನಾ). (ಮಣ್ಣು ಮೊದಲಾದುವನ್ನು) ಮುಕ್ಕುವಂಥದು : 'ನೆಲಮುಕ್ಕೆ', 'ಮಣ್ಮುಕ್ಕೆ' ಪರಾ. [ಮುಕ್ಕು₁ + —ಅ]

ಮುಕ್ಕ₂ (ನಾ). ಅಂಗಹೀನನಾದವನು ; ಊನ ಹೊಂದಿದವನು ! ಮೋಟನಂ ಮುಕ್ಕನಂ ಕೀಳುಜಾತಿಯನು ಪುರುಳಿದ ಮೆಯ್ಯಾದೊಡಂ ಬೇಳಿ ಬೆಲೆಯಿತ್ತೊಡಪಮಂ ಕಾಮುನೆಂಬ ದುಶ್ಶೀಲರುರು ಕಣ್ಗೆಸೆದರು (ಪಚಾಪ್ರ- ೪-೪೫). [ಮುಕ್ಕು₂ (<ಮುಜ್ಜಕು) + —ಅ].

ಮುಕ್ಕ₃ ಮೂರುಕ, ಮೂರ್ಕ (ನಾ). ತಿಳಿಗೇಡಿ ; ಅಜ್ಞ ; ಮೂಢ : "ಮುಕ್ಕ — ಮೂರ್ಖ = ಬುದ್ಧಿಹೀನ" (ಕರ್ನಾಕೋ. ೩೬) ; ನಾನ್ ಮೆಚ್ಚೈನ್ ಇಲ್ಲದಾಸೆಗೆ ಕಿರ್ಚು ಕಾಯಿಸುವ ಮುಕ್ಕನವ್ (ಕರ್ನಾಕಾ. ೦೯-೪೦೦) ; ಈ ಮುಕ್ಕ ಸನ್ಯಾಸಿಯೊವರೆ ಬಟ್ಟೆಗೆ ಬಣ್ಣ ಕೇಡು (ಪುಶ್ರೀ. ೦೦). **ಮೂರುಕ** : ಕಾಮಿನಿಯರುಗಳಾರು ಕೆಲಬರು ಕಾಮಿಕವ ಕಾಮಿಸುವರೆಲ್ಲರೆ ಶಾಮುಸದಿನಾ ಮೂರುಕರು ಪೂಜಿಸಿದ ಪೂಜೆಗಳ ಪ್ರೇಮದಿಂದೊಡಬಡುವರು (ಭಾಕಾಗಾ. ೩-೨೩) . **ಮೂರ್ಖರ್** : ಬಲ್ಲಂಗ ಮೂರ್ಖರ್ಗಿಂಗಾಪದವ ನೋರ್ಪ ಡವಂ ಜವದೊಳ್ ಮಾರ್ಕ್ಕೋಲ ಭೈರವಂ (ವಕ- VI. ೫೯ಕಾ- ೧೨-೨೦ ; ಕ್ರ. 1060 ಗ). [<ಪ್ರಾ. ಮುಕ್ಖ /ಸಂ. ಮೂರ್ಖ]

ಮುಕ್ಕಂಡುಗ 'ಮೂಗಂಡುಗ' ನೋ.

ಮುಕ್ಕಂಡೆ (ನಾ). (ಕರಾ) ಹಾಳು ; ನಾಶ: ಮೂರಾಬಟ್ಟೆ : ಮೂವರು ಹೋದ ಕೆಲಸ ಮುಕ್ಕಂಡೆ (ಮೂರಾಬಟ್ಟೆ) (ಕ್ರಮಾಂಶ. ೩೩). [?]

ಮುಕ್ಕಂದಿ (ನಾ). ಮೂರುವರಂಷಗಳಿಗೊಮ್ಮೆ ಕರುಪಾಕುವ ಹಸು : "ಮುಕ್ಕಂದಿ _ ಮೂರುವರುಷಕ್ಕೆ ಈಯುವ ಆಕಳು" (ಶಾಸಕೋ. ೩೦). [<ಮೂಱು + ಕಂದಿ]

ಮುಕ್ಕಂಧಾಯ 'ಮೂಗಂದಾಯ' ನೋ.

ಮುಕ್ಕಟ, ಮುಕ್ಕಟಿ, ಮುಕ್ಕೆಟ್ಟ, ಮುಕ್ಕಟ್ಟುತ (ಅ). ೧. ಮುಂಜೆ ; ಪೊದಲು : ಪೂರ್ವಭಾವಿಯಾಗಿ ; ಮುಂಜಿತವಾಗಿ : ಈ ಪಿರಂಗೇರು ಒರೋ ಮುಕ್ಕಟ ಹೀಂಗೇ ಇರತಿತ್ತಂತ (ಶಾಪಾಶಾ. ೦೬೨). ೨. ಮುಂಭಾಗದಲ್ಲಿ ; ಪೊದಲಿನಲ್ಲಿ : ಎತ್ತು ಜತ್ತಗಿ ನುಂಗಿ ಭಕ್ತ ಬಾನವ ನುಂಗಿ ಮುಕ್ಕಟ ತಿರುಪೊ ಅಣ್ಣನ ಮೇಳಿ ನುಂಗಿತ (ಕಂಕ. ೨೯-೦೪). **ಮುಕ್ಕೆಟ** : ೧. ನೀ ಬರುವ ಮುಕ್ಕಟಿ ಈ ಮನೆಗೆ ಬಂದೀನಿ ಅವ್ವಾ ! (ಮುಕ್ಕಮು. ೩೬). **ಮುಕ್ಕಟ್ಟ** : ೧. ಅಡರ ಬಾಯಿಸ್ತಾ ಮುಕ್ಕಟ್ಟ ಪವಾಡಿದ್ದು ಬ್ಯಾಜೇತನ ಆತಿಲ್ಲೂ ಆಜಾರೆಪ್ಪ ? (ಗ್ರಾಹಾಡಾ. ೦೮೩) ; ಪಾವಳ್ಳ ಬಿಟ್ಟು ನಾ ಎಲ್ಲೂ ಹೋಗಾಗಿಲ್ಲಾ ಅಂತ ಅವರು ಮುಕ್ಕಟ್ಟ ಹೇಳಿದ್ದರೀ (ಗ್ರಾಹಾಡಾ. ೩೦೬). **ಮುಕ್ಕಟ್ಟುತ** : ೧. "ಮುಕ್ಕಟ್ಟು-ಮೊದಲು, ಮೂರುಗಂಟು, ಘಂಂಭಾಗ" (ಶಾಪಕೋ. ೩೦). ೨. ಮುಂಭಾಗಕ್ಕೆ ; ಮುಂಚಕ್ಕೆ ; ಮುಂದುಗಡೆಗೆ : ಮೂರು ಹಾಡಿನ ಮೂಳೆ ಮುಕ್ಕಟ್ಟು ಬರಬೇಡ (ಹಕ್ಕ. ೬೬) ; ರಥವು ಓಡುವಾಗ ಮುಂಜೋಲಿ ಇರುತ್ತದೆ ; ಆದರಿಂದ ಮುಕ್ಕಟ್ಟು ಹಾರಿಕೊಂಡರೆ ಬೊಕ್ಕಟೋರ್ಲ್ ಬಿದ್ದು ಬಹಳ ಪೆಟ್ಟು ತಾಗುವುದು (ಮುಂಂಜಾ. ೪-೬೨).

[<ಮುನ್[1]]

ಮುಕ್ಕಟಿ 'ಮುಕ್ಕಟ' ನೋ.

ಮುಕ್ಕಟ್ಟ 'ಮುಕ್ಕಟ' ನೋ.

ಮುಕ್ಕಟ್ಟು[1] (ನಾ). ಮುಂಭಾಗ ; ಮುಂದುಗಡೆ : ಮುಕ್ಕಟ್ಟಿಗೆ ಎಚ್ಚ್ ದುನ್ನೊತ್ತಿಕೊಳ್ಳುವುದರ ಗುಣ (ಶಕ್ಕ. ೩೧) ; ಹಡಗಿನ ಮುಕ್ಕಟ್ಟಿನಲ್ಲಿ ಗಡುತರವಾದ್ದೊಂದು ಕಬ್ಬಿಣಸರಪಳಿಯು ಇರುವುದು (ಮುಂಂಜಾ. ೩-೦೦೩). 'ಮುಂಗಟ್ಟು' ಪರಾ. [<ಮುನ್[1] + ಕಟ್ಟು[2]]

ಮುಕ್ಕೆಟ್ಟು 'ಮುಗ್ಗೆಟ್ಟು' ನೋ.

ಮುಕ್ಕಟ್ಟುಣ 'ಮುಕ್ಕಟಿ' ನೋ.

ಮುಕ್ಕಡಕ 'ಮುಕುಂಡಕ' ನೋ.

ಮುಕ್ಕಡಪ್ಪು (ನಾ). ಮೂರು ಹಾಯ್ಗಡಗಳನ್ನುಳ್ಳುದು : ಮೂಡ ಮುಕ್ಕಡಪ್ಪಿನ ಹೊಳೆ ತೆಂಕಯಿಂಞಯ ಹೊಳೆ ಪಡುವ ಪುಳಕಳಿಯುವ ಹೊಳೆ ಬಡಗ ಬಲಿಮೆಯ ಹೊಳೆ ಈ ನಾಲ್ಕು ಹೊಳೆಗಳ್ಗನು . . . ದೇವರ್ಗ ಮಾಡಿಕೊಟ್ಟ ಧರ್ಮ ಕ್ಷೇಮದ ವಿವರ (ಪಾಶಾ. ೪. ೧೦-೬: 1587). [< ಮೂಱು + ಕಡಪ್ಪ೦ (< ಕಡಪು[2])]

ಮುಕ್ಕಡಲೆ (ನಾ). ಕಡಲೆಯ ಮಟ್ಟು : ಸೇವಗೆಯ ಪಾಯಸ, ಮುಕ್ಕಡಲೆಯ ಹುಗ್ಗಿ, ಹಿಂಡಿಯ ಕಜ್ಜಾರಿ, ಆಲಸಂದೆಯ . . . ಕಾಣಿಕೆ ಶಾಯೊಲ ಮಂತ್ರಸಮನ್ವಿತವಾಗಿ ಶಿರಾವಿಗೆ ಮೂರು ಸೂಳು ನಿವಾಳಿಸಿ (ಪಾಂಶಾ. ೦೩೯-೨). [ಮುಕ್ಕು[11] (<ಮೂಱು) + ಕಡಲೆ]

ಮುಕ್ಕಡಿ[1] (ನಾ). ೧. ಮೂಗು ಕಡಿದುಹೋಗಿರುವಿಕೆ ; ಮೂಗಿಲ್ಲದಿರುವಿಕೆ. ೨. ಮೂಗು ಕಡಿದು ಹೋದವನು ; ಮೂಗಿಲ್ಲದವನು : "ವಿಗ್ರಃ, ವಿಗತನಾಸಿಕಃ — ೨ ಮೂಗಿಲ್ಲದವನು, ಮುಕ್ಕಡಿಯವನು" (ಸಹ್ಯಾ. ೦೮೮) ; ಮೂಗುಳ್ಳ ಮುಕ್ಕಡಿಗಳು ನಾವು . . . ಕಸ್ತೂರಿಯ ವಾಸನೆಯನ್ನು ನೋಡಿದೆವಾದರೆ ನಮಗೆ ಮೂಗಿನಲ್ಲಿ ನೆತ್ತರು ಬೀಳುವುದು! (ಶಾಸಿಕೋ. ೩೨). [< ಮೂಗು + ಕಡಿ[3]]

ಮುಕ್ಕಡಿ[2] (ನಾ). ಮೂರು ತುಂಡು. — ಭಾಗ : ವರದರ್ಶನಕುಳಿಕ ದಿನುದ್ಧರವಿಘ್ನಾತ್ವಾದ್ರಿಪಕ್ಷಮಂ ದ್ವಿರದೇಂದ್ರಂ ಧರದಿಂ ಖಂಡಿಸೆ ಮುಕ್ಕಡಿ ನಿರತಂ ತಾನಾಯ್ತು ದ್ವಿಸ್ಪರಂ ವಿಘ್ನಾತ್ವಂ (ಶಾಕ್ಕೇಕೃ. ೫-೪೨) ; ಕೂರಲುಗನಾ ಕರ್ಣ ಬರೆಸೆಲೆದಾರಿ ಹಿಂದಣಿಸೆಚ್ಚು ಪಾರ್ಥಕುಮಾರಕನ ಚಾಪವನು ಮುಕ್ಕಡಿಯಾಗಿ ಖಂಡಿಸಿದ (ಕುವಾಕೃಕ್ರಾ. ೬-೩೨) ; ಮುಂದಣಮುಂಗಲ್ ಗಳಲಿ ಮನುಜಗೋಚರವಾಗದವೊಲೀ ವನನಿಧಿಯ ಸೇತುವ ವಿಭೂಗಿವು ದೆನಲು ಬಿಲುಗೊಪ್ಪಿಂದ ಮುಕ್ಕಡಿಯಾಗಿ ಖಂಡಿಸಿದ (ಕೂಕಾ. ೬-೩೪-೦೭).

[< ಮೂಱು + ಕಡಿ[3]]

ಮುಕ್ಕಡಿಗೆಯ್ (ಕ್ರ). ಮೂರು ತುಂಡುಮಾಡು : ಮೂರು ಭಾಗವಾಗುವಂತೆ ತುಂಡರಿಸು : ಮಂತ್ರಮಂ ತಂತ್ರದಿಂ ತಜ್ಞದು ಪ್ರೌಸಮುಸಿಯ ವಿಶಿವಿಂಗಳಿಂ ಪಗೆಯ ಬಿಲ್ಲಂ ಫಲ್ಲಂ ಕಡಿವಂತು ಮುಕ್ಕಡಿಗೆಯ್ದು ಬೊಬ್ಬಿಜ್ದಂ (ಜಾಪಾಕ್ಕ.೦೧೩-೩೬). [ಮುಕ್ಕಡಿ[2] + ಕೆಯ್[1]]

ಮುಕ್ಕಣ್ಣ, ಮುಕ್ಕಣ್ಣ (ನಾ). ಮೂರು ಕಣ್ಣುಗಳು : ಎರಡು ತೊಡೆಗಳ ಮೇಲೆ ಪರಮನನುರಿಸಿ ಸತಿ ಅಭ್ಯಂಗನವನಾಚರಿಸುತ್ತೊಯ್ಯಸೆ ಮೂಗನೊತ್ತುತ್ತ ಕವಿಯನೂಡುತ್ತ ಒರೆಸುತಂ ಮುಕ್ಕಂಗಳಂ (ಜಾಪು. ೦೩-೯). 'ಮುಕ್ಕಣ್ಣ' ಪರಾ. **ಮುಕ್ಕಣ್ಣು** : ಗಂಗೆಯು ಧರಿಸಿ ಭೀತವಿಟ್ಟು ಫಲದೊಳು ಪಿಂಗದ ಪಾಕಕ್ಕಣ್ಣನಾಂತು ಅಂಗಜಹರನಂತಿಯಾರಾಮದೊಳಗಾ ತೆಂಗಿನ ಮರಗಳೊಪ್ಪಿದುವು (ಶಂಪ. ೩-೪೨). [< ಮೂಱು + ಕಣ್]

ಮುಕ್ಕಣ್ಣ (ನಾ). ೧. ಮೂರುಕಣ್ಣುಗಳುಳ್ಳವನು ; ತ್ರಿನೇತ್ರ ; ಶಿವ : "ಗೌರವನಿನಲ್ ಮುಕ್ಕಣ್ಣಂ" (ಶಕುಶ. ೨೪) ; ಶಾಮಹರನೊಳ್ ಮುಕ್ಕಣ್ಣನೊಳಖಿಳವೇದಶಾಸ್ತ್ರಕ್ರಮಂಮಂ ವಿಷ್ಣುವನೊಳ್ ಪಿತೃವನದೊಳ್ ಪ್ರೌಢವನೊಳದೆಂತು ಚಿತ್ರಮಿಟ್ಟಿ ಲತಾಂಗೀ (ಗಿಶ. ೩-೦೦೦)' ; ರಕ್ಕಸನೆರಡು ತೋಳ್ಗಳಿ ಕಡಿದಪೆನೆಂದು ಚಿಕ್ಕವ ಪುನರಪಿ ತುಡುಕೆ ಮುಕ್ಕಣ್ಣನೈತರು ತುಳುಯವೀರರಿಗದ್ದ ಹೊಕ್ಕನು ಪಥ್ಯಸ್ಥನಾಗಿ (ಪೋಚಕ. ೪೦-೬೨). ೨. [ಜೈನ] ಜ್ಞಾನದ ಮೂರನೆಯ ಕಣ್ಣುಳ್ಳವನು ; ಕೇವಲಜ್ಞಾನಿ ; ಜಿನ : ಲೆಕ್ಕವಿಲ್ಲದೆ ಬಂದೆ ರಕ್ಕಸನಾಯಕರಿಕ್ಕಿದ ಪೌಜುಗಳೆಲ್ಲವನು ಮುಕ್ಕಣ್ಣನ ಪರಿವಾರ ಕಾಣಾತ ಪಿತಿ ಮಿಕ್ಕು ನಡೆದುದಿದಿರಾಗಿ (ತ್ರಿಪುಣಾ. ೦೯-೨೦೩) ; ಎರಡುಗಣ್ಣಿಂದ ಲೋಕವ ನೋಡಬೇಕು ತನ್ನಿರವ ಸುಜ್ಞಾನ ದೃಷ್ಟಿಯೊಳು ತಿರುಗಿ ನಿಟ್ಟಿಸಬೇಕು ಮುಕ್ಕಣ್ಣಗಲ್ಲದೆಲ್ಲರಿಗೆ ಒಹುದೆ ಸುವಿಸಿದ್ದಿ (ಶಕ ೩ ೩೭).

ಮುಕ್ಕಣ್ಣನರಸಿ = ಶಿವನ ರಾಣಿ ; ಪಾರ್ವತಿ : ಮುಕ್ಕಣ್ಣನರಸಿಯ ಬೀಳ್ಕೊಂಡು ರತಿದೇವಿ . . . ಬಂದು ಹೊಕ್ಕರು ಕುಸುಮಾವತಿಯ (ಪೋಚಕ. ೬-೪) ; 'ಮುಕ್ಕಣ್ಣನರಸಿಯಂಬೆ ಬಂದು ಧರೆಯೊಳಗೆ . . . ನಿರ್ವಾಣಪದವಿಯನಾಂತ ಮಾದೇವಿಯಕ್ಕನ ಪದಕ್ಕೆ ಶರಣು (ಪಾಪು. ೦-೦೩). [ಮುಕ್ಕಣ್ + — ಅ್ಕ]

ಮುಕ್ಕಣ್ಣವೈದ್ಯ (ನಾ). ಒಂದು ಬಗೆಯ ವಾದ್ಯ : ಮಕರತೋರಣ ಪಾಯಿಪುಟ್ಟಿ ಪವು ಕ್ಕಣ್ಣವೈದ್ಯ ಬಸವನ ಡ್ಕೆಕ್ಕೆ ನಂದಿಧ್ವಜ ಭೇರಿ ಡ್ಕೆಂಕ ಪಂಚವಾದ್ಯ ಮುಂತಾಗಿ ನವಂಸ್ಕರಿಸಿ ವಾದ್ಯಿಕ ಯಿದೆವೆ (ಜಿಕ. VI. ೩೬೪೮. ೦೦೯-೩೩; 1717). [ಮುಕ್ಕಣ್ಣ[1] + ವೈಜ್ಞ[1]]

ಮುಕ್ಕಣ್ಣು 'ಮುಕ್ಕಣ್' ನೋ.

ಮುಕ್ಕನಗಿಡು (ನಾ). ಒಂದು ಬಗೆಯ ಸಸ್ಯ : "ಕಿಣಃ—ಬೂದಿ, ಮುಕ್ಕನಗಿಡು" (ವಿಪಕೋ. ೩೩). [? + ಗಿಡು]

ಮುಕ್ಕಬ್ಬೆ (ನಾ). ಒಬ್ಬಾಕೆಯ ಹೆಸರು : ಆತನ ಪೆಣ್ಣಂತಿ ಮುಕ್ಕಬ್ಬೆ ಮಾಡಿಸಿದಳ್ (ಜಿ. VIII. ಸೊರಬ. ೪೦೬-೦೨ ; 951 ?).

[< ಮೊಕಾಂಬೆ]

ಮುಕ್ಕರ 'ಮುಕುರ[1]' ನೋ.

ಮುಕ್ಕರಿ ' ಮುಕ್ಕುಡಿ ' ನೋ.

ಮುಕ್ಕರಿಪೆ ' ಮೂಕರಿಪೆ ' ನೋ.

ಮುಕ್ಕರೆ ' ಮುಕ್ಕುಱಿ ' ನೋ.

ಮುಕ್ಕಲ್ (ನಾ). ಒಂದೇ ಎಡೆಯಲ್ಲಿ ಮೂರುಬೆಳ್ಳುಗಳು ಸೇರಿರುವ ಪ್ರದೇಶ : ಅನ್ನ ಪೋಗಿ ಕಲ್ಕುಪ್ಪೆಯ ಅನ್ನ ಪೋಗಿ ಮುಕ್ಕಲ್ಲಿ ಪೋಗಿ ಅಡವಳಿಕೆಱಿಯ ಪಡುವಣ ಖಿಡಗೋಡೆ ಏರಿಯ ಮೇಗೆ (ಪಿ. XVI-೫೪೫೩. ೦೯೦-೬೯; ೫೦. ೨೦೦). [< ಮೂಜು + ಕಲ್ ೨]

ಮುಕ್ಕವಲು ' ಮೂಗವಲ್ ' ನೋ.

ಮುಕ್ಕಳಿಸು ' ಮುಕ್ಕುಳಿಸ್ ' ನೋ.

ಮುಕ್ಕಳೆ (ನಾ). ಮೂರುಬಣ್ಣಗಳಿಂದ ಕೂಡಿದ ಕಾಂತಿ-ಹೊಳಪು : ಥಳಥಳಪ ಪೊಂಬಟ್ಟೆ ಪಟ್ಟಾವಳಿಗಳನು ತಾನುಟ್ಟು . . . ಉಳಿದ ಗೋವರಿಗೆಲ್ಲ ಸುಮಾಂಬಳಿರ ಸಾಲಿಯ ಚಂದ್ರಿಕೆಯ ಮುಕ್ಕಳೆ [ಪಾಂಡ. ೪] ದು ಮಸ್ಮಮಾತ್ರ ಹೊಕ್ಕನು ಮತ್ತೆ ಪಟ್ಟಣವ (ಕಉಕ್ರ. ೬-೫೬).

[< ಮೂಜು + ಕಳ್ಕೆ (= ಕಲ್ಕೆ)]

ಮುಕ್ಕಱಿಸು : ಮುಕ್ಕುಱಿಸ್ ' ನೋ.

ಮುಕ್ಕಾಂ, ಮಕಾಂ, ಮುಕ್ಕಾವು, ಮೊಕಾಂ, ಮೊಕ್ಕಾಂ, ಮೊಕ್ಕಾವು, ಮೊಕ್ಕಾವು, ಮೊಖಾವು (ನಾ)- ತಾತ್ಕಾಲಿಕವಾಗಿ ತಂಗುವಿಕೆ,- ಬೀಡುಬಿಡುವಿಕೆ ; ಬಿಡದಿ ; ಶಿಬಿರ ; ಠಾಣ್ಯ : ಗಿರಗಾಂವ ನಿವಾಸದಿಂದ ನಾವು ನಮ್ಮ ಮುಕ್ಕಾಂ ಕಿತ್ತಿದ್ದೇವೆ (ಕ್ಕಗೂಲ. ೩೬); ನನ್ನ ಮುಕ್ಕಾಂ ಇದ್ದ ಊರಿನಿಂದ ಮಾವನ ಮನೆ ಸಮೀಪ ಇತ್ತು (ಪಂಮಶಿ. ೦೦೪) ; ಡಾಕ್‌ಬಂಗಲೇದಾಗೆ ಈ ಸಾವನ ಮುಕ್ಕಾಂ ಇತ್ತು (ದೀಹಕ. II, ೦೭). **ಮಕಾಂ** : ಜಂಸಪಟ್ಟಿಣದ ಗಿಡದಲ್ಲಿ ತಂದು ರಘುಜೀಜಂಗಲ್ ತಿರುಗಿಸುತ್ತಾ ಧಣಿದು ಬಲ್ಲ ಮಕಾಂ ಮಾಡಿ (ಹ್ಯಪ್ರ. ೪೬). **ಮುಕ್ಕಾವು**: ಬೆಂಗಳೂರು ಮುಕ್ಕಾವಿನಲ್ಲಿ ಕೆಲವು ದಿವಸ ಶಿವಪೂಜಾನಂದಲೋಲರಾಗಿರುತ್ತಿರಲು (ಗಃಚಿತ. ೦೭); ಒಂದು ಅನಪೇಕ್ಷಿತ ಕಾರಣಕ್ಕಾಗಿ ನನ್ನ ಇಲ್ಲಿಯ ಮುಕ್ಕಾವನ್ನು ಅರ್ಧಕ್ಕೇ ಮುಗಿಸಬೇಕಾಗಿದೆ (ಹೊಸ್ತ: ೦೬೨). **ಮೊಕಾಂ** : ಪ್ರಜೋತ್ಪತ್ತಿಸಂವತ್ಸರದ ಮಾರ್ಗಸಿರ ಬ ೧ ಲು ಮೊಕಾಂ ಬೆಂಗಳೂರು ಬಿದು ಸೂರಪ್ಪ ಮುಂಸಿ (ಪಿ. VI, ೫೦೬. ೪೯-೫೨; 1811). **ಮೊಕ್ಕಾಂ** : ಇಂಗ್ಲಿಷ್‌ಕಂಪನಿಕ್ಕಾವಲ್ರಿಯ ಪದ್ಧತಿಬೆಂತೆ ಏರ್ಪಟ್ಟು ೫೦೦ ಮಂದಿ ಸವಾರರು ಕ್ಲೋಸ್‌ಪೇಟೆಯಲ್ಲಿ ಮೊಕ್ಕಾಂಮಾಡಿದ್ದರು (ಪಃಚಾಪಂ. II. ೪೬); ದೇರಿಯ ಮನೆಯಲ್ಲಿ ಅಧಿಕಾರಿಗಳ ಮೊಕ್ಕಾಂ (ಕಾವೀರ. ೦೨೨); ಅಲ್ಲನ ಚ್ಯೂ ಇನ್‌ಸ್ಪೆಕ್ಷನ್ ಲಾಸ್ಟಿನಲ್ಲೇ ಮೊಕ್ಕಾಂ ಮಾಡಿದೆ (೪೦೫. ೩೩೩). **ಮೋಕ್ಕಾವು** : ಏಳ ಸುಬ್ಬರಾವ ಮುನಸು ಹಜೂರಪ ಮೋಕ್ಕಾವು ನಂಜನಗೂಡ ಶಾಲ್ಲೇಯೂನಾ ಕಂಟೆರಾಯಿ ಬಿದುವವರಾದ ಪ್ರಕಾರಾ ಜೋಡಿ ತಗೆದುಕೊಂಡು (ಪ್ಯಕಾ. ೦೯೨೪, ೧೨-೨೩; 1813). **ಮೊಕ್ಕಾವು** : ನಮ್ಮ ಹಿರಿಯರವರು ನಮ್ಮ ಅಜ್ಜಯ್ಯನವರ ಕೂಡೆ ಜಗಳ ಮಾಡಿ ಜೋಸ್ಪೇರವ ಮೊಕ್ಕಾವಿನಲ್ಲಿ . ತೀರಿಹೋದರು (ಜಃ:೦೬೯. ೩೨); ಪಟ್ಟುಟ ಕಮಿಷನರು . . . ಒಂದು ಜವಾನುಂದಿ ಮೊಕ್ಕಾವನ್ನು ಕದಬಹಳ್ಳಿಗೇ ಹಾತಿದರು (೫೫೯೬. ೦೫೫). **ಮೊಖಾವು** ; ಅವಳು ಅಲ್ಲೇ ಇದಾಳೆ, ಊರುತೇರಿ ಬಿಟ್ಟು ಅಲ್ಲೇ ಮೊಖಾವು ಅಂದ (ಕಂಗೂಲ. ೦೦೧೦).

[← ಅರ. ಪಾರ. ಮುಕಾಮ್; ಹಿಂ. ಮರಾ. ಮುಕಾದ್. ಮುಕ್ಕಾವು, ಪೋಕಾಮ್]

ಮುಕ್ಕಾಣಿ (ನಾ). ಮೂರು ಕಾಗ್ಗ ; ಹಣವ ಅರುವತ್ತುನಾಲ್ಕನೆಯ ಮೂರು ಭಾಗ ; ಕಾಣಿಮ ಹಾಕಿ ಮುಕ್ಕಾಗೆಯನಜಸುವನಂತೆ ಒಂದ ಬಿಟ್ಟು ಒಂದ ಪಿಡಿದಿಹೆನೆಂಬ ಸುದೇಹಗೆಕೆ ಲಿಂಗಾಂಗ (ಪ್ರಚಿಕಾಮ. ೩೩-೨೭); ನಾಲ್ಕು ವೀಸ ಮುಕ್ಕಾಣಿ ಧಣಸುತೇಕೊಪ್ಪುವಂತಿರ್ದುದಕ್ಕಾಧಾರದಿಂದಂ ಬೇರು ನೀಂ ಭಾವಿಸಬೇನತಿ ಮುತ್ತಾನರಲ್ ರಾಗದಿಂದಂ (ಣಃಕ್ಕ. ೫೪ ೪).

[< ಮೂಜು + ಕಾಣ್ ೨]

ಮುಕ್ಕಾಮು ' ಮುಕ್ಕಾಂ ' ನೋ.

ಮುಕ್ಕಾಲ್ - ಮುಕ್ಕಾಲು ೧ (ನಾ). ೧. ಮೂರುಸಾಲು:- ಪಾದ : 'ಮುಕ್ಕಾಲ್ವಾಡು' ಪರಾ. **ಮುಕ್ಕಾಲು** ೨ : ೨. ಮೂರುಕಾಲುಃ 'ಮುಕ್ಕಾಲುಮಣೆ' ಪರಾ. ೩. ಮೂರುಕಾಲುಗಳುಳ್ಳ ಮಣೆ. -ಪೀಠ ; ಮುಕ್ಕಾಲಿ ; ತ್ರಿಪಾದಿ : ಎಂಜಿನಿಯರನ್ನು ಕರೆದುಕೊಂಡು ಹೋಗಿ ಪ್ಲಾನೆ ತೋರಿಸಿದ್ದಾಯಿತು. ಅತ ಟೇಪು. ಮುಕ್ಕಾಲು ಮುಂತಾದ್ದೆಲನ್ನೂ ಕುದಿರಲಿಲ್ಲ (ಹೀಸಕ್ಷ. ೩೬).

[< ಮೂಜು + ಕಾಲ್ ೨]

ಮುಕ್ಕಾಲಟ್ಟಿ (ನಾ)- ದೇವಸ್ಥಾನದ ಪರಿಚಾರಕರು ವಾಸಿಸುವ ಹಟ್ಟಿ : ಕುಂದಾಪುರದ ಪೊಳಗಣ ಕುಂದೇಶ್ವರದೇವರ ಸನಿಧಿಯಲ್ಲೂ ಪೂರ್ವದಲ್ಲೂ ಪೂರು ಜಗತ್ತು ಅದ್ದಿಕಡಲೂ ಕುಡಾಕೂರ ದೇವಣಸೇನಬೋವ ಮಾಡಿಸಿದ ಧ(ಂ)ರ್ಮವೂ ನೆಡೆಯಬೇಯಿರಲಾಗಿ ಆ ಪರಿಸಿದ್ದದೇವಪೈಡೆಯರು ಕುಂದಾಪುರದೊಳಗಣ ಗ್ರಾಮ ಜಗತ್ತು ಮುಕ್ಕಾಲಟ್ಟಗ[ಳ]ನು ಕರಸಿ ವಿಚಾರಿಸಿ (ತಾಶಾ. IX - ii, ೫೯೦-೦೩; 1425). [?]

ಮುಕ್ಕಾಲು ೧ ' ಮುಕ್ಕಾಲ್ ' ನೋ.

ಮುಕ್ಕಾಲ್ಕು (ನಾ). ೧. ನಾಲ್ಕನೆಯ ಮೂರು ಭಾಗ (೩/೪) : ಮುಕ್ಕಾಲು ಮೊಗ ಕಾಣುವಂತೆ ಮೋಡುತ್ತ ತನ್ನ ಕರದೊಳ್ ಕಪ್ಪೋಲ ವನ್ನಿಟ್ಟು (ತಾಗಂರಾ. ೨೦೪-೦೫); ಶ್ರೀವಾಂಜನಾತನು ಸಂನ್ಯಾಸಿಯಾತನು ಎಂದೆಲ್ಲರುಗ್ಗಡಿಸಿರಲು ಒಕ್ಕಾಲು ಮಾತ್ರವೆ ವಿಟವೆಂಬು ತಿಳಿ ನೀನು ಸುಳ್ಳಿನ ಕಂತೆ ಮುಕ್ಕಾಲು (ಜಾಜಾಪ. ೨೦೩-೩೩); ಸ್ವಲ್ಪ ಸರಿ ಎಂದರೆ ಅರ್ಧ ಮುಕ್ಕಾಲು ಕೊಡುವ ಅನಿವಾರ್ಯವೇ ಇಲ್ಲ (ಕಚ್ಚತ. ೩೩೨). ೨. ಒಂಬತ್ತು ಕಾಸು ; **ಮುಕ್ಕಾಲಾಣೆ** : ಮಂಗಳೂರು ನಕ್ಕ ಒಂದು ಮುಕ್ಕಾಲಿನದ್ದು ಮರಲುಬೇಡ (ಜಗಗ ೩೫). ೩. ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಮೂರುಕಾಸಿನ ಒಂದು ತಾಮ್ರದ ನಾಣ್ಯ : (೬).

ಮುಕ್ಕಾಲಾಣೆ = ಒಂಬತ್ತು ಕಾಸಿನ ನಾಣ್ಯ : ನನಗೆ ನನ್ನ ತಾಯಿ ಮುಕ್ಕಾಲಾಣೆ ಕೊಟ್ಟು ಕಳಿಹಿಸಿದರು (೫೩೬). **ಮುಕ್ಕಾಲುಪಾಲು, ಮುಕ್ಕಾಲುಮೂರುಪಾಲು** = ೧. ಮುಕ್ಕಾಲುಭಾಗ ; ನಾಲ್ಕರಲ್ಲಿ ಮೂರು ಭಾಗ ; ಬಹುಭಾಗ : ಮುಕ್ಕಾಲುಪಾಲು ಇವರೆಲ್ಲಾ ಊರೋಗೆ ರೈತರ ಮನೆಯಲ್ಲಿ ಜೀತಗಾರರಾಗಿದ್ದರು (ಹುಬ್ಬಕ. ೭೫); ಮಾನವನ ಮುಕ್ಕಾಲುಮೂರುಪಾಲು ಸಾಮಾನ್ಯವ್ಯವಹಾರವು ಪ್ರತ್ಯಕ್ಷ, ಅಪ್ರತ್ಯಕ್ಷವಾಗಿ 'ಆಹಾರನಿದ್ರಾಭಯಮೈಥುನಂ ಚ' ಎಂಬ ಸೂತ್ರದಲ್ಲಿ ಪವಣಿಸಿಹೋಗಿದೆ (ಜಾಪೂ. ೨೭). ೨. ವ್ಯಾಯಶಃ; ಬಹುಶಃ : ಮುಕ್ಕಾಲುಪಾಲು ಈ ಹೊತ್ತಿನಲ್ಲಿ ಅದರು ಮನೆಯಲ್ಲಿರುವುದಿಲ್ಲ (೫೫೬). **ಮುಕ್ಕಾಲುರೂಪಾಯಿ** = ಒಂದು ರೂಪಾಯಿಯಲ್ಲಿ ನಾಲ್ಕನೆಯ ಮೂರು ಭಾಗ; ಹನ್ನೆರಡಾಣೆ : (೬)- **ಮುಕ್ಕಾಲುವಾಸಿ** = ೧. ಬಹುಪಾಲು : ಅವರ ಪಾಯಿಲೆ ಮುಕ್ಕಾಲುವಾಸಿ ಗುಣವಾಗಿದೆ (೫೫೬). ೨. = ಮುಕ್ಕಾಲುಪಾಲು ೨ : ಅವರು ಮುಕ್ಕಾಲುವಾಸಿ ಇಂದು ನಮ್ಮ ಮನೆಗೆ ಬರಬಹುದು (೫೫೬).

[< ಮೂಜು + ಕಾಲು ೨ (< ಕಾಲ್ ೨)]

ಮುಕ್ಕಾಲುಮಣೆ (ನಾ). ಮೂರುಕಾಲುಗಳುಳ್ಳ ಮಣೆ.- ಪೀಠ : ಇದು ಸಾಹುಕ್ಕನೆಂಬ ಮುಕ್ಕಾಲುಮಣೆಯ ಮೂರು ಕಾಲು (ಜಾಪಾಣ. ೩೩).

[ಮುಕ್ಕಾಲು ೧ (< ಮುಕ್ಕಾಲ್) + ಮಣೆ ೧]

ಮುಕ್ಕಾಲ್ವಾಡು (ನಾ). ಮೂರುಪಾಡಗಳುಳ್ಳ ಹಾಡು ; ಮೂರು ಸಾಲಿನ ಗೀತೆ; ತ್ರಿಪದಿ : ಮುಂಬುಮುಕ್ಕಾದೀ ಮುಕ್ಕಾಲ್ವಾಡುಗಳ್

ನಿಲ್ಕೆ ಜೋಕೆಮುಂ ಬೌಕ್ಕಂಗೊಂಡು ಬಣ್ಣಿಗೆಯೋಳ್ ತುಂಬುವಾಡಂ ಪಾಡಿವೆಂಬುದುಂ (ಶಿಪು. ೬-೦೫೪ ವ); ಸಾಂಗತ್ಯವಾದರೂ ಈ ಮುಕ್ಕಾಲ್ಯಾಡುಗಳು(ಪ್ರಪದಿ) ಬೌಕ್ಕಂಗೊಂಡಾದುವೆಂಬುದನ್ನೂ ಅವನು ಸೂಚಿಸುತ್ತಿಲ್ಲ (ಶಾಹಿ. ೦೦೩). [ಮುಕ್ಕಾಲ್ + ಪಾಡ್ಯ]

ಮುಕ್ಕಿ (ನಾ). ಮೂರ್ಖಿಳಾದ ಹೆಣ್ಣು ; ಶಿಳಗೇಡಿ ಹೆಣ್ಣು : ಇದ್ದರಲ್ಲಿ ಸಹಸ್ರಸಂಖ್ಯೆಯ ಮಾದ್ದುಕುಟಿಲದ ಮಾಯಕಾತಿಯರಿದ್ದೆಸೆವು ಕವಿಗೊಬ್ಬಿಯರು ಮೂಳಿಯರು ಮುಕ್ಕಿಯರು (ಕಾರಾ. ೪-೨-೮೪).

[ಮುಕ್ಕ್ಯ + — ಇ]

ಮುಕ್ಕಿಸು (ಕ್ರಿ). ೧. ಪಲುಕುಪಂತೆ ಮಾಡು ; ಗಬಗಬನೆ ತಿನ್ನುವಂತೆ ಮಾಡು.— ತಿನ್ನಿಸು : ಹಕ್ಕಿಗಳು . . . ಕಾಳುಕತ್ತಿ ಹೆಕ್ಕಿ ಮರಿಗಳಿಗೆ ಮುಕ್ಕಿಸಿ ತವ್ಮ ಆಹಾರಕ್ಕಾಗಿ ಹೊಲ ಗದ್ದೆಗಳಿಗೆ ಹಾರಿಯೋಗಿದ್ದವು (ಕುಶಿ. ೦೨). ೨. (ಆಲಂ) ನುಂಗುವಂತೆ ಮಾಡು; ನಾಶಗೊಳಿಸು: ಅರಿಭೂಭೃದ್‌ಬಳಿಕಾಳ್ಪಂಡನೂಹೊಹೋ ಕೊಂದಿಕ್ಕೆಪಂ ಪೆಟ್ಟಿಪಂ (ಎಳ. VIII. ೫೧೮, ೦೦೯-೩೦: ೨೦೭೭). [ಮುಕ್ಕು$_{I}$ + — ಇಸು$_{3}$]

ಮುಕ್ಕಿಱಿ ' ಮುಕ್ಕುಱಿ$_{2}$ ' ನೋ.

ಮುಕ್ಕು$_{II}$ (ಕ್ರಿ). ೧. (ಕಾಳು, ಹಿಟ್ಟು ಮುಂತಾದುವನ್ನು ಬಾಯಿತುಂಬ ತುಂಬಿಕೊಂಡು) ಅವಸರವಸರವಾಗಿ ತಿನ್ನು ; ಗಬಗಬನೆ ತಿನ್ನು ; ಕಬಳಿಸು : "ಮುಕ್ಕು – ಖಾದನಮಿತೀಜೇ" (ಶಮೂಣಾ); ಪುಟಿ ಘನವಾಗಿ ಕೊಕ್ಕರಿಸಿ ಗುನ್ಗುರಿಯುಂ ಕೊಳೆ ಮುಕ್ಕಿ ಮಿಕ್ಕುದಂ ಕೆಲದವರ್ಗಿತ್ತು (ರಕಾಳ. ೬-೨೦೩). ೨. (ಆಲಂ) ನುಂಗಿ ನೊಣೆ ; ನಾಶಮಾಡು : ಇನ್ನುಮೆಲ್ಲಿರಂ ದುಮಸುತಸಂ ಸುರೇಂದ್ರಸುತಸುಂ ಪೊಸೆದೀಗಳೆ ಮುಕ್ಕಿ ತೋಜರೆ (ಕಂಕಥಾ. ೪-೭): ಆನೆದೀಜಗಾಡಾವರಿದೆಂಬವೋಲ್ ಪೊಸೆದು ಮುಕ್ಕರ್ ಸಾಲನೇ ಶಾಜರ್ಸ್ಗಿ ನಮ್ಮಂ ಗಂಡಾಳ್ತನವೇಷದಾಶ್ರಯಿಸುವಂ ಶ್ರೀಪಾದಮಿಲ್ಲಿ ಕೃಷ್ಣನಾ (ಜಗೂ. ೪-೧೩) ; ಈಕ್ಕಿಜಿಪ ಕೋಪಾಗ್ನಿ ದಳ್ಳಿಸಿ ದಿಕ್ಕುಗಳನ್ನಳ್ಳಿ ಜಿಯಿ ಲಕ್ಷ್ಮಣನಿಕ್ಕತಿಳುದಲಿ ಬಂದನಾ ಲಯಕಾಲದಲಿ ಜಗವ ಮುಕ್ಕಿ ಮೋದುವ ಮದಸಹರನವೊಲು (ತೋಣಾ. ೨-೩-೦೦).

[ದೇ.ಪ ತದಿ. ಮುಕ್ಕು, ಮೊಕ್ಕು; ತುಳು. ಮುಂಕ್ಕು; ತೆಲು. ಮೊಕ್ಕು]

ಮುಕ್ಕು$_{2}$ ' ಮೂಲುಕು$_{1}$ ' ನೋ.

ಮುಕ್ಕು$_{3}$ ' ಮುಜಿಂಕು$_{2}$ ' ನೋ.

ಮುಕ್ಕು$_{4}$ ' ಮುಜಿಂಕು ' ನೋ.

ಮುಕ್ಕು$_{5}$ (ನಾ). (ಉಕ) ೧. ಒಂದು 'ಸಾರಿ ಮುಕ್ಕುಳಿಸುವಷ್ಟು ದ್ರವ ; ಗುಟುಕು : ಮಾತ್ರೊಂದು ಮುಕ್ಕು ನೀರೇ ಹೆಚ್ಚಿಗೆ ಕುಡಿದು ಅಲ್ಲಯೇ ಕುಳಿತೆ (ಪೋಡಿಮು. ೦೦); ಇಲ್ಲಿ ಮುಕ್ಕು ನೀರಿಗೂ ಗತಿಯಿಲ್ಲ (ಸ್ವತಂ. ೪೬೪); ಮನೆಯಲ್ಲಿ ಒಂದು ಮುಕ್ಕು ಕೂಡ ನೀರು ಇರುವದಿಲ್ಲ (ಪಂಚಾ- ೨೨). ೨. ಮುಂಚ್ಚಿಯಲ್ಲಿ ಹಿಡಿಸುವಷ್ಟು ಪ್ರಮಾಣ ; ಬೇಸುವ ಕಲ್ಲಿನ ಕುಳಿಯಲ್ಲಿ ಹಿಡಿಸುವಷ್ಟು ಪ್ರಮಾಣ ; ಒಂದು ಹಿಡಿ : ಬೆಕ್ಕು ಮನೆಯೊಳು ಲೇಸು ಮುಕ್ಕು ಕಲ್ಲಿಗೆ ಲೇಸು (ಸರ್ವಜ್ಞ ೦೩೬೨); ಮುಕ್ಕು (ಒಂದು ಹಿಡಿ ಧಾನ್ಯ, ಬೀಸುವ ಕಲ್ಲಿನಲ್ಲಿ ಒಮ್ಮೆ ಹಿಡಿಯುವಷ್ಟು ಧಾನ್ಯ) ಮನ್ಯಾಗ ಮುಕ್ಕು ಜ್ವಾರ್‌ಕಲ್ಲ (ಸಾಮರ್ಥ. ೩೫೭) ; ಆದ ಮುಕ್ಕಿಗೆ ಶರಣು ಗೋದಿಕಲ್ಲಿಗೆ ಶರಣು (ಗಡಿ. ೦೩೭). [< ಮುಕ್ಕುಳ್ ?]

ಮುಕ್ಕುಗಳೆ (ಕ್ರಿ). ಒಡೆ ; ಭಿನ್ನಗೊಳಿಸು : ಭಂಗವಾಡು : ತಾಗಿ ವಜ್ರವ ಮುಕ್ಕುಗಳೆವಡೆ ಸಾಗರವ ಹೊಗಲೇಕೆ ಗಿರಿಗಳು (ಕುಣ್ಡಾರ್ಯ. ಪಾ. ೦೬-೩೭).

[ಮುಕ್ಕು$_{4}$ (< ಮುಜಿಂಕು) + ಕಳ್$_{1}$]

ಮುಕ್ಕುಗೆಲಸ (ನಾ). ಅಪೂರ್ಣವಾದ ಕಾರ್ಯ ; ಪೂರ್ತಿಯಾಗದ ಕೆಲಸ : ಈಗಿನ ಕಾಲದಲ್ಲಿ ಕಂಟ್ರಾಕ್ಟರ್‌ಗಳು ಬಹುಪಾಲು ಮಾಡುವುದೇ ಮುಕ್ಕುಗೆಲಸ (ದಾಪ). [ಮುಕ್ಕು$_{4}$ (< ಮುಜಿಂಕು) + ಕೆಲಸ]

ಮುಕ್ಕುಚಿಕ್ಕೆ (ನಾ)- ಒಂದು ಬಗೆಯ ಧಾನ್ಯ,— ಕಾಳು (?) : ಬಿತ್ತಿದರೆ ಬಿತ್ತುವವು ಮುಕ್ಕುಚಿಕ್ಕೆಯ ಕಾಳು ಮೊತ್ತ ರಕ್ಷನವ ಬಿತ್ತಿ ಮಾಡದಿರು ಹೊಲ ಹಾಳು (ಗಾ- ೩೦-೨); ಮುಂಕ್ಕುಚಿಕ್ಕೆಯ ಕಾಳನ್ಕೇನೊ 'ಶ್ರೀ'ಯವರು ಬಿತ್ತಿಬ್ಬಾರೆ (ಗೂಚ್ಚಾಗು. ೦೩೦). [?]

ಮುಕ್ಕುಟುಕ (ನಾ)- ಒಂದು ಬಗೆಯ ಪಕ್ಷಿ : ಮುಕ್ಕುಟುಕ ಮರಕುಟಿಗ . . . ಮೆಜುವರ್ದಪಜಿಳೊಪ್ಪಿದುದು (ಶಾಳ್ಕಥಾ. ೩-೨೩). [?]

ಮುಕ್ಕುಡಿ (ನಾ)- ೧. ತೊಂದರೆ ; ವಿಪತ್ತು : "ಮುಕ್ಕುಡಿ ಬೆನಲಬಗಡಕಿ ನಾವುಂ" (ಶಾಪಂ. ೪). ೨. ಹಾಳು ; ನಾಶ ; ಧ್ವಂಸ : ಏಳ ಪದಾತಿಯ ಮುಕ್ಕುಡಿಯ ಮಾಡಿದನು ರಣಮಾದದೆಬ್ಬಿನರಿ ರಾವು (ಕೆಸರಾ- ೬-೨೫-೩೭). [?]

ಮುಕ್ಕುಡಿತೆ (ನಾ). ಮೂರು ಜೊಗಸೆ : ಶ್ರೇಯಾಂಸಂ . . . ನವ ವಿಧಪುಣ್ಯಾನಪ್ರಗಣಯುಕ್ತನಾಗಿ ಇಕ್ಷು ರಸ ಮಂ ಮುಕ್ಕುಡಿತೆಯಂ ಕೊಂಡಕ್ಷಯ ದಾನಮೆಂಬುದುಂ (ಶಾಶ್ರಿ. ೦೦-೫೦ ಪ); ಈ ಮಂತ್ರಮಸೋ ಮಂತ್ರಂಬುಜಸಖನುವೆಯಥದಲ್ಲಿ ಮುಕ್ಕುಡಿತೆಯುಮಂ ಕೊಂಬುದು ಜಲಮಂ ಪೂಜೆಯದುಂ ಬಾಜ(ಬಿ)ಸೆ ಪರರ ವಿದ್ಯೆಯಂ ಛೇದಿಸುಗುಂ (ಕಪಾಡ. ೨೪-೦೬). [<ಮೂಱು + ಕುಡಿತ]

ಮುಕ್ಕುದಿ (ನಾ). ಮೂರು ಕುದಿ ; ಮೂರು ಸಾರಿ ಕುದಿಯುಮಿಕೆ : ಅಳಗೆಮೋಕ್ಷಗಕ್ಷ್ಯಂ ಬಿಟ್ಟುವೆಗ್ಗರಿಸಿಯದ ಮುಕ್ಕುದಿಯು ಬರಿಸಿಕೊಂಡು ಇಳುಹಿ (ಸೂಪಶಾ. ೩-೩೨). [< ಮೂರು + ಕುದಿ]

ಮುಕ್ಕುಪ್ಪೆ (ನಾ)- ೧. ಮೂರು ಗುಡ್ಡೆ ; ಮೂರುರಾಶಿ.—ಒಟ್ಟಲು : ಹ್ರಸ್ವದ್ವಿತ್ವೆಂಗಳ್ಗೆ—ಮುಕ್ಕುಪ್ಪೆ . . . ಮುಪ್ಪರಿ, ಮುಮ್ಮುಜು (ಕವಿಗ. ೦೭೩ ಕ್ರಿಪೀ); ಮುಕ್ಕೊಡೆ. ಮುಕ್ಕೊಡಿ. ಮುತ್ತಬ್ಬೆ, ಮುಕ್ಕುಪ್ಪೆ (ಕರ್ನಾಪು. ೦೦೦ ಕ್ರಿಪೀ). ೨. ಜಮೀನಿನ ಉತ್ಪಶ್ಚಿಯನ್ನು ಮೂರುಭಾಗ ಮಾಡಿ ಒಂದು ಭಾಗವನ್ನು ಜಮೀನುದಾರನೂ ಎರಡುಭಾಗಗಳನ್ನು ರೈತನೂ ತೆಗೆದುಕೊಳ್ಳುವ ಒಂದು ವ್ಯವಸಾಯಕ್ರಮ : ಗಕ್ಕನೆ ಹಮ್ಮ ತಡೆದು ಗರ್ವವ ಮೈದುಂಕಿದ ಹಾಗಿರಲೀನಮುದು ಪಕ್ಕಲಿಗನ ದೆಸೆದಿಂ ಕೊಂಡರ್ಥಕೆ ಮುಕ್ಕುಪ್ಪೆಯ ಫಲವೆನಲಹುದು (ಕಿತ್ತೂ. IV, ೦೨-೨೦); ಮೊಕ್ಕುಪ್ಪೆ ಸಾಗುವಳಿ. ಮುಕ್ಕುಪ್ಪೆಪಾಲು (ಕರ್ನಾಪು. ೩೫೬). [< ಮೂಱು + ಕುಪ್ಪೆ$_{1}$]

ಮುಕ್ಕುರಿ ' ಮುಕ್ಕುಱಿ$_{2}$ ' ನೋ.

ಮುಕ್ಕುರಿಕ್ಕು$_{1}$ ' ಮುಕ್ಕುಱಿಕ್ಕು$_{1}$ ' ನೋ.

ಮುಕ್ಕುರಿಕ್ಕು$_{2}$ ' ಮುಕ್ಕುಱಿಕ್ಕು$_{2}$ ' ನೋ.

ಮುಕ್ಕುರಿಸು ' ಮುಕ್ಕುಱಿಸು$_{1}$ ' ನೋ.

ಮುಕ್ಕುರು ' ಮುಕ್ಕುಱು$_{1}$ ' ನೋ.

ಮುಕ್ಕುರುಕು ' ಮುಕ್ಕುಱಿಕ್ಕು$_{2}$ ' ನೋ.

ಮುಕ್ಕುವೋಗು (ಕ್ರಿ). ೧. (ಆಯುಧ ಮೊದಲಾದುವು) ಸ್ವಲ್ಪ ಮುರಿದು ಹೋಗು ; ಮುಕ್ಕಾಗು : ಬಾಳಂ ಕಲ್ಲ ಮೇಲೀಡಾಡಿದೊಡದು ಮುಕ್ಕುವೋದುದಂ ಕಂಡು ಕಡುಮೋದಂ (ಕಂಚಿಂ. ೬೭-೦೯); ವಿಷಾವಿ ನಂದಿಯಂ ಕೆಂಡು ಮುನ್ನಂ ತನ್ನಿಜಿಯ ಮುಜಿಪುದು ಕಿಜುಮುಕ್ಕುವೋದ ಬಾಳನೀಡಾಡಿ (ಕರ್ಣಾ. ೨-೪೬ ಪ); ಪೆರಿಂಗೊಯ್ಯನೆ ಮುಕ್ಕುವೋದಡೆ ಬಜಿಕ್ಕಾ ಲಿಂಗಮಂ ಮುಟ್ಟಿ ಪೂಜಿಸಲಾಗ (ಪಜಿ. ೯-೯). ೨. ಊನವಾಗು ; ಕುಗ್ಗು ; ನಾಶವಾಗು : ಓರೆವೋಗದ ಜಲಮುಮುಂ ಮುಕ್ಕುವೋಗದಳುರ್ಕುಮಂ ನೋಟಕರಜ್ಜಿಮಮೆಪ್ಪವರಿಂ ಪೊಲೆಟ್ಟಿಸುವೆನೆಂದು ತಜಿಸಂದು (ಕಾಂಶಿ- ೯-೪೬ ಪ); ಭಿಕ್ಷಾನ್ನಮುಕ್ಕುವಲ್ಲಿ ಸತಿಯಂ ಬೇಡಂದು ಕಕ್ಕೆತ್ತುವಂದಿನ ಸೊರ್ಕ್ಕಟ ಮುಕ್ಕುವೋಗಿ ಕಡಯೊಳ್ ಭೈಕ್ಷಕ್ಕೆವಕ್ಕಾದಿರೇ (ಪಜಿಪಾ. ೯-೨೩). [ಮುಕ್ಕು$_{4}$ (< ಮುಜಿಂಕು) + ಪೋಗು$_{1}$ (< ಪೋ$_{1}$)]

ಮುಕ್ಕುಳ್. ಮುಕ್ಕುಳು (ನಾ): ೧. ಬಾಯಿಯ ಒಳಭಾಗ ಮತ್ತು ಬಾಯಿ ತುಂಬ ತುಂಬಿಕೊಂಡ ನೀರು ಇತ್ಯಾದಿ ದ್ರವಪದಾರ್ಥ : ಜಲಧಿಯೊಳಿರ್ದಮರ್ದಿನ ಮುಕ್ಕುಳನುಗುಬುತ್ತಿಳಿಗೆ ಪಂದುದೆವಿಸಿ ಬಿಲಿನಸ್ಯಲನಭವಮಜಹುಳಲಾಜಲಮುಗುತಿರೆ ತುರಗರತ್ನ ಮೆಸೆದತ್ಸಾಗಳಂ (ಕಾಪಂಪು. ೪೫); ತಪ್ಪಿಂಧುಬಂಧದ ನೀರೆಲ್ಲಮನೊಂದೆ ಮುಕ್ಕುಳೊಳಿ ತಂದಾ ಮ್ನಯಂ ತೂರ್ದಿದಂ (ಪಗಾ. ೦೯-೬); ತೆಱವಿಂ ನೀಳ್ದಿಗವಾಕ್ಷಮಂ ತೆಱಿವ ನೀರಂ ಮುಕ್ಕುಳಿಕೊಳ್ ಕೀವಿಕೊಂಡೆಱಿವ . . . ಸಱಂಗಿಂ ಬೀಸುತಿರ್ಪೋಪರಬ್ಭಲುಲಂಪಂಗನೆಯರ್ಗೆ ಭಾಗವನದೇಂ ಮಾಡಿತ್ತೊ ರತ್ನಂತದೊಳ್ (ಪರ್ಶ. ೬-೨೨). ೨. ಬಾಯಲ್ಲಿ ನೀರನ್ನು ತುಂಬಿಕೊಂಡು ಶುಚಿಮಾಡುವಿಕೆ; ಮುಕ್ಕುಳಿಸುವಿಕೆ : ಗಂಡೂಷ : "ಗಂಡೂಷಃ, ಮುಖಪೂರಣಾ-ಈ ೨ ಮುಕ್ಕುಳಿ" (ಹಲಾಯು. ೦೩೦-೧೦೦); "ಮುಕ್ಕುಳೆನೆ ಗಂಡೂಷವ್" (ಜ್ಞಾಸಂ. ೭೦). **ಮುಕ್ಕುಳು** : ೧. ತುಳುಕುಪೊಡೆಮ್ಮೆಮೋರ್ಮುಡಿತೆಗಂ ತೆಗೆದೀಂಟುಪೊಡಾಗದೋದು ಮುಕ್ಕುಳಿಗೆನೆ ಸಾಲ್ದುದಿಲ್ಲ (ಪಗಾ. ೬-೦೬); ಮೊಗೆದುಂದ ಹೊಮ್ಮಿಬಂದ ಕಂಪಿಗೆ ಮೂಗೊಡ್ಡಿದ ಗುತ್ತಿಗೆ ಬ್ರಹ್ಮಾನಂದವಾಗಿ ಒಂದು ಮುಕ್ಕುಳು ಅದರಿಂದಲೇ ಕುಡಿದೇ ಬಿಟ್ಟನು (ಕುರಿಮು. ೫೦೦). ೨. "ಮುಕ್ಕುಳೆಸಲು ಗಂಡೂಷದಭಿಧಾನ" (ಕಶ. ೧೦). ೩. ತುಳುಕಿಸುವಿಕೆ : ಹೊರಹೊಮ್ಮಿಸುವಿಕೆ : ಮೇಲುಸುರೆ ಬಿಕ್ಕುಳಿಸೆ ಬಿಗುಮಿನ ತಾಳಗೆದು ನೀರುಗಳ ಮುಕ್ಕುಳಿನಾಲಿಗಳ [ಜಾಹಾಂ. ನಿರ್ದ್ರವದ ನೀರೊಗುವಾಲಿಗಳ್] ನರನಾಥ ತೊಡಪ್ಪಿದನು ಫಲುಗುಣನ (ಕುಪಾ. ೦೩-೦). [ದೇ.॥ ತುಳು. ಮುಕ್ಕುಲಿ, ಮುಕ್ಕುಳಿ]

ಮುಖವಸ್ತ್ರ (ನಾ)· ೧. ಮುಖವನ್ನು ಒರೆಸಿಕೊಳ್ಳಲು ಬಳಸುವ ಬಟ್ಟೆ ; ಮುಖಪಾವಡ : ಮುತ್ತಿನುರಿ ಭಕ್ತ ಚಾಮರ ಕುಂಚ . . . ವ್ಯಜನ ಮುಖವಸ್ತ್ರಮೆಶ್ತಿ ಬೀಸುವ ಧವಳಚಾಲಯು ಚಡಾಳವಿಕ್ಕಲದಿ ವತ್ಸರಿಸುತ (ಪಪೂಕೋ- ೪-೨೪); ಹಡಪ ಕನ್ನಡಿ ಹೂಜೆ ಕಾಳಂಜಿ ಮುಖವಸ್ತ್ರ . . . ಮಚ್ಚಧ್ವಜವಾಂತು (ಪಪೂಕೋ. ೪-೩೬). 'ಕರವಸ್ತ್ರ' ಪರಿ. ೨. (ಪ್ರತಿಮೊಪ್ರತಿಷ್ಠಾಪನದ ವಿಧಿಯಂತೆ) ಮುಂಭಾಗದಲ್ಲಿ ತೊಡಿಸುವ ಬಟ್ಟೆ (?) : ಅಬ್ಯಂಜ್ಯಪ್ರತಿಮೆಯಂ ಪಂಚಗವ್ಯಶುದ್ಧಿಯಂ ಮಾಡಿ ಸುಗಂಧಾನುಲೇಪನಂಗೆಯ್ದು ದರ್ಭೆಯಿಂದಲಂಕರಿಸಿ ಮುಖವಸ್ತ್ರ ಮನಿಕ್ಕಿಯಿರಿಸುವುದು (ಕ್ರಕ್ರಾ- ೩-೨ ಪ). [ಸಂ.]

ಮುಖವಾಡ 'ಮೊಗವಡ' ನೋ.

ಮುಖವಾದ್ಯ (ನಾ). ಬಾಯಿಯಿಂದ ಊದುವ ಕೊಳಲು, ನಾದಸ್ವರ ಮುಂತಾದ ವಾದ್ಯ ; ಸುಷಿರವಾದ್ಯ. [ಸಂ.]

ಮುಖವಾರ್ತೆ (ನಾ)· ಸಮಾಚಾರ ; ಸುದ್ದಿ ; ವಿಷಯ ; ವಿಚಾರ : ಧರ್ಮಪುತ್ರಂ . . . ವಿದುರನಟ್ಟಿದೋಲೆಯಾತಂ ಬಂದೇಕಾಂತದೋಲೆಯ ನಿಕ್ಕಿದೊಡೆ ಮುಖವಾರ್ತೆಯೇನೆಂದೊಡೆ (ಜಂಪು. ೦೦-೩೮ ಪ).

[ಸಂ. ಮುಖವಾರ್ತಾ]

ಮುಖವಾಸ (ನಾ)· ೧. ಬಾಯಿಯನ್ನು ಸುವಾಸನೆಗೊಳಿಸುವ ಒಂದು ಬಗೆಯ ಪರಿಮಳದ್ರವ್ಯ : ವಿಧವಿಧದೊಳೆಸೆವ ಕುಸುಮೋತ್ಕರದ ಪರಿಮಳದ ಮಧುರಾಸವಕೆ ತಮ್ಮ ಮುಖವಾಸದೊಳ್ಗಂಪಿನೆಳರಿನಿದಂ ಪೆರಸುವಂತೆ ಮೊಗವಿಟ್ಟು ಪೊಂಬಟ್ಟಿರೊಳ್ಸವಿದು (ಸ್ಫಿಪುಣಾ- ೦೫-೨೬) : ಗಂಧಪುಡಿಯರಂಗಡಿಗೈದಿ ಕಮ್ಮಿಜ್ಜಿ ಕಸ್ತುರಿಯ . . . ತಾಂಬೂಲಮುಖ್ಯ ಮುಖವಾಸಗಳನೂ ತಗದು ಮುನ್ನಡೆದು (ಪಪೂಕೋ. ೦೭-೬೦). ೨. ಮುಖಕ್ಕೆ ಕಟ್ಟಿಕೊಳ್ಳುವ ಬಟ್ಟೆ, — ವಸ್ತ್ರ : ಪರಿಮಳಂ ತೀಡಿದಡೆ ಕಡೆಗೆ ಸಂಗಂಗೆನುತೆ ಚರಿತಮಿಂ ಮುಖವಾಸಮಂ ಸುತ್ತಿ, ರಜಸುತೆ (ಶಾಪ. ೩-೦೬). [ಸಂ.]

ಮುಖವಾಸನ (ನಾ)· ೧. = ಮುಖವಾಸ ೧ : ''ಆಮೋದೀ. ಮುಖವಾಸನಃ – ೨ ಪಚ್ಚಕರ್ಪೂರ ಮುಂತಾದ ಮುಖಪರಿಮಳಕ್ಕೆ ತಕ್ಕ ಸುದ್ರವ್ಯದ ಹಸರುಗಳು'' (ಸಿಕ್ಕಾ- ೫೬). ೨. = ಮುಖವಸ್ತ್ರ ೨ : ಅವಾಪನ ಆಸನ್ನ . . . ನೈವೇದ್ಯ ಮುಖವಾಸನ . . . ಅತ್ಮಾರೋಪಣವೆಂಬ ದ್ವಾತ್ರಿಂಶದುಪಚಾರಂಗಳಂ ಸಮಂತ್ರಕಮಾಗಿ ಮಾಡಿ (ಎಪೀ. ೧೩). [ಸಂ.]

ಮುಖವಿಕಾರ (ನಾ)· (ಮನಸ್ಸಿನ ಭಾವನೆಗೆ ತಕ್ಕಂತೆ) ಮುಖದಲ್ಲಿ ಉಂಟಾಗುವ ವಿವಿಧ ಬದಲಾವಣೆ. — ಪಾರ್ಶ್ವಟು : ಮುಖವಿಘಾವ : ಪರುಷಾಳಾಪವಮ್ಯಮಿನಿಷ್ಟುರವಿಕ್ಷಣಮುಖವಿಕಾರಮುಂ ಮಱುರೆಯುಂ ತರಳಾಪಾಂಗಮುಮಾಕೆಯ ದರಹಸಿತಮುಮಂಜಿಪೆ ಪೇಟ್ಟುಮಜಕಮು ನೆರ್ದೆಯೊಳ್ (ಕಂಪಾ- ೩-೦೦೯); ನಾನು ಹೇಳಿದ್ದೆಲ್ಲವನ್ನೂ ಅವರು ಯಾವ ಮುಖವಿಕಾರವಿಲ್ಲದೆ ಕೇಳಿಸಿಕೊಂಡರು (ದಿಪ). [ಸಂ.]

ಮುಖವಿಕಾಸ (ನಾ)· ಮುಖವು ಅರಳುವಿಕೆ, — ಹಿಗ್ಗುವಿಕೆ : ವಿಪಕ್ಷ ಭೃಮಣಚೀತೋಭಾವಪಳವನವ ಮುಖವಿಕಾಸದಲಿ ತಮದ ತನಮಸಕದಲಿ

ಭುಜಸಿಕ್ರಮ ಭಜಾಳಿಸಲೆದ್ದ ಭೂಪೋತ್ತಮನು ಕೊಂಡನು ಗದೆಯನು (ಭಾಗ್ಯ. ೭-೦೪). [ಸಂ.]

ಮುಖವಿಕೃತಿ (ನಾ). = ಮುಖವಿಕಾರ ೨ : ಭಂಗದಲಿ ಸಂದೇಹ ಮುಖವಿಕೃತಿಯಲಿ ದುರ್ನೀತಿ ಇಂಗಿತದಲಾಂಗಿಕದ ಭಾವಾಭಂಗವರಿಯನು ಯೋಗಯುಕ್ತನಯಂಗಳಲಿ ತೀಡದುಸುರದಿರ್ದುಡು ಸಭೆ ಸುಭೀತಿಯಲಿ (ಭಾಷ್ಯ. ೦೯-೯೭). [ಸಂ.]

ಮುಖವಿಕ್ಷೇಪಣ (ನಾ). ಮುಖವನ್ನು ಅತ್ತ ಇತ್ತ ತಿರುಗಿಸುವಿಕೆ : ಬಲದ ಕೋಡ ಮೇಲೆ ಕೆಮ್ಮಂ ಪೀಜು ಮುಖವಿಕ್ಷೇಪಣಂಗೆಯ್ದು ಘನಾಘನ ನಿನಾದದಿಂ ಬ್ಯಂಮಿತಂಗೆಯ್ದ ವಿಜಯಗಜಮುಂ (ಕಂಪಾ. ೯-೯೩ ಪ). [ಸಂ.]

ಮುಖವೀಣೆ (ನಾ). ಬಾಯಿಂದ ಊದಿ ಬಾರಿಸುವ ಒಂದು ಬಗೆಯ ವಾದ್ಯ : ಮುಖವೀಣೆಯ ಮೋಹಿಗಳಿಂದಂ ರಾವಣವೀಣೆಯ ರಂಜಕರಿಂ . . . ಮೇಣ್ ಅಖಳನಿಯೋಗದಚ್ಚಳಿಯ್ಕರಿಂದೊಪ್ಪಿದತ್ತಾ ಮಹಾಲಿಂಗದಾಸ್ಥಾನಂ (ಹಮ್ಮೀ. ೬-೪೦ ಪ) ; ಕಾಳ ದಂಡಿಗೆ . . . ವಿವಿಧ ವಿದ್ಯಾಜಾಲ ಮುಖವೀಣೆಗಳ ತಂದಿಳ್ಪುದರು (ಜಾಗಪ. ೨೨-೬೯) ; ನುಡಿಸುವವನ ಶ್ವಾಸಗಾಳಿಯಿಂದ ನುಡಿಯುವ ವಾದ್ಯಗಳು : ಕೊಳಲು, ನಾಗಸ್ವರ . . . ಮುಖವೀಣೆ, ಶಹನಾವಾದ್ಯಗಳೂ ಈ ವಂಗಡಕ್ಕೆ ಸೇರುತ್ತವೆ (ಹಂಗಿಸಂ. ೦೨೦). [ಸಂ. ಮುಖವೀಣಾ]

ಮುಖವೇಣು (ನಾ). = ಮುಖವೀಣೆ : ರಂಧ್ರಗಳಲ್ಲಿ ಮಾಯುಸಂಚಾರದ ಮೂಲಕ ಪಾದವನ್ನು ಸೃಷ್ಟಿಸುವುವು ಎರಡನೇ ಸುಷಿರಜಾತಿ : ಕೊಳಲು, ಸನ್ನಾಯಿ, ಮುಖವೇಣು ಮೊದಲಾದವು (ಗಾಪ್ರ. ೯೩). [ಸಂ.]

ಮುಖಶಾಲೆ (ನಾ). ದೇವಸ್ಥಾನ ಅಥವಾ ಭವನಗಳ ಮುಂಭಾಗದ ಪಜಾರ ; ಮುಖಮಂಟಪ ; ಮೊಗಸಾಲೆ : ಈಶ್ವರಸಟ್ಟಿ ಎಡದು ದೇಗುಲದೆ ಕಳಶಮನಿಡಿಸಿ ಮುಖಶಾಲೆಯಂ ಸಮೆಯಿಸಿ (ಜಾಸಕ. ೩೦-೦೨ : 1005) ; ಪಚ್ಚೆಯ ತೊಲೆ ಪವಳದ ಕಂಬ ಜೋದಿಗೆ ನಿಚ್ಚಳವಹ ನೀಲದಿಂದ ಮಾಣಿಕ್ಯಳ ಮುಖಶಾಲೆಯು ಮಣಿಮಂಟಪವಚ್ಚರಿಯಾಗಿರುತಿಹುದು (ಕೃಷ್ಣಾಭ್ಯು. ೬-೮೦). ' ಮೊಗಸಾಲೆ ' ಪರಾ. [ಸಂ. ಮುಖಶಾಲಾ]

ಮುಖಶುದ್ಧಿ (ನಾ). ೧. ಬಾಯಿಯನ್ನು ಮುಕ್ಕುಳಿಸುವುದು. ೨. (ಊಟ) ತಾಂಬೂಲ. [ಸಂ.]

ಮುಖಶ್ರೀ (ನಾ). ಮುಖದ ಸೌಂದರ್ಯ. — ಚೆಲುವು : ಕ್ಷಾಯಿಕ ದೃಷ್ಟಿ ತುಷ್ಟಿಯೊಳೂಡಬಡೆ ಜೈನವಚೋಮೃತಂ ಮುಖಶ್ರೀಯ ಪೊವಟ್ಟಿಯುಂ ಬೆಳಗ (ಶಾಂತಿಪು. ೦-೪). [ಸಂ.]

ಮುಖಸಂಧಿ (ನಾ). [ಕಾವ್ಯಮೀ] ಐದು ಅರ್ಥಪ್ರಕೃತಿಗಳೂ ಐದು ಅವಸ್ಥೆಗಳೂ ಕ್ರಮವಾಗಿ ಸೇರಿದರೆ ವಸ್ತುವಿನಲ್ಲಿ ಆಗುವ ಮುಖ, ಪ್ರತಿಮುಖ, ಗರ್ಭ, ಅವಮರ್ಶ ಮತ್ತು ಉಪಸಂಹೃತಿಯೆಂಬ ಐದು ಬಗೆಯ ಸಂಧಿಗಳಲ್ಲಿ ಮೊದಲನೆಯದು : ಅದರ ' ಮುಖಸಂಧಿ 'ಯೆಂಬ ಮೊದಲನೆಯ ಭಾಗದಲ್ಲಿ ಕಥೆ ಇನ್ನೂ ಬೀಜರೂಪವಾಗಿರುತ್ತದೆ (ಕೃಚಾ. ೨೦೬). [ಸಂ.]

ಮುಖಸಾಲೆ ' ಮೊಗಸಾಲೆ ' ನೋ.

ಮುಖಸಿರಿ ' ಮೊಗಸಿರಿ ' ನೋ.

ಮುಖಸುತ್ತು (ನಾ). ಕಕ್ಕಾಬಿಕ್ಕಿ ; ಗೊಂದಲ ; ಕಕಮಕ : ನಿನ್ನೆಯ ಯುದ್ಧದಲ್ಲಿ ನೀವು . . . ಯವನ ಶೌರ್ಯವನ್ನು ತೋರಿಸಿದಿರೋ ಅದರಿಂದ ಯವನಸೇನೆಗೆ ಮುಖಸುತ್ತಾಗಿದೆ (ಪಾಕೃ. ೯೦) ; ತುರುಕರನ್ನು ಇಟ್ಟುಕೊಳ್ಳತಕ್ಕದ್ದೇನೋ ನನಗೆ ಸರಿಯಾಗಿ ತೋರುವುದಿಲ್ಲ. ಈ ವಿಷಯದಲ್ಲಿ ಬಹು ಮುಖಸುತ್ತಾಗಿದೆ (ಪುಸಾಗ. ೪೬). [ಮುಖ + ಸುತ್ತು]

ಮುಖಸುರತ (ನಾ). = ಮುಖರತಿ : ಮುಖಸುರತಂ ಮುನಿಗಳಿಂ ದೂಷಣೆಯಪ್ಪುದರಿಂ . . . ಪೇಳಲಿಲ್ಲ (ಕಾಪುಚ. ೨೪೩). [ಸಂ.]

ಮುಖಸ್ತುತಿ (ನಾ). ಎದುರಿನಲ್ಲೇ (ಅಕಾರಣವಾಗಿ) ಹೊಗಳುವುದು. — ಪ್ರಶಂಸೆ ಮಾಡುವುದು : ಇದನ್ನು ಪಾತ್ರ ಮುಖಸ್ತುತಿಯೆಂದು ತಿಳಿಯಬೇಡಿರಿ (ಅಸ್ಮ. ೦೬೩). [ಸಂ.]

ಮುಖಸ್ಥಾನ (ನಾ). ಪ್ರಮುಖವಾದ ಸ್ಥಳ : ಆ ಭೂಭಾಗದೊಳ್ ಕುನ್ತಳಂ ತಾನತ್ಯುರ್ಜಿತಮಲ್ಲಿ ಭೋಗಿಜನರಮ್ಯಂ ಬೆಳ್ವೊಲಂ ತನ್ಮುಖಸ್ಥಾನಂ ಕೋಳಿಕುಮಾಗಳುಂ ಪುರಿಕರಶ್ರೀರಾಜಧಾನ್ಯಾಹ್ವಯಂ (ಶಾಜಾ. XX. ೪೭-೦೪ ; 1074). [ಸಂ.]

ಮುಖಹೀನ (ನಾ). ಸಂಕೋಚಸ್ವಭಾವದವನು ; ಮುಖಹೇಡಿ : ಅಪರಿಚಿತಸ್ಥಳಕ್ಕೆ ಹೋದರೆ ಅವನು ಉದ್ದಟನಾಗುತ್ತಾನೆ. ಇಲ್ಲವೆ ಮುಖಹೀನನಾಗುತ್ತಾನೆ (ಜಪ್ರ. ೧). [ಸಂ.]

ಮುಖಹೇಡಿ, ಮುಹೇಡಿ, ಮುಹೇಡಿ (ನಾ). ಸಂಕೋಚಪ್ರವೃತ್ತಿಯ ವ್ಯಕ್ತಿ ; ಸಿಗ್ಗುಳಿ : " ಲಜ್ಜೆಯಿಂದ ಕೂಡಿದ ; ನಾಚುವ ; ಮುಖಹೇಡಿಯಾದ ; ಸಂಕೋಚಪ್ರಕೃತಿಯ ; ಸಿಗ್ಗುಳಿ " (Bashful. ೧೮೪೫). 'ಮುಖಹೇಡಿತನ' ಪರಾ. **ಮುಹೇಡಿ** : ಸಮುದ್ರ ಶಾಂತವಾಗಿದೆ, ಗಾಳಿ ಮುಹೇಡಿಯಂತಿದೆ (ಕಾಂಶ. II. ೨೦೬) ; ದಾಮು ಎಲ್ಲಾ ಅವರಪ್ಪನ ಹಾಗೇ ಮುಹೇಡಿ (ಕ್ಯಕ್ಯಾ. ೦೬). **ಮುಹೇಡಿ** : ಅವಳ ಸ್ವಭಾವವೇ ಹಾಗೇಂದ್ರೆ. ದೊಡಲಿನಿಂದಲೂ ಅದು ಮುಹೇಡಿ (ಕಂಸಂ. ೨೫೫). ಪೆಡ್ಡಾಸ್ಪರ್ ಲಕ್ಷ್ಮಣರಾಯರು ಸಬ್ಬುವಿನ ಪೆನ್ನು ತಟ್ಟಿ "ಮೋಡಿದೆಯಾ. ಮುಹೇಡಿಯಾಗಬಾರದು " ಎಂದು ಬಹಳ ಹೊಗಳಿದನು (ಶಚಮಾಕಾ. ೩೦). ' ಮುಹೇಡಿತನ ' ಪರಾ. [ಮುಖ + ಹೇಡಿ (< ಪೇಡಿ)]

ಮುಖಹೇಡಿತನ, ಮುಹೇಡಿತನ, ಮುಹೇಡಿತನ (ನಾ). ಸಂಕೋಚ ಸ್ವಭಾವ ; ನಾಚಿಕೆಯ ಪ್ರವೃತ್ತಿ : ಮಕ್ಕಳು ವಿಲಕ್ಷಣರೀತಿಯಲ್ಲಿ ವರ್ತಿಸುವರು . . . ಕೆಲವರಿಗೆ ಮುಖಹೇಡಿತನ (ಶಿಕ್ಷಕ. ೬೯೯) ; ಒಂದು ವಿಧವಾದ ಮುಖಹೇಡಿತನ ಅವನನ್ನು ಎಲ್ಲರಿಂದ ಬೇರೆ ಮಾಡಿತ್ತು (ಜಾಗಕ. ೬೩). **ಮುಹೇಡಿತನ** : ಈ ಮುಹೇಡಿತನವನ್ನು ಬಿಟ್ಟು ನಾಲ್ಕುಜನರ ಜತೆ ಓಡಾಡುವುದನ್ನು ಕಲಿ (ಕಾಗ). **ಮುಹೇಡಿತನ** : ನೀನು ಅವಳಿಗೆ ಬುದ್ಧಿ ಹೇಳಿ ಮುಹೇಡಿತನ ತಪ್ಪಿಸಬೇಕು (ಜಾಸಂ. ೨೫೬) .

[ಮುಖಹೇಡಿ + — ತನ]

ಮುಖಾಂತರ (ಅ). ಆ ಮಾರ್ಗವಾಗಿ ; ಮೂಲಕ : ಜೋಡು ರಿವೇರಿಯವನ ಮುಖಾಂತರ ನನ್ನ ಕೊಬ್ಬು ಕರಗಿತ್ತು (ಕ್ಯಕ್ಯಾ. ೦೦೬) ; ಬಿಂದ್ಣಾ . . . ವೈನಿಯ ಮುಖಾಂತರ ಅಣ್ಣನ ಪರವಾನಿಗೆ ಪಡೆದುಕೊಂಡ (ಕ್ಯಾ. ೦೯೩).

ಮುಖಾಂತರವಾಗಿ = ಬೇರೆಯವರ (ಮೂತಿನ) ಮೂಲಕವಾಗಿ : ನಮ್ಮ ಅಪ್ಪಾಜಿಯವರ ಪ್ರಾಕಾರಭ್ಯ ಅಳಿಗಿಯ ಮನವಾಳ ರಾಮಾನುಜ ಜಿಯ್ಯರವರ ಮುಖಾಂತರವಾಗಿ ನಡೆಸಿಕೊಂಡು ಬರುವ ನಿತ್ಯಕಟ್ಟಳೆ ಕೈಂಕರ್ಯ (ಎಕ. III, ಶ್ರೀರಂಗ. ೦೦೦-೦೯೨; 1784) ; ಸೃಷ್ಟಿಯ ಮುಖಾಂತರವಾಗಿ ಕಾಣಿಸುವ ಆತನ ಮಹಿಮೆಯ ಕುರುಹುಗಳನ್ನು ತಿಳುಕೊಂಡು ಕೃತಜ್ಞರಾಗಿ ಭಕ್ತಿಯಿಂದ ನಾವು ಆತನನ್ನು ಯಾವಾಗಲೂ ಸೇವಿಸಬೇಕು (ಮುಂಬಾ. ೪-೨೦). [<ಮುಖ]

ಮುಖಾಡ ' ಮೊಗವಡ ' ನೋ.

ಮುಖಾಣೆ (ನಾ). ಒಂದು ಬಗೆಯ ತೆರಿಗೆ : ಯಿಂ ವಾರವತ್ಕಗಾರ ೩ ಸೇನಭೋಗರು ಸುಂಕದ ಸೇನಬೋಗರು ಸಹ ಜನ ೧೫೯ ೧ ಮುಖಾಣೆ . . . ವರುಷಂಪ್ರತಿಯೂ ಪ್ರತಿವರುಷಂಗಳಿಗೂ ಮಹದೇ [ಮೇ]ಶ್ವರ ಸ್ವಾಮಿಯವರ ಭಂಡಾರಕ್ಕೆ ಕೊಡುವ ಹಾಗೆ ಕಟ್ಟಳೆಯನ್ನುಮಾಡಿಯಿದ್ದೇವ (ಎಕ. IX. ಕಾವಣ. ೯೪-೩೬ ; 1663).

[? + <ಕಾಣ್]

ಮುಖಾಬಿಲೆ ' ಮೊಕಾಬಿಲೆ ' ನೋ.

ಮುಖಾಮಿ (ನಾ)· ೧. ಒಡೆತನ ; ಸ್ವಾಮ್ಯ : ಅವನ ಮುಖಾಮಿಗೆ ೧೨ ಭರಹದ ಭೂಮಿಯನ್ನೂ ಕೊಡುವದು (ಕುಷಾಸಂ· ೨, ೫೮)· ೨. ಒಡೆತನವುಳ್ಳವನು; ಸ್ವಾಮ್ಯವುಳ್ಳವನು: ವಸ್ತ್ರಾಭರಣವಿರತಂ ಕೊಡು ತಿರುವರೆಂಬ ವರದಿಗೆ ಮುಖಾಮಿಗಳು ಕಾದಿರುತಿರ್ಪರು (ಕ್ಯಕ್ಕ·೨-೨೦೨)· [?]

ಮುಖಾಮಿತನ (ನಾ)· = ಮುಖಾಮಿ ೧ : ದೊರೆಗಳವರು . . . ಲಕ್ಷ್ಮಿಯ್ಯಂಗಾರಿ ಎಂಬುವನಿಗೆ ಈ ಪರಕಾಲಮಠದ ಮುಖಾಮಿತನವನ್ನು ನೇಮಕ ಮಾಡಿಸಿದರು (ಕುಶಾಸಂ· ೨· ೦೬೩)· [ಮುಖಾಮಿ+–ತನ]

ಮುಖಾಮುಖಿ (ಗು)· ೧. ಪ್ರತ್ಯಕ್ಷವಾದ ; ನೇರವಾದ : ಪ್ರತಿಯೊಬ್ಬ ಮತದುರನಿಗೂ ಮತ್ತು ಹುರಿಯಾಳುವಿಗೂ ಮುಖಾಮುಖಿ ಸಂಬಂಧವನ್ನು ಒದಗಿಸಿಕೊಂಡು ಅವರಿಗೆ ಹೇಳಿಕೊಳ್ಳುವ ವಿಚಾರ, ಹೊಸಮನಿಯದು (ಕಕಣ· ೯೦) : ಅವರಿಬ್ಬರೂ ಮುಖಾಮುಖಿ ಬೆಟ್ಟಿಯಾಗಲಿ, ಗೌಪ್ಯದ ಹಿಂದುಗಡೆಯಲ್ಲಿ ದಟ್ಟಿಯಿಸಿದ್ದ ಕತ್ತಲೆ ತೊಲಗಲಿ ಎಂದು ಅವಳ ವಿಚಾರ (ಚಪ್ರ· ೦೩೦)· (ನಾ)· ೨. ಭೇಟಿ ; ಸಂದರ್ಶನ : ಹಿಂದೊಮ್ಮೆ ನೀನಲ್ಲಿ ಹೋಗೆ, ನಿನ್ನಯ ಬಯಕೆ ನೆರವಹುದೆಂದರಿತೊಡಂ ನಿನ್ನ ಜೀವಕೆ ಮೋಸವಿರದೆಂದ ಬೀಳ್ಕೊಟ್ಟೆ ನಿನ್ನನೀ ಹೊಸ ಮುಖಾಮುಖಿಯೊ ಜೀವಕ್ಕೆ ಮುಳುವೆಂದೆ ಮನಸಿನ ಕವಲು ! (ಹಕ್ಕ· ೦೯-೭೬)· [ಸಂ·]

ಮುಖಾರ (ನಾ)· ಮನೆಯ ಮುಂಭಾಗ : ಆ ಗೇಟಿನಿಂದ ಮನೆಯ ಮುಖಾರದ ವರೆಗೂ ಹೂವಿನ ಗಿಡಗಳ ಮತ್ತು ಚಿತ್ರವ್ಯಕ್ಷಗಳ ವಲಯಾಕಾರವಾದೊಂದು ತೋಟವು ರಚಿಸಲ್ಪಟ್ಟಿತ್ತು (ಜಾಯುತ· ೫೦)· [?]

ಮುಖಾರಿ (ನಾ). [ಸಂಗೀತ] ಒಂದು ರಾಗದ ಹೆಸರು : ಮುಖಾರಿ ಹಿಂದೋಳವಸಂತವೆಂಬೀ ವಸಂತಮಿಶ್ರರಾಗಂಗಳು (ಏಪೀಗ· ೦೯೯) ; ವರವಸಂತ ಮುಖಾರಿ ಗುಜ್ಜರಿ . . . ಮೋಹನದ ರಾಗಂಗಳಲಿ ಪಾಡಿದರು (ಚಾರಪ್ರ· ೮೦-೮೫) ; ಮುಖಾರಿ—ಪ್ರಸಿದ್ಧ ಪ್ರಾಚೀನರಾಗ. ೨೦ನೇ ಮೇಳಕರ್ತ ನತಭೈರವಿಯಲ್ಲಿ ಜನ್ಯ (ಸಂಗೀಸಂ· ೦೩೪)· [ಸಂ·]

ಮುಖಾವಲೋಕನ (ನಾ)· ಮುಖವನ್ನು ನೋಡುವುದು ; ಮುಖದರ್ಶನ : ಅವರು ಪಿತೃಗಳ ಮರಣಾನಂತರ . . . ಬಹಳ ವರ್ಷಗಳಿಂದಲೂ ಅನ್ಯೋನ್ಯಮುಖಾವಲೋಕನವಿಲ್ಲದವರಾಗಿದ್ದರು (ಗಪೀ· ೦)· [ಸಂ·]

ಮುಖಾಸಿ 'ಮೊಖಾಸ' ನೋ·

ಮುಖಾಸೆ 'ಮೊಖಾಸ' ನೋ·

ಮುಖಿ (ನಾ)· ಅಧಿಕಾರಿ ; ಮುಖ್ಯಸ್ಥ : ಮಠಗಳ ಮುಖಿಗಳೂ, ತಿರುವಂದಿಯ ಕೈಲಾಸದೇಗುಲದ ಸ್ಥಾನಾಧಿಪತಿಗಳೂ ಸರ್ವಮಾನ್ಯದತ್ತವಾಗಿ ಭೂಮಿಯನ್ನು ಅನುಭವಿಸುವಂತೆ ರಾಜಾಜ್ಞೆ ಇತ್ತು (ಕುಳಚಾ· ೦೩೦)· [←ತುಳು· ಮುಖಿ]

ಮುಖೇಡಿ ' ಮುಖಿಹೇಡಿ ' ನೋ·

ಮುಖೇಡಿತನ ' ಮುಖಿಹೇಡಿತನ ' ನೋ·

ಮುಖ್ತಾರ್ ' ಮೊಖ್ತಿಯಾರ್ ' ನೋ·

ಮುಖ್ತಾರ್‌ನಾಮೆ ' ಮೊಖ್ತಿಯಾರ್‌ನಾಮ ' ನೋ·

ಮುಖ್ಯ (ಗು)· ೧. ಬಾಯಿ ಅಥವಾ ಮುಖಕ್ಕೆ ಸಂಬಂಧಿಸಿದ· ೨. ಪ್ರಮುಖವಾದ ; ಪ್ರಧಾನವಾದ : ಸರ್ವಜ್ಞತ್ವ ಸರ್ವೇಶ್ವರತ್ವ . . . ಸರ್ವಶಕ್ತತ್ವಾದಿಗಳೇ ಈಶ್ವರನ ಮುಖ್ಯಗುಣಗಳು (ಏಪೀಗ· ೨೮)· ೩. ಉನ್ನತಮಟ್ಟದಲ್ಲಿರುವ ; ಶ್ರೇಷ್ಠವಾದ ; ಮೊದಲ ದರ್ಜೆಯ· ೪. ಅತ್ಯಂತ ಮುಂದಿರುವ ; ಅಗ್ರಸ್ಥಾನದ· ೫. ಮೊದಲಾದ ; ಮುಂತಾದ : ಲಕ್ಷ್ಮಿ ನಿಜವಲ್ಲಭ ಜಾಹ್ನವಿ ತನ್ನ ಪಾದಪದ್ಮೋದಕಮಿಂದ್ರಮುಖ್ಯದಿವಿಜರ್ ಸ್ವವಿಗ್ರಹಂ (ಜಗಂ· ೦–೨೦) ; ಸರಸಿಜಾಸನ ಮುಖ್ಯದೇವರನೊರಸುವಂ ಗದ (ರಪಕ್ಷ ೨೩–೨೨)· (ನಾ)· ೧. ಪ್ರಮುಖವಾದುದು ; ಪ್ರಧಾನವಾದುದು ; ಮಹತ್ತ್ವವಾದುದು : "ಅಗ್ರ್ಯಂ, ಪ್ರಧಾನಂ, ಪ್ರಮುಖಂ, ಪುರೋಗಂ, ಮುಖ್ಯಂ . . . ಅಗ್ರಣೀಃ—ಈ ೧೩ ಮುಖ್ಯಂ" (ಹಲಾಯು· ೦೦೩–೩) ; ಬಿದವನ್ನಾಗಲಿ ಬಲ್ಲಿದನಾಗಲಿ ಇನಿತು ಮುಖ್ಯವಾಗಿ ಮಾಡಿಸಿಕೊಂಬುದು ಜಂಗಮಸ್ಥಲ (ಬಸವ· ೪೬೪) ; ಕೂಡಿ ನುಡಿವೆಡೆಯೊಳೆಂದುಂ ಕೂಡದು ಲಿಂಗತ್ರಯಕ್ಕೆ ತರತಮಭಾವಂ ನೀಡುಂ ವಾಕ್ಯದ ಕಡೆಯೋಳ್ ಕೂಡಿರ್ದುದಾಪದುದುಪೆ ಮುಖ್ಯಮೆನಿಕ್ಕುಂ (ಕಬಾಭ· ೦೯) ; ರಸಾಭಿವ್ಯಕ್ತಿಗೆ ಮತ್ತೊಂದು ಮುಖ್ಯವಾದ ನಿಯಮವೆಂದರೆ—'ಮುಖ', 'ಪ್ರತಿಮುಖ', 'ಗರ್ಭ', 'ಅವಮರ್ಶ', 'ನಿರ್ವಹಣ' ಪಂಚಸಂಧಿಗಳನ್ನೂ . . . ಕೇವಲ ರಸಾಭಿವ್ಯಕ್ತಿಯು ದೃಷ್ಟಿಯಿಂದಲೇ ರಚಿಸುವುದು (ಕ್ಯಾಕೋ· ೦೩೦). ೩. ಶ್ರೇಷ್ಠವಾದುದು ; ಉತ್ತಮವಾದುದು : "ಪ್ರಧಾನಂ, ಪ್ರಮುಖಂ, ಪ್ರವೇಕಃ, ಅನುತ್ತಮಃ, ಉತ್ತಮಃ, ಮುಖ್ಯಃ . . . ಅಗ್ನಿಯಂ—೧೭ ಮುಖ್ಯವಾಗಿಯೂ, ಉತ್ತಮವಾಗಿಯೂ, ಇತರರಿಂದ ಅಪೇಕ್ಷಿಸಲ್ಪಡತಕ್ಕದ್ದಾಗಿಯೂ ಇರುವ ಶ್ರೇಷ್ಠವಾದಂಥಾದ್ದರ ಹೆಸರುಗಳು" (ಬಿಚ್ಚಾಂತಿ· ೩೩೯). ೪. ಪ್ರಧಾನನಾದವನು ; ಪ್ರಮುಖವ್ಯಕ್ತಿ: "ಅಗ್ರೇಸರಂ ಪುರಸ್ಸರಸಗ್ರಣಿ ಮುಖ್ಯಂ ಪುರೋಗಮಂ ಪ್ರಷ್ಠಂ"(ಕಸ್ಕೋ· ೩೬–೯) ; ಅಪರ್ಣಾವಾದಕ್ಕಡಿಯಾಗದೊಳ್ಳಿಂದರ್ಜಕಾಮರ್ ಗುಣವೃದ್ಧಿ ಧಾಮರ್ ದಿವಾಕರರ್ ವ್ಯಾಕೃತಿನಾಮಗಳ್ವೋಲ್ ದಿವಕ್ಕ ಪನ್ನಿರ್ವರ್ ಮುಖ್ಯರಾದರ್ (ಕಾಪ್ರಾಪ್ರ· ೦೩) ; ಪುಲಿಯನೆತ್ತಿ ಮುಗಿಲೊಡೆದ್ಹುನ ನಕ್ಕ ವನೇ ದೊರೆ ನಿನಗೆಂದೇ ಈ ಮುಖ್ಯನ ಕಳಿಸಿಹನೇ (ಗೋಳಾಪ· ೩೬–೦೩)· ೯. ಅಗತ್ಯವಾದುದು ; ಅವಶ್ಯವಾದುದು : ಈ ಕಾಲದಲ್ಲಿ ಎಲ್ಲ ವಿಚಾರಗಳಲ್ಲೂ ತುಂಬ ಎಚ್ಚರಿಕೆಯಿಂದಿರುವುದು ಬಹಳ ಮುಖ್ಯ (ಕಬಿ)· ೧೦. [ತತ್ತ್ವಶಾ] ಜೀವಸಂಬಂಧವಾದ ನಾಲ್ಕು ಬಗೆಯ ವಾಯುಗಳಲ್ಲಿ ಒಂದು : ಪ್ರೈರಂಭ ಮುಖ್ಯ ಪ್ರಭೋಜನ ಅಂತರ್ಯಾಮಿ ಸೌಷ್ಟಿಯುಳ್ಳ ನಾಲ್ಕುಜೀವಸಂಬಂಧವಾದ ವಾಯುಗಳೇ ಮಾನಸಾದ್ಯಂತಃಕರಣ ಚೇಷ್ಟಾಕಾರಣಂಗಳಾಗಿರ್ಪುವಿ (ಏಪೀಗ· ೭೨)· [ಸಂ·]

ಮುಖ್ಯತೂರ್ಯ (ನಾ)· (?) : ಘನತಾತೂರ್ಯ ಮುಖ್ಯತೂರ್ಯ ಸ್ವೇಚ್ಛಾತೂರ್ಯವೆಂಬ ಘನಾಖ್ಯ ವಸಿಪ ಕಡು ಭಕ್ತಿ ಜ್ಞಾನ ವೈರಾಗ್ಯವೆಂಬ ತ್ರಿವಿಧವಿಶ್ವವನಟುದು . . . ಕೂಡುವಲ್ಲಿ ಇಂತೀ ಭಾವ ಸನ್ಮಿಶ್ರನ ಸ್ಥಲ (ಪೀಗೀಕಾ· ೦೦೬–೨೫೬). ' ಋಣಾತೂರ್ಯ ' ಪರಾ· [?]

ಮುಖ್ಯತೆ (ನಾ)· ೧. ಪ್ರಾಧಾನ್ಯತೆ ; ಪ್ರಾಮುಖ್ಯತೆ : ಕೂಡ ನುಡಿವೆಡೆಯೊಳ್ ಲಿಂಗತ್ರಯಕ್ಕೆ ತಮ್ಮೊಳ್ ಮುಖ್ಯತೆಯಮುಖ್ಯತೆಯುಮಿಲ್ಲ (ಕಬಿಪ್ರ· ೦೦೦ ಕ್ಕಿ) ; ಪದನೆರಡುಂ ನೇಣ್ ಪಲವುಂ ಪದಾರ್ಥಮಂ ಬಯಸುತಿರೆ ಬಹುವ್ರೀಹಿ ಪದಾರ್ಥದ ಗಡಣಂ.ದ್ವಂದ್ವಮೆನಿಪ್ಪುದವ್ಯಯೀಭಾವಮಾದಿಪದಮುಖ್ಯತೆಯಿಂ (ಕಬಿಪ್ರ· ೦೬೩)· ೨. ಮೊದಲನೆಯ ಸ್ಥಾನ,—ದರ್ಜೆ. [ಸಂ· ಮುಖ್ಯತಾ]

ಮುಖ್ಯತ್ವ (ನಾ)· =ಮುಖ್ಯತೆ ೧ : "ಬಲ್ಲಿಃ, ಬಲ್ಲನಂ, ಬಲ್ಲನೀಯಂ, ಈ ೩ ಮುಖ್ಯತ್ವಂ" (ಕಾಕೃ· . ೦೫೬); ಪುರುಷತ್ರಯಂ ಕ್ರಮದಿನಿರ್ದೊಡಂ ವ್ಯತ್ಯಯವಾಗಿರ್ದೊಡಂ ಕೂಡಿ ನುಡಿವೆಡೆಯೊಳ್ ಉತ್ತಮ ಪುರುಷಕ್ಕೆ ಮುಖ್ಯತ್ವಂ (ಕಬಿಪ್ರ· ೨೭೬ ಕ್ಕಿ)· [ಸಂ·]

ಮುಖ್ಯನ್ಯಾಯಾಧಿಪತಿ (ನಾ)· ಶ್ರೇಷ್ಠನ್ಯಾಯಾಧೀಶ ; ಉಚ್ಚನ್ಯಾಯಾಧಿಪತಿ : ಭಾರತದ ಮುಖ್ಯನ್ಯಾಯಾಧಿಪತಿಯವರಿಂದ ನಿಯುಕ್ತವಾಗತಕ್ಕ ಮಧ್ಯಸ್ಥಗಾರರು ನಿರ್ಧರಿಸತಕ್ಕಂಥ ಅಂಶದಾನವನ್ನು . . . ಪಾವತಿ ಮಾಡತಕ್ಕುದು (ಕಾಡಾಕ· ೦೬೭)· [ಸಂ·]

ಮುಖ್ಯನ್ಯಾಯಾಧೀಶ (ನಾ)· = ಮುಖ್ಯನ್ಯಾಯಾಧಿಪತಿ : ಜಿಲ್ಲೆಯ ಸಿವಿಲ್‌ನ್ಯಾಯಾಲಯದ ಮುಖ್ಯನ್ಯಾಯಾಧೀಶನೇ ಕ್ರಿಮಿನಲ್ ಪ್ರಕರಣ

ಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಸೆಷನ್ಸ್ ವಿಭಾಗದ ಮುಖ್ಯನ್ಯಾಯಾಧೀಶನಾಗಿರುತ್ತಾನೆ (ಕರ್ನಾಟ. ೫೫, ೬೬೭); ಮುಖ್ಯನ್ಯಾಯಾಧೀಶ ಹೊತ್ತಿಗೆ ಮುಂಚೆ ಕೋರ್ಟಿಗೆ ಬಂದಿದ್ದನು (ಭಕರು. ೨೫). [ಸಂ.]

ಮುಖ್ಯಪ್ರಾಣ (ನಾ). ಆಂಜನೇಯ; ಹನುಮಂತ: ಕೂಸಿನ ಕಂಡೀರ್ಯಾ ಗುರು ಮುಖ್ಯಪ್ರಾಣನ ಕಂಡೀರ್ಯಾ (ಕೃಕಂವ. ೬-೦೬೬ ಕ್ಷಾಂ); ಜೋ ಜೋ ಜೋ ಮುಖ್ಯಪ್ರಾಣಾ ಮಲ್ಲರ ಗಂಟಲ ಗಾಣಾ (ಜಾಪೀಗೀ. ೦೩೭ ಕ್ಷಾಂ). [ಸಂ.]

ಮುಖ್ಯಮಂತ್ರಿ (ನಾ). ರಾಜ್ಯದ ಮಂತ್ರಿಮಂಡಲದ ಮುಖ್ಯಸ್ಥ; ಪ್ರಧಾನಸಚಿವ: ಶಾಸನಸಭೆಯಲ್ಲಿ ಸಾವಿರಮಂದಿಯಿದ್ದರೂ ಕೆಲಸದ ಜವಾಬ್ದಾರಿ ಹೊರಲು ರಾಜ್ಯಕ್ಕೆ ಒಂದು ಮಂತ್ರಿಸಂಪುಟವೂ ಒಬ್ಬ ಮುಖ್ಯಮಂತ್ರಿಯೂ ಇರಬೇಕು (ರಾಕ್ಕಾಣ. ೬೬). [ಸಂ. ಮುಖ್ಯಮಂತ್ರಿನ್]

ಮುಖ್ಯರಸ್ತೆ (ನಾ). ವಿಶಾಲವಾದ ರಸ್ತೆ; ಪ್ರಧಾನರಸ್ತೆ: ಗುಡಿಗಾರ ಪೇಟೆಯ ಒಂದು ಓಣಿಯಿಂದ ಹೊರಬಿದ್ದ ತುಂಗಕ್ಕ ಮುಖ್ಯರಸ್ತೆಯನ್ನು ಸೇರಿ ನಡೆಯಹತ್ತಿದ್ದಳು (ಹುಚರುಬಾ. ೦೬೭). [ಮುಖ್ಯ + ರಸ್ತೆ]

ಮುಖ್ಯಸ್ಥ (ನಾ). ಪ್ರಧಾನವಾದ ಅಧಿಕಾರವುಳ್ಳವನು; ಮುಖಂಡ; ನಾಯಕ: ಮಹಾಮಾತ್ಯನು ಮಂತ್ರಿಮಂಡಲದ ಮುಖ್ಯಸ್ಥನೆಂದು ಭಾವಿಸಬಹುದು (ಕಾಣಾ. ೬೬೦). [ಸಂ.]

ಮುಖ್ಯಸ್ಥೆ (ನಾ). ಪ್ರಧಾನವಾದ ಅಧಿಕಾರವುಳ್ಳವಳು: ಮುಖಂಡಳು: ಅವರು ಈ ದಿನ ಆ ಕಚೇರಿಯ ಮುಖ್ಯಸ್ಥೆಯಾಗಿ ಅಧಿಕಾರವನ್ನು ವಹಿಸಿಕೊಂಡರು (ಕಾಪ). [ಮುಖ್ಯಸ್ಥ + –ಆ]

ಮುಖ್ಯಾಧಿಕಾರಿ (ನಾ). = ಮುಖ್ಯಸ್ಥ: ತೆರೆಯು ನಿಧಾನವಾಗಿ ಎದ್ದು ಪೈಲಿನ ಮುಖ್ಯಾಧಿಕಾರಿಯ ಕೂಥದಿಯೂ ಪ್ರಟವಾಗುವುದು (ಏಗಹೋ.೦). [ಸಂ. ಮುಖ್ಯಾಧಿಕಾರಿನ್]

ಮುಖ್ಯಾನಂದ (ನಾ). [ತತ್ತ್ವಶಾ] ಆನಂದದ ಅಷ್ಟಭೇದಗಳಲ್ಲಿ ಒಂದು: ವಿಷಯಾನಂದ ಬ್ರಹ್ಮಾನಂದ ವಾಸನಾನಂದ ಮುಖ್ಯಾನಂದ ನಿಜಾನಂದ ಆತ್ಮಾನಂದ ಅದ್ವೈತಾನಂದ-ವಿದ್ಯಾನಂದವೆಂಬವೇ ಆನಂದದಷ್ಟ ಭೇದಂಗಳವಲ್ಲಿ . . . ಘಾನೋಪಾದಾನವಿಲ್ಲದುವೇಕ್ಷಾಬುದ್ಧಿಯಲ್ಲಿ ತೋರ್ಪುದೇ ಮುಖ್ಯಾನಂದವೆನಿಸುವುದು (ವಿತೀಕ. ೨೮). [ಸಂ.]

ಮುಖ್ಯಾರ್ಥ (ನಾ). [ಕಾವ್ಯಮೀ] ಶಬ್ದಪ್ರಧಾನವಾದ ಅರ್ಥ: ವಾಚ್ಯಾರ್ಥ: ಒಂದು ಶಬ್ದವನ್ನು ಕೇಳಿದ ಕೂಡಲೆ ತಟ್ಟನೆ ಮನಸ್ಸಿಗೆ ಹೊಳೆಯುವ ಅದರ ಸುಪ್ರಸಿದ್ಧವಾದ ಅರ್ಥವು ಮುಖ್ಯಾರ್ಥ ಅಥವಾ ವಾಚ್ಯಾರ್ಥವೆನ್ನಿಸುತ್ತದೆ (ಕ್ಕಶಾ. ೦೬೬). [ಸಂ.]

ಮುಖ್ಯೆ (ನಾ). = ಮುಖ್ಯಸ್ಥೆ: "ವರಾರೋಹೆಯೆಂಬಿ ಮುಖ್ಯೆಯಕ್ಕ [ಶಾಣಾ. ಮುಖ್ಯಳಕ್ಕು] " (ಪುಂಗಶಾ. ೧೦-೬). [ಸಂ. ಮುಖ್ಯಾ]

ಮುಗದಾಣ ' ಮೂಗುದಾಣ ' ನೋ.

ಮುಗಲ್ ' ಮುಗುಳ್ಳಿ ' ನೋ.

ಮುಗಳಕ್ಕಿ ' ಮುಂಗುಳಕ್ಕಿ ' ನೋ.

ಮುಗಳಿ ' ಮುಗುಳ್ಳಿ ' ನೋ.

ಮುಗಿ (ಕ್ರಿ). ೧. ಹೂವಿನ ದಳಗಳು ಮುಚ್ಚಿಕೊಳ್ಳು–ಸಂಕೋಚನ ಜೊಂದು: "ಮುಗಿ–ಪುಷ್ಪಸಂಕೋಚನೇ (ಪೊಗ್ಗಾಗು) " (ಶಮಾಪಾ); ಸರಸಿಜಬಾಂಧವನಸ್ತಾಂತರಗತನಾಗಿರೆ ಸರೋಜವೀವನಮಾದಂ ಕೊರಗುತ್ತೆ ಮುಗಿಗುಮಿಶ್ವರವಿರಹದೆ ಶೋಕಾಕುಲಂ ವಿಶೇಷಾಪ್ತಜನಂ (ಕಂಗಾ.೩-೩೦); ಪಗಲಂತಿರ್ದಚ್ಚಬೆಳ್ದಿಂಗಳನತಿರಾಜ್ಯೋತಿಗೆತ್ತಾಗಳಾಗಳೆ ಮುಗಿದಿರ್ದಂ ಭೋಜಮೋರಂತಲರ್ದುವು ... ವಲಯಪುಂಡೆಂಗಳಿತಂಕೆಯಿಂದೆಂ ಮುಗಿಯಲ್ಕೆಂದಿರ್ದವೇನಾಜ್ಞಳಿಸಿದುದೂ ಜಗಚ್ಚಕ್ರವಾಂ ಚಂದ್ರಬಿಂಬಂ(ಅಂಪ್ರ. ೦೭–೯); ದಿನಪನಪರಾಂಬುಧಿಯನ್ಯೆದಲು ಪಸಜ ಮುಗಿದವು (ಶಾಮ್ಯಕ. ೩-೬); ಮುಂಗಿದವೀ ಚಂದ್ರಾಸನೆಯು ಬರವಿಗೆ ಸಕೋಸಿಯಪೆಂಡೆ (ಕೊವರಾ. ೩ ೬ ೨೦). ೨. ಕಣ್ಣು ತನಗೆ ತಾನೇ ಮುಚ್ಚಿಕೊಳ್ಳು,– ನಿಮೀಲಿತವಾಗು: ಶವದ ಕಾಪೋದ್ರೇಕದಲಿ ಕೊಡುವ ಸಮರ್ಪಣೆಯಿಗಳ ನಿಷ್ಠುರಗಣ್ಣಿವೆಗಳರೆ ಮುಗಿವುತಿರೆ (ಶಾಕೃಶಾ. ೦೬-೬೭); ಚಿನ್ನಿಗ ನಿನ್ನಂಗವ ನೋಳ್ಪೆವೆಂದಕ್ಷಯಿ ನ್ನೊಂದು ನಿಟ್ಟಿಸಿವೆಂದು-ಮುನ್ನವೆ ಮುಗಿದಿವೆ ಚಲುವಿಕೆಯನು ತೋಜುತೆನ್ನ ನೇತ್ರಕೆ ಸುಖವೀಯೊ (ಕಂಪ್ರ. ೯-೦೬೦). ೩. ಕಣ್ಣನ್ನು ಮುಚ್ಚಿಕೊಳ್ಳು,– ನಿಮೀಲಿತಗೊಳಿಸು: ಅರೆಮುಗಿದಿರ್ವ್ ಜಾನಿಸಂವ ಕಣ್ಮಲರಾಪ್ತ ಪದಾರ್ಥತತ್ವಮಂ ಸ್ಮರಿಯಿಪ ಚಿತ್ತಂ (ಶಃಚಮಾ. ೯-೦೬); ನನು ಮುಗಿದ ಕಣ್ಣಾರೆಗಚ್ಚಿದೆಳಗಬುಕೆ . . . ಗೋರಿಗೆ ಸಿಕ್ಕಿದರಲೆಗಳನಕಟಕಟ ನಿಷ್ಕರುಣ ಲುಬ್ಧಕರು ಕದಪಿಚ್ಚರು (ಹಕಣಾ. ೯-೩೬); ಕುಮಾರಿತಿ . . . ಪಾರ್ವತೀ ಜಾಂಕರಿ ವಿಷೇಯನಿತಾ ಸೆನೆಪುಕರಲೊಂದು ದಿವರಾತ್ರಿಯೊಳು ನಿಷುಗಣ್ಣಲರ ಮುಗಿದಿರ್ದಳು (ಸಾಂವಪು. ೯ ೩೭); ಭಾರವಿಯು ನಿಜಗಿದುವೆ ಮೃತಸಂಸ್ಕಾರ ಪರಿಯಂತರದ ಕೇಳೆಂದೂರುಜಪ್ರತಿ ಸರಳ ತೀಲಿಸಿ ಮುಗಿದನಕ್ಷಿಗಳ (ತೂರಾಣಾ. ೩-೭-೦೬). ೪. (ಗುರು ಹಿರಿಯರನ್ನು ಕಂಡಾಗ ಗೌರವಸೂಚಕವಾಗಿ ಕೈಗಳಿರಡನ್ನೂ) ಜೋಡಿಸು; ಸೇರಿಸು: ನಂದಿಮಿತ್ರಂ . . . ಬಂದು ಮುಂದೆ ನಿಂದು ಕೈಗಳಂ ಮುಗಿದಿಂತೆಂದೆಂ (ತಪ್ರಾದಾ. ೨೬-೬); ಚಾರಣ ಯುಗಳಕ್ಕೆ ಕರಕಮಲಯುಗಲಮಂ ಮುಗಿದತಿತ್ವರಿತಗತಿಯಿಂ ಬರುತ್ತಿರ್ದಂ (ಅಬಾ. ೩-೧೨ ೨); ಕೈಯಂ ಮುಗಿದುದು ನಿಮೇಳಪರಿವಾರ (ಕುಪ್ರಾದ್ರೌ. ೦-೩೯); ಕಾಣಕೆಯನಿತ್ತೆಜಿಗಿ ಕೆಡೆದುದು ಶಕುಜನಶ್ರೇಣಿ ತಮಿತದುಮಗೆ ಮುಗಿದಿತ್ತಿವರ್ಸೊಸಲೆಡೆಗೆ ಜಾಣಿಗಳನು (ಕ್ಷಯಣಾ. ೬-೦೩). ೫. ಪೂರೈಸು; ಮುಕ್ತಾಯಮಾಗು; ಕೊನೆಗೊಳ್ಳು: ತದ್ಯಾಗಮೊದುಬರಿಸಕೆ ಮುಗಿವುದು (ಕ್ಷಯಣಾ. ೯-೦೦); ಅಂತಪ್ಪೊಡೆ ನೀಂ ಪೇಳ್ದ ನಲ್ಗತೆ ದುಗಿದೆಂದುದು (ರಾವಶಾಕ್ಷ. ೦೬೭-೩೬); ಮದುವೆ ಮುಗಿದರೂ ಮದುಮಗನ ನೋಡಲಿಲ್ಲ (ಗಾಪ). ೬. ಬರಿದಾಗು; ನಿಶ್ಶೇಷವಾಗು: "ಕುಸುಮ ಸಂಕೋಚನದೊಳಿಲ್ಲಮೆಯೊಳಂ ಮುಗಿಯನಿಸುಗು" (ಶಕ್ಕಾಂ. ೩೦); ಆ ಪೊಲ್ಲು ಕಾಮಂ ತಸಗೆ ಬೆಂಬಲವಾಗೆ . . . ನಿಷ್ಠಾಗಂ ಮುಗಿವನ್ನಂ ಐವಡಿಗಣಿಯಿಂ ಮಾಜಿಂವಕ್ಕ ಧೊಳಿರ್ದಾ ಧಾಮುನನಿಸುತಿರ್ದಂ (ರಾಷಾಕ್ಷ. ೩೯-೦೯); ಬತ್ತಿಯುಮೆಣ್ಣೆ ಮುಗಿದ ದೀಪಿಗೆಯಂತೆ. ಕ್ಷಿತಿಜದಿಂ ಸಿಡಿದ ವಿಂಚಿಂಬರ ದೋಣಿಪಂತೆ ಭಗವಂತನೊಡನೆ ಪರಿನಿರ್ವಾಣವಡೆದರಿ (ವ್ಯಕಾಖ. ೯೬ ೬೬). ೭. ಮುಳುಗು; ಅಡಗು: ಗಗನನೀಲಿವೆಯೆನ್ನ ಕಣ್ಣ ಸೊಗವೀವಂತೆ ಮುಗಿವ ತರಣಿಯು ರಕ್ತ ಹಿತವೆನಿಸದೇಕೋ (ಪಾಂಶಾಗೀ. ೩೨). ೮. ಕವಿ; ಆವರಿಸು; ವ್ಯಾಪಿಸು: ತನ್ನನಿಯದ ವಿಶ್ವದಲಿ ನಿಂತು ತಾಳಿದರು ಒಳಗೊಳಗೆ ಬುದ್ಧಿಯದು ಕೀಣಕಲಿಸಗಿ ಜೀವಿಸದೆ ಹೋಗುವದು ಮಾನವನ ಜೀವಿತವು ಮುಂಕುರವದ ಮುಗಿದಂತೆ ಮಂದು ಮುಸುಗು (ಕಪಾಣಾ. ೩೬-೦೬). 'ಮುಗಿಬೀಳು' ಪರಾ. ೯. ಹೆಚ್ಚಾಗು; ಮಿಗಿರು; ವಿಜಿಲಾಗು: ಸಗುಣಗುಣಾಢ್ಯಭೂಪತಿಗಳೇಕಾಂತದಿ ಮಗುಚಿಗಳೊಂದೊಂದೊರಸಿ ಉಗುವ ಮಾಣಕಮೇಮಾರುವ ಸೊಜ್ಜುಕೊಟಿಗೆ ಮುಗಿದು ಕೊಟ್ಟಪರು ವೈಶ್ಯರಿಗೆ (ಮೋಹಶ. ೨೦-೩೩). ೧೦. ಕೊನೆಗೊಳಿಸು; ಮುಕ್ತಾಯಗೊಳಿಸು; ಪೂರೈಸು: ಕಾರ್ಯವ ಮುಗಿದು ಬಂದಪನೀಶಗುಮರಲಾರ್ಷರ್ಯಪಾಯ್ತೆಂದಷ್ಟಿ ಮಗನ . . . ತಾತ್ಪರ್ಯದಿಂದಿತ್ತ ಮನ್ನಣೆಯೊ (ಪರ್ವ. ೩೩–೨೦); ದುಗುಡವಿಲ್ಲದೆ ದಿನವ ಕೋಪುವೆ ಮುಗಿವನೇ ನಂಬಿವಾನಾಜನ್ಮೆ! (ಕಂಪ್ರ. ೪೦-೩). ೧೧. ತೀರಿಹೋಗು; ಸಾಯು: 'ಮುಗಿವೆ', 'ಮುಗಿಸು' ಪರಾ. [ದೇ.ತ ತಮಿ. ಮುಕಿ; ತುಳು. ಮುಂಗಿ; ತೆಲು. ಮುಗಿಯು; ಕೂಳಿ. ಮೂಗು]

ಮುಗಿಡಿ ? (ನಾ). ಒಂದು ಬಗೆಯ ಭೂಮಿ (?): ಮೆಚ್ಚಿ ಮಣ್ಣು ಮೂಗಣ್ಣುಳ್ಳ ಪೊಲ x ನ್ನಿನ ಅ[ಪ್ರ]ಕಿಯ ಕಯ್ಯ ಪರ್ಬಿಣ್ಣುಗ ಕೊಳಗ

ಭತ್ತ ಮುಗಿಡಿಸು ಕೆಸ್ಕುಮಿನ್ತಿನಿತು ಸಲ್ಕೆ (ಸೌಇ. IX-i, ೩೭-೩೩ : ಸು. 108ಹು ೫೪ ?). [?]

ಮುಗಿತ (ನಾ)· ೧· ಸಂಕೋಚಗೊಳ್ಳುವಿಕೆ ; ಕುಗ್ಗುವಿಕೆ : "ಕುಚ–ಸಂಕೋಚನೇ· ಮುಗಿತದೊಳ್" (ಶಾಕ್ಯ· ೨೭೦)· ೨· ಮುಕ್ತಾಯ ಗೊಳ್ಳುವಿಕೆ ; ಪೂರೈಸುವಿಕೆ ; "ಯಮು–ಉಪರಮೇ, ಮುಗಿತದೊಳ್" (ಶಾಕ್ಯ· ೪೦). 'ಮುಗಿತಾಯ' ಪರಾ. [ಮುಗಿ+–ತ್ಕ]

ಮುಗಿತಾಯ, ಮುಕ್ತಾಯ (ನಾ)· ೧· ಕೊನೆ : ಕಡೆ ; ಅಂತ್ಯ : ಮಂಗಳೂರಿನ ಘಟನೆಯೊಂದಿಗೆ ವಿದ್ಯೆಗೆ ಮುಗಿತಾಯ–ಮಾನವಸಹಾಯಕ್ಕೆ ಮುಗಿತಾಯ (ಪಾಕ್ಯ· ೨೩೦)· ೨· ಕೊನೆಯ ನಿರ್ಧಾರ ; ಅಂತಿಮ ನಿರ್ಣಯ : ಮೂಮಿಯ ಸಂಗಡ . . . ಈ ಮಾತಿನ ಮುಗಿತಾಯ ಆಗಲೇಬೇಕೆಂದೂ ಅಮಲನು ನಿರ್ಧರಿಸಿದನು (ಪಪ್ಕ· ೨೬೩)· 'ಉಳಿತಾಯ' ಹೋ· **ಮುಕ್ತಾಯ** : ೧· ವಿಸೋದವೇ ಇಂಥ ಕಥೆಗಳ ಮುಕ್ತಾಯ (ಶಪ್ಕ· ೫೪)· ೨· ಕೊನೆಯ ಭಾಗ,–ಅಂಶ : ಮೂರು ನಾಲ್ಕು ನಿಮಿಷ ಮೊಂಡತನದಿಂದ ಮಾತಾಡಿದ್ದೆ ಕಡಗೆ ಸೋಲನ್ನೊಪ್ಪಿ ಮುಕ್ತಾಯಕ್ಕೆ ಸಂದುಬಿಟ್ಟೆ (ಪಂಚಮಿ· ೪೯)· ೩· [ಸಂಗೀತ] ಗಾಯನ ಆಥವಾ ವಾದನಗಳ ಏಳು ಹಂತಗಳಲ್ಲಿ ಕೊನೆಯದು : ಅಂಕುರ ಸ್ಥಾಯಿಕ ಶ್ರುತಿಸ್ಥಾಯಿ ಮೂರ್ಛನಸ್ಥಾಯಿ ಜೌಕ ಪೇಚರೀಸ್ಥಾಯಿ ರವಸಂಗತಿ ಮುಕ್ತಾಯಗಳೆಂಬ ಸಪ್ತಾವಸ್ಥೆಗಳಲ್ಲಿಯುಂ (ಜಪೀಗ· ೨೩೩) ; ಕೊರವರ ಭೀಮನು . . . ಸುದೀರ್ಘವಾದ ಪಲ್ಲವಿಯನ್ನು ಸನಾದರಲ್ಲಿ ನುಡಿಸಿ· ಕರಡಿಯವನನ್ನು 'ಮುಕ್ತಾಯ'ಕ್ಕೆ ಆಹ್ವಾನಿಸಿದ್ದಾನೆ (ಚಿಬೃಹೂ. ೦೩)·

ಮುಕ್ತಾಯಕೊಡು = (ಸಂಗೀತದಲ್ಲಿ) ಸಮಾಪ್ತಿಗೊಳಿಸು : ಉಪ ಸಂಹಾರ ಮಾಡು : ಮೇಳದವರು ಆದಕ್ಕೆ ಪೊಟ್ಟಮೊದಲು 'ಮುಕ್ತಾಯ' ಕೊಟ್ಟು· ಜಾಲತಿಯನ್ನು ಬಾರಿಸಿ ಮುಗಿಸುವರು (ಚಿಬೃಹೂ. ೦೩)·

ಮುಕ್ತಾಯಭಾಷಣ = ಕಾರ್ಯಕ್ರಮದ ಕೊನೆಯಲ್ಲಿ ಮಾಡುವ ಭಾಷಣ : ಅಂದು ಅಧ್ಯಕ್ಷರೇ ಮುಕ್ತಾಯಭಾಷಣಮಾಡಿದರು (ಕಾಪ್ರ)·

ಮುಕ್ತಾಯಸಮಾರಂಭ = ಕಾರ್ಯಕ್ರಮದ ಕೊನೆಯಲ್ಲಿ- ನಡೆಸುವ ಸಮಾರಂಭ : ಮುಕ್ತಾಯಸಮಾರಂಭದ ದಿನ . . . ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ ಸಮಾಜದ ಜನರು ಹಾರಗಳನ್ನು ಸಮರ್ಪಿಸಿ· ಗೌರವಿಸಿದರು (ಕಬ್ಯೂಶಾಂ· IV· ೦೦೯).

[ಮುಗಿತ + – ಅಯ್ಕ·/ತುಳು· ಮುಗುತಾಯಿ; ತೆಲು· ಮುಕ್ತಾಯ]

ಮುಗಿತೆ (ನಾ)· ೧·=ಮುಗಿತ ೧ : "ಚುಣ _ ಸಂಕೋಚೇ· ಮುಗಿತೆಯೊಳ್ . . . ಚುಣಿಸಂ, ಚುಣಿಸೀಯಂ, ಈ ೨ ಮುಗಿತೆ" (ಶಾಕ್ಯ· ೨೭೨)· ೨·=ಮುಗಿತ ೨ : "ಲಡ – ಉಪಸೇವಾಯಾಂ· ಕೆಲಸದ ಮುಗಿತೆಯೊಳ್" (ಶಾಕ್ಯ· ೨೫೪)· [ಮುಗಿ+ – ತೆ·/ತುಳು, ಮುಗಿತೆ]

ಮುಗಿಬೀಳು (ಕ್ರಿ)· (ಉಕ) ಕವಿ ; ಮುತ್ತು ; ಮುಸುರು : ಆಗಣಿತರಾದ ಶಿವಾಜಿಯ ಭಟರು ಇರುವೆಯಂತೆ ಬೆಳಪಡಿಕೋಟೆಯನ್ನು ಮುಗಿ ಬಿದ್ದರು (ಕಾಮಂಶ· ೬೨) ; ನನ್ನ ಪಾಡಿಗೆ ನಾನು ಹೂ ಹಡೆದರೇತರರು ಮುಗಿಬೀಳುವರೊ ಮೇಲೆ ! (ಕಬುಶ್ರಾ· ೦೩–೦೬).

[ಮುಗಿ+ಬೀಳು$_1$ (<ಬೀಜ್$_1$)]

ಮುಗಿಯಿಸು, ಮುಗಿಸು (ಕ್ರಿ)· ೧· ಹೂವಿನ ದಳಗಳು ಮುಚ್ಚಿಕೊಳ್ಳುವಂತೆ ಮಾಡು : ವನಜದಳಕಂಗಳೊಳೊಂದೊಂದನೆ ಮುಗಿಯಿಸಿ ಕುಮುದ ವನದಳಕಂಗಳೊಳೊಂದೊಂದನೆ ಪಿಡಿವಲರ್ಚುತಿರ್ದಪುವೆನೆ ಪೂಗೊಳದೊಳಗೆ ಪೊಳೆದುವಿಂದುಕರಂಗಳ್ (ಕಾದಂಕಾ· ೪೨೦) ; ಜಿನಲಕ್ಷಣವೀಕ್ಷಣಮೇಣ್ ಚಂದ್ರನಿಂದಂತರಾಯಮೆಂಬ ತಾವರೆಯುಂ ಮುಗಿಯಿಸಿದೆ (ಧರ್ಶಾಸ್ತ್ರ· ೬-೧೭). ೨· ಕೈಗಳನ್ನು ಜೋಡಿಸುವಂತೆ ಮಾಡು. —— ಸೇರಿಸುವಂತೆ ಮಾಡು : ಮರ್ತ್ಯವಿದ್ಯಾಧರರಾಜವ್ಯಂತರಾಧಿಶ್ವರಕರಸರಸಿಜಂಗಳಂ ಪಕ್ಕೆಚಂದ್ರಸ್ಫುರಿತೋದ್ಯತ್ಕಾಂತಿ ನಿಚ್ಚಂ ಮುಗಿಯಿಸೆ (ಅರಿಪು· ೪-೧೩); ಇತರಪ್ರಚಂಡರ ಕರಾಬ್ಜಮನೀಕ್ಷಣಜುದ್ರಿಕಾಂಶುವಿಂ ಮುಗಿಯಿಪುದೆಂಬಿನಂ ಮುಗಿದುವಂದವನೀಶಕರಾಂಬುಜೋತ್ಕರಂ (ಪಗಂ· ೦೪-೭೨). ೩· ಆವರಿಸು ವಂತೆ ಮಾಡು; ಕವಿಯಿಸು : ಮುಗಿಯ್ವವಿವಂದುವೆಂದೆನಿಪುವಂ ಹರಿ ಸ್ಯನ್ಮರಜೋಂಧಕಾರದಿಂ ಮುಗಿಯಿಸಿದಂ ದಿವಾಕರಕರಾಬ್ಜಮಂ (ಪಗಂ· ೦೪-೭೨)· **ಮುಗಿಸು** : ೧· ವಿಗಿಸಿದಂ ವಾದ್ಯರವದಿಂದಬ್ಧಿಘೋಷಮಂ ಮುಗಿಸಿದಂ ತಾವರೆಯನಾ ಒಭ್ರವಾಹನಂ ಭೂಳ್ಗನಿನಂ ಮುಸುಕಲು (ಕೃಬಾಣ· ೦೭-೭೭)· ಕೆಂದಾವರೆಗಳ ಮುಗಿಸಂತ . . . ಪರಿಪೂರ್ಣಂದು ಪದನೆಯರ್ಕೈದಿದರು (ಕಂಪಂ· ೫೦-೭೭)· ೨· ಈ ಬಾಲಕಂ ಭೂಪಾಲಕರ ಕಯ್ಯಂ ಮುಗಿಸಿಕೊಂಡು ಬರ್ದುಂಕುಪಧಿಗತಪರಮಾರ್ಥನಪ್ಪತ್ಯಂತ ಕಾರಣಿಕಂ (ಪಜಿಕ· ೨-೭೩)· ೪· ತೆಗೆಯದಂತೆ ಮಾಡು; ಮುಚ್ಚಿಸು : ಬಹುಚಾಟುಚಪಳರ ಬಾಯ ಮುಗಿಸಿ . . . ವಧೂಟಿಯರು . . . ಸಂವಿಲಾಪದಿಂ ಬರುತಿರ್ದರು (ಪಪಮೋ· ೪೪-೪೨)· ೫· ಕೊನೆಗೊಳಿಸು; ಮುಕ್ತಾಯ ಮಾಡು ; ಪೂರೈಸು : ವಿಗೆ ಮೂಜಗಂ ತನೆಯೆ ಹಯಮೇಧಯಜ್ಞಮಂ ಮುಗಿಸಿ ಧರ್ಮಾತ್ಮಜಂ . . . ಸುಖದಿಂದೆ ರಾಜ್ಯಂಗೈದನು (ಕೃಬಾಣ· ೪೪ ಸಾಸಿಪ); ಹೊಸಗನ್ನಡದ ಕವಿತೆಯಲ್ಲಿ ಚರಣದೊಂದಿಗೆ ಪದವನ್ನೂ ಮುಗಿಸುವುದೇ ಪದ್ಧತಿ (ಸಚಿಪರೋ· ೦೫೪)· ೬· ಬರಿದು ಘೂಡು; ನಿಶ್ಶೇಷಗೊಳಿಸು : ಎಲ್ಲರ ತಿಂಡಿಯನ್ನೂ ಆ ಹುಡುಗ ಒಬ್ಬನೇ ಮುಗಿಸಿಬಿಟ್ಟಿದ್ದಾನೆ (ಕಾಪ್ರ)· ೭· ನಾಶಮಾಡು ; ಹಾಳುಮಾಡು ; ಧ್ವಂಸಗೊಳಿಸು : ಆ ಅವಿವೇಕಿ ತನ್ನ ತಂದೆಯ ಆಸ್ತಿಯನ್ನೆರ್ಲ್ಲ ಮುಗಿಸಿ ಬಿಟ್ಟನು (ಕಾಪ್ರ)· ೮· ಕೊಲ್ಲು ; ಸಾಯಿಸು; ತೀರಿಸು : ಅವಳಿಗೆ ದ್ರವ್ಯದಾಸೆ ತೋರಿಸಿ ಅವಳ ಮಗುವನ್ನು ನಮ್ಮ ವಶಪಡಿಸಿಕೊಂಡು . . . ರಾತ್ರೋರಾತ್ರಿ ಶ್ಮಶಾನಕ್ಕೆ ಒಯ್ದು ಮುಗಿಸಿಬಿಟ್ಟಳು (ಕ್ರಶಾಸ· ೦೮)· [ಮುಗಿ +—ಇಸು]

ಮುಗಿಲ್, ಮುಗಿಲು (ನಾ)· ೧· ಮೋಡ ; ಮೇಘ : "ಅಭ್ರಂ, ಅಬ್ದಃ, ಘನಃ, ಮೇಘಃ . . . ಬಲಾಹಕಃ – ಈ ೧೦ ಮುಗಿಲ ಪೆಸರ್" (ಪಣಾಮು· ೦೦–೩೦); ತಡತಡದು ಕಾಂತನಲ್ಲಿಗೆ ನಡೆಯಲ್ ಬಗೆದನಗೆ ಕಾರ ಕಾರಿರುಳೊಳ್ ಸಪ್ಪಡವಡಿಕೆಗಳಂ ತೊಡೆದತ್ಯಡಿಪಱಿಯದ ಪೂಳೆವ ಮಿಂಚು ಮುಗಿಲೆಡೆಯೆಡೆಯೊಳ್ (ಕಣಾ· ೩-೦೫); ಇರ್ಪರುಂ . . . ಸಹಸ್ರಕೂಟಾಕಾರಮಪ್ಪುದೊಂದು ಮುಗಿಲಂ ಕಂಡು (ಪಣ್ಣಾಣ· ೦೦೯-೩); ಪಾಡುವ ವಿಮಾನದೊಂವೆಳ್ಗೇಱಿಂ ಪರಿದುಗುವ ಮುಗಿಲ ನೀರ್ಗಳ ಪಲವುಂ ಜೀಱುಗಳೊಳೆಳಸಿ ಖಚರರನಾಜಿಸಿದುದು ಗಗನದೊಳ್ ವಿಯತ್ತಳಪತನಂ (ಆಂಪ್ರ· ೪-೩೬)· ೨· ಬಾನು ; ಆಗಸ ; ಆಕಾಶ : "ಆಕಾಶದೊಳ್ ಕಾದಂಬಿನಿಯೊಳು ಮುಗಿಲ್" (ಕ್ಕಶಬ್ದಂ· ೦೦೩)· ವಾಪನಕ್ರಮಂ ಮುಟ್ಟುಗೆ ಮುಟ್ಟುದಿರ್ಕೆ ಮುಗಿಲಂ (ಅಣಾಸ· ೦-೦೦); ಅಲ್ಲಿಯ ಬನಂ ಮುಗಿಲೆಡೆಯೊಳೆಡವಿಡದೆಡೆಯಾಡಿ ಬಬಲ್ಲ ಬಿಜ್ಜೂದರಿ ಯರ್ಕಳಜಪಟ್ಟಿಗೆದಾಣಮೆಂಬಂತೆಸೆವಳಿನೀರ್ಗಳಂ ಪೊತ್ತಾಗಸದೆಡೆಗಡರ್ವ ಚೆಂದೆಂಗಿನ ಮರಂಗಳೊಳಂ . . . ಬಸಂತಶ್ರಿಗೆ ನೆಲವೀಡಾಗಿರ್ದುದು (ಕಣ್ಕಾ· ೩೦)· **ಮುಗಿಲು** : ೧· "ಮುಗಿಲೆನಲ್ಕೇಳ್" (ಶಪ್ರ· ೪೦); ಮುಗಿಲು ಹಱಿದು ಬಿದ್ದರೆ ಎನಗೆ ಮಜ್ಜನಕ್ಕೆಱಿದರೆಂಬನು (ಪುಣಾಧ· ೨-೫೦-೬೩); ಭಯರಸದ ಹಬ್ಬುಗೆಯಲುಬ್ಬಿದ ಶೋಕದೊಡ್ಡಿನ ಮುಗಿಲು ಕಱಿದುದು ಕುರುಬಲದ ಕಂಬನಿಯ ಬೀಱುವಳೆಯ (ಕಾಪ್ಕಾ· ೨೦-೩೬); ಮುಗಿಲು ಮುಸುಕಿದ ಚಂದ್ರಬಿಂಬವೊ ಪಗದೊಳೆಸೆವ ಸುದೀಪಕಾಂತಿಯೊ (ಪಗಕ· ೬-೨೪); ನೀರಾಕಾಶದಲ್ಲಿ ನಿರ್ದಿಷ್ಟರೂಪದ ಬಿಳಿಯ ಮುಗಿಲೊಂದಿದ್ದರೆ ನಮ್ಮ ಗಮನ ಆ ಕಡೆ ಜೆನ್ನಾಗಿ ಬೀಳುತ್ತದೆ (ಕ್ಷಕ· ೪೬)· ೨· ಅಗಲಗಚ್ಚನೆಯನಿಟ್ಟಿರುವರಲ್ಲದೆ ಮುಗಿಲಿಗಚ್ಚನೆಯನಿಕ್ಕುವರೆ

(ಕಂಚಿಕ. ೬-೩೦); ಮಳೆ ಯಾವಾಗ ಆದೀತೋ ಎಂದು ಮುಗಿಲ ಕಡೆ ನೋಡುವುದೇ ಅವನ ಕೆಲಸ (ಪಪಂ. ೪). ೩. ಮೇಲುಗಡೆ ; ಮೇಲು ಭಾಗ : 'ಮುಗಿಲ್‌ನೋಲು' ಪರಾ.

ಮುಗಿಲು ಮುಟ್ಟು, ಮುಗಿಲು ಮುಟ್ಟು = ೧. (ಆಲಂ) ಮೇಲೇರು ; ಉಚ್ಚಾಯಸ್ಥಿತಿಯನ್ನು ತಲುಪು : ನೆಗಬ್ಪಾಷ್ಟ್ರಾಕು ಕುಲಾಂಬರೇಂದುಭರತಂ ನಿನ್ನಗ್ರಜಂ ಸಾಹಸಂ ಮುಗಿಲಂ ಮುಟ್ಟಿ ... ದಿಗ್ವಜಕ್ಕೆ ಪೊಜಮಟ್ಟಾ ಪೆಂಪು ಸಾಮಾನ್ಯಮೇ (ಅಪಿ. ೦೪-೩೨). ೨. ಆಕಾಶವನ್ನು ತಲುಪು ; ಗಗನಕ್ಕೇರು : ವಿದ್ವಾಂಸರ ವೇದಾಶೀರ್ವಚನಗಳ್ಪುರಜನರ ಜಯಘೋಷಗಳು ಮುಗಿಲು ಮುಟ್ಟುತ್ತಿದ್ದವು (ಶ್ರೀಆಯು. ೩೪೪). ಮುಗಿಲ ಕಿಚ್ಚು = ಮೋಡಗಳ ಘರ್ಷಣೆಯಿಂದುಂಟಾಗುವ ಬೆಳಕು; ಮಿಂಚು : "ಮೇಘವಹ್ನಿ ಇರಮ್ಮದಃ—ಈ ೨ ಮುಗಿಲ ಕಿಚ್ಚು" (ಪಣಯು. ೦೩-೩೦). ಮುಗಿಲ ದನಿ=ಮೋಡಗಳ ಘರ್ಷಣೆಯಿಂದುಂಟಾಗುವ ಧ್ವನಿ ; ಗುಡುಗು ; ಮೇಘಧ್ವನಿ : "ಪೊಬಗು = ಮುಗಿಲ ದನಿ" (ಶಬುದ. ಪು. ೦); ಮುಗಿಲಿ ದನಿಯಂ ಕೇಳ್ದ ಮುದಿಹಂಸೆಯಂತೆಯಾ ಮಗನ ಡನಿಯಂ ಕೇಳಿ ಕೈಯ ನಟ್ಟಿಯು ಮಜ್ಜಿದು (ಸಪ್ಪಳ. ೨-೭೪). ಮುಗಿಲ ಧ್ವನಿ=ಮುಗಿಲ ಧನಿ : "ಮೊಬ ಗೆಂದು ಮುಗಿಲ ಧ್ವನಿಯಮು" (ಹರಿಪ. ೧೬೩). ಮುಗಿಲ ಪೂ, ಮುಗಿಲ ಹೂ= ಮಳೆನೀರು : "ಮುಗಿಲ ಪೂವೆಂದು ಜಲಂ"(ಶಶಾ. ೩೭ ೦೫೯); "ಜಲಮೆಂದುಂ ಮುಗಿಲ ಹೂ[ಪಾಣಂ. ಪೂ]ವೆನಿಕ್ಕುಂ" (ಶಪಂ. ೪೭೦-೧೦). ಮುಗಿಲಮಲ್ಲಿಗೆ, ಮುಗಿಲುಮಲ್ಲಿಗೆ = ೧. ಒಂದು ಬಗೆಯ ಮಲ್ಲಿಗೆ : ಹೊರಗೆ ಎಡಪಿಲದಲ್ಲಿ ಎರಡು ಮುಗಿಲ ಮಲ್ಲಿಗೆಯು ಗಿಡಗಳಿರುವವು (ಕ್ರಪಾಂ. ೪೩). ೨. (ಆಲಂ) ಕೈಗೆ ಎಟುಕದುದು; ದುರ್ಲಭವಾದುದು: ಅವರ ಗ್ರಂಥಗಳು ಕನ್ನಡಸಾಹಿತ್ಯಲೋಕಕ್ಕೆ ಮುಗಿಲ ಮಲ್ಲಿಗೆಯೇ ಆಗಿರುವುವು (ಶಾಹಿ. ೬); ಜ್ಞಾನಯೋಗವಂತೂ ನೂರಕ್ಕೆ ಹೊಬ ಪ್ತೊಂಬತ್ತು ಜನರ ಪಾಲಿಗೆ ಮುಗಿಲು ಮಲ್ಲಿಗೆ (ಕರ್ಪಾಣ. ೦೦೬). ಮುಗಿಲಮಟ್ಟಿ = ಆಕಾಶಮಾರ್ಗ ; ಗಗನಪಥ : ಆತನುಂ ಕೂಡೆ ಕಾವಲ್ಕೆತರೆ ಮುಗಿಲಮಟ್ಟಿಯ ಬೇಹಿನಾಳಾಗಿ ಬಟ್ಟೆವಿಡಿದರ್ ಪಂಚವಟಿಗೆ (ಶ್ರೀರಾಮಾ. ೦೫೫-೦೭). ಮುಗಿಲಿಗೇರಿಸು = (ಆಲಂ) ಹೊಗಳು ; ಅಟ್ಟಕ್ಕೇರಿಸು : ಸರ್ವಹಾನಿಗಳಿಗೂ ಕಾರಣವಾದ ಕ್ರೂರಕೃತ್ಯಗಳನ್ನು ಮೇರುಸಾಹಸಕೃತ್ಯಗಳೆಂದು ಮಂಗಿಲಿಗೇರಿಸುವ ಸಮಾನಾಭಿರುಚಿಯ ಜನರ ನಡುವೆ ಈ ರಾಜಕೀಯದುರ್ಮಾರ್ಗಿಗಳು ಸ್ವಚ್ಛಂದದಿಂದ ವರ್ತಿಸುತ್ತಿದ್ದಾರೆ (ಪ್ರಜಾ. ೫೦೦). ಮುಗಿಲುದ್ದ, ಮುಗಿಲುದ್ದಂ = ಆಕಾಶದಷ್ಟು ಎತ್ತರ ; ಗಗನದಷ್ಟು ಎತ್ತರ : ನೀನು ... ಮುಗಿಲುದ್ದವಾದ ಸೋಮಮಟಮಟಗಂ ದಿಟಕ್ಕೆನೆ ಕರಂ ಬಳೆದಂ ಮನದಂತೆ ವಾಮನಂ (ಕರ್ಣಕೌ. ೬-೨೪); ಮುಗಿಲುದ್ದವಾಗಿ ಮೂವಳಿಸಿದ ಕೋಟೆಯಿಂ ... ಊರ್ಗ್ಗಳೊಪ್ಪುಗು (ಶಾಇಸ. IX-i, ೨೯೭-೦೦; 1177); ಮುಗಿಲುವ್ದಂ ಪರಿದತ್ತು ಹರ್ಷರಸಮಾ ಪುರದೊಳ್ (ಕಂಗಸಂ. ೪-೨೪). ಮುಗಿಲು ಮಾಳಿಗೆ = (ಆಲಂ) ಕಲ್ಪನೆಯ ಸೌಧ,–ಮಹಲು : ವಿಜಯಶ್ರೀಹನಿಗೆ ತಾನು ಯೋಜಿಸುತ್ತಿದ್ದ ವಿಷಯವು ಬಹಳ ಮನೋಹರವಾಗಿದ್ದುದರಿಂದ ... ತನ್ನ ಮುಗಿಲುಮಾಳಿಗೆಯನ್ನು ಪ್ರಸಃ ಕಟ್ಟಿಕೊಳ್ಳಲಾರಂಭಿಸಿದನು (ಶಾಸಾ. ೨). ಮುಗಿಲು ಮೂರೇಗೇಣು = (ಆಲಂ) ಅತ್ಯಂತ ಉನ್ನತ ಮಟ್ಟದಲ್ಲಿರುವಿಕೆ : ಆಂಗ್ಲಭಾಷೆಯ ರಚನಾಶಕ್ತಿಯ ಸಂಬಂಧದಲ್ಲಿ ಅವನ ಗ್ರಹಿಕೆ, ಇನ್ನೇನು ಮುಗಿಲು ಮೂರೇ ಗೇಣು ಎಂಬಂತಿಲ್ಲಿತ್ತು (ಇಕ್ಕಥ. ೨೫೩). [ದೇ.ಪ್ರ ತಮಿ. ಮಲ. ಮುಕಿಲ್; ತುಳು. ಮುಗಲ್, ಮುಗಳ್; ತೆಲು. ಮೊಗುಲು, ಮೊಯಿಲು; ಕೋಲಾ. ಮೊರ್ಗರ್; ಪರ್ಜಿ. ಮಳ್ಳುರ್; ಗದಬ. ಮೊಗುಲ್, ಮೊಗ್ಗುಲ್; ಗೊಂಡಿ. ಮೊಯೊಲ್]

ಮುಗಿಲುಚ್ಚಳಿ 'ಮುಗಿಲುಚ್ಚಳಿ' ನೋ.

ಮುಗಿಲುಚ್ಚಳಿ. ಮುಗಿಲುಚ್ಚಣಿ (ನಾ). ಗಗನವನ್ನು ಮುಟ್ಟುವಷ್ಟು ಎತ್ತರವಾಗಿರುವ ಬುರುಜು; ಆಕಾಶವನ್ನು ಸೋಕುವಂಥ ಬತೇರಿ : ಮುಗಿಲುಚ್ಚಳಿಗಳ್ಕಿಲದಂಬುಗಂಡಿಯಿಂ ಪಾಸುಳ್ದು ನಡವ ದಿನಕರನ ಹಯಂ ಗಗನಾಧ್ವಚೀದವುಂ ಪುಯಿಗಳಿಗಳ ಕಣ್ಣಿಲರೆ ತೀಡುದಿಂ ತೊಲಗಿಸುಗುಂ (ಕಂಗಾಪು. ೦-೦೬); ಬಲಿದುದನಿತಕೆ ಕೋಟೆ ಪರಿಖಾವಳಯರಚನೆಯು ಲಾಳುವೇರಿಯು ಹುರಿಮುಮಿದ ಮುಗಿಲುಚ್ಚಳಿಯ ಸಾಲುಗಳ ಸೊಗಸಿನಲಿ (ಕೊರಣ. ೨-೦೬-೨); ಕಣ್ಗೆ ರವಣೀಯವಾಗಿವೆ ಕರ್ಣಾತಪಯ ನೋಡೀ ಪುರದ ಮುಗಿಲುಚ್ಚಳಿಯ ಸಾಲ್ಗಳು (ಕೃಅಣಾ. ೩-೨೦). **ಮುಗಿಲುಚ್ಚಣಿ :** ಅಗಲೊಳಗಬ್ಜಾಕೃತಿಯುಂ ಮುಗಿಲುಚ್ಚಣಿಯೊಳಗೆ ಚಂದ್ರಬಿಂಬಾಕೃತಿಯುಂ ವೊಗಪೊಪ್ಪೆ ಮಿಸಲೋಜನೆ ಮೃಗೇಕ್ಷಣೆ ಸಗರವ್ಯವನಭವೀಕ್ಷಿಸಿದಳ್ (ಅಪಿ. ೯-೩೭) ; ಬೆಟ್ಟವ ಕಿತ್ತು ತಂದಿಳಿಮಂದದಿ ಮುಗಿಲುಚ್ಚಣಿತೆನಿಗಳಗ್ಗದಲಿ ಬಟ್ಟರನ್ನಗಳ ಕೆತ್ತಿಸಿದ ಹೋಗಲಸಂಗಳಿಬ್ಬರ್ಮಾವ (ಭೀಚಕ. ೫೦-೪).

[ಮುಗಿಲ್ + ಉಚ್ಚಳಿ]

ಮುಗಿಲು 'ಮುಗಿಲ್' ನೋ.

ಮುಗಿಲುಗಡವು 'ಮುಗಿಲ್ಗಡವು' ನೋ.

ಮುಗಿಲುನೂಲು (ನಾ). ನೆಯ್ಗೆಯ ಮಗ್ಗದಲ್ಲಿ ಹಾಸುನೂಲಿನ ಮೇಲು ಭಾಗದಲ್ಲಿ ಬರುವ ನೂಲು. ← ಎಳೆ : ಪಾಸನ್ನು ಇರಿಸಿಯಾಗಲು ಅದರ ಎಳೆಗಳನ್ನು ಬೇರೆಬೇರೆ ಹೊಳ್ಕುಗಳಲ್ಲಿ ತಂದು, ಪ್ರತಿ 'ಸುರಿ'ಯ ನೂಲು ಮೇಲೆ ಬರಲು 'ಮುಗಿಲು'ನೂಲು ಕೆಳಕ್ಕೆ ಹೋಗುವಂತೆ ಏರ್ಪಡಿಸಿ. ಇವೆರಡರ ಎಡೆಯಿಂದ ಹೊಕ್ಕನ್ನು ತರುವ ಲಾಲಿಯನ್ನು ಒದಿಸುವರು (ಇಂಕೈ. ೨. ೪೨೦).

[ಮುಗಿಲು (< ಮುಗಿಲ್) + ನೂಲು, (< ನೂಲ್)]

ಮುಗಿಲುಮಟ್ಟಿ 'ಮುಗಿಲ್ಮಟ್ಟಿ' ನೋ.

ಮುಗಿಲೂಳು (ಕ್ರಿ). ಗಗನವನ್ನು ಆಶ್ರಯಿಸು; ಅಂತರಿಕ್ಷದಲ್ಲಿ ಸೇರು: ಅಂತು ಮುಗಿಲೂಳ್ದ ಮೂಜುಲೋಕಮುಂ ಕರ್ಣಾರ್ಜುನರ ಯುದ್ಧಮಂ ನೋಡಲ್ ನೆರೆದಾ(ಕಂಕಥಾ. ೦೨-೦೪೪ ಪ). [ಮುಗಿಲ್ + ಊಳು,]

ಮುಗಿಲ್ಗಡವು. ಮುಗಿಲುಗಡವು (ನಾ). ಒಂದು ಬಗೆಯ ಈಚಲು ಮರ : ಮೃಣಾಳನಾಳಧಾರಾಗ್ರಹಂಗಳ ಮೇಲೆ ಮುಗಿಲ್ಗಡವಿನೆಲರ ಧೂಳಿಯೊಳ್ ಪೊರೆದು ನಿಲಿಸಿದ ಯಂತ್ರಮಯೂವಂಗಳುಮಂ ... ನೋಡುತ್ತಂ ಪೋಗೆ (ಗದಯು. ೫೦೪). **ಮುಗಿಲುಗಡವು :** "ವೀಪಃ. ... ಹಲೀಪ್ರಿಯಃ—ಈ ೪ ಮುಗಿಲುಗಡವಿನ ಮರ" (ಪಾಪಂ. ೦೦೭). [ಮುಗಿಲ್ + ಕಡವು (< ಕಡಂಬ)]

ಮುಗಿಲ್ಗಲ್. ಮುಗಿಲ್ಗಲ್ಲು (ನಾ). ಮೋಡದಿಂದ ಬೀಳುವ ಕಲ್ಲು : ಆಲಿಕಲ್ಲು : "ಆಲಿವರಲೆಂದುಂ ಮುಗಿಲ್ಗಲ್ಲೆಂದುಂ ಘನೋಪಲಂ" (ಕಪಾ. ೩೩-೦೩೪). **ಮುಗಿಲ್ಗಲ್ಲು :** "(ವಾಯುಮಂಡಲದಲ್ಲಿಯ ನೀರಿನ ಅವಿ ಗಡ್ಡೀಭವ್ಟ ಮಳೆಯಂತೆ, ಮಳೆಯೊಂದಿಗೆ ಬೀಳುವ) ಆಲಿಕಲ್ಲು ; ಮುಗಿಲ್ಗಲ್ಲು" (Hail. ೧೦೪೩). [ಮುಗಿಲ್ + ಕಲ್,]

ಮುಗಿಲ್ಗಲ್ಲು 'ಮುಗಿಲ್ಗಲ್' ನೋ.

ಮುಗಿಲ್ಗಿಚ್ಚು (ನಾ). ಆಕಾಶದಿಂದ ಭೂಮಿಗೆ ಹರಿಯುವ ವಿದ್ಯುತ್ಪ್ರವಾಹ; ಸಿಡಿಲು; ಅಶನಿ : "ಮುಗಿಲ್ಗಿಚ್ಚೆಂದು ಸಿಡಿಲ್" (ಕಜಾ. ೩೬-೦೩೭). [ಮುಗಿಲ್ + ಕಿಚ್ಚು]

ಮುಗಿಲ್ದನಿ (ನಾ). ಮೋಡಗಳ ಘರ್ಷಣೆಯಿಂದ ಉಂಟಾಗುವ ಶಬ್ದ ; ಗುಡುಗು ; ಮೇಘಧ್ವನಿ : "ಮೊಲಗು = ಮುಗಿಲ್ದನಿ" (ಶಮಂ. ೬-ಪು. ೦) ; "ಪೊಬಗೆನೆ ಮುಗಿಲ್ದನಿ [ಪಾಣಂ. ಮುಗಿಲ ದನಿ]" (ಕಾಪ್ರಯೋ. ೩೬). [ಮುಗಿಲ್ + ದನಿ,]

ಮುಗಿಲ್ದುಱುಗು (ಕ್ರಿ)· ಮೋಡವು ಕವಿ,— ಆವರಿಸು : ಅಲ್ಲೆ ಮಹಾಂಬುಧಿಯ ಗೆತ್ತ ಮುಗಿಲ್ದುಱುಗಿ ನೀರ ಪೊಗೆವವೊಲಂದೇಂ ಕತ್ತಲಿಸಿ ಬಂದು ನೀರಾಡುತ್ತಿರ್ದುವು ಸುತ್ತಮಲ್ಲಿ ವನಕರಿನಿವಹಂ (ಗಿರಂಭ. ೦೦೪). [ಮುಗಿಲ್+ತೊಱುಗು; (< ತೊಱುಕು)]

ಮುಗಿಲ್ದೇರ (ನಾ). ಮೋಡಗಳನ್ನು ರಥವಾಗಿ ಉಳ್ಳವನು : ದೇವೇಂದ್ರ : "ಇಂದಿರಾ ಪಲಗಣ್ಣಂ ಮುಗಿಲ್ದೇರಂ ಸಗ್ಗಗಣ್ಮಂ– ಈ .ಳಿ ಇಂದ್ರನ ಪೆಸರ್" (ಕಜಾ. ೪೯–೨೦) ; ಅಂತಪ್ಪ ಭಿನದಮಂ ನೋಡಿ· ಅಳವಿಜಂ, ಮುಗಿಲ್ದೇರಂ· ಮುಂಕಪ್ಪ ಬಿಡುಗಣ್ಣರುಂ, ನಾರದಾದಿ ರಿಸಿಗಳುಂ ಹರ್ತಂದು ಒಳಗೆ ಪುಗೆ ಗಲಭೆಗೆಯ್ದರ್ (ಅದ್ಭು. ೦೪).

[ಮುಗಿಲ್ + ತೇರ್$_2$ + –ಅ$_7$]

ಮುಗಿಲ್ಪೊರೆ 'ಮುಗಿಲ್ಪೊರೆ' ನೋ.

ಮುಗಿಲ್ಬಟ್ಟೆ 'ಮುಗಿಲ್ವಟ್ಟೆ' ನೋ.

ಮುಗಿಲ್ಮೀ (ನಾ). ಮೋಡದ ಬೊರು ; ಮೇಘದ ತುಣುಕು : ಇದುವರಿರ್ದ ಪಾವನೆ ಮುಗಿಲ್ಮೀಯೆಂಬಿನಮಿಂಬುಗೆಟ್ಟು ಕಂದಿದ ಮುಗಂಬುಗನ್ನಡಿವೊಲೇನಿಪ್ಪಿದಾವುದೊ ಚಂದ್ರಮಂಡಲಂ (ಶಂಶ್ರಕ್ಷ. ೯–೩).

[ಮುಗಿಲ್ + ಮೀ$_2$]

ಮುಗಿಲ್ವಟ್ಟೆ, ಮುಗಿಲುವಟ್ಟೆ, ಮುಗಿಲ್ಬಟ್ಟೆ (ನಾ). ಮೋಡಗಳು ಸಂಚರಿಸುವ ಪಥ ; ಆಕಾಶ : "ಆಗಸಂ, ಮಿಾಂಬಟ್ಟೆ, ಎರಲ್ವಟ್ಟೆ, ಸಗ್ಗಗಮಟ್ಟೆ, ಮುಗಿಲ್ವಟ್ಟೆ, ಬಾನ್—ಈ ೬ ಆಕಾಶಂ" (ಕಜಾ. ೪೯–೨೦) ; ಅಟ್ಟಿದ ಜಟ್ಟಿಗರ್ತಡೆದುದರ್ಕೆ ಕನಲ್ದು ವಿಭೀಷಣಂ ಮುಗಿಲ್ವಟ್ಟೆಯಿಸಟ್ಟಿ ತಿಂಬ ಜವನಂತಿರವೋದ್ಗೆಗೆ ಬಲದು ಪೊಕ್ಕ (ಕಂಂರಾಮ. ೩–೨೮) ; ಮುಳಿಮ ಮುಗಿಲ್ವಟ್ಟೆಗೆ ವಿಾಱಿ ಪಾಱುವ ಬಿಜ್ಜೋದರಿ ಬಿಗಿದುಟ್ಟ ಸುವರ್ಣಾಂಬರದ ಸೆಱಂಗು ನಿಶಿತಮೆನೆ ಕೊಂಕಿದ ನಿಜಕಂಟಕದೊಳ್ ತೊಡರ್ದು (ಇಜಾ. ೩–೩೫ ೫). **ಮುಗಿಲುವಟ್ಟೆ** : ಗಗನಮಾರ್ಗದಿ ನಾರದನು ಬರಲೊಗೆದವರ ಯುದ್ಧದು ನಿಜದೃಷ್ಟಿಗೆ ಸೊಗಸುಗೊಡೆ ನೋಡುತಿರ್ದನು ಮುಗಿಲುವಟ್ಟೆಯಲಿ (ಪಾಶ್ವ. ೨೯–೩೦). **ಮುಗಿಲ್ಬಟ್ಟೆ** : "ಮುಗಿಲ್ಬಟ್ಟೆಯನೆ ಗಗನದೊಳ್" (ಕಚಾಗಿ. ೩೦–೨೩).

[ಮುಗಿಲ್ + ವಟ್ಟೆ$_1$]

ಮುಗಿಲ್ವಟ್ಟೆಗ (ನಾ). ಆಕಾಶದಲ್ಲಿ ಸಂಚರಿಸುವವನು : ದೇವತೆ : ಮೊಗದಿಂದ ಪಾರ್ವರ ಪಡದು ನಿಗಮಶಾಸ್ತ್ರಾದಿಗಳತ್ತು ಜನ್ನಗೈಸುತ್ತ ಮುಗಿಲ್ವಟ್ಟೆಗರಿಗೆ ಮುದಮನತ್ತ ರಂಗೇಶ ಬಗೆದಂದು ಬಿಡದೆನ್ನ ಸಲಹು (ಚಚಾಂ. ೩–೨೯). [ಮುಗಿಲ್ವಟ್ಟೆ + – ಗ$_3$]

ಮುಗಿಲ್ವನಿ (ನಾ). ಮೋಡದಿಂದ ಬೀಳುವ ನೀರಿನ ತೊಟ್ಟು; ಮಳೆಯ ಹನಿ : ಜಲನಿಧಿಯುಂ ಮುಗಿಲ್ವನಿಗಳಿಂದಮಗುರ್ವಿಸುವಂತೆ ವಿದ್ಯಾನಾಂ ತಿಳಿಪಿದಪಂ ಗಡ (ಶಾಕುಂ. ೧೪೬). [ಮುಗಿಲ್ + ಪನ್ನಿ$_1$]

ಮುಗಿಲ್ವೆಳಗು (ನಾ). ಮೋಡಗಳ ಘರ್ಷಣೆಯಿಂದ ಉಂಟಾಗುವ ಬೆಳಕು; ಮಿಂಚು : "ಮುಗಿಲ್ವೆಳಗೆಂದು ಮಿಂಚು" (ಕಜಾ. ೩೩–೦೩೨).

[ಮುಗಿಲ್ + ಬೆಳಗು$_2$]

ಮುಗಿಲ್ಪೊರೆ, ಮುಗಿಲ್ಪೊರೆ (ನಾ). ಮೋಡದ ಪದರ ; ಮೇಘದ ತೆರೆ : ನೀಱ್ ಮುಗಿಲ್ಪೊರೆಯೊಳ್ ಪಿಬ್ಬೊೀಱುವ ಶಶಿಕಳೆಯ ಗಾಡಿಯಂ ಗೆರೆವಂದಳ್ (ಶಂಂರಾಮ. ೩–೨೦). **ಮುಗಿಲ್ಪೊರೆ** : ಕರಿಯು ಮುಗಿಲ್ಪೊರೆಯೊಳ್ ಸಂಚರಿಸುವ ವಿದ್ಯುಲ್ಲತಾವಿಳಾಸಮನಾಂತಾದರದಿಂ ನಿಜವಲ್ಲಭ ನೆಟ್ಟರಮಂ ಪಾರುತ್ತುಮಿರ್ಪಂ ದ್ರೌಪದಿಯಂ ಭೋಂಕನೆ ಕಂಡು (ಪಂಪಭಾ. ೦೦–೬೦). [ಮುಗಿಲ್ + ಪೊರೆ$_1$]

ಮುಗಿವು (ನಾ). ೧. ಕೊನೆ ; ಪರ್ಯವಸಾನ ; ಅಂತ್ಯ : ನದಿಯ ತೆರೆಯವೊಲುರುಳಿ ಹೊರಳುತಿರುವುದು ಜೀವ ಮೊದಲಿಲ್ಲ ಮುಗಿವಿಲ್ಲ ಸಲುವಿಲ್ಲವದಕೆ (ಪುಂಶಾಗ. ೦೬) ; ಲಕ್ಷ್ಮಣನೊಡನೆ ಬಳಿಯ ಪರ್ವತಮಾಲ್ಯ ಪಂತನ ಗುಹಾಗೃಹದಿ ಮಳೆಯ ಮುಗಿವ ವಾರುತಿರ್ದನ್ ರಘೂದ್ವಹಂ (ಶ್ರೀರಾಕಾ. ೩೦೯–೪). ೨. ಸಾವು ; ಮರಣ : ಹದ್ದಿನಂತೆ ಹೊಂಚು ಹಾಕುತ್ತಿರುವ ಕೃಷ್ಣದೇವ ನನ್ನ ಮುಗಿವಿನ ನಂತರ ರಾಜ್ಯಾಧಿಕಾರವನ್ನು ಕಸಿದುಕೊಳ್ಳದೆ ಸುಮ್ಮನಿದ್ದಾನೆಯೆ! (ಆಳಿ. ೦೦).

[ಮುಗಿ + – ವು·/ತಮಿ. ಮುಗಿವು]

ಮುಗಿಸು 'ಮುಗಿಯಿಸು' ನೋ.

ಮುಗಿಹ (ನಾ)· (ಕೈಗಳನ್ನು) ಜೋಡಿಸುವಿಕೆ ; ಸೇರಿಸುವಿಕೆ : 'ಕೈಮುಗಿಹ' ಪರಾ. [ಮುಗಿ + – ಹ (< – ಪ)]

ಮುಗುಟು 'ಮೊಗಳು' ನೋ.

ಮುಗಡ್ಡೆ 'ಮೂಗುಡ್ಡೆ' ನೋ.

ಮುಗುದ, ಮುದ್ದ$_3$ (ಗು)· ೧. ಮುಗ್ಧತೆಯಿಂದ ಕೂಡಿದ ; ಕಪಟ ವರಿಯದ : ಕೂಟ್ಟ ಬೇಸಱದ ಮುಗುದರಸು ದೊರಕದನಲೇ (ಪಚಾ. ೯–೭). (ನಾ)· ೨. ಕಪಟವನ್ನು ತಿಳಿಯದವನು ; ಸರಳ ಸ್ವಭಾವದವನು : ಎನ್ನ ಅಜಗಣ್ಣ ತಂದೆ ಶುದ್ಧಕ್ಕೆ ಹೇಸಿ ಮುಗುದ ನಾದನು (ಕಚಾಸ್ಥ. ೩೦–೨೯) ; ಆಗಯಲಲುಗುವ ಕಲೆಯ ಮುಪ್ಪಿನ ಮುಗುದನೀತವ ಕಾದ ಹೇಳದು ನಗೆಯ ಸುರಿದ್ಯೆ ರಾಯ ಕಟಕದೊಳು (ಕಾಪ್ರ. ೪೯. ೨–೭೫) ; ನಿಗಮಮನುತೆ ನೀರ್ವಾಣಿ ರಕ್ಷಿಸು ಮುಗುದರನು ಕರುಣದಲ್ಲಿ ನೋಡುತಲಿ (ಪಚಾ. ೩–೭೫). ೩. ದಡ್ಡ ; ತಿಳಿಗೇಡಿ ; ಮೂಢ : ಹಗೆಗಳಿಗೆ ತಂಪಾಗಿ ಬದುಕುವ ಮುಗುದರಿನ್ನಾರುಂಟು . . . ಲೋಕದಲಿ (ಕಾಪ್ರಾ. ೩–೩೦) ; ಶ್ರೀಪಾದನಂಥ ಮುಗುದಯ್ಯನು ಹೀಗೆ ಎಲ್ಲಿಗೆ ಹೋಗಿದ್ದಾನು! (ಕಚಾ. ೩೦). ೪. ಬೆಲುವ ; ಸ್ಫುರದ್ರೂಪಿ : "ಮುಗುದ (ಮುಕುಡು)—ಮುಗ್ಧ=ಸುಂದರ, ಮೂಢ" (ಕಪ್ರಕೋ. ೩೬).

ಮುದ್ದ$_3$: ೨. ಮುದ್ದರಾವ್ಣಂ ಲೌಕಿಕರು ಕರಿವರೆನ್ನ ಗೊಗ್ಗಯ್ಯನೆಲೆಂದು (ಕ್ರಕುಪ್ರ. ೬–೦೦೬). [< ಸಂ. ಮುಗ್ಧ]

ಮುಗುದತನ (ನಾ)· ೧. ಮುಗ್ಧಸ್ವಭಾವ ; ಸರಳತನ ; ಕಪಟವಿಲ್ಲದ ನಡವಳಿಕೆ ; ನಗುತ ರಾಮುವ ಸರಚರಿತ್ರದ ಮುಗುದತನಕೆ ನಮೋ ಯೆನುತ · ಪದಯುಗಳಕಾನತನಾಗಿ ಹಾಯ್ದನು ಸಭೆಕಿ ವಿಹಗೇಂದ್ರ (ಕೋಡಾ. ೬–೦೬–೬೯). ೨. ಎಳೆತನ ; ಬಾಲ್ಯ : ಮುಗುದತನದೊಳೆದ ಮುಚ್ಚಿರೆ ಹರಯವೆ ತರೆಯದೆ ? ಅದ ನಚ್ಚಲು ಬಹುದೇ? (ಪಕ್ಕ. ೯–೨೨).

[ಮುಗುವ + – ತನ]

ಮುಗುದಾಣ 'ಮೂಗುದಾಣ' ನೋ.

ಮುಗುದೆ (ನಾ)· ೧. ಸರಳಸ್ವಭಾವದ ಹೆಣ್ಣು : ಕಪಟವರಿಯದವಳು : "ಮುಗುದೆ — ಮುಗ್ಧಾ" (ಕಪ್ರಕೋ. ೩೬); ನೇಹದ ಮುಗುದೆ ವೀಳೆಯವಾಗಿ ಮಹಾಲಿಂಗಗಡೇಶ್ವರನಲ್ಲಿ ವಿಹಾರಗೊಂಡು ಇದ್ದಳವ್ವೆ (ಸಡಾಸ. ೩೩–೨೦೪) ; ಕಳವಳದ ಕರಣದ ಮುಗುದೆ ಬಂದಳು ಬಾಣಸಿಗ ಮನೆಗೆ (ಕಾಪ್ರಾ. ೩–೩೩); ನೋಗಯಿಪ ಚಂದ್ರಕಾಂತದ ಭಿತ್ತಿಯೊಳು ತನ್ನ ಯೊಗಳ್ದ ರೂಪ ಬಿಂಬಿಸಲು ಅಗಲ್ದವಿಯನ ತೋಱಿಸು ಬಾಬಾ ಯೆಂದು ಮುಗುದೆ ಬಿದ್ದಳು ಚರಣದಲಿ (ಕೋಚಕ. ೦೮–೩೩). ೨. ಎಳೆಯ ವಯಸ್ಸಿನ ಹುಡುಗಿ ; ಬಾಲೆ : 'ಮುಗುದತನ' ಪರಾ. ೩. ಬೆಲುವೆಯಾವ ತರುಣಿ ; ಸುಂದರ ಯುವತಿ : ರತಿಕಾಶಲವ ಪೆಱಿವ ಮುಗುದೆಯರು ಮುರಹರನ 'ಮನವನು ತೆಗೆಯಲರಿಯರು (ಕಾಪ್ರ ೦೦–೩೭–೩೦). [< ಸಂ. ಮುಗ್ಧಾ]

ಮುಗುದೆತನ (ನಾ)· ಎಳೆತನದ ಸರಳಸ್ವಭಾವ ; ಅರಿವಿಲ್ಲದಿರುವಿಕೆ : ಕುಂತಿಭೋಜಗೆ ಮಗಳಹೆನು ತಾಂ ತನ್ನ ಬಾಲ್ಯದೆ ಮುಗುದೆತನದೊಳು ಬೆಳೆಯುತಿರಲು (ಕುಣ್ಯ. ೨೦೩. ೦೦ ೩೦ ೦೦೫೮೨). [ಮುಗುದೆ + – ತನ]

ಮುಗುವಳಿ (ನಾ). ೧. ಸಂಬಳ, ಬಾಡಿಗೆ ಕೆಲಸ ಮುಂತಾದುವುಗಳ ಬಗ್ಗೆ ಮಾತುಕತೆ ಮುಗಿದ ಮೇಲೆ ಮಾಡಿಕೊಳ್ಳುವ ಒಪ್ಪಂದ, — ಕರಾರು. —ಗೊತ್ತುವಳಿ : ಈಗಲೇ ನಾವು ಗುಪ್ತವಾಗಿ ಹೋಗಿ ಪರ್ವತರಾಜನಲ್ಲಿ ಸೂರೆ ಮಾಡುವಂತೆ ಮುಗುವಳೀ ಹೊತ್ತುಕೊಂಡು ಅವರವರ ಶಕ್ತ್ಯನುಸಾರವಾಗಿ ಹಂಚಿಕೊಂಡು ತುಂಬರಿಗೆ ಆಸ್ಪದವಾಗದಂತೆ ಮಾಡಬೇಕು (ಕುಸ್ರಾಹಾ- ೦೫೯); ಈ ಮುಗುವಳಿಯು ಸದ್ಯಕ್ಕೆ ಮೂರು ತಿಂಗಳವರೆಗೆ ಸಡಿಯಲಿ ; ಆಮೇಲೆ ನೋಡೋಣ (ರಾಣಾಪು- ೦೩೩). ೨. ಮುಂಚಿತವಾಗಿ ತೆಗೆದುಕೊಳ್ಳುವ ಹಣ ; ಮುಂಗಡಹಣ : ಕೆಲವು ಜನಗಳ ಕತೆಯಿಂದ ಮುಗುವಳಿಯನ್ನೂ ತೆಗೆದುಕೊಂಡು . . . ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು (ಪುಜಾಚಂ- I- ೨೦೪) ; ನಾಟಕದ ಖರ್ಚಿಗೆ ಆಗಿಗೆ ಒಂದೊಂದು ರೂಪಾಯಿ ಮುಗುವಳಿ ಕೊಡುವೇಕೆಂದು ತೀರ್ಮಾನವಾಯಿತು (ಪಪ್ರಕೃ- ೩೦೨).

[< ಮುಗಿ + — ವಳಿ]

ಮುಗುಳ್$_1$, **ಮುಗುಳ್ಳು**$_1$ (ಕ್ರಿ). ೧. ಮೊಗ್ಗಾಗು ; ಮೊಗ್ಗು ಕಾಣಿಸಿಕೊಳ್ಳು : "ಮುಗುಳ್ತುದೆಂದು ಮುಗುಳೇಜುದುದು" (ಗಪಾಂ. ೪೪-೦೪೦) ; ಮಾಧವಿ ಮುಗುಳ್ತವೊಲಿರ್ದಳವೆಂದಿರಿಂದಮೇಂ ಪಡೆದುವೊ ಲೀಲೆಯಂ ಮಾಣ್ಪಮರೀಚಿವಿಚಿತ್ರಿತಪಾಟ್ಯಶಾಲೆಗಳ್ (ಪುಗ್ಗಕ- ೨-೭೦) ; ಕಲಿದುದು ಮೊಲ್ಲೆ ಮಲ್ಲಿಗೆ ಮುಗುಳ್ತುದು (ಕರ್ಣಪ- ೪-೪೯) ; ಮುಗುಳ್ತೊಱೆದರ್ದ ಮನೋಜ್ಞಮಲ್ಲಿಕಾಬ್ಜೀರಮನೂನಪುಷ್ಪಚಯಮೊಪ್ಪಿರೆ ನಂದನಮಲ್ಲಿ ರಂಜಿಸುಂ (ಪಾಪಪು- ೨-೪೦). ೨. (ಹೂವು ತನ್ನ ದಳಗಳನ್ನು ಮುಚ್ಚಿಕೊಳ್ಳುವಂತೆ) ಕಣ್ಣನ್ನು ಎವೆಮುಚ್ಚಿಕೊಳ್ಳು, — ನಿಮೀಲನಗೊಳಿಸು : "ಮುಗುಳ್ — ನಿಮೀಲನೇ (ಕಣ್ಣಂ ಮುಚ್ಚು), ಕುಟ್ಮಲೇ ಚ(ಮೊಗ್ಗು)" (ಶಬ್ದಾ) ; ಸೊಗಯಿಪ ಮುನ್ನಿರ್ವ ಪರಿಜಂ ಕಡುಚೆಲ್ವು ಗಡಂ ಪಿನೇಂದ್ರನಂ ಬಗೆವ ಮನಂ ಗಡಂ ಮುಗುಳ್ದು ಜಾನಿಪ ಕಣ್ ಗಡಮಾತ್ಮ ತತ್ತ್ವದೊಳ್ ಬಗೆ ಗಡಂ (ಅಜಿತ. ೨-೬೦) ; ಪಜ್ಜೆದ ತಲೆ ಪಟ್ಟು ಬಾದಮಾ ನುಮುಖದ ಕೊರಲ್ಮುಗ್ಗಳ್ದ ಕಣ್ಗಳರುಣಜಲದಿಂ ಪೊರೆದ ತನುವೆರಸು ಬೀಭತ್ಸರಸಮನಭಿನಯಿಸುತಿರ್ದರಿಲ್ಲಿ ಭಟರ್ಕಳ್ (ಗಣಾಯ- ೪-೨೨) ; ನೆಜಿ ಮುಗುಳ್ದಕ್ಷಿಯ ಮಿಡುಕದಂಗದ . . . ಪೊಡರ್ಪೆಸೆಯೆ ತಾಪಸಂ ತಪಮಿರ್ದಂ (ಪಾಪಪು- ೨-೮೪)- ೩. ಮೊಡು ; ಪೊಳೆ ; ಅಂಕುರಿಸು : ನೀರಜದ ನಡೆ ಮುಗುಳ್ತುದು . . . ಚಕೋರವೆ ಮಮಮುಡುಗಿ ಪೋಯ್ತು ಮುನ್ನೀಸಱಿನೊಳ್ (ಕಾಸುಪಾ. ೧೧-೭೪). **ಮುಗುಳ್**$_2$: ೧. ಅಂಥ ಒಂದು ಅನುಭವಮುಹೂರ್ತವು ಸೃಷ್ಟಿತಿಬೀಜವಾಗಿ ರಸಸೇಚನವನ್ನು ಹೊಂದಿ ಮೊಳೆತು, ಚಿಗುರು, ಕೊಪರಿ, ಮುಗುಳಿ ಕಾವ್ಯಕೃತಿಯಲ್ಲಿ ಅರಳುವನು (ಕಾಸಾಂ. ೧೪೦). ೩. ಎನಿತು ಬೆಲುವಿನ ನೋಟ ವಿನು ಒಲವಿನ ಕೂಟ ವೆಂಬ ಬಗೆಯುಲಿ ನೆಗವು ಮುಗುಳುತಿತ್ತು . (ರಾಣಾಸಿ- ೦-೦೪)- ೪. (ಹೂವಿನ ದಳಗಳು) ಸಂಕೋಚನ ಹೊಂದು ; ಮುಚ್ಚಿಕೊಳ್ಳು : ಬೆಳಕು ಮೂಡೆ ಮುಲರಿ, ಮುಳುಗೆ ಮುಗುಳಿ . . . ಆಃ ಇಂತೆನ್ನ ಬಾಳರಳಿದರೆ ಧನ್ಯನಲ್ತೆ (ಅಖಿಃ- ೨೬-೦೪)-

[ದೇ. ‖ ತಮಿ. ಮುಕಿಟ್ಟು; ಮುಕಿಳ್ ; ತುಳು. ಮುಕುರು, ಮುಗುರು ; ತೆಲು. ಮೊಗುದು]

ಮುಗುಳ್$_3$, **ಮುಗುಳ್ತು**$_3$ (ನಾ). ೧. ಅರೆಬಿರಿದ ಹೂವು ; ಕುಟ್ಮಲ : "ಕೋರಕಃ, ಜಾಲಕಃ, ಕಳಿಕಾ, ಕುಟ್ಮಲಃ, ಮುಕುಳಃ — ಈ ೫ ಪೂವಿನ ಮುಗುಳ್" (ಹಾಶಬ್ದಾ- ೩೦-೬೨) ; ಕಾಮರೆಯುರುಳೊಳ್ ಸರಸಸುಜಾ ಮೋದದೊಳೊಂದಿ ನಲಿದು ಮಕರಂದರಜೋವ್ಯಾಮಮುಗ್ಧದೋಳೀ ಮುಗುಳೊಳಮಾ ಮಾಲ್ಕಿಯನಲ್ಲಿ ಸುಜಿವುದಳಿ ಕೆಲಕೆಲದೊಳ್ (ಗಪಾಂ. ೪-೦೨೬) ; ನಿನ್ನೆ ನೀವಾದಿತ್ಯಂಗೆ ಪೀರಂ ಸೂಸಿ ಪೊಮೆಮಡುವಾಗಳಾ ನೀರ್ಪೆರಸು ಸೂಸಿ ಪಾಮರೆಗೆಱಿಯೊಳಗೆ ಮುಬುಗಿರ್ದ ಮುಗುಳ ಮೇಗೆ ತಗುಳ್ದಿರ್ದುದು (ಪಪ್ರಾಣ- ೩-೦೩) ; ನನೆಯು ಕೊನೆಯ ತಳರೆ ಮುಗುಳ ವನಲತಾನಿಕುಂಜದಿಂ ಪ್ರಸೂನರಜವ ಪೊಂಪಡಿಂ (ಪಂಪಭಾ- ೦-೩೮ ಈಗ) ; ಪೂವಳ್ಳಿಗಳ್ ನನೆಕೊನೆಮುಗುಳರೆಮುಗುಳ್ ಬಿರಿಮುಗುಳೆಂಬುಲ್ಲರ್ದ ಪೊಸ ಮಲರ್ಗಳಿಂದೆ ಸೊಗಯಿಸೆಮುಂ (ರಾಜಾಖ್ಯ- ೦೬-೩). ೨. ಮೊಗ್ಗಿನಾಕಾರದಲ್ಲಿ ಮಾಡಿದ ಒಂದು ಬಗೆಯ ಅಭರಣ : ಬೆಳತಿಗೆಗಣ್ಣ ಬಳಮಿಗಿದುವೆ ಗುಜಿಸೋಂದು ಕಂಜಿಪಾಸ್ಯವಂತ ಕೊನೆಗೊಡಂಕೆಯೊಳ್ ತೋರಮುತ್ತಿನ ಮುಗುಳಂ ತೆಗಳ್ವಿಯೊಂ (ಹಂಪ್ರಕೃ- ೩-೩೩ ೪). **ಮುಗುಳು**$_3$: ೧. "ಕುಟ್ಮಲಃ, ಮುಕುಲಃ— ಈ ೨ ಮುಗುಳು" (ಗಣಪ್ರಾ- ೦೦೬) ; ಆಕಾಶ ಸರಸಿಯೋಡಿದ ತಾವರೆಮುಗುಳುಗಳೂ ಸುರಪಡೆಯೊಳ್ಕಿದ ಮುಗಿದ ಕೈಗಳೂ ಚಿತ್ರವಾಯ್ತು (ಕುಶಾಕ್ಷ- ೬-೩೩) ; ಸರಸಿಜಗಂಧಿಯ ವದನನಂದನದಲಿ ನೆಜಿ ಪೂತು ಸಾಲುಗೊಂಡಿಸೆವ ಪಿದಿವಾ ಮೊಲ್ಲೆಯ ಮುಗುಳ್ತುಗಳಿನೆ ಮೆಜ್ದಿದುವು ವಿಜ್ರುಂಭಿಸುವ ದಂತಪಂಕ್ತಿಗಳು (ಶಂಚಂ- ೯-೩೩).

ಮುಗುಳ ಕಂಕಣ = ಕೈಗೆ ತೊಡುವ ಒಂದು ಬಗೆಯ ಮೊಗ್ಗಿನಾಕಾರದ ಆಭರಣ : ಧುರಮೊಳಲುತಿಯ್ಯನುಚ್ಚಿದಡರಿನ್ನಿಪದುವತಿಯರ ಮುಗುಳ ಕಂಕಣದಾ ಕೀಲ್ಪರತರದಿನಲ್ಚಿದವು ನಿಜಕರಮಿಲ್ಲಮವರ್ಕ್ಕಿ ಕೀಲೆ ಶಾಪ್ತರನ್ಯಪತಿ (ಎಕಿ. VIII, ಪಗ- ೫೪-೨೪; ೧೦೬೭). ಮುಗುಳಾಗು = ೧. ಮೊಗ್ಗಾಗು; ಹೂವಾಗಿ ಅರಳದಿರು : ಅಲರಾಗಿ ನಿರೀಕ್ಷಿಸಿ ಕಾದುಸಂ ಮುಗುಳಾಗಿ ಸೋಂಕಿದೆಡೆಯೊಳ್ ಕಾಮಂಗೆಸದ ಸರಳಾಗಿ ಪಳಂಚಲೆವುದು ತೊಳಪವಳಪಾಂಗವಲರ್ಗಳ ಪ್ರಾಂಗಂ (ಕರ್ಣಪ- ೦-೭೩); ಕಮಲವೆದೆಯ ದೊಳರಳಿ ಸಂಜೆಯಲಿ ಮುಗುಳಾಗಿ ಸುವುವಪ್ಪುದಂತೆ ಮರುವಗಲು ಮಗುಳ್ವು (ಪಂಚಾಖ್ಯ- ೧೦). ೨. ಮೊಗ್ಗುಬಿಡು ; ಮೊಗ್ಗು ಕಾಣಿಸಿಕೊಳ್ಳು : "ಪವಿಪಿ ಮುಗುಳ್ತುದೆನೆ ಮುಗುಳಾದುದು" (ಕ್ಷತ್ರ- ೦೧೩-೦೯); ಗಗನಾಪಗೆಯು ಜಲಲಕ್ಷಣವದಂಬಮೊ ಮುಗುಳಾದುದೂ ಗಗನ ವೆಂಬ ಕಡಲದ ಮರಸುಂ (ಹರ್ಷಾಶ- ೨-೬೨)-

[< ಮುಗುಳ್$_1$- / ತಮಿ- ಮುಕಿಲುವು- ಕೊಳ್ಳುಳ್; ಮಲ. ಮ್ಲುಕಿಟ್ಟು; ತುಳು. ಮುಗುರು. / ಸಂ. ಮುಕುಲ]

ಮುಗುಳಂಬು (ನಾ). ಮೊಗ್ಗಿನ ಬಾಣಗಳುಳ್ಳವನು ; ಪುಷ್ಪಬಾಣ; ಕಾಮ; ಮನ್ಮಥ : ಮುಗುಳಂಬನೊಡಲ ಬೇಡಿದಳು ರುಕ್ಮಿಣಿ ಗಡಲು ಮಂಗವಾಗಬೇಕೆನಲು (ಪೋಚಕ. ೦೦-೦೦); ಮುಗುಳಂಬನುಜುಬೆಗ್ಗಾಣದೆ ಪೊರಳುತಿಹ ಮಂತ್ರಿಮಂಗಳೆಯ್ದೆ ಪರಿತಂದು ನುಡಿದಳೊಸಗೆಯನಾವ್ಪಸುಖಿಯೊರ್ವಳಳಿ ಕೂತೆ (ಕೃಪಾಶಾ. ೩೦-೨) ; ಮುಗುಳಂಬನ ಮಾಡಿಗಮರಿದ ಪನಿಮೃಳಪ್ಪೊಗುವ ಪೂದೋಬೆಯಂತಿಪರು (ಕಂಪಂ. ೬-೯೪).

ಮುಗುಳಂಬುಕೇಳಿ = ಮದನಕೇಳಿ ; ಕಾಮಕೇಳಿ ; ರತಿಕ್ರೀಡೆ : ಎನ್ನ ಬೀಡಿಪ್ಪಿ ಜುಂಬಿಸವನೀಯೆ ಕೂಡಿ ಮುಗುಳಂಬುಕೇಳಿಯೊಳು ಸುಯ್ದ ಧೀಜಗದುರ್ಕ್ಕಸನ ವಾಕ್ಯ ಕೇಳ್ದು ಕಂಗೆಟ್ಟು (ಪಾಂಚಚ- ೩೩-೫೦). ಮುಗುರಂಬನಾಗ = ಮನ್ಮಥನ ಮಗ ; ಅನಿರುದ್ಧ : ಹೊಗಲಚ್ಚರಿಗೆಯ್ದ ಚಕಿತವಾರಿಯರನು ಮುಗುಳಂಬನಾಗಳ್ಗಕ್ಷಿಸಿದ (ಪೋಚಚ. ೦೬-೪೦).

[ಮುಗುಳಂಬು +— ಅ]

ಮುಗುಳಂಬು (ನಾ). ೧. ಮೊಗ್ಗಿನ ಬಾಣ : ಬಿಕ್ಕರದ ಭಲ್ಲೆಯ ಮಾಚಿದಿ ಸುಸಂಪಗೆಯ ಮುಗುಳಂಬು ದೊರೆವಡೆದ ಕಣಗಿಲ ಪುಳುಂಬವ . . . ಬತ್ತಳಿಕೆಗಳು ನೆರೆದಿರ್ಪವರಲ್ಲಿ (ಕಾಕೃಭಾ- ೩-೦೪). ೨. (ಮನ್ಮಥನ) ಹೂಬಾಣ; ಪುಷ್ಪಬಾಣ : ಮಂಗಳೆ ನಿನ್ನದು ರೂಪ ಗುಣ ಶೀಲವ ನೋಡಿಪಗಳಿತ್ತಸುರನರೋರಗರು ಮುಗುಳಂಬಳೊಳಗಾದರು (ಪೋಚಚ- ೨೩-೩೩). ೩. ಒಂದು ಬಗೆಯ ಚಿಕ್ಕಬಾಣ : ತೆಱ ಮೊನೆಯ ಮುಗುಳಂಬುಗಳ ಸೈಗಜಿದನಭಮನ್ಮಥನ ಮೆಯ್ಯಾಲಿ ತುಜ

ದವು ಮುಱಿದುಂಬಿ ಕೆಂದಾವರೆಗೆ ಕವಿವಂತೆ (ಶಾಂ೫ರಿತ್ರೇ. ೫-೭೪); ಅಲಿಸೈ ಮುಗುಳೆಂಬು ಸಾವಿರವೇಳು ಬಳಿಕೊಂಬತ್ತುಸಾವಿರಕೋಲು ಪಿಂಡಿಯೆ ಕವಲುಗಣೆ ಹನ್ನೆರಡುಸಾವಿರವು (ಶುಣ೫ಕ್ಷೇ. ೦೯-೨೨).

[ಮುಗುಳ್[2] + ಅಂಬು[2]]

ಮುಗುಳಕ್ಕಿ, ಮುಗಳಕ್ಕಿ (ನಾ). ಸರಿಯಾಗಿ ಬೇಯದೆ, ಹೊಗ್ಗಿನಂತಿರುವ ಅನ್ನ; ಪೂರ್ತಿಯಾಗಿ ಅರಳದೆ, ಅರಿಬೆಂದ ಅನ್ನ.—ಪಕ್ವವಾಗದ ಅನ್ನ: ಇವತ್ತು ಒಲೆ ಸರಿಯಾಗಿ ಉರಿಯದೆ ಅನ್ನ ಮುಗುಳಕ್ಕಿಯಾಯ್ತು (ಕಸ). ಮುಗಳಕ್ಕಿ: ಸಮಯ ತಪ್ಪಿ ಯಾವಾಗಲಾದರೂ ಇವಳು ಅಡಿಗೆ ಒಲೇ ಮುಂದಕ್ಕೆ ಹೋದರೆ, ಅನ್ನ ಮುಗಳಕ್ಕಿಯೋ ಇಲ್ಲ ಮಿಡ್ಡೆಯೋ ಆಗುತ್ತಿತ್ತು (ಪಾಪುಶಾ. ೪೬).

ಮುಗಳಕ್ಕಿಗಂಜಿ = (ಔಷಧಕ್ಕಾಗಿ ಬಳಸುವ) ಅರಿಬೆಂದ ಅನ್ನದ ಗಂಜಿ: ಪಕ್ವವಾಗದ ಅನ್ನದ ಗಂಜಿ: (ಟಿ).

[ಮುಗುಳು[2] (< ಮುಗುಳ್[2]) + ಅಕ್ಕಿ[2]]

ಮುಗುಳಲರ್ (ನಾ)- ಅರಳುತ್ತಿರುವ ಹೂವು; ಅರೆಬಿರಿದ ಹೂವು: ಪೊಲಬ ಬೀದಿವೀದಿಗನ್ನತುಮನೋರಂತೆ ತಂದು ಗುಡಿಗಟ್ಟಿಸಿ ನೀಂ ನನೆಯ ಮುಗುಳಲ್ಲರ ತುಱುಗಲನನಂತಮಂ ನೆಱಿಯೆ ಕವಲಿವೇಟ್ ನೃಪತಿಳಕಾ (ಆಪ್ರ. ೫-೬); ಮುರಹರನಂತಃಪುರಪುರಂಧ್ರಿಕಾನಿಕಾಯಮುಮಾ ವಸೋದರದ ಪೂಮರದ ಲತೆಯ ಸಂತತಿಯ ಮುಗುಳಲರ ತುಱುಗಲ್ಗಳಂ ನೆಱಿವಿನ ಮಾಯ್ದುಕೊಂಡು ಮಂಡನಾವಳಿಯನೆಸೆಯ ಸಮಂದು ಪಸದನಂಗೊಂಡು (ಕೇಬಾಪ್ರ. ೦೫-೨೦ ಪ); ಮುಗುಳಲರ್ ಪೆಣ್ಣಾಯ್ಕೊ ಪೆಣ್ಣೆ ಮುಗುಳಲರಾಯ್ಕೊ (ಶ್ರೀಧಾಪು. ೦೫೪-೦೫೬). [ಮುಗುಳ್[1] + ಅಲರ್[2]]

ಮುಗುಳಿ[1], ಮುಗಲ್, ಮುಗಳಿ (ನಾ). ೧. ಒಂದು ಬಗೆಯ ಮುಳ್ಳಿನ ಮರ: ದಿಂಡ ಪಾತಂಗ ಮುಗುಳೆಯ ಮರನು. . . ಬಳಲಿ ಬಂದವರಿಗೆ ವಳರಿಯುಮ್ಮತದಂತೆ ನೆಳಲಾಹ ವೃಕ್ಷವಲ್ಲಿಪವು (ಪಾಪುಶಾ. ೦-೩೩); ಮುಗುಳಿಯ ಮರದ ನೆರಳಿಂದ ನುಂಗುವ ನೆಗಳು ಲೇಸೆಂದ (ಸರ್ಪಶಿ. ೦೩೫); ಮುಗುಳಿಯ ಒಳನುರಂ ಆಡಿನ ಹಾಲಿನಲ್ಲಿ ಅರೆದು ಕುಡಿಯೆ ಎಂಥಾ ಕಿಮ್ಮುಲಾದರೂ ಮಾಣ್ಗುಂ (ಸಂಕ್ರ. ೨೦೦). ೨. ಒಂದು ಊರಿನ ಹೆಸರು: ಪಸುಣ್ಣ ಮುಗುಳಿ ಪರನ್ನ ಮುಳ್ಳುನ್ನ ಏತೇಷಾಂ . . . ಮಧ್ಯಸ್ಥಿತೇ (ಇಂ. VII, ೨೨೦-೨೯; ೦೭೮); ಮುಗುಳೆಯ ನಾಗಮಯ್ಯ ಬಸವನ ಹಳ್ಳಿಯ ಬಿಷಮನ್ನ (ಚಿಕ್ಕ. XV, ಕೇದಾಸಾ. ೩೦೯-೦೦; ೦೧೫). **ಮುಗರ್**: ೧. "ಮುಗಿನ ಹುಳಿಮರ . . . ಮನುವಜ ಹುಳಿ. ಮುಗಲ್. ಮರ್ಗಲ್. ಕೋಕಂಮರ" (ಪಸ್ಪ. ೦೭೬). **ಮುಗಳಿ**: ೧. "ಮುಂಗಳಿ. ಮುಗ್ಲಿ. ಶಮಿ. ಚಿಲಯುದಿ. ಬನ್ನಿಮರ. ಮುಗಳಿ" (ಪಸ್ಪ. ೪); ಮುಗಳಿ, ಮುಗ್ಲಿ (ಪ್ರಶಿಗಿ. ೫-೦೯); ಮುಗಳಿ. ಸೀಗೆ. ಬಾಗೆ. ಸೀಮೆಹುಣಿಸೆ (ಪಪ್ರಹು. ೨೩೬).

[ದೇ.ಕ ತಮಿ. ಮಾಕಿಲ್, ಮ್ಯಾಕಿಲಮ್ ; ಮಲ. ಮುಕಿಲ್]

ಮುಗುಳಿ[2] (ನಾ)- ೧. ಎತ್ತರವಾದ ಪ್ರದೇಶ: ದಿಣ್ಣೆ: `ಮುಗುಳಿಗದ್ದೆ' ಪರಾ. ೨. (ದೇವಸ್ಥಾನ ಮೊದಲಾದುವುಗಳ) ಗೋಪುರ; ಶಿಖರ: ಆ ದೇವಸ್ಥಾನದ ಮುಗುಳಿ ತುಂಬ ಎತ್ತರವಾಗಿದೆ (ಕಸ).

[← ತುಳು. ಮುಗುಳಿ]

ಮುಗುಳಿಗದ್ದೆ (ನಾ). ಬೆಟ್ಟದ ತುದಿಯಲ್ಲಿದ್ದು ಮಳೆಯ ನೀರನ್ನೇ ಆಶ್ರಯಿಸಿರುವ ಗದ್ದೆ— ಜಮೀನು: (ಪಪಂಗ್ರ. ೦೬೫).

[ಮುಗುಳಿ[2] + ಗದ್ದೆ (< ಗಟ್ಟಿ)]

ಮುಗುಳಿಸು (ಕ್ರಿ)- ೧. ಹೊಗ್ಗು ಬಿಡು; ಹೊಗ್ಗು ಕಾಣಿಸಿಕೊಳ್ಳು: ಪಂಪಮಾದ ದಂಪತಾಲತೆಯ ತಿಱಿಲೇಱಿದ ಕರವೀರಲತೆಯ ಮುಗುಳಿಸಿದ ವಕುಳಲತೆಯ ಬಾಳ್ತೊಡೆದ ಬಳಸು ವಿಳಸಮಾದ ರತ್ನರಚಿತಕೈತಕಾಚಲಂ ಗಳೊಳ್ (ಆಪ್ರ. ೦೦-೨೪ ಪ). ೨. (ಮೊಗ್ಗಿನಂತೆ) ಮುಚ್ಚಿಕೊಳ್ಳು: ತನ್ನ ಕಡುಸೊಡರ ಬೆಳ್ಳನ್ನ ತಿಳಮಂಜಾವದನ್ನ ಮುಗುಳಿಸುವ ಬೆಳ್ಳಿಯು ಬಟ್ಟಲಿಂ ಬೆನ್ನೆಸುವ ಕೂರ್ಗಣಿಗಳನ್ನ ದೆಲ್ಲಿಹುದೆಂಬುದನ್ನರಿವಂತೊ ಕಂಗೊಳದನ್ನಗಂ (ಗೀಪ್ರ. ೫-೬). ೩. ಅರಳಿಸು; ವಿಕಾಸಗೊಳಿಸು: ಪೂಜೆಯಿಲ್ಲದಾ ಪೂಜ್ಯನು ಹೃದಯದಿ ಪೂನಗೆ ಮುಗುಳಿಸಿ ತಾಳುವನು (ಅರಳು. ೦೯೩-೦೪).

[ಮುಗುಳ್[1] + —ಇಸು[3]]

ಮುಗುಳು[1] 'ಮುಗುಳ್[1]' ನೋ.

ಮುಗುಳು[2] 'ಮುಗುಳ್[2]' ನೋ.

ಮುಗುಳುಗಣ್. ಮುಗುಳುಗಣ್ಣು (ನಾ). ಮುಚ್ಚಿಕೊಂಡಿರುವ ಕಣ್ಣು: ನಿಮ್ಮಿಲಿತ ನೇತ್ರ :- ಮುಗುಳುಗಂಗಳ ಮೇಲುಗುದಿದೋಳುಗಳ ವಿಡುಕುವ ತುಟಿಯ . . . ಪೊಸ ತಪಸಿ ತೊಡಗಿದನು ಬಲುತಪ್ಪ (ಶಾಂ೫ರಿ. ೯-೪೩); ಅರ್ಘ್ಯವೆಂತಿದ ಕೈಯ್ಯ ಅಂಜಲಿಗದೇನೊ ಬಿಲ್ದಪೂಲಾಗ್ಯ ತವಳ ಮೆಯ್ ಜುಮ್ಮೆನೆ ನವಿರ್ನಿಮಿರಲೊಯ್ಯನೆ ಮುಲರ್ದುವಾ ಮುಗುಳುಗಣ್ (ಕ್ರಿಣಪ್ರಪ. ೫೦೯-೨೦೩). **ಮುಗುಳುಗಣ್ಣು**: ಮುಗುಳುಗಣ್ಣುಗಳು, ಮೇಲೆತ್ತಿದ ತೋಳುಗಳು, ವಿಡುಕುವ ತುಟಿಗಳು (ಪಾಪುಶಾ. ೯೨).

[ಮುಗುಳು[2] (< ಮುಗುಳ್[1]) + ಕಣ್]

ಮುಗುಳುಗಣೆ 'ಮುಗುಳ್ಗಣೆ' ನೋ.

ಮುಗುಳುಗಣೆಯ 'ಮುಗುಳ್ಗಣೆಯ' ನೋ.

ಮುಗುಳುಗಣ್ಣು 'ಮುಗುಳುಗಣ್' ನೋ.

ಮುಗುಳುಗಾಯಿ 'ಮುಗುಳ್ಗಾಯ್' ನೋ.

ಮುಗುಳುಗೊಂಬು (ನಾ). (ಅನೆಯ) ಮೂಡುತ್ತಿರುವ ಕೊಂಬು; ಮೊಳೆಯುತ್ತಿರುವ ಕೋರೆ. — ದಂತ: ಜೋಟುಕೊಂಬಿನ ಆನೆ ೧ಕ್ಕೆ ೩೦ ವರಹ ಕ್ರಯ, ಮುಗುಳುಗೊಂಬಿನ ಆನೆ ೧ಕ್ಕೆ ೨೫ ವರಹ ಕ್ರಯ (ಕುಪಾಪಂ. ೩, ೫೯). [ಮುಗುಳು[1] (< ಮುಗುಳ್[1]) + ಕೊಂಬು[2]]

ಮುಗುಳುದೆನೆ (ನಾ). ಅರಳುತ್ತಿರುವ ತೆನೆ; ಮೊಳೆಯುತ್ತಿರುವ ಹೊಡೆ: ವ್ಯರ್ಥವಲ್ಲವೆ . . . ಮುಗುಳುದೆನೆಯ ಎಳೆತುಳಸಿದಳಗಳ ತಂದು ಪ್ರೇಪಾದಿಂದ ಜಗನ್ಮೋಹನಪೂಜೆಯ ಮಾಡಿ ಭರಣಕೆಱಗದವನ ಜನುಮ (ಕುಹಂರ. ಧಾ. ೨-೫೯-೨). [ಮುಗುಳು[1] (< ಮುಗುಳ್[1]) + ತೆನೆ[1]]

ಮುಗುಳುನಗು 'ಮುಗುಳ್ನಗು[1]' ನೋ.

ಮುಗುಳುನಗೆ 'ಮುಗುಳ್ನಗೆ' ನೋ.

ಮುಗುಳುಬೊಕ್ಕೆ (ನಾ). ಬಿರಿಯಲಿರುವ ಬೊಕ್ಕೆ; ಒಡೆಯಲಿರುವ ಗುಳ್ಳೆ: "ಮುಗುಳು [ಕಾಪಾಂ. ಮುಳ್ಳು]ಬೊಕ್ಕೆ ಪಟಕಂ ಸ್ಫೋಟಕ ದೊನಿಕ್ಕು" (ಪುಂಗಣಾ. ೦೦೩-೦).

[ಮುಗುಳು[1] (< ಮುಗುಳ್[1]) + ಬೊಕ್ಕೆ[1]]

ಮುಗುಳುವಾಳೆ (ನಾ). ಬಾಳೆಯ ಹೂವು; ಬಾಳೆಯೋತೆ: ಮುಗುಳು ವಾಳೆಯ ಹೊಡೆಯ ನುಚ್ಚಾಗಿ ಕತ್ತರಿಸಿ ಒಗರು ಹೋಪಂತೆ ಸುಣ್ಣದ ನೀರಿನಿಂ ಕುದಿಸಿ ತೆಗೆದು (ಸೂಪಣಾ. ೯-೬೦),

[ಮುಗುಳು[2] (< ಮುಗುಳ್[1]) + ಬಾಳೆ[1] (< ಬಾಲೆ[3])]

ಮುಗುಳುವಿಡಿ (ಕ್ರಿ)- ಮೊಗ್ಗು ಬಿಡು.—ಕಾಣಿಸಿಕೊಳ್ಳು: "ಮುಗುಳ್ತು ದೆನೆ ಮುಗುಳುವಿಡಿಪುದು" (ಸಭಾಂ. ೦೩೭-೭೬).

[ಮುಗುಳು[2] (< ಮುಗುಳ್[2]) + ಪಿಡಿ[1]]

ಮುಗುಳುಹೊದೆ (ನಾ). =ಮುಗುಳುವೆನೆ: ಮುಗುಳುಹೊದೆಗಳರಯೊದೆ . . . ತಾಲುದುಂಬುದೆನೆಪು ತಾಲಿ ಸೊಗಸನಿತ್ತುವು ಸೋಳ್ಪರಿಗೆ (ಪಂಪಾ. ೫-೬೨). [ಮುಗುಳು[2] (< ಮುಗುಳ್[2]) + ಹೊದೆ[2] (< ಪೊದೆ[2])]

ಮುಗುಳೇಱು (ಕ್ರಿ)- =ಮುಗುಳುವಿಡಿ: ಮುಗುಳೇಱಿದ ಚೂವಕಲತೆಯೊಲಿರ್ದಳಂತಾಕ್ಷಣದೊಳ್ (ಕಾಪಾಂ. ೬೫೬); ಅವಳ ಕೋಮಲತಾಯಮೆಂಬ

ಪೊಳೆವ ಸನ್ಮಾರ್ಗಲತೆ ಮುಗುಳೇಱಿದೊಲ್ ಮೆಲ್ಲಮೆಯೆ ನೀರಾಡಿದರ್ ಗುಡಿಯಂ ಕೂಡಿಯಾ ನಳಿನಾಯತಾಂಬಕಿಯರುಂ (ಸಂಬಸಾ. ೬-೨೯).

[ಮುಗುಳ್ + ಏಱು (< ಏಱ್)]

ಮುಗುಳೊತ್ತು (ಕ್ರಿ). ೧. ಅಂಕುರಿಸು : ಮೊಳೆ : ಮೂಡು : ಮೊಲೆ ಮುಗುಳೊತ್ತುವಂದು ಮೊದಲಿಂದುವರಂ ಬಗೆದುತಿರ್ಪ್ಪಯಂ ಸಲಿಸಿ . . . ಕೂರ್ತ ಮನಃಪ್ರಿಯನಂ ಬಿಡೆಂದು ನೀನೆಲೆ ಮುದುಜಾಜಿಯೊಳ್ತೆ ನುಡಿಯಲ್ಬಗೆದಂದುವನೆಂತು ಸೈರಿಪಂ (ಣಾಚಿಪು. ೦೦-೦೬೨); ಉತ್ಪವಮಾಸ್ಥಾನಸಲಿಲ ವನೆಱೆದು ಶರಾರ ಸಾಚಿತ್ಯಭೂಮಿಯೊಳಿಳ್ಕಿಯುಂ ಬಿಳ್ಕಲದುವೆ ಮುಗುಳೊತ್ತಿ ಪಲ್ಲವಿಸುತೀಕೋತ್ಕರ್ಷತಸ್ಕಲ್ಲಾಗಳನಾಂ ರುತ್ತಿರ್ಪನಂ (ಕಬ್ಬಿಗ. ೦-೭೬). ೨. ಅರಳು : ವಿಕಾಸವಾಗು: ಕಮಲದಯಿಗೆ ಚಿತ್ತವಂಕುರಿಸಿ ಬುದ್ಧಿ ಪಲ್ಲವಿಸಿ ಮನಂ ಮುಗುಳೊತ್ತಿ ಕುಳ್ಳಿರ್ದ ಬಸವಸಾಜನಂ . . . ಕಂಡು (ಬಸ. ೨-೬೩). ೩. ಮೊಗ್ಗುಗಳಿಂದ ತುಂಬು,— ಕೂಡಿರು : ಸುಮ್ಮದಮಂ ಕರಂ ತಳೆಯೆ ಜಾದಗೆಗಳ್ವಳಸತ್ಕದಂಬಜಾಲಂ ಮುಗುಳೊತ್ತೆ . . . ತಾಂ ಮುಂ ಮಱೆಗಾಲಿದೊಳ್ಕಂಡು ತೀಡಿದುದೆನಿಯ್ಯನೆ ಪಸ್ಪಿಮಾನಿಲಂ (ಅಜ್ಜಿಪ. ೯-೦೦೦). [ಮುಗುಳ್ + ಒತ್ತು]

ಮುಗುಳ್ಗಣ್ (ನಾ). ಮೊಗ್ಗಿನಂತಿರುವ ಕಣ್ಣು ; ಕುಟ್ಮಲದಂತಿರುವ ನೇತ್ರ : 'ಮುಗುಳ್ಗಣ್ಣ' ಪರಾ. [ಮುಗುಳ್ + ಕಣ್]

ಮುಗುಳ್ಗಣೆ, ಮುಗುಳುಂಗಣೆ (ನಾ). ಹೊಗ್ಗಿನ ಬಾಣ ; ಹೂವಿನ ಸರಳು : ಪುಷ್ಪಬಾಣ : ಪಗೆಗಳುಮಂ ಪೆಂಡಿರುಮಂ ಮಿಗೆ ಸೋಲಿಪ ಮನನ ಬಿ . . . ಂ ಗಾಡಿಯುಮಾಪಗಮಂಡಿಸಿ ತಾಗೆ ಕಣೆಯುಂ ಮುಗುಳ್ಗಣೆಯುಂ ಪೋನೆಪೊಳಂ ಪೊಬಿಲ್ವೀದಿಯೊಳಂ (ಕ್ಕಣಾ. ೧೪); ಸಲೆ ಪರವಶದೊಳಾದ ಕೊರುಗುರ ಕೊನೆವಲ್ಲ ಕಲೆ ಮೆಯ್ಯೊಳಿಲ್ಲದರ್ ಮುಗುಳ್ಗಣೆಯ ಮುಂದ್ರೆಯುಜ್ಜಲಿಸದರ್ . . . ಪೋಹಿಗಳ್ ಕುಲಕೆ ಹೊಱಗೆಂದು ನೂಪುರರವದೆ ನಾದಮಂ ಪೊಱ್ತುರಂಗನೆಯರಲ್ಲಿ (ಕಬ್ಬಣ. ೪-೪೦); ನಿಜಚಟುಾಕ್ಷಶರ ಮಿರ್ದಂತೆ ಮುಗುಳ್ಗಣೆಗಳೇವಾಳ್ತೆಯೆಂದು ಕಾವನ ಕರತಳದಿನಮಂ ಕವರ್ತೆಗೊಂಡು ಬೆಲ್ಲುವಂತೆ ಪುಷ್ಪವಟುಹಸ್ತದಿಂ ಪುಷ್ಪಾಂಜಲಿಯಂ ಕೆದರ್ದು (ಣಾಚಿಪು. ೪-೦೯ ಪ). **ಮುಗುಳುಂಗಣೆ** : ' ಮುಗುಳುಂಗಣೆಯ ' ಪರಾ.

[ಮುಗುಳ್ + ಕಣೆ]

ಮುಗುಳ್ಗಣೆಯ, ಮುಗುಳುಂಗಣೆಯ (ನಾ). ಹೂವಿನ ಬಾಣವನ್ನು ಹೊಂದಿದವನು ; ಕಾಮ ; ಮನ್ಮಥ : ಮುಕ್ತಿಪದವ ಹೊಲಬಂ ಮುಗುಳ್ಗಣೆಯನ ಶಕ್ತಿಗಿಡಿಪ ಜಿವಿಡಿಯಂ . . . ಯುಕ್ತಿಗೆ ಯುಕ್ತಮೆನಿಸುವಾಗಮಮಂ ವ್ಯಕ್ತೀಕರಿಸುವುವಾಧ್ಯಾದುರೆನಾಂ ಭಕ್ತಿಯಿನಭಿವಂದಿಸುವೆಂ (ಚಪಾಣಾ. ೦-೯). **ಮುಗುಳುಂಗಣೆಯ** : ಮುಗುಳುಂಗಣೆಯನ ಶಂಭು ಕುವರನು ರುಗುಮಿಣಿಯ ಸಾರಿರಲು ಕೂಡಿಮನಗರದಿಂ ಮಂತ್ರಿಗಳು ಬಂದೆಂದಂತೆ ಬಿನ್ನೈಸೆ (ಣಾಳ್ಳಣಾ. ೭೦-೦೨). [ಮುಗುಳ್ಗಣೆ + — ಅ್]

ಮುಗುಳ್ಗಣ್ಣ (ನಾ). ೧. ಮೊಗ್ಗಿನಂತೆ ಕಣ್ಣುಗಳನ್ನುಳ್ಳವನು. ೨. ಕೃಷ್ಣ : ಮೊಗವೆಲ್ಲ ಮುಚ್ಚಕೊಂಡಿಹ ಕಣ್ಣ ಮುಗುಳ್ಗಣ್ಣ ಹಾವರೆಯ ಕಣ್ಣ (ಳ್ಳಕೃ. ೩-೪೦). [ಮುಗುಳ್ಗಣ್ + —ಅ್]

ಮುಗುಳ್ಗಾಯ್, ಮುಗುಳುಗಾಯಿ (ನಾ). ೧. ಆಗ ತಾನೆ ಹೂವಿನಿಂದ ಹೊರಬಂದ ಕಾಯಿ ; ಅತಿ ಎಳೆಯ ಕಾಯಿ ; ಹೀಚು : ಮುಗುಳ್ಗಾಯ್ ಅಮಳ್ದೊಂಗಲ್, ಎಸಳ್ದಸೆ, ಅಮಳ್ದಂತ್ರಂ (ಕಬಪು. ೪೩ ಕ್ರಿಪೀ) : ತಳರ್ಗೇಪು, ಬೆಳರ್ಗಾಪು, ಮುಗುಳ್ಗಾಯ್, ಎಸಳ್ಗಂದಂ (ಕಣ್ಕಪು. ೭೩ ಕ್ರಿಪೀ). ೨. ಹೀರೆಕಾಯಿ ಮೊದಲಾದ ತರಕಾರಿಯಿಂದ ತಯಾರಿಸುವ ಒಂದು ಬಗೆಯ ಖಾದ್ಯ : ಕಲವ ಭಂಜಿತ ಶಾಕಮಂ ಕಲವ ಮುಗುಳ್ಗಾಯ . . . ಮಾಡಿ ಹಲವು ಚಂದದೊಳು ಹೀರೆಯ ಕಾಯ ಪಾಕಮಂ ಪಿರಿದಾಗಿ ಪಸಮಾಳ್ಪುದು (ಕೂಕಣಾ. ೩-೭). ಮುಗುಳುಗಾಯಿ : ೨. ಭಂಜಿತಶಾಖ, ಮುಗುಳುಗಾಯಿ, ನವಪಿಷ್ಟಸಂಧಿ . . . ಶಾಕವಂಗಿ ಮೊದಲಾದ ಹೀರೆಯ ಕಾಯ ಪಾಕವನ್ನು ಪಸನಾಗಿ ತಯಾರಿಸುವುದು (ಕೂಕಣಾ. ೩-೭ ಅಪಿ). [ಮುಗುಳ್ + ಕಾಯ್]

ಮುಗುಳ್ಚು (ಕ್ರಿ). ೧. (ಹೂವು ಮೊದಲಾದುವನ್ನು) ಮುಚ್ಚಿಕೊಳ್ಳುವಂತೆ ಮಾಡು : ಮೊಗ್ಗಾಗಿಸು : "ಮುಗುಳ್ಚು — ಸಂಕೋಚಕರಣೇ (ಕುಗ್ಗಿಸು)" (ಕುಡ) ; ಪಗಲರ್ಕನಿರಲ್ಳಿಳುಬಿಂಬವಿಂಬುಮಾಟ್ಪಂತೆ ಮುಗುಳ್ದು ಗುಂ ಕುಮುದಾವನವಂ ಲಮಳಪ್ರತಾನವಂ (ಅಧಾಪ. ೬-೬೪). ೨. (ಕಣ್ಣು) ಮುಚ್ಚಿಕೊಳ್ಳು, — ಮುಗ್ಗಿ : ಸುರತಾಂತದೊಳಕ್ಷಿಗಳಂ ಮುಗುಳ್ಚಿ ಪಟ್ಟರ ವೆರವಮಯು ಪೀವಿತಿವಳೆಂದಿರದೋಡಿದನೊರ್ವನೂಳಿಚಂ (ಣಾಚಿಪು. ೦೦-೦೪೯). [ಮುಗುಳ್ + — ಚ್ಚು]

ಮುಗುಳ್ದೊಂಗಲ್ (ನಾ). ಮೊಗ್ಗುಗಳ ಗೊಂಚಲು: ಹೂಗೊಂಚಲು; ಪುಷ್ಪಗುಚ್ಛ: ಮುಗುಳ್ದೊಂಗಲ್, ಎಸಟ್ಟಾಣಂ (ಕಶಾಮು. ೭೩ ಕ್ರಿಪೀ). [ಮುಗುಳ್ + ತೊಂಗಲ್]

ಮುಗುಳ್ದೋಜ್ ' ಮುಗುಳ್ದೋಜು ' ನೋ.

ಮುಗುಳ್ದೋಜು. ಮುಗುಳ್ದೋಜ್ (ಕ್ರಿ). ಮೊಗ್ಗುಬಿಡು ; ಹೂಬಿಡು ; ಪುಷ್ಪಿತವಾಗು : "ಮಾಗುಳ್ದುದು ಕಾನದೆನೆ ಮುಗುಳ್ದೋಜ್ದುದು" (ಕಬ್ಬಪು. ೩೨೦-೩೨). **ಮುಗುಳ್ದೋಜ್** : ಬೆಳ್ಗೆ ಪುಟ್ಟಲ್ಕೆ ಸಂಜೆಗೆ ಮುಗುಳ್ದೋರ್ವ ಸುದತಿಯರ ಬಟ್ಟಮೊಗಕಣ್ಮನಹವ ತಾವರೆಗಳಿಂವೆಂದು ಬಿಟ್ಟು ತುಂಬಿ ಜವ್ವನೆಯರ ತನುಪರಿಮಳಕೆ ಕವಿದವಾ ಬನದಳಗಳು (ಕ್ಕಣಾ. ೯-೦೭). [ಮುಗುಳ್ + ತೋಜು]

ಮುಗುಳ್ನಗು, ಮುಗುಳುನಗು (ಕ್ರಿ). ಮಂದಹಾಸವನ್ನು ಬೀರು ; ನಸುನಗು : ಪಂಪಕವಿ ಪೊನ್ನನ ಕಡೆ ತಿರುಗಿ ಮುಗುಳ್ನಕ್ಕನು (ರಾಪಂ. ೬). **ಮುಗುಳುನಗು** : ಬೋಳನು ಕೈಮುಚ್ಚಿ ಉದುಂಗೊರೆ ಕೊಡಲು ಮುಗುಳುನಗುತ್ತ ಕೋಲ್ಗಾರರು ಹೀಗೆಂದರು (ಕಾಬಿಸೆ. ೦೦ ಕಡಾಕರ).

[ಮುಗುಳ್ + ನಗು]

ಮುಗುಳ್ನಗು (ನಾ). ಮಂದಹಾಸ ; ನಸುನಗು : . ಅವರ ಮುಗುಳ್ನಗುವನ್ನು ಕಂಡು ಮಾನಸ್ಸಿಗೆ ಎಷ್ಟೋ ಸಮಾಧಾನವಾಯಿತು (ಕೂಪ).

[ಮುಗುಳ್ + ನಗು]

ಮುಗುಳ್ನಗೆ, ಮುಗುಳುನಗೆ (ನಾ). = ಮುಗುಳ್ನಗು : "ಸ್ಮಿತ ಮೆಂಬುದು ಮುಗುಳ್ನಗೆ" (ಹಶಾಭಾ. ೧೩-೨೦೬) ; ಪಗಳ ಮೊಗಮಂ ಮುಗುಳ್ನಗೆವೆರಸು ನೋಡಿದಾಗಳ್ (ಆಂಪ್ರ. ೬-೧೬ ಪ) ; ಮುಗುಳ್ನಗೆ ಪದೆಪಿಂ ಪೊಬಟ್ಟುದು ಕುಮಾರನ ಕೋಪ್ಮಳವಕ್ಕ್ರಬಿಂಬದೊಳ್ (ಕಾಚಾಪ್ರ. ೬-೦೨೬) ; ದಾರಿಗನ ಮೋಲೆಯಲ್ಲೊಂದು ಮುಗುಳ್ನಗೆ ಮಿಂಚಿತು (ಪುಚಿಕ. ೩). **ಮುಗುಳುನಗೆ** : ಮೃಗನಯನೆ ನೀನೆನ್ನನೀಕ್ಷಿಸಿ ಮುಗುಳುನಗೆಯುಂ ಚಿಂತೆಯುಂ ನಿನಗೇಕೆ ಪೇಳೆನಲು (ಪಾಚಿ. ೧೦-೩) ; ಮುಗುಳುನಗೆ ನಸುಮೊಳೆಯೆ ಭೀಮಾದಿಗಳಗೆಂದನು ಕೃಷ್ಣನು (ಕಾಣ್ಕಭ. ೬-೦೨) ; ಮುಗುಳುನಗೆಯಲಿ ಸೂರ್ಯತನುಜನ ಮೊಗವ ನೋಡಿ (ಜಾಳ್ಳಶಾ. ೪೩-೨೩) ; ಅದೃಷ್ಟದ ಕುಲಿಮೆಯಿಂದ ಪೆಗೆವ ಕಿಡಿಯಂತಿತ್ತು ಅವನ ಮುಗುಳುನಗೆ ! (ಅಜ್ಜಿಕ. ೦೬೭).

[ಮುಗುಳ್ + ನಗೆ]

ಮುಗುಳ್ನೆನೆ (ನಾ). ಅರಳುತ್ತಿರುವ ಮೊಗ್ಗು,—ಕುಟ್ಮಲ : ಮುಗುಬ್ಬುಂ ಮುಗುಬ್ಬುಂ ಪೊಸಮಲ್ಲಿಗೆಯ ಮುಗುಳ್ನೆನೆಯ ದೇಸೆಯಂ ಕಂದರ್ಪಂ ಪೋಗ್ಬುಂ (ಜಗ್ಗಿಕ. ೩-೦೪) ; ಬಲ್ನನೆಯ ಪೊವೞ್ ಮುಗುಳ್ನನೆಯ ನರ್ಮನೆ . . . ಪೊಸವಣ್ಣ ಗೊತ್ತಿದೆಕೆ ಣಗ್ಗೆನದಿರ್ದುದೊಂದು ಮುಮರಂ (ಕ್ಕಣಾ. ೦೦೦). [ಮುಗುಳ್ + ನೆನ್ನೆ]

ಮುಗುಳ್ಮೊಲೆ (ನಾ). ಮೊಗ್ಗಿನಂತಿರುವ ಕುಚ. — ಮೊಲೆ : ಹೊಗರೆಸವ ಮುಗುಳ್ಮೊಲೆಯೊಪ್ಪಿಗಂ ನವವನಿಂದನೆಗೆ (ಜಯಾ. ೦೩-೦೨) ;

ಸಣ್ಣ ಮುಗುಳ್ಮೊಲೆಯು ಪರಳ್ಮೊಲೆಯು . . . ಬೆದರ್ದ್ ಕಣ್ಣನೋಟದ ಬಾಲೆಯರ್ . . . ಎಸೆವರು (ಶಂಪು. ೧೦-೦೯). [ಮುಗುಳ್ + ಮೊಲೆ]

ಮುಗುಳ್ಪಡೆ (ಕ್ರಿ). ಮೊಗ್ಗು ಬಿಡು ; ಹೂಬಿಡು ; ಪುಷ್ಪಿತವಾಗು: ಬೊಗಸೆಗಂಗಳೆಯಂಗಲತಿಕೆಗೆ ತಿಗುರಿ ತೀಡಿದ ಮೃಗಮದದ ಪಗಮಗಿಪ ಸುರಭಿಯ ಕಾಮಿಯಭಿಗತಿ ಮುಗುಳ್ಪಡಿಮುತಾನ್ದಾದಿಪಂತೆ (ಕೃಶ-೩-೬-೩).

[ಮುಗುಳ್ + ಪಡೆ]

ಮುಗುಳ್ಪದ (ನಾ). ಮೊಗ್ಗು ಬಿಡುವ ಪದ ; ಹೂ ಬಿಡುವ ಸ್ಥಿತಿ : ಮುಗುಳ್ಪದನಾವ ಸಂಪಗೆ ಮಡಲ್ವದಿಮುರ್ತ್ತಿ ಮರಲ್ದರಲ್ದ ಮಲ್ಲಿಗ ಮನಮಾಂ ಕವರುತ್ತಿರೆ (ಪ್ರಕಥಾ. ೩-೩೬) ; ಒರಿದು ಮೃದುವಾಗಿ ನನದಕ್ಕಿ ದೊಳಗರಿಸಿನವ ಪೊರೆಯೊತ್ತಿ ಮುಗುಳ್ಪದದಿ ಬೆಂದ ವಿದಳಗಳನೊಡೆವರಿಸಿ . . . ಪಾಕಂ ಮಾಡಿ ತೆಂಗಾಯ ತೆಗೆಯ ಕಾ ಹಸನಪ್ಪೆದು (ಕೂಕಥಾ. ೬-೩) ; ಪುರಿಯಕ್ಕಿಯೆಳ್ಳು ಜೀರಿಗೆ ಮೆಣಸು . . . ಮುಗುಳ್ಪದದಿ ಬೆಂದ ಬೇಳೆಯು ಹಿಸರು ಪ್ಪಲ್ಲಸೂಜ್ಜಗೆಯು ಕೂಳು (ಕೂಕಥಾ. ೪-೦).

[ಮುಗುಳ್ + ಪದ]

ಮುಗುಳ್ಮಳೆ (ನಾ). ಹೂಗ್ಗುಗಳ ಮಳೆ ; ಹೂಮಳೆ ; ಪುಷ್ಪವೃಷ್ಟಿ : ಮುಗುಳ್ಮಳೆಯಂ ಸುರಿವ ಜೀತ್ರದ ಮುಗಿಲ್ಗಳ ತೆಗೆದು ತರಂಗೋಳಿಸಿದ ಪಂಚವರ್ಣಗೆಯ ಪಟ್ಟಿಯ . . . ಗಾಡಿವಡೆವ ಮಂಟಪದ ಮಧ್ಯವಲ್ಲಿ ನೆರೆದ ನಿುಧರಿಂ (ಜಾಪಪು. ೮-೩ ಪ). [ಮುಗುಳ್ + ಮಳೆ (< ಮಲೆ)]

ಮುಗುಳ್ವಿಲ್ (ನಾ). ಹೂವಿನ ಧನುಸ್ಸು ; ಪುಷ್ಪಚಾಪ : 'ಮುಗುಳ್ವಿಲ್ಲ' ಪರಾ. [ಮುಗುಳ್ + ಬಿಲ್]

ಮುಗುಳ್ವಿಲ್ಲ (ನಾ). ಹೂವಿನ ಧನುಸ್ಸನ್ನುಳ್ಳವನು ; ಕಾಮ ; ಮನ್ಮಥ : ಮುಗುಳ್ವಿಲ್ಲಂ ಮಗುಳ್ದಿಚ್ಚ ಶಿಖೀಮುಖ ಮುಗುಳ ಕೂಲಚಿಯರ ವೆಲ್ಲೆರ್ದೆಯಿಂ ನೆಱೆ ಮುಗಿದುವು ಮುನ್ನೀರಣುಗಿಯು ಸಜ್ಜವನೆಗಳಾ ರಾತ್ರಿಯೊಳು (ಜಯಾ. ೦೩-೬೬) ; ಮುಗುಳ್ವಿಲ್ಲನಾ [ಜಾಣಾ. ಮುಗುಳ್ವಿಲ್ಲವಾ]ರತಿದೇವಿಯರಾಡುವ ನಗರಜನದ ಸಾರಿಯರ್ಪ ಪಗಡವಾಸಿಂದೆನೆ ರವಿ ಸೋಮವೀಧಿಗಳ್ಗೊಗುಹವಾ ನಗರಿಯೊಳು (ಕ್ರೀಜಾಂ. ೦-೭೩).

[ಮುಗುಳ್ವಿಲ್ + — ಅ]

ಮುಗುಳ್ಮುಣ್ (ನಾ). = ಮುಗುಳುಬೊಕ್ಕೆ : ಅಳವೆ ಶವದದ ಬಿಸಲ್ ಕೋಮಳಿಕೆಯನುಬಿದಿನಿಸು ಬಾಡಿ ಕಂದಿರ್ದಳ್ ಕುಂದಳತಾಕುವಾರಿ ಮುಗುಳ್ಮುಣ್ಗೊ[ಜಾಣಾ. ಳ್ವೊಳ್ಳಿ]ಳೆತೊಡೆ ಮೆಯ್ಯಾಯ್ದು ಬಡವಡಾ ದಂತಾದಳ್ (ಜಾಪಪು. ೩-೩೩). [ಮುಗುಳ್ + ಮುಣ್]

ಮುಗುಳ್ವೆಳಗು (ನಾ). ಮೊಗ್ಗಿನಂತಹ ಕಾಂತಿ : ಬೆರಲೆಡೆಯೊಳಡಸಿದ ಕಪ್ಪುರವಲಿಕೆಸೊಳೆ ನಗಿಸುವ ರೋಡಗರನಿಡುವ ನೆವದಿಂ ಪರಿವ ಮುಗುಳ್ನಗೆಯ ಮುಗುಳ್ವೆಳಗಿಂಗೆ ತಕ್ಕುಗುಡುವಂತೆಮುಂ (ಅಪಂಪ. ೯-೬ ಪ).

[ಮುಗುಳ್ + ಬೆಳಗು]

ಮುಗುಳ್ಸರಿಗೆ (ನಾ). ಮೊಗ್ಗುಗಳಿಂದ ಮಾಡಿದ ಸರ.— ಹಾರ : ವನಕುಸುಮಾಂಗಳಂ ಬಗೆಗೆವಂದುವನೆಬ್ರಿಯೊಳಾಯ್ದು ಕೊಯ್ದು . . . ಮುಗುಳ್ಸರಿಗೆ ತೋಳ್ಗಳೆ ಕಂಠಣವಾರಮೆಂದು ಬೇಬ್ಸನಿತನೆ ಮಾಡಿ ತೊಟ್ಟು ಕದಮೊಪ್ಪದಳಾಕೆ ಬಸಂತಕಾಂತೆಯೋಲ್ (ಹಂಪಭಾ. ೨-೦೬).

[ಮುಗುಳ್ + ಸರಿಗೆ]

ಮುಗುಟ್ಟ್[1] (ಕ್ರಿ). (?) : ಶಿಥಿಲದ್ವಿತ್ವಕ್ಕೆ — ಮಗುಟ್ಟಿಂ, ಅಗುಟ್ಟಿಂ. . . ಮುಗುಟ್ಟಿಂ, ತೆಗಟ್ಟಿಂ (ಶಪುರ. ೩೩ ಕ್ರಹೋ). [?]

ಮುಗುಟ್ಟ್[2] (ನಾ). (?) : . ಪೊಕ್ಕುಟ್ಟು, ಕೌಂಕುಟ್ಟು, ನೆಗಟ್ಟು, ಮುಗುಟ್ಟು, ನೆಮಟ್ಟು. ತೆವಟ್ಟು (ಕಣ್ಣಪು. ೦೪೦ ಕ್ರಹೋ). [?]

ಮುಗುಟ್ಟ್ (ನಾ). (?) : ಅಗುಟ್ಟ್, ಪೊಗಟ್ಟ್, ಮುಗುಟ್ಟ್ , ನೆಗಟ್ಟ್ (ಶಬ್ಕಪು. ೫೩೯ ಕ್ರಹೋ). [ಮುಗುಟ್ಟ್ + — ಅ]

ಮುಗ್ಗಟ್ಟು (ನಾ). ೧. ವಿಷಮಸ್ಥಿತಿ ; ಕಷ್ಟ ; ತೊಂದರೆ ; ಪೇಚು : ಕಂಚಿನ ನಾಗರಿಕತೆಯು ಪರಿಢದ ಹಾಗೂ ತಾಮ್ರ ಮತ್ತು ತವರದ ಅಭಾವದಿಂದ ಎಲ್ಲರಿಗೂ ಹತಾರಗಳು ದೊರಯದೆ ಮುಗ್ಗಟ್ಟು ತಲೆದೋರಿತು (ಶಿಪ್ರಾ. ೬೬) ; ಹೀಗೆ ಜವರನ್ನು ಬಲವಂತ ಮಾಡಿ ಮುಗ್ಗಟ್ಟಿಗೆ ಸಿಕ್ಕಿಸುವುದು ಒಹಳ ತಪ್ಪು (ತುಣಾಉ. ೭೦). ೨. ಕೊರತೆ; ಅಭಾವ : ಇಲ್ಲಿ ಸ್ಥಳಕ್ಕೆ ಬಹಳ ಮುಗ್ಗಟ್ಟಂತೆ ! (ಕೂಕಥೀ. ೨೪೪) ; ಅವನಿಗೆ ಹಣದ ಮುಗ್ಗಟ್ಟು ಬಲವಾಗುತ್ತಿತ್ತು (ಕಕ್ಷಡಾ. ೬೬). 'ಇಕ್ಕಟ್ಟು', 'ಬಿಕ್ಕಟ್ಟು' ಪರಾ. [ದೇ.+ ತಮಿ. ಮುಕ್ಕಟ್ಟು]

ಮುಗ್ಗರಿಸು 'ಮುಗ್ಗುರಿಸು' ನೋ.

ಮುಗ್ಗಲು (ನಾ). ೧. ಬೂಷ್ಟು ಹಿಡಿದಿರುವು; ಮುಗ್ಗಿದುದು : ಒಂದೇ ಸಮನೆ ಮಳೆ ಹಿಡಿದು, ಥಂಡಿಯಿಂದ ಎಷ್ಟೊಂದು ಹಪ್ಪಳ ಸಂಡಿಗೆಗಳು ಮುಗ್ಗಲಾದುವು (ಕೂಠ). (ಗು) ೨. ಬೂಷ್ಟು ಹಿಡಿದ; ಕೆಟ್ಟುಹೋದ : ದೊರೆಯು ಇವಳ ತೊಟ್ಟಿಗೆ ಕೊಡುತಾ ಇದ್ದ ಖಾನಾಸೋಬಸ್ಕರವನ್ನು ದಿನಕ್ಕವೇಣ ಕಡಿಮೆ ಮಾಡುತ್ತಾ, ಕಡೆಗೆ ಕಗ್ಗಲ ರಾಗಿ ಮುಗ್ಗಲ ಹುರಳಿಗೆ ಇಳಿಸಿದನು (ಪಟಕೃಷ್ಣ. ೬೬). 'ಮುಸುಟಿಕೆಲ್'[1] ಪರಾ

ಮುಗ್ಗಲಗೇಡಿ = ಅಸಹ್ಯವ್ಯಕ್ತಿ : ಹೋಲಾ ಮಖ ಎಲ್ಲಾ ಹಾಳು ಮಾಡೋ ಮುಗ್ಗಲಗೇಡಿಗೆ ಮಗಳ ಕೊಟ್ಟು ಯಾವ ನರಕಕ್ಕೆ ಹೋಗ ಬೇಕಂತೀರೀ ನೀವು ? (ಸಖತ. ೨೪೬). [ಮುಗ್ಗು[2] + — ಅಲು (< — ಅರ್)]. /ತಮಿ. ಮುಕ್ಕಲ್ = ಮುಗ್ಗುನಾತ]

ಮುಗ್ಗಾಲಿ 'ಮೂಗಾಲಿ' ನೋ.

ಮುಗ್ಗಿಸು 'ಮೊಟ್ಟಿಸು' ನೋ.

ಮುಗ್ಗಿಱಿ (ಕ್ರಿ). ಮುಗ್ಗರಿಸಿ ಬೀಳು ; ಎಡವು : ಮುಂಗೆ ಮುಂಡಿಯೆಂದವಳ ಕಯ್ಯೊಳಗೆ ತಂದು ಕೊಡಲೊಡನೆ ಘಾವಾಗಿ ಹೂಂಕರಿಸಿ ಕೋಪದಿ ಕಿಯ್ಯ ಕಡಿಯಲಾ ಕ್ಷಣದೊಳಗೆ ವಿಷವೇಱಿ ಮುಗ್ಗಿಱಿದು ಕಾಮಲತೆ ಭೂತಳಕ್ಕೆ ಕೆಡೆಯಲು (ಶಮ್ಯಳಿ. ೬-೦೨) ; ಜೊಳ್ಳುಹೊಟ್ಟೆಯನೆತ್ತಿ ಕೊಂಡೋಡಲಾಱದೆ ಹಳ್ಳಕೊಳ್ಳದಲಿ ಮುಗ್ಗಿಱಿ[ಗ್ಗಿ]ಜಿಮು ಮುಳ್ಳಲ್ಲಿ ಬಿದ್ದು ಮೂಗರಿಸಿಕೊಂಡರ ಲೆಕ್ಕವೆಲ್ಲವನಾರು ಬಣ್ಣಿಪರು (ಶಂಪಾ. ೦೭-೩೫).

[ಮುಗ್ಗು[1] (< ಮೊಟ್ಟು[1]) + ಇಱು]

ಮುಗ್ಗು[1] 'ಮೊಟ್ಟು[1]' ನೋ.

ಮುಗ್ಗು[2] (ಕ್ರಿ). ೧. ಹಳಸು ; ಕೆಟ್ಟುವಾಸನೆ ಬರು ; ಕೆಟ್ಟುಹೋಗು : ಅವಜಿಜಗು ಮುಗ್ಗಿ ಪುಟು ಪತ್ತಿದೊಡಾಜಲ್ ಪರವೆ ಕಾಗೆಯುಂ ನಾಯುಂ ಮುಟ್ಟದುದು (ಜೂಪಚಕ. ೩-೩೬) ; ಇವನ್ಗಳಾವಾವವ್ಗುವಜವಜ ರಸ ಮನಸುವಾಗಿ ಹಿಳಿದು ಹಂಜಯು ಅರಲೆಯೊಳಗೂಡಿಯಿನಿಸು ಮುಗ್ಗವ ತೆಱದಿ ನೆಳಲೊಳೊಣಗಿಸಿ (ಕೂಕಥಾ.೨-೩೩) ; ಮುಗ್ಗದ ಮುಗಿಯದ ಬಾಡದ . . . ಪೂವೆ ಪೂಜನೆದೊಳಿಂಬಿಂ (ಜಾಪಪು. ೩೩-೦೩). ೨. (ಅಲಂ) ಅಸಹ್ಯವಾಗು ; ಇಂದಿನ ಹದಗೆಟ್ಟ ವಾತಾವರಣದಲ್ಲಿ ಮೋಜು ಮಜಲು ಗಳು ಮುಗ್ಗಹತ್ತಿವೆ (ಶಪ್ರಾ. ೩೩).

[ದೇ-ll ತಮಿ. ಮುಱಿ ; ತುಳು. ಮುಗ್ರು ; ತೆಲು. ಮುಗ್ಗು, ಮುಱುಗು, ಮುಸ್ರುಕ್ಕು ; ಗೊಂಡಿ. ಮುರ್ಕಸ್ನಾನ]

ಮುಗ್ಗು[3] (ನಾ). ಕೆಟ್ಟುವಾಸನೆ ; ಹಳಸಲು ; ಬೂಷ್ಟು : ಖಂಡಪಕ್ಕೆರೆಯ ಮೆಲುವಾತ ಮುಗ್ಗಿನ ಹಿಂಡಿಗೆಱಗುವನೆ (ಶಪ್ರಾ. ೩೦೬) ; ಹೊಟ್ಟಿಗಿಲ್ಲದಕ್ಕ ಇದ್ದ ಮುಗ್ಗ ಕಾಳೆಲ್ಲ ಮುಟ್ಟಿಬಿಟ್ಟನರಿ (ಪ್ರಾಕಾಥಾ. ೬೩). [<ಮುಗ್ಗು[2]./ತುಳು. ಮುಗ್ಗ, ಮುಗ್ಗು ; ತೆಲು. ಮುಗ್ಗ ; ಕೋಲಾ. ಮುರ್ಸ್ ; ಪರ್ಜಿ. ಮುರ್ಸ್, ಮುರುಸ್]

ಮುಗ್ಗುಡಿ (ನಾ). ಮೂರು ಕುಡಿ : 'ಮುಗ್ಗುಡಿವರಿ' ಪರಾ.

[< ಮೂಜು + ಕುಡಿ]

ಮುಗ್ಗುಡಿವರಿ (ಕ್ರಿ). ಮೂರುಕುಡಿಗಳಾಗಿ ಹುಟ್ಟು : ಮುಗ್ಗುಡಿವರಿದು ರವಣಿಸಿಂಗ ತನತನಗುಗ್ಗಡದೊಯ್ಮಾರದ ಮೋಹರಿಸುವ ಭರದಿಂ ನೆರೆದುದು ಧರೆಯುಗಲದಲಿ (ಪಂಚಿಕ. ೨–೨೭). [ಮುಗ್ಗುಡಿ + ಪರಿ$_1$]

ಮುಗ್ಗುಡ್ಡೆ ' ಮೂಗುಡ್ಡೆ ' ನೋ.

ಮುಗ್ಗುರಿಸು, ಮುಗ್ಗರಿಸು (ಕ್ರಿ). ಎಡವಿ ಬೀಳು ; ಮುಗ್ಗು : ದೃಪ್ತ ಮಲ್ಲದ ಸೂಕ್ಷ್ಮಮೋಪಸೂತ್ರದಿ ಪದಂ ಬಿಗಿದಂತೆಪೊಲಾಗೆ· ಮುಗ್ಗುರಿಸಿ ನಿಲ್ಲುತುಂ (ಶಾಕಾಅ. ೫೦–೦೭೮) ; ೧೯೨೦ರಿಂದ ಬೆಳೆದು ಬಂದಿದ್ದ ರಂಜ್ಯದ ಶಕ್ತಿ ಕುಗ್ಗಿ ಮುಗ್ಗುರಿಸುವುದೋ ಎಂಬ ಹಾಗಿತ್ತು (ರಾಜಕ. ೦೯). **ಮುಗ್ಗರಿಸು** : ಮುಗ್ಗರಿಸುವುದು ಮೊನಲಾದ ದುರ್ಗಾನಗಳಿಂದ ರಟ್ಟಿತಗಳಾದ ಅಶ್ವಗಳು (ಶಾಸಂಧಿ. ೩೫೬–೯) ; ಯುವುದೋ ಬಳ್ಳಿಯಲ್ಲಿ ಕಾಲು ಸಿಕ್ಕಿಹಾಕೊಂಡಿದ್ದರಿಂದ ಎಡವಿ ಮುಗ್ಗರಿಸಿ ಬಿದ್ದರು (ಹುಬಕೊ. ೭೭) ; ಬಿಡಿಸಿಕೊಳ್ಳಲು ಹೋದ ಅವಳು ಆಯ ತಪ್ಪಿ ಮುಗ್ಗರಿಸಿದಳು (೨೦೦೮. ೩೦). ' ಕುಕ್ಕುಜಿಸು ', ' ಪುಂಡರಿಸು ' ಹೋ.

[< ಮುಗ್ಗು$_{೧}$ + — ಇಸು$_{೨}$]

ಮುಗ್ಗುರು ? (ನಾ). ಎಡವಿ ಬೀಳುವಿಕೆ : ಮುಗ್ಗುರಿಂಪಿಕೆ : ನಲಿಸಿ ಪರಾಕರಸ್ಪೃತಿಗೆ ನೀಂ ಕಲಿಕಾಲದಿ ಕತ್ತ ಕತ್ತಲಂ ತೊಲಗಿಪ ಕೆಯ್ವೆಂಕ ಮಿರುಟಿಕೆಯು, ಮಾನಿಸಿದೆಮ್ಮ ಮುಗ್ಗುರಂ (ಗೀವಿಂ. ೫೦–೩).

[< ಮುಗ್ಗು$_{೧}$]

ಮುಗ್ಗೇರಿ (ನಾ). ಒಂದು ಪ್ರದೇಶದ ಹೆಸರು : ಎರಿಸಲ್ಮುಗ್ಗೇರಿಯಂ ಮುಂ ಮುನಿಯು ಮಸಕಮಂ ಮಳ್ಗಿಸಲ್ಕನ್ಯಕುಬ್ಜೇಶ್ವರನಂ ಹಿಮಾದ್ರಿಯಂ ವಾಯಿಸಲ(ರಾ?)ದರಿಸುವಂ . . . ಕುಂಧರಾಜಂ (ಶಶಿ. ೬–೬ ; ೨೨೨).

[? + ಕೇರಿ]

ಮುಗ್ಗೊಲಿ, ಮುಗ್ಗೊಳಿ (ನಾ). (ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ವಿಧಿಸುತ್ತಿದ್ದ) ಒಂದು ಬಗೆಯ ತೆರಿಗೆ : (ಕರಂಗ್ರಾ. ೦೭೬). **ಮುಗ್ಗೊಳಿ** : (ಕರಂಗ್ರಾ. ೦೭೬). [← ತುಳು. ಮುಗ್ಗೊಲಿ, ಮುಗ್ಗೊಳಿ]

ಮುಗ್ಗೊಳಿ ' ಮುಗ್ಗೊಲಿ ' ನೋ.

ಮುಗ್ಗೈ (ನಾ). ಒಪ್ಪಂದ ; ಕರಾರು ; ಕಂಟ್ರಾಕ್ಟು : ' ಮುಗ್ಗೈಕೆಲಸ ' ಪರಾ. [← ತುಳು. ಮುಗಿತೆ· ಮುಗ್ಗೈ]

ಮುಗ್ಗೈಕೆಲಸ (ನಾ). ಒಪ್ಪಂದ ಮಾಡಿಕೊಂಡ ಕೆಲಸ ; ಕರಾರಿನ ಕೆಲಸ ; ಕಾಂಟ್ರಾಕ್ಟ್ : (ಕರಂಗ್ರಾ. ೦೭೨). [ಮುಗ್ಗೈ + ಕೆಲಸ]

ಮುಗ್ಧ (ಗು). ೧. ಮೂಢತನದಿಂದ ಕೂಡಿದ ; ಮೌಢ್ಯದ : ' ಮುಗ್ಧತನ ' ಪರಾ. ೨. ಕಪಟಿತನವಿಲ್ಲದ ; ಸರಳಮನಸ್ಸಿನ : ದುರ್ಜಾನುಭವವಿಲ್ಲದಿಪ ಮುಗ್ಧರಾಮಂನಿಂ . . . ರಣವಿದಗ್ಧರನೆಂತು ಗೆಲಲಹುದೊ ? (ಕ್ರೀಪಾಪು. ೨೯–೩೯); ಅವರ ಮುಗ್ಧ ನಡೆನುಡಿಗಳಿಂದ ಪ್ರಭಾವಿತರಾದವರು . . . ಧನ್ಯರು (ಕಥಾಸ. ೩೬೮). ೩. ಆಕರ್ಷಕವಾದ ; ಮೋಹಕವಾದ : ಬಳಲ್ದ ಶಿಶು ನೋಮಂ ಮರೆತು ನಿಮ್ಮಿದಯನಿತು ಮುಗ್ಧನಿದ್ರಾಮುದ್ರೆಯಪ್ಪಂತೆ (ಕ್ರೀಪಾಪು. ೦೬೯–೩೩). (ನಾ). ೪. ಮೌಢ್ಯ : ಮೂಢತನ : ಮೂಗರ ಮೂಗರ ಪ್ರಸಂಗವಂತೆ ಇದೆ ಎನ್ನೊಳಗೆ ಆಳುವಿನ ಪರಿವಾಳ ಹೊಣಗೆ ನೋಡಿದರೆ ಮುಗ್ಧವಾಯಿತ್ತು (ಅಪಚಿ. ೨೦೬–೩೪). ೫. ಆಕರ್ಷಕವಾದುದು ; ಮೋಹಕವಾದುದು : ಲಳಿತ ಮಧುರಂ ಲಜ್ಜಾಕೋಲಂ ಸ್ಮರಾಕಾಂತಂ ಮನಂ ದಳಿತ ಮಪ್ಪನ್ಮುಗ್ಧಂ ಸ್ನಿಗ್ಧಂ ವಿಳೋಕನಮೋಪಳಾ (ಪಂಪಣಾ. ೪–೭೭); ಅಜಿಪು ಕರಗಿ ನಿರವಯಲಾಗಿತ್ತಾಗಿ ಅಖಿಂಜೇಶ್ವರನೆಂಬ ಶುದ್ಧ ಮುಗ್ಧವಾಯಿತ್ತು (ಅಂಚಿ. ೩೦೩–೧೦೩). ೬. ಕಪಟವನ್ನು ತಿಳಿಯದವನು ; ಸರಳ ವ್ಯಕ್ತಿ : ತನಗರಿವಿಲ್ಲವೆಂಬರಿವಾತನು ಮುಗ್ಧನು ಈ ಬುದ್ಧಿ ಕಲಿಸು (ಪಂಪಾಕ. ೦೩೦–೩೩). ೭. ಮೋಹಿತನಾದ ವ್ಯಕ್ತಿ ; ಆಕರ್ಷಿತನಾದ ವ್ಯಕ್ತಿ : ಅಂದು ನೀಪು ಎಳೆಯ ಹುಡುಗನಾಗಿ ಅವಳ ಸೌಂದರ್ಯಕ್ಕೆ ಕೇವಲ ಮುಗ್ಧನಾದವನಾಗಿದ್ದೆ (ಕಂತುಂತ. ೪೦೯); ಅದನ್ನು ಪ್ರಭುಗಳೂ, ಮಹಾರಾಣಿ ಶಾಂತಲೆ, ಲಕ್ಷ್ಮಿಯರೂ ನೋಡಿ ಮುಗ್ಧರಾದರು (ಶಾಂತಲಾ. ೦೩೩). [ಸಂ.]

ಮುಗ್ಧಜನ (ನಾ). ಕಪಟವನ್ನು ತಿಳಿಯದ ಜನ ; ಸರಳಸ್ವಭಾವದ ಜನ : ಮುಗ್ಧಜನದಜಿತಮಪಸಿ ವಿದ್ವರುಮಿದು ಕನಕಗಿರಿಯೊ ರಜತಾದ್ರಿಯೊ ಸಂದಿಗ್ಧಮನಿಸಿದುದು ಸುರಗಿರಿ (ಕಿಷ್ಕಿ. ೭೦–೪೦); ಮುಗ್ಧ ಜನರನ್ನು ಬಂಧಿಸಿ . . . ಅವರನ್ನು ವಂಚಿಸಿದ್ದಕ್ಕಾಗಿ ಆ ಪುರೋಹಿತರು ಅಪರಾಧಿಸ್ಥಾನದಲ್ಲಿದ್ದರು (ತ್ರಿಪು. ೦೫೦). [ಸಂ.]

ಮುಗ್ಧತನ (ನಾ). ಮೂಢತನ ; ಮೌಢ್ಯ : ಮುಗ್ಧತನವೇನೆಂದೆಸುವೆನ· ಶಿವನನಲ್ಲದ ಪೆಜಿತನಜಿಯುದವು (ಶಪು. ೦೩–೦೭).

[ಮುಗ್ಧ + —ತನ]

ಮುಗ್ಧತೆ (ನಾ). = ಮುಗ್ಧತನ : ಮುಂದದಿಂದಲೊಮ್ಮೆ ಮುಗ್ಧತೆಯಿಂದ ಲೊಮ್ಮೊಮ್ಮೆ . . . ಅಚ್ಯುತ್ತ (ತುಚಿ. ೫೯. ೩–೪); ದೈತ್ಯಬಾಹು ಮುಗ್ಧತೆಯನು ಹಿಸುಕಲು ಬಾಚಿತು ಹಲ ಬಾರಿ (ಪಂಪು.೩೯–೦೩) ; ದುಗ್ಧ ಧವಳಿಮ ಮುಗ್ಧತೆಯ ಮೈ ಹೊರೆಯುವಂತೆ (ಅಚೇ. ೨೩–೪).

[ಸಂ. ಮುಗ್ಧತಾ]

ಮುಗ್ಧತ್ವ (ನಾ). = ಮುಗ್ಧತನ : ಸಮಸಂದೊಂದಿದ ಲಜ್ಜೆಯುಜ್ಜುಗಮೆ ಲಜ್ಜಾಭಾವಮುಂ . . . ಮುಗ್ಧಭಾವಮೆ ಮುಗ್ಧತ್ವ ಮಹತ್ವಮುಂ ನೆಜೆಯೆ ಕಲ್ಪಂತಾದುದಾ ಕನ್ನೆಯೊಳ್ (ಶಾಪಂಅಾ. ೯೩) ; ಉತ್ಪವಮುಮುಗ್ಧತ್ವಕ್ಕೆ ಮಿಚ್ಚಿರ್ದ್ದರ್ಪಿತಿಶಯಮಮಿಮಂ ಶಂಭು ರಕ್ಷಿಕ್ಕೆ ನಮ್ಮಂ (ಅಶ. XIV, ೨೭೦–೦೩ ; 1181). [ಸಂ.]

ಮುಗ್ಧಭಾವ (ನಾ). ಕಪಟವಿಲ್ಲದ ಭಾವನೆ ; ಸರಳಭಾವ : ಸಮಸಂದೊಂದಿದ ಲಜ್ಜೆಯುಜ್ಜುಗಮೆ ಲಜ್ಜಾಭಾವಮುಂ . . . ಮುಗ್ಧಭಾವಮೆ ಮುಗ್ಧತ್ವಮಹತ್ವಮುಂ ನೆಜೆಯೆ ಕಲ್ಪಂತಾದುದಾ ಕನ್ನೆಯೊಳ್ (ಶಾಪಂಅಾ. ೩೩) ; ಲೌಲ್ಯದೃಷ್ಟಿಯಿಂ ನೋಡುವ ವಂಚಿಪುಣ್ಣನ ಮುಗ್ಧಭಾವಕ್ಕೆ ಧುಮ್ಮಾನುತುಂ (ಸಂಚಿ. ೧–೯೯). [ಸಂ.]

ಮುಗ್ಧಹೃದಯ (ನಾ). ಕಪಟವಿಲ್ಲದ ಹೃದಯ ; ಸರಳಹೃದಯ : ನನ್ನ ಮುಗ್ಧಹೃದಪುವನ್ನು ನಿಮ್ಮ ಅಧೀನವನ್ನಾಗಿ ಮಾಡಿ . . : ನಧಯಿಸುವೆನು (ತಂಗಿ. ೬). [ಸಂ.]

ಮುಗ್ಧಾಂಗನೆ (ನಾ). ಕಪಟಿತನವರಿಯದವಳು ; ಸರಳಸ್ವಭಾವದವಳು : ಸೋಜಿಗದಿಂ ನೋಳ್ಪರೊಳ್ಬು ಮುಗ್ಧಾಂಗನೆಯರ್ (ಜಪಾತ್ರಿ. ೯–೨೦). [ಸಂ. ಮುಗ್ಧಾಂಗನಾ]

ಮುಗ್ಧಾಲಾಪ, ಮುಗ್ಧಾಳಾಪ (ನಾ). ಕಪಟಿತನವಿಲ್ಲದ ಮಾತುಕತೆ ; ಸರಳಸಂಭಾಷಣೆ : ನಚ್ಚಿನ ಮುಗ್ಧಾಲಾಪಮುಂ[೦]ಪಂ ಕಱೆರು 'ಬಜಿಕ್ಕಿರು ದೆಬುನ್ನೆಗಂ ಬತ್ತಿರಲ್ ಬಾಯ್' (ಕಾಪಂಅಾ. ೩೨೩). **ಮುಗ್ಧಾಳಾಪ** : ಮಹಮುಗ್ಧಾಳಾಪವಾಕ್ಯಂಗಳಾವರಿಸುತ್ತುಂ ಪೊಸದೇಸವೆತ್ತಸೆಯೆ(ಶುಕಾಪ್ರ. ೦೦–೪೦). [ಸಂ.]

ಮುಗ್ಧಾಳಾಪ ' ಮುಗ್ಧಾಲಾಪ ' ನೋ.

ಮುಗ್ಧೆ (ನಾ). ೧. ಕಪಟವನ್ನು ತಿಳಿಯದವಳು ; ಸರಳಸ್ವಭಾವದವಳು : ಮಾಮರನಲ್ಲಿದ್ದೊಂದು ಮಾಮದ ಮರನೆಂದು ಸಾರ್ದಳತಿ ಮುಗ್ಧೆ ಕುಜುಂತರಮಂ ಮನಾಂತದೊಳ್ (ಶಂಕ್ರಕ. ೭–೦೦೬); ಓವನ ತೆಱಿಂ ಪೆಜತಾದೊಡೆ ಮುಗ್ಧೆ ನಿಲ್ಬಳೇ (ಪ್ರಭುಕ. ೬–೪೯); ಕಪಟವೆನ್ನುವುದನ್ನೇ ಅರಿಯದ ಈ ಮುಗ್ಧೆಯನ್ನು . . . ತಿರಸ್ಕರಿಸುವುದು ನಿನಗೆ ಯುಕ್ತ ವಲ್ಲವಲಾ ? (ಶ್ಯಾಸಂಂತ. ೬೮–೦೨). ೨. ಬೆಲುವೆ ; ಸುಂದರಿ : ಮುಗ್ಧೇ ಕೈರವನೇತ್ರೆ ವಿಗ್ಧೆಯುವೋರ್ ಮಾಳ್ಕಾಂತೊಪಾನೇಂತಿರ್ಪೆಂ (ಗಿವಿ.೪-೦೩೬); ಮುಗ್ಧೆ ಕೈರವನೇತ್ರೆ ವಿಗ್ಧೆಯುವೋರ್ ಮಾಳ್ಕಾಂತೊಪಾನೇಂತಿರ್ಪೆಂ (ಗಿವಿ.೪-೦೩೬);

ಮುಂದೆ ಕನ್ನಡಿವಿಡಿದು ನಡೆವ ಮುಗ್ಧೆಯರೊಳಗೆ . . . ಭರತಿರ್ದ ನಪ್ಪತಿವಾಸುಕುಮಾರಕೇಪಿರಂ (ಪಂಂರ. ೩-೧೫) ; ಪೊಸ ಮುತ್ತಿನ ತಳೆವಾಡುಗೆಬು ಪಸರಿಪ ಕಾಂತಿಮುದಗುಂತಿಮಾರೆಪ್ಪುರಿರೆ ಕಂಡು ಸಮಂತು ಮುಗ್ಧೆಯರ್ ಮುಂಡಿಯಿಸರೆ ಕಲರ್ ಮುಂಚಿ ಮುಂಡಿದರೆಂಬೀ ಭುವೆಯಿಂ (ತೀಪ್ರಶ. ೪-೨೫). ೩. [ಕಾವ್ಯಮಿಾ] ಮುಗ್ಧೆ, ಮಧ್ಯೆ ಮತ್ತು ಪ್ರಗಲ್ಭೆ ಎಂಬಿ ಮೂರುವಿಧವಾದ ನಾಯಿಕೆಯರಲ್ಲಿ ಒಬ್ಬಳು ; ತಾರುಣ್ಯ, ಲಜ್ಜೆ ಮತ್ತು ಸರಳತನಗಳಿಂದ ಮನಸ್ಸನ್ನಾಕರ್ಷಿಸುವ ಹೆಂಗಸು : ಅತಿಲಜ್ಜಾನ್ವಿತೆ ಸಂಚಿಳಮತಿಯವಿರಳಲೋಲ ಭಾವಸಂಭ್ರಮೆಯಾವಿವ್ಯ ತಚಿತ್ತೆಯೆನಿಪ ಬಾಲಿಕೆ ಸತಕಪುವಳ್ಳಗ್ಧೆಯೆಂಬ ಪೆಸರಂ ಪಡೆಗುಂ (ಕ್ಯಾಗಿ. ೩-೨೭); ಪುರುಷನಿದಿರೊಳ್ಕಿದೆ ಲಜ್ಜೆಪೆರಸು ಚಲಿಸುವ . . . ಲೋಭದಿರವನಱಿಯದವಳೆ ಮುಗ್ಧೆಯೆನಿಪಳು (ಆಕಪ. ೩-೪) ; ಸ್ವೀಯಳಲ್ಲಿ ಯೌವನ ಮತ್ತು ಸಂಸಾರಾನುಭವದ ಮೇಲೆ 'ಮುಗ್ಧೆ', 'ಮಧ್ಯೆ', 'ಪ್ರಗಲ್ಭೆ' ಎಂದು ಮೂರುವಿಧ (ಕ್ಯಶಾ. ೨೦೦). [ಸಂ. ಮುಗ್ಧಾ]

ಮುಚುಕುಂದ (ನಾ)· ೧. ಒಂದು ಬಗೆಯ ಹೂವಿನ ಗಿಡ : "ಸದಾಪುಷ್ಪವೆನಲು ಮುಚುಕುಂದಮಕ್ಕುಂ" (ಪುಂಗಣಾ. ೩೮-೨೩) ; ಕುಂದಮುಚುಕುಂದಮೆಂದಿರ . . . ಮಲ್ಲಿಕಾದ್ಯನೇಕಸುರಭಿಕುಸುಮಾಂಗಳಂ ಸಜ್ಜುಕಮಪ್ಪ ಪ್ರವಂ ಪುಟ್ಟಿಯೊಳ್ ತೀವಿಕೊಂಡು (ಪುಂತಿಪು.೦೦೭-೩); ಪಾಟಲ ಮುಚುಕುಂದ ಕುಂದ ಲತಿಕಾವೃತದಿಂದೆಮೆ ಒಳ್ಗಣಿವಿ . . . ಒಪ್ಪಿ ತೋಱುಗುಂ (ಪ್ಯಾಂ. ೧೧೧೦, ೩೮-೨೦; ೧೨೦೩). ೨. ಒಬ್ಬ ರಾಜಋಷಿಯ ಹೆಸರು : ಮಱಿವ ಮುಚುಕುಂದನೆಂಬನ ಮಱಿವೊಕ್ಕುದನಂದಾ ನೀನ್ ಜರಾಸಂಧುಗಂ ಬಿಜಿತೋಡಿದುದಂ ಭೂತಳಮಱಿಯದೆ ನೆನೆಯಲಿವೂ ಗೋವುಗಾದುದು ಪುಸಿಯೇ (ಪಂಪಾ. ೬-೩೩) ; ಒಜಿಗರ್ದಂ ನಿದ್ರೆಯಿನೆಟ್ಟಜಿಸಿದರೆಂ ಕೋಪಶಿಖಿಯಿನುರುಪುವ ವರದಿಂ ನೆಱಿವು ಕೃತಯುಗದೊಳ ಸುರರೊಳಿಜಿದ ಪರಿಶ್ರಮದೆ ರಾಜಮುನಿ ಮುಚುಕುಂದಂ (ಪಾಗ. ೯-೧೩) ; ಮುಚುಕುಂದನ ಮನೆಗೆ ಮುಕ್ಕುಂದ ಬಂದಂತೆ (ಪುಪಂಪ. ೧೩. ೦-೧೫೯-೦). [ಸಂ.]

ಮುಚುಗೆ (ನಾ)·ಮುಟ್ಟಿದರೆ ತನ್ನ ಎಲೆಗಳನ್ನು ಮುಚ್ಚಿಕೊಳ್ಳುವ ಒಂದು ಬಗೆಯ ಗಿಡ ; ಮುಟ್ಟಿದರೆ ಮುನಿ : ಆವಳ ಆತ ಮುಟ್ಟಿದರೆ ಮುದುಡಿ ಕೊಳ್ಳುವ 'ಮುಚುಗೆ'ದಂತೆ ಆಯಿತು (ಪಲಾಬ. ೭೭). [<ಮುಚ್ಚು$_{11}$]

ಮುಚ್ಚಂಜೆ 'ಮುತ್ಸಂಜೆ' ನೋ.

ಮುಚ್ಚಂಡಿ 'ಮುಸುಂಡಿ$_1$' ನೋ.

ಮುಚ್ಚಂದಿ (ನಾ)· ಮೂರುಪ್ರದೇಶಗಳ ಕೂಟ.—ಸೇರುವೆ : ಊಳ್ಳು ಪೊಲ ಮೇರೆ ಮೂಡ್ಪೆದೆಸೆ ಎಲವೆ ಕಿಱುವಜ್ಜಗಿರ್ಕೆಱಿಯ ತೆಂಕಾ ಅದರುಳ್ಳಡಂಗಲ್ಲೆ ಮುಚ್ಚನ್ನಿನ್ನಡುಗಲ್ಲೆ ಪಡುವಯಾಲೆ ಕಾಯನ್ಕೆಕಿಱಿಯೆ (ಎಕ. ೫ (೩)· ಕ್ಯಂ. ೦೦೬-೩೪ ; ೩೫೦); ಅಲ್ಲಿಂದ ಮೂಡಲು ಮುಚ್ಚಂದಿಯಯಲ್ಲೆಗಲ್ಲಾ (ಎಕ. XIV· ಪುಶ್ಯ. ೦೦೩-೦೦೩; 1616).

[<ಮೂಱು + ಸಂದಿ (< ಸಂದು$_2$)]

ಮುಚ್ಚಣಜೋಗು (ಕ್ರಿ)· ಮೂರ್ಛೆಹೋಗು ; ಎಚ್ಚರತಪ್ಪು : ಕಚ್ಚಗಿರೆ ಕಣ್ಣಾ ಪೊಚ್ಚೆಯುಮಚ್ಚಿಗಳುಂ ಪಾಲುದೇಶಮುಂ ಗುದಮುಖಮುಂ ಮುಚ್ಚಂಬೋಗಿ ಮನಂ ಕಣ್ಮುಚ್ಚರೆ ದಕ್ಕಾಲಿವೀಱಿ ಬಾಬದು ತುರಗಂ (ಅತ್ಯಶಾ. ೬-೬). [<ಮುಚ್ಚೆ$_{12}$ + ಪೋಗು$_1$ (< ಪೋ$_1$)]

ಮುಚ್ಚಟೆ (ನಾ)· ೧. ಆಕ್ಕರೆ : ಮಮತೆ ; ಪ್ರೀತಿ : ಹೆಣ್ಣು ಗಂಡಿನ ಮುಚ್ಚಟೆದು ಮಾತುಗಳಿಗೆ ಬಾಯಿಬಿಟ್ಟು, ತಾದಾತ್ಮನದ ಹೊರಗೆ ಹಿಂದು ಮುಂದು ತೀಯದೆ ತಲೆಕೊಡುವಪ್ಪು ತೀಗೇಡಿಯೇ ? (ಕಾಪ್ರ. ೭೦); ಅವರು ಕಮ್ಮನ್ನು ಮುಚ್ಚಟೆಯಿಂದ ಬೆಳೆಸಿದ್ದರು (ಪಚಿಪ್ರ. ೧೧೨). ೨. ಅಚ್ಚುಕಟ್ಟು ; ಓರಣ : ಲಕ್ಕ ಸಾಮಿಲು ಬಿಡಮಾರದಮ್ಮ, ಮೊದಲ ಮುಚ್ಚಟೆ ಸಂಸಾರ ಕೆಟ್ಟುಹೋಗುತ್ತದೆ (ಗೃಪ್ರ. ೦೭೨); ಉಳಿದವರಂತೆ ತಾನೂ ಮುಚ್ಚಟೆಯಾಗಿ ಬದುಕಿ ಬಾಳುವ ಆಕಾಂಕ್ಷೆಯಿರಲಿಲ್ಲವೇ ? (ಹುಳು. ೦೩೦). ೩. ತಾತ್ಸಾರ; ತಿರಸ್ಕಾರ : ಗಂಡ ಅಂದರೆ ಅವ್ವ ಮುಚ್ಚಟೆಯಾಗಿ ಹೋಯಿತೇನೇ (ಪಾಯಾಗ. ೦೩). ೪. ನಟನೆ; ಸೋಗು : ನಿಚ್ಚ ಏಳುವ ಸಮಭು ಮಿಂರಿತೋ ಇಂದೀಗ ಎಚ್ಚರಿಕೆ ಪುಟ್ಟದೇ . . . ಮುಚ್ಚಟೆಯಿದೇಂ ನಿದ್ರೆ ತಿಳಿಯಲಾಗದೆ ಸ್ವಾಮಿ (ಪಚಿಕ್ಷೆ. ೪೨-೬).

[ದೇ. ಕಮಿ. ಮುಚ್ಚಿಟ್ಟೆಯ; ತುಳು. ಮುಚ್ಚಟೆ = ಉತ್ಸವ; ತೆಲು. ಮುಚ್ಚಟ]

ಮುಚ್ಚಣ, ಮುಚ್ಚಲ, ಮುಚ್ಚಳ್, ಮುಚ್ಚಳ, ಮುಚ್ಚಳು, ಮುಚ್ಚುಳ್, ಮುಚ್ಚುಳ, ಮುಚ್ಚುಳು (ನಾ)· ೧. ಪೆಟ್ಟಿಗೆ, ಕರಡಿಗೆ, ಪಾತ್ರೆ ಮುಂತಾದುವುಗಳ ಮುಚ್ಚುವ ಸಾಧನ. ೨. (ಮನೆಯ) ಮೇಲ್ಭಾಗದ ಛಾವಣಿ. — ಸೂರು : ನೆಲಗಟ್ಟಾ ನಾಗರೋಕಂ ತಳದುಮನ ದಿಶಾಭಿತ್ತಿ ಭಿತ್ತಿಬ್ರುಜಂ ಸ್ವಸ್ತಲಭಾಗಂ ಮುಚ್ಚಣಂ ಮೇಗಣ ಸುರರ ವಿಮಾನೋತ್ಕರಂ (ಅಕ. II· ೩೩೨-೨೪; 1180). **ಮುಚ್ಚಲ** : ೧. ಅಹಾರ್ಮೋನಿಯುಮ್ಗೆ — ಮುಚ್ಚಲ ತೆಗೆದ್ರೆ ಗೆಜ್ಜಲು ಬಂಪೂರಾರ್ಲು ಹಾಗೆ . . . ಸಾಲು ಸಾಲಾ ಸ್ಟೈನ್ಗವಾಗಿ ಹೊರಟುಬಟ್ಟವೆ (ಕುಹಾಬ. ೩೨). **ಮುಚ್ಚಳ್** : ೨. ಬೋದಿಗೆಯು ಕೂಟದಂತೆ ಮುಚ್ಚಳ್ದಂತೆ ಪ್ರತಿಷ್ಠೆಯಂತೆ . . ಪದಿಮೂಱು ಗುಣಸ್ಥಾನಂಗಳರ್ದಪುವು (ಕರೂಸ್ಕೃ. ೦೨-೨೪) ; ಪುಚ್ಚಿಗಳ ಕಂಬುಂಗಳಂ ಪವಳವಲಗೆಗಳ ಮುಚ್ಚಳ್ಗಳಂ . . . ಕೇರಿಕೇರಿಯೊಳ್ ಪೆಚ್ಚದುವು ಗೃಹ್ಯಹದ್ವಾರಂಗಳೊಳ್ ಮಹಾಮೇರುಮೆಗಳು (ಕಾಪು. ೩-೩). ೩. ಕದ; ಬಾಗಿಲು : ವಾಗೀಶ್ವರೀದೇವರಂ ದರ್ಶಿಸಲೆಂದು ಕೊಂಡು ಬಂದು ಪುರದ ಹೊಱಗಣ ಮಾಳಿಗೆಯೊಳು ಕಣ್ಣೊಳು ನೋಡಲಂದೆನಿಸುವ ಸುಣ್ಣವಂ ಸುರಿದವರಂ ಪುಗಿಸಿ ಮುಚ್ಚಳಂ ಮುಚ್ಚಿ (ಪಾಗಿಕ-ಪೀ- ೨೩೬-೦೦). **ಮೆಚ್ಚಳ್**: ೧. ಎತ್ತಿ ಹೇಳಿಗೆಯ ಕೂಡ ಮುಚ್ಚಳ ವನಿಕ್ಕಿದ ಮತ್ತೆ ಮುಕ್ಕರಿ ಮುತ್ತಿ ಇಲ್ಲವೆಂದ (ಪೋಗಪು. ೧೪-೦೩೨); ಬಿಗಿದ ನೇಣ ಖಂಡಿಸಿ ಬಿಳಿಕ್ಕ ಮುಚ್ಚಳ ತೆಗೆದು ನೋಡಲು (ಸಿದ್ಧಶಾ. ೯-೦೪); ನಿರ್ಧನಂ ನಿಧಿಗೆಂಡಂತೆ ತನ್ನ ಮನೆಗೆ ಮಂದಸವಂ ಕೊಂಡು ಬಂದು ನಿಜ ವಧುವಪ್ಪ ಕುಸುಮಾವಳಿಗೆ ಕುಡುವುದುಮಾಕೆಯಾ ಮಂದಸಿನ ಮುಚ್ಚಳಮಂ ತೆಱಿದು ನೋಬ್ಬನ್ನೆಗಂ (ಕಾಸ್ಕೃ. ೩-೩೦ ಪ) ; ಮೇಲುಮುಚ್ಚಳ ತೆಱಿದ ತನುವಿನ ಹೇಳಿಗೆಯ ತೋಱಾಹಿಯಂತಿರೆ (ಕುಪ್ರಾ. ೩-೦೬); ಎಲ್ಲದಕ್ಕೂ ಮುಚ್ಚಳಧರುವುದು ಒಳ್ಳೆಯದು (ಅಮಾಶಾ. ೩೩). ೨. ರತ್ನರೋವೆ ವಿಸುನಿಯ ಮುಚ್ಚಳದ ವಲಗೆಯಿಂ . . . ಭದ್ರಮಂಟಪವೆಸೆದುದು (ಪಚಿಪ್ರ. ೦-೨-೩೦). ೩. ಇಂದಿರೆ ಪದ್ಮಮಂದಿರದೊಳಿರ್ದು ಮಹಾಪ್ರಣಯಪ್ರಕೋಪದಿಂದೊಂದಿರುಳ್ಕೆ ಮುಚ್ಚಳಮಂ (ಪಚಿಪ್ರ. ೩-೩೪). **ಮುಚ್ಚಳು**: ೧. ಕಾಶೀಪಟ್ಟಣಕ್ಕೆ ಪೋಗಿ ಸೂರ್ಯನನಾರಾಧಿಸಿ ಆ ಸೂರ್ಯನಿಂದ ಮುಚ್ಚಳೆಸಟ್ಟುಗಸಹಿತಮಾದ ಅಕ್ಷಯಪಾತ್ರೆಯಂ ಕೊಟ್ಟು (ಕಾಪಾಮ. ೨೧೮-೩). **ಮುಚ್ಚುಳ್**: ೧. ಉವೇಂದ್ರನುರ್ಬರದ ಮುಳಿಸಿಂದೆ ಮುಂದಸಿನ ಮುಚ್ಚುಳ ನುಂಗಿ:ಬದಿಂದೆ ಮಿಂಟಿ ಪೋಗೊದೆದು (ಹರಾ. ೬-೩೦); ಬದಿ ಮಿಸುನಿ ಗೊಡಂಗಳ್ಗೆ ತೀವಿ ಮಿಸುಪ ನೀಲದ ಮುಚ್ಚುಳಿಟ್ಟಪೊದ್ ಮೊಲೆದ್ರಂದಿಗಳ್ ಕರ್ಪಿದಿದು ಮೆಜ್ಜನವಾ ಶಶಿಮುಖಿಯಾ (ಕಾದ್ಧಶಿ. ೬-೪೯). ೨. ಕೇರೀವನದ ಕೃತಕಾಚಳದ ನಡುವಣ ವಜ್ರದ ಮುಚ್ಚುಳ ಹೆಜ್ಜೆಯ ಮನೆಯು ಹಂಸ ತೂಳದ ತಣ್ಣೆಳಲ ತಳ್ಪದೊಳ್ ಬಿಜಯಂಗೆಯ್ದು (ಪಂಂರ-೦೯-೩). ೩. ತೆಱಿದುವು ಮುಸ್ಸಮಿಕ್ಕಿದ ವಿಮಾನದ ಮುಚ್ಚುಳ್ (ಅಪಂಪ್ರ. ೦೨-೩೬). ೪. (ರೊಟ್ಟಿ ಸುಡುವ ಮೊದಲು) ಮೇಲೆ ಮುಚ್ಚಲು ಸಿದ್ಧಪಡಿಸುವ, ಕಲಸಿದ ಹಿಟ್ಟಿನ ಬಟ್ಟಲು. —ಕಣಿಕೆದ ಬಟ್ಟಲು : ನವೆದ ಸೊಜ್ಜಗದು

ಸಲೆ ಕುಟ್ಟಿ ಸರಿಕನೆಮುನಿಕ್ಕಿಸಿಸು ಬೆಳ್ಳಿಯನಿಕ್ಕಿದಾ ಕೊಟ್ಟಿಯಮು ಮುಚ್ಚು ಳೊಳಗಿಕ್ಕಿ ಬೇಯಿಸಲು ತಾನುದುರುರೊಟ್ಟಿವೆಸರಂ ಪಡೆದುದು (ಸೂಪಶಾ. ೦–೦೬). **ಮುಚ್ಚುಳ** : ೨ ಪಚ್ಚೆಯ ತೊರೆ ಪವಳದ ಕಂಬ ಬೋದಿಗೆ ನಿಚ್ಚಳವಪ ನೀಲದಿಂದ ಮುಚ್ಚುಳ ಮುಖಶಾಲೆಯು ಮಣಿಮಂಟಪವಚ್ಚರಿ ಯಾಗಿರುತಿಹುದು (ಕೃಶಣಂ. ೫೦). **ಮುಚ್ಚೆಳ್ಳು** : ೧. ಬಳಿಕ ಬೇವಾಗ ಗಂಜಿಯಂ ಬಸಿದುಕೊಂಡು ಮುಚ್ಚುಳನಕ್ಕೆ . . . ಮೃದುವಾಗಿ ಮಾಡಿದುದು ಪಾ ಶುದ್ಧಮಪ್ಪೋದನಂ (ಸೂಪಶಾ. ೫–೨); ಅಗರು ಚಂದನ . . . ಕರ್ಪುರ ತುಂಬಿ ಮೆಱೆವ ಎಗೆ ಭರಣಿಯು ಮುಚ್ಚುಳನ್ಸುಗಿದಂದದೆ ಮಗಮಗಿಸಿದುದಾಸ್ಥಾನ (ಕಂಪಂ. ೯-೦೨).

[ಮುಚ್ಚು$_2$ +–ಅಣ./ತಮಿ. ಮುಚ್ಚಿನ್; ತುಳು. ಮುಚ್ಚಲ, ಮುಚ್ಚ, ಮುಚ್ಚಲ್]

ಮುಚ್ಚಣಿಕೆ ' ಮುಚ್ಚಳಿಕ್ಕೆ$_1$ ' ನೋ.

ಮುಚ್ಚಲ ' ಮುಚ್ಚಣ ' ನೋ.

ಮುಚ್ಚಲಿಕೆ ' ಮುಚ್ಚಳಿಕೆ ' ನೋ.

ಮುಚ್ಚಲು. ಮುತ್ತಲು (ನಾ). (ಮಕ್ಕಳಾಡುವ) ಸಣ್ಣ ಮೊರ : "ಮುಚ್ಚಲು=ಮೊರ, ಸಿಪ್ಪಲು, ಮುಚ್ಚುವ ಸಾಧನ, ಟಿಪ್ಪಾರಿಕೆ: ಒಂದು ಮಕ್ಕಳಾಟಿಕೆ" (ಕಪಾಶಾಂ. ೩೦೬). **ಮುತ್ತಲು** : "ಮುತ್ತಲು = ಮಕ್ಕಳಾಡುವ ಸಣ್ಣಮೊರೆ" (ಹಾಸಕೋ. ೩೪); ದೇವರ ಮನಿಯಾಗ ಹೋದಳ ಚಿಂಗಳಕಿ ಮುತ್ತ ತಂದಾಳ ಮುತ್ತಲಿ[ಲಿ]ತುಂಬ (ಕೊಳಿಗೀ. ೦೬೩). [ದೇ.॥ ತಮಿ. ಮುಚ್ಚಿಲ್, ಮುಜ್ಜಿಲ್; ತೆಲು. ಮುಚ್ಚಿಲಿ]

ಮುಚ್ಚವಡಿ. ಮುಚ್ಚೋಡಿ (ನಾ). ೧. ಮೂರು ಜೊತೆ.—ಜೋಡಿ: ಮುಚ್ಚೋಟು, ಮುಚ್ಚವಡಿ (ಕಬುದ. ೦೫೫ ಪ್ರಯೋ) ; ಮು + ಕೊಡೆ, ಮುಕ್ಕೊಡೆ ಏವಂ ಮುಗ್ಗುಡ್ಡೆ, ಮುಚ್ಚವಡಿ (ಕಣ್ಣಾಪು. ೬೮ ಕ್ರಿಯೋ), **ಮುಚ್ಚೋಡಿ** : ೨. ಮೂರು ಮಡಿಕೆ.—ಪದರ : ನೀಡಗಲದ ಗಗನದ ನಟ್ಟನಡುವೆ ಮುಚ್ಚೋಡಿಯ ನಿಡುಜೀಲದಂತೆ ಕೂಡಿ ಗಾಳಿಗಳು ಮೂಜಗುವದಜಿಂಳೆ ತುಂಬಿದೀಡಿನಂತಿಹುವಾಜು ವಸ್ತ್ರ (ಕಪಶ. ೬೬–೬೯). [<ಮೂಱು + ಸವಡಿ$_1$]

ಮುಚ್ಚಳ್ ' ಮುಚ್ಚಣ ' ನೋ.

ಮುಚ್ಚಳ ' ಮುಚ್ಚಣ ' ನೋ.

ಮುಚ್ಚಳದೆಗೆ. ಮುಚ್ಚೆಳ್ದೆಗೆ, ಮುಚ್ಚುಳಂದೆಗೆ, ಮುಚ್ಚುಳ್ದೆಗೆ (ಕ್ರಿ). ಪೆಟ್ಟಿಗೆ, ಕರಡಿಗೆ, ಪಾತ್ರೆ ಮುಂತಾದುವುಗಳ ಮುಚ್ಚಳವನ್ನು ತೆಗೆ. —ಬಾಯಿತೆರೆ : ತಡಬಡಂಬಡುತೆಯಳುಕುತ್ತೆ ಮುಚ್ಚಳದೆಗೆಯಲು ಅಲ್ಲಿರ್ದ ಪಾತ್ರೆಯಲ್ಲಿದಿರೆಯಚ್ಚಿಗೊಂಡು ತಲ್ಲಣಿಸಿ (ಸಿಕ್ಕಾಪು. ೦೮–೩೩). **ಮುಚ್ಚಳ್ದೆಗೆ** : ಕಡಗಾಲದ ಕಚ್ಚಿನ ಮುಚ್ಚಳ್ದೆಗೆದಂದದೆ ಳೆಂಡುಳೆಂಡಿಸುವ ನಡುಗಣ್ಣವೆಯೊಡೆಯಲು (ಸಿರಿಸಂ. ೨–೨). **ಮುಚ್ಚುಳಂದೆಗೆ**: ಬೆಳುದಿಂಗಳ ನಡುವಿರ್ದ ಚಂದ್ರಮನಂತೆ ಸರ್ವಾಂಗೋದ್ಭೂಳಿತಗಾತ್ರನಾಗಿರೆ ಮಜುದಿವಸಂ ಮುಚ್ಚುಳಂದೆಗೆದು ನೋಡಿ (ಜಾಗೀಪು. ೫೬. ೨೬೩–೦೩); ಮುಚ್ಚುಳಂದೆಗೆದೇಸುವಿಲ್ಲದಿರೆ ಬೆಜಗಾಗಿ (ಕಬುದ. ೮೬. ೦೨–೦೩). **ಮುಚ್ಚುಳ್ದೆಗೆ** : ಶಾರಿಗಲಂಕರಿಸಲ್ಕೆ ಜಾಣ್ಣಗರಡಿಗೆಯ ಮುಚ್ಚಳ್ದೆಗೆದು ರತ್ನಸರಮಂ ನೆಗಬ್ಬುವ ಭಂಡಾರಿಗರಂತೆ ಬಗೆವಡೆವ ದಾಡಿಮುಂಗಳುಂ (ಜಗಪಂ. ೦೦೨–೨೦); ಪ್ರಭಾಜಾಲಂ ನೀಲಂಬಡಿಸಿ ಮುಸಗಿತ್ತೆಣ್ಣಸೆಯೊಳಂ . . . ಚೆಂಬೊಂಗರಡಿಗೆಯ ಮುಂಚ್ಚುಳ್ದೆಗೆದವೋಲ್ (ಜಗಪಂ. ೩–೦೩).

[ಮುಚ್ಚಳ (< ಮುಚ್ಚಣ) + ತೆಗೆ]

ಮುಚ್ಚಳರೊಟ್ಟಿ (ನಾ). (ಕಣಕದ ಬಟ್ಟಲೊಳಗೆ ಹಿಟ್ಟನ್ನಿಟ್ಟು ಲಟ್ಟಿಸಿ ಸಡುವ) ಒಂದು ಬಗೆಯ ರೊಟ್ಟಿ : ಉತ್ತಮದ ಸೊಜ್ಜಿಗೆಯ ಬಟ್ಟವಾಲೊಳು ನನಹು ಮೆತ್ತನಾದಾಗ ತೆಗೆದವನು ಬಟ್ಟೆಯ ಹಿಟ್ಟನೊತ್ತಿ ಲತೆಯಿಜ್ಜಿದರದು ಬಟ್ಟಲ ಪಡುವೆಯಾರಿಸಿ ಎರಡಂಚುಗಳ ಮುರಿದು ಹೊತ್ತದಂದದೊಳು ಕೆಂಡದೊಳಿರಿಸಿ ಬೋಜದಿಂದೆ ಮುತ್ತದಂ ಬೀಸಿ ಬೇಯಿಸಿ ತೆಗದುಕೊಂಡಾಜ್ಯಸುತ್ತ ತಳಿದುಪ್ಪ ಸಿಕ್ಕರೆಯು ಕಲಸೆ ಮುಚ್ಚ [ಪಾಣಾಂ.ಚ್ಚು]ಳರೊಟ್ಟಿವೆಸರಂ ಪಡೆದುದು (ಸೂಪಶಾ. ೦–೦೦).

[ಮುಚ್ಚಳ (< ಮುಚ್ಚಣ) + ರೊಟ್ಟಿ]

ಮುಚ್ಚಳಿಕ್ಕೆ$_1$. ಮುಚ್ಚಣಿಕೆ. ಮುಚ್ಚಳಿಗೆ (ನಾ). ಮುಚ್ಚುವ ಸಾಧನ; ಮುಚ್ಚಳ : ಆ ದೊಣೆಯು ಅರೆಲ್ಲಿನಲ್ಲಿ ಒಂದು ಈ ಎರಡು ಗಜ ಪ್ರಮಾಣವಾಗಿ ಇರುವುದು ಅದಕ್ಕೆ ಪಂದು ಮುಚ್ಚಳಿಕೆಯು ಕಲ್ಲು ಸೇರಿಸಿ ವಜ್ರ ಬಿಗಿದಿರುವದು (ಕಪಶಿ. ೦೫೦–೩) ; ಭಯದ ಮುಚ್ಚಳಿಕೆಯು ಅದನ್ನು ಅದುಮಿತ್ತು. ಈ ಮುಚ್ಚಳಿಕೆಯನ್ನು ತೆಗೆದಾಗ ಜ್ವಾಲಾಮುಖಿಯು ಸ್ಫೋಟವಾಗದಿದ್ದೀತೆ? (ಪ್ರಾಸ. ೦೬೩). **ಮುಚ್ಚಣಿಕೆ** : "ಮುಚ್ಚಳ" (ಜಾಪಕೋ. ೩೨). **ಮುಚ್ಚಳಿಗೆ** : ಮನೆಯೊಳಗಣ ಒರಳು ಬಂಡೂದ್ದೀಪ ನವಖಂಡ ಪೃಥ್ವಿಯ ನುಂಗಿತ್ತು ನುಂಗಿದ ಮುಚ್ಚಳಿಗೆ ತೆಱೆಲ್ಲದೆ ಮತ್ತ ಆ ಮನೆಯ ನುಂಗಿತ್ತು (ಪೋಳಪಾ. ೨೨೮–೭೮೦).

[ಮುಚ್ಚಳ (<ಮುಚ್ಚಣ) + — ಇಕೆ]

ಮುಚ್ಚಳಿಕ್ಕೆ$_2$. ಮುಚ್ಚಲಿಕೆ (ನಾ). (ಅಪರಾಧಿಗಳಿಂದ ಸರಕಾರವು ಕರಾರು ಹಾಕಿ ಬರೆಸಿಕೊಳ್ಳುವ) ಒಳ್ಳೆಯ ನಡತೆಯ ಹೇಳಿಕೆಮುಳ್ಳ ಕರಾರುಪತ್ರ: ಒಡಂಬಡಿಕೆಯ ಪತ್ರ: ಸುಬೇದಾರನು ವೈರುಪಚ್ಚೆ ಮುಂತಾದ ಬಾಬುಗಳಿಂದ ಹೆಚ್ಚು ಹುಟ್ಟುವಳಿಯನ್ನು ಮಾಡುವೆನೆಂದು ಮುಚ್ಚಳಿಕೆ ಬರೆದು ಕೊಟ್ಟು (ಪಾಹಾಪು. I. ೦೫೬); ಪಂಚಾಯ್ತರು ಕೊಡುವ ತೀರ್ಮಾನಕ್ಕೆ ತಾವು ಬದ್ಧರಾಗಿರುವೆವೆಂದು ಕಕ್ಷಿಗಾರರು ಒಪ್ಪಿ ಮುಚ್ಚಳಿಕೆಯನ್ನು ಬರೆದುಕೊಡಬೇಕಾಗಿತ್ತು (ಪಾಹಾಕಂ. II. ೫೩) ; ಈ ಪ್ರಾಂತದಲ್ಲಿರುವ ತನಕ ಯೋಗ್ಯ ನಡತೆಯಿಂದಿರುವರೆಂದು ಮುಚ್ಚಳಿಕೆ ಕೊಡಬೇಕು (ಕೀಪದಾ. ೦೦೪). **ಮುಚ್ಚಲಿಕೆ**: ಪುಥಾಪತ್ಯಾಗಿ ದುಯಾಪ್ಪಿ ಮಾಡಿ ರುವ ಮುಚ್ಚಲಿಕೆಯು ಬರೆಸಿಕೊಂಡು (ಪಾಹಾಂ. II, ೫೯).

[← ಹಾರ. ಮುಚಲ್ಕಾ; ಹಿಂ. ಮುಚ್ಚಲಿಕಾ ; ಮರಾ. ಮುಚಲಕಾ, ಮುಚಲ್ಕಾ]

ಮುಚ್ಚಳಿಗೆ. ' ಮುಚ್ಚಳಿಕ್ಕೆ$_1$ ' ನೋ.

ಮುಚ್ಚಳು ' ಮುಚ್ಚಣ ' ನೋ.

ಮುಚ್ಚಳ್ದೆಗೆ ' ಮುಚ್ಚಳದೆಗೆ ' ನೋ.

ಮುಚ್ಚಟ್ಟು (ನಾ). ಸೊನ್ನೆ; ಶೂನ್ಯ : "ಮುಚ್ಚಟ್ಟಿಂದುಂ ಸೊನ್ನೆಯೆಂದುಂ ಶೂನ್ಯಂ" (ಕಣಾ. ೫೯–೨೬೬); "ಮುಚ್ಚಟ್ಟಿಜಿ ಸೊನ್ನೆಯು ಶೂನ್ಯಂ" (ಕಬೈಂ. ೦೩೦). [?]

ಮುಚ್ಚಾರ್ (ನಾ). ಮೂರು ಸಾಲು.—ಶ್ರೇಣಿ : ಮುಚ್ಚೆರೆ ; ಮುಚ್ಚಾಲ್ (ಕಪಾಪ. ೬೬ ಕ್ರಿಯೋ). [<ಮೂಱು + ಸಾಲ್$_3$]

ಮುಚ್ಚಾಲೆ (ನಾ). ಒಬ್ಬರು ಕಣ್ಣು ಮುಚ್ಚಿಕೊಂಡು ಇತರರು ಅಡಗಿ ಕೊಂಡ ಮೇಲೆ ಕಣ್ಣೆರೆದು ಅವರನ್ನು ಹುಡುಕುವ ಆಟ; ಕಣ್ಣು ಮುಚ್ಚಾಲೆ ಆಟ : ಮುಚ್ಚಾರೆಯಾಡಿ ದೊಲ್ಲಯಿಸುವೇಕೆನ್ನ (ಗಿಕಂ. ೨೬–೨). [ಇ ಇದು 'ಕಣ್ಣಮುಚ್ಚಾಲೆ'ಯೆಂಬುದರ ಸಂಕ್ಷಿಪ್ತರೂಪ]

ಮುಚ್ಚಿ (ನಾ). ಸಾರ್ವಜನಿಕಕಚೇರಿಗಳಲ್ಲಿ ಮಸಿ ತಯಾರಿಸುವ, ಕಾಗದವನ್ನು ಒದಗಿಸುವ, ಪುಸ್ತಕಗಳ ರಟ್ಟುಕಟ್ಟುವುದೇ ಮೊದಲಾದ ಕೆಲಸಕ್ಕೆ ನೇಮಕಗೊಂಡ ವ್ಯಕ್ತಿ : (ಗ್ರಾಗ. II. ೨೩೭).

[< ಮುಚ್ಚು$_1$. / ತಮಿ. ಮುಚ್ಚಿ. / ಹಿಂ. ಮೋಚಿ]

ಮುಚ್ಚಿಕೆ. ಮುಚ್ಚಿಗೆ (ನಾ). ೧. ಹೊದಿಕೆ ; ಆವರಣ : ಚಿಪ್ಪನಾ ಮುಚ್ಚಿಕೆಯೊಳಾಪ್ಪಹುದು ಮುತ್ತು (ಗಿಕಂ. ೩೦–೦೦೭). **ಮುಚ್ಚಿಗೆ** : ೨. ಮನೆಯ ಮೇಲುಭಾಗದ ಛಾವಣಿ.— ಸೂರು : ಚಂದ್ರಯ್ಯ . . .

ಕೊಟಡಿಯ ಮುಚ್ಚಿಗೆಯನ್ನು ನೋಡುತ್ತಾ ನಗತೊಡಗಿದ (ಸಂಸ. ೬೩) ; ಅಡುಗೆಕೋಣೆಯ ಮುಚ್ಚಿಗೆ. ಗೋಡೆ . . . ನೆಲ-ಾವುಗಳ ಕಟ್ಟಿಗೂ ಆಗಾಗ ಗಮನ ಕೊಡುತ್ತಿರಬೇಕು (ಆಕಾಶ. ೭೭). 'ಮುಚ್ಚಿಗೆ' ಪರಾ.

ಮುಚ್ಚಿಗೆಯ ಮನೆ. ಮುಚ್ಚಿಗೆ ಮನೆ=ಇಟ್ಟಿಗೆ, ಗಾರೆಗಳಿಂದ ಕಟ್ಟಿದ ಮನೆ : ಮುಚ್ಚಿಗೆಯ ಮನೆಯವರೂ, ಮನೆಯ ಮಾಡು ಹೆಂಚಿನದಲ್ಲ. ಪ್ರತಿವರ್ಷ ಸೋಗೆ ಹೊಚ್ಚಬೇಕು (ಣಾಕೃ. ೦೬೯); ಸುಬ್ರಾಯರ ಮುಚ್ಚಿಗೆ ಮನೆ ಒಂದು ದಿಮಸ ಗ್ರಾಮದವರ ಹಗಗೆ ತುತ್ತಾಯಿತು (ಕಥಸಂ. ೭೦).

[ಮುಚ್ಚು$_{1}$ + — ಇಗೆ]

ಮುಚ್ಚಿಗ₂ (ನಾ)· ೧· ಇಟ್ಟಿಗೆ ಆಥವಾ ಗಾರೆ ಕೆಲಸ ಮಾಡುವವನು; ಉಪ್ಪಾರ : "ಪಲಗಂಡನೆನೆ ಮುಚ್ಚಿಗಂ" (ಪಾಂಗಣ· ೧೦೦-೪)· ೨· ಕಲ್ಲು ಕೆಲಸ ಮಾಡುವವನು; ಕಲ್ಲುಕುಟ್ಟಿಗ : (ಪ). [ಮುಚ್ಚು$_{1}$ + —ಇಗ]

ಮುಚ್ಚಿಗ₃ 'ಪೊಚ್ಚಿಗ' ನೋ·

ಮುಚ್ಚಿಗೆ 'ಮುಚ್ಚಿಕೆ' ನೋ·

ಮುಚ್ಚಿಲು (ನಾ)· ಒಂದು ಬಗೆಯ ಸಸ್ಯ : ಮುಚ್ಚಿಲು· ಕಲ್ಕೋಗ (ಪ್ಯಕಿನಿ. ೭೦-೩೬೯). 'ನೆಲಮುಚ್ಚಿಲು' ಪರಾ. [?]

ಮುಚ್ಚಿಸು (ಕ್ರಿ)· (ರಂಧ್ರ, ಬಾಗಿಲು ಮುಂತಾದುವನ್ನು) ಬಂದು ಮಾಡಿಸು : ಬಿಲದ ರಂಧ್ರವನ್ನು ಮಣ್ಣುಹಾಕಿಸಿ ಮುಚ್ಚಿಸಿದನು (ಕೂಡಿ)·

[ಮುಚ್ಚು$_{1}$ + — ಇಸು$_{3}$]

ಮುಚ್ಚು$_{1}$ (ಕ್ರಿ)· ೧· ಮರೆಮಾಡು ; ಹೊದಿಸು : "ಮುಚ್ಚು-ಆಚ್ಛಾದನೇ" (ಕಾಮಧಾ) ; ಪೊಂಗೊಡನಂ ತಮಾಳಪಲ್ಲವದೊಳೆ ಮುಚ್ಚಿದಂದದೊಳೆ ಚೂಚುಕಮಾಂತುವು ಕರ್ಪನಾಕೆಯಾ (ಪಂಚಾ· ೦-೦೨೫); ನಾಲ್ಕು ದಿಕ್ಕಿನ ಶರಧಿಗಳು ಪರಿತಂದು ಲೋಕವನರಸ ಮುಚ್ಚಿಲು (ಸಂಚಪ. ೪-೭)· ೨· (ಕಣ್ಣನ್ನು) ಮುಗಿ : ನಿಮೀಲನಗೊಳಿಸು : ಪೆಣನಂ ಕಂಡ ಪಂದೆಯುಂತೆ ಕಣ್ಣಂ ಮುಚ್ಚುತ್ತುಂ (ರಚಾಕ್ಕ· ೦-೦೪೪). ೩· ಕಾಣದಿರುವ ಹಾಗೆ ಮಾಡು ; ಮರೆಸು ; ಅಡಗಿಸು : ಪಚ್ಚು ಪಂಕಲಿಸಿ ಬೆನ್ನಂ ಮುಚ್ಚಿರೆ ದುಂಡಿ (ಶಾಸ್ತ್ರಾ· ೧೭೩ ಕೂರ್ಗಳ) ; ಕವಿಮಾರ್ಗದೊಳೊಳಪೊಕ್ಕುಂ ನವರಸಮುಂ ತಜ್ಞೆಯೆ ನುಡಿದನೆನಿಸಿದ ಕವಿ ಸತ್ಕವಿಯೆನಿಸುಂ ಗೂಡಾವದ ಕವಿಯಂತಿರೆ ಮುಚ್ಚಿ ಪೋದ ಕವಿಯುಂ ಕವಿಯೇ (ಅಚ್ಚ· ೦-೫೬) ; ಪರಗುಣಂಗಳ ಮುಚ್ಚುವ ತನ್ನನೆ ಪೊಗಳ್ವ ಲೋಗರಂ ಪಲ್ಕುವ ನೀಚನೊಳ್ ನೀಚಗೋತ್ಪಾದಾಸ್ಯವಮಕ್ಕುಂ (ಸುಗುಪ್ರಾ. ೯-೨೪)· ೪· (ಬಾಗಿಲು ಮೊದಲಾದುವುಗಳನ್ನು) ಹಾಕು ; ಬಂದು ಮಾಡು ; ಗುಹೆಯ ಬಾಗಿಲಂ ಒರಿದೊಂದು ಸಿಲೆಯಂ ತಂದಿಟ್ಟು ಮುಚ್ಚಿ (ಪಚ್ಚಾರಾ. ೦೩೨-೫೦) ; ತೆಱೆಯದೆ ಮುಚ್ಚಿದ ಪಡಿಗಳ್ ತೆಱೆದುವು (ಸುಗುಪ್ರಾ. ೯-೦೯) ; ಖಗರಾಜ ವಿನತೆಯರಜನಿಗೈದಿ ಬಾಗಿಲು ತನತನಗೆ ಮುಚ್ಚಿರಲು . . . ಬಂದನು ಮನೆಗೆ ಕದ್ರುವಿನ (ಸಂಪ. ೪-೩೨). ೫· ಗುಟ್ಟುಮಾಡು ; ರಹಸ್ಯವಾಗಿಡು : ಎರಡೆರಡು ಛಿದ್ರವನಾರು ಮಾಡಿದರು ಮುಚ್ಚಿದರು ನೀನೆಚ್ಚಿಯಾದೊಡೆ ಸಚ್ಚಿದಾನಂದೈಕನಾಥೆಯು ನಿಶ್ಚಯವ ಹೇಳೆಂದು ಪಾರ್ಥನ ಕೇಳಿದನು ಭೀಷ್ಮ (ಸಂಪ. ೦೬ ೦೩).

[ದೇ.॥ ತಮಿ. ಮುಚ್ಚು ; ಕೊಡ. ಮುಚ್ಚ್ ; ತುಳು. ಮುಚ್ಚು ; ತೆಲು. ಮುಚ್ಚು, ಮುಂಚು· ಮೂಯು ; ಕೋಲಾ. ಮುಸ್ನ ; ನಾಯ್ಕಿ. ಮುಸ್ ; ಪರ್ಜಿ. ಮುಯ್ ; ಗದಬ. ಮೂಯೆಂ ; ಗೊಂಡಿ. ಮುಚ್ಕ್, ಮಚ್ಚಾನಾ ; ಕುಗ. ಮುಸ, ಮುಸಿ ; ಕುವಿ. ಮೂಚ್ಕಾಲಿ. ಮುಜ್ಜಿಪೈ ; ಕುರುಖ್. ಮುಚ್ಚಾನ, ಮುಂಧಾನ ; ಮಲ್ತೊ. ಬ್ರಾಹುಇ. ಮುಸ್ಕ್]

ಮುಚ್ಚು$_{2}$ ಮುಚ್ಚಿ$_{1}$ (ನಾ)· ೧· (ಹೂವಿನ ದಳಗಳು) ಮುಚ್ಚಿರುವುದು : ಕೈರವಾಭ್ಯುದಯದರಲ್ಲು ನೀರಜದ ಮುಚ್ಚು ರಥಾಂಗದಗಲ್ಲು . . . ಜಗತ್ಪ್ರಿನ ಪುಣ್ಯದಚ್ಚು ಬಂದುದಯಗಿರೀಂದ್ರಮಸ್ತಕದೊಳಿರ್ದುದು ಪೂರ್ಣ ಶಶಾಂಕಮಂಡಲಂ (ಸಾಕೃಸಂ. ೯-೨೨೨). ೨· ಮುಚ್ಚುವ ಸಾಧನ ; ಮುಚ್ಚಳ : ರಾಜನು ಗಂಡಾಣದ ಮುಚ್ಚಿನ್ನು ತೆಗೆದು ಹೊರಗೆ ಬಂದನು (ಕುಚಿ. ೧೨). ೩· ಗುಟ್ಟು ; ರಹಸ್ಯ ; ಕುತ್ಸಂ ಪಗೆ ಮುಚ್ಚು . . . ವಿಜಾಗ್ನಿ ಬೆಳ್ಳೆಯಿವು ಕೀಳ್ ನಾರಕಾವಸ್ಥಯುಂ (ಅಪಃಪು. ೯-೪೨) : ತನ್ನ ನೋಟದ ಕಳವು ನಗೆ ತೆರೆಯು ಮುಚ್ಚು (ಶಾಬಿಹ. ೪೨-೩೪) ; ಮುಚ್ಚೀನು ಮತ್ತೆ ಬಚ್ಚೀನು ಇಲ್ಲಿ (ಹುಳ್ಳಕಂ. ೦೩-೩). **ಮುಚ್ಚೆ$_{1}$** : ೨· ಮುಸುಂಕಿದಳ್ . . . ಮಜಪೆಂಬ ಮುಚ್ಚುಳಿಂದರೆಮುಗುಳ್ವಚ್ಚಿಯಂ ಸವಿಯ ಮುಚ್ಚಿದ ಮುಚ್ಚಿಯಿನಾಕೆ ಚಿತ್ತಮಂ (ಅಣಣಸ· ೦೬-೦೭). 'ಎಸಮ್ಮುಚ್ಚೆ' ಪರಾ.

[< ಮುಚ್ಚು$_{1}$·/ತಮಿ. ಮಾಚ್ಚು ; ಕೊಡ. ಮುಚ್ಚ್ ; ತುಳು. ಮುಚ್ಚ, ಮುಚ್ಚ, ಪುಚ್ಚು ; ತೆಲು. ಮೂತ : ಗೊಂಡಿ. ಮುಚ್ಚೀ, ಮುಚ್ಚೆ]

ಮುಚ್ಚುಂಗಣ್, ಮುಚ್ಚುಗಣ್ (ನಾ)· ರೆಪ್ಪೆ ಮುಚ್ಚಿದ ಕಣ್ಣು; ಮುಗಿದ ಕಣ್ಣು : (ಎಮೆಯಲಿಯ ಅಂಗಾರಗಳಂತೆ ಹೊಳಪೊಲಿವ ಕ್ರೂರ ದೃಷ್ಟಿಗಳನ್ನು ಮಹಾರಾಜನ ಮುಚ್ಚುಂಗಣ್ಗಳಿಗೆ ಪಟ್ಟು ನಿಲಿಸಿಕೊಂಡು) (ಜಿಕೃಂ. ೯೯-೨೩). **ಮುಚ್ಚುಗಣ್** : ಈತನಿದ್ದನು ಬಲಿಗೆ ಸಿಲುಕಿದ ಕೋತಿಯಂದದಲಿಸುರದೊಡನೆ ಧಾತುಗುಂದಿದ ಮುಖದ ಮುರುಟಿನ ಮುಚ್ಚುಗಂಗಳಲಿ (ತೀಕರಾ. ೩-೭-೦೯) : ಮಚ್ಚರದಿ ನಡೆವ ಮಗ ಪೊಲ್ಲ ಸೊಳೆಗೆ ಮುಚ್ಚುಗಣ್ಣೊಲ್ಲಿ (ಸವಣಕ್ಕ· ೦೬೦೩). [ಮುಚ್ಚು$_{1}$ + ಕಣ್]

ಮುಚ್ಚುಗಣ್ 'ಮುಚ್ಚುಂಗಣ್' ನೋ·

ಮುಚ್ಚುಗಣೆ (ನಾ)· ಮೊಡಿಗೆಯಲ್ಲಿ ಅಡಗಿರುವ (ವಿಧ ವಿಧದ) ಬಾಣ: ಅಚ್ಚಕ್ಕೆಗಂಕಣಿಕೆ ಮಣಿಮಯಿದಚ್ಚಗನ್ನಡಿಯೇಕೆ ನಮ್ಮಯ ಮುಂ [ಪಾಣಾಂ· ೪೫, ೪೬]ಚ್ಚುಗಣಿಗಳ ಕಲಹಮನು ನೀ ನೋಡು (ತೀಕರಾ. ೬-೩೦-೯). [ಮುಚ್ಚು$_{1}$ + ಕಣೆ$_{1}$]

ಮುಚ್ಚುಗತ್ತಿ (ನಾ)· ಒರೆಯೊಳಗೆ ಸೇರಿಸಿಟ್ಟಿರುವ ಕತ್ತಿ : ಸತುಮಿನಲ್ಲಿ ಮುಚ್ಚುಗತ್ತಿಯೂ ಕಠಾರಿಯೂ ಇದ್ದುವು (ಶ್ರೀಪಾಪ್ರ· ೬೬).

[ಮುಚ್ಚು$_{1}$ + ಕತ್ತಿ]

ಮುಚ್ಚುಗದಹು (ನಾ)· ಮುಚ್ಚಿದ ಬಾಗಿಲು ; ಬಂದು ಪೂಡಿದ ಕದ : ಮುಚ್ಚುಗದಹುಗಳಂ ತೆಗೆದುಕೊಳ್ಳುಮಚ್ಚಿದಿಂ ಗಮನಿಸುವ ಲಿಂಗ ಸಮುಚ್ಚಯಂ (ಏಸತ್ಕ ೩೭-೪೬)· [ಮುಚ್ಚು$_{1}$ + ಕದಹ್ಮ (<ಕದವ್ಮ)]

ಮುಚ್ಚುಗಲ್ಲು (ನಾ). ಕಾಲುವೆ, ಚರಂಡಿ ಮೊದಲಾದುವುಗಳನ್ನು ಮುಚ್ಚುವ ಕಲ್ಲು ; ಹಾಸುಗಲ್ಲು : ಚರಂಡಿಯ ಮುಚ್ಚುಗಲ್ಲು ಸೀಳಿ ಹೋಗಿದೆ (ಕಾಪ). [ಮುಚ್ಚು$_{1}$ + ಕಲ್ಲು (<ಕಲ್ಮ್)]

ಮುಚ್ಚುದೂಂಬು (ನಾ). (ನೀರು ಹೊರಕ್ಕೆ ಹೋಗದಂತೆ) ಹಾಕುವ ತೂಬು ; ಮುಚ್ಚಿದ ತೂಬು : ಉಚ್ಚಿದರು ದೋರ್ವಳತುಬಾಕವ ಮುಚ್ಚು ದೂಂ[ಪಾತಾಂ. ದೂ]ಬನು (ತೀಕರಾ. ೩-೬-೦೯). [ಮುಚ್ಚು$_{1}$ + ತೂಂಬು]

ಮುಚ್ಚುಮರೆ 'ಮುಚ್ಚುಮಜಿ' ನೋ·

ಮುಚ್ಚುಮಜಿ, ಮುಚ್ಚುಮರೆ (ನಾ). ಬಚ್ಚಿಡುವುದು ; ಗೋಪ್ಯ ; ರಹಸ್ಯ : ಇದು ಮಟ್ಟಮಂದು ತಾಂ ಚಪ್ಪರಿಸಿದೊಡಾನಿರೆನೆ ಮುಚ್ಚು ಮಜಿಯೇಕೆಯೇ (ಕರ್ಣಕೇ· ೩-೯); ಮುಚ್ಚುಮಜಿಯೇಕನ್ನು ವಜಗುಣ ಬಡಿಸು (ಶಬ್ಮಾಕ· ೫೦-೦೯); ಮುಚ್ಚುಮಜಿಯೇಕಕಿ ಮನೆಮನೆಯಲಿ (ಪುರಂದ· ೦-೦೭೦-೨). **ಮುಚ್ಚುಮರೆ** : ಕರಲ ಗೋವರ್ಧನರ ಭಿಟ್ಟಿಯಾಗಿ ಯಾವುದೂ ಮುಚ್ಚುಮರೆಯಾಗಿ ಉಳಿಯಲಿಲ್ಲವೆಂದು . . . ಶಶ್ವಂತರವಾದಳು (ಎಸಕ· ೦೩೩); ತನ್ನ ಮನಸ್ಸಿನಲ್ಲಿದ್ದುದನ್ನು ಮುಚ್ಚುಮರೆಯಿಲ್ಲದೆ ಸ್ಪಷ್ಟವಾಗಿ ಉದ್ದೇಶಪೂರ್ವಕವಾಗಿ ಹೇಳಿದುದನ್ನೂ ಚ್ಚಾಪಿಸಿಕೊಂಡನು (ಮಲಾ· ೬); ಯಾವ ಮುಚ್ಚುಮರೆಯು ಇಲ್ಲದೆ ಸ್ವಾಮಿ ಹೇಳಿಬಿಟ್ಟ (ಸ್ವಾಂಬಿಕ್ಷೇ· ೪೩). [ಮುಚ್ಚು$_{1}$ + ಮಜಿ$_{3}$]

ಮುಚ್ಚುಮಾತು (ನಾ). ಗುಟ್ಟಾದ ನುಡಿ; ಮುಚ್ಚುಬೆರೆದು ಮಾತ್ರ: ಕನಕದಾಸರೂ ತಮ್ಮ ದೊರೆಯ ಹೆಸರನ್ನು . . . ಬಿಚ್ಚುಮಾತಿನಲ್ಲಿ ಹೇಳಿಲ್ಲವಾದರೂ ಮುಚ್ಚುಮಾತಿನಲ್ಲಿ ತುಂಬ ಹೇಳಿದ್ದಾರೆ (ಕಾಚೀಸ.ಪ್ರ). 'ಬಿಚ್ಚುಮಾತು'. ಪರಾ. [ಮುಚ್ಚು$_1$ + ಮಾತು$_1$]

ಮುಚ್ಚುವಲಗೆ (ನಾ). ಧಾವಣಿಯ ಹಲಗೆ; ಸೂರುಕಟ್ಟು: ವಿವಾಹ ಮಂಟಪಮಂ ಪೊಂಗೋಡೆ . . . ಬೆಳ್ಳಿಯ ಮುಚ್ಚುವಲಗೆ . . . ಮಿಕ್ಕ ಮಾಣಿ ಮಿಸುಬಿ ಕುಸುರಿಗೆಲಸಂಗಳಿಂದಲಂಕರಿಸಿ (ಕಾಂಕಾಸ್ಕ. ೮-೬-೨೬ ಕ). [ಮುಚ್ಚು$_2$ + ಪಲಗೆ]

ಮುಚ್ಚುವಲೆ (ನಾ). ಗುಬ್ಬಿ ಮುಂತಾದ ಸಣ್ಣಹಕ್ಕಿಗಳನ್ನು ಮುಚ್ಚಿ ಹಿಡಿಯುವಂಥ ಬಲೆ: ಗುಬ್ಬಿದು ಮುಚ್ಚುವಲೆಯೆಲಿ ಶಿವಶಿವು ಭೇರುಂಡ ಸಿಲುಕುವುದೆ (ಕಾಕೃಣಾ. ೦೭-೩೭). [ಮುಚ್ಚು$_1$ + ಬಲೆ$_1$]

ಮುಚ್ಚುಳ್ 'ಮುಚ್ಚಣ' ನೋ.

ಮುಚ್ಚುಳೆ 'ಮುಚ್ಚಣ' ನೋ.

ಮುಚ್ಚುಳೆಂದೆಗೆ 'ಮುಚ್ಚಳದೆಗೆ' ನೋ.

ಮುಚ್ಚುಳಿಕ್ಕು (ಕ್ರಿ). ೧. ಮುಚ್ಚುವ ಸಾಧನವನ್ನು ಹಾಕು; ಮುಚ್ಚು: ತರುಣಿ ಧರಣಿಗೆ ಮುಚ್ಚುಳಿಕ್ಕುವ ವೋಲು ಲಿಂಗುಂಗರವ ಮಾಡಿದಳು (ಭಕ. ೨೨-೦೩೦). ೨. ಕದ ಮುಚ್ಚು; ಬಾಗಿಲು ಹಾಕು: ಮುಚ್ಚುಳಿಕ್ಕಿ [ಜಾಣಾಂ. ಮುಚ್ಚಳಿಕ್ಕಿ] ಪೋದರಮನೆಗಿಂದು ಪೇಬರೆ ಮಾಪತ್ತರದಂ ನೈಪಸಿಂಹ ನೀಂ ತಪಸ್ಸರಿಂಗೆ ಕೂರ್ತುದಂ ನುಡಿವೊಡೀಯರೆ ಪೇಜಿಗರ್ಗರಂಗೆಚಿತ್ರಮಂ (ಅಪಂಪ. ೩-೦೦೮). [ಮುಚ್ಚುಳ(<ಮುಚ್ಚಣ)+ಇಕ್ಕು$_{41}$]

ಮುಚ್ಚುಳಿ 'ಮುಚ್ಚಣ' ನೋ.

ಮುಚ್ಚುಳ್ದೆಗೆ 'ಮುಚ್ಚಳದೆಗೆ' ನೋ.

ಮುಚ್ಚುಱು (ಕ್ರಿ). ಮೂರ್ಛೆಹೋಗು; ಪ್ರಜ್ಞೆತಪ್ಪು: "ಮುಚ್ಚಿತ್ತಂ= ಮೂರ್ಛಮೋದಂ" (ಕಮಂಪ್ರ. ಪಂ. ೨); ಎಚ್ಚಂಬಿರ್ದಯಿಂದುರ್ಚಲ್ ಮುಚ್ಚುತ್ತುಂ ತಕ್ಕೆ ನಾಡೆ [ಜಾಣಾಂ. ಮುರ್ಚುತ್ತಂತಕ್ಕನಾಡ] ತೆರ್ಪತ್ತಾಗಳ್ ಬಿಚ್ಚದೆ ಕೋಪಾನಲಮುಜಿ ಬಜ್ಜಿಸಲ್ ಪರಿ ಬಳಿಕ್ಕಿ ನಿಡುಸ್ಮೈವಿನೆಗಂ (ಪಂಪಭಾ. ೦೨-೩೬). [< ಮುಚ್ಚು + ಱು]

ಮುಚ್ಚೂಳು (ನಾ). ಮೂರು ಬಾರಿ.—ಸಲ: ಅಲ್ಲಿಂ ವಿಗತಜೀವಿಗಳಾಗಿಯೆಲೆ ಭೂವಲ್ಲಭ ನಿನಗೆ ಮುಚ್ಚೂಳು ಸಲ್ಲಲಿತಾಕಾರವಮಳುಗಳಾಗಿ ತಾವುಲ್ಲಾಸದಿಂ ಜನಿಸುವರು (ಕಃಜುಸಂ. ೦೧-೦೩೦); ಬಳುಮದು ಮುಚ್ಚೂಳಿಂದವೆ ಧರಣೀತಲಲನೇಶವನಾ ದೇಗುಲದ. . . ಕುಲಿಶದ ಪಡಿಯ ನೋಡಿದವು (ಕ್ರಿಚಾಂ. ೬-೭೪). [< ಮೂಱು + ಸೂಳ್ಕು (< ಸೂಟ್)]

ಮುಚ್ಚ್$_1$ 'ಮುಚ್ಚು$_2$' ನೋ.

ಮುಚ್ಚ್$_2$, **ಮುರ್ಚೆ** (ನಾ). ಮೈಮರೆಯುವುದು; ಎಚ್ಚರ ತಪ್ಪುವುದು; ಮೂರ್ಛೆ: "ಹಮ್ಮದಾ, ಹರವಸಿ, ಮುಚ್ಚಿ—ಈ ೩ ಮೂರ್ಛೆ" (ಕಪಾ. ೩೬-೨೬೨); ಎಚ್ಚ ಶರಮಂ ಕಲಿ ಚಕ್ಕನೆ ಕಿಬ್ಬುರಃಪ್ರದೇಶಮನಿಸ ನೆಕ್ಕರೊಕ್ಕು ಪತಿ ಮುಚ್ಚಿಬಿಳಿಚ್ಚಿಯೆಗೆಟ್ಟು ಜೋಲ್ದೊಡೆ (ಕ:ಚಕಾ. ೦೨-೦೦೬); ಮುಚ್ಚಿಯು ಬಾಷ್ಪಕ್ಕಾಗಲೆ ಮುಚ್ಚಿ[ಯುಪಾ]ಕ್ಷಣದೆ ಹಾಸ್ಯಮುಂ ಶೋಕಮುಂ. . . ಪಲ್ವುಚ್ಚನಮಪ್ಪುದಮನೂನ(ಮಾ)ಮಾಣ್ಯುದುಮಕ್ಕುಂ (ಜಪಾರ. ೦೩-೨೦). **ಮುರ್ಚೆ**: ಸೀತೆ ದೊಪ್ಪನೆ ಕುಸಿತೆಬ್ಬೆಸ್ಸನುತ್ತೊರೆಗಿದಳಾ ಮರಕೆ ಮುಚ್ಚಿದುವಕ್ಷಿ ಕಾಳಲಾರದ ಸೇದೆಯಿಂ ಪೇಳಳ್ಳರಳ್ದುದೊ ಮುರ್ಚೆಗೇಬಂತೆ (ಕ್ರಿಚಾಪು. ೦೨೯-೦೬). [< ಸಂ. ಮೂರ್ಚಾ]

ಮುಚ್ಚ್ಗೊಳ್ (ಕ್ರಿ). ಮೈಮರೆ; ಎಚ್ಚರ ತಪ್ಪು; ಮೂರ್ಛೆಹೋಗು: ಆ ವರ್ಚಸ್ವಿಯಂ ಕಾಣದಿರಲಾರೆ ಪಾ ರಾಮರಾಮೆಂದು ಮುಚ್ಚ್ಗೊಂಡಂ (ಕಕ. ೪-೬೨); ಇಂದ್ರಜಿತು ಕಾಲಪೀಳವನದರಿ ಶಕ್ಯಾಯುಧವನುರ್ಕಾ ಲಕ್ಷ್ಮಣಂ ಮುಚ್ಚ್ಗೊಳೆ (ಕಕ. ೮-೨೬). [ಮುಚ್ಚ್$_2$ + ಕೊಳ್$_1$]

ಮುಚ್ಚ್ದಿಳಿ (ಕ್ರಿ). ಎಚ್ಚರವುಂಟಾಗು: ಜ್ಞಾನಬಿರು; ಪ್ರಜ್ಞೆಬರು: ಮುಚ್ಚ್ದಿಳಿದರಸಿಯೊಳ್ ಬಗೆ ಬೆಚ್ಚರೆ ಶೀಲವತಿ ಸೀತೆ ಪೊಣ್ಮುದವೆಂತುಂ ಪ್ರಚ್ಛಜ್ಞಾಯೆನ್ನದಟ್ಟಿಂ ಚೆಚ್ಚರಮಾ ಸಭೆಗೆ ರಾಘವಂ ಬಟ್ಟಿಸಂದಂ (ಕಂರಾಮಾ. ೦೩-೩೩); ಆ ವೀರನೊಯ್ಯನೊಯ್ಯನೆ . . . ಮುಚ್ಚ್ದಿಳಿದೆದ್ದನು (ಪಪಾಶಾ. ೦೯ ೨೩); ಕೆಲಿದಾಸುಂ ಬೇಗದಿಂ ಮುಚ್ಚ್ದಿಳಿದಮು ದುಃಖಾರ್ತೆಯಾಗಿ . . . ಬಾಯಾಜಿ ವೆಜ್ಜಾಗಿದಳ್ (ಜಾಕಾಶ್ಯ. ೩೩-೨೯). [ಮುಚ್ಚ್$_2$ + ತಿಳಿ$_1$]

ಮುಚ್ಚ್ಱೆ (ನಾ). ಮೂರು ಬೊಗಸೆ.—ಸೇರೆ: ಕಪರ್ಗ ಪವರ್ಗಮುಲ್ಲ ದಲ್ಲಿಯುಮಿವಾ ಲಕ್ಷಣಮೂಯ್ತು. . . ಮುಚ್ಚ್ಱೆರಿ, ಮುಚ್ಚ್ಱಾಲ್ (ಕಚಾಪ. ೦೧೬ ಕ್ರಿಯೋ); ಅರೆದ ಸಾಸುವೆಯ ಶುಂಠಿಯುನಿಕ್ಕಿ ಪೊಚ್ಚ್ಱೆರೆ ಮೊಸರಿನಲ್ಲಿ ಮುಚ್ಚ್ಱೆರ[ಜಾಣಾಂ. ಚ್ಚ್ಱೆರ, ಚ್ಚ್ಱೆಳ]ುಂ ನೀರ ಕದಡಿ ಮೋದವನಿರದೆ ಸದೆಗೊಟ್ಟು ನೀರೋಗರವನಿಕ್ಕಲು ಸುಗಂಧತಕ್ಕೋದನ (ಸೂಪಶಾ. ೩-೨೬). [< ಮೂಱು + ಸೆಱೆ (< ಸೇರ್$_1$)]

ಮುಚ್ಚ್ವೋಗು (ಕ್ರಿ). = ಮುಚ್ಚ್ಗೊಳ್: ಅಜ್ಞಾವನೆಡವಜ್ಞುದು ಕಿಟ್ಟು ದನಜಸರ್ ಪೋಪಂತೆ ಮುಚ್ಚ್ಪೋಪುದುಂ (ಜಾಂಅತ್ತಿ. ೪.೧೮); ರತಿಯತಿ ಶೋಕಂಗೆಯ್ದು. . . ಬಸಿಱಿಂ ಪೊಸೆದು ಚೇತನಂಗೆಟ್ಟು ಭೂತಳದೊಳ್ ಬಳ್ದು ಕಚ್ಚುಗಟ್ಟಿದಳಲಿಂ ಮುಚ್ಚ್ [ಜಾಣಾಂ. ಮೂರ್ಛೆ]ವೋಗಿ (ಗಂಗ. ೯-೭೭ ಕ); ಮೇರೆದಪ್ಪುವ ಸುಖಿಕ ಮುಚ್ಚ್ವೋಪಳೊ ವಿನೊ ಕಂದನಂ ಕಂಡು (ಶಂಪ್ರತಿ. ೪೦-೦). [ಮುಚ್ಚ್$_2$ + ಪೋಗು$_1$ (< ಪೋ$_1$)]

ಮುಚ್ಚೊಟ್ಟು 'ಮುಂಚೊಟ್ಟು' ನೋ.

ಮುಚ್ಚೋಡಿ 'ಮುಚ್ಚಪಡಿ' ನೋ.

ಮುಚ್ಚೊಱೆ, ಮುತ್ತುಸಾರೆ (ನಾ). ಅಕ್ಕಿ ಮುತ್ತು ಹೆಸರುಬೇಳೆಯು ಹಿಟ್ಟನ್ನು ಕಲಸಿ, ಮೂರುರಂಧ್ರವಿರುವ ಒರಳಿನಲ್ಲಿ ಚಕ್ಕುಲಿಯಂತೆ ಒತ್ತಿ ಕರಿಯುವ ಒಂದು ಬಗೆಯ ತಿಂಡಿ.—ತಿನಿಸು: ಪೂರಿ, ಚಟ್ನಿ, ಮುಚ್ಚೊಱೆಗಳನ್ನು ತಂದು. . . ಕರೆದಳು (ಕಪಕಾ. ೦೦೭); ಮುಚ್ಚೊಱೆ, ಕೋಡುಬಳೆ, ಆಂಬೊಡೆ ಮುಂತಾಗಿ ತಿಂಡಿಗಳನ್ನು ಮಾಡಿಸುತ್ತ (ಕಾಂಕ್ರ. II. ೦೦೬೨). **ಮುತ್ತುಸಾರೆ**: ಕರುಗಾಜೆ ಮುತ್ತುಸಾರೆಯು ಚಕ್ಕುಲಿಗಳ ನರಸಿಯರ್ನೆರಿದಿವಿಕೆನುತ (ಕ್ರಿಪಪ. ೬೯-೦೪೦). [< ಮೂಱು + < ಸೋರ್$_3$]

ಮುಜಗರ, ಮುಜುಗರ (ನಾ). ೧. ಸಂಕೋಚ; ದಾಕ್ಷಿಣ್ಯ: ಆ ಮನುಷ್ಯ ವಿನೋ ಮುಜಗರಪಡುತ್ತಿದ್ದಂತೆ ಆಪನ ಬೆರ್ಯಯಲ್ಲಿ ಕಂಡು ಬಂದಿತು (ಕಂಗಳ. ೪೬): ಮುಜಗರ ಮಾಡದೆ ತಗೋ ಎಂದು ಬಿರುಕೆಂಡ ಒತ್ತಾಯಿಸಿದ್ದ (ಕಥಸ್ಕ. ೦೪೩). ೨. ಹಿಂಸೆ; ಕಷ್ಟ: ಹೇಮಲತೆಯು ಅನಾರೋಗ್ಯದ ನಿಮಿತ್ತವಾಗಿ ಮುಜಗರಪಡುತ್ತಿದ್ದಳು (ಬಿಣಾಕ. ೩೦). ೩. ಬಿಗಿ; ಹಿಡಿತ: ಈಗಲೀಗ ಮನೆಯಲ್ಲಿ ವಿಪರೀತ ಮುಜಗರ (ಜಾಗೀ. ೯೬). **ಮುಜುಗರ**: ೧. ಏನೋ ಒಂದು ರೀತಿಯ ಮುಜುಗರ ಮನಸ್ಸಿನಲ್ಲಿತ್ತು (ದೂಕಶ್ಮಿ. ೦೩೨), ೨. ಮತ್ತೆಲ್ಲದರ ಜೊತೆಗೆ ಶಕುಂತಲೆಗೆ ಕಾರಣವೆಯನ್ನು ಶಾಮಣ್ಣ ತನ್ನ ಕಾಯಿನಲ್ಲಿ ಕರೆದೊಯ್ದುದು ತುಂಬ ಮುಜುಗರವಾಗಿತ್ತು (ಕೂಚೀ. ೦೦೦); ಚಿಕ್ಕವ್ವ ತನ್ನ ಮಗಳೊಡನೆ ದೂವುದೋ ವಿಷಯ ಮಾತನಾಡುತ್ತ ಮನಸ್ಸಿನಲ್ಲಿ ಬಹಳ ಮುಜುಗರ ಪಟ್ಟುಕೊಂಡು. . . ಹೇಳುತ್ತಿದ್ದುದು ಕೊಟಡಿಯಲ್ಲಿದ್ದ ಸರೋಜಳಿಗೆ ಕೇಳಿಸಿತು (ಪಚಾಗ. ೬೩೩); ನಿರಿಜ ತಮ್ಮನ್ನು ಕೊಂದು ರಕ್ತ ಕುಡಿದರೂ ಅವರಿಗೆ ಇನಿತೂ ಮುಜುಗರವಿರಲಿಲ್ಲ (ಕಕ್ಕಶ. ೨೯೦). ೩. ಹೊರಗೆ ಮೋಡಗಳು ಭಾರವಾಗಿ ತೂಗಾಡುತ್ತಿದ್ದಾಗ ಮನೆಯಲ್ಲಿ ಎಂತಹ ಮುಜುಗರವೊದಗುವುದೋ ಅಂತಹ ವಾತಾವರಣ ಕಲ್ಪಿತವಾಗಿದೆ (ಆಕ್ಕಶ. ೩). [?]

ಮುಜರಾ 'ಮುಜರೆ' ನೋ.

ಮುಜರಾಯ್ ' ಮುಜರಾಯಿ ' ನೋ.

ಮುಜರಾಯಿ ಮುಜರಾಯ್ (ನಾ). ದೇವಸ್ಥಾನ, ಮಠ ಮೊದಲಾದುವುಗಳ ದಾನದತ್ತಿಗಳಿಗೆ ಸಂಬಂಧಿಸಿದುದು: ಮುಜರಾಯಿ ಬಾಬಿನ ವಿಚಾರಣೆಗೋಸ್ಕರ ಅಮಲ್ಕವಾದೆ ಲವಾಜಮಿಯು ಮೊಕರಾಯಿತು (ಶಾಸನಂ. II, ೦೦೨); ಬೈಸೂರು ಶೀಮೆಯ ಮುಜರಾಯಿ ಕವಾಷನರವರ ಕಚೇರಿ (ಗುರುಪ್ರ. ೦೦); ಅವರು ತಪ್ಪ ಜೀವಸವಧ್ಗೆ ಮುಜರಾಯಿ ಗುಮಾಸ್ತ ಗಿ೦. . . ಎಲ್ಲಾ ಮೊಗಿಸಿ ಇಪ್ಪತ್ತು ಪೂವತ್ತು ಸಾವಿರ ರೂಪಾಯಿ ಸಂಪಾದನೆ ಮಾಡಿ (ಅವಕಂ. ೪೫). **ಮುಜರಾಯ್ ;** ಮಠದ ಆಸ್ತಿಯ ನ್ನೆಲ್ಲಾ ಮುಜರಾಯ್ ಇಲಾಖೆಗೆ ಬರೆದುಕೊಡಲಾಯಿತು (ಕೂಡಿ).

[← ಹಿಂ. ಮುಜರಾ+ಈ]

ಮುಜರಾಯ್ಕಟ್ಟೆ (ನಾ). ಮುಜರಾಯಿ ಇಲಾಖೆಯ ಅಧಿಕಾರಿ: ಪಿಯರಸನೊಡನಾಡಿಯವನೆಂದರೆ ಮಹತ್ವವ ನನಗೆ ಕಲ್ಪಿಸಿ ಪರಿಕಿಸದೆ ದಕ್ಷತೆಯ ಮುಜರಾಯ್ಕಟ್ಟೆ ಪದವಿತ್ತು (ಚಾಪಾಸಂ. ೦-೦-೦೬).

[ಮುಜರಾಯ್ (< ಮುಜರಾಯಿ) + ಕಟ್ಟೆ]

ಮುಜರೆ, ಮುಜರಾ, ಮುಜುರೆ (ನಾ). ೧ (ಗೌರವಪೂರ್ವಕವಾಗಿ) ಬಿಟ್ಟುಕೊಡುವುದು ; ಮೊಹಿ ; ವಜಾ : ದಿವಾನ್ ಪೂರ್ಣಯ್ಯನವರು ಅದುಮರೆಗೆ ಸರ್ಕಾರಕ್ಕೆ ಬರಬೇಕಾಗಿದ್ದ ಕಂದಾಯ ಮುಂತಾದ ತೆರಿಗೆಯ ಬಾಕಿಯನ್ನೆಲ್ಲಾ ಮುಜರೆಯಾಗಿ ಬಿಟ್ಟುಕೊಟ್ಟು ಜಮೀನು ಮತ್ತು ಸಾಮರು ಬಾಬುಗಳಲ್ಲಿ ಹಿಂದಿನ ಮಹಾಪ್ರಭುಗಳವರ ಕಾಲದಲ್ಲಿದ್ದಂತೆಯೇ ತೆರಿಗೆಯನ್ನು ದಾಖಿಲ್ಮಾಡಿದರು (ಶಾಸನಂ. II, ೩೦). ೨. (ಗೌರವದಿಂದ ಅರ್ಪಿಸುವ) ನಮಸ್ಕಾರ ; ಸಲಾಂ ; ವಂದನೆ : ಭಯಾಭರಿತಭಕ್ತಿಯೊಡನೆ ನೆಲತಪಕ ತಲೆಗಳಂ ಬಗ್ಗಿಸುತ ಮುಜರೆಯಂ . . . ನಿಲಪಲ್ಲದೇ ಗೈದರ್ (ಕರ್ಣಾಪ. ೨೪-೩೦) ; ಬಂದ ಜನರುಗಳು ಮುಜರೆಯಂ ಮಾಡಿದರು (ಶಾಸನಂ. I, ೩೭) ; ಎದ್ದು ನಿಂತು ಮುಜರೆ ಮಾಡಿ (ಹುಂಚಾಕ. ೦೩೯); ಸುಭಾಷದರಲ್ಲರೂ ಆತನಿಗೆ ನಜರು ಮುಜರೆಗಳನ್ನು ಒಪ್ಪಿಸಿದರು (ರಾಶಾ. ೭೩): **ಮುಜರಾ :** ೧. ಲೆಖ್ಖಪಾಡುವದರಲ್ಲಿ ರತಲಿನ ಅಂಶ ಬಂದಿದ್ದರೆ. ಅದರ ಬಗ್ಗೆ ಒಂದು ರತಲ ಹಿಡಿದು ಲೆಖ್ಖವನ್ನು ಮಾಡಿ ಮುಜರಾ ಹಿಡಕೊಳ್ಳುವರು (ಮುಂಬಾಸ್ಮಾ. ೨೦೭). ೨. ಮುಜರಾ- "ನಮಸ್ಕಾರ. ಸಲಾಮು" (ಕಾವಕೋ. ೩೨). **ಮುಜುರೆ :** ೨. ಕವಾತು ಮುಜುರೆಗಳನ್ನು ತೆಗೆದುಕೊಂಡಿಲ್ಲ (ಧಾರಿತ್. ೦೨).

[←ಅರ. ಮುರಾ. ಮುಜರಾ, ಮುಜಾ; ಹಿಂ; ಮುಜರಾ]

ಮುಜಾರಿಯಾನ್ (ನಾ). ಸಾಗುವಳಿ ಮಾಡಿದ ಜಮೀನು. – ಭೂಮಿ : ಬೋದ್ದಮನೆ ಮುಜಾರಿಯಾನೆ ತಾಲುಕಿ ಕೊವದ ಹೋಬಳಿ ಸರಕಾರ . . . ಬರಸಿ ಕಳಿಸ್ಸ ನಿರೂಪ (ಎಕೆ VI.ಕೊಪ್ಪ. ೪೮ ೨೨; 1811).

[←ಅರ. ಮುಸ್ತುಂಅಲಿ ; ಪಾರ. ಮುಂತಖುಲಿಅನ್ ; ಮರಾ. ಮುಜಾರಿಯಾನ್ = ವ್ಯವಸಾಯವು ಹೂಡುವವನು]

ಮುಡುಗರ ' ಮುಜಗರ ' ನೋ.

ಮುಡುರೆ ' ಮುಜರೆ ' ನೋ.

ಮುಜ್ಜಗ ' ಮೂಜಗ ' ನೋ.

ಮುಜ್ಜು ' ಮುಸ್ಸು ' ನೋ.

ಮುಜ್ಜೋತಿ (ನಾ). ಮೂರು ದೀಪಗಳು,– ಜ್ಯೋತಿಗಳು : ವಿಜಳಾಱು ಕಮಲಗಳೆಸಳುಗಳೊಳಗೆ ಪೊಸಳೆ ಮುತ್ತಿ ಮುಜ್ಜೋತಿ ಉರಿವುತಿವ (ಚಪೋ. ೬೪೨). [< ಮೂರು + ಜ್ಯೋತಿ]

ಮುಜ್ಜುಟ (ನಾ). ಮಲ್ಲಯುದ್ಧದ ಒಂದು ವರಸೆ: ಭೂರವಮಂ ಭಟಂ ನಿಮಿರ್ದು ಕುತ್ತಿದೊಡಾರ್ಚಿದ ಚಂಡಪಾಸನಂ ಚಾರಣದಾಸೆಯಿಂ ಪುಸುಳ್ದು ಮುಜ್ಜುಟದೊಳ್ಕಗುಟ್ಟುಕ್ಕಿವಟ್ಟಿ ಸೈಪಾರಿಸೆ (ಕವಂತಿ. ೦೧-೭೦). [?]

ಮುಟಗೆ ' ಮುಟ್ಟಿಗೆ ' ನೋ.

ಮುಟ್ಟ ' ಮುಟ್ಟೆ ' ನೋ.

ಮುಟ್ಟಗುಜ್ಜೆ (ನಾ). ಒಂದು ಊರಿನ ಹೆಸರು : ಕಾರ್ತಿಕಮಹಾ ಪಣ್ಣಾಮಿ ಬೃಹಸ್ಪತಿವಾರದಂದು ಮುಟ್ಟಗುಜ್ಜೆಯಂ ಮಹಾಜನಕ್ಕೆ ಕೊಟ್ಟು (ಎಕೆ.VIII. ಸೊರಬ. ೪೭೨-೦೬ ; ೪೨೨). [ಮುಟ್ಟಿ + ಕುಜ್ಜೆ]

ಮುಟ್ಟಯಿಸು, ಮಟ್ಟುಟ್ಟಯ್ಸು. ಮುಟ್ಟಿಸು. ಮುಟ್ಟಿಸು. ಮುಟ್ಟೈಸು (ಕ್ರಿ). ೧. ಹತ್ತಿರ ಬರು ; ಸಮೀಪಿಸು : ಅಚ್ಚರಿ ಮಚ್ಚಾರವಳೆಂದಱಿವೊಡಂದು ಮುಟ್ಟಯಿಸಿ ಬಂದು (ಚಾಪಾಸ್ಮ. ೧೦-೯) : ಜೀಯ ಇವಳೆನ್ನಣಾಗಿ, ಶ್ರೀಮತಿಯೆಂಬ ಪೆಸರ್. ಪ್ರಭಾಸಸಮಯಮಮಂ ಮುಟ್ಟಯಿಸಿ ಬಂದನೆನೆ (ಅಜ್ಮಾಕ. ೬-೩೬). **ಮುಟ್ಟಯ್ಸು :** ೨. ಮೇಲೆ ಬೀಳು ; ಮುತ್ತು : ಎರಗು : ಪೊಯ್ಸು ಘನಭೀರಿಯಂ ಭಾರಿಯಂಕ್ಕೆ ಮುಟ್ಟಿದ್ದುಲಿ ಚಿತ್ತರ್ಬಲಂ (ಕಬಿ. ೪೭-೩೨). ೩. ತಾಕು ; ತಟ್ಟು ; ತಗುಲು : ಮನಮಂ ಮುಟ್ಟಯಿಸ್ಸ [ಪಾಠಂ. ಟ್ಟೈಸಿ] ಮಧ್ಯಂದಿನವ ಬಿಸಿಲೆ ಬೆಳ್ದಿಂಗಳಂತಾಗೆ . . . ಯೋಗೀಂದ್ರಮತದಿಂ ನಿರ್ಮೇಹಂ ನಗ ನಿಕುಹುಟದ್ಭತ್ನಕೂಟಂಬೊಲಿರ್ದಂ (ಕಂಚಾಪು. ೨-೦೪). **ಮುಟ್ಟಿವಿಸು :** ೧. ಉಟ್ಟ ಪೊಸ ಬೆಳುವಟ್ಟೆ ಪೂಮ್ಮಜ್ಜಿ ಮುಟ್ಟವಿಸೆ ಪೊಂಬಣ್ಣ ವಾದುದು (ಪೊರಾ. ೩-೪-೩೦) ; ಬಾಳೆಯಂ ಮುಟ್ಟವಿಸಿ ನಪೆತರ್ಪ ಸಕ್ಕಮಂ ಏಕ್ಕಮಂ ಮೆಟ್ಟಿ ಬಹ ಶಕುಲಮಂ . . . ಬಣ್ಣಿಸಲ್ಕರಿವರುರ್ (ಶ್ರೀಧಾಪು. ೩-೨೬). ೨. ಗದೆಯಿಂ ಮುಟ್ಟವಿಪ ನೈರುತಿಯನಿರಿದನು ಖಳ ಚಿಳಾಯುಧದಿ (ಕಂಚಾಪು. ೨೨-೦೪). **ಮುಟ್ಟಿಸು:** ೪. ಸ್ಪರ್ಶ ಮಾಡು : ಸ್ಪರ್ಶಿಸು : ಕಾಯ ಭಿನ್ನವಾಯಿತ್ತೆಂದು ಮುಟ್ಟಿಸುವರು ಲಿಂಗವನೆಂ (ಕವಪಂ. ೧೦-೧೦೨). ೫. ಸೇರುವಂತೆ ಮಾಡು ; ತಲುಪಿಸು : ಬೆಟ್ಟು ಬೆರಸಿದ ಸಾಕು ಹರಿಜಕೆ ಮುಟ್ಟಿಸಿವ ಗೆಲವಾಯ್ತು (ಕುವ್ಯಾಕ. ೦೨-೨೯) ; ನನ್ನ ಮನೆಗೆ ಮುಟ್ಟಿಸಬಡಿ ಸ್ವಾಮಿ (ಕಗಾ. ೬೯) ; ಈ ಚೀಟಿ ಅವರಿಗೆ ಒಯ್ದು ಮುಟ್ಟಿಸು (ಪಣುಂಕ. ೨೩೬). ೬. ಕೆಚ್ಚು ; ಕಡಿ : ಲೋಪಿತಾಶ್ವ . . . ಹುಳ್ಳಿಯನು ಜಾಡೆಯೊಳ್ ಫಣಿ ಮುಟ್ಟಿಸಿರ್ಮದಂ ಪೆಸೆಯಿರೆ (ಕಲ್ಕಂ. ೬೯). ೭. ಎಡೆಮಾಡು : ನೈವೇದ್ಯ ಮಾಡು: ಲಿಂಗವಿರಹಿತರು ಮಾಡಿದ ಬೋನವ ಲಿಂಗವ ಮುಟ್ಟಿಸುವರೆ ಯಾಪಾಕವ ಆಂತೀಯರಿಬ್ಬು ಪ್ರಕಾರದಿ ನರಕಂ (ರೇಣುಕಾಲೀ. ೪೪-೩೬). ೮. ಸಂದಾಯಮಾಡು: ಸಲ್ಲಿಸು : ಅವರೆ ಸಾಲ ಮುಟ್ಟಿಸು. (ಕೂಡಿ). **ಮುಟ್ಟೈಸು :** ೨. ಮುಟ್ಟಿಸುವ [ಪಾಠಂ. ಮುಟ್ಟೈದುವ, ಬೊಬ್ಬಿಜೂಪುತ] ಸುದತಿಯಚ್ಚನ ರಾಮ (ಕೂಪರಾ. ೬-೨೩-೨೬). [ಮುಟ್ಟಿ + — ಇಸು]

ಮುಟ್ಟಿಯುಸ್ಸು ' ಮುಟ್ಟಯಿಸು ' ನೋ.

ಮುಟ್ಟಿಲ್. ಮುಟ್ಟಲು. ಮುಟ್ಟಲ್ಲಿ. ಮುಟ್ಟಳೆ (ನಾ). ೧. ಸಾಮಿಪ್ಯ; ಹತ್ತಿರ. ೨. ಹೊಲೆ ; ಮುಟ್ಟು ; ಸೂತಕ : "ಮುಟ್ಟವೆ, ಮಾಣಿಕಂ, ಮುಟ್ಟಲ್–ಈ ೩ ಸೂತಕಂ" (ಶಬ್ದಾ. ೬೦-೬೦೪). **ಮುಟ್ಟಲು :** ೧. ಇವೆ ಲಗ್ನ ಮುಟ್ಟಲಾಯ್ತೆನೆ ತನ್ನ ತಂಗಿಯ ಪದದು ಪಲ್ಲಟ್ಟಿಯೊಳಿಟ್ಟು ಮುಮದೆಯ ಮುಂಟಪಕಾ ನಮಿರಾಜ ಗಾತ್ರಮೊಳಿಯ್ದು ತಿರ್ದನು (ಶರಪ. ೨೦-೨). ೨. "ರಜಸಂ, ಪುಷ್ಪಂ, ಆರ್ತವಂ – ಈ ೩ ಮುಟ್ಟಲು" (ನಾಶಬ್ದ. ೦೦೭) ; "ಮುಟ್ಟವೆ ಮಾಣಿಕವೆನುತುಂ ಮುಟ್ಟಲುಮೆನೆ ಸೂತಕಾಭಿಧಾನಂ" (ಕವಂ. ೨೪೦). **ಮುಟ್ಟಲ್ಕೆ :** ೨. ' ಮುಟ್ಟಲೆಗಾಣ್ ' ಪರಾ. **ಮುಟ್ಟಳೆ :** ೩. (?) : ತೊರವೆಯ ಪುರವರಾಧಿಪನನ ತನೂಜಾದಿಗಳ ಗಡಣವರಿ ತಿರುಗಿದನು ಪಾಳೆಯಕೆ ಲಂಕಾಪುರಕೆ ಮಂತ್ರಿಗೆ ಯಾದಂಪಾ ದಿನದಿರುಳುಮುಂವಿದಲಿ ಮುಟ್ಟಳೆಯ [ಪಾಠಂ. ಮುಟ್ಟಳದ, ಮುಟ್ಟಳದ] ಕುಟ್ಟಳೆಯ ಕಾಹಿಸಲಿ (ಕೂಪರಾ. ೬-೦೬-೩೯).

[ಮುಟ್ಟು + — ಅಲ್]

ಮುಟ್ಟಲತಿ (ನಾ). ಮುಟ್ಟಾದವಳು ; ರಜಸ್ವಲೆ : ಬಾಣತಿ ಬಸುಱಿ ಮುಟ್ಟಲತಿಯಾದಲ್ಲಿ ಕೋಣೆತ ಶುಕ್ಲ ದುರ್ಮದವ ಕಾಣುತ ಹೊವಕುಳಿ ಗೊಳುತಿಹರದಜ್ಲಿ (ಶಕಕ. ೬೩-೬೩).[<ಮುಟ್ಟಲ್ +-ತಿ೧ (<-ಗತಿ)]

ಮುಟ್ಟಲಮುರಕೆ 'ಮುಟ್ಟಲುಮುರಿಕೆ' ನೋ.

ಮುಟ್ಟಲವ್ವಿಯೂರ್ (ನಾ). ಒಂದು ಊರಿನ ಹೆಸರು : ಮುಟ್ಟಲವ್ವಿಯೂರ್ವ್ವಾವ್ಯಗ್ರಾವಂ (ಕ್ಯಾಇ. ೦೯೩೬, ೩೩-೨೩ ; ೫೫೦).

[? + ಊರ್]

ಮುಟ್ಟಲು 'ಮುಟ್ಟಲ್' ನೋ.

ಮುಟ್ಟಲುಗಾಣ್ 'ಮುಟ್ಟಲ್ಗಾಣ್' ನೋ.

ಮುಟ್ಟಲುಮುರಿಕೆ, ಮುಟ್ಟಲುಮರಕೆ, ಮುಟ್ಟಿಲುಮುರುಕೆ (ನಾ). ಮುಟ್ಟಿದರೆ ಮುರುಟಿಕೊಳ್ಳುವ ಒಂದು ಬಗೆಯ ಸಸ್ಯ ; ಮುಟ್ಟಿದರೆ ಮುನಿ : "ಮುಟ್ಟಲುಮುರಿಕೆ = ಬಿದಿರಿ, ಗಂಡಕಾರಿ, ಗಂಡಕಾಲಿ" (ಗೂಗಾಮು. ೬) . **ಮುಟ್ಟಲುಮರಕೆ** : ಮುಟ್ಟಲುಮರಕೆ ಮುಂತಾದ ಕೆಲವು ವನಸ್ಪತಿಗಳು ಕೈಹಚ್ಚದ ಕೂಡಲೇ ಮುಟ್ಟಿಕೊಳ್ಳುತ್ತವೆ (ಶುಂಇಯಿ. ೭-೩೩). **ಮುಟ್ಟಲುಮುರುಕ** : ಮುಟ್ಟಲುಮುರುಕದ ಸಸಿಯಂತಿದ್ದ ಇವನು ಒಂದುದೇಶದಿಂದ ಇನ್ನೊಂದುದೇಶಕ್ಕೊಯ್ಯುವದರಲ್ಲಿಯೇ ಕಮರಿಹೋಗದಹುದೆಂಬ ಭೀತಿಯು ನೋಡುವವರಲ್ಲಿ ಹುಟ್ಟುತ್ತಿತ್ತು (ಶಕುಚ. ೩೭೯) ; ಪ್ರೀತಿ-ಪ್ರಸಾದಭೂತಿಗಳಲ್ಲದ ಜೀವ ಒಂದು ನಾಚಿಕೆಗಿಡ ; ಮುಟ್ಟಲುಮುರುಕೆ (ಪಜ್ಞಾ. ೦೩).

[<ಮುಟ್ಟು೧ +ಮುರಿಕೆ೧ (<ಮುರಿಗೆ೧)]

ಮುಟ್ಟಲುಮುರುಕ 'ಮುಟ್ಟಲುಮುರಿಕೆ' ನೋ.

ಮುಟ್ಟಲ್, ಮುಟ್ಟಲ್ 'ಮುಟ್ಟಲ್' ನೋ.

ಮುಟ್ಟಲ್ತಿ (ನಾ). ಮುಟ್ಟಾದವಳು ; ಹೊರಗಡೆಯಾದವಳು ; ರಜಸ್ವಲೆ : ಮುಟ್ಟಲೆಯಾಗಿ ಮಿಾಮದೆ ಸುಮ್ಮನಿರಬಹುದು ಸುಟ್ಟ ಭಸ್ಮವ ಪಣೆಯೊಳಿರಲು (ಬಿಕ್ಕಾ. ೨-೧೦) ; ಮೆಟ್ಟಿ ಕರಗಡದೆ ಸೀಳ್ದರು ಮುಟ್ಟಲೆಯಂ ಬಿರಿಸಿ ನಡೆದ ಮಹಪಾತಕದುಂ (ಪಾರ್ಶ್ವ. ೩೩. ಶ್ರತಕ್ಕರ್ಣಜ).

[ಮುಟ್ಟಲ್ + -ಎ೨]

ಮುಟ್ಟಲೆಗಾಣ್ 'ಮುಟ್ಟಲ್ಗಾಣ್' ನೋ.

ಮುಟ್ಟಲೆಗೊಳ್ (ಕ್ರಿ). ಮುಟ್ಟಾಗು ; ರಜಸ್ವಲೆಯಾಗು : ರಕ್ತಸ್ರುತಿಂ—ಮುಟ್ಟಲೆಗೊಂಬುದಂ ಕುರಿತು (ಪಾಪಪು. ೫-೦-೩೬ ಪ).

[ಮುಟ್ಟಲೆ೧ (<ಮುಟ್ಟಲ್) + ಕೊಳ್೧]

ಮುಟ್ಟಲ್ಗಾಣ್, ಮುಟ್ಟಲುಗಾಣ್, ಮುಟ್ಟಲೆಗಾಣ್ (ಕ್ರಿ). ಮುಟ್ಟಾಗು : ರಜಸ್ವಲೆಯಾಗು : ರಜಸ್ವಲಾಭಗಮಿ=ಮುಟ್ಟಲ್ಗಂಡಳಂ ಪೋಪಲು ಗಂಡಳಂ (ಪಾಪಪು. ೫೫-೨೬). **ಮುಟ್ಟಲುಗಾಣ್** : ಪುಟ್ಟದು ಜಗುಳ್ದೊಡೆ ಕೈಗಂ ನೆಟ್ಟನೆ ಬಪ್ಪಂತೆ ಬಂದೊಡಾತನೆ ವಿಷ್ಣಂ ಇಚ್ಛದಿಂ ವಸರಮಾದೊಡೆ ಮುಟ್ಟೆಟ್ಟಿಲುಗಡಂತೆ ತೊಲಗುವಾತನೆ ಕಷ್ಟಂ (ಪಾಪಪು. ೨೭೦). **ಮುಟ್ಟಲೆಗಾಣ್** : "ಪುಷ್ಪವತಿ ಮುಟ್ಟಲೆಗಂಡ ಸ್ತ್ರೀ" (ಪಾಪಪು. ೪) ; ಮುಟ್ಟಲೆಗಂಡ ಸ್ತ್ರೀಯಂತಿಟ್ಟುಮಿರಲ್ಬಿಲ್ಲ ನಾಲ್ಕುದಿವಸಂ (ಕಮಾಕ್ಕು. ೧೪-೦೩೬) ; ಮುಟ್ಟಲೆಗಂಡು ಮಕ್ಕಳನು ಹಡೆಯದಿರ್ದ ಹುಟ್ಟುಬಂಜೆಯರೆಂದನುತ . . . ಸಗುತಿಹರು (ಗೋಪುಡೇ. ೦-೦೨೯).

[ಮುಟ್ಟಲ್ + ಕಾಣ್]

ಮುಟ್ಟಮಿಸು 'ಮುಟ್ಟಿಯಿಸು' ನೋ.

ಮುಟ್ಟವೆ (ನಾ). ಮುಟ್ಟಾಗುವುದು ; ಹೊರಗಾಗುವುದು : "ಮುಟ್ಟವೆ, ಮಾಣಿಕಂ, ಮುಟ್ಟಲ್ – ಈ ೩ ಸೂತಕಂ" (ಕಚಾಶಾ. ೭೦-೩೦೯); ಮುಟ್ಟವೆಯವಳಿದ ಸತಿಯಂತೆ ರಂಜಿಸಬೇಕು (ಅಂಗಶ. ೫೨-೨).

[< ಮುಟ್ಟು೧ + -ವೆ]

ಮುಟ್ಟವೆಗಾಣ್ (ಕ್ರಿ). = ಮುಟ್ಟಲ್ಗಾಣ್ : "ಅವೀಃ, ಉದಕ್ಯಾ. ರಜಸ್ವಲಾ. ಆತ್ರೇಯಿಕಾ, ಪುಷ್ಪವತೀ – ಈ ೫ ಮುಟ್ಟವೆಗಂಡವಳ್. ಕನ್ಯಕೆಯುಾ ಮುಟ್ಟವೆಗಂಡವಳ್ ತಾಕಾಯೆಱಬುಪು" (ಪಾಡಾಯು. ೮೦-೩೩೪).

[ಮುಟ್ಟವೆ + ಕಾಣ್]

ಮುಟ್ಟಸ 'ಮುಷ್ಟ೨' ನೋ.

ಮುಟ್ಟಸು 'ಮುಷ್ಟ೨' ನೋ.

ಮುಟ್ಟಹಾಳಿ 'ಮುಟ್ಟಾಳ' ನೋ.

ಮುಟ್ಟಳೆ 'ಮುಟ್ಟಲ್' ನೋ.

ಮುಟ್ಟಾಟ (ನಾ). ಪರಸ್ಪರ ಸ್ಪರ್ಶಿಸುವುದು. – ಮಂಟ್ಟಿವುದು : ಕಟ್ಟಾಸ ಅರಮನೆಗೆ ಮೆಟ್ಟಾಸೆ ಕಾರಿಂಗೆ ಪಟ್ಟಣದಾಸೆ ಹರದಂಗೆ ಹಾದರಕೆ ಮುಟ್ಟಾಟದಾಸೆ (ಸರ್ವಜ್ಞ. ೦೭೬೯) ; ಅಡಕ – ನಗೆ ಕಂಗಿಸುಲಿಸಿ ಕಣ್ಣಮುಚ್ಚಡಿಕೆಯುಲಿ ಮುಟ್ಟಾಟ ಹುಡುಕಾಟವಾದುತಿಹುದು (ಸೂಗಾತ. ೬೦–೦). [ಮುಟ್ಟು೨ + ಆಟ]

ಮುಟ್ಟಾಳೆ, ಮುಟ್ಟಹಾಳ, ಮುಟ್ಟುಹಾಳ, ಮುಟ್ಟಾಳ, ಮುಟ್ಟಾಳ, ಮುಠ್ಠಾಳ (ನಾ). ಮುಟ್ಟಿದುದನ್ನು ಹಾಳುಮಾಡುವವನು. ಬುದ್ಧಿಗೇಡಿ ಎಂಬರ್ಥದಲ್ಲಿ ಬಳಸುವ ಒಂದು ಬೈಗುಳು : ಗುರುಗಳು ಇವರು ಮುಟ್ಟಾಳರೆಂದು ನಿಶ್ಚಯಿಸಿ . . . ಹೊರಟುಹೋದರು (ಪಡಗ. ೦). **ಮುಟ್ಟಹಾಳ** : ನಮ್ಮ ಅಧಿಕಾರಿಗಳೆಲ್ಲಾ ಮುಟ್ಟಹಾಳರು, ಅವರಿಗೆ ಉಪಾಯವಾಗಿ ಕೆಲಸ ಮಾಡುವುದಕ್ಕೆ ಬಾರದು (ಕೀರಿಮಾ. ೫೪). **ಮುಟ್ಟುಹಾಳ** : "ಪ್ರತಿಷ್ಠೆ ತೋರಿಸುವ ಕೀಳಧಿಕಾರಿ, ಮುಟ್ಟುಹಾಳ" (Bumble. ೫೦೫೭). **ಮುಟ್ಟಾಳ** : ಭತ್ಸದ ಜನರು ಮುಟ್ಟಾಳರಾಗಿದ್ದಾರೆ (ಪುಕ್ಕಪು. ೦೩೭) ; ಮೂರ್ಖ – ಮಂಕ – ಮಡಯ – ಮುಟ್ಟಾಳ (ಪಾಅಕೃ. ೩) ; ಮುಟ್ಟಾಳ, ತಿಳಿಗೇಡಿ, ದುರ್ಮಿದಗ್ಧ ! ಮುಚ್ಚು ಪಾಯಿ (ಗಾಕಶಾ. ೭೩). **ಮುಟ್ಟಾಳ** : ನೆಕ್ಕಲ್ದೋವ್ ವಿಧಿಯಿಲ್ಲದೆ 'ಮುಟ್ಟಾಳ' ಎಂದು ಗೊಣಗಿದನು (ಕ್ಷಪುಬ. ೨೫೩). **ಮುಠ್ಠಾಳ** : ನಮ್ಮ ವರ್ಗದಲ್ಲಿ ಈ ಮುಠ್ಠಾಳರನ್ನು ಬಿಟ್ಟರೆ ಇಂಥ ಹೇಸಿ ಕೆಲಸವನ್ನು ಮಾಡುವವರು ಇರುತ್ತಾರಾದರೂ ಬೆರೂ ? (ಹಂಗಚೋ. ೯೦) ; ಏನು ಮುಠ್ಠಾಳನೊ ನೀನು ಹರಿ ! (ಪಡಾ. ೫೧, ೬೭) ; ಲೋ ಮುಂಠ್ಠಾಳ, ಇದೇನೋ ಕಾಳಧೈರವನ ಸೈತ್ಯ ! (ಶಾಕಾ. ೩).

[ದೇ.ಪ ತಮಿ. ಮುಂಟ್ಟಾಳ್ ; ಮಲ. ಮುಟ್ಟಾಳ್, ಮುಟ್ಟಾಳನ್ ; ತುಳು. ಮುಟ್ಟಾಳ್]

ಮುಟ್ಟಾಳು (ನಾ). ಮುಟ್ಟಬಹುದಾದ (ಜಾತಿಗೆ ಸೇರಿದ) ಮನುಷ್ಯ. –ಆಳು : ಅಸ್ಪೃಶ್ಯಜಾತಿಗೆ ಸೇರದವನು : ಪುಟ್ಟಣ್ಣಿ ಸೇರೆಗಾರರು, ನಿಂಗ ಮೊದಲಾದ ಮುಟ್ಟಾಳುಗಳು (ಮುಟ್ಟಬಹುದಾದ ಜಾತಿಯವರು ಎಂದರ್ಥ . . .) ಆ ಪದಾರ್ಥಗಳನ್ನೆಲ್ಲ ಹೇಳಿದಂತೆ ಎರಡು ಭಾಗವಾಗಿ ಬೇರೆ ಬೇರೆ ಮಾಡತೊಡಗಿದರು (ಕಾಪಪು. ೬೧೦); ಅಯ್ಯಾ, ಮಾಟ್ಟದ್ದಕ್ಕೆ ದೇಸರವಾಯಿತೇ ? ನಾನು ಗೌಡ, "ಮುಟ್ಟಾಳು" (ಜುಗ. ೦೦೨).

[ಮುಟ್ಟು೧ + ಆಳು೨ (< ಆಳ್೨)]

ಮುಟ್ಟಾಳೆ (ನಾ). (ಕರಾ) ಅಡಕೆಮಟ್ಟೆಯಿಂದ ಮಾಡಿದ ಟೋಪಿ ; ಪಟ್ಟೆಟೋಪಿ : ವಾಸುದೇವಭಟ್ಟರು ತಲೆಗೆ ಮುಟ್ಟಾಳೆಯಿಟ್ಟು ಕೈಯಲ್ಲಿ ಕತ್ತಿ ಹಿಡಿದು ತೋಟಕ್ಕೆ ಹೊರಡಲಸುವಾಗಿದ್ದರು (ಕ್ಯಾಅಚು. ೭೦) ; ಕಣ್ಣಿ ಮುಟ್ಟಾಳೆ ಜಲಗಿಟ್ಟು ಬಳಿತೊಟ್ಟು ಹೊಂಗದಿರ ಕಳಕೆ ನಡತಂದ (ಶಾಪಗೀ. ೨೮). [← ತುಳು. ಮುಟ್ಟಲೆ. ಮುಟ್ಟಳೆ]

ಮುಟ್ಟಿ೧ (ನಾ). ಮುಚ್ಚಿದ ಅಂಗೈ ; ಮುಷ್ಟಿ : "ಮುಟ್ಟಿ – ಮುಷ್ಟಿ – ಬಲಿದ ಕೈಪಿಡಿ" (ಕಬ್ಬಕೋ. ೩೩) ; ಏರನಾದೊಡೆ ಕೈದು ಮುಟ್ಟಿಗಳ ಭೀಕರಪ್ರಹಾರವಂ ತೋಲಿಸು (ಕ್ಷಪುಶಾ. ೪-೩೩). [< ಸಂ. ಮುಷ್ಟಿ]

ಮುಟ್ಟ್ಪ್ರ 'ಮುಟ್ಟಗೆ1' ನೋ.

ಮುಟ್ಟಗೆ2, ಮುಟಗೆ, ಮುಟ್ಟ್ಪ್ರ (ನಾ)· ೧. = ಮುಟ್ಟ್ಪ್ರ1 : ಗಾಡಿಗ ಡಿಂಬು ಗಂಗೆ ಚಿಕ್ಕು ಮುಟ್ಟಿಗೆ ಹಸುರಂಬಲಿ ಮುಟ್ಟಿಗೆ ಹುರಿಬುತ್ತಿಯ ಬೇಡಿ . . . ಈವಾಡಿದ ಕೂಳಂಬರಿಯನಾಯ್ದು ಕುಱುಕುವ ಪೇಸಿದೈವಂಗಳ ಬೇಡಿ ಬೇಡಿ ನಿರರ್ಥ ಕೆಡಬೇಡ (ಬಸವ. ೫೩೩) ; ಪಕಾರಕ್ಕೆ ಟತ್ವಂ . . . ಮುಟ್ಪಿಕಾ = ಮುಟ್ಟಿಗೆ (ಕಾರ. ೨೬೨ ಕ್ರಿಯೆ) ; ಗಟ್ಟಿಕಾಳುಗಳನ್ನೆ ಮುಟ್ಟಿಗೆಯಲ್ಲಿ ಹಿಡಿಯುಬೇಕೆಂದೇಕೆ ಚಪಲ (ಪಂಪು. ೩೭-೭). ೨. ಯಾವುದಾದರೂ ವಸ್ತುವೊಂದನ್ನು ಬಿವುಟಿ ಹಿಡಿಯುವ ಇಕ್ಕುಳದಂತಹ ಒಂದು ಬಗೆಯ ಸಾಧನ : "ಮುಟ್ಟಿಗೆ (ಮುಟ್ಟಿ) — ಮುಷ್ಟಿಕಾ = ಒಂದು ಉಪಕರಣ" (ಕಡ್ಡಿಕೋ. ೩೭) ; ಪಟಸೆಯಾ ನರಕದೊಳ್ ಮಾಮಪತ್ತುಮೊಜುಸಾಗದೋಪಮಾಯುಷ್ಮಪುಸೊಜೆಯರ್ ನಾರಕರಾಗಿ ಪುಟ್ಟಿ ಛೇದನಭೇದನಪೂರಣಜೂರಣಪೀಡನಬಂಧನಂಗಳನುಮಂ ಮುಟ್ಟಿಗೆಯೊಳಬ್ಬು ತೆಗಪುವುದುಂ ಕೋತಂಗಳಿಂ ಸೀಳುಟ್ಟಿಗಳಿಂದಂ ಕರುಳ್ಗಳಂ ಸೋರಿಕುತ್ತುವುದಂ . . . ವೋಲ್ವುದುವೆಂದಿಪ್ಪ ಮೊದಲಾ ಗೊಡೆಮು ದುಃಖಿಂಗಳಂ . . . ಅನುಭವಿಸುವರ್ (ಪಾರ್ಶ್ವ. ೪೭-೩೭) ; "ಮುಟ್ಟಿಗೆಯೊಳಿಟ್ಟು-ಕೊಡತಿಗಳಿಂದ ಹೊಡೆದು" (ಪಾರ್ಶ್ವ. ೮೩೨). ೩. ದಿಕ್ಕುಗಳಿಗೆ ಎಸೆದು ಚೆಲ್ಲುವ ಬಲಿ : ಜಗಕ್ಕಿದು ಮಂಗಳಮೆಂದು ರೌದ್ರದೇವತೆ ಪಿಡಿದಿಕ್ಕುವಾಮಿಷದ ಮುಟ್ಟಿಗೆಯೆಂಬಿನಿಗಂ ಸಿಡಿಲ್ದು ದಿಗ್ವಿತತಿಗೆ ಸೂಸೆ ಮುನ್ನಮೆರೆಯಾಪ ರುರುಪ್ರಜಪಾಗಳಾಸ್ಯದಿಂ ಪ್ರತಿಷ್ಠ ದೊಳಿತ್ತಿ ಬೀಸಿಮದದೊಂದು ಮಾದಿದ್ದರೆಬೆಂ ಪಾಹಾಸಿಯಂ (ಜಗ. ೦೬-೬); ಧರೆಯೊಳತಿಬಲನೆನಿಪ ಕೀರ್ತಿಕನ ಸಾನುಜರ ಪುಂಜಿದಾ ಮುಟ್ಟಿಗೆಯ ಮಾಡಿದೆಲ ಭಾಪುರೆ (ಪುರಂ. ೬-೬೩-೨). ೪. (?) : ಕಟ್ಟಿದರು ರಕ್ಷೆಗಳ ವಜ್ರದ ಮುಟ್ಟಿಗೆಯ ತಾಪ್ತಿಗಳ ಪಾಣಿಗಳ ನೆಟ್ಟ ಕಾಲರಿದುಗೆಯ ವಿಷಮ ದೊಳೆಸೆದ ಗಜಪತ್ತಿ (ಶಾಂತಿ. ೨೯-೦೩). **ಮುಟಗೆ** : ೫. ಒಂದು ಬಗೆಯ ಆಯುಧ (?) : ಶಿಪುಮ್ಯಸೆಟ ಮಾಡಿ ಧರ್ಮ ಭೀರಿ ಜೇಗಟೆ ಕಂಚು ಮುಟಗೆ ಘಾಡಿದು ಮುಗುವಿನ. ಪೊಗೆ ತ್ರಸೆಯಲಿ (ತೌಷ. IX-೫೫, ೪೭೦-೪೭ ; ೧೪೫೩). **ಮುಟ್ಟ್ಪ್ರ** : ೨. ''ಮುಟ್ಟಿಗೆ (ಮುಟ್ಟಿ) — ಮುಷ್ಟಿಕಾ = ಒಂದು ಉಪಕರಣ'' (ಕಡ್ಡಿಕೋ. ೩೭). ೩. ನೆಲವನ್ನು ಕುಟ್ಟಿ ಸಮಮಾಡುವುದಕ್ಕಾಗಿ ಬಳಸುವ ಒಂದು ಬಗೆಯ ಮರದ ಸಾಧನ ; ದಪ್ಪಾಸಿ : 'ಕೈಮುಟ್ಟಿ' ಪರಾ.

[< ಸಂ. ಮುಷ್ಟಿಕ./ತಮಿ. ಮುಟ್ಟಕ್ಕೈ = ಸಣ್ಣ ಉಳಿ ; ಮಲ. ಮುಟ್ಟಿ = ಸಣ್ಣಉಳಿ]

ಮುಟ್ಟಗೆ3, ಮುಟ್ಟುಗೆ (ನಾ). ೧. ಸೌದೆ ; ಕಟ್ಟಿಗೆ : ಅನಲಂಗೆ ಸಮಿಧ ದರ್ಭೆಯು ತುಪ್ಪಕೊಡಗಳಂ ಚನ್ನಾಗಿ ಮುಟ್ಟಿಗೆಯ ಹೊರೆಗಳಂ ವಿವಳತರ ಯಾಗಕಂ ಕೂಡಿಪುದರು (ತುಂಗ. ೩-೨೯). ೨. ಪೆಣವನ್ನು ಸುಡಲು ಒಟ್ಟಿದ ಸೌದೆಯ ರಾಶಿ ; ಚಿತೆ : ಮುಟ್ಟಿಗೆಯ ಜೇಲಿರ್ದ್ ಸುತನ ಹಿಂಗಾಲ್ವಿಡಿದು ಸೆಳೆದು ಬಿಸುಟಂ ಭೂಪನು (ಪಡಣ. ೦೨-೩೩). **ಮುಟ್ಟುಗೆ:** ೨. ಮುಟ್ಟುಗೆಯ ಪೆಣಸಸೂರ್ವಂ ಜಟ್ಟಿಗಂ ನೆಗಪೆ (ಪಾರಿಜಾ. ೯-೩೨).

[?]

ಮುಟ್ಟಗೆ4, ಮುಟ್ಟಿಗೆ (ನಾ)· ಒಂದು ಬಗೆಯ ಸಸ್ಯ ; ದೊಡ್ಡ ಪತ್ರ : ತೆಗಿಪಿ ಕುಡಿಯಿಸುಗೆ ಶಿವೆ ಕಳವಿಗೆ ದಾಳಂ ಕಕ್ಕಿ ಮುಸ್ಕೆ ಪರ್ಪಟಕಂ ಮುಟ್ಟಿಗೆಯೆಂಬಿವಿನಿತುಮಂ ಪೈತ್ತಿಗಜ್ವರಂ . . . ಅಟಾಗವಾ (ಕೋಕಶಾಸ. ೯-೦೬). **ಮುಷ್ಟಿಗೆ :** ಸರಿಕಂಡಂ ಮುಷ್ಟಿಗೆ . . . ಕೊತ್ತುಂಬರಿಯೆಂಬವನೆಂಟೊಂದಾಗಿರೆ ಮಜ್ಜುಗಿಸಿ ಕುಡಿಯೆ ವೈತಿಕಜ್ವರ ಹರಣಂ (ಕೋಕಶಾಸ. ೯-೦೭) ; ಮಧುಕಂ ಮುಷ್ಟಿ[ಟಿಗಾಂ. ದ್ವಿ]ಗೆ ಸಕ್ಕರೆ ಮಧುಜೀವನಿ ಪದ್ಮಕಿಂಗಳೆಂ ತಳ್ದು (ಅಶ್ವಶಾ. ೭-೮೩). [?]

ಮುಟ್ಟಲಿ (ನಾ). ಮುಟ್ಟಿದುದನ್ನು ಅಲ್ಲವಾಗಿ ಮಾಡುವವನು : ನಿಮ್ಮಂಥಾ ಮುಟ್ಟಲಿಗಳಿಂದಲೇ ನಮ್ಮ ದೇಶವು ಹಾಳಾಯಿತು (ಮುಸುಸ. ೦೫೭). [ಮುಟ್ಟು1 + -ಇಲಿ3]

ಮುಟ್ಟಿಎಡಿ (ಕ್ರಿ)· ಮುಷ್ಟಿಯನ್ನು ಭದ್ರವಾಗಿ ಮುಚ್ಚು,— ಬಿಗಿಗೊಳಿಸು : ಮುಟ್ಟಿವಿಡಿದಂದು ಗುರ್ದುತೆ ಕಷ್ಟರ್ ಸಕಲಾಯುಧಂಗಳಿಂ ಬಂಧಿಸುತಂ ದುಷ್ಪಪೂಜೆಗಳನಸಗುತ್ತೆ ಶಿಷ್ಟತೆಯಂ ಬಿಟ್ಟು ಕಿಟ್ಟು ಪುಡಿವರ್ ತಡೆವರ್ (ಪಾರ್ಶ್ವ. ೯-೦೫-೨೯). [ಮುಟ್ಟಿ1 + ಪಿಡಿ1 (<ಪಿಡಿ1)]

ಮುಟ್ಟಿಸು 'ಮುಟ್ಟಿಯಿಸು' ನೋ.

ಮುಟ್ಟು1 (ಕ್ರಿ)· ೧. ಸೋಕು ; ಸ್ಪರ್ಶಿಸು ; ತಾಕು : "ಮುಟ್ಟು — ಸ್ಪರ್ಶನೇ. ಉಪಕರಣೇ ಚ" (ಪಾಣಿ) ; ಉರಿ ಮುಟ್ಟಿದರೆಯಮಂತಂ ಬರಮುರಿದಕ್ಕುಂ (ಪಂಪಭಾ. ೧೦-೩೩) ; ಕಟ್ಟುಗೆ ಕಟ್ಟುದಿರ್ಕ್ಕ ಕಡಲಂ ಕಪಿಸಂತತಿ ವಾಮನ ಕ್ರಮಂ ಮುಟ್ಟುಗೆ ಮುಟ್ಟದಿರ್ಕ್ಕೆ ಮಂಗಿಲಂ . . . ಕವಿಗಳ್ ಕೃತಿಬುಧ್ಧೊಳಲ್ತೆ ಕಟ್ಟಿದರ್ ಮುಟ್ಟಿದರ್ (೧ೀಶಾಕ. ೦-೧೦) ; ತೊಲಗು ಹೊತ್ತಿಸೆ ಪುಗಳೆ ಮುಟ್ಟದಿರಿಳೆವು ಮಿಱುಧಸ್ (ಕೂಚರಾ. ೦-೦೦-೦೩) ; ಮುಟ್ಟಿ ಭಾಷೆಯು ಕೊಟ್ಟು ಮೋಸವನೆ ಮಾಡುವರು (ಪುಕಾಚ. ೦-೨೫-೨). ೨. ಸೇರು ; ತಲುಪು : ಜಾಣನಾಂತು ಪೆಚ್ಚಿದ ತೀಜಾಸೆವಟ್ಟಲಸದಕ್ಕಿದವೋಲ್ ದೊರೆವೆತ್ತು ದೂಱಿದಾಜಿದ ದನಿ ಮುಟ್ಟಿ ಮೇನಕೆ ಸರಸ್ವತಿ ಬಾಯ್ದಿಜಿಮಂತೆ ಪಾಡಿದಳ್ (ಕಂಪಣಾ. ೭-೦೫) ; ಇಳೆಯುಂ ಸಾಸಿರಯೋಜನಂಬರೆಗಮಾನುರ್ದ್ದರ್ದನಿರ್ದ್ದುಂ ಮಹೀತಳವುದ್ಧ ಸ್ಥನೆನಿಂತುಮಲ್ಲದೆಯುಮಿಂದ್ರಾವಾಸಮಂ ಮುಟ್ಟಿದಂ (ಸಾಳುಚಾ. ೦-೨೩) ; ಮೊದಲೆಗಳಿಳಿವ ಮುಟ್ಟುವಡೆ ಮುನಿಸಾದಮೊಳ್ಕಿತು (ಕುಚ್ಚಾರಿಕ್ರಿ. ೦೯-೨೬) ; ಪೇಮಿಕೆಯ ಪತ್ರವು ಬಂದು ಮುಟ್ಟಿತು (ಪಚಮಂತ. ೦೩೦). ೩. ಹತ್ತಿರಬರು ; ಸಮೀಪಿಸು : ಸಿಡಿಲ್ದೊಡೆವೊಲಟ್ಟಿ ಮುಟ್ಟಿ ಕಡಿದಿಕ್ಕಿದುದಾದಡರಂ (ಪಂಪಾ. ೦-೪೯) ; ನೆಗಟ್ಟಿದ್ದರ್ಚ್ಚಿಮಮೂರ್ತಿಗೀಯೆ ಸತಿಯುಂ ತದ್ಭಾವಧಮಶ್ರೇಣಿ ಬಂದು ಗಡಂ ತಾಂ ಬಿಡದಟ್ಟಿ ಮುಟ್ಟಿ ಕವಿಯರ್ (ಅಜಿ. ೦೨-೦೪). ೪. ಸೇವಿಸು ; ಸ್ವೀಕರಿಸು : ತನಗೆಂದಿಟ್ಟ ಪಾಲನೀ ಶಿಶು ಮುಂದೆ ಮುಟ್ಟಿನೆಂದುಮ್ಮಳಿಸಿ (ಸಿದ್ಧಾ. ೦-೩೦) ; ಅವನು ಒಂದು ತುತ್ತು ಆಹಾರವನ್ನು ಮುಟ್ಟಿರಿಲ್ಲಿ (ರಾಬಾಸ. ೩). ೫. ದೇಹ ಸಂಬಂಧವನ್ನು ಹೊಂದು ; ಕೂಡು : ಮುನ್ನ ಮುಟ್ಟಿತ್ತೆ ಮುಟ್ಟಿತ್ತು ಇನ್ನು ಮುಟ್ಟಿದೆನಾದರೆ ನಿಮ್ಮ ರಾಣಿ ವಾಸದಾಣೆ (ಬಸವ. ೫೯೭) ; ವೀರಂ ಮುಟ್ಟಿದ ನಂದನೆಯಂ ಬಹುಮತಿಯುತೆ ನನ್ನನೆ ಪಾತ್ರೀಕರಿಸಿ ಬಿಟ್ಟ ಮಾನಿಪಿ ವಿಮಾನ್ಮಂ (ಜಾಕುಂತ. ೬೯-೦೨೦). ೬. ಸಲ್ಲು ; ಸಂದಾಯವಾಗು : ಇದಂ ನನ್ನ ಪಾಲು. ಪಗೆ ಮುಟ್ಟಿತು (ಮುಂಬಾ. ೬. ೪-೦೦). 'ಮುಟ್ಟುವಳಿ' ಪರಾ. ೭. ಅನುಭವಿಸು : ಪುಟ್ಟಿದ ಜಾತಿ ಮೆಟ್ಟಿದ ಪಲಂ ನೆಜೆ ಕೊಳ್ಳದ ಕಾಲ ಮೊರ್ಮೆಯುಂ ಮುಟ್ಟಿದ ಭಾವವಂದದ ಭವಂ ಪಜಿತಿಲ್ಲೆನೆ (ಪದ್ಮಣ. II-೩೦೭). ೮. ಪಡೆ : ಹೊಂದು : ಕೊಟ್ಟದ್ದು ಮುನ್ನಿಲ್ಲ ಮುಟ್ಟಿ ದೞ್ವುಗಳ್ಳ ಕಿಟ್ಟಿ ವಿಷಯಗಳೆ ಬಿಡಲಿಲ್ಲ ಸ್ವರ್ಗದ ಬಟ್ಟೆ ಬೇಡ್ (ಪಪಣ್ಣ. ೬೧೬). ೯. ಕಚ್ಚು ; ಕಡಿ : ಶಾಪರ ಪಾವು ಮುಟ್ಟಿದೊನ್ (ಎಳ. II, ೨೦-೦ ; ೭೦೨) : ಅಳರದು ಕಿರ್ಬು ಮುಟ್ಟದ್ದು ವಿವಾಹ ಮಪಾಸತಿಯಿರ್ದ ಮಂಡಲಂ ಬೆಳೆವುದಾ (ಜಪಪ್ಪ. ೦-೨೩). ೧೦. ತಿನ್ನು ; ಮೇಯು : ಆತು ಮುಟ್ಟದ ಗಿಡುವಿಲ್ಲ (ಕಬಾಪ್ಪು. ೩-೨೨).

ಮುಟ್ಟದರೆಮಾನಿ=ಮುಟ್ಟಿದ ತಕ್ಷಣ ಎಲೆಗಳನ್ನು ಮುದುಡಿ ಕೊಳ್ಳುವ ಒಂದು ಬಗೆಯ ಸಸ್ಯ : "ಅಂಜಾಲಿಕೆ—ಮುಟ್ಟದರೆ ಮುನಿ" (ಅಣಾ. ೦-೪) ; **ಮುಟ್ಟದರೆ ಮುನಿ** . . . ಲಜ್ಜಾವತಿ (ಪ್ರಾಶಿ. ೫೪-೦೦೭೯). **ಮುಟ್ಟದರೆ ಮುರುಟು**=ಮುಟ್ಟದರೆ ಮುನಿ : ಮುಟ್ಟದರೆ

ಮುರುಟಿದುದನ್ನು ಹಿಡಿಹಿಡಿಕೆಯನ್ನೂ ಅಂಬಲವಲ್ಲಿ ಆರೆದು ಪೂಸಲು ಅಂಡವಾತ ಮೊಣ್ಣಂ (ಶಿಕ್ಷಿ. ೮೦).

[ದೇ.ಪ್ರ ಮಲ. ತುಳು. ತೆಲು. ಮುಟ್ಟು : ಕೋತ. ತೊದ. ಮೊಟ್ಟ್]

ಮುಟ್ಟು¹ (ನಾ). ೧. ಸೋಕುವುದು; ಸ್ಪರ್ಶ : ಹನುವಿಂಗೆ ಸಂಜ್ಞೆ ಎತ್ತಿಂಗೆ ಮುಟ್ಟೆ ಕಜುವಿಂಗೆ ಲಲ್ಲೆ (ಕುಲಾಗಾ. ೯. ೩೬೬-೬). ೨. ಪಕ್ಕಿರ ; ಸಮೀಪ : 'ಮುಟ್ಟೊಳಿಗೆ' ಪರಾ. ೩. ಆಳುದ್ದತೆ ; ಮೈಲಿಗೆ : 'ಮುಟ್ಟುಪದು' ಪರಾ. ೪. ಹೆಂಗಸಿನ ರಜಸ್ಸು : "ಮುಟ್ಟುವೆಯೆನೆ ಮೂಡಕವೆನೆ ಮುಟ್ಟಿನೆ ಪೊಲೆ ಸೂತಕಾಭಿಧಾನಂ" (ಶಬಾ. ೩೦) ; ಮುಟ್ಟಿನ ಹೊಲೆಯೊಳಗೆ ಹುಟ್ಟಿಹನು ಶಿವಯೋಗಿ (ಸರ್ವಜ್ಞ. ೨೩೩) ; ಮುಟ್ಟಿನ ದೋಷದಿಂದ ಮಗುವಿಗೆ ಈರಲಾಗಿದೆ (ಧಾಖಿ). ೫. ಸಾಮಾನು ; ಉಪಕರಣ ; ಸಾಧನ : "ಪರಿಸರದೊಳುಂಪಕರಣದೊಳ್ ಮುಟ್ಟು" (ಕ್ರಿಪಾಂ. ೮೯) ; ತೊಟ್ಟಿನೆ ಕೊಳೆ ಚತುರಂಗದ ಮುಟ್ಟಂ ಕೆದಱ್‌ದವೊಲ್ (ಜಾಂತಪು. ೩-೩೪) ; ಕೆನ್ನೆದ ಮುಟ್ಟುಂಗಳಂ ತಂದೆಂ (ಪಂತಕ. ೪. ೦೩೦-೦೩) ; ಸುತ್ತಿಗೆಯ ಕೈವಾರದ ಕಂಬಚ್ಚಿನ ಕೊಯಿಯಡಗಲ್ಲ ಅರನ ಮುಟ್ಟೊಟ್ಟಿಯಿಸಿರೆ (ರಾಪತಿಕ್ಕೆ. ೦೦೩-೨೨). ೬. ವೆದ್ದಳೆಯ ಮರದ ಚೌಕಟ್ಟು : (೬). ೭. ಚರ್ಮವಾದ್ಯವನ್ನು ಬಾರಿಸಲು ಬಳಸುವ ಕೋಲು : "ಅವುಜದ ಮುಟ್ಟಿನೊಳ್ ಲಾಳವಿಂಡಿಗದೊಳಂ ಬಲ್ಲರಿಂದಗುಟ್ಟುಮುಕ್ಕುಂ" (ಸಂಚಿಪ. ೦೩) ; ಅಗ್ಗಬ್ಬಿಕ— ಲಾಳವಿಂಡಿಗೆ, ಅವುಜದ ಮುಟ್ಟು (ಪಾಪ. ೩೦. ೦). ೮. ಅಡ್ಡಿ ; ಎಡರು : ಪ್ರತಿಬಂಧ : 'ಮುಟ್ಟಿಗೋಳು', 'ಮುಟ್ಟೆಡೆ' ಪರಾ. ೯. ಕಕ್ಕಾಬಿಕ್ಕಿ ; ದಿಗ್ಭ್ರಮೆ : (೬). ೧೦. ಉಪಯೋಗ ; ಪ್ರಯೋಜನ : ಆ ಗಿರೀಂದ್ರ ಕಂದರದೊಳ್ ತಪಂಗೆಯ್ದು ತಪೋಧನರ ತಪಂಗಳೆಲ್ಲಮಾತನ ತಪೋಪಾಯಂಬಿಗಳಂ ಬೆಂದು ಬೆಂದ ನುಲಿಪಂತೇ ತರ್ಕಂ ಮುಟ್ಟಿಲ್ಲದೆ ಮುಟ್ಟುಗಿಡೆ (ಪಂಪಭಾ. ೭-೬೦ ವ) ; ಪರಮ ದಯೆಗೆಯಲ್ ನಿನ್ನೊಳ್ ತೊಟ್ಟೊಂದು ಭಕ್ತಿಯನಾದರಂದೆರಸು ಪೆಜಿತೋದೇ ಮುಟ್ಟಾದೊಲ್ಲಪಂತೆದನೆಂಬ ತಕ್ಕುರಸಮುಮದಯಂ ಜೀತೋವಾಕ್ಕಾದು ಕುದ್ಧಿಗಳೊಳ್ ತಮೋಹರನನಿಜುದೆರ್ (ಶಾಂತಪು. ೦೦-೨೦). 'ಮುಟ್ಟುಗೆಡು' ಪರಾ. ೧೧. ಸಮಾನ ; ಸಾಟಿ : ಮಾನಿಯುಂ . . . ಮುನಸ್ವಿಯುಮಾಂತಾ ಮಾನಸರನಾರುಮಂ ಮನಕೇನುಂ ಮುಟ್ಟಲ್ಲದಂತು ಬಗೆವುದು ದೋಷಂ (ಕವಿಂ. ೩-೦೬೦) ; ಜಯಮರ್ಮಂ ಕೊಟ್ಟಪೆನೆಂದಿರ್ದೊಡಾತನಿಂಬಾಮುಷ್ಯಂ ಮುಟ್ಟಿ ಟ್ಟಿ ಲ್ಲನೆಂದು ಮಾಣಿಸಿ (ಕಂದ್ರಕೃ. ೩-೦೦೨). ಮುಟ್ಟಾಗು = ಹೊರಗಡೆಯಾಗು : ರಜಸ್ವಲೆಯಾಗು : ಮುಟ್ಟಾಗಿ ಇದ್ದೇನೆ ಮನೆಯೊಳಗ್ಯಾರಿಲ್ಲ ನಿಮ್ಮುರ ಮಾಡಲೆ ಹೋಗೋದಾಸದ್ಯು (ಪುರಂದ. ೦-೦೩೦-೩) ; ಶಾರದೆ . . . ಮುಟ್ಟಾದಾಗ ಹೀಗೆ ತವರು ಮನೆಗೆ ಬಂದುಬಿಟ್ಟಿದ್ದು ಇದುವೆ ಮೊದಲ ಸಾರೆಯಲ್ಲ (ಮುಷಿಮಾ. ೩೬). ಮುಟ್ಟುತಟ್ಟು→ಮುಟ್ಟುಚಟ್ಟು ೧ : ಬ್ರಾಹ್ಮಣನ ಭಕ್ತಿ ಮುಟ್ಟುತಟ್ಟಿನಲ್ಲಿ ಹೋಯಿತ್ತು (ಪುತವಾ. ೦೩-೦೩) : ಒಡವೆಯ ಒಡಲೆಲ್ಲ ಸವಿರೂಪು ನುಡಿಕಂಪು ಮುಟ್ಟುತಟ್ಟಿಸೊಳೆ ಭೂಭುವನ (ಪುಚಕ್ಕ. ೨-೦೪). ಮುಟ್ಟುನಿಲ್ಲು = ಹೊರಗಡೆಯಾಗುವುದು ನಿಂತುಹೋಗು : ಅರೆತಲೆಬೇನೆ . . . ಕಲವೇಳ ಮುಟ್ಟು ನಿಂತ ಮೇಲೆ (ಪೆನೋಪಾಸ್) ಹುಟ್ಟಾಗುತ್ತದ (ಕಬೋ ೬. ೪೯೭). ಮುಟ್ಟುನೀರು = ಹೊರಗಡೆಯಾದ ಕೂಡಲೆ ಅಥವಾ ಹೊರಗಡೆಯಾದ ಮೂರುದಿನಗಳ ನಂತರ ಮಾಡುವ ಸ್ನಾನ : ಮುಟ್ಟುನೀರು ಹಾತಕೊಂಡು ಆಕೆ ಊರಿಗೆ ಹೊಡಟಳು (ಧಾಖಿ) ಮುಟ್ಟುಪುನೆ = ಹೊರಗಡೆಯಾದ ಅಥವಾ ಹೆತ್ತ ಹೆಂಗಸು ಇರತಕ್ಕ ಕೊಟಡಿ : (೬).

[<ಮುಟ್ಟು¹./ ತಮಿ. ತುಳು. ತೆಲು. ಮುಟ್ಟು; ತೊದ. ಮುಟ್]

ಮುಟ್ಟುಂಗಾಱಿ (ನಾ). ಮುದ್ದಲೆಯನ್ನು ಬಾರಿಸುವವನು : ಲತೆಯ ಕೆಂದಳರ್ಗಳ್ ಬಡಗಾಳಿಯ ಸೋಂಕಿಂ ಪೊಸಪುಸಿನ ನಿಡುಪಣ್ಣಂ ಪೊಡೆಯುಂ ಶ್ರಿರೆ ಚೈತ್ರಮೆಸರ ಮುಟ್ಟುಂಗಾಱಿಂ . . . ಕುಲಿಶಪ್ರಸನದ್ಧ ಮುರಜಮಂ ನುಡಿಸುವ ಶೆಜಿನಾಯ್ಕ್ಯು (ಪಭಾಣಾ. ೦೨-೬).

[ಮುಟ್ಟು¹ + — ಕಾರಿ. / ತಮಿ. ಮುಟ್ಟುಕ್ಕಾರನ್]

ಮುಟ್ಟುಕಟ್ಟು (ನಾ). ೧. ಮುಟ್ಟು ತಡವಾಗುವ ಒಂದು ಬಗೆಯ ರೋಗ. ೨. ಒಂದು ಬಗೆಯ ಮೂತ್ರರೋಗ : ಕೃಮಿಗೆ ವಿಳಂಗಚೂರ್ಣ ಜೇನುತುಪ್ಪದಲ್ಲಿ ಕೊಳ್ಳುವುದು. ಮುಟ್ಟುಕಟ್ಟಿಗೆ ಎಕ್ಕೆಹಾಲು ಬೂದಿ ಕಲಸಿ ಬಾಳೇಹಣ್ಣಲ್ಲಿ . . . ಕೊಳ್ಳುವೆಮು (ಶಿಕ್ಷಿ. ೨೩); ಮುಟ್ಟುಕಟ್ಟಿಗೆ:— ಬೇವಿನ ಸೊಪ್ಪಿನ ಎಲೆಯ ರಸ. ಬೆಣ್ಣು ಗೆಣ್ಣೆ ರಸ. ಈ ಎರಡಕ್ಕೂ ಸರಿಯಾಗಿ ಎಣ್ಣೆಯನ್ನೂ ಕೂಡಿ . . . ಕೊಡಲು ಹುಳು ಮೂತ್ರದಲ್ಲಿ ಬೀಳುವುದು (ಶಿಕ್ಷಿ. ೦೦೯).

[ಮುಟ್ಟು² + ಕುಟ್ಟು²]

ಮುಟ್ಟುಕುಟ್ಟು (ನಾ). ಹೊರಗಡೆಯಾಗುವುದಕ್ಕೆ ಮುಂಚೆ ಅಥವಾ ಆಮೇಲೆ ಬರುವ ನೋವು : (೬).

[ಮುಟ್ಟು² + ಕುಟ್ಟು². / ತಮಿ. ಮುಟ್ಟುಕ್ಕುಟ್ಟು]

ಮುಟ್ಟುಗ (ನಾ). ಅಶುದ್ಧವಾಗಿರುವವನು (?) : ನಗಧರನಗ್ರ ವಲ್ಲಭನೆ ನಾನಿಲೆ ಮುಟ್ಟುಗ ಮುಗ್ಧ ನಿನ್ನ ಪೈಲಗೆಯನದೇಕೆ ಪಿಂಡಿ [ದನೆನಾಂ] (ಶುಹಾನೇ. ೦೯-೪೦). [ಮುಟ್ಟು² + — ಗ]

ಮುಟ್ಟುಗಿಡಿಸು (ಕ್ರಿ). ಸಾಧನವಿಲ್ಲದಂತೆ ಮಾಡು ; ಅಸಹಾಯಕನನ್ನಾಗಿಸು : ಮೂವತ್ತಿರ್ವರುಮೊಳ್ಪಂಡಿರ್ಕಳುಮಂ ಮೂವತ್ತೆರಬ್ಬೋಟ ಕಪವರಮುಮಂ ಕೊಳದ ಪುಲ್ಲ ದರ್ಕಂ ತೊಜಿಪಂತನಿತುಮಂ ತೊಜಿದು ಕರ್ಮಕ್ಷಯಾರ್ಥಂ ಕಪಂಗಿಟ್ಟಾತನನಿಳಿಸಿ ಪರಿಭವಿಸಿ ಮುಟ್ಟುಗಿಡಿಸಿ ನುಡಿಯಲ್ದೇಡ (ಪಚ್ಚಾಣಾ. ೪೬-೮೩).

[ಮುಟ್ಟುಗಿಡು (< ಮುಟ್ಟುಗೆಡು) + — ಇಸು]

ಮುಟ್ಟುಗಿಡು 'ಮುಟ್ಟುಗೆಡು' ನೋ.

ಮುಟ್ಟುಗೆ 'ಮುಟ್ಟಿಗೆ' ನೋ.

ಮುಟ್ಟುಗೆಡು, ಮುಟ್ಟುಗಿಡು (ಕ್ರಿ). ೧. ಸಾಧನವನ್ನು ಕಳೆದುಕೊಳ್ಳು; ಅಸಹಾಯಕವಾಗು : ಕೂರದರ್ ನೆಲನನೊಬ್ಬದೆಬುಂ ಕೊಳೆ ಕೊಟ್ಟು ಮುಟ್ಟುಗೆಟ್ಟನ್ನುವರ್ಣ್ಯದೊಳ್ ನನೆದವಪಂ ಯುಮುನೆಂಬನೆಂ (ಪಂಪಭಾ. ೬-೩೩) ; ಬೆಂಬಲಿಯಿನುಜೆಜುದೆ ಮುಟ್ಟಿವಂದೀ ಮುಟ್ಟುಗೆಟ್ಟು ದುರಾತ್ಮನಂ ವಿಚಾರಿಸುವೆಂ (ಪಂಚಾವಾ. ೦೦-೦೦೯ ವ)- ೨. ಪ್ರಯೋಜನವಿಲ್ಲದಂತಾಗು ; ನಿಷ್ಪ್ರಯೋಜಕವಾಗು: ಕಲ್ಲಂ ಕಾಗಿದ ಮಿಂಟಿಮಂತೆ ಮುಟ್ಟುಗೆಟ್ಟು . . . ಶ್ರೀದತ್ತಸಿಟ್ಟ ಪುಸಿಗೂರ್ಮೆಯಿಂದಿಂದ್ರದತ್ತಸಿಟ್ಟಿಯನಿಂತೆಂದಂ (ಪರ್ಮಾಪ್ಯ. ೦೦-೦೩೬) ; ಜರಾಸಂಧಚಕ್ರವರ್ತಿ ಕೇಳ್ದ ಮುಂದಾತನ ಮೇಲೆ ಪಂ[ಡಂ] ಪೆಬ್ಬೊಂ[ಡಾ] ದಂಡು ಕಾದಿ ಪಜಲ್ವುಟ್ಟು ಸೋಲ್ವುಟ್ಟಿಯೆ ಮುಟ್ಟುಗೆಟ್ಟು ಬಾಯ್ವಿಟ್ಟೋಡಿದೊಡೆ (ಪಾಪಾ. ೩-೨೯ ವ).

. ಮುಟ್ಟುಗಿಡು : ೨. ಆ ಗಿರೀಂದ್ರಕಂದರದೊಳ್ ತಪಂಗೆಯ್ದು ತಪೋಧನರ ತಪಂಗಳೆಲ್ಲಮಾತನ ತಪೋವ್ಯಯಂ ಶಿಬಿಗಳಿಂ ಬೆಂದು ಬೆಂದ ನುಲಿಯಂತೇ ತರ್ಕಂ ಮುಟ್ಟಿಲ್ಲದೆ ಮುಟ್ಟುಗಿಡೆ (ಪಂಪಭಾ. ೭-೬೦ ವ). ೩. ಹೀಯಾಳಿಸು; ಜರಿ (?) : ನಿನ್ನ ಪನಿಜ್ಞಾನದ ತಜಿನಸಜಿಯಲಾದುಮಂ ನೀಂ ಮುಟ್ಟಮಿರೆಂದಾ ಭಟ್ಟನಂ ಮುಟ್ಟುಗಿಡೆ ನುಡಿದುಂ (ಪಂಕತಿ. ೦೩-೯).

[ಮುಟ್ಟು² + ಕೆಪ್ಪು]

ಮುಟ್ಟುಗೋಲು 'ಮುಟ್ಟುಗೋಳು' ನೋ.

ಮುಟ್ಟುಗೋಳು. ಮುಟ್ಟುಗೋಲು (ನಾ). ಸಾಲ ಮಸೂಲಿ ಮುಂತ್ತಿತರ

ಕಾರಣಗಳಿಗಾಗಿ ಒಬ್ಬರಿಗೆ ಸೇರಿದ ಸ್ವತ್ತನ್ನು, ಸರ್ಕಾರ ಅಥವಾ ನ್ಯಾಯಾಲಯ ಮುಂತಾದುವುಗಳ ಆದೇಶದಂತೆ ಸ್ವಾಧೀನಕ್ಕೆ ತೆಗೆದುಕೊಳ್ಳುವುದು : ಈ ಮಹೀಪಾಲಕಂಗೀ ಮನೆಯನು ಮುಟ್ಟುಗೋಳಿಂಗೀಡುವವಿಂ ಮನೆಮಕ್ಕಳುಂ ಕೆಟ್ಟುಪೋಪಂತೆ ಮಾಡಿದೆನಲಾ (ಪಜ್ಜ್ಞೆ. ೦೦-೬೯) ; ತೋಳುಬಿದಸುರಾಧಿಪಗೆ ಗೇಹವ ಮುಟ್ಟುಗೋಳ ತನ್ನದು ದ್ರವ್ಯಸುತ ಪಾಳುವೆಗಿರಬೇಕನದು ವಾಚಸದ ಕೃಪಾಳುವಿಗಿತ್ತು ಪಂದಿಸಿದ (ಕೋಚಾ. ೪೦-೫೫) ; ಇವನ ಸರ್ವೆಶ್ವರ್ಯವನ್ನು ಮುಟ್ಟುಗೋಳು ತೆಗೆದುಕೊಂಡು ಹೆಂಡರುಮಕ್ಕಳೊಡನೆ ಬಂಧಿಸಿ ಸೆರೆಗೆ ತಳ್ಳಲಿ (ಕಾಕ್ಷಚು. ೫೬). ಮುಟ್ಟುಗೋಲು : ಸೇನಾವಿಧಿಯ ವೇರೆಗೆ ಸಾದರಾದ ಯಾವುದಾದರೂ ದಂಡಾಜ್ಞೆಯನ್ನು, ವಿಧಿಸಿದ ಶಿಕ್ಷೆಯನ್ನು, ಆದೇಶಮಾಡಿದ ಮುಟ್ಟುಗೋಲನ್ನು ಅಥವಾ ಮಾಡಲಾದ ಇತರ ಕಲಸವನ್ನು ಮಾನ್ಯಗೊಳಿಸ ಬಹುದು (ಕಾಕಚಚ. ೨೦) ; ಪರಂಗಿಗಳು . . . ಇವೆಲ್ಲವನ್ನು ಇಲ್ಲಿ ಮುಟ್ಟು ಗೋಲು ಕೊಟ್ಟು ಹೋಗಬೇಕಾಗುತ್ತದೆ (ಬೀಲಿಚ. ೨೪).

ಮುಟ್ಟುಗೋಲುಹಾಕು = ೧. ಸ್ವಾಧೀನಪಡಿಸಿಕೊಳ್ಳು : ವಶಪಡಿಸಿಕೊಳ್ಳು : ಅಂಗಡಿಯಲ್ಲಿನ ಸಾಮಾನುಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು ತನ್ನನ್ನು ಬಂಧಿಸಿ ಕೊಂಡೊಯ್ಯಲು ತಿಳಿಸಿರುವನೊ ಏನೊ (ಗಂಪ. ೦೮೨). ೨. ಸಂಪೂರ್ಣವಾಗಿ ನಿಲ್ಲಿಸು, ಇಲ್ಲವಾಗಿಸು : ಆತನ ವಾರ್ಷಿಕವೇತನಕ್ಕೆ ಮುಟ್ಟುಗೋಲು ಹಾಕಲ್ಪಟ್ಟಿದೆ (ರುಚಾಚ. ೯೯). ೩. ಅಡ್ಡಿಯುಂಟುಮಾಡು ; ಪ್ರತಿಬಂಧಿಸು : ನಿಬಂಧನೆಯು ಕದ್ಯುನಿಷ್ಪೇಕ್ಷವೊಂದನ್ನು ಬಿಟ್ಟು ಎಲ್ಲ ರಾಜಕೀಯನಿಷ್ಪೇಕ್ಷಗಳಿಗೂ ಮುಟ್ಟು ಗೋಲು ಹಾಕಿದೆ (ಭಾಸ. ೬೦).

[ಮುಟ್ಟು$_{1}$ + ಕೋಲು$_{1}$ (< ಕೋಲ್).//ತೆಲು.ಮುಟ್ಟುಕೋಲು]

ಮುಟ್ಟುಚಿಟ್ಟು, ಮುಟ್ಟುಚಿಟ್ಟು, ಮುಟ್ಟುಚಿಟ್ಟು (ನಾ). ೧. ಮುಟ್ಟು, ಸೂತಕ ಮುಂತಾದುವುಗಳ ಸಂಸರ್ಗದಿಂದ ಉಂಟಾಗುವ ಮೈಲಿಗೆ. —ಹೊಲೆ : ಮನೆಯಲ್ಲಿ ದೇವತಾಕಾರ್ಯಗಳು ನಡೆದುವಾಗ ಮುಟ್ಟುಚಿಟ್ಟು ಆಗಬಾರದು (ಕಗಿ). ಮುಟ್ಟುಚಿಟ್ಟು : ೧. ಮನೆಯಲ್ಲಿ ಏನೋ ಅನಾಚಾರ ನಡೆದು ಮುಟ್ಟುಚಿಟ್ಟು (ಮೈಲಿಗೆ) ಆಗಿಬಿಟ್ಟಿದೆ (ಗಾಚಸಂ. ೬೦೯); ಜಾತಿಕಿಟ್ಟು ನೀತಿಕಿಟ್ಟು ಕೇರಿಗೆಲ್ಲ ಮುಟ್ಟುಚಿಟ್ಟು ! (ಜಾಪ್ರ. ೦೯೯). ಮುಟ್ಟುಚಿಟ್ಟು : ೧. ಮಕ್ಕಳಿಗೆ ದಡಾರ ಎದ್ದಾಗ ಮನೆಯಲ್ಲಿ ಮುಟ್ಟುಚಿಟ್ಟಾಗಬಾರದೆಂದು ಹಿರಿಯರು ಹೇಳುವುದುಂಟು (ಕಗಿ). ೨. ಅಶುದ್ಧತೆ; ಅಪವಿತ್ರತೆ : ಬಿದ್ದಿಗೆ ಮುಟ್ಟುಚಿಟ್ಟು ಎಲ್ಲಿಂದ ಬಂತು ? (ಮುಜ್ಞ. ೦೦೩).

[ಮುಟ್ಟು$_{2}$ + ಚಿಟ್ಟು$_{2}$ / ತುಳು. ಮುಟ್ಟುಚಿಟ್ಟು, ಮುಟ್ಟುಚಿಟ್ಟು]

ಮುಟ್ಟುಚಿಟ್ಟು ' ಮುಟ್ಟುಚಟ್ಟು ' ನೋ.

ಮುಟ್ಟುಚಿಟ್ಟು ' ಮುಟ್ಟುಚಿಟ್ಟು ' ನೋ.

ಮುಟ್ಟುಡುಗು (ಕ್ರ). ಹೊರಗಡೆಯಾಗುವುದು ನಿಲ್ಲು : ಮುಟ್ಟುನಿಲ್ಲು: ಮುಟ್ಟುಡುಗಿ ಮುತ್ತ ಮುದುಪಾಗಿಯುಂ ಪೂವತ್ತುಂಬರಿಸದೆಳಜವ್ವನೆಯಂತೆ ಗಳವುವದು (ಪಪಂ. ೬-೨೬೬ ೫). [ಮುಟ್ಟು$_{2}$ + ಉಡುಗು$_{1}$]

ಮುಟ್ಟುಪಡ ' ಮುಟ್ಟುಪಡು ' ನೋ.

ಮುಟ್ಟುಪಡು. ಮುಟ್ಟುಪಡ (ನಾ). ಮುಟ್ಟಲು ಅಯೋಗ್ಯವಾದುದು: ಸ್ವೀಕಾರಾರ್ಹವಲ್ಲದುದು : ಆನಱಿದುದೆ ಕೊಕ್ಕರಿಕೆಗೆ ತಾನಱಿ[ದು] ಸಾಲ್ದಿದುವಱಿಯದೇಲ್ವುದೆ ಲೋಕಂ ಮನಿತೆಗೆ ಮುಟ್ಟುಪಡ[ಪಾಅಂ. ಡಾ]ದೇ[ದು]ದೇನೊ ಪೆಜರ್ \ಕೆಂಡದಲ್ಲದಾಗದ ಬಸುಂಡಲ್ (ಅಂಕಂ. ೪-೬) ; ಮುಟ್ಟುಪಡಾಪುತ್ತಾ ಜೊನ್ನವುಣಿಸುಂಬ ಚಕೋರಬಪುಕ್ಕೆ ಬಂಧನಂ ಬಿಟ್ಟುಪುದು ಪದ್ಮಕೋಶವೊಳಕೊಂಬ ಮದಾಳಿಗೆ (ಸಿಂಕೃಸಿ. ೬-೩೬). ಮುಟ್ಟುಪಡ : ಪಂದೋಲ್ . . . ಅಸ್ಪಿಯೆಂದಿವೇಚುಂ ಕುಂದದೆ ಮುಟ್ಟುಪಡಮಕ್ಕುಮಹಾನ ಮತದಿಂ (ಕಚಾಕಾಕ್ಕು. ೫-೦೬೩) ; ವಿಮಲಶುದ್ಧ ತಪಃಫಲಸೌಖ್ಯಭೋಗದೊಳ್ ತಲೆನೆವಿರಲ್ರೆ ಮುಟ್ಟುಪಡ ಮೆಂಬಪೊಲೂರ್ಜಿತಪುಣ್ಯಸಂಚಯಂ (ಆಪಂಕೃ. ೪-೯).

[ಮುಟ್ಟು$_{1}$ + < ಪಡು$_{1}$]

ಮುಟ್ಟುವಳಿ (ನಾ). ಸಲ್ಲಬೇಕಾದ ಖರ್ಜು : ಸಂದಾಯದ ಮೆಚ್ಚ.—ವ್ಯಯ : ಮುಟ್ಟುವಳಿ ಸಾಲ ಬಡ್ಡಿ . . . ಎಲ್ಲಾವನ್ನೂ ಸಲ್ಲಿಸಿಕೊಳ್ಳುತ್ತಾರೆ (ಕಚಕ. ೦೫೫-೨೯೨) ; ದೊರೆಗಳವರು ಒಂದುವರ್ಷ ಅದ ಫಲವನ್ನು ರೇಚಮಾಡಿಸಿ, ರೈತರ ಮುಟ್ಟುವಳಿಯನ್ನು ವಿಚಾರಿಸಿ ನೋಡುವಲ್ಲಿ ಹುಟ್ಟುವಳಿ ಮುಟ್ಟುವಳಿ ಸಮವಾಗಿದ್ದುದರಿಂದ . . . ಮುಂದೆ ಸುಮಾರು ಕೊಡುವಂತೆಯೂ ನಿಬಂಧನೆ ಮಾಡಿದರು (ಚಾಶಾಸಂ. I. ೦೦೬). ' ಹುಟ್ಟುವಳಿ ' ಪರಾ.

[ಮುಟ್ಟು$_{1}$ + — ವಳಿ./ತುಳು. ಮುಟ್ಟುವೇ, ಮುಟ್ಟೊಳಿ]

ಮುಟ್ಟುಹ (ನಾ). ಸೋಕುವಿಕೆ : ಮುಟ್ಟುವಿಕೆ : ವರ್ಮಾವಂ ಮುಟ್ಟುಹ ವಿದಚ್ಛರಿಯೆನುತ ಶಶುವಂ ನುತಿಸುತಿಂತೆಂದ (ಕಬ್ಬು. ೬-೦೬).

[ಮುಟ್ಟು$_{1}$ + — ಹ$_{2}$ (< — ಪ$_{2}$)]

ಮುಟ್ಟುಹಾಳ ' ಮುಟ್ಟಾಳ ' ನೋ.

ಮುಟ್ಟುಳಿಗೆ (ನಾ). ಸ್ತ್ರೀಯಪದಲ್ಲಿ ಇದ್ದು ಮಾಡುವ ಸೇವೆ.—ಪರಿಚರ್ಯೆ : ನಿಟ್ಟುಸಿರಿಂದೆ ಕೀರ್ತಿವ ಹೊಸ್ಸ ಸೆಳಗಿಯ್ಕಗಟ್ಟವರಂಗಳ ಸನ್ನೆಯಲಿ ಮುಂಟ್ಟೊಳಿಗದ ಬೋಳುಕರನೆಲ್ಲರ ಬೀಳುಕೊಟ್ಟೊಳಪ್ಪೆಕ್ಕೆ ನೊತ್ಸವದಿ (ಕೋಚಕ. ೫೦-೬೨). [ಮುಟ್ಟು$_{2}$ + ಒಳಿಗ (<ಅಳಿಗ)]

ಮುಟ್ಟೆ, ಮುಟ್ಟಿ (ಅ). ತನಕ : ವರೆಗೆ : ಹತ್ತುಕಯ್ಯಂ ಕೆಳದೂರೊಡೆಯರ ಮನೆ ಮುಟ್ಟೆ ಮನೆಯ ನಿಸೇಶದಗಲ ಕೆಯ್ ೫೪ ತಜ್ಜಾಣ ಮೆಯ್ಯ ನೀಳಂ (ಅಂ. XIII. ೪೯-೫೬ ; ೧೧೭) ; ಬಡಗ ಮುಖ್ಯಾಗಿ ಹೋದ ಹುದುಗೆಜೆಯೊಳಗು ಮುಟ್ಟೆ ಗಟ್ಟಿದುದಕ್ಕೆ ತಜ್ಞೆಯೆನ್ದು ಹಣವ ನಿಕ್ಕುವರ್ (ಪಗಿ. ೪. ಪಾಸಪ. ೫೫-೬೦ ; ೧೧೦) ; ಮುಟ್ಟೆ ಎಂಬುದುಂ ಸೀಮಾರ್ಥಮಂ ಪೇಟ್ಟುಂ (ಕಶಾದ. ೨೪೯ ಪ್ರ.ಕ.). ಮುಟ್ಟಿ : ಉದಯದೊಳು ಕಾದ ಹಾಲಂ ಸಂಜೆಮುಟ್ಟಿ ಕೆಂಡದೊಳಿರಿಸಿ . . . ಹೆಪ್ಪನಿಡೆ ಮೊಸರು ಕಡುಗೆಂಪಹುದು (ಸೂಪಣಾ. ೨-೬) ; ವೈಶಾಖಶುದ್ಧದ್ವಾದಶಿ ಮುಟ್ಟಿ ತಾಳಬೇಕೈಸನ್ನ ಮಾತ ಮನ್ನಿಪೆಡೆ (ಕೋಚಕ. ೫೬-೬೨).

[< ಮುಟ್ಟು$_{1}$ / ತಮಿ. ಮುಟ್ಟ, ಮುಟ್ಟಿ = ಸಂಪೂರ್ಣವಾಗಿ ; ತುಳು. ಮುಟ್ಟ]

ಮುಟ್ಟೈಡೆ (ನಾ). ಕಷ್ಟದ ಸಂದರ್ಭ : ಆತಂಕದ ಪರಿಸ್ಥಿತಿ : ಪಟ್ಟಣ ಖಿಲಪತವಾಗಿ ಕರ್ನಾಟಕ ಕಟ್ಟು ಸಮ್ಮಯ ರಾಷ್ಟ್ರಸಿರಿಗೆ ಮುಟ್ಟಿ[ಟ್ಟಿ]ಡೆ ಯಾಗುವಂದವ ನಿರಿಸಿದನು (ಗಂಪ. ೦೬-೧೩) ; ಅಟ್ಟುಂಬ ಕಾಲದಲಿ ಕೊಟ್ಟುಂಬುದೊಬ್ಬರಿಗೆ ಕೊಟ್ಟುಂಬುದಲ್ಲಾದಭಮಂಗೆ ಹಲತ್ತಿಜದ ಮುಟ್ಟೈಡೆಗಳಕ್ಕು (ಸರಕ್ಕ. ೬೦೦). [ಮುಟ್ಟು$_{2}$ + ಎಡೆ$_{2}$]

ಮುಟ್ಟೈಸು ' ಮುಟ್ಟಿಯಿಸು ' ನೋ.

ಮುಟ್ಟಾಳ ' ಮುಟ್ಟಾಳ ' ನೋ.

ಮುಟ್ಟಾಳ ' ಮುಟ್ಟಾಳ ' ನೋ.

ಮುಟಾರಿ (ನಾ). ಕೈಗೆ ಧರಿಸುವ ಒಂದು ಬಗೆಯ ಆಭರಣ : ಮುಂಗೈಯ ಮುಟಾರಿ ಮೂರೇಣ ಕಡಗಾವ ಒಂಟಿ ನಾಗರಸುತ್ತ ಸರಪೇಟ (ಕೋಚಗಿ. ೨೦೦). [? ./ಮರಾ. ಮಟಾರ=ಒಂದು ಬಗೆಯ ಆಯುಧ]

ಮುಟ್ಟಾಳ ' ಮುಟ್ಟಾಳ ' ನೋ.

ಮುಡಕಲು ' ಮುಡುಕಲು ' ನೋ.

ಮುಡದಾರ (ನಾ). (ಉಕ) ಬುದ್ಧಿವಾದವನ್ನು ಕೇಳದವನು: ಮೂಢ : ಇಜ್ಜು ದಿವಸ ನಿನಗೆ ಹೇಳುವವರು ಕೇಳುವವರು ಯಾರೂ ಇದ್ದಿಲ್ಲ . . .

ಅದಕ್ಕ ಈ ಮುಡದಾರೆ ಮುದುಕಸ್ನ ತಂದೀಲೇನು ? (ಪಾಂಡಾಪು. ೫೪) ; ಇಂಥಾ ನಮ್ಮ ಗ್ಗೌಡರ ಉಪಕಾರ ತೀರುಪದ ಮುಡದಾರೆ ಅನಿಸಿಗೋಳೋ ಜಾತಿ ನಮ್ಮದು ಅಲ್ಲ ತಗ್ಸೀರಿ ! (ನ್ಯಾಪಾಪು. ೩೫೩).

[←ಹಾಕ. ಮುಂರ್ಡಾರ್ ; ಮರಾ. ಮುಡದಾರ್]

ಮುಡದಾರಶಿಂಗಿ ' ಮುರದಾರಸಿಂಗಿ ' ನೋ-

ಮುಡದಾರಸಿಂಗ ' ಮುರದಾರಸಿಂಗಿ ' ನೋ-

ಮುಡದಾರಸಿಂಗಿ ' ಮುರದಾರಸಿಂಗಿ ' ನೋ.

ಮುಡಪು ' ಮುಡಿಪ್ಪು ' ನೋ.

ಮುಡಬ ' ಮುಡುಬ ' ನೋ.

ಮುಡಾವು (ನಾ). ಒಂದು ಬಗೆಯ ಮಿಮ : ನಿಮಗೆ ಬೇಕಾದ ಹೂಳೆಯ ಮಿನು, ಮುಡಾವು. ಅಬ್ಬೋನಿ. ಕೂಸೆ, ಕಲ್ಲೂರು. ಕೊಂತಿ ಯೊವುದೂ ಇಲ್ಲ (ಪೂಸ್ಟ್ಟ. ೫೪).

[←ತುಳು. ಮುಡುವ]

ಮುಡ್ಡಿ (ಕ್ರಿ). ೧. (ಹೂ ಮುಂತಾದುವನ್ನು ತಲೆಯಲ್ಲಿ) ಧರಿಸು ; ತಾಳು ; ಸೂಡು : ಪುಟ್ಟಗೆಯಾನುಟ್ಟು ಮೆಯ್ಯಂ ಪೂಸಿ ಪೂಮಂ ಮುಡಿದು . . . ಮೆಱೆಯುತ್ತಂ (ಪಣ್ಣಾ. ೦೩೬-೨) ; ಕಟ್ಟಮುಮೇಸೊ ಮೂಲೆಗಾಱನ ಪೊಸಬಾಸಿಗಂ ಮುಡಿವ ಭೋಗಿಗಳ್ಗಲ್ಲದೆ ಬಾಡಿ ಪೋಗದೇ (ಕಪ್ರ. ೨-೧೪) ; ಕದಳಿ ದಂಡೆಯನ್ಕೆದೆ ಸಿರಿಮುಡಿಗೆ ಅಂದದಿಂದಲೆ ಮುಡಿದು (ಶಾಕ್ಕಾ. ೬೫೨. ೦೬-೧೩). ೨. (ತಲೆಗೂದಲನ್ನು) ಗಂಟು ಹಾಕು : ಮುಡಿಯಂ ಪಿಡಿದೆಳೆದವನಂ ಮಡಿಯಿಸಿ ಮತ್ತವನ ಕರುಳ ಹೀಲಿಂದೆನ್ನಂ ಮುಡಿಯಿಸುವಿನೆಗಂ ಮುಡಿಯಂ ಮುಡಿಯೆಂ ಗಡ (ಪಂಪಭಾ. ೬-೦೦) ; ಮರುಳಂತೆ ಮರುಳೆ ತಲೆಯಂ ಪರಪರಿದೆ ಮನೋಸುರಾಗದಿಂ ಮುಡಿ ಮುಡಿಯುಂ (ಭರ್ಗಾಕ್ಕು. ೬-೦೨೬). ೩. ಮುಗಿ ; ತೀರು ; ಕೊನೆಗೊಳ್ಳು : ಅದೊಡೆ ಬಲ್ಗತೆ ಕಸಾ ! ಒಂಡೆರಟ್ಟಿವಸಕ್ಕೆ ಮುಡಿಯದು (ಶಾಪಾಕ್ಕ.೫-೦೦). ೪. ನಿವಾರಣೆಯಾಗು; ಪರಿಹಾರವಾಗು: ಈವುಪಚಾರದಿನಾತನ ಪಸಿವುಂ ಬಿಟಕ್ಕೆಯುಂ ಮುಡಿಯೆ (ಶಾಪಾಕ್ಕ. ೦-೦೨). ೫. ಇಲ್ಲವಾಗು; ನಾಶವಾಗು : ಅಂತು ತನ್ನ ಪಗೆಯುಂ ಬಗೆಯುಂ ದೊಪನೊಡನೆ ಮುಡಿಯೆ (ಪಂಚಭಾ. ೦೪-೦೫೫ ಪ) ; ಕೆಡುವಂತಿದ್ದಿತೇ ಕೌರವನ ರಾಜ್ಯ ಮುಡಿವಂತಿದ್ದಿತೇ ರಾವಣನ ಬರ್ಕಾಳಿಕೆ (ಸಪಾಕಾ. ೦-೦೩). ೬. ಸಾಯು ; ಗತಿಸು : ' ಮುಡಿಪ್ಪು ' ಪರಾ. ೭. ಸಾಧ್ಯವಾಗು ; ಶಕ್ಯವಾಗು : 'ಕೈ ದೂತಕ್ಕೂ ಮುಡಿಯ' ಪಿಂದು ಬಿತಾಳರು ಎಣ್ಣೆ ಸವರಿಕೊಡು ಉಜ್ಜುತ್ತಿದ್ದಾರೆ (ಪುಕಾಪ. ೩೬).

[ಪ್ರೇ.ರೂ ತಮಿ. ಮಳ. ಮುಟಿ; ತುಳು. ಮುಡಿ; ತೆಲು. ಮೂಡು]

ಮುಡ್ಡಿ (ನಾ). ೧. ತಲೆಯ ಕೊದಲು; ತಲೆಗೂದಲು : ಮುಡಿಯ ಸಂವರಿಸುಲೆ ಸೀರೆಯುಮದು ನವಾಂಬರವಿದೆ (ಕಾಣ್ಣಾ. ೬-೦೫). ' ಒಳ್ಮುಡಿ ' ಪರಾ. ೨. ಕಟ್ಟು; ಗಂಟು : ಅವರ ಕೈಕಾಲುಗಳನ್ನು ಮುಡಿ ಪಾಕೆ ಬಿಗಿವರು (ಪಂಪಕ್ಕ. ೪೩೯). ೩. ಕಟ್ಟಿದ ತಲೆಗೂದಲು; ತುರುಬು : ಮುಡಿ ಮಕರಧ್ವಜಂದೊಲೆಲುತ್ತಿರೆ (ಪಂಪಾಭಾ. ೪-೪೦) ; ಸುರರಮಣಿಯರ ಮುಡಿಗೆ ಪುಲ್ಲಿಗಡುರಲುಗಳವೊಲು . . . ರಂಜಿಸಿತು (ಪಾಕ್ಕಣ. ೫೫-೬೬) ; ಬರುತಿದೆ—ಸಪಲಿಸಿ ಮಡದಿಯರುಡಿಯನು ಮುಡಿಯನು . . . ತೆಂಕಣಗಾಳಿಯು (ಕಾಪ್ರ. ೨೮-೩). ' ಮುಡಿಯಕ್ಕು ' ಪರಾ. ೪. ತಲೆ; ಶಿರಸ್ಸು : ಪರ ಜಂಗಮಕೆ ಮಾನಕಂಜಪಣುಗೆಯ ಮುಡಿಯನಿರಿದಿಶ್ರ (ಪಪ್ರ. ೫೫-೧೧) ; ನಿನ್ನಡಿಯಾಣತಿಯನೆನ್ನ ಮುಡಿ ಮೊಳಾಂತೆನು (ಪಪಾ. ೧-೪೪) ; ಅವಳು ಅಪಿಯಿಂದ ಮುಡಿಯವರೆಗೂ ನಡುಗಿಬಿಟ್ಟಳು (ಪಾಣಿ. ೬೪೪). ೫. ಕಿರೀಟ ; ಮಕುಟ : ಆ ಕುರು ಜಾಂಗಲವಿಷಯ ಮಹೀಕಾಂತೆಗೆ ಪೆಸರ್ ಸಮೆದ ಮುತ್ತಿನ ಮುಡಿ ಧಾತ್ರೀರಮಣ್ಣವೊರವಪನಿಸ್ಕೋಕರ ಲೀಲಾಂಬುಜಂ ಧರಿತ್ರೀತಳಿಕಂ (ಪಾಪಾಕ್ಕ. ೧-೦೫೬) ; ಮುಕುಟಬದ್ಧರ ಮುಡಿಯ ರತ್ನಪ್ರಭೆಗಳಲಿ ಜರ್ಝರಿತ ತನುಪಾಯ್ತು (ಕಾಣ್ಣಾಪ್ರಾ. ೦೩-೨೬) ; ವೃಪ ಎಂಬ ಹೆಸರೊಪಣೆ ಮುಡಿಯೊಂದನಾಂತೊಡನೆ ಕಳ್ಕರೊಡೆಯಸು ಕೃಪೆಯ ಮೂರ್ತಿಯೇನು? (ಕೂಗಿರಿ. ೦೩-೯). ೬. ತುದಿ ; ಶಿವಿರ : ಮೂಡುವೆಟ್ಟಿನ ಮುಡಿಯ ತಪನೀಯಮಣಿಯಂತೆ ತಳತಳಿಸುತಿರ್ಪುದಯ ತವನಬಂಬದಿ ಪೂಡಿ (ಪಚ್ಚಾಂಗೆ. ೬-೦೫೦). ೭. ಸುಮಾರು ನಲವತ್ತೈರಡು ಸೇರು ಧಾನ್ಯದ ಅಳತೆಯ ಪ್ರಮಾಣ : ಹಾಪೆ ೪೦ಕೆ ಮುಡಿ ೧ ಲೂ ಮುಡಿ ೯ ವಂಬತ್ತು ಮುಡಿ ಅಕ್ಕಿಯನು . . . ಕೊಟ್ಟು (ಪ್ಯಳಾ. ೦೫೪೩. ೫೪-೩೦ ; 1673) ; ೧೪ ಕೂಡವಕ್ಕೆ ೧ ಮುಡಿ, ೨೦ ಮುಡಿಗೆ ೧ ಖಂಡಗ (ಕಶಾಗೆ. ೨೯೦) ; ಒಂದು ಮುಡಿಯಲ್ಲಿ ಒಂದು 'ಮುಠ' ಅಕ್ಕಿ ಇರುತ್ತದೆ. ಒಂದು ಮುಠ ಎಂದರೆ ಎಂಬತ್ತು ತೊಲ ತೂಕದ ೪೨ ಸೇರು ಅಕ್ಕಿ (ಕ್ರಪಾಇ. ೫೫. ೨೬೭). ೮. ಸುಮಾರು ನಲವತ್ತೈರಡು ಸೇರಿನ ಅಳತೆಯ ಧಾನ್ಯವನ್ನು ತುಂಬಿ ಕಟ್ಟುವ ಹುಲ್ಲಿನ ಚೀಲ : ಬೀಜಕ್ಕೆ ಇಡತಕ್ಕೆ ಬತ್ತವನ್ನು . . . ೭ ದಿನ ಒಣಗಿಸುವರು. ಇವ್ಹಾದ ಮೇಲೆ ಮುಡಿಗಳನ್ನು ಕಟ್ಟಿ ಮನೆಗೆ ತರುವರು (ಪುಂಪಾಚಾ. ೬-೨೦೨). ೯. ಮೂಟೆ ; ಹೇರು ; ಹೊರೆ : ಈಚಮುತ್ತಿನ ಜಾಳಿಗೆಯೇಂ! ಕತ್ತುರಿಯ ಪೊಜಿಯೇಂ ! ಕಪ್ಪುರದ ಮುಡಿಯೇಂ ! (ಶಾಪಾಚಾ. ೦೬೩-೦೭). ೧೦. ಕೊನೆ ; ಮುಕ್ತಾಯ : 'ಮುಡ್ಡಿಗೊಳ್', 'ಮುಡಿವು' ಪರಾ. ೧೧. ಬೆಳ್ಳಿ ಅಥವಾ ಹಿತ್ತಾಳೆಯಿಂದ ಮಾಡಿದ ಬಳೆಯಾಕಾರದ ಟೊಳ್ಳು ಭಾಗದ ಒಳಗೆ ನಿರ್ದಿಷ್ಟವಾದ ಕೆಲವು ಸಸ್ಯಮೂಲಿಕೆಗಳನ್ನು ತುಂಬಿ, ತೋಳಿಗೆ ಕಟ್ಟಿಕೊಳ್ಳುವ ಒಂದು ಬಗೆಯ ರಕ್ಷಾ ಸಾಧನ : ತಡ ಕಟ್ಟುವವನ ಮುಂದೆ ಮುಡಿಭೋಜನು ? (ಗಾಡ). ' ಮುಡಿಬಿಳೆ ' ಪರಾ. ೧೨. (ಅಲಂ) ಒಗಟು ; ಪದಿರು : ಪ್ರಮಿಳೆ ನಿಮಗೆ ಒಡಹುಟ್ಟಿದವಳಾದಳ್ನೀನೆನಲ್ಕವಳ ಮುಡಿಯ ಮಾತು ಕೇಳ್ದು ಮೊಳವ ನಸುನಗೆಯ ಬೆಳ್ದಿಯೆ (ಕ್ರಿಪಾಣಾ. ೫೫-೦೪). ೧೩. [ಛಂದ] ಚರಣದ ಕೊನೆಗೆ ನಿಂತು ಮುಕ್ತಾಯವನ್ನು ತರುವ ಅಕ್ಷರ : ಚರಣದ ಕೊನೆಗೆ ನಿಂತು ಅದಕ್ಕೆ ಮುಡಿವು ಕೊಡುವ ಅಕ್ಷರಕ್ಕೆ "ಮುಡಿ" ಎಂಬ ಹೆಸರನ್ನು ಇಲ್ಲಿ ಕೊಪರಾಗಿದೆ (ಸಪಾಕೋ. ೫೧೦) ; ಇದರಿಂದ ಆ ಗಣದ ಪೂರ್ವಾರ್ಧವು ಮೊದಲು ಒಳಪಾದಕ್ಕೆ "ಮುಡಿ"ಯಾಗಿಯೂ . . . ನಿಂತುಕೊಂಡಿತು (ಸಂಪೋಕ. ೦೬೭).

ಮುಡಿಕೊಡಿಸು = ದೇವರಿಗೆ ಕೊಡುವೆನೆಂಬ ಹರಕೆ ಹೊತ್ತು ತಲೆಯ ಕೂದಲನ್ನು ಅರ್ಪಿಸು : ಮಗೂಗೆ ಜಾನೆದೇವರ ಗುಡಿಯಲ್ಲೇ ಮುಂಡಿಕೊಡ್ಸಿಸ್ತೀವಿ (ಪಚಿಂಸಂ., ೦೫೨). **ಮುಡಿಕೊಡು** = ದೇವರಿಗೆ ಕೊಡುವೆನೆಂಬ ಹರಕೆ ಹೊತ್ತು ತಲೆಗೂದಲನ್ನು ಕೊಡು : ಈ ಕೆಲಸ ಸುಸೂತ್ರವಾಗಿ ಮುಗಿದರೆ ನಂಜನಗೂಡು ನಂಜುಂಡೇಶ್ವರನಿಗೆ ಮುಡಿಕೊಡುವ ಹರಕೆಯನ್ನು ಹೊತ್ತಿದ್ದೆ (ಪಚಿ). **ಮುಡಿಗಂಟು** = (ಕುಣಿಕೆ ಹಾಕಿ) ಕಟ್ಟುವ ಗಂಟು : ಅಕ್ಕ—ಪಕ್ಕದ ಮನೆಯ ಗಂಡಾಸರು ಬಂದು ಈ ದುರ್ಯೋಧನನ ಪುಟ್ಟಗಂಟನ್ನು ಬಿಚ್ಚಿದ ಮೇಲೆ, ಅವರನ್ನು ಕಟ್ಟಿದವನು ಗಂಧರ್ವನಲ್ಲದೆ ಅವರ ತಮ್ಮ ಕಿಟ್ಟಪ್ಪನೇ ಎಂದು ತೀರಾ ಮನಸ್ಸಿನೊಳಗೇ ನಕ್ಕರು (ಪಂಪಕ್ಕ. ೪೩೫). **ಮುಡಿಬಿಡು** = ೧. ತುರುಬು ಕಟ್ಟದೆ ಕೂದಲನ್ನು ಇಳಬಿಡು : ಕರಮಿಸಿದರಬಲೆಯರ್ ನೋಟಕರ ಮನಪೊಸೆಯೆ ಮುಡಿಬಿಟ್ಟು ಸೋಗೆ ಸವಿಲಂತೆ ಸೊಗಯಿಸಿ ತೋಜಿ (ಅಪ್ರ. ೪-೬ ಪಗಳ). ೨. ದೇವರಿಗೆ ಮುಡಿಕೊಡುವ ಹರಕೆ ಹೊತ್ತು ತಲೆಯ ಕೂದಲನ್ನು ಕತ್ತರಿಸದೆ ಬೆಳೆಯಲು ಬಿಡು : ಕೊಂಡ ಪಾಯುವ, ಮುಡಿ ಬಿಡುವ, ಬಾಯ್ಬೀಗ ಚುಚ್ಚಿಸಿಕೊಳ್ಳುವ ಸಂಪ್ರದಾಯ . . . ಚಾಲ್ತಿಯಲ್ಲಿದೆ (ಪಂಜಂಠ. ೦೫೪).

[< ಮುಂಡಿ./ತಮಿ. ಮುಟ್ಟಿ; ಮಲ. ಮುಟ್ಟ, ಮುಟ್ಟೆ; ತುಳು. ಕೋಲಾ. ಮುಡಿ ; ತೆಲು. ಮುಡಿ ; ಮುಂಡಿಯು]

ಮುಡಿಕಟ್ಟು ' ಮುಡಿಗಟ್ಟು₂ ' ನೋ.

ಮುಡಿಕು ' ಮುಡುಕ್ಕು₂ ' ನೋ.

ಮುಡಿಗಂಪು (ನಾ). ತಲೆಗೆ ಹಚ್ಚಿದ ಸುಗಂಧತೈಲ. ಮುಡಿದ ಹೂವು ಮುಂತಾದವುಗಳ ವಾಸನೆ : ಪುಂಡಿಗಂಪಿಂಗಾರ್ದು ಸಾರ್ಕಂದೆಲಗೆ ಪಜ್ಜೆಮೆಗಳ್ . . . ಮಾಣಿವಳವರ ದಿವ್ಯಾಂಘ್ರಿಯೊಳ್ ದೇವಿಯಾಗಳ್ (ರಾಜಕೇ. ೪-೨). [ಮುಂಡಿ₂ + ಕಂಪು]

ಮುಡಿಗಚ್ಚು (ಕ್ರಿ)· (ಥಳಿ, ಕೋಪ ಮುಂತಾದುವುಗಳಿಂದ) ಎರಡು ಸಾಲುಗಳ ಹಲ್ಲುಗಳ ತುದಿಯು ಒಂದಕ್ಕೊಂದು ತಾಗುವಂತೆ ಕಡಿ : ಮಗರ ಅರುಸ್ ಮತ್ತೆ ಬ್ಯಾಕ್ಟ್ರಿಯರ ಅರ್ತಮಿಸ್ ಆ ಕರೆಯ ಮಣ್ಣ ಮುಡಿಗಚ್ಚಿ ಸತ್ತೊಡಂ ಬಿಡೆವೆಂದು ಕಾದಿರ್ದರ್ (ಪಾರಿ. ೦೪-೪೦೪). 'ಹಲ್ಲುಮುಡಿ' ಪರಾ· [ಮುಂಡಿ₂ + ಕುಚ್ಚು₂ (< ಕುರ್ಚು₁)]

ಮುಡಿಗಟ್ಟು₁ (ಕ್ರಿ)· ೧. ತುರುಬನ್ನು ಕಟ್ಟು; ಕೇಶಾಲಂಕಾರಮಾಡು : ಒರ್ವ ಮಾಡದಿ ಬಲ್ಲಿನೊಳಬರೆಗೆ ಮುಡಿಗಟ್ಟಿದಳ್ ಮುಡಿಗಟ್ಟುವಂತೆ ನೋಡುವರೆರ್ದ (ಕ್ರಿಶಾ. ೫೫-೪೨) ; ಮತ್ತೆ ಮುಡಿಗಟ್ಟಿ ಹೂಮುಡಿದು ಅಲಂಕರಿಸಿಕೊಂಡ ದ್ರೌಪದಿ . . . ಕಳೆಗೊಂಡು ಶೋಭಿಸಿದಳು (ಧಾಶಾತ. ೩೧). ೨. ತುರುಬನ್ನು ಕಟ್ಟಿಕೊಳ್ಳು ; ಕವರಿಜುಟ್ಟು ನೀಳ್ದಿ ಬೆಂಬಸದಿಳಿವ ಕುಂತಳಂ ಕಾಮನ ಪಾತಾಕೆಯಂತಿರೆ ಮೆಱೆವ ಮುಡಿಗಟ್ಟಿ ಕೋವಿಳೆಯ ಲಾವಣ್ಯರಸವಲ್ಲಿ ಮಡುಗಟ್ಟಿ (ಪಾಪಕ. ೫೬. ೦೬೯-೦). ೩. ಹೊರೆಗಟ್ಟು; ಪೆಂಡಿಗಟ್ಟು : ನಿಮ್ಮುವಂ ಸೀಳ ಪೊಳ್ಗೆಯ್ದಾ . . . ಮೂಗರಿದು ಮುಡಿಗಟ್ಟುತ್ತ (ಪಪಪು. ೪-೩೦). [ಮುಡಿ₂ + ಕಟ್ಟು₁]

ಮುಡಿಗಟ್ಟು₂· ಮುಡಿಕಟ್ಟು (ನಾ). ೧. ತಲೆಗೆ ಕಟ್ಟಿಕೊಳ್ಳುವ ವಸ್ತ್ರ; ವಾಗು; ರುಮಾಲು : ಎಲ್ಲರುಮಸೊಂದೆ ಸಮ್ಮೋಹವಸ್ತ್ರದಿಂ ಪೋಲ್ವಿ ಮೂರ್ಧಾಭಿಷಿಕ್ತರ ಮುಡಿಗಟ್ಟಿನ ಪಟ್ಟಿಗಳನುಗಿಪಟಿಗೊಂಡು (ಪಾಪು. ೦೪-೫ ಪ) ; ಪೆನ್ನಟತ್ತಳಿಕೆಯ ಸುತ್ತಿದ ಕೀಲಿಯ ಮುಡಿಗಟ್ಟಿನ ಪಟ್ಟಿಯ . . . ಸಿಂಗರಂದೆರಸಿ (ಗರಿ. ೬-೫೫ ಪ). ಮುಡಿಕಟ್ಟು₂: ೨. ಕೂದಲನ್ನು ಸೇರಿಸಿ ಹಾಕಿದ ಗಂಟು ; ಮುರಿದಣಿಕ್ಕಿದ ಗಡ್ಡಮಿಸೆ ಮುಡಿಕಟ್ಟಂ ತಳ್ತ ಕೆಂಬೆಳ್ಳೆ (ಗಸಪು. ೦-೦೭೫). ೩. ತಲೆಗೆ ಧರಿಸುವ ಒಂದು ಬಗೆಯ ಆಭರಣ : ಮಾಣ್ತಿನ ಮೂಗುತಿ ಮುಡಿಕಟ್ಟು ಭುಜಕೀರ್ತಿ ವೃತ್ತಕಾಜದ ನಡುವಸೆವ ಕತ್ತೂರಿಯಂಬೆನ ಕಾಂತೆಗೊಲಿಮೆದನ ವೃತ್ತಾಂತವನುಸುರುವೆನ್ನ (ಭರತೇಶ. ೦-೦೦೮). [ಮುಂಡಿ₂ + ಕಟ್ಟು₂]

ಮುಡಿಗವಿ (ಕ್ರಿ). ಕಿರೀಟವನ್ನು ಇಡು : ಮಕುಟವನ್ನು ತೊಡಿಸು : ವ್ಯೂಗಮದಸಲಿಲದೊಳ್ ಪಿಲ್ಲಮಿಲ್ಲನುಳ್ಳಲರ್ದು ಚಿಲ್ವಿಂಗೆ ಮುಡಿಗವಿದಂತಿ ತೋಱುವ ತೋಯಪಲ್ಲಿಗೆಯ ಮುಡಿಯುಮಸೆದೆ ಕೈಗೆದ್ದಾಗಳ್ (ಅಪು. ೯-೪೦ ಪ) ; ನಯನಕುವಲಯಮಾಲೆಯುಮಾನಾಂತು ಒಬ್ಬುಂಡಿ ಚಿಲ್ವಂಗೆ ಮುಡಿಗವಿವೆಂತೆ ಸೊಗಯಿಸೆಯುಂ (ಪಂರಾಪು. ೬-೬೬ ಪ). [ಮುಡಿ₂ + ಕವಿ₁]

ಮುಡಿಗಾಜು (ನಾ). ಸಮಸ್ಯೆಯನ್ನು ಒಡ್ಡುವವನು : ಕಡುದುರುಳತನದಿ ಮುಚ್ಚರವನೊಲಿದಿಚ್ಛೈಪ ಮುಡಿಗಾಜರಿರ್ವರ್ಗೆ ಕಟ್ಟಿಕ್ಕಿ ಶಿಪಕಮಿಸಿಕರದಿ ವಿಡಿದು ನಡಾಮೆನು ವ್ಯಡನೊಲ್ಮೆಯಂ ಪಡೆದ ರಾಘವಾಂಕನ ಚರಿತೆ (ರಾಶೆ. ೦-೦೬). [<ಮುಡಿಗೆ + — ಕಾಜು]

ಮುಡಿಗಾಜುಕೆ (ನಾ). ೧. ದ್ವಂದ್ವಾರ್ಥವುಳ್ಳ ಮಾತು (?) : ಮುಡಿಗಾಜುಕೆಯು ನುಡಿಗಳಲ್ಲ ಕೇಳ್ನಿಸ್ಸಾಣೆ (ಕ್ರಿಪು. ೫-೫೩) ; ೨. (?) : ಊರೊಳಗೆ ಪರರಲ್ಲಿ ಸಾಲವಂ ತೆಗೆದು ಮುಡಿಗಾಜುಕೆಯೊಳ್ತೋಡಿ ಬಂದಾ ಸೊಪ್ಪರಾಪುರದೊಳ್ತಿಸಾಧುಸಜ್ಜನದಾಚಾರಿಯೊಲು ಬಿಲ್ಲೇಶಬೊಮ್ಮಯ್ಯನುಂ . . . ನೇಮೆದ್ದುತ್ತಿರ್ದರ್ (ರಾಶೆ. ೦೩-೫೯). [ಮುಡಿಗಾಜು + — ಇಕೆ]

ಮುಡಿಗೆ ' ಮುಂಡಿಗೆ₂ ' ನೋ.

ಮುಡಿಗೆದರು (ಕ್ರಿ)· ತಲೆಕೆದರು ; ಕೂದಲು ಹರಡಿಕೊಂಡಿರು : ಶ್ರೀ ತಪೋಧನರು ಪರ್ಬುರಿನಿ . . . ಪ್ಯಾಥ್ಯಾಸಪ್ತಾತಗಳನುಂದದು ಮುಡಿಗೆದರಿ ನಿಡುಜಡಗಳೆವೆತ್ತೆಯುತಿಥಯದಿ ಪರಿದು (ಪಪೋ. ೬-೨೪) ; ನಿಂತಿರೆವಳು ಕಣರಂಗವಲಿ ದ್ರೌಪದಿ ಮುಡಿಗೆದರಿ (ಪಾಂಚಾ. ೧೩-೨೦). [ಮುಡಿ₂ + ಕೆದರು (<ಕೆದಱ್₁)]

ಮುಡಿಗೆಯಿಡು (ಕ್ರಿ). ಆಣೆಯಿಡು ; ಪ್ರಮಾಣಮಾಡು : 'ಕೈಮೇಲೆ ಕೈಯಿಟ್ಟು ಭಾಷೆಕೊಡು' ಎಂದು ಮುಡಿಗೆಯಿಟ್ಟು . . . ಶಪಥ ಮಾಡಿದ ರಂತೆ ! (ಪುರಿಪು. ೩೦೩). [ಮುಂಡಿಗೆ (<ಮುಂಡಿಗ್ಕೆ) + ಇಡು₁]

ಮುಡಿಗೊಳ್ (ಕ್ರಿ). ಕೊನೆಯಾಗು ; ಪೂರ್ಣಗೊಳ್ಳು : ನಿನಗೆ ನಾನ್ ನಚ್ಚಿತ್ತು ಸಂತೈಸಿನಿಂದು. ತಱಿಸಂದ ತೀರ್ಪಿಂತು ಮುಡಿಗೊಳ್ಳದೆಂದು (ಅಂಚೆಗೊ. ೪೨-೪೭೩). [ಮುಡಿ₂ + ಕೊಳ್₁]

ಮುಡಿಗೊಳಿಸು (ಕ್ರಿ). ತುರುಬು ಕಟ್ಟಿಕೊಳ್ಳು : ಕೆದರ್ದ ಕುಂತಳಮಂ ಮುಡಿಗೊಳಿಸಿ . . . ರತಿಯು . . . ಪ್ರಳಾಪಿಪುತೆ ಬರುತಿರ್ದಳು (ಪಪಪೋ. ೬-೬೬). [ಮುಡಿ₂ + ಕೊಳ್₁ + — ಇಸು₅]

ಮುಡಿದಂಡೆ (ನಾ)· . ತುರುಬಿಗೆ ಮುಡಿಯುವ ಹೂವಿನ ಮಾಲೆ : ಕತೆಪರುಷದೆ ಜಡೆಯೆಡೆಯೊಳು ಗಂಗೆಯು ಮುಡಿದಂಡೆಯಾಗಿ ಧರಿಸಿದ . . . ಪೆಸ್ನನಂಜುಂಡನೆನಿದಾವರಗೆಱಗುವೆನು (ಕಂಪಿ. ೦-೭). [ಮುಡಿ₁ + ದಂಡೆ₁]

ಮುಡಿದಲೆ (ನಾ)· ಕಿರೀಟವನ್ನು ಧರಿಸುವ ತಲೆ : ಜೆಡದಲೆಗೆ ಕೊಟ್ಟನು ಮುಡಿದಲೆಯುಪೆಸಲಲಘುಮತಿ ಕರವೂರ ಚೋಳನ ಭೃತ್ಯರಾಳಾನು (ರಾಚಿ. ೫೭-೬೮) ; ಪಗಲ್ಯೋಳನೆಂದಂಬ ಧಾರುಣೇಶಂ ಜಡಯು ತಲೆಗೆ ಮುಡಿದಲೆ ಯಿತ್ತು ಕಾರುಣ್ಯಸಾಗರನ ಕೈಲಾಸಮಂ ಪೊಕ್ಕನು (ಪೆಂಪ. ೩೨-೩೦). 'ಜಡೆದಲೆ' ಪರಾ. [ಮುಡಿ₂ + ತಲೆ₂]

ಮುಡಿನಾಳಿ (ನಾ). ಧಾನ್ಯವನ್ನು ತುಂಬಿ ಬಾಯಿ ಕಟ್ಟಿರುವ ಮೂಟೆಯಿಂದ ಪರೀಕ್ಷಾರ್ಥವಾಗಿ ಧಾನ್ಯವನ್ನು ಹೊರತೆಗೆಯಲು ಬಳಸುವ ಚೂಪಾದ ಸಾಧನ; ಸಕ್ಕರೆಗುತ್ತಿ; ಚಿಕ್ಕಗುತ್ತಿ : (ಪಂಗಾ. ೫೯). [ಮುಡಿ₂ + ನಾಳಿ₁ (=ನಾರಿ)]

ಮುಡಿಪಿಕ್ಕು (ಕ್ರಿ)· (ದೇವರ ಪೆಸರಿನಲ್ಲಿ) ಯಾವುದಾದರೊಂದು ವಸ್ತುವನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ತೆಗೆದಿಡು ; ಮೀಸಲಾಗಿರಿಸು : ಮುಂಡಿಪ್ಪಂಬೇಕೆಂದೂ ಮದ್ದೇ ಆಗಬೇಕೆಂದೂ ಕೆಲವರು ಹೇಳುತ್ತಿದ್ದಂತೆ ಒಬ್ಬನು ಮದ್ದೊಂದನ್ನು ಸಿದ್ಧಪಡಿಸಿದನು (ಕಾಲಜ್ಞ. ೦೪ ಕರಾಜಾರ). [ಮುಂಡಿಪ್ಪು₂ + ಇಕ್ಕು]

ಮುಡಿಪಿಡು· ಮುಡುಪಿಡು (ಕ್ರಿ)· = ಮುಡಿಪಿಕ್ಕು : ನನ್ನ ಧ್ಯೇಯ ಸಾಧನೆಗಾಗಿ ಮುಡಿಪಿಟ್ಟ ಜೀವನ ನನ್ನದು (ರಾಜಕ. ೦೧೨) ; ಸತ್ಯವರನೆಂಬ ವೀರವರಸಿಂಬ ಮಗನು ತನ್ನ ಶಿರವನ್ನು ಕೊಯ್ದು ದೇವಿಗೆ ಮುಡಿಪಿಟ್ಟನು (ಕಪಸಾ. ೪೬). ಮುಡುಪಿಡು : ಅವರ ಕೊನೆಮುಟ್ಟಲು ಒಂದೇ ಉಪಾಯ ನನ್ನ ಜೀವಸವನ್ನು ನಿಸಗೆ ಮುಡುಪಿಟ್ಟು ಧಾರೆಯೆರೆಯುವುದು (ಜಗಜ. ೦೩) ; ವೀರೇಳು ರಾಜಕುವರ ಮನುಕುಲದ ಕಲ್ಯಾಣಕಾಗಿ . . . ಅದಕಾಗಿ ನಿನ್ನ ಜನನ ಮುಡುಪಿಡಲು ಬೇಕು ಪ್ರಾಣ (ಶ್ರೀಕೃ. ೬). [ಮುಂಡಿಪ್ಪು + ಇಡು₁]

ಮುಡಿಪ್ಪು₁· ಮುಡಿಪ್ಪು₂· ಮುಡಿಪು· ಮುಡುಪ್ಪು₂· ಮುಡುಪು₁ (ನಾ). ೧. [ಜೈನ] ನೋಂಪಿಯ ಮೂಲಕ ಗತಿಸು,— ಸಾವನ್ನು ಹೊಂದು : ಗೋವರ್ಧನಭಟ್ಟಾರರ್ ಸಮಾಧಿಮರಣದಿಂದಂ ರತ್ನತ್ರಯ ಮಂ ಸಾಧಿಸಿ ಮುಂಡಿಪಿ ದೇವಲೋಕಕ್ಕೈತಂದರ್ (ಕಪ್ರಾ. ೭೪-೨೬) ; ಘೋರವೀರತಪದೊಳ್ ತನುವಂ ಬಡವಾಡಿ ನೋಂಪಿಯೊಳ್ ಮುಂಡಿಪಿ

(೧೦೪೮. ೬-೧೮). **ಮುಡಿಪು₂**: ೧. ಶ್ರೀ ಅಗಟಿಯು ಮೋನಿಗುರುವರ ಶಿಷ್ಯ ಕೊಟ್ಟರದ ಗುಣಸೇನಗುರುವನ್ನೋರ್ವನ್ನು ಮುಡಿಪ್ಪಿದಾರ್ (ಶಿ. II, ೯೭ ; 790). **ಮುಡಿಪು** : ೧. ಮೂವರ್ಣನ ಶಿಷ್ಯರುಂ ಸನ್ಯಸನಗೆಯ್ದು ಮುಡಿಪಿದ ನಿಸಿದಿ (ಶಿ. VI, ೫೯೫. ೫೦-೬ ; 1116) ; ಗೋಕರ್ಣೆಯ ಮಗಳು ಸ[ಮ್ಯಾ]ಧಿವಿಧಿಯಿಂದ ಮುಡಿಪಿ ಸ್ವರ್ಗಸ್ಥೆಯಾದಳು (ಪ್ರಾ೧೦. ೦೯೧೦. ೩೦-೬ ; ಸು- ೧೩೬ಮು ೫೮). **ಮುಡುಪು₁**: ೧. ನಿಜಾಯುರವ ಸಾನದೊಳ್ ಸಮಾಧಿಯಿಡದು ಮುಡುಪಿ ಸೌಧರ್ಮಕಲ್ಪದೊಳ್ ಸಾಮಾನಿಕ ದೇವರಾದೊರ್ (ಪಾಂಚಾ. ೬-೮೩ ಪ) ; ತವದಿಂ ತಾಳ್ದಿದ ತನುವಂ ನಿಧಾನದಿಂ ಮುಂ ಬಿಟ್ಟಂ ಅಂತು ಮುಡುಪಿ (ಶಪಂಪ್ರ. ೦೪-೩೫ ಪ) ; ಹರಿಪಯನು ಸಮಾಧಿಂ ಮುಡುಪಿ ಸರ್ಗಪ್ರಾಪ್ತನಾದ (ಕಾ. IV, ೯-೬ : 1893) . **ಮುಡುಪು₂** : ೨. ಸಾಯುವಂತೆ ಮಾಡು ; ಕೊಲ್ಲು ; ಸಾಯಿಸು : ಕಲಿಕರ್ಣನೀಗಳೆ ಮುಡುಪುವನು ಪವನಜನನೊಂದರೆ ಳಿಗೆಮಾತ್ರದಲಿ (ಕುಪಾ. ೪. ೨೫-೨೩). [ಮುಡಿ₁ + —ಪ್ಪು₁]

೭. ರಹದಾರಿ ; ಪರವಾನಗಿ. ೮. ಮುಚ್ಚಿರುವಿಕೆ ; ತೆರೆಯದಿರುವಿಕೆ. ೯. ಸಂಧ್ಯಾವಂದನೆ, ಸಂಕಲ್ಪ, ಪೂಜೆ ಮುಂತಾದ ಸಂದರ್ಭಗಳಲ್ಲಿ ಬೆರಳುಗಳನ್ನು ನಿರ್ದಿಷ್ಟಕ್ರಮದಲ್ಲಿ ಮಡಿಚಿ ತೋರುವ ವಿನ್ಯಾಸ. ೧೦. ಕಾವ್ಯ. ಹಾಡು ಮುಂತಾದುವುಗಳ ಕೊನೆಯಲ್ಲಿ ಸೂಚಿತವಾಗುವ ಕರ್ತೃವಿನ ಇಷ್ಟದೈವ, ಕುಲದೇವರು ಅಥವಾ ಕೃತಿಕರ್ತನ ಹೆಸರು. – ಅಂಕಿತ : ಯಾವ ಕೃತಿಕರ್ತನೂ ತನ್ನ ದೇಹವನ್ನೂ ಕೃತಿಯನ್ನೂ ತನ್ನ ಆರಾಧ್ಯದೇವರಿಗೆ ಸಮರ್ಪಿಸುವುದು ಸಂಪ್ರದಾಯ. ಈ ಸಮರ್ಪಣೆ ಅಥವಾ ಮುದ್ರೆಗೆ 'ಅಂಕಿತ' ಅಥವಾ 'ಮುದ್ರೆ' ಎಂದು ಹೆಸರು· (ಸಂಗಶಾ. ೬೦) ; ಪಟ್ಟಂ ಸುಬ್ಬುವ್ವಣ್ಣ ಅಯ್ಯರ್ . . . ಕಲವು ರಚನೆಗಳಲ್ಲಿ "ವರದ ವೆಂಕಟೇಶ್ವರ", "ಅದಿ ವೆಂಕಟೇಶ" . . . ಎಂಬ ಮುದ್ರೆಯನ್ನು ಉಪಯೋಗಿಸಿದ್ದಾರೆ (ಸಂಗಕ. ೨೬). ೧೧. ಅಭಿವ್ಯಕ್ತಿ ; ಮುಖಭಾವ : ನಿದ್ರೆಯುಂ ಸುಖವಿಲ್ಲು ಪದ್ರದಿಂ ಅರಿದಿಲ್ಲ ಮುದ್ರೆಯೊಂದರಧಿಕ ಮಾತಿಲ್ಲ (ಸರ್ಪಕ್ಕ. ೨೩೦) ; ಹುದುಗನ ಮುಖದಲ್ಲಿ ಕರುಣಾಜನಕಮುದ್ರೆ ಮೂಡಿ ನಿಂತಿತು (ಕುಗಿಮು. ೪) ; ದುಷ್ಪಬುದ್ಧಿಗೆ ಮಗಳನ್ನು ಮೋಡಿಮಾಡಿದನೆಂಬ ಅಭ್ಯಾಸುಲ ಧಿಂದಂಬಂತೆ ಸಂತೋಷದ ಮಂದಸ್ಮಿತಮುದ್ರೆಯೊಂದು ಸುಳಿದು ಒಡನೆಯೆ ಮಾಯವಾಗಿ, ಬದ್ಧಭ್ರುಕುಟಿಯು ಪ್ರಥನವಿಕಾರತೆಯುಂಟಾಗುತ್ತದೆ (ಕಪ್ರಕ. ೧೨-೩). ೧೨. (ಆಲಂ) ಬಿಗುಹು ; ಭದ್ರತೆ : ಯೌವನದ ಮುದ್ರೆಯನೊಡೆದುಲ್ ಬರ್ದ ಮನೋಜನಂತೆ . . . ಸೌಂದರಂ ಪರವೆಯರ ಮನಕೆ ನಡೆತಂದು (ಪಂಪಚ. ೦೦-೩೦)· ೧೩. ಪರಿಣಾಮ ; ಪ್ರಭಾವ ; ವರ್ಚಸ್ಸು : ಕಲಿಯುವಾಗ ಆಗುವ ಅನುಭವ ಮಕ್ಕಳ ನರಪ್ಪೊಹದಲ್ಲಿ ತನ್ನ ಮುದ್ರೆಯನ್ನೊತ್ತುತ್ತದೆ (ಕ್ಷಪ್ರ. ೦೪೦) ; ಗುರು ಚರಣರ ಹೃದಯದ ಮೇಲೆ ಗಿರೀಂದ್ರನ ಮಾತುಗಳು ಚೆನ್ನಾಗಿ ಮುದ್ರೆ ಯನ್ನು ಹಾಕುತ್ತಿದ್ದುವು (ಕಂಚಿ. ೭೫). ೧೪. [ದ್ವೈತ] ವೈಷ್ಣವರ ಲಾಂಛನವಾದ ಶಂಖ, ಚಕ್ರ ಮೊದಲಾದುವುಗಳ ಗುರುತುಳ್ಳ ಲೋಹದ ಸಾಧನ ಮತ್ತು ಆ ಸಾಧನದಿಂದ ದೇಹದ ಮೇಲೆ ಹಾಕಿಕೊಳ್ಳುವ ಗುರುತು : ಒಂದೊಂದು ಕೈಮೇಲೆ ಒಂದೊಂದು ಮುದ್ರೆಯನ್ನು ಬಹು ಸೂಕ್ಷ್ಮವಾಗಿ ಒತ್ತಿಬಿಟ್ಟು . . . ಅವಳ ಕೃತಜ್ಞತೆಗೆ ಪಾತ್ರರಾದರು (ಜಾಗೃ. ೩) ; ಈ ಗುಣಗಳನ್ನು ಆಳವಡಿಸಿಕೊಳ್ಳುವುದೇ ನಿಜವಾದ ಧರ್ಮ. ಇದಿಲ್ಲದೆ ನಾಮ, ಮುದ್ರೆ, ಲಿಂಗ, ಜನಿವಾರ, ಗಡ್ಡ ಗಳೆಲ್ಲವೂ ಡಂಭಾಚಾರ (ಶುಚ್ಚ್ರ. ೦೬). ೧೫. [ವೀರಶೈ] ದೀಕ್ಷಾ ವಿಧಿಯ ಭಿಕ್ಷಾಪಾತ್ರೆ, ಭಸ್ಮಭುಟಿಕೆ, ಕಂಥೆ, ದಂಡ ಮತ್ತು ಕಮಂಡಲುಗಳೆಂಬ ಐದುಬಗೆಯ ಸಾಧನ : ಕರದಲ್ಲಿ ಕಪ್ಪರವಿಲ್ಲ ಕೈಯಲ್ಲಿ ಕಟ್ಟಿಗೆ ಇಲ್ಲ ಕರ್ಣದಲ್ಲಿ ಮುದ್ರೆ ಇಲ್ಲ ಶಿರದಲ್ಲಿ ಜಜ್ಞಾಬಂಧವಿಲ್ಲ ಕಕ್ಷೆಯಲ್ಲಿ ಭಸ್ಮಗಂಟಿಕೆ ಇಲ್ಲ (ಪಪ್ರಾಮಾ. ೦೫೩-೩೬೩) ; ಗುರೂಪದೇಶದಲಿ ಮುದ್ರೆಯನು ಮಂಟ್ಟುವರು ಶೌಖ್ಯಸಮೃದ್ಧಿಯೊಳಗೋಲಾಡುವರು (ಕ್ರಕುಲ. ೧೨೦)· ೧೬. [ನಾಟ್ಯ] ನೃತ್ಯ, ನಾಟಕಗಳಲ್ಲಿ ಅಂಗಗಳ ಚಲನವಲನದಿಂದ ತೋರಿಸುವ ವಿನ್ಯಾಸ : ಅಭಿನಯದಲ್ಲಿ ಮುದ್ರೆ ಗಳಿಗೆ ಇರುವ ಸ್ಥಾನವು ಅಗ್ರಗಣ್ಯವಾದುದು . . . ಅಭಿನಯದಲ್ಲಿ ನಿಜವ ಇಡೀ ದೇಹವು ಪ್ರವೃತ್ತವಾಗಿದ್ದರೆ. ಮುದ್ರೆಗಳಲ್ಲಿ ಅವನ ಒಂದೊಂದು ಅಂಗ ಮಾತ್ರ ಕೆಲಸ ಮಾಡುತ್ತದೆ. ಮುದ್ರೆಗಳನ್ನು ಮಾಡುವಾಗ್ಗೆ ಒಂದು ಅಂಗದ ಚಿಕ್ಕಚಲನೆ ಕೂಡ ಮಹತ್ತರವಾದ ಅರ್ಥವನ್ನು ಸೂಚಿಸಬಲ್ಲುದು (ಅಜಾಶ್ರ. ೪೩)· ೧೭. [ಶಿಲ್ಪಶಾ] "ಪ್ರತಿಮೆಗಳ ಕೈ ಮತ್ತು ಬೆರಳುಗಳ ವಿಶೇಷ ಸ್ಥಿತಿಗೆ "ಮುದ್ರೆ" —ಎಂದು ಹೆಸರು" (ಜಾಶಿಪ. ೩೦೩). ೧೮. ಮಂತ್ರಶಾಸ್ತ್ರ ಪ್ರಸಿದ್ಧವಾದ ಒಂದು ಬಗೆಯ ವಿನ್ಯಾಸ (?) : .ಅಸ್ತ್ರಮುದ್ರೆ ಚಕ್ರಮುದ್ರೆ . . . ಸಂಹಾರ

ಮುದ್ರೆಯೆಂಬ ಸಕಲಮುದ್ರಾಲಕ್ಷಣವಸಜಾದಾಮಾಕ್ರಯಗಳಲ್ಲಿ ಪ್ರಯೋಗಿಸಿ (ಪಪೀ. ೧೩)· 'ದ್ರವ್ಯಮುದ್ರೆ' ಪರಾ.

ಮುದ್ರೆಯಆದ್ದಿಕ = ಮೊಹರಿನ ಮೇಲ್ವಿಚಾರಣೆ.— ಉಸ್ತುವಾರಿ: ಮುದ್ರೆಯಆದ್ದಿಕೆಕ್ಕೆ ಗ ೧೨ ಗಂಧತಂಡಿ ನೀರವರಿಗೆ ೧೩ (ಪಪ· ೪(೩), ೫೮೩· ೪೬-೪೪; 1276)· ಮುದ್ರೆಯಕ = ೧. ಸಾರ್ವಜನಿಕ ವ್ಯವಹಾರ ಪತ್ರಗಳಿಗೆ ಮುದ್ರೆಯೊತ್ತುವವನು: (೪)· ೨. ವಿಷ್ಣುವಿನ ಲಾಂಛನವಾದ ಶಂಖ, ಚಕ್ರ ಮುಂತಾದುವನ್ನು ತನ್ನ ದೇಹದ ಮೇಲೆ ಧರಿಸುವವನು; ಮಾಧ್ವ. ಮುದ್ರೆಯುಪ್ಪೋಲಗ= ರಾಜನ ಮೊಹರನ್ನು ಹೊಡಿಕೊಳ್ಳುವ ಕೆಲಸ. — ಸೇವೆ: ಸೇನದೋಕವೊಂದಕ್ಕೂ ಗದ್ಯಾಣಂ ಹನ್ನೆರಡು ಮುದ್ರೆಯ ಪೋಲಗಕ್ಕೆ ಗದ್ಯಾಣಂ ಹನ್ನೆರಡು (ಪಪ· ೪ (೩)· ೫೮೩· ೪೬-೪೨ ; 1276)·

[ಸಂ. ಮುದ್ರಾ]

ಮುದ್ರೆಕೊಳಗ (ನಾ)· ಸರಿಯಾದ ಅಳತೆಯದೆಂದು ಅಧಿಕೃತವಾಗಿ ಒಪ್ಪಿಗೆ ಪಡೆದು ಸರ್ಕಾರದ ಮೊಹರನ್ನು ಹೊಂದಿರುವ ಕೊಳಗ: ಆರೋಗಣೆಗೆ ಸಲುವುದು ಅಪಸರವಂದಕೆ ಅಮ್ಮುತಪಡಿ ದಿನವೊಂದಕೆ ಮುದ್ರೆಕೊಳಗದಲಿ ೧೫೦ ॥ ೪೬ ಕೊಳಗ ಒಂದಕೆ ಪಡಿ ೧೪೩ ಲೆಕದಲಿ ಸಲುವ ಪಡಿ ೧೯೭೬ ಪ್ರಸಾದಪಡಿ (ಪಪ· VI (೩)· ೫೦೦೫· ೦೪೯-೬ ; 1545)· [ಮುದ್ರೆ + ಕೊಳಗ]

ಮುದ್ರೆಕೋಲು (ನಾ)· ಅರಮನೆಯ ಅಪ್ಪಣೆಯನ್ನು ವಿಾರಿ ನಡೆದವರ ಧಾನ್ಯದ ರಾಶಿಗೆ ಮುದ್ರೆಹಾಕಲು ತೋಟಿ. ತಳವಾರ ಮುಂತಾದವರು ಬಳಸುತ್ತಿದ್ದ ಮೊಹರುಳ್ಳ ಮರದ ಕೋಲು. —ದಂಡೆ: ಆಚೆ ಈಚೆ ಸೂರ್ಯಚಂದ್ರರನ್ನೂ ಮಧ್ಯೆ 'ದೇ' ಎಂಬ ಅಕ್ಷರವನ್ನೂ ಕೆತ್ತಿಸಿದ ಈ ಮುದ್ರೆಕೋಲನ್ನು ಗ್ರಾಮಗಳ ಚಾವಡಿಯಲ್ಲಿ ಇರಿಸಿ . . . ಆ ಮುದ್ರೆಕೋಲನ್ನು ತೆಗೆದುಕೊಂಡು ಹೋಗಿ ಮುದ್ರೆಹಾಕುವಂತೆ ನಿಬಂಧನೆ ಮಾಡಿದರು (ಶಾಮಂ. ೧. ೦೦೯)·

[ಮುದ್ರೆ + ಕೋಲು೧ (< ಕೋಲ್೧)]

ಮುದ್ರೆಗಟ್ಟು (ನಾ)· ಪತ್ರ ಮುಂತಾದುವುಗಳನ್ನು ದಾರದಿಂದ ಕಟ್ಟಿ ದಾರದ ಗಂಟಿನ ಮೇಲೆ ಹಾಕುವ ಮೊಹರು. —ಉಂಡಿಗೆ: (ಓರಿಯು ನ್ಮೀಯಿಸಿಕೊಂಡು, ಅದರ ಮುದ್ರೆಗಟ್ಟನ್ನು ತೆರುಗಿಸಿ ಪರೀಕ್ಷಿಸಿ) (ಪಟ್ಟಿ· ೬೬-೨೬)· [ಮುದ್ರೆ + ಕಟ್ಟು೨]

ಮುದ್ರೆಗಾಣಿಕೆ (ನಾ)· ಒಂದು ಬಗೆಯ ತೆರಿಗೆ (?): ಹತ್ತಿ ಪೊಂವು ಮಾರ್ದ ಸುಂಕ ದೇವರಾಯಮಟ್ಟ ಪಟ್ಟಿಗಾಣಿಕೆ ಮುದ್ರೆಗಾಣಿಕೆ ಸೊಪ್ಪಿನ ತೋಟ . . . ನಿರ್ವಿವಾದವಾಗಿ ಸಲುವದು (ಪಪ· ೪ (೩)· ೫೮೩, ೦೬-೦೬೯; 1749). [ಮುದ್ರೆ + ಕಾಣಿಕೆ (< ಕಾಣ್ಕೆ)]

ಮುದ್ರೆಗೂಳಿ (ನಾ)· ಒಂದು ನಿರ್ದಿಷ್ಟ ಕಾರಣಕ್ಕಾಗಿ ವಿಾಸಲು ಮಾಡಿ, ಯಾವುದಾದರೊಂದು ನಿರ್ದಿಷ್ಟ ಲಾಂಛನವನ್ನು ಬೆನ್ನಿನ ಮೇಲೆ ಮುದ್ರಿಸಿ ಸ್ವೇಚ್ಛೆಯಾಗಿ ತಿರುಗಲು ಬಿಟ್ಟಿರುವ ಗೂಳಿ: ಅಣ್ಣನು ಒಬ್ಬ ಕೌಳಿಗನ ವೇಷ ಹಾಕಿಕೊಂಡು ಆ ಮುದ್ರೆಗೂಳಿಯುಪ್ಪನ್ನು ತಂದು ಅರಮನೆಗೆ ಕೊಟ್ಟನು (ಪೀಗಾಂ. ೩೩)· [ಮುದ್ರೆ + ಗೂಳಿ೧]

ಮುದ್ರೆಪಡಿ (ನಾ)· = ಮುದ್ರೆಕೊಳಗ: ಆ ಪೊಸ್ಸ ಮುದ್ರೆಪಡಿಯು ತಂದು ಅಳಕೊಳ್ಳಿ (ಗಣಾ· ೩೨)· [ಮುದ್ರೆ + ಪಡಿ]

ಮುದ್ರೆಪ್ರಭು (ನಾ)· = ಮುದ್ರಹಸ್ತ: ಆ ಮುದ್ರೆಪ್ರಭು ಮಾಸ್ಯಕಾಲ ಸಮಸ್ತೆಪ್ರಜೆ [ಗಳು] ಅಹಂದ್ಯಾಕ್ಕೆ ಸ್ಥಾಯಿಯಾಗಿ ಕಲ್ಲಿನಾಥದೇವರಿಗೆ ಬಿಟ್ಟ ಧರ್ಮ (ಶಾಇ. XX. ೩೫೬-೫೯; 1388). [ಮುದ್ರೆ + ಪ್ರಭು]

ಮುದ್ರೆಬುಸವಿ (ನಾ)· (?): ಯಡಗ್ಯೆ ಬಲಗ್ಯೆ ದುವೆ ೧೫ ಮುದ್ರೆ ಬುಸವಿಗೆ ಮಗನಿಂದಾ ದೇವಾಂಗದವರು ಜಾತ್ರಿಗಟ್ಟಿಪುವರು ಸಹಾ ದಗ ೧೫ ಪೀರ್ಕೆದುಲ್ಲು ಕೊಡಲುಳವರು (ಪಪ. XIV· ೧೫೨· ೫೨-೬೩; ೫೨· 1776)· [?]

ಮುದ್ರೆಮನುಷ್ಯ (ನಾ)· = ಮುದ್ರಹಸ್ತ: ಮಲ್ಲಿರಸ ಅಯ್ಯನವರ ಮುದ್ರೆಮನುಷ್ಯನು . . . ರಾಮಯ್ಯನೂ (ಪಪ. IV (೩), ೨೪೦೮· ೭೭-೦೦; 1531)· [ಮುದ್ರೆ + ಮನುಷ್ಯ]

ಮುದ್ರೆಯುಂಗುರ (ನಾ)· (ರಾಜ ಮುಂತಾದವರ) ಲಾಂಛನವನ್ನು ಕೆತ್ತಿರುವ ಉಂಗುರ. —ಮುದ್ರೆ: ಕಡಗ ಕಂಕಣ ಘಮುದ್ರೆಯುಂಗುರ . . . ದಿವ್ಯನೂಪುರಗಳನಾಶ ಮಾಡದಿ ರನ್ನೆಯರ್ಕೆದಿದರು (ಕಂಪೂ. ೫೦-೦೫); ಬೆರಳಿನೆ ಮುದ್ರೆಯುಂಗುರವಿದ್ದುದರಿಂದ ಹಿಂದೂಮಹಿಳೆಯೊಂದು ಕೊಂಡೆ (ಸ್ವ.ಪ್ರ. ೬೦೦)· [ಮುದ್ರೆ + ಉಂಗುರ]

ಮುದ್ರೆಯೂಳಗ (ನಾ)· ರಾಯಸ, ಪತ್ರ ಮುಂತಾದುವುಗಳಿಗೆ ರಾಜನ ಮೊಹರನ್ನು ಒತ್ತುವ ಕೆಲಸ: ಅರಮನೆಯ ಉಗ್ರಾಣದಾಳ್ಗಳು ರಾಯಸಿಗರು; ಮುದ್ರೆಯೂಳಗದವರು (ಶುಂಕ್ರ. ೬-೦೨)·

[ಮುದ್ರೆ + ಉಳಿಗ (< ಉಳಿ೧ಗ)]

ಮುದ್ರೆಯೊಡೆ (ಕ್ರಿ)· ಮೊಹರನ್ನು ತೆಗೆ; ಉಂಡಿಗೆಯನ್ನು ಒಡೆ: ಮುದ್ರೆಯೊಡೆದು. ಓದಿಕೊಂಡು. ಬಿಟ್ಟಿದ ಅದಿನ ಪೂರ್ವಗೆಗಯ್ದು (ಪಟ್ಟಿ· ೬೬-೨೫). [ಮುದ್ರೆ + ಒಡೆ೧]

ಮುದ್ರೆಯೊತ್ತು (ಕ್ರಿ)· ೧. ರಾಜನ ಮೊಹರನ್ನು ಒತ್ತುವುದರ ಮೂಲಕ ಆಜ್ಞೆ, ಒಪ್ಪಿಗೆ ಮುಂತಾದುವನ್ನು ಸ್ಥಿರೀಕರಿಸು: ಇತರ ಪ್ರಭುಗಳಿಗೆ ನಮ್ಮ ಆಶ್ರಿತರಿಂದ ಅಂಪಟಳವು ನಮ್ಮನು ಅಪಮಾನವು ಅಡ ಸದಂತೆ ಮುದ್ರೆಯೊತ್ತಿ ನಿಬಂಧಿಸಿ (ಪಟ್ಟಿ· ೬೪-೦೬)· ೨. ಪ್ರಭಾವವನ್ನು ಬೀರು; ವರ್ಚಸ್ಸನ್ನು ಬೀರು: ಮಕ್ಕಳ ಎಳೆಯ ಮನಸ್ಸಿನ ಮೇಲೆ ಮುದ್ರೆಯೊತ್ತಿ ಅವರ ಬೇಡಿಕೆಗಳನ್ನು ಸಾಧಿಸಬೇಕು (ಶಾಪ್ರ· ೩೦೬). ೩. ಮಾಧ್ವರ ಲಾಂಛನವಾದ ಶಂಖ, ಚಕ್ರಗಳ ಗುರುತನ್ನು ಹಾಕು: ಶಂಖಚಕ್ರಮುದ್ರೆಗಳನ್ನು ಮುದ್ರಾಧಾರಣೆಯ ಹೋಮಾಗ್ನಿಯಲ್ಲಿ ಚೆನ್ನಾಗಿ ಕಾಯಿಸಿ . . . ಶಿಷ್ಯರಿಗೆ ಜಾಗ್ರತೆಯಾಗಿ ಮುದ್ರೆಯೊತ್ತಿಬಿಡುವರು (ಜಾಗೃ೮· ೪)· [ಮುದ್ರೆ + ಒತ್ತು೨]

ಮುದ್ರೆಯೋಲೆ (ನಾ)· ಮೊಹರು ಸಹಿತವಾದ ಕಾಗದ. — ಪತ್ರ: ನಂಜರಾಜಯ್ಯನವರನ್ನು ಸರ್ವಾಧಿಕಾರಿಯು ಊಳಿಗಕ್ಕೆ ನಿಯಮಿಸಿಕೊಂಡಿರುವ ಹಳೆಯಪಯ್ಯನವರ ವಂಶಾವಳಿಯು ಮುದ್ರೆಯೋಲೆಯಿದು (ಜುಂಕ್ರ. ೦೩೦-೩)· [ಮುದ್ರೆ + ಓಲೆ]

ಮುದ್ರೆವೊರು (ಕ್ರಿ)· ಆಜ್ಞೆಯನ್ನು ಪಡೆ; ಅಪ್ಪಣೆಯನ್ನು ಹೊಂದು: ಇರುಳ ಕಯ್ದಾವಿಗೆಗಳ ಕಿರಿಯ ಪ್ರಮಾಣಗಳಲ್ಲಿಯೇ ಮುದ್ರೆವೊಕ್ಕ ಸಮ್ಮ ಕರ್ತವ್ಯಗಳನ್ನು ನೆರವೇರಿಸಿಕೊಳ್ಳೋಣ (ಪಟ್ಟಿ· ೬೫-೨೦).

[ಮುದ್ರೆ + ವೊರು (< ವೊಱು)]

ಮುದ್ರೆಹಸ್ತ (ನಾ)· = ಮುದ್ರಹಸ್ತ: ಲಖ್ಮೀದೇವರ ಅಧಿಕಾರಿ ಮುದ್ರೆಹಸ್ತ ಮಲ್ಲಣ್ಣನುಂ ಪ್ರಭುಗಟುಂ . . . ಬಿಟ್ಟ ಮತ್ತರು (ಶಾಇ. XX. ೦೫೬-೬: 1197)· [< ಸಂ. ಮುದ್ರಾಹಸ್ತ]

ಮುದ್ಲಿಯಾರ್ ' ಮೊದಲಿಯಾರ್ ' ನೋ.

ಮುಧಸೆ ? (ನಾ)· (?): ಕಿತ್ತೂರ ಪುದಿವತ್ತಮುಂ ಪೆರ್ಗ್ಗಡಿ ಗದ್ಯಾಣ ಮುಧಸೆಮಟ್ಟಿಗೆದುಂ ಪುದುಪ್ಪೊದಲುಂ . . . ಪುದಿವತ್ತಮುಂ ಕೊಟ್ಟು (ಪಪ· III (೩)· ೫೫೦· ೩೦; 1079)· [?]

ಮುಧಾ (ಅ)· ೧. ವ್ಯರ್ಥವಾಗಿ: ನಿಷ್ಪ್ರಯೋಜಕವಾಗಿ: ಅದನಱಿಯದ ಬೋಧಬೋಧಿತ ತಪೋದಾನವಿಧಾನದಿಂ ಮುಧಾ ಕ್ಲೇಶಾಯಾಸನಿರತರಾಗಿ ಪಮವರ್ (ಅಂಪ್ರ. ೨.೯ ೪)· ೨. ತಪ್ಪಾಗಿ; ಸುಳ್ಳಾಗಿ; ಮೋಸಿಯಾಗಿ. [ಸಂ.]

ಮುನ್₁, ಮುಂ₁, ಮುನ್ನ₃ (ನಾ)· ೧. ಮುಂದುಗಡೆ ; ಮುಂದು ; ಎದುರುಭಾಗ : (೨)· ೨. ತರುವಾಯದ್ದು ; ಆಮೇಲಿನದು ; ಭವಿಷ್ಯಕ್ಕೆ ಸೇರಿದುದು ; 'ಮುನ್ನಱಿ' ಪರಾ. ೩. ಆದಿ ; ಮೊದಲು ; ಆರಂಭ· ೪. ಹಿಂದಿನದು ; ಪೂರ್ವಕಾಲಕ್ಕೆ ಸೇರಿದುದು ; ಮುಂಚಿನದು : ತತ್ಸ್ವಸ್ಥಪಾದೋತ್ಥಿತಂ ಪೃದಿದತ್ತಂ ರಜ ಮಂಬರಸ್ಪರ್ಶಮುಮಂ ಮುಟ್ಟಿತ್ತು ತಳ್ಪುರ್ವಿ ಪರ್ವಿದೊಡಾ ಮುನ್ನಿನ ತಳ್ಪುಗೆಟ್ಟು ಕೆಸಱುಮ್ಮಾಕಾಶಗಂಗಾಜಲಂ (ಕಂಕಣಾ· ೧೦–೨೯); ವಾಂ ಪತಿಪ್ರತೆಯಾದೊಡೆ ಮುನಿದೈವಂಗಳೆನಗೆ ಸನ್ನದಮಾದೊಡೆನ್ನ ಮುಂಗು ಮುನ್ನಿನಂತಾಗಲಿ (ಕಂಕಣಂ· ೭೭–೦೨); ಮುನ್ನಿನ ಕುಲಮಂ ಸಿರಿಯಂ . . . ಅಳಿಪಿಂದಂ ನೆನೆಯುತ್ತಿರ್ಪ ದುರ್ಜನಂ ಮುನಿಯಲ್ಲಂ (ಧರ್ಮಾಮೃ· ೫–೦೨). (ಗು)· ೫. ಮುಂದುಗಡೆಯ ; ಮುಂದಿನ ; ಮುಂಭಾಗದ· ೬. ಅನಂತರದ ; ಆಮೇಲಿನ; ತರುವಾಯದ : ಎನ್ನ ಜನ್ಮಕೆ ಸಾಫಲ್ಯ ಮಾದುದು ನಿನ್ನ ಚೆನ್ನಡಿಯೊಳಿಗದಿಂದ ಪಿನ್ನೇಳು ಮುನ್ನೇಳು ತರದಪರನ ಬರುಮುನ್ನತಿವಚ್ಚರೆನ್ನಿಂದ (ಪಂಚ. ೦–೩೯)· ೭. ಆರಂಭದ ; ಪ್ರಾರಂಭದ; ಶುರುವಿನ : 'ಮುನ್ನಿರುಳ್', 'ಮುನ್ನೀಸಱು' ಪರಾ. ೮. ಹಿಂದಿನ ; ಮುಂಚಿನ ; ಪೂರ್ವದ : 'ಮುನ್ನಿರವು' ಪರಾ. ೯. ಅಭಿವೃದ್ಧಿಯ ; ಉತ್ಕರ್ಷದಿಂದಕೂಡಿದ ; ಏಳಿಗೆಯುಳ್ಳ : 'ಮುನ್ನಡೆ' ಪರಾ. ಮುಂ₁ : ೧. 'ಮುಂಗಾಣ್' ಪರಾ. ೨. 'ಮುಂಗಾಣ್' ಪರಾ. ೩. ಮುಂ ಪಿಂತೆಂಬುದಿದೆಲ್ಲ ನಿಳಿಂಪಮುಂಗಕ್ಕೆಲ್ಲ ಮಿಂತು ಬಾಯಟ್ಟುವುದ ಚಃ ಗಾಂಪು ಬಗೆಗೊಂಡು ಜಿನವತಿಯಂ ಪೂಜಿಸು ಪಡೆವೆಯಿನಿಯನಂ ನಂಜುಭವದೊಳ್ (ಕಾಪ್ರ· ೬–೦೭)· ೪. 'ಮುಂಗುರುಳ್', 'ಮುಂಜಗಲಿ' ಪರಾ. ೬. 'ಮುಂಗಡೆ' ಪರಾ. ೭. 'ಮುಂಗಾರ್', 'ಮುಂಜಾವ' ಪರಾ· ಮುನ್ನ₂ : ೩. "ಆದೀ, ಅಗ್ರಂ, ಪ್ರ(ರಾ)ರಂ, ಪೂರ್ವಂ, ಪೃಥಮಂ, ಪ್ರಾಕ್· ವುರಃ –ಈ ೭ ಮುನ್ನಂ" (ಪಡಾಯು· ೧೦೬–೨೨). ೪. ಕರಮೆಸೆಯೆ ಮುನ್ನಿನ ದಿನಂ ಶಂಕರ ನಿಗರ್ಚಿಸಿ ಮಱುದಿವಸ ಪರಿಹರಿಸಿದಾ ಪತ್ರೆಯಪಿನಿತನಾವೋಪಲನು ತಂದು (ಲಕ್ಷ್ಮಿ· ೪೭–೬೭) : ಮುನ್ನಲುಳ್ಳಾಚಾರ್ಯರುಗಳ ಪದಗಳು ಮತ್ತೆನ್ನ ಚಿತ್ತದೊಳರ್ದ ಬಳಿಕ ಚೆನ್ನುನಡವುದು ಕವಿತೆ ಸೊಂಪ್ಪದೋರ್ಪುದು (ಪರ್ಮಕ. ೦–೦೫) ; ಒಲಿದು ತನ್ನೊಡವುಟ್ಟು ಸೊಸೆ ಮಂಗಳೆಂದೆಂಬ ಪಲರು ಮುನ್ನಿನ ಬಾಂಧವರು ಕುಲದೇವತೆಯೆಂದು ಕೂರ್ತು ತಂತಮ್ಮಿಷ್ಟಸಲವ ಪಡೆವರನ್ನಿಂದ (ತಂಬಾ· ೦–೧೦). ೮. ಮುನ್ನಜನ್ಮದ ಪಡೆದ ಫಲವಿದು ಎನ್ನ ಬಿಡುವುದೆ (ಗೋಹಿತು· ೦೬–೮೬)· ೧೦. ಹಿಂಭಾಗದ ; ಹಿರಿಬಿದಿಯ : ಪೊಸೆದು ಕಟ್ಟಿದ ಮುನ್ನ ಕಟ್ಟಿಯ ಬೆಸುಗೆ ಶಿಖಿಗಳ ಗಂಟು . . . ಎಸೆವ ಮೊಂಬಣ್ಣದ ಶರೀರದಿ ಮಿಸುವ ವಾಮನರೂಪನಾಂತಾ ವಿಷ್ಣುಮುನಿ ಬಂದ (ಶಾಳ್ವ· ೦೬–೨೬)·

ಮುನ್ನಾದಿನ = ಹಿಂದಿನ ದಿನ : ಓಬಳೆಮ್ಮ ನಾಗತಿಯು . . . ತನಗೆ ಮುನ್ನಾದಿನ ಆದಸ್ವಪ್ನದ ಸಂಗತಿಯನ್ನು ಹೇಳಿದಳು (ಪಕ್ಷಾ· ೬೨) ; ನಾನು ನಾಡಹಬ್ಬದ ಮುನ್ನಾದಿನ ಹಲಸಂಗಿಗೆ ಹೋಗಿ ತಲುಪಿದೆನು (ಪ್ರಬಂಧ· ೧೬). ಮುನ್ನಿನವ = ಹಿಂದಿನವನು ; ಪೂರ್ವಜ : ನಿಮ್ಮಲಿ ಮುನ್ನಿನವನು ಯಯಾತಿಯಯ್ಯನು ನಸ್ಮ ನಾವಾವೆ ನಹುಷನೆಂಬುದು (ಭಾಷಾ ೦೬–೬೬)· [ದೇ.॥ ತಮಿ. ಮುನ್; ಮಲ. ಮುನ್, ಮುನ್ನಂ ; ಕೊತ ಮುನ್, ಮು; ತೆಲು. ಮುಂ, ಮುನು, ಮುನು, ಮುನ್ನು]

ಮುನ್₂, ಮುಂ₂, ಮುನ್ನ₂, ಮುನ್ನಂ (ಅ)· ೧. (ಸ್ಥಳಕ್ಕೆ ಸಂಬಂಧಿಸಿದಂತೆ) ಮುಂದೆ ; ಮುಂಭಾಗದಲ್ಲಿ ; ಮುಂದಕ್ಕೆ : ಎದುರಿಗೆ: 'ಮುನ್ನುಗ್ಗು', 'ಮುನ್ನೂಕು' ಪರಾ· ೨. (ಕಾಲಕ್ಕೆ ಸಂಬಂಧಿಸಿದಂತೆ) ಅನಂತರದಲ್ಲಿ : ಭವಿಷ್ಯದಲ್ಲಿ : ಮುಂದೆ : ಪರಮಕವೀಶ್ವರ ಚೇತೋಹರಮೆಂಬಿನಮೆಸೆವ ಮೂಳವೀಮಾಭಪವಂ ವಿರಚಿಸಿವ ಕನ್ನಮ ಯ್ಯಂಬರವಾಗಂ ಸುಕವಿ ಬಗೆವೊತಿನ್ನಂ ಮುನ್ನಂ (ಪಂಕಣಂ· ೫–೪)· 'ಮುನ್ನಟಿ' ಪರಾ· ೩. ಮೊದಲು : ಮುಂಚೆ ; ಆರಂಭದಲ್ಲಿ : ನಡೆನೋಡಲ್ ರೂಪು ಕೇಳಲ್ ನುಡಿ ಪುರದ ಜನಕ್ಕಾಯ್ತು ಮುನ್ನಂತೆ ಮೇಗಣ್ಣಾಡರ್ದಾಗಳ್ ಮೆಯ್ಯ ಕಾಣಲಾ ಕಳಕಳಮಿನಿಸಂ ಕೇಳರಾಯ್ತು (೦೦೫· ೬–೪೬) ; ನೀವಿದನೆಮಗಱಿಪಿವರ್ಮ್ನೀ ವಾರ್ತೆಯನಱಿಯೆವು (ರಥೋತ್ಸ· ೨–೬೩) : ಮನದೊಳ್ ಮುನ್ನೊಗದಿರ್ದ ಸಂಶಯಮುಮದಿಲ್ಲಂ ಪಿಂಗೆ ಬಂದ್ರುದ್ಧಜಾಪಪಂ ಸಂತಸದಂತಮೆಯ್ದಿ . . . ಉದ್ಯೋಗಿಸಿದಂ (ಶಾಸಪಾ· ೧೫–೭೨)· ೪. ಹಿಂದೆ ; ಪೂರ್ವದಲ್ಲಿ : ಮುನ್ನೆಗಟ್ಟಿ ವೇಳೆ ವಡಿಚರುವಿನ್ನೆಳ್ಪೆರುಮಿಗದುಳ್ಕೊರುಂ ಬಗೆವೊಡವರ್ ನಿನ್ನನ್ನರೆ ನಿನ್ನನ್ನರೆ ನಿನ್ನನ್ನರೆ ನಿನಗೆ ನೀನೆ ದೊರೆಯಯ್ ಸಮ್ಮೂ (ಇಶ. XX, ೬೦–೦೦ ; ಸು. ೨೩೮ ೫೪); ತನ್ನೊಳಗಣ ಪನ್ನಗವಂ ಮುನ್ನೀನ್ ಪಿಡಿಬೊಗೆದು ಕಾಯು ಲಾಜಿದೆ ಪರಿವುಂ ಬನ್ನದ ಕರ್ಪಸೆವುದು ತೋಜಿಗನ್ನುಂ ಪರ ಗಳ ತಮಾಳ ನೀಳ್ಬವಿಯಿಂ (ಪಂಪಣಾ· ೭–೫೫) ; ಊರಗ ನರ ದಿವಿಜಾದಿಗಳಿಗಿದು ಪರಿಹರಿಸಲಳವಲ್ಲ ದೈವದ ಪರಾಭವಕೆ ಮುನ್ನಾದಿಯಲಿ ನಿರ್ಮಿಸಿತು ಮೃತ್ಯುವನು (ಕುಣ್ಡಕ್ರಿ· ೭–೨೯)· ಮುಂ₂ : ೧. ದಂಪತಿಗಳೆ ಮಾಡಿ ಬೀಳ್ಕೊಟ್ಟು ಕಳೆದುರು ಪುಂಂ ಪೋಗಲನಿರುವ್ದನೊಡನೆ ಚಿಂಪಕಧಾಮ ಕೋಮಲೆದಂರು · ಮರುಳ್ಕೊಂಡು ಮುಂಪೋದುದೇನ ವೇಳುವೆನು (ಪೋತ· ೦೯–೭೦) ; ಪೊಸನೀರ ಹೂರದೊಳಗೆ ಮಜ್ಜಿಮಾನ್ಗಳು ಮಜ್ಜಿಗಿ ಮುಂ ಪೊಳೆದಾತುಮಂತೆ ಮಿಸುಗುವ ಪರಲಾಪಣ್ಯಾಂಬುಪಲಿ ಕಣ್ಣಿನೆರಮುವು ಪೊಳಪೇಱಿ ನಗುತ (ಕಂಪ· ೦೦–೭೬)· ೨. ಮುಂ ಕೆಲವಾನುಂ ದಿವಸಕ್ಕ ದೇವ ಪಡೆಮ್ಮೆ ಶ್ರೀಮಂಡನ ಕ್ಷತ್ರಮಂಡಲಮಾರ್ಗೋಚತಗಾತ್ರನಂ ಬಹು ಕಳಾಸತ್ಪಾತ್ರನಂ ಪುತ್ರನಂ (ಣಾಕಂಪ್ರ· ೭೭೦)· ೩. ಪವಡಿಸಿದನಂತನೊಸೆದುವ್ವವಡಿಸಿ ತನ್ನೆರದುಮುಡಿಯನೊತ್ತುತ್ತಿರ್ದಾಹವವಿಜಯಾಯಪ್ಪ ವಿಜಯನನೆ ವಲಂ ಮುಂ ಕಂಡು ಬಲಿಕೆ ನೃಪನಂ ಕಂಡಂ (ಕಂಪಣಾ· ೯–೦೦) ; ತನ ಗಾಕಸ್ಮಿಕ ಶಂಕೆ ತನ್ನ ಮನದೊಳ್ ಮುಂ ಪುಟ್ಟೆ ತತ್ಕಾಂತೆಯಂ[ದಿನ]ರುಳ್ ಚಿಂತಿಸಿ ನಿದ್ದೆಗೆಟ್ಟು (ಹುಳುಮಾ·೦೨–೦೯) ; ಬನವಪಟ್ಟಣಕೆ ಮುಂ ಜನದಿಂದ ನಡೆತಂದು ಮಾಸವ ಮುತ್ತಿಗೆಯನೆ ಬಲಿದು ಬನಮಾಡಿಕೊಂಡರಂ ಕೋಪದೆ ತಾನಾಗಳೆಸಪ ಸಂತಸವ ತಳಿದನು (ಶಂಪ್ರ· ೦೬–೨೬)· ೪. ಮನುಷ್ಯಗತಿಯೊಳ್ ಪುಟ್ಟಿ ಮುಂ ಗೆದ್ದು ಪಾವಕರ್ಮಾದುದಯದಿಂದಂ . . . ದುಃಖಿಂಗಳನೆಯ್ದಿ (ತತ್ಪಾರಾ· ೯೭–೦೪) ; ಕತೆ ಪಿರಿದಾದೊಡಂ ಕತ್ತಿಯ ಮೆಯ್ಗಿಡಲೀಯದೆ ಮುಂ ಸಮಸ್ತಭಾರತಮನಪೂರ್ವವಾಗೆ ಸಲೆ ಪೇಟ್ದ ಕವೀಶ್ವರ[ರಿ]ಲ್ಲ (ಪಂಪಣಾ· ೧–೦೦) ; ಮುಂ ಪುಣ್ಯಕರ್ಮಮನಂತಾಗಿರೆ ಮಾಡದೀಗಳಲಲಿಂ ಪೇಬ್ಪೆಂತಱುತಿರ್ದಳಕ್ಕುಮೆ (ಶಾಕಂಪ್ರ· ೬೭೭)· ಮುನ್ನೆ₂ : ೧. (೬)· ೨. ಎನ್ನದಾನಂಬೆರಡಜಿಂದಮೆ ಬನ್ನಬಡುವನು ಜೀವನಲ್ಲದೆ ಮುನ್ನವಿನ್ನೆಂದಿಂಗಾತ್ಮಂಗಿಲ್ಲ ಭಮುಂಧ (ಕುಣ್ಡಕ್ರಿ· ೭–೫೪) ; ಎನ್ನ ವಂಶದ ಗೋವ್ಯ ಳೊಳಗೆ ನಿನ್ನ ವಂಶದ ಗೊಲ್ಲರೊಳಗೆ ಮುನ್ನ ಸಂಕ್ರಾಂತಿ ಪಬ್ಬದೊಳಗೆ ಚಿನ್ನ ಕೃಷ್ಣನ ಭಜಿಸಿಯ ಪಾಲುಪೊಂಗಲನಿಕ್ಕಿಸಯ್ಯ (ಗೋಪಾಹು· ೨೨–೦೦೯) ; ಚೆನ್ನ ನೀ ಪೋದೆಯಿನ್ನವನ ಹಿಂದೆಯೆ ಕಳುಹಿ ಮುತ್ತ ಬಾಳ್ವೆಯದೆಂತು ಮೇಳಿನ್ನ ವಂಗಳೆ (ಕಾಬಿಚ· ೦೭೪–೬೧೦)· ೫. ದುರ್ಯೋಧನನಪ್ಪೊಡೆ ಶ್ವೇತಕೃಷ್ಣಕಾರಕಂ ಕೃಷ್ಣನಂ ತನಗೆ ಮಾಡದನ್ನೆಗಂ ಮುನ್ನಮೆ ಪನ್ನಗ ಶಯನನಂ ನಮಗೆ ಮಾಡುವುದುತ್ತಮಪಕ್ಷಂ (ಪಂಕಣಾ· ೯–೦೦ ಪ) ; ಈ ಬಿಂಬೋಷ್ಠೆಯಂ ಸರ್ವದಪ್ಪೆಯನೆನಗೆ ಪದುವೆಮಾಪ್ಪುರಪ್ಪೊಡೆ ನಾಳೆ ನೀಸ ಮೂರ್ಜದ ಮುನ್ನಮೆ ವಿವಾಹಹಾರಂ ಮಾಡಿದಪ್ಪಂ (ಪಂಭಾವಿ· ೬–೪ ಪ) ; ನಾಳೆ ಪಡುಪಣ ತರಣಿ ತೊಲಗದ ಮುನ್ನ ಕೊಲುವನು ವೈರಿ ಸೈಂಧವನ (ಕುಣ್ಡಕ್ರಿ· ೭–೪೭)· ೪. ಆಂ ಮುನ್ನ ಜನಸೇಚರ ಲಲಿತಾಂಗದೇವ

ನೊಳಗುಬಂಧಿಸಿದ ಪೋಪೆದೊಳು ನಿನ್ನ ದೇವನಪ್ಪ ಲಲಿತಾಂಗಂ ಬೆರಸಿರ್ಪತ್ತಿರ್ದರ್ಲಲಿತಾಂಗವೇವರಂ ಪೂಜಿಸಿದೆಂ (ಕಾವುಂಡ. ೨೦) ; ಧರೆಯಂ ದ್ಯಾಪರ ಧೂಳ್ ವದಾನ್ಯತಿಲಕಂ ಲೋಕೋತ್ತರಂ ಮುನ್ನ ಭಾಸ್ಕರಪುತ್ರಂ ಪಿಜ ದಾನದಿಂ ತಣಿಪಿದಂತೀರೇಂ ಬ್ಬಿಳೀಭಾಗಮಂ ದೊರೆವತ್ತುತ್ತಮಭೋಗದೊಳ್ ತಣಿಪಿದಂ ಭೂಪೋತ್ತಮಂ (ಪಂಚಮಿ. ೬-೦೦) ; ಈ ವಿಧಿಯಿ ಪಿಂಡಪರಿಗಕುಟಾ ಸಾವೆ ಸೇರದು ತನಗೆ ತಾ ಮುನ್ನಾಪ ನೋಹಿಯನೆಳಿದೆನೋ ಭವ ಭವಸಪಸ್ಸರಲಿ . . . ಎನುತ ಮಿಗೆ ಮಱುಗಿವನು ಧೈತರಾಷ್ಟ್ರ (ಕಾಣ್ಮ.೬. ೦೬-೬). ಮುನ್ನಂ : ೧. (ಕ್ರಿ). ೨. ನಾಭಿರಾಜಂಗೆ ರಾಜ್ಯಾಭಿಷೇಕಂಗೆದ್ದು ಪುರುದೇವಿಗೆ ದಾಹದೇವಿ ಪಟ್ಟಂಗಟ್ಟಿ ಪೂಜಿಸಿ ಮುನ್ನೆವಾಜಿದಿಂಗಳಂಟಿನೆ ವಸುಧಾರೆಯುಮಯೋಧ್ಯಾಪುರದೊಳು ಸುರಿವಂತಾ ಧನದಿಂಗೆ ಬೆಸಸಿದೊಡೆ (ಆವುಂಪು. ೭೦). ೩. ಸಕ್ಕದಮುಂ ಪಾಗದಮುಮಪೆಕ್ಕುಂ ಬಗದಂತೆ ಸಮಱಿ ಪೇಟರ್ ಮುನ್ನಂ ನಿತ್ಯವಪೊಳವಪ್ಪ ವೆಱಂತಕ್ಕಂತಪ ಜವಲಿ ಲಕ್ಷಮುಂ ಲಕ್ಷಣಮುಂ (ಕರ್ಣಾ. ೦-೧೦) : ಮುನ್ನಂ ಪೂಜಿಸಿ ಶರಮಂ ರನ್ನವ ಪದಲಗೆದೊಳಿಟ್ಟು ನಿಜಪರಿವಾರಂ ತನ್ನುಳ್ಕನಿತಾಂ ಬೆರಳು ಭಯನ್ನಡುಕಮನೀಯಿ ಬಂದು ಕಂಡಂ ವಿಜಿಯಂ (ಆದಿಪು. ೦೨-೦೦೦) ; ಈ ಬಿಜುನುಡಿಯಂ ಲಾಲಿಸುತಾ ಬಾರೆ . . . ಮುನ್ನಂ ಕಾಣಿಸಿಕೊಂಡ ದಿವ್ಯ ಪುರುಷನಂ ಮನದೊಳ್ ಜಾನಿಸಿ ತಪಸಿಗಳೊಳೊರ್ವಂಗೆ ನರಪನಕ್ಕುವೆನೆಂದು ಮುಂಬಡಿಯಿಟ್ಟಳ್ (ಆದ್ಯ. ೦೨-೨೦). ೪. ಭೂಪಮ್ಮುರ್ನ್ನಮಿಂತಾರ್ವಿರೋಧಿಗಳಂ ಸಾಧಿಸಿ ವೀರಮಂ ತಳೆದರ್ (ಪಂ. XIII, ೩೨೯-೪ ; ೩೨೨) ; ನುಡಿ ಮುನ್ನಂ ಸ್ಪಷ್ಟವಾಗಿರ್ದುದು ಬಲ್ಲಿಕವಿಬಸ್ಪಷ್ಟಮಾಯ್ತಗ್ನಿ ಶಾಪಂ ಗುಡಲಲ್ಲಿಂದಿತ್ತಲಿಂತೀ ಶುಕಸಪಿತಿಗೆ (ಶಾಪಂಚಾ. ೬೬) ; ದುರ್ಧರದುಃಖಿ ಮೆನ್ನನೆಲೆಮಂತುಂ ಮುನ್ನಮೇಗೆದ್ದಿನೋ (ಸುಕುಮಾ. ೯-೦೦೯).

ಮುಂಮುಂ, ಮುನ್ನಮುನ್ನೆ (ದ್ವಿರುಕ್ತಿ) : ೧. ಮುಂದುಮುಂದಕ್ಕೆ ; ತುಂಬಿ ಮುಂಭಾಗಕ್ಕೆ ; ಹೆಡೆ ನಿಮಿರಿ ಹರಿವಂತೆ ಹರಿದುದಾ ಸೇತುಸರ್ಪಂ. ಕ್ಷಣಕ್ಷಣಕೆ ಮುಂಮುಂ ಬಿಳಿದು (ಕ್ರಿಪಾಪು. ೪೯೨-೩೨೦). ೨. ಮೊದಮೊದಲು ; ಪುಂಬಾ ಹಿಂದೆ : ಪುಣ್ಣಪ್ಪಳ್ಳ ಕಾಲಿಕ್ಕೆ ಪಾಷಾಣ ಪರುಷವಪ್ಪುದು ನೋಡುಮ್ಕೆ ಮಣ್ಣಾ ಹೊನ್ನಪ್ಪುದು ಜಾನ್ನಮುನ್ನವೆ ಆಚ್ಚೊತ್ತಿದ ಭಾಗ್ಯವೆನ್ನ ಕಣ್ಣಾ ಮುಂದೆ ಕಾಣುಂದಿತ್ತು ನೋಡಾ (ಪಪಸಂ. ೨೦೬-೬೩). [<ಮುನ್ನ್]

ಮುನ್ನೆ² 'ಪಸೊ' ನೋ.

ಮುನಸಿ, ಮುನಸಿ, ಮುನಿಸಿ, ಮುನಿಸಿ, ಮುನ್ಸಿ (ನಾ). ೧. ಬರೆಹಗಾರ ; ಲೇಖಕ : ಮೊಕಾಂ ಬೆಂಗಳೂರು ಖದು ಸುರಪ ಮುನಸಿ (ಎಕ. VI. ಕೊಕ್ಕ. ೪೮-೩೪; 1811); ಅಸ್ವಥನಾರಣ್ಯೆಯ್ಯಾ ಮುನಸಿ (ಕ್ರಿಪಾ. ೦೯೩೦.೪೩-೪೭; 1812). ೨. (ಅರಬ್ಬಿ, ಪಾರಸಿ ಭಾಷೆಗಳನ್ನು ಬಲ್ಲ) ಗುಮಾಸ್ತ ; ಕಾರಕೂನ : ಮುನಸಿಯು ಜಮಾಲಿಖಲನನ್ನು ಕರೆಯಬೇಕೆಂದು ದಫೆದಾರನಿಗೆ ತಿಳಿಸಿದನು (ಎರಿಕ್ರ. ೦೬೩). ಮುನಸಿ : ೧. ಸುಬ್ಬರಾಪ ಮುನಷಿ (ಕ್ರಿಪಾ. ೦೯೨೯. ೪೪-೪೫; 1813). ೨. ಕರಿಯ ದಿವಾನರು ಅದನ್ನು ಚಂದವಾಗಿ ಓದಿ ನೋಡಿ ಮುನಸಿಯನ್ನು ಕರೆಸಿ . . . ನುಡಿದನು (ಕಾಗ್ಮಂ. ೦೧೩); ಮೂರುವಿಧದ ಮುನಸಿಗಳನ್ನು ಇರಿಸಿಕೊಂಡು ಅವರ ಯೋಗ್ಯತಾನುಸಾರವಾದ ಸಂಬಳದನ್ನು ಕೊಡುವುದು ಕ್ರಮವಾಗಿತ್ತು (ಮುಸಂಗ. ೪೩). ಮುನಿಸಿ : ೨. ಓರ್ವ ಮುನಿಸಿಯಂ ಕರೆದುಕೊಂಡುದ್ದೂರಿಗೈದಿ (ಕಾಗಾಪ. ೬೦-೬೬). ೩. (ಪಾರಸಿ, ಅರಬ್ಬಿ ಭಾಷೆಗಳ) ಶಿಕ್ಷಕ : (ಕ್ರಿ). ೪. ಕಾರ್ಯದರ್ಶಿ ; ಕಾರಭಾರಿ : (ಕ್ರಿ)' ಮುನುಷಿ : ೨. ಕೋರ್ಟಿನ ಮುನುಷಿಯೊಬ್ಬನು ಪ್ರಮಾಣವಚನಗಳನ್ನು ಪೇಳಿಕೊಡಲಾರಂಭಿಸಿ (ಗಮಳ. ೦೬೬); ಶೀಲವತಿಪೀರ್ಕಚ್ಚಿಯ ತಾಯಿದಲ್ಲಿ ಒಬ್ಬ ಸಾಮಾನ್ಯ ಮುನಷಿಯಾಗಿದ್ದ – ಪೆಸರು ಶೇಷಾಚಲಯ್ಯನೆಂದು (ಸೊಂಪಾಸ. ೦೪೨). ಮುನ್ಸಿ : ೨. ದೊರೆಗಳ ಆಧಿಪತ್ಯದಲ್ಲಿದ್ದ ಮುನ್ಸಿಗಳು ಫಾರಸಿ, ಪಕ್ಕನಿ, ಕನ್ನಡ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿಯೂ ಇರುತ್ತಿದ್ದರು (ಪೂಗೌ). ೩. ಬೇರೆ ಬೇರೆ ಭಾಷೆಗಳನ್ನಾಡುವವರ ಮಾತುಗಳನ್ನು ಭಾಷಾಂತರಿಸಿ ಪರಸ್ಪರರಿಗೆ ತಿಳಿಸುವವನು : (ಕ್ಯಾಕಿ. IV, ೭೬೦).

[← ಪಾರ. ಹಿಂ. ಮುನ್ಶಿ : ಮರಾ. ಮುನಶೀ, ಮುನ್ಶೀ]

ಮುನಷಿ 'ಮುನಸಿ' ನೋ.

ಮುನಸಿಪ 'ಮುನಸೀಫ' ನೋ.

ಮುನಸಿಫ 'ಮುನ್ಸೀಫ' ನೋ.

ಮುನಸೀಫ್ 'ಮುನಸೀಫ' ನೋ.

ಮುನಸೀಫ, ಮುನಸಿಪ, ಮುನಸಿಫ, ಮುನಸೀಫ್, ಮುನಸುಫ್, ಮುನಸೂಫ್, ಮುನಸೂಫ, ಮುನ್ಸೀಫ್ (ನಾ)- ಕೆಳದರ್ಜೆಯ ನ್ಯಾಯಾಲಯಗಳಿಗೆ ಬರುವ ವ್ಯವಹಾರಗಳನ್ನು ನಿರ್ಣಯಗೊಳಿಸುವ ನ್ಯಾಯಾಧೀಶ : ಈಗಿರೋ ಮುನಸೀಫರು ಅವರಿಗೆ ಬೇಕಾದವರು (ಕಂಠತೀ. ೦೪೯); ಕೆಲಸರು ಪಾಮಲೇದಾರ – ಮುನಸೀಫರಿಗಾಗುವರು (ಸ್ವಾಂಪ್ರ. ೨೦೯); ಹಳೆಮುನಸೀಫರಿಗೆ ವರ್ಗ ಆತು ಅಂತ ಚಹಾ ಕೊಡ್ತಾರೆ ವಕೀಲ್ರೆಲ್ಲ (ಪಪಸ್ವಾಂಪ್ರ. ೦೦೯). ಮುನಸಿಪೆ : ಅಂಕೋಲಾತಾಲೂಕ ಮುನಸಿಪರು ಹರತಿ ಲಕ್ಷುಮಯನವರು (ಪೂಂಶಾಪ್ರ. ೦೯೦೦. ಕಾವಾಶಿ. ೦೦೩-೬; 1771). ಮುನಸಿಫ : ಗ್ರಾಮ ಮುನಸಿಫನು ಗ್ರಾಮಕೋರ್ಟಿನಲ್ಲಿ ದಾವಿಲ್ಮಾಡಲ್ಪಟ್ಟ ವ್ಯಾಜ್ಯಗಳ ಒಂದು ರಿಜಿಸ್ಟರನ್ನು ಇಡತಕ್ಕದ್ದು (ಗ್ರಾಪಾಶಾ. ೦೯). ಮುನಸೀಫ್ : " ಪ್ರಾಡ್ವಿವಾಕಃ, ಅಕ್ಷದರ್ಶಕಃ . . . ನ್ಯಾಯನಿರ್ಣಾಯಕನ ಹೆಸರುಗಳು. ಜಡ್ಜಿ. ಮುನಸೀಫ್-ಧರ್ಮಾಧಿಕಾರಿ " (ಸಿಡ್ಕಾ.೦೬. ೨೬೬). ಮುನಸುಫ್ : ಮುನಸಾಫ್ - ಗ್ರಾಮದ ಶಿಷ್ಟರ ಅಧಿಕಾರಗಳನ್ನು ಚಲಾಯಿಸತಕ್ಕವನಿಗೆ ಮುನಸೂಫ್, ಗ್ರಾಮ ಮುನಸೂಫನೆಂದು ಹೆಸರು (ಗ್ರಾಪಾಶಾ. ೦). ಮುನಸೂಫ್ : ಮೇಲಿನ 'ಮುನಸುಫ್' ಉಲ್ಲೇಖಿತ ಪ್ರಯೋಗವನ್ನು ನೋಡಿ. ಮುನಸೂಫ : ಚಿದೂ . . . ಸಾಪೇಬು ಆಗಲಿ. ಮುನಸೂಫ ಆಗಲಿ (ಮುಕ್ಕ.ಕ. ೬). ಮುನ್ಸೀಫ್ : 'ಮುನ್ಸೀಫ್‌ಕೋರ್ಟು' ಪರಾ.

[← ಅರೆ. ಹಿಂ. ಮುನ್ಸಿಫ್ : ಮರಾ. ಮುನಸಫ್, ಮುನಸಿಫ್, ಮುನಸೀಫ್, ಮುನಸೂಫ್, ಮುನ್ಸಫ್]

ಮುನಸುಫ್ 'ಮುನಸೀಫ' ನೋ.

ಮುನಸುಫ್‌ಕೋರ್ಟು 'ಮುನ್ಸೀಫ್‌ಕೋರ್ಟು' ನೋ.

ಮುನಸೂಫ್ 'ಮುನಸೀಫ' ನೋ.

ಮುನಸೂಫ 'ಮುನಸೀಫ' ನೋ.

ಮುನಾಫೆ (ನಾ)- ಲಾಭ ; ಫಾಯಿದೆ ; ಆದಾಯ : ಅವರು ಮುನಾಫ ಯಿರಿಸಿ ಮಾಡಿದ್ದೇಂಬುದೇ ಇಲ್ಲ (ಕಾರುಣ. ೪೬); ಹತ್ತಿಪ್ಪತ್ತಕ್ಕೆ ಟಿಕ್ಕರ್ ವಿಪಹ ನಿಮ್ಮಿಂದ ಹಿಂದು ಪೈ ಮುನಾಫೆಯಿಲ್ಲ (ಕಾಕಾ. ೫೬).

[← ಅರೆ. ಮುನಾಫಅತ್, ಮುನ್ನಾಫಅ್, ಮುನ್ಫಅ ; ಮುನಾಫಾ ; ಹಿಂ. ಮರಾ. ಮುನಾಫಾ]

ಮುನಾಸಬು (ಗು). ೧. ಉಚಿತವಾದ ; ಸೂಕ್ತ ; ತಕ್ಕುದಾದ : ಈ ಹದಿನೇಳು ಸ್ಥಳಗಳ ಪಾಳೆಯಗಾರರಿಗೆ ಅವರವರ ಸ್ಥಿತಿ ತರಗತಿಗಳಿಗನುಸಾರ ಮುನಾಸಬು ಮಾಸೇಮಾನಾ ಮಯಜೆದೆಯ್ದು ತಲಬು (stipend) ಪೊರೂರಾಯಿತು (ಮುಶಾವಂ. II, ೦೩). (ನಾ). ೨. ಆರ್ಹತೆ ; ಸೂಕ್ತತೆ : ಕುಳದ ಆದಾಯ ಮುನಾಸಬಿನಂತೆ ಮಾರದ ದೆವಪದ ಗುಡ್ಡೆಯಲ್ಲಿ . . . ಸಲ್ಲುತ್ತಿತ್ತು (ಪಾಳಗಾ. ೪೪).

[← ಅರೆ. ಹಿಂ. ಮುನಾಸೀಬ್ ; ಮರಾ. ಮುನಾಸಬ್]

ಮುನಿ₁ (ಕ್ರಿ). ೧. ಸಿಟ್ಟಾಗು ; ಕೋಪಗೊಳ್ಳು : "ಮುನಿ—ಕ್ರೋಧ-ತಪ್ಪಿನಿ ಚ" (ಶಾಬ್ದ); ಅಳುವಬೇಡಮುಂಜಿಸಾಸಿರಮುವಾನ್ ಚಿತ್ರವಾಹನನಾಳುತ್ತುಂ ಬಾಯ್ಕೇಳದಿರೆ ಮುನಿದು ಕೊಲ್ಲಿಪಲ್ಲದನೊಬಿವ್ಯಂ ನೋಟಪ್ಪರಾದಿತ್ಯನ್ ವೆಸಲ್ (ಎಳ- VIII. ೩೨೮. ೦೦-೩; ೫- ೫೦೦); ಒಸೆಗೆ ಮೆಣ್ಣಾ ಮುನಿಗೆ ಮೇಣವರೆಲ್ಲರುಮಂತೆ ಬಗ್ಗಿ[ಸುಗೆ] ಮತ್ತುಟಾಯರಾಗದು (೪೫೩. ೦-೦೩೫) ; ಮುನಿದಿರ್ಪತ್ತೊಂದುಸೂಜಿ ಕ್ಷತ್ರಿಯರ ನಱು ಕೊಂಡಿಕ್ಕಿದಾ ರಾಮನಿಂದಿತ್ತ ನರೇಂದ್ರನ್ ಪೊಕ್ಕರಿಲ್ಲೊರ್ಗುಂ (ಗದಾಯು. ೦-೨೪); ಅವರಿವರ ಹವಣಲ್ಲಿ ಗುರು ಮುನಿವವಗಡಿದರೆ ನಿಲುವ ನಾವನು (ಕುಣ್ಡಕ್ರೀ. ೯-೨೫); ಒಲಿದರೆ ನಾರಿ, ಮುನಿದರೆ ಮಾರಿ (ಗಾಣ). ೨. ಅನಪೂಹಾನಗೊಳ್ಳು ; ಬೇಸರಪೊಂದು ; ಜುಗುಪ್ಸೆ ಪಡು : ತನ್ನ ಕರಿ ಮಾಡಿದಪರಾಧಂ ತನ್ನದನುತಂ ಪೆದಱಿ ಜೋಳನು ತನ್ನ ಜೀವಕೆ ಮುನಿದವಂತಾಗಿ (ಬಷಪು. ೩೨-೨೦); ನೋಂದನೀಪರಿ ತನ್ನ ಕಂಗಳ್ ಮುಂದೆ ನರಪತಿ ಪಾರ್ಥನಿನ್ನೇನೆಂದು ಮುನಿದನೊ ಒಲಿವಾ ಎಂದಳಲಿದನು ಭೀಮ (ಕುಣ್ಡಕ್ರೀ. ೦೩-೬). ೩. ಹೊಟ್ಟೆಕಿಚ್ಚುಪಡು ; ಮತ್ಸರಿಸು : ಒಡೆಯರ ಸಿರಿಯಂ ಕಂಡೊಡೆ ಬಡವರ್ ಮುನಿಪಂತೆ ನಿಶಕ ಗತಿಗಿಬ್ಬಿವರುಂ ತಡೆಯದೆ ನಿರ್ವ್ಯತಿಸುಖದುಂ ಪಡೆದವರಂ ಕಂಡೊಡಾಗಳುಂ ಕಡುಗಾದ್ದುರ್ (ಕಮಾಸ್ಕಾ. ೦೦-೧೬); ನಿಮ್ಮವರೊಡನೆ ಸರಸಾಗಿಪ್ಪವರ ಕಂಡರೆ ಪಾಪವರಿಗೆ ಮುನಿವೆ ನೋಡಾ ಕಪಿಲಸಿದ್ಧಮಲ್ಲಿನಾಥ ನೀಲೆಪರಳ್ಗಿ ಇಪ್ಪೆಯಾಗಿ (೩೮೨೫. ೩೨-೦೬೯); ಈರ್ಷ್ಯೆಗೆ _ ಕವಿಗೆ ಕವಿ ಮುನಿಪಂ (ಕಱುದ. ೦೩೦ ಪ್ರಪಿಣ). ೪. ಪ್ರತಿಭಟಿಸು ; ಮಲೆ ; ಮುನಿದಿರಾಗಿ ಶರಣ್ಬುಗೆ ಮನಮೊಲ್ದುದನೆರೆಯೆ ಫಲ್ಗುಣ(ಸ)ಂ ಧಾತ್ರುಂ ಕರ್ಣನೆನಲ್ ಗೊಜ್ಜಗಭೂಪಾಳನಿಬ್ಬುವ ಭೂಮಿಪಾ[ಳಕ]ಕ್ಕರಿಲರೊಳರೇ (ಎಳ- XIII. ೫೫೦-೦೦; ೨೭೪); ಪಾಣ್ಡವರಪರಲೇನರ್ಜುನನು ಮಾಧವನು ಮುನಿಸಡೆಗೆಲುವೆನಲಾದೆ. ರಥದ ಹರಿಸು (ಕುಣ್ಡಕ್ರೀ. ೪-೩೬) ; ಮುನಿಯೆದಿರಾರಾಮಂಗೆ ಮಲೆತರೆ ಮಾರಮಹನು (೪೫೫೫. ೦೪-೨೪).

ಮುನಿವರ ಸಿಂಗ = ಪ್ರತಿಭಟಿಸುವವರನ್ನು ನಾಶಮಾಡುವವನು : ಒಂದು ಬಿರುದು : ನುಗುನಾಡ ರಾಘವಂ ಮುನಿವರ ಸಿಙ್ಗಮಾಜಿಕದಾವಳ್ ಚಿಣ್ಣಪಿಕ್ರಮಂ (ಎಳ- III (K). ೪೧೩ ೬೨-೫೦; 1057).

[ದೇ.॥ ತಮಿ. ಮಲ. ತುಳು. ಮುನಿ]

ಮುನಿ₂ (ನಾ). ೧. ತಪಸ್ವಿಯನ್ನು ಆಜೀವಿಸುವವನು ; ಋಷಿ ; ತಪಸ್ವಿ : "ಋಷಿಃ- ಶ್ರಿಕಾಖದರ್ಶೀ, ಮುನಿಃ, ವಾಜೆಯಮುಮಃ _ ಈ ೪ ಋಷಿಗಳ್" (ತಲಾಹಮು- ೭೯-೨೫೫); ಮುನಿವನೆಮಾವೆ ಬಿಸುಟುವ ಮುಂ ಮುನಿಯರ ಸೋಂಕಿಕೊಳೆ ಒಳೆದ ಸಿಂಗಂಗಳ್ ಮುಂದ್ರಿಸೊಳಡರ್ವ ಪಿಡಿವ ಗುರ್ದುಪ ಮುಸೆಜೆಪಿನಿಶರ್ಕಮಲಸಿ ಮರಂದಾತ್ಮಾಜನಾ (ಪಂಪಭಾ. ೨-೬) ; ಬೆಟ್ಟದ ಮುನಿಯೆಂ ನೆನೆದೊಡ ಮುಟ್ಟುವ ರಾಕ್ಷಸ ಪಿಶಾಚಿ ವಿಷಮಾಸಿಗಳಂ (ಶಬಿಪ್ರ- ೦-೦೭); ಅಂಬುಧಿದು ಮುನಿಯಾಪೋಷಣದ ಕೊಂಬಲ್ಲಿ ಚಂದ್ರ ಮುನ್ನಬಂದನೆ (೫೫೫. ೨೫). P ವಿಶೇಷವಾಗಿ ವಿಷ್ಣು, ಶಿವ, ನಾರದ, ಭರತ, ಅಗಸ್ತ್ಯ, ವ್ಯಾಸ, ವಾಲ್ಮೀಕಿ, ಅರ್ಹಂತ, ಬುದ್ಧ ಮುಂತಾದವರಿಗೆ ಈ ವಾಚಕವನ್ನು ಬಳಸುತ್ತಾರೆ. ೨. (ಪಕಾಂಗಿಯಾಗಿದ್ದುಕೊಂಡು) ವಾನಪ್ರಸ್ಥವನ್ನು ಆಜರಿಸುವ ತಪಸ್ವಿ. ೩. ದೆರ್ಪೆ. ೪. ಒಂದು ಬಗೆಯ ಮರ ; ಪಲಾಶ ; ಮುತ್ತುಗ. ೫. ಮಾವಿನ ಮರ. ೬. ಪ್ರಿಯಾಲವೃಕ್ಷ; P ಇನ್ನೂ ಅನೇಕ ಬಗೆಯ ಮರಗಳಿಗೆ ಈ ಹೆಸರುಂಟು : ಅಶೋಕ ಬದರಿ ಮಂದಾರ ಸುಮೇರ ಮುನಿ ಮಾತುಲುಂಗ . . . ಹೊಸ್ಮೆಯಿಂದಾ ಬಿಸಂ ಕಣ್ಣಿಸೆದುದು (ಪಂಶಪು. ೫-೦೯). ೭. [ಜೈನ] ಶ್ರಮಣಃ ಸಮಣ : "ಮುನಿಃ, ತಪೋಧನಃ . . . ಶ್ವೇತವಾಸಾಃ ಸಂಯತಃ – ಈ ೯ ಸಮಣರ ಪೆಸರ್" (ಪಂಚಮಾ- ೫೭-೦೧೦); ಆ ಮುನಿನಾಥಂ ತ್ರಿಗುಪ್ತಿಯೊಳ್ ನೆನೆವಂ ಈ ಮುನಿನಾಥಂ ಮಂತ್ರಗುಪ್ತಿಯೊಳ್ ನೆರೆದುಂ (೪೨೫. ೬-೨೪ ೮); ಮುನಿಮುಖ್ಯರ ಬರವಂ ಭೋಕೆನ ಕಂಡುಂ (ಕಱೀಪ್ಪ- ೯-೦೨). ೮. ಐಮವರ್ಗದ ಗುರುಗಳಲ್ಲಿ ಒಬ್ಬ : ಪಂಚಪರಮೇಷ್ಠಿಗಳಲ್ಲಿ ಒಬ್ಬ : ಸಿದ್ಧ : ಮುನಿಜನದೊಡಿಸದೋಜೆಯೊಳನುವದಿಪುವಿದೊಂದ ಕೊಂದಕುವಾನ್ಯಯಸಂಪವಪನರುಕಮಿಂದಿನಗಿನಿಸಮಗ್ರಹಂಗೆಯ್ದಿ ಕರುಣದಿಂ ಮುನಿನಿಪಯಂ (೪೭೫. ೦-೦೫); ಆರ್ಹತ್- ಮುನಿ(ಸಿದ್ಧ), ಆಚಾರ್ಯ ಉಪಾಧ್ಯಾಯ, ಸಾಧು ಇವರು ಪಂಚಪರಮೇಷ್ಠಿಗಳು (ಪಂಪಪು. ೧೦). ೯. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : ನಿಧಿ ಮುನಿ . . . ಪರ್ವತಾದ್ರಿಯೋಜಿಜಿ ನಾಮಂ (೪೪೫೫. ೯-೬). ೧೦. [ಕಾಮಶಾ] ಸ್ತ್ರೀಯರ ಹನ್ನೆರಡು ಬಗೆಯ ಮನೋಧರ್ಮಗಳಲ್ಲಿ ಒಂದು: ಶಾಂತಸ್ವಭಾವ : ಸುರ ಯಕ್ಷ . . . ಮುನಿ ಪಿಶಾಚ ರಾಕ್ಷಸ ಕಿನ್ನರ ಖರಮೆಂಬ ಪೆಸರ ಪನ್ನೆರಡುಸತ್ತ್ವದ ಬಗೆಯುನೊಳೆವೆನು (೪೪೫. ೫-೨೪). 'ಮುನಿಸತ್ತ್ವ' ಪರಾ. [ಸಂ.]

ಮುನಿಕೊಲ್ಪೋಯೆ (ನಾ). ಒಬ್ಬಾತನ ಹೆಸರು : ಮುನಿಕೊಲ್ ಬೋಯಸ್ಯ ಭಾತದ್ವಾಜಗೋತ್ರ ಕನ್ದರಮ್ಮಾಣ ಎಕ್ಕಂಶಃ (೧೪. VII. ೦೫೫-೨೩; ೫೫೫). [?]

ಮುನಿನಿವೇದಕ (ನಾ). ತಪಸ್ವಿಯು ಆಗಮನವನ್ನು ತಿಳಿಸುವವನು : ಋಷಿನಿವೇದಕ : ಸತದೇಬಿಡಿಯಂ ಜಿನಾರ್ಚಿಡಗೆಜಿಗಿ ಬಬ್ಬಿಕ್ಕಂ ಪಜ್ಜುಗೊಟ್ಟಂ . . . ಆ ಮುನಿನಿವೇದಕಂಗೆ ನೃಪೇಂದ್ರುಂ (ಪಾಃಚರಿ- ೦-೫೬).

[ಸಂ.]

ಮುನಿಪ (ನಾ). ತಪಸ್ವಿಗಳಲ್ಲಿ ಮುಖ್ಯನಾದವನು : ರಾಗಮುಂ ಮುನಿಸುಮಂತೊಲ್ಲದಂ ಮುನಿಪನೆಂಬುದುಂ (೪೭೫೫. ೫-೦೦೫); ಮುನಿಪಂ ಮಾಸೋಪವಾಸಾಂತರದೊಳನುನಯಮುಂ ವಿಂರಿಪ್ಪೆಂದು ಪೊಕ್ಕೊಯ್ದನೆ ಚರ್ಯಾಮಾರ್ಗದಿಂ ಬರೆ (೫೦೪೦. ೫-೨೪); ಅತಿಪ್ರಮುಖದಮುನಿಪರ್ಯಂಗಳ ವಾಙ್ಮನಸುಗಳಿಗೆ ಕ್ಷೀಣವದದರೆ ಮಿಜಿ ತೋಜಿಪ ನಿಸುಪಮಿತಮೂರ್ತಿ (೨೪೫. ೫೦ ೭೦) [ಸಂ.]

ಮುನಿಮ 'ಮುನೀಬ' ನೋ.

ಮುನಿಮತ (ನಾ). ೧. ಋಷಿಯ ಅಭಿಪ್ರಾಯ.- ಮತ. ೨. [ಛಂದ] ಇಪ್ಪತ್ತಾರನೆಯ ಉತ್ಕೃತಿ ಎಂಬ ಛಂದಸ್ಸಿನಲ್ಲಿ ಹುಟ್ಟುವ, ಒಂದು ಪಾದದಲ್ಲಿ ಇಪ್ಪತ್ತಾರು ಅಕ್ಷರಗಳಿಂದ ಕೂಡಿರುವ ಒಂದು ವರ್ಣವೃತ್ತ : ವಿನಮಿತಲಲಿತಪದೋಕ್ತಿಗಳಂ ಜಸಹಿತಮಿಂತಿದು ಮುನಿಮತಮೆಂಬುದು (ಛಂದೋಂಬು- ೨-೦೫೬). [ಸಂ.]

ಮುನಿಯಿಸು, ಮುನಿಸು₁ (ಕ್ರಿ). ೧. ಕೋಪಗೊಳ್ಳುವಂತೆ ಮಾಡು; ಸಿಟ್ಟು ಬರಿಸು : ಮುನಿಯಿಸಿದಂ ಕರಂ ಪಿರಿಯನಪ್ಪುದು ಬೇಟ್ಟನ ಬೇಟ್ಟ ಪಸ್ತು ಕಾಂಚನಗಿರಿಯಿಂದಮಗ್ಗಳಮೆನಿಪ್ಪ ದಾದೊಡಮೇನೊ . . . ದೊರೆಯೂರಿಕೇಸರಿ ನಿನ್ನವೊಲ್ ಪೆಜಿರಿ (ಕಂಪಾ. ೫-೭೬); ಮುನಿಯಿಸಿದ ರಾತಿಯಂ ಕೊಲ್ವೆನೆಂದು ಪೂಣ್ದಂತೆ ಪೂಣ್ದೆ ತಪ್ಪದೆ ಕೊಲಲೇಂ ನಿನಗೆಲ್ಲದಿಂತು ಕೀರ್ಗುಮೆ (ಗಣಿಪು. ೦೦-೪); ಮುನಿಯಿಸುವೇಂ ಸಪತ್ನಿಯರನೆಂದವರಧ್ರುವದೊಳ್ದು ಪುಷ್ಪವಂ ಮುನಿ ಹರಿಗಿತ್ತಿಂ (೪೫೫. ೦೫-೪). **ಮುನಿಸು**₂ : ೧. ಮುನಿಯದ ಕೂರಿದ ಮುನಿಸದ ಮುನಿಪತಿ ಧಾವಿಪೊಡ ತಾಣಿ ಜಿನಪಜಿಪಿಯಲ್ಕೆ (ತುಲಾಪು. ೯-೩೭); ವಾರಿಜೋದ್ಭವನೇ ನರೋಜ ದಳಾಯತಾಕ್ಷಿಯ ಮುಂಗಿನಾಕಾರಮಂ ನೆಜಿ ಪೋಲ್ಕುರೆಂದುಜಿ ನೋಡಿ ಸಂಪಗೆಗಳ್ಗಿ ನಿಷ್ಕಾರಣಂ ಮುನಿಸಿರ್ದನಪ್ಪುದಱಿಂದದೇಂ ಮನಸಬ್ಜಿಜಂ ಸಾರಲನ್ಯಾಪದೆ ಭಾವಿಸಂವೆವನೊಂದು ಪೂರ್ವಪೆ ತುಂದಿಗಳ್ (೪೪೫೫. ೩-೦೬೨ ೩೩೩೬). ೨. ಕೋಪಗೊಳ್ಳು : ಸಿಟ್ಟಾಗು : ಇಂತು ಪೊಯ್ದಪೆ

ನಿಂತು ಬಯ್ದುದೆಂ ಮುನಿಸಿದೊಡೆ ಶಿಕ್ಷಿಸಿ ಕೆಕಿಮಿ. ಕಾಲವಜೆಯಿಂತು ನೆನೆವಪೆನಪನೊಳ್ (ಕಬಿಪ. ೦೯-೧೦); ಚಿತ್ತಮುಮಾದರ್ಸಾನು ಯಾರಿಗೆ ಹೇಳಾರಿ ಅತ್ತ ಎಂದಾರೆ ಮುನಿಸ್ಯಾಳು ಸಿಡುಕ್ಯಾಳು (ಕಾಗೆ. ೬೪)

[ಮುನ್ನಿ + — ಸ್ಯು]

ಮುನಿವಧು (ನಾ). ಋಷಿಯ ಹೆಂಡತಿ; ಮಹರ್ಷಿಪತ್ನಿ :- ಮುನಿವಧು ಗೌತ್ಮವಲ್ಲಭನಿತ್ತ ಪುಲೋಮಜೆ (ಕರ್ಣಾ. ೩-೦೦೯); ಇನ್ನು ಪಾಂಡವ ರಾಜ್ಯಸಿರಿಯೆಮಗಿನ್ನು ಪೇಸಾದಕಟ ದೈವದ ಗಸ್ಪಗತಕವೆಯೆನಿತ ಹಿಗ್ಗಿತು ಮುನಿವಧೂನಿಕರ (ಕಾಬಾಕ. ೦೯-೫೫). [ಸಂ. ಮುನಿವಧೂ]

ಮುನಿವಾಳು (ನಾ). ಋಷಿಯ (ಶಾಂತವಾದ) ಬದುಕು;-ಜೀವನ : ಮುನಿವಾಳು ಸಾಕಾಯ್ತು ಮುನಿವಾಳು ಬೇಕಾಯ್ತು (ಕಕ. ೩೨-೦೦೪).

[ಮುನ್ನಿ + ಬಾಳ್ವು (< ಬಾಳ್)]

ಮುನಿವೃಕ್ಷ (ನಾ) ಒಂದು ಬಗೆಯ ಮರ : ಅತ್ತಿಯೊಲಪು ಅರಳಿ ಪುತ್ತಿ ಮಹಿಜಾಕ್ಷಿ ಮುತ್ತುಕವು ಮುನಿವೃಕ್ಷ (ಭೀಗೀ. ೦೨೯-೬). [ಸಂ.]

ಮುನಿಷಿ 'ಮುನಸಿ' ನೋ.

ಮುನಿಸತ್ತ್ವ (ನಾ). ೧. ಋಷಿಯ ಜೈತ್ಸ್ಯ. ೨. [ಕಾಮಶಾ] ಸ್ತ್ರೀಯರಲ್ಲಿರುವ ಹನ್ನೆರಡುಬಗೆಯ ಮನೋಧರ್ಮಗಳಲ್ಲಿ ಒಂದು; ಶಾಂತಸ್ವಭಾವ : ವಿಷಯದ ವಿವೇಕದಿಂಪಿನ ಸೈರಣೆಯ ನುಡಿಯ ಜನನಿ ಜನಕರ್ಗಂಜಿ ಸಜೆವ ಹಿತವ ನೆನೆವ ನಿರ್ಮತ್ಸರದ ಘನಘಕ್ಷಿರತದ ಮಾನಿನಿಯೆ ಮುನಿಸತ್ತ್ವದವಳ್ (ಜಕವ. ೫-೫೬). [ಸಂ.]

ಮುನಿಸತ್ವ (ನಾ). ೧. = ಮುನಿಸತ್ತ್ವ ೧. ೨. ಮುನಿಸತ್ತ್ವ ೨ : ದೇವಸತ್ವ . . . ಮಾನವಸತ್ವ ಮುನಿಸತ್ವ ಖೇಚರಸತ್ವ ರಾಕ್ಷಸತ್ವ ತಿರ್ಯಗ್ಜಸತ್ವ ಬಿಚರಸತ್ವವೆಂಬ ಷ್ಟಾದಶಸತ್ವ ಸಹಿಜುರಿಂ (ಪಚೀಗೀ. ೦೬೩).

[ಸಂ.]

ಮುನಿಸಪ್ತಕ (ನಾ). ವಿಶ್ವಾಮಿತ್ರ. ಜಮದಗ್ನಿ. ಭರದ್ವಾಜ. ಗೌತಮ. ಅತ್ರಿ. ವಸಿಷ್ಠ ಮಂತ್ರ ಕಶ್ಯಪ ಎಂಬಿ ಏಳುಜನ ಋಷಿಗಳು; ಸಪ್ತರ್ಷಿಗಳು : ಚಿತ್ರಾಪಾಸನನ ಸಭೆದುಲ್ಲಿ ಪೂಜ್ಯಂ ಮುನಿಸಪ್ತಕ ಪುಂಜಕೊಳತ್ಪಮುನಿವರನಧಿಕಂ (ಕೌಭಾ XX. ೫೫೬-೦೨; ೧೭೫೨). [ಸಂ.]

ಮುನಿಸಾನು (ಕ್ರಿ). ಕೋಪವನ್ನು ತಾಳು; ಕೆರಳು; ಸಿಟ್ಟಾಗು : ನೀನಿತಿತ ಮುನಿಸಾನು [ಬಾಣಂ ಪಾಡು] ದರೆ ಸಾಕಿನ್ನಾರು ಗತಿಯೆನಗೆ (ಪಗೆ. ೩-೯). [ಮುನಿಸ್ಸು + ಆಸು (< ಆನ್)]

ಮುನಿಸಿಪಾಲಿಟಿ, ಮುನಿಸಿಪಾಲ್ಟಿ, ಮುನ್ಸಿಪಾಲಿಟಿ (ನಾ). ಸ್ಥಳೀಯ ಆಡಳಿತಾಧಿಕಾರವನ್ನು ಹೊಂದಿರುವ ನಗರದ ಸಂಸ್ಥೆ; ಪುರಸಭೆ; ನಗರಸಭೆ : ಕೆಲವು ಮುಖ್ಯವಾದ ಜನಸಿಗಳ ಮೇಲೆ ಮೊಕದ್ದಮೆ ಆಕ್ಟಾಯಿ ಎಂಬ ತೆರಿಗೆಯೂ ಸರ್ಕಾರದ ಮೊಹರ್ಫ ತೆರಿಗೆಯೂ ಈ ಮುನಿಸಿಪಾಲಿಟಿಗಳಿಗೆ ಸೇರಿದುವು (ಜಾಪಾಂ. ೫೬, ೦೦೨); ಭಾರತೀಯರು . . . ಮುನಿಸಿಪಾಲಿಟಿಗಳು, ಜಿಲ್ಲಾಬೋರ್ಡುಗಳು, ಪ್ರತಿನಿಧಿಸಭೆಗಳು, ಇವು ಹೇಗೆ ಕೆಲಸ ಮಾಡಬೇಕೆಂಬುದನ್ನು ತಿಳಿದರು (ಪಾರ. ೧೩೬) **ಮುನಿಸಿಪಾಲ್ಟಿ** : "ಮುನಿಸಿಪಾಲ್ಟಿ" ನೀರಿನ ಪಾತೆ ಕೆಲಸಗಾರರ ಸಂಪರ್ಕದಲ್ಲಿ (ಸುಮ್ಮು. ೫೫). **ಮುನ್ಸಿಪಾಲಿಟಿ** : ಮುನ್ಸಿಪಾಲಿಟಿಯು ಮೇಲೆ ದಾವೆ ಹೂಡಿ, ಈ ಕಾಮಿದೆ ತಗೆದುಹಾಕುವ ಕಾಲ ಎಂದು ಬಂದೀತು ? (ಅಬಾಕ. ೬). [← ಇಂ. Municipality]

ಮುನಿಸಿಪಾಲ್ಟಿ 'ಮುನಿಸಿಪಾಲಿಟಿ' ನೋ.

ಮುನಿಸು$_1$ 'ಮುನಿಯಿಸು' ನೋ.

ಮುನಿಸು$_2$ (ನಾ). ೧. ಸಿಟ್ಟು; ಕೋಪ; ಕ್ರೋಧ : "ಕೋಪಃ-ಕ್ರೋಧಃ, ಆಮರ್ಷಃ, ರೋಷಃ, ಪ್ರತಿಘಃ—ಈ ೫ ಮುನಿಸು" (ಕಲಾಮು. ೫೯-೨೦೭) ; ವನರುಹದಳನಯನೇ ನಿಸ್ಸಸೆ ನೆನೆನೆನೆದಿರಳೊ ಳೊಜಗಿನ ಕಪೆಗಣ್ಗಳ್ಕುನಿಸಳನಯಿಪಪೆಳ್ಕೆಮ್ಮಸೆ ರಕ್ತಾಭೋಜರುಚಿಯ ನಬ್ಬುಗೊಳ್ಳುಂ (ಕವಿಕ. ೦-೬೩); ನಿಮಗಂ ತವಗಂ ಮುನಿಸುಂಟಿ ಕಾಯ್ದು ಬಿನ್ನೀರ್ ಮನೆ ಸುಡದೆಂಬೊಂದು ನುಡಿಯು ಫೋರ್ ಕಾರುರಾಜಾ (ಹಂಪಭಾ. ೯-೩೯) : ಕಂದ ಮನ ಮುನಿಸ್ಲುಲೇ ನಾವೆಂದ ನುಡಿಗೆ (ಕುಪ್ಯಾಂ. ೩-೩೭) : ಕೊಟ್ಟು ಒರುವ ನಿಮ್ಮುರಕ್ಕಿಂತ ಕೊಡದೇ ಬರುವ ಮುನಿಸು ಲೇಸು (ಗಾದ). ೨. ದ್ವೇಷ : ವೈರ ; ದ್ವೇಷ : ನೀನಂತಿರಾನನ್ನಗಂ ಮುನಿಸಂ ತೀರ್ಚಿ ನರೇಂದ್ರದೈರಿತರುವಂ ನಿರ್ಮೂಲನಂ ಮಾಡುವೆಂ (ಗದಾಯು. ೬-೨೫).

ಮುನಿಸುಮಾಡು = ಕೋಪ ಬರುವಂತೆ ಮಾಡು : ಕೆರಳಿಸು ; ಸಿಟ್ಟುಬರಿಸು : ಆ ಮಂಗೆ ಮುನಿಸುಮಾಡಲೆಂದಿಂದ್ರನುವಾಪು ಮೊಳಟ್ಟದ ವಜ್ರಕೀಟಂಗಳ್ ಕರ್ಣಸೆರಡುಂ ತೊಡೆಯುಮಂ . . . ಉರ್ಚಿ ಪೋಗೆದುಮಂ (ಹಂಪಭಾ. ೦-೦೦೪ ಪ). [ಮುನ್ನಿ + —ಸು$_3$]

ಮುನಿಸುಗುಟ್ಟು (ಕ್ರಿ). ಸಿಟ್ಟಾಗು : ಕೋಪಗೊಳ್ಳು; ಕೆರಳು ; ರೇಗು: ಭೂಪೇಮಿ, ನೀನು ಈ ಚರಾಚರಜಗತ್ಪಿತ ಶಂಕರವಾಗಿದ್ದೂ ಅಜ್ಞಾನಿಯಂತೆ ಅಳಿಯನ ಮೇಲೆ ಮುನಿಸುಗುಟ್ಟುತ್ತೀರೇ (ಅರಾಕ. ೦೩೪).

[ಮುನಿಸು$_2$ + ಕುಟ್ಟು$_{11}$]

ಮುನಿಸುಗೊಳ್ಳು (ಕ್ರಿ). = ಮುನಿಸುಗುಟ್ಟು : ಮುನಿಸುಗೊಂಡಗ ಲರುಷ ಮಿಟಿಮಿರ್ದಾಕ್ಷ ವಿರಹಾನಲನ ಜೆರ್ಚಸುನಿಜನಟ್ಟಿದ ಚಿರರಹೊಲು ತಂಬೆಲರು ಪರಿತಂದು (ಕಾಗಪ. ೬೦-೦೬).

[ಮುನಿಸು$_2$ + ಕೊಳ್ಳು$_1$ (< ಕೊಳ್$_1$)]

ಮುನಿಸುವ್ರತ (ನಾ). [ಜೈನ] ವರ್ತಮಾನಕಾಲದ ಇಪ್ಪತ್ತುನಾಲ್ಕು ಜನ ತೀರ್ಥಂಕರರಲ್ಲಿ ಇಪ್ಪತ್ತನೆಯ ತೀರ್ಥಂಕರನ ಹೆಸರು : ವೈಷಳ ಅಜಿತ . . . ಮುನಿಸುವ್ರತ ನಮಿ ನೇಮಿ ಪಾರ್ಶ್ವ ವರ್ಧಮಾನರೆಂಬಿಪ್ಪತ್ತು ನಾಲ್ವರ್ ತೀರ್ಥಂಕರರ್ (ಜಾಪುಂ. ೧೦೨). [ಸಂ.]

ಮುನೀಂದ್ರ (ನಾ). ೧. ಋಷಿಗಳಲ್ಲಿ ಮುಖ್ಯನಾದವನು : ಶ್ರೀದೇವೇಂದ್ರ ಮುನೀಂದ್ರಪಂಡಿತನಾಗವ್ಯಾತಂ . . . ದಯೆಗೆಯ್ದುನಕ್ಕೆಮಗೆ ಮುಕ್ತಿ ಶ್ರೀಸುಖಾವಾಪ್ತಿಯಂ (ಅಂಪ. ೦-೦) : ಪಸರಿಸಿದ ಮುನೀಂದ್ರನ ವೈಭವ ಕಿಪಲಯಸಮಾಪಾಪಾತ್ರದೊಳ್ ಶುದ್ಧಮನಂ ಮಸಂಧೇಶಾಕ್ಕಿದಂ ಪಾಯಸವಂ (ಕ್ಷತ್ರ ೦೯-೦೨). ೨. ಬುದ್ಧ. ೩. ಜಿನ. ೪. ಶಿವ. [ಸಂ.]

ಮುನೀಬ, ಮುನಿಮ (ನಾ). ೧. ಮೇಲ್ವಿಚಾರಣೆ ಮಾಡುವವನು : ನಿರ್ವಾಹಕ : ಪ್ರಮಸ್ಥಾಪಕ : ಮುಕ್ಸದ್ದಿಗಳೂ ಮುನೀಬರೂ ಗಣತಿ ಪಾತಿ ಬೇಗಾ ಪಾಕಿಸಿದರು (ಪುಸಾಗ. ೦೩೦); ಅರಮನೆಯ ಮುಕ್ಸದ್ದಿಯೂ ಮುನೀಬರೂ . . ರಾಜಪಿಡಮನಪ್ಪನ್ನು ಎದುರುಗೊಂಡರು (ಶ್ರೀಆಚಾ. ೦೨೯). **ಮುನಿಮ** : ೨. ಲೆಕ್ಕಪತ್ರಗಳನ್ನು ನೋಡಿಕೊಳ್ಳುವವನು; ಗುಮಾಸ್ತ; ಕಾರಕೂನ : ದುಕಾನನ ಮುನಿಮನ ವಿಚಿಯಂದೊಳಗಿನವರಿಬ್ಬರೆ ಅಪ್ಪಣಾ ಆದರು ಮುನಿಮನಿಗೆ ತಮ್ಮ ಪಾತ್ರಿ ಕೊಟ್ಟರೆ . . . ರಕಮು ಕೊಡೋಣದರಲ್ಲಿ ಬಂತು (ಪುಂಐಪ್ರಾ. ೫೦).

[← ಅರ. ಹಿಂ. ಮುನೀಬ್, ಮುನೀಮ ; ಮರಾ. ಮುನೀಮ್]

ಮುನುಷಿ 'ಮುನಸಿ' ನೋ.

ಮುನೂಱು 'ಮೂನೂಱು' ನೋ.

ಮುನ್ನ$_1$ 'ಮುನ್ನೆ' ನೋ.

ಮುನ್ನ$_2$ 'ಮುನ್ನೆ' ನೋ.

ಮುನ್ನಂ 'ಮುನ್ನೆ' ನೋ.

ಮುನ್ನಡಸು 'ಮುನ್ನಡೆಮಿಸು' ನೋ.

ಮುನ್ನಡಿ (ನಾ). ೧. ಪಾದದ ಮುಂಭಾಗ : ಕಾಲಿನ ಮುಂದುಗಡೆ.—ಎಮರು : ಗಜೆಜೆಂಕಿ ಭೋರೆವೆ ಪರ್ವಿ ಬೀಸಿ ಕಡುಪಿಂದೆಯ್ದಂದು

ಮಾಱುಮಾತ ಸಾಮಜಸಂಘಾತಮನೊಂದುಗೊಳ್ಳೆರಡುಗೊಳ್ಳೆಂದುರ್ವಿ
ಪೊಯ್ದೊಂದು ಪೊಯ್ಗೆ ಜವಂಗುಂದಿ ಸಿಡಿಲ್ದು ಮುನ್ನಡಿಗುರುಳ್ತರ್ಪನ್ನೆಗಂ
ಬೀಟೆ . . . ಕೊಂದಂ ಮರುನ್ನಂದನಂ (ಶಾಕಟಾ. ೦೨-೦೦೨); ಯೋಗಿ
ಪದತಳಮಿಳಿಯುಂ ನೆಱೆ ಮುಟ್ಟಿದ ಮುಂದುಗಲುವ ಸೊಗಂ ಪಡಿಪಾಸಿ
ಮೊಱ್ಗಿದಂ ಮುನ್ನಡಿಯೊಳ್ (ಸಂಪ್ರಕೃ. ೭-೨೨); ದಿವಿಜಾರಾಧ್ಯನ ನಿಂದ
ಮುನ್ನಡಿಗೆ ಮಾನವ್ಯಂತರರ್ ಮಾಬ್ಬರಷ್ಟವಿಧಾರ್ಘ್ಯಸಂ (ಶಾಂಪು. ೯-೧೬).
೨. ಕಾಲಿನ ಮುಂತುದಿ ; ಮುಂಗಾಲು : (೬). [ಮುನ್[1] + ಅಡಿ[1]]

ಮುನ್ನಡಿಯಿಕ್ಕು (ಕ್ರಿ). (ಅಲಂ) ಆಸಕ್ತಿತೋರಿಸು ; ಆಸೆಪಡು ;
ಬಯಸು : ನೀರ ಕಡದು ಬೆಣ್ಣೆದೋವಂತೆ ಗೊಡ್ಡಿಗವಾರ ಮುನ್ನಡಿಯಿಕ್ಕು
ವಂತೆ (ಪೂಸ್ತ. ೮೨-೦೦೨). [ಮುನ್ನಡಿ + ಇಕ್ಕು]

ಮುನ್ನಡೆ[1] (ಕ್ರಿ). ೧. ಮುಂದಕ್ಕೆ ಸಾಗು.-ಚಲಿಸು ; ಮುಂಬರಿ:
ಶಿಕ್ಷಣ ಫಲಮಾರ್ಗದಲ್ಲಿ ಮುನ್ನಡೆಯುವ ಸೂಚನೆ ವ್ಯಕ್ತಪಡುತ್ತದೆ
(ಭಾಭಾ. VIII, ಪುಟ್ಟು೨); ಕಾಡುವೆಳೆಮುಕ್ಕಳಂ ಪೊತ್ತು ಮುನ್ನಡೆದು
(ಗಾಬಾಠ. ೦೩೦-೪೩೦). ೨. ಮುನ್ನುಗ್ಗು ; ಮಿಗಿನಡೆ : ಮಲೆಯ
ಸರಗಂ ಸೆರೆಗೆ ಕೊಂಡೊಯ್ವ ಪಾಡೊಡಯ ಗೆಲುವಡೆದು ಮುನ್ನಡೆಯೆ
ಪಡೆಯ ಪಾಂಗಿನಲಿ (ಗಾಬಾಠ. ೦೦೦-೩೦೨). [ಮುನ್[2] + ನಡೆ[1]]

ಮುನ್ನಡೆ[2] (ನಾ). (ಅಲಂ) ಏಳಿಗೆ ; ಪ್ರಗತಿ ; ಉತ್ಕರ್ಷ : "ಮುನ್ನಡೆ,
ಅಭಿವೃದ್ಧಿ " (Advance. ಕ್ರಿಪ. ೪). [<ಮುನ್ನಡೆ[1]]

ಮುನ್ನಡೆಯಿಸು, ಮುನ್ನಡಸು (ಕ್ರಿ). ಮುಂದಕ್ಕೆ ಒಯ್ಯು ; ಮುಂದು
ವರಿಸಿಕೊಂಡು ಸಾಗು : ರಾಷ್ಟ್ರವನ್ನು ಯುಕ್ತಮಾರ್ಗದಲ್ಲಿ ಮುನ್ನಡೆ
ಯಿಸುವುದು ಇವರಿಂದಾದೀತ ? (ಜಾಜ. ೦೯). ಮುನ್ನಡಸು : ಆ ಶಾಲೆ
ಯನ್ನು ಯೋಗ್ಯರೀತಿಯಲ್ಲಿ ಮುನ್ನಡಸಿದ ಕೀರ್ತಿ ಅಲ್ಲಿನ ಮುಖ್ಯೋಪಾ
ಧ್ಯಾಯರಿಗೇ ಸಲ್ಲಬೇಕು (ಕೂಪ). [ಮುನ್[2] + ನಡೆಯಿಸು]

ಮುನ್ನಡೆವಿಡಿ (ಕ್ರಿ). (ಅಲಂ) ಮಿಗಿರು; ಅತಿಶಯಿಸು : ಉನ್ನತಲಲಿಸಿ ಬಟ್ಟೀ ಮುನ್ನಿಸದಸ್ಯಮಿಯ ಚಂದ್ರನಂ ನಗೆಗಣ್ಗಳ್ ಮುನ್ನಡೆವಿಡಿದುವ
ಕಮಳಮನಿನ್ನೇವಣ್ಣಿಪುದೊ ರಾಮನಘರಾಮತೆಯಂ (ಪಂರಾಮಾ. ೬-೦೫೨).
[ಮುನ್ನಡೆ + ಪಿಡಿ[1]]

ಮುನ್ನರಿ 'ಮುನ್ನಱಿ' ನೋ.

ಮುನ್ನಱಿ, ಮುನ್ನರಿ (ಕ್ರಿ). (ಸೂಕ್ಷ್ಮಜ್ಞಾನದಿಂದ) ಮುಂದಾಗುವು
ದನ್ನು ಮೊದಲೇ ತಿಳಿ. – ಮುಂಜಿತವಾಗಿ ಊಹಿಸು : ಬಿನ್ನವಿಸ
ಲಿಂದಿರ್ದ ಹದನಂ ಮುನ್ನಱಿದು ಪರಮೇಶ್ವರಂ ಹಿಮಗುನ್ನಯನದಿಂ
ನೋಡುವಸರದೊಳ್ (ಜಪಕ್ಷ. ೦-೨೫). ಮುನ್ನರಿ : ಸೂರ್ತಿಯಿಂದ,
ಸೂಕ್ಷ್ಮಜ್ಞಾನದಿಂದ, ಮಂತ್ರತಂತ್ರದಿಂದ. ಅಥವಾ ಊಹೆಯಿಂದ ತಿಳಿ.
ಊಹಿಸು; ಮುನ್ನರಿ: ಭವಿಷ್ಯ ತಿಳಿ (Devine. ೨೦೪೮) ; ಹಕ್ಕಿ ಮುನ್ನರಿ
ಯುವುದೆ ತನ್ನ ಪಯಣದ ತೆರವ ? (ಪುಂಳಿ. ೬೩೦). [ಮುನ್[1] + ಅಱಿ]

ಮುನ್ನಱಿಕೆ (ನಾ). ಮುಂದೆ ಆಗುವೆದರ ಸೂಚನೆ.-ತಿಳಿವಳಿಕೆ :
ಮೊದಲೆ ಮುನ್ನಱಿಕೆಯನ್ ಪೇಬ್ದನಿತು ಪೇಬ್ದಿನೇ ಅಕ್ಕ ! (ಅಂಪಾಸಾ.
೫-೨೭೬). [ಮುನ್[1] + ಅಱಿಕೆ]

ಮುನ್ನಿ (ನಾ). ನೈತ್ಯಗಾರನು ನಡುಪಟ್ಟಿಗೆ ಸೇರಿದಂತೆ ನಡುವಿಗೆ
ಕಟ್ಟಿಕೊಳ್ಳುವ. ನೆರಿಗೆಗಳುಳ್ಳ ಒಂದು ಬಗೆಯ ವಸ್ತ್ರಾಲಂಕಾರದ
ವಸ್ತ್ರ : ನಡುಪಟ್ಟಿಯನ್ನೂ ಮುನ್ನಿಯನ್ನೂ ಮಾಲಿಂಗೆ ವೀರಭದ್ರನ
ನಡುವಿಗೆ ಹೋದಿಸಿ ಬಿಗಿದ . . . .ನಡುವಿಗೆ ಸುಂದರವಾದ ನಾಲ್ಕಾರು
ಭಂಗುಗಳ ಅಗಲದ ಪಟ್ಟಿ . ಅದ್ದೀದ ಕೆಳಕ್ಕೆ ಇಳಿದು ನಿಂತ ಅಷ್ಟೆ ಅಗಲದ
ಪರ್‌ಮೆಟ್‌ನಿಂದ ಮಾಡಿದ ಜರಿ ಹೊಂದಿಸಲ್ಪಟ್ಟ ಮುನ್ನಿ (ಜಾಕಾ. ೯೦).
[← ತೆಲು. ಮುನ್ನಿ = ನೆರಿಗೆ]

ಮುನ್ನಿರವು (ನಾ). ಮೊದಲು ಇದ್ದ ಸ್ಥಿತಿ.—ಅವಸ್ಥೆ : ಆನಾವಳ್ಕ್ಕ
ಮುನ್ನಿರವಾವುದು ಮತ್ತೀ ನಿಸ್ಸ ದಯವಾವುದು (ಪಪಾ. ೦-೬೯)
[ಮುನ್[1] + ಇರವು, (< ಇರ್ದಂ)]

ಮುನ್ನಿರುಳ್ (ನಾ). ರಾತ್ರಿಯ ಮೊದಲ ಭಾಗ ; ಪಿಮಸ್ಸಂಜೆ :
"ಮುನ್ನಿರುಳಂ ಪ್ರದೋಷಮೆಂಬುದು" (ಕಪಾಯು. ೦೬-೦೦೯).
[ಮುನ್[1] + ಇರುಳ್]

ಮುನ್ನಿಱಿ (ಕ್ರಿ). ಮುಂದೆ ನುಗ್ಗಿ ಇರಿ ; ಮುನ್ನುಗ್ಗಿ ನಾಶಮಾಡು :
ರಿವುಸೈನ್ಯಮೆತ್ತ ಧುರದೊಳ್ ನೈಪರಿಂ ಮುನ್ನಿಱಿದು ಪಲವು ಕಾಳಗದೊಳ್
ಭೂವಿವಭೂಡಾವುನಿಸಿಂಗಂ . . . ಪೆಸರಂ ಪಡೆದಂ (ಎಕ. VIII. ಸೊರಬ
೦೫೪-೦೬ ; 1333 ಕ್ರಿ) ; ಮತ್ತಗಜವಂ ಕೊಂದದಱಿರುವನೆತ್ತಿ ಮುನ್ನಿಱಿ
ದವನ ಪರಿಜವನಿತ್ತು ಮೆಱೆದಿರನು ಕಟಬದೊಳು ಮಡಿವಾಳ ಮಾಚಯ್ಯ
(ಬಸಪು. ೫೦ ಸಂಸಚ). [ಮುನ್[2] + ಇಱಿ[1]]

ಮುನ್ನೀಡು (ಕ್ರಿ). ಮುಂದಕ್ಕೆ ಚಾಚು.—ನೀಡು : (ವಾಹುಗಳನ್ನು
ಮುನ್ನೀಡಿ, ಪ್ರೇಮಾಲಿಂಗನಕ್ಕೆ ಮುಂಬಾಯನು) (ಪಶ್ರ. ೦೬-೨೯).
[ಮುನ್[2] + ನೀಡು[1]]

ಮುನ್ನೀರ್, ಮುನ್ನೀರು (ನಾ). ಭೂಮಿಗಿಂತ ಮೊದಲು ಸೃಷ್ಟಿ
ಯಾದ ಜಲ ; ಕಡಲು ; ಸಮುದ್ರ : "ಮುನ್ನೀರ್. ನೀರೊಟ್ಟಿಲ್.
ಕೊಜಿಗಳಾಣ್ಮಂ, (ಕಡಲ್)— ಈ ೪ ಸಮುದ್ರಂ" (ಶಾಬಾ. ೫೭-೦೪೦) :
ಸಾರಗುಣಂ ತದ್ಯಾಜಕುಮಾರನೊಳೈನಿತು ಪೆಜರ್ಕೊಳಿಲ್ಲಂತೆವೆ ಮುನ್ನೀ
ರೊಳ್ ನೆಲಸುಗುಮಲ್ಲದ ನೀರೊಳ್ ನೆಲಸುಗುಮೆ ಸಾರರಕ್ಷಾವಳಿಗಳ್
(ಶಾಚಕ್ಷ. ೨-೬) ; ಮುನ್ನೀರ್ಬ್ಬಳಿಸಿರೆ ಧರಣಿಯೊಳ್[ನ್ನಂ] ಮಾಧುರ್ಯ್ಯ
ನುಕರಬಾತುರ್ಯ್ಯಗುಣಪ್ರೋನ್ನತರಿಲ್ಲೆನೆ ಸಾಸಮನ್ನಿದ ಚಿಲ್ಕಾಗೆ
ಸಾಮಿಯಣ್ಣಂ ಬರೆದೋಂ (ಪಾಕಾ. XI-೩. ೪೦-೫೩ ; ೦೦೨) ; ಎನ್ನಂತೆ
ರತ್ನವಿತತಿಗೆ ತಾನ್ನೆಲೆಯಾಯ್ತೆಂಬ ಸಮಗುಣಪ್ರಣಯದಿನಾ ಮುನ್ನೀರ್
ಬಂದಪ್ಪಿದುದೆನೆ ತನ್ನಗರಮನಮಲಪರಿಖೆ ಬಳಸಿದುದಿತ್ತಂ (ಪಂಪ್ರಕೃ.
೦-೦೦೫). ಮುನ್ನೀರು : "ಮುನ್ನೀರೆನಲ್ ಶರಧಿ" (ಶಾಜ. ೪೦) :
ಅವರ್ ಶೀಘ್ರದಿಂ ಮುನ್ನೀರ ತಡಿಗೆಯ್ದಲ್ (ಕಪ್ಪಣಾ. ೦೦-೦೬೦) ;
ತನ್ನನೇ ಜೀರಿ ಬಡಮಾಳ್ಪ ವಡವಾಗ್ನಿಯಂ ತನ್ನನೇ ಹೆಚ್ಚುಗೆಯ
ಮಾಳ್ಪಮೃತಕಿರಣನಂ ಮುನ್ನೀರು ತನ್ನ ಗಂಭೀರತನವನೇ ಮೆಜೆದು
ಗರ್ಭೀಕರಿಸಿತಿಲ್ಲವೇ (ಸಮ್ಯಾ. ೬-೩೦) ; ಅಲ್ಲದೋ ಮುನ್ನೀರು ಅದ
ರೊಳಗೆ ಚಾಚುವುದು ಭೂಮಿ ತಾ ಕೂರ್ಮದಂತೆ ! (ಜ್ಞಾಣಾಕ್ಷ. ೪೬-೦).
p ಕಿಟೆಲ್ ಅವರ ವಿಘಂಟು ಮತ್ತು ತಮಿಳುಕೋಶಗಳಲ್ಲಿ ಈ
ಶಬ್ದವನ್ನು 'ಮುನ್' (<ಮೂಜು)+ನೀರ್=ಮಳೆಯ ನೀರು,
ನದಿಯ ನೀರು ಮತ್ತು ಒರತೆಯ ನೀರು ಎಂದು ಅರ್ಥ ಮಾಡಿ
ದ್ದಾರೆ. [ಮುನ್[1]+ನೀರ್./ತಮಿ. ಮುನ್ನೀರ್; ತೆಲು. ಮುನ್ನೀರು]

ಮುನ್ನೀರಣುಗ (ನಾ). ಕಡಲಿನಲ್ಲಿ ಹುಟ್ಟಿದವನು ; "ಚಂದ್ರ"
(ಕ್ರಕೋ). [ಮುನ್ನೀರ್ + ಅಣುಗ (<ಅಣುಂಗ)]

ಮುನ್ನೀರಣುಗಿ (ನಾ). ಕಡಲಿನಲ್ಲಿ ಹುಟ್ಟಿದವಳು ; ಲಕ್ಷ್ಮಿ :
ಮುಗಿದು ಜಗಲ್ ಮುಸುಲ್ದಲ್ ಮುಂಗಳ್ತಲೆ . . . ಮುಗಿದುವು
ಮುನ್ನೀರಣುಗಿಯ ಸೆಜ್ಜವಸೆಗಳಾ ರಾತ್ರಿಯೊಳು (ಜಪಾಯಾ. ೦೬-೬೬).
[ಮುನ್ನೀರ್ + ಅಣುಗಿ (<ಅಣುಂಗಿ)]

ಮುನ್ನೀರು 'ಮುನ್ನೀರ್' ನೋ.

ಮುನ್ನೀರೆಱೆಯ 'ಮುನ್ನೀರೆಱೆಯ' ನೋ.

ಮುನ್ನೀರೆಱೆಯ, ಮುನ್ನೀರೆಱೆಯ (ನಾ). ಕಡಲಿನ ಒಡೆಯ :
ಸಮುದ್ರಾಧಿಪತಿ ; ವರುಣ : "ಮುನ್ನೀರೆಱೆಯಂ ಪ್ರಚೇತನೊಳ್
ಕಡಲ್[ಱೆಯಂ]" (ಶಾಜಾಸಾ. ೦). ಮುನ್ನೀರೆಱೆಯ : "ಮುನ್ನೀರೆಱೆಯನೆಂಬ
ವರುಣ" (ಶಾಚ. ೯೦). [ಮುನ್ನೀರ್ + ಎಱೆಯ]

ಮುನ್ನೀರ್ಗಂದ (ನಾ)- = ಮುನ್ನೀರಣುಗ : ರನ್ನವಸಿರ್ಪಲದೊಗ ಪೇಳ್ಗಾಲಗೆಯನ್ನಿಲ್ಲದೆ ಪಡೆವ ನೆರಲ್ಸುರಿವುಮ್ಮುನ್ನೀರ್ಗಂದಂ ಬಿಸುಗದಿರ ಸೊಡರ್ಪ್ಪಿದವನೆಂಬೆಂಟು ನಿನ್ನಯ ಪರಿಜು (ಅರ್ಕಕೀ. ೦-೩೨).

[ಮುನ್ನೀರ್ + ಕಂಡ್]

ಮುನ್ನೀರ್ಗಟ್ಟೆ (ನಾ). ಕಡಲಿನ ಎಲ್ಲೆ ; ಸಮುದ್ರದಿಂದ ಉಂಟಾದ ನೀಪೆ.—ಗಡಿ : ಮುನ್ನೀರ್ಗಟ್ಟೆಯ ನಡುವಣ ಇಳೆಯೊಜ್ಯರು ಬೇಗದಿಂದೆ ತಳರ್ದರೊಲಗಕೆ (ಶಾಂಶಾಂ. ೦೯-೩೦). [ಮುನ್ನೀರ್ + ಕಟ್ಟೆ]

ಮುನ್ನೀರ್ಗಿಚ್ಚು (ನಾ). ಸಮುದ್ರದ ಒಳಗಿರುವ ಬೆಂಕಿ ; ಕಡಲ್ಗಿಚ್ಚು ; ಬಡಬಾಗ್ನಿ : "ಕಡಲುರಿ ಮುನ್ನೀರ್ಗಿಚ್ಚಿನೆ ಪಡಬಾನಳಂ" (ಕಬು. ೦೦೩). [ಮುನ್ನೀರ್ + ಕಿಚ್ಚು]

ಮುನ್ನೀರ್ಮಗ (ನಾ). =ಮುನ್ನೀರಣುಗ : "ಜೊನ್ನೊಡಲಂ ವೆಗಲ್ವಗೆಳುಂ ಮುನ್ನೀರ್ಮಗಂ . . . ಎನ್ನಲ್ಕಿರಲೆಜಿಪುನಪ್ಪನು" (ಕಬು. ೨೦೦).

[ಮುನ್ನೀರ್ + ಮಗ]

ಮುನ್ನೀರ್ವಕ್ಕೆಗ 'ಮುನ್ನೀರ್ವಕ್ಕೆಗ' ನೋ.

ಮುನ್ನೀರ್ವಕ್ಕೆಗ. ಮುನ್ನೀರ್ವಕ್ಕೆಗ (ನಾ). ಕಡಲ್ಸೇ ಹಾಸುಗೆಯನ್ನಾಗಿ ಉಳ್ಳವನು ; ವಿಷ್ಣು : "ಅರಲ್ದೊಚಿಯುಂ . . . ಮುನ್ನೀರ್ವಕ್ಕೆಗಂ. ಕಾರೊಡಲಂ. ಕಾವನಯ್ಯಂ—ಈ ೧೨ ವಿಷ್ಣುಗೆ ಪೆಸರ್" (ಶಕಾ. ೪೭-೯). ಮುನ್ನೀರ್ವಕ್ಕೆಗ : "ರಕ್ಕಸಗೆಯಂ ಮುನ್ನೀರ್ವಕ್ಕೆಗಂ . . . ಹರಿಪುಕ್ಕಂ" (ತಪ್ರ. ೬).

[ಮುನ್ನೀರ್ + ಪಟ್ಕೆ + — ಗ್]

ಮುನ್ನೀರ್ವೆಂಕೆ (ನಾ). = ಮುನ್ನೀರ್ಗಿಚ್ಚು : "ಮುನ್ನೀರ್ವೆಂಕೆಯೆಂದು. ಕಡರ್ಗಿಚ್ಚೆಂದು ಬಡಬಾನಲಂ" (ಶಕಾ. ೩೩-೦೫೩). [ಮುನ್ನೀರ್ + ಬೆಂಕಿ]

ಮುನ್ನು (ನಾ). ಒಂದು ಬಗೆಯ ಸಸ್ಯ : ಸರುವಲು, ನಾರಲ್ಕೆ, ನರವೆ, ಮುನ್ನು, ಮಾಡಿಕೆ (ಕ್ಷಾಚಿ. ೭೯-೦೩೦). [?]

ಮುನ್ನುಗ್ಗು (ಕ್ರಿ). ರಭಸದಿಂದ ಮುಂದುವರಿ.—ಮುಂದಕ್ಕೆ ಸಾಗು : ಖಿನ್ನತೆಯ ಕ್ಷುಬ್ಧತೆಯ ತೋರಗೊಡದಲೆ . . . ಮುಂಗಾಲುಪ್ಪಟಿಗೆಯಲಿ ಮುನ್ನುಗ್ಗುತಿರಬೇಕು (ಅಕಃ. ೪೫೬-೦೩) ; ಎರಡನೆಯ ರಾಜೇಂದ್ರನು ಮತ್ತೆ ಮುನ್ನುಗ್ಗಿ ಚಾಳುಕ್ಯರ ಸೈನ್ಯವನ್ನು ಚೆಲ್ಲಾಪಿಲ್ಲಿಮಾಡಿದನು (ಕೀಸಂ೨. ೫೬).

[ಮುನ್ ೨ + ನುಗ್ಗು ೧ (<ನುಗ್ಗ್ ೨)]

ಮುನ್ನುಡಿ (ನಾ.) ೧. ಯಾವುದಾದರೊಂದು ಗ್ರಂಥದ ಆದಿಯಲ್ಲಿ ಪ್ರಕೃತಗ್ರಂಥದ ವಸ್ತು, ಉದ್ದೇಶ, ವ್ಯಾಪ್ತಿ, ನಿರೂಪಣಾಮಾರ್ಗ, ಗ್ರಂಥಕರ್ತ ಮುಂತಾದ ವಿಚಾರಗಳನ್ನು ಕುರಿತು ಬರೆಯುವ ಪರಿಚಯಾತ್ಮಕವಾದ ಬರವಣಿಗೆ : ಪೀಠಿಕೆ ; ಉಪೋದ್ಘಾತ ; ಮುನ್ನುಡಿಯ ಪದ್ಧತಿ ನಸಗೇನೋ ಪ್ರಿಯವಾದದ್ದಲ್ಲ (ಶಾಕಾಗ. ii. ೩೯೭ರ ಶಾಶಃ) ; ಒಬ್ಬ ದೊಡ್ಡವರು . . . ಒಲಿದು ಮುನ್ನುಡಿ ಬರೆದು ಕೊಟ್ಟಿರುವರು (ಅಂಬಿಚ. ೫ ೭೮೮೫ ಪಾಲ್ಕುರಿಕೆಶಾಗಳು). ೨. (ಆಲಂ) (ಯಾವುದಾದರೊಂದು ಕಾರ್ಯದ) ಆರಂಭ ; ಮೊದಲು; ನಾಂದಿ: ಸಾಮಾನ್ಯದಿ ಸುಪಿವುದೆ ಚಿರಶಾಂತಿಗೆ ಮುನ್ನುಡಿ (ಅಪಕೀ. ೪೯-೪) ; ಇನ್ನೆಗಂ ನೀನ್ ಕೇಳ್ದ ನುಡಿಗಳ್. ಮುಂದಾಗಲಿರ್ಪುದೆಕ್ರೋಂದುಮುನ್ನುಡಿ ಯುಮಲ್ಲಂ (ಅಥಕ್ರ. ೪೯-೦೩೦). [ಮುನ್ ೧ + ನುಡಿ ೨]

ಮುನ್ನುಲಿ (ನಾ)- ಮೊದಲ ಮಾತು ; ಆರಂಭದ ನುಡಿ ; ವೇದದ ಈ ಗೀತೆಗಳು . . . ಮಾನವಜನಾಂಗ ತನ್ನ ಮಹತ್ತಿಗೆ ಕಣ್ಣು ತೆರೆಯುತ್ತಿದೆ ಎಂಬುದರ ಮುನ್ನುಲಿಯಾಗಿದೆ (ಭಾಶಾಗೀ. ೦೦೫). [ಮುನ್ ೧ + ಉಲಿ ೨]

ಮುನ್ನುಸಿರ್ (ಕ್ರಿ). ಮುಂದಾಗಿ ಹೇಳು ; ಮುಂಚಿತೆಯೇ ನುಡಿ,—ತಿಳಿಸು : ಈ ಎಣಿಕೆಯನ್ ಮುನ್ನುಸಿರ್ದ್ದು, ಆರ್ಗಮಿನ್ ಅಱ್ಕದಾದೊಡ ಮಿರೆ (ಅಂಕಗೂ. ೪-೬೯). [ಮುನ್ ೨ + ಉಸಿರ್ ೧]

ಮುನ್ನುಳಿ (ಕ್ರಿ). ಅನಂತರದಲ್ಲಿ ಬಿಡು.—ತ್ಯಜಿಸು (?) : ಗಟಗೂಸಾತುವರಿಂದ್ರನಂ ಗಿರಿತನಂ ಸರ್ವಸ್ವಮಂ ಕೊಂಡು ಮುನ್ನುಳಿವರ್ (ಕಪುಡ. ೬೫ ಕ್ರಮಿಃ). [ಮುನ್ ೨ + ಉಳಿ ೧]

ಮುನ್ನುಳಿವು (ನಾ)- ಮುಂದಿನ ಜೀವನ.—ಬದುಕು ; ಭವಿಷ್ಯ : ಚದುರ್ ತನಗುಕ್ಕೊಡೆ ಮೆಲ್ಲು ಮೇಳಮಂ ಪೊಸಯಿಸಿ ತನ್ನ ಮುನ್ನುಳಿವು ಬೇಟದ ಲಲ್ಲೆಯ ಬಲ್ಮೆ ಪತ್ತಿ ಸುತ್ತಿಸೆ ಪುರುಡಿಯುಕ್ಕೈಸೆ ಬಿಯಮಾಱಿಸಿ ಪೊದವಂ ಬೊಜಂಗನೇ (ಅಪ್ರ. ೦೨-೦೬). [ಮುನ್ ೧ + ಉಳಿವು]

ಮುನ್ನೂಕು (ಕ್ರಿ)- ಒತ್ತಾಯದಿಂದ ಮುಂದಕ್ಕೆ ತಳ್ಳು ; ಮುಂದು ವರಿಯಿಸು : ನಮ್ಮ ಶತ್ರುಗಳಿಂದ ಮಾಡಲ್ಪಟ್ಟ ಈ ಯೋಚನೆ ನಮ್ಮನ್ನು ಕೂಡ ಪಾಪಮಾಡಲು ಮುನ್ನೂಕುತ್ತಿದೆ (ಖ್ರಸಿ. ೦೨೬).

[ಮುನ್ ೨ + ನೂಕು ೧ (<ನೂಂಕ್ ೧)]

ಮುನ್ನೂರು 'ಮೂನೂಱು' ನೋ.

ಮುನ್ನೂಱು 'ಮೂನೂಱು' ನೋ.

ಮುನ್ನೈಗಪ್ಪು (ಕ್ರಿ). ಮುಂದಕ್ಕೆ ಚಾಚು—ಎತ್ತು : ಕೌರ್ಯೋನ್ನತಿಯಿಂ ಮುಂಗಾರ್ಗಳಂ ಮುನ್ನೈಗಪ್ಪತುಗರ್ವದಿಂ ಪೊಮ್ಮು ಮೇಲ್ವಾಯ್ದು ಗರ್ವೋದ್ಧತಗರ್ಜಶ್ಲಿಂಘಮಂ . . . ಬಿತ್ತಿದಿಂ ಪೊಮ್ಮುವತ್ಯದ್ಭುತಸತ್ತ್ವಂ (ಕಪಶಂ. ೩-೩೩). [ಮುನ್ ೨ + ನೆಗಪ್ಪು ೧]

ಮುನ್ನೆಣಿಕೆ (ನಾ). ಮುಂಚಿತವಾಗಿ ಮಾಡುವ ಆಲೋಚನೆ ; ಮುಂದಿನ ಆಲೋಚನೆ ; ದೂರದೃಷ್ಟಿ : ತಾಯಿ ಹೇಳವ ವಿವೇಕ ಅವನ ಪೈಗಾಪಲಿಗಿದ್ದರೂ ವಿಧಿಯ ಹಲಕ್ಕೆ ಗೆಲುವಾಗಿ, ಆದಳ ಮುನ್ನೆಣಿಕೆ ನಿಜವಾಗುತ್ತದೆ (ಪಂಚಾಂಡ. ೩೯) ; ಸುಟಿಪು ಕರೆದಪರ್ ಬಾನವರ್, ಪ್ರಮಿತ್ಯೂಸ್ ಮುನ್ನೆಣಿಕೆಮುಳ್ಳವನ್ – ಎಂದೆ (ಶಿದ್ಧಕ್ರ. ೬-೦೨೬).

[ಮುನ್ ೧ + ಎಣಿಕೆ]

ಮುನ್ನೆಲೆ (ನಾ). ೧. ಮುಂಭಾಗ ; ಇದಿರು : ಎದುರುಭಾಗ ; ಬಿಚ್ಚಿನ ನೀರಚ್ಚಿನ ಪೋಲ್ಬುಬ್ಬುಳಿಗಳ್ ಬಿಟ್ಟಿತಾಡೊಡಂ ಮುನ್ನೆಲೆಯೊಳ್ ನೆಟ್ಟನೆ ಪಜಂಗದೆ ಕವಡದೆ ಕಟ್ಟುವಟಿಂ ದೊಪ್ಪದೇವನೆಸೆದಂ ವಿಟ್ಟೂ (ಪಪಂ. ೩-೦೬). ೨. ಮುಂಚೆ ಇದ್ದ ಜಾಗ ; ಮೊದಲಿನ ಸ್ಥಳ : ಒಲಿಬಿಂ ಪಾಲ್ಗಂದಲಂ ಕೀಲ್ಗಳುಪಿ ಕಜಿಮೊಸರ್ಗಂದಲಂ ಪಲ್ಲಟಂಗೊಳ್ದೊಲವಿಂ ಮಕ್ಕಳ್ಗೆ ಪೊಮ್ಮಾರಿಡಿದೊಳಲೆಗಳಂ ಕೌಚಿ ಪೋಣ್ ಸುಣ್ಣನೀರ್ ಮುನ್ನೆಲೆಯೊಳ್ ತೋರ್ಪಂತೆ ತುಂಬಿಟ್ಟು . . . ನಲಿಗುಮಾ ನಂದಬಾಲಂ (ಪಪಂ. ೩-೩೬). . ೩. (ಆಲಂ) ಪ್ರಮುಖವಾದ ಸ್ಥಾನದಲ್ಲಿರುವ ವ್ಯಕ್ತಿ : ಒಲಿವ ಮುನ್ನೆ ಜಗಕ್ಕೆಲ್ಲಕು ನಾ ಒಲಿವ ಮೇಲೆ ಜಗಕ್ಕೆಲ್ಲಕು ನೀ ಹಿನ್ನೆಲೆ ಪಾ ಮುನ್ನೆಲೆ ನೀ (ಗೋಃಕುಖ. ೨೫-೦೦). [ಮುನ್ ೧ + ನೆಲೆ ೧]

ಮುನ್ನೇಸಜ್. ಮುನ್ನೇಸಜು (ನಾ). ೧. ಬೆಳಗಿನ ಸೂರ್ಯ; ಉದಯ ಕಾಲದ ನೇಸರು ; ಬಾಲಸೂರ್ಯ : ರನ್ನದ ತೊಡವು ರಂಜಿಸುವ ಮಕುಟ ಪೊಸ ಪೊನ್ನಬಣ್ಣದ ಪೈವೆಳಗು ಚಿನ್ನೈಸವನು ಬಿಸುಮುಂದಿರೆ ಗೆಸ್ಮುಂದೆ ಮುನ್ನೇಸಜೆಂಬ ಪೂಳ್ಮೆಯೊಳು (ಶ್ರೀಚಾಂ. ೩-೨೨) ; ತನಿ ಜೊನ್ನವಾಲನ್ನೀಂಟುವ ಪದೆದೊಳದು ಬಿತ್ತೆ ಮುಸದೊಳಂ ಕಂದಿತೋಜುವ ಹುಸವಾಜಿಯೊ ಪೋಕಿಸರೆಪೆದುವಸ್ತಾದ್ರಿಯೊಳ್ ಬಿಂದ್ರಮಂಡಲಂ ಮುನ್ನೇಸಜಾಗಮದೊಳು (ತಿಪು. ೧೦-೮೦). ೨. ಪ್ರಾತಃಕ್ಷಾಲ; ಅರುಣೋದಯವೆಂಬ ವೇಳೆ ; ಉಷಃಕಾಲ : "ಮುಂಬೊಚ್ಚೆಂದು ಮುನ್ನೇಸಜಂ" (ಶಕಾ. ೩೭-೨೩೨); ಕರಿಣಿ ಕಣ್ಣಂಗೆಳನೆಚ್ಚ ಜಿಸಿಮವಾಗಳ್ ಬಾಯಂ ತೆಜಿಮವು ಪಿಂಗಳಿಗಳಲ್ಲಿ ಮುನ್ನೇಸಜಿಸೊಳ್ (ಕಾದಂಪೂ. ೧೫೩); ಬಾಡಿದ ದೇವಿಯ ತನುಲತೆ ಬಾಡಿಸಿದುದು ನೋಡಿ ಬಾಡುವೆನ್ನೆಯ ಪೊಗಮಂ ಬಾಡಿ ಬಸವಳುವು ಸುಯಂ ಬಾಡಿಸಿದುತ್ಕಳಿನಿಯಂತೆ ಮುನ್ನೇಸಜಿಸೊಳ್ (ಅರ್ಜಕೀ. ೦ ೦೦೪) ; ಚಿಕೋರೆಯ ಮುವಮುಡಿಗಿ

ಪೋಯ್ತು ಮುನ್ನೆಸಱುಸೊಲ್ (ಕುಸುರ. ೧೦-೭೪). **ಮುನ್ನೇಗ ಆ.** ವಿ. ನಿನ್ನಸೊಲಿಸದಱುಕದು ಜಯಭೂಪಂ ಪುನ್ನೆಯರೊಳ್ಸಿಸ್ಸಿಜ್ಜೆಯ ವರನಂ ವರಿಯಿಜ ಮುಂಡಪಕಿ ಮುನ್ನೇಸಜ ಪೊಕ್ಕಿಂಗೆಯ್ತರ್ಪಂ (ಅಮುಕಾ. ೪-೧೪).

ಮುನ್ನೇಸಱು 'ಮುನ್ನೇಸಱುತ್' ನೋ.

ಮುನ್ನೊಡಲ್ (ನಾ). ಹಿಂದಿನ ಹುಟ್ಟು : ಪೂರ್ವಜನ್ಮ : ಎನ್ನೊಂದು ಮುನ್ನೊಡಲ ಅಱಿಗಧ್ಯಯ ಜೊನಗೆಯಾನೀಗಳೀ ಪಾತಕಕ್ಕೆ ಕೈನೀಡು ಪೊಣಾದಮಾದಂ (ಕಾಕಾಕ್ಕ. ೭೭-೨೯). [ಮುನ್ನ್$_1$ + ಒಡಲ್]

ಮುನ್ನೋಟ್ಟು$_1$ (ನಾ). ಮೊದಲಿನ ಓಟು : ಮುಂಚಿತವಾದ ಓಟು : 'ಮುನ್ನೋಟವಿಕ್ಕು' ಪರಾ. [ಮುನ್ನ್$_1$ + ಓಟು]

ಮುನ್ನೋಟ್ಟು$_2$ (ನಾ). ೧. "ಮುಂದಿನ ನಿರೀಕ್ಷೆ" (ಕಾಂಯಿ. ೭೭-೦೫೩ ಅಟಿ) : ಒಸಗೆ ಸಮಯುಂಲಿ ನಿನ್ನು ಮುನ್ನೋಟ ಕಂಪೊರೆಯಿ ಬಗೆಯ್ಕುದು ತನಿಯುತಿರೆ ಬಳಗಕ್ಕಂ ಪಾರ್ತಂ (ಕಾಯಿಪು. ೭೨-೦೫೩). ೨. ಮುಂದೆ ಪ್ರದರ್ಶಿತವಾಗುವ ಅಥವಾ ಪ್ರಕಟಿಸಲಾಗುವ ದೃಶ್ಯ ಅಥವಾ ವಿಷಯಗಳ ಪೂರ್ವಚಿತ್ರ, –ಪೂರ್ವಪರಿಚಯ : ದೂರದರ್ಶನದಲ್ಲಿ ವಾರಕ್ಕೊಮ್ಮೆ ಆಯಾವಾರದ ಮುಖ್ಯಕಾರ್ಯಕ್ರಮಗಳ ಮುನ್ನೋಟವನ್ನು ತೋರಿಸುತ್ತಾರೆ (ಸಾಪ್ರ). [ಮುನ್ನ್$_1$ + ನೋಟ]

ಮುನ್ನೋಟವಿಕ್ಕು (ಕ್ರಿ). (ಯುದ್ಧವು ಪ್ರಾರಂಭವಾಗುವುದಕ್ಕೆ) ಮುಂಚೆಯೇ ಓಡಿಹೋಗದೆ,—ಪೊದಲೇ ಪಲಾಯನ ಮಾಡು : ಪಡುಳವಿಮುಪಪರಿಲ್ಲ ಸೇನೆಯು ಪೊಜಲಿಗರು ಮುನ್ನೋಟವಿಕ್ಕಿತು ಕದನದಲಿ (ಕುಪ್ಪಾಪ್ರ. ೯-೩೭). [ಮುನ್ನೋಟ್ಟು$_2$ + ಇಕ್ಕು]

ಮುನ್ನಿ 'ಮುನಸಿ' ನೋ.

ಮುನ್ನಿಪಾಲಿಟ 'ಮುನಿಪಾಲಿಟೆ' ನೋ.

ಮುನ್ಸೀಫ್ 'ಮುನಸೀಫ್' ನೋ.

ಮುನ್ಸೀಫ್‌ಕೋರ್ಟು, ಮುನಸುಫ್‌ಕೋರ್ಟು (ನಾ). ಕೆಳವರ್ಜೆಯ ನ್ಯಾಯಾಲಯ: ಉರಿಲೆಚ್ಚ ಪಮ್ಮ ಕೈಲೇ ಸಿ. ಮುನ್ಸೀಫ್‌ಕೋರ್ಟ್‌ನ್ನೂ ಪಿಡಿದುಕೊಂಡಿದ್ದೇಪೆ (ಆಚ್ಚ್. ೦೪). ಮುನಸುಫ್‌ಕೋರ್ಟು : ಜೊಂಬೈ ಮೈರೆ ಪ್ರಾಂತ್ಯಗಳಲ್ಲಿಯೂ ಗ್ರಾಮುಪಚಾಯಿತಿಗಳೆಂತಲೂ ಗ್ರಾಮ ಮುನಸುಫ್‌ಕೋರ್ಟುಗಳೆಂತಲೂ ಪೊಕರೂರ್ಮಾಡಲ್ಪಡುವದು (ಗ್ರಾಪಾಕೋ. ೨). [ಮುನ್ಸೀಫ್ (<ಮುನಸುಫ್) + ಕೋರ್ಟು]

ಮುನ್ನೂಚನೆ (ನಾ). ೧. ಮುಂದೆ ಆಗುವುದರ ಬಗೆಗೆ ಪೊದಲೇ ಕೊಡುವ ತಿಳಿವಳಿಕೆ: ಅದರು ಕೊಟ್ಟ ಮುನ್ನೂಚನೆಯಿಂದ ನಮಗೆ ಬಹಳ ಉಪಕಾರವಾಯಿತು (ಕೃಪಿ). ೨. ಮುಂದೆ ಆಗುವುದರ ಬಗೆಗೆ ತೋರಿ ಬರುವ ಸೂಚನೆ. — ಜಾಡು : ಮುಪ್ಪಿನ ಮುನ್ನೂಚನೆಯುನ್ನ (ಪೋ ಕಂಡಂತೆ ಆಗುತ್ತಿದೆ (ಸಜ್ಞ. ೫೦). ೩. ಭವಿಷ್ಯವನ್ನು ತಿಳಿಸುವಿಕೆ : ಭವಿಷ್ಯಮೇಳುವದು ; (ಮಾ. ಕೇಡಿನ) ಮುನ್ಸೂಚನೆ ; ಶಕುನ (Forebodings ೫೪೪). [ಮುನ್ನ್$_1$ + ಸೂಚನೆ]

ಮುನ್ನೂಚಿಸು (ಕ್ರಿ). ಪೊದಲೇ ತಿಳಿಯಪಡಿಸು : ಕೇವಲ ಸಾಧಾರಣ ಒಂದು ಶಿಗಡದು ಜೀವಚಕ್ರವನ್ನು . . . ಮೂರೂ ಮುನ್ನೂಚಿಸಲಾರದು (ಕಃಚಿ. ೯೯). [ಮುನ್ನ್$_1$ + ಸೂಚಿಸು$_1$]

ಮುಪ್ 'ಮೂ' ನೋ.

ಮುಪ್ಪಗ 'ಮುಪ್ಪಾಗ' ನೋ.

ಮುಪ್ಪಟ್ಟೆ (ನಾ). ೧. ಮೂರು ಸಮಾನಾಂತರ ರೇಖೆಗಳುಳ್ಳ ಘನಾಕೃತಿಯ ಮೂರುಮುಖಿ : ಕೈಗಾರಿಕಾಕೇಂದ್ರಗಳಲ್ಲಿ ಜಂತ್ರಾಗಾರಗಳ ಕಳಗಿನ ಅಂತಸ್ತುಗಳಿಗೆ ಪೆಟ್ಟು ಬೆಳಕು ಬರುವ ಹಾಗೆ ಮುಪ್ಪಟ್ಟೆಯು ಗಾಜುಗಳನ್ನು (prisms) ಬಳಸುತ್ತಾರೆ (ಜಂಜಾ. ೩೫೪) ೨. ಮೂರು ಮೂರು ಪಟ್ಟಿಗಳುಳ್ಳ, ಒಂದು ಬಗೆಯ ಸೀರೆ (?) : ಮುಪ್ಪಟ್ಟೆಯು ಬ್ಲಾವ ಬೀಮಪಲು ಕಪಯಲ್ಲಿ ಕಪೋತ ಕಿಂಪ್ಪ ಪುಟ್ಟಿಕ್ಕು (ಸಪಾಕ ೬೪-೪೩೩); ಕಂದರ್ಪ ಕುಸುಮಗಂಧಿಗಳಾಗಿ ಮಿಂದಿಂ ಜಪಜಪಿಂದನ ಮುಪ್ಪಟ್ಟಿಗಳು (ಅಮುಕಾ. ೪-೦೪). [ಮೂರ್ (<ಮೂಜಿ) + ಪಟ್ಟಿ]

ಮುಪ್ಪತ್ತು 'ಮುವತ್ತು' ನೋ.

ಮುಪ್ಪದರ (ನಾ). ಮೂರುಪದರ.—ಮೆಂಡಿಕೆ.—ಸ್ವರ : ಪ್ರಾಣಿಯು ಇಪ್ಪರೆರವ ಜೀವಿಮೆ . . . ಮುಪ್ಪದರದ ಜೀವಿಯಂ ? (ಪ್ರಾಹಿಂ. ೦೩). [ಮೂರ್ (<ಮೂಜಿ) + ಪದರ (<ಪದರ್ಯು)]

ಮುಪ್ಪರಿಗು (ನಾ). ಮೂರು ಬಗೆಯ ಆಕಾರ.—ರೂಪ.—ಲಕ್ಷಣ : ಪಿಡಿಮೊನಮನ್ ಪ್ರಿಯತಿಯಂಧಿಕಾರಿಸೂಪ್ಪಮುನ್ ? ಮುಪ್ಪರಿಗು ವಿಧಿದೇವಿ ಜುರ್. ಮೇಣ್ ತುಱಿಯದ್ದಾ ಕೌದ್ರಿಯುರ್ (ಪ್ರಪ್ರ. ೫೬-೪೯೨). [ಮುಂಪ್ (< ಮೂಜು) + ಪರಿಗು]

ಮುಪ್ಪಳ್ಳ$_1$ (ನಾ). ಬಾಳೆ. ಮಾವು ಪುಪ್ಪು ಹಲಸು ಎಂಬ ಮೂರು ಬಗೆಯ ಹಣ್ಣುಗಳು : ಶಿವಶಾರಾಪ್ಯತಮಂ ರಸಪೊಸರ್ ಮುಪ್ಪಳಮುಂ ಚಲುವಾಲು ಶಿರುಳ ಕರ್ಚಿಗಳುಮಂ . . . ಶಿಪಾರ್ಶತದೊಡನೆ ಕೈಕೊಂಡು (ಸಂಸ ೦೦-೩೫). [ಮುಂಪ್ (<ಮೂಜು) + ಪಳ್ಳ (=ಪಲ್ಲು)./ ತಮಿ. ಮುಪ್ಪಳಮ್]

ಮುಪ್ಪಳ್ಳ ? (ನಾ). (?) : ಆ ಅಯಿದತ್ತಾ ಹಾಂಸ್ಯ ಹಣ ಮುಪ್ಪಳ್ಳಾಳ ವೀಸಕ್ಕೆ (ಎಳ. VIII. ೩೩೪೯. ೦೪೦-೦೩: 1407) [?.]

ಮುಪ್ಪಾಗ. ಮುಪ್ಪಗ (ನಾ). ೧. ಮುಕ್ಕಾಲು ಭಾಗ : ನಾಲ್ಕನೆಯ ಮೂರು ಅಂಶ : ಆ ರಾಜ್ಯಶಕ್ತಿಗೆ . . . ಮೂಱುಗಳಗೆಯು ಕಳೆದು ಮುಪ್ಪಾಗದಿಂ ಮೇಲೆ ಸುತನಾಪೊತ್ತೊಳ್ಳತು (ಕಾಂಪು. ೩-೩೯) ; ಅವರ ಅರ್ಘವಿವೇಚನೆ ನಿನ್ನಿಸ ದಾತ್ರಿಯು ಕಟ್ಟಿಸುವೆಟ್ಟುಪತ್ಯವುದಕ್ಕೆ ಪೊದಲಿಟ್ಟಾಗ ಮುಪ್ಪಾಗ ಕಟ್ಟಿತು (ಕಾಂಕಾ. ೩೩೭). ೨. ಒಂದು ಬಗೆಯ ನಾಣ್ಯ : ಮುಕ್ಕಾಲು ಪಣ : ಹಿಂದಿನ ಕಾಲದ ಮೂರು ಅಣೆ : ಆರುಕಾಸುಗಳಪ್ಪು ಬೆಲೆಯುಳ್ಳ ಒಂದು ನಾಣ್ಯ : ಯೆಂಭತ್ತು ನಾಲ್ಕು ಪೂನ್ನು ಹಣ ಮುಪ್ಪಾಗವಮ ತೆರುವುದು (ಎಳ. VI. ೩೩೪. ೩೫-೦೩ ; 1400) ; ನಿಳಿಯು ಪಂಜರದೊಳಿಲ್ಲ . . . ಮುಪ್ಪಾಗ ಬೆನ್ನೆ ಮುನ್ನು ತಪ್ಪದೆ ನಾ ಹಾಕಿ ಸಾಕಿದೆ (ಪ್ರಕಂತ. ೦-೦೦೨-೪) ; ಪಾಗದ ಕೋಳಿ ಮುಪ್ಪಾಗದ ಮೇಷ ತೀದಿತು (ಗಾಪ). ೩. ಅಳತೆಯ ಒಂದು ಪ್ರಮಾಣ : ಯರಡು ಬೆಳ್ಳ ಅಕ್ಕಿಯು ತಳಗೆ ಪ್ರಸಾದ ಎಂಟು ಮುಪ್ಪಾಗ ಬಕ್ಷಿಯು ಇಪ್ಪಸೂ . . . ಧಾರಾಪೂರ್ವಕವಾಗಿ × × × (ಎಳ. XIV. ೨೯೫೫. ೨-೨೦ ; 1529). **ಮುಪ್ಪಗ :** ೨. ಸಿರಿಲಮ್ಮಂಗೆ ಪೊಮಂ ಮುಪ್ಪಗ ಪ್ರಿತ್ತಿ . . . ಅರ್ಜ್ಜುನಂಗೆ ಮುಪ್ಪಗ ಪ್ರಿತ್ತಿ (ಎಳ. XII. ೩೪೫. ೦೩-೨೦ ; 1251). [ಮುಪ್ (< ಮೂಜು) + ಪಾಗ್$_1$]

ಮುಪ್ಪಿಡಿ (ನಾ). (ಮೂರು ಕಡೆ ಬಾಗುಗಳುಳ್ಳ) ಒಂದು ಬಗೆಯ ಆಯುಧ ; ಬಾಕು : ಬಡಿಕೊಲ್ಲುಪ್ಪಕ್ಷಿತ್ತಿಧಿ ವಿಧಿತಚ್ಛಂ . . . ಪಡಿ ಮುಪ್ಪಿನಾದ ಕೈದುಗಳಂ ಪಿಡಿದು (ಪಾಂಪಕ್ಷ. ೦೮-೩೭) ; ಸೋಂಟದ ಮುಪ್ಪಿಡಿಯನು ಕಿತ್ತುಕೊಂಡು ಚರ್ಪಣನೆರ್ದೆಯಲ್ಲಿ ಪಿಮಿ ರಕ್ಕಸ ಬಹು ಪರಾಪಡೆದು ನಿಂದಿರ್ದ (ಕೋಚಾ. ೦೨-೩೩) ; ಛಲ್ಲೆಯ ಕತ್ತಿ ಕಠಾರಿ ಮುಪ್ಪಿಡಿ ಪಂಕಿ ಸಲ್ಲಿಹ ಗದೆ . . . ಕಿರಿಸಿಗಳಾ ಗೃಹದಲ್ಲಿವ್ವಮುರಿಯೂರಿ ಯಂತೆ (ಭರ. ೨೦-೦೩೨). [ಮುಪ್ (< ಮೂಜು) + ಪಿಡಿ. / ತೆಲು. ಮುಪ್ಪಿಡಿ]

ಮುಪ್ಪಿಡು ? (?)-(?) : ಅಮ್ಮಿದವಪ್ಪುವಳುಗುಂಬಿರುಗುಂಬಿಕ್ಕೆ ಉಪ್ಪರಿ ಸುವಳೆಂದಮುವಳು ನಿಪ್ಪ್ರಗಾತಿಯುಂ ನೇಮಗಾಜನು ಪೊಕ್ಕರು ಮುಪ್ಪಿಡೆ ಸವನೆಗೆಮ (ಭರ. ೦೦-೮೯). [?]

ಮುಪ್ಪು (ನಾ). ಮುದಿತನ ; ವೃದ್ಧಾಪ್ಯ ; ಇಳಿವಯಸ್ಸು : "ಜರಾ. ವಿಸ್ರಸಾ —ಈ ೨ ಮುಪ್ಪು" (ಪಾಶಬು. ೪೬-೪೯); ಸಿಂಗದ ಮುಪ್ಪಿಂ ನೆಗಟ್ಟಾ ಗಾಂಗೇಯರ ಮುಪ್ಪುಮಿಬ್ಬಾಕಮಡಗುಮೆ (ಕುಚಂ. ೦೦-೦೯); ಮುಪ್ಪಿಂದೊಪ್ಪವಳಿಯದ ಮುನ್ನ . . . ಪುಜಿಸು ನಮ್ಮ ಕೂಡಲಸಂಗಮದೇವನ (ಶಸ. ೦೩೦); ಮುಪ್ಪಿನ ಮುಗುದನೀತನ ಕಾವ ಹೇಳದು ನೆಗೆಯ ಸುಂದ್ಯೆ ಧಾಯ ಕುಕಡೊಳು (ಕಾಪ್ಯಾಲಂ. ೦-೬೩).

ಮುಪ್ಪಿನ ಮುತ್ತೈದೆ = ವಯಸ್ಸಾದ ಮುತ್ತೈದೆ ; ವೃದ್ಧ ಸುಮಂಗಲಿ : ಮುಪ್ಪಿನ ಮುತ್ತೈದೆಯ ರೂಪದೀದೆಯಿರುವಳಾದ ಕಾವೇರನದಿಗೆ ಪುಸಃ ನಮಸ್ಕರಿಸಿ (ಅಕಾಚಂ. ೧೨೦). **ಮುಪ್ಪುಬೆಪ್ಪು** = ಅರಿವುಮರುಳಿನಿಂದ ಕೂಡಿರುವ ವ್ಯಕ್ತಿ : ಏನಾಗಳೆಯಿ ನಿನ್ನ ತೆರೆದ ಟಿಕಡೊಳೊಂದು ಸೀರೆಯಂ ಕಂಡೆನಾದೊಡಮರಿವ್ದದೇಶದ್ಯ ಮೇಳ್. ಈ ಮುಪ್ಪುಬೆಪ್ಪು ? (ಕ್ರಿಪಾತಿ. ೨೬೬-೨೬೭).

[ದೇ.ಕ ತಮಿ. ಮಲ. ಮೂಪ್ಪು ; ತುಳು. ಮುಪ್ಪು ; ಮಬ್ಬು ; ತೆಲು. ಮುಪ್ಪು]

ಮುಪ್ಪುದಪ್ಪಗ (ನಾ). ವೃದ್ಧಾಪ್ಯವಿಲ್ಲದವನು: ಅಮರ: ದೇವತೆ: ನಯಮತಿನಿನುಡಿಯಿಂ ಜಾಕ್ಕೆಯಿನಾಮಗಮಿನಿಪುಂಜಿರ್ದಜುನಿರ್ಜರಗೊಲ್ವೀ ಮುಪುಣನ ಗೆಣೆಯೆನುವಳೆ ಮುನಮಮುನೆನಿಸುಂ ಮುಪ್ಪುದಪ್ಪುಗರಹಸುವಾಗರ್ (ಪಚಕ. ೬-೦೨೬). [ಮುಪ್ಪು + ತಪ್ಪು + — ಗ್ಯ]

ಮುಪ್ಪುರ (ನಾ). ೧. ತಾರಕಾಸುರನ ಮಕ್ಕಳಾದ ಮೂರು ದನ ದೈತ್ಯರು ನಿರ್ಮಿಸಿದ ಮೂರು ಪಟ್ಟಣಗಳು ; ತ್ರಿಪುರ ; ೨ ಆಕಾಶದಲ್ಲಿ ವಿದ್ಯುನ್ಮಾಲಿಯ ಕಬ್ಬಿಣದ ಪಟ್ಟಣ. ಅದರ ಮೇಲೆ ಅಂತರಿಕ್ಷದಲ್ಲಿ ಕಮಲಾಕ್ಷನ ಬೆಳ್ಳಿಪಟ್ಟಣ ಮತ್ತು ಅದಕ್ಕೂ ಮೇಲುಭಾಗದಲ್ಲಿ ತಾರಕಾಕ್ಷನು ನಿರ್ಮಿಸಿದ ಚಿನ್ನದ ಪಟ್ಟಣ : ಬಾಗಿಲ ಮುಂದೆ ನಿಂದಾ ಮುಪ್ಪುರದಂದಕೆ ವಿಜಮಕುಟವನು ಕಂದರ್ಪವಿಜಯನಲುಂಗಿ ನುಡಿದನು ಮೋಹೇಂದ್ರಪಥುಪಾವನೇದು (ಕ್ರಿಪಾಂ. ೨೨-೨೪೯) ; ಎನಿವ ಮುಪ್ಪುರದ ಸಿರಿಯ ಬ್ಬಿನೊಡಾವಗಂ ತೀರದು (ಶಾಪು. ೪೦-೨೩) ; ಹರನ ಸಾಹಸ ಕಜದೆ ಪಲವಗಲು ಮುಪ್ಪುರ ಪಡಿಬರಿಸಿ ಪೋರಿದುದು (ಪಪಂ. ೨-೪೮). ೨. ಮೂರುಲೋಕಗಳು ; ತ್ರಿಲೋಕ : ಮುನಿ ಮರ್ಮಜ್ಞವೇಯಾ . . . ಮುಪ್ಪುರದೊಳಗಿದಕೆ ಎದುರುಗಾಣನೆಂದು ಅಲ್ಪಮನಸುವಾಡದೆ ವಾಸವಾದಮ ಇಲ್ಲಿ (ತೀರ್ಥಕ. ೮೬-೨). ' ಮುಪ್ಪುರಗೊಳ್ ' ಪರಾ. **ಮುಪ್ಪುರ ಕೆಲಿದವನು** = ತ್ರಿಪುರವನ್ನು ಜಯಿಸಿದವನು ; ಶಿವ : ಕೆಡೆ . . . ಮುಪ್ಪುರ ಗೆದಿದವನ ಮುನಿಸುತ ಸರ್ಪಭೂಷಣ ಶಿವನ ಭವನ (ಕಥಂತ. ೦-೦೩೨-೬). [ಮುಪ್ (< ಮೂಱು) + ಪುರ]

ಮುಪ್ಪುರಿಗೊಳ್ (ಕ್ರಿ). ಮೂರುಲೋಕಗಳನ್ನು ಗೆಲ್ಲು : ತ್ರಿಲೋಕಗಳನ್ನು ಜಯಿಸು : ಮುಪ್ಪುರಗೊಂಡ ಮಾಧವನ ಅಪ್ಪಕಡಿದು ಬಿತ್ತರಿಸುವ ಕೃತಿ ಜೀನ ತುಪ್ಪದ ತೊಜೆಯಾಗದೆಜೆಯಾ (ಪಾಚರಿತ. ೦೪-೦). [ಮುಪ್ಪುರ + ಕೊಳ್]

ಮುಪ್ಪುರವೆಗೆಯ (ನಾ). ತ್ರಿಪುರವೈರಿ : ಶಿವ ; "ಜಡಗ ಮುಪ್ಪುರ ಪಗೆಯಂ ಎಲುಗ್ಗೆಯಾ ಬೂದಿಮೆಯ್ಯಂ . . . ಸ್ಮರಹರಂಗೆ ನಾಮವಿದು" (ಕವಿಗ. ೦೬). [ಮುಪ್ಪುರ + ಪಗೆಯ]

ಮುಪ್ಪುರಹರ (ನಾ). ತ್ರಿಪುರಗಳನ್ನು ಧ್ವಂಸಮಾಡಿದವನು ; ಶಿವ : ತುಪ್ಪಿನ ಅಭಿಷೇಕ ಅಪ್ಪ ಸಿದ್ಧರಾಮಯ್ಯ ಮುಪ್ಪುರಹರನಿಗೆ ಮಾಡುವಾಗ ಚರಾಚರ ತುಪ್ಪುಂಡು ತೇಗಿತು ಆ ಚಣ (ಸಿದ್ಧಕ್ಷ. ೦೯-೦೨). [ಮುಪ್ಪುರ + ಹರ]

ಮುಪ್ಪುರಿ (ನಾ). ೧. ಮೂರುಹುರಿಗಳು, — ಎಳೆಗಳು. ೨. ಮೂರುಹುರಿಗಳನ್ನು ಸೇರಿಸಿ ಹೊಸೆದ ದಪ್ಪಹುರಿ ; ಹೂರಜೆ : ಕೆದಱಿದ ತಲೆಯನಡಸಿ ಸುತ್ತಿದೆ ಮುಪ್ಪುರಿ [ಜಾಗಾ. ಮುಂಗುಡಿ. ಮುಂಗೂರಿ]ಯು ಬಾರಿ ಕಡ್ಡಣಿಗೆಯ . . . ಬೀಜುಸುಡಿಯು ಕಲಿ ವೀರ ಡಾಹುಕ ಬರುತ್ತಂ (ಪಚಾ. ೦೦-೦೬) ; ಕಾಳ್ಮನಿಸನೊರ್ವನುಂ ಕಾಮ್ಮುದಿಂ ಕರೆದು ತಂದು . . . ಮುಪ್ಪರಿಯಂ ಕಟ್ಟಿ ಟೀತಕ್ಕೆ ಸುರಿದೊಲ್ಪಿಂ ಪಲ್ಗಳಂ ಕಾಲ್ಗಳಂ ಕರದಿಂದಂ ತೊಳೆದೊಂದು ಕೊಯಮನಾಂತಂಗೊಲ್ಪ ಕೆಯ್ಗೊಯ್ಸುತುಂ (ಕ್ಷಪಚ. ೨೬-೦೦). ೩. (ಮೂರು ಪಸ್ಪುಗಳ)ಕೂಡಲು: ಸಂಗಮಃ ಸಮಾಗಮಃ ಅನವರತದಾನದಿಂ ವಿಕ್ಕನೂನಸೂನೃತದಿನೆಸಮ ಶೌರ್ಯೋನ್ನತಿಯಿಂ ವನನಿಧಿಪರಿತ ಸೌರಾವನಿಯೊಳ್ ಮುಪ್ಪುರಿವೆರಲಾದುದಾ ನೃಪನ ಗುಣಂ. (ಜಾಪ್ರಾ. ೨೬೩) ; ಕುಮಾರನ ಯೌವರಾಜ್ಯ ಸಂಪದದೊಳಮಧಿರಾಜ್ಯನಿಜಲೀಲೆಯೊಳಂ ಪಿತೃ ವೃದ್ಧೆ ರಾಜ್ಯಸಪದದೊಳ ಮೊಪ್ಪಿದಂ ಸಿರಿಯು ಮುಪ್ಪುರಿವೊಲ್ಕುವನೈಕಭೂಷಣಾ (ಅಪಂಪ. ೯-೩) : ವಿನಯಭಮುಭಕ್ತಿಗಳು ಮುಪ್ಪುರಿಯೆನಿಸಿ ತನ್ನೊಳಗೆಸೆಯು ನಿಜಕಾಂತನಗಜಿ (ಕಬ್ಬಂ. ೨-೬೦). ೪. ಬಲವಾದುದು ; ಬಿಗಿಯೂಮುದು : ಮೂಢ ಮಾನವರು ಮುಪ್ಪುರಿಯ ಮಾಯಾಪ್ರಬಂಧಕೆ ತಪ್ಪದೊಳಗಾಗಿಪ್ಪರು (ಅಮ್ಮ. ೪. ೨-೦೦೩). ೫. ದಪ್ಪವಾಗಿರುವುದು ; ಒತ್ತಾಗಿ ಸೇರಿದುದು : ಮುಪ್ಪುರಿಯ-ಹುಬ್ಬುಗಳ ಮುರಿದ ಮಿಸೆಯ ಮೇಚಕಾರಿ/ಯಾ ಸರಿಸದ ವನವನೀಗ ಮಂಡೋದರಿಯ ಮಗನು (ಕಪಂ. ೬-೧೯೬) ; ಮು[ಜಾಗಾ. ರಿ]ಪ್ಪುರಿದು ಹುಬ್ಬುಗಳ ಸುಯ್ಯುಗಳ . . . ಅಸಮಭಟರೊದಗಿದರು ಸಮರವಲಿ (ಕಪಂ. ೬-೦೪-೨೦). ೬. ಅಧಿಕ್ಯ ; ಅತಿಶಯತೆ : 'ಮುಪ್ಪುರಿಗೊಳ್' ಪರಾ.

[ಮುಪ್ (< ಮೂಱು) + ಪುರಿ-/ತಮಿ. ಮುಪ್ಪುರಿ ; ತುಳು. ಮುಪ್ಪುರಿ]

ಮುಪ್ಪುರಿಗೂಡಿಸು (ಕ್ರಿ). ಮೂರುಎಳೆಗಳನ್ನು ಸೇರಿಸು. — ಕೂಡಿಸು: ನವವಿಪತ್ಸೂಕ್ಷ್ಮವಾದ ಇಪ್ಪತ್ತೆಳೆಗಳಗೆ ಸಮಭಾಗದಿಂ ಮುಪ್ಪುರಿಗೂಡಿಸಿ ಪೋಣಿಸುವದಿದು ಉತ್ತಮ (ಪಪಕ. ೯೩). [ಮುಪ್ಪುರಿಗೂಡು + — ಇಸು]

ಮುಪ್ಪುರಿಗೂಡು(ಕ್ರಿ). ೧. ಮೂರು ಎಳೆಗಳು ಸೇರು. — ಕೂಡು. —ಒಟ್ಟಾಗು : ತತ್ವದ ಕಾವು ನಿಜನಿಶ್ಚಯದ ಬಿದಿರು ಭಕ್ತಿ ಜ್ಞಾನ ವೈರಾಗ್ಯ ಇಂತೀ ತ್ರಿವಿಧ ಮುಪ್ಪುರಿಗೂಡಿದ ನೂರಿನಲ್ಲಿ ಕುಬ್ಬುಗಳ ಕಟ್ಟಿ (ಪಪಕ. ೬೦-೬೨೨). ೨. ಒಟ್ಟಾಗು ; ಸೇರು ; ಒಂದಾಗು : ಮೈಬಲೆಯು ಪಾರಿಹಾರ್ಯದ ಮಣಿಸೂಪುರದ ಮಧುರಸ್ವನಂ ಮುಪ್ಪುರಿಗೂಡಿದ ಮದನಪಾಶಮನೆ ಪಡತಂದರ್ (ಪಂಗಾಚಂ. ೬-೬೨) ; ಕಣ್ಣಿ ಕೇಸುರಿಯುಂ ಪುರ್ವಿನ ತಳ್ಕ ಕರ್ಬೊಗೆಯುಮುಮಾಗ್ರೇಧಪ್ರತಾಪಕ್ಕೆ ಮುಪ್ಪುರಿಗೂಡುತ್ತಿರೆ (ಪಪಂ. ೦೪-೭) ; ತಪ್ಪದಹುದು ಕೌಶಿಕನ ಕೋಟಲೆ ಈಗ ಮುಪ್ಪುರಿಗೂಡಿ ರಾಯನಿಗೆ ಹೆಪ್ಪಳಿಸಿತು (ಹುಚಾ. ೦೪-೬೭). [ಮುಪ್ಪುರಿ + ಕೂಡು]

ಮುಪ್ಪುರಿಗೊಳ್. ಮುಪ್ಪುರಿಗೊಳು, ಮುಪ್ಪುರಿಗೊಳ್ಳು (ಕ್ರಿ). ೧. ಕೂಡು ; ಸೇರು ; ಒಂದಾಗು : ಹರಿವಿರಿಂಚಿಗಳ ಮಹದಭಯಕ್ಕಿಯುಂ ಕಂದರ್ಪನ ಪಂಚಬಾಣಾನುಸಂಧಾನಮುಂ ಪಾರ್ವತಿಯ ಮನೋರಥಮುಂ ಮುಪ್ಪುರಿಗೊಂಡು (ಗಂಗ. ೪'-೧೫ ೪); ಮುಪ್ಪುರಿಗೊಂಡ ಹುಬ್ಬುಗಳ ನೆಗೆದ ರೋಮಾವಳಿಯ ಬಿಗುಹಿವ . . . ರಕ್ಷಸರನೀಕ್ಷಿಸಿ ನುಡಿದನಸುರೇಂದ್ರ (ಕಪಂ. ೬-೨೬-೬). ೨. ಅತಿಶಯವಾಗು ; ಅಧಿಕಗೊಳ್ಳು ; ಹೆಚ್ಚಾಗು : ತುಱುಂಬಿದ ಕುಸುಮಾವಳಿಯ ಪೊಸೞಲಂ ಸೊಗಯಿಸುವ ಸೊಂಪುಂ ಪೊಱಮಡುವ ಬೆಳಗುಂ ಮುಪ್ಪುರಿಗೊಂಡು ಬಳಸಿ ಬೀದಿವರಿಯೆ (ಪಬಿಪ. ಪ. ೦೬೪-೦೬) ; ಕೋಜಾಗ್ರಿ ಮುಪ್ಪುರಿಗೊಂಡು ಮುಟ್ಟಿಗೆಟ್ಟ ಮುಖದಿಂದೆ ವಲ್ಮೀಕವಾಧನ ಸದನಕೆಯ್ತಂದು ಬನ್ನವಗೆಯ್ದು (ಕ್ರಿಪಾ. ೦೭-೪೨) ; ಮುಪ್ಪುರಿಗೊಂಡ ವೈರದಲೆಮ್ಮೊಳು ಮೇಕಿದಪ್ಪಿದ ದುಷ್ಕೃತದಿಂದೆ (ಕರ್ಣ. ೬-೭೪). ೩. ದೃಢಗೊಳಿಸು ; ಬಿಗಿಮಾಡು :

ತಿರುವಂ ಮುಪ್ಪುರಿಗೊಂಡು ಪಿಳ್ಕಿಸುವ ಮಿಂಚಿಂ ಮಾಡಿ . . . ನಿದಾಘಮುಂ ಬೆದಱಿ ಬೆಂಕೊಂಡತ್ತು ಮೇಘಾಗಮಂ (ಕಾದಂಬ. ೩೭೦). **ಮುಪ್ಪುರಿಗೊಳು**: ೧. ಪರಮಾಹರುಷಾದ್ಭುತಭಯಂಗಳು ಬೆರಸಿ ಕನ್ನಯ ಮನದೊಳ್ಗೆ ಮುಪ್ಪುರಿಗೊಳಲು ನಮಿಸುತ್ತ ಸಂಸ್ತುತಿಸಿದನು (ಕಬ್ಬಿಗ. ೩-೪೦). **ಮುಪ್ಪುರಿಗೊಳ್ಳು** : ೧. ಮೂರುವಿಷಯಂಗಳು ಮುಪ್ಪುರಿಗೊಂಡು ಪಡಿಕೇರಿಯನ್ನು ಬಿಟ್ಟು ಹೊರಡುವ ವಿಷಯ ತೀರ್ಮಾನವಾಯಿತು (ಒಡ್ಡಾ. ೪೪) ; ಶಾಂತಿ, ಚಿಲುಪು, ಜೀವನದ ಪ್ರಗತಿ, ಇವು ಆ ಸನ್ನಿವೇಶದಲ್ಲಿ ಮುಪ್ಪುರಿಗೊಂಡಿದ್ದವು (ಸಮುತೀ. ೧೦೭೪). ೨. ಸುರಪತಿಯೆಂಬ ಪೆರ್ಮೆ ದೆಸೆಯುಣ್ಮಾರ್ದವಾಳ್ಪಿನೆಂಬ ಹಮ್ಮು ದುರ್ಧರದಿಂತಿವೀರ್ವರನುಂ ಜಯಿಸಿದಾಳ್ತನ ಮುಪ್ಪುರಿಗೊಂಡು (ರಣಧ. ೩-೩೦) ; ಘನರೋಷ ಮುಪ್ಪುರಿಗೊಂಡು ಪಾಪಕನೆರಡುಗಣ್ಗೊಳ್ಗು ಕುದಿದನೋ (ಕೀರಾಪು. ೪-೨) ೪. ತೀಕ್ಷ್ಣವಾಗು ; ಚುರುಕಾಗು : ಪ್ರತಿಭೆ, ಆಶ್ಯಾಸ, ಜ್ಞಾನಗಳಿಂದ ಮುಪ್ಪುರಿಗೊಂಡ ಇವರ ಕವಿತಾಶಕ್ತಿ, ಇವರ ಪ್ರತಿಯೊಂದು ಕೃತಿಯಲ್ಲಿ ಬೀಜಿತವಾಗಿದೆ (ಪಗಡಾ. ೨೧೦). [ಮುಪ್ಪುರಿ + ಕೂಳ್ಸ್]

ಮುಪ್ಪುರಿಗೊಳಿಸು (ಕ್ರಿ). (ಗಟ್ಟಿಯಾಗುವಂತೆ) ಸೇರಿಸು ; ಕೂಡಿಸು : ಒಂದುಮಾಡು : ಸವ್ಯದಿವ್ಯಾಂಬರವಿಕರಮಂ ಹೊಸೆ ಹೊಸೆದು ಮುಪ್ಪುರಿಗೊಳಿಸಿ (ಧಸಂ. ೩೬-೦೬). [ಮುಪ್ಪುರಿಗೊಳ್ + — ಇಸ್ಸು]

ಮುಪ್ಪುರಿಗೊಳ್ಳು 'ಮುಪ್ಪುರಿಗೊಳ್' ನೋ.

ಮುಪ್ಪುರಿಗೊಳ್ಳು 'ಮುಪ್ಪುರಿಗೊಳ್' ನೋ.

ಮುಪ್ಪುರಿವಿಡಿ (ಕ್ರಿ). ಹೊಸೆದು ಬಲಗೊಳಿಸು : ಸಿಡಿಲ ಬಳಗವ ಹಿಡಿದು ಮುಪ್ಪುರಿವಿಡಿದ ತೆಱದಂತಿರ್ದ ಕಣು (ಕುಚ್ಚಾಕಾ. ೦೨೩. ೦೧-೩೪ ಅಚಕಕ್ಕ).

[ಮುಪ್ಪುರಿ + ಪಿಡ್ಸ್]

ಮುಪ್ಪುರಿಸು (ಕ್ರಿ). ಸೇರು ; ಕೂಡು ; ಒಂದಾಗು : ಕುಸಿದು ನಿಲ್ಲದ ಜಯಜಯಸ್ವನಸದಳದ ಭೃಳುಂಬಿಭರಂ ಪುರಿಸಿದ ಹರಹರರವಮುಂ ಮುಪ್ಪುರಿಸ (ಕುಪಂತ. ೪-೬೩). [ಮುಪ್ಪುರಿ + — ಇಸ್ಸು]

ಮುಪ್ಪೊಡವಿ(ನಾ). ಮೂರುಲೋಕ ; ತ್ರಿಲೋಕ : ಮುಪ್ಪೊಡವಿಯೊಳುಳ್ಳ ಕೃತ್ರಿಮಾಕೃತ್ರಿಮಮುಪ್ಪ ವಾಣಿಕಮಹಿಗಳ ಒಪ್ಪವ ಚೈತ್ಯ ಬಿಂಬಗಳನ್ನೇ ಪೊತ್ತು ತಪ್ಪದೆಬಂಧಿವಂದಿಸುವೆನು (ಶ್ರೀಣಾಲಿ. ೦-೯); ಅವಿರಳದೂದ ಸಮರಸನ್ನಾಹದ ವಿವಿಧ ಮಹಾಭೇರಿಯ ಬಲ್ಬನಿ ಬಳಸಿತು ಮುಪ್ಪೊಡವಿಯನು (ಜಜಗಾ. ೬-೨೨).

[ಮುಪ್ಪ್ (< ಮೂಜು) + ಪೊಡವಿ (< ಪೃಥುವಿ)]

ಮುಪ್ಪೊಳಲ್ 'ಮುಪ್ಪೊಟಲ್' ನೋ.

ಮುಪ್ಪೊಳಲು 'ಮುಪ್ಪೊಟಲ್' ನೋ.

ಮುಪ್ಪೊಳಲುರಿಕ 'ಮುಪ್ಪೊಟಲುರಿಕ ನೋ'

ಮುಪ್ಪೊಱಿಡು 'ಮೂಹೊಱಿಡು' ನೋ.

ಮುಪ್ಪೊಟಲ್, ಮುಪ್ಪೊಳಲ್, ಮುಪ್ಪೊಳಲು, ಮುಪ್ಪೊಟಲು (ನಾ). ೧. ಮೂರುಊರುಗಳು, – ಪಟ್ಟಣಗಳು : ಈ ಚಿಕ್ಕದೇವನೊರ್ವನದಟಿಂದಂ ತೂಳ್ದಿದಂ ಚೆನ್ನರಾಯನ ದುರ್ಗಂ ಮಿತಿಗೇಣಿ ಮದ್ದಗಿರಿಯೆಂಬೀ ಮುಪ್ಪೊಟ್ಟಿಂಗಮಂ (ರಾಚೂಚ. ೩೨-೯). **ಮುಪ್ಪೊಳಲ್** : ೨. = ಮುಪ್ಪುರ ೧ : ರಕ್ಕಸರ ಮುಪ್ಪೊಳಲ ಜೈಸಿ ಪ್ರಮದಮಂ ಸಕಲಲೋಕದೊಳು ಪೂರ್ಕಿಸಿದನು (ತ್ರಾಂಪು. ೦೩-೧). **ಮುಪ್ಪೊಳಲು** : ೨. ಆ ಗಿರಿಯ ತಪ್ಪಲೊಳಗಾ ಪಾರು ಶತಖಂಡವಾಗಿ ಧೂಪ್ಪನೆ ಕೆಡೆಯಲೊಡನೆ ಮುಪ್ಪೊಳಲೊಂದುಭಾಗಮೆಂಬಂತಂದು ಬಳಿದ ಮಾರುತಿಯುಗವಂ ಕಂಡು (ಕೀಚಾ. ೦೮-೪೦). **ಮುಪ್ಪೊಟಲು** : ೩. ಮೂರುಲೋಕಗಳು : ತ್ರಿಲೋಕ : ಮುಪ್ಪೊಟಲುಂ ಸತ್ತುಗಿದುದು (ಅಜ್ಜಕ. ೦೨-೦೬).

[ಮುಪ್ (< ಮೂಜು) + ಪೊಳಲ್]

ಮುಪ್ಪೊಟಲು 'ಮುಪ್ಪೊಟಲ್' ನೋ.

ಮುಪ್ಪೊಟಲುರಿಕ. ಮುಪ್ಪೊಳಲುರಿಕ (ನಾ). ತ್ರಿಪುರಗಳನ್ನು ದಹಿಸಿದವನು ; ಶಿವ : "ಎಳೆದೇರ ಗೊರವನ್ಯೆಹೊಗ ಕಂಮಗೊರಲ ಮುಪ್ಪೊಟಲುರಿಕ . . . ಈಶ್ವರವ ನಾಮಂ" (ಕಬ್ಬಿಕುಂ-೬) ; ಮುಪ್ಪೊಟಲುರಿಕ ನೊಲ್ಮೆಯುಂಟಿಮಂ, ಮುಪ್ಪೊಟಲೆ ಬಲ್ಲದು (ಅಜ್ಜಕ. ೪೩-೬). **ಮುಪ್ಪೊಳಲುರಿಕ** : "ಮುಪ್ಪೊಳಲುರಿಕನಿನೆ ಮಹಾದೇವನಕ್ಕುಂ" (ಕಬಿ. ೯೦). [ಮುಪ್ಪೊಟಲ್ + ಉರಿಕ]

ಮುಪ್ಪೊಳ್ಗು (ನಾ). ಮೂರುಮೋಳು, – ಭಾಗ. _ ಪ್ರುಂದು : ಮುತ್ತ ಬಾಳೆಯ ಕಾಯನುಕ್ಕರಿಸಿ ಕವುಚಿಱಿದು ಮತ್ತದಂ ಮುಪ್ಪೊಳ್ಗು ಮಾಡಿ (ಸೂಪಶಾ. ೯-೮೬).

[ಮುಪ್ (< ಮೂಜು) + ಪೊಳ್ಗು (< ಪೋಲ್ಗು)]

ಮುಫತ್ತು (ನಾ). ಪುಕ್ಕಟೆ ; ಉಚಿತವಾದುದು : ಅವನಿಗೊಂದು ಎರಡನೆಯ ದರ್ಜೆಯ ಟಿಕೇಟನ್ನು ಮುಫತ್ತಾಗಿ ಕೊಟ್ಟಿದ್ದಾರೆ (ಚಕಪ. ೪); ಒಂದು ಸದಸ್ಯರಾಪ್ಯದ ಅಂಚೆಪುನ್ನು ಇನ್ನೊಂದು ಸದಸ್ಯರಾಪ್ಯ ಮುಫತ್ತಾಗಿ ಸಾಗಿಸಬೇಕೆಂದೂ ಒಪ್ಪಂದವಾಯಿತು (ಪಪಗಾಸ. ೧- ೬೪).

[← ಅರ. ಮುಫತ್, ಮುಫ್ತ್; ಪಾರ. ಹಿಂ. ಮುಫ್ತ್; ಮರಾ. ಮುಫತ್, ಮೋಫತ್]

ಮುಬದಲು 'ಮುಬಾದಲೆ' ನೋ.

ಮುಬಾದಲೆ, ಮುಬದಲು, ಮುಬಾದಿಲೆ, ಮೂಬದಲು, ಮೂಬದಲೆ, ಮೋಬದಲೆ (ನಾ). ೧. ಪ್ರತಿಯಾದುದು; ಅದಲುಬದಲು: ವಿನಿಮಯ : ಮುಬಾದಲೆ ಮುಂತಾದ ವಿರ್ಚಗೆ ಅವಕಾಶವಾಗದಂತೆ ನೋಡಿಕೊಳ್ಳಬೇಕಂತಲೂ ಸವ್ ೧೮೨೬ರಲ್ಲಿ ಹುಕುಂನಾಮ ಸಾದರ್ಮಾಡಿದರು (ಕುಡಾಕಂ. ೫೯. ೩೭). **ಮುಬದಲು** : ೧. ಮಹಾರಾಜನ್ನ ತನ್ನ ಸಹಾಯದ ಮುಬದಲು . . . ಇಂಗ್ಲಿಷರಿಗೆ ನೆರವಾಗುವೆನೆಂದು ಹೇಳಿದನು (ತಂಸಂ. ೨೦೭). **ಮುಬಾದಿಲೆ** : ೨. ತಾತ್ಕಾಲಿಕವಾಗಿ ಕೊಟ್ಟ ಸಾಲ : (ಕಪಂಗ್ರಾ. ೭೫). **ಮೂಬದಲು** : ೧. ತೋಟ ದೊಳಗೆ ಹೂ ಬೆಳೆಯೋದು ಪೆಟ್ಟಿಲ್ಲ, ಬಂಜರಳೂಮಿಯೊಳಗ ಹೂ ಬೆಳೆದರ ಅವ ನಿನ್ನ ಬುದ್ಧಿಗೆ ಮೂಬದಲು (ನಾಬಂ. ೦೦೪). **ಮೂಬದಲೆ** : ೧. "ಪ್ರತಿ, ಸಮಾನವಾಗಿರುವ ಮತ್ತೊಂದು ವ್ಯಾಪಕತ್ವ, ಅಸಾಧಾರಣ ಧರ್ಮ. ಮೂಬದಲೆ" (ಸಿಣ್ಣಾಕ್ಷ. ೪೩೦). **ಮೋಬದಲೆ** : ೧. ನನ್ನ ರೂಪಾಯಿಗಳಿಗೆ ಮೋಬದಲಿಯನ್ನು ಮುಟ್ಟಿಸುತ್ತೇನೆಂದು ಕಾಗದ ಬರೆದಿರೊಮು (ರೋಚಿಕೀ. ೪೭). [← ಅರ. ಮುವಾದಲಾ; ಪಾರ. ಮುಬಾದಲ, ಮುಬದ್ದಲ್; ಹಿಂ. ಮುಬಾದಿಲಾ; ಮರಾ. ಮುಬಾದಲಾ, ಮೂಬದಲಾ, ಮೋಬದಲಾ, ಮೋಬಾದಲಾ]

ಮುಬಾದಿಲೆ 'ಮುಬಾದಲೆ' ನೋ.

ಮುಬಾರಕ್ (ಗು). ೧. ಮಂಗಳಕರವಾದ ; ಶುಭದಿಂದ ಕೂಡಿದ ; ಒಳ್ಳೆಯ : ಯಾವದೊಂದು ಕಾರ್ಯಕ್ಕೂ ಆ ಇಂಗ್ಲೇಜ ಬಾಪ್ತರ ಕುಂಪು ಮುಬಾರಕ್ ಮರ್ಜಿ ಯಾವ ಮೇರೆ ಇದೆಯೋ ಅದರಲ್ಲಿ ಈ ದೋಸ್ತುದಾರರಿಗೆ ಅಬ್ರುಕೀರ್ತಿ ದೊಡ್ಡದಾದೀತು (ಜಾಕೀಂಪ್ರ. ೨೪೨). (ನಾ)- ೨. ಶುಭ; ಮಂಗಳಪ್ರದ.

[←ಅರ. ಪಾರ. ಹಿಂ. ಮರಾ. ಮುಬಾರಕ್]

ಮುಬ್ಬಣ್ಣ 'ಮೂಪಣ್ಣ' ನೋ.

ಮುಮತ್ 'ಮುನ್ಸಾ' ನೋ.

ಮುಮರಿದಂಡ 'ಮುಮ್ಮರಿದಂಡ' ನೋ.

ಮುಮುಕ್ಷು (ಗು). ೧. ಐಹಿಕ ವ್ಯವಹಾರಗಳಿಂದ ದೂರವಾಗಲು ಬಯಸುವವ ; ಮೋಕ್ಷಾಪೇಕ್ಷೆಯಿಂದ ಕೂಡಿರುವ ; ಮುಕ್ಕಿಯನ್ನು

ಬಯಸುವ : ಅವಸೊಬ್ಬನೆ ವಿಪ್ಲವಕೀರ್ತಿಸುಧಾವಗಾಹನವಿಧಿವಿಷಯ ಪಾತಕ ಜಾಜನತೆಯುನು ಪಡೆವುದೀ ಜಗದಪ್ರಯತ್ನದಲಿ ಸೇವಿಸುವುದನುದಿನ ಮುಮುಕ್ಷುಜನಾವಳಿಗಳು (ಪಣಿಗ. ೪-೬-೨೪). (ನಾ). ೨. ಮುಕ್ತಿಯನ್ನು ಬಯಸುವಪವನು; ಮೋಕ್ಷಾಪೇಕ್ಷಿ : ಆ ಮುಮುಕ್ಷುಗಳ ಸಮುಕ್ಷದೊಳವರ ಪೇಳ್ದ ಮಾರ್ಕೆಯೊಳಿ ಪರಮಜಿನಪತಿ ಪರಿಭಾವಿತಮಪ್ಪ ಪೊಸಿತಪ್ರತಮಂ ಕೈಕೊಂಡು (ಅಣಪ್ರ. ೪-೧೦ ಕ); ಆಕ್ಷಣದೊಳಗ್ನಿಭೂತಿ ಮುನುಮುಕ್ಷುಗೆ ಮೂಜನೆಯು ದಿವ್ಯಸರ್ವಾವಧಿ ಪುಣ್ಯಕ್ಷೇತ್ರ ಶುಭಸ್ಥಾನ ಸಮುಕ್ಷದೊಳಾದುದು (ಸ:ಚರಿತ. ೪-೪೬); ಶ್ರೀ ಭವತ್ಪಸಾದ ಲವದಿಂದೆ ಮುಮುಕ್ಷುಗೆ ಮೋಕ್ಷಲಕ್ಷ್ಮಿ ಸಂಸಾರಿಗೆ ರಾಜ್ಯಲಕ್ಷ್ಮಿ ದೊರೆಕೊಳ್ವುದು (ಜಗಿ. ೦೭-೫೯). [ಸಂ.]

ಮುಮುಕ್ಷುತ್ವ (ನಾ)· ಲೌಕಿಕವ್ಯವಹಾರಗಳಿಂದ ದೂರವಾಗಿ ಮುಕ್ತಿಯನ್ನು ಬಯಸುವಿಕೆ ; ಮೋಕ್ಷಾಪೇಕ್ಷೆ : ಇದ್ದಿ ನಿತ್ಯಮನ್ಯಾನೇಕದಿಂದ ಮೋಕ್ಷವಲ್ಲಿ ಇಚ್ಛೆಯೆಂಬ ಮುಮುಕ್ಷುತ್ವವು . . . ಭೋಗ ವೈರಾಗ್ಯವೂ ಒರುವುದು (ಹಂಪಾ. ೨೨೦). [ಸಂ.]

ಮುಮುಕ್ಷುವೃತ್ತಿ (ನಾ)· ಮುನಿಧರ್ಮ; ಮೋಕ್ಷಾಪೇಕ್ಷೆಯ ನಡವಳಿಕೆ : ಕಾಮಸುಖಮೋಚಿತಮತಿಗಳ್ ನಾಮೆತ್ತ ಮುಮುಕ್ಷು ವೃತ್ತಿಯಂ ತಾಳ್ದಿದವರ್ ತಾಮೆತ್ತ (ಅಪ್ರ. ೪-೬೬). [ಸಂ.]

ಮುಮೂರ್ಷು (ಗು)· ೧. ಪ್ರಾಣವಿಡಲು ಇಚ್ಛಿಸುವ; ಜೀವವನ್ನು ತ್ಯಜಿಸಲು ಅಪೇಕ್ಷಿಸುವ. ೨. ಸಾವು ಸನ್ನಿಹಿತವಾಗಿರುವ; ಮರಣಾವಸ್ಥೆಯಲ್ಲಿರುವ : ತನ್ನ ತೊರೆವರ್ಭಕರ ಹಂಬಲಿಸಿವ ಮುಮೂರ್ಷು ತಾಯಂತೆ. . . ತನ್ನಳಿಸಪರ ಹಂಬಲದಿ ಮನೆತುಸುರಿದಂ (ಗೂಢೋಪಾ. ೦೪-೧೦೨). (ನಾ). ೩. ಸಾವು ಸಮೀಪಿಸಿದ ವ್ಯಕ್ತಿ; ಮರಣಾಸನ್ನ ನಾದ ವ್ಯಕ್ತಿ : ಆನೆಯನಿರುಳುಂ ಪಗಲುಂ ಜಾನಿಸಿ ತನು ಮೂರ್ಖಿವ್ಯಕ್ತಿ ಪೊರ್ದಿದವೋಲಜ್ಞಾನಿ ನಯಾನಯಯುತಿತೆಮುನೇನುಮನೆಱಯನೆ ಮುಮೂರ್ಮ ರ್ತೆಱನಱಿದವನೇ (ಕಂರ್ತ್ನಪ್ರ. ೦೦-೩೭); ನಮಕುಮಾರನು ಮುಮೂರ್ಮನಿಸಂತೆ ಕಾಪಾಲಿಕನ ಸಂಗವ ಹೋದನು (ಧಾಶಸಂ. ೨೩). [ಸಂ.]

ಮುಮ್ಮಡ, ಮುಮ್ಮಡಿ (ನಾ)· ಕಾಲಿನ ಹರಡಿನ ಮುಂಭಾಗ : ಪೆರ್ದೊಡೆ ಕಟಿ ಮುಮ್ಮಡಂ ಪ್ರರಡು ಸಂದಿ ಸೊಸದ್ ಪಡೆ ಕಣು ಕವಂಪಿಪೆಂಬೆಯೆಸೆ ನಟ್ಟುವೆರ್ಚ್ಚುವು . . . ಪಾರ್ಥಸಂಬುಗರ್ (ಕಂಪಣಾ. ೦೦-೦೩೬); ಹಿಂದೆಜೊಳ್ ಗೋಣ್ಮವಿರ್ ಮುಮ್ಮಡಂಬರಂ ಮುಸುಂಕಿರೆ ಪಟ್ಟೊಂದು ಪುತ್ತ ಸಿಂಗಕ್ಕೆ ತನ್ನ ಕೇಸರಮೆ ಜಾಲವಾಗಿ . . . ವಿಲಾಟಿಸಿಯುಮಾಜಿರೆ (ಜಾಬಾಕ್ಷ. ೪೨-೩೪). ಮುಮ್ಮಡ್ಡಿ : ಕಾಲು, ಕಣಕಾಲು, ತೊಡೆ, ಹಿಮ್ಮಡಿ, ಮುಮ್ಮಡಿಗಳ ಸಹಾಯದಿಂದ ಮಾಡುವ ಒಂದು ಚಲನೆಗೆ 'ಚಾರಿ' ಎನ್ನುತ್ತಾರೆ (ಅಣಾಕ್ಷ. ೩೦).

[ಮುಂ$_1$ (< ಮುನ್$_1$) + ಮಡ$_1$]

ಮುಮ್ಮಡಿ$_1$ 'ಮೂವಡಿ' ನೋ.

ಮುಮ್ಮಡಿ$_2$ 'ಮುಮ್ಮಡ' ನೋ.

ಮುಮ್ಮಡಿಸು 'ಮೂಪಡಿಸು' ನೋ.

ಮುಮ್ಮಣ್ಣು (ನಾ)· ಮೂರನೆಲ ಬತ್ತದ ಬೆಳೆಯನ್ನು ಕೊಡುವ ಭೂಮಿ: (ಕಣಣ್ಣಿ. ೦೭೩).

[ಮುಮರ್ (< ಮೂಜು) + ಮಣ್ಣು (< ಮಣ್)]

ಮುಮ್ಮನ (ನಾ)· ಹಿಂದಿನ ನೆನಪು.—ಆಲೋಚನೆ : ಮರೆತಿದ ಪುರಾ ಮುಮ್ಮನವ, ಆದರು ಆತ್ಮಕೆ ಘನ ನೆನವೆ (ಅಕಬು. ೦೧೭-೦೩).

[ಮುಂ$_1$ (< ಮುನ್$_1$) + ಮನ]

ಮುಮ್ಮನೆ$_1$ (ನಾ)· ೧. ಮುಂದಿರುವ ಮನೆ ; ಎದುರುಮನೆ : ನೆರೆ ಮನೆಯು ಮುಮ್ಮನೆಯು ಹೆಮ್ಮಕ್ಕಳಂ ಬೇಗ ಕರೆ (ಸಿಕ್ಕಣಾ. ೪-೨): ನೆರೆ ಮನೆಯು ಮುಮ್ಮನೆಯು ಭಕ್ತರು ನರರೂಪವಜ್ರಿಯುವ ಹಂಗೆ. . . ನಿಕ್ಷೇಪಮಂ ಪೂಡಿರೆಂತಿರಲು (ಜಪಪ್ರ. ೪೬-೩೦). ೨. ಮನೆಯ ಮುಂಭಾಗ. —ಮುಂಬದಿ : ನಮ್ಮದು ತುಂಬ ಹಿಂದಿನ ಕಾಲದ ಮನೆ . . .ಮುಮ್ಮನೆ ಬಳಮನೆಗಳ ನಡುವೆ ತೋಟ (ಸಂಂಧ. II. ೦).

[ಮುಂ$_1$ (< ಮುನ್$_1$) + ಮನೆ]

ಮುಮ್ಮನೆ$_2$ (ಅ). ಅತಿಯಾಗಿ; ಹೆಚ್ಚಾಗಿ; ಅತಿಶಯವಾಗಿ : ಪೀಗಳಕಂ . . . ಹಮ್ಮದಂಬೋಗಿ ಮುಮ್ಮನೆ ಬೆಮರ್ತು (ಪಂತಕಂ. ೪೬-೦೬). 'ಮುಮ್ಮಲನೆ' ಪರಾ. [?]

ಮುಮ್ಮಯ್ 'ಮುಮ್ಮೈಯ್' ನೋ.

ಮುಮ್ಮರಿ$_1$ 'ಮುಮ್ಮುರಿ$_3$' ನೋ.

ಮುಮ್ಮರಿ$_2$ (ನಾ). ನಾಶ; ಹಾಳು : ತೀರ್ತಲೋಳ್ ಸರಭಸದಿಂ ಮಾರ್ತಾಗೆ ಘಟರ್ಕಳಾರ್ದು . . . ಕಾದಿ ನೆರಪಿ ಮುಮ್ಮರಿಯಾದರ್ (ಜಂಪಂ. ೬-೬೨).

[?]

ಮುಮ್ಮರಿದಂಡ 'ಮುಮ್ಮುರಿವಂಡ' ನೋ.

ಮುಮ್ಮಲ (ನಾ). [ವೀಶೈ] ಜೀವನಿಗೆ ಅಂಟಿಕೊಳ್ಳುವ ಆಣವ, ಕಾರ್ಮಿಕ ಮತ್ತು ಮಾಯೆಗಳೆಂಬ ಮೂರುಬಗೆಯ ಮೆಲಗಳು.—ದೋಷಗಳು : ವ್ಯಸನಸಪ್ತಕದ ನೀರ್ಮುಕ್ಕಿಸುತ ವುಂದೆ ಮುಮ್ಮಲ ಪೆಂಬ ಸುಳಿಯನತಿಹೊಟ್ಟಿಬೀಜಿಪಂದಿಂದೀಂಟಿ . . . ಭವಪಾಳುವರ ಪೇಳಲಂ ಬಿಡು (ಕಾಕ. II. ೦೬೬-೬೯೫೩೬೦).

[ಮುಮರ್ (< ಮೂಜು) + ಮಲ್ಲ]

ಮುಮ್ಮಸಗು (ಕ್ರಿ)· ಮುಂಜಿಯೇ ಆವೇಶವನ್ನು ಹೊಂದು; ಮೊದಲೇ ಉದ್ವೇಗಗೊಳ್ಳು : ದಿಮ್ಮಿವರ್ ಗುಜುಗುಜಿಸದಿರಿಮತುಳರುದ್ರಗಣ ಮುಮ್ಮಸಗ ಬೇಡ (ತಂಪ್ರ. ೪-೪೬). [ಮುಂ$_1$ (< ಮುನ್$_1$) + ಮುಸಗು]

ಮುಮ್ಮಳಿ 'ಮುಣ್ಮಲಿ' ನೋ.

ಮುಮ್ಮಳಿಗಡಲು (ನಾ). ಕ್ಷೋಭೆಗೊಂಡ ಸಮುದ್ರ : ಹೊಯ್ದಾಡುವ ಕಡಲು : ಘಳುಘಳಿಸಿ ಕವಿವ ತೆರೆಗಳು ಹಳಚಿ ಕುದಿವ ಮುಮ್ಮಳಿಗಡಲು (ಪಚಕ್ಷ. ೦೦-೨೪). [ಮುಮ್ಮಳಿ (<ಮುಣ್ಮಲಿ)+ಕಡಲು (< ಕಡಲ್$_3$)]

ಮುಮ್ಮಳಿಗೊಳ್ 'ಮುಣ್ಮಳಿಗೊಳ್' ನೋ.

ಮುಮ್ಮಳಿಗೊಳು 'ಮುಣ್ಮಳಿಗೊಳ್' ನೋ.

ಮುಮ್ಮಳಿಯೋಗು 'ಮುಣ್ಮಲಿವೋಗು' ನೋ.

ಮುಮ್ಮಳಿಸು 'ಮುಣ್ಮಲಿಸು' ನೋ.

ಮುಮ್ಮಳೆ (ನಾ)· ಬೇಸಗೆಯ ನಂತರ ಬರುವ ಮೊದಲ ಮಳೆ ; ಮುಂಗಾರು : ನಾನೆ ಮರ್ಬನ ಕರ್ಪು ನಾನೆ ಕದಿರ್ಗೂನ್ಮ ಮುಂ ಮುಮ್ಮಳೆಯ ತನಗಂಪು ಬೇಸಗೆಯ ಬಿರುಜಳಂ (ಕಂಪ್ರ. ೭೦-೨). 'ಮುನ್ಮುಳೆಗಾಲ' ಪರಾ.

[ಮುಂ$_1$ (< ಮುನ್$_1$) + ಮಳೆ (<ಮಟೆ^{1})]

ಮುಮ್ಮಳೆಗಾಲ (ನಾ)· ಮಳೆಗಾಲದ ಆರಂಭ; ಮುಂಗಾರಿನ ಸಮಯ: ಶರಧಿ ಮುಮ್ಮುಳೆಗಾಲದಲ್ಲಿ ಭೋರ್ಗರೆವಪೊಲು ಭೋರೆಂದು ಹಜ್ಜೆಯಬ್ಬರಿಸಿದುವ (ತಿಪಪ್ರ. ೬-೩೬-೦೦).

[ಮುಂ$_1$ (< ಮುನ್$_1$) + ಮಳೆಗಾಲ (< ಮಟೆಗಾಲ)]

ಮುಮ್ಮಳಿದಂಡ 'ಮುಮ್ಮುರಿವಂಡ' ನೋ.

ಮುಮ್ಮಳಿಸು (ಕ್ರಿ)· ಎದುರಿಗೆ ಮರೆಮಾಚು (?) : ಘಡ ಹೋಗದಿರ್ ಮುಮ್ಮಳಿಸಿ, ಮಂಟಪಕೆ ಕಟ್ಟನಿಕ್ಕಿದ ಕಳ್ಳಿಯಂಟಿರಿವರಂ ಬೇಗದಿಂ ಪಿಡಿ (ತಂಪ್ರ. ೪೦-೩೬). [ಮುಂ$_1$ (< ಮುನ್$_1$) + ಪಾಜಿಸು (< ಮಱೆಯಿಸು)]

ಮುಮ್ಮಱಿ 'ಮಣ್ಮಲಿ' ನೋ.

ಮೂಗರಿ, (ನಾ). ಮೂಗನ್ನು ಕೊಯ್ಯಿಸಿಕೊಳ್ಳುವಿಕೆ: ಪೊಳ್ಳಿಜಯಿಲ್ ಪೋಗಿ ಮೂಗರಿವಡೆದರ್ (೪೦೭೦. ೭೭-೦೬) ; ಎಱಿಸುವುದದುಗಱಿಬ್ಬು ಪೆಱರ್ಗ ತಾನೆಱಗಿ ಪೋಗಿ ಪೋಗಿ ಮೂಗರಿವಡೆದರ ತೆಱನಪ್ಪುದೆಲಗೆ ಬೆಲೆವೆಣ್ಣ (೧೮೧೭. ೫-೭೭). [< ಮೂಗರಿ,]

ಮೂಗರಿಕೆ (ನಾ). ಮೂಗು ಕತ್ತರಿಸಿಕೊಂಡವಳು : ಮರುಳಲಾ ನೀನೆಲೆವೊ ಬಿಳ ಮೂಗರಿಕೆಗಾದಭಿಮಾನಭಂಗಕೆ ಧುರವನೆಸಗುವ ನಪ್ಪುಬುದ್ಧನೊ ಮೇಣ್ಕೆಚಕ್ಷಣನೊ (೬೦೫೦. ೭-೬-೭೫). [<ಮೂಗರಿ,]

ಮೂಗರ್ಜಿ, ಮೂಕರ್ಜೆ (ನಾ). ಬರೆದವರು ಯಾರೆಂದು ತಿಳಿಸದೆ ರುಜುವಿಲ್ಲದೆ, ವಿಳಾಸ ಕೊಡದೆ ಬರೆಯುವ ಅರ್ಜಿ: ಬೇನಾಮಿ ಅರ್ಜಿ: ಶ್ಯಾನುಭೋಗನಿಗೆ ವಿರೋಧವಾಗಿ ನಿತ್ಯ ಒಂದೊಂದು ಎರಡೆರಡು ನಾರಾಯಣಿ ' (ಮೂಗರ್ಜಿ)ಗಳೂ ತಾಲ್ಲೂಕುಕಚೇರಿಗೆ ಬರತೊಡಗಿದವು (೧೪೮೫. ೦೦೩); ತನ್ನ ಕೈಯಿಂದ ಮೂಗರ್ಜಿದೋಪಾದಿಯ ಪತ್ರ ಜೆಪಣ್ಣನ ಅಣ್ಣನಿಗೆ ತಲುಪಿಸಿ . . . ಇಲ್ಲಿಗೆ ಬಂದರೆ ಗತಿಯೇಸು ಕ್ಕಿ (೧೪೪೫. ೦೦೩). **ಮೂಕರ್ಜೆ** : ಮೂಕರ್ಜಿಗಿಂತ ಮಿಗಿಲಾಗಿ ಬರೆದರು ನಿಟ್ಟರು (೧೪೫೫. ೪೫) ; ಅವನ ವಿರುದ್ಧವಾಗಿ ಮೂಕರ್ಜೆ ಬರೆಯುವ ಧೈರ್ಯ ಆ ಹಳ್ಳಿಯವರಾರಲ್ಲೂ ಇರಲಿಲ್ಲ (೨೦೫೯. ೦೫೬).

[ಮೂಗು + ಅರ್ಜಿ,]

ಮೂಗವಲ್, ಮುಕ್ಕವಲು (ನಾ). ೧· ಮೂರು ಬಗೆ.—ರೀತಿ : ಆದಿಶಕ್ತಿಯೆನಿಸಿರ್ದಂ ಮೂಗವಲಿಂ ಪರಿಪರಮ್ಯಹ್ಮರ್ಕಳಂ ಮೋಹಿಪ ವಿಸ್ತೀ ಪಾಪಪಾವಿನೋದಮಜಾರಜ್ಞಗಂ (೧೪೩೫. ೬೨-೦೨). **ಮುಕ್ಕವಲು**: ೨. ಮೂರು ಕವಲು.—ಭಾಗ : ಅತಿಥಿಗಳೊತ್ಪಟ್ಟು, ಮದುವಣಗರ ಮರು ದಿವ್ಯಣಪೊತ್ಪಟ್ಟು, ತನ್ನವರೊಡಗೂಡಿದ ವೀರಬಿಂಕಿಯನೊತ್ಪಟ್ಟು, ಮುಕ್ಕವಲಾಗಿ ನೆರೆದ ಸಂದಣಿ ಹರಿದುದು (೫೮೦೦. ೦೦೩).

[ಮೂ, (< ಮೂಱು) + ಕವಲ್,]

ಮೂಗಳ್ (ಕ್ರಿ). ಹೇಳಲಾಗದೆ ಮೂಕವಾಗಿ ದುಃಖಿಪಡು ; ಒಳಗೊಳಗೇ ರೋದಿಸು : ಕೊರಳ್ ಬಗಿದು ಮೂಗಳ್ತಳಾ ದಿವ್ಯದುಃಖಿನಿ ಸಗ್ಗದಂ (೬೯೦೫೫. ೩೦೬-೩೬).

[ಮೂಗು + ಅಳ್, (< ಅಱ್,)]

ಮೂಗಳ ' ಮೂಗೊಳ ' ನೋ.

ಮೂಗಳು (ನಾ). ಹೇಳಿಕೊಳ್ಳಲಾಗದೆ ಒಳಗೊಳಗೇ ದುಃಖಿಸುವಿಕೆ : ಮೌನರೋದನ : ಅವಳ ಮೂಗಳುವನ್ನು ಕೇಳುವವರು ಅಲ್ಲಿ ಯಾರೂ ಇರಲಿಲ್ಲ (೬೫೦). [ಮೂಗು + ಅಳು, (< ಅಱ್,)]

ಮೂಗಟ್ಕೆ, ಮೂಗಕ್ಕೆ (ನಾ). = ಮೂಗಳು : ವಿರಾಟನ ಮಹಾದೇವಿಯುಂ ಪೇಡಿ ಸತ್ಯಂತೇಮಮನೆನಲಜ್ಞಯದೆ ನಾನ್ಕೆ ತನ್ನೊಳೆ ಮೂಗಟ್ಕೆಯನಬ್ಬು ಕೆಮ್ಮನಿರ್ದಳ್ (೪೦೬೫. ೬-೮೨ ಪ) ; ಒಳಗೊಳಗೆ ಮೂಗಟ್ಕೆಯಬ್ಬುಬ್ಬು . . . ದುಮ್ಮಲಂ ಪುಜುಗಿ (೦೮೧೫. ೬-೨೫ ಪ). **ಮೂಗಕ್ಕೆ** : ನಡವಳಿಯ ಗುಣವೋ ಪುರುಷ್ಕೃತದೊಡಲ ದುಷ್ಕೃತ ಫಲವೋ ತಪಗೆಂದಡಿಗಿದಿಗೆ ಮೂಗಕ್ಕೆಯಲಿ ಮಱುಗಿದನು ಸರನಾಥ (೬೫೦೦. ೬-೦-೯) ; ಸತಿ ಘನಗದ್ಗದಸ್ವರದಿಂದಲಾ ಮೂಗಕ್ಕೆಯಲಿ ಕದನೊಂದಳು (೬೦೭೫೫. ೦೫-೫೬). [ಮೂಗು + ಅಟ್ಕೆ]

ಮೂಗಟ್ಕೆ (ನಾ). = ಮೂಗಳು : ಪಣ್ಣಂಗಿಟ್ಟೊಡೆ ಕಾದುಗ್ ಬಿದ್ದು ದೆಂಬ ಪಾಣ್ಣುಡಿ ನುಡಿವರ ಮಾತೆನಗಾದುದೆಂದು ಮೂಗಟ್ಕೆಯಬ್ಬು (೦೫೫೫೪. ೦೦-೦೧೫). [ಮೂಗು + ಅಟ್ಕೆ, + — ಮೆ,]

ಮೂಗಾಲಿ, ಮುಗ್ಗಾಲಿ (ನಾ). ಮೂರು ಚಕ್ರಗಳುಳ್ಳ ವಾಹನ : ಗ್ಗಾಲಿ (ಸೈಕಲ್) – ಮೂಗಾಲಿ (ಟ್ರೈಸಿಕಲ್) (cycle- ೨೦೫೬). **ಮುಗ್ಗಾಲಿ** : " ಮೂರು ಚಕ್ರದ ಸೈಕಲ್ಲು. ಮುಗ್ಗಾಲಿ " (Tricycle. ೨೦೫೬). ' ಗ್ಗಾಲಿ ', ' ಒಗ್ಗಾಲಿ ' ಪರಾ.

[ಮೂ, (< ಮೂಱು) + ಗಾಲಿ]

ಮೂಗಾವುದ (ನಾ). ಮೂರು ಗಾವುದ : ಸೌಧರ್ಮಕ್ಕದಱಿಂದಮುತ್ತ ಮೂಗಾವುದದೊಳ್ ನೆಲಸುಪರನಂತಸುಖರಾ ಸಿದ್ಧರ್ (೨೦೬೫೫. ೦೨-೪) ; ಅರೆಗಾವುದಮಂ ಪರಿದಂ ಮೂಗಾವುದಮಂ ನಡದಂ (೫೩೮. ೦೫೬ ಕೃಯೋ): ಭೋಗದ ಮೂಗಾವುದವೆಳೆ ರಾಗಾವಿಲಚಿತ್ತರಾಗಿ (೧೪೬೦. ೬-೨೦).

[ಮೂ, (< ಮೂಱು) + ಗಾವುದ]

ಮೂಗಾಳಿ (ನಾ)· [ಜೈನ] ತನುವಾತ, ಘನವಾತ ಮತ್ತು ಘನೋದಧಿ ವಾತ ಎಂಬ ಮೂರು ವಾಯುವಲಯ : ಕಡೆಯಿಲ್ಲದಂಬರದೆಡೆಯೊಳು ಮೂಗಾ [೫೫೫೦- ಘ]ಳಿಯದಕಿಲುಗೊಂಡು ಬಳಸಲು ಪುಟ್ಟಿದ್ರವ ತೀವಿ ಮೂಜಗ ಜನಬೋಧಂ ಪೊಡೆಯಲಿ ತಾನೆ ರಂಜಿಪುದು (೫೮೧೫. ೦-೧೨). [ಮೂ, (< ಮೂಱು) + ಗಾಳಿ,]

ಮೂಗಾಳಿವಿಡಿ (ಕ್ರಿ)· ಮೂಗಿನಿಂದ ಪಾಸನೆಯನ್ನು ತೆಗೆ. — ಅರಿ : ಕಾಣಮದೊ ದಿಟದ ಮೃಗತತಿಯದರ ಬಲಿ ಸುಳಿಯಲೆಂತಂಜಿ ಹಿಂಜರಿದು ಮೂಗಾಳವಿಡಿದು ನಿಂತಿಹವಲ್ಲಿ ಸಾಲ್ದೊಂದು ಬೆಜ್ಜಿ ಗಾರಾಗಿ ! (೬೯೦೫೫. ೩೩೨-೦೩೮). [ಮೂ, (< ಮೂಗು) + ಗಾಳಿವಿಡಿ]

ಮೂಗಿ, (ನಾ). ಮಾತನ್ನಾಡಲು ಆಗದವಳು ; ಮೂಕಿ : " ಮೂಗಿ (ಕಿ) – ಮೂಕೀ " (೪೬೫೫. ೭೩) ; ವಿರ್ದಯದಿಂ ಪೀಡಿಸಿ ಬಳ್ಕುವೋ ಪಿಸಿದಮ್ಮಲ್ಲಂ ತಪಿಸಿನಂ ಮೇಗೆ ಮೂಗಿಯ ಮೂಗಂ ತಲೆವಾರ ಕೊಯ್ದು

(ಸುಳಾದಿ. ೬-೫೯) : ಪೂಗಿಯು ಕೋಗಿಲೆಯಂತೆ ಮೂಗಿಯಾಗಲ್ಕೆ ನೋಡವ್ವಾ (ಪಡಣ. ೨. ೦೬೦). [ಮೂಗ + — ೩]

ಮೂಗಿ₂ (ನಾ). ಒಂದು ಬಗೆಯ ಹಕ್ಕಿ : ಮೂಗ : "ಫ್ರಾ [ಪಾಣಿ. ಫ್ರು]ಣಯನೆ ಮೂಗಿ " (ಭುಂಗಣ. ೩೨-೯) ; ಕೋಗಿಲೆ ಜಾದಗೆ ಪೋದಗೆ ಮೂಗಿ ಗಲಿಂಜಂಚೆ ಕೊಂಚೆ ಸೂಲೆಗಂಪಂ ಕಾಗೆ ಪೊಣರ್ವಕ್ಕೆ ಪೊಂಗುರುಗೂಗೆ ಮುಂಕ್ಕುದಂ ಬಲಾಕೆ ಅವುಗೆ ಸೇನಂ (ಶಾಕ್ಕಾ. ೦೦೯೯ ಪೂರ್ವ) ; ಪುಗೆದುಂ ಪೊಂಗೆಯುಮೆಡದತ್ಕಲ್ ಪುಗೆ ಮೂಗಿಯು ಶಕುನಂಗಳಿಷ್ಟ ಫಲಮಂ ಕುಡುಗುಂ (ಕೀಲೋಕ. ೦೩-೦೬) ; ನಾಲಗೆಗಬ್ಬಾಕೆಯಂತೆ ಮೂಗಿ ನೆರನುಳ್ಕೆಂ ಪ್ರಿಯುಂಗೆಮ್ಮಂತೆ ವಂಗಾಗಿ . . . ಅನೇಕ ಪಕ್ಷಿಜಾತಿಗಳಂ (ಪಂಪಾ. ೨-೭೬ ಪ). [ಮೂಗು + — ೩]

ಮೂಗಿಡು (ಕ್ರಿ). (ಎತ್ತು, ಎಮ್ಮೆ ಮೊದಲಾದುವುಗಳನ್ನು ಹತೋಟಿಯಲ್ಲಿಡುವುದಕ್ಕಾಗಿ ಮೂಗಿಗೆ ದಾರ ಹಾಕಲು) ಮೂಗುಚುಚ್ಚು : "ಸಸ್ಯೋತ್ಸ, ನಸ್ಯಿತಃ — ಈ ೨ ಮೂಗಿಟ್ಟುದಂ" (ಪಣಾಮು. ೪೪-೦೦೨) ; ಸುಡೆ ಧಾವಾನಳನೊಂದನೊಂದು ತಿನೆ ಕುತ್ತುಂ ಪತ್ತೆ ಕೊಂದಿಕ್ಕೆ ಕಾಡೊಡೆಪುಶೀತಲದ ವಾತದಾತಪದ ಧಾರಾಪಾತವಕ್ಕಾತುರಂ ಮಡಿವಂ ಮಾಡೆ ಕಾಂಕ್ಷು ಶೋಪಪತಿ ಸಂತಾಪಕ್ಕೆದರ್ಪಾಗೆ ಮೂಗಿಡೆ. ನಿರ್ಮಂಧದಿನೇಱ ಪೇಱ ತಿನೆ ತಿರ್ಯಗ್ಜಾತಿಗಳ್ಗಬ್ಬರ್ದುಗುಂ (ಕುಲ್ಲಕ. ೦೩-೦೦೦).

ಮೂಗಿಟ್ಟೇಱು = (ಆಲಂ) ಅಂಕೆಯಲ್ಲಿಡು ; ಹಮ್ಮಬಸ್ತಿನಲ್ಲಿಡು: ತಲೆಮುಂ ಕಣ್ಮಿಯದುಮುಂ ಕರುಳಸುರ್ಚಿಯುಂ . . . ಮೂಗಿಟ್ಟಿ [ಟ್ಟೇ]ಱ್ದಯುಂ (ಆಪ್ತ. ೦೦ ೦೦ ಪ); ಒತ್ತಿವ್ವುದೆ ಮೂಗಿಟ್ಟೇಱುದಂ ಮಾಳವನ್ . . . ವಿಶ್ರಮಾದಿತ್ಯದೇವಂ (ಕ್ಯ.ಉ. ೦೯೨೯, ೬೫-೦೬ ; ೨೦೩೬) ; ಏಱಿದೊವೆ ಮುರಸನೆನ್ನಂ ವಿಜೃಂಭಿಸುಬಿದಡಸಿ ಪಿಡಿದು ಪೇಳಿದಸಧುಂ ತೋಱಿದ ನೊಡವ[೦] . ಮೂಗಿಟ್ಟೇಱುವನೆಂದಳ್ಕೆ ಬಾಳನಹಿಪತಿಯಿತ್ತಂ (ಪಂಪಾ. ೬-೭೬). [ಮೂಗು + ಇಡು]

ಮೂಗಿರಿ : 'ಮೂಗಿಱಿ' ನೋ.

ಮೂಗಿಲಿ₁ (ನಾ). ಮೂತಿಯು ಉದ್ದವಾಗಿರುವ ಒಂದು ಬಗೆಯ ಇಲಿ ; ಸೊಂಡಿಲಿ : " ಗಿರಿಕಾ, ಚಾಲಮೂಷಿಕಾ — ಈ ೨ ಮೂಗಿಲಿ" (ಧಾಸಾ. ೦೦೩). [ಮೂಗು + ಇಲಿ₁]

ಮೂಗಿಲಿ₂ (ನಾ). ಮೂಗು ಇಲ್ಲದಿರುವವನು : ಮೂಗಿಲಿಯೆಪದಂತಂ ಮನೆವಾಗಿಲ್ಗುಗೆ ಜೋಗಿ ಬಂದನೆಂದೆಳವಕ್ಕಳ್ ಕೂಗಿಡೆ (ಅಕ್ಕ. ೦೪೦-೦೩); ಮೂಗಿಲಿಗಳ ಪುರಕೆ ಸೊಟ್ಟಮೂಗಿಪಾತನರಸನೆಂಬ ಹಾಗೆ ನಿಮ್ಮ ಮೂರ್ಖ ಕುಲಕೆ ಆ ಗನ್ನಗತಕಿ (ಯಾವಣ. ೩೭). [ಮೂಗು + — ಇಲಿ]

ಮೂಗಿಱಿ, ಮೂಂಕೆಱಿ, ಮೂಗಿರಿ (ಕ್ರಿ). ೧. ಮೂಗನ್ನು ಕಿವಿ,—ಚುಚ್ಚು . ೨. (ಆಲಂ) (ವಾಗನೆಯನ್ನು ನೋಡಲು) ಮೂಗನ್ನು ಸಮೀಪಕ್ಕೆ ತರು ; ಮೂಸು : ತುಱುಗಳ್ . . . ತದ್ಬಾಲನಂ ಕಂಡು ಮೂಗಿಱಿಯುತ್ತುಂ ಕುಡಿವಾಲಮೆತ್ತಿ ಕೆನೆಯುತ್ತುಮ್ಮನಂದದಿಂ ಸುತ್ತಿ ಮತ್ತಿಱಿದತ್ತಿತ್ತಲವ್ವಂಕೆ ಪೋಗದಿರೆ (ಶಾಕುಂ. ೦೨-೦೦೬). ೩. ಹೀಯಾಳಿಸು ; ಅವಮಾನಗೊಳಿಸು : ರಿವ್ವಜನದ ವೆರ್ಚಂಗಂ ಪರಾಂಗನಾಜನದ ಮೆಚ್ಚಗಂ ಮೂಗಿಱಿಯಂತೆ ಸೊಗಯಿಸುವ ಗಂಧೇಭ ವಿದ್ಯಾಧರನ ಮೂಗು ತನ್ನ ಸುಮ್ಮ ಕಂಪನಲ್ಲದೆ ಪೇರ ಕಂಪನಾಸೆ ಪಡಪಂತಾದೆದು (ಜಂಜಾ. ೫-೭೫) ; ಉಮ್ಮಳಿಸುಂ . ಮೂಗಿಱಿಗುಂ ಕೆಮ್ಮನೆ ನೆವಮಿಟ್ಟು ದೂಱುಗುಂ ಸೋಂಕುವೆಡಂ ಸುಮ್ಮನಿಸದೆ ಜಡಿಗುಂ ನುಡಿಯುಮ್ಮಿಗುಂಗುಂ ಪತಿಯನೊಲ್ದುದವಳ್ಗುಮುಪ (ಪುದಾ. ೦೦-೨೦). **ಮೂಂಕೆಱಿ** : ೨. ದೆಸೆಗಳ್ಗೆ ಬೆರ್ಚ್ ಮೂಂಱಿವ ವನಮಹಿಷಗಳಿಂ ಮವಹಸ್ತಿಪಂತೆ ಪುರವಾಮ್ಮು ಪುಲಿಗಳಿಪತಿಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು (ಪಣಾ. ೬-೨೪ ಪ). **ಮೂಗಿರಿ** : ಪಿ. ಪುಗಳೆ ಮಗುಳೆನ್ನುವಂ ಮೂಗಿರಿದು ನಗುತ್ತೇದನು (ಪಪಂ. ೦೯-೬೬). [ಮೂಗು + ಇಱ್ಕು]

ಮೂಗು, ಮೂಂಕು, ಮೂಂಕೆ, ಮೂಂಕೆ, ಮೂಕೆ (ನಾ). ೧. ಪಂಚೇಂದ್ರಿಯಗಳಲ್ಲಿ / ಒಂದು ; ಉಸಿರಾಡುವ ಮತ್ತು ವಾಸನೆಯನ್ನು ಹಿಡಿಯುವ ಅವಯವ ; ನಾಸಿಕ; ಘ್ರಾಣೇಂದ್ರಿಯಂ: " ನಿಂಘಿನೀ- ನಾಸಿಕಾ, ನಾಸಾ- ಘ್ರಾಣಾ, ಘೋಣಾ —ಈ ೫ ಮೂಗು " (ಪಣಾಮು. ೩೩-೪೩೭) ; ತಾಂ ತೊನ್ನನಾಗಿ ಮುರುಂಟಿದ ಕೈಯುಂ ಕಾಲುಂ ಬೆರಸು ಮೂಗೊಳಗರ್ದುರಿಗೆ ಸುರಿಯೆ (ಪಣ್ಣಾ. ೦೨೩-೨೩) ; ಕವಿ ಮೆಯ್ ಕಣ್ ನಾಲಗೆ ಮೂಗಿವು ಶಬ್ದಸ್ಪರ್ಶರೂಪರಸಗಂಧಮುದ್ಭವ ಸುವಿದೊಳ್ ತೊತವ್ವುದೆ ಸುವಿಂ (ಪಣಾ. ೦೪-೦೨೬) ; ಮೂಗಿಸೊಳಲು ವಾಕ್ತಗೆ ನೇಗಿಲಿಂ ಕೊಟ್ಟರೆಂಬಂತೆ (ಧರಾಕ್ಷ. ೨-೦೪೯) ; ಅರಸನನಾಜನ ಕುಡಿದ ನೆತ್ತರ ಬಿಸುವೆನು ಮೂಗಿನಲಿ (ಶಾಣ್ಮಃ. ೨೦-೬) ; ಮೂಗಿಲ್ಲ ವವಳಗೆ ಮೂಗಂತಿ ಯಾಕೆ ? (ಗಾಪ). ೨. (ಪಕ್ಷಿಗಳ) ಮೂತಿ ; ಕೊಕ್ಕು : ಚುಂಚು : ಆತರ್ದು ಕಮಂಡಲುಜಲಮಂ ತುಡುಂಕೆ ಕಂಡೊಳ ಗಣಕುದಿ ಕಾಗೆಯ ಮೂಗಂ ಪಿಡಿದುಜಿದಿಜಿಂಕೆ ಮುಜುದಪ್ಪೊಲೆಡಗೆಯ್ವುದಿ ದೊತ್ತಿ ಮುಜಿಂಯ 'ಮೂಗಂ ಬೇಗಂ (ಅರಕ್ಷ. ೬-೬೩) ; ಕ್ಷಿತಿಯೊಳತಿಶಯಮಪ ಮಪ ಪಸಪಲುಗಲ್ದಧರೋನ್ನತಿಗೆರಗಿ ಮೂಗಿನಿಂ ಕಚ್ಚಲುದು ದೊರೆಯದಿರೆ ಗತಿದುಂಬಿದು ಪೋಪ ಶುಕನಿಚಯಮಕ್ಕಲದೆ ದೋಷಮಾ ನವ್ಯಫಲಕವ್ಪುದೇ (ಕುಪಾಂ. ೦-೪೮). ೩. ಮುಂದಿನ ತುದಿ ; ಮುಂಗುಡಿ ; ಅಗ್ರ : "ಮೂಗೆನೆ ಮುಂಗುಡಿಯಕ್ಕುಂ " (ಪಣಾ. ೨೦೬) ; ಮಾಶ್ವ ಊರುಳಿ ಹೊರಳಿ ಮರಳಿ ಬರಲು ತುಟಿಯ ನಪಗಿದ್ದ; ಮುಕ್ಕ ಉಯ್ಯಲಾಟ ನೋಡು ಮೂಗ ಮೂಗ ತೆನೆಗಿದೆ (ಅಂಗಾ. ೦೧೩-೬). ೪. ಪಾತ್ರೆ ಮೊದಲಾದುವುಗಳ ಮೂತಿ : (೬). ೫. ಧಾನ್ಯ, ಕಾಳು ಮೊದಲಾದುವುಗಳ ತುದಿಯ ಭಾಗ : ಪೆಲಗದಲೆ ಬೀಜವನ್ನು ಹುರಿದು ಬೇಳೆಪಾತವಾಗ ಅದರ ಮೂಗನ್ನು ಚೆರ್ಪಡಿಸಬೇಕು (ಪಣ). ೬. ಮಾತನಾಡಲು ಆಗದಿರುವಿಕೆ ; ಮೂಕತನ : 'ಮೂಗ', 'ಮೂಗಬ್ಬೆ' ಪರಾ- P ಈ ಅರ್ಥವನ್ನು ಸಂಸ್ಕೃತದ 'ಮೂಕ' ಶಬ್ದದಿಂದಲೂ ನಿಷ್ಪನ್ನ ಮಾಡುವ ಸಾಧ್ಯತೆ ಇದೆ. **ಮೂಂಕು₂** : ೭. ಗಾಡಿಯ ಮುಂಭಾಗದ ಉದ್ದವಾದ ಮೂತಿ : ಮಿನುಗುವ ಕೊಂಬಿನುಮ್ಮ ಕಿಱುಗೊಂಬಿನ ತಳ್ತರಗೀಲ್ . . . ತೋಱಗೊಂಬಿನ ನೊಗಂ ನಿಡುಗೊಂಬಿನ ಮೂಂಕುಂ ಚಕ್ಕ ಚೆಲ್ವಿನೆ ನಡೆತಂದುವಂದಸುಗೆಯೆಂಬು ನಿಗಟ್ಟಿಯ ತೇರ್ಗಳೆತ್ತಲಾಂ (ಕಬ್ಬಾ. ೨೦೩). **ಮೂಕೆ₂** : ೭. ಕೊನೆಗೆ ಅರ್ಜುನಮ . . . ಎದೆಗೆ ಹೊಡಿದನು. ಅದರಿಂದ ಪೊಂದು ಛೇಷ್ಮನು ರಥದ ಮೂಕೆಗೆ ಒರಗಿದನು (ಪಪಭಾ. ೦೬) ; ಜಾನಕಿ ಗಾಡಿಯ ಮೂಕೆಗೆ ಪವಮ್ಮರಿಸುತ್ತಿದ್ದಳು (ಗಂಜಾ. ೦೦). **ಮೂಕೆಱು** : ೫. ನೂಕಿ ಕೊಯ್ಲೊರಳುಗಳ ಮುಂಡದ ಮೂ[ಣಾಂ. ಮೋ]ಕೆಲಿ ನೆಗೆದೊಗುವ ನೆತ್ತರು ನಾಕವನು ಸಾರಿದುದೆನಲು ಸವಜ್ಞೆದನು ಪರಲುಲವ (ಶಾಣ್ಮಾ.ರಾ. ೬-೨೨). ೬. ಅಜ್ಜು ಮುಜ್ಜಿದು ಮೂಕು ಗುಡುಗಿರಿದು ಗುಂಬು ನುಚ್ಚುನೂಱುಗಾಲಾ ಶಕು ಬಿಚ್ಚಿದಂದದಿ ಮಾಯವಾಗಿ ಪೋಗಲು ಕಂಡಚ್ಚರಿಯಮನು ತಾಳ್ದರೆಲ್ಲ (ತೇಪಾಪಂ. ೦೩-೪೪); ಧಾವಶುದ್ಧದೊಳಂತರಿಕ್ಷವಾ ಪುಷ್ಕರಾವ್ಯಾವಿಶೇಷದ ಮೂಕು ಮೆಱ್ದಿವಾ ಬಂಡಿಗಿಂತಸೆಯೆ ಪರಿಗರ್ಮಿಸಿದನು (ಪಕ್ಕೆಕ್ಷ. ೨-೦೦-೬) ; ಬಂಡಿಯ ಮೂಕಿನ ಮೇಲೆ ಕುಳಿತು (ಪುಪಚಾ. ೬). **ಮೂಕೆ₂** : ೭. ಕೊಲ್ಲಾರಿ ಚಕ್ಕಡಿಗೆ ಹೂಡಿರುವ ಎತ್ತುಗಳ ಕೊರಳ ಗೆಜ್ಜೆಯ ಸರವು ಟಿಂಟಿಣಿಸಲು ಮೂಕೆಯಲಿ ಕುಳಿತಿರುವ ಅಳು ಲಾವಣಿ ಹಾಡೆ ಕವಿಗೊಟ್ಟು ಕೇಳುವವು ಬಾನು ಬಯಲು ! (ಜಾಪಾ. ೩-೧೩).

ಮೂಗ ಕೊಯ್ = (ಅಲಂ) ಅವಮಾನಗೊಳಿಸು ; ಮರ್ಯಾದೆಯನ್ನು ಕಳೆ : ಬಾಗಿದ ಬಿಲ್ಲಿನಲಿ ರಾಮರ ಮೂಗ ಕೊಯ್ದನು ಮದುವೆಯಲಿ (ಶಾಣ್ಮಿ. ೬-೦೦). **ಮೂಗನುಳಿಹು** = (ಅಲಂ) ಮರ್ಯಾದೆಯನ್ನು ಕಾಪಾಡು : ಮಾನವನ್ನು ರಕ್ಷಿಸು : ಅಸುರರ ಕೊಂಬಮರರ ಮೂಗನುಳಿಹಿದ ಬಿಸುಗಣ್ಣನುರುನಾಸಿಕೆ ವಸುಧೆಯೊಳಿಲ್ಲಾಪಮಾನ (ಶಾಣಾಣಂ. ೬-೦೬) ; **ಮೂಗಿಗೆ ಕವಡೆ ಕಟ್ಟಿಕೊಳ್ಳು** = (ಅಲಂ) ಎದುರು ಮಾತನಾಡದೆ ಜೀತದಾಳಾಗಿರು. — ಅಧೀನವಾಗಿರು ; **ಮೂಗಿಗೆ ಕವಡೆ ಕಟ್ಟಿಕೊಂಡು** ಆ ಹುಡುಗಿ ಒಬ್ಬಳೇ ದುಡಿದು ಸಾಯಬೇಕು (ಸಿಂಡಿ. ೬೨) ; ಇಷ್ಟನ್ನೆಲ್ಲ ಹೇಗೊ ಸುಸಿಕೊಂಡು **ಮೂಗಿಗೆ ಕವಡೆ ಕಟ್ಟಿಕೊಂಡು** ಹೋಗುತ್ತಿದ್ದರೂ (ಮುಖಾ. ೩). **ಮೂಗಿಗೆ ತುಪ್ಪ ಹಚ್ಚು** = (ಅಲಂ) ಆಸೆಯನ್ನು ತೋರಿಸು ; ಬಯಕೆಯನ್ನು ಹುಟ್ಟಿಸು : ಶಿವಪೂಜೆ, ಗುರುಸೇವೆಗಳ ನೆವಮಾಡಿ ದೊರೆಗಳ **ಮೂಗಿಗೆ ತುಪ್ಪ ಹಚ್ಚಕೂಡ್ರಿಸಬೇಕೆಂದು** ಮಾಡಿದ್ದಾಳೆ! (ಗಿರಿ. ೦೮೯) ; ನರಗುಂದ ಜಕಾತಿ ಕಟ್ಟಿ ಕೆರ್ಸಾ ಕೊಡ್ಸೀನಿ ಅಂತ **ಮೂಗಿಗೆ ತುಪ್ಪಾ ಹಚ್ಚಕೂಡಿಸಿದಾ** (ಕರುಣಾ. ೬೬)· **ಮೂಗಿಗ ನೇರಕ್ಕೆ ಮಾತನಾಡು** = (ಅಲಂ) ತನ್ನ ಅನುಕೂಲಕ್ಕೆ ತಕ್ಕಂತೆ ಮಾತನ್ನಾಡು; ತನಗೆ ಸರಿಯಾಗುವಂತೆ ಮಾತನ್ನಾಡು : ನಿನ್ನ **ಮೂಗಿನ ನೇರಕ್ಕೆ ಮಾತನಾಡಬೇಕಾದರೆ** ಹೆಂಗಸರನ್ನು ಹೆಳವರನ್ನು ಮಂಕರನ್ನು ಮೂಢರನ್ನು ಕೇಳು ಹೋಗು (ಕಣಾ. ೧೧)· **ಮೂಗಿಗೆ ಮೇಲೆ ಬೆರಳಿಡಿಸು** = (ಅಲಂ) ಅತಿಯಾಗಿ ಆಶ್ಚರ್ಯಪಡಿಸು. — ವಿಸ್ಮಯಗೊಳಿಸು : ಆಕದು . . . ತನ್ನ ಪ್ರಬಲವಾದ ಪರಾಕ್ರಮದಿಂದ ಮಹಾ ಚತುರರಾದ ಇಂಗ್ಲಿಷರಿಗೆ ಕೂಡ **ಮೂಗಿನ ಮೇಲೆ ಬೆರಳಿಸಿರುವಳು** (ಭಾಷ್ಯಾ. ೦೦೬). **ಮೂಗಿನಲಿ ಬೆರಳಿಡು** = (ಅಲಂ) ಅತಿಯಾಗಿ ಆಶ್ಚರ್ಯಪಡು. — ವಿಸ್ಮಯಗೊಳ್ಳು : ಕೊಂಡು ಬರುತಿದೆ ಭುವರು ಮನ್ನೆಯ ಗಂಡನಾಗ್ಮೆ ಜಯ ಎನೆ ಮತಿಗೊಂಡು **ಕುರುಪತಿ ನೋಡಿದನು ಮೂಗಿನಲಿ ಬೆರಳ್ಟು** (ಶಾಣ್ಮಿದ್ಯಾ. ೬-೨೬). **ಮೂಗಿನವರಿಗೆ ಕೆಲಸ** = (ಅಲಂ) ಬಹಳವಾದ ಕೆಲಸ ; ಅತಿಯಾದ ದುಡಿಮೆ : ದೇಸಾಯರ ಸಮಯ ಅವನಿಗೆ **ಮೂಗಿನವರಿಗೆ ಕೆಲಸ** (ಚಿತ್ತಕ. ೬)· **ಮೂಗು ಜಾಡು** = (ಅಲಂ) ಮತ್ತೊಬ್ಬರ ವಿಷಯದಲ್ಲಿ ತಲೆಹಾಕು ; ಅಧಿಕಪ್ರಸಂಗ ಮಾಡು : ನಿಮ್ಮ ಮನೆತನದ ವಿಷಯದಲ್ಲಿ ಮೂರನೆಯವನಾದ ನಾನು **ಮೂಗುಜಾಡಲು** ಬರುವುದು ಸರಿಯಲ್ಲವೆಂದು ನನಗೂ ಅನಿಸುತ್ತದೆ (ಮಾಣಿ. ೬೬). **ಮೂಗು ತಿಕ್ಕಿಸು** = (ಅಲಂ) ನಿರುತ್ತರಗೊಳಿಸು ; ಸೋಲಿಸು : ತುಂಬ ಕೇಶವನು ಸುಮ್ಮನಿರಲಿಲ್ಲ. ಅವನು ಇಂಥ ಎಷ್ಟೋ ಮಾಸ್ತರರನ್ನು **ಮೂಗು ತಿಕ್ಕಿಸಿದ್ದನು** (ಕಜಾಂ. ೨೩). **ಮೂಗು ತಿಕ್ಕು** = (ಅಲಂ) ನಿರುತ್ತರ ಗೊಳ್ಳು ; ಶರಣಾಗು ; ಸೋಲು : ಅವನ ಮುಂದೆ ದೊಡ್ಡ ದೊಡ್ಡ ಪಾಷಾನಿಗಳು **ಮೂಗುತಿಕ್ಕಬೇಕು** ! (ಕುಂಪಾ. ೨೨) ; ಶ್ರೀಮಂತರದುಂಗೆ ತವರಿಗೂ **ಮೂಗುತಿಕ್ಕಲಿಲ್ಲ** (ಚಿಪಾ. ೫೭). **ಮೂಗುಮುರಿ** = (ಅಲಂ) ಅವಮಾನಗೊಳಿಸು ; ಅವಹೇಳನ ಮಾಡು : ಮುಂದಲಿ **ಮೂಗು ಮುರಿದಿಟ್ಟಿದರೋ** ನಿನ್ನಡೆಗೆ ನನ್ನ (ಚಿಪ್ಪ. ೬೯); ವಯಸ್ಸಿಗೆ ಬಂದ ಹೆಣ್ಣಿಗೆ ಬೇಗ ಮದುವೆ ಮಾಡದಿದ್ದರೆ ನೋಡಿದವರೆಲ್ಲಾ **ಮೂಗುಮುರಿಯುತ್ತಾರೆ** (ಮುಳಿ. ೬೬); ಮುಮಾದೇವಿ **ಮೂಗು ತಿರುವಿದಳು, ಮೂಗುಮುರಿದಳು** (ಕಜಾಂ. ೨೯)· **ಮೂಗು ಮೇಲಾಗು** = (ಅಲಂ) ಗೌರವವು ಹೆಚ್ಚಾಗು ; ಪ್ರತಿಷ್ಠೆಯು ಹೆಚ್ಚು : ಬಾರ ಹೆಂಗಸರು ಆಕೆಯ ಸಹಜ ಸಿಂಗಾರ ಬಣ್ಣಿಸಿದರು, ಚೇಸುಯರ **ಮೂಗುಮೇಲಾಯಿತು** (ಚಿಪಾ. ೦೦೦). **ಮೂಗು ಹಾಕು** = ಮೂಗುಚಾಯು : "ನೀವು ನಮ್ಮ ಮಾತಿನಲ್ಲಿ ಮೂಗು ಹಾಕುವುದು ಬೇಡ" ಎಂದು ಖಂಡಿತ ಅವರಿಗೆ ಎಚ್ಚರಿಸಿದಳು (ಪಕ್ಕಾ. ೦೮೮)· **ಮೂಗುಹಾಯಿಸು** = ಮೂಗುಜಾಯಿಸು : ತಮ್ಮ ಪ್ರವಚನ ಹಾರದಲ್ಲಿ ಮೂಗು ಹಾಯಿಸುವ ಪ್ರೇಕ್ಷಕಾತ್ಮಗಳಿಗೆ ಕಾಣಿಕೆಗಳನ್ನು ವ್ಯಾಪಿಗಳನ್ನು . . . ಆರ್ಪಿಸುತ್ತಾರೆ (ಶಂಕರ. I. ೬೬೦). **ಮೂಗು ಹೋಗು** = (ಅಲಂ) ಅವಮಾನವಾಗು ; ಮರ್ಯಾದೆಯು ಹೋಗು : ಈಗಲೀ ಧರ್ಮಶ್ರವಣ ನೀವಾಗಲೇಜಿಸಿ ಮಡಿದ ಭಾವಿಗೆ **ಮೂಗುಹೋದಂತೆ** ಮಜಿಸಿದಲಾ ಮಾತುಗಳು ಹರಿಸುವವೆ (ಶಾಣ್ಮಿ. ೫೮-೬೪). **ಮೂಗುಳ್ಳವ** = (ಅಲಂ) ಮಾನವಂತನಾದವನು : ಸ್ವಾಭಿಮಾನಿ : ಈ ನವಂಶ ರೊಡನೆ ಹುಟ್ಟಿದ ನಾನು **ಮೂಗುಳ್ಳವನೆ** ದುಮಾನಿ (ಶಾಣ್ಮಿ. ೬-೨೬).

{ದ್ರ.ಗಿ ತಮಿ. ಮೂಲ. ಮೂಕ್ಕು ; ಕೊಡ. ಪೂಕೆ ; ತುಳು. ಮೂಗು, , ಮೂಕು ; ತೆಲು. ಮೊಕ್ಕು ; - ಕೋಲಾ. ಮುಕ್ಕ್ , ಮೂಕ್ಕ್ ; ಕಾಯ್ಕಿ. ಮುಂಗರ್ ; ಪರ್ಜಿ. ಕೂಗ್, ಮುಂಗೆರಿ ; ಕುವಿ. ಮುಂಗೆಲಿ, ಮೂಂಗೆಲ್ಲಿ]

ಮೂಗುಂದ (ನಾ)· ಒಂದು ಪ್ರದೇಶದ ಹೆಸರು : ಮೂಗುನ್ದ ಪನ್ನೆರಡು ಪುರವಟ್ಟೆ ಪನ್ನೆರಡುಂ ಕಲ್ತುತ್ತಿಯೆಂಬುಂ (ಪಳೆ. VIII. ೩೩೮ಬಿ. ೧೭೨-೧೭; ೧೧೨): ಬಿಜ್ಜರಸರ್ ಎಡಮಟ್ಟಮೆಚ್ಚತ್ತುಮಂ ರಟ್ಟಪಲ್ಕಯೆಬ್ಬತ್ತುಮಂ ಮೂಗುನ್ದಂ ಪನ್ನೆ × × ತ್ರಿಭೋಗಾಭ್ಯಂತರಸಿದ್ಧಿ (ಇಇ. IV. ೨೨-೦೦ : ೧೨೬ಬಿ ೫೫). [ಮೂ೨ (< ಮೂಱು) + ಕುಂದ೫]

ಮೂಗುಗಾಯ (ನಾ)· ಹೊರಗೆ ಗಾಯ ಕಾಣಿಸದಿದ್ದರೂ ಒಳಗೇ ನೋಯುವ ಗಾಯ : ಅವನು ಜಾರಿಬಿದ್ದುದರಿಂದ ಮಂಡಿಯಲ್ಲಿ ಮೂಗುಗಾಯವಾಗಿದೆ (ಲೂಪ್ತ). [ಮೂಗು + ಗಾಯ]

ಮೂಗುಜಾತಿ (ನಾ)· ಮೂತನ್ನಾಡಲು ಬಾರದ ಪ್ರಾಣಿ, ಪಕ್ಷಿ ಇತ್ಯಾದಿ : ಮೂಗುಜಾತಿಗಳ್ ಮೇಗುದು ಪುರ್ ಜಲಂ ಕುಡಿವುದಿರ್ವಿಡಮುಂ ಪುಟುವಂತುಮಿದ್ದಸಂಸೇವನೆಯುಲ್ಲಿ ಮೆಯ್ಯಳಿಯದಿರ್ದವನೆಂ ಗಳ ಕೊಲ್ವುದೊಳ್ಳಿತೇ (ಜಿಪಾ. ೦೦-೯). [ಮೂಗು + ಜಾತಿ]

ಮೂಗುಡ್ಡೆ, ಮುಗುಡ್ಡೆ ; ಮುಗ್ಗುಡ್ಡೆ (ನಾ)· ೧. ಮೂರು ಗುಡ್ಡೆ, –ರಾಶಿ : ಮುಗ್ಗುಡ್ಡೆ, ಮೂಗುಡ್ಡೆ : ಮುಕ್ಕೊಡೆ, ಮೂಗೊಡೆ (ಕಾ೪ಬ. ೪೫೩ ಕ್ರಿಪ್ರ). **ಮುಗುಡ್ಡೆ** : ೨. ಮೂರು ಗಡಿಗಳು ಸೇರುವ ಕಡೆ ಗುರುತು ಮಾಡಿರುವ ಗುಡ್ಡೆಗಳು : ತೆಂಕಲು ಬೆಳ್ಳಸೂರ ಪೊಲದ ಸೀಮೆ ನೆರಿತ್ಕದಲು ಕಂಬದ ಬಸದಿಯ ಬೆಳ್ಳಸೂರ ಪೊಲದ ಮೇರೆಯ ಮುಗುಡ್ಡೆ (ಶಾಇಇ. XX. ೬೮-೭೫; ೧೧೨); ಮಾದೀಹಳಿಯ ಬ್ಲೇಗೂರ ಮುಗುಡ್ಡೆಲಿ ನೆಟ್ಟ ಕಲು (ಎಳೆ. XIV. ಸುಕ್ಕುಕ್ಷೇ. ೦೭೭-೭; ೯). **ಮುಗ್ಗುಡ್ಡೆ** : ೧. ಮುಗ್ಗುಡ್ಡೆ, ಮುಪ್ಪುಲರ್ (ಕಾಇಬ. ೦೫೮ ಕ್ರಿಪ್ರ) ; ಮುಗ್ಗುಡ್ಡೆ, ಮುಚ್ಚ್ವಡಿ (ಕಾ೪ಬ. ೬೮ ಕ್ರಿಪ್ರ). ೨. ಹತ್ತ ಸೀಮಾಸ್ಥರಮ್ ಅಗ್ನೇಯದ ಕೋಣೊಳ್ ಮುಗ್ಗುಡ್ಡೆಯ ಸೊಸೆಕಲ್ಲೆಂಬ ಬಳಿಯ ಕಲ್ಲು (ಕ್ರಿಇಂ. ೦೯೨೦, ೦೯-೦೭; ೯೮೧); ಕರ್ಮುಗಿನ ಪೊಲದ ಕಟ್ಟರೆ ವಾಡದ ಪೊಲದ ಮುಗ್ಗುಡ್ಡೆಯ ಬೇಳೆದ ಮರಂ (ಸಿಇಇ. XI-i. ೧೨-೦೪; ೧೦೦೩) ; ಅದಕೆ ಪಶ್ಚಿಮ ಕಾರಡಿಕೆ ಬೇವಿನ ಹಳ್ಳಿ ಪೊನ್ನಾಪುರ ಹೊಲ ಕೂಡಿದ ಮುಗ್ಗುಡ್ಡೆ ಬಳಿಯ ವಾಮನಸಮುದ್ರೆ (ಎಇ. XIV. ೨೨೫-೨೫೮; ೧೬೬). ೩. (?) : ಪಿಡಿದ ಶಂಕುಪ್ರಮಾಣಿನ ಗೇಣಿಂದ ಉತ್ತಮಾಗಿರೆ ಬೀಸಿ ಸೈತಿರಿಸಿ ನಡುವೆ ಶಂಕುವುಮಂ ಪೊಕ್ಕು ಪುಜಮಟ್ಟ ನೆಲಸಾ ರೇವೆಯೊಳರ್ಚಾಟಿಪ್ಪು ಪಿಡಿಯ ಸೂತ್ರವಂ ಪಡುವಲುಂ ಮೂಡಲುಮಾಗಿರ್ಪುಂ ಮತ್ತಲ್ಲಿ ಮಚ್ಚಿಂ ಬೀಸೆ ಬಡಗಲುಂ ತೆಂಕಲೆಂದಜ್ಞೆ ಮೇಣ್ದ್ರಾವ[ತಾ]ರಿಯಂ ಸೋಡಿ ಮುಗ್ಗುಡ್ಡೆಯಂ ನಿಡುಂ ಕೊಳ್ಗೆ (ಕೋಇಇ. ೬-೦೬)· [ಮೂ೨ (< ಮೂಱು) + ಗುಡ್ಡ೫]

ಮೂಗುತಿ, ಮೂಕುತಿ (ನಾ)· ಮೂಗಿನಲ್ಲಿ ಧರಿಸುವ ಒಂದು ಬಗೆಯ ಒಡವೆ : ನಾಸಾಭರಣ : ಮೂಗುಬೊಟ್ಟು : ಹೊನ್ನೋಲೆಯು

ಚನ್ನೆಗೆ ಮೂಗುತಿಯ ಪುಂಗುಳ್ಗೆ . . . ಉದ್ಯಾನಗೆ ರಕ್ಷಣಾರ್ಥಂ ತಂದೆ ನಿಯಾಮಿಸಿಕೊಟ್ಟ . . . ಶೋಡಷಪ್ರಹಸ್ತವಿಳಾಸನಿಯರ್ಮರಸು ಸಡೆತಂದು (ಗಂಕ. ೩-೧೧ ಪ); ಮಾಣಿಕ್ಯದ ಕರ್ಣಪೂವಪದ ಮೂಗಿಪ ಮೂಗು [ಜಾಣಾಂ. ಕು]ತಿದು ಪಚ್ಚೆಯ ಪದಕದ . . . ಶೃಂಗಾರಂ ಪಳಂಚನಾಗೆ (ಧರ್ಮಶ. ೨-೨೬ ಪ); ಮುತ್ತಿನ ಮೂಗುತಿಯುಂ ವಿರಚನೆಗೆಯ್ದಳ್ ದೊರ್ವಳ್ ತರುಣಿಯ ನಾಸಾಮುಕುಳದೊಳು (ಜಯಣ.-೩-೯); ಮೂಗುತಿ ಮುಂಭಾರ ಎಣೆಗಟ್ಟು ಹಿಂಭಾರ ಸನ ಗೆಕ್ಕೆಯು ನೀ ತಂದ ಬಿಣ್ಣ ಸೆರಿ ಭಾರ (ಶಕ್ಯಾಖ. ೭೩); ಮೂಗಿಗಿಂತ ಮೂಗುತಿ ಭಾರ (ಗಾದೆ). **ಮೂಕುತಿ** : "ಘೋಣಾಂಕುಶಂ ಪೇಟಿ ಮೂಕುತಿಯಕ್ಕುಂ" (ಶುಂಗಣ. ೯೯-೨೩) : ಮುಖಬಿಂಬದೊಳ್ ಮುತ್ತಿನ ಮೂಕುತಿಯುಂ ಮೇಳ್ಕೈಸಿ (ಶುಖಶ. ೫. ೦೩೭-೦೯); ಭೂಗಧಿನಾಥವಲ್ಲಭಮು ರೂವು ಸಮಸ್ಯನಿಳಿಂಪಕಾಮಿನೀ ಪೂಗದ ಬೆಲ್ವ ಮೂಕುತಿಗಳಲ್ಲಿಯ ಮುತ್ತುಗಳಲ್ಲಿ ಬೀಬಿಸರ್ಕೆ (ಜಾರಕ ೬-೩೮); ತುಜುಗಿದ ದಿವ್ಯಕಾಂತಿಯ ಮೂಕುತಿಯಿಂದ ಸರೀಜಗಂಧಿ ಯೊಪ್ಪಿದಳು (ಶಂಪಾ. ೯-೭೫). [ದೇ.ಪ ತಮಿ. ದುಲ. ಮೂಕ್ಕುತ್ತಿ ; ತುಳು. ಮೂಕುತಿ, ಮೂಂಕುತಿ. ಮೂಂಕುತ್ತಿ, ಮೂಕುದಿ. ಮೂಗುತ]

ಮೂಗುತಿಸೊಪ್ಪು (ನಾ). ಒಂದು ಬಗೆಯ ಸೊಪ್ಪು : ಮೂಗುತಿಸೊಪ್ಪು. ಹೊನ್ನಾವರಿಕೇಸೊಪ್ಪು (ಪ್ರಾಶಿ. ೭೭-೦೩೯೯).

[ಮೂಗುತಿ + ಸೊಪ್ಪು]

ಮೂಗುದಾಣ, ಮುಗದಾಣ, ಮುಗುದಾಣ (ನಾ). ೧. ಪಸು, ಎಮ್ಮೆ ಮುಂತಾದ ಪ್ರಾಣಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಮೂಗಿಗೆ ಹಾಕುವ ದಾರ ; ಮೂಗುದಾರ : ಕೋಣನಿಗೆ ಮೂಗುದಾಣವಿರಲಿಲ್ಲ (ಶಂಪಾಕು. ೪೩). ೨. (ಆಲಂ) ಅಂಕೆ ; ಹಿಡಿತ ; ನಿಯಂತ್ರಣ : ವೇಗವತಿನಾಮ ವಿಜಯವಿಶ್ವಲ ವೇಗ ಮೂಗುದಾಣ ಇಕ್ಕಿ ಮೊಗ ಮಾಡಿ ಪದು (ಪೋಷ್ಟಾಂ. ೪೩-೬); ಕೋಣನ ಮೈತಿಗೆ ಕಳ್ಳಂ ಕುಡಿಸಿ, ಗತಿಗೆ ಮೂಗುದಾಣವನಿಕ್ಕಿ, ಪಡಪಡಿಸು ಚೇಸರವನಾರಿಸಲ್, ಕುಣಿಕುಣಿಸಿ ಸೆಳೆದೊಯ್ಯುತಿಹನೆಮ್ಮ ಪಾಸ್ಯವಿದ್ಯಾಕುಶಲಸೇನಾನಿ ! (ಕೃಷ್ಣಾಖ. ೬೯೯-೭೦೦); ಸಂಪತ್ತಿನ ಮೂಗುದಾಣವ ನಿಮ್ಮ ಕೈಯಲ್ಲಿದೆ ಎನ್ನುತ್ತಾರೆ (ಜಾಮ್ಯಾಖ. ೦೩). **ಮುಗದಾಣ** : ೧. "ಮುಗದಾಣ ಹಾಕಿ ಹಗ್ಗ ಪಚ್ಚುವ ಎತ್ತು ಸುಮ್ಮನೆ ಯಜಮಾನನ ಭಾರವನ್ನು ಹೊರುವಂತೆ, ವರ್ಣಾಶ್ರಮಬದ್ಧರಾದ ಜನರು ಈಶ್ವರನು ನಿಯಮಿಸಿದ ಕರ್ಮಗಳನ್ನು ಸುಮ್ಮನೆ ಮಾಡುತ್ತ ಹೋಗುವರು (ಜಾಮ್ಯಾಕ. ೬೨) ; ಸಾಕ್ರೆಟೀಸ ಹನನ ಬ್ರೂನೋನ ದಹನ . . . ಎಲ್ಲೆಡೆಯೊಳೂ ಜ್ಞಾನ – ನಂದಿಗೇ ಮುಗದಾಣ ! (ಶುಶ್ರಾ. ೬೯-೯). ೨ ಗೀತೆಯು . . . ಕಾನುಗಳನ್ನು ಕೊಲ್ಲಲಿಕ್ಕೆ ಹೇಳುವುದಿಲ್ಲ. ಕಾಮಗಳಿಗೆ ಮುಗದಾಣವನ್ನು ಹಾಕಲಿಕ್ಕೆ ಹೇಳುತ್ತದೆ (ಗೀತಾಸಂ. ೯೯) ; ಈ ಮೆರವಣಿಗೆಯ ಮುಗದಾಣ ಅವರ ಕೈಯಲ್ಲಿತ್ತು (ಶಮಾಬ. ೨೦೬). **ಮುಗುದಾಣ** : ೧. ಎತ್ತ ಕಾಯುವಣ್ಣ ನಮ್ಮೆತ್ತ ಕಂಡೇನೊ ಮಾತ್ತೀನ ಹಗ್ಗ ಮುಗುದಾಣ ಹಾಕ್ಕೊಂಡು ಹುತ್ತೀನ ಕೆಳಗ ಮಲಗ್ಯಾನೊ (ಜಠಗ. ೦೭), ಹಿಡಿ. ಹಗ್ಗ. ಮೀಣ- ಜತ್ತಿಗೆ, ಬಾರಕೋಲು- ವ್ಯಕ್ಕತ- ಮುಗುದಾಣ ಇಲ್ಲ ಸಾವಾಸ್ಯವಾಗಿ ಎತ್ತುಕಟ್ಟಿದವರ ಮನೆಯಲ್ಲಿ ಇರತಕ್ಕ ಪಸ್ತುಗಳೇ (ಪಠಕ. ೦೭೭). ೨. ಪೂಘಸಂಪ್ರದಾಯದ ಮುಗುದಾಣದಿಂದ ಪೆರೆದ ಜನಗಳು ಕವಲೆತ್ತಿನಂತೆ ತಲೆಹಾಕಿ 'ಹೂಂ' ಎಂದರು (ಜಠಣಕ. ೩೩); ಕಿಗುರಿ ಓಡುತ್ತಿರುವ ಕಾಲಿಗೆ ಪಥಿಕನ ಬಿಯುಕಿಯೇ ಮುಗುದಾಣ (ಶಕ್ಯಶ್ಯ. ೨೩೭). 'ಮೂಗುದಾರ' ಪರಾ. [ಮೂಗು + ದಾಣ (< ದಾವಣೆ). (ಮರಾ. ಮುಗದಾಣ]

ಮೂಗುದಾರ (ನಾ). = ಮೂಗುದಾಣ ೧ : ಮೂಗುದಾರ ಹಾಕಿ ಎತ್ತುಗಳನ್ನು ಎಳೆಕೊಂಡು ಹೋಗೋ ಹಾಗೆ ಇನ್ನೊಬ್ಬರ ಭಾವನೆಗಳನ್ನು ಎಳೆಕೊಂಡು ಹೋಗಬಾರದು (ಪಚಗದ. ೩೩). ' ಮೂಗುದಾಣ' ಪರಾ. [ಮೂಗು + ದಾರ]

ಮೂಗುದುಜ್ಜಿಸು (ಕ್ರಿ). ಮೂಗನ್ನು ಕೆರೆದುಕೊಳ್ಳು : ಅವಿರ್ವರ್ಗ ಮೊರ್ವರೊರ್ವರೊಳ್ ಮೂಗುದುಜ್ಜಿಸಲಾಗದ ಕಡ್ಡಮವರ್ಗಂತು ಪೊಡಂಬಡಾಗದು (ಪಂಪಣಾ. ೦೨-೨೦೩ ಪ) ; ಈತಂ ಪುನೆಯ ಕಿಜುಕುಳ ವ್ಯಸನಂ ಮಾಡದಿರೆ ತನ್ನ ಕಿಜುಪುಬ್ಬೆ ಜಡಿದೊಜೆ ಮುಳಿದು ಬಂದೊಂ ಮೂಗುದುಜ್ಜಿಸಲಾಜದ ಕಡ್ಡನಂದಾ ತೆಜನಂ ಪೇಟ್ದು (ಜಾಭಂಪು. ೬೩). [ಮೂಗು + ತುಜ್ಜಿಸು]

ಮೂಗುನಾಚಿ (ನಾ). (ಆಲಂ) ನಾಚಿಕೆಗೆಟ್ಟವನು ; ಲಜ್ಜೆಗೇಡಿ : ಈ ಸಕಲದೊಳಗೆ ಒಂದು ಸಯವಿಲ್ಲದೆ ನಾವು ಹಿರಿಯರು ನಾವು ಲಿಂಗವಂತ ರೆಂಬರು ಇದಿರ ಕೈಯಲ್ಲಿ ಎನಿಸಿಕೊಳುತ್ತಿಹರು ಮನನಾಚದೇ ಇಂತಾ ಮೂಗುನಾಚಿಗಳ ಮೆಚ್ಚುವನೇ . . . ಪೂರ್ವಾಚಾರ್ಯ ಸಂಗನ ಬಸವಣ್ಣ (ಶಪ್ರಕ. ೭೦-೬೯೦). [ಮೂಗು + <ನಾಣ್ಚು + —ಇ]

ಮೂಗುನೇಣು (ನಾ). = ಮೂಗುದಾಣ ೧ : ಹೇರ್ಗಳಂ ಬಿಸುಟ ಹೋರಿಗಳ ಚಪ್ಪರಣದಿಂ ನಿಲಿಸಿ ಮೂಗುನೇಣಡುತೆ . . . ನಾನಾ ತೆಜದ ಸಮಳಿಗಳ್ ನಡೆದು ಬರುತಿರ್ದರಂದು (ತಿಪು. ೪೭-೬೩).

[ಮೂಗು + ನೇಣು (<ನೇಣ್)]

ಮೂಗುನೋವು (ನಾ). ೧. ಮೂಗಿನಲ್ಲಿ ಉಂಟಾಗುವ ನೋವು. – ಬಾಧೆ : ಮೂಗಿನ ಮೇಲೆ ಕುರು ಎದ್ದು ಅವನು ಮೂಗುನೋವಿನಿಂದ ಪರದಾಡುತ್ತಿದ್ದಾನೆ (ಜಾಪ). ೨. = ಮೂಗುಗಾಯ : ಅವಳು ಮೇರಿನಂದ ಬಿದ್ದುದರಿಂದ ಮೈಕೈಯೆಲ್ಲ ಮೂಗುನೋವಾಗಿದೆ (ಜಾಪ). ೩. (ಆಲಂ) ಹೇಳಿಕೊಳ್ಳಲಾಗದ ಸಂಕಟ – ಹಿಂಸೆ ; ಮೂಕ ವೇದನೆ : ಅವನು ತನ್ನ ದುಃಖವನ್ನು ಯಾರೊಂದಿಗೂ ಹೇಳಲಾರದೆ ಮೂಗುನೋವನ್ನು ಅನುಭವಿಸುತ್ತಿದ್ದಾನೆ (ಜಾಪ). [ಮೂಗು + ನೋವು]

ಮೂಗುಬಟ್ಟೆ, ಮೂಗುಬೊಟ್ಟು (ನಾ). = ಮೂಗುತಿ : ಅವಳು ಧರಿಸಿರುವ ಮುತ್ತಿನ ಮೂಗುಬಟ್ಟು ಶುಂಬ ಚೆನ್ನಾಗಿದೆ (ಜಾಪ). **ಮೂಗು ಬೊಟ್ಟು** : ಪುನೋರಮೆ . . ಸುಂದರಯುವತಿ . . . ಮೂಗಿನಲ್ಲಿ ಮೂಗುಬೊಟ್ಟು ಕೈಯಲ್ಲಿ ಗಾಜಿನ ಎರಡೆರಡು ಮುತ್ತಿನ ಒಂದೊಂದು ಬಳೆಗಳವ (ಶ್ರಕಾಖ. ೨). [ಮೂಗು + ಬಟ್ಟು]

ಮೂಗುಬೊಟ್ಟು ' ಮೂಗುಬಟ್ಟು' ನೋ.

ಮೂಗುಬ್ಬಸ (ನಾ). = ಮೂಗುನೋವು ೩ : ಮಾಸುಕಿದರಿ. ಶರ ಜಾಲವನು ಖಂಡಿಸಿ ರಘುಕ್ಷಿತಿನಾಥ ಮೂಗುಬ್ಬಸವ ಮಾಡಿದನೆಸುಗೆಯಲಿ ಬಳಿಕಾ ವಿಶಾಟಂಗೆ (ತೂರಣ. ೩-೬-೩೬) ; ಚಿಂತಾಸಾಗರದೊಳ್ ಮುಟುಂಗಿದ ಮೂಗುಬ್ಬಸಮುಬ್ಬಿದು . . . ಪೋಪೆಮೆಂಬುದುಂ (ಶಪಪಂ. ೪೯-೦೩) ; ಬಡತನದ ಮೂಗುಬ್ಬಸವನ್ನು ಇದಕ್ಕಿಂತ ಮೇಲಾಗಿ ವ್ಯಕ್ತಪಡಿಸುವುದು ಹೇಗೆ ! (ಪಜಾಕೃ. ೩೭). [ಮೂಗು + ಉಬ್ಬಸ]

ಮೂಗುಮಾಜಿ (ನಾ). (ಆಲಂ) ಮರ್ಯಾದೆಯನ್ನು ಕಳೆದುಕೊಂಡ ವ್ಯಕ್ತಿ ; ಮಾನಗೇಡಿ ; ಅಜಾದಜೂದು ಮತಿಗೆಟ್ಟು ಮಾನಪಕುಜಿಯಲಾ ಸರೆಕಂಡು ಕಂಪಚ್ಚರದ ಖಿಳಪಲಾ ವಿವೇಕದ ಮೂಗುಮಾಜಿಯಲಾ (ಕಾಖ್ಯಾ. ೬-೬೦) ; ತಮ್ಮ ನಗರದ ಸೂಳೆಗೇರಿಯೊಳ್ ಪಂಥವಂ ನಂಡಿದು ನಿಲ್ಲದೆ ಬಂದ ಮೂಗುಮಾಜಿಗಳಿವರಲಾ (ಕಪಶ್ರ. ೨೩-೬). [ಮೂಗು + ಮಾಜು + — ಇ]

ಮೂಗುರಿ ' ಮುಂಗುರಿ' ನೋ.

ಮೂಗುರ್ಚಿ (ನಾ). ೧. ಮೂಗು ಚುಚ್ಚಿಸಿಕೊಂಡವನು ; ಮೂಗುದಾರ ಹಾಕಿಸಿಕೊಂಡವನು. ೨. (ಆಲಂ) ಬೇರೆಯವರಿಗೆ ಅಧೀನನಾಗಿರುವ ವ್ಯಕ್ತಿ,– ಆಳಾಗಿರುವ ವ್ಯಕ್ತಿ ; ಲೋಕದಲಿ ವಿಗಡ

ಬಿರುದನು ಬಿಸುಟು ಬಡಿಹೋರಿಗಳು ಪ್ರಾಂತಪರಂತೆ ಮೂಗುಚ್ಚಿಗಳ ದಿನ್ನಾರುಂಟೆಸುತ ವಂಜಿಗಿದಳು ನಳನಾಕ್ಷಿ (ಭಾಗ್ಯಾ. ೬-೩೦).

[ಮೂಗು + ಉಚ್ಚು + — ೨]

ಮೂಗುಚ್ಚು (ಕ್ರಿ)· (ಎತ್ತು, ಎಮ್ಮೆ ಮೊದಲಾದುವುಗಳ) ಮೂಗು ದಾರವನ್ನು ಕಳಚು : ಸ್ವೇಚ್ಛೆಯಾಗಿ ಬಿಡು : ಮೂಗುಚ್ಚಿದಮ್ಮೆ ವೋರಿಯಂ ಪೆಜಮೆಟ್ಟದ ತಗರುಂ ತಾಗುವಂತೆ ತಂತಮ್ಮೋಜಿದಾನೆಗಳಂ ನೂಂಕಿ . . . ಇಜಿವ ಪದದೊಳ್ (ಪಾಪಪು· ೬-೮೨ ೫)·

[ಮೂಗು + ಉಚ್ಚು]

ಮೂಗುವಡಿಸು (ಕ್ರಿ)· ಮಾತಿಲ್ಲದಂತೆ ಮಾಡು: ಮೌನವಾಗಿಸು; ಮೊಕನನ್ನಾಗಿ ಮಾಡು : ಮತ್ಕವರ ನುಡಿಯಲೀಯದೆ ಮೂಗುವಡಿಸಿ . . . ಕಾಡುತಲ್ಲಿಹುದೊಂದು ನಡ ·ಮೋಹರಾಜಸ (ಕ್ರಿಶಾಂಪು· ೯-೮೬)·

[ಮೂಗುವಡು + — ಇಸು]

ಮೂಗುವಡು (ಕ್ರಿ)· ಮಾತಿಲ್ಲದಂತಾಗು; ಮೌನವಾಗು: ಮೂಕವಾಗು: "ಮೂಗುವಡು (ಮೂಗು + ಪಡು) — ಮೌನೇ" (ಪಜಾಣ); ಮಿಡುಕದೆ ಭೀಷ್ಮ ನೋಡುತಿರು ಕುಂಭಜ ಸುರ್ಕಿರು ಕರ್ಣ ಮಿಕ್ಕು ಮಾರ್ಮಡಿಯದ ಮೂಗುವಟ್ಟರು (ಕಂಪಣಾ· ೬-೩೩); ಗುರುಬಸವ ನಿನ್ನ ಕೋದಿಂ ಸುರಭಿ ಕರಂ ಮೂಗುವಟ್ಟುದೆದು ಕಲ್ಲಾಯುತ್ತು ಪರುವಂ (ಬಸ· ೯-೨); ಬಗ್ಗಿಸೆಲೆ ಕೋಗಿಲೆ ! ಏನೀ ಮಾವರದ ಸೆಳಗೊಂಬಿನೊಳ್ ಮೂಗುವಟ್ಟಿರ್ಪಮ್ ? (ಣಪಚಾ. ೨-೦). [ಮೂಗು + ಪಡು]

ಮೂಗುಸನ್ನೆ (ನಾ). ಮೌನವಾಗಿ ಸಂಜ್ಞೆಮಾಡುವುದು; ಮಾತನಾಡದೆ ಅಂಗಾಂಗಗಳ ಚಲನೆಯಿಂದ ತಿಳಿಯಪಡಿಸುವುದು : ಮೂಗುಸನ್ನೆ ಮಾತ್ರ ಕಾಣಿಸಿದಾಗಿನ ಅನುಭವ ನನ್ನ ಶ್ರೋತೃಗಳಿಗೆ ಲಭಿಸಿರದೇಕು (ಪಂಚಿಮ· ೫೯). [ಮೂಗು + ಸನ್ನೆ]

ಮೂಗುಸಿರ್ (ನಾ)· = ಮೂಗುಜಾತಿ : ಎನ್ನೊಡೆಯ, ತಜ್ಞಸಂದು ತುಜಾಂಗಳನ್ ಕೊಲ್ವೆಯಾ? ಮೂಗುಸಿರ್ಗಳನ್ ತುಜುಬಿ, ಮಂದಿಗಳ ನಿಡಿದು . . . ಕಲಿಗಳೊಳೆ ಕಲಿ ಎಮೆ ನೀನಿಂತು ಬಿಲ್ವೆಮಾ (ಅಕ್ಕಣ್ಣ· ೯-೦೫೬). [ಮೂಗು + ಉಸಿರ್]

ಮೂಗುಸೆಕೆ (ನಾ)· (ಆಲಂ) ಅತಿಯಾದ ಸೆಕೆ; ಹೆಚ್ಚಾದ ತಾಪ; ಉಬ್ಬುಸೆಕೆ : ಭಾವಣಮು ಕೆಳಗೆ ತೀವದ ಹವ ಕವಿಯುತ್ತದೆ; ಕಬುಗಳ ನಡುವಿನ ಕೈಸಾಲೆಗಳಲ್ಲಿ ಮೂಗುಸೆಕೆ ಹಬ್ಬುತ್ತದೆ· (ಪಸಾಹೂ. ೨೮೪).

[ಮೂಗು + ಸೆಕೆ]

ಮೂಗುಹರುಕ (ನಾ). ೧· ಮೂಗು ಹರಿದಿರುವುದು; ಮೂಗಿಲ್ಲದುದು: ಮೂಗುಹರುಕಾವೊಂದು ಪಳಿಯ ತಲೆಬಿರುಡೆ ನಡು ಸಿಲುಬೆಯಡಿಯಿಂ ಜಗವ ಬಾಯ್ಮಿಸಿದು ನಗುತಲಿದೆ (ಗೂಢೃಣ· ೦೫-೩೦). ೨· ಮೂಗನ್ನು ಕೊಯ್ಯಿಸಿಕೊಂಡವನು; ಮೂಗು ಹರಿದಿರುವವನು : ಮೂಗು ಹರ್[ರು]ಕ ಜೋಗಿ . . . ತರೆಕಲಿದಿವರು . . . ಲವಣ ಇವುಗಳು ಎದುರಾಗಿ ಬಂದರೆ ಕಾರ್ಯಹಾನಿಯಾಗುವುದು (ಶಾಗಂ೨· ೩೮೫-೨೦).

[ಮೂಗು + ಹರುಕ (< ಪಜುಕ)]

ಮೂಗುಳ ' ಮೂಗೊಳ ' ನೋ·

ಮೂಗುಳಬುದ್ಧಿ (ನಾ)· (ಆಲಂ) ಅತಿಯಾದ ಬುದ್ಧಿ,—ತೀಡಿವಳಕೆ : ಮಂದಿಯನೂರೊಳ್ಕೊಂಪಗ್ಗಳದ ಜಾಂಜಗನೆನೆ, ಮೂಗುಳಬುದ್ಧಿಯ ಕೇತಿಸೆಟ್ಟಿಯ ಪೆಗಳದಾರ್ (ಶಾಾಾ· IX-i· ೨೪೬-೩೬; ೧೨೭೮)·

[ಮೂಗುಳ (< ಮೂಗೊಳ) + ಬುದ್ಧಿ]

ಮೂಗೆಯ್· ಮೂಗೆಯ್ (ನಾ)· ಮೂರುಮೊಳದ ಅಳತೆ : ಮೂಗಾವುದಂ, ಮೂಗೋಜು, ಮೂಗೆ[ಣಾಂ· ಗ]ಮ್ (ಕುಮು· ೦೫೯, ಕ್ರಿಪ್ರ)· **ಮೂಗೆಯ್** : ಶಿವರ್ದತ್ತು ಪೊವಲ್ಕೊದಲ್ಗೆ ಪಣೆಮುಂ ಮೂಗೆಯ್ಮು ಮೂಗೆಯ್ನಿಕ್ಕಾವಕ್ಕೆಯ್ದೆ ಕವಲ್ಕವಲ್ಕು ಪಲಪ್ಪಂ ಕೊಂಬಾದು ಪೊಳೆಕ್ಕುಮುಗಳ್ (ಅಂಪ್ರ· ೦೦-೧೩); ಎನೆವ ಮತ್ತಿಮು ಬಡಗ ವುತ್ತಿರ್ದೊಡಂ ಪುತ್ತಿನಿಂ ಪಡುವ ಮೂಗೆಯ್ಕೆ ನೆಲನಂ ಬಿಸುಟು (ಅಚ್ಚಪು. ೦೦-೦೦). [ಮೂಗು (< ಮೂಱು) + ಕೆಯ್]

ಮೂಗೆಜೆ (ನಾ)· ಮೂರು ಗೆರೆ : ವರ ಮುಂದ ಮಧ್ಯ ತಾರಸ್ವರ ಸೀಮಾರೇಖೆಯನಿಸೆ ಮೂಗೆಜೆ ಲಾವಣ್ಯರಸಾಬ್ಧಿಯೊಳಮರ್ದಿಸೆದುದು ಪರಿಕಲಿತ ಸುವರ್ಣಕಂಖಿಮನೆ ಗಳಪುವಳಾ (ಕ್ಕಚಾ· ೪-೦೦೦)·

[ಮೂ[ಱು] (< ಮೂಱು) + ಗೆಜೆ]

ಮೂಗೇಟು (ನಾ)· = ಮೂಗುಗಾಯ : ಇತರರೂ ಸಣ್ಣಪುಟ್ಟ ಗಾಯಗಳಿಂದಲೂ ಮೂಗೇಟುಗಳಿಂದಲೂ ನೊಂದು ರೇಗಿ ಬ್ಬರ ವೇರೊಬ್ಬರು ಬೊರು ಹೇಳುತ್ತಾ ಕೂಗಾಡುತ್ತಿದ್ದರು (ಹರಹು· ೪೫೯)·

[ಮೂಗು + ಏಟು]

ಮೂಗೇಣ್, ಮೂಗೇಣಿ (ನಾ)· ಮೂರುಗೇಣು ಉದ್ದದ ಅಳತೆ : ಮೂಗೇಣ್, ಮೂಗಾವುದಂ, ಮೂಗವ್ವಣಂ (ಣಾಪಾಕೋ· ೦೫೫ ಅಣಿ): ಮೂಗೇಣ್, ಮೂಗಾವುದಂ (ಕುಮು· ೦೫೯ ಕ್ರಿಪ್ರ)· **ಮೂಗೇಣಿ** : ಮೂಗೇಣಗಲದ ಬಾವಿಗೆ ಆರುಗೇಣಗಲದ ಗಾತ್ರದ ಕುಂಭವ ಬಿಟ್ಟು ಹುರಿಗೂಡಿದ ಕಣ್ಣಿಯಲ್ಲಿ ಸೇದುತ್ತಿರಲಾಗಿ ನೀರು ಸೆಲಸ ಮುಟ್ಟದೆ ಕುಂಭವ ಬಿಟ್ಟು ಕಣ್ಣಿಯಲ್ಲಿ ತುಂಬಿ ಬಂದಿತ್ತು (ಹೋಗಾಮಾ· ೦೪೯-೭೪೯)·

[ಮೂ[ಱು] (< ಮೂಱು) + ಗೇಣ್]

ಮೂಗೇಣಡು (ಕ್ರಿ)· (ಆಲಂ) ಆಶ್ಚರ್ಯಪಡು : ಕಡುಗಲಿದು ಪಡಬಿಟ್ಟುದಮಾ ಕಡೆಯು ಕಾಣದ ಹಲವು ಕಣ್ಣಾಲಿ ದಡಿಗ ರಜನಿಯ ನೋಡಿ ಮೂಗೇಣಟ್ಟು ಬೆಜಗಾದ (ಕಾಣಾ· ೦೭-೦೩)·

[ಮೂ[ಱು] (< ಮೂಱು) + ಗೇಣಡು]

ಮೂಗೇಣು ' ಮೂಗೇಣ್ ' ನೋ·

ಮೂಗೇರಿಸು (ಕ್ರಿ)· ೧· (ಆಲಂ) ಮೂಗನ್ನು ಆರಳಿಸು ; ಆಶ್ಚರ್ಯಪಡು : ಇದೇನು ಅಚ್ಚರಿದು ವಿಜಯುವೆಂದು ಯಾರಾದರೂ ಮೂಗೇರಿಸ ಬಹುದು (ಶ್ರೀಅಂಗಃ ೬೮). ೨· ಅಹಂಕಾರವನ್ನು ತೋರಿಸು; ಬಿಂಕ ಮಾಡು : ನಾನು ಹುಚ್ಚಿಯೇ ಸರಿ ಅಮೇ ಯೋಗ್ಯರು ಒಳ್ಳೆಯವರು ಅವರ ಮನೆಗೆಯೇ ಹೋಗಿರಿ ಎಂದು ಮೂಗೇರಿಸಹತ್ತಿದಳು (ಜಾಜಾಣ್ಣ· ೨೬); ನೋಡು ನೋಡು ಮಾತಿಗೆ ಮಾತುಕೊಡುವುದಕ್ಕೆ ಎಷ್ಟು ಚೆನ್ನಾಗಿ ಕಲಿತಿದ್ದಾಳೆ . . . ಮುದುಕ ಮೂಗೇರಿಸಿದ (ಪಾಚಕ· ೭೦)·

[ಮೂಗು + ಏರಿಸು (< ಏಱಿಸು)]

ಮೂಗೊಂಕು, ಮುಕ್ಕೊಂಗು (ನಾ)· ಮೂರುಕಡೆಯ ಬಾಗು,—ವಕ್ರತೆ; ತ್ರಿಭಂಗಿ : ಅಂತ್ಯಲೋಪಕ್ಕೆ — ಮೂಗೊಂಕು, ಮೂಮಿಟ್ಟೆ . . . ಮೂದಲೆ (ಕುಮು· ೦೫೯ ಕ್ರಿಪ್ರ); ಓ ಓ ! ಒರ್ಪನೆಯ ಬಿಂಕನಗಿವಿಯ ಮೂಗೊಂಕುಮೊಗಿನೆ ವೇರೊಡಲು ಇಲಿದೇರ ಬೆನಕ ! (ಣಾಪಚಾ· ೦೫-೨೦). **ಮುಕ್ಕೊಂಗು** : ಆ ಗೋಪಾಲಕೃಷ್ಣಂ ನಲಿದು ಕೊಳಲನೂದುತ್ತಮಿರ್ದಂದದಿಂದಾನಂದಂ ಕೈಗಣ್ಮಲಾ ಕಕ್ಕೆಯ ವರನನದಂ ನೆವಿ ಮುಕ್ಕೊಂಗಿನಿದಂ ನಿಂದಿರ್ದೊಪ್ಪುತ್ತೆ (ಶ್ರೀಪ್ರ· ೦೫-೩೪)·

[ಮೂ[ಱು] (<ಮೂಱು) + ಕೊಂಕ್ಕು]

ಮೂಗೊಡೆ· ಮುಕ್ಕೊಡೆ (ನಾ)· ೧· ಮೂರುಕೊಡೆ : ಮುಗ್ಗುಡ್ಡೆ, ಮೂಗುಡ್ಡೆ: ಮುಕ್ಕೊಡೆ, ಮೂಗೊ[ಣಾಂ· ಕೊ]ಡೆ (ಕಜ್ಞಾಪು· ೩೩೩ ಶ್ರಪೋ). **ಮುಕ್ಕೊಡೆ** : ೨. [ಜೈನ] ಜೈನದೇವಾಲಯಗಳಲ್ಲಿ ಜಿನಪ್ರತಿಮೆಯ ಹಿಂದೆ ಸಾಲಾಗಿ ಇರುವ ಚಕ್ರವರ್ತಿಲಾಂಛನದ ಮೂರು ಛತ್ರಿ : ಶ್ರೀಮದಶೋಕಂ ಮುಕ್ಕೊಡೆ ಚಾಮರತತಿ ದಿವ್ಯಭಾಷೆ ಸುರತೂರ್ಯರವಂ ಪೂಮಟೆ ಕೇಸರಿಪೀಠಂ ಭಾಮಂಡಳಮಿಸೆದು

ನೆಗಟ್ಟಿನೊಸೆವಾದಿಜಿನಂ (ಜಾಪುಂತ. ೦) ; ದೇಹಾರವೆ ಮನೆಯಂ ಪೊಕ್ಕು . . . ದೇವರ ಮುಕ್ಕೊಡೆಯೊಳ್ದರ್ ವೈಡೂರ್ಯ ಮಾಣಿಕಮಂ ಕಾಣದೆ ಪೊಜವಟ್ಟು (ಕರ್ಣಾಮೃ. ೬-೩೬) ; ಪಿಡಿದೆನಿಪ್ಪುದು ಕಿರಿದೊಳಿಂ ಮುಕ್ಕೊಡೆಯೆನಿಪ್ಪುದು ಜಿನಪತಿಯ ಮುಕ್ಕೊಡೆಯೊಳಲ್ಲದೆ ನೋಳ್ಕೊಡಿಲ್ಲಾ ಮೆಱೆವ ನಾಡೊಳಗೆ (ಶಾಸ್ತ್ರಾ. ೦-೬೦). ೩. ಜೈನದತ್ರಿಗಳ ಗಡಿಗಳನ್ನು ಸೂಚಿಸುವ ಮೂರು ಕೊಡಗಳ ಚಿತ್ರವಿರುವ ಮೇರೆಯ ಕಲ್ಲು : ನಾಲ್ಕು ದಿಕ್ಕಿಗು ನಾಲ್ಕು ಮುಕ್ಕೊಡೆ ಸಹ ನಾಲ್ಕು ನೆಟ್ಟ ಕಲ್ಲು (ಎಕ. XI, ಹೊಳಲ್ಕೆ. ೦-೨೬ ; 1154) ; ಆ ಕೆರುಗಟ್ಟಿದ ಪಡುವಣ ಕೋಡಿಯಲು ಹುಟ್ಟುಗುಂಡಿನಲಿ ಬರದ ಮುಕ್ಕೊಡೆ ಹಸುವೆ ನೆಟ್ಟೆ . . . ದೇವಳಂಗೆಱೆವು ತೆಂಂಕಣ ಕೋಡಿಯ ಗುಂಡಿನಲಿ ಬರದ ಮುಕ್ಕೊಡೆ ಹಸುವೆ ನೆಟ್ಟೆ (ಎಕ. II, ೩೩೪-೨೯ ; 1282).

ಮುಕ್ಕೊಡೆಯ ಕಲ್ಲು = ಮುಕ್ಕೊಡೆ ೩ : ಶ್ವೇತದತ್ರಿಗಳ ಮತ್ತು ಜೈನದತ್ರಿಗಳ ಗಡಿಗಳನ್ನು ಹೇಳುವ ಕಲ್ಲುಗಳಿಗೆ 'ಲಿಂಗಮುದ್ರೆಯ ಕಲ್ಲು' 'ಮುಕ್ಕೊಡೆಯ ಕಲ್ಲು' ಎಂಬ ಪೆಸರುಗಳಿರುವ ಹಾಗೆ ಪೌದ್ಧದತ್ರಿಗಳ ಮೇರೆಯ ಕಲ್ಲುಗಳಿಗೆ 'ಶಾಕ್ಯಶಿಲಾ' ಎಂಬ ಹೆಸರಿತ್ತು (ಕಜಾಶಾ. ೦೦೩).

ಮುಕ್ಕೊಡೆಯೊಡೆಯ = ಚಕ್ರವರ್ತಿಲಾಂಛನದ ಮೂರು ಛತ್ರಿಗಳನ್ನು ಉಳ್ಳ ಒಡೆಯ ; ಜಿನ ; ಅರ್ಹಂತ : ಅನೂನಪಕ್ಷತೇರ್ಪಡೆ ಪಿಡಿಪುಲ್ಕೆ ಪೂರ್ಣಸುಯಂ ಪಗುವಂದದಿಸೊಪ್ಪ ತೋರ್ಪ ಮುಕ್ಕೊಡೆಯೊಡೆಯಂಗೆ ಮಾಡುವುದು ವೊಮ್ಮೆಯೆನೀ[ಯಾ]ಗುವುನೀಶಸೌಖ್ಯಮಂ (ಸಮಾಪ. ೦-೦೩೦) ; ಮುಕ್ಕೊಡೆಯೊಡೆಯ ಜಿನೇಂದ್ರಸಿರೋಲ್ದು ಪಾಡಿದರು (ಪಜಿ. ೦-೧೩). [ಮೂ೩ (<ಮೂಱು) + ಕೊಡೆ೨]

ಮೂಗೊಲೆ (ನಾ). ಉರಿಯು ಹೊರಗೆ ಕಾಣಿಸದಂತಿರುವ ಒಲೆ ; ಅವುಗೆ : ನೆಯ್ವುದಿ ನೀಳ್ದ ಸಂಖ್ಯಾದಿಯಮಸಿರ್ಮರಹಜ್ವರದೇಟ್ಗೆಂ ಕಜ್ಜಿ ಕೆಯ್ಯಾಯ್ದೆಱಿ ಕೆಂಡದೊರ್ಬುಳಿಕೆ ಮೂಗೊಲೆ ಮೂಗೆನೆ ಪೂರ್ವನಿರ್ಮಳಂ ಕಾಯ್ವುಡವಾಗದಂತು ಪಿಡಿದುಗಜಾಕಾರಂನಕ್ಷಿದಾಣಮಂ ಸಯ್ವುಱೆ ಕಾಸಿ ಕಾಮಿನಿಯ ಬಾಷ್ಪದೊಳೊಯ್ಯನೆ ನೀರನೂಡಿದಂ (ಕ್ಷಂಗಾಸ. ೪-೩೪).

[ಮೂಗು + ಒಲೆ]

ಮೂಗೊಳ. ಮೂಗಳ. ಮೂಸುಳ (ನಾ). ಮೂರು ಕೊಳಗಗಳ ಒಂದು ಅಳತೆ : ಪುತ್ತೂರೊಳು ಕಣ್ಣಂಗೂಳರಸ ಕನಕಾರಿಗೆ ಮೂಗೊಳಂ ೯ಟಿನಿ ಭಗವತಿಗೆ ಕೊಟ್ಟುದು (ಎಕ. X, ಕೋಣಾಕ. ೨೩೦-೯ ; ಕು. 750) ; ನೂಱಾಱು ಮಿಂಡುಗ ಮೂಗೊಳವಾಗಿರೆ ಕಡಗೊಂಡು ತಿದ್ದಕೊಡುವಲಿ ಯೆಂದುಂ ಪೇರರುಗಳಮಂ ತೂರಲ್ಬು ಬಾರಿದರಪೆರೆಡುಬಳ್ಳ ಪೊಗಲಶ್ಕೇನೊ (ಶಾಸ್ತ್ರಿ. ೨೯-೨). ಮೂಗಳೆ ' ಒಕ್ಕಳೆ ಕಾಣದವ್ಯಹೋಜಿ ಇಕ್ಕಳ ಕಾಣದವು ನೂಱು ಮೂಗಳ ಕಾಣಂ (ಕ್ಷತ್ರಾ. ಕರಣ ೩೦೨) ; ನಿನ್ನಿಷ್ಟವ ಕರಂಜೆಸುವೆ ಬೇಡೆನಲು ನವಣೆ ಮೂಗಳದೆಂಕೆ ವರಚಕ್ಷಿಂಗಳಿಂ ವುದಂದು ಕೊಂಡಿಡಲ್ (ಕ್ಷಾತ್ರಾ. ೨-೨೬) ; ಕಾಳಮ್ಮನೆಂಬವಳ್ ಕಗ್ಗಲ್ಲಿನಿಂ ಕರೆದ ಹಾಲನೀಶಂಗವಣಿಸಿದಳ್ ಕಣ್ಣಳಂ ಕೊಟ್ಟು ಕಾಲಾಸಂ ಮಗುಳೆ ಮೂಗಳೆದ ಕಣ್ಣನಾರೆ ಪಡೆದನೊಲವಿಂ (ಕಬ್ಬಿ. ೩೩-೩೩ ೫) ; ಉಪ್ಪಿಲ್ಲದೆ ಮೂಗಳೆ ಗಂಜಿ ಕುಡಿಯುವವಗೆ ಉಪ್ಪಿದ್ದರೆ ನಾಗಳವೂ ಸಾಲದು (ಗಾಡಿ).

ಮೂಗುಳ : ಪತ್ತುಕೊಳಗ ಛತ್ರವುಂ ಒನ್ದು ಬಡಿಸುಂ ಬನ್ನಿಗೆ ಮೂಗುಳಮಂ ಕಪ್ಪಡಕ್ಕೆ ಪಟ್ಟೆಯುಂ ಬ್ರಹ್ಮಲಿಂಗಿಳ್ಗೆಗ್ಗೆ ಕೊಟ್ಟುದು (ಕ್ಷತ್ರಾ. ೦೪೫, ೫೬-೦೪ ; 1038) ; ಅಂಡೆಯಲ್ಲಿ ಐಗಳ ಕರೆದು ಕಂದವಲ್ಲಿ ಸುರಿಯಲಾಗಿ ಮೂಗುಳವಾಯಿತ್ತು ಆ ಮೂಗುಳವ ಒಲೆಯ ಬೆಸಮಲ್ಲಿ ಇಸಲಿಕೆ ಕಾಸೂದಕ್ಕೆ ಮುನ್ನವೇ ನಾಶವಾಯಿತ್ತು (ಸಮಾಪ. ೦೦೦-೩೭) ; ಬೆಂಕುಬನಿಗೆ ೫ ಕೊಳಗದಲ್ಲಿ ಮೂಗುಳಿ ಕೊಟ್ಟ (ಎಕ. IX, ಹೊಸಕೋ. ೨೯-೦೦ ; 1745). [ಮೂ೩ (<ಮೂಱು) + ಕೊಳ್೩]

ಮೂಗೋರು (ನಾ). (ಕ್ಷೌರಮಾಡಿದ) ಮೊರುಜಟ್ಟಿ : ಕಿಡೆ ಮೂಗೋರ್ದಂತೆರಂ ಬೋಲ್ಸಿ ಪಡುದಲೆಯೊಳ್ ಮೆಱಸನೊಡೆದು ಪಣೆಯಂ (ಹುಡ. ೦೫೮ ಕೃಡೀ). [ಮೂ೩ (<ಮೂಱು) + ಗೋರು೩]

ಮೂಱೋಟು. ಮುಜ್ಜೋಟು (ನಾ). ಮೂರು ಚೋಟು : ಒಂದು ಅಳತೆ : ಮುಕ್ಕೋಟು. ಮೂಱೋಟು (ಕರ್ಣಾಮೃ. ೩೨೦ ಕೃಡೀ). **ಮುಜ್ಜೋಟು** : ಮುಂಜ್ಜೋಟು, ಮುಚ್ಚವಡಿ (ಹುಡ. ೦೫೮ ಕೃಡೀ); ಮುಜ್ಜವಡಿ. ಮುಂಜ್ಜೋಟು (ಕರ್ಣಾಮೃ. ೬೮ ಕೃಡೀ).

[ಮೂ೩ (<ಮೂಱು) + ಚೋಟು]

ಮೂಡಗ. ಮುಜ್ಜಗ (ನಾ). ೧. ಸ್ವರ್ಗ, ಮರ್ತ್ಯ ಮತ್ತು ಪಾತಾಳ ಎಂಬ ಮೂರು ಲೋಕಗಳು ; ತ್ರಿಲೋಕ : ಮೂಱುಗದಲ್ಲಿ ನಿರತರು ಕೂಡಲುಸಂಗನ ಶರಣರು ತ್ರಿವಿಧದನಱಿವುದು (ಬಸವ. ೧೦೩) ; ಉಗ್ರ ತಪದೊಳ್ ಪೆಱಸಿ ನಿಲೆ ತಪಸ್ತೇಜಂ ಮೂಱುಗಮಂ ಪರ್ದಿಡಾಗಳ್ (ನಿಸಿ. ೪-೦೩ ಪ) ; ಮೂಱುಗವೆ ಗೆಲ್ಲುವಾಸೆಯ ತೋರ್ಪರಿಂ ಎಲ್ಲ ಕಾಮಿನಿಯರು ಹೊರಗೆ (ತಿಂಪುಪ. ೧೦-೨೦). **ಮುಜ್ಜಗ** : ೧. ವೀಣೆಯಂ ತಾಳದಂ ಪೇಳವಿಸಿ ಮುಜ್ಜಗಂಗಳು ಮೋಹಗೊಳಿಸುವಂತೆ (ತಿಗಂಂ. ೦೫೦-೭). ೨. ಮೂರು ಲೋಕಗಳಿಗೆ ಒಡೆಯನಾದವನು: ವರಮಾತ್ಮ. ೩. ವಿಷ್ಣು : ಮುಜ್ಜಗನ ಕೊಂಡಾಡೂ ಸಜ್ಜನರ ಕೂಡೂ (ಕಪಿ. ೫೦೦-೨). ೪. ಶಿವ.

ಮೂಱುಜಗದೆಱೆಯ = ಮೂರು ಲೋಕಗಳಿಗೂ ಒಡೆಯನಾದವನು: ವಿಷ್ಣು : ಮೂಱುಜಗದೆಱೆಯನ ಕಾಲ್ಗೊಳೆದಳು ಹೊನ್ನಭಾಜನ ಗಂಧವಾರಿಯಲಿ (ಕೋಚಪ. ೪-೨೯). ಮೂಱುಜಗದೊಡೆಯ. ಮುಜ್ಜಗದೊಡೆಯ = ೧. ಮೂರುಲೋಕಗಳಿಗೆ ಒಡೆಯನಾದವನು ; ಶಿವ : ಅಜಹರಿದಂದಿತ ಮೂಱುಜಗದೊಡೆಯನು ಗಜಾಂಬರ ಹೊದಿಸೂ ಸಿದ್ಧಗೆ ಬೆರಗು ಗಿರಿಜೆಗೆ ಏನ ಕಂದಪ ಕೊಳ್ಳೆಂದ (ಸಿಕ್ಕಪ್ಪ. ೩-೧೯). ೨. = ಮೂಱುಜಗದೆಱೆಯ : ಒಳಗನ್ನೆನೊಳಗಿಂದ ನೋಡೋ ಮುಜ್ಜಗದೊಡೆಯನ (ಕರಂವ. ೩-೩ ಆಮುಕ್ತ೩).

[ಮೂ೩ (<.ಮೂಱು) + ಜಗ]

ಮೂಱೆ ' ಮೂಡೆ ' ನೋ.

ಮೂಱೆಕಟ್ಟು ''ಮೂಡೆಗಟ್ಟು೩'' ನೋ.

ಮೂಱೆಸುಂಕ (ನಾ). ಹೊರಗಳ ಮೇಲೆ ಹಾಕುವ ಕೆರಿಗೆ. – ಸುಂಕ : ಈ ಗ್ರಾಮದಿಂ ಸಲುವ ಗೃಹಾರಾಮ ಕ್ಷೇತ್ರ ಗದ್ದ ಬೆದ್ದಲು ಕಾಡಾರಮ್ಬು ನೀರಾರಮ್ಬು ಹೊಗಹಣ ಮನೆವಣ ಮೂಱೆಸುಂಕ . . . ಚರಾದಾಯತಿರಿಗೆ ಮುಂಕಾದಯೇನು ಉಂಟಾದರೂ ನಿಮಗೆ ಸಲುವುದು (ಕ್ಯಾಶಿ. ೦೯೦೦. ೩೭-೦೯ ; 1669). [ಮೂಱೆ (<ಮೂಱೆ) + ಸುಂಕ೩]

ಮೂಡ ' ಮೂಱು೩ ' ನೋ.

ಮೂಡಗಡಲ್ (ನಾ). ಪೂರ್ವದಿಕ್ಕಿನ ಸಮುದ್ರ : ಆಱುಮರುವಾಡಿ ಮೂಡಗಡಲೊಳ್ ತೆರೆಮಾಲೆಯನೆತ್ತಿ . . . ಬಂದೆಸಗಿತ್ಪತಿಶೈತ್ಯಕಾರಣಂ . . . ಇಂದ್ರದಿಶಾಸಮೀರಣಂ (ಜಗಿ. ೦೮-೨).

[ಮೂಡ (<ಮೂಡು೩) + ಕಡಲ್೩]

ಮೂಡಗಡೆ (ನಾ). ಪೂರ್ವದಿಕ್ಕು ; ಮೂಡಣ ದೆಸೆ : ನಡತಂದ ಚಂಗಳೆ ಸರಸರನೆ ಆ ಮೂಡಗಡೆ ಮೊದಲಾಗಿ ನಿಂದಿರ್ದ . . . ಸುತನಂ ಹಿರಿಯ ದಿಗ್ವಿಜಯಕ್ಕೆ ಕಡಮಲು ತೊಡಗಿದಳು ಜನನಿ (ಜಪು. ೨೪-೩೬) ; ಅತಿಹರುಷದೆ ಪೂರ್ವಚಂದ್ರನು ಮೂಡಗಡೆಯೊಳ್ಪಿದನರ್ತಿಯಿಂದ (ಧರ್ಮಾ. ೩-೪) ; ಪಾಳೆದುದೊಳಾ ಮೂಡಗಡೆಯೊಳು ಬಾಲದೊತ್ತಿನಲಿ ನಿಂದವಮ ಪಾತಾಳಕೊಡ್ಡುಲು ಪಥವ ಕಾಣದೆ ಕಂಡನೂಹೆಯುಲಿ (ಕಾಸ್ತ್ರಿ. ೩೩-೩೬). [ಮೂಡ (< ಮೂಡು೩) + ಕಡೆ೩]

ಮೂಡಗರೆ (ನಾ). ಪೂರ್ವದ ದಡ ; ಮೂಡಣ ತೀರ : ಬಲದಿಯ ಪಡ ವಣ ಏಳೆದೋಣ್ಗಮುಂ ಪಡುವಣ ತೊಜಿಯು ಮೂಡಗರೆಯ ಪೊಸದೋಣ್ಗಮುಂ (ಎಳ. ಸ. ೬೦೦೫. ೧೦-೭೭ ; ೪೦೩).

[ಮೂಡ (<ಮೂಡ್ದು) + ಕರೆ]

ಮೂಡಗೆ ' ಮೂಡಿಗೆ ' ನೋ.

ಮೂಡಗೆಂಪು (ನಾ). ಪೂರ್ವದಿಕ್ಕಿನ ಕೆಂಪುಕಾಂತಿ : ತೆರೆ ಸರಳ್ದ ನಡುಗಡಲು ಪಡಗಿನೆಡೆ ಮೂಡಗೆಂಪೇರಿ ಪುತ್ತೊಮ್ಮೆ ಮೇಲೆ ಪೆಗೆವ ದೇವರುರಿಗಣ್ಣಂತೆ ತೋರಿ ನೆಗೆಯುತಿದೆ ಮತ್ತೊಮ್ಮೆ . . . ಹಿರಿಯ ಬೆಳಕೊಂದು ಸರಿಸಾರಿ (ಹೊಂಗಳ. ೫೬-೯). [ಮೂಡ (< ಮೂಡ್ದು) + ಕೆಂಪು$_1$]

ಮೂಡಗೆಱಿ[1] (ನಾ). ಒಂದು ಊರಿನ ಹೆಸರು : ಸೀಪಾನ್ತರಂ ಪಡು ವಾಯ್ಮಾಪೇರಿಯೆ . . . ಮೂಡಗೆಱಿಯ ಬೊಜ್ಜಗೆಱಿಯ ಒಳಗೆಱಿಯ ಕೂಡಿತ್ತು ಸೀಮೆ (ಎಳ. VI (R), ಶ್ರೀರಂಗ. ೬೬-೨೪ ; ೪೦೦).

[ಮೂಡ (< ಮೂಡ್ದು) + ಕೆಱಿ]

ಮೂಡಣ್ ' ಮೂಡ್ದು ' ಪರಾ.

ಮೂಡಣ ' ಮೂಡ್ದು ' ಪರಾ.

ಮೂಡಣಂ ' ಮೂಡ್ದು ' ಪರಾ.

ಮೂಡದೇಶ (ನಾ). ಪೂರ್ವದಿಕ್ಕಿನಲ್ಲಿರುವ ರಾಷ್ಟ್ರ,– ದೇಶ : ಪಾಪಕಲ್ಲ ಕುಲತಿಲಕಂ ×[ಳ್ಳ]ಪಿನಾಥ ಮೂಡದೇಶರಕ್ಷಕಂ (ಕಾಶಿ. XI-i, ೪೦-೫೨ ; ೪೮೨). [ಮೂಡ (< ಮೂಡ್ದು) + ದೇಶ]

ಮೂಡದಮುಖಿ (ನಾ). ಪೂರ್ವದಿಕ್ಕು ; ಮೂಡಲು : ಭೂಡದಮುಖಂ ಕೇರಿವುದುಂ ಬಸದಿಯಿಂ ಮೂಡಲು (ಹರ. XVIII, ೪೦೦-೦೩ ; ೧೭೫ಮು ೫೪). [ಮೂಡ (< ಮೂಡ್ದು) + ಮುಖಿ]

ಮೂಡದೊಗ (ನಾ). = ಮೂಡಮುಖಿ : ಜಗುನೆಯಂ ಪಾಯ್ದು ಮೂಡದೊಗದೆ ಪಯಣಂಬೋಗಿ ಮಾಹೃದೇಶಮಂ ಪುಗುತಂದರ್ (ಹಂಕಪಾ. ೬-೩೦ ೬) ; ಕಡೆಕೊಳಂ ಪೂರವೂರು ಕಣ್ಣೆಯದ ಮುಕ್ಕೂಡು ಮೂಡ ಮೊಗದೆ ಪೋಗಿ (ಪ್ರ೪೮. ೦೯೪೪. ೪೮-೬ ; ೧೭೫ಮು ೫೪) ಪೊಡಮೊಗದಿಂ ಶ್ರಿದಶಾರ್ಚಿತವಾದಪುಂಕಜಂ ನೀದಿರ್ದಂ (ಪರ್ಶ. ೦೫-೭೦).

[ಮೂಡ (< ಮೂಡ್ದು) + ಮೊಗ]

ಮೂಡಲ್ ' ಮೂಡ್ದು ' ಪರಾ.

ಮೂಡಲಿ (ನಾ). ಒಂದು ಬಗೆಯ ಸಸ್ಯ : ನಾರೋಲಿ. ವಃಳಮನ. ಮೂಢ. ಮೂಡಲಿ. ಕನಕಚಂಪಕ (ಕ್ಯ.೩೧. ೫೭-೦೦೪೦). [?]

ಮೂಡಲು ' ಮೂಡ್ದು ' ಪರಾ.

ಮೂಡವೆಟ್ಟ ' ಮೂಡುವೆಟ್ಟ ' ನೋ.

ಮೂಡವೆಟ್ಟು ' ಮೂಡುವೆಟ್ಟ ' ನೋ.

ಮೂಡಾಯ್, ಮೂಡೈ (ನಾ). ಪೂರ್ವದಿಕ್ಕು ; ಮೂಡಲು : ಅನ್ತೆ ಬನ್ದು ಮೂಡಾಯಿನ್ಬೀಟ್ಟುನ್ದ ನೀರಿಂವೆ ಅನ್ತೆ ಬನ್ದು ತೊಲ್ಲೊಂಡಿ ವಿ (ಕ್ಯ೪೦. ೦೯೪೬. ೬೪-೫೭ ; ೪೬೦) ; ತಸ್ಯ ಸೀಮೆ ಮೂಡಾಯ್ವರ್ವಳ್ಳಮೆ . . . ಮೂಡಾಯ್ ನೋಡಿ ನಡದು ಇಬ್ದುಲ್ಲೊಳ್ಲಿವೆ (ಎಳ. III (R), ಪ್ರಸ್ತ. ೧೦-೬ ; ೭೨೦) ; ವಿಜಯಾದಿತ್ಯನ್ ವೀರಚೂಳಾಮಣಿ ಪೃಥುಮೇರು ವಡುಂಗವಲ್ ಪನ್ನಿಱಾಶಿರವುಮುಮ್ ಮಣ್ಣೆಯನ್ಮೂಡಾವುಮುಮ್ ಪೃಥುವೀ ರಜ್ಯಂಗೆ[ದೆ] (ಕಾಶಿ. IX-i, ೫-೬ ; ಸು. ೬೩೮ಮು ೫೫). **ಮೂಡ್ದೈ** : ಪೃಥವಿಂ ದುರ್ಗ್ಗಸ್ಥೈಜೆ ಮೂಡ್ದೈ ಕಡೆ ಗೋಡೆ ವಿ (ಎಳ. X (s), ೪೯೦. ೬೬-೦೬ ; ೪೬೦). 'ಕೆಂಕಾಯ್', ' ಪಡುವಾಯ್ ' ಪರಾ.

[ಮೂಡ್ದು + — ಆಯ್/ಆಯ್-/ತುಳು. ಮೂಡಾಯಿ, ಮೂಡಯಿ, ಮುಂಡಾಯಿ]

ಮೂಡಾಯಿ ' ಮೂಡಾವಿ ' ನೋ.

ಮೂಡಾವಿ, ಮೂಡಾಯಿ, ಮೂಡಾವೆ (ನಾ). (ಮಲಗುವಾಗ ಅಥವಾ ಕುಳಿತುಕೊಳ್ಳುವಾಗ ಒರಗಿಕೊಳ್ಳುವ) ದಿಂಬು; ಒರಗು ; ಲೋಡು; ಮೆತ್ತೆ : "ಮೂಡಾವಿಯೆಂದುಂ ಕೌಳುಡೆಯೆಂದುಂ ಪುಲಗು" (ಶಬ್ದಾ. ೬೦-೬೨) ; ಕಣ್ಗೊಳ್ಸುವ ಮುಡುಪಿನ ಮೂಡಾವಿಗೆ ಕೈಯಿಟ್ಟು ಸುಗೀಶ್ವರನ ಲಲಿತಾಂಗದ ಮೇಲಾ ಸತಿಯುಲರ್ಗಣ್ಣೆಳಗು ಪರಿದು ಮುಸುಕಲು (ಜಯಾ. ೦೪-೭೩) ; ಸೆಳೆಗೊಂದಿನ ಕೇರ್, ಮಣ್ಣೆಲೆಯ ಪೆಂಪಕೆ, ಚಿಂದಳರ ಪಟ್ಟೆ, ಪೊಸಪುಲಿಯ ಮೂಡಾವಿ, ಅಲರ್ಜೋಂಪದ ಮೇಲ್ಕುಟ್ಟು ಚಿಲ್ವಾಗ (ಜಯಾಕ್ಕ. ೦೪೯-೦೦) ; ಶಾಂತಲಾದೇವಿ . . . ಸಜ್ಜೆಯ ರೇಶಿಮೆಯ ಹೊನ್ನ ಜರಿಯ ಮೂಡಾವಿಗಳನ್ನು ಅನುಗೊಳಿಸಿದಳು (ಸಪ. ೫೯). **ಮೂಡಾಯಿ** : ರಾಮಣೀಯಕ ತಾರಕಪ್ರಹ್ಮವುಂ ಮಲಗುಂ ಸಾವುವೇದಾದಿ ನಿಗಮಾರ್ಥಗಳ್ಕೂಡಾಯು ನಾವುರೂಪಕ್ರಿಯಾಪೂರಮುಪಚಾರಂಗ (ಅಕೋಕ್ಷ. ೨-೩೦). **ಮೂಡಾವೆ** : ಸುಪಾಸೀನದ ಮೂಡಾವೆಗಳಲ್ಲಿ ಸಿಂಗಾರವುಕ್ಕುಸು ನೀಳ್ಕೊರಗಿರುವಳು (ಪಚ್ಚೆ. ೦೦-೦). [< ಮೂಡ]

ಮೂಡಾವೆ ' ಮೂಡಾವಿ ' ನೋ.

ಮೂಡಿ (ನಾ). ಹುಟ್ಟುವುದು : ಉದಯ : "ಮೂಡಿ = ಉದಯಂ" (ಕಪಾ. ಹಂ. ೨) [< ಮೂಡು$_1$]

ಮೂಡಿಕೆ (ನಾ). ೧. ಭಾವನೆ ; ಅನಿಸಿಕೆ : ಸೌಂದರ್ಯಕ್ಕೆ ಸಂಬಂಧಿಸಿದಂತೆ ಕವಿಯ ಪ್ರತಿಭಾನವ್ಯಾಪಾರ ತಾಲ್ಮು ಘಟ್ಟಗಳಲ್ಲಿ ನಡೆಯುತ್ತದೆ: (೧) ಸುಂದರವಾದ ವಸ್ತುವನ್ನು ಕುರಿತು ಕಲಾವಿದನ ಅಂತರಂಗದಲ್ಲಿ ಆಗುವ ಮೂಡಿಕೆಗಳು (ಕಾಂಡಿ. ೧೦). ೨. ಸ್ವರೂಪ : ಕರ್ಣಾಟಕಸಂಗೀತದ ಮಕುಟಮಣಿಗಳಾದ ಈ ತ್ರಿಮೂರ್ತಿಗಳು ಒಂದೇ ಕಡೆಯಲ್ಲಿ ನಡೆಸಿದ ಕಚೇರಿಯ ಅವ್ಯಾಹತ ಮೂಡಿಕೆಯನ್ನು ಮಾತುಗಳಲ್ಲಿ ಅವತರಿಸಲು ಸಾಧ್ಯವೇ ಇಲ್ಲ (ಸಂಗಸಚ. ೩೦). [ಮೂಡು$_1$ + — ಇಕೆ]

ಮೂಡಿಗೆ, ಮೂಡಗೆ (ನಾ). ೧. ಬಾಣಗಳ ಬೀಲ; ಬತ್ತಳಿಕೆ; ತೂಣೀರ: "ತೆ.ಗಣೇರಂ. ಉಪಾಸಂಗಃ. ತೂಣಂ. ತೂಣೀ. ನಿಷಂಗಃ. ಇಷುಧಿಃ. ಬಾಣಾಶ್ರಯಃ, ಕಳಾಪಃ — ಈ ೮ ಮೂಡಿಗೆ " (ಹಜಾಮು. ೬೬-೬೦೦) ; ತನು ಮೂಡಿಗೆಯಾಗಿರೆ ಕಳೆದನಹಿತರಿಚ್ಛೆಬುಗಳಂ (ಕರ್ಣಕ. ೫-೫೩); ನೀಡದೆ ಮೂಡಿಗೆಯಿಂ ಕೈಗೊದಗುವಹೂಡದಮನ್ನೆವೆ ತಿರುವಾಯ್ಗೀಡುವ . . . ಮಹಾದಿವ್ಯಶರಂ (ಜಯಾ. ೭-೦೦). ೨. "ಮೂಡಿಗೆಗಳು ಎಂದರೆ, ಜೊಂಪ (ಚಪ್ಪರ) ಡೇರೆ ಮೊದಲಾದುವುಗಳಿಗೆ ಆಧಾರಗಳಾಗಿ ಮಧ್ಯದಲ್ಲಿ ಸಾಲಾಗಿ ನೆಲೆಗೊಳಿಸಿದ ನೀಳ್ಗಂಬಗಳು" (ಪಾಡೋಕ. ೪೦೩): ತೊವೆಲ್ವರಸು ನಟ್ಟಾಲಂಗಳುಮಸಮರೆ ಮಾಡಿದ ಬಟ್ಟುಳಿಯ ಕಕ್ಕಂಬು ತೊಡಂಬೆಯು ಮೂಡಿಗೆಯ ಕವಳಿಕೆಯ ಕಾಂಡಪಟಂಗಳುಮಂ (ಹಂಪಾ. ೫-೪೭ ೨) ; P ' ಪಂಪಭಾರತ ದೀಪಿಕೆ 'ಯಲ್ಲಿ ಈ ಪ್ರಯೋಗಕ್ಕೆ ' ಬತ್ತಳಿಕೆ ' ಎಂದೇ ಅರ್ಥ ಹೇಳಿದೆ. **ಮೂಡಿಗೆ** : ೩. (?) : ಆಱು ಪರಿಯಾಪ್ತಿಗಳೊಳಂ ನೆಱೆದು ತೋಱರಾಗಿ ಪುಟ್ಟನೊಡದ ಮೂಡಿಗೆಯು ಗೊಟ್ಟಯಂತಿರೆ ಸಿಡಿಲ್ದುಚ್ಚಳಿಸಿ ಪೋಗಿ ಕೆಟಗೆ ನಟ್ಟರ್ದನೇಕವಿಧ ನಿಶಾ ಚಾಯುಧಂಗಳ ಮೇಲೆ ನಚ್ಚುನೂಜಾಗಿ ಪಚ್ಚುಬರ್ದು ಮೂರ್ಛೆವೋಗಿ ಪಮ್ಮೆಸಿ ಮೆದ್ಯಆಯದಿವ್ಪದುಂ (ಪರ್ಶ. ೬-೨೬ ಪ). [?]

ಮೂಡಿಸು (ಕ್ರಿ). ೧. ಹುಟ್ಟಿಸು; ಉಂಟುಮಾಡು : ಅರ್ಜುರ್ಗೆ ಜನ ಮುದ್ರೆ ಮೂಡಿಸದೊ ಮುದದೊಡವಂ (ಕಂಕ್ರಪು. ೬-೯); ತದ್ದನುಜನ ಕ್ಷೆಪ ೨ ಸೀಳ್ದು ಲೋಕಂಗಳಂ ನಿರ್ಭಿನ್ನಾನಂದಾಬ್ಧಿಯೊಳ್ ಮೂಡಿಸಿದಳ್ ಜಯ ಮನ್ಮಾತೆ ಪಂಪಾಭವಾನೀ (ಕಾದ್ಯಶ. ೬-೨೪) ; ಮುನ್ನಥ ಹೊನ್ನ ಹೊದೆಯಿಂದಲೊಂದಂಬು ತೆಗೆದು ಎದೆಯ ಸಂಕುಲದಿ ಮೂಡಿಸಿ ತೋಱಿಸಿ ಬಿಲ್ಲ ಪೆದೆಯ ಕತ್ತರಿಸಲಿಕ್ಕಿದನು (ಪೋಹಕ. ೪೬-೦೬). ೨. (ದೀಪವನ್ನು) ಹಚ್ಚು ; ಹೊತ್ತಿಸು : ಒಗೆ ಹೋಗಿ ಕಂದೀಲನ್ನು ಮೂಡಿಸಿ, ಅಡುಗೆಯ

ಮನೆಯ ಹೊಸಕಿಲ ಮೇಲೆ ತಂದಿಟ್ಟಳು (ಗಂಗಾಸಾ. ೪೦). ಪಿ. ಅಚ್ಚು ಮಾಡು ; ಮುದ್ರಿಸು : ಉಗಿಯ ಯಂತ್ರದಿಂದ ಮೋಹರಗಳ ಮೇಲೆ ಅಕ್ಷರಗಳನ್ನು ಮೂಡಿಸುತ್ತಾರೆ (ಮುಂಡಾಖ. ೩-೨೯೧); ತನ್ನ ಹೆಸರನ್ನು ನಾನು ಮರೆಯಬಾರದೆಂದು ತನ್ನ ಕೊಡೆಯ ಮೇಲೆ ಮೂಡಿಸಿ ಇಟ್ಟಿದ್ದಾನೆ (ಪಂಚಕ್ಷ. ೮೩). [ಮೂಡು₁ + — ಇಸು]

ಮೂಡು₁ (ಕ್ರಿ). ೧. ಹುಟ್ಟು ; ಉತ್ಪತ್ತಿಯಾಗು ; ಉದಯಿಸು : "ಮೂಡಲು-ಉತ್ಪತ್ತಿ" (ಕಪುಣಾ); ನೇಸಱೆ ಮೂಡಿದೊಡೆ ಭಟಾರರಲ್ಲಿಗೆ ನಂದಿಮಿತ್ರಂ ವಂದು ಬಂದಿಸಿ ಇಂತೆಂದಂ (ಪಣ್ಣಾಣಾ. ೮೨-೦೯) ; ನೇಸಱೆ ಮೂಡಿದುದು ಬಕಂಗೆ ಮಿಟ್ಟು ಮೂಡುವ ತೆಱದಿಂ (ಪಂಚಾಖ್ಯಾ. ೩-೨೭) ; ಗಜಿ ಮೂಡಿದ ಬಟ್ಟಿಕ ನೀನೆ ದಲ್ ಪೋದಪ್ಪೆ (ಶಾಪಂಣಾ. ೬೧೩). ೨. ಉಂಟಾಗು ; ತಲೆದೋರು ; ಕಾಣಿಸಿಕೊಳ್ಳು : ಜಠರಾಗ್ನಿಹೇವಾಟವು ಸಂಧಿಗಳೊಳ್ ಸುರಂಗವಂ ಗಂಗೆವೊಳ್ ಮೂಡುವಂತಾಗೆ ಸವೆದು (ಪಂಚಾಖ್ಯಾ. ೩-೪ ೫); ಮೂಡಿದುವರೊಳ್ ಮೊಲೆ (ಪಪುಣಾ. ೩-೨೬); ವಿದ್ಯಾರಣ್ಯರ ಮನಸ್ಸಿನಲ್ಲಿ ಸ್ವರಾಜ್ಯಸ್ಥಾಪನೆಯ ಸಂಕಲ್ಪ ಮೂಡಿತ್ತು (ಕ್ರಿಪಾಣಾ. ೦೩೯).

ಮೂಡಿ ಮುಟುಂಗಾಡು, ಮೂಡಿ ಮುಳುಗಾಡು, ಮೂಡಿ ಮುಟುಗಾಡು, ಮೂಡಿ ಮುಟ್ಟುಗಾಡು = ೧. ಕಾಣಿಸಿಕೊಂಡು ಪುನಃ ಕಾಣದಂತೆ ಮುಳುಗು,—ಮರೆಯಾಗು. ೨. (ಅಲಂ) ಮಗ್ನವಾಗು ; ತಲ್ಲೀನವಾಗು : ಸಮುನ್ನತಭಕ್ತಿರಸಸುಧಾವಾರ್ಧಿಯೊಳ್ಮೂಡಿ ಮುಟುಂಗಾಡುತ್ತುದ್ಯಚ್ಚಿತ್ಕೀರ್ತಿಚಂದ್ರಮಂ . . . ಬೆಗಕೊಂಡಂ (ಜಿಂಕೃವಿ.೩-೩೨ ೫); ರಾಚಿರಾಭವಾನಂದಲೀಲೆಯೊಳ್ಮೂಡಿ ಮುಳುಗಾಡುತ . . . ಪರ್ಮ ರಸಗುರುವಂ ನಿರೀಕ್ಷಿಸುತ್ತೆ (ಪಕ್ಷಣಾ. ೩-೩೩); ಪರಮಾನಂದರಭದೊಳಗೆ ಮೂಡಿ ಮುಳುಗಾಡಿ . . . ಕೈ ನೀಡಿ ಕೊಟ್ಟಂ ನಂದಿಯೊಂಡಿಗೆಯ ಪೊಪ ಸೊನ್ನ ಮೊಗಮೊಗೆದು ಶಿವ ನಂಜಿಗೆ (ಪಾಂದಪ್ಪ. ೩-೨೭); ರಾಗರಸದೊಳು ಮೂಡಿ ಮುಳುಗಾಡಿದಳು ಜಿನದತ್ತೆ (ಪಾಕ್ಷಣಾ. ೪-೨೪); ಮನಮನಜಜ್ ಸೆಱೆವಿಡಿದ ಸೀಯನಪ್ಪ ಗೇಯರಸಾಬ್ಧಿಪೂರದೊಳ್ ಮೂಡಿ ಮುಟುಗಾಡುತ್ತುಂ (ಪಾಂಚಪ್ಪ. ೨-೨೨ ೫); ಅಂತಾ—ರಜ್ಜನಿಯೊಳ್ ರಾಜೇಂದ್ರ ಚಂದ್ರಂ ಸುರತಸುಖಾಂಭೋಧಿಯೊಳ್ಮೂಡಿ ಮುಟ್ಟುಗಾಡಿ (ಪಾಪಂಣಾ. ೦೦೬); ಅಂತು ಪುರಮುಮಂತಃಪುರಮುಮಾದಿಪುರುಷಜ್ಯೋತ್ಸ್ನವಸುಧಾಂಬು ರಾಶಿಯೊಳ್ ಕೂಡಿ ಮೂಡಿ ಮುಟ್ಟುಗಾಡುವುದಂ ನೋಡಿ (ಅಂಪ್ರ.೬-೦೨೫ ೫); ಪೊನಲೊಳಗೆ ಮೂಡಿ ಮುಟ್ಟುಗಾಡುವವೋಲ್ (ಪ್ರತ್ಯ. ೦೫-೬೭). ಮೂಡಿ ಮುಟುಂಗು, ಮೂಡಿ ಮುಳುಕು, ಮೂಡಿ ಮುಳುಗು, ಮೂಡಿ ಮುಟ್ಟು = ಮೂಡಿ ಮುಳುಗಾಡು : ನಿಜೋತ್ಸರೀಯವಸನಾಂಚಲದಿಂ ಮುಸುಱಿಟ್ಟು ಚಿಂತೆಯೊಳ್ ಮೂಡಿ ಮುಟುಂಗಿ ತನ್ನ ಮನದಪ್ಪ ರೊಳಂ ಮೊದಲಾಗಿ ಕನ್ನೆ ಮಾತಾದದೆ ಜಾನಿಸುತ್ತಿರಲು (ಶಾಪಂಣಾ. ೫೫೬); ನೋಡುವಳುಜ್ ಕಾತರಿಪಳು ಮೈಸೋಂಕಿ ಮೂಡಿ ಮುಳುಕಿ ಮೋಹರಸದ ಕೂಡಾಗ ಬಿಗಿಯಪ್ಪಿ ಮೊಗಮೊಗವೆರಸಿ ಮುಂಡಾಡಿದಳು (ಕಂಪಿ. ೦೦-೩೦); ನೋಡಿ ಪುಳಕದೊಳ್ ಮೂಡಿ ಮುಳುಗುತ್ತೊಮ್ಮೆ ನೋಡಿಯುಮ್ಮಳಿಸುತಾನಂಬ್ಗನ್ನನಾ ಪ್ರದ್ಯುನಾ ಕೂಡಿ . . . ನುದಿದು (ಪಾಂವಪ್ಪ. ೪-೭೯); ಲೀಲಾರಸದೊಳಗೆ ಮೂಡಿಮುಟ್ಟುವ . . . ಲೀಲಾಕೇಳಿಗಳೆ ವಿಲಾಸಕೇಳಿಗಳಾ ಸ್ಯಪಸತಿಯಾ (ಶಾಪ್ರ. ೩-೪).

ಮೂಡು₂ (ಕ್ರಿ). ತುರಿಬಿಸು ; ಭರ್ತಿಮಾಡು : ಗಜಿಕೆಯ ತೊಳಚ್ಚಿಯು ದಾಂಗುಡಿದುಂ ಚಿವುಂಟಿ ಬಾಬಿಪಟ್ಟೆಯೊಳ್ ಮೂಡಿ ತರ್ಪ ಬಾಲಮಿಗಳಂದೆಯುಂ . . . ಪೂರ್ಣಾಶ್ರಪುಂ ಮನೋಹರಮಾಯ್ತು (ಪಾಪಾಖ್ಯ. ೪೩-೦೫). [?]

ಮೂಡು₃, ಮೂಡ (ನಾ). ೧. ಸೂರ್ಯನು ಹುಟ್ಟುವ ದಿಕ್ಕು ; ಪೂರ್ವದಿಕ್ಕು : ಮೂಡ ದೆಸೆಯೊಳ್ಕಂಪು ದೊರೆಯೆ ತಾರಗೆ ಪರೆಯೆ ಕೂಡೆ ತಂಗಾಳಿ ಮುಂಬರಿಯೆ ಕಮಲಂ ಬಿರಿಯೆ . . . ಭೂಜಿದಂ ಪ್ರಭೆಯೊಳಾ ಸುತ್ಯನಾದಿತ್ಯನು (ಕೃಪುಣಾ. ೩-೬೩); ಮುಂಗೋಳಿ ಕೊಗ್ಯಾಪು ಮೂಡು ಕೆಂಪೇರ್ಯಾವು (ಪಕ್ಷಾ. ೦೯). ಮೂಡ ; ಮೂಡ ಕಱೆಯ ಕಲ್ಬಡಿಗೆ ಕೀರ್ತ್ಯದ ಕಲ್ಬಡುವ ಕಮ್ಮಾಱರ್ ನೈರಿತಿಯೊಳೆ ಆ ವಡಕಲ್ ತೆಂಕ ಪೇರೂರ ಪಳ್ಳಂ (ಎಕ್. XI, ಹೊಗಾ. ೫೬-೩ ; ೧೮೭) ; ರತಿನಾಟಕಾಭಿನವಮಂ ಕೃತಕೃತ್ಯಂ ಮೂಡಿ ರಯ್ಯದಾಗಿರೆ ದೀಪದ್ಯುತಿ ಯುವತಿಯರೊಳ್ ನಿದ್ರಾವಹಾರವಾದತ್ತು ಮೂಡವೆಳಗಪ್ಪಾಗಳ್ (ಪಗಂ. ೦೬-೦೫೬); ಮೂಡ ಕೆಂಪುತ್ತಿದುದು ಕಡುತಣ್ಣನಾಗಿಲರ್ ತೀಡಿತು (ಪತ್ಕಾ. ೬-೬).

ಮೂಡಣ್ = ಪೂರ್ವದಿಕ್ಕು : ನೀಲಗಿರಿ ಬಡಗಣ್ಣಾ ಕಾರಂ ದ್ರಾವಣ ರಣವಕ್ಷಾರಂ ಮೂಡಣ್ಗೆ ತನಗೆ ಸೀಮೆಯೆನಿಕ್ಕುಂ (ಪಲ್ಲಿ. ೨-೦೨); ಮೂಡನೆಂ, ಮೂಡಣ್ಗೆ (ಪಾಶಾಪ್ರ. ೩೬ ೦೦೨). ಮೂಡಣಾ = ೧. ಪೂರ್ವದಿಕ್ಕಿನ : ನೆಯ್ದಿಲ್ಗೆಜಿಯಾ ವಿಜಿ ಮೂಡಣ್ಗಾಸೀಮೆ ಇಡೆ ಪೆಟ್ಟಿದಾ ವಡಗಣ್ಣಾ ನೀಂಬಿಗೆ (ಎತ. XXI, ೦೭೬-೦೫; ಸು. ೭ ಪದು ೫೯); ಮೂಡಣ ದೆಸೆಯ ವ[ರಾಹ]ಕಱೆಯಂ ಮೂಡಣ ಪಳ್ಳ ಅದಱ ತೆಜ್ಜಣದೆಸೆ [ಪ್ರಣ್ಣಗೆಜಿ]ಗೂಟ್ಟಂ (ಸಿಶಾ. XI-i, ೯-೫೬; ೧೮೭) ; ದೇವತೆ . . . ಕೋಗಳಿಯ ಮೂಡಣ ದೆಸೆಯ ಪರ್ವತದ ಕೊರದ ಕಡಿಯೊಳ್ ಲತಾಮಂಟಪದೊಳಿರಿಸಿ ಪೋದೊಡೆ (ಪಣ್ಣಾಣಾ. ೦೦೬-೪); ನಡದು ಬಂದುದು ಕಾರವೇದ್ರನ ಪಡೆ ಕುರುಕ್ಷೇತ್ರಕ್ಕೆ ಮೂಡಣ ಕಡಯಲಳೆವಡಿಸಿದರು ಬೀಡಾಯಿತ್ತು ಏಱಲದಲಿ (ಕಾಖ್ಯಾ.೭೯. ೦-೩೦). ೨. ಪೂರ್ವದಿಕ್ಕು : ಪಡುಮಣಿ ಸಂದ ರವಿ ಮೂಡಣದಿ ಎದ್ದ (ಪಂಪು. ೩-೦೬); ಮೂಡಣದಲ್ಲಿ ತಂಗದಿರ ಮೂಡಿದಾಗೆ, ಆ ನಿಲ್ವರು ಮನೆಯನ್ನು ತೊರೆದರು (ಪಾಪುಖ್ಯ. ೮೩). ಮೂಡಣಂ = ಪೂರ್ವದಿಕ್ಕಿನವನು ; ಮೂಡಣಂ, ತೆಂಕಣಂ (ಪಪುರ. ೦೦೦ ಪ್ರಥೋ). ಮೂಡಲ್, ಮೂಡಲು, ಮೂಳ್ಳು = ಪೂರ್ವದಿಕ್ಕು : "ಪ್ರಾಚಿಯನೆ ಪೂರ್ವಮ್ಮೆಂದ್ರಿಯನೆ ಮೂಡಲೆನಿಪ್ಪಂ" (ಪಮಂಗಾ. ೦೬-೦೯); ಪುನೆಯಂ ಪೆರ್ಚಿಸುವೊಡೆ ಮುನ್ನಿನ ಮಾಜಿಕೆಯೊಳಿದ್ದೆ ಮೂಡ ೨ ಬಡಗಲ್ ಪೊತ್ತಿ ನಿಮಿರ್ಚುಗೆ (ಪಪಗಿಪಾಪ್ರ. ೩-೦೩); ಇದು ಪೂರ್ವಾಚಲದಮ್ಮಲ್ದಿದ್ದುದು ಸುರೇಂದ್ರಾಶಾದಿ- . . . ಒಪ್ಪುವ ಮೂಡಲ್ಲದಿದು ತಾಂ ಮೂಡಲ್ಮನೋರಾಜಿದಿಂ (ಪಪಶಾಪ್ರ. ೪-೦೩೯); ಬಸದಿಯಿಂ ಮೂಡಲು ದಾನಸಾಲೆಗೆ ಮ್ನಿ[ರ್]ಕ್ಯಯಿನಿವೇಸನವುಮುಂ . . . ಬಿಟ್ಟು (ಪಾಚ. XVIII, ೩೦೦-೦೩; ಸು. ೧೩೫ ೫೪); ಮೂವಲು ಮಗಳಿಗೆ ಕೆಂಪೇಜ್ ಕಡನಕೆ ಕಳನ ತುಂಬಿತು ಮತ್ತೆ ಕೌರವ ಪಾಂಡವರ ಸೇನೆ (ಕಾಖ್ಯಾ.೦೮. ೬-೩); ಸೂರ್ಯನು ಪಡುವಣದಲ್ಲಿರುವವರಿಗಿಂತ ಮೂಡಲಿನಲ್ಲಿರುವವರಿಗೆ ಮೊದಲು ಗೋಚರಿಸುತ್ತಾನೆ (ಪಮಂಪ್ರ. ೪-೩೭); ಶಿಟ್ಟಹಳ್ಳಿಗ್ರಾಮಕ್ಕೆ ಮೂಳ್ನು ಬಾಗ್ಗನಹಳ್ಳಿ ದಕ್ಷಿಣ (ಎಕ್. XIV, ಕಿಮಸು. ೦೩೭-೦೯; ೧೬೭೨); ಹಾರೆ ಬೇಲೂರುಗ್ರಾಮಕ್ಕೆಯಲ್ಲ ಚತುಸ್ಸೀಮೆ ವಿವರ ಹೇಮಾವತಿಗೆ ಮೂಳ್ನು ಮೊರಸಾಗರಹಳ್ಳಿಗೆ ಪಶ್ಚಿಮ (ಮೈಆ. ೦೯೩೨. ೭೯-೦೩; ೧೮೩೦).

[< ಮೂಡು₁ / ತುಳು. ಮೂಡು]

ಮೂಡುಗಟ್ಟಿನಗಿಡ (ನಾ). ಒಂದು ಬಗೆಯ ಸಸ್ಯ : ಮೂಡುಗಟ್ಟಿನ ಗಿಡ, ದೋಡುಕಡಲೆಸೊಪ್ಪು, ಕರಂಡೆ. ಮೂಡಿಗಿಡ (ಪೈಔ. ೩೦-೦೫೩೦). [? + ಗಿಡ (< ಗಿಡು)]

ಮೂಡುನೇಸಱೆ (ನಾ). ಹುಟ್ಟುತ್ತಿರುವ ಸೂರ್ಯ; ಉದಯರವಿ: ಮೊದಲ್ ಮೂಡುನೇಸಱೆ ಕಡೆಗೆ ತಿರುಗು (ಪಕ್ಷಕ್ಷ. ೩೭-೬೭). [ಮೂಡು₁ + ನೇಸಱೆ]

ಮೂಡುವೆಟ್ಟ, ಮೂಡವೆಟ್ಟ, ಮೂಡವೆಟ್ಟು, ಮೂಡುವೆಟ್ಟು (ನಾ). ಪೂರ್ವದಿಕ್ಕಿನಲ್ಲಿರುವ ಪರ್ವತ ; ಉದಯಾಚಲ ; ಓರ್ವ ಅಗ್ನಿ

ಹೋತ್ರಿಯು . . . ಎಳನೇಸರು ಮೂಡುವೆಟ್ಟವನ್ನೇರುವ ಸಂಭ್ರಮವನ್ನು ನೋಡುತ್ತಾ ಮೈ ಮರೆತಿದ್ದನು (ಮುಹಿ. ೦). **ಮೂಡವೆಟ್ಟ**: ಮೂಡ ಮೆಟ್ಟದ ನಡುನೆತ್ತಿಯೊಳಿರ್ದ ಭಾಸ್ಕರನ ಕಂತೆ ತಾನು (ಜಗಗಾ. ೩-೩೭); ಕ್ಷೋದೀಯೃತಾವಾಸಂ ಪರಿಜು ದುಃಖಿಂ ಪೋಗೆ ಮೂಡೇವಮಯ ಮೂಡ ವೆಟ್ಟದುದಿಯನ್ನಡರಿ ನೋಡಿದಂ ಪ್ರೀತಿಯಿಂದೆ (ಕಂಗಾರಾ. ೨-೩೭-೦೨). **ಮೂಡವೆಟ್ಟು** : " ಮೂಡವೆಟ್ಟಿಂದು ಪೂರ್ವಾಚಲಂ " (ಶಾಪ. ೪೪-೩೦); ದನಿವಾಡೆ ಕುಕ್ಕುಟ ಪರಿದೋಡೆ ತಿಮಿರ ಪದ್ಮಿನಿಗಿಪಂತಸಗೂಡ ಮನುಜರು ಭೂಪಾಳಿ ಧನ್ಯಾಸಿಗಳ ಪಾಡೆ ಇನ ಮೂಡವೆಟ್ಟನೊಳ್ಕೂಡ (ಕಂದಂಪಾ. ೦೬-೨೪); ಘಸಸತ್ತ್ವಂ ವಿಮ್ಲಪರ್ವಾತನೆಗೆಯ್ಯಲ್ ಮೂಡವೆಟ್ಟು ಶಶಿಶಂಖದೆ ಪಾಲ್ದೊನಲಿನಭಿಷೇಕಮಂ ಮಾಟ್ಟಿನಮೇಂ ಪಸರಿಸಿತೊ ಮಸಗಿ ಪೊಸವೆಳ್ದಿಂಗಳ್ (ಚಪ್ರ. ೬-೨೪). **ಮೂಡುವೆಟ್ಟು** : ತಾನೆ ಭಾಸ್ಕರಂ ಬೇಗನುಪ್ಪವಡಿಸಿ ಮೂಡುವೆಟ್ಟಿನ ಕೋಡುಗಲ್ಲನೇಜಿ ನಿಟ್ಟಿಸುತಿರ್ದಂ (ಜಾಮಾಕ್ಷ. ೫೭-೦); ಹರಿಗೋಲು ಸಾರುಳೆಲ್ಲ ತೇಲಿ, ನೇಸರು ತನ್ನ ಪೊಂಬೇರನ್ ಅಡರಿ ಮೂಡುಮೆಟ್ಟಿನ ನೆತ್ತಿಗೈತಹ ಮುನ್ನ . . . ಬಂದು ಈ ದ್ವೀಪವನ್ನು ಸೇರಿದುದು (ಜಗಣಾ. ೩೩-೭). [ಮೂಡು + ಬೆಟ್ಟ]

ಮೂಡುವೆಟ್ಟು ' ಮೂಡುವೆಟ್ಟ ' ನೋ.

ಮೂಡೆ, ಮಟ್ಟೆ, ಮೂಟೆ, ಮೊಟ್ಟೆ (ನಾ). ೧. ಹುಲ್ಲು, ನಾರು, ಬಟ್ಟೆ, ಮೊದಲಾದುವುದ್ದಗಳಿಂದ ಕಟ್ಟಿದ ದೊಡ್ಡ ಗಂಟು.—ಕಟ್ಟು,—ಹೊರೆ : ಸೂಜಿಪ್ಪ್ರಕ್ಷಿಣ್ಣ)ಕೊಂದೆ ಗಾರೊಡಂ ಪಡೆಯಂ ಮೆಣ್ಣ ಪ್ರಮೂಡೆ ಪಮಳಿ ಒನ್ದು (ಅಶ್ವ. XXI.೧೫೬೦೬; ೩೫೮ ೫೫); ನೀರ ಮೂಡೆಯ ಕಟ್ಟಿ ಬಯಲಿಗೆ ಬಲೆಯ ಬೀಸಬಹುದೇ ಅಯ್ಯ (ಪಡ್ಡಕ. ೬೫೨). ೨. ಧಾನ್ಯ ಮೊದಲಾದುವನ್ನು ತುಂಬಿಸಿ ಕಟ್ಟಿದ ದೊಡ್ಡ ಚೀಲ : ಪುರದ ವೀಥಿಯೊಳಿಡಿದು ನೆಲ್ಲ ಮೂಡೆಗಳಿರಲು (ಪಂಂಪ. ೦೦-೦೦೨); ಒಳ್ಳೆ ಐವತ್ತರ ಲೆಕ್ಕದ ಅಕ್ಕಿ ಮೂಡೆ ೨೪ (ಅಶ್ವ. XX. ೬-೨೫; ೧೫೨೦); ಕಣ್ಣಾಮುಚ್ಚಿ ಕಾವೇಗೂಡೆ ಉದ್ದಿನ ಮೂಡೆ ಉರುಳೇ ಹೋಯ್ತು (ಹುಬ್ಬ. ೦೭೪); ಮೂಢನಿಗೆ ಭಯವಿಲ್ಲ, ಮೂಡೆ ಭತ್ತಕ್ಕೆ ಕೇಡಿಲ್ಲ (ಗಾದೆ). ೩. ಚಿಕ್ಕ ಪೊಟ್ಟಣ,—ಗಂಟು : ತಳರ ಪೂಡೆಯೊಳೆ ಮಲ್ಲಿಗೆಯ ಮುಗುಳ್ಗಳಪೊಟ್ಟ ಮಿಕ್ಕ ವುಂಗುಳಂ ಮೇಲುದಿಂ ಮೊಟ್ಟೆಯಂ-ಕಟ್ಟಿ (ಅಣಾಪ. ೦೮-೦೦). ೪. ಒರಗಿಕೊಳ್ಳಲು ಉಪಯೋಗಿಸುವ ಉದ್ದವಾದ ದಿಂಬು; ಲೋಡು : ಪಾಡುವ ಗಾನವ ನಿಲಿಸಿ ಮತ್ತೊಜಗುವ ಮೂಡೆಯನೊಜಗಿ ಚಕ್ರೇಶ ನೋಡುತಿರ್ದನು (ಪಪ. ೪೯-೨೦). ' ಒಱಿಗುಮೂಡೆ ', ' ಮಲಂಗುವಮೂಢೆ ' ಪರಾ. ೫. ಒಂದು ಅಳತೆ: ಶಾಸನಗಳಲ್ಲಿ ಬರುವ ನಾಣ್ಯಗಳೂ ಅಳತೆಗಳೂ . . . ಹಾನಿ. ಮೂಡೆ, ಮುಡಿ (ಕುಳಾಜಾ. ೩೭೦). **ಮಟ್ಟೆ** : ೧. ಮಾತೆಯಾ ತಲೆಗೊಂದು ಮಟ್ಟೆಯನ್ನಿರಿಸಿ ತಾಯಂ ಬಯ್ವುತಂ ನಡಿದನಾ ಕಲ್ಮಿಯು (ಕುಬಂಗಾ. ೧೦-೪). **ಮೂಟೆ** : ೧. ಮಂದಿರದಿ ಮೊಟ್ಟೆಯನಿಟ್ಟು ಇಂದುಧರ ಜಂಗಮರ ಅಂದು ಪುದಿಸುವ (ಪಪೀ. ೦೭೦-೭)॥ ಲಲಿತಾ ಇನ್ನೊಂದು ದೂಟೆಯನ್ನು ತೆಗೆದುಕೊಂಡು ಹಿಂದೆ ಹೊರಟಳ್ (ಕ್ರೌಪ್ರ. ೭೫). ೨. ಹಾಗೂ ಹೀಗೂ ಉದ್ದಿನ ಮೂಟೆ ಕುಲುಕಿದ ಹಾಗೆ ಜನಗಳು ಸವರಿಸಿಕೊಂಡು ಎಲ್ಲರೂ ಕುಳಿತರು (ಜಾಮಾಕ್ಷ. ೦೦೦). **ಬೊಟ್ಟೆ**: ೧. ಕುಡುವವನೇನನಿತ್ತವನೆಂ ಕಟ್ಟಿ ಬುಧಾಗ್ರೆ ಪೊನ್ನ ಮೊಟ್ಟೆಯಂ ಕುಡುವೊಡೆ ಚಿಚ್ಚರಂ ಕುಡುವೆದುಳ್ಕುದಂ (ಅಣಾಪ. ೦-೫೫); ಮನೆ ಸೊಂಕಿದ ಸುಖವ ಮೊಟ್ಟೆಯ ಕಟ್ಟಬಹುದೆ (ಅಪಪ. ೦೭೦-೫೨೪); ಕಂಬಳಿಯೊಳಾತನಂ ಮೊಟ್ಟೆಯಂ ಕಟ್ಟಿ ಪೊತ್ತು ತಂದು ಬೀದಿಯೊಳಗೀಡಾಡಿಪೋಗೆ (ಕೃಷ್ಣಾಶ್ವ. ೪-೨೦ ಪ); ಅಟ್ಟಿಕ್ಕುವವನಿಗೆ ಹೆಂಡತಿಯಾಗಬೇಡ, ಮೊಟ್ಟೆ ಹೊರುವವನಿಗೆ ಅಳಿಯನಾಗಬೇಡ (ಗಾದೆ). ೨. ಭತ್ತವನ್ನು ರಾತ್ರಿಕಾಲದಲ್ಲಿ ಹೊತ್ತುಕೊಂಡು ಹೋಗುವಾಗ್ಗೆ ಭತ್ತದ ಮೊಟ್ಟೆ ತೂತಾದ್ದರಿಂದ ದಾರೀಕಡೆಗೂ ಚಲ್ಲಿದ್ದರಿಂದ (ಶ್ರೀಪ್ರ. ೦೬೨೧. ೦೮-೭೭; 1401). ೬. ಪೊಟ್ಟಣದಲ್ಲಿ ಕಟ್ಟಿದ ಆಹಾರ ; ಬುತ್ತಿ : ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟದರೇನು ಹಸಿವು ಹೋಹುದೇ (ಅಪಪ. ೮೨-೦೭೬). [ದೇ.ತ ತಮಿ. ಮೂಟ್ಟೈ, ಮೂಟ್ಟೈ ; ಮಲ. ಮೂಡ ; ತುಳು. ಮೊಟ್ಟೆ; ತೆಲು. ಪಡ್ಡ. ಮೂಟ; ಕುವಿ. ಮೂಂಟಿ, ಕುರುಖ್. ಮೋಆ. / ಸಂ. ಮೂಟ, ಮೂಟಕ, ಮೂಡಕ. / ಪ್ರಾ. ಮೂಡ. / ಮಹಾ. ಮೂಡ್]

ಮೂಡೆಗಟ್ಟು, ಮಟ್ಟೆಗಟ್ಟು, ಮೂಟೆಕಟ್ಟು, ಮೊಟ್ಟೆಕಟ್ಟು, ಮೊಟ್ಟೆಗಟ್ಟು (ಕ್ರಿ). ೧. ಗಂಟುಕಟ್ಟು; ಹೊರೆಪಾಡು : ಪಾತಾಳದೊಳಗಿರ್ದ ಕ್ಷಪನ ಕತ್ತು ಕೈಕಾಲ ಮುದುಡಿ ಮೂಡೆಗಟ್ಟಿ ಕಟ್ಟುತ್ತೆ (ಪಕ್ಷಿ. ೩-೦೩-೧೩); ಮೂಡೆಗಟ್ಟಿದ ಧಾನ್ಯ ನಿರುತಾಗಿ ಮೊಳೆವಂತೆ ಕೂಡ ರೋಮಗಳು ಗುಡಿಗಟ್ಟಿ (ಕ್ರಶಪ್ರ. ೨-೦೪). ೨. ಗಂಟಾಗು ; ಬಾವು ಬರು : ಅಂಜನಚೋರಂಗೆ ಮುಂಡು . . . ಕಾಲೊಳಂ ಕೈಯೊಳಂ ಮೂಡೆಗಟ್ಟುವಂತೆ ಮೋದಿ (ಕರ್ಣಾಕ್ಕು. ೫-೦೨೦). **ವಟ್ಟೆಗಟ್ಟು** : ೧. ಕಬ್ಬುಲಿಗರ ನಂಬಲಿಯಂ ಮಟ್ಟೆಗಟ್ಟುವರಂತೆ ಕೋಡಗಟ್ಟಿಂಗಟ್ಟಿ ಕಾಡುವಂ (ಕರ್ಣಾಪ್ರ. ೫-೭೭). **ಮೂಟೆಕಟ್ಟು** : ೧. ಅರ್ಜುನನನ್ನು ರಣಾಂಗಣದಲ್ಲಿ ಜಯಿಸುವುದಕ್ಕೆ ನಿಶ್ಚಯಿಸುವುದು ಘಾಳಿಯನ್ನು ಹಿಡಿದು ಮೂಟೆಕಟ್ಟುವುದಕ್ಕೂ . . . ಎಣಿಸಿದ ಹಾಗೆ (ಕೃಜಾ. ೬೨); ಆ ವೀರಭೂಮಿಯ ಸ್ವತಂತ್ರರಾಣಿಯನ್ನು ಬಲಾತ್ಕಾರದಿಂದ ತಂದರೆ, ಹಿಂದೂ ಪಾಳೆಯಗಾರರ ವಿರೋಧಾನಲವನ್ನು ಮೂಟೆಕಟ್ಟಿ ಮಟ್ಟಣಕ್ಕೆ ತಂದಂತೆಯೇ ಸರಿ (ಕ್ರಾಅ್. ೭೭). ೩. ಧಾನ್ಯ ಮುಂತಾದುವನ್ನು ಚೀಲದಲ್ಲಿ ತುಂಬಿಸಿ ಕಟ್ಟು : ಅವನು ಭತ್ತವನ್ನು ಮೂಟೆಕಟ್ಟಿ ಸಂತೆಗೆ ಮಾರಲು ತೆಗೆದುಕೊಂಡು ಹೋದನು (ಕಸಾ). ೪. ಒಟ್ಟುಗೂಡಿಸು ; ಒಟ್ಟಾಗಿ ಬಂಧಿಸು : ಹೆಣ್ಣಿನ ತಂಟೆ ಇನ್ನು ಬೇಡವೆಂದು ರೋಷವನ್ನೆಲ್ಲಾ ಮೂಟೆಕಟ್ಟಿ ಇಟ್ಟಿದ್ದ ಭೀಮನೂ ಮತ್ತೆ ಕರೆದನು (ಶಾಕ್ಕ. ೦೯); ಆ ಸೇದನ್ನು ಅವನು ಮೂಟೆಕಟ್ಟಿ ಪಾವಡ ಮೂಲೆಯಲ್ಲಿ ಬಚ್ಚಿಟ್ಟುಕೊಂಡನು (ಚಿತ್ರಾ. ೨೦). **ಮೊಟ್ಟೆಕಟ್ಟು** : ೧. ನನ್ನ ಜುಬ್ಬವನ್ನು ತೆಗೆದು ಪಂಚೆಯನ್ನು ಎತ್ತಿ ಮೊಟ್ಟೆಕಟ್ಟಿ ಕೆರೆಯೊಳಗಿಳಿದೆ (ಕಂಗಾಕ್ಕ. ೫೫೩). ೨. ಮಂದಾ ಅವಸದಂದ . . . ಒದ್ದಾಡುವ ಮನಸ್ಸನ್ನು ಒಟ್ಟುಗೂಡಿಸಿ ಮೊಟ್ಟೆಕಟ್ಟಿ ಅಂತೂ ಕುಳಿತುಕೊಂಡಳು (ಚಿತ್ರ. ೨೫೩). **ಮೊಟ್ಟೆಗಟ್ಟು** : ೧. ಪುಡಿಗತ್ತುರಿಯೆಂದು ಪಿಡಿಕೆಯ್ದು ಪುಸಲುಂ ಪಾನಿ ಮೊಟ್ಟೆಗಟ್ಟಲುಂ . . . ಅಪ್ಪ ಇಳೆದ ಕಟ್ಟಲೆಯೊಳ್ (ಆರಾಕ. ೩-೦೫೩); ತನ್ನ ಮನದಣಿವನಿತು ಪೊನ್ನಂ ತನ್ನ ವಸನದಿಂ ಮೊಟ್ಟೆಗಟ್ಟಿ ಸಡಗರಂ ಮಿಗೆ ಪೊತ್ತು (ಕೃತ. ೦೪-೦೪ ಪ); ಹುಟ್ಟುವಾಗಲೆ ಧನವ ಮೊಟ್ಟೆಗಟ್ಟಿಲಿಯಸೆ (ಸರಾಕ್ಷ. ೬೦೯). [ಮೂಡೆ + ಕಟ್ಟು]

ಮೂಡೆಗಟ್ಟು (ನಾ). ಮೂಡೆಗಳನ್ನು ಕಟ್ಟುವಂತೆ ಕಟ್ಟುವ ಒಂದು ಬಗೆಯ ಬಿಗಿಯಾದ ಬಂಧ, — ಕಟ್ಟು : ಈಗಳೊರ್ವಂ ಗಂಧರ್ವಂ . . . ಕುರುರಾಜನುಮಂ ಯುವರಾಜನುಮಮೊಡನೆ ಮೂಡೆಗಟ್ಟುಗಟ್ಟಿಕೊಂಡು ಗಗನಮಂಡಳಕ್ಕೊಗೆದು ಪೋದಂ (ಪಚಪ್ರ. ೦೦-೭೦೫); ಮೂಡೆಗಟ್ಟುಂ ಕಟ್ಟು ಹುಡುಕುನೀರೊಳ್ ಮೆಟ್ಟಿ ಕಾಡುತಿಹ ಪಾಮರರ ಕೈವಿಡಿತಿಗೊಳಗಾಗಿ (ಕಚಪಂ., ೨-೬); ಮೂಡೆಗಟ್ಟುಂ ಕಟ್ಟಿ ಹುಡುಕುನೀರೊಳಗದ್ದಿ ಕೂಡೆ ಮುಂಗಂ ಕೊಯ್ದೊಡೆ (ಗುಪಂ. ೦-೭೬). [ಮೂಡೆ + ಕಟ್ಟು]

ಮೂಡೆ ' ಮೂಡಾಯ್ ' ನೋ.

ಮೂಡೊಂಕು (ನಾ). ಮೂರು ಕಡೆಗಳಲ್ಲಿ ಬಾಗಿರುವುದು. — ಡೊಂಕಾಗಿರುವುದು : ವಲಹರನ ನಡುಪೊಂದೆಸೆಗೆ ಒಲಿದೊಲಿದುತ್ತೊಂಡಿದೆ . . . ಮೂಡೊಂಕಾಗಿ ಕಾಪೊಂದು ನೆಲನನೂಜ್ಜೊಡಲನಾಂತುದು ಉಲಿದ ಮೆಲ್ಲಡಿ (ಜಪ್ರ. ೭೭-೨); ಜಡಿದ ಖಂಡಯದ ಮೂಡೊಂಕ ತಿದ್ದದ

ಮುನ್ನವಡಿಗೆಱಗಿದುದು ಕೇಶವ ಪೂಜಪಿ ಶ್ರಿಖಿಂಡವೆ ಮೋಡಶರಾಯರು ಪಡೆದರು ಭೃತ್ಯಭಾವವನು (ಹರಿ. ೭-೫೦).

[ಮೂಢ (< ಮೂಜು) + ದೊಕ್ಕು]

ಮೂಢ (ಗು)- ೧. ತಿಳಿವಳಿಕೆಯಿಲ್ಲದ ; ಅವಿವೇಕದಿಂದ ಕೂಡಿದ : 'ಮೂಢನಂಬಿಕೆ', ' ಮೂಢಭಕ್ತಿ ' ಪರಾ- (ನಾ)- ೨. ತಿಳಿವಳಿಕೆಯಿಲ್ಲದವನು; ತಿಳಿಗೇಡಿ; ಅಜ್ಞ: "ವೈಧೇಯಃ . . . ಮೂಢಃ . . . ಮಾತೃ ಶಾಸಿತಃ — ಈ ೧೧ ಅಜ್ಞಿಯದವಂ" (ಪಣಪಯು- ೩೬-೦೬೦); ಮೂಢ ಬಲ್ಲನೆ ಜ್ಞಾನದೃಢ ಭಕುತಿಯ (ಕಥಾಸ. ೧೨- ೨-೦೧೦ ೪೭೬); ಮೂಢ ಪಿಂದಿರುಗಿ ಪೋಗಿ ಸಲಹಿಕೊ ಶರೀರಮಂ (ಪಂಚಾಖಾ. ೩-೩-೦೦). ೩. ಪೆದ್ದ; ಪುಂಕ : ಮೂಢಗೆ ಹೇಳಿದ ಬುದ್ಧಿ ಅಡಿಗೆ ಹಾಕಿದ ಮೇವು (ಗಾಡಿ). ೪. ಆಲಸ್ಯ; ಸೋಮಾರಿತನ : ಮೂಢವೆಂದರೆ ತಮೋಗುಣದಿಂದ ನಿದ್ರೆಯಲ್ಲಿರುವ ಹಾಗೆ ಆಲಸ್ಯದಲ್ಲಿರುವುದು (ಹಿಂದಾ. ೧೦೨). ೫. = ಮೂಢತ್ರಯ : ಮೂಜುಮೂಢದಿನಾಜನಾಯತನಸೇವೆಯಿಂ . . . ಪಿಂಗಿದ ನಿರ್ಮಳಮಪ್ಪ ಸಮ್ಯಕ್ತ್ವರತ್ನಮಂ ಕೈಕೊಂಡು (ಸುಗಸುಾ. ೭-೫೯ ಕೆ): ಬೆಸನಾವ್ತದುಯನುತವೆ ಮೂಜುಮೂಢಗಳೊಳೆಸೆದು ಬಿನ್ನಹ ಮಾಡುವರು (ಶ್ರೀಪಾಂ. ೭-೭೦); ಮೂರು ಮೂಢಗಳೆಟುಮಲವಿನ್ನಾರ ನಾಯತವಷ್ಮಮದಗಳ ದೇರುಪಡಿಸಲು ದರುಶನೇಕನುಯೆನಿಪಮ (ಪಣಪಯು. ೩೮೯-೨೧). ' ಮೂಢತ್ರಯ ' ಪರಾ. [ಸಂ.]

ಮೂಢತನ (ನಾ)- ತಿಳಿವಳಿಕೆಯಿಲ್ಲದಿರುವುದು ; ಮೂರ್ಖತನ : ರೂಢಿ ಮಾಡಿದ ಧರ್ಮಗತಿಯಲಿ ಗಾಢಮಾಡಿದ ಸರ್ವಜನಗಳ ಮೂಢತನ ಬಯಲಾಗಿ ಹೋಯಿತು (ಸಣಪ. ೪-೭೨). [ಮೂಢ + — ತನ]

ಮೂಢತೆ (ನಾ)- ೧. = ಮೂಢತನ : ಮೂಢತೆಯಂ, ಬಿಟ್ಟು ಪೆರ್ ಮಾಡುವ ಡೊಂಬಿಂಗೆ ಬೇಗಮೆಱಗದೆ ಮೂರ್ಖರ್ ಮಾಡುವುದಂ ಲೇಸನ್ನದೆ ಕೂಡುವುದಾರಯ್ದಮೂಢದೃಷ್ಟಿಯೊಳಜ್ಞಾನಂ (ಕಡಾಕಾಖ್ಯ. ೩-೩); ಬೀತುದು ಬಂಕಮೋಡಿದುದು ಮೂಢತೆ ಮೂಡಿದುದಶ್ರ ಕಣ್ಗಳೊಳ್ . . . ಬೆಳ್ಪಱಸಿ ಬೀಪಸಮಂ ತಳೆದಂ ಧನಂಜಯಂ (ಭಾಪಂ. ೪-೦೦೬). ೨.ದಿಗ್ಭ್ರಮೆ; ಕಕ್ಕಾಬಿಕ್ಕಿ. [ಸಂ. ಮೂಢತಾ]

ಮೂಢತ್ರಯ (ನಾ)- [ಜೈನ] ಲೋಕಮೂಢ, ದೇವತಾಮೂಢ ಮತ್ತು ಪಾಖಂಡಿಮೂಢ ಎಂಬ ಮೂರು ಬಗೆಯ ಮೂಢತನ.— ಮೌಢ್ಯತ್ರಯ : "ದೇವಮೂಢ, ಲೋಕಮೂಢ, ಗುರುಮೂಢ ಇವು ಮೂಢತ್ರಯಗಳು. ದೇವಮೂಢ : — ಮಿಥ್ಯಾದೇವರ ಉಪಾಸನೆ. ಲೋಕಮೂಢ :—ನದಿಸ್ನಾನ, ಪರ್ವತದ ಮೇಲಿಂದ ಬೀಳುವುದು ಮುಂತಾದವುಗಳು ಪುಣ್ಯಕರವೆಂದು ಭಾವಿಸುವುದು. ಗುರು ಮೂಢ : — ಆರಂಭಪರಿಗ್ರಹಗಳುಳ್ಳ ವಿಷಯವಾಸನೆಯಿಂದ ಕೂಡಿದ ಪಾಖಂಡಿಗಳನ್ನು ಮುನಿಗಳೆಂದು ಭಾವಿಸಿ ಪೂಜಿಸುವುದು. ಇದಕ್ಕೆ ಪಾಖಂಡಿಮೂಢವೆಂದು ಅನ್ನುತ್ತಾರೆ" (ಅಷ್ಟ. ಶ್ರಾವಕಾಚಾರ ಪ್ರ. ೫೭೮); ಜೀವಾದಿ ನವಪದಾರ್ಥದೊಳಾಗಮಬ್ರುಯನೆ ಮಾಡು ಮೂಢತ್ರಯದೊಳ್ ಭಾವಮನೆ ಬಿಸುಡು (ಅಷ್ಟ. ೫-೩೬). [ಸಂ.]

ಮೂಢತ್ವ (ನಾ)- = ಮೂಢತನ : ಪೀಡೆಪಟ್ಟರೂ ಮೂಢತ್ವ ಹೋದೀತೇಳ್(ಗಾಡಿ). [ಸಂ.]

ಮೂಢನಂಬಿಕೆ (ನಾ)- ಹಿಂದಿನಿಂದ ಬಂದ ಸಂಪ್ರದಾಯಗಳನ್ನು ವಿವೇಚನೆಯಿಲ್ಲದೆ ನಂಬುವುದು ; ಕುರುಡುನಂಬಿಕೆ : ಇದರ ಮೂಲಕ ದೇಶದಲ್ಲಿ ಒಂದು ಹೊಸ ದೃಷ್ಟಿ ಸಂಚಾರವಾಯಿತು. ಹಲವು ಮೂಢನಂಬಿಕೆಗಳು ಜಾರಿಹೋದುವು (ಜಾಕಥ. ೬೨೦) ; ವಿಚಾರಶೂನ್ಯವಾದ ಅಂಧಶ್ರದ್ಧೆ ಬೆಳೆದು, ಅಜ್ಞಾನ ಮೂಢನಂಬಿಕೆಗಳಿಂದ ಉದ್ಭವಿಸುವ ಸಂಕುಚಿತಮನೋವೃತ್ತಿ (ಪಣಾಸಂ- ೩೬ ೦೧೫೪). [ಮೂಢ + ನಂಬಿಕೆ]

ಮೂಢಭಕ್ತಿ (ನಾ)- ತಿಳಿವಳಿಕೆಯಿಲ್ಲದ ಭಕ್ತಿ ; ಅಂಧಶ್ರದ್ಧೆಯಿಂದ ಕೂಡಿದ ಭಕ್ತಿ : ದೇವಸ್ಥಾನಗಳಲ್ಲಿ ನಡೆಯುವ ಉತ್ಸವವಿಶೇಷಗಳು ಪಾಮರರಂಜನೆಯಿಂದ ಅಜ್ಞಜನರೂ ಮೂಢಭಕ್ತಿಯಿಂದ ಮುಕ್ತರಾಗಲು ಸಹಾಯಕಗಳಾದುವು (ಜಾಪಪ. ೦೦). [ಸಂ.]

ಮೂಢಮತಿ (ನಾ)- ತಿಳಿವಳಿಕೆಯಿಲ್ಲದ ವ್ಯಕ್ತಿ ; ಮೂರ್ಖವ್ಯಕ್ತಿ : ಮೂಢಮತಿಗಳಿಗಗಮಲಬ್ರಹ್ಮದ ಗೂಢವೆಂತಳವಡುವುದು (ಗಗಣಾ. ೦೨-೩೩). [ಸಂ.]

ಮೂಢಮರ (ನಾ)- ಒಂದು ಬಗೆಯ ಮರ : ಸಾರೋಲಿ. ಮೂಢ ಮರ, ಮೂಢ- ಮೂಢಲಿ. ಕನಕಚಂಪಕ (ಕ್ರಿ.ಕಾ. ೩೭-೦೦೪೦).

[ಮೂಢ್ಯ + ಮರ]

ಮೂಢಾತ್ಮ (ನಾ)- = ಮೂಢಮತಿ : ವಿತತಭಾಖಿತನಪ್ಪ ತನ್ನಿಂಗಿತ ವನವರಾಯತವಸಜಿಯಿಂದ ಕ್ಷಿತಿವನವ ಮೂಢಾತ್ಮನ್ಗೆ (ಕಾಪ್ಯಾ. ೩-೧೪); ಎಲವೊ ಮೂಢಾತ್ಮ ನೀನೆನ್ನ ಕಟ್ಟಳೆಯನಱಿದು . . . ಪಟ್ಟಣದೊಳೇಕೆ ತಳುವಿದೆ (ಕೃಪಾಣಾ. ೦೦-೨೬). [ಸಂ. ಮೂಢಾತ್ಮನ್]

ಮೂಢೋಕ್ತಿ (ನಾ)- ತಿಳಿವಳಿಕೆಯಿಲ್ಲದ ಮಾತು ; ಮೂರ್ಖತನದ ನುಡಿ : ಪಾಳಾದ ದುಷ್ಕರ ಲಂಕಾಪುರಮುಂ ನಭೋಗಪುರಮುಂ . . . ಸುಸ್ಥಿರಹಮ್ಮಿರವರಕ್ಕೆ ತೋಡಿಸರೊಡಂ ಮೂಢೋಕ್ತಿ ಮೂಲೋಕದೊಳ್ (ಕಬ್ಮಾಕ. ೨-೬೯). [ಸಂ.]

ಮೂತಿ, ಮೋತಿ (ನಾ)- ೧. (ಸಾಮಾನ್ಯವಾಗಿ ಹೀನಾರ್ಥದಲ್ಲಿ ಹೇಳುವಾಗ ಮನುಷ್ಯರ) ಮುಖ ; ಮೋರೆ : ಜಾತಿಮರ್ಕಟ ಪಂದೊಡೇನಂಟವುದೆ ನಿಶಾಪತಿಯ ಮೂತಿಯೊಳಗಣ ಜೆಲುವು (ಕ್ರಿಶ್ಮ. ೬-೨೨) : ಎಂಟುರೂಜಾಯಿ ಬಿಸಾಡುತಿದ್ದೆನಲ್ಲೇ ನಿನ್ನ ಮೂತಿಯ ಮೇಲೆ (ಕಡಾ. ೨, ೨೦೩) . ೨. ಹಂದಿ, ಹೆಗ್ಗಣ ಮುಂತಾದ ಪ್ರಾಣಿಗಳ ಉದ್ದವಾದ ಮುಖ ; ಮುಸುಡಿ : ಹಂದಿಯು . . . ಮುಂದಿರುವ ಬಲೆಯನ್ನು ಸೀಳಿಬಿಡಬೇಕೆಂದು ಮೂತಿಯನ್ನು ಮುಂದೂಡಿ ಬಲೆಯ ಕಣ್ಣಿನಲ್ಲಿ ಸಿಕ್ಕಿಕೊಂಡಿತು (ಹುಗ್ಗ. ೨೦). ೩. ಬಾಯಿಯ ಕೊನೆ ; ಕಟಬಾಯಿ ; ಸೋಟೆ : ಆಕೆ ಆ ಹುಡುಗಿಯ ಮೂತಿಯನ್ನು ತಿವಿದು ದೂಡಿದಳು (ಕೂಡ). ೪. ಮುಂಭಾಗ ; ತುದಿ : ದೋಣಿಯ ಅಥವಾ ಹಡಗಿನ ಮೂತಿ (ಖಂಗ. ೨೦೪೨) ; ಕುಡುಗೋಲಿನ ಮೂತಿ ಮುರಿದು ಹೋಯಿತು (ಕೂಡ). ಮೋತಿ : ೧. ಹಿಂಗ್ಯಾಕೆ ಮೋತಿ ಮಾಡಕೊಂಡ ಕುಂತಿದಿ ? (ರಜ್ಜು.ಹಂ. ೭೦). ೨. "ಜಾತಿ ವರ್ಣದ ಪಯಸ್ಕಂಭ್ರವಳಯಂ ವಾಲ ಮೋತಿ [ಜಾಣಂ.ತು.ಜಿ]ಕಪ್ಪಾಗೆ ಸತ್ಯಾಧಿಕಂ" (ಕುಂಗಾ. ೩೨-೦೬) ; ಕಚ್ಚಿದ ನಾಗರಹಾವನ್ನು ಮಂತ್ರಬಲದಿಂದ ಕರೆಯಿಸಿ ಆ ಹಾವೇ ತಾನು ಕಚ್ಚಿದ ಗಾಯಕ್ಕೆ ಮೋತಿಯಿಟ್ಟು ವಿಷ ಹೀರಿ . . . ಹೋಗುವಂತೆ ಮಾಡುತ್ತಿದ್ದನು ! (ಕೆಬಹು- ೪೨).

ಮೂತಿತಿರುವು=ಅಲಕ್ಷ್ಯದಿಂದ ಮುಖವನ್ನು ಬೇರೆಕಡೆಗೆ ತಿರುಗಿಸು; ವಿಮುಖವಾಗು : ನನ್ನನ್ನು ನೋಡಿ ಅವಳು ಮೂತಿತಿರುವಿಕೊಂಡು ಹೋದಳು (ಕೂಡ). ಮೂತಿ ತಿವಿ = ೧. ಸೋಟೆಯನ್ನು ಬುಚ್ಚು.— ತಿವಿ : ಕೋಪದಿಂದ ಆಕ ಆ ಹುಡುಗನ ಮೂತಿತಿವಿದ (ಕೂಡ). ೨. (ಆಲಂ) ಅವಹಾಸ್ಯವಾಡು ; ಅವಮಾನಪಡಿಸು : ಅಂದಿನ ಸಭೆಯಲ್ಲಿ ಜನರು ಅವನಿಗೆ ಮೂತಿತಿವಿದು ಬೆಳಿಸಿದರು (ಕೂಡ).

[ದೇ.॥ ತಮಿ.ಮೂಸ್ಸೈ ; ಮಲ. ಮೂಚ್ಚು, ಮುಚ್ಚಿ, ಮುಂಚ್ಚಿ, ಮೂಂಚ್ಚಿ, ಮೊಚ್ಚಿ, ಮೋಸ್ಸ ; ತೆಲು. ಕೋಲಾ. ನಾಯ್ಕ. ಮೂತಿ ; ಕುವಿ. ಮೂಂಬು, ಮೂಂಬೂ ; ಕುರುಖ್. ಮೊಚ್ಚಾ ; ಕೋತ. ಮುಚಿ, ಮೋಂಗ್]

ಮೂತೆರ ' ಮೂದೆಱ ' ನೋ.

ಮೂತ್ರ. (ನಾ)· ಮನುಷ್ಯ, ಪ್ರಾಣಿ ಮುಂತಾದ ಜೀವಜಂತುಗಳ ಶರೀರದಿಂದ ಹೊರಬರುವ ಕಲ್ಮಷಜಲ : ಉಚ್ಚೆ ; ಗಂಜಲ : "ಪುರುಜಲಮೆನಲ್ಕೆ ಮೂತ್ರಮಕ್ಕುಂ" (ಕುಂಗಣಾ. ೭೭–೦೪) ; ಪರಿಮೂತ್ರಂ ಭಿನ್ನಲಂಡಂ ಸುರಿಯೆ ಮದಜಲಂ ಮೆಯ್ಯೊಳ್ಳಾಡೆ (ಪ್ರಭುತಿ. ೦೦–೮೨) ; ಕೈಯಲ್ಲಿ ಕಜುಹು ಬಾಯಿಲ್ಲಿ ಅಜುಹು ಸುಡಿಷುಕ್ತಿಪ್ಪ ಅಮ್ಮಗೆಳ್ಳರು ಇಜುಹಿನ ಮೂತ್ರದಲ್ಲಿ ಪ್ರಳಯವಾದರು ನೋಡಾ (ಶಿಕ್ಷಣ. ೨೦೯–೪೭೭) ; ಮೂತ್ರ ಬಹಳವಾಗಿ ಹೋಗುವುದಕ್ಕೆ ಚಿಕಿತ್ಸೆ : — ಅಳಲೇಕಾಯಿ ಚೂರ್ಣ ಗ ೩ ತೂಕವನ್ನು ಜೇನುತುಪ್ಪದಲ್ಲಿ ಕೊಡುವುದು (ಶಿಕ್ಷ. ೦೫೪). [ಸಂ.]

ಮೂತ್ರಕಟ್ಟು (ನಾ). ಮೂತ್ರವಿಸರ್ಜನೆಯಲ್ಲಿ ತಡೆಯುಂಟಾಗುವ ಒಂದು ಬಗೆಯ ರೋಗ : ಉಚ್ಚೆ ನಿಂತುಹೋಗುವುದು : ಮೂತ್ರಕಟ್ಟಿಗೆ : — ಗರಿಕೆಬೇರು, ದುಷ್ಟಿಮಧುಕ, ನೆಗ್ಗಿಲಬೇರು, ತ್ರಿಫಲೆಯ ರಸದಲ್ಲಿ ಅಟ್ಟು ಕರ್ಪೂರ, ಶಿಲಾಧಾತುವಂ ಪ್ರತಿಪಾಪಿಕ್ಕೆ ಕುಡಿಯೆ ಎರ್ಮಾ ಮೂತ್ರಕೃಚ್ಛ್ರ ಮಾಣ್ಗುಂ (ಶಿಕ್ಷ. ೦೭೦) ; ಬೋಳ ದರಗದ ರಸವನ್ನು ಹಸುವಿನ ಹಾಲಿನಲ್ಲಿ ಕೂಡಿಸಿ ಜೇನಿಗೆ ಗ ೨ ತೂಕ. ಸಕ್ಕರೆ ಗದ್ಯಾಣ ೩ ತೂಕ ಸಪ ಪಾಕಿ ಕೊಡಲು ಮೂತ್ರಕಟ್ಟು ಹೋಗುವುದು (ಶಿಚ್ಛ. ಪಂ. ೧೧೨). [ಮೂತ್ರ + ಕಟ್ಟು]

ಮೂತ್ರಕಲ್ಲು (ನಾ). ಮೂತ್ರಕೋಶ ಅಥವಾ ಮೂತ್ರನಾಳದಲ್ಲಿ ಕಲ್ಲಿನಂತೆ ಗಟ್ಟಿಯಾದ ಗಂಟು ಉಂಟಾಗಿ ಮೂತ್ರ ವಿಸರ್ಜನೆಗೆ ತಡೆಯೊಡ್ಡುವ ಒಂದು ಬಗೆಯ ರೋಗ ; ಅಶ್ಮರಿ : ಮೂತ್ರಕಲ್ಲಿಗೆ ಗುಳಿಗೆಯ ಮಾಡುವ ಕ್ರಮ : — ಕೆಂಪಿನ ಅಂಕೋಲ ಬೇರು, ಪುಳಿ ಸೊಪ್ಪು . . . ಇವಕ್ಕೆ ಸಮ ಇಂಗು, ಅಂಬಿಲದಲ್ಲಿ ಅರೆದು ಮೂತ್ರಕಲ್ಲಿಗೆ ಗುರುಗುಂಜಿಯ ಪ್ರಮಾಣಕ್ಕೆ ಕೊಡುವುದು (ಶಿಕ್ಷ. ೦೫೯).

[ಮೂತ್ರ + ಕಲ್ಲು (< ಕಲ್ಲ್)]

ಮೂತ್ರಕುಂಡಲಕ (ನಾ). ಹನ್ನೆರಡು ಬಗೆಯ ಮೂತ್ರಸಂಬಂಧವಾದ ರೋಗಗಳಲ್ಲಿ ಒಂದು : ಹನ್ನೆರಡು ಪ್ರಕಾರ ಮೂತ್ರಘಾತಗಳ ಪೆಸರಾವಾವೆಂದೊಡೆ — ಮೂತ್ರೋತ್ಸಂಗ, ಮೂತ್ರಗ್ರಂಥಿ, ಮೂತ್ರಕ್ಷಯ, ಮೂತ್ರಾತೀತ, ಮೂತ್ರಶುಕ್ಲ, ಮೂತ್ರಕುಂಡಲಕ, ಮೂತ್ರವಿದ್ರಾತ, ಮೂತ್ರವಾತ, ಮೂತ್ರಷ್ಠೀಹ, ಉಷ್ಣವಾತ, ಮೂತ್ರವಸ್ತಿ, ಮೂತ್ರಸಾದವೆಂದಿಂತು (ಶಿಕ್ಷ. ೬೭೦). [ಸಂ.]

ಮೂತ್ರಕುಂಡಲಿಕೆ (ನಾ). = ಮೂತ್ರಕುಂಡಲಕ : ಮೂತ್ರೋತ್ಸಂಗ, ಮೂತ್ರಗ್ರಂಥಿ, ಮೂತ್ರಕ್ಷಯ, ಮೂತ್ರಾತಿಸಾರ, ಮೂತ್ರಶುಕ್ಲ ಮೂತ್ರಕುಂಡಲಿಕೆ, ಮೂತ್ರವಿದ್ರಾತ, ಮೂತ್ರವಾತ, ಮೂತ್ರಾಷ್ಠೀಲ ಉಷ್ಣವಾತ, ಮೂತ್ರವಸ್ತಿ, ಮೂತ್ರಸಾದಗಳೆಂದು ಇವು ಹನ್ನೆರಡು ತೆರಿ (ಶಿಕ್ಷಣ. I. ೨೩೪). [ಸಂ. ಮೂತ್ರಕುಂಡಲಿಕಾ]

ಮೂತ್ರಕೂಪ (ನಾ). ೧. ಉಚ್ಚೆಯು ಸಂಗ್ರಹವಾಗುವ ಗುಂಡಿ. ೨. ಒಂದು ನರಕದ ಹೆಸರು : ಪರ್ವತ ಯುಗಳಪರ್ವತ ಕ್ಷುರಧಾರೆ ಮೂತ್ರ ಕೂಪ ವಿಷ್ಠಾಕೂಪವೆಂಬೈವು ಮಂತ್ರಿನಳಿಕಂಗಳು (ಶಬೀ.೦೭೫). [ಸಂ.]

ಮೂತ್ರಕೃಚ್ಛ್ರ (ನಾ). ಉರಿ ಮತ್ತು ನೋವಿನಿಂದ ಕೂಡಿದ್ದು ಸರಾಗವಾಗಿ ವಿಸರ್ಜನೆಯಾಗದಿರುವ ಒಂದು ಬಗೆಯ ಮೂತ್ರ ರೋಗ : ಅಮರದವಳ್ಳಿ, ಬಿಲ್ವಪತ್ರಿಕಾಯಿ . . . ಕಷಾಯ ಕಾಯಿಸಿ, ಹಿಪ್ಪಲಿ ಪ್ರತಿಪಾಕಗೊಂಡು ಸೇವಿಸೆ . . . ಅಸ್ಥಿಗತಜ್ವರ, ಮೂತ್ರಕೃಚ್ಛ್ರ ಮೊದಲಾದ ರೋಗಗಳು ಗುಣವಾಗುವವು (ಶಿಕ್ಷ. ೫೦). [ಸಂ.]

ಮೂತ್ರಕೃಚ್ಛ್ರ (ನಾ). = ಮೂತ್ರಕೃಚ್ಛ್ರ : ಅಂತಪ್ಪ ರೇಪೆಗಳ್ ಕರ್ಪಂ ತಳೆದಾ ಪ್ರೋಥವುದ್ಧದೊಳ್ ತೋರ್ಪೊಡೆ ಬಾಬ್ಗುಂ ಪುರಗ ಮೋಡಪವರ್ಷಾಂತರಮಂ ಮೂತ್ರಕೃಚ್ಛ್ರಿಯಾಂದಂ ಮಾಡಿಗುಂ (ಶಿಕ್ಷ. ೩–೨೦). [ಸಂ. ಮೂತ್ರಕೃಚ್ಛ್ರ]

ಮೂತ್ರಕೋಶ (ನಾ)· ದೇಹದಲ್ಲಿ ಉಚ್ಚೆಯು ಶೇಖರವಾಗುವ ಚೀಲ : ಕಾಯಿಲೆ ತೀವ್ರಗತಿಯಲ್ಲಿರುವಾಗ ಕೆಲವು ವೇಳೆ ಮೂತ್ರಕೋಶ (urinary bladder) ಕ್ಕೆ ಲಕ್ವ ಹೊಡೆಯುತ್ತದೆ (ಕಲೋ. ೨೩). [ಸಂ.]

ಮೂತ್ರಕ್ಷಯ (ನಾ)· ಹನ್ನೆರಡು ಬಗೆಯ ಮೂತ್ರರೋಗಗಳಲ್ಲಿ ಒಂದು; ಸರಿಯಾದ ಪ್ರಮಾಣದಲ್ಲಿ ಮೂತ್ರೋತ್ಪತ್ತಿಯಾಗದಿರುವುದು : ಮೂತ್ರೋತ್ಸಂಗ, ಮೂತ್ರಗ್ರಂಥಿ, ಮೂತ್ರಕ್ಷಯ . . . ಮೂತ್ರಸಾದಗಳೆಂದು ಇವು ಹನ್ನೆರಡು ತೆರಿ (ಶಿಕ್ಷಣ. I. ೨೩೪) : ಹನ್ನೆರಡು ಪ್ರಕಾರ ಮೂತ್ರಘಾತಗಳ ಪೆಸರಾವಾವೆಂದೊಡೆ ಮೂತ್ರೋತ್ಸಂಗ, ಮೂತ್ರಗ್ರಂಥಿ, ಮೂತ್ರಕ್ಷಯ . . . ಮೂತ್ರಸಾದವೆಂದಿಂತು (ಶಿಕ್ಷ. ೬೭೦). [ಸಂ.]

ಮೂತ್ರಗ್ರಂಥಿ (ನಾ)· = ಮೂತ್ರಕಲ್ಲು : ಮೂತ್ರೋತ್ಸಂಗ, ಮೂತ್ರಗ್ರಂಥಿ . . . ಮೂತ್ರಸಾದಗಳೆಂದು ಇವು ಹನ್ನೆರಡು ತೆರಿ (ಶಿಕ್ಷಣ. I. ೨೩೪) ; ಹನ್ನೆರಡು ಪ್ರಕಾರ ಮೂತ್ರಘಾತಗಳ ಪೆಸರಾವಾವೆಂದೊಡೆ, ಮೂತ್ರೋತ್ಸಂಗ, ಮೂತ್ರಗ್ರಂಥಿ . . . ಮೂತ್ರಸಾದವೆಂದಿಂತು (ಶಿಕ್ಷ. ೬೭೦). [ಸಂ.]

ಮೂತ್ರಚೀಲ (ನಾ)· = ಮೂತ್ರಕೋಶ : ಬಹುಮೂತ್ರಕ್ಕೆ ಮೊದಲು ಹುಟ್ಟುವ ಉಪದ್ರವ ಮೂತ್ರಚೀಲವು ಗುದದ ದೇಥ್ರದ ಮಧ್ಯದಲ್ಲಿ ಇರುವುದು (ಶಿಕ್ಷ. ೦೫೬). [ಮೂತ್ರ + ಚೀಲ]

ಮೂತ್ರಜನಕಾಂಗ (ನಾ)· ಶರೀರದ ಶುದ್ಧೀಕರಣಾಂಗಗಳಲ್ಲಿ ಒಂದು; ಮೂತ್ರೋತ್ಪತ್ತಿಯನ್ನು ಮಾಡುವ ಅಂಗ : "ಸ್ಯನಿಗಳ, ಪಕ್ಷಿಗಳ, ಉರಗವಂಸಿಗಳ, ಉದರಕುಹರದಲ್ಲಿರುವ, ರಕ್ತದಲ್ಲಿಯ ಉಪಯೋಗ ಕಳೆದ ಸಸಾರಜನಕಪದಾರ್ಥವನ್ನು ಹೊರದೂಡುವುದಕ್ಕಾಗಿ ತನ್ನಲ್ಲಿ ಹರಿಯುವ ರಕ್ತದಿಂದ ಬೇರ್ಪಡಿಸಿ ಮೂತ್ರದ ಮೂಲಕ ಸಾಗಿಸುವ, ನಾಳಗುಚ್ಛಾಂಗಗಳಿರಡರಲ್ಲಿ ಒಂದು : ಮೂತ್ರಜನಕಾಂಗ ; ಮೂತ್ರಪಿಂಡ" (Kidney. ೩೦೪೨). [ಸಂ.]

ಮೂತ್ರತಡೆ (ನಾ)· = ಮೂತ್ರಕಟ್ಟು : ಪೆಟ್ಟುಪ್ಪ ಗ ೧ ತೂಕವನ್ನು ಪುಡಿ ಮಾಡಿ ವಿಂಪೆನ್ನೆಣ ರಸದಲ್ಲಿ ಕಲಸಿ ಸಕ್ಕರೆ ಗ ೩ ತೂಕ ಹಾಕಿ ಕುಡಿಯಲು ಆ ಕ್ಷಣವೇ ಮೂತ್ರತಡೆ ಹೋಗುವುದು (ಶಿಕ್ಷ. ಪಂ. ೧೧೪). [ಮೂತ್ರ + ತಡೆ]

ಮೂತ್ರದೋಷ (ನಾ)· ಮೂತ್ರಸಂಬಂಧವಾದ ರೋಗ : ಈ ಲೇಸ್ಯಕ್ಕೆ ಚ್ಯವನಪ್ರಾಶವೆಂದು ಹೆಸರು . . . ಇದನ್ನು ಸೇವಿಸಲು . . . ಮೂತ್ರದೋಷ, ಶುಕ್ರದೋಷ, ಸ್ವರಭಂಗ ಇವೆಲ್ಲವೂ ಪರಿಹರವಹವು (ಶಿಕ್ಷಣ. II. ೨೩೬). [ಸಂ.]

ಮೂತ್ರದ್ವಾರ (ನಾ)· ಮೂತ್ರಕೋಶದಲ್ಲಿ ಶೇಖರವಾದ ಮೂತ್ರವು ಹೊರಬರುವ ರಂಧ್ರ : ಮೂತ್ರವಿಸರ್ಜನೆಯಾಗುವ ನಾಳ ; ಮೂತ್ರನಾಳ. [ಸಂ.]

ಮೂತ್ರನಾಳ (ನಾ)· = ಮೂತ್ರದ್ವಾರ : ಲೊಳ್ಳೆಯ ಸೊಪ್ಪಿನ ರಸದಲ್ಲಿ ಪಚ್ಚಕರ್ಪೂರದ ಚೂರ್ಣವ ಹಾಕಿ ಸ್ವಲ್ಪ ಎಣ್ಣೆಯ ಬಿಟ್ಟು ಬಾಯಿಸಮಾರಸಂಗೈದು ಹಿಂಡಿ ಸಣ್ಣ ಪಾವಡಬಿತ್ತಿಗೆ ಆ ರಸವ ಮಾಡಿ ಮೂತ್ರನಾಳದಲ್ಲಿ ಮೇಲಕ್ಕೆ ಏರಿಸಲು ಆ ಊತ್ತರಕ್ಷಣದಲ್ಲಿಯೇ ಮೂತ್ರ ಧುಮ್ಮಿನಿಸಿ ಬಿಡುವುದು (ಶಿಕ್ಷಣ. I. ೨೩೬) ; ಅಳಲೆಕಾಯಿ, ನೆಗ್ಗಿಲುಬೇರು, ತಿಲಕಹಣ್ಣು . . . ಹೇಸುತುಪ್ಪ ಪ್ರತಿವಾಕವಿಕ್ಕೆ ಹೆರೆದುಕೊಳ್ಳಲು ಮೂತ್ರನಾಳದಲ್ಲಿ ಸಿಕ್ಕಿಕೊಂಡಿರುವ ಕಲ್ಲು ಕರಗಿ ಬೀಳುವುದು (ಶಿಕ್ಷ. ಪಂ. ೧೧೬). [ಸಂ. ಮೂತ್ರನಾಳ]

ಮೂತ್ರನಿರೋಧ (ನಾ)· = ಮೂತ್ರಕಟ್ಟು : ಸೋತೆಯ ಬೀಜವಂ ನೀರಲ್ಲಿ ಅರೆದು ಕುಡಿಯೆ ಮೂತ್ರನಿರೋಧ ಮಾಣ್ಗುಂ (ಶಿಕ್ಷ. ೭. ೭). [ಸಂ.]

ಮೂತ್ರಪರೀಕ್ಷೆ (ನಾ). (ರೋಗದ ಮೂಲವನ್ನು ಪತ್ತೆಹಚ್ಚಲು ರೋಗಿಯ) ಮೂತ್ರವನ್ನು ರಾಸಾಯನಿಕವಾಗಿ ವಿಭಜಿಸಿ ಪರಿಶೀಲಿಸುವಿಕೆ : ಅನೇಕ ರೋಗಗಳನ್ನು ಪತ್ತೆಹಚ್ಚಲು ಮೂತ್ರಪರೀಕ್ಷೆ ಸಹಾಯಕವಾಗುತ್ತದೆ (೧೩೫). [ಸಂ. ಮೂತ್ರಪರೀಕ್ಷಾ]

ಮೂತ್ರಪಿಂಡ (ನಾ). = ಮೂತ್ರಜನಕಾಂಗ : ಈ ವಿಷಾಣುಗಳು ಹೃದಯ, ಮೂತ್ರಪಿಂಡಗಳು, ಮೆದುಳು ಮತ್ತು ಮೆದುಳುಬಳ್ಳಿಯ ಅಣುಕೋಶಗಳ ಮೇಲೆ ಕೆಲಸ ಮಾಡಿ ಅಪಾಯವನ್ನು ತಂದೊಡ್ಡುತ್ತವೆ (೧೦೭೫. ೫೦). [ಸಂ.]

ಮೂತ್ರಪ್ಲೀಹ (ನಾ). ಮೂತ್ರಸಂಬಂಧವಾದ ಒಂದು ಬಗೆಯ ರೋಗ : ಹನ್ನೆರಡುಪ್ರಕಾರ ಮೂತ್ರಘಾತಗಳ ಪೆಸರಾವಾವೆಂದೊಡೆ ಮೂತ್ರೋತ್ಸಂಗ . . . ಮೂತ್ರಪ್ಲೀಹ, ಉಷ್ಣವಾತ, ಮೂತ್ರಪಸ್ತಿ, ಮೂತ್ರಸಾದವೆಂದಿಂತು (೫೪೩. ೬೭೦).

[ಸಂ. ಮೂತ್ರಪ್ಲೀಹನ್]

ಮೂತ್ರಬಂಧ (ನಾ). = ಮೂತ್ರಕಟ್ಟು. [ಸಂ.]

ಮೂತ್ರರಕ್ತ (ನಾ). ಉಚ್ಚೆಯಲ್ಲಿ ನೆತ್ತರು ಹೋಗುವ ಒಂದು ಬಗೆಯ ರೋಗ : ಮೂತ್ರರಕ್ತಕ್ಕೆ :– ಚತುರ್ಭಾಗ ಚವುಡಂಗಿರಸ, ಅವಿನ ನೊರವಾಲು ಕುದಿಸುವುದು. ಕಿಜುಕುಸಾರರಸದಲ್ಲಿ ತ್ರಿವಾರು ಕೂಡಿ . . . ಗುಳಿಗೆ ಮಾಡಿ ಕೊಳ್ಳೆ ಮಾಣ್ಬುಂ (೨೪೬. ೦೭೯). [ಸಂ.]

ಮೂತ್ರರೋಗ (ನಾ). = ಮೂತ್ರದೋಷ : ಮೂತ್ರರೋಗಕ್ಕೆ :– ಏಲಕ್ಕಿ ೧ ತೂಕ, ತವಕ್ಷೀರ ೪ ತೂಕ . . . ಆಡಿನ ಹಾಲಲ್ಲಿ ಕದಡಿ ಕುಡಿಯಲು ಮೂತ್ರರೋಗ ಗುಣ (೭೪೬. ೦೦೪) ; ಮೂತ್ರರೋಗ, ಭಗಂದರರೋಗ . . . ವಾತರೋಗ ಇವೇ ಮುಂತಾದ ರೋಗಗಳಿಂದ ಕೂಡಿದವರು ದಂತಧಾವನಕ್ಕೆ ಅನರ್ಹರೆಂದರಿವುದು (೫೪೩. ೫೯). [ಸಂ.]

ಮೂತ್ರವಸ್ತಿ (ನಾ). ಮೂತ್ರಸಂಬಂಧವಾದ ಒಂದು ಬಗೆಯ ರೋಗ : ಹನ್ನೆರಡುಪ್ರಕಾರ ಮೂತ್ರಘಾತಗಳ ಪೆಸರಾವಾವೆಂದೊಡೆ, ಮೂತ್ರೋತ್ಸಂಗ . . . ಮೂತ್ರವಸ್ತಿ . ಮೂತ್ರಸಾದವೆಂದಿಂತು (೫೪೩. ೬೭೦). [ಸಂ.]

ಮೂತ್ರವಾತ (ನಾ). ಮೂತ್ರಸಂಬಂಧವಾದ ಒಂದು ಬಗೆಯ ರೋಗ : ಹನ್ನೆರಡುಪ್ರಕಾರ ಮೂತ್ರಘಾತಗಳ ಪೆಸರಾವಾವೆಂದೊಡೆ, ಮೂತ್ರೋತ್ಸಂಗ . . . ಮೂತ್ರವಾತ . . ; ಮೂತ್ರಸಾದವೆಂದಿಂತು (೫೪೩. ೬೭೦). [ಸಂ.]

ಮೂತ್ರವಿಡ್ಭಾತ (ನಾ). ಒಂದು ಬಗೆಯ ಮೂತ್ರರೋಗ : ಮೂತ್ರೋತ್ಸಂಗ . . . ಮೂತ್ರವಿಡ್ಭಾತ . . . ಮೂತ್ರಸಾದಗಳೆಂದು ಇವು ಹನ್ನೆರಡು ತೆಱ (೪೪೩. ೧. ೩೪೮). [ಸಂ.]

ಮೂತ್ರವಿಸರ್ಜನೆ (ನಾ.) ಮೂತ್ರವನ್ನು ಸುರಿಸುವಿಕೆ : ಉಚ್ಚೆ ಹೊಯ್ಯುವಿಕೆ : ಕಾಯಿಲೆ ತೀವ್ರಗತಿಯಲ್ಲಿರುವಾಗ . . . ಮೂತ್ರ ವಿಸರ್ಜನೆ ರೋಗಿಯ ಸ್ವಾಧೀನ (control) ತಪ್ಪಿ ತನಗೆ ತಿಳಿಯದೇ ಮೂತ್ರ ಹನಿಹನಿಯಾಗಿ ಹೊರಬೀಳುತ್ತದೆ (೧೦೭೫. ೮೩).

[ಸಂ. ಮೂತ್ರವಿಸರ್ಜನ]

ಮೂತ್ರವ್ಯಾಧಿ (ನಾ). = ಮೂತ್ರದೋಷ : ಮುಳ್ಳುಮುತ್ತುಗದ ಒಳನಾರಂ ಚೂರ್ಣವಂ ಮಾಡಿ ಕರ್ಪೂರ, ಶಿಲಾಧಾತು ಬೆರಸಿ ಮಜ್ಜಿಗೆ, ಜೇನುತುಪ್ಪದಲ್ಲಿ ಕೊಳ್ಳೆ ಮೂತ್ರವ್ಯಾಧಿ ಮಾಣ್ಬುಂ (೭೪೬. ೬೭). [ಸಂ.]

ಮೂತ್ರಶಂಕೆ (ನಾ). ಮೂತ್ರಸಂಬಂಧವಾದ ಒಂದು ಬಗೆಯ ರೋಗ; ಉರಿಯಿಂದ ಕೂಡಿ ಆಗಾಗ ಮೂತ್ರವಿಸರ್ಜನೆ ಮಾಡುವೇಕೆನ್ನುವ ತೀವ್ರವಾದ ಅನಿಸಿಕೆ : ಮೇಲುಬ್ಬಸಮುಂಟಾಗಿ ಕಣ್ಣುಗಳಲ್ಲಿ ಡಾಳ ತಪ್ಪಿ . . . ಬಹಳವಾಗಿ ಮೂತ್ರಶಂಕೆಯು ಕಾಣಿಸುತ್ತಂ . . . ಇಂದ್ರಿಯಗಳು ಹೀನವನ್ನೆದಿ ವ್ರಣದಿಂ ಕೂಡಿಕೊಂಡಿದ್ದ ಕ್ಷಯರೋಗವು ಅಸಾಧ್ಯ (೫೪೩. ೬೭೬). [ಸಂ. ಮೂತ್ರಶಂಕಾ]

ಮೂತ್ರಶರ್ಕರೆ (ನಾ). ಮೂತ್ರದೊಂದಿಗೆ ಸಕ್ಕರೆಯ ಅಂಶವು ಹೆಚ್ಚಾಗಿ ಹೋಗುವುದು : ದಾಳಿಂಬದ ಓಚು, ಏಲಕ್ಕಿ, ಪಾಷಾಣ ಭೇದಿ, ಶಿಲಾಧಾತು, ಹಿಪ್ಪಲಿ ಇವಂ ಚೂರ್ಣಂ ಮಾಡಿ ರಾಜಾನ್ನದ ಅಕ್ಕಗಜ್ಜಿನಲ್ಲಿ ಕುಡಿದೆ ಮೂತ್ರಕೃಚ್ಛ್ರಂ, ಮೂತ್ರಶರ್ಕರೆಯುಂ ಕೆಡುಗುಂ (೭೪೬. ೨೦೬). [ಸಂ. ಮೂತ್ರಶರ್ಕರಾ]

ಮೂತ್ರಶುಕ್ಲ (ನಾ). ಮೂತ್ರದೊಂದಿಗೆ ರೇತಸ್ಸು ವಿಸರ್ಜನೆಯಾಗುವ ಒಂದು ಬಗೆಯ ರೋಗ : ಮೂತ್ರೋತ್ಸಂಗ, ಮೂತ್ರಗ್ರಂಥಿ . . . ಮೂತ್ರಶುಕ್ಲ, ಮೂತ್ರಕುಂಡಲಿಕೆ . . . ಮೂತ್ರಸಾದಗಳೆಂದು ಇವು ಹನ್ನೆರಡು ತೆಱ (೪೪೩. ೧. ೩೪೮) ; ಹನ್ನೆರಡುಪ್ರಕಾರ ಮೂತ್ರ ಘಾತಗಳ ಪೆಸರಾವಾವೆಂದೊಡೆ, ಮೂತ್ರೋತ್ಸಂಗ . . . ಮೂತ್ರಶುಕ್ಲ . . . ಮೂತ್ರಸಾದವೆಂದಿಂತು (೫೪೩. ೬೭೦). [ಸಂ.]

ಮೂತ್ರಶೂಲೆ (ನಾ). ಮೂತ್ರವಿಸರ್ಜನೆಯ ಸಮಯದಲ್ಲಿ ನೋವುಂಟಾಗುವ ಒಂದು ಬಗೆಯ ರೋಗ : ಬಿಳದುರುಚಿ, ಅಣಲೇಕಾಯಿ, ಪಾಷಾಣಭೇದಿ, ನೆಲದಾಳ, ಕೊತ್ತಂಬರಿ, ಕಕ್ಕೇಹಣ್ಣಿನ ತಿರುಳು ಇವ ಕಷಾಯವ ಕಾಸಿ ಸಕ್ಕರೆ ಹಾಕಿ ಪಾಕವಿಕ್ಕಿಕೊಳ್ಳಲು ಮೂತ್ರ ಕೃಚ್ಛ್ರ, ಕಟಿಪು ಉರಿ, ಮೂತ್ರಶೂಲೆ ಪೋಗ್ಬುಂ (೭೪೬. ೭೬೨).

[ಸಂ. ಮೂತ್ರಶೂಲ]

ಮೂತ್ರಸಾದ (ನಾ). ಬಣ್ಣವು ವ್ಯತ್ಯಾಸಗೊಂಡು ನೋವಿನಿಂದ ವಿಸರ್ಜನೆಯಾಗುವ ಒಂದು ಬಗೆಯ ಮೂತ್ರರೋಗ : ಮೂತ್ರೋತ್ಸಂಗ . . . ಮೂತ್ರವಸ್ತಿ, ಮೂತ್ರಸಾದಗಳೆಂದು ಇವು ಹನ್ನೆರಡು ತೆಱ (೪೪೩. ೧. ೩೪೮). [< ಸಂ. ಮೂತ್ರಾಸಾದ]

ಮೂತ್ರಸಿಕ್ಕು (ನಾ). = ಮೂತ್ರಕಟ್ಟು : ಸೂಲೆ ಸುಭಕ್ಷಾ(ಕ್ಷಂ) ರೂಢಾಸೂಲೆಯಿ ಸಲೆ ಮೂತ್ರಸಿಕ್ಕು ರಕ್ತವಿಮೇಹಂ ಶೂ(ರಾ)ವಿಷ್ಮಂಭ ಕೀಟಕ ಸೂಲಾಷ್ಟವಿ ಸಿಂಳ(ಪ)ಣದ್ವಯಂ ವಾತಾಂತ್ಯಂ (೪೪೩. ೦೦-೭೦); ವಿಲಕ್ಕಿ, ಪಾಷಾಣಭೇದಿಯಂ, ಕಲ್ಲ ಅಗಿಲು, ಹಿಪ್ಪಲಿ ಎಂಬಿವುಗಳ ಪುಡಿಗಳಂ . . . ಮೂತ್ರಸಿಕ್ಕು ಬಹುಮೂತ್ರ ಸಂಕಟದೊಳು ಲೇಹ್ಯವಂ ಮಾಡುಗೆ (೭೪೬. ೨೦) ; ಗಣಜಿಲಬೇರಂ ಸುಟ್ಟು ಬೂದಿಯಂ ಆಡಿನ ಹಾಲಿನಲ್ಲಿ ಕೂಡಿ ಕುಡಿದು ಮೂತ್ರಸಿಕ್ಕು ಬಿಡುವುದು (೫೪೩. ೫೭೭).

[ಮೂತ್ರ + ಸಿಕ್ಕು]

ಮೂತ್ರಾಘಾತ (ನಾ). ಮೂತ್ರವಿಸರ್ಜನೆಯಲ್ಲಿ ತೊಡಕುಂಟಾಗುವ ಹನ್ನೆರಡು ಬಗೆಯ ವ್ಯಾಧಿ : ಇವುಗಳ ಸಂಖ್ಯೆಯಲ್ಲಿ ಭಿನ್ನಾಭಿಪ್ರಾಯಗಳಿವೆ : ಹನ್ನೆರಡುಪ್ರಕಾರವಾದ ಮೂತ್ರಾಘಾತಂಗಳಂಟ್ಟು (೪೪೩. ೧. ೩೪೮) ; ವಾತಪಿತ್ತಶ್ಲೇಷ್ಮಂಗಳು ಮಸ್ತಿಸ್ಥಾನವನ್ನೆದಿ ತಮ್ಮ ತಮ್ಮ ಕಾರಣಗಳಂ ಪ್ರಕೋಪಿಸಿ ಮೂತ್ರಾಘಾತವೆಂಬ ಮಹಾರೋಗಗಳನು ಪುಟ್ಟಿಸುತಮಿರ್ಪುದು (೫೪೩. ೬೭೦). [ಸಂ.]

ಮೂತ್ರಾತೀತ (ನಾ). ತಡೆತಡೆದು ಹೋಗುವ ಒಂದು ಬಗೆಯ ಮೂತ್ರರೋಗ : ಹನ್ನೆರಡು ಪ್ರಕಾರ ಮೂತ್ರಘಾತಗಳ ಪೆಸರಾವಾವೆಂದೊಡೆ, ಮೂತ್ರೋತ್ಸಂಗ . . . ಮೂತ್ರಾತೀತ . . . ಮೂತ್ರಸಾದವೆಂದಿಂತು (೫೪೩. ೬೭೦). [ಸಂ.]

ಮೂತ್ರಾಶಯ (ನಾ). = ಮೂತ್ರಕೋಶ. [ಸಂ.]

ಮೂತ್ರಾಷ್ಮೀಲ (ನಾ). =ಮೂತ್ರಕಲ್ಲು: ಮೂತ್ರೋತ್ಸಂಗ . . . ಮೂತ್ರವಾತ, ಮೂತ್ರಾಷ್ಮೀಲ, ಉಷ್ಣವಾತ, . ಮೂತ್ರವಸ್ತಿ, ಮೂತ್ರಸಾದಗಳೆಂದು ಇವು ಹನ್ನೆರಡು ತೆಱ (೪೪೩. ೧. ೩೪೮).

[ಸಂ. ಮೂತ್ರಾಷ್ಮೀಲಾ]

ಮೂತ್ರಿ (ನಾ). ರಸ್ತೆ, ಬಸ್‌ನಿಲ್ದಾಣ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರವಿಸರ್ಜನೆಗೆ ಅನುಕೂಲವಾಗುವಂತೆ ಕಟ್ಟರುವ ಸ್ಥಳ : (ಖಾಸಗಿ ಅಥವಾ ಸಾರ್ವಜನಿಕ) ಮೂತ್ರಸ್ಥಳ, ಮೂತ್ರಿ (Urinal. ೨೦೧೭). [< ಮೂತ್ರ]

ಮೂತ್ರಿಸು (ಕ್ರಿ). ಉಚ್ಚೆಹೊಯ್ಯು : ಮೂತ್ರವಿಸರ್ಜನೆ ಮಾಡು: ನಡುವಟ್ಟೆಯೊಳ್ ಕೆಲಸ ಮೂತ್ರಿಸೆ ಪೇರಿತು ತನ್ನನಚ್ಚುಯಿಂ ಪಲಿನರಿದಾಡೆ ಪೋದ ಮನುಜಂ ಪಡೆಗುಂ ತನಗಿಪ್ಪಸಿದ್ಧಿಯುಂ (ಕೋಕಿಕಕ. ೦೨-೨೩) ; ಸಗಣವನಿಕ್ಕುತಂ ಮೂತ್ರಿಸುತವಲರುತ ಕೆಲಸ ಮೋದುತ ಪೆಲ್ಲವಾಡುತ್ತ . . . ವೃಷಭೇಶ್ವರನಿರಲು (ಪಕ್ತಿ. ೩೨-೩೭) ; ಮಾತರ ಪಿತ್ಸಲಲ್ಲಿ ಅಯ್ಕ ಮೂತ್ರಿಸ್ಯಾ ಕೂತಿನ್ಸ (ಕುಪ್ರಪಾ. ೩೩). [ಮೂತ್ರ + − ಇಸು]

ಮೂತ್ರೋತ್ಸಂಗ (ನಾ). ನೋವಿನಿಂದ ಕೂಡಿದ್ದು ರಕ್ತಸಹಿತವಾಗಿ ಮೂತ್ರವಿಸರ್ಜನೆಯಾಗುವ ಒಂದು ಬಗೆಯ ರೋಗ : ಹನ್ನೆರಡು ಪ್ರಕಾರ ಮೂತ್ರಘಾತಗಳ ವಿಸರಂವಾವೆಂದೊಡೆ, ಮೂತ್ರೋತ್ಸಂಗ, ಮೂತ್ರಗ್ರಂಥಿ . . . ಮೂತ್ರಸಾದವೆಂದಿಂತು (ಪಕ್ಕ. ೪೭೦). [ಸಂ.]

ಮೂದಜ್ಜಾರಿ (ನಾ). ಒಬ್ಬ ವ್ಯಕ್ತಿಯ ಹೆಸರು : ಶ್ರೀ ಆನಂದೂರ ಮೂದಜ್ಜಾರಿ ಮಾಡಿದವ್ (ಚಿಕ. ೩, ೫೩ಕ್ಕೆ. ೩೨-೦೩ ; ಸು. ೩೧೦ ೨). [ಮೂದಲ್ +(ಆಚಾರಿ]

ಮೂದಲಿಕೆ (ನಾ). ಹಂಗಿಸುವಿಕೆ : ಹೀಯಾಳಿಕೆ : ಚುಚ್ಚುಮಾತು : ಕಳದಿಯರ ಸಂತ್ಯಕೆ ಮೂದಲಿಕೆಯಂತಾಗೆ . . . ಮರುಗಿದಳಬಲೆ (ಕಜ್ಜಾಗೀ. ೩೫-೦೩೩) ; ಒಂದು ವೇಳೆ ಹೋದರೆ ತನ್ನ ತಾಯಿಯಿಂದ ಪಸಾದರೂ ಮೂದಲಿಕೆ ಬರಬಹುದು ಎಂಬ ಭಯ (ಕಜಾಗೀ. ೦೨). [ಮೂದಲ್ + −ಇಕೆ./ತೆಲು. ಮೂದಲಿಕ = ನಿದರ್ಶನ]

ಮೂದಲಿಸು (ಕ್ರಿ). ಹಂಗಿಸು: ಹೀಯಾಳಿಸು: ಅವಹೇಳನ ಮಾಡು: ಈ ನುಡಿಯಂ ಮಜಿಬಿಟ್ಟಲ್ಲೇಡೆಂದಿರ್ವರುಮೋರೊರ್ವರಂ ಮೂದಲಿಸಿ ಪ್ರತಿಜ್ಞೆಗೆಯ್ದು (ಕತ್ಸಾಣ. ೦೫೯-೦೨) ; ಆ ಮಾತು ತನ್ನಂ ಮೂದಲಿಸಿದಂತಾಗೆ ವಿದ್ವಿಷ್ಟವಿದ್ಯಾಪ್ರಣಾನಿಂತೆಂದಂ (ಪಂಚಣಾ. ೩-೬೨ ಪ) ; ಶತ್ರುವ್ರಣವಂ ನಿನ್ನಯ ಮೆಜಿವುದಿಜಿವ ಬೆದಸಗಾ ಎಂದು ಮೂದಲಿಸಿ ಮಡಿಯೆ (ಗಣಭಷ. ೨-೩ ಪ): ಪೂತು ಮರುಳುರೇ ದಾಲ ಎಂದವನೀಶ ಮೂದಲಿಸಿದನು ತನ್ನವರ (ಕುಪ್ರಪ್ರಿ. ೬-೨೪). [ಮೂದಲ್ + −ಇಸು-/ತೆಲು. ಮೂದಲಿಂಚು = ನಿರೂಪಿಸು]

ಮೂದಲೆ₁ (ನಾ). ಮೂರು ತಲೆ : ತಲೆ ಪಗೆವರ ಕಯ್ಯೊಳ್ ಸುರಲಲನೆಯು ತೋಳೊಳಗೆ ಪತಿಯ ಭಂಡಾರದೊಳಂ ನೆಲಸೆ ಸುಭಟರ್ಕಳೊಳ್ ಮೂದಲೆ ನೆಗಟ್ಟುದು ಪೊಣ್ಮನನ್ನನಾವನೊ ಮೊನೆಯೊಳ್ (ಪಕ್ಕ. ೦-೭೭); P ಇಲ್ಲಿ 'ಮೂರುತಲೆ' ಮತ್ತು 'ಮೂದಲಿಕೆ' ಎಂಬ ಶ್ಲೇಷಾರ್ಥವಿದೆ : ಆತ್ಮಲೋಪಕ್ಕೆ . . . ಮೂರೋಕ, ಮೂದಲೆ (ಕಜಾದ. ೦೪೯ ಕ್ರಿಪಟಿ).

ಮೂದಲೆಯ = ಮೂರು ತಲೆಗಳುಳ್ಳವನು : ಮೂದಲೆಯಂ. ಮೂಱು ತಲೆಯುಂ (ಕಜಾಪಾ. ೪೩೨. ಕ್ರಿಪಟಿ). [ಮೂ₁ (< ಮೂಱು) + ತಲೆ₁]

ಮೂದಲೆ₂ (ನಾ). =ಮೂದಲಿಕೆ: ತಲೆ ಪಗೆವರ ಕಯ್ಯೊಳ್ ಸುರಲಲನೆಯು ತೋಳೊಳಗೆ ಪತಿಯ ಭಂಡಾರದೊಳಂ ನೆಲಸೆ ಸುಭಟರ್ಕಳೊಳ್ ಮೂದಲೆ ಪೊಟ್ಟುದು ಪೊಣ್ಮನನ್ನನಾವನೊ ಮೊನೆಯೊಳ್ (ಪಕ್ಕ. ೦-೭೭) ; ಕೋಕಿಲ ಧ್ವನಿ ಮೂದಲೆಯಾಲಿಯಾಗೆ ಬಂದುದೆಂದು ಬೀಸಂ (ಹುಕೋಚ. ೦-೭೭) : ಆರ್ಯರುಂ . . . ಸೆಣಸಿಂಗೆ ಸೂಸು ಮೂದಲೆಗೆ ಮೂದಲೆಗಳಂ ಹೊಗಿದರ್ (ಪಕ್ಕ. ೪೪-೪೩).

[ದೇ. ತಮಿ. ಮೂತಲಿ. ಮೂತರಿ=ನಿರೂಪಿಸು; ತೆಲು. ಮೂದಲ=ಸಾಕ್ಷಿ]

ಮೂದಲೆವಾತು (ನಾ). ತಿರಸ್ಕಾರದ ಮಾತು ; ಅವಹೇಳನದ ನುಡಿ : ಮೂದಲೆವಾತುಗಳಿಂ ಗಡ ಮಹಾನಗಮೋಕ್ಷಿಗತೀತನೊಳ್ ಜಯಾಹ್ವಾದರ ರುಂಚೆಗಳ್ ಗಡ (ಪಂಪ. ೪-೦೩೧)· [ಮೂದಲ್₂ + ಮಾತು₁]

ಮೂದಲೆಸೊಲ್ಲು (ನಾ)·=ಮೂದಲೆವಾತು : ಬಲ್ಲಿದ ಭಟರು ಭಾಷೆಯ ಮಾಡಿ ಮೂದಲೆ ಸೊಲ್ಲುಗಳಿಂ ತಱುಬಿದರು (ಕಾಪಾ. ೦೬-೩೨). [ಮೂದಲ್₂ + ಸೊಲ್ಲು₂ (<ಸೊಲ್₂)]

ಮೂದಲ್₂ (ನಾ)·=ಮೂದಲಿಕೆ : ತಂತವ್ಮ ಮನವ ಮಚ್ಚರದ ಮಂಚ್ಚಿನ ಕಾದಲ್ಕೆ ಮೂದಲ್ಕೆಯಾಗಿ ಕೈಗೆಯ್ದು ಮೈಗೆಯ್ಕದೆ ಪರಿಚ್ಛೇದಿಸಿ (ಅಜಂತಿ. ೦೨-೦೨ ಪ). [< ಮೂದಲ್₂ + −ಮೈ₂]

ಮೂದಿಟ್ಟ (ನಾ)· ಮೂರುಕಣ್ಣು : ಮುನ್ನೀರ ಕಟ್ಟಲಾಜದನೆ ಸದನಾಗ್ರದೊಳ್ ನಿಂದ ಮೂದಿಟ್ಟದುಳ್ಳತುಳರುದ್ರಂ (ಅಕೋಪ್ರ. ೦೩-೩೦). [ಮೂ₁ (< ಮೂಱು) + ದಿಟ್ಟ]

ಮೂದಿರಿಕ (ನಾ). ಮೂರು ಕಡೆಗೆ ತಿರುಗುವಂತಹುದು : ಉಗುಬ್ಪಿಪ ಮೂಗಂ ಮುಚ್ಚಿಪ ಮೊಗಮುಂ ಮೂದಿರಿಕ್ಕನಾಗಿಪ್ಪದ್ದಿರಮನಾವಗ ಮೊಗೆಯಿಪ ಬೇಡರ ಪಳ್ಳಿಗಳಂ ಪತಿ ಪಾಯ್ದು ಪೋಗೆ (ಅಂಗಕ. ೬-೪೬). [ಮೂ₁ (< ಮೂಱು) + ತಿರಿಕ್ಕ]

ಮೂದಿವಸ (ನಾ). ಮೂರು ದಿನ : ಅವರಿವರ ಸಖ್ಯಕೆ ನೆರೆದುದೇಕಾದಶ ಶತಕ್ಷೋಣಿ ತವಿಸುವರೆ ನಸಗೊಂದುದಿನ ಮೂದಿವಸದಲಿ ಗುರುವ್ಯೆದು ದಿವಸಕೆ ರವಿಜ (ಕುಚಾ.ಅ. ೨-೩೦). [ಮೂ₁ (< ಮೂಱು)+ದಿವಸ]

ಮೂದೆಕಲ್ (ನಾ). ಒಂದು ಊರಿನ ಹೆಸರು (?) : ಮಾವಾಮತ್ರರಸರಾ ಪೊಬಲಹ್ಮಿನಾ ಮೇಗೆಬ್ಬು ಮೂದೇಕ್ಲಾ ಕಾಳಿಗದುಳ್ . . . ಅನಿಪರುವಾ ಅನ್ನಿಜ್ಜಾಡು ಸತ್ಕರ್ (ಚಿಕ. ೩. ಶ್ರೀಚಿಪಾ. ೦೦-೨ ; ಸು. ೩೦೦).

[ಮೂದೆ + ಕಲ್₂]

ಮೂದೆರ 'ಮೂದೆಜಿ' ನೋ.

ಮೂದೆಜಿ, ಮುತ್ತೆಜಿ, ಮೂತೆರ, ಮೂದೆರ (ನಾ)· ೧. ಮೂರು ಬಗೆ.—ರೀತಿ : ತ್ರಿವಿಧ : ಮೂದೋಕಂ ಮೂದೆಜಾ (ಜಾಣಕ. ೦೩೬ ಅಜಾ) ; ನಾಡೆಯುಂ ಸಲಪನಿಳಾಧಿಪಂಗೆ ನೆರೆವೆರ್ಚಿಸಿದತ್ತು ಗೃಪಾಧಿದೇವತಾವಿಲಸದಪಾಗದೊಳ್ ನೆರೆವು ಮೂದೆಜದೊಪ್ಪುವ ಬಿನ್ನಂದಂದಿಂ (ಪಂಪ್ರಕ್ಷೆ. ೭-೦೦೨) ; ವಿನದೊಳ್ ಮೂದೆಜನಾಯ್ತು ಭಾಸುವಿನ ತೇಜಂ (ಭಾಸಪಾ. ೬-೬). ಮುತ್ತೆಜಿ: ೨. ಮೂರು ಭಾಗ : ಅವಂ . . . ಮುತ್ತೆಜದ ಮಾಡಿಯೊಂದಕ್ಕೆ ಹುಲಿಯೊಂದಕ್ಕೆಯುತ್ತಮದೆ ಸಿಹಿ ಹುರಿದ ಕವಲಿಪುಡಿಯೊಂದಕ್ಕೆಯೊತ್ತರಿಸಿಯಿಸಿ (ಪಂಚಣಾ. ೫-೨೦). **ಮೂತೆರ :** ೧. ಅಜ್ಞನಾಗಿರ್ಪವಧಿನಾರಿಯಾದಂದು ಮೂತೆರನಾದ ಕೇಡಹುದು ಅರ್ಥಾನಾಸಮಪುದಪೇರ್ತಿಯಪ್ಪುದು ನರಕಲೋಕದ ದುಃಖಮಪುದು (ಜಾಣಕ. ೦೬೩-೬೩)· **ಮೂದೆರ :** ೧. ಪ್ರಾಜ್ಞನಾಗಿರ್ಪವನಧಿಕಾರಿಯಾದಂದು ಮೂದೆರನಾದೊಳ್ ತಹುದು ಯಶವಹುದಮಿತಧನಾಗಮವಪ್ಪುದು ಪಾಕಲೋಕದ ಸುಖವಹುದು (ಜಾಣಕ. ೦೬೩-೩೦).

[ಮೂ₁ (< ಮೂಱು) + ತಲೆ₁]

ಮೂದೇವರ್. ಮೂದೇವರು (ನಾ)· ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ; ತ್ರಿಮೂರ್ತಿ: "ಮೂದೇವರ್ಕಳ್ ತ್ರಿಮೂರ್ತ್ಯರ್ಥದೊಳ್" (ಗಣಗಾ. ೩೦) ; ಮೂದೇವರುಂ ವರಸಿ ನಿಜನಿವಾಸಂಗಳ್ಗೆ ಪೋದರ್ (ಪಂಚಣಾ. ೩-೦೦೩ ಪ). ಮೂದೇವರು : ಮೂದೇವರ ದೇವನ ಗೃಹದೊಳು ಬಲುಭೇದದ ಧ್ವಜನಿಕರಗಳು ವಾದಿಸಿ ವಾಯುವಥಿಕರೋಡನವರಿಗೆ ಹಾದಿಯ ಕೊಡದಿರುತಿಹವು (ಶ್ರಕಣಾ. ೬-೭೬) ; ಆಗಮಿತವರಮಹಾಮುನಿಗಳ ನಿವಹ . . . ನೆರೆದು ತಮ್ಮೊಳಗಾರು ಮೂದೇವರೊಳು ಮುಖ್ಯರೆನಿಸುತ್ತ

ಸಂಶಯಾಕರವ ತೆತ್ತರು ಮನೆವನು (ಪಭಾಗ. ೦೦-೬೨-೦).

[ಮೂ$_1$ (< ಮೂಜು) + ದೇವರ್]

ಮೂದೇವರು ' ಮೂದೇವರ್' ನೋ.

ಮೂದೇವಿ (ನಾ). ೧. ಒಬ್ಬ ದೇವತೆಯ ಹೆಸರು ; ಜ್ಯೇಷ್ಠಾದೇವಿ ; ಅಲಕ್ಷ್ಮಿ : ' ಜ್ಯೇಷ್ಠೆ' ಹೋ. ೨. ಮಂಕುತನ ; ಜಡತ್ವ ; ಸೋಮಾರಿತನ : ಮದ್ದು ತಿಂದು ತಿಂದು ಮನೆಯೆಲ್ಲ ಬಜಿದಾಗಿ ಹೊದ್ದಿತು ಮೂದೇವಿ ಮೈದುನಗೆ (ಭಗೀಪ. ೨-೮೪-೨) ; ಹೋದೆಹೆವೆಂದರೆ ಹಾದಿಯು ಕಾಣವು ಮೂದೇವಿ ಬಂದಿತುಯಮುಗೆ (ಪಾಪಣಾಂ. ೫-೦೨೦). ೩. ಚಟುವಟಿಕೆಯಿಲ್ಲದ ವ್ಯಕ್ತಿ ; ಸೋಮಾರಿ : ಒಬ್ಬನೇ ಮಗನಿಗೆ ಈ ಮೂದೇವಿ ಎದ್ದಿಂದ ಗಂಟುಬಿದ್ದಳೋ ಏನೋ (ಪಚಿಪಿ. ೪೦).

[ಮೂ$_1$+ದೇವಿ./ತಮಿ. ಪೂತೇವಿ ; ಮಲ. ಕೊಡ ತೆಲು. ಮೂದೇವಿ]

ಮೂಧ (ನಾ). ಒಂದು ಬಗೆಯ ಸಸ್ಯ : ನಾರೋಲಿ. ಮೂಧವರಂ ಮೂಧ, ಮೂಡಲಿ, ಕನಕಜಾವಕ್ (ಧ್ವಶಿ. ೫೬-೦೦೯೦). [?]

ಮೂನೂಱು, ಮುನೂಱು, ಮುನ್ನೂರು, ಮುನ್ನೂಱು (ನಾ). ಒಂದು ಸಂಖ್ಯೆ ; ಮೂರುನೂರು : ಸ್ವಸ್ತಿಶ್ರೀ ಶ್ರೀಪುರುಷ ಮಹಾರಾಜರ್ ಪೃಥುವೀರಾಜ್ಯಂಗೆಯೆ ಸಿಯಗೆಲ್ಲರ್ ಮಜುಗರೆನಾಡುಮೂನೂಱುವಳಿ (ಎಕ. XVI. ಕುಕುಳೂ. ೫೬-೩;೭೬೦); ಬೆಳ್ಳೂಲಮೂನೂಱುಮನಾಳ್ಕುಂ (ಎಇ. VIII. ೨೦೬-೦೯ ; ೨೬೬); ನೂಱುವಧದಲಿ ಸನಳ ಹೊದೆ ಮೂನೂಱು ಜರಿಚಾರರು ಸುತ ಮೈದೋಜಿ ನಿಂದನು ಭೀಮನೊಬ್ಬನೆ ತಱುಬಿ ಕುರುಬಲವ (ಕಾಪ್ಕ. ೦೫-೩). **ಮುನೂಱು** : ರಾಜ್ಯಾಭಿವೃದ್ಧಿಗೆ ಉತ್ತರೇಶ್ವರದ ಆದಿತ್ಯ ಗ್ರಹವಮುಗುಳೆ ×ಮುನೂಱು ಬೊಕಲೊಳ × (ಕಾಇ. ೦೦೬-೫-೭; ೭೦೩). **ಮುನ್ನೂರು** : ತಮ್ಮ ರಾಜ್ಯದಲ್ಲಿ ನಿಡುಂಬರೆ ಕಟ್ಟುವ ಕೆಲಸದಲ್ಲಿ ಮುನ್ನೂರು ಚಿಲುವಾನು ಅಳು ಉಂಟಪ್ಪೆ (ಶಾಸಂಪ್ರ. ೦೧೩) : ಮುನ್ನೂರುಮಂದಿ ಕೂಲಿಗಳು, ಕುಂಬಾರಗುಂಡಿಯಲ್ಲಿ ದುಡಿಯುತ್ತಿರುವ ಕಾಲದಲ್ಲೆಯೇ, ಅಲ್ಲಿನ ಜ್ವರದ ಸುಗ್ಗಿಯೂ ಬಲಿಯಿತು (ಶಾಕುಶಾ. ೦೩೩). **ಮುನ್ನೂಱು** : ನಿನ್ನ ಪ್ರಾಯದಲಿ ಹೊಣವ ಗಳಿಪೆನೆಂದು ಮುನ್ನೂಱು ಮಂಚದ ಮುಱಿದೆ (ಕಂಪಂ. ೬-೦೩೩).

ಮೂಸೂರ್ಬರ್, ಮೂಸೂರ್ಮರ್ = ಮೂರು ನೂರು ಜನ ; ಮುನ್ನೂರು ಮಂದಿ : ಎಟ್ಟದಿಂಬರುಂ ಮೂಸೂರ್ಬರುಂ ಜಕ್ಕಿದು ಬೈಯೊಳ್ ನುಡಿದವು ತವರಿಂ ಬಿಡಿಸಿದೋರೆ (ಎಳ. VII. ೩೫೦. ೨೦೯-೦೯ ; ೪೭೦) ; ಚಕ್ರವರ್ತಿ ಶ್ರೀವೀರವಾರಸಿಂಹ ದೇವರಸರಾಣಿ ಸೋವಲದೇವಿಯರಾಣಿ ಮೂಸೂರ್ಬರಿಗಂ ಮೂವತ್ತಿಕ್ಕಾಸಿನಕಂ (ಎಳ. VI ೪೫೯. ೫೫-೯; ೧೨೦೦); ಕೋಡಾಮರ್ ಪೈಯ್ದು ಕೆಯ ಬಿಟ್ಟ ಮೂನೂರ್ವರುಂ (ಎಳ. VI. ೪೫೬. ೪೦-೭ ; ೫೦. ೧೦೦೦).

[ಮೂ$_1$ (< ಮೂಜು) + ನೂಱು$_2$]

ಮೂನೆಲ (ನಾ). ಸ್ವರ್ಗ, ಪೃರ್ತ್ಯ ಮತ್ತು ಪಾತಾಳವೆಂಬ ಮೂರು ಲೋಕ ; ತ್ರಿಲೋಕ ; ಆವೂರ್ ಮುಳ್ಪಸಿಪ ಮೂಸೆಲಂ ತಪಗೆಂಬ ಆವನಿರ್ಪನೊ ಕೊರಗು ಪೂರ್ಣೇವ ಪೊಸರು (ಕಾಲಾಚ. ೨೬-೩೦).

[ಮೂ$_1$ (< ಮೂಜು) + ನೆಲ]

ಮೂನೆಲೆ (ನಾ). ಮೂರು ಆವಾಸ : ಮೂಱುಲೋಕಮನೆ ಪೊಲ್ಲುದು ಮೂಸೆಲೆಯಿಂ ಸಮುಂಬರಂ (ಪಂಪಭಾ. ೬-೬೬); ಮೂಸೆಲೆವೆತ್ತಾ ಸಭೆ ಮೂಱುಲೋಕವೊಡಸೊಂದಿರ್ದತ್ತೆಸಲ್ ರಂಜಿಸುಂ (ಕೇಪಾಚ. ೯-೪೦).

[ಮೂ$_1$ (< ಮೂಜು) + ಲೆ$_1$]

ಮೂಬದಲು ' ಮುಬಾದಲೆ ' ನೋ.

ಮೂಬದಲೆ ' ಮುಬಾದಲೆ ' ನೋ.

ಮೂಮಡಿ ' ಮೂಪಡಿ ' ನೋ.

ಮೂಮಡಿವೀರ (ನಾ). ಮೂರು ಪಟ್ಟು ಶೂರ ; ಮಹಾವೀರ : ಜ್ಯಾರಿಂಬಕನ ತಪೋಪ್ರಭ್ಪನ ಪೂಡಿದೋಲೆಯಕಾಱನಿದಾರು ಮೂಲೋಕ ವಿಜಯ ಮೂಮಡಿವೀರ ಕವ್ಮಲರ್ಗೂಲಸಲ್ಲವೆ ಪೇಳು ಜೀಯ (ಪೋಚಕ. ೯-೦೩).

[ಮೂಮಡಿ (< ಮೂವಡಿ) + ವೀರ]

ಮೂವಮೆರಿ (ನಾ). (?) : ತೋಟ ತುಡಿಕೆ ಮಕ್ಕೆ ಹಕಲು ಮೂಮರಿ ಕೋಹು ಕಾಡಾರಂಭ ಸಿದ್ಧಿಸಿದ್ಧ ಯಂತಿ ಆಷ್ಟ ಭೋಗತೇಜಸ್ವಾಂಪ್ಯ ಮುಂತಾಗಿ ವಿನುಳಿದನು ನಿಮಗೆ . . . ಧಾರಯಿಸಿಜು ಕೊಟವಾಗಿ (ಎಳ. VIII. ೫೯೯೫. ೨೫-೨೦; ೧೪೫೩). [?]

ಮೂಮೆ, ಮುಮ್ಮೈ, ಮುಯ್ಮೈ, ಮೂರ್ಮೆ, ಮೂವೆ (ನಾ). ಮೂರುಸಲ ; ಮೂರುಬಾರಿ : "ಮೂಮೆಯಿನೆ ಮೂಱುಂ ಸೂಱ್" (ಕಬಾ. ೫೬) ; ' ಅಸಾವಾರಿತಾಜ್ಞಾರಿಗೆ ಮೂಮೆ ಪಜ್ಜೆಣಿಪುವಬ್ಬಮುಂ ತ್ರಿಭುವನಜಾರಿಯೆನ್ನುಂ ಪೆಸರಿತ್ತು (ಇಂ. X. ೦೫೨-೩; ೭೫೫ ೫೯); ಇರ್ಪರುವಂ ಮೂಮೆ ಸುರೇಂದ್ರಕಾಂತೆ ಬಲಗೊಂಡುದ್ಯನ್ನಃಪ್ರತಿಯಿಂ ಎಱಗಿ (ಶಾಪ್ರ. ೬-೪೪); ಮೂಮೆ ಕೈಮಿಗೆ ಬಲವಂದು ಗಂಧ ಕುಟಿಯಂ (ಆಸಂಕ್ಷೆ. ೦೦-೪೬); ಸಮುಮರಣಮಂಡಪಮಂ ಹೊಕ್ಕಾ ರವಣಿ ಸುಲೋಚನೆ ಸಹಿತ ಜಿನಪಸಂ ಮೂಮೆ ತಿರಿದು ಬಂದು (ಕಮುಶಾ. ೦೬-೨೬). **ಮುಮ್ಮೈ** : ಮುಮ್ಮೈ, ಮೂಮೆ (ಕಾಶಾಪ. ೪೫೪ ಕೃಡೂ). **ಮುಯ್ಮೈ** : ಮುಯ್ಮೈ. ಮುಯ್ಯರ್ (ಕಾಶಾಪ. ೪೭೦ ಕೃಡೂ). **ಮೂರ್ಮೆ** : " ಮೂರ್ಮೆಯೆನಲ್ ತ್ರಿಕವಾರದಲ್ಲಿ" (ಕಾಚಂಪ. ೪೩) ; ವೇಟ್ಟಾಗಳೊರ್ಮೆಯೊ ಮೇಗಣೆರ್ಮೆಯೊ ಮೂರ್ಮೆಯೋ ಕುರುಕುಲಪ್ರಾರಬ್ಧದುರ್ವೃತ್ತಿಂ (ಕಾಕಾಶ. ೪೫೯) ; ಮೆ ಪ್ರತ್ಯಯಕ್ಕೆ . . . ಮೂರ್ಮೆ, ಸಾಸಿರ್ಮೆ, ಪಲರ್ಮೆ (ಶಬ್ದ. ೨೦೭ ಕೃಡೂ); ವೀರಪಂಡಿಗವರೋಹಿಸಿ, ಮಣಿದು ಮೂರ್ಮೆ ನವಾಸ್ಯರಿಸಿ (ಪಶ್ಮ. ೦೦೯-೨೩). **ಮೂವೆ**: ದೇವದೇವನ ಬೆಸನ ಮಾಯಾದೇವಿ ತಲೆಯಲಿ ಧರಿಸಿ ಪದವಲಿ ಮೂವೆ ಬಲವಂದೆಱಗಿ ಹೋಗುವವೆನುತ ಬೀಳ್ಕೊಂಡು (ಪಪಾಗ. ೦೦-೨-೪೪).

ಮೂಮೂರ್ಮೆ (ದ್ವಿರುಕ್ತಿ) : ಬಿಡ್ಡದ ಕೊರ್ಮೊನೆಯನ್ನು ಮಹಾರಾಜನ ಮುಖದ ಸುತ್ರವೂ ಭೂಪತೀರ್ತಿಗಳನ್ನು ಬಳಸಿಯೂ ಮೂಮೂರ್ಮೆ ನಿವಳಿಸಿ (ಪಶಾಗಂ. ೩೨-೩).

[ಮೂ$_1$ (<ಮೂಜು)+ — ಮೈ$_2$./ತಮಿ. ಮುಮ್ಮೈ ; ಕೊಡ. ಮೂಮು]

ಮೂಮ್ಮೈ (ನಾ). ಒಂದು ಬಗೆಯ ಸಸ್ಯ : " ಮಾರ್ಕಂಡೀಯಂ—ಮೂಮ್ಮೈ " (ಲಪಾ. ೦೫೩). [?]

ಮೂಮೊನೆ, ಮುಮ್ಮೊನೆ$_1$ (ನಾ). ಯಾವುದಾದರೊಂದು ಆಯುಧದ ಚೂಪಾಗಿರುವ ಮೂರು ತುದಿ.— ಮೊನೆ : ' ಮೂಮೊನೆಗೈದು ' ಪರಾ. **ಮುಮ್ಮೊನೆ$_1$** : ಮುಮ್ಮೊನೆಯ ಬೋಳೆಯ ಸರಳನಲಿ ಸಾಧನ ಸಮಗ್ರರು ಶಿರಮನೆಚ್ಚರು ದೆಸೆದೆಸೆಗೆ ಕವಿದು (ಕಾಪ್ಕಾಕ್ಕೂ. ೬-೦೦); ಪೊಳೆವ ತ್ರಿಶೂಲ ಮುಮ್ಮೊನೆಯಿಂದೆ ಕೆಂಗಿಡಿಗಳನುಗುಳ್ದು . . . ಪರಿಯುರಸ್ಥಲದಲ್ಲಿ ಬಂದು ಮೋಪಿಸಿತು (ಪೋಚಕ. ೪೦-೬೬).

[ಮೂ$_1$ (< ಮೂಜು) + ಮೊನೆ]

ಮೂಮೊನೆಗೈದು, ಮುಮ್ಮೊನೆಗಯ್ದು, ಮುಮ್ಮೊನೆಗೈದು (ನಾ). ಮೂರು ಹರಿತವಾದ ಮೊನೆಗಳುಳ್ಳ ಆಯುಧ ; ತ್ರಿಶೂಲ : " ಮೂಮೊನೆಗೈದು[ಣಾಣಂ. ಮುಮ್ಮೊನೆಗಯ್ದು]ವೆಂದುಂ, ತಿಸುಳ ವೆಂದುಂ, ಶಿವಂ ಪಿಡಿವ ತ್ರಿಶೂಲಂ " (ಕಣಾ. ೧೬-೨). **ಮುಮ್ಮೊನೆಗಯ್ದು** : ಮೇಲಿನ ' ಕಲಸಾ.' ಪ್ರಯೋಗದ ಪಾಠಾಂತರವನ್ನು ನೋಡಿ. **ಮುಮ್ಮೊನೆಗೈದು** : " ಮುಮ್ಮೊನೆಗೈದುವೆನಲ್ ತಿಸುಳಂ " (ಕಬಾ. ೫೦). [ಮೂಮೊನೆ + ಕೈದು$_1$ (<ಕೆಯ್ದು)]

ಮೂರ (ನಾ)· ತೊಗಟೆ ; ಸಿಪ್ಪೆ : " ಮೂರೆ " ಅಂದರೆ ತೊಗಟೆಯು ಸ್ವಲ್ಪಭಾಗವಿದ್ದು ಮೇಲಿನ ರೇಪಿಗಳು ಕೂವಲದಂತೆ ಪೀರಾಗಿರಬೇಕು (ಹುಣಸೆ., ೫೫). [?]

ಮೂರಡಿ ' ಮೂಜಿಡಿ ' ನೋ.

ಮೂರನ್ನ (ನಾ)· [ಜೈನ] ಮೋಕ್ಷವನ್ನು ಪಡೆಯಲು ಸಾಧಕವಾದ, ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರ ಎಂಬ ಮೂರು ಬಗೆಯ ರತ್ನ ; ರತ್ನತ್ರಯ : ಹೊದೆದು ಸುಜ್ಞಾನಾಂಬರವ ಮೂರನ್ನವ ಮುದದಿ ತೊಟ್ಟುಸರ್ಗವೆಂಬ ಸುದತಿಯುದೆದವನೆಯೊಳಗಿಪ್ಪ ಶಂಕರಪದಪದ್ಮಗಳಿಗೆ ನವಿಸುವೆ (ಪಾರ್ಶ್ವ. ೦೩-೦). ಪರತತ್ತ್ವಜಲವನು ವಿಂದು ಸುಜ್ಞಾನಾಂಬರವ ಪೊದೆದು ಮೂರನ್ನವನು ಹರುಷದಿಂ ತೊಟ್ಟ ನಿರ್ಮಲವರುಷನಿಗಳ್ಪದರಸಿಯಹಳೇ ಮುಕ್ತಿರಮಣಿ (ಪಾರ್ಶ್ವನಾ. ೦೮-೦೦). [ಮೂ೩ (< ಮೂಱು) + ರತ್ನ (< ರತನು)]

ಮೂರಾಬಟ್ಟೆ (ನಾ). ಹಾಳು ; ನಾಶ ; ಕೇಡು : ನೋಡಲಿ ನೋಡಲಿ ಹೋದಲಿ ಅವರು ಮೂವರು ಕೂಡಿ. ಇಟ್ಟಿದ ಮೂರಾಬಟ್ಟೆಯ ನಾಟಕವ ! (ಗಿ. ೬೯-೦೩) ; ಈ ಪುನೆಯ ಮೂರಾಬಟ್ಟೆ ಯಾರಿಂದ ಆಯಿತೆನ್ನುವದು ನನಗೆ ತಿಳಿದ ವಿಷಯವಾಗಿದೆ (ಕತ್ಯೆಮ. ೩೩). [← ಮರಾ: ಮುರಾಬಟ್ಟೆ]

ಮೂರಿ· ಮುರಿ೪ (ನಾ). ೧. ಯಮನ ಭಯಂಕರವಾದ ಕೋಣ : ನಾಡರಸಂ ತಗುಳ್ದು ಕಡುಗಾಲದ ಮೂರಿಯ ಮೂರಿಯಂತೆ ಕಣ್ಣಾಡದ ದಾಲವೃದ್ಧವನಿತಾವಧೆಗಯ್ದು (ಕಂಚಿಕಾ. ೪-೩೮), ಮಾಯಿ ಮೂರಿಯಂತೆ ಬರ್ದ ಸೊರ್ದಾನೆಯಂ ಕಂದು (ಕಬಾರಾಕ್ಕ. ೦೩-೩೩); ಮಾರಿಯ ಮೂರಿ ಮೇರೆಗುವಂದದೆ ಭೀಂಕನ ಮೇಲೆವಾಯ್ದ ಕಂಭೀರವಮಂ . . . ಕಡಿಕೆಯ್ದಿ (ಹರಿಕೃ. ೩-೨೨); ಭೈರವನ ಜವನ ಮಾರಿಯ ಮೂರಿಯ ಪೋಲ್ ನಿಂದ ಮಾರಿದಕ್ಕಂ (ಹರಿವಂ. ೦-೩೮) . ೨. (ಭಯಂಕರವಾಗಿ ತೆರೆದ) ಬಾಯಿ : ಮಾರಿಯ ಮೂರಿ ರಕ್ಕಸನ ರೌದ್ರತೆ . . . ಸಾಹಣಿ ಮಲ್ಲನ ಬಾಹುವಿಕ್ರಮಂ (ಕಂಕ್ಕಾಜಾ: ೦೩-೦೪; ೧೨೦). ' ಮೂರಿಗೊಳ್ ', ' ಮೂರಿವಿಡು ' ಪರಾ. ೩· (ಹೆದರಿಕೆಯನ್ನುಂಟುಮಾಡುವಂಥ) ಗುಂಪು : ಸಮೂಹ : ಕಾರಗೆಯನೆ ತೊನೆದೊಟ್ಟಿದ ಮೂರಿಯು ರೋಮಾಂಚ ಫೇನಮಂಜರಿನಿಕರಂ ಕಾರಿರುಳ ಪಿರುಳಿದನೆ ಮದಸ್ಫರಿಮಾ ಪೂರ್ವ ಚಳತ್ಪಮಾಳದ ಪೆಳಲೊಳ್ (ಕರ್ಣಪ. ೩-೧೩) ; ಕಾಲಾಗ್ನಿಯ ಮೂಲೆಯಂತೆ ಮೂರಿಯ ಮೂರಿಯಂತೆ ಮೃತ್ಯುವಿನ ಕೊಪ್ಪರೆಯಂತೆ . . . ಮುಂತಿದ್ದ ರಕ್ಕಸವಧಯ ನಡುವೆ ನಿಂದ ವೀರಭಾರಣಾಸುರಂ (ನಂಗ.ಪ-೨೨೮); ಸಿಂಗದ ಸಂಗವಂತಕನ ತಿಂತಿಣಿ ಮಾರಿಯ ಮೂರಿ ಕಾಲರುದ್ರಂಗನುಸಾರಿ ಭೈರವನ ಭಾರಣೆ . . . ಎನಲೊಪ್ಪುವೋಲ್ ನೆರೆದಿರ್ದುದಾಕ್ಷಣಾ ಸಂಗರದುದ್ಯಗಕ್ಕೆ ಚತುರಂಗಬಲಂ (ಪಜಿಪು. ೩-೧೯). ೪. ಅಯಾಸ ಅಥವಾ ಜಡತೆಯನ್ನು ಹೋಗಲಾಡಿಸಲು ಮೈ ಮುರಿಯುವಿಕೆ : ' ಮೂರಿಯಿಡು ' ಪರಾ. **ಮುರಿ**೬ : ೫. ಎತ್ತು, ವೃಷಭ : "ಕರಾಭರಣ ವಕ್ರತೆ ಬಲೀವರ್ದ ಸಮಕಟ್ಟುಗೆಳೊಳಂ ಮುರಿಯಲಾ" (ಕಬ್ಬಮು. ೧೦೩). ಈ ಶಬ್ದದ ಮತ್ತು ಇದರ ಸಮಾಸಪದಗಳ ಅನೇಕ ಪ್ರಯೋಗಗಳ ಅರ್ಥ, ಅದರ ಬೆಳವಣಿಗೆ ಮತ್ತು ನಿಷ್ಪತ್ತಿಯ ಬಗೆಗೆ ಭಿನ್ನಾಭಿಪ್ರಾಯಗಳಿಪ್ಪುದು ವಿಚಾರಣೀಯವಾಗಿದೆ.

[ಡೆ.ತ ತಮಿ. ಮಲ. ತುಳು. ಮೂರಿ]

ಮೂರಿಗೊಳ್ (ಕ್ರಿ). ಒಟ್ಟಾಗಿ ಹಿಡಿ ; ಆವರಿಸಿಕೊಳ್ಳು : ಕಡಂ ಗೋಬ್ಬುಱಿಗೊಂಡು ದೋಬುದಲೆಯುಂ ಮುಂಗೆದ್ದುಳಿಂ ಮೂರಿಗೊಂಡಿಡುಮು · ಕೊಂಡಿ ಕೊಡಂಕೆಯುಂ ಪೆಱುಪಾವಂ . . . ಎಂಡರ ಮಿಸೆಯಾ ಸಳಜಾ ವೂರಿಟ್ಟೀಯುವಂ ಮಕ್ಕಳಟ್ಟೊಡೆ ಬಾಯ್ಮುಯವೆ ಪೊಯ್ದನೇಂ ನಿತಗನೋ ಕಾಳಾಹಿಕ್ಕೋಳಾಹಳ್ಳಂ (ಕರ್ಣಪ. ೬-೦೨). [ಮೂರಿ + ಕೊಳ್೨]

ಮೂರಿದು ' ಮೂರಿಯಿಡು ' ನೋ.

ಮೂರಿಯಿಡು· ಮೂರಿದು, ಮೂರಿವಿಡು (ಕ್ರಿ)· ೧. ಆಯಾಸ ಅಥವಾ ಜಡತೆಯನ್ನು ಹೋಗಲಾಡಿಸಲು ಕೈಕಾಲುಗಳನ್ನು ನೀಡು; ಮೈಮುರಿ : ಮೂರಿಯಿಡುವೊಡಂ ಸುಜಿಪೊಡಂ ಸಿಂಗರಂಗೆಯ್ದೊಡಂ ತಂಬುಲಂ ಮೆಲುವೊಡಂ ನೀರಂ ಕುಡಿವೊಡಂ ನುಡಿವೊಡಂ ಶೃಂಗಾರಂ ಗೆಯ್ದೊಡಂ . . . ಕಾಣಲೀಯಲಾಗದು ವಧುವಂ (ಪುಪಚ. ೦೦-೩೨). **ಮೂರಿಡು** : ೨. ಭಯಂಕರವಾಗಿ ಬಾಯಿತೆರೆ: ಸೋಣಮುಲ್ ನುಂಗಲಿ ಳಾತಳಂ ಮುರಿದು ಮೂರಿಟ್ಟಂತೆ. . .ಲಗ್ಗೆ ಗಾರ್ದು ಮಸುಬೇಣಂ ಸಾರ್ದು ಸೂಬ್ಯೆಸಿದಂ (ಶಪಂಪು. ೦೦-೩೬). ಈ ಶಬ್ದದ ಸ್ವರೂಪವು ಸಂದಿಗ್ಧವಾಗಿದೆ. **ಮೂರಿಯಿಡು** : ೧. ಆಸನಪ್ರಶಯ್ಯಾತಳದಿಂದೆಂ ಕಾಂತೆಯಬ್ಬೊದೊಡಂ ಮೆಯ್ಯಂ ಕಮ್ಮಗೆ ಮೂರಿಯಿಡುವೊಡಂ ಪಚ್ಚುವೊಡಂ ಇರವಂ ಭಯಸುವೊಡಂ ಪರವುರುಷಪಾಪಕ್ಷಿಯೋಳ್ಪೆಲ್ಲವಸತೀಭಾವಂ (ಪುಪಚ. ೩-೨೧). [ಮೂರಿ + ಇಡು೧]

ಮೂರಿವಿಡು (ಕ್ರಿ)· ೧. (ಭಯಂಕರವಾಗಿ) ಬಾಯಿಬಿಡು; ಬಾಯಿತೆರೆ: ಆಗಳ್ ದುರ್ಯೋಧನನಂ ಮುಂದಿಟ್ಟೊಡಗೊಂಡು ಧೃತರಾಷ್ಟ್ರಕರ್ಣಾ ಶಲ್ಯಕೃಪ ಸೈಂಧವಪ್ರಭೃತಿಗಳ್ ನೆಲಂ ಮೂರಿವಿಟ್ಟಂತೆ ಸಭಾಕ್ಷೋಭಮಾಗೆ ತಳರ್ದು . . . ಪೋದರ್ (ಕಂಚಿಕಾ. ೨-೩೩ ಪ) ; ಭವದೀಯವನಾಯುಜ ಪಯನಿಷಂ ಕೇಳ್ ಮೂರಿವಿಟ್ಟು ನಿಶ್ವಾಸಂ ಸೈಂಧವಮಂ ಮಾಸಿಸೆ ಸೊಗಯಿಸಿತು ವಿಭದ್ರಂ ದೇವ ದೀರ್ಘಪೆಟಮಂಡಪದೊಳ್ (ಪಾರ್ಶ್ವ.೩-೧೨). ೨. ಗುಂಪುಗೂಡು ; ಒಟ್ಟಾಗು : ದ್ರುಪದಂ . . . ತನ್ನ ವಂಗಂದಿರುಂ ತಮ್ಮಂದಿರುಂ ಬೆರಸು ನೆಲಂ ಮೂರಿವಿಟ್ಟಂತೆ ಬರೆ (ಕಂಚಿಕಾ. ೪-೩೪ ಪ); ಸಿಡಿಲ ಬಳಗಕ್ಕೆ ಕುಳಿಕನ ಕುಡಿತಾಡಿಗೆ ಮೂರಿವಿಟ್ಟ ಮಾಂಗೆ ದೂಜಾ ವಡುಮಣ್ಣ (ಕೃಷ್ಣ- XV. ೦೪೨-೦೧; ೨೨೫). ೩. = ಮೂರಿಯಿಡು ೧ : ಮೂರಿವಿಡುತ್ತುಂ ನಿಂದು ಮೆಯ್ಯಂ ಬಿದಿರ್ದಳಸಿವುದಶ್ವತ್ಥಿ ಮೇಟಂಗೆ (ಹರಿಕೃ. ೪-೩೪). [ಮೂರಿ + ಬಿದು೧]

ಮೂರು 'ಮೂಱು' ನೋ.

ಮೂರುತೆ ' ಮುಕ್ತ೩ ' ನೋ.

ಮೂರುಕಾಸು (ನಾ). ೧. ಹಿಂದೆ ಇದ್ದ ಆಣೆಯ ಹನ್ನೆರಡನೆಯ ಒಂದು(ಕ್ಷುಲ್ಲಿತ)ಭಾಗದ ಬೆಲೆಯ ಮೂರುನಾಣ್ಯಗಳು ಮತ್ತು ಆ ಮೂರು ನಾಣ್ಯಗಳ ಬೆಲೆಯ ಒಂದು ತಾಮ್ರದ ನಾಣ್ಯ: ಇಂದಿನ ರೂಪಾಯಿಗೆ ಹಿಂದಿನ ಮೂರುಕಾಸಿನ ಬೆಲೆಯೂ ಇಲ್ಲವಾಗಿದೆ (ಪ.ಅ). ೨. (ಅಲಂ) ಗಣನೆಗೆ ತಕ್ಕುದಲ್ಲದ ಕಾಸು : ಅಲ್ಪಹಣ : ಹತ್ತು ಬಿಂಗ್ಗೆ ಕೊಂಟಿಲ್ಲ. ಅದನ್ನು ಮೂರುಕಾಸಿಗೆ ಇಲ್ಲಿ ಕೊಡುವುದು ಯಾಕೆ, ನೀನೇ ಒಯ್ದು ಬಿಡು (ಹೊಕ್ಕ. ೦೯). ೩. ತುಚ್ಛ ; ಅಲ್ಪ : ನನ್ನ ಚಾರಿತ್ರ್ಯದ ಬಗ್ಗೆ ಮಾತನಾಡಿದೇ ಈ ಮೂರುಕಾಸಿನ ಬಜಾರಿ (ಮುಳುಗಡಿ. ೦೮೩).

ಮೂರುಕಾಸಿನವ = ಲೆಕ್ಕಕ್ಕೆ ಇಲ್ಲದವನು; ಗಣನೆಗೆ ಬಾರದವನು; ಅಲ್ಪವ್ಯಕ್ತಿ : ಈಂತ ಮೂರುಕಾಸಿನವ! (ಕಕ್ತಮ.೦೮). ಮೂರುಕಾಸಿನವಳು = ಲೆಕ್ಕಕ್ಕೆ ಇಲ್ಲದವಳು : ಗಣನೆಗೆ ಬಾರದವಳು; ಅಲ್ಪಳು : ನೀನು ತವೆದದ್ದರಿಂದ—ಇಲ್ಲವಾದರೆ ಆ ಮೂರುಕಾಸಿನವಳಿಗೆ ತೋರಿಸುತ್ತಿದ್ದೆ ಯಾರ ಜಾರಿತ್ರ್ಯ ಏನು ಎಂದು (ಮುಳುಗಡಿ. ೦೮೩).

[ಮೂರು (< ಮೂಱು) + ಕಾಸು೨]

ಮೂರುತಗೊಳಿಸು (ಕ್ರಿ)· ಕುಳಿತುಕೊಳ್ಳುವಂತೆ ಮಾಡು : ಕುಳ್ಳಿರಿಸು; ಸಕಲ ಶಿಪಭ್ಕರಂ ಒರಿಸಿ ಮೂರುತಿ [ಕ] ಗೊಳಿಯಕುಟಿಲುಂ ಕಾಲೋಚಿ ಕೋದ್ಯಸತ್ಕಾರಮಂ ಪ್ರಕಟಿಸಿ (ಪದ್ಮಕಾ. ೫-೩೦).

[< ಮೂರ್ತ೨ + ಕೊಳ್೨ + — ಇಸು೩]

ಮೂರುತಿ (ನಾ) ೧. ದೇವರು, ಮನುಷ್ಯ ಮುಂತಾದವರ ಪ್ರತಿಕೃತಿ; ವಿಗ್ರಹ; ಪ್ರತಿಮೆ : "ಮೂರುತಿ—ಮೂರ್ತಿ = ವಿಗ್ರಹ. ಆಕಾರ" (ಕನ್ನಕೋ. ೭೬); ವ್ಯರ್ಥವಲ್ಲ ತವ ತಪಸ್ಸು, ಮರದಮಿಸು ಮೂರುತಿ (ಅಚಲೇ. ೦೬-೪). ೨. ರೂಪು; ಆಕಾರ : ಆಕೃತಿ: ತುಂದಿಲವು ನವಮಾಸ ಬಳಿಕ ನಿತಂಬಿನಿಯರಿಗೆ ನಿರ್ಮಳಪ್ರತಿಬಿಂಬ ಕಾಣಿಸಿತಾದಿನಾರಾಯಣನ ಮೂರುತಿಯ (ಕೃಷ್ಣ. ೬-೮-೪); ಮೂರುತಿಯನೆ ನಿಲ್ಲಿಸೋ ಮಾಧವ ನಿನ್ನ ಎನ್ನ ಹೃದಯಶವಾಲದೊಳು ಒಡಗಿ ನೆನೆಪುವಂತೆ ನಿನ್ನ (ಭೂಪ. ೦-೦೬ ಪ್ಯ೦). ' ಮೂರುತಿಗೊಳ್ಳು ' ಪರಾ. [< ಸಂ. ಮೂರ್ತಿ]

ಮೂರುತಿಗೊಳ್ಳು (ಕ್ರಿ)- ಆಕಾರವನ್ನು ತಳೆ ; ರೂಪುಗೊಳ್ಳು: ನಿಮ್ಮ ವೇದಶಾಸ್ತ್ರಂಗಳು ಮೂರುತಿಗೊಂಡಲ್ಲಿ ಚತುರ್ವೇದಿಗಳಿಗೊಮ್ಮೆ ಆಕೃತಿ ಅಯ್ತೆ (ರಾಷ. ೪೦೫). [ಮೂರುತಿ + ಕೊಳ್ಳು$_{1}$ (< ಕೊಳ್$_{1}$)]

ಮೂರುನಾಮ ' ಮೂಱು ' ಪರಾ.

ಮೂರುಸಂಜೆ " ಮೂಱುಸಂಜೆ " ನೋ.

ಮೂರೆಲೆ ' ಮೂಱೆಲೆ ' ನೋ.

ಮೂರೆಲೆಯಾಟ (ನಾ). ಪ್ರತಿಯೊಬ್ಬ ಆಟಗಾರನೂ ಮೂರು ಮೂರು ಎಲೆಗಳನ್ನು ಹಾಕಿಕೊಂಡು, ಪಣವನ್ನಿಟ್ಟು ಆಡುವ ಒಂದು ಬಗೆಯ ಇಸ್ಪೀಟು ಆಟ : ಪರೇಲ್ : ಈ ಪೈದಿಗಳು ಮೂರೆಲೆಯಾಟದ ಶೀನಿಯೊಡನೆ ಆಟವಾಡಿ ಸೋತು ಅವನಿಂದಲೆ ಹಣ ಸಾಲವಾಗಿ ಪಡೆದಿದ್ದರು (ಕೃಷ. ೩೦೬). [ಮೂರೆಲೆ (< ಮೂಱೆಲೆ) + ಆಟ]

ಮೂರೆಲೆಮೊನ್ನೆ ' ಮೂಱೆಲೆಮೊನ್ನೆ ' ನೋ.

ಮೂರೆಲೆಹೊನ್ನೆ ' ಮೂಱೆಲೆಮೊನ್ನೆ ' ನೋ.

ಮೂರ್ಕ ' ಮುಕ್ಕ ' ನೋ.

ಮೂರ್ಖ (ನಾ)- ತಿಳಿಗೇಡಿ ; ಅವಿವೇಕಿ : "ವೈಧೇಯಃ. . .ಮೂರ್ಖಃ, ಮಾತ್ಸರ್ಯಶಾಸಃ— ಈ ೧೧ ಅಱಿಯದವಲ್" (ಪಣಪು. ೩೬-೦೬೦) ; ರವಿ ... ಮಕರದೊಳಿರೆ ಮೂರ್ಖಂ ಖಿಲಂ ಲೋಭ ನೀಚೈಶ್ವರ್ಯವಿಹಾರಂ (ಜಾಕ. ೦೩-೦೩); ಮೂರ್ಖನ ಕೆಯ್ಯ ರತ್ನದೊಳ್ನಿಮನಿಸರ್ದಳ್ಕದನವಿಜಯಲಕ್ಷ್ಮಿಯ ಬಾಳ್ಕೊದಲೆ ಸೇವಿಸೆ ಕುಬಿ ಕುರಪ ಕಿಲದೊಳ್ (ಜಾಕೃಷ್ಣ. ೦೨-೩೩) ; ಮೂರ್ಖಂಗೆ ಬುದ್ಧಿಯನು ನೂರ್ವಾಲ ಪೇಳಿದರೆ ಗೋರ್ವಲ್ಲ ಮೇಲೆ ಮಳೆ ಹುಯಿದರಾ ಕಲ್ಲು ಜೀರ್ಣಿಯುದುಂಟೆ (ಸರಣ್ಯ. ೦೦೩೦). [ಸಂ.]

ಮೂರ್ಖತನ (ನಾ). ತಿಳಿಗೇಡಿತನ ; ಅವಿವೇಕ : ಮನದಪ್ಪ ಮದ್ದಾಕ್ಕವ ಕೇಳು ನೀ ಮೂರ್ಖತನದಿಂದ ಪಿಡಿದೆ ನೀಙ್ ಘಸಣಾವ ಕೊಟ್ಟುಯಿಕ್ಷಣ ಭೂವಿಭಾಜನವ ಮಾಳ್ಪಳು ಜೀಯ ನಿಮ್ಮ (ಕೀಷಣ. ೦೦-೩೬); ಬೌವಪ್ಪ ನವರ ಮೂರ್ಖತನಕ್ಕೋ ಅಥವಾ ಮರುಳುತನಕ್ಕೋ ಬಹಳ ಕೆಡುಕನಿಸುತ್ತದೆ (ಕಳಾ. ೦೦೩); ಪರನಾರಿಯರೊಂದಿಗೆ ಬೆರೆಯುವುದು ತುದ್ದ ಮೂರ್ಖತನವಲ್ಲದೇ ? (ಜಾಪೀಷ. ೬). [ಮೂರ್ಖ + — ತನ]

ಮೂರ್ಖತೆ (ನಾ). = ಮೂರ್ಖತನ : ಧರೆಗೆಸದತ್ತು ತಾರಕನ ದುರ್ಗತಿ ತಾರಕನೆಳ್ಳ ... ತಾರಕನ ಮೂರ್ಖತೆ ತಾರಕನುತ್ಪಶ್ಯಮಂ (ಗಣೇ. ೬-೦೦); ಮೂರ್ಖತೆ ಸಾಕು ರಾಜಮುಮಾದಗಿದು ತಾ ಯೋಗ್ಯವಲ್ಲ (ಕೀರಾ. ೨-೦೫-೦೨). [ಸಂ. ಮೂರ್ಖತಾ]

ಮೂರ್ಖತ್ವ (ನಾ). = ಮೂರ್ಖತನ. [ಸಂ.]

ಮೂರ್ಖವೃತ್ತಿ (ನಾ). = ಮೂರ್ಖತನ : ಅತಿವಯನಾಗಿ ಬಾಳ್ಮಮತಿಯಿಂದಬೆಂದಿನ ಮೂರ್ಖವೃತ್ತಿ ಪಂಡಿತಮೃತಿಯಿಂದಮಲ್ಲದೆಮ ನೀಗದು (ಜಾಅಕೃ. ೬-೦೦) ; ಆನೆಮುನಿರುಳಂ ಪಗಲ್ಗಾಂ ಜಾನಿಸಿ ತನು ಮೂರ್ಖವೃತ್ತಿ ಪೊರ್ದಿದವೋಲ್ಗಾನಿ ಪಯಾಸಯಚಿಂತೆಯನೆಸಮಾನಲ್ಲಿಯನೆ ಮುಮೂರ್ಖ ತೆಱನಱಿದವನೇ. (ಜಾಕೃತ. ೦೦-೩೬). [ಸಂ.]

ಮೂರ್ಖಿಸು (ಕ್ರಿ). ಅರಿವನ್ನು ಕಳೆದುಕೊಳ್ಳು ; ದಡ್ಡತನದಿಂದಿರು : ಮುನಿದು ಮೂದಲಿಸಿ ಮೋದಿಯೊಳಿದ್ದು ಮೂರ್ಖಿಪ ಮೊನೆಗಾತಿಯಿಂ ಕೃತಿಗೇಳೆ ಇನಿಯನ ಮೊಗವ ನೋಡದ ಮುನ್ನ ಮೋಹಿಸಿ ಮನಗರಗುವಳು (ಜಂಲಾ. ೦-೩೩). [ಮೂರ್ಖ + — ಇಸು]

ಮೂರ್ಖೀಸು (ಕ್ರಿ). ಮೈಮರೆ ; ಮೂರ್ಛೆಹೋಗು : ಈಕಾನುಭವ ಪರವೆಶದೊಳಾ ಸುತಂ ಮೂರ್ಖೀಸುವನೆಂತೆಂದು ಧರಗೇಷ್ಮದರ್ಥಮಂ ನಟಿಸಿ ತೋರ್ಪಂತೆ ಚಂದ್ರಾಪನಿಗೆ ನಿದ್ರೆಯಾಯ್ತು (ಶಕ್ಷಣ. ೩-೨೮) ; ದೇವದತ್ತಂ ನಿದ್ರಿಸಿದಂ. ಮೂರ್ಖೀಸಿದಂ. ಸತ್ತಂ (ಶಾಸಿ. ೨೦೯ ಪ್ಯ೦೩). [ಮೂರ್ಖೀ + — ಇಸು]

ಮೂರ್ಖೆ (ನಾ)- ಅರಿವು ತಪ್ಪುವುದು ; ಎಚ್ಚರ ತಪ್ಪುವುದು : ಅಱಿವು ಇದಿರೆಡೆಗೆಟ್ಟಲ್ಲಿ ಎಣ್ಣೆ ಬತ್ತಿ ತೀರಿದ ಮತ್ತೆ ಬೆಳಗೆಂಬುದು ನಷ್ಟ . . . ಅದು ಮೂರ್ಖೆ ಅಮೂರ್ಖೆ ಅದು ಅಱಿವಿನ ಮಱವೆ (ಪೀಕಾಪ. ೦೦೦-೦೩೩). [ಸಂ. ಮೂರ್ಚಾ]

ಮೂರ್ಖೆತಳಿ (ಕ್ರಿ). ಎಚ್ಚರಹೊಂದು ; ಪ್ರಜ್ಞೆಯನ್ನು ಪಡೆ : ಪರಿಜನಂ . . . ಕಪ್ಪುರದ ರಜಂಬೊರೆದ ಕರಕಾಂಬುವಂ ತಳಿದರವುರನೆಬ್ಬಜಿಸಿ ಮೂರ್ಖೆತಳಿದು ಕುಮಾರಂ ಈ ಪಟಮನಿಕ್ಷಿಗಾರ್ ತಂದರೆಂಬನ್ನೆಗಂ (ಅಷ್ಟ. ೨-೦೬) ; ವಿಷಯವೆಂಬ ರಸವ ಕುಡಿದು ಆಜ್ಞಾನವೆಂಬುದೊಂದೆ ಹಾಸಿಕೆಯಲ್ಲಿ ಮಲಗಿ ಮೂರ್ಖೆತಳಿಯದೆ ಇಪ್ಪುದ ಕಂಡು ನಾಚಿತ್ಯಯ್ತ ಎನ್ನ ಮನ (ಅದಿ. ೦೩-೩೬). [ಮೂರ್ಖೆ + ತಳಿ$_{1}$]

ಮೂರ್ಖೆಪೋಗು (ಕ್ರಿ). = ಮೂರ್ಖೀಸು : ಹಾ ಸ್ವಯಂಪ್ರಭೇ ಎಂದು ಮೂರ್ಖೆಪೋವುದುಂ (ಅಷ್ಟ. ೪-೦೬). [ಮೂರ್ಖೆ + ಪೋಗು$_{1}$ (< ಪೋ$_{1}$)]

ಮೂರ್ಧನ (ನಾ)- ೧. ಅರಿವು ತಪ್ಪುವುದು ; ಎಚ್ಚರ ತಪ್ಪುವುದು. ೨. [ಸಂಗೀತ] ಸಪ್ತಸ್ವರಗಳ ಆರೋಹಣ ಮತ್ತು (ಅದೇ ಕ್ರಮದ) ಅವರೋಹಣ : ಮೂರ್ಧನ— ಪ್ರತಿಸ್ವರದಿಂದಲೂ ಸ್ವರಸಪ್ತಕದ ಪೂರ್ಣಕೆ (ಸಂಗಸಾ. ೨೮). [ಸಂ. ಮೂರ್ಧನಾ]

ಮೂರ್ಧನೆ (ನಾ). = ಮೂರ್ಧನ : ಪೃಥುಪವನಾಘಾತದಿಂದೆ ಗಾಂಧಾರ ಗ್ರಾಮದ ಮೂರ್ಧನೆಗಳನುಚ್ಚರಿಸಿದುವಮರರ ಹಿಗಲ ಬೀಣೆಗಳ್ ಮಿಡಿಪುದಯಂ (ಈಂಪ್ರಕ. ೦೩-೩೪) ; ಆಹತ ಕಂಪಿತ ಮೂರ್ಧನಾಗಮಕಸ್ಥಾಯಿ ಸಂಚಾರಿ (ಪಾತಪಂ. ೩-೦೬) ; ಸಪ್ತಸ್ವರಗಳ ಆರೋಹಣ ಮತ್ತು ಅವರೋಹಣಕ್ರಮಗಳಿಗೆ ಪ್ರಾಚೀನಶಾಸ್ತ್ರಕಾರರು ಮೂರ್ಧನೆ ಎಂದು ಕರೆದಿದ್ದಾರೆ (ಸಂಗಸಾ. ೨೯). [ಸಂ. ಮೂರ್ಧನಾ]

ಮೂರ್ಧಿತ (ಗು). ೧. ಅರಿವು ತಪ್ಪಿದ ; ಪ್ರಜ್ಞೆಯನ್ನು ಕಳೆದುಕೊಂಡ. (ನಾ). ೨. ಮೂರ್ಧೆ ಹೊಂದಿದವನು : ಪತಿಯೆದ್ದೊಡನೆ ರಕ್ತಂ ಸುರಿವ ಕರಂ ಸರ್ವಸಂ ಕಂಡು ಲಗ ಹೌಸೆ ಹಾಙ್ ಮೂರ್ಧಿತನಾಗಿ ಸತ್ತನು (ಪ್ರಷ್ಣ. ೪೬-೨೬). ೩. ಗಟ್ಟಿಗೊಳಿಸಿದುದು ; ಗಡ್ಡೆ : ಸುರಭಿ ಶೈಲಂಗಳಂ ಪಾಷಾಣಧೃತಿಗಳಿಂದಿರದೆ ಮರ್ದಿಸಿ ಮೂರ್ಧಿತಂ ಮಾಡಿ ಬಳಿಕ ರಸಮಂ ಕೊಂಡು ತದನಂತರಂ ಸಲೆ ಕಲ್ಮಷಂ ಮಾಡಿ (ಅಣಸ. ೨-೦೩-೩). [ಸಂ.]

ಮೂರ್ಧಿಸು (ಕ್ರಿ)- ಅರಿವಿಲ್ಲದಾಗು ; ಜ್ಞಾನತಪ್ಪು ; ಎಚ್ಚರವನ್ನು ಕಳೆದುಕೊಳ್ಳು: ಕಣ್ಗಳಂ ಮುಚ್ಚಿ ಸೆರಬಿಗಿದು ದಡದಡಿಸಿ ದೊಪ್ಪನೆ ಬಿದ್ದು ಸಂಗ ಶರಣೆನುತೆ ಮೂರ್ಧಿಸೆ (ಜಪ. ೩-೬೯); ಖೇದಾನಳನುರಿದಿರ್ದು ... ಹಾ ದೇವೀ ಎನುತುಮವನಿವತಿ ಮೂರ್ಧಿಸಿದಂ (ಜಾಅಕೃ. ೩-೦೩೩); ಗಾಯದಿಂ ಮೂರ್ಧವರ್ ಜೇತರಿವರು . . . ನಿಚ್ಚಟದ ಕಲಿಗಳ್ಕಾಡಿದರ್ ಪರಿ ಜಲಂಧರರ್ (ಕವಿ. ೨೩-೦೯). [ಮೂರ್ಧೆ + — ಇಸು]

ಮೂರ್ಧೆ (ನಾ)- ೧. ಎಚ್ಚರವನ್ನು ಕಳೆದುಕೊಂಡಿರುವ ಸ್ಥಿತಿ ; ಮೈಮರೆವು : ಆ ಪಾರಿತಂ. . . . . ಮೂರ್ಧೆಯಿಂದರ್ಜುನ್ಮತ

ಬೆಚ್ಚನೆ ಸುಮ್ಮು (ಕುಂಜರ. ೬-೩ ಪ) ; ಪುದಿದಿರೆ ಮನಮಂ ಮೋಹತಮಂ ದೀವಂ ವಾತಾಹತಿಯಿಂದಂತೆ ಮೂರ್ಛೆಗೆ ಸಂದಂ (ಹಂಪಚ. ೯-೧೦೩) ; ಅರಸು ಮೂರ್ಛೆಗೆ ಸಲಲು ವಿಭೀಷಣ ಹಿರಿದು ತನ್ನೊಳಗಳಲುತಿರಲು (ರಾಮಾ. ೩೨-೬೪). ೨. ಪ್ರಜ್ಞೆತಪ್ಪಿ ಬೀಳುವ ಒಂದು ಬಗೆಯ ರೋಗ ; ಅಪಸ್ಮಾರ ; ಮಲರೋಗ : ಕಕ್ಕಹಣ್ಣು. ಅಮರವಳ್ಳಿ. ಪರ್ಪಾಟ್ಯಕ. ಭದ್ರಮುಸ್ತೆ. ಕಟುಕರೋಹಿಣಿ ಎಂಬಿವಂ ಕಷಾಯವಂ ಕಾಸಿ ಕಕ್ಕೆಯ. ಹಣ್ಣಂ ಕಲಸಿ ಕುಡಿಸಲು ಚಿಳುಕು ಹರ. ಮೂರ್ಛೆ. ಮಜ್ಜೆ. ಭ್ರಾಂತಿ. ದಾಹ, ಕ್ಷೀಣಜ್ವರ ಹರ (ಪಥ್ಯ. ೦೮). ೩. [ಕಾಮಶಾ] ವಿರಹದ ಹತ್ತು ಬಗೆಯ ಅವಸ್ಥೆಗಳಲ್ಲಿ ಒಂಬತ್ತನೆಯ ಅವಸ್ಥೆ ; ಮೋಹ ಪರವಶತೆಯಿಂದ ಪ್ರಜ್ಞೆಯನ್ನು ಕಳೆದುಕೊಂಡಿರುವ ಸ್ಥಿತಿ: ಅಧಿಲಾಪೆ ಚಿಂತೆ... ಮೌನ ಮೂರ್ಛೆ ಮರಣಮೆಂಬ ದಶಾವಸ್ಥಾದಿ ವಿಚಾರವರಿಂ (ಅಪಗೀ. ೦೦೪). ೪. [ಯೋಗ] ಎಂಟು ಬಗೆಯ ಕುಂಭಕಗಳಲ್ಲಿ ಒಂದು : ಸೂರ್ಯಭೇದವ ... ಮೂರ್ಛೆ ಕೇವಲಮೆಂಬಷ್ಟಕುಂಭಕಪ್ರಕಾರಂಗಳುಂ (ಪಪಗೀ. ೦೬೦). [ಸಂ. ಮೂರ್ಛಾ]

ಮೂರ್ಛೆಗೊಳಿಸು (ಕ್ರಿ)· ಪ್ರಜ್ಞೆತಪ್ಪಿಸು ; ಮೈಮರೆಯುವಂತೆ ಮಾಡು : ತುರಿಯದಿಂ ಭಗದಾಣಗಳ ಕಠೋರದಿಂದರಿಸ್ಯನ್ನವ ಮೂರ್ಛೆಗೊಳಿಸಿ ಪರಿತಂದು ಶೇಷಾಪಾವತಾರನ ದಿವ್ಯಚರಣಾಂಗಳೊಳ್ಕೃತ್ವಾಯ್ತು (ಭೋಜಚಂ. ೨೦-೩೬). [ಮೂರ್ಛೆ + ಕೊಳ್ + — ಇಸು]

ಮೂರ್ಛೆತಿಳಿ ' ಮೂರ್ಛೆದಿಳಿ ' ನೋ.

ಮೂರ್ಛೆದಿಳಿ, ಮೂರ್ಛೆತಿಳಿ (ಕ್ರಿ)· ಅರಿವನ್ನು ಪಡೆ; ಪ್ರಜ್ಞೆಯನ್ನು ಹೊಂದು; ಎಚ್ಚರಗೊಳ್ಳು : ಮಗುಗಿಯ ಕಣ್ಮಲ್ಗರ್ಗಳ್ ನಸುಮುಚ್ಚೆ ಹೋಗಿ ಕಣ್ಣ್ಗಿಲರೆಬಿಂದೆ ಮೂರ್ಛೆದಿಳಿದಳ್ (ಹಂಚಾಚ. ೯-೦೦೦); ಚಿತ್ರ ಜನಾತ್ಮಸಂಭವ ಮೂರ್ಛೆದಿಳಿದೆಚ್ಚತ್ತನೊಂದರಗಳಗೆಯಲಿ (ಹೋಚಚ. ೮೪-೩೩). **ಮೂರ್ಛೆತಿಳಿ** : ತೆರ್ಪಶ್ಯಂ= ಮೂರ್ಛೆತಿಳಿದಂ (ಕಬಾದ. ೫೦. ೨). [ಮೂರ್ಛೆ + ತಿಳಿ]

ಮೂರ್ಛೆಹೋಗು, ಮೂರ್ಛೆಪೋಗು (ಕ್ರಿ)· =ಮೂರ್ಛೆಸು: ಗಾಂಗೇಯ ಮೊಳ್ ಪರಶುರಾಮಂ ಕಾದಿ ಬಾಪಬೀದುಸಿರಲಪ್ಪೊಡಮಾಜಿ ಮೂರ್ಛೆಪೋಗಿರ್ದವಂ ಕಂಡು (ಕುಚಾ. ೦-೩೦ ಪ); ಅತ್ಯಾಸಕ್ತಿಯಿಂ ಮನಮಚ್ಚರಿಂತೆಯುಂ ಚಿತ್ರಿಸಿದರಿಂತೆಯುಂ ಮೂರ್ಛೆಪೋದರಂತೆಯುಂ ... ಮಿಡುಕದೆ ನೋಡುತಿರ್ದೆ (ಅಪಚಂ. ೬೫೬) ; ಕೆನ್ನೀರ್ ಭರದಿಂ ಬೆಚ್ಚನೆ ಪಾಯ್ದುರೆ ಕಣ್ಣಿರಮುಚ್ಚುತ್ತುಂ ಮೂರ್ಛೆಪೋದುದಲ್ಲಿ. ಪಾ.ಹಂ (ಪಾಹಂ. ೯-೨೨). **ಮೂರ್ಛೆಹೋಗಿಸು** : ನಿಮ್ಮ ಈ ನಡತೆಯನ್ನು ಕಂಡು ನಮ್ಮ ಸ್ವಾಮಿನಿಯು ಭಯೋದ್ರೇಕದಿಂದ ಮೂರ್ಛೆಹೋಗಿರುವಳು (ಜಾಪಾ. ೬೩); ದಶರಥನು ... ಮೂರ್ಛೆಹೋಗಿ ಕೂಡಲ ಎಚ್ಚತ್ತುತ್ತಾಕೊಂಡನು (ಶಪಾಂ. ೨. ೦೮). [ಮೂರ್ಛೆ + ಪೋಗು$_1$ (<ಪೋ$_1$)]

ಮೂರ್ಛೆಹೋಗು ' ಮೂರ್ಛೆಪೋಗು ' ನೋ.

ಮೂರ್ತ್ಯ$_1$ (ನಾ)· ದೇವಕಾರ್ಯ. ಮದುವೆ. ಮುಂಜಿ ಮುಂತಾದ ಮಂಗಳಕಾರ್ಯಗಳನ್ನು ನೆರವೇರಿಸಲು ಗೊತ್ತುಪಡಿಸುವ ಶುಭ ಗಳಿಗೆ ; ಮುಹೂರ್ತ ; "ಮೂರ್ತ್ಯ-ಮುಹೂರ್ತ=ಶುಭಗೆಳಗೆ" (ಪಜ್ಞೇಶ. ೩೩); ಈ ರಗಳೆ ಹೆಚ್ಚಿಕೊಂಡರೆ ಮೂರ್ತ್ಯ ಮಿಂಗಿ ಕೇರು ಹರಿಂಡೆ ಇದ್ದರೆ ಇಡೀ ಪಪ್ಪಗೇ ಕೇಡಲ್ಲ (ಹಂಗಣ. ೦೩೪). [ಸಂ. ಮುಹೂರ್ತ]

ಮೂರ್ತ್ಯ$_2$ (ಗು)· ೧. ನಿರ್ದಿಷ್ಟಆಕಾರವನ್ನು ಪಡೆದ.– ರೂಪವನ್ನು ಹೊಂದಿದ· (ನಾ)· ೨. ಆಕಾರ ; ರೂಪ : ಮೂರ್ತ್ಯ ಎಂದರೆ ಸೊಲ್ಲು ಸಾವಯವ; ಅಮೂರ್ತ್ಯ ಎಂದರೆ ನಿಷ್ಕಲ. ನಿರವಯವ ಎಂದರ್ಥ (ಪಜ್ಞೇ. ೨೬). ೩. ಆಕಾರವನ್ನು ಹೊಂದಿದವನು ; ಸ್ವರೂಪವನ್ನು ತಾಳಿದವನು : ಅಯ್ಯಾ ನಿಮ್ಮ ಶರಣನು ಮೂರ್ತ್ಯನಲ್ಲ ಅಮೂರ್ತ್ಯನಲ್ಲ ಲಿಂಗದಲ್ಲಿ ಪ್ರಾಣಸಂಚಿತ (ಪಜ್ಞೇ. ೪. ೦೫೯-೦೫೯). ೪. ಆಸೀನವಾಗಿರುವಿಕೆ; ಉಪಸ್ಥಿತಿ : ಅಲ್ಲಿಂದ ಕೈಲಾಸಕ್ಕೆ ನಡೆದಾರು ಅಲ್ಲಿ ತಳಿರುಚಪ್ಪರವಿಕ್ಕಿ ಮೂರ್ತವಂ ಮಾಡಾರು (ಅಂಸಂ. ೦೦). ' ಮೂರ್ತಂಗೆಯ್ ' ಪರಾ· **ಮೂರ್ತಮಾಡು=ಕುಳಿತುಕೊಳ್ಳು** : ಬಸವರಾಜನ ಗೃಹವ ಪೊಕ್ಕು ದಕಮಂ ಕೊಂಡು ಸನಿನೆದುವಾರೋಗಣಗೆ ಮೂರ್ತಮಾಡಿರಲ್ (ಪ್ರಿಕಣ. ೫-೦೭). [ಸಂ.]

ಮೂರ್ತಂಗೆಯ್ (ಕ್ರಿ)· ಕುಳಿತುಕೊಳ್ಳು : ಆಸೀನವಾಗು : ಚಿನ್ಮಭೂಮೀಶ್ವರದೇವರು, ಅನುಭವದ ಮಂಟಪದಲ್ಲಿ ಮೂರ್ತಂಗೆಯ್ದಿರ್ಪ ಸಮಯದಲ್ಲಿ ... ಬಿನ್ನಿಸಿದ ಪ್ರಸ್ತಾವದ ವಚನ (ಪುಪಾಗೀ. IV. ೦೦೫೦). [ಮೂರ್ತ್ಯ$_2$ + ಕೆಯ್$_1$]

ಮೂರ್ತಗೊಳ್ (ಕ್ರಿ)· ೧. ರೂಪುಪೊರೆ ; ಸಾಕಾರಗೊಳ್ಳು : ಪಡವದವ್ವಣ್ಣನೆ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡನು ಚನ್ನ ಮಲ್ಲೇಶ್ವರನೆ ಎನ್ನ ಮನಸ್ಥಲಕ್ಕೆ ಪ್ರಾಣವಾಗಿ ಬಂದು ಮೂರ್ತಗೊಂಡನು (ಅಂಗಚ. ೭೦-೬೪). ೨. ಕುಳಿತುಕೊಳ್ಳು ; ಆಸೀನನಾಗು : ಆಹೀಂದ್ರ ಭೂಷಣಂ ... ಸಭಾಮಂಟಿಪ ಮಧ್ಯಸ್ಥಿತ ಮಣಿಪೀಠಮನಲಂಕರಿಸಿ ಗಾಡಿಯಿಂ ಮೂರ್ತಿ[ರ್ತ]ಗೊಂದು (ಕಪಂ. ೬-೩೭ ಪ); ಪಾರ್ವತಿಯಣ್ಣಂ ... ಕಾಂಚೀನಗರಮಂ ಪೊಕ್ಕು ಭಕ್ತಗೃಹಬಹಿರ್ದೇಶದಾಮರ ಮೊದಲೊಳ್ ಬಗ್ಗದೊದಲ ಪಾಸುಗೆಯಲ್ಲಿ ಸಲ್ಲೀಲೆಯಿಂ ಮೂರ್ತಿ[ರ್ತ]ಗೊಂಡಿರೆಯಿರೆ (ಕ್ಷಕಂ. ೦೪-೩೦ ಪ). [ಮೂರ್ತ$_2$ + ಕೊಳ್$_1$]

ಮೂರ್ತಗೊಳಿಸು (ಕ್ರಿ)· ಕುಳ್ಳಿರಿಸು ; ಕುಳಿತುಕೊಳ್ಳುವಂತೆ ಮಾಡು: ತಂದತಂದದಿ ಬಪ್ಪವರ್ಗಳಿರ್ಗೊಂದು ಪುರಜನವೆಯ್ದೆ ಮನೆಗೊಡಗೊಂಡು ಬರುತಿರೆ ಮೂರ್ತಗೊಳಿಸಿ ಸುಪಾಸನಂಗಳಲಿ (ಪಪಚ. ೪-೩); ಪರಚಿತ್ರಲೇಖೆ ಪ್ರದ್ಯುಮ್ನಸುತನಾ ವಳಕಡಗೆ ಬಳಗೊಂಡು ಬಂದು ತತ್ಪಯಸ್ಥಳದಲಿ ಮೂರ್ತಗೊಳಿಸಿ (ಪಪಚ. ೫೬-೩೩) ; ಮಾರಯ್ಯ ... ಮನೆಗೆ ಬಂದ ಜಂಗಮಮೂರ್ತಿಗಳಗೆ ಕರುಣದಿಂದ ಭಕ್ತಿಯಾದ ಬಾಗಿ ಅನಂದದಿಂದ ಬೀಗಿ ಅವರನ್ನ ಮೂರ್ತಗೊಳಿಸಿದ (ಕೋಗಚಾ. ೭೨ ಕ್ರ.ಸಂ.೮೪). [ಮೂರ್ತಗೊಳ್ + — ಇಸು]

ಮೂರ್ತತೆ (ನಾ)· ಆಕಾರಸಹಿತವಾದುದು ; ಸಾಕಾರತೆ : ವಿಚಾರವೆಂದರೆ ಮೂರ್ತತೆ. ಸಾಕಾರತೆ. ಅದಕ್ಕೆ ರೂಪವಿಲ್ಲದೇ ಇಲ್ಲ (ಅಜಾಚಂ. ೭೭). [ಮೂರ್ತ$_2$ + — ತೆ$_3$]

ಮೂರ್ತಿ (ನಾ)· ೧. ಆಕಾರ ; ಸ್ವರೂಪ : ಶ್ರುತಮೂರ್ತಿಯಾಗಿಯುಂ ರುಚಿರತನು ರೆರಂ ಬಿಳಿಯಳಾಗಿಯುಂ ಚಿತುರವಚೋನ್ವಿತೆ ಬಾಯ್ವಾ ಯೊಳ್ ನೆಲಸಿಯುಮಮಿತಿಜ್ಞ ವಾಗ್ದೇವಿ ಕೊರ್ತು ಮುಲ್ಕೆಮಗಱ್ದಂ (ಜಾಪ. ೦-೨); ವಿಷ್ಣು ಮನುಗಳು ಸಂದ ಪಾರ್ಥಿವಲೋಕವಾಲಳರೊಂದು ಮೂರ್ತಿಯದು (ಶಾಬ್ಧಕ್ರ. ೩-೩೦); ಮೂರ್ತಿ ಚಿಕ್ಕಪಾದರೂ ಕೀರ್ತಿ ದೊಡ್ಡದು (ಜಾಪ). ೨. ದೇಹ ; ಒಡಲು ; ಶರೀರ: "ತನುಃ . . .ಅವರಘನಃ, ಮೂರ್ತಿಃ—ಈ ೧೭ ಶರೀರಂ"(ಕಣಾಮ. ೮೮-೩೩೬); ಅರಾತ್ರಿಂ ಕರದ್ವಿಸ್ಫೋಮ್ಮಲ್ಲಸದಜೀನಾಲಂಕೃತಂ ಮೂರ್ತಿ . . . ದೇವಗಣಾಪಂ ರಕ್ಷಿಕ್ಕೆ ಭೂಚ್ಛೇಪಂ (ಜಾಪ. ೦-೩). ೩. ಪ್ರತಿಮೆ ; ವಿಗ್ರಹ ; ಬಲಕ್ರಮದಿಂದ ಬಂದ ಇವೇ ಮೂರ್ತಿಗಳನ್ನು ಶ್ರೀರಾಮನೂ ಪೂಜಿಸಿದನಂತೆ! (ಅಜಾ. ೩೩೪); ವಿಜಲವ್ಯನು ದ್ರೋಣಾಚಾರ್ಯರ ಮೂರ್ತಿಯನ್ನು ಮಾಡಿ, ಅದರ ಸಾನ್ನಿಧ್ಯದಲ್ಲಿ ಧನುರ್ವಿದ್ಯೆ ಕಲಿಯುತ್ತಿದ್ದುದು ಸರ್ವವಿದಿತ (ಜಾಚಿ. ೩೦೦). ೪. ಕಾಣಿಸಿಕೊಳ್ಳುವಿಕೆ ; ಸಾಕ್ಷಾತ್ಕಾರ. ೫. ಕಾರಣ್ಯ; ದೃಢತೆ. ೬. ಸೌಂದರ್ಯ. ೭. ಕಾಗೆ ; ವಾಯಸ. ೮. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ : ಹರನಯನ ಪೃಂ ಪುರ ತಿಲಿ ದರರತ್ನಂ

ಮೂರ್ತಿ ರೋಕ ವಿಮಲತ್ರಿತಯಂ . . . ವರ್ಣತ್ರಯಮುಮದು ಮೂಱಱ್ ನಾಮಂ (ಕ್ರಕಣಾ. ೯-೭). [ಸಂ.]

ಮೂರ್ತಿಗೊಳ್. ಮೂರ್ತಿಗೊಳ್ಳು (ಕ್ರಿ)· ೧· ಆಕಾರವನ್ನು ಪಡೆ : ಸ್ವರೂಪವನ್ನು ತಾಳು : ಪರಹಾಸದ್ಯುತಿ ಮೂರ್ತಿಗೊಂಡುದೊ ವಿರಿಂಚ ಖ್ಯಾತಿ ರೋಕಂಗಳೊಳ್ ಪರಿದಾಯಾಸದೆ ನಿಂದುದೋ . . . ಎಂಬಂತಿರೆ ದಿವ್ಯಸುಂದರಿ ಮನಕ್ಕಾನಂದಮಂ ಮಾಡಿದಳ್ (ಶಾಂಭು- ೩೩೭) ; ತಾಯ್ ತಂದೆಯ ಚಿತ್ಕಳಮರ್ದಿವೆ ಮಟಿಯಂ ಕಱ್ದರೆ ಕುಮಾರಕರೂ ಮೂರ್ತಿಗೊಂಡ ಪುರುಷಾರ್ಥದವೋಲ್ (ಕಂಡಪು- ೬-೦೫೨) ; ಪಶುಪತಿ ಬಹನ ಮನದ ಪೊನಪೊಳೊಪ್ಪೆ ಮೂರ್ತಿಗೊಂಡು (ಪಪ್ರ. ೯-೨೦). **ಮೂರ್ತಿಗೊಳ್ಳು :** ೨. ಸಾಕ್ಷಾತ್ಕಾರಗೊಳ್ಳು ; ಗೋಚರಿಸು : ಪಂಚ ಸ್ಥಾನದಲ್ಲಿಪ್ಪ ಲಿಂಗವ ಕರಸ್ಥಲದಲ್ಲಿ ಮೂರ್ತಿಗೊಳ್ಪಲಿಕ್ಕಾಗಿ ಕಂಗಳು ತುಂದಿ ಬಾಹ್ಯದೃಷ್ಟಿ ಅಱತು ಲಿಂಗದೃಷ್ಟಿ ಪರಿಪೂರ್ಣವಾದಲ್ಲಿ (ಪ್ರಭಕಪ. ೫೫೬-೬೭). [ಮೂರ್ತಿ + ಕೊಳ್.]

ಮೂರ್ತಿಗೊಳ್ಳು ' ಮೂರ್ತಿಗೊಳ್ ' ನೋ.

ಮೂರ್ತಿತ್ರಯ (ನಾ)· ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ : ತ್ರಿಮೂರ್ತಿ : ಮುನಿ ಮೂರ್ತಿತ್ರಯವು ಕೇಳ್ದ (ಜೈಮಿ- ೦೯-೩೩). [ಸಂ.]

ಮೂರ್ತಿಪೂಜೆ (ನಾ)· ವಿಗ್ರಹಾರಾಧನೆ : ಕೆಲವರು, ಕಾಡುಜನರ ಪದ್ಧತಿಯಾದ ಮೂರ್ತಿಪೂಜೆಯನ್ನು ಹಿಂದೂಗಳು ಇನ್ನೂ ಬಿಟ್ಟಿಲ್ಲವೆನ್ನುತ್ತಾರೆ (ಶಂ- ೪೪೬). [ಸಂ. ಮೂರ್ತಿಪೂಜಾ]

ಮೂರ್ತಿಬಲ (ನಾ)· ಮೈಯ ಕಸುವು : ದೇಹದ ಬಲ : ದಮಿತಾರಿಯ ಬಲಂ ಚಂದ್ರಬಲಮಿಲ್ಲದಂಕಾಜನಂತೆ ಸೋಲ್ತು ಮೂರ್ತಿಬಲಮಿಲ್ಲದ ಮಲ್ಲನಂತಿಕ್ಕುಪಟ್ಟು (ಜಾಂಪು- ೯-೩೦ ಪ). [ಸಂ.]

ಮೂರ್ತಿಭಂಜಕತೆ (ನಾ)· ವಿಗ್ರಹವನ್ನು ಒಡೆಯುವಿಕೆ ; ಪ್ರತಿಮೆಯನ್ನು ಭಂಗಮಾಡುವಿಕೆ : ಮಹಮ್ಮದೀಯರು ಮಾಡಿದ ಮೂರ್ತಿಭಂಜಕತೆಯಲ್ಲಿ ಹಿಂದುಗಳಿಗೆ ಸೋವಾಯಿತು, ಅವಮಾನವಾಯಿತು (ಕಾಗಳ- ೩೯). [ಸಂ. ಮೂರ್ತಿಭಂಜಕತಾ]

ಮೂರ್ತಿಮಂತ (ಗು)· ಸ್ಪಷ್ಟವಾದ ಅಭಿವ್ಯಕ್ತಿಯನ್ನು ಹೊಂದಿದ — ಆಕಾರವನ್ನು ತಳೆದ ; ಸುಂದರಿಗೆ ಮಗಳ ಸ್ವಭಾವದ ಮೂರ್ತಿಮಂತ ಕಲ್ಪನೆಯಾಗಿತ್ತು (ಪಕ್ಷಾ. ೦೦೦) ; ಮೂರ್ತಿಮಂತ ದೈನ್ಯವೇ ಆವಳಾಗಿ ನಿಂತಿರುವುದನ್ನು ಕಂಡಾಗ ಎಂಥಾ ವಿಶ್ವಾಸವಾದ ಎದಿತು ಮನಸ್ಸು (ಪಜ್ಞಾ. ೨೨). [ಸಂ. ಮೂರ್ತಿಮತ್]

ಮೂರ್ತಿಮತಿ (ಗು)· ೧. ಆಕಾರವನ್ನು ಹೊಂದಿದ ; ದೇಹವನ್ನು ತಾಳಿದ. ೨. ಗಟ್ಟಿಯಾದ ; ಕಠಿಣವಾದ· (ನಾ). ೩. ಆಕಾರವನ್ನು ಪಡೆದವಳು ; ರೂಪವನ್ನು ತಾಳಿದವಳು : ಆ ಮರುದೇವಿಮಹಾದೇವಿ . . . ಪಾಹಿನರೇಂದ್ರನೆಮ್ಮ ಸಂಗಳಿಸಿದ ಕೀರ್ತಿ ಮೂರ್ತಿಮತಿ ತದ್ದದಾಖ್ಯವಿಲಾಸವಾಪದೊಳ್ ತಳರದೆ ನಿಂದ ವಾಗ್ವನಿತೆಯೆಂಬಭಿಧಂಕೆಯನುಂಟುಮಾಡಿದಳ್ (ಜಂಪ- ೬-೨೬) ; ಆತನ ಕೀರ್ತಿಲಕ್ಷ್ಮಿಯೆ ಮೂರ್ತಿಮತಿಯಪ್ಪಂತಾತ್ಮೀಯಪ್ರಾಣೇಶ್ವರನ ಮನಕ್ಕೆ ವರೆ ಸೂಟ್ಗೆ ವಂದು ಸುಪ್ರಯೋಗೆ (ಚಾಂಪ- ೧-೦೮೪ ಪ). [ಸಂ. ಮೂರ್ತಿಮತೀ]

ಮೂರ್ತಿವೆರು ' ಮೂರ್ತಿವೆಱು ' ನೋ.

ಮೂರ್ತಿವೆಱು.[1] ಮೂರ್ತಿವೆರು (ಕ್ರಿ)· = ಮೂರ್ತಿಗೊಳ್ ೧ : ಸದ್ಧರ್ಮಮೇ ಮೂರ್ತಿವೆತ್ತು ಸಮಧೃಷ್ಟಿಯೊಳ್ ನಿಂದ ವೃಷೇಂದ್ರನಿಂ . . . ದೆಂಪನಾಳ್ದು ಪರಮನ ಸಭೆ ಕಣ್ಗೊಳಿಸಿರ್ದುದು (ಧರ್ಮ- ೭-೬೯ ಪ). **ಮೂರ್ತಿವೆರು :** ಬೆದರಿದ ಹರಿಣಿಯಂತಿದ್ದ ಮುಖಭಾವ : ದೈನ್ಯವೇ ಮೂರ್ತಿವೆತ್ತು ಬಂದಂತೆ (ಜಾಕ್ಕ- ೬೩). [ಮೂರ್ತಿ + ಪೆಱು.]

ಮೂರ್ತಿಶಿಲ್ಪ (ನಾ)· ಪ್ರತಿಮೆಯನ್ನು ಕಡಿದರಿಸುವ ವಿದ್ಯೆ : ಭಿಗ್ರಹದ ಕೆತ್ತನೆಯ ಕೆಲಸ : ಪ್ರಾಚೀನಭಾರತದಲ್ಲಾದರೋ ವೇದಗಳ ಕಾಲದಲ್ಲಿಯೇ (ಕ್ರಿ. ಪೂ. ೩೦೦೦ ?) ಮೂರ್ತಿಶಿಲ್ಪವು ತಲೆಯೆತ್ತಿದ್ದಿತು (ಕಾಪ್ರ- ೫೦೯) ; ಮೂರ್ತಿಶಿಲ್ಪದ ಸಾಲಿಗೇ ಸೇರಿಸಬಹುದಾದ ಪೊಳಂಬರ ದೇವಾಲಯದ ಒಂದು ಭಾಗವೆಂದರೆ, ಅಲ್ಲಿಯ ಜಾಲಂಧ್ರಗಳು (ಪೊಳಂ- ೦೦೦). [ಸಂ.]

ಮೂರ್ತಿಸು (ಕ್ರಿ)· ೧· ಆಕಾರವನ್ನು ಕೊಡು ; ಸ್ವರೂಪವನ್ನು ನೀಡು : ರೂಪಿಸು : ಪೊಗಳೆ ಮೂರ್ತಿಸಿದರಕ್ಕ ಸದರ್ತಿವಲ್ಲಭ (ಎಳ- VII, ೫೫೩- ೩-೩೫ : ೧೩೧೬) ; ಸ್ವಾರಾಜ್ಯದೋಡು ಘನತೆಯನು ಕಂಡು ಕಟಿದಿಟ್ಟ ಅಗಿ ತ್ಯಾಗಿ ಕಾರುಣ್ಯದಲ್ಲಿ ಮಾನವರ ಮುರ್ಮೆ ಮೂರ್ತಿಸುವ ಶಿಲ್ಪಿಯಾಗಿ (ಸೂಪ್ರಾಣ- ೦೬-೦೨) ; ಕುಬಾರನಾಗಿದ್ದು ಅವನು ಮಣ್ಣಿಂದ ಮಾಮಷ್ಯನನ್ನು ಮೂರ್ತಿಸಿದ್ದ (ಪದ್ಮಕ್ಷ- ii, ೫೦೫). ೨. ರೂಪವನ್ನು ತಾಳು ; ಆಕಾರವನ್ನು ಪಡೆ : ವಿಹಿತಾಪರಾಧ್ಮರಣೆ ಮನದಲಿ ಮೂರ್ತಿಸಲು ಸುರನಾಥನಿಂತೆಂದ (ಪಶಾಗ. ೦೦-೨೬-೨೨). [ಮೂರ್ತಿ + — ಇಸು.]

ಮೂರ್ತೀಭವಿಸು (ಕ್ರಿ)· = ಮೂರ್ತಿಗೊಳ್ ೧ : ಸರ್ವಜನಮುಮಿಂದಿಗಳುಂ ಮೂರ್ತೀಭವಿಸಿ ಗೋರೂಪಂಗಳಾಗಿರ್ಪಂ (ಪಪ್ರ. ೨೫೯) ; ಅರಸ ಸುರುತೀರ್ಪಪ್ರತಾಪ ವಿಶ್ವಾಸಾರವೆರಸಿ ಮೂರ್ತೀಭವಿಸಿದಂತೆ . . . ತೋರ್ದ ರ್ಚ್ಚಿಯ ಪರಿಯ (ಪಂಗಾಚ. ೫-೬-೫೬) ; ಕದಾವಿದನ ಅಂತಿಮ್ಮತ್ಯದೇ ಅಲ್ಲಿ ಮೂರ್ತೀಭವಿಸಿದಂತಿತ್ತು (ಕಂಗುಕ್ಷ. ೧೮). [< ಮೂರ್ತಿ + ಭವಿಸು]

ಮೂರ್ತೆ ' ಮುರ್ತೆ ' ನೋ.

ಮೂರ್ಧ (ನಾ)· ೧. ತಲೆಯ ಮುಂಭಾಗ ; ಮುಂದಲೆ ; ನೆತ್ತಿ. ೨. ತಲೆ ; ಶಿರಸ್ಸು : " ಮುಂದಣ ' . . . ಶೀರ್ಷ, ಮೂರ್ಧಾ, ಕಂ _ ಈ ರ ಮಂಡೆ " (ಅಮರ- ೩೭-೫೮೨) ; ಧರೆಗಮಾರಾಧ್ಯದಿಂ ಕಿಡವ ಚೈದ್ಯನ ಮೂರ್ಧದ ರತ್ನಘಾಪರಂಪರೆ ಕುದಿಮಿಂಚಿನಂತಸಯೆ (ಜೂಪ. ೦೬-೩೮) ; ಮೂರ್ಧದ ಭಾಳನಯನವ ಧರಿತಪರಿಮಳದಂಗವಟ್ಟದ ಜಡಿದ ಕೆಂಪಡಿಯ . . . ಶಿವನನು ಕಂಡನುಜಭವ (ಭಾಣ್ಯ- ೬-೦೬). ೩. ಮುಂದೆ ಇರುವ ಪ್ರದೇಶ ; ಮುಂಭಾಗ. ೪. ಶಿಖರ ; ತುದಿ. ೫. ಮುಂದಾಳು ; ಮುಖಂಡ. ೬. [ವ್ಯಾಕ] ಎಂಟು ಉಚ್ಚಾರಣಾ ಸ್ಥಾನಗಳಲ್ಲಿ ಒಂದು : ಅಂಗುಳು.

ಮೂರ್ಧಿಘ್ರಾಣ = ಪ್ರೀತಿ, ವಾತ್ಸಲ್ಯಗಳಿಂದ ನೆತ್ತಿಯನ್ನು ಮೂಸುವುದು ; ಪಂತ್ರಾಣವೆ ಪೆಂಪ್ಪಱಿಯೆ ಪರುಷವೇ ಮುಕ್ತಿಯ ನಿರ್ಮಾಣವೆ ಎನುತುಂ ಮೂರ್ಧಿಘ್ರಾಣಂಜೆರಸಗಲದಪ್ಪಿದಂ ನಿರಿರಾಜಂ (ಗಿಸಿ. ೬-೦೦೦) ; ವಂಬಯಪೆಪ್ಪಿ, ತಕ್ಕೈಸಿ ಶಂಕರಂ ಸಾದರ್ಂ ಮೂರ್ಧಿಘ್ರಾಣಮಂ ಮಾಡುತೆ (ಪಂಚಾ. ೬-೦೪೪). ಈ ಸಂಸ್ಕೃತದಲ್ಲಿ ಇದು ಒಂದು ಪದವಲ್ಲ. [ಸಂ. ಮೂರ್ಧನ್]

ಮೂರ್ಧನ್ಯ (ಗು)· ೧. ತಲೆಗೆ ಸಂಬಂಧಿಸಿದ. ೨. ಶ್ರೇಷ್ಠತೆಯಿಂದ ಕೂಡಿದ ; ಉತ್ತಮ : ' ಮೂರ್ಧನ್ಯ ಬ್ರಾಹ್ಮಣ ' ಪರಾ· (ನಾ). ೩. ತಲೆಗೆ ಸಂಬಂಧಿಸಿದುದು. ೪. ಪ್ರಮುಖವಾದುದು. ೫. ಪ್ರಮುಖ ವ್ಯಕ್ತಿ ; ಮುಖಂಡ : ಕ್ರಿಸ್ತ ಶಕ ೧೨ ರಲ್ಲಿ ಉಂಟಾದ ವೀರಶೈವಕ್ರಾಂತಿಯ ಮೂರ್ಧನ್ಯರಾದ ಶ್ರೀ ಬಸವಣ್ಣನವರ ಪ್ರಭಾವವನ್ನು ಅನೇಕ ತಲುಗುಕವಿಗಳ ಮೇಲೆ ಕಾಣಬಹುದಾಗಿದೆ (ಕಾಪ್ರ- ೨೫೬). ೬. [ವ್ಯಾಕ] ಬಾಯಿಯ ಮೇಲುಭಾಗದಲ್ಲಿ (ಅಂಗುಳನಲ್ಲಿ) ಹುಟ್ಟುವ ಅಕ್ಷರ ; ಮೂರ್ಧನ್ಯಾಸ್ಥಾನದಲ್ಲಿ ಉಚ್ಚಾರಗೊಳ್ಳುವ ಅಕ್ಷರ : ರೇಫೆ ಮೂರ್ಧನ್ಯಂ (ಪಾಪ- ೦೯ ಕ್ಷ); ಮೂರ್ಧನ್ಯ ಮು· ಹೂ· ಟವರ್ಗ· ರ, ಷ, (ಜ· ವಿ· ೪) (ಕ್ಷಪಿ- ೩). [ಸಂ.]

ಮೂರ್ಧನ್ಯಬ್ರಾಹ್ಮಣ (ನಾ). ಶ್ರೇಷ್ಠನಾದ ಬ್ರಾಹ್ಮಣ : ಕಲಿಯುಗದಂದುಚ್ಚಂಗಿಯಬ್ಬೆಯುಂಬಳ್ಕೊದಲಾಗಿ ಮೂರ್ಧನ್ಯಬ್ರಾಹ್ಮಣಕನ್ಯಕೆ (ಕೌಷ. VI. ೩೭೮-೦೬ ; ೧೦೭೨). [ಸಂ.]

ಮೂರ್ಧಪಿಂಡ (ನಾ). ಆನೆಯ ಕುಂಭಸ್ಥಳ : "ಮೂರ್ಧಪಿಂಡಃ, ಕುಂಭಃ — ಈ ೨ ಆನೆಯ ಕುಂಭಸ್ಥಳಂ" (ಪಣಾಮು. ೩೬-೬೩); ಬೆದಱಿ ಮನಂ ವನಸ್ಥಲದೊಳ್ಕೊಂದಿಭಮಿರ್ದುದು ಮೂರ್ಧಪಿಂಡಮಪ್ಪಿದು ಶಿಖಿರಸ್ಥಲಂ (ಹಂಪಚಂ. ೦೦-೦೫೯). [ಸಂ.]

ಮೂರ್ಧವ್ಯಾಧಿ (ನಾ). ತಲೆಶೂಲೆ ; ಶಿರೋವ್ಯಾಧಿ : ಕೆಂಪಿನ ಆಗಸಿ:-ಈ ಹೂವಿನ ರಸವನ್ನು ದಿನ ಬಿಟ್ಟು ದಿನ ಒತ್ತಿ ನೀರನೆಱೆದರೆ ಮೂರ್ಧವ್ಯಾಧಿ, ನೇತ್ರರೋಗ ಗುಣ (ಹಕ್ಕಿ. ೪). [ಸಂ.]

ಮೂರ್ಧಾಭಿಷಿಕ್ತ (ನಾ). ರಾಜ್ಯಭಾರದ ಅಧಿಕಾರವನ್ನು ಪಡೆಯುವಾಗ ಶಾಸ್ತ್ರೋಕ್ತವಾಗಿ (ತಲೆಯ ಮೇಲೆ) ಅಭಿಷೇಕ ಮಾಡಿಸಿಕೊಂಡವನು; ಪಟ್ಟದ ಅರಸು: ರಾಜ : "ರಾಜಾ . . . ಮೂರ್ಧಾಭಿಷಿಕ್ತಃ . . . ಲೋಕಪಾಲಃ — ಈ ೧೨ ಅರಸು" (ಪಣಾಮು. ೩೪-೩೭); ವಿದಿತಂ ಮೂರ್ಧಾಭಿಷಿಕ್ತರ್ ಪಲಬರರಘುಗಳ್ ಪ್ರಾಜ್ಯಸಾಮ್ರಾಜ್ಯಲಕ್ಷ್ಮೀ ಪದಮಂ ಕೈಕೊಂಡು ತಮ್ಮಂ ಮಱೆದು (ಅಂಚೆ. ೯-೩೬); ಮೂರ್ಧಾಭಿಷಿಕ್ತರಿರೆ ಗೋವರ್ಧನನಂ ಪೂಜಿಸಂದನಱಿಯದೆ ಭೀಷ್ಮಂ (ಜಗಿ. ೩೭-೦೯): ನೀನು ದುರ್ಯೋಧನನ ಮಕುಟಭೋಗ ಮಾಡಿದ್ದು ಅಕ್ಷಮ್ಯ, ಭೀಮ; ಅತನು ಮೂರ್ಧಾಭಿಷಿಕ್ತನಾಗಿದ್ದ (ಅಗ್ಗಳ. ೨). [ಸಂ.]

ಮೂರ್ಧಾಭಿಷೇಕ (ನಾ). ರಾಜನಾಗುವ ವ್ಯಕ್ತಿಗೆ ರಾಜ್ಯಭಾರದ ಅಧಿಕಾರವನ್ನು ವಹಿಸಿಕೊಡುವಾಗ ಶಾಸ್ತ್ರೋಕ್ತವಾಗಿ (ತಲೆಯ ಮೇಲೆ) ಅಭಿಷೇಕ ಮಾಡುವುದು; ಪಟ್ಟ ಕಟ್ಟುವುದು : ನಿಜಕೂಚ್ಚಗ್ರದೊಳ್ ಪಾಯ್ದು ಗಂಗಾಜಲದಿಂ ಮೂರ್ಧಾಭಿಷೇಕೋನ್ನತಿ ಏಲೆ . . . ಚಕ್ರೇಶತ್ವಮಂ ತಾಳ್ದಿದುದಖಿಳಧರಾರಮ್ಯಮಾಚಳೇಂದ್ರಂ (ಹಂಪಕಾ. ೯-೦೪). [ಸಂ.]

ಮೂರ್ಧಾಭಿಷೇಚನ (ನಾ). = ಮೂರ್ಧಾಭಿಷೇಕ : ವರವಾಜಾಲ ತನಯಂಗೆಸಗಿದರು ಮೂರ್ಧಾಭಿಷೇಚನವ (ಕುಶಾಲ. ೦೦-೩೪). [ಸಂ.]

ಮೂರ್ವಡಿ 'ಮೂವಡಿ' ನೋ.

ಮೂರ್ವಡಿಸು 'ಮೂವಡಿಸು' ನೋ.

ಮೂರ್ವೆ 'ಮೂವೆ' ನೋ.

ಮೂಲ, ಮೂಳ (ನಾ). ೧. ಮರ, ಗಿಡ ಮುಂತಾದುವುಗಳ ಭೂಮಿಯೊಳಗಿರುವ ಭಾಗ; ಬೇರು; ಪಾದ : "ಪಾದಂ, ಮೂಲಂ— ಈ ೨ ಮರದ ಬೇರ್" (ಪಣಾಮು. ೩೦-೩೪); ಮೂಲ ಸಟಾಳ್ಯಿಂದ ಮುರಗಾಲಯಮಂ ಬಹುತಾಖ್ಯಯಿಂದಮಿಂದ್ರಾಲಯಮಂ ಪಳಂಚಿ (ಹಂಪಾಪು. ೬-೦೩೬); ಇದೆ ಬಿಲ್ವಮೂಲದೊಳ್ ಪುಲಿಯ ನುಜಿಚ್ಚಮಿಂತಿದ ಸರ್ವಮೃಗಪಕ್ಷಿಗಳ ಪೞೆಯೆಂದು ಪರಿದೊದಱುವಾ ಪಡವೆರು ಬೇಂಟೆ ದೂಡುತಿರ್ದಂ (ಪಾಪಂ. ೬-೦೦) : ಮೂಲ ತೀರದವನಿಗೆ ಎಲೆ ತೋರಿಸಬೇಡ (ಗಾಡ). ೨. ಗೆಡ್ಡೆ; ಗೆಣಸು; ಕಂದ : ಆಕದುಂ ಸಮಿರೆ ವರ್ಷಗಳವರೆಗೆ ಫಲ — ಮೂಲಗಳನ್ನು ಭಕ್ಷಿಸಿದಳು (ಹಂಭಾಪು. ೨೪). 'ಕಂದಮೂಲ' ಪರಾ. ೩. (ಮರ ಮುಂತಾದುವುಗಳ) ಬುಡ; ಕೆಳಭಾಗ ; ಆತ್ಮೋದ್ಭವಮೂಲಚ್ಛೇದೋಪಾಯವನೆಸಗುಂ ಮದ್ಬುದ್ಧಿ (ಕಾತ್ಯ. ೨೩) : ಮಲೆತು ನಿಮಿರ್ದ ಗರುವ ತರುವರಕುಲಂ ಮೂಲವುಂ ತಿರಿಪಿ ಮಿಂಟಿದವೋಲ್ ನೆಲಕ್ಕುರುಳಿದುವು (ಪಾಪಂ. ೮೯-೦೩೦); ಮೂಲ ಕೆಡಿದು ಅಲ್ಲಾಡಿಸಿದ ಬಳ್ಳಿದುಂತೆ ಬಳುತಿತು ಜೀವ (ಪಾಪಚಾ. ೦೭-೩). ೪. ಹುಟ್ಟುವ ಸ್ಥಳ; ಉಗಮ : ದಯವೇ ಧರ್ಮದ ಮೂಲವಯ್ಯ (ಇಷ. ೫೩); ಪಲವರು ಬ್ರಾಹ್ಮಿಲಿಯ ಮೂಲ ಹೊರದೇಶಗಳ್ಗಿ ಪುಡುಕಬೇಕೆಂದು ತಿಳಿಸಿದ್ದಾರೆ (ಬ್ರಸಂ. ೪೭). ೫. ಕಾರಣ : ಹೇತು : ಅವನ ಕಂಠದೊಳೊಂದುಸಾಲಗ್ರಾವದುಪಲುಪೆಸ್ಸ ಮಸೆ ವಾಡಿಕೊಂಡೆಯುತಿಹುದಂತೆ ! ಅತನ ವಿಚಿತ್ರಕಥೆಗದೆ ಮೂಲವಂತೆ ! (ಹಂರ್ತ್ರ. ೫೦-೦೪). ೬. ಪ್ರಾರಂಭ; ಆದಿ; ಮೊದಲು. ೭. ಒಂದು ಗ್ರಂಥದ ಮೊಟ್ಟ ಮೊದಲನೆಯ ಪ್ರತಿ ; ಅನಂತರದ ಪಾಠಗಳಿಗೆ ಆಧಾರವಾದ ಪ್ರಾರಂಭದ ಗ್ರಂಥ ; ಆಕರಗ್ರಂಥ : ಮೂಲದಲ್ಲಿದೆಯೆಂದು ತರ್ಜುಮೆಯಲ್ಲೂ ಉಳಿದು ಬಂದ ಒಂದೆರಡು ಪದಗಳನ್ನು ತೆಗೆದಿದ್ದರೆ ಇನ್ನೂ ಸುಂದರವಾಗುತ್ತಿತ್ತು (ಶಾಕ. XIV. ಪುಟ್ಟಸ್ವ). ೮. (ವ್ಯಾಪಾರ ಅಥವಾ ಉದ್ಯೋಗದಲ್ಲಿ ತೊಡಗಿಸುವ) ಪ್ರಾರಂಭದ ಧನ; ಆಸಲು; ಬಂಡವಾಳ : ದನಿಯರು ಮೂಲವಾಗಿ ಕೊಂಡ ಬಾಳಿನ ವಿವರ (ಕೌಷ. IX-ii. ೨೦೯-೦೫; ೧೦೭); ಬಳುವರ್ಷದ ಬಡ್ಡಿ ಮೂಲಸಹಿತವಾಗಿ ತಾಳುವನಲ್ಲೇಳೊ ತಿರುಕ ಮುಂಡಾಳಿ (ಕ್ಷೇಂಪ. ೦-೦೦೯-೦); ನಾಲ ಮೂಲವ ತಿಂತು . . . ಬರ ಬಂದು ದೇಶವ ತಿಂತು (ಕಂಗಾಪ. ೦೭೦-೧೨). ೯. ಹತ್ತಿರ ; ಸಮೀಪ. ೧೦. ಕೋಶ; ಭಂಡಾರ: ಊರನ್ನ ಅಮಗೊಳಿರಾ. ಬೂರನ್ನ ಅಮಗೊಳಿರಾ ಲಾಧಾಯಿ ಮಾಡಾಕ ಹೋಗಲೆ ಬರುತನಕ ಅರಮನಿ ಮೂಲ ಜತನಾವ (ಕೋಗಾಸ. ೨೨೨). ೧೧. ಹಕ್ಕು; ಅಧಿಕಾರ : ಯೆಕಪ್ಪನಾಯಕನು ಯಿಜದು ಯಿ[ಜ್ಞಾಯಿಸಿ ಕೊಂಡು] ಬೀಳಲಾಗಿ ನಿಮ್ಮ ಸಂತತಿ ಪರಂಪರೆಯಾಗಿ ಪೆಂತಿಗೆ ದಾನ ಗಂಡಿಗೆ ಮೂಲ ಅಚಂದ್ರಾರ್ಕಸ್ಥಾಯಿಯಾಗಿ ಬ[೦]ದು (ಕೃ. III-i. ೦೩-೬; ೧೬೭೭). ೧೨. ಬೀಳಲು: ೧೩. ಪೊದರು. ೧೪. ಆದಿ, ಅಂತ್ಯವಿಲ್ಲದವನು ; ಪರಬ್ರಹ್ಮ. ೧೫. [ವ್ಯಾಕ] ಯಾವ ಪ್ರತ್ಯಯವನ್ನೂ ಹಚ್ಚದ ಶಬ್ದದ ಅವಿಭಾಜ್ಯರೂಪ ; ಪ್ರಕೃತಿ ; ಧಾತು. ೧೬. [ಗಣಿತ] ಯಾವ ಒಂದು ಸಂಖ್ಯೆಯನ್ನು ಅದರಿಂದಲೇ ಒಂದು ಗೊತ್ತಾದಷ್ಟು ಸಲ ಗುಣಿಸಿದರೆ, ಒಂದು ನಿರ್ದಿಷ್ಟ ಸಂಖ್ಯೆ ಅಥವಾ ಮೊತ್ತ ಬರುತ್ತದೆಯೋ ಆ ಮೊದಲಿನ ಸಂಖ್ಯೆ : ವ್ಯಾಪೀನ ಚೀಣರು ವರ್ಗಸಮೀಕರಣಕ್ಕೆ ಒಂದೇ ಮೂಲವನ್ನು ಮಾತ್ರ ಕೊಟ್ಟಿದ್ದಾರೆ (ಗಣಿ. ೦೬). 'ಘನಮೂಲ', 'ವರ್ಗಮೂಲ' ಪರಾ. ೧೭. [ಜ್ಯೋತಿ] ಒಂದು ನಕ್ಷತ್ರದ ಹೆಸರು: ಇಪ್ಪತ್ತೇಳು ನಕ್ಷತ್ರಗಳಲ್ಲಿ ಹತ್ತೊಂಬತ್ತನೆಯದು : "ಮೂಲವಾಕ್ಷೇಪೆ ಕೃತ್ತಿಗೆಯೋಳಾತಾರೆಯಂಟಾಪವೆ" (ಪಾಪಂ. ೦೯-೩); ಮೂಲಮಾಗಿರೆ ನಕ್ಷತ್ರಂ . . . ಪರಮಂ . . . ಬಂದು . . . ಆಶ್ರಯಿಸಿದಂ (೪೫ಕ್ಷ. ೯-೦೦೬); ಆರ್ದ್ರ . . . ಮೂಲ . . . ಮುಖಯಂಬವೆ ಕ್ರಮದಿಂದ ಷಡ್ಜಾದಿ ಸ್ವರಂಗಳ ಜನ್ಮನಕ್ಷತ್ರಂಗಳು (ಜಕಗ. ೨೩೦). ೧೮. (ಅಲಂ) ಉಪದ್ರವಕಾರಿ : ಕಂಟಿಕ : ಅತ್ತೀಗೆ ಸೊಸಿ ಮೂಲ ಹಿತ್ತಲಿಗೆ ಆದ ಮೂಲ ದಿತ್ತೀದ ಹೊಲಕೆ ಸದಿ ಮೂಲ ಊರಾಗೆ ಹಚ್ಚಿಗೆ ಮೂಲ ಬಡವಾಗೆ (ಗಾಡ. ೨೨) ; "ಬಡವನ ಸಿಟ್ಟು ದವಡಿಗೆ ಮೂಲ" ಎನ್ನುವ ಹಾಗೆ ಬಡವನಾದ ಸಿದ್ದಣ್ಣನ ಸಿಟ್ಟು ಶ್ರೀಮಂತರಾದ ಬೆಳ್ಳಿಗೌಡರನ್ನು ಏನು ಮಾಡುವ ಹಾಗೆಯೂ ಇರಲಿಲ್ಲ (ಹಂಪಾಪ. ೨೨). **ಮೂಳೆ** : ೧. ಪುರಂ ಕಾಳಮಲ್ಲದ ಕಾಳದೊಳ್ ಫಲಪುಷ್ಪದೊಳ್ ವೆಱೆದಂದು ಮೇಣ್ ಮೂಳೆದಿಂದಮಿಕಾರಣಂ ಕೆಡೆದಂದು ದೇಶದ ಹಾನಿ (ಕೋಗಿಪಾ. ೨-೩೪). **ಮೂಲಿಂಬುಸಂ** = ಬುಡದ ವರೆಗೆ : ತಳದ ವರೆಗೆ : ಅಂತು ಪಾತಾಳಮೂಲಂಬರಂ ಮುಟ್ಟುಗಿ ದಿವಿಜದೀರ್ಘಕೆಯೊಳ್ ಮುಟ್ಟುಗಿ ನೆಗೆವ ಅಭ್ರಮೂಪತಿಯಂತೆ ನೆಗೆಯಲೊಡಂ (ಹಂಪ್ರಭ. ೩-೨೩ ೪). **ಮೂಲಮೂಲ** = ಆದಿ ಮತ್ತು ಅಂತ್ಯ : ಕೇವಲ ಆವರಣಗಳಿಗೆ ಪಡಿಮಿಡಿದುವ ದೈಹಿಕವರ್ತನೆಗಳನ್ನೇ ಮಾನಸಿಕವ್ಯಾಪಾರದ ಮೂಲಮೂಲಗಳೆಂದು ಒಪ್ಪಲಾಗುವುದಿಲ್ಲ (ಕೌಮು. ೬). [ಸಂ.]

ಮೊಲಂಗಿ, ಮುಲ್ಲಂಗಿ, ಮೂಲಗೆ (ನಾ). ತರಕಾರಿಯಾಗಿ ಬಳಸುವ ಒಂದು ಬಗೆಯ ಗೆಡ್ಡೆ : "ಮೂಲಕಂ ಮೂಲಂಗಿ" (ಪಾಣಿ: ೦೦೨) ; ಪದದ ನೆಲದ ಮೂಲಂಗಿಯ ಕೀಳ್ಮಂತೆಯುದಜಿ ಕೊಯಿನು ತಿಳ್ಕುಕೊಂಡು (ಪೇಬಸಂ. ೦೭-೦೦೭) ; ಚಿಕ್ಕವರ್ತದ ಸೂಪ್ಪ, ಮೂಲಂಗಿ, ಮಜ್ಜಿಗೆ . . . ಇವು ಪಥ್ಯವರ್ಗ (ಕ್ಯಕ್ಕಾ. I. ೪೦೨) ; ಮೂಲಂಗಿಯಲ್ಲಿ ಎರಡು ವಿಧಗಳಿವೆ. ಬಿಳಿಯದು ಉದ್ದವಾಗಿರುತ್ತದೆ. ಕೆಂಪುಬಣ್ಣದ್ದು ದುಂಡಾಗಿರುವುದು (ಪಥ್ಯ. ೪೦). **ಮುಲ್ಲಂಗಿ** : "ಮೂಲಕಮೆಂಬ ಶಾಕ ಮುಲ್ಲಂಗಿಯೆನಿಸಿರ್ಕುಂ" (ಶುಂಗಣಾ. ೨೯-೩) ; ಮುಲ್ಲಂಗಿ, ಗಜ್ಜರಿಗಳೆಂಥ ಗಡ್ಡೆಗಳಲ್ಲದೆ ಇತರ ಪಸಸ್ಯತಿಗಳ ಬೀರುಗಳೂ ಕೂಡ ಇಲ್ಲಿ ಸಮಾವೇಶವಾಗುತ್ತವೆ (ಕ್ರಾವಣಾ. ೨೦೩-೨೨). **ಮೂಲಗೆ** : "ಮೂಲಕಾಯಿಂಬುದು ಮೂಲಗೆ (ಮೂಲಂಗಿಗೆಡ್ಡೆ)" (ಹರಿಹರ. ೩೭-೦೦) ; ಸವನಾಗಿ ನುಗ್ಗಿ ಬಜೆ ಸಾಸಿವೆ ಮೂಲಗೆ ಕರಿಯ ಜೀರ್ಗೆ ಎಂಬಿವಿನಿತಜ ಬೀಜವನಾವ ತಕ್ರದಿಂದರೆದು ವಿಲೇವಂಗೆಯ್ಕೆ ಕಳೆಗುಮವು ಗಂಟುಗಳಂ (ಕೋಕೋಚ. ೯-೦೨೬). [ದೇ.॥ ತಮಿ. ಮಲ. ಮುಳ್ಳಜ್ಜಿ ; ತುಳು. ಮುಲ್ಲೆಂಗಿ, ಮೂಲಂಗಿ, ಮೂಲೆಂಗಿ ; ತೆಲು. ಮುಲ್ಲಂಗಿ. / ಸಂ. ಮೂಲಕ]

ಮೂಲಕ$_1$ (ನಾ). = ಮೂಲಂಗಿ : "ಮೂಲಕಮೆಂಬ ಶಾಕ ಮುಲ್ಲಂಗಿಯೆನಿಸಿರ್ಕುಂ" (ಶುಂಗಣಾ. ೨೯-೩) ; "ಮೂಲಗೆ (ಮೂಲಂಗಿ. ಮುಲ್ಲಂಗಿ) =ಮೂಲಕ" (ಕನ್ನಡ. ೩೩). [P ಸಂಸ್ಕೃತಕೋಶಗಳಲ್ಲಿರುವ 'ಮೂಲಕ' ಶಬ್ದವು ದೇಶೀಯಮೂಲದ್ದಾಗಿರಬಹುದು]

ಮೂಲಕ$_2$ (ಅ). ಮುಖಾಂತರ : ದ್ವಾರಾ : ಆ ಸಂಶೋಧನೆಗಳನ್ನು . . . ಹಲವಾರು ಲೇಖನಿಸಗಳ ಮೂಲಕ ಪ್ರಕಟಿಸಿದನು (ಸ್ವಕ. ೭೦) ; ಆ ಕಾರ್ಯ ಮಾನವರ ಮೂಲಕವೇ ಆಗಬೇಕು ಎಂಬುದಕ್ಕೆ ಕಾರಣವೇನು ? (ವೆಂಜಾ. ೬). [<ಸಂ. ಮೂಲ]

ಮೂಲಕಂದ (ನಾ). ಒಂದು ಬಗೆಯ ಸಸ್ಯ : "ಕೇದಲಜಾ — ಮೂಲಕಂದ, ನೆಲಗುಂಬಳ" (ವಿಸಂ. ೨೩), [ಸಂ.]

ಮೂಲಕೃತಿ (ನಾ). = ಮೂಲ ೭ : ಒಂದು ಪಾಠಪರಂಪರೆಯು ಭಿನ್ನಶಾಖೆಗಳ ನಡುವೆಯಾಗಲೀ ಅಥವಾ ಮೂಲಕೃತಿಗೂ ಲಭ್ಯಕೃತಿಗಳಿಗೂ ಮಧ್ಯೆಯಾಗಲೀ ಎಷ್ಟು ಬಾರಿ ಪಾಠಲೇಖನಗಳು ಜರುಗಿರಬಹುದು ಎಂಬುದನ್ನು ಎಲ್ಲ ಸಲವೂ ಹೇಳುವುದು ಸಾಧ್ಯವಿಲ್ಲ (ಕಾವಚ. ೩೩). [ಸಂ.]

ಮೂಲಗಂಟು (ನಾ). ವ್ಯಾಪಾರ ಅಥವಾ ಉದ್ಯೋಗಕ್ಕಾಗಿ ಹೂಡಿದ ಧನ : ಬಂಡವಾಳ : ಅಸಲು : (ಕ). [ಮೂಲ + ಗಂಟು]

ಮೂಲಗಾರ (ನಾ). ಜಮೀನಿನ ಪ್ರಾರಂಭದ ಒಡೆಯ.—ಮೂಲೀಕ : ಹೈಗನಾಡಿನೊಳಗಿನ ಭೂಮಿಯು ಪ್ರಜೆಗಳ ಉಸ್ತುವಿಂದೇನಿಸಲ್ಪಡುತ್ತದೆ. ಭೂವಿಗೆಯ ಬಾಧ್ಯಸ್ಥರೆಲ್ಲರು ಬಹುಶಃ ಬ್ರಾಹ್ಮಣರೇ. ಅವರಿಗೆ ವಾಡಿಕೆಯಾಗಿ ಮೂಲಗಾರರೆಂದೆನ್ನುವರು (ಕುಂಜಾಪು. ೫-೨೦೪) ; ವಿಕಾಕಿಯಾದ ಒಬ್ಬ ಮೂಲಗಾರನು ಅನುಭವಿಸಿದಂತಾ ಒಂದು ವತನಿನ ಪರಾಧೀನವು ಆತನ ಮರಣದ ತರುವಾಯ ಅವನ ವಾರಿಸ್ವಾರಸ ಅಭ್ಯಂತರಿಸುಹುದು (ಶಾಬ್ಯಾ. ೪೪೬). [ಮೂಲ + — ಗಾರ (<—ಕಾಜ)]

ಮೂಲಗಿಡು (ಕ್ರಿ). ಕುಂಯ್ ಎಂದು ಸಣ್ಣದನಿಯಲ್ಲಿ ಶಬ್ದಮಾಡು ; ಕುಂಯಿಗುಡು : ತನ್ನ ಹೆಣ್ಣು ಗಂಡು ಶುನಕಪರಿವಾರ ಸಮೇತವಾಗಿ ಹುಲಿಯ ಅವಪನ್ನು ಎಮರುಗೊಂಡಿತು. ಆದರೆ ಎಷ್ಟು ದೂರ ಅಳ್ಳಾಡಿಸಿದರೂ ಮೂಲಗಿಸಿದರೂ ಯಜಮಾನನಿಂದ ದೂರವಾಗಿ ವಿಶ್ವಾಸವ ಅಥವಾ ಮುದ್ದಿನ ಸೂಚನೆಯೂ ಹೊರಪೊಮ್ಮಲಿಲ್ಲ (ಮಂಕು. ೦೫೬).

[ಮೂಲಗು (<ಮುಲುಕು$_1$) + — ಇಸು$_2$]

ಮೂಲಗು ' ಮುಲುಕು$_1$ ' ನೋ.

ಮೂಲಗುಂಡರ (ನಾ). ಒಪ್ಪಾತನ ಹೆಸರು : ಮೂಲಗುಣ್ಡರರ ಮಗದ್ದ್ (ಪೈಎ. ೦೧೭೬. ೦೧೬-೬ : ೪೭ಯ ೫೪). [?]

ಮೂಲಗುಣ (ನಾ). ೧. ಪ್ರಾರಂಭದಿಂದ ಇರುವ ಗುಣ : ಹೊಲಿನಿಂದ ಇರುವ ಸ್ವಭಾವ. ೨. [ಜೈನ] ಮುನಿಗಳು ಆಚರಿಸಬೇಕಾದ ಇಪ್ಪತ್ತೆಂಟು ಬಗೆಯ ಆಚರಣೆಗಳು : ಇಪ್ಪತ್ತೆಂಟು ಮೂಲಗುಣಂಗಳೊಳಮುತ್ತರಗುಣಂಗಳೊಳಮುತ್ತರೋತ್ತರಂ ನೆಗಟ್ದು (ಅಪ್ಪ. ೬-೨೬ ಪ) ; ಮೂಲಗುಣಮಾದಿ ಸಕಲಗುಣಾಳಿಯೊಳಂ ಕಡಿದೆ (ರತ್ನಾಕ್ಕ. ೩-೩೬). [ಸಂ.]

ಮೂಲಗುತ್ತಿಗೆ (ನಾ). ಮೊದಲಿನಿಂದ ಪಡೆದಿರುವ ಗುತ್ತಗೆ : ನಾಪ ಹಾರಿಕಯ ಬೊಮ್ಮಣ್ಣಹೆಗ್ಗಡೆಯಿಂದ ಪಾಲಗುತ್ತಿಗೆಯ . . . ಮಾಡಿದ ಅಗ್ರಹಾರದ ಮಹಾಜನಂಗಳ ವಿವರ (ಎಳ. VI. ಶೃಂಗೇರಿ. ೩೩-೨೪ ; 1417). [ಮೂಲ + ಗುತ್ತಿಗೆ (<ಗುತ್ತಗೆ)]

ಮೂಲಗೆ " ಮೂಲಂಗಿ ' ನೋ.

ಮೂಲಗೇಣಿ (ನಾ). = ಮೂಲಗುತ್ತಿಗೆ : ಸಿಟ್ಟು ಅವನಿಗೆ ಮೂಲಗೇಣಿಗೆ ಮಾರಿ ತಿಸ್ಸುವ ಅಧಿಕಾರವಿರುವ ಶರ್ತಿನ ಮೂಲಗೇಣಿಗೆ ಒಂದು ಎಕ್ರೆ ಮುಮ್ಮು ಸ್ಥಳವನ್ನು ಕೊಟ್ಟರು (ಚಿಕ್ಕಾ. ೩೮). [ಮೂಲ + ಗೇಣಿ (<ಕೇಣ್$_2$)./ತುಳು. ಮೂಲಗೇಣ]

ಮೂಲಗ್ರಂಥ (ನಾ). ಆಧಾರಗ್ರಂಥ ; ಆಕರಗ್ರಂಥ : ಅನ್ಯೆಗಮವ್ಯಕ್ಕ ಕಾಲದೊಳೋದಿ ಮಜಿದ ವಿಜಮಶಾಸ್ತ್ರದ ಮೂಲಗ್ರಂಥಕ್ಕೆ ವಿಪರಣ ಬರ್ಜಪೊಲಿರದವಧಿವಿಜೋಧದೆ ಭರೆ ಮನಕ್ಕೆ ಬಗೆಯೊಳ್ ಕಂಡಂ (ಕಾಂಕತ್ರಿ. ೬-೦೬ ಪ) ; ಪರಂಪರಾಗತವಾಗಿ ಬಂದಿರುವ ಲಭ್ಯ ಹಸ್ತಪ್ರತಿಗಳ ಆಧಾರದಿಂದ ಮೂಲಗ್ರಂಥದ ಎಂದರೆ ಕವಿಯು ಸ್ವಹಸ್ತಾಕ್ಷರಪ್ರತಿಯು ಸ್ವರೂಪ ವೇನಿರುಹುದೆಂಬುವನ್ನು ನಿರ್ಣಯಿಸಿ ಪರಿಷ್ಕಾರ ಮಾಡುವ ಕೆಲಸ ಗ್ರಂಥ ಸಂಪಾದನೆ (ಕಾಕಿ. vii. ಪೀಠಿ). [ಸಂ.]

ಮೂಲಚ್ಛೇದ (ನಾ). ೧. (ಮರದ) ಬುಡವನ್ನು ಕತ್ತರಿಸುವುದು. ೨. (ಅಲಂ) ಪೂರ್ಣವಾಗಿ ನಾಶಮಾಡುವುದು : ಇವರ ಬಲುಹಂತಿರಲಿ ಸಾಕ್ಷಾತ್ತರ ಕರುಸು ವಿರೋಧಬಂಧವ್ಯಸ್ಥಿಗೆ ಫಲವಿಲ್ಲ ಮೂಲಚ್ಛೇದ ಕರ್ಮವಿದು (ಭಾಬ್ಯ. ೦೬-೦೬). [ಸಂ.]

ಮೂಲಣ್ಣ (ನಾ). ಒಪ್ಪಾತನ ಹೆಸರು : ಜೋಕಣ್ಣಂ ಮೂಲಣ್ಣಂ× × ನ್ ಆಪ್ಯಸ್ತರ ಸಿನ್ವಿ ಪಡದರ್ (ಎಳ. VIII. ಕೊರಲ. ೩೦೦-೪ : ೪೫೫). [ಮೂಲ$_2$ + ಅಣ್ಣ$_2$]

ಮೂಲತಃ (ಅ). ಮೊದಲಸಲ್ಲಿ ; ಪ್ರಾರಂಭದಲ್ಲಿ : ಸಹಜವಾಗಿ ಅವರು (ದ್ರಾವಿಡರು) ಮೂಲತಃ ಆಡುತ್ತಿದ್ದ ಭಾಷೆಯು ಭಾರತಕ್ಕೆ ಬರುವ ಮುನ್ನ ಇದ್ದ ಪ್ರದೇಶದ ಇತರ ಪ್ರದೇತಗಳೊಡನೆ ಕೆಲವು ರೂಪಸಾಮ್ಯಗಳನ್ನು ಪಡೆದಿದ್ದಿರಲೇಬೇಕು (ಕ್ರಾಬಿ. ೩೦). [ಸಂ. ಮೂಲತಸ್]

ಮೂಲತತ್ತ್ವ (ನಾ). ಆಧಾರಭೂತವಾದ ತತ್ತ್ವ ; ಮುಖ್ಯ ತತ್ತ್ವ : ಪತಿ – ಪಶು – ಪಾಶಗಳೆಂಬ ತತ್ತ್ವತ್ರಯಂಗಳೇ (ತ್ರಿಪದಾರ್ಥಗಳು) ಶೈವಾಗಮದ ಮೂಲತತ್ತ್ವಗಳು (ಶಾಕಿ. ೭೩) ; ಸತ್ಯ, ಪ್ರೇಮ, ತ್ಯಾಗ, ಅಹಿಂಸೆ . . . ದಯೆ, ಮಮತೆ ಇವೇ ಮಾನವಧರ್ಮದ ಮೂಲತತ್ತ್ವಗಳು (ಕವಾಣಾ. ೩). [ಸಂ.]

ಮೂಲತ್ರಿಕೋಣ (ನಾ). [ಜ್ಯೋತಿ] ಸೂರ್ಯ ಮೊದಲಾದ ಗ್ರಹಗಳ ರಾಶಿರೂಪವಾದ ಗ್ರಹ ; ರವಿಗೆ ಸಿಂಹ, ಚಂದ್ರನಿಗೆ ವೃಷಭ, ಕುಜನಿಗೆ ಮೇಷ, ಬುಧನಿಗೆ ಕನ್ಯಾ, ಗುರುವಿಗೆ ಧನುಸ್ಸು, ಶುಕ್ರನಿಗೆ ತುಲಾ ಮತ್ತು ಶನಿಗೆ ಕುಂಭ — ಇವು ಮೂಲ ತ್ರಿಕೋಣಗಳು : ದಿನಪಾದಿಗಳಭ್ಯುದೀಜನಿಯ ಗ್ರಹಂ ನೀಚಮುವರ್ಗೆ ಹರಿ ವೃಷಮಜುಮಂಗನೆ ಧನು ತೊಲೆ ಕುಂಭಮಿವಿಂತಿನಿತುಂ ಮೂಲತ್ರಿಕೋಣಮಕ್ಕುಂ ಕ್ರಮದಿಂ (ಜಾತಿ. ೦-೪೨) ; ಸೂರ್ಯಾದಿಗ್ರಹಗಳ ಉಚ್ಚರಾಶಿಗೆ ವಿಳನೆಯದು ಆಯಾ

ಗ್ರಹಗಳಿಗೆ ನೀಚರಾಶಿ. ಸಿಂಹ ವೃಷಭ ಮೇಷ ಕನ್ಯಾ ಧನುಸ್ಸು ಕುಂಭ ಇವು ಕ್ರಮವಾಗಿ ಸೂರ್ಯಾದಿಗ್ರಹಗಳಿಗೆ ಮೂಲತ್ರಿಕೋಣರಾಶಿಗಳು (ಜಾತಕ. ೦-೨೨ ೪೩೮). [ಸಂ.]

ಮೂಲದಂಡಿಗೆ (ನಾ). ಹಿಂದೆ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಶಿಕ್ಷಿಸಲು ಉಪಯೋಗಿಸುತ್ತಿದ್ದ ಒಂದು ಬಗೆಯ ಸಾಧನ ; ಕೋದಂಡ : ತೊಗುದಂಡಿಗೆ (ಉಕ) : ಕಪ್ಪುಮಾಡಿದ ವಿದ್ಯಾರ್ಥಿಮಿತ್ರನ್ನು ಶಿಕ್ಷಕರು ಚೆನ್ನಾಗಿ ದಂಡಿಸುತ್ತಿದ್ದರು. ಮೂಲದಂಡಿಗೆ ಪಾಠ ಜೋತುಬಿದ್ದುತ್ತಿದ್ದರು (ಕಂಗರೋ. ೦೨೯). [ಮೂಲ್ಯ + ದಂಡಿಗೆ]

ಮೂಲದಳ (ನಾ). ಮುಖ್ಯಸೈನ್ಯ ; ವಿಾಸಲುಪಡೆ : ಕೋವಿದರಿಲಿಯ್ಯಂದರುತ್ಸವದಿಂದಲಾ ಪರಮೆಯೊಡನೆ ಪಂಚಾಯುಧವ ಮೂಲದಳ ಪಾಡಿದಂತೆ (ಕೌಂಪ್ರ. ೬-೮೫). 'ಮೂಲಬಲ' ಪರಾ.

[ಸಂ. ಮೂಲದಲ]

ಮೂಲದೇವರು (ನಾ). ೧. ಯಾವುದಾದರೊಂದು ಮನೆತನಕ್ಕೆ ಆರಂಭದಿಂದಲೂ ಇರುವ ಅಭಿಮಾನಿದೇವತೆ : ಗೌಡಸಾರಸ್ವತರ . . . ಮೂಲದೇವರುಗಳು ಸ್ಮಾರ್ತಸಂಪ್ರದಾಯದ ದೇವತೆಗಳು (ಕುಲಾಚಾ. ೦೬೦). ೨. ದೇವಸ್ಥಾನದಲ್ಲಿ ಅನೂಚಾನವಾಗಿ ಪೂಜಿಸುವ ದೇವರ ವಿಗ್ರಹ : ಈ ದೇವಾಲಯದ ಮೂಲದೇವರ ವಿಗ್ರಹ ತುಂಬ ಸುಂದರವಾಗಿದೆ (ಕೂಷ). [ಮೂಲ+ದೇವರು (<ದೇವರ್)]

ಮೂಲದ್ರವ್ಯ (ನಾ). ೧. ವ್ಯಾಪಾರ ಮುಂತಾದುವಕ್ಕೆ ಮೊದಲ ಬಾರಿ ಹೂಡುವ ಹಣ : ಬಂಡವಾಳ : ಸಂಪತ್ತಿಯನ್ನು ಹುಟ್ಟಿಸಲಿಕ್ಕೆ ಏನಾದರೂ ಮೂಲದ್ರವ್ಯ ಬೇಕು (ಹುಂಜಾಮ. ೭-೩೦). ೨. ಆಧಾರವಾದ ಮೊದಲನೆಯ ವಸ್ತು ; ಮೂಲವಸ್ತು : 'ಪಿಚ್‌ಬ್ಲೆಂಡ್' ಎಂಬ ಖನಿಜದಲ್ಲಿ ದೊರೆಯುವ ಒಂದು ಸ್ವಪ್ರಕಾಶ ಮೂಲದ್ರವ್ಯ (Actinium. ೧೦೪೭). [ಸಂ.]

ಮೂಲದ್ರಾವಿಡ (ನಾ). ದ್ರಾವಿಡಭಾಷೆಗಳಿಗೆ ಮೂಲವಾಗಿ ಇದ್ದಿರಬಹುದಾದ ಪ್ರಾಚೀನ ಭಾಷಾರೂಪ : ಪೂರ್ವದ್ರಾವಿಡ : ಮೂಲದ್ರಾವಿಡಭಾಷೆಯು ಕವಲೊಡೆದು ಅವುಗಳಲ್ಲಿ ಒಂದು ಕವಲು ಕನ್ನಡವೆಂಬ ಸ್ವತಂತ್ರಭಾಷೆಯಾಯಿತು (ಕೃಶಿ. ೩೦೯) ; ಮೂಲದ್ರಾವಿಡಭಾಷೆಯಲ್ಲಿ 'ಬ' ಈ ಧ್ವನಿಯಿತ್ತೆಂಬುದರಲ್ಲಿ ಸಂದೇಹವಿಲ್ಲ (ಕೋಇಂ. ೯). [ಸಂ.]

ಮೂಲಧನ (ನಾ). = ಮೂಲದ್ರವ್ಯ ೧ : ಲೀಲೆಯಿಂ ಲಿಂಗಕ್ಕೆ . . . ಚಂದನಮನರ್ಪಿಸುತಿರಲು ತನ್ನ ಮೂಲಧನವೆಸುಂಟದಲ್ಲವನೋಲಿಯಲಿ ಚಂದನಕೆ ಸಮೆಯಲು (ಪಚಕ್ಷ. ೬-೨) ; ಹೊದಲನದು ಕಾರ್ಖಾನೆಯ ಕಟ್ಟಡ. ಯಂತ್ರ. ಉಪಕರಣಗಳಿಗೆ ಬೇಕಾಗುವ ಮೂಲಧನ (ಜಾಅಕ್ಷ. I, ೪೭೪). [ಸಂ.]

ಮೂಲಧಾತು (ನಾ). ೧. ಕೀವು ; ಲಸಿಕೆ. ೨. [ವಿಜ್ಞಾ.] ರಾಸಾಯನಿಕವಾಗಿ ವಿಭಜಿಸಲು ಅಸಾಧ್ಯವಾದ ಘಟಕದ್ರವ್ಯ : ಅಣು ಬಾಂಬಿನಲ್ಲಿ ಯುರೇನಿಯಮ್ ಎಂಬ ಮೂಲಧಾತುವಿನ ಪರಮಾಣುವಿನ ಒಡಯುವಿಕೆಯಿಂದ ಹೊರಬರುವ ಸ್ಫೋಟನಶಕ್ತಿಯು ಅಪಾರವಾಗಿದೆ (ಜಾಸ್ಫೂ. ೬೨೩). [ಸಂ.]

ಮೂಲನಕ್ಷತ್ರ (ನಾ). [ಜ್ಯೋತಿ] ಒಂದು ನಕ್ಷತ್ರದ ಹೆಸರು : ಸಿತಪಕ್ಷದ ಪಂಚಮಿದಿನಪ್ರತಿವಾರಂ ಶುಭದ ಮೂಲನಕ್ಷತ್ರಮೊಳ್ನಿತಮಾಗೆ ನೆಗಟ್ದುದೀ ಮತ್ಕೃತಿ ಜಗದೊಳ್ (ಕಂಪ್ರ. ೦೬-೬೬) ; ದಿನದೊಳುತ್ಪನ್ನನಾದಂ ಮೂಲನಕ್ಷತ್ರದಿಂದರಿವ್ಯಾಂಶದೊಳ್ ಸುಕುಮಾರನು (ಕ್ಷಿಬಾಚಾ. ೨೯-೦೪). [ಸಂ.]

ಮೂಲನಿವಾಸಿ (ನಾ). ಒಂದು ಪ್ರದೇಶದಲ್ಲಿ ಬೇರೆ ಪ್ರದೇಶದ ಜನರು ಬಂದು ನೆಲಸುವುದಕ್ಕಿಂತ ಮೊದಲೇ ಅಲ್ಲಿದ್ದಿರಬಹುದಾದ ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದವನು ; **ಆದಿವಾಸಿ** : ಮೂಲನಿವಾಸಿಗಳಲ್ಲಿ ಒಬ್ಬನನ್ನು ಕುರಿತು ಬರೆದಿಟ್ಟ ಸಂಗತಿ (ಮುಂಡಿಯ. ೯-೦೦೬) ; ದ್ರಾವಿಡರೂ ಕೂಡ ಭಾರತದ ಮೂಲನಿವಾಸಿಗಳಲ್ಲ (ಜ್ಞಾಪ್ರ. ೨೬). [ಸಂ. ಮೂಲನಿವಾಸಿನ್]

ಮೂಲಪತ್ರ (ನಾ). (ನಕಲು ಪ್ರತಿಗಳಿಗೆ ಆಧಾರವಾದ) ಮೊದಲನೆಯ ಪ್ರತಿ : ಪಡಿಪತ್ರವಲ್ಲದ ಅಸಲುಪತ್ರ : ನಡ ನಿನ್ನ ಮೂಲಪತ್ರವನೆಸಗೆ ತೋಜು (ಪಂಪಭಾ. ೬-೪೬) : ಪಜೆಯೊಡೇನಾಯ್ತು ಪತ್ರವನೆಮ್ಮ ಸತಿ ಮುಪ್ಪಳಱಿದಿರ್ದು ಮೂಲಪತ್ರಗಳನು ಪೊಜಗಣ ಶಿವಧವನದ ದೈತಿಟ್ಟುರೆಂದಱುಪೆ (ಕ್ರಿಶಂತಿ. ೦೦-೦೯). [ಸಂ.]

ಮೂಲಪಾಠ (ನಾ). ಕವಿಯೇ ರಚನೆಮಾಡಿದ ಕೃತಿಯ ಲಿಖಿತಭಾಗ : ಗ್ರಂಥಿದ ಪ್ರತಿಗಳಲ್ಲಿ ದೊರಕುವ ಅತಿ ಪ್ರಾಚೀನವಾದ ಪಾಠ : ಕೆಲವು ಸಂದರ್ಭಗಳಲ್ಲಿ ಕವಿಯ ಮೂಲಪಾಠವೇನಿರಬಹುದೆಂಬುದನ್ನು ಊಹಿಸುವುದಕ್ಕೆ ಆಗದಂತೆ ಇರುತ್ತದೆ (ಕಪ್ರಸಂ. ೨೦೬). [ಸಂ.]

ಮೂಲಪುರುಷ (ನಾ). (ವಂಶ ಅಥವಾ ಕುಲದ) ಮೊದಲನೆಯ ವ್ಯಕ್ತಿ : ಮೊದಲಿಗ : ಸಂತತಿಯಿಲ್ಲದ ಕುಲಗಳ ಸಾಪತ್ನಿಗಳು ಮೂಲಪುರುಷರ ಅವಸಾನದಲ್ಲಿ ಅನ್ಯರನ್ನು ಸೇರುವುವು (ಜಾಕುಂತ. ೧೩-೩೬) ; ಕಳಲೆಯ ವಂಶಕ್ಕೆ ಇದನೇ ಮೂಲಪುರುಷನಾದನು (ಸಕಕ್ಕೆ. ೪. ೪೨೬). [ಸಂ.]

ಮೂಲಪ್ರಕೃತಿ (ನಾ). [ವೇದಾಂತ] ಜಗತ್ತಿನ ಸೃಷ್ಟಿಕಾರ್ಯಕ್ಕೆ ಮೂಲಕಾರಣವಾದ (ತ್ರಿಗುಣಾತ್ಮಕವಾದ) ಪ್ರಕೃತಿ : ಒಂದಕ್ಕಿಂದು ಹೆಚ್ಚು ಕಡಮೆಯಾಗದಂತೆ ಸಮಾನವಾದ ಸತ್ತ್ವರಜಸ್ತಮಸ್ಸೆಂಬ ಮೂರುಗುಣಗಳುಳ್ಳ ದ್ರವ್ಯವೆ ಮೂಲಪ್ರಕೃತಿಯೆನಿಸಿಕೊಳ್ಳುವುದು (ಕಪ್ರಕು. ೬) : ಪ್ರಕೃತಿಯಲ್ಲಿ ವಿಶ್ರಾಂತಿಯಾದರೆ ಅದೇ ಮೂಲಪ್ರಕೃತಿ (ಹಿಂದಾ. ೩೭). [ಸಂ.]

ಮೂಲಪ್ರತಿ (ನಾ). ೧. ಕವಿಯು ಬರೆದ ಸ್ವಹಸ್ತಾಕ್ಷರ ಪ್ರತಿ. ೨. ನಕಲಿಗೆ ಆಧಾರವಾದ ಪ್ರತಿ : ಅಸಲುಪ್ರತಿ - ಮಾತೃಕೆ : ಕಳಲೆ ರಂಗಸ್ವಾಮಿಅಯ್ಯಂಗಾರ್ಯರ ಮೂಲಪ್ರತಿಯಿಂದ ಈ ಗ್ರಂಥವು ಬರೆಯಲ್ಪಟ್ಟಿದೆ (ಕಪ್ರಕ್ಕೆ. ೪. ಕ್ರಿಪ್ರಾ. ೫೫) ; ಈ ಕಪ್ಪುಗಳೀದಾಗಿ ಮೂಲ ಪ್ರತಿಯ ಪಾತ ನಕಲಿನಲ್ಲಿ ಹಲವು ಕಡೆ ಕಿಟ್ಟುಹೋಗುತ್ತಿದೆ (ಕಪ್ರಸಂ. ೭೬). [ಸಂ.]

ಮೂಲಬಂಧ (ನಾ). [ಯೋಗ] ಹಠಯೋಗದ ಮೂಲಬಂಧ, ಉಡ್ಡಾಣಬಂಧ ಮತ್ತು ಜಾಲಂಧರಬಂಧ ಎಂಬ ಮೂರು ಬಂಧಗಳಲ್ಲಿ ಒಂದು : ಅಖಿಲ ನಿರೋಧನದಿಂದಾಧಾರವಾದವಾನ ದಿನವಹಿಯನು ಹೃದಯದ ಶಶಿಯೆನಿಸುವ ಪ್ರಾಣದೊಡನೆ ಕೂಡಿ ನಡು ನಾಡಿಗನುಗೂಡಲದೆ ಮೂಲಬಂಧವು (ಕೃಪ್ರಾ. ೩-೦೮-೨) ; ಮೂಲಬಂಧ ಉಡ್ಡಾಣಬಂಧ ಜಾಲಂಧರಬಂಧವೆಂಬ ಬಂಧತ್ರಯಂಗಳಂ (ಪಪೀಗೀ. ೦೪೭). [ಸಂ.]

ಮೂಲಬಲ (ನಾ). ಯಾವುದಾದರೂ ತುರ್ತು ಸಂದರ್ಭಗಳಿಗಾಗಿ ಸದಾ ಸಜ್ಜುಗೊಳಿಸಿರುವ ಸೈನ್ಯ : ವಿಾಸಲುಪಡೆ : ಮುಖ್ಯಸೈನ್ಯ : ಮೂಲಬಲವಿಲ್ಲದ ತುಟ್ಟಾಸಂದನಂತೆ ಬಿಲ್ಲೊಳ್ಕೊಟ್ಟನಾಗಿ (ಜಾಂಚಕ್ಕೆ. ೯-೩೦ ಪ) ; ಕಾಳರಕ್ಕಸ ಕವಿದು ಹಳಚಲು ಮೂಲಬಲ ಮುಪ್ಪಾಯ್ತು ಪದ್ಮವ ಘಾಳರೋಚವನಂತೆ ಲಯಿಸಿದನಂದು ರಘುರಾಯ (ಕಾಜಾಣಾ. ೪೭ ಪ್ರಂ) ; ರಾವಣನ ಮೂಲಬಲ ಕಂಡು ಕಪಿಸೇನೆ ಅವಾಗಲೆ ಬೆದಱಿ ಓಡಿದವು (ಕಥಿಂದ. ೯-೦೪೯-೦). [ಸಂ.]

ಮೂಲಬೇರ (ನಾ). ದೇವಸ್ಥಾನದ ಗರ್ಭಗುಡಿಯಲ್ಲಿ ಶಾಸ್ತ್ರೋಕ್ತವಾಗಿ ಪ್ರತಿಷ್ಠೆ ಮಾಡಿರುವ ಮೊದಲ ದೇವವಿಗ್ರಹ ; ಮೂಲಪ್ರತಿಮೆ : ಇದರ ಪುಷ್ಕದಲ್ಲಿ ಪಿಂಡಿಕೆಯನ್ನಿಟ್ಟು ಅದರ ಮೇಲೆ ಪ್ರಭಾವಳಿ,

ಲತಾತೋರಣ, ಕೀರ್ತಿಮುಖಿಗಳ ಮಧ್ಯೆ ಮೂಲಬೇರವನ್ನು ಸ್ಥಾಪಿಸಿರುವರು (ಹೊಸ್ಕೃಶಾ. ೦೯). [ಮೂಲ+ಬೇರ್ಕ. / ತಮಿ. ಮೂಲಪೇರವ್]

ಮೂಲಧಡ್ರಿಕೆ (ನಾ)· ಮೂಲವರ್ಣಾಕ್ಷರ ಮತ್ತು ಅವುಗಳನ್ನು ಒಳಗೊಂಡ ತಾಯಿತ : "ಸಮಹಕ್ಷರಳಮಿವು ಕ್ರಮದಿಂದ ಪಲ್ಲಟಿಸ ಮೂಲಧಡ್ರಿಕೆಯಕ್ಕು" (ಶುಂಗಾ. ೦೦೩–೫). [ಸಂ.]

ಮೂಲಭಾಷೆ (ನಾ). ಯಾವುದೇ ಭಾಷೆಯ ಮೂಲಸ್ವರೂಪವನ್ನು ಹೊಂದಿರುವ ಭಾಷೆ ; ಅತಿ ಪ್ರಾಚೀನ ರೂಪದ ಭಾಷೆ : ಕನ್ನಡ ತೆಲುಗು ತಮಿಳು . . . ಬಡಗ ಮೊದಲಾದ ಭಾಷೆಗಳಿಗೆ ಪರಸ್ಪರ ಇರುವ ಹೋಲಿಕೆಯನ್ನು ನೋಡಿದರೆ ಈ ಭಾಷೆಗಳೆಲ್ಲವೂ ಒಂದೇ ಮೂಲಭಾಷೆಯಿಂದ ಹುಟ್ಟಿರಬೇಕೆಂದು ಗೊತ್ತಾಗುತ್ತದೆ (ಕೃವಿ. ೩೦೩) : ಇದೇ ಕಾಲಕ್ಕೆ ಆಧುನಿಕಕಾಲದಲ್ಲಿ ಇಂಗ್ಲೀಷ್ . . . ಗುಜರಾತಿ ಭಾಷೆಗಳು ಸೇರುತ್ತವೆ. ಇವುಗಳನ್ನು ಮೂಲಭಾಷೆಗಳೆಂದು ಕರೆಯುವುದು (ಭಾಚರ. ೨೫೬). [ಸಂ. ಮೂಲಭಾಷಾ]

ಮೂಲಭೂತ (ಗು). ಪ್ರಧಾನವಾದ ; ಮೊತ್ತಮೊದಲಿನ : ಜನತೆಯ ಮೂಲಭೂತ ಹಕ್ಕುಗಳಿಗಾಗಿ . . . ಹೋರಾಡಿದ ಆ ನಾಯಕರಿಗೆ ತಾವು ಎಷ್ಟು ಋಣಿಗಳೋ. ಮುಂದಿನ ಪೀಳಿಗೆಯವರು ತಿಳಿದುಕೊಳ್ಳುವುದು ಒಳ್ಳೆಯದು (ಹೊಗಚ. ೩೫೨೨). [ಸಂ.]

ಮೂಲಮಂತ್ರ (ನಾ)· ೧. 'ಓಂ' ಎಂಬ ಮಂತ್ರಾಕ್ಷರ ; ಪ್ರಣವ. ೨. ಬೇರೆ ಬೇರೆ ದರ್ಶನಗಳ ಬೆಳವಣಿಗೆಗೆ ಆಧಾರವಾದ ವೇದಮಂತ್ರ. ೩. ಮುಖ್ಯವಾದ ಮಂತ್ರ ; ಪ್ರಧಾನವಾದ ಮಂತ್ರ : ಹರನ ದಾಸಾಭಯಕರಂಗಳ ಪರಿಯೊಳತಿಧಾಸಾಭಯಪ್ರದಭಿತಮಾಗಿಯು ಮೂಲ ಮಂತ್ರಂಗಳ ವಿಧಾತಿಯಲಿ (ಪಪಪ್ರ. ೪೯–೨೩); ಪರಮೂಲಮಂತ್ರವನು ಗುರುವು ಬೋಧಿಸಲಾಗ ಹರುಷದಿಂ ಶಿಷ್ಯಂಗೆ ಜ್ಞಾನ ಪಲ್ಲವಿಸಲ್ಕೆ (ಪ್ರಿಚಾ. ೬.೪). [ಸಂ.]

ಮೂಲಮಾನ (ನಾ)· ಮುಖ್ಯವಾದ ಅಳತೆಗೋಲು : ಆದರ್ಶಗಳನ್ನು, ಅವುಗಳ ಮಟ್ಟವನ್ನು ಸೂಚಿಸಬಲ್ಲ ಒಂದು ಮೂಲಮಾನ ಬೇಕು (ಕ್ಷಚಿ. ೩೨೩); ಇದನ್ನು ಮೂಲಮಾನವನ್ನಾಗಿ ಮಾಡಿಕೊಂಡು ಕವಿಗಳನ್ನು, ಕಾವ್ಯಗಳನ್ನು ಪರೀಕ್ಷಿಸಲು ಹೊರಟರುವುದರಿಂದ ಇದು ಎಷ್ಟರ ಮಟ್ಟಿಗೆ ಆಧುನಿಕ ವಿಮರ್ಶೆಯ ವಿಧಾನವಾಗಲು ಸಾಧ್ಯ (ಸಾಂಪಸ. ೨. ೩೫೦೦ ೫೩೩). [ಸಂ.]

ಮೂಲರಸ (ನಾ). [ಕಾವ್ಯವಿಮಾ] ನವರಸಗಳಲ್ಲಿ ಮುಖ್ಯವಾದ ರಸ : ಭರತನ ನಾಟ್ಯಶಾಸ್ತ್ರದಲ್ಲಿ (VI, ೪೪–೭೦) ಶೃಂಗಾರ, ರೌದ್ರವೀರ, ಬೀಭತ್ಸ ಇವು ಸಾಲ್ಕೂ ಮೂಲರಸಗಳೆಂದೂ . . . ಹೇಳಿದೆ (ಕೃವಿ. ೩೦೦). [ಸಂ.]

ಮೂಲರೋಗ (ನಾ). ಗುದದ್ವಾರದ ರೋಗ ; ಮೊಳೆರೋಗ : ಆ ಕಷಾಯ . . . ಕೊಂಬುದು . . . ಅತಿಸಾರ, ಮೂಲರೋಗ, ಕಾಮಾಲೆ ತಿಮಿರ ಹರ (ಪಕ್ಷ. ೦೯೬)'; . ಕೊಡಸಿನೆಲೆಯ ಗುಣ: — ಇದರಲ್ಲಿ ಊಟ ಮಾಡುವುದರಿಂದ . . . ಮೂಲರೋಗ, ಭಗಂದರರೋಗ ಇವೇ ಮುಖ್ಯವಾದವುಗಳನ್ನು ಹೋಗಲಾಡಿಸಿ . . . ಸಮಸ್ತ ತಿಮಿರಗಳನ್ನೂ ನಾಶಮಾಡುವುದು (ಸಪ್ರ. ೨೮). [ಸಂ.]

ಮೂಲವರ್ಣ (ನಾ)· ಇತರ ಬಣ್ಣಗಳಿಗೆ ಮೂಲಾಧಾರವಾದ ಬಣ್ಣ ; ಮುಖ್ಯ ಬಣ್ಣ : ಮುದ್ರಣ ಬಣ್ಣಗಳಲ್ಲಿ ಹಳದಿ, ಕೆಂಪು ಮತ್ತು ನೀಲಿ ಬಣ್ಣಗಳು ಮೂಲವರ್ಣ (primary)ಗಳು. ಈ ಮೂರನ್ನು ಸೇರಿಸಿದರೆ ಕಪ್ಪು (ಅಥವಾ ಕಂದು) ಬಣ್ಣವಾಗುತ್ತದೆ (ಮುತ್ರಕ. ೬೭). [ಸಂ.]

ಮೂಲವಸ್ತು (ನಾ). ೧. ಆದಿದ್ರವ್ಯರೂಪವಾದ ಪರಮಾತ್ಮತತ್ತ್ವ ; ಮೂಲತತ್ತ್ವ: ಸ್ವಯಂಭುವಳ್ಕಮು ಶೂನ್ಯವಾಯಿತ್ತು ಮೂಲವಸ್ತುವೆಂದು ವೇಱುಂಟೇ ತಾನಲ್ಲದೆ (ಸಿಧ್ಯ. ೦೪೯–೫೬). ೨. =ಮೂಲಧಾತು ೨: ಪ್ರತಿಯೊಂದು ಮೂಲವಸ್ತು (Element)ವೂ ಅತಿಶಾಖವೇರಿರುವಾಗ ತನ್ನ ವಿಶಿಷ್ಟವಾದ ಕಿರಣಗಳನ್ನು ಬೀರುತ್ತದೆ (ಕ್ಷಕಿರ. ೦೪೨ ೩೩೮); ಬೇರೆ ಬೇರೆ ಮೂಲವಸ್ತು(Elements)ಗಳ ರೋಹಿತಗಳ ಪಟ್ಟಿಗಳನ್ನು ಹೋಲಿಸಿ ನೋಡಿದರೆ ಒಂದೊಂದೂ ಬೇರೆಯಾಗಿರುವುದು ಕಂಡುಬರುವುದು (ಕ್ಷಕಿ. ೨೦೬). [ಸಂ.]

ಮೂಲವಿಗ್ರಹ (ನಾ)· =ಮೂಲಬೇರ : "ಅಚಲ" ಪ್ರತಿಮೆಗಳಿಗೆ "ಮೂಲ ವಿಗ್ರಹ"ವೆಂದೂ ಹೆಸರು (ಜಾಕಲ. ೦೩೮). [ಸಂ.]

ಮೂಲವೀಸ ' ಮೂಲವೀಸ ' ನೋ.

ಮೂಲವ್ಯಾಧಿ (ನಾ). = ಮೂಲರೋಗ : "ಅರ್ಶಃ, ಗುದಕೀಲಿಕಃ— ಈ ೨ ಮೂಲವ್ಯಾಧಿ" (ಹಶಾಪು. ೪೪–೪೫೦) : ಪೆಡತಲೆ ಮಿಗೆ ನೋಗುಂ . . . ಮೂಲವ್ಯಾಧಿಯುಮಡಸುಗುಮೀಂಕಿನಿತೆ ಜೂದಿನಿಂದಪ್ಪ ಫಲಂ (ಸುಶ್ರ. ೬-೩೦)ಕ್ಕೆ ಎತ್ತುನಾಲಿಗೆ :— ಈ ಸೊಪ್ಪಂ ಅಕ್ಕಿಬುಲ್ಲಿ ಒಟ್ಟುಕುಟ್ಟಿ ಸಪ್ಪರೊಟ್ಟಿ ತಟ್ಟಿ ತುಪ್ಪದಿಂದ ಮೆಲ್ಲಲು ಮೂಲವ್ಯಾಧಿ ಪೋಗ್ಗುಂ (ಪಪ್ರ. ೬)· [ಸಂ.]

ಮೂಲಶಬ್ದ (ನಾ)· [ವ್ಯಾಕ] ಪ್ರತ್ಯಯ ಮೊದಲಾದುವು ಇನ್ನೂ ಸೇರದಿರುವ ಶಬ್ದ : ದೇಶ್ಯಶಬ್ದಗಳನ್ನು ಮೂಲಶಬ್ದಗಳು, ನಿಷ್ಪನ್ನ (Derivative) ಶಬ್ದಗಳು, ಸಮಾಸಶಬ್ದಗಳು ಎಂದು ಮೂರು ವಂಗಡಗಳಾಗಿ ವಿಭಾಗಿಸಬಹುದು(ಕೃವಿ. ೦೪). [ಸಂ.]

ಮೂಲಶಿಕ್ಷಣ (ನಾ)· ಮುಂದಿನ ವಿದ್ಯಾಭ್ಯಾಸಕ್ಕೆ ಅತ್ಯಗತ್ಯವಾಗಿ ಬೇಕಾಗುವ ಆರಂಭದ ಶಿಕ್ಷಣ ; ಮೂಲಾಧಾರವಾದ ವಿದ್ಯಾಭ್ಯಾಸ: ಮಕ್ಕಳು ಜನ್ಮತಃ ಪಡೆದುಕೊಂಡು ಬಂದಿರುವ ವಿಧಾಯಕಶಕ್ತಿಗಳು ಅವರ್ಗೆ ಕಥೆಯನ್ನು ಹೇಳುವಾಗ ಪ್ರಕಟವಾಗುವುವು. ಮೂಲಶಿಕ್ಷಣದಲ್ಲಿ ಇದಕ್ಕೆ ಅತ್ಯಪ್ರಕಾಶವೆಂದು ಹೇಳುವುದುಂಟು (ಗಣ. ೩೬) ; ಪಾಕಶಾಸ್ತ್ರವನ್ನು ಮೂಲಶಿಕ್ಷಣದಲ್ಲಿ ಸೇರಿಸಬಹುದು (ಪಿಪಾಶಿ. ೬೫)· ₱ ಇದು ಇಂಗ್ಲಿಷಿನ 'Basic Education' ಎಂಬುದರ ಅನುವಾದ. [ಸಂ.]

ಮೂಲಸಂಘ (ನಾ). [ಜೈನ] ದಿಗಂಬರಪಂಥದ ಪ್ರಾಚೀನವಾದ ಒಂದು ಸಂಘದ ಹೆಸರು : ಸ್ವಸ್ತಿಶ್ರೀ ಮೂಲಸಂಘದೇಶಿಯಗಣ ಪೊಸ್ತಕಗಚ್ಛದ ಕೊಣ್ಡಕುನ್ದಾನ್ವಯ ಕೋಲ್ಹಾಪುರದ . . . ಪ್ರತಿಬದ್ಧದ . ಶ್ರೀದೂಫನಂದಿ ಸಿದ್ಧಾನ್ತದೇವರ ಶಿಷ್ಯರು (ಎಕ. II (ಪಿ). ೩೫೬–೦ ; ೧೩೫೫ ೫೫)· [ಸಂ.]

ಮೂಲಸ್ತಂಭ (ನಾ)· ಪ್ರಮುಖವಾದ ಅವಲಂಬನೆ ; ಆಧಾರಸ್ತಂಭ : ಬಲದೇವ ವಾಸುದೇವರ್ . . . ಶೌರ್ಯಮೂಲಸ್ತಂಭದಂತೆಯುಂ ಸಾಹಸ ದ್ರವಿಣಸಾಧನದಂತೆಯುಂ . . . ಸುಖಮಿರ್ಪನ್ನೆಗಂ (ಜಾಅತ್ತ. ೦-೪೦ ೫)· [ಸಂ.]

ಮೂಲಸ್ಥ (ನಾ)· ಪರಂಪರೆಯಿಂದ ಬಂದ ಯಾವುದಾದರೂ ಅಧಿಕಾರ ಸ್ಥಾನದಲ್ಲಿರುವ ವ್ಯಕ್ತಿ : ಶ್ರೀಮತು ಮಣಿಕ್ಯವೊಳಲ ಮೂಲಸ್ಥ ಚನ್ದಕಕೋಜನೆ ಸುಪುತ್ರಂ ಪರವಾದಿಮಲ್ಲೋಜಂ (ಎಕ. VI (ಪಿ), ಕೃಕ್ಷಾ. ೦೦೩–೦೨ ; 1165 ?). [ಸಂ.]

ಮೂಲಸ್ಥಾನ (ನಾ). ೧. ಹುಟ್ಟುವ ನೆಲೆ ; ಉತ್ಪತ್ತಿಸ್ಥಾನ ; ಉಗಮ ಸ್ಥಳ : ವಿಭವದ ಮೂಲಸ್ಥಾನಮೆನಿಸಲಿದು ಕಾಮದೇವನಸ್ಥಾನಮೆನಿಸಲ್ . . . ಸಮೆದತ್ತು ವಿವಾಹ ಗೇಹಂ (ಆಂಪ್ರ. ೪-೪೦ ೫೫೪). ೨. ದೇವಾಲಯದಲ್ಲಿ ಮೂಲವಿಗ್ರಹವನ್ನು ಇಟ್ಟಿರುವ ಒಳಭಾಗ ; ಗರ್ಭಗುಡಿ ; ಗರ್ಭಗೃಹ : ತಾವು ಮಾಡಿಸಿದ ಶಿವಾಲಯದ ಮೂಲಸ್ಥಾನದ ಶ್ರೀಸೋಮೇಶ್ವರದೇವರ್ಗ್ಗೆ ತಮ್ಮ ಪ್ರಭುತ್ವದ ದೋಣಿಯಿಂ . . . ತಮ್ಮಂ [ಶ]ಕ್ಕ ಬಂದ ಮಾತ್ಸರ್ಯೋತ್ಕೀರ್ಣಜೊಳಗೊ (ಕೃಕಾ. XX, ೬೯–೭೬; 1167); ದೇವತಾಮೂರ್ತಿಗಳು ಮೂಲಸ್ಥಾನದಲ್ಲಿ (ಗರ್ಭಗೃಹದಲ್ಲಿ) ಶಿಲಾಮೂರ್ತಿ

ಗಳಾಗಿ ಉಪಾಸನೆಯ ಪ್ರಯೋಗ ವಿಧಾನಗಳಿಂದ ದೇವತಾ ಶಕ್ತಿಸಂವಾದನೆ ಹಾಗೂ ಸಂರಕ್ಷಣೆಯ ಕೇಂದ್ರವಾಗಿದೆ (ಶಾಕ್ತ. ೦೨). ೩. ಮುಖ್ಯವಾದ ಸ್ಥಳ ; ಕೇಂದ್ರ ; ಪ್ರಮುಖಕ್ಷೇತ್ರ : ಕೃತಯುಗದ ಕೇ[ದಾ]ರವೆಂಬ ಮೂಲಸ್ಥಾನ ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ (ಜಾಪ. ೬೧೨). ೪. ಹುಟ್ಟೂರು : ಜನ್ಮಸ್ಥಳ : ಸ್ಥಾನಿಕರು ಶೃಂಗೇರಿತಾಪದ ಶಿಷ್ಯರೆಂದೂ ಸುಬ್ರಹ್ಮಣ್ಯವು ಇವರ ಮೂಲಸ್ಥಾನವೆಂದೂ ಖಚಿತವಾಗುತ್ತದೆ (ತುಳುಜಾ. ೦೦೬). ೫. ತಳಹದಿ ; ಬುನಾದಿ ; ಆಧಾರ. ೬. ಪರತತ್ವ ; ಪರಬ್ರಹ್ಮ. ೭. ಗಾಳಿ ; ವಾಯು. [ಸಂ.]

ಮೂಲಸ್ಥಾಪಕ (ನಾ). ಸಂಘ, ಸಂಸ್ಥೆ, ಮತ, ಸಿದ್ಧಾಂತ ಮೊದಲಾದುವುಗಳನ್ನು ಸ್ಥಾಪನೆಮಾಡಿದವನು : ಆದ್ಯಪ್ರವರ್ತಕ : ಈ ಅನಾಥಾಶ್ರಮದ ಮೂಲಸ್ಥಾಪಕರು ಬಹಳ ಉದಾರಿಗಳು (ಕ.ಚ). [ಸಂ.]

ಮೂಲಜ್ಞಾನ (ನಾ). [ವೇದಾಂತ] ಪ್ರಪಂಚದ ಪೂರ್ವಸ್ಥಿತಿ : ಪ್ರಕೃತಿ : ಪ್ರಕೃತಿಯಿಂದರೆ ಮೂಲಾಜ್ಞಾನ, ಮಾಯೆ, ಅವಿದ್ಯೆ ಮೊದಲಾದ ಶಬ್ದಗಳಿಂದ ಹೇಳಲ್ಪಡುವ ಪ್ರಪಂಚದ ಪೂರ್ವಸ್ಥಿತಿ (ಸಂಪಜ್ಞಾ. ೦೨೪). [ಸಂ.]

ಮೂಲಾಣು (ನಾ). ಗುಪ್ತಪುಷ್ಪೀಯ ಸಸ್ಯಗಳಲ್ಲಿ ಪ್ರತ್ಯೇಕ ಹೊಂದಿ, ಸ್ವತಂತ್ರವಾಗಿ ಬೆಳೆಯಬಲ್ಲ ಒಂದು ಕಣ : ಬೀಜಕಣ : ನಿರ್ಲಿಂಗ ರೀತಿಯ ವಂಶಾಭಿವೃದ್ಧಿಯಲ್ಲಿ ಸ್ಪೊರಾ ಪಡದ ಜೀವಕಣಗಳು ಉತ್ಪತ್ತಿಯಾಗುತ್ತವೆ. ಇವುಗಳನ್ನು ಮೂಲಾಣು ಅಥವಾ ಬೀಜಕಣ (spores) ಎಂದು ಕರೆಯುತ್ತಾರೆ (ಸ್ಯ.ಶ. ೮೨) ; ಮೂಲಾಣು (spores)ಗಳು ಚದುರಿ ಮೊಳೆತು ಕಾಲಿಂಗುಲಕ್ಕೆ ಮಿಗಿದ ಹುಸುರುಬಣ್ಣದ ಹೃದಯಾಕಾರದ ಪೊರಗಳಾಗುತ್ತವೆ (ಪಸುಚಿ. ೦೧೦). [ಸಂ.]

ಮೂಲಾಧಾರ (ನಾ). ೧. ಮುಖ್ಯವಾದ ಅವಲಂಬನೆ. — ಆಸರೆ. ೨. ಪ್ರಮುಖವಾದ ಅಸ್ತಿವಾರ. ೩. ಹೊಕ್ಕುಳು ; ನಾಭಿ. ೪. [ಯೋಗ] ದೇಹದ ಸಕಲನಾಡಿಗಳಿಗೂ ಮೂಲಸ್ಥಾನವೆಂದು ಭಾವಿಸಲಾದ ಗುಹ್ಯಸ್ಥಾನ ಮತ್ತು ಜನನೇಂದ್ರಿಯಗಳ ಮಧ್ಯದ ಎರಡು ಅಂಗುಲಗಳ ಪ್ರದೇಶ. — ನಾಡೀಚಕ್ರ ; ಷಟ್ಚಕ್ರಗಳಲ್ಲಿ ಒಂದು : ಮೂಲಾಧಾರ [ಪಾಣಂ. ಮತ್ಸ್ಯಮೂಧಾರ] ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯವೆಂಬ ಷಟ್ಚಕ್ರಂಗಳಂ (ಪಡೀಕ. ೦೩೨): ಮೂಲಾಧಾರದ ಚಕ್ರದಲ್ಲಿ ಲಿಂಗರೂಪದಿಂದಿರುವ ಪರಬ್ರಹ್ಮನನ್ನು ಶಕ್ತಿಯು ಸರ್ಪರೂಪದಿಂದ ಕುಂಡಲಿನಿಯೆಂಬ ಹೆಸರಿನಲ್ಲಿ ಸುತ್ತಿ ಮಲಗಿರುವಳೆಂದೂ . . . ಶಕ್ತಿಪಂಥ ಪ್ರತಿಪಾದಿಸುತ್ತದೆ (ಪಡೀಕ. ೪೦೬). [ಸಂ.]

ಮೂಲಾನಕ್ಷತ್ರ (ನಾ). = ಮೂಲನಕ್ಷತ್ರ : ಮೂಲ . . . ಮೂಲಾನಕ್ಷತ್ರಕೆ ಪೆಸರು (ಜಾಕ್ಷ. ೩೩-೦) ; ಸಾವಿತ್ರಮ್ಮನವರು ಮೂಲಾನಕ್ಷತ್ರದ ಹುಡುಗಿ ಆಗುವುದಿಲ್ಲವೆಂದೇ ಸಾಧಿಸಿಬಿಟ್ಟರು (ಪಪಚಾಸ. ೦೬).

[ಪ್ರ ಇದು ' ಮೂಲನಕ್ಷತ್ರ ' ಎಂಬ ಶಬ್ದದ ತಪ್ಪುಬಳಕೆ]

ಮೂಲಾರ್ಥ (ನಾ). ಶಬ್ದದ ಮೊದಲನೆಯ ಅರ್ಥ : ಅನೇಕ ವೇಳೆ ಶಬ್ದಗಳಿಗೆ ಇರುವ ಮೂಲಾರ್ಥವೇ ಇಲ್ಲದೆ ಹೋಗಿ ಹೀನಾರ್ಥ ಪ್ರಾಪ್ತವಾಗಬಹುದು (ಕಾಪ). [ಸಂ.]

ಮೂಲಿ₁ (ಗು). ೧. ಬೇರಿನಿಂದ ಬೆಳೆಯುವ. ೨. ಕಾಯಂ ಹಕ್ಕಿರುವ: ಭೂಮಿ ಮನೆಗಳನು ಸಸಿ ಬಳಿ ಬಾಳೆ ವೆಡಿಸಿ ಗೈಸಿ ರೂಪ ಮಾಡಿಸಿ ಮೂಲಿ ಮಕ್ಕಳಗಳ ಕ್ಷಿಯ ಕಾಲಕಾಲಂಪ್ರತಿಯಲು ತರುಕೊಂಡು ಬಂದಿ (ಪ್ರ.ಅ. ೦೯೫೯. ೮೩-೫೦ : ೧೮೮೭). (ನಾ). ೩. ಕಾಯಂ ಹಕ್ಕಿರುವ ಸಾಗುವಳಿ ಭೂಮಿ. – ಜಮೀನು : (ಕರ್ನಾ. ೦೩೬). ೪. (?) : ಆರು[ಪೈ]ಬ್ಬರು ಮೊಲಿ ಮಾಡಿದಡೆ (ಶಿವಾ. ೦೯೫೯. ಪುಂಗಳಪು. ೪೬-೦೯ ; ೧೭೯೭).

[ಸಂ. ಮೂಲಿನ್. / ತುಳು. ಮೂಲಿ]

ಮೂಲಿ₂ (ನಾ). ಒಂದು ಬಗೆಯ ಸಸ್ಯ : " ಮೂಲಿಯನೆ ಹಣ್ಣ " (ತುಂಪಾ. ೪೩-೪೬). ' ಅಕ್ಕೆ ' ಹೋ. [?]

ಮೂಲಿಕ (ಗು). ೧. ಮೂಲದ ; ಮೊತ್ತಮೊದಲಿನ. ೨. ಮುಖ್ಯವಾದ ; ಪ್ರಮುಖವಾದ. ೩. ಬೇರು, ಗೆಡ್ಡೆ ಇತ್ಯಾದಿಗಳನ್ನು ಆಹಾರವನ್ನಾಗಿ ಸೇವಿಸುವ. (ನಾ). ೧. ಋಷಿ ; ಮುನಿ. [ಸಂ.]

ಮೂಲಿಕಾಸಿದ್ಧಿ (ನಾ). ಅರುವತ್ತುನಾಲ್ಕು ಕುಶಲವಿದ್ಯೆಗಳಲ್ಲಿ ಒಂದು: ವನಸ್ಪತಿಯ ಉಪಯೋಗದ ಬಗೆಗೆ ಇರುವ ನಿಪುಣತೆ : ಅಕ್ಷರ ಲಕ್ಷ . . . ಮೂಲಿಕಾಸಿದ್ಧಿ . . . ಮಂತ್ರತಂತ್ರಸಿದ್ಧಿ ಇವೆಲ್ಲವ ಕಲಿತಡೇನೋ ಔಷಧವಿದ್ಯಾಕಳಾವಿದನೆನಿಸಿಕೊಂಬನಲ್ಲದೆ ಲಿಂಗವಂತನೆನಿಸಿಕೊಂಬುದಿಲ್ಲ (ಪಾಚಾಪ. ೪೭-೬೦). [ಸಂ.].

ಮೂಲಿಕೆ (ನಾ). ೧. ಬೇರು ; ಮೂಲ. ೨. ಔಷಧವಾಗಿ ಉಪಯೋಗಿಸುವ ಬೇರು ; ವನಸ್ಪತಿ : . . . ನಿಮಿತ್ತ ಲಗ್ನ . . . ಮೂಲಿಕೆಯಿಂದ ಕಡಿಯ ಇನ್ನ ಇರವು (ಪಚಾಗಾಪ. ೫೬೯-೭೬) ; ಕೆಲವು ಮೂಲಿಕೆಗಳ ರಸವನ್ನು ಹಿಂಡಿ. ಗಾಯಕ್ಕೆರೆದು ಬಟ್ಟೆಯನ್ನು ಸ್ತುತ್ತಿ (ಪಾಪ್ರ. ೦೬). ೩. ಸತ್ವರವನ್ನು ಬದುಕಿಸುವುದೆಂದು ಭಾವಿಸಲಾದ ಒಂದು ಬಗೆಯ ವನಸ್ಪತಿ : ಪಾತಜನ ಮೂಲಿಕೆಗೆ ಕಪಿಬಲ ಚೇತರಿಸಿದುದು (ಕಾಚಾ. ೭೬-೨೦). ೪. ರೋಹದಿಂದ ಚಿನ್ನವನ್ನು ತಯಾರಿಸಲು ಉಪಯೋಗಿಸುವರೆಂದು ಭಾವಿಸಲಾದ ಒಂದು ಬಗೆಯ ವನಸ್ಪತಿ : ಕಸುವಂ ಮೂಲಿಕೆಯಂ ಪುರ್ದಿಸೆ ಸಗೆಯೊಳ್ ಹೇಮಮಪ್ಪ ತೆಱದಿಂದಂ ಸಂಕಿಸದ ವರಧರ್ಮದೊಳ್ , ಕೂರ್ತಸಗುವ ನರನುಂ ವಿಶೇಷಪುಣ್ಯಾಗಿರ್ಪಂ (ಪಪಾಕ್ಷ. ೪-೪೯). [ಸಂ. ಮೂಲಿಕಾ]

ಮೂಲಿಗ (ನಾ). ೧. ಔಷಧೀಸಸ್ಯಗಳ ಬೇರುಗಳಲ್ಲಿ ವ್ಯವಹರಿಸುವವನು ; ಮೂಲಿಕೆಗಳನ್ನು ಮಾರುವವನು ; ಗಂದಿಗ : (೪). ೨. ಮೂಲಕಾರಣನಾದ ವ್ಯಕ್ತಿ ; ಪ್ರವರ್ತಕ ; ಮೊದಲಿಗ : ಜೂದೆನೆವಮಾಗಿರೆ ಮೂಲಿಗನಾದೆನಾವೆ ಪೂಣ್ದಿಡುಮಗೆನ್ನೊಳಾವ ಕಿಸುರೆನ್ನೊಡ ಪೋಪುದೊಳ್ಳಿತು (ಪಂಚಾ. ೦೬-೦೮) ; ಮೂವತ್ತೋದುಸ್ಸಲದ ಮೂಲಿಗ ತಾನಯ್ಯಾ (ಪಪ್ರಚ. ೪. ೬೪೬-೦೯೦೦) ; ಮೂಲದಲ್ಲಿ — ಮೂಲಿಗಂ (ಮೊದಲಿಗ) (ಪಪ್ರಚ. ೩. ೦೬೦ ಪೃ.ಕೆ.)· ೩. ಪರಂಪರೆಯಾಗಿ (ಯಾವುದಾದರೂ) ಅಧಿಕಾರವನ್ನು ಹೊಂದಿರುವ ವ್ಯಕ್ತಿ : ದೊರವಡಿಯಪ್ಪಕ್ಕಜಿ ಪ್ರಭುಗಾವುಂಡಗಳುಂ ಮೂಲಿಗರುವೆಂಟುಪಟ್ಟುಗಳು ಸುತ . . . ಧೀವರಾಶಿವಂಡಿತರ ಪಾದಪ್ರಕ್ಷಾಳನಂಗೆಯ್ದು ಧಾರಾಪೂರ್ವಕಂ ಮಾಡಿ ಕೊಟ್ಟರು (ಶಾಸಾ. IX-೫. ೪೩೬-೪೯ ; ೧೧೬); ಅದ್ದಿಯ ಮೂಲಿಗಮುಖ್ಯವಹಜಾರ್ಗಾವುಂಡುಗಳಗ ಪಾದಪೂಜ[ಪೂ]ಯಂ ಕೊಟ್ಟು . . . ಪೂಜುಗೊಂಡು ಬಿಟ್ಟ ಎರೆಯ ಮತ್ತರು ನಾಲ್ಕು (ಕಾಚಾ. ೫೫-೬೪; ೧೧೫). ೪. ಬಂಡವಾಳಗಾರ ; ವರ್ತಕ. [ಮೂಲ + —ಇಗ]

ಮೂಲಿಗಗೆಯಿ (ನಾ). ಪರಂಪರೆಯಾಗಿ (ಯಾವುದಾದರೂ) ಅಧಿಕಾರವನ್ನು ಹೊಂದಿರುವ ವ್ಯಕ್ತಿಗೆ ಕೊಟ್ಟ ಜಮೀನು. – ಉಂಬಳಿ : ಮಾನಸಬ್ರಾಹ್ಮಣರ್ಗೆ ಮೂಲಿಗಗೆಯಾಯಾಗಿ ಕೊಟ್ಟ ಸೂಱುಮತ್ತರ್ಕ್ಕಮ್ಮುವಸನ್ನೂಱುಗದ್ಯಾಣವುನ್ನಂ ಕೊಟ್ಟು ಕೊಂಡ ಮತ್ತನ್ನೂಱುಂ (ಶಾಸಾ. XX. ೮೩-೫೯; ೨). [ಮೂಲಿಗ + ಕೆಯಿ (< ಕೆಯ್₄)]

ಮೂಲಿಗಮಾನ್ಯ (ನಾ). = ಮೂಲಿಗಗೆಯಿ : ×× ಬಮ್ಮಿಮಯ್ಯ ತಮ್ಮ ಮೂಲಿಗಮಾನ್ಯದ ಮೂಡಣ ಕೆಯಲು ಬಟ್ಟ ಕೆಯಿ ಮತ್ತರು ೬ (ಶಾಸಾ. IX-೫. ೦೦೬-೭೫; ೧೧೭). [ಮೂಲಿಗ + ಮಾನ್ಯ]

ಮೂಲಿಗವನೆ (ನಾ). ಪರಂಪರೆಯಾಗಿ (ಯಾವುದಾದರೂ) ಅಧಿಕಾರವನ್ನು ಹೊಂದಿರುವ ವ್ಯಕ್ತಿಯ ನಿವಾಸ : ಕರಡಿಯ ಮಲಯನ ಮಂಕದಿಂ ಬಡಗ ಕೈ ೩೪ ಪಡುವ ಮೂಲಿಗವನೆಯ ಹೆ[ದ್ದಾ]ರಿ ಮೂಡಬಡಗ ಮುಖ ಬಂದ ಕೈ ೪೮ (ಕೌಶಾ. ೩೧–೫. ೬೯–೭೩; ೧೮೩೨).

[ಮೂಲಿಗ + ಮನೆ]

ಮೂಲಿಗೆ (ನಾ). ಔಷಧದಂತೆ ಉಪಯೋಗಿಸುವ ಬೇರು ; ವನಸ್ಪತಿ: ಮೂಲಿಕೆ : 'ಮೂಲಿಗೆಮದ್ದು' ಪರಾ.

[< ಸಂ. ಮೂಲಿಕಾ./ತುಳು. ಮೂಲಿಗೆ]

ಮೂಲಿಗೆಮದ್ದು 'ಮೂಲಿಗೆಮರ್ದು' ನೋ.

ಮೂಲಿಗೆಮರ್ದು ಮೂಲಿಗೆಮದ್ದು (ನಾ). = ಮೂಲಿಗೆ : ಮಡದಿ ದಾನ್ನೀಱಿಯೊರ್ವಳ್ ಚಂಚಲದೃಷ್ಟಿಯಿನತ್ಯಪಿತ್ತಂ ನೋರ್ಪ್ಪಳ ಮೂಲಿಗೆಮರ್ದಂ ಕೊಂಡುಯ್ದೊಡಕ್ಕುಂ (ಕಾವಚಿ. ೦-೩). **ಮೂಲಿಗೆ ಮದ್ದು** : ಅಗಸ್ತ್ಯೋಪದಿಷ್ಟವಾದ ಮೂಲಿಗೆಮದ್ದಿನಂತಿರುವ ಅಶ್ವಮೇಧಯಾಗವನ್ನು ಜರುಗಿಸಲಿಕ್ಕಾಗಿ (ಕಸ್ಕಾ. ೧೪).

[ಮೂಲಿಗೆ + ಮರ್ದು]

ಮೂಲಿತಿ ? (ನಾ). ಒಂದು ಸಂಖ್ಯೆ ; ಏದು (?) : ಪೇಳುವೊಡೆ ಕೇದಿ ಆರಯ ಮುದ್ದಣಂ ಪದುಂ ಮೂಲಿತಿ ಪರಯ ಮೂರಯ ಕಾಳ ತಿಮ್ಮ ಸಗಾಳ ವೇಳೊಂದೞಂ ಹತ್ತು ದಶ ಕಂಸ ಕಾರತಯ ನಗರೆಯಾಗಿ ತೇಯುಂ (ತೀಗಣ. ೦೮೨–೪). [?]

ಮೂಲಿಯಿಡು 'ಮೂರಿಯಿಡು' ನೋ.

ಮೂಲಿವರ್ಗ (ನಾ). ೧. ಜಮಿನಿನ ಒಡೆತನದ ಹಕ್ಕು ; ಒಡುವಳಿ : ಕನ್ನಡ ಜಿಲ್ಲೆಯ ಹೆಚ್ಚಿನ ದೇವಾಲಯಗಳು ಸ್ಥಾನಿಕರ ಮೂಲಿವರ್ಗದಲ್ಲೇ ಇದ್ದುದು ಕಂಡುಬರುತ್ತದೆ (ತುಳುಪ್ರ. ೦೮೬). ೨. (ವರ್ಗದಾರರು ಕಂದಾಯ ಸಲ್ಲಿಸುವ) ಭೂಮಾಲೀಕ ; ಜಮಿನುದಾರ : (ಕಂಗಣ್ಣ. ೧೫೫). [ಮೂಲಿ + ವರ್ಗ./ತುಳು. ಮೂಲಿವರ್ಗ]

ಮೂಲುಗು 'ಮುಲುಕು' ನೋ.

ಮೂಲೆ[1] (ನಾ). ೧. ಎರಡು ದಿಕ್ಕುಗಳ ನಡುವಿನ ದಿಕ್ಕು ; ವಿದಿಕ್ಕು : ಬೊಬ್ಬೆಯುಲಿ ದಿಕ್ಕಿನ ಮೂಲೆ ಬಿರಿದುದು ಜಱದವದ್ರಿಗಳು (ಕುಸ್ಕಾ. ೪-೫೫). ೨. ಕೊನೆ : ಅಂಚು : ಸದುಹೊಳೆಯಾ ಹಱಿಗೋಲ ಮೂಲೆಯಂ ಕಡಿದಿರಾದರೆ ನಮ್ಮ ಪುಣ್ಯದ ಬೆಡಗಡಿಪು ಕಾಲವು ಶಿವಾ (ಕುಸ್ಕಾ. ೮೬. ೯–೩): ಭೂಮಿಗೆ ನಾಲ್ಕು ಮೂಲೆಗೆ ಕಲ್ಲ ನಿಟ್ಟಿದ್ದು (ಎಳ. VII. ೩೧೦. ೮೨-೨೮: ?). ೩. ಬಾಗು : ತಿರುವು : ಹೆಳವನ ಕಾಲುವೆ ಮುಂದೆ ಬಡಗಲು ಹರಿದ ಮೂಲೆ (ಎಳ. VII. ೩೪೮. ೦೫-೦೭: 1827). ೪. ಕಟ್ಟಡಗಳ ರಚನೆಯಲ್ಲಿ ಎರಡು ಗೋಡೆಗಳು ಸೇರುವ ಜಾಗ : ಮೂಲೆಯಲ್ಲಿದ್ದ ಎರಡು ಮಣ ತೂಕದ ಬಂದೂಕವನ್ನು ಹೊತ್ತುಕೊಂಡು ಹೊರಗೆ ಬಂದ (ಕಾಹಾಚ. ೦೯). ೫. ಅಪ್ರಸಿದ್ಧವಾದ ಜಾಗ : ಯಾರೂ ಹೋಗದ ದೂರದ ಸ್ಥಳ : ತನ್ನ ಗುರುವಿನ ತತ್ತ್ವ ಸಂದೇಶವನ್ನು ದೇಶದ ವಿಶ್ವದ ಮೂಲೆಮೂಲೆಯಲ್ಲಿ ಪಸರಿಸುವ ಪಣವನ್ನು ತೊಟ್ಟ ಧೀರ ಸೇರಂದ್ರ (ಯುಗಾ. ೦೬). ೬. [ರೇಖಾಗ] ಒಂದೇ ಸಮರೇಖೆಯಲ್ಲಿರದ ಎರಡು ರೇಖೆಗಳು ಅಥವಾ ಎರಡು ಸಮತಲಗಳು ಸಂಧಿಸುವ ಸ್ಥಳ : ಕೋನ : ಪ್ರತಿಯೊಂದು ಮೂಲೆ ಅಥವಾ ಶೃಂಗ (vertex)ದಲ್ಲಿಯೂ ಇವುಗಳಿಗೆ ಕ್ರಮವಾಗಿ ೩. ೩. ೪. ೩. ೫. ಮುಖಗಳು ಸೇರುತ್ತವೆ (ಗಣಿ. ೨೮).

ಮೃಗಶೀರ್ಷ (ನಾ). ೧. = ಮೃಗಶಿರ ; ಮೃಗಶೀರ್ಷಂ ಮೂಜುಂ ಪೂರ್ವಗಳ್ವಿನಿಯಾರ್ದ್ರೆ ಚಿತ್ರೆ . ಪುಲಂ ರೇವತಿಯುಗ್ರಂರುವೀ ಪತ್ತುಂ ತಾರೆಗಳೊಳ್ ಮಾಡುವುದು ಸಕಲವಿದ್ಯಾಗಮವುಮಂ (ಕೀರ್ತಿಕೌಕ. ೦-೦೩). ೨. [ನಾಟ್ಯ] ಅಸಂಯುತ ಹಸ್ತಮುದ್ರೆಗಳಲ್ಲಿ ಒಂದು : ನಾಟ್ಯ ಶಾಸ್ತ್ರದಲ್ಲಿ ಜೋರುವ ಅಸಂಯುತ ಹಸ್ತಗಳು ಪುಟ್ಟವೆಂದರೆ ಪತಾಕ . . . ಮೃಗಶೀರ್ಷ (ಅಾಶ್ಯ. ೮೬). [ಸಂ.]

ಮೃಗಶೃಂಗ (ನಾ). ೧. ಜಿಂಕೆಯ ಕೋಡು : 'ಮೃಗಶೃಂಗಧರ' ಪರಾ. ೨. ಬಲಮುರಿ ಎಂಬ ಸಸ್ಯದ ಕಾಯಿ : ಸುಮಾರು ಒಂದು ಒಂದೂವರೆ ಅಂಗುಲ ಉದ್ದವಿದ್ದು ಪೂಸೆ ಹೂಜ್ಞಾಗಿರುತ್ತದೆ : ಇದೇ ಕಾರಣದಿಂದ ಸಂಸ್ಕೃತದಲ್ಲಿ ಮೃಗಶೃಂಗ ಎನ್ನುತ್ತಾರೆ (ಹುಃಹಿ. ೬೦). [ಸಂ.]

ಮೃಗಶೃಂಗಧರ (ನಾ). ಜಿಂಕೆಯ ಕೋಡುಗಳನ್ನು ಧರಿಸಿದವನು : ಯಜ್ಞದೀಕ್ಷಿತನಾದವನು : ಲಿಂಗಿರ ಶಾಕ್ತದೊಳ್ ಧರ್ಮಜಂ ಮೃಗಶೃಂಗಧರನಾಗಿ ಯಾಜಮಾನ್ಯಮೊಳೆನಿದನು (ಕೈಪಿಭಾ. ೩೩-೨೦). [ಸಂ.]

ಮೃಗಾಂಕ (ನಾ). ೧. ಜಿಂಕೆಯ ಗುರುತುಳ್ಳವನು : ಚಂದ್ರ : "ಇಂದುಃ, ಚಂದ್ರಃ . . . ಮೃಗಾಂಕಃ. ವಿಧುಃ, ದಾಕ್ಷಾಯಣೀರಮಣಃ– ಈ ೨೧ ಚಂದ್ರನ ಪೆಸರ್" (ಪಣಾಮು. ೬-೧೩) ; ಕಾಂತಿನಾಥವಿಸಿತ ಪ್ರತಾಪಮಂ ತಪ್ಪಿಸುಳೆಸಲು ಕಾಂತಿಯುಮಿಂದುಮ ಮೃಗಾಂಕನ ಕಾಂತಿಯುಮೇಂ ದಿಗ್ಗತಮಂ ಪರ್ದಿಮದೋ (ಶಾಂತಿಪು. ೦೦-೦೩೯). ೨. ಕರ್ಪೂರ. ೩. ಗಾಳಿ. [ಸಂ.]

ಮೃಗಾಕ್ಷಿ (ನಾ). ಜಿಂಕೆಯ ಕಣ್ಣುಗಳಂತೆ ಕಣ್ಣುಗಳುಳ್ಳವಳು : ಸುಂದರಿ : ಸೂಸಿ ಕಣ್ಣ ನೀರೊಡಸೊಸಲುಣ್ಣಿ ಕುಂಕುಮದೊಳರ್ದಿದ ಬಾಳೆಗಳನ್ನವಾಗಿ ಕೆಂಪಡರ್ವಲ್ಲಗಣ್ಣಿಂದುಗುಮ್ಬಿ ನೋಡಿರುವಂ ನೆನೆವೇಂ ಮೃಗಾಕ್ಷಿಯಾ (ಅಂಪು. ೦೨-೩೪) ; ಏಲೆ ಮೃಗಾಕ್ಷಿ ಪೇಳೀಕೆ ಕರ್ಣಜೂರದ ಪೈದಿಲ್ ಕಾರಿರುಳೊಳಮರ್ದ ತಾರಗೆಗೂರಗೆಯೆನಿಸಿರ್ದುದಿಲ್ಲ (ರಾಪಪು. ೬-೬೬). [ಸಂ. ಮೃಗಾಕ್ಷೀ]

ಮೃಗಾಜಿನ (ನಾ). ಜಿಂಕೆಯ ತೊಗಲು : ಮೃಗಾಜಿನಮುಂ ಪೊಲುತಿರ್ಪ ಮುಂಜಮೇಖಲೆಗಳಪ್ಪವಮಾಡುವ . . . ವ್ಯವಸಾಯಮೆತ್ತಲುಂ (ಅಾಪಪು. ೨೨೨) ; ಇಟ್ಟ ವಿಭೂತಿಯು ತೊಟ್ಟ ರುದ್ರಾಕ್ಷಿಯುಟ್ಟ ಮೃಗಾಜಿನ . . . ಕಟ್ಟಾಣದ ಕಡು ಮಹಿಮೆಯುಂತ ತಪೋಧನರಿರ್ಪ ಶಾಣವಲ್ಲಿ (ರಾಪಪು. ೦-೦೩೩ ಪ). [ಸಂ.]

ಮೃಗಾದನ (ನಾ). ನಾಯಿಯ ಜಾತಿಗೆ ಸೇರಿದ ಒಂದು ಬಗೆಯ ಪೂಸಾಪಾರಿಪ್ರಾಣಿ ; · ಕತ್ತೆಕರುಬ : ಶಿಪಂಗಿ : "ತರಕ್ಷುಃ. ಮೃಗಾದನಃ—೨ ಶಿವಂಗಿ ಪೆಸರುಗಳು" (ಸಿಪ್ರಾಂಕಿ. ೦೩೩). [ಸಂ.]

ಮೃಗಾಧಿಪ (ನಾ)· = ಮೃಗೆಜತಿ ೧ ; ಮೃಗಾಧಿಪನಿನೆಂತಗ್ರದ್ವಿಪಂ . . . ತೆರಳ್ದ ತೆಱದಿಂ ವಿಷ್ಣಾಕ್ಕರಜಂ ತೂಳ್ದು ಪಾಱುವಿನಂ ನಿರ್ಮಳಧರ್ಮಮೊಂದಿ ನಿಲೆ ಪೇಬ್ದಂ ಪಂಪನತ್ಯಂತಸೌಷ್ಮವದಿಂ[ದಾವಿ]ಪುರಾಣಮುಂ(ಪಚಳುಪಾ. ೦-೩೭); ಮೃಗಾಧಿಪನುಗಿದು ಬಗಿದು ಕೋಡಿದ ಬಾಗಿಲ . . . ಕಡಪೆ ತುಳಿದ ಹೆಜ್ಜೆಗಳ ಚಿಹ್ನದ ಬೇಡನಾಯಕರು ಸಿರಿವರು (ಪಚಾ. ೩-೩). [ಸಂ.]

ಮೃಗಾರಾತಿ (ನಾ). ೧. ಸಿಂಹ : "ಪರಿ ಮೃಗೇಂದ್ರಂ . . . ಮೃಗಾರಾತಿ ಕಂಠೀರವಂ ಕರಿವೈರಿ ಕೇಸರಿಯೆನಲ್ ಸಿಂಹಮೆನಿಸಿಕ್ಕುಂ" (ಹಂಗಣಾ. ೪೭-೭). ೨. ನಾಯಿ. ೩. ಹುಲಿ. [ಸಂ.]

ಮೃಗಾರಿ (ನಾ). ೧. ಸಿಂಹ : 'ಮೃಗಾರಿಪೀಠ' ಪರಾ. ೨. ಹುಲಿ ; ವ್ಯಾಘ್ರ : "ವ್ಯಾಘ್ರಃ . . . ಮೃಗಾರಿ[—ಈ ೩ ಹುಲಿ" (ಪಲಾಹು. ೫೯-೭೩). ೩. ನಾಯಿ. ೪. ಒಂದು ಬಗೆಯ ಮರ. [ಸಂ.]

ಮೃಗಾರಿಪೀಠ (ನಾ). ಸಿಂಹಾಸನ : ಸಗವತಿನಿದ ಪೆಱಿನೊಸಲೆನೆ ಸೊಗಯಿಪ ಪಾಂಡುಕಪಿಶಾಳಿಳೆಯೊಳಿದೇಂ ದಿಟ್ಟಿಗೆವಂದುದೂ ಮಾಣಿಕ್ಯದ ಮೃಗಾರಿಪೀಠಮಾ ಲಲಾಮವೆನೆ ಕೊಂಕುಪುದಾ (ಪಂವೃತ್ತ. ೦೨-೦೦೦). [ಸಂ.]

ಮೃಗಾಲಯ (ನಾ). ಸಾರ್ವಜನಿಕರ ನೋಟಕ್ಕಾಗಿ ವಿಸ್ತಾರವಾದ ಪ್ರದೇಶದಲ್ಲಿ ಕಾಡುಮೃಗಗಳನ್ನೂ ವಿಶೇಷವಾದ ಜಲಚರಪ್ರಾಣಿ, ಪಕ್ಷಿ, ಸರ್ಪ ಮುಂತಾದುವುಗಳನ್ನೂ ಕೂಡಿಟ್ಟಿರುವ ಸ್ಥಳ: ಪ್ರಾಣಿ ಸಂಗ್ರಹಾಲಯ : ಇಲ್ಲಿ ಬಗೆಬಗೆಯ ಮೃಗಪಕ್ಷಿಗಳುಳ್ಳ ಮೃಗಾಲಯವಿದೆ (ಕಪಪು. ೫-೧೯). [ಸಂ]

ಮೃಗಾಸನ (ನಾ). [ಯೋಗ] (ಜಿಂಕೆಯಂತೆ ದೇಹವನ್ನು ಬಗ್ಗಿಸುವ) ಒಂದು ಬಗೆಯ ಆಸನ : ಸಿದ್ಧಾಸನ . . ಮೃಗಾಸನ . . . ಆರ್ಧಾಸನಾದಿ ಏಳೆಂಟ್ಕಾಸಲ್ಕು ಆಸನಭೇದಂಗಳು (ಪಪಗೀ. ೦೩೧). [ಸಂ.]

ಮೃಗಿ (ನಾ)· ಹೆಣ್ಣುಜಿಂಕೆ : ಮೃಗಕಂತಪಾದ ತತ್ಪಾಯಕಮುರ್ಜೆ ಪೋಗವೆ ಮೃಗೀಯಂಗಳಂ ಮಾಡಿಪಂತೆ ಸತ್ಕರ್ (ಪಾಚಿತ್ರ. ೬-೧೪) : ಪೂತ್ಕಣಿಂಗಳೆಂದೆಳಸುಗುಂ ಪುರ್ಗಲ್ಗಳ ಕಾಂತಿಯುಂ ಮೃಗೀಜಾಳಕಂ (ಕಂಡಾಪು. ೦ ೦೨೭). [ಸಂ. ಮೃಗೀ]

ಮೃಗಿತ (ಗು). ೧. ಬೇಟೆಯಾಡಿದ. ೨. ಹುಡುಕಿದ. (ನಾ). ೩. ಹುಜುಕಿಕೆಮಾಡು : "ಆಸ್ವೇಟಿತಂ . . . ಮೃಗಿತಂ — ೫ ಪುಜುಕಲ್ಪಟ್ಟಿರುವುದು" (ಸಿಪ್ರಾಂಕಿ. ೩೩೦). [ಸಂ.]

ಮೃಗೇಂದ್ರ (ನಾ). ೧. ಸಿಂಹ : "ಪರಿ ಮೃಗೇಂದ್ರಂ . . . ಕರಿವೈರಿ ಕೇಸರಿಯೆನಲ್ ಸಿಂಹಮೆನಿಸಿಕ್ಕುಂ" (ಹಂಗಣಾ. ೪೭-೭) : ಇಂದ್ರಂ ಮೃಗೇಂದ್ರನಂತೆ ಗರ್ಜಿಸಿ ಚತುರಂಗಬಲಸಮೇತಂ ಪೊಱವಮಟ್ಟು . . . ಒಂದು ತಾಗುವುದುಂ (ಶಾಂತಿಪು. ೬-೦೦ ಪ) : ಮೃಮಣಿಗೆ ಕಟ್ಟುಲೆ ಶರಭಕ್ಕೆ ಮೃಗೇಂದ್ರಂ ಸೆಡೆವ ಮಾಟ್ಕಿಯಿಂ ಸೆಡೆಮಿಪಂ ನಿಮಗೆ(ಕಂಡಾಪು. ೬-೦೦೯). ೨. ಹುಲಿ : ವ್ಯಾಘ್ರ. ೩. [ಜ್ಯೋತಿ] ಸಿಂಹರಾಶಿ. [ಸಂ.]

ಮೃಗೇಂದ್ರವಿಷ್ಟರ (ನಾ). ಸಿಂಹಾಸನ : ಪುರುದೇವಂ ಮೃಗೇಂದ್ರ ವಿಷ್ಟರದೊಳಿರೆ (ಆದಿಪು. ೪-೭೦ ಪ) : ಅರೀಪವಿದ್ವಜ್ಜನಸಭಾಭ್ಯಂತರ ಸ್ಥಗೆ ಪ್ರವಿಷ್ಟರಾರೂಢನಾಗಿರ್ಪಾದಂ (ಪಚಳುಪ ೨-೨೪ ಪ). [ಸಂ.]

ಮೃಗೇಕ್ಷಣ (ನಾ). (ಜಿಂಕೆಯ ದೃಷ್ಟಿಯಂತೆ) ಚಂಚಲವಾದ ನೋಟ : ಮಿನಲೋಚನೆ ಮೃಗೇಕ್ಷಣದೆ ಸಗರವ್ಯಪನಘವೀಕ್ಷಿಸಿದಳ್ (ಅಷ್ಟ. ೯-೭೭). [ಸಂ.]

ಮೃಗೋತ್ಥ (ನಾ). ಕಸ್ತೂರಿಮೃಗದಿಂದ ಉತ್ಪತ್ತಿಯಾದುದು ; ಕಸ್ತೂರಿಯೆಂಬ ಸುಗಂಧದ್ರವ್ಯ : ಮೃಗಮದ : ಮೃಗೋತ್ಥ ವಾಸಿತ ಧಾರಾಪರಿಕಲಿತ ಪರಾವೃತಮೆಸಪಿ ಪರಿಹಸ್ತಾಕೃಷ್ಟಕೇಶಹಸ್ತವೊಲೆಸೆದಳ್ (ಜಗ. ೦೯-೦೦೬) ; ಪಂಜರತ್ನದ ಘನಸಾರವಾರಿಯು ಮೃಗೋತ್ಥ ಕುಳತ್ಥದ ವಾಯಿನಂಗಳಂ ಮುದದೊದವಿಂದಮಿತ್ತು ಪೆಱೆದರ್ (ಪಂಕ್ರಶ. ೩-೮೨). [ಸಂ.]

ಮೃಗೋದ್ಭವ (ನಾ). = ಮೃಗೋತ್ಥ : ಅಡರ ಕವಲ್ದುದೊಂದಿಡೆ ಮೃಗೋದ್ಭವದಿಂ . . . ಪರಿಮಳವಿಧಾಗದೊಳ್ (ಜಾಂಚಕ್ಷ. ೯-೨೪) ; ಶೀತಕಳರ್ಪೂರಮೃಗೋದ್ಭವಾಗರು ಕುಮುಸ್ತಾಗ್ರಂಥಿಗಂಧಂಗಳಂ ತಳೆದೇಂ ಗಂದಿಗರಂತೆ ಬಂದೊರೆದುದೋ ಮತ್ತೊಂದು ಮಂದಾನಿಳಂ (ಅರ್ಧಕಃ. ೫-೧೬). [ಸಂ.]

ಮೃಗ್ಯ (ಗು). ೧. ಹುಡುಕುವ. ೨. ಹುಡುಕಲು ಯೋಗ್ಯವಾದ. (ನಾ). ೩. ಹುಡುಕಬೇಕಾದುದು ; ಶೋಧಿಸಬೇಕಾದುದು : ರಾಮ ಕಾರ್ಮುಕ. ಕೃಷ್ಣಯುಕ್ತಿ. ಗೌತಮಕರುಣೆ ಭೂಮಿಧಾರವನಿಳುಹಿ ಸಾಲದಾಗಿರಲು ಸಾಮಾನ್ಯರೆನಿತು ತಾಂ ಪೇಗಿದೊಡಮೇನಹುದು ? ಕ್ಷೇಮವೆಂದುಂ ಮೃಗ್ಯ (ಪಂಚಾಳ. ೧೫೬). [ಸಂ.]

ಮೃಚ್ಚೂರ್ಣ (ನಾ). ಮಣ್ಣಿನ ಪುಡಿ ; ಧೂಳು : ಅನುನಯದಿ ಸರ್ವಗತನೆಂಬಂತೆ ಮೃಚ್ಚೂರ್ಣವನು ಹೊದ್ದಿರ್ಪ ವಾಯುವಿನಂತೆ (ಪಕ್ಷ. ೪-೬-೪೯). [ಸಂ.]

ಮೃಜೆ (ನಾ). ೧. ತೊಳೆಯುವಿಕೆ ; ಶುದ್ಧಿಮಾಡುವುದು : "ಮಾರ್ಜಿಃ ಮಾರ್ಜನಾ. ಮೃಜಾ - ೩ ಶ್ರೀಗಂಧ. ಕುಂಕುಮಕೇಸರಿ ಮುಂತಾದ ದ್ರವ್ಯಗಳನ್ನು ಮೈಗೆ ಹಚ್ಚಿ ಉಜ್ಜಿ ತೊಳೆಕೊಂಡು ಕೊಳೆ ಹೋಗಲಾಡಿಸುವಕ್ಕೆ ಹೆಸರುಗಳು" (ನಿಘಂ.೬೬. ೨೦೬). ೨. ಶುಚಿ ; ನೈರ್ಮಲ್ಯ. [ಸಂ. ಮೃಜಾ]

ಮೃಡ (ನಾ). ಈಶ್ವರ : ಶಿವ : "ಈಶಾನಃ . . . ಮೃಡಃ . . . ನೀಲಲೋಹಿತಃ - ಈ ೪೫ ಮಹಾದೇವರ ಪೆಸರ್" (ಪಣಾಮು. ೯-೦೬) ; ಮೃಡನೊಳ್ ಪಾಶುಪತಾಸ್ತ್ರಂಬಡೆದಂ . . . ನಾರಾಯಣನೊಳ್ ಪಡದಂ ಗಾಂಡಿವಿ ಸುಭದ್ರೆಯಂ ಭದ್ರಮನಂ (ಗಣಾಮು. ೫-೩೮) ; ಮನವಿದು ವಿಜಯಕ್ಕೆ ಹರಿವುದು ಮೃಡ ನಿಮ್ಮ ಸಖನಿದು ನೆನೆಯಲೀಯದು. (ಪಾಷ. ೪೪). [ಸಂ.]

ಮೃಡರಿಪು (ನಾ). ಈಶ್ವರನ ಶತ್ರು; ಮನ್ಮಥ : ಬೆರಲಂ ಮಿಡಿಯಿಸಿ ರುಕ್ಮಿಣಿ. ಜಗಮಂ ಮೃಡರಿಪು ಬೆರಲೆತ್ತಿ ನಿಲ್ವಿಸಂ ಬಗೆಗೊಂಡಳ್ (ಜಗ. ೦೦-೦೦೬). [ಸಂ.]

ಮೃಡಸುತ (ನಾ). ೧. ಈಶ್ವರನ ಮಗ : ಗಣಪತಿ : ಮೃಡಸುತನಂತೆ ವಂತಪತಿ ಪೆರ್ದಾದೆ ಶೂದ್ರಕನಂತೆ ಶಕ್ತಿಯಂ ಕಿಡಿಸದೆ (ಪಾಭಾ. ೦೩-೧೪). ೨. ಸ್ಕಂದ ; ಷಣ್ಮುಖಿ: [ಸಂ.]

ಮೃಡಾದ್ರಿ (ನಾ). ಈಶ್ವರನ ವಾಸಸ್ಥಾನವಾದ ಕೈಲಾಸಪರ್ವತ : ದಸಮುಖಂ ಕಿಱಿ ತನ್ನನಾ ಮುಳಿಂ ಮೃಡಾದ್ರಿಯ ಸಿಂಹವಾಹನಿಯ ರೂಪಿನೊಳಾಹವಕ್ಕೆ ಸಹಾಯಮಮ್ಮು ರಘೂದ್ವಹಂಗೆನಿಸಿ (ಪಂಚಾಮು. ೦೪-೩). [ಸಂ.]

ಮೃಡಾನಿ (ನಾ). ಈಶ್ವರನ ಪತ್ನಿ; ಪಾರ್ವತಿ : "ರುದ್ರಾಣೀ . . . ಮೃಡಾನೀ. ಹೈಮವತೀ . . . . ಪೇನಕಾತ್ಮಜಾ — ಈ ೨೦ ಗೌರೀ ದೇವಿಯ ಪೆಸರ್" (ಪಣಾಮು. ೯-೦೮) ; ಅವಳ ನೊಸಲಿಳಗಿನ ಗೋರೋಚನದ ಬೊಟ್ಟು ಬೇಡತಿಯಾದ ಮೃಡಾನಿಯ ಜಡೆಗಣ್ಣಿನಂತೆ ಶೋಭಿಸುತ್ತಿರುವುದು (ಪಾಂಚಾಮು. ೩-೩೦೦). [ಸಂ. ಮೃಡಾನೀ]

ಮೃಡಾಲಯ (ನಾ). ಈಶ್ವರನ ನಿವಾಸ ; ಶಿವಾಲಯ ; ಒಡಗೂಡಿರ್ಪ ಲಿಂಗವನಜಿಯದೆ . . . ಅಡವಿಗಿಡುಗಳಲ್ಲಿಪ್ಪ ಮೃಡಾಲಯಮಂ ಕಂಡು ಹೊಕ್ಕು ಸಡಗರಿಸಿಕೊಂಡು ವರವ ಪಡೆವೆನೆಂದು ಅಚ್ಚುಗಬಡುತ್ತಿದ್ದೇನೆ (ಪಾಭಾ. ೨೦-೩೩). [ಸಂ.]

ಮೃಣಾಲ, ಮೃಣಾಳ (ನಾ). ತಾವರೆಯ ದಂಟು. — ದಿಂದ : "ಮೃಣಾಲಂ. ಬಿಸಂ - ೨ ತಾವರೇ ಕಾಮಿನ ಹಿಸರುಗಳು. ಇವೇ ತಾವರೆ ಬಳ್ಳಿಯ ಕೊಳವಿಗಳು" (ನಿಘ್ಯಾಂ. ೯೦). ಮೃಣಾಳ : "ಮೃಣಾಳಂ. ಬಿಸಂ - ಈ ೨ ನಾಳಂ" (ಪಣಾಮು. ೦೦೨-೬೦) ; ಕಣ್ಗಗುರ್ವಿಸುವಿನಮೊಕ್ಕು ನೇಲ್ದ ಕರುಳೋಳಿಯೆ ಪಾಳಮೃಣಾಳವನಾಗೆ (ಪಂಚಾಣ. ೦-೭) ; ತರುಣ ಮೃಣಾಳಮಂ ತೆಗೆದು ಪುಗೊಳದಿಂ ಪೊಱಗಿಕ್ಕಿವಂದದಿಂ (ಪಜ್ಜಿ. ೩-೫೬). [ಸಂ.]

ಮೃಣಾಳ 'ಮೃಣಾಲ' ನೋ.

ಮೃಣಾಳಗುಣ (ನಾ). ತಾವರೆಯ ದಂಟಿನ ನೂಲು. — ನಾರು : ಬಳಸಿದ ಮೃಣಾಳಗುಣಮಗ್ಗಳಿಸಿ ಮಣಿದರ್ಪಣಂ ವಹ್ನಿಪಧಿಗಳ್ಕಂ ಗೊಳಿಸಿ ಪಲ್ಲವತತಿ ಸಂಗಳಿಸಿ ಮಣಿಪೂರ್ಣಕುಂಭಮೊಪ್ಪಿದುದದೞೊಳ್ (ಧರ್ಮಪ. ೯-೦೦). ಸಂ. ಮೃಣಾಲಗುಣ]

ಮೃಣಾಳನಾಳ (ವಾ). ತಾವರೆಯ ದಂಟು ; ಕಮಲದ ನಾಳ : ಶುಕಿಳೆಗಳಂ ಮೆಲ್ವ ಸೈಂಹಿಕೇಯನಂತೆ ಮೃಣಾಳನಾಳಗಳಂ ಮೆಲ್ದು (ಜಾಪಂಚಾ. ೦೬೪). [ಸಂ. ಮೃಣಾಲನಾಲ]

ಮೃಣಾಳನಾಳಿಕೆ (ನಾ). = ಮೃಣಾಳನಾಳ : ಮೃಣಾಳನಾಳಿಕೆಗೆ ಚಂದನದಣ್ಮಗೆ ತಣ್ಬುಲಿಲ್ಲೆ ತಣ್ಗರಗದ ಸೂಸುನೀರ್ಗೆ ಕೊಳವೆಗೊಡಿಪಲಂ ಗುಱಿಯಾಗೆ ಮಾಡುವರ್ (ಕಬ್ಬಿ. ೪-೨೮). [ಸಂ. ಮೃಣಾಲನಾಲಿಕಾ]

ಮೃಣಾಳಿಕೆ (ನಾ). ತಾವರೆಯ ದಂಟಿನ ನಾರು ; ಬಿಸತಂತು : ಗರ್ಭಾಗೆ ಶಕ್ಷ್ಮಮಯೋಚಿತ ಮಂಗಳಪ್ರಸಾಧನಮೆಸೆದತ್ತು . . . ಮುತ್ತಿನ ಶಿಸರಂ ಮೃಣಾಳಿಕೆಯ ಮುದ್ರಿಕೆ ಪೂವಿನ ಪಿಂದುಗಂಕಣಂ (ಪಂಚಾಮು. ೩-೦೦೬). [ಸಂ. ಮೃಣಾಲಿಕಾ]

ಮೃತ (ಗು). ೧. ಸತ್ತುಹೋದ ; ಮರಣ ಹೊಂದಿದ. (ನಾ). ೨. ಸಾವು ; ಮರಣ. ೩. ಸಾಯುವವನು ; ಮರಣ ಹೊಂದುವವನು : ಜೀವಮಂ ಮೃತ ದುಃಖಿ ಅಮೃತಂ. ದೇವನಾ ಜೀವನುಮು ಶುದ್ಧನು ದೇವನತಿಶುದ್ಧನು (ಪಾಷ. ೩೦-೨೯) ; ಕಂದುಕಲಿ ತನಗೆತ್ಕಣದು ನಿರ್ದ್ವಂದ್ವಕನು ಮೃತದಾತ ತಾನಲ್ಲೆಂದು ಕಂಡರವಂಗೆ ಪಾಪ ವಿಲೇಪ ವಿಲ್ಲೆಂದ (ಪಾಭಾ.೧೯. ೩-೨೯). ೪. ಜೀವವಿಲ್ಲದುದು; ನಿರ್ಜೀವವಾದುದು : ಸರ್ವಸೌಂದರ್ಯಮೃತಂ ಮೃತವಂತಿಹುದು ನನಗೆ ನೀರಸಂ (ಶ್ರೀಧಾಪು. ೯-೩೨೬). ೫. ಸತ್ತುಹೋದವನು ; ಮರಣವನ್ನು ಹೊಂದಿದವನು : "ಪರಾಸುಃ. ಉಪಪನ್ನಃ. ಪ್ರಮಿತಃ. ಸಂಸ್ಥಿತಃ. ಮೃತಃ — ಈ ೫ ಸಮಾನಂ" (ಪಣಾಮು. ೦೦೯-೭) ; ಸ್ವಾಮಿಗಳು _ 'ಮೃತನೆಳ್ದಿ ತೋರಿಸಿ' ಎಂದರು (ಕಬ್ಬಿ. ೪೧೩). ೬. ಯಾಚನೆಯಿಂದ ಪಡೆದ ಆಹಾರ ; ಭಿಕ್ಷೆ. [ಸಂ.]

ಮೃತಕ (ನಾ). ೧. ಸತ್ತ ವ್ಯಕ್ತಿ; ಮರಣ ಹೊಂದಿದ ವ್ಯಕ್ತಿ. ೨. ಜೀವವಿಲ್ಲದುದು ; ಹೆಣ : ಪ್ರತಿಕೂಲವಾಗಿ ನಿಲೆ ವಿಧಿ ಮತ ನಮಮನುಕೂಲಮಾಗಿ ನಿಲಿಯುಂ ಕಾರ್ಯಸ್ಥಿತಿಯುಂ ಸಾಧಿಸಲಾಗದು ಮೃತಕೆ ಕೃತೋಪಕೃತಿಶುಭೂಲನರ್ಥಾಯಾಸಂ (ಕಣಾ. ೩-೦೫೩) ; ಮೃತಕಮಂ ಕಂಡನಿಬರುಂ ಮೂರ್ಛೆವೋಗಿ ನೀಡಱಿಂದೆಬ್ಬರ್ಚ (ಪಕ್ಷಾ.ಣ. ೩೦-೬) ; ಈ ಮೃತಕಮಂ ನಿಷ್ಕ್ರಯೋಜನಮಿಂತೇಕೆ ಪೊತ್ತು ತೊಲ್ದುವೆಯೆನೆ

(ಕುಂಡಲಿ. ೦೩-೫೫ ಪ). ೩. ಸಾವು : ಮರಣ. ೪. ಮರಣಸೂತಕ: ಮೃತಾಶೌಚ. [ಸಂ.]

ಮೃತಕದುಂದುಭಿ (ನಾ). ವ್ಯಕ್ತಿಯು ಸತ್ತ ಮೇಲೆ ಕೆಲವರಲ್ಲಿ ಒಂದು ವಿಧಿಯಾಗಿ ಬಾರಿಸುವ ತಮಟೆ : ಗಡಗಡನೆ ಪೊಡವಿ ನಡುಗಿತು. ದುಃಖವಾರ್ತೆಯಂ ಜಗಕೆಲ್ಲ ಕೇಳಿಸುವ ಮೃತಕದುಂದುಭಿಯಂತೆ (ಗೊಲ್ಲಾಣ. ೦೩-೪೨೨). [ಸಂ.]

ಮೃತಕಲ್ಪ (ಗು). ೧. ಸತ್ತಂತಿರುವ; ಮೈಮರೆತಿರುವ. (ನಾ). ೨. ಯೆಣಕ್ಕೆ ಸಮನಾದುದು: ಸತ್ತಂತೆ ಇರುವುದು : ಕಾಳರಕ್ಕಸ ಲೋಕ ವೆಲ್ಲವ ಗೋಳುಗುಟ್ಟಿಸೆ ಅಜನು ಜಟಿಸಿದ ಬೀಳು ಈ ಮೃತಕಲ್ಪವಾಗವೆ ನಿದ್ದಗ್ಗೈದಿಹನು (ಲಾಣಾ. ೨೩-೬). [ಸಂ.]

ಮೃತಕಸೆಜ್ಜೆ (ನಾ). [ಜೈನ] ತಪಸ್ಸಿನ ಒಂದು ಭಂಗಿ : ಶವಾಸನ(?) : ಪ್ರಾಯೋಪಗಮನವಿಧಾನದಿಂ ಪ್ರಚ್ಛನ್ನಮಪ್ಪೆಡೆಯೊಳ್ ಮೃತಕಸೆಜ್ಜೆಯೊಳಿರ್ದು ಸಂನ್ಯಸನಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸುತ್ತಿರ್ಪನ್ನೆಗಂ (ಕಣ್ಣಾಣಾ. ೨೯-೦). [ಮೃತಕ + ಸೆಜ್ಜೆ]

ಮೃತಪಟಹ (ನಾ). = ಮೃತಕದುಂದುಭಿ : ಮೃತಪಟಪಂ ಜಯಪಟಿಪಂ ಚಿತಾಗ್ನಿಧೂಮಂ ಜಯಧ್ವಜಂ ಜನಕರುಣಾರವಿತಿ ಜಯಮಂಗಳರುತಿಯೆನೆ ಕೃತಾಂತರಾಜಂಗೆ ರಾಜ್ಯಶ್ರಿಯಮಿದಲ್ತೆ (ಅಜಪ. ೦೦-೨೯). [ಸಂ.]

ಮೃತಪತ್ರ (ನಾ). ವ್ಯಕ್ತಿಯು, ತಾನು ಸತ್ತ ತರುವಾಯ ತನ್ನ ಆಸ್ತಿಯು ಯಾರಿಗೆ ಸೇರಬೇಕೆಂಬ ಹಕ್ಕನ್ನು ಮತ್ತು ತನಗೆ ಸಂಬಂಧಿಸಿದ ಅಂತಿಮಸಾಚ್ಚಿಗಳನ್ನು ಬರೆದಿರುವ ಪತ್ರ; ಉಯಿಲು; ಮರಣಶಾಸನ : ಆ ಮುಮಕರು ಮೃತಪತ್ರ ಬರೆದಿಟ್ಟಿದ್ದಾರೆ (ಕೂಡ). [ಸಂ.]

ಮೃತಭಾಷೆ (ನಾ). ಬಳಕೆಯಲ್ಲಿ ಇಲ್ಲದೆ ಕೇವಲ ಗ್ರಂಥಸ್ಥವಾಗಿರುವ ಭಾಷೆ : ಈಗ ವ್ಯವಹಾರದಲ್ಲಿಲ್ಲದೆ ಗ್ರಂಥಗಳಲ್ಲಿ ಮಾತ್ರ ದೊರೆಯುವ ಭಾಷೆಯನ್ನು ಮೃತಭಾಷೆಯೆಂದು ಕರೆಯುತ್ತಾರೆ (ಕೃವಿ. ೨೯೩). [ಸಂ. ಮೃತಭಾಷಾ]

ಮೃತಸಂಜೀವಕ (ನಾ). ಸತ್ತವರನ್ನು ಬದುಕಿಸುವ ಔಷಧಿ : ರತ್ನ, ಮಂತ್ರ ಇತ್ಯಾದಿ : ತನ್ನ ರವಣಂ ಬರ್ಪುಕುವಂತೆ ಮೃತಸಂಜೀವಕದ ಮಾಣಿಯನೀವುದು (ಕೃಭಾಣಾ. ೨೮-೯). [ಸಂ.]

ಮೃತಸಂಜೀವನ (ಗು). ೧. ಸತ್ತವರನ್ನು ಮತ್ತೆ ಬದುಕಿಸುವ. (ನಾ). ೨. ಸತ್ತವರು ಪುನಃ ಬದುಕಿಕೊಳ್ಳುವುದು. ೩. ಸತ್ತವರನ್ನು ಬದುಕಿಸುವುದೆಂದು ಭಾವಿಸಲಾದ ಒಂದು ಮಂತ್ರ: ಮೃತಸಂಜೀವನ ಎಂಬ ಸಂಜೀವನತ್ರಯಮಂತ್ರಂಗಳಂ (ಅಪೀ. ೦೦). [ಸಂ.]

ಮೃತಸಂಜೀವನೀವಿದ್ಯೆ (ನಾ). (ಮಂತ್ರ ಮಣಿ. ಔಷಧಿ ಮುಂತಾದುವುಗಳಿಂದ) ಸತ್ತವರನ್ನು ಪುನಃ ಬದುಕಿಸುವ ವಿದ್ಯೆ : ಅಸುರರ ಪುರೋಹಿತನಾದ ಶುಕ್ರಾಚಾರ್ಯನಿಗೆ ಸತ್ತವರನ್ನು ಬದುಕಿಸುವ ಮೃತಸಂಜೀವನೀವಿದ್ಯೆ ಗೊತ್ತಿತ್ತು (ಪಪಣಾ. ೪೯೯). [ಸಂ. ಮೃತಸಂಜೀವನೀವಿದ್ಯಾ]

ಮೃತಸಂಜೀವಿನಿ (ನಾ). ಸತ್ತವರನ್ನು ಪುನಃ ಬದುಕಿಸುವ ಮಂತ್ರ, ಮಣಿ, ಔಷಧಿ ಮುಂತಾದ ಸಾಧನ ಮತ್ತು ವಿದ್ಯೆ : ಮೃತಸಂಜೀವಿನಿಯು ಭುಜಬಿರಲು ಬಹಳ ವ್ಯಾಧಿ ಮಾಡುವ ದುರುಳತನ ತಾವೇಸು (ಅಜಾಕ್ರೌ. ೦೮-೯೯); ದೇವರಾಪಣ ಕಟಕ ಮೃತಸಂಜೀವಿನಿಯಲುಹುವಷ್ಟರ ಬಳಿಕ ವಿಭಾವರಿಯೊಳಂದಾಯ್ತು ಲಂಕಾಪುರ ಪುನರ್ದರ್ಪನ (ಕಂಕಣಾ. ೬-೪೭ ಸೂಚನೆ). [ಸಂ. ಮೃತಸಂಜೀವಿನೀ]

ಮೃತಸ್ನಾತ (ನಾ) ಶವಸಂಸ್ಕಾರವನ್ನು ಮಾಡಿದ ಮೇಲೆ ಸ್ನಾನ ಮಾಡಿದವನು : ಅಂತ್ಯಕ್ರಿಯೆಯ ನಂತರ ಸ್ನಾನಮಾಡಿದವನು. [ಸಂ.]

ಮೃತಸ್ನಾನ (ನಾ). ಶವಸಂಸ್ಕಾರ ಮಾಡಿದ ಮೇಲೆ ಮಾಡುವ ಸ್ನಾನ : ಅಂತ್ಯಕ್ರಿಯೆಯ ನಂತರ ಮಾಡುವ ಸ್ನಾನ : "ಅಪಸ್ನಾನಂ- ಮೃತ ಸ್ನಾನಂ — ಈ ೨ ನೀರಿಳಿಹು" (ಪ್ರಣಾಮು. ೦೦೩-೦೬) ; "ಅಪಸ್ನಾನಮೆನೆ ಮೃತಸ್ನಾನಕ್ಕೆ ಪೆಸರೆನ್ಕುಂ" (ಕುಂಡಿಣಾ. ೦೦೬-೩). [ಸಂ.]

ಮೃತಾಲಕ (ನಾ). ೧. ಒಂದು ಬಗೆಯ ಜೇಡಿಮಣ್ಣು. ೨. ಸುವಾಸನೆಯುಳ್ಳ ಒಂದು ಬಗೆಯ ಮಣ್ಣು : "ಆಧಕೀ- ಕಾಕ್ಷೀ- ಮೃತ್ಸ್ನಾ, ತುವರಿಕಾ- ಮೃತಾಲಕಂ- ಸುರಾಷ್ಟ್ರಜಂ — ಈ ೬ ವಲ್ಲಭ ಮಣ್ಣಂಬ ಗಂಧದ್ರವ್ಯ" (ಜಾಣಾ. ೦೦೦). [ಸಂ.]

ಮೃತಾಶೌಚ (ನಾ). ಒಬ್ಬ ವ್ಯಕ್ತಿಯ ಮರಣದಿಂದ ಆ ವ್ಯಕ್ತಿಯ ವಂಶಸ್ಥರಿಗೆ ಬರುವ ಮೈಲಿಗೆ ; ಮರಣಸೂತಕ : ವಂಶದಲ್ಲಿ, ಕೆಲವು ತಲೆಮಾರೊಳಗೆ, ಯಾರಾದರೂ ಜನಿಸಿದರೂ ಮೃತರಾದರೂ ನಿಯಮವಾದ ಕಾಲಪರ್ಯಂತವಾಗಿರುವ ಕರ್ಮಕ್ಕೆ ಅಧಿಕಾರವಿಲ್ಲದ ಅಮೈ — ಇದನ್ನು ಜಾತಾಶೌಚ, ಮೃತಾಶೌಚವೆನ್ನುತ್ತಾರೆ (ಅಚಾಗ್ರ. ೧೩). [ಸಂ.]

ಮೃತಿ (ನಾ). ಸಾವು : ಮರಣ : ಮೃತಿಗಿನಿಸಪ್ಪೊಡಂ ಸೆಡೆಯದೀ ಭವದೊಳ್ ದೊರೆಕೊಂಡುದಿಲ್ಲ ದುಷ್ಕೃತದೊವಿಂ ಮನಃಪ್ರಿಯಕರಗ್ರಹಣಂ (ಪಂಚಮಿ. ೬-೦) ; ಮತಿ ನಿರ್ವೇದ . . . ಮೋಹಾಮಯ ಮೃತಿಗಳಿವಿಂ ತೆಯ್ದ ಸಂಚಾರಿಭಾವಂ (ಕಾಪ್ರ. ೬೧೩) ; ಆ ಪಕ್ಕಾನ್ನಮೆ ಮೃತಿಗಂ ದೀಪನ ಪಿಂಡದಪೊರಾಗೆ . . . ವಿಧ್ಯದೊಳೊಗೆದಂ (ಪಾಟೀಸ. ೩-೩೪). [ಸಂ.]

ಮೃತಿಸು (ಕ್ರಿ). ಸಾಯು; ಮರಣಹೊಂದು: ತನುಮತಿ ಚಂಚಲಸದಿರುತಿರಲು ಜನಿಸುತ ಸುತರು ಮೃತಿಸುವರು (ಕಂಪ್ರ. ೯-೩೬). [ಮೃತಿ + — ಸ್ಕು]

ಮೃತ್ತಿಕೆ (ನಾ). ೧. ಮಣ್ಣು : "ಮೃತ್- ಮೃತ್ತಿಕಾ—ಈ ೨ ಮಣ್" (ಪ್ರಣಾಮು. ೨೬-೪) ; ವಿವಾಹೇಗ್ಗಹಮಂ ಸಮೆಯಿಸಿಯುದಣಿ ನಡುವಣಾರ್ದ್ರ ಮೃತ್ತಿಕಾವಿರಚಿತಮಪ್ಪ ಚತ್ತರಾಂತರದೊಳ್ . . . ಗುಣಾರ್ಣವನನಾದ್ರಪದಯುಸೊಡವೆ ಕುಳ್ಳಿರಿಸಿ (ಕುಂಡಿಣಾ. ೬-೬೪ ಪ). ೨. ಪವಿತ್ರವಾದ ಮಣ್ಣು : ಅಗುಜ್ಜಿ ತುದಿಗೊಂಬಸೆಳಲ್ ವೆಲ್ಲಗೆ ಪೊತ್ತಭಿಜೇಕ ಮೃತ್ತಿಕೆಯನೊಡಸಂದತ್ತಗಲದಿನಿಸಂ ತಪೋವನಮೃಗಮೂ ಮುನಿವರ ನೋವಿವ ಪರಿಚಯದಿಂದಂ (ಕಾದಂಪು. ೨೦೬) ; ರಾಜರು . . . ಕೈಯಲ್ಲಿದ್ದ ಮೃತ್ತಿಕೆಯನ್ನು ಕೊಟ್ಟು, ಇದನ್ನು ಲೇಪಿಸಿಕೋ ! ನಿನ್ನ ವ್ಯಾಧಿ ಪರಿಹಾರವಾಗುವುದೆಂದರು (ಕಥಾ. ೦೩೬) ; ಸಮಿಸಿದನು ಮೆಟ್ಟಿ ಮೃತ್ತಿಕೆಯನಾ ರಾಮಚರಣಸ್ಪರ್ಶಪೂಜ್ಯಮಂ (ಕ್ರಿಣಾಪ್ರಸಿ. ೦೬೨-೨೬೮). ೩. ಜೇಡಿ ಮಣ್ಣು. ೪. ಒಂದು ಬಗೆಯ ಸುವಾಸನೆಯ ಮಣ್ಣು. ೫. ಒಂದು ನರಕದ ಹೆಸರು : ಪೂಪಿವಕ್ಕ ರಕ್ತಪೂತಿ ಮೃತ್ತಿಕೆ ಕಣಧೂಮ ವೆಂಬೈದು ಮಂತ್ರಿನರಕಂಗಳಿಂ ಬೆಱೆದು ಭೀಮವೆಂಬರಸುನರಕವಿಹುದು (ಚರಿಪ್ರ. ೦೩೭).

ಮೃತ್ತಿಕೆಯ ಲವಣ = ಭೂಮಿಯಲ್ಲಿ ಘನರೂಪದಲ್ಲಿ ದೊರೆಯುವ ಉಪ್ಪು ; ಕಲ್ಲುಪ್ಪು : ಮೃತ್ತಿಕೆಯ ಲವಣ ಸ್ವಯಂಪಾಕ ಮಿಕ್ಕಾದ ಲವಣ ಅಪ್ಪುಭೇದ (ಗೃಶಾಸ್ತ್ರ ೪-೨೪೯-೦೩೩೨). [ಸಂ. ಮೃತ್ತಿಕಾ]

ಮೃತ್ತಿಕ್ಕೆ (ನಾ). [ಅಶ್ವಶಾ] ಕುದುರೆಯ ಶರೀರದ ಒಂದು ಭಾಗ ; ಗುದದ ಎರಡು ಪಕ್ಕ : ಬಾಲದ ಕೆಬಗುಂ ಗುದಮುಂ ಲೀದೆಯ ಗುದ ದರಡು ಕೆಲವೆ ಮೃತ್ತಿಕೆಯೆಂಬರ್ ತಾಲುವ ಮೃತ್ತಿಗೆ ಕೆಬಗುಂ ಪೇಟೂರೋಮಸ್ಥಮೆಂಬ ಪೆಸರಂತಕ್ಕುಂ (ಅಶ್ವಶಾ. ೯-೧೬) ; ಬಾಲದ ಕೆಳಗಂ ಗುವಮೆಂಬರು ಆ ಗುದದ ಎರಡು ಕೆಲಸಂ ಮೃತ್ತಿಕೆಯೆಂಬರು (ಅಶ್ವಶಾ. ೯-೦೬). [?]

ಮೃತ್ತಿಗೆ (ನಾ). ೧. ಮಣ್ಣು : ಮೃತ್ತಿಗೆಯಲ್ಲಿ ಗಂಧಶಕ್ತಿಯಾಗಿಯುಂ ಜಲದಲ್ಲಿ ರಸಶಕ್ತಿಯಾಗಿಯುಂ . . . ಆವುಗಳಿಗೆಲ್ಲ ಅದಿಯಾಗಿ

ಇರುವದೆ ವಮಿಯು (ಕೃತಿ. ೮೨-೦೨). ೨. ಪವಿತ್ರವಾದ ಮಣ್ಣು. – ಮೃತ್ತಿಕೆ : ನಾನು ಅವ್ಯಾಜಯು ಹತ್ತಿರವಿದ್ದ ತಟ್ಟಿಗಿಂದ ವಿಭೂತಿ ಮೃತ್ತಿಗೆ ಹೂವಿನ ಬುಟ್ಟದೆಲ್ಲವನ್ನು ಅವರ ಹತ್ತಿರವಿಟ್ಟಿ (ಕೈಗಾಳ್ಳ. ೦೨). [<ಸಂ. ಮೃತ್ತಿಕಾ]

ಮೃತ್ತಿಸು (ಕ್ರಿ). ಮಣ್ಣನ್ನು ಮೆತ್ತು. – ಲೇಪಿಸು : ಕಾಯ್ದ ಕಾಯ್ದಿಂದ ದೇಹವೆಲ್ಲೊರ್ದಿ ಬರ್ದಿಸುತ್ತಮಾಪಾದಮಸ್ತಕಂಬರಂ ಮೃತ್ತಿಸಿ ಪತ್ತಿ ತಿದಿಯುಗಿಯುತ್ತೆ (ಕಇಪ್ಪ. ೦೦-೦೦ ಪ). [ಮೃತ್ತು + – ಇಸು]

ಮೃತ್ತು (ನಾ). ಮಣ್ಣು : ಮೃತ್ತಿಕೆ : ಮೃತ್ತುವಿನಿಂದಾದ ಮಡಕೆ ಮರಳಿ ಮಣ್ಣಪ್ಪುದೆ (ಕಪಸಂ. ೪೪೭-೩೨). ' ಮೃತ್ತಿಸು ' ಪರಾ.

[<ಸಂ. ಮೃದ್]

ಮೃತ್ಪಾತ್ರ (ನಾ). ಮಣ್ಣಿನ ಪಾತ್ರೆ : ಮಡಕೆ : ತಪೋವನಕ್ಕೆ ಪೋಪ ಭೃಗ್ವಾದಿ ದ್ರವ್ಯಾರ್ಥಿಯಾಗಿ ಬಂದ ಕುಂಭಸಂಭವನಂ ಕಂಡು ಕನಕ ಪಾತ್ರಕ್ಕುವಿಯುಮಿಲ್ಲಪ್ಪ ದಜುಂ ಮೃತ್ಪಾತ್ರದೊಳರ್ಘ್ಯಮೆತ್ತಿ ಪೂಜಿಸಿ (ಕಂಪಣಾ. ೩-೧೫ ಪ). [ಸಂ.]

ಮೃತ್ಪಿಂಡ (ನಾ). ೧. ಮಣ್ಣಿನ ಮುದ್ದೆ. – ಉಂಡೆ : ಮೃತ್ಪಿಂಡದ ಹದನ ಚಿಕ್ಕಯ ಚಿತ್ರದ ಕರದಂತೆ ಚಿತ್ರಜ್ಞನ ಚಿತ್ರದ ಲೇಖನಿಯ ಒಪ್ಪದಂತೆ (ಪೂಗಪಪ. ೦೯೯-೬೨೬); ವಿಶ್ವವಿನ್ಮಂಭರೆಯುಂ ಮೃತ್ಪಿಂಡಮಾತ್ರಾಕೃತಿಯೆನೆ ಬಗೆದಂ (ಕಂದ್ರಪು. ೫೦-೦೫೬). ೨. (ಆಲಂ) ದೇಹ ; ಶರೀರ : " ಮನುಷ್ಯಶರೀರ, ಪಾರ್ಥಿವದೇಹ. ಮೃತ್ಪಿಂಡ " (Slime. ೫೦೬೭).

[ಸಂ.]

ಮೃತ್ಯು (ನಾ). ೧. ಸಾವು : ಮರಣ : " ನಿಧನಂ, ಪಾಶಃ, ಮೃತ್ಯುಃ . . . ದೀರ್ಘನಿದ್ರಾ – ಈ ೧೨ ಸಾವಿ " (ಹಾಶಬು. ೦೦೬-೬); ಮೃತ್ಯು ಮುಟ್ಟಿದ ಮುನ್ನ ಪೂಜಿಸು ನಮ್ಮ ಕೂಡಲಸಂಗಮದೇವನ (ಬಸ. ೦೬೦); ಅರಣ್ಯದೊಳಿರುವ ಅರಿಯು ಮರವ ಸ್ವಕರದ್ವಯದಿಂಗಳಿಂ ಮುಟ್ಟಿ ಸ್ಥರಿಸಿ ದೊಡೆ ಸೂರೆಂಟು ವೇಳೆಯುಂ ಪರಿದು ಪೋಪುದು ಮೃತ್ಯು (ನಗಣಾ. ೪-೬೬). ೨. ಸಾವಿನ ಅಧಿದೇವತೆ ; ಯಮ : " ಪ್ರೇತಪತಿ ಸಮವರ್ತಿ ಮೃತ್ಯು ಕಾಳಿಂದಿ . . . ಕೃತಾಂತನಕ್ಕುಂ " (ಪುಂಗಣಾ. ೦೩-೦೦); ಮೃತ್ಯು ವಿನ ಬಾಯಿಗೆ ತುತ್ತಾಗದೇಕೆ (ಬಸ. ೦೩೮). ೩. ಸಾವಿನ ದೇವತೆ ; ಮೃತ್ಯುದೇವತೆ : ಬ್ರಹ್ಮನ ಕಿತ್ಪಡದ ಕೋಪದಲಿ ಜನಿಸಿದ ರುದ್ರನಿಂ ಬಳಿಕ ಮೃತ್ಯುವೆಂದವಳಾದಳಾ ಸತಿಯತ್ತ ತಂಬನಿ ರುದ್ರಗಳಾದವು ಶತ್ತಿಗರು ಷಡುವರ್ಗ ಕಾಮ ಕ್ರೋಧ ಮೊದಲಾಗಿ (ಕಾಪ್ಯಾಕ್ರೋ. ೬-೩೯). ' ಮೃತ್ಯುದೇವಿ ' ಪರಾ. [ಸಂ.]

ಮೃತ್ಯುಂಜಯ (ನಾ). ೧. ಯಮನನ್ನು ಜಯಿಸಿದವನು : ಶಿವ : ತ್ರಾಹಿ ಮೃತ್ಯುಂಜಯ ತಿನಾಕಿ. ತ್ರಾಹಿ ಲೋಕೇಶ (ಕುಪ್ಪಾಳ. ೬-೧೩); ಮೃತ್ಯುಂಜಯನನಜಿಯದೆ ಸಂಸಾರವೆಂಬ ಮೃತ್ಯುವಿನ ಬಾಯ ತುತ್ತಾಗಿ ಉತ್ಪತ್ತಿ ಸ್ಥಿತಿ ಪ್ರಳಯಕ್ಕಿಳಗಾದಿರಲ್ಲಾ (ನಿಡ್ಡಣ. ೩೦-೦೫೦). ೨. (ಸಾವನ್ನು ಶಪ್ಪಿಸುವುದೆಂದು ನಂಬಿ ಜಪಿಸುವ) ಒಂದು ಮಂತ್ರ : ಗಾಯತ್ರಿ ಮೃತ್ಯುಂಜಯು . . . ಭೈರವಾದಿ ಮಹಾಮಂತ್ರಂಗಳಂ . . . ಬೇಜಿ ಬೇಜಿ ಪಿಪೇಕಿಸಿ ನೋಡಿ (ಬಪೋ. ೭೫). ' ಮೃತ್ಯುಂಜಯ ಮಂತ್ರ ' ಪರಾ. ೩. [ದೈಸ] ಜಿಸ ; ಅರ್ಯಾಂತ. [ಸಂ.]

ಮೃತ್ಯುಂಜಯತೆ (ನಾ). ಸಾವನ್ನು ಗೆಲ್ಲುವ ಶಕ್ತಿ : ಮರಣವನ್ನು ಜಯಿಸುವ ಬಲ : ವಿದ್ವದ್ದನು ವಿಶ್ಲೇಷ್ಯತೆ ನರನ ಮೃತ್ಯುಂಜಯತೆ (ಪುಂಕುಳ. ೧೭೨). [ಸಂ. ಮೃತ್ಯುಂಜಯತಾ]

ಮೃತ್ಯುಂಜಯಮಂತ್ರ (ನಾ). = ಮೃತ್ಯುಂಜಯ ೨ : ತಾನುಮುಡಿಯುಂ ತನ್ನುನೀಶ್ವರದಿವ್ಯಜಟಾಸಮೃತ್ಯುಂಜಯಮಂತ್ರಸಾಮರ್ಥ್ಯಸಂಧಾರ್ಯಮಾಣಜೀವಿತರಾಗಿರ್ದರ್ (ಕಂದ್ರಪು. ೩-೬೬ ಪ). [ಸಂ.]

ಮೃತ್ಯುಂಜಯಯಜ್ಞ (ನಾ). [ವೈದ್ಯಶಾ] ಒಂದು ಬಗೆಯ ಔಷಧಿ : ಮೃತ್ಯುಂಜಯ ಯ : – (ಸನ್ನಿಗೆ) – ವತ್ಸನಾಭಿ ಗ ೦ ಕೂತ. ಜಾಗಭೃ ಗ ೧ ತೂಕ, ರಸ ಗ ೨ ತೂಕ. ಇವಂ ಅರ್ಕಕ್ಷೀರದಲ್ಲಿ ಚೆನ್ನಾಗಿ ಮರ್ದಿಸಿ . . . ತೇದು ಹಚ್ಚುವುದು (ಅವೈ. ೯೯). [ಸಂ.]

ಮೃತ್ಯುದೇವತೆ (ನಾ). ಮರಣದ ಅಧಿದೇವತೆ. ; ಸಾವಿನ ದೇವತೆ : ಮರ್ತ್ಯಲೋಕದ ಉದರದೊಳಗೆ ಮೃತ್ಯುದೇವತೆ ಕಕ್ಕಿ ಕುದುರೆಯ ಹಡೆದು ಪುತ್ರೋತ್ಸಾಹವ ಮಾಡುವದ ಕಂಡು . . . ಬೆಸಗೊಳಲು (ನಿಡ್ಡಣ. ೦೧೬-೧೩೬); ಸ್ವತಃ ಮೃತ್ಯುದೇವತೆ ಬಾಗಿಲೆದುರು ಬಂದರೂ ಕವಿ ಅವಳನ್ನು ಸ್ವಾಗತಿಸುತ್ತಾನೆ (ಕಬಾಗಣ. ೦೬). [ಸಂ. ಮೃತ್ಯುದೇವತಾ]

ಮೃತ್ಯುದೇವಿ (ನಾ). = ಮೃತ್ಯುದೇವತೆ : ಕಡಿದ ತಲೆಯ ನಿಮಾಳಿ ಬೆತ್ತುವರುಡಿದ ಕೈಗಳ ಮೃತ್ಯುದೇವಿಗೆ ಕೊಡುವ ಹರಕೆಯ ಕಂಡು ರಾವಣ ನೋಡಿ ಮೆಚ್ಚಿದ್ದ (ಲಾಕಣ. ೩೦-೦೩). [ಸಂ. ಮೃತ್ಯುದೇವೀ]

ಮೃತ್ಯುಪತ್ರ (ನಾ). = ಮೃತಪತ್ರ : ಮೃತ್ಯುಪತ್ರವನೀಗಲೇ ನಾನೇಕೆ ಬರೆದೆನೊ ತೀಲುಮದು (ಪಂಕುಬ. ೩೨-೩); ರಾತ್ರಿ ಎದ್ದು ಕುಳಿತು ಬೆಳಕರು ತಮ್ಮ ಮೃತ್ಯುಪತ್ರ ಸಿದ್ಧಪಡಿಸಿದರು (ಕೃಚಿಪ, ೧೧೪).

[ಸಂ.]

ಮೃತ್ಯುಮುಖ (ನಾ). (ಆಲಂ) ಮರಣದ ಸಾಮೀಪ್ಯ : ಚಕ್ರವರ್ತಿಯು ಮೃತ್ಯುಮುಖದಿಂದ ಪಾರಾದುದು ಇಡೀರಾಜ್ಯವನ್ನೇ ಆನಂದದಿಂದ ತುಂಬಿಸಿತು (ಮುಚಿ. ೨೦); ಹದಿನೈದಂದಿವಸ ಮೃತ್ಯುಮುಖದಲ್ಲಿ ಪ್ರವೇಶಿಸಿದ ಮೆಹಬೂಬ ಒಂದು ದಿನ . . . ಜ್ವರದಿಂದ ಪಾರಾದಳು (ಗಂಪೂಜು. ೨೦೦).

[ಸಂ.]

ಮೃತ್ಯುರಾಜ (ನಾ). ಸಾವಿನ ಅಧಿಪತಿ ; ಯಮ : ಅಘವೈರಿಯಲ್ಲದೆ ದುಃಖದಂ ಗೆಲಲಾರ್ಕುಮೆ ಮೃತ್ಯುರಾಜನಂ (ಅಂಪ್ರ. ೩-೮).

[ಸಂ. ಮೃತ್ಯುರಾಜ್]

ಮೃತ್ಯುಲೋಕ (ನಾ). ಯಮಲೋಕ : ಉತ್ತರಲೋಕದಲ್ಲಿ ಸತ್ಯಜ್ಞಾನಾನಂದವೆಂಬ ಅಂಗನೆ ಮೃತ್ಯುಲೋಕವನಿಳ್ದುಲು (ನಿಡ್ಡಚ. ೫೦೪-೬೬೦).

[ಸಂ.]

ಮೃತ್ಯುಶಿಲೆ (ನಾ). ಮರಣ ಹೊಂದಿದವನ ಸಮಾಧಿಯ ಮೇಲೆ ನೆಡುವ ಕಲ್ಲು : ಅಲ್ಲೆ ಒಂದು ಮೃತ್ಯುಶಿಲೆ(ಕಬರ)ಯನ್ನು ನಿಲ್ಲಿಸ ಬೇಕೆಂದು ನಿನ್ನ ಆಪ್ತಮಿತ್ರರು ಇಚ್ಛಿಸುವುದಾದರೆ . . . ನಿನ್ನ ಕವಿತೆಯ ಸಾಲನ್ನು ಕೆತ್ತಿಸಬೇಕು (ಕೃಚಿಪ. ೧೧೩). [ಸಂ. ಮೃತ್ಯುಶಿಲಾ]

ಮೃತ್ಯುಸೂತಕ (ನಾ) = ಮೃತಾಶೌಚ : ಮೃತ್ಯುಸೂತಕವು ಹನ್ನೆರಡು ದಿನವು (ಕುಂಪ್ರ. ೫೩-೨೦-೩) ; ಹೆತ್ತ ಸೂತಕ ಹತ್ತು ದಿನಗಳಿಗೆ ಪರಿಹಾರ ಮೃತ್ಯುಸೂತಕವು ಪನ್ನೊಂದು ದಿನಕೆ (ಕಲಿಪ್ರ. ೫೩-೯). [ಸಂ.]

ಮೃತ್ಯುಹರ (ನಾ). = ಮೃತ್ಯುಂಜಯ ೧ : ಆ ನರನೆಚ್ಚ ಗಜಿಗಣೆ ಗಣ್ಣಾವರಿಸಿ ಕರಂ ಮುತ್ತೆ ಮೃತ್ಯುಹರನಂಜುವನೇ (ಕಪಸಂ. ೪-೧೩). [ಸಂ.]

ಮೃತ್ತಿ (ನಾ). ೧. ಮಣ್ಣು ; ಮೃತ್ತಿಕೆ. ೨. ಫಲುವತ್ತಾದ ಮಣ್ಣು ; ಉತ್ತಮವಾದ ಮಣ್ಣು : " ಮೃತ್ತಾ, ಮೃತ್ತಾ – ಈ ೨ ಒಳ್ಳೆಹ ಮಣ್ಣ್ " (ಹಾಶಬು. ೫೬-೪) : " ಮೃತ್ತೆಯೆನೆಲು ಒಳ್ಳೆತಹ ಮಣ್ಣು " (ಪುಂಗಣಾ. ೫೪-೩). ೩. ಒಂದು ಬಗೆಯ ಸುವಾಸನೆಯ ಮಣ್ಣು. ೪. ಒಂದು ಬಗೆಯ ಸಸ್ಯ ; ತೊಗರಿಗಿಡ. [ಸಂ. ಮೃತ್ತಾ]

ಮೃತ್ತಾಸ್ಫಟ (ನಾ). ಉತ್ತಮವಾದ ಮಣ್ಣಿನಿಂದ ಮಾಡಿದ ಪಾತ್ರೆ : ಶಿರಿಪುತ್ತುಂ ಜವದಿಂ ಮುಕುಂದನಿಷ ವಿದ್ಯುದ್ವೀಕರಂ ವೈರಿಕಂಧರಮಂ ಕೊಯಿತು ತದುತ್ಪಮಾಂಗದೊಡನುದ್ದಂ ಪಾಲಿ ಮೃತ್ತಾಸ್ಫಟಂಬರಸುದ್ಯ ಮೃಜದಂಡವರ್ತನದಿಮಗ್ರಾಡಂಬರಂ ಪೊಂಗೆ ಕೋವರಚಕ್ರಂ ಶಿರವಂದದಿಂ ಶಿಖಿಮುದಾ ಚಕ್ರಂ ವಿಯಚ್ಚಕ್ರದೊಳ್ (ಜಾಂಶಿಪು. ೪-೫೪). [ಸಂ.]

ಮೃತ್ಸ್ನ (ನಾ). ೧. = ಮೃತ್ಸ್ನೆ ೧. ೨. = ಮೃತ್ಸ್ನೆ ೨: "ಮೃತ್ಸ್ನಾ-ಮೃತ್ಸ್ನಾ —ಈ ೨ ಒನ್ನೆಹ ಮಣ್" (ಅಗ್ನಿಪು. ೫೯-೪); ಪುರಂಜಾ-ಹ್ವತದ ಹೊಣ್ ಸುರಮದಗಜಕೋಡಮಣ್ಣಮುಖಿಮಂ ಪಾಗರಮನೆಯ ಮೃತ್ಸ್ನಿಕಮುಮೂ ವರನಾಥಾಲಯದ ಮೃತ್ಸ್ನೆಯುಂ ಹೃಲ್ಲೀಪಂ (ಅಶ್ವಾ. ೯-೦೯). ೩. = ಮೃತ್ಸೆ ೩: "ಅಥೋ, ಈಕ್ಷೀ- ಮೃತ್ಸಾ-... ಸುರಾತ್ಮಜಂ – ೬ ವಲುಮಣ್ಣಂಬ ಗಂಧದ್ರವ್ಯ" (ಜಾಜಾ- ೦೦೦). ೪. = ಮೃತ್ಸೆ ೪. [ಸಂ. ಮೃತ್ಸಾ-]

ಮೃದಂಗ (ನಾ). ೧. ಒಂದು ಬಗೆಯ ಚರ್ಮವಾದ್ಯ: "ಮೃದಂಗಃ, ಮುರಜಃ—ಈ ೨ ಮದ್ದಳೆ" (ಅಜಾಜಾ. ೦೭-೧೭); ಉದಿತ ಮೃದಂಗ ಧ್ವಾಪಸ್ಪೃತ್ಸ್ಪಯೂರಾಂಚಿತಮೆಸವುದು ಕಾಂತಂ ದಿಃವುಜಾನಿಶಾಂತಂ (ಕಂಪ್ರಕೃ. ೦-೦೩೦); ಆಗಿನ ಪಟುಹ ಮೃದಂಗ ಕಹಳಾದಿಗಳ ಕಳಕಳರಭಸ ದಶದಿಕ್ಕುಗಳ ಮಾತಾಡಿಸೆ ಮಹಾಬಲ ತೆರಳಿತಿಭವರಿಯು (ಭಾಶ್ರಾ೦೯. ೦-೨೬). ೨. ಶಬ್ದ; ಘೋಷ. ೩. ಬಿದಿರಿನ ಜಲ್ಲೆ. [ಸಂ.]

ಮೃದಂಗಫಲಿನಿ (ನಾ). ಒಂದು ಬಗೆಯ ಸಸ್ಯ: "ಹಿಲೆ ಮೃದಂಗ [ಜಾಣಾ. ಡಂಗಿ] ಫಲಿನಿ ಜಾಳಿನಿಯಕ್ಕು" (ಜಾಣಾಗಾ. ೪೪-೪೪).

[ಸಂ. ಮೃದಂಗಫಲಿನೀ]

ಮೃದಂಗಯತಿ (ನಾ). [ಸಂಗೀತ] ಆರು ಬಗೆಯ ಯತಿಗಳಲ್ಲಿ ಒಂದು: ಯತಿಯಲ್ಲಿ ಆರು ವಿಧ. ಕ್ರಮವಾಗಿ ಅವು – (೧) ಸಮಯತಿ (೨) ಗೋಪುಚ್ಛಯತಿ (೩) ಶ್ರೋತೋವಾಹಯತಿ (೪) ದಮರುಯತಿ (೫) ಮೃದಂಗಯತಿ ಮತ್ತು (೬) ವಿಷಮಯತಿ (ಸಂಗೀಪಾ. ೫೭). [ಸಂ.]

ಮೃದಂಗವಾದಕ (ನಾ). ಮೃದಂಗವನ್ನು ಬಾರಿಸುವವನು: ಭಾರತ ಸಂಗೀತದಲ್ಲಿ ಮೃದಂಗವಾದಕರು ಸಂಗೀತಗಾರರಿಗೆ ಏಡುವ ಲಯವಿನ್ಯಾಸದ ನೆರವು... ಪಾಶ್ಚಾತ್ಯಸಂಗೀತದಲ್ಲಿ ಕಾಣಬಿಗೆದಂತಹುದು (ಸಂಗೀಕ. ೦೦೪).

[ಸಂ.]

ಮೃದು (ಗು). ೧. ಮೆದುವಾದ; ಮೆತ್ತಗಿರುವ: 'ಮೃದುಗೂಟ್ಟು', 'ಮೃದುತಲ್ಪ' ಪರಾ. ೨. ಕೋಮಲವಾದ: ಸುಕುಮಾರವಾದ; ನಾಜೂಕಾದ: ಮೃದುತರಕಪೋಲಫಲಕಂ... ಮುದಮಂ ಪಡೆದತ್ತು (ಅಜಾ. ೬-೦೬); ಮೃದುಕುಟಿಲಶಿರೋರುಹಂ ಸರೋರುಹವದನಂ (ಶಾಪ್ರ. ೦-೫೯); ಮೃದುಕುಸುಪದ್ಮಕೋಶಾಗ್ರದೊಳೆಱಗಿದ ತುಂಬಿಯೆಸೆದುದು (ಕಂಪ್ರಕೃ. ೬-೦೦). ೩. ನಿಧಾನವಾದ; ಮಂದವಾದ; ಮೆಲು: ಮಂಡಲದ ತುದುಗೆಯಂ ಕೆಯ್ಮಂದಿಂ ಬಗೆಯೞ್ದು ತುದಿಯುಂ ಮದವದ್ವೇತಂಡಮೃದುಗತಿಗೆ ಮಾಣಕಭಂಡಾರದ ದೆಸೆ ಸಮರಿಯರ್ ನಡೆಯಿಸುವರ್ (ಶಾಪ್ರ. ೯-೦೬೬); ಮೃದುಗತಿವಿಲೋಲ ಹಾರರ್ ಪ್ರದಕ್ಷಿಣಂ ಬಂದು... ನೂಡಿಸಿದರ್' (ಪಜಿ. ೦೦-೦೬೬) 'ಮೃದುಯಾನ' ಪರಾ. ೪. ಇಂಪಾದ; ಮಧುರವಾದ: ಮೃದು ಕಳಕಂಠವಾದ್ಯನಿಸದಂ ಪೊಜಮೊಳ್ಕ ಪೆದಬ್ದಿ ಭೃಂಗಸಂಘದ ಮೃದುಗೇಯ ನಿಸ್ವನಮುದುಳ್ಕೆ (ಕಾಮಚಾ. ೯-೫೪). 'ಮೃದುವಚನ' ಪರಾ. ೫. ಶಾಂತವಾದ; ಸೌಮ್ಯವಾದ. ೬. ಆಶಕ್ತವಾದ; ದುರ್ಬಲವಾದ. ೭. ಮೊಂಡಾದ; ಹರಿತವಲ್ಲದ. (ನಾ). ೮. ಮಿದುವು; ಮೆತುವು: ಎನಿಸು ಕಾಲ ಕಲ್ಲು ನೀರೊಳಗಿರ್ದೊಡಂ ನೆನೆದು ಮೃದುವಾಗಬಲ್ಲುದೆ (ಜಾಪ್ರ. ೯೪). ೯. ಕೋಮಲವಾಗಿರುವಿಕೆ: ಸುಕುಮಾರತೆ: "ವಯಃ —ಮೃದುವೆಂ, ಭರ್ಮವುಂ, ನ್ಯಾಯವುಂ" (ಶಾಪ್ರ. ೦೩೦); ತುಳು ಎಂಬ ಪದಕ್ಕೆ ಮೃದು ಎಂಬ ಅರ್ಥವೆಂದು ಹೇಳುತ್ತಾರೆ (ಶ್ರಾಪ್ರ. ೦೦೨). ೧೦. ಒಂದು ಗ್ರಹದ ಹೆಸರು; ಶನಿಗ್ರಹ. [ಸಂ.]

ಮೃದುಗಂಧಿ (ನಾ). ಒಂದು ಬಗೆಯ ಸಸ್ಯ: "ಜಾಪತ್ರ:– ಮೃದು ಗಂಧಿ" (ಓಪ್ರ. ೦೦೬). [ಸಂ. ಮೃದುಗಂಧೀ]

ಮೃದುಗನ್ನಡ (ನಾ). ಸುಕುಮಾರವಾದ ಕನ್ನಡಭಾಷೆ: ಸಂದರ್ಭಂ ಮೃದುಗನ್ನಡಂ... ಬಹುಭೇದ ಕನ್ನಡಗಳಂ ಬಲ್ಲಂ ಕವೀಶಂ ದಿಟಂ (ಕಂಪ್ರ. ೯-೩). [ಮೃದು + ಕನ್ನಡ]

ಮೃದುಗೂಟ್ಟು (ನಾ). ಮೆದುವಾದ ಅನ್ನ; ಮೆತ್ತಗಿರುವ ಅನ್ನ: ನೆಲ್ಲನಟ್ಟು ಮೃದುಗೂಟವಱಿಸುವ... ಕಟ್ಟಿಗ್ಗನಂ ಪೊಲ್ಲುಂ (ಕಪ್ರಾಪ್ರ. ೦೨-೨೯ ಶ). [ಮೃದು + ಕೂಟ್ಟು]

ಮೃದುಜಲ (ನಾ). ಗಡುಸಲ್ಲದ ನೀರು; ಕಠಿನವಲ್ಲದ ನೀರು: ನೀರೊಳಗೆ ಕ್ಷಾರಾಂಶವ್ಕ ಕಡಿಮೆ ಇದ್ದರೆ ಅದಕ್ಕೆ ಮೃದುಜಲವೆನ್ನುವರು (ಮೂಜಾಪ್ರ. ೬-೨೪). [ಸಂ.]

ಮೃದುತಲ್ಪ, ಮೃದುತಲ್ಪ (ನಾ). ಮಿದುವಾದ ಹಾಸಿಗೆ: ಮೆತ್ತನೆಯ ಶಯ್ಯೆ: ಪೊಳೆವ ಪಚ್ಚೆದೊಳೆ ಸೂಗಯಿಸುವ ಮೃದುತಲ್ಪದೊಳ್... ಭಾವಿಜಿಸಜನನಿ ಸತಿ ಪವಡಿಸಿ ನಿಶಾಂತದೊಳ್ (ಅಂಪ್ರ. ೬-೨೬ ಕಗ). ಮೃದುತಲ್ಪ: ನಿಪ್ಪೊಸತಿನೆ ಸೊಗಯಿಪ ಮೃದುತಲ್ಪದೊಳಾತಂ ವಿಲಾಸದಿಂ ಪವಡಿಪುದಂ (ಸುಕುಪ್ರ. ೦೦-೦೦೩). [ಸಂ.]

ಮೃದುತಲ್ಪ 'ಮೃದುತಲ್ಪ' ನೋ.

ಮೃದುತ್ವ (ನಾ). ಕೋಮಲತೆ: ನಾಜೂಕು: ಸುಕುಮಾರತೆ: ಒಂದು ರೇಖೆ ಮೃದುತ್ವ ಅಥವಾ ಗಡುಸುತನವನ್ನಷ್ಟೇ ಅಲ್ಲ ಮಾನವ ಮನೋಕಾಮನೆಗಳ ಸಮಗ್ರಸಾರವನ್ನೇ ವ್ಯಕ್ತಪಡಿಸುವುದು (ಶಾಕಥ. ೫೩೦).

[ಸಂ.]

ಮೃದುಪದ (ನಾ). ೧. ಮೃದುವಾದ ಶಬ್ದ. – ಪದ: ಇಲ್ಲಿಗಿದು ತಕ್ಕುದು ಇಲ್ಲಿಗೆ ಪೊಲ್ಲದಿದೆಂದೞಿದು ಸಮಂ ಬಲ್ಲಂತಲ್ಲಿಂ ನೆಲ್ಲುಂ ಮೊಸರುಂ ಗುಡಿದಂತಲ್ಲದೆ ತಲ್ಲಣಿಸದಲಸದಿರಿ ಮೃದುಪದಮಂ (ಕಥಾ. ೩-೨೪). ೨. ಕೋಮಲವಾದ ಪಾದ: ಸುರಾಸುರೇಂದ್ರವ್ಯಂದವಂದಿತಪಾದಂಗೆ ಮೃದುಪದಂಗಳೊಳ್ ಕಳರವರಚಿತಮಣಿನೂಪುರಂಗಳಂ ತುಡಿಸಿ (ಅಂಪ್ರ. ೬-೦೦೬ ಶ); ಮೃದುಪದಪಂಕಜಂ ಪಡೆದು ಕೆಂಪು ಮಾರಲ್ದು ನಿಜಾವಾಸಾಂಶು ಪಾಸಾದ ದುಗುಲಕ್ಕೆ ಧಾಸರದ ಮಾಸರಮಂ ಕುಡೆ (ಅಂಪ್ರ. ೯-೦೩). ೧. ೨: ವಿಳಸಿತಮಪ್ಪಲಂಕರಣಶಾಸ್ತ್ರದವೊಲ್ಸಗಳ್ ಪ್ರಸನ್ನಮಂ ಕಳೆದು... ಮೃದುಪದನ್ಯಸನೋಚಿತಮಾದ್ಯುದ್ಯಾತಳಂ (ಜಾಂಭಿಪ್ರ. ೦೨-೨೩). [ಸಂ.]

ಮೃದುಪದಗತಿ (ನಾ). ೧. (ನರ್ತನದಲ್ಲಿ) ಕೋಮಲವಾದ ಪಾದಗಳ ಗಮನ. – ಚಲನೆ: ಮೃದುಪದಗತಿಯಿಲ್ಲದ ಲಾಸ್ಯಮಿಶ್ರತದೇಂ ಪೆಜ್ಜದವುದೇ (ಕಂಪ್ರಕೃ. ೬-೧೩). ೨. [ವ್ಯಾಕ] ಉಚ್ಚರಿಸಲು ಸುಲಭವಾದ, ಕೋಮಲವಾದ ಅಕ್ಷರಗಳಿಂದ ಕೂಡಿರುವುದು. ೧. ೨: ಮೃದುಪದಗತಿಯಿಂ ರಸಭಾವದ ಪೆಜ್ಜಿಂ ಘನ್ಯವನಿತೆಯರ್ ಕೃತ ಸೌಂದರ್ಯದ ಜಾತುರ್ಯದ ಹಸಿಮೆನೆ ವಿದಗ್ಧಬುಧಜನದ ಮನಮನಲೆಯಲೆವೆಡಾ (ಅಂಪ್ರ. ೦-೦೬). [ಸಂ.]

ಮೃದುಪಾಕ (ನಾ). [ವೈದ್ಯ] ಮೃದು, ಮಧ್ಯ (ಚಿಕ್ಕಣ). ಖರಗಳೆಂಬ ಮೂರು ಬಗೆಯ ಪಾಕಗಳಲ್ಲಿ ಒಂದು; (ಔಷಧಪದಾರ್ಥಗಳನ್ನು ತುಪ್ಪ, ಎಣ್ಣೆಗಳಲ್ಲಿ ಕಾಯಿಸಿ ಇಳಿಸುವ) ಎಳೆಯ ಪಾಕದ ಹದ: ಮೃದುಪಾಕಕ್ಕೆ ಒಟ್ಟಿದ ತೆಗೆದು ನೋಡಲು ಬೆರಳ ಹತ್ತದೆ ಇರುವುದು (ಕೃಕೃಸಾ. ೧೦ ೦೩೦); ಪಸ್ಯ. ಮಾಡಿಸುವುದಕ್ಕೆ ತೈಲವನ್ನಾಗಲೀ ಘೃತವನ್ನಾಗಲೀ ಮೃದುಪಾಕದಲ್ಲಿ ಇಳಿಸಬೇಕು (ಶಶಕ್ಕ. XIII, ಕೃಚ್ಛಾ೦೬). 'ಖರಪಾಕ'. 'ಚಿಕ್ಕಣಪಾಕ' ಪರಾ. [ಸಂ.]

ಮೃದುಬಂಧ (ನಾ). ಕೋಮಲವಾದ ಶಬ್ದಗಳ ಜೋಡಣೆ. – ರಚನೆ: ಮೃಷ್ಟಸರವರ್ಣಾನುಗಮಾಪ್ಯದವಿರಚನೆಯೊಳಗೆ ತೋರ್ಪುದದು ಮೃದು ಬಂಧಂ (ಕಥಾ. ೩-೩೭) : ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದು

ವೆದೊಂದಿ ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ಮುದು ತಳ್ರೊಡೆ ಕಾವ್ಯಬಂಧಮೊವ್ವುಗುಂ (ಕಂಚಿಗಾ. ೦-೪). [ಸಂ.]

ಮೃದುಬಂಧನ (ನಾ). = ಮೃದುಬಾಧ: ಶಾಂತಿಸ್ತೋರಣಮೇಂ ಕರಂ ನವರಸಮೇಂ ಸಮರ್ಥಮುತಮೇಂ ಮೃದುಬಂಧನಮೇಂ ಪ್ರಸನ್ನಮೋ (ಕಾಂಚಿಪು. ೦-೪೭). [ಸಂ.]

ಮೃದುಯಾನ (ನಾ). ನಿಧಾನವಾದ ನಡಗೆ; ಮಂದಗಮನ: ಸೋಗೆನವಿಲ್ಬಲ್ಮುಡಿಗೆ ಭೃಂಗಂ ಕುಂತಲಕ್ಕಂಚಿಗಳ್ ಮೃದ್ವಂಯಾನಕ್ಕೆ ಪಿಕಂ ರವಕ್ಕೆಳಸೆ ತಂತಮ್ಮ ಸ್ವಜಾತೀಯ ಸಂಮದದಿಂ ಪಾವುರಿಯರ್ ಜಿತಾಮರಿ ಯರಿರ್ಕರ್ಕಾದು ಕೇದಾರಮಂ (ಪುಭಿಪು. ೩-೨೦) ; ಮೃದುಯಾನದಿಂ ಪತಿಯುಮಾ ಸತಿಯುಂ ಬರೆ (ತಾಶ್ರಪು. ೬-೦೦೯) ; ಮೃದುಯಾನಂ ಗಜಯಾನಮಂ ಜಯಿಯೆ . . . ರತ್ನಕಳಶಾದರ್ಶಂಗಳಂ ತಾಳ್ದು ತಾನಿದಿರ್ಂದಂತ್ತುರುಭೂಷಣಮ್ಮೆತಿಯುತಾಂಗಂ ಶೈವಕಾತಾಜನಂ (ಕ್ಷತ್ರ. ೩-೦೩). [ಸಂ.]

ಮೃದುರೇಖೆ (ನಾ). ತೆಳುವಾಗಿ ಎಳೆದಿರುವ ಗೆರೆ ; ಸೂಕ್ಷ್ಮರೇಖೆ : ಲಾಕ್ಷಾರಸರೇಖಾಶುದ್ಧಿಯುಮಂ ನೇತ್ರಕ್ಕಂ ಸೂತ್ರಕ್ಕಮಳವಡಿಪ ದೀಕ್ಷೆಯ ಮುಮುಷ್ಣ ಭಂಗಿದುಮಂ ಮೃದುರೇಖಾವಿಳಾಸಮುಮಂ ಪರಿಭಾವಿಸಿ ನೋಡಿ (ಪುಭಿಪು. ೩-೮೨). [ಸಂ. ಮೃದುರೇಖಾ]

ಮೃದುಲ ಮೃದುಳ (ಗು). ೧. ಮೆದುವಾದ ; ಕೋಮಲವಾದ : ಅವನ ಕೈಯು ಟೇಬಲ್ಲಿನ ಕೆಳಗಿನಿಂದ ಹಾಯ್ದು ಬಿಲಿಸಳ ಕರದ ಮೃದುಲಸ್ಪರ್ಶ ವನ್ನು ಪಡೆದಿತ್ತು (ಸಮೀ. ೧೦೩). ೨. ಇಂಪಾದ ; ಮಧುರವಾದ : ಮೃದುಲವಚಶ್ಶೋಭಿತೆ ತಳ್ವದೆ ತಚ್ಚವಧದ್ಯನಿಂತು ನುಡಿಯಿರ್ದಗೊಳಲಾ ವುದಿವಸುಗೆಯ್ದು ಪೊಸುಸಮಂ ಪಟ್ಟಿದಿಂ ಪೊಜಮುಟ್ಟು ಪೋದಳ್ (ಅಗ್ಗಳ. ೬-೩೬). (ನಾ). ೩. ಕೋಮಲವಾದುದು : ಕಾಣುತಿಹುದದೊ ನೀಲದೂರಕ್ಕೆ ಮೃದುಲಮೆನೆ ತೋರ್ಪ ಶಿಖರೇಶ್ವರಂ (ಶ್ರೀಶಾಪು. ೦೫೬-೦೫೭) ; ಸುಜಸರ ಚಿತ್ತವ ಸುಖಿದೊಳು ಮೃದುಲವು ಕಷ್ಟದೊಳ ತುಳಕರ್ಕಶವು (ಶಾಂಚಿಪು. ೨೦೬-೬೬). ಮೃದುಳ : ೧. ಪಜ್ಜಳಿಪ ಬಜ್ಜುರವಸೆಜ್ಜಿ ವನೆಯ ಸಿರಿಮಂಚದ ಸಿರಿಸಮೃದುಳತಳ್ಪಸ್ಥಳವಲ್ಲಿ (ಶಾಚಪು. ೦೦-೦೫೩ ಪ). [ಸಂ.]

ಮೃದುಲತೆ೧ (ನಾ). ಕೋಮಲವಾದ ಬಳ್ಳಿ : ಮೃದುಲತೆಯುಂ ಬಿಸಕಾಂಡದ ಮೃದುಲತೆಯುಂ ಜಯಿಸುವಮಳಬಾಹಾಲತೆಯೊಳ್ ಪುದಿದೆಳೆದಳರಂ ಪೋಲ್ತಿಪ್ಪ ದಿದೆನೆ ಕರಮೆಸೆದುದವಳ ಕರಸರಸಿರುಹಂ (ಶಾಚಪು. ೬-೮೨). [ಸಂ. ಮೃದುಲತಾ (ಮೃದು + ಲತಾ)]

ಮೃದುಲತೆ೨ (ನಾ). ಮಾರ್ದವತೆ : ಕೋಮಲತೆ : ಮೃದುತ್ವ : ಮೃದುಲತೆಯುಂ ಬಿಸಕಾಂಡದ ಮೃದುಲತೆಯುಂ ಜಯಿಸುವಮಳಬಾಹಾಲತೆ ದೊಳ್ ಪುದಿದೆಳೆದಳರಂ ಪೋಲ್ತಿಪ್ಪ ದಿದೆನೆ ಕರಮೆಸೆದುದವಳ ಕರಸರಸಿರುಹಂ (ಶಾಚಪು. ೬-೮೨) ; ಕೂರ್ಮಗೆ ಪಾಣಿವ ಮೃದುಲತೆಯಿರ್ಪುದವನೆರ್ದೆಯ ಕರ್ಬುನಿಕೆ (ಶ್ರೀಶಾಪು. ೭೦೬-೭೫೬). [ಸಂ. ಮೃದುಲತಾ]

ಮೃದುವಚನ (ನಾ). ಮಧುರವಾದ ಮಾತು ; ಸವಿನುಡಿ : ಹಿತಮಿತ ಮೃದುವಚನು ಲಲಿತಮಧುರಯುಂವರಬೇಷಂ (ಅಪಾ. ೦-೨೪) ; ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ ಮೃದುವಚನವೇ ಸಕಲಜಪಂಗಳಯ್ಯಾ (ಬಸ. ೨೧೨). [ಸಂ.]

ಮೃದುವಪು (ನಾ). ೧. ಕೋಮಲವಾದ ಶರೀರ. = ದೇಹ. ೨. ಕೋಮಲವಾದ ಶರೀರವುಳ್ಳವನು : ಇರೆ ಲಗ್ನಕ್ಕೆ ಚತುರ್ಥದೊಳ್ ಹಿವತಕರಂ ಸತ್ಪುತ್ರವಿಸ್ತಾರ್ಥಂ . . . ಅರಾತಿಸ್ಥಾನದೊಳ್ ಕೂಡೆ ಪಿಮ್ಮರ ನಾಲಸ್ಯಸಮನ್ವಿತಂ ಮೃದುವಪುಃಕಾಮಾಗ್ನಿ ಪಾನಾರಿ (ಶಾಚಪು. ೦೬-೭). [ಸಂ. ಮೃದುವಪುಸ್]

ಮೃದುವಾಕ್ಯ (ನಾ). ೧. = ಮೃದುವಚನ. ೨. ಮಧುರವಾಗಿ ಪೂತನಾಡುವವನು : ಸವಿಮಾತಿನವನು : ಮೃದುವಾಕ್ಯಂ ಸುಭಗಂ ಚವಳದೃಷ್ಟಿ ಪೇಂಪೊಪಿಜಿಸಂಸ್ತುತಿಧನಾಢ್ಯಂ . . . ಉದಕಚ್ಯಾವನಕ್ಕು [ಮೊಪ್ಪವ] ಪುರುಷಂ (ಕಾಗೋಪ. ೦೦-೧೦). [ಸಂ.]

ಮೃದುವಾತು (ನಾ). = ಮೃದುವಚನ : ಗಿಳಿಯು ಮೃದುವಾ [ಪಾಣಿ. ಪಾ]ತುಗಳ ಮಜ್ಜಗೋಗಿಲೆಯ ಮಧುರಧ್ವನಿಯು . . . ವಸವಸದ ಸಿರಿ ಬಗಗೊಳಿಸಿತ್ತೆ ಪೂರ್ವಾಭಿಭಾಷಣದಲಿ ಧನಂಜಯನ (ಕುಣ್ಮಪ. ೯-೩೩). [ಮೃದು + ಮಾತು೧]

ಮೃದುವಾಸು (ನಾ). ಮೆತ್ತಗಿರುವ ಹಾಸಿಗೆ; ಕೋಮಲವಾದ ಶಯ್ಯೆ : ಓರೆಸಿದ ಗೋಪ್ಪರಮಧ್ಯದ ಚಂದ್ರವಾರಾವತಶಯ್ಯೆಯೊಳಗೆ ತೋರ ಪಾಣಿಕಪಂಚವ್ಯಮೃದುವಾಸೊಳೊಱಗಿದ ನಾರಾಯಣನ ನೋಡಿದಳು (ಕೋಚಪ. ೨೯-೯೦). [ಮೃದು + ವಾಸು೨]

ಮೃದುವೆಜು (ಕ್ರಿ). ಕೋಮಲವಾಗಿರು; ಮೃದುತ್ವವನ್ನು ಹೊಂದಿರು : ಲಾಲಿತ ಚಿಂಬಾವುಗೆ ಮಟ್ಟಿ ಮೃದುವೆತ್ತ ಸಾರಿಯ ದುಪ್ಪಟದಾಳ್ದು ಸೋರಿಸಿ ತೊಲಗಿ ಪೋದವನ ನಟ್ಟಿಸುವ ಸರೀಲೆಯಿಂದಿದ್ದಳಾ ಕುವರಿ (ಕೋಚಪ. ೨೮-೩). [ಮೃದು + ಪೆಜು೧]

ಮೃದುಸಂದರ್ಭ (ನಾ). ಕೋಮಲವಾದ ಸನ್ನಿವೇಶಗಳಿಂದ ಕೂಡಿದುದು: ಸೂಕ್ತವಾದ ವಸ್ತುವಿನ್ಯಾಸವನ್ನುಳ್ಳದು : ಸುಂದರಂ ಸೂಕ್ತಿ ಗರ್ಭಂ ವೃದುಸಂದರ್ಭಂ ವಿಚಾರಕ್ಷಮಂ . . . ಕಾವ್ಯಮೆಂದನ್ವಿತಸುಕ ವಿಜನಾಮಜ್ಞೆ (ಕಾಪು. ೦-೩೩). [ಸಂ.]

ಮೃದುಸಿಂಜ (ನಾ). (ಕಾಲಂದುಗೆ ಮೊದಲಾದುವುಗಳ) ಇಂಪಾದ ಶಬ್ದ : ಮಂಜೀರಕ ವ್ಯಂಜುಳ ಮೃದುಸಿಂಜಪರಿಸ್ಫುರಿತಸೆಯೆ ಭರತದ ಪಲವೊಂ ಪಂಜಿಕೆಗಳಂತದೇಂ ಸುರಲಂಜಿಕೆಯರ್ ವಿಷಮಮುಂ ಸಮಂ ಮಾಡಿದರೋ (ಶಾಂಚಿಪು. ೬-೩೩). [ಸಂ. ಮೃದುಸಿಂಜಾ]

ಮೃದುಸ್ಮಿತ (ನಾ). ಮೆಲುನಗೆ ; ಮಂದಹಾಸ : ಚಂಡಕೋದಂಡ ಮನೆಕ್ಕಿ ಪೊಬ್ಬುನವಾಣನ ಪೇರುರವುಂ ಕವರ್ದಿ ಮುಂಕೊಂಡು ಮೃದು ಸ್ಮಿತಂ ಮಿಸುಗೆ ತದ್ದನುವಂ ಸೆಳೆದಂ ಕರಾಗ್ರದಿಂ (ಪಾಪಿ. ೨-೩೯). [ಸಂ.]

ಮೃದುಹೃದಯ (ನಾ). ಕೋಮಲವಾದ ಮನಸ್ಸು ; ಮೃದುವಾದ ಮನಸ್ಸು : ಮೃದುಹೃದಯದ ನಲ್ಲುರನೆಂದುದನೆನಿಸಲೆ ನಾಡ ಸುಭಗೆಯರ್ ಸುರತಮೊಳಗುಣ್ಮಿದ ತವ್ಮಿಂಚರದಿಂದೆಂದುದನೆನಿಪರ್ ಕೃತಕಶೈಲಮಂ ಕಲ್ದರ್ದೆಮಂ (ಪಜ್ಜಿಪು. ೨-೨೪). [ಸಂ.]

ಮೃದುಳ ' ಮೃದುಲ ' ನೋ.

ಮೃದೂಕ್ತಿ (ನಾ). = ಮೃದುವಚನ : ಅತಿಗಂಭೀರಮೃದೂಕ್ತಿ ವಕ್ತ್ರ ದೊಳೊಡಂಬಟ್ಟೊಪ್ಪೆ (ಶಾಂಚಿಪು. ೦-೪) ; ಕವಿಗಳ್ ನಿನ್ನ ಮೃದೂಕ್ತಿಯಂ ಬುಯಸಿ ಕೇಳುತಿರ್ಪರ್ (ಭುಚಮಾ. ೪-೬೬). [ಸಂ.]

ಮೃದೂಚ್ಚಾರಣೆ (ನಾ). ಕೋಮಲವಾದ ಉಚ್ಚಾರಣೆ : ಉದಾರತವುಂ ಕರುಣಾರಸಂ ಮೃದೂಚ್ಚಾರಣೆಯಿಂದಂ . . . ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತ[ದ]ಂ (ಕಾಣಾ. ೨-೧೯). [ಸಂ. ಮೃದೂಚ್ಚಾರಣ]

ಮೃದ್ಭಾಜನ (ನಾ). ಮಡಕೆ ಮುಂತಾದ ಮಣ್ಣಿನ ಪಾತ್ರೆ : ಪೃಥಿವ್ಯಾದಿತತ್ತ್ವಚತುಷ್ಟಯಸ್ಸಾತಮೆ ಚೈತನ್ಯಮಂ ಪುಟ್ಟಿಸುಗು ಮಪ್ಪೆಂದೊರೆಯು ಕಿಚ್ಚಿನಮ್ಮೃದ್ಭಾಜನದೆಸೆ ನೀರಬಾಣಸಿಗರುರಿಪುವ ಗಾಳಿಯ ಸಂಯೋಗದೊಳ್ ಚೈತನ್ಯಮದೇಕೆ ಪುಟ್ಟಿದು (ಕಾಂಚಿಪು. ೪-೦೩೬ ಪ). [ಸಂ.]

ಮೃದ್ವಂಗಿ೧ (ನಾ). ಕೋಮಲವಾದ ಶರೀರವನ್ನು ಉಳ್ಳವಳು ; ಕೋಮಲಾಂಗಿ : ಮೃದ್ವಂಗಿಯೆಂತಂತು ಮಣ್ಣುವಡದುಂ, ಗಾಡಿಯಿಂ ಸಡವ ಕೃಶೋದರಿಯೆಂತಂತು ಬಳ್ಕಿಯುಂ . . . ಪೂವಳ್ಳಿ ಮಡಲ್ತೆಸಗುಂ (ಅಮಾಕ್ಕ. ೩೩-೨೬). [ಸಂ. ಮೃದ್ವಂಗೀ]

ಮೃದ್ವಂಗಿ (ನಾ). ೧. ಮೆದುವಾದ ಅವಯವದಿಂದ ಕೂಡಿದ ಹುಳು : ಬಸವನ ಹುಳು ಮೊದಲಾದ ಜಂತು : ಬಾರ್ನಕಲ್ (Barnacle) ಎಂಬ ಕಠಿಣಚರ್ಮವನ್ನು ಲಿನಿಯಸ್ ಮೊದಲಾದ ವೈಜ್ಞಾನಿಕರು ಬಸವನ ಹುಳ, ಕಪ್ಪೆಯ ಚಿಪ್ಪು ನೀರಿನ ಗುಳ್ಳೆಗಳನ್ನು ಒಳಗೊಂಡ ಮೃದ್ವಂಗಿಗಳ (Mollusca) ಗುಂಪಿಗೆ ಸೇರಿಸಿದ್ದರು (ಪ್ರಾಣಿ. ೦೦); ಕೆಲವು ಪಾತುಗಳು . . . ಮೃದ್ವಂಗಿಗಳನ್ನು ಅಥವಾ ಮೀನುಗಳನ್ನು ಹಿಡಿದು ತಿನ್ನುವವು (ಅಗಸ್ತ್ಯ. ೨. ೭೫). ೨. ಒಂದು ಬಗೆಯ ಮೆದುಶರೀರದ ಹಕ್ಕಿ : ಕೆಲವು ಪಕ್ಷಿ ಜಾತಿ. ಚಿಪ್ಪುಳ್ಳ ಒಂದು ಜಾತಿಯ ಮೃದ್ವಂಗಿ (Caper. ೨೦೫೩). [ಸಂ. ಮೃದ್ವಂಗಿನ್]

ಮೃದ್ವಗ್ನಿ (ನಾ). ಸಣ್ಣ ಉರಿ : ಮಂದವಾದ ಅಗ್ನಿ : ಕೈಲ ಮತ್ತು ಘೃತಗಳನ್ನು ಮಾಡಬೇಕಾದರೆ ಸಾಮಾನ್ಯವಾಗಿ . . . ಪಾಲ್ಮನೆಯ ಒಂದು ಭಾಗ ಕಲ್ಕವನ್ನು ಹಾಕಿ ಮೃದ್ವಗ್ನಿಯ ಮೇಲೆ ಕಾಯಿಸಿ ಶೋಧಿಸಬೇಕು (ಗಣಿ. XIII. ಕ್ರಿಯಾವಿ). [ಸಂ.]

ಮೃದ್ವಿಷ್ಟಿ (ನಾ). ಮೆದುವಾದ ಮೊಳೆ; ಮೃದುವಾದ ಎಲುಬು : ಮೃದ್ವಿಷ್ಟಿಯಲ್ಲಿ ರಕ್ತನಾಳಗಳಿರುವುದಿಲ್ಲ (ಪ್ರಾಣಿ. ೧೨). [ಸಂ.]

ಮೃದ್ವೀಕೆ (ನಾ). ದ್ರಾಕ್ಷೆ : "ಮೃದ್ವೀಕಾ. ಗೋಸ್ತನೀ. ದ್ರಾಕ್ಷಾ. ಹಾರಹೂರಾ – ಈ ೪ ದ್ರಾಕ್ಷೆ" (ಪ್ರಾಣಾಭಿ. ೩೨-೧೦); ರತಿಯ ಮದವನ್ನ ಮದುವೆಯೊಳ್ ಪೊಸಯಿಸಿದ ಪಸುರ್ವಂದರಂತೆ ಮಿಸುವ ಮೃದ್ವೀಕಾಲತೆ (ಶಂದ್ರಪ್ರ. ೦-೨೦೬ ಕ). [ಪ್ರಾ. ಮೃದ್ವೀಕಾ]

ಮೃಧ (ನಾ). ಕಾಳಗ: ಯುದ್ಧ : "ಯುದ್ಧಂ . . . ಮೃಧಂ . . . ಯುದ್ಧಕ್ಕೆ ಹೆಸರುಗಳು" (ಪ್ರಾಣಾಭಿ. ೩೭೯). [ಸಂ.]

ಮೃಲ್ಲಿಂಗ (ನಾ). ಮಣ್ಣಿನಿಂದ ಮಾಡಿದ ಶಿವಲಿಂಗ : ವಿಚಾರಶರ್ಮರು ಆ ಕೊಡಗಳ ಹಾಲನ್ನು ಆ ಮೃಲ್ಲಿಂಗಕ್ಕೆ ಅಭಿಷೇಕಮಾಡಿಸಿ (ಕ್ಷಣಾ-೦೦೯). [ಸಂ.]

ಮೃಷ (ನಾ). ಸುಳ್ಳು : ಹುಸಿ; ಮಿಥ್ಯೆ : "ಕಪಟಂ ನಿಭಂ ಕೈತವಂ ಮೃಷಂ . . . ವ್ಯಾಜಮಕ್ಕುಂ" (ಪ್ರಾಣಾ. ೦೨೯-೦೦). [ಸಂ. ಮೃಷಾ]

ಮೃಷಾನಂದ (ನಾ). [ಜೈನ] ಹಿಂಸಾನಂದ. ಮೃಷಾನಂದ, ಸ್ತೇಯಾನಂದ ಮತ್ತು ಪರಿಗ್ರಹಾನಂದ ಎಂಬ ರೌದ್ರಧ್ಯಾನದ ನಾಲ್ಕು ಪ್ರಕಾರಗಳಲ್ಲಿ . ಒಂದು : "ಸುಳ್ಳಮಾತನಾಡುವುದರಲ್ಲಿ ಆನಂದ ಪಡುವುದು" (ಕ್ರಿಯಾವಿ. ೨೦೦) : ಸ್ವಸಂವೇದ್ಯಮಪ್ಪ ಆಧ್ಯಾತ್ಮಿಕಮುಂ ಹಿಂಸಾನಂದ ಮೃಷಾನಂದ ಸ್ತೇಯಾನಂದ ಸಂರಕ್ಷಣಾನಂದಮೆಂದುಂ ಚತುರ್ವಿಧಮಕ್ಕುಂ . . . ಸ್ವಮನಃಪರಿಕಲ್ಪಿತಮತುಗಳಿಂ ಪೆಜರ್ ಸಂಭವಿಸುವ ರೌದ್ರವರಂ ಬಂಡುಗಲೆಂದು ನುಡಿವ ಮೃಷಾಮಚನರೌದ್ರ ಸಂಕಲ್ಪಾಧ್ಯವಸಾನಂ ಮೃಷಾನಂದಮೆಂಬುದಕ್ಕುಂ (ಕ್ರಿಯಾ. ೪-೨೪ ಬ). [ಸಂ.]

ಮೃಷಾಪಾತಕ (ನಾ). ಸುಳ್ಳಿಡಿದುದರಿಂದ ಬರುವ ದೋಷ.—ಪಾಪ : ಗುರುವಂ ಬ್ರಾಹ್ಮಣನಂ ತೊದಳ್ನುಡಿದು ಕೊಂದಾಗಳ್ ಮೃಷಾಪಾತಕಂ ಪರಮೆಂದೀ ನುಡಿಯಿಂ ವೃಥಾಪ್ರಮುದಿತಂ ಪಾಪಕ್ಕೆ ಪಕ್ಕಾಗನೇ (ಗಣಿತ. ೬-೨೩). [ಸಂ.]

ಮೃಷಾರೋಪ (ನಾ). ಸುಳ್ಳಾರೋಪ.–ಕೋಪ : ಮೃಷಾರೋಪದಿಂ ಮಂದಪಾಸದಿಂ ಬಾದಾ ಒಡನಾಡಿನ್ನುವ ಸನ್ನೆಗೆ ಅಸ್ತು ಎನ್ನುತಾ ಹಿಮವಾಧ್ರಿಕನ್ನೆಗೆ ಮಾನುಚರಾಜಂ ಪೀಠವನುಳಿದಂ (ಗಣಿತ. ೦೯-೧೬೨). [ಸಂ.]

ಮೃಷೆ (ನಾ). ೧. ಸುಳ್ಳು : ಹುಸಿ; ಮಿಥ್ಯೆ : "ಅೞಕಂ. ವಿತಥಂ. ಮಿಥ್ಯಾ. ಮೃಷಾ-ಅನೃತಂ-ಈ ೫ ಅಸತ್ಯದ ಪೆಸರ್" (ಪ್ರಾಣಾಭಿ. ೩೭-೦೧೩); ಮುಳಿಸು ಹೊರೆ ಮೃಷೆ ರೌದ್ರಮವು ದುರ್ಮಲವೆ ಜೀವಸ್ಪೃತವು (ಪಾರ್ಶ್ವ. ೫-೭೦); ಲಿಂಗಾಧಿಮಾನಿತ್ವವರ್ತನಮಿವಾತ್ಮಸಮರ್ಪಣಂ ಮೃಷೆ ಬಳಿಕ್ಕೆಲ್ಲಂ ಶಿವಾವಲ್ಲಭಾ (ಪಾರ್ಶ್ವ. ೧೩). ೨. ವ್ಯರ್ಥವಾದುದು : ನಿಷ್ಪಯೋಜಕವಾದುದು : ' ಕುಸುಮಕೋಮಲಗಾತ್ರ ತೋರ್ಪಣಜಗರಿದಾಯ್ತು ? ಎಷದ ಪೂತನಿ ನದುನವಕ್ಷದೊಳಗಿರಲೆ ? ಮುನಿನಗುವಿನೊಳಗಿರಲಶಕ್ತವೆ ಖಳಾಟಿಕೆಗೆ ? ಮೃಷೆಯೊ ಮೈಬೆಡಗಲ್ಲ (ಪುಂಗು. ೧೦೬). [ಸಂ. ಮೃಷಾ]

ಮೃಷ್ಟ (ಗು). ೧. ಉಜ್ಜಿಹಾಕಿದ; ತೊಡೆದು ಹಾಕಿದ; ಅಳಿಸಿದ. ೨. ಬಳಿದ; ಲೇಪಿಸಿದ. ೩. ರುಚಿಕರವಾದ; ರಸವತ್ತಾದ : 'ಮೃಷ್ಟಭೋಜನ', 'ಮೃಷ್ಟಾನ್ನ' ಪರಾ. (ನಾ). ೫. ಶುದ್ಧಗೊಳಿಸಿದುದು; ಶುಭ್ರವಾದುದು : " ನಿರ್ಮಲಂ. ಶೋಧಿತಂ. ಮೃಷ್ಟಂ. . . ಕಲ್ಮಷವಿಲ್ಲದ ಹಾಗೆ ಶುದ್ಧಗೊಳಿಸಲ್ಪಟ್ಟದ್ದು" (ಶಿಕ್ಷಾ. ೬೬). ೬. ಮೆಣಸು. [ಸಂ.]

ಮೃಷ್ಟಭೋಜನ (ನಾ). ರುಚಿಕರವಾದ ಊಟ; ರಸವತ್ತಾದ ಭೋಜನ; ಮೃಷ್ಟಭೋಜನದಿಂದ ನಾವ್ ಸಂತುಷ್ಟರಾಗೊಲಿದುದನು ಬೇಡನೆ ದುಷ್ಟ ಕೌರವ ಸಮ್ಮನಟ್ಟಿದ ಧೂರ್ತವಿದ್ಯೆಯಲಿ (ಭಾಷ್ಯ. ೦೬-೧೪). [ಸಂ.]

ಮೃಷ್ಟಾನ್ನ (ನಾ). ರುಚಿಕರವಾದ ಆಹಾರ; ರಸವತ್ತಾದ ಊಟ; ರಸಗವಳ : "ಮೃಷ್ಟಾನ್ನಂ ಪರಮಾನ್ನಂ" (ಜಾಕ್ಕ. ೨೯೦); ಒಬ್ಬನೇ ಊಣವಾರದ್ದೆ ಮೃಷ್ಟಾನ್ನ ಫಲಗಳನು (ಭಾಷಾ. ೯-೨೪); ಬಿಡದ ಕಳವಿಂದ ಲೋಗರ ಮನೆಗಳಂ ಪೊಕ್ಕು ತುದುತಿಂದವಪ ಭೋಜನಕ್ಕೆ ಮೃಷ್ಟಾನ್ನ ಮಾದೊಡೆ ಕೆಲಬುಲಂಗಳಂ ನೋಡುವನೆ (ಕೃಷ್ಣಾ. ೬-೩೩); ರಾಜಕುಮಾರಿ . . . ಮೃಷ್ಟಾನ್ನವನ್ನು ಭೋಜನಕ್ಕಿಟ್ಟಳು (ಶಂಕ. ೦೬೪). [ಸಂ.]

–ಮೆ₁ (ಪ್ರ). ಒಂದು ಕೃದಂತಭಾವನಾಮಪ್ರತ್ಯಯ : ಚೇತನವಿಷಯೇ . . . ಮೆ. ಜನ ಇತ್ಯೇತೇ ಪ್ರತ್ಯಯಾ ಭವಂತಿ (ಪ್ರಾಣಾಭಿ. ೨೭೯ ಕೃತ್ತ್ವಿ); . ಮೆಕಾರಕ್ಕೆ–ಒಲ್ಮೆ. ಬಲ್ಮೆ (ಪಾಂಡ. ೨೦೦ ಕ್ರಿಯೋ); ಮೆ – ಕೊರ್, ಒರ್ – ಕೂರ್ಮೆ. ಒಲ್ಮೆ (ಕ್ರಿವಿ. ೦೬).

–ಮೆ₂ (ಪ್ರ). ಅವೃತ್ತಿ ಎಂಬ ಅರ್ಥದಲ್ಲಿ ಸಂಖ್ಯಾವಾಚಿಗಳಿಗೆ ಪತ್ತುವ ಪ್ರತ್ಯಯ : ಸಂಖ್ಯಾವಾಚಿನಾಂ ವಾರಾರ್ಥೇ ಮೆ ಪ್ರತ್ಯಯೋ ವಾ ಭವತಿ (ಪ್ರಾಣಾಭಿ. ೦೭೬); ಮೆ ಯೆಂಬುದಕ್ಕುಮೆಣಿಸುವ ಸೂಬಿಕೊಳ್ . . . ಒರ್ಮೆ. ಇರ್ಮೆ. ಸಾಸಿರ್ಮೆ (ಶಬ್ದಕ. ೨೦೭); ಒಂದು ಮೊದಲಾದ ಸಂಖ್ಯಾವಾಚಿಗಳಿಗೆ ಅವೃತ್ತಿ ಎಂದರ್ಥದಲ್ಲಿ ಮೆ ಸೇರುವುದು–ಒರ್ಮೆ, ಇರ್ಮೆ (ಕ್ರಿವಿ. ೩೪).

–ಮೆ₃ (ಪ್ರ). ಒಂದು ಕದ್ಧಿತಭಾವನಾಮಪ್ರತ್ಯಯ : 'ಜಾಣ್ಮೆ'. 'ಪಡಿಮೆ', 'ಪೆರ್ಮೆ' ಪರಾ.

ಮೆಂಟಿಗೆ ಮಂಟಿಗೆ ' ನೋ.

ಮೆಂಟಿಕೆ. ಮಂಟಿಕೆ. ಮಂಟಿಗೆ. ಮಂಟಿಕೆ. ಮಂತ್ರಿಗೆ. ಮಿಂಟಿಗೆ. ಮೆಂಟಿಗೆ (ನಾ). (ಹೆಗಸರು) ಕಾಲುಬೆರಳಿಗೆ ಹಾಕಿಕೊಳ್ಳುವ ಒಂದು ಬಗೆಯ ಆಭರಣ; ಕಾಲುಂಗುರ : ವೀರಮುದ್ರೆಯ ಮೆಂಟಿಕೆಯ . ವಿಸ್ತಾರದಂಗುಲಿಯುಂಗುರಂಗಳ . . . ನಾರಿಯರು ನಡತಂದರಾ ಮಾಯಾಂಗನೆಯ ಕೂಡೆ (ಕ್ರಿಯಾ. ೪-೩೦) ; ಸರವಿಕೆ ಒಲ್ಲಿ ಮಿಂಟಿಕೆ ಪಾದಸರ . . . ಮಿಂತಾದ ವರಿವಿಯಾಭರಣಂಗಳ ಬಿನುಬರು (ಪಾರ್ಶ್ವ. ೬೬-೦೩೦); ಅಳವಡಿಸಿ ತೋಳ ಬಾವುರಿ . . . ಅಂದಿಗೆ ಒಲ್ಲೆ ಮೆಂಟಿಕೆಗಳ (ಪಾರ್ಶ್ವ. ೦೦-೨೬). **ಮಂಟಿಕೆ** : ಸ್ತ್ರೀಯರುಗಳು ಕಾಲುಬೆರಳುಂಗುರಗಳು. ಒಲ್ಲಿ. ಮಂಟಿಕೆ ಮುಂತಾದವುಗಳನ್ನು ಧರಿಸಿದಲ್ಲಿ ಪೊಮ್ಮಿದ 'ಮಂಗಳವೂ . . . ಸದಾ ಆನಂದವೂ ಆಗುವುವು (ಪಾರ್ಶ್ವ. ೨೦) : ವೀರಮುದ್ರಿಕೆ ರತ್ನ ಮಂಟಿಕೆ ವೀರಕೆಯ ವೈಡೂರ್ಯದಂದುಗೆಯೋರಣದ ಕಿರಿಗೆಜ್ಜೆ ಸೊಬಗಿಂದಿಸೆ ದರನುವಾಗಿ (ಅಂಗಾ. ೧೫-೬೩). **ಮಂಟಿಗೆ** : ಅಂದುಗೆಯ ಮಂಟಿಗೆಯ ಕಂಕಣದ ರತ್ನಾಭರಣದ ಗೊಂದಳಿಪ ಬಳೆಯ ಕಂಕಣಿಯ ಗೆಜ್ಜೆಯ . . .

ತಾಂತೆ ಮಾಳಗೆಯ ಭದ್ರದ ಬದುಲೊಳಾಡಿವಳು ಹೊಡೆಸಿಂಡನು (ಹಹಣಾ. ೯-೦೨). **ಮೆಂಟಿಕೆ** : ಜಾಲೆಯ ಪದದೊಳ್ ಮೆಜ್ಜಿವವು ಕಾಲುಂಗುರ ವೀರಮುದ್ರೆ ತಿಱುಮಂಟಿಕೆಗಳ್ (ಪಂಪಾ. ೩೦೩) ; ಮಂತ್ರಿನ ಮಂಟಿಕೆ ಕಾಲಪೆಂಡೆಯ ಮುದಪೆತ್ತ ನೂಪುರ ಹೊನ್ನ ದಾರ ಉತ್ತಮ ಮಿಸುನಿಯ ಗಂಟಿಸರಗಳಿಂದ ಮತ್ತೇಭಯಾನೆಯೊಪ್ಪಿದಳು (ಕಂಪಾ. ೯-೭೦). **ಮಂಟಿಗೆ:** ಹೂಗಳಿವುಂಗುಬ್ರದೆಗಳಂ ಮಂಟಿಗೆಗಳಂ ಪಿಲ್ಲಿಗಳನಿಟ್ಟಿಂದುಗೆಗಳಂ ಮಣಿ ಪಾಮವಟ್ಟಂಗಳನಮರ್ಚ್ಚರು (ಪಪಪು. ೯-೩೩) : ಅಸುಗೆಯರಲುಂಗುರ ಮನುತ್ಪಳದ ಮಂಟಿಗೆಬುನಜ್ಜಳಿಪ ಗೊಜ್ಜುಗೆಯ ಸಜ್ಜುಪದ ಚಳಿಗೆಯ. . . . ಏಸಗಿ (ಪಪಪೀ. ೦೦-೨೭ ಗಸಂ). **ಮಿಂಟಿಗೆ :** ಸರಪಣಿ ಪಿಲ್ಲಿ ಮಿಂಟಿಗೆ ಪಾದಸರ . . . ಮುಂತಾದ ಪರಿವರಿವಾಭರಣಾಂಗಳ ಬಿಸುಟರು (ಕಪಪ. ೭೭-೦೨೦): ಉದ್ಯಾಮವಹ ವೀರಮುದ್ರಿಕೆ ಮಿಂಟಿಗೆಯ ಪಿಲ್ಲಿಗಳುವೆಲ್ಲಿಹವೆಂದೊಡೆ (ಕೃಪುಪ. ೯-೭೫). **ಮೆಂಟಿಗೆ :** ಪದಕ ಮೆಂಟಿಗೆ ಪಿಲ್ಲಿ ಈಮೆಟ್ಟೊದವಿದುಂಗುರ ಗೆಜ್ಜೆ ಸರಪಣಿಯಿಂದ ಸಿಂಗರಿಸಿ (ಪಪಣಾ. ೦೭-೨೭). ' ಮೆಟ್ಟು೨ ' ಪರಾ. [ದೇ.ಕ ತಮಿ. ಮೆಟ್ಟಿ, ಮಟ್ಟು : ತೆಲು. ಮಟ್ಟಿಯ, ಮಟ್ಟಿ, ಮೆಟ್ಟಿಯ; ಮುಟ್ಟಿ, ಮೆಂಡಿಯ, ಮೆಂಡ, ಮೆಂಡಿಯ = ತೋರುಬೆರಳು ಅಥವಾ ತರ್ಜನಿಗೆ ತೊಡುವ ಉಂಗುರ : ತುಳು. ಮೇಂಟಿಗೆ; ಕಾಯ್ಕಿ. ಮಟ್ಟಿ; ಪರ್ಜಿ. ಮಟ್ಟಿ]

ಮೆಂಟಿಗೆ ' ಮೆಂಟಿಕೆ ' ನೋ.

ಮೆಂಟೆ ' ಮೇಂಟಿ ' ನೋ.

ಮೆಂಡಿ (ನಾ)· ಒಂದು ಸ್ಥಳದ ಹೆಸರು : ' ಉತ್ತಮಮೆಂಡಿ ', ' ಮೆಂಡಿಮಂಗಲ ' ಪರಾ. [?]

ಮೆಂಡಿಮಂಗಲ (ನಾ). ಒಂದು ಊರಿನ ಹೆಸರು : ನಾಗಯ್ಯನು ಕೊಣ್ಣಯ್ಯನು ಶ್ರೀ ಮೆಣ್ಣೆಮಂಗಲದ ಮಹಾಜನಬ್ಗ್ ಪದಿನಾಱುಗದ್ಯಾಣ ಪೆಜ್ಜೊಟ್ಟು ಕೊಂಡ ಧರ್ಮ್ (ಎಳ. X, ೬೦೬೫. ೯-೬; ೧೭೬).

[ಮೆಂಡಿ + ಮಂಗಲ]

ಮೆಂಡಿಮುದುಳಗಾಮುಂಡ (ನಾ). ಒಬ್ಬಾತನ ಹೆಸರು : ಮಣಿಘಟ್ಟಿಯ ಮಾಣಡಾ ಮೆಣ್ಣೆಮುದುಳಗಾಮುಂಡರ ಮಗಂ ಕಸವಯ್ಯ . . . ಕಾದಿ ಇನ್ನರಂ ಕೊಂದು ತಾನು ಸ್ವರ್ಗಯಾದಂ (ಎಳ. X, ಶುಳಣಾ. ೨೫೯-೨: ೨೦೨). ' ಮೆಂಡೆಗಾವುಂಡ ' ಪರಾ. [ಮೆಂಡಿ + ಮುದುಳ್ + ಗಾಮುಂಡ]

ಮೆಂಡು (ನಾ). ಹೆಚ್ಚಳ; ಆಧಿಕ್ಯ ; ಅತಿಶಯ : ಪೊಡು ಗೋವು ಹರಿಯು ಕೃತಿಯ ಕಂಡು ಧ್ಯಾನದಲ್ಲಿ ತಂದು ತುಂಡ ನೆಗಂ ಬಾಲಮೆತ್ತಿಕೊಂಡು ನಿಂತವು ತುಡತಂಡ ಒಕ್ಕಿದವು ಹಂಡ ಹವಳೆ · ಹುಲುಗಚ್ಚಿಕೊಂಡು ನಿಂತ ವಲ್ಲಿಗಳ್ಗಿ ಮೆಂಡಲಿದ್ದವು (ಕೃಗಣಾ. ೯೯-೬)ಃ ಮದ್ಯಾನೆಗಳ ಗಂಡಭಾಗ್ಗಗಳಿಂದ ಮೆಂಡಾಗಿ ಸುರಿಯುವ ಮದಧಾರೆಗಳಿಂದ ಕೆಸರಾಗುವಂತೆ ಮಾಡಿ ವಿತರಣ ಗುಣವಲ್ಲಿ ಕಲ್ಪವೃಕ್ಷಮಂ ಮರಮೆಮ ಕಾಮಧೇನುವಂ ಪಶುವೆಂದು . . . ತಿರಸ್ಕಾರಮಾಗ್ಗೆದು (ಕಾಗಂಪಾ. ೨೨೬-೯). [ದೇ.ಕ ತೆಲು. ಮೆಂಡು]

ಮೆಂಡೆಗಾವುಂಡ (ನಾ) . ಒಬ್ಬಾತನ ಹೆಸರು : ಬಾಗೆಪೂರ ಕಮ್ಮಿಣಿ ಗಾವುಣ್ಣನು ಸಪುಳಜ್ಜದ ಮೆಣ್ಣೆಗಾವುಣ್ಣನು (ಎಳ. V. ೫೪೧೩. ೪೫೦-೦೩ : ೩೭೬)· [ಮೆಂಡೆ$_೨$ + ಗಾವುಂಡ (< ಗಾಮುಂಡ)]

ಮೆಂಡೆಯತನ (ನಾ). ಬಲಾತ್ಕಾರ ; ಬಲವಂತ ; ಜುಲುಮೆ : ಚಿದ್ದ ಯನು ಜಕ್ಕಯ್ಯನುವೆಂಬ ಪಾರುವರು . . . ಎಡೆಪಾಯ್ದನತನದಿಂ ರಾಜ ಗಾಮಿತಂಗೆಮ್ದು ಮೆಣ್ಣೆಯತನದಲೂರನೆನ್ನವೆನ್ದು ಮೂಜುಪರಿಪ ದನ್ಯಾಳಿಯ ಪೊಗೆ ಕೊಬ್ಬುಣಾತಮಿರ್ವುದು ಕಣ್ಮಾ . (ಕಾಕಪ. IX-i. ೦೨೬-೦೭: ೧೦೬೨). [? + — ತನ]

ಮೆಂಡೆಹ (ನಾ)· (?) : ಪಡುವನಾಡ ಕೊಟ್ಟುಬಾಮಿಯ ಮೆಂಡೆಹ [ಕಾಕಾ. ಯು]ವ ಕಾಯಕದ ಚೌಡು ಬಟ್ಟಿಕಱೆಯಲಿ ಬಸವನಳವಿಂಡ್ಗೆ ಮರುಳಯ್ಯ ಕೆಟ್ಟ ಧಿಕರೆಸಿನವ ಪ್ರಮಥಗಣನಾಯಕರ ಚರಣಾಂಬುಜಕ್ಕೆ ಶರಣು (ಎಪಪಂ. ೪೫-೦೩೩). [?]

ಮೆಂತಯ ' ಮೆಂತೆಯ ' ನೋ.

ಮೆಂತೆ ' ಮೆಂತೆಯ ' ನೋ.

ಮೆಂತೆಯ. ಮೆಂತಯ. ಮೆಂತೆ. ಮೆಂತ್ಯ. ಮೆಂಥಿಯ್ತ್ರ. ಮೆಂಥೆಯ್ಯ$_೨$ (ನಾ). ಒಂದು ಬಗೆಯ ಧಾನ್ಯ ಮತ್ತು ತರಕಾರಿಯಾಗಿ ಬಳಸುವ ಅದರ ಸೊಪ್ಪು : ಜೀರಗೆ ಮೆಂತೆಯಂ ಕುಂಡಿ ನೀರುಳ್ಳಿಯಚ್ಚಿಯಿನಿಷ ಎಣ್ಣೆಯಂಗಿಕ್ಕಿಪೊಗ್ಗರಿಸಿ (ಕಪಪಣಾ. ೩-೨೦) : ಮೆಂತೆಯ ತೂಕ ೧ ಒಪ್ಪಲಿ ತೂಕ ೯ . . . ಇಷ್ಟನ್ನೂ ಕಲಸಿ ಅಟ್ಟು ಕಾರೇಕಾಯಮ್ಮು ಮೆಲ್ಲಲು ಗೂಡೆ ಮಾಣುವುದು (೦೪೬೦. ೦೬) ; ಸಾಸಿವೆ ಮೆಂತೆಯ ನೀರುಳ್ಳಿ ಬೆಳುಳ್ಳಿ ಅರಿಸಿನ ಶುಂಠಿ ಮುಂತ್ತಾದ ಜಿನುಸು (ಎಳ. VIII. ೬೬೫೫. ೭೨-೨೦ ; ೧೧೭). **ಮೆಂತೆಯ :** ಜೀರಗೆ ಮೆಂತೆಯ ಯಂಗು ಸಾಸವೆ ಉಪ್ಪು ನಿಂಬೆಯ ಹಂಣು ಸಹ ಕ್ರಮ ಪರಿಷ ಗ ೧ (ಎಳ. XV. ೬೬೦೮೮. ೭೦-೭೭ ; ೨೪೬೪). **ಮೆಂತೆ :** "ಮೆಂತ — ಮೇಥಿಕಾ (ಮಂಥಾ) = ಒಂದು ಜೀನಸು" (ಕಪ್ಪಳಿಪ. ೭೭) ; ಸ್ನಾತಿಮಳೆಯಲ್ಲಿ . . . ಮೆಂತೆ ಬಿತ್ತಬೇಕು (೪೩೫೪. ೭೨) ; ಮೆಂತೆ ತಿಂದಾಕ್ಷಣ ಕುಂತೀ ಮಗನಾದಾನೇ ? (ಇಂದ) **ಮೆಂತ್ಯ :** ಅಜಾಮೋದ. ಮೌತ್ಯ. ಯತ್ಪಿ ಮಧುಕ. ಜಟಾಮಾಂಸಿ ಇವುಗಳನ್ನು ಪ್ರತ್ಯೇಕ ಒಂದೊಂದು ಹಲವಂ ಚೂರ್ಣಿಸಿ ಹಾಕಿ . . . ನೇವಿಸಲು ಶೀತಜ್ವರಂ ಶಮನಮಕ್ಕುಂ (ಎಳ್ಳ. ೭೨) ; ನೆಲ್ಲಿಕಾಯಿ ಮೆತ್ತಗಾದಾಗ . . . ಓಮವೆಣಸು ಮೆತ್ತು ಮೆಂತ್ಯ ಇವುಗಳ ಒಗ್ಗರಣೆ ಹಾಕಿ. ಆಮೇಲೆ ಭರಣಿಯಲ್ಲಿ ಹಾಕಿ ಮುಚ್ಚಿರವಿಕ್ಕಿ ಬಾಯಿಗೆ ವಸ್ತ್ರದ ತುಂಡನ್ನು ಕಟ್ಟಿ ಇರಿಸುವುದು (ಆಪಾ. ೦೦೭). **ಮೆಂಥಿಯ :** "ಮಂಥೀ — ಮೆಂಥಿಯ " (೬೪೧. ೦೫೯). **ಮೆಂಥೆಯ್ಯ$_೨$:** "ಪೀತಬೀಜ—ಮೆಂಥಿಯ" (೬೪೦. ೯೪) ; ಬೇವಿನೆಲೆ ಬೀಯ ಗುಣಜಿಲ ಮಾವಿನ ಪಾಲಿಂದಮುರೆದು ಪರ್ಸರಿಸುತಂ ಸೇವಿಸೆ ಜೀರಗೆ ಮೆಂಥೆಯ ದೋವದ ವಿಷಹರಮದಕ್ಕುಂ (೬೪೦೮: ೫-೭೬).

ಮೆಂತ್ಯದ ಸೊಪ್ಪು, ಮೆಂತಸೊಪ್ಪು = ಒಂದು ಬಗೆಯ ತರಕಾರಿ ಸೊಪ್ಪು : ಚಕ್ಕೂತ್ತಿಸೊಪ್ಪು. ಮೆಂತ್ಯದ ಸೊಪ್ಪಿಗಳನ್ನು ಸಣ್ಣಗಳಲ್ಲೀ ಕತ್ತು ಅಡಿಗೆ ಮಾಡಿದರೆ ಮೇಲು (೪೦೪. ೦೬) ; ಮೆಂತೆಸೊಪ್ಪಿನ ಪುಳಿ ಬಹಳ ಜೀರ್ಣಾಗಿರುತ್ತದೆ (೬೦೬).

[ದೇ.ಕ ತಮಿ. ಮೆನ್ರಿಯಮ್, ಮೇತಿ, ಮೇನ್ಸ್ರು, ವೆನ್ಸಯಮ್, ವೆನ್ಸಲ್, ವೆನ್ರಿಯಮ್; ಮಲ. ವೆಂತಯಮ್; ತುಳು. ಮೆಂತಿ, ಮೆಂತೆ, ಮತ್ತಲೆ, ಮೆತ್ತೆ, ಮೆತ್ತೆ; ತೆಲು. ಮೆಂತಿ, ಮೆಂತುಲು./ಸಂ. ಮಂಥಾ]

ಮೆಂತ್ಯ ' ಮೆಂತೆಯ ' ನೋ.

ಮೆಂಥಯ ' ಮೆಂಥೆಯ್ಯ$_೨$ ' ನೋ.

ಮೆಂಥಿಯ ' ಮೆಂತೆಯ ' ನೋ.

ಮೆಂಥೆಯ್ಯ$_೧$ ' ಮೆಂತೆಯ ' ನೋ.

ಮೆಂಥೆಯ್ಯ$_೨$. ಮೆಂಥಯ (ನಾ)· ಒಂದು ಬಗೆಯ ಬಳ್ಳಿ ಮತ್ತು ಅದರ ಹೂವು : ಮಾಧವಿ : "ಮೆಂಥಯಮೆನೆ ವಸಂತದೊತಿಗೆ ಬೆಸರ್" (ಕಪ. ೧೨); "ಮದ್ಯ-ಮೆಂಥಯ. ಅದಿರ್ಗಂತಿ, ಕಸ್ತೂರಿ" (೬೪೦. ೦೦೩). **ಮೆಂಥಯ :** "ಅದಿರ್ಮಾತ್ಸ್ಯ. ಮೆಂಥಯ [ಅಕಾಂ. ಮೊದ] ಅದಿರ್ಗಂತಿ — ಈ ೩ ಮಾಧವಿಲತೆ" (ಕಪಣಾ. ೩೯-೦೬೦). [?]

ಮೆಂದ ' ಮಯಿಂದ ' ನೋ.

ಮೆಂದಣ್ಣ (ನಾ). ಒಬ್ಬಾತನ ಹೆಸರು : ಪೊಬಿಬಜೇನೆಮಾರನ ಮಗ ಮೆನ್ದಣ್ಣ (ಎಳ. IX, ೧೦೭೫೦. ೩೨-೬: ೩೦೦).

[ಮೆಂದ (< ಮಯಿಂದ) + ಅಣ್ಣ$_೩$]

ಮೆಂದಮ್ಮ (ನಾ). ಒಬ್ಬಾತನ ಹೆಸರು : ಇ ಕೊಡಪ್ಪಿಯು ಬಳಿಸಿದೋರ್ ನಾಬ್ಮಾಮುಣ್ಣ ದಿಯಳನುಂ ಪಿಯ ಮುಗುಳಿಯ ಕೋಮರಬ್ಮನುಂ ಪಲ್ಮಾಡಿಯ ಮೆಂದಮ್ಮ ದಿಣ್ಣೆಯೂರ ದೇವಗನುಮ (ಎಕ. VI. ೪೯,೮೦-೦೨; ೮೮೨). [ಮೆಂದ (< ಮಯಿಂದ) + ಅಮ್ಮ_೪೭]

ಮೆಂದಯ್ಯ (ನಾ). ಒಬ್ಬಾತನ ಹೆಸರು : ನಡದೋರ್ಕ್ಕರಣಸಹಿತ ಮೈನ್ದಂಯ್ಯನುಂ ಪೆಂಣ್ಣೆಜುವಿನ ಸೊಬಮ್ಮಗಾವುಣ್ಣನುಂ (ಎಕ. XII, ೮೯-೨೬; ೪೬೩). [ಮೆಂದ (< ಮಯಿಂದ) + ಅಯ್ಯ_೪೨]

ಮೆಂದು ' ಮೇ_೧ ' ಪರಾ.

ಮೆಂದೆ (ನಾ). ಜಮಾನಿನ ಒಂದಲಿ ಅಳತೆ (?) : ಐನೂಬ್ಬರುಂ ಕೂಡಿ ಶ್ರೀ [ಪೊಜ್ಜೇ] ಶ್ವರದೇವರ್ಗ್ಗೆ ಬಿಟ್ಟು ಧಮ್ಮಮೆನ್ತೆಂದಡೆ . . ಹಂನೆರಡು ಮುಂದಯ ಬಂಜರು ಸಮಸ್ತಂ ಕೂಡಿಯಾಳಲು ವೀಸವಂ ಕೊಟ್ಟರ್ (ಕಣ. ೪೫-೪೮-೯೦; ೩೧೪೨). [?]

ಮೆಂಬರು (ನಾ). ಸಂಘ್ಯಸಮಿತಿ ಮುಂತಾದ ಘಟಕಗಳಲ್ಲಿ ಸಂವಿಧಾನ ಮೂಲಕವಾದ ಸಂಬಂಧವನ್ನು ಹೊಂದಿರುವವನು ; ಸದಸ್ಯ : (ಂ)ನೆಯ ಉಪಪ್ರಕರಣದಲ್ಲಿ ಹೇಳಿರುವ ಪಟ್ಟಿಯಲ್ಲಿ ನಮೂದಿಸಿರುವ ಯಾವನೊಬ್ಬ ಮನುಷ್ಯನನ್ನಾದರೂ ಸದರಿಬೆಂಚಿನ ಮೆಂಬರಾಗಿ ನೇಮಿಸ ಬಹುದು (ಗ್ರಾಮಚಿ. ೦೬). [←ಇಂ. Member]

ಮೆಕ್ಕಲು (ನಾ). ೧. ಬೆಟ್ಟದ ಮೇಲಿನಿಂದ ಹರಿಯುವ ನದಿಗಳು ಮೇಲಿನಿಂದ ದೂಡಿಕೊಂಡು ಹೊತ್ತು ತರುವ ಮೇಲುಮಣ್ಣು ; ರೇಬೆಮಣ್ಣು : ಫಲವತ್ತಾದ ಮೆಕ್ಕಲಿನ ಮೈದಾನಗಳಲ್ಲಿ ಇವು ಪ್ರವಹಿಸು ತ್ತವೆ (ಕೂಂಚ. ೨೪೩). ೨. ಮೆಕ್ಕಲುಮಣ್ಣಿನಿಂದ ಕೂಡಿದ ಪ್ರದೇಶ.—ಸ್ಥಳ : ಇವು ದಕ್ಷಿಣ ಭಾರತದ ಪಶ್ಚಿಮ ಮತ್ತು ಪೂರ್ವತೀರಪ್ರದೇಶ ಗಳಲ್ಲಿ ಸಮುದ್ರ ಮತ್ತು ಬೆಟ್ಟಸಾಲುಗಳ ಮಧ್ಯೆ ಇರುವ ಇತ್ತೀಚಿನ ಮೆಕ್ಕಲುಗಳು (ಕಾಪ್ರೋ. XII. ೬೫೪): [?]

ಮೆಕ್ಕಲುಮಣ್ಣು (ನಾ). = ಮೆಕ್ಕಲು ೧ : ನದಿಗಳು . . . ಹರಿಯುವಾಗ ಬೆಟ್ಟದಿಂದ ಕಲ್ಲು, ಮಣ್ಣು, ಮರಳು ಮುಂತಾದವುಗಳನ್ನು ದೂಡಿಕೊಂಡು ಬರುತ್ತವೆ . . . ಇದೇ ಮೆಕ್ಕಲುಮಣ್ಣು (ಕಣ. ೨೬) : ಮೆಕ್ಕಲುಮಣ್ಣು ಗಳಲ್ಲಿ. . . ತೀರಪ್ರದೇಶದ ಮಣ್ಣುಗಳು ಮತ್ತು ನದೀಮುಖಜ ಭೂಮಿಯ ಮೆಕ್ಕಲುಮಣ್ಣುಗಳು ಎಂದು ಎರಡುಭಾಗ ಮಾಡಬಹುದು (ಕಾಪ್ರೋ. XII. ೬೫೪). [ಮೆಕ್ಕಲು + ಮಣ್ಣು (<ಮಣ್)]

ಮೆಕ್ಕೆ_೧ ' ಮಕ್ಕೆ_೧ ' ನೋ.

ಮೆಕ್ಕೆ_೨ (ನಾ). ೧. ಒಂದು ಬಗೆಯ ಜೋಳ : 'ಮೆಕ್ಕೆಜೋಳ' 'ಪರಾ. ೨. ಮೆಕ್ಕೆಜೋಳದ ಹಿಟ್ಟು (?) : ಅಕ್ಕಯಂ ತೆಂಗು ಜಾನಕ್ಕಯಿಂ ಲಂಕಿಯು ಮೆ[ಜಾಣಾ. ೪೫]ಕ್ಕೆಯಂ ಕನಕ ಕೆಡುವಂತ ದುರ್ಬುದ್ಧಿ ಹೊಕ್ಕಳ್ಳಿ ಕೇಡು (ಸಭಾಕ್ಕ. ೮೬೨). [?-/ ಮಾರಾ. ಮಕ್ಕಾ. ಮಕಈ./ಇಂ. Maize= ಮುಸುಕಿನಜೋಳ]

ಮೆಕ್ಕೆ_೩, ಮೇಕ್ಕೆ_೩ (ನಾ). ಒಂದು ಬಗೆಯ ಬಳ್ಳಿ ಮತ್ತು ಅದರ ಕಾಯಿ : "ಉರ್ವಾರುವೆನೆ ಮೆಕ್ಕೆ" (ಪುಂಗಣ. ೪೪-೪೬) ; ಮೆಕ್ಕೆಯ ಕಾಯ್ಗಳ್ ಮೊದಲೊಳ್ ಕೈಪೆಯಪ್ಪುವ (ರಚಾಕ್ಕ. ೬-೨೫೦) : ಎಜಿಮಿ ವಂಕಿಯೊ ಕಳಿತ ಮೆಕ್ಕೆಯೊ . . , ಕಕ್ಕಿಸುಂಡೆಯೊ ಸವಿಯ ಚಿತ್ರಕವೊ (ಭಾವ್ಯಾ. ೦-೬೬) ; ಎಂತು ಕಲ್ಮನನಾಗಿ ಮಾಲತಿಯಂ ಮೆಕ್ಕೆಯಿಂ ಸಿಂಗರಿಸಿದಪಳ್ (ಜಾಪಾಕ್ಕ. ೬೬-೨೪). ಮೇಕ್ಕೆ_೩ : "ಪೃಥುವಿಶಾಲ – ಮೇಕೆ" (ಲಿಕಂ. ೦೦೨). [?./ ಮಾರಾ. ಮೇಕೀ. ಮೇಕೇ]

ಮೆಕ್ಕೆಜೋಳ (ನಾ). = ಮೆಕ್ಕೆ_೨ ೧ : (ಧತ್ತ) . . . (ಮೆಕ್ಕೆಜೋಳ) ಇವುಗಳ ಬೆಳೆಗೆ ಅವಶ್ಯಕವಾದ ಅನುಕೂಲಗಳಾವುವು (ಕೂಂಚ. ೨೦೦). [ಮೆಕ್ಕೆ_೨ + ಜೋಳ./ತಮಿ. ಮೊಕ್ಕೈಚ್ಚೋಳಮ್]

ಮೆಚ್ಚವನಿಗೆ ' ಮೆಚ್ಚುವನಿಗೆ ' ನೋ.

ಮೆಚ್ಚಿ . ಮಚ್ಚಿಕೆ (ನಾ). ೧. ಇಷ್ಟ : ಪ್ರೀತಿ : ನೀನು ತುಂಬ ಜೋರಿನ ಹುಡುಗಿ ಎಂದೇ ಅವರಿಗೆ ಅದು ಮೆಚ್ಚಿಕೆಯಂತೆ (ಕಡೂಂಕ. ೦೦೦) : ವೀರಣ್ಣನ ಮೇಲೆ ತೋರಿದ್ದ ಮುನಿಸು ಮೆಚ್ಚಿಕೆಯ ರೂಪ ತಾಳಿತು (ಜಾಹುತ್ತ. ೦೦೬). ೨. ಒಪ್ಪಿಗೆ ; ತೃಪ್ತಿ : ಈ ಅಂಶಗಳನ್ನು ನೀವು ಮನಸ ಮಾಡಿಕೊಂಡರೆ ಕುಟುಂಬದವರಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ಮತ್ತು ನಿಮ್ಮ ಹಣಕಾಸಿನ ಸ್ಥಿತಿಗೆ ತಕ್ಕಂತೆ ನಿತ್ಯದ ಅಡುಗೆಗಳನ್ನು ತಯಾರಿಸುವುದು ಕಷ್ಟವಾಗಲಾರದು (ಹಾಬಾ. ೫೬) ; ಅವರಿಗೆ ಯಾವು ದೂಂದು ಮೆಚ್ಚಿಕೆಯಾಗುವುದಿಲ್ಲ (ಒಂಟಿಪ್ರ.). ೩. ಕೊಂಡಾಟ; ಹೊಗಳಿಕೆ: ಅವಳಿಗೆ ಏನಾದ್ರೂ ಒಂದು ಮೆಚ್ಚು ಕೊಚ್ಚೇಳು ಎಂದು ಮೆಚ್ಚಿಕೆಯ ದನಿಯಲ್ಲಿ ಹೇಳಿದ (ಜಾಹುತ್ತ. ೧೩) . ಮೆಚ್ಚಿಕೆ : ೧. ಮನವನೀಯಲು ಬಹುದು ಮೆಚ್ಚಿಕೆಯನುವನೞಿದಾ ಪ್ರಾಣವಂ ಮತ್ಕೆಂತು ಕೊಡಲಹುದು (ಪಪ್ಪ. ೩೬-೫೩) ; ಸಟಿಸಿ ಪೇಳದುದಿ ತೃಪ್ತಿಯೊಂದಿಸುವ ಮೆಚ್ಚಿಕೆಯ ಗೋವಿನೊಲು (ಗಗಣಾ. ೦೦-೯) . ೪. ಸಂತೋಷ ; ಹರ್ಷ: ಸಕಲದೇವ ದ್ರೋಹಿಗಳು . . . ವಿಕಟಮತಿಗಳು ಖಳಪತಿಯು ಚಿತ್ತಕ್ಕೆ ವಿಕಾರವ ಪುಟ್ಟಿಸುತ ಮೆಚ್ಚಿಕೆಯೊಳಿಹರು (ಕಪಂಣಾ. ೦-೩-೯). ೫. (?) : ಫಲರಸ ವರ್ಣ ಕೊಂಡಂತಿರಬೇಕು . . . ದೃಷ್ಟಿಯ ಚಿತ್ರದಂತಿರಬೇಕು ಅವ್ವಿನ ಮುಚ್ಚಿಕೆಯಂತಿರಬೇಕು (ಪೋಳಚಾ. ೦೦೦-೫೦೨). 'ಮೆಚ್ಚುಗೆ' ಪರಾ. [ಮೆಚ್ಚು_೧೧ + —ಇಕೆ./ತೆಲು. ಮಚ್ಚಿಕ್ಕ]

ಮೆಚ್ಚಗೆ ' ಮೆಚ್ಚುಗೆ ' ನೋ.

ಮೆಚ್ಚಿತ, ಮೆಚ್ಚಿದ (ನಾ). ಪ್ರಿಯವಾದುದು ; ಇಷ್ಟವಾದುದು : ಮೆಚ್ಚಿತು ಮಾಡಲ್ಕೆ ಸಮರ್ಥನಪ್ಪಡಪ್ಪಿದು ಗರ್ವಂ (ಕಮಕ. ೧-೦೦೩) ; ಮುಂದದಿನ್ನೀಗಳೆ ಬೇಡು ಮೆಚ್ಚಿತಂ . (ಭಾಖಾಣಾ. ೨-೬೬). ಮೆಚ್ಚಿದು : ನಿನ್ನ ಮೆಚ್ಚಿದುಗೆಯ್ ಎಂದು ಪಂಚ್ಚೇದಿಸಿ ಪಡಿವುದುಂ (ಸಂಕಚಾ. ೬-೨೨ ೪). ಮೆಚ್ಚಿತ = ಹೊಗಳಿಸಿಕೊಂಡವನು ; ಸ್ತುತ್ಯನಾದವನು : ಪುರಹರ ಮೆಚ್ಚಿತ ಪುರುಷೋತ್ತಮನುತ ಶರಣುಹೊಕ್ಕೆನು ಸಲಹೆನ್ನ (ಪಣಂ. ೬೫-೨೪). [<ಮೆಚ್ಚು_೧೧]

ಮೆಚ್ಚಿದು ' ಮೆಚ್ಚಿತು ' ನೋ.

ಮೆಚ್ಚಿಸು, ಮೆಚ್ಚಿಸು, ಮರ್ಚಿಸು (ಕ್ರಿ). ೧. ಒಡಂಬಡಿಸು ; ಒಪ್ಪಿಸುವ ಗಂಧಮಿತ್ರ(ಕ್ಷೀಣ)ನಂ ಮೆಚ್ಚಿಸಿ ಬುದ್ಧಿಸೇನೆಯಂ ನಿಗ್ರಹದಿಂ ತನಗೆ ವಶ್ಯಂವಮಾಡಿಕೊಂಡು (ಜಾಪುಂಪು. ೦೬೦) ; ಈಕೆಯನು ಮೆಚ್ಚಿಸದು ರಾಜಶಿ ನೀಕ (ಸಂಕಚ. ೫೦-೬೬) ; ಸಂಬುಗೆಯಿಲ್ಲದಿದ್ದರೂ ಅಮ್ಮೈಯ್ಯನ ಮನಸ್ಸು ಮೆಚ್ಚಿಸುವುದಕ್ಕೆ ಹಾಗೆ ಮಾಡಬೇಕಾದುದು (ಹೆಂಗಾಕ್ಕ. ೦೦೯). ೨. ಸಂತೋಷಗೊಳಿಸು ; ಹರ್ಷಗೊಳಿಸು : ಆ ಮಿಸನಂ ಸಮಂತಿಚ್ಚು ಮೆಚ್ಚಿಸದಂ ದೇವರುಮಂ ಧನುರ್ಧರರುಮಂ (ಪಂಕಣಾ. ೬-೬೬) ; ಪರಿಣತ ರೆನಿಸುವ ನಿರ್ಮತ್ಸರರಂ ಮೆಚ್ಚಿಪುದು ಗಹನವಲ್ಲದು (ರಚಾಕ್ಕ. ೧-೯೬) ; ಹ್ಯಾಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ ನಾಗಶಯನನನೆ (ಪ್ರಭೋಪ. ೨-೬೯-೦). ಮೆಚ್ಚಿಸು : ೨. ಮಚ್ಚಿಸುತೆ ತೆಗೆದು ಮುಂಡಾಡುತ್ತೆ (ಹರಿ. ಕೇ. ೬-೦೦) ; ಎನ್ನದು ತನುವಿನಿಸಲಿ ನೀ ಸುಳಿದು ಮೆಚ್ಚಿಸಿ ಯಿನಿತು ಧಾವತಿ ಗೊಳಿಸಿ (ಕ್ರಶುಂಕ. ೬-೯೦) ; ಅವಿಂದೇಶ್ವರನ ಮೆಚ್ಚಿಸುವಾತನೇ ಮಹಾ ಸದ್ಭಕ್ತನು (ಅಂಂಕಾ. ೬೯-೬೬). ಮರ್ಚಿಸು : ೩. ಒಲಿಯುವಂತೆ ಮಾಡು ; ಅನುರಕ್ತಗೊಳಿಸು : ಮನೆಯನಿವಕ್ಕೆ ಮರ್ಚ್ಚಿಸಿದ ಮರ್ಚಿಸಿ ಕೂರಿಸಿದೆಯ್ದೆ ಕೂರ್ತು ನಚ್ಚಿನ ರುಚಿ ಬೆರ್ತು ದಿಚ್ಚತಿಕೆಯಂ ಬಗೆ ಕೂಡದಕೆಯ್ದೆ ಮಾಡಿದೋವನನುಬೆದೊತ್ತೆಗಿರ್ದಡೆಯೊಳಿಂದೆನಗಿತ್ತಪುದು (ಜಾಂತಿ. ೨-೬೦). [ಮೆಚ್ಚು_೧೧ + — ಇಸು_೨]

ಮೆಚ್ಚು₁· ಮಚ್ಚು₁· ಮರ್ಚು₁· ಮೆರ್ಚು.(ಕ್ರಿ)· ೧. ಒಲಿ : ಪ್ರೀತಿಸು : ಬಯಸು : ಸೋಂಬಿಸಂ ಮೆಚ್ಚಿ ಬೇಜಾರ್ಗೆ ಪೋದ ಸೂಳೆಯಂತೆ (ಶಾವ್ಯಸಾ೪ ೩೨೯ ೩೩೨೪) : ಸ್ವಯೆಂಬರದೊಳ್ ಸುವರ್ತಿಯಿಲ್ಲರಂ ನೋಡಿ ಯೂರಂಮಂ ಮೆಚ್ಚದೆ ಸರಿದಿರ್ಪ್ಪಂಗೆ ಮಾಲೆ ಸೂಡಿದೊಡೆ (ಪಾರ್ಶಾ· ೦೦೬–೨೦) ೨. ಇಷ್ಟವಾಗು : ಸೇರು : ಒಂದು ಪೊತ್ತಗಲದ ಮೆಯ್ಗೆ ಮೆಚ್ಚದಂ ತೊಚ್ಚೆತಂ ಕಾದಂಬುರಿಚಿಳಿಳ್ಕೆರಮು (ಶಾದಂಗಾ· ೩೫೬). ೩. (ದೇವರು, ಹಿರಿಯ ಮೊದಲಾದವರು) ಅನುಗ್ರಹಿಸು : ಪ್ರಸನ್ನವಾಗು : ಪೂಜೆ ಕಮಚರತ್ನಕುಂಡಲಂಗಳಂ . . . ಕೊಟ್ಟುವರ್ಕೆ ಮೆಚ್ಚಿ ಧೀವೇಂದ್ರ ನಾತಂಗಮೋಘಶಕ್ತಿಯಸಿಶ್ಯಂ (ಪಂಪಭಾ· ೯–೬೬ ಪ) : ' ಸೆಚ್ಚಿನಯ್ಯ ಹರಿ ಮೆಚ್ಚನಯ್ಯ (ಶ್ರೀಂಪ್ರ· ೩–೬೬–೦). ೪. ಒಪ್ಪು : ಸಮ್ಮತಿಸು : "ಮೆಚ್ಚು — ಅಭ್ಯುಪಗಮೇ" (ಪಮಾಣಾ) : ಪರಮಾರ್ಥಂ ಮೆಚ್ಚಿಸಾನೀ ಧರಣಿಯುಮಿಳರ ವಾನೆನ್ನು ಸನ್ಯಾಸಂಗೆಮ್ಮು (ಎಳ· II, ೮೮–೬ : ಸಂ. ೧೩೦) ; ಇಜ್ಜಿರು ಬಸಬಿ'[ಬದಿ] ಬೀಜ್ಜೊರನ್. ತೆಜ್ಜಿ(ಜ)[ಪ್ರ] ಮೆಚ್ಚದೊಂ (ಎಇ.XXIV. ೦೬೬–೦೨ : ಅಂಬಿ) : ತಾವಸಾಚರಣಂ ತವೋರೂಪಮಾರ್ಗಮಂ ಮೆಚ್ಚದೆ ಮಿಥ್ಯಾಂಧಕಾರಾವಕುಂಠಿತಸಮ್ಯಗ್ದರ್ಶನನಾಗಿ (ಶಾಂಶಾಪ್ರ· ೬–೮೬ ಪ). ೫. ಕೊಂಡಾಡು : ಹೊಗಳು : ಶ್ಲಾಘಿಸು : ತೆತ್ತುತನಕ್ಕೆ ತೆತ್ತುತನಮಂ . . . ಪೊಣರ್ಚುತ್ತುಮಿರ್ಪಾಯದಿಂ ಕಳೆಯೆ ಕೂಡುವನಂ ವಿಭು ಕಂಡು ಮೆಚ್ಚದಂ (ಶಾತ್ಯಸಾ· ೧೮೫ ೩೩೨೪) : ಗುಣಾಮುತನಪ್ಪನಂ . . . ಪರೋಪಕಾರಕಾರಣಪರನಪ್ಪನಂ ಮನದೆ ಮೆಚ್ಚದಿರಾರಭಿಮಾಯಿಯಪ್ಪನಂ (ಶಬಾ· ೦–೦೨೨) : ವಿದ್ವಜ್ಜನಂ ಮೆಚ್ಚೆ ವಿದ್ಯಾವಶ್ಯಂಭವಮನವ್ವುಕೆಯ್ದು (ಎಳ· II, ೬೪–೬೬ : ೧೧೮೨) ; ತಿಳಿಯು ಹೇಳುವೆ ಕೃಷ್ಣಕಥೆಯುಮಿ ಇಳೆಯ ಜಾಣರು ಮೆಚ್ಚುವಂತಿರೆ (ಶಾಣ್ಣ· ೦–೦೩). **ಮಚ್ಚು₁** : ೧. ಶ್ವದಂಭ್ರಪದ್ಮಂಗಳ ನೈದೆ ಮೆಚ್ಚಿ ನೆಲಸಿರ್ದಪುವೀ ವುಲಿ ಜದಿ ಕೋಡಗಂ ಮುಂಗುರಿ (ಅಬಾಕ. ೩–೦೪) ; ರಿಪುರಾಜ್ಯಂಗಳನೆ ವಿಜಯಕೆ ಮಚ್ಚಿ ಮನಂಗೊಳ್ವಂತೆ (ಪಾಂಶಾ· ೦೧–೪೪) ; ಹಣವ ತಕ್ಕೊಂಡು ಧಾಳರ ಕ್ಷಣದೊಳ್ಳುಬ್ಬು ಮಚ್ಚದಿರೆಂದು ಮಗಳಿಗೆ ಬಾಗಂ ವ್ಯಪ್ತಾಪ್ತೆ ಹೇಳಿದಳು (ಪೂಚಾಶಾ· ೦೮–೬೩). ೩. ದಪ್ಪು ತಾಂಬಿದು ಭುಜಬಲವಿಕ್ರಮದಳವಿಗೆ ಮಚ್ಚಿ ಮಚ್ಚುಗುಡಿಸುವವೊರ್ (ಪಾಂಶಾ· ೪–೩೮) : ಜಯಸಿಂಹಪಚಕ್ರಿ ದಯೆಯಿಂ ಕಿಯ್ಕೊಂಡು ಸರ್ವಾಧಿಕಾರಮನಿತ್ತಜ್ಜಜೂಳೆಯ್ದೆ ಮಚ್ಚಿ ಪೇರೆವಂ ಜಾನೆಂದೊಡ . . . ಉನ್ನತಿಕ್ಕೆ ಮಡದಂ ಜಾವುಂಡನೇಂ ಧನ್ಯನೋ (ಪೂಚಾಶಾ. ೦–೦೩ ೦೦೪೪) ; ಮಾಡಿದ ಪೂಜೆಯುಂ ಕೊಂಡು ಮಚ್ಚಿ ತಲೆವೊಗಿ ಲಿಂಗಯ್ಯನ ಮಾಡ ಕರಗಿ (ಪೂಚಾಶಾ. ೦೨೮ ಕೃಶಾ೪೩). ೪. ನಿಂತು ಮಾಡುಮೆನೇ ಮನವನ್ನು ಕೂಡಲಸಂಗಮ ದೇವನ ಶರಣರ ಸಚ್ಚವ ಮಚ್ಚದ ಬೆಂದ ಮಾನವನು (ನಾಸ. ೩೮) ; ಮೆಚ್ಚುಗೆ ಮಾಸ ನಿಮ್ಮಲ್ಲಿ ಮಚ್ಚುಗೆ ಮಾಸ ನಿಮ್ಮಲ್ಲಿ (ಪುಶಾದೇ· ಪ· ೩೦–೩೩) : ವೀರ ಶೈವದಲಿ ಒಳ್ಳಿತೆನುಂಬೆಂದು ಮಚ್ಚಿದನಲ್ಲದಮಿಂ ಹೇಳು (ಕ್ರಶೂಚೀ· ೨೩–೦೦). ೫. ಕುಮಾರಿಯರ್ ಬಿಗೊಳ ದಿಕ್ಕುಮಾರಿಯರೆವರ್ಗೊರೆಯಾವುವರ್ಕೆ ಮಚ್ಚಿ ಬಿಜ್ಞಸಲಭಿಯೋಗಮಾಯ್ತುಸಗೆ (ಗಾಶಾಮು· ೦–೩೩) ; ಮೆಚ್ಚದೊನಲ್ಲ ವಿಶ್ವಕಂ (ಶಾಪ್ರ·ಪ. ೪೮೪). **Δ ಮರ್ಚು₁** : ೧. "ಮರ್ಚು- ಅತಿಪರಿಚಯೇ" (ಪಮಾಣಾ) : ಕಳವಸೆ ಮರ್ಚಿ ಪೆರ್ಚಿ ಬೆಸಸಂ ಪೆಱರರ್ಥವ್ಯಾಸಂಬ್ಬುಕೊಳ್ವ ತಕ್ಕಳವಿಗಳಾಂಬವಾಗಿ ನಿರೆ ಕಸ್ಮವನಿಕ್ಕುವ . . . ನಿನ್ನ ಗೊಷ್ಠಮಂ ತಿಳಿದವಧಾನಿಸು (ಪಪಾಪ್ರ. ೩–೩೦) : ಉನ್ನತ ಗುರುಬ್ರುವಪಮಂ ಮರ್ಚಿ ಬೆನ್ನಸೆ ಪೋದಂತಿರೆ ಮೂರ್ಖವ್ಯೂಹನರಸಂ ದ್ಯಾಮೋಹಮೇಗೆಯ್ದೆದೋ (ಅಪಾಸಂ· ೨–೮೬). ೨. ಜನ ತನ್ನ ಗೊಪ್ಪತಿ ಮರ್ಚಿ ನಚ್ಚಿ ಮೋಸದೆ ಪುಮಾಳ್ವವ್ಯೋಲ್ ವಿಧಿಮಾಯಿಸುವಮೆ ಲೋಕರಾಸನಂ (ಸಂಪಾ. ೪೯–೦೦). **ಮೆರ್ಚು** : ೫. ದೇವನಿಕಾಯಂ ನೆರೆಪೆರ್ಚಿ ಮೆರ್ಚಿ ಜಯಮಂ ಕೈಕೊಯೆ (ಪಾಂಶಾಕ್ಷ. ೪–೩೦) ; ಮೆರ್ಚಿ ಪಿಡಿದಿರ್ಪವೆ . . . ಸಲ್ಲಕ್ಷಣಂ (ಪಪಮು. ೩–೩೯).

[ದೇ.-ll ತಮಿ. ಮೆಚ್ಚು, ಮೆಯ್ಚ್ಚು : ತುಳು. ಮೆಚ್ಚು ; ತೆಲು. ಮಚ್ಚು, ಮೆಚ್ಚು ; ಕೊಡ. ಮೆಚ್ಚ್ ; ಕೋತ. ಮೆಚ್ಚ್]

ಮೆಚ್ಚು₂· ಮಚ್ಚು₂· ಮರ್ಚು₂ (ನಾ). ೧. ಪ್ರೀತಿ : ಇಷ್ಟ ; ಒಲುಮೆ : ಮಾದನನ ಕಾಯ್ದು ಮಾಣ್ಗೆ ಸರಸೀರುಹಜನ್ಮನ ವೆಚ್ಚು ಹೀಗೆ (ಪಂಪಭಾ· ೩–೦೬) : ಮೆಚ್ಚಿದಂತಿರುತಿಪಳು ಮೆಚ್ಚು ಮತ್ತೊಬ್ಬನೊಳು (ಪರ್ಪಕ್ಕ· ೦೪೪೦). ೨. ಪ್ರಿಯವಾದುದು : ಇಷ್ಟವಾದುದು : 'ಈ ಪುಣ್ಯಕಥೆ ಪುಣ್ಯಜೀವಿಗಳಗೆ ಮೆಚ್ಚು ಕಾವುರುಷರಿಗೆ ಮೆಚ್ಚಲ್ಲ (ಪಪ· ೦–೦೩). ೩. ಇಷ್ಟವಸ್ತು ಕೊಡುವ ಕಾಣಿಕೆ : ಬಹುಮಾನ : ತನ್ನ ಸಲ್ಲಂಬು ಗಳಿಂದೆಚ್ಚೆಚ್ಚು ಮೆಚ್ಚಂ ಸಲಿಸುವಂ (ಪಂಪಶಾ· ೪–೨೩) : ಅರಸುಮಕ್ಕಳ ಮುಂಮೋದಿ ಮೆಚ್ಚಂ ಕೊಳ್ವಕ್ಕರಿಗರ್ಬರದೊಳಂ (ಕ್ಕಾಶಾ. ೧೪) : ಅವಮನೆಯೊಳ್ ರನ್ನಗಡಗಮಂ . . . ಮೆಚ್ಚನೀವರ್' (ಶಾಪಪ್ರ· ೩–೦೩). ೪. ಒಪ್ಪಿಗೆ : ಸಮ್ಮತಿ : ಮೆಚ್ಚಿಲ್ಲದ ಜಡಜಾನಿ ದೇವಗುರುಗಳು ಪೊರ್ದದೆ (ಶಪಾಕಾ· ೩–೦೩೭) ; ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು ಕೇಳ್ವೆಜ್ಜಿಕೆ(ಪೂಚಂದ. ೨–೪೫ ೦೦೨೪೪). ೫. ಯೊಗಳಿಕೆ: ಪ್ರಶಂಸೆ: ಬಜ್ಜಾದಲ್ಲು ಮೆಚ್ಚು ಬೌದು ಕಿಜ್ಜಾದಲ್ಲು . . . ಎನಿಸಿದುದು ನಿಜಗುಣಂ ಬೋಜಜಗಸ್ತ (ಪಾಶಾಪ್ರ. XI–i· ೮೦–೨೪: ೪೮೨). **ಮಚ್ಚು₂** : ೧. ಅರಸರ ಮಚ್ಚು ತಮ್ಮ ಮನದೊಳ್ ನಿಲೆ ಸೈರಿಸದಂತ ನಿತ್ಯಮೂ ನರರ ವಿಭೂತಿಯೆಂಬ ಬಗೆ ಬಂದಿರೆ ಮಾಣದೆ ತಮ್ಮತಮ್ಮ ಪತ್ರರನಳಿತೋಗದಿಂದತಿಬಲಂಗೆ ನಿಯೋಜಿಸಿ ಮಾಣ್ದರ್' (ಅಬಾಕ. ೩–೩೦); ವಿಷಮಂಗಳೊಳಪ್ಪ ಮಚ್ಚಿಂ ಕಿಯ್ಕೊಂಡಂಗಾ ಮಚ್ಚು ಕಷಾಯಿವಮಂ ಪುಟ್ಟಿಸುಗುಂ (ಪಾಪಸಂ· ೦೪೦–೦೦ ಪ) : ಕಳವಿನೊಳ್ ನಡವುದೇ ಸುಖಿದ ಸುಗ್ಗಿ ತರದೋಜುತಿರ್ಪ್ಪಾದೇ ಮಚ್ಚು ನಿಸಗೆ (ಪೊಕೃ· ೦೦–೩೩). ೩. ಕೂರ್ತಿಚ್ಚೆ ಬೆರ್ಚ್ಚಂತಿರೆ ಮಚ್ಚಿಂ ಮೆಚ್ಚದಂದದೊಳೆ ಸಲಿಪ . . . ವಾರನಾರೀ ಕದಂಬೀ (ಶುಬಪ್ರ. ೯–೬೩) : ಬೀರಬಲ್ಲಾಗೆ ಮಚ್ಚು (ಬಹುಮಾನ) ಕೊಡಿಸಬೇಕು (ಶಾಕ. ೭೦). **Δಮರ್ಚು₂** : ೧. ಸಹಜಧಾತುವೃಂ ಭಾವಮಕ್ಕುಂ . . . ತಡೆ ನಡೆ ಜಿಸಾ ಮೆರ್ಚು ಮರ್ಚು (ಪಪಮು. ೪೦೩ ಕೃಪೂ). ೩. ಅಲಂಕಾರ: ಶೃಂಗಾರ : 'ಮಯ್ಮರ್ಚು' ಪರಾ.

[< ಮೆಚ್ಚು₂-/ತಮಿ. ಮೆಚ್ಚು, ಮೆಯ್ಚ್ಚು : ತೆಲು. ಮೆಚ್ಚು]

ಮೆಚ್ಚುಕಾಣಿ (ನಾ)· ಪ್ರೀತಿಪಾತ್ರನಾದವನು : ಕಡುಚದುರರ ಮೆಚ್ಚು ಕಾಣಿ (ಪಪ· ೭೭ ೦)- [ಮೆಚ್ಚು₂ + — ಕಾಣಿ]

ಮೆಚ್ಚುಕೆಯ್ (ಕ್ರಿ)· ಬಯಸಿದಂತೆ ಮಾಡು : ಇಷ್ಟಬಂದ ಹಾಗೆ ಮಾಡು : ಒಬಿವೆವನಿಂದೊಳಗೆ ಕಳ್ಳನಸಾರಯ್ಯಲಾಜಿದಾಗಳ್ ದೇವರೆನ್ನಂ ಮೆಚ್ಚುಕೆಯ್ವುದು (ಪಪಾಶಾ. ೦೨೩–೨೩) ; ನೀನಿನ್ನೆನ್ನಂ ಮೆಚ್ಚುಕೆಯ್ವುವಂಬುದುಂ (ಪುಶಾದೇ· ೭–೨೪ ಪ). [ಮೆಚ್ಚು₂ + ಕೆಯ್₂]

ಮೆಚ್ಚುಗ (ನಾ)· ಇಷ್ಟ ಪಡುವವನು; ಬಯಸುವವನು : "ಸ್ವಾಕ್ಕ್ ಸ್ಕೋಚಿ. ಸ್ಕೋಚಕಃ. ಸ್ಕೋಚಿಸಮಾನಃ – ಈ ಳ ಮೆಚ್ಚುಗಂ" (ಶಾಪಕ್ಕ· ೧೩) ; ಸಾಪಿತ್ಯರಚನೆಯ ಮೊದಲ ಮೆಚ್ಚುಗ ಸ್ವತಃ ಕೃತಿಕಾರನೇ ಆಗಿರುತ್ತಾನೆ (ಪಂಪಪಾಪ· ೦೧೩). [ಮೆಚ್ಚು₂ + — ಗ್₂]

ಮೆಚ್ಚುಗಾಣಿಕೆ (ನಾ). ಇಷ್ಟವಸ್ತು ಕೊಡುವ ಬಹುಮಾನ : ತಮ್ಮ ಲೋಕೋತ್ತರವಾದ ಕಲಾವೈಭವಕ್ಕೆ ಬೆರಗಾಗಿ ಬೇಳಾಗಿ ನಸ್ಸ ನಾಟ್ಯಕಲೆಯು ಮೆಚ್ಚುಗಾಣಿಕೆಯಿತ್ತು ನನ್ನ ಸರ್ವಸ್ವವನ್ನೂ ತಮಗೆ ಎಡೆ ಮಾಡಲು ಬಂದಿದ್ದೇನೆ (ಪುಂಚಾ· ೩೩). [ಮೆಚ್ಚು₂ + ಕಾಣಿಕೆ (< ಕಾಣ್₂)]

ಮೆಚ್ಚುಗುಡು 'ಮೆಚ್ಚುಗೊಡು' ನೋ.

ಮೆಚ್ಚುಗೆ· ಮಚ್ಚುಗೆ· ಮರ್ಚುಗೆ· ಮೆಚ್ಚಿಗೆ (ವಾ). ೧. ಪ್ರೀತಿ ; ವಿಶ್ವಾಸ : ಅಭಿಮಾನ : ಬಂಧುವರ್ಗದವರೆಲ್ಲಾ ತಮ್ಮನ್ನು ಮೆಚ್ಚುಗೆ

ಯಿಂದೆ ಕಾಣುತ್ತಾರೆ (ಕೂಡ). ೨. ತೃಪ್ತಿ; ಸಂತೋಷ: ತಮ್ಮ ಕರ್ಮವಶದಿಂ ಸಂಸಾರಿಜೀವಂಗಳೆಲ್ಲಿ ಪುಟ್ಟುಗುಮಲ್ಲಿಯಲ್ಲಿಯುಚ್ಚಿಯುಂ ಮೆಚ್ಚುಗೆಯುಮಕ್ಕುಂ (ಕಜಾ.ಕಾ. ೩೩-೨೦); ಸಹಜಸ್ಥಿತಿಯಲ್ಲಿ ಅವನು ಅತ್ಯಂತ ಚುರುಕಾಗಿರುತ್ತಾನೆ ಎಂದು ಮಾನ್ಸಿನಿಕೊವ್ ಮೆಚ್ಚುಗೆ ಸೂಚಿಸಿದನು (ತ್ರಿಪು. ೨೩೦). ೩. ಹೊಗಳಿಕೆ: ಕೊಂಡಾಟ; ಪ್ರಶಂಸೆ: ಜಗದೀಶಚಂದ್ರರು . . . ಜನರ ಮೆಚ್ಚುಗೆಗೆ ಮತ್ತು ಕೃತಜ್ಞತೆಗೆ ಪಾತ್ರರಾದರು (ಪ್ರಾ.ಕ. ೦೦೩). **ಮಚ್ಚುಗೆ**: ೩. 'ಮೆಚ್ಚುಗೆಮೆಚ್ಚು' ಪರಾ. **ಮರ್ಚುಗೆ**: ೧. ನಿಸ್ಸೊಳ್ಪಿದಮಾದ ಕೊಂಡಾಟದವಂತಸೌಖ್ಯಮನೆ ಮರ್ಚದೆ ಮರ್ಚುಗೆಯೊಳ್ ತೊಡರ್ಚು . . . ಜಿನೇಶ್ವರಾ (ಪಂಡಿತ ೪-೦೦). **ಮೆಚ್ಚಿಗೆ**: ೧. ಅವರು ತಮ್ಮ ಸರಸಜ್ಞನಿಕೆಗಳಿಂದ ಎಲ್ಲರ ಮೆಚ್ಚಿಗೆಯನ್ನೂ ಗಳಿಸಿದ್ದಾರೆ (ಕೂಡ). 'ಮೆಚ್ಚಿಕೆ' ಪರಾ.

[ಮೆಚ್ಚು$_{೨}$ + — ಗೆ./ತುಳು. ಮೆಚ್ಚಗೆ; ತೆಲು. ಮಚ್ಚಿಗ]

ಮೆಚ್ಚುಗೊಡು, ಮಚ್ಚುಗೊಡು, ಮಚ್ಚುಗೊಡು, ಮೆಚ್ಚುಗುಡು (ಕ್ರಿ)- ಬಹುಮಾನವನ್ನು ಕೊಡು; ಉಡುಗೊರೆಯನ್ನು ನೀಡು: ಬಿನ್ನಪಂಗೆಯ್ದ ಬೇಂಟೆಯಾತಂಗೆ ಮ್ಯಗ ವ್ಯಾದಮಾ ಕಾರ್ತಿಕೇಯಂ ಮೆಚ್ಚಿ ಮೆಚ್ಚುಗೊಟ್ಟ (ಪಂಚಮಿ. ೩-೨೩ ಪ) ; ಎನ್ನ ಪೆಂಡತಿಯೀನಂ ಪಡವಳೆಂದು ಬೆಸಗೊಂಡೊಡೆ ಗಂಡುಗೂಸಂ ಪಡವಳೆಂದು ಪೇಬಿಂದಿಡ ಕೇಳ್ದಾ ಭಟ್ಟಂಗೆ ಮೆಚ್ಚುಗೊಟ್ಟ (ಪಂಚಮಿ. ೦೩೩-೨೨) ; ಮನಸೊಲಿದು ಬೇಡಿದುದ ಮೆಚ್ಚುಗೊಡುವೆ (ಸೌಂದ. ೩-೨೫). **ಮಚ್ಚುಗುಡು**: 'ಮಚ್ಚುಗುಡಿಸು' ಪರಾ. **ಮೆಚ್ಚುಗೊಡು**: ಆಕಗಳಾದಿದಾಟಮನಿಂದ್ರಂ ನೋಡಿ ಮಚ್ಚಿ ಮುಚ್ಚುಗೊಟ್ಟುಪಸಂಪಾದಿಸಿ (ಪಂಚತ್ರ. ೭-೩೯ ಪ) ; ಒಸಗೆವಾತಂ ಪೇಬ್ದವಂಗೆ ಮಚ್ಚುಗೊಟ್ಟು (ಆದಿಪು. ೪೨೬) ; ಮೆಚ್ಚುಗೊಟ್ಟುವೆದೆಂಬ ಮಾಳ್ಕೆಯಿಂ . . .ಕರ್ಣಪೂರಂ ಜಗುಳ್ದು ಬೀಳುತ್ತಿರೆ (ಶಾಆಪ. ೭-೦೭ ಪ). **ಮೆಚ್ಚುಗುಡು**: ನೆಗಬ್ದಂದ್ರಾದ್ಯಮರೌಘಮೋಲಗಕೆ ವಂದು . . . ಮೆಚ್ಚುಗುಡದೊಂಡು ಮಹಾಪ್ರಸಾದಮೆನುತಿರ್ದರ್ವಿರೀಶ್ವರಾಸ್ಥಾನದೊಳ್ (ಪಾಂ. ೧೦-೩೬); ವಿಷ್ಣು ಒಪ್ಪುವನು ಮೆಚ್ಚುಗುಡುವನು (ಪಚಿಕಾ. ೨. ೨೫೦). [ಮೆಚ್ಚು$_{೨}$ + ಕೊಡು$_{೧}$]

ಮೆಚ್ಚುಗೊಳ್ (ಕ್ರಿ)- ಬಹುಮಾನವನ್ನು ಪಡೆ; ಉಡುಗೊರೆಯನ್ನು ಹೊಂದು: ನಿಚ್ಚಂ ಮೆಚ್ಚುಗೊಳ್ವಿಂದ್ರನ ಕೈಯೊಳ್ (ಜಾಪ್ರ. ೯-೦೬); ಬೇಗಂ ಪರಿದು ಪೋಗಿ ಪರಮೋತ್ಸವದೀದಪ ಬಿನ್ನವಿಪ ಜನಂ ಕಾದಂಬರಿಯಂ ಮೆಚ್ಚುಗೊಳ್ಪದಿರ್ಕುಮೆ ಪಿರಿದುಂ (ಕಾದಂಬ. ೩೦೯).

[ಮೆಚ್ಚು$_{೨}$ + ಕೊಳ್$_{೨}$]

ಮೆಚ್ಚುದೋಱು (ಕ್ರಿ)- ಪ್ರೀತಿಯನ್ನು ತೋರು: ಕತೆಗಱ್ಗೊಳ್ ಮಾತಾಡುವುದಡನುಡಿಯೊಳ್ ಮೆ[ಪಾಠಾಂ: ಪು]ಚ್ಚುದೋರ್ಪುದು . . . ಇದುವೆ ವೇಶ್ಯಾಧರ್ಮಂ (ಪಚಿಕಾ. ೩-೨೦). [ಮೆಚ್ಚು$_{೨}$ + ತೋಱು]

ಮೆಚ್ಚುಮದ್ದು, ಮಚ್ಚುಮದ್ದು (ನಾ). ಪ್ರೀತಿಯಿಲ್ಲದ ವ್ಯಕ್ತಿಯಲ್ಲಿ ಪ್ರೀತಿಯು ಹುಟ್ಟುವಂತೆ ಮಾಡುವುದೆಂದು ನಂಬಲಾದ ಔಷಧಿ: ವಶೀಕರಣದ ಮದ್ದು: ಇದೊಂದು ಮೆಚ್ಚುಮದ್ದು . . . ಇದಂ ನಿನ್ನ ಗಂಡನಿಗೆ ಊಟದಲ್ಲಿಯಿಕ್ಕು (ಜಾಕ. ೦೨೩). **ಮಚ್ಚುಮದ್ದು**: ಮೋಹದ ಮಚ್ಚುಮದ್ದೊಡಲಿಟ್ಟುದೆನೆ ಸತಿ ಮೆಚ್ಚಿ (ಜಾಕ್ಕಾ. ೩೨-೩೦); ಮಚ್ಚುಮದ್ದು ಎಂದು ಕೊಟ್ಟದ್ದು ಮಚ್ಚುಮದ್ದಾಯಿತು (ಗಾಪ).

[ಮೆಚ್ಚು$_{೨}$ + ಮದ್ದು (< ಮದ್ದ)]

ಮೆಚ್ಚುವಡು (ಕ್ರಿ)- ತೃಪ್ತಿಪಡು: ಅನುದಿನಂ: ದುರ್ಗ್ರಾಣದೊಳನುದಿನಂ ಮೆಚ್ಚುಮಿರ್ಪರ್ದಸಂ ಮಾಣಸಲೆಸ್ಸಂ ಬರ್ಕುಮೇ ಸದ್ವಚಸಶತ ದೊಳಂ (ಗಪ. ೩೫. ೦೦೨.ಅರ್ಥಂ ಪಾಠಾಂತರ). [ಮೆಚ್ಚು$_{೨}$ + ಪಡ$_{೨}$]

ಮೆಚ್ಚುವಡೆ, ಮಚ್ಚುವಡೆ (ಕ್ರಿ)- ೧. ಪ್ರೀತಿಯನ್ನು ಹೊಂದು; ಮೆಚ್ಚಿಗೆ ಹೊಂದು: ಸಂಪಗೆಯಲರ್ ಸುರಪೊನ್ನೆಯ ಪೂಗಳೆಂದಿವಂ ಮುರರಿಪುಗಿತ್ತ ಮೆಚ್ಚುವಡೆಮತ್ಸ್ವದಿಂ ನುಡಿದಂ ಪ್ರಿಯೋಕ್ತಿಯಂ (ಜಗಪ. ೫೯-೧೨): ಕಿಚ್ಚುಗಣ್ಣನ ತಮವೆಂಬುದು ಪೂಗೋಲೊಳೆಚ್ಚು ಮನ್ಮಥ ಪೀಡಿಸಲು ಮೆಚ್ಚುವಡೆದು ಪಾರ್ವತಿಯೊಳು ರಮಿಸಲು (ಪೂಚಕ. ೩-೦೮). ೨. ಬಹುಮಾನವನ್ನು ಪಡೆ;— ಹೊಂದು: ಕರವೊಸೆದು ಬೇಡಿ ಕೊಳ್ಳೆಂದರಸಂ ದಯಿವೆರಸು ನುಡಿದೆ ಬಲಿಯೆಂದಂ ಭಾಸುರತೇಜ ಮೆಚ್ಚುವಡೆದವರಿಂ ಭಂಡಾರದೊಳ್ ಜಗತ್ಪ್ರಥಿತಯಶಾ (ಪಟಾಪ್ರ. ೩-೦೦). ೩. ಕಾಣಿಕೆಯಾಗಿ ಪಡೆ; ಬಹುಮಾನವಾಗಿ ಹೊಂದು: ತನ್ನ ಮನಮಂ ಮುನ್ನಮೆ ಮೆಚ್ಚುವಡೆದ. ಪೋಚರಚರಂಗೆ ನಿಜಹೃದಯದಾನ ಪ್ರೌನರುಕ್ಕ್ಯಮಂ ಮಾಡಲಿಚ್ಛೈಸಿ (ಕರ್ಣಾ. ೯-೩೩ ಪ). **ಮಚ್ಚುವಡೆ**: ೨. ಇಚ್ಛೆಗಾರ್ತಿ ಪಚ್ಚೆಪಲ್ಲಿಂ ಮುಚ್ಚುವಡೆದಚ್ಚಂ ಎಂಗೆ ತಳರ್ದೊಚ್ಚೀರೆ ಗನ್ನ ಪೆರ್ಚಸಚ್ಚರಿಯಂ (ರಾಚಕ. ೦-೦೩೫). [ಮೆಚ್ಚು$_{೨}$ + ಪಡೆ$_{೨}$]

ಮೆಚ್ಚುವಣಗೆ, ಮೆಚ್ಚವಣಗೆ (ನಾ). ಮೆಚ್ಚಿಗೆಯನ್ನು ಹೊಂದಿರುವುದು: ಪ್ರೀತಿಪಾತ್ರವಾಗುವುದು: "ಮೆಚ್ಚುವಣಗೆಯು ಮೆಚ್ಚನುಳ್ಳು ದಕ್ಕರ್ಧ" (ಪಂ.ಮು. ೩೭) ; ಮುಂಳಿಸಿನ ಮೋಹನ ಗಂಡಮಚ್ಚರದ ಮೆಚ್ಚುವಣಗೆಯಂಕಕಾಱರ್ . . . ಒರ್ವರೊರ್ವರೊಳಾ ಕಾದೆ (ಪಂಚಕ. ೩೨-೩೬ ಪ). **ಮೆಚ್ಚವಣಗೆ**: "ಮೆಚ್ಚವಣಗೆ = ಮಚ್ಚನುಳ್ಳುದು" (ಕಮಾಕ. ೫೦. ೨) ; ಓಲಗವುರುದಿಲ್ಲ ಮೆಚ್ಚವಣಗಿಲ್ಲ ಕರಂ ಮುಂಳಿಸಿಲ್ಲ ಕಾಯ್ದು ಕೆಮ್ಮಗೆ ಬಬ್ಬಸಂದು ಕೊಂದಪಸಕಾರಣದಿಂ ಪೋಜಿಯೋ ಮನೋಭವಾ (ಆದಿಪು. ೦೨-೩೩) ; ಪೆಜವುಂ ಕಚ್ಚಕಳಗಳ ತೊಡರ್ಪಿನ ಮೆಚ್ಚವಣಗೆಯುಂಕಮಂ ಮಹೀಶಂ ನೋಚ್ಚುಂ (ಕಾಮ್ಯ.ವ. ೪೪೯) ; ಕೆಲರ್ ನುಡಿವಳಿಗಳಂ ಪೊಗಬಿಸುತ್ತ[೦] ಮೆಚ್ಚವಣಗೆಯವರಂ ತೆಗಬಿಸುತ್ತ ಮಿರ್ದರ್ (ಪಂತ್ರ. ೦೨-೪೦ ಪ). [ಮೆಚ್ಚು$_{೨}$ + — ವಣಗೆ]

ಮೆಚ್ಚುವೆಣ್ (ನಾ)- ಒಲಿದ ಹೆಣ್ಣು: ಮಚ್ಚರಮನತಿರೂಪಿನಿಂದ ರತಿಯೊಳ್ಕಾಳ್ದ ಮೆಚ್ಚುವೆಂಗಳ ಮೋಹವೇ ಮುಕ್ತಿಯಲ್ಲವೇ ಧಾವಿಸಲ್ (ಸಮ್ಮಳ. ೩-೭). [ಮೆಚ್ಚು$_{೨}$ + ಪೆಣ್]

ಮೆಚ್ಚುವೇಟ್ (ಕ್ರಿ)- ಇಷ್ಟವಾದುದನ್ನು ಹೇಳು; ಬಯಸಿದುದನ್ನು ತಿಳಿಸು: ಮೆಚ್ಚುವೇಟೂಡಾನೇಂಯಾತ್ಕೋತ್ಕರಂ ಬಾಬ್ತಿಯೊ ಮಾಣಿಸಿಬಯುಂ ಬಾಬ್ತಿಯೋ ಪೇಟುಮೆಂದಾ ದೀನಾನಾಥರ್ಗೆ . . . ಧರ್ಮಜಂ ಸೂಳ್ ಗೊಟ್ಟಂ (ಪಂಚಾ. ೬-೧೦). [ಮೆಚ್ಚು$_{೨}$ + ಪೇಟ್]

ಮೆಚ್ಚೊಲೆ (ನಾ): ಹೊಗಳಿಕೆಯನ್ನು ವ್ಯಕ್ತಪಡಿಸಿದ ಪತ್ರ; ಪ್ರಶಸ್ತಿ ಪತ್ರ: ಕೊಟ್ಟುಕೋ ನಿನಗೆ ನೀ ಸೂರು ಮೆಚ್ಚೊಲೆ (ಕಬ್ಬ.ಲಂ. ೩೭-೧).

[ಮೆಚ್ಚು$_{೨}$ + ಓಲೆ]

ಮೆಟಕಿ ' ಮಡಕಿ ' ನೋ.

ಮೆಟಗುಳಿಹಂಬು (ನಾ). ಒಂದು ಬಗೆಯ ಬಳ್ಳಿ: (ಹೃ.ಕಿ. ೨೩-೪೩).

[ಮೆಟಗುಳ್ಳಿ + ಪಂಬು$_{೨}$ (< ಪರವ್ಯ)]

ಮೆಟರು, ಮೆಟರೆ, ಮೆಟ್ಟರೆ, ಮೆಡರು (ನಾ)- ಕುತ್ತಿಗೆಯ ಮುಂಭಾಗ: ಗಂಟಲು: 'ಮೆಟರುಗಂಟು', 'ಮೆಟರುಗಟ್ಟು' ಪರಾ. **ಮೆಟರೆ**: ಮುಂಗತ್ತು. ಕೂರಲು. ಮುಂಗೊರಲು. ಮೆಟರೆ. ಗೋಣು. ಗೋನಾಳಿ (Throat. ೨೦೪೩). **ಮೆಟ್ಟರೆ**: ಅವನ ಜುಟ್ಟನ್ನು ಹಿಡಿದು ನೆಲದ ಬೀಲೆ ಕುಕ್ಕಿ ಪಾಕಿ, ಮೆಟ್ಟರೆ ಮಿಸುಕಿ ಕತ್ತು, ಎದೆ ಕಾಲು ಎಲ್ಲೆಂದರೆ ಅಲ್ಲಿ ಹೊಡೆದನು (ಪಕಥಾ. ೪೦೭). **ಮೆಟ್ರೆ**: ಮೊನ್ನೆ ಯಾರೋ ಅವನನ್ನು ಮೆಟ್ರೆ ಹಿಸುಕಿ ಸಾಯಿಸಿಲು (ಕೂಡ). 'ಮೆಟ್ರೆಗಟ್ಟು' ಪರಾ. **ಮೆಡರು**: ' ಮೆಡರುಗಟ್ಟು ' ಪರಾ. [ದೇ.ಕ ತಮಿ. ಮಿಟರು, ಮಿಟಲ್; ಮಲ. ಮಿಟಱು; ತೆಲು. ಮೆಡ = ಕುತ್ತಿಗೆ]

ಮೆಟರುಗಂಟು (ನಾ)- ಒಂದು ಬಗೆಯ ಗಂಟಲುರೋಗ; ಗದ್ದಕಟ್ಟು: ಮಂದಾಗ್ನಿಯವರು. . . ಕುಷ್ಠರೋಗದವರು. ಮೆಟರುಗಂಟಿನ ರೋಗ

ದವರು. . . ಇವರಿಷ್ಟೂ ಮನುಷ್ಯಯೋಗ್ಯರಂದೀವುದು (ಸಕ್ಕ. ೨೫). 'ಮೆಟರುಗಟ್ಟು' ಪರಾ. [ಮೆಟರು + ಗಂಟು]

ಮೆಟರುಗಟ್ಟು, ಮೆಟ್ರಿಕಟ್ಟು, ಮೆಟ್ರಿಗಟ್ಟು, ಮೆಡರುಗಟ್ಟು (ನಾ). ಗಂಟಲಿನ ನಾಳಗಳು ಊದಿಕೊಳ್ಳುವ ಒಂದು ಬಗೆಯ ರೋಗ; ಗದ್ದಕಟ್ಟು : ಮಂಡೆಯ ನೋವು ಕಾಣಿಸಿ, ಮೆಟರುಗಟ್ಟು (?), ಮೈಯುರಿಕವೇಟಾಗಿ ಅಜ್ಞಾನವು, ಶರೀರದಲ್ಲಿ ಕಂಪನವು ಪುಟ್ಟಿ, ಜ್ವರವು . . . ತಾಪವು, ಕಳವಳವು ಉಂಟಾಗಿಪ್ಪುದೆ ಕಂಠಕಬ್ಬ ಸ್ನಾಪಾತವೆಂದರಿವುದು (ಸಕ್ಕ. ೦೩೯). **ಮೆಟ್ರಿಕಟ್ಟು** : ನರಡೀರೋಗ, ಚಪ್ಪರೋಗ, ಮೆಟ್ರಿಕಟ್ಟು ಮುಂಪಾದ ರೋಗಗಳು (ಸ್ತ್ರಚಿ. ೦೨೦). **ಮೆಟ್ರಿಗಟ್ಟು** (?). **ಮೆಡರುಗಟ್ಟು** : ಕುಷ್ಠರೋಗದಲ್ಲಿ, ಮೆಡರುಗಟ್ಟಿನಲ್ಲಿ. . . ದವನಸ್ತ್ರಯ ಮಾಡಿಸುವುದು (ಶಸ್ತ್ರಚಿ. I, ೩೦). 'ಮೆಟರುಗಂಟು' ಪರಾ. [ಮೆಟರು + ಕಟ್ಟು]

ಮೆಟರೆ ' ಮೆಟರು ' ನೋ.

ಮೆಟ್ಟಕ್ಕಿ (ನಾ). ಮದುವೆಯ ಸಮಯದಲ್ಲಿ ವಧೂವರರು ಮೆಟ್ಟಿ ನಿಲ್ಲಲು ಬಿದಿರಿನ ತಟ್ಟೆಯಲ್ಲಿರಿಸಿದ ಅಕ್ಕಿ : ಚಂದ್ರಿಕಾತಂಡುಲವೋ ಎನೆ ತೂಳಗಿ ತೋರ್ಪ ಮೆಟ್ಟಕ್ಕಿಗಳಂ (ನಿಶಿ. ೦೮-೫೫); ತರುಣಿ ಸೊಂಪ ಕುಮಾರ ಮಣಿಮಸ್ಯರಿಕ ಮೆಟ್ಟಕ್ಕಿಯನು ಮೆಟ್ಟಿಸೆ (ಶಾಪಂಕ. ೯-೭೭) ; ಮೆಟ್ಟಕ್ಕಿಯ ಮೇಲೆ ನಿಲಿಸಿ ಶ್ರೀಪ್ಪರು ಮಂಗಳಾಪ್ಪಕದಿ ನಿರೀಕ್ಷಣೆಗೊಟ್ಟರು ದಂಪತಿಗಳಗೆ (ಕೋಚಕ. ೩-೩೮) ; ಕಾಂಡಪಟದ ದುಂದೆ ರಜತಪೀಠದ ಮೇಲೆ ಹರವಿದ್ದ ಮೆಟ್ಟಕ್ಕಿಯ ಮೇಲೆ ಬಂದು ನಿಂತರು (ಪಾಂಚಾ. ೦೦೮).

[ಮೆಟ್ಟು$_{II}$ + ಅಕ್ಕಿ$_1$]

ಮೆಟ್ಟಡಿ (ನಾ). ೧. ಎಕ್ಕಡ ; ಪಾದರಕ್ಷೆ : ಮೆಟ್ಟಡಿಯುಂ ಕಳೆದು ಬಟ್ಟೆಯುಂ ತೊಲಗಿ ಸಾಷ್ಟಾಂಗವೆಱಗಿ (ಕೋಚಕ. ೩೦-೦೫) ; ಮೆಟ್ಟಡಿಯ ಕೊಂಡ ಕೊಕ್ಕದ ಕೊಡಿ (ಪಾಪ್ರಕಥ. ೮೩೫-೦೭೦೦) ; ಅಟ್ಟೆಯ ದುರ್ಗಾಣ ಕೆಟ್ಟು ಮೆಟ್ಟಡಿಯವರೆಗೆ ಮೆಟ್ಟಿಸ ಬಂದೆ (ಸಭಾಪ. ೦೦೨-೫೫೪). ೨. ಪಾವಟಿಗೆ ; ಮೆಟ್ಟಲು : ತಟಾಲನೆ ಪೋದು ಬಿತ್ತರಂಬಡೆದ ಬಿಡುಗಲ್ಲ ಸುತ್ತಣ ಮೆಟ್ಟಡಿಯಿಂ (ಪಾಪುಕ್ಕ. ೩೨-೦೯) ; ಆ ಬೆಳ್ಳಿಯ ಮೆಟ್ಟಡಿಗಳನ್ನೇ ಕಳಚಿಕೊಂಡು ಹೋಗಿದ್ದಾರೆ (ಪಟ್ಟಿ. ೦೦೮-೨೭).

[ಮೆಟ್ಟು$_{II}$ + ಅಡಿ$_1$]

ಮೆಟ್ಟರೆ ' ಮೆಟರು ' ನೋ.

ಮೆಟ್ಟಲಿ ' ಮಿಟಲಿ ' ನೋ.

ಮೆಟ್ಟಲಿಗೆ (ನಾ). ಪಾವಟಿಗೆ ; ಮೆಟ್ಟಲು ; ಸೋಪಾನ : ಪೆದಿಸುವ ಹಿಂದಾದ ಬಂಡಗಲ್ಲುಗಳ ಮೆಟ್ಟಲಿಗೆಗಳು (ಕಾಪ್ರ. ೦೮). [< ಮೆಟ್ಟಲು]

ಮೆಟ್ಟಲು, ಮೆಟ್ಟು (ನಾ). ೧. ಪಾವಟಿಗೆ ; ಸೋಪಾನ : ಐದಾರು ಮೆಟ್ಟಲುಗಳನ್ನು ಒಟ್ಟೊಟ್ಟಿಗೆ ಹಾರಿ ಮಹಡಿಯನ್ನು ಹತ್ತಿದೆ (ಶಾಪಾಪ್ರ. ೦೦೭) ; ಇಬ್ಬರೂ ಅಲ್ಲಿಯೇ ಇದ್ದ ಒಂದು ಮೆಟ್ಟಿಲಿನ ಮೇಲೆ ಕುಳಿತವು (ಶಾಪಾಂ. ೧೩). ೨. ಹಂತ ; ಮಜಲು ; ಘಟ್ಟ : ಕರ್ಮಯೋಗವು ಜ್ಞಾನಯೋಗದಿಂದ ಪಡೆಯಬಹುದಾದ ಸಾಕ್ಷಾತ್ಕಾರಕ್ಕೆ ಒಂದು ಮೆಟ್ಟಲು ಮಾತ್ರ (ಪತ್ರಜ್ಞಾ. ೪೭೭) ; ಕರ್ಮ ನಿನ್ನನು ಕಟ್ಟಿ ಕಡಹಲದನೇ ಮೆಟ್ಟಿ ಮುಂದೆ ಮೆಟ್ಟಿಲನೇರು ! (ಶಾಂಪಾ. ೧೯-೨). ಮೆಟ್ಟಿಲು : ೧. ದೂರಕ್ಕೆ ಆ ಸೌಧದ ಮೆಟ್ಟುಗಳು ಸಾಲಾಗಿ ಕಾಣುತ್ತವೆ (ಸಾಪ್ರ). ' ಮೆಟ್ಟಲು ' ಪರಾ. [ಮೆಟ್ಟು$_{II}$ + — ಅಲು (< — ಅಲ್$_3$)]

ಮೆಟ್ಟಾಡು (ಕ್ರಿ). (ಪ್ರಾಣಿ, ಪಕ್ಷಿ ಮೊದಲಾದುವು) ಸಂಭೋಗಿಸು : ಹೆಣ್ಣುಹಂಸೆಯು ಮೆಟ್ಟಾಡುವ ರಾಜಹಂಸೆಯರ ರತಿಕ್ರೀಡೆಯಂ ನೋಡೆಂದು ತೋರಿ (ಶಾಪಂಂ. ೩೩೦-೩). [ಮೆಟ್ಟು$_{II}$ + ಆಡು$_1$]

ಮೆಟ್ಟಿಗಾಲು ' ಮೆಟ್ಟುಗಾಲು ' ನೋ.

ಮೆಟ್ಟಿಕೆ (ನಾ). ಮೆಟ್ಟಲು ; ಸೋಪಾನ : ಕಟ್ಟಿಯ ಕಟ್ಟಿದರು ಭವ ಸಾಗರಕೆ . . . ಮೆಟ್ಟಿಕೆಯಿಂದಲಿ ದಾಟಿ ಪೋದರು (ಪಾಪ್ರಕಥ. ೦೮೯-೭) : ಹಾವುಗೆಯುಂ ಮೆಟ್ಟಿ ಮೆಟ್ಟಿಕೆಗಳನೇರಿ ಬರುವಾಗ (ಶಾಗಂಧಿ. ೩೪೦-೭).

[ಮೆಟ್ಟು$_{II}$ + — ಇಕೆ]

ಮೆಟ್ಟಿಗೆ ' ಮೆಟ್ಟಿಗೆ ' ನೋ.

ಮೆಟ್ಟಿಲು (ನಾ). ೧. ಪಾವಟಿಗೆ; ಸೋಪಾನ : ಬೆಟ್ಟದ ಮೆಟ್ಟಿಲುಂಗಳಂ ಮೆಟ್ಟಿ ಮುನ್ನಡಿಯಿಟ್ಟು ಮಾಂಗಿರೀಶನ ನೆನೆದು ಕರಯುಗವ ಮುಂಡಿಯ ಮೇಲ್ಮುಗಿದಿಟ್ಟ ಭರತನಂ ಶ್ರೀರಾಮನತಿದೂರದೊಳ್ ಕಂಡನು (ಪಾಪ. ೯-೦೫೬). ೨. ಹಂತ ; ಘಟ್ಟ : ಅದರೂ ಅಂಕಗಳೇನು? ಅವುಗಳೊಂದು ಸಾಧನವಷ್ಟೆ! ಮೇಲೆ ಮೇಲೆ ಹೋಗಲು ಮೆಟ್ಟಿಲುಗಳು (ಕ್ಯೋಚರ್ . ೬). ' ಮೆಟ್ಟಲು ' ಪರಾ.

ಮೆಟ್ಟಿಲ ಮಂಚ=. ಪಾವಟಿಗೆಗಳಿರುವ ಎತ್ತರವಾದ ಮಂಚ : ಆ ಮೆಟ್ಟಿಲಮಂಚಕ್ಕೆ ಇಲ್ಲಿಯ ಉಪಸ್ಕರ ಅಲಂಕಾರಗಳಿಗೆ(ಪಾಂಕ್ಷ. ೨೬-೦೦).

[ಮೆಟ್ಟು$_{II}$ + — ಇಲ್ಲು$_3$ (< — ಇಲ್$_3$)]

ಮೈರೇಖೆ (ನಾ)· ಮೈಮಾಟ ; ಶರೀರದ ರಚನೆ : ಬಲು ಸರಳವಾಗಿಯೂ ನೈಸರ್ಗಿಕವಾಗಿಯೂ ಜೀವಿಸುವುದರಿಂದ ಅವರ ಮೈರೇಖೆಯಲ್ಲಿ ಒಂದು ಸೊಬಗಿದೆ (ಜಾಂಕ್ರ. II. ೦೦೩೦).

[ಮೈ$_{11}$ (< ಮಯ್$_2$) + ರೇಖೆ]

ಮೈರೇಯ (ನಾ). ಒಂದು ಬಗೆಯ ಮಾದಕಪಾನೀಯ : "ಮಧು, ಆಸವ : . . . ಮೈರೇಯಂ, ಕಾಪಿಶಾಯನಂ, ಮಾಧ್ವೀಕಂ, ಆಸವಃ, ಪರಿ(ಸ್ರು)ಕ್ರುತ್". ವಾರುಣೀ$_1$ ಮಧು — ಈ ವಿಳಿ . ಕಳ್ಳು" (ಹಲಾಯು. ೩೩-೦೭೩); ಮಿಸಿರಿ ಮೈರೇಯಮುಂ ಪೀರಿ ಬಹುಮಾನ್ಯ ಮನವೇರಿ . . . ನಡತಂದರು (ಕೇಸಾ. ೦೯-೨೨). [ಸಂ.]

ಮೈರೊಳೆ (ನಾ). ಒಂದು ಬಗೆಯ ಸಸ್ಯ : ನವ್ವಲಾದಿ, ಮೈರೊಳೆ, ಭರಣಿಗೆ (ಕ್ಯಾಚಿ. ೭೬-೦೫೬). [?]

ಮೈರೋಚಿ (ನಾ). ದೇಹದ ಕಾಂತಿ ; ಶರೀರದ ಹೊಳಪು : ಬೇಚರಿಯರು . . . ಬಂದು ಮೈರೋಚಿ ಬೆಳಗಿಂ ಕೋಂಟೆ ಸುತ್ತುವಳಯದಿ ಕುಳಿತ ತೆರದಿ ಪೊಂದನೆಗಳೆಸೆಯೆ (ಪಪಪಾ. ೫-೨೬).

[ಮೈ$_{11}$ (< ಮೆಯ್$_2$) + ರೋಚಿ]

ಮೈಲ ' ಮೈಲಿ$_1$ ' ನೋ.

ಮೈಲಗೆ ' ಮೈಲಿಗೆ ' ನೋ.

ಮೈಲಗೆವೆಳ್ದಿಂಗಳ್ (ನಾ). ವಿವಾಸಲಳಿದ ಬೆಳುದಿಂಗಳು ; ಉಪಯೋಗ ಹೊಂದಿದ ಬೆಳುದಿಂಗಳು : ನಗರೀನಾಯಕನಾಯಿತಾವದನವ್ಯತದಿಂ ಸುತ್ತಿ ಸೊಪ್ಪಾದ ಮೈಲಗೆವೆಳ್ದಿಂಗಳ ಸೊಂಪಂ ಸೈರಪವೊಲ್ ಭೋಂಕಲ್ ಮರಳ್ಚಂದು (ಕಾಂಪ್ರ. ೬-೬೦); ಇರುಳು ಜಕೋರಿಗಳೆಲ್ಲ ನೆರೆದು ಚಂದ್ರನುರದ ಸಾವನೆಲ್ಲ ಕೊಳಲು ಹರುಷಪಜತು ಮೈಲಗೆವೆಳ್ದಿಂಗಳೊಳ್ವೆರಸಿರ್ದ ನಸ್ಯಾದ್ರಿಯೇಱಿ (ಕಾಸಂ. ೦೦-೦೪೬).

[ಮೈಲಗೆ (< ಮೈಲಿಗೆ) + ಬೆಳ್ದಿಂಗಳ್]

ಮೈಲತುತ್ತ, ಮಯಿಲತುತ್ತ, ಮೈಲುತುತ್ತ, ಮೈಲುತುತ್ತು, ಮೈಲುತುತ್ತ (ನಾ). ತಾಮ್ರ ಮತ್ತು ಗಂಧಕಗಳ ಸಂಯೋಗದಿಂದಾಗುವ ಒಂದು ಬಗೆಯ ಖನಿಜಲವಣ : ಕ್ಷಾರ ವಿಷಘ್ನಾರ್ದ್ರೀ — ಕ್ಷಾರ ಮೈಲತುತ್ತ ಮೊದಲಾದವು (ಜಾಪಚಿ. ೨-೪-೭೦). **ಮಯಿಲತುತ್ತ** : ಇದಕ್ಕೆ ಬಹುಶಃ ಮಯಿಲತುತ್ತವನ್ನು (Copper sulphate) ಸ್ವಲ್ಪ ದಿರಕೆ ಮಾಡುತ್ತಿದ್ದಿರಬಹುದು (ಕಪ್ರಚಿ. ೪೪). **ಮೈಲುತುತ್ತ** : ಮೈಲುತುತ್ತದ ಒಂದು ಹರಳನ್ನು ಅದೇ ವಸ್ತುವಿನ ಪರ್ಯಾಪ್ತದ್ರಾವಣ (Saturated solution) ದಲ್ಲಿಟ್ಟರೆ. ಹರಳು ಕ್ರಮವಾಗಿ ದೊಡ್ಡದಾಗು

ತ್ಪದೆ (ಶ್ರೀಪಂ. ೩). ಮೈಲುತುತ್ತು : ದೊಡ್ಡ ದೊಡ್ಡ ಜಾಂಕಿಗಳಲ್ಲಿ ಮೈಲುತುತ್ತಿನ (ಇದು ತಾಮ್ರದ ಒಂದು ಲವಣ) ಪಾನಕವನ್ನು ತುಂಬಿ ಅದಕ್ಕೆ ಸ್ವಲ್ಪ ಗಂಧಕದ ದ್ರಾವಕವನ್ನು ಹಾಕುವರು (ಜಾಂಕ್ರ. ii. ೧೮೮). ಮೈಲುತುತ್ತ : "ದಾರ್ವಿಕಾ. ಕ್ವಾಥೋದ್ಯವಂ. ತುತ್ಥಂ. ರಸಾಂಜನಂ, ರಸಗರ್ಭಂ. ತಾರ್ಕ್ಷ್ಯಶೈಲಂ—೬ ರಸಾಂಜನದ ಹೆಸರುಗಳು . . . ಮೈಲುತುತ್ತದ ಹೆಸರುಗಳೆಂದು ಕೆಲಪರನ್ನುವರು" (ಬಿಜ್ಞಾ. ೩೦೩): ರಸರತ್ನಸಮುಚ್ಚಯವು ಖನಿಜಪ್ರಪಂಚವನ್ನು ಹೀಗೆ ವರ್ಗೀಕರಣ ಮಾಡಿದೆ. ೧. ಅಷ್ಟರಸಗಳು . . . ಮೈಲುತುತ್ತ (ಕಪ್ಪಜ್ಞಾ. ೩೦೩).

[< ಸಂ. ಮದಾರತುತ್ತ]

ಮೈಲರಾ : ಮೈಲಾರ್ಯ ' ನೋ.

ಮೈಲವಣಿ. ಮೈಲವಣೆ (ನಾ). ಮಲ್ಲಯುದ್ಧದ ಒಂದು ವರಸೆ : ಮೇಣದ ಪುತ್ಥಳಿಗಳೊ ಉಕ್ಕಿನ ಬಲು ಚೀಣವೊ ಸಿದಿಲ ಕುಡುಹುಗಳೊ ಹೂಣೆ ಮೈಲವಣಿ ತಿರುಪು ಚದುರಿಂದ ಬಿನ್ನಾಡಗರೊದಗಿ ಹೊಣಗಿದರಂ (ಕೊಚಿಪು. ೬-೧೩). ಮೈಲವಣೆ : ಹೊಯ್ಲು ಹೊದರೆದ್ದಪ ವಿಘಾತದ ಕಯ್ಲುಳಿಯ ಕಡುಘಾಯ ಘಾಯಕೆ ಮೈಲವಣೆ [ಪಾಣಂ. ಮೆಯ್ಲವಣೆ] ಲಂಬಿಸಿತು . . . ಮುಷ್ಟಾಮುಷ್ಟಿ ಗತಿಯ ದೃಢಾವ್ಪರಪ್ಪಳಿದರು (ಶಾಣ್ಮಸಂ. ೨-೦೦೬). [ಮೈ₁ (<ಮೆಯ್) + ಲವಣೆ]

ಮೈಲವಣೆ ' ಮೈಲವಣಿ ' ನೋ.

ಮೈಲಾಗು (ನಾ). ದೇಹದ ಚುರುಕುತನ.—ಚಳಕ : ಕಾಗಿ ನೋಡಿನ್ನೊಮ್ಮೆಮುತ ಮೈಲಾಗಿನಲಿ ಹೊಳೆಹೊಳೆದು ಕೈದುವ ತೂಗಿ ಪುಡುಕಿದನರಘನನು ಬೊಬ್ಬಿಟ್ಟಾಡು ಕಲಿಭೀಮ (ಶಾಣ್ಮಸಂ. ೬-೦೩) : ಅದಿಜಿನನ ಕೈಲೇಸಿಂದ ದೀಕ್ಷೆಯ ಕೊಂ[ಬ]ವೆನುತಾಗ ಮೈಲಾಗಿನಿಂದೆದ್ದರವರು (ಶಪಪ. ೬೫-೪೪). [ಮೈ₁ (<ಮೆಯ್) + ಲಾಗು₂]

ಮೈಲಾಪ (ನಾ). [ಜೈನ] ಜೈನಮುನಿಗಳ ಒಂದು ಶಾಖೆ.—ಪಿನ್ವಯ : ವಿದಿತಾಶೇಷಶಾಸ್ತ್ರರಾಮ್ ಮೈಲಾಪಾನ್ವಯಮ್ . . . ಅಪ್ಪ ದೇವಕೀರ್ತಿ ಪಂಡಿತದೇವರ ಕಾಲಮ್ ಕರ್ಕಿ (ಇಂ. XVIII, ೩೦೦-೦೩; ಸಂ. ೧೧೫೮ ಶಕ).

[?]

ಮೈಲಾರ್₁ (ನಾ). ೧. ಒಬ್ಬ ಕ್ಷುದ್ರದೇವತೆಯ ಹೆಸರು : ಪರವೀಗುಮೆ ಮೈಲಾರಂ ಕೀತಂ ಕಾಟಂ ಮಾರಿಗೆ ಮಸ ಜನಿಯೆನಿಪ್ಪ ಕೊಡೆಯಯ್ದಂಗಳ್ (ಸಮು. ೯-೦೨೯) ; ವಾಂತಿಯ ಮೇರ್ ಮೈಲಾರವೆಂಬುಂತೆ ಪೊಲೆಯರಾಡಿನ ಪ್ರಸರ್ ಪಾಣಿಕದೇವಿಯೆಂಬಂತೆ (ಕರ್ಣಾಪ್ಪ. ೪-೦೬೬) : ರಕ್ತಾಂಬು ಮಜ್ಜಪಮಂ ಮಾಡಿಸಿ ಮಸ್ತಕಾಂಬುರುಹದಿಂದಂ ಪೂಜೆಗೆಯ್ದಂಕೊಡಾತನ ಕೂರ್ವಾಳ್ಕರವಾಳ್ಗಲಂತು ಪುರವಾಳ್ಪಾಟೂರ ಮೈಲಾರನಾ (ಕಪಚ್ಚ. ೦೨-೨೬). ೨. ಮೈಲಾರಲಿಂಗನ ದೇವಾಲಯವಿರುವ ಬಳ್ಳಾರಿ ಜಿಲ್ಲೆಯ ಒಂದು ಊರಿನ ಹೆಸರು : ಒಡ್ಡಿದ ಕೂಲವ ಹಾಯ್ದು ಮೈಲಾರದ ದೊಡ್ಡಿಯ ದೇವರಿಂದಪ್ಪನ ಆಡ್ಡಾಕ್ಕಲ್ಲದ ಶರಿಸಿ ನಿನ್ನಯ ಕಾಲಿಗಡ್ಡಗೆದಪುವೆನು (ಶಾಣಾಪಂ. ೨೮-೩೬) ; ಕೊಂಕಣಾ ಸುತ್ತಿ ಮೈಲಾರಕ್ಕೆ ಹೋದ ಹಾಗೆ (ಗಾಡ). [ದೇ.ಕಿ ತಮಿ. ಮೈಲಾರು = ಒಬ್ಬ ಹುಣ್ಣುದೇವತೆ : ತೆಲು. ಮೈಲಾರು- ಮಯಿಲಾರು]

ಮೈಲಾರ್₂. ಮೈಲರಾ (ನಾ). ನಾನಾ ವಿಧವಾದ ಬಣ್ಣಗಳಿಂದ ಕೂಡಿದ ಕಂಬಳಿ : ಚಿತ್ರಕಂಬಲ : ಚಂದ್ರಾಪೀಡನು . . . ಸೂರ್ಯಪುತ ಸುಪ್ಪತ್ತಿಗೆಯಲ್ಲಿ ಒರಗಿನ ಬೇಲೆ ಬರಗಿಕೊಂಡು ಮೈಲಾರತೊಡಮ ಮೇಲೆ ಕಾಲ ನೀಡಿಕೊಂಡು . . . ಚಿಂಪಿಸಿದನು (ಪಪಣಾ. ೬೪). ಮೈಲರಾ : ಕಲಾಬತ್ತಿನ ಕೆಲಸದ ಆನೆಜೀನು ಮೈಲರಾ ಜಲ್ಲಿ ಆನೆ ಕಾನಪೀರಿ ಕಲಾಬತ್ತು ಕೆಲಸದ್ದು (ಎಕ್. XIV, ಪಂಚಪಿ. ೫೮-೪೫ ೧೯೨; 1847). [?]

ಮೈಲಿ₁. ಮಯ್ಲಿ. ಮೈಲ. ಮೈಲ್ಲು₂. ಮೈಲೆ₂ (ನಾ). ೧. ಒಂದು ಬಗೆಯ ಸಾಂಕ್ರಾಮಿಕರೋಗ ; ಸಿಡುಬು : ಅವಳ ಮೈಮೇಲೆ ಕೆಂಪಕೆಂಪಗೆ ಏನೋ ಎದ್ದವು . . . ನೀವು ಅಂದುಬಿಟ್ಟರಿ ಮೈಲಿ ಎಂದು (ಚಚ್ಚ. ೧೩೪) ; ದನದ ಮೈಲಿಯನ್ನು ಜನರಲ್ಲಿ ಹಬ್ಬಿಸಿದರೆ ಸಿಡುಬಿನ ಗಂಡಾಂತರದಿಂದ ಅವರನ್ನು ಪಾರಾಗಿಸಬಹುದು (ಪಪಚಣಾ. ೬) ; ಮುಖದ ಮೇಲೆರಡು ಮೈಲಿಯ ಕಲೆಗಳು (ಕ್ರೀಕಾಂಕ. I, ೬). ಮಯ್ಲಿ : ೧. 'ಮಯ್ಲಿತೆಗೆ' ಪರಾ. ಮೈಲ : ೨. ಕಾಂತಿಹೀನತೆ : ಮಸುಕು ; ಮಬ್ಬು : ಕಣ್ಣುಗಳು ಖಿರಕಿನವಾಗಿ, ಧೂಸರಾಣಿ—ಮೈರಾಗಿರುವಂಥಾವು (ಶಾಕಪೀ. ೫-೬-೯೯ ಇ). ೩. (ಕೆಂಪು, ಬಿಳಿ, ಹಸಿರು, ಕಪ್ಪು ಇತ್ಯಾದಿಗಳ) ಮಿಶ್ರವರ್ಣ : 'ಮೈಲ್ಹೊರಿ' ಪರಾ. ಮೈಲ್ಲು : ೧. ಕೊಳಕು ; ಕಶ್ಮಲ : ಇಲ್ಲಿ ಹುಟ್ಟುವ ಉಪ್ಪು ಬೆಳ್ಳಗಿರುತ್ತದೆ. ಅದರಲ್ಲಿ ಮೈಲು ಇರುವುದಿಲ್ಲ (ಕಾಗ. ೩೯). 'ಮೈಲುತೆಗೆ' ಪರಾ. ಮೈಲೆ₂ : ೧. ಬೇಸಿಗೆಯಲ್ಲಿ ಮೈಲೆಯು ಪಿಡುಗು ವಾದಿಕೆಯಾಗಿ ಬರುತ್ತದೆ (ಕಾಗ. ೧೦೩) ; ಕೆಲವು ವೇಳೆ ದೇಹದ ಮೇಲೆಲ್ಲಾ ಮೈಲೆಗಳೇಳುವುದುಂಟು (ಕಂಪಚ. ೦೦). 'ಮೈಲೆ ರೋಗ' ಪರಾ.

[<ಪ್ರಾ. ಮಾಇಲ./ಸಂ. ಮಲ-/ ಪ್ರಾ. ಪ್ರಾಕೃ. ಮೈಲ್]

ಮೈಲಿ₂ ' ಮೈಲ್ಕು ' ನೋ.

ಮೈಲಿಕಲ್ಲು ' ಮೈಲಿಗಲ್ಲು ' ನೋ.

ಮೈಲಿಕಾರಕೂನ (ನಾ). ಸಿಡುಬನ್ನು ತಡೆಗಟ್ಟುವ ಚುಚ್ಚುಮದ್ದನ್ನು ಕೊಡುವವನು : ದೇವಿ ಹಾಕುವವನು : ಮೈಲಿಕಾರಕೂನರ ಆಗಮನ ವಾಗುತ್ತದೆ (ಗಾಂಗಾ. ೪). [ಮೈಲಿ₁ + ಕಾರಕೂನ]

ಮೈಲಿಗಲ್ಲು. ಮೈಲಿಕಲ್ಲು (ನಾ). ೧. ಒಂದು ಊರಿನಿಂದ ಇನ್ನೊಂದು ಊರಿಗೆ ಇರುವ ದೂರದ ಅಂತರವನ್ನು ಸೂಚಿಸಲು ದಾರಿಯ ಪಕ್ಕದಲ್ಲಿ ನೆಟ್ಟಿರುವ ಕಲ್ಲು : ಮೈಲಿಗಲ್ಲಿನ ಮೇಲೆ ಸೂಚಿಸಿದ್ದ ಸಂಖ್ಯೆ ಹಳೆಯದಾಗಿ ಮಾಸಿ ಸ್ಪಷ್ಟವಾಗಿ ಕಾಣಿಲ್ಲ (ಕೂಡ). ೨. (ಅಲಂ) ಮುಖ್ಯವಾದ ಘಟ್ಟ.— ಹಂತ.— ಮಜಲು : ದ್ರಾವಿಡಭಾಷಾ-ಜ್ಞಾತಿಕೋಶ ಈ ಕ್ಷೇತ್ರದಲ್ಲಿ ಒಂದು ಮಹತ್ತ್ವರವಾದ ಮೈಲಿಗಲ್ಲು (ದ್ರಾಜ್ಞಾ. ೨ ಉಪೋ). ಈ ದಿಕ್ಕಿನಲ್ಲಿ ಮಾಡುತ್ತಿರುವ ಪ್ರಯಾಣದ ಮೊದಲ ಮೈಲಿಗಲ್ಲು. ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿರುವ ಈ ಪಠ್ಯಪುಸ್ತಕಮಾಲೆ (ಗೃಹ. iii, ಮುಖ್ಯ). ಮೈಲಿಕಲ್ಲು : ೧. " ಮೈಲಿಕಲ್ಲಿಲ್ಲದ ಹಾದಿಯಲ್ಲಿ ನಡೆಮುವವರು ಮತಿಹೀನರು " ಎಂದು ನಾವೆಲ್ಲರೂ ತೀರ್ಮಾನಿಸಿದವು (ಕ್ಯಂಪ್ರ. ೦೧). ೨. ಅಂದೇ ವಾತಿನ್ಯಾನದ ಬೇರು ಭಾರತಭೂಮಿದಂಡೆ ಊರಿತು. ಅದೊಂದು ಮೈಲಿಕಲ್ಲು (ಜಾಪಿ. ೧೦೯).

[ಮೈಲಿ₂ (<ಮೈಲು₂) + ಕಲ್ಲು (<ಕಲ್₂)]

ಮೈಲಿಗೆ. ಮೈಲಗೆ (ನಾ). ೧. ಮಲಿನತೆ ; ಅಪವಿತ್ರತೆ : ಸೂತ್ರಧಾರಿಯ ಮನದ ಮೈಲಿಗೆಯು ಕಳೆಯು ಬಂದನಯ್ಯ ಮಡಿವಾಳನು (ಕಂಕ್ಷಸಂ. ೦೭೬-೦೪) ; . ಮತ್ಸ್ಯರಮತಿಯು ಬಿದ್ದುದಾತ್ಮಜ್ಞಾನ ದೃಷ್ಟಿಯಲಿ . . . ಈತನ ತಪದ ತೇಜದ ಹೊಗಜಿ ಹೊಯ್ದುನಲಿ (ಶುಣ್ಮಂ. ೬೫೩. ೬-೦೬) : ಮಡಿಯಲಾ ನೀನೆ ಮೈಲಿಗೆ ನೀನೆ ಸುಡಲಿ ನಿನ್ನ ಪಡಿ ಬಿಕನಾಸಿ (ಕ್ಷಕಂದ. ೦-೦೦೩ ತಮಿಳ್ಕಥೆ). ೨. ಕೊಳೆ ; ಹೊಲಸು ; ಮೈಲಿಗೆಯು ಸೀರೆಯನ್ನುಟ್ಟು ತನು ಕಳೆತಗೆಯೆ ಕೈಗಲ್ಲದಲಿ ನಿಂದಿಹ ಸತಿಯನೀಕ್ಷಿಸಿದ (ಪಣ. ೬-೨೪). ೩. ವಿಧವೆಯರು ಕೇಶಮುಂಡನ ಮಾಡಿಸಿಕೊಳ್ಳುವಿಕೆ.—ತಲೆಗೂದಲನ್ನು ತೆಗೆಸಿಕೊಳ್ಳುವಿಕೆ : ಹಾಂಗಾರನಮ್ಮ ಗಜಗತ್ತಾ ತಿಂಗಳಗೊಮ್ಮೆ ಮೈಲಿಗ್ಯಾಗಲಿಕ್ಕಿಲ್ಲೇ ಬರ್ತಾಳ ಕಾಣಸ್ತದವ್ವಾ (ಕಾಂಕ. ೧). ೪. ಸಿಡುಬು : 'ಮೈಲಿಗೆಗಣ್ಣು' ಪರಾ. ೫. ಕೊಟ್ಟು ಪಟ್ಟಿಪ ಬಟ್ಟೆ : ಉಟ್ಟು ಹೊಲಸಾದ ಬಟ್ಟೆ :

ಮಲಿನವಸ್ತ್ರ: ಬಳಕವರ್ . . . ಉಟ್ಟು ಕಳೆದ ಮೈಲಿಗೆ ಸವಿದೊಗಡಿಸಿದ ಕೂರ್ಗ ಕೈಯಾಂತವಂ ಬೇಱೆ ಸಂದಗವಿಲ್ಲ (ಹರಿಶ. ೦-೨೫) ; ಕುದಿಸಿ ಉದಕದೊಳಲಂಬಿ ಬೀಸುತ್ತೊಗೆದು ಪರಿಪಿ ತೆಗೆತೆಗೆದು ಫಳಗೆಯನೊದಗಿಪುದು ಮೈಲಿಗೆ [ಹರಿಶಾ. ಮಯ್ಲಿಗೆ] ಮುಗಳಹುದಕ್ಕಲಾ ಮುನಿದೆ (ಪಾಪು. ೩೬-೩೭). ಮೈಲಗೇ: ಉಟ್ಟು ಪುಟ್ಟಗೊಳವಂತೆ ಮೈಲ[ಹರಿಶಾ. ಲಿ]ಗೆಗಳವ್ವನೆ (ಅಷ್ಟ. ೩-೩೦) ; ಪಾತಕಜೀವಂಗಳ್ ಎಳ್ಸಸಂತೆ ಗಾಣಕ್ಕೆ ವಂದು . . . ಮೈಲಗೆಯುತೊಗಪಕ್ಕೆ ವಂದು (ರಚನಾಲ್ಕ. ೩-೩೩ ಪ); ವಂಡಿವಳನ ಮುಂದಣ ಮಡಿಯುಮಂ ತನ್ನೊಡನೆಮು ಗೋವಳಿಗರುಟ್ಟು ಮೈಲಗೆಯುಮಂ ಪುಧುಸೂದನಂ ಕಂಡು (ಅರಸು. ೪-೩೨ ಪ). ೩. (ಸಿಡುಬಿನಿಂದಾದ) ಒಂದು ಬಗೆಯ ಕಣ್ಣಿನ ದೋಷ : ಅಲಿ ಮೊದುದೊ ಕಣ್ಣ ಬೆನೆಯೊ ಮೈಲ[ಹರಿಶಾ. ಲಿ]ಗೆಯೊ ಹೂ ಹುಟ್ಟಿದುದೊ (ಪಾಪ. ೦೪-೩೩).

ಮೈಲಿಗೆ ಕಲಸು = ಮಲಿನತೆಯನ್ನು ಬೆರಸು ; ಅಶುದ್ಧವಾಗು : ಹೊಸಾ ಕಲ್ಲಡಗೇ ಒಡದು ಹೋತು ಮೈಲಿಗಿ ಕಲಸಿದಕ್ಕೆ (ಕೂಸಿಂಜಾ. ೩೪). ಮೈಲಿಗೆಯಾಗು = ಮೈಲಿಗೆ ಕಲಸು : ದೊಡ್ಡವರ ಹೆಸರು ಹೇಳುವಾರದಂತ ಕಣೂ. ಅವರಿಗೆ ಮೈಲಿಗೆಯಾಗುತ್ತದಂತೆ (ಅಂದ್ರಸ. ೩-೨೩).

[ಮೈಲಿ$_2$ + – ಗೆ]

ಮೈಲಿಗೆಗಣ್ಣು (ನಾ). ಸಿಡುಬು ಹತ್ತಿದ ಕಣ್ಣು : ಅಳಗಣ್ಣೊ ಪರಿಗಡ್ಡಿ ಪೊಸ ನೀಲಿಗಣ್ಣೊ ಮೈಲಿಗೆಗಣ್ಣೊ (ಅಮೃತ. ೩-೨೫).

[ಮೈಲಿಗೆ + ಕಣ್ಣು (<ಕಣ್)]

ಮೈಲಿಗೆಸಂತೆ (ನಾ). ಮಿಸನು. ಮಾಂಸಗಳನ್ನು ಮಾರಲಾಗುವ ಸಂತೆ: ಜೂದಿಸ ಕಟ್ಟಿ ಮೈಲಿಗೆಸಂತೆದುಂಗಡಿಬೀದಿ ಚವುಮಟ್ಟಿಗೊಳಿಗೆ ಬಾದುರ ನವರ ಕಾಣದೆ ಬಾದುರ ಹೋಡಿ ಹೋದೆಸೆಂದಜಿದರ್ಜ್ಜಲ್ಲಿ (ಅಮೃತಾ. ೦೪-೦೫೪). [←ತೆಲು. ಮೈಲಸಂತ]

ಮೈಲಿತೆಗೆ, ಮಯ್ಲಿತೆಗೆ, ಮೈಲುಜಿಗೆ (ಕ್ರಿ). ೧. ಸಿಡುಬನ್ನು ತಡೆಗಟ್ಟಲು ದೇವಿ ಹಾಕು : ಹಳ್ಳಿಪಳ್ಳಿಗೆ ಹೋಗಿ ಮೈಲಿತೆಗಮುಲಿಕ್ಕೆ ವ್ಯಾಕ್ಸಿನೇಟರರೆಂಬ ಅಧಿಕಾರಸ್ಥರು ಇರುವರು (ಶಾಡಾ. ೭೮) ; ಮೈಲಿ ತೆಗೆಮುವ ಯಾತ್ಯಯನ್ನು ಇಂಗ್ಲೆಂಡುದೇಶದೊಳಗಿನ ಒಬ್ಬ ಬುದ್ಧಿವಂತನಾದ ಶಸ್ತ್ರವೈದ್ಯನು . . . ಮೊದಲು ಹುಡುಕಿ ತೆಗೆದನು (ಕುಂಬಿಮಾ. ೪-೨೦೬). ಮಯ್ಲಿತೆಗೆ : ೧. ತಮ್ಮ ಮಕ್ಕಳಿಗೆ ಮಯ್ಲಿ ತೆಗಮುಗೊಡುವದಿಲ್ಲ (ಕುಂಬಿಮಾ. ೪-೨೨೬). ಮೈಲುತೆಗೆ : ೨. ಶುದ್ಧಗೊಳಿಸು : ಶುಚಿಪಡಿಸು : ಪಿತ್ತಕೋಶದೊಳಗೆ ಸ್ಫುಟಿಕಾರದಂತೆ ಮೈಲುತೆಗೆಯುವ ಗುಣವಿರುತ್ತದೆ (ಕುಂಬಿಮಾ. ೬-೨೦೧), [ಮೈಲಿ$_1$ + ತೆಗೆ$_1$]

ಮೈಲು$_1$ ' ಮಯ್ಲು ' ನೋ.

ಮೈಲು$_2$ ' ಮೈಲಿ$_1$ ' ನೋ.

ಮೈಲು$_3$, ಮೈಲಿ$_2$ (ನಾ). ದೂರವನ್ನು ಅಳೆಯುವ ಒಂದು ಮಾನ ; ಎಂಟು ಫರ್ಲಾಂಗುಗಳಷ್ಟು ದೂರ : ಉದ್ದಳತೆ ಸಾಮಾನು ೨೧೧ ಮೈಲು ; ಪರಮಾವಧಿ ಅಗಲಳತೆ ಸುಮಾರು ೦೬೭ ಮೈಲು (ಕಾಗ. ೦) ; ಈ ಬಿಸಲಲ್ಲಿ ಎರಡುಮೈಲು ಪಡೆದರೆ ನಮಗೇ ಪ್ರಾಣಕ್ಕೆ ಬರುತ್ತದೆ (ಪಾಪ. ೦೬೭) ; ಶ್ರೀ ಗಣೇಶ ಹೆಗ್ಗಡೆಯವರು ನನಗಾಗಿಯೇ ಹತ್ತಿಪ್ಪತ್ತು ಮೈಲು ದೂರ ಸಡೆದಾಡಿದುಮೂ ಉಂಟು (ಮುಗ್ಧ. ೪. ಮುಖ್ಯ). ಮೈಲಿ$_2$: "ಉದ್ದಳತೆಯ ಮಾನ:ಮೈಲಿ" (ಇಂಗ್ಲೆಂಡು ಮೊ.ದೇಶಗಳಲ್ಲಿ ಈಗ ೦.೭೭೦ ಗಜಗಳು)" (Mile. ೨೦೮೩) ; ಸುಮಾರು ಮೂವತ್ತು ಮೈಲಿಗಳಷ್ಟು ದೂರ ಶತ್ರುಸೀಮೆಯಲ್ಲಿ ನುಗ್ಗಿ ಹೋಗಿ ದಾರಿಯಲ್ಲಿ ಸಿಕ್ಕಿದ ದನಕರುಗಳನ್ನೂ . . . ಜಾನುವಾರುಗಳನ್ನೂ ಲೂಟಿ ಮಾಡಿದರು (ಕೃಕೀಪ. ೫೩). [←ಇಂ. mile]

ಮೈಲುತುತ್ಥ ' ಮೈಲ್ಲಶುತ್ರ ' ನೋ.

ಮೈಲುತುತ್ತು ' ಮೈಲತುತ್ತ ' ನೋ.

ಮೈಲುತುತ್ಥ ' ಮೈಲತುತ್ರ ' ನೋ.

ಮೈಲುತೆಗೆ ' ಮೈಲಿತೆಗೆ ' ನೋ.

ಮೈಲುವಾಹನ (ನಾ). ನವಿಲನ್ನು ವಾಹನವನ್ನಾಗಿ ಉಳ್ಳವನು ; ಷಣ್ಮುಖ.

ಮೈಲುವಾಹನಪಿತ = ಷಣ್ಮುಖನ ತಂದೆ ; ಶಿವ : ಕೈಲಾಸ ವಂಜೋದು ಕಣ್ಣಿಲಿ ಕಾಣೆ ಮೈಲುವಾಹನಪಿತ ಎತ್ತ ಪೋದನೂ ಕಾಣೆ (ತೃತೀಪ. ೩.೦೨-೦). [ಮೈಲ್ಲು$_1$ (<ಮಯ್ಲು) + ವಾಹನ]

ಮೈಲುಳಿ (ನಾ). ಶರೀರದ ಚಟುವಟಿಕೆ ; ದೇಹದ ಲಾಘವ : ಇತ್ತರೀ ಮಹದೇವಿ ವಿಗೆ ಬಳಿಕ್ಕತ್ತಲಿದ್ದಳು . . . ಉತ್ತಮದ ಮೈಲುಳಿಯ ಕಾಂತಿಯ ಮತ್ತಗಜಗಮನವ ವಿಳಾಸನ . . . ಚಾತಿಭಾವದಲಿ (ಕ್ರಕೃಲೀ. ೦೦-೨) ; ಸುತ್ತಿದ ಬಂಡಿನೊರೆಯ ಕುಬಾಯ ಲೋಳೆಯ ನಿಮಿರ್ದ ಮೈಲುಳಿಯ . . . ರಥ ತುರಗ ವಿಸ್ತೃತ (ಶಾಕ್ಕೃಲೀ. ೦೦-೩೪) ; ಪಯಪಾದು ಪುರಿವು ಮೈಲುಳಿ ಲಾಗು ಲವಣ ಲಕ್ಷ್ಮೆಂಗಳಿಂ ಧುರದೊಳೇಱಂ ತೋಱೆ ವಿಜಯತ (ಪಾಪ. ೭೦-೩೮). [ಮೈ$_{11}$ (<ಮೆಯ್$_2$) + ಉಳಿ$_1$]

ಮೈಲೆ$_1$ ' ಮಯ್ಲು ' ನೋ.

ಮೈಲೆ$_2$ ' ಮೈಲಿ$_1$ ' ನೋ.

ಮೈಲೆರೋಗ (ನಾ). ಸಿಡುಬಿನ ಬೇನೆ : ಈ ಎಲೆಯಂ ನೀರ್ಲ್ಲಿ ಅರೆದು ಕುಡಿಯ ಮೈಲೆರೋಗ ಗುಣ (ಅಷ್ಟಿ. ೪).

[ಮೈಲ್ಲೆ$_2$ (<ಮೈಲಿ$_1$) + ರೋಗ]

ಮೈಲ್ತೋರಿ (ನಾ). ವಿಶ್ರಪರ್ಣಾದ ಹೋರಿ : ಬಿಚ್ಚುವ ಬಿಳ್ಳೆ ದೆದಜ್ಜಿಸುವ ಬೆಲುವ ಮೈಲ್ತೋರಿ ಘಟನೆಗೆವ ಕಿಂದನು ವಜ್ರವ ಕಾರಿ ಮೊದಲಾದವಜೊಳು . . . ಪಲಪ್ಪವರಿಯತ್ತು ಕೊಂಭತ್ತಾಱುಲಕ್ಷ ಮೇಳ್ಳಿಸಿಡಿದುವು ಗೆಲ್ಲಕೆ (ಇಂಡಿಲಾ. ೩೩-೭). [<ಮೈಲ + ಹೋರಿ (<ಪೋರಿ$_2$)]

ಮೈವಚ್ಚೆ ' ಮೆಯ್ವಚ್ಚೆ ' ನೋ.

ಮೈವಡೆ ' ಮೀನ್ವಡೆ ' ನೋ.

ಮೈವಣ್ಣ (ನಾ). ದೇಹದ ಮೇಲಿನ ಬೆವರಿನಿಂದಾದ ಕೊಳೆ, ಕಲ್ಮಷ : ಗಿಜಿ ಮೈವಣ್ಣಂದಲೊರ್ವ ಸುತನಂ ಪಡೆದು ಬಾಗಿಲೊಳ್ ಕಾಪಟ್ಟಿರೆ (ಗಜಮು. ೪-೩೦). 'ಮೈತಿಮಿರ್' ಪರಾ.

[ಮೈ$_{11}$ (<ಮೆಯ್) + ವಣ್ಣ (<ವರ್ಣ್)]

ಮೈವಶ (ನಾ). ಅಧೀನತೆ : ಪತೋಟಿ : ಮೈವಶವ ಮಾಡಿದರಿಲ್ಲಿ ಬಲುದೈವವನು ಕುರುಳುಲದ ಜೀರನು ಕೊಯ್ವನೀ ಹರಿ (ಶಾಕ್ಕೃಲೀ. ೬೩-೦೬) ; ಈ ಬಲದ ಮೈವಶವರ ಕೈವರವೇನು ಹೊಸತೆಂದ (ಶಾಕ್ಕೃರಾಕ್ಕೃಲೀ. ೦೦-೩೦). [ಮೈ$_{11}$ (<ಮೆಯ್$_2$) + ವಶ$_2$]

ಮೈವಸ ' ಮೆಯ್ವಸ ' ನೋ.

ಮೈವಸೆ ' ಮೆಯ್ವಸೆ ' ನೋ.

ಮೈವಳಯ (ನಾ). ಹೊರವಳಯ ; ಆವರಣ : ಗಿರಿಯ ಮೈವಳಯದಲಿ ವಿದ್ಯಾಧರರು ಪೇಚರಗುಹ್ಯಕರು ಇವರಿವ ಜಡಿಗಳ ಫೋನತಪ್ಪಿನ ಧೂರ್ವದೇಹಿಗಳು (ಅಂಜಕ. ೩-೬).

[ಮೈ$_{11}$ (<ಮೆಯ್$_2$) + ವಳಯ(=ವಲಯ)]

ಮೈವಳಿ ' ಮೆಯ್ವಟಿ ' ನೋ.

ಮೈವಳಿಸು (ಕ್ರಿ). ಹೊಂದಿಸು ; ಜೋಡಿಸು ; ಅಳವಡಿಸು : ಪಿಳುತ ಮಂತ್ರಿಸಿ ಬಿಲ್ವೆದೆಗೆ ಮೈವಳಿಸಿವನತಕಿ ಶರ ಮುಖಾಗ್ನಿಯ ರುಳಿದ ಸಿಗಳಕೆ ಧಾತುಗಿಡಿಸಿತು ಸಬಲಲೋಕಗಳ (ಅಜಿತಾ. ೦೩-೨೬).

[ಮೈವಳಿ (<ಮೆಯ್ವಟಿ) + – ಸು$_2$]

ಮೈವಟ್ಟಿ ' ಮೆಯ್ವಟ್ಟಿ ' ನೋ.

ಮೈವಿಡಿ ' ಮೆಯ್ವಿಡಿ ' ನೋ.

ಮೈವಿಡು ' ಮೆಯ್ವಿಡು ' ನೋ.

ಮೈವೆಚ್ಚು ' ಮೆಯ್ವೆರ್ಚು[1] ' ನೋ.

ಮೈವೆರು ' ಮೆಯ್ವೆಱು ' ನೋ.

ಮೈವೆರ್ಚು ' ಮೆಯ್ವೆರ್ಚು[1] ' ನೋ.

ಮೈವೆಳಗು ' ಮೆಯ್ವೆಳಗು ' ನೋ.

ಮೈವೆಱು ' ಮೆಯ್ವೆಱು ' ನೋ.

ಮೈವೇದನೆ (ನಾ). ಶರೀರಕ್ಕೆ ಉಂಟಾಗುವ ನೋವು. – ವೇನೆ ; ಮೈನೋವು : ಕೆಡದು ಮೈವೇದನೆಗೆ ನರಳುವ ನಿಡುಸರದ ಖಗ ಜಂಬುಳೌಘವ ನಿಡುವ ಕೈಗಳ್ಗುಗಳ ನೃಪತಿಯ ಕಂಡರಿವರಂದು (ಕುಣ್ಡಿಗ. ೬-೫೩).

[ಮೈ$_{11}$ (<ಮೆಯ್$_{2}$) + ವೇದನೆ]

ಮೈವೊಗರ್ ' ಮೆಯ್ವೊಗರ್ ' ನೋ.

ಮೈವೊತ್ತುಗೊಡು (ಕ್ರಿ). ಶರೀರವನ್ನು ಆಸರೆಯಾಗಿ ಕೊಡು : ಹತ್ತು ದಿಸೆಗಳು ವಿದುಲತೆಗೆ ಮೈವೊತ್ತುಗೊಟ್ಟವು ಸಕಲಜೀವರ ಚಿತ್ತ ನಿರ್ಮಳವಾಯ್ತು (ಚಿಣಾಗ. ೬-೨೦-೩೬). [ಮೈ$_{11}$ (<ಮೆಯ್$_{2}$) + ಒತ್ತುಗೊಡು]

ಮೈವೊಯ್ (ಕ್ರಿ). ಶರೀರದ ಮೇಲೆ ಎರಗು : ಮೈವೊಡ್ಡಬಹುದು ಮೃತ್ಯುವಿನಿಂತಕ್ಕೆ ಮೈವೊಯ್ದು ಹರನುರಿಗಣ್ಗೆ ಮೈವೊಡ್ಡಬಹುದು ಬಂಧಿಯರ ಕೂಟಕ್ಕೆ ಮೈವೊಡ್ಡುವುದಸಂಘಟಿತವು (ಪ್ರಕಂಣ. ೩-೬೨).

[ಮೈ$_{11}$ (<ಮೆಯ್$_{2}$) + ಪೊಯ್$_{1}$]

ಮೈಸನ್ನೆ ' ಮೆಯ್ಸನ್ನೆ ' ನೋ.

ಮೈಸರಸ (ನಾ). (ಆಲಂ) ಮಲ್ಲಯುದ್ಧ : ಗುದ್ದಾಟ : ಮೈದುನನ ಮೈಸರಸಕೀ ಹುಲುಗೈದು ಸಾಲದೆ ತಂಗಿ ದುಸ್ಸಳೆಯೈದೆತವ ಬಯಲಾಯ್ತು ನುತ ಬೆಂಬತ್ತಿದರು ಬಿಳಿನ (ಭರತ. ೨೨-೨೫).

[ಮೈ$_{11}$ (<ಮೆಯ್$_{2}$) + ಸರಸ]

ಮೈಸಲ್ ' ಮೆಯ್ಸಲ್ ' ನೋ.

ಮೈಸಲಿಗೆ (ನಾ). ದೇಹದ ಸಂಗ,–ಸಹವಾಸ : ನೀನು ದೊಡ್ಡವಳಾದೆ ಮೈಸಲಿಗೆ ಬೆಳೆದೆ ಏಕಾಂತಕೆಳಸಿದೆ ಎಲೆ ಕಳದಿಯೆ (ಸೋಲಿಗ. ೯-೩೩).

[ಮೈ$_{11}$ (<ಮೆಯ್$_{2}$) + ಸಲಿಗೆ$_{1}$ (<ಸಲ್ಗೆ$_{1}$)]

ಮೈಸಾರ್ ' ಮೆಯ್ಸಾರ್ ' ನೋ.

ಮೈಸಾರ್ಚು ' ಮೆಯ್ಸಾರ್ಚು ' ನೋ.

ಮೈಸಾಲ, ಮಯಿಸಾಲ (ನಾ). ೧. ಒತ್ತೆ, ಆಧಾರಗಳೇನೂ ಇಲ್ಲದೆ ವ್ಯಕ್ತಿಯ ಮೇಲಿನ ನಂಬಿಕೆಯ ಆಧಾರದ ಮೇಲೆ ಕೊಡುವ ಸಾಲ : ಅದವು ಮೈಸಾಲದ ಪತ್ರಗಳು . . . ಸಿಕ್ಕಿ ಇರಲಾಗಿ (ಶಿಕ. VI. ೬೫೯. ೩–೯; 1589). ೨. (ಆಲಂ) ಸೇಡು : ಮುಯ್ಯಿ : ಸೋಲವಿದು ಕಾಲಾಂತಕನ. ಮೈಸಾಲ (ಕುಣ್ಡಿಗ. ೬೩–೬೦); ಕಳಸೊಳಗೆ ಸರಳ ಮೊನೆಯಿಂದಲೊಂದಕೆ ನೂರ ಬೆಳಸಿ . . . ತಿದ್ದುವರು ಮೈಸಾಲವ (ಕುರೆಂಗ. ೨೯–೦೭). ಮಯಿಸಾಲ : ೧. ಸಮಸ್ತರಿಗೆ ಮಯಿಸಾಲವಾಗಿ ಕೊಟ್ಟ ದೊಡ್ಡ ವರಪ ಗ ೮೨ (ಕೌಂಪ. IX–ii. ೪೭೦–೭೪; 1482). ' ಕೈಸಾಲ ' ಪರಾ. [ಮೈ$_{11}$ (<ಮೆಯ್$_{2}$) + ಸಾಲ]

ಮೈಸಾಲಪತ್ರ (ನಾ). ಆಧಾರ, ಭೋಗ್ಯಗಳೇನೂ ಇಲ್ಲದೆ ಬರೆದು ಕೊಡುವ ಸಾಲಪತ್ರ : ಸಾಹುಕಾರರು ದೀಡು, ಭೋಗ್ಯ, ಮೈಸಾಲ ಪತ್ರಗಳ ಮೇಲೆ ಸಾಲಕೊಡುವುದನ್ನು ಕಡಮೆಮಾಡಿದ್ದರು (ಸಂಗಾಶ. ೧೦); ಅಂತಿಮ್ಮಾಂಡ್, ' ಮೈಸಾಲ ' ಪತ್ರ, ಹಣ ಸಂದ ರಸೀದಿ . . . ತಿಥಿ ಕಾಗದ – ಇವನ್ನೆಲ್ಲ ಬರೆಯುವುದಕ್ಕೆ ಆಚಾರ್ರ್ಯ ಗತಿ (ಶಪ್ರ. ೮ಬ. ೦೮೦). [ಮೈಸಾಲ + ಪತ್ರ]

ಮೈಸಾಲೆ (ನಾ). ಒಂದು ಬಗೆಯ ಸಸ್ಯ : " ಹರಿಮಾಗೆ, ಮುಯೋದಲೆ, ಮೈಸಾಲೆ, ತಗಡಕ, ತಗಡರೆ, ಪಾಯಿಸರೆ " (ಚಿಸ್ಯ. ೬೩); ತಗಡತಿ, ಹರಿಮಾಗೆ, ಮೈಸಾಲೆ (ಪ್ರಶಿಗ. ೩೦-೦೦೦೦). . [?]

ಮೈಸಿ (ನಾ). ಎಮ್ಮೆ ; ಮಹಿಷಿ : ಅತ್ಯಕ್ಕೆತ್ಯಂ – ಮಹಿಮಂ – ಮೈಕ್ಕೆಮೆ ; ಮಹಿಷಿ – ಮೈಸಿ (ಕವಿಪ. ೫೬೫ ಪ್ರಯೋ); ಮಹಿಷಿ, ಮೈಸಿ ; ಪತ್ತನ, ಪಟ್ಟಣ (ಕಜ್ಞಾಮ. ೦೬೦ ಚಿ.ಪ್ರ.). [< ಸಂ. ಮಹಿಷೀ]

ಮೈಸಿರಿ ' ಮೆಯ್ಸಿರಿ ' ನೋ.

ಮೈಸುಖ ' ಮೆಯ್ಸುಖ ' ನೋ.

ಮೈಸುಡು ' ಮೆಯ್ಸುಡು ' ನೋ.

ಮೈಸುನಾಡು ' ಮಯ್ಸೂರ್ನಾಡು ' ನೋ.

ಮೈಸೂರ್‌ಪಾಕ್ ' ಮೈಸೂರುಪಾಕು ' ನೋ.

ಮೈಸೂರು ' ಮಯ್ಸೂರ್ ' ನೋ.

ಮೈಸೂರುಪಾಕು, ಮೈಸೂರ್‌ಪಾಕ್ (ನಾ). ಕಡಲೆಹಿಟ್ಟು, ತುಪ್ಪ, ಸಕ್ಕರೆಗಳಿಂದ ತಯಾರಿಸುವ ಒಂದು ಬಗೆಯ ಸಿಹಿತಿಂಡಿ : ಮೈಸೂರುಪಾಕು : ಪದಾರ್ಥಗಳು : ಒಂದು ಕಪ್ಪು ಕಡಲೆಹಿಟ್ಟು; ೨ ಕಪ್ಪು ಸಕ್ಕರೆ . . . ೩ ಕಪ್ಪು ಡಾಲ್ಡ (ಅಮಾಶಾ. ೦೦೦). **ಮೈಸೂರ್‌ಪಾಕ್** : ಮೈಸೂರ್‌ಪಾಕ್ ನಾಲ್ಕು ಪ್ಲೇಟು ಬಂತು (ಕಷ್ಟಕ್ಕು. ೫೭೦). [ಮೈಸೂರು$_{೩}$ (p.n. ಸಂ. ಮಸೂರ) + ಪಾಕು$_{೨}$ (p.n. ಸಂ. ಪಾಕ)]

ಮೈಸೆ (ನಾ). ಒಂದು ಊರಿನ ಹೆಸರು : ಭತ್ಕಗಾವೆ ಹಾದಿಗಾಳಿ ಕಡಗೋಡ ಮೈಸೆ ಪನ್ನೆರಡುಮನೆಲೆವಯಲುಂ (ಕ್ಯಾಚ. ೦೯೩೦, ೬೯-೦೯೯; 10538). [?]

ಮೈಸೆಕೆ (ನಾ). ಶರೀರದ ಕಾವು,– ಶಾಖ ; ಜ್ವರ : ಗೋನೇಕಾಯಿ ಚುಜ್ಜುಲಚಿಕ್ಕೆ ಇವುಗಳ ರಸವನ್ನು ತೆಗೆದು ಸಕ್ಕರೆ ಹಾಕಿ ಕುಡಿಯಲು ಮೈಸೆಕೆ ಬಿದುವುದು (ಸಪ್ಪ. ಪಂ ೧೦೦). [ಮೈ$_{11}$ (<ಮೆಯ್$_{2}$) + ಸೆಕೆ]

ಮೈಸೊಕ್ಕು (ನಾ). ದೇಹದ ಕೊಬ್ಬಿನಿಂದುಂಟಾದ ಮದ,– ಗರ್ವ,– ಅಹಂಕಾರ : ತಮ್ಮ ಮೈಸೊಕ್ಕಿನ ಫಲವನ್ನು ಉಣ್ಣುತ್ತಾರೆ (ಚಿಪ್ರ. ೦೬೨. ೦೬); ಇರಬೇಕು ಎಲ್ಲೊ ಯಾರಿಗೋ ಮೈಸೊಕ್ಕು (ಪಂಚಾ. ೦೯-೦೬). [ಮೈ$_{11}$ (<ಮೈಯ್$_{2}$) + ಸೊಕ್ಕು$_{೨}$ (<ಸೊರ್ಕು$_{2}$)]

ಮೈಸೊಬಗು ' ಮೆಯ್ಸೊಬಗು ' ನೋ.

ಮೈಸೋಂಕು ' ಮೆಯ್ಸೋಂಕು[1] ' ನೋ.

ಮೈಸೋಂಬತನ (ನಾ). ಮೈಗಳ್ಳತನ ; ಸೋಮಾರಿತನ : ಕಾಯಕ ಕಾಣದೆ ಮೈಸೋಂಬತನದಿಂದ ಬೇಱೆ ಕೂಳ ಗಳಿಸಲಾಜದೆ ಹಸಿದಿಪ್ಪರಯ್ಯ (ಪಚಾ. II. ೪೦೯). [ಮೈ$_{11}$ (<ಮೆಯ್$_{2}$) + ಸೋಂಬತನ]

ಮೈಸೋಕು ' ಮೆಯ್ಸೋಂಕು ' ನೋ.

ಮೈಸೋಲು[1] (ಕ್ರಿ). ದೇಹವು ಆಯಾಸಗೊಳ್ಳು, – ದಣಿ, – ಬಳಲು : ದಯ ಬಾರದೆ ಈ ಎಸ್ಪ ದೀನದೆಸೆಯ ನೋಡಿ ? ಸಾಕಿನ್ನು, ದೇಸಕ್ಕೆ ಮೈಸೋತೆ (ಅಂತಃ. ೦೦) :

[ಮೈ$_{11}$ (<ಮೆಯ್$_{2}$) + ಸೋಲು$_{1}$ (<ಸೋರ್)]

ಮೈಸೋಲು[2] (ನಾ). ದೇಹದ ಬಳಲಿಕೆ, – ಆಯಾಸ, – ದಣಿವು ; ವಾತ, ಶ್ಲೇಷ್ಮ, ಮೈಸೋಲು, ಎದೆಸೋಲು, ಗುಲ್ಮ, ಸರ್ವವಾತ ಹರ (ಪಥ್ಯ. ೯೯).

[ಮೈ$_{11}$ (<ಮೆಯ್$_{2}$) + ಸೋಲು$_{೩}$ (<ಸೋಲ್$_{1}$)]

ಮೈಹಸ (ನಾ). ದೇಹದ ಕೆಚ್ಚು,– ಸಾಮರ್ಥ್ಯ (?) : ಬೆಸುವುದಂ ಬೆಸುವುದು ಜಾಚುವುದು ಜಾಳಿಸುವುದೊತ್ತಂರಿಸುವುದು ಕೈಹಸದ ಮೈಹಸ ದುಚ್ಚರದ ಸಮರಾಂಗದಬ್ಬರದ ರಸವನೇಪೊಗಳುವೆನು (ಕೊಡಗಾ. ೬-೦೩-೩೬). ' ಕೈಹಸ ' ಪರಾ. [ಮೈ$_{11}$ (<ಮೆಯ್$_{2}$) + ಹಸ]

ಮೈಹಳುವಾಯಿ (ನಾ). ೧. ಮೈ ಹಗುರವಾಗಿರುವುದು; ದೇಹಲಾಘವ. ೨. ದೇಹದ ನಿತ್ರಾಣ, ದೌರ್ಬಲ್ಯ: ಬಾಯಿ ಲೋಳೆಗಳಿಂದಿ ಮೈಹಳುವಾಯಿ ಮಿಗೆ ಕುದಿಮಿರವನೂಱಿ ನಮಯಿ ಮಿಗಲು . . . ವಾನಾಯುಜದ ಸಾಲೆಸೆದುಮಂ (ಶಾಙ್ಕರ್ಣ. ೦೭-೯).

[ಮೈ೧ (<ಮೆಯ್೨) + ಹಳುವಾಯಿ]

ಮೈಹಿರ (ನಾ). ೧. ಸೂರ್ಯ: ಮಾಲೋಕಿದಱಿಯಿ ಮೇರುಸದನ ಮೈಹಿನಿಸ ಘನತೇಜಃಪ್ರಭ ಮೋಕ್ಷಪ್ರದ ವಸೌನಿಯುಕ್ತಸುಧಾಕರ ವಂಗಲವರ್ಧನ ವಾರ್ವಿತ ಸಮವರ್ತಿ ಸಲಹು ನಲಿಂ ಶ್ರೀಶಾಂತೇಶಂ (ಶಾಙ್ಕರ್ಣ. ೧-೨೯). ೨. ಸೂರ್ಯನ ಕಾಂತಿ: ತಾಳ್ದತ್ತು ಮೈಹಿರವಂ ಕೇಳಿರಸಾರ್ಥವಿಶ್ರಮಿತ ಸಾನಾದ್ಯೆವಕಂ ರೈವತಂ (ಹರಿ. ೦೬-೨೩).

[<ಸಂ. ಮಿಹಿರ]

ಮೈಹುಳಿ (ಕ್ರಿ). ೧. ದೇಹವು ಹುಳಿತು ಹೋಗು. ೨. (ಅಲಂ) ಬಹಳ ಘಾಯವಾಗು.-ಹುಣ್ಣಾಗು: ತೊಲಗು. ಇಲ್ಲವಾದಲೆ ಬೆಳ್ಳದಿಂದ ಮೈಹುಳಿಯುವಂತೆ ಛಳಸುವೆ (ಕಬ್ಬಿಗ. ೧೯); ನೋಡುತ್ತೇನು ನಿಂತಿ. ಪೆದ್ದನಂತ! ಮೈಹುಳಿಯಿ ಜಡಿ. ಅಂದರೆ ಎಷ್ಟರಾಗುತ್ತಾನೆ (ಹುಣ್ಣಿಗೆ. ೬೦). [ಮೈ೧ (<ಮಯ್೨) + ಹುಳಿ೨ (<ಷಟಿ)]

ಮೈಹೊರೆ (ಕ್ರಿ). ತೀರವನ್ನು ತಾಳು; ಮೈದಳೆ: ಅಲರುತಿದೆ ಮೂರುಲೋಕದ ಮೋಹ ಕರವಂತೆ ದುರ್ಗಧಮಳಿಮಮುಗ್ರತೆಯೆ ಮೈಹೊರೆಯುವಂತೆ (ಅಜಿ. ೨೩-೨).

[ಮೈ೧ (<ಮೆಯ್೨) + ಹೊರೆ೨ (<ಪೊರೆ)]

ಮೈಳಲದೇವಿ (ನಾ). ಒಬ್ಬಾಕೆಯ ಹೆಸರು: ಜನಕನುರ್ವೀಜಾತ ಪೆತ್ತಳ್ಗೊಮಿನಿ ತಾಯಿ ಮೈಳಲದೇವಿ (ಕಾಶಿ. XX. ೩೦-೨೪; ೩೨. ೨೦೬ರು ೨೪). [ಮೈಳೆಲ್ಲ (ಪ್ರ ← ತಮಿ. ತೆಲು. ಮೈರಾರು = ಒಂದು ಕ್ಷುದ್ರ ದೇವತೆ) + ದೇವಿ]

ಮೈಳಾಪತೀರ್ಥ (ನಾ). ಒಂದು ಸ್ಥಳದ ಹೆಸರು: ಶ್ರೀಮನ್ಮೈಳಾಪ ತೀರ್ಥಸ್ಯ ಗಣೇಕಾರೇಯನಾಮನಿ ಬಭೂವುರ್ಗ್ರಹಪೀಯುಷ್ಣಿಃ ಮಾಳ್ಕ ಭುಜ್ಯಾರಕೋ (ಕಾಶಿ. XX. ೦೩-೬: ೩೧೨). [ಮೈಳಾಪ್ಯ + ತೀರ್ಥ]

ಮೊಂಗರವಳ್ಳಿ 'ಮುಂಗುಜುವಳ್ಳಿ' ನೋ.

ಮೊಂಗುರಿ 'ಮುಂಗುರಿ' ನೋ.

ಮೊಂಟು$_1$ (ಕ್ರಿ). ತಿವಿ; ಚುಚ್ಚು (?): ತನ್ಮೈಗವಂಗಮಂ ಕಡಿದು ಖಂಡವಂ ತೆಗೆದು ಸೋದಿಸಿ ಕಟ್ಟೊಳಿಕ್ಕಿ ತಾಂ ಮಿಗೆ ಮೋಟ ಪೊರಳ್ದಿ ಸುಂಟಗೆಯಿಂದೆ ಪಚಿ (ಕಾಮಾಕ್ಷ. ೪-೨೨೩). [<ಮೊಟ್ಟು$_1$?]

ಮೊಂಟು$_2$ 'ಮುಂಡು$_2$' ನೋ.

ಮೊಂಡ 'ಮುಂಡು$_2$' ನೋ.

ಮೊಂಡಕ್ಕಿ 'ಮಂಡಕ್ಕಿ' ನೋ.

ಮೊಂಡಗತ್ತಿ, ಮೊಂಡಕತ್ತಿ, ಮೊಂಡುಕತ್ತಿ (ನಾ). ಹರಿತವಾಗಿರದ ಖಡ್ಗ; ಮೊಂಡಾಗಿರುವ ಕತ್ತಿ: (೧). **ಮಂಡಕತ್ತಿ**: ಮಾನೆಕಂಬಿಂದೂಕು ಮತ್ತು ಮಂಡಕತ್ತಿಗಳನ್ನೇ ಎತ್ತಿಕೊಂಡು . . . ಸಿದ್ಧರಾದರು (ಜೈಮಿ. ೦೮೪). **ಮೊಂಡುಕತ್ತಿ**: (ಕತ್ತಿವರಸೆಯಲ್ಲಿ ಉಪಯೋಗಿಸುವ ತುದಿಗೆ ಗುಂಡಿ ಹಾಕಿದ) ಮೊಂಡುಗತ್ತಿ (Foil. ೨೦೪೨). [ಮೊಂಡ (<ಮುಂಡು$_2$) + ಕತ್ತಿ]

ಮೊಂಡಗಳ್ಳಿ 'ಮುಂಡಗಳ್ಳಿ' ನೋ.

ಮೊಂಡತನ 'ಮೊಂಡುತನ' ನೋ.

ಮೊಂಡರಳು 'ಮುಂಡರಳು' ನೋ.

ಮೊಂಡಾಟ (ನಾ). ಹಸಿಪಾಯಿತನ: ಪಟ್ಟುಹಿಡಿಯುವಿಕೆ: ಆಗ್ರಹ: ಈ ಮೊಂಡಾಟದಲ್ಲಿ ಯಾರೂ ಸೋಲುವಂತಿಯೂ ಇರಲಿಲ್ಲ. ಗೆಲ್ಲುವಂತಿಯೂ ಇರಲಿಲ್ಲ (ಅಪಾಸ. ೩೭): ದೀವಿಗೆಗಳಿಗೆ ಎಣ್ಣೆ ಬಿಡಿಸಿಕೊಂಡು ಮೊಂಡಾಟ ಮಾಡಿ ಕಾಸು 'ಪಸೂಲು' ಮಾಡಿಕೊಂಡು ಮುಂದಿನ ಮನೆಗೆ ಹೋಗುವರು (ಸುಪಾಸ. ೩೩): ಮಕ್ಕಳ ಸ್ವಾಭಾವಿಕಆಸಕ್ತಿಗಳಿಗೆ ಅಡ್ಡಿಬುದು ಮೊಂಡಾಟ ಮಾಡುವುದು, ತುಂಟಾಟ ಮಾಡುವುದು ಮೊದಲಾದುವ ಆರಂಭವಾಗುತ್ತವೆ (ತ್ರಿಪ. ೬೫೨). [ಮೊಂಡ (<ಮುಂಡು$_2$) + ಆಟ]

ಮೊಂಡಿ, ಮುಂಡ್ಡಿ, ಮೊಣ್ಣೆ (ನಾ). ೧. ಮೊಂಡುತನ ಮಾಡುವವಳು; ಹಟಮಾರಿ: ಆ ಮೊಂಡಿಯನ್ನು ಈ ಕೆಲಸಕ್ಕೆ ಒಪ್ಪಿಸುವಷ್ಟರಲ್ಲಿ ಸಾಕಾಗಿ ಹೋಯಿತು (ಕೂಡ). **ಮುಂಡ್ಡಿ**: ೧. ಅದ್ಯೇ ಹೇಳಾದು, ನೀನು 'ಮುಂಡಿ' ಆದಿತಾ (ಕುಡು. ೬೦). **ಮೊಣ್ಣೆ**: ೨. ಅಂಗಹೀನ ಳಾದವಳು; ಅಂಗವಿಕಲೆ: ಬಲಗೈಬೆರಳೊರ್ವನಿಗಿತ್ತಿ ಮೊಣ್ಣೆಯೆಂದು ಲಿದು ಭಂಗಿಸರೆ ಕಂಡಪರು (ಕಂಚಿ. ೬-೦೬೮).

[ಮೋಡು (<ಮುಂಡು$_2$) + — ೩]

ಮೊಂಡು 'ಮುಂಡು$_2$' ನೋ.

ಮೊಂಡುಕತ್ತಿ 'ಮೊಂಡಗತ್ತಿ' ನೋ.

ಮೊಂಡುಗರೆ (ಕ್ರಿ). ಮೊಂಡುತನಮಾಡು; ಪಟ್ಟುಹಿಡಿ; ಹಟ ಹಿಡಿ: ಪ್ರಮಿಲ ಎಳೆಯ ಮಗುವಿನಂತೆ ಮೊಂಡುಗರೆಯುತ್ತಾ . . . ಗೋಗರೆದಳು (ಹುಳಿ. ೦೬೯). [ಮೊಂಡು (<ಮುಂಡು$_2$) + ಕರೆ$_1$]

ಮೊಂಡುಗಳ್ಳಿ 'ಮುಂಡಗಳ್ಳಿ' ನೋ.

ಮೊಂಡುತನ, ಮೊಂಡತನ (ನಾ). ಪಟ್ಟುಹಿಡಿತನ; ಹಿಡಿದ ಪಟ್ಟು ಬಿಡದಿರುವಿಕೆ; ಆಗ್ರಹ: ಗಂಡ ಮಾಡಿದ ಪ್ರಯತ್ನಗಳೆಲ್ಲ ಅವಳ ಮೊಂಡುತನದ ಕಲ್ಲುಗೋಡೆಗೆ ಬಡಿದು ನುಚ್ಚುನೂರಾದವು (ತ್ರಿಪು. ೩೭೦). **ಮೊಂಡತನ**: ನಾವು ರಾಯರೆಂದು ಮೊಂಡತನದಿಂದ ಕುಳಿತುಯಿರುವವು (ಕಾಗಂಧಿ. ೨೦೫-೦೨): ಅದಳು ಮೊದಲು ಬುಷ್ಯಂತ ಹುಡುಗಿಯನ್ನು ಮನೆಯಲ್ಲಿಟ್ಟುಕೊಳ್ಳಲು ಸಿದ್ಧಳಾಗಿದ್ದಳು; ಗಂಡನ ಮೊಂಡತನದಿಂದ ಅದು ಸಾಧ್ಯವಾಗಲಿಲ್ಲ. ಅಷ್ಟೇ (೨೦೦೫. ೨೯); ಹಾಗೂ ಹೀಗೂ ಮೂರು ನಾಲ್ಕು ನಿಮಿಷ ಮೊಂಡತನದಿಂದ ಮಾತಾಡಿದೆ (ಕಂಟೆ. ೩೯).

[ಮೋಡು (<ಮುಂಡು$_2$) + — ತನ]

ಮೊಂಡುವಾದ (ನಾ). ಹಟಹಿಡಿದು ಮಾಡುವ ವಾದ; ಪಟ್ಟಿಂದ ಕೂಡಿದ ಮಾತಿನ ಸರಣಿ: ಇದಕ್ಕೆ ನಾವು ಮೊಂಡುವಾದವೆಂದು ಬೇಕಾತ್ತೀವಿ (ದೂಕಶ್ಮಿ. ೦೦೫); ಫಾದರ್ ಕೊಸ್ಟೊನ ಮೊಂಡುವಾದವನ್ನು . . . ನಿಜವೆಂದು ಹೇಳಲು ಸಾಧ್ಯವಿಲ್ಲ (ಜ್ಞಾಪ್ರ. ೫೬). [ಮೊಂಡು (<ಮುಂಡು$_2$) + ವಾದ$_2$]

ಮೊಂಬತ್ತಿ 'ಮೋಂಬತ್ತಿ' ನೋ.

ಮೊಕ 'ಮೊಗ' ನೋ.

ಮೊಕಚಟ್ಟು (ನಾ). ಯಾವುದಾದರೊಂದು ಬಗೆಯ ಆಹಾರದ ಅತಿಸೇವನೆಯಿಂದ ಬಾಯಿರುಚಿ ಕೆಟ್ಟು ಜಿಗುಪ್ಸೆಯುಂಟಾಗುವುದು: ಮೊಕಚಟ್ಟುಯಾದೊಡೆ ಹುಳಿದಾಳಲುಗಳ ನಿಕರವ ಸವಿಪರೇನೆಂದೆ (ಜ್ಞಾಪ್ರ. ೭೯-೦೨೬). 'ಮುಖಚಿಟ್ಟು' ಪರಾ.

[ಮೊಕ (<ಮೊಗ) + ಚಟ್ಟು$_2$]

ಮೊಕತ 'ಮೊಖ್ತಾ' ನೋ.

ಮೊಕದ್ದಮೆ, ಮುಕದಮಿ, ಮೊಖದ್ದಮೆ (ನಾ). ಎರಡು ಪಕ್ಷಗಳ ನಡುವಿನ ಧನ, ಅಧಿಕಾರ ಇತ್ಯಾದಿಗಳಿಗೆ ಸಂಬಂಧಿಸಿದ ಯಾವುದಾದರೂ ಜಗಳ ಅಥವಾ ಪುತ್ರಾವುದಾದರೂ ಅಪರಾಧದ ವಿಷಯವಾಗಿ ನ್ಯಾಯಾಲಯದಲ್ಲಿ ಹೂಡುವ ವ್ಯಾಜ್ಯ.-ಖಟ್ಲೆ: ಇದೀ ಮೊಕದ್ದಮೆಯೇ ಮುಂದಿದು ಬೀಳುವ ಪರಿಸ್ಥಿತಿ ಒದಗಿತ್ತು (ಕಾಶ್ಮೀ. ೦೮೦); ಪರಬಾರೆಸಲ್ಲಿ ಮೊಕದ್ದಮೆ ಬೀಗಳಾವವೂ ವಿಚಾರಣೆಯಾಗ

ತಕ್ಕುದಿಲ್ಲ (ಪೀಂಚಿ. ೦೦೩). **ಮುಕದಮಿ** : ಮುಕದಮಿಯು ಕಾಗದ ತಕ್ಕೊಂಡು ಓರ್ವ ಸ್ತ್ರೀಯು ಅವರ ಕಡೆಗೆ ಬಂದಳು (ಶ್ರಹಕ್ಷ. ೯೨). **ಮೊಖಿದ್ದಮೆ** : ದಸ್ತಾವೇಜು. ಮೊಖದ್ದಮೆ (ಶಾಹಾಶಾ. ೦೬೩).

ಮೊಕದ್ದಮೆ ಹೂಡು, ಮೊಖದ್ದಮೆ ಹೂಡು = ವ್ಯಾಜ್ಯವನ್ನು ನ್ಯಾಯಾಲಯದ ವಿಚಾರಣೆಗೆ ಒಳಪಡಿಸು.– ಕೋರ್ಟಿಗೆ ಮಾಕು : ಮುಂಬಯಿಯ ಅಸ್ಸಾಮಿಯ ಮೇಲೂ ಮೊಕದ್ದಮೆ ಹೂಡಲಾಯಿತು (ಪಾಹೂಂಚಿ. ೦೮೩) ; ಬೌರ್ಯಗೋವನಕ್ಕಾಗಿ ಅವಳ ಮೇಲೆ ಮೊಕದ್ದಮೆ ಹೂಡಲಾಗಿತ್ತು (ಕ್ಷಪರು. ೦೭೨) ; ಅಪರಾಧಕ್ಕಾಗಿ ಮೊಖದ್ದಮೆ ಹೂಡಿದರು (ಕಂಬಿಹೋ. ೨೪೨). . [← ಅರ. ಮುಕದ್ದಮಾಹ್. ಮುಕದ್ದಮಾ ; ಹಿಂ. ಮರಾ. ಮುಕದಮಾ, ಮುಕದ್ದಮಾ. ಮೊಕದಮಾ]

ಮೊಕರ ' ಮೊಗ್ಗರ ' ನೋ.

ಮೊಕರಂಬ ' ಮೊಗರಂಬ ' ನೋ.

ಮೊಕರಂಬೆ ' ಮೊಗರಂಬ ' ನೋ.

ಮೊಕರರ ' ಮೊಕರರು ' ನೋ.

ಮೊಕರರು, ಮೊಕರರ, ಮೊಕ್ಕರಾರು, ಮೊಕರೂರು (ನಾ). ೧. ನಿಶ್ಚಯ ; ನಿರ್ಧಾರ : ವೀರರಾಜೇಂದ್ರಪಟ್ಟಿಯರ ಹುಡುಕುವ ಬಗ್ಗೆ ಮೊಕರರು ಮಾಡಿ ಕಳುಹಿಸಿದ್ದರಿಂದ (ಶಾಹೋಶ್ರಾ. ೦೮). **ಮೊಕರರ** : ೧. ಐದು ಹಣಾ ಮೊಕರರ ಮಾಡಿ ಆಂಗಿರಸದಪರಿಗೆ . . . ಪೇಮಕಾ ಮಾಡಿ (ಪ್ರಕಂ. ೦೪೫೯, ೧೪-೬೩ ; ೧೪೧೩). **ಮೊಕರಾರು** : ೧. ಇಲಾಖೆಯ ಸಿಬ್ಬಂದಿಗಳಲ್ಲಿ ಕಾಲಾನುಗುಣವಾಗಿಯೂ ಆಯಾ ಅಧಿಕಾರಿಗಳ ಮರ್ಯಾದೆಗನುಸಾರವಾಗಿಯೂ ಅವರವರಿಗೆ ತಲುಬು ಮೊಕರಾರಾಗುತ್ತಿತ್ತು (ಕುಇಪಂ. II- ೬೭). **ಮೊಕರೂರು** : ೨. ನೇಮಕ ಮಾಡು ವಿಕೆ : ನಿಯೋಜಿತಗೊಳಿಸುವುದು ; ನಿಯೋಜನೆ : ಹೈದಸಾಬರು ದೈವಾಧೀನವಾದ್ದರಿಂದಾ ಆ ರಿಸಾಲೆ ಬಿಜಮತ್ತು ಶಾಬಾಸಾಬರು ಹೆಸ್ರಿಗೆ ಮೊಕರೂರಾಗಿಯಿರುತ್ತಾ ಇದ್ದರು (ಕ್ಷಚಿ. ೨೬) ; ಭಪ್ಪಸ್ವಾಮಿಯ ಮಗನಿಗೆ ರಾಜ್ಯಾಧಿಕಾರಕ್ಕೆ ಮೊಕರೂರು ಮಾಪವೇಕುಯೆಂಬುದಾಗಿ (ಕಳಪಂ. ೩೨-೯). [← ಅರ. ಹಿಂ. ಮುಕರ್ರರ್ : ಮರಾ. ಮುಕರರ್, ಮುಕರ್ರ್, ಮುಕ್ರರ್]

ಮೊಕರವಲೆ (ನಾ). ಒಂದು ಬಗೆಯ ಬಲೆ : ಕರಿಯ ಜವಿಲೆ ಮುಸುಕು ವಲೆ ಬತ್ತರದ ನೇಣ್ಣಲೆ ಮೊಕರವಲೆ ಬೇಡರ ಸಿರದೊಳೊಪ್ಪಿದುದು (ಶಾಳ್ಕಾ. ೫-೦೯). [ಮೊಕರ್ಕ + ಬಲೆ]

ಮೊಕರಾರು ' ಮೊಕರರು ' ನೋ.

ಮೊಕರೂರಾತಿ (ನಾ). ನೇಮಕಾತಿ : ಗ್ರಾಮಮುನಸಿಫರ ಮೊಕರೂರಾತಿಗೆ ಕೊಡುವ ಹುಕುಮುಗಳೆಲ್ಲವೂ ಸರ್ಕಾರದವರ ಪುನರ್ವಿಮರ್ಶೆಗೆ ಒಳಪಟ್ಟಿರತಕ್ಕದ್ದು (ಗ್ರಾವಾಕ. ೦೦). ' ಮಂಜೂರಾತಿ ' ಹೋ.

[< ಮೊಕರೂರು]

ಮೊಕರೂರು ' ಮೊಕರರು ' ನೋ.

ಮೊಕವಾಡ ' ಮೊಗವಡೆ ' ನೋ.

ಮೊಕಸ್ಥ (ನಾ). ಮುಖ್ಯಸ್ಥ : ಯಾ ನಾಡುತಕ್ಕ ಮೊಕಸ್ಥರೂ ಆದಿಯಾಗಿ (ಎಕ್ಷ. IX, ಕಪಗಡ. ೨೯-೩ ; 1857). [< ಮುಖ್ಯಸ್ಥ]

ಮೊಕಾಂ ' ಮುಕ್ಕಾಂ ' ನೋ.

ಮೊಕಾಬಲಾ ' ಮೊಕಾಬಿಲೆ ' ನೋ.

ಮೊಕಾಬಿಲೆ, ಮಕಾಬಲಿ, ಮುಖಬಿಲೆ, ಮುಖಾಬಿಲೆ, ಮೊಕಾಬಲಾ, ಮೊಬಾಬಿಲೆ (ನಾ). ೧. ಎದುರು ; ಅಭಿಮುಖ ; ಸಮ್ಮುಖ : ಯಾವತ್ತು ಗೈರಮಾಜಬೀ ಲೆಕ್ಕಾಚಾರ ಸಾಕ್ಷಿ ರುಜು ಮೊಕಾಬಲೆಯಿಂದ ಕೂಲಂಕಷ ವಿಚಾರಿಸಿ ಮಾಡಿ (ಕುಇಪಂ. II. ೫೯). **ಮಕಾಬಲಿ** : ೨. ಎದುರೆದುರು ಮಾಡುವ ಕಲಹ : ಪ್ರತ್ಯಕ್ಷವಾಗಿ ಮಾಡುವ ಕಾಳಗ : ನಾವು ಸುಮ್ಮನೆ ಕೂತರೂ ಅವ ನಮಗೆ ಕಾಡತಾನ ಅಂತ ಮ್ಯಾಲ ಮಕಾಬಲಿ ಆಗೇಹೋಗಲಿ ನೋಡೋಣಾ (ಗಂಮಾಮು. ೨೨೭). **ಮುಖಬಿಲೆ** : ೩. ಭೇಟಿ ; ಸಂದರ್ಶನ : ಕ್ಷಣವೇ ನನ್ನನ್ನು ಸಿನಿಮಾ ಪೂರೀಕರ ಪತ್ರಿರ ಕರೆದುಕೊಂಡುಹೋಗಿ ಮುಖಬಿಲೆ ಮಾಡಿಸಿ ಮಧ್ಯಾಹ್ನದ ಮೋಟಾರಿಗೇ ಮೇಷ್ಟರು ಹಿಂತಿರುಗಿದರು (ದರ್ಪಕ್ರಿ. ೧೦). **ಮುಖಾಬಿಲೆ** : ೩. ' ಪಿಂಡ ' ಕಾಗೆಗೆ ಬಿತ್ತು ಎಂತಾದರೆ ಅವರವರ ಮುಖಾಬಿಲೆ ಮುಂದಿನ ಶ್ರಾದ್ಧಕ್ಕೇ ಸರಿ (ಜಹಚ. ೨) ೪. ಸಮ್ಮುಖದಲ್ಲಿ ಆಗುವ ತೀರ್ಮಾನ : ಈಗ ನಮ್ಮ ಲೆಕ್ಕದ ಮುಖಾಬಿಲೆಯಾಗಲಿ ! (ಬಾಲಕ್ರ. II. ೬೫೯). **ಮೊಕಾಬಲಾ** : ೩. ನಿಮಗೆ ಆಪಳಿಗೆ ಮೊಕಾಬಲಾ ಮಾಡಿಸುವೆನು (ಕಳಕ್ಷ. ೨೦೯). **ಮೊಖಾಬಿಲೆ** : ೧. ಮೊಖಾಬಿಲೆಯಾಗಿ ಶಾಸುಭೋಗದವರಿಗೆ ಪಟ್ಟೀಲನ ಜೊತೆದುಕ್ಕಿದ್ದು ರುಜುಮಾಡಬೇಕು (ಗ್ರಾಪಾಕ. ೬೮). ೩. ನೀವು ಒಪ್ಪಿದರೆ ಅಷನನ್ನು ನಿಮಗೆ ಮೊಖಾಬಿಲೆ ಮಾಡಿಸುತ್ತೇನೆ (ಕ್ಷಚಿಣಾಚಿ. ೦೩೭).

[← ಅರ. ಮುಕಾಬಿಲಹ್ ; ಹಿಂ. ಮುಕಾಬಿಲಾ : ಮರಾ. ಮುಕಾಬಲಾ, ಮುಕಾಬಿಲಾ, ಮೊಕಾಬಿಲಾ]

ಮೊಕ್ಕ, ಮೊಕ್ಕೆ, ಮೋಕ (ನಾ). ಒಂದು ಬಗೆಯ ಮರ : " ಮೋಕ್ಷಿ– ಮೊಕ್ಕ " (ಟಿಕ್ಷಿ. ೦೩೦) : ಮೊಕ್ಕದ ಮರ. ಚಿತ್ರಪಟಮೂಲದ ಕಣಿಕೆ, ಕಕ್ಕ – ಇವು ಸಮೂಲಗಳು ತಂದು ಸರಿಗೂಡಿ ಸುಟ್ಟು (ಕಕ್ಷಂ. ೯). **ಮೊಕ್ಕೆ** : " ಗೋಪೀಧಃ . . . ಮೋಕ್ಷೀ- ಮುಷ್ಕಕಃ – ೬ ಮೊಕ್ಕೇ ಮರದ ಹೆಸರು " (ಸಿಕ್ಕಾಂ. ೧೨೦). **ಮೋಕ** : ಮೋಕ – ಮಧ್ಯಮ ಆಕಾರದ್ದು, ಕಟ್ಟಿಗೆ ಬರುವು (ಕಾಹಗ. ೪೭). [ದೇ.ಪ ತೆಲು. ಮೊಕ್ಕ, ಮುಂಕಿಡಿ ; ಕುಗಿ. ಮೊಕೊ. / ಸೂ. ಮೋಕ್ಷ]

ಮೊಕ್ಕಸೆ (ಅ). ಒಂದು ಅನುಕರಣಾವ್ಯಯ : ತಲೆಯಂ ಮೊಕ್ಕನೆ ಪೋಗೆಚ್ಚಂ (ಕಣ್ಣಾರಾ. ೬೨-೦೩) ; ಸಿಡಿದು ಸಾಜಿ ತಲೆಗಳ್ ಬಟ್ಟುವ ಸಂಧಿಸಂಧಿಗಳ್ ಮೊಕ್ಕನೆ ಕೋಡವೆ (ಕರ್ಣಪಾ. ೪-೩೨) ; ಮೇಘರಥನೆಯ್ದೆವಂದು ಮೊಕ್ಕನೆಪೋಗಿ ನೆಲಕ್ಕೆ ಬಿಟ್ಟ ಬಿನಿಲೆ ಪೊದಜಿಮಂ . . . ಕಂಡು (ಪಚಂಪ. ೧೦-೩೬ ಪ). [ಮೊಕ್ಕು + – ಅನೆ]

ಮೊಕ್ಕಳೆ. ಮೊಗ್ಗಳ (ನಾ). ೧. ಹೆಚ್ಚಳ ; ಅಧಿಕ್ಯ ; ಅತಿಶಯ : ಮೇಗಾಳಿ ಕಗ್ಗಾಳಿಯ ಮೊಕ್ಕಳದ ತಿಳಿದು (ಪಾಂಪಕ್ಷ. ೦೪-೩೬) ; ತನ್ನಂಗಿಯನುರು ಮುದದಿಂ ಕಂಚುಕಿದೊರ್ಮೆಳ್ ಪನ್ನ್ಯಪರದಟಿನ ಪೆಂಪಂ ಸಿರಿಯಗ್ಗಳಮಂ ಸೂಚಿಸಿನ ಮೊಕ್ಕಳಮಂ ವಿದಾಸನ್ಯಯಪುರ್ದ ಪೆಚ್ಚುಗೆಯುಂ . . . ಕೋಬುತ್ತುಂ ಪೇಳುತ್ತುಂ ಮೆಲ್ಲನೆ ನಡುಸಿದಳು (ಪಪುಣಾ. ೫-೪೭). ೨. ಮೊತ್ತ ; ಗುಂಪ್ಪ ; ಸಮೂಪ : "ಬಂಬಲ್ . . . ಮೊಕ್ಕಳಂ . . . ಗೊಂದಣಿ (ಇಂದಲ್) .. ಈ ಳಿಂ ಸಮೂಹಂ " (ಶಚಾ. ೩೬-೨೨೨); ಎಲ್ಲಾ ಕಳಿಗಳ ಬರ್ದಿನ ಮೊಕ್ಕಳದಿಂ ನಂದಿವೆಣ್ಣಂ ಗೆಲ್ವಳಂ . . . ಅಳವೇ ಬಣ್ಣಿಪೊಡೆ (ಅಶ್ವಥೇ. ೩-೨೬) ; ತಿಳಿಗೊಳನುಂಟು ತಾವರೆಯುಂಟು . . . ಅಲ್ಲಿ ಕೊಂಚೆಗಳ್ಕೊಳ್ವರ್ಕಿಗಳು ಮೊಕ್ಕಳವು (ಜಾಗಳು. ೨೦-೩೪) ; ಅರಮಕ್ಕಳ ಮೊಕ್ಕಳಕಿಂತು ಪೆರ್ಕಳಂ (ಕಳಂ. ೩-೭೦). ೩. ಬಾಧೆ : ತೊಂದರೆ ; ಪೀಡೆ. ಮೊಗ್ಗಳ ; ೪. ಶೌರ್ಯ : ಪರಾಕ್ರಮ : ಹೆಗ್ಗಡ ಬಲ್ಲಾಳರ್ಕಳ ಮೊಗ್ಗಳಮಂ ಮುರಿದುಕೊಂಡು ತದ್ಭೂತಳಮಂ ಬಗ್ಗದ ಮನ್ನೆಯರವನಿಂ ಮಗ್ಗಿಸಿ ತತ್ಪದ್ಧರಿತ್ರಿಯಂ ವಶಗೈದಂ (ಕಳಕ್ಷ. ೩-೬೨).

ಮೊಕ್ಕಳಕೊಳಗು ಮಾಡು = ತೊಂದರೆಗೆ ಗುರಿಪಡಿಸು ; ಹಿಂಸೆಗೆ ಈಡು ಮಾಡು : ಸೊಕ್ಕಾನೆ ನಡೆಮೆತ್ತ ಸೊಬಗಿಯರ್ . . . ಮದನನ ಮೊಕ್ಕಳಕೊಳಗು ಮಾಡಿದರು (ಪಾಚಿಹ. ೫೯-೦೩). **ಮೊಕ್ಕಳಿಕ್ಕು** = ಮೊಕ್ಕಳಕೊಳಗು ಮಾಡು: ಎಮ್ಮಾಸಂಕೇತಪ್ಪಶ್ಚಾಂತಪಂ ದೇವಿ ತಿಳಿದು

ಪಂಪುಲೇಖೆಯುಂ ಮೊಕ್ಕಳಕ್ಕಿಕ್ಕಿದಳ್ (ಪಜ್ಜಗೋ. ೪೬). **ಮೊಕ್ಕಳವನಿಕ್ಕು** — ಮೊಕ್ಕಳಕೊಳಗುಮಾಡು : ವಿಳಸದದ್ವರದಕ್ಷಿಣಿಗೆ ಮೊ[ಣಾಣಂ·ಹೆ]ಕ್ಕಳವನಿಕ್ಕಿದನೊಬ್ಬ (ತಿಪರಾ·೩-೨-೨೯). [ದೇ.॥ ತೆಲು· ಮೊಕ್ಕರ, ಮೊಕ್ಕಲ]

ಮೊಕ್ಕಳಂ (ಅ). ಅಶಿಶಯವಾಗಿ ; ವಿಶೇಷವಾಗಿ ; ಚೆನ್ನಾಗಿ ; ಕೂಲಲ್ಕೆ ಮೊಕ್ಕಳಂ ಪೆಱೆದಾದಱಿಂದೆ . . . ಪೊಲ್ಲುದು ಮಹಾಪದಿ ರುಂದ್ರ ಭೋಜೇಂದ್ರರಾಜನಂ (ಣಪ್ಪ೫· ೭೪೭ ಕೂಪ್ರಶ) ; ಮೊಕ್ಕಳಂ ಕವಿದುಪ್ಪುಗ್ರ ಲಯಾಗ್ನಿಗಳಂತೆ ಪಿಟ್ಟುಗಳ್ (ಪಂಪಣಾ· ೨-೭೭) : ಮಱಿಸಿಂಗನ ಬಾಲಕ್ಕೆ ಗಂಟಿಕ್ಕುವ, ಗಂಟಿಕ್ಕಿ ನಗುವ, ನಕ್ಕು ಮೊಕ್ಕಳಂ ಸಲಿಪ . . . ಜ್ಞಾನರಾಟಂ ಮಾತೆೞ್ತದು ತರವಸಕದ ಸಂತಸಗವಲನಿರ್ಮಾಡಿಯುರ್ಬಿಸಿದತ್ತು (ಣಪ್ಪಕ್ಕ· ೦೩೦-೩). [< ಮೊಕ್ಕಳ]

ಮೊಕ್ಕಾಂ ' ಮುಕ್ಕಾಂ ' ನೋ.

ಮೊಕ್ಕಾಮ ' ಮುಕ್ಕಾಂ ' ನೋ.

ಮೊಕ್ಕಾಮು ' ಮುಕ್ಕಾಂ ' ನೋ.

ಮೊಕ್ಕು$_{I}$ ' ಮೊಟ್ಟು$_{I}$ ' ನೋ.

ಮೊಕ್ಕು$_{II}$ (ನಾ). ಒಂದು ಅನುಕರಣ ಪದ : 'ಮೊಕ್ಕನೆ' ಪರಾ.

ಮೊಕ್ಕುಮೊಕ್ಕು (ದ್ವಿರುಕ್ತಿ) : ನಿಶಾತಶರಾಂಗಗಳೆಯ್ದೆ ಚಕ್ಕುಚ್ಚುನೆ ಕೊಳೆ ಮೊಕ್ಕುಮೊಕ್ಕನೆ ಶರಂಗಳುರುಕ್ಕವು ವೈರಿಭೂಪರಾ (ಪಂಪಣಾ· ೦೨-೦೦೯).

ಮೊಕ್ಕೆ ' ಮೊಕ್ಕ ' ನೋ.

ಮೊಕ್ಕ ' ಮೊಖ್ತಾ ' ನೋ.

ಮೊಕ್ತಾ ' ಮೊಖ್ತಾ ' ನೋ.

ಮೊಕ್ತೆಯಾರಿ (ನಾ). ಮತ್ತೊಬ್ಬರು ಕೊಟ್ಟ ಸಂಪೂರ್ಣಅಧಿಕಾರ ; ಪ್ರತಿನಿಧಿತ್ವ : ಪ್ರಾತಿನಿಧ್ಯ : (೫). [← ಪಾರ. ಹಿಂ. ಮುಖ್ತಾರೀ, ಮುಖ್ತಾರೀ ; ಮರಾ. ದುಮುಕ್ತಾರೀ, ದುಮುಖ್ತಾರೀ]

ಮೊಕ್ತೇಸರ್ ' ಪೊಪ್ತೇಸರ್ ' ನೋ.

ಮೊಕ್ತೇಸರಿಕೆ (ನಾ). ಮುಖ್ಯಾಧಿಕಾರಿಯ ಸ್ಥಾನ, – ಪದವಿ : ಹತ್ತು ವರುಷಗಳ ತನಕ ಈ ಮೊಕ್ತೇಸರಿಕೆಗೆ ನನ್ನ ತಮ್ಮಯ್ಯನು ಪರುಂಪ್ರತಿ ನೆರವೇರುತ್ತ ಬಂದಿತ್ತು (ಕಬಚ. ೦೯೩).

[ಮೊಕ್ತೇಸರ್ (< ಮೊಪ್ತೇಸರ್) + — ಇಕೆ]

ಮೊಖಿದ್ದಮೆ ' ಮೊಕದ್ದಮೆ ' ನೋ.

ಮೊಖಮಂಟಪ (ನಾ). ದೇವಾಲಯಗಳಲ್ಲಿ ನವರಂಗದ ಮುಂಭಾಗದಲ್ಲಿ ಇರುವ ಮಂಟಪ : ದೆವರ ಮೊಖಮಂಟಪ ತಗ್ಗಿದಲ್ಲಿ . . . ದುಗಂಮಮು ಉಂನ್ನತವಾಗಿ ಕಟಸ್ಥ ಸೆವೆ (ಕ್ಯಾಂ·೦೯೩೯, ೫೯–೫; 1753). ' ಮೊಗಮಂಟಪ ' ಪರಾ.

[P ಇದು 'ಮುಖಮಂಟಪ' ಎಂಬುದರ ಅವಲಿಪಿತರೂಪವಿರಬಹುದು]

ಮೊಖರಿ (ಗು). ೧. ಅನುರಣನಗೊಳ್ಳುವ ; ಪ್ರತಿಧ್ವನಿಸುವ. (ನಾ). ೨. (ದೇವಾಲಯದಲ್ಲಿ) ಅನುರಣನಗೊಳ್ಳುವಂತೆ ಹಾಡನ್ನು ಹಾಡುವ ವ್ಯಕ್ತಿ : ಪಾಡುವ ಮೊಖರಿಗಂ ಬೀಪಳಯುರ್ವರ್ಗಂ ಎರೆಮತ್ತ ೧೬ (ಕೌಶಾ. XX· ೩೦೦–೬ ; 1240ರು ಕಪ್ರ) ; ಆ ನಾಯಕಂಗೆ ಗ ೬ ರಂಗ ಭೋಗದ ನಾಗವಾಸದ ಮೊಖರಿಗೆ ಗ ೩೦ (ಎಕ. III, ತಿರುಪು. ೦೦೦-೩೬ ; 1278). [< ಸಂ. ಮುಖರ]

ಮೊಖರಿಗಾಳಿ (ನಾ). (ಯಾವುದಾದರೂ ಉತ್ಸವದಲ್ಲಿ) ಅನುರಣನಗೊಳ್ಳುವಂತೆ ಊದುವ ಕಹಳೆ. – **ಕೂಳಿ** : ಮೊಖರಿಗಾಳಿಯ ವಾಸಿಕಾಜು ಬಸವ ಮಾದೆಗೆಲ್ಲ ಕಸವಾಸದ ಆ[ವು]ಜಗ ಬೀಜ ಇತವಾಲ್ಲ ಇಂತಿವರು ಬಿಟ್ಟ (ಕೌಶಾ. XVIII. ೪೦೩-೩ ; 1227).

[ಮೊಖರಿ + ಕಾಳಿ (< ಕಹಳೆ)]

ಮೊಖಾಂತರ (ಅ)· ಮುಖಾಂತರ ; ಮೂಲಕ: ಬಾಲೂರ ವೀರ್ಕೆಯಗೌಜರ ಹೊಕಣದ ದೇವ ಪ್ರ ××× ಮೊಖಾಂತರ ಆತನ ಬಮಸೆ ಸನ್ಮಧಾನದಲು ಕರಿಸಿ ಕೇಳಿದ್ದಲ್ಲಿ (ಎಕ· VIII, ೩೩೮· ೩೩–೦೩ ; 1629). [< ಮುಖಾಂತರ]

ಮೊಖಾಬಿಲೆ ' ಮೊಕಾಬಿಲೆ ' ನೋ.

ಮೊಖಾಮು ' ಮುಕ್ಕಾಂ ' ನೋ.

ಮೊಖಾಸ, ಮುಖಾಸಿ, ಮುಖಾಸೆ, ಮೊಖಾಸಿ (ನಾ). ೧. ತಾನು ಮಾಡಿದ ಸೇವೆಗೆ ಪ್ರತಿಯಾಗಿ ರಾಜನಿಂದ ಪಡೆದ ಭೂಮಿ, ಗ್ರಾಮ ಇತ್ಯಾದಿ ; ಉಂಬಳಿ ; ಕೊಡುಗೆ : ಜಂತಗೋಪಿನಾಯಕನು ಹಿರೆ ಮುರಾಳದ ಮೊಖಾಸವನ್ನು ಹೋದಿದ್ದನು (ಕ್ಯಾಂ· ೦೯೩೦, ೨೨ ; ೧)· ೨. ಜೀಥಾಯಿಯಲ್ಲಿ ರಾಜನ ಪಾಲನ್ನು ಕೊಟ್ಟ ಮೇಲೆ ಉಳಿದ ಹಣ. **ಮುಖಾಸಿ** : ೧· ಮೊಣದ ಹೋಬೇಸೀಮೆ ವಿಚಾರದ ಬಾವಡಿವಳಿತದ ತುರುಪೆಕೆರೆಸ್ಥಳದ ಮುಖಾಸಿ ಜಕ್ಕ ಡೋಂಕಿ ಹಳಗ್ರಾಮಕರ ೧ ಆಣ ೧ (ಎಕ· XIV. ಹಂಜಿ· ೨೯೯-೦೦ : 1761) ; ತಳಕಾಡು ನಂಜರಾಜಯ್ಯನು ಪೂರ್ವದಲ್ಲಿ ವಿಠ್ಠನಿಗೆ ಮುಖಾಸಿಯಾಗಿ ಕೊಟ್ಟಿದ್ದ ಮದ್ದೂರು (ಚಾಶಾಸಂ. I· ೫೦). **ಮುಖಾಸೆ** : ೧. ಶ್ರೀವೀರಪ್ರತಾಪ ಕೃಷ್ಣರಾಯ ಮಹಾರಾಯರು ನಮಗೆ ಮುಖಾಸೆ ಕುದುರೆಗೆ ಪಾಲಿಳ್ದ ಯಳದೆಯ ಗ್ರಾಮವುದಲು ಬಂದಂಥಾ ಬ್ಯಾ(ಂ)ಹ್ಮರಿಗೆ ದಿನವೊಂದಕ್ಕಂ ಹನ್ನೆರಡು[ವಂ]ದಿ ಬ್ಯಾ(ಂ)ಹ್ಮರಿಗೆ ಅ(ಂ)ನ್ನದಾನ ತಿಂಗಳುವೊಂದಕ್ಕೆ ಫಟ್ಟಿ ವರಹ ಗ ೩ ರ ಲೆವಿದಲು . . . ಧಾರೆಯನೆರದು ಕೊಟ್ಟಿಳಾ (ಸೌಶಾ. IX–II. ೩೫೯–೬ ; 1630). **ಮೊಖಾಸಿ** : ೧. ಭದ್ರಾವತಿಯ ಹಳೆಮೊಖಾಸಿಯ ಆ ಗ್ರಾಮದ ಪಕ್ಕಲುದುಕ್ಕಳ ಕೈಯ ದಂಡವ ಕೊಂಡ ಸಂಮ[ಂ]ಧ ಯುಲ್ಲಾ ಬಿಟ್ಟು ಪೋಗಿ ಊರು ಪಳಾಗಿಯಿರಲಾಗಿ (ಸೌಶಾ· XVIII. ೪೩೨–೪ ; 1643). ೩. ಉಂಬಳಿಯನ್ನು ಪಡೆದವನು ; ಇನಾಂದಾರ : ಆ ಗ್ರಾಮದ ಮೊಖಾಸಿಗಳು (ಇಪ· ೦೯೩೭· ಇತಪಕ್ಕೂ· ೨೪೦ ; ೨) : ಕೂಸನೂರ ಮೊಖಾಸಿ ಕೊಂಡಪ್ಪ (ಇಪ· ೦೯೩೭· ಇತಪಕ್ಕೂ· ೨೪೦-೩ ; ೨).

[← ಅರ. ಮುಕಾನಾ ; ಮರಾ. ಮೊಕಾಸ್, ಮೊಕಾಸಾ· ಮೊಕಾಶೀ, ಮೊಕಾಸೀ]

ಮೊಖಾಸಿ ' ಮೊಖಾಸ ' ನೋ.

ಮೊಖಾಳ ' ಮಕಾಳ ' ನೋ.

ಮೊಖೂಫು ' ಮೋಕೂಫ್ ' ನೋ.

ಮೊಖ್ತಾ ' ಮೊದ್ತಾ ' ನೋ.

ಮೊಖ್ತಾ, ಮೊಕತ, ಮೊಕ್ತ, ಮೊಕ್ತಾ, ಮೊಖ್ತಿ (ಅ). ವಿದುರಿನಲ್ಲಿ ; ಸನ್ನಿಧಿಯಲ್ಲಿ ; ಸಮಕ್ಷಮವಾಗಿ : ದರಶನಾ ತೆಗೆದುಕೊಂಡು ಖಾವಂದರು ಅಚ್ಚ ಮಾಡಿದ್ದು ಮೊಖ್ತಾ ವಿನಂತಿ ಮಾಡುತ್ತೆ (ಕಬಚ· ೩-೦); ಪಂಚಾಯಿತರ ಮೊಖ್ತಾ ದುಹದುರು ಮಾಡಿಸಿ (ಕ್ರಾಶಾಕ· ೩೭) ; ನಮ್ಮ ಯುಜಮಾನರೂ ದಿವಾನ್ ಸಾಹೇಬರನ್ನು ಮೊಖ್ತಾ ಕಂಡು ಹೇಳಿಕೊಂಡರು (ಇಪದು· ೩೦). **ಮೊಕತ** : ಮೊಕಶ ಶಕ್ತಿಯ ಪರಿಯ ತೋರುವುದೀಗ (ಇಪಣಾ· ೦೨-೨೦). **ಮೊಕ್ತ** : ನಮ್ಮ ಮೊಕ್ತ ನೀನು ಬನ್ದು ನಮ್ಮ ಸ್ವಳದಲ್ಲಿ ಅಜಿಕಮಾಡಿಕೊಂಡು (ಎಕ· XI· ಹಿಂಹೂ· ೩೭-೦೯; 1533 ಸ್ವ). **ಮೊಕ್ತಾ** : ಅವರ ತಂದೆ ಎಷ್ಟೋ ಸಲ ಲಿಖಿತ ಮೂಲಕವಾಗಿಯೂ ಮತ್ತು ಮೊಕ್ತಾ ಮಾನ್ಗೆ ವಾಮು ಕರಕೊಂಡು ಹೋಗಬೇಕೆಂದು ಪ್ರಾರ್ಥನೆ ಮಾಡಿದಾಗ್ಯೂ ನೀವು ಎಲ್ಲಿವನ್ನೂ ನಿರಾಕರಿಸಿದ್ದೂ ಸರಿಯಷ್ಟೆ ? (ಪಣಂಗಿ· ೦೯೩) ; ತಾನೇ ಮೊಕ್ತಾ ಕಂಡು ಮಾತನಾಡಿಯೂ ಹಣ್ಣು ವಿಶ್ವಯವಡಿಸಿಕೊಂಡು . . . ಕುರುಡುಮಗ್ಗಿಗೆ ಮದುವೆಮಾಡಿದನು (ಕಾಪುಂ· IV· ೨೨). **ಮೊಖ್ತಿ** : ಏನಿದ್ದರೂ ಆಂಗ್ಲೇಯದಲ್ಲಿ ಮೊಖ್ತಿ ಹೇಳಬಹುದಿ (ಇಪಣಾಪ· ೦೦೩).

[< ಸಂ. ಮುಖತಸ್·/ತಾಳ. ಮೊಕತಾ]

ಮೊಖ್ತಿಯಾರ್, ಮುಖ್ತಾರ್, ಮೊಖ್ತಾರ (ನಾ)· (ನ್ಯಾಯ ಸಂಬಂಧವಾದ ವ್ಯವಹಾರಗಳಲ್ಲಿ) ಮತ್ತೊಬ್ಬನಿಗಾಗಿ ಕಾರ್ಯ ನಿರ್ವಹಿಸಲು ನೇಮಕನಾದ ಅಧಿಕಾರಿ ; ಪ್ರತಿನಿಧಿ : ದಂಡಾಧ್ಯಕ್ಷ ಅವರ ಕೈಸೇರುವ ತನಕ ಭೀಟಿಯು ಪರವಾನಿಗೆ ಮೊಖ್ತಿಯಾರ್ ಸಂಪೂರ್ಣ ಜವಾಬ್ದಾರನೆಂದೂ ದೊಮಾರಿಕ ಸ್ಪಷ್ಟಪಡಿಸಿದನು (ಕೃಪಚ. ೦೫೬). **ಮುಖ್ತಾರ್** : (Attorney· ಜಾಂಒ. ೭). **ಮೊಖ್ತಾರ** : ಮೊಗಲ ಚಕ್ರವರ್ತಿಗಳು . . . ಆ ಬಗ್ಗೆ ಮೊಖ್ತಾರರನ್ನು ನಿಯಮಿಸಿದ್ದರು (ಟಿಂದುತ. ೨೯೦). [← ಅರ. ಮುಖ್ತಾರ್; ಹಿಂ. ಮುಖ್ತಾರ್, ಮುಖ್ತಾರ್; ಮರಾ. ಮುಖ್ತಿಯಾರ್, ಮುಖ್ತಾರ್, ಮುಖ್ತಾರ್]

ಮೊಖ್ತಿಯಾರ್‌ನಾಮೆ, ಮುಖ್ತಾರ್‌ನಾಮೆ, ಮೊಖ್ತಾರ್‌ನಾಮೆ (ನಾ)· ಮತ್ತೊಬ್ಬನಿಗಾಗಿ ಕೆಲಸ ನಿರ್ವಹಿಸಲು ಕೊಟ್ಟ ಅಧಿಕಾರ; ವಕಾಲತ್ತು: (ಹೈಗಸ. IV. ೩೭೯)· **ಮುಖ್ತಾರ್‌ನಾಮೆ** : (power of attorney· ಜಾಂಒ. ೭). **ಮೊಖ್ತಾರ್‌ನಾಮೆ**: (Letter of administration. ಜಾಂಒ. ೪)· [←ಅರ. ಪಾರ. ಮುಖ್ತಾರ್‌ನಾಮಹ್; ಹಿಂ. ಮುಖ್ತಾರ್‌ನಾಮಾ ; ಮರಾ. ಮುಖ್ತಾರ್‌ನಾಮಾ]

ಮೊಖ್ತೇಸರ್, ಮುಕ್ತೇಸರ, ಮೊಕ್ತೇಸರ್, ಮೊಖ್ತೇಸರ (ನಾ)· ಮುಖ್ಯಾಧಿಕಾರಿ ; ಪ್ರಧಾನ ಅಧಿಕಾರಿ : ವಿದ್ಯಾಧ್ಯಾಪನ ಇಲಾಖೆಯ ಮೊಖ್ತೇಸರ್ ಅಧಿಕಾರಿಗಳಾಗಿದ್ದ . . . ಎಂ. ಶಾಮರಾವ್ ಎಂ. ಎ. ಯಜಮಾನಿಗೆ ನಸ್ಯ ಕೃತಜ್ಞತೆಯನ್ನು ಇಲ್ಲಿ ನಮೂದಿಸದೆ ಬಿಟ್ಟಲ್ಲಿ (ಜಕ್ರಜ್ಞ: ೬ ೨೮೪೪). **ಮುಕ್ತೇಸರ** : ಆಡಳಿತೆಯನ್ನು ಸರ್ಕಾರ ವಹಿಸಿಕೊಂಡು ೧೪೩೦ರ ವರೆಗೆ ಇವರನ್ನೇ ಆಡಳಿತೆ ಮುಕ್ತೇಸರರನ್ನಾಗಿ (Trustee) ಮಾಡಿತ್ತು (ಕುಇಜಾ· ೦೦೭). **ಮೊಕ್ತೇಸರ್**: 'ಮೊಕ್ತೇಸರಿಕೆ' ಪರಾ· **ಮೊಖ್ತೇಸರ**: ಗೂಳಿಯು ಸರ್ ಮೊಖ್ತೇಸರನ ಹಾಗೆ ಅರಮನೆಯಲ್ಲಿ ಎಲ್ಲಿ ಬೇಕಾದರೂ ಅಲೆದುಕೊಂಡಿರಲಿ ಎಂದು ಅರಸನು ಬಿಟ್ಟಿದ್ದನು (ಕಚಾಗಂಕ· ೩೬); ಕೋರ್ಟಿನಲ್ಲಿ ಮೊಖ್ತೇಸರರಾಗಿದ್ದ ಸೋಮೇಶ್ವರಜಮ್ಮರ್ ಮಾಧವರಾಯ, ಜವರೇಗೌಡರು ಇಬ್ಬರಿಗೂ ಬೇಕಾದವನಾಗಿದ್ದ (ಗೃಹಂ. ೨೨೬).

[←ಅರ. ಪಾರ. ಹಿಂ. ಮೊಖ್ತೇಸರ್]

ಮೊಖ್ತೇಸರ ' ಮೊಖ್ತೇಸರ್ ' ನೋ·

ಮೊಖ್ತಾರ್‌ನಾಮೆ ' ಮೊಖ್ತಿಯಾರ್‌ನಾಮ ' ನೋ·

ಮೊಖ್ತಾರ ' ಮೊಖ್ತಿಯಾರ್ ' ನೋ·

ಮೊಗ, ಮಕ· ಮುಕ· ಮೊಕ (ನಾ)· ೧. ಮುಖ ; ಮೋರೆ : "ವದನ ವಾಸನವಾಸ್ಯಂ . . . ವಕ್ತ್ರಂ ಮೊಗಕ್ಕೆ ನಾಮಂ" (ಕಸ್ತೂರಿ· ೬೯-೦೩); ಮೊಗಮಿದಂಬಡಿಜಡಲರು . . . ಎನೆ ಸುಯುಕ್ತರೂಪಕಮಕ್ಕುಂ (ಕಬಾ· ೩-೨೩) ; ಮೊಗಮಂ ತಾವರೆ ಕಣ್ಣನುತ್ಪಲದಳಂ ಧಮ್ಮಿಲ್ಲಮಂ ನೋಗೆ . . . ಅರಾಧಿಸಿ ಪೋಲ್ತುವ (೦೦೪ಪ· ೩-೦೩); ಯಮರಾಜನ ಕುವಾರನ ಮೊಗವ ನೋಡಿದನು (ಕುಬಾ.ಕ್ರೀ.ಗ· ೪-೦೭). ೨. ಬಾಯಿ: ಮೊಗದೊಳ್ ಪಾಗ್ದಳು ಸಂತಸಮಾಗಲದೆ ನಿಲೆ . . . ಕಮಮಜ್ಜುಗ ಮೆಂತುಟೋ ಮೇಘಚಂಪ್ರಮಾನಿವ್ವಗವರಾ (೩ಕಬ. ೦-೨೦) ; ತನ್ನ ಮೊಗದೊಳೊಂಕ್ಕರಮಂ ಪೊಱಮಡಿಸಲಱಯದಜಿತಮನಱಿಯದರೊಳ್ ಮೆಱಿವ ಸಾಸಿಗಗಿದಿರುಂಟೇ (೩೮೪ಕ· ೦-೩೩); ವಿಪಾನಂಗಳ ಪೀರಣ ಪ್ಪೋಲ್ತುದು ತೆಜಿದ ಮೊಗದ ಪೇಟ್ಗಿಗಳರವಂ (೩೦೬೨ಕ· ೬-೩೯). ೩. ದಿಕ್ಕು: ದೆಸೆ : ಪಡುವಮೊಗವಾಗಿ ರೋಮಂ ಗಡ ತಲೆಯಂ ಪೆಕ್ಕಲೊಡನೆ ಸಿಯುಂ ಪೋದಂತೊಡನಾರು ನುಡಿಪರುಮಿಲ್ಲ (೩ಮಪ· ೦೩೨೦೦· ೬೩೦೩-೨೬): . ಶುಭದಿನದೊಳ್ಪೊಱಮಟ್ಟು ಪಡುವಮೊಗದೆ ಪಯಣಂಬೋಗಿ (೨೦೩೦· ೭-೩ ೫): ಎನಗಾವ ಮೊಗಮೊ! ಸುಡು ಸೀತೆಯಿಲ್ಲದೀ ನಾಡಂ! (೧೩೦೩೫· ೪೩-೦೨). ೪. ಎದುರು ; ಸಮ್ಮುಖ : ಆವರ್ಮೆರಾಮೆನ್ನ ಮೊಗದೊಳ್ ನಿಲ್ಲದೆ ಪೋದೊಡೆ (೩೦೪೦೫· ೦೪). ೫. (ಆಲಂ) (ಮುಖವನ್ನು ತೋರಿಸುವ) ಧೈರ್ಯ; ಆತ್ಮವಿಶ್ವಾಸ : ಅಂಧನರೇಂದ್ರನ ಮೊಗಮಂ ಗಾಂಧಾರಿಯ ಮೊಗಮನಾವ ಮೊಗದೊಳೆ ನೋಟ್ಪಂ (೧೭೦೩ು. ೬-೭೦); ಆಗಳವರ್ ತಾಯ ಮೊಗಮನಾವ ಮೊಗದೊಳು ನೋಡುವಮೆಂದು ನಾಣ್ಚಿ (೩೪೪ಪ. ೨-೪೨ ಪ)· ೬. ಮೊದಲು; ಆರಂಭ: 'ಮೊಗಗಳ್ಳಲೆ' ಪರಾ· ೭. ಮುಂಭಾಗ; ಅಗ್ರಭಾಗ: 'ಮೊಗ ಸೂನಿಗೆ' ಪರಾ· **ಮಕ** : ೧. ನಾಯಿಲ್ಲಿ ಮೂತಾಡಿಸ್ಕೀನಿ· ಆಲ್ಲಿ ನೀವು ಒಬ್ಬರೊಬ್ಬರ ಮಕ ನೋಡ್ತಾ ನಿಂತೀರಲ್ಲ? (೩೪೪ಕ· ೬): ನಿಮ್ಮ ಮಕಾ ನೋಡಿದರ ಏನೋ ಚಿಂತಿ ಹಿಡಿದ್ಹಂಗ ಕಾಣತೈತಿ (೧೨೬೩ಪ· ೦೩೦). **ಮುಕ** : ೧. ಖಕಾರಕ್ಕೆ ಕಕಾರಂ . . . ಮುಖ-ಮುಕ· ಶಬಿ-ಸಂಕ (೩೪ಪ· ೨೫೫ ಪ್ರಥೋ); ಯಾಕ ಗೌರಿ· ಬೆಳ್ಳಗಿಂದ ಮುಕ ಗಡಿಗೆಗಾತ್ರ ಮಾಡ್ಕೊಂಡು ಕುಂತಿದೀಯ? (೩೦೨೬· ೧೦). ೭. 'ಕಾಪರ್ಮುಕ್' ಪರಾ· **ಮೊಕ** : ೧. ನಾವು ಟೀಪುಸುಲ್ತಾನ್ನಿಂದ ಸ್ನೇಹದ ಮೊಕ ತಿರಿಗಿ ಇಂಗ್ಲೇಜ್‌ಸರಕಾರದ ದೋಸ್ತಿ ಪುಡಗಿ (೧೩೬೦ದ್ರ· ೮೪); ಮೊಕಾ ನೋಡಿ ಮಗೇ ಹಾಕುತ್ತಾರೆ (೩೦೪೬· ೦೪೩); ಕೆಂಪಿ ಬಂದು ಮೊಕ ನೋಡಿದಳು (೩೪೪· ೦೨)· ೩. ಆಲ್ಲಿ ಮೂಡಣ ಮೊಕಂದಿಳಿದು ಬರಲು' (೭೪· XII. ೪೪ಪ್ರಾ· ೪೨-೬೭; ೧೨೩೬)·

-ಮುಕಾಡಿ, ಮುಕಾಡೆ, ಮಖಾಡೆ = ಮುಖಕೆಳಗಾಗಿ ; ಬೋರಲಾಗಿ: ಮಗು ಮುಕಾಡಿ ಬಿತ್ತು (೭೩೫); ಮಂಚದ ಹಾಸಿಗೆ ಹಂಚ್ಯಾಡಿ ಹೋಗಿತ್ತು ಮೈಜಾಚಿ· ಮಕಾಡೆ ಮಲಗ್ಯಾಳೆ (೧೨೬೫· ೨); ಅವನ ಮುತ್ತಾತ . . . ಪೂತಿಟ್ಟ ಗೊಂಬೆಗಳು 'ಥ್ಕಳ್ಳೆ' ಎಂದು ಕುಣಮುವುದನ್ನು ನೋಡಿ ಅವನ್ನು ಎಕ್ಕಡದ ಕಾಲಿಸಲ್ಲಿ ಒದ್ದು ಮಕಾಡೆ ಮಾಡಿ ಬರೋಸಂತೆ (೩೫೩೬ು· ೦೬೭); ಪಟ್ಟಮಂಚದ ಮೇಲೆ ಮಖಾಡೆ ಮಲಗ್ಯಾಳೆ (೧೩೬೮· ೦೬೭). -ಮುಖಾಡೆಯಾಗಿ, ಮುಖಾಡಿಯಾಗಿ, ಮೊಕಾಡೆಯಾಗಿ, ಮೊಕ್ಕಡಿಯಾಗಿ = ಮುಖಕೆಳಗಾಗಿ; ಬೋರಲಾಗಿ: ಮುದುಕನು ಪುನಃ . . . ಕಣ್ಣು ಮುಚ್ಚಿಕೊಂಡು ಮಖಾಡೆಯಾಗಿ ಮಲಗಿಬಿಟ್ಟನು (೩೬೪೪· ೦೦೩); ಈ ಶಂಕೆಯಿಂದ ಆರ್ಧಕುಳಿತಿದ್ದ ನಾನು ಹಾಗೇ ಮುಖಾಡಿಯಾಗಿ ಕೆಳಕ್ಕೆ ಮಲಗಿದೆ (೩೦೩· ೦೩೬); ಮೊಕಾಡೆಯಾಗಿ ಬಿದ್ದರೂ ಮಿಸೆ ಮಣ್ಣಾಗಲಿಲ್ಲ ಅಂದನಂತೆ (೧೭೮); ಚಿಂತಾಕಾಲನಾಗಿ ಮಂಚದ ಮೇಲೆ ಮೊಕ್ಕಡೆಯಾಗಿ ಮಲಗಲು (೩೪೪· ೬೬). **ಮೊಕ ಕಟ್ಟಿಕೊಳ್ಳು** = ವಿರೋಧ ಕಟ್ಟಿಕೊಳ್ಳು; ಮುಖ ಕೆಡಿಸಿಕೊಳ್ಳು: ನಿನ್ನಂತವರ ಸಂಗಡ 'ಮೊಕ ಕಟ್ಟಿಕೊಂಡೆ' (೩೪೪ು· ೦೬೦)·**ಮೊಗಮಾಡು** = ಎದುರಿಗೆ ನಿಲ್ಲುವಂತೆ ಮಾಡು: ಎದುರಾಗಿಸು: ತೆಗೆದು ಹಿಮ್ಮೆಟ್ಟುವ ಬಲವ ನಿಲಿಸಿಕೊಂಡು ಮೊಗಮಾಡಿ ಮತ್ತೆ ಮೋಹರವ ಧಿಗಿಲನೆ ಬಂದದ್ದಲಾವನು (೩೪೪೩೦· ೦೬-೧೨)· [<ಸಂ. ಮುಖ./ ತಮಿ. ಮುಕ, ಮೊಕ್ಕೈ; ಮಲ. ಮುಕ; ತುಳು. ಮೊಗ, ಮುಂಗನು; ತೆಲು. ಮೊಗ್; ಕೋಲಾ. ನಾಯ್ಕಿ. ಮೊಕಮ್; ಪರ್ಜಿ. ಮೊಕೊಮ್]

ಮೊಗಂ 'ಮೋಳ್ಗೆಮ್' ನೋ·

ಮೊಗಂಗಿಡಿಸು, ಮೊಗಗೆಡಿಸು (ಕ್ರಿ)· ೧. (ಆಲಂ) ಅವಮಾನಮಾಡು: ಪಡಿದಬವಾಂತು ಬಂದ ಸಿಂಗಳರಾಯನಂ ಮೊಗಂಗಿಡಿಸಿ ಜಸಂ ಬೆಸಂಬಡೆಯು ಬಲ್ಲಿಗನೀ ಪರಿ ಚಲ್ಲವಾಡಿದಂ (೩೪೪· ೨-೬೬)· **ಮೊಗಗೆಡಿಸು**: ೧. ಲೋಕದಲ್ಲಿ ಗುಣವಂತರ್ಗೆ ಯಾವನಾನೊರ್ವಂ ತಪ್ಪದೊಡೆ ಮೊಗಗೆಡಿಸುವುದು ಧರ್ಮವೇ (೩೮೪೪· ೦೦-೪೪). ೨. ದಿಕ್ಕೆಡುವಂತೆ ಮಾಡು; ದಿಗ್ಭ್ರಮೆಗೊಳಿಸು : ಕರಿತುರಗ ಕಾಲಾಳ ಮೋಹರ ಮೊಗಗೆಡಿಸೆ ಲೋಕವನು (೩೪೪೩೦· ೮೭-೦೦೬); ಸರಸಿಜೋದ್ಭವನ ಮೊಗಗೆಡಿಸಿ ಮಿಜಿಂದಳು (೩೪೪೫· ೦೬೩೮). [ಮೊಗ + ಕೆಡಿಸು (< ಕೆಡಿಸ್ನು)]

ಮೊಗಂಗಿಡು (ಕ್ರಿ). ೧. ಮುಖವು ವಿಕಾರವಾಗು: ಮುಖವು ಬಾಡು ೨. (ಅಲಂ) ಆಹಾರ ಮುಂತಾದವುಗಳ ಅತಿಸೇವನೆಯಿಂದ ಅಸಹ್ಯಪಡು: ಬರಿದೊಂದು ಮುಗುಳ ಕಂಪ್ಗುಸೊಳೆ ಮೊಗಂಗಿಡಂವುನ್ ತುಂಬಿಗಳ್ (ಹಂಪಣಾ. ೦-೩೬). [ಮೊಗ + ಕಿಡು (< ಕೆಡು₁)]

ಮೊಗಂಗುಡು 'ಮೊಗಂಗೊಡು' ನೋ.

ಮೊಗಂಗೊಡು, ಮೊಗಗುಡು, ಮೊಗಗುಡು, ಮೊಗಗೊಡು (ಕ್ರಿ). ಮುಖವನ್ನು ತೋರಿಸು: ಎದುರಾಗು: ಹೊರಗಾಣದಿಹ ಸೇಹಗಲ ಪದ ಮೊಗಂಗೊಡದ ಗಿರಿಸುತಿಮು ಬೇಗಡಿಗೆ ಸೊಪ್ಪಳಾಗದ ತೆಲೊಳೆರದೆ ಬಳಿಸಂದು (ಹಂಪ. ೭೫-೦). **ಮೊಗಂಗುಡು**: ನುಡಿಯದೆ ಕಮ್ಮನಿರ್ದ ಪಿದಾವುದು ಕಾರಣಮಾವುದೀ ಮೊಗಂಗುಡದಿರವು (ಹಂಪಣಾ. ೪-೭೬); ಎಡೆಗುಡೆ ಸಾರ್ದು . . . ತಾಂ ಮೊಗಂಗುಡೆ ಪದವೆತ್ತು ಜುಂಪಿಸಿ (ಹಂಕ್ರಿಶ್ರ. ೬-೮೨). **ಮೊಗಗುಡು**: ಬೊವ್ಮರಸ :— (ಮೊಗಗುಡದೆ) ಇರಬೇಕು. ಇರಬೇಕು . . . ವನಗೆ ಸರಿಯಾಗಿ ಪೆಸಪಿಲ್ಲ (ಪಟ್ಟಿ. ೦೩-೯). **ಮೊಗಗೊಡು**: ತವಕದನುವಜಿಂದಪ್ಪಿ ಮೊಗಗೊಡೆ ಪಣಜಿಂದು ಜುಂದಿಸುತೆ ಇಂದುಟ ಸುಧೆಯಂಸೊಸೆದೀಂಟೆ (ಜೈಕ್ಷಣಾ. ೨-೦೦).

[ಮೊಗ + ಕೊಡು₁]

ಮೊಗಂಚಿತ (ನಾ). ಮುಖದಲ್ಲಿರುವುದು: ಪಂಚಲುವನವಂಚಸಂಜಾತ್ಷನಗಳೆ ಮೊಗಂಚಿತಮಾಗಿರಲಪಳೆ ನಾಂ ಚೆಲ್ವ ಕಾಣ್ಕೆಯಂದುಂ ಚಮೂಪನ ಶಿರಕಾಂತಿಗಂ ಪಣಿಮಜ್ಪೆನೆಂದು (ಕೃಪಪ. ೦-೨೬೨).

[< ಸಂ. ಮುಖಾಂಚಿತ]

ಮೊಗಂದಿರಿ (ಕ್ರಿ). ಮುಖವನ್ನು ತಿರುಗಿಸು; ವಿಮುಖವಾಗು: ಉಟ್ಟಿದರಸುಮಕ್ಕಳೆಲ್ಲಂ ಕರ್ಣ ಶಲ್ಯರ್ ಮೊಗಂದಿರಿದುದಂ ಕಂಡು ವನಂಗೆಟ್ಟು (ಪಂಪಣಾ. ೬-೭೦ ಪ); ಮಾರ್ಮಲೆದಿಸಲ್ಕೆ ಮೊಗಂದಿರಿದಂದವಂದಿರುಂ ತುಜುಗಿರೆ ದೆನ್ನೊಳಬುಗಳುಪಾಂಬನೆ ಕಾಜುತುಮೋಡೆ ಭೀತಿಯು (ಪಪಾಪು. ೦೨-೨೭೦). [ಮೊಗ + ತಿರಿ₁]

ಮೊಗಂದಿರಿಪು, ಮೊಗಂದಿರುಪ್ಪೆ, ಮೊಗಂದಿರುವೆ, ಮೊಗಂದಿರುಮು, ಮೊಗದಿರುಮು (ಕ್ರಿ). ೧. = ಮೊಗಂದಿರಿ: ಅಂತತಿನೆಪಿತಕಿಕೋರ ಕೇಸರಿಯಂತೆ ಪರಾಕ್ರಮೈಕಸಾಮನಾಗಿ ಮದಾಂಧಗಂಧಸಿಂಧುರ ಘಟೆಯುಂ ಮೃಗಣ ನಿಷಾದಿಯೋಧಾಗ್ರಗಣ್ಯರುಮಂ ಮೊಗಂದಿರದೆ ಮೊಗಂದಿರಿಸು [ಪ್ಪುವ ಬೆಸದೊಳ್ ತೊಡರ್ದು (ಜೈಂಪು. ೪-೨೦ ಪ); ಬಲ್ಮಗೆಯುಂ ಕಂಡಂತೆ ಮೊಗಂದಿರಿಪುತ್ತುಂ (ಶಪಾಕ್ಕು. ೪-೭೬). **ಮೊಗಂದಿರುಪು**: ೧. ಜವನಧಿಕಾರಂ ಪಿಬ್ಬುವ ಜವಕ ಮೊಗಂದಿರುಪೆ ಕೊಲ್ವ ಮೆದಿರಿ ನೆಲಸಿತ್ರವನೋದು ಗದೆಯೊಳೆಸಲ್ (ಜಾಪ, ೪-೫೫). **ಮೊಗಂದಿರುವು**: ೧. ಸಂಪಗೆಯು ಕಂಪಿಗೆ ಕಂಪಿಸಿ ಮಲ್ಲಬೆಗೊಂಡೊಲ್ಲದೆ ಮೊಗಂದಿರುವಿ ಪರಿತಂದು ಸಾದರದಿಂ ಪೂದೋಂಟಪ ಪ್ರಸೂನಕುಲ ಮನಂದಲೆದು ಬಂಡುಣ್ಬಪ್ಪೆ (ಗಂಗ. ೩-೭೦ ಪ). **ಮೊಗಂದಿರುಹು**: ೨. ಮುಖವನ್ನು ಹೊರಳಿಸು: ಅಭಿಮುಖವಾಗು: ರಾಜಕಾರ್ಯಮಂ ಮೆಪೇಳ್ದುದನಂತೆ ಭೀಪನ ಕಡೆಗೆ ಮೊಗಂದಿರುಹಿವರಸಂಗೆ ನಳಿನಾಕ್ಷಿ ನಿಂತೆಂದನು (ಭೈಅಣಾ. ೩-೩೩). **ಮೊಗದಿರುಹು**: ೧. ಪುಳಿಗೆ ಮೊಗದಿರುಹುವುದೆ ಬದಪಾನಳನು (ಋಷ್ಯಾಶ್ರೃ. ೩-೩೩); ಹೋದಿಕೆಯು ಹೊಲಬಲ್ಲವೀ ನುಡಿಯೆಂದು ಸತಿ ಮೊಗದಿರುಹಲೊಡನಿಂತೆಂದನಾ ಹನುಮಂತ (ತೊಡಣಾ. ೩-೬-೭೬). [ಮೊಗ + ತಿರಿಪ್ಪೆ]

ಮೊಗಂದಿರುಪು 'ಮೊಗಂದಿರಿಪು' ನೋ.

ಮೊಗಂದಿರುವು 'ಮೊಗಂದಿರಿಪು' ನೋ.

ಮೊಗಂದಿರುಹು 'ಮೊಗಂದಿರಿಪು' ನೋ.

ಮೊಗಂದೋಱು, ಮೊಗದೋರು, ಮೊಗದೋಱು₁ (ಕ್ರಿ). ಮುಖವನ್ನು ತೋರಿಸು: ಕಾಣಿಸಿಕೊಳ್ಳು; ಗೋಚರಿಸು; ಪ್ರತ್ಯಕ್ಷವಾಗು: ಎನಸ್ಸಂತಾನವೆಂಟುಂ ಕಿಡೆ ನಿಜಗುಣವೆಂಟುಂ ಮೊಗಂದೋಱೆ (ಹಂಪಣಾ. ೦-೨) ; ಶರತ್ಕಾಲಮತಿಕ್ರಮಿಸಿ ಮೇಲೆತ್ತಿ ಬಂದು ದೊಗಂದೋಱೆ ವರ್ಷಾಕಾಲಮಂ ಪರಾಯನವನೆಯ್ದಿಸುವುದುಂ (ಶಾಪಕ್ಕ. ೪-೬೪ ಪ). **ಮೊಗದೋರು**: ಬಾಲಭಾಸ್ಕರನು ಮೊಗದೋರೆ ಪರಿಸಿದ ಮರಳ್ದುಮಾನಂದಿಪಂತೆ (ಪಪಪುಚೀ. ೦೩-೨೨); ಆಗ ಹೋದವ ತಿರುಗಿ ಈಗ ಮೊಗದೋರಿಪನು (ಏಸೀಗಾ. ೨೬-೦೩); ಪತ್ತೂರ ಕೊಡತಿನಿ ಮೊಗ ದೋರು. (ಕೋಗಾಗೀ. ೩೩೦). **ಮೊಗದೋಱು₁**: ಬಾ ಮಗನೆ ಮೊಗದೋಱಿಸುತ ಹಲುಬಿದನು ಕಲಿಪಾರ್ಥ (ಭಾಪಾ.ರಿಶ್ರೀ. ೮ ೫೫೫೫); ಕಾನನದೊಳಗೆ ನಂಬಿದ ನಾರಿಯನು ಬಿಸುಡುವರೆ ತನಗಿನ್ನಾರು ಗತಿ ಮೊಗದೋಱಿಸುತ ಹಲುಬಿದಳು (ಪಪಪ. ೫-೨೨). [ಮೊಗ + ತೋಱು]

ಮೊಗಂನೋಡು (ಕ್ರಿ). (ಪಸ್ತುವಿನ ಬೆಲೆ ಇತ್ಯಾದಿಗಳ ಕಡೆ) ಗಮನಿಸು: ಲಕ್ಷಿಸು: ಬ್ಯಾವಣ್ಣಿಗೆಯು ಜವಂಗಳನೆ ಮೊಗಂನೋಡದೆ ಸೂಸಿದಾಗಳ್ (ಆಂಪ. ೪-೭೪ ಪ). [ಮೊಗ + ನೋಡು]

ಮೊಗಂಬಡೆ (ಕ್ರಿ). ೧. ರೂಪು ತಳೆ; ಆಕಾರ ತಾಳು; ಮೂರ್ತಿವತ್ತಾಗು: ತುಂಬಿ ತುಳ್ಕುವ ಮೊಗದ ಮೊಗುಬಡದ ಸೊಬಗುಂ ಪದ್ಮ ಸದ್ಮನ ಮೊಗುಳಿಯನೆದವುತಡಂ ಮಾಡೆ (ಶಾಪಪ್ರ. ೦೩೯-೦೦). ೨. ನಯವಾದ ಮಾತುಗಳಿಂದ ಮನಸೊಲಿಸು; ಸರಸಸಲ್ಲಾಪವಾಡು; ಅನುನಯಿಸು: "ಮೊಗಂಬಡೆ—ಅನುನಯಪೇ" (ಶಪಾಕ್ಕ. ೪) ; ಕಲಭಾಷಿತಸುಧಾಜಲದಿಂ ಸರ್ವತಿಮು ಕಲಾವಲೇಪಮುಂ ಕರ್ಚ್ ಕಳೆವಂತೆ ಮೊಗಂಬಡಿಮು (ಹಂಧಪಪ. ೩-೯ ಪ). [ಮೊಗ + ಪಡೆ₁]

ಮೊಗಂಬುಗಿಸು (ಕ್ರಿ). ಮುಖಾಮುಖಿಯಾಗಿಸು: ಸಮ್ಮುಖವಾಗಿಸು: ಅಂತಾ ದಂತಿಘಟೆಗಳನಾರೋಹಕರ್ ತೋಱಿ ಕೊಟ್ಟೊಂದೊಂದರ್ಕ ಮೊಗಂಬುಗಿಸಿದಾಗಳ್ (ಹಂಪಣಾ. ೦೦-೧೩ ಪ).

[ಮೊಗಂಬುಗು (< ಮೊಗಂಬೊಗು) + ಇಸ್ಕು]

ಮೊಗಂಬುಗು 'ಮೊಗಂಬೊಗು' ನೋ.

ಮೊಗಂಬುಗುತರ್ (ಕ್ರಿ). ಮುಖಾಮುಖಿಯಾಗಿ ತಾಗು: ಎದುರಿಸು: ಅಗದೊಳಗಂ ಮೊಗಂಬುಗುವವೋಲ್ಮದಾನೆಗಳಾನೆಯೊಳ್ಕೊಗಂಬುಗುತರೆ (ಹಂಧಪಪ. ೦೪-೬೦). [ಮೊಗ + ಪುಗುತರ್ (< ಪೊಗುಶರ್)]

ಮೊಗಂಬೊಗು, ಮೊಗಂಬುಗು (ಕ್ರಿ). ೧. ಮುಖಾಮುಖಿಯಾಗಿ ಮೇಲೆ ಬೀಳು: ಮೊಗಂಬೊಕ್ಕಮ ಭೀಮಂ ದೇವ ದುಶ್ಶಾಸನರುರಿರ ಮುಮಂ ಪೀರ್ದ ತಾಣಂ (ಗಜಾಯು. ೩-೨); ಪತ್ತುವ ಲಗ್ಗೆಗೆ ಮೂರಿ ದೊಳ್ ಮೊಗಯೊಕ್ಕಪೊಲಾಗೆ ಬಿರ್ದಿವನವಂ (ಹಂಕ್ರಿಶ್ರ. ೩-೮೦). **ಮೊಗಂಬುಗು**: ೧. ದಿಗಿಭಂ ದಿಗಿಭಕ್ಕೆ ಮೊಗಂಬುಗುವಂತಿರೆ ಸಂಚಿ ವಾರದಿಂ ಧನದಿಂದಂ ಮಿಗಿಲುದ್ದಾನಿಯು ದಾನಂ (ಜಾಂಶಿ. ೦-೩೦); ಅಗದೊಳಗಂ ಮೊಗಂಬುಗುವವೋಲ್ಮದಾನೆಗಳಾನೆಯೊಳ್ಕೊಗಂಬುಗುತರೆ (ಹಂಧಪಪ. ೦೪-೬೦). ೨. ಮುಖವನ್ನು ಮುತ್ತು.—ಕವಿ: ನಗೆ ಮೊಗಮುಂ ಪೊದಳ್ದಲರ್ದ ತಾವರೆಯೆಂಬ ವಿಮೋಹದಿಂ ಮೊಗಂಬುಗ ಲೊಡಂ (ಹಂಪಣಾ. ೩-೦೦). ೩. ಎದುರಿಗೆ ಕಾಣಿಸಿಕೊಳ್ಳು: ದೆಸೆದೆಸೆ ಯೊಳಂ ತಳವೆಳಗಾಗಿ ಪರಿತಂದು ವಾನ್ಗೆ ಮೊಗಂಬುಗದೋರ್ವೊರ್ವರ ಪೆಜಗದಂಗಿ ಗೆಟಸಿಕೊಳೆ ಪೆಲ್ಲಪೆಲ್ಲುನೆಬುಗುವ ರಾಜವುತ್ರಸಹಸ್ರಂಗಳ ಮೊಗಮಂ ನೋಡಿ (ಕಾಪಣಾ. ೪೩೬). [ಮೊಗ + ಪೆಗು]

ಮೊಗಂಮುರಿ, ಮೊಗಮುರಿ (ಕ್ರಿ). ೧. (ನೋವು, ಬೇಸರ, ಜುಗುಪ್ಸೆಗಳಿಂದ) ಮುಖವನ್ನು ವಿಕಾರ ಮಾಡು: ಅಣಂ ಮೊಗಂಮುರಿಯದಕ್ಕದೆ ಬೇಸೆಗಳೊಳ್ ಮೊಗಂಗಳಂ ಬನ್ನಗೆ ಮಾಡದಿರ್ದರಳವಚ್ಚರಿಯಾಗೆ ಕೆಲರ್ ಮಹಾರಥರ್ (ಪಂಪಣಾ. ೦೦-೭) ; ಚಿಂತಿಸುತ್ತವಿಸಿವ ಮೊಗಂ

ಮುರಿದೀವ . . . ಗುಣಂ ಗುಣದಂಕಕಾರ್ತಿಯೂ (ಕಾಪ್ರ. ೦೨-೦೭); ಇಂತಪ್ಪವಮಾನಮಾಡುದೆಂದು ಮೊಗಂಮುರಿಯೆಯುಂ (ಪಗಂ. ೦೩-೭೫ ಪ); ಅವಂಗಳವನೀಕ್ಷಿಸಿದಂತೆ ಮೊಗಂಮುರಿದು ಮಾತುಂ ನಿಲ್ಲಿಸಿದರ್ (ಕ್ರಿಪಾಪು. ೨೦-೪೧೨). ೨. ಮುಖವನ್ನು ಬೇರೆಕಡೆಗೆ ತಿರುಗಿಸು; ಪರಾಙ್ಮುಖನಾಗು; ವಿಮುಖನಾಗು: ಪುರ್ಪರಾಜನೆಯನ ಪರಾಕ್ರಮಕ್ಕೊಸೆದು ಮೊಗಂಮುರಿಯದ ಪೆಜಿತುಂ ರಥ[ಮಂ ಶಿರಿ ಕೆಸ್ಲಡರ್ದು ಕದನಕಾಗಳ ನೆಜಿದಂ] (ಕಂಪಾ. ೦೦-೦೭೬). **ಮೊಗಮುರಿ** : ೨. ಸುಯೋಧನನ ಮೊಗಮುರಿಯಲೆಚ್ಚು . . . ಪಾಯ್ದನು ಮತ್ತೆ ಸೈವರಿದು (ಕುಪಾ೯. ೦೯-೨೬). [ಮೊಗ + ಮುರಿ$_1$]

ಮೊಗಂಸಾರ್ಚು (ಕ್ರಿ)· ಮುಖವನ್ನು ಹತ್ತಿರ ತರು: ಮೊಗಂಸಾರ್ಚಿ ನಾನಾರಸಂ ಈಕ್ಕೊಳಿಪನ್ನಂ ಮೂರ್ತಿನಾರಾಯಣವ್ಯಸನನಮಳ್ ಮೆಚ್ಚಿ ನೋಡುತ್ತಮಿರ್ದಳ್ (ಶಾಂಪು. ೦೩೬). [ಮೊಗ + ಸಾರ್ಚು$_1$]

ಮೊಗಗತ್ತಲೆ ' ಮೊಗಗಳ್ತಲೆ ' ನೋ.

ಮೊಗಗನ್ನಡಿ (ನಾ)· (ಆನೆ· ಕುದುರೆಗಳಿಗೆ) ಮುಖದ ಮೇಲೆ ತೊಡಿಸುವ, ಕನ್ನಡಿಗಳನ್ನು ಅಳವಡಿಸಿರುವ ಒಂದು ಬಗೆಯ ಅಲಂಕಾರ ಸಾಧನ: ಮಿಸುನಿಯ ನಿಗಳದ ಮೊಗಗನ್ನಡಿ ಕಾಣಿಸಿಸರದ ಚೆನ್ನ ಹಕ್ಕರಿಕೆ ಪೊಸಮಕಟ್ಟಿನ ಝಲ್ಲಿಗಳಿಂದ ರಾಜಿಸುವ ದಿವ್ಯಾಶ್ವವೈದಿದುವು (ಕಂಪಾ· ೨೬-೯೦). [ಮೊಗ + ಕನ್ನಡಿ$_1$]

ಮೊಗಗಳ್ತಲೆ, ಮೊಗಗತ್ತಲೆ (ನಾ)· ಕತ್ತಲೆಯ ಮೊದಲು: ರಾತ್ರಿಯ ಆರಂಭ; ಪ್ರದೋಷಸಮಯ: ಪುಗಲಾಗ್ನಿಯುದ್ದನಸ್ಯಗಿಯ ಬಂದು ಮೊಗಗಳ್ತಲೆ ಮೊಗದೋಜ್ (ಕಾಪಾ೯೦· ೭೯-೭೯). **ಮೊಗಗತ್ತಲೆ** : ಮೊಗಗತ್ತಲೆಯೊಳಿಂದುಮಿಖದಮುರಾಗ ಸೊಗಯದುದಿಂದ್ರ ದಿಕ್ಕಸೊಳು (ಕ್ರಿಪಾಪು. ೬-೦೭); ಆಮೇಲೆ ಮೊಗಗತ್ತಲೆಯೂಗಲಾಗಿ ಕಾದಂಬರಿ ಉಪ್ಪರಿಗೆಯಿಂದಿಳಿದಳು (ಕಪಾ. ೬೦).

[ಮೊಗ + ಕಳ್ತಲೆ (< ಕಲ್ತಲೆ)]

ಮೊಗಗುದು ' ಮೊಗೆಂಗೊದು ' ನೋ·

ಮೊಗಗೆಡಿಸು ' ಮೊಗಂಗಿಡಿಸು ' ನೋ·

ಮೊಗಗೊಡು ' ಮೊಗಂಗೊದು ' ನೋ·

ಮೊಗಚು ' ಮುಗುಟ್ಟು ' ನೋ·

ಮೊಗದು (ನಾ)· ಎತ್ತರವಾದ ಪ್ರದೇಶ; ದಿಣ್ಣೆ: ಊರ ಮುಂದಣ ಬಸವನ ಗುಡಿಗೆ ಮೂಡಲ ಮೊಗದಿನಲ್ಲು ಮೂಡಮುಖವಾಗಿ (ಎಕ. III. ೪೮ಮು. ೬೬-೦೦೬ : 1748). 'ಮುಗುಟ್ಟು$_2$', 'ಪೋಟೆ' ಪರಾ.

[ದೇ.ಕ ತಮಿ. ಮುಕಟು ; ಮಲ. ಮುಗಡು ; ತೆಲು. ಮೊಗದು]

ಮೊಗತುತಿ (ನಾ)· ಎದುರಿಗೇ (ಅಕಾರಣವಾಗಿ) ಹೊಗಳುವುದು: ಮುಖಸ್ತುತಿ: ಅರಸಂಗೆ ಘಸಕರಿಗೆ ಮೊಗತುತಿಯಿಂ ರಸವೆ (ಕಬಾ೨· ೦೨-೦೩); ನಿಷ್ಠುರವಾದಿ ಹೇಗೆ ಹಾನೇ ಮೊಗತುತಿ ಮಾಡುಹುದು (ಕಾಪಾಪಾ. ೭೨). [ಮೊಗ + ತುತಿ]

ಮೊಗದಿರುಹು ' ಮೊಗಂದಿರಿಪು ' ನೋ·

ಮೊಗದುಂಸಕ್ಕರೆ ' ಮಗದುಮ್ಮಿಸಕ್ಕರೆ ' ನೋ·

ಮೊಗದುಗುಲ (ನಾ). ಮುಖದ ಮೇಲಿನ ಮುಸುಕು: ಅವಗುಂಠನ: ತಣ್ಣಾರಗ ಮೊಗದುಗುಲ ಕೈಪಿಡಿ ಡವಕೆ ಬೀಸಿ . . . ಕರ್ಪೂರದ ಪಾಳಗಳ ಪಿಡಿದೊಡನೆ ನಡವರೊಲಿದು (ಕಡ್ಕಾ. ೯-೭). [ಮೊಗ + ದುಗುಲ$_1$]

ಮೊಗದುಮ್ಮಾನ (ನಾ). ಮುಖದಲ್ಲಿ ಎದ್ದು ಕಾಣುವ ಚಿಂತೆ. — ದುಗುಡ: ಏನು ಪೇಳುವೆನವರ ರಣಮುಮ್ಮಾನವನು ನಮ್ಮ ಪರ ಮೊಗದುಮ್ಮಾನವನು (ಕುಪಾ೯೦· ೦೫-೩೨). [ಮೊಗ + ದುಮ್ಮಾನ]

ಮೊಗದೆಗೆ (ಕ್ರಿ)· ಬೇರೆಯ ಕಡೆಗೆ ಮುಖವಾಡು.—ಮುಖವನ್ನು ತಿರುಗಿಸು: ಮೆನ್ನಿ ಕೊಡೆಂದು ನಮ್ಮಯ ಇಂಗಿಯಿಂದಟ್ಟುವೆದುಚಿತವಹುದು ಎಂದು ಬೊಗದೆಗೆಜಲ್ಕುವರು (ಕಾಪ್ರ· ೭೦-೦೦). [ಮೊಗ + ತೆಗೆ$_1$]

ಮೊಗದೆರೆ (ನಾ)· ಮುಖದ ಮೇಲಿನ ಮುಸುಕು; ಅವಗುಂಠನ: ಎಳೆಪೆಂಪಿನತ್ತತ್ತು ಮೊಗದರೆಯ ಕೀಳ್ದರ್ (ಪಾಪ. ೨೦-೭). [ಮೊಗ + ತೆರೆ$_4$]

ಮೊಗದೆಱೆ (ಕ್ರಿ)· ಬಾಯಿ ತೆಗೆ; ಬಾಯಿಬಿಡು: ಮೊಗದೆಱೆದ ಹುತವಪನ [ಪಾಪಾ೦. ಹೊಗೆದಗೆದ ಹೆಬ್ಬುಲಿಯು]ಪೊಲು ಝಗರ್ಝುಗಿಪ ತೇಜದ . . . ಜವಗಿವನುಗಳ ಲಕ್ಕಿಸವದಟಿನು (ಕೂಪಾ· ೬-೪-೭).

[ಮೊಗ + ತೆಱೆ$_1$]

ಮೊಗದೊಳೆ (ಕ್ರಿ)· ನೀರಿನಿಂದ ಮುಖದ ಮಲಿನತೆಯನ್ನು ತೊಳೆ; ಮುಖಮಾರ್ಜನ ಮಾಡು: ಮುನ್ನೆಸಜಿ ಕಾಣುತ ಮೊಗದೊಳೆದು (ಕ್ರಪಾ೦. ೦-೮೩): ನಿದ್ರೆಯಂ ತ್ಯಜಿಸಿ ಮೊಗದೊಳೆದು ಮುಕ್ಕೊಳಿಸಿ ಕಪ್ಪರವೀಳೆಯಂಗೊಂಡು (ಕ್ರಪಾಪು· ೭೦-೧೨). [ಮೊಗ + ತೊಳೆ$_1$]

ಮೊಗದೋರು ' ಮೊಗಂದೋಱು ' ನೋ·

ಮೊಗದೋಱು$_1$ ' ಮೊಗಂದೋಱು ' ನೋ·

ಮೊಗದೋಜ್$_2$ (ನಾ). ಮುಖದಲ್ಲಿ (ಗಾಯದಿಂದ) ಉಂಟಾದ ಕೂತು. — ಡೊಗರು: ಮೊಗದೋಜುಗಳ ಪೂರಾಯಘಾಯದ ತಾಜು ಶಟ್ಟಿನ ಹೊಸ ಮೆದೆ ಹೇರಾಳ ರಂಜಿಸಿತು (ಕುಪಾ೯೦ಪ್ರೀ· ೦೦-೬).

[ಮೊಗ + ದೋಜು (< ಡೊಂಗಜು)]

ಮೊಗನಹಜುವೆ (ನಾ)· ಒಂದು ಬಗೆಯ ಔಷಧೀಸಸ್ಯ: ನಾಂಗಲಿಕ. ಮೊಗನಹಜುವೆ . . . ಕಲಸಿ ಗುದದಲ್ಲಿ ಪೂಸೆ ಎಲ್ಲಾ ಮೂಲವ್ಯಾಧಿ ಕೆಡುಗುಂ (ಚಕ್ಕ· ೦೭೬). [? + ಹಜುವೆ (< ಹಜುಹೆ)]

ಮೊಗನಾಯಕ (ನಾ)· ಸೈನ್ಯದ ಅಗ್ರನಾಯಕ: ಸೇನಾಪತಿ: ಮರುತ ಸುತ . . . ಮುರಿವು ಮೊಗನಾಯಕರ ಪರಣಮಂ ಕೊಂಡು . . . ಕುಪ್ಪಳಿಸಿ ಕಾಣಿದಾಡಿದಂ (ಕುಪಾ೯. ೭೬-೦೪). [ಮೊಗ + ನಾಯಕ]

ಮೊಗನೆಗಹು (ಕ್ರಿ)· ಮುಖವಿಷ್ಟನ್ನು ಮೇಲಕ್ಕೆ ಎತ್ತು: ಮೊಗನೆಗಹಿ ಭೀಮನ ದಾನಾವಾರಿಷ್ಟದು . . . ಬಲುಕಣಿಯ ಹಿಡಿಹಿಂಗೆ ಬಾಗಿಸು ತಿರ್ದ್ದಾ ದುತೆ (ಕುಪಾ೯೦ಪ್ರೀ· ೬-೪೬).

[ಮೊಗ + ನೆಗಪು$_3$ (< ನೆಗಪ್$_1$)]

ಮೊಗಪಟ (ನಾ). ಹಡಗಿನ ಮುಂಭಾಗದ ಹಾಯಿಯ ಬಟ್ಟೆ: ಹಾಯಿಪಟ: "(ಹಡಗಿನ) ಮುನ್‌ಕೂವೆಯ ಮೇಲಿನ ಮುಖ್ಯಪಟ: ಮೊಗಪಟ ಮುಂಪಟ" (Foreasail. ೧೭೫೫). [ಮೊಗ + ಪಟ]

ಮೊಗಪಾವಡ ' ಮೊಗಪಾವುಡ ' ನೋ·

ಮೊಗಪು, ಮೋಪ್ಪು (ನಾ). ೧. ಮುಂಭಾಗ; ತುದಿ; ಮುಖ: ಕಾಳಿಯ ಮೊಗಪಿನಲ್ಲಿ ಒಂದು ಜೀಜುಂಡ ಹುಟ್ಟಿ ಅದು ಆರ ಮಾತನೂ ಕೇಳಲ್ಕೀಸದು (ಪಣ. ೪. II· ೬೩೮-೩೬); ಹೊಗರುಬಿಗೆಗಡು ಕರ್ಮಣಿಯ ಬಿರುಡಿಯು ಬಿಗಿದಿಟ್ಟನೆಂಬಂತೆ ಬಲ್ಮೊಲೆಯೆರಡಜಿ ಮೊಗಪು ತೋಱುವು (ಪೂಪ೭. ೨೩-೨೩). **ಮೋಪ್ಪು** : ೨. ಸರ, ಡಾಬು ಮುಂತಾದುವುಗಳಲ್ಲಿರುವ ಚೌಕಾಕೃತಿಯ ಬಿಲ್ಲೆ: ಈಗಿನ ಕಾಲದಲ್ಲಿ ಮೋಪು ಇರುವ ಸರಗಳನ್ನು ಹೆಚ್ಚಾಗಿ ಯಾರೂ ಹಾಕುವುದಿಲ್ಲ (ಕೂಪ).

[ದೇ.ಕ ತದು. ಮಲ. ಮುಕಪ್ಪ ; ತುಳು. ತೆಲು. ಮೊಗಪು]

ಮೊಗಪೆ (ನಾ)· ೧. (ದ್ರವಪದಾರ್ಥಗಳನ್ನು ಮೊಗೆಯಲು ಬಳಸುವ) ಸಣ್ಣ ಪಾತ್ರೆ: ಮೊಗೆ: ಪ್ರತಿದಿನಕ್ಕೊಂದು ಮಲ್ಲಲ ಕೂಡುಮಕೊಂದು ಮೊಗಪೆ ನೀರುಮಂ ಪೆಲಮನೆಯೊಳಗಣ್ಗೆ ಸೀಡಿದೊಡ ಬುರಂ ಪಜ್ಜುಗೊಂಡುಣ್ಬರ್ (ಪಪ್ರಕಾ ೦೭೨-೦೦) : ಈ ಬಿಳಸಂಸೃತಿ ಯೆಂಬುದೊಂದು ಜಾಜಿಣಮೊಳಗಮ್ಮ ನೀಂ ಮೊಗಪೆಯಾಗದೆ ಕಾಲ್ಪಪ

ವರ್ಗಮಾರ್ಗವಂ (ಕಾಶಿ. ೬-೬೦) : ಕುಂಬಾಜನ ಚಕ್ರದಂತೆ ಮಳ್ಳಿಟ್ಟ ಬವಯಂತೆ ಊಟಣವ ಮೊಗಪೆಯಂತೆ (ಪರಾಣ್ಮು. ೯-೨೬). ೨. ಒಂದು ಊರಿನ ಹೆಸರು : ಬೂತರಸ ತೊಜಿಕಾರಟ್ಟಿಯುಂ ಪುಯಳೆಯು ನೆಲೆಗೂಜು ಮೊಗವೆ ಅಳಿಮುಮ ಬಿಟ್ಟಿ (ಎಕೆ. IV. ಗುಂಡ್ಕುತೀ. ೧೪-೬ :೧೩೦). [< ಮೊಗ್ಕೆ]

ಮೊಗಬೀಣೆ, ಮೊಗವೀಣೆ (ನಾ)· ಬಾಯಿಂದ ಊದುವ (ಕೊಳಲಿನಂತಹ) ಒಂದು ಬಗೆಯ ವಾದ್ಯ : ಮುಖವೀಣೆ : ದೀಪಕ್ಕೆ ಗಳಿಂಚರದ ಕೊಳಲ್, ಮೊಗಬೀಣೆಗಳಿಂದರಪಱಿದೂರ್ವಂದಿಗಳ್ ಬೀಜುಮ ದನಿಯ ಬುರುಗುಗಳಂ (ಪಾರಂ. ೬-೩). **ಮೊಗವೀಣೆ** : ವೇಣುವ ನುಡಿಯಿಸುತ ಕಿನ್ನರಿಯ ಕೌಶಲವಿಡಿದು ನಾದಿಸುತಿಸವ ಮೊಗವೀಣೆಯನು ಕೇಳಿಸುತ . . . ಸತಿಯರೆಬ್ಬಿಂದರು (ಸಪಕ್ಕು. ೦೩-೫೯).

[< ಸಂ. ಮುಖವೀಣಾ]

ಮೊಗಬೀರಚಿಟ್ಟು (ನಾ)· ಒಂದು ಬಗೆಯ ಸಸ್ಯ : ಗಂಡುಬೀರಸ ಗಿಡ· ಗತಮುಕಬೀತಾಂಬೆಕ್ಕೆ ಮೊಗಬೀರಚಿಟ್ಟು (ಹು.ಶಿ. ೭-೧೦೭).

[← ತೆಲು. ಮೊಗಬಿಜಚಿಟ್ಟು]

ಮೊಗಮಂಟಪ (ನಾ). ದೇವಾಲಯ, ಅರಮನೆ ಮುಂತಾದುವುಗಳ ಮುಂಭಾಗದಲ್ಲಿರುವ ಮಂಟಪ ,– ಪ್ರಕಾರ : ಮುಖಮಂಟಪ : ಪಂಡಿತ್ತಿಗಮು ಮೊಗಮಂಟಪದ ಬ್ಯಾವಟ್ಟಿಗೆಯ . . . ಮದನಗ್ಗೆಯ ಬಾಗಿಲ್ವಾಡದ ಸಿಂಗರದೊಂದು ದೇಗುಲಂ ಕೆಳ್ದೆಡ್ಡಮಾಗಿ ರಂಜಿಸುಂ (ಧಾಪುಕ್ಕ. ೫೪-೨೮). [< ಸಂ. ಮುಖಮಂಡಪ]

ಮೊಗಮಜ್ಜನ (ನಾ)· ನೀರಿನಿಂದ ಮುಖವನ್ನು ತೊಳೆಯುವುದು ; ಮುಖಮಾರ್ಜನ : ಮೊಗಮಜ್ಜನಮಂ ನೆಜಿ ಮಾಡಿ ದೇವಿಯರ್ ನಡಗೊಳಲರ್ವಜರ್ ಮನೆಗೆ (ಶಾಂಪು. ೬೬) ; ಜಗಲಾಣ್ಮನ ಕಾಂತೆ ಪುರಿಸಲಿರ್ವರು ಮೊಗಮಜ್ಜನವ ಮಾಡಿದರು (ಕೋಪಪ. ೩೦-೬). [< ಸಂ. ಮುಖಮಾರ್ಜನ]

ಮೊಗಮರಸು (ಕ್ರಿ)· ಮುಖವನ್ನು ಮರೆಮಾಡಿಕೊಳ್ಳು ; ಮುಖವನ್ನು ಮುಚ್ಚಿಕೊಳ್ಳು : ಚುತೆಯಿಂದಿನನಂದು ಮುಂಗಿಲ ಮುಸುಕಂ ತೊಟ್ಟು ಮೊಗಮರಸಿ (ಗೂಢ್ಯಾ. ೦-೦೨). [ಮೊಗ+ಮರೆಸು$_1$ (< ಮಱೆ)ಸು)]

ಮೊಗಮರೆ (ನಾ)· ಗುರುತು ಸಿಕ್ಕದಂತೆ ಮುಖವನ್ನು ಮರೆಸುವ ಸಾಧನ : ಏನೋ ಒಂದು ಧೂರ್ತತಮ ಮೊಗಮರೆಯ ಗುರುತೋ (ಕಾಪುಷ. ೬). [ಮೊಗ + ಮರ್ಕೆ (<ಮಾಜ್ಕೆ)]

ಮೊಗವಿಂಕ್ಕು, ಮೊಗವಿಕ್ಕು (ಕ್ರಿ)· ೧. ಎದುರಾಗು; ಅಭಿಮುಖವಾಗು: ರಾಘವನ ಜನ್ನದ ಬಿಣ್ಣಗುದುರೆ ತೆಂಕಲ್ಲಿ ಮೊಗವಿಕ್ಕಿ ಪಡಮುಕುಂ ಮಿರ್ವುದಂ (ಧಾಪುಕ್ಕ. ೬೩-೦೯). ೨. ಎದುರುಬೀಳು ; ಎದುರಿಸು : ಪ್ರತಿಭಟಿಸು : ಅಂತು ದಂತಿಘಟೆ ದಂತಿಘಟೆಯೊಳಾಂತು ಮೊಗವಿಕ್ಕಿಯುಂ (ಪಂಚತಂ. ೦೩-೬೬ ಪ). ೩. ಮುಖವಿಡು; ಮುಖವಿಡಾಕು : ನಗೆ ಮೊಗದೊಳ್ ತೆಜಂಬೊಳೆದು ನುಣ್ದುಟಿಯೊಳ್ ಮೊಗವಿಕ್ಕಿ . . . ಕಾಲುಗುರ್ಗೊಳ್ಕೆದೆ ಮಾರ್ಪೊಳೆದು (ಕಬ್ಬಾ. ೬೩೦) ; ಪತ್ತಿಸೆದೆಯೊಳ್ ಮೊಗವಿಕ್ಕು ತಿಜಂಬೆಗೆಂದು ಮತ್ತೆವೆವಿಡದೂದುತಿರ್ಪನಮೊಂದು ಮಹೋರಗಮಾನ ನಾಗ್ಯಮಂ ಪಿಡಿವಡರ್ಪಲ್ಲಿ ಪೇಲುತಿರೆ ನುಂಡಿಲಪೋಲ್ . . . ಪೆದತ್ತು ಬಿಲ್ಲುರಿದಿ ಕಾಪನೆದೊಳ್ ಕರಿಭೋತವಂತೆವೋಲ್ (ಧಾಪುಕ್ಕ. ೩-೬೯). ೪. ತೊಡಗು: ಪಡೆಯಜಿದು ತೊಗಲುವಂಪರೆ ಸಿ{ಸ}ಡಿಲ್ದು ಪೊ{ಪೋ}ಯ್ತುಟ್ಟುದಾಗಳಂಗಜಲೆಯೊಳ್ ನಡೆ ಮೊಗವಿಕ್ಕಿ ಲಯಂಗಿಡದೊಡನುಲಿದುವು ಬೆರಲು ಕೊರಲು ಪಾಲಗೆಯುಂಲಿಗಳ್ (ಧಾಪ್ಕ. ೩೦. ೬೫೫ ೫೦೨೪). **ಮೊಗವಿಕ್ಕು**: ಕ್ರಿ. ಮುಖವಿಪನ್ನು ತಿರುಗಿಸು,–ಮೊರಳಿಸು: ಮೊಗವಿಕ್ಕಿ ದತ್ತಲು ಪೊಜಿವ ಹೆಣಮಯುವೇನನುಸುರುಮನಂ (ಕಾಪ್ಕಾರ್ಕ್ರೀ. ೦೭-೨೬); ಕೈ ಪೂಡಿದತ್ತಲು ಕರುಳ ಮಯ ಮೊಗವಿಕ್ಕಿದತ್ತಲು ಪೊಜಿವ ಹೆಣನ ಮಯ (ಪಾಪಂತ. ೪-೮೪). [ಮೊಗ + ಇಕ್ಕು]

ಮೊಗಮಿಡು· ಮೊಗವಿಡು (ಕ್ರಿ). = ಮೊಗವಿಕ್ಕು ೩: ಕುರಂಗಜಂಕುಳ ಳೆಲ್ಲನ ಬಿಲ್ಲ ಮೇಲೆ ಮೊಗಮಿಟ್ಟು . . . ಸೊಯಿಮತಿರ್ವುವೆ ನಗೇಂದ್ರ ಮುನೀಂದ್ರರ ಶಾಂತಮೂರ್ತಿಯಂ (ಗಿಸಂ. ೬-೬೯) ; ಗರುಡೋದ್ಯಾರವ ಪಚ್ಚೆಯತಿರಣದೊಳೆವ್ವಲ್ಲ ಶಂಕೆಯಿಂ ಸ್ಪಟಿಕಾಶೋತ್ಕರದೊಳ್ ಜಳಶಂಕೆಯಿ ನಾದರದಿಂ ಮೊಗಮಿಡುವಲ್ಲಿ ದೃಗಶಾಬಿಂಗಳ್ (ಜಾಪತ್ತಿ. ೦-೦೬೦); ಅಧರದಿನದಂ ಬೆರಸುವಂತೆ ಮೊಗಮಿಟ್ಟು ಪೊಂಬಟ್ಟಲೊಳ್ಸವಿದು ವಿಕ್ಕ ಮಧುಮಂ (ಕೃಬಾಪು. ೦೩-೮೩). **ಮೊಗವಿಡು**: ಅಧ್ವಶ್ರಮದ ಘಗೆ ಪರಿಹರಿಸೆ ನೀರೊಳು ಮೊಗಿಸಿನು ಹರಿ ಹಮುಚಿತುಷ್ಟಯವ ಸರಸಿಯಲಿ ಮೊಗವಿಟ್ಟು. ಮೊಗದವು ಪರಜಲಪನು (ಕಾಪ್ಕಾರ್ಕ್ರೀ. ೦೦-೭೪); ಅಂಬುರುಹಾನನ ದೊಳ್ಕೊಗವಿಟ್ಟತಿಭರದಿ ನವೀನಲತಾಂಗಮನಮರ್ದಿಪ್ಪಿ (ಜಯಣಾ. ೯-೪೨): ನೀಜಿನ ಮೊಗದೊಳು ಮೊಗವಿಟ್ಟು ಮುಂದಾಡಿ (ಕಂಪಾ. ೯-೦೦೬).

[ಮೊಗ + ಇಡು$_1$]

ಮೊಗಮಿಱಿ (ಕ್ರಿ)· ಮುಖವನ್ನು ತಿವಿ.–ಚುಚ್ಚು : ಸೊಪ್ಪು ಸೊವಡಾಗದೆ ಜಲಿಸಟ್ಟಜ್ಜದೆ ಮೊಗಮಿಱದು ಕಾರ್ದಾ ಚಪ್ಪಲರ್ವಿನೆಗಂ ಸಿಟ್ಟಿಟ್ಟ ಕರೆದು ಕೊಡುವು ಸಪ್ಪದಮುಪ್ಪಳದಿನೊಱಿವ ನಜುವಂಡುಗಳಂ (ಕಾಪಾಪ. ೯-೮೬).. [ಮೊಗ + ಇಱಿ$_1$]

ಮೊಗಮಾ (ಕ್ರಿ)· ಮುಖವನ್ನು ತಿರುಗಿಸು ; ಅಭಿಮುಖವಾಗು : ದಶರಥಕ್ಷಪಂ ಮುನೀಶ್ವರರಿರ್ದಾ ದಿಸೆಗೆ ಮೊಗಮಿತ್ತು ತನ್ನಿರ್ದ ಸಿಂಹ ವಿಷ್ಟರದಿನೆದ್ದು ವಿನಮಿತನಾದಂ (ಕಂಧಾಪು. ೬-೨೬). [ಮೊಗ + ಈ$_2$]

ಮೊಗಮಾಸೆ (ನಾ)· (ಹೊಸಹರೆಯದ ಗುರುತಾಗಿ) ಮುಖದ ಮೇಲೆ ಮೂಡುವ ಮಾಸೆ :. ಮೊಗಮಾಸೆ ಬಾರದಿರ್ದುಂ ಸೊಗಯಿಪ ತನ್ನನಿಕುಮಾರವದಪಜ್ಜಂ ದಿಟ್ಟಿಗೆ ಬೆಲ್ದುವೆತ್ತು ಮಱಿದುಂಬಿಗಳಿಜಗದ ಕನಕಮಲಮಂ ನೆನೆದಿಸುಗುಂ (ಕಾಪಂಪು. ೬೬೯). [ಮೊಗ + ಮಾಸೆ]

ಮೊಗಮುಟ್ಟು (ನಾ)· (ಆನೆ, ಕುದುರೆ ಮುಂತಾದುವುಗಳ) ಮುಖಕ್ಕೆ ತೊಡಿಸುವ ಒಂದು ಬಗೆಯ ಅಲಂಕಾರಾಭರಣ; ಮೊಗಮುಟ್ಟನಾಂತ ಮೊಗಮಾಗಿರೆ ಶಾಕ್ಷರ್ಯನಸೇಜುವಂ ಕದಕ್ಕದಿಸೆ ನಿರರ್ಗಳಂ ಪೊಳೆದು ಪಾಜುವಿನಂ ಪಸುದೇವವಲ್ಲಭಂ (?) (ಕರಾಜ. ೨-೦೩೯); ವಿಸುನಿಯ ಟಂಕೆ ಸೇರಿದ ಮೊಗಮುಟ್ಟನ ವಿಸಿಕಿಯನಾ ವಾಹಕರು ಒಸೆದು ಸೇರಿಸಿದರು . . . ಆ ಜಾತಿತುರಗಕೆ (ಕಾಪಾಜಾ. ೯-೩೭) ; ಮೊಗಮುಟ್ಟು ಮುಂತಾದ ಸಜ್ಜೋಗಕ್ಕಿರ್ದ ಕೈಗೆಗಳೊಳೆಡವಿಡದೆ ಕೀಲಿಸಿದ ಮುಕ್ಕಣ್ಣ ರುದ್ರಾಕ್ಷಿಯಿಂ . . . ರಾಜಾಶ್ವವಾಶೀತಿಸಾಹಸ್ರವಿಕ್ಕೆಲದ ಹೇವಾರವಂಗಳಿಂದದು ಗಗನಕ್ಕೆ ಕಾಲಿಡುತಿರ್ದಪ್ಪ (ಕಂಪಾ. ೦೦-೧೩).

[ಮೊಗ + ಮುಟ್ಟು$_2$ / ತೆಲು. ಮೊಗನುಟ್ಟು]

ಮೊಗಮುರಿ ' ಮೊಗಂಮುರಿ ' ನೋ.

ಮೊಗಮೋಟ (ನಾ)· (ಆಲಂ) ಭಂಗಿತನಾವವನು ; ಅವಮಾನಗೊಂಡವನು : ಮರುಳಾಗಿ ಪಂದಮತಿಯಾಗಿ . . . ಮೊಗಮೋಟ [ಪಾಜಾಂ. ಮುಟ್ಟ]ನಾಗಿ ಎಂದುಮರೆ ಕಾಡಿದವೆ ತಂದೆ (ಸೀಪಾಮಹ. ೩-೬೬).

[ಮೊಗ + ಮೋಟು$_2$]

ಮೊಗರಂಬ, ಮುಖರಂಬ, ಮೊಕರಂಬ, ಮೊಕರಂಬೆ (ನಾ). ಆನೆ, ಕುದುರೆ ಮುಂತಾದುವುಗಳ ಮುಖಕ್ಕೆ ಹಾಕುವ ಒಂದು ಬಗೆಯ ಅಲಂಕಾರದ ಸಾಧನ : ಭಾಳದ ಚಂದ್ರದ ಚಿತ್ರದ ಮೊಗರಂಬದ ಕೈದಾಳಿನ ಕಾಲ್ಗಾಪಿಂ ಹಡಿಯುಂ ಹಣ್ಣಿದ ಕರಿಘಟೆ ನೆರೆದುವು ಬಲದೊಳಗೆ (ಪಾಪಂ. ೩-೨೮); ರನ್ನದ ಮೊಗರಂಬಂ ಪವೆದುನ್ನೆಟ್ಟನೆ ಪೋಲೆ (ಧರಾಣಾ. ೪-೦೪); ಇಳಾಪಿಂದನು ಬಲುಗುಳವ ಪಿಂಡಿಸಿ ಕಳಚಿದನು ಮೊಗರಂಬವನು

(ಶಬ್ದರತ್ನ. ೩-೩೨): ಮೊಗರಂಬ ರೋಷಪಕ್ಕಂಗಿಕೆಯು ಪುಟಿಗಳು . . . ಬಂದುವಪ (ಜಾಗಳ. ೦೮-೩೮). **ಮುಖಿರಂಬು**: ಬಂದ ವೇಗದಿ ಪರಸ ವಾಪಸ ಬಸವಣ್ಣ ಚಿನ್ನವ ಹಕ್ಕಂಗಿಕೆಯು ಮುಖಿರಂಬುವ . . . ಸಗೆಜ್ಜೆ ಉಲಿಯಲು ಬೆನ್ನ ಮಾದೇಶಲೋಲಗಕೆ (ಕವಿಚಾಂ. ೨-೦೮೩). **ಮೊಕರಂಬು**: ರಂಗಾಸ ತೇಜೀಗೆ ಹೊಸಾಳೆವಲ್ಯಾಣ ದುಡುಮಲ್ಲೀಗೆ ಮೊಕರಂಬು (ಜಾ.ಹಯ. ೩೨): ಮಾನವ . . . ಮೊಕರಂಬಗಳನ್ನು ಹಾಕಿ ಹೋರಿಗಳ ಬೆಡಗನ್ನು ನೋಡುತ್ತಾನೆ (ಗಿರಿಸಂ. ೯. ೮೨೩). **ಮೊಕರಂಬೆ**: ಸಾವಿರ ಎತ್ತಿನ ಮುಂದೆ ಹೋಗೋದು ನಮ್ಮತ್ತು ಪಾದ್ಕೆ ಜಂಗು ಮೊಕರಂಬೆ (ಜಾ.ಪಾ. ೩೪) ; ಗಾಣಗರ ಕುಂಟೆತ್ತಿಗೆ ಯಾಕೆ ಮೊಕರಂಬೆ (ಗಾಣಾ. ೧೩). [?]

ಮೊಗರಸ (ನಾ). ಮುಖದ ಕಾಂತಿ. – ತೇಜಸ್ಸು : ಭುಗುಭುಗನುರ್ಜೆ ಪಾಮ್ಬು ಸಲೆ ದೇಹರಸಂ ಬಿತುತೋಡಿತೆಲ್ಲಿಯುಂ ಮೊಗರಸಮೋಡಿತಿಲ್ಲ (ಸುಳುಹಾ. ೦೨-೪೦) ; ವೀರರಸ ಬಿಡಮೊನಪ್ ಮೊಗರಸದ ಸ್ಮರವಿಕಾರದ ಮನದ ಮೋಟದ ಗರುವಿಕೆಯಲೀ ಪಾತ ಸುಡಿದನು (ಹೊಡಣ. ೩-೯-೩೩): ಬಿಡದೆಸೆದವ್ ವೀರಭಟರ ತಲೆಗಳಾ ಎಡೆಮೋಳು ಮೊಗರಸದಿಂದ (ಶಂಕಾಪು. ೩೩-೮೨)· [< ಸಂ. ಮುಖರಸ]

ಮೊಗರಾಗ (ನಾ). ಮುಖದ ಬಣ್ಣ. – ರಂಗು : ಪನಜಮುಖಿ ಪಿರಿದು ಮನುರಾಗದಿಂದಡಿಗಡಿಗೆ ಸೊಗಯಿಸಿದಳಾಗ ಮೊಗರಾಗದಿಂ (ಅಭಿ. ೬-೩೩ ಕಗಳ) ; ಬೇಗಂ ಜಿನಚಂದ್ರನ ಮೊಗರಾಗಂ ಬೇಸಗೆಯು ಬಾಲೊಳಲ್ದಿದ ಹರಿದ್ರಾರಾಗದ ತೆಱದಿಂ ಕುದಿ ಕುಂದಿದಾಗರ್ (ಪಾರ್ಶ್ವ. ೬-೪೦) ; ಗತದೋಷಿಗೆ ಕೃತದೋಷಿಗೆ ಹಿತಪತಿವಮ್ಬುಲ್ಲಿ ಸರಿಯ ಮೊಗರಾಗಂ ಭೂಪತಿಗೆಂತನೆ ಪಾಲ್ ದೋಷೋದ್ಧತರಂ ಕೊಲ್ವಲ್ಲಿ ತನ್ನ ಮೆಯ್ಗುಂದಿದುದೇ (ಕಾವ್ಯಸಾ. ೪೨೦). [<ಸಂ. ಮುಖರಾಗ]

ಮೊಗರಾಗಂಗಿಡು (ಕ್ರಿ)· ಮುಖದ ಬಣ್ಣವು ಕೆಡು. – ಕಾಂತಿಹೀನವಾಗು : ಘನಸಮಯಮತಿಕ್ರಮಿಸಿ . . . ಗಿರಿಮಲ್ಲಿಗೆ ಬೀತು ಬಿನ್ನನಾಗೆಯುಂ ಕಡವು ಮೊಗರಾಗಂಗಿಡೆಯುಂ (ಹಂಪಾಚಾ. ೭-೦೪೫ ಕ)·

[ಮೊಗರಾಗ + ಕಿಡು (< ಕೆಡು$_1$)]

ಮೊಗರು$_1$ (ನಾ). ೧. ಎಳೆಗಾಯಿ ; ಮಿಡಿ ; ಹೀಚು : ಕಲ್ಪಲತೆಯ ದಾಂಗುಡಿದು ಮೊಗರಂತೆಸೆವ ನಾನಾವಂಶಮುಮುಂ (ಚಾಪಂ. ೮೮-೦೯) ; ತಳಿರಿಂದ ಮೊಗರಿಂದ ಕಾಯಿ ಪಣ್ಣಿಂದ ಚೆಲುವೆಸೆವ ಪುಷ್ಪಗಂಧದ ಪರಿಮಳಗಳಿಂದ ಪುಷ್ಪದಿಂದರಿ ಶಿವನ ಪೂಜಿಸುವ ನಾರಿ (ಸಭೀ. ೩-೦೮)· (ಗೆ). ೨. ಎಳೆಯದಾವ : ಹೀಚಾದ : ಆ ಹುಡುಗಿ ಎಳೆಮೊಗರು ಬವನೇಕಾಯಿ ಕೂಡುತಿಳಿಳ್ಳತ್ತ ಇವ್ಳಳು (ಹೊಸ್ತ. ೦೮೩)· [ದೇ.+ ತುಳು. ಮುಗುರು]

ಮೊಗರು$_2$ (ನಾ). ಒಂದು ಬಗೆಯ ಭೂಮಿ (?) : ಬಿಜಮೊಗರಿಂ ಪು ೩೧ ಕಾಗ ೧೮೨ (ಪಾ೨೨. ೦೪೫, ೩೩೨೦; ೪೮೮-೩೩; ೧೧೦೦); ಭೂಮಿ ದುಲ್ಲಿ ನೀರು ಜಾಸ್ತಿ ನಿಂತ ಮೊಗರುಭೂಮಿ (ಕೃಜಾಸಿ. ೦೩೬).

[?-/ ತುಳು. ಮೊಗರ್ ಸಮೀಪದಿಂದ ಕೂಡಿದ]

ಮೊಗಲ, ಮೊಘಲ್ (ನಾ)· ೧. ಒಂದು ಜನ್ನಾಂಗದ ಹೆಸರು : ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದು ನೆಲಸಿದ ಒಂದು ಮುಸಲ್ಮಾನ್ ಪಂಗಡ : ಕಾಂಭೋಜ ಕೊಂಕಣ ಮೊಗಲ ದ್ರಾವಿಡ ಗೌಡ ಗುರ್ಜರ . . . ಮಹಾರಾಷ್ಟ್ರಗಳ ನೃಪರೇಳ್ದೆಂದನು (ಪಾರ್ಶ್ವ. ೪-೦೪) : ಈ ಕಪಟೂರ ಸೀಮೆಗೆ ಮೊಗಲರ ಬಗೆ ಹಣ (ಎಕ. VIII, ಶಿಕಪು. ೨೩೩-೦೪ ; ೧೮೨೨ ,); ಅರಬರು, ಬೆಲುಚಿಯರು, ಚೀನೀಯರು, ಮೊಗಲರು (ತುಳುಣಾ. ೦೭೪)· **ಮೊಘಲ್**: (ಗೆ). ೨. ಮೊಗಲರಿಗೆ ಸಂಬಂಧಿಸಿದ: ಮೊಘಲ್‌ವಾಸ್ತು ಶಿಲ್ಪವು ಭಾರತೀಯವಾಸ್ತುಶಿಲ್ಪದಲ್ಲಿ ಮುಖ್ಯವಾದದ್ದು (ರಾಪ್ರ. ೩೦೬)

[←ಪಾರ. ಮುಘೋಲ್; ಹಿಂ. ಮುಂಗಲ್; ಮರಾ. ಮೊಗಲ್. ಮೊಂಗೆಲ್]

ಮೊಗಲಾಯೆ, ಮೊಗಲಾಯಿ (ಗು)· ೧. ಹಳೆಯ ಹೈದರಾಬಾದಿಗೆ ಸೇರಿದ. ೨. ಬಹಳ ಹಳೆಯದಾದ· (ನಾ)· ೩. ಮೊಗಲರಿಗೆ ಸಂಬಂಧಪಟ್ಟುದು : ಮೊಗಲಾಯ್‌ಸಾಮ್ರಾಜ್ಯದ ಪತನಕ್ಕೆ ಅವರ ದರ್ಪ ಕಾರಣವೆನ್ನುತ್ತಾರೆ (ರಾಚಿ). **ಮೊಗಲಾಯಿ** : ೩. ಆ ಕಾಲದಲ್ಲಿ ಮೊಗಲಾಯಿ ಚಕ್ರವರ್ತಿಯ ಪ್ರಭುತ್ವವು ಹಿಂದುಸ್ಥಾನದ ಅನೇಕ ಪ್ರದೇಶಗಳಲ್ಲಿ ಹಬ್ಬಿದ್ದಿತು (ಹೊಕಥ. ೮೩).

ಮೊಗಲಾಯ್‌ದೌಲತ್ತು = (ಆಲು) ಸರ್ವಾಧಿಕಾರದ ದರ್ಪ·– ಶೀವಿ : ಆಕಯು ಮೇಲೆ ಮೊಗಲಾಯ್‌ದೌಲತ್ತು ನಡೆಸಿದಯುಲ್ಲ ! (ಮುಹಾಗ. ೩೭).

[← ಹಿಂ. ಮುಗಲಈ. ಮುಗಲಾಈ ; ಮರಾ. ಮೊಗಲಾಈ]

ಮೊಗಲಾಯಿ ' ಮೊಗಲಾಯ್ ' ನೋ.

ಮೊಗಲಿಂಗಮರ (ನಾ). ಒಂದು ಬಗೆಯ ಸಸ್ಯ : ಮೊಗಲಿಂಗಮರ· ಕರ್ನ್ಲಟಿ. ಕಲಾಗಂಟಿ. ಗಂಟಿ (ಪ್ಯಾಕಿ. ೩೮-೦೩೩).

[ಮೊಗಲಿಂಗ$_1$ + ಮರ$_1$/ತೆಲು. ಮೊಗಲಿಂಗ]

ಮೊಗಲೂರ್ (ನಾ). ಒಂದು ಊರಿನ ಹೆಸರು : ಈ ಮುತ್ಸಗಿ ಅಥವಾ ಮುಳ್ಳಗಿ ಎಂಬ ಗ್ರಾಮವಿರುವ ಈಗಿನ ಬಳ್ಳಾರಿಜಿಲ್ಲೆ : ಮೊಗಲೂರ್ವಿಷಯೇ ತೆಱುವಾಸಾಣನಾಮಧೇಯಗ್ರಾಮಸ್ಯ ಪೂರ್ವ್ವದಿಗ್ಭಾಗೆ. ಮುಟ್ಟಗಿನಾಮಧೇಯ ಪ[ಪ್ಲೀ]ಮ್ಬಟ್ಟಾಪಸಹಿತಾಂ . . . ಸರ್ವ್ವಾಪರಿಹ್ಯತಪರಿಹಾರಂಸಂಪ್ರ[ದತ್ತ][ವಾನ್] (ಎಕ. VIII, ೦೮೮-೬: ೪೩೮ ಕ).

[? + ಊರ್]

ಮೊಗವಚ್ಚ (ನಾ)· ಮುಖದಲ್ಲಿ ಧರಿಸುವ ಒಲೆ, ಮೂಗುಬುಟ್ಟು ಮುಂತಾದ ಒಡವೆ : ನಿಜದಿಗ್ವಿಜಯೋದ್ಧತವಿಕ್ರಮಪ್ರಭಾವಂ ತನಗೆಂಪು ಸೋಪೆಸವ ಸಿಂದುರದಂಗವಾಂಬಾಗೆ ಸೋಡ ಭೂಕಾಂತೆಗೆ ಮುಚ್ಚುದೆತ್ತ ಮೊಗವಚ್ಚಮವಾಗಿಯಿದಾ ಭಳಿರ್ಕ್ಕರೋಳ್ (ಪಾರ್ಶ್ವ. XVIII, ೫೪೬-೦೨; ೧೧೮೮); ನಾಗಾರಿ ಧಮ್ಮಿಲ್ಲ ನಾಗಾರಿ ಮೊಗವಚ್ಚ . . . ನಾಗಾರಿ ಪಗಯಂತಿರೊಪ್ಪೆ ಕುಚಕುಟ್ಮಳಂ . . . ನಾಗಮೋಪಿನಯಿಸಿದಳು (ಅಂಗತ್ರಿ. ೨೫-೩೬).

[ಮೊಗ + ಬಚ್ಚ$_2$]

ಮೊಗವಟ್ಟ (ನಾ)· ಆನೆ, ಕುದುರೆ ಮುಂತಾದ ಪ್ರಾಣಿಗಳ ಮುಖಕ್ಕೆ ಹಾಕುವ ಒಂದು ಬಗೆಯ ಅಲಂಕಾರಸಾಧನ : "ಮೊಗವಡವಮ್ಮೆಱಭಂಗಳ ಮೊಗವಟ್ಟಂ" (ಕಾಪಾಸಾ. ೩೯)· 'ಮುಖಪಟ್ಟೆ' · 'ಮೊಗವಡ' ಪರಾ· [< ಸಂ. ಮುಖಪಟ್ಟ]

ಮೊಗವಟ್ಟವ (ನಾ)· ಸಮ್ಮುಖ; ಎದುರು : ಶ್ರೀಪೃಥ್ವಿವಿಗಂಗನ ಸೂಳೆ ಬೀರಕ್ಕನ ಮಗಂ ಎಜಿಕಂಗಂ ಪೃಥುವಿಗಂಗ ಮೊಗವಟ್ಟವದೊಳೆ ತಲೆಗಳಯಿಸಿ ಸತ್ತಂ (ಕ್ಯಾಹಾ. ೦೧೧೪. ೦೦-೨ ; ಸು. ೨೮೫ ೫೫).

[ಮೊಗ + ?]

ಮೊಗವಡ, ಮಕಾತು, ಮುಖವಾಡ, ಮುಖಾಡ, ಮೊಕವಾಡ, ಮೊಗವಾಡ, ಮೊಗಾರ (ನಾ)· ೧. ಮೇಲುಮಾಸುಕು; ಅವಗುಂಠನ: ಮೊಗವಡಂಗವಿದಿರ್ದ ಕೂಸ ಭಟ್ಟವಿಕ್ರಂಗೆ ಕುಡಿಮೆಂದು ಕೀಜಿ ಚಿಲಾತ ಪತ್ರಂ ಬೇಡಿದೊಡಂ ಕುಡದಿರ್ದೊಡೆ (ಪಾರ್ಶ್ವ. ೦೩೭-೩). ೨. ಆನೆ, ಕುದುರೆ, ಎತ್ತು ಮೊದಲಾದುವುಗಳ ಮುಖಕ್ಕೆ ಹಾಕುವ ಒಂದು ಬಗೆಯ ಅಲಂಕಾರಸಾಧನ: ಇಕ್ಕಿದ ರೋಷವಕ್ಕರಿಕೆಗಳುಮುರ್ದ ಮೊಗವಡಂಗಳುಂ . . . ಬೆರಸಲುಂಕೆವೆರಸಿದ ಕಾಲಗಿರಿಗಳೆ ತಳರ್ವಂತೆ ತಳರ್ವ ಮದಾಂಧಗಂಧಸಿಂಧುರೇಂಗಳುಮುಂ (ಪಂಪಭಾ. ೦೦-೩೦ ಪ): ಮದಸಮಾವಗಜಕ್ಕೆ ಪಿಡಿದ ಮೊಗವಡಮೆನಿಸಿ (ಪರ್ಮಶಿ. ೬-೦೩ ಪ); ಪೊರ್ಕಳಿ ಗಂಟೆಯ ಮೋಹಿಪುವ ಮೊಗವಡದ ರೂಹಿಸುವ ಪೊಸಲ ಕನ್ನಡಿಯ ಕಡುಚಿಲ್ಕ ಕೊಡಂಕೆಯು ಲಂಬಿಸುವ ಚಮರದ ಚಾರುತರಭೂಷಣಾ ಭೀಷಣಾಪ್ಯಾಗ

(೧೧೪-೬-೫೫ ಪ). ೩. (ಆಲರಿ) ಮುಖಭಾವ; ಮುಖವಿಮರ್ಶೆ: ಭೂಪಾಲಕನ ಮೊಗವಡದ ದುಗುಡವನುಗಿವೆ ನಾನೆಂದ (ಶಾಣ್ಮಳ. ೫೦-೨). **ಮಕಾಡು**: ೪. ಪ್ರಾಣಿಗಳ ಬಾಯಿಗೆ ಕಟ್ಟುವ (ಹಗ್ಗದ) ಕುಕ್ಕೆ : ಒಂದು ಗಟ್ಟಿಯಾದ ಮಕಾಡು ಕೊಡುವೆ; ಬಿಗಿದುಕೊಂಡು ಹೋಗು (ಪೂಂಮು-೩೨). **ಮುಖವಾಡ** : ೫. ಸಮಾಧಾನದ ಮುಖವಾಡವನ್ನು ತಾಳಿ ಕುಳಿತಿದ್ದಳು ಶಾಂತಲೆ (ಪಾಂಚಾ. ೨೮೭). ೫. ಮುಖಕ್ಕೆ ಹಾಕಿಕೊಳ್ಳುವ ಬೇರೆ ವ್ಯಕ್ತಿ, ಪ್ರಾಣಿ ಇತ್ಯಾದಿಗಳ (ಕೃತಕವಾದ) ಮುಖಾಕೃತಿ : ಈ ಭೂಶಾರಾಧನೆಯಲ್ಲಿ ಹಂದಿಯ ಮುಖವಾಡವನ್ನು ಅದರ ಪಾತ್ರಿಯು ಧರಿಸಿ ಕುಣಿಯುವುದು ವಾಡಿಕೆಯಾಗಿದೆ (ಪಾಕಗೀ. ೬೦); ಕಂಡೆ ನನ್ನ ಅಂತರ್ಯಾದಮರವುರುಷನನು ತೆರೆಯಲಿಹನ ಮನದ ಮುಖವಾಡ ತೊಟ್ಟು ಕೊಂಡ ಭದ್ರಾಕಾರ ಘನನ (೨೪೪೦. ೦೭೯-೨); ಎಲ್ಲರೂ ಸೀನುಗಳ ಬೊಬ್ಬೆಯನ್ನೇ ಎಬ್ಬಿಸಿದ್ದರೂ ನಾನು ಮಾತ್ರ ಶೀತನರೋಧಕ ಮುಖವಾಡವನ್ನು ಧರಿಸಿದಂತೆ ಪ್ರಶಾಂತನಾಗಿದ್ದೆ (ಪಂಚಿ. ೩೩). ೬. (ದೇವರಿಗೆ ತೊಡಿಸುವ) ಚಿನ್ನ, ಬೆಳ್ಳಿ ಮುಂತಾದ ಲೋಹಗಳಿಂದ ತಯಾರಿಸಿದ ಮುಖದ ಆಕೃತಿ : ಇಂದೂ ಮಾನ್ಯರಲ್ಲಿ . . . ಅವರು ಸಾಮಾನ್ಯವಾಗಿ ಕೂಡುತ್ತಿದ್ದ ಸ್ಥಳ ಮತ್ತು ನಿರ್ಯಾಣ ಹೊಂದಿದ ಕಾಲದಲ್ಲಿ ಒರಗಿಕೊಂಡು ಕುಳಿತಿದ್ದ ಕಂಬಕ್ಕೇ ಮುಖವಾಡವನ್ನಿಟ್ಟು ಪೂಜಿಸುವ ಸಂಪ್ರದಾಯವನ್ನು ನೋಡಬಹುದು (ಪಾಗಾ. ೦೬೩) ; ಮಾರುತಿಯ ಮುಖಕ್ಕೆ ಬೆಳ್ಳಿಯ ಮುಖವಾತವ ಗಂಭೀರತೆ ಭವ್ಯತೆಯನ್ನೇ ತಂದುಕೊಟ್ಟಿತ್ತು (ಪಶ್ಯಂ. ೩). ೭. (ಆಲಂ) ಸೋಗು; ನಟನೆ : ದೇಶಸೇವೆ ನಿಜಲಸಂತಹ ಉದಾತ್ತವಿಂದ ಆಗುತ್ತದೆಯೋ ? ಅಥವಾ ದೇಶಸೇವೆಯ ಮುಖವಾಡವನ್ನು ಧರಿಸಿದ ಸಂದೀಪನಿಂದರೋ ? (ಪಮಾಣಾ, ೬೩) ; ಸಭ್ಯತೆ ಒಂದು ಸಾಮಾಜಿಕ ಮುಖವಾಡ (ಪಾಕ್ಯಂ, ೩೧೦). **ಮುಖಾಂಡ** : ೫. ಹೊಗರೊಗುವ ಬಚ್ಚಳಿಯು ನಂದಿಯ ಮೊಗದ ಮಾಳ್ಕೆಯೊಳಹ ಮುಖಾಂಡವ ನೆಗುತ ಶಂಕರದಾಸಿಮಯ್ಯನ ಮುಖಿಕೆ ಸೇರಿಸಿದ (ಪಂಕರಾ. ೬-೩). **ಮೊಕವಾಡ** : (೨). **ಮೊಗವಾಡ** : ೧. ಒಜಿತಯಗ್ಗಣಯನತಿಭಕ್ತಿಯ ಕರದೊಳು ಚೆಚ್ಚರದೆ ಮೊಗವಾಡದಾ ಕೇಶರಾಜಯ್ಯಂಗೆ ತರಿಸಿತಿರೆ (ಪಾಸೋಚ. ೬-೨೩). ೫. ನಿಮ್ಮ ಶರಣರ ಸಂಗದಿಂದೆ ಎನ್ನ ನಂದಿಯು ಮೊಗವಾಡ ನೊಸಲ ಕಣ್ಣೆಂಬ ಅಹಂಕಾರವ ಮುಂದುಗೊಂಡಿದ್ದೆನಯ್ಯ (ಪಪ್ರಸಂ. ೩೭೫-೦೩೬) ; ಅನೆಯು ಮೊಗವಾಡವ ಧರಿಸಿದವನೇ (ಗಚಿಸಿ. ೦-೦೨). ೮. ಮುಖಮಂಟಪ ; ಮೊಗಸಾಲೆ : ಕಿಜುವಜಿಯನೆಜುಂಕೆಯೊಳ್ ಪುದುಗೂಡಿನ ಮೊಗವಾಡದೊಳಿರೆಯರೆ . . . ಜೋಡಿಗನ ಬರವನೆ ಪಾರ್ವ ಪೆಣ್ಬಕ್ಕಿಗಳ ತಂಡದಿಂದೆಮುಂ (ಪಾಚಾಕೃ. ೪-೦); "ಉದಿದ್ ಪುವುಡಿ ಬನ ರಾಜಿಯು ಮೊಗವಾಡದ ಪಳಿಕೆ ಪೊಸಂತಿರೊಳ್ ಬರೆದ ರಂಗವಲ್ಲಿ"ಯಂತಿದ್ದಿತು (ಪಚಂಪ. ೨೩೪); ಮಂಡಾತಿನಿ ಉಪ್ಪರಿಗೆಯ ಮೊಗವಾಡದಿಂದ ಕೂಗಿ ಕೇಳಿದಳು (ಪಚ್ಚಳ. ೨೩೦). **ಮೊಗಾರ** : ೮. ಕರೆಯುದೆ ಕಾವಿ ಕಂಟಿಸುವ ಕೂಟಣಿಯಂ ನೊಣಗಜ್ಜಿ ತಿಂಗೆ . . . ಕಾಳಿ ಕೊಳ್ಗೆ ಜಿಯವು ಮುಱಿದಿಕ್ಕುಗೆ ಮಾರಿ ಭೈರವಂ ಹರಹುಗೆ ವೇಳೆಯಂ ಮಾಜಿಗೆ ಮಾಳಬನಿಂದು ಮೊಗಾರಮೆತ್ತುವೆಂ (ಪಾಪಚ. ೨-೦೦೩; ಪಚಿಕ್ಷ. ೦-೩೯ ನೋ). 'ಮುಖಾರೆ' ಪರಾ. [< ಸಂ. ಮುಖಪಟ್ಟ./ತಮಿ. ಮುಕಪಟ್ಟು. ಮುಕ್ಕಾಟು ; ಮಲ. ಮುಕಮಟ್ಟು. ಮುಕ್ಕಾಡು ; ತೆಲು ಮೊಗವಡ, ಮೊಗವಾಡ, ಮೊಗವಾಳ. / ಮರಾ. ಮುಖಪಟ, ಮುಖವಟಾ. ಮುಖವಟೇ, ಮುಖೋಟಾ]

ಮೊಗವಡಂಗಳೆ (ಕ್ರಿ). ಆನೆ, ಕುದುರೆ ಮುಂತಾದುವುಗಳ ಮುಖಕ್ಕೆ ಹಾಕಿರುವ ಅಲಂಕಾರಸಾಧನವನ್ನು ಕಳಚು, –ತೆಗೆ : ಆಗಳಾಕೆಯು ಮೇಲುದೋಸರಿಸೆ ಮೊಗವಡಂಗಳೆದ ಮದನಮಾತಂಗಕುಂಭಯುಗ್ಮದಂತರ್ದ ನೆಲಿಮೊಲೆಯುಂ ಕಂತು (ಪಪ್ರಂಕ್ಷ. ೫-೯ ಪ): ಪರಿಚಾರಕಿಯರ್ ಬರುತಿರ್ದರೊಡ್ಡಿಸುತ್ತವರವೆ ಕಯ್ದುದಿಂ ಮೊಗವಡಂಗಳೆವಂಗಜಕುಂಭಿಯೆಂಬಿನಂ (ಪಾಕ್ಕರಾ. ೬-೧೪). [ಮೊಗವಡ + ಕಳ್ಚಿ]

ಮೊಗವಡದೆಱೆ (ಕ್ರಿ). ಮುಖದ ತೆರೆಯನ್ನು ಸರಿಸು ; ಮೇಲು ಮುಸುಕನ್ನು ತೆಗೆ : ಮಾರಿ ಮೊಗವಡದೆಱೆವೊಲು ಜಜ್ಜುರಮೂಸಾಳುಗಳು ನಿಜದಾತಾರನಮರಕೊದಗಿ ಋಣವಿನ ಋಣನ ನೀಗಿದರು (ಶಾಣ್ಮಕ್ರೌ. ೨-೩೦). [ಮೊಗವಡ + ತೆಱೆ]

ಮೊಗವರಿಕೆ ' ಮೊಗವಜಿಕೆ ' ನೋ.

ಮೊಗವರಿಗೆ (ನಾ). (ಆನೆಗಳ) ಮುಖಕ್ಕೆ ಹಾಕುವ ಗುರಾಣಿಯಾಕಾರದ ರಕ್ಷಣೆಯ ಸಾಧನ : ಗುಳ ಬಿಗಿದ ಜೀಂಟಿಯಂ ಮೊಗವರಿಗೆ ಕವಳಿಕೆಯಿಗಳೆ ನಿಂದ ಸಬಳಿಗರು ಜೋದಸಂಕುಳ . . . ವೀರಡಾಡಿಗಳುವೆರಸಿ ನಿಂದವು ಕರಿಗಳು (ಪೋಪುಚ. ೩-೩೦) ; ಕರಿಗಳ ಕೊರಳ ಮುಜ್ಜಿಯಿಸು ವೋರಣದ ಮೊಗವರಿಗೆಗಳ ಖಂಡಿಸುವ . . . ಜೋದರ ಧುರಚಮತ್ಕೃತಿ ಬೆಜ್ಜಗನಿತ್ತುದು ದೇವಸಂತತಿಗೆ (ಶಾಣ್ಮಂ. ೪-೪೬). [ಮೊಗ + ಪರಿಗೆ]

ಮೊಗವಜಿಕೆ, ಮೊಗವರಿಕೆ (ನಾ). ಮುಖಪರಿಚಯ ; ಗುರುತು : " ಪರಿಚಯಂ ' ಸಂಸ್ಪವಮಿನರ್ಕೆ ಮೊಗವಜಿಕೆ [ಪಾಣಾಂ. ತ] " (ಕುಂಗಣ. ೦೩೪-೩೨). **ಮೊಗವರಿಕೆ** : ಈ ಮುಖದ ಮೊಗವರಿಕೆಯು ನನಗಿಲ್ಲದಿದ್ದಿರಬಹುದು (ಪಾಂಕೃತ. ೧೦-೦೩). [ಮೊಗ + ಅಜಿಕೆ]

ಮೊಗವಜಿತ (ನಾ). = ಮೊಗವಜಿಕೆ: " ಸಂಸ್ಪವಃ ಪರಿಚಯಃ– ಈ ೨ ಮೊಗವಜಿತಂ " (ಪಣಾಮು. ೦೨೬-೧೬); ಮನುಮೆಯು ತುಪ್ಪವಂ ಬಡಿಸಿ ಮೊಗವಜಿತವಂ [ಪಾಕಾಂ. ಮುಖವಿಜಿತವಂ. ಮುಖವಿವನಜಿತವ] ಪೂಡಿಕೊಂಬೆನು (ಪೋಪುಚ. ೩-೩೮). [ಮೊಗ + ಅಜಿತ]

ಮೊಗವಾಡ ' ಮೊಗವಡ ' ನೋ.

ಮೊಗವಾಡನಾಟಕ (ನಾ). ಮುಖವಾಡವನ್ನು ಹಾಕಿಕೊಂಡು ಆಡುವ ನಾಟಕ: "(ಕಲಾವಿಸೋದಿಗಳು ಮೊಗವಾಡ ಧರಿಸಿ ಅದಿಯಲ್ಲಿ ಮೂಕನಾಟಕವಾಗಿ ಆಡುತ್ತಿದ್ದ. ಅನಂತರ ಸಂವಾದ, ಸಂಭಾಷಣೆ, ಸಂಗೀತ, ಮೊ.ಮ್ಮೊಳಕೊಂಡಿದ್ದ) ವಾಟಕವಿಸೋದ ; ಮೊಗವಾಡನಾಟಕ" (ಪಾಪಾಂ. ೫೦೪೩). [ಮೊಗವಾಡ (< ಮೊಗವಡ) + ನಾಟಕ]

ಮೊಗವಾವುಡ, ಮೊಗವಾವಡ (ನಾ). ೧. ಮುಖದ ಮೇಲೆ ಹಾಕಿಕೊಳ್ಳುವ ಮುಸುಕು ; ಅವಗುಂಠನ : ಸಂಬಳಿಗೆದುಂ ಸಂಚಿ ಮೊಗವಾವುಡರನ್ನಗಂಬಳಿ ಹೊನ್ನ ಹಾವುಗೆಯು ಹೊಂಬಣ್ಣಿ ಮೆಯ್ಯ ಮಾನಿನಿಯರಾ ಕುವರಿಯ ದಿಂಬಳಿವಿಡಿದುದ್ದುದರು (ಪೋಪಚ. ೨೨-೬). ೨. ಮುಖವನ್ನು ಒರೆಸಿಕೊಳ್ಳುವ ಬಟ್ಟೆ : ಬಿಡದೆ ಜುಂಬಿಸಿದಧರನವು ತೊಡೆದಲ್ಲದೆ ಯೋಗ್ಯವಲ್ಲೆಂದು ಮೊಗವಾವುಡವಿಡಿದಿರ್ದಳೊತ್ತಿನಲಿ (ಪೋಪಚ. ೪-೬). **ಮೊಗವಾವಡ** : ೧. ಮುನ್ನೆ ಶಿವಮುಗ್ಧ ದೇವರೆಂದುಂ ನಾಡ ಮೊಗವಾವಡವ ಮಾಡಿಕೊಂಡಿರ್ದದೊರ್ವ ಪೆಲದೊಳ್ಬಲೆ ತನ್ನ ಮುಖಪದ್ಮವನದಂ ಭವಿ ಕಂಡನೆಂದಸುಪ ಬಿಟ್ಟು (ಪಾಕೋಚ. ೦೦-೪೬).

[ಮೊಗ + ಪಾವುಡ]

ಮೊಗವಾಸ (ನಾ). ಬಾಯಿಯನ್ನು ಸುವಾಸನೆಗೊಳಿಸಲು ಬಳಸುವ ಒಂದು ಬಗೆಯ ಸುಗಂಧದ್ರವ್ಯ ; ಮುಖವಾಸ: ಸುಪಿಸುವರೊಂದು ತಿಂಗಳುತ್ತಮ ಸುಗಂಧಾಸುಲೇಪನದಿಂದ ಮೊಗವಾಸದಮಲತಾಂಬೂಲದಿಂ ಮಧುರ ಮಧುಪಾನದಿಂದೆಸವ ಸಂಯೋಗದಿಂದೆ (ಕೃಬಾಕಾ. ೦೩-೧೪). [< ಸಂ. ಮುಖವಾಸ]

ಮೊಗವಾಳೆ (ನಾ). ೧. ಒಂದು ಬಗೆಯ ಬಾಳೆ : ಕಳೆದುರುಳಿದ ಗಜದಂತೆ ಕೈಕಾಲ್ಬಾಲುಗಳಿವಾ ಪೆಲನೊಪ್ಪಿದುದು ಕಳಲೆ ಕದಳಿ ಮೊಗವಾಳೆ ಬಲ್ಗಿಸಿಕಿಲಹಳುವ ಕುಮ್ಮರಿಗಜಿದಂತೆ (ಪೋಪುಚ. ೩೭-೬೦). ೨. ಪರಿಮಳದಿಂದ

ಕೂಡಿದ ಹೂವುಗಳನ್ನು ಬಿಡುವ ಒಂದು ಬಗೆಯ ಸಸ್ಯ (?) : ಸುರಗಿ ಮೊಗವಾಳೆ ಬಂದುಗೆ ಪರಿಪರಿಯ ಸುಗಂಧಕುಸುಮ ಬಕುಳಾಳಿಮರ್ಕಂ (ಹರಿಹ್ಯ. ೬-೧೭). [ಮೊಗ ? + ದಾಳಿ ? (< ದಾಬ್)]

ಮೊಗವಿಕ್ಕು ' ಮೊಗವಿಕ್ಕು ' ನೋ.

ಮೊಗವಿಡು ' ಮೊಗವಿಡು ' ನೋ.

ಮೊಗವೀಣೆ ' ಮೊಗಬೀಣೆ ' ನೋ.

ಮೊಗವೀರ ' ಮೊಗೇರ ' ನೋ.

ಮೊಗವೂಜು (ಕ್ರಿ). ಮುಖವನ್ನು ಊರು.—ತಿಮ್ಮ.— ಚುಂಬ್ಯ : ತೋರಿವುವಾದ ಮಲ್ಲಿಗೆಯ ಮೊಗ್ಗೆಗಳೊಳ್ ಮೊಗವೂಜಿ ಬಿಟ್ಟು ಭೋರ್ಭೋರೆನೆ ವಾಯ್ದು . . . ಕಾಜು ಕಡರಿಟ್ಟುವ ಪುತ್ರಮಧುವ್ರತಾಂಗಗಳ್ (ಅಂಡಾಪ. ೯-೦೦೬). [ಮೊಗ + ಊಜು]

ಮೊಗವೆಜು ? (ಕ್ರಿ). ಕಾಣಿಸಿಕೊಳ್ಳು (?) : ಅಗಣಿತ ಬಿದ್ದುದ ತರೆ ಸೊರೆ ಸುಳಿ ನಾಭಿ ಮೊಗವೆತ್ತು ಜಂತು ಮೇಲಕ್ಕೆ ನೆಗವ ನೀರ್ವನಿಗಳು ಮುತ್ತಿನಂದದಿ ಕಣ್ಗೆ ಸೊಗಯಿಸಿತಾ ಪುಣ್ಯಾಂಗಗೆ (ತೋಡಪ. ೬-೪೬).

[ಮೊಗ + ವೆಜು ?]

ಮೊಗಶಾಲೆ ' ಮೊಗಸಾಲೆ ' ನೋ.

ಮೊಗಸಂದಿಸು (ಕ್ರಿ). ಅಭಿಮುಖವಾಗು : ಎದುರಾಗು: ಮೊಗಸಂದಿ ಸಿದಪರಂಗಭವಗ್ರಹವಡರ್ದಂದದಿ ನೋಡಿದರು . . . ಪೂರ್ಣೇಂದುವದನೆ ನತಿತರ್ವಾಗಳ್ (ಪಡುಣಾ. ೩-೩೩). [ಮೊಗ + ಸಂದಿಸು]

ಮೊಗಸನ್ನೆ (ನಾ). ಮುಖಭಾವದಿಂದ ತಿಳಿಸುವ ಸೂಚನೆ ; ಮುಖವಿದ ಮೂಲಕ ಮಾಡುವ ಸಂಜ್ಞೆ : ಬಂದ ಸ್ಪಷ್ಟಾಲಕರ ಮೊಗಸನ್ನೆಯೊಳು ಕಳುಹಿದನು ದಾನೆಗಳಿಗೆ (ಕಾಣ್ವಾಣ. ೯-೦); ಅರಸೆ ನಿಸ್ಸನುಮತಪೆಯಿನೆ ನುಡಿಯದೆ ಭರತೇಶ ಮೊಗಸನ್ನೆಗೊಟ್ಟ (ಭರತ. ೪೯-೨೦) ; ಅಸುರಮರ್ದನನುಜೆ ಮೊಗಸನ್ನೆಯಂರಿ ಬೀಳ್ಕೊಳುತ (ತೋಡಪು. ೦೩-೬೩).

[ಮೊಗ + ಸನ್ನೆ]

ಮೊಗಸಾಲೆ, ಮುಖಸಾಲೆ, ಮೊಗಶಾಲೆ (ನಾ). ದೇವಸ್ಥಾನ, ಅರಮನೆ, ಭವನ ಇತ್ಯಾದಿಗಳ ಮುಂಭಾಗದ ಹಜಾರ ; ಪಡಸಾಲೆ ; ಮುಖಮಂಟಪ : " ಪ್ರಭಣಃ, ಪ್ರಭಾಣಃ. ಅಳಿಂದಃ — ಈ ಸಿ ಮೊಗಸಾಲೆ " (ಪಣಾಮು. ೩೦-೦೫೪); ಸಪ್ತಶಾಖೋತ್ತುಂಗರಮ್ಯಹರ್ಮ್ಯದೆರಡನೆಯ ಮೊಗಸಾಲೆಯೊಳಿಟ್ಟ ಪೊನ್ನ ಪಡಗಂಗಳೊಳಂ (ಹಂಸಣಾ. ೯-೨೩ ಪ); ರಾಜಧಾನಿ ಬನವಾಸಿಪುರವ ಜಯಂತೀ ಮಧುಕೇಶ್ವರದ ಮೊಗಸಾಲೆಯುಮುಂ (ಸಿ೨೭. XI-i. ೦೦೩-೨೩ : ೧೨೫೫ ಸಂ) ; ಸರಮನೆಯ ಮೊಗಸಾಲೆಯನ್ನು ಪ್ರವೇಶಿಸಿದನು (ಪುಪು. ೩). **ಮುಖಸಾಲೆ** : ಮುಂದಣ ಸೋಭನ × ವಂತಮಂ ಪುರಮಂ ಮುಖಿಸಾಲೆಮಾಡಮಂ ಮಾಡಿಸಿ ಚಕ್ರಿಯೊಪ್ಪಡಿದು ಪಾಸನಮಂ (ಸಿ೨೭. XI-i. ೬೪-೦೪: ೧೦೭೫). **ಮೊಗಶಾಲೆ** : ಬಂದನು ಮೊಗಶಾಲೆಗೆ ಕೋಪಾಟೋಪದಿಂದ ಪೆಜ್ಜು ಟಿದು ಕಂಪಿಲನು (ಕಬಾಸಾಂ. ೪೪-೦೫೬); ಭದ್ರಮಂಟಪದ ಮುಂದಣ ಮುತ್ತಿನ ಮೊಗಶಾ[ಪಾಣಾಂ. ಸಾ]ಲೆಯೊಳ್ . . . ಓಲಗಂಗೊಟ್ಟು (ಧಾಚರಿ. ೦೩-೩೦ ಪ); ಆಕೆ ನೇರವಾಗಿ ಮೊಗಶಾಲೆಗೆ ಬಂದಳು (ಪರಿಣಾ. ೦೭).

[< ಸಂ. ಮುಖಶಾಲಾ./ತುಳು. ಮೊಕಸಾಲೆ, ಮೊಗಸಲೆ, ಮೊಗಸಾಲೆ; ತೆಲು. ಮೊಗಸಾಲ, ಮೊಗಸಲ]

ಮೊಗಸಿಂಡರಿಸು (ಕ್ರಿ). ಕಿರಿಸ್ಕಾರ, ಜುಗುಪ್ಸೆ, ಕೋಪ ಮೊದಲಾದ ಭಾವಗಳನ್ನು ವ್ಯಕ್ತಪಡಿಸಲು ಮುಖವನ್ನು ಗಂಟುಹಾಕಿಕೊಳ್ಳು : "ಮೊಗಸಿಂಡರಿಸು—ಮೋರೆಯ ಗಂಟಿಕ್ಕು" (ಪಾವೆಕೋ. ೩೭).

[ಮೊಗ + ಸಿಂಡರಿಸು]

ಮೊಗಸಿರಿ. ಮುಖಸಿರಿ (ನಾ). ೧. ಮುಖದ ಚೆಲುವು. ..ತೇಜಸ್ಸು,— ಕಾಂತಿ : ಕೋಡಗದ ಮೊಗಸಿರಿಗೆ ಕಾವಲಿಯೋಡು ಕನ್ನಡಿಯಾಯ್ತು (ಶಾಬ್ಧ. ೯-೦೩); ಬಿಂಬಾಧರದ ಕೆಂಬೆಳಗಿನೊಡನೆ ಸುಲಿಪಲ್ಲ ನುಗ್ಗೆಳಗು ಮೊಗಸಿರಿಯ ಪೈಸಿರಿಯಂ ಪಸರಿಸೆ (ರಾಚಕೋ. ೦-೦೩೫ ಪ). ಮುಖಸಿರಿ : ೨. ಮುಖಭಾವ. ಮುಖಮುದ್ರೆ : ತಿರಿವ ಗೊರವಾಗಿ ಕಂಚಕಂಡವರೆಲ್ಲ ನಗುತಿರೆ ಮುಂಡೆಯರ ಮುಖಸಿರಿಯಿ ತಾಳದೆಂಕೊಂಡು ಬಂದುದು ಭಂಗ ವಲ್ಲವೆ ಪತಿಯೆ ಬಿಡು ಸತಿಯ (ಕಾಶಾ. ೩೮-೦೪). ಪಿ. (ಕರಾ) ವಿಗ್ರಹ ಗಳಿಗೆ ತೊಡಿಸುವ ಚಿನ್ನ ಅಥವಾ ಬೆಳ್ಳಿಯ ಮುಖವಾಡ.

[< ಸಂ. ಮುಖಶ್ರೀ]

ಮೊಗಸು₁. ಮೊಗೆಸು (ಕ್ರಿ). ೧. ತೊಡಗು ; ಉಪಕ್ರಮಿಸು ; ಆರಂಭಿಸು : "ಮೊಗಸು—ಉದ್ಯೋಗಾರಂಭೇ" (ಪಾಣಾ) ; ಮನೆಗೆಲಸಕ್ಕೆ ಸಯ್ತು ಮೊಗಸಲ್ಕಣಮಾಜಿದೆ ಜೋಡಿ ಹೂಂಕೃತಧ್ವನಿ ಮಿಗಲಿಕ್ಕರಾಗಂಗಳಿ (ಸಖಚ. ೯-೦೦೯); ಮಂತ್ರಿಪುತ್ರರುಮಂ ಕೂಡಿಕೊಂಡು ನವಕ್ಕೀಡಿಗ ವಿನೋದಜಲಕೇಳಿಗಳಂ ಮೊಗಸಲೊಡನೆ (ಆರ್ಷಚೆ. ೯-೦೩೨೮): ಜೋಗುನೆಲೊಳ್ ಮೊಗಸಿ ಬೈಗುಪರಿಗಂ ಬೇಟವೆಸದಿನಸುವರೆಯಾಗಿ (ಸಂದ್ರಪು. ೬-೪ ಪ). ೨. ಎದುರಿಸು; ಪ್ರತಿಭಟಿಸು; ಹೋರಾಡು ; ಕಾಲನಳವಿಗೆ ಮೊಗಸಿನಿಂದ ಕಪಾಲಿಗಿಮ್ಮಿಗಿಲೆನಬಹುದು (ತೋಡಾ. ೬-೨೦-೬೦); ಇವನ ಭೇದಿಸ್ಪೋಡವನೆಡೆ ಗಾಣನವನ ತಾನಿವನು ಭೇದಿಪೊಡೆಡೆಯಿಲ್ಲ ಅವಿರಣದಂತೆ ಮೊಗಸಿ ಬಾಣ ಬಾಣಗಳ್ ತಮಮುರುಳಿದವಂತರದಲಿ (ಕರಗಾ. ೬-೦೪); ತುಮುಲ ಮೊಗಸ ಡಗು ಮರಳದರೊಡರ್ಚ(ಕೃಬಾಣಾ. ೨೯-೪೩).ಪಿ.ಸುತ್ತುವರಿ; ಆಕ್ರಮಿಸು; ಆವರಿಸು : ಕಳ್ಳ ಗಂಧಕ್ಕೆ ಮೊಗಸಿದ ನೊಣಂಗಳೆಲ್ಲಂ ಸಾವುದಂ ಕಂಡು (ರಹಾಸ್ಯ. ೦೨-೦೫೬). ೪. ಧಾಳಿಮಾಡು; ಎರಗು : ಲತಾಂಗಿಯರ ಸುಯ್ತ ಕಂಪಿಂಗಳಿಗೆಳ್ ಮೊಗಸಿ ಮುಸುಱಿದುವೆ (ಆದಿಪು. ೦೦-೬೦); ತಳರ್ದರ್ ಕುರುಕ್ಷೇತ್ರಕ್ಕೆ ಮೊಗಸಿವಾಗಳ್ (ಹಂಪಣಾ. ೦೦-೩೬ ಪ); ಗಿಳಿವಿಂಡ್ಗ ಗಿದಿಗನು ಮೊಗಸಿದಂತೆ (ಅಕ್ಕಣಾ. ೬-೬-೬). ಪಿ. ಇಚ್ಛಿಸು; ಬಯಸು; ಅಪೇಕ್ಷಿಸು : ಪಸುಣೀಣಂ ಲಗ್ಗಮಾಡಲ್ಕೊಗಸಿ ಪೊಗಸಿ ದುರ್ಗಕ್ಕಭವ್ಯಾತ್ರಮಂ (ಅಪಪ್ರ. ೦೨-೨೦); ವಿಮಲಾಂಗಿಯುನ್ನತದ ರೂಪೋತ್ಪತ್ತಿಯಿ ಮೊಗಸಿ (ಜಾಸೋಕ್ತ. ೦೦-೬೦); ನೀರ್ವಕ್ಕಿಗಳ್ ಜಳಕೇಳಿಗೆ ಮೊಗಸಿದುವು (ಜಾಪಪ್ರ. ೩೦-೨೪). ಪಿ. (ಪ್ರಯಾಣಕ್ಕೆ) ಹೊರಡು; ನಾಗು: ಅಟ್ಟಿಱಿ ನೊಳಯೋಧ್ಯೆಗೆ ಮೊಗಸಿದಪ್ರಜಿತೆಯು ಪಱಿ ಪಲುವೆಸೆಯೆ ಭರತಮಹೀಶಂ (ಆದಿಪು. ೦೧-೨); ಕಳದ ಹೆಣಸೊಟ್ಟಿಲಲಿ ಮೊಗಸುಪೊಡಳುತಿಹರು (ಶಾಬ್ಧಚೆ. ೩-೦). ಪಿ. ಮೂಡಿಸು; ಪ್ರಕಟಿಸು : ಸೊಕ್ಕುಜವ್ವನೆ ತರುಣರ ಹಾಸಮಂ ಮೊಗಸೆ ಕೆಲಬ್ಬಿಸುರು ರಶ್ಮಿ ಪರಿಪಿಕೊಂಡುದು (ಪಪು. ೬-೨೩).

ಮೊಗೆಸು : ೮. ತುಂಬಿ ಹೊರಸೂಸುವಂತೆ ಮಾಡು ; ಹಾಲುಹೊಳೆ ಮೊಗೆದಿನು (ಕಡಣಾ. ೧.೪೩೦). ೯. (?): ಯದಕೆ ಆವವ ಅಳುಪಿದವರಿಗೆ ವರಣಾಸಿ ಆ ಗಂಗೆಯು ತವಿಯಲಿ ಯೇಳುನೂರು[ಕ]ಬಲೆ ತಂಪು ತಂದ ಪಾಯಿಯನು ಕೊಂಡವರು ಮೊಗೆಸುಗೆ (ಆಶ್ವ. VIII (ಬಿ), ಪಾಸಪ್ರ. ೦೫೫ ೫೦ ; ೧೪೬A).

ಮೊಗಮೊಗಸು (ದ್ವಿರುಕ್ತಿ) : ಮೊಗಮೊಗಸಿ ಮುಂಬರಿವ ಕುದುರೆ ಸಾರಥಿಗಳಂ. . . ಪಜಿವಡನ ಬಿಲ್ಲನಿಕ್ಕಡಿಗೈದು ಪೊಬ್ಬಿಡಿದು (ಕೃಬಾಣಾ. ೦೨-೩೨). [ಮೊಗೆ + — ಸು ./ತಮಿ. ಮುಯಲ್; ತೆಲು. ಮೊಗಿಮು;]

ಮೊಗಸು₂ (ನಾ). ೧. ತೊಡಗುವಿಕೆ; ಪ್ರಾರಂಭಿಸುವಿಕೆ : ಮೊಗಸಂ ಪಿಲ್ಲಸೆ ಪರಿಪೂರ್ಣತೆಗೆಲ್ದೇರುವಾರ್ವನವರ ತನವ ಗೆಲ್ಲವ ಕವಿ ನಿರವಿಪಂ (ಸಂಪಾ. ೦೩-೬). ೨. ಬಯಕೆ; ಅಪೇಕ್ಷೆ: "ಪಾಕುಳಿ, ಮೊಗಸು, ಪುಂ, ಇಚ್ಛೆ _ ತಾ ೪ ಇಚ್ಛೆ" (ಪಣಾ. ೩೭-೨೬೬); "ಇಚ್ಛೆಯುಂ ಮೊಗ[ಪಾಣಾ. ಮುಂಗು]ಸೆಂದಿಸಕ್ಕುಂ" (ಅಂಕೃ. ೬೨); ಜೊಜ್ಜಬನ್ನೀಯೆಂ ಸನಿಪಿಸಿದ ಪಾಜ್ಮೊಗಸಂ (ಗಣಪ. ೩೭-೦೪). [< ಮೊಗಸು₁./ ತುಳು. ಮೊಗಸ್]

ಮೊಗಸುತ್ತು (ನಾ)· ೧. ತಲೆಗೆ ಸುತ್ತುವ ವಸ್ತ್ರ: ಪಾಗು: ಅಂತು ಬಂದು ಮೊಗಸಾಲೆಯೊಳ್ಕೆಯ್ಯಿಕ್ಕಿ ಮೊಗಸುತ್ತಿನ ದುಗುಲದ ಬಿನ್ನಪದ ಸೆಜಗನಧರಪಲ್ಲವಕ್ಕೆ ತೆಗೆದು . . . ಉದಯಸುಂದರಕುಮಾರನರಮನೆಯ ಬಾಗಿಲೊಳ್ಬಂದು ನಿಂದಿರ್ದನಂದು ಬಿನ್ನಪಿಸೆ (ಹಂಪಕಾ· ೨-೨೪). ೨. ದಿಗ್ಭ್ರಮೆ: ಕಕ್ಕಾಬಿಕ್ಕಿ: ಗೊಂದಲ: ಅಪಸು.ಮೊಗಸುತ್ತಿನ ನಿದಾರಯಿಸ ದುರ್ಮದಿಂದ ಅವುದಾದೂಂ ಅನಾಯತಕ್ಕೆರಗಿ ದಾರಿಗಿಡದಂತೆ ನೀನು ನೋಡಿಕೊಳ್ಳುತ್ತಿರಬೇಕು (ಪಟ್ಟಿಕ. ೩೯-೨೨). 'ಮುಖಸುತ್ತು' ಪರಾ. [ಮೊಗ + ಸುತ್ತು]

ಮೊಗಸೂಸಿಗೆ (ನಾ)· (ರಥದ) ಮುಂಭಾಗದಲ್ಲಿ ಸಿಕ್ಕಿಸಿರುವ ಕಡಾರಿ: ಜೊರಿಸುವ ಮೊಗಸೂಸಿ[ಪಾಠಾಂ. ರಿ]ಗೆಯ ಕೊಲ್ಲಾರಿಗಳ ಶರಬಂಡಿಗಳ ಹೊದೇರು ಕಡಿದವು (ಕಾಸ್ಕಾಕ್ರೀ. ೯-೨೨).

[ಮೊಗ + ಸೂಸಿಗೆ (< ಸೂಲಿಗೆ)]

ಮೊಗಳು, ಮುಗುಟು (ನಾ)· ೧. ಎಳನೀರಿನ ಮೇಲುಭಾಗದ (ಕೆತ್ತಿ ತೆಗೆಯಬಹುದಾದ) ಸಿಪ್ಪೆಯ ಭಾಗ: ಎಳನೀರ ಕುಯಿದಿಳುವಿ ಕಣ್ಣಸವಾದ ತಾಣದೊಳಗಿರಿಸಿ ಮಜ್ಜಿಗಿಸಿ ಮೊಗಳ ಕಳೆದು ನಿಂಬೆಯ ಹಣ್ಣಿನ ಹೊಸ ಪುಳಿಯ ಪಿಳಿವಾ (ಸೂಪಶಾ· ೩-೩೦); ಎಳನೀರೆಂ ಮೊಗಳ ತೆಗೆವು ಅದರಲ್ಲಿ ೧೮ತೂಕ ಅಳಲೆಕಾಯಿ ಚೂರ್ಣವ ಹಾಕಿ ತಕ್ಷಣವೆ ಕುಡಿಯಲು ರಕ್ತಾತಿಸಾರಂ ಕೆಡುಗುಂ (ವೈಕ್ಕ· ೩೦೦); ಹಸ್ಸೆರಡು ಎಳೆನೀರುಗಳನ್ನು ಕತ್ತುರಿ ಕತ್ತಿ ಮೊಗಳು ತೆಗೆದುಕೊಟ್ಟನು (ಹಂಗಾಕ್ಕ· ೩೦೯). ಮುಗುಟು: ೨. (ಕರಾ) ತೆಂಗಿನಕಾಯಿಯ ತೊಟ್ಟು. ೩. (ಕರಾ) ಗಡ್ಡೆಗಳ ಮೊಳಕೆ.

[ದೇ.ಕ ತಮಿ. ಮುಕಿಟು; ತುಳು. ಮುಗಡ್, ಮುಗಡ, ಮುಗೆಡೆ]

ಮೊಗಾರ ' ಮೊಗವಡ ' ನೋ.

ಮೊಗುಂ ' ಮೋಘಮ್ ' ನೋ.

ಮೊಗುಟು ' ಮಗುಟ್ಟು ' ನೋ.

ಮೊಗ್ಗೆ (ಕ್ರಿ)· ೧. ದ್ರವಪದಾರ್ಥವನ್ನು ಬೊಗಸೆ ಅಥವಾ ಪಾತ್ರೆಯ ಮೂಲಕ ತೋಡು, – ತುಂಬಿಕೊಳ್ಳು: "ಮೊಗೆ – ಜಲಾಕರ್ಷಣೇ. ಭೂಭೇದೇ ಚ, ಘಟಭೇದೇ ಚ" (ಹುಬಾ); ಮಹಾಂಬುಧಿಯ ಗೆತ್ತು ಮುಗಿಲ್ದುಂಬಿ ನೀರ ಮೊಗೆವಹೆಲ್ . . . ನೀರಾಡುತ್ತಿರ್ದುವು ಸುತ್ತ ಮಲ್ಲೆ ವನಕರಿನಿವಹಂ (ಆಪುಪು. ೭೦೩); ಬೆಲಗಸ ತೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು . . . ಬಗೆದುದಂದು ಜನಂಳ ನಚ್ಚೆಂದ್ರಿಕಾಂಬುವಂ (೧೨೩[೬-೧೬); ತಲೆಗಳ ಬಟ್ಟಲಿಂ ಮೊಗೆದು ನೆತ್ತರನಾಗಳೆ ಈಂಟಿಯಿಂಟಿ . . . ಕೈಪಜೆಯೊಳಾಡುವ ರಕ್ಕಸಿಯರ್ಕಳೊಪ್ಪಿವರ್ (ಹಬ್ಬಾ. ೨೧೩); ಜಲವನಜಮಂಳಿಯಿಂದ ಮೊಗೆದೀಂಬಲಂ (ಕುಪ್ರಾ· ೨೬-೦೬). ೨. ಬಾಚು; ಗೋರು: ಸಹಕಾರದಾಡಿಮಫಲವ್ರಾತಂಗಳಂದಾಗಳಂ ತನಗೆಂಪಂ ಮೊಗೆದಕ್ಕಿ (೩೦೯೬. ೨-೭೦); ನೀಹಪೀಠದ ಸೀಗರೆದ ಶಿರುವ ಮೊಗೆದಕ್ಷಿ ತೆಗೆದಕ್ಷಿ (೧೦೪· ೪-೦೦೯ ಪ); ಸೂಸುವ ಮಿದುಳ ಮೊಗೆದೆಣ್ಣೆಸೆಗೆ ಸಾಲಿಡುವ ಅಪಗನಾಯಿದು ಕದಱಿ ರಕುತವ ತಾಡುತೆ ಚಿಲ್ಲುವ ಕರಿಯ ಬರಿಕ್ಕೆ ಬಿಡಿಸಿದವ್ ಪುಟ್ಟಾಗಿ ಯಮರಾಜನ ಪರಿಗ್ರಹಕೆ (ಕಾಪ್ರಾ· ೨-೦೨). ೩. ಕುಡಿ: ಈಂಟು: ಅಮೃತವೃಷ್ಟಿಗಳಂ ಕಱಿವಂತಾ ಪೇಳ್ದ ತಿರ್ದಿದ ಕೃತಿಯಂ ಬುಧರ್ ಕಿವಿಗಳಿ ಮೊಗೆವರ್ (ಕಮುದ·೦-೩೪); ಸರಸಿಯಲಿ ಮೊಗೆವಟ್ಟು ಮೊಗೆದಪ್ಪ ಪರಜಲಪನೆಪರೆಕ್ಕೆ ಹಿಗ್ಗಲಾ (ಕುಪ್ರಾಕ್ರೀ· ೦೦-೪೪). ೪. ಹೊರಹೊಮ್ಮಿಸು: ಹೊರಹಾಕು: ತರುಣಿ ಪೇಣೆಯ ಪಿಡಿವಳು . . . ಮಧುರಗೀತದ ನುಡಿಯೊಳು ತನ್ನೆದೆಯ ಭಾವವ ಮೊಗೆವಳು (ಕತಿಂದಾ· ೩೨-೬); ಪ್ರತಿಕ್ಷಣಕ್ಕೂ ಮಾಡಿದ ಪಾಪವೆಲ್ಲ ಇತಿಹಾಸವಾಗಿ ಅವಳ ದೇಹವಿಷವನ್ನು ಮೊಗೆದುಮುತ್ತಿತ್ತು (ಸ್ವಾಕಾಮು. ೨೫೪). ೫. (ತುಂಬಿ) ಹೊರಸೂಸು: ತುಳುಕು: ಸುರಕ್ಕೆ ದಿಗಿಭಂಗಳ್ ಬಳ್ಕೆ . . . ಬೆಟ್ಟುಗಳ್ ಜರಿಯಿ ಕಡಲ್ ಮೊಗೆದೆ ಜಿತ್ತಾತಕಪೊಗೆಯೆ ಸಪ್ತನಭ್ಬರಂ ಕಡಿದಾಯ್ತು (ಜಾಪಾಕ್ಕ· ೦೩೦-೩೭); ಇವಳ ರಸದೆದೆಯ ಮುನ್ನೀರು ಮೊಗೆದುಮ್ಮ ಸೊರೆಯ ಚಿಮ್ಮಿತ್ತು (ಕದಂ· ೧. ೨೩೪). ೬. ಎರೆ; ಸುರಿ: ತರಕಾರಿ ಗಿಡಗಳಿಗೆ ಏತದ ನೀರು ಮೊಗೆಯುಲು . . . ಉದಾಸೀನಪಟ್ಟುದಿಲ್ಲ (ಕ್ರೈಂತಿಮು· ೩). ೭. ಧಾಳಿಯಿಡು: ಆಕ್ರಮಿಸು: ಏನ ಮೇಳುವೆಪವನು ನೃಪ ತಪಸೂನುವಿನ. ಮೋಹರದೊಳ್ಕಜ್ಜಾವಿಗಳನುಪ್ರರಿಸಿ ಗಗನವ ಮೊಗೆವ ಕುದುರೆಗಳ (ಕುಪ್ರಾಕ್ರೀ· ೯-೩೦); ಹಾಯಿತುರಿ ಹೊದಜಿದ್ದು ಕೊಡಲಿಯ ವಾಯು ಧಾರೆಯಲಬಿಳಜಗ ಜರಿದಾಯಿಸಲು ಸೀಪರಿಸಿ ಶಿಖಿ ಮೊಗೆದುದು ಮರುತ್ಪಥವ(ಕೂಪಶಾ· ೦-೦೬-೦೦). ೮.(ಅಲಂ) ಸೆರೆ ಹಿಡಿ: ಉತ್ಪನ್ನ ಗೋಗ್ರಹಂ ಪರಿದುಮಾಗ್ರಹವಂ ಮನದೊಳ್ ತಗುಳ್ದೆ . . . ಬಂದು ಮುತ್ತ ಮೊಗೆದಂ ವಿಭು ಗೋಕುಲಮಂ ವಿರಾಟನಾ (ಕಂಪಾಂ· ೪-೪೨). ೯. ನುಂಗು: ಕಬಳಿಸು: ಅಡವಿಯಂ ಮೊಗೆದು ಸುಡುವಗ್ನಿ ಗಾಪೋರನದ ಗೊಡವೆಯೇಪುದು (ಜಪಾಂ· ೬-೪೬); ಭುಗಿಲು ಭುಗಿ ಭುಗಿ . . . ಎಂದೊಗೆದು ದಳ್ಳುರಿಯುಗಳಲ್ಬಿಂಬರಕುಗಿದು ಜಿಗಿದುದು ಮತ್ತೆ ಪರಿದುದು ಲೋಕ ಬೆದಜ್ಜುತಿರೆ ಮೊಗೆದು ಮುಕ್ಕಿತು ಕೊರಳ ಕಡಿಯಲು ನೆಗದು ಹಾಱತು ರುಂಡ ಶೋಣಿತವೊಗುತ (ಕೌಪಾ. ೩೬-೭೪).

ಮೊಗೆಮೊಗೆ (ದ್ವಿರುಕ್ತಿ): ಮೊಗೆಮೊಗೆದು ನೆತ್ತರಂ ಪವನಸುತಂ ನೆತ್ತಿಯೊಳೆಜೆಚಜಿಬಿಸಜಿಬೊಜ್ಜಿ . . . ಕೇಶವನೆತ್ತಂ ಪಸರಿಸಿದಂ (ಜಂಪಾ· ೦೨-೦೩೩); ಶಂಭುವೀಯೋಗಸುಖಾಮೃತವನೆಯ್ದೆ ಮೊಗೆಮೊಗೆದು ಕೀರ್ಮಿ (ಕವ್ಯಶ·-೬-೩೬); ಒಡೆದು ಬೊಮ್ಮನಜಾಂಡವೊಂದೆಡೆ ಕವಲ · ಮೊಗೆಮೊಗೆವಲ್ಲಿ ಕಾಂಬುದೆ (ಕೌಪಾ· ೦೩-೮೩).

[ದೇ.ಕ ತಮಿ. ಮುಕ್; ತುಳು. ಮುಗವು· ಮೊಗಪ್ಪು; ಕೋತ. ಮುಖ್]

ಮೊಗ್ಗೆ₂, ಮುಗ್ಗೆ, ಮೊಳೆ (ನಾ). (ನೀರು ಮುಂತಾದ ದ್ರವಪದಾರ್ಥವನ್ನು ತುಂಬಿಕೊಳ್ಳಲು ಬಳಸುವ) ಮಣ್ಣಿನ ಪಾತ್ರೆ: ಎಮ್ಮಾಕಯ ಕೈಯ ಮೊಗೆಯು ನೀರಿನಲ್ಲಿ ನಾಮವ ತೀಯಲಾಗಿ ನಾಮವುಳಿದು ನೀರಳಿಯುತ್ತು (ಸಾಪ. ೪· ೩೫. ೨೦೯-೩೩೦); ಒಂದು ಮೊಗೆಯಕ್ಕಿಗಱ್ಕೊಂದು ಮೊಗೆ ಮಜ್ಜಿಗೆಯನೊಂದಾಗಿ ಬೆರಸಿ (ಸೂಪಶಾ· ೩-೪೯); ಪೊಸಮೊಗೆಯೊಳುಂ ಸುಣ್ಣ ತುಂಬಿರಿಸಿರೆ (ಗುರುಚಾ· ೦೩-೭೩). ಮುಗ್ಗೆ: ಇಪ್ಪತ್ತು ಮುಗೆ ನೀರು ಹೊಯ್ದು (ಸಾಪ್ರ· ೨೨೩). ಮೊಳೆ: ಅರವಟ್ಟಿಗೆಗೆ ಗುಡಾಣ ಬಿಂದಿಗೆ ಕರಗ ಮೊಳೆಗಳ ಕ್ರಯಾಕ್ಕೆ (ಸೌಪಾ·-IX-i· ೪೩೬-೨೮; 1412).

[< ಮೊಗ್ಗೆ₁/ತಮಿ. ಮುಕ್ಕೆ; ತುಳು. ಮುಗಯಿ· ಮುಗೆ· ಮುಗ್ಗೆ]

ಮೊಗ್ಗೆ₃ (ನಾ)· ಒಂದು ಬಗೆಯ ಭೂಮಿ: ಹಳದಿಬಿಣ್ಣದಿಂದ ಕೂಡಿದ ಫಲಪತ್ರಾದ ಭೂಮಿ: ಸರ್ವಸಮಸ್ಯ ಮೊಗೆ ಮಾತ್ರಾಜಂಗಂ (ಸೌಪಾ. XI-ii· ೦೦೯-೩೨; ೪೩೭); ದೇವಗ್ಗೆರೆ ಬಿಟ್ಟ ಬೆದ್ರಲು ಮೊಗೆ ಮತ್ತ ೬ (ಸೌಪಾ. IX-i· ೪೩-೦೫; 1030 ಗ); ಶ್ರೀಮಾನ್ಯವಾಗಿ ಬಿಟ್ಟ ಕಯ ಹಗರಡಿಯಂ ಪಡುವಲು ಮೊಗೆ ಮತ್ತರು ೪ (ಸೌಪಾ. IX-i, ೪೦೭-೩೭; 1223). ' ಮೊಗರ್ವು ' ಪರಾ. [?]

ಮೊಗೆತರ್ (ಕ್ರಿ)· ತುಂಬಿಕೊಂಡು ತರು: ಘಂದೋಂಬುರಾಶಿಯೊಳ್ ಮೊಗೆತಂದವನಾತ್ಮೀಯಸತಿಗೆ ವಾಕ್ಯಗನುರ್ದಂ (ಕಂದಿಪು೦೨: ೦-೩೦).

[ಮೊಗ್ಗೆ + ತರ್]

ಮೊಗೆಬಲೆ ' ಮೊಗೆವಲೆ ' ನೋ.

ಮೊಗೆವಲೆ, ಮೊಗೆಬಲೆ (ನಾ). ಮೀನನ್ನು ಹಿಡಿಯಲು ಬೆಸ್ತರು ಉಪಯೋಗಿಸುವ ಒಂದು ಬಗೆಯ ಬಲೆ: ಅವ ಹಂಜರಕೂಳ ಮೊಗ[ಗೆ]ವಲೆ ಯಾವ ಗಾಣವು ಬೀಸುವಲೆಯುಱಿ ತೀವಿದುದಕದ ಮಡುವೆಯಿಜಾ ಸುಗ್ರಾಮಭೂಮಿ ಬಾಣ (ಕುಪ್ರಾಕ್ರೀ. ೩೩-೨೬). **ಮೊಗೆಬಲೆ**: "ದೊಡ್ಡ

ಬಲೆಯಲ್ಲಿ ಮೀನು ಹಚ್ಚಾಗಿ, ಆ ಬಲೆಯನ್ನು ದಡಕ್ಕೆ ಎಳೆಯಲಾಗದೆ ಹೋದಾಗ, ಕೆಲವು ಮೀನುಗಳನ್ನು ತೆಗೆದುಬಿಡುವುದಕ್ಕಾಗಿ ಅವರೊಳಕ್ಕೆ ಹಾಕುವ ಬೇರೆ ಸಣ್ಣ ಬಲೆ: ಮೊಗೆಬಲೆ" (Spiller. ೫೦೫).

[ಮೊಗೆ$_1$ + ಬಲೆ$_1$]

ಮೊಗೆವಾಲು (ನಾ)· ಮಡಕೆಯ ತುಂಬ ಇರುವ ಹಾಲು : ಶುನಕ ಮೊಗೆವಾಲಂ ಕುಡಿದು ಪೋಗೆ (ಪಚಿತ. ೦–೫೦)·

[ಮೊಗೆ$_3$ + ಪಾಲು$_1$ (< ಪಾರ್$_1$)]

ಮೊಗೆಸು ''ಮೊಗಸು$_1$'' ನೋ·

ಮೊಗೇರ, ಮೊಗವೀರ (ನಾ)· (ಕರಾ) ಮೀನುಹಿಡಿಯುವವನು ; ಬೆಸ್ತ ; ಮೀನುಗಾರ : ಪಡ ಮೊಗೇರರ ಮಗನೆ (ಭಾಪುಚಾ· ೩೭) ; ಎಲೆ ಮೊಗೇರನ ಮಗನೆ ಗಳಹದಿರು (ಶಕಾಗಾ· ೭) : ಕನ್ನಡ – ತುಳು ನಾಡುಗಳಲ್ಲಿ ಸ್ವಭಾವತಃ ಅತಿಶೂರರೂ ಧರ್ಮಶ್ರದ್ಧಾಳುಗಳೂ ಆದ ಮೊಗೇರರೆಂಬ ಅಂಬಿಗರಿರುತ್ತಾರೆ (ಕಪ್ರಇ· ೧೩). **ಮೊಗವೀರ** : ಕಡಲಲ್ಲಿ ತಮ್ಮ ಭಾಗ್ಯವನ್ನು ಅರಸಲು ಹೋದ ಮೊಗವೀರರ ದೋಣಿಗಳು ಪುಟ್ಟ ಬಾಕುಕೋಳಿಗಳಂತೆ ಕಾಣುತ್ತಿದ್ದುವು (ಶಪ್ರ· ೬–೫೩) ; ತರುವಾದು ಮೊಗವೀರ ಹುಡುಗಿಯರನ್ನು ಬ್ರಾಹ್ಮಣಕನ್ಯೆಯರನ್ನಾಗಿ ಪರಿವರ್ತಿಸಿ . . . ವ್ಯಾಪಾರ ಮಾಡಿಕೊಂಡರು (ಪೀಪಹಿ· ೪೪). [← ತುಳು. ಮೊಗೇರೆ]

ಮೊಗೇರತಿ (ನಾ)· ಬೆಸ್ತರವಳು ; ಮೀನುಗಾತಿ : ಮೂರೋ ತನ್ನೇತೆಯೇ ತಡ ಮಾಡಿ ಹೊಸಟ ಮೊಗೇರತಿ ಇರಬೇಕು (ಹೂಸ್ಥ· ೫೦).

[ಮೊಗೇರ + — ತಿ$_1$ (< — ಇತ್ತಿ)]

ಮೊಗ್ಗಂಬ (ನಾ). ಮೊಗ್ಗುಗಳನ್ನೇ ತನ್ನ ಬಾಣಗಳಾಗಿ ಉಳ್ಳವನು ; ಮನ್ಮಥ : (ಶಮಂ· ೪. II. ೧೩).

[ಮೊಗ್ಗು$_3$ (< ಮೊಗ್ಗೆ) + ಅಂಬು$_2$ + — ಅ$_2$]

ಮೊಗ್ಗರ, ಮೊಕರ (ನಾ)· ೧. ಮೊತ್ತ ; ರಾಶಿ : ''ಮೊತ್ತಮೊಬ್ಬಳಿಯಮು ಮೊಗ್ಗರಂ'' (ಶಪಾಂ· ೦೦೬) ; ಅಬಲೆಯ ಕಣ್ಣ ಬೆಳಗಿಂಗೆ ಬೆದಱಿ ಕಬ್ಬಲೆಯ ಮೊಗ್ಗರಂ ಮುಗುಳ್ದ ಮೂದಲಿಸಿ ಕವಿವಂತೆ (ಅಧಪ್ರಚ· ೪–೩೦ ಪ) ; ಕೋರೆಕದ ಕುಟ್ಮಲದ ಮೊಗ್ಗೆಯಾ ಮೊಗ್ಗರ ಗಳನಾಯ್ದು ಕೊಪ್ಪುವ (ಶಪಂಚ· ೭–೧೪ ಪ)· ೨. ಗುಂಪು ; ತಂಡ ; ಸಮೂಹ : ಕರಿಗಳ ಮೊಗ್ಗರವ ಪೆದಗೆಡಹಿದನು (ಭಾಷ್ಯ೦೮· ೮–೫೩) : ಹೆಗ್ಗರಡಿಯು ಹಿಂಡಿದೆ ಕಾಳ್ಕೋಣನ ಮೊಗ್ಗರವಿದೆ (ಭಾಣಾಂ· ೫೭–೭೦) ; ಮಗ್ಗಿಯನು ಗುಣಿಸುವ ಮೊಗ್ಗರವ ಜೋಯಿಸರು ಅಗ್ಗವನು ಮಳೆಯನಱಿಯರು (ಸಹಾಕ್ಷ· ೦೬೦೪)· ೩. ಚಂಡು ; ಸೈನ್ಯ ; ಬಲ : "ಮೊಗ್ಗರಮನೆ ಬಲಂ" (ಜಾಕಥ· ೭೭) ; ಬಿಲ್ಲನೀಟ್ಟುಕೊಂಡೆತ್ತುತೆ ಮೊಗ್ಗರಂ ಕೆಡವಿನಂ ಬಿಡವೆಚ್ಚು (ಶಂದ್ರಪ್ರ· ೫–೦೦೦) : ಮೊಗ್ಗರವ ಕದಱುದರು ಹೊಯ್ದರೆ ನುಗ್ಗಿದರು (ಭಾಷ್ಯ೦೮· ೪–೪) : ಲಗ್ಗೆ ಮಸಗಿತು ಕೂಡೆ ರಕ್ಕಸ ಮೊಗ್ಗರವ ಮುಂಬಿನಲಿ (ತೊಗಚ· ೬–೫೦–೫೦). **ಮೊಕರ** : ೪. (ಸೈನಿಕರ) ಪಂಕ್ತಿ ; ಸಾಲು : ಎಟ್ಟದಿನ್ದರು ಪರಮೊಕರಮನೊಡೆದೊಡೆವ್ವಡೆತ್ತದು ಪುಣೆ ಸೂರ್ಪ್ಪಾಲ ಸೆಲ್ಲುಪಾಣ್ಡ್ಯುವಲೆದಮ (ಕ್ಕಚಂ· ೦೯೫೦. ೫೬–೬ ; ಮು· ೫೯೮ ೫೫). [ದೇ.ಶ ತೆಲು. ಮೊಗ್ಗರ, ಮೊಗರ]

ಮೊಗ್ಗರಂಬಾಯ್, ಮೊಗ್ಗರವಾಯ್ (ಕ್ರಿ)· ಒಟ್ಟಾಗಿ ನುಗ್ಗು ; ಗುಂಪಾಗಿ ಮೇಲೆ ಬೀಳು : ಮುಂ ಗುಱಿಗದಱು ಮೊಗ್ಗರಂದಾ[ಭಾಷಾಂ· ಬೊ· ವಾ· ಬ]ಮ್ಮು (ಸಂಗಕ· ೦೮–೫೩). **ಮೊಗ್ಗರವಾಯ್** : ಮಾರಿ ಕನಲ್ದು ಸಂಗರಕೆ ಮೊಗ್ಗರವಾಯ್ದುಪುಲ್ (ಪಚಂ· ೭–೫೩) : ಉರಿದು ಭೂಮಿಸಿ ಕೆರಳಿ ಮೊಗ್ಗರವಾಯ್ದುದೆ ಬಜೆದೆ (ಕ್ರಕುಂ· ೦೫–೦೦)·

[ಮೊಗ್ಗರ + ಪಾದ್$_1$]

ಮೊಗ್ಗರಂಬೊಯ್ (ಕ್ರಿ)· ಗುಂಪಾಗಿ ನುಗ್ಗಿ ಹೊಡೆ. – ಧಾಳಿಮಾಡು : ಮಾಸಗಿ ಬೊಪ್ಪಬ್ಬು ದೆಸೆದೆಸೆಗೆ ಪರಿಮ ಮೂದಲಿಸಿ ಮುಂಗುವಿಗೆದಱು ಮೊಗ್ಗರಂಬೊಯ್ದು (ಗಂಶ· ೬–೬೬ ಪ)· [ಮೊಗ್ಗರ + ಪೊದ್$_1$]

ಮೊಗ್ಗರಣೆ (ನಾ)· ಒಂದು ಬಗೆಯ ಆಯುಧ : ಗದೆ ಚಂದ್ರಪಾಸ ವಿಷಂಡಿ ಮೊಗ್ಗರಣೆ ಕೃಪಾಣ ದಂಡರತ್ನಾಯುಧಾವಳಿಗಳದ್ದುವು ಸರ್ವಮಂಡಲವನೆ ಭುಗಿಲಿಡುತ (ಪಂಚ· ೫೦–೦೫೫). [?]

ಮೊಗ್ಗರವಾಯ್ ' ಮೊಗ್ಗರಂಬಾಯ್ ' ನೋ·

ಮೊಗ್ಗರಿಸು (ಕ್ರಿ)· ಒಟ್ಟಾಗು ; ಸೇರು ; ಗುಂಪುಗೂಡು : ಬಗ್ಗಿಸಿ ಮೊಗ್ಗರಿಸುತ್ತೊಗ್ಗುಗೆತದೆ ನಡೆಗೋಂಟೆಯಂತೆ ನಲೆವರ್ಚ ನಿಂದು (ಗಂಶ· ೬–೫೫ ಪ); ಆರ್ವ ಪೋರ್ವ ಮೊಗ್ಗರಿಪ ತೊಡಂಕುವಗ್ಗಲಿಪ ಬನ್ನಮೊಪ್ಪ ಕಡಂಗಿ ಕಾದಿದರು (ಶಾಹೀ· ೬–೫೬) : ಮೊಗ್ಗರಿಸಿ ಮೊರೆ ಮುಂಗಿಲೆ! ಏನುಗು ಮೊನೆಮಿಂಚೇ ! (ಗಂಸಂ· ೪೬–೨).

[ಮೊಗ್ಗರ + — ಇಸು$_3$]

ಮೊಗ್ಗಳ ' ಮೊಕ್ಕಳ ' ನೋ·

ಮೊಗ್ಗಿಸು$_1$ ' ಮೊಬ್ಬಿಸು ' ನೋ·

ಮೊಗ್ಗಿಸು$_2$ (ಕ್ರಿ)· ಬಗುಳು : ಗಗನದೊಳಗೆ ಹುಣ್ಣಿಮೆ ಹೋದ ಮಾಜುದಿನ ಪಗಲೆಸದಿರಲಾತಸೊದಲು ಮೃಗ ಮೊಲಗಂಡು ಮೊಗ್ಗಿಸು ವುದಂದದಿ ಮೊಗವೆತ್ತಿ ಗಳಹುತೆಯ್ದಿದುವ (ಪೀಚಪ್ರ· ೦೯–೦೩).

[ಮೊಗ್ಗು$_1$ + — ಇಸು$_3$]

ಮೊಗ್ಗು$_2$ ' ಮೊಟ್ಟು$_1$ ' ನೋ·

ಮೊಗ್ಗು$_3$ ' ಮೊಟ್ಟು$_2$ ' ನೋ·

ಮೊಗ್ಗು$_4$ 'ಮೊಗ್ಗೆ' ನೋ·

ಮೊಗ್ಗೆ, ಮಗ್ಗು$_3$, ಮಗ್ಗೆ$_1$, ಮೊಗ್ಗು$_3$ (ನಾ)· ೧. ಪೂರ್ತಿಯಾಗಿ ಅರಳದೆ ಇರುವ ಹೂಪು : ಮಲ್ಲಿಗೆಯಂ ; ಕುಟ್ಮಲ : "ಸಜ್ಜಾಜಮುಂ ಮುಗುಳು ಮೊಗ್ಗೆ ಕುಟ್ಮಳಮದು ತಾ" (ಕವಿಕ· ೬೨) : ಜಳಜದ ಮೊಗ್ಗೆಯಂತೆ ಮುಗುಳಂತೆ . . . ಕೆಂಪನಾಳ್ದ ಕೋಮಳಶುಕಶಾಖಾ ಪ್ರಕರಮಾ ತೆಗೆದಂ ದಸುಗೆಟ್ಟು ಲುಬ್ಧಕಂ (ಶಾದಂಪ್ರ· ೦೬೬) ; ಪೊಕ್ಕತ್ತು ತುಂಡಾಗ್ರದಿಂದೊಡದಂಭೋಜದ ಮೊಗ್ಗೆಯಂ ಮಧುಕರಂ (ಅಧಪ್ರ· ೨–೫೬) ; ಕುಸುಮದ ಮೊಗ್ಗೆಯಲಿ ರಚಿಸಿದರು ಸಿರಿಮುಡಿಯ (ಶಾಪ್ರ· ೬–೨) ; ಮಲ್ಲಿಗೆಯ ಮೊಗ್ಗೆಗಳನಮಲೋತ್ಪಲ್ಲಕುಂದಪ್ರಸವದೂರ್ವ . . . ಸಲ್ಲಲಿತ ಪುಷ್ಪಂಗಳಲಿ ಭೂವಲ್ಲಭನು ಪೂಜಿಸಿದನು ಜಗದೇಕವಲ್ಲಭನ (ಪಣಾಗ· ೫–೫–೦೨)· **ಮಗ್ಗು$_3$** : ೧. ಅವು ತದ್ದಶನನಿಕರಮಲ್ಲಿಳಿ ಮೊಲ್ಲೆ ಮಗ್ಗಲ್ಲ (ಪಚು· ೬–೭) ; ಮಾವನ ಮಗಾ ಮಗ್ಗಾಗಿ ಬಾರೊ, ತುರುಬೀಗೆ (ಪಾಬ್ರಹ್ಮ· ೭೭). **ಮಗ್ಗೆ$_1$** : ೧. ಚಿಟ್ಟಿದುವು ಸಹದೇವ ಶರದಲಿ ಮಲ್ಲಿಗೆಯ ಮಾ[ಭಾಷಾಂ· ಮೊ]ಗ್ಗೆಗಳು (ಭಾಪ್ರ· ೯–೭೫). ೨. (ಬಟ್ಟೆಯ ಮೇಲೆ ಮೂಡಿಸಿದ) ಮೊಗ್ಗಿನಾಕಾರದ ಚಿತ್ರ,— ಮಾದರಿ : ಕೆಂಪಾವರೆಮಗ್ಗೆಯ ಕುಪ್ಪಸವ ತೊಟ್ಟಳು (ಕ್ರೀಕೃಪಾ· ೦೭). **ಮೊಗ್ಗು$_3$** : ೧. ಇನೆ ಮೊಗ್ಗು ಅರಳು ಮೊದಲಾದವರಲ್ಲಿಯ ಗಂಧವ ನಱುವುದು (ಅಪ್ರ· ೭–೦೨) ; ಗಿಡದ ಕೈಮುಗಿಹ ಮೊಗ್ಗಾಗಿ ಮೈದೋರು ಕಿದೆ (ಕಾಕೀ· ೨೨–೨) ; ಅಜ್ಜನ ಬುದ್ಧಿ ಮೊಗ್ಗಿನ ಹಾಗೆ, ಪ್ರಾಜ್ಞನ ಬುದ್ಧಿ ಫಲದ ಹಾಗೆ (ಗಾಪ).

[ದೇ.ಶ ತಮಿ. ಮುಕ್ಕ, ಮೊಕ್ಕ ; ಮಲ. ಮೊಟ್ಟು ; ತುಳು. ಮುಗ್ಗೆ, ಮೊಗ್ಗೆ ; ಕೊಡ. ಮೊಗ್ಗ್ ; ತೆಲು. ಮೊಗ್ಗ, ಮೊಗಡ; ಕುಗ. ಮೊಕೊ]

ಮೊಗ್ಗೆಗೋಲ (ನಾ)· ಹೂವಿನ ಮುಗುಳುಗಳನ್ನೇ ಬಾಣವಾಗಿ ಉಳ್ಳವನು : ಪುಷ್ಪಾಸ್ತ್ರ ; ಮನ್ಮಥ : ಅಗ್ಗದ ದೊರೆಯ ಕಳೆಯನೆಂಬ ಗರ್ವವೋ ಮೊಗ್ಗೆಗೋಲನ ಸಭೆಗಿನಿಸು ತ್ತಿಗ್ಗಿ ಬಾ (ಪಂಚ· ೪೬–೭೦).

[ಮೊಗ್ಗೆ + ಕೋಲ್$_1$ + — ಅ$_7$]

ಮೊಗ್ಗೊಡೆ (ಕಿ). ಮೊಗ್ಗು ಆರಳು : ಹೂವಾಗು : ಜಲಜಾಪ್ತ ಮಂಡಲಂ ಕಡುರೆ ಮುಪಾಗೊಪ್ಪಿಡುತ್ತ ಬಿತ್ತರದೊಳೆತನೊಡಮುಲ್ ಚಕೋರಿ ಸುಖವಡೆಯಲು ರಥಾಂಗ ಮೊಗ್ಗೊಡೆಯಲಾ ವಲ್ಲಿಗಳು (ಹರಿಹ. ೨೨-೪೭). [ಮೊಗ್ಗು$_{2}$ (<ಮೊಗ್ಗೆ) + ಒಡೆ$_{1}$]

ಮೊಘಲ್ 'ಮೊಗಲ' ನೋ.

ಮೊಘೆ 'ಮೊಗ್ಗೆ' ನೋ.

ಮೊಚ್ಚಗ, ಮುಚ್ಚಿಗ$_{2}$ (ನಾ). ಚಪ್ಪಲಿಯನ್ನು ಹೊಲಿಯುವವನು : ಮೋಚಿ : ದೂರಿಗಳ ಮನೆಮುಚ್ಚಿಗ ಮೊಚ್ಚಗ [ಶಾಕಾಂ. ಮುಚ್ಚಿಶ] ರಿಯರೊಂದನೆಯ (ಹರಿಹ. ೩-೧೦). **ಮುಚ್ಚಿಗ$_{2}$** : ಎಲುಪ ನಾಯಿಗೆ ಹೊಲೆಯಗಂ ಮಾಂಸವನು ಮು[ಶಾಕಾಂ. ಮು]ಚ್ಚಿಗಗೆ ಬಳಿಕ ತೊಡಲೆಯಿಂತೆ (ಲಕ್ಷ್ಮೀ. ೨೦-೨೨) ; ಗಾನಗರ್ ಪಿಪ್ಪಿಗರ್ ಮುಚ್ಚಿಗರ್ . . . ಜೂಜು ಗಾಜಿರ್ ಮುಪ್ಪಿರೊದಗಿ ಬರುತಿರ್ದರು(ಪಂಪ. ೪೭-೪೦) ; ಮುಚ್ಚಿಗರ ಕೇರಿಯಲ್ಲಿ ಬಹಳ ಜನಗಳು ಉಳಿದಿರಲಿಲ್ಲ (ಪಂಕ್ರಕ್ರ. ೦೪೩).

[ಮೊಚ್ಚೆ (<ಮೊಚ್ಚೆಯ) + -ಗ]

ಮೊಚ್ಚೆ 'ಮೊಚ್ಚೆಯ' ನೋ.

ಮೊಚ್ಚೆಗಾರ 'ಮೊಚ್ಚೆಗಾಱ' ನೋ.

ಮೊಚ್ಚೆಗಾಱ, ಮೊಚ್ಚೆಗಾರ (ನಾ). ಜೋಡುಗಳನ್ನು ಹೊಲಿಯುವವನು : ಮೋಚಿ : ಮೊಚ್ಚೆಗಾಱ ಶಶಲಾತ್ಕೇನು ಬಲ್ಲ (ತೆಂಕ. ೨-೩೬-೨). **ಮೊಚ್ಚೆಗಾರ** : ಎಚ್ಚೆ ಹಂಚುವವರು ಮೊಚ್ಚೆಗಾರರು, ಕೊರವರು. ಮಾದಿಗರೇ ಮೊದಲಾದ ಜಾತಿಯು ಹೆಂಗಸರ ಮೈಸೋಕುವುದೆಂದು ಅಜಿ ಮೂರಿಂದ ಎಚ್ಚೆ ಕೊಡುತ್ತಿದ್ದರು (ಪಾಂಪ. ೧. ೨೯) : ಇವನು ಮೊಚ್ಚೆಗಾರನ ಮಗನೆಂದು ಹೇಳುತ್ತಾರೆ (ಪಂಗ್ಯಾ. ೨೦).

[ಮೊಚ್ಚೆ (<ಮೊಚ್ಚೆಯ) + -ಗಾಱ]

ಮೊಚ್ಚೆಯ, ಮಚ್ಚೆಯ$_{3}$, ಮೊಚ್ಚೆ, ಮೋಜ, ಮೋಜಾ, ಮೋಜು (ನಾ). ೧. ಮುಂಭಾಗದಲ್ಲಿ ಒಳಮುಖಿಕ್ಕೆ ಬಾಗಿರುವ, ಅಲಂಕಾರಯುಕ್ತವಾದ ಒಂದು ಬಗೆದು ಮೆಟ್ಟು,—ಪಾದರಕ್ಷೆ,—ಜೋಡು : ಚಿನ್ನದ ಸವಂಗಮಪೂರ್ವದ ಮೊಚ್ಚೆಯಂ ಪವಣ್ಣಜೆವ ಸುವರ್ಣಪಾರಿವದ ಕುಪ್ಪಸಮೊಪ್ಪೆ ಬೆದಂಗನಾಳ್ದ (ಪಂಪಭಾ. ೪-೦೦೩) : ಗುಡಿ ಪೆಣ್ ಕಂಟಣ ಗೋಣ ದಂಡಿಗೆ ಸವಂಗಂ ಮೊಚ್ಚೆಯಂ ಪಲ್ಲಣಂ . . . ಎಂಬಿವಿನಿತುಂ ದಂಡಿಂಗೆ ಸಾಮಗ್ರಿಗಳ್ (ಪಾಪ್ರಕ್ರಿ. ೦೪-೨೩) ; ಶಿರದೊಳಾಂತರು ಮೊಚ್ಚೆಯುವನಾ ಚರಣವಲಿ ಸೀಸಕವ . . . ಬತ್ತಳಿಕೆಯನು ಬಲುದಿರುವಿನಲಿ ಮೋಹಿದರು (ಕಾಪ್ಪಾಕ್ರಿ. ೦-೧೩). **ಮುಚ್ಚೆ$_{3}$** : ೧. ನಿಚ್ಚಳಗೆಲಸ ರೇಶಿಮೆಚಿತ್ರಗೆಲಸದ ಪೆಚ್ಚಿನ ಜರತಾರ ಕಲಸ ಮೆಚ್ಚುವಂದದಿ ಮಚ್ಚೆ ತರತರ ಮಾತುವ ಮುಚ್ಚಗಾಜಿರ ಕೇರಿಯಿಸೆಯೆ (ಕ್ಷಾಲಂ. ೩-೪೦) ; ಬಾಗಿಲ ಬಳಯಲ್ಲಿ ವಿಜಾಪುರದ ಮುಚ್ಚೆಯ ಜೋಡುಗಳು (ತೆಮಗು. ೩೦) ; ಪಾದಿಗರಿಂದ ಮಚ್ಚೆಯನ್ನು, ಪುರೋಹಿತರಿಂದ ಮಂತ್ರಪಪ್ಪೂ . . . ಪಡೆಯಬೇಕಾಗುತ್ತದೆ (ಪಶಾಪ್ರ. ೦೦೪). **ಮೊಚ್ಚೆ** : ೧. ಕೆಚ್ಚಗೆ ತಣವಿಲ್ಲ ಮೊಚ್ಚಗೆ ಹೊಲೆಯಿಲ್ಲ (ಪಡಾಸ್ಮೃ. ೪೮೬) ; ಮಮಮೆಯಲ್ಲಿ ವರನಿಗೆ ಕೊಡುವುದು ಕಾಲ್ಕರೆಯಲ್ಲ ; ಮೊಚ್ಚೆ (ಗಣಾಗ್ರಾ. ೦೪೭) ; ಕಾಲಲ್ಲಿ ಪುಗಿಯೆ ಮೊಚ್ಚಗಳಿದ್ದು ಕೈಯಲ್ಲಿ ಬೆತ್ತದ ಛಡಿಯಿತ್ತು (ಕೇವಾ. ೬). **ಮೋಜ** : ೧. " ಹರಡಿಸ ಮೇಲಕ್ಕೆ ಬಂದು ಪಾದವನ್ನೆಲ್ಲಾ ಮುಚ್ಚುವ, ಪೂರ್ತಿಯಾಗಿ ಅಥವಾ ಬಹುಭಾಗ ಚರ್ಮದಿಂದ ಮಾಡಿದ, ಪಾದರಕ್ಷೆ ; ಮೋಜು ; ಬೂಜು" (ಶಾಅಕ. ೨೦೪೩) ; ಅವರು ಹೊಸ ಚಕ್ಕಳದ ಮೋಜುಗಳನ್ನು ಧರಿಸಿಕೊಂಡು (ಶಾಅಕ. ೭). **ಮೋಜಾ** : ೧. ಕಾಲಿಗೆ ಬೆಲೆಬಾಳ್ವ ಮೋಜಾ ಧರಿಸಿ ಸುಬ್ಬಣ್ಣನವರು ಸಭೆಗೆ ದಯಮಾಡಿಸುತ್ತಿದ್ದುದೇ ಒಂದು ವೈಖರಿ (ಸಂಗೀಸಂ. ೨೭೩). **ಮೋಜು$_{1}$** : ೨. ಪಾದತಳದಿಂದ ಹಿಡಿದು ಮಂಡಿಯವರೆಗೂ ಬರುವಂತಹ. ಚಿನ್ನದ ಗಿಲೀಟು ಹಾಗೂ ಸರಿಗೆಗಳಿಂದ ಕೂಡಿದ ಒಂದು ಬಗೆಯ ಕಾಲುಚೀಲ : ಮಂಡಿಯವರೆಗೆ ಬರುವಂಥ ಬಹು ಲಕ್ಷಣವಾದ ಮೋಜುಗಳನ್ನು ಜಾಕಿ ಕೊಳ್ಳುತ್ತಾರೆ. ಈ ಮೋಜುಗಳಿಗೆ ಚಿನ್ನದ ಗಿಲೀಟು ಮತ್ತು ಸರಿಗೆ ಹಾಕಿರುತ್ತಾರೆ (ಕ್ರಡಾಶ. II. ೨೩೩).

[< ಕ್ಯಾ. ಮೋಜ. / ಸಂ. ಮೋಚಕ. / ಪಾರ. ಮೂಜಾ. ಮೋಜಪ್ : ಹಿಂ. ಮೋಜಾ ; ಮರಾ. ಮೋಜಾ. ಮೋಜಾ]

ಮೊಟಕಿಸು (ಕ್ರಿ). ೧. ಕುಗ್ಗಿಸು ; ಕಡಮೆಮಾಡು : ನನ್ನ ಪ್ರಶ್ನಾವಳಿಯನ್ನು ಇಲ್ಲಿಗೆ ಮೊಟಕಿಸಿದೆ (ಪಸುಚಿ. ೩೩೯). ೨. ಬಗ್ಗಿಸು : ಬಾಗಿಸು: ಅತ ಕಾಲು ಮೊಟಕಿಸಿಕೊಂಡು, ಮೇಲಕ್ಕೆದ್ದು ನಿಂತ (ಕಾಕಾಚ. ೭೬).

[ಮೊಟಕು$_{2}$ + -ಇಸು$_{5}$]

ಮೊಟಕು$_{1}$. **ಮಟಕು$_{1}$** (ಕ್ರಿ). ತಲೆಯನ್ನು ಮುಷ್ಟಿಯಿಂದ ಗುದ್ದು, —ತಿವಿ : ಮೊಟ್ಟು : ಪಾತವ ಕೆಡಗೆ ನಿಗವಿಲ್ಲದೆ ಕಟಕಿಪಾಜಿಗೆ ನೋಡುತ್ತಿದ್ದ ಹುಡುಗನ ತಲೆಗೆ ವಾಸ್ತರು ಮೊಟಕಿದನು (ಕಾಚ). **ಮಟಕು$_{1}$** : ಲಕ್ಕ ಸಿಯಾಗಿ ಮಾತಲಿಲ್ಲವೆಂದು ಅವನು ತಂಗಿಯ ತಲೆಗೆ ಮಟಕಿದ (ಕಾಚ).

[< ಮೊಟ್ಟು$_{11}$]

ಮೊಟಕು$_{2}$, ಮಟಕು$_{2}$ (ನಾ). ೧. ಮೊಂಡಾಮದು ; ಮೋಟು ; ಚಿಕ್ಕವು : (ಕ). (ಗು). ೨. ಮೊಂಡಾದ ; ಮೋಟಾದ ; ಚಿಕ್ಕದಾದ : ಮೊಟಕು ಮೂಗು, ಆಗಳ್ಕೆಬಾಯಿ (ಕ್ರಿಕಾಕ. ೭೭). **ಮಟಕು$_{2}$** : ಸಿ. ಹ್ರಸ್ವವಾದುದು ; ದೀರ್ಘವಲ್ಲದ್ದುದು.

ಮಟಕುಮಟಕಾಗಿ = ಹ್ರಸ್ವವಾಗಿ ; ದೀರ್ಘವಾಗಿಲ್ಲದೆ : ಯಾವ ಅಕ್ಷರಗಳು ಮಟಕುಮಟಕಾಗಿ ಸೂಕ್ಷ್ಮವಾಗಿ ಗದ್ದದವಾಗಿ . . . ವರಾಹ ಉಷ್ಣ ಮೊದಲಾದ್ದಕ್ಕೆ ಸಮಾನವಾಗಿಯಿರುವ ಧ್ವನಿಯುಳ್ಳವೊ ಆ ಕುದುರೆಗಳು ಶುಭಕರಗಳಲ್ಲ (ಪಾಸಾಂ. ೩೦೬-೦). **ಮೊಟಕಾಗು**= ಕುಗ್ಗು ; ಕಡಮೆಯಾಗು ; ಚಿಕ್ಕದಾಗು : ಮಾನನಷ್ಟದ ಆಪಾದನೆಯಿಂದ ಪತ್ರಿಕಾ ಸ್ವಾತಂತ್ರ್ಯ ಮೊಟಕಾಗುವಂತಿತ್ತು (ಕ್ರಕಾ. ೩೬೩) ; 'ಮತ್ತೆ ಭಟ್ಟಿಯಾಗೋಣ' ಎಂದಿಷ್ಟೇ ಮೊಟಕಾಗಿ ನುಡಿದು . . . ಮುಖವನ್ನು ಮೊರಳಿಸಿದಳು (ಹೊಸಕ್ಷಿ. ೦೪೯). **ಮೊಟಕುಮಾಡು** = ಕುಗ್ಗಿಸು ; ಕಡಮೆಮಾಡು : ತಮ್ಮ ಅತ್ಯೌತ್ಸುಕ್ಯದ ದರ್ಪವನ್ನು ಮೊಟಕುಮಾಡಿದರು (ಕಕ್ಷಕ. ೦೬) ; ಹಕ್ಕಿಗಳು ಚಲಿಪಲಿಬಿಯನ್ನು ಮೊಟಕುಮಾಡಿ . . . ಕುಳಿತವು (ಪಚಂಪ್ರ.೩೦೦): ಅವರ ಆಸೆಗಳನ್ನು ಮೊಟಕು ಮಾಡಬಾರದು (ಕಾಪ್ರ. ೦೪೪).

[< ಮಟ್ಟು$_{11}$ / ಸಾಮ್ಯ. ಮೊಟ್ಟಕ್]

ಮೊಟಲೆ (ನಾ). ಒಂದು ಬಗೆಯ ಸಸ್ಯ : ಪವಸಂಟಿಗೆ, ಮೊಟಲೆ, ಕರಿಮೊಟಲೆ . . . ಲತೆಗಳಿಂದಲು (ಕ್ಷಾಚಿ. ೩೦). [?]

ಮೊಟವಣ (ನಾ). ಒಂದು ಬಗೆಯ ತೆರಿಗೆ : ತೆರುವ ಸಿದ್ಧಾಯಗ ೨೩.೨ ಪರ ಹೊದಕೆ ಗ ೨೦ ತೂಕದ ಕುನ್ನೆ ಮೊಟವಣ ಗ ೩ ವೆಲೆಯ ಕಾಣಿಕೆ ಗ ೧ (ಇಕ್ಷ. XV. ಕೀವಾಶಾ. ೨೪೮-೩೦; ೧೭೫). [? + ಪಣ್ಣ]

ಮೊಟ್ಟ 'ಪುಟ್ಟ$_{11}$' ನೋ.

ಮೊಟ್ಟನೆ·(ಅ). ಒಂದು ಅನುಕರಣಾವ್ಯಯ : ಮೊಟ್ಟನೆ ಮುಜುದ ಲುಗಳಾಂ ಸಿಡಿಲ್ದು ಪಾಜುವ ಸಿರುಗಳಾಂ . . . ಮಹಾಭಯಂಕರ ಮಾಗೆ (ಪಾಜಾಪ್ರ. ೦೨-೩೪ ಪ). [ಮೊಟ್ಟ$_{7}$ + -ಅನೆ$_{1}$]

ಮೊಟ್ಟಜೆ 'ಮಟ್ಟಜೆ' ನೋ.

ಮೊಟ್ಟಪ (ನಾ). [ನಾಟ್ಯ] ಆಯತ. ಅವಹಿತ್ಥ. ಆಶ್ವಕ್ರಾಂತ. ಗತಾಗತ. ಪಲಿತ. ಮೊಟ್ಟಪ. ವಿನಿವರ್ತಿತಗಳೆಂಬ ಏಳು ಬಗೆಯ ಸ್ಥಾನಾಸ್ಥಾನಕಗಳಲ್ಲಿ ಒಂದು: P "ಒಂದು ಕಾಲನ್ನು ಸ್ವಭಾವವಾಗಿರಿಸಿ ಇನ್ನೊಂದು ಕಾಲನ್ನು ಅರ್ಧ ಕುಂಚಿತ ಮಾಡಿ, ಮುಂದುಗಡೆ

ಕೈಗಳನ್ನು ಮೇಲಕ್ಕೆತ್ತುವುದು : ಕಾಮೂವಸ್ಥೆಯನ್ನು ತೋರಿಸುವಾಗ ಇದನ್ನು ವಿನಿಯೋಗಿಸಬೇಕು " (ಶಾಸ್ತ್ರಂ. ಗಣ್ಯಕುಮಾರ. ೩೫) : ಒಂದು ಪದಂ ಸಮುದಿಂ ಮತ್ತೊಂದು ಪದಂ ಕುಂಚಿತಾರ್ಧತಲದಿಂ ಮತ್ತಂ ಮುಂದಿರೆ ಕೈಗಳ್ ಸಲವಿಂ ಚಂದದ ಮೇಲಕ್ಕೆ ನೆಗೆದು ಪೊಟ್ಟಿತ ಮನಿಕುಂ (ಶಾಸ್ತ್ರಂ. ೬-೩೦). [< ಸಂ. ಮೋಟಿತ]

ಮೊಟ್ಟ೧ ' ಮೊತ್ತ ' ನೋ.

ಮೊಟ್ಟ೨ (ನಾ). ಮುಷ್ಟಿಯಿಂದ ಕೊಡುವ ಹೊಡೆತ. — ಏಟು : ಕಾದಾಟದಲ್ಲಿ ಅವನಿಗೆ ನಾಲ್ಕು ಮೊಟ್ಟು ಬಿತ್ತು (ಕೂಡ). [< ಮೊಟ್ಟ೧]

ಮೊಟ್ಟ೩ ' ಮಟ್ಟ೩ ' ನೋ.

ಮೊಟ್ಟ೪ ' ಮಟ್ಟ೪ ' ನೋ.

ಮೊಟ್ಟ೫ (ನಾ). ತತ್ತಿ : ಅಂಡ : " ಪೇಶೀ, ಕೋಶಃ. ಅಂಡಂ — ಈ ೩ ಮೊಟ್ಟೆ " (ಪಥಾಮು. ೪೦-೬೭) ; ಮೊಟ್ಟೆಗಳನು ಮಾಡುವ ಬೇಹಾರಿಗಳಟ್ಟನೆಸುತಲೆ೯ದಿವರು (೪೦೩೦. ೦೦-೪೦) ; ಪಕ್ಕಿಯ ಗೂಡಿನ ವುತ್ತಿನ ಮೊಟ್ಟೆಯೋ (೦೩೪೯. ೩೦-೩) ; ಕೇಡುಗಾಲಕ್ಕೆ ನಾಯಿಮರಿ ಮೊಟ್ಟೆ ಇಕ್ಕಿತು (ಗಾಡ). [ದೇ.॥ ತಮಿ. ಮುಟ್ಟೈ ; ಮಲ. ಮುಟ್ಟ, ಮೊಟ್ಟ : ಕೊಡ. ಮುಟ್ಟೆ ; ಕೋತ. ಮೊಟ್ : ತುಳು. ಪೊಟ್ಟೆ]

ಮೊಟ್ಟ೬ ' ಮೂಡೆ ' ನೋ.

ಮೊಟ್ಟ೭ ' ಮಟ್ಟ೨ ' ನೋ.

ಮೊಟ್ಟ೮ (ನಾ). (ಎತ್ತುಗಳನ್ನು ಹೂಡಿ) ಬಾವಿಯಿಂದ ನೀರನ್ನು ಎತ್ತಲು ಬಳಸುವ ಒಂದು ಸಾಧನ, –ಚರ್ಮದ ಚೀಲ: ಕಪಿಲೆ : " ಸಮ್ಮದ ತಿತ್ತಿಯಂಡಂಗಗಳೊಳ್ಕೊಟ್ಟೆ " (ಶ್ರಾತಂ. ೪೦); ಹಳ್ಳದ ನೀರು, ಹೊಳೆಯ ನೀರು. ಭಾವಿಯ ಮೊಟ್ಟೆಯ ನೀರು (೪೬೬೨. ೩೪); ಮೊಟ್ಟೆಯ ಹಗ್ಗವನ್ನೆಳೆದುಕೊಂಡು ಮುಂದೆ ಹೋಗುವುದು. . . ಮತ್ತೆ ನಿಧಾನವಾಗಿ ಹಿಂದೆ ಹಿಂದೆ ಬರುವುದು (ಶ್ರಾಶಂಕ್ಷ. ೩೪). ಮೊಟ್ಟೆಹೊಡೆ = ಕಪಿಲೆಯ ಮೂಲಕ ಬಾವಿಯ ನೀರನ್ನೆತ್ತು: **ಕಪಿಲೆಹೊಡೆ** : ಆಮೇಲೆ ಹತ್ತಿರವಲ್ಲಿರುವ ಒರತೆ, ಹಳ್ಳಗಳೊಳಗಿಂದ ಮೊಟ್ಟೆಹೊಡೆದು ನೀರು ಕೊಡುವರು (ಕುಂಅಾ. ೩-೨೦೩); ಕಟ್ಟು ಬೀಲಿಯ ಭದ್ರ ಮೊಟ್ಟೆಹೊಡೆ ದಿನದಿನವು (೩೦೩೫. ೨೨-೨೦); ಮೊಟ್ಟೆ ಹೊತೆಯುವ ಸಪ್ಪಳ. . . ಪಾರ್ಶ್ವಸಂಗೀತವಾವಂತಿತ್ತು (೪೬೬೨. ೦೩೬). [← ದುರಾ. ಮೋಟ್]

ಮೊಟ್ಟೆಕಟ್ಟು ' ಮೂಡೆಗಟ್ಟು ' ನೋ.

ಮೊಟ್ಟೆಕಾಜಿ. ಮೊಟ್ಟೆಗಾರ (ನಾ). ಗಂಟಿ, ಮೂಟೆ ಹೊರುವವನು : ಮೊಟ್ಟೆಕಾಜಿರು ತಂದು ಮಾಜಿದ ಭತ್ತಧಾನ್ಯಗಳಿಗಾಗಿ ಹೊಂಗೆ ಮಾನ ಪ್ಪೊಂದು (ಈ. ೩೫, ೨೦-೨೩; ೩೭೯೭). **ಮೊಟ್ಟೆಗಾರ** : ಬೀದಿಯ ಮೊಟ್ಟೆಗಾರರು, ಕೂಲಿಯ ಆಳುಗಳು ಕೂಡ ನಿಶ್ಚಿಂತೆಯಿಂದ ಓಡಾಡುತ್ತಾರೆ (೩೪೪. ೩೪೬). [ಮೊಟ್ಟ೨ (< ಮೂಡೆ) + — ಕಾಜಿ]

ಮೊಟ್ಟೆಕೋಳಿ (ನಾ). ಮೊಟ್ಟೆ ಇಡುವ ಕೋಳಿ ; ಗಬ್ಬದ ಕೋಳಿ : ಸಾಯಂಕಾಲ ಮೊಟ್ಟೆಕೋಳಿ ಕೂಯ್ದಿಸಿ, ಹಸುವಿನ ತುಪ್ಪ ಹಾಕಿ ಅಡುಗೆ ಮಾಡಿಸಿ, ಕಟ್ಟೆ ಆಗುವಂತೆ ತಿನ್ನಿಸಿದರು (೩೩೬೦೫. ೩೭); ನೀನು ಹೊಟ್ಟೆ ಕಚ್ಚಿನ ಮೊಟ್ಟೆಕೋಳಿಯಾಗಿದ್ದೆ (ಪಾಹುತ್ತ. ೪). [ಮೊಟ್ಟ೨ + ಕೋಳಿ೧ (<ಕೋಳ್೧)]

ಮೊಟ್ಟೆಗಟ್ಟು ' ಮೂಡೆಗಟ್ಟು೧ ' ನೋ.

ಮೊಟ್ಟೆಗಾರ ' ಮೊಟ್ಟೆಕಾಜಿ ' ನೋ.

ಮೊಟ್ಟೆಗೂಳ್ (ನಾ). ಪೊಟ್ಟಣ ಕಟ್ಟಿದ ಆಹಾರ ; ಬುತ್ತಿ : ಕಾಡ ಮುಳು ನಟ್ಟು ಕುಂಟುವ ಪದಂ ಪೆನ್ನ ಪಿಗುಪಳದೆಲ್ಲ ಮೊಟ್ಟೆಗೂಳೆಡಹಿ ಕೆಪೆಡೊಪಿದ ಪೋಳ್ಕಾಲ್ ತೇಕುವಳ್ಳೆಗಳುಮೆಸೂಲುತ ಕಿಟ್ಟೋದುತಿರಲು (೩೩೫೦. ೬-೨೬). [ಪೊಟ್ಟ೨ (< ಮೂಡೆ) + ಕೂಳ್ (<ಕೂಟ್೧)]

ಮೊಟ್ಟೇರು (ನಾ). ಪೆಟ್ಟು ಬಿದ್ದಾಗ ರಕ್ತ ಸುರಿಯದೆ ಉಂಟಾಗುವ ಊತ : ಮೂಗೇಟು : ಕೈಗೆ ಬರಿಯ ಮೊಟ್ಟೇರಾಯಿತು. ರಕ್ತ ಹೊರ ಬರಲಿಲ್ಲ (ಕೂಡ). [ಮೊಟ್ಟ೨ (< ಮೊತ್ತು) + ಏರು೧ (< ಏಱ್೧)]

ಮೊಡಕು ' ಮುಡುಕ್ಕು ' ನೋ.

ಮೊಡಗು ' ಮಡಗು ' ನೋ.

ಮೊಡಮೆ 'ಮೊಡವಿ' ನೋ.

ಮೊಡವಿ. ಮಡಿಮೆ. ಮಡುಮೆ. ಮೊಡಮೆ. ಮೊಡವ್ವ, ಮೊಡವೆ (ನಾ). ಪ್ರಾಯಕ್ಕೆ ಬಂದಾಗ ಮುಖದ ಮೇಲೆ ಏಳುವ ಬೊಕ್ಕೆ ; ಹರೆಯದ ಬೊಕ್ಕೆ : ಕೌಂಕುಳನೆತ್ತಿ ಕಂಪನಾರಯ್ವುತುಮೊತ್ತುತುಂ ಮೊಡವಿಯಂ ಮೊಗಮಂ ವ್ಯಗನೇತ್ರೆ ದರ್ಪಣಕ್ಕಯ್ದುದುಂ (೭೬೫೫. ೭-೩೦) ; ಮೊಡವಿ ಮೂಡಿದ ಮೊಗಂ ಸೊಗಡುಗಂಪುಗೆದ ಮೈ (೬೩೮೫. ೦೮-೨೩) : ಮೊಸವಿಗಳಂತೆ ಮೂಡೆ ಪೊಪ ಮೊಗ್ಗೆಗಳಾ ಮಧುದೂತಿಯಲ್ಲಿ (ರಾಶಿ. ೯-೨೮). **ಮಡಿಮೆ** : ಆದಚೂರ್ಣಗಳನ್ನು ಉಜ್ಜುವುದರಿಂದ . . . ಮಡಿಮೆ, ಬಂಗು ಮುಂತಾದುವು ಉಂಟಾಗುವುದಿಲ್ಲ (೪೭೬೪. I, ೬೬). **ಮಡುವೆ** : ಪ್ರಾಯ ಬಂದ ಗಿಡಕ್ಕೆ ಮಡುವೆಗಳೆದ್ದ ಹಾಗೆ ಮಲ್ಲಿಗೆ ಮೊಗ್ಗುಗಳು ಗಿಡದಲ್ಲಿ ಮೂಡಿದ್ದವು (೩೭೬೬. ೪) ; ಮುಖದ ಮೇಲೆಲ್ಲಾ ಮಡುವೆಗಳು ಹರಡಿಕೊಂಡಿದ್ದವು (೪೦೫೩. ೦೪೪); ಮುಖದ ಮೇಲಿನದೊಂದು ಮಡುವೆಯನ್ನು ಮರೆಮಾಡಿಕೊಳ್ಳುತ್ತಿದ್ದನು (ಚಾಂಪ್ರ. ೬೬). **ಮೊಡಮೆ** : ಯಾವ ಮದ್ದು ಹಾಕಿದರೂ ಮುಖದ ಮೇಲಿನ ಮೊಡಮೆ ಕಡಿಮೆಯಾಗಲೇ ಇಲ್ಲ (ಕೂಡ). **ಮೊಡವ್ವ** : ಸಿರಿಸ ಬೀಜವಂ ಗೋಮೂತ್ರದೊಳರೆದು ಪುಸಿ ಮೊಡವ್ವ ಮಾಣ್ಪುಂ (೦೩೬೦. ೬೬). **ಮೊಡವೆ** : ಸನಗಳಿಂಬಿನಂ ಮುದ್ದುಮೊಗದಿ ಮೊಡವೆ ತೋಜಿ (ಜಾಗಳ. ೩-೨). [ದೇ.॥ ಮಲ. ಮುತುಕ್ಕ; ತುಳು. ಮೊಟಿಮ]

ಮೊಡವ್ವ ' ಮೊಡವಿ ' ನೋ.

ಮೊಡವೆ ' ಮೊಡವಿ ' ನೋ.

ಮೊಡೆ (ನಾ). ದುರ್ನಾತ : ಕೊಳಕುನಾತ : ' ಮೊಡೆನಾತ ' ಪರಾ. [ದೇ.॥ ತಮಿ. ಮುಟ್ಟೈ ; ಮಲ. ಮುಡ, ಮುಡಯುಂ]

ಮೊಡೆನಾತ (ನಾ). ಕೆಟ್ಟವಾಸನೆ ; ದುರ್ಗಂಧ : ಪೆಣಮೆಂಬ ಪೆಸರಾಗಿ . . . ಮೊಡೆನಾತಕೆಡೆಯಾಗಿ (೩೭೫೦. ೦೩೪-೪೨). [ಮೊಡೆ + ನಾತ]

ಮೊಡೆನಾಱು (ಕ್ರಿ). ಕೆಟ್ಟ ವಾಸನೆ ಬರು ; ದುರ್ಗಂಧ ಬೀರು : ರಪದ ಬಾವಿಯಂ ಮೊಡೆನಾರ್ಪುದಂ ಕಂಡು (೪೦೩೦. ೦೦೬-೬); ನಾಲ್ಕು ತಿಂಗಳ ಕೂಸಂ ಪಿಂಗಳಾಕ್ಷಿ ಎಂಬ ದೇವತೆ ಪಿಸಿದೊಡೆ ಆಗುಳಿಸುಗುಂ ಬಾಯಾ ಜುಗುಂ ಮೈ ಮೊಡೆನಾಜುಗುಂ (೧೦೦೫. ೦೨೬-೬). [ಮೊಡೆ + ನಾಱು೨]

ಮೊಡೆಪೆಣ (ನಾ). ಕೊಳೆತ ವಾಸನೆ ಬರುತ್ತಿರುವ ಹೆಣ : ಬುಡಬುಡಿಸು ವೇಱಿಸಲಿ ದುರ್ವ್ಯಾಪೂಡನೆ ಸೂಸುವ ಬಸಿಯ ನಾಜುವ ಮೊಡೆಪೆಣನ . . . ಕಂಡು (೬೩೮೫. ೬-೮-೪). [ಮೊಡೆ + ಪೆಣ]

ಮೊಣ ' ಮೋಟಿ ' ನೋ.

ಮೊಣಕಾಲ್ ' ಮೊಟಕಾಲ್ ' ನೋ.

ಮೊಣಕಾಲು ' ಮೊಟಕಾಲ್ ' ನೋ.

ಮೊಣಕೆಯ್ ' ಮೊಟಕೆಯ್ ' ನೋ.

ಮೊಣಕ್ಕೈ ' ಮೊಟಕೆಯ್ ' ನೋ.

ಮೊಣಗಂಟು (ನಾ). ಕಾಲಿನ ಸಡುಗಂಟು ; ಮಂಡಿ : ಜಿಗಿತದಲ್ಲೂ ಪಾವಗಳು ಸಮೀಪ ಬಂದು ಮೊಣಗಂಟುಗಳು ಅಗಲಿಸಿ ಕಾಲು ಮಡಿಕೆ ಗೊಳ್ಳಬಹುದು (೮:೪೦. ೦೩೬); ಮೊಣಗಂಟಿಗೆ ನಿರಿಗೆ ಬರುವ ಕಿರಿಯ ಸೀರೆಯನ್ನು ಧರಿಸಿ (೬೦೫೦. ೪೩). [ಮೊಣ (< ಮೊಟ) + ಗಂಟು೧]

ಮೊಣಸಂದು ' ಮೊಳಸಂದು ' ನೋ.

ಮೊಣ್ಣ ' ಮುಂಡ್ಯ ' ನೋ.

ಮೊಣ್ಣಮಂಡಲ (ನಾ). ಒಂದು ಬಗೆಯ ಮಂಡಲದ ಹಾವು : ಮೊಸಳೆಯ ಹಿಡಿದ ಮೊಣ್ಣ (ಮಣ್ಣ ?) ಮಂಡಲದ ವಿಷ ಹತ್ತಿ ಜಗವೆಲ್ಲಾ ಮಸಳಿಸಿ ಮಬ್ಬುದೊಜಗಿದುವ ಕಂಡೆನಬ್ಯಾ (ಚಿಕ್ಕ. ಆ. ೦೨೯-೩೭೩).

[ಮೊಣ್ಣ ? + ಮಂಡಲ]

ಮೊಣ್ಣೆ ' ಮೊಂಡಿ ' ನೋ.

ಮೊಣ್ಣು ' ಮುಂಡ್ಯ ' ನೋ.

ಮೊತ್ತ (ನಾ). ೧. ರಾಶಿ ; ಒಟ್ಟಿಲು : " ಮೊತ್ತಮೊಬ್ಬಳಿಯುಂ ಮೊಗ್ಗರಂ " (ಕಂಗಿ. ೦೦೭); ಮೊತ್ತದ ಮೂಮರನುಲಿಯಿತ್ತ ಕಂಡೆ (ಅಪಚಂ. ೧೪-೧೬೯); ತಂತಮ್ಮ ಬೆಗ್ಗಳ ಮೊತ್ತಕ್ಕವ್ಯಪಾಂಬುಪೂರಮಾ ನೊಡರ್ಚುತ್ತಿರ್ಪುದೆಂಬಿಂತೆ. . .ಓಪ್ಪಿರ್ಪುವಿಮ್ಮಾವುಗಳ್ (ಶಂಚಮಾ. ೧-೧೩); ಕರ್ನಾಟಕಾರದ ಮೊತ್ತವಿದೆ ನೋಡಬಲೆ (ಹೊಚಿಗಾ. ೩-೦-೨೬). ೨. ಕೂಡಿದುದು ; ಒಟ್ಟಾದುದು : ವ್ಯಕ್ತಿತ್ವದಲ್ಲಿ. . . ಅಂಗರಚನೆ; ಅಂಗ ವ್ಯಾಪಾರ, ಮಾನಸಿಕಸ್ವರೂಪ ಇತ್ಯಾದಿಗಳೆಲ್ಲವೂ ಸೇರಿವೆ. ಆವರೂ ವ್ಯಕ್ತಿತ್ವ ಇವುಗಳ ಮೊತ್ತವೆಂದು ಭಾವಿಸಬೇಕಾ (ಕಿಪ್ರ. ೬೫೪); ಊರ ಜನರು ತಮ್ಮಿಬ್ಬರ ಬಗ್ಗೆ ಜೋರುತ್ತಿದ್ದ ಅಸಾದರದ ಬಗ್ಗೆ ತೀವ್ರವಾದ ತಿರಸ್ಕಾರ. ನೋವು ಆ ಮಾತುಗಳಲ್ಲಿ ಮೊತ್ತವಾಗಿ ಮೂಡಿಬಿವೆ (ಅಪೋಕ. ೭೩). ೩. ಸಮೂಹ ; ತಂಡ : "ವ್ಯಂದು, ನಿಕುರುಂಬು. ಕದಂಬಂ_ಈ ೩ ಮೊತ್ತದ ಪೆಸರು" (ಪಾಹಾ. ೦೦೩); ಕೋಣೆಯ ಗಂಗನೆ ಮೊತ್ತಮಲ್ಲವಂ ಬೆದಲು ವಿನಂ ತೆರಳ್ದಿ (ಅಶ್ವ. II. ೦೭೬-೦೦; ೪೦); ಪತ್ತಿಸಾರ್ದ ಪಾರುಳ ಮೊತ್ತವಂ ಬುಸ್ಸೆಂದು ಬೆದಱಿಸುವ ಪಾವಿನ ತೊಡವುಗಳೊಳಂ (ಕಬ್ಬಿಗಾ. ೦೭೭); ಮುನಿಗಳ ಮೊತ್ತದಲಿ ಹರಿಕಥೆಯ ಕೇಳುತ್ತ ಪರಮಹರುಷದಲಿ . . . ವತ್ಸರ ಹತ್ತ ಸೂಕಿದಳು (ಸೇಚಕ. ೦೭-೩೩). ೪. ಒಟ್ಟು ಹಣ : ಮೊಬಲಗು : ಅರಮನೆಯರ [ಮೊತ್ತವನೂ] ತಪ್ಪದೆ ತೆಱುವೆಳು (ಪೌಪಾ. IX-ii. ೪೭೫-೮೯; 1408); ನಾಲ್ಕೈದರಮ್ಮ ಮೊತ್ತಕ್ಕೆ ಅವನ್ನು ಹರಾಜು ಮಾಡಿ (ಕ್ಯಾಚಹ. ೦೨೩).

ಮೊತ್ತಮೊತ್ತ (ದ್ವಿರುಕ್ತಿ) : · ಬಂದು ಪೋಪರು ಮೊತ್ತಮೊತ್ತದೆ (ಗೀಪ್ರ. ೩೪-೩). [ದೇ.ತ ತಮಿ. ಮಾಲ. ತೆಲು. ಮೊತ್ತ]

ಮೊತ್ತಂಗಟ್ಟು ಮೊತ್ತಗಟ್ಟು (ಕ್ರಿ). ೧. ಒಟ್ಟಾಗು; ಗುಂಪಾಗು : ನಮಿರ್ಮುಡಿಸುಗಂಪ ಘ್ರಾಣಿಸುವ ಪಟ್ಟರಣಾಳಿ ಪಾರ್ದಂತರಾಳದೊಳು ಸುತ್ತ ಮೊತ್ತಂಗಟ್ಟಿಯಗಲದಿರ್ದು (ಪಪಪೋ. ೪೪-೮೩). ೨. ಒಟ್ಟುಗೂಡಿಸು; ಸಂಗ್ರಹಿಸು; ಸೇರಿಸು : ಅವ್ಯತಪಯೋಧಿಯಂ ಮೊಗೆದು ಮೊತ್ತಂಗಟ್ಟಿ ತಂದೊಕ್ಕರಿಸಿ ನೀಡುವುದುಂ (ಪಚಾಪೀ. ೪-೦೨೫ ಪ).

ಮೊತ್ತಗಟ್ಟು ೧. ಮೊತ್ತಗಟ್ಟಿದ ರಭಸ ಮುಂದೆನು ಮಾಱುಸಾವಿರವ (ಶಾಚಾ. ೩೭-೩೩); ರೋಲಂಬಸಿವಯ ಜೇಂಕರಿಸುತ್ತಿರಾವರಿಸೆ. . .ಪಾರ್ದುಗಂಟೊಡೆಯದೆ ಮೊತ್ತಗಟ್ಟ ಮೇಲೆ ಮೆರೆದವು (ಸಪಪೋ. ೦೦-೭೯).

[ಮೊತ್ತ + ಕಟ್ಟು₁]

ಮೊತ್ತಂಗೊಳ್ (ಕ್ರಿ). = ಮೊತ್ತಂಗಟ್ಟು ೧ : ಬ್ರಹ್ಮರ್ಷಿಗಳುಂ ದೇವರ್ಷಿಗಳುಂ ವಿಮ್ನೋತ್ತಮರುಂ . . . ಮೊತ್ತಂಗೊಂಡು ಸಾರ್ತಂದು ಧರ್ಮರಾಜನಂ ಕಂಡು (ಪಾದಣಂ. ೦-೨). [ಮೊತ್ತ + ಕೂಳ್₁]

ಮೊತ್ತಂಬೆಱು (ಕ್ರಿ). = ಮೊತ್ತಂಗಟ್ಟು ೧ : ನಲಿದೇಳ್ದರುತಿರೆ ಶರಣಸಮೂಹಂ ಮುತ್ತಿವ ಸತ್ತಿಗೆ ಮೊತ್ತಂ[ಪಾಣಂ. ಪೊತ್ತಂ]ಬೆತ್ತಿರೆ (ಕ್ಯಕಥಿ. ೩-೨೨ ೦೧೪). [ಮೊತ್ತ + ಪೆಱು₁]

ಮೊತ್ತಕಾಜಿ (ನಾ). ಗುಂಪಿನ ಮುಖ್ಯಸ್ಥ.—ನಾಯಕ : ಪುತ್ತಂ ಪಸ್ನವಣದ ದಾಸಿಸೆಟ್ಟಿಯಂ ನಗರಮುಂ ಮೊತ್ತಕಾಜಿ ರೇವಿಸೆಟ್ಟಿಯುಂ. . . ಈ ಧರ್ಮಕ್ಕನುಕೂಲರಾಗಿ (ಪೌಪು. XVIII. ೭೩-೨೪; 1072); ದೇವರುಪ ಹಾರಕ್ಕೆ ಮೊತ್ತಕಾಜಿ ಬಮ್ಮಣ ಮುಂಬಿವಾಗಿ (ಪೌಪು. XI-ii. ೦೩೨-೪೦; 1103); ಕಜಿಮು ಸತಿಯು ಮಪದೇವ ಗ ೧ ಮೊತ್ತಕಾಜಿ ಸಾಕಿ ಪ ೫ (ಎಕ. XV. ೩೮೫. ೨೦೭-೫; 1221).

[ಮೊತ್ತ + — ಕಾಜಿ. / ತೆಲು. ಮೊತ್ತಗಾಡು]

ಮೊತ್ತಗಟ್ಟು ' ಮೊತ್ತಂಗಟ್ಟು ' ನೋ.

ಮೊತ್ತಗೊಳಿಸು (ಕ್ರಿ). ಒಟ್ಟಿಗೆ ಸೇರಿಸು ; ಕಲೆಹಾಕು : ತನ್ನ ನಿಳಯಕ್ಕೆ ತಂದು ಮೊತ್ತಗೊಳಿಸುಬು ಮುನ್ನ ಕೈಕೊಂಡುಹೋದುದಿಪ್ಪತ್ತು ಬಳಿಕುಂಬ ಹೊತ್ತಿಗೆ ಹರಿತೆಂದುದೈವತ್ತಾಗೆ (ಪಪಪಚಂ. ೨-೪೩).

[ಮೊತ್ತ + ಕೊಳ್₁ + — ಇಸು₅]

ಮೊತ್ತಮೊದಲ್ ' ಮೊದಲ್₁ ' ಪರಾ.

ಮೊತ್ತಮೊದಲಿಗ ' ಮೊದಲ್₁ ' ಪರಾ.

ಮೊತ್ತಮೊದಲು ' ಮೊದಲ್₁ ' ಪರಾ.

ಮೊತ್ತವೆತ್ತಿಸು (ಕ್ರಿ). ಒಟ್ಟಾಗಿ ಮೇಲಕ್ಕೆ ಹಿಡಿ ; ಗುಂಪಾಗಿ ಎತ್ತಿ ಹಿಡಿ ; ಪಲತೆಜದ ಸತ್ತಿಗೆಯುನಭಪಂಗೆ ಮೊತ್ತವೆತ್ತಿಸಿ (ಪಾಕೃಕಾ. ೩೩-೩೭).

[ಮೊತ್ತ + ಎತ್ತಿಸು]

ಮೊತ್ತವೆಱು (ಕ್ರಿ). ಒಟ್ಟಾಗು ; ಗುಂಪಾಗು : ಎತ್ತ ಚೆಲ್ಲಿದ ಮಳಲಾ ಬೇಳದ ಮೊತ್ತವೆತ್ತುಡಪಿಯಲಿ ಸುಮನೆತ್ತು ಬೆಳೆದಿಟ್ಟಿಯ ವುರಂಗಳು ಫಲಿದು ಫಲವಾಗಿ . . . ಮೊಳೆಯಲು (ಧಾಪ್ರ. ೩೨-೩). [ಮೊತ್ತ + ಪೆಱು₁]

ಮೊತ್ತವೇಂಟೆ (ನಾ). ಗುಂಪಾಗಿ ಆಡುವ ಬೇಟೆ : ಪೆರ್ಮರೆಯ ಬೇಂಟೆ ವಿಷಂಗದ ಮೊತ್ತವೇಂಟೆ . . . ಸಿಂಪಶರಭಂಗಳ ಬೇಂಟೆಗಳಾದಿಯಾದ ಭೀಕರಮೃಗಸಂಘಸಂಹನನಮುನ್ಮತ್ತಕು ಪರ್ವಿದರಣ್ಯಮೆಂಧ್ಯದೊಳ್ (ನಿಂಕ. ೦-೬೦). [ಮೊತ್ತ + ಬೇಂಟೆ]

ಮೊತ್ತು, ಮೆಟ್ಟು₂, ಮೊಟ್ಟು₂ (ಕ್ರಿ). ೧. ಪೊಡೆ : ಮೋದು : ಒತ್ತುತೆ ಮೊತ್ತುವ ತೆಱದಿಂದಕ್ಕಿತ್ತಲ್ ವಿಡುಕಬಾರದವಗದ್ದ ತೆಯಿಂ (ಕಪಾಕಾ. ೬-೮೦). **ಮಟ್ಟು₂** : ೨. ತಲೆಯನ್ನು ಮುಷ್ಟಿಯಿಂದ ಗುದ್ದು.— ತಿವಿ : ಪೊಟ್ಟಾರಭ್ಯವಾಗಿ ಮಂದನಾಗಿದ್ದವಗೆ ಮಟ್ಟದಲ್ಲದೆ ಬುದ್ಧಿ ಬರುವದೆಂತೊ (ಜಂಗಾಕ್ಷ. ೦೫೮-೭). **ಮೊಟ್ಟು₂** : ೨. ಘಾತಿಸಿದಪೋ ರೋರ್ವರಿಂದಿಟ್ಟು ಗುದ್ದಿ ಪಿಪಿವಾ ತಳದೊಳೆರಪಿದಂ ಮೊಟ್ಟಗ್ರಮನ್ತೆಕವಾ ಭೂತಪತ್ಯೋಪೇಶನಿಟ್ಟುಳಿಗೆ ಬಳಲಿ (ಪಪಪು. ೯-೦೩); ಹೇಳದೆ ಹೋದರೆ ತಲೆಯ ಮೇಲೆ ಮೊಟ್ಟೆ ಬೆನ್ನಿನ ಮೇಲೆ ಧಬ್ಬೆಂದು ಗುದ್ದುತ್ತಿದ್ದರು (ಪಾಪೀಪ್. ೭೯); ತಲೇ ಮೇಲೆ ಪೊಟ್ಟುದಿದ್ದರೆ ಇವರಿಗೆ ಭಯ ಇಲ್ಲ (ಪಪಪಾ. ೦೪೪). ' ದೋದು₁ ' ಪರಾ.

[ದೇ.ತ ತಮಿ. ಮುಟ್ಟು, ಮೊತ್ತು ; ಮಲ. ಮುಟ್ಟು ; ಕೊಡ. ಪರ್ಜ. ಮುಟ್ಪ್ ; ತಲು. ಪೊಟ್ಟು, ಮೊತ್ತು]

ಮೊದಭಾಗೆ (ನಾ). ಒಂಮು ಊರಿನ ಹೆಸರು : ಬೆಳ್ಗೆಱೆಯೊಡೆಮುರುಂ ಮೊದಭಾಗೆಮಟ್ಟಿದಿಪ್ಪರುಂ . . . ಸಾಕ್ಷಿಯಾಗೆ ಕೊಟ್ಟತ್ತು (ಎಕ. XII. ಗುಬ್ಬಿ. ೩೮-೪೬; ೪೧೨). [?]

ಮೊದಯರ್ಸ (ನಾ). ಒಬ್ಬಾತನ ಹೆಸರು : ಪೆರಮೆಣ್ಣಿ ಮಗಂ ಮೊದಯರ್ಸನೆಮಲುದ ತೊರೆಗೊಳಂಳ್ಳಿಱಿದು ಸ್ವರ್ಗ್ಗಾಲಿ (ಎಕ. X. ಕಂತಾಪು. ೦೦೯-೦೩; ಪು. 1000). [? + < ಅರಸ್₁]

ಮೊದಲ್₁, ಮುದಲ್, ಮುದ್ದಲು, ಮೊದಲು₁ (ನಾ). ೧. ಆರಂಭ; ಆದಿ ; ಪ್ರಥಮ: ಮೊದಲಿನನಿತ್ಕೋರಾನಿತ್ಯನ್ತೆ ಬಿಟ್ಟ (ಎಕ. VI. ೪೩೨. ೩೮-೬ ; ಪು. 675 ₂); ಇಂಯಪ್ಪ ಮೊದಲೊಳ್ ಸಂಜನ ಪನಪೊಲ್ ಬಬ್ಬಿಕೆದ್ದು ಮುಳಿದು ಕೊಂದಿಕ್ಕುವುವು (ಆದಿಪು. ೦೪-೦೩೩); ವಿಸ್ತಾರದ ಜೈನಧರ್ಮದ ಮೊದಲ್ ಪರಮೇಶ್ವರರೆಂಬಿನಂ ಸದಾಚಾರಸಮೇತರಾದ

ರೆವಗೀಗೆ ಶಿವಾಸ್ಪದ ಮುಂಬ್ಮಿಸೌಖ್ಯಮಂ (ಶಾಂಪ್ರ. ೦-೩): ಅಭಿಮಾನದ ಜನ್ಮಭೂಮಿ ಮಾನ್ಯನದ ಮೊದಲ್ (ಸೌಪ್ರ. XI-೫; ೪೫-೪೯; 1028). ೨. ಪಕ್ಕ ; ಬದಿ ; ಪಾರ್ಶ್ವ : ರಾಮೇಶ್ವರ ಎಮ್ಬ ತೀರ್ಥದಾ ಮೊದಲೊಳ್ ಮೆಪ್ಪಕ್ಕಿ ಪೊರದ ಪನ್ನಿಗನಿಜಿಯಿಲ್ ಬನ್ದಲ್ಲೀ(ಲ್ಲಿ) (ಪಾ. XXX. III, ೪೩೦-೯; ೫೦೪). ೩. ಬೇರು ; ಬುಡ ; ಮೂಲ : ಮೊದಲಿಂ ತಗುಳ್ದು ತುದಿವರಂ . . . ಇದಱ ವಿಧಿಯಿಂತುಟು ಮಂತ್ರಪೂರ್ವಕಂ ನೆಗಟ್ಟುದು (ಅಪ್ರ. ೦೫-೦೬) ; ಮಱದೀನದ ಸರಮೊಪ್ಪುಮುದುದು ಪಾದ್ಪೀಠದ ಮೊದಲೊಳ್ (ಪಾಪ್ರ. ೬-೩); ಎಕ್ಕೆಯ ಮಾಡಲಂಗಳ ಮೊದಲ್ಗಳ ನೊಂದೊಂದಱೊಳ್ . . . ಪಲ್ಲಟಿಸಿ (ಪಮರ. ೦೬-೦೭). ೪. ಆಧಾರ ; ಆಶ್ರಯ : 'ಮೊದಲ್ಗೆಡಿಸು' ಪರಾ. ೫. ತುದಿ : ಅಗ್ರಭಾಗ ; ಕಟಾಯಲರಾದ ಸಂಪಗೆಯ ಬಣ್ಣದವೋಲೆ ಬೆಳರ್ತ ಬಣ್ಣದೊಳ್ ಗಟಾಯಿಸೆ ಕೆಂಪು ಕಣ್ಗಳ ಮೊದಲ್ಗಳೊಳೊಯ್ಯನೆ ತೋ[ಜಿ] ಬಾಡಿ ಪಾಡಲಿದು ಬಲುಲ್ದು . . . ತಾಮೆ ಕನ್ನಡಿಪಿದಪ್ಪುವ ಕನ್ನೆಯ ಕನ್ನೆವೇಟವಂ (ಕಚಕಾ. ೪-೭೦) ; ಮನಮಿರೆ ಭವಿನ ಮೊದಲೊಳ್ . . . ಯೋಗೀಂದ್ರನಾತ್ಮಚಾತೆಯೊಳರ್ದಂ (ಅಪಂಪು. ೪-೦೦೪). ೬. ಮುಖ್ಯವಾದುದು ; ಪ್ರಧಾನವಾದುದು ; ಶ್ರೇಷ್ಠವಾದುದು: ಅದೆ ಕಂದರ್ಪಂಗೆ ದೋರ್ದರ್ಪದ ಮೊದಲ್ (ಅಪ್ರ. ೨-೪೬) ; ಬಳೆಯೇ ಸರ್ವವಿಭೂಷಣಕ್ಕೆ ಮೊದಲ್ಗೆ (ಪಾಪಾಕ. ೦೪). ೭. ಮೂಲಧನ ; ಬಂಡವಾಳ ; ಆಸಲು : ಇನ್ತಿನಿತುಮಂ ಮೊದಲಂ ಕಿಡಲೀಯದೆ ವೃದ್ಧಿಯೊಳೆ ಧರ್ಮ್ಮಮಂ ತಮ್ಮ ಸನ್ತತಿಮರ್ಮ್ಮಡಿಮಿಸುವರ್ (ಸೌಪ್ರ. XI-೫, ೪೨-೪೦ ; 1028) ; ಓದು ಪಣವಿನ ಮೊದಲ್ಗೊಂಡಂದಿನ ದಿವದೊಳೆ ಸಹಸ್ರಪಣಮಂ ಪಡವಂ (ಪಾಪಂ. ೨೦೫-೨೬) ; ಆಚನ್ದ್ರಾರ್ಕ ತಾರಂಬರಂ ಸಲುಪನ್ತಾಗಿ ಹಣವೊಂದಱ ಮೊದಲೀಗೆ ಎಂಟು ಹಣವಂ ತೆತ್ತು (ಅಶ್ವ. II, ೪೪೪-೦೬ ; 1200?). ಮುದಲ್ : ೭. ಒಪ್ಪಾನೂಟ್ಟುವೊದು ಮುದಲ್ನೂರ್ಕಂಡುಗ ಭಕ್ತ ಪೊರಿಯೆ ಕೊಡನಟ್ಟುವೊದು(ಅಶ್ವ. X· ೫೫೭೫೮. ೬-೮ ; 783). ಮುದ್ದಲು : ೭. ಮುದ್ದಲು ಇಮ್ಮಡಿವೆಕ ಬಿಡ್ಡಿಯು ಬೆಳೆಯುವಂತಿದ್ದಿಲ್ಲ . . . ಇಂಥ ಮುದ್ದಲು ಆರೇಳು ಪಟ್ಟು ಹೆಚ್ಚಾದರೆ ಬಡ್ಡಿಯು ಬೆಳೆಯುವಂತಿದ್ದಿಲ್ಲ (ಜ್ಯೋಶಾಂ. ೪೦). ಮೊದಲು₂ : ೧. ಮಡಕೆಯು ಮಾಡುವರೆ ಮಣ್ಣೇ ಮೊದಲು (ಪಾಪ್ರ. ೭೦) ; ಮೊದಲಿದ್ದುದು ಜೀವಕಳೆ ಹೃದಯದಲಿ (ಶಬ್ದಾ. ೦-೪) ; ಮೊದಲ ಬೊಬ್ಬೆಗೆ ಬಿಸಜಸಂಭವ ಬೆದಜಿ ಬಿದ್ದನು (ಕೊಕಾ. ೪-೦೨-೨೬). ೨. ಕುದಿ ಮೊದಲಿಲ್ಲದೆ ಪರದಿಂದ ನೊಂದೆ (ಶಬ್ದಾಕ. ೨-೨೩-೦) ; ವಿಜಯೋತ್ಸಾಹಗಳ ಮೊದಲೊಳಃ ಮಗಮಗಿಸಿಮುದರೊಂಮ ಪೆಸಗುವು (ಪಾಶ್ವ. ೩-೩). ೩. ಸುರಗಿರಿಯು ಮೊದಲ್ಲಿ ಕೀಲಗಿರಿಯುಂ (ಶಬ್ದಾ. ೭-೩೩). ೪. ಮೊದಲಿಗೆ ಮೋಸವಾವಲ್ಲಿ ಲಾಭಪಜಿಸುವರುಂಟೆ (ಪೋಗಪ್ರ. ೪೫-೦೬೭). ' ಮೊದಲುಗೆಡು ' ಪರಾ.

ಮುಮ್ಮೊದಲ್, ಮೊಮ್ಮೊದಲು = ಪ್ರಪ್ರಥಮವಾಗಿ : ತಪ್ಪದೇನ್ ಬಂದಪುದು ಎಂಬುದನ್ ನಿರ್ಣಯಿಪೆ ನಾನೆ ಮುಮ್ಮೊದಲ್ ಕಲಿಸಿದೆನ್ (ಶಬ್ದಕ್ರ. ೫೫-೫೭೦) ; ಮಹಾಭಾರತ ಮೊಮ್ಮೊದಲು ಇಲ್ಲಿ ನಡೆವ ಮಹಾಯುದ್ಧದ ಕಥೆ (ಪಾರಿ. ೦೫೯). ಮೊಟ್ಟಮೊದಲಿಗ, ಮೊತ್ತಮೊದಲಿಗ = ಆರಂಭಿಗ ; ಆದಿಪುರುಷ : ಪಂಚಮಮಹಾಪಾತಕಕ್ಕೆ ಮೊಟ್ಟಮೊದಲಿಗ ರೆಂಬಂತೆ (ಪಾಗೀಕ. ೫೯. ೨೭೭-೨) ; ಶ್ರೀಗಂ ವಿಜಯಕ್ಕಂ ಮೊತ್ತಮೊದಲಿಗ ನಾಗಿಮೆ ಸಮಸ್ತರಾಜಕಮನೆಜಗಿಸಿ (ಪಾಂಪ್ರ. ೪-೭೭ ಪ) ; ರವಿನಂದನ ನನ್ನಿ ಚಾಗಮಣ್ಮೆಂಬಿನಿತರ್ಕಂ ನೀನೆ ಮೊತ್ತಮೊದಲಿಗನಾದ್ಯೆ (ಗಣಾಚು. ೩-೦೭) ; ಮತ್ತೊರ್ವಂ ಬೇಱರಭೂಚರಪತಿಪ್ರತಾನವ ಮೊತ್ತಮೊದಲಿಗಂ ಮುಂಗೆಮ್ಮ ಕಂಕಣಮಂ ತಿರಿಂಪಿ (ಅಪಂಪು. ೦೪- ೧೭ ಪ). ಮೊಟ್ಟಮೊದಲು ಮೊತ್ತಮೊದಲ್, ಮೊತ್ತಮೊದಲು. ಮೊದಮೊದಲು = ತೀರ ಮೊದಲು ; ಪ್ರಪ್ರಥಮ : ಮೊಟ್ಟಮೊದಲು ಜನರಿಗೆ ಧಾತುಗಳು ಪ್ಯಾಗೆ ಗೊತ್ತಾದವು (ಪುಂಲಾಪ್ರ. ೪-೧೦) ; ಸಿದ್ಧರಾಮ ಮೊಟ್ಟಮೊದಲಿನ ಮಾಸು ಆಡಿದನು (ಸಿರಿಕ್ಷ. ೬-೭೬) ; ನಿರಂತರಂ ಸುಖವ್ಯಾಪ್ತಿಗೆ ನೀನೆ ಮೊತ್ತಮೊದಲಾಗರಿಕೇಸರಿ ಲೋಕಮುಖ್ಯನಂ (ಕಚಕಾ. ೦-೦೪೯) ; ಸಿದ್ಧ ಮಾತೃಕಾಪದವಿಗೆ ಕಾನೆ ಮೊತ್ತಮೊದಲಾದುದು (ಅಪ್ರ. ೧-೩) ; ಸುದತಿಯ ತೊಳಗುವ ತೋಳ ಮೊದಲ್ಗಳ್ ಮದನವಿಲಾಸದ ಮೊತ್ತಮೊದಲ್ಗಳ್ (ಪುಚಾಪ್ರ. ೬-೩೦) ; ಈ ಬಗೆಯ ಆನಂದವನ್ನು ಪಡೆಯುತ್ತಿರುವೆದು ನನ್ನ ಜೀವಮಾನವಲ್ಲಿಯೇ ಮೊತ್ತಮೊದಲನೆಯ ಸಲ (ಪ್ರಕಾಶ. ೦೪) ; ಹಿಂದಿನ ಕಾಲದಲ್ಲಿ ಮೊದಮೊದಲು ಅವರು ಈ ಗ್ರಹನಕ್ಷತ್ರಗಳನ್ನು ಬರೀ ಕಣ್ಣಿನಿಂದ ನೋಡುತ್ತಿದ್ದರು (ಅಗಾಕ. ೩) ; ಮೊದಮೊದಲಿನ ವಿಗ್ರಹಗಳ ಅಳತೆಗೆ 'ಅಂಗುಲ'ವನ್ನೂ . . . ಮೂಲಪ್ರಮಾಣವಾಗಿಟ್ಟುಕೊಂಡು ಪ್ರವಹಿಸುತ್ತಿದ್ದರು (ಜಾಡ. ೩೦೭). ದೊದಲ ಬಾಡ = ಮುಖ್ಯಪಟ್ಟಣ ; ರಾಜಧಾನಿ : ಪರ್ವನಿಮಿತ್ತ ದಿಂದಲಂದಣಾಸರದ ಮೊದಲ ಬಾದವಲಂ[ಧಾ]ಪುರದ [ಸ್ವಯಂ]ಭು (ಅಶ್ವ. XXVIII, ೪೫-೪೬ ; 1035). ಮೊದಲಾಗಿ, ಮೊದಲಾಗೆ = ೧. ಮುಂತಾಗಿ ; ಇತ್ಯಾದಿಯಾಗಿ : ಸ್ಥೂಲಭದ್ರಾಚಾರ್ಯರ್ ಮೊದಲಾಗಿ ಕೆಲಂಬರ್ . . . ಅರ್ಧಗವ್ಯಡದೆ ತೀರ್ಥಮಂ ನೆಗಟ್ಟಿದರ್ (ಪಣ್ಣಾ. ೧೩-೦) ; ರುದ್ರಭಟ್ಟೋಪಾಧ್ಯಾಯರುಮಿಶ್ವರದಣ್ಣನಾಯಕ ರ್ಮೊದಲಾಗಿ (ಸೌಪ್ರ. XX. ೪೬-೪೦; 1072); ನಾಡೆ ರುಚಿವೆರಸಿದ ಲಡ್ಡುಗೆ ಚಕ್ಕುಲಿ ಗಾನಿಗೆ ಪೂರಿಗೆ ಮೊದಲಾಗಿರ್ದ· ಭಕ್ಷ್ಯಮನಾಗಳ್ ಆಜ್ಯಯುತ ಮಪ್ಪುವಂ ಮೆಲ್ದು (ಪಪೂಕಾ. ೦-೦೪೬) ; ಲಕ್ಷಣಂ ಮೊದಲಾಗೆ ಸೂರ್ವರ್ ಮಕ್ಕಳುಮಂ ಮುಂತಿರಿಸಿ (ಪಂಪಭಾ. ೪-೨೮ ಪ) ; ವಂರೀಚಿಯುಂ ಮೊದಲಾಗೆ ನಾಲ್ವಾಸಿರ್ವರರಸುಮಕ್ಕಳ್ ಪೋಗಲೊಲ್ಲದೆ (ಕಾಪ್ರಂಪ್ರ. ೪೫). ೨. ಪ್ರಾರಂಭಿಸಿ ; ಸೊದಲ್ಗೊಂಡು : ವೆಂದಿರೆಂಬರೊಳ್ ಕೂಡುವ ಸಲ್ಲೆನಿಮ ಮೊದಲಾಗಿರೆ ವಿಕ್ಕಮಂ (ಪಂಪಭಾ. ೦-೭೭) ; ನಾಳೆ ಮೊದಲಾಗ ರ್ಜುನನ ನಾವ್ ಕಾಳೆಗಕೆ ಬರಲೀಯೆವು (ಶಾಣ್ಮಕ್ರಿ. ೨-೩); ಚಿಕ್ಕಂದು ಮೊದಲಾಗೆ ನೀನಲ್ಲದೂರ್ವರ ಲೆಕ್ಕಿಸಿದೆವಳು ಹಾನಲ್ಲ (ಪಂಪಪ. ೨-೦೦೩). ಮೊದಲಾಗು = ಆರಂಭವಾಗು: ಪುರ ಗಿಡಂ ಬಾನ್ನೆಲಂ ತೊನೆದಾಡಿ ನಡುಗಿದುದು ಮೊದಲಾಯ್ತು ಮಳೆಗೆ (ಪಾಂಪಪ. ೪೫-೭೦) ; ಕಣತ ಮೊವೆ ಲಾಯಿತು! (ಪಪ. ೬). ಮೊದಲಾದ = ಮುಂತಾದ : ಇತ್ಯಾದಿಯಾದ : ಹರಿ ಬ್ರಹ್ಮಾದಿಗಳು ಮೊದಲಾದ ತೆತ್ತೀಸಾದಿದೇವರ್ಕಳು ಉಳಿ ಉಳಿ ಎನುತಿರಲು (ಪಪ. ೪೦೪); ಸಹದೇವ ನಕುಳರ ತಿವಿದು ಧೃಷ್ಟದ್ಯುಮ್ನ ಮೊದಲಾದಗನೆರ ಗೆರಿದ (ಶಾಣ್ಮಕ್ರಿ. ೩-೨೨); ಹಳ್ಳಿ ಹಿರಿಯೂರು ಪುರಗಳು ಮೊದಲಾದ ಪ್ರತ್ಯೇಕಗ್ರಾಮಗಳಿಂದ (ಎಳ್. XIV. ಗುಂಡ್ಮಶೇ. ೬-೦೦; 1530).

[ದೇ.ಪ ತಮಿ. ಮುತರ್ ; ಪ್ರಮಲ. ಮುದಲ್ ; ತುಳು. ಮುದಲು ; ತೆಲು. ಮೊದಲು]

ಮೊದಲ್₂, ಮೊದಲು₂ (ಅ). ೧. ಪ್ರಾರಂಭ ಮಾಡಿ ; ಮೊದಲ್ಗೊಂಡು : ಆ ಅಂದಮನಿಂದುಮೊದಲ್ ಪತ್ತುವಿಟ್ಟು ನಡವೆನೆಂಬುದುಂ (ಪಂಪಭಾ. ೦೩೫-೦೪). ಮೊದಲು₂: ೧. ಇಂದುಮೊದಲಿಕ್ಕಿಯುಂ ತಾಪತ್ರಯಂ ಪಿಂಗಿದವೆನಲು ವಳಿತ್ರಯವದಂಗಿದವು (ಶಿರಿಕ್ಷ. ೦-೧೪); ಇಳೆ ಮೊದಲು ಹದಿನಾಲ್ಕು ಲೋಕದ ಬಳಿಯಿಕಪರಿಂದಾಯ್ತು (ಪಂಪಕ. ೫-೪೮) ; ನಿನ್ನೆ ಮೊದಲು ನಿನ್ನಾಣೆ ನಿನ್ನಪ ಕಾಣದನ್ನವಾನಂಗಳಿಯದೆ ಬನ್ನದೊಳಾಳಿದೆ (ಪಂಪಪ. ೨-೦೦೪). ೨. ಮುಂಚೆ ; ಹಿಂದೆ ; ಪೂರ್ವದಲ್ಲಿ : ಪುಣ್ಯ ಪಾಪಂಗಳನಱಿಯದ ಮೊದಲು · ಅನೇಕ ಭವಂಗಳೆಲ್ಲಿ ಬಂದೆನಯ್ಯಾ (ಪುಪಾರೇ. ಐ. ೦೭-೦೯). [< ಮೊದಲ್₁]

ಮೊದಲಗಿತ್ತಿ. ಮದಲಗಿತ್ತಿ (ನಾ)· ಮದುವಣಗಿತ್ತಿ; ಮದುಮಗಳು: ನವವಧು : ಮೊದಲದಿನದ ಮೊದಲಗಿತ್ತಿಗೆ ಮುನ್ನೂರು ಮುತ್ತಿನ ಸರ ಮಾಲೆ (ಕುಂಗಭ· ೦೦೦); ಮೂರು ಮಕ್ಕಳ ಕಾಯಿ ಮೊದಲಗಿತ್ತಿಯಂತೆ ಕುಣಿಯಲು ಹೇಗೆ ಸಾಧ್ಯವಾದೀತು (ಕುಕ್ಷಕು· ೮೨); ಭೂಮಿಕುಯಿಯಂತೆ ನೀನು ಒಬ್ಬ ಚಿರಂತನ ಮೊದಲಗಿತ್ತಿ (ನಾಸಾ· ೦೮೨). **ಮದಲಗಿತ್ತಿ :** ಸೌಂದರದ ಮೇರುವಿಂತೊಳಗೆ ಮದಲಗಿತ್ತಿಯ ಮದಕರಿಯ ಕೊಂದು (ಪಂಗೂಲ· ೦೦-೧೦) ; ಆಗ ಆ ಮದಲಗಿತ್ತಿಯ ಮನೆಯ ಗೊಂದಿಯಲ್ಲಿ (ಕಣಾಪು· IV· ೦೬). [< ಮದುವಣಗ + – ಇತ್ತಿ]

ಮೊದಲಚ್ಚು. (ನಾ) ಮೂಲಆಕೃತಿ : ಮೂಲರೂಪ : ಆ ಮೂರ್ತಿಗಳೆಲ್ಲ ಮೊದಲಚ್ಚು, ಹಾವು ಪುಟಿಯಚ್ಚು (ಶಾಕಾ· ೩೫). [ಮೊದಲ್$_1$ + ಅಚ್ಚು$_{1\text{ಸ}}$]

ಮೊದಲಾಣ್ಮ. (ನಾ)· ಮೊದಲನೆಯ ಗಂಡ : ಮೊದಲಾಣ್ಮನೊಲ್ಪಿಂದೊರ್ವ ಬಲವಂತನಂ ಬಯಸಿ ಬಾಳ್ವೊಗಲ್ ಒಡಿವ ಗುಂದಂ ದೊರಕಿದಂತೆ (ಶಾಪ್ರ· ೩೭-೬). [ಮೊದಲ್$_1$ + ಅಣ್ಮ (< ಅಳ್ಮ)]

ಮೊದಲಾರಿ (ನಾ). ಮುಖಂಡ : ನಾಯಕ; ಪ್ರಧಾನವ್ಯಕ್ತಿ : ಇರುತಿರೆ ಸಾಂಬ್ಯೆಯ ಮೊದಲಾರಿಯ ಹಿರಿಯ ತನುಜ ಪ್ರದ್ಯುಮ್ನ ಪಿರಿದು ಗರ್ವಿಸಿ . . . ಧುರವನೆಸಗಿದ (ಕಂಪಾ· ೩೭-೨). [← ತಮಿ. ಮುತಲಾಳ್]

ಮೊದಲಿ. ಮುದಲಿ (ನಾ). ೧· ಮೊದಲಿಗ ; ಪ್ರಮುಖನಾದವನು : ಕಸವನು ಗುಡಿಸುತ ಕಸವೇ ಆಗಿ, ಪಸರೂ ಕಡಮೆ· ಅಧಮರ ಮೊದಲಿ (ಸುಪಾಕ· ೨). **ಮುದಲಿ :** ೨· ತಮಿಳು ಭಾಷೆಯನ್ನಾಡುವ ಒಂದು ಜನಾಂಗ ಮತ್ತು ಆ ವರ್ಗಕ್ಕೆ ಸೇರಿದ ಜನರ ಹೆಸರಿನ ಕೊನೆಯಲ್ಲಿ ಸೇರುವ ಶಬ್ದ : ಯಾವ ತಪ್ಪಿಗಾಗಿ ನಮ್ಮ ಪ್ರತಾಪಮುದಲಿಯನ್ನು ಬಂಧಿಸಬೇಕೆಂದು ಹೇಳುವಿರಿ ? (ಪ್ರಕಾಪ್ರ· ೩೬). ' ಮುಂದಲಿಯಾರ್ ' ಪರಾ. [ದೇ.॥ ತಮಿ. ಮುತಲಿ; ತೆಲು· ಮೊದಲಿ]

ಮೊದಲಿಕ್ಕು (ಕ್ರಿ)· ಪ್ರಾರಂಭಿಸು : ತೊಡಗು : ಭಯಮುಂ ಚಿತ್ತಕ್ಕೊದವಿ ಬಲಗೆಕ್ಕೆತ್ತಲ್ಮೊದಲಿಕ್ಕಿತು (ಶಾದಂಪಿ· ೩೮೬); ನೆರೆವಂದಿರ ಪುಬಿಗೋಷ್ಠಿಗಳ್ ನಾರಿಯರೊಳ್ ಮೊದಲಿಕ್ಕುಗುಂ (ಶಾಪಾಕ್ಕ· ೮೭-೨೫). [ಮೊದಲ್$_1$ + ಇಕ್ಕು]

ಮೊದಲಿಗ (ನಾ). ಪ್ರಥಮಸ್ಥಾನದಲ್ಲಿರುವವನು : ಪ್ರಮುಖನಾದವನು : ಜಾಳುಕ್ಯಾರ್ಜುನಂ ಬೆಲಕೆ ಮೊದಲಿಗನುಂ (ಎಕ· XIV· ಪ್ರಸಂಪ· ೦೨೬-೪; ೪೦೦); ಕಡುವೆಂಪಿನ ಪೊಜೆಗೆ ನೀವು ಮೊದಲಿಗರಾದಿಂ (ಪಂಪಣಾ· ೬-೦೨); ಹದುಳವಿಡುವವರಿಲ್ಲ ಸೇನೆದು ಮೊದಲಿಗರು (ಭಾಪ್ರಾ·೪· ೯-೨೬); ವಿಜ್ಞಾನವನ್ನು ಬೆಳೆಸಿದವರಲ್ಲಿ ಗ್ರೀಕರು ಮೊದಲಿಗರು (ಜಾಸ್ಕೃ ೬ ೨೮೯). [ಮೊದಲ್$_1$ + – ಇಗ]

ಮೊದಲಿಡು (ಕ್ರಿ). = ಮೊದಲಿಕ್ಕು : ಮೊದಲಿಟ್ಟೀ ಕೊಲಲೆಂದು ಕೌರವರಂ (ಪಂಪಣಾ· ೦೦-೦೦); ಮಾಗಿ ಬರಲ್ ಮೊದಲಿಟ್ಟಿತು (ಜಪಂ· ೦೪-೬); ಸಂಭ್ರಮಂ ಮೊದಲಿಡು[ಜಾಗಾಂ· ಮೊದಮಿಸು]ತಿರ್ದುದಾ ಸೃಷ್ಟಿಯ ದೇಶದೊಳಂ ತಿರುನಾವಲೂರೊಳಂ (ಪಂಪರ· ೫ ೫೫೫). [ಮೊದಲ್$_1$+ ಇಡು$_1$]

ಮೊದಲಿಯಾರ್. ಮುದಲಿಯಾರ್. ಮುಂದ್ಲಿಯಾರ್ (ನಾ)· = ಮೊದಲಿ ೨. ☞ ಕನ್ನಡನಾಡಿನಲ್ಲಿ ಈ ಶಬ್ದರೂಪವೇ ಹೆಚ್ಚು ಪ್ರಚಾರದಲ್ಲಿದೆ. **ಮುದಲಿಯಾರ್ :** ಇವರ ಮುಖಲಕ್ಷಣಗಳು ಮುದಲಿಯಾರರಂತೆ ಇರುತ್ತವೆ (ಕಾಗೆ· ೦೦೦); ತೊಡಮಂಡಲ ಮುದಲಿಯಾರರ ವಂಶದಲ್ಲಿ ನಾನು ಜನಿಸಿದೆ (ಕ್ರಕಾಕ· ೦). **ಮುಂದ್ಲಿಯಾರ್ :** ವಿಜಾಪುರಜಲ್ಲೆಯ ಮುಂದ್ಲಿಯಾರರು ವ್ಯಾಪಾರದ ಹೊರ್ತು ಬೇರೆ ಹೋರೆಯನ್ನು ಬಹುತರ ಮಾಡುವುದಿಲ್ಲ (ಕಾಗೆ· ೯೦). [ದೇ.॥ ತಮಿ· ಮಲ. ಮುತಲಿಯಾರ್ ; ತೆಲು· ಮೊದಲಾರಿ]

ಮೊದಲಿಸು (ಕ್ರಿ)· = ಮೊದಲಿಕ್ಕು : ರಾಜುವೇ ಯಾವುದಾದರೂ ವಿಷಯವನ್ನೆತ್ತಿಕೊಡು ಮಾತಿಗೆ ಮೊದಲಿಸುವನು (ಸಚಿತ· ೫೦); ನನಗೆ ಫಲಾಫಲ ಕಂಡರೆ ಆಗುವುದಿಲ್ಲ. ನೀವು ಅದನ್ನೇ ಹೆಚ್ಚಾಗಿ ಓದಲು ಮೊದಲಿಸಿದರೆ ಮುಂದೆ ನಿಮ್ಮನ್ನು ಕಂಡರೂ ಆಗದೇ ಹೋದೀತು (ದೂಸಂ· ೩೬). [ಮೊದಲ್$_1$ (<ಮೊದಲ್$_2$) + – ಇಸು$_5$]

ಮೊದಲು$_1$ ' ಮೊದಲ್$_1$ ' ನೋ·

ಮೊದಲು$_2$ ' ಮೊದಲ್$_2$ ' ನೋ·

ಮೊದಲುಗಣ್ (ನಾ)· ಕಣ್ಣಿನ ಬುಡ ; ಮೂಗಿನ ಮೇಲ್ಭುದಿಯು ಕಣ್ಣಿನ ಭಾಗ : ಅಕ್ಷಿಮೂಲಂ ಪೂರ್ವನೇತ್ರಮೆನೆ ಮೊದಲು [ಪಾಣಂ· ಲ] ಗಣ್ " (ಕುಂಗಣಾ· ೧೧-೩). [ಮೊದಲು$_1$ (< ಮೊದಲ್$_1$) + ಕಣ್]

ಮೊದಲುಗೆಡು ' ಮೊದಲ್ಗೆಡು ' ನೋ·

ಮೊದಲುಗೊಂಬು (ನಾ)· ಆನೆಯ ಕೋರೆಹಲ್ಲುಗಳ ಬುಡ ; ದಂತ ಮೂಲ : " ಕಿರೀರಂ, ದಂತಮೂಲಂ ಈ ೨ ಮೊದಲುಗೊಂಬು " (ಪಣಾಮು· ೩೭-೩೦). [ಮೊದಲು$_1$ (<ಮೊದಲ್$_1$) + ಕೊಂಬು$_1$]

ಮೊದಲುಗೊಳ್ ' ಮೊದಲ್ಗೊಳ್ ' ನೋ·

ಮೊದಲುಜುಬು (ನಾ)· ಆರಂಭದ ರಭಸ,–ಆವೇಗ : ಕಾರ್ಮುಟ್ಟಿಯ ಬಿಜುಗಾಳಿ ಮೊದಲುಜುಬು ಸಯ್ತು (ಅಕ್ಕಾ· ೦೦-೨೨೬). [ಮೊದಲ್$_1$ + ಉಜುಬು$_3$ (<ಉಜುಂಬು$_2$)]

ಮೊದಲೇರಿ. ಮೊದಲೇಱಿ (ನಾ) ಕೆರೆಯ ಕೋಡಿಯಿಂದ ಹರಿಯುವ ನೀರಿನ ಮೊದಲ ಪರಿಸರ, –ಭಾಗ : ಮೊಪಲೇರಿಯೊಳ್ಸಾಯಿರ ಬಳ್ಳಿಯ ತೋಣ್ಮವು ಅಯ್ತಶ್ರೀಸ್ವಾಗ್ರಹಾರಮುಮಜಿಯ ಪ್ಪುರ್ಬಾದ ಪರಿಹಾರನ್ ದೇವಭೋಗಂ ಮಾಡಿಕೊಟ್ಟರ್(ಎಕ·XII·ತೀಕಲ್ಲೆ·೨೩-೨೦;೧೬೨); ಅಂಕಲೆಗೆಜಿಯ ತುಂಬಿನ ಮೊದಲೇರಿಯ ಕೆಳಗೆ ದೇವಗ್ಗೆರೆ ಕೊಟ್ಟು ಗದ್ದೆ ಕಮ್ಮ ೫೦ (ಶಾಇತಿ· XX· ೮೪-೮೨; ೧೧೨೦); ಹಿರಿಯ ಕೆಱಿಯ ಹಿಂದಣ ವೆಸದಲೇರಿ ಅಡಕೆದೋಟ . . . ಮೇರೆಯಾಗಿ (ಎಕ· VI, ಕಡೂರು· ೦೫-೧೬; ೧೨೧೭ ಕ್ರಿ). **ಮೊದಲೇಱಿ :** ಮೊದಲೇಱಿಯೊಳ್ ಇರ್ಪಿಂಡುಗ ವೆದೆಗಬ್ಬಿ . . . ಅಯ್ನೂಱು ಬಳ್ಳಿಯತೋಣ್ಮಅಲಕೆಱಿ ಇವನಾವನೊರ್ವ ನಡೆಯಿಸಿದನಾತನದೆ ಧರ್ಮ (ಎಕ· XI. ಚಿಕಪ· ೦೭-೦೩; ೮೫೪). [ಮೊದಲ್$_1$ + ಏರಿ$_1$]

ಮೊದಲೇಱಿ ' ಮೊದಲೇರಿ ' ನೋ·

ಮೊದಲ್ಗಾಲ್ (ನಾ) ಕೆರೆಯ ತೂಬಿನಿಂದ ಹೊರಟ ಕಾಲುವೆಯ ಪ್ರಾರಂಭದ ಭಾಗ : ಆ ಸಿರಿವೊಲ ಕೆರೆಯ ಕೆಳಗೆ ಮೊದಲ್ಗಾಲ ಗದ್ದೆಯ ಹಾನೆರಡು ಖಂಡುಗದ ಬಯಲು (ಎಕ· XI. ಹಳ್ಳಿ· ೨೦-೨೨ ; ೧೦೬೨). [ಮೊದಲ್$_1$ + ಕಾಲ್$_2$]

ಮೊದಲ್ಗಡು ' ಮೊದಲ್ಗಡು ' ನೋ·

ಮೊದಲ್ಗೆಡಿಸು (ಕ್ರಿ)· ಆಧಾರವಿಲ್ಲದಂತೆ ಮಾಡು ; ನಾಶಗೊಳಿಸು : ನೀಜರ ಸೊಬಗಂ ಮೊದಲ್ಗೆಡಿಸಿ ತೋಳ ಮೊದಲ್ನ ಪೆಮ್ಮುವನೆತ್ತುವಂತಿರೆ ನನೆಯಂಬುಗಳ್ಗೆ ಬೆರಲೆತ್ತುವರಲ್ಲಿಯ ಮೂಲೆಗಾರ್ತಿಯರ್ (ಪುಶ್ತ· ೨-೩೯). [ಮೊದಲ್ಗೆಡು + – ಇಸು$_5$]

ಮೊದಲ್ಗೆಡು. ಮೊದಲುಗೆಡು. ಮೊದಲ್ಗಡು (ಕ್ರಿ)· ೧· ಬೇರುಸಹಿತ ನಾಶವಾಗು ; ನಿರ್ಮೂಲವಾಗು ; ಸಂಪೂರ್ಣವಾಗಿ ಅಳಿಸಿಹೋಗು; ವಿಂಧ್ಯವಿತಾನಪ್ರಾಂತದೊಳ್ ತಿಜ್ಜನೆ ತಿರುಗಿ ಮೊದಲ್ಗೆಟ್ಟು ದೇವಿಳ್ದು (ಪಚ್ಚಾ· ೦೯). ೨.(ವ್ಯಾಪಾರದಲ್ಲಿ) ಮೂಲಧನವನ್ನು ಕಳೆದುಕೊಳ್ಳು; ನಷ್ಟ ಹೊಂದು : ಮೊದಲ್ಗೆಟ್ಟ ಪರದನಂತೆ ಪಳಗೊಂದಂ ಪೆನೆಯದೆ (ಪರ್ಮಾಕ್ಕು· ೦೯-೩೪). **ಮೊದಲುಗೆಡು :** ೨. ಮೊದಲುಗೆಟ್ಟು ಲಾಭವ ನಜಿಸುವ ಪರಿ ಇನ್ನೆಂತೋ (ಪೋಗಜ, ೬೯-೫೦); ಮೊದಲುಗೆಡವ

ಹರದೆನಗಾದುದಱಿಮ್ಮ ಮೊದಲುಗೆಡದ ಹರದು (ಕಬ್ಬೀ. ೬೪-೧೦೨).

ಮೊದಲ್ಗಿಡು : ೧. ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ಮೊದಲ್ಗೆಡೆ ಮುನ್ನವೇಕವಿಂಶತಿ ಪರಿಸಮ್ಯೆಯಿಂ ತಮಿಸಿ (ಪಂಪಭಾ. ೨-೧೫); ಮತಿಯುಂ ಮೊದಲ್ಗಿಡಲೀಯದೆ ಮದನವಿಕಾರಮನೊದವಲೀಯದೆ (ಪಂಡಾಪು. ೪-೬೬ ಪ); ಎಱಗದ ಶಿರಭೂರುಹಮನೆಯ್ದೆ ಮೊದಲ್ಗಿಡೆ ಕೀಱ್ತ . . . ಎಱಗದರಂ ತಡುಗಿಡಿಪ ನಮ್ಮರನುರ್ವಿಪ ರಾಜರೀರೆ ಕಣ್ಡೆಱಿದುದು(ಪುಸ್ತ. ೦೩-೬).

[ಮೊದಲ್[1] + ಕಿಡು[1]]

ಮೊದಲ್ಗೆಯ್ (ಕ್ರಿ)· ಆರಂಭಿಸು; ಪೂರಲು ಮಾಡು; ಉಪಕ್ರಮಿಸು: ಅರಣ್ಯಕನಿಂತು ಕತೆಗೆ ಮೊದಲ್ಗೆಯ್ದಂ (ಧಾಪುಕ್ಕ. ೦೦೯-೬).

[ಮೊದಲ್[1] + ಕೆಯ್[1]]

ಮೊದಲ್ಗೊಳ್, ಮೊದಲುಗೊಳ್, ಮೊದಲ್ಗೊಳು (ಕ್ರಿ)· ೧. ಆರಂಭಿಸು; ಪೂರಲಾಗು; ಮೊದಲಾಗು : ಪುಟ್ಟದಂದು ಮೊದಲ್ಗೊಂಡಗಲದ ಚಂದ್ರಾಪೀಡನನಗಲ್ದಿರಲ್ನೀನದೆಂತು ಪೇಳ್ವುಗದೇವದುಂ (ಗಾಪಂಗಾ. ೪೭೦); ಅವಳ ಮೆಲ್ಲಡಿ ಮೊದಲ್ಗೊಂಡು ಮೆಲ್ಲಮೆಲ್ಲನೆ . ಮೇಗಗಡರ್ದ ನೀಳ್ದ ಕಣ್ಗಳುಂ ನಿಳಿಸಡಂವಿನರ್ವಾಟಮುಂ ಕಂಡು ಪೊಱವಾೞ್ದೇಱಿಲಾರ್ತುವಿಲ್ಲ (ಕ್ಷತ್ರಾ. ೬೬). ೨. ಒಂಡವಾಳವನ್ನು ಪಡೆದುಕೊಳ್ಳು; ಮೂಲಧನವನ್ನು ತೆಗೆದುಕೊಳ್ಳು : ಕನಕರಾಶಿಯುಂ ಬಸನಕ್ಕೆ ತಮಿಸಿ ಬಿಯುಂ ನಡೆಯುದಿರೆ . . . ಸೋದರಮಾವಂ ಭದ್ರಮಿತ್ರನಲ್ಲಿ ಮೊದಲ್ಗೊಂಡು ಸ್ಥಳಜಾತ್ರೆಗೆ ಪೋಗಿ ಸಂಖ್ಯಾತೀತಸಾರಧನಮುಂ ಪಡದು ಬರ್ಪೆಡೆಯೊಳ್ (ಪಂಂತಿ. ೪-೧೦ ಪ). **ಮೊದಲುಗೊಳ್** : ೧. ಈ ಹೊತ್ತು ಮೊದಲುಗೊಂಡು ಯುದ್ಧವಿಲ್ಲದ ರೀತಿಗೆ ಮಾಡುತಲಿಪ್ಪೆನೆ (ಕ್ಷತ್ರಾಚೂ. ೧೯); ಪ್ರಕಾಂಡ: . . . ಬೇರು ಮೊದಲುಗೊಂಡು ರೇಫೆಗಳವರೆಗೂ ಗಿಡದ ಮಧ್ಯಭಾಗದ ಹೆಸರುಗಳು (ಕರ್ನಾ.ಪಠ್ಯ.೦೦೨). **ಮೊದಲ್ಗೊಳು**: ೧. 'ಮೊದಲ್ಗೊಳುಹ' ಪರಾ. [ಮೊದಲ್[1] + ಕೊಳ್[1]]

ಮೊದಲ್ಗೊಳು ' ಮೊದಲ್ಗೊಳ್ ' ನೋ.

ಮೊದಲ್ಗೊಳುಹ (ಪಾ)· ಆರಂಭ ; ಪ್ರಾರಂಭ : " ಉಪಕ್ರಮಃ, ಉಪಕ್ರಮಃ, ಆರಂಭಃ— ಈ ೩ ಮೊದಲ್ಗೊಳುಹ " (ಪಣಪಾಃ ೦೦೬-೨೨).

[ಮೊದಲ್ಗೊಳು (< ಮೊದಲ್ಗೊಳ್) + — ಹ[2] (< —ಪ್[2])]

ಮೊದಳೆ, ಪೊಸಳೆ (ನಾ). ಒಂದು ಬಗೆಯ ಜಲಚರಪ್ರಾಣಿ: ನಕ್ರ : 'ಮೊದಳೆಮಡು' ಪರಾ. **ಪೊಸಳೆ** : "ಕಾಂಭೋರಃ- ನಕ್ರಃ _ ಈ ೨ ಪೊಸಳೆ" (ಪಣಪಾಮು. ೦೨೬-೨೪); ಮೀನುಂ ಪೊಸಳೆಯುಂ ನೆಗಳು ದಾಪೆಯುಂ . . . ಮೊದಲಾಗೊಡೆಯ ಜಲಚರಂಗಳುಂ (ಧರ್ಮಾ.ಅ. ೧೬-೬); ಪೊಸಳೆಯುಂ ಪಿಡಿವಂತೆರೆ ನೀರೊಳಿೞಿತ್ತಿ ಭೀಮಪ್ರತಿಜ್ಞಾವಿಂ ಪಿಡಿಯೆ (ಪಂತಪು. ೦-೨೬); ಆ ವಣ್ಣಂ ಕೃಶವೆನಿಂಬುದೊಂದು ಪೊಸಳೆ ಪ್ರತಿದಿನಪೊಲ್ವ ಮೆಲ್ವು (ಪಜಿತಂ. ೨೭೭-೨೦): ಉಷ್ಣವ್ರದೇಶಗಳೊಳಗಿನ ನದಿಗಳ್ಗಳಿಮೂ ಸರೋವರಗಳ್ಗಳಿಯೂ ಪೊಸಳೆಗಳುಂಟು (ಪುಂಂಪಾಪು. ೪-೨೭)

ಪೊಸಳೆಕಣ್ಣೀರು = (ಆಲಂ) ಪೋಸಗೊಳಿಸಲು ಸುರಿಸುವ ಕಂಬನಿ ; ಕಪಟದ ಕಣ್ಣೀರು : ಅವರ ಆಶ್ವಾಸನೆಗಳೆಲ್ಲ ಸುಳ್ಳೇ ಸುಳ್ಳು! ಅದು ಪೊತ್ತವರ ಪೊಸಳೆಕಣ್ಣೀರು ! (ಕ್ಷತ್ರಾ. ೭೪). **ಪೊಸಳೆತುಪ್ಪ** = (ಔಷಧಿಯಂತೆ ಬಳಸುವ) ಪೊಸಳೆಯ ಕೊಬ್ಬು : ಉಳುಕಿದಾಗ ಪೊಸಳೆತುಪ್ಪ ಸವರಿ ತಿಕ್ಕುತ್ತಾರೆ (ಕೂಪ).

[ದೇ ತಮಿ. ಮುತಲೈ, ಮುತಳೈ, ಮುಜಲೆ ; ಮಲ. ಮುತಲ ; ತುಳು. ಮುದಲೆ, ಮುದಳೆ, ಪೊಸಳೆ : ಕೊಡ. ಪೊಸಲೆ ; ತೆಲು. ಪೊವಲಿ, ಪೊಸಡಿ, ಪೊಸಲಿ ; ಕೋತ. ಪೊಜಳ್ ; ಕೋರಾ. ಪೊಸಲಿ; ಪರ್ಜ. ಪೋಚ./ಸು. ಮುಸಲೀ]

ಮೊದಳೆಮಡು, ಪೊಸಳೆಮಡು (ನಾ). ೧. ಪೊಸಳೆಗಳು ವಾಸ ಮಾಡುವ ನದಿ- ಹೊಳೆ ಮುಂತಾದುವುಗಳ ಆಳವಾದ ಭಾಗ : ಶೆಜ್ಜಾಯ್ತಲೆಮೋಜಿಜೆ ಪೆದಿಕರೆವೆ ಮೊದಳೆಮಡುವೆ ಪಡುವಾಯ್ವೆಳ್ಗೊಳ ಕಾಲುಪೆದುಂ ಒಗಿನಾಗಿ (ಪ್ಯಕಂ. ೦೯೨೬, ೦೦೮-೯೭ ; ಜಪಮು ೬೪). **ಪೊಸಳೆಮಡು** : ೧. ಅದು ಪೊಸಳೆಮಡುವಾದುದರಿಂದ ಅಲ್ಲಿ ಈಜಲು ಹೋಗಬಾರದೆಂದು ಎಚ್ಚರಿಕೆ ನೀಡಿದ್ದಾರೆ (ಜೂಪ). ೨. ಒಂದು ಸ್ಥಳದ ಹೆಸರು : ಶ್ರೀಮತ್ಸರುದೇವಪಕ್ಕೊರ್ಗಳಿಯಯ್ಯೂಱುಸಿಗೊಳಗಣಮೊಸಳೆ ಮಡುವನಾಗುತ್ಪಮಿರ್ದ್ (ಕ್ಯಾಶಾ. IX-i, ೧೨-೦೦; 1036).

[ಪೊಸಳೆ + ಮಡು]

ಮೊದಿರಕಣ್ಣಿ (ನಾ)· ಒಂದು ಬಗೆಯ ಸಸ್ಯ : ಮುಳ್ಳುಅಂಕೋಲೆ. ಮೊದಿರಕಣ್ಣಿಗಿಡ (ಪ್ಯಕಿನಿ. ೪೪-೪೭೭). [?]

ಮೊದೀಜಾಣೆ ' ಮೋದೀಜಾಣೆ ' ನೋ.

ಮೊದೆ (ನಾ)· ೧. ಒಂದು ಬಗೆಯ ಹುಲ್ಲು; ಮುಂಜ; ಮೊದೆಹುಲ್ಲು : " ಶರಃ, ಮುಂಜಃ—ಇವೆರಡುಂ ಮೊದೆ" (ಪಣಾಮು. ೩೨-೩೦) ; ಮದನಂ ಬೆಳ್ಳಗುರಂಬಿಂದಿನಿ ಜಿಗಿಲ್ದಿರ್ದಂಬುಗಳ್ ಚಿತ್ತದೊಳ್ ಮೊದೆಯಂ ವೈತಪೊರಾಗೆ (ಣಕ್ಕಾ. ೩೦೪ ಸಂಧಿ); ಅಬಾಸ್ಯಪ್ರಜರದೊಳ್ ಮೊ (ಪು)ದೆಯ ಬೂದಿಯಂ ಕಲಸಿ . . . ಬಜಿಕ್ಕಿದನೆಱ್ಚಗೆ ಕಣ್ಣ ಬೇನೆ ದಣಿಂದ್ಗುಂ (ಪೋಕೋಚ. ೪-೭೪) ; ಕ್ಕೀದಬ್ಬೆ ಮೊದೆ ಬೆಳೆದಿದ್ದ ತೆವರೇ ಮೇರೆಯಾಗಿ (ಎಕ. III, ಶ್ರೀರಂಗ. ೦೩೩-೯೪; 1458). ೨. (?) : ತಜ್ಞ ಕಾಡ ಪೆಜ್ಜಿದಿಯು ಮೊದೆಯ ಕಲಾಪಕದ ಗುರವುಗಳ್ (ಎಕ. II, ೪೩-೩; ಸು. ೨೦೦).

[ದೇ.ಪ ತೆಲು. ಪೊದಮು; ಕೊಡ. ಮೊದೆ = ಹುಲ್ಲುಗಿಡದ ಪೊದರು]

ಮೊದೆಕರನಿ (ನಾ)· (?) : ಕೊಂಗ್ಕೆನ್ಯ ಸಗೋತ್ರಾಪು . . . ದೇವಶಮ್ಮಗೇ ಮೊದೆಕರನಿನಿಪುಮಹುಲಮ್ ರಾಜಮಾನೇಸ ವಿಂಶತಿಸಿವರ್ತನಮ್ ಕೀದಾರಂ ದ[ತ್ತ]ವಾನ್ (ಎಕ. VI, ೦೪-೧೦; ಸು. ೪೦೦). 'ಮೆದಕರುನಿ' ಪರಾ. [?]

ಮೊದ್ದ (ನಾ)· ತಿಳಿವಳಿಕೆಯಿಲ್ಲದವನು ; ದಡ್ಡ : ಪೆದ್ದ : ಇವನು ಶುಂಬಾ ಮೊದ್ದ (ಕೂಪ). [ಮೊದ್ದು + — ಅ[4]]

ಮೊದ್ದಿ (ನಾ)· ತಿಳಿಗೇಡಿ ಹೆಣ್ಣು ; ಮಂದಬುದ್ಧಿಯವಳು ; ದಡ್ಡಿ : ಈ ಮೊದ್ದಿ ಏನು ಹೇಳಿಕೊಟ್ಟರೂ ಕಲಿಯುವ ಹಾಗಿಲ್ಲ (ಕೂಪ).

[ಮೊದ್ದು + — ಇ[2]]

ಮೊದ್ದು (ನಾ)· ೧. ತಿಳಿಗೇಡಿವ್ಯಕ್ತಿ; ಮಂದಬುದ್ಧಿಯ ವ್ಯಕ್ತಿ : ನಿನಗೇನೂ ತಿಳಿಯದು, ನೀನೊಂದು ಮೊದ್ದು (ಕ್ಯಗಪು. ೩೭); ಪಾಪ ! ಅವನು ಮೊದ್ದು (ಣಕ್ಕಪಾ. ೦೩೦); ನಮ್ಮ ಹೆಂಗಸು ಮೊದ್ದು (ಣಕುಗೊ. ೪೦). (ಗು). ೨. ತಿಳಿಗೇಡಿಯಾವ ; ದಡ್ಡನಾವ : ಹಿಂದೆ ಅವನು ಎಷ್ಟು ಚುರುಕು ವಿದ್ಯಾರ್ಥಿಯಾಗಿದ್ದನೋ ಈಗ ಅಷ್ಟೇ ಮೊದ್ದುಹುಡುಗನಾಗಿದ್ದಾನೆ (ಕೂಪಸ. ೨೩೦); ಎಷ್ಟು ಹೇಳಿದರೂ ನಿನ್ನ ಮೊದ್ದುಬುದ್ಧಿ ಎಲ್ಲಿ ನೆಟ್ಟಗಾದೀತು? (ಕಬ್ಯಕ್ಕೃ. ೬); ಗೊಂಬೆಯಂತಿರುವ ಮೊದ್ದು ಹುಡುಗಿಯನ್ನು ಕೈಹಿಡಿದು ಬರುವ ಭಾಗ್ಯವಾದರೂ ಏನು ? (ತೆಮೋಚ. ೦೦೦).

ಮೊದ್ದುಮಣಿ = (ಹಿರಿಯರೆ ಮುದ್ದು ಹೆಚ್ಚಾಗಿ) ದಡ್ಡನಾದ ಮನು : ಅವಿವೇಕಿ : ತಿಳಿಗೇಡಿ : ಅಮ್ಮನಿಗೆ ಮಾತ್ರ ಬೇಕಾಗಿದ್ದ ಮೊದ್ದುಮಣಿ ನಾನಾಗಿದ್ದೆ (ಕಬ್ಯಕ್ಕೃ. ೨೦೬).

[ದೇ.ಪ ತಮಿ. ಪೆತ್ತು; ತೆಲು. ಮೊದ್ದು]

ಮೊದ್ದುಗಳಹು (ಕ್ರಿ)· ಪೆದ್ದುಪೆದ್ದಾಗಿ ಹರಟು ; ತಿಳಿಗೇಡಿಯಾಗಿ ಮಾತಾಡು : ನೀ ಮೊದ್ದುಗಳಹುವುದನರಿತಿದ್ದೆನೇ (ಕೂಕರಾಣ. ೦೦೨-೨೭೬).

[ಮೊದ್ದು + ಗಳಹು (< ಗಱಪು)]

ಮೊನಗು ' ಮಿನುಕ್ಕು ' ನೋ.

ಮೊನಚು (ನಾ). ೧. ಚೂಪಾಗಿರುವಿಕೆ ; ಹರಿತವಾಗಿರುವಿಕೆ : ಮೊನಚುಳ್ಳ ಕತ್ತಿಯನ್ನು ಹಿಡಿದು . . . ಪೆರೆಯಲು (ಕೃಷ್ಣಜ. ೦೫೩). ಇರ್ಕಡೆಯೊಳು ಸೂಜಿ ಮೊನಚಾದುದಾದರೆ ಹೊಲಿಯಬಹುದೇನು ಸೂಸು (ಇಂಚರ. ೬೩-೬೪). (ಗು). ೨. ಚೂಪಾದ; ಹರಿತವಾದ: ಸಜನಪಜಗ ಮುಂದಕಡಿಯಿಡುತಿರಲು ಮತ್ತೆ ತಲೆಯೆತ್ತಿ ಕಾಲ್ಗಡಿವಹುದು ಮೊನಚು ಮುಳ್ಳು ! (ಕಂಚಾ. ೩೭-೨). [ಮೊನೆ + —ಚ್ಚು]

ಮೊನಚುಗಣ್ಣು (ನಾ.) ಹರಿತವಾದ ನೋಟ ; ತೀಕ್ಷ್ಣವಾದ ದೃಷ್ಟಿ : ಮೊನಚುಗಣ್ಣುಗಳನ್ನು ಮಾಡಿಕೊಂಡು, ಜಾತಕವನ್ನೆ ನೋಡಿದರು (ಜಸಚ ೭೭). [ಮೊಸಚು + ಕಣ್ಣು (< ಕಣ್)]

ಮೊನಚುಗೊಳಿಸು (ಕ್ರಿ). ಚೂಪಾಗುವಂತೆ ಮಾಡು ; ಹರಿತ ಮಾಡು : ಕಲ್ಲುಮುಳ್ಳುಗಳನು ಮೊನಚುಗೊಳಿಸುವರಾರು (ಜಂಚಾಕ. ೭೦-೮೨). [ಮೊನಚು + ಕೊಳ್ + ಇಸು]

ಮೊನಚುಗೊಳ್ಳು (ಕ್ರಿ). ಹರಿತಗೊಳ್ಳು ; ತೀವ್ರವಾಗು ; ತೀಕ್ಷ್ಣವಾಗು : ಹೇಗೆ ಮೂಡಿ ಬರವಣಿಗೆಗಳಿಯುವಪ್ಪು ಮೊನಚುಗೊಂಡಿತೋ ಕಾಣೆ (ಶಾಕುಚ. ೦೩). [ಮೊನಚು + ಕೊಳ್ಳು (< ಕೊಳ್)]

ಮೊನಸು (ಕ್ರಿ). ೧. ಮೂಡು ; ಅಂಕುರಿಸು ; ಮೊನಸಿದ ಮೆಯ್ಮನಿರಿಂದಾನನಂಬ್ಬಿಕಸನವಿಶೇಷದಿಂದ . . . ಪೆಚ್ಚಿಳು (ಅಣಾಪ. ೦೦-೮೦); ನನೆಯಂ ಪೆತ್ತುದು ಮೂಧವಿ ಮೊನ[ಪಾಣಿ. ನೆ]ಸಿದುವಂಕುರಿಪ ತೆಣಿ ವಿಮ್ಮಾವಿಗಳೊಳೀ (ನಿಚಿ. ೬-೩೭) ; ತುಜುಬಂ ತಿರ್ದುತ್ತಂ ಮೊನಸಿದ ವಳಕಮನೆ ಕಂದು (ಪುಷ್ಕಾಸ್ತ. ೦೦-೨೦). ೨. ಮೊಳಕೆ ಒಳು . ಪದಿನಾಲ್ಕು ದಿನಕೆ ನೆತ್ತರ ಘಟ್ಟಯೆನಿಪವಂ ಪಡೆದು ಮೊಳೆ ಮೊಸಸಿದಿಪ್ಪ ತ್ಕೈದು ದಿನವದಂ (ಶಾಪಂಕ. ೪-೩೦). [ಮೊನೆ + — ಸ್]

ಮೊನೆ (ನಾ). ೧. ತುದಿ : ಕೊನೆ : ಸೈನ್ಯಮೆಲ್ಲಮುಂಬಿನ ಮೊನೆಯೊಳ್ ಪಡಲ್ವಡೆ (ಪಃಕಣಾ. ೫.೦೦೪) ; ಎಸಟು ಮೊನೆ ಕೂರಿತಡಿಗೆಂಬು ಸಂಕೆಯಿಂ ಮೆಟ್ಟುದುತೆ ಮುಟ್ಟದೆ ಕುಣಿವಾಗಃಮೊಂಬ ರಂಗದೊಳ್ (ಶಾಂಶಪು. ೦೦-೦೩); ಮೊರಲೊಳ್ ಮುಳ್ಳಿನ ಮೊನೆಗಳ್ ಮೃದುವಪ್ಪುವ (ರಚಾಕಬ್ಬ. ೬-೦೦೬). ೨. ಹರಿತವಾದುದು : ಚೂಪಾದ ತುದಿಯುಳ್ಳದ್ದು : ಮೊನೆ ತಪ್ಪದ ಬಳಿಕ ಅಲಗೇನ ಮಾಡುವುದು (ಜಸಚ. ೭೭೯) ; ಗಗನಧ್ವನಿಯೊಳಾದುದು ವಾರ್ತೆ ಚಿತ್ರಕೆ ಮೊನೆಯ ಸರಳಿನೆ (ಪಃಕಣಾ. ೫-೭) : ಹುರಿಯ- . . . ಮೊನೆಯಾದ ಕೋರೆಹಲ್ಲುಗಳಂ ಬಲು . ಭಯಂಕರವಾಗಿ ತೋರುವುವು (ಪುಂಅಪು. ೪-೩೫). ೩. ಮುಳ್ಳು : ತಾ ನಡೆಯಲಜ್ಜುಮದ ಮೊನೆಯ ಪೆಟ್ಟಿ ಬಯಸ್ಯುವಂತೆ (ಮೋಆಪು. ೫೫-೦೫೬). ೪. ಆಯುಧಗಳ ಹರಿತವಾದ ಬಾಯಿ ; ಧಾರೆ ; ಅಲುಗು : ದುಶ್ಶಾಸನನ ಮಗನಿದಿರಾಗಿ ಏಡುಗದ ಮೊನೆಯ ಚೂರಿಸಿ . . . ಅರ್ಜುನಕುಮಾರನ ಕರೆಯ ಹಳಚಿದನು (ಭಾಷ್ಕೃ. ೬-೫೬). ೫. ತೀಕ್ಷ್ಣತೆ ; ಜುರುಕು : ಅವಳ ಆಸೆಗಳು ಹೆಚ್ಚಿ ಮೊನೆಯಾದುವು (ಪುಂಅಪು. ೧೭) ; ಆಕೆಯ ಮಾತಿನಲ್ಲಿ ಮೊನೆ ಇರುತ್ತಿತ್ತು (ಗಂಕಾಜಾ. ೦೦) ; ಘಟ್ಟಿಭಾವಕೊಂದು ಮೊನೆಯನಿಟ್ಟಿನು (ಕಬಾ. ೪೩-೦೩). ೬. ಶೌರ್ಯ ; ಕೆಚ್ಚು ; ಕಲಿತನ ; ' ಮೊನೆದೋಱು ' ಪರಾ. ೭. (ಸೈನ್ಯದ) ಮುಂಭಾಗ ; ಅಗ್ರಭಾಗ: ತನ್ನೊಡ್ಡಿದ ಮಕರವ್ಯೂಹದ ಮೊನೆಯೊಳ್ ಸುತ್ತಿಜ್ಜಿದ್ದಿತ್ತ ಪೊನ್ನ ಪಟ್ಟಿಯಿಗೆಗಳಂ (ಪಂಕಣಾ. ೦೦-೩೨ ಪ); ಕ್ರಿಷ್ಣಾರ್ಜುನಂ ವಿಜಯನಾಮಾರ್ಕಕೀರ್ತಿಯುಂ ಜ್ವಳನಜಟಿಯುಂ ಸರಿಸಿ ಸಮಕಟ್ಟಿ ಮೂಜು ಮೊನೆಯನಾಗೊಡ್ಡಿ (ಶಾಂಶಪು. ೫-೩೦ ಪ); ವಿಶ್ವಾಮಿತ್ರ ಮಹಾರಾಜನುಂ ರುಗ್ಮಿಣಿಕುಮಾರನುಮೊಂದು ಮೊನೆಯಾಗಿ ಬಂದೊಡ್ಡಿದರ್ (ಪಂಹರಿ. ೬-೩೬ ಪ) ; ಈತನಳವಿಯ ಕಡಿಸಿ ಕಲೆಯೊತ್ತಿದರು ಭೂಪನ ಮೊನೆಯ ನಾಯಕರು (ಕುಣ್ಮಕ್ರೋ. ೬-೩೯). ೮. ಜಗಳ ; ಕಲಹ ; ಮುಳಿಸು ಬೇಸಜು ಮೋಡಿಮುಲಸಿಕೆ ಮೊನೆ ಮನದಳಲಂಜಿಕೆ ದುಗುಡಮೊಳು ತಿಳಿತಿಳಿದಿನಮನಿಂಗಿತಭೇದಂಗಳನಳುಕಿಮುಳುಕಿ ಅನುಸರಿಪು (ಕದಾ. ೩-೩೪). ೧೦. ಕಾಳಗ ; ಯುದ್ಧ : " ಮೊನೆ=ಕಾಳಗಂ " (ಕವಾಲ. ಹಂ. ೨) : ಕಲಿಯೆನೆ ನೆಗಟ್ಟಿಳ್ ಕಸಪರಗಲಿಯೆನೆ ಗುಣವಂಕ ಕಾರ್ತಿ ಮೊನೆಯೊಳ್ ಮನೆಯೊಳ್ (ಕಾಪ್ರ. ೦-೬೫); ಮೊನೆಯೊಳು ಮುತ್ಕರವಿಳ್ಗಂ ಮನೆಯೊಳು ಮನುವಾಂತ್ರಸಿದ್ಧಿ ಸಂಕಟದೊಳು ಮತ್ತನು ವೆನಪ ಪತಿಹಿತಂ (ಶಾಕಾ. IX-I, ೪೧೨-೦೦ ; 1226) ; ನಿನ್ನಾಳ್ವನೆಮ್ಮಂ ಮೊನೆಯೊಳ್ಪಂದಾಂತು ಕೈಮಾಡಿದೊಡೆ (ಕಸಂತ. ೦೩-೩೦). ೧೧. ಶಕ್ತಿ ; ಬಲ : ' ಮೊನೆಪುಟಿ ' ಪರಾ. ೧೨. (ಅಲಂ) ಅಡ್ಡಿ ; ವಿರೋಧ: ' ಮೊನೆದೋಱು ' ಪರಾ. (ಗು). ೧೩. ಚೂಪಾದ ; ಪರಿತವಾದ : ತೀಕ್ಷ್ಣವಾದ : ' ಪೊನೆಗಣೆ ' ಪರಾ.

ಮೊನೆಮಸೆ = ತೀಕ್ಷ್ಣವಾಗು; ಅಧಿಕವಾಗು; ಹೆಚ್ಚಾಗು: ಮೊನೆ ಮಸೆಪಕ್ಕಜು ಜಾಂಬ್ದಿಜ್ಗೆಡಿಪಿಡದೆಡಯಾಮುವ ನಜುದಾಂಬುಲಿ . . . ನೆಜ್ ಸೊಗಯಿಸಿದಂತ್ತೆ ನವಸುರತಕ್ರೀಡೆಯೊಳಾ ದಂಪತಿಗೆ (ಜಯಂಗ. ೪-೩೩). ಮೊನೆಮಾಡು = ೧. ಚೂಪಾಗಿ ಮಾಡು : ಹರಿತಗೊಳಿಸು : ಮೊನೆಮಾಡಿದ ಪೆನ್ಸಲ್‌ನಿಂದ ರೇಖಾಚಿತ್ರ ಬಿಡಿಸಬೇಕು (ಶಾಪ್ರ). ೨. ಏಕಾಗ್ರಗೊಳಿಸು : ಮನಸ್ಸನ್ನು ಒಂದೇಶದ ಮೇಲೆ ಮೊನೆಮಾಡಿವರೆ ವಿಷಮ ಚಿನ್ನಾಗಿ ಗೊಹ್ಮಾಗುತ್ತದೆ (ಶಿಪ್ರ. ೪೭). **ಮೊನೆಮುಟ್ಟಿಗಂಡ** = ಯುದ್ಧಕ್ಕೆ ನಿಂತರೆ ಸೋಲದ ವೀರ.—ಪರಾಕ್ರಮಿ ; ಒಂದು ಬಿರುದು : ಕವಿಜನವಿನುತಂ ಮೊನೆಮುಟ್ಟಿಗಣ್ಣಂ ನಾಪಸ್ತಾಂಬ್ಯಾಣ್ಣಂ ಶ್ರೀವಮ್ಮಹಾಪಾಣ್ಣಂ ಶ್ರೀಶ್ವರಂ (ಶಾಕಾ. IX-I, ೨೬೭-೦೦ ; 1200 ಗ).

[ದೇ. ತಮಿ. ಮುನೈ ; ಮಲ. ಮುನ ; ತುಳು. ಮುನೆ, ಮೊಣ. ಮೊನೆ ; ಕೊಡ. ಮೊನ ; ತೆಲು. ಪರ್ಜ. ಮೊನ]

ಮೊನೆಕಟ್ಟು (ನಾ). ಆಯುಧಗಳ ತುದಿಯು ನಿಷ್ಪ್ರಯೋಜಕವಾಗುವಂತೆ ಮಾಡುವ ಒಂದು ಬಗೆಯ ತಂತ್ರವಿದ್ಯೆ: ಮಂತ್ರ, ತಂತ್ರ . . . ದಾರೆಕಟ್ಟು, ಮೊನೆಕಟ್ಟುಗಳಂಬ ಲವಿದ್ಯದಿಂ ಗೆಲುವನು (ಕೃಶಪಾ. ೫. ೪೬೬). [ಮೊನೆ + ಕಟ್ಟು]

ಮೊನೆಕಾಣಿ ' ಮೊನೆಗಾಣಿ ' ನೋ.

ಮೊನೆಗಣೆ (ನಾ). ಹರಿತವಾದ ಬಾಣ ; ಅತಿ ನನೆಯಂಬಿನ ಮೊನೆಗಣೆಗಳಿವೆಂಬಿನಂ ಮಲ್ಲುವಿರ್ವೆಸೆದುವು (ಇಂಚಾಂಗಾ. ೭೭೮); ಕೈಚಳಕದಲಿ ಮುಸುಕಿದನು ಮೊನೆಗಣೆಯಿಂದ ರಿಪುಭಟನ (ಭಾಷ್ಕೃ. ೫-೦೨); ತಿರುವಿಗೆ ತೂಡಿಸಿ ಸೆಳೆದನು ಮೊನೆಗಣೆಯನು (ಪಣಾಗ. ೫-೦೩-೬). [ಮೊನೆ + ಕಣ್ಕೆ]

ಮೊನೆಗಯ್ಕ (ನಾ). ಕತ್ತಿವರಸೆಯ ಒಂದು ಪಟ್ಟು : ಇಬ್ಬರಿಂದ ಗತಿಮದ್ಧವಲ್ಲಿ ಇಬ್ಬರ ಹಸ್ತಗಳಿಂದ ಅನ್ಯೋನ್ಯವಾಗಿ ತಾಗುವದು ಅವದು ಅದು ಮೊನೆಗಯ್ಕಯೆಂದು ಸಮ್ಮತವು (ಪಡ್ಡಿ. ೪-೧೭).

[ಮೊನೆ + ಕಯ್ಕ (<ಕೆಯ್)]

ಮೊನೆಗಲ್ಲು (ನಾ). ಚೂಪಾದ ಕಲ್ಲು ; ಮೊನಚಾಗಿರುವ ಕಲ್ಲು : ಮೊನೆಗಲ್ಲು ಗುಂಡುಗಲ್ಲುಗಳರೆಗಲ್ಲುಗಳ್ . . . ಪಸಮಾರ್ಗವ ತುಂಬಿಹುವು (ಕಂಪಾ. ೦೬-೧೪). [ಮೊನೆ + ಕಲ್ಲು (<ಕಲ್)]

ಮೊನೆಗಾಣಿಸು (ಕ್ರಿ). ೧. ಆಯುಧದ ತುದಿ ಕಾಣುವಂತೆ ಹಿಡಿದು ಕೊಳ್ಳು : ಹೊಂಗಳಾರಿಯ ಕೊಲುವಿಡಿದು . . . ಮುಂಗೈದಂಡ ಗೊಡುತಂ ಜಾಳುಡಿಯಿಡುತ ರುಗಿಯುತ ಮೊನೆಗಾಣಿಸುತ್ತಂ (ಪಪ್ರ. ೫೬-೦೨). ೨. ಆಯುಧದ ತುದಿ ಕಾಣಿಸಿಕೊಳ್ಳು; ಅಲುಗು ಕಾಣಿಸಿಕೊಳ್ಳು. —ಮೂಡು : ನೀನಡರ್ವುದೀ ಶೂಲಮನೆನಲ್ಕಿತ್ತದೊಸಗ

ಯಿಂದೇಜಲಾತನ ಶಿರದೊಳದಜಿ ಮೊನೆಗಾಣಿಸಲ್ಬಡ್ಡಿಗೊಳದೆ ಎನಿದಿರಲ್ (ಶಾಸಿಪು. ೭-೪೨). [ಮೊನೆ + ಕಾಣಿಸು]

ಮೊನೆಗಾತಿ (ನಾ)· ೧· ಜಗಳವಾಡುವ ಸ್ವಭಾವದವಳು: ಜಗಳಗಂಟಿ: ಮುನಿದು ಮೂದಲಿಸಿ ಮೋಡಿಯೊಳಿದ್ದು ಮೂರ್ಖಿತ ಮೊನೆಗಾತಿಯಿಂ ಕೃತಿಗೇಳೆ ಇನಿಯನ ಮೊಗವ ನೋಡದೆ ಮುನ್ನ ಮೋಹಿಸಿ ಮನಗರಗುವಳು (ಪದ್ಮ. ೦-೫೫). ೨· ಸರಸದಿಂದ ಜಗಳವನ್ನಾಡುವವಳು: ಪ್ರೇಮ ಕಲಹವನ್ನಾಡುವವಳು : ತನಗೆಜಗಿದ ಪೆಣ್ಣಂ ನೋಡಿ ಮೊನೆಗಾತಿ ಬಲುಮೋಡಿಗಾತಿ ಮುಜುಗರಗಾತಿ ದುರ್ಮಾಯೆಂದ (ಪಭಸ. ೯-೦೫೬).

[ಮೊನೆ + — ಕಾತಿ]

ಮೊನೆಗಾಯ (ನಾ). ಆಯುಧಗಳ ಚೂಪಾದ ತುದಿಯಿಂದ ಉಂಟಾದ ಗಾಯ ; ಶಸ್ತ್ರಘಾತ ; ಅರಿಗಳ ಕೆಯ್ಯ ಕೂರಸಿಧಾರೆ ಮೊನೆಗಾಯ ಪರಿಂದೊಳಗೆ ಸಂಧಿಸಲು (ಪಚಕಥ. ೫೫-೫೯). [ಮೊನೆ + ಗಾಯ]

ಮೊನೆಗಾರ ' ಮೊನೆಗಾಱ ' ನೋ.

ಮೊನೆಗಾರತನ ' ಮೊನೆಗಾಱತನ ' ನೋ.

ಮೊನೆಗಾರಂ (ನಾ). ಲೋಪದ ತಂತಿಯನ್ನು ಪೂಡಲು ಉಪಯೋಗಿಸುವ ಒಂದು ಬಗೆಯ ಚಿಮುಟ : (೫). [?]

ಮೊನೆಗಾಲ್, ಮೊನೆಗಾಲು (ನಾ)· ೧· [ನಾಟ್ಯ] ಒಂದು ಬಗೆಯ ಪಾದವಿನ್ಯಾಸ : ಚಂದು ಜಕ್ಕತಿ ಕೋಲಚಾರಿಗಳ್ ಮೊನೆಗಾಲ್ ಕಳಾಸ ಕೈವಜ್ ತಿವುಡ ಮುಡುಹುಮುಳ್ಳನಿತು ಭೇದಂಗಳಿಂ ನರ್ತಿಸುವ ನೃತ್ಯ ರಮಣಾಜನಂ ಕಣ್ಗೆಸೆದುದು (ಪಪ್ರ. ೫-೨೯). **ಮೊನೆಗಾಲು**: ೨· ಕಶ್ತಿವರಸೆಯಲ್ಲಿನ ಒಂದು ಪಟ್ಟು : ಸಮುಖಾದದಿಂದ ನಿಂತು ತುದಿಗಾಲ್ಗಳಿಂದ ಭೂಮಿಯನ್ನು ಮುಟ್ಟಬೇಕು . . . ಆದರೆ ಹಸರು ಮೊನೆಗಾಲು ಯೆಂಬುದು (ಪಪ್ರ ೫೬. ೯-೧೩). [ಮೊನೆ + ಕಾಲ್$_1$]

ಮೊನೆಗಾಲು ' ಮೊನೆಗಾಲ್ ' ನೋ.

ಮೊನೆಗಾಱ, ಮೊನೆಕಾಱ, ಮೊನೆಗಾರ (ನಾ). ೧· ಯುದ್ಧಮಾಡುವವನು : ಯೋಧ ; ವೀರ : ಅರಿಸಿಯರಸಣುಗರಂ ಬೇಟ್ಟರುವುಂ ಮೊನೆ [ಪಾಣಾಂ. ಪೂಣ್] ಗಾಜರಂ ಪ್ರಗೀತರನಿಂಬಾಗಿರೆ ಚೌಪಳಿಗೆಗಳೊಳ್ ಕುಳ್ಳಿರಿಸಿದರ್ (ಕಂಕಾ. ೨-೬೬) ; ಮೊನೆಗಾಱ ನೀನೋ ನಮ್ಮರಸನೊ (ಪಚಕ. ೫೮-೭೬) ; ಆತನ ದಾಯಿಗ ಮೊನೆಗಾಱ ಸೋಮಪ್ರಭನು (ವಾಗಚಂ. ೦೯-೦೩) ; ಪಗೆಗಾಱರ ಮೊನೆಗಾಱರ ಬೀರ ! (ರಾಪಪ್ರ. ೮೦-೩). **ಮೊನೆಕಾಱ** : ೧· ದಿಂಡುಕಾಱಂ. ಬಿಲ್ಲುಱಂ. ಮೊನೆಕಾಱಂ (ಪಾಪಾಚಂ. ೦೩೦ ಉಬಿಗಿ). **ಮೊನೆಗಾರ** : ೧· ಪ್ರತಿಜ್ಞೆಯಂ ಮಾಡಿದ ಮೊನೆಗಾರನು ಯಿಂ ಆಯುಧವನೆತ್ತಲಾರನೇ (ತ್ರಿಗಂಪು. ೨೩೫-೬) ; ಮೊನೆಗಾರರು ಅರಿಬಲವ ಮೊನೆ ಮುರಿದರು (ಧರ್ಮ. ೦೨೯). ೨· ಮೈಸೂರು ಅರಸರಿಗಿದ್ದ ಒಂದು ಬಿರುದು : ಜನಪಂ ಮೊನೆಗಾರನೆಂಬ ಬಿರುದಂ ಪಡೆದಂ (ಕುರುಪ. ೦-೪೦) ; ' ಮೊನೆಗಾರ ' ಎಂಬ ಬಿರುದೂ ಶ್ರೀಮನ್ಮಹೀಶ್ವರ ಮಹಾರಾಜವಂಶವನ್ನು ನಿಳ್ಕೆ ಒಂದು ಕೃತಾರ್ಥವಾಯಿತು (ಪಕುಗಂ. ೩೨-೩೦).

[ಮೊನೆ + — ಕಾಱ]

ಮೊನೆಗಾಱತನ, ಮೊನೆಗಾರತನ (ನಾ). ಯುದ್ಧಕೌಶಲ : ಎಬ್ಬರಂ ಬೆತ್ತ ಶಕ್ತಿಯನೆ ಕೊತ್ತಳಪುಮಂ . . . ಮೊನೆಗಾಱತನಮನೆ ಮುಂಗಿಲಟ್ಟಳೆಗಳುಮಂ ಗೆಯ್ದು ಕಾದುತ್ತೆ (ಪಚಕಂ. ೫೯-೯). **ಮೊನೆಗಾರತನ** : ಕೋಟೆಗಳಂ ನೋಟದಿಂದಲೆ ಮಿಟುವ ಮೊನೆಗಾರತನದಿಂ (ತ್ರಿಗಂಪು. ೦೩೦-೦). [ಮೊನೆಗಾಱ + — ತನ]

ಮೊನೆಗಾಱಿಕೆ (ನಾ). ಜಗಳ ; ಕಲಹ : ಸರಸಮೋಹಕೆ ಮೊನೆಗಾಱಿಕೆ ಸಲ್ಲದಂದೊರೆದು ನಿಲಿಸಿದನಾ ವಿಟನು (ಪಚಕ. ೫೯-೦೫).

[ಮೊನೆಗಾಱ + — ಇಕೆ]

ಮೊನೆಗುತ್ತು (ನಾ)· = ಮೊನೆಗಾಯ : ಖಿಲದು ಮೊನೆಗುತ್ತಿನಲಿ ನೆತ್ತರು ಸುರಿದುದಡಹೊಯ್ದಿನಲಿ ಖಂಡದ ಹೊರಳಿ ತಳಿತುದು (ಶಾಪ್ರಂ. ೬-೦೭). [ಮೊನೆ + ಕುತ್ತು$_2$]

ಮೊನೆಗೂಡು (ಕ್ರಿ)· ತುದಿಬಾನ್ನು ಮುಟ್ಟು : ಹೂಂಗಳಸ ಮಿರುಗುವತೆ ಮೊಸೆಗೂಡುವಾಗಸವ . . . ಮಂದಿರದಿ ಸಂಘಟಿಸಿತಪ್ಪ ಧಾಭಿನ್ನವಾದೀಶ್ವರ ಪ್ರಕೃತಿರೂಪಂ (ಜಿಪೀ. ೩೪-೦). [ಮೊನೆ + ಕೂಡು$_1$]

ಮೊನೆಗೈ (ಕ್ರಿ). ಹರಿತಗೊಳಿಸು ; ಚೂಪುಮಾಡು : ಮೂರನಂಬಿನ ಮೊನೆಯ ಮಗುಳೆ ಮೊನೆಗೈಯುತಿಪ ವಾರನಾರೀವರ (ಕಂಗಾಣಾ. ೦-೬-೩೯). [ಮೊನೆ + ಕೈ$_{11}$ (<ಕೆಯ್$_1$)]

ಮೊನೆಗೊಡು (ಕ್ರಿ). (ಮುಖಾವಮುಖಿಯಾಗಿ) ಯುದ್ಧಕ್ಕೆ ತೊಡಗು ; ಹೋರಾಡು : ನಿಟ್ಟಸಿ ಹಣಾಗಿ ಮೊನೆಗೊಡೆ ದಂಡಯೊಳು ಖಿಣಖಿಣಿಲು ರವವೆಸಪುಲ್ಕೆ ಕಾದಿತು ಸುರಗಿಯುತಿಬಲರು (ಶಾಪ್ರಂ. ೯-೨೬) ; ಮುಗ್ಗಿಸ ಲೆಡಗುಡದೆ ನಿಂದು ಮೊನೆಗೊಡಿರಮುವಿಂ ಒಗ್ಗಿ ಪೆಜಸಾರದಿರಿ (ಪಪ್ರ. ೩-೩೯). [ಮೊನೆ + ಕೊಡು$_1$]

ಮೊನೆಗೊಳ್ಳು (ಕ್ರಿ). ತೀಕ್ಷ್ಣತೆಯನ್ನು ತಳೆ : ತೀವ್ರವಾಗು : ಅಹಿತ ಸಂತತಿಜಾಲ ಮೊನೆಗೊಂಡು ಮುಸುಕಿರಲು ಮಹಿಮ ಮಂಗಳವೆಳಸಿ ಮರುಗುವಾತ್ಮವನು (ಪಚಗೀ. ೦೩-೯).

[ಮೊನೆ + ಕೊಳ್ಳು$_1$ (<ಕೊಳ್$_1$)]

ಮೊನೆಗೋಲು (ನಾ). (ಅಂಕುಶವಂತೆ) ಚೂಪಾದ ತುದಿಯುಳ್ಳ ಕೋಲು : "(ದನಗಳನ್ನು ಚುರುಕುಮಾಡುವ) ಮೊನೆಯುಳ್ಳ ಕೋಲು ; ಮೊನೆಗೋಲು, ಚುಚ್ಚುಗೋಲು" (Coad. ೩೦೫೩).

[ಮೊನೆ + ಕೋಲು$_1$ (< ಕೋಲ್$_1$)]

ಮೊನೆದಿಮಿಗುಳು (ನಾ). ಚೂಪಾದ ಆಯುಧದ ತಿವಿತ,—ಇರಿತ : ಮೇಲ್ಮೇಲ್ಕೊಯಲ್ಕೊಸೆದಿಮಿಗುಳಿಂದ ಮೆಯ್ಗಳ ತುಂಡುಗಳ್ ಬೀಳೆ (ಪಪ್ರ. ೫೫-೩೦). [ಮೊನೆ + ತಿಮಿಗುಳು]

ಮೊನೆದುಱುಗಲ್ (ನಾ). ಚೂಪಾದ ಮೊನೆಗಳ ಗುಂಪು : ಪಲಸಿನ ಪಣ್ಣನನುಕಿಪ ಮೊಸೆದುಱುಗಲ ವಜ್ರದ ಶಿಲೆಯೊಳಪ್ಪಳಿಸಿ (ಪಪ್ರ. ೦೦-೦೩ ವ). [ಮೊನೆ + ತುಱುಗಲ್ (<ತುಱುಂಗಲ್)]

ಮೊನೆದೋಜು ' ಮೊನೆದೋಜಿ ' ನೋ.

ಮೊನೆದೋಜಿ, ಮೊನೆದೋಜು (ಕ್ರಿ). ೧· ಆಯುಧದ ಚೂಪಾದ ತುದಿಯನ್ನು ತೋರಿಸು : ಉಜುಬವರೆ ವಡವಾನಲನ ಮುಖದಿರವು ಮೊನೆದೋಜಿದರೆ ಭುಜಗವ ಬಿಜಿಯಿಂ (ಶಾಪ್ರಂ. ೨-೪೪). ೨· ಮೊಳಕೆದ್ದೋರು ; ಕಾಣಿಸಿಕೊಳ್ಳು : ಅಂತು ಬೆಡಂಗನಾಂತ ಕಳಕಾನಿವಹಂ ಮೊನೆದೋಜಿದಸ್ಮಂ . . . ತಲೆದೋಜಿತತ್ತು ವಾಸಂತಿ (ಪಗೂ. ೦೯-೨೦). ೩· ಶೌರ್ಯವನ್ನು ತೋರು : ಬಲವೆರಸಿ ತಾನೊಡ್ಡಿ ನಿಲಲೀ ಇಳೆಯನಡುಗಿಸಿ ಸಮರಕ್ಷೇತ್ರಿಯು ಮೊಳಗೆ ಯಾವಪಬಲವ್ಯ ಮೊನೆದೋಜಿರುದು ಚೂಣಿಯಲಿ (ಪಾಕ್ಷಣಾ. ೦೯-೦೩) ; ಮೊನೆದೋಜಿ ಹೆಣ್ಣ ಭೋಗಿಸುವುದು ಸೊಗಸಲ್ಲ ವಿನಯದೊಲುಮೆ ಸೊಗಸು (ಪಪ್ರ. ೦೦-೦೬). ೪· (ಆಲಂ) ಅಡ್ಡಿಯನ್ನುಂಟು ಮಾಡು ; ವಿರೋಧವನ್ನು ವ್ಯಕ್ತಪಡಿಸು : ಯತಿಗಳಗೆ ಮೊನೆದೋಜಿ ತನಿಸದು [ಪಾಪಾಂ. ಉದಣಸನು] ವ್ರತಿಗಳಗೆ ಬೀಜಿಂತ ಸಮಾಧಿಸ್ಥಿತರ ಮುಂಗಿನ ಮೇಲಡಾಯುಧಧಾರೆಗಳನೆಳೆದು . . . ನಡೆದುದು ಯುವತಿಜನಕಟಕ (ಶುಪ್ರಾ. ೦೬-೬೬) ; ಕೇಳ್ದು ಮಾನಿನಿ ನನೆಗೋಲನರ್ಧಾಂಗನೆಗೆ ಮೊನೆದೋಜಿ ವ್ಯಸುವಾತ್ಮದಿಂದಿಡಗೆಯು ಮನೆಗೆಲಸಕೆ ಸಾರ್ಚಿದಳು (ಪಚಕ. ೦೦-೪೦). **ಮೊನೆದೋಜು** : ೫. ಜಗಳವನ್ನು ಆರಂಭಿಸು : ಮೊನೆದೋರ್ಕೆಲಸಾರ್ವರುಮ್ಮಳಿದರ್ (ಕಥಾ. ೬-೯೭). [ಮೊನೆ + ತೋಜು]

ಮೊಸೆನಗೆ (ನಾ)· ಮುಗುಳುನಗೆ ; ಮಂದಹಾಸ : ಮೊಸನಗೆಯ ಸಿರಿ ವೊಗದ ನೆಗಹಿದ ಜಸದಳಯಂಪಸ್ಸಾಂಬುಜದ ಪರಿ ವಿಸುಶಸಿಂಹಾಸನವ ನಿಳಿದಾ ಧರಕಿ ಹೂಜವಟ್ಟ (ಶಾಮ್ಶ· ೦೦-೬೦); ಮೊಸನಗೆಯಿಂದ ಆಡಿದ ಮಂದಿಮಾತನು ಮನ್ನಿಸಿ (ಶಾಪ್ಪ· ೦೯-೨೦). [ಮೊಸೆ + ನಗೆ]

ಮೊಸೆನೋಟ (ನಾ). ಕಡೆಗಣ್ಣಿನ ನೋಟ; ಕುಡಿನೋಟ : ಅಪಾಂಗ ದೃಷ್ಟಿ : ಮೊಸೆನೋಟದಿಂ ಜುಚ್ಚಿ ಬೆಳ್ಳಿ ನೋಡುವಳೊಡವೆ (ಕಾಂಶಪ. ೪೨-೩೪). [ಮೊಸೆ + ನೋಟ]

ಮೊಸೆಪಾಡು (ನಾ). ಕಾಳಗದ ಸ್ಥಿತಿ,—ಗಾರವು : ಅನುಪರದೊಳಗೆಚ್ಚಜುಲಿ ಪಾನ ಮುಲುಕರ ಮೊಸೆಪಾಡ ಮುಜುಪೆಬ್ಬಿಸೆಂದ (ಶಂಪಪ· ೦೯-೩೮).

[ಮೊಸೆ + ಪಾಡು$_3$]

ಮೊಸೆಮಗುಚು (ಕ್ರಿ)· (ಖಡ್ಗದ) ತುದಿಯನ್ನು ಒರೆಯೊಳಗೆ ಸೂಕು: ಎಸಿದ ಗಂಡುಡಿಗೆಯಲಿ ಹೊನ್ನಾಯುಗದ ಹೊಳೆವ ಕಠಾರಿಯನು ಮೊಸೆ ಮಗುಚಿ . . . ಅಹವಕ್ಕನುವಾನಸಭಿಮುಸ್ಸು (ಶಾಪ್ಪರಿ೨· ೪-೧೧). [ಮೊಸೆ + ಮಗುಚು (< ಮಗುಚ್ಚು)]

ಮೊಸೆಮಲ್ಲಿಗೆ (ನಾ). ಚೂಪಾದ ತುದಿಯುಳ್ಳ ಒಂದು ಬಗೆಯ ಮಲ್ಲಿಗೆ ಮೊತ್ತು ಅದರ ಗಿಡ ; ಸೂಜಿಮಲ್ಲಿಗೆ : ಎಳನನೆ ತೀವಿ ಕೋರ್ಪ ಮೊಸೆಮಲ್ಲಿಗೆ ತಾವರೆ ತೀವಿ ಕೋರ್ಪ ತಂಗೊಳಂ (ಚಾಪಪ· ೨-೩೬). [ಮೊಸೆ + ಮಲ್ಲಿಗೆ]

ಮೊಸೆಮಾತು ' ಮೊಸೆವಾತು ' ನೋ.

ಮೊಸೆಮಿಂಚು (ನಾ). (ಕಣ್ಣನ್ನು ಕೋರೈಸುವ) ತೀಕ್ಷ್ಣವಾದ ಮಿಂಚು: ವೊಗ್ಗರಿಸಿ ಮೊರೆ ಮುಗಿಲೆ! ವಿಮುಗು ಮೊಸೆಮಿಂಚೇ ! (ನಿಕಪ್ರ· ೪೬-೨). [ಮೊಸೆ + ಮಿಂಚು$_2$]

ಮೊಸೆಮುಗುಳು (ನಾ)· ಚೂಪಾದ ತುದಿಯುಳ್ಳ ಮೊಗ್ಗು : ಮೊಸೆ ಮುಗುಳ ಶಸ್ತ್ರಂಗಳಂ ಪಾಯ್ದು ಮಾಮಿಡಿಯ ಜೊಂಪದ ವಜ್ರಮುಷ್ಟಿಯಂ ಜಡಿದು (ಕೃಪಾಜಾ· ೩-೩೨). [ಮೊಸೆ + ಮುಗುಳ್ಳು$_3$ (<ಮುಗುಳ್$_2$)]

ಮೊಸೆಮುಳ್ಳು (ನಾ). ಚೂಪಾದ ಮುಳ್ಳು : ಸಲೆ ಪಜ್ಜೆಯನಿಡೆ ನಾಂಟುವ ಮೊಸೆಮುಳ್ಳಿನಿಂದೊಳುಗಾಡಿಸದುದೇನೆಂದೆ (ಶಂಪಪ· ೦೬-೪೭). [ಮೊಸೆ + ಮುಳ್ಳು (<ಮುಳ್$_2$)]

ಮೊಸೆಮುಜಿ (ಕ್ರಿ)· ಶಕ್ತಗುಂದಿಸು ; ನಿರ್ವೀರ್ಯಗೊಳಿಸು : ಚನನಾಯಪಟ್ಟುನದ ಭಟರು ಬರುತಿಪ ಘನವಾದ ತುರುಕರ ಬಲವ ಮೊಸೆಮುಜಿದು . . . ಮನಹರುಷದೊಳ್ಕೆದಿದರು (ಶಂಪಪ· ೦೪-೬೦). [ಮೊಸೆ + ಮುಜಿ$_1$]

ಮೊಸೆಮೊಳೆ (ನಾ). ಚೂಪಾದ ತುದಿ ; ಹರಿತವಾದ ಕೊನೆ : ಹೊನ್ನಿನ ಹೊಳೆವ ಕಠಾರಿಯ ಮೊಸೆಮೊಳೆ ಬೆನ್ನೊಳು ತಲೆದೋಜಿಸಲು (ಪೀಗಾಪ. ೦೩-೬೬). [ಮೊಸೆ + ಮೊಳೆ$_2$]

ಮೊಸೆಯಂಬು (ನಾ). ಹರಿತವಾದ ಬಾಣ : ಕೂರ್ಗಣೆ : ಕಾಸಿದ ಮೊಸೆಯಂಬುಳ್ಳವನ[ವ]ಱಂ ಮೆಯ್ಮನನೇಕಶರಸಂಘಾತಂಗಳಿಂದಮೆಚ್ಚೊಡೆ (ಪಣ್ಣಾಶಾ· ೦೬೬-೦೭) ; ವಿದ್ವಿಷ್ಟವಿದ್ರಾವಣನ ಮೊಸೆಯಂಬಿನಂಬೇಱುಂಗಳ್ಕೆ ಹತಮಿಪತಕೋಳಾಹಳರಾಗಿ (ಪಂಕಪಾ. ೩-೪೫ ೪) ; ಅದೇನಮಕರಿರ್ದ್ದುದೊ ಮನ್ಮಥನ ನನೆಯ ಮೊಸೆಯಂಬಿದೆಂಬ ಮಾತಪಾರ್ವನೆಗಂ (ಶುಪಾಪಾ. ೦೦-೫೦) ; ಪೋದಪುದಸುವೀಗಳೆ ಮದನನಸುವ ಪೊಸಕೆಂದಳಗರ್ಗಳ ಕಂಗಜಿಯ ನವೆಯ ಮೊಸೆಯಂಬುಗಳಿಂ (ಪಗಪ· ೦೮-೦೪). [ಮೊಸೆ + ಅಂಬು$_2$]

ಮೊಸೆಯಲಗು (ನಾ). ೧· (ಆಯುಧ, ಬಾಣ ಇತ್ಯಾದಿಗಳ) ಹರಿತವಾದ ಅಲಗು ; ಚೂಪಾದ ತುದಿ : ಮೊಸೆಯಲಗಿನಂಬುಗಳ ಬಿಜುಸಿಗನಿಬರಂಗವ ತೆಕ್ಕಾವಾಜಾಯನಿತವಿಗ್ರಹವಾಯ್ತು, ನಿಗ್ರಹದತಿ ಮಹಾರಥರು (ಶಾಪ್ಪರಿ೨· ೦೩-೨೨). ೨· ಹರಿತವಾದ ಬಾಣ ; ಕೂರ್ಗಣೆ : ಮದನನ ಮೊಸೆಯಲಗಿನಲಿ ಬಳಲ್ವ ಸತಿಯನು ಕಂಡು (ಪಪಶ· ೩-೨೯). [ಮೊಸೆ + ಅಲಗು$_3$]

ಮೊಸೆಯಾಳ್, —ಮೊಸೆಯಾಳು (ನಾ)· ಯುದ್ಧ ಮಾಡುವವನು ; ಯೋಧ ; ಸೈನಿಕ : ಕುಸುಮಾಸ್ತ್ರ, ತನ್ನಯ ಮೊಸೆಯಾಳ್ಗಳಿದಿರಲಿ ಪಿಸುಗುವರಿರ್ಲ್ಲಂದು ನಗುತ (ಶಂಪಾ. ೬-೧೩). **ಮೊಸೆಯಾಳು** : ಸಾಹಸಿಕರಳುಕಿದರು ಕೌರವಮೋವರದ ಮೊಸೆಯಾಳುಗಳು (ಶಾಪ್ಪರಿ೨· ೦೬-೧೬) ; ಸೇವಕ ವಜೀರ ಮೊಸೆಯಾಳು ಮಾಡಿಸ್ತ ಸ್ತಂಭ ಘಟಿ (ಎಕ. XV, ೪೫೪· ೦೩೬-೭ ; 1559) ; ಕೋಪದಲಿ ಜನನಾಥ ಕಂಠೀರವೇಂದ್ರನ ದಳಪತಿ ಮೊಸೆಯಾಳು ಸಟಿತುಜುಬಿದನು (ಶಂಪಪ· ೦೬-೦೨). [ಮೊಸೆ + ಆಳ್$_3$]

ಮೊಸೆಯಾಳು ' ಮೊಸೆಯಾಳ್ ' ನೋ.

ಮೊಸೆಯಿಟ್ಟಿ, ಮೊಸೆಯಿಟಿ (ನಾ). ಚೂಪಾದ ಈಟಿ ; ಹರಿತವಾದ ಭರ್ಜಿ : ಜಕ್ಕಯನಾದುಕಂ .ಮೊಸೆಯಿಟ್ಟಿಗೊಂಡ ನಾಯುಕರ ಮೇಲೆ ಬಾಯಲು ತಳಿಯ ಮಜುವಿಡಿದು (ಪ್ಕಜಾ· ೦೧೫೦೬ ೮೨-೦ ; 13೪೫ಬ ೪೪). **ಮೊಸೆಯಿಟಿ** : ಕುಜಿಕುಣಿದು ಮುನಿದು ಮೊಸೆಯಿಟಿಗಳ ಸಾರ್ಚುತ್ತೆ (ಪಪಪೋ. ೨೩-೨೮). [ಮೊಸೆ + ಇಟ್ಟಿ$_1$]

ಮೊಸೆಯಿಡು (ಕ್ರಿ)· ಚೂಪಾದ ತುದಿಯಿಂದ ತಿವಿ, — ಚುಚ್ಚು : ಒರ್ಮೆಯೆ ಮುಟ್ಟಿವಂದುದು ಬೆಜಂಟುತ್ತುಂ ಪಾಹೀರಂಗವಂ ಕಲೆದುರ್ಬೀ ಬೆಸುತಂಗವಂ ಮೊಸೆಯಿಡುತ್ತುಂ ಶೃಂಗವಂ ಪುಂಗವಂ (ಜಗಕ· ೫-೪೬). [ಮೊಸೆ + ಇಡು$_1$]

ಮೊಸೆಯಿಸಿ (ಕ್ರಿ)· ತೀಕ್ಷ್ಣತೆಯನ್ನು ನೀಡು ; ಮೊನೆಗೊಳಿಸು : ಸುಭ್ರೂ ಕಟಾಕ್ಷಕ್ಕೆ ಮೊಸೆಯಿಸಿದ ಬಲವೇ (ಪಾರಕ· ೨೫-೨). [ಮೊಸೆ + ಇಸ್$_2$]

ಮೊಸೆಯಿಟ್ಟಿ ' ಮೊಸೆಯಿಟ್ಟಿ ' ನೋ.

ಮೊಸೆಯೇಡು (ನಾ)· ಅದೇ ತಾನೆ ಕಳೆದುಹೋದ ಕಾಲ; ಭೂತಕಾಲ: ಸಮಂದ ಕಾಲವಾಚಕಮಿವು ನಾಡಿದು ನಾಳೆ ನಿನ್ನೆ. ಮೊನ್ನೆಗಳಾದಂ ವಿವರಿಪುವೀವಱು ಮೊಸೆಯೇಡವು ಕಂಚಿದ್ಭೂತಭೂತಕಾಲದ್ವಯದೊಳ್ (ಕಾಬಿದ· ೩೨); ಮೊಸೆಯೇಡಿನ ನೆರೆವಾಳ್ವಿಂದಿನಿವಂ ಕವಿ ಬಿಸುಟು ಲೋಕ ಮಿಂತಿರವೇಳ್ಕುಂ (ಪಂಚಪ· ೪-೦). 'ಇಯಾಂಡು', 'ಯಾಂಡು' ಪರಾ. [ಮೊಸೆ$_1$ + ಏಡು$_1$]

ಮೊಸೆಯೇಱು (ಕ್ರಿ)· ಕಾಳಗಕ್ಕೆ ತೊಡಗು : ಕೈದು ಮೊಸೆಯೇಱುವುದಕ್ಕೆ ಮೊದಲೇ ಕಟ್ಟಬಿಲ್ಲಡೆ ಕೈದೇನ ಮಾಡುವುದು (ಕರ್ಣಪ· ೪೨-೨೦೬). [ಮೊಸೆ + ಏಱು$_1$ (< ಏಱ್$_1$)]

ಮೊಸೆವಲ್ಲು (ನಾ)· ಚೂಪಾದ ಹಲ್ಲು; ಮೊನಚಾದ ಹಲ್ಲು : ಕುಲಿಶದ ಪಂತಿವಲ್ಲ ಕಂಗೊಳಿಪ ಮೊಸೆವಲ್ಲುಗಳ ಸಾಯಿರ್ ಶೃಂಗಾರಹಾರಿಯರ್ ಬರುತಿರ್ದರು (ಶಪಪ್ಪ· ೪೬-೪೩); ಸೊಗಯಿಸುವ ಗೋಣ್ಮೊಳಗಿನಿಂಚರಂ ಗಳನೆಸಗಿ ಮೊಸೆವಲ್ಲ ಕರ್ದುಕಪುಗುರೊತ್ತುಗಳನು . . ..ಕೈಗೊಳಿಸಿ (ಕೃಪಾಜಾ· ೦೦-೨೨). [ಮೊಸೆ + ಪಲ್ಲು (< ಪಲ್)]

ಮೊಸೆವಾತು, ಮೊಸೆಮಾತು (ನಾ). ತೀಕ್ಷ್ಣವಾದ ನುಡಿ: ಚುಚ್ಚು ಮಾತು; ವ್ಯಂಗ್ಯೋಕ್ತಿ : ಮೊಸೆವಾತಿನಿಂತು ಜಡಿದು ನುಡಿದಳ್ (ನೀಕಗೋ· ೩೬-೪೬); ಮುನಿದಿನಿಯನ ಕಡುಮೊಸೆವಾತಿಗೆ ನೊಂದು ಕನಲದೆ (ಪಪಪ· ೬-೨೬). **ಮೊಸೆಮಾತು** : ಆ ಮೊಸೆಮಾತುಗಳಿಂದ ತಂದೆಯ ಬಗ್ಗೆ ಜುಗುಪ್ಸೆಯುಂಟಾಯಿತು (ಕ್ರತಿಪ· ೦೭). [ಮೊಸೆ + ಮಾತು$_1$]

ಮೊಸೆವೆಳಗು (ನಾ)· ತೀಕ್ಷ್ಣವಾದ ಬೆಳಕು : ಜಾರುಗೆನ್ನೆಯ ಕಡೆಗೆ ಸುಳಿವಾಸೆದಟ್ಟಿಗಳ ಪಟ್ಟಿಸುತ ಓಲೆಮಣಿ ಮೊಸೆವೆಳಗನೆಸೆಯೆ (ಪುಶಪ· ೪೦-೨). [ಮೊಸೆ + ಬೆಳಗು$_2$ (< ಬೆಳಕು$_2$)]

ಮೊನೆಸರಳು (ನಾ). = ಮೊನೆಗಣೆ : ಮೊನೆಸರಳು ಮಾನ್ಯರನಿವನೇ ನೀವೇಕೆ ರಣವೇಕೆ (ಕುಣ್ಮಕ. ೨-೩೦). [ಮೊನೆ + ಸರಳು (< ಸರಲ್)]

ಮೊನೆಸುರಗಿ (ನಾ). ಹರಿತವಾದ ಕಠಾರಿ ; ಚೂಪಾದ ಕಿರುಗತ್ತಿ : ಕೂರಂಬಿನಲಿ ಮೊನೆಸುರಗಿಯನು ಖಂಡಿಸಿದನು (ಕುಣ್ಮಾಕ್ರಿ. ೪೦. ೨೫೯-೨೦). [ಮೊನೆ + ಸುರಗಿ (< ಸುರಿಗೈ)]

ಮೊನೆಹಾರೆ (ನಾ). ಚೂಪಾದ ತುದಿಯುಳ್ಳ ಹಾರೆ : ಗುದ್ದಲಿ ಮೊನೆ ಹಾರೆಗಳ್ ಪಿಡಿದ ಕರದ ಕುಡುಗೋಲು . . . ಸಹ ಬಹ ಕಾಮಾಟದ ಬಿಡುಮಂದಿಗೆ ಲೆಕ್ಕವಿಲ್ಲ (ಕಂಪಪು. ೦೦-೦೦). [ಮೊನೆ + ಹಾರೆ (< ಪಾರೈ)]

ಮೊನ್ನೆ$_1$ (ನಾ). ನಿನ್ನೆಯ ಹಿಂದಿನ ದಿನ ; ವನಜಮುಖಿ ಕೇಳ ನೀಂ ಮೊನ್ನಿನ ಶೂನ್ಯಮಚನಮಂ ನುಡಿಯದೆ ನೆಟ್ಟನೆ ಬರ್ದುದು (ಧರ್ಮಾಮೃ. ೪-೨೫೬); ಸವಸಾದ ಕಾಲವಾಚಕಮಿವು ನಾಡಿದು ನಾಳೆ ನಿನ್ನೆ ಮೊನ್ನೆಗಳ್ (ಕಪುಚ. ೩೨೨); ನಿನ್ನವೊಲು ಸಿದ್ಧಾರ್ಥನೆಂಬವ ಮೊನ್ನೆ ಬಂದನು (ಜಾಕೃಡಾ. ೦೭-೨೪). [ದೇ.ಪ ತಮಿ. ಮುನ್ನಾನ್ನಾಳ್, ಮುನ್ನೈನ್ನಾಳ್; ಮಲ. ಮುನಿನಾನ್ನು; ತುಳು. ಮೊರನೆ, ಮೊರಾನಿ; ತೆಲು. ಪೊನ್ನೆ]

ಮೊನ್ನೆ$_2$ (ಅ). ಇತ್ತೀಚೆಗೆ ; ಕೆಲ ಸಮಯದ ಹಿಂದೆ ; ಮೊನ್ನೆ ಮುದಿವ್ಯಾದೆನ್ಯೆ ಕಱಿದಮೊಂದರತಮೆಂ (ಪಂಪಾಂ. ೫-೬೭-೪); ಬಲರಾಮರ್ ಮೊನ್ನೆ ಮಾಡುಗುಂ ಬಲಿವಧಮಂ (ಕಣ್ಣಕು. ೮೬ ಕ್ರಡಿಗೆ); ಮೊನ್ನೆ ತದಡಿಯಿಂದ ಮಗಳೂ ಬಂದಾಳಂತಲ್ಲ (ಕುಸಂಪಾ. ೦೮೨).

ಮೊನ್ನೆಮೊನ್ನೆ (ದ್ವಿರುಕ್ತಿ) : ಮೊನ್ನೆಮೊನ್ನೆ ತನಕ-ಸ್ಕ್ಯಾರೆ ಮುಕ್ಕ ಮಾರ್ಕೆಟ್‌ನಲ್ಲಿ ಸಿಗುತ್ತಿತ್ತು (ಕಬಿ). [< ಮೊನ್ನೆ$_1$]

ಮೊಬಲಗು (ನಾ). ಹಲವು ಅಂಶಗಳನ್ನು ಕೂಡಿದಾಗ ಬರುವ ಒಟ್ಟು ಹಣ ; ರಕಮು : ಅವರು ಸಂದಾಯ ಮಾಡಬೇಕಾದ ಮೊಬಲಗನ್ನು ಖಾವತಿ ಮಾಡುವವರೆಗೂ ಪೆರಿಯಲ್ಲಿಟ್ಟು ಅವರಿಗೆ ಎದುರುಕ್ಷಿಗಾರರಿಂದ . . . ಭತ್ಯ ಕೊಡಿಸುತ್ತಿದ್ದರು (ಪುತಾಸಂ. II. ೪೬) : ಅವರಿಗೆ ಸಲ್ಲಬೇಕಾಗಿದ್ದ ಬಾಕಿಯ ಮೊಬಲಗನ್ನು ಒಟ್ಟಿಗೆ ಸಲ್ಲಿಸತಕ್ಕುದು (ಜಗಟಂ. ೫೦).

[← ಅರ. ಮುಬ್ಲಘ : ಹಿಂ. ಮುಬಲಗ್ ; ಮರಾ. ಮುಬಲಕ, ಮುಬ್ಲಗ]

ಮೊಬ್ಬು ' ಮರ್ವು$_2$ ' ನೋ.

ಮೊಮುಜಾಮೆ (ನಾ). ಎಣ್ಣೆ, ಮೇಣ ಮುಂತಾದುವುಗಳಿಂದ ಪರಿಷ್ಕರಿಸಿ ಒದ್ದೆಯಾಗದಂತೆ ತಯಾರಿಸಿದ ಬಟ್ಟೆ ; ಮೇಣಗಪ್ಪಟ : ಚವರೀಜೋಡಿ ೨ ಬುರಕೀಕಾರ್ಪೆ ೧ ಮೊಮುಜಾಮೆದು ೧ ಸಪ (ಎಕ. XIV. ಸಂಖ್ಯ. ೨೬೯-೬೫ಮು ೪೦೦ ; 1847).

[←ಓಲಿ. ಕುರಾ. ಮೋಮೆಜಾಮಾ]

ಮೊಮ್ಮ ' ಮರ್ಮ$_2$ ' ನೋ.

ಮೊಮ್ಮಕ್ಕಳು ' ಮೊಮ್ಮಗು ' ಪರಾ.

ಮೊಮ್ಮಗ, ಮಮ್ಮಗ (ನಾ). ಮಗನ ಅಥವಾ ಮಗಳ ಮಗ ; ಪೌತ್ರ : ನಿಮ್ಮ ಮಗಳಂ ನಿಮ್ಮ ಮೊಮ್ಮಗನುಂ ಪಿಂದೆ ಬರ್ಪುದು (ಪುಣಾಸ್ತ್ರ ೬-೨೬ ೪); ಗೌತರ ಮೊಮ್ಮಗ ಮಲ್ಲಿಗೌಡರಿಗೆ (ಎಕ. VIII. ಶಾಸನ. ೬-೬ ; 1460 ?) ; ಬೆಸಗೊಂಡಳುಗನೆ ಪೊಡೆಯಲರನ ಮೊಮ್ಮಗನ (ಪೊಚಪ. ೩೦-೦೭) ; ಪೊಮ್ಮಗನನ್ನು ನೋಡಬೇಕೆಂಬ ಹಂಬಲ (ಕಥಪು. ೨).

ಮಮ್ಮಗ : ಅವರಿಗೆ ಮಮ್ಮಗನನ್ನು ಕಂಡರೆ ತುಂಬ ಪ್ರೀತಿ (ಕಬಿ).

[ಮೊಮ್ಮ (< ಮರ್ಮ$_1$) + ಮಗ]

ಮೊಮ್ಮಗಳು, ಮಮ್ಮಗಳು (ನಾ). ಮಗನ ಅಥವಾ ಮಗಳ ಮಗಳು ; ಪೌತ್ರಿ : ಒಳಕಿನಲ್ಲಿ ತಾಯಿ ಹುಟ್ಟಿದಳು ಮಧ್ಯದಲ್ಲಿ ಮಗಳು ಹುಟ್ಟಿದಳು ಮೊನೆಯಲ್ಲಿ ಮೊಮ್ಮಗಳು ಹುಟ್ಟಿ ಹೆತ್ತೆಯ ತಿಂದು ತಾಯಿಗೆ ಎಸರನತ್ತು ತ್ಯೈದಾಳ್ (ಪಾಪ. ೪. I. ೦೧೦-೦೬೩) ; ನಂಮ ಮೊಂಮಗಳು ಹೊಂನ್ನಮ ನೆಟ್ಟಿತಿಗೆ (ಪೌಾಂ. ೦೯೩೦, ಕುಂಬಾಪುಕ. ೫೬-೦ ; 1498). **ಮಮ್ಮಗಳು** : ಮಮ್ಮಗಳ ಸಂಗತ ಜಗಳವಾಡುತ್ತಿದ್ದ ಅಜ್ಜಿಯೂ ಸಮಾಚಾರವನ್ನು ಕೇಳಿದೊಡನೆ . . . ಮಮ್ಮಗಳ ಕೈಯನ್ನು ಹಿಡಿದುಕೊಂಡು ಕೊಳದ ವರೆಗೆ ಬಂದಳು (ಪೂಚಕಾ. ೦೬೬). [ಮೊಮ್ಮಗ + — ಅಳ್]

ಮೊಮ್ಮಗು, ಮಮ್ಮಗು (ನಾ). ಮಗನ ಅಥವಾ ಮಗಳ ಮಗು : ನಾಳೆ ನಮ್ಮ ಮೊಮ್ಮಗುವಿನ ಹುಟ್ಟುಹಬ್ಬ (ಕೂಪ). **ಮಮ್ಮಗು** : ಅವರ ಮಮ್ಮಗು ಮುದ್ದಾಗಿದೆ (ಕಬಿ).

ಮೊಮ್ಮಕ್ಕಳು, ಮುಮ್ಮಕ್ಕಳು (ಬಹುವ) : ಎಂತು ಕಾದುವ ನೆನ್ನೆಯ ಮಕ್ಕಳೊಳುಪೆಂನ್ನ ಮೊಮ್ಮಕ್ಕಳೊಳಂ (ಪಂಕಪಾ. ೦೦-೦೨) ; ಬೈಜಪೆಗ್ಗಡೆಯ ಮೊಮ್ಮಕ್ಕಳು (ಪೊಅಶಾ. ೦೯೫೫, ಪಾತೀಂ. ೦೭೦-೬ ; 1334); ನಾಗಮಯ್ಯನ ಮೊಮ್ಮಕ್ಕಳು ಸನಗೂ ಮೊಮ್ಮಕ್ಕಳೇ ! (ಜಾಪಪು. ೬೩) ; ಯಿಂ ಧರ್ಮವನಿವರ ಮಕ್ಕಳ ಮಂ(ಂ)ಮಕ್ಕಳು ಧನಕಾಂಚಿಂದ್ರಾಕ್ಕ ತಾರಂಬರಂ ಸಲಿಸುವರು (ಪೌಇತಿ. IX-೫. ೫೭-೩೦ : 1183) ; ಆದಿತ್ಯದೇವಗಳ ಮಮ್ಮಕ್ಕಳು ದೇವಮ್ಮ ಓದಪಪೋಬಯರವರು . . . ಮಾಡಿದ ವಿವರ (ಶಿ. XII. ಶಾಭಟ. ೬೯-೬೪ ; 1447). [< ಮೊಮ್ಮಗ]

ಮೊಮ್ಮೆ ' ಮಮ್ಮು ' ನೋ.

ಮೊರ ' ಮೊಱಿ ' ನೋ.

ಮೊರಂಟಿ (ನಾ). ಒಂದು ಬಗೆಯ ವಿಷನು : ಚಿಕ್ಕಕ್ಕೆ ಮೊರಂಟಿಯಾದರೆ ಆರು, ಬೈಗೆಯಾದರೆ ನಾಲ್ಕು (ಪೂಚಕ್ಷಿ. ೪೯). [← ತುಳು. ಮೊರಂಟಿ]

ಮೊರಗಿವಿ ' ಮೊಱಿಗಿವಿ ' ನೋ.

ಮೊರಗುಟ್ಟು (ಕ್ರಿ). ಮೊರೆ ; ಅಬ್ಬರಿಸು ; ಆರ್ಭಟಿಸು : (ಕ).

[ಮೊರೆ$_2$ (< ಪೆಣಜ್$_1$) + ಕುಟ್ಟು$_{II}$]

ಮೊರಟ ' ಮುರುಡ$_2$ ' ನೋ.

ಮೊರಟಿ$_1$ ' ಮೊರಡ್ಡು ' ನೋ.

ಮೊರಟ್ಟಿ ' ಮೊರಟಿ ' ನೋ.

ಮೊರಟು (ನಾ). ಮುರುಟಿಮನು ; ಸುರುಟಿದುವು : ಅವರ ಆದರ್ಶ ಆಕಾಂಕ್ಷೆಗಳು ಸ್ವಲ್ಪ ಜೂರ ಬೆಳಮ ಮೊರಟಾಗಿ ನಿಂತುಬಿಡುತ್ತವೆ (ಶಂಕಬ. ೦೩೦). [< ಮುರುಂಟು$_2$]

ಮೊರಟುತನ ' ಮೊರಡುತನ ' ನೋ.

ಮೊರಟೆ, ಮೊರಟ್ಟಿ (ನಾ). ಒಂದು ಬಗೆಯ ಸಸ್ಯ ; ಪ್ರಿಯಾಲ : ಈ ಮೊವಲು ತಂದ ಪತ್ರ ಪುಷ್ಪ ಉಪಕವೆ ದೇವರೋ ಈ ಹರಡಿಕೊಂಡಿರುವ ಸೊರಟೆ ಮೊರಟಿಗಳ ದೇವರೋ (ಕಪಸಂ. ೦೯೩-೩೯). **ಮೊರಟ್ಟಿ** : "ರಾಜಾದನಂ. ಪ್ರಿಯಮಿಲಃ· ಸನ್ನಃದ್ರುಃ. ಧನುಃಪಟುಃ — ೪ . . . ಮೊರಟ್ಟೀಗಿಡ" (ಕಣ್ಣಂಕ. ೦೨೦). ' ಮೊರಲೆ ' ಹೋ.

[←ತೆಲು. ಮೋರಟಿ./ಸಂ. ಮೋರಟ=ಕುರುಟಿಗೆ ಸಸ್ಯ]

ಮೊರಡ ' ಮುರುಡ$_1$ ' ನೋ.

ಮೊರಡಿ$_1$ ' ಮೊರಡ್ಡು$_2$ ' ನೋ.

ಮೊರಡ್ಡಿ$_2$. ಮುರಡ್ಡಿ (ನಾ). ೧. ಒಂದು ಬಗೆಯ ಮರ : " ಮೊರಡಿ ಯೆಂದೆಸೆ ಕುಜವಿಶೇಷಪದಭಿಧಾನ " (ಶಪ. ೧೩) : ಕಗ್ಗಲೀ ಉತ್ತರಾಣೀ ಚಿಳ್ಳೆ ಮೊರಡೀ ಗುಳ್ಳಾ ಹೇರುಳೆ ಹಾಲುಳ್ಳ ಮರಗಳಲ್ಲಿ ದಂತಕಾಷ್ಠವಂ ಗ್ರಹಿಸಿ (ಶಾಕಪು. ೦೬೨-೪). ೨. ಒಂಮ ಬಗೆಯ ಸಸ್ಯ ಮತ್ತು ಅದರ ಎಲೆ : ಕರಿಯನು ಸೇವಿಪ ಸಿಂಪಕೆ ಮೊರಡಿಯ ಸೇವಿಪ ಮೊಲಂ ವಲಂ ಪಾಸಟಿಯೇ (ಪ್ರಹಾ, ೩-೩೭). **ಮುರಡಿ**$_2$: ? ಎಮ್ಮೆಮುರುಕಲುಗಿಡ, ಮುರಡಿಗಿಡ, ಮೊರವೆ, ಶಾರಪಪತ್ರಿ (ಪ್ರಕಾಗಿ. ೦೪-೨೦). [?]

ಮೊರಡಿದಾಮರೆ (ನಾ). ಗುಡ್ಡದ ಮೇಲೆ ಬೆಳೆಯುವ ತಾವರೆ ; ಬೆಟ್ಟ ದಾವರೆ : ತರಣಿ ತೆರಳಲಾ ಕಡಗೆಯಲರ್ವೊಗದಿರಿವ ಮೊರಡಿದಾಮರೆಯಂ

ಬನಂಬೋಲ್. . . ಅರಮಗನೇಕಡಗೆಯ್ದಲ್ಲಾ ಕಡಗೆ. . . ನಾವಿಯಕೊಪ್ಪ ವಡೆವರು (ಶಾಮಾ. ೦೦–೩೬). [ಮೊರವಿ₁ (<ಮೊರಚು₂) + ತಾವರೆ]

ಮೊರಡು₁ ' ಮುರುಡು₂ 'ನೋ.

ಮೊರಡು₂, ಮಂಟೆ, ಮಡ್ಡಿ₂, ಮರಡಿ, ಮೊರಟ್ಟಿ, ಮೊರಡಿ₁, ಮೊರಡೆ, ಮೊಱಡಿ (ನಾ). ದಿಣ್ಣೆ: ತೆವರು ; ಗುಡ್ಡ : ಎಜಿಗುವ ಮಬೆ ಕದಿ ಬರ್ಪ ತೊಜೆ ಬೆಟ್ಟು ತವರ್ ಮೊರಡುಪಜಲಧಿಗಳಿನೆ ಜವ ವಜೆಯಜೆಯೆ ದಲುದ್ದಬಿದ್ದವಮಿಪ್ಪುವನಿತಳಂ (ಕಾಪ್ರ. ೬-೬೨); ದರಿಯುಮಂ ಕುವ್ಮರಿಯುಮಂ ಮೊರಡುಮಂ ಕೊರಡುಮಂ . . . ಕಳೆದುಪೋಗಿ (ಕಲಾಪ.೬-೦೬ ಪ); ಚಿತುಸ್ಸೀಮೆಗಳೊಳಗಾವ ಮೊರಡು ಸಹ ಕಟ್ಟಿದ ಗುತ್ತಿಗೆ ಖಿ ರ (ಎಕ. VIII. ಶಾಗಕ. ೬೦–೩೦ ; ೧೪೭೭). **ಮಂಟೆ**: ಮಂಟೆಮಲ್ಲಿ ಮನೆ ಮಾಡಿದ ನಮ್ಮ ಶಿವ (ಕಕಂದ. ೦–೦೪೬-೨). **ಮಡ್ಡಿ₂**: ಮಾದಿಗಂ ಮಡ್ಡಿಯ ಮೇಲಿದ್ದ ಹತ್ತಿಪ್ಪತ್ತು ಗುಡಿಸಲು (ಪಭಾಕ್ಷ. ೩) : ದಿನ್ನೆ ಮಡ್ಡಿ ಗುಡ್ಡ ಅದರ್ಗಾವ ಅದನ ಪಾ ಕಂಡು ನೊಂಪಾಳೊ (ಸಾಂಗಿ. ೦೦೦–೦೬). **ಮರಡಿ** : ಕೂಚಂಣನ ಮರಡಿಯು ದೇವಪ್ಪನವರ ಕೈಯಲು ತಶ್ಕಾಲೋಚಿತಕ್ರಯದ್ರವ್ಯವನು . . . ಕೊಟ್ಟು (ಎಕ. V (೩). ತೆರುವು. ೨೩–೪೦೬ ; ೧೨೯೦) : ಮೂಡಲು ಬಡಗಲು ಬಾಚಿನ ಮರಡಿ (ಎಕ. X (೪). ಹುಣಸಾ. ೦೫೬–೦೦ : ೧೪೦೫) ; ಆ ಮರಡಿಯು ಸುತ್ತಮುತ್ತಲಿನ ಗಿಡಗಂಟಿಗಳನ್ನೂ ಮುಳ್ಳುಕಲ್ಲುಗಳನ್ನೂ ನೋಡಿದರೆ. ಇಲ್ಲಿ ಮನುಷ್ಯರು ಇರುಹುಳ್ದೆಂದು ಯಾರಿಗೂ ತೋರುವ ಹಾಗಿದ್ದಿಲ್ಲ (ರಾಬಾಕಾ. ೨೨೬). **ಮೊರಟ್ಟಿ₁** : ಯಿಕೆರೆಗೆ ದಕ್ಷಿಣಪಾರ್ಶ್ವದಲ್ಲಿ ಕೊತ್ತಿಗನ ಮೊರಟಿಯು ಪಡುವಣಾರಿಟ್ಟಿಯಲ್ಲಿ ದಕ್ಷಿಣಮುಖವಾಗಿ ನಟ್ಟ ಲಲ್ಲು (ಎಕ. III. ಶ್ರವಬೆ. ೦೮.೦೩೨; ೧೬೫೬). **ಮೊರಡಿ₂**: ಮೂಳೆಯ ಮೊರಡಿಗಳನೇಱ ನೋಡಿಯುಂ . . .ದುರ್ಯೋಧನನನುಜ ಕಾಣದ ವಿಕ್ಕಯಂಬಟ್ಟು (ಗಣಾಮು. ೬–೨೬ ಕ) ; ದೇಹಮಿದಂ ನೆಟ್ಟನೆ ಪೊತ್ತು ಸುಖಮನಱಸುವ ಮನಂಜಂ ಮೊರಡಿಜೊಳೆ ಮಾದು ಪಟಮಱಸದಿರಂ (ಜಃಕಿಱಕ. ೦–೩೦) ; ನರ ವ್ಯಕೋದರ ನಕುಲ ಮೊದಲಾದರು ಕುತೂಹಲವಿ[ದಿ]ವರ ಸುತ್ತಣ ಮೊರಡಿಗಳ ಮೇಲಿದ್ದು ನೋಡಿದರೀ ಮಹಾಹವವ (ಕುಣ್ಮಕ. ೦೯–೩೭) ; ಮಲೆನಾಡ ಭಾಗದಲ್ಲಿ ಮೊರಡಿ, ಕೆಂಪುನೆಲ ಬಹಳ (ಪುಬಕಾಮು.೩–೦೯೫). **ಮೊರಡೆ** : ಮೊರಡಮು ಮೀಲಾಗಲಿ ಗುಡ್ಡದ ಮೀಲಾಗಲಿ ಹುಲ್ಲು ತಿಂದು ಉಲ್ಲಾಸದಿಂದ ಜಿಗಿದಾಡುವ ಕುರಿಮರಿಗಳನ್ನು ನೋಡುತ್ತೇವೆ (ಪುಬಂಶಾ. ೫- ೩-೧೦)- **ಮೊಱಡಿ** : ಪೂರ್ವಸ್ಯಂದಿನಿ ಕೆಂಜಗೆ ಮೊಱಡಿವಿ (ಎಕ. I. ೦–೨೩ ; ೪೪೦ ಶ.ಪ್ರ); ಪೂರ್ವಸ್ಯಾಂದಿಕಿ ನೊಲಿ ಬೆಳದಾ ವೆಳ್ಗಲ್ಲೊಱಡಿ (ಎಕ. VII (೩). ಶಾಗಮು. ೦೪೯–೬೦ ; ೧೨೦); ಮೊಱಡಿಯ ಮೇಲೆ ಮಾವುಫಲಮಾದವೊಲಾದುಮು (ಎಕ. VI. ಕಂಗೆ. ೪೩–೭೨ ; ೧೨೬). 'ಮೊರಟು' ಪರಾ.

ಮೊರಡಿಯಣಾಗಿ = ಪರ್ವತರಾಜನ ಮಗಳು ; ಗಿರಿಜೆ : ಪೃಥನಂ ಮೊರಡಿಯಣಾಗಿ ನಾಲ್ಮೊಗನಂ ನುಡಿವೆಣ್ಣಂಬುರುಹೋದರನಂ ಸಮಗತಲು ಕುವರಿ . . . ಕಬ್ಬಿತಿದಂದಿ (ಶಾಮಾ. ೨–೦೦).

ಮೊರಡುಗಲ್ಲು ' ಮುರುಡುಗಲ್ಲು ' ನೋ.

ಮೊರಡುಗೋಡು (ನಾ). ಗುಡ್ಡದ ಶಿಖರ.— ಕೋಡುಗಲ್ಲು : ಹೊತ್ಕರೆಯ ಬೆಟ್ಟನೆತ್ತಿದು ಕಲ್ಲರೆಯ ಮೊರಡುಗೋಡಂತೆ ಭೀಮತನು (ಕ್ರೀಡಾಪಾ. ೬೪೨-೦೩)- [ಮೊರಡು₂ + ಕೋಡು₂]

ಮೊರಡುತನ, ಮೊರಟುತನ (ನಾ). ನಯವಿಲ್ಲದಿರುವಿಕೆ; ಒರಟುತನ: ಅಜ್ಞತೆ ಅನನುಭವ ಮೊರಡಾತನಗಳು ಸೇರಿದರೆ ಅನಾಹುತವಾಗುತ್ತದೆ (ಶಂಕಪು. ೬೬೪). **ಮೊರಟುತನ** : ಪತಿಯ ಮೇಲೆ ಹರಿದ ನಸ್ಸ ಪ್ರೇಮವೆ ಅವರ ಮೊರಟುತನದಿಂದ. ಮತ್ತೆ ನಸ್ಸ ಹೃದಯದೊಳಗೇ ಹುದುಗಿ ಹೋಯಿತು (ಕಪ. ೭೮)- [ಮೊರಡು₂ (< ಮುರುಡು₂) + — ತನ]

ಮೊರಡುಬೀಳು (ಕ್ರಿ)- (ಆಲಂ) ಜಡ್ಡುಗಟ್ಟು; ಜಡವಾಗು : ಹತ್ತುದಿವಸ ಒಂದೇ ತೆರನಾಗಿದ್ದು ಬಿಡಿ. ಮೊರಡುಬೀಳುತ್ತೆ ಮನಸ್ಸು (ಕಂಗೂಂ. ೬೭). [ಮೊರಡು₂ (<ಮುರುಡು₂) + ಬೀಳು₂(<ಬೀಬು₂)]

ಮೊರಡೆ ' ಮೊರಡು₂ ' ನೋ.

ಮೊರಬಿಡು (ಕ್ರಿ)- (?) : ಪಾರ್ವನ ಮಣ್ಣಲ್ಲೆ ಕೊಡಿತೆ ಕಾಯ ಬಿಟ್ಟಣ್ಣುಂ ಅರಸಣ್ಮಂ ಅಮ್ಮೊನ್ನಿ ಒಕ್ಕೆಮಣ್ಣೆತ್ತು ಪಾದಂಕ್ತೆತ್ತುನ್ಮೊರಬಿಟ್ಟುಂ ಪರಿಪೂರಮಾನ್ಯೆಡಿಮೊನ್ನಚ್ಚುಮಹಾಪಾತಕನಕ್ಕೆ (ಎಕ. XIV. ತಿಪಸು. ೨೩೨–೬ ; ೩೦೦). [?]

ಮೊರಬು (ನಾ). ೧. ಕಲ್ಲು : "ಶರ್ಕರಿಲಃ, ಶಾರ್ಕರಃ — ಈ ೨ ಮೊರಬುನುಳ್ಳ ಭೂಮಿಯ ಪೆಸರು" (ಶಾಸಾ. ೦೦೨). ೨. ರತ್ನದ ಒಂದು ದೋಷ (?) : ಅಕ್ಕುರಿಂ ಧರಿಸಿದವರಿಗೆ ಫಲವ ಪೇಳುವೆ ಕರ್ಕರಕೆ ಭನ್ನವೆಂದೊಡದು ಹುಟ್ಟಿದುದೆಂದು ಅಕ್ಕಜದ ಮೊರಬು ಲುಳಿಯಾಣ ಸಸುನಗಳೆಂದು ಪುಟದೋಷಮೆಂದಿರ್ಪುದು (ಪಕ್ಷಾ. ೯-೩).

[ದೇ.ತ ತಮಿ. ಮುರಮ್ಬು ; ತುಳು. ಮೊರ, ಮುರ=ಕಲ್ಲುಕಲ್ಲಾದ ; ತೆಲು. ಮೊರಪ=ಕಲ್ಲುಗಳಿಂದ ಕೂಡಿದ]

ಮೊರಬ್ಬ ' ಮುರಬ್ಬ ' ನೋ.

ಮೊರಲೆ (ನಾ)- ಒಂದು ಬಗೆಯ ಸಸ್ಯ ; ಪ್ರಿಯಾಲ : "ರಾಜಾದನಃ, ಪ್ರಿಯಾಲಾಃ, ಸನ್ನಕದ್ರುಃ, ಧನುಃಪಟಿ—ಈ ೪ ಮೊರಲೆ" (ಶಾಸಾ. ೦೦೬); "ಪಟಃ—ಮೊರಲೆ" (೬೩೦. ೮೦). 'ಮೊರಟೆ' ನೋ. [ದೇ.ತ ದುಲ. ಮುಂಜಿ, ಮುರಳ ; ತೆಲು. ಮೊರಲಿ, ಮೊರಂ, ಮೋರಲಿ]

ಮೊರವ ' ಮೋಬವ ' ನೋ.

ಮೊರವೆ (ನಾ). ಒಂದು ಬಗೆಯ ಸಸ್ಯ : ಎಮ್ಮೆಮುರುಕಲುಗಿಡ, ಮುರಡಿಗಿಡ, ಮೊರವೆ, ಶಾರಪಪ್ಪು (ಪ್ರತಿಗಿ. ೦೯-೩೬೦). [?]

ಮೊರಸು₁ (ಕ್ರಿ)- ಆರ್ಭಟಿಸುವಂತೆ ಮಾಡು ; ಗರ್ಜಿಸುವಂತೆ ಮಾಡು: ಮಿಂಚಿಪ ಮರಿ ಮುಂಚಿ ಮೆರಸೆ ಹೃದಯಶಿಖಿಯು ಹೊನ್ನ, ಗುಡುಗಿನ ಮಗು ಮುಂಡುಗಿ ಮೊರಸೆ ಕಿನ್ನರಿಗಿರಿಯನ್ನ (ಗಿಅಂ. ೧೨-೦೦).

[ಮೊರೆ₂ (<ಮೊಱೆ₁) + —ಇಸು₅]

ಮೊರಸು₂ (ನಾ). ಒಂದು ಪ್ರದೇಶದ ಹೆಸರು : ಶ್ರೀಪರ್ಮ್ಮಾನಡಿ ಪೃಥಿವೀರಾಜ್ಯಂಗೆಯ್ದ ಸೊಬಗಿಂತಿಮಮಾರಂ ಮೊರಸುನಾಡನಾಳುತ್ತಿರೆ (ಎಕ. IX- ಸೊಗೆಲ. ೪೦-೪ ; ೧೨೦) ; ಮಂಜಲಿನಾಡ ಮೊರಸು ಹಂನೆರಡು ನೆಕ್ಕುನಾಡ ಬೆಡಗೆಜ್ (ಎಕ. V. ಕೀರಸಾಮು. ೬೦-೨೬೯ ; ೧೧೧೪); ಪುಂಗನೂರ್ ಮಾಗಡಿ ಬೆಂಗಳೂರ್ ಮೊದಲಾದ ಮೊರಸುನಾಡ ಮೋಹರದೊಳ್ (ಕಪಮಂ. ೨೨-೪). [?]

ಮೊರಹ (ನಾ)- ಸದ್ದು ; ಧ್ವನಿ : " ಗಾವರಮೆಂದೆನೆ ಮೊರಹವಿನಿಪ್ಪರ್ಥ ಮಪ್ಪುದು " (ಕಮಂ. ೪೬). [ಮೊರೆ₁ + — ಹ್ಕ (<—ಪ್ಕ)]

ಮೊರಹತ್ತು (ಕ್ರಿ)- (?) : ಪೆರಳೆದು ಹಣ್ಣಿನ ಕಸುರಿದು ತೆಗೆದು ಮೊರಹತ್ತಿ ಕೊಚ್ಚಿದ ರಾಗಿಹಿಟ್ಟನೂ ಕಲಸಿ ಉಂಡೆಮಾಡಿ ಮೆಲ್ಲಲು ಅಜೀರ್ಣಂ ಪೂರ್ಣಂ (ಸಪ್ತ. ೩೩೩). [?]

ಮೊರಹು (ನಾ). ದುಂಬಿಯ ಧ್ವನಿ ; ಝೇಂಕಾರ : ಅಳಿಯುಳದ ಮೊರಹು ನಿಂತಿತು (ಜಪಾ. ೦೨-೧೬) ; ಅಳಿಗಳ ಮೊರಹಿನಾ ಕೋಲಾಪಲಕೆ ಮುಡಿಯನಲುಗಿದೊಡೆ · ಮೊಳಗಮರ್ದ ಕಾಲಮೇಘಂ ತೋಱುತಿದೆ (ಪದ್ಮಣಾ. ೯-೮೩)- [ಮೊರೆ₁ + — ಹ್ಕು (<—ಪ್ಕು)].

ಮೊರೆ₁ (ಕ್ರಿ). ೧. ದುಂಬಿಯಂತೆ ಧ್ವನಿಮಾಡು,—ಝೇಂಕರಿಸು : "ಮೊರೆ (ಮೂರೆ) — ಭ್ರಮರಾದಿನಿನದೇ. · ಕನ್ನರಿಕ್ರಿಯಾಯಾಂ " (ಶಮಣಾ) ; ತೊಳಪೆಳವೆಱೆಯುಂ ಮೊರೆವಳಕುಳಿಂಗಳುಂ ಮೆಲ್ಲನೆಸೆವ ಮಳೆಯಾಳನುಂ ಮುಳಿಸು ಕೆಬಲ್ದಿ ಕಳೆದುವು (ಕಜಾ. ೩-೭೦) ; ಮದಗಜ

ಗಂತಕ್ಕಳಂಗಳೊಳಿಱಿ ಮೊರೆವ ಕುಂಬಿಮು ಬಂಬಲ್ಗಳೆ ವಿಮುಖೀಭೂತಂ ಗಳಾದುವು (ಪಂಚಾ. ೪-೧೧೨); ಬಂತಸುಂದು ನಗೆಗೊಂಬುಗಳಂ ಮೊರೆದೇಱ್ಪ ಧೃಂಗಝುಂಕಾರಮೆ ಮಾಱ್ಪುದಾರ ಬಗೆಗಂ ಮದನೋತ್ಸವ ಹರ್ಷಭಾರಮುಂ (ಶಂಕಾಪ. ೦-೦೦೬). ೨. ಸಣ್ಣದನಿಯಲ್ಲಿ ಶಬ್ದ ಮಾಡು ; ಕಿರುಗುಟ್ಟು : ಕುರುಬಲಕ್ಕೆ ಮಿಱ್ತು ಪಲ್ಮೊರೆವಂತೆ ಮೊರೆದು ಪರಿವ ತನ್ನ ಕಿಸುಪೊನ್ನ ರಥಮುಂ ಭಯಂಕರಾಕಾರಮಾಗೆ (ಪಂಪಾ. ೦೦-೬೬ ೪); ತರತರದಿಂ ಕೆರಳೆ ರಸಂ . . . ಮೊರೆಪುವು ಗಾಣಂಗಳಕ್ಷವಾಟಾಂತರದೊಳ್ (ಶಾಂಪು. ೯-೩೬); ಕೊರಮಂ ಸುಯ್ವುಂ ಸೀಂತಂ ಮೊರೆದುಂ ನಿದ್ರೆಯನೆ ಕೆಡಿಪ ಮುದು ಪೊರಸಂ ಪುತ್ರರಡಿಭ್ಗದೊಲ್ಮೆನೆಂದೊಡೆ (ಶಾಪಾಪ್ಯ. ೨-೨೪); ಮೊರೆವ ಸಮ್ಮಾ ಪುಗೆಯ ಮುಂಜುಱದಿಂ ತೆಗೆದುಟ್ಟ ವರದುಕೂಲದ ಮುಂಜೆಱಗಿನಿಂ . . . ಸಿಂಗರಕ್ಕಿಟ್ಟ ಪಿಟ್ಟಮೊಯಿದೆನಿಂ (ಕಬ್ಬಣ. ೩-೨೨). ೩. ಪಾದ್ಯದಂತೆ ಶಬ್ದಮಾಡು,— ಧ್ವನಿಸು : ಮೊರೆವ ಪಟಹ ಮೃದಂಗ ಘನಜರ್ಜಿತ ವಹ ನಿಸ್ಸಾಳಚಯದಬ್ಬರಣೆ ಗಬ್ಬರಿಸಿದ್ದುದು ಕಮಲಭಮಾಂಡಬಿರ್ದರವ (ಶಾಣ್ಮಕ್ಕೃ. ೯-೩೪); ತಮ್ಮುಟಿಗಳು ಕಿವಿಟ್ಟುಗುವಂತೆ ಮೊರೆದವು (ಜಾಂಶಾ. ೦೪೪). ' ಪೊಟಿ[1] ' ಪರಾ.

[ದೇ.॥ ತಮಿ. ಮುರಜ್ಜು ; ಮಲ. ಮೊರಮ್ಮು : ತುಳು. ಮುರೆಸು. ಮೊರೆಸು ; ಕೊಡ. ಮೊರಪ್ ; ತೆಲು. ಮೊರೆಯು : ಕೋಲಾ. ನಾಯ್ಕ. ಮೊರಬ್ : ಪರ್ಜ. ಮುರ್ ; ಕುರುಖ್. ಮುರ್ಸನಾ : ಮಲ್ತೊ. ಮುರೆ]

ಮೊರೆ₂ ' ಪೊಜಿ[1] ' ನೋ.

ಮೊರೆ₃ (ನಾ). ದುಂಬಿಯ ಧ್ವನಿ : ಝೇಂಕಾರ : ' ಪರಬೆಮೊರೆ ' ಪರಾ. [<ಮೊರೆ[1]./ತುಳು. ಮುರಿಯು]

ಮೊರೆ₄ ' ಪೊಜಿ[3] ' ನೋ.

ಮೊರೆ₅ ' ಮಜಿ[2] ' ನೋ.

ಮೊರೆ₆(ನಾ). (?) : ಅಶ್ವರತ್ನದ ಆಭರಣದ ಲೆಕ್ಕ. . . ೨ ಸಿಂಹ ೧೬ ಮೊರೆ ೧೦ ಕಟಕಟಿತುಂಡು (ಅಳ. XIV, ೭೦೫೪. ೨೪೨-೧೪ದು ಶಾಂ; 1847). [?]

ಮೊರೆಗೇಳು ' ಪೊಜಿಗೇಳು ' ನೋ.

ಮೊರೆಜ್ವರ (ನಾ). ಬಿಟ್ಟು ಬಿಟ್ಟು ಬರುವ ಒಂದು ಬಗೆಯ ಜ್ವರ : ಜವುಗುಪ್ರದೇಶವಾಸಿಗಳಲ್ಲಿ ಕಂಡುಬರುವ, ಮೊರೆಜ್ವರವು ಗುಲ್ಮ ಪೋಷೆಯೂ ಲಕ್ಷಣಗಳಾಗುಳ್ಳ ಒಂದು ರೋಗಸ್ಥಿತಿ (Impaludism. ೨೦೧೬). [ಮೊರೆ₄ (<ಪೊಜಿ[3]) + ಜ್ವರ]

ಮೊರೆತ[1] (ನಾ). ಝೇಂಕಾರ : ಸೊಳ್ಳೆಗಳು ಮುತ್ತಿಗೆ ಹಾಕಿ ಝೇಂಕಾರ ಮಾಡುತ್ತಿರುತ್ತವೆ : ಅವುಗಳ ಮೊರೆತವೇ ಮಲಗಿದವನಿಗೆ ಜೋಗುಳವಾಗಬೇಕು (ಪಂಪಭಾ. ೧೩). [ಮೊರೆ[1] + — ತ್ತ]

ಮೊರೆತ[2] (ನಾ). ಅಬ್ಬರ ; ಆರ್ಭಟ : ಕಾವ್ಯದಲ್ಲಿರಬೇಕಾದ ಗುಣವಿಶೇಷಗಳೂ ಭಾವಾವೇಶದ ಮೊರೆತಗಳೂ . . . ಬಸವಣ್ಣನವರ ವಚನಗಳಿಗೆ ವಿಸಲು (ಶಾವಗ. ೦೬೭); ಸಮುದ್ರದ ಮೊರೆತ ಮನಿಷಿಯಪರೆಗೂ ಕೇಳಿಸುತ್ತಿತ್ತು (ಕಾಶಿ). [ಮೊರೆ₂ (<ಪೊಜಿ[1]) + — ತ್ತ]

ಮೊರೆಪ (ನಾ). =ಮೊರೆತ[1] : ಅಲರ್ವಾಡಸುಂದು ಸೊಕ್ಕಿ ಮೊರೆವ ಮೊರೆಪದಿಂ ತುಂಬಿಗಳುಂ ಪಲ್ಬಜೆಗುಟ್ಟಿದಪ್ಪವೆಂಬಂತೆಯುಂ (ಕಾಪುಣ್ಯ. ೨೦೯); ತುಂಬಿಗಳ ಪಲ್ಮೊರೆಪದಿಂ . . . ಮೆಱಿದುದಾ ವನಂ (ಪಕ್ಕಣ. ೬-೨೩).

[ಮೊರೆ[1] + — ಪ್ಪ]

ಮೊರೆಯಿಡು ' ಮೊಜಿಯಿಡು ' ನೋ.

ಮೊರೆಹೊಗು ' ಮಜಿಪೊಗು ' ನೋ.

ಮೊರೆಹೋಗು ' ಮರೆಪೋಗು ' ನೋ.

ಮೊರ್ಯೆಡಿವಾಡಿ (ನಾ). ಒಂದು ಊರಿನ ಹೆಸರು : ಪುಲಿಕೆಜಿ ಕಾಪಪ್ ಕಣ್ ಮೊರ್ಯೆಡಿವಾಡಿ ಕೊಮರವಂಗಲಕ್ಕಿಜಿಪಳ್ಳಪ್ (ಪ್ಯಅಂ. ೦೯೨೪. ೪೦-೬೨೦; 799). [? + ಪಾಡಿ[2]]

ಮೊರೊಪ್ಪುರ್ (ನಾ). ಒಂದು ಊರಿನ ಹೆಸರು : ಗಂಗಜುಸಾಸಿರ ಪುಮ ಆಳಿ ಮೊರೊಪ್ಪುರಾ ಗವುಣ್ಣನ್ ಆಜಕಜಿ ಹುಯ್(ಲೊ)ಳು ಸತ್ತನ್ (ಪ್ಯಅಂ. ೦೯೨೬. ೪೦-೬; 1೦೫ಯು ೫೪). [? + ಊರ್]

ಮೊರ್ಕು ' ಮುಟುಕು[1] ' ನೋ.

ಮೊಲ (ನಾ). ಉದ್ದಕಿವಿಗಳು, ಮೊಂಡುಬಾಲ ಹಾಗೂ ಸೀಳಿದ ತುಟಿಯೂ ಉಳ್ಳ ಒಂದು ಬಗೆಯ ಸಸ್ತನಿಪ್ರಾಣಿ ; ಶಶ : "ಮೊಲಂ ಶಶಮೆನಿಸುಂ" (ಶಂಗಣಾ. ೪೪-೪) : ಒಂದು ಮೊಲಂ ಕಿಚ್ಚನಿಂದಂ ಬೆಂದುನಿಯು ಬಣ್ಣಮಾಗಿ ಪರಿತಂದು ತನ್ನ ಕಾಲ ಕೆಬಗೆ ಪೊಕ್ಕೊಡೆ (ಪಕ್ಕಣ. ೦೩೭-೩) ; ಆ ಪಡೆಯೊಳ್ ಗಂಡನುಮಾ ಮೊಲಂ ದ್ರುಪದನುಂ ವೀರೊಚ್ಚಯಮಾ ಮತ್ಸ್ಯನುಂ (ಪಂಪಭಾ. ೦೦-೪) ; ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬರಿವರಯ್ಯ (ಪಪಪ. ೦೫೬) ; ಮೊಲನ ಬಲೆಯುಲಿವನವ ವುದುರಿ ಸಿಲುಕಲುರುವುದೆ (ಶಾಣ್ಮಕ್ಕೃ. ೦೦-೩) ; ಆ ಕಾಡಿನಲ್ಲಿದ್ದ ಮೊಲಗಳೆಲ್ಲಾ ತಂಪಾಗಿದ್ದ ಈ ಸ್ಥಳಕ್ಕೆ ಬಂದು ಸೇರಿಕೊಂಡವು (ಪಪಪಂ. II, ೨೨).

ಮೊಲದ ಕೋಡು = (ಅಲಂ) ಪಡೆಯಲು ಅಸಾಧ್ಯವಾದುದು ; ಅಸಂಭವವಾದುದು : ಮುಂದಿಗೂನಿ ಮಂಥದಿಗೆ ಮೊಲದ ಕೋಡಾದುದು ಸೊಗಂ (ಶ್ರೀಧಾಪು. ೫೯-೪೧೨).

[ದೇ.॥ ತಮಿ. ಮುಯಲ್, ಮುಸಲ್ ; ಮಲ. ಮುಯಲ್ ; ತುಳು. ಮೊಲ ; ಕೊಡ. ಮೊಸ ; ಗೊಂಡಿ. ಮಲೋಲ್, ಮೊಲೊಲ್ ; ಕೊಂಡ. ಮೊರೊರ್ ; ಕುವಿ. ಮ್ಯಾಲೂ ; ಕುರುಖ್. ಮುನ್ಸಾ ; ಬ್ರಾಹುಈ. ಮುನೂ]

ಮೊಲಕವಿ ' ಮೊಲಗಿವಿ ' ನೋ.

ಮೊಲಗತ್ತಲೆ ' ಮೊಲಗಟ್ಟಲೆ ' ನೋ.

ಮೊಲಗರ್ತಲೆ ' ಮೊಲಗಟ್ಟಲೆ ' ನೋ.

ಮೊಲಗಳೆಯ (ನಾ). ಮೊಲದ ಗುರುತುಳ್ಳವನು ; ಶಶಾಂಕ ; ಚಂದ್ರ : ಒಂದು ಕಂತುಕವ ತಳೆವ ಕಾಂತೆಮು ಕರತಳ ಕಕ್ಷೆ ಕಡುರಮ್ಯಮಾಯ್ತು ಮೊಲಗಳೆಯನನಮರ್ದಪ್ಪಿದ ತಾವರೆಯಲರ ಚೆಲ್ವಿಕೆಯನೇಳಿಸುತ (ಶಾಣಪಂ. ೩೨-೪).

[ಮೊಲ + ಕಳೆ[2] (= ಕಲೆ[2]) + — ಅ[7]]

ಮೊಲಗಳ್ತಲೆ ' ಮೊಲಗಟ್ಟಲೆ ' ನೋ.

ಮೊಲಗಟ್ಟಲೆ, ಮೊಲಗತ್ತಲೆ, ಮೊಲಗರ್ತಲೆ, ಮೊಲಗಳ್ತಲೆ (ನಾ). ೧. ದಟ್ಟವಾದ ಕತ್ತಲೆ ; ಗಾಢಾಂಧಕಾರ : ಕಱ್ಕೊಲದೊಳಿರುಳೊಳ್ ಮೊಲಗಟ್ಟಲೆ ಬಂದ್ರದ್ಯುತಿಗೆ ಕಾಳತಾಳೀವನದೊಳ್ (ಜಾಂತೀಪು. ೫-೦೦೩) ; ಮೊಲಗಟ್ಟಲೆಯುಂ ಕಾವಿಂಗೆ ಪುಟ್ಟಿಸುವ ಮೊಲಂ ಕಾವಗ್ರಹದಾಲಮೆನಿಸಿ ತಿಂದುಕಳಂಕಂ (ಪ:ಪ್ಪತಿ. ೬-೩೩) ; ಲಲಿತ ಹರಿನೀಲಹರ್ಮ್ಯಾವಲಿಶಿಖರೋಚ್ಚ ಳಿತರುಚಿಗಳರುಳೊದವಿ ಸಭ್ಜಲದೊಳೊದರ್ಚುವುದಿಂದುವ ಮೊಲಕ್ಕೆ ಕಟ್ಟಲೆಯಿದೆನಿಪ ಮೊಲಗಟ್ಟಲೆಯುಂ (ಶಂಪ್ರತಿ. ೦೦-೬೭). ೨. (ಅಲಂ) ಅಜ್ಞಾನ ; ಮೌಢ್ಯ : ಅಜನಂ ತಗುರ್ಚೆನಿಂತಾಗಿಯುಮೆಂಬ ನಿನ್ನ ಮೊಲಗಟ್ಟಲೆಗಾಂ ಬೆಱಗಾದಂ (ಅಂಪ್ರ. ೬-೬೬). **ಮೊಲಗತ್ತಲೆ** : ೧. ಜಲಜಲಿಸುವ ಬೆಳ್ದಿಂಗಳ್ ತೊಲಗಲೊಡಂ ಮುಂದುಗೆಟ್ಟು ಶಶಿಮಂಡಲದೊಳ್ ಮೊಲನೆಡಪೆ ಹರಿಣನುಗೆಡೆ ಮೊಲಗತ್ತಲೆಯಾಯ್ತು ಯಾಮಿನೀ ವಿರಸಸದೊಳ್ (ಅಪಂಪ್ರ. ೬-೬೪). **ಮೊಲಗರ್ತಲೆ** : ೧. ನಾಣ ಪುತ್ರ ಮೊಲಗರ್ತ್ತಲೆಯಂ ವಟುಪರ್ವ ಭಂಗಿ (ಶಾಇಕ. XVIII. ೫೬೬-೦೬; 1158). ೨. ಚಮರಕ್ಕೆಸಕ್ಕಮಜಾತಂ ಮೊಲಗರ್ತ್ತಲೆಯಾಗಿ ವರ್ತ್ತಿಪೀಗಡಿನವರಂ

ಪಳಂಚಲೆವುದುದ್ಭಗುಣಂ ರವಿದ್ಯುನಾಥನಂ(ನ) (ಎ-ರಾ. XII. ೨೩೦-೦೬೩; 1077). **ಮೊಲಗಳ್ತಲೆ** : ೨. ದುರಭಿಪ್ರಾಯುವ ಮೊಲಗಳ್ತಲೆಯಿಂದಜನಂ ಭಾವಿಸದಾ ಜೀವಂ ಆಮುಂ ತವೆ ಕೀರ್ದು (ಶಡಾಣ. ೦೦–೨೦); ಆರಮನೆಗೆ ಪ್ರಜಾರೋಕಕ್ಕೆ . . . ಮೊಲಗಳ್ತಲೆಯನ್ನು ಕವಿಯಿಸಿ (ಪುಂಶ್ರಕ. ೦೩೪-೨೪). [ಮೊಲ್ಲ + ಕಟ್ಟಲೆ]

ಮೊಲಗಿವಿ. ಮೊಲಕಿವಿ (ನಾ). ಮೊಲದ ಕಿವಿಯ ಆಕಾರದ ಎಲೆಗಳುಳ್ಳ ಒಂದು ಬಗೆಯ ಔಷಧೀಸಸ್ಯ : ಏಸುತಂ ಪೆರ್ಗುರುಟಿಗೆಯಂದಿನ ಮೊಲಗಿವಿಯಿಂದಿವಲ್ಲಿ ಸಸ್ಯದೊಳ್ ಪಿತಂ (ಪಪಚ. ೬-೩೭). **ಮೊಲಕಿವಿ** : " ಶಶಕರ್ಣಿ—ಮೊಲಕಿವಿಗಿಡು" (ಓಷ. ೦೩೯); ಮೊಲಕಿವಿಗೆಡ್ಡೆಯಂ ನೀರಿಂದ ಅರೆದು ಪಾನ, ಲೇಪನಂಗಳ ಮಾಡಿಸಲು ಮೊಲದ ವಿಷ ಪರಿಹರಮಹುದು (ಶೈಕ್ಷಾ. II. ೨೦೯). [ಮೊಲ + ಕಿವಿ]

ಮೊಲಗಿವಿಗ (ನಾ). = ಮೊಲಗಿವಿ : ಮೊಲಗಿವಿಗನ ಗೆಡ್ಡೆಯುಮಂ ಜಲದಿಂದರೆದದಿಂ ಪಾನ ಲೇಪಾದಿಗಳಿಂ ತೊಲಗುಗುಮಾಗಳೆ ತನುವಿಂ ಮೊಲನ ವಿಷಂ (ಪಪಚ. ೦೩-೭೯). [< ಮೊಲಗಿವಿ]

ಮೊಲನಾಗರ ' ಮಲರೋಗ ' ನೋ.

ಮೊಲನಾಗರು ' ಮಲರೋಗ ' ನೋ.

ಮೊಲಪಡಿ (ನಾ). ಒಂದು ಸ್ಥಳದ ಹೆಸರು : ದಕ್ಷಿಣಂ ಸೋದಿ ವಟವೃಕ್ಷಮೆ ಮೊಲಪಡಿಎ(ದು) ಮುವೃಕ್ಷಮೆ ಕಡುಗಮೊಜ್ಜಿಯ (ಇಶ. VIII. ೨೦೪-೩೪; ೨೦೫ಡು ೫೫). [?]

ಮೊಲೆ$_1$ (ನಾ).ಹೆಂಗಳು ಅಥವಾ ಸಸ್ತನಿಪ್ರಾಣಿಯು ತನ್ನ ಮಗು ಅಥವಾ ಮರಿಗೆ ಹಾಲೂಡಿಸಲು ಉಪಯೋಗಿಸುವ ಅಂಗ; ಸ್ತನ : " ವಕ್ಷೋಜ ಕುಚ ಸ್ತನಮುಮಲ್ಲಕ್ಷಿಸೆ ಮೊಲೆ " (ಪಪ್ರ ಕೋ. ೬೬-೬) ; ಮೊಲೆ ಪೊಣರ್ವೆಟ್ಟು ರೋಪುಲತೆ ಬಟ್ಟೆ . . . ಮನ್ಮಥಾನಿಳಶಿಖಿ ಬೇಗೆಯುಗೆ ಮದನಾಟವಿಯಂತೆವೊಲೊಪ್ಪಿ ತೋಱಿದಳ್ (ಶಾಕ್ಷಾ. ೬೦೩. ಕಾಪ್ರ ೪) ; ಗಿರಿಸುತೆಯ ಮೊಲೆಗಳಳ್ಗೀಱಿಂ ನೀರೇಱಿಸುತಿರೆ (ಸಂಚಾ. ೦೩-೦೬೪) ; ಮೊಲೆ ಮೂಡಿ ಬಂದರೆ ಹೆಣ್ಣೆಂಬರು (ಪಣಾಪ. ೬೬-೦೬೬).

ಮೊಲೆಬಿಡಿಸು = ಮಗುವಿಗೆ ಎದೆಹಾಲು ಕೊಡುವುದನ್ನು ನಿಲ್ಲಿಸು : ಅನೇಕ ಮಕ್ಕಳು ಮೊಲೆಬಿಡಿಸುವ ಸಮಯದಲ್ಲಿ ಚಂಡಿಮಾಡು ಶ್ವವೆ (ಪಣಾ). **ಮೊಲೆಬೀಳು** = ಸ್ತನಗಳು ಜೋತುಬೀಳು: ಇದರಲ್ಲಿ . . . ಕೈಗಡಿಕೆಯರು ಮೊಲೆಬಿದ್ದವರು ಮುದುಗಾಂಟಿಗಳು (ಕೂಡಾ. ೬-೨-೪೪). [ದೇ-ತ ತಮಿ. ಮುಲೈ; ಮಲ. ಮುಲ; ತುಳು. ಮಿರೆ; ಕೊಡ. ಮೊರೆ; ಕೋತ. ಮೊರ್]

ಮೊಲೆ$_2$ (ನಾ). ಒಂದು ಬಗೆಯ ಸಸ್ಯ : " ಜಾಲವೃಷ್ಟಿಕಾ — ಬೊಲೆ. ರಸಾಂಜನ " (ಓಷ. ೦೦೬). [?-/ತೆಲು. ಪೊಗಲಿ, ಮೊಗಿಲಿ]

ಮೊಲೆಕಟ್ಟು ' ಮೊಲೆಗಟ್ಟು ' ನೋ.

ಮೊಲೆಕುಡಿ (ಕ್ರಿ). ಎದೆಹಾಲನ್ನು ಕುಡಿ ; ಸ್ತನ್ಯಪಾನ ಮಾಡು : ಮೊಲೆಕುಡಿಯುವದನ್ನು ಬಿಡುವಷ್ಟೇ ವಯಸ್ಸಾಳ್ಳ ಅವಳಿಮಕ್ಕಳನ್ನು . . . ವಾಲ್ಮೀಕಿಮುನಿಗಳಿಗೆ ತಂದುಕೊಟ್ಟಳು (ಉಣಾಚ. ೧೦).

[ಮೊಲೆ$_1$ + ಕುಡಿ$_3$]

ಮೊಲೆಕುಡಿಸು (ಕ್ರಿ). ಎದೆಯ ಹಾಲನ್ನು ಕುಡಿಸು ; ಸ್ತನ್ಯಪಾನ ಮಾಡಿಸು : ತಾಯಿ ನಿನಗೆ ಮೊಲೆಕುಡಿಸುತ್ತಿದ್ದಳು (ಪುಸಂಪಾಮ. ೦-೨೪).

[ಮೊಲೆಕುಡಿ + – ಇಸು$_5$]

ಮೊಲೆಕೂಸು ' ಮೊಲೆಗೂಸು ' ನೋ.

ಮೊಲೆಕೊಡು ' ಮೊಲೆಗೊಡು ' ನೋ.

ಮೊಲೆಗಟ್ಟು, ಮೊಲೆಕಟ್ಟು (ನಾ). ಹೆಂಗಸರು ಧರಿಸುವ ಒಳಕುಪ್ಪಸ : ಬೆಲೆಯಿಲ್ಲದ ಮುತ್ತುರತ್ನಂಗಳಡಸಿದ ಮೊಲೆಗಟ್ಟು ಕಾಸೆ ಕಾಲ್ಗೆಸೆವ ಸಲೆ ಕುದ್ದ ಗೀತಜ್ಞಾರಿಗೆ ಬಲುಬಿರುದಾಂತ ಕಲೆಯು ನರ್ತಕಿಯನೊಪ್ಪಿದರು (ಕೋಚಕ. ೨೦-೦೭); ಕಾಲ ಕುಪ್ಪಸ ಕಸೆ ಮೊಲೆಗಟ್ಟು ಜಡೆ ರತ್ನಕೀಲುಕೆಗೆಲಸ ದೊಡ್ಡಾಣ (ಶಡಕ. ೩೦-೬೦). **ಮೊಲೆಕಟ್ಟು** : ಜೆಡೆ ಕಾಲ್ಕುಪ್ಪಸ ಮೊಲೆಕಟ್ಟು . . . ಜೇಡೆಯಮೆಸೆಯುಲಸುರನ ಮುಂಗಡೆಯೊಳೆಯ್ದಿದರಂಗನೆಯರು (ಕುಚಾಸಾಂ. ೦೬-೦೭); ಮೈದಿಲ ಸೆಜಗಿನ ಮೊಲೆಕಟ್ಟು ದುಗುಲದೊಳ್ಕೆದಿದ ನಿಜಿಗಾಸೆದಿಂದ ಬಿದಂಬನ ಮನದಾಸೆಗಳಂದದೊಳ್ಕೆದಿದರ್ಜಲಕೇಳಿಗಾಗ (ಕಂಪಂ. ೨೬-೦೦೬). [ಮೊಲೆ$_1$ + ಕಟ್ಟು$_3$]

ಮೊಲೆಗುಡಿ (ನಾ). ಎದೆಯ ತುದಿ ; ಕುಚಾಗ್ರ : ಮೊಲೆಗುಡಿಯೊಡನೆ ಕಕ್ಷಪುಟಮಸಿತಮಾಗೆ (ಸಿದ್ಧಾ. ೦-೩೨). [ಮೊಲೆ$_1$ + ಕುಡಿ$_3$]

ಮೊಲೆಗುಡು ' ಮೊಲೆಗೊಡು ' ನೋ.

ಮೊಲೆಗೂಸು, ಮೊಲೆಕೂಸು (ನಾ). ಎದೆಹಾಲು ಕುಡಿಯುವ ಮಗು ; ಹಸುಗೂಸು ; ಹಸುಳೆ : ಆ ಬಡಪೆಗಳು ಮೊಲೆಗೂಸನ್ನೂ ಬಿಟ್ಟು ಕೆಲಸಕ್ಕೆ ಬಂದಿದ್ದಾಳೆ (ಪಣಾ). **ಮೊಲೆಕೂಸು** : ಮೊಲೆಕೂಸು ಮೊಪಲು ವಾಡಿಕೊಂಡು ಹೆಂಗಸರೂ ಹುಡುಗರೂ ... . ನೋಡಿಯೇ ನೋಡಿದರು (ಪಬ್ಬಕಾ. ೩). [ಮೊಲೆ$_1$ + ಕೂಸು]

ಮೊಲೆಗೆಲ (ನಾ). ಎದೆಯ ಪಕ್ಕ ; ಸ್ತನಪಾರ್ಶ್ವ : ಕಸ್ತೂರಿಯಿಂದೆನ್ನ ಮೊಲೆಗೆಲದೊಳ್ ಪತ್ರಭಂಗಂಗಳಂ ಚಿತ್ರಿಸುವಂ (ಗಾರುಣ. ೨೦೩); ಮೊಲೆಗೆಲದೊಳ್ ಕಸ್ತೂರಿಕಾಪತ್ರಭಂಗಮುಂ ಚಿತ್ರಿಸಿಯುಂ (ಶಂಪ್ರಕ. ೬-೬೬ ಪ); ನೋಡಿದಳ್ ಕುವರಿ ತನ್ನೆಯ ಮೊಲೆಗೆಲದಲ್ಲಿ ವಾಡಿರ್ದ ಮೋಹನಗಜೇಯ (ಪೋಚಕ. ೨೬-೦೦). [ಮೊಲೆ$_1$ + ಕೆಲ$_1$]

ಮೊಲೆಗೊಟ್ಟು(ನಾ). = ಮೊಲೆಗುಡಿ: ಬೆಳರೆ ಪೊಗಂ ಮೊಲೆಗೊಟ್ಟಸೊಳೆಸಿದಿರೆ ಲರ್ವ್ . . . ಬೆಳದುದ(ದು) ಗರ್ಭ್ಯಂ (ಕಾ. ೨. ೨೫-೩೦ ; ೨೨೫). [ಮೊಲೆ$_1$ + ಕೊಟ್ಟು$_3$]

ಮೊಲೆಗೊಡು. ಮೊಲೆಕೊಡು. ಮೊಲೆಗುಡು (ಕ್ರಿ). ಎದೆಹಾಲನ್ನು ಕುಡಿಸು; ಸ್ತನ್ಯಪಾನ ಮಾಡಿಸು : ಇವನು ಗಡ ಚಿಕ್ಕಂದು ಮೊಲೆಗೊಟ್ಟವಳ ಹಿಂದಿದ (ಕುಚಾಸಾ. ೦೦–೦೬); ದಾದಿಯರಬಲಂಗೆ ಮೊಲೆಗೊಟ್ಟು (ಪೋಚಕ. ೦೬–೨೯). **ಮೊಲೆಕೊಡು** : ದಿಟ್ಟ ಶ್ರೀಪುರಂವರವಿಶಲಗೆ ಮೊಲೆಕೊಡು ಬಾರೆ ಗೋವಮ್ಮ (ಕೃಚಂ. ೨-೦೭೯-೬). **ಮೊಲೆಗುಡು** : ಪಾರ್ಥವನೆತ್ತಿ ಮೊಲೆಗುಡುತನುನಮುದಿ (ಸಂಪಕ. ೦೫–೬೭) ; ಚಂದ್ರಸುರ ಧೇನು ಕೂರ್ಮ ಚಕೋರಪತ್ನಿಗೆ ಮೊಲೆಗುಡಲು (ಪೋಚಕ. ೦೬–೨೬). [ಮೊಲೆ$_1$ + ಕೊಡು$_2$]

ಮೊಲೆಗೊಳಿಸು (ಕ್ರಿ). =ಮೊಲೆಗೊಡು: ಮೇಲುವ ಕೆಲಕಮೆಗೆ ಪಜಿಮಾಡಿ ಮುದ್ದಿಸಿ ಮೊಲೆಗೊಳಿಸಿ ತೂಬಿಬಿದು (ಕೂಚಾ. ೬-೨೬-೨೮); ವಾಯಿಯನೆ ಮೊಲೆಗೊಳಿಸಿ ಹಾಲ್ಗುಡಿಸಿ. ಈ ತಾಯಿ ಗಾಯತ್ರಿವಾಂಶ್ರಕ್ಕೆ ಭಾವ್ಯ ಬರೆದವಳು (ಅಚಕ. ೨೪-೪). [ಮೊಲೆ$_1$ + ಕೊಳ್$_1$ + – ಇಸು$_5$]

ಮೊಲೆತುದಿ ' ಮೊಲೆದುದಿ' ನೋ.

ಮೊಲೆತೊಟ್ಟು 'ಮೊಲೆಮೊಟ್ಟು' ನೋ.

ಮೊಲೆತೊರೆ (ಕ್ರಿ). ಸ್ತನದಲ್ಲಿ ಹಾಲು ಚಿಮ್ಮಿಬರು : ತಾಯ್ಗಳುವ್ಮಳಸ ಲಾಗದು ಕಜುಗಳಂ ಬಿಡರೆ ಬೇಗ ಮೊಲೆತೊರೆದು ಮಜುಗುವವು ಕಱುವಂ ಬಿಡರೆ (ಬಸ. ೯-೦೦೬); ಅಳುವ ಕಂದನ ದನಿಯ ಕೇಳುತೆ ಮೊಲೆತೊರೆಯ (ಹಾಕ್ಷಾ. ೬-೦೬). [ಮೊಲೆ$_1$ + ತೊರೆ$_3$]

ಮೊಲೆದಾಣ (ನಾ). = ಮೊಲೆಗಲ : ನಿನ್ನೆಡೆಯೊಳಗೆಳ್ಳನಿತೂಳೆಯವಿಡದ ಕಾರ್ಯಗಳ ಕಾಣಿಸಿಕೊಂಡೆನಾದೊಡೆ ಕೇಳು ಮುಡಿ ಮೊಲೆದಾಣವ ನಿನಗಿತ್ತ ಳೆಲ್ಲ (ಕಂಪಂ. ೬-೦೬೬). [ಮೊಲೆ$_1$ + ಪಾಣ]

ಮೊಲೆದುದಿ, ಮೊಲೆತುದಿ (ನಾ). = ಮೊಲೆಗುಡಿ : ತನ್ನೆಡಗೈಯ ಕೊನೆವೆರಳಿಂ ಬಲದ ಮೊಲೆದುದಿಯವುಂ ಕಡಗಣ್ಣಲಿ ಮೊಗವನರೆ ನೋಡಿ

. . . ನಲಿಪ ಕಂದನನೆಂದು ಪಡೆದಪೆನೋ (ಶಾಕ್ಷಾ. ೬-೦೬) : ಲಲನೆ. . . ಮೊಲೆದುರಿಯೊಳಗಿಱಿವವನೆದೆಧೈರ್ಯವ ತೊಲಗಿಸುತಿರ್ಪಳೆನೆಂದೆ (ತಂಪಾ. ೬-೮೬). **ಮೊಲೆತುದಿ** : (ಕ). [ಮೊಲೆ$_1$ + ತುದಿ]

ಮೊಲೆದೊಟ್ಟು, ಮೊಲೆತೊಟ್ಟು (ನಾ). = ಮೊಲೆಗಂಡಿ : ಆ ಮಗುವಿನ ಬಾಯೊಳು ಮೊಲೆದೊಟ್ಟು ಕಿತ್ತುಪೋಪಂದದಿ ತುಯ್ದು (ತೀಪಾಸಂ. ೦೫-೬೬); ತೊರೆದ ಸುಗ್ಗೊಲೆಯನ್ನೀಂಟುತೆ ಪೆರ್ಚಾಪುದ ಬೆರಲೊಳು ಮೊಲೆದೊಟ್ಟ ಪಿಡಿದು ಮುರಳ್ಚುಗೆ (ಪೀಚಪ. ೦೬-೬೬). **ಮೊಲೆತೊಟ್ಟು** : ಮಗು ಮೊಲೆಯುಣ್ಣುವಾಗ ಮೊಲೆತೊಟ್ಟಿನ ರಕ್ಷಣೆಗಾಗಿ ಹಾಕುವ ಕಾಪು (Nipple. ೧೦೪೨). [ಮೊಲೆ$_1$ + ತೊಟ್ಟು$_{11}$]

ಮೊಲೆನಾಗ ' ಮಲರೋಗ ' ನೋ.

ಮೊಲೆನಾಗರ ' ಮಲರೋಗ ' ನೋ.

ಮೊಲೆನಾಗರು ' ಮಲರೋಗ ' ನೋ.

ಮೊಲೆನೀರು, ಮಲನೀರು, ಮಲ್ನೀರು (ನಾ). ಮದುವೆಯ ದಿನವಂದು ವಧು ಮತ್ತು ವರ – ಇವರಿಗೆ ಬೇರೆಬೇರೆಯಾಗಿ, ಅವರವರ ತಾಯಿ, ಅಕ್ಕ, ತಂಗಿ ಮೊದಲಾದ ಸುಮಂಗಲಿಯರೊಂದಿಗೆ ಚಪ್ಪರದಲ್ಲಿ ಕೂರಿಸಿ, ಅರಿಸಿನ ಬೆರಸಿದ ನೀರಿನಲ್ಲಿ ಮಾಡಿಸುವ ಮಂಗಳಸ್ನಾನ : ಮೊಲೆನೀರ ಮಿಂದವರೆಲ್ಲರೂ ಹೊಡತಿಪು ರಾಗಬಲ್ಲರೆ (ಅಪಚ. ೨೪೬–೦೦೨೪); ಜಲದಂಡಿಕೆಯ ತುಂಬಿ ಮೊಲೆನೀರ ಮಿಂದವರೆಲ್ಲರು ಅಮಲನ ಗುಣಸೇಮವ ಮಾತಾಡಲೇಕೆ (ಕೀಲಾಣಾಂ. ೦೬-೨); ಮುಗದ ಮಂದುವೆಯೊಳು ಮೊಲೆನೀರಿನೊಳು ಪೆಟ್ಟ ಮಿಗೆ ಹರುಷದಿ ಮಿಂದುಮೇಳು (ಪೀಚಪಂ. ೦೯-೨೦೦); ಸುದತಿ ಮೊಲೆನೀರ ಮಿಂದಳು ಮುಗದ ಮುದುವೆಯುರಿ (ಶಾಕ್ಷಾ. ೫೬-೪). **ಮಲನೀರು** : (ಎಕಟ್ಟ. VIII. ೪). **ಮಲ್ನೀರು** : ಆ ಅಲೆಗುರುಳಿನ ರಾಶಿಯನ್ನು ಆ 'ಮಲ್ನೀರಿ'ನ ದಿನವೇ ನೋಡಿ ಆನಂದವಟ್ಟರಲಿಲ್ಲವೆ? (ಶಾಕಪಂ. ೧೬). [ಮೊಲೆ$_1$ + ನೀರು$_1$ (<ನೀರ್). p ಈ ಶಬ್ದಕ್ಕೆ ಸಂಬಂಧಿಸಿದಂತೆ ತಮಿಳು, ಮಲಯಾಳಂ, ತೆಲುಗು ಭಾಷೆಗಳಲ್ಲಿ ಜ್ಞಾತಿಶಬ್ದಗಳಿಲ್ಲ. ಆದರೆ ತಮಿಳಿನ ' ಮಣ್ಣುನೀರ್ ' (= ಸ್ನಾನಯೋಗ್ಯವಾದ ನೀರು), ' ಮಣ್ಣುಱು ' (= ಸ್ನಾನ ಮಾಡಿಸು) ಎಂಬ ಶಬ್ದಗಳನ್ನು ಇದರೊಂದಿಗೆ ಹೋಲಿಸಬಹುದು]

ಮೊಲೆಬರ್, ಮೊಲೆಬರು (ಕ್ರಿ). ಸ್ತನಗಳು ಮೂಡು : ರಜನಿ ಕೃತಾಂಜಲಿ ಕಳವಿಗೆ ಬಜೆ ಗಂಧಕ ಪೂಮೊಂಜವು ತವೆ ತಿಲತೈಲಜಳ್ವಾನಿತ ಘೃತದಿಂದೆಂಬುಜಾಕ್ಷಿಯರ್ಗೆಱಿಪು ನಸ್ಮಮಂ ಮೊಲೆಬರ್ಪುಂ (ಕೋಕೋಚಾ. ೬-೦೬೦). **ಮೊಲೆಬರು** : ಗಜಪ್ರಸ್ಪಲಿಯನು ಅರಗು, ಬಜೆ ಸಹ ಬೊಸರು ಎಣ್ಣೆಯಲ್ಲಿ ಪೂಸಲು ಮೊಲೆಬರುವುದು (ಪಪ್ರಓ. ೦೦೭).

[ಮೊಲೆ$_1$ + ಬರ್ (<ವರ್)]

ಮೊಲೆಬರು ' ಮೊಲೆಬರ್ ' ನೋ.

ಮೊಲೆಬಾವು (ನಾ). ಮೊಲೆಹಾಲು ಹೆಚ್ಚಾಗಿ, ಮೊಲೆಯು ಬಿರುಸಾಗಿ ಊದಿಕೊಳ್ಳುವ ಒಂದು ಬಗೆಯ ಬಾಣಂತಿರೋಗ : ಮಗುವಿಗೆ ಹಾಲು ಕೊಡುವುದರಿಂದ ಅಥವಾ ಹಿಂಡಿ ತೆಗೆಯುವುದರಿಂದ ಮೊಲೆಬಾವನ್ನು ಶಮನಮಾಡಬಹುದು (ಕೃಷಿ). [ಮೊಲೆ$_1$ + ಬಾವು]

ಮೊಲೆಮರಿ (ನಾ). ತಾಯಿಯ ಹಾಲುಕುಡಿಯುವ ಮರಿ; ಎಳೆಯ ಮರಿ : ಈದಿಪ ಕೇಸರಿಯೂ ಹಲ ಮೊಲೆಮರಿಯೂ ಎಳತರುತಪವಾಂ ಪಳಗಿಸುವೆ! (ಕಪ್ಪಕ. ೦-೨). [ಮೊಲೆ$_1$ + ಮರಿ (< ಮಱಿ)]

ಮೊಲೆಯುಣ್, ಮೊಲೆಯುಣು, ಮೊಲೆಯುಣ್ಣು (ಕ್ರಿ). ಎದೆಹಾಲನ್ನು ಕುಡಿ ; ಸ್ತನ್ಯಪಾನ ಮಾಡು : ಬೆಸಕೈಯ್ದ ಪೆಂತಿರ ಮೊಲೆಗಳಂ ಸೀರೆಯಿಂ ಕಚ್ಚಸಿ ಕೂಸುಗಳಂ ಮೊಲೆಯುಣಲೀಯದೆ ಬೆಸಕೆಯ್ದುಗುಂ (ಪಚಾಂಡಾ. ೦೬೦ – ೮೨) ; ಮೊಲೆಯುಂಬು ಭಾವ ಪಪ್ಪಿ ಅಪ್ಪಿದವರ ತಲೆಯು ಕೊಂಬು ಕೂದಲು ಸುಗಮವೇವ (ಪಪ್ರ. ೬೪೦); ಸಿಂಗದ ಮೊಲೆಯುಂಬ ಪಜ್ಜಯಾನೆ . . . ಮುಂಗುಲಿಯೊಡನಾಡುವೆಳ ವಾಗನ ಕಂಡಂಗಜ ಮ್ಮಿತನಾದ (ಮೀಚಪ್ರ. ೬-೫೬). **ಮೊಲೆಯುಣಿ** : ಬಿಸದದಿಂ ಮೊಲೆಯುಣಿಪ ತಾಯಾವನವ ಕಗ್ಗಣ್ಣಿಂದ ನೋಡುತ (ಶಾಕ್ಷಾ. ೫೭-೪೭). **ಮೊಲೆಯುಣ್ಣು** : ಘನನಿತ್ಯಕ್ಕಪ್ಪನಂ ಮೊಲೆಯುಣ್ಣನೆಂದು . . . ಅಳುವರಾ ಮಾತೆಪಿತರು (ಪಚ್ಚಾ. ೨-೦೦).

[ಮೊಲೆ$_1$ + ಉಣ್]

ಮೊಲೆಯುಣಿಸು (ಕ್ರಿ). ಮಗುವಿಗೆ ಎದೆಹಾಲು ಕುಡಿಸು. – ಸ್ತನ್ಯಪಾನ ಮಾಡಿಸು : ಒಮ್ಮೆ ಕಳುಹಿಂ ಕೊಡು; ಮುರಳುವೆನು ಮೊಲೆಯುಣಿಸಿ ಕಿರುಬಾಲನಾಕೆ (ಕಾಪ್ರ. ೫೫-೪); ಮೊಲೆಯುಣಿಸಿದ ನಂತರ ಈ ಭಾಗವನ್ನು ಜೊಕ್ಕುವಾಗಿ ತೊಳೆದು ಒರಸಲು ಅನುಕೂಲ ಮಾಡಿದುದರಿಂದ ಹೀಗಾಗುವುದು (ಪಾಕಮ. ೭೬). [ಮೊಲೆ$_1$ + ಉಣಿಸು$_1$]

ಮೊಲೆಯುಣು ' ಮೊಲೆಯುಣ್ ' ನೋ.

ಮೊಲೆಯುಣ್ಣು ' ಮೊಲೆಯುಣ್ ' ನೋ.

ಮೊಲೆಯೂಡು (ಕ್ರಿ). = ಮೊಲೆಯುಣಿಸು : ಸುಳಿಸಳಸ್ಯಾವಿಯಂ ಮೊಲೆಯೂಡುವ ದಾದಿ ಸುಬ್ರತೆಯೆಂಬೊಳ್ (ಪಚ್ಚಾ. ೦೫.-೦೨); ಆ ಗೃಹಸ್ಥನ ಹೊಡತಿ ಸೆಜ್ಜಂಗನಾಕ್ಕಿಕೊಂಡು ಮಗಂಗೆ ಮೊಲೆಯೂಡುವುದಂ ಕಂಡು (ಶುಕಪಂ. ೨೫೯-೪); ಈ ಮಂಸೋಹರಕ್ರೀಡನಸೆತ್ತಿಕೊಂಡು ಮೊಲೆಯೂಡಿದ . . . ಈ ಭವತ್ಸತಿ ಯಶೋದೆ ಕುಲಕ್ಕೆ ಯಶೋದೆಯಲ್ಲಳೆ (ಪಗಪ. ೫-೪೪). [ಮೊಲೆ$_1$ + ಊಡು$_1$]

ಮೊಲೆವಾಲ್, ಮೊಲೆಪಾಲು, ಮೊಲೆಹಾಲು (ನಾ). ಮಾನವಸ್ತ್ರೀ ಮತ್ತು ಸಸ್ತನಿಸ್ತ್ರೀಪ್ರಾಣಿಗಳ ಎದೆಯಲ್ಲಿ ಉತ್ಪತ್ತಿಯಾಗುವ ಹಾಲು ; ಎದೆಹಾಲು ; ಸ್ತನ್ಯ : ಮುದಂ ಮುದಮಪಾಳ್ದವಿವೇಕತೆಯಿಂದಮುಲ್ತೆ ತೊಟ್ಟಿನ ಮೊಲೆವಾಲನುಂಡ ಗುಣಮಿಂತಿಪನಾರ್ ಕಿಡಿಪರ್ ನರೇಂದ್ರ ರೊಳ್ (ಪಂಪಾ. ೦೨-೬೩); ಉರಿದ ಮೊಲೆವಾಲ ಪವಣಂ ಕೊಂಡು ಬಿಳುಟ್ಟೊಡಲ ಮವಣನಮು ಪವಣೆಂದು (ಸುಳುಪಪ. ೬-೪) ; ಪಾದವೆ ತೊಟ್ಟಿಲ್ ರೇಣುವೆ ಬಾಯ್ದೆಣ್ಣೆ ನಪರುಚಿಯ ಮೊಲೆವಾಲ್ (ಪಪ್ರ. ೫-೬). **ಮೊಲೆವಾಲು** : ಕಜುಪಸಗರಿಸಿ ಕಾಯ ಮಱುಗಿಸಿ ಮೊಲೆವಾಲ ಕಜ್ಜಿದುಣ ಬೇಡಪೊ (ಪಪ್ರ. ೯೯೯) ; ನಿಮ್ಮವ್ವೆಯಾ ಮೊಲೆವಾಲು ಬಲುಹಿನೆಲಿ ರಾಯನೀ ಕ್ಷಿಯನು (ಕಾಪ್ರಾ. ೦-೬೬); ಹುಡಿದತ್ತು ಮೊಲೆವಾಲಿಂಗೆ ಮೊಗಸುವಡಿದು ವಿಚಿತ್ರವಲ (ಕೊಡಪಾ. ೦-೪-೬೪). **ಮೊಲೆಹಾಲು** : ಅಂಕೋಲೆಯ ಬೇರಂ ಮೊಲೆಹಾಲಲ್ಲಿ ಕೇದು ಹಪ್ಪಲಂ ಕಣ್ಣುಹೂವು ಮಾಣ್ಗುಂ (ಪಪ್ರ. ೦) ; ಸಾರಗದ ಕೊಂಬನ್ನು ಮೊಲೆಹಾಲಿನಲ್ಲಿ ತೇದು ಕದಿ ಸೇಮಿದರೆ ದಾಹಜ್ವರ ಗುಣಮಕ್ಕುಂ (ಪಪ್ರ. ೬೪). [ಮೊಲೆ$_1$ + ವಾಲ್$_1$]

ಮೊಲೆವಾಲು ' ಮೊಲೆವಾಲ್ ' ನೋ.

ಮೊಲೆವಿಡಿ (ನಾ). ಮೊಲೆತೊಟ್ಟು ಒಳಗೆ ಸೇರಿಕೊಳ್ಳುವ ಒಂದು ಬಗೆಯ ಸ್ತನರೋಗ : ಕೊಗ್ಗಿಯಂ ತಂದು . . . ಇಕ್ಕಿ ಹಿಮ್ಮಡಗಲು ಮೊಲೆವಿಡಿ ಮಾಣ್ಗುಂ (ಪಪ್ರ. ೦೪೬). [ಮೊಲೆ$_1$ + ಪಿಡಿ$_3$?]

ಮೊಲೆವೆಱು (ಕ್ರಿ). ಮೊಲೆಯನ್ನು ಹೊಂದಿರು ; ಹೆಣ್ತನವನ್ನು ಪಡೆದಿರು ; ಹೆಣ್ಣಾಗಿರು : ಏನ್ನಂ ಪೆಕ್ಕಳ್ ಮೊಲೆವೆತ್ತಳೆ ವೀರಜನನಿ ಪೆಸರಂ ಪೆಕ್ಕಳ್ (ಗಿಪಾಚು. ೪-೪೫). [ಮೊಲೆ$_1$ + ಪೆಱು$_1$]

ಮೊಲೆಪೊಱು (ಕ್ರಿ). = ಮೊಲೆವೆಱು: ಮೊಲೆಪೊತ್ತ ತೈಲಜನನಿಯ ಕೆಲದೊಳ್ ರಾಜವರೆ ಮಾಸೆಪೊತ್ತನ್ನಂಗಳ್ (ಆಪಕ್ಕ. ೦-೬೬); ತೆಂಗಿನಕಾಯ ತೋರದ ಮೊಲೆಪೊತ್ತ ಲತಾಂಗಿಯ ಬಂದುಗೆವಾಯ ರಂಗಿಪ ಚಿಂದುಟಿ (ಪೀಚಪ್ರ. ೦-೪೬). [ಮೊಲೆ$_1$ + ಪೊಱು]

ಮೊಲೆಹಾಲು ' ಮೊಲೆವಾರ್ ' ನೋ.

ಮೊಲ್ಲಾಗರ ' ಮಲರೋಗ' ನೋ.

ಮೊಲ್ಲೆ, ಮಲ್ಲೆ (ನಾ)· ಮಲ್ಲಿಗೆಯ ಜಾತಿಗೆ ಸೇರಿದ ಒಂದು ಬಗೆಯ ಬಳ್ಳಿ ಮತ್ತು ಅದರ ಹೂವು : "ಮಲ್ಲಿಕಾ, ಕುಂದಃ—ಈ ೨ ಮೊಲ್ಲೆ" (ಪಾಇಶಾ. ೦೦೩) ; ಪಲ್ಲಿಸರಂಗಿಸುವೆಡೆಗಿವೆ ನಲ್ಲಂಬುಗಳಿನಿ ತುಜುಗಿ ಮಲರ್ದಲರ್ದಸೆಮೀ ಮೊಲ್ಲೆಯುಮೊಲಿಸಿದ ನಲ್ಲರ ಲಲ್ಲೆಯುಮಾರಾರ ಮನ ಮುಮುಂ ಸೋಲಿಸದೇ (೧೦೫. ೦೦-೦೦೦) ; ಸರಸಿರುಹಂ ಸುರಗಿ ಮೊಲ್ಲೆ ಪೊಸಂಪಗೆಯೂ ಅರಲಿಂ . . . ಜಿನೇಶ್ವರನ ವಾದಮಂ ಪೂಜಿಸಿದಂ (ಧರ್ಮಾಮೃ. ೫-೩೬) ; ಇವಂತಿಯ ಕಂಪು ಮೊಲ್ಲೆಯೊಂಮರಮಱೆಗೊಂಪು ಮಲ್ಲಿಗೆಯ ಕಂವು (೧೦೪. ೨-೬೦)· **ಮಲ್ಲೆ** : ಪರಿಮಳವಾಂತ ಮಲ್ಲೆಯ ಮಂಗುಳ್ಗಳ್ಗೊಪ್ಪಿದುವು (೪೦೫೦. ೩-೧೩).

[ದೇ.ಶ ತಮಿ. ಮುಲ್ಲೈ ; ಮಲ. ಮುಲ್ಲ ; ತೆಲು. ಮೊಲ್ಲ]

ಮೊಲ್ಲೆಗ (ನಾ)· ದಿಕ್ಕಿಲ್ಲದವನು ; ನಿರ್ಗತಿಕ : ಮಲ್ಲಿಗೆಯ ಹೇಳವಧಿಯಂ ನಿಮ್ಮಲ್ಲಿಗೆಮ್ಮುಂದಿದ್ದ ನಲ್ಲಾ ಮೊಲ್ಲೆಯೇ ಹೇಳವಕೆ ಮೊಲ್ಲೆಗನಾದನೇಗುವನು (೨೫೩. ೧೩-೪೦)· [ಮೊಲ್ಲೆ + -ಗ]

ಮೊಲ್ಲೆಯ (ನಾ). (?) : "ಮೊಲ್ಲೆಯುಂ ನಿಮ್ಮೂರವು" (೪೫೮. ೦೫೯)·

[?]

ಮೊಸರ್, ಮೊಸರು, ಮೋರ್ (ನಾ)· ನಸುಬಿಸಿಯಾದ ಹಾಲಿಗೆ ಹಪ್ಪುಹಾಕಿದ ನಂತರ ಉಂಟಾಗುವ ಗಟ್ಟಿಗೊಂಡ ಪದಾರ್ಥ ; ದಧಿ : ನೆಲ್ಲುಂ ಮೊಸರುಂಗುಡದಂತಲ್ಲದೆ ತಲ್ಲುಹಪ್ಪಲಸದಿಡು ಮೃದು ಪದಮಂ (೪೦೦೩. ೨-೪) ; ಪಸರ್ ನಿನಗೆ ಕೇಳ್ ಮೊಸರ್ (೦೦೫. ೬-೨೦)· ಹೆಪ್ಪಟ್ಟಿರ್ಪ ಪಾಲ್ ಮೊಸಾಗಿಪ್ಪಂತಿರೆ ನಿರ್ಗಳಾಗಲರಿಗುಮೆ (೪೫೫೫೫. ೦೦-೦೪೭)· **ಮೊಸರು** : ಚಂದದೋಗರದೊಳಗೆ ಚೆಂದ್ರಿಕೆಯು ಹೊಸ ಹಳುತಿನಿಂದದೆಮ್ಮೆಯ ಮೊಸರು. . . ಎಲ್ಲವಸರಿಸಿ ಕಟ್ಟಿಕೊಟ್ಟರು (೬೪೫೫. ೨-೪೬) ; ಮೊಸರ ಮಾಜಲು ಪೋದರೆ ನಿಸ್ಸಯ ಕಂದ ಪೆರೆನಿಂದಲೆ ಕೇಳದ (೪೦೦೦. ೦-೧೦-೨) ; ಯಾವಾಗಲೂ ಮಜ್ಜಿಗೆ ಆಥವಾ ಮೊಸರು ಸೇವಿಸಲು ಮರೆಯದಿರಿ (೦೪೫೫. ೬೯) ; ಒಲ್ಲದ ಗುಡನಿಗೆ ಮೊಸರಲ್ಲಿ ಕಲ್ಲು (೧೦೮)· **ಮೋರ್** : ಸಾರತರೋಕ್ಕಿಗೆ ನೆಲ್ಲುಂ ಮೋರುಂಗೋದಂತೆ ಸೇರಿ ಕಲ್ಪಾರ್ಪರವರ್ಗೋರೆ ನಿಬಂಧನಟೀಕಾಕಾರಂಗಲ್ಲದೆ ಪೆಱಂಗೆ ಕೋ[ಕ್ಕೊ]ದವುದೇ (೧೦೬೪೫. ೦೦-೦೪೨)· [ದೇ.ಶ ತಮಿ. ಮುಚ್ಚರ್, ಮೋರ್; ಮಲ. ತೊದ. ಮೋರ್ ; ತುಳು. ಮೊಸರು ; ಕೊಡ. ಮೋರೀ ; ಕೋತ. ಮೊಚ್ರ್]

ಮೊಸರಕ್ಕೆ (ನಾ)· (ಶುಭಕಾರ್ಯದಲ್ಲಿ ಬಳಸುವ ಮಂಗಳದ್ರವ್ಯಗಳ ಲ್ಲೊಂದಾದ) ಮೊಸರಿನ ಲೇವಣ : ರನ್ನದ ಕವ್ಪಡಿವೆರಸು ಸರ್ವಧಾನ್ಯದ ನಡುವಿರೆ ಮೊಸರಕ್ಕೆವೆರಸಿದಳಧರ್ಗಳಸಂ (೦೦೫೫. ೪-೬೬) : ಸಿರಿಗನ್ನಡಿ ಮೊಸರಕ್ಕೆವೆರಸಿದಳದರ್ಗಳಸಂಗಳ ಲೀರೆವೆರಸಿ ದಂಪತಿಯಂ ಪೋ ಬರವೇಬೆಂಬ ತೆಱದಿಂ ಸೊಗದಿಂಸಿದುದು (೪೦೦೦೦. ೦೦-೬೬ ೫೧೪) ; ಸರ್ವಧಾನ್ಯಂ ಮೊಸರಕ್ಕೆ ಕಜ್ಜಂಕೆ . . . ಕಣ್ಗೊಳಿಸುತಿರ್ದುವೆ (೪೬೫೫. ೪-೬೪).

[ಮೊಸರ್ + ಅಕ್ಕೆ]

ಮೊಸರನ್ನ (ನಾ)· ೧. ಮೊಸರಿನಲ್ಲಿ ಕಲಸಿದ ಅನ್ನ : ಸುಸಂದ ಬರೀ ಮೊಸರನ್ನ ತಿಂದು ಹೊರಗೋಡಿ ಬಂದಿದ್ದಳು (೦೦೫೫೫. ೬) : ಕತ್ತೆ ಮೊಸರನ್ನದ ರುಚಿ ಬಲ್ಲುದೆ ? (೧೦೮)· ೨. ಮೊಸರಿಗೆ ಉಪ್ಪು, ಹಸಿ ಮೆಣಸು, ಒಗ್ಗರಣೆ ಮುಂತಾದುವನ್ನು ಹಾಕಿ ಕಲಸಿದ ಅನ್ನ : ಪ್ರಯಾಣಕಾಲದಲ್ಲಿ ತಿನ್ನಲು ಮೊಸರನ್ನ ಮತ್ತು ಪುಳಿಯೋಗರೆಯನ್ನು ಸೂಡಿಕೊಂಡು ಬಂದಿದ್ದೇನೆ (೦೦೫)·

[ಮೊಸರು (< ಮೊಸರ್) + ಅನ್ನ]

ಮೊಸರವಲಕ್ಕಿ (ನಾ)· ಹಸಿಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ಉಪ್ಪು ಮತ್ತು ಒಗ್ಗರಣೆಯೊಂದಿಗೆ ಮೊಸರಿನಲ್ಲಿ ಕಲಸಿದ ಅವಲಕ್ಕಿ : ಅಡಕೆಹಾಳೆಯ ಪುಟ್ಟಣಗಳಿಂದ ಮೊಸರವಲಕ್ಕಿ . . . ಮೊದಲಾದ ತಿಂಡಿಗಳನ್ನು ರಾಮಚಂದ್ರನಿಗೆ ಕೊಟ್ಟರು (೪೪೫. ೭)·

[ಮೊಸರು (< ಮೊಸರ್) + ಅವಲಕ್ಕಿ]

ಮೊಸರು ' ಮೊಸರ್ ' ನೋ.

ಮೊಸರುತನ(ನಾ)· ಹಾಲು ಹೆಪ್ಪಾಗುವಿಕೆ.— ಗಟ್ಟಿಯಾಗುವಿಕೆ : ಹುಳಿ ಹುರಿಯು ಚೂರ್ಣವನು ನೀರಿಲ್ಲದೆ ಕಡದ ಮಜ್ಜಿಗೆಯಲ್ಲಿ . . . ಇಕ್ಕಿ . . . ನೆನೆವ ಮಳಲಿನಲ್ಲಿ ಹೂಳುವುದು . . . ಹೊತ್ತಿನಿಂದ ಮೊಸರುತನವನೆಯ್ದುವುದು (೦೦೫೫೫. ೭)· [ಮೊಸರು (<ಮೊಸರ್) + — ತನ]

ಮೊಸರುಭೋಜನ (ನಾ)· = ಮೊಸರನ್ನ ೧ : ರಾಮೇಲಿಂಗ × × ಉದಯದ ಕಾಲದಲ್ಲಿ ಮೊಸರುಭೋಜನವ ನೈವೇದ್ಯ . . . ಕೊಟ್ಟ ಮಾನ್ಯ (೨೪. XI, ಹೊಳ್ಕೆ. ೭೩-೦೦; 1618)·

[ಮೊಸರು (< ಮೊಸರ್) + ಭೋಜನ]

ಮೊಸರುವಡೆ, ಮೊಸರೊಡೆ (ನಾ). ಮೊಸರಿನಲ್ಲಿ ನೆನೆಸಿದ ವಡೆ : ತೈರುವಡೆ : ಮಧ್ಯಾಹ್ನದ ತಿಂಡಿಗೆ ಮೊಸರುವಡೆ, ಜಾಮೂನು ಮಾಡಿದ್ದೆ (೪೦೦)· **ಮೊಸರೊಡೆ** : ತಿಳಿದುಪ್ಪಿನಿಂದ ಬೀದೊಡೆಮು . . . ಮೊಸರಿನೊಳಗಿಕ್ಕೆ ಮೊಸರೊಡೆಯೆಂಬ ಪೆಸರಾಮ್ತು (೫೦೫೫. ೦-೭೦); ಶಿವು ಪೇಟೆಯಲ್ಲಿ ಮೊಸರೊಡೆ ತಿಂದು ಹೊಟ್ಟೆತುಂಬ ತಿಂದ (೪೫೫೦. ೬೩)·

[ಮೊಸರು (< ಮೊಸರ್) + ವಡೆ]

ಮೊಸರೊಡೆ ' ಮೊಸರುವಡೆ ' ನೋ.

ಮೊಸರೋಗರ (ನಾ). =ಮೊಸರನ್ನ ೧ : ಪುವನೈ . . . ಮೊಸರೋಗರವ ಸಾಲ್ವುದೆಮ್ಮ ದೇವಂಗೆ (೨೫೫. ೭-೦೩೪); ಒಬಳ ಆಕೆ ಮೊಸರೋಗರ (೫೨೨. IX-i. ೭೭-೯; 1278)· [ಮೊಸರ್ + ಓಗರ]

ಮೊಸರ್ಗೂಟ್ (ನಾ)· = ಮೊಸರನ್ನ ೧ : ಮೊಸರ್ಗೂಟಂ ವಿಧಿಯಿಂದೆ ಸೂಸೆ ಧರದಿಂ ಬೀಬ್ಯಾಲಿಕಲ್ಲಂ ನಿವಾರಿಸುಗುಂ (೪೫೫೪.೭೫೫. ೬-೦೦).

[ಮೊಸರ್ + ಕೂಟ್]

ಮೊಸರ್ಪೊಟ್ಟು (ನಾ). ಮೊಸರಿನ ಪನಿ : ದೂರ್ವೆಯಿಂದೆಮೆ ಮೊಸರ್ಪೊಟ್ಟಿನಿಟ್ಟು (೫೫೪೫. ೬-೦೯). [ಮೊಸರ್ + ಪೊಟ್ಟು]

ಮೊಸಳೆ ' ಮೊವಳೆ ' ನೋ.

ಮೊಸಳೆಮಡು ' ಮೊವಳೆಮಡು ' ನೋ.

ಮೊಸಳೆಯರಸ (ನಾ). ಒಬ್ಬಾತನ ಹೆಸರು : ಜಗಳ[ವು]ಗದ ಮೊಸಳೆಯರಸರ ಪ × × × (೫೨೨. IX-i, ೩೦-೬ ; ೯೦೦). [ಮೊಸಳೆ+ಅರಸ]

ಮೊಹತರ್ಪ (ನಾ). ಅಂಗಡಿ, ಎಣ್ಣೆಗಿರಣಿ, ಮಗ್ಗ, ಮನೆ ಮುಂತಾದುವುಗಳ ಮೇಲೆ ಹಾಕುವ ಒಂದು ಬಗೆಯ ತೆರಿಗೆ : (೬೫೧. II. ೧೪೬) ; (೪೨೧. IV. ೭೭೯)·

[←ಹಾರ. ಮುಹತರಿಫಾ ; ಮರಾ. ಮೋಹತರಫಾ, ಮೋಹತರ್ಫಾ]

ಮೊಹಬತ್ ' ಮೊಹಬತ್ತು ' ನೋ.

ಮೊಹಬತ್ತು· ಮೊಹಬತ್ (ನಾ)· ಪ್ರೀತಿ ; ಅಕ್ಕರೆ : ಮೊಹಬತ್ತಿನಿಂದ ಬರದು ಇದ್ದ ಕಾಗದ ಬಂದು ತಲಪಿ ಬಂದ ವಿವರ ಮಿಖಿಯಿಂದಾ ತಿಳಿದು ಬಂದು (೦೨೯೦೦೨. ೦೧೪)· **ಮೊಹಬತ್** : ತಾವು ನನ್ನನ್ನು ಒಂದು ವರ್ಷಾ ಅಂತ ಮೊಹಬತ್‌ನಿಂದ ಕಾಪಾಡಿದ್ರಿ (೪೨೯. ೨೪೬)·

[←ಅರ. ಹಿಂ. ಮುಹಬ್ಬತ್ ; ಮರಾ. ಮೋಹಬತ್]

ಮೊಹರ ' ಮೊಹರು ' ನೋ.

ಮೊಹರಂ, ಮುಹರ್ರಮ್ (ನಾ)· ಮಹಮ್ಮದೀಯವರ್ಷದ ಮೊದಲನೆಯ ತಿಂಗಳು ಮತ್ತು ಹಸನ್, ಹುಸೇನ್ ಎಂಬಿಬ್ಬರು ನಾಯಕರ ಸಾವಿನ ಪವಿತ್ರಸಂದರ್ಭದ ನೆನಪಿನಲ್ಲಿ. ಆ

ತಿಂಗಳಿನಲ್ಲಿ ಆಚರಿಸುವ ಹಬ್ಬ : ಅಲಾಬಿಹಬ್ಬ ; ಬಾಬಯ್ಯನ ಹಬ್ಬ : ಒಂದು ಮಸೀದಿ ಇದೆ. ಹಾಗೇಂದ ಮೇಲೆ 'ಮೊಹರಂ' ಇರಬೇಡವೆ ? (ಜಾಮಜಾ. ೪೦). ಮುಹರ್ರಮ್ : 'ಮುಹರ್ರಮ್' ಎಂಬುದು ಮುಸ್ಲಿಂ ವರ್ಷದ ಮೊದಲನೇ ತಿಂಗಳಿನ ಹೆಸರು. ಅರಬ್ಬೀ ಭಾಷೆಯಲ್ಲಿ 'ಮುಹರ್ರಮ್' ಎಂದರೆ 'ಪವಿತ್ರ' ಎಂದು ಅರ್ಥವಾಗುತ್ತದೆ (ಜಾಹುಜಾ. ೯೨). [←ಅರ. ಹಿಂ. ಮುಹರ್ರಮ್; ಮರಾ. ಮೋಹರಮ್]

ಮೊಹರಿ₁ ' ಮಸೌರಿ ' ನೋ.

ಮೊಹರಿ₂ ' ಮೊಹರು ' ನೋ.

ಮೊಹರಿ₃ ' ಮೋರಿ₂ ' ನೋ.

ಮೊಹರು, ಮೊಪರು, ಮೊಹರಿ₂, ಮೊಪರೆ, ಮೋಹರ₂, ಮೋಹರಿ (ನಾ). ೧. ಒಂದು ಬಗೆಯ ಚಿನ್ನದ ನಾಣ್ಯ : ಪಾಂಡವರಿಗೆ . . . ದಿವ್ಯಭೂಷಣಗಳನ್ನೂ ಒಂದೊಂದು ಲಕ್ಷ ಮೊಹರುಗಳನ್ನೂ ಒಬ್ಬೊಬ್ಬರಿಗೂ ಪ್ರೀತಿಪೂರ್ವಕವಾಗಿ ಕೊಟ್ಟನು (ಕ್ಷಣಾ. ೩೫೩); ಇತರ ಬಂಗಾರದ ನಾಣ್ಯಗಳು ವಿಶೇಷವಾಗಿದ್ದವು. ಯಾವವೆಂದರೆ :– ೧ ಗದುರು . . . ೧ ಮೊಹರು. ೧ ಪುತಲಿ (ಕ್ಷಕ್ಷಾ. ೩೦೯). ೨. ದಾಖಲೆ, ಪತ್ರ ಮುಂತಾದುವುಗಳ ಮೇಲೆ ಮುದ್ರಿಸಲು ಬಳಸುವ ಯಾವ ದಾದರೂ ಲಾಂಛನವಿರುವ ಸಾಧನ , ಉಂಗುರ ಮುಂತಾದುವು ಮತ್ತು ಅವುಗಳಿಂದ ಒತ್ತುವ ಮುದ್ರೆ; ಉಂಡಿಗೆ ; ಶಿಕ್ಕಾ : ದಸಕತು ಮೊಹರಾ ಶ್ರೀಚಾಮರಾಜವಡೇರ ಕನುಜ ಕೃಷ್ಣರಾಜವಡೇರು ಯಂಬುದಾಗಿ (ಅಶ. VI. ೩೩೬. ೨೦-೩೭; ೩೩೫); ಬರೆದು ಏಸ್ತರ ಪತ್ರಮು: . . . ದುರುಳಂ ಮಡಿಪಿಕ್ಕಿ ಮುದ್ರೆಗೆಯ್ದಂ ಮೊಪನಂ (ಕಂಪ್ರಕ್ಕು. ೦೩-೦೦೨); ಇವರ ತಾವ್ರಪಟ್ಟಿಕೆಗಳ ಮೊಹರುಗಳ ಮೇಲೆ ಸಿಂಹಲಾಂಛನ ವಿರುತ್ತದೆ (ಶಾಶಾಲಿ. ೬). **ಮೊಹರ** : ೧. ರಾಧೆಯು ಚಿನ್ನದ ಮೊಹರ ವನ್ನು ಘೋರನ ಕೈಗೆ ಕೊಡುವುದಕ್ಕೆ ಹೋದಳು (ಪಾಂಶ್ರೀ. ೩); ರಾಜ ಒಡಯನು ಒಂದು ಮೊಹರವನ್ನು ತೆಗೆದು ಅಂಬಗನ ಕೈಗಿಟ್ಟು (ಶ್ರೀಶಾಯ. ೧೩). ೨. ಕರಾರುನಾಮಾ ದಸ್ತತು ಮೊಹರಿಂದ ಬರದರಲ್ಲಿ (ಶಾಕೋಪ್ರ. ೬); ರಾಕ್ಷಸನ ಮುದ್ರೆಯುಂಗುರದಲ್ಲಿ ಮೊಪನಮಂ ಮಾಡಿಸಿ ಕಳಿಸುವೆನು (ಶಗಪ್ರ. II. ೬). **ಮೊಹರಿ₂** : ೧. ತಿಂಗಳ ಬಡ್ತಿ ಎಂಬುದಾಗಿ ಹದಿನೈದುರೂಪಾಯಿ ಮೊಹರಿಯನ್ನು ಕೊಟ್ಟು (ಶಕಾಮು. IV. ೪); ವಾಗೀಶರವರು ಕೊಡುವ ಮೊಹರೀ ಪಿಚ್ಚೆಯಿಲ್ಲದೇ ಮಾರುತ್ತದೆ (ತಿರಾಂ. ೦೬೨). **ಮೊಹರೆ** : ೧. ಸಹಸ್ರಚಿನ್ನದ ಮೊಪರೆ ಗಳನ್ನು ಕೊಡುವುದಾಗಿ ಡಂಗೂರ ಹೊಯಿದನು (ಶ್ರೀಶಾಯ. ೦೩೨). **ಮೋಹರ₂** : ೧. ಹನ್ನೆರಡುಲಕ್ಷ ಮೋಹರವನ್ನು ಧನ್ವಂಭಟ್ಟವಿಸೇನಾ ಧಾಯಕರಿಗೆ ಕೊಡುವಂತೆ . . . ಹುಂಡೀಕಾಗದವಂ ಬರೆಸಿ (ಕುಬ್ರಾಮು. ೨೯೦). ೨. ಸಿದ್ಧಾರ್ಥನು ಆ ಕಾಗದವಲ್ಲಿ ಒತ್ತಿರುವ ಮೋಹರದ ಪ್ರಕಾರ ಸುವರ್ಣದಿಂ ಮುದ್ರೆಯಂ ಮಾಡಿಸಿ (ಕುಬ್ರಾಮು. ೨೯೭). **ಮೋಹರಿ₂** : ೧. ಬೊಕ್ಕಸಗಳು ಹಣಗಳು ಪವಹಗಳು ಮೋಹರಿಗಳು ನವರತ್ನಗಳು (ಶಿಪ್ರ. ೦೦೬-೪).

ಮೊಹರುಮಾಡು, ಮೋಹರುಮಾಡು ⇔ ಲಕೋಟೆ. ಭರಣಿ. ಬಾಗಿಲು ಮುಂತಾದುವನ್ನು ತೆರೆಯ ನೋಡದಂತೆ ಅರಗು ಅಂಟಿಸಿ ಅದರ ಮೇಲೆ ಮುದ್ರಿಕೆಯನ್ನು ಒತ್ತು : ಬರೆದಂಥ ಕಾಗದವ ಮೊಪರುಮಾಡ್ಯಾರೆ (ಶಾಕಥ. ೦೩೬) : ಬರೆದು ಮೊಪರುಮಾಡಿ ಕುಮುದಿನಿಯ ಕೈಲಿ ಕೊಟ್ಟುಸೋಗಃತ್ಕೆನೆ (ಶಂಕಾಮು. ೦೨೨); ಈ ಮುಂಮೂಷಮ್ ಮೋಹರುಮಾಡು (ಕುಬ್ರಾಮು. ೩೦೭).

[← ಪಾರ. ಮುಹರ್; ಹಿಂ. ಮೋಹರ್ ; ಮರಾ. ಮೋಹರ್. ಮೋಹೋರ್]

ಮೊಹರೆ ' ಮೊಹರು ' ನೋ.

ಮೊಹರೆಯಕೊಳ (ನಾ). ಒಂದು ಕೊಳದ ಹೆಸರು : ಉತ್ತರಸ್ಯಾಂ ಶಿರಜಪನ್ನ ಅನ್ತೆ ಬನ್ದು ಮೊಪರೆಯಕೊಳ (ಅಶ. XVI. ೩೪೫. ೦೪೦-೭೦ ; ೪೦೦). [ಮೊಹರೆ₂ + ಕೊಳ್ಳ]

ಮೊಹರ್ಚು ' ಮೋರ್ಚೆ ' ನೋ.

ಮೊಹರ್ಚೆ ' ಮೋರ್ಚೆ ' ನೋ.

ಮೊಹಲ್ಲ ' ಮೊಹಲ್ಲಾ ' ನೋ.

ಮೊಹಲ್ಲಾ, ಮೊಹಲ್ಲ, ಮೊಹಲ್ಲೆ (ನಾ). ಊರಿನ ಒಂದು ಭಾಗ : ಬಡಾವಣೆ ; ಹರಯ : ಪಟ್ಟಣವನ್ನು ಮೊಪಲ್ಲಾಗಳಾಗಿ ಭಾಗಪಡಿ . . . ಅಧಿಕಾರಿಯನ್ನು ನೇಮಿಸಿದ್ದರು (ಇಶಾ೦ಸಂ. ೪೦); ನರಸಿಂಹರಾಯ ಶೋಂಠಿಯನೂ ಕೂಡ ದಾಕ್ಷಿಣೇಯರ ಮೊಹಲ್ಲಾದಲ್ಲಿ ಒಂದು ಅಪಾಡವನ್ನು ತೆರೆದನು (ಭೂಂಚಿ. ೧೬೦). **ಮೊಹಲ್ಲ** : ಒಂದೊಂದು ಜಾತಿಗೂ ಪ್ರತ್ಯೇಕ ಅಗ್ರಹಾರಗಳೂ ಮೊಹಲ್ಲಗಳೂ ಏರ್ಪಟ್ಟಿರುವುದನ್ನು ಇಂದಿಗೂ ನೋಡಬಹುದು (ಕೃಚ. ೬೨). **ಮೊಹಲ್ಲೆ** : ನಮ್ಮ ಮೊಹಲ್ಲೆಯಲ್ಲಿ ಒಂದು ಕಡೆ ಇಪತ್ತು ಆಟಪಾಡುತ್ತಾರೆ ಎಂತ ಕೇಳಿದೆ (ಕಮಳ. ೦೬೦).

[←ಅರ. ಮಪರ್ಲಾ: ಹಿಂ. ಮುಹಲ್ಲಾ: ಮರಾ. ಮೊಹಲ್ಲಾ]

ಮೊಹಲ್ಲೆ ' ಮೊಹಲ್ಲಾ ' ನೋ.

ಮೊಹಸಲೆ, ಮೋಹಸಲೆ (ನಾ). ಒಬ್ಬ ವ್ಯಕ್ತಿಯು ತಪ್ಪಿಸಿಕೊಂಡು ಹೋಗದಂತೆ ಹಾಕುವ ನಿರ್ಬಂಧ ಅಥವಾ ಒಬ್ಬ ವ್ಯಕ್ತಿಯು ಕೊಡ ಬೇಕಾದ ಹಣದ ವಸೂಲಿಗಾಗಿ ಅವನ ಮೇಲೆ ವಿಧಿಸಲಾಗುವ ನಿರ್ಬಂಧ : (ಪ). **ಮೋಹಸಲೆ** : ಸಾಗುವಳಿ ಸಮ ಮಾಡತಕ್ಕದ್ದಕ್ಕೆ ಕೇಮಾರ ಗೌಡ ಶ್ಯಾನಭೋಗರಿಗೆ · ಸಹ ಮೋಹಸಲೆ ಮಾಡಿ (ಪಾಹಚ. II. ೬೨). ' ಮಹಸೂಲು ' ಪರಾ.

[← ಅರ. ಮುಹಸ್ಸಿಲ್ = ಕಂದಾಯ ವಸೂಲುಮಾಡುವವನು ; ಹಿಂ. ಮುಹುಲ್ = ಕಂದಾಯ ವಸೂಲುಮಾಡುವವನು]

ಮೊಹಿಮ್ಮು, ಮೋಹಿಂ, ಮೋಹಿಮು, ಮೋಹೀಮ್ (ನಾ). ದಾಳಿ : ವಸತ್ತಿಗೆ ; ಆಕ್ರಮಣ : ತರುವಾಯೂ ಯಿವ ಮೊಹಿಮ್ಮು ಮೂರುವರುಷ ಪಟ್ಟದ ಖಜಾನೆಹಣವೆಲ್ಲಾ ವೆಚ್ಚವಾಗಿ (ಕ್ಷರಚ. ೩೩). **ಮೋಹಿಂ** : ಪಸುವಂತರಾವ್‌ರಣಸರೆ ಎಂಬ ಒಬ್ಬ ಸವಾರನು . . . ಅನೇಕ ಮೋಹಿಂಗಳ ಸಂಗಡ ಹೋಗಿ ಒಂದೊಂದರಲ್ಲಿಯೂ ಬಿಡಾವಾಡಿ ಲಡಾಯಿ ಮಾಡಿ . . . ತುಕಡಿದಾರ ಪದವಿಗೆ ಬಂದಿದ್ದನು (ಕುಚರಿ. ೦೩); ಈ ಜನರು ಈ ಬಗೆಯಾದ ಮೋಹಿಂ ಹೊರಡುವುದಕ್ಕೆ ಕೆಲವು ದಿವಸ ಮುಂಚೆ ಇನ್ನೊಂದು ಕೆಲಸವನ್ನು ಮಾಡುತ್ತಿದ್ದರು (ಶಾಹುಚ. ೧೩). **ಮೋಹಿಮ್ಮು** : ದುಂಡುಮುಂದಿ ಪಾದುಷಹನ ಸೈನ್ಯವೂ ಕರ್ನಾಟಕರಾಜ್ಯದ ಮೇಲೆ ಮೋಹಿಮ್ಮು ಹೊರಡಲಿರುವ ಸಮಾಚಾರವನ್ನು . . . ಬರೆಸಿ ಕಳುಹಿಸಿದನು (ಐಕ್ಷ. ೬). **ಮೋಹೀಮ್** : ಜ್ಯೇಷ್ಠಮಾಸವಲ್ಲಿ ಮೋಹೀಮ್ ಹೊರಡುವ ವೆಳೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಗಣನೆಮಾಡಿದ ಒಟ್ಟು ಫೌಜಿನ ಜನಗಳು ೨,೨೬,೦೦೦ ಕ್ಕೆ ವಿಪರ (ಕುಹಾಮಂ. I. ೩೩೬).

[← ಅರ. ಹಿಂ. ಮುಹಿಮ್; ಮರಾ. ಮೋಹಿಮ್. ಮೋಹೀಮ್]

ಮೊಳ ' ಮೊಬ ' ನೋ.

ಮೊಳಕಯ್ ' ಮೊಬಿಕೆಯ್ ' ನೋ.

ಮೊಳಕಾಲ್ ' ಮೊಬಿಕಾಲ್ ' ನೋ.

ಮೊಳಕಾಲು ' ಮೊಬಿಕಾಲ್ ' ನೋ.

ಮೊಳಕೆ (ನಾ). ೧. ಬೀಜದಿಂದ ಹೊರಬರುವ ಗಿಡದ ಮೊದಲನೆಯ ಸುಳಿ ; ಅಂಕುರ : ಕುಡಿ : "ಮೊಳಕೆಯೆನಲ್ಕುಂಕುರ" (ಶಾಡಿ. ೩೭) ; ಪಾಂಚಾಲಿಕನ ಭೀತಿಯ · ಮೊಳಕೆಯುರಿಯುದು (ಕುಬ್ರಾ.ಕ. ೦೬-೯) ;

ಮೊಳಕೆ ಮೂಡದ ಬೀಜ. ಜಾಲ ಮಿಸರಿದ ತೇಜ (ಶಪಣು. ೦೬೨–೦೦). ೨. (ಆಲಂ) ಪ್ರಾರಂಭ : ಕ್ರಾಂತಿಯ ಮೊಳಕೆಯು ತುಳಿಯಬೇಕು (ಶಬಸ. ೦೭–೯).

ಮೊಳಕೆಕಟ್ಟಿದ ಕಾಳು = ಪೆಸರು ಮುಂತಾದ ಕಾಳುಗಳನ್ನು ನೆನೆಸಿ, ನಂತರ ಬಟ್ಟೆಯಲ್ಲಿ ಕಟ್ಟಿ ಮೊಳಕೆ ಬರಿಸಿರುವ ಕಾಳು : ಮೊಳಕೆಕಟ್ಟಿದ ಕಾಳಿನಲ್ಲಿ ಮಾಡಿದ ಪದಾರ್ಥಗಳು ದೇಹಕ್ಕೆ ಪುಷ್ಟಿಕರ (ಕೂಅ).

[ಮೊಳ್ಕೆ + – ಕೆ-/ ತುಳು. ಮೊಳಕೆ ; ತೆಲು. ಮೊಲಕ. ಮೊಲ್ಕ. ಮೊಕ್ಕ]

ಮೊಳಕೆಗಾಣು (ಕ್ರಿ)· ಅಂಕುರಿಸು ; ಕುಡಿಯೊಡೆ : ಅಜ್ಜ ಬಿತ್ತಿದ ಬೀಜ ಮೊಳಕೆಗಂಡಿವೆ ಈಗ (ಶಂಬು). ೨೨–೦೩). [ಮೊಳಕೆ + ಕಾಣು (< ಕಾಣ್)]

ಮೊಳಕ್ಕೆ ' ಮೊಟಕೆಯ್ ' ನೋ.

ಮೊಳಗಾಡು (ಕ್ರಿ)· ಧ್ವನಿಯು ಹೊಮ್ಮು : ದೇವುಬಂತಂ ಮುರಿ ಬಹನೆಂಬ ಗೆಲುಹಿಂದ ದೇವದೊತರೆ ಬಾರಿಸುವರೊ ಮಂಗಲವಾದ್ಯವೆನಲು ಮುಂಬಕ್ಕಿಗಳ ಪೀಳವಂ ಮೊಳಗಾಡ (ಗೂಅಕ್ಕಾ . ೦-೯).

[ಮೊಳಗು$_2$ (< ಮೊಜಗು$_2$) + ಆಡು$_1$]

ಮೊಳಗಿಸು ' ಮೊಟಿಗಿಸು' ನೋ.

ಮೊಳಗು$_1$ ' ಮೊಟಗು$_1$' ನೋ.

ಮೊಳಗು$_2$ ' ಮೊಟಿಗು$_2$' ನೋ.

ಮೊಳಗು$_3$ ' ಮೊಟಗು$_3$' ನೋ.

ಮೊಳವು (ನಾ). ಒಂದು ಬಗೆಯ ಬೆಲೆಬಾಳುವ ಪರಳು (?) : ಪಾಂಡಡಂ ಹೊಂಗೆ ಹಾಗ ಮೊಳವಿನ ಕಲ್ಲಿಗೆ ವೀಸವೊಂದು ಉಟ್ಟಿನ ಪೆಡಗಿಗೆ ವೊಂದುವಪ್ಪು (ಶ್ರಾಪು. XV. ೨೦೦-೪೬ ; ೧೧೪೬). [?]

ಮೊಳಸಂದು, ಮೊಣಸಂದು (ನಾ)· ಮೊಳ್ಕೈ : ಅಗಲವಾದ ಬೀಚು ಹಣೆಯ ಮನುಷ್ಯನೊಬ್ಬ ಮಂಡಿಯ ಮೇಲೆ ಮೊಳಸಂದುರಿಕ್ಕೊಂಡು ಕುಳಿತಿದ್ದನು (ಕ್ರಪು. ೨೩೦). **ಮೊಣಸಂದು** : ಎಡಗೈ ಮೇಲೆ ಬಲದೋಳ ಮೊಣಸಂದನ್ನೂರಿಕೊಂಡು, ಬಲಗೈ ಮೇಲೆ ಕೆನ್ನೆಯೂರಗಿಸಿ ಕೊಂಡು ಮುಂದುಕಿ ಅವನೆವನಿರಿಗೆ ಏಂತುಕೊಂಡಿದ್ದನು (ಕ್ರಪು. ೨೩೭)

[ಮೊಳ (< ಮೊಟ) + ಸಂದು]

ಮೊಳಸು$_1$ (ನಾ). ೧. ಮೊಳಕೆಯೊಡೆಯುವಿಕೆ; ಅಂಕುರಿಸುವಿಕೆ : (೨). ೨. ಗಂಟಲೆನಲ್ಲಿ ಏಳುವ, ಮುಳ್ಳಿನಂತೆ 'ಜೂಪಾಗಿರುವ' ಗುಳ್ಳೆ : ಅಂತಕಾಮ್ಯಪಥ್ಯವು ಆರಗಲಾಜದ ಮೃತ್ಯುದೆಳುಗೆ ಮೊಳಸುಗಳು ಮೊಳೆಯೆ . . . ಅಡಗುಮೋನದಿ ಪರುಳುವಡಗಳು ಉಂದು ಪರಸಿದ ವಂದು ರಾಘವನ (ಶ್ರಾಣಾ. ೨೨ ೯೯). [ಮೊಳ್$_1$ + – ಸು$_3$]

ಮೊಳಸು$_2$ (ನಾ). ೧. ಒಂದು ಬಗೆಯ ವಾದ್ಯ (?) : ಪುಟವದ ತಿವಳಿಯ ಜುಂಕದ ಮೊಳಸಿನ ಜೀಕರದ ಸಿಪಿಜಿ ಸಿಟ್ಟಿನ ಲಯದಿಂದ ಬಲದ ಕಾಣಿವರ್ ಕೆಲಬರ್ (ಶಪಚ. ೩-೩೦). ೨. ಎಲ್ಲ ಬಿಮುದ್ದದ ಒಂದು ಚಲನೆ (?) : ಮೇಲ್ಮುಳಿ ಮೊಳಸು [ಪಾಣಾ. ಗು. ಹು]ಗಳ ಮಂಡಿಗಳ . . . ಜೊಜ್ಜೆಗಳೆಯೊಳವರಿರ್ವರಿಗೆ ಸಮಜೋಳಿಗಳದಾರೆಂದ (ಕ್ಷಾಣಾ. ೨೦-೩). [?]

ಮೊಳಿಯನೂರ್ (ನಾ). ಒಂದು ಸ್ಥಳದ ಹೆಸರು : ಮೊಳಿಯನೂರ ದೇವಮ್ಯನುಂ ಪಂಪಯ್ಯನುಂ . . . ಧರ್ಮ್ಮರಾತಿಭಟರರ ಕನಲಂ ಕಟ್ಟಿರ್ಪ ಕೊಟ್ಟ ಸ್ಮಿತಿ ಯಾವುದೆನ್ನೊಡೆ (ಚಕ. XI. ೩೪ರು. ೩೬–೨೦ ; ೪೨೧). [? + ಊರ್]

ಮೊಳ್$_1$ (ಕ್ರಿ)· ೧. ಚಿಗುರು ; ಕೊನರು ; ಅಂಕುರಿಸು : ಮೊಳೆ–ಪ್ರರೋಹಕ್ರಿಯಾಯಾಂ (ಅಂಕುರಿಸು). ಅಂಕುರೇ ಚ" (ಕಮಶಾ) ; ಪೊಸತೆ ಮೊಳೆತ ಧಾನ್ಯಂಗಳನಾ ಧರಣೀಶಂ ಕವಜ್ಜಿದಂ (ಅಪ್ರ. ೦೫-೩) ; ಬೀಜವಿಲ್ಲದೆ ಮೊಳೆತ ಸಸಿಯನಾವಂ ಬಲ್ಲಂ (ಶ್ರಕ್ಷಾ. ೦-೪೭) ; ಹುರಿದು ಬಿತ್ತಿದ ಬೀಜ ಮೊಳೆಪುದೆ (ಪಚ. ೨-೩೩). ೨. (ಉಗುರು. ಕೂದಲು ಮುಂತಾದುವು) ಮೂಡು; ಹುಟ್ಟು; ಕಾಣಿಸಿಕೊಳ್ಳು : ಪೊಳೆವಿಂದುಗಳ್ಕೆ ಬೆಗುಡ ಮೊಳೆದುವ ಬೆನ್ನಿಂದಮೆರ್ದಗೆ ಕದಿರ್ದುಱುಗದ್ ತೊಳಗಿದುವ ಮದನ್ರಶಿಖಿವಿಹ್ವಳಹೃದಯವ್ಯಸ್ತಹಸ್ತನಖದೀಧಿತಿಗಳ್ (ಇಂದೂ. ೧೦೬); ಸತ್ಕಹರಿಬ್ಬಂದ್ರರಾಯನ ವಾಕ್ಯದೊಳು ಹುಸಿಗಳು ಮೊಳೆಯುವ (ಪಚಾ. ೨-೦೪); ಬೆಗಡು ಮೊಳೆತುದು ಭೀಷ್ಮ ವಿದುರಾದಿಗಳ ಮನದಲಿ (ಸಂಪಕ. ೦೮–೨೬); ಅದನಿಗೆ ಮಿಸಿ ಕೂಡ ಮೊಳೆತಿಲ್ಲ (ಪಂಹೂ. ೨೦). [ಹೋ.ತ ತಮಿ. ಮುಳ್ಳ್; ಮಲ. ಮುಳೆ; ತುಳು. ಮುಳಿ, ಮುಳೆ. ಮೊಳಿ. ಮೊಳೆ; ತೆಲು. ಮೊಲುಚು, ಮೊಲುಚು, ಪೊಲ್ಚು]

ಮೊಳ್$_2$ (ನಾ)· ೧. ಕುದಿ: ಮೊಳಕೆ : "ಅಗೆಯೊಂದುಂ ಮೊಳೆಯೊಂದುಂ ಅಂಕುರದ" (ಶಪಾ. ೩೫-೦೫೩); ರುದ್ರಗರ್ಭಗ್ಗಹದೊಳ್ ತೇಜೋಸಲಯಂ ಬೆಳಗಿದನಜುವಿನ ಬೆಳಗಿನ ಮೊಳೆ ಮೊಳೆತು ಬೆಳೆಪುಮೊದಚ್ಚರಿಯೆ! (ಆಂಪ್ರ. ೬-೬೬); ವಿರಕ್ತಿ ಬೀಡಾಗಿ ಭಕ್ತಿ ಮೊಳೆಯಾಗಿ . . . ನಿಮ್ಮ ಭಕ್ತನ ಮನೆಯಂಗಳ ಪಾರಣಾಸಿಯಿಂದಧಿಕ ಮೋಡಾ (ಬಾಹಾಳ. ೩. ೬೦-೦೬೬); ಬಿಲ್ಲಿನ ಮೊಳಗು ಕಿನ್ನೀರ್ಜಲ ಪೆಣ ಬಿತ್ತು ನೆಣ ಮೊಳೆಯಾಗೆ ರಣಭೂಮಿ. . : ಮೆಱೆದುದು (ಕಾಣಾಪಾ. ೦೨-೬೬); ಬೆಳೆದು ಗುಣ ಮೊಳೆಯಲ್ಲಿ ಕಾಣುವುದು (ಪಪಪಾ. ೬೪). ೨. ಮೂಲವ್ಯಾಧಿಯಲ್ಲಿ ಗುದಪ್ರದೇಶದಲ್ಲಿ ಮೊಳಕೆಯಾಕಾರದಲ್ಲಿ ಕಾಣಿಸಿಕೊಳ್ಳುವ ದುರ್ಮಾಂಸ : ಚಿಕ್ಕಮಂ ಗೋಜಲದೊಳ್ ಕುಡಿದಳಿಗೂಬಿನಿ ಕೆಲವುಂ ದಿವಸಕ್ಕೆ ಕಡುನುಗುಮರುಸೆಯ ಮೊಳೆಗಳ್ (ಪಪಪಪಪ. ೯-೦೫೩); ಮೂಲವ್ಯಾಧಿಗೆ :—ಭೂಚಕ್ಕಿಗೆಡ್ಡ . . . ಹೊಗೆಯನ್ನು ಆಸನಕ್ಕೆ ಹಿಡಿದರೆ ಮೊಳೆ ಕರಗಿ ಹೋಗುವುದು (ಪಪ್ರ. ೦೬೬). ೩. ಮೊದಲೆ ಮೊದಲಾದ ಗುಳ್ಳೆಗಳ ತುದಿ : ಮೊದಮೆಯ ಮೊಳೆಯುನೊತ್ಪತ್ತ ಕಕ್ಷಸೊನಿಜಮರ್ಮಜಿವ ಸೊಗದ ಮಾಸಿಸುತ . . . ಪುಟ್ಟಣಯದೊಟ್ಟಿದರು . (ಪಚಪಪ. ೦೬-೩೨). ೪. (ಪಟ ಮುಂತಾದವುಗಳನ್ನು ನೇತುಹಾಕಲು ಬಳಸುವ) ಒಂದು ತುದಿ ಅಗಲವಾಗಿಯೂ ಮತ್ತೊಂದು ತುದಿ ಜೂಪಾಗಿಯೂ ಇರುವ ಲೋಹದ ಉಪಕರಣ; ಆಣಿ : ನಡುವರ್ಮೊಳೆಯುಂ (ಪಪಾಕ. ೦೨-೩೪); ಬಟ್ಟೆದ ಬೆಳ್ಳಿದು ಮೊಳಗಳೆಲಂ ತೊಗಲಿ ಬೆಳಗಿದುವ ತಾರಗೆಗಳ್ (ಪಗಂ. ೦೬-೪೪); ಏಳಿ ನೊಗವು ಕೀಲಚ್ಚು ಕೂಬರ ಬೆಳೆ ಮೊಳೆಮನಾರೈದು ಹೆರೆಯನು ಬಳದು ಹೂಡಿದರು (ಕೂಕಣಾ. ೩-೬-೩)- ೫. ಗಾಡಿಯ ಚಕ್ರಕ್ಕೆ ಸಿಕ್ಕಿಸುವ ಗೂಟು; ಕಡಾಣಿ : ಹರಿಯ ಗಾಲಿದು ನಾಭಿ ಮೂಜ್ಜರಿಯ ಜಾತುರ್ಮಾಸಗಳು. . . ವಿದ್ಯತ್ಸರವೆ ವತ್ಸರವೆನಿಪ ಮೊಳೆಯಾಯ್ದು (ಶಾಪ್ರಾ. ೬-೬೬). ೬. ನಾಣ್ಯ ಮುಂತಾದ ಲೋಹಪಸ್ತುಗಳ ಮೇಲೆ ಅಕ್ಷರಗಳನ್ನು ಕೊರೆಯುವ ಜೂಪಾದ ಸಾಧನ : ಪೃಥ್ವಿಯೆಂಬುದಾ ಕರ್ತಾವೆ ಕಮ್ಮಟ ಅಚ್ಚಿನ ಮೊಳೆ ಬಾಣಪದ ವನೆ (ಪಪಪಂ. ೨೨೪-೦೦೦೩); ಚಿನ್ನಗೆಯ್ದ ನವಿರಂಗಳಂ ಕೂಡಿ ಅಚ್ಚಿನ ಮೊಳೆಯಲ್ಲಿ ಕೊಚ್ಚಿ ದಳಕ್ಕೆ ಪೀಸ ೨ ಕಾಣ ೨ (ಅಶ. XIV. ೨೭೩-೩೦; ೧೧೭೩). ೭. ಮುದ್ರಣ ಕಾರ್ಯದಲ್ಲಿ ಉಪಯೋಗಿಸುವ ಅಕ್ಷರಗಳ ಗುರುತಿರುವ ಸಾಧನ; ಟೈಪು : ಮುದ್ರಣಾಕ್ಷರಯೋಜಕನು ಮೊದಲು. . . ಅಕ್ಷರದ ಮೊಳೆಗಳು ದಪ್ಪ ಯಾವ ಅಂಕಣಗಳಲ್ಲಿವೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು (ಮುದ್ರಣ. ೨೬). ೮. (ಆಲಂ) ಅಭಿವ್ಯಕ್ತಿ : ತೋರಿಕೆ : ಕೂಡವಯದು ವರವಲ್ಲದಿದ್ದರೆ ನುಡಿಗೆ ಮೊಳೆ ಹೊಮ್ಮುವರೆ ನಿಮ್ಮಯ ತೊಡಕಸೊಲುಮವಸಲ್ಲ (ಶಾಪ್ರಾಬ್ರಿ. ೦-೨೦).

[< ಮೊಳ್$_1$-/ ತಮಿ.ಮುಳ್ಳ್; ಮಲ. ಮುಳೆ; ತುಳು. ಮುಳೆ. ಮೊಳೆ; ತೆಲು. ಮೊಲ. ಪೊಲಪ]

ಮೊಳೆಗತ್ತಿ (ನಾ)· ಮೊಳೆಯಾಕಾರದ ಒಂದು ಬಗೆಯ ಏಡ್ಗ : ಮೊಳೆಗತ್ತಿ ಕೋಲ್ಗತ್ತಿ, ಕೊಂಕಣ ಬಿಡೆಗತ್ತಿ ಸೆಳೆಗತ್ತಿ (ಕಣಾಂತ್ರ· ೬-೨೦೦)·
[ಮೊಳೆ$_2$ + ಕತ್ತಿ]

ಮೊಳೆಗದ (ನಾ)· ಲೋಹದ ಚೂಪುಗೂಟಗಳನ್ನು ಅಳವಡಿಸಿರುವ ಕದ ; ಗುಬ್ಬಿಕದ : ಕಾರ್ಯಕುಶಲದಿಂ ಕೋಟೆ ಕೊತ್ತಳ . . . ದಿಣ್ಣಿ ಮೊಗದಂಗಳ್ಗಳಿರ್ಮಿತಮಾಗಲೊಡನೆ (ಹರಿವಂಶ· ೦-೪-೬೬ ಪ)·
[ಮೊಳೆ$_2$ + ಕದ (<ಕದವು$_1$)]

ಮೊಳೆಗಜೊಕೆ (ನಾ)· ಆಗ ತಾನೆ ಮೂಡುತ್ತಿರುವ ಹುಲ್ಲು ; ಎಳೆ ಕರಿಕೆ: ಸುಳಿವಾಳೆಲೆಯ ಬ್ಲಾ ಮೊಳಗಱೊಕೆವಣ್ಣ ಪೊಂಬಣ್ಣ ಮೆಯ್ಯಲಿಪುರ್ ಸುಳಿಯೆ (ತಂಪ· ೬೬-೪೭)· [ಮೊಳೆ$_2$ + ಕಱೊಕೆ$_1$ (< ಕಱುಂಕ)]

ಮೊಳೆಗಾಣಿಸು (ಕ್ರಿ)· (ಆಲಂ) ವ್ಯಕ್ತಪಡಿಸು ; ಪ್ರಕಟಿಸು : ಕಳದಿಯರ ನಡಿಗೆ ನಸುನಗುತೆ ನಿಜಭಾವಮಂ ಮೊಳೆಗಾಣಿಸದೆ ಪುಸಿಗೆ ಸರಸವಾಡುತೆ . . . ತಿರುಗಿದಳ್ಳನದಿಂದೆ ಮನೆಗೆ ಚಂಪಕಮಾಲಿನಿ (ಶ್ರೀಪಾ· ೬೦-೬೨)· [ಮೊಳೆ$_2$ + ಕಾಣಿಸು]

ಮೊಳೆಗೊಂಬು (ನಾ)· ಆಗ ತಾನೆ ಹೊಮ್ಮಿದ ಕೊಂಬೆ ; ಎಳೆಯ ರೆಂಬೆ : ಸುರಕುಜದ ಮೊಳೆಗೊಂಬುಗಳಿಗೆ ಚಿಂತಾರತ್ನಪರಿಖಚಿತವಾದ ಮಿಸುನಿಯ ಕಟ್ಟನಿಡುವೊಂದು ಪರಿಯಿಂದ ರಂಗುವಡೆದುರ್ವ ಮಾಣಕ ದುಂಗುರಂಗಳಂ ಬೆರಲೊಳ್ಪಟ್ಟು (ಶಾಂದಪ್ರ· ೪-೨೪)· [ಮೊಳೆ$_1$ + ಕೊಂಬು$_1$]

ಮೊಳೆಗೊಳ್ಳು (ಕ್ರಿ)· ನಿಮಿರು : ನೆಟ್ಟಗಾಗು : ಮೋಹದಿನಿಯರ ಮಯ್ಯ ಸೋಂಕಿಂ ಮೊಳೆಗೊಂಡ ಪುಳಕಾಳಿ (ಪುಣ್ಯ· ೪-೦೨)·
[ಮೊಳೆ$_2$ + ಕೊಳ್ಳು$_2$ (< ಕೊಳ್$_1$)]

ಮೊಳೆಗೋಲು (ನಾ)· ಚಾವಟಿ ; ಸೆಳೆಗೋಲು (?) : ಮಾಣರಥಂಗಳನು ಶೃಂಗರಿಸಿ ದಿವ್ಯಾಶ್ವಂಗಳನು ಪೂಡಿ ಮೊಳೆಗೋಲನಾಂತು ವಾಗೆಯು ಪಿಡಿದು (ಪಪಮಾ· ೫೦-೪)· [ಮೊಳೆ$_2$ + ಕೋಲು$_1$ (< ಕೋಲ್$_1$)]

ಮೊಳೆಜವ್ವನ (ನಾ)· ಅಂಕುರಿಸುತ್ತಿರುವ ಪ್ರಾಯ ; ಎಳೆಪ್ರಾಯ : ಗೊಜ್ಜಿಗೆಗಳೆಜವ್ವನಂ· ಮಲ್ಲಿಗೆಗ ಮೊಳೆಜವ್ವನಂ, ಸುರಯಿಗೆ ಪೆರೆಜವ್ವನಂ . . . ಒದವಿತ್ತು (ಶಾಪಪ್ರ· ೦೦೪-೬೪)· [ಮೊಳೆ$_1$ + ಜವ್ವನ]

ಮೊಳೆದೊಡಕು (ನಾ)· ಒಂದು ಬಗೆಯ ಬಾಣ : ಹಿಳು ಕವಲಂಬು ಮೋಳೆವಿದಿರೆಲೆ ಮಿಟ್ಟೆಯಾ ಮೊಳೆದೊಡಕು ನಾನಾಚ ಕಣಿಗೆಲೆಲೆ ಸಿಲುಂಬಳೆ . . . ಸವಿವಾಯುನೆಂಬ ನಾನಾಸರಳನು ಸೆಳೆದು (ಪಾಪಪ್ರ· ೪-೨೬)· [?]

ಮೊಳೆದೋರು 'ಮೊಳೆದೋಜು' ನೋ·

ಮೊಳೆದೋಜುಸು (ಕ್ರಿ)· (ಆಲಂ) ವ್ಯಕ್ತಪಡಿಸು ; ತೋರಿಸು : ಮುನ್ನೊಂದು ಪಳೆಯಾನೆಯ ಮೆಟ್ಟಿ ಸೀಳಿ ತೊಳೆಯವೆ ತೊವಲ ವಸ್ತ ವನುಟ್ಟು ಧೈರ್ಯವ ಮೊಳೆದೋಜುಸು (ಪಾಚಕ· ೪೯-೩೦)·
[ಮೊಳೆದೋಜು + — ಇಸು]

ಮೊಳೆದೋಜು, ಮೊಳೆದೋರು (ಕ್ರಿ)· ೧· ಮೊಳಕೆಯೊಡೆ ; ಅಂಕುರಿಸು : ಸಂಗದಿಂದಲ್ಲದೆ ಬೀಜ ಮೊಳೆದೋಜದು (ಭುಜಬಲ· ಪ· ೪೯-೦೬೨) ; ಮೊಳೆದೋಜು ಮುಗ್ಗದ ಮುಸ್ಸ . . . ಬಳಸುವುದಲಿಳವಸ್ತು ವನು (ಹರಿ· ೬-೦೫)· ೨. ಕಾಣಿಸಿಕೊಳ್ಳು ; ಮೂಡು ; ತೋರು : ಅದಿ ಅನಾದಿ ಇಲ್ಲದಂದು ನಾದ ಬಿಂದು ಕಳೆ ಮೊಳೆದೋಜದಂದು . . . ಸೌರಾಷ್ಟ್ರಸೋಮೇಶ್ವರಲಿಂಗವದೆ ಕಂಡಾ (ಆದಿ· ೦-೨)· ; ಮೊಳೆದೋಜುತ ಪುಟ್ಟುತಿಹೆಳಮಿಸಗಳ ಕಟ್ಟಿಜಕದ ಚೆಲುವಪ ಕಂಡು ಮೈ ಜುಮ್ಮು ದಟ್ಟಿತು (ಕಂಪ· ೪-೦೦೩)· **ಮೊಳೆದೋರು** : ೨. ಹೊಸಗನಸನು ಮೊಳೆದೋರುತ್ತ ಪಾವನವಪನನು ಬರುತಿಹನು (ಪಾಂಡಿ· ೨೩-೦೬)·
[ಮೊಳೆ$_2$ + ತೋಜು]

ಮೊಳೆನಗೆ (ನಾ)· ಮುಗುಳುನಗೆ ; ಮಂದಹಾಸ : ಮೊಳೆನಗೆಯಿಂದ ಹರುಷದಳಪನಿತೇಶ್ವರನ (ತೊಡಣ· ೨-೩-೪೩)· ನುಡಿ . . . ಮೊಳೆನಗೆ ಮಿನುಗೆ ಹಾಸ್ಯವ ನುಡಿದಾಕೆಯ ತರೆಗುತ್ತಿಸಿದಳು (ಕಂಪರಾ· ೩-೦೩೦) ; ಕುಡಿನೋಟ ಬೀರುತ ಮೊಳೆನಗೆ ತೋರುತ ಬಳಿನಿಂದು ಮನಸೆಳೆದವಳು (ಪಾಂಡಿಪ· ೦೩೦-೨೭)· [ಮೊಳೆ$_1$ + ನಗೆ]

ಮೊಳೆನುಡಿ (ನಾ)· ಚಮತ್ಕಾರದ ಮಾತು ; ಹದಿರು : ಸ್ಮೇರಾಸ್ಯಂ ಮೊಳೆನುಡಿ ಗತಸೌರಂಭಂ ಸುರತಸಂಭ್ರಮಂ ಜಾರೆಯರಾ (ಗಿಗಾ· ೪-೪೪)·
[ಮೊಳೆ$_1$ + ನುಡಿ$_2$]

ಮೊಳೆಮೊಲೆ (ನಾ)· ಆಗ ತಾನೆ ಮೂಡುತ್ತಿರುವ ಸ್ತನ : ಮೊಳೆ ಮೊಲೆಯರು . . . ಸಳಿನಮೊಗ್ಗೆಯ ಮೊಲೆಯವರು (ಪಾಪಪ್ರ· ೩-೦೦೪) : ಮೊಳೆಮೊಲೆಯೊಳಿಸವೆ ಸಸವದನದೊಳ್ . . . ಒಪ್ಪಿರ್ದರಳಪಣ್ಣಳ್ (ಕೃಪಾಣ· ೬-೨೬)· [ಮೊಳೆ$_1$ + ಪೊಲೆ$_1$]

ಮೊಳೆಯಲ್ಲ (ನಾ)· ಎಳೆಯ ಶುಂಠಿ : ಪೊಳೆಯಲ್ಲದುನುಪ್ಪನೊಳಂ ಪುಳಿಯೊಳಮಲೆದಿಟ್ಟು (ಪೋಪ್ರಪಾಪ· ೪-೦೮) ; ಬೆಚಸು ಮಾಗುಳೇರ್ದೊಳೆಯಲ್ಲಸೇಲೆ . . . ಅದಿಮಾದುಪ್ಪನ ಕಾಯ್ಗಳಂ ಮಗಮಗಿಪ್ಪುವಿಕ್ಕೆದ ಸಬ್ಬಪತ್ರದೊಳ್ (ಶಾಣಪ· ೪-೬೬)· [ಮೊಳೆ$_2$ + ಅಲ್ಲ$_1$]

ಮೊಳೆಯಿಸು, ಮೊಳೆಸು (ಕ್ರಿ)· ೧· ಕುಡಿಯಿಡುವಂತೆ ಮಾಡು ; ಅಂಕುರಿಸುವಂತೆ ಮಾಡು· ೨. ಉಂಟುಮಾಡು ; ಹುಟ್ಟಿಸು : ಅಲೋಚನೆಯೊಂದನ್ನ ಮೊಳೆಯಿಸದನು (ಕಬ· ೪೬)· .**ಮೊಳೆಸು** : ೧. ಕ್ಲೀಸಬೀಜವ ಬಿತ್ತಿ ಮೊಳೆಸಿದ ಘಾಸಿಯಾಗದ ಕಪಿಗಳಿಲ್ಲದನಿವನ ಪಡೆಯೊಳಗೆ (ಶಾಬಿಪ· ೫೯-೬೨) ; ವೀರು ಬಿದ್ದು ಹದವಾದ ನೆಲವು ತನ್ನಲ್ಲಿ ಬಿದ್ದ ಬೀಜವನ್ನು ಮೊಳೆಸುವಂತೆ ಕರ್ಮವು ಮನುಷ್ಯನ ಪುನರ್ಜನ್ಮವ ಮೊಳೆಯುವಂತೆ ಮಾಡುತ್ತದೆ (ಪಪಣ· ೪೩೨)· [ಮೊಳೆ$_1$ + — ಇಸು$_3$]

ಮೊಳೆರೋಗ (ನಾ)· ಗುದಪ್ರದೇಶದಲ್ಲಿ ಮೊಳಕೆಯಾಕಾರದ ದುರ್ಮಾಂಸ ಬೆಳೆಯುವ ರೋಗ ; ಮೂಲವ್ಯಾಧಿ : ಮೂಲ ವ್ಯಾಧಿ-ಮೊಳರೋಗ-ಗಾದರಲ್ಲಿ ಎರಡು ವಿಧಗಳುಂಟು (ಪಪಗ· ೪೦)·
[ಮೊಳೆ$_2$ + ರೋಗ]

ಮೊಳೆವಣಿ (ನಾ)· ಅನೆಯ ಹಣೆಗೆ ತೊಡಿಸುವ ಒಂದು ಬಗೆಯ ಅಲಂಕಾರಸಾಧನ : ಅರೆಟ್ಟಿಗೆ ಮೊಳೆವಣಿ ಕೂರಂಕುಶ ಸೇರಿ ಬಾಜಿಸುವ ಡೌಡಗಳ· ಕೂಡಾನೆಗಳನೆಃಜಾ ಮಾವಟ್ಟಿಗರು ಬಂದರು (ಕಂಬಾಂ· ೦೦-೩೬)· [ಮೊಳೆ$_2$ + ಪಣಿ$_1$]

ಮೊಳೆವರೆಯ (ನಾ)· = ಮೊಳೆಜವ್ವನ : ನನ್ನ ಮಗಳಿಗೆ ಮೊಳೆವರೆಯು ದರಿ ವಿಧವತೆಯನಿತ್ಕವಸು ಭೂಮಿಯಲಿ ಉಳಿಯುಬಲ್ಲನೆ (ಸಾಕ್ಕಥ· ೨೩-೦೬)· [ಮೊಳೆ$_1$ + ಪರೆಯ$_2$ (<ಪರಯ)]

ಮೊಳೆವಲ್, ಮೊಳೆವಲ್ಲು (ನಾ)· ಆಗ ತಾನೆ ಹುಟ್ಟುತ್ತಿರುವ ಹಲ್ಲು ; ಪಣೆ : ಎಳೆಯನೆ ಪುಟ್ಟಪಾಯೊಳು ಮೆಲ್ಲವೆಲ್ಲನೆ ಮೊಳೆವಲ್ಲ ಕೊಸೆದು ಮೂಡಿದವು (ಪಾಚಕ· ೦೭-೩೦) ; ಮೊಳೆವಲ್ಲುಗುಹ ಜೊಲ್ಲು ದಟ್ಟಿತದಿ ತೊದಲನುದಿ (ಶ್ರೀಪಾ· ೨೪-೦೬) ; ಮೊಳೆವಲ್ ಶೋಭಸ ನಿರ್ಮಿತ್ರಹಸಿತಂ ಚೆಲ್ವಾಗೆ (ಪಾಪಪ್ರ· ೦೦೩-೦೭೦)· **ಮೊಳೆವಲ್ಲು** : ಜೀವಂಧರಂ . . . ಕೆಂಪಾಯ ಮೊಳೆವಲ್ಲು ಮಿನುಗೆ ನಗುವ ತೊದಲಿಂಬು ವತೆಯಲೊಪ್ಪಿದನು (ಜೀಪಣಾಂ· ೬-೪)· ; ಚೆನ್ನಬಸವ . . . ಮೊಳೆವಲ್ಲು ಜೊಲ್ಲುಂ ಪೊಳೆಯ ನಸುನಗುತ್ತುಂ ಬಾಲಲೀಲೆಯಂ ತೋಜುಸಿದನು (ಪಾಪ್ರ· ೩-೪೦)· [ಮೊಳೆ$_1$ + ಪಲ್]

ಮೊಳೆವಲ್ಲು 'ಮೊಳೆವಲ್' ನೋ·

ಮೊಳೆವಿತ್ತು (ನಾ)· ಮೊಳಕೆಯೊಡೆದ ಬೀಜ : ಮೊನ್ನೆ ಬಿತ್ತಿರ್ದ ಮೊಳೆವಿತ್ತನೆತ್ತಿಯ ತಂದು ಪನ್ನಗಾಭರಣನ ಪಸಿವನಾಜಿಸುವುದು (ಜೀಕ· ೫೬· ೩೩-೨೦)· [ಮೊಳೆ$_1$ + ಬಿತ್ತು$_2$ (<ಬಿತ್ತು$_1$)]

ಮೊಳೆವುಲ್ (ನಾ). ಅದೇ ತಾನೇ ಚಿಗುರಿದ ಹುಲ್ಲು ; ಎಳೆಯ ಹುಲ್ಲು: ಮೊಳೆವುಲ್ಗಳೀನೀ ಧರಣೀವಿಘಾಗಮೊಪ್ಪಿರೆ (ಕಂಪಾ· ೭-೨೩) ; ಜಳದ ಗ್ರೀಷ್ಮಹಿಮಂಗಳಿಲ್ಲ ಮೊಳೆವುಲ್ಲಾಲ್ಯಂಗುಳಂಗಳ್ವರಂ ಬಳೆಗುಂ (ಜಾಂಪು· ೬-೦೨) : ವ್ಯಗಸಂತತಿ ಗಹ್ವರದಿಂ ಪೊಱಮಟ್ಟು ಮೇದುಮಿತಿವ ಮೊಳೆವುಲ್ಲಂ (ಗಿಂಕ· ೯-೭೩). [ಮೊಳೆ₁ + ಪುಲ್]

ಮೊಳೆವೊಯ್ (ಕ್ರಿ). ಮೊಳಕೆಯೊಗು ; ಅಂಕುರಿಸು : ಮೊಳೆವೊಮ್ಮು [ಪಾಣಾಂ· ಕೊನೆವಾಯ್ದು] ಕಂಗಳ್ಮಬ್ಬು ಬೆಳೆದೆಳೆಯು ದರ್ಭೆಯಂ ಕಂಡು (ಪಡಣಾ. ೦೨-೪). [ಮೊಳೆ₂ + ಪೊಯ್₂]

ಮೊಳೆವೋಗು (ಕ್ರಿ). ೧. ಜಿಗುರುಬಿಡು : ಕೊನರು ; ಕುಡಿಯಿಡು : ದಾಂಗುಡಿಯಿಟ್ಟುದಿಂಗಡಲ ಬೆಳ್ಪು ಕರಂ ಮೊಳೆವೋದುದಿಂದುಕಾಂತಂಗಳ ಬೆಳ್ಪು ಮುಂಡಿದುದು ವಯ್ಯಂಬಲ ಬೆಳ್ಪು (ಅಣಾಪ· ೫-೨೦) ; ಕಂದಿದುದಂ ಮೊಳೆವೋದುದನೆಂದುಂ ಕಟ್ಟಲ್ಕೆಮಿಡ ಪಾಣಂದಿಗಳಂ (ಅಕ್ಷಣ· ೭-೨೮) ; ಮೊಳೆವೋದಶ್ವತ್ಥಕಂದಂ ಕೊಳದೊಳೆ (ಣಾಪಪ್ರ· ೬-೨). ೨. ಮೂಡು : ಪುಟ್ಟು : ಹೊಮ್ಮು : ಆ ವೇವಮು ಜಾತ್ರೆಗೆ ಮೊಳೆವೋದಳವೆಂ . . . ಕೈವೋದಸುಕೆ ಕೋಲಧ್ವನಿ ಮೂವದೆಯುಲಿಮಾಗೆ ಬಂದುವಂದು ಬಸಂತಂ (ಹಚಿಪ್ರಚ. ೦-೪೬). [ಮೊಳೆ₂ + ಪೋಗು₂ (< ಪೋ₁)]

ಮೊಳೆಸು ' ಮೊಳೆಯಿಸು ' ನೋ

ಮೊಳೇಟ್ಟೂರ್ (ನಾ)· ಒಂದು ಊರಿನ ಹೆಸರು : ಶ್ರೀ × × ಕೈವ್ಮನಡಿಗಳು × × ಮೊಳೇಟ್ಟೂರ ಪುಱಾ × × ನಕ್ಕೆ ಬಿಟ್ಟ ಸ್ತಿತಿ (೨೪· IV (೩), ಶಾಖಣಾ. ೧೨೬-೩ ; ಸು· ೭ ಪದ್ಯ ೫೫) · [? + ಊರ್]

ಮೊಳ್ಳು ' ಮೊಟ್ಟು₂ ' ನೋ.

ಮೊಳ್ಳೆ (ನಾ)· ೧. ಉಬ್ಬಿಕೊಂಡುಮ : ಹಿಗಲ್ಲದೆ ಮೊಳ್ಳೆಯಾಗಿ ದರ್ಪ ನಾಗಿ ಕೀವು ರಕ್ತ ಉಳ್ಳದಾಗಿಯಿವ್ವರೆ ಅರಿಪ್ಪ (ಶಾಗಂಶಿ· ೬೫೦-೦೮). ೨. ಉಬ್ಬಿದ ಹೊಕ್ಕಳ್ಳು -- ನಾಭಿ : (೬)· [?]

ಮೊಱ ಮಾರ್₂, ಮಱಿ, ಮೊರ (ನಾ)· (ಮುಖ್ಯವಾಗಿ) ಕಾಳನ್ನು ಕೇರಿ. ಕೊಚ್ಚಿ ಹಸನುಮಾಡಲು ಬಳಸುವ ಬಿದಿರಿನ ಸಾಧನ : ಶೂರ್ಪ: ಮಾಱಲು ಮೊಱ [ಪಾಣಾಂ· ೯೦೪೫] ತೀವಿದಮೇಧ್ಯಮಂ ಭಕ್ಷಣಾಗೆಯ್ಸ (ಪಾಪುಂಪ· ೦೫೬) ; ಪಱುಗೋಲೊಳ್ ಪಾಯ್ವಂತಿರೆ ತೊಱೆಯಂ ಮೊಱಿಯಿಂದೆ ಪಾಮುಲೇಂ ಬಂದಪುದೇ (ಸಮಪ· ೦೫-೩೦) : ಮುತ್ತನೊಗಂ ವರೆ ಮೊಱಿನ ತೌಡಿಗೆ (ಶಾಣಾ. ೩೬-೩೦)· **ಮಱೆ** : ಭಗವಾರಿಯು . . . ಜೋಳವನ್ನು ಮಾರದಲ್ಲಿ ಹಾಕಿಕೊಂಡು . . . ಬೀಸುತ್ತಿದ್ದಳು (ಶಂಪ್ರಚಾ. ೦)· **ಮಱಿ** : ಸುರಿದು ಪೆನಗಡಲೆಗಳ ರಾಶಿಯಂ ಪುಱಿನ ದಿಟ್ಟೋಲೆಗಳ ಬಣ್ಣದ ಹೊನ್ನ ನೂಲುಗಳ ಗಿರಿಗಳೇ ಫಲವಾದುವಾಸ್ಪರ ಕರಿಯ ನೋಂಪಿಯ ದಾನಕೆ (ಸಂಚಿ· ೫೦-೨೦)· **ಮೊರ** : ಜಾಣರಂಗ್ಗೆಗೆ ಕೊಳಲಾದೆ ಸಿರಿಯಿದಿರೆ ಮುತ್ತು ಕೇರೋಕೆ ಮೊರನಾದೆ (ಹ್ಯಾಣಾ· ೦೪) ; ಇರಿಗಳು . . . ಹತ್ತು ಇಪ್ಪತ್ತು ಮೊರಗಳ ಹುಂಬು ಬೀಳಲು ಪ್ರಾನಂಭವಾಯಿತು (ಶಪಾ· ೦೯).

[ದೇ.ಪ ತಮಿ. ವಾಲ. ಪುಱಿವಮ್ ; ಕೊಡ. ಮೊರ ; ತೆಲು. ಮೊರಿಟಿ ; ಕೋತ. ಪೊಮ್ರ್ ; ತೊದ. ಮುರ್ಪ್]

ಮೊಱಿಕು₁ ' ಪುಱಿಕು₁ ' ನೋ·

ಮೊಱಿಕು₂ ' ಪುಱಿಕು₂ ' ನೋ.

ಮೊಱಿಗಿವಿ. ಮೊರಗಿವಿ (ನಾ). ಮೊರದಂತೆ ಅಗಲವಾದ ಕಿವಿ : ಕವಿ ಮಧುರನ ಮಾತುಗಳೇಂ ಸವಿಯೋ . . . ತನ್ನಮ ಮೊಱಿಗಿವಿಯಿಂ ಮೊಗೆಮೊಗೆದು ಸುಮುಖಿನಾಸ್ವಾದಿಸುವಂ (ಕಿಱಾಣ· ೦-೭೪) ; ಕಾಂತೆ ಯರೆ ದೊಗದಲಿ ವಿಸಿಸೆ ಸುಂಡಿಲನ: ಮೊಱಿಗಿವಿಯು ಪರ್ಮೊಲೆಯ ಬೆನ್ನಲಿ ಪಿರಚಿಸಲು ಗಂಡರು ಬೆಜಗುಗೊಳೆ (ಶಾಳ್ಕಣಾ· ೫೦-೭೭)· **ಮೊರಗಿವಿ** : ಮೊರಗಿವಿಗಳಂ ಬೀಸಿ. ಘೀಳ್ಕೊಡಿಸೆ ಮುನ್ನಿಗಿ ಪೋರಾಡಲನು ವಾದುದಾ ಹೋರಿಹೇರಾಜೆ (ಶ್ರೀಚಪ್ರ· ೪೫೫-೪೫೬). [ಮೊಱಿ + ಕಿವಿ]

ಮೊಜಡಿ ' ಪೊರಡು₂ ' ನೋ.

ಮೊಜವು. ಮೊರವು (ನಾ)· ೧. ಸಮುದ್ರ ಮುಂತಾದುವುಗಳ ಅಬ್ಬರ.— ಮೊರೆತ : ಮೊಜವುದೋಜದ ತೆರೆಮಸಗದಳೆಗೆ ಕ್ಷೀರಶರಧಿಯ ಕವಿತಂದೆಮದು (ಪಾಗಳು· ೫೦-೬೬)· **ಮೊರವು** : ೨. ದೊಡ್ಡಧ್ವನಿ ; ಆರ್ಭಟ : ಮೆರಸಿ ನಂದೀಧ್ವಜದ ಕರಡಿಯ ಮೊರವಿನೊಳಗೀ ಲಿಂಗ ವೀರರ ನೆರವಿಮೊಳಗೆ (ಜಕ್ಕಪು· ೯೨-೩); ಮುಂದಡಿಮ ಬಿಟ್ಟು ಮೊರವಂ ಬಿಟ್ಟು ಪುಧ್ಕರೊಳ್ಮಿಂದಿರ್ದ ಬಾಣಮಂ ಕಂಡು (ಕಂಗಾರಾ. ೩-೦೬-೫೬).

[ಮೊಜ್₁ + — ವು]

ಮೊಜಹಾರ (ನಾ). (?) : ಮೊ[ಪಾಣಾಂ· ಕೊ]ಜಹಾರ ನೀದಿದಜೆ ತೆಜಹಾರ ಕೈಕೊಳ್ಳುತ್ತೆದಾನೆ (ಬಡಪ· ೪· ೫೫೬-೦೩೦). [?]

ಮೊಜಿಪು ' ಮೊಜ್ಪು ' ನೋ.

ಮೊಜಿಪುಗುಂದು (ಕ್ರಿ). ಆರ್ಭಟವು ಕುಗ್ಗು : ಅಬ್ಬರವು ಕಡಮೆ ಯಾಗು : ಖಗಪನೆ ಮೊಜಿಪುಗುಂದಿದ ಕದಲಂತೆ ಮೋಸದೊಳು ಬಂದಿರ ದಿಂದುದು ಹಜಾರದೊಳು (ಜಾಗಳು· ೫೦-೪).

[ಮೊಜಿಪು (< ಮೊಜ್ಪು) + ಕುಂದು₂]

ಮೊಜುಕ (ನಾ). ಒಂದು ಜನಾಂಗದ ಹೆಸರು (?) : ಶ್ರೀಮಾಸೊಲಿ ಪಯ್ಯ ಪೃಥಿವೀರಾಜ್ಯಂಗೇಯ್ದೆ ಬಲ್ಲದ ಪಜುವ ಮೊಜುಕರ್ಕೊಳೆ ಬೆಣ್ಣಾರ ಮಾಡಿ ಕಾದಿ ಇಕ್ಕಿಸಿ ಸತ್ತು ಸ್ವರ್ಗಸ್ಥನಾದಂ (ಎಕ· X (೩), ಕುಗಣಾ. ೭೦೬-೨; ೯೨೦).

[?]

ಮೊಜ್₁, ಮೊರ್₃ (ಕ್ರಿ). ೧. ಸಮುದ್ರ, ಸಿಂಹ ಮೊದಲಾದುವು ಆರ್ಭಟಿಸು.— ಗರ್ಜಿಸು,--ಅಬ್ಬರಿಸು : ಬೇತಾಳಂಗಳ್ ಮೊಜಿದು ತೆಜಿದು ವಾಪ್ಪುಗೆನಾ ಪಾತಾಳಬಿಲಂಗಳ್ಗೋಲ್ . . . ಕಾಣೆಯ ಭಯ ಮಯಸಾದೆಂ (ಕಪಾ· ೩-೦೮೨); ಆ ಗುಪೆಯಾಂ ಪುಗಲೊಡನೊಂದು ರೂಪು ಮೊಜಿದು ಪರಿತಂದು ಮೇಲ್ವಾದುವೊಡಂ (ಸಂಚಿಂ· ೨೪೪-೦); ಸಿಡಿಲು ಮೊಜಿದರೆ ಸರ್ಪಸಂಜುವುವಲ್ಲಗುವನೆ ಗರುಡನು (ಶಾಕ್ಕಾಕ್ಕ್ರ· ೦೩-೬೬) ; ಈಶ್ವರಸಮಿಸೂರ್ಗಂ . ದಾಳಿಯನಿರದಮ್ಮುವ ತೆಜಮೊಳಬ್ಬಿ ಮೊಜಿದುದು ಪೆಂಪಿಂ (ಹಚಿಪ್ರಚ· ೦-೪೯) ; ೨. ಬುಸ್ಸೆನ್ನು ; ಬುಸುಗುದು : ಅದಂ ಹರಿವ ನೀರ್ ಮೊಜಿದ ಹಾವುರಿವ ಕಿಚ್ಚಿನ ಹೊರೆಯೊಳಿರಿಸಲು (ಪಾಪಪು· ೬-೦)· ೩. ಸಂಕುಚಿದಿವ ಕೊಗಿಕೊಳ್ಳು : ಚೇರು ; ಆರ್ತನಾದಮಾಡು : ಅರಸ . . . ಭೋಗವಿಸ್ಮಿದತ್ತಲು ಮೊಜಿವ ಪೆಣನ ಮಯ (ಪಾಪಪ· ೬-೧೪); ತೊರೆಯುತ ಪೊಜಿಯುತ ಸುರಿಯುತ ರಕ್ತವ ಕರಚರಣಂಗಳಾಮಿಸುತ ಅರಿವೆಣಗಳು . . . ಒಪ್ಪಿದುವು (ಕಂಪಪ· ೦೩ ೩೦): ಹುಲಿಯ ಬಾಯುಲಿ ಸಿಕ್ಕ ಹುಲ್ಲೆಯಂದದಿ ಮೊಜಿವೆ (ಸಧಪ್ರ· ೦೦೩). ೪. ಕೆದಳು : ವ್ಯಗ್ರವಾಗು : ಇಳಾವಂಡಲುದ ರಾಜರು . . . ಇವಪೊಳಗೆ ಮಾತೇಕೆನುತ ಮಿಗೆ ಮೊಜಿದಿದ್ದರಜ್ಜಿ (ಕೃಚಾ· ೦ ೦೩-೨೪).

ಮೊರ್₂ : ೧. ಮೊರೆದು ಸೊರೆಗಲೆಯು ಮಿರುಮಿರುಗಿ ಶಿಲೆಯಿಂ ಶಿಲೆಗೆ ಜಿಮ್ಮಿ ಪೆಗೆಯುವ ತೊರೆಯು ಲೀಲೆಯು ಮಹೋಹರತೆ (ಸಪ್ರಂಗ· ೨೯-೪೦೩). ೩. ತೆತ್ತ ಹಣ. ಸತ್ತ ಹಣ ಹೋಯ್ತೆಂದು ಮೊರೆಯದಿರು ! (ಪಾಂಕಪ· ೩-೦೬). [ದೇ.ಪ ತುಳು. ಮೊರೆಮುನಿ ; ತೆಲು. ಮೊಱುಗು· ಮೊಜುವು : ಕೋತ. ಮುರ್ಗ್, ಮೊರ್ಪ್]

ಮೊಜ್₂, ಮೊರ್₄ (ನಾ)· ೧. ಗೋಳಾಟ ; ಆರ್ತಧ್ವನಿ ; ಹುಯ್ಯಲು : ಏಕೆನ್ನ ಪೆಜಿಯ ಕೀಳೆ ಸೋಡೆಯೆನ್ನ ದುಃಖವ ಚಿನ್ನ ಮಸ್ಲಿಕಾರ್ಜುನಮ್ಮ (ಪಾಪರೇ· ೨- ೫೫-೩೦); ಮೊಜಿಯ ಪಾಯ್ಗುಳ . . . ತರದ ಪೈಗಳ ಲಳಕೆಳವ ಕೇಳದನು ಕಲಿವಾರ್ಥ (ಸಂಚಿಪ· ೫೬-೨); ತರಳನ

ಪೊಜೆ ಕೇಳಿ ತ್ವರಿತದಿಂದರಿ ಬಂದು ದುರುಳನ ಕರುಳ ತನ್ನ ಕೊರಳ್ಗೆ ಧರಿಸಿದ (ಕೃಷ್ಣ. ೩-೪-೦). ೨. ದೂರು ; ಅಹವಾಲು : ಪೊಜೆಯ ವಿಚಾರಿಸದೆ ಮುಖಮಜ್ಜನವ ಮಾಡದಿರು (ಕಂಗಿ. ೦೩-೩). ೩. ರೀತಿ ; ಪರಿಪಾಟಿ ; ಕ್ರಮ : ತಾಂ ಜಾತಿಯೊಳ್ ಪಡುವಪ್ಪ ದಜಿಂ ಪೊಜೆಯಂ ಧರ್ಮಮುಮನಜಾಯದಾ ಮೂಧರಿ (ಕುಸಂ. ೪೨-೦೩); ಪೊಜೆಯಜಿನೆಂದಿವನೇನೆಂದಜಿಯೆಂ (ಕಮಾಶ್ವ. ೩-೦೩೩). ೪. ಕಟ್ಟು ಪಾಡು; ಎಲ್ಲೆ; ಮಿತಿ : ಪೊಜೆಯಂ ಮೀಱುವ ಮಾತು . . . ಅಳುಂಬಂ ಕೂಟದೊಳ್ ನಲ್ಲರಾ (ಪಂಪ್ರಭು. ೯-೩೮) ; ಪೊಜೆಯನುಳಿದ ಮೆಲ್ನುಡಿ ಪೊನೆಮಸೆವಕ್ಕುಂ . . . ಸೊಗಯಿಸಿದುವು ಪಸಿಸುರತಕ್ರೀಡೆಯೊಳಾ ದಂಪತಿಗೆ (ಪಜಿಂಗಾ. ೪-೨೩). ೫. (ರಕ್ತ ಸಂಬಂಧ ಅಥವಾ ವಿವಾಹದಿಂದ ಉಂಟಾದ) ನಂಟಸ್ತಿಕೆ; ಸಂಬಂಧ; ವಾವೆ : ಆದನಾವ ನಾನನ್ದತ್ತಂ ಗೆಯ್ದಂ ಪೆಱರ ಪಸುವಾರ್ವರ ಊರುಮಿನ ಪೊಜೆಯಬೆದ ಕೃತಘ್ನ (ಸಾಇ. IX-ii, ೭೮೬-೬; ಪು. ೬೫೮ ಜ ೨) ; ನಾನ್ಗೆ ಗೆಡದಿರ್ವುದೊಂದು ಪುಡಿಗಳ್ ಪೊಜೆಯಂ ಮಜೆಯಪ್ಪ ದೊಂದು ಕಳ್ಗುಡಿದವರಂದವಿಂತು ಸಿರಿ ಸ್ಥಾರ್ತರೆ ಸಾರ್ವರು (ಪಂಪಭಾ ೨-೮೯) ; ಕಡುನೀಜಿಯರು ಮುಂದೆ ನಿಲೆ ಪೊಜೆಧರ್ಮವ ಬಿಡುವರೆ ಪೋಹಿಜನಗಳು (ಶಾಂಶಾಂ. ೨೬-೪೦); ಆವ ಪುನೆ ಆವ ಪೊಜೆ ಎನಗೆ (ಅಕ್ಕಶ್ಯಾ. ೨೦-೧೨) ೬. ಒಳ್ಳೆಯ ನಡತೆ; ಶೀಲ : ಪೊಜೆಯಿಲ್ಲದಳಿಗಾವಿನಿಯಂ . . . ಪಯೋಧಿಕೆಯುಮಾಗದು ಕೂಡಲ್ (ಪಜಿಪ. ೯-೩) ೭. (ರಕ್ತ ಸಂಬಂಧದಿಂದ ಆಥವಾ ವಿವಾಹದಿಂದಾದ) ನಂಟು; ಬಂಧು : ನೀನಲ್ಲದೆನಗುಬ್ಬಿದ ಪುರುಷರ್ ಪೊಜೆಯಿಲ್ಲರ್ (ಪಜಿಪ್ರ. ೦೩೩-೬) ; ಪನ್ನಗ ಭೂಷಣರಲ್ಲದ ಗಂಡರು ಇನ್ನೆನಗಾಗದ ಪೊಜೆ ಪೋಡವ್ವಾ (ಪಜಿ. ೩೦೯); ಪೊಜೆಯೆಂಬುದು ನಂಟರೊಳ್ (ಕಬ್ಬಾ. ೨೩). **ಪೊರೆ** ೧ : ೧. ಮಾನವ ನೆದೆಗೆ ಧೀರತೆಯ ತಿಡಿಗರೆದು ಸಾಹಸಕ್ಕೆಳೆದೊಯ್ವ ಕರೆ ನಿನ್ನ ಪೊರೆ, ನಿರಂತರ ಚೇತಸದ ಜಲಧಿ! (ಪಚ್ಚಾಂಗ. ೩೫-೦೩೦) ; ಪೊರೆಯು ಕೇಳಸದು (ಪಚಂಗ. ೦೯-೪). ೨. ಬಡದನ ಪೊರೆ ಕೇಳ್ಕೊಂಡು . . . ಶಕ್ಯ ಉಪಾಯವನ್ನು ಹೇಳುವೆನೆಂದು ನಂಬಿದ್ದೇನೆ (ಪುಂಅಂಮಾ. ೯-೦೦೩); ಈಗಲಾದರೂ ನಮ್ಮ ಪೊರೆಯು ಕೇಳಿತೆ ? (ಪಚಪು. ೭೦). ೩. ಚಿಕ್ಕಮಾವಾಜಿಯವರ, ಪೊರೆಯ ಈ ನಮ್ಮ ತಮ್ಮಾಜಿಯವರನ್ನು — ನಮ್ಮಸ್ಮಿ ವಕಾಜನವ ಅತಿಪರಿಚಯದಿಂದ ಎಳೆದಾಪತ್ತಿರುವುದರ ಅರ್ಥ . . . ನಿಳ್ಕಯವಿಲ್ಲ! (ಪಚ್ಚಿ. ೨೬-೦೪). ೪. ಮರೆತ ಯವನರುರ್ಕ ಮುರಿಯಿ ಹಾನೆ ಪೋದ ನಮ್ಮ ದೊರೆ, ನಾಸಿದ ಸತ್ಪಪರ ಪೊರೆ (ಪಾಕಸಿ. ೦-೦೦).

ಪೊಜೆವುಟ್ಟು=ರೀತಿ; ಕ್ರಮ : ಬಹುಶಾಸ್ತ್ರಪ್ರಜ್ಞನಪ್ಪಾ ದುಪಾ ಕವಿಯಂ ಕಂಡೊಡೆ ದಗ್ಧಮಾನಯನಸನೆಂದಿಂತಾವುದ್ ಪಾಸ್ಯೋಕ್ತಿಯಿಂ ಕವಿಗಳ್ ವರ್ತಿಪರಲ್ಲದಾವ ಪೊಜೆವುಟ್ಟಿಂದಂತವರ್ ವರ್ತಿಪರ್ (ಪಚಕ್ರಿಸಂ. ೦-೪೭). [<ಪೊಜ್ಜೆ./ತಮಿ. ಮುಜ್ಜೈ, ಮುಜ್ಜೈವು; ದಾಲ. ಮುಜ; ಮುಜಮು ; ತುಳು. ಕೊಡ. ಪೊರೆ ; ಕುಲು. ಪೊಜ, ಪೊಜ್ಜ, ಪೊರ, ಪೊರ್ರ ; ಕೋಡ. ಪೊಯ್ರ್; ತೊದ. ಮುಜ್ಜ್ ; ಕೊಂದ. ಮುಂರ್]

ಪೊಜ್ಜ್ ೨ 'ಮುಜ್ಜ್' ನೋ.

ಪೊಜೆಕಾಱ (ನಾ). ಪೊರೆಯಿಡುವವನು : ಆರ್ತನಾದ ಮಾಡುವವನು : ಕರೆದು ತಂದರು ಕವಿದ ಗಾವಳಯ ಗುಜುಪಿದೆ ಪೊಜೆಕಾಱರಂ ಪೊಜೆಗೆ ಗುಜಿಯಾದ ಪಾತಜನು (ಪಧ್ಯ. ೯-೨).

[ಪೊಜ್ಜ್ + — ಕಾಱ]

ಪೊಜೆಗಿಡಿಸು (ಕ್ರಿ). ಸಂಬಂಧವನ್ನು ಕಡಿದುಹಾಕು; ಮಾವೆ ತಪ್ಪಿಸು : ಪೊಜೆಗಿಡಿಸಿ ಕೂಡುವುದು ಕುಲದಜಿತಮನೆಬ್ಬಿಸಿ ನೆರವುವುದು . . . ಕಾಮನ ಕೆಮ್ಮಂ (ಪಂಪಿಪ್ರ. ೬-೭೦).

[ಪೊಜೆಗಿಡು (<ಪೊಜೆಗೆಡು) + — ಇಸು]

ಪೊಜೆಗಿಡು 'ಪೊಜೆಗೆಡು' ನೋ.

ಪೊಜೆಗೆಡು. ಪೊಜೆಗಿಡು (ಕ್ರಿ). ೧. ಕ್ರಮತಪ್ಪು; ರೀತಿಗೆಡು : ತನಗಣಂ ಪಾಣ್ ಮುನ್ನಮಿಲ್ಲೆಯುದಂ ಪೊಜೆಗೆಟ್ಟರ್ಚಿಪ ಲಿಂಗದಿಂ . . . ಅರ್ಚಿದು (ಪಪ್ರ. ೨, ೦೬ ಕ್ಕೆ ಕೋಕ್ಕಶಾಪಾಪಹಾರ(೧೬). ೨. ಕಟ್ಟು ಪಾಡಿಲ್ಲದಿರು : ಸ್ವೇಚ್ಛೆಯಿಂದ ಕೂಡಿರು: ಪೊಲಬರೆಲ್ಲಂ . . . ನಿನ್ನ ಪೊಜೆಗೆಟ್ಟು ನಡವಳಿಯು[ನಾಕ್ಷೇಪಿಸೆ] (ಕಾರಾಪ್ರ. ೩-೬ ಪ); ಪೊಜೆಗೆಟ್ಟು ಮಾತಾಡುವರು ಪಿಡುದರು (ಪೋಚಕ. ೦೪-೧೩). ೩. ನೀತಿತಪ್ಪು; ಶಿಷ್ಟಾಚಾರವಿಲ್ಲದಾಗು : ಎಮ್ಮ ತಂಗಯಾರ್ಗೆವರು ಪೊಜೆಗೆಟ್ಟು ಹಂದಿರಾದರೆಸಗೆ (ಆಪಾಂ. ೨೦೦-೧೪೩) ; ಆತ್ಮೀಯನಳಿಯ ದುದುವೆಯಾಗಿ ಆವರ್ಬ್ಬರ ಸಂಗದಿಂದ ಹುಟ್ಟಿತ್ತೊಂದು ಮಗು ಪೊಜೆಗೆಟ್ಟು ತಂದೆ ಮಗಳ ಮದುವೆಯಾಗಿ ತ್ರಿಪುರದ ಮಧ್ಯದೊಳಗೆ ಕ್ರೀಗಳ್ ದೇಗುಲ ನಿಂದಿತ್ತು (ಪಗ. ೪. III. ೦೧೦-೧೩೮). ೪. ನಡತೆಯು ಹಾಳಾಗು : ಶೀಲವಿಲ್ಲದಿರು : ಅರಸಿಯುಂ ಪೊಜೆಗೊ(ಗೆ)ಟ್ಟ ಹೆಣ್ಣಾಪಾಗಮಿರವ . . . ಪೋಲಿಪರ್ (ಪಕ್ಕ. ೨೪-೦೩). **ಪೊಜೆಗಿಡು**: ೫. ಸಂಬಂಧವು ಕಡಿದುಹೋಗು : 'ಪೊಜೆಗಿಡಿಸು' ಪರಾ. [ಪೊಜ್ಜ್ + ಕೆಡು]

ಪೊಜೆಗೆಯ್ (ಕ್ರಿ). ಜೀರು : ಆರ್ತನಾದ ಮಾಡು : ತಬ್ಬಿಬ್ಬು ಗೊಂಡು ಪೊಜೆಗೆಯ್ವರಿಂ ಸುಯ್ವರಿಂ . . . ಪೆಱಲದ್ಭುತಮಾದುದು (ಪಪ್ರ. ೩೬-೨೦). [ಪೊಜ್ಜ್ + ಕೆಯ್]

ಪೊಜೆಗೇಡಿ (ನಾ). ಸಂಬಂಧವನ್ನು ಹಾಳುಮಾಡಿಪವನು : ಜಂದನಾರಿ ದುರ್ಧಾದ ನಾರಿ ಪರಿ ತಾ ಪೇರುರದ ಪೆಂಗಸುಜ್ ಬೊಮ್ಮನು ಮಗಳ ಪೊಜೆಗೇಡಿ (ಶಾಬ್ಭಿ. ೦೪-೪೭). [ಪೊಜ್ಜ್ + ಕೇಡಿ]

ಪೊಜೆಗೇಳು. ಪೊರೆಗೇಳು (ಕ್ರಿ). ಆರ್ತನಾದವನ್ನು ಕೇಳು ; ಗೋಳಾಟವನ್ನು ಆಲಿಸು : ಗಜರಾಜನ ಪೊಜೆಗೇಳಿ ಸರಹರಿ . . . ಸಿರಿ ಸಹ ನಡತಂದ (ಕಂಪ. ೨೩-೩೦) ; ಪೊಜೆಯಿಸುವೈ ನಾಗಪತಿಶಯನ ರಕ್ಷಿಸೆ ಬೋಗರ ಪೊಜೆಗೇಳಲ್ಕಿವುಮಮದ ಕರವಂ (ಪಪ್ರ. ೩. ೨-೦೪). **ಪೊರೆಗೇಳು** : ಪುರಜನರಿಟ್ಟ ಪೊರೆಗೇಳದಲೆ ಗುಣಗಳನೊಟ್ಟಗಿರಿಸಿದ ರಾಘು ಗುಣವಜಿಯಂಗನೀಮೆಯಂಲಿ (ಪಪ್ರ. ೪-೩).

[ಪೊಜ್ಜ್ + ಕೇಳು (< ಕೇಳ್)]

ಪೊಜೆಗೊಡು (ಕ್ರಿ). = ಪೊಜೆಗೆಯ್ : ಹಾವಿಯ ಬೆಳ್ಕನ ಕಳ್ಳರು ಕಾಟದಜಿ ಇವ್ವಾರಿಗೆ ಪೊಜೆಗೊಡುವ (ಪಗ. ೪. II. ೨೪೩-೦೨).

[ಪೊಜ್ಜ್ + ಕೊಡು]

ಪೊಜೆಗೊಳ್ (ಕ್ರಿ). ನೀತಿಮಾರ್ಗವನ್ನು ಹಿಡಿ : ಲಾವಣ್ಯಸಂಪನ್ನೆಯಪ್ಪ ಕನ್ನೆಯಂ ತನಗಾಟಿಸಿ ಒಡೊಡವೊಪ್ಪದೆ ಪೊಜೆಗೊಂಡು ಕುಟ್ಟಿದ (ಪಂಪಪ್ರ. ೩-೨೭ ಪ). [ಪೊಜ್ಜ್ + ಕೊಳ್]

ಪೊಜೆದಪ್ಪು (ಕ್ರಿ). ನೀತಿಗೆಡು : ವಾರಿಜಸೇತ್ರೆಯರಿಗೆ ಪೊಜೆದಪ್ಪದ ವೀರರೊಂಟೀ ದೋಕದೊಳಗೆ (ಕ.ಚಾಪಾಂ. ೨೩-೦೦೩). [ಪೊಜ್ಜ್ + ತಪ್ಪು]

ಪೊಜೆಪಾರ್ (ಕ್ರಿ). ಆಶ್ರಯವನ್ನು ನಿರೀಕ್ಷಿಸು ; ರಕ್ಷಣೆಯನ್ನು ಬಯಸು : ನಾನ್, ಇನ್ನೇಕೆ ದೇವರನ್ ಪೊಜೆಪಾರಪೇಳ್ಕುಮೆಂ (ಪಂಕಿಂ. ೧೦-೧೩೩). [ಪೊಜ್ಜ್ (<ಮುಜ್ಜ್) + ಪಾರ್]

ಪೊಜೆಪು. ಪೊಜಿಪು (ನಾ). ೧. ಸಮುದ್ರ. ನದಿ ಮುಂತಾದುವುಗಳ ಪೊರೆತ. — ಅಬ್ಬರ: ನರೆ ಸೊರೆ ತೆರೆ ತೆರೆ ಪೊಜಿಪು ಕೊಮ್ಮಗೆ ಜಜ್ಜರಿತ ಪಲ್ಲಳ ತಡಿವರಸ ಜರೆ ನದಿ ಪರಿಯಲು (ಕಾಗ. ೬-೨೬). **ಪೊಜಿಪು** : ೧. ಇಂತವ್ವ ಕವಧಿಯ ಸಂಧ್ಯಮನ ಪೊಜಿಪಿನಲ್ಲಿ ಕುಂದುವೇ ನಿನ್ನ ನೊಡಗೊಡಿದೆನಯ್ಯ (ಪಗಾ. ೦೪೨-೨೦೪). ೨. ದೊಡ್ಡಧ್ವನಿ :

ಅರ್ಘ್ಯಂ : ಸುರಬಲದ ನಿಸ್ಸಾಳಕೋಟಿಯ ಮೊಱೆಯ ಮೊಳಗಿತು (ಭಾಷಾ. ೭-೦೪) : ತಂಬಟದ ಮೊಱೆಯ ಕೋಟಾಕೋಟಿ ಪೆಟಲಾರ್ಪ್ ದಶದಿಕ್ಕುಭರಿತದಿ ಘಮ್ಮೆಸಲಾಮ್ಮು (ಜಿಷ. ೧೦-೯) : ಮ್ಯಗಳ ಮೊಱೆಯ ಮುಸುಕಲು (ಶಾಕ್ಷ. ೪೬-೩). ಪಿ. (ಅಲಂ) ಪಿಟ್ಟು : "ಕೋಪ" (ಕಸೂ. ೪ ೩. ೭೩) : ಸಿಡಿಲುಗಳ ಗರ್ಜನೆಯ ಗಗನವ ತುಡುಕುವಾಗುಳಿಕೆಗಳ ಮೊಱೆಯಿನ ಮಿಡುಕುಗಳ ವಾಯ್ ಸೂಸಿದವು ಹಾಸದ ವಿಳಾಸದವಿ (ಶಾಕ್ಷಾ. ೦೩-೨೦). [ಮೊಱೆ + — ಪ್ಪ - / ತಮಿ. ಮುಱೈಪ್ಪು, ಮುಱೈಪ್ಪು; ತೆಲು. ಮುರಿಪಮು, ಮುರಿಪೆಮು]

ಮೊಱೆಮುಗಿಲು (ನಾ). ಗರ್ಜಿಸುವ ಮೇಘ ; ಗುಡುಗುವ ಘೋಡ : ಮೊಱೆಮುಗಿಲ ಮುದವಂದದರಿ ಮೊಳಗುವ ವಾದ್ಯರಭಸದರಿ . . . ಮೋಹರ ತಗೆದುದೀಚೆಯರಿ (ಶಾಕ್ಷಾ. ೦-೭).

[ಮೊಱೆ + ಮುಗಿಲು (< ಮುಗಿಲ್)]

ಮೊಱೆಯಟಿ (ಕ್ರಿ). ೧. ಕಟ್ಟುಪಾಡುಯಿಲ್ಲದಾಗಿಸು : ಧರ್ಮವನ್ನು ನಾಶಮಾಡು : ಮೊಱೆಯಟಿವ ಮದ್ಯಪಾಮಮನಜಿನಿಮಂ ಪಾಧುವ ನೀಂಟ (ಕರಾಕ್ಷ. ೦೦-೨೦). ೨. ನೀತಿಮಾರ್ಗವನ್ನು ಬಿಡು; ಶಿಷ್ಟಾಚಾರ ವಿಲ್ಲದಾಗು : ಅರಸಂ ತನ್ನ ಮಗಳಂ ತಾನೆ ಕೊಂತು ಮೊಱೆಯಟಿದಂ (ಕಷ್ಟಾ. ೦೧೯-೨೩). [ಮೊಱೆ + ಅಟಿ]

ಮೊಱೆಯಿಕ್ಕು (ಕ್ರಿ). ಆರ್ತನಾದ ಮಾಡು : ಮೊಱೆಯಿಕ್ಕುತಿರ್ದನೋಲಿಲದೇವಂ (ಕಾಕ್ಷಿ. ೧೦-೩೯). [ಮೊಱೆ + ಇಕ್ಕು]

ಮೊಱೆಯಿಡಿಸು (ಕ್ರಿ). ಸಂಕಟದಿಂದ ಕೂಗಿಕೊಳ್ಳುವಂತೆ ಮಾಡು : ಗೋಳುಗುಟ್ಟಿಸು : ಮೊಱೆಯಿಡಿಸುತಿಂತಿವರನೆನ್ನ ಮಹಿಮೆಯ ಭೃತ್ಯ (ಹರಿ. ೮೫. ೫೦-೦೮) ; ಪಿರಿದು ಮರ್ಬಲಗೂಡಿ ಬಂದು . . . ಮೊಱೆಯಿಡಿಸಿದ ವೈರಿಭರ (ಗಿಷಿ. ೭-೩೩). [ಮೊಱೆಯಿಡು + — ಇಸು]

ಮೊಱೆಯಿಡು, ಮೊರೆಯಿಡು (ಕ್ರಿ). ೧. ಆರ್ತನಾದ ಮಾಡು : ಗೋಳಾಡು; ಅಕ್ರಂದಿಸು : ರೌದ್ರಶರದ ದೊಱೆಗೆ ಕೆಯ್ಯಂ ನೀಡಿದಿನಗಳ್ . . . ಸುರರ್ ಮೊಱೆಯಿಟ್ಟರ್ (ಪಂಚಾ. ೧೩-೦೯); ಉಱೆ ಕಾವ ಸೂರ್ಯರಶ್ಮಿಗೆ ಮೊಱೆಯಿಡಲೆಂದಿಕ್ಕಿ ಪಿಡಿದ ತೊವಲೆಂದಿನಿಗಂ ತುಱುಗಿರ್ದಾವರೆಗೊಂಬು ಮುಱೆದು ಪೆಬಲ್ಮಾಡಿಕೊಂಡು ಸದಮರ್ ಪಥಿಕರ್ (ಜಗ. ೦೭-೭೦); ಅರಸಿಯರು ಸುತರು ಕುಮಾರರು ಮೊಱೆಯಿಡಲು ಫಲುಗುಣನ ಬಯಿಸಿದ ಪರಿಯ . . . ಮುಱೆಪರೆ (ಶಾಕ್ಷಾ. ೬-೯); ದೂರದಿ ನಿಂತು ಮೊಱೆಯಿಟ್ಟು ಕೂಗಲು ಜೋರಿಗೆ ದಯವು ಪುಟ್ಟಿತೆ (ಕರೇಂಕ. ೦-೦೫೭-೦). ೨. ದೂರು ; ಅಹವಾಲು ಹೇಳು : ಕಳವಳಿಸಿದುದು ಮೊಱೆಯಿಟ್ಟು ದಭವನ ಮುಂದೆ ಭುವನಜನ (ಶಾಕ್ಷಾ. ೬-೮೩). ಪಿ. ಬೇಡಿಕೊಳ್ಳು ; ಪ್ರಾರ್ಥಿಸು : ಕಚ್ಚದಿರಿಮೆಂದು ಭಯದಿಂ ನಿಚ್ಚಂ ಮೊಱೆಯಿಟ್ಟು ಪುತ್ರನರ್ಹಿಸುತಿರೆಯಾಂ (ಸಭಾ. ೯-೩೦). **ಮೊರೆಯಿಡು** : ೧. ಪಟ್ಟುಗದ ಬಾಗಿಲೊಳ್ ಕುಳಿತು ಮೊರೆಯಿಡುವ ಪರಿಯೇನು (ತಿಗಂಧಿ. ೪೩೭-೦೩) ; ನೀನು ಅರಸಾಗಿ ನಮ್ಮನ್ನೂ ರಕ್ಷಿಸೆಂದು ಪೆರೆಯಿಟ್ಟರು (ಕೃಷಾ. ೩೩೩); 'ಯಾಕೆ ಈ ದಾಸ್ಯ?' ಎಂದು ಒಮ್ಮೊಮ್ಮೆ ಹೃದಯ ಮೊರೆಯಿಡುತ್ತಿತ್ತು (ಕಮಿ. ೨೦೦). ಪಿ. ದೇವರು ದಯಪಾಲಿಸುತ್ತಾನೆ. ಅದುದರಿಂದ ಅವನಿಗೆ ಮೊರೆಯಿಡು (ಮುಂಡಾಮಾ. ೬-೦೪೨). [ಮೊಱೆ + ಇಡು]

ಮೊಱೆಯೊಗು 'ಮಱೆವೊಗು' ನೋ.

ಮೊಱೆಯೋಗು 'ಮರೆವೋಗು' ನೋ.

ಮೊಱೆವುಗು 'ಮಱೆವೊಗು' ನೋ.

ಮೊಱೆವೆಱು (ಕ್ರಿ). ತಕ್ಕುದಾಗಿರು ; ಹೊಂದಾಣಿಕೆಯಿಂದಿರು (?) : ಮೊಱೆವೆತ್ತ ಲಲ್ಲೆವಾತುಗಳಪ್ಪುಗೆಯಿಂದ ಪೆಱೆ ಪೂರ್ಣತೆಯನೆಯ್ದಿದರು (ಪೋಷಕ. ೩೨-೦೪). [ಮೊಱೆ + ಪೆಱು]

ಮೊಱೆವೇಳ್ (ಕ್ರಿ). ಆರ್ತನಾದ ಮಾಡು ; ಬೊರೆಯಿಡು : ಮೊಱೆವೇಳ್ದ ದೂತರಂ ಗರ್ಜಿಸುತೆ . . . ಭರತಂ ನುಡಿದನು (ಕೃಪಾಣ. ೨೦-೪). [ಮೊಱೆ + ವೇಳ್ (<ವೇಟು)]

ಮೊಱೆವೇಟು (ಕ್ರಿ). ಸಹಾಯವನ್ನು ಕೇಳು; ಆಶ್ರಯವನ್ನು ಬೇಡು: ಮಹಾಪದ್ಮನ್ಯವಸಂ ಬಲ್ಲಾಮಂ ಮಾಮಂ ನಿಮಗೆ ಮೊಱೆವೇಟ್ಟಿದ [ನಿದ]ಂ (ಶಕ್ಷಕ್ಷ. ೭-೦೦). [ಮೊಱೆ (<ಮಱೆ) + ವೇಟು]

ಮೊಱೆಸರ (ನಾ). ಆರ್ತನಾದ; ಚೀರಾಟ : ಅಕ್ಕಟಕ್ಕಟದೇನೊ ಮೊಱೆಸರ ಕಮ್ಮನೊಂದೊಕ್ಕಲೊಳಗೆ ಕೇಳಲಾಮ್ಮು (ಕರ್ಣಿ. ೭-೩೦).

[ಮೊಱೆ + ಸರ]

ಮೊಱೆಹೊಗು 'ಮಱೆವೊಗು' ನೋ.

ಮೊಟಿ, ಮೊಣ, ಮೊಳ (ನಾ). ೧. ಮೊಳಕೈಯಿಂದ ಹಸ್ತದ ತುದಿಯವರೆಗಿನ ಅಳತೆ : ಎರಡು ಗೇಣು ; ಅರತ್ನಿ: "ಅರತ್ನಿನಾಮಂ ಸಣಪ್ಪಕಂ ಮೊಟಂ" (ಕಪ್ಪುಕೋ. ೬೯-೦೪) ; ಏಟ್ ಧನು ಮೂಱು ಮೊಬನಿಂ ಪೇಟ್ ಹಜಂಗುಲಮೆ ಮೊದಲ ನಾರಕರೊಡಲುತ್ತಮರಂ ತದ್ವಿಗುಣಮೆ ಸೂಟ್ಗೊಂ ಪಾರಕರ ಕಣಿನರ್ಪೋಕ್ಕೆಳ್ದಂ (ಪಾಪ್ರ. ೩-೧೪) ; ಮೊಬ ಮೂಡಲೆತೆಯ ತನುರುಚಿ ಕಂಪಿನ ಪೊಳಪಿನ ಕೌಮುದಿಯನೇಂ ಕಡಲ್ಮರಿಯಿಪುದೋ (ಅಜಿತ. ೪-೧೪). **ಮೊಣ** : ೨. ಮೊಳಕೈ ಹಾಗೂ ಮೊಳಕಾಲುಗಳಲ್ಲಿರುವ ಮೂಳೆಯ ಸಂಧಿ : "ಮೊಣ (ಮೊಳ), ಜಾನು, ಮೊಣಗಂಟು" (ಸಂಚಿಸಂ. ೧೧೨). 'ಮೊಣಗಂಟು' ಪರಾ. **ಮೊಳ** : ೧. ಮತ್ಸ್ಯದೇವರ ಪವಣಾಮೊಣಿಸುವರು . . . ಅವನಿಪತಿ ಕೇಳ್ ವೇದ ವಾಕ್ಯಕೆ ಹತ್ತುಮೊಳ ಮಿಗಿಲು (ಪಂಪಿಪ. ೪-೨೬) ; ಕಟಿಯ ಬಾಲವು . . . ಮುಂದೆ ಗೇಣಾರೇಣು ಮೊಳ ತೋಳನಿತು ಬೆಳ್ಪುತಿರೆ (ಶಾಕ್ಷಾ. ೦೨-೧) ; ಮೊಳನನಿಕ್ಕಲು ಸೊಂಡಿಲಂ ಗುಹಂ (ಅಕ್ಕಿಕ್ಷ. ೨-೬-೦) ; ಧರ್ಮಕ್ಕೆ ದಟ್ಟ ಕೂಟ್ಟರೆ ಒತ್ತರಿಗೆ ಹೋಗಿ ಮೊಳ ಹಾಸಿದ (ಗಾಡ).

[ದೇ.ಪ ತಮಿ. ಮಲ. ಮುಬವ್ ; ತುಳು. ಮೆಳೆ, ಮೊರ, ಮುರ ; ಕೊಡ. ಮೊಳೆ ; ತೆಲು. ಕೋಡಾ. ಪರ್ಜ: ಮೂರ]

ಮೊಟಂಗಾಲ್ 'ಮೊಟಕಾಲ್' ನೋ.

ಮೊಟಂಗು$_1$ 'ಮೊಟಗು$_1$' ನೋ.

ಮೊಟಂಗು$_2$ 'ಮೊಟಗು$_2$' ನೋ.

ಮೊಟಕಯ್ 'ಮೊಟಕೆಯ್' ನೋ.

ಮೊಟಕಲಿಸು (ಕ್ರಿ). (?) : ಪಾಯ್ದಂಬಿಪಂಬುಮ್ಬವೊಲ್ ಪುಜಾನು ಪುಟಿಂ ಮೊಟಕಲಿಸೆ ಮನೋವೇಗದಿ ಬೇಗಮಚ್ಚಂ (ಕರ್ಣಪ. ೬-೪೦) ; ಪುಂಗಿದಂಗಂ ನೀಳ್ದ ಗಾತ್ರಂ ಮೊಟಕಲಿಸಿ ಕರಂ ದಂಡೆಯಂ ನೀಡಿದಂದಂ (ಕರ್ಣಪ. ೬-೬೩). [? + — ಇಸು]

ಮೊಟಕಾಲ್, ಮಣಿಕಾಲು, ಮಣಿಕಾಲ್, ಮಣಿಕಾಲು, ಮೊಣಕಾಲ್, ಮೊಣಕಾಲು, ಮೊಳಕಾಲ್, ಮೊಳಕಾಲು, ಮೊಟಂಗಾಲ್ (ನಾ). ಕಾಲು ಮತ್ತು ತೊಡೆ ಸೇರುವ ಭಾಗ ; ಮೊಳಸಂದು ; ಜಾನು : ನರಿಗಳ್ ಬಂದು . . . ಎರಡುಂ ಕಾಲ್ಗಳಂ ಮೊಟಕಾಲ್ವರೆಗಮೊಂದು ದಿವಸಂ ತಿಂದತ್ತು (ಪಜಾ. ೫೯-೦೩) ; ಅಂತು ದಿಟ್ಟು ಸುಲಿದ ಮೊಟ ಕಾಲ್ಗಳುಂ . . . ಉಡಿದ ಕೈಗಳುಮಾಗಿ ಬೆರಸಟುತ್ತುಂ ಬಂದು (ಪಂಚಾ. ೨-೪೦ ೩) ; ಸಾವಂಗೆ ಸಮುದ್ರಂ ಮೊಟಕಾಲುದ್ದಂ (ಪಂಪಿಪ. ೪೯-೨). ಮಣಕಾಲು : "ಜಂಘಾ-ಮಣಕಾಲು" (ಶಾಸಾ. ೦೦-೩೩). ಮಣಿಕಾಲ್ : ನೋಡಿ ಗುಜ್ಯಂ ಮಣಿಕಾಲ್ ಮಣಿಯ ಭುಜಮೊಗೆಯ . . . ಧನುರ್ಧರರ್ಕಳದಟಿಂದ್ದರ್ (ಶಾಪ್ರ. ೬-೮೨) ; ಎಳ್ಪರದ ಕುದುಳ್ಗಳಂ ಪರೆಪ್ಪಿ ಜಲ್ಲಿಮಿಗಕ್ಕೆ ವರಾಹಯೂಥಮೇಳ್ತರೆ ಮಣಿಕಾಲ್ಗಳಂ ಮಡಿದು ತೋಱದ ರೊಮ್ಮನೆ ಸನ್ನೆಮೇಂಟೆಯೊಳ್ (ಶಾಪ್ರ. ೪-೧೩). ಮಣಿಕಾಲು :

ಮಾಣಕಾಲು ಈಡಿಗ ಕಣಕಾಲು ಸಮ್ಮಗಾಜ . . . ಅಂಗಾಲು ಶುದ್ಧವಾದಿಗ ಕಾಣರೋ (ಶರಾಪ. ೦೬೫–೭೭೬). **ಮೊಣಕಾಲ್**: ಸಿರಿ ಬರೆ ಮೊಣಕಾಲನಾಂವ ಗಾಪರುಮೊಳರೇ (ಶಹಾಶ್ಯ. ೦೦–೦೭); ಬಟ್ಟಲು ಕಲ್ಲು ಮೊಣಕಾಲ್ಗಳುಂ ಮೊಟ್ಟನೆ ಮುಱಿದ ನಿಟ್ಟಿಲುಗಳುಂ . . . ಮಹಾಭಯಂಕರ ದುಗೆ (ಶಾಶಾಕ. ೦೨–೫೯ ಪ). **ಮೊಣಕಾಲು**: "ಜಾನು:, ಕ್ಷಾರು ಪರ್ವ:, ಅಸ್ಮಪರ್ವ: — ಈ ೩ ಮೊಣಕಾಲು" (ಜಾಜಾ. ೦೨೦); ಮೊಣಕಾಲೊಳಸಂಮುಗಳು ಬಾತುಕೊಂಡು . . . ಕ್ರೋಷ್ಟುಶೀರ್ಷವನು ಕೊಂಬುದು (ಪ್ರಕ್ರಿಜಾ. ೨. ೧೦೭); ಕಣಕಾಲ ಕಟ್ಟಿಸುವಳು ಮೊಣಕಾಲ ಮಣಿಸುವಳು (ಸಜಾಸ್ಕ. ೦೦೧೭); ತಲೆ ಸಾರುವಾಗ ಮೊಣಕಾಲಿಗೆ ಪಟ್ಟ ದೊರೆಯಲಾರದು (ಕಂಜಾಮು. ೨). **ಮೊಳಕಾಲ್**: ಪಲ್ಲಾದ ಮುಳೆಯಂ ಮೊಳಕಾಲಂ ಕಾವ್ವ (ಪಕ್ಷ. VIII, ಸಾಗಾ. ೦೦೯–೦೯; ೧೦೭೭); ಕಣಕಾಲ್ ಮೊಳಕಾಲ್ಮುಖಂ ಭುಜಂ (ಪಕ್ಷ. VIII, ಸಾಪಾ. ೦೭೫–೮೨ : ೧೧೫೭); ಮೊಳಕಾಲ್ಗಳಲಿ ಪಾಯವ ನೋಡಿರೈ ನೀವು (ಸಾಪಾ. ೦೭–೭). **ಮೊಳಕಾಲು**: "ಜಾನು:, ಕ್ಷಾರುಪರ್ವನ್, ಅಸ್ಮೀವತ್ — ೩ ಮೊಳಕಾಲಿನ ಹೆಸರುಗಳು" (ಸಜಾಸ್ಕ. ೦೧೦); ಬೊಬ್ಬಿಱಿದು ಮೊಳಕಾಲಮೂೞಿದರು (ಶಾಜಾ. ೧೮. ೪–೮೩); ರಕ್ಕಸರಾಯನೆತ್ತಿದನೊಡನೆ ಬೊಬ್ಬಿಱಿದವುದಿನು ಮೊಳಕಾಲಲಾಧನುವ (ಕಾಪಾ. ೧–೦೫–೨೦). **ಮೊಟಂಗಾಲ್**: ಪನಿತು ಮೊಟಂಗಾಲೊಳ್ ಕಾಲ್ವರಿವ ನೊರೆಯ . . . ತಾರೊಡಲು ಪೇರಾವೆಗಳ (ಜಾಪಾಕ್ಕ. ೧೧–೪).

[ದೇ.ತ ತಮಿ. ಮುಲ. ಮುಟಜ್ಜುಲ್; ತುಳು. ಮೊರಂಪು. ಮೊಲಂಕು : ತೆಲು. ಮೋಕಾಲು ; ಕುರುಖ್. ಮುಂಖಾ ; ಮಲ್ತೊ. ಮುಜೆ]

ಮೊಟಕೆಯ್, ಮೊಣಕೆಯ್, ಮೊಣಕ್ಕೈ, ಮೊಳಕಯ್, ಮೊಳಕ್ಕೈ, ಮೊಟಕೆಯ್, ಮೋಟ್ಕೈ (ನಾ). ಕೈಯ ನಡುಗಂಟು; ಕಣಕ್ಕೆ ಮತ್ತು ತೋಳುಗಳ ನಡುಮಿನ ಭಾಗ: "ಕಪೋಣ:, ಕೂರ್ಪರ:... ಈ ೨ ಮೊ(ಬ)ಣಕಯ್" (ಜಾಅಮು. ೫೫–೭೭೯); "ಮೊಟಕೆಯ್ಕ ಕಬಧಾಗವು ಪ್ರಕೋಷ್ಠ, ಮುಂಗೆಯ್" (ಜಾಅಕ್ಕ. ೨). **ಮೊಣಕೆಯ್**: "ಪ್ರಕೂಂಡ ಮಂಬುದು ಮೊ(ಬ)ಣಕೆಯ್ಯಂದ ಮೇಗಣ ಭಾಗ್" (ಜಾಅಮು. ೫೫–೭೭೯). **ಮೊಣಕ್ಕೈ**: ತೋಳುಗಳನ್ನ ಮೊಣಕ್ಕೆಯವರೆಗೆ ಮಡಿಸಿಕೊಂಡಿದ್ದರಿಂದ ಹೊರಬೋರುವ . . . ರೋಮತಾಂಬಿದ ಕಪ್ಪಕ್ಕೈಗಳು (ಅಪಾಲಂ. ೦೩೦). **ಮೊಳಕಯ್**: ಚಂದನಕ್ಕುಮ್ಮಳಿಸಲೇಕೆ ನೀನೆಲೆ ಮಗನೆ ಚಂದನಂ ನಿನ್ನ ಮೊಳಕಯ್ಯೊಳದೆ ಎಲೆ ಮಗನೆ (ಒಜಾ. ೫೯. ೨೧೦–೬). **ಮೊಳಕ್ಕೈ**: ಮೊಳಕ್ಕೈ ಮುಂಗೈಗಳನಾಡಿಸುತಂ (ಪ್ರಜಾಗಿ. ೫. ೪೭.೨–೨೯); ತೊಡಗಳಂ ಮೊಳಕ್ಕೈಯೊಳೂಜಾತೆ (ಜಪು. ೪–೩೨); ಮೊಳಕ್ಕೈಯೊಳಗೆ ಯಿಜ್ಜಾಕ್ಷಿದ್ದ ರದು ಹಸ್ತಂಗಳಲ್ಲಿ ಚಾಪದ ತಿರುವನೇಱಿಸಿ ಶರವ ತೊಡಚಿದನು (ಸಂಪ. ೨೪೦೭೬); ನಿನ್ನ ಮೊಳಕ್ಕೈಯಲ್ಲೇನು ಗಾಯ ಶಾರದ ? (ಪ್ರಕ್ಷಿ. ೩೪). **ಮೊಟಕೆಯ್**: ಒಳಕಯ್, ಮೊಟಕೆಯ್, ಪೊಜ್ಜಕೆಯ್ (ಶಾಜಾಮು. ೦೦೦ ಪ್ರಪೂ). **ಮೋಟ್ಕೈ**: "ಕಪೋಣ, ಕೂರ್ಪರ: — ಈ ೨ ಮೊಟಕ್ಕೈ" (ಜಾಅಕ್ಕ. ೦೨೦); ಮೋಟ್ಕೈಯಂ ಕೊಂತದಿಂ ಕುತ್ತಿ (ಪಪಾಕ್ಷಿ. ೬–೨೦೫). [ದೇ.ತ ತಮಿ. ಮುಲ. ಮುಟಜ್ಜು ; ತುಳು. ಮೊರಂಗೆ ; ಕೊಡ. ಮೊಳಕಮ್ : ತೆಲು. ಮೋಚೆಯ್ಯಿ]

ಮೊಟಕ್ಕೈ 'ಮೊಟಕೆಯ್' ನೋ.

ಮೊಟಗಿಸು, ಮೊಳಗಿಸು (ಕ್ರಿ). ಧ್ವನಿಯುಂಟಾಗುವಂತೆ ಮಾಡು ; ಶಬ್ದಮಾಡಿಸು : ಸುಭುಜಂ . . . ಮಿಕ್ಕಿಪ ಸೇನೆ ನಡೆದು ಬಪಣಂತು ರಣದುಂದುಭಯಂ ಮೊಟಗಿಸಿದಂ (ಜಾಪಾಕ್ಕ. ೧೩–೨೮). **ಮೊಳಗಿಸು**: ಜನವಜಯ ಹಜಯ ಮೊಳಗಿಸುತ (ಪಪಾಗ. ೦೦–೪೭).

[ಮೊಟಗು$_1$ + — ಇಸು$_2$]

ಮೊಟಗು$_1$, ಮೊಳಗು$_1$, ಮೊಟಂಗು$_1$ (ಕ್ರಿ). ೧. (ವಾದ್ಯಗಳು) ಧ್ವನಿ ಮಾಡು ; ಶಬ್ದಮಾಡು : . "ಮೊಟಗು — ವ:ದನಕ್ರಿಯಾಯಾಂ-ಸ್ಯನಿತೇ ಚ (ಗುಡುಗು), ಪ್ರಕ್ಷಭೇದೇ ಚ" (ಪಪಾಂಡ) : ಆಗಳ್ ಕುಂಭ ಸಂಭವನುರವ ಜನರ ಕಳಕಳರವಮುಮಂ ಮೊಟಗುವ ಪಱೆಗಳುಮಂ ಬಾರಿಸಿ' (ಸಂಪಕ್ಷಾ. ೨–೭೨ ಪ); ಮೊಟಗುವ ಪಱೆಯುಮಾನಾನೆದು ವಟಯಿಗೆದುಮುನಾಂತ ಬಲಮುಮಂ ಕಂದು (ಪಪ. ೩೪, ಆಪಸಾ. ೨೭೭–೯ ; ೪೧). ೨. (ಮೋಡಗಳು ಒಂದಕ್ಕೊಂದು ತಗುಲಿ) ಗುಡುಗುಡು ಎಂಬ ಶಬ್ದವುಂಟಾಗು ; ಗುಡುಗು : ಕಳದರ್ ವಿಳಯಕಾಳಮೇಘ ದಂತೆ ಮೊಟಗಿ ಮಹಾಪ್ರಳಯಭೈರವನಂತೆ ಮಸಗಿ (ಜಾಪಾಕ್ಕ. ೦೦–೪೦ ಪ) ; ಱರಿದುದು ನಭಂ ನೆಲಂ ಮೊಟಗಿದುದು (ಜಾಅಕ್ಕ.೩–೦೦೩) ; ನೆಲಂ ಮೊಟಗಿದಂತಪ್ಪುದೋದಿದು ಭಯಂಕರಧ್ವನಮಾಗಲ್ (ಪಪಪಾ. ೪೦–೦೦). ೩. ಆರ್ಭಟಿಸು ; ಗರ್ಜಿಸು : ದೆಸೆಗ್ಗೆ ಕಿಮ್ಮನೆ ಮೊಟಗುವಿರೇಂ ಮೊಟಗಿದಂತೆ ಕೊಳ್ವವೆ ಮಟ್ಟಿಗಳ್ (ಕಾಪ್ಪಾ. ೪೩೭ ಪಕ್ರಶ್ವ). **ಮೊಳಗು$_1$**: ೧. ರಾಯರಥಿಕರು ಚಟುಳಚೆರಣಚಡಾಯಮಾನತರಿಧ್ವುದಾ ಖಿಳರಿಯು ದುರ್ಗವ ಮೊಳಗುವಗಣತವಾದ್ಯಪೂಷದಲಿ (ಪಪಪಾ. ೩–೦೬–೪); ಸನ್ನಾಹಭೇರಿಗಳ್ಮೊಳಗಲು ಖಾನ ಬಪ್ಪನ್ನತಗಳನೇಱಲ್ಕೆ (ಪಪಪಾ. ೦೦–೦೩); ಮಂಗಳವಾದ್ಯಗಳು ಮೊಳಗಿದವು (ಜಾಪಾಕ್ಕ. ೦೧೦). ೨. ಪಲಬಾರಿ ಕೇಳಿ ಹೆನು; ಮೋಡಗಳ ಮಧ್ಯದಿಂ ಮೊಳಗಿ ಮಾರ್ದನಿಗುಡುವ ನಿನ್ನ ದನಿಯ (ಪಪಗಾ. ೩೨–೦೦). ೪. ಶಬ್ದಮಾಡಿಸು; ಮೊಳಗಿಸು: ನಳನಾಭನು ಪಾಂಚಜನ್ಯವ ಮೊಳಗಿದನು (ಶಾಜಾಕ್ಕ೨.೯–೪೦). ೫. ಹೆರೆ; ವಿಜೃಂಭಿಸು: ಪಳೆವಿದಿರ ಪೆಳೆಯಲಿ ಮೊಳಗಿದುರಿಯವೊಲುರುಹಿದನು ದ್ರೋಣ (ಶಾಜಾಕ್ಕ೨. ೦೭–೨೫); ವೈರಿಸೇನೆಯ ಕುತ್ತಿ ತೇಗುವ ಮನದ ಮಾರುತಿ ಮೊಳಗಿದನು ಮುಂದೆ (ಶಾಜಾಳ. ೦೨–೨೦). **ಮೊಟಂಗು$_1$** : ೧. ಊರ: ವೊಟಂಗದೇ ಗೋಳಾಟಮಿಟ್ಟುಗ್ರ (ಅಪಪ್ಪ. ೩೪–೭೭೬).

[ದೇ.ತ ತಮಿ. ಮುಟಜ್ಜು; ಮುಟಕ್ಕು ; ಮುಲ. ಮುಟಿಗ್ಗ್, ಮುಟಕ್ಕ್; ತೆಲು. ಮ್ರೋಗು. ಮ್ರೋಯು. ಮ್ರೋವ್]

ಮೊಟಗು$_2$, ಮೊಳಗು$_2$, ಮೊಟಂಗು$_2$ (ನಾ). ೧. (ವಾದ್ಯದ) ಧ್ವನಿ; ಸದ್ದು; ಘೋಷ : "ಮೊಟಗು=ಮುಂಗಿಲ ದನಿ, ಒಂದು ತುದಿಯ ಪೆಸರ್, ವಾದನವಿಧಿ ವಾದ್ಯಂ" (ಪಪಾ. ೫೫. ೦). ೨. (ಮೋಡಗಳ ಘರ್ಷಣೆಯಿಂದುಂಟಾಗುವ) ಗುಡುಗುಡು ಎಂಬ ಶಬ್ದ: "ಮೊಟಗೆಂದು ಸಿಡಿರ್" (ಪಪಗಾ. ೩೦); ವಿಳಯಕಾಳಾಂಬುದದಂತೆ ಮೊಟಗುವುಂ ಸಿಡಿಲ ಬಳಗಮನೊಳಕೊಂಡ. . . ಮುಂಗಿಲ್ಗಳಂ ಬೆಸುದಾಗಳ್ (ಪಪಪಾ.೩–೫೫ ಪ); ಕಾರ ಮೊಟಗಂ ಕೇಳ್ದ ನವಿಲಂತೆ ನಲಿದು (ಪಪಗಾ. ೦–೭೯ ಪ) ; ಗುಡುಗುಡಿಪ ಮೊಟಗಂ ಕಡುಕಾಯ್ದೞಿದ ಸಿಂಗದ ದನಿಗೆತ್ತು (ಜಾಪಾಕ್ಕ. ೩–೦೬). **ಮೊಳಗು$_2$**: ೧. ಬಹುವಿಧದ ವಾದ್ಯದ ಮೊಳಗುಗಳ ತುದಿ ತುಡುಕಿತಾ ಬ್ರಹ್ಮಾಂಡಮಂಡಲವ (ಶಾಜಾಕ್ಕ. ೨–೪೦); ಪನ್ನೆರಡು ಭೇರಿಗಳ ಕಟ್ಟಿದರಾಗಳೆ ಜಗವೆಲ್ಲ ಮೊಳಗಿನ ಮೊಟ್ಟೆಯ ಕಟ್ಟಿದಂತಾಯ್ತು (ಪಪಪಾ. ೩೩–೩); ಒದಗಿರ್ಪ ಪರೆ ಕೊಂಬು ಮುರಿಕೊಂಬುಗಳ ಮೊಳಗು (ಜಾಅಕ್ಕ. ೦೧೩–೩೦೬). ೨. ಆಕಾಶದ ವಿದ್ಯುಲ್ಲತೆಯ ಘರ್ಜನೆಯ ಮೊಳಗಿನಂತೆ (ಪಪಗಾಪ್ರ. ೦೦–೪೦) : ಫಳಫಡಫಡಿಲೆಂದು ಮೊಳಗು ಮೊಳಗಿತು (ಗಾಅ. ೯–೪೦) ; ಮೊಳಗಂ ಕೇಳ್ದರಸುಕಿಯ ತಲೆದಿ ಅವರಿಸಿದವಕ್ಕ ಯೊರೆದಯ್ತಂದು (ಪಪಗಾ. ೨–೪೨). **ಮೊಟಂಗು$_2$** : ಪಿ. ಅಬ್ಬರ ; ಆರ್ಭಟ ; ಓವೋ. ಕನ್ನಡದ ಖಾಡೇ, ಮಾನ್ನೀರ್ ಮೊಟಂಗು ಕರೆನಾಡೇ (ಅಪ್ಪ. ೦೭–೭೩೦). [<ಮೊಟಗು$_1$. /ತಮಿ. ಮುಟಕ್ಕು. ಮುಟಕ್ಕೆಮ್ಮಾ; ಮಲ. ಮುಟಕ್ಕಮ್; ತೆಲು. ಮ್ರೋಗುಡು. ಮ್ರೋತ]

ಮೊಟಗು$_3$, ಮೊಳಗು$_3$ (ನಾ). ಒಂದು ಬಗೆಯ ಮರ: "ಮೊಟಗೆಲರ್ ವಾದ್ಯಮವನಿಜಭೇದದಲ್ಲಿಯುಂ ಗುಡುಗಿನೊಳ್ ಪೊಬ್ಬಿನಿಕ್ಕುಂ"

(ಶಂಚರ. ೩) ; ಮೊಬುಗಿನ ಕಾಮಂ ನೆಲ್ಲೆಯ ಕಾಯ್ದು ಕುವೆಮ ಕಾಯ್ದ್ ಬೇಱೆಬೇಱೆ ಸವಿಪಡೆದಿರವೇ (ಶಕಾಂ. ೧೭೩). **ಮೊಳಗು**೨ : ಪುಕ್ಕಿ ಮೊಳಗರನೆಲ್ಲಿ ಮಾದಲ . . . ಕರ್ನಾಕಾರದ ಮೊತ್ತವಿವೆ ಪೋಡುಬಲೆ (ಹರಿಶ. ೩-೦-೩೭) ; ಕಮಾಲಂ ಮೊಗಾಮಂ ನೆಲ್ಲಿ ನೇಜಿರ್ ತಮುಕು ವನೆಗಳೊಪ್ಪಿರ್ಕುಮಾ ಕಾಡೊಳೆತ್ತಂ (ಶಾತಂ. ೩ ೩೨).

[ದೇ.ಪ ತೆಲು. ಮೊಲುಗು, ಮೊಲ್ಲು, ಮೋಲುಗು, ಮೋಲ್ಲು]

ಮೊಬುಗುಗೇಳ್ (ಕ್ರಿ)· ಗುಡುಗಿನ ಧ್ವನಿಯಂಪ್ಪು ಕೇಳು: ಮೇಘಧ್ವನಿಯನ್ನು ಆಲಿಸು : ಮೃಗಾಳಿ ಘೋಂಕೆನೆ ಮಬ್ಬಿಗಾಲದೊಳ್ ಮೊಬುಗುಗೇಳ್ದು . . . ರಾಮನ ಘಸ್ಟಾಪವೆಂದರಮಂ ನೆನದು . . . ಬೇವುಗೊಳ್ಲೊಳ್ಳವೆ (ಶಾಂಪು. ೦೧೦)· [ಮೊಬುಗು೨ + ಕೇಳ್]

ಮೊಬವೆಱೆಯಾರ್ಮ್ (ನಾ)· ಒಬ್ಬಾತನ ಹೆಸರು : ಚೋಲಿಗ ಮೊಬವೆಱೆಯಾರ್ಮ್ಮಗಜ್ಗಿ ಕೆಱೆಗೊಡಗದು ರಾಜಮಾನಿಂ ಮಾಗಂಡಂಗ ಗಬ್ದಿ . . . ಸಲ್ವುದು (ಎಳ. XII, ಹುಕ್ಕ. ೦೦೩-೦೪; ಸು. ೧೦೦ ೧). [?]

ಮೊಬ್ಬಿಸು, ಮುಬ್ಬಿಸು, ಮೊಬ್ಬಿಸು೨ (ಕ್ರಿ)· ೧. ತಗ್ಗಿಸು ; ಶಮನಗೊಳಿಸು ; ಕುಬ್ಬಿಸು : ಹಮರಿಳಾಜಯಮುಂ ಮದೇಭಮದ ಮೂತ್ರಾಸಾರಮುಂ ರೇಣುಪುಂಜಮುಮಂ ಮೊಬ್ಬಿ [ಶಾಶಾಂ. ತರಿಗಿ]ಸಿ (ಕಬ್ಬಕ್ಕ. ೩-೧೩). **ಮುಬ್ಬಿಸು** : ೨. ನಮಸ್ಕರಿಸು ; -ಬಾಗು : ಉಲ್ಲಾಸದಿಂ ಸಡತಂದು ತಮ್ಮಣ್ಣನಾ ಪೆಲ್ಲಡಿಯೊಳು ಮುಬ್ಬಿಸಿದನು (ಕ್ರಶಂ. ೩-೨೬). ೩. ಮುಗ್ಗರಿಸು ; ಎಡವು : ಪೆಗ್ಗಳಿಪ ನೀರಾಜನ ಪ್ರಭೆ ಕುಬ್ಬಿ ಮುಸುಳಿತೋ ಮಜ್ಜಿದು ನೀ ಮುಬ್ಬಿಸಿದೊ ಬಿಕ್ಕಾರತಿಯನದ್ಯಂಗೆ ಕೊಡುವಾಗ (ಬಚಕ್ಕ. ೩೬-೦೬). ೪. ನಾಶಮಾಡು ; ಧ್ವಂಸಗೊಳಿಸು : ನೀನಿಟ್ಟು ಸೂತ್ರದಿಂ ಚರಿಪವ ಕೈಕಾಲಂಗಳು ನೀನೆ ಮುಬ್ಬಿಸಲು ಮುಗ್ಗುವ ದೇಹದವಸು (ಕ್ರಶಂ. ೩-೧೪-೦); ಚಿಂತಿಸಬೇಡ ತಾಯೆ ನಾ ಮುಬ್ಬಿಸುವೆ ಸಪತಿಪಕ್ಕಳೆಲ್ಲ ನುಂಗಿ ಮಾ ಬಿಬ್ಬಿಸುವೆನವ್ವ ಸಂಶಯ ಬೇಡ (ಜಪಂಗ. ೩-೩೩); ಬೊಪ್ಪಗೆಯ ಉದ್ಯೋಗವನ್ನು ಮುಬ್ಬಿಸಿ ಕೆಲಸಿಗನ ಕೈಮೇಲಾಯಿತೆಂದು ನಾನು ಹೇಳುವುದಿಲ್ಲ (ನಾಕ. ೦೩೩). ೫. ವಶವಡಿಸಿಕೊಳ್ಳು ; ಅಧೀನಗೊಳಿಸು : ಸುಬ್ಬಿಯ ಸೂಳೆದುರಿಹರಲ್ಲಿ ನೋಟದಿಂ ಮುಬ್ಬಿಸಿಕೊಳುತ ಮುಸಿಗಳ (ಶಾಶಾಂ. ೪-೦೦೩). **ಮೊಬ್ಬಿಸು**೩ : ೬. ಬಾಗಿಸು ; ಬಬ್ಬಿಸು : ಕೂರ್ಗಣಿಗಳಂ ತೆಗೆದು ಧನುಮಿಗಂ ಮೊಬ್ಬಿಸುತ ಕರ್ಣಪೂರಂತೆಳೆದು ಪಾಳಿಕೋರೆಂದೆನುತ ತೆಗೆವೆಚ್ಚನು (ಶಂಭಗ. ೩೨-೦೩). 'ಮುಬ್ಬಿಸು' ಪರಾ. [ಮೊಬ್ಬು೧ + — ಇಸು೩]

ಮೊಬ್ಬು೧, ಮುಗ್ಗು೧, ಮುಗ್ಗ್, ಮುಳ್ಳು, ಮುಬ್ಬು೧, ಮೊಕ್ಕು೧, ಮೊಗ್ಗು೧, ಮೊಳ್ಳು (ಕ್ರಿ)· ೧. ಬಾಗು ; ಮಣಿ ; ಬಗ್ಗು : ಕನಕಶಾತಿಮುನೀಂದ್ರರೇವಳಗಳ ಪೂಜಿಪಡಿಗಳೊಳಂ ವಾಣಿಮಯ ಮಕುಟಮಲಿದು ಮೊಬ್ಬಿ ಪೊಡವಟ್ಟು (ಶಾಂತಿ. ೯-೨೬ ಪ) ; ಪೋಗಿ ತನ್ನ ಪೋದ್ಯೋಪಕಂಠದೊಳ್ಮೊಬ್ಬಿ ಪೊಡೆವಟ್ಟು (ಶಾಶಾಮ. ೪-೭೮ ಪ) ; ಮೇಗಣಧಿಕಾರಕೆಂತಪ್ಪ ರಾದ್ರಮುಂ ಶತ್ರುಮುಂ ಮೊಬ್ಬುವುದು (ಅಕ್ಕಣ್ಣ. ೨೬-೩೩೦)· ೨. ನಮಸ್ಕಾರ ಮಾಡು ; ವಂದಿಸು ; ಎರಗು : "ಮೊಬ್ಬು-ನಮನೇ" (ಪಜಿ:ಧಾ) ; ನಿಜಾನುಜಜ್ಞನ ಕಳೇವರದ ಕಾಲ ಮೊದಲೊಳ್ ಮೊಬ್ಬಿ (ಹರಗ. ೯-೩೦ ಪ) ; ಖರಿಯರ್ಗೆ ಮೊಬ್ಬು ಜಮಮಂ ಕೈಕೊಳ್ (ಪಶಂ. ೩-೦೨೦)· ೩. ಕುಗ್ಗು ; ಅಡಗು ; ಕುಸಿ : ಪವನಾತ್ಮಜಾ ಗದೆಯಿನೆಲ್ಲಡಗಾಗಿರೆ ಪೋದೆ ಮೊಬ್ಬಿ ಜಿಬ್ಬುಪ್ಪ ಮುದವಾರನಾಂಗಳ್ (ಪಂಚಾ. ೦೩-೩೩) ; ಆ ಸಂಗ್ರಾಮದೊಳ್ ತನ್ನಸುಜ ತನುಜ ಜಾಮಾತೃವರ್ಗಂ ಪತಲ್ವಟ್ಟಂತಾಗಳ್ ಮೊಬ್ಬಿ ತಬ್ಬುರ್ವುದುಂ (ಶಾಂತಿ ೩-೩೬)· **ಮುಗ್ಗು**೧ : ೧. ಗುರುಬಾಹಾಂ[ಬುರುಹಕ್ಕೆ] ಮುಗ್ಗಿ ಪೊಮ್ಮಟ್ಟು (ಗಣಿಮು. ೩-೩೩)· ೨. ಭೂಪರೆಲ್ಲರು ಭಯಭಕ್ತಿಯಿಂ ನೇಮಿಯ ಶ್ರೀಪಾದಕೆ ಮುಗ್ಗುತಿರಲು (ಶಂಬಸಂ. ೩೨-೨) ; ಪರಿದರ್ಕಕೇಶ್ಕಾರ್ದಿ ರಾಜರು ಕಣ್ಣೀರು ಸುರಿಪುತ ಮುಂದಡ್ಡಗಟ್ಟಿ ಚರಣಾಬ್ಜದೊಳು ಮುಗ್ಗಿ ಕೆದರು (ಪಶಂ. ೩೩-೩೭). ೩. ರಿಪುಭಟನ ಪೊಮ್ಮುಳ್ಗಳ ಧರಧುರಕ್ಕೆ ಕಲಿ ಸಾತ್ಯಕಿಯ ತರಹರಣಕ್ಕೆ ತಗ್ಗಿತು ಮಹಿಮೆ ಮುಗ್ಗಿತು (ಶಾಕ್ಕ. ೦೪-೦೦). ೪. ಎಡವು ; ಮುಗ್ಗರಿಸು : "ಮುಗ್ಗು — ಜೇರ್ಗಾವಗಂದೇ. ಗತಿಭಂಗೇ ಚ (ಮುಗ್ಗರಿಸು)" (ಪಜಿಂಧಾ) ; ಮುಂದೆ ಮುಗ್ಗುತ್ತಿರ್ದಜಲದೊಳಗಾಂ ಬೀಲುತಂ ಪಕ್ಕಗೂಡಾಗೊಜಗುತ್ತಂ ಪೋಗಿ (ಶಾದಂಪು. ೦೧೦) ; ಕರ್ಣನ ಕುದುರೆಗಳು ಮುಗ್ಗಿದವು (ಕಾಣ್ಯ. ೯-೨೬)· ೫. ಕೆಡು ; ನಾಶವಾಗು : ಹಿಗ್ಗುವೆ ದೂತೋ . . . ಮುಗ್ಗುವ ಕುಗ್ಗುವ ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕ್ಕೆ (ಪುಕಂಡ. ೦-೦೩೨ ಉಮಸ್ತುತಿ) ; ಪಡೆ ಕೆಡಲೊಳಿದ್ದಿ ಜೀವಮೂಹಾದಿಗಳ್ ನೀರ ಕುಡಿಕುಡಿದು ಮುಗ್ಗಿತೀವೊಗಳ್ದೆಂ (ಸಿಂಗಣ. ೩-೨೦)· ೬. ಕವಿ ; ಮೇಲೆ ಬೀಳು ; ಆವರಿಸು ; ಮುಗ್ಗಿ ಬೀಳುವ ಪಾಯದಳವನು ನುಗ್ಗನಸಿ ಮಾಡಿದನು (ಶಾಕ್ಕ.೪-೪೩); ಲಗ್ಗೆಯೊಡೆದು ದಾಪೆಯ ಮೇಹರ ಮೇಲೆ ಮುಗ್ಗುವ ಕುದುರೆಯ ಪೌಜು ಒಗ್ಗೂಡಿಯಿತು (ಶಾಶಾಂ. ೩೩-೦೩೫) ; ನಲೆ ಮುಗ್ಗಿದರ್ಮಗಿಲ ಪೊಗ್ಗರದಂತೆ (ಕೃಬಾಣ. ೩-೩೨). ೭. ಜಗಳವಾಡು ; ಕಾದಾಡು : ಮುಂದವರೊಳು ಮೊಗವಂಟಿ ಮುಗ್ಗದೆಯಾಡಿ ಪಳಿವಮೊಳು ಪೋರುಗೊಳದೆ . . . ಒಳುವೆಂದಿರೊಳ್ಪವಡವುದು (ಪಜಿ. ೯-೧೦)· ೮. ಕೊನೆಗಾಣು ; ಮುಗಿ ; ನಿಲ್ಲು : ಈ ವ್ಯಪಹೇತುವಿನಲ್ಲಿಯಿ ನನ್ನ ಸಂತತಿ ಇಂದಿಗೆ ಮುಗ್ಗಿ ಹೋಯಿತು (ಅಭಿ. ೦೦೩). **ಮುಗ್ಗು**೨ : ೧. ಕಡುವಿರಿಯುವ ಪೊಜೆಗಳನೆಡಪಾಡಗದ ಮೇರೊಟ್ಟಿ ಮುತ್ತೆ ಮೆಲ್ಪರಮುಮನಾಗಡೆ ಕಟ್ಟಿ ಕುಡುವ ಕುಸಿದಡಿ ವಿಡುಕದೆ ಸುಗಿದಗಿದು ಮುಗ್ಗಿ ತರ್ಗೂವ ಪದದೊಳ್ (ಸುಚಕಾ. ೩-೦೪)· **ಮುಳ್ಗು** : ೩. ಜಪದೊಳಿಜಿದಾಡಿದರ್ ಮುಳ್ಗಿದರ್ ತಳ್ಗಿದರ್ ಸಂಗಾವೇಶದಿಂದೆ (ಪಪು. ೩೬-೦೬); ಇರದಿಜಿಯೆ ಕಣ್ಣಟ್ಟು ತಳ್ಗುವರ್ ಮುಳ್ಗುವರ್ (ಪಪು. ೫೦-೩೬)· ೪. ಜನ್ನಗುದುರೆ . . . ಪೊದರಂ ಪಾಯ್ದು ಮುಳ್ಗಿ ನಡಗೆಟ್ಟು ತಜೆವಟ್ಟು ಕೊಲಗಂ ಪಟುಗದ ನೆರೆಯ ಮಜ್ಜಿಯಜ್ಜಿಯೊಳ್ ತಾಂಟಿದತ್ತು (ಶಾಪಪ್ರ. ೦೪೩-೩೬); ಮುಳ್ಗಿ ಕೆದುಮದು ಭದ್ರಪ್ಪುದುಂ ಖಿಲ್ಗಮೊರ್ವನ ಕರದಿ ಬರ್ಮದು (ಪಾಗಪ. ೦೯-೩೪). **ಮುಟ್ಟುಗ**೨ : ೨. ಆಕೆ ವಿನಮಿದಿಂ ತನ್ನ ಪದಾಬ್ಜವ ಮೇಲೆ ಮುಟ್ಟಲೊದವಿದ ಪದಪಿಂ ತೆಗೆದಿತ್ತಿ ನೃಪಸುತಂ ಮುನ್ನಿಸಿದಂ (ಶಾಪಂಶಾ. ೦೦೬); ಎಮ್ಮಿ ವಂದು ಕಾಲ ಮೇಲೆ ಮುಬ್ಬಿದ ವಿನಯಾಭಿರಾಮನಂ ತೆಗೆದು ತಬ್ಕೈಸಿ (ಶಾಪಂಶಾ. ೩೬೩). ೩. " ಮುಟ್ಟು — ಪತನೇ " (ಪಜಿಧಾ). **ಮೊಕ್ಕು**೧ : ೨. ಮೊಕ್ಕಿದನು ಓಡತಿಯರೇ (ಪಪು. ೦೨); ಅನೇಕ ದೇವಪಿಗೆ ಮೊಕ್ಕಿದಳು (ಪಜಿಕಿ. ೨೩). **ಮೊಗ್ಗು**೨ : ೩. ಅಳ್ಳಾಡಿದನಿಂದ್ರಂ ಮೊಗ್ಗಿದಂ ಪಾವಕನದಿಱಿದನುಗ್ರಾಂತಕಂ (ಎಳ. VII, ಶಾಂಪು. ೦೬೦-೮; ೨೦೬೦). ೪. ವಿನ್ನ ಸೂತ್ರವು ತಪ್ಪದರೆ ಮೊ[ಶಾಶಾಂ. ಮುಂ]ಗ್ಗುವ ಹೂಹಗಳು (ತಂಪಾ. ೬೯). ೬. ಭೂಸಾರವ್ಯಂದೆವ್ವೆರಿಯು ಪರಶುರಾಮನ ಚಂದವಱಿಯೆದೆ ಬಂದಾ ಪಳಚಿದನಾ ಪತಂಗಗಳ ಗೋದಣಮಮರಿಯೋಗೆ ಮೊಗ್ಗುವ ಚಂದದಲಿ (ಸಂಪಪ. ೨೬-೮೩). ೯. ಬಾಡು ; ಒಣಗು : ಮಾಯದ ಪುಷ್ಪಗಳು ಮೊಗ್ಗಿ ಕಂದಿದವು (ಶಾಪಪ. ೨೨). **ಮೊಳ್ಗು** : ೧. ಒಂಟಿ ಸಲಗ . . . ಸೊಂಡಿಲನ್ನೆತ್ತಿ ಮೊಳ್ಗಿ ಮುಂಗಾಲ ಮೊಣಕಾಲ ಮೇಲೆ ಕುಳಿತುಕೊಳ್ಳುತ್ತದೆ (ಪಪು. ೦೭೮). ೨. ಸತ್ಕೇಂದ್ರಜೋಳೇಂದ್ರಸತ್ಪದ ಪದ್ಮಕ್ಕೆ . . . ಮೊಳ್ಗಿದಂ (ಶಾಪಂ. ೯-೦೦೩); ನಾರಾಯಣನ ಪದಕೆ ಮೊಳ್ಗು ವೆನೇಗಳ್ (ಪಮ್ಮಕ. ೦-೨-೦೩೩). ೩. ಅರಿಭಟರ ಮಿಗೆ ಬೀಳಲಿಱಿಯೆಂಬ ಖಾನರಜ್ಜುರವಾಗ ಗಗನಮಂಡಲವ ಮೊಗ್ದುದು (ಶಂಪ. ೦-೮೫). 'ಮಟ್ಟುಗ' ಪರಾ.

[ದೇ.ತೆಲು. ಮೊಕ್ಕು, ಮ್ರೊಕ್ಕು, ಮೊಗ್ಗು, ಮ್ರೊಗ್ಗು ; ಕಾಯ್ಕಿ. ಪೊಕ್ಕ ; ಪರ್ಜ. ಮೊರ್ಕ್ ; ಗಡಬ. ಮುರ್ಕ್ ; ಕುಗ. ಮ್ರೋಂಗ ; ಪಾಲ್ಕೊ. ಮುರ್ಕ್ಲ]

ಮೊಟ್ಗೆ, ಮೊಗ್ಗೆ (ನಾ). ೧. ನಮಸ್ಕಾರ ; ವಂದನೆ : "ತುಟಿಲೆ ಱಗು ಮೊಟ್ಗು ಪಣಿ ಕುಂದಿ ಪೊಡವುದಿರೆಯುಂ ನಮಸ್ಕಾರಕೆ ತವೆ ಸಂದ ನಾಮ" (ಕ್ಯಪಾಂ. ೬೩). ೨. ಅಧೀನ ; ವಶ : "ಮೊಟ್ಗಿಸು" ಪರಾ. ಮೊಗ್ಗೆ : ೧. "ಮೊಗ್ಗು [ಜಾಣಾಂ. ಟ್ಗು] ತುಟ್ಟಿಲ್ಲೆಯ್ನಲ್ ಬಿಡದದುವೆ ವಂದನಾರ್ಥದಿ ತೊಡರ್ಗುಂ" (ಶಶಾ. ೦೮೯). ೨. "ಮೊಗ್ಗೆಸೆ ವಶಮೊಳ್" (ಕಾಪಾ. ೯೬); "ಮೊಗ್ಗೆಸೆ ವಶವೆಂದು" (ಶಮಾ. ೯೬). ೩. ಕೊಳ್ಳಿ ; ಸೂರೆ: "ಮೊಗ್ಗೆಸೆ ತಾಂ ಸೂಱೆಯೆಂಬ ತೆಱನದು" (ಶಮಾ. ೦೫೦); ಗೆಲ್ದ ಜಯದಗ್ಗದ ಸುಗ್ಗಿಯ ಮೊಟ್ಗು ದೆಂದು ಬಂದಿರದೆ ಪೊಣರ್ದಿ (ಭುತ್ರಿ. ೦-೦೩). ೪. ಸುಲಭಸಾಧ್ಯವಾದುದು : ಆ ಬೇಳಂನ್ಗುದಿಗೇಳ್ದು ಕಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ (ಶಂಪಾ. ೬-೨೪); ಸರೇಂದ್ರಸೇನ ಮುನೀಂದ್ರಂಗೇಕಾಕ್ಷರಂ ಪೆಱರಿಗಿವು ಮೊಗ್ಗೇ (ಪಾ. XVI. ೫೫-೫೬ ; ೧೦೬೩); ನೀನಲ್ಲದಂಗನೆಗೆ ಕಾಣ್ಬುದು ಮೊಗ್ಗೇ (ಭುತ್ರಿ. ೯-೦೦೦). ೫. ಸಾಮರ್ಥ್ಯ ; ಶಕ್ತಿ : ಗುಗ್ಗುರಿಯಂ ತಿಂಬ ಮೊಗ್ಗು ಸುನ್ನದೊಳುಂಟೇ (ರಶಾಕ್ಕು. ೬-೦೬೦); ಅತ್ತರಿತ್ತಲು ಪರನ ಬಿಟ್ಟಿಪ ಶಿತ್ತ ಮೊಗ್ಗಲ್ಲ (ಕಾಶಾ. ೫೦-೧೩). ೬. (?): ಬಗ್ಗಿಸಿದವು ಕೋಗಿಲೆಗಳ್ ಪೊಗ್ಗಿಪ್ಪ ವಿಯೋಗಿಯಂ ಪುಗಲ್ ಪುಗಲೆಸುತಂ (ಕಾಡ್ಕಾ. ೧೮೨). [< ಪೊಟ್ಟು]

ಮೋಂಕು ' ಮೋಕು ' ನೋ.

ಮೋಂಬತ್ತಿ, ಮೊಂಬತ್ತಿ (ನಾ). ಮೇಣದಿಂದ ತಯಾರಿಸಿದ ಬತ್ತಿ ; ಮೇಣದ ಬತ್ತಿ : ಸಮಯಕ್ಕೆ ಅಂತ ಮೋಂಬತ್ತಿ ಬೆಂಕಪೊಟ್ಟಣ ಎರಡನ್ನೂ ಇಂಸಿರುವರು (ತಿಂಗೂಂ. ೦೫೦); ದಾಗಿಲಿಗೆದುರಾಗಿ ಮೋಂಬತ್ತಿ ಅಂಟಿಕೊಂಡಿದ್ದ ಕಪ್ಪುಬಣ್ಣದ ವಿಗ್ರಹವೊಂದನ್ನು ತೂಗುಹಾಕಿತ್ತು (ಪ್ರಹು . ೦೮೦). ಮೊಂಬತ್ತಿ : ಹಳೆಯ ಲಾಂದ್ರಗಳನ್ನೂ ಮೊಂಬತ್ತಿಗಳನ್ನೂ ಹುಡುಕಿ . . . ಇಟ್ಟಿದ್ದಾಯಿತು (ಮಹಾಗ. ೩೫). [← ಹಿಂ. ಪರಾ. ಮೋಮ್‌ಬತ್ತೀ]

ಮೋಂಬತ್ತಿಬೀಜ (ನಾ). ಒಂದು ಬಗೆಯ ಸಸ್ಯ : ಕಿಂಡಿ. ಮೋಂಬತ್ತಿ ಬೀಜ (ಕ್ಯಕಿಗ. ೪೮-೬೦೪). [ಮೋಂಬತ್ತಿ + ಬೀಜ]

ಮೋಕೆ₁ ' ಮೊಕ್ಕೆ ' ನೋ.

ಮೋಕ್ಷ (ನಾ). ೧. ಯಾವುದಾದರೂ ಪ್ರಾಣಿಯು ಕಳಚಿದ ಚರ್ಮ. ೨. ಜತುಪ್ಪಾದವ್ಯಾಣಿ. ೩. ಬದ್ಯಾಧಿ. [ಸಂ.]

ಮೋಕಳೀಕ, ಮೋಕಳೀಕು (ನಾ). ೧. ಬಂಧನವಿಲ್ಲದಿರುವುದು ; ಸ್ವತಂತ್ರವಾದುದು ; ತೆರವಾದುದು : ಏಸಗ ಎರಡ ದಾರಿ ಮೋಕಳೀಕ ಅವ (ರಚಿಪ. ೦೩೨). ೨. ಸ್ವತಂತ್ರನಾದವನು : ಅವಿವರ ಪುಣ್ಯದಿಂದ ಮೋಕಳೀಕ ಆಗಿನಿ (ಗ್ರಾಜಡು-೧೧೩): ಗೌಡರು . . . ನಿರಾಯಾಸವಾಗಿ, ನಿಃಶಂಕವಾಗಿ ಅಲೆದಾಡಲು ಮೋಕಳೀಕರಾಗುವರು (ರಚಿಪ. II, ೮೩). ೩. ವಿವಾಹವಿಚ್ಛೇದನ ; ಸೋಡಚೀಟಿ : ಪಮ್ಮ ಅಂತೂಸಿಂತ ಎರಡ ವರ್ಷ ದೊಡ್ಡಾಕಿ, ಮೋಕಳೀಕ ಪ್ಯಾಂಗ ಮಾಡಿರ ? (ಪಗಿಗ. ೦೮೩). **ಮೋಕಳೀಕು** : ೪. ಹಕ್ಕು ; ಸ್ವಾಮ್ಯ : ಮಾಲ ಕೊಡುವ ಮೋಕಳೀಕು ನಮಗೆ ಕೊಟ್ಟಿದ್ದಾದರೆ ವಿಕ್ರಿ ಮಾಡುವದಕ್ಕೆ ಅಪಜಿಕೆ ಬೇಳಲಿಕ್ಕಿಲ್ಲ (ಮುಂಬಡ್ಕಾ. ೫೩). [← ಮರಾ. ಮೋಳೀಕ್]

ಮೋಕಳೀಕು ' ಮೋಕಳೀಕ ' ನೋ.

ಮೋಕು, ಮೋಂಕು (ನಾ). ತುದಿ; ಅಗ್ರಭಾಗ; ಮೇಲುಭಾಗ: ಮುಂಡದ ಮೋ[ಜಾಣಾಂ. ಮೂ]ಕನಲಿ ಬಗಿದೊಗುವ ನೆತ್ತರು ನಾಕವನು ನಾದಿತ್ತೆನಲು: ಸವಜ್ಞೆವನು ಪರುಳುವ (ಭುಣ್ಯಕ್ರೀ. ಜಾ ೬-೧೩); ಒಮಂತೂ ಸುಯ್ಯನೆ ಒಂದು ಮೋಕಗೆ ಅಪ್ಪಳಿಸಿ ಪುಟಿದು ಬೀಳುತ್ತಿತ್ತು (ಭುಂಗಕೃ. ೬೦); ಅವಳು ಮುಂದಿದ್ದ ಹೊರಸಿನ ಕಾಲಿನ ಮೋಕಗೆ ರಪರಪನೆ ಜೋರಾಗಿ ಹಣೆ ಹಾಯಿಸಿ ಅಳತೊಡಗಿದಳು (ಣಗಸ. ೬೨). ಮೋಂಕು : ಅಲ್ಲಿಂ ಮುಂದೆ ಕೆಂದರಿದು ಮೋಂಕಿನೊಳ್ ನಟ್ಟ ಕಲ್ಲ್ (ಅಶ. XIII. ೪೦-೯೫; ೧೨೦೬). [ದೇ.ತೆ ತೊದ. ಮುಕ್. ಮೊಕ್ ; ಕೊಂದ. ಮುಸ್ಕು]

ಮೋಕೂಫ್, ಮುವಕುಫ್, ಮುಕೋಪು, ಮೊಖೂಫು, ಮೋಖೂಫ್, ಮೌಕೂಫ್ (ನಾ). ೧. ತೆಗೆದುಹಾಕುವಿಕೆ ; ವಜಾ ; ರದ್ದು : ಅವರ ಕಡೆಮ ಜನಗಳ ಅಧಿಕಾರವನ್ನು ತೆಗೆಮ, ಪ್ರಧಾನರೆಂಬ ಪೆಸರನ್ನು ತಪ್ಪಿಸಿ ಆ ಅಧಿಕಾರವನ್ನು ಮೋಕೂಫ್ ಮಾಡಿಸಿದರು (ಜಹಾಹಿ. I. ೩೫೪). **ಮವಕುಫ್**: ೧. ನಾಲ್ಕು ಹಣ ಅಮುದ್ಯಾಳೆಯಂನ್ನು ಚಕ್ರದ ತಸದೀಕಿನ ಐಜಸಲ್ಲಿ ಶ್ರೀಮಶ್ಕೆ ಸಲ್ಲುತಾಯಿದದಂನ್ನು ಮವಕುಫ್ ಮಾಡ್ಸಿ (ಕ್ರಿ.ಶ. ೧೯೨೬-೨೭-೧೮೩೦). **ಮುಕೋಪು**: ೨. (ಕೋರ್ಟು, ಕಚೇರಿ ಮುಂತಾದುವನ್ನು) ಮುಚ್ಚಿರುವುದು : ಬಾಂದುಗೊಳಿಸಿರುವುದು ; ಸ್ಥಗಿತಗೊಳಿಸಿರುವುದು : ರಜಾಮಯವಾಮದರಿಂದ ಕೋರ್ಟು ಮುಕೋಪು ಆಗಿ ಡಪಾಳರ ಅಪ್ಪರಪ್ಪೆ ಒಬ್ಬರಿವ ವಕೀಲ ನಾಗಪ್ಪಯ್ಯನವರೂ ಅಲ್ಲಗೆ ಚಿತ್ಕ್ಯಸಿದ್ದರು (ಜುಕಜು. ೧೮೬). **ಮೊಖೂಫು** : ೧. ಹೆಚ್ಚಿಗೆ ಪಣ ಬೇಕಾದರೆ ಕೊಡುವೆವೆಂದು ಹೇಳಿ ಪಾರ್ಲಿಮೆಂಟನ್ನು ಮೊಖೂಫು ಮಾಡಿಪರು (೨೦೧೫ ಜ. ೦೩೬). **ಮೋಖೂಫ್**: ೧. ಕುದುರೆರಿಜಮೆಂಟನ್ನು ಮೋಖೂಫ್ ಮಾಡಿ . . . ದಾಖಿಲೆಗಳನ್ನು ನೋಡಬೇಕೆಂಬ ಅಭಿಪ್ರಾಯದಿಂದ ಜಪ್ತಿಮಾಡಿದರು (ಜಹಾಹಿ. II. ೦೦೦). **ಮೌಕೂಫ್** : ೧. ಗ್ರಾಮದ ಅಥವಾ ಗ್ರಾಮಗಳ ಭಾಗಗಳಲ್ಲಿನ ಯಾವುದಾದರೂ ಗ್ರಾಮ ಸೌಕರಿಯು ಮೌಕೂಫ್ ಆಗತಕ್ಕದ್ದು (ಗ್ರಾಜಾಶ. ೫೭).

[←ಅರ. ಮವಕುಫ್. ಮೌಕೂಫ್ ; ಹಿಂ. ಮೌಕೂಫ್; ಮರಾ. ಮೋಕೂಫ್. ಮೋಕೂಫ್. ಮೋಪಕೂಬ್./ತುಳು. ಮುಂಕೂಬ್]

ಮೋಕ್ಕಳಿಕ (ನಾ). ಒಂದು ಬಗೆಯ ಸಸ್ಯ : "ಮೋಕ್ಕಳಿ – ಮೊಱಗಿನ ಮರ" (ಓಪಾ. ೦೩೦). [?]

ಮೋಕ್ಷ (ನಾ). ೧. ಬಿಟ್ಟುಕೊಡುವುದು. ೨. (ಬಂಧನ, ದಾಸ್ಯ ಮುಂತಾದುವುಗಳಿಂದಾಗುವ) ಬಿಡುಗಡೆ ; ವಿಮೋಚನೆ : ನಿನ್ನ ಬಂಧನಮೋಕ್ಷಮಂ ಮಾಡಿ ರಾಜ್ಯಮಂ ಪೊಗಿಸಿ ಮುನ್ನಿನ ಪರಿಯಲಿ ಸುವೆಂ (ಪಪಣಾ. ೦೩-೦೪). ೩. ಬಿಚ್ಚುವುದು ; ಕಳಚುವುದು. ೪. (ಬಾಣದ) ಏಸೆತ. ೫. ಋಣದ ನಿವಾರಣೆ.—ಪರಿಹಾರ. ೬. ಮನುಷ್ಯನ ಚತುರ್ವಿಧಪುರುಷಾರ್ಥಗಳಲ್ಲಿ ಕೊನೆಯದು; ಆತ್ಮವು ಜನನಮರಣಗಳಿಂದ ದೂರವಾಗುವುದು ; ಮುಕ್ತಿ : "ಅಪವರ್ಗಂ . . . ಮೋಕ್ಷಂ . . . ನಿರಾಮಯಂ ನಿರ್ವಾಣಂ" (ಹಬ್ಬಳಿ. ೫೦-೦೯); ಮೋಕ್ಷೆ ಪ್ರಾಸಾದಾಧಿರೋಹಣನಿಶ್ರೇಣೀಭೂತ ಕ್ಷಪಕಶ್ರೇಣಿಪ್ರಾಪ್ತೋಪಾಧ್ಯಾಪ್ರಪೃತ್ತಿಕರಣ ಪರಿಣತಿಸಪೂರ್ವಕರಣಕ್ಷಪಣ ಪ್ರಥಮಸಂಕ್ಲಿಷ್ಟಾನಪರಿಣತನಾಗಿರ್ದು (ಕಾಂಪ್ರ. ೦೦-೦೪ ಪ); ಕ್ರಮದಿಂ ಪೂಜಿಸುವಂ ಶತಕ್ರತುವಿ . . . ಪೂಜಾಲಭ್ಧಮಕ್ಷೋಣಮೋಕ್ಷಮೆ (ಕಶ್ರ. ೦೦-೩೬); ಧರ್ಮಅರ್ಥಕಾಮಮೋಕ್ಷವೆಂಬ ಚತುರ್ವಿಧ ಫಲ ಪದಂಗಳ ನಾನೊಲ್ಸೆನಯಮ್ಮ (ಅಂಯೇ. ೦೬೦-೬೩). ೭. ಸುರಿಸುವುದು ; ಹರಿಸುವುದು : ಕಾಮಗ್ರಹಗೃಹೀತರಾಗಿರೆ . . . ವ್ಯಾಮೋಹ ಗದ್ಗ ಬಾಶ್ರುಮೋಕ್ಷಮಾರ್ಗದಿ ನಾನಾವಿಕಾರದಿಗಳೊಡನೊಡನೆ ತೋಱುವುದುಂ (ಪಂಪಾ. ೪-೩೯ ಪ). ೮. ತ್ಯಾಗ ; ವಿಸರ್ಜನೆ : ಘಟೋತ್ಕಚ ವಧೆ ದ್ರೋಣಚಾಪಮೋಕ್ಷಂ ದ್ರೋಣವಧೆ . . . ಪಱವುಮುಪಾಖ್ಯಾನ ಕಥೆಗಳೊಳೊಂದೊಂದು ಕುಂದಲೀಯದೆ ಪೇಟ್ದಿಂ (ಪಂಪಾ. ೦೪-೩೨ ಪ). ೯. ಒಂದು ಬಗೆಯ ಮರ ; ಪಾಟಲಿ : "ಪೊಕ್ಕವ ಮರ – ಗೋಲೀಢ,

ರ್ಷಾಟಲ. ಘಂಟಾ. ಪಾಟಲಿ। ಮೋಕ್ಷ. ಮುಷ್ಕಕ" (ಜಾಕಾ. ೪)· ೧೦. ಒಂದು ಬಗೆಯ ಸಸ್ಯ : ಜಟಾಮಾಂಸಿ : "ಮೋಕ್ಷಾ — ಜಟಾಮಾಂಸಿ" (ಬೃಸಂ. ೦೩೦)· ೧೧· ನಿಧನ ; ಸಾವು ; ಮರಣ. ೧೨. [ಜ್ಯೋತಿ] ಸೂರ್ಯ ಅಥವಾ ಚಂದ್ರಗ್ರಹಣಕಾಲದಲ್ಲಿ ಗ್ರಹಣದ ನಂತರ ಉಂಟಾಗುವ ಬಿಡುಗಡೆ : ಇಂದೆನ್ನ ದೇಹಕ್ಕೆ ಗ್ರಸಣವಾಯಿತ್ತು ಇನ್ನೆಂದಿಗೆ ಮೋಕ್ಷವಹುದೋ ಕೂಡಲಸಂಗಮದೇವಾ (ಬಸವ. ೯). ೧೩. [ತತ್ತ್ವಶಾ] ಎಂಟು ಬಗೆಯ ಅವಸ್ಥೆಗಳಲ್ಲಿ ಒಂದು : ಸೃಷ್ಟಿಪ್ರಕರಣದಲ್ಲಿ ಪ್ರಪ್ರತ್ಯವಾದ ವೇದವಾಕ್ಯಗಳ ದೃಷ್ಟಿಯಿಂದ ಪ್ರಪಂಚವಸ್ತುಗಳಿಗೆ ಒಟ್ಟಿನಲ್ಲಿ ಸಂಭವಿಸುವ ಅವಸ್ಥೆಗಳು ಎಂಟು—ಉತ್ಪತ್ತಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷ ಎಂದು (ಕಾತ್ಯ. ೧೪೬)· ೧೪. [ಜೈನ] ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ ಎಂಬ ಏಳು ತತ್ತ್ವಗಳಲ್ಲಿ ಒಂದು ; ಬಂಧನಕ್ಕೆ ಕಾರಣವಾದ ಸರ್ವಕರ್ಮಗಳಿಂದಲೂ ಬಿಡುಗಡೆ ಹೊಂದಿ ಆತ್ಮದ ಶುದ್ಧಸ್ವಭಾವವನ್ನು ಗಳಸಿಕೊಳ್ಳುವಿಕೆ : ಜೀವಾಜೀವಾಸ್ರವ ಬಂಧಸಂವರನಿರ್ಜರಾಮೋಕ್ಷ ಭೇದದಿಂ ಸಪ್ತವಿಧಂ. . . ಮೂಲೋತ್ತರಾದಿಭೇದಭಿನ್ನಕರ್ಮಪ್ರಕೃತಿಗಳ ವಿಮೂಲೋಚ್ಛಿತ್ತಿ ಮೋಕ್ಷ ಮೆಂಬುದು (ಅಷ್ಟ. ೦೧–೬೬ ಪ); ಆತ್ಮನ ನಿಮಲಾಚ್ಛಿತ್ತ ಸ್ವಾಭಾವಿಕ ಜ್ಞಾನಾದಿ ಗುಣಗಣಾವ್ಯಾಬಾಧಸುಖಸಂಯುಕ್ತಾತ್ಯಂತಿಕಾವಸ್ಥಾಂತರಂ ಮೋಕ್ಷಂ (ಪ್ರಕ್ರ. ೨)· ೧೫. ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರೆ, ಬಂಧ ಮತ್ತು ಮೋಕ್ಷಗಳೆಂಬ ಒಬತ್ತು ತತ್ತ್ವಗಳಲ್ಲಿ ಒಂದು : ನವಪದಾರ್ಥಗಳಲ್ಲಿ ಒಂದು : ಜೀವಾಜೀವಪುಣ್ಯಪಾಪಾಸ್ರವಸಂವರ ನಿರ್ಜರಬಂಧಮೋಕ್ಷಮೆಂದಿಂತು ನವಪದಾರ್ಥಂಗಳಂ ಪಞ್ಚಾಸ್ತಿಕಾಯಷಡ್ದ್ರವ್ಯಂಗಳುಮೆಂದಿವಜಿನೋಕ್ತವಾದ ಮಾನುಮುಚಿತಮುಂ . . . ಗುಣಾಂಗಳುಮನಱಿದು (ಪಞ್ಚ. ೩-೦೮)·

[ಸಂ.]

ಮೋಕ್ಷಕ (ನಾ)· ೧. ಬಿಡುಗಡೆ ಮಾಡುವುದು. ೨. ಮುಕ್ತಿ ; ವಿಮೋಚನೆ. ೩. ವಿಮೋಚನೆ ಮಾಡುವವನು ; ಮುಕ್ತಿಯನ್ನು ಕೊಡುವವನು.

[ಸಂ.]

ಮೋಕ್ಷಕಾಲ (ನಾ)· ಗ್ರಸಣವು ಬಿಡುವ ಸಮಯ : ಏಗೋಳಶಾಸ್ತ್ರಜ್ಞರು . . . ಗ್ರಹಣಗಳ ಸ್ಪರ್ಶ ಮತ್ತು ಮೋಕ್ಷಕಾಲಗಳು, ಮಧ್ಯಗ್ರಹಣಕಾಲ ಮುಂತಾದ ಎಲ್ಲ ವಿವರಗಳನ್ನು ಕೊಡುತ್ತಾರೆ (ಶಬ್ದಸ. VI. ೬೯೧)· [ಸಂ.]

ಮೋಕ್ಷಗತಿ (ನಾ)· ಬಿಡುಗಡೆ ; ಮುಕ್ತಿ : ವೀತರಾಗತ್ವಮಂಬುರುಹ ಶ್ರೇಣಿಗೆಯಿತ್ತ ಮೋಕ್ಷಗತಿ ಪೌಷ್ಕಲ್ಯಾದಿಯಿಂದಂ ದಿಗಂಬರಸಾಂಗೆತ್ಯತಪಃ ಪ್ರಭಾವಮೆನಿಸುಂ ಮೆಯ್ದಪ್ಪೊ ತೇನಾಗದೋ (ಪ್ರತ್ತ. ೬-೨೨)· [ಸಂ.]

ಮೋಕ್ಷಗಾಮಿ (ನಾ)· ಕೈವಲ್ಯಕ್ಕೆ ಹೋಗುವವನು ; ಮುಕ್ತಿಯೋಗ್ಯನಾದವನು : ಸಗರಸುತರೆಲ್ಲರುಂ ಮೋಕ್ಷಗಾಮಿಗಳ್ (ಅಷ್ಟ. ೦೩–೨೯) ; ಭೂಮಿಯೊಳಾಕಾಶವನು ತಂದು ಹೂಳಿದಂತೀ ಮೈಯೊಳಾತ್ಮತತ್ತುವಂದಿಹುದು ಭೂಮಿಗಚ್ಚರಿಯಲ್ಲದೆಬೀಜರಾ ಮೋಕ್ಷಗಾಮಿಗಳಧ್ಯಾತ್ಮವಲ್ಲದು (ಪಞ್ಚ. ೬೪-೭೬). [ಸಂ. ಮೋಕ್ಷಗಾಮಿನ್]

ಮೋಕ್ಷಣ (ನಾ)· ೧. ಬಿಡುಗಡೆ ಮಾಡುವುದು ; ವಿಮೋಚನೆಗೊಳಿಸುವುದು. ೨. (ಬಾಣವನ್ನು) ಎಸೆಯುವುದು. ೩. [ನಾಟ್ಯ] ಇಪ್ಪತ್ತು ಬಗೆಯ ಕರಕರ್ಮಭೇದಗಳಲ್ಲಿ ಒಂದು : ಧೂನನ, ಶ್ಲೇಷ, ವಿಶ್ಲೇಷ, ಕ್ಷೇಪ, ರಕ್ಷಣ, ಮೋಕ್ಷಣ . . . ಕರ್ಜನ ಈ ಇಪ್ಪತ್ತು ಕರಕರ್ಮಭೇದಂಗಳ್ (ಅಸ್ಯಂ. ೪-೩೩ ಪ)· [ಸಂ.]

ಮೋಕ್ಷದಾಯಕ (ನಾ)· ೧. ಕೈವಲ್ಯವನ್ನು ಕೊಡುವಿಕೆ. ೨. ಕೈವಲ್ಯವನ್ನು ಕೊಡುವವನು : ಪರಮಾತ್ಮ. [ಸಂ.]

ಮೋಕ್ಷದಾಯಕಿ (ನಾ)· ಮುಕ್ತಿಯನ್ನು ಕೊಡುವ ದೇವತೆ : ಮೋಕ್ಷದಾಯಕಿ ಸಕಲಮಂತ್ರಸಾಯಕಿ ಮಾಯೆ ಸಾಕ್ಷಾಜ್ಜಗನ್ಮಾತೆ (ಕೃಬಣಾ. ೦೫–೨೩). [ಮೋಕ್ಷದಾಯಕ + – ಇ]

ಮೋಕ್ಷಪದ (ನಾ)· ೧. ಕೈವಲ್ಯದ ಪದವಿ ; ಮುಕ್ತಿ : ಸತತಮೋಕ್ಷ ಪದೇಚ್ಛುಮಹಾತಪಸ್ವಿ . . . ಸೈದ್ಧಾಂತಿಕಚಕ್ರವರ್ತಿ ಮುನಿಚಂದ್ರ ಮುನೀಂದ್ರನೆ ವಂದ್ಯನುರ್ವಿಯೊಳ್ (ಕಂವೃತ್ತ· ೦-೨೭)· ೨. ಮುಕ್ತಿದಾಯಕನಾದವನು : ಮೋಕ್ಷಪದರ್ ಸದೇಚ್ಛುಗಳಕ್ಷಪಮುನಿಗಳ ಸುವಾಕ್ಯದೊಳಮೆನಿಸಲ್ ಪ್ರತ್ಯಕ್ಷಪ್ರಮಾಣವಚನಪುನಕ್ಷವದು ಮೂಢಾತ್ಮ ನೀನದಂ ತಿಳಿದಿರ್ಪ್ಪೆ (ಹರಿಹ. ೧೧-೩೬)· [ಸಂ.]

ಮೋಕಮೊಷ್ ' ಮೋಕೂಷ್ ' ನೋ.

ಮೋಗ (ನಾ)· (?) : ಬಾಗಿಸಿ ಶಿರವ ಕೂರ್ಮಗಳ ಗ್ರೆಲ್ಲ ಮೇಗಾಲುಗಳ ಸೂಗುಸುಗಳ ನಮ್ಮಮೋಗದಂತಪ ಹರತುಗಳ ಬಂದು (ಶಾಹೋ. ೩೯-೨)·

[ಸಂ.]

ಮೋಗಮ್ ' ಮೋಘಮ್ ' ನೋ.

ಮೋಗುಮ ' ಮೋಘಮ್ ' ನೋ.

ಮೋಘ (ಗು)· ೧. ಇಲ್ಲದಿರುವ ; ವಿಹೀನವಾದ. ೨. ಬಿಟ್ಟ ; ತ್ಯಜಿಸಿದ. ೩. ವ್ಯರ್ಥವಾದ ; ಫಲವಿಲ್ಲದ : ಮಚ್ಚರಮುಂ ಮೋಘಮೊಡಂಬಡುಂ ಕಲಿಮಮುಂ ಮುಸ್ಸುಳ್ಕುದು (ಕಂಚಾ. ೬-೩೬)· ೪. ಉದ್ದೇಶರಹಿತವಾದ ; ಗುರಿಯಿಲ್ಲದ. (ನಾ)· ೫. ವ್ಯರ್ಥವಾದುದು ; ನಿಷ್ಪ್ರಯೋಜಕವಾದುದು : "ವೃಥಿ ಮೋಘಂ" (ಕಬ್ಬಕೋ. ೦೮೨-೦೦); ಮೋಘಮನಪಲಪರಿಗ್ರಹದಾಘಮನೀ ಕೈಕೆ ಬೇಡ ಧರಯಂ ತ್ಯಜದಿಂ ಲಾಘವಮೆನೆ ಬಗೆದೀಗುಂ ರಾಘವನೌದಾರ್ಯತುಂಗನೀಯದುದುಂಟೇ (ಕಂರಾಕಾ. ೬-೦೦೯); ಲೋಕ ಶಾಶ್ವತ. ಇದೇ ಸತ್ಯ. ಮಿಕ್ಕುದು ಮೋಘ (ಅಪ್ಪಕ. ೦೩)· [ಸಂ.]

ಮೋಘತೆ (ನಾ)· ಅಪ್ರಯೋಜಕವಾದುದು ; ನಿರರ್ಥಕವಾದುದು : "ಮೋಘತೆ ಕಾಂ ವೈಯರ್ಥಂ" (ಕಬ್ಬಕೋ. ೦೦೩-೨೯)·

[ಸಂ. ಮೋಘತಾ]

ಮೋಘಮ್, ಮಗುಂ, ಮೊಗಂ, ಮೊಗುಂ, ಮೋಗಮ್, ಮೋಗುಮ, ಮೋಘಮ (ಗು)· ೧. ಅನಿಶ್ಚಿತವಾದ ; ಅಸ್ಪಷ್ಟವಾದ ; ನಿರ್ದಿಷ್ಟವಲ್ಲದ : ಕೊಟ್ಟ ಮನಿಗೆ ಹೋಗ್ವಿನಿ ಅಂಬೋ ಮೋಘಮ್ ಮಾತು ಏನುಪಮೋಗ ? (ಜಾಗೃಕ್ಷೇ. ೬); ಕೇಕಮರಾಯು ಮೋಘಮ್ ಮಾತಾಡಿ ಕೈಬಿಟ್ಟ (ಗ್ರಾಪಾಹು. ೦೩೬)· ಮಗುಂ : (ನಾ)· ೨. ಅಸ್ಪಷ್ಟ ; ಅನಿಶ್ಚಯ : ಆಳಿಸಿನಲ್ಲಿ ಇರುವ ಇವರಿಗೆ ವಿಷಯ ತಿಳಿಯದಂತೆ ಮಗುಂ ಆಗಿ ಉತ್ತರ ಕೊಡುವುದು ಮತ್ತೂ ಕಷ್ಟ (ಅರಸು. ೦೦೬)· **ಮೊಗಂ** : ೨. ಸುಂಕೆ ಅಲ್ಪಮಾತಂತ ಅಂಗಲ್ಲ ಮೊಗಂ ಆಗಂದ್ರ ನದೀತದ ರತ್ನ ? (ಕಾಗ. ೦೬೨)· **ಮೊಗುಂ** : ೧. ಉಭಯತ್ರರಿಗೂ ಅನುಕೂಲವಾಗುವಂತೆ ಮೊಗುಂ ಕರಾರು ಮಾಡಿಸಿದೆ (ಕಂಚ. ೬೫೪); ಮಾಹಲಿಂಗಯ್ಯ ಮೊಗುಮ್ಮಾಗಿ. . . ಅಂಗಲಾಚಿದ (ಹಾಮಚ. ೩೦)· **ಮೋಗಮ್** : ೧. ಹೊಸ ಎಸ್. ಈ. ಯ ನೇಮಗೂಡೀ ಅಚ್ಚಿಗಳು ಹಿಂಬಾಲಿಸಲಿವೆ ಎಂಬ ಮೋಗಮ್ ವಾಕ್ಯವಿತ್ತು (ಪೀಚಕ. II. ೬೭೪)· ೨. ಆರ್ಜಿ ಒಳಗೆ ಎಲ್ಲಾ ಮೋಗಮ್‌ನ ಅವ (ಪೀಚಕ. II. ೬೩೦); ಹಿಂಗ ಮೋಗಮ್ ಬ್ಯಾಡಪ. ಬಿಡಬಿಡಿಸಿ ಹೇಳನ್ನು ಮಾರಾಜರಿಗೆ (ಪಾರಾ. ೮೬)· **ಮೋಗುಮ** : ೧. ಏರೇದಿ ಬರಿಯುವಾಗ್ಗೆ ಉತ್ತಮ, ಮಧ್ಯಮ, ಸುಮಾರ ಈ ಪ್ರಕಾರದ ಮೋಗುಮ ವರ್ಣನೆಯು ಬರಿಯದೆ, ಯಾವ ಪ್ರಕಾರದ ಮಾಲು ಬೇಕಾಗುತ್ತದೆಯೋ ಅವರ ಅಜಮಾಸಿದಿಂದ ಭಾವವು ಸಪಾ ಬರಿಯಬೇಕು (ಮುಂಖ್ಯಾ· ೬೮)· **ಮೋಘಮ** : ೧. ಏನೋ ವಿಚಾರಿಸಿದಂತೆ ಮಾಡಿ . . . ಮೋಘಮ

ಮಾತಾಡಿ ಬಿಟ್ಟ (ಗ್ರಾಮಾ. ೫೬೧). [← ಅರ. ಮುಗ್ವಮ್ ; ಹಿಂ. ಮುಗ್ಧಮ್; ಪಾರಾ. ಮೋಳಮ್, ಮೋಹಗವ್]

ಮೋಳ್ಪಮು ' ಮೋಳಮ್ ' ನೋ.

ಮೋಳೆ (ನಾ). ೧. ಒಂದು ಬಗೆಯ ಸಸ್ಯ; ಪಾದರಿಗಿಡ. ೨. ಕ್ರಿಮಿ ನಾಶಕಬೀಜವನ್ನು ಹೊಂದಿರುವ ಒಂದು ಬಗೆಯ ಸಸ್ಯ ; "ವಾಯು ವಿಡಂಗ" (ಗಂಗಾಷ್ಟ. ೬). [ಸಂ. ಮೋಘಾ]

ಮೋಚ (ನಾ). ೧. ಮರದ ತೊಗಟೆಯಿಂದ ಸುರಿಯುವ ರಸ; ಹಗಿನ. ೨. ಬಾಳೆಯ ಗಿಡ ಮತ್ತು ಅದರ ಹಣ್ಣು : ಕದಳಿ : "ಕದಳೀರಂಭಾಭಿಮ್ಮಮಂತದಕ್ಕುಂ ಮೋಚಂ" (ಶಬ್ದಮ. ೩೪-೬); ಉಂನತಚಂಪಕಚೋಚಮೋಚವಾಟಳವನಸಾಲ್ಯು ಪೂಗವನನಾಗಲತಾಳಿಯಿಂ ... ಒಪ್ಪುವುದು (ಪಾರ್ಶ್ವ. IX-೫, ೦೦೬-೨೬; ೧೬೭); ಮನೆಕನಕರಜತಪಾತ್ರಂಗಳೊಳ್ ... ದ್ರಾಕ್ಷಾಚೋಚಮೋಚಾವಿ ಫಳಕುಳಂಗಳುಂ ಸೊಗಯಿಪುವ (ಪಂಪ್ರಕೃ. ೬-೩೪ ೫). ೩. ಒಂದು ಬಗೆಯ ಮರ ಮತ್ತು ಅದರ ಕಾಯಿ ; ನುಗ್ಗೆ : ಪೊಸತವರೆ ತೊಂಡೆ ಪಡಲಂ ಮೋಚಂ ತೊಗರಿ ಬದನೆಯಾಸಪ ಪೀಲೋಗರಮಂ ಪಲವನಿಕ್ಕಿದರ್ ಶಶಿಮುಖಿಯರ್ (ಶಿಶಾ. ೦೦-೩೭). ೪. ಬೂರುಗದ ಮರ; ಶಾಲ್ಮಲಿವೃಕ್ಷ: "ಸ್ಥಿರಜೀವಿ ಮೋಚ ಶಾಲ್ಮಲಿಯೆಲವಮಕ್ಕುಂ" (ಜಾಗಣಾ. ೩೬-೦೭). [ಸಂ.]

ಮೋಚನ (ನಾ). ೧. ಬಿಡುಗಡೆ ಮಾಡುವುದು ; ವಿಮೋಚನೆ ಮಾಡುವುದು. ೨. ಬಿಡುಗಡೆ ; ಮುಕ್ತಿ ; ಬಲುತರ್ಮಬಂಧಗಳು ಮೋಚಕವಾಗುವಲಿ (ಕರಾಕ್ಕ. ೦೮-೩). ೩. ಮುಕ್ತಿದಾಯಕವಾದುದು : ಅಸ್ಮಿಯಿಂದ ಮಾಡಿದ್ದು ಹೇಯ. ಬಂಧಕ. ಕಹಿ ; ಅವಾಸ್ಮಿಯಿಂದ ಮಾಡಿದ್ದು ಶ್ರೇಯ. ಮೋಚಕ. ಸಿಹಿ (ಶಂಕರಾ. ೦೨). ೪. (ವಿಹಿಕ ಬಂಧನದಿಂದ) ಬಿಡುಗಡೆ ಹೊಂದಿದವನು ; ಮುಕ್ತ : ತ್ರಿವಿಧ ತಾಪಗಳಿಂದ ತಪಿಸುತ್ತ ಮೋಚಕರಾಗಲಿ ಯೋಚಕರಾಗಿ ಬಂದ ಜನಕೋಟಿಯನ್ನು ನೋಡಿ ಅನಂತ ಆಶ್ಚರ್ಯಗೊಂಡ (ಚಾಣಾ. ೦೦೩). ೫. ವಿರಕ್ತ; ಯತಿ. ೬. ಅನಾಸಕ್ತಿ; ವೈರಾಗ್ಯ. ೭. ಬಾಳೆಯ ಗಿಡ ಮತ್ತು ಅದರ ಹಣ್ಣು; ಕದಳಿ : "ಮೋಚಕಂ – ಬಾಟಿಯ ಹಣ್ಣು" (ಓಪಿ. ೦೩೦); ಮೋಚಕಂ ಬಳುಕಿದುವು ನುಣ್ಣೊಡಗೆ (ಪಂಗಾಣಾ. ೩-೮-೩). ೮. ನುಗ್ಗೆಯ ಮರ ಮತ್ತು ಅದರ ಕಾಯಿ : "ತೋಥಾಂಜನಃ. ಶಿಗ್ರುಃ. ತೀಕ್ಷ್ಣಗಂಧಕಃ. ಅಕ್ಷೀಬಃ. ಮೋಚಕಃ – ೫ ನುಗ್ಗೆಮರದ ಹೆಸರು" (ಶಿಷ್ಯಹಿ. ೦೦೬). ೯. ಶಾಲ್ಮಲಿ ; ಬೂರುಗದ ಮರ. ೧೦. ಮರ; ವೃಕ್ಷ : ಬಾಬೊಳು ನೆಲ್ಗೆಯೊಳು ಭೂರುಹದೊಳು ಸ್ಥಿರಾಯುವಿನೊಳು ವಿರಾಗದೊಳು ಮುಕ್ತಿಯೊಳು ಮೋಚಕಾಖ್ಯಂ" (ಪಂಗಾಣಾ. ೦೪೯-೩೩). [ಸಂ.]

ಮೋಚಕರಿ (ನಾ). ಒಂದು ಬಗೆಯ ಸಸ್ಯ : "ಮೋಚಕರಂ – ಮಾದವೃಕ್ಷ (ಮಾಚದ ವೃಕ್ಷ)" (ಓಪಿ. ೦೩೦). [?]

ಮೋಚಜ (ನಾ). ಬೂರುಗದ ಮೇಣ : ಎಲವದ ಹಗಿನು : "ಮೋಚಜಃ – ಎಲವದ ಹಗಿನು" (ಓಪಿ. ೦೩೦). [ಸಂ.]

ಮೋಚನ (ನಾ). ೧. ಬಂಧನದಿಂದ ಬಿಡುಗಡೆ ಮಾಡುವುದು.— ಬಿಡಿಸುವುದು. ೨. ಬಿಡುಗಡೆ ; ವಿಮೋಚನೆ ; ಮುಕ್ತಿ : ಏಲ್ದಿ ಚೇತನಮೆಸುವುದಲ್ಲಿಯ ಪ್ರಾಣಪದವೆಲ್ದಿ ಪ್ರಾಣಂ ಬಲಿವುದಲ್ಲಿಯ ಮೋಚನಂ (ಶಂಗಕ್ಕ. ೦೩-೨೯). ೩. ಬಿಡಿಸುವಿಕೆ ; ಕಳೆಯುವಿಕೆ ; ನಿವಾರಣೆ. ೪. ನಿವಾರಣೆ ಮಾಡುವವನು : ನರ್ಘರಾಶಾಪಾಶಮೋಚನ ಕರ್ಮ ಕರ್ಮಠನು (ಶಸಕ್ಕ. ೩೩-೩); ಶೋಕಮೋಚನನೆಂದು ವೇದಗಳೂ ಕೂಡ ಆತನ ಯಶಸ್ಸನ ಗಾಯನ ಮಾಡುವವು (ಕುಶಾಃ. ೦೩). ೫. ಎಸೆಯುವುದು. ೬. ಗರ್ಭ. ೭. ಮೋಸ ; ವಂಚನೆ. [ಸಂ.]

ಮೋಚನಿರ್ಯಾಸ (ನಾ). = ಮೋಚಜ : "ಮೋಚನಿರ್ಯಾಸಃ– ಎಲವದ ಹಗಿನು" (ಓಪಿ. ೦೩೦). [ಸಂ.]

ಮೋಚಶ್ರಾವ (ನಾ). = ಮೋಚಜ : "ಮೋಚಶ್ರಾವಃ, ಮೋಚ ಸಾರಃ – ಈಯೆರಡುಂ ಎಲವದ ಹಗಿನು" (ಓಪಿ. ೦೩೦). [ಸಂ.]

ಮೋಚಸಾರ (ನಾ). = ಮೋಚಜ : "ಮೋಚಶ್ರಾವಃ, ಮೋಚ ಸಾರಃ – ಈಯೆರಡುಂ ಎಲವದ ಹಗಿನು "(ಓಪಿ. ೦೩೦). [ಸಂ.]

ಮೋಚಾಸ್ರು (ನಾ). = ಮೋಚಜ : "ಮೋಚಾಸ್ರುಃ – ಎಲವದ ಹಗಿನು" (ಓಪಿ. ೦೩೦). [ಸಂ.]

ಮೋಚಿ$_1$ (ನಾ). ಬಾಳೆ; ಕದಳಿ : "ಮೋಚಿ–ಬಾಲಿ" (ಓಪಿ. ೦೩೦). [ಸಂ. ಮೋಚೀ]

ಮೋಚಿ$_2$ (ನಾ). ಚಪ್ಪಲಿ ಮುಂತಾದ ಚರ್ಮದ ಕೆಲಸ ಮಾಡುವವನು; ಚರ್ಮಕಾರ : ಜೋಡನು ಹೊಲಿಯಲು ಬಾರದ ಪಂಡಿತ ಮೋಚಿಯು ತಾನಲ್ಲ (ಅಪರೋ. ೨೩). [← ಹಿಂ. ದಾರಾ. ಮೋಚೀ; ಬಂಗಾಲಿ. ಮುಚಿ. / ಸಂ. ಮೋಚಿನ್]

ಮೋಚಿಕೆ (ನಾ). ಕತ್ತರಿಸಿರುವ ಸ್ಥಿತಿ : ಇತ್ತ ಮೂಗಿನ ಮೋಚಿಕೆಯ ಭೂ ಮಿತಿಯ ಧರದಲಿ ಬಂದನಾಹವಕೆ (ಕೊಡಗಾ. ೬-೨೮-೨). [ಮೋಚು$_1$ + – ಇಕೆ]

ಮೋಚಿಗ (ನಾ). ಮೊಚ್ಚೆಯನ್ನು ಹೊಲಿಯುವವನು : ಕವಲೆಯವು ನಳದೋಂ [ಮೋ]ಚಿಗನುಂ . . . ಧರ್ಮ್ಯಮಂ ಬಟ್ಕೋನ್ (ಇಂ. ೦೪೫, ಜಾತಗಳ್. ೨೦೬-೦೦; ೭೩೧). [ಇದು ' ಮೊಚ್ಚಿಗ ' ಎಂಬುದರ ಅವಲಿಖಿತವಿರಬಹುದು]

ಮೋಚು$_1$, ಮೋಸು$_1$ (ಕ್ರಿ). ೧. ಕತ್ತರಿಸು ; ತುಂಡುಮಾಡು ; 'ಮೋಚಿಕೆ' ಪರಾ. ೨. ವೈಧವ್ಯಸೂಚಕವಾಗಿ ತಲೆಯನ್ನು ಬೋಳಿಸಿಕೊಳ್ಳು : "ಮೋಚು—ವೈಧವ್ಯೇ" (ಚಾಣಾ) ; ಈಚಲುಮರ ಹೀನ ನೀಚರ ನೆರೆ ಹೀನ ಮೋಚದ ಜೆನ್ನ ತರ ಹೀನ (ಸಮಾಕ್ಕ. ೦೬೫). ೩. ವೈಧವ್ಯಸೂಚಕವಾಗಿ ತಲೆಯಮೇಲೆ ಸೆರಗು ಹಾಕಿಕೊಳ್ಳು—ಮುಸುಕು ಹಾಕಿಕೊಳ್ಳು: (೦). ೪. (ಅಲರಿ) ಹಾಳುಮಾಡು : ನಾಶಗೊಳಿಸು : ಪಾಚಿ ಪುಷ್ಕರ ಸೀಹಪೀಠವ ಮೋಚಿದವನಂ ತಿಳಿದು ನಿಳಯಕೆ ಕೋಚೆಯಂದೈದಿದನು ನಳನೃಪ ನಿಜನಿಕೇತನಕೆ (ಶಂಖಾ. ೧೮-೭೨). ಮೋಸು$_1$: ೪. ಪಾಂಡ್ಯಪುರವರಾಧೀಶನತಿಕೋಪಮಾನಸ ನಾಗಿ ಜಂಗಮವ ಮೋಸಿ ದಾ ಕಡ್ಡೊಯ್ದ ಚರಜೋರ ಕಳವರವ . . . ಎಮತಲಿ ಯತಿಯ ರೋಷದಿಂ ಕಿಡಿಕಿಡಿಯನುಗುಳುತಿರೆ (ಸೋಡಶ. ೩-೨). ಮೋಚಿಕೊಳ್ಳು = ವೈಧವ್ಯಸೂಚಕವಾಗಿ ತಲೆಯನ್ನು ಮುಂಡನ ಮಾಡಿಸಿಕೊಳ್ಳು : ನಿನ್ನ ಅಪ್ಪ ಅಂತೀಯಲ್ಲ, ಅವರು ಸತ್ತಾಗ ನಾನು ಮೋಚಿಕೊಂಡೆ (ಸಣ್ಣ. ೯-೩೭).. ' ಲೋಚು ' ಪರಾ. [ದೇ.ತೆ ತಲು. ಮೋಯು]

ಮೋಚ್ಚು (ನಾ). ಬೋಳಿಸುವಿಕೆ ; ಮುಂಡನ : ಓಡಾಂತು ಕಯ್ಯಲ್ಲಿ ಮೋಚಾಂತು ತಲೆಯಲ್ಲಿ . . . ಪರಿಜು ಸೊಡರಂತವಂ ಬಿಕ್ಕು ನಿಕ್ಕುವಮಲ್ಲು (ಸಾಬಿಂದ. ೭-೧೪). [<ಮೋಚು$_1$]

ಮೋಜಿ (ನಾ). ೧. ಬಾಳೆ ; ಕದಳಿ : "ರಂಭಾ. ಕದಳೀ. ಮೋಚಾ—ಈ ೩ ಬಾಬೆ" (ಪಂಚಾಯು. ೩೨-೩೪). ೨. ಹತ್ತಿಯ ಗಿಡ. ೩. ನೀಲಿ ಗಿಡ : "ಮೋಚಾ—ಬಬ್ಬೆ. ನೀಲಿ. ಎಲವ. ತದುಕ್ಷಂ" (ಓಪಿ. ೦೩೦). ೪. ಶಾಲ್ಮಲಿ ವೃಕ್ಷ: ಬೂರುಗದ ಮರ: "ಪಿಚ್ಚಿಲಾ. ಪೂರಣೀ. ಮೋಚಾ. ಚಿರಾಯುಃ. ಶಾಲ್ಮಲಿಃ —೫ ಬೂರುಗದ ಗಿಡ" (ಸಿಧ್ಯಾಂತ. ೦೨೨). [ಸಂ. ಮೋಚಾ]

ಮೋಜ ' ಮೊಜ್ಜೆಯ ' ನೋ.

ಮೋಜಣೆ (ನಾ)· ಭೂಮಿಯನ್ನು ಅಳತೆ ಮಾಡುವಿಕೆ : ಭೂಮಿಯ ಮಾಪನ : ಮೋಜಣೀ ಎಂಬುವದು ಅಳತೆಯನ್ನೂ ಮೋಜಣೇದಾರ್ ಎಂಬುವದು ಅಳತೆ ಮಾಡುವವನನ್ನೂ ತಿಳಿಸುವದು (ಕೂಮೀ· ೨) ; ನೆಲವನ್ನೆಲ್ಲ ಅಳೆದು ವಿಂಗಡಿಸಿ ಕಂದಾಯ ಗೊತ್ತುಮಾಡುವ 'ಮೋಜಣಿಯವರ' ಕಾರ್ಯರೀತಿಯನ್ನು ಇದು ವಿವರ್ಶಿಸುತ್ತದೆ (ಜಾಕದ. ೦೭೭).

[←ಮರಾ. ಮೋಜಣೀ]

ಮೋಜಣೇದಾರ 'ಮೋಜಣೇದಾರ' ನೋ.

ಮೋಜಣೇಪಾತೆ (ನಾ)· ಭೂಮಿಯ ಅಳತೆ, ಪರಿಶೀಲನೆ ಮೊದಲಾದ ಕಾರ್ಯವನ್ನು ಮಾಡುವ ಇಲಾಖೆ : ಮೋಜಣೇಪಾತೆಯಲ್ಲಿ ಅವನಿಗೊಂದು ಕೆಲಸವಿತ್ತು (ಧಂಗೆಪ್ರ. ೧೯).

[ಮೋಜಣಿ + ಪಾತೆ]

ಮೋಜಣೇದಾರ, ಮೋಜಣೆದಾರ, ಮೋಜಿನಿದಾರ, ಮೋಜಿನೀದಾರ (ನಾ)· ಭೂಮಿಯನ್ನು ಅಳತೆ ಮಾಡುವವನು : ಕಲವು ವೇಳೆ ಮೋಜಣೇದಾರನು ಅಳತೆಯ ಕೆಲಸದಲ್ಲಿರುವಾಗ ನಿಶಾನಿ ಹಿಡಿಯುವವನು ನಿಶಾನಿ ಕಳಗಿಟ್ಟು ನಿದ್ದೆ ಮಾಡುವದುಂಟು (ಕ್ರಚಾಂ. ೦೭). **ಮೋಜಣೆದಾರ** : "ಮೋಜಣೆದಾರ. ಪೈಮಾಷಿದಾರ" (Surveyor. ಶಾಕೆ). **ಮೋಜಿನಿದಾರ** : ಮೋಜಿನಿದಾರನ ದಿಗ್ದರ್ಶಕ (Compass. ಶಾಕೆ. ೦೮). **ಮೋಜಿನೀದಾರ**: ತಮ್ಮ ಜಮೀನನ್ನು ಪಕ್ಕದ ಜಮೀನಿನವನು ಒತ್ತುವರಿ ಮಾಡಿಕೊಂಡಿದ್ದಾನೆಂದು ಮೋಜಿನೀದಾರರನ್ನು ಕರೆಸಿ, ಅಳತೆ ಮಾಡಿಸಿ, ಸರಿಯಾದ ಸ್ಥಳಕ್ಕೆ ಬಾಂದುಕಲ್ಲು ನೆಡಿಸಿದ್ದವನು (ಜಾಪ್ರ· ೩೩).

[← ಮರಾ. ಮೋಜಣೇದಾರ್]

ಮೋಜನ (ನಾ)· ವಿಮೋಚನೆ : ಬಿಡುಗಡೆ : "ಮೋಜನ.—ಮೋಚನ = ಬಿಡುಗಡೆ" (ಕ್ರಟ್ಟೀ.ಅ. ೩೭) ; ಮೋಚನ. ಮೋಜನ (ಕಣ್ಣಪು. ೦೪೭ ಕೃಪೂ).

[<ಸಂ. ಮೋಚನ]

ಮೋಜನಿ (ನಾ)· ಮಾವಿನ ಮರ : "ಮೋಜನೀ—ಮಾವು" (ಓಪಂ.೦೩೦).

[?]

ಮೋಜಾ 'ಮೊಚ್ಚೆಯ' ನೋ.

ಮೋಜಿನಿದಾರ 'ಮೋಜಣೇದಾರ' ನೋ.

ಮೋಜಿನೀದಾರ 'ಮೋಜಣೇದಾರ' ನೋ.

ಮೋದು$_1$ 'ಮೊಚ್ಚೆಯ' ನೋ.

ಮೋದು$_2$, ವೌಜು (ನಾ)· ೧. ವಿನೋದ; ತಮಾಷೆ : ಈ ಸ್ಪರ್ಧೆಪಪ್ಪ ಬಲು ಮೋಜಿನದಾಗಿದೆ (ಜಾಓಕ. ೦೯೯) ; ಫೋರನೊಬ್ಬನು ಬಂದು ಅಮಲಿನಿಗೆ ಮೋಜಿನ ಕತೆಗಳನ್ನು ಹೇಳುತ್ತಾನೆ (ಕಖಾಣಾ. ೬೪) ; ಆಗಾಗ ಮೋಜಿಗೆಂದು ಮುಂಚ್ಚಿ ಹಣ್ಣುಗಳನ್ನು ತನ್ನ ತಂಟಿಗಳ ಮಧ್ಯೆ ಇನಿಸಿ ಕೊಳ್ಳುವಳು (ಆಕ್ರಪು. ೬೩). ೨. ವಿಲಾಸ : ಮನೋರಂಜನೆ ; ಸುಖೋಪಭೋಗ : ಗಾಯು ನೋಟಕೆ ಲೇಸು ಮೋಜು ಇರುನಲಿ ಲೇಸು (ಹರಾಕೃ· ೦೧೩೬) ; ಕಲವೊಮ್ಮೆ ಸಲ. ಮೋಜಿಗಾಗಿ ಕುಮಾರಿಸವಾಮಿ ಮಾಡುತ್ತಿದ್ದುದುಂಟು (ಕಸ್ಮಳ· ೮೪). ೩. ಮೋಕೆ ; ಮಜ : ಸಮ್ಮ ಕೃಷ್ಣನ್ನರಿಗೆ ಸ್ವಲ್ಪಿಲ್ಲ ಸ್ವಲ್ಪ ಮೋಜದ ಜೀವನವಲ್ಲಿ—ನಿಮಗೆ? (ಹಪಚ್ಚಿ· ೦೩೪); ಗೂಬೇ ಮದಿವಿ ಮಾಡಿ ಮಾಡಿ ಸಾಕಾಯ್ತು. ಪೋದಿ-ಅವರೋಗೆ ಮೋಜೇ ಇಲ್ಲ (ಹುಳ್ಳ· ೩೦). ೪. ಸಂತೋಷ ; ಆನಂದ : "ತುಷ್ಟಿ = ಮೋಜು" (ಶಾಪ್ರ· ೫೬). ೫. ಸಂಭ್ರಮ ; ಸಡಗರ : ಗೌಜಲವಕ್ಕಿಯ ಕಾಳಿಗೆನು ಬಲು ಮೋಜಿನಿಂದಲಿ ಮಾಡಿಸುವನು (ತಂಬಾ. ೭-೦೪) ; ರಾಜರಾಜರು ; . . . ಮೋಜಿಂ ಮುಂದೆ ಹಿಂದೆ ಮಾಗಿ ಬರುತಿರಲು (ತೌಗಂ· ೫೮-೨) ; ಇಬ್ಬರೂ ಮೋಜಿನಿಂದ ಹಾತ್ರ ಮಾಡಿ ಕೃಷ್ಣ ಹೊಂಪಾತ್ರಾರೆ (ಕಕೃಹಾ· ೦೦೭). ೬. ಸೊಗಸು ; ಅಂದ : ಮುಂಗಾರುಮಳೆಯ ಮೋಜನ್ನು ದಿಟ್ಟಿಸುತ್ತ . . . ಕೂತುಕೊಂಡಿದ್ದೆ (ಜಾಪ್ರೋಲ್ ೧).

ಮೌಜು : ೧. ವಾಯುಯಜ್ಞ ಮುಂದಿತ್ತಿ ಮೌಜುಲಿ (ಕಂಗಿ. ೦೦). ೩. ಗಳೆಯರೂ ಬಂಧುವರಿಂದ ಅವನಿಗೆ ಒಳ್ಳೇ ಮೌಜಿನಿಂದ ಕಾಲ ಕಳೆಯಲಿಕ್ಕೆ ಅನುಕೂಲವಾಗಿತ್ತು (ಅವಶ· ೪). ೨. ಲಹರಿ ; ಗುಂಗು : ನಾವೀಗ ಒಳ್ಳೆಯ ಮೌಜಿನಲ್ಲಿದ್ದೇನೆ! (ಅಚಿ· ೦೭೦). ೪. ಉತ್ಸವ ; ಸಮಾರಂಭ : ಜಾತ್ರೆ ಮೌಜುಗಳಲ್ಲಿ . . . ಭಾಗವಹಿಸಿ ಜನತೆಯನು ಭಕ್ತರಪದತ್ತ ಆಕರ್ಷಿಸುತ್ತಿದ್ದರು (ಶಂಭ· ೫೭).

ಮೋಜಿನ ವೇಷ = ಮನೋರಂಜನೆಗಾಗಿ ಧರಿಸುವ ವಿಚಿತ್ರವೇಷ : ಮೋಜಿನ ವೇಷ ಹಾಕಿವರಿಗೆ . . . ಬಹುಮಾನಗಳನ್ನು ಹಂಚಿದರು (ಕಕಪ್ರ· ೭-೪೦). **ಮೋಜನಾಟ** = ತಮಾಷೆಯ ಪ್ರಸಂಗ : ಆವರಿಗೆ ಪೆರಿಕೆಯೆಲ್ಲಿ ಹೋಗಿ ಇದೊಂದು ಮೋಜನಾಟವೆಂದು ಕಾಣತೊಡಗಿತ್ತು (ಕುಜಾಪ್ರ. ೫).

[←ಅರ. ಹಿಂ. ಪುರಾ. ಮೌಜ್]

ಮೋಜುಗಾರ 'ಮೋಜುಗಾಜಿ' ನೋ.

ಮೋಜುಗಾರಿಕೆ (ನಾ)· ವಿಲಾಸ ; ಸುಖೋಪಭೋಗ : ಆ ಪಣ ವ್ಯಾಪಾರಿಯ ಮೋಜುಗಾರಿಕೆಗೆ ದುರ್ವ್ಯಯವಾಗಿತ್ತು (ಕಮಕೃ· ೪೩) ; ನಿನ್ನ ಕ್ಷಣಿಕಾರಳ ಮೋಜುಗಾರಿಕೆಯ ರಭಸದಿಂದ ಪತಿಯ ಪ್ರಾಣವನ್ನು ಹೋಗರಾಮಿಕೊಂಡರೆಂದು ಹೇಳಬಲ್ಲಯಾ ? (ಜಾಗ್ಯಲ· ೩೫೦).

[ಮೋಜುಗಾರ (<ಮೋಜುಗಾಜಿ) + – ಇಕೆ]

ಮೋಜುಗಾಜಿ, ಮೋಜುಗಾರ (ನಾ)· ೧. ವಿಲಾಸಿ ; ರಸಿಕ ; ಗುರು ಭಕ್ತಿಯೆಂಬೋದೆ ಕೊಳವಿಯಾಕಾರ ಸಿರಿನಾರಾಯಣನೆಂಬೊ ನೀರ ಅವಸಜೀತು ತುಂಬಿಕೊಳ್ಳಿ ಎಲ ಮೋಜುಗಾಜಿ (ಕಕಂವ. ೩-೧೬-೩). **ಮೋಜುಗಾರ** : ೧. ರಾಜಬೀದಿಗಳಲ್ಲಿ ತರಳುವ ಮೋಜುಗಾರರ ಬಿಳಿಯ ಬಟ್ಟೆಗಳೋಲ್ ವೋಕಳಗಳನ್ನಿಟ್ಟಂತೆ (ತೌಗಂ· ೦೬೩-೦೩). ೨. ತಮಾಷೆ ಮಾಡುವವನು ; ಹಾಸ್ಯಗಾರ : ಒಳ್ಳೆಯ ಮೋಜುಗಾರರು ! ಉದ್ದ ಪಾಜ ಲಂಗಗಳನ್ನು ತೊಟ್ಟ ಮೇಳದವರು (ಕುರಾ· ೬೪).

[ಮೋಜು$_2$ + —ಗಾಜಿ]

ಮೋಟು$_1$ (ನಾ)· ದಡ್ಡತನ ; ಅಜ್ಞಾನ : 'ಮೋಟೆವಾದ' ಪರಿ.

[ದೇ-ಕ ತಮಿ. ಮೋಟು ; ತೆಲು. ಮೋಟ ; ಬ್ರಾಹುಈ. ಮೋಟೀ = ತಿಳಗೇಡಿಯಾದ]

ಮೋಟು$_2$ (ನಾ)· ೧. ಕೈ, ಕಾಲು ಮುಂತಾದ ಅವಯವಗಳಿಲ್ಲದವನು ; ಅಂಗಹೀನ : ಕೈಯಿಲ್ಲದ ಮೋಟನೆಂತು ಕಾಲಿಲ್ಲದ ಪೆಬುವ ಪೆತು ತಬಭಾರ್ಯಕ್ಕಂ ರಾಜಸಭೆಗಂ . . . ಒಳ್ಪಿಂಗೆಂ ಸಲ್ಲಂ (ರಚತಾಕ್ಕು· ೯-೩) ; ಪೊಳಸಂ ಮುಳಸಂ ಮೋಟನಂ ಮುಕ್ಕನಂ . . . ಬೇಳೆ ಬೆಲೆಯಿಪ್ಪೊಡವನಂ ಕಾಮನೆಯಿ ದುಶ್ಶೀಲೆಯರು ಕಣ್ಣಿಸೆದರು (ಕಚಾ. ೯-೨೮) ; ಮೋಟಂಗೆ ಕೈಗಳು ಮೊಳೆತಮಂಗಳಸಹಿತವಾ ದುಶರಯ್ಯನ ಭಾವದಲಿ (ಶಪ್ರ. ೩೮ ಸೂಚ್ಯ) ; ಲೀಲೆಯಿಂ ಬಸವಣ್ಣ ಮೋಟಂಗೆ ಕೊಡನೆ ಕೈಕಾಲ (ಶಂಪ್ರ. ೩೭-೪೨).. (ಗು). ೨. ಕೈಕಾಲಿಲ್ಲದ ; ಅಂಗಹೀನನಾದ : ಮೋಟ ಗಂಧನ ಮೂಕೊಜತೆ ಹೆಂಡತಿ ಬೇಟವ ಮಾಡಿದಂತಾಯಿತ್ತು ಕಾಣಾ (ಶಪ್ರ· ೩೦೩-೭೦). ೩. ಬೋಳಾದ ; ಬರಿದಾದ : ಸಾಕ್ಷಾತ ವಡ ಬಾನ್ನಿಯೆ ಎಗ್ಗಪಡೆಸಿ ತಪಮಂ ಮಾಳ್ಪುದೊಯ್ಯಂ ಹಾಗೆಯು ಮೋಟ ವರಪ್ರಾಪ್ತಿ ಕವಲದಯಿವ್ವಂಥಾ (ಶಾಕಾಪು· ೬೭-೪). ೪. ಚಿಕ್ಕದಾದ ; ಗಿಡ್ಡ : 'ಮೋಟುಗೆಯ್' ಪರಾ.

[< ಮೋಟು + – ಅ್ಯ / ತಮಿ. ಮೊಣ್ಣೈ ; ತೆಲು. ಮೊಂಡಿ, ಮೊಂಡಮು ; ಕೋಡ. ಮೊಂಡ್ಯೆ ; ತೊದ. ಮುಡ್ಯೆ]

ಮೋಟು$_3$ (ನಾ)· ಒಂದು ಬಗೆಯ ಸಸ್ಯ : "ವಿಪ್ರಾ—ಮೋಟು. ಬೋಟತಲಿ" (ಓಪಂ· ೦೫೨).

[ಸಂ. ಮೋಟಾ]

ಮೋಟುಕೆಯ್ 'ಮೋಟುಗೆಯ್' ನೋ.

ಮೋಟಗಯ್ಯ ' ಮೋಟಗೆಯ್ ' ನೋ.

ಮೋಟಗೆಯ್, ಮೋಟಕೆಯ್, ಮೋಟಗಯ್ಯ (ನಾ)- ಪೂರ್ಣವಾಗಿ ಬೆಳೆಯದೆ ಗಿಡ್ಡಾಗಿರುವ ಕೈ ; ಮೊಂಡುಕೈ : ಹೋಗಿ ದಸರಯ್ಯಗಳ ಮಂಡೆಯುನೀಗ ನಿನ್ನಯ ಮೋಟುಗೆದ್ಕುಲಿ [ಪಾಣಾ. ಕೈಯಲಿ] ಬೇಗವಲಿ ತಿವಿ (ಪಾಪ್ರ. ೭೬–೦೬). **ಮೋಟಕೆಯ್** : ಭಂಡನೀತನು ಕಪಟವೇಷದ ತೊಂಪು ಕಾಜಿನು ಮೋಟಕೆಯ್ [ಪಾಣಾ. ಕೈ] ಗಳ ಮುಂಡನೆನ್ನದೆ ತನ್ನ ಭಾವಕೆ ಜಂಗಮಾಕೃತಿಯು ಕಯು (ಪಾಪ್ರ. ೭೬–೨೩). **ಮೋಟಗಯ್ಯ** : ಅಂಗ ಜೋದ್ರೇಕದಿಂದವಗಡಿಸಿ ಮೋಟನೊಪ್ಪಿಸಲವಂ ಕಳ್ಳಂಡಿಸು ತಿವಿಯು ತನ್ನಯ ಮೋಟಗಯ್ಯಂದೆ (ಕಾಬ್ಯೊಲ. ೪–೨೬). [ಮೋಟ್ಟ + ಕಯ್]

ಮೋಟನ (ನಾ)- ೧. ನಾರಮಾಡುವುದು. ೨. [ನಾಟ್ಯ] ಇಪ್ಪತ್ತು ಬಗೆಯ ಕರಕರ್ಮಭೇದಗಳಲ್ಲಿ ಒಂದು : ಧೂನನ. ಶ್ಲೇಷ . . . ಮೋಟನ. ವಿಸರ್ಜನ, ಆಹ್ವಾನ, ತರ್ಜನ–ಈ ಇಪ್ಪತ್ತು ಕರಕರ್ಮಭೇದಂಗಳ್ (ಶಾಸ್ತ್ರಂ. ೪–೦೬ ೫). [ಸಂ.]

ಮೋಟರು ' ಮೋಟಾರು ' ನೋ.

ಮೋಟವಾದ (ನಾ)- ಅಪ್ಲಾನದಿಂದ ಕೂಡಿದ ಜರ್ಜೆ ; ಹುರುಳ್ಳಿಚ ಪೂತು : ಪೂರ್ವಕರ್ಮಶುಭಾಶುಭವಿನಿಪ್ಪ ಮೋಟವಾವಂ ಸಲ್ಲದು (ಪಾಪ್ರ. ೪೪–೦೭). [ಮೋಟ್ಟ + ವಾದ್ಯ]

ಮೋಟಾರ್ ' ಮೋಟಾರು ' ನೋ.

ಮೋಟಾರು, ಮೋಟರು, ಮೋಟಾರ್ (ನಾ). ೧. ಯಾಂತ್ರಿಕ ಚಲನೆಯನ್ನು ಉತ್ಪಾದಿಸುವ ಯಂತ್ರ : ಜಾಲಕಯಂತ್ರ : ಈ ಮದ್ದಲೆಯನ್ನೂ ಸ್ಪರ್ಶಕಾರಿಯನ್ನೂ (ಕಾಂಟಿಕ್ಟ್ ಮೇಕರ್) ಒದು ಸ್ವಾ ಸಮಕಾಲಿಕ ಮೋಟಾರು ಒತಿಸುತ್ತದೆ (ಕಬಿಸಾ. ೧, ೩೫೪). ೨. ಜಾಲಕ ಯಂತ್ರದಿಂದ ನಡೆಯುವ ಕಾರು, ಬಸ್ಸು ಮುಂತಾದ ವಾಹನ : ಈ ಕೋಲಾಹಲವನ್ನು ಕೇಳಿ ಮೋಟಾರಿನೊಳಗಿನ ಜನರು .ಸುತ್ತಲಿನ ಪರಿಸರದ ಎತ್ತಿ. ಹೊರಗಿನವರನ್ನು ನೋಡುತ್ತಲಿದ್ದಾರೆ (ಕ್ರಪ್ರ. ೩೩) : ಅವನು ಕೋಪದಿಂದ ಎಸೆದ ಆಟದ ಮೋಟಾರು ತಳಮೇಲಾಗಿ ಬಿದ್ದು ಕಾಲಿಗೆ ಸಿಕ್ಕುತ್ತದೆ (ಅಪಾ. ೩೪). **ಮೋಟರು** : ೨. ಪಮ್ಮ ದೇಶದಲ್ಲಿ ನೂರಾರು ಮೋಟರುಗಳು ಬಳಕೆಯಲ್ಲಿವೆ (ಪಾಂಕ್ರ. ೨. ೧೦೩) ; ಅಂದಿನ ಪಯಣಿಗರಿಗೆ ಮೋಟರು, ಟಾಂಗ ಮೊದಲಾದ ವಾಹನಸೌಕರ್ಯಗಳು ಸಿಗುತ್ತವೆ (ಪಕ್ಷ. ೨). **ಮೋಟಾರ್** : ೨. ಬೈಸಿಕಲುಗಳ್ ಮೋಟಾರ್‌ಗಳೆಮ್ಬ . . . ಪೊತ್ತಮನಿಪಂ ಬಣ್ಣಿಪ್ಪನಂ ಕಾಣೆನಾ (ಪ್ರಸಾಮು. ೪–೦೩೬). [← ಇಂ. Motor]

ಮೋಟಾಳು (ನಾ)- ಕುಳ್ಳ ; ಗಿಡ್ಡ : ಆವಾಗೊಂದು ಮೋಟಾಳೇ ? (ಗಾಪ). [ಮೋಟು + ಆಳು$_3$ (< ಆಳ್$_2$)]

ಮೋಟಿ (ನಾ)- ೧. ಮುಂಗೈ ಇಲ್ಲದವಳು. ೨. ಕುಳ್ಳಗಿರುವವಳು: (೧). [ಮೋಟ್ಟ + — ಇ. / ತುಳು. ಮೋಟಿ, ಮೋಂಟಿ]

ಮೋಟು (ನಾ). ೧. ತುದಿ ಮುರಿದುದು : ಮೊನಚಾಗಿಲ್ಲದುದು ; ಮೊಂಡು : ಹಾರೆ ಮೋಟು, ಗುದ್ದಲಿಮೊಪ್ಪ, ಗೈಯುವವನಿಗೆ ಒಕ್ಕೈ (ಗಾಪ). ೨. ತುಂಡಾದ ಕೈ ; ಮೊಂಡುಕೈ : ಕೇಶವನ ದೇಟವಳಿವಾ ಸುರದ ಮೋಟುಳಿವು ವ್ಯಾಸನುಚ್ಯುತ ತೃಣವಿದೇವುದೆಂದು ಹೇಸಿದುಪಸಂ ಬಿಸುಟುಯಾತಾಂಭ್ರವಿಡಿದುಳಿದ ಮೋಸಿಯಂ ಕಾಳಕಾಯಿಂಡದಲ್ಲಿ (ಶಾಪಂಚ ೨–೩೦) ; ದಂಡಿಸರದ ವಸಂತದೋಕುಯಂಡೆಯೆನೆ ಮೋಟಿರಡಲಿ ಹೊಱವಂದುವರುಣಜಲ್‌ಫ ಹೊಱೆದುದು ದಿಕ್ಕಟಾವಳಿಯು (ಕಾಪಂ. ೬–೨೬–೨೯). ೩. ಕೊಂಬೆ, ರೆಂಬೆಗಳ್ಳದ ಮರದ ಭಾಗ ; ಬೊಡ್ಡೆ : " ಸ್ಥಾಣುಃ, ಧ್ರುವಃ, ಶಂಕುಃ – ಈ ೩ ಮೋಟಿನ ಹೆಸರು " (ಶಿಶಾ. ೦೮. ೩೦೦) ೪. ಕೊಯ್ದಾದ ಮೇಲೆ ಉಳಿಯುವ ಪೈರು : ಕೂಳೆ : ಮೇದ ಮೋಟು ಕಾಣದು. ಹೋದ ಹಿಜ್ಜೆ ಕಾಣದು (ಗಾಪ). ೫. ಊನ; ನ್ಯೂನತೆ : ನಮಗೆ ಅನುಕೂಲವಾಗಿದ್ದರೆ . . . ಬೇಕಾದದ್ದು ಮಾಡು ತ್ತಿದ್ದವು ಎಂಬ ಅಹಂಭಾವಕ್ಕೆ ಒಳಗಾಗಿ ನಮ್ಮ ಮೋಟು ಮೇಲೆ ಮಾಡಲಿಕ್ಕೆ ಹವಣಿಸುವೆ (ಕಾಬಿಂಶಾ. ೪೪). (ಗು). ೬. ಕುಳ್ಳಾದ ; ಗಿಡ್ಡವಾದ ; ಮೋಟುಗೋಡಿಯನ್ನು ಹಾರುವುದು ಇವನೊಬ್ಬನಿಗೇ ಸಾಧ್ಯ ! (ಪಾಗದ್ಯ. ೫೫) ; ಮೋಟುಗೋಡಿಯ ಮೇಲೆ ಕುಳಿತು ತಲೆ ಕೊಂಕಿಸಿ ನಗು ಬೀರುತ್ತಿರುವಾಗ ಶಿವರ ಒಂದು ಫೋಟೋ ತೆಗೆದ (ಪಾಪ್ರ. ೪೬). [ದೇ.ತ ತಮಿ. ಪೊಟ್ಟೈ, ಪೊಣ್ಣೈ ; ಮಲ. ಪೊಟ್ಟ ; ತುಳು. ಮೋಯು, ಮೋಂಟ್, ಮೋಂಟ ; ಕೊಡ. ಮೋಟ್ ; ತೆಲು. ಮೋಟು, ಮೋಡು]

ಮೋಟುಕೈ ' ಮೋಟುಗೆಯ್ ' ನೋ.

ಮೋಟುಗೆಯ್, ಮೋಟುಕೈ (ನಾ). ೧. ಕತ್ತರಿಸಿದ ಕೈ; ತುಂಡುಗೈ : (೪). **ಮೋಟುಕೈ** : ೨. ಗಿಡ್ಡವಾಗಿರುವ ಕೈ : ಮೋಟುಕೈಗಳನ್ನು ತಿರುಪುತ್ತ, ಕಂಬುಗಳಂತಿದ್ದ ಆ ಕಾಲುಂಗಳಿಗೆ ಕರುಂಗೆಜ್ಜೆಗಳ ಸರಗಳನ್ನು ಕಟ್ಟಿಕೊಂಡು ನಾಟ್ಯರಂಗಮೇರಿದ ಗಣಪತಿ (ಪಾಪಣ. ೨೪೪).

[ಮೋಟು + ಕಯ್]

ಮೋಟೆ (ನಾ). ದಿಣ್ಣೆ : ಗುಡ್ಡ : ಗದ್ದಗೆ ಸೀಮೆ ಯಾವುದನೆ . . . ಬಡ ಗಣದ ಮೋಟೆಯ ದನ್ತೆದು ಸುನಕ್ಕೆ ನಟ್ಟು ಕಲ್ಲು (ಪಾಪ್ರ. ೪೨–೫೨, ೦೮೬–೮೯; ೧೨೨೦); ಭಾಗಮಂಡಲದ ಕೋಟೆಗೆ ಹೋಗಿ, ಮುತ್ತಿಗೆ ಹಾಕಿ, ಬಿಂಬಾರತ್ನ ಎಂಬ ಮೋಟೆಯಲ್ಲಿ ಭದಂಗಿ ಮಡಗಿ . . . ಕೋಟೆಗೆ ಇದು ತ್ತಿದ್ದರು (ಪಾಕೊಕ್ರ. ೮೯). ' ಮುಗುಳಿ$_3$ '. ' ಮೊಗಡು ' ಪರಾ.

[ದೇ.ತ ತಮಿ. ಮೋಟು]

ಮೋಟ್ಟಾಯಿತ (ನಾ). [ಕಾವ್ಯಮಿಮಾ] ಹತ್ತುವಿಧವಾದ ಶೃಂಗಾರ ಚೇಷ್ಟೆಗಳಲ್ಲಿ ಒಂದು : ಕ ಪ್ರಿಯಂಕರನ ವಾರ್ತೆಯನ್ನು ಕೇಳಿದಾಗ ಇಲ್ಲವೆ ಆತನನ್ನು ನೆನೆದಾಗ ಸ್ತ್ರೀಯ ಸ್ವಾಭಾವಿಕವಾದ ಅಂಗಚೇಷ್ಟೆ ಗಳ ಮೂಲಕ ಸೂಚಿತವಾಗುವ ಪ್ರೀತಿಯ ಅಭಿವ್ಯಕ್ತಿ : ಬಿಮ್ಮೋಳ ಮೋಟ್ಟಾಯಿತ . . . ಕುಟ್ಮಿಮಾಗಳೆಂಬ ದಶವಿಧೋದ್ಭಾವಂಗಳುಳ್ಳ ವಿಲಾಸಿನಿಯರಿಂ (ಪಪಂ. ೨೫೯). [ಸಂ.]

ಮೋಡ$_1$ (ನಾ)- ೧. ಮುಗಿಲು ; ಮೇಘ : " ನೀರ್ದೇವ್ಯುರ್ಗಿಲ್ ಮೋಡ ಮೇಘದ ನಾಮ " (ಶಬ್ದಮ. ೦೩); ತೊಲಗದ ಮೋಡವೋಡಿದುದು . . . ಶರತ್ಪ್ರಥಮಪ್ರವೇಶದೊಳ್ (ಪಪಂ. ೪–೪೬); ಮೋಡವ ಗಬ್ಬ ಜಿಮಕರಣಂತೆ . . . ಮನೋಪರಾಕೃತಿಯೊಳರ್ದನತಿದುಃಖಿಯಿಂದಿ ಳಾಧಿಪಂ (ಪಪಂ. ೬೫೬); ಆಕಾಶದಲ್ಲಿ ಮೋಡಗಳು ಮುಚ್ಚಿಕೊಳ್ಳು ತ್ತಿದ್ದುವು (ಪಾಪ್ರ. ೨೩). ೨. ಮೋಡ ಕವಿದ ವಾತಾವರಣ ; ಮಬ್ಬು : " ದುರ್ದಿನಪಭ್ರತಿಮಿರಮೆನೆ ಮೋಡಮೆಂದನಿಸಿಕ್ಕು " (ಪುಂಗಣ. ೦೭–೨). ೩. (ಆಲಂ) ಚಿಂತೆಯ ನೆರಳು : ಅವನ ಮೊಗದಲ್ಲಿ ಕರು ಮೋಡ ಸುಳಿದುತ್ತು (ಪಾಪ್ರ. ೭೩). ೪. ಅಜ್ಞಾನ ; ಪೌಢ್ಯ : ಮೋಡಮಬುಧಿ ಕೀಳದ ಕಳಗಳಂ ಬೆಳಗುವ ಚಂದ್ರಮನಂತೆ ಮೋಡ ವಬ್ಧಿಯ ಕಿಳದ ಕಳಗಳಂ ಬೆಳಗಿವರ್ ಯಮಳರ್ (ಪಾಪ್ರ. ೦೫೦–೦೬).

ಮೋಡ ಕವಿ = ೧. ಮುಗಿಲು ಮುಚ್ಚಿಕೊಂಡು ಮಬ್ಬಾಗು : ದೂರ ಪಶ್ಚಿಮದಿಗಂತದತ್ತ ಮೋಡ ಕವಿದು ಮಿಂಚುತ್ತಿತ್ತು (ಪಾಪ್ರ. ೧೭೬). ೨. (ಆಲಂ) ಚಿಂತೆ ಆವರಿಸು : ಮೋಡ ಕವಿದಾ ಮೊಗದಿ ನಿನ್ನ ದೆಸೆಯಿಂದಂ ಮೂಡಿತೇ ಅರಗಳಿಗೆಯಾದೊಡಾನಂದಂ ? (ಕಾಪ್ರ. ೪೬–೨). **ಮೋಡಮುಚ್ಚಿಕೊಳ್ಳು** = ಮೋಡಕವಿ ೧ : ಒಂದೇ ಒಂದು ಕ್ಷಣದಲ್ಲಿ ಮೋಡಮುಚ್ಚಿಕೊಂಡು ಮಳೆ ಬರುವ ಹಾಗಾ ಯಿತು (ಪಾಪ್ರ). **ಮೋಡ ಹಾಕಿಕೊಳು** = ಮೋಡ ಕವಿ ೧ : ಮೋಡ

ಹಾಕಿಕೊಂಡಿದೆ. ಹೊರಗೆ ಹೊರಮೋಡ (೮೨೨). **ಮೋಡ ಹಾಕು** = ಮೋಡ ಕವಿ ೧ : - ಮೋಜ ಹಾಕಿದರೆ ಶೀತ. ನೆಗಡಿ (೮೦೧೨- ೮೩).

[ದೇ.ಕ ತಮಿ. ಮೋಟುಮ್, ಮೂಟುಮ್, ಮೂಟ್ಟುಮ್ ; ಮಲ. ಮೂಟಲ್ ; ತುಳು. ಮುಂಡ, ಮೋಡ, ಮೋಡು ; ಕೊಡ. ಮೋಡ ; ತೆಲು. ಮೋಡಮು ; ತುಳು. ಮುಡೆಂಗಿ]

ಮೋಡ್ಕ (ನಾ). ಹೆಡ್ಡ ; ತಿಳಿಗೇಡಿ ; ಮೂಢ : "ಗಾಂಪನೊಳು ಮೇಳವಿದ್ದೊಳು ಮೋಡಪದ" (೫೧೪೮. ೮೩) ; ಊಕಾರಕ್ಕೆ ಒತ್ತಂ-ಕೂಟ-ಕೋಡು. ಮೂಢ-ಮೋಡ (೪೮೮. ೩೭೦ ಕ್ರಿಯೋ) ; ಈ ರೀತಿ ಮಮ್ಮ ಜನಗಳ್ಳಿ ಮೋಡರು ಎನ್ನುತ್ತಿದ್ದರು. ಇದೇನೋ ನಿಜ. ಇದಕ್ಕೆಲ್ಲ ಅವಿದ್ಯೆಯೇ ಮೂಲಕಾರಣ (೫೧೪೮. ೪೦). [< ಸಂ. ಮೂಢ. / ತಮಿ. ಮೋಟನ್ ; ತೆಲು. ಮೋಡಿ ; ತುಳು. ಜೋಡ]

ಮೋಡಂಗಪ್ಪು (ನಾ). ಮೋಡ ಕವಿಯುವುದರಿಂದ ಉಂಟಾಗುವ ಮಬ್ಬು : ಶರದಾಗಮನಕೆಂತು ಮೋಡಂಗಪ್ಪು ತೊಲಗಿದಪ್ಪುದಂತ ಮೂಡಿದುದು ರಾಮನ ಮನಕೆ ನಿಶ್ಚಂಕೆ (೪೯೦೫೫. ೩೪೦-೩೪೩).

[ಮೋಡ$_{೩}$ + ಕಪ್ಪು$_{೪}$ (< ಕರ್ಪ್$_{೧}$)]

ಮೋಡಕಾ (ನಾ). ಹಳೆಯ ವಸ್ತು. -ಪದಾರ್ಥ.

ಮೋಡಕಾ ಅಂಗಡಿ = ಹಳೆಯ ಸಾಮಾನುಗಳನ್ನು ಮಾರುವ ಅಂಗಡಿ ; ಗುಜರಿ : ಒಂದು ಮೋಡಕಾ ಅಂಗಡಿಯು ಒಮ್ಮ ಮೂಲೆಯಲ್ಲಿ ತೂಗಾಡುತ್ತಿದ್ದ ದುಃಖಚಿತ್ರವು ನನ್ನ ದೃಷ್ಟಿಯನ್ನು ಆಕರ್ಷಿಸಿತು (೫೮೨೫೪. ೧೦೦) ; ಅವನ ಮೋಡಕಾ ಅಂಗಡಿಯು ಮುಂದಿದ್ದ ಒಂದು ಪೆಟ್ಟಿಗೆಯ ಮೇಲೆ ಕುಳಿತುಕೊಂಡ (೨೫೫. ೭೮). [ಈ-ದುಡಾ. ದೋಡಕಾ]

ಮೋಡಗತ್ತಲೆ (ನಾ). = ಮೋಡಂಗಪ್ಪು : ದಳವೇಱಿತೊತ್ತರಿಸಿ ಮೋಡಗತ್ತಲೆ ಗಾಳಿ ಪನಿ ಮೊಗಲು ಸುಂತ (೩೭೬೩. ೬-೩೭) ; ಕಾಡು ಗತ್ತಲೆಗೆ ಮೋಡಗತ್ತಲೆಯೂ ಸೇರಿ ಮಸಿಮುದ್ದೆಯಾಗಿ ಅಳಿಸಿ ಹೋಗಿಹುದೆಲ್ಲ (೫೦೭೫. ೦೦೦). [ಮೋಡ$_{೩}$ + ಕತ್ತಲೆ$_{೧}$ (< ಕಟ್ಟಲೆ)]

ಮೋಡಾಮೋಡಿ (ನಾ). ೧. ಸೊಗಸಾದ ರೀತಿ.—ಶೈಲಿ ; ಆಂದವಾದ ವೈಖರಿ : ಕೆಲಕೆಲಬರು ಮೋಡಾಮೋಡಿಗಳಾ ಕೆಲಕೆಲಬರು ಗುಂಥಾ ಗುಂಥಿಗಳಂ. ಕೆಲಕೆಲಬರು ಧಾರಾವಂಚಕಮಂ ಮುಂದೆಯೆ ತೋಱುತ್ತಂ ಜಲಧಿತರಂಗದ ತೆಱದಿಂದಾ ಹಯಬಲವಿಘಟ್ಟಂಗಳ್ ಕಾರ್ಪ್ಪಿನೊಳಿಕ್ಕಲ ದೊಳಮತಿಶಯಮಾಗಿರೆ ಸಡದವು ಹಿಂದೆಮುಂದೆ ಸಂದಣಿಸಿ (೪೩೮೫೦. ೯-೨೮) ; ಜಾಜಿಗಳ ಘಾಯದ ಕಳವುಗಳ ಕೈಮೆಗಳ ಮೋಡಾಮೋಡಿಯು ಬ್ಬಣದ ಲಲಿತಚಿತ್ರದ ಚಮತ್ಕಾರವನ್ನೆಳಿಸಿ ಹೊಯ್ದಾಡಿದರು (೪೩೮೫೦. ೦೨-೬) ; ಆಗಲಂಬರ ಧರಣಿತಳಮೆಲ್ಲ ತುಂಬಿ ಬರೆ ಜೈತ್ರನುಜಿ ಸ್ಮರಿಸೆ ಪೇಳಿದ ತನ್ನ ಬಲದ ವೈಭವದ ಮೋಡಾಮೋಡಿಯಂ ಗಾಡಿಯು (೪೮೮೩. ೩-೧-೩). ೨. ಚಾತುರ್ಯ; ಕೈಚಳಕ : ಲಂಕೆಯಲೊಮ್ಮಾರದಲಿ ಮೋಡಾಮೋಡಿಯಂದವಲಿ . . . ಶಸ್ತಾವಳಿಯ ಸಾಂಗೋಪಾಂಗಶ್ರಮ ವನು ತೋರ್ದನು ಪಾರ್ಥ (೪೩೮೫೦. ೩-೨೦) ; ಹೊಗೆದುದ್ಯೆ ಹುಟ್ಟಾಳುಗಳ ನಗಮೊಗವ ಮೋಡಾಮೋಡಿಯಲಿ ಕೈಮಗುಚಿ ಕಳೆದನು ನಿಮಿಷದಲಿ ಹೇರಾಳ ರಾಶಿಗಳ (೪೩೮೫೦. ೦೩-೩) ; ಬೆರಸಿ ಧಾಳಾಧೂಳಿಯಲಿ ಪೊಪ್ಪರಿಸಿ ಪಾಡಾಪಾಡಿಯಲಿ ಮೋಹರಿಸಿ ಮೋಡಾಮೋಡಿಯಲಿ ಮುಸ್ಸಿ ಪ್ರಹಾರದಲಿ . . . ಕಾದಿತು ಸೇನೆ ಸೇನೆಯಲಿ (೫೮೨೫೪. ೩-೩೮-೩). ೩. ಬೆಡಗು ; ಬಿನ್ನಾಣ ; ವಿಲಾಸ : ಪರಿಮಿತದ ಮೋಡಾಮೋಡಿ ದುನುಭವದೊಳ್ ವಲ್ಲಭನ ಮನಂ ಪಲ್ಲಟಿಸುವ ಕಾಲಮನಱಿದು (೧೦೪. ೩-೦೦೩ ಕ) ; ಸುಳಿದುದು ಸವಿಸಾರಣಾ ಮಹಾದ್ರಿಯಲಿ . . . ಮೊಱೆದೊಗುವ ಮಱಿದುಂಬಿಗಳ ಮೋಹರದ ಮೋಡಾಮೋಡಿಯಲಿ ಡಾವರಿಸಿ ತ್ಯದಿಂದ್ರಿಯದಲೊಂದಿರೆ ಸಲಮುನಿಜನವ (೪೩೮೫೦. ೦೦-೭).

೪. ಮೆರೆತ ; ಪ್ರದರ್ಶನ : ಅಪಿಳ ಪೃಥ್ವೀಶ್ವರರ ಬಹಳಾಸ್ಥಾನದಲಿ ಮೋಪರಿಸಿದರು ಮೋಹನದ ಮೋಡಾಮೋಡಿಯುಬೆಯರು (೪೩೮೫೦. ೦೩-೪೪) ; ಧರೆತಾಧಿದೇವತೆಯಂತೆ ನಿಂದಳಾ ತಾಣದೊಳಗಾ ದಿವ್ಯವನಿತ ಮೋಹನದ ಮೋಡಾಮೋಡಿ ಪೊಪಸಿ ನಿಂದಂದದಿಂ (೩೦೦೭೪. ೮-೯). ೫. ರಭಸ ; ವೇಗ : ಕವಿಮುವಿದು ಗಜಿಗಟ್ಟಿ ಕಾವಸಿಸಹ ಮೋಡಾ ಮೋಡಿಯಲಿ ರಣದವಕಿ ಕರ್ಣದ್ರೋಣಿಯಾಪೆಡೆ ತೋಟು ತೋಟಿನುತ (೪೩೮೫೦. ೦೩-೯). ೬. [ಸಂಗೀತ] ಒಂದು ರಾಗದ ಹೆಸರು : ಶ್ರೀಯು ಮೋಡಾಮೋಡಿ ಸರಸೋಪಾಯ ಸದುಪಾಯಂ ವೆಜಿಬಿ . . . ಧರೆಯೊಳ್ವ ಮೊದಲಾಗಿ ಸೊಗಸುವ ಒರಿಯ ರಾಗಂಗಳು (೪೩೪೪. ೦೯-೦೩).

[< ಮೋಡಿ$_{೩}$ / ತಮಿ. ಮೋಟಾಮೋಟಿ ; ತೆಲು. ಮೋಡಾಮೋಡಿ]

ಮೋಡಿ$_{೧}$ (ನಾ). ೧. (ನಡೆ, ನುಡಿ ಇತ್ಯಾದಿಗಳ) ರೀತಿ ; ವೈಖರಿ ; ಶೈಲಿ ; ವರಸೆ : ಮೋಡಿದನು ಕುರುರಾಮನಲಿ ಹೊಯ್ದಾಡಿ ಬರಬೇಕೆಂಬ ಭೀಮನ ಮೋಡಿಯನು ನೃಪನಱಿದು ಸಂತೈಸಿದನು ಸಾಮದಲಿ (೪೩೮೫೦. ೦೪-೩೦) ; ನಮ್ಮ ನಗರವನೊರಸಿ ಮೋದುವ ಮೋಡಿ ಮೋಜಿಹೊಳವನಲ ದೆಯೆಂದ (೫೮೮೩. ೬-೬-೩) ; ಪರಿಚರೋಡಿವರು ದೆಸೆದೆಸೆಗೆ ದೈತ್ಯನ ಮೋಡಿಯೆಂತುಟೊ (೪೩೦೨. ೦-೭-೩೩). ೨. ಸ್ಥಿತಿ ; ವೈಕ್ಲಿ : ಪ್ರಿಯೆಯ ಮುಖವೆನ್ನೊಳಗೆ. ನಿನ್ನೊಳಗೆ ಚಂದಿರನು, ನವ್ವಿಬ್ಬರಾ ಮೋಡಿಯುವಿತು ಸಮವೆ (೪೪೩೦೫. ೩೩). ೩. ಶೀವಿ ; ಗಾಂಭೀರ್ಯ; ಗತ್ತು : ಮೇಳವದ ಮೋಡಿ [೫೫೦೦. ರೂಢಿ. ವೇಧ]ಯಲಿ ರಥ ದುವ್ಯಾಳಿಸಿತು (೪೩೮೫. ೩-೭೩) ; ಹನುಮನ ಮೊಗದ ಮೋಡಿಯ ಧೂರ್ತ ವಚನದ ಬಗೆಯ ಭಂಗಿಯನಾ ಪ್ರಹಸ್ತ ವಿವೇಕದಿಂದಱಿದು . . . ಇವನ ನುಡಿಸಿದು ಪೋಡಬೇಕೆಂದ (೫೮೨೫೪. ೩-೭-೩೩); ಮೋಡಿಯೊಳೂಜಿ ನಿಂದಡಿಯೊಳಿರ್ಕಲಕಂ ಮಾಜಿಗೊಂಬ ಮುದ್ದುಮೆಯಾ . . . ಕಳೆಗು ಮಲ್ಲರ ದೃಷ್ಟಿ ಮಾನಸ್ತ್ಯವಂಗಳಂ (೪೪೦. ೯-೦೩೭) ; ನಿಲುವಿನ ಮೋಡಿಯಲ್ಲಿ ಉಡುಗೆಯ ಗಾಡಿಯಲ್ಲಿ . . . ವಿಲಾಸದ ಒಳ್ಪು ಸೇರಿಕೊಂಡಿತು (೭೩೦೦. ೧೩). ೪. ಬಿಗುಮಾನ ; ಗರ್ವ : ಮಾನವುದತ್ತಾದಿನ್ನು ಮೋಡಿಯತ್ತಣದು ಮನವ ಬೈತಿಟ್ಟು ಮಾರ್ಮಲೆವುದತ್ತಣದು (೧೪೪೫೫. ೩೭) ಏನೆಂದಱಿಯದಿಳೆಯೊಳಿನಿಯಳಭಿಮಾನಗೊಂಡಿರೆ ಮಚ್ಚರಿಸದೆ ಮೋನ ದೊಳಿರದೆ ಮೋಡಿಯ ತಾನಸದೆ ಸನ್ಮಾನದಿ ಮನಗರಗಿಪುದು (೫೦೫. ೬-೦೩) ; ಮ್ಲೇಕ್ಕಕುಂ ಶಕ್ಕಿನಿಂದೊಲ್ಮೆಗೊಳ್ ಮುನಿವರ್ ಮೋಡಿಯೊಳ್ ಪರ್ಯೇಡಿಪರ್ (೪೪೦. ೬-೧೩). ೫. ಬಿಂಕ ; ಬಿನ್ನಾಣ ; ಬೆಡಗು ; ಹಿರಿಯಳಿರ್ದಂತವಳಿಗಿಪ್ಪೇಕುರವಱಯು ಯಾ ಗಾಡಿ ಮೋಡಿಯಾ (೫೫೫೫. ೨-೦೭) ; ಕಿಬಿನಗೆಯ ಮೋಡಿಯೊಳೊರ್ಮೆ, ತಾಂ ಬಬಬ್ಬುಂ-ನಲ್ಲ ! ಬಬಬ್ಬೆದು ! ಕುಳ್ಳಿನ ಎಂದು ಪಾಸುಬಿದುಂ ತೋಜಿ ತಾನುಮೊತ್ತಿನೊಳ್ ದುಂಡಿಸಿ (೫೫೮೮೪. ೨೫-೨೬). ೬. ಸೊಗಸು ; ಅಂದ : ಅಗಡು ಮೋಡಿ [೫೫೫೦. ೫]ಯ ಹೊಗಱಿ ಹೊಸಪಡ್ಡನದ ಭಟನಿಕರ ಜಗಮರಸ ರಾಮಂಗೆ ಕೈಗಳ ಮುಗಿಮುಗಿದು ಕಿಲಸಾರುತಿರ್ದುದು (೪೮೮೩. ೨-೮-೩); ಆಗಮವಧ್ಯಾತ್ಮವಳವಟ್ಟು ಶೃಂಗಾರತ್ಯಾಗಭೋಗದ ಮೋಡಿ ಮೆಜಿಬಿ . . . ಸೊಲ್ಲಿಸುಮವಾಲಿಸಿರೋ (೪೮೮೩. ೦-೦೯) ; ಮೋಡಿಯನೇವೇಟ್ಟಿಸೀ ಮನೋಮೋಹಕವಾ (೫೫೫೦. ೬-೩೯). ೭. ಆಕರ್ಷಣೆ ; ಸೆಳೆತ : ವಿಮೋದದಾಗರಂ ಮೋಡಿಯ ಮಂಟಿಪಂ (೫೩೮೫೦. ೦-೨೪) : ಈ ನಲ್ಲೆಯಾ ಗಾಡಿ ಯಾ ಮೋಡಿ . . . ಆಗಿಗಳವಡದು (೫೦೩೦೫. ೩-೯-೦೦) ; ಇವಳ ಮುಖದಲ್ಲಿ ಇನ್ನೂ ಆ ಮೋಡಿಯಿತ್ತು . (೪೦೮೫೦. ೪೭). ೮. ವೈಶಿಷ್ಟ್ಯ ; ವಿಶೇಷತೆ : ಅರಲಂಬಗರಸನಿಮ್ಮಡಿ ಚೆಲ್ವನವನ್ಯೆದು ಸರಲನಾಂತೊಡೆ ಹತ್ತು ಸರಲಾ ದೊರೆ ಪಿಡಿವುದು ಮೋಡಿಯೆನೆ ಕವಗಳ ಹತ್ತು ಬೆರಳೆಸೆದುವ ಸರಲದೊಳು (೪೮೮. ೬-೩೮). ೯. ಕೈಚಳಕ ;

ಚಾರಚಕ್ಕತೆ ; ಚಾತುರ್ಯ : ಅಡರೇಸವಾಂಡ್ರಜಿತುವಿನ ಮೋಡಿ ಬೇಜೋಸರಿಸಿ ದಿನದಿನಕೋಡಿ ಹಿಂಗಿದ ಜಯವಧುವ ತಿರುಹಿದನು ನಿಮಿಷದಲಿ (ಕೊಡಗ. ೬-೪೫-೧೪) ; ಘನಪಯೋಗಾತ್ರ ಮೋಡಿಯಲಿ ವಲ್ಲಭಗಳೂ ದಿನದಮನೆ ಬಾಜಿಸುವ ವೈಣಿಕೋತ್ತಮರುಗಳ ಮನೆಗಳಂ. . . ಕಾಣುತಚ್ಚರಿಗೊಂಡನು (ಪಂಚಾಖ್ಯಾ. ೫-೩-೨೬) ; ರೂಢಿಪಿದ ಭುವನೆಂಬುದಂ ಬಲ್ಲೆ ಕರ್ಣ ಕೇಳ್ ಮೋಡಿ ಬೆರಗಾಗಿಹುದು ಪಸನಜಂಗಿಂದು ನೀ ನೋಡಲುಪೊ (ಕುರಂಜಿ. ೬೬-೪). ೧೦. (ಯಕ್ಷಿಣಿಗಾರನು ಯಾವ ದಾದರೂ ವಸ್ತುವನ್ನು ಮಂತ್ರಪೂರ್ವಕವಾಗಿ ನೆಲದಲ್ಲಿ ಹೂಳಿ ಅದನ್ನು ತನ್ನ ಪ್ರತಿಸ್ಪರ್ಧಿಯು ತನ್ನ ಮಂತ್ರಬಲದಿಂದ ತೆಗೆಯಲು ಹೇಳುವ) ಯಕ್ಷಿಣಿ ; ಇಂದ್ರಜಾಲ ; ಮಾಟ : ಪರದೆ ಬಿದ್ದ ಮೇಲೂ ಕೆಲವು ಕ್ಷಣಗಳು ನಾಟಕಮಂದಿರ ಮೋಡಿಯಲ್ಲಿದ್ದಂತೆ ಮೌನ ವಾಗಿತ್ತು (ಪಂಗಾಣ. ೦೬೬) ; ಮೋಡಿಗೆ ಸಿಕ್ಕಿದಂತೆ ಅವಳ ದೃಷ್ಟಿ ಅಲ್ಲೆ ನೆಲಸಿತು (ಕೂಷಿ. ೬೬೦). ೧೧. ಮಾಯೆ ; ಗಾರುಡಿ : ಮತ್ಸ್ಯ ಸ್ನಪ ನಗುತ . . . ನಿಮ್ಮಯ ಮೃದುವಚನ ಬಲು ಮೋಡಿ ಗಾಣಿಕಗಾರು ಸರಿಯೆಂದ (ಭಾಗ್ಯಸಿ. ೬೦೪: ೪-೬೨) ; ಈವರೆಗೂ ಬಾಡಿ ಬತ್ತಿದಂದಿದ್ದ ನೀನು ಅದಾವ ಮೋಡಿಯಿಂದ ಅರಳುಮಲ್ಲಿಗೆಯಾದಿ ? (ಕಂಡೂಜ. ೦೬). ೧೨. ಮಂತ್ರ ; ತಂತ್ರ : ತಮ್ಮ ಮಾತು ಕೇಳದರೆ. ನಮ್ಮ ಮೋಡಿಯನ್ನು ನಮ್ಮ ಮೇಲೆ ತಿರುಗಿಸುತ್ತಿರುವಂತಿದೆ (ಕಷಾಖ. ೪) ; ವಿಜಲರಾಯರು ಈ ಎಮರುಮೋಡಿ ಎದುರಿಸಲೇಬೇಕಾಯ್ತು (ಕೃದ್ಯಪ್ರ. ೫೬). ೧೩. ಮೋಸ ; ವಂಚನೆ : ಕೃತಕಮಾರ್ಗದ ಮೋಡಿಯಲಿ ಪರಿಚಿತನು ನೀನಲ್ಲಕ್ಷವಿಮಲಕೃತುವಿಧಾನವನಕ್ಷದೀಕ್ಷಿತರಜಃಪರಿದನೆಂದೆ (ಭಾಗ್ಯಸ. ೬೦೨-೦೪-೬೬). ೧೪. ಹಠ ; ಮೊಂಡಾಟ : ನನಗೆ ಆಣತಿ ನೀಡಿ ಎಂದಂದೆ ಬೇಡಿದೆನು ಬೇಡವೆಂದರು, ಮೋಡಿ ಬೇಡೆಂದು ಬೈದಿದರು (ಹುಕೊಸ್ತ. ೪). ೧೫. (ಬಣ್ಣದ) ಛಾಯೆ.— ಪ್ರಭಾವ.—ಭಾವ : ಬೆಳಕರೆಮದ ಹುಡುಗಿ ಆಕೆ. ತುಸುಕೆಂಪು ಮೋಡಿಯ ಮೇಲಿದ್ದಳು (ಪಮೋ. ೨೦೬) ; ಎಳೆಬಿಸಲು ಶಿವಮೊಗ್ಗದ ಮೇಲೆ ಸುವರ್ಣಾಲಂಕಾರದ ಮೋಡಿಯನ್ನು ಪರಡಿತ್ತು (ಭಾಹಾಗ. ೨೬೩). ೧೬. ಕುದುರೆಸವಾರಿಯಲ್ಲಿ ಒಂದು ಬಗೆ : ದಾಟು ದೀಟು ಹೊಳಹು ಹೊಮ್ಮಚ್ಚುವಕೆ ಮೋಡಿ . . . ವರತರಹಮೆಂಬ ನವ[ಪಾಣಿ. ನವೀನ]ಗತಿಗಳೊಳು ತನ್ನ ಮಮೆಮ ಹಯದ ತನುಗತಿಗಳಾದಂತೆ ವಾಹಕವಿನ್ಯಾಸಂಗಳಂ ತೋಱುತ (ಭಾಶಾಸ್ತ್ರ. ೬-೫೦ ಪ). ೧೭. ವೇಗದ ಬರವಣಿಗೆಗಾಗಿ ಅಕ್ಷರಗಳನ್ನು ಮೊಟಕು ಮಾಡಿ ಬರೆಯುವ ಲಿಪಿವಿನ್ಯಾಸ ; ಅಕ್ಷರಗಳನ್ನು ಒಂದಕ್ಕೊಂದು ಸೇರಿಸಿ ಬರೆಯುವ ಬರವಣಿಗೆ : ಮೋಡಿದು ತಮ್ಮ ತಂದೆಯ ಸ್ವಹಸ್ತದ ಮೋಡಿಯ ಬರಹ ಬಾಹನು (ಪೀಕ್ರಚಾ. ೬-೪೦) ; ಈದುರಮೋಡಿ ಬಳಕೆಯ ಮಟ್ಟಿಗೆ ರೂಢಿಯಿಂದ ಕಲಿತರು (ಕೂಲಿ. ೫೬) ; ನಾಮ ಆ ಪ್ರಕಾರ ಬರೆದು ಕೊಟ್ಟೆ. ಅದರ ಕೆಳಗೆ ಅವರು ಮೋಡಿಯಲ್ಲಿ ಸಹಿ ಹಾಕಿ . . . ಹೇಳಿದರು (ಜಾಕೂಲಾ. ೫೪). ೧೮. ಹಸನು ಮಾಡಿದ ಅಡಕೆ ದುಲ್ಲಿ ಒಂದು ಬಗೆ : ಬಹಳ ಎಳೆಯಾದ ಅಡಕೆಗಳನ್ನು ಸಣ್ಣಾಗಿ ಕೊರೆದು ಚೂರುಮಾಡಿ ಕುದಿಸುತ್ತಾರೆ. ಆದರಲ್ಲಿ ಚತುರ್ಥಾಗ ಕೊರವ. ಲವಂಗ ಚೂರು. ಮೋಡಿ. ಅಣ್ಣಾವಾರ. ದೀಪಾವಾರ ಎಂದು ಬೇರೆಬೇರೆ ರಾಶಿಗಳನ್ನು ಮಾಡುತ್ತಾರೆ (ಕೃಷಿ. ೦೫೩). ೧೯. [ಸಂಗೀತ] ಮದ್ದಳೆಯನ್ನು ಬಾರಿಸುವ ಒಂದು ಬಗೆಯ ವೈಖರಿ.—ಗಪ್ತು : ಆ ಸಮಯದೊಳ್ ಮದ್ದಳಿಗಂ ಮದ್ದಳೆಯಂ . . . ಲಾಗು ಮೋಡಿ ಚಮತ್ಕಾರ ತುಡುಕು ರಿಗ್ಮವಣೆ ಪಹರಣಿಗಳೇಬ ನಾನಾಶಬ್ದಂಗಳಂ ಬಾನೆಪ್ಪಿ (ಭಪುಗಾ. ೨-೨೬ ಪ) ; ಬಾಜಿಸಿದನೊರ್ವನಮರ ಮದ್ದಳೆಯ ಲೀಲೆಯೊಳು ತುಡುಕುಪಹರಣಿ ರಿಗ್ಮವಣೆ ಮೋಡಿಗಳಲು ಸುಡಿಸೆ (ಗೋಹಾರಿ. ೬-೦೬).

ಮೋಡಿತಗೆ = (ಮಾಟದ ಪ್ರಭಾವವನ್ನು ಕಡಮೆ ಮಾಡಿ) ಮಾಟ ಮಾಡಿ ಹೂಳಿದ ವಸ್ತುವನ್ನು ಹೊರಗೆ ತೆಗೆ : (೪). **ಮೋಡಿ ಮಾಡು** = ೧. ಮಾಟ ಮಾಡು; ಇಂದ್ರಜಾಲ ಮಾಡು : ಹಳ್ಳಿಗಳಲ್ಲೆಲ್ಲ ಮೋಡಿ ಮಾಡುತ್ತಾರಂತೆ. ಅದರಲ್ಲಿ ನಿಮಗೆ ವಿಶ್ವಾಸ ವಿದೆಯೇ ? (ಪಪ್ರ. ೬೦); ಯಾವ ಮೋಡಿ ಮಾಡಿ ಸುಬ್ರಾಯರನ್ನು ಒಳಗೆ ಹಾಕಿಕೊಂಡನೋ ಏನೋ ? (ಜಾಕ್ಕ. ೦೦೦); ಹಾವಾಡಿಗ ಮೋಡಿ ಮಾಡ್ದಂಗೆ ಮಾಡಿಬಿಟ್ಟು ಈಗ ಹಿಂಗಂತೀಯಾ ? (ಕಬಹಳಾ. ೬೦೪). ೨. ಮಂತ್ರಪಯುಗ್ದನನ್ನಾಗಿ ಮಾಡು ; ಸೆಳೆ : ಈ ಕಾಣತಗಳಂತೂ ಜನತೆಗೆ ಮೋಡಿ ಮಾಡಿಯೇ ಬಿಡುವುವು (ಕೃಷಿ. ೫೪). **ಮೋಡಿ ಹಾಕು** = ೧. ಮಂತ್ರಪೂರ್ವಕವಾಗಿ ಯಾವುದಾದರೂ ವಸ್ತುವನ್ನು ನೆಲದಲ್ಲಿ ಹೂಳು : (೪). ೨. ಮಾಟ ಮಾಡು ; ಮಂತ್ರದ ಪ್ರಭಾವಕ್ಕೆ ಒಳಪಡಿಸು : ಮೋಡಿ ಹಾಕಿದಂತಾಗಿ ಅವನನ್ನೇ ದಿಟ್ಟಿಸಿ ನೋಡು ವಂತಾಗುತ್ತಿತ್ತು (ಜಂಕೊ. ೦೦೬); ಜನರೆಲ್ಲರೂ ಮೋಡಿ ಹಾಕಿದ್ದಂತೆ ಎವೆಯಿಕ್ಕದೆ ಸಂಗೀತ ಕೇಳುತ್ತ ತಲ್ಲೀನರಾದರು (ಪಂಗಾಕ. ೬೫). ೩. ಮಂತ್ರಮುಗ್ದನನ್ನಾಗಿ ಮಾಡು ; ಸೆಳೆ ; ಮೋಡಿ ಮಾಡು : ಡಾ. ನರೋತ್ತಮರು ಮೋಡಿ ಹಾಕುವಂತಹ ಭಾಷಣಕಾರರು (ಕಷಕ. ೪೦೬); ಎರಡು ದಿನದಲ್ಲಿ ಅಂಥೋಣಿ ಸುಬ್ಬುವಿಗೆ ನಿಜವಾಗಿಯೂ 'ಮೋಡಿ' ಹಾಕಿದ್ದ (ಕಬಹಳಾ. ೫೯); ನಿಮಗೆ ಮೋಡಿ ಹಾಕೋ ವಿದ್ಯೆ ಬರುವುದು (ಕಷಕಟ್ಟೆ. ೪೩).

[ದೇ.॥ ತಮಿ. ಮೋಟಿ ; ಮಲ. ತುಳು. ತೆಲು. ಮೋಡಿ. / ಹಿಂ. ಮರಾ. ಮೋಡೀ]

ಮೋಡಿ$_{೩}$ (ನಾ). ಒಂದು ಬಗೆಯ ಮೂಲಿಕೆ: ಹಿಪ್ಪಲೀಮೂಲ : "ಮೋಡಿ _ ಶಿರ. ಹಿಪ್ಪಲೀದೇರು" (ಗಂಗಾಮಾ. ೪); ಗಟಟು ಭಾರಂಗಿ, ಹಿಪ್ಪಲಿವಮೂಲ (ಮೋಡಿ). ಚವ್ಯ. ಬೆಳ್ಳುಳ್ಳಿ. ಅಗರಧೂಮ ಇವುಗಳನ್ನು ನಾಲ್ಕು ನಾಲ್ಕು ತೂಕ ಚೂರ್ಣವು ಮಾಡಿ (ಪಚಕ್ಕ. ೬೩); ಕಾಡುಮೆಣಸಿನ ಬಳ್ಳಿಯ ಬೇರು ಮತ್ತು ಮೋಡಿಕಡ್ಡಿಗಳು ಗುಣದಲ್ಲಿ ವೆಣಸಿನಂತೆ (ಅಸ್ಯಾಚ. ೦೫೩-೦೫೩ ಆಭ). [ದೇ.॥ ತಮಿ. ಮೋಟಿ]

ಮೋಡಿ$_{೪}$ (ನಾ). ಬುದ್ಧಿಯಿಲ್ಲದವಳು ; ಪಡ್ಡಿ : ಅಕಲಂಕಕುಲದೊಳ ಪತರಿಸಿ ವಿಯಮಾಡಿಸಿರ. ಸುಕುಮಾರತೆಯನಿರತಳ್ಳದೀ ಪ್ರಾಕೃತರ ಪಾಸಟಿಯ ಮೇಧಿ [ಮೋಡಿ]ಯಲ್ಲಿ (ಪಂಗಾಕಾ. ೩-೦೦-೩). 'ಮೋಡೆ' ಪರಾ. [ಮೋಡ್ಡ + — ೈ]

ಮೋಡಿಕಾರ ' ಮೋಡಿಗಾರ ' ನೋ.

ಮೋಡಿಕಾರ್ತಿ (ನಾ)· ಗಾರುಡಿ ಮಾಡುವವಳು ; ಮಾಟಗಾತಿ : ನೀನಾರು ? ನೀನು ಮೋಡಿಕಾರ್ತಿಯೋ? (ಪಾಂಚಾ. ೩೬).

[ಮೋಡಿಕಾರ (< ಮೋಡಿಗಾರ) + —ತಿ$_{೧}$ (<—ಇತಿ)]

ಮೋಡಿಗಾರ, ಮೋಡಿಕಾರ (ನಾ). (ಹಣದ ಸಂಪಾದನೆಗಾಗಿ) ಇಂದ್ರಜಾಲ ಮಾಡುವವನು; ಯಕ್ಷಿಣಿ ಮಾಡುವವನು; ಮಾಟಗಾರ ; ನಾಡು ಓಡುವಾಗ ಮೋಡಿಗಾರ ಬಂದ (ಗಾಪ). **ಮೋಡಿಕಾರ**; ನರಿಯೇ ಮುಕ್ಕದ್ದಿ. ಮೋಡಿಕಾರನೇ ಕತ್ತಜ್ಜಾನಿ. ತೇಪೆ ಅನುಕರಣಗಳೇ ಕಲೆ ಇರುವ ದೇಶಕ್ಕಾಗಿ ಕನಕರ ಪಡಿ (ಕ್ರಚಾಕೋ. ೦೦); ನಿಜವಿದ್ದುದನ್ನು ಸುಳ್ಳು, ಸುಳ್ಳಿದ್ದುದನ್ನೂ ನಿಜವೆಂಬ ಮಾಟ ಮಾಡಿ ತೋರಿಸುವ ಬಾಯ್ಬಡಿಕ ಮೋಡಿಕಾರರ ಕುಲ. ಯಾವ ಕುಲ ? (ಹುಕ್ಕ. ೦೦೯).

[ಮೋಡಿ$_{೩}$ + —ಕಾರ$_{೧}$ (<—ಕಾಱ)]

ಮೋಡಿಗೊಳ್, ಮೋಡಿಗೊಳು (ಕ್ರಿ). ೧. ಅಂದವಾಗು ; ಚೆಲುವಾಗು : ಮೋಡಿಗೊಂಡಿರ್ಪ ನಾಸಂ ತೊಳವ ಮುಖವಿಕಾಸಂ

ತುಂಬಿಬರಿ ಕಣ್ಗ ಲೇಸಂ (ಚಾಂ. ೨-೭೭). **ಮೋಡಿಗೊಳು** : ೨. ಪಶ ಮಾಡು; ಮೋಡಾಟ ಮಾಡು : ಕೋಪಮೆಸಗದೆ ದುಗುಪಡದೆ ಮೋಡಿಗೊಳದೆ ಲೋಗರೆಂಚಿತಮೆನಲೊಯ್ಯನೊಯ್ಯನೆಯನುವಾಗಿ ನುಡಿವು ದವರೊಡನೆ (ಹರಿ. ೨-೦೦). [ಮೋಡಿ$_1$ + ಕೊಳ್$_1$]

ಮೋಡಿಗೊಳು ' ಮೋಡಿಗೊಳ್ ' ನೋ.

ಮೋಡಿಸು (ಕ್ರಿ). ಆಕರ್ಷಿಸು ; ಸೆಳೆ ; ಮೋಡಿ ಮಾಡು : ಸ್ಮರನಿನ್ನಿ ನ್ನಿಲ್ಲದಂದೀ ಜನವನೆಱಗಿಸಲ್ಕೊಡಿಸಲ್ ಮೋಡಿಸಲ್ ಮಚ್ಚರದಿಂಪಲ್ಲಾ ಡಿಸಲ್ . . . ಅದೇನೊರ್ವನೆ ನೆಜ್‌ವನೆ ವೇಲ್ಕೆಂದು ಲೋಕಕ್ಕೆ ವೇಟ್ಟಂತಿರೆ ಬಂದಲ್ ಬಿಂಕದಿಂ ಸಂತಿಸದೆ ಸಕಲವಿದ್ಯಾಧರಸ್ತೋಮಮೂಹಂ (ಚಾರ್ಯಾ. ೬-೨೦೬). [ಮೋಡಿ$_1$ + — ಇಸು$_2$]

ಮೋಡೆ (ನಾ). ಬುದ್ಧಿ ಇಲ್ಲದವಳು ; ಮೂಢೆ : ಅನೇಂ ಮೋಡೆಯೆ ! ಪೋ ! ತನ್ನಾಣೆ. ಕಣ್ಣಾಣೆ. ಕೇಳ್ದೆಂ (ಜಾಮಾಕ್ಕ. ೦೦೬-೦೬). ' ಮೋಡಿ$_3$ ' ಪರಾ. [ಮೋವ್$_2$ + — ಎ$_3$]

ಮೋಣ (ನಾ). ಒಣಗಿದ ಹಣ್ಣು. [ಸಂ.]

ಮೋತಾದಾರ (ನಾ). ಕುದುರೆಗಳ ಆರೈಕೆ ಮಾಡುವವನು ; ಕುದುರೆಗಳ ಮೇಲ್ವಿಚಾರಕ ; ಕಾಸ್ತಾರ : (ಕ).

[←ಮರಾ. ಮೋತಾದ್ದಾರ್, ಮೋತದ್ದಾರ್]

ಮೋತಿ ' ಮೂತಿ ' ನೋ.

ಮೋತಿಪಾನೆ ' ಮೋದೀಪಾನೆ ' ನೋ.

ಮೋತಿಬಿಂದು (ನಾ). ಕಣ್ಣಿನ ಗುಡ್ಡೆಯ ಮೇಲೆ ಬಿಳಿಯ ಚುಕ್ಕೆ ಅಥವಾ ಹೂ ಕಾಣಿಸಿಕೊಳ್ಳುವ ಒಂದು ಬಗೆಯ ಕಣ್ಣಿನ ರೋಗ : ದಿನಪತ್ರಿಕೆಗಳಲ್ಲಿ ಹೊರಬೀಳುವ ಗುಣಕಾರಿಗಳಲ್ಲದ "ಮೋತಿಬಿಂದುನಾಶಕ" ತೊಟ್ಟುಗಳನ್ನು ಉಪಯೋಗಿಸಲು ತವಕ ಪಡುವುದು ಸಹಜವೇ ಸರಿ (ಪಕ್ಕಿಪ್ರ. ೦೬೦). [←ಮರಾ. ಮೋತಿಬಿಂದು, ಮೋತಿಬಿಂಬು, ಮೋತ್ಯ ಬಿಂದು, ಮೋತ್ಯಬಿಂಬ ; ಹಿಂ. ಮೋತಿಯಾಬಿಂದ್]

ಮೋತೀಖಾನೆ ' ಮೋದೀಖಾನೆ ' ನೋ.

ಮೋತೀಚೂರು (ನಾ). ೧. ದುಂಡಾದ ಪಣ್ಣಿ ಸಣ್ಣಿ ಕಾಳುಗಳಿಂದ ಕೂಡಿದ ಬೂಂದಿಯ ಲಾಡು ; ಗುಂಜಾಲಾಡು : ವಸಮವಿಃಪ್ರಸ್ಫ ಕ್ಕೇನು ಒಂದು ಮೋತೀಚೂರು. ಇಲ್ಲಾ ಮಂಡಿಗಿ ಮಾಡ್ಸಿ ಬೆಡೂಣು (ಪಪುಣು. ೫೪) ; ಹೆಣ್ಣಿನ ಕಡೆಯವರು ದಿಬ್ಬಣದ ಅನಿಗೆ ತುಪ್ಪ ಮೋತೀ ಚೂರನ್ನು ತಿನ್ನಿಸುವೇಕೆಂಬ ತವಣಕೆಯಲ್ಲಿರ್ದರು (ಪಪಾಕ್ಕ. ೬) ; ಉತ್ತರಾದಿ ಮಠದ ಮೋತೀಚೂರಿನ ಸಪಾರಂಭಕ್ಕೆ . . . ಊಟಕ್ಕೆ ಹೋದ ಬ್ರಾಹ್ಮಣ ರುಂಟು (ಪಾಕ್ಷಪ್ರ. ೦೬೬). ೨. ದೋತ್ರದ ಅಲಂಕಾರಯುಕ್ತವಾದ ಜರಿ ಅಂಚು : (ಕ). [←ಹಿಂ. ಮರಾ. ಮೋತೀಚೂರ್]

ಮೋತೆ (ನಾ). ೧. ಬಾಳೆಯ ಗೊನೆಯ ಪುದಿಯಲ್ಲಿ ಇರುವ ದೊಡ್ಡ ಆಕಾರದ ಹೂವು : ಏಹಮೂತ್ರಕ್ಕೆ ಪಥ್ಯಾಪಥ್ಯಂಗಳು— ಹಳೆಅಕ್ಕಿಅನ್ನ. ಗೋಧಿ . . . ಬಾಳೆಯ ಮೋತೆ. ಕಾರಸೊಪ್ಪು (ಪಪ್ಯ. ೪೦೦) ; ಬಾಳೆಯ ಮೋತೆಯ ಗಾತ್ರದ ಕಿವಿಗಳ ಮೃಗವಿದೋ ಗುಡ್ಡೆಯ ಕಣ್ಣುಗಳ (ಪಾಪಗೀ. ೪೧೭). ೨. (ಕೇದಗೆ ಮುಂತಾದುವುಗಳ) ತೆನೆ ; ಹೊಡೆ ; ಗುಚ್ಛ : ಜೂಡಾಲಾ. ಚಕ್ರಲಾ. ಉಚ್ಚಟಾ—ತಿ ಪಂಪಾ ಗಡ್ಡೆ ವಳಗೆ ಅನೇಕ ಮೋತೆಗಳುಳ್ಳ ಗಂಟುಮುಸ್ಸಿಗಳು (ಹಿಪ್ಪಾಂತಿ. ೦೧೬) ಅಗಿದು ಪಣ್ಣ ಳನಡಸಿ ತೋರುವ ಮುಗುಳು ಮೋತೆಯು ಮುರಿವಾ ಕಿದರು : ಹಗರಣದ ಕಪಿಮೃಗವ ನೋಡುವ ತರುಶಿಖಾಗ್ರದಲಿ (ಕಾಪಾಂ. ೪-೨೦) : ದಾರಿಯಲ್ಲಿ ಒಪ್ಪು ಗೊಡ ನಾಲ್ಕು ಮೋತೆ ತಾಳೇಹೂವನ್ನೂ . . . ಇಟ್ಟು ಕೊಂಡು ಯಾರಾದರೂ ಕೊಂಡುಕೊಳ್ಳುತ್ತಾರೆಯೇ—ಎಂದು ಕಾದು ಕೊಂಡಿದ್ದನು (ಇತಾದಾ. ೦೦). [ದೇ-ಕ ತಮಿ. ಮೋತ್ತೈ]

ಮೋದ$_1$ (ನಾ). ೧. ಸಂತೋಷ : ಹಿಗ್ಗು ; ಆನಂದ : ಇಹಗೆ ಮಾಡುವೆನಾದರದೊಳೆಂದನಾತ ಮನದೊಳು ಮೋದವೆ [ಜಾಪಾಂ. ವ] ಯ್ದಲು (ಅಪು. ೫೭-೦೬) ; ಮೋದದಿಂದ ವಿದುರನ ಮನೆಗಬ್ಬು ಅದರದಿ ಪಾಲ ಕುತಿದುಳಿದುದ ನೀ ಮೇದಿನಿಗೀಽಪೆದಲ್ಲಿ ಕಲಿತ್ಕೋ ರಂಗ (ಕುಲಂಪ. ೯-೦೫೬-೯) ; ಲಕ್ಷ್ಮಣಂ ಲಜ್ಜಾವಿಷಾದಮಂ ತುಂಬಿದ್ಕಿ. ಮೋದದಿಂ ಕಣ್ಣಾನನತ್ರಕ್ಕೆ (ಕ್ರಿಪಾಪು. ೦೭೯-೫೦೩). ೨. ಸುಗಂಧ ; ಸುವಾಸನೆ : ' ಮೋದೋಪಚಾರ ' ಪರಾ. ೩. ಮೂವು : " ಮೋದಾಖ್ಯಃ — ಮೂವು " (ಓಪಾ. ೦೪೦); ಬಾಳೆ ಕಾಬಾಳೆ ಮೋದ ಸ್ಕರಮಾವು ವೇಜಾಲಪನ್ನಸ ಯಾಮಪರಿತ್ಪರಾನ್ನಗೆ (ಕೋಪಾ. ೦೯-೫೫). ೪. ತೆಂಗು : " ಮೋದಃ — ತೆಂಗು " (ಓಪಾ. ೦೪೦). ೫. [ಜೈನ] ಏಮತ್ಕೂರು ಗರ್ಭಾನ್ವಯಕ್ರಿಯೆಗಳಲ್ಲಿ ಐದನೆಯದು ; P " ೯ನೇ ತಿಂಗಳ ಗರ್ಭವತಿಗೆ ಪೂರ್ವದಲು ಮಂಗಳಸ್ನಾನಾದಿಗಳಂ ಬೆಳಯಿಸಿ ಅಲಂಕಾರವಂ ಮಾಡಿ ಹಸೆಯ ಮೇಲೆ ಕುಳ್ಳಿರಿಸಿ ಪತಿಯ ಹಸ್ತದಿಂ ರಕ್ಷಾಯಂತ್ರವಂ ಕಟ್ಟಿಸುವದೇ ಮೋದವೆಂಬ ಐದನೇ ಕರ್ಮವು " (ಕ್ರಿಪಾ. ೦೯೬) : ಆದಾನ ಪ್ರೀತಿ ಸುಪ್ರೀತಿ ಧೃತಿ ಮೋದ . . . ಎಂಬಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾ ನ್ವಯಕ್ರಿಯೆಗಳುಂ (ಆಪು. ೦೩-೦೩ ೪); ಆದಾನಮುಂ ಪ್ರೀತಿಯುಂ ಸುಪ್ರೀತಿಯುಂ ಧೃತಿಯುಂ ಮೋದಮುಂ . . . ಎಂದಾದಾ ನಾದಿನಿರ್ವಾಣಪರ್ಯಂತಮಪ್ಪವ್ಯತ್ತುಮೂಱುಗರ್ಭಾನ್ವಯಕ್ರಿಯೆಯೊಳ್ (ಚಾಪು೦೪. ೫೦೨). ' ದೀಕ್ಷೆ ' ಪರಾ. [ಸಂ.]

ಮೋದ$_2$ (ನಾ). ಅಜವಾನ ; ಅಜಮೋದ ; ಓಮು : " ಮೋದ — ಅಜಮೋದ " (ಓಪಾ. ೦೪೦); ಒಂದು ಬೆಸುಗೆಮಣ್ಣಿ ಕಾದ ಹಂಚಿನಿಂ ಳಡಕೆಯುಮ್ಮ ಮೋದವನಿಕ್ಕಿ ಮೇಲೊಂದು ಲೋಟ ಮುಚ್ಚಿ . . . ಬಿಲಿಕ್ಕಿಯ ಚೂರ್ಣವ ತಳದಲ್ಲಾದಿಸುವುದು (ಅಮಾಸಾ. ೫೮). ' ಮೋದೆ ' ಪರಾ. [ಸಂ. ಮೌದಾ]

ಮೋದಂಡ (ನಾ). ೧. ಅನಿಶ್ಚಿತತೆ ; ಸಂದೇಹ : (ಕ). ೨. ಸುಮ್ಮ ನಿರುವುದು ; ವಮೌನ (?) : ಇಕ್ಷ್ವಾಕುಕುಲವತ್ಸೋಮಂಗೆಯ್ದ ಪ್ರಾರ್ಥ ನೆಗೆ ಸಾಗರನು ಕಿವಿಗೊಡದೆ ಮೋದಂತವಾಗಿರಲು ದಾಶರಥಿ ಇವನ ಅಭಿ ಸಂಯಕೆ ತಗುವಂದದಲಿ (ಪಪಾಂ. ೫-೬೨). [←ತುಳು. ಮೋದಂಡ]

ಮೋದಂಬೆಱು (ಕ್ರಿ). ಹರ್ಷವನ್ನು ಹೊಂದು ; ಸಂತೋಷವನ್ನು ತಾಳು : ಶಶಿಶೇಖರಂ ಗುರುವಿರೂಪಾಕ್ಷಂ ಭವಾನೀಪ್ರಿಯಂ ಮೋದಂಬೆತ್ತಿರೆ ತಾಳ್ದು ರಂಜಿಪುದು ಪಂಪಾಕ್ಷೇತ್ರಂ (ಕ್ಷಪ್ರ. ೫-೭೭).

[ಮೋದ$_1$ + ಪೆಱು$_1$]

ಮೋದಕ$_1$ (ಗು). ೧. ಸಂತೋಷವನ್ನುಂಟುಮಾಡುವ : ಉಲ್ಲಾಸ ಕರವಾದ : ಆನಂದದಾಯಕವಾದ : ಧರನೇಭಾರಮನಾಂ ಬಿಸುಟ್ಟೊಡದು ಚಿಃ ಲೋಕಕ್ಕೆ ಖಾತ್ವಾಸಮಿಕರಣಂ ಭೌತಿಕಮೋದಕವ್ಯತಿಕರಂ ತಾನೆಂ ಬುವಂ ಮಸಡವೇ (ಅಪಪ್ರ. ೯-೪೦). (ನಾ), ೨. ಒಂದು ಬಗೆಯ ಸಿಹಿಯಾದ ಖಾದ್ಯ : ಕಡುಬು : ಒರೊ ರ್ವರೊಳ್ ವಿಷಯವಿಮಿಶ್ರ ಮೋದಖಾದಿ ಖಾದ್ಯಪ್ರದೇಶಮಂ ಪೂಡುತ್ತಮಿರ್ವುದಂ ಕಂಡು (ಪಾಪಾಕ. ೩-೦೩೯ ೪); ಮೋದಕ ವೈದ್ಯವನಗೈಯೆ ನೆಪವೇನಂ ಪೇಳಲಿ ಸಾನರಿಯೆ (ಗಪಾ. ೩-೩೩); ಮಸ್ಸುನಲ್ಲಿ ಮೋದಕವನ್ನು ತಿಂದರೆ ಹಸಿವೆಯು ಶಾಂತ ವಾಗಲಾದೀತು (ಪುಗೀ. ೩೩). [ಸಂ.]

ಮೋದಕ$_2$ (ನಾ). ಅಜಮೋದ ; ಓಮು : ಮೋದಕದಿಂ ಮಧು ಪೀಲಿಯ ಬೂದಿ ಕಣಚೂರ್ಣಮೆಂದಿವಂ ತಿವೆ ರುಜೆಯುಂದಾದಿರ್ಕುಟುಂ . . . ಕಂಠದೋಗಮುಂ ಪ್ರಶಮಿಸುಗುಂ (ಕೋಗಿಪಾ. ೪-೩೨).

[<ಮೋದ$_2$]

ಮೋದಗೆ (ನಾ). ಮೋದಕ ; ಕಡುಬು : ಆಕಗೆ ಗರ್ಭಮಾನಿ ಮೋದಗೆ [ಪಾಣಂ. ಮೊಱಗೆ, ಮೊದಜಗೆ]ಯ ಮೇಗೆ ಬಯಕೆಯಾದೊಡೆ (ಪಣ್ಣಾಡ. ೦೬-೦೪). [<ಸಂ. ಮೋದಕ]

ಮೋದನ (ನಾ). ೧. ಸಂತೋಷ ; ಹರ್ಷ : "ಮುತ್, ಮುದಂ, ಮೋದಂ, ಮೋದನಂ, ಮುದಿತವ್ಯಂ . . . ಮೋರ್ಯಂ ಈ ೧೨ ನಲಿವು" (ಶಾಶ್ಯ. ೪೩) ; ಕೋ [ಪಾಣಂ. ಪೋ]ದನವಿಲ್ಲಂದುಱಿ ಪುಸಿಯಂಜದ ವಣಮಂ ನೆಜಿ ಕೊಳಲಱಿಯುಂಡು ಸುತ್ತಗೆ ಕಲಿಸಿದಕೊರ್ವಳ್ (ಕ್ರಿಪ್ರ. ೨೪-೦೧೨). ೨. ಸಂತೋಷಗೊಳಿಸುವುದು ; ಆನಂದವನ್ನುಂಟು ಮಾಡುವುದು. ೩. ಸಂತೋಷಗೊಳಿಸುವವನು ; ಆನಂದವನ್ನುಂಟು ಮಾಡುವವನು : ಯಾದವಯಿನ ಯಾಶಯುಕ್ತಿದಯುಧವಮೋದನ . . . ದಯೆದೋಱು (ಪಣಂ. ೬೬-೪೪). [ಸಂ.]

ಮೋದನೀಯ (ಗು). ೧. ಸಂತೋಷಿಸಬೇಕಾದ. ೨. ಸಂತೋಷವನ್ನುಂಟುಮಾಡುವ. (ನಾ). ೩. ಮಲ್ಲಿಗೆ : "ಮೋದನೀಯ – ಮಲ್ಲಿಗೆ" (ಲಿಪಿ. ೦೩೦). [ಸಂ.]

ಮೋದವಿ (ನಾ). ಒಂದು ಬಗೆಯ ಸಸ್ಯ : "ಮೋದವೀ – ಮಲ್ಲಿಗೆ, ಸೇವಂತಿಗೆ, ಜೊನ್ನಾವರೆ". (ಲಿಪಿ. ೦೩೨). [?]

ಮೋದಿ (ಗು). ೧. ಸಂತೋಷಪಡಿಸುವ. ೨. ಮಿಶ್ರಮಾಡುವ. (ನಾ). ೩. ನಲಿವನ್ನು ನೀಡುವವನು ; ಸಂತೋಷಗೊಳಿಸುವವನು: ಎನ್ನ ಪಾಲಿಸಿದಂದದಿ ಸಕಲಪ್ರಾಣ್ಗಳ ಸಲಹೊ ಮೋದಿ (ಪಗಣಾ. ೦೩೨). ೪. [ಸಂಗೀತ] ಒಂದು ರಾಗದ ಜೆಸರು : ಕೌಶಿಕ . . . ಮೋದಿ . . . ಕಮುಸೋವರಿಯೆಂಬ ಮುಂವತ್ತುನಾಲ್ಕು ರಾಗಂಗಳೇ ಭಾಷಾಂಗದಿಂದ ಪುಟ್ಟಿದವು (ಪಪಗೇ. ೨೪೭). [ಸಂ. ಮೋದಿನ್]

ಮೋದಿಕೆ (ನಾ). ಹೊಡೆಯುವಿಕೆ ; ತಾಡನ : ಮೋದಿಕೆಗಳ್, ಮೋದುಗಳ್ (ಶಾಬಾ. ೩೩೯ ಕ್ರಪೊಗೆ). [ಮೋದು$_1$ + — ಇಕೆ]

ಮೋದಿಖಾನೆ ' ಮೋದೀಖಾನೆ ' ನೋ.

ಮೋದಿತೆ (ಗು). ೧. ಸಂತೋಷಗೊಂಡ ; ಆನಂದಿತನಾದ : ಮೋದಮಲರಲ್ ಸೋಮವಾರಮಾದಾದಿಯಾಡೊಂಭತ್ತುದಿವಸಂ ಮೋದಿತೋತ್ಸಾಹ ಭಕ್ತಿ [ಪಾಣಂ. ವೇದಿತೋತ್ಸವಿವೃತ್ತಿಬಿಂ ಸಲೆ ಸೋಂತು (ಪಪಭ. ೨-೨೦). (ನಾ). ೨. ಸಂತೋಷ ; ಆನಂದ. [ಸಂ.]

ಮೋದಿನಿ (ನಾ). ಒಂದು ಬಗೆಯ ಸಸ್ಯ ; ಅಜಮೋದ : "ಮೋದಿನೀ – ಅಜಮೋದ, ಮದ್ಯ, ಉಗುವಿ, ಹಿಟ್ಟಿಳಿಕೆ" (ಲಿಪಿ. ೦೩೦). [ಸಂ. ಘೋದಿನೀ]

ಮೋದಿರ, ಮೋಯಿರ (ನಾ). ಉಂಗುರ : ಮೋದಿರ ನಿನಗೆಲ್ಲಿ ಸಿಕ್ಕಿತು ? (ನಿಂಗ. ೨೪೪). 'ಪೊನ್ಮೋದಿರ' ಪರಾ. **ಮೋಯಿರ** : 'ಮೋಯಿರ ಮುಹೂರ್ತ' ಪರಾ. [ದೇ.ತ ತಮಿ. ಮೋತಿರ ; ಮಲ. ಮೋದಿರ; ಕೊಡ. ಮೋದ್‌ರ-/ಸಂ. ಮುದ್ರಾ]

ಮೋದಿಸು$_1$ (ಕ್ರಿ). ೧. ಹೊಡೆಯುವಂತೆ ಮಾಡು : ಬಡಿಯಿಸು : ಒರ್ವರಿಂದಮೊರ್ವರೆನಜಿಯಟ್ಟಿ ಮೋದಿಸುತಮಿಂ ತೆಱನಿಂ ನಗುತಿರ್ಪ ನಾವಗಂ (ಕಮಾಖ್ಯ. ೨-೮೨). ೨. ಹೊಡೆ ; ಕುಟ್ಟು : ಪುಡಿನೆಲದಿ ಪೊರಳುವ ಮೋದಿಸುವ ತಲೆಗಳನು ಕಗ್ಗಲ್ತುಗಳಿಗೆ . . . ಭರತಭಾರ್ಯೆಯರಾ ದಿನದ ದುಃಖವನು ಪೇಳುಪೆಡನ್ನಳವೆ (ಕಪ್ಪಿ.ಭ. ೩-೩೬).

[ಮೋದು$_1$ + — ಇಸು$_3$]

ಮೋದಿಸು$_2$ (ಕ್ರಿ). ೧. ಸಂತೋಷಪಡಿಸು ; ಆನಂದಗೊಳಿಸು : ಅದಿವಮುಖದಿಂದಲಱಿದುದ್ರವ್ಯಮಂ ರೂಪು ಮೋದಿಪುವ ಗಂಧರಸಾಸ್ಪರ್ಶ ಶಬ್ದ ಲಿಂಗಾದರ ತೃಪ್ತಿಯಾಯ್ತಱು ರೂಪಾದಿ ಪ್ರವ್ಯಂಗಳು (ಪಕ್ಕಿ. ೩-೦೬-೦೩) : ಗಂಡಯ್ಮನೆದೆಯೊಳಗೆ ಮೋದಿಸಲು ಕುಣಿವೆ ತರೆಮೂಗಿ (ಕಪ್ಪಾ. ೩೦೦). ೨. ಆನಂದವನ್ನು ಹೊಂದು : ಉಲ್ಲಾಸವನ್ನು ತಳೆ : ಬುವಂತಿಯು ಮಾತು ನಗೆಮು ಮಕರಂದವನ್ನು . ಮೂಸಿ, ಮೋದಿಸುಯೇ ಬಂದಂತಿತ್ತು (ಲಕಾ. II, ೦೩೦). [ಮೋದ$_1$ + — ಇಸು$_3$]

ಮೋದೀಖಾನೆ, ಮೊದೀಖಾನೆ, ಮೋತಿಖಾನೆ, ಮೋತೀಖಾನೆ, ಮೋದಿಖಾನೆ (ನಾ). ಸೈನಿಕರಿಗೆ ಒದಗಿಸುವ ಆಹಾರ ಸಾಮಗ್ರಿ ಮುಂತಾದುವುಗಳನ್ನು ಸಂಗ್ರಹಿಸಿಡುವ ಸ್ಥಳ – ಉಗ್ರಾಣ; ಗೋದಾಮು: P ಆಹಾರಖಾನೆಗಳಲ್ಲಿ ಒಂದು : ಅಕ್ಕಿಯನ್ನು ಕೂಡಿಗೆ ಮಾಡಿಸಿ, ಕಗ್ಗಟ್ಟಿನಾದ ಮೋದೀಖಾನೆಯಲ್ಲಿ ಜೋಪಾನದಿಂದ ಮಡಗಿಸಿ . . . ಅಕ್ಕಿ ಕೇಳಿದರೆ ಅಳೆದು ಕೊಡುವಂತೆ ಕಾಕೀದಿ ಮಾಡಿದ್ದೇವೆ (ಶಾಕೇಂಕ್ರ. ೬೬) : ಹಜೂರು ಮೋದೀಖಾನೆ ಸಾವಕಾರ ಬೆಟ್ಟದ ವೃರದ. ವೇಂಗಳ ಮನೆ ಲಿಂಗಣ್ಣನ ಮಗ (ಎಳೆ. XIV, ಹುಣಸೂ. ೦೪೬-೬; ೧೯೧೭) : ಕಚೇರಿಗಳು ೧. ದಿವಾನ್ ಕಚೇರಿ . . . ೧೦. ಮೋದೀಖಾನೆ, ೧೧. ಕಂದಾಚಾರ ಕಚೇರಿ (ಮಖಾಸಂ. II, ೭೬). **ಮೊದೀಖಾನೆ** : ಅರಮನೆ ಶಿರಸ್ತೆದಾರ ಹಿರಣ್ಣಯ್ಯನ ಮಗ ಮೊದೀಖಾನೆ ಶಿರಸ್ತೆದಾರ ನರಸಯ್ಯನು (ಎಳೆ. XIV, ಕಃಕೃ. ೦೪೪-೬; ೧೯೬೬). **ಮೋತಿಖಾನೆ** : ಮೋತಿಖಾನೆ ಬಕ್ಷಿ ದೊಡಬಳಾಪುರದ ದೇಶಕುಲಕರಣಿ ಸರಿಂಗರಾಯನ ಶೇವೆ (ಎಳೆ. V (K). ಹೊಸಕೋ. ೬೩-೦; ೧೭೫೮ ಕ್ರ). **ಮೋತೀಖಾನೆ** : ರಾಜ್ಯಪ್ರತಿಷ್ಠಾಪನೆಯಾದೊಡನೆ ಈ ಯುವಕರಾಜನು ಮೋತೀಖಾನೆಯ ಅಕ್ಕಿ ಬೇಳೆಗಳ ಲಿಪ್ಯಾವರಕ್ಕೆ ಹೊರಟನು (ಕಥಾ. ೬೦೧). **ಮೋದಿಖಾನೆ** : ಮೋದಿಖಾನೆ ಶಿರಸ್ತೆದಾರ ಸುಬ್ಬಯ್ಯನ ಸೇವಾರ್ಥ (ಎಳೆ. IV (R), ಕಾಮಂಗ. ೪೬-೨; ೨). ' ಆಹಾರಖಾನೆ ' ಪರಾ.

[←ಹಿಂ. ಮರಾ. ಮೋದೀಖಾನಾ]

ಮೋದು$_1$ (ಕ್ರಿ). ೧. ಹೊಡೆ; ಬಡಿ ; ಅಪ್ಪಳಿಸು : "ಮೋದು–ತಾಡನೇ" (ಧರಣಾ); ಮೋದಿವ ನೀಲಸರೋಜಮಾಲೆಯಂದುದಿರ್ವ ಮದಂಗದೊಳ್ ತೊದರ್ವ ತೋರ್ಪ ದಳಂಗಳೊ ಪೇಱುಮಾಪುದೆಂಬುದನೆನೆ ಕಾದಿ ಮೋದಿದವಿನಾಣಮದಿಲ್ಲಿ ದಲಿಲ್ಲ ಸಲ್ಲಳಾ (ಪಾಪ್ರ. ೪-೧೦); ಅಱತೇಂದೀವರಲೋಲ ಲೋಚನೆಯಮನಂದಂತಾ ಸಭಾಮಧ್ಯದೊಳ್ ಪಸುವಂ ಮೋದುವವೋಲೆ ಮೋದೆಮುಂ (ಪಂಚಾ. ೭-೩೬); ಕೆಲಂ ತೆಗಳ್ದೆಯಾ ಹೃ ಕರಂ ತೆಗಳ್ದೆಯಿಂದೆನೆ ವೃತ್ತಿಯನಟ್ಟಿ ಮೋದಿದಳ್ (ಗಂಗೆ. ೪-೦೨೩). ೨. ಹೊಡೆದುಕೊಳ್ಳು; ಬಡಿದುಕೊಳ್ಳು : ಇಂಪಿನ ಪೋಲ್ ತರಳ್ದೊಜೆದ ಕಣ್ಣಿನ ವಾಣದ ಮೋದೆ ತೋಕವಚ್ಚಿಜ್ಜಿದವೊಲಿರ್ದ್ ವಾಪುಬಿಸೊಳ್ಟು ಕೆನಲ್ದು ಬಲ್ದು ಪೋಲ್ದ ಮೆಯ್ (ಪಚಕ್ಷಾ. ೦೪-೩); ಜನಕಜೆ ಬಸಿಱಂ ಮೋದಿ ಪುಯ್ಕುರ್ಪ ಕೇಳ್ವಾ ನಾಮಕ್ಕಾನೆಯ್ದುದೆಂ (ಪಂರಾಮಾ. ೦೦-೩೬); ಅರ್ಕಾವರಾರ್ಶರನೆಂದಾ ಕಳಕಂಠನಾದೆ ಬಿಱಿಂ ಬಾರೇಱ್ಕಿನೆಂ ಮೋದಿದಳ್ (ಪಸಂಕ್ಷೆ. ೦೦-೪೬). ೩. ಎರಗು ; ಮೇಲೆ ಬೀಳು : ಹರಿಣಪ್ಕೈಂಗಳು ವ್ಯಗವ ಹರಿದಟ್ಟ ಪಿಡಿದಡಿ ಮೋದಿ ಮುಱಿಯದೆ ನಿಂದು ಮಱೆವಟ್ಟ ಕಾರಣವನಱುವ ಬೇಕೆಂದೆಯ್ದಿ (ಪಪಭ. ೩-೩೬); ಮೊಳಗಿ ಮೋದುವ ಸಿಡಿಲ್ಗಳ್ಗಂಬಿನ ಮೊನೆಯೊಳುದಿಸಿದುದೊ (ಕಾಶ್ಯಾರ್ಜ. ೪-೦೪). ೪. ಮುಟ್ಟು ; ತಗಲು ; ಸೋಕು : ಫಲವ್ರಾತದಿಂ ನೆಲನಂ ಮೋದುವ ಮಾತುಳುಂಗಮಿಸಗುಂ ವಿದ್ಯಾಧರೋದ್ಯಾನದೊಳ್ (ಕಂಪ್ರ. ೦-೩೩) ; ಕದಪಂ ಮೋದುವ ಕುಂಡಲದ್ವಿತಯಮುಂ ಚೆಲ್ವಾಗೆ (ಪಗಣ. ೩-೦೩); ನೆಲನಂ ಸಲೆ ಮೋದುತಿರ್ಪ ಪೀವರ ಫಲಮಾತುಳುಂಗತತಿ ಸಂತತಪೊಪ್ಪವುದಾ ವನಾಂತದೊಳ್(ಪಚಕ್ಷಾ. ೨-೩೬); ಬೆನ್ನಂ ಮೋದಿ ಕೇಶಾಳಿ ಗಂಡಮನೋರಂತಿರೆ ಪೊಯ್ಕೆ ಕುಂಡಲಯುಗಂ (ಪಚಕ್ಷಾ. ೩೫೩). ೫. ಒದೆ ; ಪಾದದಿಂದ ಪ್ರಹಾರ ಮಾಡು : ಪಾರ್ವನ ಕಾಲ್ ಮೋದೆ ನಡುತಲೆಯಲ್ಲಿರ್ದುದುಮಾದುದು ನಿಮಗೆಂದು ನುಡಿದು ಕಾಯ್ದೆನೊಳೊದೆದೆ (ಪಂಕಥಾ. ೨-೬೪); ಅವಾಳಯಂ ಮೋದಿದ ಕಾಲ್ಗಳನಾವ ಜನ್ಮ ಜನ್ಮಂಗಳೊಳಗಾಗಿಯುಮಕ್ಕಿ ಮುಂದೆ ಕೇಳ್ದನ್ನದಿರೆಂ

(ಶುಶ್ರುತ. ೩-೪). ೫. ಜಜ್ಜು ; ಕುಟ್ಟು : (ಮುಷ್ಟಿಯಿಂದ) ಗುದ್ದು : ಎಲುವ ಮುಱಿ ಮೂಳೆಯಂ ಮೋದು ಬಿಸಿನೆತ್ತರಂ ಕುದಿಯೆನುತ್ತ ನಾಲ್ದೆಸೆಗಳಿಂದುಲಿದೆಸುತ (ಪಜಿಣ. ೬-೦೪); ಒದೆದು ಕೆಲವನು ಮುಷ್ಟಿಯಲಿ ಮೋದಿದನು ಕೆಲವನು (ಶಾಣ್ಮಕ್ರೀ. ೩-೩೦); ಅಬ್ಬರಿಸಿ ಬಿಳ ಮೋದಿದನು ಮುರಹರನ ವಕ್ಷಸ್ಥಳವ ಮುಷ್ಟಿಯಲಿ (ಪಣಾಡ. ೩-೩೨೦). ೬. ಸದೆಬಡಿ ; ಆಜಿಗಿಜಿಯೂಗುವಂತೆ ಮಾಡು : ರಿಪುರಾಜರಂ ಮೋದಿ ಮುಱಿದು ಮೆಲಲೆಂದು ದುರ್ಗ ಬಾಯ್ದೆಱೆದಿಸಿವ ದಂತಪೋ ಶಿಖಿಯಲರಿದೆನಲ್ . . . ರನ್ನದ ತೆನೆಯ ತೆಕ್ಕೆ ಮಿಕ್ಕೊಪ್ಪಿರವ ಮೇಘಮಂಡಲವ ಬಗಿದು (ಪಣಾ. ೦-೩೮); ಅಕ್ಕಟ ಹಂಸೆಯ ಮಱಿಯ ಮೋದುವ ಬಕನ ತೆಗೆಸೈ (ಶಾಣ್ಮಕ್ರೀ. ೧೪-೦೫೩) ; ಮಿಱಿದ ಜಕ್ಕವಕ್ಕೆಯನ ಮೇರೆಯಲ್ಲವ ಬಲವಾರಿಧಿಯನು ಮೋದಿದಾರುಭಟೆಯನೇವೇಳ್ದೆ (ಕಂಪಂ. ೩-೩೪). ೮. ನಾಶಮಾಡು ; ಇಲ್ಲವಾಗಿಸು : ಲಕ್ಷ್ಮಣನಿಕೃತುಳದಲಿ ಬಂದಾಣಲುಕಾಲದಲಿ ಜಗವ ಮುಕ್ಕಿ ಮೋದುವ ಮದನಹರನಪೆನ್ (ತೊಡಾ. ೨-೩-೦೦) ; ವೇದಮಂತ್ರವ ಪೇಳಿ ಕಾದ ತುಪ್ಪದಿ ತೊಳೆಯೆ ಹಾದರದ ಪಾಪ ಹೋಯ್ಸುಂ ಹಾರುವನ ಮೋದದೆ ವಿಧಿಯುಂ (ಸರಾಕ್ಷ. ೪೩); ಶ್ರೀದಿವ್ಯಾಪಾಂಗೆಂಗಳಿನಾ ದಿನದೊಳ್ ಕಲ್ಮ ಷೋಳಿ ನೊವಿಂ ಪನುಸಂ ಮೋದಿ ನಿಗಮಂಗಳಂ ತಂದಾದಿಯ ಮಿನಾಳ್ದನಕ್ಕೆ ನರಪತಿಗನಿಶಂ (ಪಣಾ. ೩-೦). ೯. ಮುಕ್ಕು ; ಕಬಳಿಸು : ಪೇದಪಾತ್ಮರ ಪೃತ್ಯುದೇವತೆ ಮುಱಿದು ಮೋದದೆ ಬಿಡುವಳೇ (ಶಾಣ್ಮಕ್ರಿ. ೧-೦೫೦) ; ನಮ್ಮ ನಗರವನೊರಸಿ ಮೋದುವ ಮೋಡ ಮೋಜಿಗೊಳಿಪಸಲದೆ (ತೊಡಾ. ೬-೬-೬); ಪಾತಕರನಂತಕ ಮುಱಿದು ಮೋದುವನೆಂದು ವೇದಂ ಘೂರ್ಮಿಸುತ್ತಿಹುದು (ಪಂಭಾ. ೩-೦೦); ಹಣ್ಣುಗಳನ್ನು ಮೋದಿದನು . . . ಚಕ್ಕುಲಿಗಳನ್ನು ಕುಟಿಸಿದನು (ಪಚಾಪು. II. ೦೬). ೧೦. ಸವಿ ; ಆಸ್ವಾದಿಸು ; ತಿನ್ನು : ಓದಿದ ಬಾಯುಮ್ಮಾಸ್ವಪ ಮೋದದ ಬಾಯುಂ . . . ತಾಂ ಮೋದಿನಿಜೊಳ್ ಬಿಲದ ಬಾಯಿ (ಪಚಾಪು. ೫೦). ೧೧. (ಅಲಂ) ಹಿಡಿದುಕೊಳ್ಳು ; ಮೆಟ್ಟಿಕೊಳ್ಳು : ಕಾದುಕೊಂಡಿರ್ದಂದುಗ ದುದುವೆಗೈತಂದು ಮೋದಿತೇಂ ನಿನ್ನ ದಾಳ್ವೆಯನೆನ್ನ ಮಗಳ (ಶಾಂಪು. ೦೬೬-೨೯೬). ೧೨. [ಗಣಿತ] ಗುಣಾಕಾರ ಮಾಡು ; ಗುಣಿಸು ; ಬಡಿ, ಮೋದು. ಒತ್ತು . . . ಬೆಳಸಂದು ಇಂತಿನಿತುಂ ಗುಣಿಸೋದಕ್ಕೆ ಹೆಸರು (ಕ್ರಪಾಣ. ೦೦). [ದೇ.ಪ ತಮಿ. ಮೋತು; ಮಲ. ಮೋದು ; ತೆಲು. ಮೋಂದು]

ಮೋದು₂ (ನಾ). ೧. ಮಿಟು ; ಹೊಡೆತ : ಓದುಗಳ್, ಮೋದುಗಳ್, ತಿರ್ದುಗಳ್ (ಕಶ್ಯಾಖ. ೪೫೯ ಕ್ರಹೋ). ' ಮೋದುವೆಱು ' ಪರಾ. ೨. ಹೊಡೆತದಿಂದ ಉಂಟಾದ ಬಾವು ; ಪೆಟ್ಟಿನಿಂದಾದ ಬಾಸುಂಡೆ : ' ಮೋದುಗಟ್ಟು ' ಪರಾ. ೩. ಒಂದು ಬಗೆಯ ಗುಹ್ಯರೋಗ : (ಕ)

[< ಮೋದು₁ / ತಮಿ. ಮೋತು; ತೆಲು. ಮೋಂದು. ಮೋಂದ]

ಮೋದುಗಟ್ಟು (ಕ್ರಿ). ಪೆಟ್ಟಿನಿಂದ ಗಂಟುಕಟ್ಟು : ಹೊಡೆತದಿಂದ ಬಾಸುಂಡೆಯೇಳು : (ಕ). [ಮೋದು₂ + ಕಟ್ಟು₁]

ಮೋದುವೆಱು (ಕ್ರಿ). ಏಟು ತಿನ್ನು ; ಹೊಡೆತವನ್ನು ಪಡೆ : ಏಕಾಂತದೊಳ್ ನೂಪುರರವವಿಳಸದ್ವಾಮವಾದಪ್ರಹಾರಕ್ಕಿದಱೊಳ್ ಪಕ್ಕಾಗಿ ಗೋತ್ರಸ್ಖಲನೆ ನೆಗಟ್ ವೂಮಾವೆಯಿಂ ಮೋದುವೆಕ್ತಂ (ಅಭಿ. ೯-೪).

[ಮೋದು₂ + ಪೆಱು₁]

ಮೋದೆ (ನಾ). ಅಜಮೋದ ; ಅಜವಾನ ; ಓಮು : (ಕ).

[ಸಂ. ಮೋದಾ]

ಮೋದೋಪಚಾರ (ನಾ). ಬಾಣಂತಿ ಹಾಗೂ ಎಳೆಯ ಮಕ್ಕಳಿಗೆ ಸ್ನಾನಾನಂತರ ಸುವಾಸನಾಯುಕ್ತವಾದ ಧೂಪದಿಂದ ಮಾಡುವ ಉಪಚಾರ : ಆ ಶಿಶುವಿಗೆ ಸಾದರದಿ ಪ್ರಣಾ[ಕ್ಷಾ]ಲನಂಗೈದುಪೊಲಿದು ಕೊಂಡೊಯ್ದು ತಜ್ಜನಿವಕ್ತಿಸಲಿ ಮಲಗಿಸಿ ವಸ್ತ್ರ ಮೋದೋಪಚಾರವ ಮಾಡುತಿರಲು (ಪಪೋ. ೦೦-೨೦). [ಸಂ.]

ಮೋನ (ನಾ). ೧. ಮಾತನಾಡದಿರುವಿಕೆ ; ಮೌನ : ಗುರುಚರಣಂಗಳ್ಗಿಜಗದ ಪರಕಯನಾದರದಿನಾಂತುಕೊಳ್ಳದೆ ಮೋನಂಬೆರಸಿರ್ಪುದು ನಿನಗುಚಿತಮೆ (ಪಣಾಪು. ೩-೪೦) ; ಸೊಬಗಿಯ ಗಾಂತಿನಂತೆ ನುಡಿಜಾಣನ ಮೋನದಂತೆ (ಪಚಾಕ್ಕು. ೧-೧೧); ಮೋಜವಿತ್ತಲು ರಭಸವತ್ತಲು ಹಾನಿಯಿತ್ತಲು ವೃದ್ಧಿಯತ್ತಲು (ಶಾಪ್ಕಾಕ್ರೀ. ೧-೦) ; ಶಿಶಿರಕಾಲದ ಕೋಗಿಲೆಯ ಪೊಲು ಉಸುರದಶಿಮೋನದಲಿ ಜೀವಂಜಸಲಿರಲು (ಶಾಕೃಣ ೫೦-೦೩). ೨. ಮಾತನಾಡದಿರುವ ನಿಯಮ ; ಮೌನವ್ರತ ; ಮನಸಿಜರಾ × × × ಗಸಾ ಅರಸಿ ಬೇನೆಪತ್ತಿ ಮೋಹಮುಜ್ಜಿಮಿಸುವಲ್ಲಿ ಕೊಟ್ಟುದು (ಎಳ. II. ೩೫-೩, ಮು. ೫೦೦), ೩. [ಕಾಮಶಾ] ವಿರಹದ ಹತ್ತು ಅವಸ್ಥೆಗಳಲ್ಲಿ ಎಂಟನೆಯದು : ಎಜಗಿ ನೋಡುವುದೊಂದಜಲಿ . . . ಎಂಟಜಲಿ ಮೋನಂ ಬಿಜಿತುಸುರುಪೊಂಬತ್ತಜಲಿ ಮೇಣ್ ಹತ್ತಜಲಿ ಮರಣ ಇವು ದಶಾವಸ್ಥೆಗಳೆನಲು ಪೇಳ್ದುವು ವಿರಹಿಜನರ್ಗೆ (ರತಿ. ೩೫-೩೨) P ಕೆಲವು ಗ್ರಂಥಗಳಲ್ಲಿ ಮಾತ್ರ ದಶಾವಸ್ಥೆಗಳಲ್ಲಿ ಮೌನದ ಉಲ್ಲೇಖವಿವಿದೆ. [< ಪ್ರಾ. ಮೋಣ./ಸಂ. ಮೌನ]

ಮೋನಂಗೆಡು (ಕ್ರಿ). ಮೌನವು ಭಂಗವಾಗು : ಕೇಳ್ದಾ ಕವಿಯ ಕೊಪ್ಪಂ ಸೀಂ ಕೊಳ್ವೊತೆ ನೋಯದಂತೆ ತೆಗೆಬಂದೊತೆ ಮೋನಂಗೆಟ್ಟುಳಿವಳೆ ನೋಲ್ವವಳೆಂದಂ (ಧರ್ಮಶ. ೯-೩೦). [ಮೋನ + ಕೆಡು₁]

ಮೋನಂಗೊಳ್, ಮೋನಗೊಳ್, ಮೋನಗೊಳ್ಳು (ಕ್ರಿ). ೧. ಸುಮ್ಮನಿರು ; ಮೌನವಾಗಿರು : ಭಟ್ಟಾರರುಂ ಮೋನಂಗೊಂಡು ನುಡಿಯದೆ ಕಪ್ಪಗಿರ್ದೊಡೆ (ಪಣಾಣ. ೬೯-೦೦) ; ದಿವ್ಯನಿನಾದಮಸಾಲಿಖಿಯಂ ವಿಡುಕದುಸಿದೆ ನುಡಿಯದೆ ಮೋನಂಗೊಂಡಿನಿಸಿರ್ದಧಿಪತಿಗೆ ನಿಶ್ಚಂ [ಮೆಚ್ಚಂ] ಪದದು (ಪಾಂಚಕ್ಷಿ. ೦೦-೪೭) ; ಆಸೇಸಂ ಪೇಜ್ಞೊಂಡಂ ನೀಂ ಮೋನಂಗೊಂಡಿರ್ದಪೆ (ಪಂಪಪಂ. ೦೨೦-೨೨). ೨. ಮೌನವಾಗಿರುವುದನ್ನು ಆಚರಣೆಯಲ್ಲಿ ತರು ; ಮೌನವ್ರತವನ್ನು ಪಾಲಿಸು : ಮೌನಾನುಷ್ಠಾನವನ್ನು ಮಾಡು : ನಮ್ಮಡಿ ನೀಮೂ ಶಿಕ್ಷುರ್ಮಾಸಮಿಲ್ಲಿರ್ಪನ್ನೆಗಂ ಸ್ವಾಧ್ಯಾಯಾಧ್ಯಯನಾನುಷ್ಠಾನನಿಯಮದಿಂ ಮೋನಂಗೊಂಡಿರ್ಪುದು (ಶುಶ್ರುತ. ೦೦-೪೫ ಕ) ; ನಿಶ್ಚಲಮತಿಯಿಂ ಮೋನಂಗೊಂಡು ಪಂಚ ಸಮಸ್ಕಾರಮಂ ಜಪಿಸುತ್ತುಮಿರದಿರ್ಪುದುಂ (ಧರ್ಮಾಶ್ಯ. ೬-೧೬). **ಮೋನಗೊಳ್** : ೧. ಚಿತ್ರದನುರಾಗವಿಲ್ಲದ ಮೋನಂಗೊಂಡಿರುಳ ಬಳಸಿ ಗೊಳಗುವಿರ್ದ ಸರಸಿನುಪದಂತೆ . . . ತಾಪವಡೆದು (ಪಣಾ. ೫೦. ೨೦೯). **ಮೋನಗೊಳ್ಳು** : ೧. ಜಯಂತನು ಮೋನಗೊಂಡು ಆಕೆಯ ಬೆನ್ನು ಪತ್ತಿ ನಪದನು (ಪಜಯಂತ. ೫೬). [ಮೋನ + ಕೂರ್₁]

ಮೋನಗೊಳ್ ' ಮೋನಂಗೊಳ್ ' ನೋ.

ಮೋನಗೊಳ್ಳು ' ಮೋನಂಗೊಳ್ ' ನೋ.

ಮೋನದಳೆ (ಕ್ರಿ). = ಮೋನಂಗೊಳ್ ೨ : ಚಳಗಾಳಿ ಮಳೆ ಬಿಸಿಲನ ಜುಯದಬಲುತ್ವದಿಂ ಮೋನದಳೆದು ಅನುದಿನ ತಪಂಗೈವ ಮುನಿವರ್ಗಮೆನೆ (ಪಂಪಪು. ೬-೨೦). [ಮೋನ + ತಳೆ₁]

ಮೋನಾನುಷ್ಠಾನ, ಮೋನಾನುಷ್ಠಾಣ, ಮೋನಾನುಷ್ಠಾನ (ನಾ). ಮೌನವಾಗಿರುವುದನ್ನು ಪಾಲಿಸುವಿಕೆ ; ಮೌನವ್ರತದ ಆಚರಣೆ : ಧ್ಯಾನಧಾರಣ ಮೋನಾನುಷ್ಠಾನ ಪ್ರಶಮಸಮಾಧೀಲಸಂಪನ್ನರಪ್ಪ . . . ಸಾಸಿರದ ಮೂನೂರ್ವ್ವರಂತನೆ (ಪಳ. VII, ೪೫೦. ೦೪-೦೪ ; ಬಿ೫೫). **ಮೋನಾನುಷ್ಠಾಣ** : ಧ್ಯಾನಧಾರಣ ಮೋನಾನುಷ್ಠಾನ ಸಮಾಧಿ ಸಮ್ಪನ್ನರಪ್ಪ ಶಕ್ತಿರ್ಪ್ಪಯ ಲೋಕಾಭರಣಪ್ಪ್ರಿತರ [ಕಾ] ಲಂ ಕರ್ಚಿ

(ಸೌಂ.XX. ೪೯-೨೮ ; 1058). **ಮೋನಾನುಷ್ಠಾನ** : ಧ್ಯಾನಧಾರಣಾ ಮೋನಾನುಷ್ಠಾನ ಜಪಸಮಾಧಿಶೀಳಸಂಪನ್ನರ್ (ಸೌಂ. XX. ೧೬-೦೭ : 1073) ; ಮೋನಾನುಷ್ಠಾನ ಜಪಸಮಾಧಿ ಶೀಲಗುಣ ಸಂಪನ್ನರ್ (ಕೇಶಿ. ೦೬-೪-೦೦೬ ; 1093). [< ಸಂ. ಮೌನಾನುಷ್ಠಾನ]

ಮೋನಾನುಷ್ಠಾಣ ' ಮೋನಾನುಷ್ಠಾನ ' ನೋ.

ಮೋನಾನುಷ್ಠಾನ ' ಮೋನಾನುಷ್ಠಾನ ' ನೋ.

ಮೋನಿ (ನಾ). ೧. ಮಾತನಾಡದಿರುವವನು : ಮೌನವಾಗಿರುವವನು : ಆಂ ಬೇಱುದಿರ್ದೊಡೆ ಮಹಾಕಷ್ಟಮಕ್ಕುಂ ನಟ್ಟಯು ಭಿಕ್ಷಯುಂ ಕಿಡುಗುಮೆಂಬ ನೆವದಿಂ ಮೋನಿಯಾಗಿ (ಭರತೇಶ್ವ. ೬-೩೬). ೨. ಮೌನವ್ರತವನ್ನು ಪಾಲಿಸುತ್ತಿರುವ ಮುನಿ.—ತಪಸ್ವಿ : ಪೋಗಳಂ ಪೊಗಬಿದೆ. . . ವಸುಮತಿಯೊಳ್ ದಾನಿಗಳನೂನಮಿಲ್ಲದ ಮೋನಿಗಳಂ ಪೋಗಿ ಪೊಗಬ ಕೆಲ್ಲಂಗೆಜ್ಜೆಯೊಳ್ (ಪಾ. ೪. ಕೀರವಾಕು. ೦೨೬-೨೯; ೩೭೨); ಜಯಮಾಲನ ಅಸತ್ಸಂಗತಿಗಳಿಗೆ ಜಯಂತನು ಮೋನಿಯಾಗಿ ಅನುಮೋದಿಸಿದುದು ಉಪಕಾರವೆನಿ ಹೇಳುವುದನ್ನು ಕಡಿಮೆ ಮಾಡಿದನು (ಜಯ:೦೪. ೦೦೮).

[<ಪ್ರಾ. ಮೋಣಿ. / ಸಂ. ಮೌನಿನ್]

ಮೋನಿಗುರವ (ನಾ). = ಮೋನಿ ೨ : ಶ್ರೀಅಗಬಿಯ ಮೋನಿಗುರವರ ಶಿಷ್ಯ ಕೊಬ್ಬರದ ಗುಣಷೇನಗುರವರ್ಗೋನ್ನು ಮುಡಿಪ್ಪಿದಾರ್ (ಚಂ. II. ೫೦ ; ಷಿ. 700) [< ಮೋನಿಗೊರವ]

ಮೋನಿಗುರವಡಿ (ನಾ). = ಮೋನಿ ೨ : ಅದೆಯಜಿನಾಡ ಚಿತ್ತೂರ ಮೋನಿಗುರವಡಿಗಳ ಶಿಷಿತ್ತಿಯರ್ ನಾಗಮತಿಗನ್ತಿಯರ್ . . . ಮುಡಿಪ್ಪಿದರ್ (ಚಂ. II. ೫೦-೦; ಷಿ. 700). [ಮೋನಿ + ಗುರವಡಿ]

ಮೋನಿಗೊರವ (ನಾ). = ಮೋನಿ ೨ : ವೈಜಾಖಮಾಸದ ಪೌರ್ಣಮಾಸಿಯನಟ್ಟುಣಿಸಿಯ ನಾಲ್ವದಿಮ್ಮಡ್ಗೂಹಾದನಮುಂ ಮೋನಿಗೊರವರುಂ . . . ಕೊಟ್ಟರ್ (ಕಾ. ೨. ೦೬-೬: ೩೦೬). [ಮೋನಿ + ಗೊರವ]

ಮೋನಿಭಟಾರ (ನಾ). = ಮೋನಿ ೨ : ಇನ್ನು ಕೆಲ್ಲಜ್ಜೆಯಮ್ಮಲ ಪ್ಪೊಗಬ್ ಮೋನಿಭಟಾರರೆನುತ್ತು ಲೋಕಮೆಲ್ಲಜ್ಜಿಡಗೊಣ್ಡುಗೊಣ್ಡು ಕೊಪಿದಪ್ಪುದು (ಪಾ. ೪. ಕೀರವಾಕು. ೦೨೬-೩೬; ೩೭೨). [ಮೋನಿ + ಭಟಾರ]

ಮೋಪಜಿ (ಕ್ರಿ). ಬಯಕೆಯನ್ನು ಅರಿ.—ತಿಳಿ : ಪ್ರಸಾದಮುಂ ಮುಕ್ಕುಳಿಸಿ ಕುಟ್ಟಿಯಂ ಅಕ್ಕುಳಿಸಿ ಕಣ್ಣೇಜಾದುದೆಂದು ಮೋಪಜಿದು ತೂಪಿಜಿದು ತೊಡಿಗಳಂ ತಟ್ಟ (ಕ್ರೌ. ೦೫೨. ೬-೨). [ಮೋಪು + ಅಜಿ]

ಮೋಪು$_1$ (ನಾ). ೧. (ಕಟ್ಟಿಡಗಳ ಕಂಬ, ಬಾಗಿಲು ಮೊದಲಾದುವುಗಳಿಗೆ ಬಳಸುವ) ಮರದ ದಿಮ್ಮಿ.—ಜೊತೆ ; ಮುಂಡಿಗೆ ; ನಾಟಾ : ಎರಡು ತಿಂಗಳು ಪರಿಯಂತವೀ ದೀಕ್ಷಿಯೊಳ್ಕರ ಮೋಪುಗಳ ತರಿಸಿದನು (ಗೋಕ:ಸೀ. ೦೬-೪೬); ಮೋಪು. ಅಂಟಲು. ಸೀಗೆ.ಎಂದು ಯಾವತ್ತು ಸಾಮಾನು ಸರಂಜಾಮು ಅವರ ಮೂಲಕವಾಗಿ ಸಾಗಿ ಸಲಿಯಬೇಕು (ಕಪಕ. ೦೮); ಬಿಚ್ಚಿದ ತುದಿಯಿಂದ ಬುಡದ ತನಕ ಮತ್ತಿ. ಜಂಡೆ, ನಂದಿ ಮೊದಲಾದ ಮೋಪಿಗೆ ಬರುವ ಮರಗಳಿವೆ. (ಕ:ಪಕ. ೦೦೬). ೨. ಒಳ್ಳೆಯ ಅಂಗಸೌಷ್ಠವ : ರೂಪು ತಲೆದೂಗಿತು ಸತಿಯರ ಮೋಪು ಕೊಂಡಾಡಿತು ಹುದಸ್ಸ ಚಾಪಕೆಂಬೇರಿಸಿತು (ಅಂಗಗಾ: ೪೪-೭೬); ಆದರೂ ಕೆಂಪು ಒಳ್ಳೆ ಮೋಪಾದ ಹೆಂಗಸು ; ಕಾವೇರಿತೀರದ ಹೆಣ್ಣುಗಳನ್ನು ನೋಡಿದ್ದವರಿಗೇ ಆ ಮೋಪು ಅನ್ನುವುದರ ಅರ್ಥವಾಗುವುದು (ಪುಷ್ಪ. ೯). ೩. ಭಾರ ; ಹೊರೆ : (೪). ೪. ಹೊರೆಯ ಒಜ್ಜೆ.—ತೂಕ : (೪). ೫. ಏಟಿನ ಅಥವಾ ಗಾಯದ ತೀವ್ರತೆ.—ತೀಕ್ಷ್ಣತೆ : (೪). ೬. ಹಿಡಿತದ ಬಿಗಿ : (೪). ೭. ಅನುಕೂಲವಾದ ಅವಕಾಶ.—ಅಸ್ಪದ ; ಸಕಾಲ : (೪).

[ದೇ.? ತುಳು. ಮೋಪು, ಮೂಪು; ತೆಲು. ಮೋಪು; ಕೊಡಗಾ.ಮೋಪ್]

ಮೋಪು$_2$ ' ಮೊಗಪ್ಪು ' ನೋ.

ಮೋಪು$_3$ (ನಾ). ೧. ಅನೆ; ಬಯಕೆ: ಬೇಟ : ಮತ್ತೊರ್ವ ಬೇಟಕರ್ತಿ ತಾಯ ಕಣ್ಣಂ ಬಂಚಿಸಿ . ತನ್ನ ಮೋಪಿನಾ [ಪಾಪಾ]ರೆಯ ಮನೆಗೆ ಪೋಪ ಬೇಟದಾಣ್ಮನಂ ಪಿಡಿದು (ಪಂಕಣಾ. ೯-೯೮ ಪ); " ಪ್ರೇಮ, ಪ್ರೀತಿ " (ಪಂಕಣೀ. ೦೬೩). ೨. ಶ್ರದ್ಧೆ ; ಆಸಕ್ತಿ : ಅಂತು ಮುಳಿಸಿನ ಮೋಪಿನ ಗಂಡಮಚ್ಚರದ ಮೆಚ್ಚುಪಣಿಗೆಯುಂಕಾಜರೆಳ್ಕತುಳಕ್ಕೆಕ್ಕೆಯಿಂ. . . ಕಾದೆ (ಪಂಕಣಾ. ೮೨-೭೩ ಪ); ಈ ವರಿಯ ಗಮಕದಿಂ ಕಾರ್ತವೀರ್ಯಾರ್ಜುನಂ ಮೋಪಿನಿಂದರ್ಚಿಸಿದ ಹಯವು ನಡಿಪುಲ್ಕೆ (ಪಾಷ. ೯-೫೬).

[ದೇ.? ತಮಿ. ಮೋಪ್ಪು]

ಮೋಪುಗಾರಿಕೆ (ನಾ). ಮರದ ದಿಮ್ಮಿಗಳನ್ನು ಕೊಯ್ಯುವ ಉದ್ಯಮ : ಸ್ವೀಡನಿನ ಮಧ್ಯಭಾಗವು ತುಂಬಾ ಕಾಡುಗಳಿಂದ ತುಂಬಿದೆ. ಆದರಿಂದ ದೇಶವು ಮೋಪುಗಾರಿಕೆಗೆ (Lumber Industry) ಹೆಸರುಗೊಂಡಿದೆ (ಪಾಲಕ್ರ. III. ೦೩೨).

[ಮೋಪು$_1$ + — ಗಾರ (<— ಕಾಜ) + — ಇಕೆ]

ಮೋಬದಲಿ ' ಮುಬಾದಲೆ ' ನೋ.

ಮೋಬಿದ (ನಾ). (ಪಾರಸಿಗಳ) ಧರ್ಮಾಧಿಕಾರಿ; ಪುರೋಹಿತ : ದಾದಾಭಾಯಿಯು ತನ್ನ ಆರಂಭಸಂಸ್ಕಾರವನ್ನು ಹೊಂದುವವರೆಗೆ ಅವನ ತಂದೆ ಬದುಕಿದ್ದಲ್ಲಿ ಮೋಬಿದನಾಗಿ ತನ್ನ ಜನದ ಮತಧರ್ಮಕಾರ್ಯಗಳಲ್ಲಿ ತೊಡಗುವಂತೆ ಅವನನ್ನು ಪ್ರಾಯಶಃ ಒತ್ತಾಯಪಡಿಸುತ್ತಿದ್ದನು (ದಾದಾತ. ೬). [← ಪಾರ. ಮೂಬಿದ್, ಮೂಬದ್, ಮೂಬಿದ್, ಮೂಬಜ್, ಮೌಬದ್, ಮೌಬಜ್]

ಮೋಯಿರ ' ಮೋದಿರ ' ನೋ.

ಮೋಯಿರಮುಹೂರ್ತ (ನಾ). ಮದುವೆಯ ನಿಶ್ಚಿತಾರ್ಥದ ಸಂಕೇತವಾಗಿ ವರನು ವಧುವಿಗೆ ಉಂಗುರವನ್ನು ತೊಡಿಸುವ ಮುಹೂರ್ತ : ಅವರು ಮಾತಾಡಿ ಮೋಯಿರಮುಹೂರ್ತದ ದಿನವನ್ನು ನಿಶ್ಚಯಿಸಿಕೊಂಡು ಬಂದರು (ಕಡಕಾ. II. ೦೦೩). ' ಉಂಗುರವುಡಿಕೆ ' ಪರಾ.

[ಮೋಯಿರ (< ಮೋದಿರ) + ಮುಹೂರ್ತ]

ಮೋರ್ ' ಮೊಸರ್ ' ನೋ.

ಮೋರ (ನಾ). ನವಿಲು; ಮಯೂರ : " ಮೋರನೆಂದುಂ ಸೋಗೆಯೆಂದುಂ ನವಿಲ್ " (ಕಕಾ. ೫೦-೧೩); ಮದನನ ಮುಂಗಡೆ ಮೋರ ಹೆಗ್ಗಾಳಿ ಸಾಱುದುದು (ಪಾಷ. ೬-೦೩); ವರುರ್ಷಂಗಳಿನೊಲ್ದು ಬೀಸುವುದು ಮೋರಂ ಹೋದುಸಪ್ಪಾರ್ಚಿಯಂ (ಶಂಪ್ರಕ್ಕು. ೨-೦೨೬); ಉಜ್ವಳತರದ ನೃತ್ಯ ಮಾಡುತ್ತಿದ್ದುದೊಂದು ಮೋರಂ ಸಂತಸಂದಾಳುತೆ (ಸಿಪ್ರಚಿ. ೦೬-೨೬). [< ಸಂ. ಮಯೂರ./ಪ್ರಾ. ಮೋರ್./ಹಿಂ. ಮರಾ. ಮೋರ್]

ಮೋರಚೂತ (ನಾ). ಒಂದು ಬಗೆಯ ಖನಿಜಲವಣ; ಮೈಲುತುತ್ತ : " ಮಯೂರಕ — ಮೋರಚೂತ " (ಗುಣಾಕು. ೨೩೦).

[← ಮರಾ. ಮೋರಚೂತ್, ಮೋರಚೂದ್]

ಮೋರಟು (ನಾ). ೧. ಕಬ್ಬಿನ ಬೇರು : " ಮೋರಟುಂ, ಇಕ್ಷುವಮೂಲಂ—ಕಬ್ಬಿನ ಬೇರುಗಳಿಗೆ ಪೆಸರು" (ಕಜ್ಞಾಕ. ೩೦೭). ೨. ಒಂದು ಬಗೆಯ ಮರ : ಪಿಗ್ಗೋಳಿಯಾಲವು ಬೆಳ್ಲು ಮೋರಟು. . . ಹಾದರಿಯ ಮರ ಮೊದಲಾದವುರ್ವಿಹವು (ಜಾಕ್ಷಣಾ. ೫-೭). ೩. ಒಂದು ಬಗೆಯ ಸಸ್ಯ; ಕುರಟಗೆ : " ಮೋರಟು—ಕುರುಟಗೆ, ಸಿಗುದಿತೆ " (ಲಷಂ. ೦೩೦). ೪. ಅಂಕೋಲೆಯ ಹೂವು. ೫. ಕರು ಹಾಕಿದ ಏಳುದಿನಗಳ ನಂತರದ ಹಸುವಿನ ಹಾಲು. [ಸಂ.]

ಮೋರಟಿ (ನಾ). ೧. = ಮೋರಟು ೧ : " ಮೋರಟಾ—ಕಬ್ಬಿನ ಬೇರು " (ಲಷಂ. ೦೩೦). ೨. ಒಂದು ಬಗೆಯ ಸಸ್ಯ; ಕುರಟಗೆ : " ಮೂರ್ವಾ,

ದೇವೀ. ಮಧುರಸಾ. ಮೋರಟು. . . ಟೀಲುಪರ್ಣೀ–೧೦ ಹೆಗ್ಗುರುಟಿಕೆಯ ಹೆಸರುಗಳು" (ಶಿಕ್ಷಾಕೋ. ೧೬೦). [ಸಂ. ಮೋರಟ]

ಮೋರಟಿಕ್ಕೆಯ (ನಾ)· ನವಿಲಿನ ಗುರುತು ಇರುವ ಬಾವುಟ; ಮಯೂರಧ್ವಜ : ಮುಱಿದುದು ಬಾಣನ ಮೋರಟಿಕ್ಕೆಯ ಮತ್ತ ಮುಱಿದುವು ಹಲವು ಹಮ್ಮೀಗಳು (ಪೋಪಪ. ೩೬-೩೬).

[ಮೋರ + ಟಿಕ್ಕೆಯ (< ಟಿಕ್ಕೆದು)]

ಮೋರಿ₁ ' ವರೌರಿ ' ನೋ.

ಮೋರಿ₂, ಮೊಹರಿ₂ (ನಾ)· ೧. (ಸಾಮಾನ್ಯವಾಗಿ ಕೊಳಕು ಅಥವಾ ಮೈಲಿಗೆ) ನೀರು ಹರಿಯಲು ಮಾಡಿರುವ ಸಣ್ಣ ಕಾಲುವೆ; ಚರಂಡಿ; ಗಟಾರ : ಪರಸರದ ಮೋರಿಯಲಿ ಇಲಿ ಹೆಗ್ಗಣದ ಮೇಳ (ಪಂಕೆಮು. ೩-೦೨); ಎಡಬಲದ ಮೋರಿಗಳಲ್ಲಿ ಮಳೆಯ ನೀರು ಹರಿಯುತ್ತಿತ್ತು (ಕಷ್ಣ. ೧-೦೭); ನಿಮ್ಮ ಸಾಲಿಗೆಗೆ ಗುರುತು ಸಿಕ್ಕರ ತಿನ್ನರಿ. ಕಾಸ್ಪಾದಿರ ಬಚ್ಚಲ ಮೋರಿ ಏತಲ್ಲಾ (ಪಾಪಂ ೩೬). ೨. ರಸ್ತೆಯ ಕೆಳಗೆ, ರಸ್ತೆಗಡ್ಡವಾಗಿ ನೀರನ್ನು ಸಾಗಿಸುವ ಕಾಲುವೆ : ಒಂದೆ ಕವಾನಿನ ಚಿಕ್ಕ ಸೇತುವೆಗಳಿಗೆ "ಮೋರಿ" (culvert) ಎನ್ನುವ ರೂಢಿಯಿದೆ (ಪಾಂಪ್ರ. ೩. ೨೩೬). **ಮೊಹರಿ**₃ : ೧. ನಾರಾಗಳ ಬಚ್ಚಲು ಮೊಹರಿ ಹಳ್ಳಕಟ್ಟೆಗಳು ಮುಂತಾದವುಗಳ ಸ್ವಾಧೀನಗಾರರು (ಸ್ವಾಪಾಕಾ. ೨೦೩); ಊರಿಗೆ ಅಗತ್ಯವಾದ ರಸ್ತೆ. ಚರಂಡಿ. ಕಲ್‌ಮರ್ಟುಗಳು. ಮೊಹರಿ. ಭಾವಿ ಮುಂತಾದ ಕಾಂಗಾರಿಗಳಿಗೆ ಸರ್ಕಾರ. . . ವೆಚ್ಚವನ್ನು ಪಹಿಸಿಕೊಳ್ಳುತ್ತ (ಪಜ್ಞಾಳ್ಳ. ೪೩) : ನನ್ನೂರಿಗೆ ಈಗ ಜಲ್ಲಿಕಲ್ಲಿನ. ಚರಂಡಿ ಮೊಪರಿಗಳ ರಸ್ತೆ ಆಗಿದೆ (ಕವಿಸ್ಮೃ. ೩೦೩). ೨. ದಾರಿಯಲ್ಲಿರುವ ಒಂದು ಮೊಪರಿಯ ಮೇಲೆ ಕೂತುಕೊಂಡು ಅಳುತ್ತಿದ್ದನು (ಕಂಗಕ. ೨೦೨).

[← ಹಿಂ. ಮೋರೀ; ಮರಾ. ಫೋರೀ. ಮೊಹರೀ]

ಮೋರಿಯ ' ಮೋರ್ಯ ' ನೋ.

ಮೋರು (ಕ್ರಿ)· ಹೀರು ; ಸುರಿದುಕೊಳ್ಳು : ರಾಮಪ್ಪ. . . ಕಳ್ಳು ಮೋರುವುದಕ್ಕೆ ಆರಂಭಿಸಿ, ಅದರಲ್ಲಿ ಸುಪಿದ ಪರಾಕಾಷ್ಠೆಯನ್ನು ಕಾಣತೊಡಗಿದ (ಬಿಕ್ಷಾ. ೦೦೬). [?]

ಮೋರುಂಡೆ (ನಾ)· (ಮೊಸರನ್ನುಪಯೋಗಿಸಿ ತಯಾರಿಸುವ) ಒಂದು ಬಗೆಯ ಉಂಡೆ,– ಭಕ್ಷ್ಯ : ಸಜ್ಜುಗಂಪೊಪ್ಪುವ ಮೋರುಂಡೆ ಮನ ಕೊಪ್ಪಿಸಿದುವು ಮಧುರರಸದ ಸುಧೆಯಂ ಬುಧರೊಳ್ (ಪಪಷ. ೧೧೩) ; ಪೂರಿಗೆ ಮುಂಡಿಗೆ. . .ಮೋರುಂಡೆಗಳೆಂಬಿವನಾ ನಾರೀತತಿ ಮುನಿಜನಕ್ಕೆ ಬಡಿಸಿದುದಾಗಳ್ (ಕ್ರಿತಿ. ೦೦-೩೪); ಬಿಳಿಯ ಬೆಲ್ಲವು ಮೋರುಂಡೆ ಎಳ್ಳುಂಡಿಯು (ಶಾಪಪ. ೪೬-೨೦೬) ; ಮೂಱು ಮೋರುಂಡೆಯು ಜಿರುವನಿಡುವೆದು (ಪೋಂಬಿ. ೫೬-೦೦).

[ಮೋರ್ (< ಮೊಸರ್) + ಉಂಡೆ./ತೆಲು. ಮೋರುಂಡ./ಪ್ರಾ. ಮೋರಂಡ = ಕಾದ ಕಡುಬು, ಕರಿಗಡುಬು]

ಮೋರೆ ' ಮೋಜೆ ' ನೋ.

ಮೋರ್ಚಾಂಗ್, ಮೋರ್ಸಿಂಗ್ (ನಾ)· (ತಾಳವಸ್ತ್ರ ಸೂಚಿಸುವ) ಒಂದು ಬಗೆಯ ಲೋಹದ ಮುಖವಾದ್ಯ : ಬಂದದಿಂ ಮುಖವೀಣೆ ಮೋರ್ಚಿಂಗ್ ಪಟೀಲುಗಳ ಪಿಂದೆ ನಂಡಿ ಪಿಮ್ಮೇಳದವರೊಡನೆಯೊಲಪಿಸಂ ನಿಂದು ಕುಣಿಯುತ್ತಿರುವ ವಾರಕಾಂತವ್ಯಂದಮಂ ನೋಡು ರಮಣಿ ನೀನು (ಅಚಾಗಾ. ೨೪-೩೦); ಬಿಂದದಿಂ ಮುಖವೀಣೆ ಮೋರ್ಚಿಂಗ್ಪಟೀಲುಗಳ (ಪಚಗಸ. ೩-೩೦). **ಮೋರ್ಸಿಂಗ್** : ಅಲಗಸುಳ್ಳ ಕಂಚಿನ ವಾದ್ಯವೊಂದು. ಬಾಯಲ್ಲಿಟ್ಟು. ಅಲಗಿನ ತಾಡನದಿಂದ ಲಯವಾದ್ಯವಾಗಿ. ಉಪಯೋಗಿದಲ್ಲಿದೆ. ಇದಕ್ಕೆ ' ಮೋರ್ಸಿಂಗ್ ' ಎಂದೂ ಹೆಸರು (ಪಂಗಾಪಂ. ೦೨೨).

[← ಹಿಂ. ಮೋರ್‌ಚಂಗ್. ಮುರ್‌ಚಂಗ್; ಮರಾ. ಮೋರ್‌ಚಂಗ್. ಮೋರ್‌ಶಿಂಗ್]

ಮೋರ್ಚಾಲ್ (ನಾ)· (ದೇವರು. ದೊರೆಗಳು ಮತ್ತು ಪೂಜ್ಯರಾದ ವರ ಬಳಿ ಗೌರವದ ಚಿಹ್ನೆಯಾಗಿ ಹಿಡಿಯಲ್ಪಾಗುವ) ನವಿಲುಗರಿಗಳಿಂದ ಮಾಡಿದ ಚಾಮರ : ರಥೋತ್ಸವ ಮುಂತಾದ ಉತ್ಸವಗಳಿಗೆ ಕಲಾಮತ್ತು ಪಲ್ಲಕ್ಕಿ. ಛತ್ರಿ. ಚೌರಿ. ಸೂರಿವಾಸಿ. ಮೋರ್ಚಾಲ್ . . . ಚಂದ್ರಮಂಡಲ ಮುಂತಾದ ನಾನಾವಿಧಗಳಾದ ವಾಹನಗಳನ್ನು ಒಪ್ಪಿಸಿದರು (ಪಚಾಪಂ. II, ೦೨೯) ; ರಾಜಬಿರುದುಗಳು—ನವಪತ್. ಮೋರ್ಚಾಲ್. ಸೂರ್ಯಪಾನ. ಮಕರತೋರಣ. ಹಗಲು ದೀಪಟಿಗೆ. ಧವಳಚಂಪ (ಗುಡಪ. ೦೦).

[← ಹಿಂ. ಮೋರ್‌ಛಲ್; ಮರಾ. ಮೋರ್‌ಚೆಲ್. ಮೋರ್‌ಚೇಲ್]

ಮೋರ್ಚೆ, ಮೊಹರ್ಚು, ಮೊಹರ್ಚೆ (ನಾ)· ೧. ಕೋಟೆಯ ಬತ್ತೇರಿಯ ಮೇಲೆ ತುಪಾಕಿಯನ್ನು ಇರಿಸುವ ಜಗಲಿ : ಇಂಗ್ಲೇಜ ಬಹಾದ್ದರವರ ಫೌಜನವರು ಮುಂತಾಗಿ ಬತ್ತೇರಿಗಳ ಮೋರ್ಚೆ ಮೇಲೆ ಯೇರಿಸಿ ಇದ್ದ ಬರಂಗಿಗಳನ್ನು ಇಳಿಸಿದರು (ರಾಕಿಂಪ್ರ. ೮೪). ೨. ಲಗ್ಗೆ; ಧಾಳಿ; ಮುತ್ತಿಗೆ ; ಅತ್ಯರಾಗಿ ಟೀಪುಸುಲ್ತಾನರು ಮಹಾಕೋಪದಿಂದ ತಮ್ಮ ಯಾವತ್ತು ಫೌಜು ತೆಗದುಕೊಂಡು ಹೋಗಿ. ಬೆಟ್ಟಕೋಟೆಗೆ ಮೋರ್ಚೆಗಳ ಹಾಕಿ. ಲಡಾಯಿ ಮಾಡಿ . . . ಪಟ್ಟಣದ ಕಡೆ ಹೊರಟರು (ರಾಕಿಂಪ್ರ.೬೬) ; ಕರ್ನಾಡ ಕಚೇರಿಯ ಮೇಲೆ ನಮ್ಮ ಮೊದಲನೆಯ ' ಮೋರ್ಚೆ ' ಹೋಯಿತು (ಕ್ರತಿಕ. ೬೨). **ಮೊಹರ್ಚು** : ೩. ಸೈನಿಕರು ನಿಲ್ಲುವ ಕೋಟೆಯ ಆಯಕಟ್ಟಿನ ಸ್ಥಳ : ಸೂರಾರು ಜನ ಹೊರ ಹೊರಟು ಮೊಹರ್ಚು ಮ್ಯಾಲೆ ಬಿದ್ದು ಜನರ ಗಾಬರಿಮಾಡುವುದನ್ನು ಶಾಬಾಸ್ಸಾಬರು ಕಂಡು (ಕ್ಷಕಾ. ೨೬). **ಮೊಹರ್ಚೆ** : ೧. ಅಗಸನ ಕಲ್ಲು ದಿಣ್ಣೆ. . . ರಂಗಯ್ಯನ ಬಾಗಿಲು ಎದುರಿಗೆ. ಬುದ್ಧಿವಂತನ ಮಾರಡಿ ಬಳಿಯಲ್ಲಿ ಈ ಕಡಗಳಲ್ಲಿ ಮೊಹರ್ಚೆ ಕಟ್ಟಿಸಿ ಫಿರಂಗಿಗಳನ್ನು ಹೂಡಿಸ ತಕ್ಕದ್ದು (ಚಕ್ಷಾ. ೨೨).

[←ಹಿಂ. ಮೋರ್ಚಾ ; ಮರಾ. ಮೋರ್ಚಾ. ಮೋರಜಾ. ಮೋರಚಾಲ್. ಮೋರ್ಚಾಲ್ ; ಹಾಕ. ಮೋರ್ಚಾಲ್]

ಮೋರ್ಚೆಕಟ್ಟು (ಕ್ರಿ)· ಮುತ್ತಿಗೆ ಹಾಕು : ದಾಳಿಮಾಡು ; ಲಗ್ಗೆ ಹಾಕು : ಬಹದ್ದರ್‌ಹೈದರ್ಷೇಖಾನಮ್ಮ ಸತ್ಯಮಂಗಲದ ಕೋಟೆಗೆ ಮೋರ್ಚೆಕಟ್ಟಿ ತೋಪುಗಳನ್ನು ಹೂಡಿಸಿ . . . ಶ್ರೀರಂಗಪಟ್ಟಣಕ್ಕೆ ಬಂದು ಸೇರಿದನು (ಪಚಾಪಂ. I, ೦೦೨).

[ಮೋರ್ಚೆ + ಕಟ್ಟು₂]

ಮೋರ್ತಬ್ಬ (ನಾ)· ಮುದ್ರೆ ; ಠಸ್ಸೆ : ' ಶಿಕ್ಕಾಮೋರ್ತಬ್ಬ ' ವರಾ.

[← ಹುರಾ. ಮೋರ್ತಬ್. ಮೋರತಬ್]

ಮೋರ್ಯ, ಮೋರಿಯ (ನಾ)· ಒಂದು ವಂಶದ ಹೆಸರು : ಅಲ್ಲಿಂದಂ ತೆಂಕಲು ಮೋರ್ಯ್ಯರ್ ಮಾಳಸಮೂಹಂ ಅಲ್ಲಿಂದ ತೆಂಕಲು ಬಿದಿರೂರ(ದ) ತೊಜ್ (ಪ್ರಾಶಾ. ೦೧೨೩, ೦೦೩–೧೦ ; ೩೩೬)· **ಮೋರಿಯ** : ಸರಮಯ ಕೆಯ್ಗೆ ಪಣವಾಜು ಮೋರಿಯರ ಕೆಯ್ಗೆ ಪಣಂ ಮೂಱು ಕೆಱೆಯತ್ತಿಂಗೆ ಗರುಡಸ ಕಂಧದಿಂ ಮೂಡಲ್ ಮನೆವೊನ್ದು (ಪೌಷಾ. XVIII. ೦೦೨–೧೯ ; ೧೧೧೬)· [< ಪ್ರಾ. ಮೋರಿಯ = ಒಂದು ಕ್ಷತ್ರಿಯ ವಂಶ./ಸಂ. ಮೋರೀ=ಒಂದು ವಂಶದ ಹೆಸರು./ತಮಿ. ಮೋರಿಯಂ=ಮೌರ್ಯ]

ಮೋರ್ಸಿಂಗ್ ' ಮೋರ್ಚಾಂಗ್ ' ನೋ.

ಮೋಲು (ನಾ)· ಬೆಲೆ ; ಕಿಮ್ಮತ್ತು ; ಮೌಲ್ಯ : ಏನು ನಿಮ್ಮ ಮೋಲು—ಲೋಕದಾಗ ? ನಾವು — ಮರತೇವದನ ಹ್ಯಾಂಗೆ ? (ಕೃಕ್ಕಾಕು. ೧೦-೦೦) [← ಹುರಾ. ಹಿ. ಮೋಲ್-/ಸಂ. ಮೌಲ್ಯ]

ಮೋವೆ (ನಾ). ಅಗ್ರಭಾಗ : ಮುಂಭಾಗ : ಅರಸ ಕೇಳಾಕ್ಷಣದೆ ಸುಳಿದಳು ಸರಸಿರುಹಮುಖಿಯೊಬ್ಬಳಾ ಮೋಹರದ ಮೋವೆಯು ಮುಂದೆ ಮುಜುಗರದ ವಿಂಚಸಂದದರಿ (ಹರಿಶ.೪-೯-೦೦). [← ತೆಲು. ಮೋವಿ]

ಮೋಷ (ನಾ). ೧. ಕಳ್ಳತನ ; ಕಳವು. ೨. ಕೊಳ್ಳೆ ; ಸುಲಿಗೆ ; ಲೂಟಿ : ಅಸತ್ಯಮೋಷವಾಗ್ಯೋಗರಾಶಿಸಾಧಿಕಂ ದ್ವೀಂದ್ರಿಯಪರ್ಯಾಪ್ತಕಂಗಳ್ ಅಸಂಖ್ಯಾತಭಾಗಂ (ಕೃಷ್ಣಕ್ರ. ೩೩). [ಸಂ.]

ಮೋಷಕ (ನಾ). ಕಳ್ಳ : " ಚೋರಃ, ಪಣಾಗಾರಿಕಃ, ಸ್ತೇನಃ, ದಸ್ಯುಃ, ತಸ್ಕರಃ, ಮೋಷಕಃ . . . ಮಲಿಮ್ಲುಚಃ – ೧೮ ಕಳ್ಳನ ಪೆಸರುಗಳ್" (ಲೋಕೋ. ೩೦೪). [ಸಂ.]

ಮೋಷ್ಟಿಕ (ನಾ). ದಾನವಾಗಿ ಪಡೆದ ಮುಷ್ಟಿಧಾನ್ಯದಿಂದ ಜೀವನ ನಡೆಸುವವನು (?) : ತಿರುನಾರಾಯಣಪುರಮುಖ್ಯವಾದ ಸಕಳಾಚಾರ್ಯರೂ ಸಕಳಸಮಯಿಗಳೂ ಸಕಳಸಾತ್ವಿಕರೂ ಮೋಷ್ಟಿಕರು . . . ಹದಿನೆಂಟ್ನಾಡ ಶ್ರೀವೈಷ್ಣವರ ಕೈಯ್ಯಲು ಮಹಾರಾಯನು ಜೈನರ ಕೈವಿಡಿದು ಕೊಟ್ಟು (ಎಕೆ. II. ೪೯೯-೦೨ ; 1363). [?]

ಮೋಸ (ನಾ). ೧. ಕಪಟ ; ವಂಚನೆ ; ದುಷ್ಟ ಮೋಸದೊಳಿರದನೆಂಬರು (ಕಾಶಿಖಂ. ೧೯-೫೯) ; ಮಱುಗಿದನು ಮನದೊಳಗೆ ಮೋಸದ ಮಱಿಯರಸ್ಯಸಗದನಕೆ (ಕೂಕರಾ. ೬-೩೬-೪) ; ಇಂತಾ ಮೋಸ ಎಲ್ಲಿ ಕಲಿತಿರಿ? (ಜಾಮಳ. ೬೨). ೨. ಅಪಾಯ ; ಆಪತ್ತು ; ಗಂಡಾಂತರ : ದೇಶಾಧಿಪ ಕೃಷ್ಣರಾಯಂಗೆ ಖಿಲರಿಂದ ಮೋಸವ ಬರಗುಡನೆಂದು ಶೇಷ ಮಂಡಳಿಂದಂದಿ ವಜ್ರದಾಳ್ಟೇರಿ ಲೇಸಾದುದು (ಕೂಚಪಕ. ೬-೬) ; ಇವರಂತಲ್ಲ ಮುಹೀಶೂರವರದುವು ಬೇಱೆ ಮಿಱೆ ಪೋಪುದು ಮೋಸಂ (ಪಾರ್ಶ್ವ. ೨-೦೦೦) ; ಅವರ ಮಂತ್ರಬಲ ಸಾಲದಿದ್ದರೆ ಮಂತ್ರವಾದಿಗೆ ಮೋಸ (ಶಕ. ೬೬). ೩. ತಪ್ಪು ; ಅಪರಾಧ : (೧). ೪. ನಷ್ಟ ; ಹಾನಿ : (೧).

ಮೋಸ ಮಾಡು = ವಂಚಿಸು ; ಮೋಸಗೊಳಿಸು : ನನಗೆ ಅವರು ಮೋಸಮಾಡಬಹುದು (ಅಶಾ. ೪೭) ; ಇವರು ಮೂವ್ವರೂ ಸೇರಿ ನನಗೆ ಮೋಸಮಾಡಲು ಹೊಂಚುಹಾಕುತ್ತಿದ್ದಾರೆ (ಕಾಪಾಶಾ. ೩೫). **ಮೋಸವಾಗು** = ವಂಚನೆಯಾಗು : ವ್ಯಾಪಾರದ ಮಹಾವಿನಲ್ಲಿ ಅವನಿಗೆ ಜೂತಿಗಾರನಿಂದ ಮೋಸವಾಗಿದೆ (ಕೂಶಿ). **ಮೋಸಹೋಗು** = ವಂಚನೆಗೆ ಗುರಿಯಾಗು ; ಕಕ್ಕಿಗೆ ಒಳಗಾಗು : ಮೋಸಹೋಗುವನಲ್ಲಮ್ಮ . . . ನಮ್ಮ ವಾಸುದೇವ ತಿಮ್ಮಯ್ಯ (ಕೃದಂದ. ೦-೩೩-೦೦) ; ದ್ರೋಣನು ನಿನ್ನ ಮಾತಿನಿಂದ ಮೋಸಹೋದನು (ಪಾಪಾಂ. IV. ೩೨).

[<ಪ್ರಾ. ಮೋಸ./ ಸಂ. ಮೋಷ]

ಮೋಸಂಬಿ ' ಮೂಸಂಬಿ ' ನೋ.

ಮೋಸಕಾಱ ' ಮೋಸಗಾರ ' ನೋ.

ಮೋಸಕೂಪ (ನಾ). ಕೃತಕವಾಗಿ ನಿರ್ಮಿಸಿದ ಬಾವಿ : ನುಜಿಸ ಮಡುಹು ಹೆಬ್ಬಲೆ ಕರಗುಸಂಗಳು ಅಡಿಯನೂಜುವರೊಡನೆ ನುಗುವ ಮೋಸಕೂಪಗಳು (ಕಾಶಿಖಂ. ೦೬-೪೦). [ಮೋಸ + ಕೂಪ]

ಮೋಸಗಾತಿ (ನಾ). ವಂಚನೆ ಮಾಡುವವಳು ; ಮೋಸಗೊಳಿಸುವವಳು ; ವಂಚಕಿ : ಅರಸನು ಅತಿವ್ಯಗ್ರನಾಗಿ ಪಿಸುರಿತು ಬಾಯಿಗ ಬಂದಂತೆಲ್ಲ ಮಗಳನ್ನು ಬಯ್ದು ಮೋಸಗಾತಿಯೆಂದೂ . . . ದೂಷಿಸಿದನು (ಕಬ. ೬೨). [ಮೋಸ + – ಗಾತಿ]

ಮೋಸಗಾರ, ಮೋಸಕಾಱ (ನಾ). ವಂಚನೆ ಮಾಡುವವನು : ಮೋಸಗೊಳಿಸುವವನು : ಕಪಟಿ : "ಅಕ್ಕ, ಬೊಂದುಕ, ಜಲ್ಲುವತ್ತ, ಸಂಬಿಸಿ ಶಿಂಬಪ, ಮೋಸಗಾರ, ಕಾಕ, ದುರುಳ" (ಕಂಪಹು. ೬೪) ; ಅವರು ತುಂಬಾ ಮೋಸಗಾರರೆಂದು ತಿಳಿಯತಕ್ಕದ್ದು (ಪುಂಬಾಬು. ೯ ೦೦೭). **ಮೋಸಕಾಱ** : ಆಟಿಕಾಱಂ, ಮೋಸಕಾಱಂ (ಕಾಶಾಪ. ೪೨೬ ಕ್ರಡೋ).

[ಮೋಸ + –ಗಾರ (< –ಕಾಱ)]

ಮೋಸಗಾರಿಕೆ (ನಾ). ವಂಚನೆ ; ಕಪಟ ; ಠಕ್ಕು : ಇವರ ಮೋಸಗಾರಿಕೆ ನಮ್ಮ ಬಳಿ ನಡೆಯುವಂತಿಲ್ಲ (ಕುಸರು. ೨೯೩) ; ಈ ಪ್ರಕರಣದಲ್ಲಿ ಮೋಸಗಾರಿಕೆಯು ತುಂಬ ತುಳುಕುವಂತೆ ತೋರುವುದು (ಸೂ೧೩೩. ೦೭೪).

[ಮೋಸಗಾರ + – ಇಕೆ]

ಮೋಸಗಾರ್ತಿ (ನಾ). = ಮೋಸಗಾತಿ : (೧).

[ಮೋಸಗಾರ + – ತಿ$_1$ (< – ಇತ್ತಿ)]

ಮೋಸಗೊಳಿಸು (ಕ್ರಿ). ವಂಚನೆ ಮಾಡು ; ಠಕ್ಕಿಸು : ಧೂರ್ತರು ತರತರದ ಹಂಚಿಕೆಗಳಿಂದ ಜನರನ್ನು ಮೋಸಗೊಳಿಸಲಿಕ್ಕೆ ಹವಣಿಸುತ್ತಾರೆ (ಪುಂಬಾಬು. ೯-೦೪) ; ಜನ ನಮ್ಮನ್ನು ಮೋಸಗೊಳಿಸಲು ಬಂದರೆ ನಾವು ಸತ್ಯ ಪನ್ನೇ ನುಡಿಯುತ್ತೇವೆಂದ (ಕಬಾಗಾ. ೦೪೬). [ಮೋಸಗೊಳು + – ಇಸು$_5$]

ಮೋಸಗೊಳು, ಮೋಸಗೊಳ್ಳು (ಕ್ರಿ). ವಂಚನೆಗೆ ಒಳಗಾಗು; ಕಪಟಿಕ್ಕೆ ಗುರಿಯಾಗು : ' ಮೋಸಗೊಳಿಸು ' ಪರಾ. **ಮೋಸಗೊಳ್ಳು** : ಬಹಳ ಸ್ನೇಹವಿರುವ ವ್ಯಕ್ತಿಯಿಂದಲೇ ಅವರು ಮೋಸಗೊಂಡರು (ಕೂಪ).

[ಮೋಸ + ಕೊಳು (< ಕೊಳ್$_1$)]

ಮೋಸಗೊಳ್ಳು ' ಮೋಸಗೊಳು ' ನೋ.

ಮೋಸನಿಗೆ (ನಾ). ಜಾರೆ ; ವೇಶ್ಯೆ ; ಸೂಳೆ (?) : ಮೋಸನಿಗೆಯು ರೊಪ್ಪಿರದಸ್ಪರ್ಶ್ಯದುಮಿಲ್ಲದೆ ತನ್ನಿಚ್ಛೆ ಸಲ್ವುದೆಂಬುದು ಕಾತ್ಪರ್ಯಂ (ಪಂಕಾ. ೨೬-೪೦). [?]

ಮೋಸಮ್ ' ಮೋಸಮು ' ನೋ.

ಮೋಸಮು. ಮೋಸಮ್, ಮೋಸಮ್ಮು, ಮೋಸುಂ (ನಾ). ೧. ಅನುಕೂಲವಾದ ಕಾಲ ; ಸಕಾಲ : "ಮೋಸಮು—ಯೋಗ್ಯಸಮಯ (ಜಾಪಸೂಟೀ. ೩೩). **ಮೋಸಮ್** : ೨. ಋತು ; ಕಾಲ : ಏನು ಮನೆ ತುಂಬ ಮಾಣಿಕ್ಯರುವ ಧನಕನಕವೋ? ಬರಲು'ಪ್ರತಿ 'ಮೋ'ದ ಮೋಸಮ್? (ಪಂಕಪ. ೬೯-೦೦). **ಮೋಸಮ್ಮು** : ೧. ಆಟದ ಮೋಸಮ್ಮು ಇಲ್ಲದಾಗ ಊಟಾಗ ಮುಖ್ಯಮು ಇರತಿತ್ತಿರಿ (ಪಂಪಕ. II, ೪೮೬). **ಮೋಸುಂ** : ' ಅವಲ್‌ಮೋಸುಂ ' ಪರಾ.

[← ಅರ. ಮೌಸಿಮ್ ; ಹಿಂ. ಮೌಸಮ್. ಮೌಸಿಮ್ ; ಪುರಾ. ಮೋಸಮ್]

ಮೋಸಮ್ಮು ' ಮೋಸಮು ' ನೋ.

ಮೋಸಮಡೆ (ಕ್ರಿ). ಮೋಸಗೊಳ್ಳು ; ವಂಚನೆಗೊಳಗಾಗು : ವ್ಯಾಸನಂದನನಿರ್ದ ಒಳಗೆ ರಂಭಾನಾರಿ ಮೋಸವಡೆದು ನಡೆತಂದು ಪುಸರನಾಗವಂಶವ ಕರೆದು ಪರಿವಾಸಕೊಳಗಾದಳವಳು (ಕಂವಿ. ೯-೦೮೪).

[ಮೋಸ + ಪಡ$_1$]

ಮೋಸು$_1$ ' ಮೋಬ್ಬು$_1$ ' ನೋ.

ಮೋಸು$_2$ (ನಾ). ೧. ಕುಡಿ; ಚಿಗುರು ; ಮೊಳಕೆ : ಎನಿತೇ ಬೀತರು ಈ ಎಡೆ ಮತ್ತೂ ತಲೆಯಿದುವುದು ಬಯಕೆಯ ಮೋಸು (ಕಬಾ. ೩-೩೦) ; ಕಲ್ಲುಗೋಡೆಯ ಮೇಲೆ ಸುರಿವ ತುಂತುರು ಬಳ್ಳಿ. ಬೆಳ್ಳಿಯೆಲೆ. ಬೆಳ್ಳಿಮೋಸು (ಕಾಶಾ. ೭೦-೦೨) ; ಈ ಜಾತಿಯ ಗಿಡಗಳು ಕಾಂಡವಿಲ್ಲದವ, ಒಂದೇ ಸಸ್ಯದಿಂದ ಮೋಸುಗಳು ಹೊರಬಂದು ಗುಂಪಾಗಿ ಬೆಳೆಯುವ. ಸಕ್ಕೂಲೆಂಟ್ ಸಸ್ಯಗಳು (ಪಾಶಾ. I. ೪೭೭). ೨. ಮೂಲ ; ಉಗಮಸ್ಥಾನ : ಕರ ಕರೆಯ ಮೋಸು ಸಂತಾಪದೊಬ್ಬುಳಿ . . . ಲಘುತ್ವದ ಗೆರಸೆಯಿಂ ದೇಹವ (ಕೃಶ. ೦-೦೪-೦೦). [?]

ಮೋಸುಂ ' ಮೋಸಮು ' ನೋ.

ಮೋಹ$_1$ (ನಾ). ೧. ವಿಚ್ಛಿದ್ರತಪ್ಪಿಬಿಕೆ ; ಜ್ಞಾನಹೋಗುವಿಕೆ ; ಮೂರ್ಛೆ : " ಮೂರ್ಛಾ, ಕಶ್ಮಲಂ, ಮೋಹಃ– ಸಿ ಮೈಮರೆಯುವಿಕೆ,

ಮೂರ್ಖ " (ನಿಜ್ಞಾಂತಿ. ೨೭೦). ೨. ಭ್ರಾಂತಿ; ಭ್ರಮೆ : ವೈದೇಹೋ ವೈದೇಹಿಯೆಂದು ಪ್ರದಿದಿರೆ ಮನಮುಂ ಮೋಹತಮಂ ದೀಪಂ ಪಾತಾಪತಿಯಿಂ ನಂದುವಂತೆ ಮೂರ್ಛೆಗೆ ಸಂದಾ (ಕುಣಪಾ. ೯-೦೦೬) ; ಜಂತ್ರಮಿಡುಗಕ್ಕೆ ಹರನು ತಂತ್ರಚಕ್ರಕಿ ಹರಿಯು ಮಂತ್ರಮೋಹಕ್ಕೆ ದೊಮ್ಮನು ಜಗದಿ ಸ್ವತಂತ್ರನಾರುಂಟು (ತೋಣ. ೨೦೦) ; ಇಂಥ ಹುಸಿ ಬೆಮೆಯ ಮೋಹ ಮೋಸಗಳಿಗೆ ಒಳಗಾಗಿ, ಅವನು ಅಲ್ಲಿ ಇರುವ ತನಕ ತುಂಬ ಅವಮಾನಪಟ್ಟು ಹೊರಟನು (ಪಪಚಾ. ೪೭). ೩. ದಿಕ್ಕುತೋಚದಿರುವಿಕೆ ; ದಿಗ್ಭ್ರಮೆ; ಕಕ್ಕಾಬಿಕ್ಕಿ. ೪. ಮೂರ್ಖತನ; ಅವಿವೇಕ. ೫. ತಪ್ಪು ; ದೋಷ. ೬. ಅಭಿಮಾನ; ಪ್ರೀತಿ; ವಿಶ್ವಾಸ : " ಕೂರ್ಮೆಯೆಂಬಲ್ ಮೋಹ " (ಪಪಾಂ.೯೦); ಈಕೆ ಸಾಮಾನ್ಯವನಿತೆಯಲ್ಲಿವಳ್ ಗಂಧರ್ವವನಿತೆಯೆನ್ನೊಳಾದ ಮುಚ್ಚುಂ ಮೋಹಮುಂ ಕಾರಣವಪಾಗಿರ್ಪಳ್ (ಪಂಪಭಾ. ೯-೬೬ ೫) ; ಮೋಹಕ್ಕೆ ಮಂಗಳಾಗಿ ಹುಟ್ಟಿದಳು ಮಾಯೆ (ಪಪಪು. ೦೩) ; ಚಿತ್ತಮಾವಣ್ಣಿಗಳ ಮಹದೇವಿಯರ ಮೋಹವ ಕಂದನೋಪುನುತ ಪಾಪಾವನು (ಪಪಪು. ೪೭. ೦೦). ೭. ಮರುಳುಗೊಳಿಸುವಿಕೆ; ಆಕರ್ಷಣೆ; ಸೆಳೆತ : ಭವದೀಯ ರೂಪಲಂಪಟ ವಿವರಂ ಮರುಳ್ಗೊಳಿಸುತ್ಕಟಮೋಹತಮಃಪಟಂ ಪಟು (ಕವಿಕೃ. ೩-೯೦) ; ಮೋಹದಿಂದಾ ಮೂರ್ಖನೋಗರು ದೋಷದಿಂದಾ ಮರಣವಯಿದರು ಮೋಹದಿಂದಾರ್ಕಿದರು (ಪಾಕೃಪಾ. ೩-೩೩) ; ಹೃದಯ ಹೆಂಗುಸು ನನಗೆ ಜಿಹಾಸೆ ಹುಟ್ಟಿಸಲಿಲ್ಲ, ಅಯ್ಯರ ಹೆಂಡತಿ ಮೋಹವನ್ನೂ ಹುಟ್ಟಿಸಲಿಲ್ಲ (ಶಾಕೃಪಾ. ೦೦೩). ೮. ಮರೆತು ಹೋಗುವಿಕೆ; ಮರವು : ರಾಹು ತೊರೆದೊಡನೆ ಶಶಿಯಂ ರೋಹಿಣಿ ಬಳಿಯೊರ್ದಿದಂತೆ ನಿನಪಿಂದಿರವಾ ಮೋಹತಮವಮಳಿಯೆ ಸುಕೃತದೆ ನೀಹಾರಕರಾಸ್ಯೆ ಸೇರ್ದೆಯೆನ್ನಯ ಬಳಿಯಂ (ಶಾಳಾ೦೬. ೦೬೩). ೯. (ಶತ್ರುವನ್ನು ದಿಗ್ಭ್ರಮೆಗೊಳಿಸಲು ಮಾಡುವ) ಇಂದ್ರಜಾಲ : ಯುಕ್ಷಿಣಿ. ೧೦. [ವೇದಾಂತ] ಅರಿಷಡ್ವರ್ಗಗಳಲ್ಲಿ ಒಂದು ; ಸತ್ಯವನ್ನು ತಿಳಿಯಲು ಅಡ್ಡಿಬರುವ ಮನಸ್ಸಿನ ಭ್ರಾಂತಿ; ಅಜ್ಞಾನ : ಮಾಯೆ ; ಅವಿದ್ಯೆ : ಇನ್ನಿಂದ್ರಿಯಕ್ಕಿಯಂ ಜರೆ ಭರಂಗೆಯ್ದೊಯ್ದೆ ಬೆನ್ನಟ್ಟಿ ವಿಸ್ಫುಟಮಿಲ್ಲಿಚ್ಛೆಯ ಮುಚ್ಚು ಮೋಹ ಘನಮುಂ ಮುಂದಿಟ್ಟು ದಲ್ ತೃಷ್ಣೆ ಲಂಪಟೆ ಬೆನ್ನಂ ಬಿಡದೊಲ್ಲೆಮೊಲ್ಲೆ ಮೆನೆಯುಂ ದೂಡಿಟ್ಟ ದುರ್ಬುದ್ಧಿಯಂ (ಪಾಪಪ್ರ. ೬-೬೬) ; ಮೋಹ ಮನೆಕ್ಕು ಗೆಲ್ದು . . . ತಾಳ್ದಿ ಮಹಾಪ್ರತಿಜ್ಞೆಗಳಂ (ಪಪಪು. ೦೪೯-೨೦). ೧೧. [ಕಾವ್ಯಮೀ] ಮೂವತ್ತುಮೂರು ಸಂಚಾರಿಭಾವಗಳಲ್ಲಿ ಒಂದು ; ಮೈಮರೆಯುವಿಕೆ ; ಪರವಶತೆ : ಮತಿ ಲಜ್ಜೆ . . . ಮೋಹ . . . ಅಪಸ್ಮಾರವೆಂಬ ಮೂವತ್ತುಮೂಱು ಸಂಚಾರೀ ಭಾವಂಗಳಂ ಪರಿವರ್ಧಿಸಿ (ಅಪೇಕ್ಷ. ೦೬೦) ; " ಚಿತ್ತಮೂಢತ್ವಂ ಮೋಹಂ ", ಎಂದರೆ, ಎಚ್ಚರತಪ್ಪುವುದು; ಇದು ಸುಮಿದ ಪಳಗೆಯಲ್ಲೂ ಉಂಟಾಗಬಹುದು (ಶಾಲಂಪಾ. ೩೪೭). ೧೨. [ತತ್ತ್ವಶಾ] ಅಜ್ಞಾನದ ಐದು ಬಗೆಗಳಲ್ಲಿ ಒಂದು : ಮತ್ತಂ ತಮಸ್ಸು ಮಾಯೆ ಮೋಹ ಅವಿದ್ಯೆ ಅನ್ಯತಾತ್ಮರೆಯೆಂಬಿವೇ ಮಾಯಾಪಂಚಕಂಗಳವಲ್ಲಿ . . . ಆ ತೋಱ್ದರ ಜಗತ್ತಿನಲ್ಲಿ ಶುಕ್ತಿರಜತಾದಿ ವಿಪರೀತಜ್ಞಾನಮಂ ಪುಟ್ಟಿಪುದಱಂ ಮೋಹವೆನಿಸುವುದು (ಪಪೇ. ೩೦) ; ಪ್ರಾಣಗಳಲ್ಲಿ . . . ಪರಮಾತ್ಮನು ಇದ್ದು ತಾಮಸರ ಶಬ್ದಾದಿ ಮಾತ್ರಾಗುಣಗಳಿಗೆ ವಿಷಯಾಭೂತನಪಾಪ ತಾಮಿಸ್ರ ಅಂಧತಾಮಿಸ್ರ ಮಹಾಮೋಹ ಮೋಹ ತಮಸ್ ಎಂಬ ಅಜ್ಞಾನವೃತ್ತಿಗಳಲ್ಲಿ ಪ್ರೇರಿಸುವನು (ಪಪಪು. ೬-೦೨ ಪೀಠ) ; ಅಜ್ಞಾನವು ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಎಂದು ಐದು ವಿಧ . . . ಮತ್ತೊಂದು ಪದಾರ್ಥವನ್ನು ತನ್ನದೆಂದು ತಿಳಿಯುವುದೇ ಮೋಹ (ಪಾಪಕ್ರ. ೬೫). ೧೩. [ದ್ವೈತ] ಜೀವನಿಗಿರುವ ಐದು ಬಗೆಯ ಅವಸ್ಥೆಗಳಲ್ಲಿ ಒಂದು : ಸಾಮಾನ್ಯವಾಗಿ ಜೀವಾತ್ಮರಿಗೆ ಜಾಗೃತಿ, ಸ್ವಪ್ನ, ಸುಷುಪ್ತಿ, ಮೋಹ, ತುರೀಯ ಎಂದು ಐದು ಅವಸ್ಥೆಗಳು ಇರುವುವೆ (ಹಿಂಪಾಾ. ೨೧೬).

ಮೋಹಪಡು = ಮರುಳಾಗು ; ಮನ ಸೋಲು : ಸಲರೂ ಮೋಹಪಟ್ಟರು (ಅಗಪಾ. ೩) ; ಶ್ರೀಪಾದಂಗಳವರು ನಿನ್ನ ಮೇಲೆಮೋಹ ಪಟ್ಟಿರುವರೆಂಬ ಶಾತ್ಪರ್ಯ ನಿನಗೆ ಸೂಚಿಸಿದೆ (ಶಾಗೃಪಾ. ೦೪). ಮೋಹ ಸಲ್ = ಬಯಕೆಯನ್ನು ಹೊಂದು : ಅಪೇಕ್ಷೆ ಪಡು : ದೇವಾರಕ್ಕೆ ಕೊಟ್ಟ ಕೆಮ್ಮ ಅವುಕವೂರ್ಗಂ ಕಾಲಾನ್ತರದೊಳ್ ಮೋಹಸನ್ದೊಂ ಪುಣ್ಯಮಹಾ ಜಾತಕನಕ್ಕುಂ (ಎಳ್. VII. ೩೧೨೦. ೨೦೯-೩೦; ೩೭೫). [ಸಂ.]

ಮೋಹ್ಯ (ನಾ). ಒಂದು ಬಗೆಯ ಮರ ; ಹಿಪ್ಪೆ ; ಮಧೂಕ ; ಇಪ್ಪೆ(ಮೋಹ) . . . ಇದರ ಬೆಟ್ಟಿಗೆಯು ತಾಳಿಕೆಯುಳ್ಳದ್ದು (ಕಾಗಾ. ೩೬) ; ಮೋಹದ ಬೀಜಾ. (ಇಪ್ಪೆ ಬೀಜಾ) ಬಣ್ಣದಲ್ಲಿ ಕೆಂಪಾಗಿದ್ದು ಎಣ್ಣೆ ಉಳ್ಳದ್ದಿರ ತಕ್ಕದ್ದು (ಮುಂಬಾಣ್ಯ. ೩೬). [← ಮರಾ. ಮೋಹ. ಮೋಹೋ./ಪ್ರಾ. ಮಹು. ಮಹುಅ./ಸಂ. ಮಧುಕ]

ಮೋಹಕ (ಗು). ೧. ದಿಗ್ಭ್ರಮೆಗೊಳಿಸುವ ; ತಬ್ಬಿಬ್ಬುಮಾಡುವ. ೨. ಮರುಳುಗೊಳಿಸುವ ; ಮನೋಹರವಾದ ; ಅಂದವಾದ : ಶ್ರೀಕೃಷ್ಣಪರಮಾತ್ಮನು ಬಲಶಾಲಿ ಮತ್ತು ಮೋಹಕರೂಪುಳ್ಳವನು (ಪಪಪು. ೦೦೨). (ನಾ). ೩. ಭ್ರಮೆ ; ಭ್ರಾಂತಿ : ಅಕ್ಕತೇ ದುಷ್ಕೀರ್ತಿ ತಮ್ಮನನಿಕ್ಕಿದೆನದಾ ರಣಕೆ ಮಾಯೆಯು ಕಕ್ಕಿಸಬಲೆಯು ಮೋಹಕ ದಲೆಂದರಸನ್ಗವಳದ (ಕೋಣಾ. ೩-೧೭-೨೮) ; ಇನಿತೆಲ್ಲ ಮಾಯ ಮೋಹಕವೆಂಬ ಶರಧಿಯೊಳು ಅನುದಿನವು ಮುಳುಗಿ (ಪ್ರಕಂಕ. ೧-೨೨೨-೩). ೪. ಆಕರ್ಷಿಸುವಂಥದು ; ಅಂದವಾದುದು : ಅವಳ ನಿಡಿದಾದ ಮೂಗೂ ಮಣಿವ ಹುಬ್ಬುಗಳೂ ದುಂಡುಮುಖವೂ ಒಗ್ಗೇ ಮೋಹಕವಾಗಿ ಕಂಡವು (ಮುಂಭಾ. ೦೦೩). [ಸಂ.]

ಮೋಹಗೊಳಿಸು (ಕ್ರಿ). ಮರುಳುಗೊಳಿಸು; ಮನಸ್ಸನ್ನು ಆಕರ್ಷಿಸು : ಭಾವಕ-ಮೋಹಗೊಳಿಸುವದಕ್ಕಾಗಿ ತೋರಿಸುವ ಹಸ್ತದ ಅಭಿನಯ (ಗಂಗಾಹಾ. ೨೯೨). [ಮೋಹ + ಕೊಳ್₁ + − ಇಸು]

ಮೋಹಗೊಳ್ಳು (ಕ್ರಿ). ಮರುಳಾಗು ; ಆಕರ್ಷಣೆಗೆ ಒಳಗಾಗು : ಸರಿಯಾದ ಕಾಗುಣಿತ ವ್ಯಾಕರಣಾಂಶಗಳು ಇದ್ದಾಗ ಮೋಹಗೊಂಡು ಮೆಚ್ಚು ಅಂಕಗಳನ್ನು ಕೊಟ್ಟುಬಿಡಬಹುದು (ಶಿಕ್ಷ. ೨೧೩).

[ಮೋಹ + ಕೊಳ್ಳು₂ (< ಕೊಳ್₁)]

ಮೋಹತಮಿಮಾಮ (ನಾ). ಪರೀಕ್ಷಾಧಿಕಾರಿ : ಹೆದರಾಬಾದಿನಲ್ಲಿ ಕರೋಡ ಗಿರಿಯ ಮೋಹತಮಿಮಾಮರಾವ ಸುಬ್ಬರಾಯರು ನಮ್ಮ ತಂದೆಯವರ ಬಾಲ್ಯಸ್ನೇಹಿತರು (ಕೂಕೆಬು. ೩೩೬). [←ಅರ. ಹಿಂ. ಮುಹತಮಿಮ್]

ಮೋಹನ (ಗು). ೧. ಮೂರ್ಛೆಗೊಳಿಸುವ ; ಜ್ಞಾನ ತಪ್ಪಿಸುವ. ೨. ತಬ್ಬಿಬ್ಬುಗೊಳಿಸುವ ; ಭ್ರಾಂತಿಗೊಳಿಸುವ ; ಭ್ರಮೆ ಹಿಡಿಸುವ : ಅದಾವ ಮೋಹನವಪಶ್ಯವಿದ್ಯೆಯ ಕಲಿತೆಯೋ ದಿಟಕೆ (ಪ್ರಭೋ. ೩-೪೯). ೩. ಮರುಳುಗೊಳಿಸುವ ; ಆಕರ್ಷಿಸುವ : ಮೋಹನ ಮೊಲೆ ಮುಮ್ಮುಮೊಗದ ಭಾಮೆಯರ ಲಲ್ಲೆನುಡಿಯೆಂಬ ನಯಗತ್ತಿ ಎಲ್ಲರ ಹೃದಯವ ಕೊಜಿವುತ್ತಿದೆ ನೋಡಾ (ಪಪಸಂ. ೬೪-೩೦); ಶ್ರೀಭುವನಮೋಹನ ದೀಪಪ್ರಭೆ . . . ಪುಟ್ಟದಳೆಸವ ಶಶಿಪ್ರಭೆ (ಕಂದ್ರಶ. ೩-೦೨); ಯಾವ ಮೋಹನ ಮುರಲಿ ಕರೆಯಿತು ದೂರತೀರಕೆ ನಿನ್ನನು ? (ಶಾಗೀಗ. ೪೧೨). (ನಾ). ೪. ಮೂರ್ಛೆ ; ಮೈಮರೆವು : ತೀವ್ರ(ರುಗ)ಳುಬ್ಬರದಿಂದಂ ಮಿಡಿವಂದು ಲೋಳೆ ಪಾಱುಕಾ ಶೋಕಂ ಬೆವರ್ ಮೋಹನಂ . . . ತಮಗ್ರಜಾತಿವಿಷದಿಂ ಮರ್ಕ್ಕಳೊಳ್ ತೋಱುಗುಂ (ಕೂಲವಿಜ. ೦೦-೨೬). ೫. ಭ್ರಾಂತಿ ; ಭ್ರಮೆ : ' ಚಿತ್ತಮೋಹನ ' ಪರಾ. ೬. ಆಕರ್ಷಣೆ ; ಸೆಳೆತ : ಬಂದ ಭಸಂತದ ಕಮ್ಮನೆಪ್ಪಲರ್ ಕಾಂ ಗುರುವಾಗ

ಕಲ್ಲುದೊ ಪಿಳಾಸವತೀನಯೆಸಪ್ತಿಭಾಗದೊಳ್ ಸಂಗಳಿಸಿತ್ತೊ ಮೋಹನ, ಬಾನಗ್ಗಳ ನಿಸ್ಸಯ ವಾಕ್ಪ್ರಗುಂಭನಂ (ಹರಿವ್ರತ. ೦-೫೯); ಪನ್ನೀರು ಕರ್ಪೂರ ವೀಳೆಯ ಮೋಹನದನುಲೇಪನವಿ ವಸ್ತುಗಳ ಪೊತೆಮು ಮುಡಿಮೂಲೆಯೆಡ ಬಾಯಿ ಕೊರಳಗಂದನುಗೊಳಿಸದೇವೆಗ್ಗೆ (ಶಂಪ. ೦೦-೫೯). ೨. ಸೌಂದರ್ಯ ; ಮನೋಹರತೆ ; ಚೆಲುವ : ಕಿಬಿನಗೆಯ ಕದಪುಗಳ ಕುಂಡಲದ ಚಿಲ್ವಿನಿಂ ಮೆಜಿವ ಸದ್ವದನಂ ಮೋಹನದ ಸದನಂ . . . ಕಂಡನವನೀಪಾಲನು (ಕೃಷ್ಣ. ೨-೧೬); ತರುಣಿ ಮೋಹನದರಗಿಣಿ ಸೌಂದರ್ಯದ ಸರಣಿಯೊಪ್ಪಿದಳಾ ಮೇಳೆ (ಶಂಪ. ೯ ೫೬). ೮. ಮನೋಹರವಾದ ರೂಪುಳ್ಳವನು ; ಕೃಷ್ಣ : ಕೊಳಲ ದನಿಯೊಡನಗೋ ಬರ ಮೋಹನ ಬಾಲಕೃಷ್ಣ ರಾಧೆಯ ಹೃದಯಪ್ರಂದಸಕ್ಕೆ (ಶಂಗಿಪ. ೫೬-೩); ಶ್ರೀ ಕೃಷ್ಣಪರಮಾತ್ಮನು ಬಲಶಾಲಿ ಮತ್ತು ಮೋಹಕರೂಪುಳ್ಳವನು. ಅವನಿಗೆ ಮೋಹನನೆಂಬುದೂ ಕರೆಯುತ್ತಾರೆ (ಹರಿವಂ. ೦೦೩). ೯. ಸಂಭೋಗ ; ಸುರತ : "ಸಂವೇಶನಂ . . . ಸುರತಂ, ಮೋಹನಂ—ಈ ೭ ಸುರತಂ (ಶಬ್ದಚಂ. ೪೩-೪೦೩); ಸಿರಿಗಂಧದಚ್ಚಿಗೆ ಪನ್ನೀರ್ಗೆ ಪಿರಿದು ಬಯಸುತವ ರಿರ್ವರೆಸೆದರಾಗ ಸ್ಮರಮೋಹನದ ಸೊಕ್ಕೇಜಿ (ಶಂಪ. ೦೦-೩೨); ಮೋಹನ ಮೆಂಬುದು ವಂಚನೆಯುದ್ಧಮೆಂಬುದು ಸುರತಕ್ಕೆ ಪೆಸರು (ಶಬ್ದಮಣಿ. ೨೪೦). ೧೦. ಮಂತ್ರಬಲದಿಂದ ಮೋಹಗೊಳ್ಳುವಂತೆ ಮಾಡುವ ತಂತ್ರ ; ಮಾಟ ; ಇಂದ್ರಜಾಲ : ಶತ್ರುಗಳ ಮೇಲೆ ಜಯ ಗಳಿಸುವುದಕ್ಕೆ ಅಭಿಚಾರಕರ್ಮಗಳೂ ಉಂಟು. ಮಾರಣ, ವಶೀಕರಣ, ಮೋಹನ, ಸ್ತಂಭನ, ಉಚ್ಚಾಟನ ಇತ್ಯಾದಿ (ಜಾಪಕ.೨೬). ೧೧. ಮನ್ಮಥನ ಐದು ಬಾಣಗಳಲ್ಲಿ ಒಂದು : ಉನ್ಮಾದನ ಮದನ ಮೋಹನ ಸಾಂತಾಪನ ವಶೀಕರಣಮೆಂಬ ಪಂಚಬಾಣಪ್ರತಾಪಪ್ರವೀಣರಿಂ (ಪಂಪಭಾ. ೦೪೪). 'ಮೋಹನಬಾಣ', 'ಮೋಹನಶರ' ಪರಾ. ೧೨. ಒಂದು ಬಗೆಯ ಸಸ್ಯ ; ದತ್ತೂರಿಗಿಡ : "ಮೋಹನಃ —ಉಮ್ಮತ್ತ, ವಿರುಳ್ಳಿ, ಬೇಳ" (ಓಷ. ೦೪೦). ೧೩. [ಸಂಗೀತ] ಒಂದು ರಾಗದ ಹೆಸರ : ಪರಮಲಲಿತಕುರಂಜಿ ಮಂಗಳ ಸರಸತರ ಮೋಹನಿಪ ರಾಗಂಗಳಲಿ ಪಾಡಿವರು (ಹರಿವ. ೦೦-೪೪); ಮೋಹನಾನಂದಳ್ಳಿರವಿ . . . ಮೋಹ ಸರ್ವಸ್ವಗಳ ರಾಗಾದ್ಧಿಯೋ ಬ್ರಹ್ಮಗಾ ಓಪರೊಳಗೆ ನೀಂ (ಪಾರ್ಶ್ವ. ೧೪೨); ಮೋಪನ – ಈ ರಾಗದ ಜನರಾಗದ ವಿಪಮಮದಲ್ಲಿ ಮತಭೇದವುಂಟು (ಸಂಗೀತಂ. ೦೧೦). [ಸಂ.]

ಮೋಹನಗಾರ (ನಾ). ಮರುಳುಗೊಳಿಸುವವನು ; ಆಕರ್ಷಿಸುವವನು ; ಚೆಲುವ : ಮುಂಬೋಕಮೋಹನಗಾರನತುಳತಪ್ತಜ್ಞಗೋಲನಪ್ರತಿಮ ಸತ್ಪಾತ್ರ (ಸಪಮೋ. ೦೩-೨೪). [ಮೋಹನ + —ಗಾರ (< —ಕಾಜಿ)]

ಮೋಹನಗೌಳ (ನಾ). [ಸಂಗೀತ] ಒಂದು ರಾಗದ ಹೆಸರು : ಸೌರಾಷ್ಟ್ರ ಗೌಳ . . . ಮೋಹನಗೌಳಮೆಂಬಿವ್ವಗೌಳಂಗಳೇ ಸಾಳಿಗದ ವಿತ್ರರಾಗಂಗಳು (ಪಪೀಳ. ೦೪೧). [ಸಂ.ಮೋಹನಗೌಲ]

ಮೋಹನಚೂರ್ಣ (ನಾ). ಮರುಳುಗೊಳಿಸುವ ಪುಡಿ ; ಮೆಚ್ಚಿಸುವಂದ್ದು ; ಮುಂಕುಬೂದಿ : ಹುಬ್ಳಿಳ್ಳಿದು ರಂಗಭೂಮಿದು ಮೇಲೆ ಬಾಲಗಂಧರ್ವನು ಮೋಹನಚೂರ್ಣವನ್ನು ಮೆಯಿಯುತ್ತಿರುವ ತೆರದಲ್ಲಿಯು ಪೆಂಕಣ್ಣಸ ಸರಸಸಂಭ್ರಮದಿಂದ ಅರಂಭವಾಗುವ ಕಥೆ (ಪಾಪಮೋ. ೦೧೪) ; ಆ ರೂಪು . . . ನಾಗಶ್ರೀಯ ಎಚ್ಚರದ ಕಣ್ಣಿಗೆ ಮೋಹನಚೂರ್ಣ ಪನ್ನೀರಚಿತು (ಪಾಗಶ. ೧೦). [ಸಂ.]

ಮೋಹನಬಾಣ (ನಾ). ಮನ್ಮಥನ ಪಂಚಬಾಣಗಳಲ್ಲಿ ಒಂದು : ಮೋಹನಬಾಣಮಾಚ್ಚಿದೊಡೆ ಮಸ್ತಕಕಂಪನಮಾದುದೆಂಬಿನಂ ಸಾಹಸಿಕರ್ ಕುಮಾರವರರಾಕಿಮ ಚಿಲ್ವನಕ್ಷೀಕ್ಷಿಸುತ್ತುಮಿರ್ದು . . . ತಲೆದೂಗುತಿರ್ದರ್ (ಪಾರಕೃ. ೦೦-೧೪). [ಸಂ.]

ಮೋಹನಮಾಲೆ (ನಾ). ಚಿನ್ನದ ಗುಂಡುಗಳಿಂದ ಮಾಡಿದ ಆಕರ್ಷಣೀಯವಾದ ಹಾರ : ಬಲ್ಲೆ ಮೋಹನಮಾಲೆ . . . ಪೊಲೆಲಾದ ಪೈಸಮಿಸುನಿದೊಡಪ್ಪಗಳಿಂ ತೊಂಡಿಲ್ಲಗಳಿಂದಲಂಕೃತಿಯಾದ . . . ಕನ್ನ ಕಿಯಂ (ಜಾಂಬವ. ೪-೯-೬೪ ಪ) ; ಕಂಠಭೂಷಣಗಳು–ತಾಳಿ, ಚಂದ್ರಹಾರ, ಮೋಹನಮಾಲೆ . . . ಮಾವಿನಕಾಯಿ ಸರ, ಮಲ್ಲಿಗೆ ಮೊಗ್ಗಿನ ಮಾಲೆ, ಪದಕ ಇತ್ಯಾದಿ (ಪಪಮಾ. I, ೪೨೦) ; ಅಳಿಮುಂದಿರಿಬ್ಬರಿಗೂ ಚಿನ್ನದ ಗಡಿಮಾಳೆ, ಮೋಹನಮಾಲೆಗಳನ್ನು ಕೊಟ್ಟರು (ಕೃಪಮಾ. ೨೪೩).

[ಸಂ. ಮೋಹನ. ಮಾಲಾ. / ಹಿಂ. ಮೋಹನ್‌ಮಾಲಾ ; ಮರಾ. ಮೋಹನ್‌ಮಾಳ]

ಮೋಹನವಡೆ (ಕ್ರಿ). ಚೆಲುವನ್ನು ಪಡೆ ; ಸುಂದರವಾಗು : ಮೋಹನವಡೆದ ಪದಕ ವೈಡೂರಿಯ ಕಡುಸೊಬಗಿಸ ಬಲ್ವಂಟದ ಸುಕುಮಾರ ನಡೆದನು ಸಪುರ ಮೇಳದಲಿ (ಶಂಪಾ. ೦೦-೩೦). [ಮೋಹನ + ಪಡೆ]

ಮೋಹನಶರ (ನಾ). = ಮೋಹನಬಾಣ : ಕಾಮಂ ಹೂಡಿದನಂಗ್ಯಾ ಕ್ಷೆನುತ್ತ ಮೋಹನಶರಮಂ (ಗಿಗೆ. ೬-೨೯). [ಸಂ.]

ಮೋಹನಶಾಸ್ತ್ರ (ನಾ). ಅವಿದ್ಯೆಯನ್ನುಂಟುಮಾಡುವ ಶಾಸ್ತ್ರ : ಅಜ್ಞಾನವನ್ನುಂಟುಮಾಡುವ ಶಾಸ್ತ್ರ : ಮಾಯಿಗಳ ಗೆಲ್ದುಂ ಮೋಹನಶಾಸ್ತ್ರಬಲೆಯೆನರಿದು . . . ವಿಷ್ಣು ಪರದೈವಮೆಂದಬುಹಿದಾ ಅಲಮೋಧರ ಭಜಿಸರ್ಕೆ (ಹರಿವಂ. ೧೩. ೦-೪೬-೨). [ಸಂ.]

ಮೋಹನಾಂಗ (ನಾ). ಮರುಳುಗೊಳಿಸುವ ರೂಪುಳ್ಳವನು ; ಸುಂದರ ; ಚೆಲುವ : ಇದು ಏನೆಂಗ ಮೋಹನಾಂಗ ಪುದನಜನಕ ತೊರವೆಯು ನರಸಿಂಹ (ಹರಿವಂ. ೦-೪೪ ಶ್ಲೋ) ; ಸಂತೋಷದೊಳು ಮೋಹಿಸುತೆನ್ನನೊಡಗೂಡೊ ಕಂತುಸ್ಮಿಧ ಮೋಹನಾಂಗ (ಶಂಪಾ. ೯-೦೪೦) ; ನೀ ತಾಯಿಯೆನಲೊ ನೀ ಮಾಯಿಯೆನಲೊ ಮೋಹಿನಿದು ಮೋಹನಾಂಗ ? (ಸೂರ್ಯಗಾ. ೩೭-೯). [ಸಂ.]

ಮೋಹನಾಂಗಿ (ನಾ). ಮರುಳುಗೊಳಿಸುವ ರೂಪುಳ್ಳವಳು ; ಚೆಲುವೆ : ಅನಿಮಿಷಪತಿಸುತ ನರಲೋಕವ ಭೋಗದನುವನೀಕ್ಷಿಸೀಕನುತ ಬಸಿದ ಪರರೂಪಿನೊಳಗೆಂಬೊಲು ತನ್ನ ಮನಕೆ ತೋಜಾದ ಮೋಹನಾಂಗಿ (ಶಂಪಾ. ೯-೦೪೦) ; ಬೇರೆ ದುವ ಮಾರ್ಗವಿದೆ ಮೋಹನಾಂಗಿ? (ಪಾಪಮೋ. ೦೪೦). [ಮೋಹನಾಂಗ + — ಇ]

ಮೋಹನಾಸ್ತ್ರ (ನಾ). ಪ್ರಜ್ಞೆ ತಪ್ಪಿಸುವ ಅಸ್ತ್ರ. [ಸಂ.]

ಮೋಹನಿ (ನಾ). ಒಂದು ಬಗೆಯ ಸಸ್ಯ : "ಮೋಹನೀ — ಚಿಬ್ಬಸಲೆ" (ಓಷ. ೦೪೦). [ಸಂ. ಮೋಹನೀ ?]

ಮೋಹನಿದ್ರೆ (ನಾ). ಕೃತಕವಾಗಿ ಉಂಟುಮಾಡುವ ನಿದ್ದೆ ; ಮಾಯಾನಿದ್ರೆ : ಭರ್ ಕಾಪ್ಪಳಿದು ಮೋಹನಿದ್ರೆಗೆ ಸಂದರ್ಕೆಂಬರ್ ! (ಕೃಪಮಾ. ೩೫೬-೬೪೨). [ಸಂ. ಮೋಹನಿದ್ರಾ]

ಮೋಹನೀಯ (ಗು). ೧. ಭ್ರಮೆಗೊಳಿಸುವ ; ಕಕ್ಕಾಬಿಕ್ಕಿಮಾಡುವ. (ನಾ) ೨. ಅಜ್ಞಾನ ; ಮಾಯೆ : ಬಗೆಗಿಡಿಸೆ ಮೋಹನೀಯಂ ನಗಧರ ಕಪಧಾರಿಯಾಗೆ ಜಗನ್ಮಾಸಮದೇಂ ನೆಗಬ್ದುದೊ ಸಲೆ ಬಲದೇವನ ಬೆಗಲ ಮೇಣ ಕುಂದದೆಂಬ ನಾಬ್ದುಡಿ ಜಗದೊಳ್ (ಸಂಧಾಪಮ. ೦೬-೫೬). ೩. [ಜೈನ] ಆತ್ಮನನ್ನು ಬಂಧಿಸುವ ಎಂಟು ಮೂಲಕರ್ಮಗಳಲ್ಲಿ ಒಂದು : ಮತ್ತಿರ್ಪತ್ತೆಂಟುತೆಱದ ಮೋಹನೀಯಮೆಂಬ ಕರ್ಮದ ಕೇಡಿನಿಂ ಅನಂತಸುಖಿಗಳಾದರ್ (ಕಾರ್ತಾ.೦೬೪-೨೬); ಪಂಚೇಂದ್ರಿಯಂಗಳ್ . . . ಮೂಲಪ್ರಕೃತಿಭೇದದಿಂದೆಂಟುತೆಱನಕ್ಕುಂ ಅವಾವುವನೆ ಜ್ಞಾನಾವರಣೀಯಂ ದರ್ಶನಾವರಣೀಯಂ ವೇದನೀಯಂ ಮೋಹನೀಯಂ ಆಯುಷ್ಯಂ ನಾಮಗೋತ್ರಮಂತರಾಯಂ (ಪಾಂಚಾ. ೦೪-೦೦ ಪ) ; ದರ್ಶನ ಮೋಹನೀಯಮುಂ ಚಾರಿತ್ರಮೋಹನೀಯಮುಂ ಎಂದು ಮೋಹನೀಯಂ ದ್ವಿವಿಧಮಕ್ಕುಂ (ತತ್ತ್ವಾ. ೭೯).

ಮೋಹನೀಯಕರ್ಮ (ನಾ). = ಮೋಹನೀಯ ೩ : ಬುಱಯಂ ಮೋಹನೀಯಕರ್ಮೋಪಶಮದೊಳ್ ವಿಶುದ್ಧಕ್ಷಿತಿಯುವಿಶೇಷದಿನುಪಶಮ ಶ್ರೇಣ್ಯಾರೋಹಣಂಗೆಯ್ದು (ಶಾಪ್ರ. ೬-೪೬ ಪ); : ಅಂತತಿವ್ಯಾಮೋಹದಿಂ ಬಂದು ಸಕಲಲೋಕಾಧಿಪರಿಂ ಪರಿವೃತರಾಗಿರ್ದ ಸಕಲಭೂಷಣಕೇವಲಿಗಳ ಸಭೆಯನೆದ್ದುಲ್ಲೊಡಂ ರಾವಣ ಮೋಹನೀಯಕರ್ಮಮುಪಶಮಕ್ಕೆ ಸಲ್ದು ದುಂ (ಪಂಕಾಪು. ೦೬-೪೫ ಪ) : ಜೀವನ ಸಮ್ಯಕ್ತ್ವವನ್ನೂ ಚಾರಿತ್ರಗುಣವನ್ನೂ ಘಾತಿಸಿ ಜೀವಸಿಗೆ ಆ ತತ್ವಗಳಲ್ಲಿ ಶ್ರದ್ಧೆಯನ್ನೂ ಲೋಭವನ್ನೂ ಉಂಟುಮಾಡುವುದು ಮೋಹನೀಯಕರ್ಮವು (ಕ್ಷಪ್ರ. ೩).

[ಸಂ. ಮೋಹನೀಯಕರ್ಮನ್]

ಮೋಹನೆ (ನಾ). ಮೋಯಕವಾಗಿರುವವಳು ; ಮರುಳುಗೊಳಿಸುವ ರೂಪವನ್ನು ಹೊಂದಿರುವವಳು : ಸುಂದರಿ : ಬಾ ಬಾ ಮೋಹನೆ ಬೇಗ . . . ನಸುನಗುವ ಹುಸಿಮುಳಿವ ವಿಸಪಂದವ ಸುಂದರಿ ನೀ ಬೇಗ ಬಾ (ಗಪ್ರ. ೩೫-೦). [ಸಂ. ಮೋಹನಾ]

ಮೋಹಪರವಶ (ನಾ). ವ್ಯಾಮೋಹವನ್ನು ಹೊಂದಿದವನು : ಮರುಳಾದವನು : ಆತನು . . . ಈ ಹುಡುಗಿಯನ್ನು ಕಂಡು ಅವಳ ರೂಪಲಾವಣ್ಯಾದಿಗಳಿಗೆ ಆಶ್ಚರ್ಯಪಟ್ಟು ಮೋಹಪರವಶನಾದನು (ಕಪ್ರ. ೯). [ಸಂ.]

ಮೋಹಪಾಶ (ನಾ). ಲೌಕಿಕ ವಿಷಯಗಳ ಬಂಧನ.— ಸೆಳೆತ; ಮಾಯಾಜಾಲ : ಅಭಗಶದುಂತಿಂ ತನ್ಮೋಹಪಾಶಮಂ ಪಱಿವ ತೆಱದೆ ತಲೆಯುಂ ಪಱಿದಂ (ಪಾಂತಿಪು. ೯-೬೩) ; ದೇಹಸಂಬಂಧಿಗಳಾದವರ್ಕಳವರು ಮೋಹ ಪಾಶದಿ ಕಟ್ಟಿ ಬಗಿದಿಪರ್ಕೆ (ಕುರಂಪ್ರ. ಪಾ. ೨-೦೫-೦). [ಸಂ.]

ಮೋಹಭಾವ (ನಾ). ಪ್ರೀತಿಯ ಭಾವನೆ ; ಆಕ್ಕರೆಯ ಭಾವನೆ : ಎನ್ನ ಮೇಲಣ ಮೋಹಭಾವಮೊಳೆನ್ನುವಂ ಸಲಪಸ್ಕೆ ಬಂದಿರಿಂ (ಪಪ್ರ ೦೪-೦೬) ; ಅವುಬ್ಬರಲ್ಲಿ ಪರಸ್ಪರ ಮೋಹಭಾವಗಳ ಏಕ್ಯತೆ ಒಡನೆ ಉಂಟಾಯಿತು (ಜಗ್ಗಪ್ರ. ೮೯). [ಸಂ.]

ಮೋಹರ$_1$ (ನಾ). ೧. ಸೈನ್ಯ; ದಂಡು: ಪಡೆ: ದಳ : " ಮೋಹರವೆನೆ ನೃಪಸೈನ್ಯಂ " (ಕಾಕಂ. ೩೦); ಅರಗಿಳಿಂದು ವಾರುವದ ಮೋಹರವಾಜಿತಿಂದು ಬಿಲ್ಲುಬೀರರ ಪಡೆ (ಕ್ಷಾಕಾ. ೩೫೦) ; ಕಲಿ ರಾಧೇಯನೇ ವಜ್ರಾಂಗಿಯಲ್ಲಿ ನಮ್ಮ ಮೋಹರಕೆ (ಕುಕ್ಕೃ. ೦-೨೬) ; ಕರಡಿಯ ಮೋಹರವ ಜಾಂಬವರು ತೋಱಿದರ್ಕೆದು ನಿರ್ಜಿದವ (ಕೂಪ್ರ. ೪-೬-೨೨). ೨. ಯುದ್ಧ; ಕದನ : ರಕ್ಕಸನಾಥ ಬೈಪೆದ ಕೇಳಿ ನೀಲಸು ಪಡೆದ ಮೋಹರೆ (ಶಾಕಾಪ್ರ. ೩೪-೦೨) ; ಈಯಮನೀ ಮೋಹರದೊಳಲ್ಲದೆ ಫಲುಗುಣಪ ಮಗನವನು ಬಲುಗೈದುಳಿಂಪಪ್ಪಾರದು (ಕುಕ್ಕೃ. ೪-೨೬). ೩. (ಕಾಳಗದ) ಕಣ : (ರಣ)ರಂಗ : ಕಲಿಗೆ ಕಾಳಗದ ಮೋಹರವಂತೆ ಭಕ್ತಿಯಿ ಧರಿಗೆ ಮುಕ್ತಿಯ ಬಿಡಿನಂತೆ . . . ಕಂಗೊಳಿಸುವುದು ಗೌರನ ಕಾವ್ಯ (ಪೂಪ್ರ. ೩-೨). ೪. ಗುಂಪು; ಸಮೂಹ : "ಒಡ್ಡಿನೆ ಮೋಹರಂ "(ಕಣಾಪ್ರ. ೦೪); ದುಂಡಿನ ಮೋಹರ ರವಿಯ ಕಿರಣವ ಕವಿಸಲಾಪುದೆ (ಪಪ್ರ ೪. ೪೭-೬೨). ಗಗನದ ಮುಗಿಲ ಮೋಹರವ ದಾಳಯಲಿಯಜಿಯುಟ್ಟಿ ಸುಂಟರುಗಾಳಿಯುರವಣೆ ನಿಂದವೊಲಾ (ಕುಕ್ಕೃ. ೬-೩೦); ಮತ್ಪದಾತಿಗಳೊಗ್ಗು ವಿಡಿದು ಬಂದವು . . . ಕಾರ್ಮುಗಿಲ ಮೋಹರದಂದದಿಂ (ಪಾಂಪ್ರ. ೦೬-೦೬). [ದೇ.ಶ ತೆಲು. ಮೋಹರ]

ಮೋಹರ್ಕ ' ಮೊಪರು ' ನೋ.

ಮೋಹರ್ಕ (ನಾ). [ಸಂಗೀತ] ಮದ್ದಳೆಯನ್ನು ಬಾರಿಸುವ ಒಂದು ಬಗೆಯ ಗತ್ತು : ಬೊಟ್ಟು ಮೋಹರ ಅರಿದೆಂದಿವಂತವಿರಾ ಎಂಬ ಕೂಜು ತಪ್ಪದೆ ಶಬ್ದಭಾರಿ ತಪಣೆಯೆಂಬ ಮದ್ದಳೆಗಳಂ ಬಾರಿಸುವ ಮದ್ದಳೆ ಕಾಱರಿಂ (ಪಣಪ್ರ. ೩-೧೦ ಪ): ಪಿರಿದು ಬಾರಿಸಿ ತೋಱಿದರು ಮೋಹರಗಳನು ಮರ್ದಳೆಯವರು (ಪಂಕಾ. ೨ ೬೩). [?]

ಮೋಹರಂಬಡೆ (ಕ್ರಿ). ಗುಂಪುಗೂಡು ; ಹಿಂಡುಗಟ್ಟು : ಅಂತೊಯ್ಯನೆ ಮುಂದೆ ಮೋಹರಂಬಡಿದು ಕಳರ್ವ ಪುಸಿವಡೆಯಲ್ಲಿ (ಕ್ಷಾಕಾ. ೫೦೨).

[ಮೋಹರ$_1$ + ಪಡ$_1$]

ಮೋಹರಬೆಱು (ಕ್ರಿ). = ಮೋಹರಂಬಡೆ : ಸುರವ್ಯೂಹಮಂಬರದಲ್ಲಿ ಹೂಮಳೆಗಳಂ ಹಿಡಿದು ಮೋಹರಬೆಱ್ತು ನೋಡುತ್ತಿರಲು (ಪಪ್ರ. ೦೪-೦೩).

[ಮೋಹರ$_1$ + ಪೆಱು$_1$]

ಮೋಹರದಗೆ (ಕ್ರಿ). ೧. ಸೈನ್ಯವನ್ನು ಒಡ್ಡು. — ಸಜ್ಜುಗೊಳಿಸು; ಯುದ್ಧಕ್ಕೆ ತೊಡಗು : ಧರ್ಮಜನೆಲ್ಲಿ ಮೋಹರದಗೆವನತ್ತಲೆ ರಥವ ಹರಿಸಿವ (ಕುಕ್ಕೃ. ೨-೩೦). ೨. ಗುಂಪುಗೂಡು; ಸಂದಣಿಸು; ಜಗದ ನಿಡುನಿದ್ರೆಯಲಿ ಮೋಹರದಗೆದ ಮುಗಿಲೋ . . . ಕೈಕಾಲ್ ಮೂಡಿತೋ ನಳಕೆ (ಕುಕ್ಕೃ. ೬-೧); ಜಗದ ವಿಲಯದ ಮುಗಿಲ ಮೋಹರದಗೆವ ವೊಲು ನಳವ್ಯಾದೆ ಶಾಖಾಮೃಗದ ಮದುವಾಯ್ಗಣಂಗೆ ಕೇಳುಬ್ಬರದ ಕಪಿಬಲವ (ಕೂಪ್ರ. ೬-೬-೦೧). [ಮೋಹರ$_1$ + ತಗೆ$_1$]

ಮೋಹರಮಲ್ಲ (ನಾ). ಯುದ್ಧದಲ್ಲಿ ಶೂರನಾದವನು : ಕಲಿ : ಶಲ್ಯ ಭಾರದ್ವಾಜಸಿರ್ದಾನೆವೊಳಲೊಯಸಿನೆಸವ ಮೋಹರಮಲ್ಲ ಕೃಷ್ಣಪಾನ್ಯಥ ಶೋಭಿಯಿಂದೆಮಗಳ ಲಲಿತ ಸೈನಿಕಮಲ್ಲ ಭೀಮವಿಜಯಾಪ್ತದಂದಳೆದು . . . ಕಣ್ಗೆ ಮಂಗಳವಾನಾಗಿಸಿದುದಾ ಗೋಕ್ಷಂ (ಪಂಂಪ್ರ. ೨-೪೦).

[ಮೋಹರ$_1$ + ಮಲ್ಲ]

ಮೋಹರಸ (ನಾ). ೧. ಅನುರಾಗ : ಪ್ರೀತಿ : ಕೌತುಕಮೇಂ ಪೆಂಡಿರೊಳಂ ಭೀತಿರಸಂ ಮೋಹರಸಮಸೊತ್ತರಿಸುಗುಮೇ (ಪಗೂ. ೬-೨೩). ೨. ಮದನ ಜಲ ; ಮದನದ್ರವ : ನಟ್ಟಿಸಿ ಮೋಡಿದ ಪುರುಷಗೆ ಮೈ ಜುಮ್ಮುದಟ್ಟಿ ರೋಮಾಂಚನಮೆಸಗಿ ಕಟ್ಟಿಬಿಕದೆ ಮೋಹರಸವುಬ್ಬಿ ನೆಱೆ ಪೊಱಮಟ್ಟು ಸೂಸುವುದಂಗದಿಂದ (ಕಂಪ್ರ. ೦೦-೦೪). [ಸಂ.]

ಮೋಹರಿ$_1$ ' ಮೌರಿ ' ನೋ.

ಮೋಹರಿ$_2$ ' ಮೊಹರು ' ನೋ.

ಮೋಹರಿಸು. ಮೋಹಳಿಸು (ಕ್ರಿ). ೧. ಮುತ್ತಿಗೆ ಹಾಕು ; ಧಾಳಿ ಮಾಡು : ಮೋಹರಿಸಿದುದಾದೀಕ್ಷನ ಚತುರಂಗವಾಹಿನಿಯತಿರೋಷದಲಿ (ಕ್ರಿಕಾಂ . ೦೪-೨೦೪) ; ತಾಜುಗಿ ಗಂಧೋತ್ಕಟನ ನಿಜಮಂದಿರದ ದಳ ಮೋಹರಿಸೆ (ಪಂಪಪ್ರ. ೦೦-೦) ; ಸ್ಕಂಧವ ಬಿಲುದುಡುಕೆ ಮೋಹರಿಸಿದರು ಭೂರಿಶ್ರವಾದಿಗಳು (ಕುಕ್ಕೃ. ೪-೦೪). ೨. ಎದುರಿಸು ; ಪ್ರತಿಭಟಿಸು : ಇದುವೆ ನೀಂ ಮೋಹರಿಸಿ [ಕಾಣಾಂ. ಮೋಹಿಸಿ] ನಿಂದುದಕೆದು ಬಳಿಕೊಂದುತ್ತರ ಮಗಳ್ದುದಕಿದು ನಿನಗೆ ಕೊಳ್ಕೆಂದು ಮೂದಲಿಸುತೆ ರಘುಜನೆಚ್ಚಂ (ಕುಕುಣಾ. ೨-೩೩) : ಶಕುನಿ ಮೋಹರಿಸಿದನು ಸಮಸಪ್ತಕರು ಬೆಜ್ಜೊಡ್ಡಿದರು (ಕುಕ್ಕೃ. ೨-೪). ೩. ಮುತ್ತು ; ಆವರಿಸು ; ಕವಿ : ಸತ್ಯಲೋಕದ ಧಾಮವನು ಮೋಹರಿಸಿ ಮುಚ್ಚಿತು ತಮಸಿನೊಡ್ಡ ವೇ (ಜಂಪ್ರ. ೪-೦೨) : ಪರಿದು ಕಾರ್ಮುಗಿಲು ಚಂದ್ರಗೆ ಕವಿದಂತೆ ಮೋಹರಿಸುವುದೊಡನಂಧಕಾರ (ಪಪ್ರ. ೦೬-೩೦) : ಬಗೆಬಗೆಯ ಮುಗುಳು ಗೊಂಚಲಿನ ಹೂಜಲ್ಲಿಗಳ ಕಣಗೊಟ್ಟು ಮನವ ಮೋಹರಿಸುತ್ತಿದೆ (ಪಕ್ಕ. ೪೩-೦೪). ೪. (ಸೈನ್ಯವು) ನುಗ್ಗಾಗು ; ಆಣಿಯಾಗು : ಕಾಲಾಳು ಮುಂಕೊಳಿಸಿ ಅಸುಸಸುಜರುಸಹಿತ ಕೃಷ್ಣನ ಬೆರಳ ಸನ್ನೆಯೊಳ್ಕೆದೆ ಬಿಡೆ ಮೋಹರಿಸಿ ನಿಂದುದು (ಕುಕ್ಕೃ. ೪-೨೨) ; ಮೋಹರಿಸಿ ಕಳದೊಳಗೆ ನಿಲೆ ಕಜುಗಾಹಿಯೆಳಿಗೊರಳನು ಮುಱಿಯ ಬಿಸುಟಾ ಹಡೆದ ತಾಯ್ಗಾವೆ ಶೋಚವೆನೆಂದ ಜಾಣೂರ (ಜಗ್ಗಪ್ರ. ೩೨-೩೦) ; ಸರಕಾರದ ಪಡೆಯವರೂ ಸತ್ಯಾಗ್ರಹಿಗಳೂ . . . ಎದುರಾಗಿ ಮೋಹರಿಸಿ ನಿಂತರು (ಕಭೀ. ೦೬). ೫. ಯುದ್ಧಕ್ಕೆ ಸೈನ್ಯದ ವ್ಯೂಹವನ್ನು ರಚಿಸಿಮಾಡು : ಸಾಹಸ ವಸಜುವೆನಾಹವವನೊಡ್ಡುವೆ ತನಗೆ ಮೋಹರಿಪ[ಪಣಾಂ. ಸೆ] ಶಿವ [ಪಾಂಪ್ರ.

ಮೋಹರಿಸುವೆಮು] ಸದಾಚಾರ ವ್ಯೂಹವ ತನಗೆ (ವೀಕ್ಷಾಕೋ. ೫೦-೭೦) ; ತನ್ನ ಸಚಿವನೊಳು ಬಲವಂ ನೆರಪಿ ಮೋಹರಿವುದೆಂದು ಚಿನನನು ಕೂಡಲು (ತೌಂಡಪು. ೯-೪೪). ಹಿ. ಸಜ್ಜುಗೊಳಿಸು ; ಅಣಿಮಾಡು : ಸಿದ್ಧಪಡಿಸು : ತಂದು ಮಾಣಿಮಯಸಾರವಲಗೆಯನಂದು ಮೋಹರಿಸಿದರು ಜೂಜಿಂಗೆ (ಭಾಗ್ಯಸ. ೦೩-೧೫). ಪಿ. ಗುಂಪುಗೂಡು ; ಸಂದಣಿಸು ; ಒಟ್ಟಾಗು : ತರಣ ಶಶಿ ರುದ್ರಾದಿಗಳು ಮೋಹರಿಸಿದರು ಮುಂಗುತಿಯಲಿಂದ್ರನ (ಸಂಧಿ. ೭೭-೭೩) ; ಧರಣಿಪನ ಕೈಸನ್ನೆಯಲಿ ಮೋಹರಿಸಿ ನಡದುದು ಸೇನೆ (ಕವಿಕಾ . ೯-೩-೨) ; ಮೋಹರಿಸಿ ಬಂದು ಮುತ್ತಿಗೆಯನಿಕ್ಕಿ ಕೊಂಡರ್ಮಳವಿಲ್ಲಗೆನಲು . . .ಪ್ಪೊನ್ನ ಕೋಂಟಿಗಳ ಕಾಂತಿಗಳ್ಕೆದೆ ಮುಸುಕಿ ಕೊಂಡುಸೆದಿರ್ಮವ್ವಿ (ಕೃಪಾಣಾ. ೦೭-೭) ; ಒಡಿಲ ಪಡೆಯಂತೆ ಮೋಹರಿಸಿ ಶರವರ್ಷಮಂ ಕಲ್ಪುತ್ತ ನಿಜಬಲ್ಲುಬೆರಸು ಕಡಂಗಿ ಕವಿಯಲೊಡನೆ (ಜಾಪಸಂ. ೬-೦೦೦ ಪ). ೮. ಹೆಚ್ಚಾಗು : ಅಧಿಕವಾಗು : ಪೆಪ್ಪೆ ಪಲಿವಾಡೆ ಸುಖಿಂ ಸುಳಿವಾಡೆ ಲೀಲೆ ಮೋಹರಿಸೆ ಗಳಂ ಚಮತ್ಕರಿಸೆ . . . ಕೂಡಿದರ್ (ಗಿಸಂ. ೩-೨೮); ಮೋಹನಂ ಮೋಹರಿಸೆ ಗಾಡಿ ಪರಿದಾಡೆ ಪೊಸ ದೇಶ ಸೂಸೆ . . . ಪಡೆದು ಕೃತಿಯಂ ಶಿವಾರ್ಪಿತವನೆಸಗುವ ನಿನ್ನ ಸ್ಥೈರ್ಯಂಗೆ ಸಾಟಿಯುಂಟೇ (ಕಬ್ಕಾ. ೦-೩೦) ; ಮೋಹರಿಸಿದ ಮಮತೆಯೊಳೆಮ್ಮರಿತತಿ ಹಾಹಾಕ್ರಂದನಮಂ ಮಿಗೆ ಮಾಡುತ್ತ (ಜಯಣಾ. ೯-೨೮). ೯. ಗುರುತಿಸು ; ಕಾಣಿಸು : ಶ್ರೀಹರಿಯಣುಗಿನಣುಗನತಿಮುದ್ದಿಂ ತನ್ನೆಳವರೆಯಮೊಳು ಮೋಹರಿಸಿದ ಮೂರೇಬೆಯ ತೆಜನೆಸಲಾ ಹೆಣ್ಣಂಳ ರನ್ನೆಗೆ . . . ರಾಜಿಸುವು ತಿವಳಿಗಳು (ಜಯಣಾ. ೩-೩೩). ೧೦. ಸೇರು ; ಜೊತೆಗೂಡು : ಏಕೆ ನಿಮಗೀ ಚಿಂತೆಯಿಂದರಡೌಕಿದವು ದುಷ್ಕಾರ್ಯಸಂಧಿವಿವೇಕನಿಕರದಲೊರೆದು ಪೋಹರಿಸೊಮು ಬಾಹಯ.೨) (ಭಾಗ್ಯಸ. ೦೩-೭೦); ನಳಭೂವರಮು ನಿಜಸತಿಸಹಿತ ಹೊಕ್ಕನು ನಿಷಧಪಟ್ಟಣವ ಮೊಜಿವ ಶಂಖ ಮ್ಮದಂಗ ಭೇರಿಗಳುಬ್ಬಟಿ ಧುಧುರೆನಲು ಮೋಹರಿಸಲಾ ನಿಸ್ಸಾಳತತಿ ಘನವಾದ್ಯ ಘೋಷಿಸಲು (ಪಣ್ಣ. ೩-೭೩). ೧೧. ಒಟ್ಟುಗೂಡಿಸು; ಸೇರಿಸು: ಸರಸಿಜಾಯತದಂದವನು ಮೋಹರಿಸಿ ಮುಂಚುವ ಪರಿಮಳವನಂದರು ಬೀಜುತ ಬಂದು ಹೊಕ್ಕಳು ರಾಜಮುಂದಿರಪ (ಭಾಗ್ಯಸ.೦-೨೬). ೧೨. ತುಂಬಿಕೊಂಡಿರು ; ತುಂಬಿರು : ಮೋಹರಿಸಿ ಪೊಮಟ್ಟ ಪೊಚ್ಚಪೊಸಜೇನ್ನೊಡನಂ ಪಿಟ್ಪಂದು ಸೋರ್ವ ಜೇಂಜರಿ . . . ದೂರೆವಡದೀ ಕುಮಾರ ಚಿಕದೇವನ ಹಾನದೆ ಮೋದಶಾಂಪಮಂ (ಪಣ್ಣ. ೯-೦೦೭). ಮೋಹಳಿಸು : ೧೧. ಲಳಿಯ ಲಹರಿಯ ಲಗ್ಗೆಗಳ ಮೋಹಸಿ ಬಿಲುರ್ಬೆಂಕಾರರವದಿಂದುಲಿವನು ಕಲಿಕರ್ಣನು (ಭಾಗ್ಯಪ. ೬-೩೭). P ಇದು ಪ್ರಾಸಕ್ಕಾಗಿ ಮಾಡಿಕೊಂಡಿರುವ ರೂಪ.

[ಮೋಹರ + —ಇಸು/ತೆಲು. ಮೋಹರಿಂಚು. ಮೊಹರಿಂಪು]

ಮೋಹಲತೆ (ನಾ). (ವಶೀಕರಣದ ಮದ್ದಿಗೆ ಬಳಸುವ) ಒಂದು ಬಗೆಯ ಬಳ್ಳಿ : ಮೋಹಲತೆಯುಂ ಧೂಮಕುಣಿಕೆಯುಂ ಗಿರಿಕರ್ಣಿಕೆಯುಂ ರುದಂತಿಯುಂ ಚಾರಿಕೆಯುಂ ಅಧೋಪುಷ್ಪಿ ಎಂದು ಸುಬೀಗೆಬೀಜವುಂ . . . ಕೂಡಿ ತಿಲಕವನಿಡಲು ತ್ರೈಲೋಕ್ಯವಶಮಪ್ಪುದು (ಕಾಮಸಾ. ೨೬). [ಸಂ. ಮೋಪಲತಾ]

ಮೋಹವೆಚ್ಚು (ಕ್ರಿ). ಪ್ರೀತಿಯು ಹೆಚ್ಚಾಗು; ಅನುರಾಗವು ಅಧಿಕವಾಗು: ಒಚ್ಚೀರೆಗೈಯೊಳು ನೀರ ಮೊಗೆದು ಮೋಹವೆಚ್ಚಿ ರಂಗವ ಮೇಲಿಡಲು (ಕಂಕಪ ೫೫-೦೨೨). [ಮೋಪ್ಪ + ಪೆಚ್ಚು (<ಪೆರ್ಚು)]

ಮೋಹವೆಣ್ (ನಾ). ೧. ಮರುಳುಗೊಳಿಸುವ ಹೆಣ್ಣು; ಆಕರ್ಷಿಸುವ ಹೆಂಗಸು. ೨. ಬಾರೆ ; ವೇಶ್ಯೆ.

ಮೋಹವೆಂಗಳು (ಬಹುವ): ಮುಂದರಿಂದ ರಾಜಿಸುತಿಹ ಮೋಹವೆಂಗಳ ಸದನವಂಕ್ಕಿಯಲಿ ಲೋವೆಯೊಳಗೆ ಮದನವಿಲಾಸವ ತೋರ್ಪ ಪುತ್ಥಳಿಗ ಳೊಪ್ಪಿದುವತಿಚಿಲುವಿಕೆಯಿಂದ (ಕಂಕಪ. ೬-೮೪). [ಮೋಹ್ಯ + ಪೆಣ್]

ಮೋಹಶಾಸ್ತ್ರ (ನಾ). ಅವಿದ್ಯೆಯನ್ನುಂಟುಮಾಡುವ ಶಾಸ್ತ್ರ ; ಅಜ್ಞಾನವನ್ನುಂಟುಮಾಡುವ ಶಾಸ್ತ್ರ: ಅವು ತಾಮಸಂಗಳುಂ ಮೋಹಶಾಸ್ತ್ರಂಗಳುಂ ಅಸಾತ್ವಿಕಂಗಳುಮಾಗಲಾಗಿ ಪ್ರಮಾಣಂಗಳಾಗಲಿರವಿಯವು (ಜಾಬಾಲ. ೪೯). [ಸಂ.]

ಮೋಹಸಲೆ ' ಮೊಹಸಲೆ ' ನೋ.

ಮೋಹಳ (ನಾ). ಕತ್ತಿಯ ಹಿಡಿ ; ಕಠಾರಿಯ ಹಿಡಿಕೆ : "ಪಾಳೆ ವರಂಜು ಪೆಸಲು ಮೋಹಳವಂಕ್ಕು" (ಮುಂಗಣಾ. ೫೯-೭೬) ; ಏಡ್ಗದ ಮೋಹಳ [ಜಾಣಾಂ. ರ]ಕೆ ಕೈದುಡುಕಿ . . . ತ್ರಿಪುರಾಂತಕಾ ಎನಲು (ಜಪಪ್ರ. ೫೯-೩೪), ಕಠಾರಿಯ ಮೋಹಳದ ಮೇಲಿಟ್ಟ ಗಲ್ಲದ . . . ಘನಶೋಕವಹ್ನಿಯ ಮೇಹುಗಾಡಿನ ಮಸದ ಕೌದವನಿತ್ಕನೋಲಗವ (ಭಾಬ್ಕಾಪ್ರ. ೦-೦೨) ; ಹೊನ್ನ ಮೋಹಳದ ಕಠಾರಿ ಕತ್ತುರಿಬೊಟ್ಟು ಚಿನ್ನದ ಕದುಂಬು ಮೆಜೆಯ (ಭಾಗಾಸಾಂ. ೧೦-೧೬). [←ತೆಲು. ಮೋಹಣ]

ಮೋಹಳಿಸು ' ಮೋಹರಿಸು ' ನೋ.

ಮೋಹಾಂಧ (ನಾ). ವ್ಯಾಮೋಹದಿಂದ ಕುರುಡಾದವನು ;-ಮುಂದುಗಾಣದವನು: ಕಪಟಪ್ರಪಂಚಜಾಳಾವೃತನೆನಧಿಕಮೋಹಾಂಧನಂ (ಶಾಃಚಾ. ೩-೫೩); ಮುಂತ್ರಿವೃತ್ರಮೋಹಾಂಧನಾಗಿ ಕುಬಿಗರೆಯತೊಡಗಿದ (ಆಕ್ರಮ. ೬೦). [ಸಂ.]

ಮೋಹಾತುರ (ನಾ). ವ್ಯಾಮೋಹದಿಂದ ತವಕಿಸುವ ವ್ಯಕ್ತಿ: ಸುವಿವೇಕವುಂಟೆ ಮೋಹಾತುರರೊಳ್ (ಪಂಭಾ . ೩-೦೦೩). [ಸಂ.]

ಮೋಹಾಪೋಹ (ನಾ). [ಕಾವ್ಯಮೀ] ಅಪಹ್ನುತಿಅಲಂಕಾರದ ಒಂದು ಪ್ರಭೇದ ; P ಮೋಹವಶತೆಯಿಂದಾಗಿ ವಸ್ತುವಿನಲ್ಲಿರುವ ಗುಣಗಳನ್ನು ಅಲ್ಲಗಳೆದು ಬೇರೆ ಗುಣಗಳನ್ನು ಆರೋಪಿಸಿ ವರ್ಣಿಸುವುದು : ಅಮೃತಮಯಕಿರಣಸೆಂಬುದುಮಮರದು ಶಶಿರಾಶು ವೆಂಬುದುಂ ಶಶಿಗೆಂದುಂ ಸದುನಿಸಿ ವಿಷಕಿರಣನುಪುನಲದುರೀಚಿಯುಮೆಂದೆನಿ ಸ್ಕೆ ಮೋಹಾಪೋಹಂ (ಕಣಾ. ೩-೦೦೩). [ಸಂ.]

ಮೋಹಾಲಸ್ಯ (ನಾ). ಎಚ್ಚರ ತಪ್ಪುವುದರಿಂದುಂಟಾಗುವ ಜಡತೆ : ನಿದ್ರಾಲಸ್ಯ ಹೆಚ್ಚಾಗಿರುತ್ತದೆ. ಕೆಲವೊಮೆ ಮೋಹಾಲಸ್ಯವುಂಟಾಗುತ್ತದೆ (ಕಂಶಾ. ೭೫). [ಸಂ.]

ಮೋಹಿ (ಗು). ೧. ತಬ್ಬಿಬ್ಬುಗೊಳಿಸುವ ; ದಿಗ್ಭ್ರಮೆ ಹಿಡಿಸುವ. ೨. ಮರುಳುಗೊಳಿಸುವ. ಹಿ. ಮೋಹಕವಾದ; ಆಕರ್ಷಕವಾದ; ಸುಂದರವಾದ : ' ಮೋಹಿಪೆಣ್ ' ಪರಾ. (ನಾ). ೪. ಅಂದ ; ಪುನೋಹರತೆ. ೫. ಮೋಹಕ್ಕೊಳಗಾದವನು ; ಮೋಹವಶನಾದವನು : ' ಮೋಹಿಯಲ್ಲದನ ನೋಡದಿರು ಮೋಹವ ಬಲ್ಲವನೆಲ್ಲವ ಬಲ್ಲನೆಂದಾ ಪಾವಿಯೊಳಗಾಡುತಿಪರು (ಕಣಪ. ೪೬-೩೯). [ಸಂ. ಮೋಹಿನ್]

ಮೋಹಿಂ ' ಮೊಹಿಮ್ಮು ' ನೋ.

ಮೋಹಿಚಕ (ನಾ). ಒಂದು ಬಗೆಯ ನಸ್ಯ; ಕಿಂಶುಕ : "ಮೋಹಿಚಕ [ಜಾಣಾಂ. ಓಚಕ. ಹಿತಚಕ]ಮಾ ತ್ರಿಪತ್ರಕಂ ಕಿಂಶುಕಾಖ್ಯಂ" (ಮುಂಗಣಾ. ೩೭-೩೦). [?]

ಮೋಹಿತ (ಗು). ೧. ತಬ್ಬಿಬ್ಬಾದ ; ಭ್ರಮೆಗೊಂಡ. ೨. ಮರುಳಾದ; ಆಕರ್ಷಣೆಗೊಂಡ. (ನಾ). ೩. ಮರುಳಾದವನು ; ಆಕರ್ಷಣೆಗೊಂಡವನು ; ಮೋಹಗೊಂಡವನು : ಅನು ಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದೆ (ಜಪಪ್ರ. ೧೫೫); ಅಂಗರಕ್ಷೆಯು ಮಾಡಿ ಮೋಹಿತನಲ್ಲ ಮೂಜಗಕೆ . . . ಪರತರವಸ್ತು ನೋಡಿತ (ಭಾಗ್ಯಾಂ. ೯-೭೦); ದಾರುವನದಲ್ಲಿ ಮೋಹಿನಿ ನಾರಾಯಣಿ ಸುಳಿಯಲೊಡಂ ಮೋಹಿತರಾದರ್ ಧೀರಯತಿರಾಜರ್ (ಕಂಶ್ರೀ. ೬-೩೬). [ಸಂ.]

ಮೋಹಿನಿ (ನಾ). ೧. ಮೋಹಕವಾದ ರೂಪವುಳ್ಳವಳು ; ಜೆಲುವೆ : ಮೋಹಿನಿಯರ ಮೋಹಪಾಶ ಹೊಂಬಿಣ್ಣಿದ ರಾಹುಗಳಿನಿ ವೈರಿಶಿಗೆ ರೂಪಿಸಿ ಶೃಂಗಾರವೀರರೊಳಾಜಾನುಬಾಹುಗಳಿಸಿದುವಾ ನೃಪನ (ಪಂಚ. ೬-೪೬); ತನ್ನ ಮನಸ್ಸನ್ನು ಮರುಳುಮಾಡಿರುವ ಮೋಹಿನಿಯ ಕೈ ಹಿಡಿಯುವ ಹಾಗಿಲ್ಲ ! (ಹೂಹಾಬ್ಲಾ. ೦೪೩); ಏ ತಾಯಿಯೆನಲೊ ಜೀ ಮಾಯೆಯೆನಲೊ ಮೋಹಿನಿಯ ಮೋಹನಾಂಗ ? (ಹೂಹರಾಣಾ. ೫೬-೯). ೨. ಒಬ್ಬ ಅಪ್ಸರೆಯ ಹೆಸರು : ಧರಯ ಪಾರಿಯರ ಚಿಲ್ಪಿಕೆಯ ಕೆಗೆದು ನೆಲಿ ಸರಸಿಜಭವ ನಿರ್ಮಿಸಿದ ತರಳಾಕ್ಷಿ ಮೋಹಿನಿ ಯಾ ಬೆಲೆಮಿಣ್ಣಿನ ಚರಣದುಂಗುಟಕಿಣಿಯಹಳೆ (ಕಂಪಂ. ೦೦-೦೩). ೩. ಸಮುದ್ರಮಥನದ ನಂತರ, ಅಮೃತವನ್ನು ಪಂಚುವ ಕಾಲದಲ್ಲಿ ರಾಕ್ಷಸರನ್ನು ವಂಚಿಸಲು ವಿಷ್ಣುವು ಧರಿಸಿದ ಸ್ತ್ರೀರೂಪ : ಮೋಹಿನಿ . . . ಳಿ ಚಾಮುಂಡಿ ಸಿ ಯಿಂದಿಸ್ಸಾಣೇ (ಪಿಗ. ೪ (೩). ೩೮೫. ೨೩೭-೨; ೧೪೫೫ ೫೯). ೪. ಸುಂದರಸ್ತ್ರೀಯ ರೂಪವನ್ನು ಧರಿಸುವ ಒಂದು ದುಷ್ಟಶಕ್ತಿ : ಪೆಣ್ಣುಪಿಶಾಚಿ : ಹೊನ್ನೆಮರವಲ್ಲಿ ಬೊಬ್ಬರ್ಯ . . . ತೆಂಕಿನ ಪಾವಟಿಗೆಯ ಎಡದ ನೆಲ್ಲಿಮರದಲ್ಲಿ ಮೋಹಿನಿದ್ಯ . . . ಇವುಗಳೆಲ್ಲಾ ಕೋದ ಸುತ್ರಲಿಪ ಮರಗಳಲ್ಲಿವೆ (ಕ್ಷತ್ರ. ೨೭). ೫. ಆಕರ್ಷಿಸುವವಳು; ವಶೀಕರಣ ಮಾಡುವವಳು : ಈಗಿನ ಹುಡುಗಿದುರೇನು. ಮಾಯಾವಿನಿಯರು. ಮೋಹಿನಿಯರು (ಸಂಶ್ಲಿ. ೦೨). ೬. ಒಂದು ಬಗೆಯ ಯಕ್ಷಿಣಿ ; ಇಂದ್ರಜಾಲ : ಮಣ್ಣಿನ ಮಸೆಯ ಕಟ್ಟಿ ಮಾಯಾ ಮೋಹಿನಿಯೆಂಬ ಮಹೇಂದ್ರಜಾಲದೊಳಗಾಗಿ (ಭಾಪುರಾ. ೩- ೦೩೩-೩೦೨). ೭. ಮೂರ್ಛೆಬರಿಸುವ ಒಂದು ವಿದ್ಯೆ : ಪ್ರಂಛಿನಿ ಸ್ತಂಭಿನಿ ಮೋಹಿನಿ ಸರ್ಪಪಿ ತಾಳೋದ್ಭಾಟಿನಿ ವಿದ್ಯಾಮಂತ್ರಪೂರ್ಣ ಯೋಗಘಟಿಕಾಂಜನ ಮೆಂದಿವು ಮೊದಲಾಗೊಡಮು ತಸ್ಕರಶಾಸ್ತ್ರಂಗಳೊಳಾದಮಾನುಂ ಕುಶಲ ನಂತಪ್ಪ ಕಳ್ಳಂ (ಪಚ್ಚಾಣ. ೦೨೨-೦೩). ೮. ಒಂದು ಬಗೆಯ ಸಸ್ಯ : "ಮೋಹಿನೀ–ಮಯೂರುಸಿಲಿಯುಮ್ಮಿಕ್ಕ. ಎಲಚಿ. ಅಲುದೆರೆ" (ಲಿಪಾ. ೦೩೦).

[ಸಂ. ಮೋಹಿನೀ]

ಮೋಹಿನಿಆಟ್ಟಂ (ನಾ). (ಕೇರಳದಲ್ಲಿ ಪ್ರಚಾರದಲ್ಲಿರುವ) ಒಂದು ಬಗೆಯ ನಾಟ್ಯಪ್ರಭೇದ : ಕಥಕ್ಕಳಿಯಲ್ಲದೆ, ಕೇರಳದಲ್ಲಿ ಒಟ್ಟಂ ತುಳ್ಳಲ್. ಮೋಹಿನಿಆಟ್ಟಂ ಮುಂತಾದ ನಾಟ್ಯಪ್ರಭೇದಗಳು ಇವೆ (ಭಾಕಥ. ೩೩೭) : ಕಥಕಳಿಯ ಜೊತೆಗೆ ಕೇರಳದಲ್ಲಿ ಮೋಹಿನಿಆಟ್ಟಂ ಎಂಬ ಕಲೆಯೂ ಪ್ರಚಾರವಲ್ಲಿದೆ (೦೦೩೯. ೦೬) ; ಮೋಹಿನಿಆಟ್ಟಂ ಕೂಡಾ ಕೊಂಚಮಟ್ಟಿಗೆ ಶಾಸ್ತ್ರೀಯನೃತ್ಯವೆನಿಸಿದ್ದು ಪೂರ್ಣ ಜಾನಪದನೃತ್ಯವಲ್ಲ (ಭಾಕೋ. ೦೨೯). ' ಕಥಕ್ಕಳಿ ' ಪರಾ. [← ಮಲ. ಮೋಹಿನಿಯಾಟ್ಟಮ್]

ಮೋಹಿನೀಗಜ (ನಾ). ಶ್ರೀಶೈಲದಲ್ಲಿರುವ ಒಂದು ಕಲ್ಲಿನ ಆನೆ : P " ಶ್ರೀಶೈಲದ ಬಿಲ್ವವನಕ್ಕೆ ಸೇರಿದ ಕಲ್ಲಾನೆ. ಅದರ ಮೇಲೆ ಸಾಧಕನು ಹತ್ತಿದರೆ ಅದು ಎತ್ತರಕ್ಕೆ ಎದ್ದು ನೆಲಕ್ಕೆ ಹುಗ್ಗಿ ಸಾಧಕನು ಬೀಳುವ ಹಾಗೆ ಪೈಕೊಡವಿ ಪೊರಳಿ ಹಾರಿ ಚಕ್ರವಂತೆ ಗಿರ್ರನೆ ತಿರುಗಿ ಘೀಳಿಟ್ಟು ಬೆದರಿಸುತ್ತದೆ. ಇದಕ್ಕೆಲ್ಲ ಸಾಧಕನು ಹೆದರದಿದ್ದರೆ ಆಗ ಅದು ಮೆಚ್ಚಿ ಇಷ್ಟಸಿದ್ಧಿಯನ್ನು ಕೊಡುತ್ತದೆ " (ಸಿಕ್ಕಾ. ೫೫೬೪- ೦೩೭) : ಮೋಹಿನೀಗಜಪಸಡರುತ್ತಾ ಕುಮಾರಧಾರೆಯ ನಾಸುತ . . . ನಡದಂ ಭಾವು ಸಿದ್ಧಕುಲವತಿಯೆಂದು ಭೈರವಂ ಕೈ ಮುಗಿವನು (ಸಿಕ್ಕಾ. ೦೦- ೩-೮) ; ಮೋಹಿನೀಗಜವಸಡರ್ದಿಳಿದು (ಶಿವಾ. ೦೦೯-೨೩) ; ಅಲ್ಲಿಯುಜ್ಜ್ವಲವೆಸಪ ಕಲ್ಲಾನೆ ಮೋಹಿನೀಗಜವೆಂಬ ಪೆಸರಿಂದ ಮೆಸದಿರ್ಪುದು . . . ಇಷ್ಟಸಿದ್ಧಿಯನೀವೆದಾ ಮೋಹಿನೀಗಜಂ ಬಿಲ್ವವನದೆ (ಜಾಸೋಚ. ೩-೩೬). [ಸಂ.]

ಮೋಹಿಮು ' ಮೊಹಿಮ್ಮು ' ನೋ.

ಮೋಹಿಮೆಕ್ ' ಮೋಹಿಮೆಣ್ಣು ' (ನಾ). ೧. ಮೋಹಕವಾದ ರೂಪವುಳ್ಳವಳು ; ಜೆಲುವೆ : ಮೋಹ ರಾಗ ದ್ವೇಷ ಹಾಸ್ಯ . . . ಮೋಹಿಮೆಣ್ಣಾಸೆಯಿಂತೀರೇಳ ಬಿಡಬೇಕು (ಹಬ ೬೦-೬೦). **ಮೋಹಿಮೆಣ್ಣು** : ೧. ಮುಡಿಯ ಕಟ್ಟುವರು ದಿವ್ಯಾಂಗಕಾಭರಣವ ತೊಡಿಸುವ ಮೋಹಿಮಣ್ಣುಗಳು ಬಿಡದಾಗ ಪರಿಮಳವನು ತೆಗೆರುವ ಹೆಂಗಳೊಡನೆ ಸ್ವತಂದರ್ಚಿಯಲಿ (ಕಂಪಂ. ೯-೬೯). ೨. ಮರುಳಾಡುವವಳು ; ಮೋಹಕ್ಕೆ ಸಿಲುಕಿದವಳು : ಕಡುಕೂರ್ತ ನಲ್ಲರ . . . ಬಿಗಯಪ್ಪಿಕೊಳ್ಳದೆ ಬಿಡುಪರೆ ಮೋಹಿಮೆಣ್ಣುಗಳು (ಭಾರಾಕಾಂ. ೩೨-೬).

ಮೋಹಿಮೆಗಳು (ಬಹುವ) : ವಿಚ್ಚಿಪ ಮೋಹಿಮೆಗಳ ದಿಟ್ಟಿ ಕವಚಗೆ ತೊಟ್ಟನೆ ತಾಕದಂದದಲಿ ಇಟ್ಟ ಕಸ್ತೂರಿರೇಖೆಯೊಲೆಪನ್ನ ಬವರಿಯ ಸೃಷ್ಟಿಕ ನಾಲಿಸಗುಸಿರೆ (ಕಂಪಂ. ೨೬-೬೮). [ಮೋಹಿ + ಪೆಣ್]

ಮೋಹಿಮೆಣ್ಣು ' ಮೋಹಿಮೆಕ್ ' ನೋ.

ಮೋಹಿಸು₁ (ಕ್ರಿ). ೧. ಹೊಸೆದುಬುವಂತೆ ಮಾಡು ; ಬಡಿಯುವಂತೆ ಮಾಡು ; ಅಪ್ಪಳಿಸುವಂತೆ ಮಾಡು : ಆತನ ನಿವಾಸದೊಳು ಬಿಟ್ಟವಂ ಕೈಯಿಕ್ಕಿ ಸೆಳೆದು ವಾರಾಸಿಗಡುಕ್ಕುವ ಕುಗಳುಂಟಿವಂ ತಂದೀ ಕದಕ್ಕೆ ಮೋಹಿಪೆ ವೆಂದರು (ಹೂಹರಾ. ೪-೩೩). ೨. ಒದರೊಡಸೊಂದು ಬಡಿದಾಡು ; ತಾಕಲಾಡು : ಅಲಗಲಗು ಮೋಹಿಸಿವೆಲ್ಲದೆ ಕಲಿತನವ ಕಾಣಬಾರದು (ಕಸಂ. ೬೩೭). ೩. ಮೇಲಿಬೀಳು ; ಮೇಲೆ ಎರಗು : ಅಜನ ಬಾಚಿದ ತೂಲಿಗೆಯ ರಥಗತಕಯಲಿ ಕರಿಘಟೆಗೆ ಜೋದರು ಕಡಿದು ನೂಕಿದರಮಮ ತೇಜಿಯ ನಿಲಿಸಿ ಮೋಹಿಸಿದ (ಭಾವ್ಯಾಕ್ರಿ. ೦೦. ೨೬೩-೨). ೪. ಅಡ್ಡಗಟ್ಟಿ ನಿಲ್ಲು ; ಪ್ರತಿಭಟಿಸು : ಆ ಹಿರಣ್ಯಕಸವಮದ್ಯೆತ್ಮ ಕದಂಬದಲಿ ರೂಪಿಸಿದ ವರಕೇಸರಿಯು ರೌದ್ರಾಟೋಪದಂದದಲಿ ಮಸಗಿ ಮಾರ್ಬಲದಿರಿನಲಿ ಮೋಹಿಸಿದನ್ಯೆ (ಹೂಹರಾ. ೪-೬-೬). ೫. ತಿವಿ ; ಚುಚ್ಚು ; ಇರಿ : ಮಸೆದ ಕೂರಲಗು ಸಸ್ರ ಮೋಹಿಸುವಂತೆ ರಸಭಟಿಕೆಯೊಂದೆ ಮೊನೆಮೊನೆಗೆ ಬಂದಾಸುವಂತೆ (ಪಪ್ಪ. ೪- ೦೨೩-೦೪೫); ಬಂದು ಸಾಷ್ಟಾಂಗಪ್ರಣಾಮವಿಂ ವಂದಿಸುತ್ತಿರೆ . . . ತನ್ನ ಕರವಾಳ ಮುಂದೆ ಕೊರಳಿಗೆ ಮೋಹಿಸಲು (೦೪೪. ೫೬-೩); ಓಸರಿಸಿ ಕರವನವನಿಯೊಳ್ಪರ್ದಿ ಖಂಡೆಯವನಾಸುರದಿ ಜರಿದು ಪಡತಲೆಗೆ ಮೋಹಿಸುತೆತ್ತಿಯಾ ಸುಭಟ ವಾರ್ದಾ ಸುಕುಮಾರಂಗೆ ಬಿನ್ನೈಸುತಿರ್ದನೆಂ ಟನ್ನೆಸುವೆನು (ಕಾಪಾಂ. ೯-೨೨); ಪೇರುರಕೆ ಮೊನೆಗಣಗಳಂ ಮೋಹಿಸಿದನು (ಕೃಷ್ಣಾ. ೦೨-೯೯). ೬. ಚುಚ್ಚಿಕೊಳ್ಳು ; ತಿವಿದುಕೊಳ್ಳು : ಈ ಪರೀರತ್ಯಾಗವೇ ಕೃತದೋಷ ಹರಮೆನ್ನತುಗಿದು ಸುರಗಿಯನಾ ಸುದಿತ್ಸಾಸೂನು ಮಿಗೆ ಮೋಹಿಸಿದ ನುದರದಲಿ (ಹೂಹರಾ. ೩-೬-೨೬). ೭. ಇಡು ; ಇರಿಸು ; ಹೊಂದಿಸು : ಉರುತರ ರುದ್ರಾಕ್ಷಿಗೆ ಇನಿತು ಫಲಂ . . . ಕರ್ಣದೊಳಿರಿಸಲು ದಶಕೋಟಿ ಫಲಂ ಮೋಹಿಸೆ ಗ್ರೀವಕೆ ಶತಕೋಟಿಫಲಂ (ಬಸವಪು. ೭೦-೨೩೭); ನಿಜಾಯುಧಿಗೆಯುಲಿ ಮಲ್ಲಗಂಟಿಪ ಸೆಲಗ ಮೋಹಿಸಿ ಬೆರಳ ದರ್ಭೆಯ ಹಜ್ಜದು ಬಿಸುಟಿನು . . . ಕಲಿದ್ರೋಣ (ಭಾವ್ಯಾಕ್ರಿ. ೯-೦೩). ೮. (ಆಲಬ) ನಾಶಮಾಡು ; ಹಾಳುಮಾಡು : ಬಲು ಮಗಧಯವನೇಶ್ವರರ ಬಲ ಬಲಧಿಯನು ಬಹಳಾಸ್ಥವಪಾಡಲನ ಮುಂಬಿದಲಿ ಮೋಹಿಸಿದನು (ಪಣಾಗ. ೩-೨-೩೨). [ಮೋಹು₂ + — ಇಸು]

ಮೋಹಿಸು₂ (ಕ್ರಿ). ೧. ಮೈಮರೆ; ಎಚ್ಚರ ತಪ್ಪು : ಮೋಲ್ಮುಂ ನೆಜಿಲ್ಮುಂ ಸಮಾಕುಲಿತರ್ ದೋಹಿಸಿ ಮುಚ್ಚಿಪೋಗೆ (ಪಾಂಕೃಪ. ೬-೩೩) ; ಆ ಮಾತಂ ಕೇಳ್ದನಘವಜ್ರಾಘಿಪಾತಮಾದಂತೆ ಸಭಾಜನಮೆಲ್ಲಂ ಮೋಹಿಸೆ (ಪಪ್ಪ. ೦೦-೩೩) ; ಮೆಯ್ ರೋಮಂಚಿಪುವೊಪ್ಪೆ ಬಾತೊಡೆ ಮಿಗೆ ಮೋಹಿಸುವೊಡೆ ರಾಸ್ಮಾದಿತೋಯಮುಂ ಕೆಡೆ ಪೀರ್ದುಂ (ಕೃಷ್ಣಕಾ. ೯-೨೪೯). ೨. ಎಚ್ಚರ ತಪ್ಪುವಂತೆ ಮಾಡು : ಪ್ರಜ್ಞೆ ತಪ್ಪಿಸು : ಮುಸುಕಿದರೆ ಮಂತ್ರಾಸ್ತ್ರದಲಿ

ಮೋಹಿಸಿ (ಕುಮಾ೪ ೫೦-೬೪). ಕ್ರಿ. ವಶವಿಗೆ ಸಿಲುಕು ; ಭ್ರಾಂತನಾಗು ; ಬಗೆಯುದೆ ತಡೆಯದೆ ಸುಲಭವುದೆ ಮೋಹಿಸದೆ ಎಲ್ಲಾ ವಸ್ತುಗಳಸೊರ್ಗೊದಲಜಾವ ಕಾಣ್ಯಸಂತಜ್ಞಾಮಮುಮನುತದರ್ಶನಮುಮು ನೊಡೆಮರಾದರ್ (ಪಜಾ೧ಾ. ೦೫೪-೫೦): ಬೇಡಿಂತೀ ವಿಷಾದಂ ನಿರಸ್ತವಿದೇಕಂ ಬೊಲಿದೇಕೆ ಮೋಹಿಸಿದಪ್ಪೆ ನೀಂ (೧೦೫. ೦೬-೬೯); ಮನೋಪರಯವ್ವನಪಾದು ಮುಕ್ಕಣ್ಣನು ಕಾರಣಮೆಂದು ಬಲ್ಲೊಡಂ ಮೋಹಿಸುವರ್ (ಪಾರಕ್ಷ. ೩-೪೨). ೪. ಭ್ರಮೆಗೊಳಿಸು; ಭ್ರಾಂತಿಯನ್ನುಂಟುಮಾಡು: ಮೋಹಿಸಿತು ಘುಳುಘುಳುನಿನಾದ ವರಾಹನ್ನುಸದುತೆ ಮುನಿಬಿಜಯೂಪೆ ಕೊಳ್ಳದೆ ಕೊಂಡು ಪರಿದುದು ಚಿತ್ರವಳವಪಕೆ (ಕವರಾ. ೨-೩-೦೦). ಚಿ. ಪ್ರೀತಿಸು : ಒಲುಮೆಯನ್ನು ತೋರು : ಮೋಹಿಸಿ ಮುದ್ದಿಸಿ ಮರುಳಾಡಿನವ್ವ (ಪಜಾತೀ. ೨. ೪೬-೪೪); ನೀ ಮೋಹಿಸಿದೆ ನಿನ್ನಲ್ಲಿ ತಪ್ಪಿಲ್ಲ ಕೇಳಬಲೆ (ಗಂಪಪ. ೯-೦೩೪); ಇನಿಯನ ಮೊಗವ ನೋಡದ ದುನ್ನ ಮೋಹಿಸಿ ಮನಗರಗುವಳು (ಪವಚ. ೦-೩೩). ಕ್ರಿ. ಆಸ್ಥೆಪಡು; ಬಯಸು: ವಿಷವ ಮೋಹಿಸುವಂತೆ ಬಾಯುವುದೀತಂಗೆ (ಕೃಎಚಾ. ೩೦-೫೬). ೭. ಆಕರ್ಷಿಸು ; ಮೋಹಗೊಳಿಸು ; ಮರುಳುಮಾಡು : ಕುಚಿದೀ ನಿರೀಕ್ಷಿಸಿದವರ್ನಿಷ್ಪಾಪಿಗಳ್ ಚಲ್ವನೇ ಹರನು ಮೋಹಿಸೆತಮಾರ್ಪ್ಪನಧೀಂ ಶ್ರೀಮದ್ಭೂವಾಳಂ (ಪಶ. ೪. ಪಾಸಪ. ೫೬-೦೩ : 1170) : ಬಗೆ ಬಗೆ ಆಟಗಳೆಲ್ಲಿ ಕಲಿತೆಯ್ದ ಜಗವ ಮೋಹಿಸಪೆ (ಕುಸಂರ. ೦-೧೬ ೪೨೦); ಪುಷ್ಪಾಂಜಲಿಗೆದರ್ದು ಮೋಹಿಸಿ ನಿಂದು . . . ನರ್ತನೆಮಂ ಬಿತ್ತರಿಪ ರಂಭಾದಿ ದಿವ್ಯನರ್ತಕಿಯರಿಂ (ಪಪಂ. ೦-೬೯ ೪). ೮. ಆಕರ್ಷಿತನಾಗು ; ಮರುಳಾಗು ; ಮನಸೋಲು : ಮುಂದೆ ಮೋಹಿಸಿ ನಿರೆದ ಭಕ್ತರ ಸಂದಣಿಗಳುಳ್ಳಿ ಎನಲು (ಕ್ರಕ:೦೦. ೫೯-೩೦) : ಮಾತನಱಿಯುವ ಬಾಲ ನಿಮ್ಮನು ಕಂಡು ಸೋತು ಮೋಹಿಸಬಲ್ಲನೆ (ಕುಸಂರ. ೩-೦೧೫-೩). ೯. ಕ್ರಮೋಸು : ರಂಜಿಸು ; ಶೋಭಿಸು : ಪೊರ್ದಾಳ್ ಗಂಟಿಯ್ ಮೋಹಿಸುವ ಮೊಗವಡವ . . . ಚಾರುತರಭೂಷಣಾಂ ಭೀಷಣಮಾಗೆ (೧೦೪. ೬-೫೫ ೪); ಕಾವುಂ ಕಿಜುಸೂಜ್ಗೆ ಸೇರಿದ ಪೊಸ ಮುತ್ತುಗಳೋ ಎಂಬಂದದೊಳಾ ಅಸಿಯಳ ಬೆಯ್ವೂರ್ದಲ ಮೊದಲೊಳ್ಕೋ ಹಿಸುವು ಸಣ್ಣ ಬೆಮರ ಬಿಂದುಗಳರಮ್ಯಸಂ ಕಾಣಾತವೆ (೭೮:೫೦. ೯-೦೩): ಹೊಂಬಣ್ಣ ದೈಗೆ ಮೋಹಿಸುವ ಕಾಣಿವ ದಟ್ಟಿ . . . ಮುಜಾದು ಕರ್ಪೂರ ವೀಳೆಯದಿಂದ ಕಣ್ಗೆಂಬಾವನಾ ಗಾಡಿಕಾಱಿ (೭೮೫. ೦-೪೬).

[ಮೋಹ + — ಇಸು]

ಮೋಹೋದೆ ' ಮೊಹಮ್ಮು ' ನೋ.

ಮೋಹು$_1$ (ಕ್ರಿ)· ೧. ಗುರಿಯಿಡು : ಈಡನ್ನು ಇಡು : ಬಿಡ್ಡವ ಸೆಳೆದು ಜಡಿದು ಸೋಡಿ ಪೆಡತಲೆಗೆ ಮೋಹಿ ಕಯ್ಯಿತ್ತಿ ಕಂಧರ ಹಜ್ಜಿಲಸುವಾವೆನು (ಪಪಣ. ೦೩-೦೨); ಪೆಡತಲೆಗೆ ಮೋಹಿದ ಕೃತಾಂತನ ಪಿಡುಗವನು ಕಂಗಾಣದೇತಕೆ ... ಬಜ್ಜಿದ ಕೆಡುವರಜ್ಞಾನದಲಿ (ಪಣಗ.೨-೦-೬). ೨. (ತಲೆಯಿಂದ ತಲೆಯನ್ನು) ತಾಟಿಸು : ಡಿಕ್ಕಿ ಪೊಡೆ : ಎನ್ನ ತಲೆಮಲಿ ತನ್ನ ತಲೆ ಮೋಹಿ ನಸುನಗುವನು (೦೩೪. ೪೬-೩೦). ೩. ಮುಷ್ಟಿಯಿಂದ ಪೊಡೆ; ಗುದ್ದು : ಜೊಗಕೆ ಮೋಯತಲೆದೆಯಲೂಱುವ ವಿಗಡಬಲದಲಿ ಮುಸಿಸುಂಗಿರದೆ ಕಾದಿದರು (೫೫೨. ೬-೪೬). ೪. ಎರಗು ; ಮೇಲೆ ಬೀಳು : ಕವಲಿದಡೆ ಕಲ್ಪಾಂತರುದ್ರನ ಮೊನೆಗೆ ಮೋಹುವ ಮೋಹಿದಂತಕನಸಂ ನಿತಾಂತಭುಜಪ್ರತಾಪದಲಸುವನಸಬಡಿವ ಭಟಪರಾಕ್ರಮ ಚಕ್ರಿಗಳ . . . ತೋಱಿದರು (ಕೂಪರಾ. ೪-೬-೦೬); ಒಂದು ಕಡೆಯೊಳಭತತಿ ಮೋಹಿ ಒಂದು ದಿಕ್ಕಿನೊಳತಿರಥರೊತ್ತಿ ಸಾಹಸದಿಂದವನಿದಿರಾಗಿ ಕವಿದರು (ಕ್ರಭಾ. ೦೬-೪೪); ಪಂದಣಿಸಿ ನಾದುಕರ ದಳ ನಡೆಯಿ . . . ದಂತಿಗಳ ವ್ಯೂದಗಳು ಮೋಹಿದುವೆ (ಕುಸಂರ. ೩೩-೨). ೫. ಜುಮ್ಮೆ ; ತಿವಿ : ರಜನಿಯೆಂಬ ಮದ್ದೋತ್ಕಟದ ದಿಗ್ಜಯ ಕುಂಭ್ಯಳಕೆ ಮೋಹಿದೆ ವಿಜಿತ ಬಲಸಂಕುಪರ ತಲೆಮಾಣಿಕವಿದೆಂಬಂತೆ ಗಜಗಲಿಸಿತಿನಿಬಂ (ಕವರಾ. ೨-೦೪-೨). ೬. ಚುಚ್ಚಿಕೊಳ್ಳು ; ನಾಟಿಕೊಳ್ಳು : ಬೆನ್ನಲಿ ಮೋಹಿದಲಗಿನ ಪೇರುರದ ಕಂಪದ ಕೆಂಗಱುಮು . . . ಪಾಪೆಯಮೊಲೆಸದಿರ್ದನಾಹವ ರಂಗಮಧ್ಯದಲಿ (ಕವರಾ. ೪-೪-೩೨). ೭. (ಬಾಗಿಲು ಮುಂತಾದುವನ್ನು) ರಭಸದಿಂದ ಮುಚ್ಚು : ಬಾಗಿಲ ಕದವನುಜ್ ಮೋಹಿ ಬೀಯುಗವಿಕ್ಕಿ ಅಸುರರು ಗವಗಟ್ಟಿ ಸಗುತ (೦೩೪. ೪೬-೪೬). ೮. ಮೃದುವಾಗಿ ಒತ್ತು :— ಅಮುಮು : ದೈವ್ಯನು ತನ್ನ ಎಡದ ಕೈಯಲ್ಲಿ ರೋಗಿಯ ಬಲದ ಕೈಯ ಹೆಬ್ಬೆಟ್ಟಿನ ಮೂಲದಲ್ಲಿ ಮೂರು ಬೆರಳ್ನೊ ಅಂಕುಶಾಕಾರವಾಗಿ ಒತ್ತಿ ಪಿಡಿದು ಆ ಮೂರು ಬೆರಳ ತುದಿಗಳಿಂದ ಮೋಹಿ ನೋಡಲಾಗಿ ಸಣ್ಣನಾಗಿ ಆಡುವ ನಾಡಿಯು . . . ಮನಸ್ಸಿಗೆ ತೀವುದು (೨೪೬. ೦೧). ೯. ಜೋಡಿಸು ; ಹೂಡು : ಶರದೊಳಾಂತರು ಪೊಚ್ಚಿಯವನು . . . ಸುರಗಿಗಳನೀಡಾಡಿ ತಿರುಹಿನೊಡೆಗಳನು ಬತ್ರ್ಸಕೆಯನು ಬಿಲುದಿರುವಿನಲಿ ಮೋಹಿದರು (ಪಾಕ್ಕರ್ಣ. ೬-೪೬). ೧೦. ವ್ಯೂಹವನ್ನು ರಚಿಸು : ವ್ಯೂಹರಚನೆ ಮಾಡು : ಗರುಡನಾಕಾರದಲಿ ಬಲವನು ಸಲಿಸ ಮಿಗೆ ಮೋಹಿದನು (ಪಾಕ್ಕರ್ಣ. ೩-೩೦). ೧೧. ಇಡು ; ಇರಿಸು : ಈ ಪರಿಣಿಸ್ಪೇಕಮತ ಕಾಳಾಹಿದುಷ ಬಾಯೋಗೆ ಕೈದುಸು ಮೋಹಿ ವಿಷವಸ್ಪೈಗದಿನ್ನುಳಿದಳು ತನ್ನ ಕಾರೊಡಲ (ಪಾಕ್ಕರ್ಣ. ೩-೩೬). ೧೨. ಬಳಿ ; ಲೇಪಿಸು : ಬಾಲಕರಲೇ ಖಡ್ಗಧಾರೆಯ ಪೇಲೆ ಮೋಹಿದ ಮಧುವ ಸವಿಯಲಿ ನಾಲಗೆಯಲಿವರೊಲ್ಲ ರೆಂದನು ನಗುತ ಕದಿದ್ರೋಣ (ಪಾಕ್ಕರ್ಣ. ೦೬-೪೨). ೧೩. ಒಡ್ಡು ; ಚಾಚು : ನೀಡು : ಬೀಗಿಗಳೊಳಗೆ ಬರಿಬರಿ ಮುಂದೆ ಮೋಹಿದ ತಳಗೆ ದಂಬುಲ ವೀರಸೇನೆಯ . . . ಮನ್ನಿಸಿಕೊಳುತ ಪಾಳೆಯದಿಂದ ಹೊಱವಂಟ (ಪಾಕ್ಕರ್ಣ. ೦೬-೦೪). ೧೪. (ಗೌರವಸೂಚಕವಾಗಿ) ಬೀಸು; ಗಾಳಿಹಾಕು : ಸೀಗುರಿ ಮೊಗವ ಮೋಹಿಂದವು . . . ಜೌರಿಗಳ ತೊಂಕಣಿ ತುಜುಗಿದವು ಪತ್ತಾಳಿಗಳ ಪುಸ್ಕಕವರು ಸೆಲಸುಗ್ಗಡಿಸಲ್ಕೆತಂದ (ಪಾಕ್ಕರ್ಣ. ೩-೩೩). ೧೫. ಅವರಿಸು ; ವ್ಯಾಪಿಸು : ಚಿಡ್ಡಣೆಯ ಚಮಳಕ್ರೋಧವಿಖಿ ಮೋಹಿದುದು ಮೋಜಿಯಲಿ (ಪಾಕ್ಕರ್ಣ. ೫೦-೯). 'ಮೋಮ್ಮು' ಪರಾ.

ಮೋಹ್ಯ (ಕ್ರಿ)· ೧. ಸಿಲುಕು ; ಒಳಗಾಗು : ಹಾಹ ಮಾನಿನಿಯಸುತ ಭೀತಿಗೆ ಮೋಹಿ ಮೌಳಿಯನಕೆಮು ಗೇಪದ ದೇವಳಿಯಲಪ್ಪಳಿಸಿ ಬಿದ್ದನು ರಾಮ ಮೂರ್ಜೆಯಲಿ (ಕವರಾ. ೩-೦೦-೦೬). ೨. ಸೊಲಿ ; ಅನುಗ್ರಹಿಸು: ಬೇಪ ವರವನು ಪೇಡಿಕೊಳ್ಳಸಲೆಱಗಿ ಕೈಮುಗಿದು ದೇವಿಯೆಂದೆನು ನಾಗ ವಂಶವ ಮೋಹಿ ಕೊಡು ಕೋವಂಡ ಕವಚವ ದ್ರೋಹಿಕಪಿಗಳ ಪತಯ ಗೆಲಲಿನ್ನೆಂದವರ ಬೇಡ (೪೦೫೫. ೦೯-೩೬). [< ಮೋಹ$_1$?] .

ಮೋಹೋಪಮಿತ (ನಾ)· [ಕಾವ್ಯಮಾ] ಉಪಮಾಲಂಕಾರದ ಒಂದು ಪ್ರಭೇದ ; P ಎರಡು ವಸ್ತುಗಳಲ್ಲಿರುವ ಹೋಲಿಕೆಯನು ಒಂದು ಮತ್ತೊಂದೆಯೆ ಎಂಬ ಭ್ರಮೆಯನ್ನು ಉಂಟುಮಾಡುತ್ತದೆ ಎಂದು ವರ್ಣಿಸುವುದು : ಕಮಳವಿಮೋಪದಿನೀ ನಿನ್ನ ಮೊಗಕ್ಕಿಜಗುವುದು ತೂಬಿವುದಾ ಸರಸಿಜಮಂ ಭ್ರಮರಂ ಪದನವಿಂದಲ್ಕೆಂದು ಮೋಪದಿಂದೆಂಬುದಿದುವೆ ಮೋಹೋಪಮಿತಂ (೪೦೫೫. ೩-೪೯). [ಸಂ.]

ಮೋಳ್$_1$ ' ಮಾಳ್$_1$ ' ನೋ.

ಮೋಳ್$_2$ (ನಾ)· (?) : ಅರಮನೆಯರ [ಮೊತ್ತವಸೂ] ತಪ್ಪದೆ ಕಿಬಿವೆಳು ಅರಮನೆಂದೆ ಪಾಣಧಾನ್ಯ ಯೆತ್ತು ತುಪ್ಪ ಸಬರ ಮಾಪ್ಪುದಳ ಮೋಳ ಮುಂತಾದೆ ಮೆಚ್ಚೆ ವಿರಾಡಪನು ಕುಳ ಸರದಿಯಲಿ ತೆಱುವೆಱು (೩೦೩. IX-ii. ೪೩೯-೫೦ : 1408). [?]

ಮೋಳಬೆಕ್ಕು ' ಮಾಳಬೆಕ್ಕು ' ನೋ.

ಮೋಳಗೆ (ನಾ). ೧. ಸೌದೆಯ ಕಟ್ಟು : ಕಟ್ಟಿಗೆಯ ಹೊರೆ : ಅಪ್ಪನವರ ವೆಂಬ ಬಳ್ಳಿಯ ಸೀಳಿ ಪಳು ಕಟ್ಟಿನ ಮೋಳಿಗೆಯುನೆ ಹೊತ್ತು ಸಡೆದನಮ್ಮಾ (ಕಸ್ನತ. ೪. ೦೦೯–೩೬) : ಪಾಳಕಾಯಿ ಮೋಳಿಗೆಯೊಂದಂದ ಮುರುಡ ನಪ್ಪವಕ್ಕಂ (ಯುಕಟಚ. ೩–೧೦) ; ಮಾರಯ್ಯ ಮನೆಗೆ ಬಂದು ಮೋಳಿಗೆಯನ್ನು ಬಾಗಿಲ ಮುಂದಿಳುಹಿದ (ಮೋಚಪ್ರ. ೭೦ ತ್ರಿಪ್ರಾ.೭೫). ೨. ಕಟ್ಟು : ಹೊರೆ : ಪೂಗೊಂಬಲಂ ಮುಱ್ದು ಮೋಳಿಗೆಗಳಂ ಬಿಗಿದು ತುಜುಗಿ ಕೇದಗೆಪೂವಸವಜಿ ನತುವಂ ಬಿಗಿದು . . . ಬಂದರತಿವೇಗದಿಂ (ಲಂಡಾಪ. ೦೦–೦೦) ; ಹಸಿಯ ಮುಕ್ಕುಗಳ ಮೂಡಿ ಮೋಳಿಗೆಯು ದಂತಂ ಕಮ್ಮಿ ವೊಲ . . . ಹೆಬ್ಬುಲಿದು ಬಂಡಿಗಳನೇಱದ ಕೋಣವೆರಸಿ ತಿರುಗಿದ ಬೇದರಂ ಕಂಡು ಬೆಜಗಾದನು (ಹೂಚಪಾಕ. ೬-೦೮).

ಮೋಳಿಗೆಯ ಕಾಯಕ = ಕಟ್ಟಿಗೆಯ ಹೊರೆಗಳನ್ನು ಮಾರುವ ವೃತ್ತಿ ; ಸೌದೆಯ ಹೊರೆಯನ್ನು ಮಾರುವ ಕಾಯಕ : ಸತಿಪತಿಗಳೀರ್ವರು ಕಲ್ಯಾಣಕ್ಕೆ ಬಂದು ಮೋಳಿಗೆಯ ಕಾಯಕಮಂ ಮಾಡಿಕೊಂಡು ಜಂಗಮಾರ್ಚನೆಯ ಮಾಡುತ್ತಿರೆ (ಕಲ್ಯಕ. ೨೩೫–೦೨).

[< ಸಂ. ಮೂಲಿಕಾ./ದ್ರಾವಿ. ಮೋಳೀ = ಕಟ್ಟಿಗೆಯ ಹೊರೆ ; ಮೋಳಿಕ್ಕಾ, ಮೋಳ್ಕಾ = ಕಟ್ಟಿಗೆ ಮಾರುವವನು]

ಮೋಳಿಡು (ಕ್ರಿ). "ಉದ್ದಕ್ಕೆ ಒಂದೇ ಸವನೆ ಕೂಸು" (ಪಾಂಳಚ. ೪೦೭) : ಕತ್ತಲೆಯೊಳೇನಸೋ ಕಂಡು ಬಿದರಿದ ನಾಯಿ . . . ಕಪ್ಪಿಕ್ಕಿ ಮೋಳಿಡುತ ಬೊಗಳ ಹಾರಾಡುವುದು (ಪಾಂಳಚ. ೪೬೦). 'ಊಳಿಡು' ಪರಾ. [? + ಇಡು.]

ಮೋಳ್$_1$ (ನಾ). ೧. ಬತ್ತದ ಗದ್ದೆಯ ಬದುವಿನಲ್ಲಿ ಅಥವಾ ಕೆರೆಯ ಒಡ್ಡುಗಳಲ್ಲಿ (ಏಡಿ ಮುಂತಾದುವುಗಳು) ಮಾಡುವ ತೂತು.—ರಂಧ್ರ.—ಸೀಳು : "ಬತ್ತದ ಗದ್ದೆಯಲ್ಲಿಯು ನೀರಿನ ಒಡಕು" (ಶಾಸಚಂ. ೪೭) : ಮೋಳಿಯಿಂ ಕೆರೆ ಕೆಡುಗು ಆಳು ಇಲ್ಲದನ ಹೊಲ ಕೆಡುಗು (ಸರ್ಪಶ. ೦೯೫೫) ; ಕೆರೆಯು ತುಂಬುತ್ತದೆ ನೀರು ನಿಲ್ಲುವುದಿಲ್ಲ. ಮೋಳೆಯು ಗೊತ್ತಾಗುವುದಿಲ್ಲ (ಜಾಪ್ರಕ. ೦೯೬). ೨. ಹಳ್ಳ : ಎರಸುಂ ಮುತ್ತಪುಮೊಂದಿದಲ್ಲಿ ಪಡುವಲೆ ಮೂಗಯ್ಯರೆಲ್ ತೋಡಲೊಪ್ಪರುಪಂ ಪೋವುದು ಮೋಳೆಯಕ್ಕುಂ (ಅಕ್ಕಪು. ೦೦–೬). [ದೇ.ಕ ತಮಿ. ಮೋಲ್ಕೆ]

ಮೋಳ್$_2$ ' ಮಾಳ್$_2$ ' ನೋ.

ಮೋಳೆಯೋಗು (ಕ್ರಿ). ತೊಪ್ಪಾಗು ; ರಂಧ್ರವಾಗು : ಮೋಳೆಯೋಗುತ್ತಿರ್ದೂದೇರಿ ಬಿರಿದಿರ್ದೂಡನುಕೂಲಬಡ್ಡೋಪಬಂಗಳ್ ಸುತ್ತಿರ್ದೂಡೆ. . . ಅಂಭೋವಾಟಮಾ ಪೈಸರವುಂಮುದಕಸೂತ್ರಕ್ಕೆ ಹರಿಯಾದೊಡೆ (ಕಪ್ಪಣ. ೬-೨೦). [ಮೋಳ್$_1$ + ಪೋಗು$_2$ (< ಪೋ$_1$)]

ಮೋಱೆ. ಮೋರೆ (ನಾ). ೧. ಮುಖ ; ಆನನ : "ಪದನಂ ಮುಖಂ . . . ಆಸ್ಯಂ ಮೋಱೆ" (ಪಾಂಗಣ. ೪೬-೬); ಕೊರಲುಂ ಕುಸಿಯುತ್ತುಂ ಮುತ್ತರಿಸಿದ ಕುದುರೆಯಂತೆ ಮೋಱೆಯಿಂ ಪಿಗಪುತ್ತುಂ (ಧರ್ಮಾಕ್ಷ. ೩-೦೪೬) ; ಹಸ್ತಿನಪುರಿಗೆ ಧಾಳಿಯನಿಡುವೆನೆಮರರ ಮೋಱೆಗಳ ತಿವಿದು (ಶಾಪ್ರಾಂ. ೦-೦೨). ಮೋರೆ : ೧. ಮಹಿಳೆಯ ಸಂಜ್ಞೆರೆಂದು ಪೆಂಬುವನಾ ಮೋರೆಯನುಗುಳೋನ (ಕಾಪ. ೦೧–೬೦೨) ; ನರಿಯ ಮೋರೆಯ ನೋಡಿ ಪರಿತೋಷದಲಿ ನಡೆಯುತಿರೆ (ಸಣಾಪು. ೨-೦೬) ; ತೆಂಗಿನಕಾಯ ತಿಳಿನೀರ ತಕ್ಕೊಂಡು ಬಂಗಾರಮೋರೆ ತೊಳೆದೇನು (ಭಾಪುಗ. ೨೦೪). ೨. ಸಮ್ಮುಖ; ಮುಂಭಾಗ ; ಇದಿರು : ಕೋತಿಯ ಮೋರೆಯಲಿ ನಿಲುಲಂಜೆ ಮೋಸದಿ ಕೂಂದ ಭಟನೆಂದ (ಕಾಗಪು. ೨೨-೩೭).

ಮೋರೆಗೆ ಮಂಗಳಾರತಿಯಾಗು = ಮುಖಕ್ಕೆ ಮಂಗಳಾರತಿಯಾಗು; ಅವಮಾನವಾಗು: ಮುಖಭಂಗವಾಗು : ಹೀಗೆ ಮೋರೆಗೆ ಮಂಗಳಾರತಿಯಾಗಿ ಹಿಂದೆಳೆದ ಪನ್ನ ಪುಕಾರನನ್ನು ಕಂಡು (ಕಂಪುಪು. ೦೨೩).

ಮೋರೆ ತಪ್ಪಿಸು = ಮುಖ ತಪ್ಪಿಸು: ಮರೆಯಾಗು : ಅವರ ಮೋರೆ ತಪ್ಪಿಸಬೇಕೆಂದು ಮೌಸಪ್ರಭುವು ಚಡಪಡಿಸತೊಡಗಿತು (ಕಪಗ. ೦೦೨). ಮೋರೆ ಮಾರುದ್ದವಾಗು = (ಕೋಪ, ಬೇಸರ ಇತ್ಯಾದಿಗಳನ್ನು ಸೂಚಿಸಲು) ನೀಳಮುಖವಾಗು : 'ಅವನ ಮೋರೆ ಕೋಡಾಗಿದೆ ; ಅವನ ಮೋರೆ ಮಾರುದ್ದವಾಗಿದೆ' ಎಂಬ ಮಾತು ನಮ್ಮಿತ್ಯಣ ಕನ್ನಡದಲ್ಲಿ ರೂಢವಾಗಿದೆ (ಪಾಪೋಚ. ೧೩). ಮೋಱೆಯಿಂ ಮುರಿ, ಮೋರೆಮುರಿ, ಮೋಱೆಯ ಮುರಿ = ೧. ಮುಖವನ್ನು ತಿರುಗಿಸು.—ಹೊರಳಿಸು : ಒತ್ತರಿಸುತಂ ಮೋಱೆಯಿಂ ಮುರಿವುತ್ತ ಸಕ್ಕುತ. . . ಚವುದರಾಯನ ಪತ್ತರಿಕೆ ಬಂದೀಕ್ಷಿಸುತ (ಜಕ್ಕ. ೩೨-೩೬). ೨. (ಬೇಸರ, ತಿರಸ್ಕಾರ ಇತ್ಯಾದಿಗಳನ್ನು ಸೂಚಿಸುವಂತೆ) ಮುಖವನ್ನು ಗಂಟುಮಾಡಿಕೊಳ್ಳು; ಮುಖವನ್ನು ಸಿಂಡರಿಸು : ಕಕ್ಕ ಮೋರೆಮುರಿದು ಉತ್ತರವಿತ್ತಳು (ಪ್ರಚಾಪ್ರ. ೩೨). ೩. ಪರಾಙ್ಮುಖವಾಗು; ವಿಮುಖವಾಗು : ಗುರು ಪಿತಮುಪರೀಂದ ಮೋಜ್ಯ ಮುರಿದೆ ವಿಜಯವಧೂಟಾಕ್ಷದ ತಿರುಹಿ ಹಾಮ್ಮುವ ಗಂಡನವನು ನೀವು ತಪ್ಪದಡೆ (ಕಂಪ್ರಾ.೪. ೩-೩೩).

[ದೇ.ಕ ತಮಿ. ಮೋಜ್ಞಿ. ಮೋರ್ಕ್ಕ; ಕುಲ. ಮೋರ್; ತುಳು. ಮೋರಿ. ಮೋನೆ; ತೆಲು. ಮೋರ]

ಮೌಂಜ (ಗು). ಮುಂಜಹುಲ್ಲಿನಿಂದ ದಾಡಿದ ; ನೊದೆಹುಲ್ಲಿನಿಂದ ತಯಾರಿಸಿದ. [ಸಂ.]

ಮೌಂಜಿ (ನಾ). ಮುಂಜಹುಲ್ಲಿನಿಂದ ಮಾಡಿದ ದಾರ.—ಹುರಿ ; P ಬ್ರಹ್ಮಚಾರಿಯು ಧರಿಸುವ ಮುಂಜಿಹುಲ್ಲಿನ ದಾರದ ಉಡಿದಾರ.—ಕಟಿಸೂತ್ರ : ಜಿನರೂಪಮಂ ಬಿಸುಟ್ಟು ಮೌಂಜಿವಲ್ಕಲಕೌಪೀನದಂಡ ಧರನಾಗಿ ಪರಿವ್ರಾಜಕವೇಷಮುಂ ಕಿಮ್ಮೊಂಡು (ಕರ್ಣಪ. ೬-೦೦ ಪ) ; ಪೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪಱದು ಬಿಸುಟು (ಜಸಪ. ೨-೧೨) ; ಹುಗೆಗೆ ಗೋಪೀಚಂದನವನ್ನಿಟ್ಟು ಪಡುವಿಗೆ ಮೌಂಜಿಯನ್ನು ಕಟ್ಟಿ . . . ಶ್ರೀನಿವಾಸ ಶಕ್ರೋತ್ರಿ ಎಂಬ ತನ್ನ ಅಭಿಧಾನದೊಡನೆ ಪ್ರವರವನ್ನು ಪೇಳಿದ (ಕಂಪ್ರಾ. ೩೨೦). [ಸಂ. ಮೌಂಜೀ]

ಮೌಂಜೀಧಾರಣ (ನಾ). ಮುಂಜದ ಹುರಿಯ ಕಟಿಸೂತ್ರವನ್ನು ಕಟ್ಟುವ ಸಂಸ್ಕಾರ.—ವಿಧಿ : ಮಹಿಳೆಯರಿಗೆ ಮೌಂಜೀಧಾರಣ ಮತ್ತು ಉಪನಯನಸಂಸ್ಕಾರಗಳು ನಡೆಯುತ್ತಿದ್ದುವು (ಜಾಕಥ. ೬೧೦).

[ಸಂ.]

ಮೌಂಜೀಬಂಧ (ನಾ). = ಮೌಂಜೀಧಾರಣ : ಪಟುವಿಗೆ ಮೌಂಜೀಬಂಧ. . . ಯಜ್ಞೋಪವೀತಧಾರಣ. ಬ್ರಹ್ಮೋಪದೇಶಗಳು ನಡೆದವು (ಜಾಂಕಥ. ೬೬). [ಸಂ.]

ಮೌಂಜೀಬಂಧನ (ನಾ). = ಮೌಂಜೀಧಾರಣ : ಯಥಾವಿಧಿಯಾಗಿ ಅತಿ ವಿಜೃಂಭಣೆಯಿಂದ ಮೌಂಜೀಬಂಧನವನ್ನು ಮಾಡಿದನು (ಕೃದಸು. ೨೫೬) ; ದ್ವಿಜರ ಮುಖ್ಯಸಂಸ್ಕಾರವಾದ ಮೌಂಜೀಬಂಧನವೂ ಅವರಲ್ಲಿ ಶಾಸ್ತ್ರೋಕ್ತ ನಡೆದ ಹಾಗಾಯಿತು (ಕಾರಪ. ೩೭, ೨೮). [ಸಂ.]

ಮೌಕೂಫ್ ' ಮೋಕೂಫ್ ' ನೋ.

ಮೌಕ್ತಿಕ (ನಾ). ನವರತ್ನಗಳಲ್ಲಿ ಒಂದು ; ಮುಕ್ತಾಫಲ ; ಮುತ್ತು : "ಮುಕ್ತಾ. ಮೌಕ್ತಿಕಂ. ಶೌಕ್ತೇಯಂ _ ಈ ೩ ಮುತ್ತು" (ಪಾಲಾಯು. ೦೦೯–೧೦) : ಜಗಮಿದು ಮೌಕ್ತಿಕದಿಂದಂ ತೆಗೆದುದೂ ದಂತದೊಳೆ ಸಮೆದುದೂ ಪಾಲ್ದಡಲಿಂದೊಗೆದುದೂ ಪೇಲ್ಬಿನಿಗಂ ಸೊಗಯಿಸಿದುದು ಸಾಂದ್ರಚಂದ್ರಿಕಾವಿಸ್ತಾರಂ (ಕಾಪಾಂ. ೦೧೭) ; ರತ್ನ ಮೌಕ್ತಿಕದಿಟ್ಟು ಕೂಡಲಸಂಗಮದೇವಾ ನಿಮ್ಮ ಶರಣರು (ವಚಸ. ೧೧೦) ; ಹಾರ ಹಜ್ಜುದುದು ಕರ್ಣಪೂತದ ಚಾರುಮೌಕ್ತಿಕನಿಕರ ಸಿಡಿದವು (ಕಾಪಾ.ಗ. ೭-೩೨).

[ಸಂ.]

ಮೌಕ್ತಿಕಕ್ಷಾರ (ನಾ). ಮುತ್ತಿನ ಬೂದಿ : ಮೌಕ್ತಿಕದ ಭಸ್ಮ (?) : ೨೦೦ ಭಾಗ ಸಿಂದೂರ ೧೦೦ ಭಾಗ ಮೌಕ್ತಿಕಕ್ಷಾರ (ಕುಂಬಾಭಿ. ೪-೬೯). [ಸಂ.]

ಮೌಕ್ತಿಕಶಿಲಾಲಿಂಗ (ನಾ). (ಮುತ್ತಿನ ಬಣ್ಣದ) ಚಂದ್ರಕಾಂತಶಿಲೆಯಿಂದ ನಿರ್ಮಿಸಿದ ಲಿಂಗ : ನಿರ್ಮಲಬಿಮ್ಮಮೌಕ್ತಿಕಶಿಲಾಲಿಂಗಂ ಚತುರ್ವಕ್ತ್ರಸುಂದರಮಪ್ಪಲ್ಲಿರ್ದುದು ರತ್ನಪೀಠಘಟಿತಂ ದೇದೀಪ್ಯಮಾನವ್ರದಂ (ಶಾರಂಪು. ೬೩೬). [ಸಂ.]

ಮೌಖರ್ಯ (ನಾ). ೧. ಬಹಳ ಮಾತನ್ನಾಡುವಿಕೆ : ವಾಚಾಳತ್ವ. ೨. [ಜೈನ] ಐದು ಬಗೆಯ ಅನರ್ಥದಂಡವಿರತಿವ್ರತಾತಿಚಾರಗಳಲ್ಲಿ ಒಂದು : ಪುದಿದ ಸಮೀಕ್ಷ್ಯಾಧಿಕರಣಮುದಯಿಪ ಕಂದರ್ಪಮಂತ್ರಿ ಕೌತ್ಕುಚ್ಯಂ ಪೆರ್ಚಿದ ಪ್ರಮೌಖರ್ಯಮಸರ್ಥಕ್ಕಾದೊಳ್ ವ್ಯತಿಕ್ರಮಮತಿಪ್ರಸ[ಧ್ಸ ಸಹಿತಂ (ಶಬಸಾಪು. ೬-೨೦) ; ಪ್ರಮೌಖರ್ಯ — ಧಾರ್ಷ್ಟ್ಯದಿಂ ಬಹು ವಕ್ಯಪ್ರಲಾಪಮಂ ಮಾಟ್ಪ ಪ್ರಮೌಖರ್ಯಮುಂ (ತತ್ತ್ವಾರ್ಥ. ೭೬೬). [ಸಂ.]

ಮೌಖಿಕ (ಗು). ಮಾತಿನ ; ವಾಚಿಕವಾದ : 'ಮೌಖಿಕಪರೀಕ್ಷೆ' ಪರಾ. [ಸಂ.]

ಮೌಖಿಕಪರೀಕ್ಷೆ (ನಾ). ಮಾತಿನ ಮೂಲಕ ನಡೆಸುವ ಪರೀಕ್ಷೆ ; ವಾಚಿಕಪರೀಕ್ಷೆ : ತೋಂಡಿವರೀಕ್ಷೆ : ಬರೆಯತೊಡಗಿದರೆ ಶಬ್ದಗಳೇ ಹೊರಡವು — ಮೌಖಿಕಪರೀಕ್ಷೆಯಲ್ಲಿ ಪರೀಕ್ಷಕರೆದುರಿಗೆ ಬಾಯಿಯಿಂದ ಶ್ವಾಸ ಕೂಡಾ ಹೊರಡದಿರುವಂತೆ ! (ಕಾಪಾಸ್ಮೃ. ೧೦). [ಸಂ. ಮೌಖಿಕಪರೀಕ್ಷಾ]

ಮೌಗ್ಧ್ಯ (ನಾ). ೧. ಏನೂ ಅರಿಯದಿರುವಿಕೆ ; ಮುಗ್ಧತನ : ತರುಣ ಬಾಲಕಿಯರ್ ವಿಭುಬಿಂಬದಲ್ಲಿ ತಮ್ಮಾನನಮಂ ನಿರೀಕ್ಷಿಸಿ ಮದಾಂಬು ಲಾಪೋಪಮನುಯ್ದು ಬಿಂಬಪಾಧ್ಯಾನದಲ್ಲಿ ಬಿತ್ತರಿಸೆ ಮೌಗ್ಧ್ಯದೊಳಾಯ್ದು ತದಂಕಮೆಂದೆಂ (ಕಂರ್ಪಕೃ. ೦೦-೬೨). ೨. ಲಾವಣ್ಯ ; ಸೊಬಗು. [ಸಂ.]

ಮೌಜು 'ಮೋಜ್ದು' ನೋ.

ಮೌಜೆ, ಮವುಜೆ (ನಾ). ಸಣ್ಣಹಳ್ಳಿ ; ಸಣ್ಣಗ್ರಾಮ ; ಕಸಬಾ : ನಮ್ಮ ಅಣ್ಣಂದಿರಾದ ಸದರಿ ರಾಘವೇಂದ್ರವಾಮನಬಿಂದಗೋಳ ಅವರೇ ನಮ್ಮ ಬಿಂದಗೋಳ ಮೌಜೆಯಲ್ಲಿ ಇರುವ ವಿಕಶ್ರಆಸ್ತಿಯ ವಹಿವಾಟು ಮಾಡುತ್ತ ಬಂದಿರುತ್ತಾರೆ (ಗಂಪತ್ರಿ. ೫೦೦). **ಮವುಜೆ :** ಶ್ರೀಕೃಷ್ಣಾನಂದಸ್ವಾಮಿಗಳವರಿಗೆ ಮವುಜೆ ಮಜಕೂರಿನಲ್ಲೂ ಪ್ರಾಕಾರೇಪ ಭೂಮಿವುತ್ತಾರಯಿದ್ದದ್ದು . . . ಹಾಲಿಯಿನಾಮತ್ಯಿಯಲ್ಲು ಜಾರಿಯಿರುವುದು (ಕ್ರಿಶಾ. ೦೯೪೯, ೩೨-೬; ೧೮೭೯). [←ಅರ. ಮೌಝಾ ; ಹಿಂ. ಮೌಜಾ ; ಮರಾ. ಮೌಜಾ, ಮೌಜೆ]

ಮೌಢ್ಯ (ನಾ). ದಡ್ಡತನ ; ಮೂಢತನ : ಅಹಿಮಕರಂಲ ತನ್ನ ಮೌಢ್ಯದಿಬಹಳಶೋಕದಲಿರಲು (ಕೃಶಿರಾ. ೦-೩೨); ಓದಿರುವಾತಗೆ ಮೌಢ್ಯವೆಂಬುದಿಲ್ಲ (ಜಾಶತಕ. ೪೦-೯೦); ತನ್ನ ಜಾಡ್ಯ ಮೌಢ್ಯ ದೊಳಗೆ ಸಾಧಿಸಿಹುದು —ಗೊತ್ತು ನನಗೆ (ಪ್ರಾಜಡಗ. ೪೦-೭). [ಸಂ.]

ಮೌದ್ಗ (ನಾ). ಹೆಸರುಕಾಳನ್ನು ಬೆಳೆಯಿಬಿವ ಹೊಲ : ಪರಿಪಾಲಿಸಿಮುಪ್ಪ ಕನ್ಕ ನಾಡೆ ಮೌದ್ಗಂ[ಜಾಹಾ. ೧೯೦] ಮಾಷ್ಯಂ ಪಾಲೇಯಂ ವೈಹೇಯಂ (ಕಂರ್ಪಕೃ. ೦-೯೦). [ಸಂ.]

ಮೌದ್ಗೀನ (ನಾ) : ಅ ಮೌದ್ಗ : "ಹೆಸರು ಕೆಯ್ ಮೌದ್ಗೀನಮೆಂಬುದು" (ಕಠಾಯಾ. ೩೬-೬); ವಿನೆನೆವುಪೊ . . . ತೈಳೀನದ ಮಾಷೀಣದ ಮೌದ್ಗೀನದ ಬಹುಸಾರಸ್ಯಸಕಳಫಳಂಗಳ್ (ತ್ರಕೃ. ೨-೦೨). [ಸಂ.]

ಮೌನ (ನಾ). ೧. ಮಾತನ್ನಾಡದಿರುವಿಕೆ ; ಸುಮ್ಮನಿರುವುದು : ಮೌನಂ ಸರ್ವಾರ್ಥಸಾಧನಂ (ಗಣಿತಾ.೪-೩೯ ಪ); ಮೌ[ಜಾಕಾ. ದೋ]ನದಲುಂಬುದು ಆಚಾರವಲ್ಲ ಲಿಂಗಾರ್ಪಿತವ ಮಾಡಿದ ಬಳಿಕ ತಪ್ಪಿಗೊಮ್ಮೆ ಶಿವಶರಣನ್ನುಶ್ಚಿರಬೇಕು (ಶಸಾ. ೬೬೬); ಬಯಕೆಯೊಳು ಬಜಮುನುಮುಂ ಮೌನದೊಳು ನುಡಿಯುಮಂ . . . ಬೈಸಿಡುತೆ (ತಿಪ್ರ. ೮೭. ೬-೯); ಮುಮಿಸರಸಿರುಹಾಬಾಡಿದವು ಮುಸುಕಿತು ಮೌನಮಯಜಲಧಿ (ಕಾಣ್ಮಕೃ. ೦೯-೩೦). ೨. ಮಾತನ್ನಾಡದೆ ಇರುವ ಸಮಯ : 'ಮೌನವ್ರತ' ಪರಾ. ೩. ಸದ್ದಿಲ್ಲದೆ ಇರುವುದು ; ನೀರವತೆ : ಸುತ್ತಲು ಮೌನ ! ಶ್ವಶಾಸ ಮೌನ ! (ಜಾಂಕಪ್ರ. ೩೬-೨೦). ೪. [ಕಾಮಶಾ] ವಿರಹದ ಹತ್ತು ಅವಸ್ಥೆಗಳಲ್ಲಿ ಒಂದು : ಅಥಿಲಾಷೆ ಚಿಂತೆ ಸಂಸ್ಮೃತಿ ವಿಘುಗುಣನುತಿ ಸಂತಾಪನ ಕ್ರಿಯಾದ್ವೇಷ ವಿಕಳ ಪ್ರೌನ ಮೂರ್ಛ ಮರಣವೆಂಬ ದಶಾವಸ್ಥಾದಿ ವಿಚಾರಪರಿಂ (ಜನೇಕ. ೦೪೪). [ಸಂ.]

ಮೌನಂಗೊಳ್, ಮೌನಗೊಳ್ (ಕ್ರಿ). ೧. ಮಾತನ್ನಾಡದಿರು-; ಸುಮ್ಮನಿರು : ಮಜುಮಾತುಗುಂಡಲಜಿಯದೆ ಧರ್ಮವೃತ್ತಂ ಮೌನಂಗೊಂಡುಸಿರದಿರೆ (ತಂಕಾ. ೬-೨೪ ಪ). **ಮೌನಗೊಳ್ :** ೧. ಏನೂ ಅಲ್ಲೆಯೆಂದು ಮೌ[ಜಾಕಾ. ಮೋ]ನಗೊಂಡಿರಬೇಡ (ಬಸಪ್ರ. ೦೬೬); ಬಂದಿಹ ಮಹಂತರು ಮೌನಗೊಂಡಿದ್ದಿಹರು (ಬಸಪ್ರ. ೩೭-೯). ೨. ಸದ್ದು ಮಾಡದಿರು : ಮೌನಗೊಂಡುವು ಭೇರಿನಿಸ್ಸಳವೇಣ ಹೇಳುವೆ ದನುಜನುಚ್ಚಟಿ ಹಾನಿಯಾದುದು (ಕ್ರಿಶಾ. ೫೦-೩೫). [ಮೌನ + ಕೊಳ್,]

ಮೌನಕಲಹ (ನಾ). ಮಾತಿಲ್ಲದ ಜಗಳ ; ಮೌನವಾದ ಕಲಹ : ಶಮ್ಮ ಈ ಕೆಲದಿನಗಳ ಮೌನಕಲಹವನ್ನು ಇಂದು ಬಗೆಹರಿಸಿಬಿಡಲೇಬೇಕು (ಇಪ್ರಳ. ೨೭೨). [ಸಂ.]

ಮೌನಗೊಳ್ 'ಮೌನಂಗೊಳ್' ನೋ.

ಮೌನಮುದ್ರೆ (ನಾ). ಸುಮ್ಮನೆ ಇರುವುದು : ಏನು ಸಿದ್ಧಿಯಿದಕ್ಕೆ ಮೋಹಿದ ಮೌನಮುದ್ರೆಯಿ ಬಿಸುಟು ಹೇಳು (ಕುಹಾ. ೫೦-೩೬); ಇನ್ನು ನಮಗೆ ಗುಡಗಜ್ಜನ ಬಾಧೆ ತಪ್ಪುದು ಎಂದು ಹೇಳಿ ಮೌನಮುದ್ರೆಯನ್ನು ತಾಳಿದರು (ಕುಹಾ. ೩೬). [ಸಂ. ಮೌನಮುದ್ರಾ]

ಮೌನವಡು (ಕ್ರಿ). ಮಾತನ್ನಾಡದಿರು; ಸುಮ್ಮನಿರು : ಗಾನವಿದ್ಯಾಲೋಲರಾವರು ಏನೆ ಗುರು ಮೂಲೋಕಕನ್ನುತ ಮೌನವಟ್ಟಿದು ಸರ್ವಜ್ಞಪದ (ಜಾಗಕ. ೦೨-೭೬). [ಮೌನ + ಪಡು,]

ಮೌನವ್ರತ (ನಾ). ಮಾತನ್ನಾಡದೆ ಇರುವ ವ್ರತ; ಮೌನದ ಆಚರಣೆ : ಇತ್ತ ವ್ಯಪಘನಾಥನುಂ ಮೌನವ್ರತದಿಂ ಯೋಗಯೋಗ್ಯಪ್ರದೇಶದೊಳು ಅಪ್ರಹತಧ್ಯಾನನಾಗಿ ವಿಹರಿಸಿ, (ಜಾಗಿಂಕೃ. ೫೦); ಮೌನವ್ರತಕ್ಕೆ ದೀಕ್ಷಿತರಾಗಿ ಮೌನಸಂಗದಲಿ ಇರಿದಿಹರು (ಪಾಪ್ರಕ. ೧೪-೦೨). [ಸಂ.]

ಮೌನಾಧ್ಯಯನವೃತ್ತಿ (ನಾ). [ಜೈನ] ಏವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು; ಉಪವಾಸಾನಂತರದ ಪಾರಣೆಯ ಸಮಯದಲ್ಲಿ ವಾಙ್ನಿಯಮವನ್ನು ತಾಳುವುದು ಹಾಗೂ ಶಾಸ್ತ್ರಾಭ್ಯಾಸವನ್ನು ಮೌನವಾಗಿ ಮಾಡುವುದು : ಮೌನಾಧ್ಯಯನವೃತ್ತಿಯಂ ತೀರ್ಥಕರತ್ವಭಾವನೆಯುಂ . . . ಅಪ್ಪಯ್ಯತ್ತುಮೊಜುಗರ್ಭಾನ್ವಯಕ್ರಿಯೆಯೊಳು (ಕಾಪುಂಪು. ೨೦೨). [ಸಂ.]

ಮೌನಿ (ನಾ). ೧. ಮಾತನ್ನಾಡದೆ ಸುಮ್ಮನಿರುವವನು : ಮೌನಿಯಾದನು ರಾಮ (ಕ್ರಿರಾಚರಿ. ೦೩೯-೨೦೯); ಮೌನಿಯಾದವಗಿಗೆ ಕಲಹವೆಂಬುವುದಿಲ್ಲ (ಜಾಕಾಚ. ೪೦-೯೦); ಹಾಗೆ ನೋಡಿದರೆ ರಾಯರು ದೊಡ್ಡಮೌನಿ ! (ಕಾಜಾಮು. ೦೩೦). ೨. ಮುನಿ ; ತಪಸ್ವಿ ; ಋಷಿ : ಮಾನಿಗಳು ಮೌನಿಗಳು ಸ್ವಚ್ಛ ಶಿವಾಮೃತಾಪೇಚ್ಛಾತ್ಮಸುಖಿಗಳು (ಬಸಪ್ರ. ೬-೧೭). [ಸಂ. ಮೌನಿನ್]

ಮೌರಜಿಕ (ನಾ). ಮದ್ದಲೆಯನ್ನು ಬಾರಿಸುವವನು : "ಮಾರ್ದಂಗಿಕಃ. ಮೌರಜಿಕಃ — ೨ ಮದ್ದಲೆ ಬಡಿಯುವವನ ಪೆಸರು. ಮದ್ದಳಿಗ" (ಕಿಶ್ಕಾ.೦೬. ೩೦೦). [ಸಂ.]

ಮೌರಜಿಗ (ನಾ). ಅ ಮೌರಜಿಕ : "ಮೌರಜಿಗ — ಮೌರಜಿಕ=ತಮಟೆ ಬಾರಿಸುವವ" (ಕರ್ನಾಕೋ. ೩೭) ; ಸುರಪುರದ ಮೌರಜಿಗನಾವಡೆ ಕುರುಬಲದ

ಗಜಬುಜದ ಗರುದನ ತೋಱಿಸುತ ತೂಳನು ಕಲಿಪಾರ್ಥ(ಕಾಪ್ಪ.೨೦-೫೫).
[< ಸಂ. ಮೌರಜಿಕ]

ಮೌರವಪಾಶ (ನಾ). ಮುರು ಎಂಬ ಕಬ್ಬಿಣದಿಂದ ಮಾಡುವ ಒಂದು ಬಗೆಯ ಸರಪಣಿ.– ಸಂಕೋಲೆ : ಖಚರಕಿನ್ನರವಿದ್ಯಾಧರರಂ ಕಡಿಪಿಂದ ದೂಗೆ ಕತ್ತರಿಸಿ ಕೊಲ್ವ ಮೌರವಪಾಶಮಿರ್ಪುದು (ಜಗಂ. ೦೦-೫೯ ಪ); ನರಸೇನೆಗರಿವು ಲಂಕಾಪುರದ ಬಹಿರ್ಜಲಧಿ ದಾಂಟಲಿಂತಿದು ದೇವಾಸುರರ್ಗ ಮರಿದೆನಿಸಿ ನರಕನ ಪುರಮಂ ಬಳಸಿರ್ದುದೊಂದು ಮೌರವಪಾಶ (ಜಗಂ. ೦೨-೪). [<ಸಂ. ಮೌರ್ವಪಾಶ]

ಮೌರಿ$_1$, ಮವುರಿ, ಮಹುರಿ, ಮೂವುರಿ, ಮುಹುರಿ, ಮುಹುರಿ, ಮೊಹರಿ$_1$, ಮೋರಿ$_1$, ಮೋಹರಿ$_1$, ಮೌವರಿ (ನಾ). ಒಂದು ಬಗೆಯ ಉದುವ ವಾದ್ಯ : ವೇಣು ವೀಣೆ ಮೌರಿ ವಾದ್ಯಂಗಳ್ದಿ ಪಾಯು ಅಂಗುಲಿಯ ಭೇದದಿಂದ ರಚನೆಗಳ ತೋಱುವಂತೆ (ಕ್ರಕೊಚಿ. ೪. ೩೦೩-೮೪) ; ಕುಂದಿದುವ ಕೊಂಬುಗಳ ರಣದಿತ್ರಿರಿಯ ಮೌರಿ ಹಲಹಲಿಪು ರೀತಿರೀತಿಯ ಚಿನ್ನದಾ ತಂಬಟದ ಸಾನಾವಿಧವ . . . ನಿಸ್ಸಾಳಕುಳದಬ್ಬಿಱಿಪುದು (ಕೋಬಾಚ. ೩-೯೩); ತಿತ್ರಿರಿ ಮೌರಿ ತಾಳ ದಂಡಿಗೆ ಮದ್ದಲೆ ಉತ್ತಮದ ಶಂಖಿಶ್ವಾನಾದಗಳಂದ. . . ಕುಣಿಪುವರು (ಕ್ರಕಂಪ. ೪-೦೩೬-೨). **ಮವುರಿ** : (೪). **ಮಹುರಿ** : ಕೊಳಲು ಮುಹುರಿ ರಣಮವುರಿ ದವಳಸಂಕ (ಕಣಾಂಪ್ರ. ೬-೨೦೦). **ಮೂವುರಿ** : ಬಾಯಿಂದೆ ಕೊಂಬು ಮೂವುರಿ ಕಹಳೆಗಳನೂದಿ ಬಾಯಿಂದೆ ಕರಡಿಯಂ ಬಾರಿಸುತೆ ಕೊಳಲೂದಿ (ಶ್ರಕ. ಪೆ. ೦೩೯-೩). ℙ ಇದು ಧಂದಸ್ಸಿಗಾಗಿ ಮಾಡಿಕೊಂಡಿರುವ ರೂಪವಿರಬಹುದು. **ಮುಹುರಿ** : ಮುಹುರಿಯ ಮಧುರತೆಯಿಂ ಬೀಣೆಯ ಬಹುಲಿಕೆಯುಂ ಎಸೆಯ (ಪರಿಕ್ಷ. ೯-೧೩ ಪ). **ಮುಹುರಿ** : ವೇಣು ಮುಹುರಿಗಳ್ದಿ ಪೂವತ್ತರಡುರಾಗಮಿಶ್ರಂಗಳ ಅಜವತ್ತುನಾಲ್ಕಱಲ್ದಿ ಕೂಡಿ ನುಡಿವುದು ಒಂದೋ ಎರಡೋ (ಕೋಬಾಚ. ೦೩೭-೧೧೩) ; ಮುಹುರಿಶ್ವಂಗವಂಶ ಕಹಳಾಶಂಖಿಪಾವಪ್ರಭೃತಿಸುಷಿರವಾದ್ಯಚಯಮಂ . . . ತಾಳಾನುಗತವಾಗಿ ಬಾಜಿಪುತೆ ತತ್ಕುಶಲಗತಿಯಿಂ (ಪದ್ಮಣ. ೬-೫೬); ಭೇರಿ ನಿಸ್ಸಾಳಗಳು ದೂಣದತಿಸ್ವರಗಮ್ಯ ಮುಹುರಿ ವೀರಣವಾದ್ಯ ವಿದ್ಯಜ್ಜನಾವಿಕರವ್ . . . ಎಸಕದಿಂ ರಾಜಿಸಲು (ಕ್ರಕುಚ. ೪-೨೫). **ಮೊಹರಿ**$_1$: ಹೊನ್ನಿನ ಕಹಳೆಗಳಂ ಪೊಸರನ್ನದ ವಾಸಂಗಳಂ ಸುಶಂಖಿಗಳುಮಂ ಚಿನ್ನಿನ ಮೊಹರಿ[ಜಣಾಂ. ಮೌರಿ]ಗಳಂ ಸುರಹೆನ್ನೆಯರೊರ್ವೊರ್ವರೂದಿದರ್ ಕಡುನಲವಿಂ (ಜಾಪ್ರ. ೬-೯೦) ; ಕಿವಿಗೆ ಇಂಪಾದ ಮೊಹರಿ ಶ್ರುತಿಗಳ ನಾದವೂ ಕೇಳಿ ಬಂತು (ಕಂಗಾಕ್ಷ. ೩೦೬). **ಮೋರಿ**$_1$: ಮಾದುಮೆಯ ನಾಲ್ಮುದಿನ, ಮೋರಿ ಹಿಡಿದ ಕೊರಗುಗಳೇನೆ ಅವನ ವಾದ್ಯ ಕೇಳಿಸಿತೋ ಸ್ಖಲಿಪೋ (ಕುಚಿ. ೨); ಶಿವಗುಡಿಯಲ್ಲಿ ಮೋರಿ ಬಾರಿಸುತ್ತಿದ್ದ (ಪರ್ಕಸ. ೦೯೦). **ಮೋಹರಿ**$_1$: ಅಲರ್ದಿಂದಿಗಜಿಗಿ ಝೇಂಕರಿಪಲಿ ಶಿಖಗಳನ್ನೊಲೆವ ನೈದಿಲ ನಿಡಿದಂಟು ಜಲದೇವಿಯರಂಗಜವೀರವನೋದು ತೊಲೆವ ಮೋಹರಿಯಂತಾಯ್ತು (ಶ್ರಚಾಂಪ. ೦೨-೨೩) ; ನೀರದಗಳಂತೆ ನಭದೊಳ್ಪರಿದವಾಗ ಕಹಳಾಳಿಗಳು ಮೋಹರಿಗಳು (ಪುಣ್ಯಾ. ೬-೩೭). **ಮೌವರಿ** : ಪಟುಪ ಭೇರಿ . . . ಕಹಳೆ ಡಿಂಡಿಮರವದಿ ಸಂಘಟಿಸಿದುದು ಭೀರಣದ ಬೊಂಬುಳಿ ದೋಳು ಮೌವರಿಯ ಪಿಟುತರ ಧ್ವನಿ ಪೀವಿದುದು ದಿಕ್ಪಟಗಳನು (ಸಪಕ್ಕು. ೦೩-೬೪). [ದೇ.॥ ತುಲು. ಪೂರಿ, ಮವುರಿ]

ಮೌರ್ಕಿ (ನಾ). [ಸಂಗೀತ] ಒಂದು ರಾಗದ ಹೆಸರು : ಮೋದದಿಂದ ಗಾಯಕರು ಮೌರ್ಕಿ ಪಾಡಲು (ಶಾಶಿಕ್ಷ. ೧೦-೬). [<ಸಂ. ಮಾಹುರ್ಕಿ]

ಮೌರ್ಖ್ಯ (ನಾ). ದಡ್ಡತನ ; ಅವಿವೇಕ ; ಮೂರ್ಖತನ : ಕ್ಷಿತಿಜೋಕೀ ದೇಹಂಗಳು ಪಶುಗಳಂದದಿ ತಿಳಿಯದತಿಶಯದ ಸುಖಗಳನು ಹಾರ್ಯಪರಮದಿನದಿ ಮೌರ್ಖ್ಯದಿಂದೀ ಪುಸಿಯನು (ಕಂಗಾಡಾ. ೩-೯-೨೨). [ಸಂ.]

ಮೌರ್ವ (ಗು). ೧. ಮುರು ಎಂಬ ಕಬ್ಬಿಣದಿಂದ ಮಾಡಿದ. (ನಾ). ೨. ಕಂದುಬಣ್ಣದ ಕುದುರೆ : "ತುರಗವರ್ಣಂ . . . ಮಾಸರದಾಗೆ ಮೌರ್ವನಕ್ಕುಂ" (ಮಂಗಾ. ೮೦-೦೪). [ಸಂ.]

ಮೌರ್ವಿ (ನಾ). ಬಿಲ್ಲಿನ ಹೆದೆ ; ನಾರಿ ; ಸಿಂಜಿನಿ : "ಮೌರ್ವೀ, ಜ್ಯಾ. ಶಿಂಜಿನೀ. ಗುಣಃ. ಜೀವಾ—ಈ ೫ ಬಿಲ್ಲ ತಿರು" (ಪಣಾಮು. ೬೬-೩೦೦) ; ಲಲಿತಭ್ರೂಕಾರ್ಮುಕಂ ಕೇಕರರುಚಿ ನಸಿಗೋಲ್ ಕುಂತಳಂ ಮೌರ್ವಿ ಮಂಜೀರಲಸದ್ಧ್ವನಂ ಧನುಷ್ಟಂಕೃತಮನೆ . . . ಎಸೆಗುಂ ವಾರನಾರೀಕದಂಬಂ (ಜಗಂ. ೨-೪೬) ; ಧನುವಿಗೆ ಮೌರ್ವಿಯ ತೊಡಿಸಿ ಗುಱಿಯನೆಚ್ಚ ಘನಮುಪಮನಿಗೆ ನೂಱಿಂದು ತನುಜೆಯು ಕೈಯಲಿ ಮಂದಾರಮಾಲೆಯ ಘನತರರಾಗದಿಂದಿಕ್ಕು (ಕಪಂಗಾಂ. ೦೬-೨೩).
[ಸಂ. ಮೌರ್ವೀ]

ಮೌರ್ವೀನಾದ (ನಾ). ಬಿಲ್ಲಿನ ಹೆದೆಯ ಠೇಂಕಾರ ; ಜ್ಯಾನಾದ : ಸಂಸ್ಫೋಳಿಕೋದ್ಭತ ಚಪಳಜಾಪಕರಾಳಮೌರ್ವೀನಿನದಭೀಷಣವಾದನಾ ಭೀಮ (ಕಾಪ್ಪಾ. ೦೨-೦೩). [ಸಂ.]

ಮೌಲ (ಗು). ೧. ಬಹಳ ಹಿಂದಿನ ; ಪ್ರಾಚೀನವಾದ. ೨. ಮುಖ್ಯವಾದ ; ಮೂಲಭೂತವಾದ. (ನಾ). ೩. ಗೃಹ, ಕ್ಷೇತ್ರ ಮುಂತಾದುವುಗಳ ಹಿಂದಿನ ಸ್ಥಿತಿಗತಿಗಳನ್ನು ತಿಳಿದು ವಂಶಪರಂಪರೆಯಾಗಿ ಅಧಿಕಾರ ನಿರ್ವಹಿಸುವ ಮಂತ್ರಿ ಮೊದಲಾದ ರಾಜಸೇವಕ : ಮೌ[ಲ]ಭೃ[ತ್ಯ]ಸುಹೃತ್ ಶ್ರೇಣಿವಿತ್ತಾಪ್ತವಿಕತಂತ್ರಂಗಳ್ ಪನ್ನೆದ ಜಂತ್ರಂಗಳಂತೆ ಕುಱುಬಮಾದುವು (ಪಂಚಾ. ೦೩-೨೦ ಪ). [ಸಂ.]

ಮೌಲಬಲ (ನಾ). ಪ್ರಧಾನವಾದ ಸೈನ್ಯ ; ಮೂಲಬಲ : ನಿಜರೂಢ ವ್ಯಾಳಕುಂಡಾಲಮಂ ಒಳಸಿ ಎಂದ ಮೌಲ[ಜಣಾಂ. ೪]ಬಲಮನರನಲಿಗೆ ನೂಂಕಲ್‌ವೇಬ್ದು (ಪಂದ್ರಪು. ೧೦-೯೯ ಪ). [ಸಂ.]

ಮೌಲಿ, ಮೌಳಿ (ನಾ). ೧. ತುದಿ ; ಶಿಖರ ; ಅಗ್ರಭಾಗ : ಫಣಿ ಗರುಡ ಗಜ ಮಕರ . . . ಚಿಹ್ನಂಗಳ್ ಯಥಾಕ್ರಮದಿಂ ತನ್ಮೌಲಿಗಳೊಳ ಪ್ಪುವ (ಪಪ್ರಕ್ರ. ೦೫೬). ೨. ತಲೆ : 'ಚಂದ್ರಮೌಳಿ' ಪರಾ. ೩. ಕಿರೀಟ ; ಪಟಕುಟ : ಆ ಸತ್ಕೀಂದ್ರಜೋಳೇಂದ್ರಸತ್ಪದಪದ್ಮಕ್ಕೆ ಮರಂ ದಮಂ ಪಡಮ ಮೌಳಿದ್ಯೋತಿಯಿಂ ಪೊಳ್ಗಿದಂ (ಜಾಪ್ರ. ೪-೦೦೩). ೪. ಜಡೆ ; ಮುಡಿ. **ಮೌಳಿ** : ೨. "ಮುಂಡಃ. ಉತ್ತಮಾಂಗಃ. ಮಸ್ತಕಃ. ಮೌಳಿಃ. ಶಿರಃ. ಶೀರ್ಷಾ. ಮೂರ್ಧಾ, – ಈ ೮ ಮಂಡೆ" (ಪಣಾಮು. ೦೪-೩೬೩). ೩. "ಮೌಳಿಂ[ನಲ್ ಮಕುಟ [ಜಣಾಂ. ಮುಂಬರ, ಮಕುರ]" (ಪಣಾಮ. ೭) ; ಮೋಟಿನ ಮೌಳಿ ಮೂಱೊಜತಿಯ ಶೃಂಗಾರ ಬೇಟ ಕುರುಡಂಗೆ ಸೆಗೆಡಿಯಾಯಿತ್ತು (ಜಸಕ. ೪೩೦). ೫. (ಆಲಂ) ಮುಂದಾಳು ; ನಾಯಕ : ಓಲಗದೊಳಿರ್ದಖಿಳಮೂರ್ಧರ ಮೌಳಿಯನು ಕಂಡವಧರಿಸಿ ಸಿರಿಲೋಲ ವಿಜಯಂಗೈಯಲವಸರವುಂಟೆ ಹೇಳೆವಲು (ಕಾಪ್ಪಾ. ೪-೨೬). ೬. ಮುಖದ ಸೌಂದರ್ಯ (?) : ಎಱದಳೋ ಸುರರಿಂಗೆ ಸತಿ ಕೈದೋಜದಳೋ ದನುಜರಿಗೆ ಮೌಳಿಯ ಬೆಱದಳೋ ಅಸುರರಿಗೆ ಸುರರಿಗೆ ಸುರದಳೋ ಸುಧೆಯ . . . ಎನೆ ಮುನಿಸಿಕರ ಸಲುಹಿದಳು ಸುರಕುಲವ (ಪಣಾಗ. ೪-೯-೨೨). [ಸಂ.]

ಮೌಲಿಕ (ಗು). ೧. ಮೂಲರೂಪದ ; ಮೂಲಭೂತವಾದ : ಗೀತಾ ರಹಸ್ಯದಲ್ಲಿ ವ್ಯಕ್ತವಾದ ಬಳಕರ ಮೌಲಿಕ (original) ವಿಚಾರಗಳನ್ನು ಸ್ಪಷ್ಟಪಡಿಸುವುದು ಕ್ರಮವಾಪ್ತ (ಕಜ್ಞಾ. ೦೪೯) ; ಅವು ಮೌಲಿಕ ಬಾಲಬೋಧವೆದ್ದತಿಯವಾದ್ದು ಗೀತೆಯ ತತ್ವಜ್ಞಾನ ಹೇಳುವಂಥವಾಗಿರುವುದನ್ನು ಕಂತು ಪುತ್ತೊಂದು ಬಗೆಯ ಕೌತುಕವನ್ನಿಸುವುದು (ಸ್ಫೂಪ್ರ. ೦). (ನಾ). ೨. ಪ್ರಾಚೀನವಾದುದು ; ಮೂಲಭೂತವಾದುದು. ೩. ಮುಖ್ಯವಾದುದು ; ಮಹತ್ವವಾದುದು : ಈ ಪುಸ್ತಕವು ಸ್ವತಂತ್ರವೆ ?

ಮೌಲಿಕವೆ ? (ಪುಣಾಕ. ೩) ; ಈ ಪಂಥದಲ್ಲಿ ಏವರ ಅಧಿಕಾರವು ಮೌಲಿಕವಾಗಿದೆ (ಪುಣಾಕ. ೦೦) ; ಮೌಲಿಕವಾಗಿ ನೋಡಿದರೆ ಸಾಹಿತ್ಯವೆಂಬುದೂ ಒಂದು ಮೌಲ್ಯವೇ (ಕಂಚಿ. ೧೦. ಟಿಪ್ಪ). ೪. ಒಂದು ಬಗೆಯ ತೆರಿಗೆ: ತ್ರಿಭೋಗಾಧ್ಯಂತರಮಷ್ಟಭೋಗತೇಜಃಸ್ವಾಮ್ಯಯುಕ್ತ (ಕ್ರಂ) ಶುಲ್ಕ ದಂಡ ಸಾದಕಾರುಕರಮೌಲಿಕಾರ್ಹಣಾದಿ ಸಲದ್ರವ್ಯಾಪಾರ್ಜನೋಪೇತಂ (ಇಂ. IV. ೨೬೬-೬೮ ; ೧೨೬೨). [ಸಂ.]

ಮೌಲಿಕತೆ (ನಾ). ಬಹಳ ಹಿಂದಿನಿಂದಲೂ ಉಳಿದುಬಂದಿರುವ ಗುಣ. – ಸ್ವಭಾವ : ಈಗ ಅವರ ಮೌಲಿಕತೆ ತೀರ ಬಂತು (ಕ್ಯ. ೮೫. ೧೪).

[ಸಂ. ಮೌಲಿಕತಾ]

ಮೌಲ್ಯ (ನಾ). ೧. ಬೆಲೆ ; ದರ ; ಧಾರಣೆ : "ವೃತ್ತಿಕ್ಷಿಪ್ತಂ ಧೃತಿ ವೇತನಂ ಮೌಲ್ಯಮನೆ ಹೊತ್ತ ಬೆಲೆ" (ಪಾಂಗಣ. ೦೦೨-೨) ; ಎರಡು ತೆರ ಮೌಲ್ಯಂಗಳೆಲ್ಲಕಂ ಲೋಕದಲಿ ಪರಮಾರ್ಥಕೊಂದು. ಸಾಂಪ್ರತದರ್ಥ ಕೊಂದು (ಪಾಂಗಣ. ೬೬೩). ೨. ಉಪಯುಕ್ತವಾದುದು ; ಬೆಲೆಯುಳ್ಳದು : ಅನಘರತಾಲ್ಯವಕ್ಷಯವಮೌಲ್ಯ [ಪಾಣಿ. ಮೂಲ್ಯ]ವಭವ ಸ್ವಲ್ಪಬಹ ಕೈವಲ್ಯವೀ ವಿಮಾರ್ಷಿಸಿಕೊಳ್ಳಿ (ಕೃಷ್ಣ. ೪೬-೬೩). ೩. ಜೀವನದಲ್ಲಿ ಬೆಲೆಯುಳ್ಳದ್ದೆಂದು ಭಾವಿಸುವ ಅಂಶ ; ಆದರ್ಶ : ಜೀವನದ ಮೂಲಭೂತಕ್ರಿಯೆಗಳ ಗುರಿಯಾಗಿ ಏನು ಜೈವಿಕ ಚಟುವಟಿಕೆಗಳಿಗೆ ಮಾರ್ಗದರ್ಶನ ಮಾಡುವ ಆದರ್ಶಗಳಿಗೆ ಮೌಲ್ಯಗಳೆನ್ನಬಹುದು (ಕಂಚಿ. ೯ ಟಿಪ್ಪ); ಸಪ್ತಕಾಪ್ತದಲ್ಲಿ ಈ ವ್ಯಕ್ತ್ಯತೀತವಮೌಲ್ಯಗಳಿಗೇ ಪ್ರಧಾನತೆ ಯುಂಟಾಗುವುದೆಂದು ತೋರುತ್ತದೆ (ಕ್ಯ. ೫೫. ೧೪). [ಸಂ.]

ಮೌಲ್ಯಧನ (ನಾ). ಒಂದು ವಸ್ತುವನ್ನು ಮಾರಿದಾಗ ಅದರ ಬೆಲೆಯಾಗಿ ಬರುವ ಹಣ ; ಬೆಲೆಯ ಹಣ : ಈ ಆಭರಣಂಗಳಂ... ಕ್ರಯಕ್ಕೆ ಹೊಂದಿಸಿ ಅದರ ಮೌಲ್ಯಧನವನ್ನು ನೀವೇ ಯಾಗಾರ್ಥವಾಗಿ ಪಡೆದುಕೊಳ್ಳುವರಾಗಿ (ಪುಣ್ಯಾಶ್ರಂ. ೨೪೭). [ಸಂ.]

ಮೌಲ್ಯನಿರ್ಣಯ (ನಾ). ಯಾವುದಾದರೊಂದು ವಸ್ತು, ಕಲಾಕೃತಿ ಇತ್ಯಾದಿಗಳ ಬೆಲೆ ಅಥವಾ ಉಪಯುಕ್ತತೆಯನ್ನು ನಿಗದಿಪಡಿಸುವುದು. — ಗೊತ್ತುಮಾಡುವುದು : ಸಾಹಿತ್ಯದ ಮೌಲ್ಯನಿರ್ಣಯದ ಸಮಸ್ಯೆಯೊಡನೆ ಸ್ವತಃ ಸಂಬಂಧಿಸಿದಂತೆ, ಆಚರಣೆಯ ತತ್ತ್ವವೊಂದು ಪ್ರಾರಂಭದಲ್ಲಿ ನಮಗೆ ಇದ್ದೇ ಇದೆ (ಪಾಕಿಕ್ರ. ೩೦೩). [ಸಂ.]

ಮೌಲ್ಯಮಾಪನ (ನಾ). ಯಾವುದಾದರೊಂದು ವಸ್ತು, ಕಲಾಕೃತಿ, ಗ್ರಂಥ, ಲೇಖನ ಇತ್ಯಾದಿಗಳ ಬೆಲೆಯನ್ನು ಅಳೆಯುವಿಕೆ. — ಅರ್ಹತೆಯನ್ನು ಗುರುತಿಸುವಿಕೆ. – ಯೋಗ್ಯತೆಯನ್ನು ನಿರ್ಣಯಮಾಡುವಿಕೆ : ನರನಾರಿಯೆಂದವೆ ... ತಮ್ಮ ಆತ್ಮಪರಿತೋಷದಿಂದ ಪ್ರಯೋಗದ ಸಿದ್ಧಿಯ ಮೌಲ್ಯಮಾಪನವನ್ನು ಮಾಡಬೇಕು (ಕ್ರಾಂಥ. ೪೪) ; ಸಾಹಿತ್ಯದ ಮೌಲ್ಯಮಾಪನವನ್ನು ... ವಿವೇಚಿಸುವುದು ನಮಗಿಂದ ಉಳಿದಿದೆ (ಪಾಕಿಕ್ರ. ೩೧೮). [ಸಂ.]

ಮೌಲ್ವಿ (ನಾ). ಮುಸಲ್ಮಾನರ ಧರ್ಮಗುರು : ಅವನ ಬೋಧನೆಯನ್ನನುಸರಿಸಿ ಮೌಲ್ವಿಗಳೂ ಉಲಮಾಗಳೂ ದೇಶದೇಶಗಳಿಗೂ ಹೋಗಿ ... ಗ್ರಂಥರಚನೆ ಮಾಡಿ (ಕ್ರಗಂಥಾ. ೦೬೨) ; ಅಲ್ಲಿಯ ಮೌಲ್ವಿಯೇ ಅವನಿಗೆ ಒಂದು ಕಂಬಳಿಯನ್ನು ಕೊಟ್ಟಿದ್ದರು (ಕೃಚರಿ. ೦೨೬) ; ದೊಡ್ಡ ದೊಡ್ಡ ಅಧಿಕಾರಿಗಳೂ, ಮೌಲ್ವಿಗಳೂ ... ರಾಜಾಗಮನಕ್ಕೆ ಪೂರ್ವ ಭಾವಿಯಾಗಿ ಸಿದ್ಧರಾಗಿ ಕಾದಿದ್ದರು (ಕಶಾ. ೫೧೦).

[←ಅರ. ಮವ್ಲೀ: ಪಾರ. ಮಾರಾ. ಹಿಂ. ಮೌಲವೀ]

ಮೌವರಿ ' ಮೌರ್ವಿ ' ನೋ.

ಮೌಸಿ ' ಮಾವಸಿ ' ನೋ.

ಮೌಸೂಳ (ಗು). ೧. ಮೇಲೆ ಹೇಳಿಪ : ಹಿಂದೆ ಹೇಳಿರುವ. (ನಾ). ೨. (ಹಿಂದೆ) ಸೂಚಿಸಲಾದ ವ್ಯಕ್ತಿ : ನಮ್ಮ ಋಣಾನುಬಂಧ ಪೂರ್ವದಿಂದ ಸರಿಯಾಗಿ ನಡದು ಬರುತಿರಲಿಕ್ಕೆ ನಿಮ್ಮಿಂದಾ ಇಂಥಾದ್ದು ಬರಲಿಕ್ಕೆ ಇಲ್ಲ. ಸಾಹೇಬ ಮೌಸೂಫುಗೆ ಬಿಟ್ಟು ಕಳುಹಿಸುವಂತೆ ಮಾಡಿಸಬೇಕು (ಚಕ್ರಪಾ. ೭೮). [← ಅರ. ಮವ್‌ಸೂಫ್; ಹಿಂ. ಮೌಸೂಫ್; ಮರಾ. ಮೌಸುಫ್, ಮೌಸೂಫ್]

ಮೌಹಳಗ (ನಾ). ಒಂದು ಬಗೆಯ ಕುದುರೆ : ಜನ್ನನಂ ನೀಲನನಳಗನಂ ತನ್ನ ಕತ್ತಳ ಮೌಹಳಿಗನಂ ತನ್ನ ... ವಾಹಕರಿರಾ ನೀವು (ಜಪ್ಪ. ೬೦-೪೦).

[?]

ಮೌಹೂರ್ತ (ನಾ). ಮುಹೂರ್ತಜ್ಞಾನವನ್ನು ಬಲ್ಲವನು; ಜೋಯಿಸ: "ಸಾಂವತ್ಸರಃ ... ಮೌಹೂರ್ತಃ, ಜ್ಞಾನಿಸ್. ಕಾರ್ಷಾಂತಿಕಃ – ರ ಜ್ಯೋತಿಷ್ಯನ ಹಸರುಗಳು. ಜೋಯಿಸನು" (ಕರ್ಣಾಂ. ೫೬೪). [ಸಂ.]

ಮೌಹೂರ್ತಿಕ (ಗು). ೧. ಕ್ಷಣಿಕವಾದ ; ಕ್ಷಣದ. ೨. ಮುಹೂರ್ತಕ್ಕೆ ಸಂಬಂಧಿಸಿದ. – ಸೇರಿದ. (ನಾ). ೩. = ಮೌಹೂರ್ತ : "ಸಾಂವತ್ಸರಃ, ಜ್ಯೋತಿಷಿಕಃ, ಜ್ಞಾನೀ. ಮೌಹೂರ್ತಿಕಃ ... ಗಣಕಃ – ಈ ರ ಜೋಯಿಸಗಂ" (ಕರ್ಣಾಮು. ೬೬-೭೯); ಅತ್ಯೀಯಪುತ್ರೀವಿವಾಹೋತ್ಸವಕ್ಕೆ ಮೌಹೂರ್ತಿಕರಂ ಕರೆದು ದಿವಸಮಂ ಪೆಸಗೊಳ್ವುದುಂ (ಶಿಪು. ೯-೩೦ ಪ) ; ನಿಜ'ಯ ಕಯ್ಗೂಡಿ ವಧೂವರರಂ ಮೌಹೂರ್ತಿಕ ನಿರೂಪಿತ ಶುಭಮುಹೂರ್ತದೊಳ್ ... ಪಾಣಿಗ್ರಹಣಾಂಗೆಯ್ಸಿದಾಗಳ್ (ಸುಕುಮಾ. ೧೭-೧೦೦ ಪ). [ಸಂ.]

ಮೌಳಿ ' ಮೌಲಿ ' ನೋ.

ಮೌಳಿಕಾಣಿ (ನಾ). (ಆಲು) ನಾಯಕ: ಮುಖಂಡ: ' ಮೌಳಿಕಾಣಿತನ ' ಪರಾ. [ಮೌಳಿ (=ಮೌಲಿ) + – ಕಾಣಿ]

ಮೌಳಿಕಾಣಿತನ (ನಾ). (ಆಲು) ನಾಯಕನಾಗಿರುವಿಕೆ ; ಮುಖಂಡನಾಗಿರುವಿಕೆ : ಮೌಳಿಕಾಣಿತನದಿಂದೊಮ್ಮೆ ತನ್ನ ಭುಜಾದಂಡಮಂ ತಿರುಗಿ ನೋಡುತುಂ (ಕಂಚಿ. ೯-೧೭). [ಮೌಳಿಕಾಣಿ + – ತನ]

ಮೌಳಿಮಣಿ (ನಾ). ಕಿರೀಟದ ರತ್ನ ; ಮಕುಟ ಮಣಿ : ಪೃಥಿತಪೃಥಿವೀ ಪಾಲೌಘನಮ್ರಮೌಳಿಮಣಿ ಪ್ರಭಾಗ್ರಥಿತಪದಪೀಠಾಗ್ರಂ ಕೇಯೂರವಮಂ ತಳೆವಂದದಿಂ ಪೃಥುಳಭುಜದಿಂ ಪೃಥ್ವೀಕಂ ತಾಳ್ದಿದಂ ಬೆಲನೆಲ್ಲಮಂ (ಕಾಜಂಪು. ೦೬) ; ಯಾದವಮಹೀಭುಜಮೌಳಿಮಣಿಬ್ರಜಪ್ರಭಾಲಿಂಗಿತಪಾದ ಪೀಠಂ (ಕಾಭಾ. XX. ೧೬-೬ ; ೨೦೧೬) ; ಓಲಗಿಸುವುದು ಮಿಕ್ಕರಾಯರ ಮೌಳಿಮಣಿ ಪಾಂಡುವಿಷ ಚರಣನಖಾಳಿಯನು ಸೆಣಸುವ ಮಹೀಶ್ವರ ಮೌಳಿಮಣಿಕಿರಣ ಓಲಗಿಸಿತು ಪ್ರಣಯದಮರೀ ಬಾಲೆಯರ ಪದನಖಮನು (ಕಾಜಂಪು. ೯-೩). [ಸಂ. ಮೌಲಿಮಣಿ]

ಮ್ಯಾಚು (ನಾ). ೧. ಸರಿಹೊಂದುವುದು ; ಜೋಡಿ : ಇವಕ್ಕೆ ಮ್ಯಾಚು ಆಗೋ ಬ್ಲೌಸುಪೀಸು ತಂದುಕೊಡಿ (ಕಾಮ್ಯಕ. ೬೮). ೨. (ಆಟಗಾರರು) ಪರಸ್ಪರ ಪ್ರತಿಸ್ಪರ್ಧಿಗಳಾಗಿ ನಿಂತು ಆಡುವ ಆಟ ; ಪಂದ್ಯ : ಅಂದು ಅವರ ಶಾಲೆಯಲ್ಲಿ ಹಾಗು 'ಹಾಕಿ' ಮ್ಯಾಚು ಬೇರೆ ಇತ್ತಂತೆ (ಕಿಂಬಾಕಿ. ೦೩) ; ಅದು ಹೋಗಲಿ ಬಿಡು, ಮ್ಯಾಚನಲ್ಲಿ ಏನಾಯಿತು ? (ಪುಣಾಗ. ೦೬). [←ಇಂ. Match]

ಮ್ಯಾಜಿಸ್ಟ್ರೇಟ್ (ನಾ). ರಾಜ್ಯಸಂಸ್ಥಿತಿಶಾಖೆಯ ದಂಡಾಧಿಕಾರಿ : ನ್ಯಾಯಾಧಿಪತಿ ; ವ್ಯಾಯಾಧಿಕಾರಿ : ಪೋಲಿಸ್ ಮತ್ತು ಮ್ಯಾಜಿಸ್ಟ್ರೇಟ್ ಆಡಳಿತಗಳು (ಪ್ರಾಚಾ. ೧೩) ; ನಮ್ಮ ರೆಸಿಡೆಂಟ್ ಮ್ಯಾಜಿಸ್ಟ್ರೇಟರು ಕೂಡ (ಕಾಬ್ಯಕ. ೬೭೬). [←ಇಂ. Magistrate]

ಮ್ಯಾಣ ' ಮಯಣ ' ನೋ.

ಮ್ಯಾಣಪ್ಪಟ ' ಮೇಣಗಪ್ಪಡ ' ನೋ.

ಮ್ಯಾನಾ ' ಮೇನಾ ' ನೋ

ಮ್ಯಾನೇಜರಿಕೆ (ನಾ)· ವ್ಯವಸ್ಥಾಪಕನ ಅಧಿಕಾರ. –ಹುದ್ದೆ : ಅವನ ಮ್ಯಾನೇಜರಿಕೆಯನ್ನು ನೋಡಿ ನನಗೂ ಆಮ್ಯತವನ್ನಿಸಿತು (ಕಂಗಿರೂ. ೦೯೯).

[ಮ್ಯಾನೇಜರು + –ಇಕೆ]

ಮ್ಯಾನೇಜರು (ನಾ)· (ವ್ಯಾಪಾರ, ಸಂಸ್ಥೆ ಮೊದಲಾದುವುಗಳ) ಕಾರ್ಯನಿರ್ವಾಹಕ ; ವ್ಯವಸ್ಥಾಪಕ : ಅವನಿಗೆ ಬುದ್ಧಿ ಹೇಳುವುದರ ಏಂದೆ. ಮ್ಯಾನೇಜರವರು ಒಳಕ್ಕೆ ಧಾವಿಸಿದರು (ಪಾರಿಗೇ. ೪೦೦).

[← ಇಂ. Manager]

ಮ್ಯುಜಿಯಂ ' ಮ್ಯೂಸಿಯಂ ' ನೋ.

ಮ್ಯುಸಿಯಮ್ಮು ' ಮ್ಯೂಸಿಯಂ ' ನೋ.

ಮ್ಯೂಸಿಯಂ. ಮ್ಯುಜಿಯಂ, ಮ್ಯುಸಿಯಮ್ಮು (ನಾ). ಪುರಾತನ ಅವಶೇಷಗಳನ್ನು ಸಂಗ್ರಹಿಸಿ ಪ್ರದರ್ಶಿಸುವ ಮಂದಿರ ; ವಸ್ತು ಸಂಗ್ರಹಾಲಯ : ವಸ್ತುಸಂಗ್ರಹಾಲಯಗಳು (ಮ್ಯೂಸಿಯಂ) ಜನತೆಯ ಶಿಕ್ಷಣಕ್ಕೆ ನೆರವಾಗುತ್ತವೆ (ತ್ರಿಪ. ೫೮). **ಮ್ಯುಜಿಯಂ** : ಅಲ್ಲಿಯೇ ಸಮೀಪದಲ್ಲಿದ್ದ . . . 'ಮ್ಯುಜಿಯಮ್' ಬಳಿ ಬಂದ (ಎಚಕ. ೬೮). **ಮ್ಯುಸಿಯಮ್ಮು** : ವಿಜಾಪುರ ಮ್ಯುಸಿಯಮ್ಮಿನಲ್ಲಿರುವ ವಿಕ್ರಮನ ಕಾಲದ ಒಂದು ಮಹಾಶಾಸನವನ್ನೋದಿ (ಜಾಬಸಂ. ೬).

[← ಇಂ. Museum]

ಮ್ರಿತ್ತು ' ಮಿಟ್ಟು ' ನೋ.

ಮ್ಲಾನ (ಗು)· ೧. ಮುದುಡಿದ ; ಬಾಡಿದ ; ಮಸುಕಾದ : ಮ್ಲಾನ ಮುಖಚಂದ್ರಂ ಪರೇಂದ್ರನವಳೆಡೆಗೋಡಿದನ್ (ಶ್ರೀಶಾತಾ. ೬೭–೬೮). ೨. ದಣಿದ ; ಬಳಲಿದ ; ಜಡವಾದ : ಮ್ಲಾನ, ತೂನ್ಯ . . . ಭುಜ ದಿಗಂತದಿ ಗಗನಕಿದುರು ನಿಂತಿದೆ ತರು (ಆಪೇ. ೦೪–೦). ೩. ದುಃಖದಿಂದ ಕೂಡಿದ : ಜಗುಪ್ಸೆಗೊಂಡ. ೪. ಕೊಳಕಾದ : ಹೊಲಸಾದ ; ಮಾಸಿದ. ೫. ಕಪ್ಪಾದ ; ಕಪ್ಪುಬಣ್ಣದಿಂದ ಕೂಡಿದ· (ನಾ)· ೬. ಬಾಡಿದುದು : ಕಳೆಗುಂದಿದುದು : ವಿರಹಪರವಶಾಂಗಂ ತ್ಯಕ್ತ ಜಾಯಾನುಷಂಗಂ . . . ದರವಿಚಳದಪಾಂಗಂ ಮ್ಲಾನವಮಾಯ್ತು ರಥಾಂಗಂ (ಶಂಪ್ರತ್ಯ. ೯–೩). ೭. ಕೊಳಕಾದುದು ; ಮಾಸಿದುದು ; ಮಲಿನವಾದುದು : "ಕಿಲ್ಬಿಷಂ. ಮಲಿನಂ. ಮ್ಲಾನಂ. ಮಲೀಮಸಂ— ಈ ೪ ಮಸಿದುದು" (ಶಬಾಮು. ೮೫೦-೮೩). ೮. ಹೀನವಾದುದು ; ಕೀಳಾದುದು : ಅವರ ಸಾಹಸ ಎಷ್ಟು ಮ್ಲಾನವಾದ್ದು (ಶಿಶಿಂ. ೨. ೬೮).

[ಸಂ.]

ಮ್ಲಾನತೆ (ನಾ)· ೧. ಕಾಂತಿಹೀನತೆ : ಮಾನವಕನ್ಯೆಯಂ ಬಯಸಿ ನಂವನೆ ನಿನ್ನ ಮನಕ್ಕೆ ಚಿಂತೆಯಂ ಮ್ಲಾನತೆಯಂ ಮುಖಕ್ಕೆ ತರವೇಬ್ಬುದೆ (ಹಂಗಾಪಾ· ೯–೧೯). ೨. ದೀನವು ; ಬಳಲಿಕೆ : ಮೂಸ್ಸನಿಕೋವನ ಮುಖ ಚರ್ಯೆಯಲ್ಲಿ ನಿರುತ್ಸಾಹ ಮ್ಲಾನತೆಗಳು ತಲೆದೋರಿದುವು (ತ್ರಿಪು· ೨೩೦)· ೩. ದುಃಖ : ಒರಿದುಂ ಬಿದಿ ನಿಜಜನ್ಮಾಕರಮಿನಿವೆ ಪದ್ಮಜಾತಿಗಂ ಮ್ಲಾನತೆಯುಂ ದೊರೆಕೊಳಿಸಿದವೆನೆ ಮಿತ್ರಿತರರೊಳಾದಂ ಮಾಬ್ಬ ಕೈಪೆ ಏವುಪ್ಪವಂದಲ್ತೇ (ಶಂಪ್ರತ್ಯ. ೪–೦೪). [ಸಂ· ಮ್ಲಾನತಾ]

ಮ್ಲಾನೆ (ನಾ). ಕಳೆಗುಂದಿದವಳು ; ಸೊರಗಿದವಳು : ಕುಡಿ ಮುರುಟಿ, ಸೊರಗಂದಾ ಲತೆಯುಮೋರ್ ಮ್ಲಾನೆಯುಂ . . . ಕ್ಲಾನಲ್ಮೈಯುಂ ಕಂಡನ್ (ಶ್ರೀಶಾತಾ. ೦೦೩–೦೦೩). [ಸಂ. ಮ್ಲಾನಾ]

ಮ್ಲೇಂಧ (ನಾ)· ಸುಸಂಸ್ಕೃತನಲ್ಲದವನು ; ಅನಾಗರಿಕ ; ಅನಾರ್ಯ ದೇಶದವನು ; ಯವನ : "ಮ್ಲೇಂಧ–ಮ್ಲೇಚ್ಛ. ಕಿರಾತ. ಅನಾರ್ಯ" (ಕ್ಷಸಿಕೋ -೩೭); ರಾಧಕ್ಕನು. . . ಈ ಮ್ಲೇಂಧನ ಮನೆಯಲ್ಲಿ ವಾಸವಾಗಿದ್ದಳು (ಜಯಂಕ. ೪೩೬) ; ಸಾಲ್ವದೊರೆ ಒಬ್ಬ ಮ್ಲೇಂಧ ಎಂದಿದೆಯೇ ಹೊರತು, ರಾಕ್ಷಸ ಎಂದಿಲ್ಲ (ಕೃಕೃಟೀ· ೩೦೦). [< ಸಂ. ಮ್ಲೇಚ್ಛ]

ಮ್ಲೇಂಧಖಂಡ (ನಾ). ಏವತ್ತಾರು ದೇಶಗಳಲ್ಲಿ ಒಂದು; ಅನಾರ್ಯರು ವಾಸಿಸುತ್ತಿದ್ದ ದೇಶ ; ಯವನದೇಶ : ದಕ್ಷಿಣಭರತದ ನರರಂ ವಿದ್ಯಾಧರರನಡಿಜಿಸಿ ಬಲಿಸುಂ ಮ್ಲೇಂಧಖಂಡವಂ ಬಾಯ್ಕೇಳಿಸಿ ಚಕ್ರ ಪೂಜೆಯ್ದು (ಆಪು. ೯-೩೮ ಪೆ). [< ಸಂ. ಮ್ಲೇಚ್ಛಖಂಡ]

ಮ್ಲೇಚ್ಛ (ನಾ)· ೧. = ಮ್ಲೇಂಧಖಂಡ : ಮತ್ತಮಾ ಭಾರತವರ್ಷದಲ್ಲಿಯೇ ಅಂಗ. . . ಮ್ಲೇಚ್ಛ [ಪಾಣಿ· ಮ್ಲೇಂಧ] ದ್ರಾವಿಡ ಕರ್ನಾಟಕ ವೆಂಬೈವತ್ತಾಱು ದೇಶಂಗಳಕ್ಕುಂ (ಪಪೇ. ೦೯೩)· ೨. ಅನಾರ್ಯ ದೇಶದವನು; ಯವನ : ಮ್ಲೇಚ್ಛರೆಂದರೆ ನಿಮಗೆ ಬಹಳ ಆಸಹ್ಯ (ಭಾರತ. ೩೯). ೩. ಕೆಟ್ಟವನು; ನೀಚ : ಪೆಜಹೇನೆಂದು ಪೊಗಬಲಜುಯಂ ಮ್ಲೇಚ್ಛಂ (ಪಾಣಿ. ೭). ೪. ಕೀಳುಜಾತಿಯವನು : "ಕಿರಾತ:, ಶಬರ:, ಮ್ಲೇಚ್ಛ: – . . . ಈ ೮ ಬೇಡರ್ಮೊದಲಾಗುಳ್ಳಂತ್ಯಜಾತಿಗಳ್" (ಪಡಾಮು. ೧೪-೧೧೩); ಆ ಪಕ್ಕಯಂ ಕ್ರೂರರುಂ ಮ್ಲೇಚ್ಛರುಮಪ್ಪ ಬೇಡರ್ ಕೊಂದು ಪೋದರ್ (ಪಂಪಸಂ· ೦೨೦–೦೦). [ಸಂ.]

ಮ್ಲೇಚ್ಛಖಂಡ (ನಾ)· = ಮ್ಲೇಂಧಖಂಡ : ತೞಿವ ತೞನಿಂತುಟಿಂತೀ ತೞದಿಂದೆ ತಮಿಸ್ರಗುಹೆಯ ವಜ್ರದ ಪಡಿಯಂ ತೞಿದದಱ ದೆಂಕೆ ಪೋಪನ ಮೆಱಿಸು ನೀಂ ಮ್ಲೇಚ್ಛಖಂಡದುಂ ಪಡುವಣದಂ (ಆಪು. ೦೩-೩೩); ಮೂಡಣ ಮ್ಲೇಚ್ಛಖಂಡಮಂ ದಂಡನಾಯಕಂ ಬಾಯ್ಕೇಳಿಸಿ (ಜಂಪಪು. ೦೦–೩೩ ಪೆ). [ಸಂ.]

ಮ್ಲೇಚ್ಛದೇಶ (ನಾ)· = ಮ್ಲೇಂಧಖಂಡ : "ಮ್ಲೇಚ್ಛದೇಶ:. . . ಭಾರತವರುಷದ ತುದಿಯಲ್ಲಿರುವ ಕಾಮರೂಪಾದಿ ದೇಶದ ಹೆಸರು. ಅಂದರೆ ಅರಬ್ಬಿಸ್ತಾನ್- . . . ಮುಂತಾದ ಸಮುದ್ರ ಬೆಟ್ಟ ಇವುಗಳ ಹೊರಗಿನ ದೇಶಗಳು" (ಕರ್ನಾಕ್ರಿ· ೯೪).

ಮ್ಲೇಚ್ಛಭಾಷೆ (ನಾ)· ಮ್ಲೇಚ್ಛದೇಶದವರ ಭಾಷೆ ; ಅನಾರ್ಯರ ಭಾಷೆ. [ಸಂ. ಮ್ಲೇಚ್ಛಭಾಷಾ]

ಮ್ಲೇಚ್ಛಮುಖ (ನಾ)· ಕೆಂಪುಬಣ್ಣದ ಒಂದು ಬಗೆಯ ಲೋಹ : ತಾಮ್ರ: "ತಾಮ್ರಕಂ. ಶುಲ್ಬಂ. ಮ್ಲೇಚ್ಛಮುಖಂ . . . ತಾಮ್ರದ ಮೇರುಗಳು" (ಕಿರ್ಕಾಕ್ರಿ· ೩೦೪). [ಸಂ.]

ಮ್ಲೇಚ್ಛರಾಜ (ನಾ)· ಅನಾರ್ಯದೇಶದ ರಾಜ; ವಿದೇಶದ ರಾಜ; ಯವನ ರಾಜ : ವಸ್ತುವಾಹನವುರ್ವರಂ ಮ್ಲೇಚ್ಛರಾಜರಂ ಲಲಾಟ ಪೃಷ್ಠಭೂತಳರಂ ಮಾಡಿ (ಜಾಪು. ೩೩–೮೦ ಪೆ); ಮೂಡಣ ಮ್ಲೇಚ್ಛಖಂಡಮಂ ದಂಡನಾಯಕಂ ಬಾಯ್ಕೇಳಿಸಿ ತಂದಾ ಮ್ಲೇಚ್ಛರಾಜರಂ ಕಾಣುಯ್ತಂ (ಪಾಂಚಾಪ್ರ. ೦೦–೩೩ ಪೆ)· [ಸಂ. ಮ್ಲೇಚ್ಛರಾಜನ್]

*

ಯ

ಯ (ನಾ). ೧. ಕನ್ನಡವರ್ಣಮಾಲೆಯಲ್ಲಿ ನಲವತ್ತಾರನೆಯ ಅಕ್ಷರ. ೨. [ಛಂದ] ಅಕ್ಷರಗಣಗಳಲ್ಲಿ ಒಂದು ; ಆದಿಯಲ್ಲಿ ಒಂದು ಲಘು, ಮುಂದೆ ಎರಡು ಗುರುಗಳಿರುವ ಗಣ : ಯಗಣ (⏑ – –) : "ಮಯರಸತಜಭನಂ ಲಗವಿನಿಪ್ಪಕ್ಷರಂ ಗಣಾಕ್ಷರಂಗಳಕ್ಕುಂ" (ಸುಂಗಣ. ೧೭-೧೯). ೩. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ : "ನಿರುತದಿಂ ಕಟಪಯಮನಲೊಂದು" (ಪಾಂಗಣ. ೦೦೯-೦೨).

ಯಂತರ 'ಜಂತ್ರ' ನೋ.

ಯಂತೃ (ಗು). ೧. ನಿಗ್ರಹಿಸುವ ; ನಿಯಂತ್ರಿಸುವ. ೨. ನಡೆಸಿಕೊಂಡು ಹೋಗುವ ; ಮಾರ್ಗದರ್ಶಕವಾದ. (ನಾ). ೩. ನಿಯಂತ್ರಿಸುವವನು ; ನಿಯಾಮಕ. ೪. ಬಂಡಿಹೊಡೆಯುವವನು ; ಸಾರಥಿ : "ರಥಚೋದಕನಕ್ಕುಂ ಸಾರಥಿ ಸೂತಂ ಕ್ಷತ್ರ್ಯ ಯಂತೃ ಸಚೇವೃ[ಕಸುಂ]" (ಪಪ. ೪೭೯. ೪೭-೫೦). ೫. ಆನೆಸವಾರಿ ಮಾಡುವವನು : ಆನೆಸವಾರ. [ಸಂ.]

ಯಂತ್ರ (ನಾ). ೧. ಏನನ್ನಾದರೂ ಕಟ್ಟುವ, ಹಿಡಿಯುವ ಹಾಗೂ ನಿಯಂತ್ರಿಸುವ ಸಾಧನ. – ಉಪಕರಣ : 'ಯಂತ್ರವ್ಯಯೋಗ' ಪರಾ. ೨. (ಗಾಲಿ, ಕೀಲುಗಳ ಜೋಡಣೆಯಿಂದ) ಕೆಲಸ ಮಾಡಲು ಸಹಾಯಕವಾಗುವ ಉಪಕರಣ.—ಸಾಧನ; ಇಂಜಿನ್ನು : ಉಗಿಯಿಂದ . . . ಯಂತ್ರಗಳು ನಡೆಯುತ್ತವೆ (ಕುಂಬಾಯ. ೨೯-೨೯). ೩. ತಾಂತ್ರಿಕಪೂಜೆಗಾಗಿ, ಕೆಲವು ಮಂತ್ರಾಕ್ಷರಗಳೊಂದಿಗೆ ಸಾಮಾನ್ಯವಾಗಿ ತಾಮ್ರದ ತಗಡಿನ ಮೇಲೆ ಬರೆದಿಡುವ ಆಕೃತಿ ; ಶ್ರೀಚಕ್ರ : ಯಂತ್ರಂಗಳುಮಮಿತಮಪಾಮಂತ್ರಂಗಳುಮನುಪಮಾನೆ ಮೆನಿಪ ಪಲವುಂ ತಂತ್ರಗಳುಮೇಂ ಕಾವುವೆ ಸಂತ್ರಾಸಕರೋಗ್ರ ಮೃತ್ಯು ರಾಜನ ಬರವಂ (ಪಾವಚೆ. ೭೦-೩) : ಯಂತ್ರದ ತಾಯಿತಿಗಳಂ ಮಡಗಿ (ಶಾಗೊಂಧಿ. ೧೩೬-೦೨) ; 'ಚಕ್ರ' ಎಂದರೆ ಯಜ್ಞವೇದಿಕೆ ಕುಂಡ. ಇವು ಅನುಭಾವಪೂರ್ಣವಾದ ರೇಖಾಕೃತಿಗಳಿಂದ ರಚಿತವಾಗಿ ಕ್ರಮೇಣ ಚಕ್ರ, ಯಂತ್ರ ಎಂಬ ರೂಪಗಳಾದುವು (ಶಾಂಭಾ. ೦೨೦). ೪. ರೋಗ ನಿವಾರಣೆ ಅಥವಾ ಭೂತಪಿಶಾಚಿಗಳ ಬಾಧೆ, ಅಂಜಿಕೆ ಮುಂತಾದುವುಗಳ ಪರಿಹಾರಕ್ಕೆಂದು ಕಟ್ಟುವ ತಾಯಿತಿ : ತುರುಚಾರ ಗಾಳಿ ಹಿಡಿದವನಿಗೆ. ಭಾರಿ ಯಂತ್ರವ ಕಟ್ಟಿಸಲುಬೇಕು (ಹೀ.ಶಾ. ೪೨).

ಯಂತ್ರಕಟ್ಟು = ತಾಯಿತಿಯನ್ನು ಕಟ್ಟು : ದಾಲಗ್ರಹವೆಂದು ಮಗುವಿಗೆ ಯಂತ್ರಕಟ್ಟಿಪ್ಪಾರೆ (ಕೂಂ). [ಸಂ.]

ಯಂತ್ರಕರ್ಮಿ (ನಾ). ಯಂತ್ರದಿಂದ ಕೆಲಸಮಾಡುವವನು ; ಯಂತ್ರದ ಕೆಲಸ ಬಲ್ಲವನು ; ಯಂತ್ರಕಾರ : "ಯಂತ್ರಶಿಲ್ಪಿ, ಯಂತ್ರಕರ್ಮಿ, ಯಂತ್ರಿಗ" (Mechanic. ೫೦೪೨).

[ಸಂ. ಯಂತ್ರಕರ್ಮಿನ್]

ಯಂತ್ರಕಲೆ (ನಾ). ಯಂತ್ರಗಳನ್ನು ನಡೆಸುವ ವಿದ್ಯೆ. – ಜಾಣ್ಮೆ : (ಕ). [ಸಂ. ಯಂತ್ರಕಲಾ]

ಯಂತ್ರಕಾರ (ನಾ). = ಯಂತ್ರಕರ್ಮಿ : ಆಯುಧಂಗಳಂ ಧರಿಸಿದ ವಡ್ಡರು ಯಂತ್ರಕಾರರು . . . ಗಾರಕೆಲಸದವರು ವೃಕ್ಷಗಳಂ ಕಡಿಮುವರು ಧಾವಿಗಳಂ ತೆಗೆಯುವರು (ಶಾಗೊಂಧಿ. ೦೩೫-೦೩). [ಸಂ.]

ಯಂತ್ರಕಾಲಕ (ನಾ). ಯಂತ್ರನಡೆಸುವವನು : ಯಂತ್ರಜಾಲಕನು ಯಂತ್ರದ ಕೈಮಣಿಯ ಮುಂದೆ ಕುಳಿತು ಬೇಕಾದ ಅಕ್ಷರದ ಗುಂಡಿಯನ್ನು ಬೆರಳಿನಿಂದ ತುಸು ಒತ್ತುವನು (ಪುಪ್ರಕ. ೯೯). [ಸಂ.]

ಯಂತ್ರಚಾಲಿತ (ನಾ). ಯಂತ್ರದಿಂದ ನಡೆಯುವಂತಹುದು ; ಯಂತ್ರ ಸಹಾಯದಿಂದ ಕೆಲಸಮಾಡುವಂತಹುದು : ಯಂತ್ರಚಾಲಿತವಾದ ಕೈಗಾರಿಕೆಗಳಲ್ಲಿ ಬೇಗೆ ದೊಡ್ಡ ಪ್ರಮಾಣದಲ್ಲಿ ಕಾರ್ಯವ್ಯವಸ್ಥೆ ಮಾಡ ಬಹುದೋ ಹಾಗೆ ಮಾಡಲು ಸಾಧ್ಯವಾಗದು (ಪಂಶ್ರ. ೦೩೩). [ಸಂ.]

ಯಂತ್ರಣ (ನಾ). ಹತೋಟಿ ; ಆಣೆ ; ನಿಗ್ರಹ. [ಸಂ.]

ಯಂತ್ರಧಾರಾಗಾರ (ನಾ). ನೀರನ್ನು ಮಳೆಯಂತೆ ಧಾರಾಕಾರವಾಗಿ ಸುರಿಪಡಿಸುವ ಯಂತ್ರವನ್ನು ಅಳವಡಿಸಿದ ಸ್ನಾನಗೃಹ : ಸುಖದ ದೊಣೆ ಸುಖದ ದೀರ್ಘಿಕೆ ಸುಖದ ಕೊಳಂ ಸುಖದ ಯಂತ್ರಧಾರಾಗಾರಂ (ಪ್ರಿಸಡಾ. ೬೭). [ಸಂ.]

ಯಂತ್ರಧಾರಾಗೃಹ (ನಾ). = ಯಂತ್ರಧಾರಾಗಾರ : ಮತ್ತಮಾ ರಾಜ ಭವನಂ . . . ಆನಾಮಂತ್ರ ಯಂತ್ರಧಾರಾಗೃಹಂಗಳಿಂ ಸವರ್ಷಾಸಮಯ ದಂತೆಯುಂ . . . ಎಸೆವುದು (ಶಂಪ್ರತಿ. ೦೦-೭೯ ೫) [ಸಂ.]

ಯಂತ್ರನಾಗರಿಕತೆ (ನಾ). ಮಾನವಪಶಕ್ತಿಯನ್ನು ಬಿಟ್ಟು ಯಂತ್ರಗಳಿಗೆ ಪ್ರಾಧಾನ್ಯನೀಡುವ ವಿಧಾನದ ನಾಗರಿಕಜೀವನ : ಯಂತ್ರ ನಾಗರಿಕತೆಯ ವಿಜ್ಞಾಶಬುದ್ಧಿ ತಾನಲ್ಲಿ ಪಡೆದಿತ್ತು ಪರಮಸಿದ್ಧಿ (ಕೋಗೀ. ೨-೨೪). [ಸಂ. ಯಂತ್ರನಾಗರಿಕತಾ]

ಯಂತ್ರಪ್ರಯೋಗ (ನಾ). ಯಂತ್ರಗಳನ್ನು ನಡೆಸುವಿಕೆ : ಸ್ಮರಮಂತ್ರಂ ಬಹುಭಾಷಾಪರಿಚಿತಿ ಯಂತ್ರಪ್ರಯೋಗಮುಖಿಲವ್ಯೂಹೋತ್ಕರಮೆಂಬಿನಿತ ಜೊಳಂ ಬಲ್ಲರೆಲ್ಲರುಂ ಮೆಚ್ಚಿ ಪಡೆದಸತಿಕೌಶಲಮಂ (ತಿಪ್ಪ. ೪-೩೦). 'ಬೌಷಪ್ಪಿಕಲೆ' ಪರಾ. [ಸಂ.]

ಯಂತ್ರಮುಕ್ಕ (ನಾ). ಯಾಂತ್ರಿಕಸಾಧನದ ಸಹಾಯದಿಂದ ಪ್ರಯೋಗಿಸುವ ಬಿಲ್ಲು ಮೊದಲಾದ ಆಯುಧ. –ಅಸ್ತ್ರ : "ಅ ಕಯ್ದು ಮುಕ್ತಾವುಕ್ತಂ, ಅಮುಕ್ತಂ, ಕರಮುಕ್ತಂ, ಯಂತ್ರಮುಕ್ತಮೆಂ(ದು) ಬುದು ನಾಲ್ಕು ತೆಱಸಕ್ಕುಂ . . . ಅಂಬು ಮೊದಲಾವುದು ಯಂತ್ರಮುಕ್ತ ಮೆಂಬುದು" (ಪಾಆಯು. ೬೬-೭೧) ; ಅಗ್ನಿಪುರಾಣವು ಆಯುಧಗಳನ್ನು ಅಸ್ತ್ರ ಮತ್ತು ಶಸ್ತ್ರಗಳೆಂದು ಎರಡುಭಾಗಗಳಾಗಿ ವಿಂಗಡಿಸುತ್ತದೆ. ಇವುಗಳಲ್ಲಿ ಮೊದಲನೆಯದನ್ನು (೧) ಯಂತ್ರಮುಕ್ತ, (೨) ಪಾಣಿಮುಕ್ತ, (೩) ಮಂತ್ರಮುಕ್ತ, (೪) ಮುಕ್ತಸಂಧಾರಿತ (ಬಿಟ್ಟು ಹಿಂದಕ್ಕೆ ಪಡೆದದ್ದು) ಎಂದು ನಾಲ್ಕಾಗಿ ವಿಭಾಗಿಸುತ್ತದೆ (ಕಾಇ. ೨೬೨). [ಸಂ.]

ಯಂತ್ರಯುಗ (ನಾ). ಯಂತ್ರನಾಗರಿಕತೆಯ ಅಭಿವೃದ್ಧಿಯ ಕಾಲ ; P ಇಂಗ್ಲೆಂಡಿನಲ್ಲಿ Industrial revolution ಎಂಬ ಹೆಸರಿನ ಕ್ರಾಂತಿ ನಡೆದ ಕಾಲದ ಪರಿಣಾಮವಾಗಿ ಈ ಶಬ್ದ ಪ್ರಯೋಗವಾಗುತ್ತಿದೆ : ಹದಿಪಂಟನೆಯ ಶತಮಾನದಲ್ಲಿ ಯೂರೋಪಿನಲ್ಲಿ . . . ಯಂತ್ರಯುಗವು ಹುಟ್ಟಿ ಸಕಲಆರ್ಥಿಕಉದ್ಯೋಗಗಳೂ ಯಂತ್ರೋಪಕರಣಗಳ ದ್ವಾರಾ ನಡೆಯಲಾರಂಭಿಸಿತು (ಪಾಅಪ. ೩೫೭). [ಸಂ.]

ಯಂತ್ರವಾಹಕ (ನಾ). ೧. ಯಂತ್ರವನ್ನು ನಡೆಸುವವನು ; ಯಂತ್ರ ಚಾಲಕ. ೨. (ಆಲಂ) ಸೂತ್ರಧಾರ : ನೆಲದ ಬೊಂಬೆಯ ಮಾಡಿ ಜಲದ ಬಣ್ಣವನುಡಿಸಿ . . . ಆಡಿಸುವ ಯಂತ್ರವಾಹಕನಾರೋ (ಅಕಸಾ. ೩-೦೬) ; ಯಂತ್ರವಾಹಕ ನೀನೆ ಒಳಗಿದ್ದು ಎನ್ನ ಸ್ವತಂತ್ರನೆಂದೆನಿಸಿ ಕೊರಿಸುವರೆ

ಹೇಳೊ (ಕೃಷಂ. ೫-೧೮-೩) ; ಜಿತೆ ಮಾಡಿದರೆಮೆನ್ನಾಣೆ ತಾಯಿ ಯಂತ್ರವಾಹಕ ಶಿವನಾಣೆ (ಪಾಣಿ. ೮-೧೩). [ಸಂ.]

ಯಂತ್ರಶಾಸ್ತ್ರ (ನಾ). ೧. ಯಂತ್ರಗಳ ರಚನೆ, ಕಾರ್ಯ ಮೊದಲಾದುವುಗಳನ್ನು ವಿವರಿಸುವ ಶಾಸ್ತ್ರ : ಯಂತ್ರಶಾಸ್ತ್ರದ (Theoretical Mechanics) ಪ್ರತಿಪಾದಕರಲ್ಲಿ ಮೊದಲಿಗನು ಅರ್‌ಕ್ಮಿಡಿಸ್ (ಜಲಾ. ೪೭). ೨. (ಹವನ, ಹೋಮಾದಿ ಕರ್ಮಗಳಿಗಾಗಿ) ಶ್ರೀಚಕ್ರ ಮುಂತಾದ ಯಂತ್ರಗಳನ್ನು ರಚಿಸುವ ಶಾಸ್ತ್ರ : ಯಂತ್ರಶಾಸ್ತ್ರಜಾಲಲೋಲ ರಾಗಮಜ್ಞರುಲ್ಲಸತ್ಮಂತ್ರಸಾರಸಾರ್ವಭೌಮರ್ . . . ಮಂತ್ರಕೂರ ರೊಪ್ಪಿದರ್ ತವೀಯ ಯಾಗಶಾಲೆಯೊಳ್ (ಅಕ್ಕಕ. ೧-೩೨). [ಸಂ.]

ಯಂತ್ರಶಿಲ್ಪ (ನಾ). ಯಂತ್ರಗಳನ್ನು ರಚಿಸುವಿಕೆ : "ಯಂತ್ರಶಿಲ್ಪಿತನ. ಯಂತ್ರಶಿಲ್ಪ" (Engineering. ೨೦೪೭). [ಸಂ.]

ಯಂತ್ರಶಿಲ್ಪಜ್ಞ (ನಾ). ಯಂತ್ರಗಳನ್ನು ರಚಿಸುವವನು ; ಯಂತ್ರಶಿಲ್ಪವನ್ನು ಬಲ್ಲವನು ; ಎಂಜಿನಿಯರು : ಅನೇಕ ಪೋರ್ಚುಗೀಸ್ ಯಂತ್ರಶಿಲ್ಪಜ್ಞರಿಗೆ ಉದ್ಯೋಗಗಳನ್ನು ಕಲ್ಪಿಸಿ. ಅವರ ಸಹಾಯದಿಂದ ಭವ್ಯವಾದ ದೇವಸ್ಥಾನಗಳನ್ನೂ ಕೆಟ್ಟೆಗಳನ್ನೂ ನಿರ್ಮಿಸಿದನು (ಕೃದೇಸ. ೦೯). [ಸಂ.]

ಯಂತ್ರಶಿಲ್ಪಿ (ನಾ). ೧. = ಯಂತ್ರಶಿಲ್ಪಜ್ಞ : "ಎಂಜಿನ್ನುಗಳನ್ನು ರಚಿಸುವವನು ; ಯಂತ್ರಶಿಲ್ಪಿ" (Engineer. ೨೦೪೭) ; ಯಂತ್ರಶಿಲ್ಪಿಯು ಉದ್ದೇಶಿಸಿದ ಎಂಜಿನ್ ಕೆಲಸ ಮಾಡಬೇಕು (ಪಂಚಾ. ೮೦). ೨. ಯಂತ್ರವನ್ನು ನಡೆಸುವವನು : ಯಂತ್ರಚಾಲಕ : "ಯಂತ್ರಮಾಡುವವನು ; ಯಂತ್ರಶಿಲ್ಪಿ ; ಯಂತ್ರ ನಡಿಸುವವನು" (Machinist. ೨೦೪೭). [ಸಂ. ಯಂತ್ರಶಿಲ್ಪಿನ್]

ಯಂತ್ರಾಗಾರ (ನಾ). ಯಂತ್ರವಿರುವ ಸ್ಥಳ ; ಕಾರ್ಖಾನೆ : ಈ ಕಡೆ ಬನ್ನಿರಿ ಕಾವಲುಗಾರ ಬಿಡುವುದು ಹೊಗಡೆ ಯಂತ್ರಾಗಾರ (ಗಪ್ರ. ೯-೦೦೯). [ಸಂ.]

ಯಂತ್ರಾಪೀಡೆ (ನಾ). ಸೆಳವು ರೋಗ ; ಎಳವು : ನೆಲಗುಮ್ಮಡಿಬೇರ್ಗಳ ತಂದು ಒಣಗಿಸಿ ಚೂರ್ಣವ ಮಾಡಿ ವಸ್ತ್ರಗಾಳಿತ ಮಾಡಿ . . . ಅಡಿಗೆ ಮಾಡಿಕೊಡುವುದು. ಯಂತ್ರಾಪೀಡೆ ಮಾಣ್ಗುಂ (ಅಕ್ಕಶ. ೦೭೦). [ಸಂ. ಯಂತ್ರಾಪೀಡ]

ಯಂತ್ರೋದ್ಧರಣ (ನಾ). ಯಂತ್ರವನ್ನು ಬರೆಯುವುದು ; ಯಂತ್ರ ರಚನೆ : ಅಲ್ಲಿಂ ಪೊಱಗೆ ಹ್ರೀಂಕಾರದಿಂ ತ್ರಿಧಾವೇಷ್ಟನಂ ಮಾಡ್ಪುದು ಇದು ಯಂತ್ರೋದ್ಧರಣಕ್ರಮಂ (ಕ್ರಕಾಕ್ಕ. ೦೦-೦೨). [ಸಂ.]

ಯಂತ್ರೋನ್ಮುಕ್ಕ (ನಾ). = ಯಂತ್ರಮುಕ್ಕ : "ಶಕ್ತಿ ಮೊದಲಾಗೆ ಪಾಣಿವಿಮುಕ್ತಂ . . . ಯಂತ್ರೋನ್ಮುಕ್ತಂ ಶಾರಿ" (ಪಾಕ್ಕಕೋ. ೪೪-೦೪). [ಸಂ.]

ಯಂತ್ರೋಪಕರಣ (ನಾ). ಯಂತ್ರಸಾಮಗ್ರಿ ; ಯಂತ್ರದಿಂದ ಮಾಡಿದ ಉಪಕರಣ. —ಸಾಧನ : ನಾವು ಈಗ ಇಲ್ಲಿ ಇದರ ವಿಸಿತ ಭಿನ್ನಭಿನ್ನ ಆಮ್ನಾಯೀಜಗಳನ್ನು ಯಂತ್ರೋಪಕರಣಗಳ ಮೂಲಕ ನೋಡಲು ಸಾಧ್ಯ (ಕಾಚಾಕ್ಕ. ೦೬೦) ; ವಿಜ್ಞಾನಿಗಳು ಈ ಕೆಲಸ ಸಾಧಿಸುವುದಕ್ಕೆ ಗಡಿಯಾರದ ಚಲನೆಯಂಥ ಯಂತ್ರೋಪಕರಣ (Clockwise Mechanisms) ಮಾಡಿಕೊಂಡಿದ್ದಾರೆ (ಅಣಾ. ೭). [ಸಂ.]

ಯಃಕಶ್ಚಿತ್ (ಗು). ಕ್ಷುದ್ರವ್ಯಕ್ತಿ : ಗಣನೆಗೆ ಬಾರದ : ಸಾಮಾನ್ಯವಾದ : ಅಂತಹ ಬ್ರಹ್ಮಜ್ಞಾನಿಯಿಂದು ಪುತ್ರಶೋಕದಿಂದ ಹತನಾಗಿ ಯಃಕಶ್ಚಿತ್ ಪಾಮರನಂತೆ ಆತ್ಮಹತ್ಯವನ್ನು ಮಾಡಿಕೊಳ್ಳಲು ಯತ್ನಿಸುತ್ತಿರುವನು (ಪುರಾಶಾ. ೦೨೦) ; ನಾಟಕ ನೋಡಲು ಯಃಕಶ್ಚಿತ್ ಸಿಪಾಯಿಯ ಅಪ್ಪಣೆಯೆ ! (ಕಾಪೋಕಾ. ೦೬೨). [ಸಂ.]

ಯಃಕಶ್ಚಿತ (ನಾ). ೧. ತೀರಕ್ಷುಲ್ಲಕನಾದವನು ; ಗಣನೆಗೆ ಬಾರದ ವ್ಯಕ್ತಿ ; ಕ್ಷುದ್ರವ್ಯಕ್ತಿ : ಯಃಕಶ್ಚಿತವಾದ ಈ ರಾಜಕಿಶೋರನು ಜೀವದಿಂದಿರುವುದನ್ನು ನಾನು ನೋಡುತ್ತಿರುವೆನು (ಕುಸಾ. ೪೭). ೨. ತೀರ ಅಲ್ಪವಾದುದು ; ಯಃಕಶ್ಚಿತ ಈ ಇಪ್ಪತ್ತು ರೂಪಾಯಿಗಾಗಿ ಇಷ್ಟು ಶ್ರಮಪಟ್ಟು ದುಡಿಯುವುದೇಕೆ ? (ಜಾಗಾ. ೨೯). [< ಸಂ. ಯಃಕಶ್ಚಿತ್]

ಯಃಪ್ಯಾರಿ (ನಾ). ಅಧಿಕಾರಿ : ಯಃಪ್ಯಾರಿಯ ಪ್ರದೇಶವೂ ಸಹ ಒಂದು ಗ್ರಾಮದ ಭಾಗವಾಗಿರುವ ಸಂದರ್ಭದಲ್ಲಿ, ಬಾಕಿ ವಿಷಯದಲ್ಲಿ ಆರ್ಹತೆ ಇದ್ದರೆ. ಪಟೇಲನನ್ನು . . . ಕೋರ್ಟಿನ ಜಾರ್ಜಿಗೆ ನೇಮಿಸತಕ್ಕದ್ದು (ಗ್ರಾಪಾಕ್ರ. ೦೦). [<-ಅರ. ಹಿಂ. ಇಮ್ತಿಯಾರಾ = ಅಧಿಕಾರ]

ಯಕಾರ (ನಾ). ಯ ಎಂಬ ಅಕ್ಷರ : ಯಕಾರಕ್ಕೆ – ಕಯ್. ಮೆಯ್. ನೆಯ್ (ಕಪುಚ. ೪೪ ಕ್ರಮೋ). [ಸಂ.]

ಯಕೃತ್ತು (ನಾ). ಪಿತ್ತಜನಕಾಂಗ ; ಪಿತ್ತಕೋಶ ; ಈರಿ : "ಯಕೃತ್ ಎಂಬುದು ಏರ್ಗಡ ? [ಕಾಳಜ] " (ಕಠಾಯು. ೦೦೪-೦೬) ; ಆ ನಾಳವು ಯಕೃತ್ತಿ (Liver)ಗೆ ಹೋಗಿ ತನ್ನ ಸಕ್ಕರೆಯ ಭಾಗವನ್ನು ಒಪ್ಪಿಸಿ, ಮುಂದೆ ಸಾಗುವುದು (ಜಾಂಕ್ರ. I. ೪೦೬) : ಪಾರೀಂಕಶಿಕ್ಷಣದ ಹೊಸ ಪದ್ಧತಿಯಂತೆ ಈ ಆಟದಿಂದ ಹೆಣ್ಣುವಾಕ್ಕಳಿಗೆ. ಕಿಪ್ಪೊಟ್ಟೆ, ಯಕೃತ್ತು, ಬೆನ್ನುಹುರಿ ಮೊದಲಾದ ಅಂಗಗಳಿಗೆ ಸುಸಮ್ಮ ವ್ಯಾಯಾಮ ದೊರೆಯುವುದು (ಆಕ್ಷಣ. ೬೯). [ಸಂ. ಯಕೃತ್]

ಯಕ್ಷ (ನಾ). ೧. ದೇವತೆಗಳಲ್ಲಿ ಒಂದು ವರ್ಗ : "ಕಿನ್ನರರು ಗಂಧರ್ವರಪ್ಸರರು ವಿದ್ಯಾಧರನುನ್ನಿಶಾಚರು ಪಿಶಾಚರು ಗುಹ್ಯಕರು ಸಿದ್ಧರುಂ . . . ಯಕ್ಷರು ಭೂತಸಾಮಿಗಳು ದೇವಯೋನಿಗಳಿನಿಕ್ಕುಂ " (ಪುಂಗಣ. ೦೬-೦೭) ; ಅಷ್ಟಮೂರ್ತಿಗಳಷ್ಟವಸುಗಳು ನವಬ್ರಹ್ಮರು ಸುರರು ಮುನಿವರರು ಪೇಚರರು ಯಕ್ಷರು . . . ಎಯ್ದೆ ನೆರೆಯಿತು ತದ್ಭ ಪರಿವಾರಸಹಿತಲಾಗ (ಕಕಣಾ. ೦೬-೦) : ಒಬ್ಬ ಯಕ್ಷೆ ತನ್ನೊಡೆಯನಿಂದ ನಲ್ಲೆಯನು ಆಗಲಿ ಬೆಂದು . . . ವಸತಿನಿಂದನೋ ರಾಮಗಿರಿಯು ಪುಣ್ಯಾಶ್ರಮುಂಗಳಲ್ಲಿ (ಮೀಶಕಾ. ೬-೦). ೨. ಆ ವರ್ಗದ ಅಧಿಪತಿ ; ಕುಬೇರ : "ಧನಪತಿ ಯಕ್ಷಂ . . . ಕುಬೇರನಳಕಾದಿ ನಾಯಕಂ ಗುಹ್ಯಕೇಶ್ವರಂ ವೈಶ್ರವಣಂ " (ಪಾಕ್ಕಕೋ. ೬-೧೬). ೩. ಪಿಶಾಚಿ ; ಭೂತ : 'ಯಕ್ಷಗ್ರಹ' ಪರಾ. ೪. [ಜೈನ] ವ್ಯಂತರ ದೇವತೆಗಳ ಒಂದು ವರ್ಗ : ಅನೀ ಮಟ್ಟಯಕ್ಷ ನಿವಾಸಿಯೆನ್ ಮನೋಪರನೆಂಬ ಯಕ್ಷನೆನ್ (ಪಾಪು. ೨೪: ೩೬-೦೬) ; ಕಲ್ಪವಾದ ಪದ ತಣ್ಣೆಲಲ್ಲಿ ವಸಂತಲಕ್ಷ್ಮಿಯೋಲ್ ನೆಲಸಿದ ಯಕ್ಷಿ ಯಕ್ಷರೆಮಂಗಳೊಲ ಎಂದೆ ದಯಾವ್ರಲೋಕಮಂ (ಅರಪಾ. ೦-೯). ೫. ಇಪ್ಪತ್ತನಾಲ್ಕು ಜನ ತೀರ್ಥಂಕರರಲ್ಲಿ ಪ್ರತಿಯೊಬ್ಬ ತೀರ್ಥಂಕರನ ಬಳಿಯಲ್ಲಿಯೂ ಇರುವ ಒಬ್ಬೊಬ್ಬ ಶಾಸನದೇವತೆ. [ಸಂ.]

ಯಕ್ಷಕರ್ದಮ (ನಾ). ಕರ್ಪೂರ, ಅಗರು, ಕಸ್ತೂರಿ, ತಕ್ಕೋಲ ಮೊದಲಾದ ಸುಗಂಧದ್ರವ್ಯಗಳನ್ನು ಸಮಪ್ರಮಾಣದಲ್ಲಿ ಬೆರಸಿ ತಯಾರಿಸುವ ಒಂದು ಬಗೆಯ ಸುಗಂಧಲೇಪ : " ಅಗುರು ಹಿಮಂ ತಕ್ಕೋಲಂ ವ್ಯಗಮದಮಿವ್ವ ಕೂಡೆ ಯಕ್ಷಕರ್ದಮಮಮ್ಕುಂ " (ಪಾಕ್ಕಕೋ. ೭೭-೦೨) ; ಯಕ್ಷಕರ್ದಮದ ಕಯ್ಗಟ್ಟಿಯೊಳ್ ಕಯ್ಯಂ ತಿಮಿರ್ದು ತಂಬುಲಮಂ ಕೊಂಡು (ತಂಕಣಾ. ೪-೫೯ ಪ) : ರಾವುತರಿಗಾರೋಹಕರಿಗೆ ಭಟಾವಳಿಗೆ ರಥಿಕರಿಗೆ ಚಿಲ್ಲಿದನಾ ವಿವಿಧಸುಗಂಧಘನಿತಯಕ್ಷಕರ್ದಮವ (ಕಾಜ್ಞಾ. ೬-೨೦). [ಸಂ.]

ಯಕ್ಷಗಾನ (ನಾ). ೧. ಒಂದು ಬಗೆಯ ಜಾನಪದ ನೃತ್ಯನಾಟಕ : ಯಕ್ಷಗಾನದಲ್ಲಿ ಬಹು ಹೆಚ್ಚಿನ ಸೌಂದರ್ಯವಿದ್ದಿಯನ್ನು ಹೊಂದಿವ ಭಾಗವಂದರೆ, ಅದರ ವೇಷಭೂಷಣಂಗಳು (ಯಕ್ಷಾ. ೦೬೬) ; ಆಗಾಗ ಯಕ್ಷಗಾನ

ಕಲೆಯು ಕುರುಹಾವ ತಾಳಮದ್ದಳೆ ಅದೇ ಶಾಲೆಯಲ್ಲಿ ಪರಿಗುತ್ತಿತ್ತು (ಶಂಕುತಾ. ೭೩). ೨. (ಯಕ್ಷಗಾನಪ್ರಬಂಧಕ್ಕೆ ಸಂಬಂಧಿಸಿದ) ಒಂದು ಬಗೆಯ ಗಾಯನಪದ್ಧತಿ : 'ಯಕ್ಷಗಾನ' ಎಂದರೆ ಅದೊಂದು ದೇಶೀಯವಾದ ಗಾನಪದ್ಧತಿ ಎಂಬುದು ಗೊತ್ತಾಗುತ್ತಿದೆ (ಪಾಕೀಸು. ೫೯); ಯಕ್ಷಗಾನವೆಂಬುದು ಅಭ್ಯಾಸ, ಪರಿಶ್ರಮಗಳಿಂದ ಬೆಳೆಯಿಸಿಕೊಂಡು ಬಂದ ದೇಶೀಯ ಗೀತಮಾರ್ಗ (ಹುಗ್ಗಿ. ೭೩). [ಸಂ.]

ಯಕ್ಷಗ್ರಹ (ನಾ). ೧. ಪಿಶಾಚಬಾಧೆ ; ದೆವ್ವ ಹಿಡಿದುಕೊಳ್ಳುವಿಕೆ : ನಾನಾಶಸ್ತ್ರಧಾರಣೆ ಮಾಡುವುದರಿಂದ . . . ದೇವಗ್ರಹ, ಗಂಧರ್ವಗ್ರಹ, ಯಕ್ಷಗ್ರಹ ಮುಂತಾವ ದುಷ್ಟಗ್ರಹಂಗಳನ್ನೂ ಶತ್ರುಗಳಿಂದುಂಟಾಗುವ ಹಾನಿಯನ್ನೂ ಕಡಿಸುವುದು (ಶಶಿ. ೫೬). ೨. ಪಿಶಾಚಿ : ಸಕ್ಕೇಂದ್ರ ಚೋಳನ ಮಹಾಬಲಂ . . . ಯಕ್ಷಗ್ರಹವ ಗಡಣದಂತೆ . . . ಸೀಳಿದಿಗ್ಬಲಿಯ ಕೊಡುತಿರ್ದುದರಿಸೇವೆಯ (ಶಾಕಟಾ. ೩-೨೦). [ಸಂ.]

ಯಕ್ಷತರು (ನಾ). ಒಂದು ಬಗೆಯ ಮರ ; ಅಲ : "ಯಕ್ಷತರುಃ, ಯಕ್ಷವಾಸಃ — ಈ ಯೆರಡುಂ ಅಲ" (ಟಿಪ್ಪ. ೦೩೦). [ಸಂ.]

ಯಕ್ಷಧೂಪ (ನಾ). ಸುವಾಸನೆಯ ದ್ರವ್ಯ.—ಧೂಪ : "ಮಂಗಮಂಗಿಸುವ ಸಜ್ಜರಸಂ ಪೊಗಬ್ತಿವೆತ್ತಿರ್ದ ಯಕ್ಷಧೂಪಮಮದಕ್ಕುಂ" (ಪುಟ್ಟ. ೪೫. ೬೬-೦೨). [ಸಂ.]

ಯಕ್ಷಪತಿ (ನಾ). ಯಕ್ಷರ ಅಧಿಪತಿ ; ಕುಬೇರ : ಅಲ್ಲಿ ನಮ್ಮ ಮನೆ ಯಕ್ಷಪತಿಯ ಮೆನೆಯುತ್ತರಕ್ಕೆ ಇಹುದು (ಪುಣಕಡ. ೨೦-೦೨). [ಸಂ.]

ಯಕ್ಷಪತಿಸಖ (ನಾ). ಕುಬೇರನ ಸ್ನೇಹಿತ ; ಶಿವ : ಯಕ್ಷಪತಿಸಖ ಸಹಸ್ರಾಕ್ಷಮುಖಿತೀಯೂಷಧಕ್ಷಾಳಿ ವೆತಪದಯುಗ . . . ರಕ್ಷಿಪುದು ಸಂಗಮೇಶ (ಕ್ರಿಕಡಾ. ೦೧-೦). [ಸಂ.]

ಯಕ್ಷಪ್ರಶ್ನೆ (ನಾ). ೧. ಮಹಾಭಾರತಕಥಾಪ್ರಸಂಗದಲ್ಲಿ ಯಕ್ಷರೂಪಿಯಾದ ಯಮಧರ್ಮರಾಯನು ಯುಧಿಷ್ಠಿರನಿಗೆ ಕೇಳಿದ ಪ್ರಶ್ನೆ : ಮಹಾಭಾರತಾಂತರ್ಗತ ಯಕ್ಷಪ್ರಶ್ನೆಯು ಪ್ರಸ್ತುತಕತೆಯಲ್ಲಿಯೂ ಮಹಾತ್ಮಾಜಮುವರ ಈ ಮಾತಿನ ಅನುಭವವು ಬರುತ್ತದೆ (ಹುಗ್ಗಕ್ರ. ೦). ೨. (ಅಲಂ) ಉತ್ತರಿಸಲು ಕಠಿನವಾದರೂ ಉತ್ತರಿಸಲೇಬೇಕಾದ ಮಹತ್ತ್ವದ ಪ್ರಶ್ನೆ.— ಸಮಸ್ಯೆ : ಎಂದೆಂದಿಗೂ ಇಹುದು ಯಕ್ಷ ಪ್ರಶ್ನೆ (ಕಡೂಗ. ೫೯-೩) : ಈ ಎರಡು ಪ್ರಶ್ನೆಗಳೂ ಇಂದಿಗೂ ಸರಿಯಾಗಿ ಬಿಡಿಸರಾಗದ ಯಕ್ಷಪ್ರಶ್ನೆಗಳಾಗಿವೆ (ಕ್ರಾಂಜ. ೩೨). [ಸಂ. ಯಕ್ಷಪ್ರಶ್ನ]

ಯಕ್ಷರಾತ್ರಿ (ನಾ). ದೀಪಾವಳಿಯ ಹಬ್ಬ : ಈ 'ಯಕ್ಷರಾತ್ರಿ' ಅಥವಾ 'ದೀಪಾವಳಿ' ಹಬ್ಬದ ರಾತ್ರಿಯಲ್ಲೇ ನಮ್ಮ ಯಕ್ಷಗಾನಮೇಳದವರು ತಮ್ಮ 'ಪೊತ್ತಮೊದಲಿನ ಸೇವೆಯಾಟವನ್ನಾಡುವುದು (ಪಾಕೀಸು. ೫೬). [ಸಂ.]

ಯಕ್ಷಲೋಕ (ನಾ). ೧. ದೇವಲೋಕ. ೨. ಮಾಯಾಲೋಕ. [ಸಂ.]

ಯಕ್ಷವಾಸ (ನಾ). = ಯಕ್ಷತರು : "ಯಕ್ಷತರುಃ, ಯಕ್ಷವಾಸಃ — ಈ ಯೆರಡುಂ ಅಲ" (ಟಿಪ್ಪ. ೦೩೦). [< ಸಂ. ಯಕ್ಷಾವಾಸ]

ಯಕ್ಷಸಂಪ್ರದಾಯ (ನಾ). ಭಾರತೀಯ ಚಿತ್ರಕಲೆಯ ಮೂರು ಸಂಪ್ರದಾಯಗಳಲ್ಲಿ ಒಂದು : ಯಕ್ಷಸಂಪ್ರದಾಯ ಮೂರನೇ ಶತಮಾನದಲ್ಲಿ . . . ರೂಢಿಯಲ್ಲಿತ್ತೆಂದೂ ಅತ ಹೇಳಿದ್ದಾನೆ (ಕಾಚಿ. ೩೩೩). 'ದೇವಸಂಪ್ರದಾಯ', 'ನಾಗಸಂಪ್ರದಾಯ' ಪರಾ. [ಸಂ.]

ಯಕ್ಷಸತ್ತ್ವ (ನಾ). [ಕಾಮಶಾ] ನಾಯಿಕಾಭೇದದಿಂದ ಸ್ತ್ರೀಯರಲ್ಲಿರುವ ಹನ್ನೆರಡು ಬಗೆಯ ಮನೋಧರ್ಮಗಳಲ್ಲಿ ಒಂದು : ಸುರತಕೆ ನಲಿವ ಸಿಂಗರಕೆ ಸೇರುವ ಬಗೆಗೆ ಹರುಷಿಪುವ ವನಜಲಕ್ಕೀಡೊಲಿವ ಸರಸಕ್ಕೆ ಸಲುವ ಸೌಂದರಕೆ ಲಜ್ಜೆಗೆ ನಿಜಾಕರವೆನಿಪಳಿ ಯಕ್ಷಸ[ಜಾಣಾಂ. ೪]ತ್ತ್ವದವಳು (ಕಪಪ. ೩-೩೭); ಲಜ್ಜೆಗೆಟ್ಟವಳು ಉದ್ಯಾನ ವನಕ್ರೀಡೆ ಮದ್ಯಪಾನಾದಿಗಳಲ್ಲಿ ಇಚ್ಛೆ ಸುರತುದ್ದಿಗೆ ಸಂತೋಷಪಡುವಳು ಇವಳು ಯಕ್ಷಸತ್ತ್ವದ ಸ್ತ್ರೀಯು (ಶಾಕುಣಾ. ೨೦೩). 'ದ್ವಾದಶಸತ್ತ್ವ' ಪರಾ. [ಸಂ.]

ಯಕ್ಷಾಂದೋಳ (ನಾ). ಒಂದು ಬಗೆಯ ನೃತ್ಯ : ಅವುರೇಂದ್ರಂ ಕುಡಿ ದಂಡಭ್ರಮರಿಯನುದ್ದಂಡಬಾಹುದಂಡಂಗಳೊಳಿರ್ದವರಿಯರೇಂ ಯಕ್ಷಾಂದೋಳಮನಾಡುವ ಮಾಟ್ಕಿಯಂ ಮನಂಗೊಳಿಸಿದರೋ (ಪುಪ್ರತಿ. ೦೩-೨೭) ; ಈ ಯಕ್ಷರೆಂಬ ದೇಶೀಯರು ಆಡುತ್ತಿದ್ದ ಬಗೆಬಗೆಯ ಆಟಗಳಲ್ಲಿ "ಯಕ್ಷಾಂದೋಳ" ಅಲ್ಲವೆ "ಚಪ್ಪರಮಂಚ"ದ ಆಟವೂ ಒಂದಾಗಿರಬೇಕು. ಇತ್ತಣ ಯಕ್ಷಗಾನದ ಆಟವೆಂದರೆ ಪೌರಾಣಕಕಾವ್ಯಗಳನ್ನು ಆಡಿ ತೋರಿಸುವ ದೃಶ್ಯರೂಪಿಯೂ ಪರಿಣಮಿಸಿದ ಮೇಲೆ ಆ ಯಕ್ಷಾಂದೋಳವ ನಿತ್ಯಮೆನ್ನಿಸಿದ 'ಸಭಾಲಕ್ಷಣ' ಅಥವಾ ಪ್ರಸ್ತಾವನೆಯ ಭಾಗಕ್ಕೆ ಸೇರಿರಬೇಕು (ಪಾಕೀಸು. ೫೬). 'ಜಕ್ಕಂದೊಟ' ಪರಾ.

[ಸಂ. ಯಕ್ಷಾಂದೋಲ]

ಯಕ್ಷಾಂಶಕೆ (ನಾ). [ಕಾಮಶಾ] ಯಕ್ಷಸತ್ತ್ವದ ಸ್ತ್ರೀ : ಶೃಂಗಾರಾನ್ವಿತೆ ಲುಬ್ಧೆ . . . ಸೋಲ್ಗಿಂಗಾಗರಮಾದಡಜ್ಜಿಗೆ ಯಕ್ಷಾಂಶಕೆಯುಂ (ಪಾಪಕ. ೩-೩).

[ಸಂ. ಯಕ್ಷಾಂಶಕಾ]

ಯಕ್ಷಿ (ನಾ). ೧. ಯಕ್ಷಲೋಕದ ಹೆಣ್ಣು ; ಯಕ್ಷಸ್ತ್ರೀ. ೨. ಯಕ್ಷನ ಹೆಂಡತಿ : ಅಲಕೆಯಲ್ಲಿ ಕೈಲಾಸದೆಡೆಗೆ ತಾ ಪಯಿ ಸಖನ ಚಿಂತೆ ಸಾಕ್ಷಿಯಾಗಿ ಆ ಯಕ್ಷಿ ತಪಿಸುತಿರೆ ಅಂತರಾತ್ಮನಂತೆ (ಪುಣಕಡ. ೦೨ ೨೧೫). ೩. ಕುಬೇರನ ಹೆಂಡತಿ. ೪. ಮಾಟಗಾತಿ ; ಮಾಯಾವಿನಿ : ಕಾಂಕ್ಷಿಗಳ ದೋಷಿಸುವ ಬಂಧು ಸಖಿರುಪಕಾರ ಯಕ್ಷಿಯರು ಮ್ಮಾಕಚಿತನಗೆಸಗಿದುಪದೇಶ (ಹುಂಗಸ. ೦೬೩). ೫. [ಜೈನ] ಇಪ್ಪತ್ತುನಾಲ್ಕು ತೀರ್ಥಂಕರರಲ್ಲಿ ಪ್ರತಿಯೊಬ್ಬ ತೀರ್ಥಂಕರನ ಬಳಿಯಲ್ಲಿಯೂ ಇರುವ ಶಾಸನದೇವತೆ : ಯಕ್ಷಿ ಬರೆ ಕಂಡು ತಾಂ ಪ್ರತ್ಯಕ್ಷಂ ಕರೆದನ್ನನಿತ್ಯೇ ಪತ್ಯನಂ (ಪಾಬಾಪು. ೩-೦೦) ; ಮಾಕಾಳಿ ಯಕ್ಷಿ ಸವೀಣಾ ಭರಣಾಂಗೆ ಮತ್ಸ್ಯಕ್ಕೆ ಮಾಟ್ಕೋರಂತೆ ನಿರ್ವಿಘ್ನಮಂ (ಪುಪ್ರತಿ. ೦-೦೦) ; ಕರ್ನಾಟಕದಲ್ಲಿ ಪದ್ಮಾವತಿ ಮತ್ತು ಜ್ವಾಲಾಮಾಲಿನಿ ಎಂಬ ಯಕ್ಷಿಯರಿಗೆ ವಿಶೇಷಗೌರವ ಸಂದಿದೆ (ಕಣಾಂ. ೦೦೦).

[ಸಂ. ಯಕ್ಷೀ]

ಯಕ್ಷಿಣಿ (ನಾ). ೧. = ಯಕ್ಷಿ ೧. ೨. = ಯಕ್ಷಿ ೩. ೩. ದುರ್ಗಾದೇವತೆಯ ಊಳಿಗದವಲ್ಲಿರುವ, ದುಷ್ಟಪ್ರಕೃತಿಯ ಒಂದು ಕ್ಷುದ್ರ ದೇವತೆ. ೪. ಮಾಟಗಾತಿ ; ಮಾಯಾವಿನಿ : "ಯಕ್ಷಿಣೇ = ಗಾರುಡಿಗಿತ್ತಿ" (ಶಾಕ್ಕ. ೫೬) ; ಯಾವು ಎಂದು ಹುಡುಕಬೇಕಾದುದೇ ಇಲ್ಲ. ಯಕ್ಷಿಣಿ ಹತ್ತಿರವೇ ಇದ್ದಾಳೆ (ಸುಬ್ಬ. ೦೨) ; ನಿಮ್ಮ ತಂದೆ ಆರ್ಯಕನು . . . ಕಾಡಿನ ಯಕ್ಷಿಣಿಯ ಜೊತೆಯಲ್ಲಿ, ತನಗೆ ಜಯವಾಗಲೆಂದು ಮಾಟ ಕುಟ್ಟಿ ಪಡಯಿಸಿವಂತೆ (ಅಭಿಗ. ೩೦). ೫. (ಹೆಣ್ಣಿನ) ಪಿಶಾಚಿ ; ಜಕಣ್ಣಿ : ಮಂತ್ರವಾದವನ್ನು ಅಪರ ಜನರೂ ಮಾಡುತ್ತಾರೆ. ಅದು ಮೈಮೇಲೆ ಬರುವ ಯಕ್ಷಿಣಿಗೆ. ಮೈಮೇಲೆ ಬರುವ ಕಾಯಿಲೆಗಳಿಗೇ ಹೊರತು, ಕಲ್ಯಾಡನಂತಹ ಮಲೆಯ ದೇವತೆಗಳಿಗಲ್ಲ (ಶಾಪಗ್ರ. ೦೩೩). ೬. ಮಾಟಗಾರಿಕೆ ; ಮಾಯಾವಿದ್ಯೆ ; ಇಂದ್ರಜಾಲ : ಅದು ನನ್ನ ಯಕ್ಷಿಣಿ ಸಿಂಹವಿಕ್ರಮ ! ಅದು ನನಗೆ ಮೂರಾವರ್ತಿ ಕಣ್ಣಿಗೆ ಬಿದ್ದಿದೆ (ಅಭಿಗ. ೦೦೯). 'ಯಕ್ಷಿಣಿವಿದ್ಯೆ' ಪರಾ. ೭. ಯಕ್ಷಗಾನದಲ್ಲಿ ಬರುವ ಸ್ತ್ರೀವೇಷ : ಇಲ್ಲಿ ಸ್ತ್ರೀವೇಷಕ್ಕೆ "ಯಕ್ಷಿಣಿ" ಎಂಬ ಹೆಸರು ವಾಡಿಕೆಯಲ್ಲಿ ಬಂದಿರುವುದು ಒಂದು ಗಮನೀಯ ವಿಷಯ ! (ಹುಗ್ಗಿಣಿ. ೫೦).

[ಸಂ. ಯಕ್ಷಿಣೀ]

ಯಕ್ಷಿಣಿಗಾರ (ನಾ). ಮಾಟಗಾರ ; ಐಂದ್ರಜಾಲಿಕ : ಶಾಲೆಗೆ ಒಬ್ಬ ಯಕ್ಷಿಣಿಗಾರ ಬಂದು ಇಂದ್ರಜಾಲವಿದ್ಯೆ ಪ್ರದರ್ಶಿಸಿ ಹುಡುಗರನ್ನು ನಲಿಸಿದನು (ಕೂಪ). [ಯಕ್ಷಿಣಿ + – ಗಾರ (< — ಕಾರ)]

ಯಕ್ಷಿಣೆವಿದ್ಯ (ನಾ).= ಯಕ್ಷಿಣಿ ೬ : ಅವರವರ ಮನದಲಿ ದಾನವರುಹಿದ ಕಲಿತ ಯಕ್ಷಿಣಿವಿದ್ಯದರಿ ಬಸವ (ಪಾಕ್ಷ. ೧೩-೨೯). [<ಸಂ. ಯಕ್ಷಿಣೀವಿದ್ಯ]

ಯಕ್ಷಿಣೆವಿದ್ಯೆ (ನಾ). = ಯಕ್ಷಿಣಿ ೬ : ಏನು ಯಕ್ಷಿಣೆವಿದ್ಯೆ ಮಾಡಿದಳೋ . . . ಗಿರಕ್ಕನೆ ಆವಳ ಕಡೆ ತಿರುಗಿಬಿಟ್ಟಿ (ಪುಟಾಪ. ೧೯೩) ; 'ಯಕ್ಷಿಣೆವಿದ್ಯೆ' ಇಂದ್ರಜಾಲಕ್ಕೆ, ವಶೀಕರಣಕ್ಕೆ ಹೇಳುವಂಥ ಮಾತೂ ಆಗಿದೆ (ಹುಳಿ. ೯).

[< ಸಂ. ಯಕ್ಷಿಣೀವಿದ್ಯಾ]

ಯಕ್ಷ್ಮ (ನಾ). ಶ್ವಾಸಕೋಶದ ಕ್ಷಯ ; ಕ್ಷಯರೋಗ : ಆ ಗೆಡ್ಡಿಯಂ ನೀರಲ್ಲರೆದು ಕುಡಿಯೆ ಯಕ್ಷ್ಮ, ಕ್ಷಮರೋಗ ತೀರ್ಗುಂ (ಪಕ್ಷಿ. ೧೩).

[ಸಂ.]

ಯಕ್ಷ್ಮರೋಗ (ನಾ). ೧. = ಯಕ್ಷ್ಮ. ೨. (ಆಲಂ) ಮಾನಸಿಕವಾದ ನೋವು : ಸುದತಿಯೆ ಬಿಡದಿಲ್ಲವ ಪೇಳ್ವುದು ಹೃದಯದೊಳಿರ್ಪ ಯಕ್ಷ್ಮರೋಗದ ಪರಿಯಂ (ಕ್ರಿಶಾಕೋ. ೦೬೦). [ಸಂ.]

ಯಗಣ (ನಾ). [ಛಂದ] ಆದಿಯಲ್ಲಿ ಒಂದು ಲಘು ಮುಂದೆ ಎರಡು ಗುರುಗಳುಳ್ಳ ಒಂದು ಅಕ್ಷರಗಣ (ು – –) : ಮಗಣಂ ಭೂಮಿ ಯೆನಿಕ್ಕುಂ ಯಗಣಂ ಜಲ ರಗಣಮಗ್ನಿ ಸಗಣಂ ವಾತಂ (ಛಂದೋಂಬು. ೧-೬೭ ಪದ್ಯ).

[ಸಂ.]

ಯಚ್ಚಾವತ್ತು (ನಾ). ಎಲ್ಲವೂ ಒಳಗೊಂಡುದು; ಸಮಗ್ರವಾದುದು : ಯಚ್ಚಾವತ್ತು ಜಗತ್ತು ನೆಟ್ಟಿನ ಮೆಚ್ಚು. ಇದರ ಮೈಮೆಯನ್ನು ಹೆಚ್ಚಿಗೆ ಮೆಚ್ಚದವನೇ ಬಲ್ಲನು (ಚಾಸಾಂಬ. ೬೪).

[P ಸಂಸ್ಕೃತದಲ್ಲಿ ಇದು 'ಯತ್' 'ಚ ಯಾವತ್' ಎಂದು ಎರಡು ಭಿನ್ನಶಬ್ದಗಳು]

ಯಜನ (ನಾ). ೧. ಯಜ್ಞ ; ಯಾಗ: ೨. ಯಾಗಮಾಡುವಿಕೆ : ಅಂತು ಭವಿಷ್ಯದ್ವಿಜನ್ಮವರ್ಣಕಧ್ಯಯನಾಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ. . . ನಿಜಾಸಿ (೧೦೬೪. ೪-೭೬ ಪ); ಯಜ[ನಯಾ]ಜನಾಧ್ಯಯನಾಧ್ಯಾಪನ ದಾನ ಪ್ರತಿಗ್ರಹಶುಶ್ರೂರ್ಷಾನಿರತರುಂ (ಪಾಭಾ. ೪-೪೯-೨೩; ೧೦೯೭); ಯಜನಾಧ್ಯಯನು ದಾನಂ ನಿಜಮಾಗಿರೆ ನೃಪವಣಕ್ಕೆ ಲಕ್ಷಂ ಸಲ್ಗುಂ (ಪಜ್ಞಕೋ. ೬೬-೬೦). ೩. ಪೂಜೆ; ಅರ್ಚನೆ : ಶಿವಸ್ತುತಿ ಪೂರ್ಣಕರ್ಣನಿಃಶ್ವರಯಜನಾನುರಕ್ತಂ (ಚಾಕಥ. ೬-೨).

[ಸಂ.]

ಯಜನಾಧಿಕಾರಿ (ನಾ). ೧. ಯಜ್ಞಮಾಡುವ ಅಧಿಕಾರವುಳ್ಳವನು : ಶಾಖಾ, ಸೂತ್ರ, ಗೋತ್ರ ಪರಂಪರೆಯಲ್ಲಿ ಸ್ವಾರ್ಥ ಮತ್ತು ಪರಾರ್ಥ ಯಜನಾಧಿಕಾರಿಗಳು ಮುಖ್ಯಾಧಿಕಾರಿಗಳು (ಚಾಕಥ. ೬೬). ೨. ದೇವ ಪೂಜೆಯ ಅಧಿಕಾರವುಳ್ಳವನು : ಪರಾರ್ಥ ಯಜನಾಧಿಕಾರಿಯಾವ ಅರ್ಚಕನು ಸ್ವಾರ್ಥವನ್ನು ಬದಿಗೊತ್ತಿ. . . ಶ್ರದ್ಧಾಭಕ್ತಿಯಿಂದ ದೇವರನ್ನು ಅರ್ಚಿಸುವಾತನು ತನ್ಮಯತ್ವವನ್ನು ಪಡೆಯುವನು (ಚಾಕಥ. ೬೯).

[ಸಂ. ಯಜನಾಧಿಕಾರಿನ್]

ಯಜಮಾನ (ನಾ). ೧. ಯಾಗಗಳನ್ನು ಮಾಡುವವನು; ಯಜ್ಞ ಕರ್ತೃ : "ಯಜ್ಞಾ. ಯಜಮಾನಃ . . . ಯಾಸುತೀರ್ಃ—ಈ ೯ ಯಜ್ಞ ಮಾಡುವಾತಂ" (ಪಶಾಯಜು. ೬೯-೩೬೬); ಧರ್ಮಪತ್ನಿಂ ಸಪತ್ನಿ ಯಜಮಾನಾಗಿರ್ದಾಗಳ್ (ಕಂಪಶಾ. ೬-೬೬ ಪ); ಯಜಮಾನನು ಹೊಗೆಯಿಂದ ಕಣ್ಣುಗಳನ್ನು ತೆರೆಯದಿದ್ದರೂ ಆತನ ಕೈಯಿಂದ ಆಹುತಿಯು ದೈವಯೋಗದಿಂದ ಅಗ್ನಿಯಲ್ಲೇ ಬಿದ್ದಿತು (ಚಾಳಾಂಕ. ೨೯-೩೯): ವಿಶ್ವಜಿದ್ಯಾಗದಲ್ಲಿ ಯಜಮಾನನು ತನ್ನ ಸಕಲಸಂಪತ್ತನ್ನೂ ದಕ್ಷಿಣೆಯಾಗಿ ಕೊಡಬೇಕೆಂದು ವಿಯಮವಿದೆಯಂತೆ (ಪಕಂಚಾ. ೦೬೦). ೨. ಅರ್ಚಕ; ಪೂಜಾರಿ : "ಯಟ್, ಯಾಟ್. . . ಯಜಮಾನಃ, ಯಕ್ಷ್ಯಾ. ಯಾಯಜೂಕಃ—ಈ ೭ ಪೂಜಿಸುವಂ" (ಚಾಕ್ಷ. ೦೬೦); ಎಲ್ಲೆ ಅಗ್ನಿಯೆ. . . ನೀನು ಸಕಲಕ್ಕೂ ಪೋಷಕನಾಗಿದ್ದು ನಿನ್ನನ್ನು ಪಚರಿಸುವ ಯಜಮಾನನನ್ನು ಮನಃಪೂರ್ವಕವಾಗಿ ಕಾಪಾಡುತ್ತೀಯೆ (ಪುಣ್ಯಾರ. ೦೯). ೩. (ಸಂಸಾರದ ಅಥವಾ ಸಮಾಜದ) ಮುಖ್ಯಸ್ಥ.–ಒಡೆಯ : ಒಡಂಬಟ್ಟು ಯಮ್ಮ ಯಜಮಾನಜ್ಞಿ ಧಾರಾಪೂರ್ವಕಂ ಮಾಡಿಕೊಟ್ಟಿಱಂ (ಎಕ್ಷ. XII. ೫೪೫. ೪-೪ ; 1287); ಯಜಮಾನನಿಲ್ಲದ ಗೃಹವು ನಮಗಸ್ಯಾವ್ಯ (ಪೊಕಥಾ. ೬-೪-೨೦); ದೇಶದ ಶಬ್ಬರು–ಯಜಮಾನರು–ವೀರಕೈವಾನುಯಾಯಿ ೧೮ ಪಣಗಳ ಮುಖಿಂಡರು (ಪಚಾ. ೫೪-೬); ಊರ ಗೌಡ ಸೇನಬೋವ ಸೆಟ್ಟಿ ಯಜಮಾನ ಕಂದಾಚಾರ ದವರೂ ಎಲ್ಲಾರೂ . . . ಎಲ್ಲಾವನ್ನೂ ಸೆಳೆದು ಅರಮನೆಗೆ ಸೇರಿಸಿಕೊಂಡು ಬಿಡುತ್ತಾರೆ (ಪಚ್ಚಿ. ೦೩೨-೦೬); ಹಿರಿಮಲೆಯ ಯಜಮಾನ ಪೂಜಾರಿಯ ಕೈಗೆ ಸಿಂಗಾರ ಹೂವು ಹಾಕಿದ (ಶಾಪಚ. ೦೪೬). ೪. ಧಣಿ ; ಮಾಲೀಕ : ಆಳು ಯಜಮಾನನು ಹೇಳಿದ ಕೆಲಸ ಮಾಡುತ್ತಾನೆ (ರಹಾಗಾ. ೦೦೩); ಅವನು ವ್ಯವಸ್ಥಾಪಕನಾಗಿರುವ ಹೊಟೇಲಿಗೆ ಇದಿರಾಗಿ ವಿದ್ಯಾವಂತಸಾದ ಒಬ್ಬನ ಹೊಟೇಲೊಂದಿಕ್ಕೆಂದು ಹೇಳಿತಪ್ಪೆ. ಅಲ್ಲಿನ ಯಜಮಾನನ ಕಿವಿಗೆ ರಾಮನ ವಿಚಾರಗಳು ತಿಳಿಯಬಂದುವು (ಪಚಕು. ೩೨೨). ೫. ಗಂಡ ; ಪತಿ : ನಿಮ್ಮ ಯಜಮಾನ್ರು ಇದ್ದಿದ್ರ ಇಂಥಾದೆಲ್ಲ ಸಹನ ಆಗತಿತ್ತೇ ಅವರಿಗೆ ? (ಗುಣಾಶಾ. ೦೦೩); ಇಲ್ಲಿ ನಿನ್ನ ಯಜಮಾನ ನಿಂತಾನಲ್ಲ ಅವನು ಹೇಳಲಿ (ಕೆಂಗಿರೀ. ೪೯). ೬. ವಯಸ್ಸಾದ ವ್ಯಕ್ತಿ : ಹಿರಿಯವನು.

[ಸಂ.]

ಯಜಮಾನಗಿತ್ತಿ (ನಾ). ೧. ಒಡತಿ : ಯಜಮಾನಿತಿ : ಎಲ್ಲರೂ ಹುಬಿರಲು ಸಾಧ್ಯವಿಲ್ಲವಾದ್ದರಿಂದ ಮನೆಯ ಯಜಮಾನಗಿತ್ತಿ ಹಸಿದುಕೊಂಡಿದ್ದು, ಬಾಳೆಯಹಣ್ಣನ್ನು ಸುಲಿದು ಅಭಿಷೇಕಕ್ಕಾಗಿಯೇ ತಂದ ಹೊಸ ಮಾಡಕ್ಕೆ ಹಾಕಿ ಆದಕ್ಕೆ ಜೇನುತುಪ್ಪ ಬೆಲ್ಲ ವಿಲಕ್ಕಿ ಇವನ್ನು ಸೇರಿಸುತ್ತಾಳೆ. (ಪಹೊಡ. ೮೨). ೨. ಹೆಂಡತಿ ; ಪತ್ನಿ : (ಅ). [ಯಜಮಾನ + – ಗಿತ್ತಿ]

ಯಜಮಾನತನ (ನಾ). ಯಜಮಾನನ ಪದವಿ ; ಯಜಮಾನಿಕೆ : ಯಜಮಾನತನದ ಅಹಂಕಾರ ಪಾನೊಲ್ಲೆ (ಪಪಕ. ೨೦-೦).

[ಯಜಮಾನ + – ತನ]

ಯಜಮಾನತಿ 'ಯಜಮಾನಿತಿ' ನೋ.

ಯಜಮಾನಪಟ್ಟ (ನಾ). ಹಿರಿತನದ ಅಧಿಕಾರ : ಆನಂದದಿನಾ ಸುಕುಮಾರಗೆ ಯಜಮಾನಪಟ್ಟವ ಕಟ್ಟಿದನು (ಶ್ರೀಚಾಂಪು. ೦೪-೩೬). [ಸಂ.]

ಯಜಮಾನಿ (ನಾ). ೧. ಹೆಂಡತಿ ; ಪತ್ನಿ : ನಿಮ್ಮ ಯಜಮಾನಿ, ಕುಂಬಳೇ ಸೀಮೆಯವರೋ ಎಟ್ಲು ಸೀಮೆಯವರೋ ಎಂದ ಹಾಗಿದೆ (ಪಚ್ಚಿ. ೦೫೬). ೨. ಒಡತಿ ; ಸ್ವಾಮಿನಿ : ನೀನು ಮನೆಯ ಯಜಮಾನಿ ಎಂಬುದು ಗೊತ್ತಿದೆ ನನಗೆ (ಪುಟಾಪ. ೩೦೦). [ಸಂ. ಯಜಮಾನೀ]

ಯಜಮಾನಿಕೆ (ನಾ). ೧. ಯಜಮಾನನ ಪದವಿ.—ಸ್ಥಾನಮಾನ : ಶೀನಮಯ್ಯನಿಗೆ ಹಾನು ಯಜಮಾನಿಕೆಯ ಪಟ್ಟ ಸಲಿಸಿದರೂ ತಮ್ಮ ಈ ಹೊರೆಯನ್ನು ತಾವೇ ಹೊರುವುದು ತೀರ ಅವಶ್ಯವಾಗಿತ್ತು (ಪಚಮ. ೧೦). ೨. ಒಡೆತನ ; ಅಧಿಕಾರ ; ಸ್ವಾಮ್ಯ : ರೋಕಯನು ತಂನ ಯಜಮಾನಿಕೆ ಖ್ಯಾತಿ ಬಗ್ಗೆ ಖಾತ್ರಿಯಾದ ಸ್ವಾಸ್ತಿಯವಳಿಗೆ ಉತ್ತಾರ ಕೊಟ್ಟಿದು (ಎಕ್ಷ. VII, ೫೪೫. ೨೯-೦೫; 1713); ನಮ್ಮೂರಿನಲ್ಲಿ ಮೂರು ಅಂತಸ್ತಿನ ಜವರಿದ್ದರೆಂದು ಧಾರಾಳವಾಗಿ ಹೇಳಬಹುದು. ಒಂದು ಯಜಮಾನಿಕೆ, ಎರಡನೇದು ಆಳುತನ. ಮೂರನೇದು ಇವರಿಬ್ಬರ ದಳ್ಳಾಳಿತನ (ಪುಟ್ಟಕ. ೭೫). [ಯಜಮಾನ + – ಇಕೆ]

ಯಜಮಾನಿತಿ. ಯಜಮಾನತಿ (ನಾ)- ಒಡತಿ ; ಅಧಿಕಾರಿಣಿ ; ಸ್ವಾಮಿನಿ: ತಾನೇ ಯಜಮಾನಿತಿಯೆಂಬಪ್ಪು ಬಿಂಕದಿಂದ ಮಗು ರಾಗವಾಗಿ ಹೇಳಿತು (ಚಾಸ್ಕೃ. ೭೬). **ಯಜಮಾನತಿ :** ಈ ವಾಡೀದ ಯಜಮಾನತಿ ಆಗಾಗ ಲಾಯಖಿ ಇದ್ದೀ ನೋಡು (ಸ್ತ್ರೀಪಜಾ. ೦೬); ಯಜಮಾನತಿಯು . . . ಮನೆಗೆ ಬರುತ್ತಿದ್ದರು (ಪುಟ್ಟಕ. ೯).

[ಯಜಮಾನ + – ಇತಿ (< – ಇತ್ತಿ)]

ಯಜಿಸು (ಕ್ರಿ)· ೧· ಯಾಗಮಾಡು : ಯಾಗದಿಂದ (ದೇವತೆಗಳನ್ನು) ತೃಪ್ತಿಪಡಿಸು : ಹಲವು ಯಜ್ಞಂಗಳಲಿ ಯಜಿಸಿವನಲಕ್ಷುಮತಿ ಯಜ್ಞಾಧಿಪತಿಯನು (ಪಾರ್ಶ್ವ. ೩-೩-೩); ಯಜಿಸಲು ಯೋಗ್ಯರಲ್ಲದಿರ್ಪ ಶೂದ್ರ ವ್ರಾತ್ಯಪತಿತಾದಿಗಳ್ಗೆ ಪೌರೋಹಿತ್ಯಮನೆಸಗಿ ಜನ್ಮಂಗಳಾಜಿವುದುಂ (ಶಾಕಟಾ· ೨೫). ೨· ಪೂಜೆಮಾಡು ; ಆರ್ಚಿಸು : ನಮಿಸಿ ಮುಂಗಡೆ ನಿಂದನಂತವಿಧದಿಂ ಯಜಿಸಿ (ಕಬ್ಬಕಾ. ೦೦-೨೦೩) : ಸ್ಮರಿಸುತ್ತೀಕ್ಷಿಸುತೀಸುತ್ತೆ ಯಜಿಸುತ್ತಾನಂದದಿಂ . . . ಆ ನಿಮ್ಮೆ ತಾನೀಗಳೇ ಪರೆ ಪಶ್ಯತಿಸುಮಧ್ಯೆ ವೈಖರಿಯನಲ್ಲೋರ್ಕುಂ (ಪಪ. ೦೩೬-೧೩) : ಕಲ್ಮೀಶ್ವರನ ಕಾಶಿಯೊಳ್ ಕೇಶವಂ ಶುದ್ಧಮಾನಸನಾಗಿ ಯಜಿಸಿದಂ (ಸಿದ್ಧೇ· ೬-೨೬)·· [ಯಜ + ಿಸು]

ಯಜುರಂಗ (ನಾ)· ಯಜುರ್ವೇದದ ಭಾಗ.—ಅಂಗ : ಸಲೆ ಯಜುರಂಗದಿಂದಭಿನಯಾಂಗಳನುಸ್ಮತ ಋಙ್ಮಾಕ್ಯಾಯದಿಂ ಪಲವಡದಿರ್ಪ ಕ್ಷುತ್ಕತಿಯಂ ನೀಱೆ ಸಾಮದೆ ಗೀತಸಾರವಂ ಸುಲಲಿತಮಿವ್ಪರ್ವಣದಿನಗ್ಗದ ಪ್ರಪ್ರಸದೇಳ್ಗೆಯಲ್ಲವಂ ಗೆಲ್ದೊಲವಿಂದೆ ಕೂಡಿ ಮಿಗೆ ಪಟ್ಟಿಸಿದಂ ದಿವಿ ನಾಟ್ಯವೇದಮಂ (ರಾಷ್ಟ್ರಕೂ· ೦-೮), [ಸಂ.]

ಯಜುರ್ವೇದ (ನಾ)· ವೇದಗಳಲ್ಲಿ ಎರಡನೆಯದು ; ಯಜ್ಞಕ್ಕೆ ಸಂಬಂಧಪಟ್ಟ ಗದ್ಯಭಾಗಗಳನ್ನೊಳಗೊಂಡು, ತೈತ್ತಿರೀಯ ಹಾಗೂ ವಾಜಸನೇಯಿ ಎಂಬ ಎರಡು ಶಾಖೆಗಳನ್ನುಳ್ಳ ವೇದ : ಋಗ್ವೇದ ಯಜುರ್ವೇದ ಸಾಮ ಅಥರ್ವಣ ಅಖಿಲಸುವ ವೇದಘೋಷಗಳು (ಪ್ರಭಂದ· ೪-೦-೨)ಃ ವೇದನಿ ಋಗ್ವೇದ. ಯಜುರ್ವೇದ. ಸಾಮವೇದವೆಂದು ಮೂರುವಿಧ (ಶಿವದಾಸ· ೦೩೭). [ಸಂ.]

ಯಜುಸ್ಸು (ನಾ). ೧· ಯಜ್ಞಕಾಲದಲ್ಲಿ ಪಠಿಸುವ ಮಂತ್ರ : ಕೃಷ್ಣ ಯಜುರ್ವೇದದಲ್ಲಿ ಮಂತ್ರಗಳು. ಯಜುಸ್ಸು (ಅಂದರೆ· ಯಜ್ಞದಲ್ಲಿ ಹವಿಸ್ಸನ್ನು ಕೊಡುವಾಗ ಉಚ್ಚರಿಸುವ ಗದ್ಯವಾಕ್ಯಗಳು)— ಇವುಗಳ ಜೊತೆಯಲ್ಲೇ ಯಾಗದ ಒಂದೊಂದು ಕ್ರಿಯೆಯ ಅರ್ಥವನ್ನೂ ಸಾರ್ಥಕ್ಯವನ್ನೂ ಹೇಳಿದ (ಕಂಕದ· ೩೧). ೨· ಯಜ್ಞದಲ್ಲಿ ಹೇಳುವ ಸ್ತೋತ್ರ, ಪ್ರಾರ್ಥನೆ, ಮಂತ್ರ ಮೊದಲಾದುವನ್ನೊಳಗೊಂಡ ಗ್ರಂಥ : ಯಜುರ್ವೇದ ಪಾಠ. ೩· ಯಜುರ್ವೇದ : ವೇದಂ ಭಿದಂ ಶ್ರುತಿ ತದ್ವೇದಂ ಸಾಮರ್ಗ್ಯಜುಸ್ಯಯಂ ತ್ರಯಯನೀತಿ (ಪಾರ್ಶ್ವ· ೬-೦೨). [ಸಂ· ಯಜುಸ್]

ಯಜ್ಞ (ನಾ)· ೧· ಯಜನ : ಯಾಗ : "[ಕ್ರತು] ಯಾಗಮಧ್ವರಂ ಸಪ್ರತಂತು ಸತ್ರಂ ಮಖಂ ಸವಂ ಯಜ್ಞಂ" (ಪಾರ್ಶ್ವ· ೫೫-೨೦) : ಖಿಟ್ವಾಂಗನೆಂಬರಸನ ಯಜ್ಞದೊಳಾತನ ತಂದ ಘೃತಸಮುದ್ರಮುಂ ಕುಡಿದೊಡಾದ ರೋಗವಿಂದು ಪೋದುದು (ಪಂಚಾಣ· ೩-೦೦೨ ೩) ; ಯಜ್ಞದ ನೆವವು ಭಾರವಣಿಯಲಿ ಬಿದ್ದುದು ಧರ್ಮನಂದನನ (ಭಾರ್ಗ· ೦-೪೩) ; ನನ್ನ ಸಂಶಯ ಯಜ್ಞವನ್ನೇ ಕುರಿತದ್ದಾದುದೆಂದಿಂದ ಅದಿಲ್ಲಿಯೇ ಪರಿಹಾರವಾಗಬೇಕು (ಕಂಕಾಣ· ೦೩೮)- ೨· ದೇವಪೂಜೆ ; ಭಗವದರ್ಚನೆ : "ಇಷ್ಟಂ· ಇಷ್ಟಿಃ . . . ಯಜ್ಞಃ, ಯಾಗಃ . . . ಯಾಜ್ಯಂ ಈ ೦೦೦ ದೇವಪೂಜೆ" (ಶಾಕಲ್ಯ· ೦೩೦) ; ಯಜ್ಞವೆಂದರೆ ಭಗವದರ್ಚನೆ ಮತ್ತು ಅರ್ಪಣ—ಸಾಧು ಸುತರ ಸೇವೆ (ಕೃಷ್ಣ· ೧೭).

ಯಜ್ಞಮಾಡು = ೧· ಯಾಗಮಾಡು : ನಾನು ಈ ಯಜ್ಞ ಮಾಡುತ್ತಿರುವುದು ದೇವತೆಗಳಿಗೆ ಪ್ರಿಯವಾಗಿಲ್ಲವೇ ?. . (ಕಂಕಾಣ· ೦೩೬); ನಾವು ಎಂದರೆ ಸರಸ್ವತೀತೀರದಲ್ಲಿರುವ ಋಷಿಗಳೆಲ್ಲರೂ ಸೇರಿ ವಿಶ್ವಶಾಂತಿಗೆಂದು ಯಜ್ಞ ಮಾಡುತ್ತಿದ್ದೆವು (ಪುಣಾಂ· ೨೯೯). ೨· ಕೊಲ್ಲು ; ವಧಿಸು : (ಕ). ೩· ಚೆನ್ನಾಗಿ ಥಳಿಸು ; ಹೊಡೆ : (ಕ). [ಸಂ.]

ಯಜ್ಞಕಂಕಣ (ನಾ)· ಯಜ್ಞಕ್ಕೆ ದೀಕ್ಷಿತನಾಗಿರುವ ಸಂಕೇತವಾಗಿ ಯಜಮಾನನು ಮುಂಗೈಗೆ ಕಟ್ಟಿಕೊಳ್ಳುವ ಮಂತ್ರಪೂತವಾದ ದಾರ. —ಸೂತ್ರ. [ಸಂ.]

ಯಜ್ಞಕುಂಡ (ನಾ). ಯಜ್ಞದಲ್ಲಿ ಅಗ್ನಿಪ್ರತಿಷ್ಠಾಪನೆಗಾಗಿಯೂ ಆಹುತಿಯನ್ನು ಕೊಡುವುದಕ್ಕಾಗಿಯೂ ನಿರ್ಮಿಸಿದ ವೇದಿಕೆಯಲ್ಲಿಯ ಹಳ್ಳ.—ಕೊಂಡ : ಮೇಲಣಂತರ್ವೇದಿಗಳ ಮುನಿಪಾಳಿ ಮಂತ್ರಾಹುತಿಗೆ ಕವಿವುರಿನಾಲಗೆಯ ಲಾವಣಿಗೆ ತಳಿತುದು ಯಜ್ಞಕುಂಡದಲಿ (ಭಜ್ಞಾ· ೦೦-೦); ಪೂರ್ಣಾಹುತಿಯ ಸಮನಂತರದಲಾ ವಿಸ್ಫುಲಿಂಗತೋಜೋಮೂರ್ತಿ ಜೊಳೆದುದೆ ಯಜ್ಞಕುಂಡದಲಿ (ಕೊಂಭಾ· ೦-೬ ೫೪) : ಪಾಪಿಶಾಲೆಯುಂ ರಚಿಸಿ. ಯಜ್ಞಕುಂಡಂಗೈದು ವಿಶ್ವಕರ್ಮಸ್ವರೂಪಿಯುಸಗ್ನಿಯಂ ಭಜಿಸಿ ನೇಂ (ಕೃಷ್ಣಾಮಾ· ೦೦-೨೫೮). [ಸಂ.]

ಯಜ್ಞತುರಗ (ನಾ). ಯಜ್ಞದ ಕುದುರೆ : ರಾಮನೊರ್ವನೇ ವೀರನಾತನ ಯಜ್ಞತುರಗಮಿದು (ಕೃಷ್ಣಾ· ೨೦-೭). [ಸಂ.]

ಯಜ್ಞದೀಕ್ಷಿತ (ನಾ). ಯಜ್ಞಕ್ಕೆ ಸಿದ್ಧನಾದವನು ; ಯಾಗ ಮಾಡಲು ಅಧಿಕಾರವನ್ನು ಹೊಂದಿರುವವನು : ಯಮನಂದನನು . . . ಮಱುದಿನ ಯಜ್ಞದೀಕ್ಷಿತನಾದನೊಲವಿನೆಲೆ(ಭಜ್ಞಾ· ೭-೨೬); ಅಸುರರು ಪಕ್ಷುಗಳಾದರು ಯಜ್ಞದೀಕ್ಷಿತನಾದನಾ ಹನುಮ (ಕೊಂಭಾ· ೩-೦-೪); ಯಜ್ಞದೀಕ್ಷಿತನಾದ ವಾಜಶ್ರವಸ . . . ತಾನು ಮಾಡಬೇಕಾದ ಕಾರ್ಯಗಳನ್ನು ಮಾಡುತ್ತಿದ್ದಾಪ (ಕಂಭಾ. ೦೩೧). [ಸಂ.]

ಯಜ್ಞದೀಕ್ಷೆ (ನಾ)· ೧· ಯಜ್ಞಮಾಡುವುದಕ್ಕೆ ಪರ್ವಾಚೆ ಯಜಮಾನನಿಗೆ ಅಧಿಕಾರವನ್ನು ಕೊಡುವುದು: ಯಜ್ಞದೀಕ್ಷೆಯನ್ನು ಪಡೆಸುವ ದಿನದ ದೀಕ್ಷಾಯಜ್ಞೇಯಾಜ್ಞಿಯಾಯಿತು (ಕುಚಾಂ. ೦೦೮). ೨· ಯಜ್ಞವನ್ನು ಕೈಕೊಳ್ಳುವಿಕೆ. — ನಡಸುವಿಕೆ. [ಸಂ· ಯಜ್ಞದೀಕ್ಷಾ]

ಯಜ್ಞದ್ರವ್ಯ (ನಾ)· ಯಜ್ಞಕ್ಕೆ ಬೇಕಾಗುವ ಸಾಧನ.—ಸಾಮಗ್ರಿ : ಯಜ್ಞದ್ರವ್ಯಂಗಳೆಲ್ಲಮಂ ನೆರಪಿ (ಪಂಚಾಣ· ೩-೩೩ ೩)ಃ ಯಜ್ಞದ್ರವ್ಯೋತ್ಕರಮಂ . . . ರಕ್ಷಿಪಂ ಧರವಿನಾದಿಮದ್ರೇಶ್ವಾಣಂ (ಪಾಶ್ವ. ೦೯-೨೫)· [ಸಂ.]

ಯಜ್ಞಪತ್ನಿ (ನಾ)· ಯಜ್ಞಕಾರ್ಯದಲ್ಲಿ ಗಂಡನ ಜೊತೆಗೆ ಭಾಗವಹಿಸಲು ಅಧಿಕಾರವುಳ್ಳ ಹೆಂಡತಿ : ಸಕಲ ಸೌಖ್ಯ ಸೌಭಾಗ್ಯಗಳನ್ನೂ ಪಡದು ಯಜ್ಞಪತ್ನಿಯೂ ವ್ರತಾಚಾರಿಣಿಯೂ ಆಗು! (ಭಜ್ಞಾ· ೭೦). [ಸಂ· ಯಜ್ಞಪತ್ನೀ]

ಯಜ್ಞಪಶು (ನಾ)· ೧· ಯಜ್ಞದಲ್ಲಿ ಬಲಿ ಕೊಡುವ ಮೇಕೆ, ಕುದುರೆ ಮೊದಲಾದ ಪ್ರಾಣಿ ; ಬಲಿಪಶು : ಯಜ್ಞಪಶುಬಂಧನಕ್ಕೆಂದು ಸ್ಥಾಪಿತವಾದ . . . ಯೂಪಸ್ತಂಭದ ಬಳಿ ತನ್ನ ಮಗ ನಿಂತುದನ್ನು ನೋಡುತ್ತಿದ್ದ ಹಾಗೇ . . . ಜೀರಿ ಹೋಳದೇಕನಿಸಿತು (ಕಕಂಚಾ· ೦೬೬). ೨· (ಲಲಿಂ) ಮೋಸಕ್ಕೆ ಬಲಿಯಾಗುವವನು. [ಸಂ.]

ಯಜ್ಞಪುರುಷ (ನಾ)· ೧· ವಿಷ್ಣು. ೨· ಅಗ್ನಿ : ಯಜ್ಞಸಧಿಪತಿಯಾತ ನೀತನು ಯಜ್ಞಪುರುಷನು ಸ್ರುಕ್‌ಸ್ರುವಾದೀ ಯಜ್ಞಸಾಧನನೀತನೀತನು ಮಂತ್ರಕಾಲಾತ್ಮ (ಭಜ್ಞಾ· ೯-೦೫); ಹರನ ಸ್ಮರಿಸಿ, ಅಗ್ನಿಗೊಂಡವ ಬೇಳುತ್ತಿರಲು, ಯಜ್ಞಪುರುಷ ಮೆಚ್ಚಿ ಪ್ರಸನ್ನವಾಗಿ ಕಾಳದಾಸನ ಪ್ರಾಣವಂ ಕೊಟ್ಟು ಯಜ್ಞಪುರುಷನದೃಶ್ಯವಾಗಲು (ಕೃಕಸೂ· ೨· ೦೦೩). [ಸಂ.]

ಯಜ್ಞರಕ್ಷಣೆ (ನಾ)· ಯಜ್ಞ ಕಾಪಾಡುವುದು : ರಾಷ್ (ಕೊಕಾಣ· ೦-೯-೩೭)- [ವು ಸುಸೂತ್ರವಾಗಿ ನಡೆಯುವಂತೆ ನು ಕೊಡು . . . ಯಜ್ಞರಕ್ಷಣೆಗೆ ಯಜ್ಞರಕ್ಷಣ]

ಯಜ್ಞರಿಪು (ನಾ)· ೧· ಯ ಕಾರ್ಯಗಳಿಗೆ ವಿರೋಧಿಯಾದವನು; ರಾಕ್ಷಸ : ತಕ್ಕಿಗಳ ೨· ಯಜ್ಞರಿಪುಗಳ ಮೃತ್ಯುವಜ್ರವು

(ಭಾಷ್ಯಸ. ೦೦-೭೦). ೨. ಧರ್ಮಬಾಹಿರನಾದವನು ; ಅಧರ್ಮಿ : ಯಜ್ಞರಿವುಗಳು ನಿಮ್ಮಂಗಿಗೆ) ವರಯಾಜ್ಞಿಕರಿಂಗಾಚಾರಯೋನರು (ಭಾಷ್ಯಸ. ೦೦-೭೨). [ಸಂ.]

ಯಜ್ಞವಾಟ (ನಾ)· ಯಜ್ಞಕಾರ್ಯಕ್ಕಾಗಿ ನಿರ್ಮಿಸಿದ ಚಪ್ಪರ; ಯಾಗಶಾಲೆ : ಧೃತರಾಷ್ಟ್ರ ಬಾಹ್ಲಿಕ ವರಬ್ಯಹದ್ರಥ ಸೋಮದತ್ತರು ಪರಮಪೂಜ್ಯರು ಮಾನನೀಯರು ಯಜ್ಞವಾಟದಲಿ (ಭಾಷ್ಯಸ. ೭-೦೯); ನೃಪಾಲದ ಪೂರ್ಣಮುನಿಗಳ ಯಜ್ಞವಾಟಪತಿಕೌತುಕದ ಮಾಳ್ಕೆಯಂ ಕಂಡು ನಲಿದಾಡಿತು ಜನಂ (ಕೃಪಾಪಾ. ೪೪-೦೦). [ಸಂ.]

ಯಜ್ಞವಿದ್ಯೆ (ನಾ)· ಯಜ್ಞಕಾರ್ಯಗಳ ಜ್ಞಾನ ; ಯಜ್ಞತಂತ್ರ ಜ್ಞಾನ : ಜಾರುತರ ಯಜ್ಞವಿದ್ಯಾಪಾರಗರ ರವಂಗಳಿಂ . . . ನೆಗಟ್ಟು ದಾಹುತಿಧೂಮಂ (ಕಂಪಾ· ೬-೪೪). [ಸಂ. ಯಜ್ಞವಿದ್ಯಾ]

ಯಜ್ಞವೇದಿ (ನಾ). ಯಜ್ಞದ ಜಗಲಿ, ವೇದಿಕೆ; ಯಜ್ಞಕುಂಡವಿರುವ ಭಾಗ : ಎತ್ತರಪ್ರದೇಶದಲ್ಲಿ ಯಜ್ಞವೇದಿಯನ್ನು ನಿರ್ಮಿಸಿ . . . ಸುಖಾಸನಗಳನ್ನೂ ಹಾಕಲಾಗಿತ್ತು (ಪಾಂಪಾ· ೦೭). ' ಯಜ್ಞವೇದೀ ಸಂಭವೆ ' ಪರಾ. [ಸಂ.]

ಯಜ್ಞವೇದಿಸಂಭವೆ (ನಾ)· ಯಜ್ಞಕುಂಡದಲ್ಲಿ ಹುಟ್ಟಿದವಳು; ದ್ರೌಪದಿ : ಯಜ್ಞವೇದಿಸಂಭವೆಯುಂ ಯಾಜ್ಞಸೇನಿಯುಂ . . . ಎನಿಸಿದ ಪಾಂಚಾಲರಾಜತನೂಜೆ ಪವಮಾನತನೂಜನಲ್ಲಿಗೆ ಬಂದು (ಗಜಾಮು· ೦-೬೩ ೩). [ಸಂ. ಯಜ್ಞವೇದಿಸಂಭವಾ]

ಯಜ್ಞವೈರಿ (ನಾ)· ೧. ಯಜ್ಞಕ್ಕೆ ಶತ್ರುವಾದವನು. ೨. ದಕ್ಷ ಯಜ್ಞವನ್ನು ನಾಶಮಾಡಿದವನು ; ವೀರಭದ್ರ : ವಿಷ್ಣುರಾಜ ವಿನಾಯಕನೆ . . . ಯಜ್ಞವೈರಿಯ ಶಿತನ [ಪಾಪಾ· ಶತನತಪಾದ] ಸುತ ನಿನ್ನ ಪೊಗಳ್ಕುಭಜ್ಞರಲ್ಲದೆ ಎನ್ನ ಜಡಮತಿಗಗೋಚರವು (ಶ್ರೀಕಂ· ೦-೩). [ಸಂ. ಯಜ್ಞವೈರಿನ್]

ಯಜ್ಞಶಾಲೆ (ನಾ)· = ಯಜ್ಞವಾಟಿ : ರಾಜರುಷಿ ಜನಕನನು ಕಾಶೀರಾಜನನು . . . ಯಜ್ಞಶಾಲೆಯಲಿ ಆ ಜಪೇಶ್ವರ ವಿಲಿಸಿ ಮುದದಲಿ ಪೂಜಿಪುದನವರುಗಳ (ಕೃಪಾಪಾ· ೦-೭-೭೪). [ಸಂ. ಯಜ್ಞಶಾಲಾ]

ಯಜ್ಞಸಾಧನ (ನಾ). ೧. ಯಾಗವನ್ನು ನೆರವೇರಿಸುವಿಕೆ. ೨. = ಯಜ್ಞದ್ರವ್ಯ : ಗಂಧ ಪುಷ್ಪ ಅಜ್ಯಮಾತ್ರಾದಿ ಯಜ್ಞಸಾಧನಂಗಳಂ ಸಂಗ್ರಹಿಸಿ (ಕವಿಗ· ೦೨೦). [ಸಂ.]

ಯಜ್ಞಸೂತ್ರ (ನಾ)· ಜನಿವಾರ ; ಯಜ್ಞೋಪವೀತ : ಬಲದ ಕಯ್ಯ ನೆಗಪಿ ಇಕ್ಕಲು ಪ್ರಮಿತಪ ಯಜ್ಞಸೂತ್ರವು — ಉಪವೀತ (ಪಾತಾ· ೨). [ಸಂ.]

ಯಜ್ಞಾಂಗ (ನಾ)· ೧. ಯಜ್ಞದ ಭಾಗ· ೨. = ಯಜ್ಞದ್ರವ್ಯ· ೩. ಅತ್ತಿ, ಕಗ್ಗಲಿ ಇತ್ಯಾದಿ ಮರಗಳ ಸಮಿತ್ತು. [ಸಂ.]

ಯಜ್ಞಾರಿ (ನಾ)· ೧. ದಕ್ಷಯಜ್ಞದ ಶತ್ರು ; ವೀರಭದ್ರ· ೨. ಶಿವ. [ಸಂ.]

ಯಜ್ಞಾಶ್ವ (ನಾ)· = ಯಜ್ಞತುರಗ : ಪಮ್ಮ ತಂದೆ . . . ಆ ಯಜ್ಞಪಶುವಿಯಜಾರದೆಂಬ ದುರಾದ್ವೇಶದಿಂದ ಯಜ್ಞಾಶ್ವವನ್ನು ಅಪಹರಿಸಿಬಿಟ್ಟನು (ಕಬಾ· ೦೩). [ಸಂ.]

ಯಜ್ಞಿಕ (ನಾ)· ಒಂದು ಬಗೆಯ ಮರ ; ಪಲಾಶ : "ಯಜ್ಞಿಕಃ — ಮುತ್ತುಗ. ಕಗ್ಗಲಿ" (ಲಿಪಂ· ೦೩೦). [ಸಂ.]

ಯಜ್ಞೀಯ (ಗು)· ೧. ಯಜ್ಞಕ್ಕೆ ಸಂಬಂಧಿಸಿದ. ೨. ಯಜ್ಞಕ್ಕೆಂದು ತಂದ ; ಯಜ್ಞದಲ್ಲಿ ಬಲಿ ಕೊಡಬೇಕಾದ : ನಾನೂ 'ಪಬ್ಬಕ್ಕೆ ತಂದ ಪರಕೆಯ ಕುರಿ'ಯೇನೂ ಅಲ್ಲ ; ಯಜ್ಞೀಯ ಪಶುವೆ (ಪಾಸಂ. ೨೩). ೩. ಯಜ್ಞಕ್ಕೆ ಯೋಗ್ಯವಾದ.– ಪವಿತ್ರವಾದ.

(ನಾ)· ೪. ಯಜ್ಞಕ್ಕೆ ಬೇಕಾದುದು ; ಅತ್ರಿ· ದರ್ಭೆ ಮೊದಲಾದ ವಸ್ತು : "ಯಜ್ಞೀಯಃ ಅತ್ರಿ· ದರ್ಭಃ" (ಲಿಪಂ· ೦೩೦). [ಸಂ.]

ಯಜ್ಞೇಶ್ವರ (ನಾ)· ೧. ವಿಷ್ಣು : ಹರಿ. ೨. ಇಂದ್ರ. ೩. ಅಗ್ನಿ : ಯಜ್ಞೇಶ್ವರನು ಬಿಸುಛಯದಿಂದ ಮುಡಿದಿದ್ದ ಹೂವು ಕೂಡ ಬಾಡದ ಹಾಗೆ ಸೀತೆಯನ್ನು ತಂದು ರಾಮಂಗೆ ಒಪ್ಪಿಸಿದನು (ಪಚಿಹಂ· ೩೪· ೦೨) : ಯಜ್ಞೇಶ್ವರನ ಜ್ವಾರಾಕಲಾಪಗಳು ಏಳೇಳುತ್ತಿವೆ (ಪುಚಾಚಾ· ೦೮೨). [ಸಂ.]

ಯಜ್ಞೋತ್ಸಾರ (ನಾ). ಯಜ್ಞದ ಕಾರ್ಯ : "ದೈನ್ಯದಲ್ಲಿ ಯಜ್ಞೋತ್ಸಾರದಲಿ ಕೋಪದಲಿ ಮನ್ಯುವೇದೆಂದೆಂಬುದು" (ಪುಂಗಣಾ. ೦೨೩-೨೮). [ಸಂ.]

ಯಜ್ಞೋಪಕರಣ (ನಾ). = ಯಜ್ಞದ್ರವ್ಯ : ನಿರತಿಶಯ ಯಜ್ಞೋಪಕರಣದ ಪರಿಪರಿಯ ಸಂಭಾರಚಯ ಗೋಚರಿಸಿದುದು ವರಗುರು ವಸಿಷ್ಠ ಮುನೀಂದ್ರನಾಜ್ಞೆಯುಲಿ (ಕೂಪಪಾ· ೦-೭-೯). [ಸಂ.]

ಯಜ್ಞೋಪವೀತ (ನಾ)· ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯವರ್ಗದ ಪುರುಷರು ಉಪನಯನದ ಸಮಯದಿಂದ ಎಡಭುಜದ ಮೇಲೆ ಮತ್ತು ಬಲಭುಜದ ಕೆಳಗೆ ಬರುವಂತೆ ಮಂತ್ರಪೂರ್ವಕವಾಗಿ ಧರಿಸುವ, ಮೂರು ಎಳೆಗಳಿಂದ ಕೂಡಿದ ಸೂತ್ರ ; ಜನಿವಾರ : ಅವರವ ನೆಲೆಗಳೊಳ್ ಬ್ರಹ್ಮಸೂತ್ರಾವಧಿನ ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ (ಶಾಕ್ಷ· ೦೫-೦೦ ೫) ; ವರಕಾಂಚನವರ್ಣದ ಯಜ್ಞೋಪವೀತವಳಿಪಿದನು ದ್ರೋಣ (ಭಾಷ್ಯಸ್ತ್ರೀ· ೯-೦೯). [ಸಂ.]

ಯಜ್ಯ (ಗು)· ೧. ಪೂಜೆಗೆ ತಕ್ಕ ; ಪೂಜ್ಯವಾದ· (ನಾ)· ೨. ಯಜ್ಞ· ೩. ದೇವಪೂಜೆ : "ಇಷ್ಟಂ, ಗಿಷ್ಟಂ . . . ಯಜ್ಯಂ, ಯಾಜ್ಯಂ—ಈ ೦೦ ದೇವಪೂಜೆ" (ಶಬ್ದ· ೦೩೦). [ಸಂ.]

ಯಜ್ವ (ನಾ)· ವೇದೋಕ್ತವಾದ ವಿಧಾನದಲ್ಲಿ ಯಜ್ಞ ಮಾಡುವವನು ; ಯಜ್ಞಕರ್ತ : "ಯಾಜಪಮಾನನಿಜ್ಯಾಗಮವ್ರತಿ ಯಜ್ವನಾ ದೀಕ್ಷಿತ ಸೆನಿಕ್ಯ" (ಪುಂಗಣ· ೭೭-೦೨). [ಸಂ. ಯಜ್ವನ್]

ಯಡಾನಬಳ್ಳಿ (ನಾ)· ಒಂದು ಬಗೆಯ ಬಳ್ಳಿ : ''ಧಗಡಿಬಳ್ಳಿ . . . ಯಡಾನಬಳ್ಳಿ, ಸುಗಡಿಬಳ್ಳಿ'' (ಪಪ್ಪ· ೪೭); ಧಗಡಿಬಳ್ಳಿ, ದುಸರಿಬಳ್ಳಿ, ಅಡಂಬುಬಳ್ಳಿ, ಯಡಾನಬಳ್ಳಿ (ಪ್ರಸಿಗ. ೨೭-೩೨೪). [ಯಡಾನ್ನಿ +ಬಳ್ಳಿ]

ಯಣ್‌ಸಂಧಿ (ನಾ)· [ವ್ಯಾಕ] ಸಂಸ್ಕೃತದ ಸ್ವರಸಂಧಿಗಳಲ್ಲೊಂದು : ಇ ಈ, ಉ ಊ, ಋ ೠ ಖೞಕಾರಗಳಲ್ಲೊಂದರ ಮುಂದೆ ಅದಕ್ಕೆ ಸವರ್ಣವಲ್ಲದ ಸ್ವರವಿದ್ದರೆ ಇ ಈ ಕಾರಗಳಿಗೆ ಯಕಾರವೂ, ಉ ಊ ಕಾರಗಳಿಗೆ ವಕಾರವೂ, ಋ ೠ ಖೞಕಾರಗಳಿಗೆ ರೇಫವೂ (= ರ್) ಆದೇಶವಾಗಿ ಬರುವ ಸಂಧಿ. ಇವಕ್ಕೆ ಯಣ್‌ಸಂಧಿಯೆಂದು ಹೆಸರು (ಶಬ್ದಮ· ೦೭೨). [ಸಂ.]

ಯತ (ಗು)· ೧. ಎತ್ತಿಹಿಡಿದ ; ಮೇಲಕ್ಕೆ ಎತ್ತಿದ : (ಈ). ೨. ಬಾಚಿದ; ನೀಡಿದ : (ಈ)· ೩. ಹತೋಟಿಗೊಳಿಸಿದ ; ನಿಗ್ರಹಿಸಿದ. ೪. ಸೀಮಿತವಾದ. ೫. ಸೌಮ್ಯವಾದ : 'ಯತಯಾತಪ್ರೌಢಿ' ಪರಾ. (ನಾ)· ೬. ಓಡುವಿಕೆ ; ಓಟ : "ಓಡುವುದು ಯತವೆಂಬುದು" (ಶಬ್ದಮ· ೭೭-೭೪). ೭. ಮಾವುತನು ಕಾಲಿನಿಂದ ತಿವಿದು ಆನೆಯನ್ನು ಜೋದಿಸುವಿಕೆ : "ಯತಪಂಪ್ರಸರ್ಮ" (ಪಚಿಹಂ· ೪೫· ೪೦-೪೭). [ಸಂ.]

ಯತನ (ನಾ)· ಪ್ರಯತ್ನ; ಸಾಧನೆ : ಯತ್ನ, ಯತನ (ಕಾಶಾ· ೦೯೭ ಕ್ರಿಯೂ); ಯತನ ಕರ್ತವ್ಯವದು ನಮಗೆ ವಿದ್ಯಾಭ್ಯಾಸ ಹಿತಪರಿಜ್ಞಾನ ಯತ್ನಾನುಭವ ಫಲಿತ ಸತತಯತ್ನದಿನಾತ್ಮಶಕ್ತಿ ಪರಿವರ್ಧಿಪುದು ಯತನ ಜೀವನಶಿಕ್ಷೆ (ಶುಂಶಿ. ೦೩೭). [ಸಂ.]

ಯತನಗ್ಯೆ (ಕ್ರಿ)· ಪ್ರಯತ್ನಮಾಡು : ಬ್ರಹ್ಮಾದಿಗಳ್ ಯುಕ್ತಸ್ಯೈಯಲು ಲಭ್ಯವಹುದೆ. (ಕೃಕೃಗೋ. ೩-೦೦೭). [ಯತನ +ಗ್ಯೆ (<ಕಯ್)]

ಯತಯಾತಪ್ರೌಢಿ (ನಾ)· ಸೌಮ್ಯವಾದ ಅಂಕುಶಪ್ರಹಾರದಿಂದ (ಆನೆಯನ್ನು) ನಡೆಯಿಸುವ ಕೌಶಲ : ಯತಮಾತಪ್ರೌಢಿಯಿಂ ಮಿಂಚಿನ

ಮೊಗವಡಮಂ ಬೀಸೆ ಕೊರೆಂಕುಶಂ ಪ್ರೇರಿತವುತ್ಸಳಕ್ಕೆ . . . ವಿಶ್ರುತ ಪುಣ್ಯಂ ಪುಣ್ಯಪುಂಜಾಕರವುನಿಸಿದ ಭೂಪಾಲ್ರಿಯಂ ಮುಟ್ಟಿದಂದಂ (ಚಂಪ. ೬-೪೫). [ಸಂ.]

ಯತಾರಾಜಿ (ನಾ). ಆಕ್ಷೇಪ ; ಆರೋಪ : ನಮ್ಮ ಮೇಲೆ ಜಾಡಿ ಹೇಳಿದವನ ಮೇಲೆ ಯತಾರಾಜಿ ಹಾಕಲಾದೀತು (ಜಾಜಿಶ್ರ. ೦೫೯).

[← ಆರ. ಹಿಂ. ಏತರಾಜ್]

ಯತಿ (ನಾ). ೧. ಹತೋಟಿ ; ನಿಗ್ರಹ ; ನಿಯಮನ. ೨. ಇಂದ್ರಿಯ ನಿಗ್ರಹವನ್ನು ಮಾಡಿದವನು ; ಮುನಿ ; ಯೋಗಿ : ಕೈವಲ್ಯಲಕ್ಷ್ಮಿಯಾ ಯತಿ ಪಡೆದಂ (ಜಿಪು. ೦೦-೦೩) ; ಯತಿಗಳಂದಿರಿ ನೀವು ರೋಷಚ್ಯುತರಲೇ ಬಳಿಕೇನು (ಶಾಕ್ಷಾಣ. ೬-೨೦) ; ಯತಿಗಳಿಗೆ ಕೋವ ದುರ್ಮತಿಗೇಕೆ ಪರತತ್ವ (ಸಭಾಪ. ೧೧೨). ೩. [ಛಂದ] ಪದ್ಯಗಳನ್ನು ಓದುವಾಗ ಅರ್ಥವು ಕೆಡದ ಹಾಗೆ ಕೊಂಚ ನಿಲ್ಲಬೇಕಾದ ನಿಯತಸ್ಥಾನ ; ಪದ್ಯದ ಪಾದಗಳಲ್ಲಿಯ ವಿರಾಮಸ್ಥಾನ ; ಉಚ್ಚಾರ್ಯಾಣ : ಯತಿಯೆಂಬುದುಸಿರ್ವ ತಾಣಂ ಕೃತಾಸ್ಪದಂ ವೃತ್ತಜಾತಿ ಪದಪದ್ಧತಿಯೊಳ್ (ಶಬ್ದಾ. ೦-೭೦) ; ದೋಸಮನೆ ಗುಣದವೋಲುದ್ಯುಮಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್ ದೇಸಿಯನೆ ನೆಲಸಿ ಖಂಡವ್ಯಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ (ಶಬ್ದಾ. ೦-೭೬). ೪. [ಸಂಗೀತ] "ತಾಳಕ್ಕೆ ಬರುವ ಆಗಿಗಳನ್ನೂ ಅವುಗಳ ನಿರ್ದಿಷ್ಟ ಓಟಿಕ್ರಮವನ್ನೂ ಸ್ವರ ಸಾಹಿತ್ಯಗಳು ಅನುಸರಿಸುವ ರೀತಿಗೆ ಯತಿ ಎಂದು ಹೆಸರು" (ಸಂಗೀತ. ೫೭) ; ಕೃತಿಯ ಒಂದು ಪಾದ ಯಾವ ಅಕ್ಷರದಿಂದ ಪ್ರಾರಂಭಿಸುವುದೋ ಕೆಲವು ಅಕ್ಷರಕಾಲ ವಿರಾಮ ಬಂದು, ನಂತರ ಅದೇ ಪಾದದ ಉತ್ತರಾರ್ಧ ಅದೇ ಅಕ್ಷರದಿಂದ ಪ್ರಾರಂಭಿಸುತ್ತದೆ. ಇದಕ್ಕೂ ಯತಿ ಎಂದು ಹೆಸರು (ಸಂಗೀತ. ೮೩). ೫. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : (೪). ೬. (?) : ಯತಿಯರಡರ ಪೋಲ್ವ ಸ್ಥೂಲವ ತೊಳ್ತಂಡುಲಕೆ ಸರಿಯಪಿರೆ ಕ್ರಯವ ಪೇಳ್ದುದು ನಾಲ್ಕು ಮಾಡಿಯಂದು (ಕಕ್ಷಾ. ೧-೦೭). [ಸಂ.]

ಯತಿಗಣ (ನಾ). ೧. ಮುನಿಗಳ ಸಮೂಹ. ೨. [ಛಂದ] ಯತಿಸ್ಥಾನ ಮತ್ತು ಗಣ. ೧ . ೨ : ಛಂದೋನಿಬಂಧನದಂತೆ ಯತಿಗಣಮುಂ. . . ಯಾವ್ಯಾದಿಶಯಂತೆ ಧರ್ಮಪ್ರಭಾವವಿಭವಿತಮುಮೆಂಬ ಮಹಿಮೆಯುಂ ತಳೆದು . . . ಇರ್ಪುದಾ ಪುರಂ (ಕ್ಷತ್ರ. ೧-೪೦ ಟಿ). [ಸಂ.]

ಯತಿಭಂಗ (ನಾ). [ಛಂದ] ಯತಿಯು ಇಂತಹ ಕಡೆ ಇರಬೇಕೆಂಬ ನಿಯಮವನ್ನು ಮೀರುವುದು ; ಯತಿಯನ್ನು ಬಿಟ್ಟುಬಿಡುವುದು : ಪದತದಿಸಿ ಯತಿಯನಿಂತಿರೆ ತೊಡರ್ಚ್ ಕೆಡೆ ಪೇಬ್ಕೊದ್ದುವುದು ಯತಿಭಂಗಂ (ಶಬ್ದಾ. ೦-೭೨). [ಸಂ.]

ಯತಿಭ್ರಷ್ಟ (ನಾ). = ಯತಿಭಂಗ : ಖಂಡಿತ ವ್ಯಸ್ತಸಂಬಾಧ . . . ಯತಿಭ್ರಷ್ಟ ದುಷ್ಟ ಆಷ್ಟಿಯೆಂದೆಂಬು ವಾಕ್ಯದೋಷಮಿಲ್ಲದೆ (ಛಂದ. ೦೩೦). [ಸಂ.]

ಯತಿರಾಜ (ನಾ). ೧. ಮುನಿಗಳಲ್ಲಿ ಮಿಗಿಲಾದವನು : ಯತಿರಾಜ ಗಣಾಗ್ರನಿ. . . ಜನಚಂದ್ರಮನೀಂದ್ರಂ (ಪಂಚಕ. ೬-೨೬) ; ಯತಿರಾಜಾಸ್ಯಪಯೋಜದಿಂದೊಗೆವ ಭಾಸ್ವದ್ದಿವ್ಯ ಮಂತ್ರಾವಳೀರುತಿಗಂ ದ್ವಣದಿಂದೆ ಮಾರುತಸುಂ ಪ್ರತ್ಯಕ್ಷಮಾಗಾರಮಾಂತು. . . ಸರ್ಮರ್ಮಯಾಹುತಿಯಂ ಕೈಕೊಳುತಿರ್ದಂ (ಕೃಷ್ಣಚ. ೪-೦೫೬). ೨. ರಾಮಾನುಜಾಚಾರ್ಯರು, ರಾಘವೇಂದ್ರ ಸ್ವಾಮಿಗಳು ಮುಂತಾದವರ ಗೌರವ ಸೂಚಕವಾದ ಹೆಸರು : ಶೇಷನೀ ಧರೆಯೊಳಗುದಿಸಿ ಮಾನುಷ ದಿವ್ಯ ವೇಷದಿಂ ಯತಿರಾಜನೆನಿಸಿ (ಕೃಷ್ಣಚ. ೬-೨) ; ಯತಿರಾಜಾ . . . ಬ್ಯುಡಾವವಲ್ಲಿ ಪೀನಿದ್ದು, ಭಕ್ತಜನರ ಸಕಲ ಕೋರಿಕೆಗಳನ್ನು ಸಲ್ಲಿಸಿ ಕೀರ್ತಿವಂತನಾಗು (ಶಬ್ದ. ೨೨೮). [ಸಂ. ಯತಿರಾಜನ್]

ಯತಿವಿಲಂಘನ (ನಾ). =ಯತಿಭಂಗ : ಗಮಃಸಮಾಸದಿಂ ಜಟುಕಾಳಕ್ಷರಿಯದಿಂ . . . ಯತಿವಿಲಂಘನದಿಂದಾದಲ್ತೆ ಕನ್ನಡಂ (ಶಬ್ದ. ೪. ೪೮). [ಸಂ.]

ಯತುನ ನೆ. ಜತನ, ಜತ್ನ, ಜತ್ನನ (ನಾ). ೧. =ಯತನ : ಕಡುಯತುನ ದಿನಲ್ಲಿ ತಾಪಸರ್ ಸಂತಪಿಪರ್ (ಪಾಸಂಚ. ೬-೦೬). **ಜತನ** : ೧. ಕೃಶತ—ಕರಗಸ, ಯತ್ನ_ಜತನ (ಶಬ್ದ. ಪಾಲ್ಕು ಕೃಯೋ) ; ಬಲ್ಲಗೆಯೊಳ್ ಜತನದಿಂ ಬಿಲ್ಲಿಯೊಳ್ ಪಜ್ಜೆಯಿಡುತಿರ್ದಂ (ಕಬ್ಬಿ. ೪-೩೭-೬). ೨. ಎಚ್ಚರಿಕೆ; ಜೋಪಾನ; ಜೋಕೆ : ಇಳೆಯನೀರಡಿ ಮಾಡಿದ ಪಾದ ಜತನ ಬಾಂಬೊಳೆಯ ವರಿಸಿದಂಭ್ರ ಜತನ (ಪೋಜಚ. ೦೪-೦೯) ; ಸುರತ್ರಯದ ಕೋಂಟೆ ಗಾವಲ ಪಟುಭುಜ್ರತನವೆಂದು ನೇಮಿಸಿ ತಾರಕಾಕ್ಷನರಮನೆ ಪೊಕ್ಕನಾಕ್ಷಣದೊಳು (ಪಾಪ್ಪ. ೨೨-೯) ; ಎಡೆಕೆ ಬೇಡಿದಡೆನ್ನು ವೀರ ವ್ಯಪಕೇತು ಫಲುಗುಣರ ದೇಹಂಗಳಕಿ ಜತನವೆಂದಾಪ್ತರ್ಗೆ ರಣದ ಸುಯ್ದಾನಮಂ ಪೇಳ್ದು (ಕೃಷ್ಣಾ. ೫೪-೫೪). **ಜತ್ನ** : ೧. ಮೊತ್ತಮೊದಲಿಗನುದುಪ್ಪೊನೊರ್ವಂ ತನ್ನ ಜತ್ತಮ(ವಿ)ಲ್ಲಬೊಲ್ದೊಂಜಳ ವೃತ್ತಕಮನಿಂತಂದಂ (ಪಾಂಡ್ಯ. ೬-೧೧). ೨. ನಿತ್ಯಭಕ್ತಿಯಿಲ್ಲದವನು ಹತ್ತಿಲಿ ಪದಾರ್ಥವೆಲ್ಲ ಜತ್ರಾಗಿರಿಸಿಕೊಂಡು ಸುತ್ತ ಸಮರ್ಪಣೆಯೆಂದು ಇತ್ತು ನಲಿದಾಡಿದರೆ ಉತ್ತಮ ಶ್ಲೋಕನು ಒಪ್ಪ (ಪೋಲ್ಲಾಂ. ೦೦೦-೩). **ಜತ್ನನ** : ೨. ಎಡವಿ ಕೆಂಡ್ಯಾ ಸ್ವಾಮಿ ಜತ್ನನ ಕಲ್ಲುಯಿಕೊ ಯೆನುತ ಕೆಡಗು ಕುಣಿಯದೆ ಯೆಚ್ಚರೆಂದೇ (ಪ್ರಾ.ಶಿಂ. ೫೦-೩೬).

ಜತನ ಮಾಡು = ಭದ್ರಪಡಿಸು ; ಜೋಕೆಯಾಗಿರಿಸು : ಸಂಂಣ ಸಹ ಯತಿ ತೊಬನೂ ಜತನ ಮಾಡಿ (ಪಿಂಗಕಾಶ್ಯ. ೦೯೨೦. ಪಿಂಗಕಾಶ್ಯ. ೦೩೬-೯; ೬೬೨) ; ಅಮಾನಿ ದವಸವನ್ನು ಜತನ ಮಾಡಿ ಲಾಭ ಬರುವಂತೆ ವಿಕ್ರಯಿಸುವುದು (ಪಾಜಾಪಂ. II. ೩೬) ; ಹಸ್ತಪತ್ರಗಳನ್ನು ಕರೆ ಹಾಕಿ ಬಂಗಾತದಂತೆ ಜತನ ಮಾಡುತ್ತಾನೆ (ಗಾಶಪ. ೬೩)-[< ಸಂ. ಯತ್ನ /ಕ್ರಾ. ಜತ್ರ]

ಯತ್ಕಿಂಚಿತ್ತು (ವಾ). ಅಷ್ಟಿಷ್ಟು ; ತೀರ ಸ್ವಲ್ಪವಾದುದು.

[P ಸಂಸ್ಕೃತದಲ್ಲಿ ಇದು 'ಯತ್' 'ಕಿಂಚಿತ್' ಎಂದು ಎರಡು ಭಿನ್ನಪದಗಳು]

ಯತ್ನ (ನಾ). ೧. ಪ್ರಯತ್ನ ; ಎತ್ತುಗಡೆ ; ಸಾಧನೆ : ಮರಳಿ ಯತ್ನವ ಮಾಡು . . . ತೊರೆಯದಿರು ಮೊದಲು ಕೈಗೂಡದಿರಲು (ಕಾಪ್ರ. ೬) : ಯತ್ನ ಪ್ರತಿಯತ್ನಗಳು ಒಂದಕ್ಕೊಂದು ಸಮನಾಗಿ ಮತ್ತು ವಿರುದ್ಧವಾಗಿ ಇರುವುವು (ಕಾಶಾ. ೬೪). ೨. ಕಷ್ಟ ; ಶ್ರಮ : ನುಡಿವಳು ಯತ್ನದೆ ನಡವರು ಯತ್ನದೆ ಗರ್ಭಭರಾಲಸೆ (ಸಾಂಸಂ. ೦೬೬-೨೦). ೩. [ಕಾವ್ಯಮೀಮಾಂಸೆ] ನಾಯಕನ ಕಾರ್ಯದೃಷ್ಟಿಯಿಂದ ನಾಟಕದ ವಸ್ತುವಿನಲ್ಲಿರುವ ಆರಂಭ, ಯತ್ನ, ಪ್ರಾಪ್ತ್ಯಾಶೆ, ನಿಯತಾಪ್ತಿ, ಮತ್ತು ಫಲಾಗಮ ಎಂಬ ಐದು ಸ್ಥಿತಿಗಳಲ್ಲೊಂದು : ಯತ್ನ-ಅಡ್ಡಿ ಬರಲು, ಅದನ್ನು ನಿವಾರಣೆ ಮಾಡಿಕೊಂಡು ಕಾರ್ಯಸಾಧನೆಗಾಗಿ ಅವರು ಮಾಡುವ ಪ್ರಯತ್ನ (ಸಾಂಶಿ. ೦೬). ೪. ವೇಗ ; ಶೀಘ್ರತೆ : (೪). ೫. ಸಹಾಯ : "ಉಪಕಾರ ಶೀಘ್ರಪ್ರಸಾದಿತ ಬುದ್ಧಿಯುಜ್ಜಗದೊಳಪ್ಪವದಾವಗ ಯತ್ನವಾಚಕಂ" (ಪಾಪ್ಪ. ೦೧೯). ೬. ಎಚ್ಚರಿಕೆ : ಜಾಗ್ರತೆ : 'ಯತ್ನಂಗೆಯ್' ಪರಾ.

ಯತ್ನ ಮಾಡು = ಪ್ರಯತ್ನಿಸು : ಕೈಲಾದ ಮಟ್ಟಿಗೆ ನಿಮ್ಮ ಸಹಾಯ ಸುಂಗುವುದಕ್ಕೆ ಯಾವಾಗಲೂ ಯತ್ನಮಾಡಿರಿ (ಪಾಂಲಿಂಬಿ. ೧-೦೬) ; ಭಗೀರಥ ಯತ್ನಮಾಡಿ ಭಾಗೀರಥಿ ಕಂದ, ನಗರುವ ಯತ್ನ ಮಾಡಿ ನಗ ಕಳಕೊಂಡ (ಗಾಪ). [ಸಂ.]

ಯತ್ನಂಗೆಯ್ (ಕ್ರಿ). ಎಚ್ಚರಿಕೆ ವಹಿಸು ; ಜಾಗ್ರತೆಯಿಂದಿರು : ಯತ್ನಂಗೆಯ್ಯದ ಮುನಿವರ ಪತ್ನಿಯರುಂ ಕಾಮಕೃತಕ[ರಾ]ದರಯತ್ನಂ [ಪಾಣಾ.ಕಾಮಕೃತಕಂದರಯತ್ನಂ] ಯತ್ನಂಗೆಯ್ಯದ ವನಿತಾಪರತ್ನಮುಮಾ ಕಾಮಕೃತದೆ ಕೆಡೊದಮಿಸುಗುಂ (ಪಾವಿ. ೦-೭೦). [ಯತ್ನ + ಕೆಯ್]

ಯತ್ನಶೀಲ (ನಾ). ಶ್ರಮಿಸುವ ಸ್ವಭಾವದವನು ; ಪ್ರಯತ್ನ ಮಾಡುವ ಸ್ವಭಾವದವನು : ಅರ್ಜುನನು ಗುರುಸೇವೆಯಲ್ಲಿಯೂ, ಅಸ್ತ್ರಾಭ್ಯಾಸದಲ್ಲಿಯೂ ತುಂಬ ಯತ್ನಶೀಲನಾಗಿದ್ದುಕೊಂಡು ದ್ರೋಣನಿಗೆ ಪ್ರೀತಿ ಪಾತ್ರನಾದನು (ಪಚಾ. ೦೯).

ಯತ್ನಿಸು, ಯತ್ನೈಸು (ಕ್ರಿ). ಸಾಧನೆ ಮಾಡು ; ಪ್ರಯತ್ನ ಮಾಡು ; ಸಾಧಿಸು : ಬಿರುಮಾ ನೀನೊಲವಿಂದೆ ಯತ್ನಿಸಿದೊಡಂ ಕಾದಂಬರೀದೇವಿಯಾ ಚರಣೋಪಾಸನಸೌಖ್ಯಮಾದೊತ್ತನಗಾದಪ್ಪಿಲ್ಲಮಾ ಪುಟ್ಟಿಸೊಳ್ (ಕಾದಂಬ. ೩೭೬) ; ಈ ಪ್ರಶ್ನೆಯನ್ನು ಅಗಸನ ಮೇಲೆ ಎಸೆದು ಅವನನ್ನು ಅಪ್ರತಿಭಗೊಳಿಸಲು ನಾನು ಯತ್ನಿಸಿದ್ದೇನೆ (ಜೀಕತ್ಕ. ೩೪). **ಯತ್ನೈಸು** : ಬಿಜ್ಜಳನು . . . ಅವನನ್ನು ಹಿಡಿಯಬೇಕೆಂದು . ಯತ್ನೈಸಿದನು (ಕಣಾಗ. ೮೨) ; ಆಕಾಂಕ್ಷೆಯು ನಿಮ್ಮ ಮನಸ್ಸಿನಲ್ಲ ಮೆಲ್ಲಮೆಲ್ಲಗೆ ಬೆಳೆಯುವಂತೆ ಯತ್ನೈಸಿರಿ (ಪ್ರುಂತಾಯ. ೬-೪). [ಯತ್ನ + — ಇಸು]

ಯತ್ನೀಕರಿಯು (ಕ್ರಿ). = ಯತ್ನಿಸು.: ಅವರಪ್ಪಾ ಅರಿಸಿನಪ್ಪಟಂ ಧರಿಸಿ ಅಗ್ನಿಗೆ ಬೀಳುವುದಕ್ಕೆ ಯತ್ನೀಕರಿಸಿ ಇರುವುದ ಕಂಡು . . . ಮನಗೇನೂ ಸೊಗಪೆ ವೃಥಾ ಬಂದ (ಶಾತ್ರಚ. ೩೩) : ಪುಣ್ಯಕೋಟಿ ಎಂಬ ಪಶುವನು ತಾನು ತಿಂದೇನೆಂದು ಹುಲಿಯಿ . . . ಅಡ್ಡಗಟ್ಟಿ ತಿನ್ನ ಯತ್ನೀಕರಿಸಿತು (ಗೋಪಾತಾ. ೦೨-೩೬). [ಯತ್ನೀಕರಣ್ಯ + — ಇಸು]

ಯತ್ನೈಸು ' ಯತ್ನಿಸು ' ನೋ.

ಯತ್ವ (ನಾ). =ಯಕಾರ : ಅದಂತ ಪ್ರತ್ಯತಿಗಳ್ಗಿಶು ಪ್ರತ್ಯಯಮಿಂತಿದಿರಂಗೆ ಯತ್ವಮನುಕೃತಿಪದಕಂ ಮುಂದಣನುಕೃತಿಪ್ಪರಂ ನಿಲೆ ಯತ್ವಂ (ಕಬಿದ. ೩೪). [ಸಂ.]

ಯಥಾಕಾಮಿ (ಗು). ೧. ಮನಸ್ಸಿಗೆ ಬಂದಂತೆ ನಡೆಯುವ ; ಸ್ವೈರ ವರ್ತನೆಯುಳ್ಳ (ನಾ). ೨. ಮನಸ್ಸಿಗೆ ಬಂದಂತೆ ವರ್ತಿಸುವವನು ; ಸ್ವೈರಾಚಾರಿ : "ಯಥಾಕಾಮಿ, ಸ್ವರುಚಿ, ಸ್ವಚ್ಛಂದ, ನಿರಪಗ್ರಹ —ಈ ೪ ತನ್ನಿಚ್ಛೆಕಾರಿಯಂ" (ಪಣತು. ೬-೨೨೪). [ಸಂ. ಯಥಾಕಾಮಿನ್]

ಯಥಾಕಾಲ (ನಾ). ಸೂಕ್ತವಾದ ಸಮಯ ; ಶಕ್ಯ ಸಮಯ : ಯಥಾಕಾಲಾನುಭವನ ತಪೋನಿಮಿತ್ತಮಾಗಿ ಸವಿಪಾಕಾವಿಪಾಕರೂಪದಿಂ ಪೂರ್ವಾರ್ಜಿತಕರ್ಮನಿರ್ದಾರಣಂ ನಿರ್ದರೆಯಂಬುದು (ಜಿಪ್ರ. ೦೦-೬೬ ಪ) : ಅತ್ತೆ ಸೊಸೆಯರು ಕಾಡಿಗೆ ಹೋಗಿ ತಪೋನಿರತರಾಗಿದ್ದು ಯಥಾಕಾಲದಲ್ಲಿ ದೇಹವನ್ನು ಬಿಟ್ಟರು (ಪಚಾ. ೦೬). [ಸಂ.]

ಯಥಾಕ್ರಮ$_1$ (ನಾ). ೧. ಸರಿಯಾದ ರೀತಿ ; ಯೋಗ್ಯವಾದ ಕ್ರಮ : ಭೋಗ್ಯರಯುತ್ತಿರ್ದವನೇಕ . . . ಘಂಟಾರುತಿಗಳ್ ಯಥಾಕ್ರಮದಿಂ (ಶಕ್ರಕ್ಕ. ೦೦-೦೬). ೨. = ಯಥಾಸಂಖ್ಯಾಲಂಕಾರ : ತರದಿಂದೊಂದಿರೆ ನಿರ್ದೇಶ್ಯಸ್ಥಿತಿಯಿಂದು ಪೇಳ್ದುದು ಯಥಾಕ್ರಮಂ (ಕಾಜ್ಞಶ. ೬೦೬). [<ಯಥಾಕ್ರಮ$_2$]

ಯಥಾಕ್ರಮ$_2$ (ಅ). ಸರಿಯಾಗಿ ; ಯೋಗ್ಯವಾಗಿ : ನಾನಾ ಜನಪದಂಗಳಂ ಯಥಾಕ್ರಮೋಕ್ತಕ್ರದುದಿಂ ವಿಹರಿಸುತ್ತಂ (ಸುಕುಮಾ. ೪-೨ ಪ). [ಸಂ.]

ಯಥಾಖ್ಯಾತ (ಗು). ೧. ಮೊದಲು ತಿಳಿಸಿದಂತಿರುವ ; ಪೂರ್ವದಲ್ಲಿ ತಿಳಿಸಿದ ಮೇರೆಗೆ ಇರುವ. ೨. [ಜೈನ] ಎಲ್ಲ ಮೋಹನೀಯ ಕರ್ಮಗಳ ಉಪಶಮ ಅಥವಾ ಕ್ಷಯದಿಂದ ಆತ್ಮನು ತನ್ನ ಮೊದಲಿನ ಸ್ವಾಭಾವಿಕ ಅವಸ್ಥೆಯನ್ನು ಹೊಂದಿರುವ ಸ್ಥಿತಿಯ.—ಅವಸ್ಥೆಯ : ಯಥಾಖ್ಯಾತಚಾರಿತ್ರ' ಪರಾ. [ಸಂಸ್ಕೃತದಲ್ಲಿ ಇದು ಅವ್ಯಯ]

ಯಥಾಖ್ಯಾತಚರಿತ (ನಾ). [ಜೈನ] ಆಗಮಗಳಲ್ಲಿ ಹೇಳಿದ ಅನುಷ್ಠಾನದಂತೆ ಕಷಾಯಗಳನ್ನೆಲ್ಲ ಕಳೆದುಕೊಂಡು ಆತ್ಮನ ಸ್ವಾಭಾವಿಕ ಸ್ವರೂಪವನ್ನು ಹೊಂದಿದವನು : ಪರಿಪೂರ್ಣಮೆನಿಸೆ ಗುಣಪರಿಕರಂ ಯಥಾಖ್ಯಾತಚರಿತನಾಗಿ ಚಿರಂ ಮುಕ್ತಿರಮಾಕಚಗ್ರಹಸ್ಪಸಪರಿರಂಭಾರಂಭ ಕೇಳಿಗುತ್ಸುಕನಾದಂ (ಸಂಶಾಮಾ. ೪೬ ೦೦). [ಸಂ]

ಯಥಾಖ್ಯಾತಚಾರಿತ್ರ (ನಾ). ೧. [ಜೈನ] ಏಳು ಬಗೆಯ ಸಂಯಮಿಗಳಲ್ಲಿ ಒಂದು ; ಎಲ್ಲ ಮೋಹನೀಯಕರ್ಮಗಳನ್ನು ಕಳೆದುಕೊಂಡು ಆತ್ಮನು ಸ್ವಾಭಾವಿಕ ಅವಸ್ಥೆಯನ್ನು ಪಡೆದುಕೊಳ್ಳುವಿಕೆ ; ವೀತರಾಗಭಾವ : ನಿರವಶೇಷ ಮೋಹೋಪಶಮೋದ್ಭೂತ ಯಥಾಖ್ಯಾತಚಾರಿತ್ರಸಂಪನ್ನನಂತರ್ಮುಹೂರ್ತದಿಂ ಸ್ವಸ್ಥಾನಸ್ಥಿತನಾಗಿ (ಜಿಪ್ರ. ೬-೪೩ ಪ) ; ಸಾಮಾಯಿಕಚ್ಛೇದೋಪ ಸ್ಥಾಪನಾಪರಿಹಾರವಿಶುದ್ಧಿ ಸೂಕ್ಷ್ಮ ಸಾಂಪರಾಯ ಯಥಾಖ್ಯಾತಚಾರಿತ್ರ. ದೇಶ ಸಂಯಮ ಅಸಂಯಮ ವಿಕಲ್ಪದಿಂ ಸಂಯಮಂ ಸಪ್ತವಿಧಂ (ಶಕ್ರ ಕ್ಷ. ೦೭). ೨. ಸಮ್ಯಕ್ಚಾರಿತ್ರದ ಐದು ಭೇದಗಳಲ್ಲಿ ಒಂದು : ಸಾಮಾಯಿಕಚ್ಛೇದೋಪಸ್ಥಾಪನಾ ಪರಿಹಾರಶುದ್ಧಿ ಸೂಕ್ಷ್ಮಸಾಂಪರಾಯ ಯಥಾಖ್ಯಾತಚಾರಿತ್ರಭೇದದಿಂ ಪಂಚವಿಧಮೆಂದು ಹೇಯೋಪಾದೇಯ ತತ್ತ್ವಮನರ್ಪಿ (ಜಿಪ್ರ. ೦೦-೬೦ ಪ). [ಸಂ.]

ಯಥಾಗತಿ (ಅ). ಸಂಪ್ರದಾಯದಂತೆ ; ಯಥಾಪ್ರಕಾರವಾಗಿ : ಮೊದಲಿನಂತೆ. [ಸಂ.]

ಯಥಾಗಮ (ಅ). ಆಗಮದಲ್ಲಿ ಹೇಳಿರುವಂತೆ ; ಸಂಪ್ರದಾಯಕ್ಕೆ ಅನುಸಾರವಾಗಿ ; ಶಾಸ್ತ್ರೋಕ್ತವಾಗಿ : ಅಂಕಾ ಯತಿತಿಲಕಂ ಭೀತಿಯೊಳ್ ಪ್ರಾಣೋಪಗಮನಂಗೆಯ್ವುದುಂ ಯಥಾಗಮಾರ್ಥದ್ರವ್ಯಂಗಳನನುಕ್ರಮದಿಂದಱವಾಜ್ಞಾನಿಚಯಮುಮಂ . . . ಬೇಱೆವೇಱೆ ಹೃದ್ಗತಂಮಾಡಿ ಧರ್ಮಧ್ಯಾನಮಯನಾದಂ (ಜಾಅಕ್ಕ. ೯-೦೦೬ ಪ). [<ಸಂ. ಯಥಾಗಮಂ]

ಯಥಾಜಾತ (ನಾ). ಹುಟ್ಟಿದಾಗ ಇದ್ದಂತೆಯೇ ಇರುವವನು ; ಬುದ್ಧಿಯಲ್ಲಿ ಬೆಳವಣಿಗೆಯಿಲ್ಲದವನು ; ಮೂರ್ಖ : "ಅಜ್ಞ, ಮೂಢ, ಯಥಾಜಾತ, ಮೂರ್ಖ, ವೈಧೇಯ, ಬಾಲಿಶಾ — ೬ ತಿಳುವಳಿಕೆಯಿಲ್ಲದವನ ಹೆಸರುಗಳು" (ಶಿಷ್ಟಶಬ್ದ. ೪೬೬). [ಸಂ.]

ಯಥಾತಥ (ಗು). ೧. ಸತ್ಯವಾದ ; ಸರಿಯಾದ. (ನಾ). ೨. ಸತ್ಯವಾದುದು ; ದಿಟ : "ಯಥಾರ್ಥಂ, ಯೆಥಾತಥಂ —೨ ಸತ್ಯವು, ದಿಟ" (ಶಿಷ್ಟಶಬ್ದ. ೪೬೬). [ಸಂ.]

ಯಥಾತ್ಮಿಕ (ಗು). ಸ್ವಾಭಾವಿಕವಾದ ; ಸಹಜವಾದ : ಸಾಮಾನ್ಯ 'ಸ್ಪೀವೇಷ'ಗಳು ಯಥಾತ್ಮಿಕಳುಡುಗೆಯಲ್ಲಿ ರಂಗಸ್ಥಳದಲ್ಲಿ ಅದಾಗಲೇ ವೇರದಾತತೊಡಗಿದ್ದುವು (ಪುಪ್ರ. ೩೩). [< ಸಂ. ಯಥಾತ್ಮಿಕ]

ಯಥಾಪ್ರಕಾರ (ಅ). ಎಂದಿನಂತೆ ; ಮೊದಲಿನಂತೆ : ಅಕ್ಕಮಹಾದೇವಿಯನ್ನು ಕುರಿತ ಗ್ರಂಥಗಳಲ್ಲಿ ಯಥಾಪ್ರಕಾರ ಹರಿಹರನ ಗ್ರಂಥವೇ ಮೊದಲನೆಯದು (ಕಾಚ್ಕಳ. ೩೩). [ಸಂ]

ಯಥಾಪ್ರತಿ (ನಾ). ಮೂಲಪ್ರತಿಗೆ ಅನುಸಾರವಾದ ಪ್ರತಿ: ಸರಿಯಾದ ನಕಲು. [P ಸಂಸ್ಕೃತದಲ್ಲಿ ಇದು ಅವ್ಯಯ]

ಯಥಾಪ್ರಯೋಗೆ (ನಾ). ೧. ಪ್ರಯೋಗಕ್ಕೆ ಅನುಸಾರವಾದುದು : ದ್ವಿತ್ವಂ ಲೆರಸಿದ ಚತ್ವಂ ಖತ್ವಂ ಯಥಾಪ್ರಯೋಗೆದಿನಕ್ಕುಂ (ಕಬಿದ. ೩೬೨). ೨. ಸಂಪ್ರದಾಯ: ರೂಢಿ : (ಅ).

[P ಸಂಸ್ಕೃತದಲ್ಲಿ 'ಯಥಾಪ್ರಯೋಗಂ' ಎಂಬುದು ಅವ್ಯಯ]

ಯಥಾಭೂತ (ನಾ). ನಡೆದ ಘಟನೆಗಳಿಗೆ ಅನುಸಾರವಾದುದು; ಯಥಾರ್ಥವಾದುದು ; ನಿಜಸ್ಥಿತಿ : ಸತ್ಯ : ಸಮಾಹಿತನಾದವನು ಯಥಾಭೂತವನ್ನು ತಿಳಿಯುವನು (ಜಾಧ್ಯಕ. ೩೦೦೦. ೩೦); ಇದನ್ನು ಯಥಾಭೂತವಾಗಿ ತಿಳಿದಾಗ ನಿರ್ವಾಣವು ಪರಮಸುಖವು (ಜಾಪಠ. ೨೦೦).

[P ಸಂಸ್ಕೃತದಲ್ಲಿ ಇದು ಅವ್ಯಯ]

ಯಥಾಮತಿ (ಅ). ಬುದ್ಧಿಗೆ ನಿಲುಕುವಷ್ಟು ಮಟ್ಟಿಗೆ; ತಿಳಿಯುವುದಕ್ಕೆ ಎಷ್ಟು ಸಾಧ್ಯವೊ ಅಷ್ಟರವರೆಗೆ : ವೇದಗಳು ಕೂಡ ಯಥಾಮತಿ

ಅನುಮಾನ ಮಾಡಿ ಅತನನ್ನು ಕುರಿತು ಪ್ರತಿಪಾದಿಸುವವೆ (ಕುಂಬೇ. ೭೫). [ಸಂ.]

ಯಥಾಯಥ (ನಾ). ೧. ಸ್ವಾಭಾವಿಕವಾದುದು ; ಸಹಜವಾದುದು ; ನೈಸರ್ಗಿಕವಾದುದು : ಪ್ರಾಣವಾಯುವಿನ ನೈಸರ್ಗಿಕಗತಿಯನ್ನು ಯಥಾಯಥವಾಗಿ ನಡೆಯಲು ಬಿಡದೆ ನಿರುದ್ಧಮಾಡಿ ವ್ಯತ್ಯಸ್ತರೂಪದಲ್ಲಿ ವಿನಿಮಯ ಮಾಡುವುದು ಪ್ರಾಣಾಪಾಮದ ಅರ್ಥವು (ಅಪರೋ. ೧೭೯); ಯಾವ ಕಲೆಯೇ ಆಗಲಿ ಪ್ರಕೃತಿಯ ಯಥಾಯಥವಾದ ಅನುಕರಣವಲ್ಲ (ಪಂಚಕ. II, ೫೭೭). ೨. ಯೋಗ್ಯಸ್ಥಿತಿಯನ್ನು ಹೊಂದಿದವನು; ತಕ್ಕ ಅವಸ್ಥೆಗೆ ಮುಟ್ಟಿದವನು ; ಮಾತಾಪಿತೃಗಳೂ. . .ಆಶ್ರಿತ ಪರಿಚಿತರೂ ಎಲ್ಲರೂ ಯಥಾಯಥರಾಗುವರು (ಅರ್ಥಾ. ೪೪). [< ಯಥಾಯಥ]

ಯಥಾಯಥಂ (ಅ). ೧. ಸರಿಯಾದ ರೀತಿಯಲ್ಲಿ: ಸಮರ್ಪಕವಾಗಿ. ೨. ಆಯಾ ವಸ್ತು ಅಥವಾ ವ್ಯಕ್ತಿ ತನಗೆ ಯೋಗ್ಯವಾದ ಸ್ಥಾನದಲ್ಲಿರುವಂತೆ ; ವ್ಯವಸ್ಥಿತವಾಗಿ. ೩. ಕ್ರಮಕ್ರಮವಾಗಿ ; ಒಂದೊಂದಾಗಿ. ೪. ಅಸ್ತವ್ಯಸ್ತವಾಗಿ ; ಯದ್ವಾತದ್ವಾ : ಅತನ ಭಂಡಮಂಡಲಿಯೊಳ್ ಕೆಲರೊಂಡಿಯುಂ ಕೆಲರ್ಪುತರೊಳ್ ಕೂಡಿಯುಂ ಇಂತೆಲ್ಲಂ ಯಥಾಯಥಮಾಗೆ (ಕುಸಂಭ. ೨೯-೦). [ಸಂ.]

ಯಥಾಯೋಗ್ಯ (ಗು). ೧. ಯೋಗ್ಯತೆಗೆ ಸರಿಯಾದ; ಸಮರ್ಪಕವಾದ. ೨. ಸತ್ಯವಾದ ; ಯಥಾರ್ಥವಾದ ; ಸಿಕ್ಕಿರುವ ಯಥಾಯೋಗ್ಯ ಸಂಗತಿಗಳು ಇಲ್ಲೇ ಬರಿದಿದ್ದೇವೆ (ಜೈಮಿಬಾ. ೬ ಕ್ರ.ಸಾ.೪೫). [ಸಂ.]

ಯಥಾರೀತಿ (ಅ). ಸಂಪ್ರದಾಯದಂತೆ ; ವಾಡಿಕೆಯ ಮೇರೆಗೆ ; ಪದ್ಧತಿಯ ಪ್ರಕಾರವಾಗಿ ; ಅಮೇಲೆ ಯಥಾರೀತಿ ಇಬ್ಬರೂ ಚಹಾಪಾನಕ್ಕಾರಂಭಿಸಿದರು (ಕಳ್ಳಕಂ. ೨). [ಸಂ.]

ಯಥಾರೂಪ (ಗು). ೧. ರೂಪಕ್ಕೆ ಅನುಸಾರವಾದ.–ಅನುಗುಣವಾದ. ೨. ಯೋಗ್ಯವಾದ ; ತಕ್ಕ ; ಸರಿಯಾದ : ಇದಿರ್ಪಂದು ಯಥಾರೂಪಪ್ರತಿಪತ್ತಿಯಿಂದಮುರವರಿಪನ್ಮಧ್ಯದೋಪಾಸೇಂದ್ರಸಂಜ್ಞಿಸಿ (ಶಾಂತಿಪು. ೭-೩೦ ಪ). [ಪ್ರ ಸಂಸ್ಕೃತದಲ್ಲಿ 'ಯಥಾರೂಪಂ' ಎಂಬುದು ಅವ್ಯಯ]

ಯಥಾರ್ಥ (ಗು). ೧. ಸತ್ಯವಾದ ; ವಸ್ತುಸ್ಥಿತಿಗೆ ಅನುಸಾರವಾದ; ದಿಟವಾದ. (ನಾ). ೨. ಸತ್ಯ; ನಿಜಸ್ಥಿತಿ ; ಒಳ್ಳೆದು ಕೆಲವು ವ್ಯಾಪ್ತ್ಯರ್ಥವಾಗುವ ಹಾಗಿದ್ದರೆ ಆಗ ಅಪ್ರಿಯವಾದ ಯಥಾರ್ಥವನ್ನೂ ಪ್ರಿಯವಾದ ಅಯಥಾರ್ಥವನ್ನೂ ನುಡಿಯಬಹುದು (ಅರ್ಥಾಕ. ೩೨); ವಸ್ತು ಹೇಗಿದೆಯೋ ಹಾಗೆಯೇ ತಿಳಿಸುವ ಜ್ಞಾನ ಯಥಾರ್ಥ (ಪಂಕಪ್ರ.-೧೪); ಸಾಂಖ್ಯರು ಸರ್ವಜ್ಞಾನವನ್ನು ಸತ್ಯ, ಯಥಾರ್ಥ ಎನ್ನುತ್ತಾರೆ (ಪಂದಾಸಾ-೫೦). ೩. ಅನ್ವರ್ಥಕವಾದುದು ; ಅನುಗುಣವಾದುದು : ಅನ್ನದಾತ ಎಂಬ ಪೆಸರು ಅವರಿಗೆ ಯಥಾರ್ಥವಾಗಿದೆ. ಅವರ ಅನ್ನದಾನ ನಿರಂತರವಾಗಿ ನಡೆಯುತ್ತಿದೆ (ಕಸಾ). [ಸಂ.]

ಯಥಾರ್ಥಂ (ಅ). ಯೋಗ್ಯವಾಗಿ ; ಸರಿಯಾಗಿ ; ತಕ್ಕ ರೀತಿಯಲ್ಲಿ : ಜಯ ಜೀವಾಧಿಪ ನಂದನಂದ ಸುಚಿರಂ ವರ್ಧಸ್ವ ವರ್ಧಸ್ವಯೆಂದು ಯಥಾರ್ಥಂ ಸ್ತುತಿಗೆಯ್ದು (ಶಾಂತಿಪು. ೧೧-೧೧). [ಸಂ.]

ಯಥಾರ್ಥಕಂ (ಅ). ಅದೇ ಅರ್ಥದಲ್ಲಿ ; ಸಮಾನಾರ್ಥಕವಾಗಿ : "ಪ್ಲವಂಗಮಶಬು ವಾರೀಜಂಭಾಮ್ಯೆಯೊಳಂ ಶಾಲೂರದೊಳಂ ಯಥಾರ್ಥಕಂ ವರ್ತಿಸುಗುಂ". (ಕಸ್ತೂ.ಕೋ. ೦೬೦-೬೬). [ಸಂ.]

ಯಥಾರ್ಥಜ್ಞ (ನಾ)· ಸತ್ಯವನ್ನು ತಿಳಿದವನು : ಪ್ರಿಯವಾಪ್ರಿಯ ಮೆಂಬೆರಡಱ ವಿಯೋಗ ಸಂಯೋಗವೆಂದಿವೆಲ್ಲ ಜನಕ್ಕಾರಯ ಸಾಧಾರಣ ಮೆಂದಲ್ತೆ ಯಥಾರ್ಥಜ್ಞರ್ ಬಿಸುಟ್ಟರಟಲೊಸಗೆಗಳಂ. (ಕಂಪ್ರಕೃ. ೩-೬೨). [ಸಂ.]

ಯಥಾರ್ಥಜ್ಞಾನ (ನಾ)· ವಸ್ತುಸ್ಥಿತಿಯ ಸರಿಯಾದ ತಿಳಿವಳಿಕೆ : ಸತ್ಯದ ಅರಿವು : ಪರಬ್ರಹ್ಮನ ಯಥಾರ್ಥಜ್ಞಾನವ ಲಭಿಸಿದೊಡನೆಯೆ. . . ಸತ್ಯವನ್ನೂ ಸಾಕ್ಷಾತ್ಕಾರ ಮಾಡಿಕೊಳ್ಳುತ್ತೇನೆ (ಪುಣ್ಯಾಶ್ರ. ೫೬೨); ಯಥಾರ್ಥಜ್ಞಾನ :–ವಸ್ತುವು ಇರುವ ರೀತಿಯಲ್ಲಿ ಅದನ್ನು ಗ್ರಹಿಸುವ ಜ್ಞಾನ. ಇದಕ್ಕೆ ಪ್ರಮಾ, ಪ್ರಮಾಣಜ್ಞಾನ ಮುಂತಾದುವು ಪರ್ಯಾಯಗಳು (ಜಾಕ್ಕ್ರ.- ೦೭೭). [ಸಂ.]

ಯಥಾರ್ಥತ್ವ (ನಾ). ೧. ನಿಜ; ಸತ್ಯ. ೨. ಯೋಗ್ಯವಾಗಿರುವಿಕೆ ; ಸಮರ್ಪಕತೆ ; ಸರಿಯಾಗಿರುವಿಕೆ. [ಸಂ.]

ಯಥಾರ್ಥವರ್ಣ (ನಾ). ೧. ನಿಜವಾದ ಬಣ್ಣವುಳ್ಳುದು : (ಕ). ೨. ಬೇಹುಗಾರ : " ಯಥಾರ್ಥವರ್ಣಾಃ, ಮಂತ್ರಜ್ಞಾಃ ಸ್ಪಶಃ, ಹೇರಿಕಃ – ಈ ೪ ಹೇರಿಗಂ " (ತಲಕಾಯು. ೭೦-೨೭೦). [ಸಂ.]

ಯಥಾರ್ಥವಾದಿ (ನಾ). ದಿಟವನ್ನು ನುಡಿಯುವವನು ; ಸತ್ಯವಾದಿ : ನಾನು ಕಳ್ಳನೇನೋ ನಿಜ, ಆದರೆ ಯಥಾರ್ಥವಾದಿ. ಈ ಮಾತ್ರಿಯು ಕಳ್ಳತನವನ್ನು ಮಾಡಿ ಸುಳ್ಳು ಹೇಳುತ್ತಾನೆ (ಪಿಠಿಚಿ. ೪, ೯). [ಸಂ. ಯಥಾರ್ಥವಾದಿನ್]

ಯಥಾರ್ಥಾನುಭವ (ನಾ). ವಸ್ತುಸ್ಥಿತಿಯ ಸರಿಯಾದ ತಿಳಿವು ; ಸತ್ಯವಾದ ಅನುಭವ: ಅನುಭವದಲ್ಲಿ ಎರಡು ವಿಧ : ಯಥಾರ್ಥಾನುಭವ, ಅಯಥಾರ್ಥಾನುಭವ ಎಂದು. ದೊಡ್ಡಲೆಪೆಯದಕ್ಕೆ ಪ್ರಮೆ ಎಂದೂ ಎರಡನೆಯದಕ್ಕೆ ಭ್ರಮೆ ಎಂದೂ ಪೆಸರು (ಪಂಜಾ. ೦೬೨). [ಸಂ.]

ಯಥಾರ್ಥಾನುವೃತ್ತಿ (ನಾ). ಈ ಮೊದಲು ಹೇಳಿದ ಕ್ರಮಕ್ಕೆ ಅನುಗುಣವಾದುದು : ಸಮುದೆಂಬುದು ಬಂಧದೊಳವಿಷಮಂ ಮೃದುಸ್ಪುಟ ವಿಮಿಶ್ರಮಿನ್ಯಾಸಪದಕ್ರಮದಿಂ ಮೂಜು ತೆಜಂ ಬಂಧಮುಂ ಯಥಾರ್ಥಾನುವೃತ್ತಿಯಿಂ ವರ್ತಿಸುಗುಂ (ಕಾಪ್ರಾಕ. ೩೦೦). [ಸಂ.]

ಯಥಾರ್ಹ (ಗು). ಯೋಗ್ಯತೆಗೆ ಸರಿಯಾದ ; ಯಥಾಯೋಗ್ಯವಾದ : ಇದಿರ್ಂದ ಪ್ರಜಾಪತಿಮಹೀಪಾಲನಂ ಜ್ವಲನಜಟಿಮಾಹಾರಾಜಂ ಯಥಾರ್ಹ ಪ್ರತಿಪತ್ತಿಯಿಂ ಕಂದು (ಶಾಂತಿಪು. ೫-೩೬ ಪ). [ಸಂ.]

ಯಥಾರ್ಹವರ್ಣ (ನಾ). = ಯಥಾರ್ಥವರ್ಣ ೨ : " ಯಥಾರ್ಹವರ್ಣಃ . . . ಗೂಢಪುರುಷಃ– ೭ ಬಾತಮಿಪಾರನ ಪೆಸರುಗಳು ; ಗೂಢಚಾರನು–ವೇಷಧಾರಿಯಾಗಿ ಕಪಟದಿಂದ ತನ್ನನ್ನು ತಿಳಿಯಪಡಿಸದೆ ಹೊಂಚಿ ವಿಷಯವನ್ನು ತಿಳಿದು ತಂದರಿಕೆ ಮಾಡುವ ದೂತನು " (ನಿಘಂ.೬೬-೨೭೬). [ಸಂ.]

ಯಥಾವಕಾಶ (ಅ). ಸಂದರ್ಭಾನುಸಾರವಾಗಿ; ಸಮಯಾನುಸಾರವಾಗಿ; ಕಾಲಾವಕಾಶ ದೊರೆತಾಗ : ಪೃಥ್ವಿ, ಅಪ್, ತೇಜ, ವಾಯು, ಆಕಾಶ–ಐದರಾವರಣದಲಿ ತೋರೆನವ ಕಟ್ಟಿ ತೊಗಿರಲು ಮಾನಪ ಯಥಾವಕಾಶ (ಕಂಪಾಖ. ೦೬-೨೬). [ಸಂ.]

ಯಥಾವತ್ತು (ಅ). ೧. ಸರಿಯಾಗಿ ; ನಿಷ್ಕೃಷ್ಟವಾಗಿ. ೨. ರೂಢಿಯಂತೆ ; ಯಥಾಪ್ರಕಾರ. ೩. ಯೋಗ್ಯವಾಗಿ ; ತಕ್ಕಂತೆ.

ಯಥಾವತ್ತಾಗಿ = ರೂಢಿಯಂತೆ : ಯಥಾವತ್ತಾಗಿ ಶಾಸ್ತ್ರಿಗಳು ಉಪಹಾರಕ್ಕೆ ಕೂಡುವ ಮೊದಲು ಚಿನ್ನಾಗಿ ಒಂದು ಸೆರೆ ಉಪ್ಪಿಟ್ಟು ತಂದು ಹೊರಗಡೆ ಇರುವ ನಾರಾಯಣಾಚಾರಿಗೆ ಹಾಕಿದರು (ಕಂಬಾಣ. ೨೩). ಯಥಾವತ್ತಾದ = ವಸ್ತುಸ್ಥಿತಿಗೆ ಸರಿಯಾದ ; ಸದ್ದಿಗಾರನು ಕಲ್ಪನೆಗೆ ಕ್ರಿಯಾಕ್ಕದೆ ಘಟನೆಗಳ ಯಥಾವತ್ತಾದ ಚಿತ್ರವನ್ನು ಕೊಡತಕ್ಕುದು (ಕಷ). [ಸಂ. ಯಥಾವತ್]

ಯಥಾವಿಧಿ (ನಾ)· ನಿಯಮಾನುಸಾರವಾದುದು ; ಕ್ರಮಾನುಗತವಾದುದು : ಕ್ಷಮುವ್ಯದ್ಧಿಸ್ಥಾನಮಿಧಿತ್ರಯಂಗಳೊಳ್ ಕ್ಷಯಮನಹಿತರೊಳ್ ಶೇಷವಧಿದ್ವಯಮುಂ ತನ್ನೊಳ್ ವಿಜೃಸುವುದು ಯಥಾವಿಧಿಯಿಂದ ದಯಮುಂ ಜಯಮುಂ (ಶಾಂತಿಪು. ೨-೪೯); ಮೊದಲು ಪ್ರಾಣದೇ

ಸಾಕ್ಷೀಕೃತಿಸಿಕೊಂಡು· ಆತನವ್ವಳೆಯಿಂದ ಪಂಚೆಯನ್ನು ಕಂಡು ಅವರನ್ನು ಯಥಾವಿಧಿಯಾಗಿ . . . ಆರ್ಚಿಸಿದರು (ಶಾಪಾ· ೨೬೬).

[ಪ್ರ ಸಂಸ್ಕೃತದಲ್ಲಿ ಇದು ಅವ್ಯಯ]

ಯಥಾಶಕ್ತಿ (ನಾ). ಸಾಧ್ಯವಾದಷ್ಟು ; ವಿಷ್ಣುನ್ನು ಮಾಡುಬಹುದೊ ಅಷ್ಟು : ಸಾಮರ್ಥ್ಯವಿರುವಷ್ಟು : ಅರ್ಹತೆವ್ಯಕ್ತಿಮಗಳ ವಿಜ್ಞಾನ ಯಥಾಶಕ್ತಿಸ್ಮಪನಪೂಜಾಪುರಸ್ಸರಂ . . . ಅರ್ಚಿಸಿ (ಅಂಪ್ರ· ೧೫-೦೬ ಪೀ) : ಜಂಗಮಾರಾಧನೆಗಳಂ ಭಯಭಕ್ತಿಯಲಿ ಮಾಡಿ ಯಥಾಶಕ್ತಿಯಲಿ (೦೬ಪ್ರ· ೪೫-೦೪); ಯಥಾಶಕ್ತಿಯಲಿತ್ತ ಮಿತವಾಗಿ . . ಭೋಜನ ಮಾತಾವಂಥಾವನೇ ಬುದ್ಧಿವಂತನು (೫೪೬· ೫೦).

[ಪ್ರ ಸಂಸ್ಕೃತದಲ್ಲಿ ಇದು ಅವ್ಯಯ]

ಯಥಾಸಂಖ್ಯ (ಗು)· ೧. ಅನುಕ್ರಮವಾದ : ಸಂಖ್ಯಾನುಗತವಾದ. (ನಾ)· ೨. = ಯಥಾಸಂಖ್ಯಾಲಂಕಾರ : ಕ್ರಮದೊಳ್ ಪೇಳ್ದು ವಸ್ತುಗಳ್ಗೆಯದೇ ಕ್ರಮದೊಳಸ್ಯಯಮಂ ಪೇಳಿಯಮ ಯಥಾಸಂಖ್ಯ ಮೆನಿಪುದು (೩೨೬· ೧೭). [ಸಂ.]

ಯಥಾಸಂಖ್ಯಾಲಂಕಾರ (ನಾ). [ತಾವ್ಯಮಿಂ] ಸಂಖ್ಯಾಕ್ರಮವನ್ನು ಅನುಸರಿಸಿರುವ ಅನ್ವಯಕ್ರಮವಿರುವ ಅಲಂಕಾರ : ಎರಡು ವಿಚಾರಗಳ ಪರಸ್ಪರ ಅನ್ವಯದಲ್ಲಿ ಮೊದಲನೆಯ ವಿಚಾರದ ಸಂಖ್ಯೆಯನ್ನು ಎರಡನೆಯ ವಿಚಾರದ ಸಂಖ್ಯೆಗೆ ಹೊಂದಿಸಿರುವ ಅಲಂಕಾರ: ಕ್ರಮವಿಂದಲಿ ಪೇಳುವಂತಹ ಅರ್ಥಕ್ಕೆ ಕ್ರಮದಿಂದನ್ವಯವಿಟ್ಟು ಪೇಳಲು ಯಥಾಸಂಖ್ಯಾಲಂಕಾರವೆನಿಸುವುದು (ಕಾಪ್ರ· ೧೯· ೦ ೧೧೨) : ಸಂಖ್ಯಾಕ್ರಮವನ್ನು ಅನುಸರಿಸಿರುವ ಕ್ರಮವೇ ಯಥಾಸಂಖ್ಯಾಲಂಕಾರ ಉದಾ:— ಕಳಕಂಠಂಗಿಗ ಬಗ್ಗಣ ಗಿಳಿಗಳ ಚಪ್ಪರಣಿಜಿಂಗಳಿಂಚರಪೆಸೆಗುಂ ಪಳಿಗರ್ಳ್ ತನಿವಣ್ಗಳ್ ಸುಮನಃಕುಳಿಂಗಳಿತಿಳಿದು ಚೂತಶಾಖಾಂತರದೊಳ್ (೯೫೫· ೨೬೬). [ಸಂ.]

ಯಥಾಸಂಖ್ಯೆ (ನಾ)· = ಯಥಾಸಂಖ್ಯಾಲಂಕಾರ : ಕ್ರಮದಿಂದಲಿ ಯುಚಿತ್ಯಾರ್ಥಕೆ ವೇಳ್ಕುಸ್ವಯಕ್ರಮದಿಂದಲಿವು ಯಥಾಸಂಖ್ಯಾ ಶ್ರಮವಿಲ್ಲದ ಶಕ್ರುಮಿತ್ರದುಃಖಿಪ ಪರಾಕ್ರಮದಿಂ ಗೆಲು ರಂಜಿಸು ಭಂಜಿಸು ನೀ (೪೨೦· ೧೯-೦). [ಪ್ರ· ಯಥಾಸಂಖ್ಯ]

ಯಥಾಸಂಭವ (ನಾ)· ೧. ಒದಗಿ ಬಂದುದು : ಸಂದರ್ಭಾನುಸಾರವಾಗಿ ಬಂದಿದ್ದು : ಇದನು ಕಾಂಚನಪಾತ್ರಜಲವಿಂದಿಪು ವರಾಸನವೆಂದು ಕೈಕೊಂಬುದು ಯಥಾಸಂಭವದಲೆಂದನು ಧರ್ಮನಂದನನು (೪೨೨· ೪-೦೦). ೨. ಸಂದರ್ಭಕ್ಕೆ ಹೊಂದಿಕೊಂಡುದು : ಆಯಾ ಪರಿಸ್ಥಿತಿಗೆ ಯೋಗ್ಯವಾದುದು : ಈ ಪೇಳ್ದ ವಿಧಕ್ತಿಗಳ್ ಯಥಾಸಂಭವದಿನೆಂತಾದೊಡಂ ಪಲ್ಲಟಿಪುವ (೪೨೦· ೦೪೨ ಕೃ). [ಸಂ.]

ಯಥಾಸ್ಥಾನ (ನಾ)· ೧. ಯೋಗ್ಯವಾದ ಸ್ಥಳ : ಸರಿಯಾದ ಜಾಗ. ೨. ಮೊದಲು ಇದ್ದ ಜಾಗ : ಪಾಡಿಕೆಯ ಸ್ಥಾನ: ನಿಮ್ಮ ಪಲ್ಲುವನು ವೇಷ್ಟಿಸಿದೊಡನ್ನ ದೋಷಃ ಪುನರ್ದರ್ಶನಂ ಯಥಾಸ್ಥಾನಕ್ಕೆ ಬಿಜಯಂಗೆಯ್ಯಿಂ (ಕಾಂಬಿ· ೪· ೦೦೦ ಪ). [ಪ್ರ.]

ಯಥಾಸ್ಥಿತ (ಗು)· ೧. ಯಥಾರ್ಥವಾದ ; ವಸ್ತುಸ್ಥಿತಿಗೆ ಅನುಗುಣವಾದ. ೨. ಸಂದರ್ಭಾನುಸಾರವಾದ : ಕಾಲೋಚಿತವಾದ : ಯೋಗ್ಯವಾದ . ೩. ಹೊಂದಲಿದ್ದಂತೆಯೆ ಇರುವ : ಯಥಾಪೂರ್ವವಾದ : (೬). [ಸಂ.]

ಯಥಾಸ್ಥಿತಿ (ನಾ). ಮೊದಲು ಇದ್ದ ಸ್ಥಿತಿ : ಪೂರ್ವದಲ್ಲಿದ್ದ ಅವಸ್ಥೆ : ಮಹಲಿಂಗಯ್ಯನಿಗೆ ಮತ್ತೆ ಯಥಾಸ್ಥಿತಿಗೆ ಪ್ರಸಂಗ ಬಂದು ನಿಂತಿದ್ದಕ್ಕೆ ವಿಸ್ಮಯೋಚಿದಾಯಿತು (ಮಾಪ್ರ· ೫೩). [ಪ್ರ ಸಂಸ್ಕೃತದಲ್ಲಿ ಇದು ಅವ್ಯಯ]

ಯಥೇಚ್ಛ (ನಾ)· ೧. ಮನಸ್ಸಿಗೆ ಬಂದಷ್ಟು : ಬೇಕಾದಷ್ಟು : ಇಚ್ಛಿಸಿದಷ್ಟು. ೨. ವಿಪುಲವಾದುದು ; ಅಧಿಕ ಪ್ರಮಾಣ : ದ್ರುಪದನಿಗೆ ಯಥೇಚ್ಛವಾಗಿ ಸೈನ್ಯ ಕೊಟ್ಟು ಅವನೂ ಅವನ ಮಕ್ಕಳೂ ಪಾಂಡವರೂ ಪಾಂಥಿಸ್ಥಿರನ್ನು ಕೈಬಿಡುವಂತೆ ಮಾಡಬಹುದು (೫೫೦· ೬೨) ; ಎಳೆಯ ಮಕ್ಕಳ ಆಟಪಾಟಗಳನ್ನು ನೋಡುವ . . . ಸೌಲಭ್ಯ ಶಿಕ್ಷಕರಿಗೆ ಯಥೇಚ್ಛವಾಗಿರುತ್ತದೆ (೬೪೮· ೭೭). ೩. ತನ್ನ ಇಚ್ಛೆ.—ಅಪೇಕ್ಷೆ : ಚಂಡಶಾಸನಕನು . . . ಪಟ್ಟಾಭಿಷೇಕವನ್ನು ಮಾಡಬೇಕೆಂದು ಯಥೇಚ್ಛವಾಗಿ ಹೋದನು (೬೫೫· ೭೦). [ಸಂ.]

ಯಥೇಚ್ಛೆ (ನಾ)· ಯೋಗ್ಯವಾದ ಅಪೇಕ್ಷೆ. [ಸಂ. ಯಥೇಚ್ಛ]

ಯಥೇಪ್ಸಿತ (ಗು)· ೧. ಅಪೇಕ್ಷಿಸಿದ ರೀತಿಯಲ್ಲಿರುವ : ಇಷ್ಟಾನುಗುಣವಾದ : ನಿರೀಕ್ಷೆಗೆ ಸರಿಯಾದ. ೨ ಹೇರಳವಾದ : ಅಧಿಕ ಪ್ರಮಾಣದ : ಪಿಂಪೆಯಾತಂಗೆ ಬಯಸಿದ ತೆರಂ ಕೊಳ್ಳಿಕ್ಕಮಾದಿಲ್ಲ . . . ಇದೀತಂಗೆ ಯಥೇಪ್ಸಿತಭೋಜನಪ್ರಸಾದಮಂ ಕೊಟ್ಟೆನಾ (೧೩೨೫· ೮೨). [ಸಂ.]

ಯಥೇಷ್ಟ (ನಾ)· ೧. ಮನಸ್ಸಿಗೆ ಬಂದುದು ; ಸ್ವೇಚ್ಛೆ ; ಸ್ವೈರವೃತ್ತಿ : ಮಿಸುಣಿಬರಿಪುವೆ ಯಥೇಷ್ಟ ಚಾರವೆ (೪೧೬೦· ೭೮) ೨. ಬೇಕಾದಷ್ಟು ; ಹೇರಳವಾದುದು : ವಿಪುಲವಾದುದು : ಗಳಿಸುವ ಚಿಂತೆಯಿಲ್ಲ. ತಂದುಂ ಅಷ್ಟಿ ಯಥೇಷ್ಟವಾಗಿದೆ (೪೦೭೨· ೮೨) : ಸ್ತ್ರೀದರ್ಶನಕ್ಕೆ . . . ತಬ್ಬುಸಾಮಗ್ರಿಯೂ ಪಾಕಸಂಧಾನಗಳೂ ಯಥೇಷ್ಟವಾಗಿ ಬಂದವು (೪೨೬· ೨೨೮) [ಸಂ.]

ಯಥೇಷ್ಟಂ (ಅ)· ಇಷ್ಟಾನುಸಾರವಾಗಿ : ಇಷ್ಟವಿದ್ದ ರೀತಿಯಲ್ಲಿ : ಅಜಿನಮು ವಿಘಕ್ಕಿಯೋಳ್ಪಳಿಜ್ಯಾರಣಿ ಯಥೇಷ್ಟಮು ಜಿಮೆಗಳೊಳಂ (೪೦೦· ೨· ೦೮) ; ಕಜ್ಜಕ್ಕಿಯಿಂಗಳೊಳಂದಿ ಯಥೇಷ್ಟಂ ನಲಿದಾಡಿ ಪಾಥಾವೇಷದಿನಿವರ್ಗಳ್ ಶಿಷ್ಯರೊಳ್ ಬಂದ್ಧಮಿಥ್ಯಾದೃಷ್ಟಿಗಳ್ (೯೮೫· ೦೪· ೭೦). [ಸಂ.]

ಯಥೋಕ್ತ (ಗು)· ೧. ಒಂದೆ ಹೇಳಿದ : ಪೂರ್ವೋಕ್ತವಾದ : ಯಥಾವಿಧಿಯಾದ : ಸೂಕ್ಷ್ಮಾಪರಾಯ ಗುಣಸ್ಥಾನಕ್ಷಪಕಂ ಯಥೋಕ್ತ ಪ್ರಕಾರಾದಿಂ ಸೂಕ್ಷ್ಮಲೋಭಮಂ ನಿಜಿಯಿ ಪಜಃಪದಿಸಿ (೪೫೦೫· ೯-೬೨ ಪ). (ನಾ)· ೨. ಹೇಳಿದವನ್ನು : ಹೇಳಿರುವನ್ನು ; ಉಕ್ತವಾಗಿರುವನ್ನು : ಗ್ರಹವೆಂಬುಂ ಜನನೋದಯಗೃಹಮುಂ ಬಲಮುಕ್ತಮಿವೆ ಪರಸ್ಪರ ಪೀಡಾರಹಿತ ಸ್ವಸ್ವಸ್ಥಂ ಸನ್ಮಹವೆಂಬೆ ವಿವಮಾಯುವಂ ಯಥೋಕ್ತಂ ಕುಡುಗುಂ (೪೫೬· ೯-೯). [ಸಂ.]

ಯಥೋಚಿತ (ಗು)· ಯೋಗ್ಯವಾದ : ಅನುಗುಣವಾದ : ಅರಸು . . . ಸಪರಿವಾರಮೆನಸು ಬಂದರ್ಚಿಸಿ ಯಥೋಚಿತ ಸ್ಥಾನದೊಳಿರ್ದಂ (೪೨೧೧· ೪೫-೨೦) ; ಯಥೋಚಿತ ಸಂಭಾವನೆಯಿಂ ರಾಜನ್ಯಕಮಂ ಬೀಡಿಗೆ ವಿಸರ್ಜಿಸಿ (೪೧೬೪· ೦೧-೬೪ ಪ).

ಯಥೋಚಿತವಾಗಿ = ಯೋಗ್ಯವಾಗಿ : ತಕ್ಕಂತೆ : ಇಂದ್ರನು ಬೃಹ್ಮದೇವನಿಗೆ ಯಥೋಚಿತವಾಗಿ ಸಮರ್ಚನವನ್ನು ಒಪ್ಪಿಸಿ . . . ಹೊರಟನು (೪೫೦· ೧೨· ೦೪೬). [ಸಂ.]

ಯಥೋದಿತ (ನಾ)· ಪದ್ಯ : ತಿಳಿಗೇಡಿ : " ವೈಧೇಯಃ . . . ಯಥೋದಿತಃ· ಮೂಢಃ . . . ಪಾತ್ಯತಾಸಿತಃ— ಈ ೧೧ ಅಜಿಯ ದಮಂ " (೪೦೩೮· ೩೬-೦೬೦). [ಸಂ.]

ಯಥೋದ್ಗತ (ಗು). ೧. ಹುಟ್ಟಿದಾಗ ಇದ್ದ ಹಾಗೆಯೇ ಇರುವ; ತಿರುವಳಿಕೆ ಇಲ್ಲದ (ನಾ). ೨. ದಡ್ಡ ; ಅಜ್ಞ ; ಮೂರ್ಖ : "ವಾಲಿಶಸ್ಯಜ್ಞಂ ಮೂರ್ಖಂ ಬಾಲಂ ಮೂಢಂ ಜಡಂ ಯಥೋದ್ಗತ ನೆನೆಯುಂ" (೪೨೨೫· ೧೧-೭). [ಸಂ.]

ಯಥೋದ್ದಿಷ್ಟ (ಗು)· ಯಾವುದನ್ನು ಸೂಚಿಸಿ ಅಥವಾ ತೋರಿಸಿ ಕೊಡಲಾಯಿತೋ ಅಂತಹ : ನಿರ್ದೇಶಿಸಲ್ಪಟ್ಟ : ಗಗನಚರಾಧೀಶನಂ

ಯತಿ ವರಸಿ ಯಯೋದ್ದಿಷ್ಟವಿಸ್ಪರದೊಳ್ ಕುಳ್ಳಿರ್ದು (ಶಾಂಕಥ. ೨-೨೦ ಪ)· [ಸಂ.]

ಯಯೋಪದಿಷ್ಟ (ಗು)· = ಯಯೋದ್ದಿಷ್ಟ : ಮಹೀತಳಾಶ್ಲಿಷ್ಟ ಲಲಾಟಪಟ್ಟನೆಜಿಗಿ ಪೊಪಟ್ಟು ಯಯೋಪದಿಷ್ಟಾಸನದೊಳ್ ಕುಳ್ಳಿರ್ದು (ಶಾಂಕಥ. ೨-೨೦ ಪ)· [ಸಂ.]

ಯದು (ನಾ)· ೧· ಯಯಾತಿ ಮತ್ತು ದೇವಯಾನಿಯರ ಹಿರಿಯ ಮಗನೂ ಕೃಷ್ಣನ ವಂಶದ ಪೂರ್ವಜನೂ ಆದ ಒಬ್ಬ ದೊರೆ. ೨. ಯದುವಂಶದಲ್ಲಿ ಹುಟ್ಟಿದವನು ; ಯಾದವ : ಯದು ನಾಶಕ್ಷಮವುತ್ತನು ಪಡೆವೆಂ (ಪಗಾ. ೯-೦೭) ; ಯದುಗಳು ಗೋವೇರು ದನಗಾರರೆಂಬ ಬಗ್ಗೆ ಭಿನ್ನಾಭಿಪ್ರಾಯವೇ ಇಲ್ಲ (ಕರ್ನಾಶ್ರ. ೧೩). ೩. ಯಮುನಾ ನದಿಯ ಪಶ್ಚಿಮಕ್ಕಿದ್ದ ಒಂದು ದೇಶ ; ಯಾದವರ ದೇಶ. [ಸಂ.]

ಯದುಕುಲ, ಯದುಕುಳ (ನಾ)· ೧· ಯದುವಿನ ವಂಶ ; ಯಾದವ ವಂಶ : ಯದುಕುಲಜಲಧಿಯೊಳ್ ಪುಟ್ಟಿದಿಯುಮರ್ಮಂ ನಿಜು ಮೊತನೆ ಪುಟ್ಟುವಪೋಲ್ (ಪಣಾಯು. ೬-೩೩). ೨. ಯದುವಂಶದವರು; ಯಾದವರು: ಯದುಕುಲ ದುರ್ವಾಯನವ್ಪಂತದೊಂದು ವನವಂ ತ್ರಿಣೇತ್ರ ರೂಪದೆ ತಾನಿತ್ತುವನಜಿದು (ಪಗಾ. ೯-೨೨) ; ಯದುಕುಲಸುತ ದೇವವಂಕುಂದ ಬಾಯಂಗೈದು ಹೊಕ್ಕನು ದ್ವಾರಕಾಪುರವ (ಕುಪಾ.ಗಾ. ೦-೦೯)· ೩. ಮೈಸೂರಿನ ಅರಸರ ವಂಶ : ಯದುಕುಲವ ಕಾಯುವಾ ಶಕ್ತಿಗಳ ದಿವ್ಯಪ್ರಸಾದವಿಹಕ್ಕೆ (ಹೊಂಗಳು. ೩೨-೦೬). **ಯದುಕುಳ** : ೪. ಹೊಯ್ಸಳ ವಂಶ : ಯದುಕುಳಕುಳಾದ್ರಿಶಿಖರದೊಳುದಿಯಿಸಿದಂ . . . ವಿನಯಾದಿತ್ಯ (ಎಕ. ೪. ೪೪ಶಾ. ೦೪೯-೯; ೧೨೩೫). [ಸಂ.]

ಯದುಕುಲಕಾಂಭೋಜಿ (ನಾ)· [ಸಂಗೀತ] ಒಂದು ಮೇಳ ರಾಗದ ಹೆಸರು : ಯದುಕುಲ ಕಾಂಭೋಜಿ :— ಈ ರಾಗದ ನಿಜನಾಮ 'ಎರುಕಲ ಕಾಂಭೋಜಿ ; ಎರುಕಲ ಜಾತಿಯ ಅಂಬಿಗರ ದೋಣಿ ಹಾದುಗಳ ಧಾಟಿಯಿಂದ ಈ ರಾಗ ರೂಪುಗೊಂಡಿತೆಂದು ತಿಳಿದುಬಂದಿದೆ (ಸಂಗಸಂ. ೦೩೩). [ಸಂ. ಯದುಕುಲಕಾಂಭೋಜೀ]

ಯದುಕುಲನಂದನ (ನಾ)· ಯಾದವ ವಂಶಕ್ಕೆ ಸಂತೋಷವನ್ನುಂಟು ಮಾಡುವವನು ; ಕೃಷ್ಣ : ಯಾದವ ನೀ ಬಾ ಯದುಕುಲನಂದನ ಮಾಧವ ಮಧುಸೂದನ ನೀ ಬಾರೊ (ಕ್ರಿಂಚ. ೦-೦೩ ಪಲ್ಲ). [ಸಂ.]

ಯದುಕುಳ ' ಯದುಕುಲ ' ನೋ·

ಯದುಕುಳತಿಳಕ (ನಾ)· ೧. ಯಾದವ ವಂಶಕ್ಕೆ ಭೂಷಣಪ್ರಾಯನಾದವನು. ೨. ಹೊಯ್ಸಳವಂತದಲ್ಲಿ ಶ್ರೇಷ್ಠನಾದವನು : ಯದುಕುಳತಿಳಕಂ ವೀರ ವಿಷ್ಣುವರ್ಧನರಾಯ (ಎಕ. ೪. ೪೪ಶಾ. ೦೪೯-೦೦ ; ೧೨೩೫)· [ಸಂ. ಯದುಕುಲತಿಲಕ]

ಯದುವಂಶ (ನಾ)· ೧.=ಯದುಕುಲ ೧) ; ಯದುವಂತಶ್ರೀಲಲಾಮಂ ರಿಷ್ಟಗಿರಿಕುಳಿತಂ . . . ಅರವಿನೆಯಂ ತೋರಣಾದ್ಯುನ್ನತೋಭಾಸ್ಪಪಮಂ ಪೊಕ್ಕಂ ಸ್ಪಪೇಂದ್ರಂ (ಪಲಪು. ೬-೨೦೩). ೨. ಯದುಕುಲದಲ್ಲಿ ಹುಟ್ಟಿದವನು ; ಕೃಷ್ಣ : ಪೊಗೆ ವಧಮಂ ದುದುವಂತಂ [ಪಾಣಂ. ೪೯] ಪೆಜಿತುವಾಯಟುಂ ಚಿಂತಿಸಿನೆಂ (ಪಗಾ. ೯-೨೦). ೩. ಮೈಸೂರಿನ ಅರಸರ ವಂಶ: ಯದುವಂಶಂ ಪಿರಿವಾಯ್ತು . . . ಮಾಹೀಶೂರಾಣ್ಮಾರೀ ಚಕ್ರಮಂ ಪದಪಿಂ ಪೂಲಿವ ಕಾಲಮಿಗಳೊದವಿಚ್ಚಿ (ಪಗಾ. ೩-೦೨೬)· [ಸಂ.]

ಯದೃಚ್ಛೆ (ನಾ)· ೧. ತನ್ನ ಅಪೇಕ್ಷಾನುಸಾರವಾಗಿ ನಡೆದುಕೊಳ್ಳುವಿಕೆ; ಸ್ವೇಚ್ಛಾಪರ್ತನೆ : ಸ್ವಚ್ಛಂದ ವರ್ತನೆ : "ಸ್ವಚ್ಛಂದ ವರ್ತಮಿತ್ತಂ ಮದ್ಯದೃಚ್ಛೆಯಮು ತನ್ನಿಚ್ಛೆ" (ಪಂಗಣಾ. ೦೩೩-೩೦) ೨. ಆಕಸ್ಮಿಕ: ಅನಿರೀಕ್ಷಿತವಾದ ಘಟನೆ ; "ತಾಂ ನಿರ್ಹೇತುಕಮಕ್ಕುಂ ಯದೃಚ್ಛೆ" (ಪಗ್ಗ. ೯೫. ೦೦೩-೩೭)· ಯದೃಚ್ಛಾಲಾಭದಿಂದ ಸಂತುಷ್ಟನಾಗಿದ್ದ ಮಾಜಶ್ರವಸ. ಈಗ ತನ್ನ ಪಶ್ಚೆಯಿಂದ ಧನಸಂಗ್ರಹವಾದೀತೇ . . . ಎಂದು ದಾನಿ ಕಾದು ತೊಡಗಿದ (ಕಂಜಾ. ೬೯); ಆ ವಿಶ್ವರೂಪಸಂದರ್ಶನದಿ ಹೊಂದಿಯುವು ಜೀವ ನಿರ್ಜೀವಗಳು, ಕ್ರಮ ಯದೃಚ್ಛೆಗಳು (ಹಂಗಾಶ. ೩೩೩). ೩. [ವ್ಯಾಕ] ನಿರ್ದಿಷ್ಟವಾದ ಅರ್ಥವಾಗಲಿ, ನಿಷ್ಪತ್ತಿಯಾಗಲಿ ಇಲ್ಲದ ನಾಮಪದ: (ಕ). [ಸಂ. ಯದೃಚ್ಛಾ]

ಯದೃವಿಷ್ಟ (ನಾ)· ದೈವದಲ್ಲಿ ಇದ್ದಂತಾಗಲಿ ಎಂದು ನಂಬುವವನು ; ದೈವವಾದಿ: "ಯದೃವಿಷ್ಟಃ- ದೈವಪರಃ_ಈ ೨ ದೈವಂಬೋಲಿಸರ್ವಂ" (ಪಣಾದೀ. ೬೨-೨೨೨)· [ಸಂ.]

ಯದ್ಯಪಿ (ಅ)· ಆದರೂ ಕೂಡ ; ಆದಾಗ್ಯೂ : ನಾನು ನಾಸ್ತಿಕನೆಂದೇ ಇಟ್ಟುಕೊಳ್ಳಿ. ಯದ್ಯಪಿ ತಂದೆ ಹಾಯಿಗಳ ಮೇಲೆ ನನಗೆ ಭಕ್ತಿಯಿದೆ (ಕಸಾ). [P ಸಂಸ್ಕೃತದಲ್ಲಿ ಇದು 'ಯದಿ', 'ಅಪಿ' ಎಂದು ಎರಡು ಭಿನ್ನಪದಗಳು]

ಯದ್ವಾತದ್ವಾ (ಅ)· ಅವ್ಯವಸ್ಥಿತವಾಗಿ ; ಸಿಕ್ಕಾಪಟ್ಟೆ ; ಯಾವ ಒಂದು ಕ್ರಮವೂ ಇಲ್ಲದೆ : ಓಗೆ ಯದ್ವಾತದ್ವಾ ಗಳಹುವುದು ನಿನ್ನ ಸ್ವಭಾವವೇ ಆಗಿದೆ· (ಅಕ್ಷಪ. ೧೦) ; ಈಚೆಗಂತೂ ಉಕ್ಕಿನ ಕಂದಿಗಳ ಬೆಲೆಯೂ ಯದ್ವಾತದ್ವಾ ಏರಿಹೋಗಿದೆ (ಕಂಜಾ. ೨೯೩)· [P ಸಂಸ್ಕೃತದಲ್ಲಿ ಇದು 'ಯದ್' ವಾ', "ತದ್' ವಾ" ಎಂಬ ಎರಡು ಭಿನ್ನಪದಗಳು]

ಯಮ (ನಾ)· ೧. ತಡೆದಿರುವಿಕೆ ; ಪತೋಟಿ ; ನಿಗ್ರಹ. ೨. ಇಂದ್ರಿಯನಿಗ್ರಹ ; ಆತ್ಮಸಂಯಮನ : ಇದು ಧರ್ಮಶಾಸ್ತ್ರಸಜನಿತ ರಹಸ್ಯಮೋ ಯಮನೋ ಪಠ್ಯ (ಕಾಂಕಥ. ೦೧೬); ಯೋಗಮಾರ್ಗದಲ್ಲಿ ತನುವ ಮೊದಲಾದಿಂದ್ರಿಯಂಗಳ ಈಸವಿರತಿಯಿದೆ ಯಮವೆನಿಪುದು (ನಗಣಾ. ೨೨-೩೯). ೩. ಪಿತೃಲೋಕಾಧಿಪತಿಯೂ ದಕ್ಷಿಣದಿಕ್ಕಿನ ಅಧಿಪತಿಯೂ ಆದ ದೇವತೆ : ಮೃತ್ಯುದೇವತೆ : "ಪ್ರೇತಪತಿ ಸಮವರ್ತಿ ಮೃತ್ಯು ಕಾಳೀದಿಸಹಜಾತಂ ಯಮಂ ಧರ್ಮನಂತಕಂ . . . ಕೃತಾಂತನಕ್ಕುಂ" (ಹಂಗಣಾ. ೦೫-೦೦) : ಅಮರಾಧಿರಾಜ ಹುತವಹ ಯಮ . . . ಯಕ್ಷೇಶಾನಕ್ಕಮಾದಿನವರಿಣ್ಮರಂತಾತ್ಮಮನಯ್ ನೀಂ ನಮಮಲೋಕಮಾಳನೆ ಆವರೊಳ್ (ಕಲಾ. ೩-೧೩) ; ಯಮಜಪರಾನರಮೇಜಧಿಪೊ (ಪಜ್ಜಕ. ೦೩-೦೦೦) ; ಈ ಪ್ರಾಣಿಗಳನ್ನೆಲ್ಲ ಒಂದೊ ನಿಯಮದ ಕಟ್ಟಿನಲ್ಲಿ ಇಟ್ಟಿದ್ದೀಯೆ . . . ಆದ್ದರಿಂದಲೇ ನಿನಗೆ 'ಯಮ' ನೆಂದು ಹೆಸರು (ಪಣಾ. ೦೩೩). ೪. ಶಿಸಿಗ್ರಹ : ಯಮ ದನುಜೇಂದ್ರ ವಂದ್ಯರಹಿತಂ ರವಿಸುಂದಲದೊಳ್ ಗ್ರಹಗಳಸ್ತಮಿಸಿದೊಡೆ . . . ತದರ್ಧಾಸನ [ಬಾಶಾ] . . . ಕುತುಪಾಯಃ ಏನೊಳ್ (ಪಾಕಶಿ. ೬-೪). ೫. ಜೊತೆ ; ಜೋಡಿ. ೬. ನಿತ್ಯವೂ ಮಾಡಬೇಕಾದ ಧಾರ್ಮಿಕ ಕ್ರಿಯೆ : ನಿತ್ಯಕರ್ಮ : "ನಿತ್ಯಕರ್ಮಮದು ಯಮಮಕ್ಕುಂ" (ಪಕ್ಕಶಿಂ. ೨೯-೩೩)· ೭. [ಗಣಿತ]ಎರಡು ಎಂಬ ಸಂಖ್ಯೆಯ ಸಂಕೇತ : ಯಮ ನಯನ. . .ತಿವಿಗಳೆರಡಱ ನಾಮಂ (ಕ್ಷಣಾ.೯-೨). ೮. [ಯೋಗ] ಅಷ್ಟಾಂಗಯೋಗದ ಎಂಟು ಅಂಗಗಳಲ್ಲಿ ಮೊದಲನೆಯದು : ಹಿಂಸೆ, ಅಸತ್ಯ, ಕಳವು, ದುರಾಚಾರ, ಪರಿಗ್ರಹ ಈ ಐದನ್ನು ಬಿಡುವುದು : "ಯಮ ನಿಯಮಾದಿ ನಿಜಯೋಗಮಕ್ಕುಂ" (ಪಂಗಣಾ. ೩೨-೦೩) ; ಯಮ ನಿಯಮ ಸ್ವಾಧ್ಯಾಯಕ್ರಮದಿಂದ ನೆಗಟ್ಟಿದ್ದಲ್ಲದಾಗದು (ಪಣಾಕ. ೩೩) ; ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧಿಃಸಂಪನ್ನರ್ . . . ಶ್ರೀಪುರುಷ್ಯಗಳ್ (ಶಿಶಾ. XX, ೪೭ ೦೩ ; ೧೦೭೬) : ಯಮನಿಯಮಾಸನಾದಿ ವಿವಿಧಕ್ರಮದಿಂ ಗಿರಿತಳ್ಪದೊಳ್ ಮಾನೋರಮಮನೆಯುತಾ ತಪಶ್ಚರಣಮಂ ತಳೆದು (ಪಕಾ. ೩ ೭೦)· ೯. (ಆಲಂ) ಅಧಿಕವಾದುದು ; ಹೆಚ್ಚಾದುದು : 'ಯಮಭಾರ' ಪರಾ.

ಯಮನವರು = ಯಮಧರ್ಮರಾಯನ ಭಂಟರು ; ಯಮದೂತರು : ಸಾಯಲಾಜಿನು ಎನಲು ಕುಸುರಿದಱಿಯದೆ ಬಿಡರು ಯಮನವರು (ಭೂಕಂದ. ೨-೬೦-೩)- [ಸಂ.]

ಯಮಕ (ನಾ). ೧. ನಿಗ್ರಹ ; ತಡೆ ; ಹತೋಟಿ. ೨. ಧಾರ್ಮಿಕ ಕರ್ತವ್ಯ ; ನಿತ್ಯಕರ್ಮ. ೩. ಆಪಳಿ ; ಯಮಳ. ೪. ಜೊತೆ ; ಜೋಡಿ : 'ಯಮಕಗಿರಿ' ಪರಾ. ೫. ಇಮ್ಮಡಿ ; ಎರಡು ಪಟ್ಟು. ೬. ಎಣ್ಣೆ ಮತ್ತು ಶುಷ್ಕದ ಮಿಶ್ರಣ : ಈ ಘೃತ ತೈಲಗಳ ಸಂಯೋಗಕ್ಕೆ ಯಮಕವೆಂದು ವೈದ್ಯಶಾಸ್ತ್ರದಲ್ಲಿ ಹೆಸರಿದೆ (ವೀಚಿಸಂ. ೩-೦೦ ೩೫೫). ೭. ಗದಾಯುದ್ಧದ ವರಸೆಗಳಲ್ಲಿ ಒಂದು ; ಒಂದು ಗತಿ ವಿಶೇಷ : ಭೀಮನು ಅದನ್ನು ಅರ್ಥಮಾಡಿಕೊಂಡು, ಮಂಂತಲಗಳು, ಯಮಕಗಳು, ಗೋಮೂತ್ರಿಕೆ ಮುಂತಾದ ಚಿತ್ರವಿಚಿತ್ರವಾದ ಗತಿಗಳಲ್ಲಿ ಓಡಾಡುತ್ತ ಎದುರಾಳಿಯನ್ನು ಬುದ್ಧಿಭ್ರಮೆಗೊಳಿಸುವುದಕ್ಕೆ ಪ್ರಯತ್ನ ಪಟ್ಟನು (ಪಚಾಣ. ೩೦೬). ೮. [ಕಾವ್ಯಮೀ] ಶಬ್ದಾಲಂಕಾರಗಳಲ್ಲಿ ಒಂದು ಪ್ರಭೇದ ; "ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದವೋ ಪದಭಾಗವೋ ಒಂದು ಪದ್ಯದ ಆದಿ, ಮಧ್ಯ, ಅಂತ್ಯ ಈ ಸ್ಥಾನಗಳಲ್ಲಿ ನಿಯತವಾಗಿ ಪುನಃಪುನಃ ಬಂದರೆ ಅದಕ್ಕೆ ಯಮಕವೆಂದು ಹೆಸರು" .(ಕೃಚಿ. ೩೫೯) : ಯಮಕಂ [ಪ]ದಾ ಪಾದಾರ್ಥ ಸಮುಚ್ಚೋಕ[ಸು]ಗೋಚರಂ ಪ್ರಮಿತಾದ್ಯಂತದೂಪ್ಯೋಪ ಕ್ರವಮನೇಳ ಪ್ರಕಲ್ಪಿತಂ (ಶಬಾ. ೨-೦೨೯) : ಯಮಕದ ಗಮಕದ ಬಿನ್ನಣ ಮುಮರ್ವಿನಗಂ ತತ್ವಮುಂ ಕವಿತ್ವಮುಮೆತ್ತಂ ಸಮಸಂದಿರೆ ಪೇಟ್ಟಿಂಜಿಗೆ ಸವಿನಲ್ಲಿ ಧನಂಜಯಂಗೆ ಕವಿತಾಗಮಿಕರ್ (ಸುಕಣ್ಣ. ೦-೩೩) ; ಇವು. . . ವ್ಯಾಸದೆಡೆಗೆ ಸಲ್ಲವು ಯಮಕತ್ವಮಹ್ಯತಿಶಾಗವು (ಕಬಾಪ. ೦೯). [ಸಂ.]

ಯಮಕಗಿರಿ (ನಾ). ಜೋಡು ಬೆಟ್ಟ: ಇರ್ಕಲದೊಳ್ . . . ಎರಡೆರಡುಂ ಯಮಕಗಿರಿಗಳಪ್ಪುವು (ಕಪ್ಪಕ್ಕ. ೦೫೩). [ಸಂ.]

ಯಮಕಿಂಕರ (ನಾ). ಯಮನ ಆಳು ; ಯಮದೂತ : ಸಿರಿ ಬ್ರಹ್ಮಾದಿಗಳೊಡೆಯನು ಪರಿಯರಲಾಗಿ ಹಿರಿಯಸೊಡೆಯನೆಂದು ಕಲ್ಪಿಸುತ ಸರತೊಟ್ಟರೇಱಿಸಿ ವೆಸರಿಟ್ಟು ಕರವೆ ನಿನ್ನವರೆ ಯಮಕಿಂಕರರ ಕೇಳಿ ಮೂಳಿ (ಭೂಕಂದ. ೪-೫೦-೯). [ಸಂ.]

ಯಮಕು (ನಾ). ಜಂಟು ; ಶೀವಿ ; ದಿಮಾಕು : ಶಾಂತರಾಜನು ನಮ್ಮನಾಗಿದ್ದರೂ ಯಮಕಿನಿಂದ ನುಡಿದನು (ಪಚಾಣ. ೩೨) ; ಹೌದ ಹುಡುಗೀ! ಏನೆ ಯಮಕು ಅಂದೀ ! ಕಾರಿನೊಳಗಿಂದ ಇಳಿಯೋದೂ ಒಂದು ಸೊಬಗು (ಟಾಕಸಾ. ೫). [?]

ಯಮಗಂಡಕಾಲ (ನಾ). [ಜ್ಯೋತಿ](ವ್ಯಾಪಾರಾಪಾಯವನ್ನು ಸೂಚಿಸುವ) ಅಶುಭಕಾಲ : ದುಮಗಂಡಕಾಲದಲ್ಲಿ ಪ್ರಯಾಣ ಹೊರಟಿದ್ದಕ್ಕೆ ಸರಿಯಾಗಿ ಆ ಗುಂಪು ಅಪಘಾತಕ್ಕೀಡಾಯಿತು (ಕೂಪ). [ಸಂ.]

ಯಮಗೊಲೆ (ನಾ). (ಆಲು) ನರಕಯಾತನೆ ; ಭೀಕರವಾದ ಹಿಂಸೆ : ಬೇಡಿಕೊಂಬುವೆ ನಿನ್ನಾ . . . ಕೆಂಗೆಂಡದೊಳು ಹುರಿವ ಯಮಗೊಲೆಗಳುಕ್ಕೆ ಸಾಯರಾಜದಲೆ (ಕೃಕಂ. ೦-೦೯-೯). [ಯಮ + ಕೊಲ್ಲೆ]

ಯಮಜ (ನಾ). ೧. ಆವಳಿ. ೨. ಯಮಧರ್ಮರಾಯನ ಮಗ : ಯುಧಿಷ್ಠಿರ : ಯಮಜನೊಳ್ ಪುದುವಾಬ್ಧಿ (ಗದಾಯು. ೪-೦೦). [ಸಂ.]

ಯಮತಾತ (ನಾ). ಯಮನ ತಂದೆ ; ಸೂರ್ಯ : ಪೂತಾತ್ಮ ಮುನಿಹೃದಯಪನಮಾತ ಯಮತಾತ . . . ಸಂಗಮೇಶ್ವರ ಓತು ರಕ್ಷಿಸೆನ್ನಂ (ಕ್ರಿಕಂ. ೯-೦). [ಸಂ.]

ಯಮದಂಡ (ನಾ). ೧. ಯಮನ ಆಯುಧ. -ಗದೆ : ಮತ್ಪ್ರಭವಧ ಪ್ರಚಂಡ ಯಮದಂಡವದೇಂ ಮಾಣ್ಬುದೆ ಪಿಪೀಲಿಕಾವಧವಿಧಿಯಂ (ಜಗಂ. ೩-೩೪) ; ಯಮದಂಡಾ [ಣಾಣಾಂ. ತಾ]ಶನಿಪಾತದೊಪ್ಪು ಸಮಿಯಂ ಶ್ರೀಸಿಂಹಸೇನಪ್ರತಾಪಮನುಗ್ರಾಜಿಯೊಳ್ಕುಂದು ಕೆಡು ಬಬ್ಬಿಯಂ ವ್ಯಾಘ್ರೈಕಮಾತ್ಸಾತ್ಸ್ಯನವಮಾಲಾಭದಿಂ . . . ಬಾ ಬ್ಯ ರಿ ಳಿ ಯೊ ಳ್ ವೀರಾಂಭೂಪಾಲಕರ್ (ಶಾಂಪ್ರ. ೩-೫) ; ಯಮದಂಡಮಂ ಪೊಲ್ವ ಗದೆಯುಂ ಕೊಂಡು ಮತ್ತೆ ಪುರುತಸುತಂ ಮೇಲ್ವಾಯ್ದು ಬರಲ್ (ಕೃಪಾಪಾ. ೬-೧೯). ೨. ಯಮನು ಕೊಡುವ ಶಿಕ್ಷೆ ; ಸಾವು ; ಕಂಡು ಲಿಂಗವನು ಪೂಜಿಸವಗೆ ಯಮದಂಡ ಕಾಣಯ್ಯ (ಸರಾಶ. ೦೫೯). [ಸಂ.]

ಯಮದಶಮ (ನಾ). [ಯೋಗ] ಅಷ್ಟಾಂಗಯೋಗಗಳಲ್ಲಿ ಮೊದಲನೆಯದಾದ ಯಮದ ಹತ್ತು ಪ್ರಕಾರಗಳು : ℙ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಕ್ಷಮೆ, ಧೃತಿ, ದಯೆ, ಆರ್ಜವ, ಮಿತಾಹಾರ ಮತ್ತು ಶೌಚ : ವಿಸ್ತರಿಸುವೆವು ಯಮದಶಮಗಳ ವಂಶ್ಯ ತಿಳಿಯಲಹಿಂಸೆ ಸತ್ಯಾಸ್ತೇಯದಾ ಬಳಿಕ ತನಯ ತಿಳಿಯಾ ಬ್ರಹ್ಮಚರ್ಯವು ಕ್ಷಮೆಯುಂ ಧೃತಿ ದಯೆ ಆರ್ಜವವು ಅನುದಿನದಿ ಮಿತಭೋಜನವು ಶೌಚಾದಿಗಳು ಯಮವಹವು (ಗಗಣಾ. ೦೦-೬೬). [ಸಂ.]

ಯಮದೂತ (ನಾ). ೧. ಪ್ಯತ್ಯುದೇವತೆಯ ಆಜ್ಞಾನುಸಾರವಾಗಿ ಜೀವಗಳನ್ನು ಯಮನ ಆಸ್ಥಾನಕ್ಕೆ ಎಳೆದೊಯ್ಯುವ ದೂತ ; ಯಮದೇವನ ಆಳು : ಕಣಕಗಳ್ ನೆಲನಂ ಬಿಡೆ ನಟ್ಟು ಸುಳುಟರಸುವಂ ನಡೆಯಿಸಿದುವ ಯಮಪುರಕ್ಕೆ ಯಮದೂತರವೋಲ್ (ತಂಂಚಾಪು. ೦೬-೮೨); ಲಿಂಗವ ಪೂಜಿಯು ಮಾಡಿ ಜಂಗಮವ ಕಂಡುದಾಸೀನವ ಮಾಡಿದರೆ . . . ಲೋಕದ ಕರ್ಮಿಗಳಿಗೆ ಮಾಡಿದ ಯಮದೂತರ ದಂಡವೆಂಬುದು (ಬಸಪು. ೪೨೬) ; ಯಮದೂತರು ಬಂದು ಎಳೆದಾಗ . . . ಪುರಂದರವಿಠಲನ್ನ ನಾಮವು ಕಾಲವಾಗೋ ಸಮಯಕ್ಕೆ ಬರುಪುದೇನಯ್ಯ (ಪುರಂದ. ೨-೦೫೫-೩). ೨. (ಆಲಂ) ಸ್ಫೂಲವಾಗಿಯೂ ಒರಟಾಗಿಯೂ ಇರುವ ವ್ಯಕ್ತಿ ; ದಾಂಡಿಗ. [ಸಂ.]

ಯಮದ್ವಿತೀಯೆ (ನಾ). ಕಾರ್ತಿಕ ಶುದ್ಧ ಬಿದಿಗೆಯಂದು ಸೋದರಿಯರು ಅಣ್ಣತಮ್ಮಂದಿರನ್ನು ಬರಮಾಡಿಕೊಂಡು ಸತ್ಕರಿಸುವ ಹಬ್ಬ ; ಭಾವಬಿದಿಗೆ : ಯಮಧರ್ಮ ತನ್ನ ಸೋದರಿಯಾದ ಯಮಿ ಅಥವಾ ಯಮುನೆಯ ಮನೆಗೆ ಈ ದ್ವಿತೀಯೆಯ ದಿವಸ ಬಂದಿದ್ದ . . . ಈ ಕಥಾ ಸಂಬಂಧದಿಂದ ಇದು ಯಮದ್ವಿತೀಯೆಯೂಆಗಿದೆ (ಕಾಪ್ರಸ್ಮೃ. ೦೫೦). 'ಭಾವಬಿದಿಗೆ' ಪೋ. [ಸಂ. ಯಮದ್ವಿತೀಯಾ]

ಯಮಧರ್ಮ (ನಾ). = ಯಮ ೩ : ಜರುಗಿದ ಜಾವಂಗಳೆಲ್ಲ ಅನ್ಯ ನರೇನ ಬಲ್ಲರು ಯಮಧರ್ಮ ಬಲ್ಲ (ಭೂಕಂದ. ಧಾ. ೨-೨೨೬-೩) ; ಯಮಧರ್ಮ ನಮ್ಮಂಥವರಿಗೆ, ನಿನ್ನ ಹಾಗೆ ವ್ಯಾಯದ ಹುಡುಗರಿಗೆ ಅಲ್ಲ (ಜಾಪಟ. ೩೨೦). [ಸಂ.]

ಯಮಧರ್ಮರಾಯ (ನಾ). = ಯಮ ೩ : ಸುಮ್ಮನೆ ಕಾಲವ ಕಳೆವರೆ ಯಮಧರ್ಮರಾಯನ ದೂತರೆಳೆಯರೆ (ಕುಕಂದ. ಕಾ. ೨-೩ ೪೫೦) ; ಯಮಧರ್ಮರಾಯನ ರಾಜಧಾನಿಯಾದ ಸಂಯಮನೀನಗರವಲ್ಲಿಂದು ಏನೋ ಒಂದು ಬಗೆಯ ಅಪೂರ್ವಉತ್ಸಾಹ (ಪಕಂಚಾ. ೦೬೩). [ಸಂ.]

ಯಮನ (ನಾ). ಹತೋಟಿ : ನಿಗ್ರಹ. [ಸಂ.]

ಯಮನಂದನ (ನಾ). = ಯಮಜ ೨ : ಅನ್ನೆಗಮತ್ತ ಯಮನಂದನಂ ಮೂವರ್ ತಮ್ಮಂದಿರ ಬರವಂ ಕಾಣದೆ ಭಗ್ನಮನನಾಗಿ (ಪಂಪಾ. ೯-೧೦ ೪); ಯಮನಂದನಾದಿಗಳಳಲಿ ನುಡಿದರು ದೈತ್ಯಜಯಸಂಶಯದ ಭೇದದಲಿ (ಕುಪ್ರಾಕ. ೦೦-೨೦). [ಸಂ.]

ಯಮನಗರಿ (ನಾ). ಯಮನ ಪಟ್ಟಣ : ಯಮಪುರ : ಮಾನವೇಂದ್ರನು ಮಾಡಿದೊಡಾತನನೂನಲಕ್ಷ್ಮಿಯಲಕ್ಷ್ಮಿಯಾಯಿತ್ತಾ ನಗರಿಯಾ ಯಮನಗರಿ ಯೊಳಾಯ್ತು (ಪಪು. ೬೦-೬೫). [ಸಂ. ಯಮನಗರೀ]

ಯಮನಿ (ನಾ). ಒಂದು ಬಗೆಯ ಸಸ್ಯ : "ಗಿಣಗಿಣಿಕೆ ಯಮನಿ [ಶಾಣಾ. ವರುಣ]ಯಕ್ಕು" (ಪುಂಗಣಾ. ೪೨-೩೭).

[< ಸಂ. ಯವಾನೀ = ಅಜವಾನ]

ಯಮನಿಕೇತನ (ನಾ). ಯಮನ ನಿವಾಸ ; ಯಮಲೋಕ : ಈತನಂ ಯಮನಿಕೇತನಕ್ಕಟ್ಟುವುದೆ ನಯಂ (ಸಂಚಹಾ. ೨೪೨-೬). [ಸಂ.]

ಯಮಪಾಕುಳ (ನಾ). (ಅಲಂ) ಅತ್ಯಂತ ಹೇಸಿಗೆಯಾದುದು : ಬಾಪನೆ ಹೆಸರ ಒಸಡಿಯಂ ಕಟ್ಟಿಸಿ ತನ್ನ ಪಾತಕವ ಕೆಡಿಸಿಕೊಂಬವನ ದೇವರೆಂದು ಬೊಗಳುವ ನಾಲಗೆ ಬಾಯಿ ಯಮಪಾಕುಳ ತಪ್ಪದು (ಅಪಾಚಂ. ೦೫೯-೬೨೦); ನಿಮಗೆ ಕಟುಕುಳದೈವಂಗಳ ಸವನೆಂದು ಬಗುಳುವನ ಬಾಯಿ ಯಮಪಾಕುಳ ತಪ್ಪದು (ಗಡಾಣಾ. ೬೯ ೨). [ಯಮ + ಪಾಕುಳ]

ಯಮಪಾಶ (ನಾ). ಯಮನ ಹಗ್ಗ.— ಉರುಳು : ಯಮಪಾಶಂ ಪೆಗೆವಂಗೆ ಕಲ್ಪಲತೆ ಕೈಯಾಂತಂಗೆನಲ್ ಚಿಂತವಿಕ್ರಮಮುಂ ಜಾಗದ ಪೆರ್ಮೆಯುಂ ದೆಜೆಯುದನ್ಯಸ್ತೀ ಕಚಾಕರ್ಷಣ ಶ್ರಮಸಂಭೋಗ ವಿಳಾಸಮುಂ ಪೆಜೆವ ಬಾಹಾಸಂಗದಿಂ ಪಿಂಗದಿರ್ಕುಮೆ ವೀರಾಂಗನೆ (ಕುಂಚಪ್ರ. ೦೨-೬೦); ಯಮಪಾತದಿಂದ ತಪ್ಪಿಸಿಕೊಂಡವನು ಅಮರಸಾಗುವನು (ಪ್ರಚಾಣ. ೧೩). [ಸಂ.]

ಯಮಪುತ್ರ (ನಾ). = ಯಮಜ ೨ : ದೊರೆ ಯಮಪುತ್ರನಿರ್ದಿರವು ಪಾಯುಜನಿರ್ದಿರವು . . . ಮಂತ್ಪ್ರನಿವಾಸದೊಳ್ಗಮಂತೆ . ಮೆಯ್ದೆರದಿರೆ (ಗದಾಯು. ೬-೩೦). [ಸಂ.]

ಯಮಪುರ (ನಾ). ಯಮನ ಪಟ್ಟಣ ; ಸಂಯಮನೀನಗರ : ಈ ದೂರಯಜಮಂಗನುಂ ಮೃಷಮಾಮಂ ನೋಡೆಂದು ಧರ್ಮನಂ ಮೂದಲಿಸಲ್ ಸೋದಂ ಪುತ್ರಸನಜಸುಜ್ಪೋದನೆ ಯಾವುವರಕೆ ಮುಕ್ತಬಾಣಂ ದ್ರೋಣಂ (ಗದಾಯು. ೬-೨೩) ; ಮುಂದಣಸುರರು ಹಾದಿಯನು ಸಜುದರು ಯಮಪುರದತ್ತ ಪಯಣಕ್ಕೆ (ಶಾಖಾಣಾ. ೨೦-೦೭). [ಸಂ.]

ಯಮಬಲ (ನಾ). ಅಧಿಕವಾದ ಶಕ್ತಿಯುಳ್ಳವನು ; ಮಹಾಬಲಶಾಲಿ : ಯಮಬಲಸಪ್ಪ ಬಲಂ ... .ರಣೋದ್ಯಮನಾದಂ ಭುಜಬಲವದ್ದವಿಹಾರಿಗೆ ವಾಲಿಜಾಕ್ಷನಭಮುಖನಾದಂ (ಪಾಂಚಕ್ಕೆ. ೬-೪೩). [ಸಂ.]

ಯಮಬಾಧೆ (ನಾ). ೧. ನರಕದಲ್ಲಿ ಯಮನು ಕೊಡುವ ಹಿಂಸೆ. ೨. (ಅಲಂ) ತೀವ್ರವಾದ ಹಿಂಸೆ. [ಸಂ. ಯಮಬಾಧಾ]

ಯಮಭಾರ (ನಾ). (ಅಲಂ) ಅತ್ಯಂತ ಭಾರವಾದುದು : ಆಯಾಸದಿಂದ ಯಮಭಾರವಾಗಿತ್ತು ಮೈ (ಪಗಾಣ. ೬೨) ; ಎರಡು ಪಾಲಿನ ಹಸಿ ಮಿನು, ಯಮಭಾರ (ಪೂಸಕ್ಷ. ೫೦). [ಸಂ.]

ಯಮಮಾಯೆ (ನಾ). ಒಂದು ನರಕದ ಹೆಸರು: ಯಮಾನುಗ . . . ಅಚಿರಂತನವೆಂಬೈದು ಮಂತ್ರಿನರಕಂಗಳಿಂ ಸಂವನ್ನಮಾಗಿ ಯಮಮಾಯೆ ಯೆಂ[ಶಾಣಾಂ. ಮಾಯಾಖ್ಯಮೆಂ]ಬುರಸುನರಕವಿಹುದು (ಪಪಣ. ೦೫೨).

[ಸಂ. ಯಮಮಾಯಾ]

ಯಮಯಾತನೆ (ನಾ). ೧. = ಯಮಬಾಧೆ ೧. ೨.(ಅಲಂ) ತೀವ್ರವಾದ ಹಿಂಸೆ : ಕಡುಕಷ್ಟ : ಸೋಮ . . . ಯಮಯಾತನೆಯನ್ನು ಫಲ್ಲಕಚ್ಚಿ ಸಹಿಸಿಕೊಂಡು ಮೇಲೆದ್ದು ಕಾಲ ಮೇಲೆ ನಿಲ್ಲಲು ಮಹಾಪಾಪನ ವಮಿಡಿದನು (ಗಾಕಪಡು. ೧೨೬). [ಸಂ. ಯಮಯಾತನಾ]

ಯಮರಾಜ (ನಾ). = ಯಮ ೩ : ಯಮರಾಜನವದ್ಯತತೇಜಸಂ ಸರೋಜಾನನೆ ಜಾನಪಿ ಬರಿಸೆ (ಪಂಚಕ್ಷಾ. ೦-೦೦೯) ; ಯಮರಾಜಂ ತಂದೆ ಭೋಜಪ್ರಭವೆ ತನಗೆ ಜಾಮ್ಯ ಮಯ್ದುನಂ ವಾಸುದೇವಂ (ಗದಾಯು. ೪-೦೬). [ಸಂ. ಯಮರಾಜನ್]

ಯಮಲ. ಯಮಳ (ನಾ). ೧. ಜೊತೆ: ಜೋಡಿ: 'ಯಮಲಮರ್ದಲ' ಪದಾ. ೨. [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ. **ಯಮಳ** : ೧. " ಯಮಳಂ=ಜೋಡು " (ಶಾಕ್ಷ. ೦೪೪). ೨. ಯಮಳಾಂಘ್ರಿ ದ್ವಿಯಕ್ಷಿ ಪಕ್ಷ ನೇತ್ರಂ . . . ಎರಡಜ ನಾಮಂ (ಕೃಷಹಾ. ೪-೨). ೩. ಒಂದೇ ಹೆರಿಗೆಯಲ್ಲಿ ಮುಟ್ಟಿದ ಎರಡು ಮಕ್ಕಳು ; ಅವಳಿಜವಳಿ : ವಿಸಜಾತಪ್ರಿಯ ವೆಂತ್ರಿಗಳ್ ಬಳಬುತ್ತರ್ ಮಧ್ಯಂಗಳೊಳ್ ನಿಂದೊಡಿಂದು ಸುತಂ ವೀಕ್ಷಿಸೆ ಕೂಡುಗುಂ ಯಮಳಪುಂಜನ್ಮಂ ಬಲುಕ್ಕಲ್ಲಿ ಸೋಪು ಸಿತರ್ ನಿಲೆ ಬಾಂದ್ರಿ ನೋಡೆ ಯುಮಳಕ್ಕ್ರಾಜನ್ಮಂ (ಪಾಚಕ್ಷಿ. ೩-೦೩) : ಧರಿಸಿದಳು ದಿತಿ ಗರ್ಭವನು . . . ಕಾಲಾಂತರಕೆ ಪಡೆದಳು ಯುಮಳರನು (ಪಜಾಗ. ೩-೯-೦). ೪. ಅವಳಿಮಕ್ಕಳಾದ ನಕುಲ ಮತ್ತು ಸಹದೇವ : ಅಡವಿಯ ಕಾಯಂ ಪಣ್ಣುಮನೆಂದಿರ್ದಿ ತಿಂದಗಲದೆ ನಿಂದೀ ಯಮಳರಾವ ತೆಜಿಂ ನೋಯಿಸರಮ್ ನಿನ್ನ ನನ್ನಿಕಾಜನ ಮನಮಂ (ಪಂಚಕ್ಷಾ. ೭-೧೬) : ಮಧ್ಯಮದ ಪಾಂಡವನೈತರುತ . . . ಸರಸಿಯ ತೀರದಲಿ ಕೀಲಿಸಿದ ಪುಗ್ಗುಲಲಿ ಯಮಳರೊಜಗಿನೆ ಕಂಡು ಮನವಲಿ ತಮವ ಒತಿದನು (ಕುಣ್ಣ. ೨೩-೨೪). ೫. ಅವಳಿ ಮಕ್ಕಳಾದ ಲವ ಮತ್ತು ಕುಶ : ಜಾನಕಿಯ ಶುಶ್ರೂಷೆಯೊಳ್ಪಂದು ಋಷಿಯು ಚಿತ್ರಕ್ಕೆ ಬಂದು ಯಮಳರಿರೆ ಕಂಡು ಸಂಪ್ರೀತಿಯಿಂ ತಾಪಸೋತ್ತಮನಿತ್ತ ಸಮಸ್ತಾವಜರ್ಮಾಖಡ್ಗಂಗಳಂ (ಕೃಪಾಣ. ೫೦-೦). ೬. ಅಶ್ವಿನೀದೇವತೆಗಳು : ಎಲ್ಲೆ ಯಮಳರೆ. ತಾವು ಹೇಳುವ ವಿಧಾನವನ್ನು ಮಾಡುವುದು ತಮ್ಮಿಂದಲೇ ಸಾಧ್ಯ (ಋಷಾಣ. ೧೩). [ಸಂ.]

ಯಮಲಮರ್ದಲ. ಯಮಳಮರ್ದಳ (ನಾ). ಜೋಡಿಪದ್ಯಕ್ಕೆ ; ಪದ್ಯಕ್ಕೆಗಳ ಜೊತೆ : (೬). **ಯಮಳಮರ್ದಳ** : ಯುಮಳಮರ್ದಳ — ಜವಳದ್ಯಕ್ಕೆ (ಕಬಿಚ. ೨೯೨ ಕೃಟೀ). [ಸಂ.]

ಯಮಲಿ (ನಾ). ಬಟ್ಟೆಯ ಎರಡು ತುಂಡುಗಳಿಂದ ರಚಿಸಿದ ಪೋಷಾಕು.—ಉಡುಪು. [ಸಂ. ಯಮಲೀ]

ಯಮಲೋಕ (ನಾ). ಯಮಧರ್ಮರಾಯನ ಲೋಕ : ನಾನು ಯಜ್ಞ ಬಲಿಯಾಗಿ ಯಮಲೋಕಕ್ಕೆ ಬಂದಿದ್ದೇನೆ (ಕಚಂಚಾ. ೦೬೨). [ಸಂ.]

ಯಮಸಮಾಧಿ (ನಾ). [ಯೋಗ] ಇಂದ್ರಿಯನಿಗ್ರಹದಿಂದ ಕೂಡಿದ ಸಮಾಧಿ : ಯಮಸಮಾಧೀಕರಂ ಯಮಸಮಾಧಿಯಿನೀಶ್ವರನಿಂ ವರಂ ವರಂ ಸಮನಿಪ ಬಾಣನೀ ಸುರರ್ಗ ಹೃದ್ಗತಬಾಣನೆ ಬಲ್ದಿಂ (ಪಗಾ. ೦-೬೨). [ಸಂ.]

ಯಮಸುತ (ನಾ). = ಯಮಜ ೨ : ಯಮಸುತನಣ್ಮ ಸತ್ಯೆಯೆನುತುಂ ನಿಶಿತಾಸ್ಯಮನುರ್ಚಿಕೊಂಡು ವಕ್ಷಮನಿರದಜ್ಜೊತೆ (ಪಂಚಕ್ಷಾ. ೦೨-೦೦೬) : ಯಮಸುತನಿಂಬುಕಿಯ್ವನೆಮಗಿನ್ನು ಮೊಡಂಬಡು ಕಂದ ಸಂಧಿಯುಂ ಸಮ ಗೊಳಿಸಲ್ಕೆ ಸಂಜಯನನಟ್ಟುವೆ (ಗದಾಯು. ೪-೦೩) ; ಯಮಸುತನ ರಾಜಗಕ್ಷಯಮಹನವನಿತ್ತೆ (ಗಪಣ. ೦೪೬-೨). [ಸಂ.]

ಯಮಹರ (ನಾ). ಯಮನನ್ನು ಜಯಿಸಿದವನು ; ಶಿವ ; ಅಸಮಾನೇತ್ರನು ಯಮಹರನು ಮೃತ್ಯುಭಯಹರನು (ಜಪಣ. ೧೬-೨೩). [ಸಂ.]

ಯಮಳ 'ಯಮಲ' ನೋ.

ಯಮಳಕಂಟಕ (ನಾ). ಒಂದು ಬಗೆಯ ಸಸ್ಯ : " ಯಮಳಕಂಟಕಃ— ಮುಂಡಗಳ್ಳಿ " (ಓಪಂ. ೧೩೨). [?]

ಯಮಳಮರ್ದಳ 'ಯಮಲಮರ್ದಲ' ನೋ.

ಯಮಳೆ (ನಾ). (ವಾಂತಿಯೊಡನೆ ಬರುವ) ಒಂದು ಬಗೆಯ ಬಿಕ್ಕಳು : ಆಹಾರವ ತೆಗೆದುಕೊಳ್ಳುವಲ್ಲಿ ಏಮನಾಕಾರವಾಗಿ ಅಗುವ ಬಿಕ್ಕಳು ಯಮಳೆ ಎನಿಸಿಕೊಳ್ಳುವುದು (ಪಚಕ್ಕ. ೨೪೦). [ಸಂ. ಯಮಲಾ]

ಯಮಾನುಗ (ನಾ). ಒಂದು ನರಕದ ಹೆಸರು : ಯಮಾನುಗ . . . ಶೀಘ್ರ ಅಚಿರಂತನವೆಂಬೈದು ಮಂತ್ರಿನರಕಂಗಳಿಂ ಸಂವನ್ನಮಾಗಿ ಮಾಯಾಖ್ಯ ವೆಂಬುರಸುನರಕವಿಹುದು (ಪಪಣ. ೦೫೨). [ಸಂ.]

ಯಮುನಾನುಜೆ (ನಾ). ಯಮುನಾ ನದಿಯ ಹೆಸರು : "ಯಮುನಾನುಜೆಯೆನಲು ಯಮುನೆಯಕ್ಕುಂ" (ಶುಂಗಣಾ- ೦೨೨-೦೦)·

[ಸಂ. ಯಮುನಾನುಜಾ]

ಯಮುನಾಸೆ (ನಾ). ಯಮುನೆ ದಿಕ್ಕು : ದಕ್ಷಿಣದಿಕ್ಕು : ಅಮರಾಸೆಯುನಜಹರಿ ಧನು ಯಮುನಾಸೆಯಂ ವೃಷಭ ಕನ್ಯಕಾಮಕರಂ . . . ಅಳ್ಗುಂ (ಜಾಕಟ- ೦-೨೮). [ಯಮ + ಆಸೆ]

ಯಮಿ$_1$ (ನಾ). ಇಂದ್ರಿಯನಿಗ್ರಹ ಮಾಡಿದವನು ; ಸಂಯಮಿ : ತಪಸ್ವಿ: ಯಮಿಗಳುಮಂ ಮೋಹಿಪ ವಿಮ್ಮುಮಾಯೆ ಮೋಹಿಸದೆ ಗೊಂಪರಂ (ಜಗಂ. ೬-೬೩) ; ಯಮಿಗಳ್ ವಿಶಾಖದತ್ತಪ್ರಮುಖರ್ . . . ತೊಳಗಿದರ್ (ಪರ್ಶ್ವ- ೦೩-೦೪) : ಯಮಿಗಳ ಅಂಗಳಕಸಮಂ ಸಮಯುಂದಪ್ಪದೆ ತೊಡವುವು ಚಮರೀಮೃಗಂ (ಶುಲ್ಲಣಾ. ೩ ೫೯). [ಸಂ. ಯಮಿನ್]

ಯಮಿ$_2$ (ನಾ). ಯಮುನಾ ನದಿ. [ಸಂ. ಯಾಮಿ]

ಯಮುನಾನದಿ (ನಾ). ೧. ಭಾರತದ ಪವಿತ್ರವಾದ ಒಂದು ನದಿಯ ಹೆಸರು : ಯಮುನಾನದೀತರಂಗಮಾಸಮಂಕಿ ವನಲತೆಯು ಮನೆಗಳಂ ಸೋಂಕಿ ವನ ಭ್ರಮಣಪರಿಶ್ರಮಮಂ ಮುನ್ನೆವೆ ಕಳೆದುದು ಬಂದಡೋದು ಮಂದಶ್ವಸನಂ (ಹಂಚಾ. ೫-೭೩) ; ಯಮುನಾನದಿಯೊಳ್ಮಾರ್ದೊಳೆವಮ್ಮ ತಾಂಶು ಮರೀಚಿಜಾಳಮೆಂಬಿನೆಗಂ ತದ್ಯಮುನೆಯ ಕಚಮಂ ಪಿಕ್ಕಿದಳವಿನ ನುಸಿಸರದಿಂ ವಧೂವರನೆಯೊರ್ವಳ್ (ಕಾಕ್ಕಪ. ೯-೨೩). ೨. ಈಡಾ ಎಂಬ ನಾಡಿಯ ಹೆಸರು ; ಚಂದ್ರನಾಡಿ : ವಾಮಭಾಗದ ಈಡಾನಾಮಿಯೇ ಚಂದ್ರನಾಡಿಯೆಂದು ಯಮುನಾನದಿ [ಜಾಣಾ- ಯಮುನ ನಾಡಿ] ಎಂದು ಶೇಳ್ಳಡುವುದು (ಕಾಂಡೇ. ೨೨೯-೩೯). [ಸಂ. ಯಮುನಾನದೀ]

ಯಮುನೆ (ನಾ)· ೧. = ಯಮುನಾನದಿ ೧ : ಗಿಣಿಂದಿ ದಿನಕರಾತ್ಮಜೆ ಯುಮಾನುಜೆಯೆನಲು ಯಮುನೆಯಕ್ಕುಂ" (ಶುಂಗಣಾ- ೦೨೨-೦೦) ; ಯಮುನೆಯ ಮಧ್ಯದಲಿ . . . ಸರಸತಿಯ ಸಂಗಮದಲಿ ಮೆರೆಯುವ ತ್ರಿವೇಣಿಯೆನಿಸುವ ತೀರದಲ್ಲಿ ಪಟುತರುಛಾಯೆಯಲ್ಲಿಹುದು ದೇವಋಷಿ ವ್ಯೂಹಗಣ (ಕ್ಷೇಂಪ್ರ ೧೨- ೩-೧೪-೨). ೨. = ಯಮುನಾನದಿ ೨ : ಈಡೆಯೆ ಯಮುನೆ ಪಿಂಗಳೆಯೆ ಗಂಗೆಯು (ಕ್ಷೇಭ. ೪-೪-೦). ೩. ಪುರ್ಗೆಯ ಒಂದು ಹೆಸರು. [ಸಂ. ಯಮುನಾ]

ಯಮೆ (ನಾ). ಒಂದು ಬಗೆಯ ಬಳ್ಳಿ : "ಅಶ್ವಪಟ—ಕೊಸರಿ. ಯಮೆ" (ಟಿಪ್ಪ. ೩). [?]

ಯಯು (ನಾ). ೧. ಕುದುರೆ : "ಅರ್ವಾ . . . ತುರಂಗಃ· ಯಯುಃ, ಘೋಟಕಃ, ಹಯಃ· ವಾಹಃ – ಈ ೧೪ ಕುದಿರೆ" (ಪಂಚಯು. ೭೨-೨೮೨). ೨. ಅಶ್ವಮೇಧಯಾಗಕ್ಕೆ ಅರ್ಹವಾದ ಕುದುರೆ ; ಯಜ್ಞಾರ್ಶ್ವ : "ಯಯುವೆಂಬುದಶ್ವಮೇಧದ ಹಯಮುಂ ಸಾಮಾನ್ಯ ಹಯಮುಮಕ್ಕುಂ" (ಪಕ್ಷ್ಮಕೀ- ೦೧೦-೦೩೧). [ಸಂ.]

ಯಲ್ಲಕ (ನಾ)· ಆತುರ ; ಕಾತರ ; ಉತ್ಕಂಠೆ : ಯಲ್ಲಕಂ ಜಗುಬ್ಲುಮ್ಮ ಮಾರಿಕೆಯೆಬ್ಬು ಮೇಣ್ಶಶಿಲೇಬೆಯಂ ಮೆಲ್ಲನಂಚಿತ ಲಜ್ಜೆಯಿಂ ನಡನೋಡರ್ (ಕಾಕ್ಕಪ- ೬-೬೬). [< ಸಂ. ಆಪಲ್ಲಕ]

ಯವ (ನಾ). ೧. ಒಂದು ಬಗೆಯ ಗೋದಿ ; ಜವೆಗೋದಿ : ಮೃಣಾಳ ನಾಳದಿಳ್ ಸಮೆದ ಸರಿಗೆಗಂಕಣಾಂಗಳುಮಾ ಯವಕಳಿಕೆಗಳೊಳ್ ಸಮೆದ ಕಟಿಸೂತ್ರಮುಮಂ . . . ತೊಟ್ಟು (ಶಂಚಾ- ೪-೬೫). ೨. ಉದ್ದವನ್ನು ಅಳೆಯುವ ಒಂದು ಪ್ರಮಾಣ : ಅಂಗುಲದ ಎಂಟನೆಯಿಂ ಒಂದು ಭಾಗ : ಯೂಕಮೆಂಟಾಗಲೊಂದು ಯವವೆನಿಸುವುದು. ಆ ಯವವೆಟ್ಟಾಗಲೊಂದುತ್ತಮ ಮಾನಾಂಗುಳಮೆನಿಸುವುದು (ಚೀಕ- ೩೨೦) : ಎಂಟು ಜೂಗಳಿಂದ ಒಂದು ಯವ (ದಪ– ಮಧ್ಯ) ಎಂಟು ಯವಗಳಿಂದ ಒಂದು ಅಂಗುಲವಾಗುತ್ತದೆ (ಕ್ಷೇಪ- ೩೮೬). ೩. ಒಂದು ದೇಶದ ಹೆಸರು : ಅಳಿ ಜೋಳ ವರಾಳ ಯವ ಬಂಗಾಳ . . . ವಿದರ್ಭಧರಣೀಪಾಲಪತಿ ಸಂದಣಿಸಿದುದು ಸಾಕೇತನಗರಿಯಲಿ (ಕವರಾ- ೦-೭ ೦೪). ೪. [ಭೌತವಿ] ಮಧ್ಯದಲ್ಲಿ ಬಾಗುಳ್ಳ ಗಾಜಿನ ಬಿಲ್ಲೆ ; ಅಂತರ್ಮಕ್ಕ. ಬಹಿರ್ಮಕ್ಕ ಅಥವಾ ಪೀನಮಧ್ಯವಾದ ಗಾಜು ; ಲೆನ್ಸು : ಗಾಜಿನ ಕೆಲಸ ಮಾಡುವವರು ಯವಗಳನ್ನು (lenses) ಹೊಂದಿಸಿ . ಪದಾರ್ಥಗಳು ದೊಡ್ಡದಾಗಿ ಕಾಣುವ ಒಂದು ಉಪಾಯವನ್ನುಂಟರು (ಗಪ್ರ. ೦೦೨). ೫. [ಸಾಮುದ್ರಿ] ಅಂಗೈ ಮೇಲೆ ಜವೆಗೋದಿಯಾಕಾರದಲ್ಲಿ ಇರುವ ಸುಮೈವಸೂಚಕವಾದ ಚಿಪ್ಪೆ. ೬. [ಜ್ಯೋತಿ] "ಅಕೃತಿದೋಷಗಳಲ್ಲಿ ಒಂದು [ಲಗ್ನ ಮತ್ತು ವಿಳನೆಯ ಸ್ಥಾನಗಳಲ್ಲಿ ಪಾಪಗ್ರಹಗಳೂ ನಾಲ್ಕು ಮತ್ತು ಹತ್ತನೆಯ ಸ್ಥಾನಗಳಲ್ಲಿ ಶುಭಗ್ರಹಗಳೂ ಇರುವುದು|" (ಜಾತಕ- ೫೦-೬೮೯) : ಉಭಯಪೊಳಸ್ಪದೊಳ್ ನಿಲೆ ಶುಭಗ್ರಹವಿಂಗ್ರಗಿಣಂ ಚತುರ್ಥಕರ್ಮದೊಳಿರೆ ವಜ್ರಯೋಗಮದು ತದ್ವಿಪರೀತತೆದುಂ ಯವಂ (ಜಾತಕ- ೦೬-೬). ' ಯವಯೋಗ ' ಪರಾ. [ಸಂ.]

ಯವಕ (ನಾ)· ೧· = ಯವ ೧ : (೪). ೨. (ಜವೆಗೋದಿಯ ಬೂದಿಯಿಂದ ಸಿದ್ಧಪಡಿಸುವ) ಒಂದು ಬಗೆಯ ಔಷಧಿದ್ರವ್ಯ : ಪೆಟ್ಟುಪ್ಪು : "ಯವಜಃ· ಯವಕಃ, ಯವಾಹ್ವಾ .. ಈ ಮೂಜಿಂ ಯವಕ್ಷಾರ" (ಟಿಪ್ಪ- ೦೩೦). [ಸಂ.]

ಯವಕಾರ (ನಾ)· ಒಂದು ಬಗೆಯ ಸಸ್ಯ (?) : "ಕಾಸಹಾ – ತಾಳೀಸ ಪತ್ರೀ· ಯವಕಾರ· ಎಲಹುರಿ" (ಟಿಪ್ಪ- ೨೯). [?]

ಯವಕೆ (ನಾ)· = ಜವ ೧ : "ಯವ್ಯಂ· ಯವಕ್ಯಂ. ಪಷ್ಟಿಕ್ಯಂ– ಸಿನ್ನ ಕ್ರಮವಾಗಿ . . . ಯವ ಭೂಮಿ ಯವೆಗಳು· ಯವಕೆಗಳು· ಪಷ್ಟಿಕಗಳು ಬೆಳೆಯುವ ಕ್ಷೇತ್ರವಾಗಿದಯೋ ಅದರ ಪೆಸರುಗಳು" (ಸಿದ್ಧಾಂ- ೨೩೩).

[ಸಂ. ಯವಕ]

ಯವಕ್ಷಾರ (ನಾ)· (ಜವೆಗೋದಿಯ ಬೂದಿಯಿಂದ ಸಿದ್ಧಪಡಿಸುವ) ಒಂದು ಬಗೆಯ ಔಷಧಿದ್ರವ್ಯ; ಪೆಟ್ಟುಪ್ಪು : "ಯವಭಸ್ಮೋದ್ಭವಂ. ಯವಕ್ಷಾರ" (ಟಿಪ್ಪ- ೦೩೦) ; ಹಿಪ್ಪಲ್ಯಾದಿಗಣದ ಕಷಾಯವನ್ನು ಯವಕ್ಷಾರ ಬೆರಸಿ ಸೇವಿಸೆ ಶ್ಲೇಷ್ಮಜ್ವರ ಪರಿಹಾರವಾಗುವುದು (ಗಪ್ರ- ೮೯). [ಸಂ.]

ಯವಜ (ನಾ)· = ಯವಕ್ಷಾರ : " ಯವಜಃ· ಯವಕಃ· ಯವಾಹ್ವಾ.. ಈ ಮೂಜಿಂ ಯವಕ್ಷಾರ" (ಟಿಪ್ಪ- ೦೩೦)· [ಸಂ.]

ಯವನ (ನಾ)· ೧· ವೇಗ; ಶೀಘ್ರತೆ. ೨. ವೇಗವಾಗಿ ಓಡುವ ಕುದುರೆ. ೩. ವಿದೇಶೀಯನಾದ ವ್ಯಕ್ತಿ ; ಪರಂಗಿಯವನು : "ಯವನಃ = ಪರಂಗಿ" (ಶಾಕ್ಕ- ೦೩೩). ೪. ಗ್ರೀಸ್ ದೇಶದವನು ; ಗ್ರೀಕ್ : ಇದರಲ್ಲಿ ಯವನರು· ಕಾಂಭೋಜರು· ಪಲ್ಲವರು . . . ಆಂಧ್ರರ (x ೪೮) ಹೆಸರು ಬರುವುದರಿಂದ ಇದು ಕ್ರಿ. ಪೂ. ೩ನೆಯ ಶತಮಾನದ ಒಂದ ರಚಿತವಾಗಿರಬೇಕೆಂದು . . . ಅಭಿಪ್ರಾಯಪಡುತ್ತಾನೆ (ಭಾಚಿ- ೩೨). ೫. ತುರುಕ ; ಮುಸಲ್ಮಾನ : "ತುರುಷಂ ತುರಃಷ್ಕಂ· ಯವನ [ಜಾತಕ- ದಾವ]ನೆನೆ ಜೋನೆಗಂ" (ಶುಂಗಣಾ- ೦೦೩ ೬) ; ಈ ಪೀರ ಯವಕನನ್ನು ಯವನ ಯುದ್ಧಕ್ಕೆ ಕರೆದುಕೊಂಡು ಹೋಗುವೆನು (ಕಾಸಾಬವಾ. ೦೦). ೬. ಒಂದು ಬಗೆಯ ಧೂಪದ್ರವ್ಯ : "ಯವನ.– ಸಜ್ಜರಸ. ಲವ" (ಟಿಪ್ಪ- ೦೩೦)· ೭. (ಅಲಂ) ಅಧರ್ಮಿ: ಶಿವೆಯಿಲ್ಲದ ವ್ಯಸನಾದಿ ಯವನ (ಪಕ್ಷ್ಮಕೀ- ೪. ೦೦೫-೨೭೬). [ಸಂ.]

ಯವನಕ (ನಾ)· ವಿದೇಶೀಯನಾದ ವ್ಯಕ್ತಿ : ಯವನಕ– ಸಾಗಲವೆಂಬ ಹೆಸರಿನ ಯವನರ ನಗರವುಂಟು (ಶಾಕ್ಕತ- ೩೨೦೨- ೦೬). [ಸಂ.]

ಯವನಾನಿ (ನಾ)· ೧· ಯವನರ ಲಿಪಿ. ೨. ಪರಂಗಿ ಹೆಂಗಸು ; ಯವನ ಸ್ತ್ರೀ : " ಯವನಾನೀ = ಪರಂಗಿತಿ " (ಶಾಕ್ಕ- ೦೩೩)·

[ಸಂ. ಯವನಾನೀ]

ಯವನಾಲ. ಯವನಾಳ (ನಾ). ೧. ಒಂದು ಬಗೆಯ ತೃಣಧಾನ್ಯ : (ಕ). ೨. ಜೋಳ. ಯವನಾಳ : ೨. " ಯವನಾಳವಾ ಕಳಮೆಸ ಜೋಳಮಕ್ಕುಂ" (ಶುಂಗಣ. ೦೦೦-೩). [ಸಂ.]

ಯವನಾಳ ' ಯವನಾಲ ' ನೋ.

ಯವನಿ (ನಾ). ೧. ಯವನರ ಹೆಂಗಸು : ಯವನೀಮುಖಾಬ್ಜಮಧು ಪಾಯಿವಮಂ ಸೇನಾನಿ ಕಳೆದಂ (ಪಾಂಚಾ. ೦೦-೨೨) ; ರುಂರದ ರುಳ್ಳರಿಯ ಜವನಿಕೆಯಾಂತು ನರ್ತಿಸುವ ಯೌವನಾಯುವನಿದು ಕರದ ಪೂಜಾರಿಗೆಯಂತೆ ಸಮಸೋಜ್ಜಪಮದಾ . . . ಮುಂಗಾರ್ ಮೊದಲ್ (ಕ್ರಿಶಾಪ. ೬೪೦ ೭೬). ೨. ಪರದೆ ; ಜವನಿಕೆ ; ತೆರೆ. [ಸಂ. ಯವನೀ]

ಯವನಿಕೆ (ನಾ). ೧. = ಯವನಿ ೧. ೨. ಪರದೆ ; ತೆರೆ ; ಜವನಿಕೆ : " ಆಪಟೀ . . . ಯವನಿಕಾ- ತಿರಸ್ಕರಿಣೀ- ಈ (೫) ತೆರೆ" (ಪಂಡಿ. ೫೨-೦೫೧) ; ನವಮೇಘಧ್ವನಿ ಪ್ರಸ್ಫರದ್ಧ್ವನಿ ಲಸತ್ತಾರಾಳಿ ಪುಷ್ಪೋಪಹಾರವಿಲಾಸಂ ರುಚಿರಾಂಬುವಂ ಯವನಿಕಾವಿನ್ಯಾಸಂ (೦೦೫. ೬-೬೨) ; ಗಗನಗಂಗಾತರಂಗೋತ್ಪತ್ತ್ಯವನೀವನಿಪೋ ವಿಪ್ರುಷ್ಟಿಕರ್ಮಾರಯ[ಪಾಣಾ. ಜ]ವನಿಕೆಯೋ . . . ಎನೆ ನೆಗದುವಳಿಕ್ಕಾಪಂಗಳಂ ಮೇಘ ಜಾಲಂ (ಪಂಕ್ರತ್ತಿ. ೯-೩೦). [ಸಂ. ಯವನಿಕಾ]

ಯವಫಲ (ನಾ). ೧. ಬಿದಿರು : " ವಂಶಃ . . . ಯವಫಲಃ, ವೇಣುಃ, ಮಸ್ಕರಃ. ತೇಜಸಃ—೧೦ ಬಿದುರು ಹೆಸರುಗಳು " (ಶಿಶ್ಯಾ. ೦೪೯). ೨. ಕೊಡಸಿಗೆ ; ಕುಟಜ ವೃಕ್ಷ. ೩. ಪ್ಲಕ್ಷವೃಕ್ಷ. ೪. ಈರುಳ್ಳಿ. [ಸಂ.]

ಯವಯೋಗ (ನಾ). [ಜ್ಯೋತಿ] " ಲಗ್ನ ಮತ್ತು ಸಪ್ತಮ ಸ್ಥಾನಗಳಲ್ಲಿ ಪಾಪಗ್ರಹಗಳೂ ಚತುರ್ಥ ಮತ್ತು ದಶಮ ಸ್ಥಾನಗಳಲ್ಲಿ ಶುಭಗ್ರಹಗಳೂ ಇದ್ದರೆ ಯವಯೋಗ " (ಜಾತಕ. ೦೩-೩ ೩೩೮). ' ಯವಯೋಗಜ ' ಪರಾ. [ಸಂ.]

ಯವಯೋಗಜ (ನಾ). [ಜ್ಯೋತಿ] ಯವಯೋಗದಲ್ಲಿ ಹುಟ್ಟಿದವನು : ಮಮಜಂ . . . ಯವಯೋಗಜಂ ಶಿಶುತಯೊಳ್ ವೃದ್ಧತ್ವದೊಳ್ ದುಃವಿ ಧಾಜನನಕ್ಕುಂ (ಜಾತಕ. ೦೩-೦೩). [ಸಂ.]

ಯವಸ (ನಾ). ಮೇವು ; ಹುಲ್ಲು : " ಘಾಸಃ . ಯವಸಃ-ಈ ೨ ದಮಂ " (ಪಾಣಾ. ೩೫-೩೩) ; ವನದಲಿ ಪುಲಿಯರಲು ಗೋಧವ ಕುಲಕ್ಕೆ ಯವ ಸಾಂಬುಗೋಸುವೆ (ಶಾಕ್ಯಾ. ೩-೨). [ಸಂ.]

ಯವಹಿಂಸ್ರೆ (ನಾ). ಒಂದು ಬಗೆಯ ದ್ವಿಪದೀದ್ರವ್ಯ : ಯವಹಿಂಸ್ರೆ. ಜನ್ಮದ ಈ ಎರಡನ್ನು ಜೀನುತುಪ್ಪದಲ್ಲಿ ಹಚ್ಚಲು ಆರುಳುಗಣ್ಣು ಮಾಣ್ಗುಂ (ಪಕ್ಕೆ. ೬೩). [?]

ಯವಾಗು (ನಾ). ಬಾರ್ಲಿ ಮುಂತಾದ ಧಾನ್ಯದ ಅಥವಾ ಅನ್ನದ ಗಂಜಿ : " ಗಂಜಿ ಯವಾಗು " (ಪಕ್ಕು.ಪಾ. ೨೨-೨) ; " ಯವಾಗುವೆಸೆ ಗಂಜಿ " (ಶುಂಗಣ. ೬೬-೦). [ಸಂ. ಯವಾಗೂ]

ಯವಾಗ್ರಜ (ನಾ). = ಯವಕ್ಷಾರ : " ಯವಕ್ಷಾರಃ, ಯವಾಗ್ರಜಃ . ಪಾರ್ಶ್ವಃ – ೩ ಯವಕ್ಷಾರದ ಹೆಸರುಗಳು " (ಶಿಶ್ಯಾ. ೦೪೯). [ಸಂ.]

ಯವಾನಿ (ನಾ). ೧. ಅಜವಾನೆ ; ಓಮ : "ಜೋಪಾರನಾಮಾಂ ಯವಾನಿಯೆನಲ್" (ಶುಂಗಣ. ೦೦-೨೯) ; " ಯವಾನೀ-ಓವ. ಯದಾಳಿ. ಅಜಮೋದ " (ಶಿಪಂ. ೦೩೦). ೨. ತುರುಕರ ಹೆಣ್ಣು ; ಯವನ ಸ್ತ್ರೀ : " ಯವಾನೀ-ತುರುಕಿತಿ " (ಶಾಶ್ಯ. ೦೩೩). [ಸಂ. ಯವಾನೀ]

ಯವಾನಿಕೆ (ನಾ). = ಯವಾನಿ ೧ : " ಅಜಮೋದಾ, ಅಗ್ರ್ಯಸಂಧಾ, ಬ್ರಹ್ಮದುರ್ಲಾ, ಯವಾನಿಕಾ-ಳಿ ಅಜಮೋದದ ಹೆಸರುಗಳು. ಓಮು ಕಾಳು " (ಶಿಶ್ಯಾ.ಪಾ. ೦೪೩). [ಸಂ. ಯವಾನಿಕಾ]

ಯವಾಸ (ನಾ). ೧. ಒಂದು ಬಗೆಯ ಸಸ್ಯ : ಸಸಿಗೆನ್ನಿ ; " ಯವಾಸಃ, ಯವಾಸಃ . . . ದುರಾಲಭಾ – ೧೦ ತೀಟಕಸಂಧಿ ಪೆಸರುಗಳು " (ಶಿಶ್ಯಾ.ಪಾ. ೦೪೩). ೨. ಒಂದು ಬಗೆಯ ಖದಿರವೃಕ್ಷ. ೩. ಬೇವಿನ ಮರ : " ಯವಾಸಃ – ನೀಮ " (ಶಿಪಂ. ೦೩೦). [ಸಂ.]

ಯವಿಷ್ಠ (ನಾ). (ಅಣ್ಣತಮ್ಮಂದಿರಲ್ಲಿ) ಎಲ್ಲರಿಗಿಂತ ಕಿರಿಯವನು : ಕಿರಿಯ ಸಹೋದರ. [ಸಂ.]

ಯವೀಯಾಂಸ (ನಾ). = ಯವಿಷ್ಠ : ಯವೀಯಸ್-ಯವೀಯಾಂಸನು, ಯವೀಯಸ್ಸು, ಯವೀಯನು (ಕೂಪುಗ. ೦೦೭). [< ಸಂ. ಯವೀಯಸ್]

ಯವ್ವೆ (ನಾ). ಜವೆಗೋದಿಯನ್ನು ಬೆಳೆಯುವ ಭೂಮಿ : " ಜವೆಯ ಕೆಯ್ ಯವ್ವೆಯಕ್ಕುಂ " (ಶುಂಗಣ. ೫೯-೩) [< ಸಂ. ಯವ್ಯ]

ಯವ್ವೆ (ನಾ). ೧. ಒಂದು ಬಗೆಯ ಗೋದಿ : ಜವೆಗೋದಿ : " ಜವೆ ಯಿಸಲು ಜವೆ" (ಶುಂಗಣ. ೦೦೨-೩) : ಆಕಳಿಗೆಮ್ಮೆಯಂ ದು [ಪಾಣಾ. ಜ] ಪೆಗೆ ಗೋದುವೆಯಂ ತುರಗಕ್ಕೆ ಕತ್ತೆಯಂ . . . ಪ್ರತಿ ಮಾಡಿದನೋರ್ವ ಜೀಯನೆಂದೇಕೆಪೊ ಮೂಢಪೂರ್ವರ್ (ಸಹ. ೦೦ ೦೨೦) ; ಯ [ಪಾಣಾ. ಜ]ವೆ ದಿವ್ಯೌಷಧಿ ಪಾರಿಜಾತಕುಸುಮಂ ಸಿದ್ಧಾರ್ಥಮಾರ್ಷಾಕ್ಷತಂ . . . ಎಂಬಿವಱಂ ತೆಕ್ಕನೆ ತೀವಿ ಪೊಂಬಿರಿಯಣಂ ಚೆಲ್ವಾದುದು (ಪಾಂ. ೦೦-೧೪) ; ಯವೆಮಸ್ಸು ಚಳಿ ಅಕ್ಕಿ ಮಾಡಿ ಕುದುರೆಗೆ ತಿನ್ನಿಸುವುದು (ಅಕ್ಷಿ. ೩೨-೦). ೨. ಉದ್ದವನ್ನು ಅಳೆಯುವ ಒಂದು ಪ್ರಮಾಣ: ಅಂಗುಲದ ಎಂಟನೆಯ ಒಂದು ಭಾಗ : ಮೂಱಿಂತಿಲಕೊಂದು ಯವೆ . . . ಆ ಯವೆ ಮೂಱ ಸೇರಿಸೆ ತದಂಗುಲವ ಪಾಲ್ಕ ಕೂಡಲು ಮುಷ್ಟಿ (ಪಾಸ್ಕ. ೩೩-೯) ; ಆ ಯೂಕವೆಟ್ಟಾದರೆ ಒಂದು ಯವೆ ಯೆನಿಸಿಕೊಂಬುದು (ಪಚಿ. ೬೮-೨). ೩. ಒಂದು (ಗೋದಿ ಕಾಳಿನಷ್ಟು) ತೂಕದ ಪ್ರಮಾಣ : ಯವೆ ಸಾಲ್ಕು ಐದಾರು ಸುಸಿಸಿದ ಗಾತ್ರದಿಂದವ ಪವಕೆ ತೂಕ ತಂದಿಲ ಪ್ರಮಾಣದೊಳಿರಲು ಪವೆ ಮೂಲ್ಕ ಪನ್ನೆರಡು ಪದಿನಾರು ವಿಂಶತಿಯೊಸುವಲ್ಲಿ ಬೇಳ್ಕುದಪು (ಪಕ್ಷಾ. ೫-೦೬).

[ಸಂ. ಯವ]

ಯವ್ಯ (ಗು). ೧. ಜವೆಗೋದಿಯನ್ನು ಬೆಳೆಯಲು ಯೋಗ್ಯವಾದ.– . ಹಿತವಾದ. ೨. ಜವೆಗೋದಿಯನ್ನು ಬಿತ್ತಿದ. (ನಾ). ೩. ಜವೆಗೋದಿ ಯನ್ನು ಬೆಳೆಯುವ ಭೂಮಿ : " ಜವಯ ಕೆಯ್ ಯವ್ಯವೆಂಬುದು " (ಶುಂಗಣ. ೫೬-೩); ಲೀಲೆಯನಿದಱ ನೆಲಂ ಪರಿವಾಲಿದುವ ಕಣ್ಗ ನಾಡ ಮೌದ್ಗಂ ಮಾಷ್ಯಂ ಶಾಲೇಯಂ ವ್ರೀಹಿಯಂ ತೈಲೀನಂ ಕೌದ್ರವೀಣ ಮೌಮ್ಯಂ ಯವ್ಯಂ (ಪಂಕ್ರತ್ತಿ. ೦-೧೨). [ಸಂ.]

ಯವ್ವನ (ನಾ). ಪರಯ ; ಪ್ರಾಯ ; ತಾರುಣ್ಯ : ನಿಮ್ಮ ರೂಪು ಯವ್ವನಮುಂ ಲಾವಣ್ಯಮುಮಂ ಕಂಡೆಂ (ಪಜಾ.ಪಾ. ೬೬-೦೦); ಆ ಯವ್ವನ ದೊಳಪರ ಜಂತಂ ಕರಂ ಪೊಸತು (ಪಜಿ. ೫೯. ೯-೨). ' ಜವ್ವನ ' ಪರಾ. [< ಸಂ. ಯೌವನ]

ಯವ್ವನಕಾಲಿ (ನಾ). ತರುಣ ; ಯುವಕ : ದೊಡ್ಡವಂಶದಲ್ಲಿ ಹುಟ್ಟಿ ಯವ್ವನಕಾಲಿಗಳಾಗಿರುವರನೇಕರು . . . ಅಮಿತವ್ಯಯ ಮಾಡಿ ಕಷ್ಟಕ್ಕೀಡಾಗುವರಲ್ಲವೇ ? (ಕಾಪ. ೨, ೨). [< ಸಂ. ಯೌವನಶಾಲಿನ್]

ಯವ್ವನಿಗ ' ಜವ್ವನಿಗ ' ನೋ.

ಯವ್ವನಿಗತನ (ನಾ). ಪರಯ ; ತಾರುಣ್ಯ : ಯವ್ವನಿಗತನದಲ್ಲಿಯೇ ಆ ಜಾತಿಗೆ ರಾಜಭವೆಂದೇ ಅಭಿಧಾನವಮಹುದು (ಪಂಕ್ರತ್ತಿ. ೦೦-೨).

[ಯವ್ವನಿಗ (< ಜವ್ವನಿಗ) + — ತನ]

ಯವ್ವನೆ ' ಜವ್ವನೆ ' ನೋ.

ಯಶ (ನಾ). ೧. ಖ್ಯಾತಿ ; ಕೀರ್ತಿ : ಪೊಬಲೊಳ್ ನೆಗಟ್ಟ ಪಂಡಿತರ್ಕಳೊಡನೆ ವಾದಂಗೆಯ್ದು ಗೆಲ್ದು ದಶದಿಶೆಗಳೊಳ್ಗೆಂ ತನ್ನ ವಾಂಮಿತ್ಯದ ಪಸರಮಂ ಪಸರಿಸಿ (ಪಜಾ.ಪಾ. ೬೪.೨೦): ಕಾರ್ಯಕ್ಕೆ ಯಶವು

ದೊಳೆತಾಗೆ ಸಂತೋಷಾಗರದಲ್ಲಿ ಮಿಯುವುದು . . . ಮಂಕು ಮಾನವ ಬುದ್ಧಿ (ಶಬ್ದಾಸ. ೦೦೬). ೨. ಗೆಲವು : ವಿಜಯ : ' ಯಶಂಬಡೆ ' ಪರಾ. [ಸಂ. ಯಶಸ್]

ಯಶಂಬಡೆ (ಕ್ರಿ). ಗೆಲವನ್ನು ಗಳಿಸು : ವಿಜಯಿಯಾಗು : ಒಡನೆಯುವ ರೊಂದೆ ಮಾರ್ಬಲವೆಡಮುಡಗದೆ ಪೊಗಲ್ ತಾಗಿ ತಲ್ಕಿಱುದು ಯಶಂ ಬಡದಂ ಗೊಗ್ಗಿ (ಪಂ. ೪೭.೫೯.೬-೭ : ಪು. ೨೭೬).

ಯಶಃಪಟಹ (ನಾ). ಒಂದು ಬಗೆಯ ವಾದ್ಯ : ಢಕ್ಕೆ : ಮದನಯಶಃ ಪಟಹಧ್ವನಿ ಪುದಿಯೆ ವಿಯಚ್ಚರನ ಕರ್ಣಮಂ ಹೃದಯಕ್ಕೆಯ್ದಿದುದಿಲ್ಲ ದಿವ್ಯವಚನಂ (ಸಂಂಚಿತಾ. ೯-೧೪). ' ಯಶೋಡುಂದುಭಿ ' ಹೋ. [ಸಂ.]

ಯಶಃಪಿಂಡ (ನಾ). ೧. ಕೀರ್ತಿಯ ಸಮೂಹ. ೨. ಅತಿಶಯವಾದ ಕೀರ್ತಿಯನ್ನು ಪಡೆದವನು : ವಿಪುಳಯಶಃಪಿಂಡಂ ಪುಣ್ಯಪುಂಜಮಾ ಕ್ಷತ್ರಧಾಮಧಾಮಂ ತಾನಾ ನೃಪಸುತಂ (ಜಾಪ. ೪-೧೪). [ಸಂ.]

ಯಶಸ್ಕರ (ಗು). ೧. ಕೀರ್ತಿಯನ್ನು ತರುವಂತಹ ; ಶ್ರೇಯಸ್ಕರವಾದ. (ನಾ). ೨. ಶ್ರೇಯಸ್ಕರವಾದುದು : ಅಪವಾದವಿನಿಪುದು ಕಡುತಾಪ ವಾದರು ಅದು ಪುಗಳಿ ಯಶಸ್ಕರವು (ಜಾಮಾಕ. ೨೨೩-೦೫). [ಸಂ.]

ಯಶಸ್ಕೀರ್ತಿ (ನಾ). [ಜೈನ] ಏಪ್ಪತ್ತೈರಡು ನಾಮಪ್ರಕೃತಿಗಳಲ್ಲಿ ಒಂದು; ಜೀವನಿಗೆ ಲೋಕದಲ್ಲಿ ಕೀರ್ತಿ ಹಬ್ಬುವಂತೆ ಮಾಡುವ ಪ್ರಕೃತಿ : ಅನ್ಯತರ ವೇದನೀಯ . . . ಬಾದರಯಃಶ್ಕೀರ್ತಿರುಚ್ಚೈರ್ಗೋತ್ರ ತೀರ್ಥಕರ ನಾಮಂಗಳೆಂಬ ಪದಿಮೂಱುಂ ಪ್ರಕೃತಿಗಳುಮಂ ನಿರ್ಮೂಲಂ ಕೆಡಿಸಿ (ಜಾತ. ೦೬-೧೪ ಪ) ; ವೇದನೀಯ . . . ಯಶಸ್ಕೀರ್ತ್ಯಯಶಸ್ಕೀರ್ತಿ ನಿರ್ಮಾಣ ನೀಚೈರ್ಗೋತ್ರಂಗಳೆಂಬೆಟ್ಟುತ್ತರದುಂ ಪ್ರಕೃತಿಗಳಂ ದೂರೀಕೃತಂ ಮಾಡಿ (ಸಂಂಚಿತಾ. ೦೬-೧೦ ಪ). [ಸಂ.]

ಯಶಸ್ತಂಭ (ನಾ). ಗೆಲುವಿನ ಸ್ಮಾರಕವಾಗಿ ನಿಲ್ಲಿಸುವ ಕಂಬ ; ವಿಜಯಸ್ತಂಭ : ನೀಮುಂ . . . ಇಲ್ಲಿಯ ಪೀಡುವಿಟ್ಟು ನಿಜಿಸಲ್ವೇಟ್ಟುಂ ಯಶಸ್ತಂಭಮಂ (ಕಪ್ಪ. ೬-೧೪).

ಯಶಸ್ವಿ (ಗು). ೧. ಶ್ರೇಯಸ್ಸನ್ನು ಪಡೆದ ; ಹೆಸರುವಾಸಿಯಾದ. ೨. ಅತ್ಯುತ್ಕಮವಾದ. (ನಾ). ೩. ಗೆಲುವನ್ನು ಪಡೆದವನು ; ಜಯಿಪ್ರದವಾವುದು : ನಮ್ಮ ಚಲಚಿತ್ರಗಳಲ್ಲಿ ಹತ್ತು ಹದಿನೈದಕ್ಕೆ ಕಡಿಮೆ ಹಾಡುಗಳಿಲ್ಲದಿದ್ದಲ್ಲಿ ಅವು ಯಶಸ್ವಿಯಾಗಲು ಸಾಧ್ಯವೇ ಇಲ್ಲ (ಶಾಪಿಪ. ೨೩೩). [ಸಂ. ಯಶಸ್ವಿನ್]

ಯಶಸ್ಸು (ನಾ). ಕೀರ್ತಿ ; ಖ್ಯಾತಿ : ಯಶಃ ಯಶಸ್ಸು ; ತೇಜ, ತೇಜಸ್ಸು ; ವಯ, ವಯಸ್ಸು (ಕಾಪಿ. ೧೬ ಪೃಟೀ) : ಕವಿಗಳು ಬೆಳಗಿದ ರಾಜರ ಯಶಸ್ಸು ಸ್ಥಿರವಾಗಿರುತ್ತದೆ (ಶಾಪಿ. ೧೧೩). [ಸಂ. ಯಶಸ್]

ಯಶೋದುಂದುಭಿ (ನಾ). ಯಶಸ್ಸನ್ನು ಸಾರುವ ವಾದ್ಯ : ವಿಜಯ ದುಂದುಭಿ : ಪ್ರಕಟ ಯಶೋದುಂದುಭಿ ಸಿಂಹಾಸನಪುರದುಂದುಭ ಪತಿಚರಣಕಮಳಭೃಂಗಂ ಪಂಪ (ಜಾತ. ೦-೪೬).

ಯಶೋದೆ (ನಾ). ೧. ಯಶಸ್ಸನ್ನು ಕೊಡುವವಳು. ೨. ಕೃಷ್ಣನ ಸಾಕುತಾಯಿ ; ನಂದಗೋಪನ ಹೆಂಡತಿ: ಮತ್ತೊಂದು ಸಮಯದೊಳ್ ಪಾಲ್ಬುಡಿಯಲೊಲ್ಲದಾಟಿಗಟ್ಟುವ ದಾಮೋದರನಂ ಯಶೋದೆ ಕಂಡು (ಭಗ. ೪-೩೦ ಪ) : ಯಶೋದೆ ನಿನ್ನ ಕಂಗಳ್ ವಿಶ್ವರೂಪವೆ (ಪುಕೊಂದ. ೪-೦೦೪ ಪ್ರಾ). ೧. ೨ : ಅಬ್ಧಿಶಯನಂ ಗಡ ನಂದನನೀ ಮನೋಹರ ಕ್ರೀಡನನೆತ್ತಿಕೊಂಡು ಮೊದೆಯೂಡಿದ . . . ಭವತ್ಸುತಿ ಯಶೋದೆ ಕುಲಕ್ಕೆ ಯಶೋದೆಯಲ್ಲಳೇ (ಭಗ. ೩-೧೪). [ಸಂ. ಯಶೋದಾ]

ಯಶೋಧನ (ನಾ). ಕೀರ್ತಿಯೇ ಧನವಾಗಿರುವವನು ; ಮಹಾಖ್ಯಾತಿ ವಂತ : ಬಲುವನನಾಜಶ್ರಾಂತನಂ ಯಶೋಧನನಿಜಾಯಂ (ಪಾಂಚಕ. ೪-೩೦).

[ಸಂ.]

ಯಶೋಧರ (ನಾ). ೧. ಕೀರ್ತಿಯನ್ನು ಹೊಂದಿದುದು. ೨. [ಜೈನ] ಅರುವತ್ತುಸಾವಿರಂ ಇಂದ್ರಕಗಳಲ್ಲಿ ಒಂದು : ೧. ಜಿನತು. ೨ ವಿಮಳಂ . . . ೫೬. ಯಶೋಧರಂ . . . ಅಜವತ್ಸಮೂಱು ಇಂದ್ರಕಂಗಳ ಪೆಸರ್ಗಳ್ (ಕಕ್ಕಕ್ರ. ೨೮೩). [ಸಂ.]

ಯಶೋಧಿಪ (ನಾ). ಅಧಿಕವಾದ ಖ್ಯಾತಿಯನ್ನು ಪಡೆದವನು : ಕುಲಜ ನೀತನೆ ಪಂಡಿತನೀತನುಜ್ವಲಯಶೋಧಿಪನೀತನೆ (ಕಬಾ. ೦-೦೩೬). [ಸಂ]

ಯಶೋನಿಧಿ (ನಾ). ಕೀರ್ತಿಗೆ ನೆಲೆಯಾದವನು ; ಮಲ್ಲಪಾರ್ಯನು ಮುದಾತ್ತಯಶೋನಿಧಿಪುತ್ರಮಾರ್ಯನುಂ ಸವಿ ತಪದಂತೆ ಪೇೞ್ದಿದರ್ (ಜಾಂಪಿ. ೦-೦೩) : ಆ ಯಶೋನಿಧಿಗೆ ವಲ್ಲಭೆಯಾದಳ್ ವಾಯುವೇಗೆ (ಪರ್ಶು. ೩-೦೩). [ಸಂ.]

ಯಶೋನಿಳಯ (ನಾ). ಯಶೋನಿಧಿ : ಪ್ರಕಟ ಯಶೋನಿಳಯರ್ ತಾರ್ತಿಕಚೂಡಾಮಣಿಗಳ್ . . . ಆಕಳಂಕದೇವರ್ (ಶುಕಾಪ್ರ. ೦-೩೪).

[ಸಂ. ಯಶೋನಿಲಯ]

ಯಶೋಭಾಗಿ (ನಾ). ಕೀರ್ತಿಯುಳ್ಳವನು : ಕಾದಿ ರಾಜಸುತರೊಳ್ . . . ಏಂ ಭೀಷ್ಮಂ ಯಶೋಭಾಗಿಯೋ (ಪಂಪಣಾ. ೦ ೩೪).

[ಸಂ. ಯಶೋಭಾಗಿನ್]

ಯಶೋರ್ಥಿ (ನಾ). ಶ್ರೇಯಸ್ಸನ್ನು ಬಯಸುವವನು : ಧರ್ಮ ಪುತ್ರನಪ್ಪ ಯುಧಿಷ್ಠಿರ ಧರ್ಮಾರ್ಥಿಯುಂ ಯಶೋರ್ಥಿಯುಮಾಗಿ ರಾಜ ಸೂಯಯಾಗಂ ಮಾಡಲುದ್ಯೋಗಗೆಯ್ದು (ಸಂಸೋ. ೨೩೩-೩೦).

[ಸಂ. ಯಶೋರ್ಥಿನ್]

ಯಶೋವಂತ (ನಾ). ಕೀರ್ತಿಶಾಲಿಯಾದವನು : ಯಶೋವಂತನಾಗಂ, ಅಪ್ರತಿಮ ವೀರನಾಗಂ, ಮಹಾತ್ಮನಿಗಿಯಾಗಂ (ಜಾಂಕಣ. ೧೧).

[ಸಂ. ಯಶೋವತ್]

ಯಶೋವತಿ (ನಾ). ಖ್ಯಾತಿಯಿಂದ ಕೂಡಿದುದು ; ಕೀರ್ತಿಯಿಂದ ಕೂಡಿದುದು : ದ್ವಾರವತಿಯು ಯಶೋವತಿಯಾದ ಮಹಾಮ್ಲೇ ವಾಯಿತು (ಜಾಂಕಣ. ೦೨೦). [ಸಂ. ಯಶೋವತೀ]

ಯಷ್ಟಿ (ನಾ). ೧. ಕೋಲು ; ಬಡಿಗೆ : ತ್ರಿಶೂಲಂ ಕೊಡೆಯ ಕಾವಗೆ ಖಟ್ವಾಂಗಂ ಯಷ್ಟಿಯಾಗೆ . . . ಮಹಾವೈದ್ಯನಾಗಿ (ಪಂಚ. ೬-೦೭ ಪ) ; ದರ್ಪದಿಂ ಮುಂದುಗಾಣದ ಗಾಂಪರಿನಿವರ್ ಪಲವರೆಂದು ಸಮ್ಮುಕ್ಕಾವ್ಯಮಂ ರಚಿಸಿದಿರ್ದರೇ ದಿವ್ಯಮಂತ್ರಂ ಕೆರ್ದು ಯಷ್ಟಿ ವಾಗ್ಬಂಧನಂಗಳ್ ತಮಗಿರೆ (ಪಕ್ಕಣಾ. ೦-೩೪). ' ಅಂಧಯಷ್ಟಿ ' ಪರಾ. ೨. ಕಂಬ ; ಸ್ತಂಭ. ೩. ಗದೆ : "ಯಷ್ಟಿಃ, ಪಟ್ಟಿಶಃ . . . ಗದಪದಂಡಃ, ಚಕ್ರಂ –ಇವು ಮೊದಲಾಗುಳ್ಳವು ಕೆಯ್ಮಂಗಳ ಭೇದಂಗಳ್" (ತಾಡಾಯು. ೭೯-೩೨೨) ; ಕುಮಾರನಂ ಯಷ್ಟಿ ಮುಷ್ಟಿ ಪ್ರಹಾರಾದಿಗಳಿಂ ಗೆಲ್ದಿರ್ದೊವನೆತ್ತಿಕೊಂಡು (ಜಾಮಾಕ. ೫೩-೩೩). ೪. ಬಾವುಟದ ಕಂಬ ; ಧ್ವಜಸ್ತಂಭ. ೫. ಕಾಂಡ ; ದಂಟು. ೬. ಮರದ ಕೊಂಬೆ.–ರೆಂಬೆ. ೭. ಕತ್ತಿಯ ಒಡಿ. ೮. ದಾರ ; ಎಳೆ. ೯. ಮರಣ ಹೊಂದಿದವರ ಜ್ಞಾಪಕಾರ್ಥವಾಗಿ ನಿಲ್ಲಿಸುವ ಸ್ಮಾರಕಸ್ತಂಭ. ೧೦. ಮುತ್ತು ಮೊದ ಲಾದುವುಗಳ ಸರ.–ಹಾರ : " ದೇವಸ್ತ್ರೈಂದಂ ಯಷ್ಟಿ ಶತಾವಚ್ಛಿನ್ನಂ " (ಜಸ್ತುತಾ. ೨೩-೩) ; ಕೈವಲ್ಯಬೋಧರಮಾ ಮೌಕ್ತಿಕಹಾರಯಷ್ಟಿ . . . ವಿದ್ವಾನಟ ಪಾಟಕಂ ವಲಿಗೆ ಮತ್ಕಾವ್ಯಸ್ಥಲೀರಾಗದೊಳ್ (ಪಂಗಾಪ್ರ. ೦-೩). ೧೧. ದೇವಪೂಜೆ ; ದೇವತಾರ್ಚನೆ : " ಇಷ್ಟಿಃ, ಯಷ್ಟಿಃ . . . ಯಾಜ್ಯಂ – ಈ ೧೦ ದೇವರ ಪೂಜೆ" (ಶಾಕ್ಕ. ೦೩೦). ೧೨. ತೆಳು ವಾದುದು ; ತೆಳ್ಳಗೆ ಇರುವುದು : 'ಅಂಗಯಷ್ಟಿ' ಪರಾ. ೧೩. ಒಂದು ಬಗೆಯ ಔಷಧೀಸಸ್ಯ ; ಅತಿಮಧುರ : " ಯಷ್ಟಿಃ – ಯಷ್ಟಿಮಧುಕ" (ವೈವಿ. ೦೩೦). [ಸಂ.]

ಯಷ್ಟಿಕೆ (ನಾ)· ೧· ಕೋಲು ; ಬಡಿಗೆ. ೨· (ಒಂದೆಳೆಯ) ಮುತ್ತಿನ ಹಾರ : ' ಏಕಯಷ್ಟಿಕೆ ' ಪರಾ. [ಸಂ. ಯಷ್ಟಿಕಾ]

ಯಷ್ಟಿಮಧು (ನಾ)· ಒಂದು ಬಗೆಯ ಔಷಧೀಸಸ್ಯ. [ಸಂ.]

ಯಷ್ಟಿಮಧುಕ (ನಾ)· = ಯಷ್ಟಿಮಧು : "ಮಧೂಕಯಷ್ಟಿಃ, ಮಧುಯಷ್ಟಿಕಾ — ಈ ಪೆರಮುಂ ಯಷ್ಟಿಮಧುಕ" (ಓಷ· ೮೨೦); ದ್ರಾಕ್ಷಿ ಮಧು ಖಂಡಶರ್ಕರೆ ಗೋಕ್ಷೀರಂ ಯಷ್ಟಿಮಧುಕಮಿವೆ ಪಿತ್ರಪರಂ (ಅಶ್ವಾ· ೭-೧೩). [ಸಂ. ಯಷ್ಟಿಮಧುಕಾ]

ಯಷ್ಟ್ರು (ನಾ)· ಯಾಗ ಮಾಡುವವನು ; ಯಜ್ಞಕರ್ತ. [ಸಂ.]

ಯಸ (ನಾ)· ಒಳ್ಳೆಯ ಹೆಸರು ; ಕೀರ್ತಿ : ಯಸಕ್ಕೆವಲ್ಲಾತಂ (ಪ್ರಾಜ. ೫೫-೫ ; ೪೭-೪ ; ೪೮). 'ಜಸ' ಪರಾ. [< ಸಂ. ಯಶಸ್]

ಯಹೂದ್ಯ, ಯೆಹೂದಿ, ಯೆಹೂದ್ಯ (ನಾ)· ಪ್ಯಾಲಸ್ಟೈನ್ ಅಥವಾ ಇಸ್ರೇಲ್ ದೇಶದಲ್ಲಿ ವಾಸಿಸುವ ಒಂದು ಕುಲದ ಹೆಸರು ಮತ್ತು ಆ ಕುಲಕ್ಕೆ ಸೇರಿದ ವ್ಯಕ್ತಿ : ಪಶ್ಚಿಮದಲ್ಲಿ ಸುಮಾರು ಒಂದು ಲಕ್ಷ ಪಾರಿಸೀ ಜನರೂ ಕೆಲವುಂದಿ ಜೂಜನರೂ (ಯಹೂದ್ಯರೂ) ವಾಸವಾಗಿದ್ದಾರೆ (ಕೂಗೂಸೇ. ೭೧) ; ಮತ್ತೊಬ್ಬ ಯಹೂದ್ಯ ಕುಟುಂಬಕ್ಕೆ ಸೇರಿದವನು (ಕ್ಷಮಾ. ೫೫). **ಯೆಹೂದಿ:** ಯುನಾನಿಯರ ಮೂಗು ಒಂದು ತೆರನಾಗಿದ್ದಲ್ಲಿ ರೋಮನರ, ಯೆಹೂದಿಯರ, ನೀಗ್ರೋಗಳ ಮೂಗುಗಳು ಬೇರೆಬೇರೆ ಯಾಗಿರುತ್ತವೆ (ಪ್ರಬಕ್ಕ. ೨೨೦). **ಯೆಹೂದ್ಯ :** ಇದೂ ಯಹೂದ್ಯರೆ ಇವನೊಳೇನುವುಂಪರಾಧಂ ಕಾಣೆ (ಗಿರಿಕ್ಷಾ. ೩-೦೩೩) ; ಯಹೂದ್ಯರು, ಮುಸಲ್ಮಾನರು ಮತ್ತು ಕ್ರೈಸ್ತರು ಇವರ ವಿಷಾ ಅಳಿದ ಎಲ್ಲಾ ಜನಾಂಗದವರಲ್ಲಿ ಈ ಸಿದ್ಧಾಂತ ಪ್ರಚಾರದಲ್ಲಿತ್ತು (ಪ್ರಬಕ್ಕ. ೦೬೪).

[←ಹೀಬ್ರು. ಯಹೂದೀ ; ಲ್ಯಾಟಿನ್. ಇದೂಮ್ಯುಸ್./ಇಂ. ಜ್ಯೂ]

ಯಾ$_1$ ' ಯಾವುದು ' ಪರಾ.

ಯಾ$_2$ (ಅ)· ಅಥವಾ ; ಇಲ್ಲವೆ : ಅಂಥ ಪಾವತಿ ಯಾ ಸಮಾಧಾನವು ಗುಮ ಮುನಸಿಫರಿಂದ . . ನಪೂರು ಮಾಡಲ್ಪಡೆಯು (ಕ್ರಿಶಾಕ್ಷ. ೪೪). [←ಪಾರ. ಹಿಂ. ಮರಾ. ಯಾ]

ಯಾಂಡು (ನಾ). ವರ್ಷ ; ಸಂವತ್ಸರ : ಶ್ರೀರಾಜೇಂದ್ರಚೋಳದೇವರು ಯಾಣ್ಡು ೧೯ ದಾವೆದಿ ಸಕವರಿಷ ೯೫೩ನೆಯ . . . ಬೃಹಸ್ಪತಿವಾರದನ್ದು (ಕ್ರಿಶಾ. ೦೯೨೦. ೫೫-೬; ೧೦೩೦) ; ಶ್ರೀ ರಾಜೇಂದ್ರಚೋಳದೇವರ್ಗೆ ಯಾಣ್ಡು ಇಪ್ಪತ್ತ ನಾಲ್ಕಾವುದು (ಅ೪.೫. ೫.೬೦೦೮. ೦೯-೪; ೧೦೨೬). 'ಆಯಾಂಡು', ' ಏಡು ' . . ' ಮೊನೆಯೇಡು ' ಪರಾ.

[ದೇ.ತ ತಮಿ. ಯಾಣ್ಡು ; ಮಲ. ಓಣ್ಡು ; ತೆಲು. ಪಡು]

ಯಾಂತ್ರಿಕ (ಗು)· ೧. ಯಂತ್ರಕ್ಕೆ ಸಂಬಂಧಿಸಿದ. ೨. ಯಂತ್ರದಿಂದ ತಯಾರಾದ ; ಯಂತ್ರಸಿದ್ಧವಾದ. (ನಾ). ೩. (ಭೂತ, ಪಿಶಾಚಿಗಳ ಪೀಡಾ ಪರಿಹಾರಕ್ಕಾಗಿ) ಯಂತ್ರ ಬರೆದು ಕಟ್ಟುವಪಘಸು ; ಯಾಂತ್ರಿಕನ ಯಂತ್ರ ಮಂತ್ರ ಸಂಬಂಧದಿಂದ ಪಿಶಾಚಿಗ್ರಸ್ತನ ಪಿಶಾಚಿಯು ವಲಾಯನ ವಪ್ಪ ತೆಜನಂತೆ (ಪಪ್ರ. ೪. ೦೯-೨೦). ೪. (ಆಲಂ) ಯಂತ್ರದಂತೆ ಕೆಲಸ ಮಾಡುವಿಕೆ ; ಯಾವ ವಿವೇಚನೆಯೂ ಇಲ್ಲದಿರುವಿಕೆ : ಮೌಢ್ಯ ರೀತಿಯಲ್ಲಿ ಯಾಂತ್ರಿಕವಾಗಿ ನಡೆಯುವುದು ಶ್ರೀಕೃಷ್ಣನ ಯೋಗಮತವಲ್ಲ (ಕಾದ. ೦೦೬). [ಸಂ.]

ಯಾಕೂತ (ನಾ)· ೧. ಕೆಂಬಣ್ಣದ ರತ್ನ ; ಮಾಣಿಕ್ಯ ; ಪದ್ಮರಾಗ. ೨. ಬೂದಿ ಬಣ್ಣದ ರತ್ನ : ಯಾಕೂತವೂ ಜಪರ್ಣ ಸ್ಫಟಿಕರೂಪವಾದ ಸಾಧಾರಣ ಖನಿಜವು ; ಇದಕ್ಕೆ ಬೂದಿ ಬಣ್ಣವಿರುವುದು (ಖನಿಂಶಾ· ೬-೦೬). ೩. ನೀಲವರ್ಣದ ಹರಳು : ಇದರೊಳಗೆ (Quartz) ನೀಲವರ್ಣವ ವಿಶ್ರವಾಗಿದ್ದರೆ ಯಾಕೂತವೆನ್ನುವರು (ಖನಿಂಶಾ· ೬-೨೬೯). [←ಅರ. ಹಿಂ. ಮರಾ. ಯಾಕೂತ್ ; ಪಾರ್ಸಿ. ಯಾಖಿಂತ್]

ಯಾಕೆ ' ಏನ್$_2$ ' ಪರಾ.

ಯಾಗ (ನಾ). ೧. ಯಜ್ಞ ; ಕ್ರತು : ದಿವಿಜಾಪಗೆ ನೋಡ ಕೂಡ ಕರ್ದಡರ್ತಳೆಯಾರುದಾ ಯಮುನೆಗಗ್ಗದ ಯಾಗದ ಧೂಮದೀಟ್ಗೆಯೊಳ್ (ಪಂಪಭಾ· ೬-೩೬) ; ಮಿಗಡ ಯಾಗಕೆ ಸಕಲ ರಾಯರು ಪಗೆ (ಕಾಣ್ಮ. ೩-೩೨). ೨. ದೇವಪೂಜೆ ; ಭಗವದರ್ಚನೆ : "ಯಜ್ಞಃ, ಯಾಗಃ . . . ಯಾಜ್ಞಂ, ಈ ೧೦ ದೇವಪೂಜೆ" (ಶಾಕ್ಕ. ೦೬೪). [ಸಂ.]

ಯಾಗಕುಂಡ (ನಾ). ಹೋಮಕ್ಕಾಗಿ ರಚಿಸುವ ಅಗ್ನಿಯ ಕುಂಡ ; ಅಗ್ನಿಕುಂಡ ; ಯಜ್ಞಕುಂಡ : ಯಾಗಕುಂಡವನು ಬೇಗನೆ ಮಾಡಿ (ಕೃಚಾಸಿ· ೨೨-೪). [ಸಂ.]

ಯಾಗಗೆಯ್ (ಕ್ರಿ)· ಯಜ್ಞವನ್ನು ಮಾಡು : ಯಾಗಗೆಯ್ವಂ ಸ್ಥಪತಿಯಕ್ಕ (ಶುಂಗಣಾ . ೭೬-೦೪). [ಯಾಗ + ಕೆಯ್$_2$]

ಯಾಗದೀಕ್ಷೆ (ನಾ). ಯಜ್ಞ ಮಾಡುವುದಕ್ಕೆ ಮುಂಚೆ ಯಜಮಾನನಿಗೆ ಅಧಿಕಾರವನ್ನು ಕೊಡುವುದು ; ಯಜ್ಞದೀಕ್ಷೆ : ಯಾಗದೀಕ್ಷೆಯ ನೃಪ ಮಂತ್ರುವಾರಿಸ್ನಾತನಾಗಿ ಬಳಿಕ . . . ಹಯಮಂ ಕರಿಸಿ (ಕ್ಷತ್ರಾ· ೪೯-೦೨). [ಸಂ. ಯಾಗದೀಕ್ಷಾ]

ಯಾಗದ್ವೇಷಿ (ನಾ). ಯಜ್ಞಕ್ಕೆ ವೈರಿಯಾದವನು : ಯಜ್ಞವಿರೋಧಿಯಾದವನು: ಈಗ ಭವನೇ ಕೃಷ್ಣ ಯಾಗದ್ವೇಷಿಗಳು ಖಿರಿದಾಗಲಿವಗಿನ್ನೆ ಸಲೇ ವರಯಾದಭೂಯೂರ್ವರಕೆ ಸಂನ್ಯಾಸ (ಶಾಮ್ಮ. ೩-೨೩).

[ಸಂ. ಯಾಗದ್ವೇಷಿನ್]

ಯಾಗಧ್ವಂಸಕ (ನಾ). ಯಜ್ಞವನ್ನು ಹಾಳುಮಾಡುವವನು : ರಾಕ್ಷಸ ಇವ ನಿಸ್ಸಂಶಯನು ವಿಜಯವಲಿ ಯಾಗಧ್ವಂಸಕನ ನೆಱೆ ಮುಂಬಿವುಜಾಯುಪ ಕಾಕೆ ನಾನು (ಶಾಮ್ಮ. ೩-೨೨). [ಸಂ.]

ಯಾಗಪ್ಪ (ನಾ). ಕಲ್ಲನ್ನು ಸೀಳಲು ಉಪಯೋಗಿಸುವ ಉಳಿ : (ಕ). [?]

ಯಾಗಮಂಟಪ (ನಾ). ಯಜ್ಞಕಾರ್ಯಕ್ಕಾಗಿ ನಿರ್ಮಿಸಿದ ಚಪ್ಪರ : ಇಂದ್ರಪ್ರಸ್ಥಕ್ಕೆ ಉತ್ತರದಿಗ್ಭಾಗದೊಳ್ . . . ಯಾಗಮಂಟಪಮಂ ಪಮೆದು (ಪಂಚಾ· ೬-೪೬ ಪ). [< ಸಂ. ಯಾಗಮಂಡಪ]

ಯಾಗರಕ್ಷೆ (ನಾ)· ಯಜ್ಞಕಾರ್ಯವು ಸುಸೂತ್ರವಾಗಿ ನಡೆಯುವಂತೆ ಕಾವಾಡುವುದು ; ಯಜ್ಞರಕ್ಷಣೆ : ವರಮುನೀಂದ್ರರ ಯಾಗರಕ್ಷೆ ಬಲವಳಿಯುತಿರೆ (ಪಚಾ· ೬-೦೦). [ಸಂ. ಯಾಗರಕ್ಷಾ]

ಯಾಗವ್ರತ (ನಾ). ಯಜ್ಞದ ಆಚರಣೆ ; ಯಾಗಕರ್ಮ : ಆಹು ಯಾಗವ್ರತಕೆ ಭಂಗವ ತಹುದೆ ಜೀಯ (ಶಾಮ್ಮ. ೩-೨೬). [ಸಂ.]

ಯಾಗಶಾಲೆ (ನಾ)· ಯಜ್ಞಕಾರ್ಯ ನಡೆಯಲು ನಿರ್ಮಿಸುವ ಚಪ್ಪರ; ಯಜ್ಞಶಾಲೆ : ಪುರೋಹಿತಾಮಪಮಶದಿಂ ಪಲ್ಲಾವುದವಳತೆಯೊಳ್ ಯಾಗಶಾಲೆಯಂ ನೇರ್ಪಡಿಸಿ . . . ಯಾಗಂಗಳಂ ಸೆರೆಯಿಸುತಿರ್ದರ್ (ಅಜಾಕ್ಕ· ೫೬-೪). [ಸಂ. ಯಾಗಶಾಲಾ]

ಯಾಚಕ (ನಾ)· ೧. ಬೇಡುವವನು ; ಪ್ರಾರ್ಥಿಸುವವನು : ಯಾಚಕ ಪಾಚಕ . . . ಸಮಸ್ತಜನಕ್ಕಂ ಬೇಡಿದುದಂ ಕೊಟ್ಟು (ಶಾಂಚರಿ· ೬-೨೫ ಪ); ರತುನಭಂಡಾರವನು ತೆಗೆತೆಗಸಿ ಮನದಣಿಯೆ ಯಾಚಕರಿಗಿತ್ತುದನೆನಗೆ ಬಣ್ಣಿಸಲಳವೆ (ಶಾಮ್ಮ. ೯-೦೪). ೨. ತಿರುಕ ; ಭಿಕ್ಷುಕ : ಯಾಚಕ ನಡಿಸೆಂದು ಕನವರಿಸಿ ಯಾಚಿಸಲು ಪಾಚಿಕೊಂಡಂತೆ (ಪಪ್ರಾ. ೫೫೭). [ಸಂ.]

ಯಾಚಕತ್ವ (ನಾ)· ಬೇಡುವಿಕೆ ; ಯಾಚನೆ : ಸ್ಥಲಜ್ಞಾನ ಯಾಚಕತ್ವವು ಸ್ಥಲಭವಿತನ ಮುಟ್ಟಬಲ್ಲುದೆ (ಪೂ·ಅಪ್ರಾ. ೯-೩೨). [ಸಂ.]

ಯಾಚನಕ(ನಾ). = ಯಾಚಕ ೧ : " ವನೀಪಕಃ, ಯಾಚನಕಃ, ಮಾರ್ಗಣಃ, ಯಾಚಕಃ, ಅರ್ಥೀ — ೫ ಕೇಳುವವನ ಹೆಸರು ; ಬೇಡುವವನು " (ಕಾಶಾ·೦೬. ೫೫೬). [ಸಂ.]

ಯಾಚನೆ (ನಾ)· ಬೇಡುವಿಕೆ ; ಬೇಡಿಕೆ ; ಪ್ರಾರ್ಥನೆ : "ಅಧ್ಯೇಷಣಾ, ವಿಷಣಾ, ಯಾಞ್ಞಾ, ಯಾಚನಾ· ಪ್ರಾರ್ಥನಾ, ಆರ್ಥನಾ—ಈ ೬ ಬೇಡುಹ" (ಹೊಯ್ಸಳ· ೫೯-೨೦೩); ಪ್ರಯತ್ನದಿಂ ಯಾಚನೆಯಂ ಮಾಡಿ ಭಕ್ತಿಯಿಂದ ಬ್ರಾಹ್ಮಣರಿಗೆ ದಾನವ ಕೊಡು (ಶಕುತ. ೫೪-೦೬). [ಸಂ· ಯಾಚನಾ]

ಯಾಚಿತ (ಗು). ೧. ಬೇಡಿದ ; ಕೇಳಿಕೊಂಡ ; ಪ್ರಾರ್ಥಿಸಿದ. (ನಾ). ೨. ಬೇಡಿ ಪಡೆದುದು ; ಭಿಕ್ಷೆ : ಮೃತಮೆನೆ ಪಡೆಗುಂ ತಾಂ ಯಾಚಿತಮುಂ ಮೃತ್ಪಮೃತಶಬ್ದಮುಂ ಪಡೆಗುಮಯಾಚಿತಮುಂ (ಪಪ್ಪರಾ. ೦೪೮-೦೦೯). ೩. ತಿರುವೆ ; ಭಿಕ್ಷಾವೃತ್ತಿ. [ಸಂ.]

ಯಾಚಿತಕ (ನಾ). ಬೇಡಿ ಸಂಪಾದಿಸಿದುದು ; ಕೇಳಿ ಪಡೆದುದು : "ಯಾಚಿತಕರಂ, ಯಾಂಚಯಾ ಅಪ್ರ·—೨ ಕೇಳುವುದರಿಂದ ಹೊಂದಲ್ಪಟ್ಟದ್ದು' ಎರವು ತಂದದ್ದಕ್ಕೂ ಹೆಸರು" (ಶಿಷ್ಟಾ·೦೦· ೨೭೪). [ಸಂ.]

ಯಾಚಿಸು (ಕ್ರಿ). ಬೇಡಿಕೊಳ್ಳು ; ಯಾಚನೆ ಮಾಡು : ಅಲಸದೆ ಯಾಚಿಪುದಕ್ಕಂ . . . ಅರ್ಕರ್ ಪಾರ್ವರ್ (ಪಪಪ· ೦೦-೦೪); ನರರುಮಂ ಯಾಚಿಸದ ಭಾಷೆಯಿತರಜನಕೆ ಕೈಮುಗಿಯದದು ನಿಬ್ಬರದ ಭಾಷೆ (ಜಸಿತ· ೬-೬) ; ಯಾಚಿಪುದನಂಗಮುಂ ಸುತನನುಳುಹೆಂದೆಗೆ ಸೂಚಿಪುದನೀ ದ್ವಿಪಂ (ಕೃಪಣಾ· ೨೬-೪೯). [(ಸಂ· ಯಾಚನ) + — ಇಸು]

ಯಾಜ (ನಾ). ಯಜ್ಞ ಮಾಡುವವನು : ದ್ರೋಣಭಯದಲಿ ಸಕಲ ವಿಪ್ರಶ್ರೇಣಿಯರೆ ಯಾಜೋಪಯಾಜರು ಪ್ರಾಣನಿಸ್ಪೃಹರಾಗಿ ಮಾಡಿಸಿದರು ಮಹಾಕ್ರತುವ (ಭಾಣ್ಕ·. ೭-೭೦). [ಸಂ.]

ಯಾಜಕ (ನಾ). ೧. ಯಜ್ಞವನ್ನು ಮಾಡುವವನು : ಯಾಗಕರ್ತ. ೨. ಯಜ್ಞವನ್ನು ಮಾಡಿಸುವವನು : ಯಜ್ಞಪುರೋಹಿತ ; ಋತ್ವಿಕ್ಕು : ಯಾಜಕಂ ಕಾನಪ್ಪೆನದ್ಧರಕೆ (ಕೃಪಣಾ· ೫-೪೫); ಈರೆಯ್ವರ್ ಯಾಜಕರೋರೊಂದು ದೆಸೆಯೊಳ್ ಸಾಮಗಾನಮಂ ಪಾಡುತುಂ (ಶಾಪರ್ವ. ೦೭೭-೨); ೩. ಧರ್ಮಗುರು ; ಪೂಜಾರಿ : ನಿನ್ನ ಜನಪದವೆ ನಿನ್ನ ಯಾಜಕರವಗೆ ನಿನ್ನನೊಪ್ಪಿಸುವಂತ ನೀನೇಪ ಗೆಯ್ದಿ ಸಿ (ಗೂಡೂ.ಶಾ. ೫-೦೨೬). [ಸಂ.]

ಯಾಜನ (ನಾ). ೧. ಯಜ್ಞವನ್ನು ಮಾಡಿಸುವಿಕೆ ; ಯಜ್ಞ ಕಾರ್ಯಕ್ಕೆ ತೊಡಗಿಸುವಿಕೆ ; ಬ್ರಾಹ್ಮಣನು ಆಚರಿಸಬೇಕಾದ ಷಟ್ಕರ್ಮಗಳಲ್ಲಿ ಒಂದು : ಭವಿಷ್ಯದ್ವಿಜನ್ಮವರ್ಣಾಕರ್ಧ್ಯಯನಾಧ್ಯಾಪನ ದಾನಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ . . . ನಿಜಿಸಿ (ಆದಿ· ೪-೬೬ ಪ) ; ಯಜ[ಪಯಾ]ಜನಾಧ್ಯಯನಾಧ್ಯಾಪನ ದಾನ ಪ್ರತಿಗ್ರಹ ಷಟ್ಕರ್ಮನಿರತರುಂ . . . ಅಪ್ಪ ಶ್ರೀವನ್ನಹಾಗ್ರಹಾರಂ ಪುಲಿಯೂರಡೆಯ ಪ್ರಮುಖಾನಿರ್ವ್ಯಮ್ಮಹಾಜನಂಗಳ ದಿಟ್ಟಶ್ರೀಪಾದಂಗಳ ನಾರಾಧಿಸಿ (ಪ್ರಾಶಾ. V, ೪೪೮-೨೫ : 1097). ೨. ಅರ್ಚನೆ ; ದೇವಪೂಜೆ : " ಇಷ್ಟಂ . . . ಯಾಜನಂ . . . ಯಾಜ್ಯಂ—ಈ ೧೦ ದೇವಪೂಜೆ " (ಶಾಪಕ· ೦೩೦). [ಸಂ]

ಯಾಜಮಾನ್ಯ (ನಾ). ೧. ಯಜ್ಞಕರ್ತನಾಗಿರುವಿಕೆ : ಹುದಿದ ನವಘೃತಾನುಲೇಪದ ಹೊದೆದ ಕೃತ್ಸ್ನಾಜಿನದ ಹಸ್ತಾಗ್ರದಲೆಸೆವ ಸಾರಂಗಶೃಂಗದ ಯಾಜಮಾನ್ಯದಲಿ . . . ಅಂಕರ್ವೇದಿಗೈತಂದನು ಮಹಿಪಾಲ (ಭಾಣ್ಕ·. ೬-೨೪); ಯಾಜಮಾನ್ಯದೊಳೆಸವ ಭೂಪಾಲನಂ ಕಂಡು ವಾಜಿಗಳನೊಪ್ಪಿಸಿ ಪದಾಂಬುಜಕೆ ಪೊಡಮಟ್ಟೊಡೆ (ಕೃಪಣಾ· ೫೩-೨೯). ೨. ಒಡೆತನ ; ಯಜಮಾನಿಕೆ : ರಾಮಾಯಣದ ಕಾಲದಲ್ಲಿದ್ದ ರಾಜ್ಯಗಳೆಲ್ಲ ಕಂದೆಯ ಯಾಜಮಾನ್ಯವನ್ನುಳ್ಳ ಕುಟುಂಬದ ಮೂದರಿಯಲ್ಲಿ ಇದ್ದೀಥವೆ (ಜಾಕಥ· ೫೫) ; ಈ ಮನೆಯ ಸ್ವಾಮಿತ್ವ, ಯಾಜಮಾನ್ಯವೆಲ್ಲ ತನ್ನ ಪಾಲಿನದು (ಜಾಕ್ಕೃ·. ೩೦೭); ಕಾಯಿ ರೋಗದಿಂದ ಹಾಸಿಗೆ ಪಕ್ಕಿ ಮಲಗಿದ್ದಳು ; ಅದ್ದನಿಂದ ಅವಳದೇ ಯಾಜಮಾನ್ಯ (ಜಾಕಮು. ೦೯೦). [ಸಂ.]

ಯಾಜಿ (ನಾ). ೧. ಯಾಗ ಮಾಡಿಸುವವನು ; ಯಜ್ಞ ಪುರೋಹಿತ : ಅರಿದ ಯಾಜಿಗ ದಾಹ್ಯಯಜ್ಞದಲೇಸಾ ಫಲ (ಗಣಿತಾ· ೦೬-೨೦); ನಾನು ನಿನ್ನನ್ನಿಲ್ಲಿಗೆ ಕರತಂದುದು ಮುಖ್ಯವಾಗಿ ಇದು ಯಾಜಿಗಳ ಸ್ಥಳವೆಂದು (ಕೀಪರ್ತ· ೦೫೪). ೨. ಪೂಜಿಸುವವನು ; ಅರ್ಚಕ : '' ಯಟ್· ಯಾಟ್· ಯಾಜೀ . . . ಯಾಯಜೂಕಃ — ಈ ೭ ಪೂಜಿಸುವಂ '' (ಶಾಪಕ್ಕ· ೦೩೦). ೩. ಯಜ್ಞ ; ಯಾಗ· ೪. = ಯಾಜಕ ೧· 'ಸೋಮಯಾಜಿ' ಹೋ. [ಸಂ.]

ಯಾಜ್ಞ (ಗು)· ಯಜ್ಞಕ್ಕೆ ಸಂಬಂಧಿಸಿದ ; ಯಜ್ಞದ ಕಾರ್ಯಕ್ಕೆ ಸಂಬಂಧಪಟ್ಟ. [ಸಂ.]

ಯಾಜ್ಞವಲ್ಕ್ಯಸ್ಮೃತಿ (ನಾ)· ಪ್ರಸಿದ್ಧವಾದ ಹತ್ತೊಂಬತ್ತು ಸ್ಮೃತಿಗಳಲ್ಲಿ ಒಂದು ; ಯಾಜ್ಞವಲ್ಕ್ಯ ಎಂಬ ಮುನಿಯಿಂದ ರಚಿತವಾದ ಸ್ಮೃತಿ : ಯಾಜ್ಞವಲ್ಕ್ಯಸ್ಮೃತಿಯು ವಿಷ್ಣುಸ್ಮೃತಿಗಿಂತ ಹಿಂದಿನದಲ್ಲ (ಕಾಡ· ೫೦). [ಸಂ.]

ಯಾಜ್ಞಸೇನಿ (ನಾ). ಯಜ್ಞಸೇನನೆಂಬ ನಾಮಾಂತರವನ್ನು ಹೊಂದಿದ್ದ ದ್ರುಪದರಾಜನ ಮಗಳು ; ದ್ರೌಪದಿ : ಯಜ್ಞವೇದೀಸಂಭವೆಯುಂ ಯಾಜ್ಞಸೇನಿಯುಂ . . . ಎನಿಸಿದ ಪಾಂಚಾಲರಾಜತನೂಜೆ ಪಮಮಾನ ತನೂಜನಲ್ಲಿಗೆ ವಂದು . . . ನೊಂದು ನುಡಿಮೆ (ಗಣಿಮು. ೦-೨೫ ಪ). [ಸಂ. ಯಾಜ್ಞಸೇನೀ]

ಯಾಜ್ಞಿಕ (ಗು). ೧. ಯಜ್ಞಕ್ಕೆ ಸಂಬಂಧಪಟ್ಟ. (ನಾ). ೨. ಯಜ್ಞ ಕರ್ತ ; ಯಾಜಕ : ಯಜ್ಞರಿಷ್ಠಗಳು ನಿವುಣರಿಂಗೆ ವರಯಾಜ್ಞ ಕರಿಗಳಾಚಾರ ಹೀನರು (ಭಾಣ್ಕ·. ೦೦-೬೨). ೩. ಯಜ್ಞ ಮಾಡಿಸುವವನು ; ಯಜ್ಞಪುರೋಹಿತ. ೪. (ಯಜ್ಞಕಾರ್ಯದಲ್ಲಿ ಉಪಯೋಗಿಸಲಾಗುವ) ಅರಳಿ, ಮುತ್ತುಗ ಮೊದಲಾದ ಮರ : "ಯಾಜ್ಞಿಕ— ಅರಳಿ· ಮುತ್ತುಗ" (ಚಿಪಂ· ೦೬೨). [ಸಂ.]

ಯಾಜ್ಞೀಯ (ಗು)· ಯಜ್ಞಕ್ಕೆ ಸಂಬಂಧಿಸಿದ ; ಯಜ್ಞಕ್ಕೆ ಸೇರಿದ ; ಇದೀಗಳ್ ಸಮಯಂ ಯಾಜ್ಞೀಯಾಶ್ವಮಂ ಪೂಜಿಸಲ್ಕೆ (ಭಾಪಪಸ್ಕ. ೦೭-೯). [ಸಂ.]

ಯಾಜ್ಯ (ಗು)· ೧. ಯಜ್ಞಕ್ಕೆ ಸಂಬಂಧಿಸಿದ. (ನಾ). ೨. ಯಾಗ ಮಾಡಲು ಅರ್ಹನಾದವನು ; ಯಜ್ಞಕರ್ತ ! ' ಯಾಜ್ಯ ಯಾಜನಕೆ ಒಂಸುವೇದಂಗಿರಸನ ಸುತಂ ಪೂಜ್ಯನೆಮ್ಮಿ ಕುಲದರ್ಮ (ಕೃಪಣಾ· ೫-೨೪). ೩. ಇನ್ನೊಬ್ಬರಿಗಾಗಿ ಯಜ್ಞಮಾಡುವವನು. ೪. ಅರ್ಚನೆ ; ದೇವಪೂಜೆ : "ಇಷ್ಟಂ· ಇಷ್ಟಿ· . . . ಯಾಜ್ಯಂ—ಈ ೧೦ ದೇವಪೂಜೆ (ಶಾಪಕ· ೦೩೦). [ಸಂ.]

ಯಾಣ (ನಾ)· ಯಾನ ; ಸಂಚಾರ : ಜಗಪ್ರವಾಸದ ಖಗಪ್ರಯಾಣ ಗುಹ್ಯಾತ್ ಗುಹ್ಯತರಂ ಈ ಯಾಣ (ಆದಿ· ೨೯೭-೦೩). [< ಪ್ರಾ· ಯಾಣ·/ಸಂ· ಯಾನ]

ಯಾತ$_1$ ' ಏತ$_1$ ' ನೋ·

ಯಾತ$_2$ (ಗು)· ೧. ನಡೆದ ; ಮುಂದೆ ಚಲಿಸಿದ. (ನಾ). ೨. ಹೋಗುವಿಕೆ ; ಹೋಗುವುದು ; ಗಮನ ; ' ಯಾತಾಯಾತ ' ಪರಾ. ೩. ಅಂಕುಶಪ್ರಯೋಗದಿಂದ ಆನೆಯನ್ನು ಮುಂದಕ್ಕೆ ನಡಸುವುದು : "ಅಂಕುಶ(ವಾ)ಚಾರಣಮಂ ಯಾತಮೆಂಬುದು" (ಹೊಯ್ಸಳ· ೫೬-೬೯). ೪. ಕಾಲಾಳು ; ಪದಾತಿ : "ಯಾತಂ ಪದಾತಿಕಂ ಪಾಯದಳ ಪತ್ತಿ ಪಾದಾತಂ ಪದಾಜಯ ಪದಿಕನೆಪೆ ಕಾಲಾಳ್" (ಪಂಗಣಾ. ೫೫-೨೬). [ಸಂ.]

ಯಾತಕೆ ' ಏನ್$_1$ ' ಪರಾ.

ಯಾತಕ್ಕೆ ' ಏನ್$_1$ ' ಪರಾ.

ಯಾತನ (ನಾ)· ತೀವ್ರವಾದ ಹಿಂಸೆ; ಯಾತನೆ: "ಆ ಯಾತನಂ ಕಾರಣಂ ದಂಡನೆ(ನೆ)ಯೆನಿಕ್ಕುಂ" (ಪಾಂಗಣ· ೦೦೩-೦); ಪುಣ್ಯವ ಹಾದಿಗಳ ಬಿಟ್ಟು ಆಂತಕನ್ನ ಯಾತನದಿ ನೀ ಕಪ್ಪಪಟ್ಟು (ಕುರಂಜ. ೩-೦೮-೩).

[ಸಂ. ಯಾತನಾ]

ಯಾತನೆ (ನಾ)· ತೀವ್ರವಾದ ಹಿಂಸೆ.–ಬಾಧೆ: ಉತ್ಕಟವಾದ ದುಃಖ: "ಯಾತನೆ ಗುರುವೇದನೆ" (ಪಜ್ಜ.ಕೋ. ೨೦-೦೦); ನಮ್ಮ ಎರಡು ಕಣ್ಣುಗಳಲ್ಲಿ ಯಾವುದನ್ನು ಚುಚ್ಚಿದರೆ ತಾನೆ ಯಾತನೆಯಾಗುವುದಿಲ್ಲ? (ಪಂಚತಂ· ೩. ೦೮); ಅವಳು ಅನುಭವಿಸಿದ ಪ್ರಾಣಿಕಯಾತನೆಯನ್ನು ಮರೆಮಾಚಲೂ ಸಹ ಪ್ರಯತ್ನಿಸಲಿಲ್ಲ (ಪಾಣಿ· ೦೦೯).

[ಸಂ. ಯಾತನಾ]

ಯಾತನೆಗೊಳ್ (ಕ್ರಿ). ತೀವ್ರವಾದ ಬಾಧೆಗೊಳಗಾಗು.— ವೇದನೆಯನ್ನು ಅನುಭವಿಸು: ದುಸಿಯೆಂದುಂ ಮಕ್ಕಳೆಂದುಂ . . . ತಾಪ ಶ್ರಯದೊಳ್ ಕುದಿದೆಂ ಬಸ್ಸಿದೆಂ ಬಾಡಿದೆಂ ಯಾತನೆಗೊಂಡು ದೇವ (ಕರ್ಣಾ· ೨೨). [ಯಾತನೆ + ಕೊಳ್]

ಯಾತಯಾಮ (ಗು)· ೧. ಒಂದು ರಾತ್ರಿಯಷ್ಟು ಹಳೆಯದಾದ: ತಂಗುಳಾದ. ೨. ಹಳಸಿದ: ಕೆಟ್ಟುಹೋದ: ನಿಷ್ಪ್ರಯೋಜಕವಾದ. ೩. ವಯಸ್ಸಾದ: ಜೀರ್ಣವಾದ: ಶಿಥಿಲವಾದ. (ನಾ)· ೪. ಹಳಸಿಹೋದುದು: "ಯಾತಯಾಮಂ — ಹಗಸಿ ಹೋದದ್ದು. ಅನುಭವಿಸಿಯಾದ್ದು; ತಿಂದು ಜೀರ್ಣಿಸಿಹೋದದ್ದು" (ಕರ್ಣಾ· ೨೦೬). ೫. ಮುದುಕ: ವೃದ್ಧ: "ಯಾತಯಾಮಂ ವೃದ್ಧಂ ಸ್ಥವಿರಂ ತಾನ್" (ಪಜ್ಜ.ಕೋ. ೩೬-೩೬). [ಸಂ.]

ಯಾತವ್ಯ (ನಾ)· ಯುದ್ಧದಲ್ಲಿ ಎದುರಿಸಲು ಯೋಗ್ಯನಾದವನು: ಶತ್ರು: ಆತನಿನ್ನೆವರೆಗಂ (ವ್ಯಾನರು) ಯಾತವ್ಯರುಮಪ್ಪಾ ವಿಧಾನ ಸ್ಥಾನಮುಮಪ್ಪ ನಮ್ಮೊಳಾದುದು ನಯೋಪಾಯಂ ವ್ಯವಹಾರಸಮಾನನು ಮುಮಪ್ಪಾನುಮಪ್ಪಲ್ಲದಿರ್ಪುಗಳ್ಗಳಿಗೇ ವಿಧೇಯಂ ಮಾಳ್ಪುದೇದು . . . ನುಡಿದು (ಗಾಂಭಾ· ೨-೭೫ ೬). [ಸಂ.]

ಯಾತಾಯಾತ (ನಾ)· ಹೋಗುವುದು ಮತ್ತು ಬರುವುದು: ಸಂಚಾರ: ಓಡಾಟ: ಯಾತಾಯಾತ ಮಾಡುವುದನ್ನು ಚೆನ್ನಾಗಿ ಬಲ್ಲೆನು. ಎಲ್ಲಿಗೆ ಹೋಗೆಂದರೆ ಅಲ್ಲಿಗೆ ಹೋಗುವೆನು (ಪಂಚಾತಂ· ೩೦): ಊರ ದಾರಿಗಳಲ್ಲಿ ಯಾತಾಯಾತ ಒಂದು ಬಗೆಯಾಗಿ ನೀತೇ ಹೋಗಿದೆ (ಚಿತ್ಕಳ· ೮). [ಸಂ.]

ಯಾತು (ನಾ)· ೧. ದಾರಿಗ: ಪ್ರಯಾಣಿಕ. ೨. ರಾಕ್ಷಸ. ೩. ಪಿಶಾಚಿ. ೪. ಮಾಟ; ಮಾಯಾವಿದ್ಯೆ. ೫. ನೈಋತ್ಯ ದಿಕ್ಕಿನ ಅಧಿಪತಿ; ನಿಯತಿ: "ಯಾತು. ಯಾತುಧಾನಃ. ಕ್ರವ್ಯಾತ್. ರಾಕ್ಷಸಃ. ರಕ್ಷಸ್ . . . ಕೈಕಸೇಯಃ — ಈ ೯ ನೈಋತಿಯ ಪೆಸರ್" (ಪಾಂಚಾಮು· ೦೩-೭೩). [ಸಂ.]

ಯಾತುಧಾನ (ನಾ). ೧. = ಯಾತು ೨: "ರಕ್ಷಃ ಕೋಣಪ ನೈಋತ ರಾಕ್ಷಸಪುಣ್ಯಜನ ಯಾತುಧಾನ ಕ್ರವ್ಯಾದ ಕ್ಷಣದಾಚರರೆಂದು ಸಪ್ತಕಾರ್ಥಂಗಳ್ ನಿರಾಟ ಪರ್ಯಾಯಂಗಳ್" (ಪಜ್ಜ.ಕೋ. ೯-೮೨). ೨. = ಯಾತು ೩. ೩. = ಯಾತು ೫: "ಯಾತು. ಯಾತುಧಾನಃ. ಕ್ರವ್ಯಾತ್. ರಾಕ್ಷಸಃ. ರಕ್ಷಸ್ . . . ಕೈಕಸೇಯಃ — ಈ ೯ ನೈಋತಿಯ ಪೆಸರ್" (ಪಾಂಚಾಮು· ೦೩-೭೩); ಯಾತುಧಾನ ಕುಬೇರ ಕಿನ್ನರ ಮಾತೃಗಣ ಕರ್ಣಸಲಿ ಸುಮನೋಜಾತ ಚಿತ್ರರಥಾದಿ ಗಂಧರ್ವರು ವಿಪಕ್ಷವಲಿ ಭೂತಗಣೇಶಿಯಲಿ . . . ನಾರದಾದಿ ಮಹಾತಪಸ್ವಿಗಳತ್ತಲಾಯಿತು (ಭಾಷ್ಯ· ೨೨-೬). [ಸಂ.]

ಯಾತೃ (ನಾ). ೧. = ಯಾತು ೧. ೨. ರಥವನ್ನು ನಡೆಸುವವನು; ಸಾರಥಿ. ೩. ನೆಗಣ್ಣಿ; ಓರಗಿತ್ತಿ: "ಯಾ(ತಾ)ತೃವೆಯುಮೆ ಸಗೆವೆಣ್ಣು" (ಪಜ್ಜಾಮು. ೮೪-೩೩೪). [ಸಂ.]

ಯಾತ್ಯ (ಗು). ೧. ಚಿತ್ರಹಿಂಸೆಗೆ ಗುರಿಯಾಗುವ: ನರಕಯಾತನೆಗೆ ಗುರಿಯಾಗುವ. (ನಾ). ೨. ನರಕಯಾತನೆಗೆ ಈಡಾದ ಜೀವ: ಪ್ರೇತ: "ಪಾರಕಾಃ. ಪ್ರೇತಾಃ. ಯಾತ್ಯಾಃ. ಅತಿವಾಹಿಕಾಃ — ಈ ೪ ನಾರಕರ್" (ಪಜ್ಜಾಮು. ೦೦೩-೩). [ಸಂ.]

ಯಾತ್ರಾದಾನ (ನಾ)· ೧. (ರಾಜನು ತನ್ನ) ಪ್ರಯಾಣದ ಆರಂಭ ಕಾಲದಲ್ಲಿ ಮಾಡುವ (ನಪಧಾನ್ಯಗಳ) ದಾನ: ಧರ್ಮರಾಯನು ಬ್ರಾಹ್ಮಣೋತ್ತಮರಿಗೆ ಅನೇಕ ಧನಗಳನ್ನು ಯಾತ್ರಾದಾನವಾಗಿ ಕೊಟ್ಟು . . . ಹಸ್ತಿನಾಪುರಕ್ಕೆ ಹೊರಟನು (ಕೃಷ್ಣಾ. ೦೫೬). ೨. ರಥೋತ್ಸವದ ಆರಂಭದಲ್ಲಿ ಪೂಜಾರಿಯು ಕೊಡುವ ದಾನ: (ಸ). [ಸಂ.]

ಯಾತ್ರಾರ್ಥಿ (ನಾ)· ತೀರ್ಥಕ್ಷೇತ್ರಗಳ ದರ್ಶನಾರ್ಥವಾಗಿ ಹೊರಟವನು: ಯಾತ್ರಿಕ: ಅನಂತರ ಕೃಷ್ಣದೇವರಾಯನು ವಾನಪ್ರಸ್ಥಾಶ್ರಮ ಸ್ವೀಕಾರ ಮಾಡಿದವನಂತೆ ಯಾತ್ರಾರ್ಥಿಯಾದನು (ಕಟಿ. ೧೧೦).

[ಸಂ. ಯಾತ್ರಾರ್ಥಿನ್]

ಯಾತ್ರಾಸ್ಥಳ (ನಾ)· ಪುಣ್ಯಕ್ಷೇತ್ರ: ಪವಿತ್ರಸ್ಥಳ: ತೀರ್ಥಕ್ಷೇತ್ರ: ಯಾತ್ರಾಸ್ಥಳಗಳಿಗೆ ಜನರು ಹೋಗಿ ಬರುವುದು ಹೆಚ್ಚಾಗಿರುವುದರಿಂದ ಅಲ್ಲಿಗೆ ರಸ್ತೆಗಳನ್ನು ಸುಪ್ರಸಸ್ತವಾಗಿ ಹಾಕಿರುವರು (ಕಟಿ. ೬೦).

[ಸಂ. ಯಾತ್ರಾಸ್ಥಲ]

ಯಾತ್ರಿಕ (ನಾ)· ೧. ಯಾತ್ರೆ ಮಾಡುವವನು: ದಾರಿಕಾರ: ಪ್ರವಾಸಿ: ಯಾತ್ರಿಕರು ಮೈಸೂರು ತುಂಬುವ ಕಾಲ ಶಪ್ಪಿದರೆ. ಅಲ್ಲಿ ಹಬ್ಬಿಗೆ ವ್ಯಾಪಾರವಿಲ್ಲ (ಜಾಕು. ೩೩೬). ೨. = ಯಾತ್ರಾರ್ಥಿ: ಮೂವರು ಯಾತ್ರಿಕರೂ ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು (ಕ್ರೀಡಾಯು· ೪). [ಸಂ.]

ಯಾತ್ರೆ (ನಾ)· ೧. ಪಯಣ: ಪ್ರಯಾಣ: "ಯಾತ್ರೆ ಪ್ರಸ್ಥಾನಮೆನೆ ಪಯಣಮದು" (ಪಾಂಗಣ. ೩೩-೩೬); ಮಂದಹಾಸದಲಸುರರಿಪು ಸಗುತೆಂದ ನೆಲ್ಲಿಗೆ ಯಾತ್ರೆ ಕೋಪಿಸುವಂದವಾರೊದನೆನಲು (ಪಂಚಾಗ. ೦೦-೬೨-೩೦); ಅಜ್ಜನ ಮನೆಯು ಯಾತ್ರೆಯು ಇದಕ್ಕೆ ಅನುಕೂಲವಾಯಿತು (ಬಳಿಮು. ೨೩೬). ೨. ಪುಣ್ಯಕ್ಷೇತ್ರಗಳ ದರ್ಶನಾರ್ಥವಾಗಿ ಮಾಡುವ ಪ್ರಯಾಣ: ಇಂದು ನಾಳೆಯೆನುತ್ತ ಯಾತ್ರೆಗೆ ಬಂದವರ ಬೀಳ್ಕೊಡದೆ ಪರಮಾನಂದವನು ನಿತ್ಯತ್ಯ ಕೃಷ್ಣನು ಸಲಿಸಿದನು ಜಗಕೆ (ಪಜ್ಜಾಗ· ೦೦-೭೩-೮೫); ಯಾತ್ರೆಗೆ ಬರುವವರನ್ನು ಜೇಡವೆಂದಾರೆ? (ಕ್ರೀಡಾಯು· ೨೦೬). 'ಕಾಶೀಯಾತ್ರೆ', 'ತೀರ್ಥಯಾತ್ರೆ' ಪರಾ. ೩. ಯುದ್ಧಕ್ಕಾಗಿ ಸೈನ್ಯ ಹೊರಡುವುದು: ಕಾಳಗ ಆಥವಾ ಧಾಳಿಗಾಗಿ ಶಿಸ್ತಿನಿಂದ ಹೊರಡುವ ದಂಡಯಾತ್ರೆ: ಪ್ರಸ್ಥಾನ: "ಯಾತ್ರಾ. ವೈಜ್ಯಾ. ಅಭಿನಿರ್ಯಾಣಂ. ಪ್ರಸ್ಥಾನಂ. ಗಮನಂ. ಗಮಃ — ೬ ಜಯಾರ್ಥವಾಗಿ ಹೊರಟ ಅರಸನ ಪ್ರಯಾಣಕ್ಕೆ ಪೆಸರುಗಳು" (ನಿಘಂ೦೬· ೨೬೬). ೪. (ಯಾವುದಾದರೂ ದೇವತೆಗೆ ವರ್ಷಕ್ಕೊಂದು ಸಲದಂತೆ ನಿಯತಕಾಲದಲ್ಲಿ ನಡೆಸುವ ತೇರಿನ) ಉತ್ಸವ: ಜಾತ್ರೆ. ೪. ಮೆರವಣಿಗೆ: ವಾದಿತ್ರಾರವಂ ವಂದಿವ್ಯದಧ್ವನಿ ಜಯಜಯಕೋಲಾಹಲಂ ಮಂಗಲಾಲಂಕಾರಂ ಯಾತ್ರೋತ್ಸವ ಪ್ರಸ್ತುತಮೆನೆ ತಳರ್ದಂ ರಾಗದಿಂ ರಾಜರಾಜಂ (ಅಣ್ಣಿ· ೦೩-೩೩); ಉಣ್ಮಿದತ್ತು ಪೊಜಲೊಳ್ . . . ಬಂಧುರಂ ವಂದನಾ ಯಾತ್ರೋತ್ಸಾಹನಿವೇದಕಂ ಕನಕಕೋಣಾಘಾತಭೀರವಂ (ಪಂಪ್ರಕೃ· ೨-೦೦೯). ೫. ಅನುಸರಣೆ; ಹಿಂಬಾಲಿಸುವುದು: "ಅನುಸರಿಸುವಲ್ಲಿಯುಂ ಯಾತ್ರಾ ಎಂಬುದು" (ಪಠಾಮು. ೦೩೬-೩೩). ೬. ಜೀವನೋಪಾಯ: ಜೀವನೋಪಾಯ. ೭. ಪದ್ಧತಿ; ಸಂಪ್ರದಾಯ; ರೂಢಿ.

[ಸಂ. ಯಾತ್ರಾ]

ಯಾಥಾತ್ಮ್ಯ (ನಾ)· ನಿಜಸ್ಥಿತಿ; ಸ್ವಭಾವ: ಸಂಶಯವಿಪರ್ಯಯಾನಾವ ದ್ಯಾಪವ್ಯವಸಾಯ ಸ್ವಭಾವರಹಿತಮಾಗಿ ಜೀವಾದಿಪದಾರ್ಥಯಾಥಾತ್ಮ್ಯ

ವಗಮಂ ಸಮ್ಯಗ್ಜ್ಞಾನಂ (ಅಷ್ಟ. ೫೦-೭೭ ಪ). [ಸಂ.]

ಯಾಥಾರ್ಥ್ಯ (ನಾ). ವಸ್ತುಸ್ಥಿತಿ : ನಿಜಸ್ಥಿತಿ : ಯಾಥಾರ್ಥ್ಯಮೆಂಬ ಪ್ರಮಾಣಾವೆ ಸ್ವತಃಸ್ಫೂರ್ತಿ (ಶಂಪಾ. ೧೭೭). [ಸಂ.]

ಯಾದ$_1$ (ನಾ). (ಮರವನ್ನು ಹತ್ತುವ) ಒಂದು ಬಗೆಯ ಆಲಿ : ಎಳನೀರುಗಳನ್ನೆಲ್ಲಾ ಯಾದ ಕುಡಿದು ಉದುರಿಸಿದ್ದುವು (ಕಟ್ಟೆಪು. ೨೬೦).

ಯಾದ$_2$ (ನಾ). ಕ್ರೂರವಾದ ಜಲಚರಪ್ರಾಣಿ : "ಎಂಭೆಕ್ಕರೋಗ್ರಸತ್ವಂ ಯಾದಂ" (ಪ್ರಭು ಕಥೆ. ೨೨-೪). [< ಸಂ. ಯಾದಸ್]

ಯಾದ$_3$ (ನಾ). ನೆನಪು ; ಸ್ಮರಣೆ ; ಜ್ಞಾಪಕ : ತರ್ಕಾ ಮತ್ತ ಯಾದ ಪಟ್ಟಿ ಶೋಧ ಮಾಡಿ ಕೀಳತೀನಿ ಒಂದ ಸೋಡಾ (ಕುಚ್ಚ. ೪೨)ಃ ಒಂದಿಷ್ಟು ಯಾದ ಇರಲಿ ಅವರ ಅನ್ನದ್ದು (ರಾಷ. II, ೪೨೨).

[← ಪಾರ. ಫಾ. ಮರಾ. ಯಾದ್]

ಯಾದಃಪತಿ (ನಾ). ೧. ಸಮುದ್ರ; ಕಡಲು : "ಸಮುದ್ರಃ, ಅಬ್ಧಿಃ . . . ಯಾದಃಪತಿಃ ಆದ್ಯಾಂಪತಿಃ — ೧೫ ಸಮುದ್ರದ ಹೆಸರುಗಳು. ಅಂದರೆ ಕಡಲು" (ನಿಘ೦ಟು. ೬೬). ೨. ಪಶ್ಚಿಮದಿಕ್ಪಾಲಕ : ವರುಣ : ದಂತವಕ್ತ್ರಂ . . . ವನಮಾಲಾಸ್ಪದನೆಂದು ಯಾದಃಪತಿಯನದಿರ್ಪಯುಂ ಅದ್ರಿಧರನೆಂದು ಪವಮಾನನನವಮಾನಿಯುಂ (ಪಗಂ. ೯-೫೭ ಪ). [ಸಂ.]

ಯಾದಗಾರಿ (ನಾ). ನೆನಪು ; ಸ್ಮೃತಿ : ಈ ಮಿತ್ರತ್ವ ಶಾಶ್ವತವಾಗಿ ನಡೆದು ಬರುವುದಕ್ಕೆ ಯಾದಗಾರಿ ಗುರ್ತು ದೋಸ್ತಿಮಾರ್ಗದಿಂದ ಕೀಳುತ್ತೇವೆ (ಶಾಕಂಪ್ರ. ೧೬). [← ಪಾರ. ಹಿಂ. ಮರಾ. ಯಾದ್‌ಗಾರ್]

ಯಾದವ (ಗು). ೧. ಯದುವಿನಿಂದ ಬಂದ ; ಯದುಕುಲಕ್ಕೆ ಸೇರಿದ : ಯಾದವವಂಶದೊಳ್ ವೆಗ್ಗಟ್ಟಿ ಚಕ್ರಧರಂಗೆ ಮುರಾಂತಕಂಗೆ . . . ಸೇಸುಮನ್ಮಿದಂ (ಸಂಪಕಂ. ೦೨-೬೨). (ನಾ). ೨. ಯದುವಂಶಕ್ಕೆ ಸೇರಿದವನು : ಧನ್ಯರೆಮ್ಮೊಲುದಾಂ ಮುನ್ನಾದವರ್ ಯಾದವರ್ (ಪಗಂ. ೬-೩) ; ಯಾದವರು ಕೌರವರೊಳಂಟೀ ಭೇದ (ಭಾಷ್ಯಾ. ೦-೨೮). ೩. ಕೃಷ್ಣ : ಯಾದವ ನೀ ಬಾ ಯದುಕುಲವಂದಾಪ (ತೆಂಕ. ೦-೦೩ ೪೪). ೪. ಹೊಯ್ಸಳವಂಶ ಮತ್ತು ಆ ವಂಶಕ್ಕೆ ಸೇರಿದವನು : ಸಳನೆಂಬ ಯಾದವಂ ಪೊಯ್ಸಳನಾದಂ (ಎಕ. ೪. ೦೮೫. ೦೫೯-೦೦ : ೧೧೬೬). ' ಯಾದವಕುಳ ' ಪರಾ. ೫. ಸೇವುಣವಂತದವನು : ಈ ಪ್ರಕಾರ ಯಾದವ ಅರಸರು ಕರ್ನಾಟಕದ ಉತ್ತರಭಾಗವನ್ನು ಕ್ರಿ.ಶ. ೧೩೧೧ನೇ ವರ್ಷದವರೆಗೆ ಆಳಿದರು (ಕರಾಗೆ. ೬೩೦).

ಯಾದವರಜಯ = ಯಾದವರ ಒಡೆಯ ; ಕೃಷ್ಣ : ಅವಧಾನ ಜೀಯ ನಮ್ಮಿ ಪೊಳಲ ಪೊರೆಗೆ ಯಾದವರೆಜಿಪುನಿದ ಬಂದನು (ಕೃಬಾ. ೫-೧೬). [ಸಂ.]

ಯಾದವಕಲಹ (ನಾ). ೧. ಯಾದವರಲ್ಲಿಯೇ ಉಂಟಾದ ಜಗಳ, – ಹೊಡೆದಾಟ. ೨. (ಅಲಂ) ಅಂತಃಕಲಹ ; ಒಳಜಗಳ : ಈ ಯಾದವ ಕಲಹದಿಂದ ಅವರೆಲ್ಲರೂ ಹತರಾದರು (ಕುಚೆ. ೮೫). [ಸಂ.]

ಯಾದವಕುಲ, ಯಾದವಕುಳ (ನಾ). ೧. ಯಾದವರ ವಂಶ ; ಯದುಕುಲ. ೨. = ಯಾದವ ೩ : ಯಾದವಕುಲನುಸಿ ತಿಂತಿನೆಯಾದವಮೇ ಪಾಲಕುಲದ ಹಯಸಂತತಿಯಂ ಸಾದಿಗಳಂ ರಣಾದ್ರರಸಾದಿಗಳಂ ಕುಲುಂಗಿ ನಟ್ಟುವಸ್ತಾವಳಿಗಳ್ (ಪಗಂ. ೯-೩೦). ಯಾದವಕುಳ : ೩. = ಯಾದವ ೪ : ದ್ವಾರಾವತೀಪುರವರೇಶ್ವರಂ ಯಾದವಕುಳಾಂಬರದ್ಯುಮಣಿ . . . ವೀರ ವಿಷ್ಣುವರ್ಧನದೇವಂ (ಎಕ. ೪. ೫೬ನೇ : ೧೧೬೦). [ಸಂ.]

ಯಾದವಕುಳ ' ಯಾದವಕುಲ ' ನೋ.

ಯಾದವಿ$_1$ (ಗು). ೧. ಯಾದವರಿಗೆ ಸಂಬಂಧಿಸಿದ. (ನಾ). ೨. (ಅಲಂ) ಅಂತಃಕಲಹ ; ಒಳಜಗಳ : ಅದೊಂದು ಯಾದವಿಯ ಪರಿಣಾಮ ಬಿಸೆನ್ (ಕೃಚೆ. ೬೬). [< ಸಂ. ಯಾದವೀಯ]

ಯಾದವಿ$_2$ (ನಾ). ೧. ಯದುವಂಶಕ್ಕೆ ಸೇರಿದವಳು. ೨. ವಸುದೇವನ ಸಹೋದರಿಯೂ ಶಿಶುಪಾಲನ ತಾಯಿಯೂ ಆದ ಸಾತ್ವತಿ : ದಿಗಿಲು – ದೆಃಖಿಗೆಂದಿ ಯಾದವಿಯಿಟು ಕೃಷ್ಣನಿಕಿದ ವರವನ್ನು ಕೇಕಿದಳು (ಪಭಾ. ೮೪). ೩. ದುರ್ಗೆ; ಪಾರ್ವತಿ. ೪. ಕುಂತಿ. [ಸಂ. ಯಾದವೀ]

ಯಾದವೀಕಲಹ (ನಾ). (ಅಲಂ) ಒಳಜಗಳ ; ಅಂತಃಕಲಹ : ಪನ್ನೊಂದನೆಯ ಶತಮಾನದಿಂದಾಚೆ . . . ಯಾದವೀಕಲಹಗಳು ಎದ್ದು, ದೇಶ ನಾನಾರಾಜರ ಕೈಸೇರಿತು (ಶಾಪಡೆ. ೪೮೭). [ಸಂ.]

ಯಾದಸ (ನಾ). ೧. = ಯಾದ$_2$: ಉಪಧಿಯೊಳ್ಮಣಿಗಲೋರಂತೆ ಯಾದಸಗಳುಂದು ಸುಪಿಸಲಿ (ಹಂಗಾಣಾ. ೫-೫-೦೬). ೨. ನೀರು ; ಜಲ. [ಸಂ. ಯಾದಸ್]

ಯಾದಸಾಂನಾಥ (ನಾ). ಜಲಚರಗಳ ಅಧಿಪತಿ; ವರುಣ. [ಸಂ.]

ಯಾದಸಾಂಪತಿ (ನಾ). = ಯಾದಸಾಂನಾಥ : "ಪ್ರಚೇತಾ, ವರುಣಃ, ಪಾಶೀ, ಯಾದಸಾಂಪತಿಃ, ಅಪ್ಪತಿಃ – ೫ ವರುಣನ ಹೆಸರುಗಳು" (ನಿಘ೦ಟು. ೫೪). [ಸಂ.]

ಯಾದಾಸ್ತ ' ಯಾದಾಸ್ತು ' ನೋ.

ಯಾದಾಸ್ತು, ಯಾದಾಸ್ತ (ನಾ). ೧. ನೆನಪಿಗೆ ಬರಲು ಸಹಾಯಕವಾದ ಟಿಪ್ಪಣಿಕಾಗದ, – ಸೂಚನಾಪತ್ರ ; ಜ್ಞಾಪಕಪತ್ರ : ಮುತ್ಸುಭಟ್ಟನ ಕೈದುಲ್ಲಿ ಒಂದು ಯಾದ್ದಾಸ್ತು ಬರಕೊಟ್ಟು ಕಳುಹಿದಲ್ಲಿ (ಶಾಕಂಪ್ರ. ೫೬) : ಒಂದು ಯಾದಾಸ್ತು ತೋರಿಸಿದರು. ಅದು ಸಭೆಯ ನೋಟೀಸು (ಕರೋ. ೦೦೩). ೨. "ಸರಿಸಮಾನರಾದ ಅಧಿಕಾರಿಗಳಿಗೆ ಬರೆಯುವ ಸರ್ಕಾರಿ ಒಕ್ಕಣೆ" (ಪಪ್ರಕ. ೪೫೫ ಪಪ್ರಪ) : ಇತ್ತಿಲ್ಲೇ ಅಂತ ಬರೆಯಬೇಕಾದಲ್ಲಿ ಯಾದಾಸ್ತು ಅಂತ ಬರೆಯುತ್ತಿದ್ದರು (ಪಪ್ರಕ. ೦೫೫). ಯಾದಾಸ್ತ : ೧. ಶ್ರೀ ಪರಕಾಲಸ್ವಾವಿಗಳವರ ಮಂಠಕ್ಕೆ ಸಾಗ್ಸಿಕೊಂಡು ಬರ್ಪುವ ಅಕ್ಕಿ ಗೋಣಿಗೆ ಮಂಡ ಪಾರಪತ್ಯಗಾರ ಯಾದಾಸ್ತ ಮೈರಿಗೆ . . . ಸುಂಕದ ಬಗ್ಗೆ ತಡಿಯದೆ ಬಿಡುವುದು (ಕ್ಯಾಂ. ೦೯೩೬, ೨೦-೩ ; ೧೬೧೫).

[←ಪಾರ. ಹಿಂ. ಯಾದ್‌ದಾಸ್ತ್; ಮರಾ. ಯಾದ್‌ದಾಸ್ತ್]

ಯಾದಿ (ನಾ). ನೆನಪಿಗಾಗಿ ಬರೆದಿಟ್ಟುಕೊಂಡ ವಸ್ತುಗಳು, ವ್ಯಕ್ತಿಗಳ ಹೆಸರು ಮೊದಲಾದುವುಗಳ ಪಟ್ಟಿ : ಒಂದೇ ಸಾರಿಗೆ ಎಲ್ಲ ಸಾಮಾನುಗಳನ್ನು ತಂದುಬಿಡಬೇಕೆಂದು ಎಲ್ಲವರ ಯಾದಿ ಮಾಡಿಕೊಳ್ಳುತ್ತೇನೆ (ಸಂಶಿಗ. ೬); ಹೊಸಪುಸ್ತಕಗಳ ಯಾದಿಯನ್ನು . . . ನಿನಗೆ ಕಳಿಸಿಕೊಡುತ್ತೇನೆ (ಪತ್ರಾವ್ಯ. ೪೦೬) ; ನಾನು ಈಗಾಗಲೇ ಈ ಹಳ್ಳಿಯಲ್ಲಿ ಹೊಲವಿಲ್ಲದ ಜನರ ಯಾದಿಯನ್ನು ಸಿದ್ಧಪಡಿಸಿದ್ದೇನೆ (ಮುಕ್ಕಥ. ೪೫೯). [← ಮರಾ. ಯಾದೀ]

ಯಾದೃಚ್ಛಿಕ (ಗು). ೧. ಸ್ವಚ್ಛಂದವಾದ ; ನಿಯಮಕ್ಕೆ ಒಳಪಡದ : ಒಂದು ಪರಿಮಾಣದ ಅಳತೆಯನ್ನು ಹತ್ತಾರು ಸಾರಿ ಮಾಡಿದಾಗ ಅವರ ಲೋಪ ಪ್ರತಿಸಾರಿಯೂ ಒಂದೊಂದು ಬೆಲೆಯುಳ್ಳದ್ದಾದರೆ ಅದನ್ನು ಯಾದೃಚ್ಛಿಕಲೋಪವೆನ್ನುತ್ತಾರೆ (ಪಂಗಣ. I, ೬೩೦). ೨. ಅನಿರೀಕ್ಷಿತವಾದ; ಆಕಸ್ಮಿಕವಾದ : ಕೇವಲ ದಾಹ್ಯಸಾಧಿಗಳಲ್ಲಿ ಅಸಕ್ತನಾಗಿರುವವನು ಕರ್ಮಪರಿಪಾಕದಿಂದಲೋ, ಯಾದೃಚ್ಛಿಕ ಸುಕೃತದಿಂದಲೋ ಅಧ್ಯಾತ್ಮ ವಿಷಯವನ್ನು ಅರಿಯುವನು (ಶಾಪಡೆ. ೪೬೩). [ಸಂ.]

ಯಾದೃಚ್ಛಿಕಂ (ಅ). ಮನ ಬಂದಂತೆ ; ಸ್ವಚ್ಛಂದವಾಗಿ ; ಬೇಕಾದ ಹಾಗೆ : ಪದ್ಮಣಾರ್ಯಂ . . . ಶಿವೈಕ್ಯಪ್ರಕರಸಹಿತನಾಗಿ ಲಿಂಗಾರ್ಚನಮನಾಕಜಿಮೊಳುರುತುರಾನಂದದಿಂ ಯಾದೃಚ್ಛಿಕಂರಚಿಸಿ ಹರ್ಷದಿಂ ಬಂದು ನಿಂದು (ಕಕ್ಕಣಾ. ೬-೭೪). [ಸಂ.]

ಯಾದೃಚ್ಛಿಕವಾದ (ನಾ). ಕಾರ್ಯಕಾರಣಭಾವವನ್ನು ಒಪ್ಪದೆ, ಎಲ್ಲವೂ ತನ್ನಿಂದ ತಾನೆ ಆಗುವುದೆಂದು ಹೇಳುವವರ ವಾದ ; ಸ್ವಭಾವವಾದ ; ನಿರಪೇಕ್ಷವಾದ : ಒಬ್ಬ ಪುರುಷನ ಬುದ್ಧಿಪೂರ್ವಕ

ಇಚ್ಛಾಸಂಕಲ್ಪ ಪ್ರಯತ್ನಗಳಿಂದ ಈ ಪರಿಣಾಮಪರಂಪರೆ ಈಂಟಾಗುವ ಹಾಗೆ ಕಂಡುಬರುವುದಿಲ್ಲ. ಇದಕ್ಕೆ ನಿಯತವಾದ ನಿಯಾಮಕವಿಲ್ಲ ದಿರುವುದರಿಂದ ಇದೇ ಯಾದೃಚ್ಛಿಕವಾದವು (ಶಿಪಣಾ. ೦೩). [ಸಂ.]

ಯಾದೃಶ (ಗು). ಯಾವುದರಂತಹ ; ಯಾವ ಬಗೆಯ ;. ಯಾವ ರೀತಿಯ. . [ಸಂ.]

ಯಾದೋಜಾತಿ (ನಾ). (ಉಗ್ರವಾದ) ಜಲಚರಗಳ ವರ್ಗ :ಹೇಳಲಾರ ಳವು ಗುರುತಿಥನವಿಳೆಯಂ ಒಳಿ ವೇಳಾತಟಂಗಳಾ . . . ಕರಿ ಮಕರ ನೀರಾನೆ ಯಾದೋಜಾತಿ ಜಾಳವಿಮ್ಮುರತ್ನಬುಬ್ಬುದಾಘೇನಂಗಳೋಳಿ ಯಿಂದೆಸೆವ ನೀರಾಕರಂ ಭೂಮಂಡಲಕ್ಕೆ ಪರಿವೇಷಪ್ರಾಂತೆ (ಶಿಪ್ಪ. ೨-೦೭). [ಸಂ.]

ಯಾದೋನಾಥ (ನಾ). = ಯಾದಸಾಂನಾಥ : " ವರುಣಂ ಪಶ್ಚಿಮದಿಕ್ಪತಿ ಶರನಿಧಿಯೆ ವಾಶವಣಿ ಯಾದೋನಾಥಂ " (ಕಬ್ಬ. ೪೫. ೪-೧೩). [ಸಂ.]

ಯಾನ (ನಾ). ೧. ಹೋಗುವಿಕೆ ; ಚಲನೆ ; ಸಂಚಾರ ; ತಕ್ಕಗೊದಗಿತು ಮತ್ತ ಭಾನಯಾನ (ಶಾಪೀ. ೦೦೦). ೨. ಪಯಣ ; ಪ್ರವಾಸ : ಯಾನ ಶ್ರಮಹರಮಾಗೆನಿಪಾನುಂ ವಿಜಯಾರ್ಧಶೈಲಸಾನುಸ್ಥಳದೊಳ್ ತಾನಿರ್ದಂ ವಜ್ರಾಯುಧಭೂನಾಥಂ ಸೇನೆವೆರಸು ಕಿಲವಾಸು ದಿನಂ (ಶಾಂಪಸ್ಥ. ೦೨-೦೬). ೩. ನಡೆ ; ನಡಗೆ : ಯಾನಸೌಮ್ಯದೊಲವಿಂ ನೆಲನುಗ್ರಿಪಂತೆ ಮುಂದೆ ಸಂಧಿಸಿದುದು ನೂಪುರ್ಸ್ಸಸಪ್ತಮಾಪ್ಯತಗೇಪಮರಾಳಮಂಡಲಂ (ಶಂಪ್ರಕೃ. ೦೦-೯) ; ಕಳರವಮುಂ ಪಿಕಾಂಗನೆಗೆ ಮಂಜು ಮೃದೂಕ್ತಿಗಳಾ ಪೊವಳ್ದ ಪೆಣ್ಗಳಿಗೆ ನವೀನಯಾನಪ್ರಸನಸೂನವಿಮರಾಳಿಗೆ ಶಕ್ತಿಗೆಯ್ಯಲೋಪಳಿ ನಡೆ ನಂದನಕ್ಕೆ (ಜಾಪೀ. ೦೦-೦೦). ೪. ಪಲ್ಲಕ್ಕಿ ; ಮೆನೆ : ಮಾನು ಹಿಡಿಯುವವನು . . . ರಥವ ಮೇಲಾಗಲಿ ಯಾನದ ಮೇಲಾಗಲಿ ಹೋಗುವುದನ್ನು ನೀವು . . . ಕಂಡಿರುವಿರ ? (ಜಾಪ್ರತಿ. ೦೬೨). ೫. ರಥ ಮೊದಲಾದ ಯಾವುದಾದರೂ ವಾಹನ : " ಯಾನಂ, ಯುಗ್ಯಂ, ಪತ್ರಂ, ಧೋರಣಂ – ಳ್ ಸರ್ವಂ ವಾಹನಂ. ನಾನಾ ಬಗೆಯಾದ ಸಲ ವಾಹನಗಳಿಗೂ ಹೆಸರುಗಳು" (ಶಿಣ್ಕೃಂ. ೨೫೪). ' ಯಾನಶಾಲೆ ' ಪರಾ. ೬. ವಾಹಕ ; ಮಾಧ್ಯಮ : ಪರಮಾಣುಭವಗಳುಲಿಯನುಭವಗಳೊಳ ಕವಿಗೆ ಒರಟು ಯಾನವೊ ಭಾಷೆ (ಕಾಂಗಿ. ೬೬). ೭. ಕಾಲುವೆ ; ನಾಲೆ : " ಯಾನಂ, ಸರಿಣೀ – ಈ ೨ ಹರಿಕ್ಕೀಣ" (ಹಡಾಯು. ೦೪೦-೬೬). ೮. ಮಾರ್ಗ ; ದಾರಿ : ' ಯಾನಯುಗಳ ' ಪರಾ. ೯. [ರಾಜನೀ] ರಾಜನ ಷಡ್ಗುಣಗಳಲ್ಲಿ ಒಂದು ; ವೈರಿಗಳ ಮೇಲೆ ಏರಿ ಹೋಗುವುದು ; ಯುದ್ಧಕ್ಕೆ ಹೊರಡುವುದು : ಕಿಕ್ಕಿಱಿಗಿಜಿದ ಧ್ವನ ಚ್ಛತ್ರಂಗಳೊಳ್ ತಳ್ಪೊಯ್ದುಂ ಯಾನವಿಮಾನಂಗಳೊಳ್ ಪಾಯ್ದಾಯ್ದುಂ ತಟ್ಟುಕ್ಕುವ ಧ್ವಜಕ್ಷತಮರುಮಂಗಳ ಮುಂದೆ ಪೊಳೆವ ದುಗ್ಗುಬ್ಬಿ ಪೊನ ಪಿಂಡಪಾಂಡುರಂಗಳಪ್ಪೊಜ್ಜುರಂಗಳೊಳಂ . . . ಪರಭಾಗುಡಿದು (ಶಾಂಪು. ೦೦-೨೦ ೪); ಯಾನಲೀಲೆಯುಮಂ ನೋಬ್ಬ ವಿಯಚ್ಚರರ್ಗ್ ತಿಱಪಂ ಮಾಡಿತ್ತು ಕರ್ಣಾರ್ವಿನಂ (ಪ್ರಕೃ. ೩-೨೩). ' ಷಾಡ್ಗುಣ್ಯ ' ಪರಾ. ೧೦. [ಬೌದ್ಧ] ಜ್ಞಾನವ ಅರಿವನ್ನು ಉಂಟುಮಾಡುವ ಕ್ರಮ ; ನಿರ್ವಾಣಪ್ರಾಪ್ತಿಯ ಮಾರ್ಗ : ' ಮಹಾಯಾನ '. ' ಹೀನಯಾನ ' ಪರಾ. [ಸಂ.]

ಯಾನನಾಗ (ನಾ). ಸವಾರಿಯ ಆನೆ ; ಪ್ರಯಾಣಕ್ಕೆ ಬಳಸುವ ಆನೆ : ದಿಗ್ವಿಜಯಕ್ಕೆ ಜಸೇಂದ್ರಚಂದ್ರವೇಪಂ ಪೊಱಮಟ್ಟನೇಜಃ ಜಯಮಂ ಜಯ ಪರ್ವತಯಾನನಾಗಮಂ (ಶಾಂಕೃ. ೦೦-೦೧೨). [ಸಂ.]

ಯಾನಪಾತ್ರ (ನಾ). ದೋಣಿ ; ನಾವೆ : ಪರಿವೃತನ್ಯಪತ್ರಂಗದೇವ ಮಾರ್ಗಾಂತರಗತಬೋಧವಿಶೇಷಯಾನಪಾತ್ರಂ ಪರಮಗುಣಪರೀತ ಶಾಸ್ತ್ರ ರತ್ನಾಕರದುರುಪಾರಮಾನೆಯ್ದಗುಂ ಮಹಾತ್ಮಂ (ಕವಿಗ. ೩-೨೩೦) ಪ್ರ ದೋಣಿ ಯಾನಪಾತ್ರಾದಿಗಳೊಳ್ ಜಲದುರ್ಗೋತ್ಕರಣಮುಮನುಪದೇಶಂ ಗೆದ್ದುಂ (ಅಭಿ.ವಿ.೩ ೪). [ಸಂ.]

ಯಾನಯುಗಳ (ನಾ). [ವೇದಾಂತ] ಪರಲೋಕಕ್ಕೆ ಹೋಗುವ ಎರಡು ಮಾರ್ಗ ; ಬ್ರಹ್ಮಲೋಕವನ್ನು ಸೇರುವ ಎರಡು ಮಾರ್ಗ ; ದೇವಯಾನ ಮತ್ತು ಪಿತೃಯಾನ : ಯಾನಯುಗಳವ ಜನನಮಾರ್ಗ ವಿಧಾನ ನಿರ್ಣಯವರುಹಿದನು (ಗಗಣಾ. ೪ ೩೩೮). [ಸಂ. ಯಾನಯುಗಲ]

ಯಾನಶಾಲೆ (ನಾ) ರಥ ಮೊದಲಾದ ವಾಹನಗಳನ್ನು ಇಟ್ಟಿರುವ ಸ್ಥಳ ; ವಾಹನಶಾಲೆ : ಯಾನಶಾಲೆಗೆ ನಡದನೇರಿದನು ಧನದನಿಂ ಗೆಲ್ದು ತಂದಾ ಕಾಮಗಮನದ ವಿಮಾನಮುಂ (ಶ್ರೀಣಾಪು. ೨೦೬-೦೩೩). [ಸಂ. ಯಾನಶಾಲಾ]

ಯಾನಹಸ್ತಿ (ನಾ). = ಯಾನನಾಗ : ವಿಜಯಾರ್ಧಪರ್ವತಮೆಂಬ ಯಾನ[ಜಾಣಾ. ಗ]ಹಸ್ತಿಯುಂ ಜವನಂಜಯಮೆಂಬ ತುರಗರತ್ನಮುಂ (ಅಭಿ. ೦೩-೩ ೪). [ಸಂ. ಯಾನಹಸ್ತಿನ್]

ಯಾನೆ (ಅ). ಎಂದರೆ ; ಅರ್ಥಾತ್ ; ಅಂದರೆ : ' ಮದ್ದು ಯಾನ 'ಮಾಧವ' ಶಬ್ದಿಯು ವೇಳೆಯುನ್ನು . . . ವ್ಯಭಿಸಿದವನಲ್ಲಿ (ಶಾಕುಣಾ. ೩೩); ಹೆಂಡತಿಯ ತಾಯಿಯು ಸಹೋದರ ಯಾನೆ ಹೆಂಡತಿಯ ಸೋದರಮಾವನು ಸಾಧುವಾವ ಪ್ರಾಣಿಯೆಂದು ಲೋಕದ ಜನರ ನಂಬಿಕೆ (ಜಾಭಾ. ೩೭). [← ಅರ. ಯಅನಿ ; ಹಿಂ. ದಾಶಾ. ಯಾನೇ. ಯಾನೀ]

ಯಾಪನ (ನಾ). ೧. (ಸಮಯವನ್ನು) ಕಳೆಯುವುದು. — ನವೆನು ವುದು ; ಕಾಲಕ್ಷೇಪ. ೨. ತಡ ; ವಿಳಂಬ ; ನಿಧಾನ ಮಾಡು ವಿಕೆ. ೩. ಜೀವನೋಪಾಯ ; ಜೀವನಾಧಾರ. ೪. ನಡೆ ; ನಡಗೆ : "ಯಾನಂ, ಯಾಪನಂ, ಯಾಪನೀಯಂ, ಯಾತ್ರಾ—ಈ ೪ ನಡೆ" (ಕಾಕ್ಕೆ. ೦೬೫). [ಸಂ.]

ಯಾಪನೀಯ (ನಾ). ೧. ನಡೆ ; ನಡಗೆ : " ಯಾನಂ, ಯಾಪನಂ, ಯಾಪನೀಯಂ, ಯಾತ್ರಾ—ಈ ೪ ನಡೆ " (ಕಾಕ್ಕೆ. ೦೬೫). ೨. [ಜೈನ] ಜೈನರಲ್ಲಿ ಒಂದು ಪಂಗಡ : ಜೈನರಲ್ಲಿ ಯಾಪನೀಯ, ನಿರ್ಗ್ರಂಥ, ಕೂರ್ಚಕ, ಶ್ವೇತಪಟ, ಆಪರಿಷ್ಣ ಸಂಘಗಳೆಂಬ ಪಂಗಡಗಳದ್ದುವು (ಕರಾಂಗ. ೧೦); ಉತ್ತರ ಕರ್ನಾಟಕದಲ್ಲಿ ಯಾಪನೀಯದ ಅನೇಕ ಕೇಂದ್ರಗಳು . . . ಸವಲ್ಗುಂದ ಮುಂತಾದ ಕಡೆ ಇದ್ದುವು (ಕಲಂ. ೭೫). ' ಯಾಪನೀಯ ಸಂಘ ' ಪರಾ. [ಸಂ.]

ಯಾಪನೀಯಸಂಘ (ನಾ). [ಜೈನ] ದಿಗಂಬರ ಮತ್ತು ಶ್ವೇತಾಂಬರ ಪಂಗಡಗಳ ಮಿಶ್ರಣವೆನಿಸುವ ಸಂಘ ; ಕಲ್ಯಾಣವೆಂಬ ನಗರದಲ್ಲಿ ವಿಕ್ರಮನ ಪರಿನಿರ್ವಾಣಾನಂತರ ೯೦೫ನೇ ವರ್ಷ ಕಳೆದಾಗ (ಇಲ್ಲಿ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವರು ೨೦೫ ವರ್ಷಗಳೆನ್ನುತ್ತಾರೆ) ಶ್ರೀಕಲಶ ಎಂಬ ಹೆಸರಿನ ಶ್ವೇತಾಂಬರಸಂಪ್ರದಾಯದ ಸಾಧು ಈ ಸಂಘವನ್ನು ಸ್ಥಾಪಿಸಿದನು. ಇದು ದಿಗಂಬರ ಮತ್ತು ಶ್ವೇತಾಂಬರ ಸಂಘಗಳೆರಡರ ತತ್ತ್ವವನ್ನೂ ಒಪ್ಪುತ್ತದೆ. ಇದರಲ್ಲಿ ಗುರುಗಳ ಪರಂಪರೆ ದೊರೆತಿಲ್ಲ : ಸುತ ಯಾಪನೀಯಸಂಘ[ಪ್ರ]ತೀತ ಕಣ್ಣೂರ್ಗ ಣಾಗ್ರಚಂದ್ರಮರೆಂದೀ ಕ್ಷಿತಿವಳೆಯಂ ಪೊಗಳ್ವ ನಮುನ್ನತಿವೆತ್ತರ್ಮಾನಿ ದೇವದಿವ್ಯಮುನೀಂದ್ರರ್ (ಪೌಷ. XX. ೦೬-೩೦; ೨೫೦) ; ಯಾಪನೀಯ ಸಂಘಕ್ಕೆ ಕಾರಣಕರ್ತನಾದವನು ಉತ್ತರಭಾರತದ ಶ್ವೇತಾಂಬರಸಂಪ್ರ ದಾಯದ ವ್ಯಕ್ತಿ (ಕಣಾ. ೭೬). [ಸಂ.]

ಯಾಪೆ (ನಾ). (ಕರಾ) ಬಿದಿರಿನಿಂದ ಹೆಣೆಯುವ ಒಂದು ಬಗೆಯ ಚಾಪೆ : ಬೇಸಾಯಗಾರರ ಗಮನವೆಲ್ಲ . . . ಹಳ್ಳಕ್ಕೆ ಯಾಪೆ ಕಟ್ಟು ವುದು. ಹತ್ತು ಮಾಮು ಕಡಿಯುವುದು ಮೊದಲಾದ ಮಾನುಬೇಟೆಯು ಪ್ಯಗಮನೈಕಾಗ್ರವಲ್ಲಿಯೂ ಆಸಕ್ತವಾಗಿತ್ತು (ಕುಕೆಮ. ೭೨೭). [?]

ಯಾಪ್ಯ (ಗು). ೧. (ಕಾಲದಂತೆ) ಕಳೆಯಬೇಕಾದ; ಸವೆಸಬೇಕಾದ :(ಕ). ೨. ನಿವಾರಿಸಬೇಕಾದ ; ಹೊರತಳ್ಳಬೇಕಾದ ; ಬಿಡಬೇಕಾದ. ೩. ಕ್ಷುದ್ರವಾದ ; ಕುತ್ಸಿತವಾದ : " ಕುತ್ಸಿತಂ ಕುಪ್ಪುಯಂ ಯಾಪ್ಯಂ" (ಕಸ್ತೂ. ೦೦೮-೫೯). (ನಾ). ೪. ತಂದೆಯ ಹಿರಿಯ ಸಹೋದರ. ೫. ಗುಣಪಡಿಸಲು ಸಾಧ್ಯವಾಗದ, ಆದರೆ ಚಿಕಿತ್ಸೆಯ ಮೂಲಕ ನಿಯಂತ್ರಿಸಬಹುದಾದ ರೋಗ : ಆವುದಾದರೊಂದು ವ್ಯಾಧಿಯು ಔಷಧ ಸೇವನೆ ಪರಿಯಂತರ ಹೆಚ್ಚದೆ, ಕಗ್ಗದೆ ಇದ್ದು, ಆ ಔಷಧವನ್ನು ಬಿಟ್ಟು ಬಳಿಕ ಎಂದಿನ ಮರ್ಯಾದೆಯಲ್ಲಿ ಯಾವಾಗ ಹೆಚ್ಚುತಲಿದ್ದಿತೋ ಆ ರೋಗವೂ ದೋಷಾಂತರದೊಡನೆ ಕೂಡಿರುವ ರೋಗವು ಯಾಪ್ಯಸಾಧ್ಯ ಗಳೆಂದರಿವುದು (ಸಕ್ಕ. ೨೨). [ಸಂ.]

ಯಾಪ್ಯಯಾನ (ನಾ). ಪಲ್ಲಕ್ಕಿ ; ಮೇನೆ : ಪರಿಚಾರವ್ಯಾಪಾರನಿರತರ್ . . . ಯಾಪ್ಯಯಾನಮನಟಬಿಟ್ಟಿಳಿದಾಗಳ್ (ಪರ್ಪಕೃ. ೦೬-೯ ಪ). [ಸಂ.]

ಯಾಪ್ಯಯಾನಕ (ನಾ). = ಯಾಪ್ಯಯಾನ : "ಯಾಪ್ಯಯಾನಕಮನು ಶಿಬಿಕಾಖ್ಯಾನಂ" (ಪಜ್ಞ. ೬೩೯. ೫೬-೨೦). [ಸಂ.]

ಯಾಭ (ನಾ). ರತಿಕ್ರೀಡೆ ; ಸಂಭೋಗ : "ನಿಧುವನ ರತ ಯಾಭ ಗ್ರಾವ್ಯಕ್ಕರ್ಧುನಾಮ್ನಂ ವ್ಯವಾಯಮುದು ವೆಯ್ಕುಸುಮುಂ" (ಪಜ್ಞ. ೬೩೯. ೫೯-೦೩). [ಸಂ.]

ಯಾಮ (ನಾ). ೧. ಹತೋಟಿ ; ನಿಯಮನ ; ನಿಗ್ರಹ. ೨. ದಿನದ ಎಂಟನೆಯ ಒಂದು ಭಾಗ ; ಮೂರು ಗಂಟೆಯ ಕಾಲ ; ಪ್ರಹರ ; ಜಾವ : "ಯಾಮಃ ಪ್ರಹರಃ — ೨ ಜಾಮ ಹೆಸರುಗಳು. ಅಂದರೆ ಅಹೋರಾತ್ರದ ೬೦ ಘಳಿಗೆಗಳ ೮ ನೇ ಭಾಗವಾದ ೭ ಘಳಿಗೆಯುಳ್ಳ ಕಾಮ, ಘೊತ್ತು" (ನಿರ್ಣಾ೦. ೩೬) ; ಎರಡನೆಯ ಯಾಮ ಆರಂಭವಾಗುತ್ತಿದೆ. ನನಗೆ ನಿಶ್ಚಯಿಸಿಕೊಳ್ಳಲು ಸಾಧ್ಯವಿಲ್ಲ (ಅಸ್ಪ. ೫೭) ; ಯಾಮವು ಕಳೆದರು ಬರಲಿಲ್ಲವಾತನು ದೂತಿಯ ಹೋಗೋಣ, ಏಳು (ಪಂಚಾತಂ. ೦೩೭-೨೨). ೩. ಜಲನೆ ; ಮಾರ್ಗಕ್ರಮಣ : ಯಾಮದ್ವಿಪೇಂದ್ರ ಪ್ರತಾನ ಕಟೋನ್ಮುಕ್ತಮದಾಘಕರ್ದಮಿತಕಾಂತಂ ರಾಜಗೇಹಾಜಿರಂ (ಕಂದ್ರಕೃ. ೦-೦೩೦).

ಯಾಮಪೂಜೆ = ಸಾಯಂಕಾಲವ ಸಮಯವಲ್ಲಿ ಮಾಡುವ ಪೂಜೆ ; ಪ್ರದೋಷ ಪೂಜೆ . [ಸಂ.]

ಯಾಮಘೊರ್ಯ (ನಾ). (ರಾತ್ರಿಕಾಲದಲ್ಲಿ) ಒಂದೊಂದು ಜಾವ ಕಳೆದಂತೆ ಅದನ್ನು ಸೂಚಿಸಲು ಬಾರಿಸುವ ಗಂಟೆ, ತಮಟೆ ಮೊದಲಾದ ವಾದ್ಯ : ರವಮಿತ್ತಯಾಮತೂರ್ಯರವಪಿಹಿತಶಯನಬ್ಧಿಯೆ ನಿದ್ರೆಯತ್ತಲುಪ್ಪವಡಿಸುವಂತು ಮಾಬ್ಬುದು (ಪಾಂಚಕೃ. ೩-೦೩೬). [ಸಂ.]

ಯಾಮತ್ರಯ (ನಾ). ಮೂರು ಪ್ರಹರಗಳು: ಒರ್ಮೆ ಯಾಮಿನೀಯಾಮತ್ರಯಸಮಯದೊಳ್ . . . ಗುಹೆಯಿಂ ಪೊಜಮಟ್ಟಿಂ (ಪಾಪಂಅಂ. ೩೦೯); ಒಂದು ದಿವಸಂ ಯಾಮತ್ರಯ ವಿರಾಮಸಮಯದೊಳ್ ತಾಂಬೂಲ ಕರಂಕವಾಹಿಕಾದ್ವಿತೀಯಾನುತ್ಸಂಗಸೌಧ ಶಿಬಿರನಿರ್ಯೂಹಪರ್ಯಂಕದೊಳ್ ಕುಳ್ಳಿರ್ದು (ಕಂದ್ರಕೃ. ೨-೩೬ ಪ). [ಸಂ.]

ಯಾಮಳ (ನಾ). ಜೋಡಿ ; ಜೊತೆ : " ಯುಗಳಂ ಯುಗ್ಮಂ . . . ಯಾಮಳಂ ದ್ವಯಂ ದ್ವಿತಯಂ" (ಪಜ್ಞ. ೬೩೯. ೦೦೪-೦೫) ; ಭೀಮ ಬಲದೊಡನೆ ರಾವಣ ಅಭಮನಿಯಮವಿರೆ ಯಾಮಳವರ್ಮಗಳವು (ಪಾಂಚಾಕೃ. ೪೦೦). [ಸಂ. ಯಾಮಲ]

ಯಾಮಿ (ನಾ). ೧. ಒಡಹುಟ್ಟಿದವಳು ; ಸೋದರಿ. ೨. ಇರುಳು ; ರಾತ್ರಿ. ೩. ಮಗನ ಹೆಂಡತಿ ; ಸೊಸೆ. [ಸಂ.]

ಯಾಮಿಕ (ನಾ). ರಾತ್ರಿಯ ಕಾವಲುಗಾರ ; ಪಹರೆಯವನು ; ಪ್ರಹರಿ: ಯಾಮಿಕನಂತಾರೋಪಿತಚಾಪನಾಗಿ ಕುಸುಮಚಾಪಸಂತಃಪುರಮಂ ಪೊಕ್ಕ ತೊಳೆಯುಂ (ಪಾಪಂಪು. ೫೦೩) ; ಗುಣಾಕರಮಿತ ಕಿಕ್ಕಯಂ ನಿನಗೆ ಯಾಮಿಕನಲ್ತೆ ಮನೋಜಭಂಜನಾ (ಕ್ಕಪ. ೬-೮೨). [ಸಂ.]

ಯಾಮಿಕವೃತ್ತಿ (ನಾ). ಪಹರೆಯ ಕಾಯಕ ; ಪ್ರಹರಿಯ ಕೆಲಸ : ಸದಭಿಜ್ಞೋತಕನೊರ್ ಪ್ರದೀಪಕರಣಂ ತಾನೇವುದುದ್ಯೋಧಕಾಸ್ಪದನೊಳ್ ಯಾಮಿಕವೃತ್ತಿಯೇವುದು ವಿಶುದ್ಧಾಕಾರನೊಳ್ ಸ್ನೇಹವೇವುದು (ಕಂದ್ರಕೃ. ೦೨-೨೦೬). [ಸಂ.]

ಯಾಮಿನಿ (ನಾ). ೧. ಇರುಳು ; ರಾತ್ರಿ : "ಇರುಳ್ ತಾಂ ಶ್ರಿಯಾಮ್ಯ ಯಾಮಿನಿಯಕ್ಕುಂ" (ಪಜ್ಞ. ೬೩೯. ೦೬-೫) ; ಯಾಮಿನಿಯ ಬೆನ್ನನೆ ಪೋಪ ದುಕೂಲಚ್ಛೀಲದಂಚಳಮನೆ ಪೋಯ್ತು ಚಂದ್ರಿಕೆ (ಪಗರಿ. ೦೬-೦೨೫) ; ಸವಿಗೆ ಬಂದನೆದಿರ್ದುದು . . . ಯಾಮಿನಿಯಂತೆ ಚಂದ್ರರುಚಿರಾಜಿತವಕ್ಷಯ ಮೂರ್ತಿಯಂತೆ ಮುಕ್ತಾಮಯಭಾಸಿ (ಕ್ಷತ್ರ. ೦೬-೮೬). ೨. ಅರಿಸಿನ : "ಯಾಮಿನೀ = ಅರಿಸಿನ" (ಶಿಪಾ. ೦೬೨). [ಸಂ. ಯಾಮಿನೀ]

ಯಾಮಿನಿವಿಹಾರ (ನಾ). (ಬೆಳದಿಂಗಳಿರುವ) ರಾತ್ರಿಯಲ್ಲಿ ಮಾಡುವ ವಿಹಾರ ; ಚಂದ್ರಿಕಾವಿಹಾರ : ಅನಿರುದ್ಧನೊಲಿದತಿಶಯದಿ ಸುರೊಡನೆ ಯಾಮಿನಿವಿಹಾರಗೈತಲಿ . . . ಸಂತಸದಿ ಗೃಹಕೆ ಬಂದ (ಕಕಪಚ. ೦೬ ಸಂಚಿ). [ಸಂ. ಯಾಮಿನೀವಿಹಾರ]

ಯಾಮಿನೀಪತಿ (ನಾ). ರಾತ್ರಿಯ ಒಡೆಯ ; ಚಂದ್ರ. [ಸಂ.]

ಯಾಮಿನೀವಿಯೋಗ (ನಾ). ರಾತ್ರಿಯನು ಕಳೆದುಹೋಗುವಿಕೆ ; ನಿಶಾಂತ:[ಪ್ರವ್ರ]ಜ್ಯಾಶ್ರಮಗರೂರ್ವರಾಸ್ಯತಿಲಕಂ ಯಾಮಿನೀವಿಯೋಗಮಂ ನಿರ್ವರ್ತಿಸಿ ರಾಜಮಂದಿರಕ್ಕೆ ವಂದು ಪಾರಣಾವಿಧಿಯೊಳ್ಮಹಾಹಾರ ಮನಾರೋಗಿಸಿ (ಪಂಂತಿಪು. ೯-೮೯ ಪ). [ಸಂ.]

ಯಾಮಿನೀವಿರಾಮ (ನಾ). ರಾತ್ರಿಯ ಮುಕ್ತಾಯ ; ಬೆಳಗು : ಮಱುದಿವಸಂ ಯಾಮಿನೀವಿರಾಮಮಪ್ಪುದುಂ ಪ್ರಯಾಣಭೇರಿಯಂ ಪೊಯ್ಪುದಾಗಳ್ (ಪಂಂತಿಪು. ೦೩೬-೦೯). [ಸಂ.]

ಯಾಮಿಸರ (ನಾ). ಚಂದ್ರ. [ಸಂ.]

ಯಾಮುನ (ಗು). ೧. ಯಮುನಾನದಿಗೆ ಸಂಬಂಧಪಟ್ಟ ; ಯಮುನಾನದಿಯಿಂದ ಬಂದ. (ನಾ). ೨. ಒಂದು ಬಗೆಯ ನೇತ್ರಾಂಜನ; ಸೌವೀರಾಂಜನ : "ಸ್ರೋತೋಂಜನಂ, ಸೌವೀರಂ, ಕಾಪೋತಾಂಜನಂ, ಯಾಮುನಂ – ೪ ಸೌವೀರಾಂಜನದ ಹೆಸರುಗಳು" (ಅಚಿಂ೦. ೩೦೩); "ಯಾಮುನಂ = ನೀರಾಂಜನ" (ಶಿಪಾ. ೦೩೨). [ಸಂ.]

ಯಾಮುನಕ (ನಾ). ಒಂದು ಬಗೆಯ ಖನಿಜಲವಣ ; ವೈಲುತುತ್ತ; ಮಯೂರತುತ್ತ : "ಯಾಮುನಕಂ – ಸ್ರೋತೋಂಜನ, ಮಯೂರ ಕುತ್ತ" (ಶಿಪಾ. ೦೩೨). [ಸಂ.]

ಯಾಮ್ಯ (ಗು). ೧. ಯಮನಿಗೆ ಸಂಬಂಧಿಸಿದ. ೨. ದಕ್ಷಿಣ ದಿಕ್ಕಿನ; ದಕ್ಷಿಣಕ್ಕೆ ಇರುವ. (ನಾ). ೩. ಯಮನ ಸೇವಕ ; ಯಮದೂತ : ಗಮ್ಯಯಲ್ಲದ ಸತಿಯನಾವಮ ಗಮ್ಯನಲ್ಲದ ವರನನಾವಳು ರಮ್ಯಮತದಲಿ ಗವಿಸುವರು ರಮಿಸುವರು ಮೇಣವರ ಯಾಮ್ಯರಾಧಯವ ಕಾದ ಲೋಹದ ಶರ್ಮಿಯನು ತೋಳುಗಳಲಪ್ಪಿಸಿ ಕರ್ಮ ಸವೆದನ್ನವರ ಬಿಡರೇಸರು ದುರಾತ್ಮಕರ (ಕಾಗಾ. ೩-೦೦-೨೯). ೪. ಚಂದನ; ಶ್ರೀಗಂಧ. [ಸಂ.]

ಯಾಮ್ಯದಿಶೆ (ನಾ). ದಕ್ಷಿಣ ದಿಕ್ಕು ; ತಳರ್ದು ಬಂದೀ ದ್ವಿತೀಯದ್ವೀಪದ ಯಾಮ್ಯದಿಶೆಯೊಳೆಸವಿಮುಕಾಧಾರಿನೇಧರದ ಮೂಡಣ ಭರಶಿದೊಳ್ (ಕಂದ್ರಕೃ. ೯-೭೯ ಪ); ಯಾಮ್ಯದಿಶೆಮುಂತೆ ಧರ್ಮಪ್ರಭಾವವಿಧಾವಿತ ಮುಮೆಂಬ ಮಹನೀಯಮಹಿಮೆಯಂ ತಳೆದು (ಕ್ಷತ್ರ. ೯-೩೦ ಪ). [ಸಂ. ಯಾಮ್ಯದಿಶಾ]

ಯಾಮ್ಯದ್ರುಮ (ನಾ). ಎಲವದ ಮರ : "ಯಾಮ್ಯದ್ರುಮಃ ೭ ಎಲವ" (ಶಿಪಾ. ೦೩೨). [ಸಂ.]

ಯಮ್ಮಾಸ್ತ್ರ (ನಾ). ಯಮನೇ ಅಧಿಷ್ಠಾನದೇವತೆಯಾಗಿರುವ ಬಾಣ ; ಯಮಾಸ್ತ್ರ : ದಿವಿಜರಿಪು ಯಮ್ಮಾಸ್ತ್ರದಿಂದಿಸೆ ಭುವನ ತುಂಬಿತು ಜವನ ಜಂಗುಳಿ (ಕಾಣಾ. ೪೦–೪೯). [ಸಂ.]

ಯಮ್ಮೆ (ನಾ). ೧. = ಯಮ್ಮದಿಶೆ : "ಯಮ್ಮಾ, ದಕ್ಷಿಣಾ, ಆವಾಚೀ –ಈ ಮೂಱು ತೆಂಕಣ ದೆಸೆ" (ಕರಾಟು. ೭೬–೧೦೦). ೨. ರಾತ್ರಿ. [ಸಂ. ಯಮ್ಯಾ]

ಯಾಯ (ನಾ). ಮುಪ್ಪುಗ ; ಪರಾಶ : "ಯಾಯಃ – ಮುತ್ಪಗ" (ಲಘು. ೦೬೨). [?]

ಯಾಯಜೂಕ (ಗು). ೧. ಮೇಲಿಂದ ಮೇಲೆ ಯಜ್ಞಮಾಡಿಸು. (ನಾ). ೨. ಮೇಲಿಂದ ಮೇಲೆ ಯಜ್ಞಮಾಡುವವನು: ಸತತವಾಗಿ ಯಜ್ಞಮಾಡುವವನು : "ಯಾಯಜೂಕಃ, ಜಜ್ಞಶೀಲಃ—ಅಗಾಗ್ಗೆ ಯಜ್ಞಗಳನ್ನು ಮಾಡುತ್ತಲೇಯಿರುವ ಸ್ವಭಾವಪಳ್ಪಿನ ಹೆಸರು" (ಸಿದ್ಧಾಂ. ೫೦೪): ಅಂತಃಪುರಾಂಗನೆಯರಮಿತಪ್ರಜೆವರಿವಾರಸಂತರು ಯಾಯಜೂಕಾದಿಗಳ್ ಪರಮಪ್ರಯಾಸಾಂತು ಮುಂದ್ಕೆದಲೆಂದಶಿಪರಂಪಡೊಳು ಕೈದಲು (ಪೊಣಾಗ. ೨–೨೬–೭೦). ೩. ಪೂಜಕ; ಆರ್ಚಕ: "ಯಟ್ಟ್- ಯಾಟ್ . . . ಯಾಯಜೂಕಃ—ಈ ೩ ಪೂಜಿಸುವಾತಂ" (ಕಾಟಕ್ಕ. ೦೬೦). [ಸಂ.]

ಯಾಯವಾರ (ನಾ). ೧. ತಿರುಪೆ ; ಭಿಕ್ಷೆ : ಬುಧವಾರವಾವೆ ಯಾಯವಾರ ಇಕ್ಕಬಾರದೇ ? (ಗಣ). ೨. ಭಿಕ್ಷಾವೃತ್ತಿ : ಯಾಯವಾರವು ಮುನ್ನಿಸುತದೊಬ್ಬತಿಥಿಗಿಕ್ಕುತಲೇಕಭುಕ್ತದಲಿ ತನ್ನ ಪರಮೌಪಾಸನವಾಗ್ಗಿಯ ಭಿನ್ನವಿಲ್ಲದೆ ಬೇಗಿ ರಾತ್ರಿಯ ಕನ್ನೆಯಲಿ ವಿಜಿತೇಂದ್ರಿಯಂಗಿದು ಬದುಕು ಲೋಕದಲಿ (ಕಾಬ್ಯಾ. ೫೦. ೩೪೦); ಯಾಯವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ ಪ್ರೀಯದಲಿ ತಾನೊಂದು ಕೊಡದ ಲೋಭಿ . . . ಗಾಯನವ ಮಾಡಲವ ಹರಿದಾಸನೇ (ಹರಾ. ೩೬). [<ಸಂ. ಯಾಯಾವರ]

ಯಾಯಾವರ (ಗು). ೧. ಅಲೆಮಾರಿಯಾದ ; ಎಲ್ಲಿ ಬೇಕೆಂದರಲ್ಲಿ ತಿರುಗಾಡುವ ; ನೆಲೆಯಿಲ್ಲದ. (ನಾ). ೨. ಧಾನ್ಯದ ಭಿಕ್ಷೆ ; ಕೋರಾನ್ನ : "ಯಾಯಾವರಃ—ಕೋರಾನ್ನಂ {ನ್ನ೧} " (ಶಾಕಟ್ಟ. ೦೬೩) ; ಯಾಯಾವರಂ ತಕ್ಕುದ ತಂದು ಜಡೆಯ ಶಂಕರಂಗಿತ್ತು ಪ್ರಸಾದಮಂ ಕೊಂಡು ಸುಬದೂಳಿರ್ದು (ಕಂಚಾ. ೫. ೯–೦೬). ೩. ಅಲೆಮಾರಿಯಾದ ಸಂತ. ೪. ಬ್ರಾಹ್ಮಣರಲ್ಲಿ ಒಂದು ಪಂಗಡದ ಹೆಸರು : ಗೌತಮ ಗೋತ್ರದ ಯಜುಶಾಖಿಯು ಯಾಯಾವರ ಗೌರಿದೇವಭಟ್ಟರ ಮಕ್ಕಳು ಪುಲ್ಲಿಭಟ್ಟರಿಗೆ ವ್ರಿಕ್ತಿ ೪ (ಕೌಶಾ. IX–ii. ೪೮೪–೫೬ ; 1511). [ಸಂ.]

ಯಾಯಿ (ಗು). ೧. ಹೋಗುವ ; ಸಂಚರಿಸುವ. (ನಾ). ೨. ಸಂಚಾರ ಮಾಡುವವನು ; ಪ್ರಯಾಣಿ ಮಾಡುವವನು : ವಿಪರೀತ ದೆಸೆ ಬುಧ ಶುಕ್ರ ರಾಹುಗಳ ಯಾಯಿಗಳಿಗಜಮು ನಿವಾಸಸ್ಥಾಯಿಗೊಳ್ಳಿತು (ಕಾಬ್ಯಾ. ೨೨–೪). [ಸಂ. ಯಾಯಿನ್]

ಯಾರಿ (ನಾ). (?) ; ವಾರಿಜಗಂಧಿ ನಿಸ್ಸಯ ಕಾಂತ ತಿರುಗದ ದಾರಿಯು ಹೋದಾತ ಬಹನೆ ಯಾ[ಪಾಣಾ. ಭೂ]ರಿಯ ಮಾಡದೆ ಮುನಿವಾರತೆಯು ವಿಚಾರಿಪುದೆಂದರಾಳಿಮನು (ಪೊಚಕ. ೫–೦೬). ; "ತಿರುಗುವ ಬುಗುರಿ" (ಪೊಚಕ. ೦೩೪). [?]

ಯಾರು ' ಯಾವುದು ' ಪರಾ.

ಯಾಲಕ್ಕಿ ' ಏಲಕ್ಕಿ ' ಪರಾ.

ಯಾಲಕ್ಕಿಬಾಳೆ (ನಾ). ಬಾಳೆಯಲ್ಲಿ ಒಂದು ಬಗೆ : ಹೋಬಾಳೆ ಯಾಲಕ್ಕಿ ಬಾಳೆ . . . ಮೊದಲಾದ ರಸ್ಯಸುಖಾಪ್ತ ಸಾರ್ವರ್ತ್ಯಕಮಾದ ಫಲಂಗಳುಳ್ಳ ತರುನಿಕರಂಗಳಿಂ (ಪಚೇ. ೨೨೬). [<ಏಲಕ್ಕಿಬಾಳೆ]

ಯಾಲಪದ (ನಾ). ಒಂದು ಬಗೆಯ ದೇಶೀಯ ಗೀತೆ.–ಪದ್ಯ : ಯಕ್ಷಗಾನಗ್ರಂಥಗಳಲ್ಲಿ ಯಾಲಪದವೆಂಬುದೊಂದು ಸಿಕ್ಕುತ್ತದೆ (ಕ್ಷಣ. ೦೬೪) ; ದೂಲಪದವೆ ತ್ಯಾಗಮಾಜಗಳು ಅಂಶಗಣಾನ್ವಯವಾದ ಉತ್ಸಾಹ ಲಯದಲ್ಲಿವೆ (ಕಂಕೋಗ. ೨೩೬. ೨೩೮) : 'ರುದ್ರಗಣಗಳಿಂದ' 'ಯಾಲಪದ' ರಚನೆಯಾಗುತ್ತದೆ. ಇದರಲ್ಲಿ ಒಂದು ಉಪಪಾದವೂ ಆ ಉಪಪಾದಕ್ಕೆ ಏಕಾಕ್ಷರಿಯ ಅಪಾಪಾದವೂ ಇರುತ್ತದೆ (ಸಂಕೋಗ. ೦೩೦). [<ಏಲಪದ]

ಯಾವ್ಯ ' ಯಾವುದು ' ಪರಾ.

ಯಾವ್ಯ (ಗು). ೧. ಜವೆಗೋದಿಗೆ ಸಂಬಂಧಿಸಿದ ; ಜವೆದಿಂದ ಮಾಡಿದ.–ತಯಾರಿಸಿದ. (ನಾ). ೨.ಜವೆಗೋದಿಯಿಂದ ತಯಾರಿಸಿದ ಆಹಾರ. ೩. ರಾಳ ; ಅರಗು : "ಅಲತಗೆ ಜತು ಲಾಕ್ಷಾದ್ರವ ಮಲಕ್ಕಂ ಯಾವಮಿವು ಸಮಾನಾರ್ಥಂ" (ಪಸ್ಕಾಕಾ. ೭೭–೦೩). [ಸಂ.]

ಯಾವಕ (ನಾ). ೧. ಜವೆಗೋದಿಯಿಂದ ತಯಾರಿಸಿದ ಆಹಾರ: ಜವೆಗೋದಿಯ ಗಂಜಿ. ೨. ಅರ್ಧಬೇಯಿಸಿದ ಜವೆಗೋದಿ : "ಅರ್ಧ ಬೇಯಿಸಿದ ಕಾಳು, ಗುಗ್ಗರಿ" (ಗಂಗಾಮ. ೫೭). ೩. ಒಂದು ಬಗೆಯ ದ್ವಿದಳಧಾನ್ಯ ; ಅಲಸಂದೆ : "ಯಾವಕಃ, ಯಾವಕಃ, ಕುರ್ಮಾಷಃ, ೩ ಅಲಸಂದಿಗೇ ಕಾಳು, ಕಾಪುಳುದ್ದಿಗೂ ಹೆಸರು" (ನಿಘಂ೧೨. ೫೭೯). ೪. ಅರಗು ; ಅಲತಗೆ : "ಜತು, ಯಾವಕಃ, ಲಾಕ್ಷಾ – ಈ ೩ ಅರಗು" (ಪಣಾಮು. ೯೦–೯೦೦). ' ಯಾವಕದ್ರವ ' ಪರಾ. [ಸಂ].

ಯಾವಕಕೃಚ್ಛ್ರ (ನಾ). ಒಂದು ಬಗೆಯ ಕೃಚ್ಛ್ರವ್ರತ ; P ಶುಕ್ಲ ಪಕ್ಷದಲ್ಲಿ ಆಹಾರವನ್ನು ತುತ್ಪುತುತ್ತಿಗಾಗಿ ಹೆಚ್ಚಿಸಿಕೊಂಡು, ಕೃಷ್ಣ ಪಕ್ಷದಲ್ಲಿ ಆಹಾರವನ್ನು ತುತ್ಪುತುತ್ತಾಗಿ ಕಡಿಮೆಮಾಡಿಕೊಳ್ಳುವ ವ್ರತ : ದೇವಕೃಚ್ಛ್ರ, ಯಾವಕಕೃಚ್ಛ್ರಾದಿ ಕೃಚ್ಛ್ರಂಗಳಂ ಪಕ್ಷಮಾಸಾದಿಕ. ಗಳಲ್ಲಿ ಅನ್ನವಂ ಪೆರ್ಚಿಸಿ ತಗ್ಗಿಸಿಕೊಂಬುದು (ಪಚೇ. ೦೨೨). ' ಚಾಂದ್ರಾಯಣ' ಪರಾ. [ಸಂ.]

ಯಾವಕದ್ರವ (ನಾ). ಅರಗಿನ ರಸ ; ಅಲತಗೆ : ವ್ಯಧುಪಾವತಳಂ ಗಳಸೂಡಿ ಯಾವಕದ್ರವದಿಂದಲಿ ಪ್ರತಿಲಿಪಿಸಮೂ ದೇವಿ ವಿಳೇಪಿತಕರ್ಮಮ ನೊರ್ವಳಮರವಧು ಕೆಯ್ಕೊಂಡಳ್ (ಕಾಂಬಪು. ೯–೦೬೪) ; ಯಾವಕದ್ರವದಿಂ ಪದತಳಮಂ ಲೇಸಿನಿಸಿದಿಸುಂ (ಸಂಭ್ರಶ್ರೀ. ೬–೬೬ ೩). [ಸಂ.]

ಯಾವತರಸ (ನಾ). = ಯಾವಕದ್ರವ : ಜನಜನಿಯ ಪದಸೇವೆಗೆ ಘನ ಸಂಧ್ಯಾರಾಗಲಕ್ಷ್ಯಮಂ ತಂದೀಗಳ್ ದಿಸಲಕ್ಷ್ಮಿ ಸಮರ್ಪಿಸಿದವಳೆನಿಸುದಳಿ ಯಾವತರಸದಿಂ (ಕ್ಷತ್ರಶ. ೯–೬೩). [ಸಂ.]

ಯಾವಜ್ಜೀವ$_1$ (ನಾ). ಜೀವನದ ಪೂರ್ಣಕಾಲ ; ಇಡಿಯ ಜೀವಮಾನ : ಹಿಂಸಾಧರ್ಮವ್ಯಕ್ತಿಯರಿ ನಡದು ಯಾವಜ್ಜೀವದಲಿ ಗತಿವಡದರುಂಟಿಲೆ ಪಾರ್ಥ (ಕಾಬ್ಯಾ. ೦೭–೦೩). [< ಯಾವಜ್ಜೀವ]

ಯಾವಜ್ಜೀವ (ಅ). ಜೀವಮಾನಪರ್ಯಂತ ; ಜೀವನಾಂತ್ಯದ ವರೆಗೂ : ಯಾವಜ್ಜೀವವೂ ಸತ್ಕೋಪಾಸರಾಗಿ . . . ಆ ಪುಣಾ ಶಾಸ್ತ್ರಜ್ಞರ ಅಕ್ಷಯಪ್ರತಿಭೆಯನ್ನು ಕೊಂಡಾಡೋಣ (ಕ್ಷತ್ರಶ್ರೀ. ೬) ; ತಂದೆಯು ರಾಜ್ಯವನ್ನಪಹರಿಸಿ ತಾವು ತಾಯಿಮ್ಮ ಪತಿಗಳೊಡನೆ ಯಾವ ಜ್ಜೀವವೂ ನಿರಾತಂಕವಾಗಿ ಸುಖವಸ್ಪಪಭವಿಸಬೇಕೆಂಬ ದುರುದ್ದೇಶ ದಿಂದಲೇ ಈ ಪಾತಸ್ಸಾಧಿಸರು (ಕಾಬ್ಯ. ೨೩). [ಸಂ.]

ಯಾವತ್ತು$_1$ ' ಏಪ್ಪೊತ್ತು ' ನೋ.

ಯಾವತ್ತು$_2$ (ನಾ). ಎಲ್ಲ ; ಸಮಸ್ತವಾದುದು ; ಯಾವತ್ತು [ಪಾಣಿನಿ. ಯಾವಂತಿ]ಗಣಿತಭಾಸ್ಕರಪಾಪಸ ಮುನಿತ್ರಯೈಸುದಯಮಮಳನಗುಣಸದ್ಭಾ ವದಿಗಂಬರಕುಳಮಂ ಧಾಮಿಸೆ ಬೆಳಗುವುದು ಯಂತ್ರಪುವನಿವ್ಯಕ್ತಂ (ಪಾರ್ಶ್ವಪು. ೦–೨೬); ಸೋತರು . . . ಗಜಘಟೆಗಳಂ ರಥ ಹಯ ಪದಾತಿ ಯಾವತ್ತು ಭಂಡಾರಮಂ (ಕುಂಗೆ. ೨೪–೮೨); ಚಂದಾಸಾಹೇಬರ ಫೌಜು ಯಾವತ್ತು ಮಾಳಗಿಯಿದರು (ಗಣೇಂಕ್ರ. ೦೩).

ಯಾವತ್ತರು = ಎಲ್ಲರು ; ಸಮಸ್ತರು : ಮರುದಿನ ಆ ಊರ

ಜಾತ್ರೆ ಆಗುತ್ತಿತ್ತು; ನೋಡಲಿಕ್ಕೆ ಯಾವತ್ತರೂ ಹೋದರು (ಕುಂಂದಾ. ೨-೩೦); ನಾನು, ದೇವತೆಗಳು, ಮನುಷ್ಯರು ಮುಂತಾದ ಯಾವತ್ತರಿಗೂ ಕೂಡ್ರತಕ್ಕ ಸ್ಥಳಸಿದ್ಧತೆಗಳನ್ನು ಮಾಡಿದೆನು (ಉದಾತ. ೦೭೩); ನಾನೊಬ್ಬಳೇ ಅಲ್ಲ, ಯಾವತ್ತರೂ ನಿನ್ನ ಗುಣವನ್ನು ಹೊಗಳುತ್ತಾರೆ (ಕೋಚಿಪ್ರ. ೨).

ಯಾವತ್ತುಗಳ್ = ಎಲ್ಲವೂ : ಪ್ರುರಥತುರಗ ಧೀರಾರಗಳನೆಲ್ಲ ಯಾವತ್ತುಗಳ್ಕೊಯ್ದು (ಕುರಂಗ. ೩೨-೦೩); ಧರಣಿ ಯಾವತ್ತುಗಳ್ಗಪಗಾದ ರಾಜ್ಯವಂ ಬಿಟ್ಟು ಇನ್ನೆನ್ನೆತ್ತಣದು ಸ್ವರ್ಗಸುಖ (ಕುರಂಗ. ೪೨-೯).

[ಸಂ. ಯಾವತ್]

ಯಾವತ್ತೂ ' ಏವೊಬ್ಬುಂ ' ನೋ.

ಯಾವನ (ನಾ). ೧. ಯವನದೇಶದವನು ; ಯವನ ; ಮ್ಲೇಚ್ಛ : ಉದಯಿಸಿದಂ ಪ್ರತಾಪನಧಿ ಬಿಜ್ಜಲದೇವಧರಾಧಿವಾಥನತ್ತುದಯಿಸೆ ಯಾವನೋದ್ಧತವಧೂತತಿಗುತ್ಕಳಿಕಾಪ್ರಪಂಚಂ (ಪಾ. XI, ರಾಜಾ. ೪೨-೨೩; ಪು. ೧೧೭೫); ನಿತ್ಯನೈಮಿತ್ತಿಕಾವ್ಯಾತುಗಳಂ ಪಂದು ಯಾವನಾಸ್ಪಗಳುಂಡು ಲೋಕನಿಂದಿತನಾದರೂ . . . ವಲ್ಲಮಂ ಬೀತು ಹೋಗುವಡೆ ವ್ಯಾಯಶ್ಚಿತ್ತ ಹರಿನಾಮಪ್ಯಾತನೆಂದರುಪುವುದು ಶ್ರುತಿಗಳನವರತ (ವಂಕಾರಾ. ೪-೦೨-೯). ೨. ಒಂದು ಬಗೆಯ ಧೂಪದ್ರವ್ಯ : " ಯಾವನಃ— ಕುಂದುರುಷ್ಕ, ತದುಕ್ತಿನ ಧೂಪ ." (ಓಪಂ. ೦೭೩).

[ಸಂ.]

ಯಾವನಾಳ (ನಾ). ಒಂದು ಬಗೆಯ ಧಾನ್ಯ ; ಯವನಾಲ : "ಯಾವನಾಳಃ = ಜೋಳಂ" (ಕಾಶಿ. ೦೭೩); ಅಂತು ಕೊಂಡ ಪದವಲಿಗಳೊಳ್ ಕಳಮುಷಪ್ಪಿಕಾವ್ರೀಹಿಯಪಯಾವನಾಳ . . . ವಿವಿಧ ಧಾನ್ಯ ಭೇದಂಗಳುಂ (ಅಂಪ್ರ. ೬-೬೨ ಪ); ಪುಜುದಿನ ಯಾವನಾಳದ ಪುಜಿಯು ಕದಡದು ಕುಡಿಯಲೊಲ್ಲದೆ ಕೆಡಹಿ ಕಳೆದನು ಯೂಳಿಯಾಡುತವಳಿತ ಹೋರುತಿರೆ (ಸಂಚಿಪ. ೦೭-೦೩).

[ಸಂ. ಯವನಾಲ]

ಯಾವನಿ (ಗು). ೧. ಯವನರಿಗೆ ಸಂಬಂಧಿಸಿದ ; ಯವನ ದೇಶೀಯವಾದ. (ನಾ). ೨. ಯವನಜನದ ಭಾಷೆ, ಲಿಪಿ ಇತ್ಯಾದಿ : " ಯಾವನೀ = ಪರಂಗಿ ಲಿಪಿ " (ಕಾಶಿ. ೦೭೩).

[ಸಂ. ಯಾವನೀ]

ಯಾವನು ' ಯಾವುದು ' ಪರಾ.

ಯಾವರು 'ಯಾವುದು ' ಪರಾ.

ಯಾವಸ (ನಾ). ಹುಲ್ಲಿನ ರಾಶಿ : ಖಷ್ಯಾಯುಧಂ ಯಾವಸು ಪೆರ್ಚಲ್ಕೀಯದೆ ಕಿಟ್ಟಿದರ್ (ಪಪ್ಪಕಂ. ೨೩).

[ಸಂ.]

ಯಾವಳು ' ಯಾವುದು ' ಪರಾ.

ಯಾವಾತೆ ' ಯಾವುದು ' ಪರಾ.

ಯಾವಾಗ (ಅ). ಯಾವ ಸಮಯದಲ್ಲಿ ; ಯಾವ ಹೊತ್ತಿಗೆ ; ಎಂದು : ನಿನ್ನ ನಾಟಕ ಯಾವಾಗಪ್ಪ ರಾದಾ (ಕಟಾಣಾ. ೦೭).

ಯಾವಾಗಾದರೂ = ಯಾವ ಸಮಯದಲ್ಲಾದರೂ ; ಯಾವಾಗಲಾದರೂ : (೨), **ಯಾವಾಗಿನಂತೆ** = ಎಂದಿನಂತೆ ; ರೂಢಿಯಂತೆ : (೨) [ಯಾವ$_1$ (< ಯಾವುದು) + ಆಗ$_1$ (< ಆಗತು)]

ಯಾವಾಗಲು, ಯಾವಾಗಲೂ (ಅ). ಸದಾಕಾಲ ; ಎಲ್ಲಾ ಕಾಲದಲ್ಲಿಯೂ ; ಒಂದೇ ಸಮನೆ ; ನಿರಂತರವಾಗಿ : ಯಾವಾಗಲು ಹೋಬಾರದ ವಾಸುದೇವನೆ ಕೈಬಿಡಬೇಡವೆಂದೆನುತಲಿ (ಕುರಂಪ್ರ. ೨-೦೦೫ ಪದ್ಯ).

ಯಾವಾಗಲೂ : ಯಾವಾಗಲೂ ದಿಳುದಿನಗಳಿನಿಂದ ತುಂಬಿದ ಪಿಸುನೆಯ, ಮೆಲುಮಾತಿನ, ಒಲವಿನ ನೋಟಗಳಿಂದ ತುಂಬಿದ್ದು ದಾಂಪತ್ಯಜೀವನ (ಕೂಪ್ರ. ೫೦).

ಯಾವಾಗಲಾದರೂ = ಯಾವಾಗ ಬೇಕೋ ಆಗ ; ಯಾವಾಗಲಾದರೂ ಚಾರಲಿ ನಾನು ಎದ್ದು ಬಾಗಿಲು ತೆಗೀತೀನಿ (ಪೂಕಪ್ರ. ೦೪).

[< ಏಗಳ್]

ಯಾವಾಗಲೂ ' ಯಾವಾಗಲು ' ನೋ.

ಯಾವಾತ ' ಯಾವುದು ' ಪರಾ.

ಯಾವುದು (ನ). ರೂಪಗಳು (ಪುಂ. ಏಕ) ಯಾವನು, ಯಾವಾತ : (ಸ್ತ್ರೀ. ಏಕ) ಯಾವಳು, ಯಾವಾಕೆ ; (ಬಹುವ) ಯಾರು, ಯಾವರು, (ವಿಶೇ) ಯಾವ್ಮ, ಯ್ಯಾ$_1$: ೧. ಎಂತಹುದು, ಎಲ್ಲಿಯದು, ಏನು ಎಂಬರ್ಥದಲ್ಲಿ ಬಳಕೆಯಾಗುವ ಪ್ರಶ್ನಾರ್ಥಕ ಸರ್ವನಾಮ : ದಾರಿ ಯಾವುದಯ್ಯ ವೈಕುಂಠಕೆ ಪಾದಿ ತೋಜೆಸಯ್ಯ (ಪುರಂದ. ೨-೦೩೭ ಪದ್ಯ) ; ಯಾವುದೊ ಅಸಲಿನ ಯಾವುದೊ ಬಡ್ಡಿದರದ ರಾಸುಗಳನ್ನು ಹಿಂಜಿ ತೆಗೆದು . . . ಅನೇಕರಿಗೆ ತಿಳಿಸಿಕೊಟ್ಟು ದಣದಿದ್ದೇನೆ (ಗಾಆಕ. ೦೬೬). ೨. ಸಂಬಂಧಾರ್ಥಕ ಸರ್ವನಾಮ : ಯಾವುದು ನನಗೆ ಒಪ್ಪಿಗೆಯೋ ಅದನ್ನು ತೆಗೆದುಕೊಂಡು ಹೋಗು (ಪುಕೃಬು. ೩೦) ; ಈ ಜೀವವನ್ನು ಯಾವುದು ನಿರ್ಮಿಸಿತೋ, ಸ್ವಪ್ನಶೀಲತೆಯನ್ನೂ ಅದೇ ಸೃಜಿಸಿತು (ರಚಿಕೃ. ೪). ' ದಾವುದು ' ಪರಾ.

ಯಾವನು : ಯಾವನೋ ಒಬ್ಬನು ಆ ದೇಶಕ್ಕೆ ಎಮ್ಮೆ ಕೋಣಗಳನ್ನು ಒಯ್ದನೆಂದು ಹೇಳುತ್ತಾರೆ (ಪುಂಕಾಯು. ೩-೨೪). ಯಾವಾತ : ಯಾವಾತನಾದರೂ ಸರಿ,ಕೊಡುವಾತನಾದರೆ ಸಾಕು (ಕೂಗೀ). ಯಾವಳು: (೨). ಯಾವಾಕೆ : (೨). ಯಾರು : ಯಾರಿಗೆ ಯಾರುಂಟು ಎರವಿವ ಸಂಸಾರ ನೀರ ಮೇಲಣ ಗುಳ್ಳೆ ನಿಜವಲ್ಲ (ಶ್ರೀರಂಪ್ರ. ೪-೩೫ ಪದ್ಯ); ಈ ಸುದ್ದಿಯನ್ನು ಯಾರು ಹೇಳಿದರು (ಪುಕೃಬು. ೦೩೩) ; ಯಾರದೋ ರೊಕ್ಕ ಯಲ್ಲಮ್ಮನ ಜಾತ್ರೆ (ಗಾಪ್ರ). ಯಾವರು : ವರ್ಣಧರ್ಮಂಗಳಂ ಯಾವರು ತ್ಯಜಿಸುತ್ತಾರೋ ಅವರು ಪಾಷಂಡಿಯೆನಿಸಿಕೊಂಬರು (ಕುಗಿ. ೨೩೦). ಯಾವ್ಮ : ಯಾವ ಕರ್ಮವೋ ಇದು ಯಾವ ಪುಣ್ಯವೋ (ಪುರಂಪ್ರ. ೩-೨೩ ಪದ್ಯ) ; ಆತ್ಮ ಯಾವ ಕುಲ ಜೀವ ಯಾವ ಕುಲ (ಶಿಪ್ರ. ೭೭-೩). ಯ್ಯಾ$_1$: ಯಾ ಆಸೆ ಜೀವಾಳದಿ ಉಳಿದು . . . ಮೂಡಿ ಬಂದಿತಿಲ್ಲಿ (ಶಿಪ್ರ. ೦೩೨-೦).

ಯಾವ ಗಿಡದ **ತೊಪ್ಪಲು** = (ಆಲಂ) ಯಾವ ಬೆಲೆಯೂ ಇಲ್ಲದಂತಹ ಸರಕು. — ಪದಾರ್ಥ : ಕೊತವಾಲ ಸಾಹೇಬರು ಯಾವ ಗಿಡದ ತೊಪ್ಪಲು ? ನಾನು ಮನಸ್ಸು ಮಾಡಿದರೆ ಓಡಿಸಿ ಬಿಡುವೆ (ಕೊಕಣಾ. ೩೬). **ಯಾವಲ್ಲಿ** = ಯಾವ ಸ್ಥಳದಲ್ಲಿ ; ಎಲ್ಲಿ : ಇಂಥ ವಸ್ತು ಯಾವಲ್ಲಿ ಸಿಕ್ಕುತ್ತದೆ ? (ಕೂಗೀ). **ಯಾವುದೊಂದು** = ಏನೊಂದು ; ಯಾವುದಾದರೂ ಒಂದು : ಯಾವುದೊಂದು ಕೆಲಸ ಮಾಡುವುದು ಎಲ್ಲರಿಂದ ಆಗದೆ ಹೋದಾಗ್ಯೂ, ಅದನ್ನು ಕೆಡಿಸುವುದು ಎಲ್ಲರ ಕೈಯಲ್ಲಿದ್ದೂ ಉಂಟು (ಪುಂಕಾಯು. ೪-೩೬).

[< ಅವುದು]

ಯಾಷ್ಟೀಕ (ನಾ). ದೊಣ್ಣೆಯನ್ನು ಹಿಡಿದಿರುವ ಸೈನಿಕ, — ಯೋಧ : "ಯಾಷ್ಟೀಕಃ, ಪಾರಶ್ವದಿಕಃ — ಈ ನಿನ್ನ ಕೃಪದಿಂದ, ಯಷ್ಟಿಸ್ವಧಿತಿ ಹೇತಿಕೌ — ದೊಣ್ಣೆಯೂ ಗಂಡಕೊಡಲಿಯೂ ಆಯುಧವಾಗಿ ಉಳ್ಳವರ ಪೆಸರುಗಳು" (ನಿಕ್ಕಂಂತಿ. ೨೩೭).

[ಸಂ.]

ಯಾಸ (ನಾ). ೧. ಪ್ರಯತ್ನ. ೨. ಒಂದು ಬಗೆಯ ಸಸ್ಯ; ಬಳ್ಳಿ ದುರುಚೆ : "ಯಾಸಃ, ಯವಾಸಃ . . . ದುರಾಲಭಾ — ೧೧ ತೀಟಕಸಂಧಿ ಪೆಸರುಗಳು. ಸಸುಗುನ್ನೇ ಪೆಸರುಗಳು. ತುರುಚೇ-ಳ್ಳಿ, ಬಳ್ಳಿದುರಿಚೆ" (ನಿಕ್ಕಂಂತಿ. ೦೩೩). ೩. ಕೊತ್ತುಂಬರಿ : "ಯಾಸಃ—ಬಳ್ಳಿದುಜುಚೆ, ಕುಸ್ತುಂಬರಿ" (ಓಪಧ. ೦೩೨).

[ಸಂ.]

ಯಾಸಿ ' ಯಾಸೆ ' ನೋ.

ಯಾಸೆ, ಯಾಸಿ (ನಾ). ಡೊಂಕಾದುದು ; ಓರೆಯಾದುದು ; ಸೊಟ್ಟಗಾದುದು; ನೇರವಲ್ಲದುದು : (ತೋಳದ) ಕಣ್ಣುಗಳು ಯಾಸೆಯಾಗಿ ಗುಡ್ಡೆಗಳು ಹುಚ್ಚಗೆ ಹೊಳೆಯುತ್ತವೆ (ಪುಂಬಾಯು. ೩-೦೩). **ಯಾಸಿ** : ಗೇಣು ಒಂದೂವರೆಗೇಣಗೊಂದು ಗೂಟಗಳನ್ನಾಗಲಿ, ಪೊಳೆಗಳನ್ನಾಗಲಿ ಕವಲಿನ

ಹಾಗೆ ಯಾವುಯ ಮೇಲೆ ಹೊಡೆದು ಆ ಹಳ್ಳದಲ್ಲಿ ನಡಿಸುವದು (ಕೃಷಿಕ್ರ-೪೦).
[< ಏಸೆ?]

ಯಾಹೊತ್ತು (ಅ). ಎಲ್ಲ ಕಾಲದಲ್ಲಿಯೂ ; ಸದಾಕಾಲವೂ : ಕಂಡ ನಿನ್ನ ಅಂತರ್ಮುದಮರವರುಜನನು ತರೆಯಲಿಹನ . . . ಮೃತ್ಯುಲೋಕವನು ಅಮೃತನಂತೆ ಯಾಹೊತ್ತು ಕಾಣುವವನ (೦೪೪೦. ೦೬೯-೩).
[< ಏವೊಜ್ಜೂಂ]

ಯಾಳ್ ' ಯಾಟು್ ' ನೋ.

ಯಾಳ್‌ಪಾಣ (ನಾ). 'ಯಾಳ್' ಎಂಬ ವಾದ್ಯದೊಡನೆ ಹಾಡುವವನು: ಯಾಳ್ ಎಂಬ ಒಂದು ವಿಧವಾದ ತಂತ್ರೀವಾದ್ಯದ ಶ್ರುತಿಯೊಡನೆ . . . ಶಿವಶರಣರ ಗೀತಗಳನ್ನು ಹಾಡುತ್ತಿದ್ದವರಿಗೆ 'ಯಾಳ್‌ಪಾಣರ್' ಎಂದು ಹೆಸರು (೨೦೩೦. ೦೪ ೨೦೦೪). [← ತಮಿ. ಯಾಟುಪ್ಪಾಣರ್]

ಯಾಳ ' ಯಾಟು್ ' ನೋ.

ಯಾಳಿ (ನಾ). ಸಿಂಹದ ಮುಖ, ಆನೆಯ ಕೋರೆ ಹಾಗೂ ಸೊಂಡಿಲು ಇರುವ ಒಂದು ಬಗೆಯ ಕಾಲ್ಪನಿಕ ಪ್ರಾಣಿ : ಆ ಬಲದ ಸಿಂಹನ ತಲೆಯನ್ನು ಮೆಟ್ಟಿ, ಮೇಲಣ ಯಾಳಿಯನ್ನು ನೆಮ್ಮಿ. ಸಜ್ಜೆಗೆ ಆರೋಹಣ ಮಾಡು (೩೬೬೦. ೦೦೯-೦೦) ; ಕಳಿಭಾಗದಲ್ಲಿ ಯಾಳಿಗಳು. ಸಿಂಹಗಳು ಮತ್ತು ಆನೆಗಳು ಕತ್ತಲ್ಪಟ್ಟಿವೆ (ಪ್ರಬಾಸ್ತ್ರ. ೩೩).
[ದೇ.ಟಿ ತಮಿ. ಯಾಳಿ; ಮಲ. ಯಾಳೀ]

ಯಾಟು್, ಯಳ್. ಯಾಳ (ನಾ). ಒಂದು ಬಗೆಯ ತಂತೀವಾದ್ಯ: ಕೊಲಲಿನಿವು ಯಾಟು್ನಿದೆಂಬರ್ ತಮ್ಮಕ್ಕಳ ತೊಡಳ್ನುಡಿಯ ಕೀರ್ತಿವರೆ (೪೨೪೯. ೦-೭-೩). **ಯಾಳ್** : ಯಾಳ್ ಎಂಬ ಒಂದು ವಿಧವಾದ ತಂತ್ರೀವಾದ್ಯದ ಶ್ರುತಿಯೊಡನೆ . . . ಶಿವಶರಣರ ಗೀತಗಳನ್ನು ಹಾಡುತ್ತಿದ್ದವರಿಗೆ 'ಯಾಳ್‌ಪಾಣರ್' ಎಂದು ಹೆಸರು (೨೦೩೦. ೦೪ ೨೦೦೪). **ಯಾಳ** : ಯಾಳದ ಜತಿ. ಏಳೆಯ ಗತಿ ಏಳೇಳೆಂದು ಎಬ್ಬಿಸಿ, ಮುಸುಸು ಜೆದರಿಸಿ ಬಾಳ್ ಬಾಳ್‌ಬಾಳೆಂದು ತಂತಿಯು ತಾಳಕೆ ಮಿಡಿದಿರೆ, ಎಲ್ಲಾಯಿತು ಒಂದು (೧೦೧೩೪. ೦೦೬-೦೦). [← ತಮಿ. ಯಾಟುಬ್]

ಯಿಸಗ (ನಾ). ಒಂದು ಬಗೆಯ ಸಸ್ಯ : ಇಬ್ಬನಿ, ಪರಲೆ. ಇಟ್ಟೆವು. ಯಿಸಗ, ಮದರಾಸ್‌ಮಜ್ಜಿಗೆ (ಪ್ರಕಿಗ. ೨೬-೨೦೬). ' ಇಚಕ ' ಪರಾ.
[?]

ಯುಂಜಾನ (ಗು). ೧. ಜೋಡಿಸುವ; ಕೂಡಿಸುವ. ೨. ಸರಿಯಾದ; ಯೋಗ್ಯವಾದ. ೩. ಯಶಸ್ವಿಯಾದ ; ಏಳಿಗೆಯನ್ನು ಹೊಂದಿದ. (ನಾ). ೪. ಮೋಕ್ಷಪ್ರಾಪ್ತಿಗಾಗಿ ಯೋಗಸಾಧನೆಯಲ್ಲಿರುವ ಬ್ರಾಹ್ಮಣ : ಯುಂಜಾನರ ಹೃದಯಸ್ಥಿತ ಮಂಜುಳಚ್ಚಿದ್ರೂಪವರ್ಮ ಬೆಳಗಿನೊಳನಿಶಂ ರಂಜಿಪ ಗಿರಿಪುತ್ರಿಗೆ ನೀರಿಜಜನಮಂ ಬೆಳಗಿದಂ ಧರಿತ್ರೀಪಾಲಂ (ಗಂದ್ಧಳಿ. ೩-೦೨೩) ; ಯೋಗಿಗಳಲ್ಲಿ ಯುಕ್ತ, ಯುಂಜಾನ ಎಂದು ಎರಡು ವಿಧ. ಯುಕ್ತನು ಸರ್ವದಾ ಸರ್ವಜ್ಞನು. ಯುಂಜಾನನು ಬೇಕಾದಾಗ ಧ್ಯಾನದಿಂದ ಸರ್ವಜ್ಞನಾಗುವನು (ಪಿಂಡಾ. ೦೯೦). ೫. ಬ್ರಾಹ್ಮಣ.
[ಸಂ.]

ಯುಕುತ (ಗು). ೧. ಯೋಗ್ಯವಾದ ; ಉಚಿತವಾದ. (ನಾ). ೨. ಯೋಗ್ಯವಾದುದು ; ಸಮರ್ಪಕವಾದುದು ; ತಕ್ಕುದು : ಯುಕುತವಾಗಲಯುಕುತವಾಗಲಿ ಪರರು ಪಜ್ಞಿಸಲು ಸಕಲವೂ ಪರಮಾಯೆಯೆಂಬೀ ಮುಕುತನನುನು (೬೫೫೫. ೦೦-೦೪-೩೬). [< ಸಂ. ಯುಕ್ತ]

ಯುಕುತಿ. ಜುಕುತಿ. ಜುಕ್ತಿ. ಜುಗುತಿ. ಜುಪ್ತಿ (ನಾ). ೧. ಮಾರ್ಗ; ಪದ್ಧತಿ : ರೀತಿ ; ಕ್ರಮ : ಭಕ್ತಿರತಿಯ ವಿಳತೆಯ ಯುಕುತಿ[ಪಾಠಾ. ಯುಕ್ತಿ]ಯನೇನ ಬೆಸಗೊಂಬಿರಯ್ಯಾ (೦೪೪. ೩೦೬) ; ಆಸಿಧಾರಾವ್ರತ ಬೆಳೆವ ಯುಕುತಿಯ ಯುಂಕುತಿಗೋಸಿದವಾದಿಶಿವನಸವರತ ಜನಗಳಿಗೆ (೦೨೪೪. ೦೦-೪೩) ; ಮುಂದೆ ಬದುಕುವ ನಿನ್ನ ಯುಕುತಿಯನಿಂದು ತೋರೆಂದೆನುತಲಾರ್ಭಟದಿಂದ ಕೈವಿಡಿದೆಳೆದನಾ ಧನವ್ರತಿಯ ದಶಮುಖನು (೦೪೦೦. ೦-೯-೨೦). ೨. ಹಂಚಿಕೆ ; ಯೋಜನೆ ; ಉಪಾಯ : ಯುಕುತಿಯನ್ನಿದಕೆಲ್ಲ ಪಾರ್ಥನ ಶಕುತಿ ಘನವು (೪೨೦೦೪೪. ೯-೭೦). ೩. ಆಚಾರ ; ವರ್ತನೆ : ಸಕಲಕರಣಂಗಳನು ಒಸುಕಿಯ ಜ್ಯೋತಿಯಲ್ಲಿ ಸುಟ್ಟು ಯುಕುತಿಯ ವಿಭೂತಿಯ ಧರಿಸಲು ಮುಕುತಿಯಹುದಕೆ ಸಂದೇಹವಿಲ್ಲ (೩೬೬೪. ೬೬-೦೬೬) ; ಭಕುತರ ಬಿನ್ನಪಗೇಳಿಯೂ ಮುನಿಪತಿ ಸಕಲಾಗಮದ ಕೊಜ್ಜೆಯೊಳು ಯುಕುತಿಪ್ರಯುಕ್ತ ಭವ್ಯರ ಮುಳುಗಿಸುದನು (೪೦೬೦೦೦. ೫೦-೦). ಜುಕುತಿ : ೧. ಕಕಾರಕ್ಕೆ ತಕಾರಂ—ಯುಕ್ತಿ–ಜುತ್ತಿ. ಜುಗುತಿ, ಜುಕುತಿ (೪೪೦೪. ೫೬೪ ಕ್ರ.ಟೀ). ಜುಕ್ತಿ: ೧. "ಜುತ್ತಿ ಯುಕ್ತಿ" (೪೫೪೦. ೬೫). ಜುಗುತಿ : ೧. ಕಕಾರಕ್ಕೆ ತಕಾರ—ಯುಕ್ತಿ–ಜುತ್ತಿ. ಜುಗುತಿ, ಜುಕುತಿ (೪೪೦೪. ೫೬೪ ಕ್ರ.ಟೀ). - ಜುತ್ತಿ : ೧. "ಜುತ್ತಿಯೆಂದು ಯುಕ್ತಿ" (೪೫೦೦. ೬೯-೫೬೬) ; "ಜುತ್ತಿಯೆ ಪಾಂ ಯುಕ್ತಿಯಕ್ಕುಂ" (೪೪೪೦. ೨೨೯).
[< ಸಂ. ಯುಕ್ತಿ-/ಕ್ರಾ. ಜುತ್ತಿ]

ಯುಕುತಿವಿದ (ನಾ). ಯುಕ್ತಿಯನ್ನು ಬಲ್ಲವನು ; ಸಂಧಾನಚತುರ . ಯುಕುತಿವಿದರುಗಳಾಗಿ ವಿದ್ಯಾಧಿಕರೆನಿಸಿ . . . ಪರಪುರುಷಾರ್ಥಿಗಳು ವೈದಿಕರಲೇ ವಿದ್ವಾಂಸರೆನಿಸುವರು (೪೦೦೦೦. ೩-೦೩) ; ಸಕಲಾಗಮ ಬುಧಜನರು ಯುಕುತಿವಿದರು ಕವಿಗಳು ಕಾವ್ಯನಿಪುಣರಿಂದಕಲಂಕಸಭೆ ಯೊಪ್ಪತಿಪುದು (೦೪೦೦. ೩-೦೩). [<ಸಂ. ಯುಕ್ತಿವಿದ್]

ಯುಕ್ತ (ಗು). ೧. ಜೋಡಿಸಿದ ; ಸೇರಿಸಿದ; ಕೂಡಿಸಿದ. ೨. ಹೊಂದಿದ; ಪಡೆದ. ೩. ಸರಿಯಾದ ; ಯೋಗ್ಯವಾದ ; ತಕ್ಕುದಾದ : ಹಿಮ ಜೂಳಂ . . . ದೀಕ್ಷೆಯಂ ಕೆಯ್ಕೊಂಡು ಯುಕ್ತಾಚರಣದಿನಾತ್ಮದೊಳ್ ಸಮಾಧಿಪಡೆದು ಮುಡುಪಿ ಶರೀರಕ್ಕಲ್ಲದೊಳ್ ಸಾಮಾನಿಸದೇವನಾದೊಂ (೪೦೦೬೪. ೯-೨೬ ಪ). ೪. ಮಗ್ನವಾದ ; ಆಸಕ್ತವಾದ. ೫. ತರ್ಕದಿಂದ ನಿಷ್ಪನ್ನವಾದ–ಸಿದ್ಧವಾದ. (ನಾ). ೬. ಯೋಗ್ಯವಾದುದು: ವಿಯದ್ವಾಸಾವಧಿಯಾಗಿ ಪೆಜ್ಜೆ ಬೆಳೆದಿರ್ದ್ ಮತ್ತಿಯಂ ಕೃಷ್ಣಸಟ್ಟಿಯ ಕೂಸಾಗದೆ ಕಟ್ಟು ಮಾನುಷಜಿತ್ವಂ ನೋಜ್ಜು ಗೋಪಾಲರೊಳ್ ಭಯವರ್ಮಾ ಮಾಡದೆ ಮುದ್ದಿದೆಂಬವಟಿದೆಂಬಂತಾಯ್ತು ಯುಕ್ತಂ (೪೧೦. ೬-೭೮) ; ನಿನಗೆ ಅಗತ್ಯವಾಗಿ ಹೇಳತಕ್ಕದ್ದೆ ಯುಕ್ತವು (೦೪೯೦೦. ೭೬). ೭. ಯೋಗ್ಯನಾದವನು: ಉತ್ತಮನಾವನು : ನಿಮ್ಮ ಶರಣರ ಮುಂದೆ ನಾನೇತಕೆ ಯುಕ್ತೆನಯ್ಯಾ (೪೦೦. ೬೬೬). ೮. ತ್ರಿಕಾಲಜ್ಞನಾದ ಯೋಗಿ : ನೆನಪು ನಿಲಿಸುವನವನೆ ಯುಕ್ತನು ಪೆಸರಾರ್ಜಿಸಲುವನೆ ಶಕ್ತನು (೧೧೦೦. ೦೪-೭೭) ; ಯುಕ್ತನು ಸರ್ವದಾ ಸರ್ವಜ್ಞನು ಯುಂಜಾನನು-ಬೇಕಾದಾಗ ಧ್ಯಾನದಿಂದ ಸರ್ವಜ್ಞನಾಗುವನು (೩೦೦೦೦. ೦೯೦). ೯. [ಕಾವ್ಯವಿಮಾ] ಅರ್ಥಾಂತರನ್ಯಾಸಾಲಂಕಾರದ ಹತ್ತು ಪ್ರಭೇದಗಳಲ್ಲಿ ಒಂದು : ಉರುಪಿತ್ಪಲೋಕಪಲ್ಲವವಿರಚಿತಶಯನೀಯ ಮೆನ್ನ ಮೆಯ್ಯಂ ಪೀನ ಸ್ತನಪಸಲಪ್ರತಿನಿಧಿ ತತ್‌ಸ್ವರೂಪಗುಣಮುಕ್ತ ಮೆಯ್ಯುದೇವುಂ ಯುಕ್ತಂ (೪೦೦೦. ೩-೭೭). ' ಯುಕ್ತಾರ್ಥ ' ಪರಾ. ೧೦. [ಗಣಿತ] ಕೂಡುವುದು ; ಸಂಕಲನ : ಯುತಂ, ಯುಕ್ತಂ, ಮಿಶ್ರಂ . . . ಬತಂ ' ಂತಿನಿತುಂ ಕೂಡೋದಕ್ಕೆ ಹೆಸರು (೪೪೦೦೦. ೦೦-೦೩ ಪ).
[ಸಂ.]

ಯುಕ್ತಗ್ಗೆ (ಕ್ರಿ)- ಕೂಡಿಕೊಳ್ಳು ; ಹೊಂದಿಕೊಳ್ಳು : ಉಕ್ತದಿಂ ಧರೆಯೊಳಿಪ ಜೀವಿಗಳು ಜಲದಲ್ಲಿ ಯುಕ್ತಗ್ಗುವದನು ಜಲಪೂರ್ಮದಿಂ ನುಡಿವುದು (೪೦೦೦೦. ೦೨೨-೯). [ಯುಕ್ತ + ಕ್ಕೆ1 (< ಕೆಯ್1)]

ಯುಕ್ತ್ಯಯಾರಿಕೆ (ನಾ). ಅಧಿಕಾರ ; ಬಲ : ಮೇಲೆ ಬರದು ಇರುವ ಮಾರ್ಗ ಬಿಟ್ಟು ತಮ್ಮ ತಮ್ಮ ಯುಕ್ತ್ಯಯಾರಿಕೆಯಿಂದ ಮನಸು ಬಂದಂತೆ

ನಿವುಕ್ಷರಾಮತನ ಕೆರಯಿಂದಾ ಮೂಮುವದು (ಣಟೀಂತ್ರ. ೨೬೯)

[< ಯುಜ್+ಕ್ತಿ + —ಕೆ]

ಯುಕ್ತರಸೆ (ನಾ). ಒಂದು ಬಗೆಯ ಸಸ್ಯ ; ರಾಸ್ನೆ : "ಪರಾಷರ್ಯ. ಸುವಹಾ. ರಾಸ್ನಾ. ಯುಕ್ತರಸಾ — ಳಿ ಸ್ನಾದುಮಂಪಾಸ್ಕೆ. ರಾಸ್ನೆ" (ಕಣ್ಣಂಕ. ೦೮೮).

[ಸಂ. ಯುಕ್ತರಸಾ]

ಯುಕ್ತರೂಪಕ (ನಾ). [ಕಾವ್ಯಮೀ] ರೂಪಕಾಲಂಕಾರದಲ್ಲಿ ಒಂದು ಪ್ರಭೇದ ; ಸಮುಚಿತವಾದ ರೂಪಕ : ಮೊಗಮೆಂಬಂಬುಜದೆಲರಾ ನಗೆಯೆಂಬ ವಿಕಾಸಮೊಪ್ಪುವದಱಿಂಳ್ ಸುಬಾಗಂ ಮಿಗೆ ಕಣ್ಗಳೆಂಬ ತುಂದಿಗಳೊಗಬೊಗೆಯಿನೆನೆ ಸುಯುಕ್ತರೂಪಕಮುಮ್ಮಂ (ಯುಕ್ತರೂಪಕಂ) (ಕವಿಗಾ. ೩-೩೩). ☞ ಪ್ರಯೋಗವಲ್ಲಿ 'ಸುಯುಕ್ತರೂಪಕ' ಎಂದಿದ್ದು 'ಸು' ಎನ್ನುವುದು ಛಂದಸ್ಸಿಗಾಗಿ ಸೇರಿದೆ. [ಸಂ.]

ಯುಕ್ತಾಯುಕ್ತ (ಗು). ೧ ಯೋಗ್ಯವಾದ ಮತ್ತು ಅಯೋಗ್ಯವಾದ. (ನಾ). ೨. ಯೋಗ್ಯವಾದುದು ಮತ್ತು ಅಯೋಗ್ಯವಾದುದು : ಬೋಳನೂ ಯುಕ್ತಾಯುಕ್ತವನ್ನು ಮರೆತು ಮಾತಾಡಿದ ಹುಚ್ಚಾಟವನ್ನು ನೋಡದೆ . . . ಹೊರಟುಹೋದನು (ಅಂಬಿ. ೦೦ ೪೩೧೪೮). ೩. [ಕಾವ್ಯಮೀ] ಅರ್ಥಾಂತರನ್ಯಾಸಾಲಂಕಾರದ ಪ್ರಭೇದಗಳಲ್ಲಿ ಒಂದು : ಪರಿಣಧರಂ ಸೊಗಯಿಸಿವಂತಿರೆ ಕುಸುಮಿತ ಚೂತವಿತತಿ ಸೊಗಯಿಸಿತೆನಸುಂ ಸುರಭಿಸುಮಸನ್ಮಿದೋಷಾಕರವಿಲಸಿತವುಪ್ಪೆಡಿಂತು ಯುಕ್ತಾಯುಕ್ತಂ (ಕವಿಗಾ. ೩-೩೩). [ಸಂ.]

ಯುಕ್ತಾರ್ಥ (ಗು). ೧. ತರ್ಕಬದ್ಧವಾದ ಅರ್ಥಪುಳ್ಳ; ಸುಸಂಗತವಾದ. (ನಾ). ೨. ಸುಸಂಗತವಾದ ಅರ್ಥ.—ಅಭಿಪ್ರಾಯ. ೩. [ಕಾವ್ಯಮೀ] ಅರ್ಥಾಂತರನ್ಯಾಸಾಲಂಕಾರದ ಒಂದು ಪ್ರಭೇದ : ಸಲವ್ಯಾಪಿ ವಿಶೇಷಪ್ರಕಾರಕಂ ಯುಕ್ತಕರಿ ಯುಕ್ತಾಯುಕ್ತಂ . . . ವಿಪರ್ಯಯಂ ಯುಕ್ತಾರ್ಥಂ (ಕವಿಗಾ. ೩-೩೯). 'ಯುಕ್ತಿ' ಪರಾ. [ಸಂ.]

ಯುಕ್ತಿ (ನಾ). ೧. ಜೋಡಣೆ ; ಸೇರಿಕೆ. ೨. ಎತ್ತು, ಕುದುರೆ ಮೊದಲಾದುವುಗಳನ್ನು ಹೂಡುವಿಕೆ. ೩. ಸಾಧನೆ ; ಆಚರಣೆ ; ಅನುಸರಣೆ : ಈಸು ವಿಧದೊಳಗೆ ಅಂಗವಿಲ್ಲ ಮೇಲೆ ಸತ್ಪುರುಷನ ಸಂಗವಿಲ್ಲ ಯುಕ್ತಿಯಿಲ್ಲಾ ಎನಗೆ ಭಕ್ತಿಯೆಂತಹುದಯ್ಯಾ (ಬಸ. ೦೫೮) ; ಸಮಗ್ರ ಸಮನ್ವಯ ಸಿದ್ಧಾಂತದ ಪೂರ್ಣದರ್ಶನ . . . ಬುದ್ಧಿ ಆತ್ಮಶುದ್ಧಿಯಾಗಿ ಭಾವ ಅನುಭಾವವಾಗಿ, ಯುಕ್ತಿ ಈಶ್ವರಭಕ್ತಿಯಾಗಿ ಪಲ್ಲವಿಸಿದ ಯೌಗಿಕಜ್ಞಾನಿಗೆ ಮಾತ್ರ ಸಾಧ್ಯ (ಬಾಸ. ೦೦೦). ೪. ಯೋಜನೆ ; ಹಂಚಿಕೆ : ಉಪಾಯ : ಹಿಂದೆ ನಾನಾಯೋನಿಯಲ್ಲಿ ಬಂದನೆಂಬ ಹೇಯವಿಲ್ಲ ಮುಂದೆ ಮುಕ್ತಿಯೂಗಬೇಕೆಂಬ ಯುಕ್ತಿಯಿಲ್ಲ (ಬಸ. ೦೩) ; ಭಕ್ತಿಯಭಿಮಾನಗಳು ಭಕ್ತನೊಡನೊಡನೆ ಕೊರಗುತ್ತ ನಡದು ಬರುತಮಿರೆ ಯುಕ್ತಿ ಹೊದ್ದದ ಶಿವಸ್ನೇಹಿಗಳ್ಳರುತಮಿರೆ (ತಿರು. ೧೯. ೦೪-೦೩); ಹೋಕಾಯಂತ್ರದ ಯುಕ್ತಿಯನ್ನು ಇಟಲೀದೇಶದಲ್ಲಿ ಫ್ಲೀಯೋಜೀಯೋ ಎಂಬ ಮನುಷ್ಯನು ತೆಗೆದನೇದು ಬಹುಜನರು ಹೇಳುತ್ತಾರೆ (ಮುಂಬಾಸಾ. ೩-೨೩೨). ೫. ಕುತಂತ್ರ ; ಕಪಟಯೋಜನೆ. ೬. ಕೌಶಲ ; ನೈಪುಣ್ಯ : ಛಂದಸ್ಸು ಲಕ್ಷಣಮುಲಂಕಾರಭಾವರಸಮೊಂದಿ ಕಳವೆತ್ತ ಸತ್ಕತಿ ಚಮತ್ಕೃತಿ ದುಕ್ತಿಯೊಂ[ಣಾಂ. ಕೃಮೋ]ಮಿಲ್ಲದ ಕಾವ್ಯಮಶಾವ್ಯಮಹುದು (ಕೃಬಾಶಾ. ೦-೩). ೭. ಮರ್ಮ ; ರಹಸ್ಯ ; ಗುಟ್ಟು. ೮. ತರ್ಕ ; ವಾದ : ದೀಪಕ್ಕ ಅತಿಂಕ್ಷವಾದ ಆತ್ಮವೆಂಬುದೊಂದಿದೆ ಎಂಬ ವಿಷಯವನ್ನು ಯುಕ್ತಿಗಳಿಂದಲೂ ಅನುಭವದಿಂದಲೂ . . . ಸಿದ್ಧಪಡಿಸುತ್ತಾರೆ (ಪಾಣಕ್ಕ. II. ಪುಟ್ಟ.೩). ೯. [ಕಾವ್ಯಮೀ] ಕಥಾವಸ್ತುವಿನಲ್ಲಿರುವ ಘಟನೆಗಳ ಅನುಕ್ರಮ. ೧೦. ಉದ್ದೇಶವನ್ನು ಸೂಚ್ಯವಾಗಿ ಅಥವಾ ಸಾಂಕೇತಿಕವಾಗಿ ವ್ಯಕ್ತಪಡಿಸುವುದು. ೧೧. ತನ್ನ ರಹಸ್ಯವನ್ನು ಮರೆಮಾಡಿ ಇತರರಿಗೆ ಮೋಸಮಾಡುವ ಉಪಾಯವನ್ನು ಕೈಕೊಳ್ಳುವಿಕೆ : ತನ್ನ ಬಗೆಯಂ ವೆಜಂ ತೀರಿಯದಂತೆ ವಂಚಿಸುವುದರ್ಕೋದು ಕಜ್ಜಮನೆಸಗುವುದು ಯುಕ್ತಿಯೆನಿಪುದು : ಎಂತೆನೆ – ತಜಃಸಂಡಪ್ರತಿಮಭಟರ್ ತಱುಬುವಿನಂ ಪರಿವ ಕಳಿದಬಲದೊಳದೊರ್ವಂ ಮುಱುಮುಮು ಕೆಳಿಯ ದಬಮಿಱಿಯುಱಿ ಯೆಂದೊಜಱುತ್ತೆ ತಮ್ಮವರನೇ ತಱುದಂ (ಕಕ್ಕಕ. ೩-೦೩೦) ; ತನ್ನಯ ಮರ್ಮವ ಮರೆಮಾತಲ್ ಕ್ರಿಯದಿಂ ಪರರಿಂಗೆ ಇನ್ನು ವಂಚನೆ ಮಾಡ ಯುಕ್ತಿ (ಕಂಪಾ. ೦೩೦-೦). [ಸಂ.]

ಯುಕ್ತಿಗೆಡು (ಕ್ರಿ). ಆಚಾರ ತಪ್ಪು.—ಕೆಡು : ಸುಪಥಮಂತ್ರದುಪದೇಶಮ ಕಲಿತು ಯುಕ್ತಿಗೆಟ್ಟು ಪಡವಿರಯ್ಯಾ ತತ್ತ್ವಮಸಿಯೆಂಬುದನಱಿದು ಕತ್ತಲೆಯೊಡವಿರಯ್ಯಾ (ಬಸವ. ೯೦). [ಯುಕ್ತಿ + ಕೆಡು.].

ಯುಕ್ತಿಬಲ (ನಾ). ಸಾಧನೆಯಿಂದ ಪಡೆದುಕೊಂಡ ಬಲ.—ಶಕ್ತಿ : ಬಲವು ಮೂರು ವಿಧವಾಗಿರುವುದು. ಎಂತೆಂದೊಡೆ – ಆ ಕಾಯಬಲವು ಸಹಜವೆಂದೂ, ಕಾಲಜವೆಂದೂ, ಯುಕ್ತಿಕೃತವೆಂದೂ ಮೂರು ತೆರನಾಗಿರುವುದು . . . ರಸಾಯನಾದ್ಯೌಷಧಗಳಿಂದಾದ ಬಲವು ಯುಕ್ತಿಬಲವೆನಿಸಿಕೊಂಬುದು (ಸಣಕ. ೦೯). [ಸಂ.]

ಯುಕ್ತಿವಂತ (ನಾ). ಉಪಾಯಕುಶಲನಾದ ವ್ಯಕ್ತಿ ; ಚುರುಕಾದ ಬುದ್ಧಿಯುಳ್ಳವನು : ಆ ಹುಡುಗರಿಗೆಲ್ಲ ಸೀತಾರಾಮು ಎಂಬ ಹುಡುಗನು ಮುಖಂಡ . . . ಬಹಳ ಯುಕ್ತಿವಂತ (ಸಣತು. ೬). [ಸಂ. ಯುಕ್ತಿವತ್]

ಯುಕ್ತಿವಾದ (ನಾ). ದೃಷ್ಟಪ್ರಮಾಣವನ್ನು ಆಧರಿಸಿದ ವಾದ ; ಬೌದ್ಧಿಕವಾದ ; ವೈಚಾರಿಕವಾದ : ಯುಕ್ತಿವಾದದ ಪ್ರಬಲತೆಯಿಂದ ನಾಸ್ತಿಕವಾದಿಗಳು ವೇದಗಳನ್ನೂ, ವೇದವ್ಯಾಮಾಣ್ಯವನ್ನೂ ನಿರಾಕರಿಸಿದ್ದರು. ಅಂತಹ ಯುಕ್ತಿವಾದದ ಬಲದಿಂದಲೇ ವೇದವ್ಯಾಮಾಣ್ಯವನ್ನು ಆಸ್ತಿಕರು ನಿರೂಪಿಸತೊಡಗಿದರು (ಶಾಶಿ. ೦೩೦) ; ರಾಘವ್ಪನ ಯುಕ್ತಿವಾದವೂ ಸರಿಯಾದದ್ದೇ. ಕೆಲಸದಲ್ಲಿ ಘಟ್ಟಗಳವೆ. ಅಯಾ ಘಟ್ಟಕ್ಕೆ ತಕ್ಕಂತೆ ಆಯಾ ಜನರನ್ನು ಉಪಯೋಗಿಸಬೇಕು (ಸಂತಾಬಾ. ೩೩೦). [ಸಂ.]

ಯುಕ್ತಿಶಾಲಿ (ನಾ). = ಯುಕ್ತಿವಂತ. [ಸಂ. ಯುಕ್ತಿಶಾಲಿನ್]

ಯುಕ್ತಿಸು (ಕ್ರಿ). ವಿಚಾರಿಸು ; ಯೋಚಿಸು : ಮುಕ್ತಿಗರಸಂ ಪಾನೆ ಬಸವಂ ಭಕ್ತಿಗರಸಂ ತಾನೆ . . . ಅನಚಲಲಿಂಗಂ ಯುಕ್ತಿಸಲು ಸಚರಾಚರದ ಚರಲಿಂಗವೀ ಬಸವ (ಬಸ. ೦೦-೧೨) ; ಯುಕ್ತಿಸಲು ಮುನಿಸಿನ ನೆವದಿ ಕಲುಷೋಕ್ತಿಯುಂ ನಿನಗಾಂಟು (ಬಸ. ೪೭-೪೩). [ಯುಕ್ತಿ + — ಸ್ನು]

ಯುಕ್ತ್ಯಲಂಕಾರ (ನಾ). = ಯುಕ್ತಿ ೧೧ : ಕ್ರಿಯೆಯಿಂ ನೈಜಮರ್ಮಮಂ ಮರೆಗೆಯ್ದು ಪರವಂಚನೆಯಂ ನೆಗಳ್ತುದು ಯುಕ್ತ್ಯಲಂಕಾರಂ (ಕಕ್ಕ. ೨-೪೯೯ ಪ). [ಸಂ.]

ಯುಗ (ನಾ). ೧. ನೇಗಿಲಿನ ಅಥವಾ ಬಂಡಿಯ ನೊಗ : "ನೊಗ ನೆಂಬುದು ಯುಗನಾಮಂ" (ಪಪ್ಪ ೫೦. ೪೬-೪೯); ಆ ದಿವ್ಯರಥದ ಸಮೀಪಕ್ಕೆ ವಂದು . . . ಇಚ್ಛಾಮಾತ್ರವ್ಯಮ್ಮ ತಸಮಸ್ತಯುಗನದಱ ಯುಗಕೋಭೆಯುಮಂ . . . ನಿಜಾಗ್ರಜಂಗೆ ಕೋಜು ನಾಡಿಯಂ ಮೆಚ್ಚಿ ಬಿಚ್ಚಿರಿ (ಕಗಾ. ೯-೩೩ ಪ). ೨. ಬಂಡಿಯ ಮೂಕಿ : ಈಸು. ೩. ಜೊತೆ ; ಜೋಡಿ : " ದ್ವಂದ್ವಮುಭಯಂ ದ್ವಯಂ ಯುಗ್ಮ ಯಮಳಂ ಯುಗಂ ದ್ವೈತಮೆನಲು ಬೆರಡಕ್ಕೆ ಪೆಸರಕ್ಕು " (ಶಂಗಣ. ೦೫೯-೦೩); ಮತ್ಸ್ಯನೆಂಬ ಪರದಂಗೆ ಜೈನೆಯೆಂಬಳ್ ಕುಲವಾನಿನಿ ತದ್ಯುಗಕ್ಕೆ ಪೆಸರಿಂದೆ ನಂದನುಂ ಭದ್ರಸುಮಿ ತನೂಭವರಿರ್ವರಾ (ಶಾಶಪ. ೭-೩೦); ಪೂಜಿಸಿದಂ . . . ಜಿನಮುಖಪದಾಂಬುಜಯುಗಂಗಳಂ (ಭುಕ್ತ. ೯-೭). ೪. ಐದುವರ್ಷಗಳ ಅವಧಿ : ಅಯ್ದು ವರ್ಷದೊಳ್ ಯುಗಂ ಎರಡಾಯುಗಂ ದಶವರ್ಷಂ (ಕಂಣಪಾ. ೦-೩೩). ೫. ವಿಶ್ವದ ದೀರ್ಘವಾದ ಕಾಲಖಂಡ ; ☞ ಕೃತ.

ತ್ರೇತಾ, ದ್ವಾಪರ ಮತ್ತು ಕಲಿಯೆಂಬ ನಾಲ್ಕು ಯುಗಗಳು : ಇಂತೀ ಯುಗದೊಳ್ಪೋಗಳಂ ನಾರಾಯಣನೆಂ ನೀನುದಾತ್ತನಾರಾಯಣನೈ(ಹಂಪಶಾ. ೧-೧೩); ಪರರ ಗುಣಾಗಮವ ಪತಿಕರಿಸಿ ನುಡಿವವನೀಗಳಿವ ಯುಗದಾತನೇ (ಶಾಕ್ಕುಟ್ರೀ. ೨-೩೬) ; ಒದರೆಗಳಿಗೆಯುಸಿರೊಂದು ಬರಿಸದಂತೊದು ಜಾವವ ಯುಗದಂತೆ ಒದಿರುಳನು ಕಲ್ಪಕಾಲವಂತೆಣಿಪಳು (ಹರಿಶ. ೭-೨೭). ೬. ದೀರ್ಘವಾದ ಕಾಲ; ದೀರ್ಘಕಾಲಾವಧಿ : ಕ್ಷಣವೊಂದು ಯುಗವಾಗಿ ತೃಣಕಂತ ಕಡೆಯಾಗಿ ಎಣಿಸಲಾಱದ ಭವದಿ ನೊಂದೆ ನಾನು (ಹರಿಂಶ. ೦-೧೭-೨); ಕಾಲುಗಳಿಗೆ ಯುಗವಾಗೆ ಒಳೆದು ನಿನ್ನ ಮೇಲಣಾಸೆಯಲಿ ತಾನಿಹೆನು (ಕಂಪಂ. ೦೦-೭೩). ೭. ನಾಲ್ಕು ಮೊಳದ ಅಳತೆ ; ಮಾರು: ಯುಗಮಾತ್ರಕ್ಷೇತ್ರಮುಂ ಕಣ್ಣಾರಿಸೆ ನಡದೀರ್ಯಾವಿಶುದ್ಧಿಕ್ರಮಂ ಕೈವಿಗೆ . . . ಗೃಹದ್ವಾರದೇಶಕ್ಕೆ ವಂದಂ (ಪಾರ್ಶ್ವ. ೦೩-೦೫); ಅರ್ಜುನತಂ ಕಣ್ಗಳ್ ತಾತ್ಪರ್ಯದೆ ಯುಗಮಾತ್ರಧಾತ್ರಿಯಂ ಪರಿಸಿ ಮುಂದೀರ್ಯಾವಿಶುದ್ಧಿ ಸಮನಿಸೆ ಚರ್ಯಗೆ ನಡತಂದಂ (ಪಾರ್ಶ್ವ. ೦೩-೦೦೩). ೮. ಕುಂಡೆ ; ವೃಷ್ಣ : "ಕಟಿಪಾನು ಪ್ರೋಥಂ ಯುಗಂ ಕುಂಡೆಯಕ್ಕುಂ" (ಪುಂಗಣಾ. ೧೦-೦೩). 'ಯುಗಸಂಧಿ' ಪರಾ. ೯. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ : "ಧರಣಿ ಶಯನನೆಲೊಂದು ಕರ ಪೇತ್ರಮೆನಲೆರಡು ಪುರಹ್ಸ್ತಯ ಮೂಱು ಶ್ರುತಿ ಯುಗಾಯುಧಿ ನಾಲ್ಕು" (ಪುಂಗಣಾ. ೦೦೬-೮). ೧೦. [ಜ್ಯೋತಿ] " ಸಂಖ್ಯಾಯೋಗಗಳಲ್ಲಿ ಒಂದು [ಏಳು ಗ್ರಹಗಳೂ ಎರಡು ರಾಶಿಗಳಲ್ಲಿರುವುದು] " (ಜಾತಕ. ಹಾ. ೬-೪೮೦) : ಏಳೆ ಸಪ್ತಗ್ರಹವೊಂದೆ ರಾಶಿಯೊಳೆ ಯೋಗಂ ಗೆಣೆಗಾಪಾಂ ಯುಗಂ ಏಳೆ ಗೇಹದ್ವಯದೊಳ್ (ಜಾತಕ. ೬೬-೩). 'ಯುಗಯೋಗ' ಪರಾ.

ಯುಗಯುಗ, ಯುಗಜುಗ (ದ್ವಿರುಕ್ತಿ) : ಯುಗಯುಗಕೂ ಉರುಳು ತಿಹುದು ಜಗದ ರಥದ ಗಾಲಿ (ಕಂಪಂ. ೨೪-೦); ಯುಗ್ಮಜುಗಂಗಳಲ್ಲದಂದು ಊರ್ಧ್ವಮುಖನೆಂಬ ಗಣೇಶ್ವರನು (ಅಪಪಂ. ೨-೬); ಯುಗಜುಗದ ಪರಿವಾಕದಿಂದ ಬರಲಿರುವಂಥ ಸ್ನೇಹಸಾರದ ಹದವನರಿವವೇ ? (ಶಾಪ್ರಾ.೮-೨೬-೪). [ಸಂ.]

ಯುಗಂಧರ (ನಾ). ಬಂಡಿಯ ಈಸು ; ಮೂಕೆ : "ಕೂಬರಂ ಯುಗಂಧರಂ – ಈ ೨ ಈಸು" (ಪಣಾಮು. ೬೩-೨೮೩); "ಯುಗಂಧರೋದ್ದೇಶದಲ್ಲಿ ಕೂಬರಮಕ್ಕುಂ" (ಪಮ್ಮಟೀ. ೮೬-೨೯). [ಸಂ.]

ಯುಗಕೀಲಕ (ನಾ). ನೊಗದ ರಂಧ್ರದಲ್ಲಿ ಸೇರಿರುವ ಗೂಟ : "ಶಮ್ಯಾ. ಯುಗಕೀಲಕಃ–ಈ ೨ ಕಳಯಜಕಂ" (ಪಣಾಮು. ೮೨-೮೨೦). [ಸಂ.]

ಯುಗದ್ವಯ (ನಾ). ಎರಡು ಜೊತೆ ; ನಾಲ್ಕು : 'ಯುಗದ್ವಯವದನ' ಪರಾ. [ಸಂ.]

ಯುಗದ್ವಯವದನ (ನಾ). ನಾಲ್ಕು ಮುಖಗಳುಳ್ಳವನು; ಚತುರ್ಮುಖ; ಬ್ರಹ್ಮ : ಗಡಗಡನೆ ನಡುಗುತ ಯುಗದ್ವಯವದನ ಕೈಮುಗಿದೆನ್ನ ಬರಿಸಿದ ಹದನದೇನೆನೆ (ಕೊಡಗ. ೬-೩೬-೮೩). [ಸಂ.]

ಯುಗಧರ್ಮ (ನಾ). ೧. ಆಯಾ ಕಾಲಮಾನದ ಸ್ವಭಾವ : ಕಲ್ಕಪದ ಯುಗಧರ್ಮವೆಯ್ದೆ ಪೊರ್ದಿದಾ ತನಗೆ (ಪಂಪಪು. ೯-೪). ೨. ಆಯಾ ಕಾಲಮಾನಕ್ಕೆ ಹೊಂದಿಕೊಳ್ಳುವ ನಡವಳಿಕೆ.–ಆಚಾರ.–ನಿಯಮ: ಯುಗಧರ್ಮವೆಂದರೆ ಆಯಾ ಯುಗಗಳ ಸಮಯ ಸಂದರ್ಭಾನುಸಾರವಾಗಿ ನಡೆಯಬೇಕೆಂದು ಉಕ್ತವಾದ ನಿಯಮಗಳು (ಆದಿಪು. ೦೦). [ಸಂ.]

ಯುಗನಾಯಕ (ನಾ). ಯುಗದ ಮುಂದಾಳು ; ಯುಗದ ಜನರಲ್ಲಿ ಶ್ರೇಷ್ಠನಾದವನು : ಯುಗನಾಯಕನೆನೆ ನಿಜಪದಯುಗಮಮಿತಸುರೇಂದ್ರನೆನೆ ಯುಗಂಧರದೇವಂ ನೆಗಲ್ದಪೋಗಳ್ (ಆದಿಪು. ೩-೩೦). [ಸಂ.]

ಯುಗಪತ್ತು (ಅ). ಒಮ್ಮೆಲೆ ; ಏಕಕಾಲದಲ್ಲಿ : "ಒಡಸಲ್ವುದೇಕಕಾಲಂ ಯುಗಪತ್" (ಪಮ್ಮಟೀ. ೦೬-೦೬) ; ಯುಗಪದ್ವಾದಿತ ದೇವದುಂದುಭಿಗಳಿಂದಾಪ್ತೆದ್ದೆ ಶ್ರುತ್ವಾತ್ಮಕಂ ಜಗಂ (ಆದಿಪು. ೦೦-೨೦): ಯುಗಪತ್ಕರ್ಮವಿಧಾನದಿಂ ಯುಗಪದುತ್ಪಾನಾಂಗ ಸಂಸ್ಥಾನದಿಂ ಯುಗಪದ್ವಿಭ್ರಮವೇಗದಿಂ ಯುಗಪದಧ್ಯವಸಿತಚಾತುರ್ಯದಿಂ ಯುಗಪಪ್ರಗ್ರಹ ಏಗೆಲ್ಲೆಗೆಲ್ದ ಕ್ಷಣತದಿಂ ಕೋಲಾಟದೊಳ್ ಕೃಷ್ಣನಂ ಬಗೆಗೊಂಡರ್ ಸಮಸಪ್ತ್ಯವಿಭ್ರಮಕೆಯರ್ ಶ್ರೀರೂಪೆಯರ್ ಗೋಪಿಯರ್ (ಹರಿ. ೩-೦೩) ; ಪರಮಹಂಸನ ದೀಕ್ಷೆ ತಾಳಿದ ವರಮಹಾರಘುರಾಯನೊಂದೆಡೆ ಪರಮಲಕ್ಷತೆಯಿಂದ ಪ್ರಜೆಗಳ ಪೊರೆವ ರಾಘವನು . . . ಧರೆಯ ಮೇಲವತರಿಸಿ ಯುಗಪತ್ತಿರದೆ ಬಂದಿಹ ಧರ್ಮಕರ್ಮಗಳಂತೆ ತೋರಿದರು (ಕಥಾಮಂ. ೬೬-೦೬). [ಸಂ. ಯುಗಪದ್]

ಯುಗಪತ್ರಕ (ನಾ). ಕೆಂಗಾಂಚಾಳದ ಗಿಡ ; ಕೋವಿದಾರಸಕ್ಕ: "ಕೋವಿದಾರಃ. ಚಮರಿಕಃ. ಕುದ್ದಾಲಃ. ಯುಗಪತ್ರಕಃ– ೪ ಕೆಂಪು ಕಾಂಚವಾಳದ ಗಿಡ. ಕೆಂಗಾಂಚಾಳ ಹುವ್ವಿನ ಗಿಡ" (ಕಬ್ಬಾಕ. ೦೦೭). [ಸಂ.]

ಯುಗಪದುಕ್ತಿ (ನಾ). ಎಲ್ಲರನ್ನೂ ಕುರಿತು ನುಡಿಯುವುದು.– ಒಳಗೊಂಡು ಹೇಳುವುದು : ಪುರುಪತ್ರಯಮುಂ ಸ್ವಾರ್ಥೋಚ್ಚರಿತಂಗಳ್ ಯುಗಪದುಕ್ತಿಗುತ್ಪಪುರುಷಂ ಪರಮದನುಬಂದಿರೆ ಮಧ್ಯಮಪುರುಷಾಕೃಮಗಣಮಿರೆಯುಮೊಲ್ಮಂತಿರೆಯುಂ (ಕಪ್ರಾದ. ೨೨೩). [ಸಂ.]

ಯುಗಪರಿವರ್ತನ (ನಾ). ಒಂದು ಯುಗದ ನಂತರ ಮತ್ತೊಂದು ಯುಗವು ಬರುವುದು : ಯುಗಪರಿವರ್ತನಕ್ಕೆ ಪೋಗುಂಬ ಸುಖಕ್ಕೆ ನಿವಾಸ ಮೆಂಬ ಶೋಭೆಗ ಮೊದಲೆಂಬ . . . ಕಥಾಕಥನಂ ವಿದೇಹದೊಳ್ (ಪಾರ್ಶ್ವ. ೨-೩). [ಸಂ.]

ಯುಗಪಾರ್ಶ್ವಗ (ನಾ). ನೊಗಕ್ಕೆ ಹೂಡುವ ಎತ್ತಿನ ಪಕ್ಕದಲ್ಲಿ ಕಟ್ಟುವ ಮಜ್ಜೊಂದು ಎತ್ತು : "ಪ್ರಷ್ಠವಾಟ್. ಯುಗಪಾರ್ಶ್ವಗಃ – ೨ ಉಕ್ಕೆಗೆ ತಿದ್ದಲೆಂದು ನೊಗವನ್ನು ಹೊತ್ತು ನಿಲಿಯುವ ಎತ್ತಿನ ಕೆಲದಲ್ಲಿ ಕಟ್ಟಲ್ಪಟ್ಟ ಎತ್ತು. ತಿದ್ದಲ್ಪಡುತ್ತಾಯರುವ ಎತ್ತು" (ಶಬ್ಕೋ. ೨೪೭). [ಸಂ.]

ಯುಗಪುರುಷ (ನಾ). ಒಂದು ಕಾಲದ ಅತ್ಯಂತ ಸತ್ತ್ವಶಾಲಿಯಾದ ವ್ಯಕ್ತಿ : ಒಂದು ಹೊಸಯುಗವನ್ನೇ ಆರಂಭಿಸುವ ಮಹಾವ್ಯಕ್ತಿ: ಇವು ಗಾಂಧೀಯುಗ ; ಮಹಾತ್ಮಾಗಾಂಧಿಯವರು ಯುಗಪುರುಷರು (ಕೃಚರಿ. ೦); ಯುಗಪುರುಷರ ಜಗಲಿಗಿರಿಸಿ ಕೈಯ ತೊಳೆದುಕೊಂಡವು (ಪಂಪಪು. ೨೪-೨೦). [ಸಂ.]

ಯುಗಪ್ರವರ್ತಕ (ನಾ). ೧. ಯುಗಗಳನ್ನು ಉಂಟುಮಾಡುವವನು : ಯುಗಾದಿಕೃತು ತಾ ಯುಗಪ್ರವರ್ತಕನೆನಿಸಿ ಧರ್ಮಪ್ರಭುತನು ತಾನಾಗಿ ಭಕುತರಿಗೀವ ಸಂಪದವ (ಹರಿಶ.೬-೦೩). ೨. ಒಂದು ಕಾಲಮಾನದ ಜನಜೀವನಕ್ಕೆ ಸಂಪೂರ್ಣ ಹೊಸದಾದ ರೂಪವನ್ನು ತಂದು ಕೊಡುವವನು ; ಯುಗಪುರುಷ : ಕ್ರಾಂತಿಗೆ ಮೂಲ, ಆದರ್ಶಸಾಹಿತ್ಯ. ಯುಗಪ್ರವರ್ತಕರನೇಕರು ಇದನ್ನು ತೀರ ಹತ್ತಿರಕ್ಕೆ ಜಗ್ಗಿ "ಸಹೋದರ" ಭಾವವನ್ನು ಹುಟ್ಟಿಸಿದರು (ಕೃಬಂಧ. ೦). [ಸಂ.]

ಯುಗಯೋಗ (ನಾ). = ಯುಗ ೧೦ : ಏಳು ಗ್ರಹಗಳೂ . . . ಎರಡು ರಾಶಿಗಳಲ್ಲದ್ದರೆ ಯುಗಯೋಗ (ಜಾತಕ. ೦-೬ ೦೦೫). 'ಯುಗಯೋಗಜಾತ' ಪರಾ. [ಸಂ.]

ಯುಗಯೋಗಜಾತ (ನಾ). [ಜ್ಯೋತಿ] ಯುಗಯೋಗದಲ್ಲಿ ಹುಟ್ಟಿದವನು : ಯುಗೆಯೋಗಜಾತನಧನಂ ಪಾಪಂಡಿ (ಜಾತಕ. ೦೬-೦೩). [ಸಂ.]

ಯುಗಲ, ಯುಗಳ (ನಾ). ೧. ಜೊತೆ ; ಜೋಡಿ : ಮುಂಗಿಲ ಯುಗಲದಂತೆ ಬಂದು ಸೇರಿ ಸಾರಿ ಅಗಲದೆ . . . ಬಾಳಬೇಕು, ಬೆಳೆಯಬೇಕು, ಸಮ್ಮ ಕ್ಷಣಕಮೆನಿಸದೆ ! (ಶಾರ್ಙ. ೨೪-೦೭) ; ಕೋಗಿಲೆಯು ಏಕಾಕಿನಿ ! ಶನ್ನ ಯೋಗೀಶ್ವರನು ಬಾರದೆ ಯುಗಲವರಿಯದ ಯೋಗಿನಿ !

(ಕಂಕಪ. ೧೯-೦೬). **ಯುಗಳ** : ೧. " ಯುಗಂ, ಯುಗ ೦. ಯುಗಳಂ . . . ಈ ೮ ಅವುಳ್" (ಪಜಾಯು. ೦೧೬-೦೩). ೨. ಅವಳಿ ಮಕ್ಕಳು : ಅವಳಿ ಜವಳಿ : ಯುಗಳಂಗಳ್ಬುಟ್ಟೆ ಸೀಂತಾಗುಳಿಸಿ ಪಿತ್ಯಯುಗಂ ಸತ್ತು ಸಗ್ಗಂಗಳೊಳ್ ಪುಟ್ಟುಗುಂ (ಪಂಚತಂ. ೦-೭೬). ೩. [ಗೌಪ] ಎರಡು ಎಂಬ ಸಂಖ್ಯೆಯ ಸಂಕೇತ : ಪದ ಯುಗಳಂ . . . ಎರಡಱ ನಾಮಂ (ಕೃಪಪಾ. ೯-೨). [ಸಂ]

ಯುಗಶಕ್ತಿ (ನಾ). ಒಂದು ಯುಗದ ಚೈತನ್ಯ.—ಸತ್ತ್ವ : ಜನಮನಸಮೆ ಯುಗಶಕ್ತಿಯಲ್ಲೆ? ತಾನಾ ಶಕ್ತಿ ಮೂರ್ತಿಗೊಳೆ ನಾಮವಸ್ಸಪ ತಾರಮೆಂದು ಪೂಜಿಪವಲ್ಲೆ (ಕೃಣಾಮಾ. ೦೦-೨೯). [ಸಂ.]

ಯುಗಸಂಧಿ (ನಾ). ಗುದಸ್ಥಾನ : ಪೃಷ್ಠ : ರೋಹೀಸಂಧಿಯ ಕೆಳಗಿರೆ ಕಾ(ಸೂ)ಸುಳ ಪೆಸರದಕಂಬರಪಾಸದ ನಡುವೆಯದಕೆ ಯುಗಸಂಧಿಯುಮಂ (ಅಕ್ಷಾ. ೯-೩೨). [ಸಂ.]

ಯುಗಳ ' ಯುಗಲ ' ನೋ.

ಯುಗಳಜಿಹ್ವಗ (ನಾ). ೧. ಎರಡು ನಾಲಗೆಗಳುಳ್ಳುದು : ಹಾವು. ೨. ಎರಡು ನಾಲಗೆಯ ವ್ಯಕ್ತಿ : ಮಾತಿಗೆ ತಪ್ಪುವವನು. ೧, ೨ : ಬೆಗೆದಿಳಿಯ ಪೋಗಿಯಟಿವತಿಯ ಪೊರ್ದಲುಮವನು ಯುಗಳಜಿಹ್ವ [ಪ್ಪ]ಗನೆಂದು ಜರಿದಿರದೆ ಸ್ವರ್ಗಕ್ಕೆ ಏಗಮು ಪೇಳ್ಪೊಕ್ಕುವಿಪ್ಪಕ್ಷಿಯಗ್ನಿಮುಖಿ ರೆನುತಮಂದನುಳಿದು ಹುಡುಕುತ್ತಲಿ (ಪಪಪೋ. ೫೦-೬).

[< ಸಂ. ಯುಗಲಜಿಹ್ವಕ]

ಯುಗಳತೆ (ನಾ). ಜೋಡಿಯಾಗಿರುವಿಕೆ : ಎರಡಾಗಿ ಕೂಡಿರುವುದು : ಅಮರಯಿರೆನೆವುಗಳಕ್ಕುಂ ಕೃಮದೇಕಾನೇಕವಚನದೊಳ್ ಪ್ರತ್ಯೇಕತಾ ಸಮನಿಸೆ ಯುಗಳತೆಯಾಪ್ಯಾತಮಾರ್ಗದೊಳ್ ನೆಲಸಿ ನೀದ ಪುರುಷ ತ್ರಯಕಂ (ಕಪಾದ. ೨೦೬). [ಸಂ. ಯುಗಲತಾ]

ಯುಗಳರಸನ (ನಾ). = ಯುಗಳಜಿಹ್ವಗ ೧ : ಕುಂಜರಕೃತ್ತಿವಸನ ಯುಗಳರಸನ ರಂಜಿಪ ಕಂಕಣ ಮಂಜುಳ ರಿಪುಪುರಭಂಜನ ನಿತ್ಯನಿರಂಜನ (ಅಷ್ಟಪ್ರ. ೬-೩೨). [ಸಂ. ಯುಗಲರಸನ]

ಯುಗಳಾರ್ಥ (ನಾ). ೧. ಎರಡು ಅರ್ಥಗಳು. ೨. ಎರಡು ಎಂಬ ಅರ್ಥ : ಜೊತೆ ಎಂಬ ಅರ್ಥ : ಯುಗಳಾರ್ಥದ ಬಹುವಚನಕ್ಕೆಗೆ ತಂದಾವಿಷ್ಟಲಿಂಗದೆಡೆಗೇಕತ್ವಂ ನೆಗಟ್ಟುಗುಂ (ಕಪಾದ.೦೫೪).[ಸಂ.ಯುಗಲಾರ್ಥ]

ಯುಗಳೋಚ್ಚರಣ (ನಾ). ಎರಡು ಸಲ ಉಚ್ಚರಿಸುವುದು.—ಹೇಳುವುದು : ದ್ವಿರುಕ್ತಿ : ದೂರಾಭೀಕ್ಷಣವೀಪ್ಸೋದಾರಾನುಕೃತಿಕ್ರಿಯಾಸಮಭಿಹಾರ ಸಮಿಪೇರುತರ ಜಾಪಳಾದಿಗೆ ಸಾರಂ ಬುಧರಿಂ ಪದಕ್ಕೆ ಯುಗಳೋಚ್ಚರಣಂ (ಪಪಾ. ೦೧೩). [ಸಂ. ಯುಗಲೋಚ್ಚರಣ]

ಯುಗಾಂತ (ನಾ). ೧. ಯುಗವು ಮುಗಿಯುವ ಕಾಲ. ೨. ಪ್ರಳಯ ಕಾಲ; ಜಗತ್ತಿನ ನಾಶ: "ಸಂವರ್ತಃ, ಪರಿವರ್ತಃ, ಕ್ಷಯಃ, ಯುಗಾಂತಃ . . . ಮಹಾಪ್ರಳಯಃ—ಈ ೯ ಪ್ರಳಯಕಾಲಂ " (ಪಜಾಯು. ೫೦-೦೦೭); ಮಹೇಶ್ವರಭೈರವಾಡಂಬರಮುಮಂ ಯುಗಾಂತಕಾಲಾಂತಕನ ಮಸಕ ಮುಮಂ ತನ್ನೊಳಿವಡಿಸಿನೊಂದು (ಪಂಕಥಾ. ೦೦-೦೦೩ ೩); ಪುರುಷರು ಇಲ್ಲದಿರುವ ಬೇರೊಂದು ಬ್ರಹ್ಮಸೃಷ್ಟಿಯೊ . . . ಸ್ತ್ರೀಪಯವಾದ ಯುಗಾಂತವೊ ! (ಪಪಾಕಾ. ೨೮). [ಸಂ.]

ಯುಗಾಂತರ (ನಾ). ೧. ಇನ್ನೊಂದು ಯುಗ ; ಬೇರೆ ಯುಗ. ೨. ಬಹಳ ಕಾಲ : ದೀರ್ಘವಾದ ಕಾಲ ; ಅನೇಕ ವರ್ಷಗಳು : ಮರಣವು ಈಗಲೆ ಬರಲಿ. ಅಥವಾ ಯುಗಾಂತರದಲ್ಲಿಯ ಬರಲಿ ಧೀರರಾದವರು ನ್ಯಾಯಮಾರ್ಗದಲ್ಲಿಟ್ಟ ಹೆಜ್ಜೆಯನ್ನು ಎಂದಿಗೂ ಚಲಿಸುವುದಿಲ್ಲ (ಪಪಕಾ. XI. ೪). [ಸಂ.]

ಯುಗಾದಿ (ನಾ). ೧. ಯುಗದ ಆರಂಭ : ಈ ಪುರುಷನರ್ಸಾ ಯುಗಾದಿ ಮಯಾಪುರ-ಪರಿಗೆ ಮೊದಲ ಷರುಷನು (ಪಪಪು. ೩-೬೨). ೨. ವರ್ಷದ ಮೊದಲನೆಯ ದಿನ ಮತ್ತು ಆ ದಿನ ಆಚರಿಸುವ ಹಬ್ಬ ; ಚೈತ್ರಶುದ್ಧ ಪ್ರತಿಪದೆ : ದೀವಗೆ ಯುಗಾದಿ ಹಬ್ಬಗಾಣಿಕೆ ಗ ೨ (ಪಪ. VIII. ತೀರ್ಥಪ. ೧೩-೭೪; 1708) ; ಆ ಯುಗಾದಿಯಲಿ ನೀನೆನ್ನ ದರ್ಪಣಮೆ _ ಈ ಯುಗಾದಿಯಲಿ ನೀನೆಲ್ಲಿ ? ಪಾನೆಲ್ಲಿ ? (ನಿಲಾಪ. ೫೬-೦೬); ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ (ಗಂ. ೦೦೬-೦). ' ಉಗಾದಿ' ಪರಾ.

[ಸಂ. ಯುಗಾದಿ, ಯುಗಾದ್ಯಾ]

ಯುಗಾವಸಾನ (ನಾ). = ಯುಗಾಂತ ೨ : ಯುಗಾವಸಾನಮುಮಾಂಭೋಧಿ ವೇಲಾಕಲ್ಪೋಲವಿಲಾಸಸಮುಲ್ಲಾಸಪ್ರತಿಭಾಸಮುಮಂ ಕಿ ಟ್ಟ ಡಿ ಸಿ ದ ವಿದ್ಯಾಧರರಾಜನ ಸಭಾಮಂಡಳಂ ಕ್ಷೋಭಕ್ಕೊಡರ್ಚಿದಾ ಪ್ರಸ್ತಾವದೊಳ್ (ಪಾಪಿಪು. ೪-೬೬ ೪). [ಸಂ.]

ಯುಗ್ಮ (ನಾ). ೧. ಜೊತೆ : ಜೋಡಿ : "ಯುಗ್ಮಂ, ಯುಗಂ, ಯುಗಳಂ . . . ಯುವುಳಂ _ ಈ ೮ ಅವುಳ್ " (ಪಜಾಯು. ೦೦೬-೦೩) : ಶ್ರೀಭದ್ರಾಹುವೆಂದ್ರಗುಪ್ತಮುನೀಂದ್ರಯುಗ್ಮವಿನೊಪ್ಪೆ ವಲ್ . . . ಪಾನ್ಪಿಸೇನ ಮುನೀಶಸಾಕ್ಕಿವ ವೆಳ್ಗೊಳ ಅದ್ರಿ ಮೇಲಪ್ಪಾದಿ ವಿಟ್ಟ ಪುನರ್ಭವಕ್ಕೆಯೆ ಆಗಿ × × (ಪಪ. II. ೩೦-೦ ; ಪು. ೮೫೦); ಇತೀ ಯುಗ್ಮಮುಂ ಅನೇಕ ಪಾರಂ ಪೋದೊಪೆ ಏಕವಾರಂ ಗೃಹೀತಗ್ರಹಣಾ ಆಕ್ಕುಂ (ಕಕ್ಷ್ಯಪ್ರ. ೭೭). ೨. ಗಂಡಹೆಂಡತಿಯರು; ದಂಪತಿ : ಕೂರ್ಮೆ ತಳ್ತಿರವಿಂ ಮುಚ್ಚುಗೆವೆತ್ತ ಪತ್ರುಗೆಯುಸಂತಾ ಪಾಲ್ವರಿಂದಿರ್ವರಿರ್ವರೆ ಯುಗ್ಮದ್ವಯಮಾದರ್ (ಕಾಂಶಿಪು. ೬-೦೨೬). ೩. ನೊಗ : ಧರೆ ತೀರ್ದ್ದಿಕ್ಕುಂಭಿ ಯುಗ್ಮಂ ರವಿ ಶಶಿಮಳಯುಂ ಗಾಲಿಗಳ್ ಮೇರು ಬಿಲ್ . . . ಆ ವಾಯು ಪೀಳ್ಕಾಗೆ ರುದ್ರಂ ಸುರಸ್ಯನ್ಯಂ ಕೂಡೆ ಸುಟ್ಟಂ ತ್ರಿಪುರಮನೆಳವಿಂದಂದು (ಪಪ. V, ಅಶೀ. ೦೨೬-೨೬ ; 1185). [ಸಂ]

ಯುಗ್ಮಪದಕರಣ (ನಾ). [ಕಾಮಶಾ] ಸುರತದಲ್ಲಿ ಒಂದು ಬಂಧ : ಮತ್ತಂ ಕುಳ್ಳಿರ್ದವಳು ಒಂದು ಕಾಲಂ ಮಡಿದು ಇರಲಾಗಿ ಪುರುಷನವಳಿರ್ದ ಮೊಗಮಾಗಿ ಶವ್ಯ ಕಾಲನವಳು ನೀಡಿದ ಕಾಲ ಕೆಳಗೆ ನೀಡಿ ಮಡಕಾಲಂ ಅಡ್ಡಕಾಲೊಡನೆ ಎತ್ತಿ ಓರೊರ್ವರನಪ್ಪುತ್ತು ಕೂಡಿದೊಡೆ ಯುಗ್ಮಪದ ಕರಣಂ (ಕೌಮಶಾ. ೨೬೬). [ಸಂ.]

ಯುಗ್ಮಾದ್ರಿ (ನಾ). ಒಂದು ನರಕದ ಹೆಸರು ; ಲಾಕ್ಷಾಪ್ರಲೇಪ ಮಾಂಸಾದ ನಿರುಚ್ಛ್ವಾಸ ಸನಿಚ್ಛ್ವಾಸ ಯುಗ್ಮಾದ್ರಿ ಶಾಲ್ಮಲಿ ಲೋಹಪ್ರದೀಪ ಕ್ಷುತ್ಪಿಪಾಸಕ ಕ್ರಿಮಿಕುಲಂಗಳೆಂಬವೇ ರಾಜನರಕಂಗಳು (ಪಪೀಕ. ೦೫೦).

[ಸಂ.]

ಯುಗ್ಯ (ಗು). ೧. ನೊಗಕ್ಕೆ ಹೂಡಲು ತಕ್ಕುದಾದ. (ನಾ). ೨. ರಥಕ್ಕೆ ಹೂಡುವ ಕುದುರೆ : " ವಾಹನಂ, ಧೋರಣಂ, ಯುಗ್ಯಂ, ಯಾನಂ, ಪತ್ರಂ— ಈ ೫ ರಥವ ಹೂಡುದ ಕುದಿರೆ " (ಪಜಾಯು. ೬೪-೨೯೩). ೩. ವಾಹನ : " ವಾಹನಮೂವುದಾದೊಡಂ ಪತ್ರಯುಗ್ಯಧೋರಣನಾಮಂ " (ಪಪ್ರಕೋ. ೮೮-೩೦). [ಸಂ.]

ಯುಂಜ್ಯ(ಗೆ). ೧. ಜೋಡಿಸಿದ ; ಸೇರಿಸಿದ. ೨. ತಕ್ಕ : ಯೋಗ್ಯವಾದ. ೩. ಸಂಬಂಧಪಟ್ಟ ; ಸಂಬಂಧವುಳ್ಳ. (ನಾ). ೪. ಹೊಂದಿಕೆ ; ಸಂಬಂಧ. [ಸಂ.]

ಯುತ (ಗು). ೧. ಹೊಂದಿಸಿದ ; ಸಂಧಿಸಿದ ; ಜೋಡಿಸಿದ. ೨. ಸಹಿತವಾದ ; ಒಳಗೊಂಡ : ಭೋಂಕನೆ ರಥದಿಂದಮಂದಿರ್ದು ಬಂದನುಪೇಂದ್ರಯುತಂ ರಥೋದ್ಭಹಂ (ಪಂಕಥಾ. ೦೬-೩೦); ಯುತಕರಮಳಂ ಗತಕಮಳಂ ಶ್ವೇತಕುರವಂ ಮುಕ್ತಕರವಂ . . . ಚಿತ್ರತರಂ ನೋಡುವ ನರಂಗೆ ಖಾತಮಖಾತಂ (ಪಂಪ್ರಪು. ೧೩-೩೦). (ನಾ). ೩. ಹೊಂದಿಸಿದುದು ; ಜೋಡಿಸಿದುದು : "ಯುತಮನ್ವಿತಂ ಸಂಹಿತಂ ಸಮಸ್ತಿತಂ"

(ಪಂಗಡಾ. ೦೩೦-೦೪). ೪. [ಗಣಿತ] ಕೂಡುವಿಕೆ ; ಸಂಕಲನ : "ಯುತಂ. ಯುಕ್ತಂ . . . ಇಂತಿನಿತುಂ ಕೂಡೊದಕ್ಕೆ ಹೆಸರು" (ಭೃತಾ. ೦೦೨೨ ಪ).

[ಸಂ.]

ಯುತಕ (ನಾ). ೧. ಜೋಡಿ ; ಜೊತೆ. ೨. ಜೋಡಣೆ; ಹೊಂದಿಕೆ. ೩. ಮೈತ್ರಿ ; ಸ್ನೇಹ. ೪. ಹೆಂಗಸರ ಉಡುಗೆಗಳಲ್ಲಿ ಒಂದು ಪ್ರಕಾರ. [ಸಂ.]

ಯುತಿ (ನಾ). ೧. ಕೂಡಿರುವಿಕೆ ; ಸೇರಿಕೊಂಡಿರುವಿಕೆ. ೨. ಹೊಂದಿಕೆ; ಜೋಡಣೆ : ಶ್ರುತಿಮತಿಗಳನ್ಯೋನ್ಯಪರಿಪೂರಕಂಗಳ್ ಯುತಿಯೊಳವು . ಸೇರಿರಲು ಸತ್ಕರ್ಶನ ನಿನಗೆ (ಪಾಂಚಾ. ೩೩೨). [ಸಂ.]

ಯುದ್ಧ (ನಾ). ಕದನ ; ಸಮರ : ಮಾಪಸಗರೋವರದೊಳ್ ಸಿತಮತ್ಸ್ಯನಂ ಯುದ್ಧದೊಳಾಪುಂ ಗೆಲ್ದುಂ (ಪಜ್ಜಾ. ೬೦-೩೬) ; ನಿಚ್ಚಂ ಧರಾಧೀಶರು ವಡಲಿಟ್ಟಂತಿರೆ . ಮಾಟ್ಟಿನೋವರೆ ಪಯೋಧಾರ್ವರಂ ಯುದ್ಧದೊಳ್ (ಪಂಪಭಾ. ೦೦-೨೬). [ಸಂ.]

ಯುದ್ಧಂಗೆಯ್ (ಕ್ರಿ). ಕಾಳಗ ಮಾಡು : ವೃದ್ಧನವ್ವಾ ಸುಂದರನೊಳ್ ಯುದ್ಧಂಗೆಯ್ದು (ಪಜ್ಜಾ. ೩೬-೦೯) ; ಪದಘಾತಕ್ಕೆ ಧರಾತಳಂ ಕುಸಿಯೆ . . . ಯುದ್ಧಂಗೆಯ್ದುರೀಶಾರ್ಜುನರ್ (ಪಾಪಂ. ೪-೭೪).

[ಯುದ್ಧ + ಕೆಯ್]

ಯುದ್ಧಭೂಮಿ (ನಾ). ಕಾಳೆಗದ ಕಣ ; ರಣರಂಗ : ಗಂಗರಾಜರೊಡವೆ . . . ಕೇತಮಲ್ಲ ನಾಯಕರುಗಳು ಯುದ್ಧಭೂಮಿಗೆ ಹೊರಡಲನುವಾದರು (ಶಾಂಪಾ. ೦೪೭). [ಸಂ.]

ಯುದ್ಧರಂಗ (ನಾ). = ಯುದ್ಧಭೂಮಿ : ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿನೇತ್ರಂ (ಪಗಾ. ೦-೪) ; ರಾತ್ರಿ ಯುದ್ಧರಂಗದೆಡೆಯೇ ಕಳೆಯಿತು (ಪಭಾ. ೫೦೨). [ಸಂ.]

ಯುದ್ಧವಿರಾಮ (ನಾ). ಯುದ್ಧವನ್ನು ನಿಲ್ಲಿಸುವಿಕೆ ; ಕದನವಿರಾಮ : "ಯುದ್ಧವಿರಾಮಃ ಕದನವಿರಾಮ" (Cease fire- ಶಬ್ದಿ. ೦೪). [ಸಂ.]

ಯುದ್ಧವೀರ್ಯ (ನಾ). ೧. ಕಾಳೆಗದಲ್ಲಿ ತೋರುವ ಪರಾಕ್ರಮ ; ಸಮರಶೌರ್ಯ. ೨. [ಜೈನ] ಕದನದಲ್ಲಿ ಗೆಲ್ಲುವ ಒಂದು ಬಗೆಯ ವಿದ್ಯೆ : ಅಮಿತತೇಜಂ ಶ್ರೀವಿಜಯಂಗೆ ಯುದ್ಧವೀರ್ಯಮುಂ ಪ್ರಹರಣಾವರಣಮುಂ ಬಂಧಮೋಚನಮೆಂಬ ಮೂಱುವಿದ್ಯೆಗಳಂ ಕೊಟ್ಟು (ಶಾಪುಂ. ೦೯೨). [ಸಂ.]

ಯುದ್ಧಸನ್ನದ್ಧ (ನಾ). ಕಾಳೆಗಕ್ಕೆ ಸಿದ್ಧನಾದವನು : ಚಕ್ರವರ್ತಿ ಯುದ್ಧಸನ್ನದ್ಧನಾಗಿ ಸವಸ್ತ್ರಸಾಮಗ್ರೀಸಹಿತಂ ಶಿಬಿರದಿಂ ಪೊಱಮಟ್ಟೊಡಂ (ಪಾಂಪಾ. ೩-೩೦ ಪ). [ಸಂ.]

ಯುದ್ಧಾಜಿರೆ (ನಾ). = ಯುದ್ಧಭೂಮಿ : ನವಘಟೀಯಂತ್ರದಿಂ ವಿಮ್ಮುಯುದ್ಧಾಜಿರವಾಪೀವ್ಯೆರಿಕ್ಕಾಂಮುವನೆ ನಿಜಯಶೋವಲ್ಲಿಗೆತ್ತುತ್ತು ವಿರ್ಪಂ (ಎಗೆ. ೪- ಪಾಪಕ- ೦೪೦-೦೩; ೧೧೯೨). [ಸಂ.]

ಯುಧಿಷ್ಠಿರ (ನಾ). ೧. ಯುದ್ಧದಲ್ಲಿ ಸ್ಥಿರವಾಗಿರುವವನು.—ಅಚಲನಾಗಿರುವವನು. ೨. ಪಾಂಡವರಲ್ಲಿ ಹಿರಿಯವನಾದ ಧರ್ಮಪುತ್ರನ ಹೆಸರು ; ಧರ್ಮರಾಯ : ಯುಧಿಷ್ಠಿರಂ ಶಲ್ಯನ ಮೊಸಗೆ ನೆಜ್ದು ನಿಂದು ಕಯ್ದು ಸುವಾ ಪ್ರಸ್ತಾವದೊಳ್ (ಪಂಪಭಾ. ೦೦-೪೯ ಪ) ; ಯುಧಿಷ್ಠಿರ ರಾಯದಳ ಮುಂಕೊಳಿಸಿ ಹೊಕ್ಕುದು ಜಡುದ ಸುಮ್ಮಾಸದ ಸೂಡದಲಿ (ಕಾವ್ಯಾಕ್ಕೂ. ೦-೪೯). [ಸಂ.]

ಯುನಾನಿ (ಗು). ೧. ಯವನದೇಶಕ್ಕೆ ಸಂಬಂಧಿಸಿದ ; ಗ್ರೀಸ್ ದೇಶದ : ಕ್ಷತ್ರಿಯಕುಲಸ್ಥರು . . . ಯವನಾನೀ (ದುವನ–ಗ್ರೀಕ) ದಳಗಳನ್ನು ಓಡಿಸಿ ಅವರ ಅಧಿಕಾರಿಗಳನ್ನು ಹಿಡಿದು ಧ್ವಂಸ ಮಾಡಿಬಿಟ್ಟರು (ಕಾಶಕ್ರ. ೦೩೦). (ನಾ). ೨. ಗ್ರೀಸ್‌ದೇಶದವನು ; ಯವನ : ದುನಾನಿಯರ ಮೂಗು ಒಂದು ತೆರನಾಗಿದ್ದರೆ ರೋಮನರ. ಯೆಹೂದಿಯರ. ನೀಗ್ರೋಗಳ ಮೂಗುಗಳು ಬೇರೆ ಬೇರೆಯಾಗಿರುತ್ತವೆ (ಪಣಾಕ್ಕ. ೦೨೨). ೩. ಒಂದು ಬಗೆಯ ವೈದ್ಯಪದ್ಧತಿ ; ಮಹಮದೀಯರಿಂದ ಬಂದ ವೈದ್ಯವಿದ್ಯೆ : ಅಲೋಪತಿ . . . ಹೋಮಿಯೋಪತಿ . . . ಯುನಾನಿ (ಪಕಾಜ. ೩೨).

[← ಪಾರ. ಹಿಂ. ಯೂವಾನೀ; ಮರಾ. ಯುನಾನೀ]

ಯೊಯ್ಯು (ನಾ). ಕುದುಬೆ; 'ಯಯ್ಯು' ಪರಾ. [ಸಂ.]

ಯುಯುತ್ಸು (ಗು). ೧. ಯುದ್ಧ ಮಾಡುವ ಅಪೇಕ್ಷೆಯುಳ್ಳ; ಕದನೋತ್ಸಾಹಿಯಾದ. (ನಾ). ೨. ಕಾಳೆಗ ಮಾಡಲು ಬಯಸುವವನು ; ಯೋಧ : ಹೋರಾಟದ ಕಥೆಗಳು ಯುಯುತ್ಸು ಹಾಗು ಸ್ವಪ್ರತಿಷ್ಠೆಯ ಪ್ರವೃತ್ತಿಗಳಿಗೆ ಆಕರ್ಷಕವೆನಿಸುತ್ತವೆ (ಕಪಕ. ೧೭). ೩. ಧೃತರಾಷ್ಟ್ರನ ದಾಸೀಪುತ್ರ ; ಕೌರವರಲ್ಲಿ ಒಬ್ಬ : ಸ್ವಪಂ ದಯೆಯಿಂದಮೂ ಯುಯುತ್ಸುವನೊಡಗೊಂಡು ಬಂದಂ (ಪಂಪಭಾ. ೦೦-೫೬) ; ತಿಳಿದು ತನ್ನೊಳು ಭೀಮಸೇನನ ಬಲುಗದಾಘಾತದಲಿ ಕುರುಕುಲವಳಿವುದೆಂದು ಯುಯುತ್ಸು ರಥದಿಂದಿಳಿದು ನಡತಂದ (ಕುಪಾ. ೨೦. ೨-೩೬).

[ಸಂ.]

ಯುವ (ಗು). ೧. ಎಳೆವಯಸ್ಸಿನ ; ಹರಯದ ; ಯೂಥಪತಿ ಪೋಗಿದ ಕರಿಕಲಭ್ಮಿಂತಿಯಿಂದಂ . . . ರಾಜಹಂಸಂ ಪೋಗಿದ ಯುವ ರಾಜಹಂಸಪ್ರಕಾರದಿಂದಂ ಬಂದು ಪತಿವಿಯೋಗದಿಂ ನಿಜಜನನಿಯರವೆ ಪೋಲ್ದು (ಜಾಂಪು. ೦-೧೬ ಪ). ೨. ಬಲಶಾಲಿಯಾದ ; ಶಕ್ತಿವಂತನಾದ. (ನಾ). ೩. ಹರಯದವನು ; ತರುಣ ; ಯುವಕ : ಯುವಸಂಘಾತಮದೊಂದು ತೋಳ್ದಡಿಗಳೊಳ್ ವಾತ್ಯೋದ್ಧತೋರೋಳಿಯೊಳ್ ಯುವತೀವ್ರಾತಂ . . . ಸೆರ್ತಿಸೆ (ಜಾಪು. ೬-೦೫೬); ಕರಮದ್ಧ ಕರಭಗಮನದ . . . ಜರ್ಜರಜಘರಲಂಬಿತವಯೋಧರ ಶತವೇಣಿಯರನೂನ ಯುವರಂ ಕರೆದರ್ (ಪಪ್ರಾ. ೨-೩೬). ೪. ಅರುವತ್ತು ವರುಷ ಪ್ರಾಯದ ಆನೆ : ಈದೀತಜವನಂ ಯುವನಂ . . . ತರಿಸಿ ದಿಗ್ವಿಜಯಕ್ಕೆ ಜನೇಂದ್ರಚಂದ್ರನೇವಂ ಪೋಪುದುಚಿತಂ ಜಯಮಂ ಜಯಪರ್ವತಯಾನಸಾಗಮಂ (ಪಾಂಪಕ್ಷ. ೦೦-೦೯೨). ೫. ಅರುವತ್ತು ಸಂವತ್ಸರಗಳಲ್ಲಿ ಒಂಬತ್ತನೆಯ ಸಂವತ್ಸರ : ವತ್ತಮಾ ಪರ್ವದೇ ಪ್ರಭವ . . . ಯುವ . . . ಅಕ್ಷಯವೆಂದಱುವತ್ತು ತಜನಾಗಿಹುದು (ಪಪಗ. ೫೬). [ಸಂ. ಯುವನ್]

ಯುವಕ (ನಾ). ತರುಣ ; ಯೌವನಸ್ಥ : ಭಯಭೀತಿಯಿಲ್ಲದ ಯುವಕ ವಡೆಯು ಎತ್ತೆತ್ತಲೂ ತಲೆಯೆತ್ತಲಿರೆಂಭಿಸಿದೆ (ಕ್ರಬಾಪ. ೫೪). [ಸಂ.]

ಯುವಜನ (ನಾ). ತರುಣಜನ ; ಹರಯದ ಜನ : ಸುವಶರನಾದರೊ ಯುವಜನರಮ ಪರಿಪರಿಯೊಳು ಪೀಡಿಸುತಿಹನು (ಇಂಪಾಪ. ೦೪೪-೩೦).

[ಸಂ.]

ಯುವತಿ (ನಾ). ೧. ಹರಯದವಳು ; ತರುಣಿ ; ಯೌವನಸ್ಥೆ : ಯುವತಿಯ ನಗೆಮೊಗಮಂ ಪಿಗುಗುವೆ [ಪಾಕಾಂ. ಮಿಸುಗುವ] ಭಾಮಿಸೆ ದರ್ಪಣೇಂದು ಜಳಜಂಗಳ್ ಸೋಲವನಾಂತುವು ಗಡ ಮುನ್ನವಜಯವ ಮೊಂದೊಂದಱೊಡನೆ ತವ್ಮೊಂದೊಂದುಂ (ತಿತ್ರಿ. ೩-೦೪). ೨. ಹೆಂಗಳು ; ಸ್ತ್ರೀ : ಯುವತಿ ಪ್ರಸೂತಿಕಾಲಂ ಸವನಿಸೆ . . . ಅವಳೆರಡು ಮೂಱು ನಾಲ್ಕಯ್ದುವರಂ ಸಂಭವಿಸೆ ತತ್ಕುಲಂ ಕ್ಷಯಮಕ್ಕುಂ (ಕೋಗಿಪು. ೪-೩೩) ; ಒಪ್ಪುವ ಪತಿಯ ಹಾನಿವೃದ್ಧಿಯೆ ಯುವತಿಯರೊಳಮಕ್ಕು ಮೆಂಬುದುಂ ತಕ್ಕುದೆ ದಲ್ (ಪಾಕ್ಕ. ೦-೦೦೩). [ಸಂ.]

ಯುವರಾಜ (ನಾ). ಮುಂದೆ ಪಟ್ಟಕ್ಕೆ ಬರತಕ್ಕವನೆಂದು ನಿಯುಕ್ತನಾದವನು ; ಪಟ್ಟದ ರಾಜಕುಮಾರ ; ರಾಜನ ಉತ್ತರಾಧಿಕಾರಿ : ಯುವ

ರಾಜಂ ಭಟಾರರಂ ವಂದಿಸಿ ಪೋದಂ (ಶಬ್ದಾ. ೮೨–೦೬) ; ಅತ್ಯ ರಾಜಾಧಿರಾಜನುಮಿತ್ತ ಯುವರಾಜಪಂ ನಿಂದಾಗಳ್ (ಅಂತ್ಯ. ೦೪–೫೫ ಪ) ; ಬೀಸುವ ಧವಳಚಾಮರಂಗಳ್ ಯುವರಾಜನ ಕೆಲದೊಳೆಸದುವತಿಲಲಿತಂಗಳ್ (ತೀರ್ಥ. ೩–೦೭). [ಸಂ.]

ಯುವರಾಜಕ್ರಿಯೆ (ನಾ). [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದಂ ; ಸಕಾಲದಲ್ಲಿ ತಂದೆಯಿಂದ ಯುವರಾಜಪಟ್ಟವನ್ನು ಪಡೆದು ರಾಜ್ಯಕ್ಕೆ ಉತ್ತರಾಧಿಕಾರಿಯಾಗುವುದು : ಯೌವರಾಜ್ಯ : ಕುಮಾರಕಾಲದೊಳ್ ಯುವರಾಜ್ಯಾಭಿಷೇಕಮಂ ಪಡೆವುದು ಯುವರಾಜಕ್ರಿಯೆ (ಕಾರುಂಡ. ೨೦೯). ' ದೀಕ್ಷೆ ' ಪರಾ.

[ಸಂ. ಯುವರಾಜಕ್ರಿಯಾ]

ಯುವರಾಜತೆ (ನಾ). ಯುವರಾಜನ ಪದವಿ.–ಅಧಿಕಾರ : ಕ್ಷತ್ರಿಯೋತ್ಪನ್ನನೆಂದು . . . ಅಪರಾಜಿತಕುಮಾರಂಗೆ ಭುಜಬಲಿಗೆ ಸಂದ ಯುವರಾಜತೆಯ ಕೊಟ್ಟೊಲವಿಂದ ಮಂದನಿಗೆ ಪಟ್ಟಗಟ್ಟುವ ಬೀದದಿಂ ಕಟ್ಟಿದನು ಕೊರಲಲಿ ಕಂಠಮಾಲೆಯನು (ಹರ್ಷಚ. ೪–೦೨). [ಸಂ. ಯುವರಾಜತಾ]

ಯುವರಾಜಪಟ್ಟ (ನಾ). ೧. = ಯುವರಾಜತೆ : ಕಿಱಿಯಾತನಪ್ಪ ಭಾನುವೇಗಂಗೆ ಯುವರಾಜಪಟ್ಟಮಂ ಕಟ್ಟಿ (ಶಬ್ದಾ. ೬೦–೦೬) ; ಪಟ್ಟವದು ಹಿರಿಯರಸನದು ಯುವರಾಜಪಟ್ಟವೆ ಪರಿತನೂಜನೊಳಾಯ್ತು (ಕಾಮ್ಯಾಗ. ೦೬–೬). ೨. ಯುವರಾಜಪದವಿಯ ಚಿಹ್ನೆಯಾದ ಹಣೆಗೆ ಧರಿಸುವ ಒಂದು ಆಲಂಕಾರ : ಅಂಗದಗೆ ಪೊಸಲಲಿ ಧರಿಸುವುದು ಯುವರಾಜಪಟ್ಟವನು (ಕೊಡಗ. ೪–೫೬). [ಸಂ.]

ಯುವರಾಣಿ (ನಾ). ಯುವರಾಜನ ಹೆಂಡತಿ : ಅಪ್ಪರಲ್ಲಿ ಯುವರಾಣಿಗೆ ಎಚ್ಚರವಾಗುತ್ತಿಕೆ (ಕೃಷ್ಣ. ೬). [<ಸಂ. ಯುವರಾಜ್ಞೀ]

ಯುವಾಧಿಪ (ನಾ)* = ಯುವರಾಜ : ಬಿಲ್ಲ ಬಿನ್ನಣಮನಾ ರಾಣದೊಳ್ ಮೆಱೆದು ಯುವಾಧಿಪಂ (ಶಂವೃತ್ತ. ೬–೭೬). [ಸಂ.]

ಯುವಾನ (ನಾ). ತರುಣ ; ಯುವಕ : ಈ ಯುವಾನರನವದ್ಯವಿದ್ಯಾರಾಮ್ನಾಯಶುದ್ಧರವದಾತಕೀರ್ತಿಗಳ್ (ಶಾಬ್ದಿ. ೦೪೪); ಶ್ವಾನ· ಯುವಾನ· ಅಧ್ವಾನ . . . ಪಸುಪಂತ–ಇವು ಮೊದಲಾವುವು (ಕಪಾಣ. ೪೭ ಕ್ರಿಯೋ). [<ಸಂ. ಯುವನ್]

ಯುಷ್ಮತ್ಕಟಾಕ್ಷ (ನಾ). ನಿಮ್ಮ ಕುಡಿನೋಟ ; ನಿಮ್ಮ ಕಢೆಗಣ್ಣೊಟ : ಭವಹರಣ ಯುಷ್ಮತ್ಕಟಾಕ್ಷದಿ ಕ್ಷಪಿತನಾದೊಡೆ ಸಕಳಶಬ್ದಶ್ರೋತ್ರನಾಗಿರನೆ (ಶಾಕ್ಷ. ೪೬–೬೨). [ಸಂ.]

ಯುಷ್ಮತ್ಕಳೆ (ನಾ). ನಿಮ್ಮ ಅಂಶ : ಎಲೆ ಮಾಯಾದೇವಿ ಲೋಕತ್ರಯ ಜನನಿ ಮದಾಜ್ಞಾಸಮುತ್ಪನ್ನೆ ಯುಷ್ಮತ್ಕಳೆ . . . ಪುಟ್ಟುಗೆ ಭಗವತಿಯುಂ ಜಂಡಿಯುಂ ದುರ್ಗೆಯುಂ ವೀರಲುರಾಯದ್ವಯಂಯುಂ ಕನ್ನೆಯುಮೆನಿಸುಗೆ (ಶಾಗ. ೨–೩೪). [ಸಂ. ಯುಷ್ಮತ್ಕಲಾ]

ಯುಷ್ಮದ್ಗುಣ (ನಾ). ನಿಮ್ಮ ಗುಣ : ಯುಷ್ಮದ್ಗುಣಾ· ಅಸ್ಮದ್ದಾಹಿತ್ರ· ಭವದ್ರಾಜ್ಯ (ಕಪಾಣ. ೦೦ ಕ್ರಿಯೋ). [ಸಂ.]

ಯೂಕ (ನಾ). ೧. (ಕೊಳೆಕಾದ ಬಟ್ಟೆಗಳಲ್ಲಿ ಹುಟ್ಟಿಕೊಳ್ಳುವ) ಒಂದು ಬಗೆಯ ಕ್ರಿಮಿ ; ಕೂರೆ ; ಹೇನು : ಕುಂಥು ಭೃಂಗ ಮತ್ಕುಣ ದಂಶ ಮಶಕ ಲಿಕ್ಷಾ ಯೂಕ ಪಿಪೀಲಿಕಾದೇಹಿಕಂ . . . ಕ್ರಿಮಿಕೀಟಾದಿ ತ್ರೀಂದ್ರಿಯಂಗಳ್ (ಕಷ್ಟ. ೧೪) ; ಜನುಗುಂ ಕ್ರಿಮಿ ಕೀಟಕಂ ಮತ್ಕುಣಂ ಯೂಕವನುಗುಣಂ ಸ್ವೇದದಿಂ (ಧರ್ಮಾ. ೭೯–೩೬). ೨. ದೂರವನ್ನು ಅಳೆಯುವ ಒಂದು ಅತಿಸೂಕ್ಷ್ಮವಾದ ಪ್ರಮಾಣ : ಲವಮೆಂಟಾಗ ಲೊಂದು ಯೂಕವೆನಿಸುವುದು (ಲೀಷ. ೬೨೦) ; ವಾಲಾಗ್ರವೆಂಟಾದರೆ ಒಂದು ಲಿಕ್ಷವೆನಿ ಕೊಂಬುದು ಆ ಲಿಕ್ಷವೆಂಟಾದರೆ ಒಂದು ಯೂಕವೆನಿ ಕೊಂಬುದು (ಜಗಣ. ೬೮–೪). [ಸಂ.]

ಯೂಕೆ (ನಾ). ೧. = ಯೂಕ ೧ : ಯೂಕಾಭೀತಿಯಿಂದಂಬರಂ ಪರಿಹರ್ತವ್ಯಮೆ ಮೇಣಜೀರ್ಣಭವದಿಂ ಪ್ರಾಜ್ಞಾಜ್ಯಮೇಂ ತ್ಯಾಜ್ಯಮೇ (ಸೂಪ್ರಕೃ. ೦–೮೩). ೨. = ಯೂಕ ೨ : ಲಿಕ್ಷಾ ಯೂಕೆ ಯವಯು ಮಂಗುಲಮಕ್ಕುಂ (ಜ್ಯೋಶಾ. ೫–೨೬). [ಸಂ. ಯೂಕಾ]

ಯೂಥ (ನಾ). (ಸಾಮಾನ್ಯವಾಗಿ ಪ್ರಾಣಿಗಳ) ಗುಂಪು : ಹಿಂಡು : ರಥಯೂಥಧ್ವಜಹ್ರ ಶಂಖಪಟದೊಳ್ . . . ಕುಳಶೈಲದಂತೆ ಕರಿಗಳ್ ಬೀಬ್ರೀದುವುರ್ಜಾಜಿಯೊಳ್ (ಪಂಚಾ. ೦೦–೭೭) ; ಬಗೆವುಗೆ ಸಲಿಲಕ್ರೀಡಾವಗಾಹರುಚಿ ಯೂಥಪತಿಸಮನ್ವಿತಯೂಥಂ ಸೊಗಯಿಪ ತಾವರೆಗೊಳನಂ ಪುಗುವಂತಿರೆ ಚಕ್ರವರ್ತಿ ನಿಜಮಂದಿರಮಂ . . . ಪೊಕ್ಕಂ (ಪಾಂಪ್ರ. ೦೦–೭೩). [ಸಂ.]

ಯೂಥನಾಥ (ನಾ). ೧. ಸಮೂಹದ ಮುಂದಾಳು ; ಗುಂಪಿನ ನಾಯಕ. ೨. (ಆನೆ ಮೊದಲಾದುವುಗಳ) ಹಿಂಡಿನ ಒಡೆಯ ; ಸೇಳಗ : ವಂಚಶ್ಮವಯ್ದಲಾ ಯೂಥನಾಥಗೆ ಮಹಾಕಾಂತಾರವಲ್ಲದೇಂ ಕಿಯ ಕಟ್ಟೆಯ ? (ಕೃಶಾ. ೩೬–೩೪). [ಸಂ.]

ಯೂಥಪ (ನಾ). = ಯೂಥನಾಥ ೨ : ನಡುವಗಲಲ್ಲಿ ತಾಂ ನಡಪಿದಂತಿಗಳಂ ರವಿತಪ್ತಯೂಥಪಂ ಬಿಡದತಿಶೀತಲಸ್ಥಲವ ಸೇವಿಸುವಂತೆ ವೊರ್ (ಶಾಕುಂ. ೬೨–೦೦೩). [ಸಂ.]

ಯೂಥಪತಿ (ನಾ). = ಯೂಥನಾಥ ೨ : ಮನುಮಾರ್ಗನಿಪುಣನೆನಿಸಿದ ನಿನಗಾಮಿ ರಾಜವರ್ಗಮಂ ತೋಱಿ ಜಗಜ್ಜನಕೆ ನಗೆಯಲ್ಕೆ ಕಳಭಂ ವನಪಥಮಂ ಯೂಥಪತಿಗೆ ತೋರ್ಪಂತಕ್ಕುಂ (ಅಂತ್ಯ. ೬–೭೨) ; ಜಲಕ್ರೀಳೋಲನೆನಿಸಿದ ಯೂಥಪತಿ ಕರೇಣು ಯೂಥಂಬೆರಸು ಬರ್ಪಂತೆ ಬಂದು (ಪಜ್ಜ. ೬–೫೯ ಪ). [ಸಂ.]

ಯೂಥಿ (ನಾ). ಒಂದು ಬಗೆಯ ಮಲ್ಲಿಗೆ : ಕಂಗೊಳಿಸಿದುದುಳ್ಳಲರ್ಮಿಸುವ ಯೂಥಿಯ ಮಲ್ಲಿಯ ಕರ್ಣಿಕಾರದಾ (ಕೃಷ. ೪–೭೬). [ಸಂ. ಯೂಥೀ]

ಯೂಥಿಕೆ (ನಾ). ೧. ಒಂದು ಬಗೆಯ ಮಲ್ಲಿಗೆ. ೨. ಸೇವಂತಿಗೆ : " ಮಾಗಧೀ, ಗಣಿಕಾ, ಯೂಥಿಕಾ, ಲಂಬಪ್ಪಾ – ೪ ಕಾಡುಮಲ್ಲಿಗೆಯಲ್ಲಿ ಒಂದು ಬಗೆ ಗಿಡ ; ಇದಕ್ಕೆ ಶಾವಂತಿಗೆ ಗಿಡವೆಂದು ಕೆಲವರರ್ಥ ಹೇಳುವರು"(ಶಬ್ದಾಂ. ಕೋ). [ಸಂ. ಯೂಥಿಕಾ]

ಯೂಧ (ನಾ). ಗುಂಪು ; ಸಮೂಹ : ಆ ಯೂಧಕ್ಕೆಲ್ಲಮಧಿಪತಿಯಾಗಿ (ಶಬ್ದಾ. ೫೭–೨೦) ; ಮುಸ್ಸಿನ ಲೋಭದೆ ಕೊಲ್ವರತ್ತಲುಂ ಮೃಗಪತಿ ಯೂಧಮುಂ ಪಲಬರಾ ಬಸದೊಳ್ ಶೂರಾಧಿನಾಯಕರ್ (ಶಾಂಭು. ೧೪). [ಸಂಸ್ಕೃತಕೋಶಗಳಲ್ಲಿ ಈ ರೂಪ ಸಿಗುವುದಿಲ್ಲ. 'ಯೂಥ'ಕ್ಕೆ ಅನುರೂಪವಾಗಿ ಈ ಶಬ್ದ ಬಳಕೆಯಾಗಿದೆ]

ಯೂಧಿಕೆ (ನಾ). ಸೇವಂತಿಗೆ : " ಮಾಗಧೀ, ಯೂಧಿಕಾ– ಈ ೨ ಸೇವಂತಿಗೆ" (ಪಲಾಮು. ೬೪–೩೨). [ಸಂಸ್ಕೃತಕೋಶಗಳಲ್ಲಿ ಈ ರೂಪ ಸಿಗುವುದಿಲ್ಲ. ' ಯೂಥಿಕೆ'ಗೆ ಅನುರೂಪವಾಗಿ ಈ ಶಬ್ದ ಬಳಕೆಯಾಗಿದೆ]

ಯೂನ (ನಾ). ತರುಣ ; ಯುವಕ : ಸ್ಮರನೆನುತ ಮತ್ಕಾಮಿನಿಯರುಂ ಸುಕುಮಾರಶರನೆನುತ ಯೂನರುಂ ಖರತರಾನಲನೆನುತವುರಿನಿಚಯಂ . . . ಪೊಗಳುತಮಿರ್ದರ್ (ಪೊಣಾರಾ. ೬–೩೬–೩೦).

[ಸಂ. ಯೂನ = ಕಟ್ಟುವ ಹಗ್ಗ,–ಹುರಿ]

ಯೂಪ (ನಾ). ೧. ಯಜ್ಞಪಶುವನ್ನು ಕಟ್ಟುವ (ಸಾಮಾನ್ಯವಾಗಿ ಖದಿರವೃಕ್ಷ ಅಥವಾ ಬಿದಿರಿನಿಂದ ಮಾಡಿದ) ಕಂಬ : ಮನ ಮಾರಾಧಿತ ಹೋಮಭೂಮಿ ಮಱುಗಳ್ ಕಾಮಾತುರರ್ ಬಂದವಾವನಿತಾಂ ಸ್ಥಾಪಿತಯೂಪಕೋಟಿ ಬಳವತ್ಕಾಮಾಗ್ನಿ ಹೋಮಾಗ್ನಿ . . . ಇಂತಿಗೆ ತಾನಿನಿತಾಂ ಕಾಮನ ದೇಳ್ವೆನೆಂದು ಸುಗಿದಳ್ ತನ್ನಂಗಿ ಬೆಳ್ದಿಂಗಳೊಳ್

(ಕಂಕರಾ. ೪-೫೯) ; ಯೂಪಮಯಮಪ್ಪುದು, ಧರೆಯೆಲ್ಲಮುಂ ವರಜಾತ ರೂಪಮಯಮಾಯ್ತು, ಮನೆಯೆಲ್ಲಮುಂ ದಾಶರಥಿ ರಾಜ್ಯಮಂ ಪಾರಿಸೆ (ಕೃಷ್ಣಾ. ೦೪-೦೨). ೨. ಗೆಲ್ಲಗಂಬ ; ಜಯಸ್ತಂಭ. ೩. [ಜ್ಯೋತಿ] ಆಕೃತಿಯೋಗಗಳಲ್ಲಿ ಒಂದು ; ಜನನಕಾಲದಲ್ಲಿ ಎಲ್ಲ ಗ್ರಹಗಳೂ ಲಗ್ನದಿಂದ, ನಾಲ್ಕು ಸ್ಥಾನಗಳೊಳಗೆ ಇರುವ ಯೋಗ : ಈದಯದಿನೆಯ್ದೆ ತುರ್ಯಭವನಂಬರೆಗಂ ಜರೆ ಯೂಪಂ (ಜಾತಕ. ೦೩-೭). [ಸಂ.]

ಯೂಪಕಂಭ (ನಾ). = ಯೂಪ ೧ : ಅರಿಯಚ್ಚಿ ಭೂತ್ತಂಗಳ ವರ ಸತಿ ಪುತ್ರರಂ ಸೆಜೆಗಳಂ ಪಿಡಿವುಕ್ಕ ಯೂಪಕಂಭಂಗಳಂ ಮುಱಿದಿಟ್ಟು . . . ನಾರ್ದೆಸಯಲ್ಲಿ ಪರಿಪರಿದು ಕೋಳಾಪಳಂಗೆಯ್ದುವ್ (ಬಿಜ್ಜಳ. ೨೯-೩೦).

[< ಸಂ. ಯೂಪಸ್ತಂಭ]

ಯೂಪಸ್ತಂಭ (ನಾ). = ಯೂಪ ೧ : ಯೂಗನಮಿತ್ತಂ ಯೂಪಸ್ತಂಭಂಗಳಿಪ್ಪ ಕಟ್ಟ ಪಸುಗಳಂ ಗೋಡಿಕೆ ಕೊಮ್ಮ ದೇಳ್ವುದು ಕಂಡು ಕೊಂಡಂಗಳನೊಡೆದು ಶಾಲೆಗಳಂ ಕೆಡಪ ಯೂಪಸ್ತಂಭಂಗಳಂ ಕಡಿದು (ಪಂಚತಂ. ೦೧-೦೫೫ ಪ) ; ಶುನಶ್ಶೇಫಗೆ ತನ್ನನ್ನು ಯೂಪಸ್ತಂಭಕ್ಕೆ ಕಟ್ಟಿದಾಗ ಈ ಮಂತ್ರವನ್ನು ಹೇಳಲು ದೇವತೆಗಳೆಲ್ಲ ಪ್ರತ್ಯಕ್ಷರಾಗಿ . . . ಅವನ ಪ್ರಾಣವನ್ನುಳಿಸಿದರು (ಭಾಷಾಂ. XIV, ೦೫). [ಸಂ.]

ಯೂಷ (ನಾ). ೧. (ಮಾಂಸದ) ಸಾರು. ೨. ಧಾನ್ಯಗಳನ್ನು ಕುದಿಸಿ ಪೆಗೆದ ನೀರು.—ಕಟ್ಟು. ೩. ಕೆಂಡದ ಮೇಲೆ ಸುಡುವ ಹಾಲುಗಾಳಿನ ತೆನೆ ; ಬೆಳಸು; ಸಿಹಿತೆನೆ : " ಯೂಷಯೆಂಬುದು ಸೀತೆನೆ " (ಕಣಾಯು. ೪೬-೪೭೦). [ಸಂ.]

ಯೆನ್ನು (ನಾ). (?) : ಕಾಟಿಯ ಹನ್ನೆರಡು ಯೆಂನು ಆ ಹನ್ನೆರಡು ಯೆನ್ನಿನ ಬೆಂಬಳಿಯಲಿ (ಶಾಸಂ. ೦೪೫೯, ಶಾಕೆಲಂ. ೩೫೫-೦೫ ; ೧೪೦೦).

[?]

ಯೆಹೂದಿ ' ಯಹೂದ್ಯ ' ನೋ.

ಯೆಹೂದ್ಯ 'ಯಹೂದಿ' ನೋ.

ಯೋಕ್ತ್ರ (ನಾ). ಬಂಡಿ ಹೊಡೆಯನುವವನು ; ಸಾರಥಿ. [ಸಂ.]

ಯೋಕ್ತ್ರ (ನಾ). ಹಗ್ಗ ; ಕಣ್ಣಿ : " ಯೋಕ್ತ್ರಂ ಕಣ್ಣಿ ಹಗ್ಗಮಾ ಬಂಧವುಕ್ಕುಂ " (ಪಂಗಣಾ. ೦೦೯-೨). [ಸಂ.]

ಯೋಕ್ತ್ರಕ (ನಾ). ಕಟ್ಟುವ ಸಾಧನ ; ಹಗ್ಗ. [ಸಂ.]

ಯೋಕ್ತ್ರಿಕೆ (ನಾ). ಒಂದು ಬಗೆಯ ಕಂಠಾಭರಣ : ಜೋಲೆ ಮುತ್ತಿನ ಸರಂ ತೊವೆಯ ಯೋಕ್ತ್ರಿಕೆಯಾಗಲೆಸೆಯಲಿ ಮಾಡವೆತೆಯಿಂದವಳ್ ಬಾಗತ್ತೆ ಸೈಪಳಿಯೆ ಸಗ್ಗದ ವಿಮಾನದಿಂ ಬಿಲ್ದಪ್ ನಲ್ಲನಂ ಪೋಡುತ್ತ ಮಿರ್ಪಚ್ಚರಿಯಂತೆ (ಶಾಖಂಡ. ೬-೪). [ಸಂ. ಯೋಕ್ತ್ರಿಕಾ]

ಯೋಗ (ನಾ). ೧. ಜೋಡಿಸುವಿಕೆ ; ಹೊಂದಿಸುವಿಕೆ. ೨. ನೊಗ ಹೇರುವಿಕೆ. — ಕಟ್ಟುವಿಕೆ. ೩. ಕೂಟ ; ಸಂಗ ; ಸಂಬಂಧ : ಅಪ್ಪ ವಿನ ಯೋಗದ ಕಾಪ್ಪ ಹೊತ್ತುವಲ್ಲಿ ಮೆಕ್ಕೆಸೆ ತಮದ ಭೂಮ ಶುಷ್ಕದ ಅಪ್ಪುವಿನ ಗುಣ (ಪೂಗಮ. ೬-೨೪). ೪. ಬೆರಕೆ ; ಮಿಶ್ರಣ : ಯೋಗಗಳಲ್ಲಿ ದ್ರವ್ಯಗಳ ಪ್ರಮಾಣಗಳನ್ನು ಹೇಳಿರದಿದ್ದರೆ ಅವನ್ನು ಸಮತೂಕದಲ್ಲಿ ಹಾಕಬೇಕು (ಸಕ್ಕ. XII, ಶ್ರಾಸ್ತಕ). ೫. ವ್ಯವಸ್ಥೆ ; ವಿರ್ಮಾಟು. ೬. ಯುದ್ಧವ್ಯೂಹ ಮೊದಲಾದುವುಗಳ ರಚನೆ. ೭. ರೀತಿ ; ವಿಧಾನ. ೮. ಉಪಾಯ ; ಯೋಜನೆ ; ಹಂಚಿಕೆ : ಯೋಗವೆಂದರೆ ಉಪಾಯ, ಪೂರ್ಗವೆಂದರ್ಥ (ಹಿಂದಾಸ. ೨೫೭). ೯. ಜೋಗ. ೧೦. ಕಾರ್ಯ : ಉದ್ಯೋಗ. ೧೧. ಕಾರ್ಪಣಿಸರ್ವಹಣಿ : ಕರ್ಮ ಕೌಶಲ್ಯವೇ ಯೋಗ (ಶಾಭ. ೦೦೬). ೧೨. ಯುಕ್ತತೆ ; ಔಚಿತ್ಯ. ೧೩. ಧನ, ಭೂಮಿ ಇತ್ಯಾದಿ ಸಂಪತ್ತಿನ ಪ್ರಾಪ್ತಿ. ೧೪. ಶುಭವಾದ ಗ್ರಹಯೋಗದಿಂದ ಒದಗುವ ಒಳ್ಳೆಯ ಅದೃಷ್ಟ ; ಸುದೈವ ; ಭಾಗ್ಯ : ಇಲ್ಲಿಯವರೆಗೂ ಯೋಗ ಕೂಡಿಬಂದಿರಲಿಲ್ಲ (ಕಣಾ. ೦೧೦) ; ನಿಮ್ಮ ಜೊತೆ . . . ಸುಖಿಪಡುವ ಯೋಗ ಅವಳ ಹಣೆಬರಹದಲ್ಲಿ ದೇವರು ಬರೆಯಲಿಲ್ಲ (ಪಂಚತಂ. ೯೬) ; ಯೋಗವಿದ್ದಮ್ಮ ಭೋಗಿಸಿಯಾನು (ಗಾಥ). 'ಯೋಗತೆ' ಪರಾ. ೧೫. ಅವಕಾಶ ; ಸಂದರ್ಭ. ೧೬. ಮೋಸ ; ತಂತ್ರ. ೧೭. ದೇಹ ; ಶರೀರ. ೧೮. ಔಷಧಿ. ೧೯. ಗೂಢಚಾರ : ' ಯೋಗಪುರುಷ ' ಪರಾ. ೨೦. ಒಳ್ಳೆಯ ಗುಣ ; ಸದ್ಗುಣ : " ಸದ್ಗತಿ ಕಾಯ ಕೂಟ ದಿನ ಮೌಷಧಿ ವೇಷ ವಸಂ ಜಪಾರ್ಚನಂ ಸದ್ಗುಣಮಿಂತು ಯೋಗಮನಿಕಂ " (ಜಾಖಾಸ. ೦೦೯). ೨೧. ಮಂತ್ರ ; ಮಾಟ ; ಮಾಯೆ : 'ಯೋಗ ಚೂರ್ಣ'. 'ಯೋಗದಂಡ' ಪರಾ. ೨೨. ಷಡ್ದರ್ಶನಗಳಲ್ಲಿ ಒಂದು ; ಪಾತಂಜಲಯೋಗ : ವೈಶೇಷಿಕ, ನೈಯಾಯಿಕ, ಸಾಂಖ್ಯ, ಯೋಗ, ಜೈಮಿನೀಯ, ಔಪನಿಷದಗಳೆಂಬ ಆರು ಆಸ್ತಿಕದರ್ಶನಗಳು (ಜಾಠಡ. ೨೫೯). ೨೩. ಮನಸ್ಸು ಹಾಗು ಇಂದ್ರಿಯಗಳನ್ನು ನಿಗ್ರಹಿಸಿ ವಿಕಚಿತ್ತದಿಂದ ಧ್ಯಾನಮಾಡುವಿಕೆ : ಚಿತ್ತವೃತ್ತಿನಿರೋಧ : ಪರಮೇಶ್ವರನೆಂದುದಾತ್ಮಯಶರೆಂದು ಜಿತೇಂದ್ರಿಯನೆಂದು ಯೋಗಪಂಕರುಹದಿನೇಶರೆಂದು. . .ಕೂರ್ತ್ತು ಮಲಿಯಳಿತಪೋನಿಧಿ ದೇವಸಿಂಗಿಜ್ಜಿಯರ ಪದಯುಗ್ಮಮಂ ಪಡೆದು ಕಟ್ಟಿದ ರತ್ನಿಯ ಪುಣ್ಯಮೂರ್ತ್ತಿಗಳ್ (ಶಾಖಾ. XX, ೪೯-೫೬ : ೧೦೧೬ ?) ; ಯಾವುದನ್ನು ಪತಂಜಲಿದೇವನು ' ಚಿತ್ತವೃತ್ತಿನಿರೋಧ ' ವೆಂದು ಹೇಳಿದ್ದಾನೋ ಆ ಯೋಗ ಪುಸಕ್ತವಲ್ಲ (ಪಂಕಾಬು. ೧೩೦). ೨೪. [ವೇದಾಂತ] ಜೀವಾತ್ಮವು ಪರಮಾತ್ಮನೊಡನೆ ಐಕ್ಯಹೊಂದುವುದು : ಮುಕ್ತಿ ; ಸಾಯುಜ್ಯ : ಜೀವಾತ್ಮ—ಪರಮಾತ್ಮರ ಸಂಯೋಗವೇ ಯೋಗವೆಂದೂ . . . ನಿರೂಪಿಸಿಮವರು (ಪಂಪಾಚಾ. ೧೩). ೨೫. [ವ್ಯಾಕ] ಪದಗಳ ಮೂಲಾರ್ಥ ; ವ್ಯುತ್ಪತ್ತಿಮೂಲಕವಾದ ಅರ್ಥ : ಪದಗಳ ವಿಭಾಗವನ್ನು ಯೋಗ, ರೂಢಿ, ಯೋಗರೂಢ ಮೊದಲಾದ ಭೇದಗಳಿಂದ ವಿಭಾಗಮಾಡುವರು. ಯೋಗವೆಂದರೆ ಅವಯವಶಕ್ತಿ. ಪದವಲ್ಲಿರುವ ಅಂಶಗಳ ಅರ್ಥ ಮೂಲಕ ಒಂದರ್ಥವನ್ನು ಕೊಡುವ ಪದವು ಯೋಗಪದ (ಪಂಪಾಚಾ. ೦೧೭) ; ಅವಯವಾರ್ಥದಿಂದ ತಿಳಿಯುವರ್ಥವು ಯೋಗ (ಪಂಕಾಬು. ೧೩೦). ೨೬. [ಶೈವ] ಆಗಮದ ನಾಲ್ಕು ಭಾಗಗಳಲ್ಲಿ ಒಂದು : ಶೈವಾಗಮಗಳೆಲ್ಲವೂ ಜ್ಞಾನ, ಯೋಗ, ಕ್ರಿಯಾ, ಚರ್ಯಾ ಎಂಬ ನಾಲ್ಕು ವಿಷಯಗಳನ್ನು ವಿವರಿಸತಕ್ಕವುಗಳಾಗಿವೆ (ಜಾಠಡ. ೨೦೦). 'ಯೋಗಪಾದ', 'ಯೋಗಪರ್ಯಾಯ' ಪರಾ. ೨೭. [ಜೈನ] ಬಾಹ್ಯಪ್ರಪಂಚದೊಡನೆ ಉಂಟಾಗುವ ಸಂಬಂಧ : ಮನ, ವಚನ, ಕಾಯಗಳ ಚಂಚಲತೆಗೆ ಯೋಗವೆನ್ನುವರು. (ಕೃಪ್ರ. ೫೯೦) ; ಯೋಗವೆಂಬ ವಿಧನೆಯಿದು ಪ್ರಕೃತಿ ಪ್ರದೇಶುಬಂಧಗಳಿಗೆ ಹೇತು (ಹಿಂದಾಸ. ೮೯). ೨೮. [ಜ್ಯೋತಿ] ಜನ್ಮಕಾಲದಲ್ಲಿ ಶುಭಾಶುಭಫಲಗಳನ್ನು ಸೂಚಿಸುವ ಗ್ರಹಗಳ ಸ್ಥಿತಿ.—ಗೊತ್ತಾವ ಗ್ರಹನನ್ನಿವೇಶ : ನೋಡೆ ವಿಷ್ಣುಂಭಾದಿ ಯೋಗವುಕ್ಕು (ಪಂಗಣಾ. ೫೦-೯). ೨೯. [ಗಣಿತ] ಸಂಖ್ಯೆಗಳನ್ನು ಕೂಡುವುದು ; ಸಂಕಲನ : "ಯೋಗಂ ಬೆರಸು . . . ಬಕಂ ಇಂತಿನಿತು ಕೂಡೂದಕ್ಕೆ ಪೆಸರು" (ಕೃಪಜಾ. ೦೩-೦೪ ಪ); "ಯೋಗಂ ಧ್ಯಾನೋಪಯೋಗಮುಂ ಸಂಗತಿಯುಂ" (ಪಕ್ಕ. ೦೩೬-೩೦) ; " ತನುವಿನೊಳು ದ್ರವ್ಯದೊಳು ಮುಕ್ತಿಯೊಳು ಸುಗತಿಯೊಳ್ ವೆಸೆವ ಸುಧ್ಯಾನದೊಳು ವೇಷದೊಳು ಕೂಟದೊಳು ದಿನದೊಳೌಷಧಿಗಳೊಳು ಯೋಗಮಿನಿಕ್ಕುಂ " (ಪಂಗಣಾ. ೦೩೦-೩೦). [ಸಂ.]

ಯೋಗಂಗೊಳ್ (ಕ್ರಿ). ಧ್ಯಾನಾಸಕ್ತನಾಗು : ಯತೋಭವಸ್ವಾಮಿಗಳೆಂಬ ಪರಮಾವಧಿಜ್ಞಾನಿಗಳ್ . . . ಯೋಗಂಗೊಂಡಿರ್ಪದುಂ (ಸುಗಸಾ. ೦೦-೫೭ ಪ). [ಯೋಗ + ಕೊಳ್,]

ಯೋಗಕ್ಷೇಮ (ನಾ). ೧. ಧನ, ಆಸ್ತಿ, ರಾಜ್ಯ ಮೊದಲಾದುವುಗಳ ಸಂಪಾದನೆ ಹಾಗೂ ಅವುಗಳ ರಕ್ಷಣೆ : ಯೋಗಕ್ಷೇಮಾಧೀನಮಪ್ಪ ನೀತಿಶಾಸ್ತ್ರಮುಮುಂ . . . ಪೆಜವುಂ ವಿದ್ಯಾಕಳಾಪಮುಮಂ ತ್ರಿದಶರ್ಗ್ಕುಪದೇಶಂಗೆಯ್ಯುತುಂ (ಶಾಂತಿ. ೦೦-೯೦ ೪). ೨. ನೆಮ್ಮದಿ ; ಸೌಖ್ಯ ; ಕಲ್ಯಾಣ : ಮಕ್ಕಳು ಸಾಸಿಗರು ನೀವಱಿಯೆ ಕಳುಒಳು ಬೇಸಱವ್ವ ಭಯಬೇಡ ಯೋಗಕ್ಷೇಮಕಾವೆಂದ (ಶಾಣಾ. ೦-೯೦); ಅಕ್ಕನಾವಬಗೆ ತಂಗಿಯ ಯೋಗಕ್ಷೇಮವೇ ಮೊದಲು (ಶಾಂಪಾ. ೮೪). ' ಪಾಮಕ್ಷೇಮ ' ಪರಾ. [ಸಂ.]

ಯೋಗಚೂರ್ಣ (ನಾ). ಮಂತ್ರಿಸಿದ ಪುಡಿ ; ಮಂತ್ರಶಕ್ತಿಯಿಂದೊಡಗೂಡಿದ ಪುಡಿ : ಯೋಗಚೂರ್ಣ ಯೋಗಪ್ರವೃತ್ತಿಯಂ ಕರಾಗ್ರದಲ್ಲಿ ತಾಳ್ದಾಗಳಂತೆ ಬಂದು ವಿತ್ತಮುಳ್ಳಾಲಯಂಗಳಂ ರಾಜಿಪುತ್ತೆ ಸಾರ್ದು ಸೊಪ್ಪಳಿಸುತ್ತೆ ನೋಡಿ ಸಂಯೋಗಿಪುತ್ತೆ ತಕ್ಕುದಲ್ಲಮಂ ಕಡಂಗಿ ಜಾಗ್ರಮ್ಮಿಯಿಂ (ಶ್ರಸಂ. ೫೦-೬) ; ಆ ವೈದ್ಯನು ಯೋಗಚೂರ್ಣವನ್ನು ಬೆರಸಿ ಚುದ್ರಗುಪ್ತನಿಗೆ ಔಷಧಿ ಮಾಡಿಕೊಟ್ಟನು (ಚಾಕ್ಷಚು. ೫೬). ' ಚೂರ್ಣ ಯೋಗ ' ಪರಾ. [ಸಂ.]

ಯೋಗಜ (ಗು). ೧. ಯೋಗ ಅಥವಾ ಧ್ಯಾನದಿಂದ ಉಂಟಾದ. (ನಾ). ೨. [ಶೈವ] ಇಪ್ಪತ್ತೆಂಟು ಶಿವಾಗಮಗಳಲ್ಲಿ ಒಂದು : ಕಾಮಿಕ, ಯೋಗಜ, ಚಿಂತ್ಯ . . . ತಿರಣ, ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಶಾರೆವ. ೭೨). [ಸಂ.]

ಯೋಗಜಲಕ್ಷಣೆ (ನಾ). [ತರ್ಕಶಾ] ಅಲೌಕಿಕ ಪ್ರತ್ಯಕ್ಷದ ಜ್ಞಾನಲಕ್ಷಣೆ. ಸಾಮಾನ್ಯಲಕ್ಷಣೆ ಮತ್ತು ಯೋಗಜಲಕ್ಷಣೆ ಎಂಬ ಮೂರು ಸಂಬಂಧಗಳಲ್ಲಿ ಒಂದು : ಯೋಗಾಭ್ಯಾಸದಿಂದ ಬರುವ ಶಕ್ತಿ : ಯೋಗಜಲಕ್ಷಣೆಯೆಂದರೆ ಯೋಗಾಭ್ಯಾಸಸಾಮರ್ಥ್ಯದಿಂದ ಬಂದ ಶಕ್ತಿ ವಿಶೇಷ (ಶಿಂಪಾ. ೦೮೦). ' ಜ್ಞಾನಲಕ್ಷಣೆ ' ಪರಾ.

[ಸಂ. ಯೋಗಜಲಕ್ಷಣಸ್]

ಯೋಗತೆ (ನಾ). ಅದೃಷ್ಟ ; ಭಾಗ್ಯ : ' ಯೋಗತೆವಡೆ ' ಪರಾ.

[ಸಂ. ಯೋಗತಾ]

ಯೋಗತೆವಡೆ (ಕ್ರಿ). ಭಾಗ್ಯವಂತನಾಗು; ಅದೃಷ್ಟವಂತನಾಗು: ಭೂಗೀರಥಿ ನಿನ್ನ ಸೋಂಕಿನ ತಂಗಾಳಿ ಕಾಗಿದ ಸಕಲಜಂತುಗಳು ಯೋಗತೆವಡೆಮ ಸ್ವರ್ಗದ ಸೌಖ್ಯಂಗಳ ಭೋಗಿಸುತಿಹರು ಸಂತಸದಿ (ಕೋಚಿ. ೬-೮೨).

[ಯೋಗತೆ + ಪಡೆ]

ಯೋಗತ್ಯಾಗಕ್ರಿಯೆ (ನಾ). [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು : ಜನರ ಅನುಗ್ರಹಕ್ಕಾಗಿ ಮಾಡುತ್ತಿದ್ದ ತೀರ್ಥಾಟನೆಯನ್ನು, ಸಮವಸರಣವನ್ನು ತ್ಯಜಿಸುವುದು : ಸಮವ ಸರಣಮಂ ವಿಸರ್ಜಿಸಿ ವಿಹಾರಾದಿಗಳಂ ಮಾಬ್ಬುದು ಯೋಗತ್ಯಾಗಕ್ರಿಯೆ (ಶಾಭೂಪು. ೨೨೦). ' ದೀಕ್ಷೆ ' ಪರಾ. [ಸಂ. ಯೋಗತ್ಯಾಗಕ್ರಿಯಾ]

ಯೋಗತ್ರಯ (ನಾ). ೧. ಜ್ಞಾನಯೋಗ, ಕರ್ಮಯೋಗ ಮತ್ತು ಭಕ್ತಿಯೋಗಗಳೆಂಬ ಮುಕ್ತಿಸಾಧಕವಾದ ಮೂರು ಮಾರ್ಗಗಳು : ಶ್ರೀಕೃಷ್ಣ . . . ಅರ್ಜುನನಿಗೆ ಯೋಗತ್ರಯಗಳನ್ನು ಬೋಧಿಸಿದ ಅನಾಸಕ್ತನಾದ ಮಹಾಯೋಗಿಯೂ ಹೌದು (ಶಾಕೆದ. ೪೭). ೨. [ಜೈನ] ಭಾವಾಸ್ರವವನ್ನುಂಟು ಮಾಡುವ ಮನ, ವಚನ ಮತ್ತು ಕಾಯ ಎಂಬ ಮೂರು ಪ್ರವೃತ್ತಿಗಳು : ಗತಗೌರವತ್ರಯಂ ನಿರ್ಜಿತದಂಡತ್ರಯನಪೇತಶಲ್ಯತ್ರಯನಪ್ರತಿಹತಯೋಗತ್ರಯಂ (ಪ್ರತ್ಯ. ೦೪-೦೬). [ಸಂ.]

ಯೋಗದಂಡ (ನಾ). ೧. ಮಂತ್ರದ ಕೋಲು ; ಮಾಯಾದಂಡ : ಪಾಲಿಸೆನುತವೆ ಕಪಿಗಳಿಬ್ಬಗಲು ಕೇಳಿ ವಾರ್ತೆಯನಾ ಸ್ವಯಂಪ್ರಭೆ ಬೀಳ್ಕೊಟ್ಟಳು ಯೋಗದಂಡದಿ ಬಾಗಿಲನು ತೋಱಿ (ಶಾಪಾ. ೯-೬೬). ೨. ಯೋಗಿಗಳು ಉಪಯೋಗಿಸುವ ಕೋಲು,– ದಂಡ : ಭೂತ ಹಿತಮೆಂತಂಬ ಕೀರ್ತಿಯಿಂ ಪೊದವನಿಶಮೀಕಾಗ್ರಾತಿಶಯನಿಜ ಜ್ಞಪ್ತಿ ಪೆಸರಿನ ಯೋಗದಂಡವನು ಚಾತುರಿಯದಿಂ ಪಿಡಿವುತ (ಗಗಣಾ. ೦೬-೩೦). [ಸಂ.]

ಯೋಗದರ್ಶನ (ನಾ). ಷಡ್ದರ್ಶನಗಳಲ್ಲಿ ಒಂದು ; ಪಾತಂಜಲ ದರ್ಶನ: ಯೋಗದರ್ಶನಕ್ಕೆ ಪತಂಜಲಿಮಹರ್ಷಿಗಳು ಸೂತ್ರಕಾರರಾದುದರಿಂದ ಪಾತಂಜಲದರ್ಶನವೆಂದು ಪ್ರಸಿದ್ಧಿ ಬಂದಿದೆ (ಹಿಂಪಾ. ೯೨) ; ಯೋಗ ದರ್ಶನಕ್ಕೆ ಸೇಶ್ವರಸಾಂಖ್ಯವೆಂದು ವ್ಯವಹಾರವಿದೆ (ಪಾರಕ. ೦೩೦). [ಸಂ.]

ಯೋಗದೃಷ್ಟಿ (ನಾ). ಧ್ಯಾನದ ಮೂಲಕವಾಗಿ ಬರುವ ಅಲೌಕಿಕಜ್ಞಾನ; ಪಾರಮಾರ್ಥಿಕ ದೃಷ್ಟಿ : ಅವನ ಸ್ಥೈರ್ಯಸ್ಥಾಲಿತ್ಯಕ್ಕೆ ಹೇತುವಾದ ಉಪಯೋಗದೃಷ್ಟಿಯಮನ್ನು ಶ್ರೀಕೃಷ್ಣನು ಹೋಗಲಾಡಿಸಿ, ಅವನಿಗೆ ಯೋಗ ದೃಷ್ಟಿಯನ್ನು ಅನುಗ್ರಹಿಸುತ್ತಾನೆ (ಪಾರಕ. ೦೦೬). [ಸಂ.]

ಯೋಗನಾಥ (ನಾ). ೧. ಶಿವ. ೨. ವಿಷ್ಣು : ಪುಗಸನೆಕ್ತಿಕೊಂಡು ವಸುದೇವನೇತಾನುಮಾ ರಾತ್ರಿಸರಕ್ಷಿತಪ್ರಸೂತಿಕಾನಿಳಯದಿಂ ತಳರ್ದು ನಡೆವಾಗಳಾ ಯೋಗನಾಥಂ ಪುರಜನಂ ಮೆಯ್ಯಱಯದಂತು ನಿದ್ರೆಯಂ ಕವಿಸ (ಪಗಂ. ೬-೬ ೪). [ಸಂ.]

ಯೋಗನಿದ್ರೆ (ನಾ). ೧. ಧ್ಯಾನಯೋಗದಿಂದ ಬರುವ ನಿದ್ರಾವಸ್ಥೆ ; ಧ್ಯಾನಾಸಕ್ತಿಯಲ್ಲಿ ಎಚ್ಚರ ಹಾಗೂ ನಿದ್ದೆಯ ಎರಡರ ನಡುವಿನ ಸ್ಥಿತಿ : ಹೊರಜಗತ್ತು ಕಣ್ಮರೆಯಾಗಿ ಸ್ಮರಣಮಾತ್ರವಾಗಿ ಗೋಚರ ವಾಗುತ್ತಿರುವ ಧ್ಯಾನಸ್ಥಿತಿ : ನಿದ್ರೆ ತಿಳಿಯದೆ ತೊಳಲುವತಿಜದನಿದ್ರೆ ಮುಸುಕಿದವರ್ಗ ಸತತಂ ನಿದ್ರೆಯಲ್ಲದೆ ಯೋಗನಿದ್ರೆಯದೆಂತು ದೊರಕುವುದು (ಜಸಿ. ೩೫-೯) ; ರಾಘವನು ಮೈಮಱೆದ ಲಕ್ಷ್ಮಣ ಯೋಗ ನಿದ್ರೆಯ ತಾಳ್ದ (ಶಾಕಾ. ೨೯-೬೬). ೨. ವಿಶ್ವದ ಪ್ರಳಯಂ ಹಾಗು ಉತ್ಪತ್ತಿಗಳ ಮಧ್ಯದಲ್ಲಿ ಬ್ರಹ್ಮನಿಗೆ ಬರುವ ದೀರ್ಘಕಾಲದ ನಿದ್ರೆ. ೩. ಯುಗಾಂತ್ಯಕಾಲದಲ್ಲಿ ವಿಷ್ಣುವಿಗೆ ಬರುವ ನಿದ್ರೆ : (೨). ೪. ಇತರರನ್ನು ತನ್ನ ಪ್ರಭಾವದ ಪರಿಧಿಗೆ ತಂದು ಅಧೀನಪಡಿಸಿಕೊಳ್ಳುವುದರ ಮೂಲಕ ಬರಿಸುವ ನಿದ್ರೆ : ವಶ್ಯಸುಪ್ತಿ : ಚಂದ್ರಶೇಖರನು . . . ಅವಳ ಮುಖದ ಮೇಲೆ ಕೈಯಾಡಿಸಿ ಅವಳಿಗೆ ಯೋಗನಿದ್ರೆ ಬರಿಸಿದನು (ಶಂಚಿ. ೦೧೪). [ಸಂ. ಯೋಗನಿದ್ರಾ]

ಯೋಗನಿಯೋಗ (ನಾ). ಯೋಗದಲ್ಲಿ ತೊಡಗಿರುವಿಕೆ ; ಧ್ಯಾನ ತತ್ಪರತೆ : ಸ್ಫಟಿಕಮಯಶಿಲಾತಳದೊಳ್ ಯೋಗನಿಯೋಗದಿಂದಮಿರ್ದರ್ ಮುನೀಂದ್ರರೊರ್ವರ್ (ಸುಳಾಚ. ೬-೬). [ಸಂ.]

ಯೋಗನಿರೋಧ (ನಾ). [ಜೈನ] ಕರ್ಮಗಳ ಆಸ್ರವವನ್ನುಂಟು ಮಾಡತಕ್ಕ ಕಾಯ, ವಾಕ್ಯ ಮತ್ತು ಮನಸ್ಸುಗಳ ಚಂಚಲತೆಯನ್ನು ತಡೆಗಟ್ಟುವಿಕೆ,–ನಿಗ್ರಹ : ವ್ಯಪಘನಾಘನಂ ... ಯೋಗಬಲ್ಯಂಕಾಸನ ದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ (ಶಂಪ್ರ. ೦೬-೯೦ ೪); ಆದಿದೇವನುಂ ಪದಿನಾಲ್ಕುದಿವಸಂ ಯೋಗನಿರೋಧಂಗೆಯ್ದು . . . ತ್ರೈಲೋಕ್ಯಚೂಡಾಮಣಿಯುಮಾಗಿರ್ದಂ (ಶಾಭೂಪು. ೮೨). [ಸಂ.]

ಯೋಗನಿರ್ವಾಣಸಂಪ್ರಾಪ್ತಿ (ನಾ). [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು : ಯೋಗನಿರ್ವಾಣಸಂಪ್ರಾಪ್ತಿ ಯೋಗ ನಿರ್ವಾಣಸಾಧನ . . . ನಿರ್ವೃತಿಯೆಂಬುದ್ಯುತ್ತುಮೂಱು . . . ಗರ್ಭಾನ್ವಯಕ್ರಿಯೆಗಳಂ (ಶಾಭೂ. ೦೬-೦೬ ೪). [ಸಂ.]

ಯೋಗನಿರ್ವಾಣಸಾಧನ (ನಾ). [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು : ಯೋಗನಿರ್ವಾಣಸಂಪ್ರಾಪ್ತಿ ಯೋಗ ನಿರ್ವಾಣಸಾಧನ . . . ನಿರ್ವೃತಿಯೆಂಬುದ್ಯುತ್ತುಮೂಱು . . .

ಗರ್ಭಾನ್ವಯಕ್ರಿಯೆಗಳು (ಆದಿಪು. ೦೫-೦೬ ಪ) . 'ದೀಕ್ಷೆ' ಪರಾ.
[ಸಂ.]

ಯೋಗಪಟ (ನಾ)· ಧ್ಯಾನಕಾಲದಲ್ಲಿ ಯೋಗಿಯು ಬೆನ್ನು ಮತ್ತು ಮೊಳಕಾಲುಗಳ ಸುತ್ತ ಕಟ್ಟಿದಂತೆ ಸುತ್ತಿಕೊಳ್ಳುವ ಪಸ್ತ : "ಯೋಗಪ[ಟಾಕಾಂ· ಪ]ಟ ವ್ಯಾಪಿಯಕ್ಕುಂ." (ಶುಂಗಣ. ೬೬-೯). [ಸಂ.]

ಯೋಗಪಟ್ಟ (ನಾ)· = ಯೋಗಪಟ : ಯೋಗಪಟ್ಟವನ್ನು ಮೊಣಕಾಲುಗಳ ಮೇಲೆ ಕಟ್ಟಿಪಮ್ಮಟೀಠದ ಮೇಲೆ...ಕುಳಿತಿರುವಪ್ಪು(ಹೊಯ್ಸಚ· ೯೩). [ಸಂ.]

ಯೋಗಪಟ್ಟಕೆ (ನಾ)· .= ಯೋಗಪಟ : "ಜೋಗವಟ್ಟಮಂದು ಯೋಗ ಪಟ್ಟಕೆ" (ಕಜಾ. ೬೪-೧೬೯)· [ಸಂ. ಯೋಗಪಟ್ಟಿಕಾ]

ಯೋಗಪಟ್ಟಗೆ ' ಯೋಗವಟ್ಟಗೆ ' ನೋ·

ಯೋಗಪಾದ (ನಾ)· [ಶೈವ] ಆಗಮದ ಕ್ರಿಯಾಪಾದ, ಚರ್ಯಾ ಪಾದ, ಯೋಗಪಾದ ಮತ್ತು ಜ್ಞಾನಪಾದಗಳೆಂಬ ನಾಲ್ಕು ಭಾಗ ಗಳಲ್ಲಿ ಒಂದು : ಮೋಕ್ಷಸಾಧನೆಯ ಮಾರ್ಗವನ್ನು ವಿವರಿಸುವ ಭಾಗ : ಸಕಲಾಗಮಂಗಳೆಲ್ಲಿಯೂ ಕ್ರಿಯಾಪಾದ ಚರ್ಯಾಪಾದ ಯೋಗ ಪಾದ ಜ್ಞಾನಪಾದಮೆಬ ನಾಲ್ಕು ಪಾದಂಗಳು (ಪರಾಕ್ಷ. ೬೭) ; ಯೋಗ ಪಾದವು ಮೋಕ್ಷವನ್ನು ಸಾಧಿಸುವ ಅಧ್ಯಾಸಗಳನ್ನು ತೋರಿಸುತ್ತದೆ (ಶಾರದ· ೨೦೦)·· [ಸಂ.]

ಯೋಗಪಾದುಕ (ನಾ)· ಯೋಗಿಗಳು ಮೆಟ್ಟುವ ಪಾವುಗೆ : "ಜೋಗ ಪಾವುಗೆಯುಮೆನೆ ಯೋಗಪಾದುಕಂ " (ಕ್ಯಾಕ್ಕ· ೬೨). [ಸಂ.]

ಯೋಗಪಾದುಕೆ (ನಾ)· ೧. = ಯೋಗಪಾದುಕ : " ಯೋಗಪಾದುಕಾ —ಜೋಗವಾವುಗೆ "(ಕಮುಕ· ೨೬೨ ಕೃತೋ)· ೨. ಧರಿಸಿದವನನ್ನು ಅವನ ಇಚ್ಛೆ ಬಂದಲ್ಲಿಗೆ ಕೊಂಡೊಯ್ಯಬಲ್ಲ ಮಾಯಾಶಕ್ತಿಯುಳ್ಳ ಪಾದ ರಕ್ಷೆ : ಮಾಟದ ಪಾವುಗೆ. [ಸಂ. ಯೋಗಪಾದುಕಾ]

ಯೋಗಪೀಠ (ನಾ)· ೧. ಯೋಗಸಾಧನೆಯಲ್ಲಿ ಕುಳಿತುಕೊಳ್ಳುವ ಒಂದು ರೀತಿ ; ಒಂದು ಬಗೆಯ ಯೋಗಾಸನ : ಯೋಗಪೀಠಂಗಳವು ಪದಿನೆಂಟಾಗಿ ದಾಸಿಗೆ ವರುಷವರುಷಕೆ ಹೋಗಿ ವಂದಿಸಿ ಕಪ್ಪಮಂ ತಪೆ ತೆತ್ತು ಬಪುಕುವವು (ಶಾಪ್ರ· ೨೬-೨೦). ೨. ಶಿವಲಿಂಗದ ಪೀಠಗಳಲ್ಲಿ ಒಂದು ಬಗೆ : ಶಿವಾರ್ಚನೆಗುಪಯುಕ್ತವಾಗಿ ಅನಂತಪೀಠ ಕಮಠ ಪೀಠ ಶೇಷಪೀಠ ಸಿಂಹಪೀಠ ಪದ್ಮಪೀಠ ವಿಮಲಪೀಠ ಭದ್ರಪೀಠ ಯೋಗಪೀಠ ಪ್ರಣವಪೀಠಗಳ ಭಾವನೆಯಿಂದುಪಕಲ್ಪಿತವಾಪ ದಿವ್ಯಮಂಟಪ ಮಧ್ಯಗತಸಿಂಹಾಸನಕ್ಕೆ (ಪರೇಶ· ೦೦೦)· [ಸಂ.]

ಯೋಗಪುರುಷ (ನಾ)· ೧. ಆಧ್ಯಪ್ಪಶಾಲಿ ; ಭಾಗ್ಯವಂತ : ನಿಜಕ್ಕೂ ಅವನ ರಾಜಕಳೆ ಯೋಗಪುರುಷನೆಂದೇ ಸಾರುತ್ತೆ (ಕೇಚಾಭಾ.೦೮). ೨. ಗೂಢಚಾರ. [ಸಂ.]

ಯೋಗಮಾರ್ಗ (ನಾ)· ೧. ಧ್ಯಾನಮಾರ್ಗ : ತಪೋಮಾರ್ಗ : ಧರೆಯೊಳಗೆ ರವಿಮಂಡಲವನೊದೆದುರವಣಿಸಿ ಪಾಯ್ದುರು ತಾವಿಬ್ಬರು ಕಣಾ ಸನ್ಯಾಸಿಯಾಗಿದೆ ಯೋಗಮಾರ್ಗದಲಿ ಪರಿಣವನು ಬಿಬ್ಬರಂಗಳು ಸೂಗರ ದೊಳಭಿಮುಖರಾಗಿ ಮರಣಾಂತರವನೆದುಬ್ಬರವರು (ಕಾಪ್ರಾಖಾ· ೩-೦೯). ೨. [ಶೈವ] ಶೈವಸಿದ್ಧಾಂತದ ನಾಲ್ಕು ಮಾರ್ಗಗಳಲ್ಲಿ ಒಂದು : ದಕ್ಷಿಣಾದೇಶದ ಶೈವಸಿದ್ಧಾಂತಗಳಲ್ಲಿ ಚರ್ಯಾಮಾರ್ಗ, ಕ್ರಿಯಾಮಾರ್ಗ, ಯೋಗಮಾರ್ಗ, ಜ್ಞಾನಮಾರ್ಗಗಳೆಂಬ ನಾಲ್ಕು ಅಂತಸ್ತಿನ ಸಾಧನಗಳವೆ . . . ಯೋಗಮಾರ್ಗದಲ್ಲಿ (ಸಚಿಮಾರ್ಗ) ಪ್ರಾಣಾಯಾಮದ ಮೂಲಕ ದೇಹವಲ್ಲಿರುವ ಪಟ್ಟಕ್ರಗಳಲ್ಲಿ ವಾಯುವನ್ನು ನಿಲ್ಲಿಸಿ ನಿಷ್ಕಲಮೂರ್ತಿ ಯನ್ನು ಆರಾಧಿಸುವುದರ ಮೂಲಕ ಶಿವನ್ನರೂಪವಾದ ಸ್ವರೂಪ ಮುಕ್ತಿ ಯನ್ನು ಪಡೆಯುವುದು (ಜಾಧರ· ೨೦೬). [ಸಂ.]

ಯೋಗರೂಢ (ನಾ)· [ವ್ಯಾಕ] ಯೋಗ· ರೂಢ ಮತ್ತು ಯೋಗರೂಢ ವೆಂಬ ಪದವಪ್ರಕಾರಗಳಲ್ಲಿ ಒಂದು ; ರೂಢಿಯಿಂದ ನಿರ್ಧಾರಗೊಂಡ ವಾಚ್ಯಾರ್ಥ ; ಶಬ್ದಶಕ್ತಿ ; ವಾಚಕತ್ವ ಶಕ್ತಿ : ಅವಯವಾರ್ಥವಿದ್ದರೂ ಸಮುದಾಯದಿಂದ ಒಂದು ಅರ್ಥವನ್ನೇ ರೂಢವಾಗಿ ಹೇಳಿದರೆ ಅದು ಯೋಗರೂಢಪ್ರ· ಪಂಕಜವು· ನೀರಜವು ; ಇಲ್ಲಿ ನೀರಲ್ಲಿಯೂ ಕೆಸರಲ್ಲಿಯೂ ನೈದಿಲೆ ಕಪ್ಪೆ, ಮೊದಲಾದುವು ಎಲ್ಲಾ ಅವಯವಾರ್ಥದಿಂದ ಹೇಳಲ್ಪಟ್ಟರೂ ಸಮುದಾಯವು ತಾವರೆಯಲ್ಲೇ ರೂಢವಾದ್ದರಿಂದ ಇದು ಯೋಗರೂಢವು (ಹೊಮಗ· ೦೬೨). [ಸಂ.]

ಯೋಗರೂಢಿ (ನಾ)· = .ಯೋಗರೂಢ : ಶಾಸ್ತ್ರಕಲ್ಪಿತವಾದ ಅವಯವಾರ್ಥದಿಂದ ಸಹಿತವಾದ ವಿಶೇಷ್ಯಭೂತವಾದ ಅರ್ಥದಿಂದ ನಿರೂಪಿತ ವಾದಶಕ್ತಿಗೆ ಯೋಗರೂಢಿ ಎಂದು ಹೆಸರು (ಶಾಶಕ್ತ್ಯ· ೭೩). [ಸಂ.]

ಯೋಗವಂಟಿಗೆ ' ಯೋಗವಟ್ಟಿಗೆ ' ನೋ·

ಯೋಗವಂತ (ನಾ)· ೧. ಧ್ಯಾನಯೋಗವಲ್ಲಿ ತೊಡಗಿದವನು : ಯೋಗವಂತರಿಗೆ ಹೃದಯದಲ್ಲಿ ಬ್ರಹ್ಮಭಾವನೆಯು ಗೃಹಸ್ಥರಿಗೆ . ವೇದಾರ್ಥ ಯುಷ್ಪು ವೇದಾಂತಾರ್ಥದ ವಿಚಾರವು (ಶಿಗಪ್ರ. ೬೭). ೨. ಸಂದೈವಿ : ಅದೃಷ್ಟಶಾಲಿ : (ಕ)· [ಸಂ. ಯೋಗವತ್]

ಯೋಗವಟ್ಟಗೆ· ಯೋಗಪಟ್ಟಗೆ· ಯೋಗವಂಟಿಗೆ (ನಾ)· = ಯೋಗ ಪಟ್ಟಕೆ : ಕಾಯದೆ ಕವಚಸವಾಗಿ ಮೆನಪಜೆ ಯೋಗವಟ್ಟಗೆಯಾಗಿ ಇಂದ್ರಿಯ ವಿಸಂಚಿನಿಂದಾವುಪಬುಯಬುಮ್ಮ (ಶಾಪ್ರ. ೦೧೦-೬೬); ಯೋಗಪಟ್ಟಿಗೆಯ ಪರ ಸದಿಲಿಸಿ ಧಿಗಿಲನೆದ್ದನು . . . ದಕ್ಷಾಧ್ವರಧ್ವಂಸಿ (ಶಿಪುಗ· ೪-೩-೩೮). **ಯೋಗವಟ್ಟಗೆ :** ಪರವ ಶ್ರೀಕಂಠಭ್ಯುತಿಪರಿಕ್ಕಿದರ್ ಪಾಂತಿ[ಜ]ಳ ಗ್ರಿಹಾಚಾರ್ಯರ್ಗ್ಗೊರ್ವರೆ ಯೋಗವಟ್ಟಗೆಯನಾದರದಿಂದಂ ವಜ್ರಪಂಜರ ಮನಿಕ್ಕುವಪೊಲು (ಶಿ. VIII· ಸೊಡ್ಡ· ೨೯-೩೭; ೨೦೦೩ ಗ). **ಯೋಗವಂಟಿಗೆ :** ಕುಚ್ಚಿಯ ಕಂಥಿಯು ಕೈಯ ಲಾಗಲು ಸುಚ್ಚಿಯ ಅವುಗೆ ಯೋಗವಂಟಿಗೆ ವಚನದಲಿ ಜಜ್ಜಳ ಹರಸಿ ವಿಭೂತಿಯನು ಇಟ್ಟು ವಿಚಿತ್ರದಿಂದಲಿ ಸಿದ್ಧ ಬಂದನು (ಕೇಚಾ. ೭-೦೪). ' ಜೋಗವಟ್ಟಿಗೆ ' ಪರಾ.
[< ಸಂ. ಯೋಗವಟ್ಟಿಕಾ]

ಯೋಗವರ್ತನ (ನಾ)· ೧. ತಪಸ್ಸನ್ನು ಆಚರಿಸುವಿಕೆ ; ತಪಶ್ಚರಣ. ೨. [ಜೈನ] ಮನಸ್ಸು· ಕಾಯ· ವಾಕ್ಕುಗಳ ಮೂಲಕವಾಗಿ ಕರ್ಮಾಸ್ರವವಾಗುವ ಸಂದರ್ಭ·– ಸಂಬಂಧ· ೧. ೨ : ನಿರಂಜನ ರಾಗಿರ್ದುಮಶೇಷಲೋಕನಿಹಿತಾರ್ಥಗ್ರಾಹಿಗಳ್ ಯೋಗವರ್ತನಮೊಂದುಂ ತಮಗೆಂದುಮಿಲ್ಲೆನಿಯುಂ ಸಿದ್ಧರ್ಕಳ್ (ಪುಕ್ಕಪು. ೦-೨). [ಸಂ.]

ಯೋಗವಾವುಗೆ (ನಾ)· = ಯೋಗಪಾದುಕ : " ಯೋಗವಾವುಗೆ [ಪಾಕಾಂ. ಜೋಗಪಾವುಗೆ] ಯುಮೆನೆ ಯೋಗಪಾದುಕಂ" (ಕ್ಯಾಕ್ಕ· ೬೨); ಆದೈ್ವತವ ಯೋಗವಟ್ಟಗೆ ಆಗಮ್ಮವೆ ಯೋಗವಾವುಗೆ (ಆಕಚಿ. ೫೩-೬೮೮).
[< ಸಂ. ಯೋಗಪಾದುಕಾ]

ಯೋಗವಾಹ (ನಾ)· [ವ್ಯಾಕ] ಇನ್ನೊಂದು ವರ್ಣದ ಸಹಾಯದಿಂದ ಮಾತ್ರ ಉಚ್ಚಾರಣೆಯನ್ನು ಪಡೆಯುವ ಸಂಜ್ಞೆ·– ವರ್ಣ ; ಅನುಸ್ವಾರ, ವಿಸರ್ಗ, ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯ (೦, ಃ, ×೪, ೦೦) ಎಂಬ ಈ ನಾಲ್ಕು ಸಂಜ್ಞೆಗಳಿಗೆ ಇರುವ ಪೆಸರು : ಸಮಸಂದಿರ್ದ ×೪ ಮುಮಂ ೦೦ವುಮೊಂದಿದ ಬಿಂದುವುಂ ವಿಸರ್ಗಮುಮೆಂದಕ್ಕುಮಿವೆಯ್ದೆ ಯೋಗವಾಹಂ ಕ್ರಮದಿಂ ಕಪಯುಗಳ ವಿವಜೋಳನುಬಂಧಂಗಳ್ (ಕಮುಕ· ೦೭). [ಸಂ.]

ಯೋಗವಿಜ್ಞಾನ (ನಾ)· = ಯೋಗದರ್ಶನ : ಬ್ರಹ್ಮಸತ್ಯಮನಾ ಪರ ಬ್ರಹ್ಮಸತ್ಯಮಂ ಮಾತ್ರಮೆಯೆ ದರ್ಶಿಸುತಿದಂ ವಿಶ್ಯೆಯಂಬುದೇಂ ಪೂರ್ಣಸತ್ಯವೆ ? ಯೋಗವಿಜ್ಞಾನವೊಪ್ಪದು ಕಣಾ! (ಶ್ರೀರಾಮಾ. ೩-೭೦).
[ಸಂ.]

ಯೋಗವಿಡಿಸು (ಕ್ರಿ)· [ಜೈನ] ಕರ್ಮಗಳ ಆಸ್ರವ ಸಂಬಂಧವನ್ನು ನಿಲ್ಲಿಸು.— ಬಿಡಿಸು : ಸುಕುಮಾರನ ಮೋಹಬಂಧದ ಬಳ್ಕಪಳ್ಕಿಯ ತೊಡರ್ಪಂ ಪಱಿಪಡೆ ಬಿಡಿಸುವಂತೆ ಯೋಗವಿಡಿಸಿ . . . ಶ್ರೀಲೋಕ ಪ್ರಜ್ಞಪ್ತಿಯಂ ಪರಿವಡಿಗೆಯ್ವುಗಳ್ (ಸುಕುಮಾ- ೦೦-೬೯.೩).

[ಯೋಗ + ಬಿಡಿಸು]

ಯೋಗಶಾಸ್ತ್ರ (ನಾ)· = ಯೋಗದರ್ಶನ : ಭರತಸುತಂ ಮರೀಚಿಪರಿಗ್ಗಹೀತಪರಿವ್ರಾಜಕವೇಷಂ . . . ಕಾಪಿಲಸಿದ್ಧಾಂತಮುಮಂ ಯೋಗಶಾಸ್ತ್ರಮುಮಂ ತೋಱಿ ಲೋಕಮಂ ಸಮ್ಯಗ್ಜ್ಞಾನಪರಾಙ್ಮುಖಂ ಮಾಡಿದಂ (ಆಪು. ೯-೧೩ ಪ).

[ಸಂ.]

ಯೋಗಸನ್ನಾಹ (ನಾ)· [ಜೈನ] ಐವತ್ತು ಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು ; ಕೇವಲಜ್ಞಾನವನ್ನು ಹೊಂದಿದ ಬಳಿಕ ಪಡೆಯುವ ಪೂಜೆ.— ಉತ್ಸವ : ನಾಮಕರ್ಮ . . . ಯೋಗಸನ್ನಾ [ಕಾಣಂ. ಮೃ] ಹಾರ್ಹಂತ್ಯಮಿತಾರ ಯೋಗತ್ರಿಗನಿರ್ವೃತಿಯಿಂಬಯ್ದುತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಿಂ (ಆಪು. ೦೩-೦೫ ಪ). ' ದೀಕ್ಷೆ ' ಪರಾ. [ಸಂ.]

ಯೋಗಸಮಾಧಾನ (ನಾ)· = ಯೋಗನಿದ್ರೆ ೧ : ಶ್ರೀನನ್ದಿಪಣ್ಡಿತದೇವರ್ . . . ಯೋಗಸಮಾಧಾನಾಧೀನಚಿತ್ತರಾಗಿ [ಶ] [ಮಿತ] ಪರಿತ್ಯಾಗದಿನಮರ ಲೋಕಾಪಳೋಕನಕೌತುಕದಿಂ ದೇವಲೋಕಕ್ಕೆ ವಿಜಯಂಗೆಯ್ದರ್ (ಶಾಽಽ. XX. ೩೨-೩೭ ; 1077). [ಸಂ.]

ಯೋಗಸಮಾಧಿ (ನಾ)· = ಯೋಗನಿದ್ರೆ ೧ : ಕಡಿಸುವ ನಿದ್ರೆಯನೆ ಯೋಗಸಮಾಧಿಯ ಮಾಡಿ ಜಗವ ಗೆದ್ದ ಶರಣರ ಬುದ್ಧಿಹೀನರೆತ್ತ ಬಲ್ಲರೂ (ಅಂಗಸ. ೨೨-೬೯). [ಸಂ.]

ಯೋಗಸಿದ್ಧಿ (ನಾ)· ಅಷ್ಟಾಂಗಯೋಗದಿಂದ ಕ್ರಮಕ್ರಮವಾಗಿ ಇಷ್ಟಾರ್ಥಗಳನ್ನು ಪಡೆದುಕೊಳ್ಳುವಿಕೆ ; ಯೋಗದಲ್ಲಿ ಪರಿಣತಿ : ಕಾಯ ದಿಗ್ಬಂಧ ಪ್ರಣಾಮ ವಿಧೇಯವರ್ತನೆ ಯೋಗಸಿದ್ಧಿ ನಿಕಾಯ ನಾಲ್ಕಱಿ ಇಂದ್ರಿಯಜ್ಞಿಶಿಕಾಯರ್ಕೆದು ಆಯವನು ವಿವರಿಸುತ ಮೇಲಣ ಬೀಯಾವಿದು ತಪಗೆಂಬುದನು ನಿರ್ದಾಮದಲಿ ನಿಶ್ಚಯಿಸಬೇಹುದು (ಶಾಖ್ಯಾ. ೪-೭೬). [ಸಂ.]

ಯೋಗಾಂಗ (ನಾ)· ೧· ಪತಂಜಲಯೋಗಸಿದ್ಧಾಂತದಲ್ಲಿ ವಿವರಿಸಿದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಎಂಟು ಅಂಗಗಳು : ಯಾವ ವಯಸ್ಸಿನಲ್ಲಾದರೂ ಎಂತಹ ಸ್ಥಿತಿಯಲ್ಲಿಯೂ ಯೋಗಾಂಗಗಳ ಅಭ್ಯಾಸವನ್ನು ಮಾಡಬಹುದು (ಣಾಕರ. ೦೩೯). ೨· [ವೀಶೈ] ಅಂಗಸ್ಥಲದ ಯೋಗ, ಭೋಗ ಮತ್ತು ತ್ಯಾಗ ಎಂಬ ಮೂರು ಪ್ರಕಾರಗಳಲ್ಲಿ ಒಂದು : ಸರ್ವವನಱಿದು ತ್ಯಾಗಾಂಗವಾಗಿ ಭೋಗಾಂಗವಾಗಿ ಯೋಗಾಂಗವಾಗಿ ಕಾಮಾಸ ನಿರಸನವೆಂಬ ಭೂತ ಭವಿಷ್ಯ ವರ್ತಮಾನಕ್ಕೆ ಹೊಱಗಾಗಿ ನಿಂದ ನಿಜತತ್ವದಂಗಕ್ಕೆ ಬೇಱೆ ಮಂಗಲೋತ್ಸವಸಜಸಲಿಲ್ಲ (ಪೋಶಪ. ೧೬-೦೬೦) ; ಯೋಗಾಂಗವು ಶರಣ, ಐಕ್ಯನೆಂದೂ, ಭೋಗಾಂಗವು ಪ್ರಾಣಲಿಂಗಿ ಪ್ರಸಾದಿಯೆಂದೂ ತ್ಯಾಗಾಂಗವು ಮಹೇಶಭಕ್ತನೆಂದೂ ಒಂದೊಂದರಲ್ಲಿ ಎರಡು ತೆರನಾಗುವುದು (ತಿಪಸಾ. ೪೯ ಉಪ). [ಸಂ.]

ಯೋಗಾಕ್ಷರ (ನಾ)· [ವ್ಯಾಕ] ಎರಡು ಅಥವಾ ಹೆಚ್ಚು ವ್ಯಂಜನಗಳು ಕೂಡಿದ ಅಕ್ಷರ : ಒತ್ತಕ್ಷರ ; ಸಂಯುಕ್ತಾಕ್ಷರ : ಬೆರಸಿರೆ ಮುಂದಂ ಯೋಗಾಕ್ಷರಂಗಳೇಕಸರಂಗಳಿಂ ಸುಪ್ರಾಸಂ (ರಂಡೋಂಜ, ೦-೩೩ ಉಪಕಥೆ). [ಸಂ.]

ಯೋಗಾಕ್ಷಿ (ನಾ)· ಜ್ಞಾನದೃಷ್ಟಿ ; ಅಂತರ್ದೃಷ್ಟಿ : ಯೋಗಾಕ್ಷಿಯಿಂದೆ ಕಂಡು ಮನೋಗೃಹದೊಳ್ ಏಲಿಸಿ ಭಾವಕುಸುಮೋತ್ಕರದಿ ಯೋಗಿಗಳರ್ಚಿಪ ನಿನ್ನನದೇಗಾಣ್ಕೆ ಮಱಲೆಯರಾವದೆಂತರ್ಚಿಪೆಯೋ (ಜಗಲ. ೪-೦೦೬). [ಸಂ.]

ಯೋಗಾಚಾರ (ನಾ)· ೧· ಯಮ ನಿಯಮಾದಿಗಳ ಅನುಷ್ಠಾನ ; ಯೋಗಾಭ್ಯಾಸ· ೨· ವಿಜ್ಞಾನವಾದವನ್ನು ಪುರಸ್ಕರಿಸುವ ಬೌದ್ಧ ಮತ ಮತ್ತು ಅದರ ಅನುಯಾಯಿ : ಮಹಾಮತಿ ಸಂಭ್ನಮತಿ ಶತಮತಿಗಳ್ ಲೋಕಾಯತಿಕ ಯೋಗಾಚಾರ ಮಾಧ್ಯಮಿಕಮತ ವಿತಥಾಭಿಧಾಯಿಗಳ್ . . . ಆತ್ಮನಿರಾಕರಣಮನೆ ನುಡಿದು ಮಾಣೆ (ಅಶ್ವ. ೨-೭ ವ); ಬಾಹ್ಯಾರ್ಥಾಕಾರಸಹಿತವಾದ ಬುದ್ಧಿ ಎಂಬ ವಸ್ತುವೇ ಯೋಗಾಚಾರರಿಗೆ ಸಮ್ಮತ (ಣಾರಿರ. ೨೮೪) ; ಯೋಗಾಚಾರರು . . . ಬಾಹ್ಯವಸ್ತುಗಳೆಲ್ಲ ವನ್ನೂ ವಿಜ್ಞಾನವೆಂಬ ವಸ್ತುವಿನಲ್ಲಿ ಸೇರಿಸಿ ಮನೋನಿಯಮನದಿಂದ ವೈರಾಗ್ಯೋಪದೇಶದಲ್ಲಿರುವರು (ಹಂಧಾ. ೨೪). [ಸಂ.]

ಯೋಗಾಭ್ಯಾಸ (ನಾ)· ಯೋಗಶಾಸ್ತ್ರವನ್ನು ಅಭ್ಯಾಸ ಮಾಡುವುದು ; ಅಷ್ಟಾಂಗಯೋಗದ ಅನುಷ್ಠಾನ : ಉಪವಾಸ ಮಿತಾಹಾರಾದಿಗಳಿಂದ ಯೋಗಾಭ್ಯಾಸಕ್ಕೆ ವಿರೋಧವಿಲ್ಲದಂತೆ ಶರೀರವನ್ನು ಆರೋಗ್ಯವಾಗಿಟ್ಟು ಕೊಳ್ಳತಕ್ಕದ್ದು (ಹಿಂದಣಾ- ೯೯). [ಸಂ.]

ಯೋಗಾಯೋಗ (ನಾ)· ಅದೃಷ್ಟವೆ ಕೂಡಿಬರುವುದು ; ದೈವ ಯೋಗ ; ಅನಿರೀಕ್ಷಿತವಾಗಿ ಒದಗುವ ಘಟನೆ : ನಿಮ್ಮಂತರ ಸಹವಾಸವೇ ಒಂದು ಯೋಗಾಯೋಗ (ಪೂಸಕ್ಷ- ೩೩) ; ಅದೊಂದು ಯೋಗಾಯೋಗದ ಮಾತು (ಪುಶಂಚಾ- ೨೩೬) ; ಯೋಗಾಯೋಗದಿಂದ ಗಿಡಿವಾಸರು ಮಗವ ಸಾಲೆಯ ಚೀಲವಿರುವ ಸ್ಥಳಕ್ಕೆ ಹೋದರು (ಕಂಬಹು. ೯೨). [ಸಂ.]

ಯೋಗಾರೂಢ (ನಾ)· ಧ್ಯಾನದಲ್ಲಿ ಮಗ್ನನಾದವನು : ಯೋಗಸಮಾಧಿಯನ್ನು ಪಡೆದವನು : ಭೂರಿಶ್ರವಕ್ಷಿತಿಪ . . . ಪದ್ಮಾಸನವಪನುಕೊಳಿಸಿ ಯೋಗಾರೂಢನಾದನು ವರಸಮಾಧಿಯುಲಿ (ಕಬ್ಬಿಕ್ರೀ- ೦೪-೩೦) ; ಯೋಗಾರೂಢವಾಗಿದ್ದ ಆವನ ಬಾಯಿಂದ ಬೆಳ್ಗೆ ಸಾವಿರ ಹೆಜೆಯಿದ್ದ ಒಂದು ಸರ್ಪವು ಹೊರಟು ಸಮುದ್ರವನ್ನು ಹೊಕ್ಕಿತು (ಪಚಾ. ೪೫೦). [ಸಂ.]

ಯೋಗಾವತಿ (ನಾ)· [ಸಂಗೀತ] ಒಂದು ಮೇಳರಾಗದ ಹೆಸರು : ಶ್ರೀರಾಗದೊಳ್ ನಟನಾರಾಯಣಿ ಯೋಗಾವತಿಯಾಗಿರ್ಕುಂ ಘಂಟಾರಾಗಂ ನಾದವತಿಯಾಗಿರ್ದಪುದು (ಕಲ್ಕೌ. ೩-೯೦ ವ). [< ಸಂ. ಯೋಗವತಿ]

ಯೋಗಾಸನ (ನಾ)· [ಯೋಗ] ಯೋಗಾಭ್ಯಾಸವನ್ನು ಮಾಡುವಾಗ ಕುಳಿತುಕೊಳ್ಳುವ ಒಂದು ವಿಶೇಷ ಭಂಗಿ ; ಯೋಗಾಸನ :— ಜಿಕ್ಕಮಟ್ಟ ಪಾದ ಕುಳಿತು, ಹಸ್ತಗಳನ್ನು ತೊಡೆಯ ಮೇಲೆ ಇಟ್ಟರುವಂತೆ ರಚಿತವಾದರೆ ಈ ಹೆಸರು (ಣಾಕರ. ೩೦೩) : ಕೊಂಡುಗ್ರರೂಪವ, ಬಳಿಕೀ ಯೋಗಾಸನಮೊಳಗದ ಶಮಿಸುವ ಭಾಸುರ ನರಸಿಂಹನೆಮಗೆ ಮಂಗಳವನ್ಕೆ (ಮಂಕೇ. ೩೯-೦೩). [ಸಂ.]

ಯೋಗಿ (ನಾ)· ೧· ಚಿತ್ತವೃತ್ತಿ ನಿರೋಧ ಮಾಡುವವನು ; ಯತಿ ; ತಪಸ್ವಿ : "ಯತಿ ಸಂಯಮಿ ಋಷಿ . . . ಯೋಗಿ ಕಾಮಸಪಾತಂ" (ಣಮು ೪೦೦- ೩೭-೩೩); ಯೋಗಿಗೆ ಯೋಗಿತಯಾಯಿತ್ತು ಮಾಯೆ (ಪುಹಾಧ. ೩- ೦೬-೩೬); ಸಂಸೃತಿ ಫಲವತಿಯಾಗಿರೆಯುಂ ಯೋಗಿಗುತ್ತಮಂ ಪುಟ್ಟದವೋಲ್ (ಜಗಲ. ೨-೩೩); ಕಾವಿಯ ಹೊದೆದು ಹೋದಾತ ಯೋಗಿಯನಬೇಡ ಇಂದ್ರಿಯವ ಕಾದಾತ ಯೋಗಿ (ತತ್ಪ್ರ- ೪೯). ೨· ವೈಭವಭಕ್ತನಾಗಿದ್ದು ಭಿಕ್ಷಾವೃತ್ತಿಯಿಂದ ಜೀವಿಸುವವನು ; ಜೋಗಿ : (೪). ೩· ಯೋಗಸಿದ್ಧಾಂತವನ್ನು ಅನುಸರಿಸುವವನು· ೪· ಮಂತ್ರಗಾರ; ಮಾಟಗಾರ ; ಐಂದ್ರಜಾಲಿಕ. [ಸಂ. ಯೋಗಿನ್]

ಯೋಗಿಣಿ (ನಾ)· ೧· ಮಾಟಗಾತಿ : ಮಾಯಾವಿನಿ· ೨· ದುರ್ಗಾದೇವತೆಯ (ಅಥವಾ ಶಿವನ) ಸೇವೆಗೆ ಇರುವ ಎಂಟು ಜನ

ಶಕ್ತಿಯರು. – ಅಷ್ಟಶಕ್ತಿ ದೇವತೆಗಳು : ಭೋಗಕ್ಕೆ ಭೂಬಲಂ ದಿಗ್ವಿಜಯೋದ್ಯೋಗಕ್ಕೆ ಯೋಗಿಜೇಬಲಂ ಭಂಡಾರದ ಭಾಗ್ಯಪೋಲಗದ ಮಯಿಸಿರಿದಶಕ್ಕೆ ದೀಕ್ಷಾಗುರು ರಾಜ್ಯಕ್ಕೆ ರಕ್ಷಾಮಣಿಯೆನಿಸಿದ ಪ್ರಧಾನ ಚಂಡಾಮಣಿಗಳ್ (ಪಾಶ. XX. ೨೦೨–೦೦; 1844). ೩. ಯೋಗಾಭ್ಯಾಸ ಮಾಡುವವಳು ; ತಪಸ್ವಿನಿ ; ಯೋಗಿಗೆ ಯೋಗಿಣಿಯಾಯಿತ್ತು ಮಾಯೆ (ಪುಷ್ಪಾರೋ. ೩. ೦೮–೩೬) ; ಸ್ಪರ್ಶಮಣಿಯ ಸ್ಪರ್ಶದಿಂದ ಯೋಗಿಣಿಯುಂ ಗೃಹಿಣಿಯಾದಳು (ಕಥಾಸಂ. ೯೩). ' ಜೋಗಿಣಿ ' ಪರಾ.

[< ಸಂ. ಯೋಗಿನೀ]

ಯೋಗಿತ (ಗು). ೧. ಮಂತ್ರಮುಗ್ಧವಾದ ; ಮಾಟಕ್ಕೆ ಒಳಗಾದ. ೨. ಮರುಳು ಹಿಡಿದ ; ಹುಚ್ಚು ಹಿಡಿದ ; ಬುದ್ಧಿಭ್ರಂಶವಾದ. [ಸಂ.]

ಯೋಗಿನಿ (ನಾ). ೧. = ಯೋಗಿಣಿ ೨ : ಅಷ್ಟಯೋಗಿನಿಯರಣಿಮಾದಿಗಳ್ . . . ಸೃಷ್ಟಿಯ ಸಮಸ್ತಾಭಿಮಾನ ದೇವತೆಯರಿರ್ವರು ದೇವಿಯಂ ಸೇವಿಸಿ (ಕೃಬಾಪಾ. ೦೫–೨೦). ೨. ಅರುವತ್ತು ನಾಲ್ಕು ಜನ ಉಗ್ರದೇವತೆಗಳು: ರಕ್ತಜಳಾಸವಮತ್ತಯೋಗಿನೀವ್ರಾತವರೀತ ಭೂತ ಸದನಂ ಕದನಂ ಕದನತ್ರಿಣೇತ್ರನಾ (ಕಂಪಪ್ರ. ೦೪–೩) ; ಅಷ್ಟದಿಕ್ಪಾಲರ್ಗ ಪೂಜೆಯುಂ ಮಾಡಿ ಚೌಷಷ್ಟಿಯೋಗಿನಿಯರ್ಗ ಬಲಿಗೊಟ್ಟು . . . ಹೃಷ್ಟತೆ ಯೊಳರ್ಥಮಂ ಸಾಗಿಸಿದನಿಬವರಿಗೆ (ಕೃಬಾಪಾ. ೩–೨೨). ೩. = ಯೋಗಿಣಿ ೩: ಸವ್ರೀತಸೌಖ್ಯದೊಳ್ ಸತಿ ದಿಗಂಬರವೇಷಮನಾಂತು . . . ತನ್ನನೋಹ್ಯನ್ನಿ ಧ್ಯಾನಮನುಷ್ಠಾರ್ಜಿಪ ಯೋಗಿನಿಯಂತಿರೊಪ್ಪಿದಳ್ (ಶಾಪ್ರಹಾ. ೬೬೩ ೫೦೨ಕ್ಕ).

[ಸಂ. ಯೋಗಿನೀ]

ಯೋಗಿಪ್ರತ್ಯಕ್ಷ (ನಾ). ಯೋಗಿಗಳಿಗೆ ಮಾತ್ರ ಕಾಣುವಂತಹುದು : ಯೋಗಿದೃಷ್ಟಿಗೆ ಗೋಚರವಾದುದು : ಪ್ರತ್ಯಕ್ಷವು ಲೌಕಿಕ, ದಿವ್ಯಮೆಂದು ಎರಡು ಪ್ರಕಾರ . . . ದಿವ್ಯವು ಭಗದ್ಪದನುಗ್ರಹದಿಂದ ಬರತಕ್ಕ ಯೋಗಿ ಪ್ರತ್ಯಕ್ಷ (ಸಿಂದಾಸಾ. ೨೪೦). [ಸಂ.]

ಯೋಗಿಸು (ಕ್ರಿ). ಆನುಷ್ಠಾನ ಮಾಡು : ತೂಗಿ ನಿಮ್ಮಾತ್ಮಸಾಕ್ಷಿಯೊಳೀನು ವ್ರತವೆಂದು ಯೋಗಿಸಿದರೆ ಸತಿಯರಿರಾ (ಪಡಿ. ೯–೧೦). [ಯೋಗ + –ಇಸು]

ಯೋಗೀಶ್ವರ (ನಾ). ಯೋಗಿಗಳಲ್ಲಿ ಶ್ರೇಷ್ಠನಾದವನು : ಯೋಗೀಶ್ವರರ ತತ್ತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ . . . ಕಾವ್ಯಕೆ ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ (ಶುಷ್ಕಾ. ೦–೦೯). [ಸಂ.]

ಯೋಗು (ನಾ). ತಪಸ್ಸು; ಧ್ಯಾನ : ಯೋಗಿವ ದಿಮಸಂ ಸಾರ್ಚಿದುದಾಗಿ . . . ಈಗಳ್ ಬೇಗಂ ಚಾತುರ್ಮಾಸದ ಯೋಗಂ ಕೈಕೊಂಡಂ (ಚಂಚಮ. ೦೦–೩೬). ' ಜೋಗ್ಯು ' ಪರಾ. [< ಸಂ. ಯೋಗ]

ಯೋಗೇಶ್ವರ (ನಾ). ೧. ಯೋಗವಿದ್ಯೆಗೆ ಪ್ರಭುವಾದವನು : ಯೋಗೇಶ್ವರ ಹರಿ ಒಳಗಿದ್ದು ನುಡಿದ ಹಿಂಗೆ ಹಾಗೆ ಎನ್ನ ಸಲ್ಲ (ಪಜಾಕ್ಕ. ೧೧–೩). ೨. ಶಿವ. [ಸಂ.]

ಯೋಗೇಷ್ಟ (ನಾ). ೧. ತವರ. ೨. ಸೀಸ : "ನಾಗಂ, ಸೀಸಕಂ, ಯೋಗೇಷ್ಟಂ, ವಪ್ರಂ – ೪ ಸೀಸದ ಹೆಸರುಗಳು" (ಸಿಂಕ್ಕಾ. ೦೫೬). [ಸಂ.]

ಯೋಗ್ಯ (ಗು). ೧ ಒಗಕ್ಕೆ ಹೊಡಲು ತಕ್ಕುದಾದ. ೨. ಯೋಗಾಭ್ಯಾಸಕ್ಕೆ ತಕ್ಕ.—ಅರ್ಹವಾದ. ೩. ಒಪ್ಪುವ ; ಸರಿಹೋಗುವ ; ಸಮರ್ಪಕವಾದ. ೪. ತಕ್ಕ; ಅರ್ಹ; ಉಚಿತವಾದ : ವಿಷ್ಣುವು ಈ ಮಹಾತ್ಮರನ್ನು ಕಂಡ ಕೂತಲೇ ಎದ್ದು ಯೋಗ್ಯವಾದ ಪೀಠದಲ್ಲಿ ಕುಳ್ಳಿರಿಸಿದನು (ಪಚಿಪು. ೨೪. ೦೨). ೫. ಉಪಯುಕ್ತವಾದ : ಪ್ರಯೋಜನವುಳ್ಳ. (ನಾ). ೬. ಯೋಗ್ಯತೆ ; ಅರ್ಹತೆ : ನಿನ್ನ ಭಕ್ತರ ಯೋಗ್ಯವ ನೀನೆ ಬಲ್ಲೆ (ಪಾಷ. ೧೬–೬). ೭. ಸರಿಯಾದುದು ; ತಕ್ಕುದು : ಅರ್ಹವಾದುದು : ಇದು ಯೋಗ್ಯಮಯೋಗ್ಯಮಿದೆನ್ನದೆ ವಿಷಯದಲಂಪು ನಿಮಿರೆ ಗತಿ ಹಾಸಗವಜ್ಜದೆ ನಪಿವ ಕಾತರಂಗಾಗದು ಸಕಳತ್ಯಾಗಸಾಧಕಂ ಜೈನಮತಂ (ಪರ್ಚಕ್ಕ. ೦೦–೭೨). ೮. ಅರ್ಹನಾದ ವ್ಯಕ್ತಿ ; ಯೋಗ್ಯತೆಯುಳ್ಳವನು : ನಿಮ್ಮನೋದಿಸಿ ಯೋಗ್ಯರಂ ಮಾಡುವಂತಿರೆ ನಿರೂಪಿಸಿ ಕಲ್ಪಿಸಿಯೋಲೆಯಂ ಬರೆಯಿಸಿ ನಿಮ್ಮ ಕಯ್ಯೊಳ ಟ್ಟಿದವೆಂ (ಪಪ್ರಾಣಾ. ೩–೩) ; ಬಸವನೆಂಬ ಗಣೇಶ್ವರನ ಮಾಡಿ . . . ನಿಮ್ಮೊಕ್ಕುದ ಮಿಕ್ಕುವಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿರ್ದಿರಯ್ಯಾ (ಬಸವ. ೪). ೯. ಚಂದನ ; ಶ್ರೀಗಂಧ. ೧೦. ಒಂದು ಬಗೆಯ ಔಷಧದ್ರವ್ಯ : "ಯೋಗ್ಯಂ, ಋದ್ಧಿಃ ಸಿದ್ಧಿಃ, ಲಕ್ಷ್ಮೀ – ೪ ಋದ್ಧಿಯೆಂಬುವ ಗಂಧಿಕದ್ರವ್ಯದ ಹೆಸರುಗಳು " (ಸಿಂಕ್ಕಾ. ೦೪೬). [ಸಂ.]

ಯೋಗ್ಯತಾಪತ್ರ (ನಾ). ೧. ಪರೀಕ್ಷೆಯಲ್ಲಿ ನಿರೀಕ್ಷಿತ ಮಟ್ಟವನ್ನು ಮುಟ್ಟಿದವರಿಗೆ ಕೊಡುವ ಅರ್ಹತೆಯ ಪತ್ರ : ತೇರ್ಗಡೆಯಾದ ವಿಷಯದಲ್ಲೇ ಯೋಗ್ಯತಾಪತ್ರ . . . ತರಬೇಕು (ಕ್ಷಕಿ. ೩೬೬). ೨. " (ಒಬ್ಬನ ಶೀಲ, ನಡತೆ, ಯೋಗ್ಯತೆ—ಇವನ್ನು ಕುರಿತು ಕೊಟ್ಟ) ಯೋಗ್ಯತಾ ಪತ್ರ, ಪ್ರಮಾಣ ಪತ್ರ" (Testimonial. ೦೦೪). [ಸಂ.]

ಯೋಗ್ಯತಿಕೆ (ನಾ). ಅರ್ಹತೆ ; ಯೋಗ್ಯತೆ : ಯೋಗ್ಯರಲ್ಲದರಾರು ಮುಕುತಿಗೆ . . . ಜೋಗ್ಯತಿಕೆ ಸಶ್ರದ್ಧೆಯೊದೇ ಯೋಗ್ಯತಿಕೆ ನೆಜ್ ನಂಬ ಬಲ್ಲಡೆ (ಪಣಾಗ. ೬–೩–೨೬). [ಯೋಗ್ಯತೆ + — ಇಕೆ]

ಯೋಗ್ಯತೆ (ನಾ). ೧. ಅರ್ಹತೆ ; ದಕ್ಷತೆ : ಗುರು ಮೊದಲು ಶಿಷ್ಯರ ಯೋಗ್ಯತೆಯನರಿದು . . . ಬೋಧಿಸಿ ರಕ್ಷಿಸುವನು (ಗಗಾಪಾ. ೦೩–೦೩). ೨. ಸಮರ್ಪಕವಾಗಿರುವಿಕೆ ; ಸಮುಚಿತತೆ. ೩. (ಆಲಂ) ಗೌರವ ; ಅಂತಸ್ತು ; ಘನತೆ : ಕೈಕೆಳಗಿನವರ ಕೂಡ ನಯದಿಂದ ನಡೆದರೆ ತಮ್ಮ ಯೋಗ್ಯತೆಯು ಕಡಿಮೆಯಾಗುವುದೆಂದು ಕೆಲವರು ತಿಳಿಯುವರು (ಪುಂಶಾಬು. ೯–೩೩). ೪. [ತರ್ಕಶಾ] ಪದಗಳ ಅರ್ಥಗಳಲ್ಲಿ ವಿರೋಧವಿಲ್ಲದಿರುವಿಕೆ : ಅರ್ಥಗಳಿಗೆ ಪರಸ್ಪರಾನ್ವಯಕ್ಕೆ ವಿರೋಧವಿಲ್ಲದಿರುವುದು ಯೋಗ್ಯತೆ (ಸಿಂದಾಶಾ. ೦೮೩) ; ಯೋಗ್ಯತೆಯೆಂದರೆ ವಾಕ್ಯದಲ್ಲಿ ಸೇರುವ ಪದಗಳ ಅರ್ಥಗಳು ಒಂದರೊಡನೊಂದು ವಿರೋಧವಿಲ್ಲದೆ ಹೊಂದಿಕೊಂಡಿರುವುದು (ಭಾಕಪ್ರಾ. ೨೩೦). [ಸಂ. ಯೋಗ್ಯತಾ]

ಯೋಗ್ಯಾರಥ (ನಾ). ಸೈನ್ಯದಲ್ಲಿ ಅಭ್ಯಾಸಕ್ಕಾಗಿ ಬಳಸುವ ರಥ. [ಸಂ.]

ಯೋಗ್ಯೆ (ನಾ). ೧. ಅಭ್ಯಾಸ; ಆಚರಣೆ. ೨. ಸೈನಿಕ ವ್ಯಾಯಾಮ; ಕವಾಯತು. ೩. ತಕ್ಕವಳು ; ಅರ್ಹತೆಯುಳ್ಳವಳು : (೪).

[ಸಂ. ಯೋಗ್ಯಾ]

ಯೋಚಕ (ನಾ). ಯೋಚನೆ ಮಾಡುವವನು ; ಆಲೋಚಿಸುವವನು ; ವಿಚಾರ ಮಾಡುವವನು : " ಜೇಪಕಃ, ಜೇಹಮಾನಃ, ಈ ೨ ಯೋಚಕಂ " (ಶಾಕ್ಕ. ೦೨೧) ; ಆ ಕೊಲೆಗಾರನ ಹೃದಯದ ಮಸೀಮಯ ಭಯಾತಿಯಿಂದ ಯೋಚಕರ ಹೃತ್ಪಿಂಡವು ನಡುಗಿ ಹೋಗುತ್ತಿತ್ತು ! (ಅಂಬಿ. ೨೦). [< ಯೋಚನ ?]

ಯೋಚನ (ನಾ). ೧. ವಿಚಾರ ; ಆಲೋಚನೆ. ೨. ದುಃಖದ ವಿಚಾರ; ಚಿಂತೆ : (೪). 'ಆಲೋಚನ', 'ಯೋಚಿಸು' ಪರಾ.

[< ಸಂ. ಯೋಜನ ?./ ತಮಿ. ಯೋಚನೈ : ತೆಲು. ಯೋಚನ]

ಯೋಚನಾಪರ (ಗು). ಆಲೋಚನೆಯಲ್ಲಿ ತೊಡಗಿದ ; ಚಿಂತಾಪರವಾದ : ರಾಯರು . . . ಒಂದರಡು ಕ್ಷಣ ಯೋಚನಾಪರದೃಷ್ಟಿಯಾದ ನೋಡುತ್ತಾರೆ (ಪಕಥೋ. ೩೪). [ಇದು ' ಆಲೋಚನಾಪರ ' ಎಂಬ ಶುದ್ಧ ರೂಪಸಾದೃಶ್ಯದಿಂದ ನಿರ್ಮಿತವಾದ ಪದ]

ಯೋಚನಾಶಕ್ತಿ (ನಾ). ಆಲೋಚಿಸುವ ಶಕ್ತಿ ; ವಿಚಾರಶಕ್ತಿ : ಯೋಚನಾಶಕ್ತಿ. ಒಂದು ವಿಧದ ಜೀವಶಕ್ತಿ (ಪಕಾಂ. ೨೩೪). [ಇದು ' ಆಲೋಚನಾಶಕ್ತಿ ' ಎಂಬ ಶುದ್ಧ ರೂಪಸಾದೃಶ್ಯದಿಂದ ನಿರ್ಮಿತವಾದ ಪದ]

ಯೋಚನೆ (ನಾ). ೧. ಆಲೋಚನೆ ; ವಿಚಾರ ; ಎಣಿಕೆ : ಈ ಯೋಚನೆಗಳ ತುಯ್ದಾಟದೊಡನೆ . . . ಹೊಸನಗರ ತಲುಪಿದ್ದನು (ಶಾಕೃ. ೦೯೯). ೨. ಯೋಚಿಸುವಿಕೆ ; ಚಿಂತನೆ : ಏಕಾಂತ ಕೆಲರೊಳು ಯೋಚನೆ ಕೆಲರೊಳು ಮೂಕತೆ ಕೆಲರೊಳೊಂದೆರಡು ವಾಕು ಕೆಲರೊಳಿರೆ . . . ಭೂಕಾಂತ ನುಡಿದನು (ಕರ್ಣ. ೯-೩೭) ; ಮೈತಳೆವ ಕರುಣೆ ಮೈಮರೆತು ಕುಳಿತಿದೆ ನೋಡು ಯೋಚನೆಯ ಯೋಜನೆಯ ಕುರಿತು ಬೆರೆತು (ಅಡ್ಡಾಕ. ೫೫-೨). ೩. ಚಿಂತೆ ; ಕಳವಳ : ಪ್ರಾಜೀನಕರ್ಮವು ಬಿಡಲರಿಯದು ಯೋಚನೆಯ ಮಾಡಿ ನೀ ಬಳಲಬೇಡ (ಕುರೇಂದ. ೯-೩೭ ಪದ್ಯ) ; ಬಡ್ಡಿಗೆ ಯಾತಕೆ ಬದುಕಿವ ಯೋಚನೆ ? (ಜಾಪ). 'ಆಲೋಚನೆ' ಪರಾ.

[<ಯೋಚನ-/ತಮಿ. ಯೋಚನೈ ; ತುಳು. ಯೋಚನೆ]

ಯೋಚನೆಗೈ (ಕ್ರಿ). ಆಲೋಚಿಸು : ಯೋಚಿಸು : ಎಂತು ನಾವಿಲ್ಲಿಂದ ಹೊರಡುವ ಯತ್ನವೆಂದಂತದ ಯೋಚನೆಗೈದು . . . ವಿಪ್ರರು ಕವಟದ ಗೋವ ನಿರ್ಮಿಸಿದರು ಕ್ಷಣದ (ಕೃಪಪ. ೩-೦೫).

[ಯೋಚನೆ + ಗೈ (<ಕೆಯ್)]

ಯೋಚಿಸು (ಕ್ರಿ). ೧. ವಿಚಾರ ಮಾಡು ; ಆಲೋಚಿಸು ; ಆಲೋಚನೆ ಮಾಡು : ಕಡುಗೂರ್ಮೆ ಕೂರ್ತವೀರ್ವೀರಮನಾಕೆಗಳ್ಗೆ ಪದಿರ್ದೊರ್ವರ ನೊರ್ವರು ಗೆಲ್ವ ಭೇದಮುಂ ವಾರಿಜಕ್ಕೆ ಯೋಚಿಸುವವಂ ಚಿಮುರಂ (ಪಾಪ. ೦೦-೬೨) ; ಈ ಲಿಪಿಗಳಂ ತಿಳಿದು ಯೋಚಿಸಿ ಹೇಳುವೆಂಡ . . . ಮಾನವರಿಗರಿದು (ಕಪು. ೩-೩೩) ; ಯೋಚಿಸಿ ಮಾತಾಡು ಪರಹಿತಕಾಗಿ ದಧೀಚಿ ತನ್ನೊಡಲ ಮಾಂಸವನು . . . ಸುರಪಂಗೆ ಕುಡನೆ (ಕೋಚಕ. ೩-೩೪). ೨. ಭಾವಿಸು ; ಎಣಿಸು ; ತಿಳಿದುಕೊಳ್ಳು : ಮಹೇಶ್ವರಂ ಮಿಗೆ ಯೋಚಿಸುತ್ತಿರ್ದನೆನ್ನ ಪಣೆಯಿಂದಾದ ರುದ್ರನೇ ತನ್ನಯ ಸ್ವರೂಪ ಮೆಂದು (ಕಣಾ. ೦೩-೨). [ಯೋಚನ + ಿಸು]

ಯೋಜಕ (ನಾ). ೧. ಹೊಂದಿಸುವಂತಹುದು ; ಹೊಂದುವುದಕ್ಕೆ ಕಾರಣವಾದುದು : ಸಕಲಮಹೀಚರಪೀಚರನಿಕಾಯ ಸೇವ್ಯತೆಗೆ ವೃದ್ಧ ಸೇವಿತ್ವಮೆ ಯೋಜಕವಾದುದು (ಪಂತಿಪು. ೫-೫೧). ೨. ಹೊಂದಿಸುವವನು ; ಯೋಜನೆ ಮಾಡುವವನು ; ವ್ಯವಸ್ಥಾಪಕ : ಮಮ್ಮ ದೇಶದಲ್ಲಿ ಒಳ್ಳೆಯ ಯೋಜಕರ ಸಂಖ್ಯೆ ವಿರಳ (ಕೂಪ). ೩. ಅಗ್ನಿ. [ಸಂ.]

ಯೋಜನ (ನಾ). ೧. ಹೊಂದಿಸುವುದು ; ಕೂಡಿಸುವುದು ; ಅಳವಡಿಸುವುದು. ೨. ವಿಧಾಡು : ವ್ಯವಸ್ಥೆ : ಮೂರು ಭಾಗಗಳ ಯೋಜನೆ ಮಾಡಿರುತ್ತದೆ (ಪುಟಾಶಾ. ೧ ಪ್ರಶಾ.೫೬). ೩. ದೂರದ ಅಳತೆಯ ಒಂದು ಪ್ರಮಾಣ ; ಎರಡು ಗಾವುದ ; ನಾಲ್ಕು ಹರದಾರಿ : "ದಂಡಮೆರಡು ಸಾವಿರಮಾಗೆ ಕ್ರೋಶಮಕ್ಕುವ ನಾಲ್ಕುವರಲು ಯೋಜನಮಕ್ಕುಂ" (ಪಾಂಗಣ. ೯೬-೦೦) ; ಅಲ್ಲಿ ಖರಭಾಗಂ ಪದಿನಾಱುಸಾಸಿರಯೋಜನಂ (ಸಗರಚ. ೦೦-೧೦ ಪ) ; ಒಂದು ಯೋಜನವರೆಗೆ ತಿರುಗಿತು ಒಂದಕಿಂತ ತೇರು ತಾನೆಸಲೊಂದು ಬಿಲ್ಲಂತರಕೆ ಹೊಲಗಿತು ನಮ್ಮರಭ (ಕುಷ್ಕಾ. ೨೬-೨೦) ; ಕ್ರೋಶವರಡಾಗಲೊಂದು ಗವ್ಯೂತಿ . . . ಗವ್ಯೂತಿಯಿರಡಾಗಲೊಂದು ಯೋಜನವೆನಿಸುವುದು (ಲಘಿಕ. ೫೩೦). ೪. ಮನಸ್ಸಿನ ಏಕಾಗ್ರತೆ ; ಧ್ಯಾನ ; ಚಿತ್ತವೃತ್ತಿನಿರೋಧ. [ಸಂ.]

ಯೋಜನಗಂಧಿ (ನಾ). ಒಂದು ಯೋಜನದ ವರೆಗೆ ಸುತ್ತಲೂ ಹರಡುವಂತಹ ಸುವಾಸನೆಯನ್ನುಳ್ಳವಳು : ℙ ವ್ಯಾಸಮಹರ್ಷಿಯ ತಾಯಿಯಾದ ಸತ್ಯವತಿ : ಬಳಿಕ ಯೋಜನಗಂಧಿಯಲ್ಲಿಂದಿರವಸಪ್ರ ಶ್ನಮನುರುಪಿಂಗಳಜಟಾಬದ್ಧ ವೇದವ್ಯಾಸಮುನಿರಾಯ(ಕುಷ್ಕಾ. ೫-೨೬).

[<ಸಂ. ಯೋಜನಗಂಧಾ]

ಯೋಜನಗಂಧಿತ್ವ (ನಾ). ಸುತ್ತಲೂ ಒಂದು ಯೋಜನದವರೆಗೆ ಹರಡುವಂತಹ ಶರೀರಸುಗಂಧವನ್ನು ಹೊಂದಿರುವಿಕೆ : ಮುನೀಂದ್ರನಾಕೆ ಯೊಡನೀ ದುರ್ಗಂಧವೆಂತಪಂತೆ ಯೋಜನಗಂಧಿತ್ವಮನಿತ್ತು . . . ಕೂಡುವೆಡೆಯೊಳ್ ಜ್ವಾನಸ್ವರೂಪಂ ಮಹಾಮುನಿಪಂ ಪುಟ್ಟಿದಂ (ಕಂಕಣ. ೦-೬೯). [ಸಂ.]

ಯೋಜನವಲ್ಲಿ (ನಾ). ಒಂದು ಬಗೆಯ ಸಸ್ಯ ; ಮಂಜಿಷ್ಠೆ : "ಮಂಜಿಷ್ಠಾ. ವಿಕಸಾ . . . ಭಾಂಡೀ. ಯೋಜನವಲ್ಲೀ — ೯ ಮಂಜಿಷ್ಠೇ ಹೆಸರುಗಳು" (ಕರ್ಣಾಂ. ೦೬೨). [ಸಂ. ಯೋಜನವಲ್ಲೀ]

ಯೋಜನೆ (ನಾ). ೧. ವ್ಯವಸ್ಥಿತವಾಗಿ ಮಾಡಬೇಕಾದ ಕಾರ್ಯಗಳ ರೂಪರೇಷೆ ವಿಧಾನಗಳನ್ನು ಮುಂಚಿತವಾಗಿ ರೂಪಿಸಿಕೊಳ್ಳುವುದು ; ವಿಧಾಟು ; ವ್ಯವಸ್ಥೆ. ೨. ವ್ಯವಸ್ಥಿತವಾಗಿ ನಿರೂಪಿಸಿಕೊಂಡ ಕಾರ್ಯಕ್ರಮ : ಜಾರ್ಡಾ . . . ತನ್ನ ಯೋಜನೆಗಳನ್ನು ಕಾರ್ಯಗತ ಮಾಡಲು ಉದ್ಯುಕ್ತನಾದನು (ಕಸ್ಕ. ೫೫) ; ಇತ್ತೀಚೆಗೆ ಗ್ರಾಮಗಳ ಉದ್ಧಾರಕ್ಕಾಗಿ ಹಲವಾರು ಯೋಜನೆಗಳು ಪ್ರಚಾರಕ್ಕೆ ಬರುತ್ತಿವೆ (ಕ್ರಪಚಾ. ೬೩); ಯೋಚಿಸಿ ಯೋಜನೆಯೊಂದನು ಹೊಂದಿಸು ಅದರಂತೆ ಬಾಳನು ನಡಿಸು (ಶಾಂಗಾಕ. ೦೦೬೬೦). ೩. [ವ್ಯಾಕ] ನಿಯಮದಂತೆ ಪದ, ಅರ್ಥ ಮೊದಲಾದುವುಗಳನ್ನು ಹೊಂದಿಸುವಿಕೆ.

[ಸಂ. ಯೋಜನಾ]

ಯೋಜಿತ (ಗು). ೧. ಕೂಡಿಸಿದ ; ಹೊಂದಿಸಿದ. ೨. ಉಪಯೋಗಿಸಿದ ; ಬಳಸಿದ. ೩. ಕೊರತೆಯಾಗಿದ್ದುದನ್ನು ಭರ್ತಿ ಮಾಡಿದ ; ಹೊಸದಾಗಿ ಒದಗಿಸಿದ. [ಸಂ.]

ಯೋಜಿಸು (ಕ್ರಿ). ೧. ಹೂಡು: ಸಂಧ್ಯಾರಾಗವುಳ್ಳ ರಶ್ಮಿಗಳು ಅವರ ರಥಕ್ಕೆ ಯೋಜಿಸಲ್ಪಡುತ್ತವೆ (ಪುಟಾಶಾ. ೦೦೨). ೨. ಹೊಂದಿಸು; ಅಳವಡಿಸು ; ಕೂಡಿಸು : ಲೋಕಮಂ ಧರ್ಮಪಥಪ್ರಸ್ಥಾನದೊಳ್ ಯೋಜಿಸಿ (ಕಂಕಾಪತಾ. ೦-೨೬) ; ಸಮ್ಮಗೆಂಬುದರರ್ಥಂ ಪ್ರಶುಸೆಯೊಳ್ವರ್ತಿಸುವುದಜಂ ಸಮ್ಯಗ್ದರ್ಶನಂ ಸಮ್ಯಗ್ಜ್ಞಾನಂ ಸಮ್ಯಕ್ಚಾರಿತ್ರಮೆಂದು ಅದು ಬೇಜಿಪೇಱೆ ಯೋಜಿಪ ಪಡುಗುಂ (ಕ್ಷತ್ರಕ್ರ.೩). ೩. ಧರಿಸುವಂತೆ ಮಾಡು ; ಧಾರಣ ಮಾಡಿಸು: ಜನವಾಥಂ . . . ರಾಜ್ಯಮಂ ನಂದನನೊಳ್ ಶ್ರೀಕಾಂತನೊಳ್ ಯೋಜಿಸಿ ತಳರ್ದು ತಪೋಲಕ್ಷ್ಮಿಯಂ ತಾಳ್ದಿದು (ಹಂಪ್ರತ್ಯ. ೯-೩೦); ಮತ್ತೊರ್ವಳ್ . . . ಪಯೋಧರತಟದೊಳ್ ಸೊಗಯಿಪ ನಕ್ಷತ್ರಮಾಲೆಯಂ ಯೋಜಿಸಿದಳ್ (ಪ್ರತ್ಯ. ೯-೩೬). ೪. ನಿಯಮಿಸು ; ನೇಮಕಮಾಡು ; ನಿಯೋಜಿಸು: ಅಂ ಪರೀಕ್ಷಿಸಿ ಏನ್ನಂ ... ಈ ರಾಜ್ಯಭಾರಕ್ಕೆ ಯೋಜಿಸಿದೆಂ (ಕಾದಂಂ. ೩೦೯); ಕನಕೆ ಮೊದಲಾಪ ಪಲವು ದೇವತೆಯರನು . . . ಹಲವು ಸೇವೆಗೆ ಯೋಜಿಸಲು ನೆರೆತಂದುದೋರಂತೆ (ಶಾಳ್ಕಾ. ೩೨-೨೩). ೫. ಉಪಯೋಗಿಸು ; ಬಳಸು : ಕ್ರಮದಿಂ ಪಾಡ್ಗುಣ್ಯಮಂ ಯೋಜಿಸುವುದೆ ಸುನಯಂ ವ್ಯಾಪ್ತಪ್ರಕಾರಾನುರೂಪಂ (ಕೃಚಂ. ೨೦೯-೪); ಪಡುಗೇರಿಯ ಮನೆಯುಮಂ ಧರ್ಮದೊಳ್ ಯೋಜಿಸುವಂ × × × (ಸೌಇಇ. XI-೨. ೭೯-೪೬; ೨೦೪೦). ೬. ತೊಡಗಿಸು ; ಪ್ರವೃತ್ತಗೊಳಿಸು : ಜನನೀ ಸ್ತನ್ಯಾಮೃತಸೇವನೆ ಮುನ್ದಿ ಬಜಿಕ್ಕಮಪ್ಪಿಳವಿದ್ಯಾಮೃತಸೇವನೆಯೊಳೆ ಯೋಜಿಪುದುಚಿತಂ ತನಯನಂ (ಹಂಪ್ರತ್ಯ. ೯-೨). ೭. ಸಮ್ಮತಿಸು ; ಒಪ್ಪಿಗೆ ಕೊಡು ; ಅನುಮತಿಸು : "ಯೋಜಿಸು_ಅನುಮತೇ" (ಶಪುಣಾ).

[ಯೋಜನ + ಿಸು]

ಯೋತ್ರ (ನಾ). = ಯೋಕ್ತ್ರ : "ಯೋತ್ರಮಪಾಬಂಧ ಯೋಕ್ತ್ರ ರಶ್ಮಿಸಮಾಖ್ಯಂ" (ಶಪ್ರಕೋ. ೬೬-೬೯). [ಸಂ.]

ಯೋದ್ಧ (ನಾ). ದುಃದ್ಧಮಾಡುವವನು ; ಯೋಧ ; ಸೈನಿಕ : ನಿಂತಿಪರು ಕಾಣ್ಲಿ ದೀರ್ಘಾಸಿ ಕಟಿಬದ್ಧಸನ್ನದ್ಧ ಯೋದ್ಧರುಂ (ಶ್ರೀರಾಪ. ೬೦-೦೬೦). [< ಸಂ. ಯೋದ್ಧೃ]

ಯೋದ್ಧೃ (ನಾ). = ಯೋದ್ಧ. [ಸಂ.]

ಯೋಧ (ನಾ)· = ಯೋದ್ಧ ; ಆಹವ ಮುಂಗಯ್ ಧಾತ್ರಿವಾಪನ ಯೋಧನಿಂ ಚಕ್ರಪಾಣಿಯುಂ ಖಂಡಿಸಿಪಟ್ಟುದಾಗಿ ಪೆಲದೊಳ್ ಬಿರ್ದುದಂ ಪರ್ದು ಕಂಡು (ಕರ್ಣಾ· ೦೫೯-೯); ಯುದ್ಧವೊಂದೇ ಯೋಧನಾದ ಕ್ಷತ್ರಿಯನಿಗೆ ವಿಧ್ಯುಕ್ತಧರ್ಮವೂ ಕೆರ್ಮವೂ ಆಗಲಿ (ಧಾಕ್ಷ· ೦೦೬). [ಸಂ.]

ಯೋಧನ (ನಾ)· ಕಾಳಗ ; ಸಮರ ; ಯುದ್ಧ : ವಾಸಿಗೊಟ್ಟ ಯೋಧನದೆ ದೈತ್ಯರೊಡನೆ . . . ಗಾಂಧರ್ವಸಮುದಾಯಮೇ ಸುರುಳಿತನೆ ಲೆಕ್ಕಿಸಲ್ವೇಳ್ಕು (ರಂಗಾಶಾ· ೬-೦೬-೧೦). [ಸಂ.]

ಯೋನ (ನಾ)· ಯವನ ; ಗ್ರೀಸ್‌ದೇಶವಾಸಿ : ನಾವೆಗಳಸು ಮೂಡಿ ನೂಕಿ, ಯೋನರಿಂದ ಮುಂದಿರು (ಪಾಡಿ· ೫೦-೬). [< ಸಂ. ಯವನ]

ಯೋನಿ (ನಾ)· ೧. ಸ್ತ್ರೀಯ ಜನನಾಂಗ ; ಭಗ : "ಭಗಃ, ಯೋನಿಃ ಉಪಸ್ಥಃ, ವರಾಂಗಂ· ಸ್ಮರಮಂದಿರಂ—ಈ ೫ ಉಪಸ್ಥಂ" (ಪಾಪಪು. ೫೫-೬೬೦) ; ರುಧ್ರನಾವ ಯೋನಿಯುಲ್ಲಿ ಬಂದನೆಂದು ನಿನ್ನ ಹೇಳರೋ (ಪಾಪ. ೮೫) ; ಬಂದ ಯೋನಿಯಿಂದಱಿಯದೆ ಉಂಡ ಮೊಲೆಯಿಂದಱಿಯದೆ ಕಾವುವಿಕಾರ ತಲೆಗೇಱಿ ವಿಪರೀತರಪಾಗಿ . . . ಆತ್ಮ ಕೆಟ್ಟು ನಷ್ಟವಾಗಿ ಹೋಯಿತು (ಕಾಲಜ್ಞ· ೦೦-೬). ೨. ಗರ್ಭಕೋಶ ; ಗರ್ಭಾಶಯ : ನೆಲಸದ ಯೋನಿ ಮುಟ್ಟದೆ ಕಾಣದ ಕಾಲಮೃತ್ಯ ದೊಳ್ ಮಘಂ ನಿಲಿಸದ ಭಾವಮಬ್ಜಿಸುವ ವೃದ್ಧಳಮಿಲ್ಲೆನೆ ಕರ್ಮಬಂಧದಿಂ . . .ಭವಾಂಬುನಿಧಿಯೊಳ್ ತಿರಿತಪ್ಪಿವಿ ಜೀವರಾಶಿಗಳ್ (ಸುಕಾಪ್ರ· ೫-೬೨). ೩. ಜನ್ಮ ; ಹುಟ್ಟು : ಹಿಂದೆ ನಾನಾ ಯೋನಿಯಲ್ಲಿ ಬಂದೆಂಬ ಹೇಯವಿಲ್ಲ (ಪಾಪ· ೦೬) ; ಜೀವದೊಳಗುಂಟೆಂದರೆ ನಾನಾ ಯೋನಿಯವನಲ್ಲ (ಕೋಗಪ್ರ· ೬-೮) ; ಹುಟ್ಟುವ ಯೋನಿಗಳಿಲ್ಲ ಮೆಟ್ಟುವ ಭೂಮಿಗಳಲ್ಲ (ಧರ್ಮ· ೦೬೨-೦) ; ೪. ಜನ್ಮಸ್ಥಾನ ; ಉತ್ಪತ್ತಿಸ್ಥಾನ· ೫. ವಂಶ ; ಜಾತಿ· ೬. [ವೇದಾಂತ] ಮೂಲಕಾರಣ; ಹೇತು : ಋಗ್ವೇದವೇ ಮುಂತಾದ ಮಹಾ ಶಾಸ್ತ್ರಕ್ಕೆ 'ಯೋನಿ' ಅಂದರೆ ಕಾರಣವಾಗಿರುವದು (ಶ್ರಿತ್ಪಾ· ೫೬). ೭. [ಜೈನ] ಜನ್ಮ ಅಥವಾ ಉತ್ಪತ್ತಿಗೆ ಆಧಾರವಾದುದು: ಜೀವಸಾಸದಲ್ಲಿ . . . (೧) ಸ್ಥಾನ (ಏಕೇಂದ್ರಿಯ ಮೊದಲಾದ ಜಾತಿಭೇದ), (೨) ಯೋನಿ (ಕಂದ· ಮೂಲಿ, ತತ್ತಿ· ಗರ್ಭ· ರಸ· ಜೆವರು ಇತ್ಯಾದಿ ಉತ್ಪತ್ತಿಯ ಆಧಾರಗಳು), (೩) ದೇಹಾವಗಾಹನ (ಶರೀರವ ಆಕಾರ), (೪) ಕುಲ . . . ಈ ಕಾರಣಗಳಿಂದಲೂ ಉತ್ತರೋತ್ತರಭಾಗಗಳು ಅಸಂಖ್ಯಾತವಾಗಿವೆ (ಕೃಪ್ರ· ೫೦೦). . [ಸಂ.]

ಯೋನಿಜ (ನಾ). ಗರ್ಭಕೋಶದಿಂದ ಹುಟ್ಟುವ ಜೀವ : ಇವರೆಲ್ಲರು ಯೋನಿಜರೆಂಬುದ ತ್ಕೈವಗ ಬಲ್ಲುದು (ಪಾಪ· ೫೯೬) ; ಜನಸದಯೋನಿಜಂಗಂ ಪಿರಿದು ಜನನುಗಳಲಿ ಜನಿಸುವ ಯೋನಿಜರು ಸರಿಯೇ (ಪಾಪ· ೫೯-೫೬) ; ಶರೀರವು ಯೋನಿಜ ಮತ್ತು ಅಯೋನಿಜ ಎಂದು ಎರಡು ವಿಧ (ಧಾತತ್ತ್ವ· ೫೧೦). [ಸಂ.]

ಯೋನಿದೋಷ (ನಾ)· ಸ್ತ್ರೀಯ ಜನನಾಂಗಕ್ಕೆ ಸಂಬಂಧಿಸಿದ ವ್ಯಾಧಿ : ನೈದಿಲಗೆದ್ದೆ ಅರಿವಳ· ಒಪ್ಪಲಿ ಇವ ಸಣ್ಣವಾಗಿ ಅರೆದು ಯೋನಿಯೊಳೊತ್ತೆ ಯೋನಿದೋಷ ಪೋಗ್ಗುಂ (ಪಥ್ಯ· ೬೨). [ಸಂ.]

ಯೋನಿನೆತ್ತರು (ನಾ). ಯೋನಿಯಿಂದ ಅತಿಯಾಗಿ ರಕ್ತಸ್ರಾವವಾಗುವ ಒಂದು ಬಗೆಯ ರೋಗ : ಯೋನಿನೆತ್ತರಿಗೆ : — ಪೊಸರು· ಹಾಲು· ಎಳ್ಳೆಣ್ಣೆ· ಹಾಲು ಈ ಎರಡಪ್ಪೂ ಸಮವಂ × × × ಪಾಕಿ ಪೀಗೆ ಮೂಱುದಿನ ಕುಡಿಸಿದರೆ ನೆತ್ತರು ನಿಲ್ಲುವೆಯು (ಪಥ್ಯ· ೦೬೯).

[ಯೋನಿ + ನೆತ್ತರು (<ನೆತ್ತರ್)]

ಯೋನಿಮುದ್ರೆ (ನಾ). ಶಕ್ತಿಪೂಜೆಯ ಸಂದರ್ಭದಲ್ಲಿ ಮಾಡುವ ವಿವಿಧ ಕರನ್ಯಾಸಗಳಲ್ಲಿ ಒಂದು.— ಒಂದು ಬಗೆಯ ಹಸ್ತ ಮುದ್ರೆ : ಅಸ್ತ್ರಮುದ್ರೆ· ಚಕ್ರಮುದ್ರೆ . . . ಯೋನಿಮುದ್ರೆ . . . ಸಂಹಾರ ಮುದ್ರೆಯೆಂಬ ಸಕಲ ಮುದ್ರಾಲಕ್ಷಣವನ್ನರಿತಾಮಾ ಕ್ರಿಯೆಗಳ್ಗೆ ಪ್ರಯೋಗಿಸಿ (ಪಥ್ಯ· ೯೬). [ಸಂ· ಯೋನಿಮುದ್ರಾ]

ಯೋನಿರಕ್ತ (ನಾ)·=ಯೋನಿನೆತ್ತರು : ವಿಷ್ಣುವು ಹಾಲನು ಚೆನ್ನಾಗಿ ಕಾಸಿ ಸಕ್ಕರೆ ಜೇನುತುಪ್ಪವರಸಿ ಕುಡಿಯೆ ಯೋನಿರಕ್ತಂ ಪರಿಹರವಹುದು (ಪಥ್ಯ· ೦೫೫). [ಸಂ.]

ಯೋನಿಶೂಲೆ (ನಾ)· ಯೋನಿಯಲ್ಲಿ ಉಂಟಾಗುವ ನೋವು : ನೋವು ಸಾಧಿಸಿ ಇಂಗು ೧ ತೂಕ ಆರೆಪು ಅಡಿನ ಹಾಲಲ್ಲಿ ಕಲಸಿ ೨೨ ದಿನ ಕೊಳ್ಳಲು ಯೋನಿಶೂಲೆ ಗುಣ (ಪಥ್ಯ· ೦೦೯) ; ಸೇರಲೆಚಿಕ್ಕೆಸಾರು· ಬೋರೆಚಿಕ್ಕೆ ಸಾರು . . . ಮೆಣ್ಣೆ ಬೊಸರನ್ನು ಹಾಕಿ ಕಲಸಿ ಕುಡಿಯಲು ಯೋನಿರಕ್ತ· ಯೋನಿಶೂಲೆಗಳು ನಿಲ್ಲುವವು (ಪಥ್ಯ· ೯೩೦). [ಸಂ. ಯೋನಿಶೂಲ]

ಯೋಷಿಜ್ಜನ (ನಾ)· ಹೆಂಗಸರು; ಸ್ತ್ರೀವರ್ಗ : ದ್ವೇಷಂ ವಿರಹಿಗಳೊಳ್ ಪರಿತೋಷಂ ಮಧುಮತಿಯೊಳಾಗೆ ಬಂದರ್ ಕೆಲರುಂ ಯೋಷಿಜ್ಜನಂ (ಪಾಂಚಪ್ರ· ೯-೨೬) ; ಜಗಜ್ಜನೈಕವಿಭುವಂ ಯೋಷಿಜ್ಜನಂ ಪಜ್ಜನಂ ಬಗಿಸುತ್ತು (ಪಥ್ಯ· ೦೦-೧೦೦). [ಸಂ.]

ಯೋಷಿತೆ (ನಾ)· ೧. ಹೆಂಗಸು ; ಸ್ತ್ರೀ : ನೆರೆದ ಯೋಷಿತೆಯರತಿ ಯೋಚಿಸಿದರು (ಪಾಪಪ್ರ· ೦೦-೦೬). ೨. ಹೆಂಡತಿ ; ಪತ್ನಿ· 'ಗುರು ಯೋಷಿತೆ' ಪರಾ· [ಸಂ· ಯೋಷಿತಾ]

ಯೋಷಿತ್ತು (ನಾ)· = ಯೋಷಿತೆ ೧ : "ವನಿತೆ ವಧು ನಾರಿ ಸೀಮಂತಿನಿ ಯೋಷಿದ್ಭಾಮೆ ಕೇವಲಂ ಸ್ತ್ರೀನಾಮಂ" (ಪಾಪ್ರ· ೫೨-೦).

[ಸಂ. ಯೋಷಿತ್]

ಯೋಷೆ (ನಾ)· = ಯೋಷಿತೆ ೧ : ನಯವಿನಯಮೊಯ್ಯಾರ ಸಂಸ್ಕೃತಿಗಳೊಂದಾಗಿ ಮೆಯ್ದೆತ್ತವೋಲ್ ಬಂದಳಾ ವಿಯಚ್ಚರಯೋಷೆ (ತ್ರಿಜಾಚಂ. ೨೦೫-೬೦೨). [ಸಂ.ಯೋಷಾ]

ಯೌಕ್ತಿಕ (ಗು)· ೧. ಯುಕ್ತಿಯಿಂದ ಕೂಡಿದ ; ತರ್ಕಸಮ್ಮತವಾದ· ೨. ಯೋಗ್ಯವಾದ ; ಅರ್ಹವಾದ· (ನಾ)· ೩. ಶತ್ರುಗಳನ್ನು ಭೇದಿಸುವ ಐದುಸಾಧನಗಳಲ್ಲಿ ಒಂದು : ಯುಕ್ತಿ ; ಉಪಾಯ; ತಂತ್ರ : ಮಾಂತ್ರಿಕ ದೈವಿಕ ನೈಸರ್ಗಿಕ ಯೌಕ್ತಿಕ ವಾಸ್ತವಿಕವೆಂಬ ಪಂಚಭೇದಸಾಧನಂಗಳಿಂದಲುಂ ಪರಭಯಂಕರ ವೇಷಭಾಷಾಕಾರಂಗಳುಳ್ಳ ಘಟದೇರ್ವಳ್ಕರ್ಂ (ಪಥ್ಯ· ೫೬). ೪. ತರ್ಕವನ್ನೇ ಅವಲಂಬಿಸುವವನು; ತಾರ್ಕಿಕ : ತಾರ್ಕಿಕರಿಗೆ ಯೌಕ್ತಿಕರೆಂದು ವ್ಯವಹಾರವಿರುವುದು (ಒಂರಾಶಾ· ೦೦೪). ೫. ಅರಸನ ಬಳಿ ಇರುವ ಸರ್ವಸಚಿವ· [ಸಂ.]

ಯೌಗಿಕ (ಗು)· ೧. ಉಪಯುಕ್ತವಾದ ; ಪ್ರಯೋಜನವುಳ್ಳ· ೨. ಯೋಗ್ಯವಾದ ; ತಕ್ಕ· ೩. ರೂಢವಾದ ; ಸಾಂಪ್ರದಾಯಿಕವಾದ· ೪. ಯೋಗಕ್ಕೆ ಸಂಬಂಧಿಸಿದ· (ನಾ)· ೫. [ವ್ಯಾಕ] ಅವಯವಾರ್ಥವನ್ನುಳ್ಳ ಪದ ; ವ್ಯುತ್ಪತ್ತಿಯನ್ನು ಹೊಂದಿಕೊಳ್ಳುವ ಪದ· ೬. ರಾಸಾಯನಿಕ ವಿಶ್ಲೇಷಣೆ : (೧)· [ಸಂ.]

ಯೌಗಿಕ (ನಾ)· [ಕಾವ್ಯಮೀಮಾ] ಶಬ್ದಗುಣಗಳಲ್ಲಿ ಒಂದು; ಅವಯವಾರ್ಥವನ್ನುಳ್ಳ ಪದ : ಅಗ್ನಿಪುರಾಣದಲ್ಲಿ . . . ಶ್ಲೇಷ· ಔಚಿತ್ಯ· ಗಾಂಭೀರ್ಯ· ಸೌಕುಮಾರ್ಯ· ಉದಾರತಾ· ರೂಢಿ· ಯೌಗಿಕ – ಇವು ಏಳೂ 'ಶಬ್ದಗುಣ'ಗಳೆಂದೂ ಮಾಧುರ್ಯ . . . ಸಮಾಯಿಕತಾ ಇವು ಆರೂ 'ಅರ್ಥಗುಣ'ಗಳೆಂದೂ . . . ಹೇಳಿದೆ (ಕೃವಿ· ೫೬೨ ೪೦೫).

[ಸಂ. ಯೌಗಿಕ]

ಯೌತಕ (ನಾ)· ಮಗಳು ಪುತ್ತು ಅಳಿಯನಿಗೆ ಮದುವೆಯ ಕಾಲದಲ್ಲಿ ಕೊಡುವ ಬಳುವಳಿ.— ಉದುಗೊರೆ : "ಯೌತಕಂ . . . ಮುದಿವೆ ಮುಂತಾದುವುಗಳಲ್ಲಿ ಮಗಳಿಗೂ ಅಳಿಯನಿಗೂ ಕೊಡತಕ್ಕ ಬಹುಮಾನಕ್ಕೆ ಪೆಸರು" (ಲಿಪ್ಯಾ· ೦೬· ೨೧೬). [ಸಂ.]

ಯೌತವ (ನಾ)· ಒಂದು ಆಳತೆ· – ಮಾನ. [ಸಂ.]

ಯೌವತ (ನಾ)· ೧· ತರುಣಿಯರ ಗುಂಪು ; ಯುವತಿಯರ ಸಮೂಹ : "ಯೌವತಮದು ಯುವತಿಜನರ ಸಂಘಾತಂ" (ನಸ್ಕು೬೬. ೦೦೬-೬೨); "ಇದು ಪಿರಿದುಂ ವಸಂತಸಖಿ ಯೌವತರತ್ನನಿಧಾನವಂತದಲ್ಲಿದು . . . ರತಿನಾಥಕಲ್ಪಲತಿಕಾಪ್ರಕರ್ಮಕಕೃತಾವಳಂ (ಕಂಪ್ರತಿ. ೬-೦೫೬)· ೨· ಯುವತಿಯ ಗುಣಧರ್ಮ; ಯುವತಿಯಾಗಿರುವಿಕೆ· [ಸಂ.]

ಯೌವನ (ನಾ)· ೧· ಹರಯ ; ತಾರುಣ್ಯ ; ಆ ಕನ್ನಿಗೆ ಯೌವನಂ ನೆಱೆದಂದು ಮಧುಮೆಯಾದೊಡೆ (ಕಾಕಾ. ೦೬-೨೭); ಯೌವನನವನ ಪ್ರಸನ್ನಲಕ್ಷ್ಮಿ ಸೌಭಾಗ್ಯನಿಧಾನದೀಪವರ್ತ್ತಿ . . . ಶ್ರೀಮತ್ರಿರಿಯರಸಿ ಕಂಚಲಮಹಾದೇವಿಯರ್ (ಕೌಚ. XI. ೪೬-೦೬; ೨೦೭); ಭವದ ಬಳಸುವ ತನುವಿನಲಿ ಕೌಮಾರ ಯೌವನ ವಾರ್ಧಿಕಂಗಳಲಿ ತನು ವಿಕಾರಿಸುವದು (ಶಾಕ್ಕಾ. ೬-೧೪); ಚಿಂತೆಯೇ ಮುಪ್ಪು,ಸಂತೋಷವೇ ಯೌವನ (ಗಾಕ). ೨· ತಾರುಣ್ಯವನ್ನು ಉಳ್ಳವನು; ಯೌವನವನ್ನು ಹೊಂದಿದವನು: ಸುಕುಮಾರಸ್ವಾವಿಯುಂ ಯೌವನನಾಗಿ ಅತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿಯಿಂದಂ ಕೂಡಿದೊಂ (ಕಬ್ಬಾಹಾ. ೫೬-೦೦); ಒಳಕ ಯೌವನನಾಗಿ ಪರಮಂಡಲಕ ನಡೆದನು (ಶಾಬ್ಬಾರ್ಕ್ಕೃ. ೬-೬೦)· [ಸಂ.]

ಯೌವನಗಾರ್ತಿ (ನಾ)· ಜವ್ವನೆ ; ತರುಣಿ ; ಯುವತಿ : ಅತ್ಯಂತ ರೂಪ ಯೌವನಗಾರ್ತಿಯರು . . . ಸತ್ಯಭಾಮೆಯನು ಸಾರಿದರು (ಕೃಚಾಹ. ೫೫-೬೨)· [ಯೌವನ + – ಕಾಜಿ + – ತ್ತಿ (< – ಸ್ತ್ರಿ)]

ಯೌವನಮದ (ನಾ). ಹರಯದ ಸೊಕ್ಕು : ಯೌವನಮದದಿಂದಲೂ ಅಪಹನೆಯಿಂದಲೂ ಮೌಢ್ಯದಿಂದಲೂ ಕುಂದಿರುವ ಅವರಿಗೆ ವಿವೇಕವನ್ನು ಹೇಳಿದರೆ ಅದು ಅವರ ಮನಸ್ಸಿಗೆ ಇಷವುವುದಿಲ್ಲ· (ಪಚಾ. ೨೫೦). [ಸಂ.]

ಯೌವನಸ್ಥ (ನಾ)· ಯುವಕ ; ತರುಣ : ಯೌವನಸ್ಥನಾದ ಮಾಧವನು . . . ತಂದೆಗೆ ಬಲವಾದ ಎರಡು ಪೆಟ್ಟುಗಳನ್ನು ಕೊಟ್ಟನು (ಪಚಾಂ. X. ೫೩). [ಸಂ.]

ಯೌವನಾವಸ್ಥೆ (ನಾ)· ತಾರುಣ್ಯ ; ಯುವಾವಸ್ಥೆ : (೬)· [ಸಂ. ಯೌವನಾವಸ್ಥಾ]

ಯೌವನೆ (ನಾ)· ಯುವತಿ : ತರುಣಿ : ವಯಸವಿಭೇದದಿಂ ಬಾಲೆ ಯೌವನೆ ವೃದ್ಧೆ ಲೌಕ್ಯಜೆಂದಿಂತು ಧರಿತ್ರಿಯೊಳಪ್ಪರ್ ನಾಲ್ವರ್ಕಾಂಭೆ ಯರ್ (ಪುಪಚ. ೬-೦). [ಯೌವನ + – ಎ್]

ಯೌವನೋದಯ (ನಾ). ಹರಯದ ಆರಂಭ ; ತಾರುಣ್ಯದ ಪ್ರಾರಂಭ : ವಿಜೃಂಭಿಸಿದುದು ಯೌವ[ಪಾಣ್ಡ. ಯವ್ವ]ನೋದಯವಿಲಾಸ ಮನುಕ್ರಮದಿಂ ಮದಂಗದೊಳ್ (ಶಾದಂಪು. ೬೦೪) ; ಆ ವಧು ಯೌವನೋದಯ ರಸಾಯನಸಿದ್ಧಿ ಮನೋವಿಮೋಹ ಸಂಭಾವನವಿದ್ಕೆ . . . ಎನಿಪ್ಪಳದೇಂ ಸುರೂಪೆಯೋ (ಕಂಪ್ರತಿ. ೬-೨೬)· [ಸಂ.]

ಯೌವರಾಜ್ಯ (ನಾ)· ೧· ಯುವರಾಜನ ಪದವಿ. – ಅಧಿಕಾರ : ಪೊದಲೊಳ್ ತಾಂ ಯೌವರಾಜ್ಯಂ ಬಟ್ಟಿಕೆ ನಡುವೆ ಸಂದಾಧಿರಾಜ್ಯಂ ಬಟ್ಟಿಕ್ಕಂ ತುದಿಯೊಳ್ ಕೈವಲ್ಯಸೌಖ್ಯಪ್ರದಮೆನಿಪ ತಪೋರಾಜ್ಯಮಂದಿಂತು ಮಿಯ್ಯಂದದೆ ಸೇವ್ಯಂಗಳ್ ಮದೀಯಾನ್ವಯನೃಪರ್ಗ್ (ಕಂಪ್ರತಿ. ೨-೩೦). ೨· [ಜೈನ] ಐವತ್ತು ಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು : ಯೌವರಾಜ್ಯ . . . ನಿರ್ಗ್ರತಿಯೆಂಬಿವ್ವತ್ತುಮೂಜು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿ. ೦೫-೦೬ ಪ). [ಸಂ.]

ಯೌವರಾಜ್ಯಪದ (ನಾ)· ಯುವರಾಜನ ಪದವಿ. — ಅಧಿಕಾರ : ಅನುತವಿರ್ಮನವಾರಬಲಂ ಯೌವರಾಜ್ಯಪದದೊಳ್ ನಿಂದು (ಪಾಂಕ. ೨-೦). [ಸಂ.]

ಯೌವರಾಜ್ಯಾಭಿಷೇಕ (ನಾ). ಯುವರಾಜಪದವಿಯನ್ನು ಕೊಡುವಾಗ ಮಾಡುವ ಅಭಿಷೇಕ : ಶುಭದಿನದೊಳಾಧೀಶ್ವರಂ ಮಾಡೆ ತೂರ್ಯಸ್ವರದೊಳ್ ತಳ್ಪೊಯ್ದುದೇಂ ಕೋಭಿಸಿದುದೊ ಪಿರಿದುಂ ಯೌವರಾಜ್ಯಾಭಿಷೇಕಂ (ಕಂಪ್ರತಿ. ೨-೩೬); ಕುಮರವಿಷ್ಣುವಿಗೇ ಯೌವರಾಜ್ಯಾಭಿಷೇಕವನ್ನು ಮಾಡಿದರಾಯಿತು (ಪಾಂಕಣಾ. ೨೪). [ಸಂ.]

*

ರ

ರ₁ (ನಾ)· ಕನ್ನಡವರ್ಣಮಾಲೆಯ ನಲವತ್ತೇಳನೆಯ ಅಕ್ಷರ : ರಕಾರ ; ರೇಫ : ಆಪಗೀಯ ; ಯ ರ ಲ ವ ಶ ಷ ಸ ಹ ಳ ಱ (ಕೃವಿ· ೩)·

ರ₂ (ನಾ). ೧· [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ :"ಖಿಷರ ಮದರಡಕ್ಕು" (ಕೃಂಗಣಾ. ೨೦೪-೦೦)· ೨· [ಛಂದ] ಆದಿ ಮತ್ತು ಅಂತ್ಯಗಳಲ್ಲಿ ಎರಡು ಗುರುಗಳೂ ಮಧ್ಯೆ ಒಂದು ಲಘುವೂ ಇರುವ ಒಂದು ಗಣದ ಹೆಸರು : ರಗಣ (–ು –) : ದುಲ್ಲಿಕಾಯುತ ಮಾಲೆಯಪ್ಪುದು ರಂ ಸಜಂಜಭರಂ ಬರಲ್ (ಕೃಚಿ. ೩೬)· [ಸಂ.]

ರಂಕ (ಗು)· ೧· ಆತ್ಮಾಸೆಯಿಂದ ಕೂಡಿದ : ಲೋಭಿಯಾದ·(ನಾ)·೨· ನಿರ್ಗತಿಕ ; ಭಿಕ್ಷುಕ ; ತಿರುಕ : ಅಂಕೆಯಿಲ್ಲದ ರಾಜ್ಯವನು ನಿಶ್ಯಂಕೆಯಿಂದಾಳುವ ನೃಪಾಲಗೆ ಮುಂಕುಹಿಡಿಯಲು ತನ್ನನೇ ಶಾ ರಂಕನೆಂಬಂತೆ (ಕಬ್ಮಕ· ೩-೦೩) ; ರಾಜ ರಂಕನಾಗುವುದು ಕಾಲಗತಿಯ ಪರಿಣಾಮ (ಕಂಶಾ. ೧೧೩) ; ರಾಜನಿಂದ ರಂಕನವರೆಗೂ ಅವನಿಗೆಲ್ಲರೂ ಒಂದೇ (ಪಾಂಗಗೀ. ೩೯)· [ಸಂ.]

ರಂಕರಾಟಣ (ನಾ)· (ಜಾತ್ರೆ, ಪರಿಸೆ ಮೊದಲಾದುವುಗಳಲ್ಲಿ) ಮಕ್ಕಳನ್ನು ಕೂರಿಸಿ ತಿರುಗಿಸುವ ಗಿರಗಿಟ್ಲೆ : "ಮರದ ಕುದುರೆಗಳು. ತೊಟ್ಟಿಲುಗಳು ಮೊ. ಗಳುಳ್ಳ ತಿರುಗುಯಂತ್ರ ; ರಂಕರಾಟಣ" (Merry-Go-round. ೨೦೧೬). [←ತೆಲು· ರಂಕುಲರಾಟ್ನ]

ರಂಕು (ನಾ)· ಮೈಮೇಲೆ ಕಪ್ಪುಮಚ್ಚೆಗಳಿರುವ ಒಂದು ಬಗೆಯ ಜಿಂಕೆ : "ಆ ರಂಕು ನ್ಯಂಕುವೆನೆ ಮಾಗೆ ಪೆರಕ್ಕುಂ" (ಪ:ಗಣಾ· ೧೨-೦೦) ; ಬೆಲ್ಲನಿಬಿದಕ್ಕು ವಿಯತ್ಕ್ರಳಮಧ್ಯಭಾಗದಿಂ ಪರಿಗತ ರಂಕುರೋಮವತಿ ಪಾಂಡುರೆಮಂದು ಶರಾಂಕಮಾವಲಂ (ಕಾದಂಪು· ೨೩೬)· [ಸಂ.]

ರಂಕೆ ' ಱಾಂಕು ' ನೋ·

ರಂಗ (ನಾ). ೧· ಬಣ್ಣ ; ವರ್ಣ· ೨· ಬಣ್ಣದ ಪುಡಿ : ಜನಸಗಳು . . . ೬೫· ರಂಗ, ಸರ್ವಜಾತಿಯದು (ಕುಃಪಾಂಪ್ರ· ೦೩೦)· ೩· ಬಣ್ಣದ ಪುಡಿಯಿಂದ ರಚಿಸುವ ಹಸೆ, ಚಿತ್ರ ಮೊದಲಾದುವು : ನಡುಬೀಟಜೊಳು ಪಕುಗಳ್ದಡಪೆಜೆಯೊಳಪೂರ ಪಿರಿಯ ಚೌಪಟ್ಟದೊಳಂ ತೊಡದು ಬರಿದಲ್ಲಿ ರಂಗಮನುಜಗೆಗಳಂ ಸುರಿದು ಸೂಸಿ ಕಡುವರ್ಮೂರ್ದರ್ (ಕಡಃಕ. ೯-೦೩೦)· ೪· ನಾಟಕ· ಮೇಳ ಮೊದಲಾದುವುಗಳನ್ನು ಆಡುವ ಸ್ಥಳ : ವೇದಿಕೆ : "ಆಡುವ ಶಾವು ರಂಗಮೆಂಬುದು" (ಕಲಾಮು· ೦೬-೧೬) : ಧರೆ ರಂಗಂ ಗಗನಂ ಮನೋಹರ ತರಂ ನಾಟ್ಯಾಲಯಂ ನರ್ತಕಂ ಸುರರಾಜಂ (ಅಂಕ· ೬-೦೨೬) : ನಗಗೆ ವನ್ನೋಲಗೆಯಂವರಿಗೆ . . . ಉಡಿಗೆ ತೊಡಿಗೆಯ್ದಸಗಮಾಡಿ ರಂಗಕೆ ಬಿಟ್ಟರು ಬಣ್ಣವ ಬಳಿ (ಶಂತಾಕ· ೦೦-೨೬)· ' ರಂಗಪೂಜೆ ' ಪರಾ· ೫· ಸಭೆ ಸೇರುವ ಸ್ಥಳ : ಸಭಾಮಂದಿರ· ೬· ನಾಟಕ ಮೊದಲಾದುವನ್ನು ನೋಡಲು ಸೇರಿರುವ ಜನಸಮೂಹ : ಪ್ರೇಕ್ಷಕವರ್ಗ· ೭· ಯುದ್ಧ ಭೂಮಿ : ಕಳ : ರೋಷದಿಂ ಭೀಂಕರಿಸಿ ರಂಗಮಂ ಪೊಕ್ಕಾ ಮದದ್ವಿಪಂ ಬೆರ್ಚಿ ನಿಂದುದು ಭಕ್ಕನೆಯೆ (ಕ್ರಿಶಾಪ್ರ. ೨೩೬ ೩೩೨)· 'ರಣರಂಗ' ಪರಾ· ೮· ನೃತ್ಯ ; ನರ್ತನ· ೯· ಹಿಗ್ಗು ; ಸಂತೋಷ· ೧೦· ತವರ : "ತೃಪ. ಪಿಸ್ವಟಂ. ರಂಗಂ. ಮಗಂ —— ಳ ತವರದ ಪೆಸರುಗಳು" (ಕಿಂಕಾಂಶಿ· ೩೦೩)· ೧೧· ಕೃಷ್ಣ : ☞ ಈ ಅರ್ಥವು ಸಂಸ್ಕೃತ ಕೋಶಗಳಲ್ಲಿಲ್ಲ : ರಂಗ ಬಾರೋ ಕೃಷ್ಣ ಬಾರೋ ಮಂಗಳಾತ್ಮಕ ಮನಸಿಜ ನಯ್ಯನೆ · · · ಬಾರೋ (ಕೃದಂದ· ೩-೬೬ ಕ್ಷಾಖ) ; ರಂಗ ನಿನ್ನಯ ರಂಗುವತೆದ ಜಂಘೆಯು ಜಿಲ್ಲ ಮುಂಗುಡಿದರಿಮು ಮುದಮೊಳು ಹಿಂಗದೆ · · · ಹೃದಯಾಂಗಣದೊಳಿರುತಿರ್ಕೆ (ಕಹಾಂಂ· ೯-೩)· ೧೨· ಹೊಳಪು ; ಪ್ರಕಾಶ : ' ಪಿಂಡರಂಗ ' ಪರಾ·

ರಂಗಕುಣಿ = ನರ್ತನ ಮಾಡು ; ನಾಟ್ಯವಾಡು ; ಅವರೂ . . . ತಮಟೇ ಸದ್ದಿಗೆ ಸರಿಯಾಗಿ ಪಾದವಿನ್ಯಾಸ ಮಾಡುತ್ತಾ ರಂಗಕುಣಿಯುವರು (ಹ.ಬ್ಯಸ· ೨೦)· ರಂಗದ ಕುಣಿತ = ಸುಗ್ಗಿಪುಲ್ಲಿ ನಡೆಯುವ ಒಂದು ಬಗೆಯ ಕುಣಿತ : 'ರಂಗದ ಕುಣಿತ' ಮಂಡ್ಯ ಜಿಲ್ಲೆಯಲ್ಲಿ ವಿಶೇಷವಾಗಿಯೂ . . . ಕಂಡುಬರುತ್ತದೆ (ಕಜಾ. ೦೩೨)· [ಸಂ.]

ರಂಗಜೊಗು (ಕ್ರಿ)· ನೃತ್ಯ· ನಾಟಕ ಮೊದಲಾದುವುಗಳನ್ನು ಪ್ರದರ್ಶಿಸಲು ರಂಗಸ್ಥಳಕ್ಕೆ ಬರು : ಮಂಗಲಾಲಂಕಾರಾಲಂಕೃತನಾಗಿ ನಾಟ್ಯವಿದ್ಯಾಚಾರ್ಯನಂ ಪೋಲ್ದು ರಂಗಂಜೊಕ್ಕು ಲೋಕಾಕಾರಮನಭಿನಯಿಪಾಕಾರಂ ನೆಗಬ್ (ಕಂಶ್ರ· ೭-೦೦೫ ಕ) ; ನಿನ್ನೆ ರಂಗಜೊಕ್ಕಾ ಚಿತ್ರವೆನೆ ನರ್ತಿಸಿದ ಕನ್ನೆ ನಿನ್ನಯ ಕುವರಿಯೇ (ಕ್ಕಾಂದಶ್ರ· ೯-೬೦)·

[ರಂಗ + ಜೊಗು]

ರಂಗಕಾಜಿ ' ರಂಗಗಾಜಿ ' ನೋ·

ರಂಗಗಾಜಿ, ರಂಗಕಾಜಿ (ನಾ)· ಬಟ್ಟೆಗಳನ್ನು ಶುಭ್ರಮಾಡುವವನು : ಅಗಸ ; ರಜಕ : ಬಲ್ಲಿದನು ನೀ ರಂಗಗಾಜಿರಿಗೆಲ್ಲರಿಗೆ ಲೇಸಾಯ್ತು ಕೊಡುನಿಸಗುಳ್ಳ ವಸನದಲುತ್ಪವನೆಮಗೆಂದನಿಸುವಾರಿ (ಪಣಾಗ. ೦೨-೬೬-೨)· **ರಂಗಕಾಜಿ** : ವಸಮೂಳಿ ಮೂಳಾಪ್ರಪಂಚಂ ಬೇಡ ಬಿಡುಬಿಡೆಂದು ರಂಗರಂಗಾರ್ಥಿಯಾಗಿ ರಂಗಕಾಜಿನ ಕಯ್ಯ ಸೀರೆಯಂ ಸೆಳೆಯಲ್ (ಅರ್ಜು. ೯-೬೬ ಕ) ; ಇರದೆಯ್ದಿ ರಂಗಕಾಜಿನೊಳುರವಣೆಯಿಂ ಕೊಂಡ ವಸ್ತ್ರಮೆನಿಸಿದ ನೀಲಾಂಬರಮಂ ರಾಮಂಗಿತ್ತಿಸೆದಿರೆ ಕೃಷ್ಣನಸರ್ಜ್ಯಕೀರ್ತಿಪತಮನಮನುಟ್ಟಂ (ಜಗಂ. ೬-೬)·

[ರಂಗ್ಯ + — ಕಾಜಿ· / ಸಂ· ರಂಗಕಾರ = ಬಣ್ಣಗಾರ, ಚಿತ್ರಗಾರ]

ರಂಗಗೀತೆ (ನಾ)· ನಾಟಕರಂಗದ ಮೇಲೆ ಹಾಡುವ (ವಿಶಿಷ್ಟವಾದ ಮಟ್ಟುಗಳನ್ನೊಳಗೊಂಡ) ಹಾಡು : ಹಳೆಯ ರಂಗಭೂಮಿಯ ನಟರಲ್ಲಿ ಕೆಲವರು ಇಂದೂ ಆ ಕಾಲದ ರಂಗಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ (ಕಜಾ)· [ಸಂ· ರಂಗಗೀತಾ]

ರಂಗತಂತ್ರ (ನಾ)· ನಾಟಕರಂಗದ ಮೇಲೆ ಬಳಸುವ ವಿಶಿಷ್ಟವಾದ ತಂತ್ರ·—ವಿಧಾನ : ಶುದ್ಧಸಾಂಪ್ರದಾಯಿಕ ರಂಗತಂತ್ರಗಳ ಬಳಕೆ ಅನಿವಾರ್ಯವೆಂದು ಒಪ್ಪಬೇಕಾಗಬಹುದು (ಕಾಒಕ್ರ· ೨೦೦)· [ಸಂ·]

ರಂಗತಾಲೀಮು (ನಾ)· ನಾಟಕಪ್ರದರ್ಶನಕ್ಕಾಗಿ ಮಾಡುವ ಪೂರ್ವಸಿದ್ಧತೆ ; ನಾಟಕದ ಅಭ್ಯಾಸ : ನಾಟಕೀಯವಾಕ್ಯಗಳ ಹಾಗು ಪದ ಪುಂಜಗಳ ' ರಂಗತಾಲೀಮು ' ಕಿಟ್ಟಿಯ ಮನಸ್ಸಿನಲ್ಲಿ ನಡೆದಿರುತ್ತಿತ್ತು (ಗಂಪಾಮಾ· ೦೨೦) : ಯಾವ ಮಾತನ್ನು ಹೇಗೆ ಆಡಬೇಕೆಂಬ ರಂಗತಾಲೀಮನ್ನು ಅವರು ಆಗಲೇ ಮಾಡಿಕೊಂದಿದ್ದರು (ಪಕ್ಕಪು· ೩೦೨)·

[ರಂಗ + ತಾಲೀಮು]

ರಂಗಪಂಚಮಿ (ನಾ)· ಫಾಲ್ಗುಣ ಕೃಷ್ಣಪಂಚಮಿಯ ದಿನ ಮತ್ತು ಅಂದಿನ ಓಕಳಿಯ ಎರಚಾಟ : ಓಕಳಿಯಾಡುವ ಪೀಕಳಿಯಂತೆ· ಹಗಲು ಹನ್ನೆರಡು ತಿಂಗಳೂ ರಂಗಪಂಚಮಿಯನ್ನು ನೆರವೇರಿಸುವವರಂತೆ· ಓಚ್ಚಿ

ಒಟ್ಟಿ ಏಲೆಗಳನ್ನು . . . ಅಗಿದು ಪಿಚಿಪಿಚಿ ಉಗುಳುವ . . . ಬಗ್ಗೆ ನಾನಿಲ್ಲಿ ಬರೆಯಲು ಬಯಸುವದಿಲ್ಲ (ಪಣಕ. ೦೫೯).

[←ಮರಾ. ರಂಗಪಂಚಮಿ]

ರಂಗಪರಿಕರ (ನಾ). ನಾಟಕಕ್ಕೆ ಬೇಕಾಗುವ ಬಣ್ಣ, ಭೂಷಣ, ಪರದೆ, ದೀಪ ಮೊದಲಾದ ಸಾಧನ : ಸಂಪೂರ್ಣ ರಂಗಪರಿಕರವುಳ್ಳ ಬಯಲಾಟದ ಸಂಪ್ರದಾಯ ಒಂದಾದರೆ ಅದಿಲ್ಲದಂಥ ಹಾಳಮದ್ದಲೆಯ ರೂಪ ಎರಡನೆಯದು (ಪುಪ್ರಶಿ. ೦೮೩). [ಸಂ.]

ರಂಗಪೀಠ (ನಾ). ನೃತ್ಯ, ನಾಟಕ ಮುಂತಾದುವನ್ನು ಅಭಿನಯಿಸುವ ಸ್ಥಳ.– ವೇದಿಕೆ : (ಈ ಎರಡು ಬಾಗಿಲುಗಳ ನಡುವೆ ರಂಗಶೀರ್ಷ ನೇಪಥ್ಯಗಳಿಗೆ ಮಧ್ಯೆ 'ಜವನಿಕೆ' ಅಥವಾ ತೆರೆ ಇರುತ್ತಿತ್ತು). ಈ ಭಾಗದ ಮುಂದೆ ಇರುವ . . . ಭಾಗವು "ರಂಗಪೀಠ" ಎನ್ನಿಸಿಕೊಳ್ಳುತ್ತದೆ (ಸಂಪಾಟ. ೨೬). [ಸಂ.]

ರಂಗಪೂಜೆ (ನಾ). ೧. ನಾಟಕ, ನೃತ್ಯ ಮೊದಲಾದುವುಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ರಂಗಕ್ಕೆ ಮಾಡುವ ಪೂಜೆ ; ರಂಗ ದೇವತಾಪೂಜೆ : ನಾಟಕ ಆರಂಭವಾಗುವುದಕ್ಕೆ ಮುಂಚೆ ರಂಗಪೂಜೆ ಮಾಡುವುದು ವಾಡಿಕೆ (ಕೃಷ). ೨. ದೇವರ ಉತ್ಸವಮೂರ್ತಿಯನ್ನು ಕೂರಿಸಿ ಮಾಡುವ ಪೂಜೆ : ಪಡುವಕೇರಿಯ ಮಹಾದೇವರ ಸಂನಿಧಿಯಲಿ ಮಾಡಿದ ಧರ್ಮದ ವಿವರ ರುದ್ರಪುಟಿಯಬ್ಬರು ದೀವಳಿಗೆಮಹ್ಯದಲಿ ರಂಗಪೂಜೆ ೧ (ಶಾಇಶ. IX-ii, ೧೧೬-೦೦ ; 1442) ; ಕಾರ್ತಿಕ ಶುದ ೧೧ ದಿನ ದೇವಿ ಬಿಜಯಂ ಮಾಡಿದಾಗ ರಂಗಪೂಜೆಗೆ ಲ್ ೩. (ಪ್ರಸಂ. ೦೫೨೪. ೦೪-೦೫ ; 1516) ; ಸೋಣೆತಿಂಗಳಿನ ರಂಗಪೂಜೆಯಲ್ಲಿ ಒಂದು ದಿನದ ಹೂವಿನ ಪೂಜೆ ಹೆಗಡೆಯದು (ಕೀಪಹೆ. ೦೧೦). [ಸಂ. ರಂಗಪೂಜಾ]

ರಂಗಭೂಮಿ (ನಾ). ೧ ನಾಟಕ, ನೃತ್ಯ ಮೊದಲಾದುವುಗಳನ್ನು ಅಭಿನಯಿಸಿ ತೋರಿಸುವ ಸ್ಥಳ ; ರಂಗಸ್ಥಳ : ಪಾಂಡುಕಪಿಳಾತಳವೆ ರಂಗಭೂಮಿಯಾಗೆ . . . ವಿಳಿಪಭಾರತಿಕರೆ ನಟ್ಟುಪರಾಗೆ (ಪಾಂಪಕ್ಷ. ೦೧-೩೦ ಪ) ; ರಂಗಭೂಮಿ ಎಂಬ ಕಲ್ಪನೆಯಲ್ಲಿ ನೃತ್ಯ, ಸಂಗೀತ, ನಟನೆ ಇವುಗಳಿಂದ ಪುಸ್ತೋರಂಜನೆ ಎಂಬ ಮಾತು ಅಡಕವಾಗಿದಯುವೈ ? (ಪ್ರಕಡ. ೨೬೮). ೨. (ಯಾವುದಾದರೂ ಕಾರ್ಯವನ್ನು ನೆರವೇರಿಸುವ) ವೇದಿಕೆ ; ಜಗಲಿ : ರತ್ನದಿಂ ಬೆರಸಿದ ಬಣ್ಣದೂಳ್ ಮೆಱಿಯ ಕಟ್ಟಿಸಿ ಘಟ್ಟಿಸಿ ರಂಗಭೂಮಿಯಂ (ಕಂಕಣಾ. ೩-೧೦). ೩. ಯುದ್ಧಭೂಮಿ ; ಕಳ : ಗಂಗಾಕುಮಾರನ ಕಳಶಪಸ ರಾಧಾತನೂಜನ ರಂಗಭೂಮಿಯಿದು (ಕುಪಾ. ೩-೨೬). [ಸಂ.]

ರಂಗಭೂಮಿಕೆ (ನಾ). = ರಂಗಭೂಮಿ ೧ : ಕೆದಱಿದ ಪುಷ್ಪಾವಳಿ ರಂಗಜೊಳೆ ಸಯಂಬಡೆಯೆ ರಂಗಭೂಮಿಕೆ ಪುತೊಪ್ಪಿದಪುದು (ಪಾಂಪಕ್ಷ. ೭೦-೭೨). [ಸಂ. ರಂಗಭೂಮಿಕಾ]

ರಂಗಭೋಗ (ನಾ). ದೇವರ ವಿಗ್ರಹದ ಎದುರಿನಲ್ಲಿ ನೃತ್ಯ, ಸಂಗೀತ ಮೊದಲಾದುವುಗಳ ಮೂಲಕ ಸಲ್ಲಿಸುವ ಸೇವೆ. –ಉಪಚಾರ : ಪಂಕ್ತಾನ್ನನಿಮಿತ್ತಮಾಗೆ ದೇವರಂಗಭೋಗಕ್ಕಂ ರಂಗಭೂಭೋಗಕ್ಕಂ . . . ಕುಟುಮಡುವುಮಂ . . . ಕೊಟ್ಟರ್ (ಶಾಶಾ. ೨೨-೭-೩೨ : 1063) ; ಮಂಗ್ಳೀಶ್ವರದೇವರ ನಿತ್ಯಪೂಜೆ ಪಂಚ್ಚಿಪಬ್ಬ ಅಜ್ಜಭೋಗ ರಜ್ಜಭೋಗ ಮಣ್ಣಸ್ಸುಟಿತಜೀರ್ಣೋದ್ಧಾರಕಂ . . . ದಟ್ಟ ದಿಕ್ಷಿ (ಎಸ್. XII, ೫೫೬. ೦೫೬-೧೭ ; 1286). 'ಅಂಗಭೋಗ' ಪರಾ. [ಸಂ.]

ರಂಗಮಂಟಪ (ನಾ). ೧. = ರಂಗಭೂಮಿ ೧ : ರಂಗಮಂಟಪ, ಸಭಾಗೃಹ. ನೇಪಥ್ಯಸಂಬಂಧವಾದ ಎಲ್ಲ ವಿಷಯಗಳಲ್ಲೂ ಅಗಿನ ದಿವಸಗಳಲ್ಲಿ ಪಕ್ವವಾದ ಅಭಿಪ್ರಾಯಗಳಿದ್ದಂತೆ ಕಾಣುವುದು (ಪಾಲಕ್ಷ. III, ೦೨೯೯) ; ಶಾಲೆಯ ಬಾಗಿಲಿಗೂ ರಂಗಮಂಟಪಕ್ಕೂ ತಳಿರುತೋರಣಗಳನ್ನು ಕಟ್ಟಿದರು (ಕಪಕ್ಷ. ೬-೧೦). ೨. = ರಂಗಭೂಮಿ ೨ : ತಿರುವೆಂಗಳ ನಾಥಗೆ ಕಟ್ಟಿಸಿದ ರಂಗಮಂಟಪ (ಪ್ರಸಂ. ೦೪೭೯. ೯-೦೦ ; 1465).

[ರಂಗ + ಮಂಟಪ]

ರಂಗಮಂಡಪ (ನಾ). = ರಂಗಭೂಮಿ ೧ : ವಿಮಾನ, ಅರ್ಧಮಂಡಪ, ಮಂಡಪ ಮತ್ತು ತೆರೆದಿರುವ ರಂಗಮಂಡಪಗಳು ಮೊದಲು ಕಂಡು ಬರುತ್ತವೆ (ಪೂಪ್ರಶಾ. ೦೦). [ಸಂ.]

ರಂಗಮಹಲು (ನಾ). ಭೋಗವಿಲಾಸವನ್ನು ನಡೆಸುವ ಸ್ಥಳ ; ವಿಲಾಸ ಮಂದಿರ : ಅವನು ಅಲ್ಲಿಂದ ಜಾಗ್ರತೆಯಾಗಿ ಹಿಂದಿರುಗಿ ರಂಗಮಹಲಿನಲ್ಲಿ ರಾಣಿಯ ಬಳಿಗೆ ಬಂದನು (ಕುಸಾಕ. ೭೦).

[← ಪಾರ. ಮರಾ. ರಂಗಮಹಾಲ್; ಹಿಂ. ರಂಗಮಹಲ್]

ರಂಗವಲಿ, ರಂಗವಾಲಿ, ರಂಗಾವಲಿ, ರಂಗೋಲಿ, ರಂಗೋಲೆ (ನಾ). ನೆಲದ ಮೇಲೆ ಬರೆಯುವ ಹಸೆ ಮುಂತಾದ ಅಲಂಕಾರ ಮತ್ತು ಅದಕ್ಕೆ ಬಳಸುವ ಅಕ್ಕಿಹಿಟ್ಟು, ಬಿಳಿಯ ಕಲ್ಲಿನ ಪುಡಿ, ಬಣ್ಣದ ಪುಡಿ ಮೊದಲಾದುವು : "ಪುವಲಿಯೆನುತುಂ ಧರೆಯೊಳ್ ಭಾವಿಸೆ ತಾಂ ರಂಗವರಿಗೆ ನಾಮಂ" (ಶಾಶಾ. ೦೬೭) ; ಕತ್ತುರಿಯ ಸಗಣನೀರ್ ಬಿಡುಮುತ್ತಿನ ರಂಗವಲಿ ಮಿಳರ್ವ ಮಂಗುಲದ ಗುಡಿ . . . ಮನೆಗಳೊಳಿಲ್ಲಂ (ಪಂಪಾ. ೩-೨) ; ಮೆಱಿದ ರಂಗವಲಿ ದಿವ್ಯಪರಿಮಳವೆರೆದಿಪ ಪನ್ನೀರ ಚಳೆಯ (ಶಂಪಂ. ೨೭-೭೩). ರಂಗವಾಲಿ : "ಗೃಹಲಕ್ಷಣ ಮೆನಿಪ್ಪ ಬಂಧು ರಂಗವಾಲಿಯಕ್ಕುಂ" (ಪುಂಗಣಾ. ೩೦-೦೪) ; ಕುಂಕುಮದ ಕಾವಣಿಯಂ ಕರ್ಪುರದ ರಂಗವಾಲಿಯಿಂ . . . ಅಲಂಕರಿಸಿದ ಮಕರಧ್ವಜ ಮಂಟಪವು (ಪಂಪಕ. ೦೦-೩೯) ; ಗಂಧಗಜದಾನಜಲಂಗಳಿನಾದ ಪಂಕದೊಳ್ ವೇಗಿಗಳಪ್ಪ ವಾಜಿಗಳ ಫೇನಲವಂಗಳವಲ್ಲಿಗಿಲ್ಲಿಗಿಂಬಾಗಿಯೆ ಬೀಬ್ ಪೋಲ್ಕುದದು ಪದಪಡೆಂಳಿಕ್ಕಿದ ರಂಗವಾಲಿಯಂ (ಪಾರಕ್ಷ. ೭-೦೮೯). ರಂಗವಾಲೆ : ರಂಗವಾಲೆ ಎಂದರಂಗವಿಸದಮ್ಮಾ ಎನ್ನ ಮನವು (ಪಪಹ. ೦೦೬-೪೩೨) ; ರಂಗವಾಲೆ ಒಟ್ಟಿವಾರತಿಗೆ ಪೋಲಗ ನಾಲ್ಕಕ್ಕಂ ಗದ್ಯಾಣಂ ಪದಿನಾಜು (ಎಶಾ. III. ೬೮೫. ೭೬-೮೩ ; 1276) ; ಮಂಜಗಳಲಿಕ್ಕುತಿಪ ರಂಗವಾಲೆಯ ನಾಸಿದೇವಿಯರ್ಬಂದರಾನಂದದಿಂದ (ಪುದೇಪು. ೨೬-೨೩). ರಂಗಾವಲಿ : ಲಲಿತ ಮೌಕ್ತಿಕಮಣಿಗಣಶ್ರೀಕಲಿತರಂಗಾವಲಿಯ ಜೊಳಗುವ ಜಾಗದೊಳಗಳ (ಕಪಪ. ೨-೦೦೩). ರಂಗೋಲಿ : ಚಿಪ್ಪದ ನೇಸರುಕೋಲ್ಗದಿರಿ ಚೆಂಬಿಸಿಲಿನ ರಂಗೋಲಿಯನೆಸೆದಿತ್ತು (ಶಾಪಕ್ಷ. ೨೬-೬) ; ಗೊಂದೆಯಾಟ, ಹಾದುವುದು, ಕಥೆ ಹೇಳುವುದು–ಕೇಳುವುದು ಮತ್ತು ರಂಗೋಲಿ ಹಾಕುವುದು–ಇವೇ ಆ ನಾದಗಳು (ಸ್ವಪ್ರ. ೦೦). ರಂಗೋಲೆ : ಅಂಗಳದೊಳಗೆ ರಂಗೋಲೆ ಹಾಕುವಾಗ ಶೃಂಗಾರದಂಗದ . . . ಹೆಂಗಳ ವ್ರತವನು ಭಂಗಮಾಡಿದ ಶ್ರೀರಂಗನಂಬವಮ (ಪ್ರಕಂ. ೦-೭೬-೨) ; ಅಂಗಳ ತುಂಬಾ ಅವಳು ಬಗೆಬಗೆಯ ರಂಗೋಲೆಗಳನ್ನು ಬಳಿದಿದ್ದಳು (ಪಾಪುತ್ರ. ೦೮).

ರಂಗವಾಲೆಯ ನಿಯೋಗ= ರಂಗೋಲೆಯನ್ನು ಹಾಕಲು ನೇಮಿಸಿದ ಸೇವಕವರ್ಗ : ಪಾಯಸ ಪಶ್ಚಾನ್ನದಡಿಗೆಗೂಡಿದ ರಂಗವಾಲೆಯ ನಿಯೋಗಕ್ಕೆ ಜೀವಿತಗದ್ಯಾಣವೆರಡು (ಎಶಾ. XII. ೫೯೫ಸಾ. ೨-೨೦ : 1261).

[< ಸಂ. ರಂಗವಲ್ಲೀ. / ತಮಿ. ರಜ್ಜವಲ್ಲಿ ; ತೆಲು. ರಂಗವಲ್ಲಿ. / ಮರಾ. ರಾಂಗವಳೀ. ರಾಂಗೋಳೀ]

ರಂಗವಲ್ಲಿ (ನಾ). = ರಂಗವಲಿ : ಅರಸರಾ ಬರ್ಪ ಬಟ್ಟೆಯೊಳೆಲ್ಲಂ ಪಂಚರತ್ನಂಗಳಿಂ ರಂಗವಲ್ಲಿಯನಿಕ್ಕಿ ನೇತ್ರವಟ್ಟು ದುಕೂಲ ಚೀನಾದಿ ದಿವ್ಯವಸ್ತ್ರಂಗಳಂ ಪಾಸಿ (ಪಚ್ಚಾಶಾ. ೨೬-೨) ; ತಟ್ಟು ಕಟ್ಟಿದ ಗುಡಿ ರಂಗವಲ್ಲಿಗಳಿ ದಾಂಗುಡಿಯಂತಿರೆ . . . ಪೊಕ್ಕನಂದು ನಿಜಮಂದಿರಮಂ ಪರಸ್ತ್ರೀಭೈರವಂ (ಪಂಕಡಾ. ೩-೦೦೩) ; ಬೀದಿಗಳಂ ಗಂಧೋದಕದಿಂ ಸಾರಣೆಗೆಯ್ದು ರಂಗವಲ್ಲಿಗಳನಿಟ್ಟು (ಕಾಬ್ಯಕ. ೦೦-೨೩). [ಸಂ. ರಂಗವಲ್ಲೀ]

ರಂಗವಳಿ (ನಾ). (?) : " ರಂಗವಳಿಗಳೆನೆ ಪಿವಿದುಮಪಂಗಾಯ್ರೆಸಲ್ಕ ಡಂಗಾಜಿರೊಳಪ್ಪರ್ " (ಕರ್ಣಾ. ೨೪). [?]

ರಂಗವಾಲಿ ' ರಂಗವಲಿ ' ನೋ.

ರಂಗವಾಲೆ ' ರಂಗವಲಿ ' ನೋ.

ರಂಗಶಿಲ್ಪಿ (ನಾ). ನಾಟಕರಂಗವನ್ನು ಸಜ್ಜುಗೊಳಿಸುವವನು.— ಸಿದ್ಧಗೊಳಿಸುವವನು : ಬಹುರಂಗಪ್ರಯೋಜನ ಪುತ್ತು ನಟರುಗಳಿಲ್ಲದಿದ್ದರೂ ರುದ್ರಪ್ರಭಾವವು ಸಾಧ್ಯ. ಆದೂ ಅಲ್ಲದೆ, ದೃಶ್ಯದ ರಚನೆಯು ಕವಿಗಿಂತಲೂ ಹೆಚ್ಚಾಗಿ ರಂಗಶಿಲ್ಪಿಯ ಕೆಲಸ (ಪಾಣಿ. ೭೮). [ಸಂ. ರಂಗಶಿಲ್ಪಿನ್]

ರಂಗಶೀರ್ಷ (ನಾ). ಪ್ರಾಚೀನ ರಂಗಸ್ಥಳದಲ್ಲಿ ನಟಿರು ಅಭಿನಯಿಸಲು ಉಪಯೋಗಿಸುತ್ತಿದ್ದ ವೇದಿಕೆ : " ನಾಟ್ಯರಂಗ " : ಇದರಲ್ಲಿ ೪ × ೩.೨ ಹಸ್ತಗಳ ಅಳತೆಯುಳ್ಳ ಎರಡು ಭಾಗಗಳಿದ್ದು ಹಿಂದಿನ ಭಾಗವು ಜಗಲಿಯ ಹಾಗೆ ಸುಮಾರು ಒಂದು ಮೊಳ ಎತ್ತರವಾಗಿರುತ್ತದೆ; ಇದಕ್ಕೆ " ರಂಗಶೀರ್ಷ " ವೆಂದು ಹೆಸರು (ಸಂಪಾಕಿ. ೨೩). [ಸಂ.]

ರಂಗಸಜ್ಜಿಕೆ (ನಾ). ೧. ನಾಟಕದ ಅಭ್ಯಾಸ ; ರಂಗತಾಲೀಮು : ಗೋಖಲೆಯವರು . . . ಏಕಾಂತಸ್ಥಳದಲ್ಲಿ ತಮ್ಮ ಭಾಷಣಗಳ ಸಾಭಿನಯವಾದ ' ರಂಗಸಜ್ಜಿಕೆ ' ಮಾಡುತ್ತಿದ್ದರಂತೆ (ಗಕೆ. ೭೭). ೨. = ರಂಗಪರಿಕರ : ಈಚೆಗೆ ನಾಟಕಗಳ ರಂಗಸಜ್ಜಿಕೆ ತುಂಬಾ ಆಡ್ಡಂಬರವಾಗಿರುತ್ತದೆ (ರೂಪ). [ರಂಗ + ಸಜ್ಜಿಕೆ]

ರಂಗಸಾಮಗ್ರಿ (ನಾ). = ರಂಗಪರಿಕರ : ಇದರಲ್ಲಿ ಛೂರದೆಗಳು. ವೇಷ ಭೂಷಣಗಳೇ ಮೊದಲಾದ ರಂಗಸಾಮಗ್ರಿ. ದೃಶ್ಯೋಪಕರಣಗಳೆಲ್ಲವೂ ಸೇರಿವೆ (ಅಂಗಾ. ೬೪ ಅಪಿ). [ಸಂ.]

ರಂಗಸಾಲೆ (ನಾ). ನಾಟಕರಂಗ ; ನಾಟ್ಯವೇದಿಕೆ : ನಾನು ಬಡವಿ ಆತ ಬಡವ . . . ಹತ್ತಿರಲಿ ದೂರವಿರಲಿ ಅವನ ರಂಗಸಾಲೆ (ಶಾಡಂಲ. ೫೯-೬). [ರಂಗ + ಸಾಲೆ]

ರಂಗಸಿದ್ಧತೆ (ನಾ). ನೃತ್ಯ. ನಾಟಕ ಮುಂತಾದುವಕ್ಕೆ ಅಗತ್ಯವಾದ ಪರಿಕರಗಳನ್ನು ಸಿದ್ಧಪಡಿಸುವುದು : ದೇವತೆಗಳು ಏನೋ ಒಂದು ಮಹತ್ಕಾರ್ಯಕ್ಕೆ ರಂಗಸಿದ್ಧತೆ ಮಾಡುತ್ತಿರುವಂತಿದೆ (ಕಪಂಗಾ. ೬). [ಸಂ. ರಂಗಸಿದ್ಧತಾ]

ರಂಗಸ್ಥಲ, ರಂಗಸ್ಥಳ (ನಾ). ೧. = ರಂಗಭೂಮಿ ೧ : ನಟರಿಗಾಗಿ ಒಂದು ಎತ್ತರದ ರಂಗಸ್ಥಲ. ಕ್ಷೋತೃಗಳಿಗಾಗಿ ನೆಲ (ಶಾಡಪ. ೪೭೩). **ರಂಗಸ್ಥಳ** : ೧. ರಂಗಸ್ಥಳದ ಮೇಲೆ ದೊಡ್ಡದೊಂದು ರತ್ನಗಂಬಳಿ ಹಾಸಿತ್ತು (ಶಾಡಪ. ೦೫೦). ೨. ವೇದಿಕೆ . ಜಗಲಿ: ಮೂಡುವನು ರವಿ . . . ಮೂಡಣ ರಂಗಸ್ಥಳದಲಿ ಪೆತ್ತವು ಮಾಡುವನು (ಕಬಿ. ೩-೦). [ಸಂ.]

ರಂಗಸ್ಥಳ ' ರಂಗಸ್ಥಲ ' ನೋ.

ರಂಗಳಿಸು (ಕ್ರಿ). ೧. ನೀರು. ಹಾಲು. ಜೇನುತುಪ್ಪ ಮೊದಲಾದುವುಗಳಲ್ಲಿ ಔಷಧಿಯ ಪುಡಿಯನ್ನು ಕದೆರು : ಇವುಗಳ ಅರೆದು ಹಾಲಿನಿಂದ ರಂಗಳಿಸಿ . . . ಬೆಂಗ್ಗೆ ತೆಗೆದುಕೊಳ್ಳುವದು (ಶಾಮಾಜ. ೨೩೭) ; ಆ ಹಾಲಿಗೆ ಈ ಪುಡಿಯನ್ನು ಸೇರಿಸಿ ರಂಗಳಿಸಿ ಕೈಯಲ್ಲೆತ್ತಿಕೊಂಡಳು (ಶಾಸಚಂ. ೨೫೬). ೨. ಅಂಗೈಯಲ್ಲಿ ಯಾವುದಾದರೊ ಸಣ್ಣ ವಸ್ತುವನ್ನು ಇಟ್ಟು ಹೊಳಪು ಬರುವಂತೆ ಬೆರಳುಗಳಿಂದ ತಿಕ್ಕು : (೪). ೩. (ಅಲಂ) ನಾಶಮಾಡು : ರಂಗಳಿ ಕಿಡಿಪೂಸಿ ಕರಿವಿಳಿ ಮುಂಗಡಿಯ ಶಿವಭಟರ ಗಬಯಿಂದ ರಂಗಳಿಸಿ ಸಂಗರದೊಳೆತಗುತ . . . ಏತರೆ (ಅಂಬಾ. ೨೯-೨೦).

[? + — ಇಸು./ಕೆಲಾ. ರಂಗಲಿಂಚು. ರಂಗಿಂಬು]

ರಂಗಾಜೀವ (ನಾ). ೧. ಬಣ್ಣದ ವೃತ್ತಿಯಿಂದ ಜೀವಿಸುವವನು ; ಬಣ್ಣಗಾರ ; ಚಿತ್ರಕಾರ : "ರಂಗಾಜೀವಃ. ಚಿತ್ರಕೃತ್ — ಈ ೨ ವ್ಯಾಖ್ಯೆಗಾಜಿಂ [ಬಣ್ಣಗಾಜಿಂ. ಚಿತ್ರಕಾರಂ]" (ಪಾಅಮ. ೯೬-೪೭೬). ೨. ರಂಗಭೂಮಿಯ ಮೇಲೆ ನಟನೆಮಾಡಿ ಜೀವಿಸುವವನು : ನಟ. [ಸಂ.]

ರಂಗಾಣಿ (ನಾ). ಚಿಕ್ಕಮಕ್ಕಳ ಒಂದು ಬಗೆಯ ಆಟಿಕೆ : ಗಿಲಿಕೆ : ಆಳು ಮಗುವಿನ ಬೆಳ್ಳಿಯ ರಂಗಾಣಿಯನ್ನು ಕೈಯಲ್ಲಿ ಹಿಡಿದುಕೊಂಡು ಇಂದಕ್ಕನ ಬಳಿ ಬಂದ (ಸಂಕ್ರ. ೦೩೬). [← ತುಳು. ರಂಗಾಣಿ ; ರಂಗಣಿ]

ರಂಗಾರಿ, ರಂಗಾರೆ (ನಾ). ಬಣ್ಣದ ಕೆಲಸ ಮಾಡುವವನು; ಬಣ್ಣಗಾರ : ವಾನಾಬಗೆಯ ಕೈವಾರಿ ಶಿಲ್ಪಿಗರು ರಂಗಾರಿ ಚಿತ್ರಿಗರು (ಪಾಚರಿ. ೫೬-೪೬) ; ರಂಗಾರಿಗಳು ಮುಂಡಾಸು. ಶಲ್ಯ. ಪಡಿಕೆ ಮುಂತಾವ ಬಿಳಿವಸ್ತ್ರಕ್ಕೆ ಬಣ್ಣ ಕೊಡುವರು (ಕಶಗೆ. ೦೫೭). **ರಂಗಾರೆ** : ರಂಗುಹಾಕುವವನು ; ಬಣ್ಣಗಾರ ; ರಂಗಾರಿ (Dyer. ೬೦೪೨).

[← ಹಿಂ. ರಂಗಾರಾ ; ಮರಾ. ರಂಗಾರೀ./ಸಂ. ರಂಗಕಾರ]

ರಂಗಾರೆ ' ರಂಗಾರಿ ' ನೋ.

ರಂಗಾವಲಿ ' ರಂಗವಲಿ ' ನೋ.

ರಂಗಿಗ (ನಾ). ಬಣ್ಣಗಾರ : ಸ್ಪಟಿಕದ ಪುಟದೊಳಗಿದ್ದ ಬಹುರಂಗಿಗರಂತೆ ಎನ್ನಂಗಮದು ನೀನಾಗಿ ಹಿಂಗಲೇಕೆ (ಪಾಚಮಾ. ೦೯-೩೨).

[ರಂಗು + — ಇಗ]

ರಂಗಿಣಿ (ನಾ). ೧. ಒಂದು ಬಗೆಯ ಗಿಡ; ನೀಲಿಗಿಡ : "ನೀಲಿ ರಂಗಿಣಿಯಕ್ಕೆ" (ಪಾಂಗಿಣಾ. ೪೯-೨೯). ೨. ಒಂದು ಬಗೆಯ ಮುಳ್ಳುಗಿಡ; "ಪಟಿಪಾಲತಾವರೀ" (ಪಂಚತ. ೨೪೪). [ಸಂ. ರಂಗಿಣೀ]

ರಂಗಿಸು (ಕ್ರಿ). ೧. ಬಣ್ಣಕೊಡು ; ರಂಗುಗೊಳಿಸು ; ವಿಕಾವಳಿಯ ಮುಂತ್ತಿಸೊಳಪಿಳಗು ವೆಳುದಿಂಗಳ ರಂಗಿಸಲು ಶೃಂಗಾವನಿಧಿ ಸೌಂದರೇಂದ್ರುಂ . . . ನಡೆತಂದನು (ಪಾಂಡವ. ೯-೮೩). ೨. ಕೆಂಪುಬಣ್ಣದಿಂದ ಕೂಡಿರು; ಕೆಂಪಾಗಿರು : ತೆಂಗಿನಕಾಯಿ ತೋರದ ಮೊಲೆಮೊತ್ತ ಲತಾಂಗಿಯ ಬಂದುನೆವಾದು ರಂಗಿಪ ಚಿಂದುಟಿಯಿನಿದೆನೆ ಮೋಹತರಂಗಿಣಿವೇಳ್ಕೆ (ಪೋಚಕ. ೦-೩೬). ೩. ಹೊಳೆ ; ಪ್ರಕಾಶಿಸು : ರಂಗಿಸುವನರ್ಘ್ಯರತ್ನದ ಪಾವುಗೆಯು ತೊಟ್ಟು (ಅಂಗಪ್ರ. ೩೬-೨೩). ೪. ಉತ್ಸಾಹಗೊಳ್ಳು; ಉಬ್ಬು : ರಂಗಿಸಿದಂ. ರಾಗಿಸಿದಂ. ಭೋಗಿಸಿದಂ (ಪಭಾವಿ. ೭೪ ಪ್ರಯೋ) ; ರಂಗಿಸುತ ಮೊನೆಗಾಣಿಸುತ್ತಂ ಸಂಗಡಿಗರಂ ಹಿಂಗಿಸುತ ತನ್ನಂಗವಾ ಶಾನೇಜಲಿಳಯಲು ನೋಡುತಾಡುತ್ತ (ಪಚಕ್ರ. ೩೬-೦೨). ೫. ಉದ್ವೇಗಗೊಳ್ಳು : (೬). ೬. ಕರಗು; ದ್ರವಿಸು : ತಿಂಗಳ ವೆಳಗು ಸೋಂಪಲು ಕೂಡೆ ಶಶಿಕಾಂತ ರಂಗಿಸುವಂತೆಮ್ಮ ನೃಪನ ರಂಗಳ ಪ್ರಭೆ ತಾಗಲೊಡನೆ ಕಾಂತೆಯರಂತರಂಗ ವೊಸರುವುದು (ಪಚ. ೬-೧೩). [ರಂಗು + — ಇಸು]

ರಂಗು (ನಾ). ೧. ಬಣ್ಣ; ವರ್ಣ : "ರಂಗು — ರಂಗ = ಬಣ್ಣ" (ಕಲ್ಕೋಲ. ೪೭) : ನಸುಬಿಸಿಲ ಕುಸುಮಶಿ ಸುಗಂಧ ರನ್ನಕೆ ರಂಗು ದೊರಕೊಂಡ ಮಾಳ್ಕೆಯಿಂ ಪಸರಿಸಿಮುದೆಳೆಪ್ಪನ (ಪಾಂದಪು. ೬-೨) ; ಪೊಂಗೆ ಪೊಸಮಿಸುಗು ರನ್ನಕೆ ರಂಗು ಸುಧಾರುಚಿಗೆ ಜೊನ್ನಪಂವಿನಾಭವಂ ಸಂಗಳಿಸಿ ಮಿಸುಪ ತೆಜದಿಂ ಕಂಗೊಳಿಪುದು ಭೃತ್ಯ (ಪೃಕೃ. ೩-೩೯) ; ಗುಲಾಬಿಯ ರಂಗು ಮೂಡುವೆನ್ನೆನ ಕೆನ್ನೆಗಳಲರಳಿ ಕಂಪೇರೆ (ಪಪ್ರಾಂಗೆ. ೩೬-೦೫೦). ೨. ಕೆಂಪುಬಣ್ಣ ; ' ರಂಗುದುಟಿ ' ಪರಾ. ೩. ಶೋಭೆ ; ಕಾಂತಿ ; ಕಳೆ : "ಒಜಿದಿನೊಳ್ ಕಾಂತಿಯೊಳ್ ರಮ್ಯದೊಳ್ ರಂಗಿನಿಂ" (ಪಪ್ರಸು. ೮೪). ' ರಂಗುಮಾಣಿಕ', ' ರಂಗುಮಡೆ ' ಪರಾ. ೪. ಆವೇಶ ; ಉದ್ರೇಕ : ಆವೇಗ : ಒಗ್ಗಾಲಿಯು . . . ರಂಗಿನಲ್ಲಿ ಮಹಾಡುತ್ತಿದ್ದ (ಕಾಅಮು. ೦೯). ೫. ಸಡಗರ ; ಉತ್ಸಾಹ : ತುಂಗಮಾಣಿಶಿವಿರಂಗಳಲಿ ದಿವಿಜಾಂಗನಾಜುವ ಹೇಮಶ್ಮತಪೀತಾಂಗಳಲಿ ಕುಳ್ಳಿರ್ದು ನವರಸಭೋಗಲು ವೀಣೆಗಳಾ ರಂಗುರಕ್ಕಗಳಿಂದ ಬಾಜಿಪ ಸಿಂಗರದ ಶಿಲೆ ಕರಗಿ ವಿವಿಧ ಮಂಪಂಗಳಲಿ ರಭರಿಯಾಗಿ ಸುವುತಲಿರ್ಪವೆಲ್ಲಿಯಮು (ಪಚಂಪ. ೨-೨-೬).

'ರಂಗುಗೊಳಿಸು' ಪರಾ. ೬. (ನಾಟಕ, ಗಾಯನ, ನೃತ್ಯ ಮೊದಲಾದುವುಗಳಂಥ) ಮನರಂಜನೆಯ ಒಂದು ಪ್ರಕಾರ: ರಾಜರು ಸಂಗೀತ, ಸಾಹಿತ್ಯ, ಪಾಚು, ರಂಗು ಮುಂತಾದುವುಗಳಲ್ಲಿಯೇ ಆಸಕ್ತರಾಗಿದ್ದರು (ಬಿಪ್ರ. ೫೫); ದಿನಂಪ್ರತಿ ನಾಚು, ರಂಗು . . . ಅನೇಕ ಸಮಾರಂಭಗಳು ನಡದೇ ಇದ್ದವು (ಮೈಚರಿ. ೨೯೨). ೭. ಲಾವಣಿಯಲ್ಲಿ ಒಂದು ಬಗೆ: 'ರಂಗು' ಎಂದು ಹೆಸರಾದ ಶೃಂಗಾರಪದಗಳು ಇನ್ನೊಂದು ಜಾತಿ:—ಲಾವಣಿಗಳಲ್ಲೆಲ್ಲ ಇದೇ ಬಹಳ ಸ್ವಾರಸ್ಯವಾದುದು . . . ಈ ರಂಗುಲಾವಣಿಗಳು ಬಹುಶಃ ತಮಿಳಿನ ಕಡಿಯಿಂದ ಬಂದವುಗಳ ಸಂತಾನವಿರಬಹುದು (ಕರ್ನಾಸಂ.-೩೮).

ರಂಗಾಗು=೧. ಬಣ್ಣವೇರು; ಕಾಂತಿಯಿಂದ ಕೂಡು: ಕುಣಿಯುವ ಕಣ್ಣ ನೋಟ, ದೂವಾಗಲೂ ರಂಗಾಗಿನುತ್ತಿದ್ದ ಆ ತುಟಿ ಎದ್ದಾ – ಅವನ . . . ಉತ್ತರವನ್ನು ನಿರೀಕ್ಷಿಸಿಯೇ ಇರುತ್ತವೆ (ಕಪ್ರ. ೧೧. ೧೮೯). ೨. ಉತ್ಸಾಹಪಡು: ಕವಿಯು ವಿಷಯವಾಗಿ ಅವಳು ರಂಗಾಗಿ ಮಾತನಾಡುತ್ತಿದ್ದಳು (ಅಂಚೆ. ೦೩೮). ರಂಗಿನ ಪುಡಿ = (ಅಲಂ) ಬಣ್ಣದ ಮಾತು; ಬಿನ್ನಾಣದ ನುಡಿ: ನೀನು ಹನುಮಣ್ಣನ ರಂಗಿನ ನುಡಿಗಳಿಗೆ ಮರುಳೋತು ನಿನ್ನ ಆತ್ಮವನ್ನು ಅವನಿಗೆ ಮಾರಿಕೊಂಡೆ (ಜಾಕುಶ್ರ. ೨೯).

[← ಪಾರ. ಹಿಂ. ಮರಾ. ರಂಗ್./ಸಂ. ರಂಗ]

ರಂಗುಗೊಳಿಸು (ಕ್ರಿ). ಉತ್ಪೇಜನ ನೀಡು; ಹುರುಪುಗೊಳಿಸು: ಕೆಲಬರ ನವರಾತ್ರಿಸಿ ಕೆಲವರಂ ಚಮರಂಗಧಾಟಿಯೊಳ್ ರಂಗುಗೊಳಿಸಿ (ಪೌಗಂ೦. ೬-೦). [ರಂಗು + ಕೊಳ್₁ + – ಇಸು₅]

ರಂಗುದುಟಿ (ನಾ). ಕೆಂಪುಬಣ್ಣದ ತುಟಿ; ಚೆಂದುಟಿ: ರಂಗುದುಟಿ ಸಳ್ಳುಗುರು ಬಳ್ಳುಡಿ ನಾಡೆ ನಳತೋಳು (ಪ್ರಾಶಾ. ೦೦೯); ಪೊಂಗೊಡ ಮೊಲೆಗಳ ನೋಡುವನಪ್ಪವ ರಂಗುದುಟಿಯು ಕಚ್ಚಿ ಪೀರ್ದ (ಶಪ. ೧೦-೬೯); ರತ್ನದಂತೆ ಬೆಳಗುವ ರಂಗುದುಟಿಯು . . . ರವಿಕೋಟಿಪ್ರಭೆಯಂತೆ ರಾಜಿಸುವ ರಾಜಾಧಿರಾಜ ನಮ್ಮ ಅಮಿಂಡೇಶ್ವರನು (ಅಮಂಪ್ರ. ೨೩೨-೨೩).

[ರಂಗು + ತುಟಿ]

ರಂಗುದಾಬಿ (ನಾ). ಕೆಂಪುಬಣ್ಣದ ಬಾಳೆ; ಚೆಂದ್ರಬಾಳೆ: ಪಣ್ಣು ಪೊಂದಾಬಿಯ ಚೆಂಬಾಬಿಯು ರಂಗುದಾಬಿಯ ತೋಟವು (ಪಾಪಾಕ್ಷ. ೦೦೦-೨೯). [ರಂಗು + ಬಾಬಿ]

ರಂಗುಮಾಣಿಕ (ನಾ). ಪ್ರಕಾಶಮಾನವಾದ ಕೆಂಪುಹರಳು. — ಮಾಣಿಕ್ಯ: ಮಂಗಳಂ ಜಯಮಂಗಳಂ . . . ಗಂಗೆಯ ಪಡೆದ ಶ್ರೀರಂಗನಿಗೆ ರಂಗುಮಾಣಿಕದುಂಗುರದವಗೆ (ಪ್ರಕೀದ. ೪-೨೦೮-೨); ಗಗನಮಣಿ ಪಶ್ಚಿಮಾಂಗನೆಯ ಬೈತಲೆಯ ರಂಗುಮಾಣಿಕದಂತೆ ಕಣ್ಣ ಕಾಣಿಸುತಿರ್ದುದಸ್ತಗಿರಿಮಸ್ತಕದೊಳು (ಕೃಪಾಣ. ೪-೨೩).

ರಂಗುಮಾಣಿಕದಂಬುಲ = ಮಾಣಿಕ್ಯದಂತೆ ಕೆಂಪಾದ ತಂಬುಲ: ಚುಂಬನಗೊಟ್ಟು ಚುಂದಿಸಿ ರಂಗುಮಾಣಿಕದಂಬುಲವಿತ್ತು ಮುದ್ದಿಸಿದ (ಪ್ರಜಾಪ. ೫೫-೯೯). [ರಂಗು + ಮಾಣಿಕ]

ರಂಗುವಡೆ (ಕ್ರಿ). ಕಾಂತಿಯನ್ನು ಹೊಂದು: ಬಣ್ಣವೇರು: ಸಡಗರಿಸಿದರು ಬಾಣಜೆಯ ಹರ್ಮ್ಯದಿ ರಂಗುವಡೆದ ಮಾಣಿಕ್ಯಮೆಯ್ಯೊಳಗು ಸೂಡರಿನೇಳ್ಗೆಯ ಹೊನ್ನ ಕಳಸಂಗಳಾಕಾಶದೆಡೆಯಲ್ಲಿ ಜಗಜಗಿಪಂತೆ (ಕೃಪಪ್ರ- ೫೦-೭); ರಂಗುವಡೆದ ಪವಳದ ತೋರಣದ ಕಾಂತಿ ಕಂಗೊಳಿಸುವು ದೀದಿಯಲಿ (ಕಾವಿ. ೫೦-೦೭). [ರಂಗು + ಪಡ₁]

ರಂಗುವಾಲ (ನಾ). ಒಂದು ಬಗೆಯ ಗಿಡ; ಅರುಬಾಳ: "ಅರಿಷ್ಟ. ಳೆನಲು – ೨ ರಂಗುವಾಲದ ಗಿಡ" (ಹಿಡ್ಕಂಡಿ. ೦೦೯). [?]

ರಂಗುವಿಡಿ (ಕ್ರಿ). ಕೆಂಪುಬಣ್ಣವನ್ನು ಹೊಂದು: ಕೆಂಪಾಗು: ಶೃಂಗಾರಕಾಲಿಯ ಕೋಮಲಗರ್ಭದ ರಂಗುವಿಡಿದ ಮೊತ್ತದಂತೆ ಜಂಘೆಗಳಿಂದ ರಾಜಿಸುವಸಾರೀತನ ಸಂಗಕೆಳಸುತಿನ್ನ ವನಪ(ಕಾಪ್ರ. ೯-೦೦೬).

[ರಂಗು + ಪಿಡಿ₁]

ರಂಗುವೆಱು (ಕ್ರಿ). ಕಾಂತಿಯನ್ನು ಪಡೆ; ಶೋಭಿಸು: ರಂಗ ನಿನ್ನಯ ಪೊಡೆ ಕಣ್ಗಳ ಮಂಗಳ ಸಿಂಗಾರ ತ್ರೈಜಗತ್ತಿಂಗೆ ರಂಗುವೆತ್ತಾಳ್ವನೆಯಿನಲದು ಎಸ್ಮಂತರಂಗದೊಳಾವಗಮಿರ್ಕೆ (ಕಕಣಾ. ೨-೬). [ರಂಗು + ಪೆಱು]

ರಂಗೇರು (ಕ್ರಿ). ೧. ಬಣ್ಣವೇರು; ರಂಗಾಗು: ಇಗೊ ಸಂಜೆ. ಸವಿ. ಪೆಬೊಗಿರಿ ರಂಗೇರಿಹ ಜಲದಾಮ್ಬುಮುಖ . . . ಶಿಶುಚಂದ್ರನ ನಗೆ ನಗುವಳು (ಗಪ್ರ. ೩೦-೩); ಅವನಿಗೆ ಇದ್ದಕ್ಕಿದ್ದಂತೆ ಮುಖ ರಂಗೇರಿತು (ಅಮಪ್ರ. ೭೯). ೨. ಕಳೆಗಟ್ಟು; ರಂಜಿಸು: ಹೆಚ್ಚು ಜನ ಇದ್ದದ್ದೂ ಅಟ ರಂಗೇರುತ್ತದೆ (ಶಂಪ್ರ. ೩, ೭೦೯).

[ರಂಗು + ಏರು₁ (< ಏಱ್₁)]

ರಂಗೋಲಿ ' ರಂಗವಲಿ ' ನೋ.

ರಂಗೋಲೆ ' ರಂಗವಲಿ ' ನೋ.

ರಜಿ ' ಅಂಚೆ ' ನೋ.

ರಂಜಿಗಾಣು (ಕ್ರಿ). (?) : ಪಂಚವಿಂಶತಿತತ್ತ್ವರೂಪದ ಸಂಭವಜಾಯದೆ ನೀತಿವಿಮುಖದಿಂ ರಂಜಿ [ಪಾಠಾಂ. ದಿಂ ಅಂಜಿ]ಗಾಣದೆ ಸಗುಣಮಯಂ ನೀಹಾರದಲಿ ಮುಳುಗಿ ವಿಂಚುವೆಳಗಿನ ಬಳಕೆಯಲಿ ಮನಮುಂಚಿ ಮೈಗೊಂಡಳಲು ಪಾತುಪಾವಂಚಕರು ನೀವ್ ಜಶಂಗಳೆಂದರೆ ವೇದವೇಕೆ (ಶಾಪ್ರ. ೬-೩೭).

[ರಂಜಿ₇ + ಕಾಣು (< ಕಾಣ್)]

ರಂಜ, ರಂಜಿ, ರೆಂಜೆ (ನಾ). ಒಂದು ಬಗೆಯ ಗಿಡ ಮತ್ತು ಅದರ ಹೂವು; ಪಗಡೆ: ಶಮಿಮುಖಿಯೋರ್ವಳು ರಂಜದೆಡೆಗೆ ಎಯ್ದಿ ಕುಸುಮಾರಂಜಿಮುಂದೆಂಬ ಪೊಸರಾಗವ ಪಾಡೆ (ಪಾಭಾ. ೨೫-೧೩); ಗರುಡಾಚಾರ್ಯನಲ್ಲಿ ರಂಜ, ದಾಸಾಚಾರ್ಯನಲ್ಲಿ ಮಂದಾರ; ದುರ್ಗಾಭಟ್ಟನಲ್ಲಿ ಶಂಖಪುಷ್ಪ, ಬಿಲ್ವಪತ್ರೆ (ಸಂಪ್ರಕ್ರ. ೦೬). ರಂಜಿ: ಕುರವಕ ಬೇಲ ರಂಟಾಳ ಸಿರಿಸ ರಂಜಿಯು ಗೋಳಿ ಲೊದ್ದಸಿಲುಕವಾದಿ ಮೆರವ ಕಮ್ಮಾರವನು ಕಂಡ (ಪಾಭಾ. ೦೦-೦೯). ರೆಂಜೆ: ಬೊಗಸೆ-ಬೊಗಸೆ ರೆಂಜೆ ಮತ್ತು ಸುರಗಿಯನ್ನು ಇಲ್ಲಿ ಸಂಗ್ರಹಿಸುವುದು ಸಾಧ್ಯವೇ ? (ಪಾಕೃಶ್ರೀ. ೯).

[ದೇ.ಶ ತುಳು. ರೆಂಜ, ರೆಂಜಿ, ರೆಂಜೆ, ರೆಂಜೆಯಿ]

ರಂಜಕ₁ (ಗು). ೧. ಬಣ್ಣಹಾಕಿದ. ೨. ಸಂತೋಷಗೊಳಿಸುವ. ೩. ಬೆಲುಪಾದ; ಮನೋಹರವಾದ. (ನಾ). ೪. ಅಂದ; ಶೋಭೆ: ಮಾಯದ ಬೊಂಬೆಯ ಮಾಡಿ ಕಂಗಳಿಗೆ ಕಾದುನ ಬಾಣವ ಹೂಡಿ ಪಡೆ ನುಡಿಯೊಳಗೆ ರಂಜಕದ ತೊಡಿಗೆಯನೆ ತೊಡಿಸಿ . . . ಸಂದೇಹದಲ್ಲಿ ಸತ್ತು ಹುಟ್ಟುವ ಈ ಭವಬಂಧನಗಳೆತ್ತ ಬಲ್ಲರೋ ಈ ಶರೀರ ನೆಲೆಯ (ಲಿಂಗಚ. ೪. ೩೬-೩೯). ೫. ಆಕರ್ಷಕವಾಗುವುದು; ಮನೋಹರವಾದುದು: ಜೀವನ—ನಿಸರ್ಗಗಳೆಲ್ಲಿಯ ಮನೋಧರ್ಮ. . .ಇವುಗಳೊಳ ಹೊಕ್ಕು ನೋಡುವ ರಂಜಕವು ರಮ್ಯವು ಆದ ಪ್ರಯತ್ನ ಮೊದಲಾಯಿತು (ಪಕ್ಷಾ. ೦೦೭). ೬. ಸಂತೋಷವನ್ನುಂಟುಮಾಡುವಂತಹುದು; ಆನಂದಗೊಳಿಸುವಂತಹುದು; ಸಾಲ್ಕಖನಮಯಮುಂ ಸಕಲಪರಿಷಹವೇನೆ ರಂಜಕಮಾದುವು (ಅಷ್ಟ. ೩-೯) : ವಿನು ಮಾಡಲಯ್ಯ . . . ರಮ್ಯಹೇರ ರಂಜಕದ ನುಡಿಯನ್ನು ಕೇಳಿ . . . ತೋಷಿಸುವ ಕರ್ಣೇಂದ್ರಿಯಕೆ (ಶಪ್ರ. ೫೦-೨) ; ಅಂಜದಿರು ಗಂಧರ್ವ ತಮ್ಮದು ರಂಜಕದ ಮಾತಲ್ಲ ನಿನ್ನನು ಭುಂಜಿಸಲು ಬಂದವನಲ್ಲುವೆ ನಿನ್ನ ರಕ್ಷಿಸುವೆ (ಕೋಗಹ. ೦೦-೪೬). ೭. ಮನವೊಲಿಸುವಂತೆ ಮಾತನ್ನಾಡುವವನು; ರಂಜಿಸುವವನು: ಮುನ್ನಿನ ಪುರಾತನರ ನೆನೆದು ಧನ್ಯನಾದಹೆನೆಂಬ ಮಾತಿನ ರಂಜಕರನೇನೆಂಬೆ (ಶಪ್ರ. ೬೭೦) : ರಂಜಕರು ಪಾಂಡವರು ನಿನ್ನನು ಭುಂಜಿಸುವರಾವಂಗದಲಿ (ಶಾಪ್ರ. ೯-೩೨). ೮. ಒಂದು ಬಗೆಯ ಗಂಧ; ರಕ್ತಚಂದನ. [ಸಂ.]

ರಂಜಕ್ಕ (ನಾ)· (ಸಿಡಿಮದ್ದು, ಬೆಂಕಿಕಡ್ಡಿ ಮುಂತಾದುವನ್ನು ತಯಾರಿಸಲು ಬಳಸುವ) ಒಂದು ಬಗೆಯ ಅಲೋಹಮೂಲಧಾತು : ಮತ್ತೊಂದು ಕೋವಿ ರಂಜಕ ಮಾತ್ರ ಹತ್ತಿ . . . ಆ ರಂಜಕದ ಕಡಿ ಹಾರಿ ಸುಟ್ಟಿತು (ಕಾಕೀಂಕ್ರ. ೩೬೬) ; ಸಾರಜನಕ. ಗಂಧಕ. ರಂಜಕ . . . ಕಬ್ಬಿಣ ಮೊದಲಾದ ನಿರವಯವವಸ್ತುಗಳು ಪ್ರಾಣಿಗಳ ಆಹಾರದ ಘಟಕವಸ್ತುಗಳು (ಪ್ರಾಪ್ರಾ. ೬) ; ರಂಜಕದ ಅಧಾವದಿಂದ ಮೂಳೆರೋಗವಾದ ಹಕ್ಕಿರೋಗ ಸಂಭವಿಸುವುದು (ಗೃಪ್ರ. ೫೦). [← ಫಾರ್. ಹಿಂ. ಮರಾ. ರಂಜಕ]

ರಂಜಕೆ (ನಾ)· [ಸಂಗೀತ] ಮಧ್ಯಮಸ್ವರದಿಂದ ಹುಟ್ಟುವ ನಾಲ್ಕು ಶ್ರುತಿಗಳಲ್ಲಿ ಐದು : ರಂಜಕೆ ಪೂರ್ಣೆ ಅಲಂಕಾರಿಣಿ ವಾಂಛೆಯೆಂಬ ನಾಲ್ಕು ಶ್ರುತಿಗಳೇ ಮಧ್ಯಮಸ್ವರದಿಂ ಪುಟ್ಟಿದವ್ (ಪಚೇಸ. ೨೩೨).

[ಸಂ. ರಂಜಕೀ]

ರಂಜಣಿಗೆ, ರಂಜಳಿಗೆ (ನಾ). ರಿ· (ಪನ್ನೀರು, ಗಂಧ ಮುಂತಾದುವುಗಳನ್ನು ತುಂಬಿಡುವ) ದೊಡ್ಡ ಪಾತ್ರೆ ; ಕೊಪ್ಪರಿಗೆ : ಚಂದನವಾರಿ ಪೂರಮಪ್ಪ ರಜತದ ರಂಜಣಿಗೆಗಳಂ . . . ಕೊಣ್ಮಿಳಿಸಿ (ಭರತೇ. ೬-೦೫೬ ಪ) ; ಲಲಿತಮಣಿನಂಜಣಿಗೆಯೊಳಗುಜ್ಜ್ವಳವ ಸಾದುಜವಾರಿ ರ್ದರ್ದಮು ಬಳಸಿತನಲಿನ್ನುಳಿದುವನು ವರ್ಣಿಸುವನಾರು (ಪಚೇಸ. ೬-೨೯) ; ಸದ್ಯೋಘೃತದ ರಂಜಣಿಗೆಗಳ ಸಾಲಿಗುಹಿಂದವು ಪಾನರಸಾಯನಾದಿಗಳ ರುಗ್ಗ ರುಗಿಪ ಹೊಂಗೊಪ್ಪರಿಗೆಗಳ ಬಗೆ ವಿರಾಜಿಸಿತು (ಕೊಕಥಾ. ೬-೩೫-೩೬). ೨. ದವಸಧಾನ್ಯಗಳನ್ನು ತುಂಬುವ ಗುಡಾಣ : ಒಂದು ರಂಜಣಿಗೆ ಅದರಲ್ಲಿ ಮನೆಯ ನಗನಾಣ್ಯಗಳನ್ನು ಇಡರಾಗಿತ್ತು (ಸ್ಕ.ಪು. ೨೩೬). ೩. ದನಕರುಗಳ ಹಟ್ಟಿ; ಕೊಟ್ಟಿಗೆ: ಈ ಹುಲ್ಲನ್ನು ರಾತ್ರಿ ಹಾಸಿಕೊಂಡು ದನದ ರಂಜಿಗೆಯೊಳಗೆ ಬಿದ್ದುಕೊಳ್ಳುತಿದ್ದವು (ಕಾಮುಚಾ. ೦೬೨):ಬರೀ ಬೈಯಲ್ಲಿ ಎಂದಿನ ರಂಜಿಗೆಯಲ್ಲಿ ತೂತುಕೊಂಡವು (ಕಾಪರಾ. ೦೬೯).

[<ಪ್ರಾ. ರಂಜಣ./ಮರಾ. ರಾಂಜಣೇ, ರಾಂಝಣೇ]

ರಂಜನ (ನಾ)· ರಿ· ಬಣ್ಣಹಾಕುವಿಕೆ. ೨. ಬಣ್ಣ; ವರ್ಣ. ೩. ಸಂತೋಷ ಪನ್ನುಂಟು ಮಾಡುವಂತಹುದು. ೪. ಸಂತೋಷ ; ಆನಂದ. ೫. ಕೆಂಪುಚೆಂದನ : "ತಿಲಪರ್ಣ, ಪತ್ರಾಂಗ, ರಂಜನ, ರಕ್ತಚಂದನ, ಕುಚಂದನ – ೫ ಕೆಂಪುಬಣ್ಣದ ಚಂದನಪ್ಕದ ಪೆಸರುಗಳು" (ನಿಘಂ. ೨೦೩).

[ಸಂ.]

ರಂಜನಿ (ನಾ)· ರಿ· ಒಂದು ಬಗೆಯ ಗಿಡ ; ನೀಲಿಗಿಡ· ೨. ಅರಿಸಿನ. ೩. [ಸಂಗೀತ] ಒಂದು ರಾಗದ ಹೆಸರು: ರಂಜನಿ–ಶಂಕರೇ ಮೇಳಕರ್ತ ಧರ್ಮಪತಿಯಲ್ಲಿ ಪುಟ್ಟಿ (ಪಂಗೀಸಂ. ೨೩೭).

[ಸಂ. ರಂಜನೀ]

ರಂಜನೆ (ನಾ)· ರಿ· ಬಣ್ಣ ; ವರ್ಣ. ೨. ಮೆರುಗು ; ಕಾಂತಿ . 'ರಂಜನೆಗೈ' ಪರಾ. ೩. ಅಲಂಕಾರ ; ಶೋಭೆ ; ಸಗಸುಮಿ ಬೆನಕಂಗೆ ಸಂಪಗೆಯರಳ್ದಿ ಪೂಜಿಸಿದರೆ ರಂಜನೆಯಲ್ಲದೆ ಆದಱ ಗಂಜಳ ಬಿಡದಣ್ಣಾ (ಪಚೇ. ೧೭). 'ರಂಜನೆವೆಡೆ' ಪರಾ.. ೪. ಉಲ್ಲಾಸ ; ಸಂತೋಷ: ಆ ಮಾತು ಆ ಕಥೆ ಆ ನಗೆ ಆ ಬಗೆ ಮೆಚ್ಚುವುದೊರೆವ ಕೌಶಲವು ರಂಜನೆಯಾಯಿತು ಸುತ್ತಣ ಜನರಿಗೆ (ಶಾಂಪ್ರಕ. ೦೦-೩೬). [ಸಂ. ರಂಜನ]

ರಂಜನೆಗೈ (ಕ್ರಿ)· ಬಣ್ಣಹಾಕು : ಮುಮ್ಮಳ ಪಸಗಪುಂಜಮಾ ರಂಜನೆಗೈದು ತರವಱಿದು ಸರಂಗೊಳಿಸಿ ಕವಿನಕಂಠಾಭರಣವೆನಿಸುವಂತೆ (ಪಚೇ. ೨).

[ರಂಜನೆ + ಗೈ (<ಕಯ್)]

ರಂಜನೆವಡೆ (ಕ್ರಿ)· ಶೋಭೆಯನ್ನು ಪಡೆ ; ಚೆಲುವಾಗು : ಭರತಮಿಳಿತದಿಂದಾ ನೀರ ಭಂಡಾರವು ತಿಳಿದಾ ರಂಜನೆವಡೆದಿತ್ತು (ಶ್ರೀಪಾಂ. ೦–೫೯).

[ರಂಜನೆ + ಪಡೆ]

ರಂಜಳಿಗೆ ' ರಂಜಣಿಗೆ ' ನೋ·

ರಂಜಾನ್ ' ರಮಜಾನು ' ನೋ·

ರಂಜಿ ' ರಂಜ ' ನೋ·

ರಂಜಿಕೆ ' ಜುಂಜಿಕ್ಕೆ ' ನೋ·

ರಂಜಿತ (ಗು)· ರಿ· ಬಣ್ಣ ಹಾಕಿರುವ· ೨. ಸಂತೋಷಪಡಿಸುವ ; ಆನಂದವನ್ನುಂಟುಮಾಡುವ : ರಂಜಿತಮಧುಮಧುಕರಚಯಮಂ ಜಿತ ನಾನಾಪ್ರಸೂನಚಯ(ಮುಂ). . . ಕೊಯ್ದಳ್(ಕಸ್ತೂ. ೬-೬೩).೩. ಸಂತೋಷ ಗೊಂಡ· (ನಾ). ೪. ಚೆಲುವಾದುದು; ಮನೋಹರವಾದುದು.[ಸಂ.]

ರಂಜಿಸು (ಕ್ರಿ)· ರಿ· ಹೊಳೆ ; ಪ್ರಕಾಶಿಸು : ಅರ್ಥಾಭಾಸದಿನಕ್ಷರಸಾರ್ಥ ಮನುಷ್ಯರಿಸಿ . . . ರಂಜಿಸದ ಪಲಕು ಮನೆಯನೊರಿರದೇ (ಜಾಕ. ೦-೦೪) ; ಚಕ್ರವಾಕದ ತಗಹು ಕಟ್ಟುದು ಹೇಳೆಸಲು ರಂಜಿಸುತು ದೀಪಾವಳಿ (ಶುಷ್ಕಕ್ರೋ. ೦೫-೩೮). ೨. ಶೋಭಿಸು ; ಮನೋಹರವಾಗು : "ರಾಜಿಸು-ತೋಧಾಯಾ, ರಾಗೇ ಜ (ಬನ್ನಹಾಕು)" (ಶಬ್ದಾ) ; ಅವದು ಚಿಲ್ಲುಮೆಚ್ಚು ರಂಜಿಸುಗುಮದರ್ಕದಂ ಸುಜಿ . . . ಭೋಗಿಸಿದಂ ಗುಣಾರ್ಣವಂ (ಶಂಪಾ. ೦೪-೩೬) ; ಆತನ ಕಯ್ಯೊಳ್ ರಂಜಿಪಕ್ಷಾವಳಿ ನಡುಗಿದುದು (ಕಾರಂಪ್ರ. ೩೩೬); ನವಾಕಾಶಸ್ಫಟಿಕದ ಜಾವುಗೆಯಂ ಮೆಟ್ಟುತ್ಕೃಜೀಯನ ಸಚ್ಚದನೆಗೆ ಬರ್ಪ ಸುದತೀವರ್ಣ ರಂಜಿಸುವಳ್ (ಪಚೇಸ. ೨-೫೦). ೩. ಉದ್ರೇಕಗೊಳಿಸು; ರಾಗಾವೇಶಗೊಳ್ಳುವಂತೆ ಮಾಡು : ಒಸಗೆಗಮು ತ್ಸಾಹಕ್ಕಂ ಸಸಿಯುದಯಂ ರಂಜಿಪಂತೆ ಕಳ್ಳಿಂಗಂ . . . ಆ ತೆಱದಿಂ ರಂಜಿಸ ಲಕ್ಕುಮೆ (ಕಬಾಕ್ಕು. ೪-೨೪) ; ಉತ್ಕಮರತಿಸಾಮ್ರಾಜ್ಯವ ಹರುಷದ ಮೊತ್ಕದ ರಂಜಿಸಿ ಬೇಗ (ಕಂಪಂ. ೦೦-೩೨). ೪. ಸಂತೋಷಗೊಳಿಸು ; ಹಿಗ್ಗುವಂತೆ ಮಾಡು : ವಿನಯಂ ಸಜ್ಜನ ಕೃತ್ರಿಮವೆನಿಸಿದವು ಇವೆರಡುಂ ನಿನಗೊಳವಾರಾರ ಮನಮುಮಂ ರಂಜಿಸವೇ (ಆರಾ. ೦೪–೬೩); ಸೊಕ್ಕಾನೆ ಕುದುರೆಯ ವೈಪಾಳಿಯಂಕಣದಿಕ್ಕೆ ಕಣ್ಮನಕೆ ರಂಜಿಸಿತು (ಪೊಚಂಪ. ೨-೩೫) ; ಸಜ್ಜಾತಿಪತಿಯರಿನಿಯರ ಸ್ಪನ್ಧಿದಯೊಳು ಲಜ್ಜಿಪರೆಸಿ ರಂಜಿಪುದು (ಪಂಂ. ೬-೬೮). ೫. ಬೆಳಗಿಸು ; ಪ್ರಕಾಶಗೊಳ್ಳುವಂತೆ ಮಾಡು : ಸಜಿವಸಾ ಪತ್ರುಗಳನಂತೋಷಿಸುವಣಾಶಾವಾಶವಂ ಧ್ವನಿಸುವೆನೂರ್ಜಿತಭಿಯಂ ರಂಜಿಸುವನಪವರತ (ಪಚೇ ೪೯–೩೯). [ರಂಜನ + – ಇಸು]

ರಂಜು (ನಾ)· ಧೂಳು ; ರಜ : ' ಕಾಲುರಂಜು ' ಪರಾ. [<ರಜ]

ರಂಜೆ ' ಜುಂಜೆ ' ನೋ·

ರಂಟೆ ' ರೆಂಟೆ ' ನೋ·

ರಂಡೆ (ನಾ)· ರಿ· ಗಂಡನನ್ನು ಕಳೆದುಕೊಂಡಿರುವವಳು : ವಿಧವೆ : ಸುರಲೋಕಮೆ ಪಾಜಾದ್ಯೆ ಸರಸ್ವತೀದೇವಿ ರುದಿಯಾದೆ (ಕಾಂಪ್ರ. ೧೦೦); ಜೋಯಿಸನ ಮಗಳ್ ಪಸಿಯ ಮೇಲೆ ರಂಡೆಯಾದಳ್ (ಪಮಾಕ್ಕು. ೦೨-೩೬): ಅನ್ಯಕಾರಿ ಅತ್ತ ಗನ್ನಘಾತಕಿ ರಂಡೆ ಅತ್ತಿಗೆಯು ಎನ್ನ ಗೋಳು ಕಾವ ಪಾತ ವೆಂದಿಗಹುದೊ (ಕ್ರಕಂದ. ೫-೫೪-೬). ೨. ಹಾದರ ಮಾಡುವವಳು ; ಸೂಳೆ ; ಜಾರೆ : ರಂಡೆಯೊಳಾ ಧೃಷ್ಟಯೊಳಂ . . . ನೆರೆದೊಡಬ್ಬಗಾ ಮಾಯುಂ ಶ್ರೀಯುಂ (ಪಚೇ. ೯-೪); ರಂಡೆ ರಜಕಾಂಗನೆ . . . ವೇರಡ ಗಿತ್ತಿಯೆರಬ ವೆಂದಿರ ಪೆರೆಗೊಂಡೊಡಂದಱಗೆ ಸಜ್ಜನವೆಂದಿತಿ ಕಟ್ಟುಳೆಂ ಬುದಂ (ಕೃಕ್ಕಟು. ೬-೦೦೬); ರಂಡೆಯಾಸೆಗೆ ರಮಣಿಮುಂದವ ಕೆಡಿಸಿ ದಂತಾಯ್ತು (ಶಾಂಪ್ರ. ೫೪-೩೦). ೩. ಒಂದು ಬಯ್ಗುಳು : " ಏನು ರಂಡೆಯೋ ? ನೀನು ರಂಡೆ " ಎಂದು ಗದರಿಸಿ, ಬಾಗಿಲು ದಾಬ್ಬ ಒಳಗೆ ಮಲಗಿಕೊಂಡಳು (ಕಕ್ಕಾ. ೦೦೬). ೪. ಒಂದು ಬಗೆಯ ಔಷಧೀಸಸ್ಯ

[ಸಂ. ರಂಡಾ]

ರಂಡೆತನ (ನಾ)· ವಿಧವೆಯಾಗಿರುವಿಕೆ ; ವೈಧವ್ಯ : ದಾಯಬುದಟ್ಟ ಮೆಬ್ಬಿದ ಡಂದಿವ ರಂಡೆತನಕ್ಕೆ ಪುಣ್ಯಾಧಿಪ್ರಾಯಮೆ· ಸಿಂಹವಂದೆಗಮ ನಿಂದಿತೆಗಂ (ಪಾಂಚ. ೬-೨೨); ಮುಂದಿನ ವರ್ಷದಿಂದ ಅತ್ಯಯ ರಂಡೆಪ ವನ್ನೂ ನೋಡತೊಡಗಿದನು (ಪಾಂಪ್ರ. ೧೦). [ರಂಡೆ + – ತನ]

ರಂಡೆಹುಣ್ಣೆವೆ (ನಾ)· ಮಾರ್ಗಶೀರ್ಷಮಾಸದ ಹುಣ್ಣಿಮೆ ; P ಕಾರ್ತವೀರ್ಯನು ಜಮದಗ್ನಿಯಿಂದ ಕಾಮಧೇನುವನ್ನು ಪಡೆದು ಕೊಳ್ಳಲು ಪ್ರಯತ್ನಪಟ್ಟು ಜಮದಗ್ನಿಯು ಪೂರ್ಣ ಹೋಗುವಂತೆ ಆಘಾತಗೊಳಿಸಿದನು· ಆಗ ರೇಣುಕೆಯು ವೈಧವ್ಯದ ಹೆದರಿಕೆಯಿಂದ ಗೋಳಾಡಿದಳು· ಇದು ಮಾರ್ಗಶೀರ್ಷಮಾಸದ ಹುಣ್ಣಿಮೆಯಂದೇ ನಡೆದುದೆಂಬ ನಂಬಿಕೆಯಿದೆ : ಮಾರ್ಗಶೀರ್ಷಪೌರ್ಣಮಿಗೆ ರಂಡೆಹುಣ್ಣೆವೆಯೆನ್ನುವರು· ಈ ಜಾತ್ರೆಯಲ್ಲಿ ದೇವತೆಯು ಕೈಯೊಳಗಿನ ಬಳೆಗಳನ್ನು ಪೂಡಿದು ರಂಡೆತನ ಬಂದಂತೆ ತೋರಿಸುವರು (ಶಾಸನ· ೫೦೬) ; ರೇಣುಕಾ ಭಕ್ತರು ಆ ದಿನವನ್ನು ರಂಡೆಹುಣ್ಣೆವೆ ಎಂದು ಹೇಳುತ್ತಾರೆ (ಜಾಪ್ರ· ೬೦).

[ರಂಡೆ + ಹುಣ್ಣೆವೆ (< ಪುಣ್ಣಮೆ)]

ರಂಡೋಲು ' ರಮಡೋಲು ' ನೋ·

ರಂಢೋಲು ' ರಮಡೋಲು ' ನೋ·

ರಂದಣ· ಲಂದಣ (ನಾ)· ಅಡುಗೆಯ ಕೆಲಸ ; ಅಡುಗೆಮಾಡುವಿಕೆ : ' ರಂದಣಿಗೆ ' ಪರಾ· ಲಂದಣ : ' ಲಂದಣಿಗ ' ಪರಾ·

[< ಸಂ· ರಂಧನ]

ರಂದಣಗಿತ್ತಿ, ಲಂದಣಗಿತ್ತಿ (ನಾ)· ಅಡುಗೆ ಮಾಡುವವಳು : ಅನುಶ್ರುತವ ಮಾಡಿಹೆನೆಂದು ಉಪ್ಪರಗುಡಿಯನಿತ್ತಿ ಪಾಡುವ ಭಕ್ತನ ಮನೆ ಅಟ್ಟಿಕ್ಕುವ ರಂದಣ [ಪ್ರಾಣಾ· ಲಂದಣ, ಅಂದಣ]ಗಿತ್ತಿದು ಮನೆ (ಪ್ರಸ·ಸ· ೬೬೯–೬೦೬). ' ಅಂದಣಗಿತ್ತಿ ' ಪರಾ· ಲಂದಣಗಿತ್ತಿ : ಅಪರತ ಮಾಡಿಹೆನೆಂದು ಉಪ್ಪರಗುಡಿಯ ಕಟ್ಟಿ ಪಾಡುವ ಭಕ್ತನ ಮನೆಯಮಲಂ[ಪ್ರಾಣಾ· ಅಂ]ದಣಗಿತ್ತಿಯ ಮನೆ (ಪ್ರಸ· ೨೫೬) ; ಲಂದಣ [ಪ್ರಾಣಾ· ಳ] ಗಿತ್ತಿಯಂತೆ ಬಂದ ನಿಂದ ಭಕ್ತರಲ್ಲಿ ಹೊಸತನದಂದವ ಹೇಳಿ (ಪ್ರಸ·ಸ· II· ೪೫೦-೦೫೦)· [ರಂದಣಿಗ + — ಇತ್ತಿ]

ರಂದಣಿಗ, ಲಂದಣಿಗ (ನಾ)· ಅಡುಗೆಯ ಕೆಲಸವನ್ನು ಮಾಡುವವನು ; ಬಾಣಸಿಗ : ' ರಂದಣಗಿತ್ತಿ ' ಪರಾ· ಲಂದಣಿಗ : ಭಕ್ತರೆಲ್ಲರೂ ಲಂ[ಪ್ರಾಣಾ· ಅಂ]ದಣಿಗರಾಗಿ ಹೋಯಿತ್ತು ಜಂಗಮವೆಲ್ಲವು ಉಪಜೀವಿಗಳಾಗಿ ಹೋಯಿತ್ತು (ಪ್ರಪಾ· ೦೦೬-೮೦೦) ; ತತ್ಪುರದೊಳಿರ್ದ ವಿಪಾಮಿನಂದಿ ಮಹಂ ನಂದಿಸಲೆಂದು ಲಂದಣಿಗರ ಮುಂದಿರ್ಕ್ಕೆ ಪೋಪಮಂ ಮುಂದೆ ಸಂದಣಿಸಿ ನಿಂದ ನೆರವಿಯಂ ಭೋಂಕೆನೆ ಕಂಡು (ಪಾರ್ಶ್ವ· ೩-೦೩ ೬)·

[ರಂದಣ + — ಇಗ]

ರಂದಿ, ರಂದೆ (ನಾ)· ೧· (ಉಕ) ಅಶ್ವಶ್ವಸ್ವವಾಗಿ ಹರಡಿದ ವಸ್ತು ; ಕಸ : ಒಲೆಯ ಮುಂದೆ ರಂದಿ ಹರಡಿತ್ತು (ಕೃ·ಚಿ· ೨೬೬) ; ಸಿಗರೇಟಿನ ಬೂದಿ . . . ತುಂಡು, ಟೇಬಲ್ಲಿನ ಅಸುವಾಸು ರಂದಿ ಹರವಿದ್ದವು (ಪ್ರಚಿ· II· ೨೫೬)· ೨· ಗೊಂದಲ ; ಗಲಾಟೆ : ಮಾತುಮಾತಿಗೆ ಸಿಟ್ಟು ಸೆಡವು, ರಂದಿ, ರಭಸ (ಕೊಡಗಿ· ೦೯೬) ; ಇಷ್ಟೆಲ್ಲ ರಂದಿಯಾದರೂ ಆಗುವ ಕಾರಣವಿರಲಿಲ್ಲ (ಮುಗಾ· ೦೨೬), ರಂದೆ : ೨· ಪಮ್ಮ ಖಾಸಾ ವಳಗೆ ಪ್ರವಾಸಿಗರ ರಂದೆ ಇಲ್ಲ (ಕ್ಯ·ಕ್ಷ· ೦೦) [← ಮರಾ· ರೇಂದ, ರೇಂದಾ]

ರಂದು (ನಾ)· ಒಡಕು ; ನ್ಯೂನತೆ ; ದೋಷ : ಸೋತವರುಗಳು ಯಿರವೇಕು ವನ್ನೆರಡುವರುಷ ವನವಾಸಂಗಳ ಪೊಂದೊಂದು ವರುಷ ಮಜ್ಞಾತವಾಯಿದರೊಳಗೆ ರಂದು ಕಂಡರೆ ಮರಳೆಯುವೇನು ಮತ್ತೆ ನಾ ಹಿಂದೆ ಪೇಳಿರ್ದ ಮಾರಿಯಾದೆಯೋಳ್ (ಪಂಪಭಾ· ೨೮-೪೪)·

[< ಪ್ರಾ· ರಂಧ· / ಸಂ· ರಂಧ್ರ]

ರಂದೆ ' ರಂದಿ ' ನೋ·

ರಂಧ್ರ (ನಾ)· ೧· ಕಂಡಿ ; ತೂತು : "ನಿಷ್ಪಂ . . . ರಂಧ್ರಂ ರೋಕಃ . . . ಈ ೧೫ ಕಂಬು" (ಪಣಾಪಟು· ೦೦೩-೨) ; ಗೋಡೆಗೆ ಶಗಲು ಮಾಕಿರುವ ಪಟಗಳ ಅಂಚಿನಲ್ಲಿ ಅಲ್ಲಿದು ಸಣ್ಣ ರಂಧ್ರಗಳ ಸುತ್ತಮುತ್ತ . . . ತಗುಲಿಗಳ ಬೀಡು (ಪಂಬಿಯ· ೧೭)· ೨· ಸೀಳು ; ಬಿರುಕು ; ಗಳ)· ೩· ಮನುಷ್ಯನ ಶರೀರದಲ್ಲಿರುವ ಬಾಯಿ, ಮೂಗು, ಕಿವಿ ಮೊದಲಾದ ಒಂಬತ್ತು ತೂತು ; ನವದ್ವಾರ: ಪ್ರಜುರಂ ಪತ್ಕೊಳಿಗಾಗೆ ರಂಧ್ರವನೆ ಕೈಗೊಂಡೆಂಟಿನಿಗೇಳ ಪಿಟ್ಟು (ಸೋಮೇ· ೦೦೦). ೪· ತಪ್ಪು ; ನ್ಯೂನತೆ ; ದೋಷ : ' ರಂಧ್ರಾನ್ವೇಷಣ ' ಪರಾ· ೫· [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ : ಭಾವ ರಂಧ್ರನಂದಪದಾರ್ಥಂ . . . ನವಮವೊಂಭತ್ತಿನಿಕ್ಕುಂ (ಕ್ಷಪಣಾ· ೯-೯)· ೬· [ಜ್ಯೋತಿ] ಎಂಟನೆಯ ರಾಶಿ : ವೃಶ್ಚಿಕರಾಶಿ : ರಂಧ್ರಗತಿಮುಮಿತ್ಯರೋಂದಾಗಿ ಅರ್ಥಸುತ ಅಂದಿನ ತಿಥಿಯಸೊಡಗೂಡಿ ಸಕ್ಷತ್ರ ಮುಂದೆ ಬಂದಕ್ಕು (ಸೂರ್ಯ· ೦೫೭).

[ಸಂ·]

ರಂಧ್ರಪಾತ್ರೆ (ನಾ)· ೧· (ದೇವತಾವಿಗ್ರಹಗಳಿಗೆ ಅಭಿಷೇಕಮಾಡಲು ಬಳಸುವ) ತೂತಿರುವ ಪಾತ್ರೆ ; ಧಾರಾಪಾತ್ರೆ· ೨· ತೂತುಮಾಡಿದ ಪಾತ್ರೆಯನ್ನು ನೀರಿನಲ್ಲಿ ಇಟ್ಟು · ಆಮ ತಾಂಬಿಕೊಳ್ಳುವಷ್ಟು ಕಾಲವನ್ನು ನೋಡಿ, ಸಮಯವನ್ನು ಅಳೆಯುವಿದ್ದ ಪಾತ್ರೆ : ಗಳಿಗೆ ಬಟ್ಟಿಲು : ಆಗ ಅರ್ಧರಾತ್ರಿ ಕಳೆದು ಒಂದು ಜಾವಕಾಲವಾಗಿತ್ತು· ಕಾತರರಾಗಿದ್ದ ಜನಗಳ ದೃಷ್ಟಿ ಈಗ ರಂಧ್ರಪಾತ್ರೆಯ ಮೇಲೆ ಬಿದ್ದಿತು (ಶಾಸಂಕಾ· ೨೭೭).

[ಸಂ· ರಂಧ್ರಪಾತ್ರ]

ರಂಧ್ರಾನ್ವೇಷಣ (ನಾ)· ಮತ್ತೊಬ್ಬರ ತಪ್ಪನ್ನು ಹುಡುಕುವಿಕೆ ; ದೋಷಾನ್ವೇಷಣೆ : ಕೃತಿಗಳನ್ನು . . . ತುಂಡುತುಂಡಾಗಿ ಕತ್ತರಿಸಿ, ರಂಧ್ರಾನ್ವೇಷಣ ಅಥವಾ ರಂಧ್ರೀಕರಣ ಮಾಡಲು ಸ್ವಭಾವತಃ ಪ್ರವೃತ್ತಿ ಉಂಟಾಗಿಲ್ಲ (ಪಾಂಡ· II· ೦೬)· [ಸಂ·]

ರಂಧ್ರಾನ್ವೇಷಿ (ಗು)· ೧· ತಪ್ಪನ್ನು ಹುಡುಕುವ : ತಪ್ಪ ಹಿಡಿಯುವ ; ಹುಳುಕು ಹುಡುಕುವ ; ದೋಷದೃಷ್ಟಿಯು ; ರಂಧ್ರಾನ್ವೇಷಿ (Censorious. ೩೮೫)· (ನಾ)· ೨· ತಪ್ಪು ಹುಡುಕುವವನು ; ರಂಧ್ರಾನ್ವೇಷಿಗಳ ಸ್ನೇಹ ಅಪಾಯಕಾರಿಯಾದುದು (ಕಸ್ತೂ)· [ಸಂ· ರಂಧ್ರಾನ್ವೇಷಿನ್]

ರಂಧ್ರಿ (ನಾ)· (ಹಿಟ್ಟು, ಶರಿ ಮುಂತಾದುವನ್ನು ಶೋಧಿಸಲು ಬಳಸುವ) ಸಣ್ಣತೂತುಗಳಿರುವ ಒಂದು ಬಗೆಯ ಸಾಧನ ; ಜರಡಿ ; ಒಂದರಿ : "ಬಾಳೆನಿ ರಂಧ್ರಿ ಸಾರಣಿಗೆ" (ಹುಗೆಣಾ· ೬೨-೪೦)· [ಸಂ· ರಂಧ್ರಿನ್]

ರಂಧ್ರಿಸು (ಕ್ರಿ)· ತೂತು ಕೊರೆ ; ಛಿದ್ರಿಸು : ಹೂಸಿ ಹುತ್ತಿನ ಮಣ್ಣು ರಂಧ್ರಿಸಿ ಕಾಸದವು ಘಮಿಸುವವ. ಮೇಣ್ಮೊಳ್ಳಾಸದರಿ ಡಾಪರಿಸಿದವು ಕಡಿ ಧೂತಧೂಮದರಿ (ಕುಮ್ಮಿ· ೨೦-೨೦)· [ರಂಧ್ರ + — ಇಸು]

ರಂಧ್ರೀಕರಣ (ನಾ)· = ರಂಧ್ರಾನ್ವೇಷಣ ; ಕೃತಿಗಳನ್ನು . . . ತುಂಡುತುಂಡಾಗಿ ಕತ್ತರಿಸಿ, ರಂಧ್ರಾನ್ವೇಷಣ ಅಥವಾ ರಂಧ್ರೀಕರಣ ಮಾಡಲು ಸ್ವಭಾವತಃ ಪ್ರವೃತ್ತಿ ಉಂಟಾಗಿಲ್ಲ (ಪಾಂಡ· II·೦೬)· [ಸಂ·]

ರಂಪ, (ನಾ)· ೧· ಚರ್ಮ ಮೊದಲಾದುವನ್ನು ಕತ್ತರಿಸುವ ಸಾಧನ : ಘೋರರೂಪಗಳಿಂದ ಮನುಜರನ್ನು ವೀರರು ಕಡಿದು ಹಾಕಿದರು (ಪಾಪಾ· ೬೮)· ' ರಂಪಿಗೆ ' ಪರಾ· ೨· ಗರಗಸ ; ಗರಗಸ, ರಂಪ (ಪಾಂಪ· ೪೦೫೭). [ದೇ·ಶ ತುಮಿ· ಇರುಮ್ಪ ; ತೆಲು· ಱಂಪ ; ಪರ್ಜಿ· ರಂಪ್]

ರಂಪ, ರಂಪು (ನಾ)· ಗದ್ದಲ ; ರಗಳೆ ; ಹಗರಣ : ಕಾರ್ತವೀರ್ಯಾರ್ಜುನನೆಂಬಂ ರಂಪದಿಂ ನೀರ್ತರುವಿ ಬಿಡುತಲ್ಲಿ ನಾರಿಯರ ಲಂಪಟುದ್ರಿಕ್ತರಿಸುತ್ತಿರ್ದಪಂ (ಪಾಪು· ೦೬-೦೬) ; ನೀವು ಹಾದಿ – ಬೀದಿ ರಂಪ ಎಬ್ಬಿಸಬೇಡಿ (ಗಂಗಾಪ· ೯೮)· ರಂಪು : ಆ ಆಯೋಗ್ಯನ ಬಳಿ ನಾನು ಹೆಣ್ಣು ಕೇಳಲು ಹೋಗುವುದಿಲ್ಲವೆಂದು ಮೊದಲು ಗುಂಡೂರಾಯರು ರಂಪು ಮಾಡಿದ್ದರು (ಪಾಚಾಕಾ· ೨೭); ಅದಕ ಜತೆಗೆ ಲಲಿತೆಯುಪೂ ರಂಪು. ನನಗೆ ಉಭಯಸಂಕಟ (ಶಾಸಂಕಾ· ೨೪೩). ' ರಂಪಾಟ ' ಪರಾ·

[ದೇ·ಶ ಕೊಡ· ರಂಪ ; ತೆಲು· ರಂಪು· ಱಂವು ; ಕೋಲಾ· ರಾಮಂ]

ರಂಪಣಿ[1] (ನಾ). = ರಂಪ್ಪ : ಹರಕಂಠ್ರರ ಮಾತೃಭಾಷೆ ಕನ್ನಡವಾದೆ, ಗಾಬೀತರ ಭಾಷೆ ಮರಾಠಿ. ಈ ಎರಡು ಪಾಡಿಗಳಲ್ಲಿ ಎಷ್ಟೋ ರಂಪಣಿಗಳು ಸಡಿಯುತಿದ್ದವು (ಶಾವಶ. ೬). [< ರಂಪ್ಪ]

ರಂಪಣಿ[2] (ನಾ). (ಕರಾ) ದೊಡ್ಡ ಬಲೆ : ಈ ಹೊತ್ತು ರಂಪಣಿ ಹಾಕಿದ್ದರೆ ಬಂಗಡೆ ರಾಶಿಗಟ್ಟಲೆ ಬೀಳುಪುದಿತ್ತು (ಕುಸರಾ. ೬೫) ; ಬಂಗ್ಡೆ, ಕಾನೆ ಇವತ್ತು ಇಲ್ಲ. . . ನಿನ್ನೆಯ ರಂಪಣಿಗೆ ಬೀಳಲಿಲ್ಲ (ಹೊಸಚ್ಚಿ. ೮೪).

[← ತುಳು. ರಂಪೊಣಿ]

ರಸ (ನಾ). ೧. ಗಿಡ, ಮರ, ಕಬ್ಬು ಮುಂತಾದುವುಗಳ ದ್ರವ : ಕರ್ಬಿನ ರಸವೆಲ್ಲ ಕಾಗದ ಪೌರ್ (ಶಕ್ಷ. ೨-೪೦); ರಸವಚಿತ ದಟ್ಟು ಗಳ ಹಸು ಮೇಯಲ್ಲೊದ್ದು (ಸಕಸ್ಯ. ೦೬೯೯). ೨. ಹೂವು, ಕಾಯಿ, ಹಣ್ಣು ಮುಂತಾದುವುಗಳಲ್ಲಿರುವ ಸಾರ : ದಳಿತ ಜಂಬೂಪಕ್ವಫಲರಸ ಲುಳಿತಸಮಕರಂದಮಧುರೋರ್ಜಿತವಾಚದಲಿ . . . ಎಸೆದುದು ಗಜ ಪುರೋವಾಸನ (ಶಾತ್ಮಕ. ೭-೨೬); ದವಿವಿನ ತನಿವಣ್ಣ ರಸದಂತೆ . . . ಮಂಗರಸನೊಪ್ಪುವ ಪಕ್ಕಗುಂಪನಂ ಭಾವಿಸಿದೊಡೆ (ಸಮ್ಯಕ್ಕಾ. ೭-೦೦). ೩. ದ್ರವರೂಪವಾದ ಪದಾರ್ಥ : ನಾವು ತಿನ್ನುವ ಅನ್ನದ ರಸದಿಂದ ವಾಂಸ ಹುಟ್ಟುತ್ತಿದೆ (ಕುಂಅಮು. ೯-೩೨). ೪. ನೀರು ; ಜಲ : ರಸರಸದ ಬಾವಿ ಮನೆಮನೆಗೆ ಬೇಜ್ (ಕಂಹರಿ. ೯-೦೦ ಪಗ್ಗ); ಪೊಸಕಲಶಮಾ ದುತಿಮ ಕರದಲಿರಲದ ಕೊಂಡು ರಸಭರಣಗೈದು ಪಿಡಿದ್ದಿದೆಂ (ಪಂಗಣಾ. ೨-೩೬-೩೦). ೫. ಗಾಯದಿಂದ ಸುರಿಯುವ ಕೀವು ; ರಸಿಕೆ : (ಉಗುರು ಸುತ್ತಿಗೆ) ಮೇಲಿನ ಪುಡಿಯೊಳಗೆರ್ಮಾಯ ಕಿಳಿವಾಲಂ ಕಲಸಿ ಬಿಗಿದು ಕಟ್ಟುಗೆ ಬೆರಳಂ ಬೀಸಿದ ರಸದಿಂಬುಣ್ಣಾಳ ನಿಲಿಸದಿರದು (ಪಣಗಾಪಚ. ೯-೦೬೯). ೬. ಹಾಲು, ತುಪ್ಪ, ಎಣ್ಣೆ ಮೊದಲಾದ ದ್ರವಪದಾರ್ಥ: 'ರಸಧಾನ್ಯ' ಪರಾ. ೭. ಅಮೃತ ; ಸುಧೆ : ಕೂಡಲ ಸಂಗನ ಶರಣರು ರಸದ ಪಾರುಧಿಗಳು ಎಂತಿರ್ದರೇನಯ್ಯಾ (ಬಸ. ೬೫೦). ೮. ದೇಹದಲ್ಲಿ ರುವ ಸಪ್ತಧಾತುಗಳಲ್ಲಿ ಒಂದು ; ವೀರ್ಯ ; ರೇತಸ್ಸು. ೯. ವಿಷ ; ನಂಜು: "ಬ್ರಹ್ಮಪುತ್ರಃ . . . ರಸಃ . . . ವಿಷಂ _ ಈ ೯ ವಿಷಂ" (ಅಣಾಮು. ೦೦೬-೨೪). ' ರಸದಾನ' ಪರಾ. ೧೦. ಪಾದರಸ; ಪಾರದ : "ಪಾದರಂ ಚವಲವೆನೆ ರಸಮೆನಿಕ್ಕುಂ" (ಪಂಗಣಾ. ೧೭-೦೫) ; ಸಂಸ್ಪರ್ಶಕನಿಕರುಂಟು ದೊಳಗೊರ್ವರುಮಂ ಕಿಜಾವೀಲಲೀಯದೆ ರಸಮಂ ಕೊಲ್ವಂತೆಂತಾನುಂ ಕೊಂದು (ಪಂಗಣಾ. ೦೪-೦೨೦ ಪ) ; ಊರಿಗೆ ರಸ ನಿಂದಾಗವೆ ರಸಸಿದ್ಧಿ ಎಂಬೆ (ಪೋಣಾ. ೦೯-೭೩); ರಸಮಂ ನೀರೆ ಗೆಕ್ಕು ಮೊಗೆಯೆಲೆನ್ನ ಕರಮುಗದಂಗಳ್ ಕೊಯ್‌ತೆಲ್ದರು ಬೀಟಲಿರ್ದಾವೆ (ಪೋಣಾ. ೯-೯೦ ಪ). ೧೧. ರಾಳ ; ಹಗಿನು. ೧೨. ಚಿನ್ನ ಮೊದಲಾದ ಲೋಹ. ೧೩. ರುಚಿ ; ಸವಿ ; ಸ್ವಾದು : ಕಯ್ಪೆಯಣ್ಬಾರಂ ರಸಮೆ ಬಾರಿಕುಂ (ಜಾಂಪು- ೬-೭೭) ; ರಸಮುಂ ಪಾಲಗೆ ಪವಿಕಾರಸಮಂ ಕವಿ . . . ಅಜೀವನು (ಕುಗ್ಗಪು- ೦-೨೪). ೧೪. ಆನಂದ ; ಸಂತೋಷ ; ಹರ್ಷ : ರಸದ ತೊಜ್ ಪರಿದುದರ್ಮದಿನ ಪೊಘೋನೆಯ ಸುರಿದುದೇಜನಂ ಪೇಟ್‌ರ್ವರ್ಗಳ್ ಮೆಸುಮೆಸೆಯೆ ಪಾಡಿದರ್ (ಶುಚ್ಛಪ್ರ. ೦೦-೨೩) ; ರಸದ ಮಜ್ ಕಜ್ಜಿದವುದು ಸುತಸದಿಂ ಮಾಣದೆ ರಸಾಯನದ ಕೂಪದೊಳೆಂಬೆಕದಿಮಪದಳಮೆಸವುದು ರಸಗೀತಂ (ರಪಚಾಪ್ರ. ೯-೦೬೭). ೧೫. ಸಿಹಿ, ಹುಳಿ, ತೊಗರು,

ಕಹಿ ಮೊದಲಾದ ರುಚಿ : ರಸ—ತಿಕ್ತಕಟುಕಷಾಯಾಮ್ಲ ಮಧುರಾಭಿಧಾನರಸಷಡ್ಭಚಕಮುಂ (ಕಬ್ಬ.ಕ್ರ. ೨೯೩). 'ಷಡ್ರಸ' ಪರಾ. ೧೬. [ದ್ವೈತ] ನಲವತ್ತುವಿಧವಾದ ಗುಣಗಳಲ್ಲಿ ಒಂದು : ರೂಪ, ರಸ, ಗಂಧ, ಸ್ಪರ್ಶ . . . ಸೌಭಾಗ್ಯವೇದು, ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಒಂದಣ. ೫೬೩). ೧೭. [ಕಾವ್ಯಮೀ] ಭಾವ, ವಿಭಾವ, ಸಂಚಾರಿಭಾವಗಳ ಸಂಯೋಗದಿಂದ ಆಗುವ ಆನಂದಾತ್ಮಕವಾದ ಚಿತ್ತವೃತ್ತಿ : ಶೃಂಗಾರ, ಹಾಸ್ಯ, ಕರುಣೆ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ ಮತ್ತು ಶಾಂತ ಎಂಬ ಒಂಬತ್ತು ರಸಗಳು: ನವವಿಧರಸಂಗಳಂ ಮನಕೆ ಬರೆ ನಿರೂಪಿಸುವ ವಚನರಚನೆ ರಸಋದ್ಧಿವಿಧಾಲಂಕಾರಂ ಕುಱಿತು ಏಕಲ್ಪಿಸಿ ಕೊಂರ್ಪೆಂ (ಕಜಣ. ೩-೦೫೬); ರಸಮಿಲ್ಲದ ಕಾವ್ಯಂ ನೀರಸಂ (ಕಬ್ಬ. ೦-೨); ವಿಷಯವೇ ಪ್ರಧಾನವಾಗಿ ಮಿಕ್ಕ ಚಿತ್ತವೃತ್ತಿಗಳು ಅಪ್ರಧಾನವಾದಾಗ ಅದೇ ರಸವೆನ್ನಬಹುದು (ಭಾವಿಪ್ರ. ೪೦೩). ೧೮. [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ : ರಸ ನಾಟ್ಯಾಂಗಂ ಗ್ರಹಣಂ ಪೊಸತು ಏಳಿ ರತ್ನ ನವಮುಮೊಂಭತ್ತನಿಸುಂ (ಕ್ಷತ್ರಚೂ. ೯-೯). ೧೯. ಆರು ಎಂಬ ಸಂಖ್ಯೆಯ ಸಂಕೇತ : "ಋತುರಸಖರಮಿತ ಬಾಣ" (ಶುಂಗಾಖ. ೦೦೩-೬); ಋತು . . . ರಸ . . . ಒಕ್ಕೆ ಪೆಸರು (ಕ್ಷತ್ರಚೂ. ೦೨). [ಸಂ.]

ರಸಋದ್ಧಿ (ನಾ). [ಜೈನ] ತಪಸ್ಸಿನ ಸಾಧನೆಯಿಂದ ದೊರಕುವ ಒಂದು ಬಗೆಯ ಸಿದ್ಧಿ : ಆಸ್ಯವಿಷತ್ವಂ ದೃಷ್ಟಿವಿಷತ್ವಂ ಕ್ಷೀರಾಸ್ರವತ್ವಂ ಮಧ್ವಾಸ್ರವತ್ವಂ ಸರ್ಪಿರಾಸ್ರವತ್ವಮಮೃತಾಸ್ರವತ್ವಮೆಂದನೇಕಪ್ರಕಾರಮಪ್ಪ ರಸಋದ್ಧಿಯೊಳಂ . . . ನೆಜಿಸು (ಕಂದ್ರಪ್ರ. ೦೮-೩೦ ಪ). [ಸಂ.]

ರಸಋಷಿ (ನಾ). ರಸಾನಂದವನ್ನು ಉಂಟುಮಾಡುವ ಋಷಿ ; ಕವಿ : ಪರಮಾನಂದವನ್ನು ನೀಡುವ ದ್ರಷ್ಟಾರ : ಪರೀಷ್ಟರು . . . ತನ್ನ ಪಾಲಿನ ಕರ್ಮಫಲಗಳನ್ನು ಮುಚ್ಚಿದೆ ಮಾಪಿದೆ ಅಡಿ ಮಾಡಿ ಬೋಧಿಸುತ್ತಿದ್ದ ಒಬ್ಬ ರಸಋಷಿಯಾಗಿದ್ದರು (ಪಂಚ. ೬೨ ಕಂಠಾಕ್ಷಕಂಡು) ; ರಸಋಷಿಗೆರಗುವೆವಾದರನ್ನನು ಕರುಣಿಸುತಿಹುದೆನ್ನ ಸೈವ(ಶಾಂತಿ. ೧-೬). [ಸಂ.]

ರಸಂಗೊಳ್ (ಕ್ರಿ). ದ್ರವವನ್ನು ಪಡೆ : ಪುಂಡ್ರೇಕ್ಷುದಂಡಂಗಳಂ ಕಡಿ ಕಡಿದು ಯಂತ್ರಪೀಡನೆಯಿಂ ರಸಂಗೊಳ್ಳ ತೆಜಿಪುಮನಱಿಯೆ ಪೇಳ್ದುಂ (ಶಾಪ್ರ. ೬-೩೬ ಪ). [ರಸ + ಕೊಳ್]

ರಸಂದಿಗೆ (ಕ್ರಿ). ನೀರು ಇಂಗಿ ಹೋಗು ; ಒಣಗು : ಸುಳಿವಾಗುಂಕಿಗಳ ರಸಂದಿಗೆದ ಜಿಹ್ವೆಯ ಬಿರ್ಮಾವಿಗಳುದಿಸಿದ ವದನದ . . . ದಿಗಿದ ಬೆಜಿಗಿನ ಜಿಂತೆಗಾಗರಂ ತಾನಾಗಿ (ಕಬ್ಬ. ೬-೫೨). [ರಸ + ತಗೆ]

ರಸಂಬಡೆ (ಕ್ರಿ). ನವರಸಗಳನ್ನು ಸೃಷ್ಟಿಸು, – ಚಿತ್ರಿಸು : ಸುಗತಿಗರಂ ಸೂಸುವ ಮುದ್ದಳಿಗರಿಂ ರೂಪುರೇಪೆ ರಸಂಬಡಿಪ ವರ್ತನನಾಯಕಿಯರಿಂ (ನಿಚ್ಚ.ಕಿ-೦೦೩ ಪ). [ರಸ + ಪಡೆ]

ರಸಂಬೋಗು (ಕ್ರಿ). ರಸವಿಲ್ಲದಂತಾಗು ; ಒಣಗು : ಹಸಂಬೋದ ಕಬ್ಬಿನಂತೆ ಪೇಡಿಯಪ್ಪರಸನ ಮಾತಿನಂತೆ (ಪಜಾಶತ್ಕ. ೯-೨೬). [ರಸ + ಪೋಗು (< ಪೋ)]

ರಸಕವಳ (ನಾ). ರುಚಿಕರವಾದ ಭೋಜನ ; ಸವಿಯಾದ ಊಟ : ಗುರುಗಳ ಮನೆಯಲ್ಲಿ ಎರಡು ಹೊತ್ತೂ ರಸಕವಳ ಬಿದ್ದುಹೋಗುತ್ತಿತ್ತು (ಕಾಗಿ. ೩೩) : ಪೋಟು ಮಾಡಿದರೆ ರಸಕವಳ ತಪ್ಪದು ನಮಗೆ (ಅಷ್ಟಮ. ೩೨-೦). [ಸಂ. ರಸಕವಲ]

ರಸಕಸಿ, ರಸಕಸೆ, ರಸಕಸಿ, ರಸಗಸಿ (ನಾ). ೧. ತಿಕ್ಕಾಟ : ಮನಸ್ತಾಪ : ಕಾರಾಯಣ ನಿನ್ನ ನಾಮದ ಸ್ಮರಣೆಯ ಸಾರಾಮೃತವೆನ್ನ ನಾಲಿಗ್ಗೆ ಬರಲಿ . . . ರಸಕಸಿ ಇರಲಿ ಹರುಷಿರಲಿ (ಪ್ರಭಂ. ೦-೩೩-೨) ; ಅಸಮಸ್ತ ದೇಹ, ರಸಕಸಿಯು ಬೇಡ, ಹೊಸ ರಸಿಕವೃತ್ತಿ ಬೇಕು (ಸ್ವರ. ೩೩-೦೩) ; ಮಾತುಮಾತಿಗೆ ಸಿಟ್ಟು, ಸೆಡವು, ರಂದಿ, ರಸಕಸಿ (ಹೊಚ್ಚಿ. ೦೧೩). **ರಸಕಸೆ** : ೨. ಜಗಳ ; ಕಲಹ ; ರಸಕಸೆಯನ್ನು ಮಾಡಬೇಡ ಸೂನಾ (ಶಕಲ. ೦೩೭). **ರಸಕಸಿ** : ೨. ಬವಣೆ ಹಾಡಿಗಿ. ಅತ್ತೀ ಜೋಡಿ ರಸಕಸಿ ಮಾಡತೀಯಂತಲ್ಲಾ (ಡಂಕತಾಮ. ೦೩೯). **ರಸಗಸಿ** : ೨. ಹೀಂಗ ಮಾತಮಾತಿಗೆ ರಸಗಸಿ ಮಾಡೋದೊಂದು ಕಟ್ಟಬಾಳೀನ ಅದ ಅಕ್ಕಂಗೆ (ಜಾಂಜಾಹು. ೪). [← ಮರಾ. ರಸಕಶ್, ರಸಭಸ್]

ರಸಕಸೆ 'ರಸಕಸಿ' ನೋ.

ರಸಕಾವ್ಯ (ನಾ). ನವರಸಭರಿತವಾದ ಕಾವ್ಯ : ಭರತಂ ಮಹಾಕ್ಕನೆಸಲನು . . . ರಸಕಾವ್ಯ ಸತ್ಕಥಾಭ್ಯಾಸದಧ್ಯಾತ್ಮದಲಿ (ಕ್ರಿಅಾಮಹ. ೫೬-೬೧). [ಸಂ.]

ರಸಕೂಪ (ನಾ). ಪಾದರಸದ ಬಾವಿ : ಇದು ಚಿತ್ರಂ ರಸಕೂಪದೊಳ್ ಜದೆಪಿನಿಂದಾಂ ಬಂದು ಪೊಕ್ಕೆರ್ದೆಕ್ಕ . . . ಪಿಂಗೊಂದಾವತ್ತು ವೆತ್ತೆರ್ದೆಕ್ಕ (ಕಂಅತ್ತಿ. ೪-೪೦). [ಸಂ.]

ರಸಗಸಿ 'ರಸಕಸಿ' ನೋ.

ರಸಗಂದಾಯ (ನಾ). ರುಚಿಕರವಾದ ಪದಾರ್ಥಗಳ ಮೂಲಕ ಕೊಡುವ ಕಂದಾಯ; ತೆರಿಗೆ: ದಾಳಿಂಬವಲಸಿಮ್ಮಾವರನೇಜಿಲ್ ಮೊದಲಾದ ಫಲ ಕುಸುಂಗಳಂ ಸೊಬಗುಗೊಡೆದ ಸುರಪಂ ಕೈಗೆಯ್ದು ಕಾಮಧೇನು ಕಲ್ಪವೃಕ್ಷಂಗಳೆತ್ತ ಪಾಲ್ದುಪ್ಪ ಸಕ್ಕರೆಗಳ್ ಮೊದಲಾದ ರಸಗಂದಾಯಂಗಳಂ . . . ಉದ್ದಾಹ ಮಂದಿರಂ ಮೆಜ್ದುದು (ಜಾಂಶಾಕ್ಕ. ೦-೬-೫೬ ಪ). [ರಸ + ಕಂದಾಯ]

ರಸಗತಜ್ವರ (ನಾ). ದೇಹದ ದ್ರವರೂಪವಾದ ಧಾತುವಿನಲ್ಲಿ ಸೇರುವ ಜ್ವರ : ಬಹಳ ಮಾತ ಕ್ಷೀಣ ಉಂಟಾಗಿ, ಮೈಯಲ್ಲಿ ಭಾರ ಕಾಣಿಸಿ ದೇಹದಲ್ಲಿ ಉರಿದೋರಿ, ದೈನ್ಯವಾದ ಮಾತುಗಳುಂಟಾಗಿ, ಆಕಳಿಸುತ್ತ, ಭಾಯಿಯಲ್ಲಿ ಅರೋಚಕ ಪಟ್ಟಿ, ಭ್ರಾಂತಿಯಾಗುತ್ತ, ದಾಹ ವುಂಟಾಗಿರುವುದೇ ರಸಗತಜ್ವರವೆನಿಸಿಕೊಂಬುದು (ಪಥ್ಯ. ೧೯). [ಸಂ.]

ರಸಗತ್ತಲೆ 'ರಸೆಗತ್ತಲೆ' ನೋ.

ರಸಗಬ್ಬ (ನಾ). = ರಸಕಾವ್ಯ : ಇಂಚರದಿ ಸಂಗೀತರಸದಲಿ ಮಿಂಚು ಕವಿಗಳ ಪಲವು ರಸಗಬ್ಬವನು ಗಮಕದಲಿ ಉಂಚದಲಿ ಮೆಜ್ದೋದಿ (ಶಾಳ್ಳಾ. ೩೨-೨೯); 'ಶಾಲೂರ ಚಿಲುವೆ' . . . ಪೋಲೀಸರು ಲಂಚಗುಳಿ ತನದಿಂದೆ ಮಾಡುವ ಅನ್ಯಾಯ ಇತ್ಯಾದಿಗಳನ್ನು ರಮ್ಯವಾಗಿ ಚಿತ್ರಿಸುವ ರಸಗಬ್ಬ (ಇಂಎಸ. ೦೦ ಪಗ). [ರಸ + ಕಬ್ಬ]

ರಸಗರ್ಭ (ನಾ). ೧. ಕಾಡಿಗೆ ; ರಸಾಂಜನ : "ದಾರ್ವಿಕಾ. ಕ್ವಾಥೋದ್ಭವಂ ತುತ್ಥಂ, ರಸಾಂಜನಂ ರಸಗರ್ಭಂ, ತಾರ್ಕ್ಷ್ಯಶೈಲಂ – ೬ ರಸಾಂಜನದ ಹೆಸರುಗಳು" (ಶಿಶಾ.೨೬-೩೦೩). ೨. ಕೇಸರಿಬಣ್ಣದ ಪುಡಿ; ಸಿಂದೂರ. [ಸಂ.]

ರಸಗವಳ (ನಾ). = ರಸಕವಳ : ಶೃಂಗಾರ ಕರುಣ ವೀರರಸಗಳ ಸಂದರ್ಭೋಚಿತವಾಗಿ ಒಳಿ ರಸಿಕರಿಗೆ ರಸಗವಳವಾಗಿದೆ (ಇಂಎಸ.೦೦ ಪಗಳ). [< ರಸಕವಳ]

ರಸಗಸಿ 'ರಸಕಸಿ' ನೋ.

ರಸಗೀತ (ನಾ). ರಸಭರಿತವಾದ ಹಾಡು ; ಇಂಪಾದ ಗೀತೆ : ರಸಗೀತಕ್ಕೆಡೆಗೊಟ್ಟು ತಿಳಿಲಯದೊಳ್ ನೆರ್ಪಟ್ಟು . . . ಬಾಜಿಸುತ್ತುಂ (ಪುಲ್ಲಿ. ೦೨-೭೭). [ಸಂ.]

ರಸಗುಂಡು (ನಾ). ಪಾದರಸವನ್ನು ಬಳೆದು, ಹೊಳೆಯುವ ಬಣ್ಣಬಣ್ಣದ ಗೋಳಾಕಾರದ ಗಾಜಿನ ಗುಂಡು ; ಗುಳಾಪು : ಮಂದುಮೆಯ ಚಪ್ಪರಕ್ಕೆ ರಸಗುಂಡುಗಳನ್ನು ಕಟ್ಟಿ ಚೆನ್ನಾಗಿ ಅಲಂಕರಿಸಿದ್ದರು (ರಾಷ). [ರಸ + ಗುಂಡು]

ರಸಗುಲ್ಲ 'ರಸಗುಲ್ಲಾ' ನೋ.

ರಸಗುಲ್ಲಾ, ರಸಗುಲ್ಲ (ನಾ). ಹಾಲನ್ನು ಒಡೆಸಿ ಅದರ ಗರಣಿಯಿಂದ ಮಾಡುವ ಒಂದು ಬಗೆಯ ಸಿಹಿತಿಂಡಿ : ಕಲಕತ್ತೆಯಿಂದ ಒಂದು ಪಾತ್ರೆಯಲ್ಲಿ ಉತ್ತಮ ರಸಗುಲ್ಲಾ ತಂದಿದ್ದೆ (ಕ್ರೀಡಾಂತ. ೩೩); ಜನಪ್ರಿಯವಾದ ಮಿಠಾಯಿಯೆಂದರೆ 'ರಸಗುಲ್ಲಾ'. ಅದನ್ನು ಮೊದಲು ತಯಾರಿಸಿದವಳು ಒಬ್ಬ ಸೂಳೆಯಂತೆ (ಆತ್ಮಚ. ೦). ರಸಗುಲ್ಲ : ರಸಗುಲ್ಲ, ಮಸಾಲೆದೋಸೆ ಮಾಡಿದ್ದೀನಿ (ಮಿಡಿ).

[← ಹಿಂ. ರಸಗುಲ್ಲಾ; ಪುರಾ. ರಸಗುಲ್ಲಾ, ರಸಗೋಲ್ಲಾ]

ರಸಗೆಡು (ಕ್ರಿ). ಸಾರವಿಲ್ಲದಾಗು ; ನಿಸ್ಸತ್ತ್ವವಾಗು : ರಸಗೆಟ್ಟು ಹೋದ ವನಿತೆಯ ಹೊಸಪಾತ ಪಶುವಿನಾದತ್ತೆ (ಸರಸ್ವ. ೦೬೯).

[ರಸ + ಕೆಡು,]

ರಸಗೆಯಿ, ರಸಗೈ (ಕ್ರಿ). ೧. ದ್ರವವನ್ನಾಗಿ ಮಾಡು; ಕರಗಿಸು : ಕುಂದಣವನು ರಸಗೆಯ್ದೊಡಾಕ್ಷಣ ಕರುವಿಂದ ಬೇರ್ಪಡಿಸಿ ಪೃತ್ಯಯ ತಂದಡರ್ಚಿದರು (ಕೋಕಶ. ೨೬-೩೪). ರಸಗೈ : ೨. ಸತ್ತ್ವವಳ್ಳುದನ್ನಾಗಿ ಮಾಡು : ಬಗೆಬಗೆಯಾಟಿಕೆಗಳನು ಮಣ್ಣಿಳು ಮಾರದೊಳು ತಂದೆ ನಿರ್ಮಿಸುವರು ಕವನು ರಕ್ಷಿಸ್ಪವರು (ಜಾಕಾಚ. ೦೦-೭೭).

[ರಸ + ಕೆಯ್,]

ರಸಗೇಯ (ನಾ). = ರಸಗೀತ: ರಸಗೇಯಂ ಪರಿವೆರ್ಚಿದೀಕೆ ವಿತತಾ ತೋದ್ಯಸ್ವನಂ ಸೂಸದೀಕೆ (ಜೂಲ್ಲ. ೯-೧); ರಸಗೇಯಂ ಧಾವನ್ಮತ್ಯಂ ಪಡೆಯೆ (ಜಾಕ್ಷರಿ. ೩-೧೦೦). [ಸಂ.]

ರಸಗೈ 'ರಸಗೆಯಿ' ನೋ.

ರಸಗೋಲ್ (ನಾ). ಸಿಹಿಯಾದ ದ್ರವವನ್ನುಳ್ಳುದು; ಕಬ್ಬು: ಕುಸುಮಾಸ್ತ್ರನೊಂದು ಕಬ್ಬಿನ ಬಿಲ್ಲಿನಂ ಲೋಕವಿಸರಮಂ ಕೊಂದು ತೊಂತರಿಪನು . . . ರಸಗೋಲ್ಗಳಿನ್ನು ವೆಗ್ಗಳಮಿರಲು ಮಾರ ಗರ್ವಿಸಲಿಂತು ಮಾಳ್ಪೆನೊ (ಪಜಿತೀ. ೯-೨೪). [ರಸ + ಕೋಲ್,]

ರಸಗ್ರಹಣ (ನಾ). ಕಾವ್ಯ, ನೃತ್ಯ ಮೊದಲಾದ ಕಲೆಗಳ ಸ್ವಾರಸ್ಯವನ್ನು ಗ್ರಹಿಸುವಿಕೆ : ಅರ್ಥವನ್ನು ವಿವರವಿವರವಾಗಿ ತಿಳಿದುಕೊಂಡು ರಸಗ್ರಹಣ ಮಾಡುವವಂಗೆ ಇಂಥ ಕವನಗಳನ್ನು ಓದಿದಾಗ ಒಮ್ಮೆಲೆ ಅರ್ಥವಾಗುವುದಿಲ್ಲ (ಪದ್ಮಣ. ೪೩). [ಸಂ.]

ರಸಗಳಿಗೆ (ನಾ). ಅತ್ಯಂತ ಆನಂದದ ಕಾಲ ; ಸಂತೋಷದ ಗಳಿಗೆ : ಮಕ್ಕಳ ಹಿಂದೆ ಬಹುದುಕರೂ ಹೊರಡುವ ರಸಗಳಿಗೆ ಅದು (ಸಣತೀ. ೩, ೬೦೬). [ರಸ + ಗಳಿಗೆ, (< ಗಳಿಗೆ)]

ರಸಗುಟಿಕೆ (ನಾ). ಪಾದರಸದಿಂದ ಮಾಡಿದ ಗುಳಿಗೆ. — ಮಾತ್ರೆ: ಮಂತ್ರ ತಂತ್ರ ಯಂತ್ರ ಬೇಳಂವೆ ತಿಲಕ ತಿಗುರು ರಸಗು[ಳಿ]ಟಿಕೆ . . . ಮೊಕಕ್ಕೆಂಬ ಕುವಿದ್ಯದಿಂ ಗೆಲುವೆನು (ಕ್ಷತ್ರ. ೩, ೩೩೬).

[ಸಂ. ರಸಗುಟಿಕಾ]

ರಸಚಿತ್ರ (ನಾ). ೧. ದ್ರವರೂಪವಾದ ಬಣ್ಣಗಳಿಂದ ಬರೆದ ಚಿತ್ರ: ಚಕ್ರಚಿತ್ರಾರ್ಧಚಿತ್ರಾಭಾಸವೆಂಬ ಮೂಱುಂ ಪ್ರಕಾರಮುಮಾಂ ರಸಚಿತ್ರ ಧೂಳೀಚಿತ್ರದೋಡೆಯುಮಂ . . . ಪರಿಭಾವಿಸು ನೋಡಿ (ಕಬ್ಬಿಪ್ರ. ೩-೮೨) ; ಸಡಿವಂತೆ ಸುಡುವ ಪೃಥ್ವಿಕೆ ಮಿಡುಕುವ ರಸಚಿತ್ರವೆಸೆವ ಪೆಣ್ಣಂ ದೊಳ್ಪಂ ಪಡೆದಳ್. (ಜಂದ್ರಪ್ರ. ೩-೨೩೬); ರಸಚಿತ್ರಂ ರತ್ನಭೂಷಾವಳಿ ಮೃದು ವಾಸಶ್ರೇಣಿ ಮುಕ್ತಾತಪತ್ರಪ್ರಸರಂ (ಜಾಹರಿ. ೯-೪೦). ೨. ಕಾವ್ಯದಲ್ಲಿ ಆನಂದವನ್ನುಂಟುಮಾಡುವ ಸನ್ನಿವೇಶ ; ಸ್ವಾರಸ್ಯಕರವಾದ ಪ್ರಸಂಗ. [ಸಂ.]

ರಸಜ (ನಾ). ೧. ಸಕ್ಕರೆ. ೨. ಕಾಕಂಬಿ. ೩. ರಕ್ತ. [ಸಂ.]

ರಸಜೀವನ (ನಾ). ಸಾರವತ್ತಾದ ಬಾಳು ; ಸೊಗಸಾದ ಜೀವನ : ರಸಜೀವನಕೆ ವಿಗಿರ್ ತಪಮಿಹುದೆ? (ಕ್ರೀಡಾಚ. ೩೨-೦೩೬). [ಸಂ.]

ರಸಜ್ಞ (ನಾ). ೧. ಸ್ವಾರಸ್ಯವನ್ನು ಬಲ್ಲವನು : ಭೋಗಂಗಳೆ . . . ಮನೋರಾಗಮನೊದವಿಸದುವು ಹೃದ್ಯೋಗಮನೊದವಿಸೆ ರಸಜ್ಞ ನಿಸುಧವಿಸುಗುಮೇ (ಆಪ್ತ. ೬-೭೦); ಶ್ರೀಮದುಮಾಮಧುರಾಧರಸೋನು ಕಂಠಾರಸಸಜ್ಞ ರಸನಂ (ಜಾಹರಿ. ೯-೦). ೨. ಶೃಂಗಾರ, ಹಾಸ್ಯ ಮೊದಲಾದ ಕಾವ್ಯರಸಗಳನ್ನು ಬಲ್ಲವನು: ಒದವಿರ್ದ ಚಿತ್ರದಿಂ ತೋರ್ಪುದು ಭಾವಂ ಭಾವದಿಂದೆ ರಸಮುದಯಿಸುಗುಂ ವದನಮುದಂ ಪ್ರಕಟಿಪುದಾ ವದನದೆ ರಸಮಿಂತಿದೆಂದು ತಿಳಿಗೆ ರಸಜ್ಞರ್ (ರಸ. ೦-೬). ೩. ರಸವಿದ್ಯೆಗಳನ್ನು ಬಲ್ಲವನು ; ರಸವಾದಿ. [ಸಂ.]

ರಸಜ್ಞತೆ (ನಾ). ೧. ರಸಾನುಭವವನ್ನು ತಿಳಿಯುವ ಶಕ್ತಿ; ಆನಂದವನ್ನು ಅರಿಯುವ ಚೈತನ್ಯ. ೨. ಕಾವ್ಯಶಕ್ತಿ. ೩. ರಸವಾದಜ್ಞಾನ. ೪. ರುಚಿಭೇದಜ್ಞಾನ. ೫. ತಾರತಮ್ಯಜ್ಞಾನ. [ಸಂ. ರಸಜ್ಞತಾ]

ರಸಜ್ಞಾನಿ (ನಾ). ರಸವಿದ್ಯೆಯನ್ನು ಬಲ್ಲವನು ; ರಸವಾದಿ: ಇನಸುತ್ತ ರಾಯಣದೊಳನುದಿನಂ ರಸಜ್ಞಾನಿ ನೀರನೊಸವಂತೊಸದಂ (ಜಾಂತಿ. ೦೦-೭೬). [ಸಂ. ರಸಜ್ಞಾನಿನ್]

ರಸಜ್ಞೆ (ನಾ). ೧. ರಸಗಳನ್ನು ಅರಿಯುವ ೫ನೆಯ ಇಂದ್ರಿಯ ; ನಾಲಗೆ: "ರಸಜ್ಞಾ, ರಸನಾ, ಜಿಹ್ವಾ—ಈ ೩ ನಾಲಗೆ" (ಶಬ್ದಮ. ೪೬-೪೬೭). ೨. ರಸನನ್ನು ಬಲ್ಲವಳು ; ರಸಿಕಳು. [ಸಂ. ರಸಜ್ಞಾ]

ರಸತಂತ್ರ(ನಾ). ತೀಳುಲೋಹಗಳನ್ನು ಚಿನ್ನವಾಗಿಸುವ ಕಲೆ; ರಸವಿದ್ಯೆ : ಮಾಟದುಂತ್ರವಿದ್ಯೆಯು ಒಂದು ಭಾಗ ರಸತಂತ್ರ (ಕ್ರಮಾಶ. ೨,೨೫೯). [ಸಂ.]

ರಸತಪಸ್ಕ (ನಾ). ರಸಾನುಭವಕ್ಕಾಗಿ ಮುಡಿಪಿಟ್ಟ ತಪಸ್ಸು : ಮಂಡಿಯೂಗಿರಲಿ ಬಾಳ್ಕೆ, ಜಯಿಸುಗೆ ರಸತಪಸ್ಕೆ ; ದೂರಕೊಳ್ಗುಗೆ ಚಿರಶಾಂತಿ (ಕ್ರೀಡಾಸಾ. ೩-೦೩೯) [ಸಂ. ರಸತಪಸ್ಕಾ]

ರಸತವರ (ನಾ). ಪಾದರಸ : (ದರ್ಪಣದ ಗಾಜಿಗೆ) ರಸತವರವನ್ನು ಲೇಪಿಸು (Quicksilver. ೨೦೪೭). [ರಸ + ತವರ]

ರಸತ್ಕಾರುಗ ? (ನಾ). (?) : ತೊತ್ತಬದುಬೀವ ಮದೇಭಂಗಳುಮಂ ಮದೇಭಂಗಳನಾದುರ್ ಬಿಟ್ಟಿಕ್ಕುವ ನಿಜಾದಿಗ[ಳಬೀ]ಯೆ ಪೇರಜಿವಿಡಿದು ಕೊರಲ ಬಳಿಗಳೊಳ್ ಹುಲ್ಗೂದು ವರಿಯಿಸುವ ರಸತ್ಕಾರುಗರುಮಂ[ಪಜಿತೀ. ವರಿಯಿಸುವವರಸತ್ಕಾರು ಗುರುಮಂ, ವರಿಯಿಸುವಾರರಸತ್ಕಾರು ಗುರುವಾಂ] ಆ ರಸತ್ಕಾರುಗರಿತುವಿಟ್ಟಿಯ ಪಿಡಿಕತ್ತಿನ ಕಕ್ಕಡಿಯ ಕೋಳ್ಗಿಮರಪಟಲಂ ಪಾಯ್ದು ಕೆದೆಂ (ಪಂಪಭಾ. ೮೩-೬೦ ಪ) ; " ರಸತ್ಕಾರುಗರುದಾಂ — ಆನೆಯ ಮೇಲೆ ಕುಳಿತು ಯುದ್ಧಮಾಡುವವರನ್ನು (?)" (ಪಜಿತೀ. ೧೩೭).

[?]

ರಸತ್ವ (ನಾ). ರಸಾನುಭವವುಂಟಾಗುವ ಅವಸ್ಥೆ : ಭಾವ ರಸತ್ವಕ್ಕೆ ಏರುವುದು ಎಂದರೆ ಪ್ರಾಣಮಯ ಮನೋಮಯಕ್ಕೇರುವುದು ಎಂದು ಅರ್ಥ (ಶ್ರೀಅಪ. ೦೯). [ಸಂ.]

ರಸದಂಬುಲ (ನಾ). ರಸಭರಿತವಾದ ತಾಂಬೂಲ: ಪೊಳೆವ ಕಂಬಳ್ಗಿಗೆ ರಸದಂಬುಲವ ಮೆಲ್ಲಗೆ ಸಾಜ್ (ಕೋಕಶ. ೬೬-೪೯); ಸಿಂದಾಧರದ ಸವಿಯ ತೋಜಿ ನೆಜೆ ರಸದಂಬುಲಗುಟಿಕೆತ್ತ ಕೊಡೊ (ಗೊಪಲ. ೯-೦೭೯).

[ರಸ + ತಂಬುಲ]

ರಸದರ್ಶನ (ನಾ). ರಸವನ್ನು ಕಾಣುವುದು. — ಅರಿಯುವುದು: ವಪನಪೋನ್ಮೇಷತಂ ನಿತ್ಯಚನೊತನಂ ರಸದರ್ಶನಾಸ್ವಾದನಂಗೈವ ಸಹಜಕವಿ (ಕ್ರೀಡಾಸಾ. ೩೩-೦೦೦). [ಸಂ.]

ರಸದಾಡಿಮ (ನಾ). ಸಾರವತ್ತಾದ ದಾಳಿಂಬೆ : ರಸದಾಡಿಮದ ಬಿತ್ತುಮಂ ಪೊಸಮುತ್ತುಮಂ ಮುಕ್ಕುಳಿಪಿದಂತಪ್ಪ ವಿಬುಧವನಿಜವನಕಳಹಂಸದಂತಪಂಕ್ತಿಗಳಮ್ಯತಕರಣನ ಕಾಂತಿಗಳಿನಿಸುವಂತಾದುವು (ಪಂಪಭಾ. ೨-೪೯ ಪ). [ಸಂ.]

ರಸದಾನ (ನಾ). ೧. ದ್ರವವನ್ನು ಕೊಡುವಿಕೆ : (ಆ). ೨. ವಿಷಹಾಕುವುದು; ವಿಷವ್ಯಯೋಗ : ಪುರುಷಮಂ ಸಮಕಟ್ಟುವಮಪ್ಪುಡೆ ಪೊಕ್ಕಿಲ್ ಯಲುಣ್ಮುವರಿಲ್ಲ ರಸದಾನಾದಿಗಳೊಳ್ ಛಿದ್ರಿಸುವಮನ್ಪೊಡವರಾಪ್ತವಂತರುಂ ಬುದ್ಧಿವಂತರುಮಾಗಿ ನೆಗಬ್ದರ್ (ಪಂಚಾ. ೬-೬೭ ಪ). ೩. ಆನಂದವನ್ನು ನೀಡುವುದು ; ರಸಾನುಭವವನ್ನು ಕೊಡುವುದು : ಕಮ್ಮಿಪ್ಪಿಮ ಈ ಸ್ನಾನ. ಈ ಪಾನ 'ಪಟ್ಟಕಾರಿ'ಯು ರಸದಾನವಾಗಿದೆ (ಪಾಪಚ. ೦೦೦).

[ಸಂ.]

ರಸದಾಳಿ, ರಸದಾಳೆ, ರಸ್ತಾಳಿ (ನಾ). ೧. ಒಂದು ಬಗೆಯ ಶ್ರೇಷ್ಠ ಜಾತಿಯ ಕಬ್ಬು : ರಸವತ್ತಾದ ಕಬ್ಬು : ರಸದಾಳಿ ದಾಳಿಂಬಂಗಳಂ ತವೆ ಬಾಲದಿಂದಲಿ ಕಿತ್ತೊರಸಿ ಹುಡಿಹುಡಿ ಮಾಡಿದನು ಹನುಮ (ಶಾಂತಾ. ೦೦-೩೦); ರಸದಾಳಿಯಂತೆ ರಮಣಿಯುಂ ಜೆಂದುಬೆಯುಂತೆ . . . ಅತಿರುಚಿಯು ಪಡೆದುದತಿರಸಿಕನತಿನಿಪುಣ ಮುಂಗರಸನೊಪ್ಪುವ ವಾಕ್ಯಗುಂಫನಂ ಭಾವಿಸಿದೊಡೆ (ಪಾಪು. ೧-೦೦) ; ಕಬ್ಬಿನ ಜಾತಿಗಳಲ್ಲಿ – ರಸದಾಳಿ. ರಾಮಗಬ್ಬು. ಕರಿಗಬ್ಬು . . . ಎಂದು ಅನೇಕವುಂಟು (ಪಜಿಂಅಂ. ೩-೨೦೦). ೨. ಒಂಮ ಬಗೆಯ ಶ್ರೇಷ್ಠ ಜಾತಿಯ ಬಾಳೆ : ನಂಜನಗೂಡಿನಲ್ಲಿ ರಸದಾಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ (ಪಜಿ). **ರಸದಾಳೆ** : ೧. 'ರಸದಾಳೆಕಬ್ಬು' ಪರಾ. **ರಸ್ತಾಳಿ** : ೧. ಮಾಳೆ ರಸ್ತಾಳಿ ದಾಳಿಂಬಂ ಮೊದಲಾದ ಫಲತರುಗಳಂ . . . ಬೆಳಗುವ ಧರ್ಮತೋಟಂ (ಜಾಪು. ೩೫).

[ದೇ.ತ ತೆಲು. ರಸದಾಳಿ, ರಸದಾಡಿ]

ರಸದಾಳಿಂಬ (ನಾ). = ರಸದಾಡಿಮ : ರಸದಾಳಿಂಬದ ಬೀಜಮುಂ ಕರ್ಪು ಕಲಾ ಸಾರಂ ಕರಂ ಸ್ಪರ್ಶದೊಳ್ ಬಿಸಿಯಲ್ (ಅಧ್ಯಪ. ೯-೩೬); ಫಲಭರದ ರಸದಾಳಿಂಬ ವಿಜೃಂಭಾಮ್ಬು . . . ಮಧೂಕತರುನಿಕುರುಂಬಕದ ಸುರನಂದನ (ಕಪಪಂ. ೦-೩-೧೦). [ರಸ + ದಾಳಿಂಬ]

ರಸದಾಳಿಕಬ್ಬು 'ರಸದಾಳಿಗರ್ವ' ನೋ.

ರಸದಾಳಿಗಬ್ಬು 'ರಸದಾಳಿಗರ್ವ' ನೋ.

ರಸದಾ ಗರ್ವ. ರಸದಾಳಿಕಬ್ಬು. ರಸದಾಳಿಗಬ್ಬು. ರಸದಾಳಿಕಬ್ಬು (ನಾ).=ರಸದಾಳಿ ೧ : ಇಕ್ಕೆಲದೊಳು ಕೊರ್ವಿ ನೆಗನಲಿಸಿ ಪೀಳ್ದು ಜೆಕೆ ಬೆಳೆದ ರಸದಾಳಿಗರ್ವಗಳ್ (ಕೃಪುಚಂ. ೩-೩). **ರಸದಾಳಿಕಬ್ಬು** : ರಸದಾಳಿಕಬ್ಬಿನೊಳು ಹಿಂಡುಮುಂಡನೆ ತೆಗದು ಮಿಸುಪ ಮರಗಬ್ಬಿ ಕರಿಯ ಮರಗಬ್ಬಿನೊಳೊಸರ್ವ ರಸಮುಂ ಹೀಲು (ಸಚಪಾ. ೨-೩೦) ; ರಸದಾಳಿ [ಜಾಜಾಂ. ೪]ಕಬ್ಬು ಮೆಲಲೆಂದು ಹೋದರೆ ವಿಷವಾಗಿ ತೋಯಿತಿದೆ ಪ್ರಾರಬ್ಧ ಬಲದಿಂದ (ಕೃಚಂದ. ೨-೨೬-೬). **ರಸದಾಳಿಗಬ್ಬು** : ಚೆಂದಂಗಿನೆಳ ಗಾಹೊಡೆದು ರೆಳೋರೆನೆಪುಸರ್ವ ಪೊನಲಿ ಕದುಮೆಳೆದ ರಸದಾಳಿಗಬ್ಬುಗಳು (ಜಾಕೃಚಾ. ೦-೩೦) ; ರಸದಾಳಿಗಬ್ಬಿನ ರಸದೊಳಾ ನೃಪತಿ ವಿಸಾಜಿಸುವಂದ ಮೆಱೆಸುವಂತಿ ಜನನಾ (ಪಪಚ. ೦೬-೬೩). **ರಸದಾಳಿಕಬ್ಬು** : ಆಲಜ ಪೀಳು ಎಲಚಿ ಚಿಗುರು . . . ರಸದಾಳಿಕಬ್ಬು. ಇವೈಹೂವು ಇವುಗಳ ಕಷಾಯವಿಕ್ಕಿ ಸಕ್ಕರೆಗೂಡಿ ಸೇವಿಪೆ ದೀಪ್ತಜ್ವರ ಗುಣಮಕ್ಕುಂ (ಪಪ್ಯ. ೬೩).

[ರಸದಾಳಿ + ಕರ್ಬ್]

ರಸದಾಳಿವಿಲ್ಲ (ನಾ). ರಸದಾಳಿಯ ಕಬ್ಬಿನ ಬಿಲ್ಲನ್ನು ಹಿಡಿದಿರುವವನು : ಮನ್ಮಥ : ನಲ್ಲ ಕೊ ನಾಗರೀಕನೆ ಕೊಳ್ಳೊ ರಸದಾಳಿವಿಲ್ಲನ ರೂಪ ಕೊಳ್ಳಲಪ್ಪೋ (ಪಚಪಪ. ೦೬-೧೬). [ರಸದಾಳಿವಿಲ್ಲು + —ಅ]

ರಸದಾಳಿವಿಲ್ಲು (ನಾ). ಮನ್ಮಥನ ಕಬ್ಬಿನ ಬಿಲ್ಲು : ಕವಿವರಂ ತೆಗೆದು ಸಮ್ಮೋದದಿಂದೆಸುವ ರಸದಾಳಿವಿಲ್ಲೋ ಎಲ್ಲಾಗಳರೆಪೆಜೆಂಜೊಗವಮದು (ಪಪ್ಯಾ. ೬-೬೬). [ರಸದಾಳಿ + ಬಿಲ್ಲು (<ಬಿಲ್)]

ರಸದಾಳೆ 'ರಸದಾಳಿ' ನೋ.

ರಸದಾಳೆಕಬ್ಬು 'ರಸದಾಳಿಗರ್ವ' ನೋ.

ರಸದು, ರಸ್ತು (ನಾ). ಸೈನ್ಯಕ್ಕೆ ಸರಬರಾಜುಮಾಡುವ ಆಹಾರಧಾನ್ಯ : ಯರತು ಕೋಟೆಗೆ ಇರುವ ರಸದು ತೆಗೆದುಕೊಂಡು ಹೊರಟು ಬಂದು ರಸ್ತು ಸಾಮಾನು 'ಸಾಗಿಸಿಕೊಂಡು (ಪಚಿಂದ್ರ. ೨೩). **ರಸ್ತು** : ರಾಜೇಶ್ವರ ದೊರಗಳ ರಸ್ತಿನ ಹುಣಸನುಯಿತ್ತಿ (ಎಕೆ. XI. ಪಿಳಿಗಾ. ೨೬-೩೭ ; ೧೬೮) ; ಜಕೀರಿ ರಸ್ತು ಮುಸ್ಲೈದೆಗಳೂಳಪೊಗದಂತು ಕಂಡಿಕೆಗಡಿ ಪಥಂಗಳಂ ಕಟ್ಟಿ (ಕಳಿಕೃ. ೩-೨೪). [←ಪಾರ. ಹಿಂ. ಮರಾ. ರಸದ್]

ರಸದುಂಬು (ಕ್ರಿ). ರಸಭರಿತವಾಗಿರು : ಅವಳ ರಸದುಂಬಿದ ಚೆಂದುಟಿಗಳಿಗೆ ನಸ್ಸ ಒರಟುತುಟಿಗಳನ್ನು ತಗಲಿಸಿದೆ (ಪಾಪಚ. ೦೦೩). [ರಸ + ತುಂಬು]

ರಸದೃಷ್ಟಿ (ನಾ). ಕವಿಯ ಸ್ವಾರಸ್ಯವಾದ ರೀತಿ.– ದೃಷ್ಟಿ : ಕೆಲ ಅಧ್ಯಾತ್ಮಿಕ ಸತ್ಯಗಳನ್ನು ರಸನೇತ್ರದಿಂದ ಸೂಚಿಸುವ ವ್ಯಂಜಕತೆ (ಪಕೃಗಾ. ೦೦೭). [ಸಂ.]

ರಸದೋಷ (ನಾ). ೧. ಹೊಟ್ಟೆಯಲ್ಲಿ ನೀರು ತುಂಬಿಕೊಳ್ಳುವ ಒಂದು ಬಗೆಯ ರೋಗ : ಪದನಜ್ದು ಮುನ್ನ ಹೇದುಂತವ ಪಿಂಡಮನಿಕ್ಕಿ ಗರ್ದಗನಕ್ಕುಗೆ ಬಟ್ಟಿಯುಂ ತ್ರಿದಿನಂ ತಾಂ ಲೇಪಂಗೆಯ್ದುಡಾಬ್ಬಿಯಿದೆ ಕಿಡುಗುಮನಿತಱೊಳ್ ರಾದೋಷಂ (ಪಕೃಗಾ. ೦೬-೪೯). ೨. [ಕಾವ್ಯಮೀ] ಕಾವ್ಯದೋಷಗಳಲ್ಲಿ ಒಂದು ; ರಸವಲ್ಲಿ ಉಂಟಾಗುವ ದೋಷ : 'ದೋಷ' ಗಳನ್ನು (೧) ಪದದೋಷ, (೨) ಅರ್ಥದೋಷ, (೩) ರಸ ದೋಷ ಎಂದು ಮೂರು ಭಾಗ ಮಾಡಬಹುದು (ಕೃಚಿ. ೨೩೬). [ಸಂ.]

ರಸದ್ರವ್ಯ (ನಾ). ರುಚಿಕರವಾದ ಪದಾರ್ಥ : ಸಹಪಂಕ್ತಿಯಲ್ಲಿ . . . ರಸದ್ರವ್ಯವ ಎಸಂದಿಂ ಇಕ್ಕಿದಡೆ (ಪಪ. I. ೧೩೦-೫೦) ; ಪರ ಸುಹಸ್ತದಿ ಪಾಕಗ್ಯೆದ ರಸದ್ರವ್ಯಮಂ ಏರುತನಾಂ ನಿತ್ಯ ಭುಂಜಿಪೆ (ಪಪಮೀ. ೬-೭೯). [ಸಂ.]

ರಸಧರ್ಮ (ನಾ). ರಸಾನುಭವವನ್ನು ಉಂಟುಮಾಡುವ ಗುಣ : ಇದನ್ನು ಮಮ್ಮಟ ಮುಂತಾದ ಸಜೀನಾಲಂಕಾರಿಕರು ಗ್ರಹಿಸಿ ಗುಣಗಳು 'ರಸಧರ್ಮ' ಗಳೆಂದು ನಿಷ್ಕರ್ಷಿಸಿದ್ದಾರೆ (ಕೃಚಿ. ೦೬೩). [ಸಂ.]

ರಸಧಾತು (ನಾ). ೧. ಪಾದರಸ ; ಪಾರಜ. ೨. ದೇಹವಲ್ಲಿರುವ ಸಪ್ತ ಧಾತುಗಳಲ್ಲೊಂದು : ಧಾತುಗಳು ರಸಧಾತು. ರಕ್ತಧಾತು. ಮಾಂಸ ಧಾತು . . . ಎಂದು ಏಳು ತರನಾಗಿವೆ (ಪಪಕೃ. ೧೬). [ಸಂ.]

ರಸಧಾನ್ಯ (ನಾ). ದ್ರಾಪಾಂಶವಿರುವ ಎಳ್ಳು, ಕಡಲೆಕಾಯಿಬೀಜ ಮುಂತಾದುವು : ಬಿದ್ದುಗದ ಮೂಗಳದ ಹೊಲದಲಿ ಹುಟ್ಟಿದಂತ್ತಾ ರಸಧಾನ್ಯ ಜೋಳ ನೆಲು ಮುಂತಾದ ಧಾನ್ಯ (ಸಿಶಪ. IX-ii, ೬೮೦-೦೯; ೧೬೮). [ಸಂ.]

ರಸಧಾರೆ (ನಾ). (ಹನ್ನೆರಲ್ಲಿರುವ) ದ್ರಜದ ಧಾರೆ : ತನವಣ್ಣಂ . . . ಚಿಂಚುಪುಟದಿಂದಂ ಪೆಂಪ್ಪಿಸಂ ಸೀಳ್ದು ಸೀಯೆಸೆ ಸೋರ್ವಾ ರಸಧಾರೆಯುಂ ಸವಿದು (ಕಪಪಂ. ೨-೨೪). [ಸಂ. ರಸಧಾರಾ]

ರಸಧಿ (ನಾ). ಕಡಲು ; ಜಲಧಿ : ಸುಖದುಃಖಜಸ್ಯವ್ಯತ್ಯಾಗಗಳೆಲ್ಲಮೊಂದಾಗಿ ಮುಳುಗಿರ್ದುವೊಂದಸಂತಾನಂದರಸಧಿಯುಲಿ (ಪಚಿಗೆ. ೧೦-೦೦೩೬). [ಸಂ.]

ರಸಧ್ವನಿ (ನಾ). [ಕಾವ್ಯಮೀ] ಐದು ವಿಧವಾದ ಧ್ವನಿಗಳಲ್ಲಿ ಒಂದು ; ರಸಾನುಭೂತಿಯನ್ನುಂಟು ಮಾಡುವ ಧ್ವನಿ : ರಸಗಂಗಾಧರಕಾರನು : "ಹೀಗೆ ಐದು ವಿಧವಾದ 'ಧ್ವನಿ' ಯಲ್ಲಿ 'ರಸಧ್ವನಿ' ಗೇ ಪರಮ ರಮಣೀಯತೆ" ಎಂದು ಹೇಳಿದ್ದಾನೆ (ಕೃಚಿ. ೦೬೨); ವಸ್ತುಧ್ವನಿ ಅಲಂಕಾರ ಧ್ವನಿಗಳಿರಡೂ ಪರ್ಯಂತದಲ್ಲಿ ರಸಧ್ವನಿಗೆ ಪೋಷಕವಾಗಬಹುದು (ಪಾಪಚ. ೩೦೩). [ಸಂ.]

ರಸನ (ನಾ). ೧. ರುಚಿ ನೋಡುವಿಕೆ ; ಆಸ್ವಾದನೆ. ೨. ರುಚಿಯನ್ನು ನೋಡುವ ಅಂಗ ; ನಾಲಗೆ : ಸ್ಪರ್ಶನ ರಸನ ಘ್ರಾಣ ಚಕ್ಷು ಶ್ರೋತ್ರೇಂದ್ರಿಯಂಗಳ್ (ಪಳಿಪಾ. ೩-೬ ಪ) ; ರಸನದಿ ಕೇಳ್ದ ಕಾಂಬ ಆಜ್ಞಿದ ಅಘ್ರಾನ

ಸುವ ಆಸ್ವಾದಿಸುವ (ಕ್ರೀಂದ. ರಾ. ೩-೧೧೦-೨). ೩. ಕೊಗುವಿಕೆ: ಆಬ್ಬರ. [ಸಂ.]

ರಸನಗೆ (ನಾ). ಸ್ವಾರಸ್ಯವಾದ ನಗು : ರಸನಗೆಯುಳೆನಗೆಯೆಂಬಮೆಂತಿಹುವೆಂದು ನಸುನಗುತಪಳು ಪಾಡಿದಳು (ಕಡ. ೨೦-೩೦). [ರಸ + ನಗೆ]

ರಸನತ್ವ (ನಾ). ರುಚಿಯನ್ನು ಕಂಡುಹಿಡಿಯುವ ಶಕ್ತಿ : ಅವರ ಹೊಟ್ಟೆಪಸಿವಿನ ತೀವ್ರತೆಯಲ್ಲಿ ನಾಲಗೆಯ ರಸನತ್ವ ಮುಂಕುಬಡಿದು ಹೋಗಿದ್ದಿರಬೇಕು (ಪಮುಪ್ರ. ೩೩೬). [ಸಂ.]

ರಸನಾಂಚಲ (ನಾ). ನಾಲಗೆಯ ತುದಿ ; ಜಿಹ್ವಾಗ್ರ : ತೊಳಗುವ ರತ್ನದೊಟ್ಟಿಲೊಳ್ ಪಬ್ಬಿಸುತ್ತ ಕುಮಾರನಂ ಮುಜಂದಳೆದಳವರ್ಣಕೊಲ್ದು ರಸನಾಂಚಲದೊಳ್ದನಿದೋಱಿ . . . ಜೋಯಿಸಮತೊಪ್ಪಿ ತೊಗಿದರ್ (ರಾಚಕೇ. ೪-೬೦). [ಸಂ.]

ರಸನಾಗ್ರ (ನಾ). = ರಸನಾಂಚಲ : ದ್ವಿಪಾಗಿಗುಣ್ಮುವ ರಸನಾಗ್ರಮಂ ಪುರಿಗೆ ಕೈಯರಡಂ ನಿಮಿರ್ದೆತ್ತಿ ಕಂಧಿಗೊಪ್ಪುವ ಮೊಳಕೈಯು ತೋರ್ಪರ ಕೆಬರ್ ಬಿಯುದರ್ ಸರೆ ಸ್ಪೇಪೇಂಟೆಯೊಳ್ (ರಾಚಕೇ. ೩-೮೩). [ಸಂ.]

ರಸನಾಮಕರ್ಮ (ನಾ). [ಜೈನ] ತೊಂಬತ್ತುಮೂರು ಬಗೆಯ ನಾಮಕರ್ಮಗಳಲ್ಲಿ ಒಂದು : ಸಿಹಿ, ಕಟು, ಕಾರ, ಒಗರು ಮತ್ತು ಹುಳಿ ಎಂಬ ಪ್ರಕೃತಿಗಳು : ರಸನಾಮಕರ್ಮಂ ಪಂಚವಿಧಮಕ್ಕುಂ ತಿಕ್ತ ಕಟುಕ ಕಷಾಯಾಮ್ಲಮಧುರನಾಮಕರ್ಮಂ (ಗೊಕ್ಕ. ೩೩- ೯-೦೦). [ಸಂ.]

ರಸನಾಲಂಪಟ (ನಾ). ಜಿಹ್ವಾಚಾಪಲ್ಯಪುಳ್ಳವನು : ರಸನಾಲಂಪಟನಾಜ್ಯಾಪೋಧಿತನಸಂತುಷ್ಟಂ ಸದಾಸರ್ಪಭಕ್ಷ ಸಮಸ್ತಾವಿಧುಂಜಿತೋಗ್ರ ನೆನಪೀ ದಾವಾಗ್ನಿಯಂ ಕಾಲ್ಗಳಿ ಪೊಸೆದೆಂ (ಕಪ್ರ. ೩೨- ೦೦-೦೬೩). [ಸಂ.]

ರಸನಿಮಿಷ (ನಾ). ಅತ್ಯಂತ ಸಂತೋಷದ ಕಾಲ; ರಸವತ್ತಾದ ಗಳಿಗೆ: ತನ್ನ ಜೀವನದ ಅತ್ಯುತ್ತಮ ರಸನಿಮಿಷಗಳಲ್ಲಿ ತಾನು ಬಾಳುತ್ತಿದ್ದಂತೆ ಅವನಿಗೆ ಅನುಭವವಾಯಿತು (ಕ್ರಪಡು. ೨೯೭). [ಸಂ.]

ರಸನಿರೂಪಣೆ (ನಾ). ರಸದ ಅಭಿವ್ಯಕ್ತಿ : ರಸನಿರೂಪಣೆಯಲ್ಲಿ ವಾಲ್ಮೀಕಿಯ ಶಕ್ತಿ ಅದ್ಭುತವಾದುದು (ಜಾಕಥ. ೧೨). [ಸಂ. ರಸನಿರೂಪಣ]

ರಸನಿರ್ಮಿತಿ (ನಾ). = ರಸನಿರೂಪಣೆ : ರಸನಿರ್ಮಿತಿಯಲ್ಲಿ ಕವಯಿತ್ರಿಯು ವ್ಯಕ್ತಿತ್ವಕ್ಕನುಗುಣವಾಗಿ ಅಲ್ಲಲ್ಲಿ ಭೇದಗಳು ಕಂಡು ಬರುತ್ತವೆ (ಶಾಪ್ರಕ. ೩೩೮). [ಸಂ.]

ರಸನಿಷ್ಪತ್ತಿ (ನಾ). ರಸಾನುಭವವು ಉಂಟಾಗುವಿಕೆ : ಕಾವ್ಯಾನಂದದ ಉತ್ಪತ್ತಿ : ವಿಭಾವಗಳು, ಅನುಭಾವಗಳು, ಸಂಚಾರಿ(ಭಾವ)ಗಳು ಇವುಗಳ ಸಂಯೋಗದಿಂದ ರಸನಿಷ್ಪತ್ತಿಯಾಗುವುದು (ಚಾರಿತ್ರ. ೩೩೩). [ಸಂ.]

ರಸನೆ (ನಾ). ೧. ನಾಲಗೆ ; ಜಿಹ್ವೆ : ''ರಸಜ್ಞಾ . ರಸನಾ. ಜಿಹ್ವಾ – ಈ ೩ ನಾಲಗೆ'' (ಶಬ್ದಮ. ೩೩-೩೩೬) ; ರಸನಾಶಂಪಾತತಂ ಸಂಬೆಸೆ ಪುದಿಯೆ ಪೂತ್ಕಾರಮಾರಾತಮಂ ದಳ್ಳಿಸೆ ವಹ್ನಿಜ್ವಾಲೆ (ತಂಜಾಪ್ರ. ೩-೭೪). ೨. ಉಡೆನೂಲು ; ಮೇಖಲೆ : ''ರಸನೆ ಮೇಖಲೆ ಕಾಂಚಿ ಸಪ್ತಕ ಕಳಾಪಿ ನಾರಸಮೆನಲುಡಿದಾರಮಕ್ಕುಂ'' (ಪುಂಗಣಿ. ೨೦೦-೩೦) ; ದಿಸಲ್ಕ್ಷೀ ರಸನೈಕಮಧ್ಯಮಣಿಯೂದಂ ಭಾಸ್ಕರಂ (ಕಾದಂಪ್ರ. ೬೫೯). [ಸಂ. ರಸನಾ]

ರಸನೇಂದ್ರಿಯ (ನಾ). ರುಚಿಯನ್ನು ಗ್ರಹಿಸುವ ಅಂಗ ; ನಾಲಗೆ : ರಸನೇಂದ್ರಿಯವಶದಿಂ ಸೈರಿಸಲಾಜೆ ಗಾಳದೆರಗೆ ಪಾಯ್ದಬಾವುವ ಮಿನ ಸಾಯಮೆಂದೊತಕ್ಕಟ ವಸುಮತಿಯೊಳ್ ಜಿಹ್ವೆ ಕೆಡಿಸದಾರಂ ಪದಪಿ (ಕವಿಕಾಮ್ಯ. ೩-೨೩) ; ರಸನೇಂದ್ರಿಯವಿಷಯದಿಂದೆ ಮತ್ಸ್ಯ ಕೆಡುವೆದು ಪಾಲಗಾಜಿನ ಬಲೆಯಲ್ಲಿ (ಕಾಂಶೀ. ೬-೪). [ಸಂ.]

ರಸಪಂಚಕ(ನಾ)೧. ಹಾಲು, ತುಪ್ಪ, ಜೇನು, ಕೈಲ ಮತ್ತು ಮದ್ಯ ಎಂಬ ಐದು ಬಗೆಯ ರಸಗಳು : ನವರಸದೊಳ್ ಘೃತವಿದಿ ರಸಪಂಚಕದೊಳ್ . . . ರಸಾಖ್ಯ ಸಂತತಂ (ಜಾಜಿತ. ೩೪). ೨. [ಜೈನ] ಮಧುರ, ಅಮ್ಲ, ಕಟು, ಕಷಾಯ ಮತ್ತು ತಿಕ್ತ ಎಂಬ ಐದು ರಸನಾಮ ಪ್ರಕೃತಿ : ಪೂರ್ವಕರೀರಬಂಧಸಂಘಾತವರ್ಣರಸಪಂಚಕಸಂಸ್ಥಾನಸಂಹನನ ಪಂಚಪ್ರಚ್ಯಾಂಗೋಪಾಂಗವ್ಯಿಕಂ (ಅಪ್ರ. ೦೬-೪೯ ಪ). ' ಪಂಚರಸ ' ಪರಾ. [ಸಂ.]

ರಸಪರವಶತೆ (ನಾ). ಆನಂದದಲ್ಲಿ ಮುಳುಗೇಳಿಕೆ.– ತಲ್ಲೀನಗೊಳ್ಳುವಿಕೆ: ಮಾಯಾಮೃಗಳಿಯಿಂದ ಹೊರಪೊಮ್ಮುತ್ತಿದ್ದ ನಾದಪಾಧುರ್ಯವು . . . ಮನಮೋಹಕವೂ ಆಗಿತ್ತು. ಅದರ ರಸಪರವಶತೆಯು ದೈವೀಕವಾಗಿತ್ತು (ಸಂಗೀಕ. ೩೬) ; ಮೂಲಸೌಂದರ್ಯವೇನಿದ್ದರೂ . . . ರಸಪರವಶತೆಗೆ ಸಾದ ಚಿತ್ತಕ್ಕೆ ವೇದ್ಯವಾಗುವ ಒಂದು ಅತೀಂದ್ರಿಯವಾದ ಆಧ್ಯಾತ್ಮಿಕಸತ್ಯ (ಕ್ಯಾಂಪ್ರ. ೫೬). [ಸಂ. ರಸಪರವಶತಾ]

ರಸಪರಿತ್ಯಾಗ (ನಾ). [ಜೈನ] ಆರು ಪ್ರಕಾರದ ಬಾಹ್ಯತಪಗಳಲ್ಲಿ ಒಂದು ; ತುಪ್ಪ, ಹಾಲು, ಎಣ್ಣೆ, ಬೆಲ್ಲ, ಸಕ್ಕರೆ, ಉಪ್ಪು ಮೊದಲಾದ ರಸಪದಾರ್ಥಗಳನ್ನು ಸೇವಿಸದೆ ಇರುವ ವ್ರತ : ಕ್ಷೀರ ದಧಿ ಘೃತ ಲವಣ ತೈಲಾದಿ ರಸಂಗಳಂ ಪರಿತ್ಯಾಗಂಗೆಯ್ವ ರಸಪರಿತ್ಯಾಗಂ ಎಂಬ ನಾಲ್ಕನೆಯ ತಪದೊಳಂ . . . ನೆಜೆದು (ಅಪ್ರ. ೬-೪೦ ಪ) ; ಕರಮೆ ಮುನಿ ದುಗ್ಧ ದಧ್ಯಾದಿ ರಸಂಗಳನೆಯ್ದಿ ತೊಱೆದು . . . ನಾಲ್ಕನೆಯ ರಸಪರಿತ್ಯಾಗವೆಂಬ ತಪಮಂ ತಳೆದಂ (ಜಂಪ್ರ. ೦೬-೦೦). [ಸಂ.]

ರಸಪಾಕ (ನಾ). ರುಚಿಯಾವ ಅಡುಗೆ ; ಸವಿಯಾದ ಪಾಕ : ಕೂಗರಿ ಬದನೆ ಪೊದರುವಿದ ಕಾಯ್ಗಳ ರಸಂಗಳ ತೆಗೆದು . . . ಪರಿಮಳಗೊಳಿಸಲದು ಪಾರ್ವತೀಪತಿಯ ರಸಪಾಕ (ಸೀಪು. ೩-೨೦) ; ಸಗುವೊಂದು ರುಪಾಕವಳುವೊಂದು ರಸಪಾಕ . . . ಬಗೆದೆರಡನುಂ ಭುಜಿಸು (ಪುಂಕಾ:ಗ. ೧೭೪). [ಸಂ.]

ರಸಪುರಿ (ನಾ). ಒಂದು ಬಗೆಯ ಮಾವು : ದಾವಿನ ಹಣ್ಣುಗಳಲ್ಲಿ ರಸಪುರಿ ಬಾದಾಮಿ ಮುಂತಾದ ಅನೇಕ ಜಾತಿಗಳಿವೆ (ಪಸಾ). 'ತೋತಾಪುರಿ' ಪರಾ. [ರಸ + ಪುರಿ]

ರಸಪ್ರಕ್ರಿಯೆ (ನಾ). = ರಸನಿಷ್ಪತ್ತಿ : ಇವರಲ್ಲಿ ಪುಟ್ಟಿವಾಗಿ ರಸಪ್ರಕ್ರಿಯೆ ಪ್ರತಿಪಾದಿತವಾಗಿದೆ (ಕೃವಿ- ೦೬೬). [ಸಂ. ರಸಪ್ರಕ್ರಿಯಾ]

ರಸಫಲ (ನಾ). ೧. ರಸ ತುಂಬಿರುವ ಹಣ್ಣು ; ಸಾರವತ್ತಾದ ಫಲ : ರಸಫಲ ಪಾಣಿದಿಗಳೆಸೂ ಸರ್ವದ್ರವ್ಯಗಳನೂ ಪಡುರುಚಿ ಭಿನ್ನರುಚಿ ಪುಟ್ಟುವತ್ಪಾಜಿಪಲ್ಲಿದು ಜಿಹ್ವೆಯ ಕೈಯಲ್ಲೂ ಲಿಂಗಜಿಹ್ವೆಗೆ ಅರ್ಪಿಸಲು ರಸಪ್ರಸಾದ (ಅಾತ. ೪. ೦೦೬-೦೬೬). ೨. ತೆಂಗು. [ಸಂ.]

ರಸಬಾಳೆ ' ರಸವಾಳೆ ' ನೋ.

ರಸಬೀಜ (ನಾ).ಒಂದು ಬಗೆಯ ಸಸ್ಯ : ತಪಸಿ, ಕಾಲಾದ್ರಿ, ರಸಬೀಜ (ಪ್ರಕಿ. ೩೪-೩೩೯). [ಸಂ.]

ರಸಬುರುಡೆ (ನಾ). = ರಸಗುಂಡು : ಪಲಕ್ಕಿಲ್ಲಾ ಅಮೃತಶಿಲೆಯು ಹಾಸಲ್ಪಟ್ಟಿದೆ. ಮೇಲುಗಡೆ ಕುದಿಲುಗಳು ರಸಬುರುಡೆಗಳೂ . . . ಅಲಂಕರಿಸಲ್ಪಟ್ಟಿದೆ (ಕ್ರಿಚಾಯು. ೦೩೩). [ರಸ + ಬುರುಡೆ]

ರಸಭಂಗ (ನಾ). ರಸಾನುಭವಕ್ಕೆ ಉಂಟಾಗುವ ಆಡ್ಡಿ : ರಸಭಂಗ ಭಯದಿನಿಂದ್ರಂ ಪೊಸತೊಂದಾ ದೊರೆಯ ಪಾತ್ರಮಂ ತಂದೆನುಸಂಧಿಸುವುದುಂ (ಅಂಪ್ರ. ೬-೦೨) ; ಆ ಮೇಳೆಮಲ್ಲಿ ವಾಲೀಕಾರನೊಬ್ಬನು ಬಂದು . . . ರಸಭಂಗ ಮಾಡಿದನು (ಕಾಗಡಿಕೇ. ೩೩). [ಸಂ.]

ರಸಭರಿತ (ಗು)ಗಿ-ರುಚಿಕಟ್ಟಾದ ; ಸಾರವತ್ತಾದ : ರಸಭರಿತ ಖರ್ಜೂರ ಫಲ ಸಂಪ್ರಸರಭೃತ್ರವಸಗಿಯುಪವನವೆಸೆದುದ್ದೆ (ಶಾವ್ಯಾಉ. ೩-೨೪) ; ರಸಭರಿತ ಖರ್ಜೂರ ಕುಜಿ ಮೆಲ್ಲುಲ್ಲುದೆ (ಕ್ರೀಂದ. ೩-೦೪-೦). (ನಾ). ೨. ಸಾರವತ್ತಾದುದು. ೩. ಶೃಂಗಾರಾದಿ ನವರಸಗಳಿಂದ

ತುಂಬಿದುದು. ೨. ಸಿ : ರಸಭರಿತವಾಗಿ ಸತ್ಕವಿತಾವ್ಯಬಂಧದಂತೆ ಸಮಸ್ತಫಲಪೂರ್ಣವಾಗಿ ಸುಕೃತಾತ್ಮನಂತೆ ಪರದನಂತೊಪ್ಪಗುಂ ಶಾಲಿಯ ವನಂ (ಪಕ್ಷಿ. ೯-೦೩). [ಸಂ.]

ರಸಭಸ್ಮ (ನಾ)· ಒಂದು ಬಗೆಯ ಔಷಧೀಭಸ್ಮ : ಪಾದರಸದ ಬೂದಿ : ರಸಂ ತೊಳೆದು ಹುದ್ದಿಯಂ ಮಾಡಿ ಗಂಧಕದ ಚೂರ್ಣದಲ್ಲಿ ಜಳಕಮಾಡಿ, ಶಟ್ಪಗೆಯ ಸಂಪುಟವ ಮಾಡಿ, ಕುಳಿ ತೋಡಿ, ವಾಲುಕಾಯಂತ್ರದಲ್ಲಿ ಬೆರಣಿಯ ಕುಳಿಯಲ್ಲಿ ೪ ಜಾವ ಪುಟವಿಕ್ಕೆ ರಸಭಸ್ಮವಹುದು (ಖಗೃಕ. ೪೩).

ರಸಭಾವ (ನಾ)· ೧. ನೀರು ಇರುವಿಕೆ ; ದ್ರವದ ಅಸ್ತಿತ್ವ. ೨. ರಸಾನುಭವವನ್ನುಂಟುಮಾಡುವ ಚಿತ್ತವೃತ್ತಿ : ಮೃದುಪದ ಗತಿಯಿಂ ರಸಭಾವದ ಪೆರ್ಚಿಂ ಪನ್ನವಿನಿತೆಯೊಲ್ ಕೃತಿಸೌಂದರ್ಯದ ಜಾತುರ್ಯದೆ ಕಣಿಯಿನೆ ವಿದಗ್ಧಬುಧಜನದ ಮನವನಲೆಯಲಿವೇಡಾ (ಅಪಾ. ೦-೦೬). ೧, ೨ : ಜಗದೇಕಜೀವಸ್ಥಿತಿಯಿನ್ನತಿಪ್ರಸಾದಗುಣದಿಂ ರಸಭಾವವಿಳಾಸದಿಂ . . . ಸರಸ್ವತಿ ದಯೆಗೆದ್ದು (ಶಾಕುಶ. ೨). [ಸಂ.]

ರಸಭೋಜ್ಯ (ನಾ)· ದ್ರವರೂಪದ ಆಹಾರ (?) : ರಸಭೋಜ್ಯದೊಳಂ ಮರಣಮುಮುಂ ಸಂಪಾದಿಸುಗುಂ ಕಾಜಿಗ್ಗೆ ಪಡ್ವಿಂಪಿತಿಯೊಳ್ (ಅಕ್ಷಣ. ೩-೩೨). [ಸಂ.]

ರಸಮಗ್ನ (ನಾ)· ಆನಂದದಲ್ಲಿ ಲೀನನಾದವನು : ಚತುರಕವಿ ವೇಬ್ಗೆ ರಸವತ್ಕೃತಿಯಂ ರಸಮಗ್ನನಾಗಿ ದುರ್ಜನನುಮದಂ ಸ್ತುತಿಯಿಸವೇಟ್ಟುದು (ಶಬ್ದ. ೦-೫೪). [ಸಂ.]

ರಸಮಗ್ನತೆ (ನಾ)· ಆನಂದದಲ್ಲಿ ತಲ್ಲೀನವಾಗುವಿಕೆ : ಘನಾಗಮ ಲಕ್ಷ್ಮಿ ತೇತೀಧವಳಕಟಾಕ್ಷೆ ಕಂಡು ರಸಮಗ್ನತೆಯಿಂ ಪುಳಕಾಂಕುರ್ಪಂಗಳತ್ಯವಿಳಮಾಗೆ ಕೊಟ್ಟಳಚಿರಪ್ರಭೆಯೆಂಬ ಸಂವರ್ಣಮಾಲೆಯಂ (ಪಂಪ. ೯-೧೬).

[ಸಂ. ರಸಮಗ್ನತಾ]

ರಸಮಟ್ಟ (ನಾ)· ವಸ್ತುಗಳ ಮಟ್ಟವನ್ನು ಕಂಡುಹಿಡಿಯಲು ಉಪಯೋಗಿಸುವ, ಪಾದರಸವನ್ನು ತುಂಬಿ ಮಾಡಿದ ಒಂದು ಸಾಧನ : ವಸ್ತುಗಳು ಸಮತಲವಾಗಿವೆಯೆ ಇಲ್ಲವೆ ಎಂಬುದನ್ನು ಪರೀಕ್ಷಿಸಲು ಉಪಯೋಗಿಸುವ ಒಂದು ಸಲಕರಣೆ ; ಮಟ್ಟಕೋಲು ; ಮೂಲೆಮಟ್ಟ ; (ರಸ)ಮಟ್ಟ (Level· ೫೦೩). [ರಸ + ಮಟ್ಟ]

ರಸಮಾರ್ಗ (ನಾ)· ಶೃಂಗಾರಾದಿ ನವರಸಗಳನ್ನು ನಿರೂಪಿಸುವ ಕ್ರಮ. — ರೀತಿ : ವೀರಾದ್ಭುತಕರುಣಾಶ್ಚರ್ಯಶೃಂಗಾರಭಯಾನಕ ಸರೌದ್ರ ಬೀಭತ್ಸಮಹಾಸಾರತರಹಾಸ್ಯಶಾಂತಾದಿರಸನವವಿಧವಿಕಲ್ಪಮಾ ರಸಮಾರ್ಗಂ (ಕಾಡಾ. ೩-೧೮೬). [ಸಂ.]

ರಸಮೂಲಿಕೆ (ನಾ)· ಒಂದು ಬಗೆಯ ಸಸ್ಯ : "ರೋಮಕಂದಃ — ರೋಮಕಂದರ ; ರಸಮೂಲಿಕೆ " (ಓಷ. ೦೪೦).

[ಸಂ. ರಸಮೂಲಿಕಾ]

ರಸಮೆಟ್ಟು (ಕ್ರಿ)· ರಸವು ತುಂಬಿರು ; ಸಾರದಿಂದ ಕೂಡಿರು : ಹಸನಾದ ಹೆಣ್ಣೇ ಮೊಸಳೆತೋಟೆ ದಾರೆ ರಸಮೆಟ್ಟಿದೆಲೆಯ ಕೊಯಿಸೇನು (ಪ್ರಭು. ೩೩). [ರಸ + ಮೆಟ್ಟು]

ರಸಯಿಸು (ಕ್ರಿ)· (?) : ರಸಯಿಸಿರ್ದ ತುರಂಗಮಮುಮಂ ವೀರೂಢದ ಹರ್ನಿತಮುಂ ಪ್ರಯೋಗಿಸುಗೆ ಕಪ್ಪದೆ ಜಾವದೊಳರ್ಪತ್ಯಯ್ದು ಹರಿಶತಯಾಗೆ ಸಂಧಿಸೆ (ರೋಹಿಣೀ. ೯-೨೩೭). " ವಾಯುಕೊಳ್ " (ರೋಹಿಣೀ. ಪೀಠಿ). [?]

ರಸಯೋನಿ (ನಾ)· ಬಿಳುಗಾರ ; ಟಂಕಣ. [ಸಂ.]

ರಸರಸಾಯನ (ನಾ)· ಅತಿರುಚಿಯಾದ ರಸಾಯನ : ನಾಳನ್ನೆಯರುಂ ಕಾನುಂ ಮನಂಬುಗಿಸುವಂತೆ ಮಜ್ಜನಂಬುಗಿಸಿ ರಸರಸಾಯನಂಗಳನೂಡುವಂತೆ ದಿವ್ಯಾಹಾರಂಗಳನೂಡಿ (ಶಂಚಣಾ. ೯-೦೬ ಬ); ದಿನದಿನದೊಳಿತ್ತಲು ರಸರಸಾಯನಮಂ ಬಸವಪ್ರಭುವೆನ್ನೊಳಿನುಭವಿಸಿ(ಬಸಕೃ. ೩೦-೩); ತನಿವಣ್ಣಳ ರಸರಸಾಯನ . . . ಪಾಲ್ಮೊಸರ್ಗಳಿವು ಬಗೆಗೊಳಿಸಿ(ಕೃಬಾಣಾ. ೬-೨೪). [ಸಂ.]

ರಸರ್ದಿ (ನಾ)· = ರಸನಯುದ್ಧಿ : ಆಸ್ಯವಿಷರುಂ ದೃಷ್ಟಿವಿಷರುಂ ಕ್ಷೀರಸ್ರಾವಿಗಳುಂ ಮಧುಸ್ರಾವಿಗಳುಂ ಸರ್ಪಿಃಸ್ರಾವಿಗಳುಂ ಅಮೃತಸ್ರಾವಿಗಳುಂ ಎಂದು ರಸರ್ದಿವ್ಯಾಪ್ತಾಚಾರ್ಯರ್ ಅಜುತಿಯಂ (ಕಕ್ಷ್ಯಕ್ಷ. ೦೬೯). [<ಸಂ. ರಸರ್ದಿ]

ರಸವಂತಿ (ನಾ). ೧. ರಸವನ್ನು ಹೊಂದಿರುವುದು ; ಸಾರವತ್ತಾದುದು : ಯಾರ ಪುಣ್ಯ ಬೆಳೆಯಲೆಂದು . . . ಸತತ ಶ್ರಮಿಸಿದನೊ ಆ ರಸವಂತಿ ಈಗ ಬತ್ತಿ ಹೋಯಿತೆ ! (ಪಾಂಚಾಲಾ. ೬೩೪). ೨. ಒಂದು ಬಗೆಯ ಔಷಧಿಮೂಲಿಕೆ : ಕಿ.ಸಿ. ರಸವಂತಿ ಕಿ.ಟಿ. ರಸಸಿಂಧೂರ (ಶುಂಠಾಶ್ಯಾ. ೦೬೨). [← ಹಿಂ. ಮರಾ. ರಸವಂತೀ]

ರಸವಂತಿಕೆ (ನಾ)· ರಸಿಕತನ : ಮನೋಹರವಾಗಿ ಹೃದಯಂಗಮವಾಗುವಂತಹ ವಿಶೇಷತರದ ರಸವಂತಿಕೆಯೂ ಇಲ್ಲ (ಶಾಚಾ. ೩೩) ; ನಿನ್ನೀ ರೂಪು . . . ಐಶ್ವರ್ಯ ರಸವಂತಿಕೆ ಎಂಥ ಮಹಾಯೋಗಿಯ ದೃಢನಿಶ್ಚೆಯನ್ನೂ ಹುಡಿಗುಟ್ಟಬಲ್ಲುದು (ಶುಂಗಾ. ೩೩). [ರಸ + — ವಂತ + — ಇಕೆ]

ರಸವಚ್ಚ (ನಾ)· ಚಿನ್ನದ ಆಭರಣ : ರಸವಚ್ಚಂಗಳ ಬಣ್ಣಗೆವೆಳಗಿನಿಂದೆ ಇಂದ್ರಧನುವಂ ಸಿರಿರಾಣಿಯ ಪೊಂಜೆಳೆಮೆಯ್ಯಂ ಮಿಂಚುವಳ್ಳಿಯನೊಳ ಕೊಂಡೆವಮರ್ದುಂಡ ಕಮರ್ಪಗಲುತೆಯುಂ ತೋರ್ಕುಂ (ಪಾರ್ಶ. ೦೨೩-೦೩). [ರಸ + ಪಚ್ಚ]

ರಸವಣ್ (ನಾ)· ರಸಭರಿತವಾದ ಹಣ್ಣು : ಸಾರವತ್ತಾದ ಫಲ : ಸೋರ್ವ ರಸವಣ್ಗಳಂ ತಾಳ್ದ ಚೂತಂ ತುದಿಗೆ ಪರ್ವಿದೆಳೆವಳ್ಳಿಯಿಂದೆಸವ ಪೂಗಂ . . . ನಾಡೆ ಸಾರ್ವಕಾಲಂ ಕುಂದವು (ಪಜಿ. ೦೦-೩೩).

[ರಸ + ಪಣ್]

ರಸವಣಿ (ನಾ)· ಒಂದು ಬಗೆಯ ಮದ್ಯ : ರಸವಣಿಯನುಂಡ ಗೊರವಿತಿ ಪೊಸತ್ಗಾಶೀರ್ವಾದವಳ್ಳದೊಂದೆಂದೊಗಳ್ ಬಾಗಳ್ಕಿಂಗೆ ಮಹೇಶರ ಪಸಾದ ಸುರುಕವಡೆ ಕವಡೆ ಹರಿವೋ ಎಂದಳ್ (?) (ಪಜಿ. ೩೨. ೦೬-೨೦).

[ರಸ + < ಪಾಣ್]

ರಸವಣಿಗ (ನಾ)· ಮದ್ಯವನ್ನು ಕುಡಿಯುವವನು : ಇಜಿದುದಕದಂತೆ ಹಾಲಿನ ಪಜುಸೋನೆಯಂ ಬಂಡ ಬಣ್ಣದರಲ್ಗಳ ಸೊನೆಯಿಂ ತಂಜುಕಿನ ಜೋಲುವ ತಿಳಿಗಳನೆಜಗಿದರಾ ಜವ್ವನವಳುರೆ ಹೊಸರಸವಣಿಗರ್ (?) (ಪಜಿ. ೩೨. ೦೬-೦೯). [ರಸವಣಿ + — ಗ]

ರಸವತಿ (ನಾ)· ಅಡುಗೆಮನೆ ; ಪಾಕಶಾಲೆ : " ಪಾಕಸ್ಥಾನಂ. ರಸವತೀ, ಮಹಾನಸಂ — ಈ ೩ ಬಾಣಸಿಗ ಮನೆ " (ಹಜಾಶಬ್ದ. ೧೪-೦೪೦).

[ಸಂ. ರಸವತೀ]

ರಸವತ್ತು (ನಾ)· ರಸಪುಳ್ಕದು ; ರಸಭರಿತವಾದುದು : ಇದರಿಂದ ಒಳ್ಳೆ ರಸವತ್ತಾದ ಪಲಾವ್ ಆಗುತ್ತದೆ (ಹುರಣಾ. ೩೩); ಗುರುವಿನುರ್ತಿ . . . ರಸವತ್ತಾದ ಸಾಮಗ್ರಿ ತುಂಬಿದ ಶಾಟು ಮುಂದೆ ಸರಿಸಿದ (ಕಾಪುಚ. ೦೧೩). [ಸಂ. ರಸವತ್]

ರಸವದ್ಗೇಯ (ನಾ)· ಸಾರವತ್ತಾದ ಹಾಡು : ಲಲಿತಾಲಂಕರಣವ್ಯಸ್ತ ರಸವದ್ಗೇಯಾಂಗಳೊಳ್ ಪೊಡಮುತುಂ ಮುಟ್ಟುಗುತ್ತುಂ (ಅರಿ. ೦-೩೪). [ಸಂ.]

ರಸವರ್ಗ (ನಾ). ೧. ಆಹಾರಕ್ಕೆ ರುಚಿಕೊಡುವ ಮೆಣಸು, ಉಪ್ಪು ಮೊದಲಾದ ಪದಾರ್ಥ. ೨. ಬೆನ್ನಾಗಿ ಮಿಶ್ರಣ ಮಾಡಿದ ಗಾರೆ : ವಜ್ರಗಾರೆ. [ಸಂ.]

ರಸವಶ (ನಾ)· ರಸಾನುಭವದಲ್ಲಿ ತನ್ಮಯನಾದವನು : ಕನ್ನಡವನೆ ಆಡಿ ಕನ್ನಡವನೆ ಪಾಡಿ ರಸವಶನಾದೆನೋರಂತೆ (ಇಂಪಾಚ. ೬೯-೩೩); ದೇವರು

ರುಜುಮಾತಿದನು : ರಸವಶನಾಗುತ ಕವಿ ಆದ ನೋಡಿದನು (ಪ್ರಭಾ. ೨೭-೩೦). [ಸಂ.]

ರಸವಸ್ತು (ನಾ). ಸತ್ವವನ್ನು ನೀಡುವ ದ್ರವಪದಾರ್ಥ ; ಎಣ್ಣೆ : ರಸವಸ್ತುವನಂಡು ಜ್ಯೋತಿ ತಾ ಪೋಪಾಗ ಪಣತಿಗೆ ಪೇಳದೆ ಹೋಯಿತು (ತುರಂಪ. ಣಾ. ೩-೦೫೯-೪). [ಸಂ.]

ರಸವಾದ (ನಾ). ಒಂದು ಬಗೆಯ ಲೋಹವಿದ್ಯೆ ; ಕಬ್ಬಿಣ ಮುಂತಾದ ಕೀಳುಲೋಹಗಳನ್ನು ಚಿನ್ನವನ್ನಾಗಿ ಮೂರ್ಪಡಿಸುವ ವಿದ್ಯೆ : ಬಲಭದ್ರನೆಂಬ ಸಿದ್ಧನು . . . ಸಕಲಸಾಧನಮಂ ಕೂಡಿ ರಸವಾದದಿಂದ ಸುವರ್ಣಮಂ ಮಾಡಲು (ಕೃಪಾಂ. ೨. ೩೩೬); ರಸವಾದದ (Alchemy) ಮಾತು ಮೊದಲು ಬಂದಿರುವುದು ಕ್ರಿ. ಪೂ. ೧೩೩ರಲ್ಲಿ ಚೀನದಲ್ಲಿ (ಶಿಶಾ. ೯೯). [ಸಂ.]

ರಸವಾದಕ (ನಾ). ಲೋಹವಿದ್ಯೆಯನ್ನು ಬಲ್ಲವನು ; ಕಬ್ಬಿಣ ಮುಂತಾದ ಕೀಳುಲೋಹಗಳನ್ನು ಚಿನ್ನವನ್ನಾಗಿ ಮಾಡುವವನು: ಒರ್ವ ರಸವಾದಕನೆಂಬ ಬಿಟ್ಟುಪನೀ ಬಾಬಿಯೊಳಗಿಬಿದು ನೀರ್ ರಸಮಂ ಮೊಗೆದು ಕೊಟ್ಟೊಡದಜಿಂಳ್ ಮಾಡಿದ ಪೊನ್ನುಂ ನಿನಗದುನಗಂ ಸಮಭಾಗಮಕ್ಕುಮೆಂದೊಡೆ (ಕಾಕಾ. ೦೬೭-೦೮). [ಸಂ.]

ರಸವಾದಸಿದ್ಧ (ನಾ). ರಸವಾದದಲ್ಲಿ ಸಿದ್ಧಿಯನ್ನು ಪಡೆದವನು : ಶಿವನು ರಸವಾದಸಿದ್ಧನೆಂಬ ಜಂಗಮವಾಗಿ ಬಂದು . . . ಪರಮಪಗಟ್ಟಿಯಿಂದ ಮುಟ್ಟಿಸಿ ಚಿನ್ನವ ಮಾಡಿ ಜಂಗಮಾರ್ಚನೆಯಂ ಮಾಡುವ ಎಲೆಲಾ (ಶಿಪ್ರಸಾ. ೨. ೩೮೪). [ಸಂ.]

ರಸವಾದಸಿದ್ಧಿ (ನಾ). ರಸವಾದವ ಪ್ರಯೋಗದಲ್ಲಿ ದೊರೆಯುವ ಸಾಧನೆ ; ರಸಸಿದ್ಧಿ : ಎನ್ನ ರಸವಾದಸಿದ್ಧಿಯಂ ನೋಡೀಗಳ್ ನಿನ್ನ ಮನೆಯೊಳ್ದ ಬೆಳ್ಳಿ ತಾಮ್ರ ಸೂಚಿಗಳ್ ಮೊದಲಾದವಂ ತಂದು ಮುಂದ ಮಡಂಗೆಂದು ನುಡಿಯಲ್ (ಪಾರ್ಶ್ವನಾ. ೪-೪-೦ ಪ). [ಸಂ.]

ರಸವಾದಿ (ನಾ). ೧. ರಸವಾದಕ : ಎಂದು ಬಿನ್ನಪಗೆಯ್ದೊಡೊಡಂಬಡದ ರಸನುಂ ಸಿದ್ಧರಸವೇದಿಸುವಹಾದ ರಸವಾದಿಯಂತೆ ಜ್ವಲನಜಟೆ ರಾಗಿಸಿ (ಶಾಂಚಿತ್ರ. ೪-೩೬ ಪ); ನೊಗಸ ಹುಟ್ಟಿಸಿ ಸುರಿವ ರಸವಾದಿಗಳವರ ವಿಧಾಯಿಗಳ ಸಂಬಂಧವು ಕೇವಣ ಪಾಮರಕಾಜಿರ ಕರ್ಣ ನೋಡು (ಶಾಪ್ರಹೊಸ. ೦೩-೨೩). [ಸಂ. ರಸವಾದಿನ್]

ರಸವಾಳೆ ' ರಸವಾಬೆ ' ನೋ.

ರಸವಾಬೆ[1], ರಸಬಾಳೆ, ರಸವಾಳೆ (ನಾ). ಒಂದು ಬಗೆಯ ಶ್ರೇಷ್ಠವಾದ ಬಾಳೆ : " ನೇಪಾಳೇಕ್ಷು ರಸವಾಬೆ " (ಚಿಪಂ. ೩೬). ರಸಬಾಳೆ : ರಸಬಾಳೆ ಚಿರುಬಾಳೆ ಹಸಬಾಳೆ ಕೆಂಬಾಳೆ ಹೊಂಬಾಳೆ ಕರ್ಪೂರ ಬಾಳೆ . . . ಮೊದಲಾದ ರಸ್ಯ ಸುಬಾರ್ಹ ಸಾರ್ವತ್ರಿಕಮಾದ ಫಲಂ (ಅಪೇಗ. ೨೦೦); ಬಾಳೆಯು ಕುಲದಲ್ಲಿ ಗುಜರಾತಿ, ರಸಬಾಳೆ . . . ಪಚಿಬಾಳೆ ಎಂದು ಈ ಪ್ರಕಾರ ಹಲವು ವಿಧ (ಕೃಚಕ್ರ. ೦೩೩); ನಂಜನಗೂಡಿನ ರಸಬಾಳೆ ಅತಿ ಪ್ರಸಿದ್ಧ (ಕೂಪ). ರಸವಾಳೆ : ರಸವಾಳೆ ಪುಟವಾಳೆ ರಾಜವಾಳೆ ಸಕ್ಕರೆಯೆಸೆವಾ ದೇವಾಳೆ . . . ಮೆಜಿಸ್ಟಿಯವರ್ತಿಯಲಿ (ಕಂಪಾ. ೩-೩೭) ; ರಸವಾಳೆಹಣ್ಣಿನಂ ಒಸೆದು ಮೆಲುವಂತಾಯ್ತು (ಶಪಣಾ. ೦೯-೦೦). [ರಸ + ಬಾಬೆ[1]]

ರಸವಿಕಾರದೋಷ (ನಾ). ಜೀರ್ಣರಸವಲ್ಲಿ ದೋಷವುಂಟಾಗುವ ಒಂದು ಬಗೆಯ ರೋಗ : ಸೊರೆವೆರಸು ಲದ್ದಿ ಪೂಜಿಮಡಿ ತುರಗಂ ದಪವಡಿಸಿ ನಡೆಯಲಾಜಿದ ಕಾಲ್ಗೆಟ್ಟರೆ ರಸವಿಕಾರದೋಷಂ ತುರಗ ಮುಖುಕ್ಕಕ್ಕುಂ (ಅಶ್ವಾ. ೦೩-೩೩). [ಸಂ.]

ರಸವಿಜ್ಞಾನಿ (ನಾ). ರಸಾಯನಶಾಸ್ತ್ರವನ್ನು ಬಲ್ಲವನು ; ರಸಶಾಸ್ತ್ರಜ್ಞ : ರಸವಿಜ್ಞಾನಿ ಕಾಕಾಘೋಡೆಲ್ ತನಗೆ ಸಿಕ್ಕಿದ ಕಲ್ಲಿನ ಚೂರನ್ನು ತೆಗೆದುಕೊಂಡು ಪ್ರಯೋಗಶಾಲೆಗೆ ಹಿಂತಿರುಗಿದನು (ಭೂರಕ್ಷ. ೭೦). [ಸಂ. ರಸವಿಜ್ಞಾನಿನ್]

ರಸವೃತ್ತಿ (ನಾ). ನವರಸಗಳಿಂದ ಕೂಡಿದುದು; ರಸಮಯವಾದುದು : ರಸವೃತ್ತಿ ಸಭೆಗೆ ಮೋಪನರಸವೃತ್ತಿಯನೀಯೆ ವಿಭ್ರಮಂ ವಿಭ್ರಮಮಂ ಪುನಿಸಿ ವಿಲಾಸವತಿ ವರ್ತಿಸಿದಳ್ ಕಂದರ್ಪಸಾಯಕಂ ನರ್ತಿಪವೋಲ್ (ಪುಪ್ರತಿ. ೯-೮೪) ; ಪೆಜಿದೆಂಟುಮರ್ಚನೆಗಳಿಂ ರಸವೃತ್ತಿಯ ನೈತ್ಯಮಂ ಪ್ರವರ್ತಿಸಿ (ಪಂಭ್ರತಿ. ೨-೭೪). [ಸಂ.]

ರಸವ್ಯಂಗ್ಯ (ನಾ). [ಕಾವ್ಯಮೀ] ರಸಾನುಭವಕ್ಕೆ ಸಹಕಾರಿಯಾದ ವ್ಯಂಗ್ಯ : ವಸ್ತು ರಸ ಅಲಂಕಾರಗಳು ವ್ಯಂಗ್ಯಗಳಾಗುವುವೆಂದೂ ಅವುಗಳಲ್ಲಿ ರಸವ್ಯಂಗ್ಯವೇ ಶ್ರೇಷ್ಠವೆಂದೂ ಸಿದ್ಧಾಂತಿಸಿದ ಮೇಲೆ . . . ಅದಕ್ಕೆ ಪ್ರಾಧಾನ್ಯವನ್ನು ಕೊಟ್ಟಂತಿಯೂ ತೋರುತ್ತದೆ (ಕೃಪ್ರಾ. ೦೬೩). [ಸಂ.]

ರಸಶಾಸ್ತ್ರ (ನಾ). ೧. = ರಸವಾದ. ೨. [ಕಾವ್ಯಮೀ] ನವರಸಗಳನ್ನು ಕುರಿತ ಶಾಸ್ತ್ರ : ವಿಪ್ರಲಂಭ ವಿಟ ಪ್ರಸ್ತುತ ವೈಶಿಷ್ಟಾದಿ ರಸಶಾಸ್ತ್ರೋದ್ಭೂತಸಾಮಗ್ರ ವೃತಿ ವಿಕಲ್ಪಂಗಳುಮಂ ಮನಗೊಳಿಸಿದಂ ಶೃಂಗಾರರತ್ನಾಕರಂ (ಕೃಂಗಾಕ. ೦-೦೬). ೩. [ವಿಜ್ಞಾನ] ರಸಾಯನಶಾಸ್ತ್ರ : ' ರಸಶಾಸ್ತ್ರಜ್ಞ ' ಪರಾ. [ಸಂ.]

ರಸಶಾಸ್ತ್ರಜ್ಞ (ನಾ). ರಸಾಯನವಿಜ್ಞಾನವನ್ನು ಬಲ್ಲವನು : ರಸವಿಜ್ಞಾನಿ : ತಾವು ವಾಯುವಿನಲ್ಲಿ "ಆರ್ಗಾನ್" ಎಂಬ ಇನ್ನೊಂದು ಹೊಸ ಅಂಶವು ಇದ್ದೇ ಇರಬೇಕೆಂದು ಹೇಳಿದಾಗ ಇಂಗ್ಲೆಂಡಿನ ರಸಶಾಸ್ತ್ರಜ್ಞರು (Chemists) ತಮ್ಮನ್ನು ಧಿಕ್ಕರಿಸಿ ಅವಹೇಳನ ಮಾಡಿದರು (ಜಗಟಿ. ೧೬). [ಸಂ.]

ರಸಶುದ್ಧಿ (ನಾ). ಪಾದರಸವನ್ನು ಶುದ್ಧಿಗೊಳಿಸುವಿಕೆ. [ಸಂ.]

ರಸಶೇಷ (ನಾ). ವಿಷೂಚಿ ಎಂಬ ರೋಗದಲ್ಲಿ ಒಂದು ಬಗೆ : ಆ ವಿಷೂಚಿ ವಿಷೂಚಿಕೆಯೆಂದು, ಆಲಸಕವೆಂದು, ಅಜೀರ್ಣವೆಂದು, ವಿಳಂಬಿಕೆಯೆಂದು, ರಸಶೇಷವೆಂದು ಐದು ತೆಱನಾಗಿಪದು (ಕೃಕ್ರಾ. ೨. ೨೮೬); ಜೀರ್ಣಾಜೀರ್ಣವೊಪನೆ ಕೂಡಿಕೊಂಡಿರ್ದ ವಿಷೂಚಿಯಂ ರಸಶೇಷವೆನಿಸಿ ಕೊಯ್ಯುವು (ಸಪ್ಪ. ೩೩೮). [ಸಂ.]

ರಸಸಿಂಧೂರ (ನಾ). ಪಾದರಸ ಮತ್ತು ಗಂಧಕಗಳ ಸಂಯೋಗದಿಂದ ಸಿದ್ಧವಾಗುವ ಒಂದು ಬಗೆಯ ರಾಸಾಯನಿಕ ವಸ್ತು : ರಸಸಿಂಧೂರ ವನ್ನೇ ಅವರು ಧರಿಸುವುದು (ಪಾಪ್ರಹೊ. ೦೩೩) ; ರಸವಂತಿ. . . ರಸಸಿಂಧೂರ (ಹುಬಂಪಾ. ೦೬೩). [ಸಂ.]

ರಸಸಿದ್ಧ (ನಾ). = ರಸವಾದಸಿದ್ಧ : ರಸಸಿದ್ಧನಿಟ್ಟ ಗುಳಿಗೆಯನನ್ಯ ದೊಯ್ಯಲಾ ನೊಸಲ ವೆರಂ ಪರುಷವೇದಿಯಂ ಮಾಡಿ (ಪಪ್ರತಿ. ೩.೩-೩೦); ಶಿವನು ರಸಸಿದ್ಧನೆಂಬಾತರ್ಜನಾಗಿ ಬಂದು ರಸವಾದಸಿದ್ಧಿಯ ಕಲಿಸಿಹೆನೆನಲು (ಕೃಪಾಂ. ೨. ೩೩೬) ; ಮುಟ್ಟಿದುದನೆಲ್ಲ ಚಿನ್ನ ಮಾಡಿದ ರಸಸಿದ್ಧರವರು (ಪಪ್ರ. ೬೭೦). [ಸಂ.]

ರಸಸಿದ್ಧಿ (ನಾ). ೧. ರಸವಾದದಲ್ಲಿ ದೊರೆತ ಸಾಧನೆ ; ರಸವಾದಸಿದ್ಧಿ : ಅನಿಗೆ ರಸ ನಿಂದಾಗವೆ ರಸಸಿದ್ಧಿ ಎಂಬೆ ಅಗೆ ಶರೀರ ನಿಂದಲ್ಲಿಯೆ ಕಾಯಸಿದ್ಧಿ ಎಂಬೆ (ಪೋಗಪ್ರ. ೦೯-೭೬) ; ಜಂಗಮದ ಪಾದೋದಕವೆಂಬ ರಸಸಿದ್ಧಿ ಪಮಗುಂಟು (ಕೃಪಾಂ. ೨. ೩೩೬) ೨. ಕಾವ್ಯಾನಂದವನ್ನು ದೊರಕಿಸಿಕೊಳ್ಳುವುದು : ರಸಜೀವನಕೆ ಮಿಗಿಲ್ ತಪಮಿಹುದೆ ? ರಸಸಿದ್ಧಿಗಿಂ ಮಿಗಿಲೆ ಸಿದ್ಧಿ ? (ಕ್ರಿಣಾಪ್ರ. ೩೩-೦೨೬). [ಸಂ.]

ರಸಸೂತ್ರ (ನಾ). [ಕಾವ್ಯಮೀ] ರಸಾನುಭವದ ವಿಚಾರವನ್ನು ತಿಳಿಸುವ ಸೂತ್ರರೂಪದ ನಿರೂಪಣೆ : ಭರತಾರ್ಯನು . . . ಉಸುರಿದ ರಸಸೂತ್ರವೇ ಇತ್ತೀಚಿನ ಕವಿಗಳಿಗೂ ಲಕ್ಷಣಕಾರರಿಗೂ ಅಮೃತಾನ್ನ

ವಾಗಿದೆ(ಶಾಒಂ. ೬) : ಭರತಮುನಿಯ ರಸಸೂತ್ರದ ವಿಸ್ತಾರವಾದ ವ್ಯಾಖ್ಯಾನಗಳಿಂದ ಆ ವಿಚಾರ ಚರ್ಚಿತವಾಗಿದೆ (ಕಾಂಅ. ೦೫೯). [ಸಂ.]

ರಸಸ್ಥಾನ (ನಾ). ಕಾವ್ಯದಲ್ಲಿ ಸ್ವಾರಸ್ಯವು ಅತಿಶಯವಾಗಿ ಇರುವ ಸ್ಥಳ.— ವೆಲೆ : ಪುರುಷೇವನ ಚರಿತ್ರೆಯಲ್ಲಿ ಅಲ್ಲಲ್ಲಿ ಚಿಲುಮಾದ ರಸಸ್ಥಾನಗಳಿರುತ್ತವೆ (ಕಾಸ. ೧೦). [ಸಂ.]

ರಸಸ್ಥಿತಿ (ನಾ). ರಸಾನುಭವವಾಗುತ್ತಿರುವ ಆನಂದದ ಇರವು : ಕವಿಯು ರಸಸ್ಥಿತಿಯನ್ನೂ ಮೀರಿದ ಸಮರಸಸ್ಥಿತಿಯು ಅನುಭವಿಯದು (ರಾಬಾಣ. ೧೦೦). [ಸಂ.]

ರಸಸ್ಯಂದಿ (ನಾ). ಸ್ವಾರಸ್ಯವನ್ನು ಒಟ್ಟುಮಾಡುವುದು ; ರಸಾನುಭವಕರವಾದುದು : ಅವಳ ಮಚಿನಗಳಲ್ಲಿ ನಮುಳಯಗಳ ಕೊರತೆ ಕಂಡು ಬಂದರೂ ಒಟ್ಟಿನಲ್ಲಿ ರಸಸ್ಯಂದಿಯಾವ . . . ನಿರ್ಮಾಣವಿದೆ (ಕಾಸ. ೦೬೬). [ಸಂ. ರಸಸ್ಯಂದಿನ್]

ರಸಹಾರಿ (ನಾ). (ಸಂಬಾರ ಪದಾರ್ಥಗಳನ್ನು) ಅರೆಯುವ ಕಲ್ಲು ; ಅಮ್ಮಿಕಲ್ಲು : " ರಸಹಾರಿಯೆನಲಮ್ಮಿಕಲ್ಲಕ್ಕು " (ಕುಂಗಣ. ೩೨-೦೯). [ಸಂ. ರಸಹಾರಿನ್ = ದ್ರವವನ್ನು ಉತ್ಪತ್ತಿಮಾಡುವಿಕೆ]

ರಸಹೀನ (ನಾ). ರಸವಿಲ್ಲದುದು ; ಶುಷ್ಕವಾದುದು ; ರಸೋಪಕಥ್ಯಳಿಳಂ ರಸಮಯವಪ್ಪುದು ವಿಚಿತ್ರಮೆಂ ಕಾಣೊಡಂ . . . ಮುನೀಂದ್ರಚಂದ್ರನ ಮುಖಮುಂ (ಶಾಪು. ೯-೦೦೦). [ಸಂ.]

ರಸಾಂಜನ (ನಾ). ೧. ವಿಷಧವಾಗಿ ಬಳಕೆಯಾಗುವ ಒಂದು ಧಾತು ವಿಶೇಷ; ಮೈಲುತುತ್ತ : ವನದಂತಿಯ ವಂದಿದು ಕೋಣನ ಬಸದೊಳ್ ಮೊಲೆಯನೊರಸಿ ಕಬ್ಬಿವೆರಸು ರಸಾಂಜನವೆಂಬ ನಿಸ್ಸಂಗೆಯ್ದೊಡೆ ವಜ್ರಾಕ್ಷಿಯು ಮೊಲೆಗಳೊಡವಿ ಪಡುವಂ ಮುಂಜಿಗುಂ (ರೋಗಿಷಿ. ೯-೦೬೦) ; ಧಾಮಂಚ, ರಸಾಂಜನ, ಮುಡಿವಾಳ . . . ಸಕ್ಕರೆ ಸಹ ಚೂರ್ಣಿಸಿ ಪಾಕ ಸೇವಿಸೆ ವಾಂತಿ ನಿಲ್ಲುಂ (ಚಕ್ಕಿ. ೨೬೬). ೨. ಕಣ್ಣಿಪ್ಪೆ ; ಕಾಡಿಗೆ : "ದಾರ್ವಿಕಾ, ಕ್ಷಾಭೋದ್ಭವಂ, ತುತ್ಥಂ, ರಸಾಂಜನಂ, ರಸಗರ್ಭಂ, ತಾರ್ಕ್ಷ್ಯಶೈಲಂ— ಈ ರಸಾಂಜನದ ಹೆಸರುಗಳು" (ಕಾಮ್ಯಂಚ. ೩೦೩). [ಸಂ.]

ರಸಾಗ್ರ (ನಾ). ಹಾಲು, ಮೊಸರು ಮುಂತಾದ ದ್ರವಪದಾರ್ಥಗಳ ಮೇಲುಭಾಗದಲ್ಲಿ ಕಟ್ಟುವ ಕೆನೆ; ಮಂಡ : "ರಸಾಗ್ರಮಂತರು ಮಂಡಂ" (ಕಬ್ಬಿಗಕ. ೮೨-೨). [ಸಂ.]

ರಸಾತಲ, ರಸಾತಳ (ನಾ). ಭೂಮಿಯ ಕೆಳಗಿರುವುದೆಂದು ಭಾವಿಸಲಾದ ಅತಳ, ವಿತಳ, ಸುತಳ, ರಸಾತಳ, ತಳಾತಳ, ಮಹಾತಳ ಮತ್ತು ಪಾತಾಳವೆಂಬ ಏಳುಲೋಕಗಳಲ್ಲಿ ಒಂದು : "ರಸಾತಲಮೆನಲ್ಕ ಧೋಭುವನಮೆಂದೆನಲು ಪಾತಾಳಲೋಕಕ್ಕೆ ನಾಮಂ" (ಕುಂಗಣ. --ಅಾ-೦) ; ಬಲಿಯಂ ಕಟ್ಟಿದನಾವನೀ ಧರಣಿಯಂ ವಿಕ್ರಾಂತದಿಂದಂ ರಸಾತಲದಿಂದಿತ್ತಿರೆ ನಾವಂ (ಪೊಕಣಾ. ೬-೪೦). **ರಸಾತಳ** : ಆ ಮಹಾರ್ಣವಂ . . . ರಸಾತಳದಂತೆ ವಿಷಧರನಿವೇತ್ಯಮುಂ (ಜಗಿ. ೦-೮೪ ೩) ; ಶರಧಿಯ ಮಥಿಸಲು ಮಂದರಗಿರಿಯ ತಂದಿರಿಸಿ ರಸಾತಳತಳಿಯ ಧರದಿಂದ ಕಮಠ ನೀನಾಗಿ ದೆನ್ನೊಳು ಪೊತ್ತ ಸಿರಿಯಣ್ಣ (ಕಾಗಣ. ೩೭೬). [ಸಂ.]

ರಸಾತಳ ' ರಸಾತಲ ' ನೋ.

ರಸಾತ್ಮಕ (ನಾ). ಸಾರವತ್ತಾದುದು : ರಸಾತ್ಮಕವಾದ ವಾಕ್ಯವಿತ್ತಿ ಕಾವ್ಯ (ಶಾಕಾಖ. ೦೩೨ ೩೩೫); ರಸಾತ್ಮಕವಾದ ವಾಕ್ಯವೇ ಕಾವ್ಯ (ಶಾರಚ. ೨೨೯). [ಸಂ.]

ರಸಾತ್ಮಿಕೆ (ನಾ). ರಸಿಕಳಾದ ಹೆಂಗಸು.— ಸ್ತ್ರೀ : ಭಾವಜೀವಿಯೂ ರಸಾತ್ಮಿಕೆಯೂ ಅದ ಮಹಾರಾಣಿ ಶಾಂತಲಾದೇವಿ . . . ನರ್ತಿಸುತ್ತಿದ್ದ ಶಿಲಾಪುತ್ರಿಯಿದಂದು ನನ್ನ ಹೃದಯ ಹೇಳಿತು (ಕಾಂಕಾ. iii. ೦೦೬). [ಸಂ. ರಸಾತ್ಮಿಕಾ]

ರಸಾಧಿಭೂತೆ (ನಾ). ಆನಂದಕ್ಕೆ ನೆಲೆಯಾದವಳು; ಸಂತೋಷದಾಯಕಿ: ಸುರಕ್ಷಿತಾಮರಪ್ರೀತೆ ರಸಾಧಿಭೂತೆ ರಮಣೀಯರಮಾರತಿಮುಖ್ಯಶಕ್ತಿವಿಖ್ಯಾತೆ . . . ಪಾಲಿಪುದನ್ನ (ರಾಸಿಂ. ೫-೦೬೪). [ಸಂ. ರಸಾಧಿಭೂತಾ]

ರಸಾನಂದ (ನಾ). ರಸಾನುಭವದಿಂದ ಆಗುವ ಆನಂದ : ದೃಶ್ಯದಲಿ . . . ಒಂದಾಗುವುದೆ ಪರಮರಸಿಕತೆ; ಅದಕೆ ಮಿಗಿಲಹ ರಸಾನಂದ ಮತ್ತೆ ಬೇರೊಂದಿಲ್ಲ! (ಕೃಗಾ. ೮೦-೫೯); ಅದು ಕೇವಲ ಭೋಗಿಸಬೇಕೆನ್ನುವ ರಸಾನಂದವಲ್ಲ; ಅದು ರಚಿಸಿ ನೋಡಬೇಕೆನ್ನುವ ರುಚಿಕಾನಂದ (ಇಕೃ. ೧೦೩). [ಸಂ.]

ರಸಾನುಭವ (ನಾ). [ಕಾವ್ಯಮೀ] (ನವರಸಗಳಲ್ಲಿ ಯಾವುದಾದರೂ) ರಸವನ್ನು ಅನುಭವಿಸುವಿಕೆ ; ರಸಾಸ್ವಾದ : ಇವನಿಗೆ ರಸಾನುಭವ ಹೇಗೆ ಉಂಟಾಗುವುದು (ಶಾರಂಪ್ರ. ೧೩೭); ಅಭಿನಯಿಸುತ್ತಿರುವಾಗಲಾಗಲಿ ಅಮೇಲಾಗಲಿ ಪಟನು ರಸಾನುಭವ ಮಾಡಿದರೆ ಅವನು ಆಗ ಸಾಮಾಜಿಕನಾಗುವನು (ಕೃಪ್ರ. ೦೧೪); ರಸಾನುಭವವು ರಸಪದಲಂಕಾರ ಎಂಬ ಹೆಸರಿನಿಂದ ಅಲಂಕಾರಗಳಲ್ಲಿ ಮಧ್ಯೆ ಪ್ರವೇಶ ಪಡೆದಿತ್ತು (ಕೌಅಪ್ರ. ೦೬೦). [ಸಂ.]

ರಸಾನುಭೂತಿ (ನಾ). = ರಸಾನುಭವ ; ರಸಾನುಭೂತಿಯು ರಸಪಥವಲ್ಲದ ಸತ್ಯಕೆ ಗತಿಯಿಲ್ಲ ! (ಕೃಗಾ. ೫೦-೬). [ಸಂ.]

ರಸಾನ್ನ (ನಾ). ರುಚಿಯೂಡಿದ ಅನ್ನ; ಸವಿಯೂಡಿದ ಆಹಾರ : ಕಾಗೆಗೆ ರಸಾನ್ನ ಮುಂದಿನಲಿಕ್ಕೆ ಪರಿವ ಕೀಟಕಂಗೆ ಸವಿಯದಲ್ಲದೆ ಮತ್ತೆ ಅದು ಸವಿಸಾರವ ಬಲ್ಲುದೆ (ಪಕೇಕ್ಷ. ೩೫); ಪಂಚಭಕ್ಷ್ಯ ರಸಾನ್ನಯುತನೈ ವೇದ್ಯಮಂ ಸೌರಾಷ್ಟ್ರವತಿಗಿತ್ತು (ಪಪು. ೧೬-೫೦). [ಸಂ.]

ರಸಾಭಾಸ (ನಾ). ೧. [ಕಾವ್ಯಮೀ]ಕಾವ್ಯ ನಾಟಕಾದಿಗಳಲ್ಲಿ ಬರುವ ನವರಸಗಳಲ್ಲಿ, ಯಾವುದನ್ನೇ ಆಗಲಿ ಕವಿಯು ಪ್ರತಿಪಾದಿಸುವಾಗ ಉದ್ದೇಶಪೂರ್ವಕವಾಗಿ ಅಥವಾ ಪ್ರಮಾದದಿಂದ ತಲೆದೋರುವ ಅನೌಚಿತ್ಯಸನ್ನಿವೇಶ: ಇದುವೆಮೇಕತ್ರಾನುರಾಗದಿಂ ರಸಾಭಾಸವಪ್ಪುದು (ರಸಿ. ೪-೩೫೯); ಸಾಮಾಜಿಕರಿಗೆ ಇದು ಅನುಚಿತ ಎಂಬ ಬುದ್ಧಿಯು ಉಂಟಾದರೆ ಆಗ ನಿಜವಾದ ರಸವು ಹುಟ್ಟದೆ ರಸದಂತೆ ತೋರುವ 'ರಸಾಭಾಸ'ವು ಉಂಟಾಗುವುದು (ಕೃಪ್ರ. ೨೦೪); ರಸವಲ್ಲದಿದ್ದರೂ ರಸದಂತೆ ತೋರತಕ್ಕದ್ದು, ರಸದೃಶವಾದದ್ದು ರಸಾಭಾಸ (ಶಾಕಖಾ. ೪೨೪). ೨. (ಅಲಂ) ಅನುಚಿತವಾದುದು; ಔಚಿತ್ಯಮಿರಿದುದು; ರಸಭಂಗ : ನಡಿ ಗುರುಪೂರ್ತಿ ಇವಳು ಇನ್ನು ರಸಾಭಾಸ ಮಾಡಿಬಿಡುತ್ತಾಳೆ (ಪಾಕುಚಿ. ೦೬೮). [ಸಂ.]

ರಸಾಭಿನಯ (ನಾ). ಆನಂದವನ್ನು ಕೊಡುವ ಅಭಿನಯ : ರಸಿಕರ್ಕ ಳೊವ್ವವನ್ನಂ ರಸಾಭಿನಯಕೌಶಲಂಗಳೊಳ್ಪಿದುವೆನುತಾನುಸಿರಂ (ಶಾಗಿಂಚ. ೦-೨). [ಸಂ.]

ರಸಾಭಿವ್ಯಂಜಕ (ಗು). [ಕಾವ್ಯಮೀ] ನವರಸಗಳಲ್ಲಿ ಯಾವುದಾದರೂ ಭಾವವನ್ನು ಅಭಿವ್ಯಕ್ತಿಗೊಳಿಸುವ.—ವ್ಯಕ್ತಿಪಡಿಸುವ : ರಸಾಭಿವ್ಯಂಜಕ ಶಬ್ದಾರ್ಥಗಳು ಕೂಡ ಹೀಗೆ "ಮಧುರ", "ಮಧುರತರ", "ಮಧುರತಮ" ವಾಗಿರಬಹುದು (ಕೃಪ್ರ. ೦೬೮). [ಸಂ.]

ರಸಾಭಿವ್ಯಂಜನ (ನಾ). [ಕಾವ್ಯಮೀ] ನವರಸಗಳ ಅಭಿವ್ಯಕ್ತಿ : ಸಂಗೀತದಲ್ಲಿ ಯಾವ ಯಾವ ರಸಾಭಿವ್ಯಂಜನಶಕ್ತಿ ಇದೆ ಎನ್ನುವುದನ್ನೂ ಬೇರೆದೆ (ಕಾಂಪ್ರ. ೦೩೨). [ಸಂ.]

ರಸಾಭಿವ್ಯಕ್ತಿ (ನಾ). = ರಸಾಭಿವ್ಯಂಜನ : ಎಲ್ಲ ಕಲೆಗಳೂ ರಸಾಭಿವ್ಯಕ್ತಿಯನ್ನೇ ತಮ್ಮ ಗುರಿ ಎಂದು ಸಾರಿದುವು (ಕಾಂಪ್ರ. ೦೩೨). [ಸಂ.]

ರಸಾಯ (ನಾ). ಸಿಹಿ ನೀರಿನಿಂದ ಕೂಡಿದುದು : ಮಣಿಯಲ್ಲದ ಕಲ್ ಜ್ಯೋತಿಸ್ಪೃಣಮಲ್ಲದ ಪುಲ್ ರಸಾಯಮಲ್ಲದ ಪುದು . . . ಇಲ್ಲ ತತ್ಪರಿಸರದೊಳ್ (ಕಾಪ್ರತಿ. ೦೦-೪೬). [ಸಂ. ರಸಾಯ್ = ರುಚಿಯಾದ]

ರಸಾಯನ (ನಾ). ೧. ಹಿತವಾದುದು ; ಇನಿದಾದುದು ; ಅಮೃತವು ಮಾನವಾದುದು : ' ಈರ್ಷಾರಸಾಯನ ' ಪರಾ. ೨. ಮಧುರವಾದ ಪೇಯ ; ರುಚಿಕರವಾದ ಪಾನೀಯ : ಚೋಳನ ರಸಾಯನವಪೊಳ್ದಿದ ಬೆಸ್ಸನ ಅಂಬಳಿಕವನ್ನು ಉಂಡುದನ್ನು ವೇದವ್ಯಸುವ ಕೇಳಲಿಲ್ಲಿ ! (ಪೊಲಾ. ೭೭ ಕೃಷ್ಣ.೫೫). ೩. ಸಿಹಿ, ಮೊಸರು, ಹುಳಿ ಮೊದಲಾದ ಆರು ರಸಗಳ ಮಿಶ್ರಣ : "ಇಂತು ಪುಳಿರಸಮುಕ್ಕು ಮಿವು ತಮ್ಮೊಳೊಂದೊಂದು ಬೆರಸಿ ತೋಲಲ್ ಸ್ವಾದು ರುಚಿ ರಸಾಯನ ಮುಮ್ಮಿಂ " (ಮುಷಾ. ೭೫-೬) ; ಕಾಳಿಗವನೆ ಮುಳ್ಳ ಪೆಣ್ಣಳೊಡವೆ . . . ಪುಷ್ಪವನು ರಸಾಯನವನು ಪಣ್ಣಳನು ಶರಂಗೋಳ್ಗೆ ಸಾರ್ಚುತೆ (ಪಪ. ೯-೦೫). ೪. ಬಾಳೆಹಣ್ಣು, ಬೆಲ್ಲ ಮುಂತಾದುವುಗಳ ಮಿಶ್ರಣದಿಂದ ತಯಾರಿಸುವ ಒಂದು ಬಗೆಯ ಸಿಹಿಖಾದ್ಯ : ಸೊದಲು ಚಿಂತೂರವರು ಸೊಂಟಕ್ಕೆ ಬೌಲು ಬಿಗಿದು ದಾನಿ ಭಕ್ತಯಿಂದ ರಸಾಯನಕ್ಕೆ ಕೈ ಒಡ್ಡಿದರು (ಪಾಪಪ. ೦೫೬). ೫. ರಸವಾದ : ರಸವಿದ್ಯೆ. ೬. ಪುಚ್ಚೆಗೆ. ೭. ವಿಷ. ೮. ಬಾಲಪೆಣಸು ; ಹಿಪ್ಪಲಿ. ೯. ಗರುಡನ ಹೆಸರುಗಳಲ್ಲಿ ಒಂದು. ೧೦. [ವೈದ್ಯಶಾ] ಒಂದು ಬಗೆಯ ಔಷಧ : ರಸಾಯನ . . . ಸಿದ್ಧಲೇಪಾದಿ ವಸ್ತುಗಳವೇವತಾಗಿ ಅಲ್ಲಿಯ ಶಿವಭಕ್ತರಿಗೆ ಸುಕ್ಷತಾಮರೂಪದಿಂದಾನಂದಕರಗಳಾಗಿರ್ಪಂ (ಪಪಪ. ೨೦೦) ; ಅಶ್ವಗಂಧಿರಸಾಯನ . . . ನಿತ್ಯವೂ ಸೇವನೆಯಂ ಮಾಡಲು ಕ್ಷಯರೋಗ ಮುಂತಾದ ಸಮಸ್ತವ್ಯಾಧಿ ಪರಿಹಾರವಹುದು (ಪಗಕ್ಕ. ೨೦೧) ; ಔಷಧಿ. ರಸಾಯನಾದಿಗಳಲ್ಲಿ ಇವರು ಆ ಕಾಲದ ತಜ್ಞರಾಗಿದ್ದರು (ಪಪಗಿ. ೪೬). ೧೧. ಶಕ್ತಿ, ಉತ್ಸಾಹಗಳನ್ನು ಹೆಚ್ಚಿಸುವ ಒಂದು ಬಗೆಯ ಔಷಧದ ಮಿಶ್ರಣ : ಅಂದಿನ ಅನುಭವವು ಕಟ್ಟಿಯ ಮೈದುಂಬಿ ರಸಾಯನವಾಗಿ ತಿಂಗಳುಗಳವರೆಗೆ ಹುಟ್ಟಿ ತೊಂದು ಅವನ ಚೈತನ್ಯವು ಬದಲಾವಣೆಗಳನ್ನು ಮಾಡಿತು(ಗಿಪಪಪ. ೩೩). ೧೨. ಕೃಮಿರೋಚಕ ಔಷಧಿಯಾಗಿ ಬಳಸುವ ಒಂದು ಬಗೆಯ ಮೂಲಿಕೆ ; ವಿಡಂಗ. ೧೩. [ವಿಜ್ಞಾನ] ವಸ್ತುಗಳ ಗುಣ ಮತ್ತು ಧರ್ಮವನ್ನು ತಿಳಿಸುವ ವಿದ್ಯೆ. —ಶಾಸ್ತ್ರ : ' ರಸಾಯನ ಶಾಸ್ತ್ರ ' ಪರಾ. [ಸಂ.]

ರಸಾಯನಜ್ಞ (ನಾ). ರಸಾಯನಶಾಸ್ತ್ರವನ್ನು ಬಲ್ಲವನು : ಇತ್ತೀಚೆಗೆ ರಸಾಯನಜ್ಞರು ಹುಟ್ಟಿಕೊಂಡು ಕೃತಕವಿನ್ನ ತಯಾರಿಸುತ್ತಿರುವರಂತೆ (ಪಯಾಂ. ೦೩). [ಸಂ.]

ರಸಾಯನವಿಜ್ಞಾನ (ನಾ). "ಮೂಲಧಾತುಗಳು, ಅವು ಸಂಯೋಗ ವಾಗುವ ನಿಯಮಗಳು, ಮತ್ತು ಅವು ಬೇರೆ ಬೇರೆ ಸ್ಥಿತಿಗಳಲ್ಲಿ ತೋರಿಸುವ ಜರ್ಯೆಗಳು, ಮೊ. ವಿಷಯಗಳನ್ನು ವಿಚಾರಮಾಡುವ ಶಾಸ್ತ್ರ " (Chemistry. ೧೯೧೨) : ಪುಸ್ತಕಗಳು ಭೌತವಿಜ್ಞಾನ, ರಸಾಯನವಿಜ್ಞಾನ . . . ಮೊದಲಾದುವುಗಳಿಗೆ ಸಂಬಂಧಿಸಿದುವು (ಪಪಪ. ೧೪. ಮುಖ್ಯ). [ಸಂ.]

ರಸಾಯನವಿಜ್ಞಾನಿ (ನಾ). = ರಸಾಯನಜ್ಞ : "ರಸಾಯನವಿಜ್ಞಾನಿ. ಔಷಧವನ್ನು ವ್ಯಾಪಾರಿ " (Chemist. ೧೯೧೨). [ಸಂ.]

ರಸಾಯನಶಾಸ್ತ್ರ (ನಾ). = ರಸಾಯನವಿಜ್ಞಾನ : ಭೌತಶಾಸ್ತ್ರ (Physics). ರಸಾಯನಶಾಸ್ತ್ರ (Chemistry) . . . ಖಗೋಳಶಾಸ್ತ್ರ (Astronomy) ಮುಂತಾದ ಭಾಗಗಳು ಈ ರೀತಿಯಲ್ಲಿ ವೇರೆವೇರೆಯಾದವು (ಪಿಷಪ. ೦೨) ; ಮೊದಮೊದಲು ಜನರು ರಸಾಯನಶಾಸ್ತ್ರ ಒಂದಿದ್ದರೆ ಸಾಕೆಂದು ಭಾವಿಸಿದ್ದರು (ಪಪಕ್ಕ. ೦೦೩). [ಸಂ.]

ರಸಾರುಹ (ನಾ). ಭೂಮಿಯಲ್ಲಿ ಹುಟ್ಟಿದುದು : ಮರ ಗಿಡ ಮೊದಲಾದ ಸಸ್ಯ : ಮತ್ತೊಂದು ಸುಮಮಿಳತರಸಾಲರಸಾರುಹದ ಕೆಳಗೆ . . . ಕಬ್ಬಿಕಚಿಪುಟ್ಟಗಳನ್ನೆಧುಬಿದು ತೋಜುಗುಂ (ಪಾಪಪ. ೦೦-೫೪ ೮). [ಸಂ.]

ರಸಾಲ, ರಸಾಳ (ಗೆ). ೧. ಸವಿಯಾದ ; ಮಧುರವಾದ. (ನಾ). ೨. ಒಂದು ಬಗೆಯ ಮರ ಮತ್ತು, ಅದರ ಹಣ್ಣು ; ಮಾವು : ಇದು ಪಿಕತುಂಡಮಿಂಡಿತಗರದ್ರ ಸಕೋಕಿಲರಸಾಲಸಾಲಂ (ಪಾದಪೂ. ೬೫೫) ; ಗುಣವಂ . . . ಪಿವನಂ ಬಲಿಸಿ ಬಂದು ಪಚ್ಚಿಲ್ಲವುದನೆ ಹರಿಸದಿಂ ಮಚ್ಚಿ ಗೊಡವದವಂ ಗೆಯೂ ರಸಾಲದ ಪಣ್ಣಿನಿಕ್ಕನಭವಂ (ಪಪಕೀಪ. ೦೦-೦೦) ; ಉರಿವ ಕೆದು ವೇಸಗೆಯ ಬಿಸಿಲಿಂದ ಬಳವಳಿದ ಕೋಮಲರಸಾಲದಂತೆ (ಪಂಚಿ. ೦೨೦). ೩. ಕಬ್ಬು. ೪. ಒಂದು ಬಗೆಯ ಕಬ್ಬು ; ಪುಂಡ್ರಕ. ೫. ದ್ವೀಪದ ಹಲಸಿನ ಮರ. ೬. ಧೂಪದ ಪುರ ; ಲೋಬಾನ. ೭. ಗೋದಿ. ೮. ಒಂದು ಬಗೆಯ ಅಲಿ ರಸಾಳ : ೧. ಪುಣ್ಯಕಾರಕಕಥೆಗಳನ್ನೂ ಹೇಳುತ್ತಾ ನಿನ್ನ ರಸಾಳವಾಣಿಯಿಂದ ಅವರನ್ನು ಸಮಾಧಾನಪಡಿಸುತ್ತಾ ತೋಗು (ಪಾಪಪ. ೦೨೮). ೨. ರಸಾಳೆಯುಪಶ್ರೇಣಿ . . . ಸೊಗಯಿಸಲಿಪುಗುಂ ತತ್ಪುರೋದ್ಯಾನವೆಂದುಂ (ಪಪಾ. ೨-೦೬) ; ಸಾಳ ರಸಾಳ . . . ಹಿಂತಾಳ ಮುಖ್ಯತರುಸಂತತಿಯಿಂ ವನಬ್ಯಂದಮೊಪ್ಪುಗುಂ (ಪೂಪಪ. ೦-೩೫). ೯. ರಸಿಕನಾದವನು ; ರಸಗ್ರಾಹಿ ; ರಸಜ್ಞ : ಪಿರಿದು ರಸಾಳನಿಸುವ ಪುರಾಣಕಂ . . . ಪೇಳಲುದ್ಯತನಾದಂ (ಕೃಷ್ಣ. ೦೨-೦೩). [ಸಂ.]

ರಸಾಲಂಕಾರ (ನಾ). [ಕಾವ್ಯಮೀ] ರಸಕ್ಕೆ ಅಂಗನಾದ ಅಲಂಕಾರ : "ರಸವತ್, ಪ್ರೇಯಃ . . . ಭಾವಶಬಳಂ ಎಂದು ರಸಾಲಂಕಾರಗಳೇಟುಂ (ಅಕ್ಕ. ೦೧೦) ; ರಸಾಲಂಕಾರವಿಲ್ಲದ ಕೃತಿಯದೇನಿದ್ದೇನು ಫಲ (ಪೊಕಂ. ೬-೦೪-೦೬) ; ಪೂರ್ವಿಕರ ಮಾತಿದಲ್ಲಿ ರಸಕ್ಕೆ ಪ್ರಧಾನಸ್ಥಾನವೇ ಬಂದಿರುವುದರಿಂದ 'ರಸಾಲಂಕಾರಗಳು' ಉಪಮಾದಿ ಉಕ್ತಿವೈಚಿತ್ರ್ಯಗಳ ಜೊತೆಗೆ ಸೇರ ತಕ್ಕವುಗಳಲ್ಲ (ಕೃಚಿ. ೨೦೦). [ಸಂ.]

ರಸಾಲೆ (ನಾ). ಪೆಟ್ಟ ಮಾಡಿ, ಒಗ್ಗರಿಸಿದ ಮಜ್ಜಿಗೆ : "ರಸಾಲಾ, ಮಜ್ಜಿಕಾ – ೨ ಪೆಸರಂ ಕೈಗುಡಿದು ಪೂಡಿದ ಮಜ್ಜಿಗೆ . . . ವಗ್ಗರಿಸಿದ ಸಂಬಾರದ ಮಜ್ಜಿಗೆ" (ಕಿಪ್ಪಾ. ೦೨-೨೦೩). [ಸಂ. ರಸಾಲಾ]

ರಸಾವೇಶ (ನಾ). ನವರಸಗಳಲ್ಲಿ ಯಾವುದಾದರೂ ರಸದ ಆವಿರ್ಭಾವ : ರಸಾಸ್ಫೂರ್ತಿ : ಕಾವ್ಯನಾಂ ಸರ್ವಾಪಿತಾ ರಸಾವೇಶ ಮುಜಹಾಲಸ್ಯಮಿತ ಗೂಳಲಾ ತಪ್ಪಗ್ಗಳದ ಕಾವ್ಯಕರ್ತೃ ತವ್ಯವಿಷೆ (ಪಪಗಾ. ೦-೨೩) ; ಕವಿಯ ರಸಾವೇಶವಿಪಯಲ್ಲಿ ತಾನಾಗಿ ಅಸ್ಫುರ ಉಕ್ತಿಗಳು – ಪ್ರಯೋಗಗಳು ಬರಲು ಸಾಧ್ಯವಿಪುಂದು ಇಲ್ಲಿನ ಅಭಿವ್ಯಾಯವಾಗಿವೆ (ಪಂಕಪಗ ೦೨೬). [ಸಂ.]

ರಸಾಶ್ರಯ (ನಾ). ೧. ನೀರಿಗೆ ಆಶ್ರಯವಾದುದು. ೨. ಕಾವ್ಯರಸಕ್ಕೆ ಆಶ್ರಯವಾದವನು : ರೌಪದ್ಯಾ, ೧. ೨ : ಕ್ಷಿತಿಳದಂತೆ ರಸಾಶ್ರಯನ ಶರ್ಕ್ಷಸುಕವೀಂದ್ರವ್ಯವಹಾರವೆಂತೆ ವಿಶೇಷಾನ್ವಿತನಂಬರದಂತೆ ಸದಾವೃತ ನಂಬುಧಿಯಂತೆ ಪರಮಗಂಭೀರಗುಣಾ (ಪಪಪಪ. ೯-೪೨). [ಸಂ.]

ರಸಾಸ್ವಾದ (ನಾ). ರಸಾನುಭವವನ್ನು ಹೊಂದುವುದು ; ರಸವನ್ನು ಅನುಭವಿಸುವುದು : ಕಳಗೆಯಂ ಬಿಗೆಗೊಂಡ ರೂವು ಕುಸುಮಾಮೋದಂ ರಸಾಸ್ವಾದಮಗ್ಗಳವಪ್ಪಂಗಪಲಾಗಂ ತಳ್ಕೊಯ್ಯ ಪಂಚೇಂದ್ರಿಯಂಗಳೊಳ್ . . . ತನಿದಂ ಸುಖಾಖಾನಿಧಿಯೊಳ್ (ಪಾಂಚಿ. ೬-೦೨೬); ಮುಖಿಮಂಡಲಂ ಶಿಮ್ಮೋತ್ಸ ಗೀತಾಮ್ಮತರಸಾಸ್ವಾದ[ಪಪಾಂ. ರಸಾಕ್ಷರ]ಕ್ಕೆ ತೀವಿರ್ಪ ರತ್ನ ಖಚಿತಮಾಣಿಕ್ಯ ಕರಂಡಗೆಯಂ ಕಿರ್ದಪ್ಪದು (ಪಂಪ. ೧-೪೩) : ಅತ್ಯುತ್ಕಮ ಕಲಾವಿದ ತನ್ನ ಕೃತಿಯಲ್ಲಿ . . . ರಸಾಸ್ವಾದದಲ್ಲಿ ತಲ್ಲೀನವಾಗುವಂತಹ ಮನಸ್ಥಿತಿಯನ್ನು ಉಂಟು ಮಾಡಿ ಬಿಡುತ್ತಾನೆ (ಪಿಂಪಪ. ೭೩). [ಸಂ.]

ರಸಾಳ ' ' ರಸಾಲ ' ನೋ.

ರಸಿಕ (ಗು). ೧. ಸವಿಯಾದ ; ಮಧುರವಾದ : ಕತೆಗಾರ್ತಿಯರು 'ಹೆಣ್ಣಿನ ಬಾಳಿನ' ಕಣ್ಣೀರನ್ನು ರಸಿಕದಾಂಪತ್ಯದ ಮಧುರಹಾಸವನ್ನೂ . . . ಚಿತ್ರಿಸಬಲ್ಲರು (ಜಾಸ iii, ಮುಮ್ಮು). ; ಶಾರೀರಕ ಗುಣಧರ್ಮಗಳ ಸ್ಪುಟಗೊಂಡು ರಸಿಕಜೀವವು ಆರಂಭವಾಗುತ್ತದೆ (ಕ್ಷಶ. ೦೦೩). ೨. ಹಾಸ್ಯ ಮನೋಭಾವದ ; ವಿನೋದದೃಷ್ಟಿಭಾವದ : ಗಾದೆಮಾತನ್ನು ರೂಢಿಸಿದವಳು ಒಬ್ಬ ಕೋಮಲೆಯಾದ ರಸಿಕ ಮುತ್ತೈದೆಯೆ ಆಗಿರಬೇಕು (ದೇಚಕ್ಕ. ೦೯). (ನಾ). ೩. ರಸಾನುಭವ ಮಾಡಬಲ್ಲವನು ; ರಸಜ್ಞ : ರಸಿಕರ್ ಬಣ್ಣಿಸೆ ಭಾವಕರ್ ಪೊಗಟ್ [1] . . . ನಾಟ್ಯಮಂ (ತಿಕ್ಕಾ. ೦೨-೩೦) ; ರಸಿಕರೊಟಕ್ಕೆ ಏರಿದುಂ ಯೋಗ್ಯವಾಗಿಯಾ ಬೋನ ವೆಸರಂ ತಳೆದುದು (ಸ.ಚರಿತಾ. ೦-೬೦) ; ವಸುಧೇಶಂ ಮನುರಾಜಂ ರಸಿಕಂ ರಾಜೇಂದ್ರನೆಮಳಹಮ್ಮಿರನೆನಿಪ್ಪ ಸದ್ಬಿರುದಂಗಳ್ ಪರಿಸುಗುಂ (ಕಬ್ಬಿಗ. ೦-೨೯) ; ರಸಿಕನಾಡಿದ ಮಾತು ಶಿಶುವಿದಿಸಿ ಬಂದಂತೆ ರಸಿಕಲ್ಲದ ಬಜಿಮಾತು ತಿಗೆ ಕೂರ್ದಿಯು ಬಡಿದಂತೆ (ಸರ್ಪಕ್ಕ. ೦೩೩೦) ; ಕಾವ್ಯದ ಸಮಯವನ್ನು ಅರಿಯುವುದನು ರಸಿಕ (ಜಾವಿಸಾ. ೨೨೩). ೪. ಶೃಂಗಾರದಲ್ಲಿ ಆಸಕ್ತಿಯುಳ್ಳವನು ; ವಿಲಾಸಿ : ದಿಂಟಾದರವ್ವ ಡೊಂಕು ಚುಂಬಿಸಿದು ಹೊಂಕೆ ರಸಿಕಾ ಪೇಳೊ (ಹಂ. ೩೨-೦೨) ; ರಸಿಕ ನೆಂದರೆ ಭೋಗಿಯೆಂದು ಎಲ್ಲರೂ ಬಲ್ಲರು (ಜಾವಿಸಾ. ೧೩). ೫. ಮರ್ಮ; ರಹಸ್ಯ : ಕಪಾಲದ ಒಡಿದಾತನ ಕೈಯಲ್ಲಿ ಗುಣಗೊಳಗಾವರು ಆತ್ಮನ ರಸಿಕವನಱಿಯದ (ಹೀಗಸಾ. ೩೯-೨೯೩). [ಸಂ.]

ರಸಿಕತನ (ನಾ). ೧. ರಸಿಕನಾಗಿರುವಿಕೆ : ಪಾನಾದಿಗಳನೀಂಟುತ ರಸಿಕತನದಿಂ ಚಪ್ಪಿಜಿದ ದನಿಸೋಜಲು (ಜಸಿಚ. ೩೩-೦೩). ೨. ವಿಷಯ ಲಂಪಟತ್ವ : ಮೊದಮೊದಲಿಗೆ ರಸಿಕತನವೂ ಇತ್ತು ಮಾವಯ್ಯನಿಗೆ (ಕಷ್ಮಶ. ೫೦೯). [ರಸಿಕ + — ತನ]

ರಸಿಕತೆ (ನಾ). = ರಸಿಕತನ ೧ : ಪೊಸುಗೆ ಬಗೆ ರಂಜಿಪ ರಸಿಕತೆ ರಸಿಕತೆ ಕುಸಿವ ಪಸರಿಸುವ ರೀತಿ ರೀತಿಯಿನೆ ಮೆಚ್ಚದರಾರ್ (ತುಳಚಾ. ೦-೨೩) ; ಇನ್ನೆನಗೆ ನವಯೌವನಂ ಬಂದು ರಸಿಕತೆಯು ಬಗ್ಗೆಯುಕ್ಕುವುದೊಂದು ಅಚ್ಚರಿಯ ? (ಸಂದ್ರಚ. ೨೨-೦೦) ; ರಸಿಕತೆ ಬರಿಯ ವಿಲಾಸವಲ್ಲ. ಅದು ಹಿತವೂ ಮಿತವೂ ಆಗಿದ್ದರೆ ಜೀವನಪಥವನ್ನು ಸುಗಮವಾಗಿ ಮಾಡುತ್ತದೆ (ಸಂಗಾಕ. ೩೬೦). [ಸಂ. ರಸಿಕತಾ]

ರಸಿಕತ್ವ (ನಾ). = ರಸಿಕತನ ೧ : ನಿನ್ನ ಪಾಂಡಿತ್ಯಕ್ಕಲ್ಲಿಂದಮೈತಂದುದೀ ರಸಿಕತ್ವಂ ? (ಹಂಪ್ರಸ. ೪೦-೨೬). [ಸಂ.]

ರಸಿಕೆ ' ಲಸಿಕೆ ' ನೋ.

ರಸಿಗೆ ' ಲಸಿಕೆ ' ನೋ.

ರಸಿತ (ಗು). ೧. ರುಚಿ ನೋಡಿದ ; ಸವಿದ. ೨. ಗಿಲೀಟು ಮಾಡಿದ. ೩. ಧ್ವನಿ ಮಾಡಿದ ; ಕೂಗಿದ. (ನಾ). ೪. ಧ್ವನಿ ; ಕೂಗು : ಅನೇಕಾಕಾರವಿಕೃತಮರಕುಮಾರಜರಿಪತನಟನಮ್ಮದು ಕೂಜಿತ ರಸಿತದರಹಸಿತ . . . ವಾನಾವಿನೋದಂಗಳೊಳಂ (ಜಜಿ. ೯-೬ ಪ) ; ನೂಪುರಂಗಳ ದನಿಯಿಂ ಕುಸುಮೋಪಹಾರದಳಿಗಳ ರಸಿತಂ ದ್ವಿಗುಣಿತಾ ನೃಪಗೃಹಪ್ರಾಂಗಣದೊಳ್ (ಪ್ರಸ್ತಾ. ೯-೨೩). [ಸಂ.]

ರಸೀತಿ ' ರಶೀತಿ ' ನೋ.

ರಸೀದಿ ' ರಶೀತಿ ' ನೋ.

ರಸುಗೆ ' ಲಸಿಕೆ ' ನೋ.

ರಸುಮಿ. ರಸುಮೆ. ರಸ್ಮೆ (ನಾ). ಕಾಂತಿ ; ಪ್ರಭೆ : ರಸುಮಿ ತೋರಿತು ಮೂಡಣಾದ್ರಿಯ ಮೇಲೆ (ಮುಂಗಾ. ೨೨). ' ರಸುಮಿಸು ' ಪರಾ. **ರಸುಮೆ** : " ರಶ್ಮಿ — ರಸ್ಮಿ = ಕಿರಣಲೇಖೆ " (ಕ.ಪ್ರ.ಕೋ. ೩೯) ; ನಸುನಗೆಯ ಚೂಣಿಯಲಿ ವದನದ ರಸುಮಿ ರುಳಿಪಸೆ (ಜಾಪ್ರಾ. ೩-೮) ; ಎಲ್ಲಿ ನೋಡಿದೊಡಲ್ಲಿ ಮಿಂಚುಬುಳುಮಿವ ರಸುಮೆ (ಕಬ್ಬಳಿ. ೦೦-೩೬) ; ಸೂರ್ಯನ ರಸುಮೆಗಳು ಮಾಸಿದವು (ಜಜಾಗ. ೯-೦-೩೬). **ರಸ್ಮೆ** : ಚಂದದಿ ವಂಜನು ಹಿಡಿದು . . . ಚಂದ್ರನ ಕಿರಣ ಪ್ರಜ್ವಲಿಸುವಂದದಿ ರಸ್ಮಿಯಿಂದ ವರ್ಮದುದಾಸ್ಥಾನ (ಜಸಚ. ೩-೦೩). [< ಸಂ. ರಶ್ಮಿ]

ರಸುಮಿಸು (ಕ್ರಿ). ಬೆಳಗು ; ಪ್ರಕಾಶಮಾನವಾಗು : ವಜ್ರಸ್ತಂಭಗಳ ಕಂಡರಣಗಳೆಲ್ಲೊಪ್ಪಿರ್ದ ರಸುಮಿಪ ವಜ್ರಧಾರೆಗಳ . . . ವೈವಾಹಮಂಟಪ ವೆಸೆದುದು (ಜಂಸಂ. ೭-೨೪) ; ಕಡೆಗಣ್ಣ ನೋಟವೆಳನಗೆಯ ಮಿಸುಗಂ ರಸುಮಿಸುವ ಬಟ್ಟದೊಡೆ (ಪಂಪಭಾ. ೯-೪) ; ರಸುಮಿಪ ರವಿಯದ ಕ್ಕಂಕಣವಂಗಜವೆಸರಂ ಕಂಠಿಕೆ ರತಿವೆಸರಂ . . . ತಳೆದು (ಜಜಾಗ. ೭-೨೫). [ರಸುಮಿ + — ಇಸು]

ರಸುಮೆ ' ರಸುಮಿ ' ನೋ.

ರಸೆ (ನಾ). ೧. ವೆಲ ; ಭೂಮಿ ; ಧರೆ : "ಭೂಃ . . . ರಸಾ, ಕ್ಷಿತಿಃ . . . ಅಧಾರಾ — ಈ ೩೭ ಭೂಮಿಯ ಪೆಸರ್" (ಕಠಾಯು. ೫೯-೦) ; ರಸೆಯಂ ತಾಂ ತಾಂಕೆ ಕಲ್ಪಾಂತದ ಬಲುಸಿಡಿಲಯ್ತಂದು ಪೊಯ್ಯಲ್ [2] (ಶಾರಂಪು. ೭೦೦). ೨. ಅಧೋಲೋಕ ; ಪಾತಾಳ : ಎಳೆ ರಸೆಯೋಟ್ಟುದಂ ಭುಜಬಳದಿಂ ಮುನ್ನೆತ್ತಿದಂತೆ ವಿಜಯಾಂ ಬುಧಿಯೊಳ್ . ಮುಬುಗಿರ್ದೆವ್ಮಯ್ಯರುಮಂ ಬಳಿಪರ ಪಿಡಿದತ್ತಲೆಂದು ಬಂದೆ ಬರವಂ (ಪಂಪಾ. ೯-೦೩); ರಸೆಯಿಂ ಕಾಲಾಗ್ನಿರುದ್ರಂ ಪೊಜಮಡುವ ಪೊಲ್ (ಧರಾಶು. ೭-೩೦). ೩. ತದುಕಿನ ಗಿಡ ; ಆನೆಬೇಲ : "ಗಜಭಕ್ಷ್ಯಾ, ಸುಮಾ, ಸುರಭೀ, ರಸಾ . . . ಹ್ಯಾದಿನೀ – ೆ ತದುಕಿನ ಗಿಡದ ಹೆಸರು. ಆನೆಬೇಲ " (ಶಿಷ್ಯಿಂ. ೦೫೦). ೪. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ : ರಸೆ ಧರೆ ಇಳೆ ರೂಪಮ್ಮೆಕಮೊಂದಱ ನಾಮಂ (ಕ್ಷಕಷಾ. ೯). **ರಸೆಯರಸ** = ಭೂಮಿಯ ಒಡೆಯ ; ರಾಜ : ರಸೆಯರಸನಱ್ಕಿಯಂ ಪಾಲಿಸುವೊಡಾಂ ಜೀರವಸನಂ ಜಟಾಧಾರಿಯುಮಿ ವನಮಂ ಪೊಗುವೆ (ಪಂಆಣಾ. ೨-೬-೦೯). [ಸಂ. ರಸಾ]

ರಸಗಳ್ತಲೆ. ರಸಗತ್ತಲೆ (ನಾ). ದಟ್ಟವಾದ ಕತ್ತಲೆ ; ಕಗ್ಗತ್ತಲೆ : ಪೊದಳ್ದ ಪೆರ್ಗಳ್ತಲೆ ನಾಲ್ದೆಸೆಗಳ್ತಲೆ ಪೊಸಗಳ್ತಲೆಯುಸಿ ಕೂಡೆ ತೀವಿತು ತಿಮಿರಂ (ಗಿಂಕ. ೯-೬೬). **ರಸಗತ್ತಲೆ** : ಸಂಕೇತಸ್ಥಲಕ್ಕಿ ಬರಲೊರ್ವ ಜಾರೆ ರಸಗತ್ತಲೆಯೊಳಪಳನೆರ್ದಮನೀಳ್ಕುಳಿಗೊಳ್ವ ರಸಿಕಜಾರಂ ಬರುತಿರಲ್ಕೆ (ಜಸಚ. ೯-೬೩). ' ಭೂಚ್ಛಾಯೆ ' ಹೋ.

[ರಸೆ + ಕಳ್ತಲೆ (< ಕತ್ತಲೆ)]

ರಸೇಕ್ಷು (ನಾ). ಒಂದು ಬಗೆಯ ಕಬ್ಬು ; ರಸದಾಳಿ : ಇಕ್ಷು ಧವಳೇಕ್ಷು ಪುಂಡ್ರೇಕ್ಷು ರಸೇಕ್ಷು (ಅಚಿಕ. ೨೦೦). [ಸಂ.]

ರಸೇಶ್ವರ (ನಾ). ೧. ಪಾದರಸ ; ಪಾರದ. ೨. ಷಡ್ದರ್ಶನಗಳಿಗೆ ಹೊರತಾದ ಒಂದು ದರ್ಶನ: ' ರಸೇಶ್ವರಶೈವ ' ಪರಾ. [ಸಂ.]

ರಸೇಶ್ವರಶೈವ (ನಾ). [ಶೈವ] ಶೈವಮತದ ಎಂಟು ಭೇದಗಳಲ್ಲಿ ಒಂದು : ಶೈವಮತದಲ್ಲಿ ನಾವು ಎಂಟು ಪ್ರಭೇದಗಳನ್ನು ಕಾಣುಬಹುದು. ೧) ದ್ವೈತವಾಶುಪತ . . . ೬)ಸಂದಿಕೇಶ್ವರಶೈವ. ೭) ರಸೇಶ್ವರಶೈವ, ೮) ಕಾಶ್ಮೀರಶೈವ (ಶಾಶಿಪ. ೨೦೦). [ಸಂ.]

ರಸೋಕ್ತಿ (ನಾ). ೧. ರಸಭರಿತವಾದ ನುಡಿ ; ಸಾರವತ್ತಾದ ಮಾತು. ೨. [ಕಾವ್ಯಮೀಮಾ] ರಸಾಲಂಕಾರ : ವಕ್ರೋಕ್ತಿ ಸ್ವಭಾವೋಕ್ತಿ ರಸೋಕ್ತಿ ಪಾಕಲಾಲಿತ್ಯ . . . ಸೂತನೆಮಾಗೆ (ಗಿಂಕ. ೨-೦೦೫ ಪ). [ಸಂ.]

ರಸೋತ್ಪತ್ತಿ (ನಾ). ನವರಸಗಳಲ್ಲಿ ಯಾವುದಾದರೂ ಭಾವದ ಉತ್ಪತ್ತಿ,– ಆವಿರ್ಭಾವ : ಒದವಿದ ನಾಟಕದೊಳ್ ಕಾವ್ಯದೊಳೀಕ್ಷಿಸಿ ಪೇಳಲಾದ ಭಾವಾದ್ಯಿಯಪೊಳ್ಪೊದವೀಕ್ಷಿಪ ಕೇಳ್ವ ಸಭಾಸದ್ಗೆ ರಸೋತ್ಪತ್ತಿಯಂದಾ ಪೇಳ್ದರ್ ಪಿರಿಯರ್ (ಕಷ. ೦-೭). [ಸಂ.]

ರಸೋದ್ದೀಪನ (ನಾ). ಆನಂದವಾಗುವಿಕೆ ; ಸಂತೋಷವುಂಟಾಗುವಿಕೆ : ' ರಸೋದ್ದೀಪನಂಗೊಳ್ ' ಪರಾ. [ಸಂ.]

ರಸೋದ್ದೀಪನಂಗೊಳ್ (ಕ್ರಿ). ಆನಂದವನ್ನು ಹೊಂದು ; ರಸಾನುಭವವನ್ನುಪಡೆ : ಈ ಉದ್ಯಾನ ಶೋಭೆಗೆ ರಸೋದ್ದೀಪನಂಗೊಂಡು ಮೈಮರೆಯದಿರು (ಶಬ್ದಸ. ೩೦-೯). [ರಸೋದ್ದೀಪನ + ಕೊಳ್$_1$]

ರಸೋದ್ರೇಕ (ನಾ). ಆನಂದದ ಹೆಚ್ಚಳ ; ರಸದ ಉದ್ರೇಕ : (catharsis. ಶಾಬಿ. ೮೨). [ಸಂ.]

ರಸೋನಕ (ನಾ). ಬೆಳ್ಳುಳ್ಳಿ : " ಲಶುನಂ ಗೃಂಜನಸಂಜ್ಞಂ ರಸೋನಕಂ " (ಹಚ್ಚಶಬ್ದ. ೩೯-೩೬). [ಸಂ.]

ರಸೋಪಾಸಕ (ನಾ). ಕಾವ್ಯರಸಾನುಭವದ ಉಪಾಸನೆ ಮಾಡುವವನು: ರಸಜ್ಞ : ಹುಟ್ಟು ರಸೋಪಾಸಕನಾದ ಆತನು ತನ್ನ ದರ್ಶನವನ್ನು . . . ರಸ್ಯವಸ್ತುವನ್ನಾಗಿ ರೂಪಿಸುತ್ತಾನೆ (ಕಕ್ಕಾಗಾ. ೩೫೦). [ಸಂ.]

ರಸ್ತಾಳೆ ' ರಸದಾಳಿ ' ನೋ.

ರಸ್ತು ' ರಸದು ' ನೋ.

ರಸ್ತುಬಿಡು (ಕ್ರಿ). ಸೈನಿಕರಿಗೆ ಆಹಾರವನ್ನು ಸರಬರಾಜು ಮಾಡು ; ಸೇನೆಗೆ ಧಾನ್ಯವನ್ನು ಕೊಡು : ಅವರ ದಂಡಿಗೆ ರಸ್ತುಬಿಡದಂತೆ ಆಟಾವಳಿ ಮಾಡಿಸಿ (ಜಾಬಾಪಂ. ೩. ೩೩). [ರಸ್ತು (<ರಸದು) + ಬಿಡು$_1$]

ರಸ್ತುಮುಸ್ಕೈದೆ (ನಾ). ಆಹಾರಸಾಮಗ್ರಿ : ಜಕ್ಕರಿ ರಸ್ತುಮುಸ್ಕೈದೆಗಳೊಳಪುಗದಂತು ಕಂಡಿ ಕಣವೆ ಪಥುಗಳಂ ಕಟ್ಟಿ ಜೀರುಮುತ್ತಿಗೆಯಂ ರಚಿಪಲು (ಕಾಕ್ಕ. ೩-೧೩ ೩); ರಸ್ತುಮುಸ್ಕೈದೆಯು ಇಲ್ಲವಾಗಿ ಬಹಳ ಜನ ಮೃತವಾಗಿ ಹೋದರು (ಜಾಪಂಪ್ರ. ೨೩). [ರಸ್ತು (<ರಸದು) + ಮುಸ್ಕೈದೆ]

ರಸ್ತೆ (ನಾ). ದಾರಿ ; ಮಾರ್ಗ ; ಬೀದಿ : ರಾಜಧಾನಿಯಿಂದ ಆಶ್ರಮದವರೆಗಿರುವ ರಸ್ತೆಯು ಬಹಳ ದೂರ (ಜಾಬ್ಯಕ. ೦೩೯); ಅಲ್ಲಿಗೆ ರಸ್ತೆ ಇಲ್ಲ (ಬೌಅಗ. ೩೨೩). [← ಪಾರ. ರಾಸ್ತಹ್; ಹಿಂ. ರಸ್ತಾ, ರಾಸ್ತಾ ; ಮರಾ. ರಸ್ತಾ]

ರಸ್ತೆಸಾರಿಗೆ (ನಾ). (ರಸ್ತೆಯ ಮೇಲೆ) ಸಾಗಣಿಕೆಯ ಸೌಕರ್ಯಕ್ಕಾಗಿ ವಿಶ್ವಾಡಾಗಿರುವ ವಾಹನವ್ಯವಸ್ಥೆ : ರಸ್ತೆಸಾರಿಗೆ ಸಂಸ್ಥೆಯ ಕೆಲಸಗಾರರು ಸಂಪು ಹೂಡಿದ್ದಾರೆ (ಪ್ರಾಪ). [ರಸ್ತೆ + ಸಾರಿಗೆ]

ರಸ್ತೆ ' ರಸಂಮಿ ' ನೋ.

ರಸ್ಯ (ಗು). ೧. ರಸಭರಿತವಾದ ; ರಸವುಳ್ಳ : ರಸ್ಯಗುಣವೊಂದನ್ನು ಹೊರತು ಕವಿಯ ದರ್ಶನಕ್ಕೂ ಶಾಸ್ತ್ರಕಾರ ಕೀರ್ತಿಶಾಸ್ತ್ರಜ್ಞರ ದರ್ಶನಗಳಿಗೂ ಇರುವ ಅಂತರವು ಬಹಳ ಕಡಿಮೆ (ಅಂಶಾ. ೪೬). (ನಾ). ೨. ನೆತ್ತರು ; ರಕ್ತ. [ಸಂ.]

ರಹ$_1$ (ನಾ). ೧. ಏಕಾಂತಸ್ಥಳ ; ನಿರ್ಜನಪ್ರದೇಶ. ೨. ಏಕಾಂತತೆ. ೩. ಗುಟ್ಟು ; ರಹಸ್ಯ : " ಗುಹ್ಯ ರಹಮುಪಸ್ತ್ರಮಮು ರಹಸ್ಯಂ " (ಪೂಗಣಾ. ೦೨೯-೦೦) ; ಬಹುತಪವ ಕೈಕೊಂಬೆವೆಂಬೊಲು ರಹಕೆ ಸೇರದೆ ಮುಳುಗಿದುವು ವಿಷಾನುಗಳು ಕೊಳನೊಳಗೆ (ಕೀಗಣಮು. ೪-೬೩). ೪. ಗುಪ್ತಾಲೋಚನೆ : ಮಂತ್ರಿಯ ಗೃಹಕೆ ಕಳುಹಿಂದು ತಂದೆ ಮಕ್ಕಳು ರಹವ ಮಾಡಿದರು (ಕೂಪಾ. ೬-೦-೩೦). ೫. ಆಶ್ಚರ್ಯ : ಸೋಜಿಗ : " ರಹಮೆನಲತ್ಯಾಶ್ಚರ್ಯಂ " (ಜಾಪಂ. ೩೮) ; ವಿನು ನಿನ್ನಂಘ್ರಿವನಕೆ ನೀನಾರಾವರೇಂದ್ರರ ಸೆಱೆಯ ಬಿಡುಗಡೆಗೈಸನೆಂಬೆನು ರಹವನೆಂದನು (ಕುಪಾ. ೩-೩೨). [ಸಂ. ರಹಸ್]

ರಹ$_2$. **ರಹ್ಯ** (ನಾ). ೧. ತಂತ್ರ ; ಉಪಾಯ. ೨. ದಾರಿ; ಮಾರ್ಗ; ಹಾದಿ : ನಾಟ್ಯದ ಗೃಹಕೆ ಸೂಚನೆಗೊಟ್ಟು ನಿಮಿಷಕೆ ರಹವ ಮಾಡಿದರವರು (ಕುಪಾ. ೯-೩) ; ಹೊಗಳಲದೇಕೆ ನಿಂದಿಸಲೇಕೆ ನಿಮಗೆ ನಾ ಜಗಳವನ್ಕ ಬಂದವನೆ ಮಗಳನು ಕಡಿಸಿದನಿಗೆ ರಹವಜ್ಞಯದೆ ದೃಗುಯುಗದೊಳು ಕಿಡಿಯೇಕೆ (ಪೂಗಣ. ೩೩-೨೩) ; ಜನಗಳ ನೆಮ್ಮದಿಗೆ ಭಂಗವನ್ನುಂಟು ಮಾಡುವುದಕ್ಕೆ ಅವಕಾಶಕ್ಕೆ ರಹ ಇಲ್ಲದಂತೆ . . . ತಿಳಿಸುವುದು (ಗ್ರಾಪಾಚ. ೫೦). ರಹ$_3$: ೨. ' ರಹಿಗೆಡು ' ಪರಾ.

[← ಅರ. ಪಾರ. ಹಿಂ. ರಾಹ್ ; ಮರಾ. ರಹಾ]

ರಹಟ ' ಜುಟ್ಟು ' ನೋ.

ರಹಟಘಟಿಕಾನ್ಯಾಯ (ನಾ). [ತರ್ಕಶಾ] ಒಂದು ಬಗೆಯ ನ್ಯಾಯ ; ರಾಟೆ ಮತ್ತು ಅದರ ಗಡಿಗೆಗೆ ಸಂಬಂಧಿಸಿದ ನ್ಯಾಯ ; ಕ್ರಮವಾಗಿ ಪುನರಾವರ್ತನೆಯಾಗುವುದನ್ನು ಸೂಚಿಸುವ ನ್ಯಾಯ : ಅನುಸಂಧಾನಂಗಿಡದೈದನೆಯದು ದುಷ್ಷಮಮೆನಿಪ್ಪ ಕಾಲಂ ಬಟಿಕಾಜಿನೆಯದತಿ ದುಷಮಂ ವರ್ತನಮಿಂತೀ ತೆಱದೆ ರಹಟಘಟಿಕಾನ್ಯಾಯಂ (ಪಂಗಾಪ್ರ. ೦-೩೭). [ರಹಟ (< ಜುಟ್ಟು) + (ಸಂ. ಘಟಿಕಾ) + ನ್ಯಾಯ]

ರಹಟಘಟೀಯಂತ್ರ (ನಾ). ಬಾವಿಯಿಂದ ನೀರೆತ್ತುವ ಸಾಧನ : ರಾಟೆ : ರಹಟಘಟೀಯಂತ್ರಂಗಳ್ ಬಹುವಿಧವಿಭ್ರಮದಿನೆಸೆವುವುಪಶಲ್ಯಕದೊಳ್ (ಕಪ್ಪ. ೩-೩೦). [ರಹಟ (< ಜುಟ್ಟು) + ಘಟೀಯಂತ್ರ]

ರಹಣ (ನಾ). ಓಡಿಹೋಗುವುದು ; ಪಲಾಯನ : ರಕ್ಕಸರಾಯು ಭೈರವನಾದನಹಾ ಕೈಯ ಮುಚ್ಚಿದನೇನ ಹೇಳುವೆ ರಹಣವಾಯ್ತೆಂದು (ಗೀಶಾ. ೨೨-೩೦).

ರಹಣದಾಕಾರ = ಭದ್ಮವೇಷ್ಟ ; ಮಾರುವೇಷ : ಆ ಮಹಾಸಭೆಯೂ ರಹಣದಾಕಾರದಂಗಳಲಿ ವಿಗ್ರಹವಲಾಯನನಾಟಕವ ನಿರ್ವಹಿಸಿದಿಂದ್ರಾದಿಗಳು (ಅಪ್ರಕಾ. ೯-೮೩). [ಸಂ.]

ರಹಣೆ (ನಾ). ೧. ಸಾಲು ; ಸರಣಿ : "ರಹಣೆಯೆನಲ್ ಸರಣಿ" (ಜಾಅಕ. ೫೦) ; ಗಹಗಹಿಸಿ ನಗೆ ನಗುವ ನಗೆಗಳ ರಹಣಿಗಳಿಗೊಳಗಾದನಲ್ಲಾ (ಜಪಕ್ಷ. ೨೮-೨೦) ; ಲಹರಿ ಮಸಗಿದುದತ್ತ ಕಾಂತಾಟಹಳಪಾರಾವಾರ . . . ಗಹಗಹಿಕೆ ಮಿಗೆ ಅಟ್ಟಹಾಸದ ರಹಣಿಗಳ (ಉಬ್ಯಾಉ. ೦೭-೦೯) ; ಅಹುದಲೇ ವಾಲ್ಮೀಕಿ ಕವಿತೆಯ ರ[ಜಾಕಾಚ. ವ]ಹಣಿ ಲೇಸ್ಕೆ (ಕೂಲಾಣಾ. ೦-೨-೦೭). ೨. ನಟನೆ ; ಅಭಿನಯ : ಹಯಮಂ ತಡೆದ ರಹಣಿ ರಾಯರ ಮುಂದೆ ಹೋಗೆಂದು ದುಷ್ಕೃತಿಯ ಕುಹಕದಿಂ ಬೈದು (ಕೃಬಾಕಾ. ೦೭-೩೩). ೩. ಉಪಾಯ ; ತಂತ್ರ : ಕಾಮನ ಮಹಿಮೆಯಿಂದೆ ಪರವಧುವಿನ [ಮನ್ನು] ರಯನೆಯಿಂದೆ ಜನ್ನ ಬಗೆಗೆ ಬಹಪೊಲೆಸಗುವಳು ಸಮರ್ಥದೂತಿ (ಜಪಕ. ೦೬-೩). [← ಮರಾ. ರಹಣೇ, ರಹಾಣೇ]

ರಹಣೆಕಾಜಿ (ನಾ). ನಟನೆ ಮಾಡುವವನು ; ನಟ : ಗರ್ದಭಗಳಂತೊದೆದಾಡಿ ರಹಣೆಕಾಜಿರವೊಲು ಕೆಲದು ಮಹಿಷನಂದದಿ ನೋಡಿ ಕುದುರೆವೊಲ್ಕೂಡುವ ಮಹಿಯ ರೊಟ್ಟಿಗನ ವರ್ತನವೆ (ಪಪಕ. ೩೦-೦೦೨). [ರಹಣೆ + — ಕಾಜಿ]

ರಹದಾರಿ (ನಾ). ೧. ಅನುಜ್ಞಾಪತ್ರ ; ಪರವಾನೆ : ಮಡಕೆಯನು ಬಡಿದು ಹೊಸ್ ಕೊಡವ ಜೋರುವ ಸಪನೆ ಪಡೆದಿಪೆಯ ರಹದಾರಿಯನು ಹೊನ್ನ ಗಣಕೆ ? (ಪಂಅಗ. ೩೬೨) ; ಪ್ರಾಚೀನ ಕರ್ನಾಟಕದಲ್ಲಿ ಈಗಿನ ರಹದಾರಿ (Pass-Ports)ಗಳನ್ನು 'ಉಂಡಿಗೆ'ಗಳೆಂದು ಕರೆಯುತ್ತಿದ್ದರು (ಕಶಾಇ. ೩೩೬). ೨. ರಸ್ತೆ ; ಮಾರ್ಗ : ಮೈಸೂರಿಗೆ ಹೋಗಬೇಕಾದ್ದಕ್ಕೆ ಒಳ್ಳೆ ರಹದಾರಿ ಮಾಡಿ (ಜಾಪಂಪ್ರ. ೦೨೬); ಎಡಬದಿಯ ದೊಡ್ಡಬಯಲನ್ನು ದಾಟಿ ರಹದಾರಿಗಳಿಂದ ದೂರಯೋಗಿ ಸಣ್ಣದಿನ್ನೆಯೊಂದರ ಮೇಲೆ ಕುಳಿತುಕೊಂಡೆವು (ಮುಶ್ಕಿ. ೩೬). [← ಪಾರ. ಹಿಂ. ರಾಹದಾರೀ ; ಮರಾ. ರಹದಾರೀ]

ರಹದಾರಿಚೀಟಿ 'ರಹದಾರಿಚೀಟು' ನೋ.

ರಹದಾರಿಚೀಟು, ರಹದಾರಿಚೀಟಿ (ನಾ). (ಒಂದು ಸ್ಥಳದಿಂದ ಹೊರ ಹೋಗಲು ಅಥವಾ ಒಂದು ಸ್ಥಳದ ಒಳಗೆ ಬರಲು ಪಡೆಯ

ಬೇಕಾದ) ಅಪ್ಪಣೆಚೀಟಿ ; ಅನುಮತಿಪತ್ರ : ಮೂಡುೞೆದೆ ಹೊಗು ವಂಥಾ ಜನರಿಗೆ ರಹದಾರಿಚೀಟು ಕೊಡಬೇಕು (ಶಾಸಂಪ್ರ. ೨೬೦) **ರಹದಾರಿಚೀಟಿ** : ನಗರದಿಂದ ಯಾರೂ ಮುದ್ರೆ ಒತ್ತಿದ ರಹದಾರಿಚೀಟಿಯಿಲ್ಲದೆ ಹೊರಕ್ಕೆ ಹೋಗದಂತೆ ತಡೆಯಲ್ಪಟ್ಟರು (ಪಾಕತಿ. ೦೪೮).

[ರಹದಾರಿ + ಚೀಟು]

ರಹವಾಸಿ ' ರಹಿವಾಸಿ ' ನೋ.

ರಹಸಿಯ (ನಾ). ಗುಟ್ಟು ; ರಹಸ್ಯ : ರಹಸಿಯದ ಬುಗ್ಗೆಯದು ಭಿಮ್ಮಿತಿಹುದಲ್ಲರೊಳು (ಜಂಬುಕು. ೨೦೩).

[< ಸಂ. ರಹಸ್ಯ]

ರಹಸ್ಯ (ನಾ). ಗುಟ್ಟು ; ಗೋಪ್ಯ ; ಮರ್ಮ : "ಗುಪ್ತರಹಸ್ಯಮುಪಜ್ಞ ರಮದು ರಹಸ್ಯಂ " (ಜಾಂಗಂ. ೦೫೯-೦೦) ; ನಿರ್ಮಳದ ಧರ್ಮಸ್ಥಿತಿ ರಹಸ್ಯವ ತಿಳುಪಿದವರಾರ್ (ಭಾಷ್ಯ. ೦೭-೦೪); ಇವಪ ರಹಸ್ಯವನಿನ್ನು ಮಾರಯಲು . . . ಇಂತೆಂದನು ಜಾನಪನಂ ಕುರಿತು (ಗಪಚ. ೯-೨೨೩).

[ಸಂ.]

ರಹಾಟಿ ' ಹುಟ್ಟು ' ನೋ.

ರಹ್ಮಿ (ನಾ). ೧. ರೀತಿ ; ವ್ಯಕಾರ ; ಬಗೆ : ''ರಹಿಯೆಂದೊಡದೀ ಪ್ರಕಾರ'' (ಜಾಪ. ೫೮) ; ತಾರಾಗಣದ ಮಧ್ಯದ ಚಂದ್ರಮನ ಹೊಯ್ದಣ ಲೊಳಪಿನ ರಾಹುವಿನ ರಹಿಯಾಯ್ತು ನಿನಿಷದಲಿ (ಭಾಷ್ಯ. ೫೫-೨೯) ; ವಂದಿಗಳ ವೈತಾಳಿಕಾಮರವ್ಯಂದ ಸೂಸುವ ಪುಷ್ಪವೃಷ್ಟಿಗಳಿಂದ ದಿಕ್ಕೆ ಮಳಮಯಿಸೆ ಪರಮೋತ್ಸವದ ರಹಿಗಳಲಿ (ಜಜಾಗ. ೩-೭-೩೭). ೨. ಸಡಗರ ; ಸಂಭ್ರಮ ; ಉತ್ಸಾಹ : ರಾಣಿಯರೆ ರಹಿಯಿಂದ ರಂಜಿಸಿ ಜಾಣನಲಿ ಬಹಿವರಸ ನಿಮ್ಮಿಯಾಣೆಯೆಂದೊಡಬಡಿಸಿದರು (ಭಾಷ್ಯ. ೦೭-೨೭) ; ಮೊಳಗಿದವು ಘನಗಂಭೀರಭೇರಿಗಳಬ್ಧಿದಲಿ ನಾರಿಯರ ಪೆಣ್ಣಿದ ಪರಮೋತ್ಸವದ ರಹಿ ಮಿಗಲು (ಜಜಾಗ. ೯-೦೦-೩೩). [< ಹಾ. ರಹ]

ರಹ್ಯೆ ' ರಹ್ಯೆ ' ನೋ.

ರಹಿಗೆಡು (ಕ್ರಿ). ದಾರಿ ಕಾಣದಾಗು ; ದಿಕ್ಕು ತೋರದಂತಾಗು : ಮಹಿಯೊಳ್ ಭೂಸುರವೇಷದಿಂದ ಕಲಿಯುಲ್ ಕರ್ಣಂ ಧನುರ್ವೇದಮಂ ರಹಿಗೆಟ್ಟುಂ (ಸೋಭೂಪ. ೮೨). [ರಹ್ಯೆ (< ರಹ್ಯ) + ಕೆಡು]

ರಹಿತ (ಗು). ೧. ಇಲ್ಲದ. (ನಾ). ೨. ಬಿಡುಮಿಕೆ ; ತ್ಯಜಿಸುವಿಕೆ : ' ನಿಯಮರಹಿತ ' ಪರಾ. [ಸಂ.]

ರಹಿತಾಳು (ನಾ). ಪಾಪವಿಲ್ಲದವನು ; ನಿಷ್ಕಳಂಕ : ಸುಹಿತಾಚಾರನು ದಾರಲಾಳ ಮಲಧಾರಿಖ್ಯಾತವಾಮಾಂತೆ[೦] ರಹಿತಾಳಂ ಪರಮದ್ಯಸೇನ ಮುನಿಪಂ (ಶಾಶಾ. XX. ೨೦೩-೨೬; ೧೨೬೭). [ಸಂ.]

ರಹಿತಾನುಕೂಲೆ (ನಾ). ೧. ಅನುಕೂಲೆಯಲ್ಲದವಳು. ೨. ದಂಡೆಯನ್ನು ಬಿಟ್ಟು ಹರಿಯುವ ನದಿ. ೧, ೨ : ಪರವಂತೆ ಧನದಸುನಿವರತ್ನದಂತೆ ಗುಣವಿರಹಿತೆ ಸುರಾಚಾರ್ಯನಂತೆ ಗತಸೌಮ್ಯೆ ಸ್ವರುಚಿ ಖುತು ನಿಮ್ನಗಾರಯದಂತೆ ರಹಿತಾನುಕೂಲೆ (ಪಂಪ. ೦೦-೭೬).

[ಸಂ. ರಹಿತಾನುಕೂಲಾ]

ರಹಿತು (ನಾ). ರದ್ದು ; ವಜಾ : ಏನು ಸರಹರಿ ! ಈ ವರ್ಷ ಕಾಲೇಜಿಗೆ ಹೋಗುವುದನ್ನು ನೀನು ರಹಿತು ಮಾಡಿದಿಯಾ ? (ಪಮಾಪ್ರ. ೦೪೮).

[< ರಹಿತ]

ರಹಿವಾಸಿ, ರಹವಾಸಿ (ನಾ). ವಾಸಿಸುವವನು ; ನಿವಾಸಿ : ಅಂಣಾ ರಾಯರಾದರೂ ಅಲ್ಲಿಯ ಮೂಲ ರಹಿವಾಸಿಗಳಲ್ಲ (ಪಾಅಚೋ. ೬) ; ಇಲ್ಲಿಯ ರಹಿವಾಸಿಗಳು ಕನ್ನಡ ಮಾತೃಭಾಷೆಯವರು (ಪೀಚಿ. ೩೪). **ರಹವಾಸಿ** : ನಾವೂ ಪುಣೆಯ ರಹವಾಸಿಗಳಾಗುತ್ತೇವೆ ! (ಪಮಾಪ್ರ. ೪೭೬).

[← ಮರಾ. ರಹಿವಾಸೀ]

ರಹಿಸು (ಕ್ರಿ). ಇರು ; ವರ್ತಿಸು ; ಉಂಟಾಗು : ಸೂಳೆಯರೇಕಪುರುಷರಲ್ಲಿ ವಿಹರಿಸುವರೇ ಲೋಕಧರ್ಮದೆ ರಹಿಸಿ ರಹಿಸುವುದ್ಯೆಸಲೇ (ಶಾಶ್ಯಾ. ೨೨-೨೩) ; ಪಾರದನ ತುಂಬುರನ ಸಂಗೀತ ರಹಿಸೆ ರಂಭಾ ರಮ್ಯನರ್ತನ ಕಣ್ಗಸೆಯೆ ನೀಲಕಂಧರನಲ್ಲಿ ನ್ಯೆದೋಜಿಪ (ಪಾಂಪಚ. ೦೭-೬೭).

[ರಹ್ಯ + — ಇಸು]

ರಹೋಭ್ಯಾಖ್ಯಾನ (ನಾ). [ಜೈನ] ಸತ್ಯಾಣುವ್ರತದ ಐದು ಅತಿಚಾರಗಳಲ್ಲಿ ಒಂದು ; ಗಂಡ ಹೆಂಡಿರ ವಿಕಾಂತದ ವಿಷಯಗಳನ್ನು ಬಹಿರಂಗಪಡಿಸುವುದು : ಜಾನಾ ವಿಭ್ಯೋಪದೇಶಂ ಪುದಿದೊದವಿದ ಸಾಕಾಯಮಂತ್ರಂ ರಹೋವ್ಯಾ[ಭ್ಯಾ]ಖ್ಯಾನಂ ನ್ಯಾಸಾಪಹಾರಕ್ರಮಮನುಗತಿಯಿಂ ಕೂಟಲೇಖಕ್ರಿಯಾವಿಜ್ಞಾನಂ ಸತ್ಯವ್ರತಕ್ಕಿಂತೆವು ಪರಿವಿಡಿಯಿಂ ದಮ್ಮುತೀಚಾರಮಕ್ಕುಂ (ಜಬೆಚಾಪ್ರ. ೬-೦೪). [ಸಂ.]

ರಳೆ ' ಟಬು ' ನೋ.

ರಾಉತ ' ರಾವುತ ' ನೋ.

ರಾಉತ್ತ ' ರಾವುತ ' ನೋ.

ರಾಂಕವ (ಗು). ೧. ರಂಕು ಎಂಬ ಜಿಂಕೆಯ ಕೂದಲಿನಿಂದ ಮಾಡಿದ ; ಸುಕುಮಾರವಿಚಿತ್ರರಾಂಕವಾಸ್ತರಣಂಗಳಿಂದಲಯುಂ . . . ಶೋಭಿಸುವ (ಜಾಣಕ. ೨-೦೭-೩೪). (ನಾ). ೨. ರಂಕು ಎಂಬ ಜಿಂಕೆಯ ಕೂದಲಿನಿಂದ ಮಾಡಿದ ವಸ್ತ್ರ. ಕಂಬಳಿ. ಶಾಲು ಮುಂತಾದುವು: "ರಾಂಕವಂ. ಮೃಗರೋಮಜಂ–ಮೃಗರೋಮಗಳಿಂದ ಮಾಡಲ್ಪಟ್ಟ ಶಾಲು . . . ಮುಂತಾದುವುಗಳಗೆ ಪೆಸರುಗಳು" (ಕಣ್ಣಂಕ. ೨೦೨). [ಸಂ.]

ರಾಂಡಬಾಜ (ನಾ). ವ್ಯಭಿಚಾರ ; ಸೂಳೆಗಾರಿಕೆ : ಹೆಣ್ಣಿನ ಸಹವಾಸಕ್ಕೆ 'ರಾಂಡಬಾಜ'ವೆಂದೂ ಆಗದವರು ಕರೆಯುವ ವಾಡಿಕೆ (ಜಾಮಂಕ. ೦೮೨).

[← ಹಿಂ. ರಂಡೀಬಾಜೀ ; ಮರಾ. ರಾಂಡಬಾಜ್]

ರಾಂಡಬಾಜತನ (ನಾ). = ರಾಂಡಬಾಜ : ನನುಷ್ಯ ಕಳವುಮಾಡಿ ಬದುಕುತ್ತಾನೆ ; ರಾಂಡಬಾಜತನ ಮಾಡಿಯೂ ಹೆಸರುಮಾತ್ಸಾನೆ (ಜಆಚ. II. ೨೬೦). [ರಾಂಡಬಾಜ + — ತನ]

ರಾಕಟಿ ' ರಾಕಡಿ ' ನೋ.

ರಾಕಡಿ, ರಾಕಟಿ, ರಾಕಟೆ, ರಾಕುಡಿ, ರಾಗುಟಿ, ರಾಗುಟೆ, ರೇಗಟಿ, ರೇಗಟೆ, ರ್ಯಾಕಟಿ, ರ್ಯಾಕಟೆ, ರ್ಯಾಕಡೆ, ರ್ಯಾಗುಟೆ (ನಾ). ತಲೆಯಲ್ಲಿ ಧರಿಸುವ ಒಂದು ಬಗೆಯ ಆಭರಣ : ಜಡೆಬಿಲ್ಲೆ : " ರಾಕಡಿ . . . ಹೆಣ್ಣುಮಕ್ಕಳ ತಲೆಯ ಆಭರಣ" (ಜಾಪಕೋ. ೨೦). **ರಾಕಟಿ** : ಶೃಂಗಾರವಾದ ಜಡೆಭಂಗಾರ ಹೊಂಗ್ಯಾದಿಗೆ ಮುಡಿದ ಭಂಗಾರದ ಹರಳಿನ ರಾಕಟಿ [ಜಾಪಾ. ಗುಟಿ] (ಪ್ರಭಂದ. ೦-೦೪೦-೩). **ರಾಕಟೆ** : ಮುತ್ತಿನ ಮೂಗುತಿ ಕೆತ್ತಿದ ವಾಲೆಯು ಇತ್ತರಾ ಬುಗುಡಿ ಪೆತ್ತಿಗರಳೆ ಚಿನ್ನದ ರಾಕೆಟಿ (ಜಾಂಕೀ. ೦-೭೩-೦೩). **ರಾಕುಡಿ** : ಸ್ತ್ರೀಪಾತ್ರಜೆವರು ರಾಜುಡಿ, ಚಂದ್ರವಂತಿ, ಜಡೆ- ಅಡ್ಡಬಿಸೆ ಮುಂತಾದ ಹಳೇಆಭರಣಗಳನ್ನು ತೊಟ್ಟುಕೊಳ್ಳುತ್ತಾರೆ (ಜಾಕ್ಯ. ೭೦). **ರಾಗುಟಿ** : ಬಿಚ್ಚೋಲೆ ರಾಗುಟಿಗೆಡೆದ ಭೋರೆಂದೆಂಬ ನಿಡುನರವಿಗಳನೀಕ್ಷಿಸಿದ (ಪ್ರಚಾಣಾ. ೨-೭೭). **ರಾಗುಟೆ** : ಅಯ್ಯೋನ್ನಯ . . . ಬುಗುಡಿ ರಾಗುಟಿಮೆ (ಪ್ರಭಕ. ೭-೭) ; ಹೆರಳು ರಾಗುಟೆ ಜೌರಿ ಗಿಂಗಳೆಡಾಲಕ (ಜಾಪಾಂ. ೪೪). **ರೇಗಟಿ** : ರೇಗಟಿ, ಕೇದಗೆ . . . ಮೊದಲಾದ ಆಭರಣಗಳು (ಪಂಪಾಂ. ೩೮). **ರೇಗಟೆ** : ಕುರುಳು ರೇಗಟೆ ಕರ್ಣಪತ್ರವು ಮೆರವ ಕಾಂಚನ ಪೂವ್ವೆ ಬರಳೊಳಗಿಟ್ಟು ಮುದಿಕೆ (ಜಪಾ. ೦೯-೩) - **ರ್ಯಾಕಟಿ** : ಕುವರಿಯಳಯಸಿತ ಮುಡಿದಲಿಗೆ ರ್ಯಾಕಟಿಯನಮರ್ಚಿ (ಪಪಾಂ. ೨೪-೩೪). **ರ್ಯಾಕಟೆ** : ಮೇಲೆ ರ್ಯಾಕಟೆ ಜೌರಿ ಮುಡಿದ ಕುಸುಮವು (ಜಬಾಕ್ಷ. ೦೦-೩) ; ರ್ಯಾಕುಟಿ ಜೌರಿ ಶಕಜಡೆ ಭಂಗಾರವು (ಜಪಾಂ. ೦೩೭). **ರ್ಯಾಕಡೆ** : ಹಿಂಗಲು ಹಾಡದ ಜೌರಿ ರ್ಯಾಕಡೆಯ ಗೊಂಡೆ (ಪಾಂಪ. ೪೦-೦೦). **ರ್ಯಾಗುಟೆ** : ಪದ್ಮರಾಗ

ಮಣಿಯ ರ್‍ಯಾಗಟಿಯ ಬಿಲ್ಲೆಯಂ ಬಿಗಿದು (ತೌಗಂ. ೨೦೦–೦೯) ; ಕಾಲ್ಮಾಳ್ ವೇಣ ಮ್ಮಾಲೆ ರ್‍ಯಾಗಟೆಯ ಸಂದು ಕೀಲಿಸಿದ (ಪಪಮು. ೪೩–೨೪) .

[ದೇ.॥ ತಮಿ. ರಾಕ್ಕಟಿ, ರಾಕ್ಕಿಟಿ, ರಾಕ್ಕುಟಿ; ತೆಲು. ರಾಕಿಡಿ, ರಾಗಿಡಿ./ ಮರಾ. ರಾಖಡೀ]

ರಾಕರಿ (ನಾ). ಕಲ್ಲುಗುಡ್ಡೆ : ಈ ಒಂದೆ ಹೂವು ಜರ್ಮರಾ. ಮರದ ಬುಡದ ರಾಕರಿಯಲ್ಲಿ ಮೂಡಿ ಕಣಿಪುರ್ತ್ಯದಲ್ಲಿ ನಾಚುತಿರುವ ನರ್ಜರಾ ಬಿಂಬಾಧರದಪ್ಪಲಾ ! (ಪಪೇ. ೦೯–೦೩) ; ತುಂಬುಜಾತಿ ರಾಕರಿಗಳಲ್ಲಿ ಬೆಳೆಸಲು ಉಪಯುಕ್ತವಾಗಿವೆ (ಗಿಪಿಪ. I, ೬೪೯). [← ಇಂ. Rockery]

ರಾಕಾಚಂದ್ರ (ನಾ). ಪೂರ್ಣಚಂದ್ರ ; ಹುಣ್ಣಿಮೆಯ ಚಂದ್ರ : ತಾರೆಗಳ ಸಮೂಹದೊಂದಿಗೆ ಬರುವ ರಾಕಾಚಂದ್ರನಂತೆ ತರುಣಿರನ್ನೆಯರ ಮೊತ್ತದಲಿ ನಾಯಕಲಾಲೆಗೆ ಬಂದನು (ಗಿಪಾಗಿ. ೦೬೬). [ಸಂ.]

ರಾಕಾಸ ' ರಕ್ಕಸ ' ನೋ.

ರಾಕಾಸಿ ' ರಕ್ಕಸಿ ' ನೋ.

ರಾಕುಟಿ ' ರಾಕಡಿ ' ನೋ.

ರಾಕುಡಿ ' ರಾಕಡಿ ' ನೋ.

ರಾಕೆ (ನಾ). ೧. ಪೂರ್ಣಚಂದ್ರನಿರುವ ದಿನ : ಹುಣ್ಣಿಮೆ : 'ಚಂದ್ರಂ ನೆಟ್ಟನೆ ನೆಜಿದು ಬಿಂಬದಿಂ ಪೂರ್ಣನಾಗೆ ರಾಕಾಖ್ಯೆ ಪೌರ್ಣಮಾಸಿಯದಕ್ಕುಂ'' (ಪಚ್ಚ ಕೋ. ೦೬–೯). ೨. ಮೊದಲನೆಯ ಬಾರಿ ಋತುಮತಿಯಾದ ವಳು ; ಮೈನೆರೆದ ಹುಡುಗಿ : "ಕನ್ಯಕಿಯಾಗಿ ಮುಟ್ಟಮೆಗೊಂಡವಳ ರಾಕಾಯೆಂಬುದು " (ಪಣಾಚು. ೪೦–೪೯). [ಸಂ. ರಾಕಾ]

ರಾಕೆಟ್ ' ರಾಕೆಟ್ಟು ' ನೋ.

ರಾಕೆಟ್ಟು, ರಾಕೆಟ್ (ನಾ). ೧. ಒಳಗಿನ ಮದ್ದನ್ನು ಹೊತ್ತಿಸಿದವುದ ರಿಂದ ಮೇಲಕ್ಕೆ ಹಾರಬಲ್ಲ ಲೋಹದ ಅಥವಾ ಕಾಗದದ ಉರುಳೆ ಯಾಕಾರದ ಕೋಶ ; ಪಟಾಕಿಯಲ್ಲಿ ಒಂದು ಬಗೆ : ಆಕಾಪಾಣ. ರಾಕೆಟ್ಟು (Rocket- ಚಿಕ್ರಿ. ೭೦) **ರಾಕೆಟ್** : ೨. ಕ್ಷಿಪಣಿ : ಅಮೆರಿಕನ್ನರು ತಮ್ಮ ಮರಿಚಂದ್ರನನ್ನು ಹಾರಿಸಲು ಜೂಪಿಟರ್ ಎಂಬ ರಾಕೆಟ್ ಉಪಕರಣಗಳನ್ನು ಉಪಯೋಗಿಸಿದರು (ಅಾಇ. ೮೬). [← ಇಂ. Rocket]

ರಾಕೇಂದು (ನಾ). = ರಾಕಾಚಂದ್ರ : ಒಪ್ಪುವ ಸುಕುಮಾರಂಗೆ . . . ರಾಕೇಂದುವದನ ಶ್ರೀಕಾರರ್ಣಾದ . . . ಗೌರೀದೇವಿಯೆಂಬ ತರುಣಿಯಂ ಮದುವೆಯಂ ಮಾಡಿ (ಪಮ್ಮಕ. ೫–೩೨ ಪ).

ರಾಕ್ಷಸ (ಗು.) ೧.ರಕ್ಕಸರಿಗೆ ಸಂಬಂಧಿಸಿದ. ೨. ಬಯಂಕರವಾದ ; ಅಮಾನುಷವಾದ : ' ರಾಕ್ಷಸಮೌನ ' ಪರಾ.(ನಾ). 2 ದೇವತೆಗಳ ಶತ್ರು ; ದೈತ್ಯ ; ದನುಜ : ಕ್ರಿಯೆ ಇಲ್ಲದ ಭಕ್ತ ಮನುಜ ಕ್ರಿಯೆ ಇಲ್ಲದ ಜಂಗಮ ರಾಕ್ಷಸ (ಪಪ. ೩೫–೩೬) ; ತತೋಯೋಗ್ಯರಲ್ಲಿ ದೈತ್ಯ, ರಾಕ್ಷಸ, ಪಿಶಾಚ ಮನುಷ್ಯಾಧಮ ಎಂದು ಐಲಕ್ಕ ಪ್ರಕಾರಗಳು (ಕಂಪಾ. ೨೫೬). ೪. ನೈಋತ್ಯದಿಕ್ಕಿನ ಅಧಿಪತಿ ; ನೈಋತಿ : " ಧಾತ್ರು, ಯಾತ್ರುಧಾನಃ, ಕ್ರವ್ಯಾತ್, ರಾಕ್ಷಸಃ . . . ಕೈಕಸೇಯಃ — ಈ ೯ ನೈಋತಿಯ ಪೆರ್ " (ಪಣಾಚು. ೦೩–೭೩). ೫. ಎಂಟು ಬಗೆಯ ವಿವಾಹಗಳಲ್ಲಿ ಒಂದು ; ಕನ್ಯೆಯ ಬಂಧುಗಳನ್ನು ಸೋಲಿಸಿ, ಬಲಾತ್ಕಾರವಾಗಿ ಅವಳನ್ನು ಕೊಂಡೊಯ್ದು ಮಾಡಿ ಕೊಳ್ಳುವ ವಿವಾಹ. ೬. ಅರುವತ್ತು ಸಂವತ್ಸರಗಳಲ್ಲಿ ಐವತ್ತನೆ ಯದು : ಪ್ರಭವ . . . ರಾಕ್ಷಸ . . . ಅಕ್ಷಯವೆಂದಿಂತು ತೀಜನಾಗಿ ಹುದು (ಪಚಕ. ೨೬೬). ೭. ಒಂದು ಬಗೆಯ ಕತ್ತಾಳೆ : ಹಂದಿಗಳಿಗೆ ರುಚಿಯಾದ ಆಹಾರ ರಾಕ್ಷಸನ (ಕತ್ತಾಳೆ) ಗೆಡ್ಡೆ (ಕ್ಕೃಶಾ. ೭೯). [ಸಂ.]

ರಾಕ್ಷಸಗಣ (ನಾ). [ಜ್ಯೋತಿ] ನಕ್ಷತ್ರಗಳ ಮೂರುಗಣಗಳಲ್ಲಿ ಒಂದು ; ರಾಕ್ಷಸವರ್ಗಕ್ಕೆ ಸೇರಿದುವೆಂದು ಭಾವಿಸಲಾದ ನಕ್ಷತ್ರಗಳ ಗುಂಪು : ॥ ಕೃತ್ತಿಕೆ. ಆಶ್ಲೇಷೆ. ಮಘೆ. ಚಿತ್ತೆ. ವಿಶಾಖೆ. ಜ್ಯೇಷ್ಠ, ಮೂಲ. ಧನಿಷ್ಠೆ ಮತ್ತು ಶತಭಿಷೆ ಇವು ಒಂಬತ್ತು ಸೇರಿ ರಾಕ್ಷಸಗಣ : ದೇವ ಗಣ ರಾಕ್ಷಸಗಣಂಗಳ್ ಕೂಡಿದೊಡೆ ಅಧಮಂ (ಕೋಕೋಚ. ೫–೦೩ ಚಿಗಿ). ' ದೇವಗಣ ' ಪರಾ. [ಸಂ.]

ರಾಕ್ಷಸಬಾಳೆ (ನಾ). ಒಂದು ಬಗೆಯ ಬಾಳೆ ; ರಕ್ಕಸಬಾಳೆ ; ದೆವ್ವ ಬಾಳೆ : ರಾಕ್ಷಸಬಾಳೆಯ ಹೂವಿನ ಬಳಬಲ್ಲಿರುವ ಕಾಯಿಗಳನ್ನು ಬೇಯಿಸಿ (ಸೂಪಹಾ. ೪–೩೩ ಆಪಿ). [ರಾಕ್ಷಸ + ಬಾಳೆ (< ಬಾಟೆ)]

ರಾಕ್ಷಸಭೇದಿ (ನಾ). ರಾಕ್ಷಸರನ್ನು ನಾಶಪಡಿಸಿದವನು ; ವಿಷ್ಣು : ರಾಕ್ಷಸಭೇದಿಯಂಗುಷ್ಮಸಂಭವೆ . . . ಪರಮಪಾವನೆಯ ನೀಕ್ಷಣೆಗೆಯ್ದು ಮನ್ಮಥನು (ಪೋಚಕ. ೬–೩೨). [ಸಂ. ರಾಕ್ಷಸಭೇದಿನ್]

ರಾಕ್ಷಸಮೌನ (ನಾ). ಭಯಂಕರವಾದ ನಿಶ್ಶಬ್ದತೆ ; ರಣಮೌನ : ಹಿಂಸ್ರಸ್ ಮತ್ತು ಶಕ್ತಿಯರೊಂದಿಗೆ ಹೊರಡುವವರಿಗೆ ರಾಕ್ಷಸಮೌನವನ್ನು ಅವಲಂಬಿಸಿ . . . ವಿಂತಿರಬೇಕು (ಶಿವ್ಯಕ್ರ. XLVI. ೫೫೫). [ಸಂ.]

ರಾಕ್ಷಸಸತ್ವ (ನಾ.) [ಕಾಮ ಶಿ] ಸ್ತ್ರೀಯರ ಹನ್ನೆರಡು ಬಗೆಯ ಸ್ವಭಾವಗಳಲ್ಲಿ ಒಂದು ; ರಾಕ್ಷಸರ ಮನಸ್ಸಿನಂತೆ ಕ್ರೂರವಾಗಿರುವ ಮನಸ್ಸು : ದೇವಸತ್ವ . . . ರಾಕ್ಷಸಸತ್ವ ಹಿನ್ನೆರಸತ್ವ ಖರಸತ್ವವೆಂಬ ದ್ವಾದಶಸತ್ವದ ಸತಿಯರಿಂ (ಪಪಚಿ. ೦೫೩). [ಸಂ.]

ರಾಕ್ಷಸಾಂಶಕೆ (ನಾ). ೧. ರಾಕ್ಷಸೀ ಅಂಶವನ್ನು ಪಡೆದವಳು. ೨. ಕ್ರೂರಳಾದ ಹೆಂಗಸು : ಕರಂ ಕೋಪಮುಂ ಪುಯಿಯುಂ ವಿಡಂಬದ ಪಾಜು ಗೆಯ್ವಸಮುಗ್ರವಿದ್ರೂಪಮುಂ × × × ಕ್ಕಪೆ ರಾಕ್ಷಸಾಂಶಕೆಯೆಂದು ನೀಸಜಿ ಧೂರ್ತಯಂ (ಪಚಕ. ೬–೨). [<ಸಂ. ರಾಕ್ಷಸಾಂಶಕಾ]

ರಾಕ್ಷಸಿ (ನಾ). ೧. ರಾಕ್ಷಸರ ಹೆಣ್ಣು ; ರಕ್ಕಸಿ : ರಾಕ್ಷಸಿಯೆ ತಿಂಬೆ ನೀನೇಕೆಮ್ಮನು (ಪಣಾಗ. ೦೦–೭೭–೯೯); ನವಿಚಯಂ ಮೊರದವೋಲಗು ರ್ವಾದುದಾ ಸ್ಮೃರರಾಕ್ಷಸಿಗೆ (ಕ್ರಿಣಾಪಾ. ೫೯೯–೩೦೨); ಅವಳಿಗೆ ಆಯುಧ ಧಾರಿಣಿಯರಾದ ವಿಕೃತರಾಕ್ಷಸಿಯರು ಹಗಲೂ ಇರುಳೂ ಕಾವಲಾಗಿದ್ದರು (ಪಪಾ. ೨೦೬). ೨. (ಆಲಂ) ಕ್ರೂರಳಾದ ಹೆಂಗಸು : ದುಷ್ಟೆ : ಆ ಮೊಮ್ಮಗನನ್ನು ಹಡೆದ ಮೇನಕಿ—ಅವರು ಕ್ಷಮಿಸಲಾರದ ರಾಕ್ಷಸಿ (ಪಪಚಿ. ೨೦೦). ೩. ಒಂದು ಬಗೆಯ ಸಸ್ಯ : ಕರಿಯ ಕಜೋರೆ : "ರಾಕ್ಷಸೀ, ಚಂಡಾ . . . ಗಣಹಾಸಕಃ — ೬ ಕರೀಕಜೋರೆ, ಬಲರಾಕ್ಷಸೀ ಗಡ್ಡೆ" (ಕಾಡ್ಯಂಕ. ೦೨೦). ೪. [ಸಂಗೀತ] ಒಂದು ರಾಗದ ಹೆಸರು : ನೀಲೋತ್ಪಲಿನಿ . . . ರಾಕ್ಷಸಿ [ಪಾಣಿಚ. ರಕ್ಕಸಿ] . . . ಇಪ್ಪತ್ತೆರಡು ಕ್ರಿಯಾಂಗದಿಂದಾದ ರಾಗಂಗಳು (ಪಪಗೀ. ೦೦೬). [ಸಂ. ರಾಕ್ಷಸೀ]

ರಾಕ್ಷೆ (ನಾ). ಕೆಂಪುಬಣ್ಣಕ್ಕಾಗಿ ಉಪಯೋಗಿಸುವ ಒಂದು ಬಗೆಯ ಅರಗು ; ಲಾಕ್ಷೆ : "ಲಾಕ್ಷೆ. ರಾಕ್ಷಾ . . . ದ್ರುಮಾಮಯಃ— ೬ ಅರೆನ ಮೆಸರ್ಗಳು. ಕೆಂಪರಗು". (ಕಾಣ್ಯಂಕ. ೨೦೭). [ಸಂ. ರಾಕ್ಷಾ]

ರಾಖಿ (ನಾ). ಶ್ರಾವಣಶುದ್ಧಪೌರ್ಣಮಿಯಂದು, ಸೋದರತ್ವದ ಸಂಕೇತವಾಗಿ ಕೈಗೆ ಕಟ್ಟುವ ರೇಷ್ಮೆಯ ದಾರ; ರಕ್ಷಾಬಂಧ : ಅಮರು ಯವನೊಬ್ಬ ಬಲಾಢ್ಯರಾಜನ ಕಡೆಗೆ 'ರಾಖಿ' ಯನ್ನು ಕಳಿಸಿ, ಅತನ ಸಹಾಯವನ್ನು ಯಾಚಿಸುತ್ತಿದ್ದರಂತೆ (ಹಂಶಾ. ೬೫೬); ಅಕಯು ರಾಜಪುತ್ರರ "ರಾಖಿ" ಎಂಬ ಪದ್ಧತಿಯಂತೆ ಹುವಾಯೂನನ ಸಹೋದರತ್ವವನ್ನು ಪಡೆದಿದ್ದಳು (ಕಟ್ಟೋಚ. ೦೫೦). [← ಹಿಂ. ಮರಾ. ರಾಖೀ./ಸಂ. ರಕ್ಷಾ]

ರಾಗ (ನಾ). ೧. ಬಣ್ಣ ; ರಂಗು : ಮೌಕ್ತಿಕ ಉಂಡ ಜಲಕ್ಕೆ ರಾಗ ಉಂಟೇ ಅಯ್ಯಾ (ಪೋಚಮಾ. ೦೦೬–೪೯). ೨. ಕೆಂಪುಬಣ್ಣ : ತನ್ನ ರಾಗಮಂ ರಾಗಿಗಳ್ಗೆಲ್ಲಂ ಪಚ್ಚುಕೊಟ್ಟಂತೆ ಕೆಂಪು ಪತ್ತುವಿಟ್ಟಾಗಳ್ (ಪಂಪಭಾ. ೪–೩೦ ಪ); ಅಧಿಕತರ ರಾಗದೀಧಿತಿನಿಧಾನಮವಲೆಸವ ಚಕ್ರಚರಣಾಂ ಬುಜಮಾ ಮಧುಕ್ಲೇಟಭಮದಮರ್ದನರುಧಿರಾರುಣಚಕ್ರಿಚರಣಮಂ ನೆನೆಯಾ

ಸುಗುಂ (ಕಾಡಪು. ೨೭); ಎನೆವಲತಗೆಯುಂ ಪೊರೆದ ಮೆಲ್ಲುದಿಯ ನಡೆಸು ಬೆದಂಗಿನೊಂದು ಭಾವದಿಂ ವೆಲೆವಬಿಯ ಕಲ್ಲಳ್ಗಿ. ರಾಗವಾನೊಡರ್ಚಿಯುಂ (ಚಾಪಪ್ರ. ೫೯-೯). ೩. ಒಲುಮೆ ; ಅನುರಾಗ ; ಆಸಕ್ತಿ : ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊದರ್ವುದಂ- . . ಸತಿ ಕಂಡೊಸೆದಳ್ ವಿಶಾಂತದೊಳ್ (ಶಂಕಪ್ರ. ೦-೦೮೦); ರಾಗವೇ ಮೂಡಲು ಜೋಗವೆ ಬಡಗಲು ರೋಗವದು ಶುದ್ಧ ಪಡುವಲು ತಂಕಲು ಭೋಗದ ಬೀಡು (ಸೆರಕ್ಕ. ೦೬೦೬). ೪. ಹಿಗ್ಗು ; ಸಂತೋಷ : ಅಂದಱಿವಟ್ಟು ರಾಗದ ತವರ್ಮನೆ (ಎಳ- IV, ಹರಿವಂ. ೦೩೬-೪೭; ೧೧೩); ಲೋಕಪಿತನೊಲ್ದು ಚತುರ್ಮುಖನೀಗೆ ರಾಗಮಂ (ಪಗಿ. ೦-೨). ೫. ಬೆಲುವು; ಸೊಬಗು. ೬. ವೀರ್ಯ ; ರೇತಸ್ಸು : ರಾಗಮೆಂಬುದು ರೇತಸ್ಸಿಗೆ ಪೆಸರು (ಶಾಖಾಗ. ೨೪೨). ೭. [ಸಂಗೀತ] ಇಂಪಾಗುವಂತೆ ಹೊಂದಿಸಿದ ಸ್ವರಗಳ ಮೇಳೈಕೆ : ಶ್ರೋತೃವಿನ ಮನಸ್ಸಿಗೆ ರಂಜಿಪೆಮಾಂಱಾಗುವ ರೀತಿಯಲ್ಲಿ ಸ್ವರಗಳು ಮೇಳೈಸಿದರೆ ರಾಗವಾಗುತ್ತದೆ. ರಂಜನೆಯನ್ನುಂಟು ಮಾಡುವುದು ರಾಗದ ಗುಣ (ಸಂಗೀಪಾ. ೨೨) ; ಭೈರವಿ ಪೂರ್ವಯಾಮದ ರಾಗ. ಸೂರ್ಯ ಮೂಡುವ ಮೊದಲು . . . ಹಾಡಿದರೆ ಆ ರಾಗ ಸಿದ್ಧಿಸುತ್ತದೆ (ಪಂಗೀಪ್ರ. ೦೪೦). ೮. [ಶೈವ] ಶೈವಾಗಮದ ಮೂಲತ್ತಾರು ತತ್ತ್ವಗಳಲ್ಲಿ ಒಂದು : ಶಿವ, ಶಕ್ತಿ . . . ವಿದ್ಯಾ, ರಾಗ, ನಿಯತಿ . . . ಭೂಮಯ (ಇವು ಶೈವಾಗಮವಲ್ಲಿರುವ ತತ್ತ್ವ ಸಂದೋಹಗಳು) (ಪಾಪ್ರ. ೩೩ ೦೩೬).

ರಾಗತೆಗೆ = ೧. (ಅಲಂ) ಅಳು ; ರೋದಿಸು : ಆ ಮಗು ರಾಗತೆಗೆಯುತ್ತು ಅಂದರೆ ಅದು ಸಲ್ಲಿಸುವುದಿಲ್ಲ (ಪಾಪ). ೨. ಅಪಸ್ವರ ನುಡಿ; ಅಪಶಕುನ ಹೇಳು : ಹಿಳ್ಳಿಯದಕ್ಕೆ ನೀನು ರಾಗತೆಗೆಯಬೇಡ, ಸುಮ್ಮನಿರು (ಪಾಪ). ೩. ನೆವ ತೆಗೆ ; ತಕರಾರು ಮಾಡು : ಗಂಡಿನವರು ಒಪ್ಪಿಗೆ ಕೊಡದೆ ರಾಗತೆಗೆದರು (ಪಾಪ). [ಸಂ.]

ರಾಗಂಗೆಡು, ರಾಗಗೆಡು (ಕ್ರಿ). ೧. ಪ್ರೀತಿಯಿಲ್ಲವಾಗು ; ಆಸಕ್ತಿಯಿಲ್ಲವಾಗು : ಮನದೊಳ್ ರಾಗಂಗೆಟ್ಟು ಕೆಲಂಬರ್ ಮೂಗಂ ಮುಚ್ಚಿದರ್ (ಕರ್ಣಾಮ್ಯ. ೧-೦೩೦). **ರಾಗಗೆಡು** : ೨. ಸಂತೋಷವಿಲ್ಲವಾಗು : ಬಿಳಕ ಮರಳಿದು ರಾಗಗೆಟ್ಟಾ ಲಲನೆಯರು ಗೋಕುಲಕಿ ಪುದನವುಲಿಯರಾ ನಿತ್ಯಾತ್ಮರಾಮರು ನಡೆದರುರವಣಿಸಿ (ಅಥಗ. ೦೦-೪೪-೩೦). [ರಾಗ + ಕೆಡು$_1$]

ರಾಗಂಬೇಡು (ಕ್ರಿ). ಪ್ರೀತಿಯನ್ನು ಹೊಂದು ; ಒಲುಮೆಯನ್ನು ತಾಳು : ಪುಸ್ಸ ಪರ್ತ್ಕಕ್ಕೆ ಇಂದುಮೌಳಿಯ ಪಿನವಿಂದವೆ ಬಂದ ಸಂದೇಶವು ಹೃದಯದೊಳಿಪ್ಪಂತರಾಗಂಬೆಟ್ಟು ಹಾನೆಯ್ದುಪ್ಪ ಬರವಿಂಗೆ (ಪಚ. ೨-೩೩). [ರಾಗ + ಪೆಜು$_1$]

ರಾಗಂಬೊರೆ (ಕ್ರಿ). ಬಣ್ಣದಿಂದ ಲೇಪಿತವಾಗು ; ವರ್ಣಮಯವಾಗು : ರಾಜಕಂ ಬೇಗಮೆಜಗೆ ತನ್ನೆಪಪುಕುಟಸ್ಫುರಣಗಳಿಂ ಧರೆ ರಾಗಂ ಬೊರೆದಂತೆಸೆದತ್ತು ರಾಜಭವನಾಂಗಣದೊಳ್ (ಪಾಂಚಿಪ. ೩-೦೦೩). [ರಾಗ + ಪೊರ್ಕೆ$_2$]

ರಾಗಗೆಡು ' ರಾಗಂಗೆಡು ' ನೋ.

ರಾಗಟೆ ' ರಾಕಡಿ ' ನೋ.

ರಾಗಧರ (ನಾ)· ಒಂದು ಬಗೆಯ ಪಕ್ಷಿ : ಟಿಟ್ಟಿಭ ಕುಕಿಲ ತುಱುಮಣ್ಣಿಂ ಹಂಸೆ ರಾಗಧರನೆಂಬ ಪಕ್ಷಿಗಳ ದನಿಯಿಂ ಕರೆಯಲು (ಪಪಾ- ೩-೮೨). [?]

ರಾಗಮಾಲಿಕೆ (ನಾ)· ೧. ಒಂದು ಬಗೆಯ ವಾದ್ಯ ; 'ಮೌತ್ ಆರ್ಗನ್' ಎಂಬ ವಾದ್ಯ. ೨. [ಸಂಗೀತ] ಒಂದು ಕೀರ್ತನೆಯ ಹಲವು ಚರಣಗಳಿಗೆ ಬೇರಬೇರೆ ರಾಗಗಳನ್ನು ಅಳವಡಿಸಿ ಹಾಡುವ ಒಂದು ಪ್ರಕಾರ : ಒಂದು ಪಲ್ಲವಿಯನ್ನು ರಾಗಮಾಲಿಕೆಯಲ್ಲಿ ಕಟ್ಟುವುದು ಸಾಧ್ಯ (ಸಂಗೀಕೆ. ೪೯) ; ಇವುಗಳಲ್ಲಿ ಒಂದೊಂದು ಭಾಗವೂ ಪ್ರತ್ಯೇಕರಾಗಗಳಲ್ಲಿ ಹಾಡಲ್ಪಡಲು ಪ್ರಾರಂಭವಾಗಿ ರಾಗಮಾಲಿಕೆಯೇ ಆಯಿತು (ಸಂಗೀಪ್ರ. ೭೭). [ಸಂ. ರಾಗಮಾಲಿಕಾ]

ರಾಗಮಾಲಿನಿ (ನಾ)· ಒಂದು ಬಗೆಯ ತಂತೀವಾದ್ಯ : ವಿವಂಚಿಕೆ . . . ರಾಗಮಾಲಿನಿ . . . ಮೂವತ್ತುಮೂಱು ತಂತೀವಾದ್ಯಂಗಳು (ಪಪಾ- ೨೭೭). [ಸಂ. ರಾಗಮಾಲಿನೀ]

ರಾಗರಸ (ನಾ). ಪ್ರೇಮಾನುರಾಗ ; ಪ್ರಣಯಾಭಿಲಾಷೆ : ಶ್ರೀಗೆ ಕುಳ್ಳದನಪೆನೆ ತೋಳ ಪುಣಿಭವನದೊಳ್ ರಾಗರಸಮೊಂದಿ ಸರಸಿರುಹ ಸಮವದಮೊಳ್ (ಆದಿಪು. ೬-೨೭ ಹಿಗ್ಗೆ). [ಸಂ.]

ರಾಗರಸಿಕ (ನಾ). ಪ್ರೀತಿಯಲ್ಲಿ ಆಸಕ್ತನಾದವನು ; ರಸಜ್ಞ : ಅನ್ನದ ಸಮಸ್ಯೆಯನ್ನು ಬಿಡಿಸಿದವ ರಾಗರಸಿಕನಾಗುಬಲ್ಲ (ಸಮಚಾ. ೩೦೭). [ಸಂ.]

ರಾಗವಿಡಿ (ಕ್ರಿ)· ಬಣ್ಣವೇರು ; ಕಾಂತಿಗೂಡು : ಸೋಗೆದುಱುಬಿನ ಶೃಂಗಾರದಾಭರಣದ ರಾಗವಿಡಿವ ತನುಲತೆಯ ಪೂಗಣೆಯನ ಮಘವಲಗಿ ಪಂತಸೆಪಳು (ಕಂಪ್ರ. ೨೦-೬೯). [ರಾಗ + ಇಡಿ$_3$]

ರಾಗಾಂಧತೆ (ನಾ). ಮೋಹದಿಂದ ಮುಂದನ್ನು ಕಾಣದಿರುವಿಕೆ : ವ್ಯಾಮೋಹದಿಂದ ವಿವೇಕರಹಿತವಾಗಿರುವಿಕೆ : ಸಾಂಸಾರಿಕವಿಳಾಸಂ . . . ಶಾಶ್ವತಮೆಂಬೆ ಬಗೆದು ರಾಗಾಂಧತೆಯುಂ ಗತಿಗಿಡುವರೇಂ ವಿಚಿತ್ರಮೊ ಕರ್ಮಂ (ಜಂಪ್ರಕೃ. ೪-೩೨). [ಸಂ. ರಾಗಾಂಧತಾ]

ರಾಗಾಧರೆ (ನಾ)· ಕೆಂಪಾದ ತುಟಿಯುಳ್ಳವಳು ; ಬಿಂಬಾಧರೆ : ಪಾಡುವ ರಾಗಾಧರೆಯರ ರಾಗರಸಪೂರಂ ಮೇರೆದಪ್ಪಿ ಮೇಲ್ವರಿಯೆ (ಚಾಪ್ರ. ೦೬-೪೩ ಪ). [ಸಂ. ರಾಗಾಧರಾ]

ರಾಗಾಲಾಪನ (ನಾ). [ಸಂಗೀತ] ನಿರ್ದಿಷ್ಟರಾಗವನ್ನು ಸಾಹಿತ್ಯವಿಲ್ಲದೆ ವಿಸ್ತಾರವಾಗಿ ಹಾಡುವುದು : ರಾಗಾಲಾಪನಲೀಲಸಂ ನವ ನವೋತ್ಕರ್ಷಾನನಾಂಭೋರುಹಂ (ಪಪ್ರ. ೪-೦೩೦) ; ರಾಗಾಲಾಪನಪದ್ಧತಿಯಲ್ಲಿ ಎರಡು ಕ್ರಮ—೧. ಅಷ್ಟಪ್ರಕೃಮ. ೨. ರಾಗವರ್ಧಿನಿ ಕ್ರಮ (ಸಂಗೀಪ್ರ. ೫೯) [ಸಂ.]

ರಾಗಾಲಾಪನೆ (ನಾ). = ರಾಗಾಲಾಪನ : ಮಹಾವೈದ್ಯನಾಥಅಯ್ಯರ್ ಅವರು ತಮ್ಮ ಏಳನೆಯ ವಯಸ್ಸಿನಲ್ಲಿಯೇ ರಾಗಾಲಾಪನ ಮತ್ತು ಪಲ್ಲವಿಯನು ಹಾಡುವ ಸಾಮರ್ಥ್ಯವನ್ನು ಪಡೆದುಕೊಂಡಿದ್ದರು (ಸಂಗೀಪ್ರ. ೩). [ಸಂ. ರಾಗಾಲಾಪನ]

ರಾಗಾವಲಂಬ (ನಾ). ರಾಗದ್ವೇಷಗಳಿಗೆ ಒಳಗಾದವನು; ವಿಷಯಾಸಕ್ತ : ನೀವು ಸುಪ್ಪದಯರಿಂದಂ ದುರ್ಜನರಾವ ನೀವ್ನೀರಾಗಿಗಳು ರಾಗಾವಲಂಬರು ನಾವಲೇ (ಕುಣ್ಡ. ೦೩-೩೩). [ಸಂ.]

ರಾಗಾವಳಿ (ನಾ)· ಒಂದು ಬಗೆಯ ಕೆಂಪುಬಣ್ಣದ ಬಟ್ಟೆ : ಪೊಪ್ಪಳಿಯು ಶಿಗುಳಿ ರಾಗಾವಳಿಯ ರತ್ನಾವಳೀಧಾವಳ್ಯ ದಿವ್ಯತಾರಾವಳಿಯ ಗಗನ ಮಾರಾವಳಿಯು ವಿಯರುಪ ಪೇಹ್ರಾವಳಿಯು ಮುಪ್ಪಿನಾನಾವಿಧದ ಸೀರೆಗಳ . . . ಬೇತನಿತ ತಗವು (ಪಪಚೋ. ೦೬-೩೦).

[<ರಾಗ + ಪಳ್ಳ (<ಪಟ್ಟಿ)]

ರಾಗಾವಿಲ, ರಾಗಾವಿಳ (ಗು)· ೧. ಕೆಂಪುಬಣ್ಣದಿಂದ ಕೂಡಿದ. ೨. ಮೋಹದಿಂದ ಮಲಿನವಾದ ; ಅತಿಯಾದ ಮೋಹಕ್ಕೆ ಒಳಗಾದ : ಯೋಗಂ ಮೂಗಾವುದವೆನೆ ರಾಗಾವಿಲಚಿತ್ರರಾಗಿ ಕುತ್ತದ ಬೇರಂ ನೀಗಲ್ಕರಿಯದರುಂ ನಿಜರೋಗಕ್ಕೌಷಧಮನೀತನೆಡೆಯೊಳ್ ಪಡೆವರ್ (ಪಪ್ರಕಂ. ೬೦). (ನಾ)· ೩. ಕೆಂಪುಬಣ್ಣದಿಂದ ಕೂಡಿದವನು. ೪. ಮೋಹದಿಂದ ಮಲಿನವಾದುದು ; ಅತಿಮೋಹಕ್ಕೆ ಒಳಗಾದುದು : ರಾಗದ್ವೇಷ ನಿಬಂಧಮಪ್ಪ ಕೃತಿಯಂ ನಿರ್ಬಂಧದಿಂ ಬಂಧಮಿಂದಾಗರ್ಥಂ ಪೊಸತಾಗೆ ಪೇಳ್ದಿಲಮಂ ರಾಗಾವಿಲಂ[ಪಾಣಾಂ.೪೦] ಮಾಟ್ಟ ವಿದ್ಯಾಗರ್ವಗ್ರಹ

ಓ:ನಿತರ್ (ಕಂಣಪಚ. ೦-೩೨). ೫. ಮೋಹಕ್ಕೆ ಒಳಗಾದ ವ್ಯಕ್ತಿ : ಮೋಹದಲ್ಲಿ ತೊಡಕಿಕೊಂಡವನು : ರಾಗಾವಿಲ[ಪಾಣಾಂ.ಳ]ರಿಂಪದ್ಗತ ರಾಗದರಾರೆಂದು ' ದಶ ಬುಪಂಗಜ್ ಭವಪ್ಪೀಲ್ ಆಗಸದಿನಪರಸಂಧ್ಯಾ ರಾಗಾವಿಲ[ಪಾಣಾಂ. ಳ]ನರ್ಕನಪರವಾಧಿಗಿಚ್ಚಿದಂ (ಕಂಣಪಚ. ೯-೦೮೬).

ರಾಗಾವಿಳ : ಪಿ, ಪೆ : ಸಕಲಂ ರಾಗಾವಿಳಂ ಪೀಡಿತಕುವಲಯನೆನ್ಮಾರ್ಗ ಸಂಸ್ಕೃನುನ್ಮೂಚಿತಪಾರ್ಶ್ವತ್ವಂ ಸಭಾರ್ದರ್ಶನರುಚಿ ವಿರದಂಡಪ್ರಿಯುಂ ತಾನೆನಿಪ್ಪಾ ಕ್ಷಿತಿಪಂಗೆ (ಕಂ೨ಕ. ೨-೨೫). [ಸಂ.]

ರಾಗಾವಿಳ ' ರಾಗಾವಿಲ ' ನೋ.

ರಾಗಿ$_1$, **ರಾಳಿ** (ನಾ). ಒಂದು ಬಗೆಯ ವಿಕದಳಧಾನ್ಯ : "ಧೂಳಿಕಂ ರಾಗಿಯೆದು" (ಕುಂಗಣಿ. ೦೦೦-೪) : ವರಕೊಜ್ಜರಾಮಂಗಳನರೆದೊಂದಾ ಗಿರಲು ಪಾಲೊೞ್ವುದು ಮತ್ತಂ ಪರಿಪರಿವೆದಾಕ್ಷಣಂ ತಾಂ ಧರೆಯೊಳ್ ರಾಗಿಯು ವಿಪಂಗಳಂ (ಪಪಾಪ. ೨-೦೩೨) ; ರಾಗಿ ತಂದಿರ್ಯಾ ಭಿಕ್ಷೆಕೆ ರಾಗಿ ತಂದಿರ್ಯಾ (ಪ್ರಬಂಧ. ೦-೭೯ ಪದ್ಯ) ; ರಾಗಿಯನು ಉಂಬುವ ನರೋಗಿ ಎಂದೆನಿಸುವನು ರಾಗಿಯು ಭೋಗಿಗಳಿಗಲ್ಲ ಬಡವರಿಗಾಗಿ ಬೆಳೆದಿಹುದು (ಸರಕ್ಕ. ೨೦೨೩). **ರಾಳಿ** : ವ್ಯವಸಾಯವ ಮಾಡಿ ರಾಳಿಯ ಬಿತ್ತುವ ಹೊಲ (ಶಾಖಂ. ೧೯೩೧, ತೆಂಗಸೂಕು. ೧೫೬-೦೦ ; ೨೬೨೦).

ರಾಗಿಬೀಸು = ೧. ರಾಗಿಯನ್ನು ಬೀಸಿ ಹಿಟ್ಟು ಮಾಡು : ರಾಗಿ ಬೀಸುವಾಗ, ಗದ್ದೆ ನಾಟಿಮಾಡುವಾಗ , . . ಹಾಡುವ ಹಾಡುಗಳೆಲ್ಲು ಅವಳು ಕಲಿತವುಗಳೇ (ಪಪಾಕು. ೨೫) ; ರಾಮದಾಜ್ಯವಾದರೂ ರಾಗಿ ಬೀಸುವುದು ತಪ್ಪಲಿಲ್ಲ (ನಾಡ). ೨. (ಆಲಂ) ಅನುಭವ ಪಡೆ : ಪಕ್ಕ ಗೊಳ್ಳು : ನೀನೆನ್ನೂ ಒಹಳ ರಾಗಿಬೀಸಬೇಕು (ಕ.ಪ).

ರಾಗಿಮಾಸಿ = ರಾಗಿಯಿಂದ ತಯಾರಿಸುವ ಮಸಿ—ಶಾಯಿ : ರಾಗಿಯನ್ನು ಹುರಿದು ಸೀಯಿಸಿ ಪುಡಿಮಾಡಿ ನೀರಿನಲ್ಲಿ ಕಲಸಿ ಅದಕ್ಕೆ ಗೋಂದಸ್ನೂ ಸಕ್ಕರೆಯನ್ನೂ ಅಂಟಾಗಿ ಸ್ವಲ್ಪ ಮಿಶ್ರಮಾಡಿ ಅದನ್ನು ಬರವಣಿಗೆಗೆ ಉಪಯೋಗಿಸುತ್ತಿದ್ದರು. ಇದಕ್ಕೆ ರಾಗಿಮಸಿ ಎಂದು ಹೆಸರು (ಕಪ್ರಸಂ. ೪೪). **ರಾಗಿಮುದ್ದೆ** = ರಾಗಿಯ ಹಿಟ್ಟನ್ನು ಬೇಯಿಸಿ ಮಾಡುವ ಮುದ್ದೆ : ಹಿಟ್ಟು : ರಾಗಿಮುದ್ದೆ ಮೈಗೆ ತುಂಬ ಪುಷ್ಟಿಯನ್ನು ಕೊಡುವ ಆಹಾರ (ಕ.ಪ). **ರಾಗಿಯ ಪದ** = ರಾಗಿ ಮುಂತಾದುವನ್ನು ರಾಗಿ ಕಲ್ಲಿನಲ್ಲಿ ಬೀಸುವಾಗ ಹಾಡುವ ಹಾಡು : ಮುಂಗೋಳಿ ಕೂಗಿ ತೆಂದರೆ ನನ್ನೂರಿನ ಎಲ್ಲ ಮನೆಗಳಲ್ಲಿಯೂ ರಾಗಿಕಲ್ಲಿನ ಶ್ರುತಿಯೊಡನೆ ಸೇರಿ ಕೇಳಿಬರುವ ರಾಗಿಯ ಪದಗಳು (ಪಪಾಕು. ೨೦). **ರಾಗಿರೊಟ್ಟಿ** = ರಾಗಿಯ ಹಿಟ್ಟಿನಿಂದ ತಯಾರಿಸುವ ರೊಟ್ಟಿ : ರಾಗಿಹಿಟ್ಟು, ರಾಗಿ ರೊಟ್ಟಿ, ರಾಗಿದೋಸೆ ಇತ್ಯಾದಿ . . . ಉಟ ಮಾಡುವುದರಿಂದ ದೇಹಕ್ಕೆ ಕ್ಯಾಲ್ಸಿಯಂ ದೊರಕುತ್ತದೆ (ಗೃಪ. ೨೦) ; ಹೆಂಗಸರು ರಾಗಿರೊಟ್ಟಿಗಳನ್ನು ತಟ್ಟಿ ಚಟ್ಟಿ ಅರೆದುಹಾಕಿ ಬುತ್ತಿ ಕಟ್ಟಿಕೊಡುವರು (ಹುಬ್ಬಿ. ೦೯). **ರಾಗಿಹಿಟ್ಟು** = ೧. ರಾಗಿಯನ್ನು ಬೀಸಿದಾಗ ಬರುವ ಪ್ರಡಿ.—ಹಿಟ್ಟು : ಪಂಸೆಯಲ್ಲಿ ರಾಗಿಹಿಟ್ಟು ಮುಗಿದಿದೆ (ಕ.ಪ). ೨. = ರಾಗಿಮುದ್ದೆ : ರಾಗಿಹಿಟ್ಟು, ರಾಗಿರೊಟ್ಟಿ, ರಾಗಿದೋಸೆ ಇತ್ಯಾದಿ . . . ಉಟಮಾಡುವುದರಿಂದ ದೇಹಕ್ಕೆ ಕ್ಯಾಲ್ಸಿಯಂ ದೊರಕುತ್ತದೆ (ಗೃಪ. ೨೦).

[ದೇ.ಪ ತವಿ. ಗುರಾಕಿ ; ಮಲ. ರಾಗಿ. ಜೂಮು ; ತುಳು. ತೆಲು. ರಾಗಿ ; ಕೊಡ. ಎರಿ./ ಸಂ. ರಾಗಾ, ರಾಗೀ]

ರಾಗಿ$_2$ (ನಾ). ೧. ಬಣ್ಣವೆಳ್ಳುದು ; ರಾಗಯುಕ್ತಪಾದವದು. ೨. ಕೆಂಪುಬಣ್ಣ. ೩. ಬಣ್ಣಹಾಕುವಿಕೆ ; ಚಿತ್ರಬಿಡಿಸುವಿಕೆ. ೪. ರಾಗೋದ್ರೇಕವನ್ನು ಹೊಂದಿರುವಿಕೆ. ೫. ಸಂತೋಷವನ್ನು ಕೊಡುವಂತಹುದು. ೬. ಅತಿಯಾಗಿ ಮೋಹಗೊಳ್ಳುವಿಕೆ. — ಆಚ್ಛಿಸುವಿಕೆ. ೭. ಬಣ್ಣಹಾಕುವವನು ; ಚಿತ್ರಗಾರ. ೮. ಪ್ರೇಮಿ ; ಅನುರಕ್ತ ಆಗಲ್ ತಪ್ಪ ರಾಗಮುಂ ರಾಗಿಗ್ಗೆಲ್ಲಂ ಪಚ್ಚುಕೊಟ್ಟಂತೆ ಕೆಂಪು ಪತ್ರ ವಿಟ್ರಾಗಲ್ (ಪಚಪಾ. ೨-೩೦ ಪ) ; ಬಂದನೆಂತೆಂತಕ್ಕೆ ಆಗಲಲಾಜದೆ ರಾಗಿ ಸಂಗಮನ ಕರುಣದೇ ತನಗೆ ಬೆಂಬಲವಾಗಿ (ಪಪಕ. ೩-೨೨). ೯. ವಿಷಯಲಂಪಟ ; ವಿಷಯಾಸಕ್ತ : ಒನ್ಮನು ಭಜಿಸಲಜಾದುವ ರಾ[ಪಾಣಾಂ. ದೋ]ಗಿಗಳ ಮಾತೇನು (ಪಂಪಾ. ೦೭) [ಸಂ. ರಾಗಿನ್]

ರಾಗಿಕಲ್ಲು (ನಾ). (ರಾಗಿ ಮುಂತಾದ ಧಾನ್ಯಗಳನ್ನು) ಬೀಸಿ ಹಿಟ್ಟು ಮಾಡುವ ಕಲ್ಲು : ಬಿದಿರೆ ಬಿಟ್ಟುದ ಮೇಲೆ ಚಿದುರ ರಾಗಿಕಲ್ಲು ಮದನಾರಿ ನೆಂಬೊ ಒಡಿಗೂಟ ಒಮುಕೊಂಡು ಶಿವನ ಪಾಡ್ಯಾಳಿ ಸಿರಿಗೌರಿ (ಪಾಪಕ. ೬೨); ಮುಂಗೋಳಿ ಕೂಗಿತೆಂದರೆ ನಮ್ಮೂರಿನ ಎಲ್ಲ ಮನೆಗಳಲ್ಲಿಯೂ ರಾಗಿಕಲ್ಲಿನ ಶ್ರುತಿಯೊಡನೆ ಸೇರಿ ಕೇಳಿಬರುವ ರಾಗಿಯ ಪದಗಳು (ಪಪಾಕು. ೨೦).

ರಾಗಿಕಲ್ಲು ಪದ = ರಾಗಿ ಮುಂತಾದುವನ್ನು ರಾಗಿಕಲ್ಲಿನಲ್ಲಿ ಹಾಕಿ ಬೀಸುವಾಗ ಹಾಡುವ ಹಾಡು : ರಾಗಿಕಲ್ಲುಪದ — ಶರಣೆಂಬೆ ಶಿವನಿಗೆ ಶರಣೆಂಬೆ ಗುರುವಿಗೆ ಶರಣೆಂಬೆ ಶಿವನ ಮದದೀ(ಗೆ) (ಪಾಕಕ. ೨).

[ರಾಗಿ$_1$ + ಕಲ್ಲು (< ಕಲ್^{ತ})]

ರಾಗಿಣಿ (ನಾ). ೧. ಪ್ರೀತಿಯುಳ್ಳವಳು ; ಅನುರಕ್ತೆ. ೨. [ಸಂಗೀತ] ಹಿಂದೂಸ್ಥಾನೀ ಸಂಗೀತದಲ್ಲಿ ಬರುವ ಸ್ತ್ರೀರಾಗ : ಋತುಗಳ ಹೆಸರು ಹೊಂದಿರುವ ಆರು ರಾಗಗಳು, ಅವಕ್ಕೆ ಆರು ರಾಗಿಣಿಯರು ಕಲಾದಿದನ ಪ್ರತಿಭಾಕಲ್ಪನೆಗೆ ಸಾಟಿಪ್ಪ ಉತ್ಪ್ರೇಕ್ಷಾವಸ್ತುಗಳಾಗಿವೆ (ಪಾರಪ. ೪೩೦) ; ಅನೇಕ ರಾಗಗಳು ಇವುಗಳಲ್ಲಿ ಹುಟ್ಟಿ 'ರಾಗಿಣಿ'ಗಳೆಂದು ಹೆಸರಾಂತಿವೆ (ಪಂಗೀಪಂ. ೦೮೨). [ಸಂ. ರಾಗಿಣೀ]

ರಾಗಿಸು (ಕ್ರಿ). ೧. ಕೆಂಬಣ್ಣವೇರು ; ಕೆಂಪಾಗು : ಶೌಕುಮಾರ್ಯ ವೇಱೆ ಮೆಲ್ಲಡಿಗಳು ಮೆಲ್ಲವೆ ರಾಗಿಸೆ ಕೆಳ್ದೊಡೆ ತ್ರಿವಳಿಗಳಂ ಬೀಳ್ದೊಡೆ (ಪಪಕ. ೦೦-೧೬). ೨. ಕೆಂಪಾಗುವಂತೆ ಮಾಡು ; ರಂಗೇರಿಸು : ಕಂಡಾಕ್ಷಣವೆ ತಕ್ಕೈಸಿ ಮುಂಡಾಡಲಿರ್ವರ ಪರಿತೋಷ ಪೂರ್ವದಿಳ್ಕಂಡಲು ವನು ರಾಗಿಸಿತು (ಪಪಪಕ. ೫೯-೩೬). ೩. ವಿಶ್ವಾಸವಿಡು ; ಆಸಕ್ತಿ ಪೊಂದು : ಗುರುಗಳ ಪೊಗಟ್ರಿಗೆ ರಾಗಿಸಿ ಸಂತೋಷಂಬಟ್ಟು (ಪಪಾ.ಪಂ. ೬೨-೨೩). ೪. ಪ್ರೀತಿಯನ್ನು ತೋರು ; ಪ್ರೀತಿಸು : ಬಡವಂ ಪೂರ್ವತಮಂ ಕಂಡಡೆ ರಾಗಿಸುವಂತೆ (ಪಪಕ. ೨-೩೦) ; ಬದೆ ರಾಗಿಸಿ ದೆಸಗೀ ಗಳ್ಗಳಂಗಳಲ್ಲಿದಪ್ಪುದು ಕೋಗಿಲೆ (ಕಾಜ್ಞಕ. ೪೬೮); ತಾಗದ ಚುಂಬನಂ . . : ವಿಗೆ ರಾಗಿಸುವ ಮನಂ ಮನೋಹರಂ ಜಾರೆಯರೊಳ್ (ಗಂಗ.೨-೬೩). ೫. ಸಂತೋಷವನ್ನುಂಟುಮಾಡು : ಕಂಬಿಡುತೆ ಕನಕರುಚಿದಾಳುತ್ತುಂ ರಾಗಿಪುತೆ ರಂಜಿಸುತೆ ಸೊಂಪಾಗಿರ್ದುವು ಕಣ್ಗೆ ಗುಂಧಶಾಲಿವನಂಗಳ್ (ಕಾಪಕ. ೩-೦೦). ೬. ಬಯಸು ; ಆಪೇಕ್ಷಿಸು : ರಾಗಿಸಿ ರಾಸಧನಿರ್ವೆತಿ ವೇಗದಿನಾ ನರಿಯ ಪಿಂಪುಪಿಂದನೆ ಬಂದಂ (ಪಪಕ. ೨೬೩-೨೦೩).

[ರಾಗ + — ಇಸು$_3$]

ರಾಗುಟಿ ' ರಾಕಡಿ ' ನೋ.

ರಾಗೋಪಗೂಢಕ (ನಾ). [ಕಾಮಶಾ] ಒಂದು ಬಗೆಯ ಚುಂಬನ : ಒಳಪಾಟಿಯನೊತ್ತಿ ಪಲ್ಲುಳೊಳ್ಕೊಂಕಲದು ಮನಂಗೊಳಿಪ ರಾಗೋಪಗೂಢಕ [ಪಾಣಾಂ. ವ]ಮೆನಿಪ್ಪದು (ಪಪವ. ೬-೨೯). [ಸಂ.]

ರಾಳಿ ' ರಾಗಿ$_1$ ' ನೋ.

ರಾಳಿ (ನಾ). ಕುದುರೆಯನ್ನು ಹತ್ತಲು, ಆದರ ಮಗ್ಗುಲಲ್ಲಿ ನೇತು ಬಿಟ್ಟಿರುವ ಬಳೆ ; ರಿಕಾಪು ; ಅಂಕವಣಿ : ಅಶ್ವಮಂ ವೇಗದಿಂ ಬೆಂಗೆ ವಾಯ್ದು ರಾಳಿಯೊಳ್ಕೊಂಕಿ ವಾಳಿಯೊಳ್ ನಿಲಿಸಿ (ಗಂಗ. ೨-೦೦೫ ಪ); ಗರುವ ಹಾತ್ಕಶ್ವಗೊಂದೇ ರಾಯರಾವುತನ ರಾಳಿ ವಾಳಿಯೆ ಸಾಲದೇ (ಪ್ರಕುಂ. ೦೬-೬೦). [← ತೆಲು. ರಾಗೆ]

ರಾಳೋಲು ' ರಾಯಗೋಲು ' ನೋ.

ರಾಚಮಲ್ಲ (ನಾ). ಒಬ್ಬಾತನ ಹೆಸರು ; p ತಲಕಾಡಿನ ಗಂಗವಂಶದ ಕೆಲವು ಅರಸರ ಹೆಸರು : ನೋಲಂಬವಾಡಿಗ ರಾಚಮಲ್ಲ[ಂ] ಮಂಡಿಜ್ಜಿದ ಗುಂಡಿಗೆಗಂ[ಳ್ಕ] ಎನಿಪರು ಸಮಸ್ತಮಲಂಬೆಜ್ಜಾನಿ ಬಟ್ಟೊಡೆ (ಎಇ. XXIV. ೦೪೦-೬; ೫೫೬). [ರಾಜ್ಯ (p ← ಸಂ. ರಾಜನ್) + ಮಲ್ಲ]

ರಾಚಮಲ್ಲಗಾವುಂಡ (ನಾ). ಒಬ್ಬಾತನ ಹೆಸರು : ರಾಚಮಲ್ಲಗಾವುಂಡನು ಸಿಜನುಂ ಗಂಗಗಾವುಂಡನುಂ . . . ಸಾಕ್ಷಿ (ಎಇ. XII, ಕುಣ್ಣ. ೬೦-೪೬; ೬೭೨).

ರಾಚಮ್ಮ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಪೆರ್ಮಾರ್ಡಿಯ ಮಸೆವ ಗತಿ ನೀಲಬ್ಬೆಯ ಮಗಂ ರಾಚಮ್ಮನ ಧರ್ಮ್ಮ (ಎಇ.III. ಕಂಚಿ. ೦೫೬-೨; ೪೧೦).

ರಾಚು (ಕ್ರಿ). ೧. (ರಭಸದಿಂದ) ಚೆಲ್ಲು ; ಎಸೆ ; ಎರಚು : ಅನಲ ಹೊಟ್ಟಿನು ತಳಿವುಪುರಿಯೊಳು ರಾಚುವುದಾಯೆನಗೊಲುಮೆಯುಂಪಚರ ನಾರಿಯರು ಆಹುದೆಂದೀಂದುಮುಖೀ (ಪಪಣಾ. ೨೯-೩). ೨. ವೇಗವಾಗಿ ಹೊಡೆ. —ಬಿಡಿ ; ಅಪ್ಪಳಿಸು : ಅವರ ಪಾತು ಕೇಳಿ ನನಗೆ ಮುಂಬಿಕ್ಕೆ ರಾಚಿದಂತಾಯಿತು (ಜಂಗಕ. ೬೦); ನಾಗವೇಣಿ ನಾಗಿಣಿಯಂತೆ ಸಿಡಿದಾರಪ್ಪನೆ ರಾಚಿದಂತೆ. ಚಿಂತಾಮಣಿಯನ್ನೂ ಮಂಗುವಂತೆ ನೋಡಿ ಹೊರಟು ಹೋದಳು (ಪಪಣಾ. ೩). ೩. ಅಡ್ಡವಾಗಿ ಬೀಳು.—ಕೆಡೆ : ಕೂಚಿಯಾದುದು ಕೂಡೆ ಸಾಸಿರಲೋಜನ ಕಟಕದಲಿ ಗುಡಿಗಳು ರಾಚಿ ಕೆಡದವು (ಶಾಪಾ. ೪೬-೦೦). ೪. ವ್ಯಾಪಿಸು : ಈ ಕವನದಲ್ಲಿ ಅವನ ಕ್ರೋಧಜ್ವಾಲೆ ಹೇಗೆ ರಾಚುತ್ತದೆಂದರೆ, ಅದರ ಪಟಿಯಲ್ಲಿ ಕವಿಶಾಕುಸುಮವು ಬಾಡಿ ಹೋಗಿದೆ (ಕವಚರಿತ್ರೆ. ೪೩). ೫. (ಆಲು) ಅಹಿತವಾಗು; ಅಸುಖಿಕರವಾಗು : ನಡುಹಗಲಿನ ಬಿಸಲು ಮುಖಿಕ್ಕೆ ರಾಚುತ್ತಿದೆ (ಕವಿ); ಆ ಸೀರೆಯ ಮಿನ್ಪಕೆಂಪುಬಣ್ಣ ಕಣ್ಣಿಗೆ ರಾಚುತ್ತದೆ (ಪಪಣ).

[< ಎರಚು (<ಎಱಚು)./ ತೆಲು. ರಾಚು—ತಿಕ್ಕು, ತೀಡು].

ರಾಚಿಯ (ನಾ). ಒಬ್ಬಾತನ ಹೆಸರು ; ಪುಳ್ಳಿಯಣ್ಣನ ಮಗಂ ರಾಚಿಯಂ (ಎಇ. XI, ಶಕ್ರಮ. ೭೫-೦೪; ೪೬).

[ರಾಜ್ಯ (p ← ಸಂ. ರಾಜನ್) + < ಅಯ್ಯ$_1$ (< ಅಯ್ಯ$_{61}$)]

ರಾಚಿಯಗಂಗ (ನಾ). ಒಬ್ಬಾತನ ಹೆಸರು : ಶ್ರೀಮತ್ ಪೆರ್ಮ್ಮಾನಡಿಗಳ ಪಟ್ಟಂಗಟ್ಟಿದ ಇಪ್ಪತ್ತೈರಡನೆ ವರಿಷ × × × ರಿಳ್ಕಗರ ಕೋಟೆಯೊಳ್ ನೊಟಮ್ಮನೊಳ್ ಕಾದಿ ರಾಚಿಯಗಜ್ಜ ಸಕ್ಕೊಡೆ (ಎಇ. III, ಕಂಚಿ. ೦೪೯-೬; ೪೭೬ ?). [ರಾಚಿಯ + ಗಂಗ]

ರಾಜ (ನಾ). ೧. ದೊರೆ ; ಅರಸು : "ಸ್ವಪತಿ ರಾಟ್ ರಾಜಂ . . . ಪ್ರಜಾಧಿಪನೆನ್ಬುರ್ವರಸಕ್ಕು" (ಪುಣಗಣ. ೬೯-೦); ಕಳಿಂಗರಾಜನ ಪೊಂಕದ ಕರಿಘಟೆಯನುಡಿಯೆ ಬಡಿಬಡಿದೆತ್ತಂ ತಿಂಕೊಜೆ ಮಾಬ್ಬುದಮಾಜಿಮಜ್ಜಂ ಕರ್ಣಂ ನಿತಿತಶರದಿನೆರಡುಂ ಕರಮಂ (ಕಂಪಾ. ೦೦-೦೦೨); ಜೊನ್ನಪಕ್ಕಿಗಳೆಂಬ ಮಿಂಧರ್ಗಳಂ ತಣಿಪದನ್ನಾಡೆ ಜಲಿಪ್ಪುರ್ಗಮಂ ಪೊಕ್ಕ ರಾಜನಿನಲ್ಲಿಂದು ಪಡುಗಡಲ ಸಾರ್ದಂ (ಪಪಣಾ. ೬-೪೩) : ಸಾಕೇತಪುರಜನರ್ . . . ಕೊಂಡಾಡಿದರ್ ರಾಜನಂ (ತ್ರಿಪುರ. ೦೬-೪೨೬). ೨. ಕ್ಷತ್ರಿಯ ವಂಶದಲ್ಲಿ ಹುಟ್ಟಿದವನು ; ಕ್ಷತ್ರಿಯ : "ರಾಜಾ — ಚಂದ್ರ. ಕ್ಷತ್ರಿಯ, ನರಪತಿ" (ಸಿದ್ಧಾ೦. ೪೦೦). ೩. ಒಡೆಯ ; ಪ್ರಭು : ರಾಜರಾಜಸುಮಿತ್ರ . . . ಪುರುಳ್ಗಳ ರಾಜ ಪರಮಾಪವಿತ್ರ ಜಯಜಯ ಶರಣಪಸಚೈತ್ರ (ಕಂಕಾ. ೦೪-೪೬). ೪. ಚಂದ್ರ : "ಇಂದು . . . ದ್ವಿಜರಾಜನೆನೆ ಸುಧಾಂಶುವೆನಿಸ್ಕುಂ" (ಪುಣಗಣ. ೦೦-೪) ; ರಾಜರಾಜಸುಮಿತ್ರ ಭಾಸ್ಕರ ರಾಜಪಾವಕನೇತ್ರ . . . ಜಯಜಯ ಶರಣವನಚೈತ್ರ (ಕಂಕಾ. ೦೪-೪೬). ೧, ೪ : ಪರರಾಜಾವೇಷಜೇಜ್ಯಾತಿ ಕೆದ ಕಮಳಾವೋದಪಿಂದಾಗೆ ಧಾತ್ರೀವರಿತೋಷಂ ಪೆರ್ಚಿ (ರಾಪೌ. ೩-೪೩). ೫. ಇಂದ್ರ. ೬. ಯತಿ ; ಸಂನ್ಯಾಸಿ : ಕೇಳ್ ಮಾರುಳೆ ತೂಸ್ಯಾಲಮು ದೊಳ್ಳಣ್ಣರಿರರು ಸಿದ್ಧಮು ರಾಜನಿಹನೆನಲು (ಕಂಕಾ. ೦೦-೨೪). ೭. ಸಮಾಸದ ಮೊದಲು ಅಥವಾ ಕಡೆಯಲ್ಲಿ ಸೇರಿ 'ದೊಡ್ಡ, ಮುಖ್ಯ, ಶ್ರೇಷ್ಠ, ಉತ್ತಮ' ಇತ್ಯಾದಿ ಅರ್ಥವನ್ನು ಕೊಡುವ ಪದ : 'ಕವಿರಾಜ', 'ಗಜರಾಜ', 'ರಾಜಕೀರ' ಪರಾ.

ರಾಜನ ಸೇಸೆ = ಒಂದು ಬಗೆಯ ತೆರಿಗೆ (?) : ಸೇಸೆ—'ರಾಜನ ಸೇಸೆ', ಚಕ್ರವರ್ತಿಯ ಸೇಸೆ' ಎಂದು ಶಾಸನಗಳಲ್ಲಿ ಉಕ್ತವಾಗಿದೆ. ರಾಜ ಅಥವಾ ಚಕ್ರವರ್ತಿಯು ಮದುವೆಯು ಸಮಯದಲ್ಲಿ ಜನರು ಕೊಡುತ್ತಿದ್ದ ತೆರಿಗೆಯಿರಬಹುದೆ ? (ಕಣಾ. ೪೦೬). ರಾಜಮಾರ್ತಂಡರೂಪ = ೧. ರಾಜರಲ್ಲಿ ಸೂರ್ಯನಂತೆ ಇರುವವನು. ೨. ಚಂದ್ರ ಮತ್ತು ಸೂರ್ಯನ ರೂಪವನ್ನು ಪಡೆದವನು. ೧, ೨ : ಶ್ರೀಕಾಂತಾನೇತ್ರ ನೀಳೋತ್ಪಳವದನಸರೋಜಾತಸಸ್ಮೇರವೀರಾಲೋಕಂ . . . ಶ್ರೀವಿಷ್ಣು ಭೂಪಂ ಬೆಳಗುಗೆ ಜಗಮಂ ರಾಜಮಾರ್ತ್ತಾಂಡರೂಪಂ (ಎಇ. IV. ಶಾಸನಪು. ೬೬-೬ ; ೧೨೬೬). ರಾಜಾಸಾಹೇಬ = ಸ್ಥಳೀಯರಾಜರ ಒಂದು ಬಿರುದು : (೬). [ಸಂ. ರಾಜನ್]

ರಾಜಋಷಿ (ನಾ). (ಪುರೂರವ, ಜನಕ, ವಿಶ್ವಾಮಿತ್ರ ಮೊದಲಾದವರಂತೆ) ರಾಜನ ವ್ಯಕ್ತಿತ್ವವನ್ನೂ ಋಷಿಯ ವ್ಯಕ್ತಿತ್ವವನ್ನೂ ಮೈಗೂಡಿಸಿಕೊಂಡವನು : ಉಕ್ತಾನಪಾದನೆನಿಸುವ ರಾಜಋಷಿ ಮೊದಲು ಪತ್ಯ ಭರತಂಗೆ ಸಮಮಂತದಿತ್ತಣ ಧರೆಯನಿತ್ತ ಕತದಿಂದ ಭಾರತವರುಷವೆನಿಸಿತು (ಪಾಪಾ. ೨-೬); ಮಹಾಪ್ರಭಾವವುಳ್ಳವನಲ್ಲದ ರಾಜಋಷಿಯಾ! (ಜಾಕಾಚ. ೦೦-೪). 'ರಾಜರ್ಷಿ' ಪರಾ. [ಸಂ.]

ರಾಜಋಷಿತನ (ನಾ). ರಾಜಋಷಿಯಾಗಿರುವಿಕೆ : ನಿಯಮವೆಮಗಿದು ವನನಿವಾಸಾಶ್ರಯದ ತುದಿಪರಿಯಂತ ಮೃಗಹಿಂಸೆಯಲಿ ಮಾಡವು ಮನದ ಮತವಿದು ರಾಜಋಷಿತನದ (ಕವಿಕಾ. ೩-೩-೬). [ರಾಜಋಷಿ + -ತನ]

ರಾಜಋಷಿತ್ವ (ನಾ). = ರಾಜಋಷಿತನ : ಶರ್ವಾಣಿಯು ಪ್ರಸಾದದಿಂದ ಅವನ ರಾಜಋಷಿತ್ವವ ಸಾರ್ಥಕ್ಯವೆಯಲಿ ! (ಪುಗುಗಂ. ೦೪೭-೦೩). [ಸಂ.]

ರಾಜಕ (ನಾ). ೧. ರಾಜರ ಸಮೂಹ ; ಅರಸರ ಗುಂಪು : ನೆರೆದ ಸಮಸ್ತರಾಜಕಮನಾವರದಿಂದಿದಿರ್ಗೊಂಡು (ಕಂಕಾ. ೩—೪೦) ; ಯುಗಾಂತ ನವಮಗಿನ್ನೇನುಭಯ ರಾಜಕವ ಸಂತೈಸುವುದು (ಶಾಣ್ಮಂ. ೩-೦೩). ೨. ಸಣ್ಣದೊರೆ ; ಚಿಕ್ಕಅರಸು. ೩. ರಾಜನಿಂದ ಆಗುವ ಆಕ್ರಮಣ.— ಮುಂಕ್ಕಿಗೆ : ಕೊಳ್ಳೆಯೋ, ದಂಗೆಯೋ, ಸುಲಿಗೆಯೋ, ಧಾಳಿಯೋ, ರಾಜಕವೋ, ವಿನೋ ಬರುತ್ತಿದೆ ! (ಪುಗುಗಂ. ೦೨-೦೩); ರಾಜಕ ಬಂದೆರೂ ರಾಜ್ಯಕ್ಕೆ, ದೈವಿಕ ಬಂದರೂ ರಾಜ್ಯಕ್ಕೆ (ಗಾಪಿ). 'ರಾಜಿಕ' ಪರಾ. [ಸಂ.]

ರಾಜಕದಲಿ, ರಾಜಕದಳಿ (ನಾ). ಒಂದು ಬಗೆಯ ಶ್ರೇಷ್ಠಜಾತಿಯ ಬಾಳೆ ; ರಾಜಬಾಳೆ : (೬). **ರಾಜಕದಳಿ** : ಬಕ್ಕೆ ಪಲಸು ರಾಜಕದಳಿಯಿಳೆಗಳಾದಿ ಜೊಕ್ಕಪುಲವನಾಂತು (ಅಪಂ. ೦_೮೩) ; ಪಣ್ಣು ಬೀಜ್ಞೊನೆಯುಂದೆಜಗಿ ನಿಂದ ರಾಜಕದಳಿಗಳಂ (ಪಪಂ. ೩-೪೨ ಪ). [ಸಂ. ರಾಜಕದಲೀ]

ರಾಜಕದಳ (ನಾ). ರಾಜಕದಲಿ : ರಾಜಕದಳಾವ್ರಜಂಬೀರ ಫಲ ಗುಚ್ಛೆದಿಂ . . . ಪೂಜಿಸಿ (ತಂತ್ರಶಾ. ೬—೦೦೦ ಠಗಳ). [ಸಂ. ರಾಜಕದಲ]

ರಾಜಕದಳಿ 'ರಾಜಕದಲಿ' ನೋ.

ರಾಜಕದ್ವಾದಶ (ನಾ). ಹನ್ನೆರಡು ಜನ ಮಹಾರಾಜರ ಗುಂಪು : ಗೆಲ್ಲವೆ ನಯಶೌರ್ಯದ್ವಯದಿಂ ಪೊಜವಗಯ ರಾಜಕದ್ವಾದಶಮಂ (ಕಪ್ರಶ. ೬-೬). [ಸಂ.]

ರಾಜಕಪೋತ (ನಾ). ಶ್ರೇಷ್ಠಜಾತಿಯ ಪಾರಿವಾಳ : ಮೇಘರಥಧರಾಧೀಶ್ವರನ ಮುಂದೆ ಬಂದು ಬಿಟ್ಟುರ್ದ ರಾಜಕಪೋತ(ಶಾಂಶಾ. ೬—೮೮ ಪ)[ಸಂ.]

ರಾಜಕರ (ನಾ). ೧. ರಾಜನು ಪ್ರಜೆಗಳ ಮೇಲೆ ಹೇರುವ ಕಂದಾಯ. ೨. ಚಂದ್ರನ ಕಿರಣ. ೧, ೨: ರಾಜಕರಪಾತಭೀತಿ ಸರೋಜಮೊಳ್ . . . ಸಮನಿಕುಮಾ ಜನಪದಜನದೊಳಿಂತುಮೇಂ ಸಮನಿಕುಮೇ (ಹಂಪ್ರಕ. ೦೦-೪೬). [ಸಂ.]

ರಾಜಕರ್ಮ (ನಾ). ರಾಜನು ಮಾಡಬೇಕಾದ ಕಾರ್ಯ.—ಕರ್ತವ್ಯ : ರಾಜದ್ರೋಹಿ ಇವನ ನೀ ಕೊರಿಸದಿರೆ ರಾಜಕರ್ಮವ ಸಮಂತಿಪಗಿದೆಮೆ ? (ಗೂಡಿಣಿ. ೪೬-೦೫೬). [ಸಂ. ರಾಜಕರ್ಮನ್]

ರಾಜಕಳೆ, ರಾಜಕಳೆ (ನಾ). ೧. ದೊರೆಗಳು ಕಲಿಯಬೇಕಾಗಿದ್ದ ಆಯುಧಗಳ ಪ್ರಯೋಗ ಮುಂತಾದ ವಿದ್ಯೆ : ರಾಜಕಳೆಗಳೊಳೆ ಕವಿರಾಜಗೋಷ್ಠಿಯೊಳೆ ವನಿತಾಜನೋತ್ಸವವ್ಯತ್ತಿಯೊಳೆ ಸಂತತಂ ರಾಜಿಸುವ ಸದ್ಗುಣಸಮಾಜಮಂ ಭೂಕಲ್ಪಭೂಜನಂ ಭೋಜನಂ ಮಿಗೆ ಮೆಚ್ಚುವೆಂ (ಜಪ. ೦-೯). **ರಾಜಕಳೆ** : ೨. ರಾಜತೇಜಸ್ಸು : ರಾಜತ್ವದ ಕಳೆ : ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು ! (ಗು. ೭೫-೩). [ಸಂ. ರಾಜಕಲಾ]

ರಾಜಕಶೇರು (ನಾ). ಸುವಾಸನೆಯನ್ನು ಬೀರುವ ಒಂದು ಬಗೆಯ ಗೆಡ್ಡೆ ; ಕೊಡನಾರಿಗೆಡ್ಡೆ. [ಸಂ.]

ರಾಜಕಳಾಪ (ನಾ). ಚಂದ್ರನನ್ನು ಆಲಂಕಾರವನ್ನಾಗಿ ಮಾಡಿಕೊಂಡವನು : ಶಿವ : ಜೋಜೋ ರಾಜಕಳಾಪ ಭಕ್ತಜನಚಿಂತಾರತ್ನ (ಪಾಶ್ವ. ೨-೨೬). [ಸಂ. ರಾಜಕಲಾಪ]

ರಾಜಕಳೆ ' ರಾಜಕಲೆ ' ನೋ.

ರಾಜಕಾರಣ (ನಾ). ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ವ್ಯವಹಾರ; ರಾಜಕೀಯ : ಸುತ್ತಲಿನ ಜನ ಬಯಸರವಾಗಿ ಸ್ವಕೀಯ ರಾಜಕಾರಣದಲ್ಲಿ . . . ನಿರತರಾದರು (ಸ್ಕಂಪು. ೮೪) ; ಕಾಂಗ್ರೆಸ್ ರಾಜಕಾರಣದಲ್ಲಿ ಮೋಹನನ ಪ್ರಾಬಲ್ಯವನ್ನು ಯಾವ ರೀತಿ ಕಡಮೆ ಮಾಡಬಹುದು? (ಪೂಕಪಂ. ೯೬). [ಸಂ.]

ರಾಜಕಾರಣಪಟು (ನಾ). ರಾಜಕೀಯದಲ್ಲಿ ನಿಪುಣನಾದವನು : ರಾಜ್ಯದ ಆಡಳಿತದಲ್ಲಿ ದಕ್ಷನಾದವನು : ಆ ಚರ್ಚೆಯನ್ನು ಕೇಳಿದರೆ ಎಂಥ ರಾಜಕಾರಣಪಟುವಿಗೂ ಬುದ್ಧಿ ಚುರುಕಾದಿತು (ಪೂಚತ್ರ. ೬೬); ನಮ್ಮಲ್ಲಿನ ವೈಜ್ಞಾನಿಕರೂ ರಾಜಕಾರಣಪಟುಗಳೂ ದೇಶವಿದೇಶ ಕಂಡವರೂ . . . ತಮ್ಮ ಬಿಡಿವ ಪವಿಜ್ಞಾನವನ್ನು . . . ಪ್ರಸಾರಮಾಡಲೇಕು (ರಾಮಣಾ. ೮೩). [ಸಂ.]

ರಾಜಕಾರಣಿ (ನಾ). ರಾಜಕಾರಣವನ್ನು ತಿಳಿದ ವ್ಯಕ್ತಿ : ಲೋಕ ಮಾನ್ಯರು ನಿಜಕ್ಕೂ ಶ್ರೇಷ್ಠ ರಾಜಕಾರಣಿ (ಭಮಾಣಾ. ೦೫೮). [ಸಂ. ರಾಜಕಾರಣಿನ್]

ರಾಜಕಾರಿಯ (ನಾ). ರಾಜನಿಗೆ ಅಥವಾ ರಾಜ್ಯದ ಆಡಳಿತ ಮುಂತಾದುವಕ್ಕೆ ಸಂಬಂಧಿಸಿದ ಕೆಲಸ : ತೊಡಗಿವಗ್ಗದ ರಾಜಕಾರಿಯ ಕಡುವುದೆಂದೇ ನಿನ್ನನುಳುಪಿದೆ (ಕಬಾ. ೪. ೧೦-೪೬) ; ಪಾನ ಮುಂಪೇಸಿವ ರಾಜಕಾರಿಯವ (ಕಂಪಿ. ೦೮-೩೩). [< ಸಂ. ರಾಜಕಾರ್ಯ]

ರಾಜಕಾಸಂ (ನಾ). ೧. = ರಾಜಕಾರಿಯ : ಶ್ರೀಮನ್ಮಹಾ ಪ್ರಧಾನ ಶಂಬರದೇವಪೆಸರೆಯರು ತುಳುಪಟುಕಸಹಿತ ಹಾಡಂಪಳ್ಳಿ ಮೇಲೆ ರಾಜಕಾರ್ಯಕ್ಕೆ ಬಟುಕಳದಲಿ ಪಾಳೆಯ ಪಿಡಲಾಗಿ (ಕಾ. ೨. ೧೦-೯ ; 1415) ; ದ್ರುಪದಸಕ್ಷೋಣಿಸೇನೆಯ ನೆರವು ಬಂದುದು ರಾಜಕಾರ್ಯದ ಬಳಕೆ ಲೇಸೆಂದ (ಕಾಪಾ. ೬-೨೦) ; ಕೆಡಿಸಿ ಕಳೆದ್ದ ರಾಜಕಾರ್ಯವ ತತ್ಪ ಸಮುದಾದಲ (ಕಾಪಿದಿ. ೪೬-೬೬). ೨. (ಅಲಂ) ಮುಖ್ಯವಾದ ಕೆಲಸ : ದೊಡ್ಡ ಕಾರ್ಯ : ಊರಿಗೆ ಹೋಗಿ ಏನಾ ರಾಜಕಾರ್ಯ ಸಾಧಿಸಿ ಬಂದೆ ? (ರಾಪ). [ಸಂ.]

ರಾಜಕೀಯ (ಗು). ೧. ರಾಜನಿಗೆ ಸಂಬಂಧಿಸಿದ ; ಅರಸನಿಗೆ ಸೇರಿದ. ೨. ಆಡಳಿತಕ್ಕೆ ಸಂಬಂಧಿಸಿದ. (ನಾ). ೩. ರಾಜನಿಗೆ ಸಂಬಂಧಿಸಿದುದು. — ಸೇರಿದುದು : ರತ್ನಮಯವಾಗಿ ಹೆಸರನ್ನು ಕೆತ್ತಿರುವ ರಾಜಕೀಯವಾದ ಈ ಉಂಗುರವನ್ನು ಎಲ್ಲಿ ಕದ್ದೆ ? (ಬಳಿಂಕ. ೬೩-೪). ೪. = ರಾಜಕಾರಣ : ಪೂಜಿಸುತಲಿರುತಿರ್ದಳೀ ವಿವಿಧ ರಾಜಕೀಯಂಗಳೇನೊಂದರಿಯದತುಳಸಂತೋಷದಿಂದ (ಪಂಚಾಣ. ೨-೦೦-೩೬) ; ಮತಕ್ಕೂ ರಾಜಕೀಯಕ್ಕೂ ಏನು ಸಂಬಂಧ ? (ಚಾಪಾ. ೦೪೦). ೫. (ಅಲಂ) ಅಂತಃಕಲಹ ; ಒಳಜಗಳ : ಈಗಿನ ಅನೇಕ ಸಂಘ ಸಂಸ್ಥೆಗಳಲ್ಲಿ ರಾಜಕೀಯ ನಡಯುತ್ತಿದೆ (ರಾಪ). ೬. ಪಿತೂರಿ ; ಒಳಸಂಚು: ಆ ವೈದ್ಯರನ್ನು ಮರ್ಗಾದಿಸಲು ದೊಡ್ಡ ರಾಜಕೀಯ ನಡಿಯುತ್ತಿದೆ (ರಾಪ).

ರಾಜಕೀಯಕ್ಷೇತ್ರ = ಆಡಳಿತಕ್ಕೆ ಸಂಬಂಧಪಟ್ಟ ವಲಯ.—ಕ್ಷೇತ್ರ : ನಾನಕ ಮತ್ತು ರಾಮದಾಸರು ರಾಜಕೀಯಕ್ಷೇತ್ರದಲ್ಲಿ ಕಾರ್ಯ ಮಾಡಿದರು (ರಮಗಾ. ೦೩೦). **ರಾಜಕೀಯ ಪ್ರೇರಿತ** = ರಾಜದ್ರೋಹ ಅಥವಾ ದೇಶದ್ರೋಹಕ್ಕಾಗಿ. ರಾಜಕಾರಣದಲ್ಲಿ ಮಾಡಿದ ತಪ್ಪಿಗಾಗಿ ಸರೆಯಾಳಾದವನು.— ಬಂದಿಯಾದವನು : ಸಾವಿರಾರು ರಾಜಕೀಯಪ್ರೇರಿತಗಳಿಗೆ ಬಸಿರು ದಾಕ್ಷಿಣ್ಯ ಕನಿಕರಗಳಿಲ್ಲದೆ ಚಿತ್ರಹಿಂಸೆ ಕೊಡುತ್ತಿದ್ದರಂತೆ (ತಾಸರು. ೪೪೩). [ಸಂ.]

ರಾಜಕೀರ (ನಾ). ಶ್ರೇಷ್ಠವಾದ ಗಿಳಿ ; ಅರಗಿಳಿ : ವಿರಹಿಂಗಳ ಸುಯ್ಕ ಬೆಂಕೆಯೊಳ್ . . . ಕರಿಮುರಿಕನಾದುವುನ್ಮದಪರಭೃತಕಷ್ಟುರಣರಾಜಕೀರ ಕುಲಂಗಳ್ (ಪಂಕಣಾ. ೩-೧೦) ; ಸಲ್ಲಲಿತದ ರಾಜಕೀರನ ನುಡಿಗೇಳಿ ವಲ್ಲಭ ಬಾರೆಂದಳಲು (ಕಂಪಾ. ೯-೩೦೦). [ಸಂ.]

ರಾಜಕೀರಕ (ನಾ). = ರಾಜಕೀರ : ರಾಜಕೀರವಾಕ್ಪಾಟವಮಲ್ಲದಿಲ್ಲ ವೆಜಕುಂ ವಾಕ್ಪಾಟವಂ ಸುತ್ರಲಂ (ಜಾಅಪ್ರ. ೩-೩). [ಸಂ.]

ರಾಜಕೀರೆ ' ರಾಜಗೀರೆ ' ನೋ.

ರಾಜಕುಂಜರ (ನಾ). ಶ್ರೇಷ್ಠವಾದ ಆನೆ ; ಗಜರಾಜ : ಅನುಕೂಲಾನಿ ಲಾಂದೋರಾಯವಮಾನರಾಜಕುಂಜರವಿಜಯಕದಲಿಕಾತರಂಗಿತ ಗಗನಾಂಗಣನುಂ . . . ಆಗಿ ನಡೆಯೆ (ಜಿಪ್ರ. ೦೨-೩೦ ಪಿ). [ಸಂ.]

ರಾಜಕುಮಾರ (ನಾ). ದೊರೆಯ ಮಗ ; ಅರಸುಪುತ್ರ : ಪಲಂಬರ್ ರಾಜಕುಮಾರರ ನಡುವೆ . . . ಕಸ್ತ್ರಕಳಾಧರನಾಗಿ ತನ್ನುದುಂ ಗೆದೆವಂದ ಸಾಮಂತಚೂಡಾಮಣಿಯು ಶರಪರಿಣತಿಯಾನವರೆಯಲು (ಪಂಕಣಾ. ೨-೩೯ ಪ); ರಾಜಕುಮಾರರಿರ್ಕೆ ಸುರರಾಜಕುಮಾರಕರೊಳ್ . . . ದೊರೆಯಪ್ಪರಂರೊ ಪೇಟೀ ಜಿತಕಂತಂಗೆ (ಪಂಚಾಪು. ೩-೦೩೯). [ಸಂ.]

ರಾಜಕುಮಾರಕ (ನಾ). = ರಾಜಕುಮಾರ : ರಾಜಕುಮಾರಕರ್ ನಿಜವಿನೋದಿಗಳ್ . . . ಜೂಜುಗಳಂ ಸಮಗ್ರಮೆನಲಾಡುತಿರಲ್ ಪಡೆಪಲ್ಲಿಗೆಯ್ದಿದೆಂ (ಜಿಕಾ. ೯-೪೬) ; ಸಾರಿತೇಯಕಟಕಟ ರಾಜಕುಮಾರ ಕರಿಗಾಪತ್ಪ (ಕವಿಗಾ. ೩-೨೪-೪೪). [ಸಂ.]

ರಾಜಕುಮಾರಿ (ನಾ). ದೊರೆಯ ಮಗಳು ; ಅರಸುಪುತ್ರಿ : ರಾಜಕುಮಾರಿಯು ಶ್ವೇತಚಾಮರವನ್ನು ಶ್ರೀರಂಗರಾಯನ ಕೈಗೆ ತಂದು ಕೊಟ್ಟಳು (ಶ್ರೀಚಾಮು. ೩೩೦). [ಸಂ. ರಾಜಕುಮಾರೀ]

ರಾಜಕುಲ (ನಾ). ೧. ಅರಸುವಂಶ ; ಕ್ಷತ್ರಿಯಕುಲ : ಆಳೋಳಿಯೊಳಿರ್ಕ್ ರಾಜಕುಲಮೆಂದುತ್ಪಾಪತೂರ್ಯಸ್ವನಂ ದಿಸಿಸುಂ ತೀವೆ (ಪಂಚಾಪು. ೦೭-೦೧) ; ರಾಜಕುಲಘೋತರನು ಭಜಿಸಿವೆ (ಪಭಾಗ. ೦೦-೪೬-೦೦). ೨. ರಾಜಮನೆತನ : ನಾವು ಶುದ್ಧ ಮುಸಲ್ಮಾನಸೇನೋ ಹೌದು . . . ಯಾವ ರಾಜಕುಲದಲ್ಲಿಯೂ ಹುಟ್ಟವಳಲ್ಲ (ಬೆಂಕ್. ೪೩೦). ೩. ಅರಸರ ಗುಂಪು ; ಅರಸರ ಸಮೂಹ. ೪. ಅರಮನೆ. ೫. ವಿಲಾಸಿನಿಯರ ಸಮೂಹ : " ವಾರಸತಿ ರಾಜಕುಲವೆನೆ ವಿಲಾಸಿನಿಯರಕ್ಕು " (ಕುಗಣಾ. ೦೦-೪). [ಸಂ.]

ರಾಜಕುವರ ' ರಾಜಗುವರ ' ನೋ.

ರಾಜಕುಳಪ್ರತಿಬದ್ಧೆ (ನಾ). ವಿಲಾಸಿನಿ ; ಎಂಗಾರದವಳು : " ರಾಜಕುಳಪ್ರತಿಬದ್ಧಾ, ವಾರಸ್ತ್ರೀ, ವಾರಮುಪ್ಪಾ — ಈ ೩ ವಿಳಾಸಿನಿಯರ್" (ಕಠಾಮ. ೬೨-೨೭೬). [ಸಂ. ರಾಜಕುಲಪ್ರತಿಬದ್ಧಾ]

ರಾಜಕೇತನ (ನಾ). ಅರಸನು ಇರುವ ನಿವಾಸ ; ಅರಮನೆ ; ರಾಜಗೃಹ : ಅತನುಂ . . . ನಿಜನಾಥಪುರವರಮನೆಯ್ದಿ ರಾಜಕೇತನನಿಷ್ಟ ನೊಡ್ಡೋಲಗಂಗೊಟ್ಟರ್ದ ಗಗನಚರೇಂದ್ರನಂ . . . ಕಂಡು (ಜಾಂತಿ. ೩-೭೭ ೪). [ಸಂ.]

ರಾಜಕ್ಷಯ (ನಾ). ತೀವ್ರತರವಾದ ಒಂದು ಬಗೆಯ ಕ್ಷಯರೋಗ : ಪುಷ್ಕರಮೂಲ, ಏಲೋರ . . . ಕೆಗ್ಗಲು ಸಹ ಸಮಾನಗೊಂಡರೆವು ಹುಪ್ಪದಿಂ ಸೇವಿಸೆ ರಾಜಕ್ಷಯವುಂ ರೋಗಂ ಪರಿಹರಂ (ಪಥ್ಯ. ೨೧೮). 'ರಾಜಯಕ್ಷ್ಮ' ಪರಾ. [ಸಂ.]

ರಾಜಖರ್ಜೂರ (ನಾ). ಒಂದು ಬಗೆಯ ಉತ್ತಮಜಾತಿಯ ಖರ್ಜೂರ : "ಮುನಿಖರ್ಜೂರಿಕಾ — ರಾಜಖರ್ಜೂರಿ" (ಓಷ. ೦೩೭). [<ಸಂ. ರಾಜಖರ್ಜೂರೀ]

ರಾಜಗಾಂಭೀರ್ಯ (ನಾ). ರಾಜೋಚಿತವಾದ ಠೀವಿ.— ಗತ್ತು : ಅವರು . . . ರಾಜಗಾಂಭೀರ್ಯದಿಂದ ಬೀದಿಯಲ್ಲಿ ಬರುತ್ತಿದ್ದ ವ್ಯಕ್ತಿಯ ಕಡೆಗೆ ಕುತೂಹಲದಿಂದ ದೃಷ್ಟಿಹರಿಸಿದರು (ಕ್ಷಮಾ. ೨೭೬). [ಸಂ.]

ರಾಜಗಾಮಿ (ನಾ). ಹಕ್ಕುದಾರರಿಲ್ಲದ ಆಸ್ತಿಯನ್ನು ರಾಜ್ಯದ ಬೊಕ್ಕಸಕ್ಕೆ ಸೇರಿಸಿಕೊಳ್ಳುವುದು : ಭಾರತದ ರಾಜ್ಯಕ್ಷೇತ್ರದಲ್ಲಿರತಕ್ಕ ಯಾವ ಸ್ವತ್ತು . . . ರಾಜಗಾಮಿಯಾಗುವುದರಿಂದ . . . ಅಂಥ ರಾಜ್ಯದ ವಶದಲ್ಲಿ ನೆಲಸತಕ್ಕುದು (ಕಾಶಾಸ. ೦೬೦). [ಸಂ. ರಾಜಗಾಮಿನ್]

ರಾಜಗಾಮಿತ (ನಾ). = ರಾಜಗಾಮಿ : ' ರಾಜಗಾಮಿತಂಗೆಯ್ ' ಪರಾ. [ಸಂ.]

ರಾಜಗಾಮಿತಂಗೆಯ್ (ಕ್ರಿ). ಹಕ್ಕುದಾರರಿಲ್ಲದ ಆಸ್ತಿಯನ್ನು ರಾಜ್ಯದ ಬೊಕ್ಕಸಕ್ಕೆ ಸೇರಿಸಿಕೊಳ್ಳು.— ವಶಪಡಿಸಿಕೊಳ್ಳು : ಗುಣ್ಣಮಯ್ಯಂ ದೋಱೆ ಎಡೆಯಾಳ್ದುತನದಿಂ ರಾಜಗಾಮಿತಂಗೆಯ್ದು ಮೆಣ್ಣೆಯತನದ ಲೂರನೆನ್ನದೆನ್ದು . . . ಇವ್ವರ್ದಂ ಕಣ್ದು (ಪೌಶಾ. IX-i. ೦೩೩ ೦೬; 1059). [ರಾಜಗಾಮಿತ + ಕೆಯ್]

ರಾಜಗಿರಿ (ನಾ). ಒಂದು ಬಗೆಯ ಸೊಪ್ಪು : " ರಾಜಾಗ್ರಃ—ರಾಜಗಿರಿ" (ಓಷ. ೦೩೭) ; ದಿನಾಲು ರಾಜಗಿರಿಯ ಕಾಳುಗಳನ್ನು ತಿನಿ ಜೋಕೆ ಮಾಡಿದ್ದರಿಂದ ಆ ಬಿಗರೆ ಅವನಿಗೆ ಬಹಳ ಈರಾಗಿತ್ತು (ಮುಂಕಥ. ೩-೩೦) ; ಒಂದು ದಿನ 'ರಾಜಗಿರಿ'ಯ ಪಲ್ಲೆಯು ಎಲೆ ಹುಸರು ಮುರಿಯುತ್ತಿದ್ದವು (ಗಪುಚ. ೧೪೦) ; ಸೋಮವಾರ ಪ್ರತಿಯೊಬ್ಬರೂ ಬರೀ ರಾಜಗಿರಿಪಲ್ಲೆ. . . ತಿನ್ನತಕ್ಕದ್ದು (ಹಕಸ್ಮಂದ. ೬೮). 'ರಾಜಗೀರೆ ಪರಾ. [ಸಂ./ ಮರಾ. ರಾಜಗಿರಾ]

ರಾಜಗಿಳಿ (ನಾ). = ರಾಜಕೀರ : " ಪ್ರಾಜ್ಞಃ — ರಾಜಗಿಳಿ " (ಓಷ. ೧೩). [ರಾಜ + ಗಿಳಿ]

ರಾಜಗೀರೆ, ರಾಜಕೀರೆ (ನಾ). ಒಂದು ಬಗೆಯ ಕೀರೆಸೊಪ್ಪು : " ಶತಪತ್ರಃ—ರಾಜಗೀರೆ " (ಓಷ. ೦೩೦). **ರಾಜಕೀರೆ** : " ರಾಜಶಾಕಿನೀ—ರಾಜಕೀರೆ " (ಓಷ. ೦೩೮). 'ರಾಜಗಿರಿ' ಪರಾ. [ರಾಜ + ಕೀರೆ]

ರಾಜಗುವರ, ರಾಜಕುವರ (ನಾ). = ರಾಜಕುಮಾರ : ನೀವೆಂದಾದರೂ ಈ ಮಾತಿದತ್ತ ಬಂದು ರಾಜಗುವರರ ಕುಶಲವನ್ನು ವಿಚಾರಿಸಿದುಮುಂಟೆ ? (ಕಪ. ೨೩೬). **ರಾಜಕುವರ** : ನರನೊಳಿನ್ನಡುಹುವೆನು. . . ರಾಜಕುವರನ ಮರಣವಾರ್ತೆಯ (ಗುಪಾ. ೮-೨) ; ರಂಗನ ನೋಡಿರೆ ರಾಜಕುವರ ನರಸಿಂಗದೇವ ನಮ್ಮ ದೇವತನುಜ (ಕೃಲಂಪ. ೪-೪೮ ಪದ್ಯ).

[ರಾಜ + ಕುವರ]

ರಾಜಗೃಹ (ನಾ). ೧. ಅರಸನ ನಿವಾಸ ; ಅರಮನೆ : ಲತಾಗೃಹಮೆಂಬ ರಾಜಗೃಹಕ್ಕೆ ವಂದು (ಕಾಪ್ರ. ೬-೪೦ ೫) ; ರಾಜಗೃಹಕ್ಕೆ ವಿಳ್ಕ ಗಜದಂತ ಚಯಂಗಳುಮುಂ . . . ಬಿದಿರಕ್ಕಿಯುಮುಂ ತಜುಂಬ ನಿರ್ಘ್ಯಾಜದಿನೆಯ್ದೆ (ಪಚಮು. ೨-೭೬). ೨. ಪ್ರಾಚೀನ ಮಗಧರಾಜ್ಯದ ರಾಜಧಾನಿಯ ಹೆಸರು. ೧, ೨ : ಅಂತು ಪವಗಧವಿಷಯದಂತೆ ರಾಜಗೃಹಸನಾಥಮುಂ . . . ಯಾಮ್ಯದಿಶೆಯಂತೆ ಧರ್ಮಪ್ರಭಾವವಿಭಾವಿತಮುಮೆಂಬ ಮಹನೀಯ ಪುಟ್ಟಿಮೆಯುಂ ತಳೆದು (ಶಕ್ಷ. ೪-೩೦ ೫). [ಸಂ.]

ರಾಜಗೇಹ (ನಾ). = ರಾಜಗೃಹ ೧ : ಪರಿಪಾಕಪಲಫಲಪುಷ್ಪೋತ್ಕರಂಗಳಂ. . . ಧರಣೀಶಂ ಕೆದಱಿಸಿದು ನಿರ್ಬರ ರಾಜಗೇಹದೊಳಗಂ ಪೊಱಗಂ (ಅಂಪ್ರ. ೦೩-೭) ; ರಾಜಗೇಹದ ಮುತ್ತಿನ ಬಾಗಿಲಿದಿರೊಳು . . . ನವಿಲು ಯ್ಯಾಲೆಯಿತ್ತುವ ಕಣ್ಗೆ ಕೌತುಕದ (ಶಂಪಂ. ೭-೮). [ಸಂ.]

ರಾಜಗೋಳಿ (ನಾ). ಒಂದು ಬಗೆಯ ಗೋಣಪ್ಪಸೊಪ್ಪು : ರಾಗೀಯು ಒಣರೊಟ್ಟಿ ರಾಜಗೋಳಿಯ ಪಲ್ಲೆ ರಾಜಕ ತವರು ಬಡವರ ಭೂನಿಯಾಗ ನಾಕುದಿನವಿದ್ದು ಒರುಪೇವ (ಗಪಚ. ೪). ' ರಾಜಗೀರೆ ' ಪರಾ. [ರಾಜ + ಗೋಳಿ]

ರಾಜಚಿಹ್ನ (ನಾ). ಅರಸುತನದ ಅಧಿಕಾರ, ಘನತೆ ಮುಂತಾದುವುಗಳನ್ನು ಸೂಚಿಸುವ ಗುರುತು ; ರಾಜಲಾಂಛನ ; ಪಟುಶಶಿ ಸಂಕಾಶಪಾಂಡುಛತ್ರಜಾಮರಯುಗಳಂ ಪೆಜ್ಜುಂ ರಾಜಚಿಹ್ನಂಗಳುಮೆಸೆಯೆ (ಕಂಪಾಶಾ. ೦೦-೩೭ ೪) ; ನಿಜನಿಜರಾಜಚಿಹ್ನನಿವಹಂ ಪರಿರಂಜಿಸೆ (ಪಗಪ. ೬-೮೦). [ಸಂ.]

ರಾಜಚಿಹ್ನೆ (ನಾ). = ರಾಜಚಿಹ್ನ : ರಾಜನು ಮಂತ್ರಿಗೆ ಬೆಳ್ಗೊಡೆ, ಚಾಮರ . . . ಮುಂತಾದ ರಾಜಚಿಹ್ನೆಗಳನ್ನು ಕೊಡುತ್ತಿದ್ದನು (ಪಚಾಂ. ೩೫೯) ; ಅರಸನು ಉಳಿಸಿಕೊಂಡಿದ್ದ ಆ ಅಲ್ಪಪರಿವಾರವನ್ನೂ ರಾಜಚಿಹ್ನೆಗಳನ್ನೂ ಸ್ವೀಕರಿಸಲಾರದವರಾಗಿ . . . ನಿರಾಕರಿಸಿ ಬಿಟ್ಟರು (ಪಚಾ. ೪೫). [ಸಂ. ರಾಜಚಿಹ್ನ]

ರಾಜಜಿಘಾಂಸು (ನಾ). ಅರಸನನ್ನು ಕೊಲ್ಲಲು ಬಯಸುವವನು : ಜನರ ಮಾರ್ಮಲೆಸುವೀ ಪರಿಯ ರಾಜಜಿಘಾಂಸುಗೆಮ್ಮ ಬಡ ಧರ್ಮದಂಡವೆ ಸಾಕೆ ? (ಗೂಕ್ಕೊಣಾ. ೧೦-೦೦೩). [ಸಂ.]

ರಾಜಠೀವಿ (ನಾ). = ರಾಜಗಾಂಭೀರ್ಯ : ಅತನಲ್ಲಿ ಏನೋ ಒಂದು ಬಗೆಯ ರಾಜಠೀವಿ ಕಾಣುತ್ತಿತ್ತು (ಜ್ಞಾಮಿಸ್ತ್ರೀ. ೦೧೪). [ರಾಜ + ಠೀವಿ]

ರಾಜಣ ' ರಾಜನ ' ನೋ.

ರಾಜತ (ಗು). ಬೆಳ್ಳಿಯಿಂದ ಆದ ; ಬೆಳ್ಳಿಯ : ಆ ರಾಜತಶೈಲೇಂದ್ರದೊಳೆ ಮಹಾಜಿನಮೆಂದ್ರಂ ಪ್ರಸಸ್ತಿಯಂ ಬರೆಯಿಸಿದಂ (ಜಾಂತಿ. ೪-೩೯) ; ಮರಳಿ ಸುತನಂ ಪಡೆದು ರಾಜತಗಿರಿಯನಾಗಳೆ ಸೂಜಿಗೊಂಡನು (ಪಪಚ. ೨೫-೦೩). [ಸಂ.]

ರಾಜತಂತ್ರ (ನಾ). ರಾಜಕೀಯಕಾರ್ಯದಲ್ಲಿರುವ ಚಾತುರ್ಯ ; ಆಡಳಿತತಂತ್ರ : ಹಿಂಗಲೊಲ್ಲದೆ ಹೋಯ್ತು ರಾವಣನ ವಿಚಿತ್ರರುಜೆ . . . ದಿನದಿನಕೆ ರಾವಣನ ರಾಜತಂತ್ರದ ಜಯಕೆ ಕೈಗೂಡಿದತ್ತೆಂಬಿನಂ ಮುರುಟಿದುದು ಮನದ ಕೆಚ್ಚು (ತ್ರಿಣಾಮಾ. ೨೭೩-೩೦೮). [ಸಂ.]

ರಾಜತರು (ನಾ). ಒಂದು ಬಗೆಯ ಮರ ; ಕಕ್ಕೆಮರ : "ಆರಗ್ವಧಂ ಸ್ವರ್ಣಪ್ರಭ್ಯ ಕೃತಮೂಲಮೆನಲಾ ರಾಜತರುವೆನಲ್ ಕಕ್ಕೆ" (ಪುಂಗಣಾ. ೩೫-೦೨) ; ಕವಕಚಂಪಕ, ರಾಜತರು (ಪ್ರಾಶಿ. ೩೫-೦೩೦). [ಸಂ.]

ರಾಜತ್ವ[1] (ನಾ). ದೊರೆತನ ; ಪ್ರಭುತ್ವ : ನನ್ನ ರಾಜತ್ವಗೊಂದೆ ಸತ್ಯವಸತರ ಸಾಕ್ಷಿ! (ಗೂಕ್ಕೊಣಾ. ೦೦೦-೦೩೦); ಸ್ವೀಮದ್ಭಲೋಲನಾಗಿ . . .

ಪುಣ್ಯಮೋಹಿನಿಯರಿಂಗೆ ಮೆಚ್ಚುನಗಳನು ರಾಜ್ಯ ರಾಜತೆಗಳನು ಸೋಲ್ತು (ಶಬ್ದ. ೨೦೬-೬). [ಸಂ. ರಾಜತಾ]

ರಾಜತೆ೨ (ನಾ). ಪ್ರಕಾಶ ; ಹೊಳಪು ; ಕಾಂತಿ : ಬಕ್ಕನಾವಲ್ಲಿ ಸುಗಂಧದ ಸುಳುಹಿನಂತೆ ಪಳುಕಿನೆ ರಾಜತೆಯಂತೆ ತುಟ್ಟದು ಅಪ್ಪ ವಿನಂತೆ (ಸಭಪ. ೪. ೩೦. ೫೫೪-೬). [ಸಂ. ರಾಜತ]

ರಾಜತೇಜ (ನಾ). ೧. ಅರಸನಲ್ಲಿರುವ ತೇಜಸ್ಸು. –ಕಾಂತಿ : ರೆಸೊಂಪಿನುವ ಖಿಲಮೊಗದ ನೋಟವ ಸೊಂಪಡಗಿದಾಲಿಗಳ ಧೈರ್ಯದ ಗುಂಪಳಿದ ನಿಜರಾಜತೇಜದ ವಿಪ್ಲವವೇವನೆಯ . . . ವಿಘಾತಿಯ ರೆಸೊಂಪಿನಲಿ ಹುಟ್ಟುಗಿದ್ದ ಮಹೀಶನ ಕಂತವಾ ಪಾರ್ಥ (ಭಾಷ್ಯ. ೦೩-೩). ೨. ಘನತೆ ; ಹಿರಿಮೆ : ಸ್ವಾಮಿನಿಷ್ಠಂ ದಾಕ್ಷಿಣ್ಯಪರನು ಸಾನಲ್ಲ ಲೋಕವಿರೋಧಿ ಶರಣಾಗತಿಗಂಜುವನಲ್ಲ ಕೂಡಲಸಂಗಮದೇವರ ರಾಜತೇಜದಧಿಪ್ಪನಾಗಿ (ಬಸ. ೭೩೬). [ಸಂ. ರಾಜತೇಜಸ್]

ರಾಜತ್ವ (ನಾ). = ರಾಜತೆ೧ : ಮೃಗರಾಜಂ ರಾಜತ್ವದ ಜಗೆಗಿಜ್ಜಂತಿ ಜಿಂದು ನಮಿದಿಂ (ಪಾಂಪಚ. ೭-೭೨) ; ಮನಸ್ಸು ರಾಜತ್ವ ಮಾಡುತ್ತಿರುವಾಗ ಅದು ತನ್ನ ಸುಖವನ್ನು ಕಾನೇ ಸೃಷ್ಟಿಮಾಡಿಕೊಳ್ಳಬಲ್ಲುದು (ಜಕ್ಕ. ೨೦೯). [ಸಂ.]

ರಾಜದಂಡ (ನಾ). ೧. ಪ್ರಭುತ್ವದ ಚಿಹ್ನೆಯಾಗಿ ಅರಸನು ಕೈಯಲ್ಲಿ ಹಿಡಿಯುವ ರತ್ನಖಚಿತವಾದ ಚಿನ್ನದ ದಂಡ : ರಾಜದಂಡಕ್ಕಿಂತಲೂ ಕಾಲನ ಕೈಯು ಹೆಚ್ಚು ಬಲಶಾಲಿ ; ಪಸನ್ನೂ ಎಸಗುಬಲ್ಲದು (ಜಾಷ್ಯ. ೪). ೨. ರಾಜಾಧಿಕಾರ ; ಪ್ರಭುತ್ವ. ೩. ಅರಸನು ವಿಧಿಸುವ ಶಿಕ್ಷೆ. — ದಂಡನೆ : ಅವನು ಘಾತುಕ, ಅವನಿಗೆ ತಕ್ಕ ರಾಜದಂಡವಾಗುವುದು (ದೀಕ್ಷೆ. ೬೨). ೪. ಅರಸನಿಗೆ ತೆರಬೇಕಾದ ದಂಡ. — ಜುಲ್ಮಾನೆ. [ಸಂ.]

ರಾಜದಂಡನೆ (ನಾ). = ರಾಜದಂಡ ೩ : ದ್ವೀಪಾಂತರವಾಸ ಮಾಡಬೇಕೆಂಬ ರಾಜದಂಡನೆಗೆ ಗುರಿಯಾದವರು ಇರುವುದಕ್ಕಾಗಿ ಈ ದ್ವೀಪಗಳನ್ನು ಸ್ಥಳವು ಏರ್ಪಾಟಾಗಿದೆ (ಕಾಗೋಶ. ೩೨). [ಸಂ. ರಾಜದಂಡನ]

ರಾಜದರಬಾರು (ನಾ). ಅರಸನ ಆಸ್ಥಾನ : ರಾಜನ ದರ್ಬಾರು : ರಾಜದರಬಾರಿನಲ್ಲಿ ದೊಡ್ಡಕೆಲಸವನ್ನು ಸಂಪಾದಿಸಬೇಕೆಂಬ ಆಶೆಯಿಂದಲೂ ಅವನು . . . ಅಲ್ಲಿ ವಾಸಮಾಡುತ್ತಿದ್ದನು (ಕಾಹಳಿಂ. ೩೪).

[ರಾಜ + ದರಬಾರು (< ದರ್ಬಾರು)]

ರಾಜದಾರಕ (ನಾ). = ರಾಜಕುಮಾರ : ಸಪಪಾದಸುಕ್ರೀಡಾನೇಕವಿಧಪ್ರಮಕ್ರೀಡಾರಸೋದಾರರಾಜದಾರಕಪರಿವೃತನಾಗಿ (ಜಪ್ರ. ೯-೧೦ ಪ). [ಸಂ.]

ರಾಜದೂತ (ನಾ). (ಅರಸನಿಂದ ನಿಯಮಿಸಲ್ಪಟ್ಟು) ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕಳುಹಿಸಲಾಗುವ ಪ್ರತಿನಿಧಿ ; ರಾಯಭಾರಿ : ಲಾಂಗಲಹಸ್ತಂ ವಿದ್ಯಾಧರರಾಜದೂತನ ಮೊಗಮಂ ಸೋದಿ (ಜಾಪ್ರ. ೫-೦೬ ಪ). [ಸಂ.]

ರಾಜದ್ರವ್ಯ (ನಾ). ಅರಸನಿಗೆ ಸಲ್ಲಿಸಬೇಕಾದ ಹಣ. —ಧನ : ಬಾಳ್ಗಳಿಯೂರೊಡೆಯಂ ಪಶುಪತಿಭಟ್ಟಿಕ್ಕ್ಗೆ ಪಾಜಿನ್ದಿಪು ಸಂಬ್ಧದ ರಾಜದ್ರವ್ಯ ಮಾದುದ್ದೆವಂ ಬಿಟ್ಟರ್ (ಪೌಶಾ. ೩೬-೫. ೫೫-೦೨ ; ೪೮೦). [ಸಂ.]

ರಾಜದ್ರೋಹ (ನಾ). ಅರಸನಿಗೆ ಅಥವಾ ಆಡಳಿತಕ್ಕೆ ಕೇಡು ಬಗೆಯುವಿಕೆ. – ಅನ್ಯಾಯ ಮಾಡುವಿಕೆ : ಆ ಶಿಬಿರದಲ್ಲಿ ಪಡಿಮುತ್ತಿರುವುದೆಲ್ಲಾ ಸ್ವಾಮಿದ್ರೋಹ· ರಾಜದ್ರೋಹಗಳೆಂದು ನನಗೆ ಮನವರಿಕೆಯಾಯಿತು (ಶ್ರೀಶಾಚ. ೩೭೩). [ಸಂ.]

ರಾಜದ್ರೋಹಿ (ನಾ). ಅರಸನಿಗೆ ಅಥವಾ ಆಡಳಿತಕ್ಕೆ ಕೇಡೆಣಿಸುವವನು: ರಾಜದ್ರೋಹವನ್ನು ಬಗೆಯುವವನು: ರಾಜದ್ರೋಹಿಯಾದ ಹೃದಯವು ರಾಜ್ಯಪುಷ್ಪನಾದ (ಒಡ. ೫೯) ; ರಾಜಾಧಿರಾಜರಾದ ಮೈಸೂರಿನ ಸುಲ್ತಾನರಿಗೂ ರಾಜದ್ರೋಹಿಯಾಗಿ ಈ ದಂಗೆಕೋರನಿಗೂ ಪ್ರೇಮಿಯೆಂದನೇನು ? (ದೀಂಕ್ಷೆ. ೬೩). [ಸಂ. ರಾಜದ್ರೋಹಿನ್]

ರಾಜದ್ವಾರ (ನಾ). (ಅರಮನೆಯ) ಮುಖ್ಯದ್ವಾರ ; ಹೆಬ್ಬಾಗಿಲು : ರಾಜದ್ವಾರದೊಳಗ್ನಿಕುಂಡಮನಲಂಪಿಂ ಮಾಡಿ ತಂದಿಕ್ಕಿ (ಪಾಪು. ೦೦-೦೦೩) ; ತೆಂಕಣ ಬಾಗಿಲೇ ಅರಮನೆಯವರು ಪ್ರವೇಶಿಸುವ ರಾಜದ್ವಾರ (ಪಪಚ. ೪೫). [ಸಂ.]

ರಾಜದ್ವೇಷ (ನಾ). ೧. ಅರಸನ ಮೇಲಿನ ದ್ವೇಷ. —ಸೇಡು. ೨. ಚಂದ್ರನ ಮೇಲಿನ ದ್ವೇಷ. —ವೈರ. ೧. ೨ : ರಾಜದ್ವೇಷು ಮುಧುಪಸಮಾಪಾತಿಪ್ರೀತಿ ತನ್ನ ಸಂಗವೆ ಗುಣಿ ನೀರೇಜಕ್ಕೊಳವೆನಿಸಿದ ಲಕ್ಷ್ಮೀಜಾಯಿಗೆ ಕೂರ್ತವಂಗೆ ಮತಿ ಸಮನಿಪ್ಪದೇ (ಪ್ರಸಾ. ೦೨-೮೨). [ಸಂ.]

ರಾಜಧರ (ನಾ). ಚಂದ್ರನನ್ನು ಧರಿಸಿದವನು ; ಚಂದ್ರಶೇಖರ; ಶಿವ : ರಾಜಧರನಂತಾ ಪ್ರಮಥಗಣಾಂಬುಜಿನೀರೂಪ್ಪ ಪೊಳವುರ್ಮಿ ವಿರಾಜಿಸುತ್ತಿರೆ (ಪಾಪು. ೩-೨೯) ; ನೀರೇ ಜಾಂಬಕನೊಲ್ದು ರಾಜಧರನಿಂದಂ ಸೂನುವಂ. . . ಪಡೆದಂ (ಪಪ್ರಾ. ೨-೬). [ಸಂ.]

ರಾಜಧರ್ಮ (ನಾ). ಅರಸನು ಪಾಲಿಸಬೇಕಾದ ಧರ್ಮ. –ಕರ್ತವ್ಯ ; ಪಸಂಧೆಯನೆ-ಕಾಯತ್ರಪವಾನಸನಜ್ಞಾವಿಂ ನೆಜ್ಜಿದು ರಾಜಧರ್ಮದಿನಭಿರಕ್ಷಿಸೆ ಪೋಪುದು ಕೆಲಂ (ಪಾಂಪಚ. ೭-೩೯) ; ಹೇಗು ಹೇಳಿನ್ನೊಮ್ಮೆ ಧರ್ಮವ ಕೇಳಿದಜ್ಞೆಯುವು ನಿಮ್ಮ ಕಪ್ಪುಲಿ ಕೇಳಲಾಗದ ರಾಜಧರ್ಮ ಪುರಾಣಸಂಗತಿಯ (ಶಾಷ್ಯ. ೫೬-೬೬). [ಸಂ.]

ರಾಜಧಾನಿ (ನಾ). ದೇಶದ ಅಥವಾ ರಾಜ್ಯದ ಮುಖ್ಯಪಟ್ಟಣ. – ಆಡಳಿತಕೇಂದ್ರ : " ಸ್ಕಂಧಾವಾರ, ರಾಜಧಾನಿ-ಈ ೨ ರಾಜಧಾನಿ " (ಪಾಂಪಚಂ. ೪೮-೧೩೦) ; ದಕ್ಷಿಣೋತ್ತರಶ್ರೇಣ್ಯಗಳ್ಗೆ ರಾಜಧಾನಿಗಳಾಗಿರ್ದ. . . ಪುಟ್ಟಲ್ಗಳನೊಳಕೊಂಡು (ಪಾಪು. ೦-೬೨ ಪ). [ಸಂ. ರಾಜಧಾನೀ]

ರಾಜನ, ರಾಜಣ, ರಾಜಾಣ, ರಾಜಾನ, ರಾಜುಣ (ನಾ). ಒಂದು ಬಗೆಯ ಶ್ರೇಷ್ಠಜಾತಿಯ ಬತ್ತ, ಮತ್ತು ಅದರ ಅಕ್ಕಿ ; ರಾಜಾನ್ನ : ಕಸ್ತರ ಬೊಮ್ಮಿದೇವಯ್ಯಗಳು ದಮುಮರಸಂಗಳು ರಾಜನದ ಬೊಮ್ಮಿದೇವಯ್ಯಗಳು (ಪಪ್ರ. ೫೯-೨) : ಕಲ್ಲವ್ವ ತಾಯಿ ಮೆಲ್ಲವ್ವ ರಾಜನವ ಜಲ್ಲಜಲ್ಲಾನೆ ಉದುರವ್ವ ನಾ ನಿನಗೆ ಬೆಲ್ಲದಾರತಿಯಾ ಬೆಳಗ್ಯೇನು (ಪಾಗಿಚ. ೨). **ರಾಜಣ** : ಉತ್ತ ಹೊಲದಲ್ಲಿ ಉತ್ತಾಣಿ ಕಾಳಲ್ಲಿ ಪುಟ್ಟರಾಜಣದ ಬಯಲಲ್ಲಿ ಬಸಕುಕ್ಕುವ ಚಿತ್ರಸಾಲಲ್ಲಿ ಬರುತಾಳೆ (ಪಾಗಿಚ. ೧೦) ; ರಾಜಣವ (ನೇ) ಗಣಿಗೆ ಒರಗಿ ನಿಂದಿರುವೋಳೆ ರಾಜ ಮಾದಣನ ತಿರುವಂಗಿ ಕಡುಚೆಲುವೆ ರಾಜಣ ತತ್ತಾರೆ ಹಸೆ ಹುಯ್ಕೆ (ಜಾಕಥ. ೦೨೬). **ರಾಜಾಣ** : ರಾಗಿಯು ಮುಗಿದಾವು ರಾಜಾಣ ಹೆಚ್ಚಾವು ನಾನ್ತಿಡಿದ ಕೆಲಸ ವದಗ್ಯಾವು ರಾಗೀಕಲ್ಲೆ ನಾ ತೂಗಿ ಬಿಡುವೆನು ಬಲದೋಳ್ (ಪಾಗಿಚ. ೬). **ರಾಜಾನ** : ರಾಗಿ ಬೀಸೋ ಕಲ್ಲೆ ರಾಜಾನ ಒಡೆಗಲ್ಲೆ ರಾಯ ಅಣ್ಣಾಯ್ಯ ಅರಮನೆ ರಾಗೀಕಲ್ಲೆ ರಾಜುಂದಿಗೆ ದಸಮೋರೆ (ಪಾಕಥ. ೬೪). **ರಾಜುಣ** : ಗಂಧಾರ ಮಂದಪತಿ ರನ್ನಾವ ಕೆಲ್ಲಿಸೋರ್ಮ ಆಡೀ ರಾಜುಣವ ತೊಳಸೋಳೆ ಗೋಪಮ್ಮ ನಂದಾಗೋವಿಂದನ ಕರಕೊಳ್ಳೆ (ಪಾಶ್ವಪ. ೫೬).

[< ಸಂ. ರಾಜಾನ್ನ]

ರಾಜನೀತಿ (ನಾ). ೧. ಅರಸನಿಗೆ ಅಥವಾ ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ನೀತಿ : ಆಡಳಿತವ್ಯವಹಾರ : ರಾಜಕಾರಣ : ಸಾವು ಮೆಂಬುದು ರಾಜನೀತಿಗೆ ತಾ ಪುಸಿಹೋದ ರೂಪು ಬದುಕುವ ಭೂಮಿ ಪಾಲರನಂತಪಿಭವಕೆ ಬೀಜಮಾಂತ್ರವದು (ಶಾಷ್ಯ. ೯-೩) ; ಈ ಗಣಿಯು . . . ರಾಜನೀತಿಮರಿತು ಸಮಯೋಚಿತವಾಗಿ ಮಾತನಾಡಬಲ್ಲುದು (ಪಪ್ರ. ೦) ; ರಾಜದ್ರೋಹಿ . . . ಇನ್ನಿವನ ಜೀವದಿಂದಿರಲೀವ ಕರುಣೆ ಎತರ ರಾಜನೀತಿ ? (ಗೂಹ್ಯೋ. ೬-೦೬೦). ೨. [ಗಣಿತ] ಒಂದು

ಬಗೆಯ ಲೆಕ್ಕ (?) : ಕರ್ನಾಟಕದ ವಾರ್ತೆಯಲ್ಲಿ ಅಷ್ಟಾದಶಗಣಿತಂ· ಗಳುಂಟು ಅವಾವುದೆಂದೊಡೆ ಮಗ್ಗಿ ಗಣಿತ . . . ಕ್ಷೇತ್ರಗಣಿತ ಮಂಗಳಿ ಅಳತೆ ರಾಜನೀತಿ ಬಣ್ಣಾಂಕರ ಪದ್ಯನಾಥ . . . ಮುತ್ತಿನ ಬೆಲ್ಲಿನ ಗಣಿತವುಂ ಅಷ್ಟಾದಶಗಣಿತಂಗಳು (ಲೀಲಾವ. ೨–೨). [ಸಂ.]

ರಾಜನೀತಿಜ್ಞ (ನಾ). ರಾಜನೀತಿಯನ್ನು ಬಲ್ಲವನು; ರಾಜ್ಯದ ಆಡಳಿತ ವ್ಯವಹಾರವನ್ನು ತಿಳಿದವನು : ಅಂಗ್ಲರಾಜನೀತಿಜ್ಞರು ವಿರೂಪಿಸಿದ ವಿದ್ಯಾಭ್ಯಾಸವಿನ್ಯಾಸ ಇವರಿಂದಕ್ಕೂ ಪುಷ್ಟಿ ಕೊಟ್ಟಿತು (ಬಾಗ್ಯಕ. ೦೦೪ ೫೦೪). [ಸಂ.]

ರಾಜನೆಲ್ಲು (ನಾ). ಒಂದು ಬಗೆಯ ಉತ್ತಮಜಾತಿಯ ಬತ್ತ; ರಾಜಾನ್ನ : (ಕೃ). [ರಾಜ + ನೆಲ್ಲು (< ನೆಲ್)]

ರಾಜನ್ಯ (ನಾ). ೧. ದೊರೆ ; ಅರಸು : "ರಾಜಾ, ರಾಜನ್ಯಃ . . . ಲೋಕವಾಲಃ–ಈ ೧೨ ಅರಸು" (ಚಿಂತಾಮ. ೬೯–೭೬). ೨. ಕ್ಷತ್ರಿಯ ವಂಶದಲ್ಲಿ ಹುಟ್ಟಿದವನು ; ಕ್ಷತ್ರಿಯ : "ಮೂರ್ಧಾಭಿಷಿಕ್ತಃ, ರಾಜನ್ಯಃ, ಬಾಹುಜಃ, ಕ್ಷತ್ರಿಯಃ· ವಿರಾಟ್–೫ ರಾಜ್ಯಾಧಿಕಾರದ ಪಟ್ಟ ಕಟ್ಟಿ ಕೊಂಡಿರುವ ಕ್ಷತ್ರಿಯನಿಗೂ ಅವನ ವಂಶದಲ್ಲಿ ಹುಟ್ಟಿದವರಿಗೂ ಹೆಸರುಗಳು" (ಚಿಕ್ಕ.ಅ. ೨೬೪); ರಾಜನ್ಯಗೊಂದು ಸಭೆ; ಪುರದ ಪುರಂಧ್ರಿಯರಿಗೊಂದು ಸಭೆ ಯೋಜನವಳಕೆಯೊಳಾಯ್ತು (ಣಾಚಿಪ್ರ· ೦೬೭–೦); ಈದಯವಾಗಲಿ ನಮ್ಮ ಚಿಲುವ ಕನ್ನಡನಾಡು . . . ರಾಜನ್ಯರಿಪು ಪರಶುರಾಮನಮ್ಮನ ನಾಡು (ಶಸ್ತ್ರಾ. ೦೦೦). [ಸಂ.]

ರಾಜನ್ಯಕ (ನಾ). ಅರಸರ ಸಮೂಹ ; ದೊರೆಗಳ ಗುಂಪು : "ರಾಜಕಂ· ರಾಜನ್ಯಕಂ-ಅರಸುಗಳ ಗುಂಪಿಗೆ ರಾಜನ್ಯಕವೆಂಬ ಹೆಸರು" (ಸಿಜಾ.ಅ.೨೫೫); ಅನೇಕ ರಾಜನ್ಯಕಮಕುಟಸಂಘಟ್ಟೋಚ್ಚಲನ್ಮಣಿಮರೀಚಿಗಳ್ ವಿಲಯಿಸಿನಲ ವಿಸ್ಪುಲಿಂಗಂಗಳಂತೆ ದಿಸದಿಸೆಗೆ ಕೆದರಿ (ಅಪ್ಪ. ೦೯–೩ ೫) ; ರಾಜಶೇಖರ ಸಕುಮಾರನ ಬಗೆಗೆ ಸಧಾಸದವ್ಯದ್ಧಪ್ರಸಿದ್ಧರಾಜನ್ಯಕಂ ಬಗೆ ಮೆಚ್ಚಿ ಮಣಿ ಮಕುಟಮನೊರೆದು ತೂಗಿ (ಣಾಚಿಪ್ರ· ೦೯–೨೦ ೫). [ಸಂ.]

ರಾಜನ್ವತಿ (ನಾ). ಒಳ್ಳೆಯ ರಾಜನನ್ನು ಉಳ್ಳ ದೇಶ ; ಸದ್ಗುಣಿಯಾದ ಅರಸನಿರುವ ನಾಡು : ರಾಜನ್ವತಿ ಮಾಡು ಧರಣಿಯಂ ಧರಣಿಪತೀ (ಅಪ್ಪ. ೦೯–೨೦) ; ರಾಜನ್ವತೀನಾಮಮಂ· ವಸುಧಾವಲ್ಲಭೆ ತಾಳ್ದೆ (ಅಪಂಪ. ೯–೪)· [ಸಂ. ರಾಜನ್ವತೀ]

ರಾಜಪಟ್ಟ (ನಾ). ೧. (ವಿಧಿಪೂರ್ವಕವಾಗಿ) ಅರಸನ ಹಣೆಗೆ ಕಟ್ಟುವ ರಾಜ್ಯಾಧಿಕಾರದ ಪಟ್ಟ–ಲಲಾಟಪಟ್ಟ : (ಕೃ). ೨. ದೊರೆಯ ಅಧಿಕಾರ ; ಅರಸೊತ್ತಿಗೆ : ರಾಜಪಟ್ಟವ ದೊರಕುವ ಮೊದಲು ಬಡಜನರ ಗಳೆಮರಿ ಸುಖದುಃಖಗಳು ಅವನಿಗೆ ತಿಳಿದಿರುವುವೆ (ಗುಖಾಕ. ೩). [ಸಂ.]

ರಾಜಪಿಂಡ (ನಾ)· ಅರಸುಕುಲದಲ್ಲಿ ಹುಟ್ಟಿದವನು ; ರಾಜವಂಶಕ್ಕೆ ಸೇರಿದವನು : ಚಂದ್ರಹಾಸನ ವಂಶ ನೋಡಿದ ಕೂಡಲೆ ಅವನು ರಾಜ ಪಿಂಡ ಎಂದು ತಿಳಿಯುತ್ತಿತ್ತು (ಕಸಾ). [ಸಂ.]

ರಾಜಪಿಂಡೆ (ನಾ). ೫ ರಾಜಪಿಂಡ : ಪಾಪಿಗಳೂ ರಾಜಪಿಂಡೆಯವರೂ ದಿವ್ಯಾಸನಗಳನ್ನು ಅಲಂಕರಿಸಿದ್ದಾರೆ (ಚಿಂಪ್ರ· ೫೫). [< ರಾಜಪಿಂಡ]

ರಾಜಪುತ್ರ (ನಾ). ೧. ಅರಸುಮಗನ ; ರಾಜಕುಮಾರ : ಬಾಹುಬಲ ವಿಲ್ಲದ ರಾಜಪುತ್ರನಂತಿ ತಕ್ಕುಗೆಟ್ಟು (ಜಾಂಅತ್ತಿ· ೪–೩೦ ಪ) ; ತಗರ. . . ಜಗಳವ ಕಾದಿಸುತಿಹ ರಾಜಪುತ್ರರು ಸೊಗಸಿದರಾ ಬೀದಿಯೊಳಗೆ (ಕಂಪ. ೬–೦೦). ೨. ಒಂದು ಕ್ಷತ್ರಿಯವಂಶದ ಹೆಸರು ; ರಜಪೂತ : ಬಾಟವೀರೆಂಬಲ್ಲಿನ ರಾಜಪುತ್ರ ಅರಸನೊಬ್ಬನು ಅವನನ್ನ ಪ್ರತಿಭಟಿಸಿದನು (ಜಾಶಾಸ್ತ್ರ· XII, ೦೪೦). [ಸಂ.]

ರಾಜಪುತ್ರಿ (ನಾ)· ದೊರೆಯ ಮಗಳು ; ಅರಸನ ಪುತ್ರಿ : ರಾಜಪುತ್ರಿಯು ನಾನು, ರಾಜೀವಕುಲದ ಕುಲದೈವತದ ಹಾಗೆ ಬೆಳೆದು . . . ರಾಜಿಸಿದೆನು (ಕೃಷ್ಣಕ. ೯–೦೫); ರಾಜಪುತ್ರಿಯು ಎಚ್ಚತ್ತರೆ ತನ್ನನ್ನು ಕೇಳದೆ ನಿನ್ನನ್ನು ಹೊರಗೆ ಬಿಟ್ಟದ್ದಕ್ಕಾಗಿ ವಿಪರೀತವನ್ನು ತಿಳಿಕೊಂಡಾಳು (ಕಕ್ಕಕ. ೫೫)· [ಸಂ. ರಾಜಪುತ್ರೀ]

ರಾಜಪುರುಷ (ನಾ). ೧. ದೊರೆಯ ಸೇವಕ ; ಅರಸನ ಆಳು. ೨. ಅರಸನ ಕೈಕೆಳಗಿನ ವ್ಯಕ್ತಿ.– ಅಧಿಕಾರಿ : ಮಂತ್ರಿ ಪೂರ್ಣಯ್ಯನವರು ಜೊತೆಯಲ್ಲಿ ಆಜಾನುಬಾಹುವಾದ ರಾಜಪುರುಷನೊಬ್ಬನನ್ನು ಕರೆದು ಕೊಂಡು ದರಿಯಾವೌಲತ್ತಿನ ಪಿಮಹಿಯ ಮೇಲೆ ಬಂದರು (ಕೌಅಂ. ೫೩). ೩. ಮಂತ್ರಿ ; ಸಚಿವ· [ಸಂ.]

ರಾಜಪುರೋಹಿತ (ನಾ). ಅರಮನೆಯ ಧಾರ್ಮಿಕ ಪ್ರತಾದಿಗಳನ್ನು ಮಾಡಿಸುವವನು.– ಪುರೋಹಿತ : ಚಕ್ರವರ್ತಿಯು . . . ರಾಜ ಪುರೋಹಿತನನ್ನು ಕರೆಯಿಸಿ· ಶಾಂತಿಸಂಸ್ಕಾರಗಳನ್ನು ಮಾಡಿಸಿದನು (ಪುಪ್ರ· ೫೭); ರಾಜಪುರೋಹಿತರು ಮಹಾಬ್ರಾಹ್ಮಣರು . . . ಶಾಂತಲ ದೇವಿಗೆ ಮಂತ್ರಪೂರ್ವಕವಾಗಿ ಅಭಿಷೇಕಮಾಡಿದರು (ಣಾಂಶಾ· ೦೦೬). [ಸಂ.]

ರಾಜಪೂಜಿತ (ನಾ). ಅರಸರಿಂದ ಪೂಜಿಸಲ್ಪಟ್ಟವನು.– ಗೌರವಿ ಸಲ್ಪಟ್ಟವನು : ಕಾಳಗಪತಿಧವಳಯಶಂ ರಾಜಪೂಜಿತಂ ಸ್ಥಿರವಿಸ್ತಾರಂ (ಕೇಶಿ. XX, ೪೦–೦೩; ೧೦೪೬)· [ಸಂ.]

ರಾಜಪೂಜ್ಯ (ನಾ). ಅರಸರಿಂದ ಪೂಜಿಸಲ್ಪಡುವವನು.–ಗೌರವಿ ಸಲ್ಪಡುವವನು : ನಾಗಾಯುತಜಿತಾರಿವರ್ಣ್ಣಲವಮ್ ರಾಜಪೂಜ್ಯಮಮಲ ಶ್ರೀಮೂಮ್ಮದಮ್ ಕಾಮುದವಮ್ ಹತಮದವಮ್ ನಮಾಮ್ಯಹಮ್ (ಪಿ. II, ೪೦–೩; ಪು. ೨೦೦); ನುಡಿದಡೆ ಕರ್ನ್ನಾಜಹವದೊಳಿವ್ವ ಸುತಂ . . . ಚಾರುದತ್ತನೆನ್ದಡೆ ಸಲೆ [ಮೇಚ್ಯಾ] ಬಗ್ಗಸುವರಾರ್ಗ್ಗಳಿ ರಾಜಿತ ರಾಜಪೂಜ್ಯನಂ (ಕೇಶಿ· XX, ೪೦-೦೩; ೧೦೪೬); ರೂಪೋತ್ಕರನು ಧನಿಕನು ರಾಜಪೂಜ್ಯನು ಕೀರ್ತಿವಲ್ಲಭನು (ಶಾಣ್ಮ. ೩–೦೦೩). [ಸಂ.]

ರಾಜಪೆಂಡಿ (ನಾ). ೫ ರಾಜಪಿಂಡ : "ರಾಜಪೀಜ್ಞಃ ರಾಜವಂಶ್ಯಃ – ೨ ರಾಜವಂಶದಲ್ಲಿ ಹುಟ್ಟಿದವನ ಹೆಸರುಗಳು. ರಾಜಪೆಂಡಿ· ಅರಸುಪೆಂಡಿ " (ಸಿಜಾ.ಅ. ೨೦೩). 'ಅರಸುಪೆಂಡಿ' ಪರಾ· [ರಾಜ + ಪೆಂಡಿ]

ರಾಜಪ್ರಕೃತಿ (ನಾ). ಅರಸನು ಮಂತ್ರಾಲೋಚನೆಯನ್ನು ಮಾಡಿ ಕಾರ್ಯವನ್ನು ನಿರ್ವಹಿಸುವಿಕೆ : " ಮಂತ್ರಂ ಕ್ಷಾತ್ರವಟ್ಟೆ ರಾಜ ಪ್ರಕೃತಿಯಪ್ಪುದು " (ಕುಂಗಣಿ· ೭೯–೬). [ಸಂ.]

ರಾಜಪ್ರತಿನಿಧಿ (ನಾ). ಅರಸನ ಪರವಾಗಿ ಅಧಿಕಾರವನ್ನು ನಿರ್ವಹಿ ಸುವ ಅಧಿಕಾರಿ : ಇನ್ನು ಕೆಲವು ಸಂದರ್ಭಗಳಲ್ಲಿ ರಾಜಪ್ರತಿನಿಧಿಗೂ ಇವರೊಂದಿಗೆ ಕಲೆಯುತ್ತಿದ್ದುದುಂಟು (ಚಾಚಿ· ೫೫). [ಸಂ.]

ರಾಜಪ್ರಮುಖ (ನಾ). ರಾಜ್ಯದ ಪ್ರಧಾನವ್ಯಕ್ತಿ ; ℙ ಈಗಿನ 'ರಾಜ್ಯ ಪಾಲ' ಎಂಬ ಪದಕ್ಕೆ ಪರ್ಯಾಯವಾಗಿ ಹಿಂದೆ ಬಳಕೆಯಲ್ಲಿದ್ದ ಪದ : ಎಲ್ಲೆಲ್ಲಿ " ರಾಜ್ಯಪಾಲರು " ಎಂಬ ಪದವು ಬರುತ್ತದೆಯೋ ಅಲ್ಲಲ್ಲಿ ಆ ಪದಕ್ಕೆ ಬದಲಾಗಿ " ರಾಜಪ್ರಮುಖರು " ಎಂಬ ಪದವನ್ನು ಸೇರಿಸಿಕೊಳ್ಳಶಕ್ಯವಾಗಿದೆ (ಕಾಗಾಚ. ೦೩೦). [ಸಂ.]

ರಾಜಪ್ರಶಂಸೆ (ನಾ)· ಅರಸನನ್ನು ಹೊಗಳುವುದು.– ಶ್ಲಾಘಿಸು ವುದು : ರಾಜಪ್ರಶಂಸೆ, ಪಂಚಾಸ್ಯಮಂ· ಘಲಶ್ರುತಿ ಇವುಗಳನ್ನು ಸಶ್ಲಮವಾಗಿ ನಿರೂಪಿಸುವ ಶಾಸನ (ಪಾಕೃಂ. ೬೭). [ಸಂ. ರಾಜಪ್ರಶಂಸಾ]

ರಾಜಫಣಿ (ನಾ). ಹಾವುಗಳಲ್ಲಿ ಶ್ರೇಷ್ಠವಾದುದು ; ನಾಗರಾಜ ; ರಾಜಸರ್ಪ : "ಘಳಘಳಗ್ರಾಜಫಣಿಯೆನಲ್ಕರವಾವು" (ಪುಂಗಣಿ· ೦೦೬–೩). [ಸಂ. ರಾಜಫಣಿನ್]

ರಾಜಬಲೆ (ನಾ). ಒಂದು ಬಗೆಯ ಸಸ್ಯ; ಸಾರಣಿ : "ಸಾರಣೇ . . . ರಾಜಬಲಾ· ಭದ್ರಬಲಾ — ೫ ಕಿರಿಯ ಹಸುರಾರಣೇಗಿಡ, ಸಾರಣೆಗಿಡ" (ಚಿಂಪ್ರ· ೦೧೭). [ಸಂ. ರಾಜಬಲಾ]

ರಾಜಬಾಳೆ ' ರಾಜವಾಳೆ ' ನೋ.

ರಾಜಬಿತ್ತರಿ (ನಾ). ಅರಸನ ವಿಲಾಸಿನಿ : ಮುತ್ತಿಕೊಂಡಾ ರಾಜಬಿತ್ತರಿಯರು . . . ತೋರಲಾ ರಾಜಪೋಲಿಯರ್ ಧೀರರಾಗಿ ವರದರಗಿಳಿಯುಂ ಕುರಿತು ವಹಿಲದಿಂವ ಸರಸಸುಕುಮಾರ ಶುಕರಾಜ ಸಾರ್ವಭೌಮ ಯಾರು ನೀಂ ಬಂದ ಕಾರ್ಯವನ್ನರುಹು ಜೀಯ್ಯಾ (ಪಾರ್ಶ್ವ. ೩೪-೩).

[ರಾಜ + ಬಿತ್ತರಿ]

ರಾಜಬೀಜ (ನಾ). = ರಾಜಪಿಂಡ : " ರಾಜಬೀಜೋ. ರಾಜವಂಶ್ಯಃ— ೨ ರಾಜವಂಶದಲ್ಲಿ ಹುಟ್ಟಿದವರ ಹೆಸರುಗಳು. ರಾಜಪೆಂಡಿ. ಅರಸುವೆಂಡಿ " (ಶಿವ್ಕಾಂ. ೨೦೨).

[ಸಂ. ರಾಜಬೀಜನ್]

ರಾಜಬೀದಿ (ನಾ). ಮುಖ್ಯರಸ್ತೆ ; ಹೆದ್ದಾರಿ : ಮುಂದೆ ಕಂದಿಮ ಕಂಚುಕಿಯರೊಲವಿಂದ ವಿಪ್ರರ ಮಂತ್ರಘೋಷಣೆಯಿಂದ ಬಂದರು ರಾಜ ಪುತ್ರರು ರಾಜಬೀದಿಯಲಿ (ಕೂಕರಾ. ೨-೨೬-೧೨) ; ದ್ರೌಣಿಸಾಧಿಭಟ್ಟನು ತನ್ನ ಮಗನಾವ ಹರಿಯನ್ನ ಕರಕೊಂಡು ರಾಜಬೀದಿಯಲ್ಲಿ ಹೋಗುತ್ತಿದ್ದನು (ಕುಂಪಾ. ೪-೦೫೬). [ರಾಜ + ಬೀದಿ]

ರಾಜಬುರಿಹಣ್ಣು (ನಾ). ಒಂದು ಬಗೆಯ ಹಣ್ಣು : ಗೋಮುಳ್ಳು. ರಾಜಬುರಿಹಣ್ಣು (ಹ್ಯಶಿಗ. ೬೬-೦೬೬೦).

[ರಾಜಬುರಿ (ಪ್ರ ← ಇಂ. Raspberry) + ಹಣ್ಣು (< ಪಣ್ಣು)]

ರಾಜಬೋಯಿ, ರಾಜಬೋವ (ನಾ). ಅರಸನ ಪಲ್ಲಕ್ಕಿಯನ್ನು ಹೊರುವವನು : ಅಂದಣವನ್ನು ಹೊತ್ತಿರುವವರು . . . ರಾಜಬೋಯಿಗಳು (ಕುಂಗಿ. ೩೬). **ರಾಜಬೋವ** : ರಾಜಬೋವಂ ಚಂಡವಂಶಮಂ ಶನಗೆಂಬ ವ್ಯಾಜದಿಂ ಮನಮನೆಗೆ ಬೇಡ ಕಲ್ಯಾಣದೊಳಗಾ ಜನಂ ಕುಡದಿರಲು (ಅಚಾ. ೩೨-೨೬). [ರಾಜ + ಬೋಯಿ (< ಬೋಯ)]

ರಾಜಬೋವ ' ರಾಜಬೋಯಿ ' ನೋ.

ರಾಜಬ್ರುವ (ನಾ). ಅರಸನೆಂದು ಹೇಳಿಕೊಳ್ಳುವವನು ; ಹೆಸರಿಗೆ ಮಾತ್ರ ದೊರೆಯಾದವನು : ಸವನಿಸಿದ ಗರ್ವದಲಿ ರಾಜಬ್ರುವನು ಕಳುಹಿದನಿಂದು ಕರುಣಾರ್ಣವನೆ ನಿಮ್ಮಡಿಯಂಭ್ರಸ್ಸಾಧಿಗೆ (ಅಭಾಡ. ೦೦-೫೮-೨೪). [ಸಂ.]

ರಾಜಭಕ್ತಿ (ನಾ). ಅರಸನ ಮೇಲಿರುವ ಭಕ್ತಿ ; ರಾಜನಿಷ್ಠೆ : ಅವರು ರಾಜಭಕ್ತಿಯನ್ನು ತೋರ್ಪಡಿಸಿದರೆ ಅವರಿಗೆ ನಗರದ ದಿವಾಣಗಿರಿಯನ್ನು ಕೊಡಬಹುದು (ಕಾಂಶ್. ೬೨). [ಸಂ.]

ರಾಜಭತ್ತ (ನಾ). = ರಾಜಸೆಲ್ಲು : ವಿಲಕ್ಕಿ. ರಾಜಭತ್ತದರಳು ಇವನ್ನು ಸಕ್ಕರೆಯೊಡನೆ ತಿನ್ನಲು ದಾಪವಡಗುವುದು (ಪಥ್ಯ. ಸಂ. ೧೬೬).

[ರಾಜ + ಭತ್ತ$_{1}$ (<ಬತ್ತ)]

ರಾಜಭವನ (ನಾ). ಅರಸನ ನಿವಾಸ ; ಅರಮನೆ : ಮಹಾಮಕುಟ ಬದ್ಧ ಪರಿವೃತಂ ರಾಜಭವನಮಂ ಪೊಯಿಪುಟ್ಟು (ಅಂಪ್ರ. ೦೦-೦೪ ಪ) ; ರಾಜಭವನವ ರಾಜಾಂಗಣಮಂ ಪೊಕ್ಕು (ಪುಕ್ಕ. ೯-೪೬ ಪ). [ಸಂ.]

ರಾಜಭಾಷೆ (ನಾ). ಒಂದು ದೇಶದ ಅಧಿಕೃತವಾದ ಆಡಳಿತಭಾಷೆ : ಆಗ ರಾಜಭಾಷೆಯೊಂದು ಓಮಲುಪುದಿಂದ ರಾಮೇಶ್ವರದವರೆಗೂ ಸ್ವೇಚ್ಛೆಯಾಗಿ ಓಡಾಡುವುದು (ಕಾಪಾ. ೨) ; ' ಪರ್ಷಿಯನ್‌ಭಾಷೆ ಒಕು ಕಾಲ ದೆಹಲಿಅರಸರ ರಾಜಭಾಷೆಯಾಗಿ ನಡೆದುಬಂದಿತು (ಬಾಸಂ. ೧೦೪). ' ರಾಜ್ಯಭಾಷೆ ' ಪರಾ. [ಸಂ. ರಾಜಭಾಷಾ]

ರಾಜಭೋಗ (ನಾ). ೧. ಅರಸನಿಗೆ ಯೋಗ್ಯವಾದ ಆಹಾರ ; ಶ್ರೇಷ್ಠವಾದ ಆಹಾರ : ಇದರಲ್ಲಿ ಅನ್ನ ಸಾರು ಇವೆ. ಅದೇ ನಮಗೆ ರಾಜಭೋಗ (ಕಾಕೃಕೃ. ೮೨). ೨. ಅರಸರಿಗೆ ಯೋಗ್ಯವಾದ ಸುಖ ; ಶ್ರೇಷ್ಠವಾದ ಸುಖ. ೩. ಒಂದು ಬಗೆಯ ಬತ್ತ ಮತ್ತು ಅದರ ಅಕ್ಕಿ : ರಾಜಭೋಗ ಊಟಕ್ಕೆ ಚೆನ್ನಾಗಿರುತ್ತದೆ (ಕೃಪ). [ಸಂ.]

ರಾಜಮಂತಲು, ರಾಜಮಂಡಳ (ನಾ). ೧. ದೊರೆಗಳ ಸಮೂಹ ; ಅರಸರ ಗುಂಪು : ಭಾರತೀಯರಾಜಾವಾದ ತಾವೇ ನಿಯೋಜಿಸಿದ ಯಾವದೇ ಸಂಯುಕ್ತರಾಜಮಂತಲದ ಕೈಯಲ್ಲಿ . . . ಸಮರ್ಪಿಸಿ (ಕೃಜಾಧ. ೫೭). ೨. ಚಂದ್ರಮಂಡಲ. **ರಾಜಮಂಡಳ** : ೧. ೨ : ರಿವುರಾಜಮಂಡಳಂ ಕುಂದಿ ಮದ್ಭತೇಜದಿನದೊರ್ಮೆಯುಂ ಪೆರ್ಚದು ಭಾವಿ ಪೊಡೆಯ್ದಿ ವಿಸ್ತ್ರಮಂಡಳಮುಪಚಯಮುಮಂ ತಾಳ್ದುದಂತದುಚಿತಂ ಚಿತ್ರಂ (ಕೃಕೃ. ೬-೨).

[ಸಂ.]

ರಾಜಮಂಡಳ ' ರಾಜಮಂಡಲ ' ನೋ.

ರಾಜಮಂತ್ರ (ನಾ). ಅರಸನು ಮಂತ್ರಿಗಳೊಡನೆ ಮಾಡುವ ಆಲೋಚನೆ ; ದೊರೆಯ ಮಂತ್ರಾಲೋಚನೆ : ರಾಯನನುಜರು ದುರುಳರುಚಿತಾನುಚಿತಗೇಡಿಗಳರುಳು ದೊರೆಗಳು . . . ಹರಿಯ ಬಲು ಹುಂಟಾದಡಮು ಧಿಕ್ಕರಿಸುವರಮು ರಾಜಮಂತ್ರವನು (ಕಾಪ್ರಾ. ೬-೦೮).

[ಸಂ.]

ರಾಜಮಂದಿರ (ನಾ). = ರಾಜಭವನ : ಭರತೇಶ್ವರಚಕ್ರವರ್ತಿ ನಿಜಸ್ಥಪತಿ ರತ್ನವಿರಚಿತಮಣಿಮಯರಾಜಮಂದಿರಮಂ ಪುಗುವುದಾಂ (ಅಪ್ರ. ೦೨-೦ ಪ); ಜಯರವದ ರಭಸದುದಾರ ಮೆಱೆಯಲು ಬೀಳುಕೊಂಡನು ರಾಜ ಮಂದಿರವ (ಕಾಪ್ರಾ. ೦-೨೪). [ಸಂ.]

ರಾಜಮಖ (ನಾ). ರಾಜಸೂಯ ಯಾಗ : ನಿನ್ನ ಕೃಪೆಯುಲಿ ರಾಜಮಖ ನಿಷ್ಪನ್ನವಾದರೆ ಬೊಪ್ಪನಿಂದ್ರನ ಮಸ್ಸಣಿಯ ಪೈಸೋಂಕಿನೋಲಗ ಸುಲಭ ವಹುದು (ಕಾಪ್ರಾ. ೬-೨೯). ' ರಾಜಸೂಯ ' ಪರಾ. [ಸಂ.]

ರಾಜಮನೆತನ (ನಾ). = ರಾಜಕುಲ ೧ : ರಾಜಮನೆತನದಲ್ಲಿ ಜನ್ಮವೆತ್ತಿದರೂ . . . ಗಟ್ಟಿಮುಟ್ಟಾಗಿ ಬೆಳೆದನು (ಕುಪ್ರ. ೭೪).

[ರಾಜ + ಮನೆತನ]

ರಾಜಮನ್ನಣೆ (ನಾ). ೧. ದೊರೆಯಿಂದ ಬರುವ ಮಾನ್ಯತೆ : ಅರಸನು ತೋರುವ ಗೌರವ : ಹಿಂದೆ ವೀಣೆ ಶೇಷಣ್ಣನವರು ತಮ್ಮ ಕೊನೆಗಾಲದ ವರೆಗೂ ಮೈಸೂರಿನ ಆಸ್ಥಾನವಿದ್ವಾಂಸರಾಗಿ ರಾಜಮನ್ನಣೆಗೆ ಪಾತ್ರರಾಗಿದ್ದರು (ಕೂಪ). ೨. ಅತಿಶಯವಾದ ಮನ್ನಣೆ ; ಶ್ರೇಷ್ಠ ಮರ್ಯಾದೆ : ರಾಜಮನ್ನಣೆಯುಂಟು ಭೀಮುವಿಗೆ ! (ಕೀಂಪು. ೧೩).

[ರಾಜ + ಮನ್ನಣೆ]

ರಾಜಮಯ್ಯ (ನಾ). ಒಬ್ಬಾತನ ಹೆಸರು : ರಾಜಮಯ್ಯನ ಮಗ ಭೀಮಯ್ಯ (ಎಕ್ರ. ೭. ಚಾಕಾಮ. ೪೯-೫; ೪೬೨).

[ರಾಜ + ಅಮ (< ಅವ್$_{೩}$) + ಅಯ್$_{೩}$]

ರಾಜಮರಾಲ, ರಾಜಮರಾಳ (ನಾ). ಶ್ರೇಷ್ಠವಾದ ಹಂಸ : ಅರ ಸಂಜೆ : " ಕಾಪ್ಯೊಗಂ ಕೆಂಪುದೋಜೆ ರಾಜಮರಾಲಂ [ಜಾಕಾಂ. ೪೦] " (ಕುಂಗಾ. ೩೦-೬)॥ **ರಾಜಮರಾಳ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ರಾಜಮರಾಳ ' ರಾಜಮರಾಲ ' ನೋ.

ರಾಜಮರ್ಯಾದೆ (ನಾ). ೧. = ರಾಜಮನ್ನಣೆ ೧ : ಕರವಬ್ಯನಿಗೆ . . . ಅತ್ಯಣಿಗೆ ಮತ್ತು ಗದ್ದಿಗೆಗಳಂಬ. ರಾಜಮರ್ಯಾದೆಗಳನ್ನೊಳಗೊಂಡು ಪರಿಸಾದ ಕೊಳತೂರನ್ನು ವೈಶ್ಯದತ್ತಿಯಾಗಿ ಕೊಟ್ಟನು (ಕೂಅಪ್ರ. ೫೪ ಬಿ). ೨. = ರಾಜಮನ್ನಣೆ ೨ : ಆ ಸದ್ಜನರನ್ನು ಕಾಣಲು ಹೋದಾಗ ನಮ್ಮನ್ನು ರಾಜಮರ್ಯಾದೆಯಿಂದ ನೋಡಿಕೊಂಡರು (ಕೂಪ್ರ).

[ಸಂ. ರಾಜಮರ್ಯಾದಾ]

ರಾಜಮಲ್ಲ (ನಾ). ಒಬ್ಬಾತನ ಹೆಸರು ; ಗಂಗವಂಶದ ಒಬ್ಬ ಅರಸನ ಹೆಸರು : ರಾಜಮಲ್ಲಮರ್ಮಾನಡಿಗಳ್ ಪೃಥುವೀರಾಜ್ಯಂಗೆಯೆ (ಎಕ್ರ. ೧೫. ಹಂಬಿ. ೬೬-೪ ; ೪೧೦). ' ರಾಚಮಲ್ಲ ' ಪರಾ. [ಸಂ.]

ರಾಜಮಹಿಷಿ (ನಾ). ಅರಸನ ಪಟ್ಟದ ರಾಣಿ ; ಮಹಾರಾಣಿ : ವಿಜಯ ರಾಜಮಹಿಷೀಮಯೂರಾತಪತ್ರಶುಕಾಮಹಿಸಂಕುಳಂಗಳಿಂದಂ . . . ತೀವಿದ ಸಿಬಗೆಯೊಳ್ (ಆಪ್ತ. ೦೯–೧೦ ಪ); ಮಂದ್ರತಾರಗೀತಿಯ ಪದಗೊಪ್ಪೆ ರಾಜಮಹಿಷೀಸಭೆಯೊಳ್ ಕಡುಜಾಣೆಯುಂ ಪ್ರವೀಣೆಯುಮೆನೆ ವೀಣೆಯಂ ಮಿಡಿದಳ್ (ಪಾಂಡ. ೯–೦೭೭). [ಸಂ. ರಾಜಮಹಿಷೀ]

ರಾಜಮಾತೆ (ನಾ). ಅರಸನ ತಾಯಿ : ರಾಮನು ಪಟ್ಟಕ್ಕೆ ಬಂದರೆ . . . ಕೌಸಲ್ಯೆ ರಾಜಮಾತೆಯಾಗುತ್ತಾಳೆ (ಪಾಂಭಾ. ೮೭) ; ರಾಜಮಾತೆಯವರ ಸಂತೋಷವಂತೂ ಹೇಳತೀರದಷ್ಟಾಗಿತ್ತು (ಪಾಂಚಾ. ೮೯).

[ಸಂ. ರಾಜಮಾತಾ]

ರಾಜಮಾನ (ನಾ). ರಾಜನಿಂದ ಅಥವಾ ಸರಕಾರದಿಂದ ಅಧಿಕೃತವಾಗಿ ಗೊತ್ತುಪಡಿಸಲಾದ ಒಂದು ನಿರ್ದಿಷ್ಟ ಅಳತೆ : ಪ್ರಜಾಜನ ಪ್ರಜೆಯೂ ಸನ್ಮತದೆ ಕೊಟ್ಟುದು ರಾಜಮಾನ ಅಯ್ವತ್ತು ಮತ್ತರ್ (ಪೌಷ. IX-೫, ೮೫-೬; ೭೫೮ ಪ) ; ಸರ್ವ ನಪುಸ್ಕಮಾಗಿ ಬಿಟ್ಟ ಕರಿಯ ಕೈ ರಾಜಮಾನ ರೋಳಾಜು ಮತ್ತರ್ (ಪೌಷ. XVIII, ೮೮-೮೭; ೨೦೭೦). [ಸಂ.]

ರಾಜಮಾನ್ಯ (ನಾ). ೧. ದೊರೆಯಿಂದ ಗೌರವಿಸಲ್ಪಟ್ಟವನು. ೨. ಗೌರವಾಸ್ಪದರನ್ನು ಕುರಿತು ಬರೆಯುವಾಗ ಅಥವಾ ಮಾತನಾಡುವಾಗ ಉಪಯೋಗಿಸುವ ಸಾಂಪ್ರದಾಯಕವಾದ ಮರ್ಯಾದೆಯ ಮಾತು : ರಾಜಮಾನ್ಯರಾಜಶ್ರೀ . . . ಹೆಸರಿನ ಹಿಂದೆ ಹೋಡಿಸಿ ಬರೆಯುವ ಸಂಪ್ರದಾಯವುಂಟು (ಮುಂಡಾ. ೧–೮೭). ' ರಾಜಶ್ರೀ 'ಹೋ. [ಸಂ.]

ರಾಜಮಾರ್ಗ (ನಾ). ೧. ದೊಡ್ಡ ರಸ್ತೆ ; ಮುಖ್ಯವಾದ ಮಾರ್ಗ ; ಹೆದ್ದಾರಿ : "ಧಾತ್ರಿಪಥಃ, ಸುಸರಣಂ—ಈ ೨ ರಾಜಮಾರ್ಗದ ಹೆಸರು. ೧೦೦ ಮಾರಳತೆಯ ಮಾರ್ಗವೆಂದೇಬರು" (ಅಭಿಧಾ. ೦೮೩) ; ಸಾರ್ವಭೌಮಂ . . . ಚಂಚತ್ಪಂಚಿರತ್ನತೋರಣಾಲಂಕೃತರಾಜಮಾರ್ಗದಿಂ ಬರ್ವಾಗ್ಗ (ಅಜಿ. ೦೦-೦೯ ಪ) ; ಲಲಿತಕಟಾಕದ ರಾಜಮಾರ್ಗದೊಳಾಲಿವುತಾಡುವ ಭಕ್ತ ಗಣಸಂಕುಳದ ನಡುವೆ . . . ಶವನೀಕ್ಷಿಸಿ (ಪಾಪ. ೩-೦೨). ೨. ದೇಶದ ಮುಖ್ಯಪಟ್ಟಣಗಳಿಗೆ ಹೋಗುವ ದೊಡ್ಡ ರಸ್ತೆ ; ಬಾಟಾಮಾರ್ಗ ; ರಾಷ್ಟ್ರೀಯ ಹೆದ್ದಾರಿ. ೩. (ಅಲಂ) ಒಳ್ಳೆಯ ದಾರಿ ; ಹಕ್ಕ ಉಪಾಯ : ಜನ ತುಂಬಿಸಲಿಕ್ಕೆ ಚರುವೇ ರಾಜಮಾರ್ಗ (ಕ್ರಿಕ್ರಿ. ೦೦೦); ಶಿಸ್ತಿನ ಹೆಸರಿನಲ್ಲಿ ಅಮಾನ ಹಿಡಿಯುವುದು ಶಿಕ್ಷಣದೃಷ್ಟಿಯಿಂದ ಅಪತ. ಅಷ್ಟೇ ಅಲ್ಲ, ಅಪಾಯಕಾರಿ. ಅದರ ಬದಲು ಪ್ರಕಾಶಕ್ಕೆ ಅವಕಾಶ ಕಲ್ಪಿಸುವುದೇ ರಾಜಮಾರ್ಗ (ಕ್ರಿಶ. ೬೨೨). [ಸಂ.]

ರಾಜಮೃಗ (ನಾ). ಒಂದು ಬಗೆಯ ಉತ್ತಮ ಜಾತಿಯ ಮೃಗ : "ಮಹಾರಾಜಮೃಗಃ ಮಹಾರಾಜಾಮೃಗಃ—ಈ ಯೆರಡುಂ ರಾಜಮೃಗ" (ಸಿಭಿ. ೦೩೨). [ರಾಜ + ಮೃಗ]

ರಾಜಮೂಷ (ನಾ). ಒಂದು ಬಗೆಯ ದ್ವಿದಳಧಾನ್ಯ ; ಉತ್ತಮಜಾತಿಯ ಅಲಸಂದೆ : "ಅಲಸಂದೆ ರಾಜಮೂಷಂ" (ಧನ್ವ. ಕೋಶ. ೧೫-೦೭); ಮಸೂರಿಕಾ ಕುಲತ್ಥಮುದ್ಗಮಾಷರಾಜಮಾಷಾಢಕೀನಾಷ್ಟವಚಣಕಸಂಭೃತಾರ್ಜಕಸರ್ಷಪಜೀರಕಧಾನ್ಯಕಾದಿವಿವಿಧಧಾನ್ಯಭೇದಂಗಳಂ (ಅಜಿ. ೬-೬೨ ಪ). [ಸಂ.]

ರಾಜಮುಡಿ (ನಾ). ದೊರೆಯು ಮಾಡಿಸಿದ ಕಿರೀಟ; ಕ್ರಿ.ಶ.೧೫೭೮–೧೬೧೭ ರಲ್ಲಿ ಮೈಸೂರನ್ನು ಆಳಿದ ರಾಜಒಡೆಯರು ಮೇಲುಕೋಟೆಯ ಚೆಲುವರಾಯಸ್ವಾಮಿ ದೇವರಿಗೆ ಮಾಡಿಸಿಕೊಟ್ಟ ರತ್ನಖಚಿತವಾದ ಚಿನ್ನದ ಕಿರೀಟ : ಮೇಲುಕೋಟೆ ಚಲುವರಾಯಸ್ವಾಮಿಯವರಿಗೆ ಅಮೂಲ್ಯ ರತ್ನಗಳಿಂದ ನೂತನವಾಗಿ ಮಾಡಿಸಿದ ಮಯೂರಮುಡಿಯಂತಿರುವ ರಾಜ ಮುಡಿ ಎಂಬ ಕಿರೀಟವನ್ನು ಸಮರ್ಪಿಸಿ...ವಿಶೇಷೋತ್ಸವಗಳಲ್ಲಿ ರಾಜಮುಡಿ ಮಾತ್ರ ಹೋಗಿ ಬರುವಂತೆಯೂ, ನಿಬಂಧನೆ ಮಾಡಿ . . . ಒಪ್ಪಿಸಿದರು (ಮೈಚಾರಿ. I. ೪೦) : ವೈರಾಮುಡೀ ಚಲುವ ಒಳಗೇನ ಮಾಡೀಯೊ ರಾಜಮುಡೀಯಾ ಬೆಳಕ್ಲಿ ಚಲುವಯ್ಯ ವಾಲೇಗೆ ಪಜ್ಜೂರೆ ಬಿಗಿಸ್ಯಾನೆ (ಮುಖ್ಯ. ೮೬). ' ವೈರಮುಡಿ ' ಪರಾ. [ರಾಜ + ಮುಡಿ]

ರಾಜಮುದ್ರೆ (ನಾ). ಅರಸನ ಲಾಂಛನ. – ಮೊಹರು ; ಅರಸೊತ್ತಿಗೆಯ ಗುರುತು : ಸಮಸ್ತಪ್ರಜೆಯನ್ನು ಪರಿಪಾಲಿಸುತ ಚಂದದಿಂದಿಹುದನುತ ರಾಜಮುದ್ರೆಯನಿತ್ತು ಬೀಳ್ಕೊಡುತ (ಪಚಿತೋ. ೮೪-೬೨).

[ಸಂ. ರಾಜಮುದ್ರಾ]

ರಾಜಮೋಡಿ (ನಾ). ಅರಸನ ಪ್ರಭಾವ.—ವರ್ಚಸ್ಸು : ಸುಮ್ಮನಿದ್ದುದು ಜನ ಭರತಕ್ಕೀಶನ ಸೊಮ್ಮಲ್ಲದೇ ರಾಜಮೋಡಿ (ಕಚಿ. ೦–೬೦) ; ರಾಜ ಮೋಡಿಯಿಂದೊಪ್ಪುಗೂಡಿ ಆಸ್ಥಾಪಿಸುವ ಸುಗಂಧರಾಯನ ಗಂಭೀರಧ್ವನಿ (ಪೌಷಿ. ೬೫–೦೨) ; ಅಲ್ಲಿಗೆ ಪದುಳೀಸುತನುಂ ಬಂದು ಅಲಂಕಾರಯುಕ್ತ ನಾದ ರಾಜೇಂದ್ರನ ಮುಂಗಡೆಯೊಳ್ ನಿಂತು ಸೌಂದರ್ಯಾದಿ ರಾಜಮೋಡಿ ಗಳಂ ನೆಸಗಿದನು (ಕುಮಾ. ೦೮೮). [ರಾಜ + ಮೋಡಿ]

ರಾಜಮೋಡಿಗ (ನಾ). ಅರಸನ ವರ್ಚಸ್ಸುಳ್ಳವನು ; ಅರುತಪೂಜೆಯೊ ಮದ್ಭವೆಭೂ ಉಲ್ಲವಿದು ಸ್ವಯಂವರಕೆ ಕೂಡಿದ ಕೂಟದಂತೆ ಕರಸೊಬಗಾಗಿದೆ ಹೇಳೆಂದನಜಾಯುಷ ಪರಿಯೊಳಾ ರಾಜಮೋಡಿಗನಾ (ಪಚಿ. ೫೫ ೧೦).

[ರಾಜಮೋಡಿ + — ಗ]

ರಾಜಯಕ್ಷ್ಮ (ನಾ). ತೀವ್ರತರವಾದ ಒಂದು ಬಗೆಯ ಕ್ಷಯರೋಗ : "ರಾಜಯಕ್ಷ್ಮಾ, ಕ್ಷಯಃ, ಶೋಷಃ — ಈ ೩ ಕ್ಷಯವ್ಯಾಧಿ" (ಕೈಪಾಯು. ೧೪-೧೧೮) ; ಆಯಂ ಪೂಗಣ ಪೆನ್ನೇ ಮಗಳ ಚಿಪಳೆ ಪುತ್ರಂ ಕರಂ ರಾಜಯಕ್ಷ್ಮಾಕುಳನೆನ್ನೆಶ್ವರ್ಯಮುಂ ನಿರ್ಜರರೆ ಕರ್ದಾರ್ (ಪಾಪಕ್ಷೇ. ೦-೦೦೨). [ಸಂ.]

ರಾಜಯೋಗ (ನಾ). ೧. [ಯೋಗ] ನಾಲ್ಕು ಬಗೆಯ ಯೋಗಗಳಲ್ಲಿ ಒಂದು : ಹಠಯೋಗದಿಂದ ಭಿನ್ನವಾದ, ಸುಲಭವಾಗಿ ಅಭ್ಯಾಸ ಮಾಡಬಹುದಾದ ಒಂದು ಬಗೆಯ ಯೋಗ : ಅಂತರ್ಬಾಹ್ಯದ ದೃಷ್ಟಿ ಮನಸ್ಸುಗಳ ಹೊಂದಾಣಿಕೆಯಿಂದ . . . ಪರಿಪೂರ್ಣಸಾಕ್ಷಾತ್ಕಾರವಂ ಕಂಡುಕೊಳ್ಳುವುದೆ ರಾಜಯೋಗ (ಪದಗೋ. ೫–೦೫) ; ಮಂತ್ರಯೋಗ ಲಯಯೋಗ ಹಠಯೋಗ ರಾಜಯೋಗವೆಂದು ಯೋಗಚತುರ್ವಿಧದೊಳಗೆ ಮೊದಲು ಮಂತ್ರಯೋಗದ ಭೇದವೆಂತೆಂದೊಡೆ (ಪಾಪಕೇ. ೨೮೨–೮೨). ೨. [ಜ್ಯೋತಿ] ಜನ್ಮಕುಂಡಲಿಯಲ್ಲಿ ರಾಜತ್ವವನ್ನು ಸೂಚಿಸುವ ಗ್ರಹಗಳ ಕೂಟ : ಉದಯಸಿಂದಾಲಯಕ್ಕುಮಷ್ಟಮಾಲಯದಲ್ಲಿ ಸಮಸ್ತ ಸೌಮ್ಯರೊಂದಿದೊಡಾತಂಗೆನಿಪ್ಪಂ . . . ಇದು ಮುಖ್ಯಮೆನಿಪ್ಪದು ರಾಜಯೋಗದೊಳ್ (ಪಾಪಕೇ. ೦೨–೩೩). ೩. [ವೈದ್ಯಶಾ] ಅತ್ಯುತ್ಕೃಷ್ಟವಾದ ಔಷಧ.

ರಾಜಯೋಗ ಪಳದ್ಯ=(ಅತ್ಯುತ್ತಮ ಔಷಧಿಗಳಂತೆ ಉಪಯೋಗವಾಗುವ ಪದಾರ್ಥಗಳಿಂದ ತಯಾರಿಸಿದ) ಒಂದು ಬಗೆಯ ಮೇಲ್ಲೇಪಗರ : ಕೊತ್ತಮರ್ಚಿ, ಒಮ, ಸಾಸಿವೆ, ಸೈಂಧವಲವಣ, ದಾಳಿಂಬದ ಕಾಯಿ, ನೆಲ್ಲಕಾಯಿ, ಶುಂಠಿ, ಬಿಡಲವಣ ಇಷ್ಟನ್ನೂ ಸಮಭಾಗ ಹೂರ್ಣಮಾಡಿ ಇರಿಸಿಕೊಂಡು ಹುಳಿವಿನ ಮಜ್ಜಿಗೆಯಲ್ಲಿ ಕಿವಿಡಿ ಪಳದ್ಯ ಕಾಸಿ ಊಟಮಾಡುವಾಗ ಮೊದಲು ಪಳದ್ಯವಂ ಬಿಟ್ಟುಕೊಂಡು ಉಣ್ಣಲು ಸಪ್ತಧಾತುವಿನಿಂದ-ಹುಟ್ಟಿದಂಥಾ ವಾಯು ಕೆಡುಗು . . . ಇದು ರಾಜ ಯೋಗಪಳದ್ಯ. ಸಮಸ್ತ ವ್ಯಾಧಿಗಳಿಗೆಲ್ಲಾ ಒಳ್ಳೆಯದು (ಅಕ್ಕ. ೫೬). [ಸಂ.]

ರಾಜಯೋಗಿ (ನಾ). ರಾಜಯೋಗವನ್ನು ಅಭ್ಯಾಸ ಮಾಡುವವನು : ಆ ತಾರಕಬ್ರಹ್ಮಪಥಾಸಂಗೈವಾತನೆ ರಾಜಯೋಗಿ ನೋಡಾ (ಅಮೃತೇ. ೨೨೮–೩೭) : ಇಲ್ಲಿರುವ ಯೋಗಿಗಳೆಲ್ಲ ಮಾತಿಗೆ ರಾಜಯೋಗಿಗಳೆಂದೇ

ಅಥವಾ ಜ್ಞಾನಯೋಗಿಗಳೆಂದೋ ಅರ್ಥ (ಅಭ್ಯಸ. ೦-೨ ಪೀಠಿ).
[ಸಂ. ರಾಜಯೋಗಿನ್]

ರಾಜಯೋಗ್ಯ (ನಾ). ದೊರೆಗೆ ಉಚಿತವಾದುದು; ಅರಸನಿಗೆ ಯೋಗ್ಯವಾದುದು.—ತಕ್ಕುದು: ಅರಿಯಿಂಗಿ ಕಾದ ಪಾಲಂ ಮಾದಲದ ಹಣ್ಣನೆರಡುಗಿ ಕೊಯಿದು ಕುಸುರೆಯ ತೆಗೆದವಕೆ ತುಂಬಿ . . . ಮೆಣಸಿನ ಬಿಳಿಯ ಬೇಳೆಯಂ ಹಾಕಿದೋಗರ ರಾಜಯೋಗ್ಯ ಸೌಗಂಧಿಕಾಸಹಿತ ರುಚಿರೋಗರ ವೆನಿಸಿಕೊಂಬುದು (ಶೂಶಕ. ೬-೨೨) ; ಪಾಂಡುಮಿಗೂ ಮಾದ್ರಿಗೂ ರಾಜಯೋಗ್ಯವಾದ ರೀತಿಯಲ್ಲಿ ಉತ್ತರಕ್ರಿಯೆಗಳು ನಡೆದುವು (ಕರ್ಣಾ. ೦೩).
[ಸಂ.]

ರಾಜಯ್ಯ (ನಾ). ಒಬ್ಬಾತನ ಹೆಸರು : ಶ್ರೀರಾಜಯ್ಯಂ ಬರೆದಂ (ಎಳ. XI, ರಾಷಣ. ೦೦೪-೦೪ ; ೧೧೭). [ರಾಜ + ಅಯ್ಯ[1]]

ರಾಜರಸ್ತೆ (ನಾ). = ರಾಜಮಾರ್ಗ ೧ : ಅವನ ಮನೆಯ ಮುಂದಿನ ರಾಜರಸ್ತೆಯುಂ ಹೊತ್ತಾರೆಯು ತಂಗಾಳಿಯ ತುಂತುರಿಂದ ಮುರವಟ್ಟು ಹೋಗಿತ್ತು (ಪಚಕ. ೦) ; ವಾಹನಗಳಿಗೆ ಹೋಗಲು, ಬರಲು, ಹಾಗೇ ಜನರಿಗೆ ಬೇರೆ ಕಾಲ್ದಾರಿಗಳಿರುವ ಭವ್ಯವಾದ ರಾಜರಸ್ತೆ (ಪಾಕ್ಯ. ೫೯).
[ರಾಜ + ರಸ್ತೆ]

ರಾಜರಹಸ್ಯ (ನಾ). ಅರಸನಿಗೆ ಅಥವಾ ರಾಜ್ಯಾಡಳಿತಕ್ಕೆ ಸಂಬಂಧಿಸಿದ ರಹಸ್ಯ : ಅರಸೊತ್ತಿಗೆಯ ಗುಟ್ಟು : ತನ್ನ ರಾಜರಹಸ್ಯವನ್ನು ತಿಳಿಯಬೇಕಾದ ಪ್ರಸಂಗವೂ ಅತನಿಗೆ ಬರದೆ ಹೋಗುವುದಿಲ್ಲ (ಪಕ್ಕೃತ್ರ. XXX, ೫೬೬).
[ಸಂ.]

ರಾಜರಾಜ (ನಾ). ೧. ಅರಸರಲ್ಲಿ ಶ್ರೇಷ್ಠನಾದವನಂ ; ಸಾಮ್ರಾಟ ; ಚಕ್ರವರ್ತಿ : ಆ ಮುನಿರಾಜಂ ಕರ್ಮಂಗಳಂ ಗಾಳಿಸಿದಂ-ಈ ರಾಜರಾಜಂ ಪುಟ್ಟಂಡುಮಂಡಲಮಂ ಬಾಯ್ಕೇಳಿಸಿದಂ (ಪಂಪಭಾ. ೬-೨೪ ಶ) ; ರಾಜರಾಜಂ ನದೀತನೂಜನಂ ಮಾಣಿಸಿ . . . ನಿಜಾಗಮನವೃತ್ತಾಂತವಂ ಸಮರಪರಿಶ್ರೀದಮುಮನಱಿಪಿದೊಡೆ (ಗಡಾಯು. ೩-೧೪ ಶ). ೨. ಕುಬೇರ : "ಐಬಿಳಿಃ . . . ರಾಜರಾಜಃ ಧನಿಃ ಪುಣ್ಯಜನೇಶ್ವರಃ—ಈ ೧೭ ಕುಬೇರನ ಪೆಸರ್" (ಶಬ್ದಮ. , ೮೪-೭೯) ; ರಾಜರಾಜನುಮಿತ್ರ ಭಾಸ್ವರರಾಜ ಪಾವಕನೇತ್ರ ಸುಮನಸರಾಜಸಂಸ್ತುತಪಾದ (ಪಂಚಕಾ. ೦೫-೧೩). ೧, ೨ : ಅರಿರಾಯಗಿರಿವಜ್ರದಂಡನಭವನಕಾಲಸರಣಿ . . . ರಾಜರಾಜಂ ಮದೀಶಂ (ಶಾಷಡಂ. ೩-೪೫). ೩. ಚಂದ್ರ. ೧, ೨, ೩ : ಅರಿಕಾಮಧ್ವಂಸಿ ನಾಗವ್ರಜಮಯಕಟಕಂ ರಾಜರಾಜಪ್ರತಿಷ್ಠಾನಿರತಂ . . . ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿನೇತ್ರಂ (ಪಾಷ. ೦-೩). [ಸಂ.]

ರಾಜರ್ಷಿ (ನಾ). = ರಾಜಋಷಿ : ಬ್ರಹ್ಮಋಷಿಯಾದಡೊಳಗು ಸ್ವರ್ಗಳವಪ್ಪುದಯ್ಯ ನೀಂ ರಾಜರ್ಷಿ ಕೋಪಿಸದೆ ಧಟ್ಟಿಸದೆ ಕೆಡನುಡಿಯುದೆ ನಿಲಲೆಂತು ಬಲ್ಲೆ (ಪಚಕ. ೨-೩೨) ; ರಾಜರ್ಷಿಯಾ ದೀರ್ಘದರ್ಶಿಯಾ ಸಮವರ್ತಿ ತಾರ . . . ಸಮಬುದಿ ಯಿಂ ದರ್ಪದಿಂ ಪಾಲಿಸಿರ್ದನು ತನ್ನ ರಾಜ್ಯಮಂ (ಶ್ರೀಧಪು. ೬-೦೬೯).
[ಸಂ.]

ರಾಜಲೀಲೆ (ನಾ). ೧. ಅರಸನ ವಿಲಾಸ : ಅಂತು ನಿಜರಾಜಲೀಲೆಯಂತೆ ಜಲಕ್ರೀಡಾದಿ ರಾಜಲೀಲೆಯಂ ಸವಯೋವಯಸ್ಸ ರಾಜಪೋಕಪರಿವೃತಂ . . ಅವಲೋಕಿಸುತ್ತುಮಿರ್ಪಲ್ಲಿ (ಶಬ್ದಸ್ಮೃ. ೦೩-೨೪ ಪ). ೨. ಚಂದ್ರನ ವಿಲಾಸ : ಬೆಳುದಿಂಗಳು. ೧, ೨ : ಸಮುಚ್ಛ್ರಿತಾನೇಕಮೇಘವೇಬರ ಚ್ಛಾರುತಾವಳಂಬಿಯಾಗಿಯುಂ ಪ್ರಕಟೀಕೃತರಾಜಲೀಲೋದಯಮಲ್ತು (ಪಂಪ್ರಶ. ೧-೪೨ ಶ) [ಸಂ. ರಾಜಲೀಲಾ]

ರಾಜವಂಶ (ನಾ). ೧. ಅರಸುಮನೆತನ ; ಅರಸುಕುಲ : ಚಂಳ್ಳ ಭೃತ್ಯವೆಂಬ ರಾಜವಂಶಮೊಂದು ಇತ್ತು (ಧ್ರಾಷಡ. ೦೩೩). ೨. ಶ್ರೇಷ್ಠವಾದ ಬಿದಿರು ; ಒಳ್ಳೆಯ ಬಿದಿರು. ೧, ೨ : ಜಿತಧಾತ್ರೀಚಕ್ರಚಕ್ರಾಧಿಪನೃಪವರಬಲ್ಲಾಳ ಕೇಳ್ ನಿನ್ನೊಳ್ಳಾಂತುದ್ದತವೀರಾರಾತಿಯೂಥಂ ವಿಗತವಿಭವಮಾಗಿರ್ದಡಂ ರಣ್ಣಾಕ್ಷಿಯಂ ವಿಶ್ರುತನಾನಾವಾಹಿನೀಸಂಕುಲವರಿಗತ ಕೋಧಾನ್ಸಕೂಲ್ಯಂ ಸದಾಸೇವಿತರಾಜದ್ರಾಜವಂಶಂ ಸಕಲಕವಿನಿಕಾಯಸ್ತುನಾ ತೀರ್ಣಕರ್ಣಂ (ಎಳ. VIII, ಕೊರಿ. ೦೮೦-೯ : ೧೦೧೬) ; ಅತ್ಯುದ್ಧತರಾಜವಂಶವನಮಂ ನಿರ್ಮೂಲಿಸಲ್ ಪೋಪೆಂ (ಶ್ರೀವಿ. ೫-೩). [ಸಂ.]

ರಾಜವಂಶೀಯ (ನಾ). ಅರಸುವಂಶಕ್ಕೆ ಸೇರಿದ ವ್ಯಕ್ತಿ ; ಅರಸುಮನೆತನದಲ್ಲಿ ಹುಟ್ಟಿದವನು : ಪಲ್ಲವರು ಎಲ್ಲಾ ದೃಷ್ಟಿಯಿಂದಲೂ ದಕ್ಷಿಣ ಭಾರತದ ರಾಜವಂಶೀಯರೆಂಬುದರಲ್ಲಿ ಸಂಶಯ ಕಾಣದು (ಕ್ರಿಪಲ್ಲ. ೦೩).
[ಸಂ.]

ರಾಜವಂಶ್ಯ (ನಾ). = ರಾಜವಂಶೀಯ : "ರಾಜಬೀಜೀ, ರಾಜವಂಶ್ಯಃ — ೨ ರಾಜವಂಶದಲ್ಲಿ ಹುಟ್ಟಿದವನ ಹೆಸರುಗಳು, ರಾಜಪೆಂಡಿ, ಅರಸುಪೆಂಡಿ" (ಶಿದ್ಧಾ. ೫೩). [ಸಂ.]

ರಾಜವಟಿ ' ರಾಜವಟ್ಟಿ ' ನೋ-

ರಾಜವಟ್ಟಿ, ರಾಜವಟಿ (ನಾ). ರಾಜಕಾರ್ಯಗಳಲ್ಲಿ ಒದಾವ ಸಂಧಾನ ಕಾರ್ಯ : ರಾಯಭಾರ : ಕಟ್ಟಾಣಮುತ್ತ ಸೇರಿಪೊಲು ದೇಸಿಯ ರಾಜವಟ್ಟದ ಸವಿನುಡಿಗಳನ್ನು ಸೃಷ್ಟೀಶ್ವರಗೆ ಬಿನ್ನೈಸುತ (ಗಂಚಪ. ೬-೩೬) ; ಆತನ ಸಮೀಪಕ್ಕೆ ಕುಲೀನನಾಗಿಯೂ . . . ಪರಿಶುದ್ಧನಾಗಿಯೂ ಇರುವ ಒಬ್ಬನನ್ನು ರಾಜವಟ್ಟಕ್ಕೆ ಕಳುಹಿಸಬೇಕೆಂದು ನುಡಿಯಲು (ಕೃಪಾಕಾ. ೭). **ರಾಜವಟಿ** : ಕಣ್ಣೂರ ಬೀದಿ ಕಡೆ ನಾಲಕ್ಕುಸಾವಿರ ಮಾಪಿಳ್ಳಿರು ಸಜ . . ರಾಜವಟಿ ನಡೆಸಿದಲ್ಲಿ (ರಾಷೇಂದ್ರ. ೬೩). [<ಸಂ. ರಾಜವ್ಯಕ್ತ]

ರಾಜವತಿ (ನಾ). ಹೆಸರಿಗೆ ಮಾತ್ರ ರಾಜನನ್ನು ಪಡೆದಿರುವ ಭೂಮಿ : ರಾಜವತಿಯಕ್ಕುಮಲ್ಲದ ರಾಜನ್ವತಿಯಾಗದಲ್ತೆ ಧರೆ ಮತ್ತೊರ್ವಂ ಶೇಜಸ್ವಿ ಪುಟ್ಟರ್ದೊಡದಱಿಂ ರಾಜನ್ವತಿ ಮಾಡು ಧರೆಯಂ ಧರಣಾಪತೀ (ಅಜಿತ. ೧೯-೨೦) ; ರಾಜವತಿಯಾಯ್ತು ರಿಪುವಹಿ ರಾಜನ್ವತಿಯಾಯ್ತು ತನ್ನ ಧರೆ(ಣಂ)ತಿ (ಅಜಿತ. ೦೦—೦೦೩). 'ರಾಜನ್ವತಿ' ಪರಾ [ಸಂ. ರಾಜವತೀ]

ರಾಜವಶ್ಯ (ನಾ). ೧. ಒಂದು ಬಗೆಯ ವಶೀಕರಣವಿದ್ಯೆ: (ಮಂತ್ರದಿಂದ) ಅರಸನನ್ನು ವಶಪಡಿಸಿಕೊಳ್ಳುವಿಕೆ ; ಅರಸನನ್ನು ಅಧೀನಮಾಡಿಕೊಳ್ಳುವಿಕೆ: (೧). ಪಿ. (ಮಂತ್ರಕ್ಕೆ) ದೊರೆಯು ವಶವಾಗುವಿಕೆ ; ಅರಸನು ಅಧೀನವಾಗುವಿಕೆ : ಈ ಮಂತ್ರದಿಂ ಉತ್ತರಾಣಿಯ ಕಡ್ಡಿಯ ೨೧ ಸಾರಿ ಮಂತ್ರಿಸಿ ದಂತಧಾವನಮಾಡಿಕೊಳ್ಳಿ ರಾಜವಶ್ಯ (ಪಕ್ಕಿಪ. ೩೦೦); ಕುಂಕುಮ ಶ್ರೀಗಂಧ. ಕರ್ಪೂರ ಇವಂ ಹಸುವಿನ ಹಾಲಿನಲ್ಲಿ ತೇದು ತಿಲಕವಿಡೆ ರಾಜವಶ್ಯ (ಪಕ್ಕಿಪ. ೨೦೩). [ಸಂ.]

ರಾಜವಸು (ನಾ). ಚಂದ್ರನ ಬೆಳಕು.—ಕಾಂತಿ : ನಿಜಕರದಿಂದೆ ರಾಜವಸು ವೆಲ್ಲಮನೊಯ್ಯನೆ ಕಲ್ದು ನೀಲನೀರಜನಿಯ ಬಾಯ ಮುದ್ರಿಸಿ ಪೊಸಂಗ್ಗೆಡೆವ ಪ್ಪಳೆಮುತ್ತೆ (ರಾಷಡೀ. ೨೦-೨೦). [ಸಂ.]

ರಾಜವಾಡೆ (ನಾ). ಅರಸರು, ಶ್ರೀಮಂತರು ವಾಸಿಸುವ ಭವ್ಯವಾದ ಗೃಹ: ಅರಮನೆ: ಪ್ರಾಸಾದ: ॥ ವಿಶೇಷವಾಗಿ ಮರಾಠಿಯ ಪೇಶ್ವೆಗಳು ವಾಸಿಸುತ್ತಿದ್ದ ಭವನಗಳಿಗೆ ಈ ಹೆಸರು ಬಳಕೆಯಾಗಿದೆ : ರಾಜವಾಡೆಯವರು ಮಾತ್ರ ಉಡಲು ಯೋಗ್ಯವಾದ ಚೀನಾಂಬರವನ್ನು ನೋಡುತ್ತ ಮೇಲಕ್ಕೆದ್ದಾಗ. ಕೆಳಗೆ ಒಂದು ಓಲೆ ಕಂಡಿತು (ಜಾಂಕಡಾ. ೫೬); ಒಳಭಾಗವು ರಾಜವಾಡೆಯಂತೆ ಒಳ್ಳೇ ಭವ್ಯವಾಗಿದ್ದಿತು (ಆಂಠೆ. ೫೯).
ರಾಜ + ವಾಡೆ[2] (<ಬಾಡ)]

ರಾಜವಾಹನ (ನಾ). ಅರಸನ ಕುದುರೆ ; ಪಟ್ಟದ ಕುದುರೆ : "ಪಂಚ ಪಲ್ಲವದ ವಾಜಿಯೆ ರಾಜವಾಹನಂ" (ಕ್ಕಾಪಂ. ೪೨). [ಸಂ.]

ರಾಜವಾಹ್ಯ (ನಾ). ಅರಸನ ಆನೆ ; ಪಟ್ಟದ ಆನೆ : "ಪಿಪವಾಹ್ಯಃ. ರಾಜವಾಹ್ಯಃ—ಈ ೨ ಅರಸರೇಱುವ ಆನೆ" (ಪಲಾಮು. ೬೬-೭೦). [ಸಂ.]

ರಾಜವಾಳೆ, ರಾಜಬಾಳೆ (ನಾ). ಒಂದು ಬಗೆಯ ಉತ್ತಮಜಾತಿಯ ಬಾಳೆ : ರಸವಾಳ ಪುಟವಾಳೆ ರಾಜವಾಳೆ ಸ್ಕಂರೆಯೆಸೆವಾ ದೇವಾಳೆ . . . ಮೆಚ್ದುವರ್ತಿಯಲಿ (ಕಂಪಂ. ೩-೮೭). **ರಾಜಬಾಳೆ** : ಬಾಳೆಯಲ್ಲಿ ಅನೇಕ ಜಾತಿಗಳಿವೆ. ರಸಬಾಳೆ, ಚಂದ್ರಬಾಳೆ, ರಾಜಬಾಳೆ (ಕೃಷಿ. ೩೭).

[ರಾಜ+ಬಾಳೆ$_1$ (<ಬಾಬೆ)]

ರಾಜವಿಡ್ಡೂರ (ನಾ). ಅರಸನಿಂದ ಪ್ರಜೆಗಳಿಗೆ ಉಂಟಾಗುವ ಉಪದ್ರವ.—ಹಿಂಸೆ: (೬). [ರಾಜ + ವಿಡ್ಡೂರ]

ರಾಜವಿದ್ಯೆ (ನಾ). ಅರಸನಿಗೆ ಉಚಿತವಾದ ವಿದ್ಯೆ : ವೀಣಾದಿರಾಜವಿದ್ಯೆ ನಿನಗಾ ನಾಲ್ಕುಂ ರಾಜವಿದ್ಯೆ ಪುಟ್ಟಿದುವು (ಕಂಪ್ರ. ೦೪-೨೦); ಅಮಲಸ್ವಭಾವ ಸೊಳ್ ನಿಶ್ಯಮಹೇಶ್ವನೊಳತುಳರಾಜವಿದ್ಯೆ [ಕಣಾಂ. ಪ್ಯ]ಗಳನಿತುಂ ಕ್ರಮದ ಸಮನಿಸಿದುವಾತನೊಳಮಳಸತಾವಾಳಿ ಗಗನಪೊಳ್ ನೆಲಸುವಪೊಲ್ (ಕಂಶ್ರಪು. ೯-೩). [ಸಂ. ರಾಜವಿದ್ಯಾ]

ರಾಜವೀಥಿ (ನಾ). ದೊಡ್ಡ ರಸ್ತೆ; ರಾಜಮಾರ್ಗ: ವಿಶಾಲವೂ ಸುಂದರವೂ ಆದ ರಾಜವೀಥಿಗಳಲ್ಲಿ . . . ಆ ಬಂತಿ ಮೇರಿಯಟ್ಟಳ ಗೃಹಾಭಿಮುಖವಾಗಿ ಸಾಗಿತ್ತು (ಕೃಪಟು. ೫೭೬). [ಸಂ.]

ರಾಜವೀಧಿ (ನಾ). = ರಾಜವೀಥಿ : ಅನೇಕವಿದ್ಯಾಧರರಾಜಾಜಿರಾಜವೀಧಿ ವಿಸ್ತೀರ್ಣಮುಮಾಗಿ (ಜಂಪ್ರ. ೦-೬೦ ಪ). [ರಾಜ + ವೀಧಿ]

ರಾಜವೃಕ್ಷ (ನಾ). ಒಂದು ಬಗೆಯ ಸಸ್ಯ : ಕಕ್ಕೆಯ ಗಿಡ : "ಆರಗ್ವಧಃ . . .ರಾಜವೃಕ್ಷಃ . . . ಕೃತಮಾಲಃ, ಸುವರ್ಣಕಃ-ರ ಕಕ್ಕೇಗಿಡದ ಹೆಸರು" (ಸಿದ್ಧಾಂ. ೦೦೭); ರಾಜವೃಕ್ಷದ ಸಮೀಪದೊಳಗೆರಲೆಗಾಪಂ ತುಳಿದ ನೆಲದ ಶಾಪ ಇದೆ (ಶಾಪಪ್ರ. ೩-೦೦). [ಸಂ.]

ರಾಜವೃತ್ತ (ನಾ). ೧. ಅರಸನ ನಡವಳಿಕೆ.— ವ್ಯವಹಾರ : ನ್ಯಾಯಾರ್ಜಿತ ವಿತ್ತಂ ಧರ್ಮಾಯತ್ತವೆನಿಪ್ಪ ರಾಜವೃತ್ತಂ ತನಗೇಕಾಯುತ್ತಮಾಗೆ ಧರೆಯಂ ಜೀಯೆನಿಸಿದನಿಂತುದಾತ್ತಚರಿತರುಮೊಳರೇ (ಜಂಗಾಮಾ. ೨-೭೦). ೨. ಚಂದ್ರಬಿಂಬದ (ವೃದ್ಧಿ, ಕ್ಷಯಗಳ) ಸ್ವಭಾವ. ೧. ೨ : ಮಸುವಂ ಸನ್ಮಾರ್ಗದೊಳಾರ್ಜಿಸುವಂ ಜರ್ಧಿಸುವನೆಯ್ದೆ ರಕ್ಷಿಸದೀವಂ ನಿಸುಂ ವಿಬುಧರ್ಗಿದು ಭಾವಿಸೆ ಚಿತ್ರಂ ರಾಜವೃತ್ತಮಾಯ್ತುನ್ಮೊನಂ (ಕೃಪ್ರ. ೬-೯). [ಸಂ.]

ರಾಜವೃಷಭ (ನಾ). ಅರಸರಲ್ಲಿ ಶ್ರೇಷ್ಠನಾದವನು : ಉತ್ತಮನಾದ ದೊರೆ : ಮಾನವೃಷಭಂಗೆ ಕೇವಲಜ್ಞಾನೋತ್ಪತ್ತಿಯಾದುದೀ ರಾಜವೃಷಭಂಗೆ ಸಕಲಸಾಮ್ರಾಜ್ಯಸಂಪತ್ತಿಯಾಯಿತು (ಜಂಪ್ರ. ೬-೨೪ ಪ). [ಸಂ.]

ರಾಜವೈದ್ಯ (ನಾ). ೧. ಅರಸನಿಗೆ ಚಿಕಿತ್ಸೆಮಾಡುವವನು. ಅರಮನೆಯ ವೈದ್ಯ : ರಾಜವೈದ್ಯನು ತಲೆತಗ್ಗಿಸಿ ನಿಂತಿದ್ದನು (ಪಾಪ್ರ. ೦೮). ೨. ಆಶ್ವತ್ಥವನಾಪ ವೈದ್ಯವೃತ್ತಿ : (೬). [ಸಂ.]

ರಾಜವೊಟಲ್ (ನಾ). ಒಂದು ಉರಿಸ ಹೆಸರು : ಮಾಗಬಿಸಾಡ ರಾಜವೊಟಲ ಬೀಡಿನೊಳ್ ಸುಖಸಂಕಥಾವಿನೋದದೊಳ್ ಪ್ರಭುಃರಾಜ್ಯ ಗೆಯ್ಯುತ್ತಮಿರೆ (ಆಕ. IV, ನಾಗಮಂ. ೫೦-೬; ೪೭). [ರಾಜ + ಪುಟಲ್]

ರಾಜಶಾಸನ (ನಾ). ೧. ಅರಸನ ಆಜ್ಞೆ.—ಆಜ್ಞೆ : ಮಾಪಂದರಿಜಿರು ನಗರಕ್ಕೆ ದಯಪಾಡಿಸಿದ ಮೊಟ್ಟಮೊಜಲನೆಮ ರಾಜಶಾಸನವು ಒಬ್ಬ ಮುಸಲ್ಮಾನ್‌ಸರದಾರನ ಪಥಪೆಟ್ಟಿಯುದು ದೊಡ್ಡ ಅಜಬ್ಯಾತಿ (ರಾಬಾ. ೭೬). ೨. ರಾಜ್ಯದ ಆಡಳಿತ.— ವ್ಯವಹಾರ : 'ರಾಜಶಾಸನಪಟ್ಟು' ಪರಾ. [ಸಂ.]

ರಾಜಶಾಸನಪಟ್ಟು (ನಾ) ರಾಜ್ಯದ ಆಡಳಿತ ಅಥವಾ ವ್ಯವಹಾರವನ್ನು ಬೇರೆಯಾಗಿ ತಿಳಿದುಕೊಂಡವನು ; ರಾಜನೀತಿಜ್ಞ : ಆಕೆ ಅನೇಕಾನೇಕ ನಾಮಾಂಕಿತರಾಜನೀತಿಜ್ಞರನ್ನೂ ಮುಶ್ವದ್ದಿಗಳನ್ನೂ ರಾಜಶಾಸನಪಟು ಗಳನ್ನೂ ಹೆತ್ತಿದ್ದಾಳೆ (ಪಂಕಾಪೋ. ೦೬೪) [ಸಂ.]

ರಾಜಶುಕ (ನಾ). ಅರಗಿಳಿ ; ರಾಜಕೀರ : ಮಿಡಿಯಂ ಕರ್ಪೂರಕ ನಲಿದಾಡುವ ರಾಜಶುಕಂ . . . ಗಲ್ಲದುದಿಲ್ಲ ನಂದನಂ (ಪಗೂ. ೩-೦೦); ವರ ಕಂಠೀರವಮಧ್ಯೆ . . . ಸುಕೇಶಿ ರಾಜಶುಕಸಲ್ಲಾಪಾಂಗಶ್ಯಂಗಾರೆ (ಪಂ.ಸ್ತ. ೨-೬೨). [ಸಂ.]

ರಾಜಶೂನ್ಯ (ನಾ). ೧. (ರಾಜ್ಯದಲ್ಲಿ) ಅರಸನಿಲ್ಲದಿರುವುದು; ಅರಾಜಕತೆ. ೨. (ಆಕಾಶದಲ್ಲಿ) ಚಂದ್ರನಿಲ್ಲದಿರುವುದು ; ಕಗ್ಗತ್ತಲು. ೧, ೨ : ಅಮ ಸಲೆ ರಾಜಶೂನ್ಯಮುರುರಾಜವಿಧಾಸಿಯ ನಾಂ ದ್ವಿಜಿಷ್ಣ ಸಂವದಮದು ಸಜ್ಜನಕ್ಕೆ ಶರಣಾಂ . . . ಎನೆ ಭೋಗವತೀಪುರವೆನ್ನನೆಂತಾ ವೋಲ್ದುದು ಚರವೆಂದಧಃಕರಿಸುವಂತಿದ ವೇಲೆನಿಸರ್ಪುದಾ ಪುರಂ . (ಕೃಕೃ. ೯-೬೨). [ಸಂ.]

ರಾಜಶೂಲೆ (ನಾ). [ಶಲ್ಯಶಾ] ಕುದುರೆಗೆ ಬರುವ ಒಂದು ಬಗೆಯ ತೀವ್ರತರವಾದ ರೋಗ : ತೋರಿದುವಾಗಿರೆ ನಡುಗಳ್ ನೇರಿದು ವಪ್ಪೆರಡು ರೇಚಿಗಳ್ ತಾಂ ಮೊದಲಾಕಾರದೊಳಿರೆ ಸವಪರುಷಪ್ರಾರಂಭದೆ ವಾಜಿ ರಾಜಶೂಲೆಗೆ ಬೀದುಂ (ಅಶ್ವಶಾ. ೩-೦೨). [ಸಂ. ರಾಜಶೂಲಾ]

ರಾಜಶೇಖರ (ನಾ). ೧. ಅರಸರಲ್ಲಿ ಶ್ರೇಷ್ಠನಾದವನು, ಮುಖ್ಯನಾದವನು : ನಿಯೋಗಿಸಮಸ್ತರನು ಬೀಳ್ಕೊಟ್ಟು ವಿನಿಯೋಗಸ್ಥ ರೊಲಗದಲ್ಲಿ ಎಸೆದನು ರಾಜಶೇಖರಮ (ಜೈಪ್ರ. ೩೦-೩೬). ೨. (ಮುಡಿಯಲ್ಲಿ) ಚಂದ್ರನನ್ನು ಧರಿಸಿದವನು ; ಸೋಮಶೇಖರ ; ಶಿವ : ರಾಜಶೇಖರ ದಿವಿಜವಂದಿತಪಾದ . . . ಭೋಗಿರಾಜಭೂಷಣ . . . ಸಲಸೆಂದು ಹರಿ ಪೊಗಳ್ದನು (ಪಂಪ್ರ. ೦೩-೩೦) ; ಆ ಸಮಯದೊಳಾ ರಾಮಶೇಖರಂ ರಾಜಶೇಖರಪೂಜೆಗೆಯ್ದು ಯಥೋಚಿತಪ್ರಾತರಾಶಾದಿಯಂ ನಿರ್ವರ್ತಿಸಿ (ಶಾಪ್ರ. ೬-೪೦ ಪ). [ಸಂ.]

ರಾಜಶ್ರಾವಿತ (ನಾ). ಅರಸನಿಗೆ ತಿಳಿಸಿದುದು ; ದೊರೆಯ ಗಮನಕ್ಕೆ ತಂದುದು : ಆಮೋಘವರ್ಷದೇವರೊಳ್ ರಾಜಶ್ರಾವಿತಂ ಮಾಡಿ ತದನು ಪತದಿಂದಿರ್ವ್ವೊರುಂ (ಪಪ್ರ. VI, ೦೦೪-೫೮ : ೫೦೦); ರಾಜಶ್ರಾವಿತ[ಂಗಳಾ ವೈ] ಶಾಖಿಮಾಸ ಶುಕ್ಲಪಕ್ಷಪುನ್ನಮೆ ದಿನ (ಪೌಪ್ರ. XI-೫, ೦೩-೪ : ೫೦೦). [ಸಂ.]

ರಾಜಶ್ರೀ (ನಾ). ೧. ಅರಸನ ಐಶ್ವರ್ಯ. ೨. = ರಾಜಮಾನ್ಯ ೨ : ಕನ್ನಡದಲ್ಲಿ . . . ರಾಜಮಾನ್ಯ, ರಾಜಶ್ರೀ . . . ಹಸರಿನ ಹಿಂದೆ ಜೋಡಿಸಿ ಬರೆಯುವ ಸಂಪ್ರದಾಯವುಂಟು (ಮುಂಶಾಪ್ರ. ೪-೪೪). [ಸಂ.]

ರಾಜಶ್ರೇಷ್ಠಿ (ನಾ). ಪ್ರಧಾನನಾದ ಸೆಟ್ಟಿ ; ವರ್ತಕಶ್ರೇಣಿಯ ಮುಖಂಡ : ಆ ಪೊಲೆಲೊಳ್ ರಾಜಶ್ರೇಷ್ಠಿ ಸಾಗರಸೇನುಗಮಮ್ಯತ ಪತಿಗಂ ಪುಟ್ಟಿದ ವತ್ಸನುಂ ನಂದಿಷೇಣನುಂ ಎಂಬರ್ . . . ಬರ್ಪಿಡಿಯೊಳ್ (ಜಂಂಪ್ರ. ೯-೧೦ ಪ) ; ಸೆಟ್ಟಿವಟ್ಟಮಂ ಕಟ್ಟಿಸಿಕೊಂಡಲ್ಲಿಯ ರಾಜಶ್ರೇಷ್ಠಿಯಾಗಿ ಸುಖದಿಂಳಿರ್ವನ್ನೆಗಂ (ಜಂಪ್ರ. ೩೪-೦೦). [ಸಂ. ರಾಜಶ್ರೇಷ್ಠಿನ್]

ರಾಜಸ (ಗು). ೧. ರಜೋಗುಣಕ್ಕೆ ಸಂಬಂಧಿಸಿದ ; ಕಾಮಕ್ರೋಧಗಳಿಂದ ಕೂಡಿದ : ಅರಸ ಕೇಳ್ ರಾಜಸಾಂತಃಕರಣಮು ಕಾಮ್ಯಕ್ರಿಯಾಸಿದ್ಧಿಪ್ರಧಾನಗೋಸುಗ ತಪವಲ್ಲೇ ರಾಜ್ಯಾಭಿಲಾಷೆಯಲಿ (ಭಾಷ್ಯಾಂ. ೪-೨) ; ಇಂದ್ರಿಯಗಳಿಗೆ ಯಾವುದು ಅಮಾದಾನಕಾರಣವೋ ಅದು ಸಾತ್ವಿಕಾಹಂಕಾರವೆಂದೂ . . . ಈ ಯೆರಡಕ್ಕೂ ಯಾವುದು ಅನುಗ್ರಾಹಕವೋ ಅದು ರಾಜಸಾಹಂಕಾರವೆಂದೂ ತಿಳಿಯಬಹುದು (ಕೃಕೃ. ೬). (ನಾ). ೨. ಕಾಮಕ್ರೋಧಗಳಿಂದ ಕೂಡಿದ ಗುಣ ; ರಜೋಗುಣ : ರಾಜಸ ಸಾತ್ವಿಕಮೆಂಬೀ ರಾಜಗುಣಾಂ ವಿಷಯವಿಷಾವಹಾರಂಗಳವೊಲ್ ರಾಜಸೆ ವಿಷಮೋರಗನಂತೀ ಜಗತಿತಳಮನಾಂತನವನೀಕಾಂತಂ (ಪಾಭಾ. ೬-೬) ; ಮನಸ್ಸನ್ನು ರಾಜಸಕ್ಕೆ ಒಪ್ಪಿಸಿ ಅವರು ಈ ಮೂಲಕ ನಿನ್ನನ್ನು ಶಿಕ್ಷಿಸುವುದಕ್ಕೆ

ಹೊರಟಿದ್ದಾರೆ (ಕಬರಸ. ೨೯೪). ೩. ರಜೋಗುಣವುಳ್ಳ ವ್ಯಕ್ತಿ : ಜೀವರಾಶಿಗಳ ದೇವಮನುಷ್ಯಾದಿ ಭೇದಗಳಿಂದ ಸಾತ್ವಿಕರಾ, ರಾಜಸರು, ತಾಮಸರೆಂಬ ಮೂರುವಿಧರಾಗಿ ಭಾಗಿಸಲ್ಪಟ್ಟಿರುವರು (ಪೂಸಂ. ೦-೧ ೬೫ಚಾಶರ್ಮ). [ಸಂ.]

ರಾಜಸದನ (ನಾ). ಅರಸನ ನಿವಾಸ ; ಅರಮನೆ : "ಸೌಧಃ. ರಾಜಸದನಂ — ೨ ರಾಜಗೃಹದ ಹೆಸರು. ಅರಮನೆ. ರಾಜಯೋಗ್ಯವಾದ ಉಪ್ಪರಿಗೆ" (ನಿಘಂ೬ನಿ. ೦೦೦); ರಾಜಸದನಸಂಸ್ಥೆಯಾಗಿಯುಂ ಶೂನ್ಯಾರಣ್ಯ ಸಂಸ್ಥೆಯಂತೆಯುಂ . . . ಇರ್ಪನೆಗಂ (ಶಂಭ್ರಕೃ. ೬-೩೦ ೮) ; ರಾಜಸದನಕ್ಕೆ ಹೋಗುವೆನು (ಜಾಖಾಂಕ. ೬೬-೦೬). [ಸಂ.]

ರಾಜಸಬುದ್ಧಿ (ನಾ). ೧. ರಜೋಗುಣದಿಂದ ಕೂಡಿದ ಬುದ್ಧಿ. ೨. ರಜೋಗುಣದಿಂದ ಕೂಡಿದ ಬುದ್ಧಿಯುಳ್ಳವನು : ಎಮಗೆ ಜಯಪ್ರೇತಹುದು ರಾಜ್ಯಪ್ರಮೆಯ ರಾಜಸಬುದ್ಧಿಗಳು ವಿಕ್ರಮವಿಹೀನರು ನಾವು (ಭಾಶಾ೦೮. ೬-೨೦). [ಸಂ.]

ರಾಜಸಭೆ (ನಾ). ದೊರೆಯ ಒಡ್ಡೋಲಗ : ಅರಸನ ಆಸ್ಥಾನ : "ಆಸ್ಥಾನವೆಂಬುದು ರಾಜಸಭೆ" (ಪಣಾಹು. ೦೨೮-೧೩) ; ಅಂದು ಕೌರವ ನಾಯಿ ಸಭೆಯಲಿ ತಂದು ತೋಱಿದನನ್ನತಿಯಃ ಬಳಿಕಿಂದು ಕೀಚಕ ಕುನ್ನಿಯೊದೆದನು ರಾಜಸಭೆಯೊಳಗೆ (ಭಾಶಾ೦. ೬-೪೬). [ಸಂ. ರಾಜ್ಞಸಭಾ]

ರಾಜಸರ್ಪ (ನಾ). = ರಾಜಘ್ನೆ : "ರಾಜಸರ್ಪಃ. ಸರ್ಪಭುಕ್ — ಈ ಎರಡು ಅರವಾ(ಹಾ)ವು" (ಪಣಾಹು. ೦೦೬-೨೦). [ಸಂ.]

ರಾಜಸರ್ಷಪ (ನಾ). ಕರಿಯ ಸಾಸುವೆ : "ಅಸುರೀ. ರಾಜಿಕಾ. ರಾಜಸರ್ಷಪಃ — ಈ ಮೂಱು ರಾಯಸಾಸುವೆ" (ಪಣಾಹು. ೧೩-೧೪೬). [ಸಂ.]

ರಾಜಸಿಕ (ಗು). ೧. ರಜೋಗುಣದಿಂದ ಕೂಡಿದ : ನಮಗೆ ಚಿರ ಪರಿಚಿತವಾದ ಪ್ರಿಯವಾದ ಈ ರಾಜಸಿಕತಮುಲಗಳ ನಡುವೆ ನಾವು ಮತ್ತೆ ಮೊದಲಿನಂತಾಗುತ್ತೇವೆ (ಪಂತೀ. ೨). (ನಾ). ೨. ರಜೋಗುಣದಿಂದ ಕೂಡಿದುದು : ಎಲ್ಲ ವ್ಯಾಪಾರಗಳೂ ಈ ತ್ರಿಗುಣಕ್ರಿಯೆಗಳೇ. ಅವರಲ್ಲಿ ಹಲವು ಪ್ರಧಾನವಾಗಿ ಸಾತ್ವಿಕ, ಮತ್ತೆ ಹಲವು ಪ್ರಧಾನವಾಗಿ ರಾಜಸಿಕ ಅಥವಾ ತಾಮಸಿಕ (ಕೌಂದಸ. ೧೦೦). [ಸಂ.]

ರಾಜಸುತ (ನಾ). = ರಾಜಕುಮಾರ : ರಾಜಸುತಂ ಜಸಿದೆಂ ನೀರಡಿಸಿದ ನೆನಗಿವಲ್ಪದಲ್ಪಲ್ಪೆನ್ನಂ ವಾರ್ಯಸಂ ಪಲವಂ (೩೦೪. ೩-೪೬); ಇರ್ಗೊಂಡು ಶ್ಲಾಘಿಸುತಾ ಭೂಪ ತನ್ನ ಪುರಕೆ ತಂದನಾ ಘನೋಜ್ವಲರಾಜಸುತರ (೪೪೮. ೩೩-೪೪). [ಸಂ.]

ರಾಜಸುತೆ (ನಾ). = ರಾಜಕುಮಾರಿ : ರಾಜಾಂತರದಿಂದ ರಾಜಸುತೆಯಂ ನಯದಿಂದವಳಿಯ್ದುಳ್ (೩೦೬೫. ೩-೩೭). [ಸಂ. ರಾಜಸುತಾ]

ರಾಜಸೂಯ (ನಾ). ಚಕ್ರವರ್ತಿಯು ಮಾಡುವ ಒಂದು ಬಗೆಯ ಯಾಗ : ಈ ವಾಜಪೇಯಯಜ್ಞವನ್ನು ಮಾಡಿಲ್ಲದ ರಾಜನಿಗೆ ಮಾತ್ರ ಈ ಯಜ್ಞ ಮಾತುವ ಅಧಿಕಾರವುಂಟು. ಈ ಯಜ್ಞ ಮಾಡುವ ರಾಜನು ಸಾಮ್ರಾಟನಾಗುತ್ತಾನೆ : ಗಾಳುಗೊರವಂ ತಗುಳ್ದಿ ಪಳಾಳಮನೇನೊಂದನಪ್ಪೊಡಂ ಗಟಬಿದೊಡಾ ಬೇಳು ನುಡಿಗೆಳ್ದು ಕಿಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ (೩೦೪೬. ೬-೨೪) ; ಸ್ವರ್ಗಾಪವರ್ಗೈಕಾರೋಹವಪ್ಪಗ್ಗವ ರಾಜಸೂಯ ಮನೊಡರ್ಚಿಂ (೩೧೬. ೦೬-೦೦) ; ವಿರಂಚಿಪ್ರಭವನನುಮತದಿಂದ ಧರಣೀವಿಭು ಪುಷ್ಪಾರ್ಕ್ಯತು ರಾಜಸೂಯವನೊರ್ವಿಂ ಕೈಕೊಂಡ (ಭಾಶಾ೬. ೧ ೩೦೦೩). 'ಅಶ್ವಮೇಧ' ಪರಾ. [ಸಂ.]

ರಾಜಸೇವೆ (ನಾ). ಅರಸನ ಸೇವೆ.—ಊಳಿಗ : ಸೆಣಸಿನೆಲೆ ಸಮದರ್ಶಿಗಳು ಧಾರುಣಿಯ ಪತಿಗಳು ರಾಜಸೇವಾಪ್ರಣಯಮಮಿಮಾಸಾದಿ ಮೂಢರು ನೆಮ್ಮೆ ಭಟರೆಂದ (ಭಾಶಾ೦ಗೀ. ೬-೦೦). [ಸಂ. ರಾಜಸೇವಾ]

ರಾಜಸ್ವ (ನಾ). ೧. ಅರಸನ ಆಸ್ತಿ. ೨. ರಾಜ್ಯದ ಹುಟ್ಟುವಳಿ. — ಆದಾಯ : ಸಂಪ್ರಕ್ಕೂ ರಾಜ್ಯಗಳಿಗೂ ರಾಜಸ್ವಗಳ ಹಂಚಿಕೆ (ಭಾರಾಸ ೦೩೨). [ಸಂ.]

ರಾಜಸ್ವರ (ನಾ). [ಸಂಗೀತ] ಒಂದು ರಾಗದ ಮುಖ್ಯವಾದ ಸ್ವರ; ಜೀವಸ್ವರ : ಒಂದು ರಾಗದ ಸ್ವರೂಪ ಪ್ರತ್ಯೇಕತೆ ಎತ್ತಿ ತೋರಲು ಯಾವ ಸ್ವರ ಪದೇಪದೇ ಉಪಯೋಗವಾಗುವುದೋ ಆ ಸ್ವರ, ವಾದಿಸ್ವರ . . . ವಾದಿಸ್ವರಗಳನ್ನು ರಾಜಸ್ವರಗಳೆಂದೂ ಸಂವಾದಿಸ್ವರಗಳನ್ನು ಮಂತ್ರಿ ಸ್ವರಗಳೆಂದೂ . . . ಕರೆಯುವ ವಾಡಿಕೆ (ಸಂಗೀಪ್ರ. ೩೦). [ಸಂ.]

ರಾಜಹಂಸ (ನಾ). ೧. = ರಾಜಮರಾಲ : "ರಾಜಹಂಸಃ . . . ಕಿರಿಯಾವ ಕಾಲುಗಳೂ ಮೂಗೂ ಉಳ್ಳ ಬೀಳಹಂಸೆ, ಆರಸಂಬೆ" (ನಿಘಂ೬ನಿ. ೧೬೨) ; ಕುರುಕುಳಸರೋರಾಜಹಂಸವಲ್ಲಿಯು ರಾಜಹಂಸಿಗಳುಮಂ . . ಅತಿಕುತೂಹಲಂಬೆರಸು ನೋಡಿ (ಗಣಾಹು. ೬-೦೬ ೫) ; ಮಹೋದ್ಭತರಾಜಹಂಸತ್ವಮಿದನೆಸೆದತ್ತು ರಾಜ್ಯವಿಭವಂ ಜಳದಾಗಮಚಕ್ರವರ್ತಿಯಾ (೩೧೬. ೪-೩೩). ೨. ಅರಸರಲ್ಲಿ ಶ್ರೇಷ್ಠನಾದವನು ; ನೃಪೋತ್ತಮ : ಒಬಿಬನೆ ಬರೆ ಹಂಸೀಕುಳಮುಬಿದು ಸರೋವರಮನದಱ ಪುಟ್ಟಿಲೊಳ್ ಪಲಮೆಂ ಸುಬಿಯಲ್ಕೆ ತಳ್ದರ್ ಹಂಸನಾಬಿಪಿದನಾ ರಾಜಹಂಸನಬುಳಿದುಂತು (ಶಂಭ್ರಕೃ. ೬-೦೦೭). ೩. ಸೂರ್ಯ. ೪. ಚಂದ್ರ. ೧, ೩, ೪ : ನಾತಪ್ಪ ಕೆಱದೆ ಸರದಿಂ ತಾರಾಪಥವಂತೆ ರಾಜಹಂಸಾನ್ವಿತದಿಂ ಕ್ಷೀರಾಬ್ಧಿ ಶಯನಸ್ಥನವೊಲಾರಮೆಯಿಂ ತುಬಿಗಿ ಪೊಜವೊಲಲ್ ಸಾ(ಸೊ)ಗಯಿಸುಗುಂ (೩೩. XIV. ೩೬೦-೨೦ ; ೩೬೩). ೧. ೨. ೩. ೪ : ಜನಸುಂತರರಾಜಹಂಸನಯನಂ ಕಮಳಾವಸಥಂ ಕಳಾನಿಕೇತನನೆನಿಸಿರ್ದ . . . ಲೋಕಪ್ರಿತನೊಲ್ದು ಚತುರ್ಮುಖನೀಗೆ ರಾಗಮಂ (೩೧೬. ೦-೨). ೨,೩,೪ : ಉರ್ವಿಯಂತೆ ನಭದಂತಪಲಂಬಿತರಾಜಹಂಸವಾಮ್ಯೋವಳಿಯಂತೆ ಕಾಮಿಜನದಂತೆ ಸಮುತ್ಸಳಿಕಾಕುಳಂ ಕೊಳಂ (೪೫೬. ೨-೩೩). [ಸಂ.]

ರಾಜಹಂಸಿ (ನಾ). ಶ್ರೇಷ್ಠವಾದ ಹೆಣ್ಣುಹಂಸಪಕ್ಷಿ ; ಹೆಣ್ಣಂಜೆ : ಪರಮಜಿನಸಮನೆಗೊರ್ವಳ್ ಸುರವಧು ಕೊಡವಿಡಿದು ನಳಿನಿಯೊಡವೆಳೆದು ರಜಂಬೊರೆದು ಕೊಡೆಯೆರೆಯ ಕೆಲಗಿರ್ದ ರಾಜಹಂಸಿಯ ವಿಳಾಸವಂ ನೆನೆಯಾಸಿವಳ್ (೩೦೬೫. ೧-೩೭೬) ; ಕುರುಕುಳಸರೋರಾಜಹಂಸವಲ್ಲಿಯ ರಾಜಹಂಸಿಗಳುಮಂ . . . ಅತಿಕುತೂಹಲಂಬೆರಸು ನೋಡಿ (ಗಣಾಹು. ೬-೦೬ ೫). [ಸಂ. ರಾಜಹಂಸೀ]

ರಾಜಹಂಸೆ (ನಾ). = ರಾಜಹಂಸಿ : ಲೀಲಾಲಸಗಮನಮಂ ಗಜಗಮನೆಯರ್ಗುಪದೇಶಂಗೆಯ್ದು ದೀವದ ರಾಜಹಂಸೆಗಳುಮಂ . . . ಕೊಟ್ಟು (೩೦೪. ೪-೪೪ ೫). [ಸಂ. ರಾಜಹಂಸಾ]

ರಾಜಹರ್ಮ್ಯ (ನಾ). ದೊರೆಯ ನಿವಾಸ ; ಅರಮನೆ : ಈ ವಾತಾವರಣದಲ್ಲಿ ಒಮ್ಮೆ ಸುಳಿದು ಬಂದರೆ ಸಾಕು . . . ಯಾವುದೋ ಒಂದು ರಾಜಹರ್ಮ್ಯದಲ್ಲಿ — ಮಹಾದೇವಸ್ಥಾನದಲ್ಲಿ — ಸುಳಿದುಬಂದ ಭಾಸವಾಗುತ್ತದೆ (೦೪೫೫. II. ೮೩). [ಸಂ.]

ರಾಜಹುಂಡಿ (ನಾ). ಸರ್ಕಾರದ ಖಜಾನೆಯಿಂದ ಬರುವ ಹಣದ ಆದೇಶ ಪತ್ರ.— ಹುಂಡಿ : ಭಾರತಸರ್ಕಾರದಿಂದ ಸ್ವೀಕರಿಸಲಾದ ಎಲ್ಲ ರಾಜಸ್ವಗಳೂ ರಾಜಮಂಡಿಗಳನ್ನು, ಸಾಲಗಳನ್ನು . . . ಸಂಚಿತವಾದ ಒಂದು ನಿಧಿಯಾಗಿ ವಿಸರ್ಜಿಸತಕ್ಕುದು (ಭಾರಾಪ. ೦೩೦). [ರಾಜ + ಹುಂಡಿ]

ರಾಜಹುಣ್ಣು (ನಾ). ಒಂದು ಬಗೆಯ ಭಯಂಕರವಾದ ಹುಣ್ಣು ; ಬೆನ್ನುಪಣಿ : "ಕಟ್ಟಕುರು ; ಬೆನ್ನುಪಣಿ ; ರಾಜಪುಣ್ಣು. ನೆರಡಿರೋಗ" (Carbuncle. ೨೦೫೨) ; ಪವಾಮ್‌ಪೈವರಲ್ಲಿಖಾನರು ಬೆನ್ನಿನಲ್ಲಿ ರಾಜಹುಣ್ಣು ಎದ್ದು ಅರಕಾಡಿನಲ್ಲೆ ಮೈತರಾದರು (ಜಾಕಂಂದ್ರ. ೨೬). [ರಾಜ + ಹುಣ್ಣು (<ಪುಣ್)]

ರಾಜಾಂಗಣ (ನಾ). ೧. ಅರಮನೆಯ ಅಂಗಳ : ವಿವಿಧಫಲಪ್ರಸೂನ ಪಲ್ಲವತತಿಯಿಂ ಕೀವಿದ ರಾಜಾಂಗಣಮನಿಳಾವಂದ್ಯರ್ ಮೆಟ್ಟಲೊಲ್ಲದಲ್ಲಿಯೆ ನಿಂದರ್ (ಆಂಪ. ೦೬-೯). ೨. (ವಿಶಾಲವಾದ) ಅಂಗಳ: ಪಿಂಗಲೆ ಪೋದೆಗೆ ಪೊಜಿಸು ಬಕಂ ಗಿಡಿಗಂ ಗೂಗೆಯಾದಿಯಾದ ಖಗಂ ರಾಜಾಂಗಣದೊಳ್ ಚರಿಸುವೊಡೆ ಸರಂಗೆಯ್ವಡೆ ತಡೆಯದಾ ಗೃಹಂ ಪಾಟಕ್ಕುಂ (ಕೋಕಿ. ೪-೬೬). ರಾಜಾಂಗಣದ ಊಟ = ಉಡುಪಿಯ ಮಠದ ವಿಶಾಲವಾದ ಅಂಗಳದಲ್ಲಿ ಸೇರಿ ಮಾಡುವ ಭೂರಿಭೋಜನ.– ಭರ್ಜರಿಊಟ : ಬಮ್ಮಗೆ ಉಂಡು ಕೆಗಬೇಕಾದರೆ ಮಧ್ವನವಮಿಊಟಕ್ಕೋ, ರಾಜಾಂಗಣದ ಊಟಕ್ಕೋ ಉಡುಪಿಗೇನೆ ಹೋಗಬೇಕು (ಪುರಪು. ೯೯). [ರಾಜ + ಅಂಗಣ]

ರಾಜಾಂಗನೆ (ನಾ). ರಾಜವಂಶದ ಸ್ತ್ರೀ ; ಅರಸುಮನೆತನದ ಹೆಣ್ಣು : ಸುದತಿಯರು ಹೊಱಮಂಟರೊಗ್ಗಿನ ಮೃದುಮೃದಂಗದ ಕಹಳೆಗಳು ಸಂಪದದ ಸೊಂಪಿನಲೆಸೆಯೆ ರಾಜಾಂಗನೆಯರನುವಾಯ್ತು (ಶಾಪ್ರಾ. ೯-೦೦). [ಸಂ. ರಾಜಾಂಗನಾ]

ರಾಜಾಂಗವಸ್ತ್ರ (ನಾ). ಒಂದು ಬಗೆಯ ಶ್ರೇಷ್ಠವಾದ ಬಟ್ಟೆ : ಗಾಜು ನೋಟಕ್ಕೆ ಲೇಸು ಮೋಜು ಇಕ್ಕುಳಲಿ ಲೇಸು ರಾಜಾಂಗವಸ್ತ್ರ ಉಡ ಲೇಸು ಊಟಕ್ಕೆ ರಾಜಾನ್ನ ಲೇಸು (ಸರಾಶ. ೦೦೬೩). [ಸಂ.]

ರಾಜಾಜ್ಞೆ (ನಾ). ದೊರೆಯ ಆದೇಶ ; ಅರಸನ ಅಪ್ಪಣೆ : ತಳೆದೇನಿರ್ದರೊ, ತಮ್ಮತಮ್ಮ ತಲೆಯೊಳ್ ರಾಜಾಜ್ಞೆಯಂ ಮೂರ್ತಿಗೊಂಡಳೆನಂ ಬಂತಿರೆ ಭೂಪತಿಪ್ರಕರ ನಾನಾಮೌಳಿಮಾಣಿಕ್ಯಸಂಕುಳದೊಳ್ ಮಾರ್ಪೊಳೆವುತ್ತಮೊಯ್ನೆ ಬರುತ್ತಿರ್ದಳ್ ಪ್ರತೀಹಾರಿ (ಕಾಕಂಪು. ೨೪) ; ಲಂಚವನ್ನು ತೆಗೆದುಕೊಳ್ಳುವುದನ್ನು ರಾಜಾಜ್ಞೆಯು ವಿರೋಧಿಸಿದ್ದಿತು (ಕಶಾಕ. ೬೮೩). [ಸಂ. ರಾಜಾಜ್ಞಾ]

ರಾಜಾಣ ' ರಾಜನ ' ನೋ.

ರಾಜಾತಿಥ್ಯ (ನಾ). ೧. ಅರಸನು ಮಾಡುವ ಅತಿಥಿಸತ್ಕಾರ. ೨. ರಾಜಯೋಗ್ಯವಾದ ಆತಿಥ್ಯ ; ಶ್ರೇಷ್ಠವಾದ ಆತಿಥ್ಯ : ಏದಾರುದಿನಗಳ ತನಕ ಒಗ್ಗಾಲಿ ಮತ್ತು ಭಟ್ಟರು ಮುದುಕನ ಮನೆಯಲ್ಲಿ ರಾಜಾತಿಥ್ಯವನ್ನು ಅನುಭವಿಸಬೇಕಾಯಿತು (ಕಂಬಹು. ೫೦). [ಸಂ.]

ರಾಜಾದನ (ನಾ). ೧. ಒಂದು ಬಗೆಯ ಬಾದಾಮಿಮರ : ಮೊರಟಿ ಮೆರ ; ಪಿಯಾಲ : " ರಾಜಾದನಂ, ಪ್ರಿಯಾಲಃ, ಸನ್ನಿಕರ್ಷಃ, ಧನುಃಪಟಃ – ೪ ಮೊರಟೀಗಿಡ, ಮೊರಟೀಗಿಡ " (ಶಿಡಾ. ೦೬. ೦೦೯). ೨. ಒಂದು ಬಗೆಯ ದಪ್ಪ ಹಣ್ಣು ಬಿಡುವ ಮರ. ೩. ಒಂದು ಬಗೆಯ ಗಿಡ ; ಹಾವೆ : " ರಾಜಾದನಂ, ಫಲಾಧ್ಯಕ್ಷಂ, ಕ್ಷೀರಿಕಾ – ೩ ಹಾಲೇಗಿಡ, ಹಾಲುಬಳ್ಳಿ, ಪೆಸರು" (ಶಿಡಾ. ೦೬. ೦೨೨). [ಸಂ.]

ರಾಜಾದಾಯ (ನಾ). ಅರಸನಿಗೆ ಸಲ್ಲಬೇಕಾದ ಆದಾಯ; ಕಂದಾಯ; ತೆರಿಗೆ ಮುಂತಾದುವು : ಮಿತಿಮೀರಿದ ರಾಜಾದಾಯವನ್ನು ಅನ್ಯಾಯವಾಗಿ ಕೇತಮಲ್ಲನ ಮೇಲೆ ವಿಧಿಸಿ ಅವನ ಹಣದ ಬಹುಭಾಗವನ್ನು ಅಪಹರಿಸಿದ್ದನು (ಕಾಂಚರಾ. ೦೦೬) ; ರಾಜರೂ ಮಂತ್ರಿಯೂ ಇಬ್ಬರೂ ಸೇರಿ ರಾಜಾದಾಯವನ್ನು ಹೆಚ್ಚಿಸಲು ಅನೇಕ ಉಪಾಯಗಳನ್ನು ಯೋಚಿಸಿದರು (ಬಿಚೆ. ೧೩). [ಸಂ.]

ರಾಜಾದೇಶ (ನಾ). = ರಾಜಾಜ್ಞೆ : ದೂತನ ನುಡಿಯುಮಂ ರಾಜಾದೇಶಮುಮನವಧಾರಿಸಿ ಬಂದ ದೂತನಂ . . . ಪೋಗಲ್ವೇಟ್ಟು (ಪಾತ್ರ. ೦೪-೩೦ ಪ). [ಸಂ.]

ರಾಜಾಧಿರಾಜ (ನಾ). ಅರಸರಿಗೆಲ್ಲ ಅರಸನಾದವನು ; ಚಕ್ರವರ್ತಿ : ಮಂಗಳಂ ಜಯ ಮಂಗಳಂ . . . ರಾಜೇತ ಪುರಂದರವಿಟ್ಠ ರಾಜಾಧಿರಾಜ ಸರ್ವೇಶಗೆ (ಶ್ರೀರಂಪ. ೫-೦೩೬-೩). [ಸಂ.]

ರಾಜಾಧ್ಯಕ್ಷ (ನಾ). ಅರಸನ ಆಸ್ಥಾನದ ಹಿರಿಯ ಅಧಿಕಾರಿ : ರಾಜಾಧ್ಯಕ್ಷೆ ×ಳಬಟ್ಟಪ್ಪಯ್ಯನ × × × ಲಿಖಿತ (ಎಳ್. VII ೩೦೦-೩೨ ; ೧೦೨೭) ; ಶ್ರೀಮನ್ ಮಹಾಪ್ರಧಾನಂ ರಾಜಾಧ್ಯ ವೆರ್ಗ್ಗಡೆ ಕನ್ನಡಸಂಧಿವಿಗ್ರಹಿ ದಂಡನಾಯಕಂ ಕಾಳಿಮರಸರ್ (ಶಾಸ ೧೦೨೭). [ಸಂ.]

ರಾಜಾಧ್ವರೆ (ನಾ). = ರಾಜಸೂಯ : ಪರಮಜೈಮಿನಿಕಣ್ಣ ಗಳಾಗ್ನೀಧ್ರಾದಿ ರಾಜಾಧ್ವರನಿಯೋಗಿಗಳಾಯ್ತು ಮೇದವ್ಯಾಸ (ಶಾಪ್ರಾ. ೬-೨೩). [ಸಂ.]

ರಾಜಾನ ' ರಾಜನ ' ನೋ.

ರಾಜಾನ್ನ (ನಾ). ಒಂದು ಬಗೆಯ ಶ್ರೇಷ್ಠಜಾತಿಯ ಬತ್ತ ; ಆದರ ಅಕ್ಕಿ : "ಸಿತಶಾಲಿ ಕೆಂಗಟವೆ ಕೆಂಬುತ್ತಿ ರಾಜಾನ್ನಂ" ೦೦೦-೪) ; ಮುಂದೆ ಮುಂದೈಸಿ ತಲೆಮುದ್ದಮಾಗಿ ತುಱುಂಗಿ ಬ ರಾಜಿಸುವ ರಾಜಾನ್ನದ ಕುಸುಂಕುಜ್ಜೊಳಗೆ . . . ನೆಗೆವ ಸುಟ್ಟು (ಕೀರಾವ. ೩-೬೨ ಪ) ; ಬೀಗಿ ಬೆಳೆದು ನಭಕಡರ್ದೊಡೆ ದೇವರ್ಕಳ್ ಸವಿಗಾಣರ್ ಪೋಗಿ ಮಾಡುವುದೇನೆನುತ ಲಜ್ಜಿಸಿ ತಲೆವಾಗಿದ ರಾಜಾನ್ನ (ಮೋಹಕ. ೨-೪೦).

ರಾಜಾನ್ನದಕ್ಕಿ = ರಾಜಾನ್ನವೆಂಬ ಬತ್ತದ ಅಕ್ಕಿ : ನವೇದ್ಯಕ್ಕೆ ರಾಜಾನ್ನದಕ್ಕಿ ಕೊಳಗ ಒಂದು (ಕಾಚ. ೬೯-೧೩೦-೪೦ ಉತ್ತಮದ ರಾಜಾನ್ನದಕ್ಕಿಯ ಬೋನವಂ ಮಾಡಿ ೧೪೮ ೨೬-೦೩). [ಸಂ.]

ರಾಜಾನ್ವಯ (ನಾ). = ರಾಜಕುಲ ೧ : ಕೆಟ್ಟುದಿಂದ್ರಪ್ರಸ್ಥ ರುಟ್ಟು ಪೋದರು ನಾರ ಸೀರೆಯ ನಟ್ಟಡವಿ ಮನೆಯಾಯ್ತು ನ್ವಯದ ರಾಜರಿಗೆ (ಶಾಪ್ರಾ. ೦-೦೯). [ಸಂ.]

ರಾಜಾಪುರಿ (ನಾ). ಒಂದು ಬಗೆಯ ಸಕ್ಕರೆ : ಪುಡಿಸಕ್ಕರೆಯ ರಾಜಾಪುರೀ, ಎಳಗಂಡೀ, ಹುರಿಸಕ್ಕರೆ, ಮಗುದುಮ್ಮಿ ಎಂದ ತರವುಂಟು (ಮುಂಂಬಾ. ೫-೮೫). ' ರಾಯಪುರಿಸಕ್ಕರೆ ' ಪರ

ರಾಜಾಭರಣ (ನಾ). ಚಂದ್ರನನ್ನೇ ಆಭರಣವನ್ನಾಗಿ ಧರಿಸಿ ಚಂದ್ರಶೇಖರ ; ಶಿವ : ರಾಜಾಭರಣನೆ ಕೇಳಯ್ಯ ವಿರೂಪಾಕ್ಷಾ (ಸೀಂಪ. ಕೀ. ೩೬-೩). [ಸಂ.]

ರಾಜಾಯತ್ತ (ನಾ). ಪ್ರಭುಸಿದ್ಧಿಯ ಮೂರು ಬಗೆಗಳಲ್ಲಿ ಸಂಪೂರ್ಣವಾಗಿ ಅರಸನು ನಡೆಸುವ ಅಧಿಕಾರ; ನಿರಂಕುಶ ಪ್ರಭುಸಿದ್ಧಿಯನ್ನು ಅರ್ಥಶಾಸ್ತ್ರಕಾರರು ರಾಜಾಯತ್ತ, ಸಚಿ ಉಭಯಾಯತ್ತ ಎಂದು ಮೂರು ಬಗೆಯಾಗಿ ವಿಂಗಡಿಸುತ್ತಾರೆ (ಎಲ್. ೪೭). ' ಸಚಿವಾಯತ್ತ ' ಪರಾ. [ಸಂ.]

ರಾಜಾರೂಪಾಯಿ (ನಾ). ೧. ಹೈದನ ಮೈಸೂರುಅರಸ ದಲ್ಲಿದ್ದ ಒಂದು ಬಗೆಯ ನಾಣ್ಯ : (೪). ೨. ಐದನೆಯ ಮುಮ್ಮಡಿ ಮುದ್ರೆಯಿದ್ದ ಒಂದು ಬೆಳ್ಳಿಯ ನಾಣ್ಯ : ಮಸ ಲಯದಲ್ಲಿ ಇಂದೂ ರಾಜಾರೂಪಾಯಿಯು ಇರಬಹುದು (ರಾಶ್ರೀ [< ರಾಜ + ರೂಪಾಯಿ]

ರಾಜಾರೋಷ (ನಾ). ಎಲ್ಲರಿಗೂ ತಿಳಿಯುವಂತಿರುವುದು ; ಮರೆಯಿಲ್ಲದಿರುವುದು ; ಬಹಿರಂಗವಾಗಿರುವುದು.

ರಾಜಾರೋಷವಾಗಿ = ಎಲ್ಲರಿಗೂ ತಿಳಿಯುವಂತೆ ; ಬಹಿರ

ವಾಗಿಯೇ ಕೋಳಿಮಾಂಸ ಮತ್ತು ಹೋಟಲುತಿಂಡಿ ತಿನ್ನುತ್ತಿದ್ದರು (೧೧೪೮. ೭). [←ದುರಾ. ರಾಜಾರೂಸ್, ರಾಜಾರೋಸ್, ರಜಾರೋಶ್, ರಾಜಾರೋಷ್]

ರಾಜಾರ್ಹ (ಗು)- ೧. ಅರಸನಿಗೆ ಉಚಿತವಾದ : ರಾಜಯೋಗ್ಯವಾದ. (ನಾ)- ೨. ಒಂದು ಬಗೆಯ ಸುಗಂಧದ ಮರ ; ಧೂಪದ ಮರ; ಅಗರು : "ವಂಶಕಂ, ಅಗರು, ರಾಜಾರ್ಹಂ, ಲೋಹಂ, ಕ್ರಿಮಿಜಂ, ಜೋಂಗಕ್ಕ– ೬ ಅಗರುಗಂಧ, ಶ್ವೇತಾಗರು" (ಶಿಕ್ಷಾ. ೦೬. ೨೦೬). ೩. ಒಂದು ಬಗೆಯ ಶ್ರೇಷ್ಠಜಾತಿಯ ಬತ್ತ ; ರಾಜಾನ್ನ. ೪. ಕತ್ತಾಳೆ ಜಾತಿಗೆ ಸೇರಿದ ಒಂದು ಬಗೆಯ ಸಸ್ಯ. [ಸಂ.]

ರಾಜಾಲಯ (ನಾ). ದೊರೆಯ ನಿವಾಸ ; ಅರಮನೆ : ಜನನಿಯುಮುಂ ಜನ್ಮಭೂಮಿಯುಮುಂ ಕಂಡಾಗಿನಿವಿರಿದು ರಾಗೋದಯಮದೇವಿರದೆನುತುಂ ಬಂದು ರಾಜಾಲಯಮಂ ತೋಱೆ (ಶಾಂತಿ. ೬-೦೦ ೪) ; ಹೊಂಗೆಲಸದಲಿ ರಾಜಾಲಯವನನುಕರಿಸಿದರು ಕುಂತೀಕುಮಾರರಿಗೆ (ಭಾಗ. ೦೦-೮೪).

[ಸಂ.]

ರಾಜಾವರ್ತ (ನಾ). ಚಿನ್ನದ ಹೊಳಪಿನ ಎಳೆಗಳುಳ್ಳ (ವಿಶೇಷವಾಗಿ ಕಂದುಬಣ್ಣದಿಂದ ಕೂಡಿದ) ಒಂದು ಬಗೆಯ ಹರಳು : "ರಾಜಾವರ್ತವೆಳೆಯ ನೀಲಕ್ಕೆ ಪೆಸರ್" (ಕ೬೬. ೫೫); ದ್ರುಪದಂ ಪಟ್ಟಿಯ ನೆಲಗಟ್ಟಿನೊಳಂ ರಾಜಾವರ್ತದ ಕಂಬದೊಳಂ . . . ವಿವಾಹೇಹಮುಂ ಸಮೆಯಿಸಿ (ಕಂಚಾ. ೩-೮೪ ೫) ; ಪುಷ್ಯರಾಗ, ರಾಜಾವರ್ತ, ಅಡುಸೋಗೆ ಹೂವು . . . ಇವುಗಳಲ್ಲಿ ನಾಲಿಗೆಗೆ ಗಂಡೂಷವನ್ನು ಮಾಡಲು ಪಿತ್ತಜ್ವರ . . . ಗುಣವಾಗುವುವು (ಸಾಪ್ರ. ೫೫). [ಸಂ.]

ರಾಜಾವರ್ತಿ (ನಾ). =ರಾಜಾವರ್ತ : ನನ್ನ ರಾಜಾವರ್ತಿ ಕಲ್ಲಿದ ಪದಕ ಕಳೆದುಹೋಗಿದೆ (೧೫೫). [<ಸಂ. ರಾಜಾವರ್ತ]

ರಾಜಾವಳಿ (ನಾ). ೧. ಅರಸರ ಸಮೂಹ. ೨. ಅರಸನ ವಂಶಾವಳಿಯ ನಿರೂಪಣೆ : ಚಾಳುಕ್ಯಚಕ್ರವರ್ತಿಗಳ ವಂಶದ ರಾಜ್ಯಂಗೆಯ್ದರಸುಗಳ ರಾಜಾವಳಿ ಮಂಗಳ (ಪ್ರ. XII, ೫೬೬-೦೦೬ ; ೨೦೧೭).

[ಸಂ. ರಾಜಾವಲಿ]

ರಾಜಾಶ್ರಯ (ನಾ). ದೊರೆಯ ಆಸರೆ ; ಅರಸನ ಆಶ್ರಯ : ಪುಟಿದವರ್ಗ ಬೇಳ್ಪುದನಾ ಜನ್ಮದೋಳವ ದೆಯ್ವಮುಳ್ಳಡೆ ಬಳಿಯಂ ರಾಜಾಶ್ರಯಮೇವುದೊ (೫೮೫. ೯-೯೦) ; ರಾಜಾಶ್ರಯವು ತಿಳಿದಮ್ಮ ಅನುಕೂಲವಾದುದಲ್ಲ (೧೫೮. ೫೫೬). [ಸಂ.]

ರಾಜಾಸ್ಥಾನ (ನಾ). ← ರಾಜಸ್ಥಾ : ಸ್ಮೃತಿಗಳ ಕಾಲದಲ್ಲಿ ರಾಜಾಸ್ಥಾನವೇ ನ್ಯಾಯಾಸ್ಥಾನವಾಗಿತ್ತು (೧೫೮. ೫೬) ; ರಾಜಾಸ್ಥಾನಗಳ ಒಂದು ಸಮಗ್ರ ಚಿತ್ರವು ಎಲ್ಲಿಯೂ ದೊರೆಯದಿರುವುದು ದುರದೃಷ್ಟ (೪೫೫-೪೫೬). [ಸಂ.]

ರಾಜಿ₁ (ನಾ). ೧. ಸಾಲು ; ಓಳಿ ; ಪಂಕ್ತಿ : "ಆಳೀ(ಳಿ) . . . ವೀಥೀ. ರಾಜೀ(ಜಿ) — ಈ ೭ ಪಂತಿ" (ಪಠಾಯು. ೨೦೯-೪೬). ೨. ಗುಂಪು; ಸಮೂಹ ; ರಾಶಿ : ಜಲರುಹಬೀಜರಾಜಿಗಳನಾಜೂಪ ವರ್ಣ ಕುಟೀರಕಂಗಳಂ ನಿಲಿಸುವ . . . ಅಕ್ಷಮಾಜಯಂ ಸಮೆವೀ ವ್ಯವಸಾಯ ಮೆತ್ತಲುಂ (೧೫೦೫. ೫೫೬) ; ಕೊಡಲಿ ಕುಜನವಮಹೀರಾಜಗೆ ಕೊಡಲಿ. . . ಕೊಡಲಿ ವೀರವನಿತುತಲಾತನ ಕೊಡಲಿಯಂ ಕೊಂಡಾಡಿದರು (೫೫೫. ೯-೦೪) ; ಸೋನ್ನತದೇಹ . . . ಭುಜವರೆಗೆ ತೂರಿ ಹರಿದು ಬಂದಿರುವ ಕೇಶರಾಜಿ (ಶಾಂತಿ. ೦೦೬). ೩. ಕರಿಯ ಸಾಸುವೆ. ೪. ಕೆರುನಾಲಗೆ. ೫. ಬಯಲು ; ಮೈದಾನ. ೬. ಮೈಮೇಲೆ ಪಟ್ಟೆಗಳುಳ್ಳ ಒಂದು ಬಗೆಯ ಹಾವು : ದರ್ವೀಕರ ಮಂಡಲ ರಾಜಿಗಳೆಂಬ ಮೂರು ತೆರನಾದ ಸರ್ಪವಿಷಗಳಲ್ಲಿ ಸಳಿಯ ಸುಟ್ಟುಗದ ದೇರ ನೀರಲ್ಲಿ ಅರದು ಕುಡಿಯಲು ವಿಷಹರ (೫೫೫. ೦೦-೪). ೭. [ಅಶ್ವಶಾ] ಕುದುರೆಯ ಮೈಮೇಲೆ ಇರುವ ಒಂದು ಬಗೆಯ ರೇಖೆ : ಮೂವತ್ತೆರಡುರೇಖೆಗಳ ನಡುವೆ ಕಾಣಿಸುವ ಇಪ್ಪತ್ತೈದು ಅಡ್ಡರೇಖೆಗಳಿಗೆ ರಾಜಿಗಳೆಂಬ ಹೆಸರು (೫೬೬. ೫೬-೦೫). [ಸಂ.]

ರಾಜ್ಞಿ ' ರಾಜೀ ' ನೋ.

ರಾಜಿಕ (ಗು). ೧. ಅರಸನಿಗೆ ಸಂಬಂಧಿಸಿದ : (೬). (ನಾ). ೨. ಮಿತ್ರಿಗೆ ; ಆಕ್ರಮಣ : ರಾಜ್ಯದ ಸ್ವಸ್ವಮು ಅರ್ಥ ರಾಜಿಕವರ ಕೈಸ್ಸಿ ಬಿದ್ದು ಸೂರೆಯಾಗಲು . . . ಸಿದ್ಧವಾಗಿದೆ (೫೬೬. ೫೪-೫೫) ; ೧೬೮೪ನೇ ಚಿತ್ರಭಾನು ಸಂ ೧೧ ದಲ್ಲಿ ಇನ್ನೊಂದು ರಾಜಿಕ ಸಂಧಮಿತು (೫೯೬. ೬೫). ೩. ಕರಿಯ ಸಾಸುವೆ : "ಸರ್ಷಪವದಾ ರಾಜಿಕಂ ಸಾಸಿವೆಯೆನಿಕ್ಕುಂ" (ಶುಂಗಾ. ೪೦-೬೬).

[←ಮರಾ. ರಾಜೀಕ./ಸಂ. ರಾಜಿಕಾ]

ರಾಜಿಕೆ (ನಾ)- ೧. ಸಾಲು ; ಪಂಕ್ತಿ ; ಶ್ರೇಣಿ. ೨. ಬಯಲು ; ಮೈದಾನ. ೩. ಕರಿಯ ಸಾಸುವೆ : "ಸಾಸಿವೆ ರಾಜಿಕೆ ಸರ್ಷಪ ವಾಸುರಿ" (ಪಟ್ಟ. ೬೫೮. ೧೩-೦೯). [ಸಂ. ರಾಜಿಕಾ]

ರಾಜಿಗೈ (ಕ್ರಿ)- ಒಪ್ಪಂದವಾಡಿಸು ; ಒಡಂಬಡಿಸು : ಸಮರವ್ಯಾಪವೆಮ್ಮೊಳಗೇಕೆ ರಾಜಿಗೈವುದಕೆ ನಿಜಪರಸಟ್ಟಿ (೫೦೦೫. ೫).

[ರಾಜ್ಞಿ (<ರಾಜೀ) + ಕೈ₁₁ (<ಕೆಯ್₁)]

ರಾಜಿತ (ಗು). ಶೋಭಿಸುವ ; ರಂಜಿಸುವ : ಸಭಾಸದನದಂತೆ ವೇತ್ರಾಸನಾಧಿಷ್ಠಿತರಾಜರಾಜಿತಮುಂ (೫೦೬೬. ೭-೫೫ ೫); ಮಾಣಿಕ್ಯಪ್ರಭಾ ರಾಜಿತಾಂಘ್ರಿಯುಗ . . . ಪಾಲಿಪುದೆನಗೆ ಜಾರುಮತಿಯಂ (೫೬೬. ೦); ಭಾದಿತ ದಿನಾಧಿಪಂ ರಾಜಿತ ಜನಾಧಿಪಂ . . . ಪೂಜಿಸಿದನೊಲ್ಮೆಯಿಂ (೧೫೫೬. ೦೩-೫೦ ೫೫೪). [ಸಂ.]

ರಾಜಿನಾಮೆ ' ರಾಜೀನಾಮೆ ' ನೋ.

ರಾಜಿಲ, ರಾಜಿಳ (ಗು)- ೧. ಪಟ್ಟೆಗಳುಳ್ಳ ; ಗೆರೆಗಳಿರುವ. (ನಾ)- ೨. (ಮೈಮೇಲೆ ಪಟ್ಟೆಗಳಿರುವ) ಒಂದು ಬಗೆಯ ನಿರ್ವಿಷವಾದ ಹಾವು : ಒಳ್ಳೆ ; ನೀರುಹಾವು : ರಾಜಿಲಸರ್ಪದಿಂದಾವುಂಟಾದ ಮೊದಲ ವೇಗ ಮೈಮೇಲೆ ನರಗಳಯೇಳಿಸುವುದು (೫೫೫. ೦೦-೨). ೩. ಎರಡುತಲೆಗಳುಳ್ಳ ಒಂದು ಬಗೆಯ ಹಾವು : "ರಾಜಿಲಃ. ದುಂಡುಭಃ — ೨. ಎರಡುತಲೆಗಳುಳ್ಳ ಶಿವಿಂಡಿಯೆಂಬ ಸರ್ಪಭೇದದ ಹೆಸರುಗಳು, ಎರಡು ತಲೆ ಉರಿಶಿಂಗಿ " (ಶಿಕ್ಷಾ. ೦೬. ೬೨). ೪. ಆನೆ ; ಗಜ. ರಾಜಿಳ : ೨. "ರಾಜಿಳಃ. ದುಂಡುಭಃ — ಈ ೨ ಒಳ್ಳೆ" (ಪಠಾಯು. ೦೦೬-೨೦). [ಸಂ.]

ರಾಜಿಸು (ಕ್ರಿ). ಶೋಭಿಸು ; ಕಂಗೊಳಿಸು : " ರ್ರಾಜಿಸು–ಶೋಭಾಯಾಂ " (ಕಮುಡಾ); ರಾಜಭವನದೊಳಿಸವೆ ಮಣಿತೋರಣಂಗಳಿಂ ರಾಜಿಪುವೆತ್ತಿ ದಾತಪವಾರಣಂಗಳಿಂ . . . ಕಣ್ಗೆಸದುದು ನರೇಂದ್ರಭವನಾಂಗಣಂ (೫೫೫. ೪-೭ ೫೫೪) ; ಕಂದರಿಸಿದರೊ ಕಡೆದರೋ ಎನೆ ಗಿರಿರಾಜತನೂಜೆ ಪೂಜೆಯೊಳ್ ರಾಜಿಸುವಳ್ (೧೫೪. ೫-೦೦೨) ; ಒಪ್ಪುವ ಕಾಡುಮಲ್ಲಿಗೆಯ ಬಳ್ಳಿವಾಡಮುಂ ರಾಜಿಸೆ (೫೫೫೫. ೫೦-೦೯).

ರಾಜಾಜಿಸು (ದ್ವಿರುಕ್ತಿ): ದಾಸನಯಾಳಂಕಾರೆ ರಾರಾಜಿಪದಳಭಳ ವಿದ್ಯಾರ್ಥಿದೀನಾವಳೀನನ್ದಿನಿಯಕ್ಕಾ ದೇವಿ (೫೫. XVIII, ೫೬೬-೫೦; ೨೦೫೫); ದಂತದ್ಯುತಿ ರಾರಾಜಿಸಿ ಮುಖದಿನ್ದೊಳ್ಕೆ ನುಡಿದಂ ಕೃಷ್ಣಂ (೫೫೦. ೦೦-೦೯); ರಂಗಧಾಮನ ರಾಣಿಗೆ ರಾರಾಜಿಪ ರಂಗನಾಯಕಿಗೆಱುವೆನು (೫೫೫. ೨-೨).

[ರಾಜ್ಞ (ಕ್ರಿ←ಸಂ. ರಾಜ್ ಾಪ್ರಕಾಶಿಸು) + —ಇಸು]

ರಾಜೆಳ ' ರಾಜಿಲ ' ನೋ.

ರಾಜೀ, ರಾಜ್ಞಿ (ನಾ)- ೧. ಒಪ್ಪಂದ ; ಒಡಂಬಡಿಕೆ : ನಮ್ಮ ಭಾಷೆಯಲ್ಲಿ ತೀರ ಹೊಂದಿಕೊಂಡು ಹೋದ . . . ಶಬ್ದಗಳೆಂದರೆ . . .

ರಾಜೇ (ರಾಳ್ಗು). ತಾರೀಮು (ಶಾಕಾಶಾ. ೦೬೬); ಇವನು ಹೋಗಿ ತಪ್ಪಾರು ತೆಂದು ಬೇಡಿಕೊಂಡೊಡನೆಯೇ ಪುನಃ ರಾಜೇ (ರಾಚಮು. ೦೩). **ರಾಜ್ಯ**: ೧. ಕ್ಷತ್ರಿಗಾರರೇ ರಾಜಗೆ ಒಪ್ಪಿದರೆ ಅವರನ್ನು ಒಪ್ಪಿಸಬಹುದು ಎಂದಿದ್ದೆ (ಸಂಪಕೋ. ೦೩೪). ೨. ಒಪ್ಪಿಗೆ; ಸಮ್ಮತಿ; ಕಬೂಲು: ಅದಕ್ಕೆ ನಿಮ್ಮ ರಾಜಿ ಇದೆಯ? ನಿಮಗೆ ರಾಜಿ ಇರಲಿ, ಇಲ್ಲದಿರಲಿ ನಾನಂತೂ ರಾಜಿಯಾಗಿದ್ದೇನೆ (ಕಾಗಿ. ೦೬೬). ೩. ಸ್ವಂತ ಇಚ್ಛೆ; ಸ್ವಯಂಪ್ರಸಮ್ಮತಿ: ನಡಸಿಕೊಂಡು ಬಹಿರಿಯೆಂದು ನಮ್ಮ ರಾಜಿಯಿಂದ ಒಡಂಬಟ್ಟು ಕೊಟ್ಟ ಧರ್ಮಸಾಧನ (ಎಕ. XIV, ಶ್ರವಣಂಗ. ೨೬೦-೬೭ ; 1419); ಜೂಜವಾಡಿಯು ಸಕಲರಾಜ್ಯವನು ಪುಷ್ಕರಗೆ ರಾಜ್ಯಂದಲಿ ಸೋತು (ಯುಚಿ. ೮೪). ೪. ರಾಜೀನಾಮೆ: ಈಗಿನ ಕೆಲಸಕ್ಕೆ ರಾಜಿಯಿತ್ತರೆ ಮುಂದ ಕೆಲಸವಾಡುವುವೆಲ್ಲಿ (ಪಂಚಮು. ೦೬).

ರಾಜೆಕಬೂಲಿ = ಒಪ್ಪಂದ; ಒಡಂಬಡಿಕೆ: ಜನರು ಅದನ್ನು ನೋಡಿ–ನಾವು ಕೇಡಿಗತನದೊಡನೆ ರಾಜಿಕಬೂಲಿ ಮಾಡಿಕೊಳ್ಳಕಕ್ಕವರೇಂದು ಭಾವಿಸಿ, ನಮ್ಮ ಮಾತಲ್ಲು ಪೊಳ್ಳುಹರಟೆಯೆಂದುಕೊಂಡುಬಿಟ್ಟರು (ರಾಸ್ಕಾ. ೫೮೨). **ರಾಜೀ ಆಗು, ರಾಜಿಯಾಗು** = ೧. ಹಿಂದಿನ ವಿರೋಧವನು ಬಿಟ್ಟು ಸ್ನೇಹದಿಂದ ಒಪ್ಪಂದ ಮಾಡಿಕೊಳ್ಳು; ಒಡಂಬಡು: ರೈತನು ರಾಜೀಆಗಿ ಹೇರಳವಾಗಿ ಭೂಮಿ ಪಾಗುವಳಿ ಮಾಡುತ್ತಾರೆ (ಪುಶಾಸ್ಥ. II. ೬೬). ೨. ಒಪ್ಪಂದವಾಗು; ಒಡಂಬಡಿಕೆಯಾಗು: ಪಕ್ಷದ ನಾಯಕರು ಸ್ವಾತಂತ್ರ್ಯವಿಲ್ಲದೆ ಕೈಕಟ್ಟಿದವರಾಗಿ ಅಲ್ಲಿ ಬಂದು ಕಾಳಿತರೆ ಅವರಲ್ಲಿ ರಾಜಿಯಾಗುವುದೆಲ್ಲಿ? (ರಾಚಾಶಾ. ೬೦೩). ೩. ಒಪ್ಪು; ಸಮ್ಮತಿಸು: ಅದಕ್ಕೆ ನಿಮ್ಮ ರಾಜಿ ಇದೆಯ . . . ನಾನಂತೂ ರಾಜಿಯಾಗಿದ್ದೇನೆ (ಕಾಗಿ. ೦೬೬). **ರಾಜೀಮಾಡಿಸು** = ಪರಸ್ಪರ ಒಪ್ಪಿಸು; ಒಂದುಗೂಡಿಸು; ಒಡಂಬಡಿಸು: ನ್ಯಾಯಾಧೀಶರು ಗಂಡನಿಗೆ ಉಪದೇಶಮಾಡಿ ರಾಜೀಮಾಡಿಸಿದರಂತೆ (ಕ್ಷತ್ರಾ. ೬).

[←ಅರ. ರಾಜೀ, ರಾಳ್ಗು; ಹಿಂ. ಮರಾ. ರಾಜೀ]

ರಾಜೀನಾಮೆ, ರಾಜಿನಾಮೆ (ನಾ). ೧. ಪರಸ್ಪರ ಒಪ್ಪಿಗೆಯಿಂದ ಬರೆದುಕೊಡುವ ಪತ್ರ; ಒಪ್ಪಿಗೆಪತ್ರ; ಒಡಂಬಡಿಕೆಯ ಪತ್ರ: (೬). ೨. ಉದ್ಯೋಗ ಮೊದಲಾದುವುಗಳಿಂದ ಬಿಡುಗಡೆ ಮಾಡಬೇಕೆಂದು ಕೇಳಿ ತಾನೇ ಒಪ್ಪಿ ಬರೆದುಕೊಡುವ ಪತ್ರ: ಮಂಡಳಿಯ ಸಭಾಪತಿ ಕೆಲಸಕ್ಕೆ ನಾನು ಈಗ ರಾಜೀನಾಮೆಯನ್ನು ಕೊಡುತ್ತೇನೆ (ಸೋಕಾಪ್ರ. ೦೬೬); ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಿಟ್ಟ (ದುಂಕಥ. ೦೬೬). **ರಾಜಿನಾಮೆ**: ೨. ತನ್ನ ಕೆಲಸಕ್ಕೆ ರಾಜಿನಾಮೆಯಿತ್ತು . . . ದೊಡ್ಡ ಚಿರವಳವನ್ನು ಹೂಡಿದನು (ಜಗಚಿ. ೭೦); ನಾನು ಸೇನಾಪತಿಯ ಕೆಲಸಕ್ಕೆ ರಾಜಿನಾಮೆ ಕೊಡುತ್ತೇನೆ (ಪುಂದಾಕ. ೦೨೪).

[← ಪಾರ. ರಾಜೀನಾಮಹ್, ರಾಳ್ಗುನಾಮಾ; ಹಿಂ. ಮರಾ. ರಾಜೀನಾಮಾ]

ರಾಜೀವ (ನಾ). ೧. ಕಮಲ; ತಾವರೆ: "ಸಹಸ್ರಪತ್ರಂ . . . ರಾಜೀವಂ . . . ಪಂಕಜಂ – ಈ ೧೭ ಪಾವತೆ" (ಜಿಣಾಯು. ೦೦೨-೩೬); ಬೆಳಗಲ್ಲು ವೋಗೆ ವಿಯತ್ಸರಿದೊಳ್ ಬೆಳರ್ಗೆಂಪು ಪಸರಿಪಶ್ರಿರಲಪರಾಚಲಶಿಖರದತ್ತ ಲೊಯ್ಯನೆ ತಳರ್ದರ್ ರಾಜೀವಪ್ರಜೀವಿತೇಶ್ವರನಾಗಳ್ (ಗಾದಂಶಾ. ೦೩೬); ದೂರದಲಿ ರಾಜೀವಗಂಧಸಮಿಧಾನನ ಸಭಾವನೆಗೆ ಸೊಗಸಿವಳು ಸತಿ (ಕಾವ್ಯಶ. ೦೦-೦೫); ಪಾದರಿ ಸುರಗಿ ಸೇವಂತಿ ರಾಜೀವ ನಿರ್ಜರಸುಮಮಾಲೆ ಕಣ್ಣ ವಿರಾಜಿಸಿವುವ (ಪೋಚಚ. ೦೬-೦೬). ೨. ನೈದಿಲೆ; ಕನ್ನೈದಿಲೆ. ೩. ಒಂದು ಬಗೆಯ ಮೀನು: "ಶಾಲಃ . . . ರಾಜೀವಃ, ಲೋಹಿತಃ, ಪಲ್ಲವಕಃ – ಈ ೬ ಮತ್ಸ್ಯದ ಭೇದಂಗಳ್" (ಜಿಣಾಯು. ೦೦೯-೩೭); ಪೆರ್ಚರ್ಮದಧಿಕತರಸತ್ವದಿಂ ಸತ್ವದಿಂದಾರ್ಜಿ ಮೆಯ್ಗರೆವ ರಾಜೀವಮಾ ಜೀವಮುಂ ಕರ್ಜಿ ಪಾಯ್ದಡಂಗುವ ತರಂಗದಿಂ ರಂಗದಿಂದೆಟ್ಟ ವೆರ್ಮೀನಿನಿಂದ . . . ಆ ಸಮುದ್ರಂ (ತ್ರಿಣಾಮು. ೬-೨೬). ೪. (ಮೈಮೇಲೆ ಪಟ್ಟೆಗಳಿರುವ) ಒಂದು ಬಗೆಯ ಜಿಂಕೆ. ೫. ಆನೆ; ಗಜ. ೬. ಸಮೂಹ; ಗುಂಪು. ೭. ತಲೆಯ ಕೂದಲು; ಕೇಶರಾಶಿ. ೮. ನೀರು; ಜಲ: "ಕೂದಲು ತಾವರೆಯುದಕ ಸಮೂಹ ವಾಲ್ಮು ರಾಜೀವಾಖ್ಯಂ" (ಪಾಣಾಕಂ. ೫೦).

[ಸಂ.]

ರಾಜೀವಪೀಠ (ನಾ). ೧. ಕಮಲದ ಪೀಠ; ತಾವರೆಯ ಆಸನ. ೨. ಕಮಲವನ್ನು ಪೀಠವಾಗಿ ಉಳ್ಳವನು; ಬ್ರಹ್ಮ: ಶ್ರೀವನಿತೆಯರಸನೆ ವಿಮಲರಾಜೀವಪೀಠನ ಪಿತನೆ . . . ಕಾವುದಾನತಜನವ ಗದುಗಿನ ವೀರನಾರಯಣ (ಕಾಚ್ಕಾ. ೦-೦).

[ಸಂ.]

ರಾಜುಣಿ ' ರಾಜನ ' ನೋ.

ರಾಜುಳ್ಳಿ (ನಾ). ಒಂದು ಬಗೆಯ ದಪ್ಪ ಈರುಳ್ಳಿ: " ರೋಚಕಃ – ಪೊಂಗೆ, ರಾಜುಳ್ಳಿ" (ಓಷಧಿ. ೦೪೦). 'ರಾಯುಳ್ಳಿ' ಪರಾ.

[ರಾಜ + ಉಳ್ಳಿ]

ರಾಜೇಂದ್ರ (ನಾ). ಚಕ್ರವರ್ತಿ; ಮಹಾರಾಜ: ರಾಜೇಂದ್ರ ಚಿತ್ರಸೇನ ನಸುರೇಂದ್ರ (ಕೂರಾಂ. ೬-೬-೬೬); ಶೈಕ್ಷಿದು ಶಕ್ತಿದೂತನೆಂ, ರಾಜೇಂದ್ರ (ತ್ರಿಣಾಮು. ೦೬-೬೫೬). [ಸಂ.]

ರಾಜೋಚಿತ (ಗು). ಅರಸನಿಗೆ ಉಚಿತವಾದ; ರಾಜಯೋಗ್ಯವಾದ: ಪಕ್ಕಳು ರಾಜೋಚಿತ ಅಲಂಕಾರದಲ್ಲಿ ಬಹಳ ಮುದ್ದಾಗಿ ಕಾಣುತ್ತಿದ್ದರು (ರಾಚ).

[ಸಂ.]

ರಾಜೋಪಚಾರ (ನಾ). ೧. ಅರಸನಿಗೆ ಮಾಡುವ ಸೇವೆ–ಉಪಚಾರ: ಸುದತಿ ನೀ ಕೇಳು ಯಿಂಕಥಿಕನಗರದ ಮಧ್ಯ . . . ಕುಧರಜಾರ್ಧಾಂಗ ಪರಮೇಶ್ವರನ ಭವನಮಿದೆ ರಾಜೋಪಚಾರಮೊಡನೆ (ಪಪಕೋ. ೨-೬೨). ೨. ರಾಜೋಚಿತವಾದ ಉಪಚಾರ: ಹೆಚ್ಚಿನ ಸೇವೆ: ರಾಜೋಪಚಾರಮನ್ನಿರ್ವ್ಯಾಜದೊಳಾನೆಸಗದಾವೆಮೋ ಶಂಭುಗೆ (ಪ್ರಕಪ. ೫೦-೨೦): ಹೆಣ್ಣಿನವರು ವರನ ಕಡೆಯವರಿಗೆ ರಾಜೋಪಚಾರ ಮಾಡಿದರು (ರಾಚ). [ಸಂ.]

ರಾಜ್ಞಿ (ನಾ). ೧. ಅರಸಿ; ರಾಣಿ: ರಾಜ್ಞೀಗರ್ಭದೊಳರ್ದುಂ ಶ್ರೀಜ್ಞಾನ ಸಮೇತನೆಂದು ವೇಬ್ಡಿರ್ದಪೆ ದಲಭಜ್ಞಾರೇಖೆಗಳೆನಿಸಿ ಮನೋಜ್ಞತೆಯಂ ಶ್ರೀವಳರೇಖೆ ತಳೆದೆಸೆದಿರ್ಕುಂ (ಶಂಪ್ರತಿ. ೦೨-೨೩); ರಾಜ್ಞಿ, ಕಾಸುಮ ಸುಖಮೊದಗಿತೀ ಮಾಮರಕೆ (ತ್ರಿಣಾಪ್ರ. ೦೯-೪೬೬). ೨. [ಸಂಗೀತ] ಒಂದು ರಾಗದ ಹೆಸರು: ನೀಲೋತ್ಪಲಿನಿ . . . ಗೀತಿ ರಾಜ್ಞಿ [ಪಾಶಾಂ. ರಯೆ] ತರಂಗಿಣಿ . . . ವಸಂತಬಂಗಾಳಮೆಂಬಿಪ್ಪತ್ತೆರಡು ಕ್ರಿಯಾಂಗದಿಂದಾದ ರಾಗಂಗಳು (ಎಪಿಕ. ೦೬೬). [ಸಂ. ರಾಜ್ಞೀ]

ರಾಜ್ಞೀನಿವಾಸ (ನಾ). ರಾಣಿಯ ನಿವಾಸಸ್ಥಾನ; ಅಂತಃಪುರ: "ಅಂತಃಪುರಮೆನಿಕುಂ ಶುದ್ಧಾಂತಂ ರಾಜ್ಞೀನಿವಾಸಂ" (ಪಸ್ತ್ರಕೋ. ೮೬-೦೬); ರಾಜ್ಞೀನಿವಾಸದಂತೆ ಜರತ್ಕಂಚುಕಶತೋದಂಚಿತಮುಂ . . . ಆಗಿಯುಂ (ಶಂಪ್ರತಿ. ೩-೬೬ ೫).

[ಸಂ.]

ರಾಜ್ಯ (ನಾ). ೧. ಅರಸನ ಸಪ್ತಾಂಗಗಳಲ್ಲಿ ಒಂದು; ದೊರೆಯ ಅಧಿಕಾರಕ್ಕೆ ಒಳಪಟ್ಟ ಭೂಮಿ; ದೇಶ: "ನೆಲನೆಂದೆನೆ ರಾಜ್ಯಂ" (ಕವಿಂ. ೨೫೯); ಹಾಮಿಲ್ಲದೆ ರಾಜ್ಯಮುಂ ಪರಿಪಾಲಿಸುವೊರಾರುಮಿಲ್ಲ (ಪಶ್ಚಾರಾ. ೦೩೦-೨೫); ರಾಜ್ಯಕ್ಕಂ ಶ್ರೀಭುವನಸಾಮ್ರಾಜ್ಯಕ್ಕಂ ಬಗೆಯ ಹಸ್ಮಿ ಮಶಕಾಂತರಮೆಂದಿಜ್ಯಾಪುರಸ್ಸರಂ ಪ್ರವ್ರಜ್ಯಮನವಯವದೆ ಹುಲಧರಂ ಧರಿಯಿಪುದುಂ (ಜಾಂಕಪು. ೩-೬೨); ರಾಜ್ಯವೆಂದರೆ ಕೆಲವು ಮೂಲನಿಬಂಧನೆಗಳಿಗೆ ಅನುಚಾರವಾಗಿ ಒಟ್ಟುಗೂಡಿಕೊಂಡು ಬಮಕಲು ಒಡಂಬಟ್ಟಿರುವ ಜನರ ಸಂಘ ಅಥವಾ ಸಮಾಜ (ರಾಶ್ಕಾ. ೧೩). ೨. (ಭಾಷಾನುಗುಣವಾಗಿ) ವಿಂಗಡಿಸಲ್ಪಟ್ಟ ದೇಶದ ಭಾಗ; ಪ್ರಾಂತ:

ಪ್ರತಿಯೊಂದು ರಾಜ್ಯಕ್ಕೂ ಒಬ್ಬೊಬ್ಬ ರಾಜ್ಯಪಾಲರು ಇರುತ್ತಾರೆ (೭೫೨). ೩. ಅರಸೊತ್ತಿಗೆ ; ದೊರೆತನ. ೪. ಆಡಳಿತ ; ಆಳ್ವಿಕೆ : ' ರಾಜ್ಯಂಗೆಯ್ ' ಪರಾ. [ಸಂ.]

ರಾಜ್ಯಂಗೆಯ್, ರಾಜ್ಯಂಗ್ಯೆ (ಕ್ರಿ). ರಾಜ್ಯವನ್ನು ಆಳು ; ರಾಜ್ಯಭಾರ ಮಾಡು : ಆಡಳಿತ ನಡೆಸು : ಶ್ರೀವುರುಷ ರಾಜ್ಯಂಗೆಯುತ್ತಿರೆ (ಎಳ. XVI, ಸಣಾ. ೦೭೬-೬; ೭೫೫) ; ಸಮಸ್ತಂ ಪರಿವಾರಮೆಂಬ ಗುಣ ಸಂಘಾತಂಗಳಂ ತಾಳ್ದಿ ಪೆಂಪುಕಂದೆತ್ತಿರೆ ಸಂತಮಿಂತತಿಬಳಂ ರಾಜ್ಯಂಗೆಯುತ್ತಿರ್ಪನಂ (ಅಜಿ. ೦-೭೬); ಶ್ರೀಮತ್ತಿಭುವನಮಲ್ಲದೇವರು ಜಯಂತೀಪುರದ ನೆಲವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ (ಶಾಅ. ೧೨-೩-೬; ೧೧೭೬). ರಾಜ್ಯಂಗ್ಯೆ : ರಾಜರಾಜಾಧೀಶ ರಘುಕುಲ ರಾಜಪರಮೇಶ್ವರನು ನಿಮಿಕುಲರಾಜನಂದನೆ ಸಹಿತ ರಾಜ್ಯಂಗ್ಯೆದಪೊಲವಿನಲಿ (ಕೃಭಾ. ೬-೫೫ ಸೂಕಥೆ). [ರಾಜ್ಯ + ಕೆಯ್]

ರಾಜ್ಯಂಗ್ಯೆ ' ರಾಜ್ಯಂಗೆಯ್ ' ನೋ.

ರಾಜ್ಯಕ (ನಾ). ರಾಜ್ಯವನ್ನು ಆಳುವವನು ; ಆಡಳಿತಗಾರ : ಪಾರಿಜಾತವ ಕಂಡು ನಿಡುಸುಯ್ದು, ಪದಗಳಿಂ ಶೌರಿಕಥೆಯನು ಹೇಡದು ತೃಪ್ತನಹನು ಕವಿ ಕ್ಷೂರಿನುದ್ಯಾನದ ತರಿಸಿ ಬೆಳಸುವ ಕಾರ್ಯಧೀರನಲ ರಾಜ್ಯಕನು (ಪಾಂಪಳ. ೪೭೩). [ಸಂ.]

ರಾಜ್ಯಕಾರಿಯ (ನಾ). ಆಡಳಿತದ ವ್ಯವಹಾರ.—ಕೆಲಸ : ಅತಿದೇಗದಲಿ ರಾಜ್ಯಕಾರಿಯದಿರವ ಬಿನ್ನೈಸಿ ಕಳುಹಿದ (ಕಂಪಾ. ೦೦-೦೦೬). [< ಸಂ. ರಾಜ್ಯಕಾರ್ಯ]

ರಾಜ್ಯಕಾರ್ಯ (ನಾ). = ರಾಜ್ಯಕಾರಿಯ : ರಾಜ್ಯಕಾರ್ಯಗಳನ್ನು ಕುರಿತ ಜ್ಞಾನಕ್ಕೆ ರಾಜಮಾರ್ಗವಾವುದೂ ಇಲ್ಲ (ಶಾಜ್ಞಾಂಗ. ೦೦೨). [ಸಂ.]

ರಾಜ್ಯಕಾಲ (ನಾ). ರಾಜ್ಯವಾಳುವ ಕಾಲ ; ಆಳ್ವಿಕೆಯ ಅವಧಿ : ಸಾರಮ್ಯಗಳೊಳ್ ನಿಸರ್ಗದಿಂದೆ ತಾಂ ನಿರಾದರನಾಗಿ ಶುಭಭುವನೆಯೊಳ್ ರಾಜ್ಯಕಾಲಮಂ ಪರಿಸುತ್ತುಮಿರೆ (ಶಾಂಕಥೆ. ೬—೦೦೬ ಕ); ದಶಲಕ್ಷಪೂರ್ವ ಕುಮಾರಕಾಲಂ ಪೋಗೆ ರಾಜ್ಯಕಾಲದೊಳ್ ನಿಂದೇಕೋನತ್ರಿಂಶಲ್ಲಕ್ಷಪೂರ್ವಮುಂ ಪನ್ನೆರಡು ಪೂರ್ವಾಂಗಮುಂ ರಾಜ್ಯಕಾಲಂ ಪೋಗೆ (ಶಾತೀಂ. ೦೦೮). [ಸಂ.]

ರಾಜ್ಯಕ್ಷೇತ್ರ (ನಾ). ರಾಜ್ಯದ ಪ್ರದೇಶ ; ಆಡಳಿತದ ಸೀಮೆ : (೧) ಭಾರತವು ರಾಜ್ಯಗಳ ಒಂದು ಸಂಘವಾಗಿ ಇರತಕ್ಕುದು. (೨). ಅದರ ರಾಜ್ಯಗಳೂ ರಾಜ್ಯಕ್ಷೇತ್ರಗಳೂ ಮೊದಲನೆಯ ಅನುಸೂಚಿಯ . . . ರಾಜ್ಯಕ್ಷೇತ್ರಗಳು ಆಗಿರತಕ್ಕುದು (ಇಶಾ. .). [ಸಂ.]

ರಾಜ್ಯಚಿಹ್ನ (ನಾ). ಅರಸೊತ್ತಿಗೆಯ ಗುರುತು ; ರಾಜಚಿಹ್ನೆ : ಬೆಳ್ಗೊಡೆ ಮೊದಲಾಗೊಡೆಯ ರಾಜ್ಯಚಿಹ್ನಂಗಳ್ ಮುಂದೆ ಪರಿಯೆ (ಪಾಚಾ. ೮೭೦-೩೦) ; ಕಂದಂಗೆ ರಾಜ್ಯಚಿಹ್ನಮನೊಂದೆರಡುಮನುಟಿಸಿ ಮಂದಿಗೆರೆದರ್ಥಮನಾ ಮಂದಾರಂ ಕೆಯ್ಯಂದವೊಲೆಂದಿತ್ತಿಸಗುವನೊ ನೃಪತಿ ಜನನೋತ್ಸವಮಂ (ಶ್ರೀಪ. ೫-೧೨). [ಸಂ.]

ರಾಜ್ಯಚಿಹ್ನೆ (ನಾ). = ರಾಜ್ಯಚಿಹ್ನ : ಗುಡಿ, ಚಾಮರ, ಮೇಘಾಡಂಬರಾದಿಗಳು ರಾಜ್ಯಚಿಹ್ನೆಗಳೆಂದು ಒಂದು ಶಾಸನವು ತಿಳಿಸುತ್ತದೆ (ಕಶಾಅ. ೭೭೬). [ಸಂ. ರಾಜ್ಯಚಿಹ್ನ]

ರಾಜ್ಯದಾಹ (ನಾ). ರಾಜ್ಯವನ್ನು ಪಡೆಯಬೇಕೆಂಬ ಅತ್ಯಾಸೆ ; ರಾಜ್ಯ ಲಾಲಸೆ : ಈ ಆಕ್ರಮಣದಿಂದ, ದಿಲ್ಲಿಸುಲ್ತಾನರ ರಾಜ್ಯದಾಹ ಹೆಚ್ಚಿತು (ಚಾರಿಚ. ೪೨೨). [ಸಂ.]

ರಾಜ್ಯನೀತಿ (ನಾ). ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ನೀತಿ. — ವ್ಯವಹಾರ : ರಾಜ್ಯಪಟ್ಟಂಗಟ್ಟಿ ಸಂಕ್ಷೇಪದಿಂ ರಾಜ್ಯನೀತಿಯನಿಂತೆಂದು ಕಲ್ಪಿಸಿದಂ (ಕಪಾ. ೦೪೪-೩೬). [ಸಂ.]

ರಾಜ್ಯನೀತಿಜ್ಞ (ನಾ). ರಾಜನೀತಿಯನ್ನು ಬಲ್ಲವನು ; ರಾಜನೀತಿಜ್ಞ : ರಾಜ್ಯಶಾಸನ ದೊಡ್ಡದೇ ? ಈ ಪ್ರಶ್ನೆಯನ್ನು ರಾಜ್ಯನೀತಿಜ್ಞರು ಬಹುವಾಗಿ ಚರ್ಚಿಸಿದ್ದಾರೆ (ಚಾಜ್ಞಾ. ೩೫೩). [ಸಂ.]

ರಾಜ್ಯಪಟ್ಟ (ನಾ). ರಾಜಪದವಿ ಸೂಚಕವಾಗಿ ಹಣೆಗೆ ಕಟ್ಟುವ ಚಿನ್ನದ ಪಟ್ಟಿ.— ಲಲಾಟಪಟ್ಟ : ಅಭಿಷೇಕಪುರಸ್ಸರಂ ಸ್ಮರಂ ಪುಟಿರಿದಿರ್ದ ಮಲ್ಲಿಗೆಗೆ ಕಟ್ಟಿದನಂಕದ ರಾಜ್ಯಪಟ್ಟಮಂ (ಚಾಅಪು. ೬-೦೧೨). [ಸಂ.]

ರಾಜ್ಯಪತ್ರ (ನಾ). ಸರ್ಕಾರವು ಪ್ರಕಟಿಸುವ ಪತ್ರ ; ಗೆಜೆಟ್ಟು : ಬಹಳ ಶಕ್ತಿಯುಳ್ಳ ಕಾಗದವನ್ನು . . . ಸೆನ್ನದು- ರಾಜ್ಯಪತ್ರಗಳು- ಮೌಲ್ಯಚಲನ ವಣವತ್ರಗಳು. . .ಮುದ್ರಿಸುವುದಕ್ಕೆ ಉಪಯೋಗಿಸುವರು (ಕಾಪ್ರಳ. ೬೦). [ಸಂ.]

ರಾಜ್ಯಪದ (ನಾ). ಅರಸನ ಪದವಿ ; ಅರಸೊತ್ತಿಗೆ : ಸೀತೆಯ ತಂದವನ ತೋಜಿದರೆ ನಮಗದು ರಾಜ್ಯಪದವೆಂದ (ಕಪಾರಾ. ೬-೦೦-೪೪) ; ಆತನ ಕುಮಾರಂಗೆ ಪಟ್ಟಂಗಟ್ಟಿ ರಾಜ್ಯಪದದೊಳಿಟ್ಟು ಕಾಣ್ಕೆಗೊಂಡು . . . ತೆರಳ್ದಂ (ಶಾಕಾಪ್ರ. ೬೬-೦೬). [ಸಂ.]

ರಾಜ್ಯಪರಿಷತ್ತು (ನಾ). ಸಂಸತ್ತಿನ ಒಂದು ಅಂಗ ; ಕೇಂದ್ರಸರ್ಕಾರದ ಒಂದು ಸಭೆ ; ರಾಜ್ಯಸಭೆ ; P ಸ್ವತಂತ್ರಭಾರತದ ಕೇಂದ್ರಸರ್ಕಾರದಲ್ಲಿ ' ರಾಜ್ಯಪರಿಷತ್ತು ' ಮತ್ತು ' ಲೋಕಸಭೆ ' ಎಂದು ಎರಡು ಸಭೆಗಳುಂಟು. ಇವು ಇಂಗ್ಲೀಷಿನ ' Upper-House ' ಮತ್ತು ' Lower-House ' ಎಂಬ ಪದಗಳಿಗೆ ಸಹಜಾನವಾದುವು: ಭಾರತ ಸಂಘಕ್ಕೆ, ರಾಷ್ಟ್ರಪತಿಯವರೂ ರಾಜ್ಯಪರಿಷತ್ತೆಂಬ ಹೆಸರಿನ ಒಂದು ಸದನವೂ ಲೋಕಸಭೆ ಎಂಬ ಹೆಸರಿನ ಒಂದು ಸದನವೂ ಸೇರಿರುವ ಒಂದು ಸಂಸತ್ತು ಇರತಕ್ಕುದು (ಕಂದಾಪ್ರ. ೬೯). [ಸಂ. ರಾಜ್ಯಪರಿಷದ್]

ರಾಜ್ಯಪಾಲ (ನಾ). ಸ್ವತಂತ್ರಭಾರತದ ಕೇಂದ್ರಸರ್ಕಾರದಿಂದ ನೇಮಕಗೊಂಡ ಪ್ರತಿರಾಜ್ಯದ ಮುಖ್ಯಾಧಿಕಾರಿ : ಶ್ರೀಜಯಚಾಮರಾಜ ಒಡೆಯರವರು . . . ಅಖಿಂಡಕರ್ನಾಟಕಕ್ಕೆ ರಾಜ್ಯಪಾಲರಾಗಿ . . ಎಲ್ಲ ಕನ್ನಡಿಗರ ಸೌಖ್ಯವನ್ನು ನೋಡಿಕೊಳ್ಳುತ್ತಿದ್ದಾರೆ (ಕ್ಯಾಚಾ. ೫೦). [ಸಂ.]

ರಾಜ್ಯಭರ. (ನಾ). ರಾಜ್ಯದ ಆಡಳಿತ. —ಆಳ್ವಿಕೆ : ಮಹಿತನಿಜೈಕರಾಜ್ಯ ಭರದೊಳ್ ನಿಲವೇಱ್ಪುದು ನೀಂ (ಶಾಅಪ್ರ. ೦೦-೦೦೩); ಸಿಂಹಭೂಪತಿ [ಗೆ ಭಾ] ಸಾಮಂತರುಂ ಮಣ್ಣಾಳ್ಕೆಶ್ವರುಂ ತಪ್ಪೆ ಕಳ್[ಲ್ದ][ರಾಜ್ಯ]ಭರಮುಂ ಕ್ಕೊಣ್ಮಾ (ಕಾಅ. ೩-೨-೬೯; ೧೦೬೨); ಆ ರಾಯಂ ಪೊಸಜವ್ವನದ ಮುದ್ದುಗುವರನೊಳ್ ರಾಜ್ಯಭರಮನೊಪ್ಪಿಸಿ ತಾಂ ತಪಸ್ಸಾವ್ರಾಜ್ಯಮಂ ಸೂಜೆಗೊಂಡಾಳುತುಮಿರ್ದಂ (ಶಾಪ್ರ. ೦೦೬-೩). [ಸಂ.]

ರಾಜ್ಯಭಾರ (ನಾ). ೧. ರಾಜ್ಯಾಡಳಿತದ ಹೊಣೆ.— ಜವಾಬ್ದಾರಿ. ೨. = ರಾಜ್ಯಭರ : ಅಂತು ವೇಘನಾದಂ ತನ್ನ ಮಗಂ ಸಿಂಹನಾದಂಗೆ ರಾಜ್ಯಭಾರಮನಿತ್ತು ತಪೋಭಾರದೊಳ್ ತಾಂ ನಿಂದು (ಶಾಅಪ್ರ. ೬-೦೦೬೫); ಆತನ ತಾಯಿ . . . ಇವನೊಳಂಬನ ರಾಜ್ಯಭಾರವನ್ನು ನೀಕ್ಷಿಸುತ್ತಿದ್ದಳು (ಕಾಅಪ್ರ. ೫೭). [ಸಂ.]

ರಾಜ್ಯಭಾಷೆ (ನಾ). ರಾಜ್ಯದ ಅಧಿಕೃತಭಾಷೆ : ಒಡಂಬಟ್ಟಿರುವ ಜನಕ್ಕೆ ರಾಜ್ಯಭಾಷೆಯಲ್ಲಿ "ಪ್ರಜೆ" ಎಂದು ಹೆಸರು (ಚಾಜ್ಞಾ. ೧೨). [ಸಂ. ರಾಜ್ಯಭಾಷಾ.]

ರಾಜ್ಯಭ್ರಂಶ (ನಾ). ರಾಜ್ಯವನ್ನು ಕಳೆದುಕೊಳ್ಳುವಿಕೆ; ರಾಜ್ಯಚ್ಯುತಿ : ಕ್ಷೀಡುದೆಮಗೆ ವನಪ್ರವಾಸದ ಮೇದ . . . ಹೋದ ರಾಜ್ಯಭ್ರಂಶ ಬಹಳವಿಷಾದ ಬೀತುದು ನಿಮ್ಮ ಕಾರುಣ್ಯೋದಯವಯಮಗಾಯ್ತಲಾ (ಶಾಜ್ಞಾ. ೦೦-೨೮). [ಸಂ.]

ರಾಜ್ಯಭ್ರಷ್ಟ (ನಾ). ರಾಜ್ಯದಿಂದ ಹೊರಹಾಕಲ್ಪಟ್ಟವನು ; ರಾಜ್ಯಚ್ಯುತ : ರಾಜ್ಯಭ್ರಷ್ಟಂಗೆ ತ್ಯಾಗಭೋಗವುಂಟೆ (ಸಭಕ.೩೩I. ೩೦೦-೩೦); ರಾಜ್ಯಭ್ರಷ್ಟ

ಮುಳಿದು ವಾಸಿಷ್ಠಮುನಿ ಕೊಟ್ಟ ಶಾಪದೊಳು ಕುಲವಳಿದು ರಾಜ್ಯಭ್ರಷ್ಟನಾಗಿ ಜಾಂಡಾಲತ್ವವಳವಟ್ಟು (ಪಪಣಾ. ೯-೩೯); ಹೈದರನು ರಾಜ್ಯಭ್ರಷ್ಟನಾದನೆಂಬ ಸಮಾಚಾರವನ್ನು ತಿಳುಹಿ . . . ಮರಾಟೆಯವರ ದಳವನ್ನು ಕಳುಹಿಸಿದನು (೬೫೪. ೬೪). [ಸಂ.]

ರಾಜ್ಯಲೋಭ (ನಾ)· = ರಾಜ್ಯದಾಹ : ಮಣಿಯದೆ ರಾಜ್ಯಲೋಭ ವರದಿಂ ಪುರುಷಾರ್ಥಮನೊಕ್ಕು ವ್ಯಾರ್ಥಾಗ್ರಹಗಳನೇಕರುಂ ಜವನ ದಾಡೆಯೊಳ್ಸಿಲ್ಕಿದರ್ (೪೬೬. ೦೩-೭೪). [ಸಂ.]

ರಾಜ್ಯವಿಚ್ಯುತ (ನಾ)· = ರಾಜ್ಯಭ್ರಷ್ಟ : ರಾಜ್ಯವಿಚ್ಯುತನಾದ ಚಕ್ರವರ್ತಿಯೆಂಬ ಕ್ಷುದ್ರದೇವತೆಯನ್ನು ಸೇವೆಮಾಡಿದುದರಿಂದ ವನ್ನ ತಂದೆಯು ಬಹುಕಷ್ಟಗಳನ್ನು ಅನುಭವಿಸಿರುವನು (ಜಾಣಾಖ. ೩೬). [ಸಂ.]

ರಾಜ್ಯವಿಭ್ರಂಶ (ನಾ)· = ರಾಜ್ಯಭ್ರಂಶ : ಚಿರಂತನಭವದ ಕಿಲ್ಬಿಷ ಕರ್ಮವಿಪಾಕಪ್ರಪರ ದುರಿಯೋಧನನ ಸಮ್ಮಪದೇಶಮಾತ್ರದಲಿ ಎಮಗೆ ರಚಿಸಿತು ರಾಜ್ಯವಿಭ್ರಂಶವನು (ಶಾಣ್ಮಗ. ೦೦-೦೪). [ಸಂ.]

ರಾಜ್ಯವ್ಯಸನ (ನಾ). ಸಪ್ತವ್ಯಸನಗಳಲ್ಲಿ ಒಂದು : ರಾಜ್ಯದ ಚಿಂತೆ : ತನುವ್ಯಸನ ಮನೋವ್ಯಸನ ಧನವ್ಯಸನ ರಾಜ್ಯವ್ಯಸನ . . . ಸೇವಕವ್ಯಸನವೆಂಬ ಸಪ್ತವ್ಯಸನದಿಂ ಹಸಂಗೆಟ್ಟು (೪೮೪. ೦೧೩); ರಾಜ್ಯವ್ಯಸನವೆತ್ತಿದಲ್ಲಿ ವಾಹನ ವಸ್ತ್ರಾಭರಣ ಆಮುಲೇಪನ ತಾಂಬೂಲಂಗಳಂ ಬಯಸುತ್ತಿಹನು (೪೪೫. ೩೩, ೦೨೪). [ಸಂ.]

ರಾಜ್ಯಶಾಸನ (ನಾ)· ರಾಜ್ಯದ ಆಡಳಿತಪಕ್ಷವು ಪ್ರಕಟಿಸುವ ಕಟ್ಟಳೆ.—ಆಜ್ಞೆ : ರಾಜ್ಯಶಾಸನಕ್ಕೆ ವಿಧೇಯನಾಗಿ ನಡೆದುಕೊಳ್ಳುವುದು (ಶಾಣ್ಮಗ. ೦೩೦). [ಸಂ.]

ರಾಜ್ಯಶಾಸ್ತ್ರ (ನಾ)· ರಾಜ್ಯದ ಆಡಳಿತವನ್ನು ವಿವರಿಸುವ ಶಾಸ್ತ್ರ ; ರಾಜನೀತಿಶಾಸ್ತ್ರ : ರಾಜ್ಯಶಾಸ್ತ್ರದ ವಿಷಯ ಮನಸ್ಸಿಗೆ ಬಂದಾಗಲೆಲ್ಲ ಅಲ್ಲಿ ತಂಬೂರಿಯ ತಂತಿಗಳಂತೆ ಸಮಾಂತರವಲ್ಲ ಎರಡು ವಿಚಾರಸರಣಿಗಳು ವಾದಮಾಡುತ್ತಿರುತ್ತವೆ (ಜಾಜ್ಞಾ. ೩೦೬). [ಸಂ.]

ರಾಜ್ಯಶ್ರೀಕ (ನಾ). ರಾಜ್ಯಸಂಪತ್ತುಳ್ಳವನು : ಅತುಳತಪಸ್ಸಿಕರನನು ನ್ನತರಾಜ್ಯಶ್ರೀಕನವಧಿದರ್ಶನನಂ . . . ನೃಪತಿ ಭಕ್ತಿಯಿಂ ವಂದಿಸಿದಂ (೫೦೨೪. ೬-೭೦). [ಸಂ.]

ರಾಜ್ಯಸಭೆ (ನಾ)· = ರಾಜ್ಯಪರಿಷತ್ತು : ಕೇಂದ್ರಸರ್ಕಾರದಲ್ಲಿರುವ ವಿವಿಧರಾಜ್ಯಗಳಿಂದ ಆಯ್ಕೆಯಾದ ಸದಸ್ಯರ ಸಭೆ ; ಪಾರ್ಲಿಮೆಂಟಿನ ಮೇಲ್ಮನೆ (Council of State: ಕ್ರಿ.ವ. ೨೬). [ಸಂ. ರಾಜ್ಯಸಭಾ]

ರಾಜ್ಯಸಿರಿ (ನಾ). ರಾಜ್ಯದ ಸಂಪತ್ತು : ಪೂತುರೇ ಧನಮೆಂಬುದೆಮ್ಮಯ್ಯ ಧಾತು ಕಲಿ ಮೂದಲಿಸಿ ಕರೆದರೆ ರಾಜ್ಯಸಿರಿಯೇಕೆ (ಶಾಣ್ಮಕ್ರೌ. ೦೩-೨೫). [< ಸಂ. ರಾಜ್ಯಶ್ರೀ]

ರಾಜ್ಯಸೂತ್ರ (ನಾ). ಆಡಳಿತದ ಅಧಿಕಾರ : ಮೃಗೇಶವರ್ಮ ರವಿವರ್ಮರ ಆಳಿಕೆಗಳ ಮಧ್ಯದಲ್ಲಿ ರಾಜ್ಯಸೂತ್ರಗಳನ್ನು ವಹಿಸಿರಬೇಕು (೪೫೦೦. ೦೧); ರಾಮಚಂದ್ರರಾಮನು ರಾಜ್ಯಸೂತ್ರವನ್ನು ಸ್ವಾಧೀನ ಪಡಿಸಿಕೊಂಡು ಕೆಲವು ದಿನಗಳಲ್ಲಿಯೇ ವಿಜಾನಿಯಸ್ಸನ್ನೂ ಬರಿದು ಮಾಡಿದನು (ಕುಚಾಣ. ೨). [ಸಂ.]

ರಾಜ್ಯಾಂಗ (ನಾ). ೧. ಆಡಳಿತಕ್ಕೆ ನೆರವಾಗುವ ರಾಜ, ಪ್ರಧಾನಿ, ಸ್ನೇಹಿತ, ಬೊಕ್ಕಸ, ನಾಡು, ಕೋಟೆ ಮತ್ತು ಸೈನ್ಯ ಎಂಬ ವಿಳು ಅಂಗಗಳು : ಈ ಅವುಗಳ ಜೊತೆಗೆ ಪೌರ ಮತ್ತು ಪುರೋಹಿತ ಎಂಬೆರಡನ್ನು ಸೇರಿಸಿ ಕಿಟಿಲ್ ಅವರು ರಾಜ್ಯಾಂಗಗಳು ಒಂಬತ್ತು ಎಂದು ಹೇಳಿದ್ದಾರೆ : ಗಟಗಟ ಸುರಿದುವು ಕಣ್ಣಿನಿ ಪಟಲೆವ್ವದ ರೂಪುಗಳ್ಗೆ ರಾಜ್ಯಾಂಗಂಗಳ್ ಕಟುಕುಟುಮಾಗಿರ್ದುವು ತತ್ಕಟಗುದಿದುವು ಭವವೀರ್ಭ ಕಾಶ್ಯಜಲಂಗಳ್ (ಜಾಂಚಿ. ೩-೦೦೩). ೨. ರಾಜ್ಯದ ಆಡಳಿತ ವ್ಯವಸ್ಥೆ : ರಾಜತ್ವ . . . ಅನೇಕ ನಾಯಕಪ್ರಭುತ್ವ -ಹೀಗೆ ರಾಜ್ಯಾಂಗವು ನಾಲ್ಕಾರು ಮಾರ್ಪಾಟುಗಳನ್ನು ಪಡೆದು ಬೆಳೆದಿದೆ (ಜಾಜ್ಞಾಂಗ. ೧೦೩). [ಸಂ.]

ರಾಜ್ಯಾಂಗಪ್ರಕೃತಿ (ನಾ). = ರಾಜ್ಯಾಂಗ ೧ : ಆಳುವ ನರಪತಿಗಳ ಸ್ವಾಮ್ಯಮಮಾತ್ಯ ಬಂಧು ಕೋಶ ರಾಷ್ಟ್ರ ದುರ್ಗ ಬಲಂಗಳೆಂಬ ರಾಜ್ಯಾಂಗ ಸಪ್ತಕದಿಂ (೦೭೫೪. ೨೨೨). [ಸಂ.]

ರಾಜ್ಯಾದಾಯ (ನಾ). ರಾಜ್ಯದ ಉತ್ಪತ್ತಿ.— ಹುಟ್ಟುವಳಿ : ರಾಜ್ಯಾದಾಯಕ್ಕೆ ಸಂಬಂಧಪಟ್ಟ ಎಲ್ಲ ವಿಧಿಗಳೂ ಶಾಸ್ತ್ರಪ್ರಮೇಯವೇ ಎನ್ನಿಸಿಕೊಳ್ಳುತ್ತವೆ (ಶಾಜ್ಞಾಂಗ. ೬೩). [ಸಂ.]

ರಾಜ್ಯಾಧೀನ (ಗು). ರಾಜ್ಯಾಡಳಿತದ ಕೈಕಳಗಿರುವ ; ಸರ್ಕಾರದ ಹತೋಟಿಯಲ್ಲಿರುವ : ಕೇವಲ ಧರ್ಮ, ಮೂಲವಂಶ . . . ಅವುಗಳಲ್ಲಿ ಯಾವುದೊಂದರ ಆಧಾರದ ಮೇಲೆ ಮಾತ್ರವೇ, ಯಾವನೊಬ್ಬ ನಾಗರಿಕನಿಗೆ ರಾಜ್ಯಾಧೀನ ನೌಕರಿಯ ಅಥವಾ ಹುದ್ದೆಯ ವಿಚಾರದಲ್ಲಿ ಅಪಾತ್ರತೆಯುಂಟಾಗತಕ್ಕುದಲ್ಲ (ಜಾರಾಪ. ೯). [ಸಂ.]

ರಾಜ್ಯಾಧ್ವರ (ನಾ). ರಾಜಸೂಯಯಾಗ : ಸಿರಿಯ ಪಲ್ಲಭನೊಲಿದು ರಾಜ್ಯಾಧ್ವರವನಾನಲು ಕಾಲಭಾಗ್ಯದ ಭರವ ಬಣ್ಣಿಪನಾವ (೦೪೩೦. ೦೪-೩೭). [ಸಂ.]

ರಾಜ್ಯಾನುಜ್ಞಾನ (ನಾ). ಆಡಳಿತದ ಕೆಲಸವನ್ನು ವಿಧಿವತ್ತಾಗಿ ನಡೆಸುವುದು ; ರಾಜಕಾರ್ಯನಿರ್ವಹಣೆ : ನೀನೆಮ್ಮಂ ವಿಸಿಜದ ರಾಜ್ಯಾನುಜ್ಞಾಸಮನೊಡಂಬಡು (೦೦೫. ೪-೦೦); ಅಂತು ವಿಷಾದವಿಮುಖನಿಂ ರಾಜ್ಯಾನುಜ್ಞಾನಾಭಿಮುಖನಿವನಾಗಿ (೫೦೨೪. ೨-೩೦). [ಸಂ.]

ರಾಜ್ಯಾಪಹಾರ (ನಾ)· ರಾಜ್ಯವನ್ನು ಕಿತ್ತುಕೊಳ್ಳುವುದು : ಏನ ನೆನೆದೆ ಮಗನೆ ಕುಂತೀಸೂನುಗಳ ರಾಜ್ಯಾಪಹಾರದೊಳೇನು ಬುದ್ಧಿವಿಳಾಸ (ಶಾಣ್ಮಕ. ೦೨-೩೮). [ಸಂ.]

ರಾಜ್ಯಾಭಿಲಾಷೆ (ನಾ)· ರಾಜ್ಯವನ್ನು ಪಡೆಯಬೇಕೆಂಬ ಬಯಕೆ.—ಅಪೇಕ್ಷೆ : ನಿನ್ನ ಸುತರು ದೃಢಕಸತ್ಕರು ನುಡಿದ ಕಾಲವ ನೂಕದರು ರಾಜ್ಯಾಭಿಲಾಷೆಗೆ ವೆರಹಿದರು ಬಲವ (ಶಾಣ್ಮಕಾ. ೫-೨೬). [ಸಂ. ರಾಜ್ಯಾಭಿಲಾಷಾ]

ರಾಜ್ಯಾಭಿಷವಣ (ನಾ). ರಾಜನಾಗುವವನಿಗೆ ಮಾಡುವ ಅಭಿಷೇಕ ; ಪಟ್ಟಾಭಿಷೇಕ : ರಾಜ್ಯಾಭಿಷವಣಭವನವಂತೆ ಪೂರ್ಣಕುಂಭೋಪಶೋಭಿತಮುಂ . . . ಭದ್ರಲಕ್ಷಣಲಕ್ಷಿತಮುಮಪ್ಪ ಪಟ್ಟವರ್ಧನಮನೇಱಿ (೫೪೫೪. ೫-೩೩). [ಸಂ.]

ರಾಜ್ಯಾಭಿಷೇಕ (ನಾ)· = ರಾಜ್ಯಾಭಿಷವಣ : ಅಂತು ಭುವನತ್ರಯ ಚೂಡಾಮಣಿಯ ರಾಜ್ಯಾಭಿಷೇಕದೊಸೆಯಿಂ ಸಾಭಿರಾಜಾದಿರಾಜಸಭೆಗಱಿಪಿ (೦೦೪. ೬-೩೭ ಪ). [ಸಂ.]

ರಾಜ್ಯಾಭ್ಯುದಯ (ನಾ). ರಾಜ್ಯಾಡಳಿತ : ರಾಜ್ಯಭಾರ : ಶ್ರೀಮಚ್ಚಾಳುಕವಿಮ್ಮಾನಿಡದೇವರು ತತ್ಪುತ್ರಿ ಶ್ರೀಪಂಪಾದೇವಿಯರ ರಾಜ್ಯಾಭ್ಯುದಯದಂದು (೦೪. IV. ಕುಡಿಸಿ. ೫೦-೩ ; ೧೧೪). [ಸಂ.]

ರಾಜ್ಯಾರ್ಹ (ನಾ). ರಾಜ್ಯದ ಆಡಳಿತಕ್ಕೆ ಯೋಗ್ಯನಾದವನು ; ಅರಸು ತನಕ್ಕೆ ಅರ್ಹನಾದವನು : ಅರಸಂಗಮರಸಿಯರ್ಗಂ . . . ಶರೀರ ಸಂಸ್ಕಾರವಿಧಿಯಂ ವಿಧಿವೂರ್ವಕಂ ನಿರ್ವರ್ತಿಸಿ ರಾಜ್ಯಾರ್ಹನಪ್ಪಿಂದ್ರನ ಮಗಂ ಚಂದ್ರನಂ ಧರಾಭಾರಧುರಂಧರಂ ಮಾಡಿದರ್ (ಜಾಂಚಿ. ೬-೪೬ ಪ). [ಸಂ.]

ರಾಟಿ (ನಾ)· ಮಲ್ಲಯುದ್ಧದ ಒಂದು ಪಟ್ಟು : ಉರ್ಬಿನೊಳೆಱಗುವ ಸೊರ್ಕಾನೆಯ ಸ್ಸಗ್ಗವಕ್ಕೆ ಎರ್ದೊಡ್ಡಿ ಸೋಂಕದ ಮುನ್ನಮೆ ಒರ್ಮೆಯ್ಯೊಳೊಲೆದು ತಪ್ಪಿಸಿ ಎಡಗೆಡಪುವಂತೆ ಕಿಡಪಿ ಬೆನ್ನೇಱಿಯು {ಯುಂ} ರಾಟದೊಳ್ಪಿಗಿದು ತನ್ನ ಸಾದಕದ ಚಳಕಮಂ ಮೆಱೆಯಲ್ಕೆ (೫೪೦೦. ೦೩೫-೩). [ದೇ.ತ ತೆಲು. ರಾಟಿ, ರಾಟವ]

ರಾಟಿಣ ' ಜೂಟಿಣ ' ನೋ.

ರಾಟಿಣಪೂ (ನಾ). ಒಂದು ಸ್ಥಳದ ಹೆಸರು (?): ರಾಟಿಣಪು ವಿನ್ನಿರ್ವ್ಯತ್ಯಗ್ಗಣ್ಣಾಗಂ ವತ್ರ ತೆಱುವೊದು (ಅಶ್ವ. XIV. ತುಗು. ೨೩೨-೬; ಸು. ೫೦೦). [?]

ರಾಟಿಣೆ ' ಜೂಟಿಣ ' ನೋ.

ರಾಟವಿಣಿ ' ಜೂಟಿಣ ' ನೋ.

ರಾಟವಾಳ ' ಜೂಟಿಣ ' ನೋ.

ರಾಟವಾಳ ' ಜೂಟಿಣ ' ನೋ.

ರಾಟಳ ' ಜೂಟಿಣ ' ನೋ.

ರಾಟಳಕ (ನಾ). (ಕರಾ) ಬಟ್ಟೆಯನ್ನು ಸ್ವಚ್ಛಮಾಡಲು ಬಳಸುವ ಒಂದು ಬಗೆಯ ಕಾಯಿ; ಆಂಟುವಾಳದ ಕಾಯಿ: ಬಟ್ಟೆಯನ್ನು ಬೆಳ್ಳಗೆ ಮಾಡಲು "ರಾಟಳಕ"ದ ಕಾಯನ್ನು ಉಪಯೋಗಿಸುತಿದ್ದಳೆ (ದಾಂಶ್ರ. III. ೦೪೧೦). [?]

ರಾಟಾಣ ' ಜೂಟಿಣ ' ನೋ.

ರಾಟಾಲ ' ಜೂಟಿಣ ' ನೋ.

ರಾಟಾಳ ' ಜೂಟಿಣ ' ನೋ.

ರಾಟಾಳತೇರು (ನಾ). ಒಂದು ಬಗೆಯ ರಥ; ತಿರುಗಣಿ ತೇರು: ಎಡದಲಯ್ಮನ ತೇರು ಬಲದಲಮ್ಮನ ತೇರು ರಾಟಾಳತೇರು ಕೈತೇರು ಗೊಂದೆತೇರು ಹರಿದೂ ನಂಜಯ್ಯ ಎಡಬಲಕೆ (ಹ್ಯಹಾ. ೭೬).

[ರಾಟಾಳ (<ಜೂಟಿಣ) + ತೇರ್ಕ (<ತೇರ್)]

ರಾಟಿ (ನಾ). ತೊಂದರೆ; ಉಪದ್ರವ; ಹಿಂಸೆ: ಜೇಟಿಯೊಳು ರತನಾಗಿಹನಾತನ ರಾಟಿಗೆ ಮೃಗ ನಿಲ್ಲವಲ್ಲಿ (ಕರ್ಣಾ. ೬-೨೮); ಬಹಳದಿಮ ಪ್ರವಾಳಭ್ಯ ತಕ್ಕೊಳ್ಳಲು ಈ ರಾಟಿಯು ತಪ್ಪುವದು (ಶಿಪ್ರೀ. ೭೦). ' ರಾವಡಿ ' ಪರಾ. [ದೇ.-ತೆ ತೆಲು. ರಾಟು]

ರಾಟೆ ' ಜೂಟ್ಟ ' ನೋ.

ರಾಟೆವಾಳೆ ' ಜೂಟಿಣ ' ನೋ.

ರಾಡಿ (ನಾ). ೧. ಕೆಸರು: ಬಗ್ಗಡ: ಸಾಡೊಳು ಪರಿವ ನಿರ್ಮಲಜಲದೊಳು ಬಲುರಾಡಿ ಕೂಡಿ ಸಾಗಿ ಪೋಗುವಂತೆ (ಕೋಕ್ಷಂ. ೭೭-೩); ರಾಡಿಯ ನೀರೊಳಗೆ ಘಟಿಕದ ಪುಡಿ ಚೆಲ್ಲಿದರೆ, ರಾಡಿಯು ತಳಕ್ಕೆ ಕೂಡ್ರುತ್ತದೆ (ಪುಣಾಖ್ಯಾ. ೩-೦೩೦). ೨. ಮಂದವಾದ ದ್ರವ.– ರಸ: ದ್ರಾಕ್ಷೀ ಜೋಡಿ ಪಾರದ ರಾಡಿ ತುಸಾ ಉಳಸದ. ಹಸನ್ ಮಾಡಿ ಮಿಸೀ ಮಾತ್ರ ಒರಿಸಿಕೊಂಡು ಪೊರಗ ಬರಬೇಕು (ಕೂಸಂಶಾ. ೦೫); ಬಳ್ಳಿಯ ತೊಪ್ಪಲನ್ನು ಹರಿದು ಅದನ್ನು ಒಂದು ಕಲ್ಲಿನ ಮೇಲೆ ಗುಂಡಿನಿಂದ ಅರೆದು ರಾಡಿಯನ್ನು ಮಾಡಿ (ಕುಂಬಾ. ೯೩). ೩. ಹೊಲಸು; ಕೊಳಕು: ದೇಹದ ರಾಡಿಯ ತೊಳಕೋಳ . . . ಹೇಸಿ ನಿನ ಮಾರಿ ತೊಳಕೋಳ (ಕರ್ಣಾ. ೨೩೯). ೪. (ಆಲಂ) ರಂಪ; ಗೊಂದಲ; ರಾದ್ಧಾಂತ: ಇದಲ್ಲಾ ರಾಡಿ ಆ ಕೃಷ್ಣಾಜೀದೇ. ಮೊದಲಿಂದಲೂ ಅವಗೆ ನನ್ನ ಕಂಡರಾಗುವುದಿಲ್ಲ (ಪರಿಣ. ೪೩); ನಮ್ಮ ಮನೆಯಾಗಿನ ರಾಡಿ – ಹೊಲಗೇರಿ ಹೊರಗ ಹೋಗೂದು ಬ್ಯಾಡಾ (ಪರಿಪ್ರ. II. ೩೩೨). ೫. ದುರುದ್ದೇಶ; ಕೆಟ್ಟ ಭಾವನೆ: ನನ್ನ ಮಿದುಳಿವಲ್ಲಿಯ ರಾಡಿಯನ್ನು ತೊಳೆದು ಸ್ವಚ್ಛಮಾಡುವುದೇ ನನ್ನ ಮುಖ್ಯೋದ್ದೇಶ (ಮುಖ್ಯ. ೯೨).

ರಾಡಿಯಾಗು = ಕೆಸರಾಗು; ಬಗ್ಗಡವಾಗು: ಅದೇ ಬಿದ್ದ ಮಳೆಯಿಂದ ರಾಡಿಯಾದ . . . ನೀರನ್ನೂ ಕುಡಿಯಬಾರದು (ಅಷ್ಟೋಗ. ೬೩); ಅವನ ಮುಖ ತಲೆ, ಮೈಯೆಲ್ಲ ರಾಡಿಯಾಯಿತು (ಬಂಗಾಕ. ೭೦).

ರಾಡಿಯಾಟ = ಕೆಸರನ್ನು ಎರಚಿ ಆಡುವುದು: ವಿಷಮಸಂಸಾರಸಾಗರದಲ್ಲಿ ' ರಾಡಿಯಾಟ'ವನಾಡುತ್ತ . . . ಬಡಿದಾಡಿ (ಕೋಗವಾ. ೦೨೬ ಕ್ಷಣ ೫೫). [← ಮರಾ. ರಾಡ್, ರಾಡೀ, ದಾಹಡೀ./ತುಳು. ರಾಡಿ]

ರಾಡು (ನಾ). ೧. ಮುಖ್ಯದ್ವಾರದ ಮೇಲೆ ಅಡ್ಡಲಾಗಿ ಕಟ್ಟಿರುವ ಕಟ್ಟಡ,—ರಚನೆ: ಮೂಡಲ ಬಾಗಿಲ ರಾಡಿನಲ್ಲಿರುವ ಬಡಗ ಚಾರಿ ವೆಂಕಟಾಚಲನ ಕೊತ್ತಲದಲ್ಲಿ ೧ . . . ಮೈಸೂರುಬಾಗಿಲ ರಾಡಿನಲ್ಲಿ ಜಯವಿಜಯ ಕೊತ್ತಲಗಳಲ್ಲಿ ೨ . . . ಭರಂಗಿಗಳನ್ನಿರಿಸಿ (ಪ್ರಜಾಸಂ. I, ೦೦೬). ೨. ಬಾಗಿಲಿಗೆ ಅಡ್ಡಲಾಗಿ ಹಾಕುವ ಪಟ್ಟಿ; ಅಗಳಿ: ಪಾರುಪತ್ತೆಗಾರನು ಬಾಗಿಲನ್ನು ಹಚ್ಚಿ ರಾಡು ಹಾಕಿದನು (ಕೊಣಿಳ್ಳ. ೨೩೩).

[?./ತೆಲು. ರಾಡು = ಸ್ತಂಭ./ಇಂ. Rod = ಕಂಬಿ, ಪಟ್ಟಿ]

ರಾಡುಬಾಗಿಲು (ನಾ). ಅಗಲವಾದ ಬಾಗಿಲು (?): ಕಣದ ರಾಡು ಬಾಗಿಲ ಹತ್ತಿರಕ್ಕೆ ಹೋಗಿದ್ದ ಸಾಹುಕಾರ ಭದ್ರಪ್ಪನವರ ಕಾಲುಗಳ ಮೇಲೆ ಬಿದ್ದು (ಕಣಾಂ. ೪). [ರಾಡು + ಬಾಗಿಲು (< ಬಾಗಿಲ್)]

ರಾಣ (ನಾ). ರಾಜ: ದೊರೆ: ಕೆಂಠೆಯಂಬಾರದ ನನ್ನಪಯ್ಯರಾಣನ ತನೆ(ನ)ಯಂ ವಿವೇಕನಿಧಿ ಕತ್ತಮುಹೇಭುಜನೆಂಬ ಪೆರ್ಮ್ಗಂ (ಅಶ್ವ. XVI. ೯-೪೦ ; ೧೮೭). [< ಪ್ರಾ. ರಾಣ./ಸಂ. ರಾಜನ್]

ರಾಣವೆಜೆ (ನಾ). ರಾಜನಿಗೆ ಕೊಡಬೇಕಾದ ತೆರಿಗೆ: ಪಂಚಕಾರುಕ ರಾಣವೆಜೆಯಂ ಶ್ರೀಮದ್ರಾಜಗುರುಲೋಕಾಭರಣಗುರುದೇವ್ಗೆರ್ . . . ಬಿಟ್ಟ ಧರ್ಮ್ (ಕೆಇಶಾ. IX-i. ೩೫೬-೭ ; 1187). [ರಾಣ + ತೆಜೆ]

ರಾಣವೆ ' ರಾಣಾವೆ ' ನೋ.

ರಾಣಾರಂಪು ' ರಣರಂಪ ' ನೋ.

ರಾಣಿ (ನಾ). ರಾಜನ ಹೆಂಡತಿ; ಅರಸಿ: ಭಾಗಯಬ್ಬೆರಾಣಿಗೆ ಸುತ್ X X X (ಅಶ್ವ. XVIII. ೦೬೩-೫೦ ; ೧೧೬); ಭೂಮಿಗೆ ಕಡುಜಾಣೆ ರಾಣ ರಮಣೀಯತೆಯಂ ಪಡೆದಿರ್ದಳಾಕ್ಷಣಂ (ಜಾಪು. ೬-೧೦೦); ರಾಣಿಯರ ನವರತ್ನದ ತೊಟ್ಟಿಗಳಿಹುರ್ಮಿಯಲಿ (ಕಂಪಂ. ೬-೮೨).

ರಾಣಿಯ ವಾಸ=ಅರಸಿಯು ವಾಸಮಾಡುವ ಸ್ಥಳ: ಅಂತಃಪುರ: ಈ ಬಪ್ಪುದೇಂ ರಾಣಿಯ ವಾಸಂ ನೋಡಿಮೆಂಬುತ್ಸಿಸದುದು ಪಲವುಂ ತಂಡದಿಂ ಪೆಂಡವಾಸಂ (ಅಂಪ್ರ. ೦೦-೩೩) ; ಚಿತ್ರಮಂ ತಳೆದು ವಿಲಾಸಮಂ ಮೆಱೆವ ರಾಣಿಯ ವಾಸದ ಬಳ್ಳಿಮಾಡದುಜ್ವಳಮಣಿಭಿತ್ತಿ ಚೆಲ್ವನೊಳಕೊಂಡು (ಪಂಚಚಾ. ೦-೦೫೮). [< ಪ್ರಾ. ರಾಣೀ./ಸಂ. ರಾಜ್ಞೀ]

ರಾಣೆಕ (ನಾ). ಹೊಂದಾಣಿಕೆ; ಸಾಮಂಜಸ್ಯ: ರಾಜಸೂಯದ ಹೊಱಗೆ ನಿನ್ನದು ರಾಣೆಕವ ನಾನಱಿಯೆನೆಮ್ಮರ್ಥಾಭಿಮಾನಪ್ರಾಣದೊಡೆಯನಲೆ (ಕುಸಾ. ೨-೩೦) ; ಭೀಷ್ಮನ ವಾಣಿ ವಿಪರೀತ. ನಿನಗೆ ವಿದುರನು ರಾಣೆಕವ ನಿನ್ನಲ್ಲಿ ಬಲ್ಲನೆ (ಶಾಪ್ರಾ. ೨೦-೦೩). [?]

ರಾಣೆಗವಲ್ಲ (ನಾ). ಒಬ್ಬಾತನ ಹೆಸರು: ರಾಣೆಗವಲ್ಲಂ ಪಲರಂ ತಳ್ಕಿಱಿದು ಸತ್ತು ಸುಗತಿಗೆ ಸನ್ದಂ (ಅಶ್. VII. ಕೂಪ್ರಾ. ೨೬-೪ ; ೩೭೫). [?]

ರಾಣೆಗೆದ್ದಲು (ನಾ). ಗೆದ್ದಲುಹುಳುಗಳಲ್ಲಿ ರಾಣೆಯಂತೆ ಇರುವ ಹುಳು; ಮೊಟ್ಟೆಯಿಡುವ ಹುಳು; ತಾಯಿಹುಚಲು: ರಾಣೆಗೆದ್ದಲು (ತಾಯಿಹುಚಲು) ಪ್ರತಿನಿಮಿಷ ಅರವತ್ತಸಂತೆ ಲಕ್ಷಾಂತರ ಮೊಟ್ಟೆಗಳನ್ನಿಡುತ್ತದೆ (ಕೀಚಕ. ೦೦೬). [ರಾಣೆ + ಗೆದ್ದಲು (< ಗೆದರ್)]

ರಾಣೆಜೇನು (ನಾ). ಜೇನುಹುಳುಗಳಲ್ಲಿ ರಾಣೆಯಂತೆ ಇರುವ ಹುಳು.– ಮೊಟ್ಟೆಯಿಡುವ ಹುಳು: ರಾಣೆಜೇನು ಮತ್ತು ಇರುವೆಗಳು ಬಾಯಿಯ 'ಫೆರೊಮೋನ್'ಗಳನ್ನು ಸ್ರವಿಸುತ್ತವೆ (ಕೀಚಕ. ೨೩).

[ರಾಣೆ + ಜೇನು (< ಜೇನ್)]

ರಾಣೆವಾಸ, ರಾಣೇವಾಸ (ನಾ). ೧. ಅರಮನೆಯಲ್ಲಿ ರಾಣಿಯರೂ ಹೆಂಗಸರೂ ವಾಸಿಸುವ ಭಾಗ; ಜನಾನಾ; ಅಂತಃಪುರ: "ರಾಣಿವಾಸವೆ ಪೆಂಡವಾಸ" (ಕ್ಯಾಕ. ೬೩) ; ಬಾಣಸನ ಮಜ್ಜನದ ರಾಣೆವಾಸದ ಮನೆಗಳುಮಂ (ಪಂಪಭಾ. ೩-೪೭ ಪ); ರಾಗಿಯೆನಿಜ್ಜವನ ರಾಣೆವಾಸದ ಕಾಪುಂ

. . . ಅಕ್ಕಂತೆ ದುಃಖಿಮಂ ಪುಟ್ಟಿಸುಗುಂ (ಶರ್ಮಾಭ್ಯು. ೬-೧೦೨) ; ಕೇಚಕನು . . . ರಾಣವಾಸಕ್ಕೆ ಹೋದನು (ಪಾಂಡವ. IX. ೬). ೨. ಅಂತಃಪುರದಲ್ಲಿ ವಾಸಮಾಡುವ ಅರಸಿಯರು ಮುಂತಾದವರು : ಎಲೆ ದೇವ ನಿಮ್ಮ ತೊತ್ತಿರು ನೂರ್ವರುಂಟಲ್ಲಿ . . . ಎಂದು ತನ್ನಯ ರಾಣವಾಸಮುಂ ಕರೆಸುತ್ತೆ (ಚಾಮ. ಪು. ೪೯-೦೦) ; ಓವೊ ತವೋವನವಧುಗಳ ಲಾವಣ್ಯಂ ರಾಣವಾಸಕರಿದನೆ ಪಡೆಯಲ್ಕೇವೇಳ್ಪಮನು (ಜಾಳುಹ. ೯-೦೭). **ರಾಣೇವಾಸ** : ೧. ಮಾಣಿಕ್ಯಸಿಂಹಾಸನದೊಳು ಕೃಷ್ಣ ಕುಳಿತು . . . ರಾಣೇವಾಸಕ್ಕೆ ವನವನೊಪ್ಪಿಸಿದ (ತೋಟಕ. ೪-೩೬) ; ರಾವಣನ ರಾಣೇವಾಸವು ಬಲು ದೊಡ್ಡದು (ಪಾಟಿ. ೧೪).

ರಾಣವಾಸವಾಗು = ಅಂತಃಪುರದವಳಾಗು ; ಅರಸಿಯಾಗು ; ರಾಣಿಯಾಗು : ಜನಕಮಹೀಶನತೆ ವಿನಗಂದು ಭವಬಾಣಾಸನದ ಭಾರಣೆಯ ಬಿಗುಪಿನ ಜಗುಳುದಲೆಯಿಂದ ದಾಶರಥಿಗಾ ರಮಣಿ ರಾಣೇವಾಸವಾದಳು (ತೊರಣ. ೬-೬-೦೭). [ರಾಣಿ + ವಾಸ್ಯ]

ರಾಣಿವೆ ' ರಾಣಾವೆ ' ನೋ.

ರಾಣಿಸಾಲು (ನಾ). ಇಪ್ಪೇಟುಆಟದಲ್ಲಿ ಒಂದು ಬಗೆ : ಯಾರೋ ಪರಸ್ಥಳದ ಜನ ; 'ರಾಣಿಸಾಲು' ಆಡುವುದಕ್ಕೆ ಬಂದಿದ್ದವರು (ಶಬುಪ. ೫೫). [ರಾಣಿ + ಸಾಲು (< ಸಾಲ್)]

ರಾಣೇವಾಸ ' ರಾಣಿವಾಸ ' ನೋ..

ರಾಣಾವೆ, ರಾಣವೆ, ರಾಣಿವೆ, ರಾಣ್ಯ (ನಾ). ೧. ಪಡೆ ; ಸೈನ್ಯ ; ದಳ : " ರಾಣಾವೆಯೆನೆ ಸೇನೆ " (ಪಾರ್ವ. ೬೦) ; ವಿಕ್ರಮತ್ರಿರಾಜನು ಹಲವು ಧ್ವಜವ ಕೊಟ್ಟು ರಾಣವೆಗೆ ಹೊಲಬಿಗರ ಮಾಡಿದಂತೆ (ಕ್ರಮೋಗ. ೬೫) ; ರಾಮಚಂದ್ರದಣಾಯಕ್ಕರು ಸಮಸ್ತರಾಣವೆ ಪಾರುಪತ್ಯವನು ಚಿತ್ತಯಿಸಿ (ಕೃಷ್ಣ. IX-ii. ೧೬೦-೩ : ೧೪೬೬) ; ಪಿರಿಯತನು ಯೇಸುವಿಗೆ ಮಂರಣಾಜ್ಞೆಯನ್ನು ವಿಧಿಸಿ ಅವನನ್ನು ರಾಣವೆಯರಿಗೆ ಒಪ್ಪಿಸಿದನು (ಗೊರೂಶಾ. viii. ಮಾಲ್ಕು೬). ೨. ಪರಿವಾರ : ತನ್ನಂದ್ರಜಾಲದ ಮಹಿಮೆಗಿಹಿಮೆಯಂ ನೋಡುವೆಂ ನಿನ್ನ ರಾಣವೆಯೊಳಿಳ್ಪಿಲ್ಲ ಬಲ್ಲಮರ್ಗಳಂ ನಿಖಿಲಜನನಿಚಯಮಂ ಒರಿಸು (ಕಪ್ಪಣಾ. ೪-೫೬). **ರಾಣವೆ** : ೧. ಸಕಲ ರಾವುತರಾಣವೆಯಂ ಕಳುಹಿಸಿ (ಜಾಕೋಗ. ೦೩). **ರಾಣೆವೆ** : ೧. ಸಕಲ ರಾಣೆವೆ ಸಹಾ ಯದುರುಗೊಂಡು (ಹುಚಕ. ೦೩೮). **ರಾಣ್ಯ** : ೧. ಭರದಿ ಮಾಡಲು ರಾಣ್ಯ ಕೈಕೊಂಡು ಪೊಗಳುವಕ್ಕರಿಗರ ಸಂದಣಿಯೊಳಗೆ (ಶ್ರಾಹ. ೪೦-೨೩) ; ರಾಣ್ಯವೆಂದರೆ ಸೇನೆ ಎಂದು ಒಂದು ಕಡೆ ಪೋಲೀಸ್ ಅಥವಾ ಕಂದಾಚಾರದ ಸಿಬ್ಬಂದಿ ಎಂದು ಒಂದು ಕಡೆ ಅರ್ಥವಾಗಬಹುದು. ಆ ಕಾಲದಲ್ಲಿ ಎರಡು ಜಾಕರಿಯೂ ಏಗಿಡಿಸಲ್ಪಡದೇ ಒಟ್ಟಿಗೇ ಸೇರಿಕೊಂಡಿರ ಬಹುದು (ಪಾಳಣ. ೪೬)..

ರಾಣೇರು = ಸೈನ್ಯಸಮರು ; ಪಡೆವಳರು : ಬಂದರು ರೈತರು ರಾಣೇರು ಗುರಿಕಾರರು (ಕರ್ಣಕ. ೨೭೬).

[ದೇ.ಕ ತಮಿ. ರಾಣುವ, ರಾಣು ; ಮಲ. ಕೆಲು. ರಾಣುವ; ತುಳು. ರಾಣುವೆ, ರಾಣ್ಯ]

ರಾಣೆಯ (ನಾ). ದೊರೆ ; ರಾಜ : ಸಾಳುವೆಯ ಬಲುಗಿದೇವರಾಣೆಯನು ನಾಗರಖಂಡನಾಡುಮಂ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತಮಿರೆ (ಎಕ. VII (೩). ೩೮೦-೨೦ ; ೧:೭೨) ; ಶ್ರೀಮಾಂಡಳಿಕಮಹಾದೇವರಾಣೆಯರು (ಕರ್ನಾಶಾ-೨೦-೨೫ ; ೧೨೭೮). [<ಪ್ರಾ. ರಾಣಯ]

ರಾಣ್ಯ ' ರಾಣುವೆ ' ನೋ.

ರಾತಲು, ರತಲು, ರಾತ್ಲು (ನಾ). ವಲುವಪ್ಪು ತೊಲಗಳ ಒಂದು ತೂಕ : ಇಂಗ್ರೇಜಿ ರಾತಲು ಎರಡಕ್ಕೆ ಪಣ್ಯಸೇರು ಒಂದು (ಜಾಕೋಪ್ರ. ೦೨೬) ; ಒಬ್ಬ ಪ್ರಾಪುಸ್ಥನ ಸಮತೂಕಆಹಾರವೆಂದರೆ . . . ೧೨ ಪಿನ್ನಿನಿಂದ ಒಂದು ರಾತಲಿನವರೆಗೆ ಶರ್ಕರಪಿಷ್ಟಗಳು ಇರಬೇಕು (ಆಪುಶಾ. ೬೦). **ರತಲು** : ಒಂದು ರತಲು ವಾಲ್ವತ್ತುರೂಪಾಯಿ ತೂಕವುಳ್ಳದ್ದು (ಮುಂಜಾಶಾ. ೬೦). **ರಾತ್ಲು** : ಒಂದು ಖಂಡಿತೂಕದ ಗೋಧಿಹಾಳನ್ನು ಬೆಳೆಯಿಸಲು ಸಾಧಾರಣ ೧೨ ರಾತ್ಲು ಸಾರಜನಕವೂ . . . ೧೨ ರಾತ್ಲು ಪೊಟೇಸಿಯಂ ಕ್ಷಾರವೂ ಬೇಕಾಗುವುದು (ಜಾಂಕೃ. II. ೬೬೩) ; ಒಂದು ರಾತ್ಲು ಧಾರದ ಸಾಮಾನು ಹೊರಲಿಕ್ಕೆ ಸುಮಾರು ೫೦ ರೂಪಾಯಿ ತಗಲುತ್ತದೆ (ಜಂಕೃ. ೦೪೯). [←ಅರ. ರತ್ಲ್ ; ಹಿಂ. ರಾತುಲ್ ; ಮರಾ. ರತಲ್, ರತ್ಲ್./ಪೋರ್ಚು. Arratel]

ರಾತಾರಾತ್ರಿ ' ರಾತೋರಾತು ' ನೋ.

ರಾತೀಪು ' ರಾತೀಬು ' ನೋ.

ರಾತೀಬು, ರಾತೀಪು (ನಾ). ೧. ಪುಷ್ಟಿಕರವಾದ ಆಹಾರ; ಸತ್ತ್ವಪುಳ್ಳ ಆಹಾರ : (೬). ೨. (ಸಾಮಾನ್ಯವಾಗಿ) ದಿನನಿತ್ಯದ ಆಹಾರ : ಮನೆಯಲ್ಲಿ ರಾತೀಬಿಗೆ ಗತಿಯಿಲ್ಲ. ರತ್ನಪಡಿಯ ವ್ಯಾಪಾರ (ಗಾಪ). **ರಾತೀಪು** : ೧. ಅಡು, ಕುರಿ ಮುಂತಾದ ರಾತೀಪಿನ ಸಾಮಾನು ಹೇರಳವಾಗಿ ತರಿಸಿ (ಜಾಕೋಪ್ರ. ೬೪). ೨. ಹುಟ್ಟಿಸಿದ ದೇವರು . . . ನನಗೂ ರಾತೀಪು ಕೊಟ್ಟ (ಪಂಗಾಂ. ೬೩) ; ಮೂರುದಿನಗಳಿಂದ ರಾತೀಪು ತಿನ್ನದೇ ಹಸಿದಿರುವೆ (ಶ್ರೀಚಾಮು. ೦೯).

[←ಅರ. ಹಿಂ. ರಾತಿಬ್ ; ಮರಾ. ರತೀಬ್]

ರಾತು (ನಾ). ಹುಲುಸು ; ಸೊಂಪು : ರಾತಾಗಿ ಬೆಳೆದ ಮೆಣಸೀಯ ಮೆಳೆಯಲ್ಲಿ ಮೋಸಮಾಡಿದಳು ಗಗಕಾತಿ (ಹ್ಯಾಳು. ೬೦). [?]

ರಾತೋರಾತ್ ' ರಾತೋರಾತು ' ನೋ.

ರಾತೋರಾತು, ರಾತಾರಾತ್ರಿ, ರಾತೋರಾತ್, ರಾತೋರಾತ್ರಿ, ರಾತ್ರಾರಾತ್ರಿ, ರಾತ್ರೋರಾತ್ರಿ (ಅ). ರಾತ್ರಿಯಲ್ಲಿಯೆ : ರಾತ್ರಿ ಮುಗಿಯುವುದರೊಳಗಾಗಿ : ತಿಮ್ಮಣ್ಣನಾಯಕನು ರಾತೋರಾತು ನಾಗತಿಯವರೊಡನೆ . . . ದುರ್ಗದ ಗುಡ್ಡಕ್ಕೆ ಬಂದನು (ಕೃಪಾ. ೬). **ರಾತಾರಾತ್ರಿ** : ಮುತ್ತಣ್ಣನು ಸಂಗಡಯಿದ್ದ ಕೊಡಗಜನ ಯಾವತ್ತು ತೆಗೆದುಕೊಂಡು ರಾತ್ರಿರಾತ್ರಿಯೇ ಕಣ್ಣೂರಿಗೆ ಹೋರಟುಹೋಗುವಲ್ಲಿ (ಜಾಕೋಪ್ರ. ೬೨). **ರಾತೋರಾತ್** : 'ರಾತೋರಾತ್' ಹೀಗೆ ಜಾತಕ ಹಿಡಿದು ಹೋಗುವ ಅವಸರ (ಹುಕರುಚಾ. ೨೫೦). **ರಾತೋರಾತ್ರಿ** : ತೆಂಗಿನ ಮಡಲಿನ ಸೂಟಿಯೊಂದನ್ನು ಉರಿಸಿಕೊಂಡು ರಾತೋರಾತ್ರಿ ಹೊರಟಿ ಬಿಟ್ಟಿದ್ದರು (ಪಗುಚ. ೬೦) ; ದ್ಯಾವಮ್ಮ ಇವತ್ತು ಬರೋದಿಲ್ಲ . . . ಅಂತ ಅವಳಣ್ಣ ತನಿಯ ಬಂದು ರಾತೋರಾತ್ರಿ ಹೇಳಿದ (ಪೂಕೃ. ೨೪). **ರಾತ್ರಾರಾತ್ರಿ** : ಕಾಡಿನಲ್ಲಿ ಗುಟ್ಟಾಗಿ ರಾತ್ರಾರಾತ್ರಿ ಕುದುರೆಹಿಂಡನ್ನು ಮೇಯಿಸುವ ಸಲುವಾಗಿ ಅಟ್ಟಿಕೊಂಡು ಹೋಗುತ್ತಿದ್ದರು (ಕ್ರಪು. ೨೯೩) ; ರಾತ್ರಾರಾತ್ರಿಯೇ ಆತ ಕನ್ನಾನೂರಿಗೆ ಹೋಗಿ . . . ಪೋರ್ಚುಗಲ್ಲಿಗೆ ತನ್ನ ಮರುಪ್ರಯಾಣವನ್ನು ಆರಂಭಿಸಿದನು (ಕ್ರಚಾಇ. II. ೨೨೬). **ರಾತ್ರೋರಾತ್ರಿ** : ರಾತ್ರೋರಾತ್ರಿ ಯುದ್ಧಸಿದ್ಧತೆಗಳು ನಡೆದವು (ಕೂಪ್ರ).

[←ಮರಾ. ರಾತೋರಾತ್, ರಾತೋರಾತೀ]

ರಾತ್ರಾರಾತ್ರಿ ' ರಾತೋರಾತು ' ನೋ.

ರಾತ್ಯೃತೆ (ನಾ). [ಕಾಮಶಾ] ರತಿಕ್ರೀಡೆಯ ಒಂದು ಧ್ವನಿ : ಸೀತ್ಕೃತಂ ಹೂಂಕೃತಂ . . . ರುಚಿತ ಮೃದುರತಮಾಹತಂ ದೂತ್ಕೃತಂ ಶ್ವಸಿತ ಪುರುರಾತ್ಕೃತಂ [ಜಾಕಾಂ. ದಾತ್ಕೃತಂ ಪಾತ್ಕೃತಿ] ಎನಿಪೀ ಚಮತ್ಕೃತಿಯನೆಯ್ದು ರಮಿಸುವನೆ ಚದುರಂ (ಕಪ್ರ. ೯-೩೦). [ಸಂ.]

ರಾತ್ರಾರಾತ್ರಿ ' ರಾತೋರಾತು ' ನೋ.

ರಾತ್ರಿ (ನಾ). ೧. ಇರುಳು ; ನಿಶೆ ; ರಜನಿ : "ತಮೂ . . . ಶ್ಯಾಮಾ, ರಾತ್ರಿಃ –ಈ ೧೯ ಇರುಳಿನ ವೆಸರ್" (ಹಲಾಯು. ೦೯-೦೮೭) ; ಅಗ್ನಿಕುಂಡ

ದುಂ ದೀಪ್ತಿಮಾನಮಾದುದು . . . ರಾತ್ರಿಯಾಕಾಶದಲಿ ಕಾಣ್ಬಾಂದು ತಾರಾಗರ್ಧದಂತೆ (ಶ್ರೀರಾಮ. ೦೦-೨೬೪). ೨. ಇರುಳಿನ ಕತ್ತಲೆ.– ಅಂಧಕಾರ. ೩. ಅರಿಸಿನ. [ಸಂ.]

ರಾತ್ರಿಂಚರ (ನಾ). ೧. ರಾಕ್ಷಸ : ನಡಮಾಡದೊಳಗಿರ್ದ ರಾತ್ರಿಂಚರರ್ . . . ಎರಗಿ ಕಂಗೆಡಿಸಲ್ಕೆ (ಕಇಹಾ. ೦೦-೪೮). 'ರಾತ್ರಿಂಚರಪತಿ' ಪರಾ. ೨. ಕಳ್ಳ. ೩. ಪಿಶಾಚಿ ; ದೆವ್ವ. ೪. ಕಾವಲುಗಾರ.

ರಾತ್ರಿಂಚರಪತಿ (ನಾ). ರಾಕ್ಷಸರ ಮುಖಂಡ: ನೈಋತಿ : ರಾತ್ರಿಂಚರಪತಿ ಸಿತವಂಜ್ಯಾಂಪುರು ಪಾತಿಹಾರೋರುಮಯೂಖಿ . . . ಬಳೆದು ಬಳಸು ದಂಕಾಯ್ತು ಬೆಳ್ದಿಂಗಳೆತ್ತಂ (ರಾಹರಿ. ೦೩-೧೨). [ಸಂ.]

ರಾತ್ರಿಚರ (ನಾ). ೧. ಇರುಳಿನಲ್ಲಿ ಓಡಾಡುವವನು ; ಕಳ್ಳ. ೨. ಪಿಶಾಚಿ ; ದೆವ್ವ. ೩. ನಿಶಾಚರ; ರಾಕ್ಷಸ : ಮಿಚರಸುರೋರಗಸಚ ರಾತ್ರಿಚರಚಮೂವಂದ್ಯ (ಚಾಹರಿ. ೩-೩). ೪. ಕಾವಲುಗಾರ; ಪಹರಿ. [ಸಂ.]

ರಾತ್ರಿಜ (ನಾ). ಇರುಳಿನಲ್ಲಿ ಮೂಡುವುದು; ನಕ್ಷತ್ರ; ತಾರೆ. [ಸಂ.]

ರಾತ್ರಿಜಲ (ನಾ). ಮಂಜು ; ಕಾವಳ. [ಸಂ.]

ರಾತ್ರಿಜಾಗರ (ನಾ). ೧. ರಾತ್ರಿಯಲ್ಲಿ ಎಚ್ಚರವಾಗಿರುವಿಕೆ. ೨. ಇರುಳಿನಲ್ಲಿ ಎಚ್ಚರದಿಂದಿರುವ ಪ್ರಾಣಿ ; ನಾಯಿ : "ಕಾಳೀದುಕಂ ರಾತ್ರಿಜಾಗರಂ ಗ್ರಾಮಶಾರ್ದೂಲಂ . . ನಾಯಿ" (ಪುಂಗಣ. ೩೫-೪). [ಸಂ.]

ರಾತ್ರಿಜ್ವರ (ನಾ). ರಾತ್ರಿಯಲ್ಲಿ ಮಾತ್ರ ಬರುವ ಒಂದು ಬಗೆಯ ಜ್ವರ: ವಿಷ್ಣುಕ್ರಾಂತಿ, ಶುಂಠಿ . . . ಸಮಭಾಗ ಕಷಾಯಮಿಟ್ಟು ಕೊಡಲು ರಾತ್ರಿಜ್ವರಂ ಮಾಣ್ಗುಂ (ಗಕೃ. ೦೦೭). [ಸಂ.]

ರಾತ್ರಿನಾಡಿ (ನಾ). ಶರೀರದ ಬಲಭಾಗದಲ್ಲಿರುವ ನಾಡಿ : ಸ್ತ್ರೀ ಪುರುಷ ನಾಡಿಗಳಿಗೆ. ದಿವಾನಾಡಿಗಳೆಂತಲೂ ರಾತ್ರಿನಾಡಿಗಳೆಂತಲೂ ವ್ಯವಹಾರ ಉಂಟು (ಹಣಾ. ೪-೩ ಚಾಕ್ಷಿಪ್ರ). [ಸಂ.]

ರಾತ್ರಿಭುಕ್ತವ್ರತಿಕ (ನಾ). [ಜೈನ] ರಾತ್ರಿಯಲ್ಲಿ ಊಟಮಾಡದಿರುವ ವ್ರತವನ್ನಾಡುವವನು : ದಿವದೊಳ್ ಸುರತವ್ಯಾಪಾರವಿನೋದಮಾನನ್ನ ಪಾನಮಂ ರಾತ್ರಿಯೊಳಾಸೆವಡುಪುದುವನುಬುದ್ಧಿಗೊವ ವಿವೇಕಿಯಾಱನೆಯ ರಾತ್ರಿಭುಕ್ತವ್ರತಿಕಂ (ಸುಳುಚಾ. ೬-೩೦). [ಸಂ.]

ರಾತ್ರಿಮಣಿ (ನಾ). ೧. ಇರುಳಿನಲ್ಲಿ ರತ್ನದಂತಿರುವವನು : ಚಂದ್ರ. ೨. ಕರ್ಪೂರ. [ಸಂ.]

ರಾತ್ರಿಯುದ್ಧ (ನಾ). ಇರುಳಿನಲ್ಲಿ ನಡೆಯುವ ಕಾಳಗ ; ಪ್ರಾಚೀನ ಕರ್ನಾಟಕದಲ್ಲಿ . . . ರಾತ್ರಿಯುದ್ಧವು ಇರಲಿಲ್ಲವೆಂದೇ ಹೇಳಬಹುದು. ಅದರೂ ಒಂದೇ ಒಂದು ಶಾಸನದಲ್ಲಿ ಮಾತ್ರ ರಾತ್ರಿಯುದ್ಧಗಳು ('ಇರುಳ ಬವರ') ಬಹು ವಿರಳವಾಗಿಯಾದರೂ ನಡೆಯುತ್ತಿದ್ದುವೆಂಬುದಕ್ಕೆ ಸೂಚನೆಯಿದೆ (ಕಶಾ. ೩೭೦). [ಸಂ.]

ರಾತ್ರಿರಾಣಿ (ನಾ). ಇರುಳಿನಲ್ಲಿ ಮಾತ್ರ ಅರಳಿ, ಸುವಾಸನೆಯನ್ನು ಬೀರುವ ಒಂದು ಬಗೆಯ ಹೂವು ಮತ್ತು ಅದರ ಗಿಡ : ಸೊಕ್ಕು ಜವ್ವನದ .ರಾತ್ರಿರಾಣಿ ಮುಸುಗುಡಿಸೆ ಆಯ್ತು ಹಗಲು (ಸೂರ್ಯಚಾ. ೪೪-೦೪) ; ಬೆಳದಿಂಗಳಿರುಳಲ್ಲಿ ರಾತ್ರಿರಾಣಿಯ ಹೂವು ನಾಲ್ದೆಸಗು ಅಚ್ಚ ಸೌಘವ ಬೀರಿರೆ (ಜಾಪರ್ಶ. ೦೩-೪೦೩). [ರಾತ್ರಿ+ರಾಣಿ]

ರಾತ್ರಿವಿರಾಮ (ನಾ). ಇರುಳು ಮುಗಿಯುವ ಕಾಲ ; ಮುಂಜಾವ : "ರಾತ್ರಿವಿರಾಮಂ ವೈಷ್ಯಂ" (ಪಚ್ಚ. ೧೭-೬). [ಸಂ.]

ರಾತ್ರೀಚರ (ನಾ). ನಿರಋತಿ ; ನಿರುತಿ : ದಿನಮಣಿಯ ಪುತ್ರನೇ ಪಾಪ ಪುಣ್ಯವಿಚಾರಕಂ ನೆಗಳ್ದ ರಾತ್ರೀಚರನೆ ಪಾದುಕಾಧಾರನೆನೆ ಶಿವಂ ವೈಭವ ದೊಳಿರುತಿರ್ದನು (ಪಾಪ್ರ. ೨೯-೩೯). [ಸಂ.]

ರಾತ್ರೀಶ (ನಾ). ರಾತ್ರಿಯ ಒಡೆಯ ; ಚಂದ್ರ : ದಿವಸೇಶ ರಾತ್ರೀಶಾಧಿಗ್ರಹತಾರಕಾವಳಯಧೀಶ ಸಕಲಮುನೀಶರುಂ . . . ನೆರೆದು (ಪಚಕ್ರ. ೨೪-೪೮) ; ಘೋರಾಂಧಕಾರರಕ್ಕಸನ ಪೆರ್ಮಡೆಯ ಮೀಲ್ಕೋರಂತೆ ದಂಡೆತ್ತಿ ಬಹನೋ ರಾತ್ರೀಶನೆನೆ (ಪಪಚೋ. ೨೩-೩೪). [ಸಂ.]

ರಾತ್ರೆ (ನಾ). ರಾತ್ರಿ ; ಇರುಳು : ಚಿಕ್ಕದೇವರಾಜರು ರಾತ್ರೆ ಹಗಲು ಘಪಜು ಕಳುಹಿಸಿ (ರಾತೀಪ್ರ. ೪). 'ಸೆಡುರಾತ್ರೆ' ಪರಾ. [< ಸಂ. ರಾತ್ರಿ]

ರಾತ್ರೆರಾಣಿ (ನಾ). = ರಾತ್ರಿರಾಣಿ : ಮನಮು ಮುಂದೆಯೇ ಸರ್ಪಗಳಿಗೆ ಪ್ರಿಯವಾದ ದೇವರ ಮುಡಿಗೆ ಅರ್ಹವಾಗಿ ತಾಮಸಪುಷ್ಪ – ರಾತ್ರೆರಾಣಿ (ಸಂಹ್ಯಾ. ೦೭). [ರಾತ್ರೆ + ರಾಣಿ]

ರಾತೋರಾತ್ರಿ ' ರಾತೋರಾತು ' ನೋ.

ರಾತ್ಯಂಧ (ನಾ). ೧. ರಾತ್ರಿಯಲ್ಲಿ ಕಣ್ಣು ಕಾಣಿಸದವನು ; ಇರುಳುಗಣ್ಣ : ಕೌಶಿಕಂಗಳ್ಗಂ ನಮಗ್ಗೆ ದುರ್ಧರಮಪ್ಪ ವೈರಮುಂಟಾಗಿಯುಂ ವಾಲ್ಮೆಲ್ಲರುಂ ರಾತ್ರ್ಯಂಧರುಮಂಪರೆಲ್ಲರುಂ ದಿವಾಂಧರುಮಪ್ಪುದೆಱಂ ಸಂಧಾನಮೆಂತುಮಾಗಲರಿಯದು (ತುಸಚ. ೩೫೦-೫೦). ೨. ರಾತ್ರಿಯಲ್ಲಿ ಕಣ್ಣು ಕಾಣಿಸದಿರುವ ಕಾಗೆ ಮುಂತಾದ ಪಕ್ಷಿ. 'ದಿವಸಾಂಧ' ಪರಾ. [ಸಂ.]

ರಾತ್ಸು ' ರಾತಲು ' ನೋ.

ರಾದ್ಧ (ಗು). ೧. ಒಲಿಸಿಕೊಂಡ. ೨. ಸಾಧಿಸಿಕೊಂಡ ; ಸಿದ್ಧಿಯನ್ನು ಪಡೆದ. ೩. ದೊರಕಿಸಿಕೊಂಡ ; ಪಡೆದ. [ಸಂ.]

ರಾದ್ಧಾಂತ (ನಾ). ೧ [ತರ್ಕಶಾ] ವಾದವಿವಾದಗಳ ನಿರ್ಣಯ ; ಸಿದ್ಧಾಂತ : " ಕೃತಾಂತಃ. ರಾದ್ಧಾಂತಃ. ಸಿದ್ಧಾಂತಃ. ಸಮಯಃ — ಈ ೪ ಸಿದ್ಧಾಂತದ ಪೆಸರು " (ಪಣಾಮು. ೬-೦೦) ; ತತ್ತ್ವಭಾವನೆಯುಂ ಧ್ಯಾನಮುಮೆಂದುಮೊದುವಪರಾ ರಾದ್ಧಾಂತಮುಂ ತತ್ತ್ವೋರ್ಜನಮುಂ ತುಪ್ಪದ ಕಾದ ಪಾಲಪೊಲದೇಂ ಸಂಭುಸಂಯೋಗಮೋ (ಜಾಂತ್ರಿ. ೯-೦೪೬); ಸಕಲಜೀವದಯಾಪರ ಜೈಮಮಾರ್ಗರಾದ್ಧಾಂತಪಯೋಧಿಗಳ್ (ಪಪ. ೩೫-೦೦೭-೦೦೭ ; ೧೧೭೨). ೨. (ಅಲಂ) ರಂಪ ; ಗೊಂದಲ ; ಕೋಲಾಹಲ ; ನಾಳೆ ನಿನ್ನಣ್ಣ ಬಂದಾಗ ರಾದ್ಧಾಂತ ಆಗಬಾರದು (ಹುಚಕುದಾ. ೭೦೮); ಮಾಡಿಯಲ್ಲಿ ಈ ಮಾತಿನಿಂದ ರಾದ್ಧಾಂತವಾಗುತ್ತದೆ (ಹುಚಕ್ಕೃಪ. ೫೬).

ರಾದ್ಧಾಂಜಿಕಾಧಿಪ = ವಾದವಿವಾದ ಮಾಡುವುದರಲ್ಲಿ ಪ್ರಮುಖನಾದವನು ; ಒಂದು ಬಿರುದು : ' ಲೋಕಕ್ಕೆ ಸದ್ಗುರುವಾದಂ ನಯ ಕೀರ್ತಿದೇವಮುನಿಪಂ ರಾದ್ಧಾಂತಚಕ್ರಾಧಿಪಂ (ಪಪ. ೩೭. ೩೬-೯೦ : ೧೧೭೬). ರಾದ್ಧಾಂತಪಾರಗ = ಸಿದ್ಧಾಂತದಲ್ಲಿ ಪರಿಶ್ರಮವುಳ್ಳವನು: ರಾದ್ಧಾಂತ ಪಾರಗಂ ಗುಣವೃದ್ಧಂ ಮಾರ್ಗವ್ರಭಾವನಾರ್ಥದಿನಿರ್ದಂ (ಶಪ್ರತ್ತಿ. ೯-೩೦). ರಾದ್ಧಾಂತವಿದ = ರಾದ್ಧಾಂತಪಾರಗ : ತತ್ತ್ವನಿರ್ಣಿಕ್ತ ರಾದ್ಧಾನ್ತವಿದಂ (ಸಾಇತಿ. ೩೩. ೩೦-೩೯ ; ೪). ರಾದ್ಧಾಂತಿಕ = ರಾದ್ಧಾಂತ ಚಕ್ರಾಧಿಪ : ತಪೋನಿಧಿ ಮುನಿಚಂದ್ರಪ್ರತಿಪನಪಿಳರಾದ್ಧಾನ್ತೇಶಂ (ಪಪ. ೪೩. ೬೪೨-೪೬ ; ೧೧೭೬). [ಸಂ.]

ರಾಧ (ನಾ). ೧. ಅನುಗ್ರಹ ; ದಯೆ. ೨. ವೈಶಾಖಮಾಸ : " ಸ್ಮೈತಾಖಿ, ಮಾಧವಿ, ರಾಧಃ — ೩ ವೈಶಾಖಮಾಸದ ಹೆಸರುಗಳು" (ಸಿಶ್ಲಾ. ೧೦). ೩. ಏಳಿಗೆ ; ಅಭ್ಯುದಯ. [ಸಂ.]

ರಾಧನ (ನಾ). ೧. ಪ್ರಾಪ್ತಿ ; ಲಾಭ. ೨. ತಣಿವು ; ತೃಪ್ತಿ. ೩. ಪೆರಪೇರಿಕೆ. ೪. ಅನುಗ್ರಹ ಸಂಪಾದನೆ. ೫. ಸಾಧನೆ. [ಸಂ.]

ರಾಧಾತನೂಜ (ನಾ). ರಾಧೆಯ ಮಗ ; ಕರ್ಣ : ಗಂಗಾಕುಮಾರನ ಕಳಶಜನ ರಾಧಾತನೂಜನ ರಂಗಭೂಮಿಯಿದು (ಕುಣ್ಯಾ. ೬-೩೬). [ಸಂ.]

ರಾಧೆ (ನಾ). ೧. ಏಳಿಗೆ ; ಅಭ್ಯುದಯ. ೨. ಮಿಂಚು. ೩. ನೆಲ್ಲಿಗಿಡ. ೪. ವೈಶಾಖಮಾಸದ ಹುಣ್ಣಿಮೆ. ೫. ಕರ್ಣನ ಸಾಕುತಾಯಿ.

ಬಾಳನಂ . . . ಎತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ಸೊಸೆಯ ಸೋಂಕಿರೊಳ್ ಕೊಸನಿಟ್ಟೊಡೆ (ಹಂಪಾ. ೦-೧೩ ಪ). ೭. ಶ್ರೀಕೃಷ್ಣನ ನೆಚ್ಚಿನ ಪ್ರೇಯಸಿಯಾದ ಒಬ್ಬ ಗೋಪಿಕಾಸ್ತ್ರೀ : ನೋಡುತಿರಲು ಒಳಗಣ್ಣಿನಿದಿರು ನೀ ಹೇಗೊ ರಾಧೆಯಾದೆ (ಕೃಷ್ಣ ಭಾ. ೨೭-೫೧). ೭. ಇಪ್ಪತ್ತೇಳು ನಕ್ಷತ್ರಗಳಲ್ಲಿ ಹದಿನಾರನೆಯದು; ವಿಶಾಖಾನಕ್ಷತ್ರ: " ರಾಧೆಯೆ ವಿಶಾಖೆ " (ಶುಂಗಾ. ೦೨-೭); ಜಾಣಿಯಂತೆ ನೆಱೆ ಕೂಟ್ಟಿಸೆ ದೊಟ್ಟತು ರಾಧೆಯಂತೆ ಸಂದಿಸಿ ಮುಂ ಮೇಲೆ ಕೊಂಕದುದು (ಹುಕೇಶ್ವ. ೬-೭೬). [ಸಂ. ರಾಧಾ]

ರಾಧೇಯ (ನಾ). = ರಾಧಾತನೂಜ : ಕೋಳ್ಕೆಂದರಿದೀಡಾಡಿದವಂದ್ರಂಗೆ ಕವಚಮಂ ರಾಧೇಯಂ (ಹಂಪಾ. ೦-೦೦೦) ; ಮಱೆದಪ್ಪೊಡಂ ತೊದಳ ನುಡಿದಱಿಯವಪ್ಪುದಱಿಂ ಸತ್ಯರಾಧೇಯನುಂ . . . ಎನಿಸಿ (ಪುಸ್ತ. ೦-೬೨ ಪ). [ಸಂ.]

ರಾಪ್ಪೆ$_1$ (ನಾ). ಕಬ್ಬಿನ ರಸವನ್ನು ಹೆಚ್ಚಾಗಿ ಕುದಿಸಿ ಮಾಡಿದ ಪಾಕ : ಆ ರಸವನ್ನು ತುಸು ಕುದಿಸಿದರೆ ಕಾಕವಿಯಾಗುವುದು, ಅದಕ್ಕೂ ಹೆಚ್ಚು ಕುದಿಸಿದರೆ ರಾಪವಾಗುವುದು (ಶುಂಗಾಮಾ. ೬-೪೨).

[← ಹಿಂ. ಮಾಣ. ಥಾವ್].

ರಾಮ್ಮ (ನಾ). ಒಬ್ಬಾತನ ಹೆಸರು : ಬಂಕೇಯಂಗೆ ಧರ್ಮ್ಮಮೆಕ್ಕೆಸ್ಸು ಕುನ್ನಟ್ಟೆಯುಂ ರಾಪನುಮಿಬ್ಬು (ಪಂ. VII. ೨೦೭-೦೦ ; ೪೧೮). [?]

ರಾಪಣ (ನಾ). (?) : ಆ ಪುರದ ತರದ ವಿಸ್ತರದ ಸೌಧೋತ್ಕರದ ಶ್ರೀವರದ ರಾಪಣದ ಸಿಂಗರದ ಮಂಗಳದ ಗೋಪುರದ ಮತ್ತವಾರಣದ ತೋರಣದ ಉಜ್ ಮೆಱೆವ ವೈಭವಧ್ವಜಗಳು (ಗುಕಥ. ೦-೩೬). [?]

ರಾಪಮ್ಮ (ನಾ). ಒಬ್ಬಾತನ ಹೆಸರು : ತದಸೂರಾ ಸಿಜ್ಜವಡ್ಡಂಗಿ ರಾಪವ್ಮನ್ ಸಿದ್ಧವಾಳ್ಗೆ ಮಾಡಿದಾನ್ (ಕೌಶಾ. XX. ೬-೩; ಶು. ೨೭೫ ೫೬). [ರಾಪ್ಪ + ಅಮ್ಮ$_1$]

ರಾಪಾಟ (ನಾ). ಆರ್ಭಟ ; ಅಬ್ಬರ : ಅವರ ರಾಪಾಟ ಹೇಳತೀರದು (ಪೊಕ). [ರಾಪು + ಆಟ]

ರಾಪಾಡು (ಕ್ರಿ). ಆರ್ಭಟಿಸು : ಕೂಗಾಡು : ಅವನುಂ ಖಂಡಿಸಲಡ ಹಾಯ್ದು ರಾಪಾಡಿ ಶಿರವನು ಕುಟ್ಟಿ ಮೇಣ್ ತೋರಣಕೆ ಗುಟ್ಟಿದಂ ದಿಟ್ಟ ತನದಿಂ (ಪಚು. ೪೮-೧೭). [ರಾಪು + ಆಡು$_1$]

ರಾಪಿಸು (ಕ್ರಿ). ಕಂಗೊಳಿಸು : ಶೋಭಿಸು : ಅಂಗನೆಯ ರೂಪು ರಾಪಿಸುತಾ ಕಂಗಳಿಂದರಿದು ಕುಡಿವಳಂತೆ ವಾಲಗರಂಗದಿ ಬಂದು ನಿಂದಿಹಳು (ಕೌಪಾಗಾ. ೩-೨೪). [ರಾಪು + — ಇಸು$_5$]

ರಾಪು (ನಾ). ೧. ದಿಗಿಲು ; ಅಂಜಿಕೆ ; ಭಯ : ' ರಾಪುಗೊಳ್ ' ಪರಾ. ೨. ಆರ್ಭಟಿ ; ಜೋರು : ಪುಳಿಯ ರಾಪಿಗೆ ಮನುಷ್ಯರು ಹತ್ತಿರ ಸುಳಿಯದ ಹಾಗೆ ಮಾಡಿದ (ಕಂಪು. ೧೦) ; ನಿಷ್ಪಪ್ಪನ ಬಾಯ ರಾಪಿಗೆ ಯಾರು ಹೆದರುತ್ತಾರೆ ? (ಪುಷಚರಿ. ೧೭) ; ಆದರ ಬಾಯಿ ಕಟ್ಟಿಸಿ, ಕಣ್ಣಿಗೆ ಮೊಳೆ ಹೊಡೆದು 'ರಾಪು ನಿಲ್ಲಿಸುತ್ತೇನೆ' ಎಂದ ಇವರ ಹಮ್ಮು ಅಡಗಿತು ! (ಕೃಷ್ಣಚ. ೨೭). ' ರಾಪಾಡು ' ಪರಾ. ೩. ಕಾಂತಿ ; ಶೋಭೆ : 'ರಾಪಿಸು', ' ರಾಪುದೋರು' ಪರಾ. ೪. ಸೊಕ್ಕು ; ಗರ್ವ ; ಜಂಭ: ಈ ಮೊಗೇರ ಮಕ್ಕಳಿಗೆ ರಾಪು ಹೆಚ್ಚಾಯೇ ಈ ವರ್ಷ ಕಡಲಿಗೆ ಬೈಗೆಮಿನು ಬಾರದೆ ಇದ್ದುದು (ಪುಕಥ. ೫೩೬).

ರಾಪಾಗು = ಭಯಪಡು ; ಗಾಬರಿಬೀಳು : 'ಕಾವುಗಾರರು ಬಿಟ್ಟು ಪೋದರು ಅವರ್ಗೆಲ್ಲ ರಾಪಾಗಿ ಮನ ಬೆದರ ಕಡಗೆ (ಪಚೀ. ೩೧೬-೩). **ರಾಪು ಮಾಡು** = ೧. ಗಾಬರಿಯನ್ನುಂಟುಮಾಡು ; ಹೆದರಿಸು : ರಾಪುಮಾಡದ ಬಿಡನು ಜಪುಸು (ಪಂಚಾ. ೬೪). ೨. ಜೇರ್ಕೋದ್ಧಾರವಾಡು ; ಸರಿಪಡಿಸು : ಆ ಗ್ರಾಮಕು ಏಲುವಾಗಿಯರಲಾಗಿ ಆ ಗ್ರಾಮವನೂ ರಾವುಮಾಡಿ ಆ ಗ್ರಾಮದ ಕುಂಟೆಯನೂ ಕಟ್ಟಿಸಿ (ಕೌಶಾ. IX-II. ೪೪-೦೦ ; ೧೪೭). [ದೇ.ಗೆ ತುಳು. ತಲು. ರಾವು]

ರಾಪುಗೊಳ್ (ಕ್ರಿ). ಗಾಬರಿಯಾಗು ; ಹೆದರು : ಬಜ್ಜಿಯ ಬಿಲ್ಲುನಿಗೆ ರವಣನ ತಾಗಿತಂದೆಂದು ನೆಱೆ ಮೋಹದಿಂ ಪೊರಳ್ದುವ ಕೆಲವು ರಾಪು ಗೊಂಡೊಂದಿದಿನಿಯವನಗಲ್ದು ಮಱುಗಿ ಮದನಾಸ್ತ್ರದಿಂದಿರದೆ ಬಿದ್ದುವ ಕೆಲವು (ಕೃಪುಣಾ. ೨೮-೩೦). [ರಾಪು + ಕೊಳ್$_1$]

ರಾಪುದೋರು (ಕ್ರಿ). ಶೋಭಿಸು ; ಕಂಗೊಳಿಸು : ಈ ಪರಿಯಲಿ ರಾವುದೋರುತ ಸಿಂಹಪೀಠದಿ ಕುಳಿತು ಸಂತಸದಿ (ಕೌಂಪಾ. ೨-೩); ರಾಪುದೋರುವ ಕನಕನೂಪುರದಂದುಗೆಗಳ . . . ಇತ್ತು (ರೇಣುಕ್ಯ. ೨೯). [ರಾಪು + ತೋರು (< ತೋಱು)]

ರಾಭಸಿಕೆ (ಗು). ದುಡುಕಿನ ; ಆತುರದ : ಕಾಲೋಚಿತಸಂಧಿವಿಗ್ರಹ ದೊಳೊಂದಂ ಕಾರ್ಯಮಂ ಪ್ರಾಪ್ತಮಪ್ಪುದನಾಪ್ತೋಕ್ತವನುಂತೆ ರಾಭಸಿಕ ವಾಕ್ಯಾತಕ್ಕೆ ಮೆಯ್ದಪ್ಪುದೇ (ಜಾಂತಕ. ೬-೬೨). [ಸಂ.]

ರಾಭಸಿಕವೃತ್ತಿ (ನಾ). ದುಡುಕುತನ ; ಆತುರದ ಸ್ವಭಾವ : ಆ ಭವದೊಳ್ ತಾಯಾಗಿಯುಮಿತಾ ಭವದೊಳ್ ತಂದೆಯಾಗಿಯುಂ ನೀನೆಮ್ಮಾ ರಾಭಸಿಕವೃತ್ತಿಯಂ ವಾಗ್ವೈಭವದಿಂ ಕಳೆದು ಪೊರದೆಯ್ದುಮ್ಮಸುಂದಾ$_8$ (ಜಾಂತಕ. ೬-೬೦). [ಸಂ.]

ರಾಭೆಯ (ನಾ). ಒಬ್ಬಾತನ ಹೆಸರು : ಮಱುಜಾಂತರನೇಕರಂ ತಮಿ ಮಸ್ಸುಗಳಂ ಮದವಾರಣಂಗಳಂ ಕಾಂತೆಯರಂ ತುರಂಗಚಯಮುಂ ಪಿಡಿದಿ ತ್ತೊಡೆ ಮೆಚ್ಚಿ ರಾಭೆಯಂ ದನ್ತಿಯನಿತ್ತನಂತದುವೆ ಪೇಳದೆ ಬಿಟ್ಟುಗ ನಿನ್ನ ಗೆ[ಲ್ಲ]ವಂ (ಕೌಶಾ. XX. ೦೪-೦೪ ; ೪೮೦). [?]

ರಾಮ (ಗು). ೧. ಸಂತೋಷಗೊಳಿಸುವ ; ಆನಂದಕರವಾದ. ೨. ಮನೋಹರವಾದ ; ಸುಂದರವಾದ. ೩. ಕಪ್ಪಾದ ; ಕಪ್ಪನೆಯ : 'ರಾಮಧಾನ್ಯ' ಪರಾ. ೪. ಬಿಳಿಯ; ಬಿಳಿದಾದ : ' ರಾಮಗುಳ್ಳ ', ' ರಾಮತುಳಸಿ' ಪರಾ. (ನಾ). ೫. ಮನೋಹರವಾದುದು ; ಸುಂದರವಾದುದು : ದಳತಾಬ್ಜಪ್ರಸರಂ ಸರಂ ಕುಸುಮ ಮಾಳಾರಾಮಮಾರಾಮಂ (ಜಾಂ. ೨-೨). ೬. ಕತ್ತಲೆಯ ಬಣ್ಣ ; ಕಪ್ಪು. ೭. ಬಿಳಿಯ ಬಣ್ಣ ; ಶ್ವೇತ ವರ್ಣ : "ಬೀದಲ್ಲಿಯುಂ ಶುಚಿಯೆಂಬುದು, ರಾಮವುಮೆಂಬುದು" (ಪಂಚಾ. ೦೩೨-೩೩). ೮. ಹಸುರು; ಹರಿದ್ವರ್ಣ : "ಶ್ಯಾಮಂ. ಶ್ಯಾಮಳಂ. ರಾಮಂ, ಪಾರಾಶಂ, ಹರಿತಂ, ಹರಿತ್-ಈ ೬ ಪ(ಹ)ಸುರ್" (ಪಂಚಾಮಾ. ೦೨೦-೧೧). ೯. ಶುಚಿಯಾದುದು; ನಿರ್ಮಲವಾದುದು. ೧೦. ಸಂತೋಷ ; ಆನಂದ. ೧೧. ವಿಷ್ಣುವಿನ ಆರನೆಯ ಅವತಾರ : ಜಮದಗ್ನಿಯ ಮಗ ; ಪರಶುರಾಮ : ಕೂರಿ[ಸಿ] ಗುರುಶುಶ್ರೂಷೆಯೊಳಾ ರಾಮನನುಗ್ರಮಶುಪಾಟಿತ ರಿಪುವಂಶಾ ರಾಮನನಿಷುವಿದ್ಯಾಪಾರಗವೆನಿಪೆಮೆಂದು ಬಲ್ಮೆ ವೈಕರ್ತನನಾ (ಪಂಪಭಾ. ೦-೦೦೯) ; ಸಾಗರವ ಕಾಸರ ಸೆಣಸುವಂತಾಯ್ತು ಜೀಯಬಹುದಿನ್ನೆನುತ ಕೊಡಲಿಯ ರ್ಚುಡಿದನಾ ರಾಮ (ಪೊಪು. ೦-೦೭-೦೦). ೧೨. ವಿಷ್ಣುವಿನ ಏಳನೆಯ ಅವತಾರ ; ದಶರಥನ ಮಗ ; ರಾಘವ : ರಾಮನಕಟಾ ಹಸುಳೆ ಭಾರ್ಗವರಾಮನಗ್ಗದ ಜವನ ಜೂಬು (ಪೊಪು. ೦-೦೭-೦೩) ; ರಾಮನೊಡಗೂಡಿ ಬಳೆದರು ಮೂವರನುಜರುಂ (ತ್ರಿಪುತಾ. ೦೯-೧೧೪) ; ರಾಮನಂತಹ ರಾಜನಿಲ್ಲ ಕಾಮನಂತಹ ಪುರುಷನಿಲ್ಲ (ಗಾಪ). ೧೩. ವಿಷ್ಣುವಿನ ಎಂಟನೆಯ ಅವತಾರವಾದ ಕೃಷ್ಣನ ಅಣ್ಣ ; ಬಲರಾಮ ; ವಸುದೇವನ ಮಗ : "ಬಲದೇವಃ . . . ರಾಮಃ, ಕಾಮಪಾಲಃ . . . ಹಲಾಯುಧಃ—ಈ ೧೮ ಬಲದೇವನ ಪೆಸರ್ " (ಪಚಮು. ೬-೩೦) ; ಒಲ್ದೀಕ್ಷಿಸಿದೊ ನಿಜಾಗ್ರಜನಂ ದೈತ್ಯಾರಿ . . . ವಿಜಯಂ ನೈಗಾರಾಮನಂ ರಾಮನಂ (ಜಾಂ. ೯-೩೬). ೧೪. ವರುಣ :

ರಾಮೋತ್ಕಂಠೆ ' ಪರಾ. ೧ಜ. ಕುದುರೆ ; ಅಶ್ವ. ೧೬. ಒಂದು ಬಗೆಯ ಜಿಂಕೆ. ೧೭. ಪ್ರಿಯ ; ಇನಿಯ : ಅಭವರ್ಜಿಪೆಂ ರಣ ಯಶಶ್ರೀರಾಮನಂ ಭೀಮನಂ (ಗಣಭಾ. ೦-೩೨). ೧೮. [ವೀಶೈ] ಪಂಚಾಚಾರ್ಯರಲ್ಲಿ ಒಬ್ಬ : ಏಕೋರಾಮ : ರೇಣುಕ ರಾಮ ಪಂಡಿತ ಮಹಾಮರುಳಾರ್ಯರ . . . ಮಾಣದೆ ಬಣ್ಣಿಸುತ್ತಿರ್ಪಿಗಿ ಮೇಣ್ಪಡವಂ ಪರಮಾರ್ಥಸಿದ್ಧಿಯಂ (ಶಾಶಿ. ೦-೦೬). [ಸಂ.]

ರಾಮಕಲಿ (ನಾ). [ಸಂಗೀತ] ಒಂದು ರಾಗದ ಹೆಸರು : ಪೂರ್ವಿರಾಗವು ರಕ್ತದ ಒತ್ತಡವನ್ನೂ ತಿಲಂಗ್, ಬಿಲಾವಲ್, ಮುಲ್ತಾನಿ, ರಾಮಕಲಿ ರಾಗ ಗಳು ಕ್ಷಯರೋಗವನ್ನೂ. . . ಗುಣಪಡಿಸುವುದೆಂಬ ಭಾವನೆ ಉತ್ತರ ಭಾರತದಲ್ಲಿದೆ (ಶಾಸಂದ. ೩೮೪). [ಸಂ. ರಾಮಕಲಿ:]

ರಾಮಕ್ರಿಯೆ (ನಾ). [ಸಂಗೀತ] ಒಂದು ರಾಗದ ಹೆಸರು : ಬಳಿಕ ಸಪುಸ್ವರಾಗಂಗಳೊಳಗೆ ರಾಮಕ್ರಿಯೆ [ಶಾಶಾ. ರಾಮಕ್ರಿ] . . . ಮಧ್ಯ ಮಾವತಿಯೆಂಬ ಮೂವತ್ತಾಱುರಾಗಂಗಳು (ಪಪಚ. ೨೪೯). [ಸಂ. ರಾಮಕ್ರಿಯಾ]

ರಾಮಕ್ರೀ (ನಾ). [ಸಂಗೀತ] ಒಂದು ರಾಗದ ಹೆಸರು : ಲಲಿತಾ ಹರಿ ನಾಟಿ ರಾಮಕ್ರೀರಾಗ ತೋಡಿ ಮಕರಂದಿ ವಸಂತರಾಗಂ ಇವಾದಿಯಾದ ರಾಗಂಗಳಂ ಪಾಡುತ್ತಿರೆ (ಪಜಾಭಾ. ೨-೪೦). [ಸಂ.]

ರಾಮಗುಬ್ಬಿ (ನಾ). ಒಂದು ಬಗೆಯ ಬಿಳಿಯ ಕಬ್ಬು : ಕಬ್ಬಿನ ಜಾತಿ ಗಳು—ರಸದಾಳಿ, ರಾಮಗುಬ್ಬಿ, ಕರಿಗಬ್ಬು, ದೆತ್ತಗಬ್ಬು . . . ಎಂದು ಅನೇಕವುಂಟು (ಬುಂಜಾಜ. ೩-೨೦೦). [ರಾಮ + ಕಬ್ಬು೩ (<ಕರ್ಬು೧)]

ರಾಮಗುಳ್ಳ (ನಾ). ಒಂದು ಬಗೆಯ ಬಿಳಿಯ ಬದನೆ : ರಾಮಗುಳ್ಳ, ಕರಿಗುಳ್ಳ (ಕ್ಯಶಿಗಿ. ೭೦-೦೫೦) ; ಅತುಸೋಗೆಯಲೆಯ ಕಡ್ಡಿ . . . ರಾಮಗುಳ್ಳ, ಶುಂಠಿ, ಕಟುಕರೋಹಿಣಿ ಇವುಗಳನ್ನು ಸಮಭಾಗ ಕಷಾಯ ಕಾಯಿಸಿಕೊಡಲು ಶ್ಲೇಷ್ಮಜ್ವರವು ಗುಣವಾಗುವುದು (ಸಕ್ಕ. ೮೦). [ರಾಮ + ಗುಳ್ಳ]

ರಾಮಗೋಟು (ನಾ). ಒಂದು ಬಗೆಯ ಸಸ್ಯ : ಪಿಂಡಿಕಾಯಿ. ರಾಮ ಗೋಟು (ಕ್ಯಶಿಗಿ. ೩೩-೨೦೦೪). [?]

ರಾಮಚ (ನಾ). ಒಂದು ಬಗೆಯ ಔಷಧೀಸಸ್ಯ : ಪರ್ವಾಟಕ. ರಾಮಚದ ಚೂರ್ಣ . . . ಸಕ್ಕರೆ ಸಹ ಕೊಡಲು, ಸಕಲಕ್ಷಯವ್ಯಾಧಿ . . . ಹರ (ಬ್ಯಿವಿ. ೫೭). [?]

ರಾಮಚಂಗಿ (ನಾ). ಒಂದು ಬಗೆಯ ಫಿರಂಗಿ,— ಶೋಪು : ಹಿರಿಯ ತೋಪುಗಳು. ಸಣ್ಣ ತೋಪುಗಳ: . ರಾಮಚಂಗಿಗಳು, ರಾಮಬಾಣಗಳು, ಮತ್ತಾಪುಗಳು. . . ರಣಗಾತಿಗಳು ಮೊದಲಾದ ಯುದ್ಧೋಪಕರಣಗಳನ್ನೆಲ್ಲ ಎಣೆಸಿದುದಾಯತು (ಜಕ್ಕಣ. ೦೩). [← ಹಿಂ. ರಾಮಚಂಗೀ]

ರಾಮಚರಿತ (ನಾ). ರಾಮನ ಕಥೆ : ರಾಮಚರಿತಾರ್ಥವನು ಕೇಳ್ದಪ ರಾಮನಿಗೆ ಸರಿಯಹನು ಜಗದೊಳು ರಾಮನಾಮದ ಮಹಿಮೆಯನು ಬಣ್ಣಿ ಸುವಡರಿದು (ತೊಆಣ. ೬-೨೩-೬೦ ೨೩೬೬). [ಸಂ.]

ರಾಮಟಂಕಿ, ರಾಮಟೆಂಕಿ (ನಾ). ರಾಮನ ಪಟ್ಟಾಭಿಷೇಕದ ಚಿತ್ರವಿರುವ ಒಂದು ಚಿನ್ನದ ನಾಣ್ಯ : ' ಶ್ರೀರಾಮಟಂಕೇಮರಹ ' ಪರಾ. **ರಾಮಟೆಂಕಿ** : ರಾಮಟಂಕೇ ನಾಣ್ಯವು ಕಬಾಕಟಿ ನಾಲ್ಕು ತೊಲಿ ಇರುತ್ತಿತ್ತು (ಆಚಾಗ. ೨೦೦). [ರಾಮ + ಟಂಕಿ]

ರಾಮಟೆಂಕಿ 'ರಾಮಟಂಕಿ ನೋ.

ರಾಮಠ (ನಾ). ಇಂಗು ; ಹಿಂಗು : "ಹಿಂಗುಃ, ರಾಮಠಂ—ಈ ೨ ಹಿಂಗು" (ಪಣಾಯು. ೦೦೦-೪೬೩) ; ಎರಡುಳ್ಳಿ ಹಿಂಗು ನಿಂಬ ತಿರುಳಾದಿನ ಬೆಣ್ಣೆ ಬೇವಿನೆಣ್ಣೆಯಂ ಬಿತ್ತರದಿಂ ನೆಯ್ ನಿಲೆ ಕುದಿಯಿಸುಗೆ ರಾಮಠಕ್ಕೆಲ್ಲ ಮಿಂತಿದುಂ ಸಮನಕ್ಕುಂ (ವೀಚಿಸಾಸಂ. ೬-೪೬). [ಸಂ.]

ರಾಮಣೀಯಕ (ಗು). ೧. ಸುಂದರವಾದ ; ರಮಣೀಯವಾದ ; ಬೆಲುವಾದ : ಸಂಧಿ ಮುಗಿದುದು ರಾಮಣೀಯಕ ರಾವಕಥೆಯೊಳಗೆ (ಶಿಚಿಪಾ. ೪೬-೨೯) : ರಾಮಣೀಯಕ ರಾಜಿಗೆ ಪಶ್ಚಿಮರಂಗಧಾವನಿಗಾನೆಜಿಗುವೆನು (ಪಜಾ. ೦-೦). (ನಾ). ೨. ರಮಣೀಯವಾದುದು ; ಬೆಲುವಾದುದು : ವನ ರಾಮಣೀಯಕಂ, ಜಲ ರಾಮಣೀಯಕಂ (ಶ್ರೀಣಾಪಾ. ೦೪೬-೩೨). [ಸಂ.]

ರಾಮಣೀಯತೆ (ನಾ). =ರಾಮಣೀಯಕ ೨ : ' ರಾಮಣೀಯತೆವೆಱು ಪರಾ. [ಸಂ. ರಾಮಣೀಯತಾ]

ರಾಮಣೀಯತೆವೆಱು (ಕ್ರಿ). ಸುಂದರವಾಗು ; ಬೆಲುವಾಗು : ರಾಮಣೀ ಯತೆವೆತ್ತ ಚಿಂದಳಿರ್ ಮಿಡಿಯಿಂದೆ ಮಾಮರ ಮನಗೊಳಿಸಿದುವು (ಪಜಾಪ. ೨೨-೪೪). [ರಾಮಣೀಯತೆ + ಪೆಱು೧]

ರಾಮತುಳಸಿ (ನಾ). ತುಳಸಿಯಲ್ಲಿ ಒಂದು ಬಗೆ; ಬಿಳಿತುಳಸಿ : (ಕ್ಯಶಿಗಿ. ೩೭-೦೦೫). ' ಕರಿತುಳಸಿ' ಪರಾ. [ಸಂ. ರಾಮತುಲಸೀ]

ರಾಮದೂತ (ನಾ). ೧. ರಾಮನ ಸೇವಕ : ರಾಮದೂತನೆ ? ಎಲ್ಲಿ ? ಎಲ್ಲಿ ತೋರ್ ! (ಶ್ರೀಣಾಪಾ. ೦೩೬-೦೩೭). ೨. ಹನುಮಂತ. ೩. ಕಪಿ ; ಕೋತಿ : ಈತನಂ ರಾಮದೂತನೆಂದು ಗೋಸಱಗಳೆದು ಪರಿಭವಿಸಿ ಪೊಣ ಮಡಿಸಿ ಕಳೆಯಿಂ (ಪಂಗಾಪಾ. ೦೨-೦೪೦ ಪ). [ಸಂ.]

ರಾಮಧಾನ್ಯ (ನಾ). ಒಂದು ಬಗೆಯ ಕಪ್ಪನೆಯ ಧಾನ್ಯ ; ರಾಗಿ : ರಾಮಧಾನ್ಯದ ಕೃತಿಯನು . . . ಪೇಳುವೆನು (ಅಷಾಚ. ೩-೭). [ಸಂ.]

ರಾಮನಡಿಕೆ (ನಾ). ಒಂದು ಬಗೆಯ ಔಷಧೀಸಸ್ಯ : ರಾಮನಡಿಕೆ, ರಾಮಪತ್ರೆ (ಕ್ಯಶಿಗಿ. ೩೩-೦೦೦೭). [?]

ರಾಮನವಮಿ (ನಾ). ಶ್ರೀರಾಮನು ಹುಟ್ಟಿದ ಚೈತ್ರಶುದ್ಧನವಮಿಯ ದಿನ ಮತ್ತು ಅಂದು ಆಚರಿಸುವ ಹಬ್ಬ : ರಾಮನವಮಿಯಲ್ಲಿ ರಾಮ ಭಕ್ತರು ಉಪವಾಸ ಮಾಡುವರು (ಶಾಪತ್ರಿ. ೬೨). [ಸಂ. ರಾಮನವಮೀ]

ರಾಮನಾಥ (ನಾ). ಶಿವ ; ಈಶ್ವರ : ರಾಮನಾಥನು ಸರ್ವಗತನೇ ರಾಮನಾಥನ ಭಕ್ತರನಳರು ರಾಮನಾಥನನರ್ಚಿಸಿದವರು ಪರಮಪಾವನರು (ಶಪಪ್ರ. ೫೦-೬೦). [ಸಂ.]

ರಾಮಪಟ್ಟಿ (ನಾ). ಒಂದು ಬಗೆಯ ಆಟ ; ತಿಳ್ಳಿಯಾಟ : ಸ್ಕೂಲಿನ ಸುತ್ತ ಓಡುವ್‌ದೋ, ಅಲ್ಲಿನ ಹುಣಸೇಮರದ ಕೆಳಗೆ ರಾಮಪಟ್ಟಿ ಆಡುವುದೋ ಅವನ ವಾಡಿಕೆ (ಶಾ.ಬಾಚೀ. ೩). [?]

ರಾಮಪ್ರಿಯ (ನಾ). ೧. ರಾಮನಿಗೆ ಪ್ರಿಯನಾದವನು : ಯದುಗಿರಿಯೊಳ್ ನೆಲಸಿದ ರಾಮಪ್ರಿಯಂಗೆ ಪ್ರಿಯತಮರೆನಿಸಿದ ರಾಮಾನುಜರಂ ಸಸ್ಮರಿಸುವರ್ (ಗಚಿಗೂ. ೪೬-೩ ಪ). ೨. [ಸಂಗೀತ] ಒಂದು ರಾಗದ ಹೆಸರು : ರಾಮಪ್ರಿಯು . . . ಕರುಣಾರಸಪ್ರಧಾನರಾಗ, ರಕ್ತರಾಗ (ಸಂಗಸಾ. ೦೪೩). [ಸಂ.]

ರಾಮಫಲ (ನಾ). ಒಂದು ಬಗೆಯ ಮರ ಮತ್ತು ಆದರ ಹಣ್ಣು : (ಕ್ಯಶಿಗಿ. ೭-೨೨). ' ಸೀತಾಫಲ ' ಪರಾ.

[ಸಂ./ತೆಲು. ರಾಮಫಲ, ರಾಮಾಫಲ]

ರಾಮಬಾಣ (ನಾ). ೧. ಶ್ರೀರಾಮಚಂದ್ರನು ಬಿಡುವ ಬಾಣ ; ಶ್ರೀ ರಾಮನು ಬಾಣವನ್ನು ಒಮ್ಮೆ ಪ್ರಯೋಗಿಸಿದರೆ ಅದು ತನ್ನ ಗುರಿ ಯನ್ನು ತಪ್ಪದೆ ಭೇದಿಸಿ ಮತ್ತೆ ಬತ್ತಳಿಕೆಗೆ ಹಿಂದಿರುಗಿ ಬರುವ ವಿಶಿಷ್ಟಶಕ್ತಿಯುಳ್ಳದೆಂದು ಭಾವಿಸಲಾದ ಬಾಣ : ದಿವ್ಯಾಸ್ತ್ರದಿಂ ವಿರಥಂಮಾಡಿದನೇಟುಸೂಬ್ಬರೆಗಮಾವಂ ರಾಮಬಾಣಕ್ಕೆ ವಿತ್ತರಿಪಂ (ಪಂಗಾಪಾ. ೦೨-೩೦); ತರಿಹರಿಸಬಾರದಿಹ ರಾಮಬಾಣಾಗಳ್ಕೆದಿದುವು ಕಾಲಾಗ್ನಿ ಯಂತೆ (ಕ್ಯಶಿಣಾ. ೨೦-೩೩); ರಾಮಬಾಣಕ್ಕೆ ಹುಸಿಯಿಲ್ಲ, ವಾಲಿಯ ಪ್ಯೆಗೆ ಕಲೆಯಲ್ಲ (ಗಾಪ). ೨. ಒಂದು ಬಗೆಯ ಯೆಮದ್ಧೋಪಕರಣ ;

ರಾಮಬಿಂಗಿಗಳು, ರಾಮಬಾಣಗಳು, ಮಾತಾಪುಗಳು . . . ರಣಗಾಹಿಗಳು ಮೊದಲಾದ ಯುದ್ಧೋಪಕರಣಗಳನ್ನೆಲ್ಲ ಎಸೆದುಬಿಡಾಯಿತು (೨೬೪೮. ೦೩).

೩. (ಆಲಂ) ನಿಶ್ಚಿತಫಲವನ್ನು ಕೊಡುವಂತಹುದು : ವ್ಯರ್ಥವಲ್ಲದುದು : ಶ್ರೀ ಶಂಕರರ ಕವಾಟದಲ್ಲಿನ ಬಿಷಧಗಳಲ್ಲಿ ಇದು ರಾಮಬಾಣದಂತಹುದು (ಕೀಚಾಕೃ. ೩೦೦); ನೆಗಡಿಗೆ ರಾಮಬಾಣ ಯುವುದೂ ಇಲ್ಲ (ಪಂಚರು. ೩೭).

[ಸಂ.]

ರಾಮರಕ್ಷೆ (ನಾ). ೧. ಶ್ರೀರಾಮನನ್ನು ಕುರಿತ ಪ್ರಸಿದ್ಧವಾದ ಒಂದು ಸ್ತೋತ್ರ. ೨. (ಆಲಂ) ಏನೂ ಇಲ್ಲದಿರುವ ಸ್ಥಿತಿ : ಯಾರ ಮನೆಯಲ್ಲಿ ಹೊಕ್ಕು ನೋಡಿದರೂ 'ರಾಮರಕ್ಷೆ' (ಹುಬಣಾ. ೧೦೩); ಈಗೆಲ್ಲಾ ರಾಮರಕ್ಷೆಯಾಗಿ ಕೂತದ ವನ್ಯಾಗ (೩೩೫೫. ೪೨).

[ಸಂ. ರಾಮರಕ್ಷಾ]

ರಾಮರಗಡು (ನಾ). ಹೆಚ್ಚಾದುದು ; ಪುಷ್ಕಳವಾದುದು : ಈ ಪಶುಪತಿ ಸಾಂಬಶಾಸ್ತ್ರಿಗಳ ಮನೇ ಊಟದ ಹಾಗೆ ರಾಮರಗಡಾದ ಊಟ . . . ಸಿಕ್ಕಿದರೆ (೩೩೪೫೫. ೭೯) [←ಮರಾ ರಾಮರಗಡಾ, ರಾಮರಗಾಡಾ]

ರಾಮರಸ (ನಾ). ಭಂಗಿಸೊಪ್ಪಿನಿಂದ ತಯಾರಿಸುವ ಒಂದು ಬಗೆಯ ಮಾದಕಪಾನೀಯ : ಬಣ್ಣ ಒಳಪುಕೊಳ್ಳುವುದಕ್ಕೆ ಮುಂಚೆ ನನ್ನ ಕೈಯಿಂದಲೇ ಅರ್ಧಸೇರು ರಾಮರಸ ಅರಸಿಕೊಂಡು ಕುಡಿದರು (ಗಳಣ. ೪೦); ಮಿರ್‌ಜಾಫರನು ಭಂಗಿ, ರಾಮರಸಗಳನ್ನು ಕುಡಿದು ನಿದ್ರೆ ಹೋಗುತ್ತಿದ್ದನು (೩೦೪೫. ೨೬೩).

[ಸಂ.]

ರಾಮರಸದಾಳಿ (ನಾ). ಒಂದು ಬಗೆಯ ಬಿಳಿಯ ಕಬ್ಬು : ರಾಮರಸದಾಳಿಯನ್ನು ತೋಟಗಳಲ್ಲಿಯೂ ಬತ್ತದ ಭೂಮಿಯಲ್ಲಿಯೂ ಹಚ್ಚುವರು (೪೫೫೫. ೨೬೩).

[ರಾಮ + ರಸದಾಳಿ]

ರಾಮರಾಜ್ಯ (ನಾ). ೧. ರಾಮನ ಆಳ್ವಿಕೆಯಲ್ಲಿದ್ದ ಸಾಮ್ರಾಜ್ಯ : ಸಿರಿಯ ವಲ್ಲಭನೊಲಿದು ರಾಜ್ಯಾಧ್ವರವನಾವಲು . . ಹರಸುತಿರ್ದುದು ರಾಮರಾಜ್ಯದೊಳಖಿಳಜನನಿವಹ (೪೦೩೫. ೪೪-೩೩) ; ರಾವಣರಾಜ್ಯದೊಳ್ ಕಾಲದ ಮರಣಮಿಲ್ಲಖಿಳಜೀವಿಗಳ್ಗೆ (೬೫೩೫. ೦೮-೦೩)· ೨. (ಆಲಂ) ಯಾರಿಗೂ ಯಾವ ತೊಂದರೆಯೂ ಇಲ್ಲದೆ ಬಾಳುವ ರಾಜ್ಯ ; ಸುಖೀರಾಜ್ಯ : ಗಾಂಧಿಯುಗದಲ್ಲಿ 'ರಾಮರಾಜ್ಯ'ವೆಂಬುದಕ್ಕೆ 'ಸ್ವರಾಜ್ಯ' ಎಂಬ ಅರ್ಥವನ್ನು ದೇಶದ ದೊಡ್ಡವರು ಸಂಪಾದಿಸಿಕೊಟ್ಟಿದ್ದಾರೆ (೧೩೫೫. ೪ ೫೫೫೩೩).

[ಸಂ.]

ರಾಮರಾಯಿ (ನಾ). (ಚಿತ್ರದುರ್ಗದ ಪಾಳೆಯಗಾರರಲ್ಲೊಬ್ಬನಾದ ರಾಮರಾಯನು ಚಲಾವಣೆಗೆ ತಂದ) ಒಂದು ಬಗೆಯ ಚಿನ್ನದ ನಾಣ್ಯ : ದುರ್ಗವು ಕೈವಶವಾದ ಮೇಲೆ ಈ ದೊರೆಯ ಹೊಕ್ಕಸದಲ್ಲಿದ್ದು ಹಗೆಗಳ ಕೈಗೆ ಸಿಕ್ಕಿದ ನಾಣ್ಯಗಳ ವಿವರ . . . ೧ ದೇವರಾಯಿ ೧ ಕಲ್ಲು ಕುಂಟೆ ೧ ರಾಮರಾಯಿ (೩೪೫೫-೦೦೪). 'ಕಂಠೀರಾಯಿ'. 'ದೇವರಾಯಿ' ಥರಾ.

[ರಾಮರಾಯ + — ಇ]

ರಾಮವಚನ (ನಾ). ೧. ರಾವಣನ ಮಾತ್ಸರ್ಯ–ನುಡಿ : ಹನುಮನು . . ರಾಮವಚನಾನುಗ್ರಹವು ವಿಶ್ರಾವಿಸಲು ಕರ್ಣದಲಿ ಸ್ಫಟಪದತಾಮರಸಕಭಿನಮಿಸಿ ಬೀಳ್ಕೊಂಡನು ಸರಾಗದಲಿ (೬೫೫೫. ೬-೪೭-೪೭)· ೨. (ಆಲಂ) ತಪ್ಪದೆ ಪಾಲಿಸುವ ಮಾತು–ಭಾವೆ : ಇವತ್ತು ಏನು ಮಾಡಿದರೂ ಸಾವಿರಾರು ಹೊನ್ನು ಕೊಟ್ಟರೂ ಬರಲಾರೆ, ನಾಳೆ ಅವಶ್ಯವಾಗಿ ಬರುವೆನೆಂದು ರಾಮವಚನವನಿತ್ತಳು (೩೦೫೫. ೦೯).

[ಸಂ.]

ರಾಮಸೇವಕ (ನಾ). = ರಾವಂದೂತ ೧ : ರಾಮಸೇವಕನಾಗಿ ರಾವಣನ ಪುರವ ನಿರ್ಧೂಮವು ಮಾಡಿದ (೪೦೦೫. ೧೩. ೦-೪೦-೦).

[ಸಂ.]

ರಾಮಾಂಗೆ (ನಾ). ಸುಂದರವಾದ ದೇಹವನ್ನುಳ್ಳವಳು ; ಚೆಲುವೆ ; ಸುಂದರಿ : ವಿಕ್ಷೇಂದೀವರವಕ್ತ್ರ ಸ್ಪರ್ಧಕತಚ್ಯಾಯಾಂಗಿ ರಾಮಾಂಗೆ (೫೪೪೫. ೦–೪).

[ಸಂ. ರಾಮಾಂಗಿ]

ರಾಮಾನುಜ (ನಾ). ೧. ಶ್ರೀರಾಮನ ತಮ್ಮ : ಅಜನು ಬಳಿಕ . . . ಆತ್ಮಜಮ ಜನಿಸಿದನೀ ದಶಸ್ಯಂದನಮಹೀಪಾಲ . . . ಬಳಿಕೀ ರಾಮ ರಾಮಾನುಜರು ಮಕ್ಕಳು ನಾಲ್ವರೀತಂಗೆ (೬೫೫೩. ೦-೦೬-೨೪). ೨. ಲಕ್ಷ್ಮಣ : ಬಳವದ್ದಿಕ್ಕಾಂತದೊಳ್ . . . ಭೀಮಸೇನಂ . . . ಬಳವದ್ರಾಮಾನುಜಂ ದಾಡವಶಿಖಿಹನುಮಂ ವೈನತೇಯಂ ಸಮಂ ತನ್ನೊಳಿಪ್ಪಂ (೨೪. VIII. ೫೫೫. ೦೪೬-೨೪; ೧೧೬೫)· ಬೆರಗಾಗಿ ನೋಡುತಿರೆ ರಾಮಾನುಜಂ ಶಾಸ್ತ್ರವೇತ್ತನಾ ಯೋಗಸಿದ್ಧಂ ಪೇಳ್ದನಾತಂ ಗಾಂಜಸೇಯಂ ಬ್ರಹ್ಮವಿದ್ಯಾನಿ (ಕ್ರೀಚಾಪು. ೬೫-೩೬೬). ೩. ಭರತ : ಪವಮಾನಜಂ . . . ಭರತಂಗೆ ತೋಱಿಸಲ್ಕೆ . . . ರಾಮಾನುಜಂ ಕುಶಸಮ್ಮುಖಿಕ್ಕಿದ ನುಡಿಸಿದಂ (೪೫೩೫. ೨೦-೦೩)· ೪. ಶತ್ರುಘ್ನ. ೫. ಶ್ರೀಮತ್ಪಗಳಲ್ಲಿ ಒಂದಾದ ವಿಶಿಷ್ಟಾದ್ವೈತಧರ್ಮವನ್ನು ಪ್ರತಿಪಾದಿಸಿದ ಹನ್ನೆರಡನೆಯ ಶತಮಾನದ ಯತಿ : ಶ್ರೀಮತೇ ರಾಮಾನುಜಾಯ ನಮಃ (೨೪. VIII (R). ೫೫೪೫. ೩೮-೦; ಸು. ೧೦೬೫೦ ೫೫) ; ವಿಶಿಷ್ಟಾದ್ವೈತಸಿದ್ಧಾಂತವೇಬುದು ಶ್ರೀಮದ್ರಾಮಾನುಜಾಚಾರ್ಯರಿಂದ ಪ್ರಚಾರಕ್ಕೆ ಬಂದಿರುವುದು (೬೦೦೫. ೨೩೦). ೬. ರಾಮಾನುಜಾಚಾರ್ಯರ ಅನುಯಾಯಿ.

ರಾಮಾನುಜಕೂಟ=ರಾಮಾನುಜರ ಅನುಯಾಯಿಗಳು ಸಾಮೂಹಿಕವಾಗಿ ಭೋಜನಮಾಡುವ ಛತ್ರ : ನಾಲು ಕಟ್ಟಿಸ್ತ /ಶ್ರೀರಾಮಾನುಜ ಕೂಟದಲೂ . . . ಶ್ರೀವಯಷ್ಣವರಗಳಿಗೆ ಯಿಕ್ಕುವ ಹಾಗೆ ಕಟ್ಟಳೆಯು ಮಾಡಿದವಾಗಿ . . . ರಾಮಾನುಜಕೂಟಕೆ ನಡಸಿಬಹುದು(೩೪೫೫. IX-ii, ೪೩-೪; ೧೧೬೭).

[ಸಂ.]

ರಾಮಾಭಿರಾಮೆ (ನಾ). ಅತಿಚೆಲುವೆಯಾದವಳು ; ಅತ್ಯಂತ ಸುಂದರಿ : ಎಲೆಗೆ ರಾಮಾಭಿರಾಮೆ ! ಸುಗ್ರೀವೆ ! ನೀಲಕುಂತಳೆ ! ಕಮುದನಯನೆ ! (೧೪೪೫೫. ೨೪೬-೫).

[ಸಂ. ರಾಮಾಭಿರಾಮಾ]

ರಾಮಾಯಣ (ನಾ). ೧. (ಶ್ರೀರಾಮ ಮತ್ತು ಸೀತೆಯರ ಚರಿತ್ರೆ, ರಾಮ-ರಾವಣರ ಯುದ್ಧ ಮುಂತಾದ ವರ್ಣನೆಗಳನ್ನೊಳಗೊಂಡ) ಆದಿಕವಿ ವಾಲ್ಮೀಕಿಮಹರ್ಷಿಯಿಂದ ಸಂಸ್ಕೃತದಲ್ಲಿ ರಚಿತವಾದ ಮಹಾಕಾವ್ಯ: ತಿಣುಕದನು ಘನರಾಯ ರಾಮಾಯಣದ ಕವಿಗಳ ಧಾರದಲಿ (೪೪೫೫. ೦-೦೬)· ವಾಲ್ಮೀಕಿ . . . ರಾಮಾಯಣವನೆಲ್ಲಮಂ ಕಂಡಂತೆ ಹಾಡಿದನೊ (ಕ್ರೀಚಾಪು. ೩-೪೪); ರಾಮಾಯಣ ಶುದ್ಧವು ರಾವು ಮತ್ತು ಅಯನ ಎಂಬ ಎರಡು ಶಬ್ದಗಳ ಸಮಾಸವಾಗಿದೆ (೫೫೫. ೮೯) ; ಬೆಳತನಕ ರಾಮಾಯಣ ಕೇಳಿ ರಾವನಿಗೆ ಸೀತೆಯೇನಾಗಬೇಕೆಂದ (೧೫೪). ೨. (ಆಲಂ) ದೀರ್ಘವಾದ, ಬೇಸರ ತರುವ ಮಾತು; ಕಗ್ಗ : ನಿನ್ನ ರಾಮಾಯಣ ತೆಗೆಯಬೇಡ (೪೩೫). ೩. ಜಗಳ : ಅವರ ಮನೆಯಲ್ಲಿ ಪ್ರತಿನಿತ್ಯವೂ ರಾಮಾಯಣ ತಪ್ಪಿದ್ದಿಲ್ಲ (೪೪೫).

[ಸಂ.]

ರಾಮಾರಕ್ಕ (ನಾ). ತುಂಬ ರಕ್ತದಿಂದ ಕೂಡಿದುದು : ಬನುವ ಅಣ್ಣನ ರಾಮಾರಕ್ತವಾದ ಕಳೇಬರವನ್ನು ಅವರಿಗೆ ತೋರಿಸಿದ (೨೪೫. ೪೦).

[←ತುಳು. ರಾಮಾರಕ್ತ = ಅತಿಯಾದ ರಕ್ತಸ್ರಾವದಿಂದ ಕೂಡಿದ]

ರಾಮಾವತಾರ (ನಾ). ೧. ವಿಷ್ಣುವಿನ ವಿಧನೆಯ ಅವತಾರ: ಶ್ರೀರಾಮಚಂದ್ರನ ಅವತಾರ : ವಿನುತ ರಾಮಾವತಾರದ ಪುಣ್ಯಶಕ್ತಿಯಿಂದೆ . . . ಶೀವಿದ ಮಹಾಕಪಿಯನು . . . ಫಲುಗುಣನಚ್ಚನು (ಕೃಲಂಣ ೦೩-೪೩). ೨. ರಾವನ ಅವತಾರವನ್ನು ಎತ್ತಿದವನು.—ಅವತಾರ ಪುರುಷ : ಪೂಜಿಸನೆ ರಾಮಾವತಾರನು ಸೇತುವಿನೊಳಾ ರಾಮನಾಥನನು (೩೪೫. ೪೪-೬೨).

[ಸಂ.]

ರಾಮಾಸ್ತ್ರ (ನಾ). = ರಾಮಬಾಣ ೧ : ಕಿಕುವುದು ಬಲವೈದುವುದು ಸುರಲೋಕವನು ರಾಮಾಸ್ತ್ರದಲಿ (೬೫೫೩. ೬-೩೫-೩೬).

[ಸಂ.]

ರಾಮಿ (ನಾ)· ಒಂದು ಬಗೆಯ ಸಸ್ಯ : ರಾಮಿ (ರಾಮಿಟ)· –ಸಣ್ಣಗಿದ್ದ ತೊಪ್ಪಲವನ್ನು ನೀರೊಳಗೆ ಚಲ್ಲಿದರೆ ಮೀನುಗಳು ನಿಶ್ಚೇತನವಾಗುತ್ತವೆ (ಕಾಗೆ· ೪೭)· [ಸಂ. ರಾಮಾ]

ರಾಮೆ (ನಾ)· ೧· ಹೆಂಗಸು; ಸ್ತ್ರೀ : "ರಾಮಾ, ವಾಮೊ . . . ಮಹಾ, ಯುವತಿಃ – ಈ ೨ರ ಸ್ತ್ರೀಯರ್" (ಕಣಾಮು· ೬೪–೬೮)· ೨· ಹೆಂಡತಿ : ರಾಮಂ ಕಲಿಸಿದ ತಜದಿಂ ರಾಮೆಗೆ ಪುಸಿ ನುಡಿದು ರಥಮನೇಱಿಸಿಕೊಂಡು ಭೀಮಾಟವಿಯಂ . . . ಎಯ್ದುಂದಂ (ಪಂಚಪಾ· ೦೫–೭೫)· ೩. ನಲ್ಲೆ; ಪ್ರಿಯೆ ; ಕಾದಲಿ : ಅರಸ ಸತಿಯಿಡೆಗೆಯ್ದಿ ರಾಮೆ ಹೇರಡವಿಯೊಳು ಶಿವನ ಭವನಕೆ ಹೋಗಿ ನೀ ಮಾಡಿದಾಚರಣೆಯೇನು . . . ಎನೆ (ಗುರುಪಾ· ೬–೦೯)· ೪. ಲಕ್ಷ್ಮಿ : "ಶರಧಿಸುತೆ ರಾಮೆ ಗೋಮಿನಿ ಲಕ್ಷ್ಮಿ . . . ಮನ್ಮಥಮಾತೆಯೆನಲು ಸಿಗಕ್ಕು ನಾಮಂ" (ಶುಂಗಾ· ೬–೦೬)· ೫· ಶಾಕಿನಿ, ಡಾಕಿನಿ ಮುಂತಾದ ಪಿಶಾಚಿಸ್ತ್ರೀ : ಪಱಿದ ಶಿರಂಗಳಿಂ ಕೆದಱಿ ಬರ್ದ್ದ ಗಜಂಗಳಿನಾಡುವಚ್ಚಿಯಿಂ ಸುಬಾದರಾಂಗನಿಂಬುವಂ ನಲಿವ ರಾಮೆಯರಿಂ ಪೆಣವತ್ತ ಸಾರ್ವ್ವ ಪೆಂವೆಜೆಯರಿಂ . . . ಸಮರಮಾಸುರ ಮಾದುದು (ಪಂ· VII, ಜಾಸು· ೦೦೯–೨೯; 1042)· [ಸಂ. ರಾಮಾ]

ರಾಮೇಶ್ವರ (ನಾ)· ೧· ದಕ್ಷಿಣಭಾರತದ ದಕ್ಷಿಣತುದಿಯಲ್ಲಿರುವ ಒಂದು ತೀರ್ಥಕ್ಷೇತ್ರ : ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡದು (ಗಾಡಿ)· ೨· ಈ ಕ್ಷೇತ್ರದಲ್ಲಿರುವ ಶಿವಲಿಂಗದ ಹೆಸರು: ದಾಸಿವಯ್ಯಂ ಗಂದು ರಾಮೇಶ್ವರನು ಕದವಂ ತೆಱೆದನತಿಶಯವು (ಚಿಕ್ಕ· ೪೬–೪೬)· [ಸಂ.]

ರಾಮೋಜ (ನಾ)· ಒಬ್ಬಾತನ ಹೆಸರು : ××× ರಾಮೋಜನ ಮಣ್ಣು ಕದಂಬರಸಂ ಮಾಡಿಕೊಟ್ಟ (ಎಕ. V· ಕುಂಸಾ· ೫೬–೦೬; ಸಂ· 1800 ?)·

[ರಾಮ + ಓಜ (<ಓವರ್ಚು)]

ರಾಮೋತ್ಕಂಠೆ (ನಾ)· ೧· ರಾಮನಲ್ಲಿ ಉತ್ಸುಕತೆಯುಳ್ಳವಳು· ೨· ಜಲಾಭಿಮಾನಿದೇವತೆಯಾದ ವರುಣನಲ್ಲಿ ಉತ್ಸುಕತೆಯುಳ್ಳವಳು· ೧, ೨ : ಬಲಭೂಭೃದ್ಭವೆ ಲಕ್ಷ್ಮಣಾಭಿಮತೆ ರಾಮೋತ್ಕಂಠೆ ವೈದೇಹಿ ಮಂಜುಲವೇಣೀ ರಮಣೀಯೆ· ·· ಕಣ್ಗೊಳಕುಂ ಪಾಹಿ ಸೀತೆ ಪೋಲ್ತು ಭುವನಪ್ರಖ್ಯಾತೆಯುಂ ಸೀತೆಯುಂ (ಕಪ್ಪ· ೨·೦)·

[ಸಂ. ರಾಮೋತ್ಕಂಠಾ]

ರಾಯ, ರಾವ್ (ನಾ)· ೧· ಅರಸ ; ರಾಜ ; ದೊರೆ : ರಾಯಂಬೀ ಪೆಸರಿಲ್ಲ ದಂತು . . . ಭಾರ್ಗವಂ ಕೊಂದಂ (ಪಂಕಥಾ· ೦೨–೪೪); ಈಟಿಯ ರಾಯರ ಕೊಡೆಗಳ್ ಅಣಂಬೆಯ ಕೊಡೆವೋಲ್ ಬೆಳ್ಗೊಡೆಗಳಾದುವು (ಕ್ಷ,ಭಾ· ೩೦); ಆ ಯುಧಿಷ್ಠಿರಸಖಿಂ ನೀನೇ ರಾಯನಾಗಿರು (ಕಾಣ್ಕ,ಪ· ೦೨–೪೩)· ೨· ಒಬ್ಬಾತನ ಹೆಸರು ; ಭಾವುಂಡರಾಯ : ಗಂಡರ ಮುಂಕುತಿಯೆನಿಸಿದ ಮುಂಡಳಿಕರ ಮಂತ್ರಿ ಸಂಧಿವಿಗ್ರಹಿ ರಾಯಂ ಕೊಂಡಾದಿ ಪೊರೆದಂ (ರಂಜಿನೀಚಾ· ೧–೨೮) ; ಗಂಗರಾಜನಾ ಮುನ್ನಿವ ಗಂಗರ ರಾಯಂಗಂ ಸೂರ್ಮ್ಮಾಡಿ ಧನ್ಯನಲ್ತೇ (ಪಂ· II, ೬೭–೭೫; 1116)· ೩. ಗಂಡಸರ ಹೆಸರಿನ ಕೊನೆಯಲ್ಲಿ 'ರಾಜ' ಎಂಬಂತೆ ಸೇರುವ ಶಬ್ದ : ಆ· ನ· ಕೃಷ್ಣರಾಯರು ಪ್ರಸಿದ್ಧ ಕಾದಂಬರಿಕಾರರು (ಕೂಪ)· ೪. ಯಜಮಾನ ; ಒಡೆಯ : ಬರಮಯ್ಯ ರಾಯರ ಕುದುರೆ ಕತ್ತೆಯಾಯಿತು (ಗಾಡಿ) ; ರಾಯರು ಮನೆಯಲ್ಲಿ ಇಲ್ಲ (ಕೂಪ)· ೫. ಸಮಾಸಪದಗಳ ಆದಿಯಲ್ಲಿ 'ಮಿಗಿಲಾದ', 'ಅತಿಶಯವಾದ', 'ದೊಡ್ಡ' ಎಂಬ ಅರ್ಥಗಳಲ್ಲಿ ಬಳಕೆಯಾಗುವ ಪದ : 'ರಾಯಂಚೆ' 'ರಾಯಗಿಡಿಗ' ಪರಾ· **ರಾವ್** : ೫· ದಿವಾನ್ ಮಾಧವರಾವ್ ರಸ್ತೆಯಲ್ಲಿ ನಮ್ಮ ಮನೆಯಿದೆ (ಕೂಪ)·

ರಾಯಕಂದರ್ಪ = ರಾಜರಲ್ಲಿ ಮನ್ಮಥನಂತಿರುವವನು ; ಒಂದು ಬಿರುದು : ರಾಯಕಂದರ್ಪ ಹೃದಯಪರಿಷೋತ್ಕರಿಪೆ ರಾಯದಾಮೋದರಾನುರಾಗಪ್ರತ್ಯಕ್ಷ ×× ಯೌವನವನಮಸನ್ತಲಕ್ಷ್ಮಿ (ಪೌಭಾ· XX.೪೬–೦೨; 1072)· **ರಾಯಕೋಲಾಹಲ, ರಾಯಕೋಳಾಹಳ** = ರಾಜರಲ್ಲಿ ಕಲಕಲವನ್ನುಂಟುಮಾಡುವವನು : ಒಂದು ಬಿರುದು : ರಾಯಕೋಲಾಹಲಂ, ಜವಾದಿಕೋಲಾಹಲಂ (ಕಣ್ಕ,ಪು· ೨೮೩ ಪ್ರಥೋ) ; ರಾಯದಲ್ಲಣ ರಾಯಕೋಳಾಹಳ . . . ಸ್ಥಿರಂಜೀವಯೆಂದು ಕೀರ್ತಿಸಿ (ಪಚಾ· ೬–೬); ದಟಮುಮಾದಿತ್ಯಂ ರಾಯಕೋಳಾಹಳಂ (ಕಬುದ· ೦೬೪ ಪ್ರಥೋ)· **ರಾಯಗಂಡರದಾವಣೆ** = ಶೂರರಾದ ರಾಜರನ್ನು ಬಾಧಿಸುವವನು ; ಒಂದು ಬಿರುದು : ಹುಸಿವರ ಶೂಲ ನಿಗಳಂಕವಲ್ಲ ಚಲದಂಕರಾಮ ರಾಯಗಂಡರ ದಾವಣೆ (ಪಂ· XXVII· ೦೬೦–೦೬ ; 1256)· **ರಾಯಗಜ ಕೇಸರಿ** = ರಾಜರೆಂಬ ಆನೆಗಳಿಗೆ ಸಿಂಹವಂತಿರುವವನು ; ಒಂದು ಬಿರುದು : ಮಾರ್ಪ್ಪಡಿಧೀಮಂ ರಾಯಗಜಕೇಸರಿ ಗಂಡರೊಳ್ ಗಂಡ(ಡಂ) (ಪಂ· ೪. ೦೬–೪; 1013); ಮಜಿವೆತ್ತೆಚ್ಚಜುತವನಪತಿ ಕರೆ ತರುಣ ನಾವೆಡೆ ರಾಯಗಜಕೇಸರಿಯದಾವೆಡೆ ಕಂದ ಬಾಯೆನುತಪ್ಪಿದನು ಬಯಲ (ಕಬಾಕ್ಕ,ರಾ· ೭–೬)· **ರಾಯಗಜಸಿಂಹ** = ರಾಯಗಜಕೇಸರಿ : ರಾಯಮುರಾರಿ ರಾಯಗಜಸಿಂಹಂ ಸೋಮಭೂಪಾಳಕಂ (ಕಣ್ಕ,ಚಾ· ೦೪–೦೫; 1176)· **ರಾಯಖರಟ್ಟಿ** = (ಪರ) ರಾಜರನ್ನು ನಾಶಮಾಡುವವನು ; ಒಂದು ಬಿರುದು : ಈ ರಣಪಾದಾಂಧನ ತೊಟ್ಟುಳಿಕೆಯನು ಕೀಳ್ವ ರಾಯಖರಟ್ಟನಲ್ಲಾ ಎನುತ ತನಿ ಮಸಗಿತು ಭಟಸ್ತೋಮ (ಕುಪ್ಪ,ಕ· ೨೦–೨)· **ರಾಯಜಗರುಳಂಜಿ** = (ಪರ) ರಾಜರನ್ನು ಗೆದ್ದವನು ; ಒಂದು ಬಿರುದು : ಬೌವಣ ಸಹಸ್ರದಾಹು ರಾಯಜಗರುಳಂಜಿ ಕೀರ್ತಿವಿದ್ಯಾಧರಂ (ಇಂ· V, ೧೩–೬ ; 1019)· **ರಾಯರುಳಿಪ್ಪ, ರಾಯಜಳಪ್ಪ** = (ಉದ್ಧಟರಾದ) ರಾಜರ ಮೇಲೆರಗಿ ಸೋಲಿಸುವವನು ; ಒಂದು ಬಿರುದು : ಸಾಮಾನ್ಯಮಲ್ಲನೆಳೆಯೊಳ್ ಸೋಮೇಶ್ವರನನುಜನದಱರಾಯರುಳಿಪ್ಪಂ (ಪೌಭಾ· XX. ೨೨–೬; 1082) ; ಸೌಭಾಗ್ಯಸದನೆ ರಾಯಜಳಪ್ಪ ಕಳ್ಳಾವನೀಜ ಸಮಾಲಿಂದ(ಗಿತ) ಜಂಗಮಲತೆ (ಎಆ· XXVIII· ೩೫–೪೯; ಸಂ. 1082)· **ರಾಯದಲ್ಲಣ** = ರಾಜರನ್ನು ತಲ್ಲಣಗೊಳಿಸುವವನು ; ಒಂದು ಬಿರುದು : ರಾಯದಲ್ಲಣ ರಾಯಕೋಳಾಹಳ (ಕಣಾಕ· ೬–೬); ರಾಜಗೃಹಕೆ ವಿಡಾಯದಲಿ ಕತಿವಯಬಲವು ಸಹ ರಾಯದಲ್ಲಣನೆಯ್ದಿ ಚಕ್ರಿಯ ಕಂಡು ವಸುದೇವ (ಹಾಕ್ಕ,ಹಾ· ೦೯–೨೨)· **ರಾಯದಳಮಳಕಾಜಿ, ರಾಯದಳವ್ಹಳಕಾಜಿ** = (ಶತ್ರು) ರಾಜರ ಸೈನ್ಯವನ್ನು ಸೂರೆಮಾಡುವವನು ; ಒಂದು ಬಿರುದು : ರಾಯದಳದುಳ್ಳ ಕಾಜಿ ಕೌರವರಾಯಸೇನಾಸೂಜಿಕಾಜಿನಜೇಯನೋ ಕಲಿಭೀಮ ಗೆಲಿದನು ಭಾನುನಂದನನ (ಕುಪ್ಪ,ಕ· ೦೨ ಸೂಕೆ) ; ರಾಯರುಳಿಪ್ಪ ರಾಯದಳವ್ಹಳ ಕಾಜಿ . . . ಸ್ಥಿರಂಜೀವಯೆಂದು ಕೀರ್ತಿಸಿ (ಪಚಾ· ೬–೬). **ರಾಯುದಾಮೋದರ** = ರಾಯಮುರಾರಿ : ರಾಯುದಾಮೋದರಾನುರಾಗಪ್ರತ್ಯಕ್ಷ (ಪೌಭಾ· XX. ೪೬–೦೨ ; 1072)· **ರಾಯಮುನ್ನೀರಬಡಬಾನಳ** = ರಾಜರೆಂಬ ಸಮುದ್ರಕ್ಕೆ ಬಡಬಾನಳದಂತಿರುವವನು; ಒಂದು ಬಿರುದು : ಶೌರ್ಯನಿರಾಯಣಂ ರಾಯಮುನೀರ ಬಡಬಾನಳಂ ಬೌವಣ ಸಹಸ್ರ ಬಾಹು (ಇಂ· V, ೦೫–೬ ; 1019)· **ರಾಯಮುರಾರಿ** = ರಾಜರಿಗೆ ಮುರಾರಿಯಂತಿರುವವನು; ಒಂದು ಬಿರುದು : ಪ್ರತಾಪ ಲಂಕೇಶ್ವರ ರಿಪುಮದನ ಮಹೇಶ್ವರ ರಾಯಮುರಾರಿ ಭುಜಬಳಮಲ್ಲ (ಕಚಾ· ೬೪–೦೬–೦೪; 1176)· **ರಾಯಸಿರಸೆಲ್ಲ** = (ಶತ್ರು) ರಾಜರಿಗೆ ಶೂಲದಂತಿರುವವನು; ಒಂದು ಬಿರುದು : ಗರಿದುರ್ಗವಲ್ಲಂ ರಾಯಸಿರಸೆಲ್ಲಂ ಚಲದುಂಕರಾಮಂ (ಪಂ· VI, ೬೦೭· ೧೫–೩೦: 1196)· [ಪ್ರ ಸಂಸ್ಕೃತಕೋಶಗಳಲ್ಲಿ ಇದು 'ರಾಜನ್' ಶಬ್ದದ ತಪ್ಪುರೂಪವೆಂದು ಹೇಳಿದೆ./ಪ್ರಾ· ರಾಯ]

ರಾಯಂಚೆ (ನಾ)· ಹಂಸಗಳಲ್ಲಿ ಶ್ರೇಷ್ಠವಾದುದು ; ರಾಜಹಂಸೆ; ಅರಸಂಚೆ : "ರಾಯಂಚೆಯೆನಲ್ ರಾಜಹಂಸಂ" (ಶಬ್ದಾ· ೬೪): ಜಾರು ದತ್ಸನು ವನಜಷಂಡದೆ ಬಂದುವಿಂದಿನ ಕೂಡೆ ರಾಯಂಚೆ ಬನದಿಂದೆಡೆಯಾಡುತಿಹ ಬೆಲುವನು. . . ಕಂಡು ಮೆಚ್ಚಿದನು (ಶಾಳ್ವಾ· ೦೭-೦೩): ಪಾಂಡಿತ್ಯಮನೀಯೆ ಕಯ್ಯ ಗಿಳಿಗೊಲ್ದೈತಂದ ರಾಯಂಚಿಗೊಳ್ಳಡಯಂ ಮೆಲ್ಲಡಿ ಬೀಱ್ ಬಂದು (ರಾಷಡೀ· ೭-೦೨). [ರಾಯ + ಅಂಚೆ]

ರಾಯಕಟಕ (ನಾ). ರಾಜನ ಸೈನ್ಯ; ಅರಸನ ಪಡೆ : ಕಪ್ಪದೀ ಯುವ ರಾಜನಾಡಿದ ಕಪ್ಪುದೋಜವ ಮಾತು ಹನುಮಂಗಾವ್ಪರದ ಭೂತರುಂಟೆ ನಮ್ಮಿ ರಾಯಕಟಕದಲಿ (ತೊಣಾ· ೪-೦೨-೦೨).

ರಾಯಕಟಕಪಿತಾಮಹ = ರಾಜನ ಸೈನ್ಯಕ್ಕೆ ಅಜ್ಜನಂತಿರುವವನು ; ಭೀಷ್ಮ : ರಾಯಕಟಕಪಿತಾಮಹಪ ತಱುವಾಯಲಭಿಷೇಕವನು ಕೌರವರಾಯ ಮಾಡಿಸಿ ಪತಿಕರಿಸಿದನು ಕುಂಭಸಂಭವನ (ಶಾಣ್ಮಕ್ರೀ· ೧ ಸಂಚಿ). **ರಾಯಕಟಕಾಚಾರ್ಯ** = ರಾಜಸೈನ್ಯದ ಆಚಾರ್ಯ ; ಸೇನಾಪತಿ; ದ್ರೋಣ : ರಾಯಕಟಕಾಚಾರ್ಯನಾ ಚಾಪಾಯುಧಾಗ್ರಗಣ್ಯ ಮೋಹಿದನು ಪದ್ಮಾಯತವ್ಯೂಹವನು (ಶಾಣ್ಮಕ್ರೀ· ೧ ಸಂಚಿ).

[ರಾಯ + ಕಟಕ]

ರಾಯಕಲ್ಲು (ನಾ)· ಅರೆಯುವ ಕಲ್ಲು : ಅರೆವ ಗುಂಡ ದೇವರ ಜಗಲಿಯೊಳಿಟ್ಟು ಹರಿಗಳ ತಂದು ರಾಯಕಲ್ಲ ಮೇಲಿಟ್ಟಿ ಮಜ್ಜಿಗೊಱಿದ್ದ ದುಕ್ಕಳ ಬಡಿದಬ್ಬಿಸಿ ಆಱಿಯಾದಂತೆ ಬೊಬ್ಬಿಡುವ. . . ಮಾಧವನ ಮಹಿಮೆ ಅಳವಲ್ಲವಾರಿಗೂ (ಹರಿಂದ· ೩-೭೭-೩). [ರಾಯ + ಕಲ್ಲು (<ಕಲ್ಲ್)]

ರಾಯಕುಮಾರ (ನಾ)· ರಾಜಕುಮಾರ; ಅರಸುಕುವರ.

ರಾಯಕುಮಾರಚಮತ್ಕಾರ = ರಾಜಕುಮಾರನಿಗೆ ತನ್ನ ಶೌರ್ಯದ ಚಮತ್ಕಾರವನ್ನು ತೋರಿಸುವವನು; ಒಂದು ಬಿರುದು: ವಿಜಯಲಕ್ಷ್ಮೀ ಮುಖಿದರ್ಪಣಂ ರಾಯಕುಮಾರಚಮತ್ಕಾರಂ (ಶಾಣಾ· ೪೪, ೧೦-೦೨; ೨೦೦೬). [ರಾಯ + ಕುಮಾರ]

ರಾಯಕುವದ (ನಾ)· = ರಾಯಕುಮಾರ : ಎಲೆ ರಾಯಕುವರ ನೀನಾರಲಿಸಿಕೆಯಂ ಪೋದವೆನ್ನಿಸುವನೋವಿದೆ (ಅಷ್ಟಪ್ರ· ೫-೩); ರಾಯಕುವರನ ಮರಣವಾರ್ತೆಯಿವಾ ಸುಧದ್ರಾದೇವಿ ಕೇಳಿದಳು (ಶಾಣ್ಮಕ್ರೀ· ೬-೦೦).

ರಾಯಕುವರವಿಘಾಡ = ರಾಜಕುಮಾರರನ್ನು ನಾಶಮಾಡುವವನು; ಒಂದು ಬಿರುದು : ರಾಯಕುವರವಿಘಾಡ ಬಂದನು ರಾಯಕಟಕಾಚಾರ್ಯ ಬಂದನು (ಶಾಣ್ಮಕ್ರೀ· ೬೦೩. ೪-೩೨ ಪಾಠ). [ರಾಯ + ಕುವರ್]

ರಾಯಗಜ್ಜ (ನಾ). ರಾಜಕಾರ್ಯ : ಈ ರಾಯಗಜ್ಜದೊಳಾಂ ಪಡೆವಳ ನಪ್ಪೆಂ ಎಲಗಪ್ಪಣೆ ವೀಳೆಯವುಂ ಬಯೆಗೆಯ್ದುದು (ಶಶಕಂ· ೦೩-೨೦). [ರಾಯ + ಕಜ್ಜ]

ರಾಯಗರೀಟಸೀರೆ (ನಾ)· ಒಂದು ಬಗೆಯ ಸೀರೆ : ಪಂಕಜಮುಖಿವೆ ವಿಮಾನಾಕ ಮಂರಿವ ನೋಟ ಶುಭಿಗೊರಳು ಗಿಳಿವಾತು ಪಂಕಿಸಿ ರಾಯಗರೀಟುಸೀರೆಯನುಟ್ಟು ನಿಶ್ಶಂಕನೋಲಗದಿ ನಿಂದಿಹಳು (ಪೌಂಪಾ· ೩-೧೦). [? + ಸೀರೆ]

ರಾಯಗಿಡಿಗ (ನಾ). ಒಂದು ಬಗೆಯ ದೊಡ್ಡವಾದ್ಯ : ಗಜಜುವಗ್ಗದ ಬೊಗ್ಗುಗಳ ದಿಗ್ವಿಜಯ ನುಡಿಸುವ ರಾಯಗಿಡಿಗನ ವಿಜಯಬಲ ತೊಡರಿಕ್ಕಿಶ್ಶ ಕಲ್ಪಾಂತಸಾಗರಕೆ (ಶಾಣ್ಮಕ್ರೀ· ೪-೩) ; ತೊಳುಮಱಿಗಳ ರಾಯಗಿಡಿಗನ ಘೋಳಘೋರದ ಘೋಷವವೆಸಿಯ ಸೀಳಿ ನಡೆದುದು ಸೇನೆ (ಶಾಣ್ಮಕ್ರೀ· ೨-೨). [ರಾಯ + ಗಿಡಿಗ್ಗ (ಫ್ರ← ತೆಲು. ಗಿಡಿಯ)]

ರಾಯಗಿಡಿಬಿಡಿ (ನಾ)· = ರಾಯಗಿಡಿಗ : ಬೊಬ್ಬಿಡುವ ನಿಸ್ಸಾಳದ ಮಹಾರವ ರಾಯಗಿಡಿಬಿಡಿ [ಪಾಠಾಂ· ಗಡಿಬಿಡಿ]ಯಾ ಘಡುಘುಂಡುಸ್ವರವೆಸಯ ಲಂಬರವ್ಯೂಡದುದೋಯೆಂಬಂತೆ ನಗರವನೊಡನೆ ಹೊಜಮಂಚರು ನೃಪಾಲನ ಮಲ್ಲಸಂದೋಹ (ಶಾಣ್ಮಕ್ರೀ· ೬೦೩. ೯-೦೪) ; ಡೌಡೆ ರಾಯಗಿಡಿಬಿಡಿ ಕಹಳೆ ಕಂಬು ಭೇರಿ ಮೃದಂಗ ಬೊಂಬುಳಿರವಂಗಳಿಂದಂಬುಜಭವಾಂಡಮಂದಿರೆ (ಪಂಪಭಾ· ೪೪-೨೮). [ರಾಯ + ಗಿಡಿಬಿಡಿ]

ರಾಯಗಿಳಿ (ನಾ). ಅರಗಿಳಿ ; ರಾಜಶುಕ : ಮಣಿಪಂಜರದೊಳು ರಾಯ ಗಿಳಿಯ ಹಸುಳೆ ಪಿರಿದುಂ ರಾಜಿಸುವಂದದಿಂ . . . ತೊಟ್ಟಿರೋರಸುವಂಗಂ ಬಳೆದಂ (ಪಾರ್ಶ್ವ· ೨-೨೨). [ರಾಯ + ಗಿಳಿ]

ರಾಯಗುರಿವು (ನಾ)· ರಾಜಚಿಹ್ನೆ ; ಅರಸನ ಲಾಂಛನ : ಐಹಿಕವಾದ ಶಂತಮ್ಮ ಎಲ್ಲಾ ವಾದ್ಯಗಳನ್ನೂ ಬಿರುದಾವಳಿಗಳನ್ನೂ ಮತ್ತಿನ ರಾಯಗುರಿವುಗಳನ್ನೂ ನಿಲಿಸಿ (ಪಾರ್ಶ್ವ· ೨೨-೨). [ರಾಯ + ಕುರಿವ್ಪು (ಸಂ ಕುಜುಪು)]

ರಾಯಗುರು (ನಾ)· ರಾಜನ ಗುರು : ಪಾಗಲಾಂಬಿಕೆ ಗಡ ವಿರಕ್ತೆ ಗಡ ರಾಯಗುರುವ ಬಲು ದಣಾಯಕ ಬಸವನಕ್ಕ ಗಡ ಗರ್ಭಮಂ ತಳೆದಳ್ಗಡಂ ಚಿತ್ರಂ (ಪಪ್ರಾ· ೪-೦೬). [ರಾಯ + ಗುರು]

ರಾಯಗೆಂಪು (ನಾ)· ಗಾಢವಾದ ಕೆಂಪು ; ಅತಿಯಾದ ರಕ್ತವರ್ಣ : (ಅಂದಳೆದ ರಾಯಗೆಂಪಿನ ಮಕಮಲ್ಲಿನ ಮೇಲ್ಮುಸುಕನ್ನೆತ್ತಿ ಸರಿಯಿಸುವಳು) (ಪಕುಗೋ· ೨೬-೦). [ರಾಯ + ಕೆಂಪು]

ರಾಯಗೆಲಸ (ನಾ). ದೊಡ್ಡ ಕೆಲಸ ; ಮಹಾಕಾರ್ಯ : ನಮ್ಮ ಹೊಚ್ಚ ಹೊಸಗನ್ನಡದ ಗುಡಿಯನ್ನೇರಿಸುವ ರಾಯಗೆಲಸಕ್ಕೆ ಕೈನೀಡುತ್ತೀರೊ ? (ಪಪ್ರಾ· ೨. ೧೭೭). [ರಾಯ + ಕೆಲಸ]

ರಾಯಗೋಪುರ (ನಾ). ದೊಡ್ಡ ಗೋಪುರ : ರಾಯಗೋಪುರವನ್ನು ಹದ್ದು ಕೊಂಡುಹೋಯಿತೋ ? (ಗದ). [ರಾಯ + ಗೋಪುರ]

ರಾಯಗೋಲು, ರಾಳೋಲು (ನಾ)· ಒಕ್ಕುವಾಗ ಕಣದಲ್ಲಿ ತೆನೆ, ಹುಲ್ಲು ಮೊದಲಾದುವುಗಳನ್ನು ಎಳೆಯಲು ಉಪಯೋಗಿಸುವ ಒಂದು ಸಾಧನ ; ಮೆರೆಕೋಲು : ರಾಯಗೋಲಿನಿಂದ ಕಣದಲ್ಲಿ ತೆನೆ ಎಳೆದುಕೊ (ಜಾಪ). **ರಾಳೋಲು** : ಸೆಳ್ಳು, ಜಂತಗುಂಟೆ, ರಾಳೋಲು ಮೊದಲಾದ ಉಪಕರಣಗಳನ್ನು ಹೊತ್ತು (ಶಬ್ದಾ· ೧೪೩).

[ರಾಯ + ಕೋಲು (< ಕೋಲ್)]

ರಾಯಗೋವಳ (ನಾ)· ದನ ಕಾಯುವವರ ಮುಖಂಡ : ರಾಯಗೋವಳಂಗೆ ಬನ್ನವಿಸುವರ್ (ಗಿಱಕೋ· ೧೬-೨ ಪ).

[ರಾಯ + ಗೋವಳ (< ಗೋವಾಳ)]

ರಾಯಗೋಳಾಯ್ದ (ನಾ). ಶ್ರೇಷ್ಠನಾದ ಕುದುರೆಸವಾರ : ಈಮ್ಮಹತ್ತರ ಶ್ರೀವೀರ ಶ್ರೀವಲ್ಲರಾಜಒಡೆಯ ರಾಯಗೋಳಾಯ್ದನ ಕುದುತೆಯಲ್ಲಿ ಪ್ರವೇಶ (ಐಯಗೋ· ೩೪-೦೨).

[ರಾಯ + ಗೋಳಾಯ್ದ (< ಗೋಟಾಯಿಲ)]

ರಾಯಜಗಜಟ್ಟಿ (ನಾ). ರಾಜನ ಪ್ರಖ್ಯಾತ ಜಟ್ಟಿ ; ಅರಸನ ಪ್ರಸಿದ್ಧನಾದ ಮಲ್ಲ : ರಾಯಜಗಜಟ್ಟಿಗಳು ರಿವುಕುರುರಾಯ ಭಟ್ಟನೊಳಿನಿಬರಿಗೆ ನಿನ್ನಾಯತದಿ ವಿಲುವಂಭವನಣಾಮೇನ ಹೇಳುವೆವು (ಶಾಣ್ಮಕ್ರೀ. ೧೩-೦೦).

[ರಾಯ + ಜಗಜಟ್ಟಿ]

ರಾಯಜಗದಳ (ನಾ)· ಒಂದು ಬಗೆಯ ನಾಣ್ಯ : ಶ್ರೀಕೇಶವದೇವರಿಗಂ ಬ್ರಾಹ್ಮಣರಿಗಂ ಕ್ರಯವಾನವಾಗಿ ಕೊಟ್ಟುಕೊಂಡ ರಾಯಜಗದಳಂ ಗದ್ಯಾಣ ಅಯಿನೂಱಪತ್ತು ಮತ್ತಂ (ಕೆಶಿ· II· ೦೬-೨೦; ೧೨೭೨).

[ರಾಯ + ಜಗದಳ್]

ರಾಯಡೆಂಕಣಿ (ನಾ)· ಒಂದು ಬಗೆಯ ಯುದ್ಧಸಾಧನ : ದೊಡ್ಡ ಡೆಂಕಣಿ : ತೋಜುದೆಡೆಗೆ ಸಿಡಿವ ಡೆಂಕಣಿ ರಾಯಡೆಂಕಣಿಗಳ ಸಾಲು ಬಿಡದೊಟ್ಟಿದವೆ ದುರ್ಗದೊಳು (ಕಂಗಾಣಿ· ೪೨-೬೯) ; ಗಗನದೊಳಿಟ್ಟುಗುಡುವ ರಾಯಡೆಂಕಣಿ ಕವಣೆಗಲ್ಲುಗಳು (ಪ್ರಭಾಣ· ೨-೦೬). [ರಾಯ + ಡೆಂಕಣಿ]

ರಾಯತನ (ನಾ)· ದೊರೆತನ ; ರಾಜತ್ವ : ರಾಯತನವೆಮಗಿಂದ್ರ ಲೋಕದ ರಾಯದರಿ ದಿಟ (ಶಾಬ್ಕ. ೫೬-೨೩) ; ಶ್ರೀವಮ್ತರನ್ನು ಅವರ ರಾಯತನದ ಹಾವುಗೆಯ ಮಂಗಳಕ್ಕೆ ಸೀಳಿಡುವುದಾಗಿಯೂ ಕೂಗಿ ಕಳಿಸಿ ಮಾಡಿದರು (ಜಿಸಿ. ೬೯-೩೦). [ರಾಯ + — ತನ]

ರಾಯತವಸಿ ' ರಾಯದವಸಿ ' ನೋ·

ರಾಯಪಟ್ಟು (ನಾ)· = ರಾಯಕಟಕ : ರಾಯಕಟಕಾಚಾರ್ಯಮೊದ್ದಿದ ರಾಯಪಟ್ಟನೊಳಿರುಳು ಕೊಂದನು ವಾಯುತನಯನ ತಮಜನಗ್ಗದ ದೈತ್ಯಕೋಟಿಗಳ (ಶಾಬ್ಕರತ್ನ· ೫೫ ಸಂಸಿ). [ರಾಯ + ಪಟ್ಟು]

ರಾಯದವಸಿ, ರಾಯತವಸಿ (ನಾ)· ರಾಜಮಂಪಿ : ರಾಜರ್ಷಿ : ಅಗ್ರಜಂಗಾಂ ಬಜಿಯನಿರ್ಪಿನಂ ರಾಯದವಸಿಯ ಕುವರಿಯಂ : . . ಸೀತೆಯಸ್ಸನ್ನಿಸಾಣತಿಯಿಂ ಕಾಡೊಳ್ ಬಿಸುಡಲ್ಕೆ ಬದ್ದನಾದೊ (ಶಾಸಾಕ್ಕ. ೫೬-೪). **ರಾಯತವಸಿ** : ಆ ರಾಯತವಸಿ ತನ್ನೊಳ್ಳಿರ್ದ ದೃಢ ಧೃತ್ಯಯಂ ಕಾಣುತೆ ಸಂತಸಂದಾಳ್ದು . . . ಜನಾರ್ದನಂ ತಾಂ ಪ್ರತ್ಯಕ್ಷನಾದಂ (ಶಾಬ್ಕ· ೬-೦೩). [ರಾಯ + ತವಸಿ]

ರಾಯದಳ (ನಾ)· = ರಾಯಕಟಕ : ಗಜದ ಬಳಿಯಲಿ ಸಂದಣಿಸಿದುದು ರಾಯದಳ ಮಣಿರಥಾಯದಲಿ (ಶಾಬ್ಕ· ೫-೦೦) ; ರಾಯ ರಘೂತ್ತಮ ಸಾರ್ವಭೌಮಂಗೆ . . . ಅನುಮದುರಾಯದಳವನು ತೋಱಿ ಮನ್ನಿಸಿ ಕೊಂಡನಾ ರವಿಜ (ರಘಕಾ. ೪-೬ ಸಂಸಿ). [ರಾಯ + ದಳ್ಳ (=ದಲ)]

ರಾಯನಿಂಬೆ (ನಾ)· ಒಂದು ಬಗೆಯ ದೊಡ್ಡ ಜಾತಿಯ ನಿಂಬೆ : ಭರಪ್ರಾಹಿಗ್ಗಡೆ . . . ರಾಯನಿಂಬೆಯ ಹಣ್ಣುಗಳ್ನಾತ್ರು ತನ್ನ ಪರಿಚಯವನ್ನು ಹೇಳಿಕೊಂಡನು (ಸಿಚ. ೬೫) ' ಗಜನಿಂಬೆ ' ಪರಾ.

[ರಾಯ + ನಿಂಬೆ]

ರಾಯನೆಲ್ಲಿ (ನಾ). ಒಂದು ಬಗೆಯ ದೊಡ್ಡ ಜಾತಿಯ ನೆಲ್ಲಿ ; ಅರ ನೆಲ್ಲಿ : ಈಗೆ ಕಿಕ್ಕಳಿ ಹಲಸು ಬಕ್ಕವಲಸಿನ ಸಾಲುನೆಲ್ಲಿಯ ರಾಯನೆಲ್ಲಿ (ಪಂಪಾಂತ್ರಿ· ೬-೨೬೭) ; ಅನೆಯ ಮುಂಗಿಳು ಮುರಿದ ರಾಯನೆಲ್ಲೀಮರದ ತೊಗಟೆಯ ವಾಸನೆ ಬರುತ್ತದೆ (ಪುಂಚಿತು· ೩-೭೮). [ರಾಯ + ನೆಲ್ಲಿ]

ರಾಯನೇರಿಲು (ನಾ)· ಒಂದು ಬಗೆಯ ದೊಡ್ಡ ಜಾತಿಯ ನೇರಿಳೆ ; ಅರನೇರಿಲು : ನೇರಿಲುಂ ರಾಯನೇರಿಲು ಜಂಬುನೇರಿಲು ತೋರುತಿಹ ಹಿಪ್ಪಲಿಯ ನೇರಿಲುಂ (ಪಪಚಿ· ೫೪-೩೦).

[ರಾಯ + ನೇರಿಲು (< ನೇಱಿಲ್)]

ರಾಯಪುಡಿಸಕ್ಕರೆ (ನಾ). = ರಾಯವುಡಿಸಕ್ಕರೆ : ಪಸುವಿನ ಹಾಲು ಚೆನ್ನಾಗಿ ಕಾಸಿ ರಾಯಪುಡಿಸಕ್ಕರೆ ಜೇಮತುಪ್ಪವರಸಿ ಸೇವಿಸೆ ಹೆಣ್ಮಕ್ಕರು ನಿಲುವುದು (ಶಿಸ್ಕ· ೦೫೭). [< ರಾಯವುರಿಸಕ್ಕರೆ]

ರಾಯಪುಡಿಸಕ್ಕರೆ, ರಾಯಿವುಡಿಸಕ್ಕರೆ (ನಾ)· ಒಂದು ಬಗೆಯ ಸಕ್ಕರೆ : ಚಿತ್ರಮೂಲ, ಬೆಳ್ಳಿಳಿ . . . ಜೀರಿಗೆ ಇವುಗಳನ್ನು ಸಮಭಾಗವಾಗಿ ಕಷಾಯವಿಕ್ಕಿ ಶೋಧಿಸಿಕೊಂಡು, ರಾಯವುಡಿಸಕ್ಕರೆ ಮಾತ್ರ ಹಸುವಿನ ತುಪ್ಪದಲ್ಲಿ ಪ್ರತಿಪಾಕವನಿಕ್ಕಿ ಕೊಡಲು ವಿಷಮಜ್ವರ ಗುಣವಾಗುವುದು (ಸಶಿ· ೦೩೩). **ರಾಯಿವುಡಿಸಕ್ಕರೆ**: "ಶರ್ಕರಾ· ಸಿತಾ—ತ್ರಿ ತವರಾಜನೆಂಬ ಸಕ್ಕರೆ. ರಾಯಿವುಡಿಸಕ್ಕರೆ" (ನಿಘಂ·೦. ೨೩೬). [< ರಾಯವುರಿಸಕ್ಕರೆ]

ರಾಯವುರಿಸಕ್ಕರೆ (ನಾ)· ರಾಯವುರಿ ಎಂಬ ಊರಲ್ಲಿ ತಯಾರಾದ ಸಕ್ಕರೆ : ಇಷ್ಟು ಸೊಪ್ಪನ್ನು ಸಮಾನಂಗೊಂಡು . ಅಕ್ಕಿಗಚ್ಚಿನಲ್ಲಿ ರಾಯವುರಿಸಕ್ಕರೆ, ತುಪ್ಪದಲ್ಲಿ ಮೆಲ್ಲಲು ಗರ್ಭಕಟ್ಟುವುದು (ಪಕ್ಕಿ· ೦೦೩).

ರಾಯವುರಿಯ ಸಕ್ಕರೆ = ರಾಯವುರಿಸಕ್ಕರೆ : ವಿಷ್ಣುಕ್ರಾಂತಿರ್ಮಾರ್ಗ . . . ಒಂದು ಪಾವು ರಾಯವುರಿಯ ಸಕ್ಕರೆಯಿಂದ ಕಲ್ಕಮಾಡಿ ಕೂಡಿ ಪೂಜುವಿನ ಕೊಳ್ಳಲು ದ್ವಂದ್ವಮೇಹ ನಾಶ (ಪಕ್ಕಿ· ೦೨೨). ' ರಾಯವುಡಿಸಕ್ಕರೆ ' ಪರಾ. [← ಪರಾ. ರಾಯವುರೀಸಾಖರ್]

ರಾಯಪೌಜು (ನಾ)· = ರಾಯಕಟಕ : ವಿಜಯಬಾಹ್ಯಗಳಬ್ಬರೆ ರಾಯಪೌಜಲಿ ಕ್ರಿಜಗಕ್ಕೆ ಭಯವ ಬೀಱಿದುವು (ಶಂಪಾ· ೦೬-೨೦).

[ರಾಯ + ಪೌಜು (< ಫೌಜು)]

ರಾಯಬಿತ್ತರಿಗೆ (ನಾ)· ರಾಜಪೀಠ ; ಸಿಂಹಾಸನ : ಅವಳು ಮುಂದೆ ರಾಯಬಿತ್ತರಿಗೆಯನ್ನೇರಿದ ವಿಜಯನಾರಸಿಂಹನನ್ನು ಪಡೆದದ್ದರಿಂದ ವಂಶ ವೃಕ್ಷವನ್ನಡರಿದ ಅವನ ಜತೆಯಲ್ಲಿ ಇವಳೂ ಪ್ರಧಾನಳಾಗಿ ಕಂಡಳು (ಸಚಿ. ೪. ಕ್ರಮಾ೫೬). [ರಾಯ + ಬಿತ್ತರಿಗೆ]

ರಾಯಬೀದಿ (ನಾ)· ಮುಖ್ಯವಾದ ದಾರಿ ; ರಾಜವರ್ತ್ಮ : "ರಾಯಬೀದಿಬೆಂದುಂ ರಾಜಬೀದಿ" (ಸಕಾ· ೫೯-೩೦೩) ; ಕಣ್ಣಿಂಬಾದುದು ರಾಯ[ಪಾಂ.ಜ]ಬೀದಿ (ಕ್ಕಾಗ· ೩೫) ; ರಾಯಂಚಿ ಪೊಣರ್ವಕ್ಕಿಗಳೆಡೆಯಾಟದ ರಾಯಬೀದಿಯೊ ತುಂಬಿಗಳ ಲಾಯಮೊ ಹೇಳು (ಶಾಬಾಂ· ೫-೩೨). [ರಾಯ + ಬೀದಿ]

ರಾಯಬೊಗರಿ(ನಾ)· ಜೂಜಿನಂತೆ ಆಡುವ ಒಂದುಬಗೆಯ ಬುಗುರಿಯ ಆಟ : ಲೆತ್ತ ಪಗಡೆ. ರಾಯಬೊಗರಿ . . . ಮೊದಲಾದ ಜೂಜಿವಾಟಗಳನ್ನಾಡಿ (ಶಾಬಾಸಾ· ೦೦೪). [ರಾಯ + ಬೊಗರಿ (< ಬವರಿ)]

ರಾಯಬೋರೆ (ನಾ)· ಒಂದು ಬಗೆಯ ದೊಡ್ಡ ಜಾತಿಯ ಬೋರೆ.—ಎಲಚಿ :." ರಾಜಕೋಲಃ— ರಾಯಬೋರೆ, ಹೇರೀಚಲು" (ಟಿಪ್ಪ· ೩೩೫); ಬೋರೆಯರಬೋರೆ ಪುಳಿಬೋರೆ ಸೀಬೋರೆಯಿಂ ರಾಯಬೋರೆಯುಂ (ಪಪಚಿ· ೫೪-೩೦). [ರಾಯ + ಬೋರೆ]

ರಾಯಭಾರ (ನಾ). ೧. ರಾಜ್ಯಾಡಳಿತವನ್ನು ನಡೆಸುವುದು ; ರಾಜ್ಯಭಾರ : ರಾಜೇಂದ್ರನು ಸುಪ್ರಸಿದ್ಧ ರಾಯಭಾರಕಾರ್ಯಧುರಂಧರತ್ವದೊಳ್ ದೀಕ್ಷಾಬದ್ಧನಾಗಿ (ಕೀಗಂಧಿ· ೬-೦೦)· ೨. ದೂತಕಾರ್ಯ; ದೌತ್ಯ : ಶರಣದೇಹಿಕದೇವನೆಂಬೀ ಬಿರುದ ಪೆಱೆಯಲು ರಾಯಭಾರವ ಧರಿಸಿ ಕೌರವನರಮನೆಗೆ ವಡತಂದನಸುರಾರಿ (ಶಾಬ್ಕಾಗ· ೬ ಸಂಸಿ) ; ಈತನ ರಾಯಭಾರವು ಸಫಲವಾಯಿತು (ಪಂಚಾಮ್ಯ· ೫೬).

[< ಸಂ. ರಾಜ್ಯಭಾರ./ತೆಲು. ರಾಯಬಾರ, ರಾಯಭಾರ]

ರಾಯಭಾರಿ (ನಾ). ೧. ಪ್ರತಿನಿಧಿ ; ನಿಯೋಗಿ : ಜಯವರ್ಮಂ ಆದರದಿಂದಟ್ಟಿದ ರಾಯಭಾರಿ ದಮನಂ ಬಂದಿರ್ದಪಂ (ಪಚಿ· ೬-೩೭); ಶ್ರೀರತದಿಂ ಬುದ್ಧಿವಂತರ ರಾಯಭಾರಿಯುಮ್ಮಿರನು ಕರುಪೆ (ಕೃಪೂ· ೨. ೦೩೬). ೨. ಒಂದು ರಾಷ್ಟ್ರದಿಂದ ಇನ್ನೊಂದು ರಾಷ್ಟ್ರಕ್ಕೆ ಕಳುಹಿಸಲ್ಪಟ್ಟ ನಿಯೋಗಿ,— ರಾಜದೂತ : ನೀವು ನಿಮ್ಮ ಮಂತ್ರಿಪದವಿಗೆ ರಾಜೀನಾಮೆಯನ್ನು . . . ಪರದೇಶದ ರಾಯಭಾರಿಯಾಗಿ ನಿರ್ದೇಶಿಸಲ್ಪಡದೆ ಕೊಡಬೇಡಿರಿ (ಬಹಚಿ· ೫೫) ; ಐರೋಪ್ಯನಾಡುಗಳ ಗಿಡುಮರಗಳೂ ಇಲ್ಲಿಗೆ ರಾಯಭಾರಿಗಳಂತೆ ಬಂದು ನೆಲಸಿದವು (ಪಾಸಿ. ೬. ಪುಟ್ಟ·೫).

[ರಾಯಭಾರ + — ಇ· / ತುಳು. ರಾಯಭಾರಿ; ತೆಲು. ರಾಯಬಾರಿ, ರಾಯಭಾರಿ]

ರಾಯಭಾರಿತನ (ನಾ)· = ರಾಯಭಾರ ೨ : ಧನದನಗಂ ತನಗಟ್ಟಿದೊಡೆ ರಾಯಭಾರಿತನಂ ಬಂದಂತಿರ್ಪುವಿದಲಿ ಕುಂಜೋಪಾಂತ ' ಥಳಥಳಿಸಿ ಬೆಳಗೆ ಕುಳಿಶಶಿಶ್ಮಂಗಳ್ (ಪಾಂಚಿಪು· ೨-೦೦೩) ; ಆಯ ಪರವಾಗಿ ರಾಯಭಾರಿತನ ವಹಿಸಿ ಬಂದಿರುವುದು ನಾನೇ(ಪಾಕ್ಕ· ೬೨೦). [ರಾಯಭಾರಿ + — ತನ]

ರಾಯಭೇರಿ (ನಾ)· ದೊಡ್ಡದಾದ ಭೇರಿ ; ಭಾರಿಯಾದ ನಗಾರಿ : ಧ್ವನಿಗ್ಯೆದುವೆನಿತಜಿಸೊಳಗೆ ರಾಯಭೇರಿಗಳನುವಾದ ಚೆನ್ನಗಾಳೆಗಳು (ಸಚಿ· ೨೫-೦). [ರಾಯ + ಭೇರಿ]

ರಾಯಭೇರಿಗೆ (ನಾ)· = ರಾಯಭೇರಿ : ಜಾಯು ಹರಿಗೋಲಾದ ರಾಯಭೇರಿಗೆಯಾದೆ ರಾಯರಾ ಕಾಲಿಗೆ ಮುಳ್ಳಿತ್ತುದಾದೆ (ಸಚಿ· ೫-೩೨).

[ರಾಯ + ಭೇರಿಗೆ (ಪ ←ತಮಿ. ಪೇರಿಕೈ)]

ರಾಯಮನೆ (ನಾ). ರಾಜನ ನಿವಾಸ ; ಅರಮನೆ : ಘನತರಭದ್ರ ಮಂಟಪಗಳಿಂದಾ ರಾಯಮನೆ ರಾರಾಜಿಸುತಿಹುದು (ಶಾಣಾಂ. ೩-೬). [ರಾಯ + ಮನೆ]

ರಾಯಮನೆತನ (ನಾ). ರಾಜಮನೆತನ ; ಅರಸುಕುಲ : ಆ 'ಮೊನೆಗಾರ' ಎಂಬ ಬಿರುದೂ ಮಹೀಶೂರ ರಾಯಮನೆತನಕ್ಕೆ ಆಚನ್ದ್ರಾರ್ಕವಾಗಿ ಸಲ್ಲತಕ್ಕದ್ದು (ಅಭಗಂ. ೪೦-೧). [ರಾಯ + ಮನೆತನ]

ರಾಯಮನ್ನಣೆ (ನಾ). ಅರಸನಿಗೆ ದೊರೆಯುವ ಗೌರವ ; ರಾಜಮನ್ನಣೆ : ಅಲ್ಲಿಯ ಪ್ರಜೆಗಳಾದರಂ ಮಿಗೆ ಮಾಡಿದ ರಾಯಮನ್ನಣೆಯುಂ ಕಯ್ಕೊಂಡು (ಶಾಣಾ. ೬-೧೧ ವ). [ರಾಯ + ಮನ್ನಣೆ]

ರಾಯಮಱ್ಗೆ (ನಾ). ಶ್ರೇಷ್ಠವಾದ ಸ್ಥಳ.— ಸ್ಥಾನ (?) : ಪಟ್ಟನೆ ಜಂಬೂದ್ವಿಪಕ್ಕಿಟ್ಟಳ ಹಗರಟ್ಟಗೆನಾಡು ನೊಸಲಾ ನೊಸಲಿಂಗಿಟ್ಟಿಸೆವ ತಿಱಕದಂತಿರೆ ಪಟ್ಟಣವಿದು ರಾಯಮಱ್ಗೆ ಕಲುಕೆಱಿಪಿಸಗುಂ (ಪಾಭಾ. XX. ೨೦೨-೧೦ ; 1244). [ರಾಯ + ಮಱ್ಗೆ]

ರಾಯಮಾನ (ನಾ). ರಾಜನಿಗೆ ಸಲ್ಲುವ ಆದಾಯ ; ರಾಜ್ಯಾದಾಯ : ರಜ್ಯಾದಾಯವು ಷಡ್ಭಾಗವೆಂದು ಗೊತ್ತಾದ ನೆಲಗಂದಾಯದಿಂದಲೂ ವೊಗದಿ, ನಿಕ್ಷೇಪ, ಶುಲ್ಕ, ದಂಡ ಮತ್ತು ಗಣಿಗಳ ರಾಯಮಾನಗಳಿಂದಲೂ ಉತ್ಪತ್ತಿಯಾಗುತ್ತಿತ್ತು (ಕಾಶ್ರ. ೬೩). [ರಾಯ + ಮಾನ]

ರಾಯಮೂದಲೆ (ನಾ). ಅಧಿಕವಾದ ತಿರಸ್ಕಾರ.—ಅವಹೇಳನ : ಆತನ ಪೆಣ್ವಾಸಕ್ಕೆ ಕ್ಷಾತ್ರದ ರಾಯಮೂದಲೆಯನ್ಹೊಡ್ಡಿ ವಿಡಂಬಿಸಿ ಕೆಣಕಿ . . . ಮಹಾಪರಾಭವನ್ನು ನೀನು ಪಡೆಯಿಸಿದಪನಾದೆ (ಕಂಗಂ. ೪೯-೬). [ರಾಯ + ಮೂದಲೆ]

ರಾಯಮೋಹರ (ನಾ). = ರಾಯಕಟಕ : ಬಲವಲ್ಲಲ್ಲಿ ಭಯಗೊಳೆ ದ್ರೋಣ ಹೊಕ್ಕನು ರಾಯಮೋಹರಕ್ಷ (ಶಾಣ್ಕರ್ಣ. ೨-೩೪) ; ಹೊಂತಕಾಲ್ ಗಳಾಗ ರಾಯಮೋಹರದಲಿ ಪಂತದೊಳೆಸೆದರುಬ್ಬಸಲಿ (ಕಂಪಾ. ೦೫-೨೦). [ರಾಯ + ಮೋಹರ]

ರಾಯರಾವುತ, ರಾಯರಾವುತ್ತ, ರಾಯರಾವ್ತ (ನಾ). ಶ್ರೇಷ್ಠನಾದ ಕುದುರೆಸವಾರ : ಹಿರಿಯ ಮಲಧಾರಿಗಳು ಬಪ್ಪಾಗ ಮುಂದೆ ವೀರರ ಮಕುಟವರ್ದ್ಧನರ ರಾಯರಾವ್ತ[ಕಾಣಂ - ಹು]ತರ . . . ನಡುವೆ . . . ಜಂದಾಯಿತ್ಯನಿರ್ದನು (ಪೊಚಾಪು. ೪-೩೩) ; ಖರ ಕುಣಿದಾಡೆ ಹೊಕ್ಕರು ರಾಯರಾವುತರು (ಶಾಣ್ಕರ್ಣ. ೦೬-೨). **ರಾಯರಾವುತ್ತ** : ಗೆಲ್ಲಂಬಡೆದ ರದಟನಂ ರಾಯರಾವುತ್ತರಾಗಳ್ (ಶಬ್ದಾ. ೨೬೧). **ರಾಯರಾವ್ತ** : ವಾನಾಯುಜದ ಸಾಲೆಸೆದುದೋಜಿಗಿದ ರಾಯರಾವ್ತರ ಮಣಿಮಕುಟ ಮರ ಗೋಡನೋಲ್ಮೆಸೆ (ಶಾಣ್ಕರ್ಣ. ೦೬-೯). [ರಾಯ + ರಾವುತ]

ರಾಯರಾವುತ್ತ ' ರಾಯರಾವುತ ' ನೋ.

ರಾಯರಾವ್ತ ' ರಾಯರಾವುತ ' ನೋ.

ರಾಯರಿಸಿ (ನಾ). ರಾಜಋಷಿ ; ರಾಜರ್ಷಿ : ಈತನಸಂತರಿಕ್ಷದೊಳ್ ಕರಗಳನಿತ್ತಿ ರಾಯರಿಸಿಯೆಂದುರೆ ಕೀರ್ತಿಪರಲ್ತೆ ಚಾರಣರ್ (ಶಾಶಾಂತ. ೨೬-೨೯). [ರಾಯ + ರಿಸಿ (< ಋಷಿ)]

ರಾಯರೂವಾರಿ (ನಾ). ಶಿಲ್ಪಿಗಳಲ್ಲಿ ಶ್ರೇಷ್ಠನಾದವನು : ಕಲ್ಯಾಣದ ರಾಯರೂವಾರಿ ಬಲ್ಲೋಜ ಕಂಡರಿಸಿದ ಸೊಸವ (ಪಾಭಾ. XX. ೨೦೨-೦೦೦ ; 1244). [ರಾಯ + ರೂವಾರಿ]

ರಾಯರೇಜೆ (ನಾ). ರಾಜನು ಮಾಡಿದ ಆಜ್ಞೆ ; ರಾಜಾಜ್ಞೆ : ರಾಯರೇಜೆಯ ಭವ್ಯರಾಲಿಸಿ ರಾಯಬಿಜ್ಜಣ ಬಸವಗುಲಿದಪ್ಪವಾಯ ತಂಕ್ಕಾಲೋಡವಾದುದ ಧೈರ್ಯಿಯಗ್ರಜನ (ಪಜಿತ. ೩೩-೦). [ರಾಯ + ರೇಜೆ]

ರಾಯಲ್₁ (ನಾ). ಮುದ್ರಣಕಾಗದದ ಒಂದು ಅಳತೆ; ಇಪ್ಪತ್ತುನಾಲ್ಕು ಅಂಗುಲ ಉದ್ದವೂ, ಹದಿನೈಬತ್ತು ಅಂಗುಲ ಅಗಲವೂ ಇರುವ ಮುದ್ರಣದ ಕಾಗದ : ಮುದ್ರಣದಲ್ಲಿ ವಿಂಗಡಣೆ ಮಾಡುವಾಗ ಈ ಮುಂದಿನ ಪಟ್ಟಿಯನ್ನು ಅನುಸರಿಸುವುದು ಲೇಸು . . . ರಾಯಲ್, ಡಮ್ಮಿ, ಕ್ರೌನ್ (ಮುಕ್ರಕ್ರ. ೨೭). [← ಇಂ. Royal]

ರಾಯಲ್₂ (ನಾ). ಚಿತ್ರದುರ್ಗದ ಪಾಳೆಯಗಾರರ ಕಾಲದ ಒಂದು ಚಿನ್ನದ ನಾಣ್ಯ : ದುರ್ಗವು ಕೈವಶವಾದ ಮೇಲೆ ಈ ದೊರೆಯ ಬೊಕ್ಕಸದಲ್ಲಿದ್ದು ಹಗೆಗಳ ಕೈಗೆ ಸಿಕ್ಕಿದ ನಾಣ್ಯಗಳ ವಿವರ . . . ೧೦೨,೦೦೦ ರಾಯಲ್ (ಚಕ್ರಪ್ರ. ೦೦೩). [?]

ರಾಯವಜೀರ (ನಾ). ರಾಜನ ಮಂತ್ರಿ.—ಸಚಿವ : ರಾಯವಜೀರರೊಳ್ ರಾಣಾ ಜಗದೇವರಾಯರಸನಗ್ಗಳಂ (ಪಪಪ. ೦೨-೦೯). [ರಾಯ + ವಜೀರ]

ರಾಯವತ್ತಳೆ (ನಾ). ರಾಜನ ನಿರೂಪ ; ಅರಸನ ಅಪ್ಪಣೆ : ಶ್ರೀ ಪೆಬ್ಬಿದ ಬಾವರಾಜಒಡೆಯರ ಬಳಿಗೆ ಈ ನಿರ್ಣಯವನ್ನು ರಾಯವತ್ತಳೆಯಟ್ಟಿ (ಶಬ್ಕ. ೨೦೬-೭). [ರಾಯ + ಪತ್ರಳೆ₁]

ರಾಯವಾಡ (ನಾ). ರಾಜಭವನ್ನು ಕುರಿತ ಸ್ತುತಿ.—ಹೊಗಳಿಕೆ : ಓದುವ ರಾಯವಾಡದುಗ್ರಡಿಸುವ ಮಾಂಗಳಿಕದ ಚಪ್ಪರಿಸುವ ಪಡಿಯಱರ . . . ಕೈವಾರಿಗಳಾಡಂಬರಮಳುಂಬುಮಾಗೆ (ಪಪಂಪ್ರ. ೦೦-೧೩ ವ). [ರಾಯ + ವಾಡ್ಯ (p ← ಪ್ರಾ. ವಾಢ = ಅಧ್ಯಯನ, ಶಾಸ್ತ್ರ)]

ರಾಯವಾವುಡ (ನಾ). ರಾಜನ ವಸ್ತ್ರ ; ಅರಸನು ಉಡುವ ಬಟ್ಟೆ : ಇದು ರಾಯವಾವುಡಂ ನಲಿಯಿಂದಸೆಂತೋ ತಂದನಿಂದು ಸ್ಪವಕಾಱಂ (ಪಪಪ. ೬-೦೭೬). [ರಾಯ + ಪಾವುಡ]

ರಾಯಶಿಲ್ಪಿ (ನಾ). = ರಾಯರೂವಾರಿ : ರಾಯಶಿಲ್ಪಿ "ಅಪ್ಪಣೆ ಆದರೆ ಹೋಗಿ ಬರುತ್ತೇನೆ ಪ್ರಭು" ಎಂದನು (ಪಪಪ. ೧೩). [ರಾಯ + ಶಿಲ್ಪಿ]

ರಾಯಸ (ನಾ). ೧. (ತಮ್ಮ ಪ್ರಜೆಗಳನ್ನು ಕುರಿತು ಗುರು, ರಾಜ ಮುಂತಾದ) ಹಿರಿಯರು ಬರೆಸುವ ಪತ್ರ ; ನಿರೂಪ : ಬಲ್ಲಾರಿಗೆ ದಿನಿಮಿರಿ ರಾಯಸಂ ಬರೆಯಿಸುವಂ (ಪಪಂಪ್ರ. ೦೬-೭) ; ರಾಯನಾಯುಷ್ಮಾವ ಸಾನದ ರಾಯಸವ ಬರೆಸಿದರು (ಪೊಪಾ. ೩-೬-೦) ; ಆಡಳಿತವನ್ನು ನಡೆಸಲು . . . ಯಾವ ಭಾಷೆಯಲ್ಲಿ ರಾಯಸಗಳನ್ನು ಬರೆಯಬೇಕು ? (ಮುಕ್ರಕ್ರ. ೨೬). ೨. (ರಾಜನ) ಆಜ್ಞೆ ; ಅಪ್ಪಣೆ ; ಕಟ್ಟಳೆ : ಊರೂರ್ಗೆ ಬೇಱಬೇಱೊಲಿದು ರಾಯಸವಿತ್ತು ಹಾರ್ಪೆಸುತರಸನಳ್ಗೆ ಳೆಲ್ದರ್ಗೆ ಬೆಸನಿತ್ತು (ಪಂಲೆ. ೩-೪) : ಯಿರಾಯೆಸದ ಮರ್ಯ್ಯಾದೆಯ ಆ ಚಂದ್ರ ಗಿರಿಯ ಮಲ್ಲಿಕಾರ್ಜುನದೇವರಿಗೆ ವೊರ್ವ್ವದಲು ಸಲುವಂತೆ . . . ಮಾಡಿಸಿ ಕೊಯ್ದುದು (ಪಾಭಾ. IX-ii. ೨೫೯-೨೦: 1405) ; ರಾಯಸವೆಂಬುದು ರಾಯ ಗಲ್ಲದೆ ಮಿಕ್ಕ ನಾಯಕವಾಕ್ಯಗಳಿಗುಂಟೆ (ಶಾಣಾಂ. ೦೦-೩೨). ೩. ಆಜ್ಞಾಪತ್ರಗಳನ್ನು ಬರೆಯುವ ಹಾಗೂ ಓದಿ ಹೇಳುವ ವೃತ್ತಿ : ಈ ಲಿಖಿತವಚ್ಚರಿ . . . ವಾಚಿಸುವೆನೆಂದೆನುತ ರಾಯಸದ ಕಡುನಿಪುಣರು ನಲ್ಲದನಿಬರ್ ನೋಡಿ (ಪಪಪಂ. ೩೦-೪೬) ; ಕರಿಸಿ ರಾಯಸವ ಮಂತ್ರಿಗಳ . . . ದೊರೆಗಳಗೋಲೆಯ ಬರಿಸಿದ ಲಿಂಗರಾಜೇಂದ್ರ (ಶಂಪ್ರ. ೨೦-೩೩) ; ರಾಯಸದ ಶಕಟದಾಸನು ಅಮಾತ್ಯರಾಕ್ಷಸನ ಪ್ರೇರಣೆಗೆ ಒಳಗಾಗಿ . . . ತಂತ್ರಗಳನ್ನು ನಿತ್ಯವೂ ಹೂಡುತ್ತಿದ್ದ ಕಾರಣ (ರಾಕ್ಷಮು. ೨೬).

ರಾಯಸದವ = ರಾಯಸವನ್ನು ಬರೆಯುವ ಹಾಗೂ ಓದಿ ಹೇಳುವ ಕೆಲಸದವನು : ರಾಯಧಾರಿಗಳ ರಾಯಸದವರ ಕರಣಿಕರ ಜೋಯಿಸರ . . . ನಡುವೆವೊಡ್ಡೋಲಗಂಗೊಟ್ಟು ರಂಜಿಸುತ್ತಿರ್ದನು (ಸಮ್ಕಳಾ. ೨-೪) ; ಅಂತಸ್ತು ಗೌರವಗಳಿಗೆ ತಕ್ಕಂತೆ ಒಕ್ಕಣಿಸಿದ ಲಗ್ನದ ಓಲೆಗಳನ್ನು ಯೋಗ್ಯರಾದ ರಾಯಸದವರು, ಭಟ್ಟರು ಒಯ್ದರು (ಕಾಕಂಕಾ. ೪೩). [ದೇ.+ತವಿ. ಇರಾಯಚಮ್, ರಾಯಚಮ್ ; ತುಳು. ರಾಯಸ, ತೆಲು. ರಾಮಸ, ವ್ಯಾಯಸ]

ರಾಯಸನ್ನಿ (ನಾ). ಸನ್ನಿಪಾತಜ್ವರದಲ್ಲಿ ಒಂದು ಬಗೆ ; ತೀವ್ರವಾದ ಸನ್ನಿ : ಕವಡುಸನ್ನಿಯೆಂದರೆ ಸನ್ನಿಗಳೊಳಗೆ ರಾಯಸನ್ನಿಯಂತೆ (ಪಡಾ. ೨. ೪೭೬). [ರಾಯ + ಸನ್ನಿ]

ರಾಯಸಭಾವಿ (ನಾ). = ರಾಯಭಾವಿ ೨ : ಪಾಂಡವರ್ಗೆ ಪಗೆಯಂಗಳಂ ಸಮಕಟ್ಟಿ ಸ್ವಕೀಯ ರಾಯಸಭಾ[ಪಾಣಾ. ಬಾ]ರಿಗಳಂ ಕಲ್ಪಿಪುವುದುಂ (ಪಾಪಾಕ. ೯-೦೫೬ ಪ). [< ರಾಯಭಾವಿ]

ರಾಯಸವಿದ್ಯೆ (ನಾ). ರಾಯಸವನ್ನು ಬರೆಯುವ ಕಲೆ : ಚಿತ್ರಾಂವಿದ್ಯೆ, ಸಿಪ್ಪರಿಗವಿದ್ಯೆ, ಪುಸ್ತಕದ ಲೇಖನವಿದ್ಯೆ, ರಾಯಸವಿದ್ಯೆ . . . ನಾನಾಧಾವೆ ನಾನಾಸಂಜ್ಞೆಗಳನು ಅರಿತು (ಪಾಪಾ. ೬). [ರಾಯಸ + ವಿದ್ಯೆ]

ರಾಯಸಾಹಣಿ (ನಾ). = ರಾಯರಾವುತ : ವಜ್ರದೇವನ ಡಿಂಗರಿಗ ರಾಯಸಾಹಣಿ ನೋಡಪಾ (ಪಾಂ. ೦೪೭೨, ೪೦೫೧ಾ. ೪-೩; ೪). [ರಾಯ + ಸಾಹಣಿ]

ರಾಯಸಿಗ (ನಾ). ರಾಯಸವನ್ನು ಬರೆಯುವವನು : ರಾಯಸಿಗನಂ ಕರೆಯಿಸಿ ಪಲವುಂ ಗಡ್ಡಿಗೋಂಟಿಗಳ ಬಲಮಂ ಪಯಣಸನ್ನದಂಗೆಯ್ದು ದೆಂದು ರಾಯಸಂಗಳಂ ಕಳುಪಿ (ಪಾಪಾ. ೪-೩೩ ಪ); ಅರಸನ ಕಣ್ಸನ್ನೆಯಿಂ ರಾಯಸಿಗನದಂ ಕೊಂಡು (ಪಾಪಾ. ೦೩-೦೩). [ರಾಯಸ + ಇಗ]

ರಾಯಸೂಯ (ನಾ). ಚಕ್ರವರ್ತಿಯು ಮಾಡುವ ಯಾಗ : "ರಾಯಸೂಯಮಂ ಮಾಡಿದಾತನಂ ಸಾಮ್ರಾಟ್‌ಯೆಂಬುದು" (ಪಾಪಾಕ. ೭೦-೨೬೪). [< ರಾಜಸೂಯ]

ರಾಯಸೆಜ್ಜೆ (ನಾ). ರಾಜನ ಹಾಸುಗೆ; ಅರಸನ ಶಯ್ಯೆ: ಮಹಾರಾಜ:– (ರಾಯಸೆಜ್ಜೆಯಲ್ಲಿ ಸ್ಮಿತನಾಗುವನು) (ಪಟ್ಟಾ. ೦೯-೦); ಶಾಂತಲಾದೇವಿ ರಾಯಸೆಜ್ಜೆಯ ಇನ್ನೊಂದು ಅಂಚಿನಲ್ಲಿ ಕುಳಿತಳು (ಪಪಾ. ೪೩). [ರಾಯ + ಸೆಜ್ಜೆ]

ರಾಯಸೊಮ್ಮು (ನಾ). ರಾಜನ ಸಂಪತ್ತು: ಅರಸನ ಐಶ್ವರ್ಯ : [ಸ್ಥಾನ:–ಶ್ರೀರಂಗಪಟ್ಟಣ. ಅರಮನೆಯ ಪೆಲವಾಗಿಗೆ. ರಾಯಸೊಮ್ಮಿನ ಒಳಗಂಡಾರ] (ಪೂಕ್ಷ. ೦೦-೭). [ರಾಯ + ಸೊಮ್ಮು]

ರಾಯಿತ (ನಾ). ತರಕಾರಿ ಮತ್ತು ಮೊಸರು ಬೆರಸಿ ಮಾಡುವ ಒಂದು ಬಗೆಯ ವ್ಯಂಜನಪದಾರ್ಥ : ಬೆಂಡೇಕಾಯಿ ರಾಯಿತವು ಅರುಚಿಯಾಯಿತು (ಪಾಪಾಕಾ. ೦೦೬). [←ಹಿಂ. ರಾಯತಾ; ಮರಾ. ರಾಯತೀ]

ರಾಯಿಪುಡಿಸಕ್ಕರೆ ' ರಾಯಂಪುಡಿಸಕ್ಕರೆ ' ನೋ.

ರಾಯುಂಳ್ಳಿ (ನಾ). ಒಂದು ಬಗೆಯ ದಪ್ಪ ಈರುಳ್ಳಿ : " ರಾಜ ಪ್ರಿಯಃ – ರಾಯುಂಳ್ಳಿ" (ಲಿಪಿ. ೦೪೮); ರೊಟ್ಟಿ ಸ್ಕರೆ ತುಪ್ಪ ಬೆಲ್ಲ ಗೋಧುವ ತಿಪ್ಪೆಟ್ಟು ರಾಯುಂಳ್ಳಿಯಖಿನಿಯು ಒಟ್ಟಿಲಾ ಕೆವಳ ಕೊಂಡಿದ ಮೂಸದ ರಾಸಿಯಿಟ್ಟಣಿಸಿದವಂಗಡಿಯೊಳು (ಪಾಪಾಕಾ. ೪೨-೬೦). ' ರಾಜುಳ್ಳಿ ' ಪರಾ. [ರಾಯು + ಉಳ್ಳಿ]

ರಾಯ್ಮಂಗೆಯ್ . ರಾಯ್ಮಗೆಯ್ (ಕ್ರಿ). ರಾಜ್ಯಭಾರಮಾಡು : ಆಡಳಿತವನ್ನು ನಡೆಸು ; ಆಳು : ಬಜ್ಜವಾಸಿಪನ್ನಶ್ಯಾಸಿರಕೆ ಚಟ್ಟು ರಾಯ್ಮಂಗೆಯುತ್ತಿರೆ (ಪಪ. VIII. ಸೊಡಾ. ೧೦೬-೬; ೮೮೦). ರಾಯ್ಮಗೆಯ್ : ಚಂದ್ರಾರ್ಕತಾರಂಬರಂ ರಾಯ್ಮಗೆಯುತ್ತಿರಲು (ಪಪ. ೪. ಪಾಸಪ. ೦೬೦-೯; ೧೧೦೬). [< ರಾಜ್ಯಂಗೆಯ್]

ರಾಯ್ಮಗೆಯ್ ' ರಾಯ್ಮಂಗೆಯ್ ' ನೋ.

ರಾರಾಜಿಸು ' ರಾಜಿಸು ' ಪರಾ.

ರಾಲ. ರಾಳ (ನಾ). ೧. ಒಂದು ಬಗೆಯ ಮರ; ಆರಾಲ: ಸಜ್ಜರಸ : "ಸಸ್ಯಂ _ ರಾಲ. ಸಾ" (ಲಿಪಿ. ೦೬೪). **ರಾಳ** : ೧. "ಸೌರಮೆಸಲಾ ರಾಳಮೆಸೆ ಸಜ್ಜರಸಮಕ್ಕುಂ" (ಕೀಗಣಾ. ೪೬-೪೨); ಕರೀಡಮಾರ. ರಾಳ (ಪ್ಯಾಸಿ. ೭೦-೦೪೭೭). ೨. ರಾಲಮರದಿಂದ ದೊರಕುವ ಅಂಟು : ಇನ್ನು ಕೆಲವೊಂದು ವಿಶಿಷ್ಟವೃಕ್ಷಗಳಿಂದ ಅಂಟು, ರಾಳ, ಶೀಗೇಕಾಯಿ . . . ಕಾಯಿ ಮೊದಲಾದ ಉಪಯುಕ್ತವಸ್ತುಗಳು ದೊರೆಯುವವು (ಕಪಟ್ಟ. ೬-೦೪); ಲೋಲನಾಗರಮೋತಿ ಚಂದನ–ಕರ್ಪೂರ ರಾಳ ಗುಗ್ಗುಳದ ದಶಾಂಗ (ಸಿದ್ಧಕ್ಷ. ೦೯-೬). [ಸಂ.]

ರಾವ್ ' ರಾಯ ' ನೋ.

ರಾವ (ನಾ). ೧. (ಪ್ರಾಣಿಗಳ) ಕೂಗು ; ಅರಚಾಟ : ನರಲ್ಲ ರಾವದಂತೇಂ ಬಗೆಗೊಂಡುದೋ ಗುಡುಗು ಸೂಪಿಮರುತ್ಕೃತಕೋವ ದೇಳ್ಗೆಯಿಂ (ಪಾಪಕ. ೪-೦೦೬); ವಾಲಿ ದೆಸಗಳು ಬಿರಿಯ ರಾವದಲನು ಜನನು ತಿವಿದನು ಸ್ರೋಪದಲಿ (ಪಾಪಪ. ೪-೨-೩೦); ಹೆಬ್ಬುಲಿಯ . . . ಭಯಂಕರರಾವದ ಇದಿರು ನಾಯಿಯ ಬೊಗಳು ನಗಣ್ಯವಾಗಿ ಬಿಟ್ಟಿತ್ತು (ಪುರಿಪು. ೨೫೦). ೨. ಶಬ್ದ; ಧ್ವನಿ; ಸದ್ದು : ದಿಗ್ವಿತ್ತಿವಿಭೇದಿ ವೆರ್ಚಿ ಕದನಾನಕರಾವಮಂಗರ್ವಿನುರ್ವೆ ಪರ್ವುತ್ತಿರೆ (ಪಂಪಾ. ೮-೮೨); ಅಂಬುಧಿಯ ನಿರ್ಘೋಷಮಂ ಪಳಿವಂತೆ ಡಮರುಗದ ರಾವಮೆಸೆಯ (ಪಪಪ. ೮-೪). [ಸಂ.]

ರಾವಟಿಗೆ (ನಾ). ಚಿಕ್ಕ ದೇರೆ ; ಗುಡಾರ : ನವಾಬರು . . . ತಲೆದಿಂಬಿಗೆ ಶಾಲನ್ನೂ ಸಕಲಾತಿಯನ್ನೂ ತಾವು ಮಲಗಿದ್ದಂತೆಯೇ ಹೊದಿಸಿ, ಆ ರಾವಟಿಗೆಯನ್ನು ಕೊಯಿದು ಪುತ್ತೂಂದು ಗುಡಾರಕ್ಕೆ ಹೋಗಿ (ಪಾಪಪ. ೨- ೨೨೬). [← ದುರಾ. ರಾವಟೀ]

ರಾವಡಿ (ನಾ). ಉಪದ್ರವ ; ತೊಂದರೆ : ನೊಣ ರಣವ ಹೊಕ್ಕು ಶೋಣಿತವ ಭುಂಜಿಸುವಾಗ ಕೀಣಸರದೆ ಭಟರೆಲ್ಲರೂ ನೂಸದ ರಾವ[ಪಾಣಾ. ಊವು]ಡಿಗಂಜಿ ಹೇಳದೆ ಪೋದರು (ಪುರಾಪ. ೬೦–೬) ; ಬಡತನದ ರಾವಡಿಗೆಯಾಜದೆ ಕಡುಗಿ ಭೂಮಿಯು ತೊಳಲಿ ಬರುತವೆ (ಪಾಪಪ. ೦೦-೦೬). [← ತೆಲು. ರಾವಡಿ]

ರಾವಣ (ನಾ). ೧. ಗಟ್ಟಿಯಾದ ಕೂಗು ; ಗರ್ಜನೆ. ೨. ಗಟ್ಟಿಯಾಗಿ ಕೂಗುವವನು ; ಗರ್ಜಿಸುವವನು. ೩. ರಾವುಣಿಂದ ಹತನಾದ ಲಂಕಾದ್ವೀಪದ ಒಬ್ಬ ರಾಕ್ಷಸರಾಜ : ಸೀತೆಯ ದೂಸಱಂದಟ್ಟಿದ ರಾವಣನಂತಿರೆ ನೀನುಂ ಅಲ್ಲಿಯಲಾಟಿಸಿದ್ದೆ (ಪಂಪಾ. ೯-೧೯) ; ರಾವಣನಂ ಜಗತ್ಪಿತಯ ರಾವಣನಂ . . . ರಘುಪ್ರಭವರೂಪದೆ ಮರ್ದಿಸಿದ್ದೆ ಜನಾರ್ದನಾ (ಪಪಪ. ೦–೬೦) ; ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ (ಗಾಪ). ೪. ಒಂದು ಬಗೆಯ ವೀಣೆ : ವಿಪಂಚಿಕೆ . . . ರಾವಣ . . . ಕಾಲಚೀಯೆಂಬ ಮೂವತ್ತಮೂಱು ತಂತ್ರೀವಾದ್ಯಂಗಳಲ್ಲಿ (ಪಪಗ. ೨೩೬). [ಸಂ.]

ರಾವಣಕರ (ನಾ). [ಗಣಿತ] ಇಪ್ಪತ್ತು ಎಂಬ ಸಂಖ್ಯೆಯ ಸಂಕೇತ : ಕರಿ ದಿನೆವ ರಾಜ ರಾವಣಕರ ಪ್ರಸಿಸಂಖ್ಯಾಕ್ಷರಂ ಪೊಂದಲ್ವಿಸೆಯೆ (ಧರ್ಮಪಂಚಾ. ೪-೨೪). [ಸಂ.]

ರಾವಣವೀಣೆ (ನಾ). = ರಾವಣ ೪ : ರಾವಣವೀಣೆಯ ರಂಜಕರಿಂ . . . ಒಪ್ಪದಕ್ಕಾ ವಂಹಾಲಿಂಗದಾಸ್ಥಾನಂ (ಪಂಪಾಕ. ೯-೧೦ ಪ); ತಂತ್ರೀವಾದ್ಯ ಕಳಾಮಹಿತನಾದ ಮಾದರಸ ರಾವಣವೀಣೆ . . . ಏನಾಕವೀಣೆ ಮೊದಲಾದ ಮೂವತ್ತೆರಡು ವೀಣೆಗಳನ್ನೂ . . . ಶ್ರುತಿಗೊಳಿಸಿ (ಪಪಪ. ೨೩೫). [ಸಂ. ರಾವಣವೀಣಾ]

ರಾವಣಶಾಖಿ (ನಾ). ಒಂದು ಬಗೆಯ ಸಸ್ಯ ; ಅಡುಸೋಗೆ : ಬಡಗಿ ಮಾಚಲದೇವಿಯ ಕುಲದೆಯ ಮಾಡಿಹೆನೆಂದು ಹೊನ್ನ ಕಪಿಲೆಯ ರಾವಣ ಶಾಖಿದುಚ್ಛಿಷ್ಟದ ಹಾಲಿನಿಂದ ಕೂಸಾಟ್ಟುಂಬವರನೇನೆಂಬೆ (ಪಪಪ. ೦೪೪). [?]

ರಾವಣಹಸ್ತ (ನಾ). ಒಂದು ಬಗೆಯ ವೀಣೆ : ಸುಲಲಿತವಾಗೆ ವಸು ಗುಣರೂಪವೆನಿಸ್ವವನಾಂಕಮಾಲೆಯಾ ಪಲತೇಜದಿಂ ರಸಬಡೆಯೆ ರಾವಣ

ಹಸ್ತದಿನೆಂದು ರಾವಣಾ ಅಂತು ನಿರ್ಭರಭಕ್ತಿಯಿಂ ಬಾಜಿವಾಗಳ್ (ಕಂಗಾಮಾ. ೦೦-೦೬೬) ; ಪ್ರಾಚೀನಗ್ರಂಥಗಳು. ಕೆಸ್ರಿ . . . ರಾವಣಹಸ್ತ ಮುಂತಾಗಿ ನಾನಾರೀತಿಯ ವೀಣೆಗಳನ್ನು ನಮೂದಿಸುತ್ತವೆ (ಸಂಗೀಶಿ. ೩೦೦).

[ಸಂ. ರಾವಣಹಸ್ತಾ]

ರಾವಣಾರಿ (ನಾ). ರಾವಣನ ಶತ್ರು ; ರಾಮ : ರಾವಣಾರಿಯ ಕಾಣಿಕೆಗೆ ಬಲುಖೀಯನು ತೋಱಿದನು ಸಾರುವ ಭಟ್ಟರೋಳಿಯಲಿ (ಕಾಶ್ಮಾಗಾ. ೯-೧೬) ; ರಾವಣಾರಿಯ ನಾಮ ಇಡ್ಡಲಿಗೆ ಸುಖಿಯುಂಡೆ (ಕೃಂದ. ರಾ. ೬-೩೭-೬). [ಸಂ.]

ರಾವಣಾಸುರ (ನಾ). ಒಬ್ಬ ರಾಕ್ಷಸ ; ರಾವಣ : 'ರಾವಣಾಸುರ ಮಥನ' ಪರಾ. [ಸಂ.]

ರಾವಣಾಸುರಮಥನ (ನಾ). ರಾವಣನನ್ನು ನಾಶಮಾಡಿದವನು ; ರಾಮ : ರಾವಣಾಸುರಮಥನ . . . ಕಾವುದಾನತಜನವ (ಕಾಶ್ಮಾಗಾ. ೬-೦). [ಸಂ.]

ರಾವಣಿ (ನಾ). ೧. ರಾವಣನ ಮಗ. ೨. ಇಂದ್ರಜಿತು : ರಾವಣಿಯ ಸಮರಂಗ ಕಂಗೆಡಿಸುತ್ತು ಕಪಿಬಲವ (ಕಾಶಾಗಾ. ೦೯-೧೬) ; ಎತ್ತಿ ಬಾಹಾ ದಂಡವನು ನಭಕೊತ್ತಿ ಹಲುಗಳನಾಷಿನಿ ಲಯಮಿತ್ತು ಮೊಗನೆಱಗಿದಮು ಮದದುಬ್ಬಿನಲಿ ರಾವಣಿಯ (ಕೊರಣಾ. ೪-೬೨೦). [ಸಂ.]

ರಾವದಿ (ನಾ). ಕುದುರೆಯ ಹೃದಯದ ಜಾಗ : ವಕ್ಷದ ಹೃದಯದಡೆಗೆ ರಾವದಿಯೆಂಬ ಪೆಸರಕ್ಕುಂ (ಕೃಕಾ. ೪೯-೦೬). [?]

ರಾವಬಹದ್ದೂರ್ (ನಾ). ಹಿಂದಿನ ಕಾಲದಲ್ಲಿ ಬ್ರಿಟಿಷ್ ಸರ್ಕಾರದವರು ಪ್ರಸಿದ್ಧರಾದ ನಿವಾಸಸೇವಕರಿಗೆ ಕೊಡುತ್ತಿದ್ದ ಒಂದು ಬಿರುದು: ರಾವಬಹದ್ದೂರ್ ತೋಟದವ್ಪನವರು ಶ್ರೇಷ್ಠದಾನಿಗಳು (ಕೃಚ).

[←ಹಿಂ. ರಾವ್‌ಬಹದುರ್]

ರಾವಲ್ (ನಾ). ರಜಪೂತರಾಜರಿಗೆ ಸಲ್ಲುತ್ತಿದ್ದ ಒಂದು ಬಿರುದು : ಟೊರಿಮಹಾರಾಜರವರಿಂದ ಕೊಡಲ್ಪಟ್ಟ "ರಾವಲ್" ಎಂಬ ಬಿರುದು ಅನೂಚಾನವಾಗಿ ನಡೆದು ಬಂದಿರುವುದು (ಗುಚಿತ. ೭೦).

[←ಹಿಂ. ರಾವಲ್./ಪಾಲಿ. ರಾಜುಲ್]

ರಾವಸಾಬ್ ' ರಾವಸಾಹೇಬ ' ನೋ.

ರಾವಸಾಹೇಬ, ರಾವಸಾಬ್ (ನಾ). ಹಿರಿಯರನ್ನು ಗೌರವದಿಂದ ಸಂಬೋಧಿಸುವಾಗ ಬಳಸುವ ಒಂದು ಮಾತು: ಕಲವು ಹೊತ್ತಿನ ಮೇಲೆ ಮೇದ ತಾನಾಗಿ ನುಡಿದ__'ರಾವ ಸಾಹೇಬ' (ಕಶಂ. ೧೦). **ರಾವಸಾಬ್** : ಯಾವ ಕೆಲಸವಿದ್ದರೂ ಬಿಟ್ಟುಬರಲು ಹೇಳಿದ್ದಾರೆ ರಾವಸಾಬ್ ! (ಕಂಗಸಾ. ೬೯). [←ಹಿಂ. ರಾವ್‌ಸಾಹಬ್]

ರಾವಳಿಸು (ಕ್ರಿ). ಆಬ್ಬರಿಸು ; ಅರ್ಭಟಿಸು : ಎಂಟುದಿಕ್ಕಿಂ ಮುತ್ತಿ ರಾವಳಿಸಿ ಮುಳಿದೆಮ್ಮ ಗಂಟಲಂ ಕೊಯ್ಯಬೇಡ (ಅಕೃಕೆ. ೬-೩೭-೨೯).

[<ರವೆ + — ಇಸು-/ ತೆಲು. ರವಿಂಚು]

ರಾವಿ (ನಾ). ಒಂದು ಬಗೆಯ ಮರ ; ಅರಳಿ: "ಬೋಧಿದ್ರುಮಃ . . . ಅಶ್ವತ್ಥಃ—ಶಿ ಅರಳೀಮರದ ಹಿರುಂಗಳು. ಅಶ್ವತ್ಥ . ರಾವಿಕಟ್ಟಿ" (ಕಾಶ್ಮಾಕಾ. ೦೦೬); ರಾವಿ — . . . . (ಅಶ್ವತ್ಥ) (ಜಾಮಾ. ೯). [←ತೆಲು. ರಾವಿ]

ರಾವಿನಾಡು (ನಾ). ಒಂದು ನಾಡಿನ ಹೆಸರು : ಬಯ್ದಕೂರ ರಾವಿನಾಡ ಮಾರ್ಯಮ್ಮ ಮಮ್ಮ ಗಣವ ರಾಮ ತುಜುವನಿಕ್ಕಿಸಿ ಆಬ್ಬಿ ಸತ್ತನ್ (ಚೆ. ಸ, ಪುಗಣಾ. ೨೦೬-೨; ೨೭೬). [ರಾವಿ + ನಾಡು]

ರಾವು$_1$ (ಕ್ರಿ). ಅಂಟಿಕೊಳ್ಳು ; ಹತ್ತಿಕೊಂಡಂತಿರು : ಅತನು . . . ನೆಲಕ್ಕೆ ರಾವಿ ಗಗನಕ್ಕೆ ನೆಗೆದು ಹಗೆಯ ಹೊಡೆತವನ್ನು ತಪ್ಪಿಸಿ ಖಡ್ಗದಿಂದ ಪ್ರಳಿಸಿ ಢಾಲನ್ನೊಡ್ಡಿ ತಿವಿದು ರಿವುರಿವನ್ನು ಇಳುಹಿದನು (ಕಾಪ್ರಸಂ.೨೬೬: ಸುಭಗೆ ಅಡಿಗೆಯ ಮನೆಯ ಮೂಲೆಯಲ್ಲಿ ರಾವಿಕೊಂಡು ಕುಳಿತಿದ್ದಳು (ಗಂಗಾಣಾ. ೦೨೬) : ಅವನು ಮನೆಯೊಳಗೆ ರಾವಿಕೊಂಡು ಕುಳಿತಿದ್ದ (ಕಬಿಪ್ರಾ. ೫೫). [?]

ರಾವು$_2$ (ನಾ). ಒಂದು ಕೊಂಡಾಟದ ಮಾತು : ಹರುವೆ ಹಳುರೇ ರಾವು ರಾವುರೆಯೆಂದು ಖಿಳರುಲಿಯೆ (ಕಾಶಾಗಾ. ೩೨-೨೦): ರಾವು ಫಲುಗುಣಯನುತ ಪಾರ್ಥನ ಭಾವ ಕುಡಿಚಮ್ಮ ಟಗೆಯಲಿ ತುರಗಾವಳಿಯನದುಹಿದನು ಸುಳಿಸಿದ ಸಾಹವಕೆ ರಥವ (ಕುಪ್ರಾಕ್ಕೃ. ೯-೭೭).

ರಾವು$_3$ (ನಾ). ೧. ನವಗ್ರಹಗಳಲ್ಲಿ ಎಂಟನೆಯ ಗ್ರಹ ; ರಾಹು : "ರಾವು (ರಾವು)—ರಾಹು=ಗ್ರಹವಿಶೇಷ" (ಕಕ್ಕಕೋ. ೭೮) ; ನೆಱೆ ಮೊಗವೆಂಬ ಚಂದಿರ ರಾವಿನೊಳು ಸೇರಿ ಹಲುವುದನುತ ಬಳುಬೆದಱಿ ಮಱಿವೊಕ್ಕ ಕಱು ವೆಱಿಯನು ಸೋಲಿಸುತೆಂದು ಮೆಱೆದುದವಳ ನಾಣ್ಕೊಸಲು (ಜಕುಪ. ೦೨-೫೫). ೨. ದೆವ್ವ; ಭೂತ : ಅವರ ಹಿರಿಯರು ನಂದಿದ ರಾವು ಮತ್ತು ಕೀಳುದೆವ್ವಗಳು ಅವ (ಕದ್ಮಸ. ೫೬). ೩. ಅಬ್ಬರ; ಆಟೋಪ; ಉಗ್ರತೆ : ಸ್ಲೇಗಿನಮ್ಮನ ರಾವಿನ ಮುಂದ್ಯಾರು ನಿಲುವೋರು (ಚಕ್ಕೃಕು. ೭೦). ೪. ಭಯಾನಕವಾದುದು : ಭೀಕರವಾದುದು : ಹೆಣವನ್ನು ಹೆಗೆದರು: ಮೈ ಉಬ್ಬಿ ರಾವಾಗಿದೆ (ಕಪಲ. ೭೪) ; ತಂದೆಯವರ ಸಿಟ್ಟಿನಿಂದ ರಾವಾದ ಮೋರೆ . . . ಪಾಪ್ಪನ್ನು ಕಲಕಿದವು (ಅಕೃ. ೨೬). ೫. ಕೋಪ; ಸಿಟ್ಟು : ಜಮಾದಾರ ಮುಖದ ಮೇಲೆ ರಾವಿನ ಕಳೆಯುರಲಿಲ್ಲ (ಗಂಗಾಣಾ. ೦೩೩) ; ವಾಲೀಕಾರ ಮಲಪ್ಪ ದಾದಾನ ರಾವು ನೋಡಿ . . . ಎಂದು ಕೇಳಿದ (ನ್ಯಾಕಾಚಾ. ೩೩). ೬. (ಕರಾ) ಅತಿಯಾಸೆ; ಹಂಬಲ; ಬಯಕೆ.

[< ಸಂ. ರಾಹು]

ರಾವುಕನಡಿ ' ರಾವುಗನ್ನಡಿ ' ನೋ.

ರಾವುಗಣ್ಣು (ನಾ). ೧. ಭಯವನ್ನು ಹುಟ್ಟಿಸುವ ಕಣ್ಣು : ರೌದ್ರವಾದ ಕಣ್ಣು : ಗೌಡರ ಮನಗೆ ಬೇಗದಿ ಬೀಗ ಹಾಕಿ ರಾವುಗಣ್ಣಿನ ತುರುಕರ ಕಾವಲಿಟ್ಟು (ಜಾಪಿದ. ೦೨೦). ೨. ಕೆಟ್ಟ ನೋಟ ; ಕ್ರೂರದೃಷ್ಟಿ : ಅವಳ ರಾವುಗಣ್ಣಿಗೆ ಬೀಳಬೇಡ (ಡಿಜಾ). [ರಾವು$_3$ + ಕಣ್ಣು (< ಕಣ್)]

ರಾವುಗನ್ನಡಿ, ರಾವುಕನಡಿ (ನಾ). ಸಣ್ಣವಸ್ತುವನ್ನು ದೊಡ್ಡದನ್ನಾಗಿ ಮಾಡಿ ತೋರಿಸುವ ಕನ್ನಡಿ ; ಭೂತಕನ್ನಡಿ : ಕಲಕಲವು ಕಡೆಗೆ ಬರೆದ ಅಕ್ಷರಗಳನ್ನು ರಾವುಗನ್ನಡಿ ಹಿಡಿದೇ ನೋಡಬೇಕು (ಕೃಜಾ. ೦೩೬); ಉಬ್ಬಿದ ಭೂತಕನ್ನಡಿಗೆ . . . ಬದಲಾಗಿ ಹಳ್ಳವಾಗಿರುವ ರಾವುಗನ್ನಡಿ (Concave mirror)ಯನ್ನು ಉಪಯೋಗಿಸಿದನು (ಜಕ್ಕಾ. ೯೮) . **ರಾವುಕನಡಿ:** ಅರಸು ರಾವುಕನಡಿಯ ಕಂಡು ಡಕ್ಕೆಯ ಬಿಸುಡು (ಜಕಾ. ೨-೨೩೫). [ರಾವು$_3$ + ಕನ್ನಡಿ$_1$]

ರಾವುಗಾಣು (ಕ್ರಿ). ಅತಿಭಯಾನಕವಾಗು : ನಾಯಕನ ಅವ್ಯವಸ್ಥಿತ ಚಿತ್ತದಿಂದ ಆಡಳಿತದಲ್ಲಿ ಉಂಟಾದ ಗಲಭೆಯು ಅತನ ವಧೆಯಿಂದ ರಾವು ಗೊಂಡಿತು (ಕಾಬಾಇ. ೩೭). [ರಾವು$_3$ + ಕಾಣು (< ಕಾಣ್)]

ರಾವುಗೆಂಪು (ನಾ). ಉಗ್ರವಾದ ಕೆಂಬಣ್ಣ ; ಅತಿರಕ್ತವರ್ಣ : ದಾಸವಾಳ, ಕೆಂಜಲ್ಲ ಮೊದಲಾದ ರಾವುಗೆಂಪು ಹೂಗಳನ್ನು ಒಯ್ದು ಅವಳ ಮುಂದೆ ಚೆಲ್ಲಿರಿ (ಕ್ರಜಾಚೆ. ೦೨೬). [ರಾವು$_3$ + ಕೆಂಪು$_1$]

ರಾವುಗೈ (ನಾ). ಬಲಿಷ್ಠವಾದ ಕೈ : ಮರಕಾಲ ರಾವುಗೈಯಿಂದ ಆ ಹುಚ್ಚುಹೊಳೆಯನ್ನು, ತೊಳೆಯಿಂದ ಮರ್ದಿಸತೊಡಗಿದನು (ಕಾಜಾಬಾ. ೦೩೩). [ರಾವು$_3$ + ಕೈ$_2$ (< ಕಯ್$_2$)]

ರಾವುಗೋಲು (ನಾ). ಕಮ್ಮಾರನು ಉಪಯೋಗಿಸುವ ಒಂದು ಬಗೆಯ ಉದ್ದವಾದ ಕಬ್ಬಿಣದ ಸಲಾಕೆ ; " ಲೋಹದ ಪಟ್ಟಿಯು ಒಂದಕ್ಕೊಂದಕ್ಕೆ ಅಂಟಿಕೊಳ್ಳುವುದಕ್ಕೆ ಬೇಕಾಗುವ ಶಾಖದ ಹದವನ್ನು ಪರೀಕ್ಷಿಸುವ ಸಲಾಕೆ " (ಅಪಾಣಾ).

[ರಾವು$_3$ + ಕೋಲು$_1$ (< ಕೋರ್$_1$)]

ರಾವುತ, ರಾಳುತ, ರಾಉತ್ತ, ರಾವುತ್ತ, ರಾವ್ತ, ರಾಹುತ, ರಾಹುತ್ತ (ನಾ). ಕುದುರೆ ಸವಾರ; ಅಶ್ವಾರೋಹಿ : "ಘೋಟೂಯ್ಲನೆ ರಾವುತಂ" (ಪಚಾ. ೩೯); ರಾವುತನ ತಲೆ ಕುದುರೆಯ ಕಾಲು ಬಲ್ಲೆಹದ ಮೊನೆ ಅಲ್ಲಿಯ ಅಡಗಿತ್ತು (ಸಭಾ. ಪ. II. ೬೬೫-೬೪); ತೆಪ್ಪವ ತೆಗೆವಂತೆ ತೆಗೆದೇಱಿ ರಾವುತರೊಪ್ಪದಿ ಬಂದರೋಲೈಸಿ (ಪಭಾ. ೨೬-೩೦); ಉಭಯಪಾರ್ಶ್ವದಲ್ಲಿಯೂ ರಾವುತರ ಪಹರೆ (ಶ್ರೀಪಾಭಾ. ೪೩). **ರಾಳುತ** : ಸಿರಿಯಂಗರಾಳುತರಿಂಗೆ ಖಿ ೩ ಪೊಗುಗೊಡಗೆ (ಎಕ. XIV. ಎಳಂಪೂ. ೨೩-೦೩; ಸಂ. 1448). **ರಾಉತ್ತ. ರಾವುತ್ತ** : ರಾಪತ್ತರಂ ತಳ್ಪಿಱುದು (ಎಕ. VIII. ತಿಮಂ. ೨೨೩-೦೦; 1158 ?) ; ರಥಿಕರಿಗೆ ಮಾವಂತರಿಗೆ ಕಾಲಾಳಿಂಗೆ ರಾವುತ್ತರಿಂಗೆ ಕೂಡಿಸಿದನವರ ವರಿಗವರಂಗದಾಯುಧವ (ಶಾಕ್ಕರ್ತೀ. ೦೩-೨೦); ಪಡವಳ್ಳರ್ ರಾವುತ್ತರ್ ಸ್ಸಾದಿಗಳ್ . . . ದಂಡೆತ್ತಿ ಪೋದರ್ (ಭಾಪಾಕ್ಕ. ೯೩-೨೯). **ರಾವ್ತ** : ಭಯದಿ ತೇಜಯನಿಳಿದು ರಾವ್ತರು ಕರವ ಮುಗಿದರು ಕೊರಳ ಸಲಹೆನುತ (ಶಾಕ್ಕರ್ತೀ. ೪-೦೪); ಮೊಱೆವ ಬೊಬ್ಬೆಗೆ ರಾವ್ತರಂ ಬಿಸುಟು ವಾಜಿಗಳ್ ಪರಿದಾಡಿದುವು (ಕಂಪ್ರ. ೨೪-೨೮). **ರಾಹುತ** : " ಘೋಟೂಯ್ಲನೆನಲು ರಾಹುತ " (ಕಬಾಕ. ೦೫೬); ಶ್ರೀಮನ್ಮಹಾವಡ್ಡವ್ಯವಹಾರಿ ಕುಲ್ಲ ಹಣ ರಾಹುತರುಂ (ಎಕ. V. ಹಾಸಕ. ೦೪೯-೦೪; 1113 ?) ; ಮದಕರಿದುಂ ಮಾಹುತನ ಕುದುರೆ ತಾ ರಾಹುತನ ಹದುಳವನಱಿದು ನಡೆವಂತೆ ಸೂಳೆ ತನಗೊದಗುವರನಱಿಗು (ಸಭಾಕ್ಕ. ೦೯೦೩). **ರಾಹುತ್ತ** : ಹೊಸ ಬಿರುದರ ಗಂಡೋರಾಯ ರಾಹುತ್ತಮಿಂಡಱ (ಎಕ. VII. ಶಿಪ್ರ. ೬೩-೦೦೩; 1687).

ರಾವುತರಾಯ, ರಾಳುತರಾಯ, ರಾಳುತ್ತರಾಯ, ರಾವುತ್ತರಾಯ. ರಾಹುತರಾಯ = ಅಶ್ವಾರೋಹಿಗಳಲ್ಲಿ ಶ್ರೇಷ್ಠನಾದವನು ; ಒಂದು ಬಿರುದು : ಶ್ರೀಮನುಮಹಾಪ್ರಧಾನಿಯಮ್ಮಡಿರಾವುತರಾಯ ರಾಯಕುಮಾರ (ಎಕ. VII. ಶಿಪ್ರ. ೬೦-೬ ; 1787); ಅರಸುಗಳವರ ಕಾರ್ಯ್ಯಕ್ಕೆ ಕರ್ತರಾದ ರಾಳುತರಾಯರು . . . ಕೊಟ ಗ್ರಾಮ (ಎಕ. XI. ಬಾಪ್ರ. ೦೧೪-೬; 1684 ?) ; ರಾಉತ್ತರಾಯರುಂ ಜವನಿಕೆ ನಾರಾಯಣರುಂ ಶ್ರಿ ರಾಮಕೃಷ್ಣಪದವದ್ಮಾರಾಧಕರುಮಪ್ಪ ಶ್ರೀಮನುಮಹಾಪ್ರಧಾನಂ ಪೆರುಮಾಳೆದೇವ (ಎಕ. XI. ಶಕ್ರದು. ೦೨-೦೬; 1286); ಸ್ವಸ್ತಿಪುರ ವರಾಧೀಶ್ವರ ಇಂಮಡಿರಾಉತ್ತರಾಯ ಶ್ರೀಪೆರುಮಾಳದಣ್ಣಾಯಕರ ಸುವುತ್ರಂ (ಎಕ. XIV. ಗುಂಕ್ಕೂ. ೦೩೦-೯ ; 1310) ; ರಾವುತ್ತರಾಯಂ (ಕಣಾಪ್ರ. ೨೪೩ ಪ್ರಯೋ); ಶ್ರೀಸೋಮ ಶಿಲಾದೇಗೂ ರಾಹುತರಾಯ ಮಹಾ ವಾತ್ರೆ ಅರಸುಗಳ ಕಾರ್ಯ್ಯಕ್ಕೆ (ಎಕ. XIV. ಗುಂಕ್ಕು ಶೀ. ೦೩೨-೬; 1540).

[←ಮರಾ. ರಾಳುತ್, ರಾಉತ್, ರಾವುತ್./ತಮಿ. ರಾವುತ್ತ, ಇರಾವುತ್ತ; ತುಳು. ರಾವುತೆ, ರಾಹುತೆ ; ತೆಲು. ರವುತು, ರಾವುತು, ರಾವುತ್ತು, ರಾಹುತು, ರಾಹುತ್ತು]

ರಾವುತಟ್ಟು (ಕ್ರಿ). ದೆವ್ವ ಭೂತ ಮುಂತಾದುವುಗಳ ಬಾಧೆ ತಟ್ಟು : ಗರ ಬಡಿದಂತಾಗು : ಅವನ ಮುಖ ರಾವುತಟ್ಟಿದಂತಿತ್ತು (ಪಚಾ).

[ರಾವು$_3$ + ತಟ್ಟು$_1$]

ರಾವುತಪಡೆ (ನಾ). ಕುದುರೆಗಳ ಪಡೆ ; ಅಶ್ವಬಲ ; ಅಶ್ವಾರೋಹಿಗಳ ತಂಡ : ಕಡೆಮೊದಲಿಲ್ಲದ ಖಳರಾಯರಾವುತಪಡೆ ಬಿದ್ದುದಿತ್ತ ಮೇಣತ್ತ (ಕೂಚಪ. ೧೦-೬೨). [ರಾವುತ + ಪಡೆ]

ರಾವುತಪಾಯಿಕೆ (ನಾ). ಕುದುರೆಸವಾರಿ ; ಅಶ್ವಾರೋಹ : ಕಾಟಣ್ಣನ ರಾವುತಪಾಯಿಕೆಯ ಸಘಾಟಿಕೆಯನು ಕಂಡು ಮೆಚ್ಚಿ ನೋಟಕರೊಲಿದು ಕೊಂಡಾಡಿದರು (ಶಾಕಾಸಂ. ೦೩-೦೯). [ರಾವುತ + ಪಾಯಿಕೆ]

ರಾವುತಿಕೆ (ನಾ). = ರಾವುತಪಾಯಿಕೆ : ಆದರಿಸಿ ರಾವುತಿಕೆಯಾದುದ ಭೇದವಿಲ್ಲದೆ ಮೂಳ್ವ ಹಯವನು ಸಾಧನೆಯ ಧನಪತಿಯ ದಿಕ್ಕಿಗೆ ಹೋಗದಿರಿ (ಸಂಕತ. ೬-೩); ಕುದುರೆಯ ಹಿಡಿಯ ಹೇಳಿದರೆ ರಾವುತಿಕೆಯ ಮಾಡಿದರೆ ಒಪ್ಪುವರೇ (ಸಿಕ್ಕೇಶ. ೩೬-೩); ನಿಡುಮಾಳಕೆ ತೇಜಿಯ ತೆಗೆದು ಲೀಲೆಯೊಳ್ಕೊಂದೆರಳ್ಚೀದಿಯನೇಱಿ ನೃಪಾಲ ರಾವುತಿಕೆದೋಱಿದನು (ಪಭಾ. ೨೯-೨೨). [ರಾವುತ + — ಇಕೆ]

ರಾವುತು (ನಾ). ಮೆಚ್ಚುಗೆಯ ಒಂದು ಮಾತು ; ಕೊಂಡಾಟದ ಒಂದು ನುಡಿ : ಪೂತು ರಾವುತೆನೆ (ಎಕ. VI. ತಿಪ್ರ. ೨೩-೨೪; 1196); ಅರರೆ ರಾವುತು ಜಾಗು ಸ್ವಾಮಿಯ ಹರಿಬಕ್ಕೊಸುಗ ಹಗೆಯ ಹೊಯ್ದಿರಿ (ಶಾಕ್ಕ. ೩. ೩-೪).

ರಾವುತೆಗೆ (ಕ್ರಿ). ದೆವ್ವ, ಗ್ರಹ ಮೊದಲಾದುವುಗಳ ಪೀಡೆಯನ್ನು ಮೈ ಮೇಲಿನಿಂದ ಬಿಡಿಸು,– ಓಡಿಸು : ಬಲಕೊಟ್ಟು ರಾವುತೆಗೆಯಬೇಕು (ಕಟ್ಟ). [ರಾವು$_3$ + ತೆಗೆ$_1$]

ರಾವುತ್ತ ' ರಾವುತ ' ನೋ.

ರಾವುಬಡಿ (ಕ್ರಿ). = ರಾವುತಟ್ಟು : ಅವನು ರಾವುಬಡಿದವನಂತೆ ಸುಮ್ಮನೆ ಕುಳಿತುಬಿಟ್ಟಿದ್ದ (ಕೂಚಪ. ೦೯); ಅವರ ಮುಖಗಳು ರಾವುಬಡಿದಂತೆ ವಿಕಾರವಾಗಿ ಕಾಣುತ್ತಿದ್ದುವು (ಶ್ರೀಪಾಭಾ. ೬೦೦). [ರಾವು$_3$ + ಬಡಿ$_1$]

ರಾವುಮುಖ (ನಾ). ಗರಬಡಿದಂತಿರುವ ಮುಖ ; ಭಯದಿಂದ ವಿಕಾರವಾದ ಮುಖ : ಪ್ರೇತಕಳೆಯ ನಿನ್ನ ರಾವುಮುಖ ನೋಡಿ ಸಾವೆ ಸತ್ತಿತೊ ಏನೊ (ಪಾಪೋ. ೪೦-೬). [ರಾವು$_3$ + ಮುಖ]

ರಾವುಮೊಗ (ನಾ). ಭಯಂಕರವಾದ ಮುಖ ; ಹೆದರಿಕೆಯನ್ನುಂಟು ಮಾಡುವಂಥ ಮುಖ : ಜಡಗಟ್ಟಿದ ಮೊರಟುಗುರುಳು – ಕಿಸಿಬಾಯಿ– ದೊಡ್ಡಹೊಟ್ಟೆ – ರಾವುಮೊಗಗಳಿಂದ ಅವನು ಯಮದೂತನಂತೆ ಭೀಷಣನಾಗಿದ್ದನು (ಶ್ರೀಪಾಕ. ೩೪). [ರಾವು$_3$ + ಮೊಗ]

ರಾವುರೆ (ನಾ). ಕೊಂಡಾಟದ ಒಂದು ನುಡಿ : ರಾವುರೆ ಅಮರೇಶ ಪೂತುರೆ ಅಮರನೀತಿ (ಅಸಾಪ್ರ. ೫೬. ೦೦೪-೬) ; ಎಲುವ ಗದೆಯಲಿ ಹುಟ್ಟು ಗಕೆಟ್ಟೋ ಹಳುರೆ ಹಳುರೇ ರಾವು ರಾವುರೆಯೆಂದು ಖಳರುಲಿಯೆ (ಶಾಪಾ. ೩೨-೨೦).

ರಾವುಹಿಡಿ (ಕ್ರಿ).– ರಾವುತಟ್ಟು : ರಾವುಹಿಡಿದುಹೋಗಿದ್ದ ಮುಖದಿಂದ ಸುಂದರಮ್ಮ ಗೋಳಾಡುತ್ತ ಹೊರಕ್ಕೆ ಬಂದಳು (ಸಂಚಕ್ರ. ೩೨) ; ಅವನು ಅಬ್ಬರಿಸಿದರೆ ಯಾರಾದರೂ ತುಂಬಿದ ಬಸುರಿ ಇದ್ದರೆ ರಾವುಹಿಡಿದು ಹೋಗುತ್ತಿದ್ದಳು (ಪಪ್ರಕ್ಕು. ೩೦೩). [ರಾವು$_3$ + ಹಿಡಿ$_1$ (<ಪಿಡಿ$_1$)]

ರಾವುಹೊಡೆ (ಕ್ರಿ). = ರಾವುತಟ್ಟು : ಅವನ ಮೋರೆ ರಾವುಹೊಡೆದಿತ್ತು (ಪಪ್ರಚಂ. ೬೩೦) ; ಅವರ ಕೂಗಾಟಕ್ಕೆ ಓಣಿಗೆ ಓಣಿಯೇ ರಾವುಹೊಡೆದಂತಾಗಿತ್ತು (ಗಂಪತಾಯಾ. ೨೪೨). [ರಾವು$_3$ + ಹೊಡೆ$_1$ (<ಪೊಡೆ$_1$)]

ರಾವೞ ' ರಾವುತ ' ನೋ.

ರಾಶಿ (ನಾ). ೧. (ಧಾನ್ಯ ಮೊದಲಾದ ವಸ್ತುಗಳ) ಗುಪ್ಪೆ; ಒಟ್ಟಲು ; "ಪುಂಜಃ ರಾಶಿಃ, ಉತ್ಕರಃ, ಕೂಟಂ – ೪ ಧಾನ್ಯಾದಿಗಳ ರಾಶಿ" (ಸಿಕ್ಕಾಂಶ. ೦೬೬); ಕಾಳನು ತೂರುತ ರಾಶಿಯ ಹೇರುತ ಕುಣಿವರು ರೈತರು ಊರಲ್ಲಿ (ಕಪಕ್ಷ. ೬-೬೭). ೨. ಗುಂಪು; ಸಮೂಹ : "ನಿಕರಃ. . . ರಾಶಿಃ . . . ಸ್ತೋಮಃ...ಈ ೩೯ ಸಮೂಹಂ" (ಪಣಾಯು. ೦೦೯-೦); ಮುದ್ರಿಸಿತು ಮಂಡಿಯುಂ ಕೆನ್ನವಿರ ರಾಶಿ (ಶ್ರೀಪಪು. ೦೩-೪೮೨). ೩. ಹೆಚ್ಚು; ಬಹಳ : ರಾಶಿ ಅನ್ನ ಹಾಕಬೇಡ, ಎಷ್ಟು ಬೇಕೋ ಅಷ್ಟು ಹಾಕು (ಕಟ್ಟ). ೪. ಮಧ್ಯಮತರಗತಿಯದು: ' ರಾಶಿಚಿಕ್ಕಣಿ ' ಪರಾ. ೫: [ಶೈವ] ಕಾಳಾಮುಖಿ ಮತ್ತು ಪಾಶುಪತಪಂಥದವರ ಹೆಸರಿನ ಕೊನೆಯಲ್ಲಿ ಸೇರುವ ಒಂದು ಪದ: ಶ್ರೀವಿದ್ಯಾರಾಶಿಪಂಡಿತ ದೇವರನ್ನು ಶಾಸನವೊಂದು ಸ್ತುತಿಸುತ್ತದೆ (ಕಣಾಕ. ೦೨೯). ೫. [ಜ್ಯೋತಿ] ಜ್ಯೋತಿಶ್ಚಕ್ರದಲ್ಲಿರುವ

ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನು, ಮಕರ, ಕುಂಭ ಮತ್ತು ಮೀನ ಎಂಬ ಹನ್ನೆರಡು ವಿಭಾಗಗಳು : ಧನು ರ್ಮುಖಂ ಸುಂದರಿ ಮಿಥುನಂ ದ್ವಿಸ್ವಭಾವರಾಶಿಗಳಿನಿಕುಂ (ಜಾಕಿ. ೦-೨೩); ಸೂರ್ಯ . . . ವರ್ಷದ ಹನ್ನೆರಡುಮಿಂಗಳುಗಳಲ್ಲಿ ಹನ್ನೆರಡು ರಾಶಿಗಳಲ್ಲಿ ಇರುತ್ತಾನೆ (ಅಗಾಚ. ೮೩). ೭. [ಗಣಿತ] ಕೂಡುವುದು, ಗುಣಿಸುವುದು ಮೊದಲಾದ ಗಣಿತಪ್ರಕ್ರಿಯೆಗಳಲ್ಲಿಯ ಸಂಖ್ಯೆಗಳ ಗುಂಪು: ಸಂಖ್ಯಾನವು (ಗಣಿತವು) ಹತ್ತು ವಿಷಯಗಳನ್ನೊಳಗೊಳ್ಳುತ್ತದೆ : ಪರಿಕರ್ಮ, ವ್ಯವಹಾರ, ರಜ್ಜು, ರಾಶಿ, ಕಲಾಸವರ್ಣ, ಯಾವತ್‌ತಾವತ್. . . . ವರ್ಗವರ್ಗ ಮತ್ತು ವಿಕಲ್ಪ (ಗಣಿತ. ೨೦೦). 'ತ್ರೈರಾಶಿ', 'ಭಿನ್ನರಾಶಿ' ಪರಾ. [ಸಂ.]

ರಾಶಿಕುಂಡಲಿ (ನಾ). [ಜ್ಯೋತಿ] ನಿಶ್ಚಿತಕಾಲದಲ್ಲಿ ಗ್ರಹಗಳ ಗತಿಯನ್ನು ಗುರುತಿಸುವ ಹನ್ನೆರಡುಮನೆಗಳ ರೇಖಾಕೃತಿ : ಆ ಗ್ರಾಮದಲ್ಲಿ ಯಾರ ಮನೆಯಲ್ಲಿ ಮಗು ಹುಟ್ಟಿದರೂ ಶಾಸ್ತ್ರಿಗಳೇ ಅವರ ರಾಶಿಕುಂಡಲಿಯನ್ನು ಬರೆಯುವ ವಾಡಿಕೆ (ಕೃಷ). [ಸಂ. ರಾಶಿಕುಂಡಲೀ]

ರಾಶಿಚಕ್ರ (ನಾ). ೧. ಆಕಾಶದಲ್ಲಿ ಗ್ರಹಗಳು ಸಂಚರಿಸುವ ಮಂಡಲಾಕಾರವಾದ ಮಾರ್ಗ.–ಪಥ : ಆಕಾಶದಲ್ಲಿ ನಾವು- ಸೂರ್ಯ, ಚಂದ್ರ ಮತ್ತು ಇತರ ಗ್ರಹಗಳ ಚಲನವಲನಗಳನ್ನು ಗಮನಿಸುವಾಗ, ನಕ್ಷತ್ರಗಳ ನಡುವೆ ಯಾವುದೋ ಒಂದು ರಾಜಮಾರ್ಗವಿರಬೇಕು ಎಂದು ಭಾಸವಾಗುತ್ತದೆ . . . ಈ ರಾಜಮಾರ್ಗವನ್ನು ರಾಶಿಚಕ್ರ ಎಂದು ಕರೆದರು (ಅಣಾಸ. ೬೬). ೨. = ರಾಶಿಕುಂಡಲಿ. [ಸಂ.]

ರಾಶಿಚಿಕ್ಕಣಿ (ನಾ). ಹೆಚ್ಚು ಬಲಿಯದ, ಹಾಗೂ ಅತಿ ಎಳೆಯದೂ ಅಲ್ಲದ ಅಡಕೆ : ಮಧ್ಯಮದರ್ಜೆಯ ಅಡಕೆ : ಅಡಿಕೆಗಳು . . . ಮಧ್ಯ ಎಳಕಾದರೆ ರಾಶಿಚಕ್ಕಣಿಯಾಗುವವು (ಕೃಕೃ. ೦೮೨). [ರಾಶಿ + ಚಿಕ್ಕಣಿ]

ರಾಶಿಭವಿಷ್ಯ (ನಾ). [ಜ್ಯೋತಿ] ವ್ಯಕ್ತಿಯ ಜನ್ಮರಾಶಿಯನ್ನು ನೋಡಿ ಹೇಳುವ ಭವಿಷ್ಯ: ಚಕ್ರಬಂಧದ ಒಗಟು, ರಾಶಿಭವಿಷ್ಯ, ಲೂಟಿ- ರಾಟರಿ (ಸಾಹುಗಾಣ. ೩೦-೬). [ಸಂ.]

ರಾಶಿವಾಳ (ನಾ). (?) : ಜ್ಯೌರಾಸಿಲಕ್ಷಜೀವರಾಶಿಗಳಿಗೆ ರಾಶಿವಾಳ [ಜಾಣಂ. ರಾಸಿವಾಳ, ರಾಸಿವಾಳುಕ, ರಾಸಿವಾಳಕ]ತಾನಾಗಿ (ಅಪಮಂ. ೩-೮). [?]

ರಾಶೀಶ (ನಾ). [ಜ್ಯೋತಿ] ರಾಶಿಯ ಒಡೆಯ.– ಅಧಿಪತಿ : ಕ್ರಮದಿಂ ದ್ವಾದಶಭಾಗಮೊಂದು ಗೃಹಕಕ್ಕುಂ . . . ಪ್ರಥಮಕ್ಕೆ ತತ್ಪ್ರಥಮ ರಾಶೀಶಂ (ಜಾಕಿ. ೦-೨೬). [ಸಂ]

ರಾಶ್ಮಿ, ರಾಪ್ಮಿ, ರಾಸ್ಮಿ (ನಾ). ಒಂದು ಬಗೆಯ ವನಸ್ಪತಿ :" ನಾಕುಲಿ–ಈಶ್ವರಿ, ಸರ್ಪಾಕ್ಷಿ, ರಾಶ್ಮಿ, ಕಾಡುವಿಟ್ಟಿ, ಹಿಪ್ಪಲಿ, ತುಳಸಿ " (ಓಷ. ೬೩). **ರಾಪ್ಮಿ** : ಬಿಲ್ವಪತ್ರೆಯ ಬೇರು ಆ ಹಣ್ಣಿನ ತಿರುಳು ಕಳ್ಳಂಗಡಲಿ ಜೊಳ್ಳಂಗಡಲೆ ಆಕಲುರ ರಾಪ್ಮಿ ಸುಂಟಿ ಗಂಟುಪರಂಗಿಯಿವ ಕಷಾಯವನಿಟ್ಟು (ಜಾಣಾಸ. ೦೨-೬). **ರಾಸ್ಮಿ** : " ಏರಾಪರ್ಣಂ. ಸುಮಹಾ. ರಾಸ್ನಾ. ಯಂಕ್ರಸಾ–ಈ ಳಿ ರಾಸ್ಮಿ " (ಜಾಸಾಕಾ. ೨೦೦) ; ರಾಸ್ಮಿ, ಅಮರವಲ್ಲಿ . . . ಕಷಾಯವ ಕಾಸಿ . . . ಕೊಡಿಸಲು ಸಂಧಿಸನ್ನಿಪಾತ ಹರವಹುದು (ಕೃಕೃಟಾ. ೨. ೬೬). [<ಸಂ. ರಾಸ್ನಾ]

ರಾಷ್ಟ್ರ (ನಾ). ೧. ಒಂದು ಆಡಳಿತದ ವ್ಯಾಪ್ತಿಗೆ ಒಳಪಟ್ಟ, ಅನೇಕ ರಾಜ್ಯಗಳ ಸಮುದಾಯ : ದೇಶ ; ನಾಡು : "ವಸುಮತೀರಾಗ ತಮಗೆನತ್ತು ಪುಹಿಯಂಟಿದಜಿ ಪೆಸರು ರಾಷ್ಟ್ರಂ " (ಪುಂಗಾಗಾ. ೫೬-೨) : ರಾಜಸ್ಥಲದ ರಾಷ್ಟ್ರವು ವಿನಾರಯೊಂದುವುದು (ಜಾಕ್ಕಂಗಿ. ೦೬). ೨. ಸಾಮ್ರಾಜ್ಯ: ಚಕ್ರಾಧಿಪತ್ಯ. ೩. ಒಂದು ದೇಶದ ಜನತೆ.– ಪ್ರಜಾವರ್ಗ. [ಸಂ.]

ರಾಷ್ಟ್ರಕ (ನಾ). ದೇಶದಲ್ಲಿರುವವನು ; ಪ್ರಜೆ : ಪ್ರಜೆಯೆಂದರೆ ಇಲ್ಲಿ ರಾಜ್ಯಕಾರ್ಯಸಮರ್ಥನಾದ ಪ್ರಜೆಯೆಂದು ಭಾವ. ಅಂಥ ಪ್ರಜಾವ್ಯಕ್ತಿಯೇ ರಾಷ್ಟ್ರಕ (ಸಿಟಿಸೆನ್) (ಜಾಕ್ಕಂಗಿ. ೮೩೦). [ಸಂ.]

ರಾಷ್ಟ್ರಕೂಟ (ನಾ). ಕನ್ನಡನಾಡಿನ ಒಂದು ರಾಜವಂಶದ ಹೆಸರು: ಕುನ್ತಳ ದೇಶಮುಂ ಸಮರಧಾರಿಣಿಯಲ್ಲಿಯೆ ರಾಷ್ಟ್ರಕೂಟಭೂಕಾನ್ತರನೆಲ್ಲರಂ ನಿಜಭುಜಬಲದಿಂದವೆ ಕಾದಿ ಗೆಲ್ದು (ಕವಿರಾ. ೯-೬; ೨೧೬೭) ; ರಾಷ್ಟ್ರಕೂಟದವರ ಭಾಷೆಯು ಕನ್ನಡವೇ ಆಗಿತ್ತು (ಕಣಾಇ. ೮೦). [ಸಂ.]

ರಾಷ್ಟ್ರಗೀತೆ (ನಾ). ದೇಶದ ಹಿರಿಮೆಯನ್ನು ಸೂಚಿಸುವ ಸಂಕೇತವಾಗಿ ಆರಿಸಿಕೊಂಡಿರುವ ಒಂದು ಹಾಡು : ತಾಕೂರರು . . . ಜನಗಣಮನ ಗೀತೆಯನ್ನು ರಚಿಸಿದರು. ಅದು ಸಾರ್ವಭೌಮಸ್ವತಂತ್ರಭಾರತದ ಗಣರಾಜ್ಯಗಳ ರಾಷ್ಟ್ರಗೀತೆಯೆಂದು ಸ್ವೀಕೃತವಾಗಿದೆ (ಕಕುಣಾ. ೬೬) ; ನಾಲ್ಕು ನಿಟ್ಟಿನಿಂದಲೂ ಕೇಳಿ ಬರುತ್ತಿತ್ತು ಭಾರತದ ರಾಷ್ಟ್ರಗೀತೆ (ಅಜ್ಯಕ್ರ. ೦೯೨). [ಸಂ. ರಾಷ್ಟ್ರಗೀತಾ]

ರಾಷ್ಟ್ರಧ್ವಜ (ನಾ). ದೇಶದ ಸಂಕೇತವಾಗಿ ರಚಿಸಿಕೊಂಡಿರುವ ಬಾವುಟ: ತ್ರಿವರ್ಣರಾಷ್ಟ್ರಧ್ವಜವೇ ಭಾರತಮಾತೆಯ ಪವಿತ್ರಪ್ರತೀಕ (ಜಾಕ್ಕಾ. ೦೬೨). [ಸಂ.]

ರಾಷ್ಟ್ರಪಕ್ಷಿ (ನಾ). ದೇಶದ ವಿಶಿಷ್ಟಸಂಕೇತವೆಂದು ಆಯ್ಕೆಯಾಗುವ ಪಕ್ಷಿ : ನವಿಲು ಈಗ ಭಾರತದ ರಾಷ್ಟ್ರಪಕ್ಷಿ (ಕಂಕಚಿ. ೫, ೦೫೦). [ಸಂ. ರಾಷ್ಟ್ರಪಕ್ಷಿನ್]

ರಾಷ್ಟ್ರಪತಿ (ನಾ). ೧. ಚಕ್ರವರ್ತಿ; ಸಾಮ್ರಾಟ. ೨. ದೇಶದ ಒಡೆಯ; ನಾಡಿನ ಅಧಿಪತಿ : ರಾಷ್ಟ್ರಪತಿ ವಿಷಮುಪತಿ ಗ್ರಾಮಕೂಟಕಾಯುಕ್ತಕ ನಿಯುಕ್ತಾಧಿಕಾರಿಕ ಮಹತ್ತರಾದಿ ಸಮೇತದಿಂ (ಎಇ-XII, ೫೫೬-೨೦೦; 1077); ನಿಮಗೆ ಅದಿನ್ನೂ ಹೊಸದಾಗಿರದಿದ್ದರೂ ರಾಷ್ಟ್ರಪತಿಯಾಗಿ ನಿವೇದಿಸುತ್ತೇನೆ (ಏಗಭಂ. ೮೩). ೩. ಭಾರತದ ಸಂವಿಧಾನದಂತೆ ಚುನಾಯಿತನಾದ ದೇಶದ ಅಧ್ಯಕ್ಷ ; ದೇಶದ ಸರ್ವೋಚ್ಚಅಧಿಕಾರಿ : ಭಾರತಕ್ಕೆ ಒಬ್ಬರು ರಾಷ್ಟ್ರಪತಿಯವರು ಇರತಕ್ಕುದು (ಕಣಾಸ. ೫೬) ; "ಪ್ರೆಸಿಡೆಂಟ್" ಪದಕ್ಕೆ "ಪತಿ"—ರಾಷ್ಟ್ರಪತಿ ಎಂದು ಕೆಲವರು ಸಮಾನಪದ ಮಾಡಿಕೊಂಡಿದ್ದಾರೆ (ಜಾಕ್ಕಂಗಿ. ೦೦೯ ೩೩೮). [ಸಂ.]

ರಾಷ್ಟ್ರಪ್ರಜ್ಞೆ (ನಾ). 'ಇದು ನನ್ನ ದೇಶ' ಎಂಬ ಭಾವನೆ; ದೇಶಾಭಿಮಾನ : ರಾಷ್ಟ್ರಪ್ರಜ್ಞೆ, ವೈಜ್ಞಾನಿಕದೃಷ್ಟಿ . . . ನಮ್ಮಲ್ಲಿ ಜಾಗೃತವಾಗದಿದ್ದರೆ. ನಮ್ಮ ದೇಶ ಭಾರತವಾಗಿ ಒಹುದಿನ ಉಳಿಯುವುದೂ ಕಷ್ಟ ಎನ್ನಿಸುತ್ತದೆ (ಹೇಮುಳಿ. ೨ ಮುಖ್ಯ). [ಸಂ. ರಾಷ್ಟ್ರಪ್ರಜ್ಞಾ]

ರಾಷ್ಟ್ರಸ್ವಾಮ್ಯ (ನಾ). ದೇಶದ ಒಡೆತನ.–ಯಾಜಮಾನ್ಯ: ಪ್ರಜಾಪ್ರಭುತ್ವ ಕ್ರಮದಲ್ಲಿ ರಾಷ್ಟ್ರವೇ ಭೂಸ್ವಾಮಿಯಾಗುವುದು. ಆಗ ಉಭಯಪಕ್ಷದವರಿಗೂ ರಾಷ್ಟ್ರಸ್ವಾಮ್ಯವೇ ಲಕ್ಷ್ಯವಾಗುವುದು (ಜಾಕಿ. ೩೬೦). [ಸಂ.]

ರಾಷ್ಟ್ರಾಧ್ಯಕ್ಷ (ನಾ). ದೇಶದ ಒಡೆಯ : ಅಪಸೇ ದೊರೆ ಅಥವಾ ರಾಜ ಅಥವಾ ರಾಷ್ಟ್ರಾಧ್ಯಕ್ಷ (ಜಾಕ್ಕಾ. ೩೬). [ಸಂ.]

ರಾಷ್ಟ್ರಾಭಿಮಾನ (ನಾ). ದೇಶದ ಮೇಲಿನ ಮಮತೆ; ದೇಶಭಕ್ತಿ: ಇಟಲಿ, ಜರ್ಮನಿ . . . ಮುಂತಾದ ದೇಶಗಳು ಹೇಗೆ ತಮ್ಮ ರಾಷ್ಟ್ರಾಭಿಮಾನವನ್ನು . . . ಸಾಧಿಸಿಕೊಂಡವು ಎಂದು ಅರಿತು, ಉದ್ವೇಗಗೊಂಡರು (ಜಾಸಂ. ೪೩೬). [ಸಂ.]

ರಾಷ್ಟ್ರಿಕ (ಗು). ೧. ದೇಶಕ್ಕೆ ಸಂಬಂಧಿಸಿದ ; ದೇಶದ : ಕವಿಗಳು ಪಾರಮಾರ್ಥಿಕವಿಷಯಗಳಿಗಿಂತ ರಾಷ್ಟ್ರಿಕ, ಸಾಮಾಜಿಕ, ಚಾರಿತ್ರಿಕ ಮುಂತಾದ ಲೌಕಿಕಪ್ರಮೇಯಗಳಿಗೆ ಹೆಚ್ಚು ಗಮನಕೊಡುವರು (ಕಂಪು. ೦೬೮೫). (ನಾ). ೨. ರಾಷ್ಟ್ರದ ಹಕ್ಕುಬಾಧ್ಯತೆಯನ್ನು ಪಡೆದಿರುವವನು ; ಪೌರ ; ಪ್ರಜೆ. ೩. = ರಾಷ್ಟ್ರಕೂಟ : ಈ ರಾಷ್ಟ್ರಿಕರು ಅಥವಾ ರಾಷ್ಟ್ರಕೂಟರು

ಎಂಬವರೇ ಮಹಾರಾಷ್ಟ್ರರೆಂದು ಹೆಸರಿಟ್ಟುಕೊಂಡು ತಮ್ಮ ರಾಷ್ಟ್ರಕ್ಕೆ ಮಹಾರಾಷ್ಟ್ರವೆಂದು ಹೆಸರಿಟ್ಟರು (ಕಕ್ಕ. ೧೯). ೪. ರಾಜ್ಯದ ಆಡಳಿತವನ್ನು ನಡೆಸುವವನು ; ರಾಜ್ಯಪಾಲ : ರಾಷ್ಟ್ರಿಕ ಅಥವಾ ಭೋಜಕ ಇವು ಮೂಲತಃ ಆಡಳಿತದ ಅಧಿಕಾರಕ್ಕೆ ಸಂಬಂಧಿಸಿದ ಪಾರಿಭಾಷಿಕಶಬ್ದಗಳು (ಕರ್ನಾಲಿ. ೧೩೭). [ಸಂ.]

ರಾಷ್ಟ್ರಿಕೆ (ನಾ). ಒಂದು ಬಗೆಯ ಮುಳ್ಳುಬದನೆಕಾಯಿ ; ಹೆಗ್ಗುಳ್ಳ : "ನಿದಿಗ್ಧಿಕಾ, ಸ್ಪಶೀ, ವ್ಯಾಘ್ರೀ, ಬೃಹತೀ . . . ರಾಷ್ಟ್ರಿಕಾ—೧೦ ಹೆಗ್ಗುಳ್ಳದ ಹೆಸರುಗಳು" (ಸಿದ್ಧಾಂತ. ೦೩೩). [ಸಂ. ರಾಷ್ಟ್ರಿಕಾ]

ರಾಷ್ಟ್ರಿಯ (ಗು). ೧. ದೇಶಕ್ಕೆ ಸಂಬಂಧಿಸಿದ. (ನಾ). ೨. ರಾಜನ ಭಾವಮೈದುನ,—ಶ್ಯಾಲಕ: "ರಾಷ್ಟ್ರಿಯಃ, ರಾಜ್ಞಃ, ಸ್ಯಾಲಃ—ಅರಸನ ಹೆಂಡತಿಯ ಒಡಹುಟ್ಟಿದವನ ಹೆಸರು" (ಸಿದ್ಧಾಂತ. ೬೦). [ಸಂ.]

ರಾಷ್ಟ್ರೀಕರಣ (ನಾ). (ಕೈಗಾರಿಕೆ ಇತ್ಯಾದಿಗಳನ್ನು) ದೇಶದ ಸ್ವಾಮ್ಯಕ್ಕೆ ಒಳಪಡಿಸುವುದು ; ಸರ್ಕಾರದ ಅಧೀನಕ್ಕೆ ತೆಗೆದುಕೊಳ್ಳುವುದು : ಕೈಗಾರಿಕೆಗಳ ರಾಷ್ಟ್ರೀಕರಣವಾದ ಮೇಲೂ ವಿಜ್ಞಾನದ ಮೇಲೆ ಹಚ್ಚಿನ ಪರಿಣಾಮವಾಗಿಲ್ಲ (ಪಂಪಾ. ೦೮೨). [ಸಂ.]

ರಾಷ್ಟ್ರೀಯ (ಗು). ೧. = ರಾಷ್ಟ್ರಿಯ ೧ : ರಾಷ್ಟ್ರೀಯ ರಕ್ಷಣಾಬಲದವರು . . . ಹೆಚ್ಚಾಗಿ ಬೆಳಿಯರೆಂದು ಸ್ವಾವಲಂಬನೆಯ ಸಂದೇಶವನ್ನು ಸಾರುತ್ತಿರುವರು (ಕಕ. ೬೩). (ನಾ). ೨. = ರಾಷ್ಟ್ರಿಯ ೨ : ಆರ್ಯನೆ, ರಾಷ್ಟ್ರೀಯನಾದ ಮಿತ್ರಾವಸುವು ಮಹಾರಾಜನ ಸ್ನಾಧಿಯಿಂದ ಇಲ್ಲಿಗೆ ನಮ್ಮನ್ನು ಕಳುಹಿಸಿ ಕೆಲವು ದಿವಸಗಳಾದುವು (ಕಾಉಂಕ. ೦೦–೫). ೩. ರಾಜ ; ದೊರೆ. [ಸಂ.]

ರಾಷ್ಟ್ರೀಯತೆ (ನಾ). ೧.ಒಂದು ದೇಶದ ಜನರು ತಮ್ಮ ದೇಶದ ಒಟ್ಟು ಸತ್ವವನ್ನು ಕುರಿತು ಹೊಂದಿರುವ ಅಭಿಮಾನ ; ಒಟ್ಟು ದೇಶದ ಐಕ್ಯದ ಪರಿಭಾವನೆ : ಮಾಂಡಲಿಕ ಪ್ರಭುತ್ವಗಳನ್ನು ಅನುಭವಿಸಿ ರಾಷ್ಟ್ರೀಯತೆಯ ಉದಯವನ್ನು ಕಣ್ಣಾರೆ ಕಂಡು (ಪಪ್ರಾ. ೦೬). ೨. " ಜನಾಂಗ ಲಕ್ಷಣ ; ರಾಷ್ಟ್ರೀಯತೆ - . . ಜನಾಂಗವಾಗಿರುವುದು ; ಒಂದು ಅಥವಾ ಹೆಚ್ಚಿನ ರಾಜಕೀಯ ರಾಷ್ಟ್ರಗಳ ಭಾಗವಾಗಿರುವ ಕುಲ " (Nationality. ೩೪೪). [ಸಂ. ರಾಷ್ಟ್ರೀಯತಾ]

ರಾಷ್ಟ್ರೆ ' ರಾಶ್ಟ್ರೆ ' ನೋ. [ಸಂ.]

ರಾಸ (ನಾ). ೧. ಶಬ್ದ: ಸದ್ದು. ೨. ಕೃಷ್ಣನು. ಗೋಪಿಯರು ಮತ್ತು ಗೋಪಾಲಕರ ಸಂಗಡ ಮಾಡಿದ ಒಂದು ಬಗೆಯ ನೃತ್ಯ : ಮೋಹನನೆನ್ನಂ ಮೋಹಿಸಿ ರಾಸಕೆ ಕರೆದಂತೆ (ಪಾಪಚ. ೪೩–೨೦). 'ರಾಸ ಕ್ರೀಡೆ' ಪರಾ. ೩. ನಾಟ್ಯ ; ಕುಣಿತ : ಸಂಜೆಯು ಬೀಸುತ್ತಿದ್ದ ಗಾಳಿಯಲ್ಲಿ ಪೈರುಪಚ್ಚೆಗಳ ಸಾಮೂಹಿಕರಾಸವು ಛಂದೋಬದ್ಧವಾಗಿ ನಡೆದಿತ್ತು (ಪಪಚ. ೬೪). [ಸಂ.]

ರಾಸಕ (ನಾ). [ಕಾವ್ಯಮೀ] ಹದಿನೆಂಟು ಬಗೆಯ ಉಪರೂಪಕಗಳಲ್ಲಿ ಒಂದು: ೫ ಒಂದು ಅಂಕದಿಂದೊಡಗೂಡಿದ ಇದರಲ್ಲಿ ಐದು ಪಾತ್ರಗಳಿದ್ದು, ನಾಯಿಕೆಯ ಪಾತ್ರವು ಮೇಲುಗೈಯಾಗಿದ್ದು ನಾಯಕನು ಮುಖ್ಯನಾಗಿರುತ್ತಾನೆ, ಸೂತ್ರಧಾರನಿರುವುದಿಲ್ಲ : ೧. ನಾಟಿಕಾ . . . ೯. ಪ್ರೇಂಖಣ. ೧೦. ರಾಸಕ . . . ಎಂದು ಉಪರೂಪಕಗಳು ಹದಿನೆಂಟು ವಿಧ (ಸಂಪಾಲಿ. ೩೨). [ಸಂ.]

ರಾಸಕೇಳಿ (ನಾ). ಕೃಷ್ಣನು ಗೋಪಿಕಾಸ್ತ್ರೀಯರ ಜೊತೆ ಆಡಿದ ಪುಂಡಲಾಕಾರದ ನೃತ್ಯ : ಮೊಗಮೊಗದಲಿ ದೀಪಾವಳಿ ! ರಾಸಕೇಳಿ ! ರಾಸಕೇಳಿ ! (ಶ್ರೀಂಚಕ್ಕ. ೦೦–೦೬). [ಸಂ. ರಾಸಕೇಲಿ]

ರಾಸಕ್ರೀಡೆ (ನಾ). = ರಾಸ ೨ : ರಾಸಕ್ರೀಡೆಯನು ನಿಜವಲ್ಲಭೆಯರೊಡಗೂಡಿ ಲಕ್ಷ್ಮೀವಲ್ಲಭನು ತೊಡಗಿದನು (ಕಣಾಗ. ೦೦–೩೬–೨). [ಸಂ. 'ರಾಸಕ್ರೀಡಾ]

ರಾಸಗೋಷ್ಠಿ (ನಾ). = ರಾಸಕೇಳಿ : ಎಳಸಗೆಯ ಸುಪ್ರೇಮವೀಕ್ಷಣದಲಸಗಮನದ ವಿಭ್ರಮದ ಹರಿ ಸಲಿಸಿದಪು ಮನವನು ಸರಾಗದ ರಾಸಗೋಷ್ಠಿಯಲಿ (ಕಣಾಗ. ೦೦–೨೬–೭). [ಸಂ.ರಾಸಗೋಷ್ಠೀ]

ರಾಸನ (ನಾ). ೧. ಧ್ವನಿಮಾಡುವಿಕೆ. ೨. ಕತ್ತೆಯ ಕೂಗು : "ರಾಸಿಃ. ರಾಸುಃ. ರಾಸನಂ. ರಾಸನೀಯಂ. ರಾಸ್ಯಂ: ಈ ೫ ಕತ್ತೆಗೂಗು " (ನಾಕ್ಯ. ೦೨೦). [ಸಂ.]

ರಾಸಭ (ನಾ). ಕತ್ತೆ ; ಗಾರ್ದಭ : "ರಾಸಭಾಖ್ಯಾತಿ ಗರ್ದಭಂ" (ಚಾಸ್ಮೃ. ೦೯–೩೯); ರಾಗಿಸಿ ರಾಸಭಾನರದತಿವೇಗದಿನಾ ನರಿಯ ಛಿಂದುಚ್ಛಿದನೆ ಬಂದಂ (ಪಂಚತಂ. ೨೬೬–೯): ಮಹಾತಾಳವನವನಂ ಧೇನುಕನೆಂಬ ರಾಸಭರಾಕ್ಷಸಂ ಕಾದಿರ್ದಂ (ಚಾಗೂ. ೪–೩೯ ಪ). [ಸಂ.]

ರಾಸಭಿ (ನಾ). ಹೆಣ್ಣುಕತ್ತೆ : ಎನ್ನಿರ್ವ ಕಾಡಿನೊಳಿರಿಸಿ ನಿಶ್ಚಿಂತರಾಗಿರ್ದ ರಾಸಭೀವಿಲಾಸಿನಿಯರ್ ತವಗೊರ್ವ ಪುರುಷನಂ ತರವೇಬ್ಯುಮೆಂದೆನ್ನಂ ತುತಿಸುತ್ತಿರ್ದರ್ (ಪಂಚತಂ. ೨೬೬–೪). [ಸಂ. ರಾಸಭೀ]

ರಾಸಮಯ್ಯ (ನಾ). ಒಬ್ಬಾತನ ಹೆಸರು : ವುಲಿನಾಡು ರಾಸಮಯ್ಯ ಹರಿಯೂರರಸರಂ ದಣ್ಣುವೇಬ್ಯಿಂಡೆ (ಎಕೆ, X, ೨೮(೩)ಾ. ೬೩–೪; ಸಂ. ೨೦೦). [ರಾಸ್ + ಅಮ (< ಅಮ್ಮ್) + ಅಯ್]

ರಾಸಲೀಲೆ (ನಾ). = ರಾಸಕೇಳಿ : ಕೃಷ್ಣಗೋಪಿಯರ ರಾಸಲೀಲೆಯಲ್ಲಿ ಗೋಪಿಯರು (ಜೀವಾತ್ಮ) ಕೃಷ್ಣ (ಪರಮಾತ್ಮ)ನನ್ನು ಸೇರಲು ಹಂಬಲಿಸುತ್ತಾರೆ (ಶಾಸ್ತ್ರ. ೨೨೯) ; ಕೋಲು ಕೋಲಿನ ಆಟ. ಕೂಡಿ ಕೊಳಲಿನ ಆಟ. ರಾಸಲೀಲೆಯು ಕೋಲ (ಶಬ್ದ. ೪೩೬–೨). [ಸಂ. ರಾಸಲೀಲಾ]

ರಾಸಾಯನಿಕ (ಗು). ೧. [ವಿಜ್ಞಾನ]ರಸಾಯನವಿಜ್ಞಾನಕ್ಕೆ ಸಂಬಂಧಿಸಿದ. -ಸೇರಿದ. ೨. ರಸಾಯನವಿಜ್ಞಾನದ ಪ್ರಕ್ರಿಯೆಯಿಂದ ಸಿದ್ಧಪಡಿಸಿದ : ರಾಸಾಯನಿಕ ಗೊಬ್ಬರಗಳನ್ನೂ ನಮ್ಮ ದೇಶದಲ್ಲಿ ತಯಾರು ಮಾಡುವ ಪ್ರಯತ್ನ . . . ಫಲಿದಿದೆ (ಕಾಶ್ಮಾ. ೦೩೭). [ಸಂ.]

ರಾಸಾಯನಿಕವಿದ್ಯೆ (ನಾ). [ವಿಜ್ಞಾನ] ಮೂಲಧಾತುಗಳು, ಅವುಗಳ ಸಂಯೋಗ ಮೊದಲಾದ ವಿಷಯಗಳ ನಿಯಮಗಳಿಗೆ ಸಂಬಂಧಿಸಿದ ಶಾಸ್ತ್ರ; ರಸಾಯನಶಾಸ್ತ್ರ : ದೇವಾ, ಪನ್ನೆನ್ನೇಕೆ ಹುಟ್ಟಿಸಿದೆ ? ಹುಟ್ಟಿಸಿದರೂ ನನ್ನಲ್ಲಿ ರಾಸಾಯನಿಕ ವಿದ್ಯೆಯನ್ನಾದರೂ ಏಕೆ ಹಾಕಿದೆ ? (ಕುಸ್ವಿ. ೨೩೦). [ಸಂ. ರಾಸಾಯನಿಕವಿದ್ಯಾ]

ರಾಸಿ$_1$ ' ರಾಸ್ಯ್ ' ನೋ.

ರಾಸಿ$_2$ (ನಾ). ೧. = ರಾಶಿ ೧ : ಕುಬೇರನಳ್ಕ ತಂದೊಟ್ಟಿದ ಪೊನ್ನ ರಾಸಿಗಳನ್ನೆತ್ತು ಧರಾಮರರ್ಗೆ (ಗಡಾಯು. ೨–೩೭); ಮಿಸುನಿಯ ಪೊಂಗಳುಂ . . . ಬಸವನ ಮನೆಯ ಮುಂದೆ ಸುರಿದು ರಾಸಿಯಾಗಿರೆ (ಪಪ. ೦೨–೩೬); ಅಂಗಡಿಯೊಳು ಗೋಧಿ ಕಡಲೆ ನಾನಾಧಾನ್ಯಂಗಳ ರಾಸಿ ರಂಜಿಸಿತು (ಪೋಚಕ. ೩–೨೦) ; ಜ್ಯೋತಿರ್ಲಿಂಗದಂತೆ ರಾರಾಜಿಸುವುದು ಆ ಜೋಳದ ರಾಸಿ (ಕೆಳಪಾ. ೨೩೬). ೨. = ರಾಶಿ ೬ : ಜ್ಯೋತಿಷ್ಯರಂ . . . ಬೆಸಗೊಳಲು ಅವರಾಭಧಾನನಕ್ಷತ್ರರಾಸಿಯು ಗೃಹಕರಣಕೂಟಾದಿಗಳನು . . . ನಿಶ್ಚಯಿಸಲು (ಪಾವಿಚ. ೦೩–೨೯). [< ಸಂ. ರಾಶಿ.]

ರಾಸಿಕ್ಯ (ನಾ). ರಸಿಕತನ : ಕಾಶ್ಮೀರದ ವಿಮುಕ್ತಪುಷ್ಕಶಿಸೌಂದರ್ಯದ ನಿತಾಂತರಮಣೀಯತೆ. ನೂರಳ ಅನುರಕ್ತ ರಾಸಿಕ್ಯ ಎಲ್ಲವೂ ಸಂದಿಗ್ಧವಾಗಿದ್ದವು (ಪೂರ್ಣ. ೩೩) ; ಬಲ್ಲಾಳಕವಿ . . . ಭೋಜನ ರಾಸಿಕ್ಯ. ದಾನಶೂರತ್ವಗಳನ್ನು ಬಣ್ಣಿಸಿದ್ದು ಅಸತ್ಯವಲ್ಲ (ಶಾಲಂಶಾ. ೫೬). [ಸಂ.]

ರಾಸಿಗೂಳು (ನಾ). ೧.ಗುಡ್ಡೆ ಹುಲಂಡಿಯ ಅನ್ನ : ಸುತ್ತಳ ಪಳ್ಳಿಯ ಜನರು ವರುಷಕೊಮ್ಮೆ ಬಾರಿ ಬಿಜಿಗೂಳ ಸುರಿಯಲು, ತಪಸಿಯಾಗಿ ರಾಸಿಗೂಳ ತಿಂದು . . . ಆ ಗ್ರಾಮಗಳಿಗೆ ಶಾಂತಿಯು ಮಾಡಿಕೊಂಡಿಪ್ಪನು (ಕೈರಕೂ. I. ೨೬೨) ೨. ಸಾಮಾನ್ಯವಾದ ಆಹಾರ : ರಾಸಿಗೂಳಲ್ಲ

ದಿವ್ಯಾಹಾರವದು ಶಕ್ತಿ ಸೂಸುವುದದಱಿಂದು ತುತ್ತ ಪುಸರ ದಕ್ಕಿಸುಲ್ಲುನೆ (ಹರಿ. ೫೦-೦೦೦). [ರಾಸಿ + ಕೂಳು (< ಕೂಬ್)]

ರಾಸಿಗೆಯ್, ರಾಸಿಗ್ಗೆ (ಕ್ರಿ)· ಗುಡ್ಡೆಮಾಡು; ರಾಶಿಹಾಕು : ಕಾಂಚೀರ ವಮಹೀರುಹದ ಪಣ್ಗಳಂ . . . ತಿಱೆದು ತಂದು ಧನ್ವಂತರಿ ವಿಶ್ವಾನು ಲೋಮರ ಮುಂದೆ ರಾಸಿಗೆಯ್ದುದುಂ (ರಕ್ಷಾಶ್ವ. ೨-೦೦೩). **ರಾಸಿಗ್ಗೆ** : ನಿರ್ಮಳನಕ್ಷತ್ರಸಮಾಜಮಂ ನೆಗಟ್ಟಲಂಪಂ ರಾಸಿಗ್ಗೆದಂತೆ ಕಣ್ಗಳವಟ್ಟಿಂ ತುರುಕಾಂತಿಯಂ ಪರಪ್ಪತಂ ಪ್ರೋತ್ತುಂಗತಾರಾಚಳಂ . . . ಕಣ್ಗೆಸದುಮು (ಶಾಶ್ವ. ೦೩-೦೦೯). [ರಾಸಿ + ಕೆಯ್]

ರಾಸಿಗ್ಗೆ ' ರಾಸಿಗೆಯ್ ' ನೋ.

ರಾಸಿಗೊಳ್ (ಕ್ರಿ)· ರಾಶಿಯಾಗು; ಒಟ್ಟಾಗು; ಕೂಡು : ಮಕರಂದ ಸಂದೋಹಮೊಂದಿಡೆಯೊಳ್ ರಾಸಿಗೊಂಡು ಪಾಸಾದಂತೆ ಮನೋಹರ ಮಾಗಿರ್ದ ವ್ಯದುತಳ್ಪಸಂಪುಟದೊಳಾ ಪುಣ್ಯಜೀವಂ ಬಂದು ನೆಲಸಿ (ಶಾಪು. ೦೨-೨೩೮). [ರಾಸಿ + ಕೊಳ್]

ರಾಸಿಹಬ್ಬ (ನಾ). ಸುಗ್ಗಿಕಾಲದಲ್ಲಿ ಕಣದಲ್ಲಿಯ ರಾಶಿಯನ್ನು ಪೂಜೆಮಾಡುವ ಹಬ್ಬ : ನೀನಾದರೂ ಬಂದೆಯಲ್ಲ ರಾಸೀಹಬ್ಬಕೈ ಸರಿಯಾಗಿ (ಪೆಳಾಪು. ೨೩೭). [ರಾಸಿ + ಹಬ್ಬ (< ಪರ್ವ)]

ರಾಸು· ರಾಸಿ (ನಾ). ದನ; ಜಾನುವಾರು : ರಾಸುಗಳ ಅತಿಕ್ರಮ ಪ್ರವೇಶದ ಆಕ್ಷನ್ನು ತಿದ್ದುಪಡಿ ಮಾಡಿದ ಕಾಸೂನು (ಗ್ರಾಪ್ರಾಕಾಳ. ೧೦೩); ಏವತ್ತು ರಾಸು ಇರುತ್ತಾ ಇದ್ದವು (ಸಂಪಕೊಸ. ೩೦). **ರಾಸಿ** : ' ಗಿಡ್ಡರಾಸಿ ' ಪರಾ. [?]

ರಾಸ್ಕ· (ನಾ). ಅಸಲು ಮತ್ತು ಬಡ್ಡಿ ಕೂಡಿದ ಮೊತ್ತ : ಯಾವುದೂ ಅಸಲಿನ ಯಾವುದೂ ಬಡ್ಡಿದರದ ರಾಸುಗಳನ್ನು ಹಿಂಜಿ ತೆಗೆದು . . . ಅನೇಕರಿಗೆ ತಿಳಿಸಿಕೊಟ್ಟು ದಾರಿದ್ದೀನೆ (ಗಾಅಪ. ೦೩೬). [←ಮರಾ. ರಾಸ್]

ರಾಸಿ (ನಾ)· = ರಾಸ ೨ : ರಾಸೆಯನರ್ಧಕೆ ಕಡೆದವಳು ಹಾಡನು ಪಾಡಂ ಗೈದವಳು (ಗೋಪುಶ. ೮೨-೨೬). [ಸಂ. ರಾಸ]

ರಾಸ್ಕ (ಗು)· ೧. ಸರಿಯಾದ; ಯೋಗ್ಯವಾದ; ನ್ಯಾಯವಾದ : ಆಚಾರೆಪ್ಪ ರಾಸ್ತ ಮಾತ ಆಡಿದಿರಿ (ಪುಚಿ. ೦೮) ; ನೀ ಏನ ಹೇಳಿದ್ದಲ್ಲ ಈ ಮಾತೂ ಇದಾ ನೋಡಿದು ರಾಸ್ತ ಮಾತು (ಕಪುಗು. ೮೪). (ನಾ). ೨. ಸಮರ್ಪಕವಾದುದು; ಯೋಗ್ಯವಾದುದು : ನಾ ಹೇಳೂದು ರಾಸ್ತ ಏತಿರ್ಲೋ (ಗ್ರಾಪಪಾಹು. ೨೩). [← ಪಾರ. ಹಿಂ. ಮರಾ. ರಾಸ್ತ]

ರಾಸ್ತಿ (ಗು). ೧. ಸರಿಯಾದ : ' ರಾಸ್ತಿತೂಕ ' ಪರಾ. (ನಾ). ೨.ನಿಜ; ಸತ್ಯ : ಶಾಸ್ತ್ರ ಶ್ರವಣಗಳಾದೆ ಶ್ರೌತಸ್ಮರ್ತಗಳಾದ ರಾಸ್ತಿ ಜಿದಾನಂದ ಅವಧೂತನಾದೆ (ಪಾಪ. ೦೦೦-೭). [←ಹಿಂ. ಮರಾ. ರಾಸ್ತ]

ರಾಸ್ತಿತೂಕ (ನಾ)· ಸರಿಯಾದ ತೂಕ : ತಾವು ಮಾಮೀಲತ್ತು ತಿಳಿಮು ವಂಥಾದ್ದು ರಾಸ್ತಿತೂಕ ಮಾಡುವಂಥಾದ್ದು (ಶಾಕೇಂಪ್ರ. ೨೬೨). [ರಾಸ್ತಿ + ತೂಕ]

ರಾಸ್ಮೆ (ನಾ).=ರಾಶ್ಮೆ : "ವಿಲಾಪರ್ಣೇ. ಸುಮಪಾ. ರಾಸ್ನಾ. ಯುಕ್ತರಸಾ- ಳಿ ರಾಸ್ನೆ" (ಶಾಪಾ. ೦೦೦) ; ಸರಳಂ ಕೋಷ್ಮಂ ಮಂಜಿಷ್ಠೆ ರಾಸ್ನೆ ಬೆಳ್ಳುಳ್ಳಿ ಸೈಂಧವಂ ತಗರಮಿವಂ ಕರಿಯೂವಿನ ಸೊರೆವಾಲೊಳ್ ಬೆರಸಿ ಬಲುಶ್ಯೆಷ್ಣವೊಯ್ದು (ಅಶ್ವಾ. ೦೩-೩೬). [ಸಂ. ರಾಸ್ನಾ]

ರಾಸ್ಮೆ 'ರಾಶ್ಮೆ' ನೋ.

ರಾಹ (ನಾ)· ವೇಗ : ರಭಸ ; ಆರ್ಭಟ : ನಿಗುರ್ಗಿಡಗಳೇರಿಕೆಯ ರಾಹದಿಂ ಲಗದ್ದಳಂ ತಗಡೆಣ್ಗಳೆಂಬಂತೆ ಬೆಂಗೊಡದೆ (ಪಪು. ೩೦-೯) : ಬರಸಿಳೆದು ರಾಹದಿಂ ಶಿರಗಳಂ ಕೊರೆದು ಕೊರೆವೀಡಾಡಿ (ಪಪು. ೩೭-೦೪). [ಈ ಇದು 'ರಂಹಸ್' ಎಂಬುದರ ಅಪಭ್ರಂಶವಿರಬಹುದು]

ರಾಹು (ನಾ). ೧. ಸಿಂಹಿಕೆ ಎಂಬ ರಾಕ್ಷಸಿಯ ಮಗ ; ಈ ಇವನೇ ನವಗ್ರಹಗಳಲ್ಲಿ ಒಬ್ಬ ಮತ್ತು ಸೂರ್ಯ. ಚಂದ್ರರನ್ನು ಗ್ರಹಣ ಕಾಲದಲ್ಲಿ ನುಂಗುತ್ತಾನೆ ಎಂಬ ಪ್ರತೀತಿಯಿದೆ: "ಭಾನುರಿಪು ಸಿಂಹಿಕಾ ಪ್ರಿಯಸೂನು . . . ವಿಧುಂತುದನಂತದು ತಾನಕ್ಕುಂ" (ಪಪು. ೯.೪೮-೦೪-೬೭); ಸುರಪತಿ ಶಿವಿ ಯಮ ನೈರುತಿ . . . ರಾಹು ಮಂದೇಂದು ಚಂದ್ರನಂದನ ಗುರುಗಳ್ (ಶಾಕ. ೨-೦) ; ಶಶಿವಂಶದ ನಿಲವನು ರಾಹು ಗೆದ್ದುದ ಕಂಡು ಹಿರಿಯರು ಹೊಲಬುಗೆಟ್ಟಿರು (ಶಾಪಾ. ೪. ೦೮೧-೩೦೪) ; ರವಿ ಚಂದ್ರ. ಬುಧ ನೀನೆ ರಾಹುಕೇತುವು ನೀನೆ (ಪಕೀಪ. ೩-೨೬-೦). ೨. ಗ್ರಹಣ, ಉಲ್ಕಾಪಾತ, ಭೂಕಂಪ ಮೊದಲಾದ ಉತ್ಪಾತ. ೩. ಆಗ್ನಿ ; ಬೆಂಕಿ : "ಅನಲೋತ್ಪಾತಂ ಕರಾಳಂ ಗ್ರಹವಿಪರಮಿವುಂ ರಾಹುವಕ್ಕುಂ" (ಪಾಪಾ. ೭೭). [ಸಂ.]

ರಾಹುಕಾಲ (ನಾ)· ರಾಹುವು ಅಭಿಮಾನಿದೇವತೆಯಾಗಿರುವ ಕಾಲ ; ಶುಭಕಾರ್ಯಗಳಿಗೆ ಪ್ರಶಸ್ತವಲ್ಲವೆಂದು ಪರಿಗಣಿಸಿರುವ, ಪ್ರತಿ ದಿನದ ಮೂರು ಮುಕ್ಕಾಲು ಗಳಿಗೆ ; ಅಶುಭಕಾಲ : ನಾವು ಇಲ್ಲಿಗೆ ರಾಹುಕಾಲದಲ್ಲಿ ಬಂದಂತಾಯಿತು (ಕ್ಷಾಳ. ೩೬) ; ರಾಹುಕಾಲದಲ್ಲಿ ಶುಭ ಕಾರ್ಯವನ್ನು ಮಾಡಬಾರದು (ಕಾಪ). [ಸಂ.]

ರಾಹುಗ್ರಸ್ತ (ನಾ)· ರಾಹುವಿನಿಂದ ಹಿಡಿಯಲ್ಪಟ್ಟುದು, – ನುಂಗಲ್ಪಟ್ಟುದು : ಕಿಡದನಕಟಕಟ ಮದಮುದಿತ ರಾಹುಗ್ರಸ್ತವಾದ ತರಣಿಯಂದು ಬಿಂಬಂ ನೆಲಕೆ ಬೀಳ್ದಂದದೆ (ಪಪಾ. ೦೨-೮) ; ರಾಹುಗ್ರಸ್ತವಾದಂದದಲಿ ಚಂಡಗಭಸ್ತಿಮಂಡಲವಿಳಿಗೆ ಕಾಣಿಸದಾಯ್ತು (ಕೃಪಣಾ. ೬-೨೮-೩೬). [ಸಂ.]

ರಾಹುಗ್ರಹಣ (ನಾ). ಚಂದ್ರ. ಸೂರ್ಯರನ್ನು ರಾಹುವು ಹಿಡಿಯುವಿಕೆ ; ಉಪರಾಗ : ರವಿ ರಾಜರ್ . . . ರಾಹುಗ್ರಹಣಗಾಢಪೀಡಿತ ರಾದರ್ (ಪಪ್ಯಾಕೃ. ೨-೩೬). [ಸಂ.]

ರಾಹುಟಿ (ನಾ)· ಸಣ್ಣಗುಡಾರ; ಡೇರೆ; ತಂಬೂ : ದಾರಿಗುಂಟ ಚಿಕ್ಕಚಿಕ್ಕ ರಾಹುಟಿಗಳಿದ್ದುವು. ಪ್ರತಿಯೊಂದರಲ್ಲಿ ೨-೩ ಜನ ಶಿಪಾಯಿಗಳು ಇರುತ್ತಿದ್ದರು (ಪಂಸಾ. ೦೦೬); ಪ್ರಯಾಣೋಪಯುಕ್ತವಾದ ಡೇರೆ, ರಾಹುಟಿ ಮೊದಲಾದವುಗಳನ್ನು ತಕ್ಕೊಂಡು ಹೊರಟರು (ಪುಂಜಾಳ. ೦೬೩). [←ಹಿಂ. ರಾವುಟೀ; ಮರಾ. ರಾವಟೀ, ರಾವ್ಟೀ, ರಾಹುಟೀ, ರಾಹೋಟೀ]

ರಾಹುತ ' ರಾವುತ ' ನೋ.

ರಾಹುತ್ತ ' ರಾವುತ ' ನೋ.

ರಾಹುಸಂಸ್ಪರ್ಶ (ನಾ). = ರಾಹುಗ್ರಹಣ : ಉಪರಾಗಃ, ಉಪಪ್ಲವಃ (ರಾಹುಸಂಸ್ಪರ್ಶ ಉಚ್ಯತೇ)-ಈ ೨ ಗ್ರಹಣದ ಪೆಸರ್ (ಪಶಾಮು. ೬-೨೦). [ಸಂ.]

ರಾಳ ' ರಾಲ ' ನೋ.

ರಾಳಕರ್ಪೂರ (ನಾ). ಒಂದು ಬಗೆಯ ಕರ್ಪೂರ ; ಸಜ್ಜರಸದ ಕರ್ಪೂರ : ಚರ್ವಿಸಿ ವೀರ್ಯಯೀಲವ ರಾಳಕರ್ಪೂರವಾ (ಪಾಶಕ. ೪೬೬-೬೭). [ರಾಳ (=ರಾಲ) + ಕರ್ಪೂರ (< ಕಪ್ಪುರ)]

ರಾಳಧೂಪ (ನಾ). ಒಂದು ಬಗೆಯ ಮರದ ರೆಸದಿಂದ ತಯಾರಿಸುವ ಸುಗಂಧದ್ರವ್ಯ ; ಲೋಬಾನ : ರಾಳಧೂಪ(ರಾಳ)– ಸುಂದರವಾದ ವೃಕ್ಷವೆ. ಇದರ ಅಂಟಿಗೆ ರಾಳವೆನ್ನುವರು. ಅದು ಔಷಧಕ್ಕೆ ಬರುತ್ತದೆ (ಕಣಾಡಿ. ೧೬). [ಸಂ. ರಾಲಧೂಪ]

ರಾಳು (ನಾ). (ಬೆಂಕಿಯನ್ನು ಸುಲಭವಾಗಿ ಹಿಡಿಯಬಲ್ಲ) ಸಾಲವೃಕ್ಷದ ಅಂಟು ; ಸಜ್ಜರಸ : ಕ್ಷಣಹೊತ್ತು ಮನಸ್ಸಿಟ್ಟು ನೋಡುವದೊಂದೇ ತಡ, ರಾಳವಾತ ಮದ್ದಿನ ಸ್ಫೋಟದಂತೆ ಒಮ್ಮೆಲೇ ಆ ವ್ಯಕ್ತಿಯಲ್ಲಿ ಮಹಾ ಜ್ವಾಲೆಯೇ ಏಳುವದು (ಶ್ರಿಕೃತೀ. ೧೪). [< ಕಾಲ]

ರಿ (ನಾ). [ಸಂಗೀತ]ಸಪ್ತಸ್ವರಗಳಲ್ಲಿ ಎರಡನೆಯದು ; ಋಷಭ : " ಸಪ್ತಸ್ವರಂಗಳ್ . . . ಸುಗಮಾವಧಾರ್ಯಂಬವು" (ಶಾಂಗಣಾ. ೨೩-೬) ;

ಸಪ್ತಸ್ವರಗಳು ಕ್ರಮವಾಗಿ ಸ, ರಿ, ಗ, ಮ, ಪ, ಧ, ನಿ ಎಂಬ ಸಂಕೇತಾಕ್ಷರಗಳಿಂದ ಪ್ರಯೋಗದಲ್ಲಿವೆ (ಸಂಗೀತ. ೦೩). [ಸಂ.]

ರಿಂಕಿಸು (ಕ್ರಿ). ಒತ್ತಿ ಹಿಡಿ ; ಅದುಮಿ ಹಿಡಿದುಕೊಳ್ಳು ; ನಲ್ಲನೇ ಕೂಪದೊಳು ಬಿದ್ದಿರ್ದ ತಣ್ಣಂ ನೀಂ . . . ಕಾಲಲ್ಲಿ ರಿಂಕಿಸಿ ಮೊಗನೂಱಿ ನೆಲವಂ ಮುಟ್ಟಿಯಲ್ಲಿಂದ ತರುವುದು (ಶ್ರೀಧಾ. ೩-೨೯). [ರಿಂಕು + — ಇಸು₅]

ರಿಂಕು (ಕ್ರಿ). ಬಿಗಿಯಾಗಿ ಕಟ್ಟು ; ಒತ್ತಿ ಕಟ್ಟು : ಕುಂಕುಮಜಲವ ಹೊನ್ನಂಡೆಗಳೊಳು ತುಂಬಿ ಮುಂಕೊಂಡು ಹೊಯ್ದುಡಲವಳ ರಿಂಕಿದ ಕುಚಯುಗ ಬಾಹುಮೂಲಂಗಳ ಕುಂಕುಮ ಜಗವ ಮೋಹಿಸಿತು (ಕೋಚ. ೦೯-೩೦) ; ಕೊಂಕುಗುರುಳುಗಳು ಕುಸಿದಾಡಯಲ್ಲಾಡಿ ಮಿಗೆ ರಿಂಕಿರ್ದ ಬಟ್ಟಮೊಲೆ ನಚ್ಚಣಿಸುತಿರ್ಪ ಮುಡಿಯಿಂ ಕುಸುಮ ಸೂಸೆ . . . ಬಳಲಿಕೆ ಗಳೆದಳೊಂದೆಸಂಪೊಳೊರ್ವ ನೀಱೆ (ಹರಿಶ. ೬-೨೦). [< ಇಂಕು]

ರಿಂಖ (ನಾ). ೧. ತೆವಳುವಿಕೆ ; ಸರಿಯುವಿಕೆ. ೨. ಕುಣಿಯುವಿಕೆ. ೩. ಕುದುರೆಯ ಗತಿಗಳಲ್ಲಿ ಒಂದು. ೪. ಕುದುರೆಯ ಗೊರಸು. ೫. ಮೋಸಗೊಳಿಸುವುದು. [ಸಂ.]

ರಿಂಖಣ (ನಾ). ೧. (ಮಕ್ಕಳು) ತೆವಳುವಿಕೆ ; ದೇಕುವಿಕೆ. ೨. ಋಜು ಮಾರ್ಗವನ್ನು ಬಿಟ್ಟು ನಡೆಯುವುದು ; ದುರ್ವ್ಯವಹಾರ : "ರಿಂಖಿಣಂ ಸ್ಖಲನಂ _ ೨ ಜಾರುವದಕ್ಕಾದರೂ ತಪ್ಪುವದಕ್ಕಾದರೂ ವ್ಯಾಯನಿರ್ಬಂಧದಿಂದ ಹಾರಿಹೋಗುವದಕ್ಕಾದರೂ ಹೆಸರುಗಳು" (ಕರ್ಣಾ. ೬೬. ೬೯) ; ರಿಂಖಿಣದ ತಂಕಣರಾಯರ ಬಂಕವ ಮುಱಿವ ರಣಾಂಕದ ಬರುದ್ದಂಕ ಶ್ರೀಮದ್ವೆಸವ ರಾಜದೇವರುಂ ಕಲ್ಯಾಣಪುರವರದೊಳ್ಪೊತ್ತಿರೆ (ಕರ್ಣಾ. ೯-೯ ೩). ೩. ಸುತ್ತು ; ಬಳಸು : ' ರಿಂಖಿಣಾಗೊಳಿಸು ' ಪರಾ. [ಸಂ.]

ರಿಂಖಿಣಂಗೊಳಿಸು (ಕ್ರಿ). ಸುತ್ತು ; ಬಳಸುವಂತೆ ಮಾಡು : ವಾಲವಂ ಶಿರದಲಿ ರಿಂಖಿಣಾಗೊಳಿಸಿ ಕರ್ಣಗಳೆತ್ತಿ ನಿಮಿರ್ದ . . . ಲಂಭಿಸಿದಂ (ಕರ್ಣಾ. ೨೦). [ರಿಂಖಿಣ + ಕೊಳ್₂ + — ಇಸು₅]

ರಿಂಗಣ (ನಾ). ೧. (ಸುತ್ತುತ್ತಾ ಮಾಡುವ) ಒಂದು ವಿಶಿಷ್ಟಬಗೆಯ ಕುಣಿತ, — ನೃತ್ಯ : "ರಿಂಗಣಮೆಂದು ಕುಣಿಪಂ" (ಕರ್ಣಾ. ೬-೩೨೦) ; ದಂಗೆಗಳದ ರಿಂಗಣ ರುಧಿರಿಸಿತು ವೈವಾಹಮಂಟಪವ (ಕುಕ್ಕಾಶ. ೦೨-೦೩) ; ಮನವ ರಿಂಗಣದ ರಂಗಭೂಮಿಯನು ಆಗೆದು ಬಗೆದು (ಅಧಿಶ. ೧೧೦-೦). ೨. ಚಟುವಟಿಕೆ ; ಚೆಲನೆ : ಅಣುವಿನಲಿ ಲಘುವಿನಲಿ . . . ವಶಿತ್ವದಲಿ ವೆಂಟಣಿಸಿ ರೇಚಕ ಪೂರಕದ ರಿಂಗಣವನಱಿವುದು ಯೋಗ ಸಿದ್ಧಿಗೆ ಲಕ್ಷಣವನಾ (ಶಾಣ್ಮಾ. ೪-೯) ; ಆ ಕಟಿಗಳುಬ್ಬಟೆಯು ಕೊರೆಯ ಸವಿಾಕದಂಗದ ರಿಂಗಣದ ಲೋಕ್ಯಕವೀರರ ಮುಂಡ ಕುಣಿದವು ಕೋಟ ಸಂಖ್ಯೆಯಲಿ (ಕೀಪರ್ಣ. ೬-೪೨-೦೯) ; ನವ್ಯ ರಿಂಗಣ ಪದದೇ ಇತ್ತು. ಅದರಿಂದ ಅವಳ ಬದ್ಮುವಿಕೆಗೆ ಮತ್ತಷ್ಟು ಹುರುವು ಬಂದಿತು (ಕಣಿ. ೧೩). ೩. = ರಿಂಖಿಣ ೧. [ಸಂ.]

ರಿಂಗಣಂಗುಣಿ, ರಿಂಗಣಕುಣಿ, ರಿಂಗಣಗುಣಿ (ಕ್ರಿ). ೧. (ಸುತ್ತುತ್ತಾ) ನೃತ್ಯವಾಡು ; ಲಾಸ್ಯವಾಡು : ಮೇಗಣ್ಗೆ ನೂಂಕಿ ತೆಗೆದತ್ತಿ ವಾಜಿಸಿ ಸೋರ್ದ ಪೂಗೊಳಂಗಳೊಳ್ಕೆದೆ ರಿಂಗಣಾಪುಣಿವಂತಿರ್ದ್ (ಅಜ್ಜಿ. ೦೦-೦೨೩) ; ಅಂತರಿಕ್ಷದೊಳ್ ನಾರದಂ ಪೆಱೆಗೆದಱಿ ರಿಂಗಣಂಗುಣಿವುತಿರಲು (ಶ್ರೀಪಾ. ೧೨-೧೩) ; ಕೆಲರು ಮನಬಂದಂತೆ ರಿಂಗಣಂಗುಣಿವುತಿರೆ (ಜಾತೀಪು. ೦೫-೨೦). **ರಿಂಗಣಕುಣಿ** : ೨. ಸುತ್ತು ; ತಿರುಗು : ಅಳವಿ ಮಿಗೆ ಕೌರವಚತುರ್ಬಲದೊಳಗೆ ರಿಂಗಣಕುಣಿವ ಖಾತಿಯ ನಿಲ್ಲಿಸಿ . . . ಹೊಯಿದನು (ಕುಣ್ಮಾ. ೦೮. ೦೩೨). **ರಿಂಗಣಗುಣಿ** : ೧. ನಾರದ ರಿಂಗಣಗುಣಿದನು ನಲಿಯೆ ಮರುಳ್ಗಳ್ (ಅಧಿಶ. ೨-೦೯) ; ರಿಂಗಣಗುಣಿದಾರ್ದ್ರ ಸಾರ್ದ್ರ ನಲವೆರ್ಚುವ . . . ಸಂಭ್ರಮವಾದೇಂ ಬಗೆಗೊಂಡುದೊ ಪಾಂಡುಪುತ್ರನಾ (ಹರಿಂ. ೪-೩೬) ; ಅಂಗನೆಯರು ಆರತಿಯಿತ್ತಿದರು ; ಯುವಕರು ರಿಂಗಣಗುಣಿದರು (ಹರಿಶ. ೬೭೬). ೨. ಚಿಕ್ಕಯ ಬಾಲ್ಯಮೊ. . . ಉದಿಸಿ ಮನದಂಗಣದಲ್ಲಿ ರಿಂಗಣಗುಣಿಯತೊಡಗಿತು (ಕರ್ವಾ. ೩೨-೨೯೨). [ರಿಂಗಣ + ಕುಣಿ₁]

ರಿಂಗಣಕುಣಿ ' ರಿಂಗಣಂಗುಣಿ ' ನೋ.

ರಿಂಗಣಗುಣಿ ' ರಿಂಗಣಂಗುಣಿ ' ನೋ.

ರಿಂಗಣಗುಣಿತ (ನಾ). (ಸುತ್ತುತ್ತಾ) ಕುಣಿಯುವಿಕೆ; ನಾಟ್ಯವಾಡುವಿಕೆ : ಕ್ರಾಂತಿಯ ದಾರಿಯನ್ನು ನೋಡುತ್ತ ನಡೆದಿರುವ ರಿಂಗಣಗುಣಿತವನ್ನು ನಾವೂ ಕೂಡಿಕೊಳ್ಳುವೆವು (ಕ್ರಾಂತಿ. ೩೦).

ರಿಂಗಣಗುಣಿತ ಹಾಕು = ಸುತ್ತು; ತಿರುಗು : ನೂರಳ ಹೃದಯದಲ್ಲಿ ದುಃಖವೆ ರಿಂಗಣಗುಣಿತ ಹಾಕುತ್ತಲಿತ್ತು (ಕರ್ವಾ. ೩೬). [ರಿಂಗಣ + ಕುಣಿತ]

ರಿಂಗಳ (ನಾ). ತಿರುಗುವಿಕೆ; ಸುತ್ತುವಿಕೆ: ' ರಿಂಗಳಗುಣಿಸು ' ಪರಾ. [< ರಿಂಗಣ]

ರಿಂಗಳಗುಣಿಸು (ಕ್ರಿ). ಸುತ್ತಿಸು ; ತಿರುಗಿಸು : ರಣದಿ ಕುಬಿಬಿರಿದಬ್ಬಿ ರಿಂಗಳಗುಣಿಸುತತ್ಖಣಯೋಳಾಗ ಶರಭನು ತನಗೆ ಮಾರಾಂತಮಿಳಿಬಿಳಿಸುರು ಚಾತುರಂಗಬಸು. . . ಸಮರಿ (ಅಂಬಾ. ೩೬-೨೦). [ರಿಂಗಳ + ಕುಣಿಸು]

ರಿಃಖ (ನಾ). [ಜ್ಯೋತಿ] ಲಗ್ನದಿಂದ ಹನ್ನೆರಡನೆಯ ಸ್ಥಾನ : ಉದಯಕ್ಕೆಂಟಱೊಳಿಂದು ಕೂಡೆ ಸರುಜ . . . ರಿಃಫದೊಳಸತ್ಯಂ ವಾಮ ನೇತ್ರಾಂಧಕಂ (ಜಾತಕ. ೦೮ ೬). [ಸಂ.]

ರಿಕಾಪು ' ರಿಕಾಬು ' ನೋ.

ರಿಕಾಬು, ರಕಾಬು, ರಿಕಾಪು (ನಾ). ಕುದುರೆಯನ್ನು ಹತ್ತುವಾಗ ಕಾಲನ್ನಿಡಲು ಅನುಕೂಲವಾಗುವಂತೆ ಜೀನಿಗೆ ಅಳವಡಿಸಿರುವ ಬಳೆ; ಅಂಕಮಣೆ : ಅಶ್ವರತ್ನದ ಆಭರಣದ ಲೆಕ್ಕ. . . ೨ ರಿಕಾಬು (ಅ. XIV. ೫೦೫. ೫೯೬-೬೦೨; ಷಿ. 1817); ಕುದುರೆಯ ಪದ್ಮದಲ್ಲಿ ವಿಶ್ವಾಸ ರಿಕಾಬು_ ಲಾಮವು ಶ್ಲಾಘ್ಯವೆ. ಬತ್ತಲೆಕುದುರೆ ಏರಿ ಒಂದು ಮೈಲಿನ ಪರ್ಯತ್ತನ್ನು ಗೆದ್ದಿದ್ದೆ (ಅಚಿಶ. I. ೦೬). **ರಕಾಬು** : ನೀಲನು ತವ್ಮ ಕುದುರೆಯನ್ನು ಒಮ್ಮೆಲೆ ಮುಂದೆ ನೂಕಿ ರಕಾಬಿನ ಮೇಲೆಯೇ ಎದ್ದುನಿಂತು ಕೈಯಲ್ಲಿಯ ಚೂರಿಯನ್ನು ಬಲವಾಗಿ ಬೀಸಿ ಒಗೆದನು (ಜಂಗಸ. ೬೬). **ರಿಕಾಪು** : ಕುದುರೆಯ ರಿಕಾಪು ಜಾಗಟೆಯ ಬಲ್ಲಿಯೊಂದಕ್ಕೆ ತೊಡಕಿಕೊಂಡಿತು (ಮೂಡಾ. ೬) ; ಎರಡೇ ನಿಮಿಷಗಳಲ್ಲಿ ಜೀನುಹೊಕೆ ಹೊಟ್ಟೆಗೆ ಪಟ್ಟ ಬಿಗಿದು. ರಿಕಾಪು ಸರಿಮಾಡಿಕೊಂಡ (ಜಗಾಂ. ೧೦). [<–ಅರ. ರಕಾಬ್; ಪಾರ. ಹಿಂ. ರಿಕಾಬ್. ರಕಾಬ್; ಮರಾ. ರಿಕಬ್. ರಿಕಬೀ. ರಿಕಾಬೀ]

ರಿಕಾಮಿ₁ (ಗು). ಖಾಲಿಯಾದ ; ಬರಿಯ ; ಸಕುವಿನಾ ರಿಕಾಮಿ ಡುಬ್ಬಿಗಳು (ಮುಂಬಾಕ್ಷ. ೦೬೯). [<– ಮರಾ. ರಿಕಾಮಾ]

ರಿಕಾಮ್ಮಿ (ಅ). ನಿರರ್ಥಕವಾಗಿ ; ವ್ಯರ್ಥವಾಗಿ ; ಸುಮ್ಮನೆ : ಬಂಟನ್ನ ನಾ ಬಲ್ಲೆ. ರಿಕಾಮಿ ತೋಟತೋಟದ ಸುತ್ತ ತಿರಗಕಾನು (ಜಾಲಂ. ೨೬). [< ರಿಕಾಮಿ₂]

ರಿಕ್ತ₁ (ನಾ). ಒತ್ತಾಗಿರುವುದು ; ಇರುಕು : ಜನರೆಲ್ಲ ರಿಕ್ತಾಗಿ ಕೂತಿದ್ದಾರೆ (ಕಾ. ೦೦೩) ; ರಿಕ್ತಾಗಿ ಬಿಗಿಯಾದ ಬಂಧನಗಳು ಬಿಚ್ಚಳ ಹೊತ್ತು ಬಾರವು (ಹುಚ್ಚ. ೦೦೩೨). [< ರಿಂಚು]

ರಿಕ್ತ₂ 'ರಿಚ್' ನೋ.

ರಿಕ್ತ₃ (ಗು). ೧. ಬರಿದಾದ ; ಖಾಲಿಯಾದ : ರಿಕ್ತಕುಂಭಂ ವಿಲಾಪಿಪ ಭಗ್ನಾಂಗನ ಕುಟ್ಟಿಯಾಂ. . . ಧೂಮಮಾಂ ನಿವುರ್ ಕಂಡರೆ ಪೋಗರ್ಕ್ಕೆ (ಕೋಟೀಶ. ೬೮). ೨. ತಿರುಳಿಲ್ಲದ; ಬೆಲೆಯಿಲ್ಲದ. (ನಾ). ೩. ಶೂನ್ಯ ; ಬರಿದು : ತದಾತರ್ಗತರೋವಾಂಗಳಂ ಪ್ರತಿಸಮಯಮೊಂದೊಂದಂ ಆವ ಕರ್ಮಾಣಂ ಮಾಡಿದೊಡಂದಿಂಗೆ ರಿಕ್ತಮಕ್ಕುಂ (ಷಟ್ಪ್ರ. ೦೬೩). ೪. ಹೀನ

ವಾದುದು ; ತುಚ್ಛವಾದುದು : " ರಿಕ್ತಂ- ತುಚ್ಛಂ- ಅಸಾರಂ- ಫಲ್ಗು- ವ್ಯರ್ಥಫಲಂ – ಈ ೫ ತುಚ್ಛಂ" (ಪಣಿಯು- ೮೫೬-೯೨). : ಮೃಗಗಳ ಭಾಷೆ ಮನುಷ್ಯನ ಭಾಷೆಯ ಎದುರಿಗೆ ಹೇಗೆ ರಿಕ್ತವೆಂದು ಕಾಣುತ್ತದೆಯೋ ಹಾಗೆ ಮಾನವರ ಇಂದಿನ ಭಾಷೆಯನ್ನು ರಿಕ್ತವೆಂದೆನ್ನಿಸುವ ಒಂದು ಭಾಷೆಯನ್ನು ಊಹಿಸುವುದು ಕಷ್ಟವಲ್ಲ (ಪ್ರಾಪ್ರ- ೨). ಹಿ. ಬಡವ ; ದರಿದ್ರ. [ಸಂ.]

ರಿಕ್ತ (ನಾ). ಒಂದು ಬಗೆಯ ಸಸ್ಯ : ಕಾಡುಪಿಂಡಿ, ರಿಕ್ತಾ, ರಕ್ತಮರ (ಪ್ರಸಿಗ- ೪೮-೪೭). [?]

ರಿಕ್ತಕ (ನಾ). ಏನೂ ಇಲ್ಲದುದು ; ಬರಿದು : "ಶೂನ್ಯಂ . . . ರಿಕ್ತಕಂ— ೪ ಬರಿದಾದ ಮನೆ, ಮಡಿಕೆ, ಮುಂತಾದ್ದು" (ಚಿತ್ಸಾಂಕ- ೪೩೮). [ಸಂ.]

ರಿಕ್ತಗೊಳಿಸು (ಕ್ರಿ). ಖಾಲಿ ಮಾಡು ; ತೆರವುಗೊಳಿಸು : ರಾಷ್ಟ್ರಪತಿಯವರು ಸಂಸತ್ತಿನ ಉಭಯಸದನಗಳಲ್ಲಿ ಯಾವುದೊಂದರಲ್ಲಾಗಲಿ ನಿರ್ವಾಚಿತರಾದರೆ . . . ಸದನದ ತಮ್ಮ ಸದಸ್ಯಸ್ಥಾನವನ್ನು ರಿಕ್ತಗೊಳಿಸಿದಂತೆ ಭಾವಿಸತಕ್ಕುದು (ಕಾರಾಸ- ೨೯). [ರಿಕ್ತ$_1$ + ಕೊರ್$^{ಗೆ}_1$ + — ಇಸು$_3$]

ರಿಕ್ತತೆ (ನಾ). ೧. ಬರಿದಾಗಿರುವಿಕೆ ; ಶೂನ್ಯತೆ : ಸುತ್ತಣ ಈ ವಿಪುಲರಿಕ್ತತೆಯಲ್ಲಿ ಈ ಚಿತ್ರ ಎಷ್ಟು ಸಂಪೂರ್ಣವಾಗಿ, ಒಂದಾಗಿ- ನನಗೆ ಗೋಚರಿಸಿತು ! (ಪಶಂಕ- ೩೩- ೨೦೭). ೨. ದಾರಿದ್ರ್ಯ ; ಬಡತನ. [ಸಂ. ರಿಕ್ತತಾ]

ರಿಕ್ತಪೂರ್ಣ (ನಾ). [ನಾಟ್ಯ] ನೃತ್ಯದಲ್ಲಿಯ ನಾಲ್ಕು ಬಗೆಯ ಉದರ ಭೇದಗಳಲ್ಲಿ ಒಂದು : ☞ "ಶ್ವಾಸರೋಗದಿಂದ [ಉಬ್ಬಸ] ಪೀಡಿತನಾದಧನಿಗಿರುವಂತೆ ಹೊಟ್ಟೆಯನ್ನು ಒಳಕ್ಕೂ ಹೊರಕ್ಕೂ ಚಲಿಸುವುದು" (ಅಸ್ಕಂ- ೨೬೨ ಗದ್ಯಾನುವಾದ) : ಕ್ಷೀಣ, ಖಲ್ವ, ಪೂರ್ಣ, ರಿಕ್ತಪೂರ್ಣ—ಈ ನಾಲ್ಕು ಉದರಭೇದಂಗಳ್ (ಅಸ್ಕಂ- ೨-೦೩೩ ಪ) [ಸಂ.]

ರಿಕ್ತಹಸ್ತ (ನಾ). ೧. ಬರಿಗೈ. ೨. ಬರಿಯ ಸೊಂಡಿಲು : ಕಾಣಿಮಾ ಕಂಡಾನೆ . . . ಜಾಯ್ಸಿ ಪುಗಿಸುತಿದೆ ರಿಕ್ತಹಸ್ತವನುಸಿರ ಬಿಸುಟಿಂಗೆ ಬಯಸಿ ! (ಕ್ರಿಲೀಪ್ರ- ೨೦೨-೨೦೯). [ಸಂ.]

ರಿಕ್ತೆ (ನಾ). ೧. ಬಡವಿ ; ಅತಿದರಿದ್ರಳಾದವಳು. ೨. ಶುಭ ಕಾರ್ಯಗಳಿಗೆ ಪ್ರಶಸ್ತವಲ್ಲದ. ಶುಕ್ಲ ಮತ್ತು ಕೃಷ್ಣಪಕ್ಷಗಳಲ್ಲಿ ಬರುವ ಚತುರ್ಥಿ, ನವಮಿ, ಚತುರ್ದಶೀ ತಿಥಿಗಳು. [ಸಂ. ರಿಕ್ತಾ]

ರಿಕ್ಥ (ನಾ). ೧. ಪಿತ್ರಾರ್ಜಿತವಾಗಿ ಬಂದ ಆಸ್ತಿ : ಸ್ವತ್ತು. ೨. ಧನ ; ಹಣ . "ದ್ರವ್ಯಂ . . . ರಿಕ್ಥಂ . . . ವಿಭವಃ –ಗಿಷ್ಟ ಧನದ ಪೆಸರುಗಳ್" (ಚಿಂತ್ಸಾಂಕ- ೪೦೨). ೩. ಬಂಗಾರ : ಚಿನ್ನ : " ರಿಕ್ಥ [ಪಾಠಾಂ- ತ್ರ]ಮಾ ಕನಕಂ ಹಿರಣ್ಯಮರ್ಥಂ" (ಪುರಂಗಾ- ೮೩-೦೩). [ಸಂ.]

ರಿಕ್ಷ ' ರಿಕ್ಷೆ ' ನೋ.

ರಿಕ್ಷಾ (ನಾ). ೧. ಮನುಷ್ಯನಿಂದ ನಡೆಸಲ್ಪಡುವ, ಎರಡು ಅಥವಾ ಮೂರು ಚಕ್ರಗಳುಳ್ಳ ವಾಹನ : ಆನಂತ . . . ರಿಕ್ಷಾವಲ್ಲಿ ಕೂತನು . . . ರಿಕ್ಷವಾಲನು ಕಬ್ಬಿಂಗಡಿ ತುಳಿಯುಹತ್ತಿದಕು (ಜಾಣ- ೩೩). ೨. ದಂತ್ರಚಾಲಿತ ಯಾಂ, ಮೂರುಚಕ್ರಗಳುಳ್ಳ ವಾಹನ : ಬಸ್ಸೂ ರಿಕ್ಷಾ ಹತ್ತಿ ಓಡತಾರ (ಅಳಿಲು, ೨೩೦-೦೩); ರಿಕ್ಷಾದಲ್ಲಿ ಕುಳಿತು ಪಾನಿಪುರಿ ಕಚ್ಚಿಗೆ ಹೊರಟೆ (ದೂಸ್ತ). [← ಇಂ. Rickshaw]

ರಿಕ್ಷೆ, ರಿಕ್ಷ (ನಾ). ನಕ್ಷತ್ರ; ತಾರೆ : ಗರ್ಭಂಗಟ್ಟು(ಟ್ಟಿ)ಗಂದಿನ ರಿಕ್ಷೆಯೊಳಾ (ಅಶ್ವಸಂ- ೬-೩). **ರಿಕ್ಷ** : " ರಿಕ್ಷಮುಂ- ೨. ತ ನಗೆ ನಕ್ಷತ್ರಂ " (ಪಜ್ಜಿಕೋ, ೦೪-೩೭). [< ಸಂ. ಋಕ್ಷ]

ರಿಗ್ಗವಣೆ. ರಿಗ್ಗ್ವಣೆ (ನಾ). ೧. ಮದ್ದಳೆ ಮೊದಲಾದ ಚರ್ಮವಾದ್ಯಗಳನ್ನು ಬಾರಿಸುವವರಲ್ಲಿಯ ಒಂದು ಕ್ರಮ, ಗತಿ : ನಿನದತ್ಸಂಧ್ಯಾನಕಂ ರಿಗ್ಗವಣೆಯ ಪಱಿ ಪೂರ್ವಾಚಲಂ ಕುಂಗರೆಂಗಂ ತನಗಾದತ್ಸಂಬನ್ದು ನೀಲಿಯು ಜವನಿಕೆವೋಲ್ ಪಿಂಗೆ (ಸಂಧ್ಯಕ್ಷ- ೬-೩೦); ಆ ಡಂಗುರಗಳೆಂಬ ರಿಗ್ಗವಣೆಯ ಪಱಿಗಗ್ಗಲಿಸುವ ನಗರನರ್ತಕಿಯರ ಚಿತ್ತದಂತಿರೆತ್ತುವ ತೋರಣದ (ಅವಂಕ್ಷ- ೯-೩೯ ಪ); ಮಲಪು ರಿಗ್ಗವಣೆ ಒಡ್ಡಾಸರ ಪಱಿಸಿ ಚಮತ್ಕಾರ . . . ಮೊದಲಾದ ವಾದ್ಯಪ್ರಬಂಧಂಗಳಲ್ಲಿ ತನ್ನ ಸೇತುವೆಯನಾರ್ಪೆವುತ್ತೆ . . . ಬಾಜಿಸುತಿರ್ದಂ (ಪರಮಾ- ೮೦ ಪ). ೨. ಒಂದು ಬಗೆಯ ಚರ್ಮವಾದ್ಯ ; ಮೃದಂಗ : " ರಿಗ್ಗವಣೆಯನೆ ಮೃದಂಗಂ " (ಪಪಂಪ- ೦೦೦). **ರಿಗ್ಗ್ವಣೆ** : ೧. ಮದ್ದಳಿಗಂ ಮದ್ದಳೆಯುಂ . . . ಚಮೆತ್ಕಾರ ತುದುಕು ರಿಗ್ಗ್ವಣೆ ಪಟಹಣಿಗಳೆಂಬ ನಾನಾಶಬ್ದಂಗಳಂ ಬಾಜಿಸಿ (ಪರ್ಭಾಪ- ೨-೨೩ ಪ). [< ಸಂ. ರಿಗೋಣಂ]

ರಿಗ್ಗ್ವಣೆ ' ರಿಗ್ಗವಣೆ ' ನೋ.

ರಿಚೆ, ರಿಕ್ಕೃ, ರುಕ್ಕು$_1$ (ನಾ). ೧. ಆಶೀರ್ವಾದ ಮಂತ್ರ: ಮುಂದದೇವಿದರ್ಮ ಬದ್ದಣಮುದ್ದವಣಂ ರಿಚೆ [ಪಾಣಾ- ರಿಚಿ, ರಿಚೆ, ರುಚಿ] ಪಾಟವಾಟವೆತ್ತಿದ ಗುಡಿ ತೋರಣಂ (ಅರಸಚೆ- ೨-೩೯). ' ರಿಚೆವೇಟ್ಪು ' ಪರಾ. **ರಿಕ್ಕು$_{೨}$** : ೨. ವೇದಮಂತ್ರ ; ಋಕ್ಕು : " ರುಕ್ಕಾ (ರಿಕ್ಕಾ) – ಋಚ್$^{ಕ್}$(ಕ್) ಜ ಕರಣ, ವೇದಮಂತ್ರ " (ಕರ್ಕಟಕ- ೩೮). **ರುಕ್ಕು$_{೩}$** : ೨. ವೇದರುಕ್ಕಂ ಪೇೞ್ದಕ್ಷತೆಯನೀವುದುಂ (ರಕ್ತರಾಕ್ಷ- ೦-೧೩). [< ಸಂ. ಋಚ್]

ರಿಚೆವೇಟ್ಪು (ಕ್ರಿ). ಆಶೀರ್ವಾದ ಮಂತ್ರವನ್ನು ಹೇಳು : ವೇದಘೋಷ ಮಾಡು : ಅಂತು ಪೊಕ್ಕಾ ನೃಪಂಗೆ ರಿ[ಪಾಣಾ- ರು]ಚೆವೇೞ್ದಕ್ಷತಂಗಳ್ ಕೊಟ್ಟು (ಪಂಪಭಾ- ೦೦-೦೩೨ ಪ). [ರಿಚೆ + ವೇಟ್ಪು$^{ಗೆ}$]

ರಿಜಮಿಂಟುದಾರ (ನಾ). ಸೈನ್ಯದ ವಿಭಾಗಾಧಿಕಾರಿ ; ತುಕಡಿದಾರ : ಬಾಬುರಾವಮ್ಮಾಲ ರಿಜಮಿಂಟುದಾರ (ಎಳ- XIV- ಪುಂಕ್ಕ- ೦೩೬ ಕ; ೧೮೩೧). [ರಿಜಮಿಂಟು (☞ ← ಇಂ. Regiment) + — ದಾರ್^{ಕ}]

ರಿಜಿಸ್ಟರು ' ರೆಜಿಸ್ಟರು ' ನೋ.

ರಿಜು ' ಋಜು$_1$ ' ನೋ.

ರಿಣ ' ಋಣ ' ನೋ.

ರಿಣಗೂಳು (ನಾ). ಹಂಗಿನ ಅನ್ನ : ಎಷ್ಟು ದಿನ ರಿಣಗೂಳನ್ನುಂಡು ಕೊಂಡು ಇರುವುದು (ಪಳ- ೦೦); ಪರೀಕ್ಷಾ ನಾವಾಸಾದಿ- ಮನ್ಯಾಗ ಕೂತು ರಿಣಗೂಳು ತಿಂತೀದಿ (ಅಸ್ಪಂ- ೦೪೬).

[ರಿಣ (< ಋಣ) + ಕೂಳು$_{೩}$ (<ಕೂಬ್$^{ಳ್}_1$)]

ರಿಣಗೇಡಿ (ನಾ). ಸಾಲವನ್ನು ತೀರಿಸದೆ ಇರುವವನು ; ಋಣದಲ್ಲಿರುವವನು : ವ್ಯಣ ನೋಡಿ ಬಂದರೆ ಮೇಲ್ಮೂತ ನೊಣದಂತೆ ರಿಣಗೇಡಿ ಜೀವವಿನ್ನೇಕೆ ಮುಮತೆಯ ಜೊತೆ ? (ಕೂದುಗಾ- ೬೮-೦೨).

[ರಿಣ (< ಋಣ) + ಕೇಡಿ$_1$]

ರಿಣಸ್ಥ (ನಾ). ಋಣವನ್ನು ಹೊಂದಿರುವವನು ; ಹಂಗಿಗ : ನೀನು ಲಿಂಗವ ರಿಣಸ್ಥನು- ನಾನು ನಿನ್ನ ರಿಣಸ್ಥನಾದೆನು (ಶ್ರೀಕೃಷ- ೩, ೦೧೦).

[ರಿಣ (< ಋಣ) + — ಸ್ಥ]

ರಿತುಗಾನ (ನಾ). ಆಯಾ ಋತುಗಳಲ್ಲಿ ಹಾಡುವ ಗಾನ ; ಋತುಗಾನ : ನವನವ ರಿತುಗಾನಮನವತರಿಸುವೆ (ನೀಪಂ- ೪೬-೦).

[ರಿತು (< ಋತು) + ಗಾನ]

ರಿದ್ದಿ, ರುದ್ಧಿ (ನಾ). ೧. ಅಭಿವೃದ್ಧಿ : " ರಿದ್ಧಿ–ಋದ್ಧಿ =ಅಭಿವೃದ್ಧಿ " (ಕರ್ಕಟಕ- ೩೮); ಋದ್ಧಿ–ರಿದ್ಧಿ (ಕಣ್ಣಾಕ್ರಿ- ೦೩೯ ಕ್ರಿಯೋ). ೨. ಜನನದಿಂದಾಗುವ ಸೂತಕ ; ಪುರುಡು ; ವೃದ್ಧಿ : ನಮಗ್ಯಾರಿಗೂ ಹುಟ್ಟಿದ ರಿದ್ದಿಸೂ ಇಲ್ಲ ; ಸತ್ತ ಸೂತಕನೂ ಇಲ್ಲ (ಹೂಸಂಣಾ- ೭೭). **ರುದ್ದಿ** : ೧. ಶ್ರುತಕೀರ್ತಿಯುಪಧಿಜ್ಞನಿ ಪಲವು ರುದ್ಧಿಗಳಿಂದಂ ಕೂಡಿದೊಂ (ಪಶಾಂಶಾ- ೭೯ ೦೩೮). [<-ಪ್ರಾ. ರಿದ್ಧಿ-/ಸಂ. ವೃದ್ಧಿ]

ರಿಪಿ (ನಾ). ೧. ಕಾಟ ; ಹಿಂಸೆ ; ಕಿರಿಕಿರಿ : 'ರಿಪಿಗೇಡಿ' ಪರಾ. ೨. ಕಾಟ ಕೊಡುವವನು ; ಉಪದ್ರವಕಾರಿ : ನಿನ್ನನ ದಿನ ನಾನೇ ಹೋಗಿದ್ದರೆ ಆ ರಿಪಿಯು ನನ್ನ ಬೆನ್ನಗೇ ಬೀಳುತ್ತಿದ್ದಿತಲ್ಲಾ ಎಂದು ನಡುಗಿದೆನು (ಶಾಕು. ೭೬).

ರಿಪರಿಪಿ (ದ್ವಿರುಕ್ತಿ) : ಸುಮ್ಮನೆ ಆಕೆ ತೋರಿಸಿ ರಿಪರಿಪಿ ಹಚ್ಚಿರುತ್ತಾನೆ ! (ಪ್ರಸಾಬೆ. ೬೬). [← ಮರಾ. ರಿಪರಿಪ]

ರಿಪಿಗೇಡಿ (ನಾ). ಕಾಟ ಕೊಡುವವನು ; ಉಪದ್ರವಕಾರಿ : ಪುನಿಯಗ ರಿಪಿಗೇಡಿ ಆದ ಹ್ವಾದಲ್ಲಿ ಕಿಡಿಗೇಡಿ ಬಾಳನ ಹ್ಯಾಂಗ ಸಂಬಸಲೆ ಪಡೆದಮ್ಮ (ಜಿಸಂ. ೯೨) ; ರಿಪಿಗೇಡಿ ! ನಾಕುಮಾಡು ನಿನ್ನ ಮುತಾಬುಡತೀನಿ (ಚಿತ್ರಕೃ. ೭೩). [ರಿಪಿ + ಕೇಡಿ]

ರಿಪಿಜಿಡ್ಡು (ನಾ). ಜಿಪುಣತನ ; ಜಿಗುಟುಸ್ವಭಾವ : ಅಂಥ ಜಿಗುಟು ರಿಪಿಜಿಡ್ಡು ಹುಡುಗರಿಗೆ ಕೂಡ . . . ಅವರ ಕೈಯಿಂದ ಒಂದು ಕವರ್ನಷ್ಟವನ್ನೂ ಉಚ್ಚಿಕೊಳ್ಳಲು ಸಾಧ್ಯವಾಗಿದ್ದಿಲ್ಲ (ಜಿಕೃ. ೨೯೯). [ರಿಪಿ+ಜಿಡ್ಡು]

ರಿಪೀಸು (ನಾ). ಮರದ ಪಟ್ಟಿ ; ತುಂಡು : ಮನೆಯ ರಿಪೀಸುಗಳಿಗೆ ಬೆಂಕಿ ತಗುಲಿತು (ಕೃಷ್ಣ). 'ರೀಪು' ಪರಾ.

[←ಇಂ. Reeper·/ಮರಾ. ರೀಪ]

ರಿಪು (ನಾ). ೧. ಹಗೆ; ಶತ್ರು : "ಅಭಿಯಾತೀ, ಅರಾತೀ, ಅಮಿತ್ರಂ, ರಿಪುಃ . . . ದ್ವಿಷತ್ — ಈ ೨೪ ಹಗೆ " (ಕರಾಯು. ೭೭-೩೦೦) : ಆ ಮಹೋಗ್ರರಿಪುಭೂಭುಜಶ್ರವಣ ಭೈರವಾಡಂಬರಂ . . . ಆದುದಾ ರವಿ ತನೂಭವಜ್ಯಾರವಂ (ಕಂಪಾ. ೦೩-೦೩೩) ; ಮಡದೀ ನೀಂ ಪಡೆವಾ ಸುತಂ ರಿಪುಚಮೂಸಂಹಾರಮಂ ಹಾರವಂ ಪೊತೆರಲ್ ಮಾಬ್ಯುಂ (ಜಗ. ೨-೫೩). ೨. [ಜ್ಯೋತಿ] ಲಗ್ನದಿಂದ ಆರನೆಯ ಸ್ಥಾನ ; ಶತ್ರುಸ್ಥಾನ : ತನಯಸ್ಥಾನದೊಳಿತ್ಯಮಂತ್ರಿ ರಿಪುಸ್ಥೋಗ್ರ ನಿಶ್ಚತ್ರು (ಜಾಹ. ೦೬-೦೦).

ರಿಪುಕಟಕಭೈರವ = ಶತ್ರುಸೈನ್ಯಕ್ಕೆ ಭೈರವನಂತಿರುವವನು ; ಒಂದು ಬಿರುದು : ಭಟರೆ ತೆಗೆತೆಗೆ ಪಾರ್ಥನೋ ರಿಪುಕಟಕ ಭೈರವನೋ (ಭಾಪ್ರ. ೨-೦೯). ರಿಪುಕವಿದಲ್ಲಣ = ಶತ್ರುಕವಿಗಳನ್ನು ತಲ್ಲಣಗೊಳಿಸುವವನು : ಒಂದು ಬಿರುದು : ಶ್ರೀನಾಥನ ಭೃತ್ಯ ರಿಪುಕವಿದಲ್ಲಣಾಗ್ರಫರಟ್ಟ ಪಂಡಿತಮಲ್ಲಿಃಶರ್ಮನ (ಪಂಲಿಪಾ. ೦-೦೯). ರಿಪುಗೋಧೂದುಘರಟ್ಟ = ಶತ್ರುವೆಂಬ ಗೋಧೂಪಕ್ಕೆ ಬೀಸುವ ಕಲ್ಲಿನಂತಿರುವವನು ; ಒಂದು ಬಿರುದು : ದಾಟ್ಯವಿದಾಂತ ಪಗೆದರ ಪಟ್ಟಿಂ ಪಾಱಿಸದೆ ಮಾಣ್ಬನೇ ವೈರಿದಿಙಾಟ್ಟಿಂ ರಿಪುಗೋಧೂಮ ಘರಟ್ಟಿಂ ಪುರಿದೇವನದಱುರುವ್ವರವಟ್ಟಿಂ (ಕಾಪ್ರಾ. ೦೩-೩೩ ; ೧೧೮೮). ರಿಪುಘಟಾಕೇಸರಿ = ಶತ್ರುವೆಂಬ ಆನೆಗೆ ಸಿಂಹದಂತಿರುವವನು ; ಒಂದು ಬಿರುದು : ವಾಣಸ್ಯನ್ನದು ಪ್ರಚಂಡರಂ ರಿಪುಘಟಾಕೇಸರಿ (ಕಾಪ್ರ. ೬-೭-೨೬೨ ; ೧೦೬೨). ರಿಪುನೃಪತಿನಿಕ್ಷತ್ರ = ನಿಲ್ಲಲು ನೆಲೆಯಿಲ್ಲದಂತೆ ಶತ್ರುರಾಜರನ್ನು ನಾಶಪಡಿಸುವವನು ; ಒಂದು ಬಿರುದು : ಪರಿವಾರಚಿನ್ಹಾನಿಣಿ ಸುಜನಚೂಡಾಮಣಿ ರಿಪುನೃಪತಿ ನಿಕ್ಷತ್ರಂ ಗೋತ್ರಪವಿತ್ರಂ (ಪಾ. VII. ೪೫೦. ೫೦-೦೯ : ೧೦೩೭). ರಿಪುನೃಪಬಂದಿಕಾಜಿ = ಶತ್ರುರಾಜರನ್ನು ಸೆರೆಹಿಡಿಯುವವನು ; ಒಂದು ಬಿರುದು : ಇಸಸಂದನನು . . . ರಿಪುನೃಪಬಂದಿಕಾಜಿವಧಾರು ಧಿರುಪಯವೆಂದು ಕಳಕಳ ಗಜಜು ಮಿಗೆ ಕುರುಭೂಮಿಗೈತಂದ (ಕಾಪ್ರಾ. ೬-೦೯). ರಿಪುಬಲದಿಶಾಪಟ = ಶತ್ರುಸೈನ್ಯವನ್ನು ಚೆಲ್ಲಾಪಿಲ್ಲಿ ಮಾಡುವವನು ; ಒಂದು ಬಿರುದು : ಗೆರೆದನಹಿತಾನೀಕವನು ರಿಪುಬಲದಿಶಾಪಟ ಭೀಷ್ಮನು (ಕಾಪ್ರಾ. ೬-೨೪). ರಿಪುಭೀಕರ = ಶತ್ರುಗಳಿಗೆ ಭೀತಿಯನ್ನುಂಟುಮಾಡುವವನು ; ಒಂದು ಬಿರುದು : ರಾಜ್ಯ ಲಕ್ಷ್ಮೀನಿವಾಸನೆನೆ ನೆಗಟ್ಟಿನಖಿರಿಪುಭೀಕರಸೌಷ್ಠವಭುಜಯುಗಂ . . . ಜಿವುಂಡನೃಪಂ (ಕೌಶಾ. XI-ii, ೦೦೯-೦೬ ; ಸಿ. ೨೬೫). ರಿಪುಮಂದಳಕ್ಷೈರವ = ಶತ್ರುಸಮೂಹಕ್ಕೆ ಭೀಕರನಾದವನು ; ಒಂದು ಬಿರುದು : ಸುವರ್ಣಗರುತಧ್ವಜಂ ಮಣಿವಂಕಪ್ಪಕ್ಕಿಂ ಅಯ್ಯನ ಸಿಂಗಳ ರಿಪುಮಂಡಳಕ್ಕೈರವಂ . . . ಶ್ರೀಮದ್ವಿಜಯಾದಿತ್ಯದೇವರಸರು (ಕಾಶಾ. ೨೯-೩ ; ೨). ರಿಪುಮದನಮಹೇಶ್ವರ = ಶತ್ರುವೆಂಬ ಕಾಮನಿಗೆ ಈಶ್ವರನಂತಿರುವವನು : ಒಂದು ಬಿರುದು : . ಪ್ರತಾಪ ಲಂಕೇಶ್ವರ ರಿಪುಮದನಮಹೇಶ್ವರ · ರಾಯಮುರಾರಿ ಭುಜಬಳವಲ್ಲ (ಕಾಶ. ೭೯-೦೩-೦೪ ; ೧೨೨೦). ರಿಪುರಾಯಕಟಕಸೂಚೀಕಾರ = ಶತ್ರುಸೈನ್ಯವನ್ನು ನಾಶಮಾಡುವವನು ; ಒಂದು ಬಿರುದು : ಸಹಜ ಮನೋಜರಿಪುರಾಯಕಟಕಸೂಚೀಕಾರ (ಪಾಚಾ. XX. ೩೩-೦೩ ; ೧೦೩೭). ರಿಪುಸಂವರ್ತ = ಶತ್ರುಗಳನ್ನು ಪ್ರಳಯಕಾಲದಂತೆ ನಾಶಪಡಿಸುವವನು ; ಒಂದು ಬಿರುದು : ಎರೆಲೆ ರಿಪುಸಂವರ್ತನೊಳು ಕೊಳುಗುಳಕೆ ವರ್ತಿಸಲುರಿದೆಮತ ತಲ್ಲಳಿಸಿ ತೆತ್ತುದು ಮನವನಮನೋಪಾಲಸಂದೋಹ (ಶಾಬ್ಯಾಕ್ರೀ. ೦೨-೦೦). ರಿಪುಸರ್ಪಗರುಡ = ಶತ್ರುವೆಂಬ ಹಾವಿಗೆ ಗರುಡನಂತಿರುವವನು ; ಒಂದು ಬಿರುದು : ಮಹಾಪ್ರಚಂಡದಂಡನಾಯಕವಿಭೂತಿಯನಪ್ಪಿಕೆಯ್ದು ರಿಪುಸರ್ಪಗರುಡನೆನಿಸಿ ನೆಗಟ್ಟಿ ಗೋವಿಂದನ ಮಗನಬಳ ಕಳಾವಿದಂ (ಕಾಶಾ. ೩-೦೬ ; ೧೦೭೬). ರಿಪುಹೃದಯಶಲ್ಯ = ಶತ್ರುಗಳ ಹೃದಯಕ್ಕೆ ಈಟಿಯಂತಿರುವವನು ; ಒಂದು ಬಿರುದು : ನಿರ್ಮಲ ಕೀರ್ತಿ ದೋಷಾನನದಾವ ಸಮಿತದೇವಾ ಮೋಗಲ್ಯ ರಿಪುಹೃದಯಶಲ್ಯ ಲೋಕಖ್ಯಾತ . . . ಕಾಂತನಭೀಶ್ವರಾ (ಪಚ್ಚೆ. ೩-೦೪-೨). [ಸಂ.]

ರಿಪುಕುಲ, ರಿಪುಕುಳ (ನಾ). ಹಗೆಗಳ ಸಮೂಹ : 'ರಿಪುಕುಲಾಂತಕ' ಪರಾ. **ರಿಪುಕುಳ** : ಉಭಯದೇಸೀಮನೋರಂಜನಂ ರಿಪುಕುಳಜಳಧರ ಪ್ರಭಂಜನ ನಾಮಾದಿ ಸಮಸ್ತಪ್ರಶಸ್ತಿಸುತಂ (ಕಾಪ್ರ. ೦೭೨-೫-೦೪ ; ೧೦೭೬).

ರಿಪುಕುಲಮೃತ್ಯು = ಶತ್ರುಸಮೂಹಕ್ಕೆ ಯಮನಂತೆ ಇರುವವನು ; ಒಂದು ಬಿರುದು: ಸಿಂಧದ ಸತ್ರಿಗೆಯ ಸಾಲಿನಲಿ ರಿಪುಕುಲಮೃತ್ಯುವಾತನು ವೀರಗಂಗಾಸುತನು ನೋಡು (ಕಾಬ್ಯಾಪ. ೬-೩೬). [ಸಂ.]

ರಿಪುಕುಲಾಂತಕ (ನಾ). ಶತ್ರುವಂಶಕ್ಕೆ ಯಮಸದೃಶನಾದವನು : ಕಂದ ಬಾರೋ . . . ರಿಪುಕುಲಾಂತಕನಿವುಣ ದುಃಖದೋಱೊ (ಶಾಬ್ಯಾಕ್ರೀ. ೬-೨೦). [ಸಂ.]

ರಿಪುಕುಳ ' ರಿಪುಕುಲ ' ನೋ.

ರಿಪುಬಲ, ರಿಪುಬಳ (ನಾ). ಹಗೆಗಳ ಪಡೆ ; ಶತ್ರುಸೈನ್ಯ : ರಿಪುಬಲದುರ್ಭೇದನಪತಿವಿಪುಲಂ ಕ್ರೀಡೋಪಯೋಗ್ಯಮೆಂಬೆಯುವಾಸೀಕ್ಷಿಪುದೊಂದು ಪೊಲಲುಮಂ ನಮಿಯಿಪುದೀಗಳೆ ಸಮ್ಮ ಭಟಕಮಂ (ಜಗ. ೯-೨೬) : ವಿನಿವದ್ಭುತವೀರವಿಹಾಪವಾಸಿಕೆಯ ರಿಪುಬಲದ ಸಂಭ್ರಮ (ಕಾಪ್ರ. ೬-೨೦-೨೬). ರಿಪುಬಳ : ರಿಪುಬಳಕೆಮಗ್ಗಾರದಂ ನೃಪದ್ವಿಪಂ ವಿಳಕ್ಕ ಪೊಕ್ಕು ಕೀಳ್ಪೆತ್ತಿತ್ತು (ಚಾಪ್ರ. ೩-೬). [ಸಂ.]

ರಿಪುಬಳ ' ರಿಪುಬಲ ' ನೋ.

ರಿಪುಬ್ರಜೆ (ನಾ). ಶತ್ರುಗಳ ಸಮೂಹ : ರಿಪುಬ್ರಜೆ ಮಂದಳಮೆಯ್ದೆ ಸಾಕ್ಷಿ ಸಾಹಸಕೆ (ಪಾಚಾ. XX. ೪೬-೨೦ : ೧೦೭೨). [< ರಿಪುವ್ರಜ]

ರಿಪುಭಟ (ನಾ). ಶತ್ರುಪಕ್ಷದ ವೀರ ; ಅರಿಭಟ : ವಿಂಗಿಪಿತನೋದಂಚನಲಿ ರಿಪುಭಟನ ಸಾರಥಿಯ ಪೊಯಿಸಿದನು (ಕಾಪ್ರಾ. ೬-೪೦-೩೦). [ಸಂ.]

ರಿಪುಮಥನ (ನಾ). ಹಗೆಯ ನಾಶ ; ಶತ್ರುಸಂಹಾರ : ಕಥೆಯಿನಿದನಾ ಕೇಳಿದೆನು ಕದುಶಿಖಿಬಲವಾವು ಹಿಂದಕವು ರಿಪುಮಥನವೆಂಟೀ ಹೇಳು (ಕಾಪ್ರಾ. ೬-೩೯-೨೬). [ಸಂ.]

ರಿಪುರಾಮಗಾಮುಂಡ (ನಾ). ಒಬ್ಬಾತನ ಹೆಸರು : ಸಂಗಮದ ಪೃಥುವೀಗಾಮುಂಡರುಂ ರಿಪುರಾಮಗಾಮುಂಡನುಂ ಎನೆಬ್ಬರುಂ ಸರಸಾಕ್ಷಿಯಾಗೆ

ಪಡದಾವ್ (ಎಳ. VI (E)· ಕ್ರೀಡಂಗ· ೬೬–೨೬; ಸಂ. ೦೦೦).

[ರಿಪು + ರಾಮ + ಗಾಮುಂಡ]

ರಿಪುರಾಯ (ನಾ)· ಶತ್ರುರಾಜ : ಯಾದವಕುಳಕಮಳಕಳಕಾವಿಕಾಸ ರಿಪುರಾಯ ಗಳಗಾಳವಾಸ ಮಾಳವಮದಮಲ್ಲಂ (ಕರ್ಣಾ. ೦೯–೦; 1235); ಮುಱಿದುದ್ದೆ ರಿಪುರಾಯದಳ ಹಗೆ ಪಱಿದುದ್ದೆ ಕುರುಪತಿಗೆ (ಭಾರ್ಗ. ೧೦–೬)· [ರಿಪು + ರಾಯ]

ರಿಪುವಂಗಡಿಗ (ನಾ)· ಶತ್ರುವಂಗಡಕ್ಕೆ ಸೇರಿದವನು : ಹಗೆಯ ಪಕ್ಷದವನು : ಹೋಗದಿರು ತಲೆಗೊಡುವೊಡಿದಿರಾಗೆನುತ ರಿಪುವಂಗಡಿಗರನು ಮೂದಲಿಸಿ (ಭಾರ್ಗ. ೬೦ಷ. ೩–೫೪). [ರಿಪು + ವಂಗಡ + – ಇಗ]

ರಿಪುವ್ರಜ (ನಾ)· ಶತ್ರುಗಳ ಸಮೂಹ : ಅನ್ನೋದಕಂ ಕಿಱಿದಾದಲ್ಲಿ ರಿಪುವ್ರಜಂಗಳೆಡೆಯೊಳ್ . . . ಇರ್ದೊಡೆ ಹಾನಿಯೈ (ಕೀರ್ತನ. ೩೫).

[ಸಂ.]

ರಿಪೇರಿ (ನಾ)· ಶಿಥಿಲವಾದ ಕಟ್ಟಡ, ಕೆಟ್ಟುಹೋದ ಯಂತ್ರ ಮೊದಲಾದುವನ್ನು ಸರಿಪಡಿಸುವಿಕೆ ; ದುರಸ್ತು : ಕೆರೆ ತೂಬು ವಗ್ಗೆರೆ ರಿಪೇರಿ ಮಾಡತಕ್ಕದ್ದು (ಗ್ರಾಚಾಶ. ೦); ಆ ಕಟ್ಟಡಕ್ಕೆ ರಿಪೇರಿ ಆಗಿ ಎಷ್ಟೋ ವರ್ಷಗಳಾಗಿವೆ (ಕಂಗಿಳ. ೦೦೦). [←ಇಂ. Repair]

ರಿಪೋರ್ಟು (ನಾ)· ಯಾವುದಾದರೊಂದು ಸಂಗತಿಯ ಬಗ್ಗೆ ಮಾಡಿದ ವರದಿ.–ವಿವರ : ಪ್ರತಿದಿನವೂ ನಡೆದ ವಿದ್ಯಮಾನಗಳನ್ನು ರಿಪೋರ್ಟು ಮಾಡುವುದು (ಕ್ಯಾಚಾಸಂ. II. ೫೯); ಲಿಖಿತಮೂಲಕವಾದ ರಿಪೋರ್ಟುಗಳನ್ನು . . . ತಯಾರ್ಮಾಡಲು ಬದ್ಧರಾಗಿರಬೇಕು (ಗ್ರಾಚಾಶ. ೬).

[←ಇಂ. Report]

ರಿಬು, ರಿಭು (ನಾ)· ದೇವತೆ ; ಅಮರ್ಕ; ಆ ರಿಬುಗಳ ಮೊತ್ತದಿಂದ್ರಂ . . . ಸೊಗಯಿಸೆ (ಜಾಂಕೃ· ೦–೨–೪೦ ಪದ್ಯ). ರಿಭು : ' ರಿಭುವಿಮಾನ' ಪರಾ. [<ಸಂ. ಋಭು]

ರಿಬ್ಬನ್‌ಹುಲ್ಲು (ನಾ)· ಒಂದು ಬಗೆಯ ಹುಲ್ಲು : (ಕ್ಯಾಔಗ. ೬೦–೦೫೦).

[ರಿಬ್ಬನ್ + ಹುಲ್ಲು (<ಪುಲ್)]

ರಿಭು ' ರಿಬು ' ನೋ.

ರಿಭುವಿಮಾನ (ನಾ)· ದೇವವಿಮಾನ : ನೆಲ್ಲವತ್ತಿಯ ಜನಭವನಂ ರಿಭು ವಿಮಾನಮಂ ಪೋಲ್ಕುಂ (ಎಳ· VII. ೬೬೦. ೦೦–೧೮; 1085 ?)·

[ರಿಭು (<ರಿಬು) + ವಿಮಾನ]

ರಿಯಾಯತಿ, ರಿಯಾಯಿತಿ, ರಿಯಾಯ್ತಿ (ನಾ)· ೧. ತೆರಿಗೆ, ವ್ಯಾಪಾರದ ವಸ್ತು ಮೊದಲಾದುವುಗಳ ಮೇಲೆ ನೀಡುವ ಸೋಡಿ.–ವಟ್ಟೆ : ಸರಕಾರವು ಅಷ್ಟೂಂದು ರಿಯಾಯತಿಯನ್ನೂ ತೋರಿಸುವುದಿಲ್ಲ. ತೆರಿಗೆಯ ಚರವೂ ಕಡಿಮೆಯಾಗಿರುವುದಿಲ್ಲ (ಬಿಚಿಂ. ೩೬). ೨. ದಯೆ ; ಕರುಣೆ : ಶರಣಾಗತನಾದ ಅಪರಾಧಿಗೆ ವಿಶೇಷವಾಗಿ ರಿಯಾಯತಿಯೂ ದೊರೆಯುತ್ತಿತ್ತು (ಜಾಚಿ. ೦೪). ರಿಯಾಯಿತಿ: ೧. ಇಂದಿಯಾದಿಂದ ತಂದ ಅಥವಾ ಮುಂದೆ ತರುವ ಸಾಮಾನುಗಳ ಮೇಲೆ ಕೇವಲ ಐದರಷ್ಟು ಮಾತ್ರ ಸುಂಕ ಕೊಡಬಹುದೆಂಬ ರಿಯಾಯಿತಿಯೂ ದೊರೆಯಿತು(ಕ್ರಾಚಾ.II, ೩೨೮); ಅನುಭವಶಾಲೆಯ ಶುಲ್ಕ ದುದಾರಿಯದಲ್ಲಿ ರಿಯಾಯಿತಿಯಿಲ್ಲ (ಆಂಪ್ರಸ. ೦೦೯–೨೯). ೨. ನಾನು ಬಹಳ ರಿಯಾಯಿತಿ ತೋರಿಸಿದ್ದೇನೆ (ಗಾಪಾಗಾಂ. ೦೪೪). ರಿಯಾಯ್ತಿ : ೨. ಯಾರಿಗೂ ಯಾವ ರಿಯಾಯ್ತಿಯೂ ಇರುವುದಿಲ್ಲ (ಕುಗಾಕ. ೦೬೬); ಅದೇನೋ ರಿಯಾಯ್ತಿಯಿಂದ ಮೂಳು ವರ್ಷಗಳ ಶಿಕ್ಷೆ ಅರೆ ತಿಂಗಳಲ್ಲಿ ನಿವೃತ್ತಿಯಾಗಿದೆ (ಕಸಭು. ೨೮).

[←ಆರ· ರಿಆಯತ್ ; ಹಿಂ. ರಿಆಯತ್, ರಿಯಾಯತ್]

ರಿಯಾಯಿತಿ ' ರಿಯಾಯತಿ ' ನೋ.

ರಿಯಾಯ್ತಿ ' ರಿಯಾಯತಿ ' ನೋ.

ರಿಯಾಸತ ' ರಿಯಾಸತ್ತು ' ನೋ.

ರಿಯಾಸತ್ತು· ರಿಯಾಸತ (ನಾ)· ಸಂಸ್ಥಾನ : ರಾಜ್ಯ : ರಿಯಾಸತ್ತು ಗಳಲ್ಲಿಯೂ ಈ ವಿಧಾನವನ್ನು ಜಾರಿಗೆ ತರಲಾಗುವುದೆ ? (ಕುಚಾಶ· ೬೩). ರಿಯಾಸತ : ದಾಖಲು ರಿಯಾಸತ ಮೈಸೂರ (ಕ್ಯಾಔಗ. ೦೯೨೪. ೯೪–೬; 1813). [← ಆರ, ಹಿಂ. ರಿಯಾಸತ್ ; ಮರಾ. ರಿಯಾಸತ್, ರಿಯಾಸತ್]

ರಿರಂಸೆ (ನಾ)· ರಮಿಸುವ ಆಸೆ ; ಕಾಮತೃಷ್ಣೆ : ರಾಜಸುತೆಯೆನ್ನುತ ರಿರಂಸೆಯಿಂ ಭುವೆಗೊಂಡು ಕೈವಿಡಿದು ಕಡೆಯೊಳತಿಹಿಂಸೆಗೊಳಗಾದ (ಸಂಗಾರಾ. ೨–೬–೨೬). [ಸಂ. ರಿರಂಸಾ]

ರಿವಾಜು (ನಾ)· ಪದ್ಧತಿ ; ರೂಢಿ ; ರೀತಿ : ಮನೆಯ ರಿವಾಜನಂತೆ ಅವಳು ಫೋಷಾ ವಾಲಿಸಬೇಕಾಗಿತ್ತು (ಶ್ರಾಚಾಶು. ೬೯); ಯುಗಾದಿಯ ಸಮಯ ಮಳೆ ಬರುವ ರಿವಾಜೇ ಇದೆ (ಪಾಚಿ· ೫೩).

[← ಆರ· ಹಿಂ. ಮರಾ. ರಿವಾಜ್]

ರಿಷಭ, ರಿಸಬ (ನಾ)· ಬಸವ ; ವೃಷಭ : ಖ್ಯಾತರಾ ದ್ವಾದಶಾದಿತ್ಯರವ ರೊಳಗೆ ಪುರುಹೂತಶಚಿಯುರ್ಗೆ ಮಿಷದು ಜಯಂತಂ ರಿ[ಷಭಂ· ಪೆ.ವೃ] ಷಭರೋತು ಸಂಭವಿಸಿದರ್ (ಕರ್ಣ. ೦೯–೯). ರಿಸಬ : ಋಷಭ _ ರಿಸಬ (ಕರ್ಣಾಪು· ೦೪೯ ಕ್ರಿಯೋ). [< ಸಂ. ಋಷಭ]

ರಿಷಿ ' ರುಷಿ ' ನೋ.

ರಿಷಿಗ (ನಾ)· ಒಬ್ಬಾತನ ಹೆಸರು (?) : ಕುಂದಿಗನ್ಯಪಂ ಚಾವುಣ್ಡರಾಯ ಮುನ್ನತಶೌರ್ಯ್ಯಂ ವಿಭು ಮಾದಿಗಂ ರಿಷಿಗನನ್ಯಾ ನ್ಸ್ಯಮರ್ಮ್ಮಂ ಗುಣ ಸ್ತುತಿಗೆಯ್ದು (ಶಾಔ· XX· ೩೦–೦೫; 1044). [?]

ರಿಷಿಪಳ್ಳಿ ' ರುಷಿವಳ್ಳಿ ' ನೋ.

ರಿಷ್ಟ (ನಾ)· ೧. ಅಪಾಯ ; ಕೇಡು. ೨. ಅಶುಭ ; ಅಮಂಗಳ ; ಶಕಿ ರಿಷ್ಟಹರಂ (ಶಾಕ್ತ. ೭–೨). ೩. ಪಾಪ; ಕಳಂಕ : "ಪಾಪದಲ್ಲಿಯುಂ ರಿಷ್ಟಮೆಂಬುದು" (ಪಣಾಚಾ. ೦೩೨–೦೬). ೪. ಅದೃಷ್ಟ; ಸುದೈವ : "ರಿಷ್ಟಂ–ಗಿ. ಕ್ಷೇಮ. ಅಶುಭ ಇಲ್ಲದೇ ಇರುವಿಕೆ" (ಕರ್ನಾಕ್ರಿ· ೩೮೨). [ಸಂ.]

ರಿಷ್ಟಿ (ನಾ)· ೧. ಕತ್ತಿ; ಖಡ್ಗ : "ಖಡ್ಗಃ. ನಿಸ್ತ್ರಿಂಶಃ, ಚುದ್ರಹಾಸಃ, ಅಸಿಃ, ರಿಷ್ಟಿಃ . . . ಕೃಪಾಣಿಕಾ – ೯ ಖಡ್ಗದ ಹೆಸರು" (ಕರ್ನಾಕ್ರಿ· ೨೬೮). ೨. ಕೇಡು ; ಹಾನಿ. ೩. ದುರದೃಷ್ಟ.೦ [ಸಂ.]

ರಿಸಬ 'ರಿಷಭ' ನೋ.

ರಿಸಾಲು, ರಿಸಾಲೆ (ನಾ)· ಸಾಮಾನ್ಯವಾಗಿ ನೂರು ಕುದುರೆಗಳ ಪಡೆ : ' ರಿಸಾಲುದಾರ ' ಪರಾ. **ರಿಸಾಲೆ** : ಒಟ್ಟು ೫೧,೦೦೦ ಕುದುರೆಗಳು ಸೇರಿ ಒಂದೊಂದು ಸಾವಿರಕ್ಕೊಂದೊಂದು ರಿಸಾಲೆಯಂತೆ ವಿಭಾಗವಾಗಿ (ಖುಚಾಸಂ. II, ೦೬); ಯಾವಾಗ ರಿಸಾಲೆಗಾಗಲಿ (ಅಶ್ವಸೇನೆ) ಅಥವಾ ಪದಾತಿಸೈನ್ಯಕ್ಕಾಗಲೀ ಆದೇಶ ದೊರಕಿವುದೋ ಆಗ ಅವು ಸೂಚಿಸಿದ ಕಡೆ ಯುದ್ಧ ಮಾಡಬೇಕೆಂದೂ ನಿರ್ದೇಶಿಸಿದಳು (ಖುಚಾಸಂ· ೪೫೬).

[← ಆರ· ರಿಸಾಲ್; ಪಾರ· ರಿಸಾಲಹ್; ಹಿಂ. ಮರಾ. ರಿಸಾಲಾ]

ರಿಸಾಲುದಾರ ' ರಿಸಾಲ್ದಾರ್ ' ನೋ.

ರಿಸಾಲೆ ' ರಿಸಾಲು ' ನೋ.

ರಿಸಾಲ್ದಾರ್, ರಿಸಾಲುದಾರ, ರಿಸಾಲ್ದಾರ (ನಾ)· ಅಶ್ವದಳದ ಅಧಿಪತಿ: (ಕ್ಯಾಗ. II. ೩೩೦)· **ರಿಸಾಲುದಾರ** : (ಕ). **ರಿಸಾಲ್ದಾರ** : ಈ ಸೇನೆಯ ಟೋಲೆಗಳು ರಿಸಾಲ್ದಾರರ ಕೈಕೆಳಗಿದ್ದವು (ಖುಚಾಸಂ. II. ೯೭).

[← ಆರ. ಪಾರ. ಹಿಂ. ರಿಸಾಲ್‌ದಾರ್, ರಿಸಾಲೇದಾರ್; ಮರಾ. ರಿಸಾಲ್ದಾರ್]

ರಿಸಾಲ್ದಾರ 'ರಿಸಾಲ್ದಾರ್' ನೋ.

ರಿಸಿ 'ರುಷಿ' ನೋ.

ರಿಸಿಕುವರಿ (ನಾ)· ಋಷಿಯ ಮಗಳು : ಚಟುಲಕಾಮೋದ್ದೀಪನದಿಂದ ಕಡುಧೂರ್ತವಟುಗಳು ರಿಸಿಕುವರಿಯರ ಬಟುಮೊಲೆಗಳ ಕೈದುಡುಕಿದುದು ಕೇಳೆಲೆ ನಟಲಾಕ್ಷ ತವಮರ್ಮ ಬನದಿ (ಸೂಚಿ. ೭-೦೩)·

[ರಿಸಿ (< ರುಷಿ) + ಕುವರಿ]

ರಿಸಿಪೆಣ್ (ನಾ)· ಋಷಿಯ ಹೆಂಡತಿ; ಮುನಿಪತ್ನಿ : ತಾನೆ ಸೀತೆ ದೋಹದದಿನಡವಿಯ ರಿಸಿಪೆಣ್ಗಳಂ ಕಾಣಲ್ಕೆಂದು ಬಯಸಿದಳ್ (ಜಾಪುಕೃ. ೫೩-೨೨)·

[ರಿಸಿ (< ರುಷಿ) + ಪೆಣ್]

ರೀಷಾ (ನಾ)· ಕರಂಜಮರದ ಒಂದು ಪ್ರಕಾರ : "ಮಂಗಲಃ – ರೀಷಾ. ಕರೆಂಜ, ಅರಳಿ, ಇಪ್ಪೆ" (ಓ೩೦· ೦೦೩)· [ಸಂ.]

ರೀಡರ್ (ನಾ)· ೧. ಉಪಪ್ರಾಧ್ಯಾಪಕ ; ಪ್ರವಾಚಕ : ಅವರು ಕನ್ನಡ ರೀಡರ್ ಆಗಿದ್ದಾರೆ (೧೮೩)· ೨· ಪಾಠದ ಪುಸ್ತಕ; ಪಠ್ಯಪುಸ್ತಕ : ಕನ್ನಡ ಐದನೆಯ ರೀಡರ್‌ನಲ್ಲಿ ನಳನ ಕಥೆಯಿದೆ (೧೮೩)· [← ಇಂ. Reader]

ರೀಢೆ (ನಾ)· ಅವಮಾನ; ಅವಜ್ಞೆ ; ತಿರಸ್ಕಾರ : "ಆವಗಣ್ಣಮವಜ್ಞಾನ ಮವದಹೇಳಂ ರೀಢೆ" (ಕಸ್ತು. ೨೫೯. ೦೮೨-೬)· [ಸಂ. ರೀಢಾ]

ರೀಣ (ಗ)· ಸ್ರವಿಸುವ ; ಸೋರುವ· [ಸಂ.]

ರೀತಿ (ನಾ)· ೧. ಗಮನ; ಗತಿ· ೨. ನದಿಯ ಹರಿವು· — ಪ್ರವಾಹ· ೩. ಮಾರ್ಗ; ಪದ್ಧತಿ : ನಾನಾಜಾತಿನೀತಿಯ ರೀತಿಗಳ ವಿಸ್ತರಿಸಿ (ಗಚಿಪಾ· ೦೯೮-೦)· ೪. ಬಗೆ; ವಿಧ; ಕ್ರಮ : ಹೊಳಲು ಹೊಸನೀತಿಯಲಿ ಮಿಗೆ ಕಂಗೊಳಿಸುತಿರ್ದುದು (ಕೂಚಂ· ೦-೬೦೦) ; ರೀತಿ ತಿಳಿಯದಿನ್ದಿರೂ ಮಾತು ಬಲ್ಲ (ಗಾಪ)· ೫. ಆಚಾರ; ರೂಢಿ; ಸಂಪ್ರದಾಯ: "ಚರಿತಂ ರೀ[ತಿಯಾ·ನೀ]ತಿ ಚಾರಿತ್ರಂ . . . ಆಚಾರಕಕ್ಕು ನಾಮಂ" (ಶಬ್ದಾಂ· ೩೯-೬)· ಪರಕೀಯರ ರೀತಿ ಅನುಕರಣೀಯವಲ್ಲ (ಕೂಚಂ)· ೬. ಒಂದು ಬಗೆಯ ಲೋಹ ; ಹಿತ್ತಾಳೆ : "ಆರಕೂಟಃ· ರೀತಿಃ – ಈ ೨ ಪಿತ್ತಳೆ" (ಕಡಾಮು· ೨೬-೦೩)· ೭. ಮೇರೆ ; ಗಡಿ ; ಎಲ್ಲೆ· ೮. ಕಬ್ಬಿಣ ಮುಂತಾದ ಲೋಹಗಳ ಜಂಗು· –ಕಟ್ಟು· ೯. ಸ್ವಭಾವ; ಗುಣ : ಅವನ ರೀತಿಯೇ ವಿಚಿತ್ರವಾಗಿದೆ (ಕೂಚಂ)· ೧೦. [ಕಾವ್ಯಮೀ] ಮಾಧುರ್ಯಾದಿ ಕಾವ್ಯಗುಣಗಳಿಂದ ಕೂಡಿದ ಪದಗಳ ಜೋಡಣೆ : ರೀತಿವಿನೂತಮನ್ತು ಕೃತಿಗೊಪ್ಪುವ ಪೆಮ್ಪೆ . . . ರೀತಿಯೊಳೊಂದೆ ಪೇಟ್ಪುದು ರಸಂ ಬಿಡೆ ಬಂಧುರಕಾವ್ಯಬಂಧಮುಂ (ಗಾಶಾ· ೬೮೦); ಪೊಸ ರೀತಿ ನೋಡಿದು (ಸಾಂ· ೦-೨೬); ರೀತಿ ಅಥವಾ ಮಾರ್ಗವೆಂದರೆ 'ಪದಸಮೂಹಸಮವಾಯ' (ಕೃಬಿ· ೩೨೦)· [ಸಂ.]

ರೀತಿಕೆ (ನಾ)· ಹಿತ್ತಾಳೆ : "ರೀತಿಕ[ಮಾಣಿ·ರೀತಿ]ಮೆಸಲುಂ ಹಿತ್ತಾಳೆ" (ಶಬ್ದಾಂ· ೩೦-೬) ; ಅಯ್ಯ ರೀತಿಕೆಯಲ್ಲಿ ಅವರಜಿಮಾಪಿಜುವರೆ (ಅಪಪ· ೦೬-೨೯)· [ಸಂ. ರೀತಿಕಾ]

ರೀತಿಕೆದು " ರೀತಿಗೆದು " ನೋ·

ರೀತಿಗೆಡಿಸು (ಕ್ರಿ)· ಹಾಳುಮಾಡು ; ದಾರಿತಪ್ಪಿಸು : ನೆಬಸೆಂದಿ ... ಪ್ರೀತಿಪಡಿಸಿ ಹಣವ ಸೆಳೆದು ರೀತಿಗೆಡಿಸಿ ಕಡೆಯಲಪನ ಕೋತಿಯಂತೆ ಮಾಡಿಬಿಡುವ ಜಾತಿಕಾಜಿ ಹೆಂಗಳ (ಕ್ಷಯಂ· ೩-೦೬-೨) ; ಬೆಳೆಯುವ ಮಕ್ಕಳನ್ನು ಅತಿಯಾಗಿ ಮುದ್ದಿಸಿ ರೀತಿಗೆಡಿಸದೆ ಅವುಗಳನ್ನು ಶಿಸ್ತಿನಿಂದ ಬೆಳೆಸುವುದು ತಾಯಿ ತಂದೆಗಳ ಮಹಾಕರ್ತವ್ಯವಾಗಿದೆ(ಗಕಪ· ೦೬೨)·

[ರೀತಿಗೆಡು + — ಇಸು$_3$]

ರೀತಿಗೆಡು· ರೀತಿಕೆಡು (ಕ್ರಿ)· ಹಾಳಾಗು : ದಾರಿತಪ್ಪು: ರೀತಿಗೆಡಿಸು ' ಪರಾ· ರೀತಿಕೆಡು : ನೀತಿಕೆಟ್ಟ ರೀತಿಕೆಟ್ಟ ನಾಯೆ (ಪಾಕೃ· ೦೦)·

[ರೀತಿ + ಕೆಡು$_1$]

ರೀತಿಗೌಳ (ನಾ)· [ಸಂಗೀತ] ಒಂದು ರಾಗದ ಹೆಸರು : ರೀತಿಗೌಳ :– ೨೨ನೇ ಮೇಳಕರ್ತ ಪರಹರಪ್ರಿಯದಲ್ಲಿ ಜನ್ಯ· ಆರೋಹಣಾವರೋಹಣ ಘನರಾಗ ಗಳಲ್ಲೊಂದು(ಹಂಗೀಪ್ರ· ೦೬೨)· [ಸಂ. ರೀತಿಗೌಲ]

ರೀತಿತಪ್ಪು (ಕ್ರಿ)· = ರೀತಿಗೆದು : ಇವು ರೀತಿತಪ್ಪದಾಗಲೆಲ್ಲಾ ಕಾಣದಂತೆ ಅಸಡ್ಡೆ ಆಲಕ್ಷದಿಂದ ಇರಬಾರದು (ಗ್ರಹಾ· ೦೪೭)· [ರೀತಿ + ತಪ್ಪು$_{12}$]

ರೀತಿಪುಷ್ಪ (ನಾ)· ಹಿತ್ತಾಳೆಭಸ್ಮದಿಂದ ತಯಾರಿಸಿದ ಕಣ್ಣಿನ ಅಂಜನ; ಕುಸುಮಾಂಜನ : "ರೀತಿಪುಷ್ಪಂ, ಪುಷ್ಪಕೇತುಃ· ಕುಸುಮಾಂಜನಂ – ೩ ಕುಸುಮಾಂಜನದ ಹೆಸರು" (ಶಬ್ದಾಂ· ೩೦೬)· [ಸಂ.]

ರೀತಿವಿಫಲ (ನಾ)· [ಕಾವ್ಯಮೀ] ಹದಿನೆಂಟು ಬಗೆಯ ಪದದೋಷಗಳಲ್ಲಿ ಒಂದು : ಅಪದರ್ಥಂ . . . ವಿಶ್ಲೇಷನಷ್ಟಸಮಾಸಂ ಪುನರುಕ್ತಾದಿ ವಿಫಲಂ ದುರ್ಲಕ್ಷಣಂ . . . ಇವಿನಿಶ್ಚಂ ದೋಷಂಗಳಿಪ್ಪುದಿಂ (ಕಾದಿ೨೦೩· ೦-೮೬ ಶತಪ)· [ಸಂ.]

ರೀಪು (ನಾ)· = ರಿಬೀಸು : . ಸಮ್ಮದು ಚಿಕ್ಕಮನೆ : ಬಿದಿರಿನ ರೀಪು ಹೊಡೆದರೆ ಸಾಕು (ಮುಂಗಾಮು· ೬೦) ; ಚಿಕ್ಕಪ್ಪನು ಹನ್ನೆರಡು ಕೋಲು ಹಲಗೆ· ಇಪ್ಪತ್ತು ಕೋಲು ರೀಪು· ಎರಡು ಸೇರು ಆಣಿ . . . ತರಿಸಿದ (ಜಲಪ· ೬)· [← ಮರಾ· ರೀಪ]

ರೀಮು (ನಾ)· ಏನೂರು ಹಾಳೆಗಳಿರುವ ಕಾಗದದ ಕಟ್ಟು ; ಇಪ್ಪತ್ತು ದಸ್ತು : ಬರೆಯುವ ಕಾಗದಗಳಾದರೆ . . . ೨೦ ಕೈಯರುಗಳಿಗೆ ಒಂದು ರೀಮನ್ನಾಗಿ ಕಟ್ಟುವರು (ಜಾಪ್ರ· ೫೯· ೩೨೬)· [← ಇಂ. Ream]

ರೀಲ್ ' ರೀಲು ' ನೋ·

ರೀಲು, ರೀಲ್ (ನಾ)· ದಾರ; ತಂತಿ, ಚಲನಚಿತ್ರಪಟಲ ಮೊದಲಾದುವುಗಳನ್ನು ಸುತ್ತುವ ಸಲಕರಣೆ ; ಕಂಡಿಕೆ ; ಇಲ್ಲಿದೋ ಬೆಳ್ಳಕ್ಕಿಯ ಸಾಲು; ಹೊಸಯುಗದ ರೀಲು ! (ಅಂಚೆ· ೩೦-೪)· **ರೀಲ್** : ಇದು ಮುಗಿಯುವ ಹೊತ್ತಿಗೆ ಎರಡು ರೀಲ್‌ಗಳು. ಮುಗಿದಿರಬಹುದು (ಪಾಡಿಗ· ೦೩೦)·

ರೀಲ್‌ಪಡು = (ಅಲಂ) ಸುಳ್ಳು ಹೇಳು; ಬುರುಡೆ ಹೊಡೆ : ನನ್ನ ಮುಂದೇನೇ ಇಷ್ಟು ರೀಲ್ ಬಿಡ್ತಾ ಇದ್ದೀಯಲ್ಲಾ (ಕ೦೫)·

[← ಇಂ. Reel]

ರುಂಡ (ನಾ)· ೧. ತಲೆಯಿಲ್ಲದ ದೇಹ : ಮುಂಡ· ೨. ತಲೆಬುರುಡೆ ; ಶಿರಸ್ಸು : " ರುಂಡಮೆಂದು ಶಿರಂ " (ಶಾಪ· ೫೮-೨೬೨) ; ಧರಣಿ ಕಂಪಿಸೆ ಖಳನ ರುಂಡವು ಹೊರಳಿ ಬಂದುರು ಹರಿಯ ಚರಣಕೆ (ಕೌಶಾ· ೩೭-೫೮) ; ಕಡಿಮೆದ ರುಂಡಗಳ ಘೊನೆಗಟ್ಟಿಯಿಡಿದಿರುವ ಮುಂಡಗಳ . . . ಕೆಡು (ಕಷ್ಕಿ೨· ೩-೦೩)· ರಣಕಾಳಿ ರುಂಡ ಮುಂಡಗಳ ಚೆಂಡಾಟವಾಡಿದಳಲ್ಲಿ (ಜಪ್ರ೦ಗ· ೮೨-೨೨೪೪)· ೩. ಹೇಸರಗತ್ತೆ· [ಸಂ.]

ರುಂಡಮಾಲೆ, ರುಂಡಮಾಳೆ (ನಾ)· ತಲೆಬುರುಡೆಗಳ ಹಾರ : ಕರೋಟಿ ಮಾಲೆ : ದೇಹ ರುಂಡಮಾಲೆಯ ಸ್ಥಾವ ಕಣ್ ನಾಗೇಂದ್ರನ ಸ್ಥಾನ (ಪ್ರಹ· ೪೧೮); ಕರುಳುದುಡಿಯ ರುಂಡಮಾಲೆಯು ಮಾರುಳುಗಳು ಕುಣಿದುವಡೆ (ಕೌಶಾ· ೧೧-೦೩) ; ಚಂಡಸುರಥನ ಶಿರವನು . . . ತರಿಸಿದನದಂ ರುಂಡಮಾಲೆಯ ತೊಡವೆಗೆ (ಕೃಂಶಾ· ೦೪ ೩೩೭೫)· **ರುಂಡಮಾಳೆ** : ಅಂಧಾಸುರುಣ್ಮಮಾಳೆ ಪಳನಿಕ್ಕೆ ತದೀಯಕಪೋಳದೊಳ್ಕಿದುಳ್ದೆರಸಿದ ನೆತ್ತರಂ ಸುಜಿದುಂ ಕತ್ತಿಗೆಯುಂ ಜಡಿಯುತ್ತೆ . . . ನರ್ತಿಸುವ ಭೈರವನೀ ರಣರಂಗಭೈರವ (ಜಾಶಾ· ೩೩, ೩೬-೩೯ ; ?)· [ಸಂ. ರುಂಡಮಾಲಾ]

ರುಂಡಮಾಳೆ ' ರುಂಡಮಾಲೆ ' ನೋ·

ರುಂಡಾಭರಣ (ನಾ)· ತಲೆಬುರುಡೆಯ ಮಾಲೆಯನ್ನು ಆಭರಣವಾಗಿ ಧರಿಸಿದವನು : ರುಂಡಾಭರಣರು ಘನವೆಂಬೆನೆ ರುಂಡಾಭರಣರು ಘನವಲ್ಲ (ಅಂಚೆ· ೩೩೬-೩೦)· [ಸಂ.]

ರುಂಡಿಕೆ (ನಾ)· ೧. ಯುದ್ಧರಂಗ· ೨. ದೂತಿ ಅಥವಾ ಕುಂಟಣಗಿತ್ತಿ· ೩. ಹೊಸ್ಕಲು· ೪. ಅತಿಮಾನುಷ ಶಕ್ತಿ· [ಸಂ. ರುಂಡಿಕಾ]

ರುಂಡಿಮಾರಮ್ಮ (ನಾ). ಒಬ್ಬಾತನ ಹೆಸರು : ವಲ್ಲಭಗಾವುಂಡ್ಡನುಂ ರುನ್ದಿವಚ್ಚರು ರುಣ್ದೆಮಾರಮ್ಮನುಂ ಕಾದಳೂರ ಶ್ರೀವಿಕ್ರಮಗಾವುಂಡ್ಡರುಂ (ಎಕ್ಷ. II, ೪೫-೬ ; ಸು. ೫೦೨). [ರುಂಡಿಮಾರ್ + ಅಮ್ಮ]

ರುಂದಿ (ನಾ). ಅಡ್ಡಳತೆ ; ಅಗಲ : ಲಾಂಬಿಯ ಪಕ್ಕದ ಮೂಲೆಗಳ ವಿಶಾಗಳನ್ನು ಹಿಡಿದು ತಂಕಾ ಹತ್ತಿಸಿ ಯಾವ ಅಳತೆ ಬರುತ್ತದೆಯೋ ಅದನ್ನು ರುಂದಿಯೆಂದು ಹೇಳುವುದು (ಕೃಷಿ. ೦೨).

[<ಪ್ರಾ. ರುಂದಿ./ಮರಾ. ರುಂದೀ]

ರುಂದಿವಚ್ಚ (ನಾ). ಒಬ್ಬಾತನ ಹೆಸರು : ವಲ್ಲಭಗಾವುಂಡ್ಡರುಂ ರುನ್ದಿವಚ್ಚರು ರುಣ್ದೆಮಾರಮ್ಮನುಂ (ಎಕ್ಷ. II, ೪೫-೬ ; ಸು. ೫೦೨). [?]

ರುಂದ್ರ (ಗು). ೧. ವಿಸ್ತಾರವಾದ : ವಿಶಾಲವಾದ : "ಬೃಹದುರು ರುಂದ್ರಂ ಪೃಥು ಗುರು ಪೃಹದ್ವಿಶಾಳಂ ವಿಶಂಕುಟಂ ವಿಸ್ತೀರ್ಣಂ" (ಪಜ್ಞ. ೫೭೯. ೦೦೬-೦೨) ; ವ್ಯಾಸಮುನೀಂದ್ರರುರುಂದ್ರವಚನಾವ್ಯತಭಾರ್ಥಿಯು ನೀಸುವೆಂ (ಶಂಕಣ. ೧-೦೬) ; ಇದು . . . ಶ್ರೀಪಾದನಖಿಚೆಂದ್ರಸಾಂದ್ರ ರುಚಿರುಂದ್ರಚೆಂದ್ರಿಕಾಚೆಂಚಚ್ಚಕೋರಾಯಮಾನೆ (ಜಾಕೇ. ೨-೦೧೭ ಪ) ; ಪುಲಕಿಸಿತು ನಿಶ್ಶಬ್ದರುಂದ್ರದಂಡಕವಂ ಕೂಡೆ ಪುಲಕಿಸುವಂತೆ (ಶ್ರೀಪಾಪು. ೦೬೯-೦೮). ೨. ವ್ಯಾಪಕವಾದ ; ನಿಬಿಡವಾದ ; ವಿಯಚ್ಚರದ್ಗರನೇಶರತ್ನ ಮಕುಟಪ್ರಭೆಯಿಂ ದಶದಿಙ್ಮುಖಂಗಳಂ ಭರಿತಮೆನಿಪ್ಪನಂ ನೆರೆದುದಾ ಧ್ವನಿಗಿಂಪ್ರನ ರುಂದ್ರಸೈನಿಕಂ (ಹಂಗಾಚಿ. ೦೦-೦೯೪). [ಸಂ.]

ರುಂಬಾಲ ' ರುಮಾಲು ' ನೋ.

ರುಂಹರಿ (ನಾ). ಭೂಮಿ ; ಇಳೆ : ಭೂವಲಯಂ ತ್ರಿಜಗದಳವಿಸ ಯಮನ ಸುಭೂವ್ಯಜವೊ ಜೊಗಳುವೆನೇನ ರುಂಹರಿ ರುಜೆಗೆ ಸಂದಳು ಧರಿಸರಾಜದೆ ವೈರಿವಾಹಿನಿಯ (ಕೃಷಿಂ. ೬-೦೩-೦೨) ; ಹರಿಯಕ್ಷವಾಹಿನಿ ಹಂಸ್ಯರೂಪೆ ರುಂಹರಿಯ ಭಾರವನು ಛೇದಿಸು (ರಾಜಕ್ಷ. ೪೪). [?]

ರುಕ್'ಸತು (ನಾ). ಪರಪಾನಿಗೆ ; ನಿರೂಪ : " ಮಾವಿನಿಸಾಹೇಬರು . . . ಕೂಡಗಿನ ಮಹಾರಾಜರವರ ಸಂಗಡ ರುಕ್'ಸತು ತೆಗೆದುಕೊಂಡು ತಲಚೇರಿಗೆ ಹೋದರು (ಬಾಚೇಂದ್ರ. ೦೦೦).

[←ಅರ. ರುಖ್ಸತ್ ; ಹಿಂ. ಮರಾ. ರುಖಸ್]

ರುಕುಮಿತೋರಣ (ನಾ). ಚಿನ್ನದ ತೋರಣ ; ಸುವರ್ಣತೋರಣ : ಆ ರುಕುಮಿತೋರಣದ ಕಾಂತಿಗಳಿಂದ ರಂಜಿಸುವ ದ್ವಾರಕಾಪುರವರವ ಪೊಕ್ಕನುದಾರವೇಂಕಟನಾಥ ಕೃಷ್ಣನು (ಕಿಷ್ಕಾ. ೩-೦೩೨).

[< ಸಂ. ರುಕ್ಮತೋರಣ]

ರುಕ್ಕು[1] ' ರುಚಿ ' ನೋ.

ರುಕ್ಕು[2] (ನಾ). ೧. ಕಾಂತಿ ; ಪ್ರಭೆ : ಆ ನತಭೂಮಿಪಾಳಸುಂದರ ಮಂಗಲಮೌಳಿರುಕ್ಕುಪ್ರಸರಪೂಜಿತಪಾದಪಯೋಜಯುಗ್ಮಂ (ಜಾನಿ. ೦೫: ಸು. ೧೨೧೦). ೨. ಕದಿರು ; ಕಿರಣ : " ರೋಚಿಃ . . . ರುಕ್ . . . ಗೌಃ — ಈ ೩೨ ರಶ್ಮಿಗಳ ಪೆಸರ್ " (ಪಜಾಯು. ೬-೪೮). [< ಸಂ. ರುಜ್]

ರುಕ್ಕು[3] (ನಾ). ರೋಗ ; ಜಡ್ಡು : " ರೋಗಃ, ರುಜ್ . . . ರುಜಾ — ಈ ೧೨ ವ್ಯಾಧಿ " (ಪಜಾಯು. ೫೮-೦೧೬). [< ಸಂ. ರುಜ್]

ರುಕ್ಕ್ರಕ್ರ (ನಾ). ಕಿರಣಗಳ ಸಮೂಹ : ಈತನೆ ಶಕ್ರನೆನಲ್ ಪಿಂಗದಂಗದುವಜ್ರದ ರುಕ್ಕ್ರಕ್ರಂ ದೆಸೆಯಂ ದಳ್ಪಿಸೆ ಚಕ್ರಮನಾಕ್ರಮಿಸಲೆಂದು ತಜಿಸಂದಿರ್ದಂ (ಹಂಗಾಚಿ. ೦೮-೦೯೦). [ಸಂ.]

ರುಕ್ಮ (ಗು). ೧. ಹೊಳೆಯುವ ; ಪ್ರಕಾಶಿಸುವ. (ನಾ). ೨. ಚಿನ್ನ ; ಬಂಗಾರ : " ರೈ ರುಕ್ಮಮಪ್ಪಾವದಂ . . . ಸ್ವರ್ಣಮೆನೆ ಹೆಸ್ರಿಂಗೆ ನಾಮವಕ್ಕುಂ " (ಪುಂಗಶಾ. ೩೦-೪) ; ರುಕ್ಮರಶ್ಮಿಸಿಯಂ ದೇಹದ ಕಾಂತಿ ರೂಪಾ ನಿಟ್ಟಿಸಿದರ್ (ಎಕ್ಷ. VIII. ಸೊರಬ. ೦೪೬-೦೪ ; ೧೨೮೦). ೩. ಕಬ್ಬಿಣ. ೪. ಒಂದು ಬಗೆಯ ಕಾಡಿಗೆ. [ಸಂ.]

ರುಕ್ಮಕ (ನಾ). ಒಂದು ಬಗೆಯ ಪಕ್ಷಿ : ಆ ವನಂಗಳೊಳು ಶುಕ . . . ರುಕ್ಮಕ . . . ವಾಸಕ ಮೊದಲಾದ ಚಿತ್ರರೂಪಪಕ್ಷಿಗಳುಳ್ಳ ಪಕ್ಷಿಕುಲಂಗಳಂ (ಜಪಚಿ. ೨೦೨). [ಸಂ.]

ರುಕ್ಮದಾನ (ನಾ). ಚಿನ್ನವನ್ನು ದಾನಮಾಡುವುದು ; ಸುವರ್ಣದಾನ : ರುಕ್ಮಭೂಷಿತಗಾತ್ರನಾಶ್ರಿತರುಕ್ಮದಾನವಿನೋದಿಯಿಂತಾ ರುಕ್ಮವರ್ಣಾಂಬರವ ವಂಶವದಾಮುನ್ನು ಮ್ಮಾತ (ಪಣಗ. ೦೦-೪೬-೪೬). [ಸಂ.]

ರುಕ್ಮಾಂಗದ (ನಾ). ೧. ಚಿನ್ನದ ತೋಳುಬಂದಿ : ಈತಂಗೆ . . . ಸೊಬಗುಸಿರಿಯ ನಳಿದೋಳ್ಗೆ ರುಕ್ಮಾಂಗದಮೆನೆ ಸಲ್ವ ರುಕ್ಮಾಂಗದನೆಂಬ ಸೀಮಂತಪುತ್ರನುಂಟು (ಜಪಚಿಕ್ಷ. ೦೨೨-೨೦). ೨. ಒಬ್ಬ ರಾಜನ ಹೆಸರು. ೧. ೨ ; ಈತಂಗೆ ರುಕ್ಮಾಂಗದನೆಂತಂತು ಹರಿಭಕ್ತಿಗಿಬಾಗಿ . . . ಸಲ್ವ ರುಕ್ಮಾಂಗದನೆಂಬ ಸೀಮಂತಪುತ್ರನುಂಟು (ಜಪಚಿಕ್ಷ. ೦೨೨-೨೦). [ಸಂ.]

ರುಕ್ಷ[1] (ನಾ). ೧. ಕರಡಿ : ರು[ಋಕ್ಷ]ಕ್ಷ ದಂತಿ ತರಕ್ಷು ಘನ ಹರಿಯಕ್ಷ . . . ರಾಕ್ಷಸೂಕ್ಷಭೀತಿಗಳು ಆ ಕ್ಷಣವಳಿದು (ಜಪಕ್ಷ. ೬೦-೬೨) ; ವಕ್ಷಿಗಳ ನುಗ್ಗಿಲಿ ಸೀದುರಣ್ಯದಲ್ಲಿ ಸಾಗಡಿಸಿದ ರುಕ್ಷರೋಮಾತತಿ ಬೆದುದು ಬೇಸಗೆಯುಗ್ರಮೆಂತುಟೋ (ಜಪಚಿ. ೫-೦೩). ೨. ವಕ್ಷತ್ರ ; ತಾರೆ ; ಪುನರ್ವಸುರುಕ್ಷಂ (ಬಚಿಪು. ೦೬-೦೩) ; ಮರುನ್ಮಾರ್ಗದಂತಿರೆ ಚುಂಚಕ್ಕಗರಾಜರುಕ್ಷಯುತಂ . . . ಗಹನಂ (ಜಪಚಿ. ೫-೨೬).

[< ಸಂ. ಋಕ್ಷ]

ರುಕ್ಷ[2] (ಗು). ೧. ಒರಟಾದ ; ಕಠಿಣವಾದ. ೨. ತೀಕ್ಷ್ಣರುಚಿಯ. (ನಾ). ೩. ಕಾಠಿಣ್ಯ ; ಒರಟು : ಮುಂದೇನು ಬೇಕು ? ಶ್ರೀಕಾಂತ ರುಕ್ಷವಾಗಿ ನುಡಿದ (ಮುಬ್ಧ. ೦೮೨). ೪. ನಯವಿಲ್ಲದುದು ; ದೊರಗು : ಶರೀರವೆಲ್ಲ ಪರೆ ಬಂದಂತೆ ರುಕ್ಷವಾಗಿಯೂ ಮತ್ತು ಕಾಂತಿ ಹೀನವಾಗಿಯೂ ಕಾಣುವುದು (ಪ್ರಾಪ್ರಚಿ. ೫೬). [ಸಂ.]

ರುಮೋತ, ರುಮ್ಮೋತ (ನಾ). (ಉಕ) ಮದುವೆಯ ಹಿಂದಿನ ದಿನ ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಗೆ ವಿಶೇಷವಾಗಿ ಏರ್ಪಡಿಸುವ ಔತಣ ಮತ್ತು ಆ ಸಮಾರಂಭ : ಮೊದಲು ಎದುರುಗೊಳ್ಳುವುದು, ಆಮೇಲೆ ರುಮೋತವನ್ನು ಹಾಕುವುದೆಂದು ಬಹಳ ಚರ್ಚೆಯಾಗಿ ನಿರ್ಣಯವಾದಿತ್ತು (ಅಪಂಚ. ೬). ರುಮ್ಮೋತ : ರಾತ್ರಿ ಸುಳ್ಳಾತಣ ದುಂಗಿದು ರುಮ್ಮೋತ ಆಗೂ ತನಕಾ ಅಂದರ ಎರಡು ಘಂಟೆ ಆತು (ಕೃಕ. ೯) ; ಹಿಂದಿನ ರಾತ್ರಿ. ಬೀಗರು ಬಂದು ಎದುರುಗೊಂಡು ಸುಳ್ಳಾತಣ ರುಮ್ಮೋತ ಮುಗಿಯುವ ದಕ್ಕೆ ರಾತ್ರಿ ಮೂರು ಹೊಡೆದುಹೋಗಿತ್ತು (ಸಾಚಾ. ೯೯).

[←ಮರಾ. ರುಖತ್. ರುಖವತ್]

ರುಮ್ಮೋತ ' ರುಮೋತ ' ನೋ.

ರುಗ್ಣ (ಗು). ೧. ಮುರಿದ ; ಒಡೆದ. ೨. ಖಾಯಿಲೆಯಿಂದ ಕೂಡಿದ ; ರೋಗದ : ಅವನು ನನ್ನ ರುಗ್ಣ ತಾಯಿಯ ಸೇವೆಯಲ್ಲಿ ಬಹಳ ಸಹಾಯ ಮಾಡಿದ (ಶಾಡಿ. ೩೬). (ನಾ). ೩. ಕೆಟ್ಟುದು; ಹಾಳಾದುದು : "ಭಗ್ನಮೆನೆ ರುಗ್ಣಮೆನೆ . . . ಭಿನ್ನಮೆನೆ ಕೆಟ್ಟುದು" (ಪುಂಗೂಾ. ೦೩೨-೨೬). ೪. ಮುರಿದುಹೋದುದು : "ರುಗ್ಣಂ. ಭಗ್ನಂ—೨ ಮುರಿದು ಹೋದದ್ದು" (ಸಿಡ್ಕಾ. ೦೮೬). ೫. ರೋಗಿ. [ಸಂ.]

ರುಗ್ಣಗೃಹ (ನಾ). ರೋಗಿಗಳಿಗೆ ಚಿಕಿತ್ಸೆ ಮಾಡುವ ಮನೆ ; ಚಿಕಿತ್ಸಾಲಯ ; ಆಸ್ಪತ್ರೆ : ರುಗ್ಣಗೃಹದ ಅವರ ಸಭೆಯಲ್ಲಿ . . . ಆನಂದ ಪ್ರವಾಹಕ್ಕೆ ತುಂಬ ತಡೆಯುಂಟಾಗುತ್ತಿತ್ತು (ಇಷ್ಕ. ೦೮೨). [ಸಂ.]

ರುಗ್ಣತೆ (ನಾ). ರೋಗ ; ಜಡ್ಡು ; ಖಾಯಿಲೆ : ಸಾಮಾಜಿಕ ರುಗ್ಣತೆಯನ್ನು ಕಳೆಯುವ ಇವರ ಹಾಸ್ಯ . . . ಬೆಳಗುವಂತಿರಲಿ (ಸಮಾಜ. ೬ ಮುಖ್ಯ). [ಸಂ. ರುಗ್ಣತಾ]

ರುಗ್ಣಶಯ್ಯೆ (ನಾ). ರೋಗದಿಂದ ಹಾಸುಗೆ ಹಿಡಿದಿರುವ ಸ್ಥಿತಿ : ಅಂತ್ಯದಲ್ಲಿ ರುಗ್ಣಶಯ್ಯೆ ಇಲ್ಲದಿರುವುದು ಮಾಘವಜನ್ಮಕ್ಕೆ ಒಂದು ಪೂರ್ವಪುಣ್ಯ (ಕಾಂಚಾ. ೦೭೦). [ಸಂ. ರುಗ್ಣಶಯ್ಯಾ]

ರುಗ್ಣಾಲಯ (ನಾ). =ರುಗ್ಣಗೃಹ : ರೋಗಿಗಳ ರುಗ್ಣಾಲಯದಲ್ಲಿ ತೋರಿ ಬರುವ ಶಾಂತತೆ ಅಲ್ಲಿ ಪಸರಿಸಿದ್ದಿತು (ಕಾಂಯಾ. ೫೫); ಅವಳು ರುಗ್ಣಾಲಯಕ್ಕೆ ಹಿಂದಿರುಗಿದಾಗ ದಾದಿಯ ಆಜ್ಞೆ ಕಾದಿತ್ತು (ಕೃಮು. ೭೨೬). [ಸಂ.]

ರುಗ್ಣಾವಸ್ಥೆ (ನಾ). ರೋಗದಿಂದ ನರಳುತ್ತಿರುವ ಸ್ಥಿತಿ : ರಾಜರೇ ಖುದ್ದಾಗಿ ಹೋಗಿ ರುಗ್ಣಾವಸ್ಥೆಯಲ್ಲಿದ್ದ ಮಲ್ಲಿಗಮ್ಮನನ್ನು ಕರೆಸಿಕೊಂಡು ಬಂದ ಸುದ್ದಿಯು ಅರಮನೆಯಲ್ಲಿ ಹರಡದೇ ಹೋಗಲಿಲ್ಲ (ಕ್ರೀಣಾಯ. ೦೦೩); ಮತ್ಸರಾಗ್ನಿ ಆ ರುಗ್ಣಾವಸ್ಥೆಯಲ್ಲಿಯೂ ಹೊಗೆಯಾಡತೊಡಗಿತ್ತು (ಪುಕಥು. ೬೭೭). [ಸಂ. ರುಗ್ಣಾವಸ್ಥಾ]

ರುಗ್ಣಾಹ (ನಾ). ಹದಿಮೂರು ಬಗೆಯ ಸನ್ನಿಪಾತಗಳಲ್ಲಿ ಒಂದು ; ಎಡೆಬಿಡದೆ ಬಾಯಾರುವ ಒಂದು ಬಗೆಯ ಸನ್ನಿಪಾತ : ತ್ರಯೋದಶ ಸನ್ನಿಪಾತವಾವುದಂದೊಡೆ : _ ಸಂಧಿಗ. ಅಂತಕ. ರುಗ್ಣಾ[ಜಾಹಂ.ಗ್ಯಾ]ಹ. ಚಿತ್ತವಿಪ್ಲವ . . . ಪ್ರಳಾಪಗಳೆಂದು ಪದಿಮೂರು ತೆರನು (ಸಗಣ. ೦೩೦). [ಸಂ.]

ರುಗ್ವೇದ (ನಾ). ಚತುರ್ವೇದಗಳಲ್ಲಿ ಒಂದು ; ಋಗ್ವೇದ : ' ರುಗ್ವೇದದರೆ ' ಪರಾ. [< ಸಂ. ಋಗ್ವೇದ]

ರುಗ್ವೇದದರೆ (ನಾ). ಋಗ್ವೇದದ ಬೋಧನೆಗೆಂದು ಎತ್ತುತ್ತಿದ್ದ ತೆರಿಗೆ ; ಭಟ್ಟವೃತ್ತಿ : ವೇದಾಂತದರೆ ಮತ್ತ ೧೫ ಹರಳ್ಕತ್ತರು ೧೦ × × ರುಗ್ವೇದದರೆ ಮತ್ತ ೧೫ (ಶಾಸಾ. XX, ೭೦೦-೦೭ ; 12ನೆಯ ಶ.ಪ) [ರುಗ್ವೇದ+ತೆರಿಗೆ (<ತೆಱಿ)]

ರುಚ (ನಾ). ೧. ಹೊಳಪು ; ಪ್ರಕಾಶ. ೨. ಕಿರಣ ; ರಶ್ಮಿ : "ರುಚಿ ದ್ಯುತಿ ಪ್ರಗ್ರಹಂ ದೀಪ್ತಿ ಘೃಷ್ಟಿ ರಶ್ಮಿ ರುಚಂ ಕಿರಣಂ" (ಪಂಗಣ. ೧೦-೩). [ಸಂ.ರುಚ್. ರುಚಾ]

ರುಚಕ (ಗು). ೧. ಹಿತವಾದ ; ಮನಸ್ಸಿಗೆ ಒಗ್ಗುವ . ೨ ಜೀರ್ಣಕಾರಿಯಾದ ; ಜಠರೋತ್ತೇಜಕವಾದ. ೩. ತೀಕ್ಷ್ಣರುಚಿಯುಳ್ಳ ; ಕಟುರುಚಿಯ. ೪. ಮಂಗಳಕರವಾದ. (ನಾ). ೫. ಮಂಗಳದ್ರವ್ಯ. ೬. ಒಂದು ಬಗೆಯ ಉಪ್ಪು ; ಸೌವರ್ಚಲ : "ಸೌವರ್ಚಳ. ರುಚಕಕ್ಕೆ —ಈ ೨ ಸೌವರ್ಚಳಂ" (ಪಂಗಣು. ೦೦೦-೨೬೩). ೭. ಒಂದು ಬಗೆಯ ಚಿನ್ನದ ಕಂಠಾಭರಣ. ೮. ಪಾಲೆ ; ಹಾರ . ೯. ಹಲ್ಲು ; ದಂತ . ೧೦. ಕುದುರೆಯ ಕುತ್ತಿಗೆಯ ಮೇಲಿನ ಕೂದಲು : ಅಯಾಲು. ೧೧. ಉತ್ತರದ ಕಡೆ ಮಾತ್ರ ಮುಚ್ಚಿ, ಉಳಿದ ಮೂರು ಕಡೆಗಳಲ್ಲಿ ತೆರೆದ ಆವರಣಗಳಿರುವ ಒಂದು ಬಗೆಯ ಕಟ್ಟಡ. ೧೨. ಅಮೃತ ; ಸುಧೆ. ೧೩. ಒಂದು ಬಗೆಯ ಹಣ್ಣಿನ ಮರ ; ಪಾದಲ; ಮಾತುಲುಂಗ. ೧೪. ಬಿಡಲಿದ ಪ್ರದ. ೧೫. ನಿರ್ದಿಷ್ಟನಕ್ಷತ್ರರಾಶಿಯಲ್ಲಿ ಹುಟ್ಟಿದ. ಅಸಾಧಾರಣವಾದ ಪದುಗಣ್ಯಪುರುಷವರ್ಗಗಳಲ್ಲಿ ಒಂದು: ವರಾಹಮಿಹಿರನು ಮನುಷ್ಯರನ್ನು ಪೋರದ ಆಕೃತಿ ಆಕಾರದ ಮೇಲೆ, ಐದು ಜಾತಿಗಳನ್ನಾಗಿ ವಿಂಗಡಿಸಿದ್ದಾನೆ. ಹಂಸ. ಶಶ. ರುಚಕ. ಭದ್ರ. ಮಾಲವ್ಯ ಎಂಬುವೇ ಈ ಐದು ಜಾತಿಗಳು (ಜಾತಿವ. ೩೦೬). ೧೬. ಕೊರಳು; ಕತ್ತು: "ಭೂಧರದಶನಾಮ್ಯತಂ ಲಪಣಭದ್ರ ಶರೋಧರ ಮಾತುಳಂಗವಾಭರಣಗಳೆಂಬವ್ವೆದ ರುಚ[ಜಾಹಂ.ಚಿ]ಕಾಹ್ವಯಂ" (ಜಾಹಪ. ೮೨). ೧೭. [ಜೈನ] ಸುಮೇರುಪರ್ವತದ ಬಳಿ ಇರುವ ಒಂದು ಪರ್ವತ : ಪ್ರಾಗ್ದಿಗ್ದೇಶದ ಮೇಘಸುಪ್ರಬುದ್ಧ ರುದ್ರವಿಮಲರುಚಿಕ . . . ಸುಪ್ರಶಿಷ್ಟ ಮೆಂಬ ಕೂಟಾವ್ಯಕಂಗಳೊಳ್. (೪೦೫. ೬-೪೮) ; ಶ್ರಿಕೂಟ . . . ಪತಂಗ ರುಚಕ ... ವಿಜಧವೆಂಬೈದು ಗಿರಿಗಳ್ (೭೮೫. ೨೦೦). ೧೮. ಅರುವತ್ತುಮೂರು ಇಂದ್ರಕಗಳಲ್ಲಿ ಒಂದು : ೧. ಋತು . . . ೧೫ ರುಚಕಂ . . . ೬೩ ಸರ್ವಾರ್ಥಸಿದ್ಧಿ ಎಂಬಿವು ಅನುಕ್ರಮದಿಂ ಅಱುವತ್ತುಮೂಱು ಇಂದ್ರಕಂಗಳ ಪೆಸರ್ಗಳ್ (ತ್ರಿಲೋ. ೨೦೭). [ಸಂ.]

ರುಚಕಾಯೋಗ (ನಾ). [ಜ್ಯೋತಿ] ಶುಭವನ್ನುಂಟುಮಾಡುವ ಒಂದು ಯೋಗ.—ದೆಸೆ : ಕುಜನ ಚತುಃಷ್ಕೇಂದ್ರಂಗಳಲ್ಲಿ ಶುಭಗ್ರಹರಿರಲೂ ರುಚಕಾಯೋಗಂ ಯದರಿಂದಂ ಅಷ್ಟಾದಶವಿಧ. ಧಾನ್ಯಲಾಭಮಕ್ಕು (ಅಯಾದೇ. ೨೫-೦೦). [ಸಂ.]

ರುಚಿ (ನಾ). ೧. ಕಾಂತಿ : ಪ್ರಕಾಶ ; ತೇಜಸ್ಸು : ಸಂಧ್ಯಾಸಮಯಾತ್ತ ರಕ್ತರುಚಿ ಪಿಂಗೆ ಬಬ್ಬಕ್ಕುದಯಾದ್ರಿಯೊಳ್ ಪದಂಗಾಸಿದ ಪೊಸ ಪೂಂಜಿಯುಮೊಲಿರ್ದುರು ಕಣ್ಗೆ ಹಿಮಾಂಶುಮಂಡಲಂ (ಶಂಕಣಾ. ೩-೩೦); ಸುಧಾಂಶುರುಚಿಯಂತೆ . . ಶಂಕರಂ . . . ಮೆಱೆವಿತಿರ್ದನು ದಿವ್ಯತೇಜದಲಿ (ಕ್ರಕುಚ. ೨-೦೩). ' ರುಚಿವೀಱು ' ಪರಾ. ೨. ಕಿರಣ ; ರಶ್ಮಿ : "ರೋಚಿಃ . . . ಕಿರಣಃ, ರುಚಿಃ . . . ಗೌಃ — ಈ ೩ ರಶ್ಮಿಗಳ ಪೆಸರ್" (ಪಜಾಚು. ೭-೩೮) . ೩. ಅಪೇಕ್ಷೆ ; ಬಯಕೆ : "ಇಚ್ಛೆ . . . ರುಚಿ ಕಾಮ ವಾಂಛೆ ಈಪ್ಸಿತವೆನಲು ಬಯಕೆ" (ಪುಂಗಣಾ. ೦೨೬-೦೦); ಸನ್ಮಾರ್ಗರುಚಿಪ್ರಸೂರ್ತಿ ಜೆಲ್ವಾಗಿರೆ ಕರಮುದಯಂಗೊಂಬ ಬಾಲಾರ್ಕನಂ ಮದ್ಭರಚೇತಃಪದ್ಮಮಿಗಳ್ ಬಯಸಿದವುದು (ಜಾಹಪ. ೩-೭೩); ಕವಿಗಳಲ್ಲಿ ರುಚಿ ಹುಟ್ಟಿಸಬೇಕಾಗಿದೆ (ಕೃವಾಂಗೀ. ೪೫). ೪. ಸವಿ ; ಸ್ವಾದ : ತೆಂಗಿನ ತಿರುಳು ಪಿಪ್ಪಲಿಯ ನೀರೊಳಕರಿದವಸಂಬಾಗಿರೆ ಪಿಟುದು ಕಳೆಯ್ದು ದುರ್ಗಂಧಸ್ವರೂಪಮಂ ತಳೆದು ವಿಮಳರುಚಿಯಾಗಿರ್ಕುಂ (ಪಾಗೃಸಾಚ. ೮-೧೩)ಸ್ತ್ರಿಯಾಸಂತಿಯ ಮನಸ್ಸಿಗೆ ಸೊಗಸಿಲ್ಲ ; ಊಟದಲ್ಲಿ ರುಚಿಯಿಲ್ಲ (ತೀಪ್ರಾಚ. ೦೦೦) ; ತಾಯಿಗಿಂತ ಬಂಧುವಿಲ್ಲ. ಉಪ್ಪಿಗಿಂತ ರುಚಿಯಿಲ್ಲ (ಗಾಪ). ೫. (ವಿಶೇಷ ಸಂದರ್ಭಗಳಲ್ಲಿ) ಉಪ್ಪು : ಸಾರಿಗೆ ರುಚಿ ಸಾಲದು (ಕೂಪ). ೬. ಒಂದು ಬಗೆಯ ಹುಲ್ಲು : "ಕಹಿಹುಲ್ಲು ರುಚಿಯಕ್ಕುಂ" (ಪುಂಗಣಾ. ೫೬-೪). ೭. ಒಂದು ಬಗೆಯ ಸಸ್ಯ : "ಸೊಂಡೆ ರುಚಿ ಚಿತ್ರರತಿ ಸಿಂಹಕಾಮ್ಯಂ" (ಪುಂಗಣಾ. ೪೯-೨೪).

ರುಚಿಯಾಗು = ೧. ಕಾಂತಿಯಿಂದ ಕೂಡಿದ ; ರಂಗಾಗು : ಸುರಧನು ಪಾಟಲರುಚಿಯಾಗಿರೆ ಸಮರ ಪೀತವರ್ಣಮಾಗಿರೆ ವೈಶ್ವಾನರ ಭಯಂ (ತೀಪ್ರಾಚ. ೪-೫೫). ೨. ಸ್ವಾದುವಾಗು ; ಹಿತವಾಗು : ಕರಿದ ಆಹಾರ ರುಚಿಯಾಗಿರುತ್ತದೆ (ಅಪಾಚಿ. ೪೯). [ಸಂ.]

ರುಚಿಕಟ್ಟು$_{1}$ (ಕ್ರಿ). ರುಚಿಯಾಗು ; ಸವಿಯಾಗು : ಸಾರಿಗೆ ಇಂಗಿನ ಒಗ್ಗರಣೆ ಹಾಕಿದರೆ ಅಡಿಗೆ ರುಚಿಕಟ್ಟುತ್ತದೆ (ದಾಪ). [ರುಚಿ+ಕಟ್ಟು$_{1}$]

ರುಚಿಕಟ್ಟು$_{2}$ (ನಾ). ರುಚಿಯಾದುದು ; ಸವಿಯಾದುದು : ಬಾಳೆಯ ಹೂ ಹಾಗೂ ದಿಂಡಿನ ಪಲ್ಲೆ ರುಚಿಕಟ್ಟು (ಸಾಕೃಮಾ. ೫೦) : ಬಹಾಳ ಬಹಾಳ ರುಚಿಕಟ್ಟು ! ಅಮೃತದ ಕೆವೆ ಇರ್ತದಂತಲ್ಲ. ಅದು ಇದರ ಮುಂದೆ ಸಕ್ಕತ್ತೆ ಸವ್ವೆ ! (ಕಳುಕು. ೨೦೯). [< ರುಚಿಕಟ್ಟು$_{1}$]

ರುಚಿಕತ್ರಿ (ನಾ). ಒಂದು ಬಗೆಯ ಸಸ್ಯ : ಆರದ್ರಿ. ದೊಡ್ಡನಾತದ ಗಿಡ. ಇದನ್ನೆ. ರುಚಿಕತ್ರಿ (ಕ್ಯಾಔಗಿ. ೦೭-೨೮೩). [?]

ರುಚಿಕರ (ಗು). ೧. ಸ್ವಾದುವಾಗಿರುವ; ರುಚಿಕಟ್ಟಾದ. (ನಾ). ೨. ರುಚಿಕಟ್ಟಾದುದು ; ಸ್ವಾದುವಾದುದು : ತಿಳಲು ಬಲು ರುಚಿಕರವು (ಪುಂಅಪ. ೪-೬೦); ಅಚ್ಚ ಆಹಾರ ರುಚಿಕರವಾಗಿರುವುದು ಮಾತ್ರವಲ್ಲದೆ ಜೀರ್ಣಕಾರಿಯೂ ಆಗಿದೆ (ಅಪಾಚಿ. ೫೯). [ಸಂ.]

ರುಚಿಕಾರ (ನಾ). ರುಚಿಯನ್ನು ಕೊಡುವ ವಸ್ತು.—ಪದಾರ್ಥ : ಅನ್ನಾದಿ ರುಚಿಕಾರದೊಳು ಸಾಧನಾಮ್ಯಂ (ಪುಂಗಣಾ. ೦೧೬-೬೭). [ಸಂ.]

ರುಚಿಕೆಡು ' ರುಚಿಗೆಡು ' ನೋ.

ರುಚಿಕೊಡು ' ರುಚಿಗೊಡು ' ನೋ.

ರುಚಿಗೆಡು. ರುಚಿಕೆಡು (ಕ್ರಿ)· ೧. ಸವಿಯಿಲ್ಲದಂತಾಗು; ಅರುಚಿಯಾಗು: ರುಚಿಗೆಡದು . . . ಅವುಳ ಸುಧಾಪಿತರನವ (ಜಾಜಕ· ೩೩-೧೦೦)· ೨. ಕಾಂತಿಗುಂದು ; ತೇಜೋಹೀನವಾಗು : ಭವದಾನನಕ್ಕೆ ಸೋರ್ದಾತ್ಮ ವಿಲಾಸಮನುಲುದ ತೆಱದೆ ರುಚಿಗೆಟ್ಟು ದಿಗಂತವಿಲಂಬಿಬಿಂಬನಂಬುರುಹ ವೈರದಿಂದುಡುವನುಡುಪವಾದಂತಾದು (ಜಾಂಬಿ· ೩-೦೮)· **ರುಚಿಕೆಡು :** ೧· ಈ ರೋಗದಿಂದಾಗಿ ಜೀರ್ಣಶಕ್ತಿಯ ಮೇಲೆ ಪರಿಣಾಮವಾಗುವುದು ; ರುಚಿಕೆಡುವುದು (ಅಮಾಗೌ. ೬೩)· [ರುಚಿ + ಕೆಡು$_1$]

ರುಚಿಗೆಯ್ (ಕ್ರಿ)· ಸವಿನೋಡು ; ಆಸ್ವಾದಿಸು : ಉಚಿತವಱಿದು ಮಿಂದಿವ್ಗಳು ನವರತ್ನಖಚಿತಭೂಷಣಹಸ್ತದಲಿ ರುಚಿವೆತ್ತು ಬಡಿಸಲ್ಕೆ ಶ್ರೀಕೃಷ್ಣರಾಯನು ರುಚಿಗೆಯ್ದು ಮೊಗಮನೀಕ್ಷಿಸಿದ (ಕೃಚಾಪ. ೦೪-೦೯)· [ರುಚಿ + ಕೆಯ್$_1$]

ರುಚಿಗೊಡು. ರುಚಿಕೊಡು (ಕ್ರಿ)· ೧. ಸವಿಯಾಗು; ರುಚಿಯಾಗು : ಎಲ್ಲಿ ಕಡಲಿನ ಉಪ್ಪು ಎಲ್ಲಿ ಕಾಡಿನ ನೆಲ್ಲಿ ಸವಿಗೂಟ ಕೂಡಿಬಂದಲ್ಲಿ ನೆನ್ನಲ್ಲಿ ರುಚಿಗೊಡುವಿ ಕಂದ ಬಂದಿಲ್ಲಿ (ಗ· ೦೦೬-೦೨)· **ರುಚಿಕೊಡು :** ೨· ರುಚಿಯೊದಗಿಸು : ಊಟಕ್ಕೆ ಉಪ್ಪಿನಕಾಯಿ ರುಚಿಕೊಡುತ್ತದೆ (ಕಜಿ)· [ರುಚಿ + ಕೊಡು$_1$]

ರುಚಿಗೊಳಿಸು (ಕ್ರಿ)· ಸವಿಯಾಗಿಸು ; ರುಚಿಯಾಗಿಸು : ಸ್ವಾತಂತ್ರ್ಯ ದುಪ್ಪು ಸಾಗರದವರೆಗೆ ಮುಟ್ಟಿಸುವ ಪಂಥ ತಳೆದ· ಅಂಥ ಉಪ್ಪಿನಲೆ ಜೀವ ರುಚಿಗೊಳಿಸಿ ಸಪ್ಪೆತನವ ಕಳೆದ (ಸೂರ್ಯಾಜಾ· ೦೩-೦೨)·

[ರುಚಿ + ಕೊಳ್$_1$ + —ಇಸು$_2$]

ರುಚಿತೋರು ' ರುಚಿದೋಱು ' ನೋ·

ರುಚಿತ್ವ (ನಾ)· ೧. ರುಚಿಯಾಗಿರುವಿಕೆ ; ಸವಿ· ೨. ಕಾಂತಿಯಿಂದ ಕೂಡಿರುವುದು : ದ್ವಿಜಮುಖ್ಯವೃತ್ತಿ ಕೃಷ್ಣರುಚಿತ್ವಂ ಪೇೞದಿರೆ ಪುರೋಹಿತ ಬ್ರಾಹ್ಮಣನೆನಿಸುದುದತನುಪ್ಪತಿಗೀ ಪರಪುಷ್ಟಂ (ಜಂಕ್ರಪು. ೭-೦೮)· [ಸಂ.]

ರುಚಿದೋಱು. ರುಚಿತೋರು (ಕ್ರಿ)· ೧. ಹೊಳವನ್ನು ತೋರು ; ಕಾಂತಿ ಬೀರು : ಕುವಲಯನೇತ್ರಿ ದಾಳಿಂಬದ ದಿತ್ರಿನಂತೆಸವ ಕೆಂಬಲ್ಲ ರುಚಿದೋಱಿ ಬಿನ್ನಮಿಸಿದಳು ಕೀತಾಂಬರಧರಗೆ (ಕೀಚಾಪ· ೦೭-೨೯)· **ರುಚಿತೋರು :** ೨· ಸವಿಯಾಗು; ರುಚಿಕಾಣು : ರುಚಿತೋರದ ಊಟ ಉಂಡರೆಷ್ಟು ಬಿಟ್ಟರೆಷ್ಟು ? (ಕಜಿ)· [ರುಚಿ + ತೋಱು]

ರುಚಿನೋಡು (ಕ್ರಿ)· ಪದಾರ್ಥದ ಸವಿಯು ಸರಿಯಾಗಿದೆಯೇ ಇಲ್ಲವೇ ಎಂದು ಪರೀಕ್ಷಿಸಲು ಸ್ವಲ್ಪ ಭಾಗವನ್ನು ತಿಂದು ನೋಡು : ಉತ್ಕೃಷ್ಟವಾದ ಫಲಗಳನ್ನು ನಿಮಗೋಸ್ಕರ ರುಚಿನೋಡಿ ಇರಿಸಿದ್ದೇನೆ (ಪ್ರಕಾಪಾ· XV, ೨೦)· [ರುಚಿ + ನೋಡು]

ರುಚಿರ$_1$ (ನಾ)· [ಛಂದ] ಒಂದು ವೃತ್ತದ ಹೆಸರು : ಅತಿಜಗತಿ ಛಂದಸ್ಸಿನಲ್ಲಿ ಹದಿಮೂರಕ್ಷರವಾದವಾಗಿ ಹುಟ್ಟುವ ವೃತ್ತಗಳಲ್ಲಿ ಒಂದು : ದಿನೇಶ ಚಂದ್ರ ಪವನ ಭಾನು ರುದ್ರರೊಂದಿನಿಲ್ವುದುಂ . . . ರುಚಿರಮಿದಾಗಮೋಕ್ತಿಯಿಂ (ಛಂಕೋಚಾಖಾ· ೫-೦೩೯)· [ಸಂ. ರುಚಿರಾ]

ರುಚಿರ$_2$ (ಗು)· ೧. ಹೊಳೆಯುವ ; ಪ್ರಕಾಶಮಾನವಾದ : ಯತಿತತಿ ಚಕ್ರವರ್ತಿರುಚಿರಾಮಳಮೂರ್ತಿ . . . ಮಾಳ್ಕೆಮಗಿಷ್ಟಸಿದ್ಧಿಯಂ (ಜಾಪಕೇ· ೦-೬)· ೨. ಸುಂದರವಾವ ; ಚೆಲುವಾದ : ಆ ರುಚಿರವನಧಿಪರಿಯಂತೆ . . . ಒಪ್ಪುವುದು ಚಾರುಚರಲಾಳದೇಶಂ (ಜಕಾಾ· ೦-೩೪)· ೩. ರುಚಿಯಾದ ; ಸವಿಯಾದ ; ಪ್ರಿಯಕುಶಲವೂರ್ವಕೋಚಿತ ನಯವಿನಯೋದಾರರುಚಿರಪಚನಪ್ರಾಯಂ ಪ್ರಿಯತರಮೆಂಬುದು (ಕಂಾ· ೬-೨೦೬)· ೪. ಜೀರ್ಣಕಾರಿಯಾದ; ಜಠರೋತ್ತೇಜಕವಾದ. (ನಾ)· ೫. ಸೌಂದರ್ಯ ; ಚೆಲುವು : "ವ್ಯಾಗ್ಮಂ . . . ಮನೋಹರಂ, ರುಚಿರಂ . . . ವೇಶಲಂ —ಈ ೨೯ ಒಳ್ಳಿಕು" (ಜಾಹಾಬು· ೦೦೯-೪)· ೬. ಕೇಸರಿಬಣ್ಣ. ೭. ಕೆಂಪುಬಣ್ಣದ ಕುದುರೆ : ಅತ್ತಿಹಣ್ಣಿನ ವರ್ಣ ಉಳ್ಳ ಕುದುರೆಯು ರುಚಿರವೆಂದು ಪೇಳಲ್ಪಡುವುದು (ತೌಗೀಂ· ೭೦೦-೦೮)· [ಸಂ.]

ರುಚಿರತೆ (ನಾ)· ಸೌಂದರ್ಯ ; ಚೆಲುವು : ಯಾವ ವಸ್ತು ಸುಂದರವಾಗಿದೆಯೋ ಅದರ ಮೊದಲ ಗುಣ ರುಚಿರತೆ (ಕೌಂಪ· ೪೬)·

[ಸಂ. ರುಚಿರತಾ]

ರುಚಿರಾಮೆ (ನಾ)· ೧. ಪಾದರಸ ; ಪಾರದ : (೪)· ೨. ಕಣ್ಣು ; ನಯನ : (೪)· ೩. ಬೆಳಕು ; ಶ್ವೇತ : " ಬೀದನಿಪ್ಪುದಂ ನುಡಿವಲ್ಲಿ [ಜಾಾ.ಶ]ಚಿರಾಮಮೆಂದೆಂಬುದು " (ಪುಂಗಂ· ೦೮೦-೦೦) ; " ಸಿತಂ ದೃಕ್ಸೂತಂ ರುಚಿರಾಪಮಕ್ಕುಂ" (ಜಾಜಕ· ೦೩೨)· [ಸಂ.]

ರುಚಿರೆ (ನಾ)· ನೆಲ್ಲಿ ; ಕಾದಲೆ : ಪ್ರಿಯತಮೆ : " ಪ್ರಿಯತಮೆ ಸುಭಗೆ . . . ರುಚಿರೆ ವಲ್ಲಭೆ ತಾಂ" (ಪಸ್ತ್ರಕಾ· ೩೨-೩)· [ಸಂ. ರುಚಿರಾ]

ರುಚಿವಡಿಸು (ಕ್ರಿ)· ರುಚಿಗೊಳಿಸು ; ಸವಿಗೊಳಿಸು : ನಿನ್ನ ಕರ್ಣಕ ಕಪುರುಚಿವಡಿಸುವೆ ಪೇಳಿ ಮೇಲ್ಗತೆಯ (ಕೃಚಾಪ· ೦೯-೨)·

[ರುಚಿ + ಪಡಿಸು]

ರುಚಿವಡೆ (ಕ್ರಿ)· ರುಚಿಯಾಗು ; ಸವಿಯಾಗು : ಉಪ್ಪಿಲ್ಲದೆ ಕೇಳೊಕ್ಕಳ ತುಪ್ಪವನೆಱೆದುಣ್ಣೆನೆಂದೊಡಾಂಬುಣಲೇಂ ಸ್ವಾದವೆಪ್ಪೆ ಸಹಜಂ ತನಗಿನಿಸಪ್ಪೆಡಮಿಲ್ಲದನ ಕವಿತೆ ರುಚಿವಡೆದಪುದೇ (ಧರ್ಮಾಕ್ಕು· ೦-೩೦)·

[ರುಚಿ + ಪಡೆ$_1$]

ರುಚಿವೀಱು (ಕ್ರಿ)· ಕಾಂತಿಯನ್ನು ಬೀರು ; ಪ್ರಕಾಶಿಸು : ಪುರುಗಲ್ಲಾ ಬೆಳೆದ ರುಚಿವೀಱುವ ಗವಾಕ್ಷದಿ ತೋಳ ಬಹುರತ್ನಂಗಳ್ (ಜಾಕೃಜಾ· ೪-೩೦)·

[ರುಚಿ + ಬೀಱು$_1$]

ರುಚಿವೆಱು (ಕ್ರಿ)· ಕಾಂತಿಯನ್ನು ಹೊಂದು ; ಹೊಳಪನ್ನು ಪಡೆ : ತರುಣವ್ಯಾಳಾಲಗರ್ಭರುಚಿವೆತ್ತ ರಫೊದ್ದೂಹದೀಹದಿಪ್ಪಿಮಂಜರಿಯನುಪಾ ಶ್ರಯಯುಡಮು (ಜಂಜಾಪ· ೮೨-೦೩)· ಉಚಿತವಱಿದು ಮಿಂದಿವ್ಗಳು ನವರತ್ನಖಚಿತಭೂಷಣಹಸ್ತದಲಿ ರುಚಿವೆತ್ತು ಬಡಿಸಲ್ಕೆ ಶ್ರೀಕೃಷ್ಣರಾಯನು ರುಚಿಗೆಯ್ದು ಮೊಗವನೀಕ್ಷಿಸಿದ (ಕೃಚಾಪ ೦೯-೦೯)· [ರುಚಿ + ವೆಱು$_1$]

ರುಚಿಸು (ಕ್ರಿ)· ೧. ರುಚಿಯಾಗು ; ಸ್ವಾದುವಾಗು : ಕ್ರೋತ್ರಂಗಳೇಕೆ ಅಲಿಸದೇಡ ಎಂದಡೆ ಮೂಗವ ಜಿಹ್ವೆಯೇಕೆ ರುಚಿಸದೇಡ ಎಂದಡೆ ಮೂಗವು (ಅಪಾಂ· ೨೮-೨೮)· ೨. ಆಸ್ವಾದಿಸು ; ತಿನ್ನು : ಜಿಹ್ವೆಯೊಳಗೆ ಜಿಹ್ವೆಯಿದ್ದೂ ರುಚಿಸಲೇಕಱಿಯರಯ್ಯಾ (ಅಪಾ· ೧೦೩)· ೩. ಹೊಳೆ ; ಪ್ರಕಾಶಿಸು : ರತಾನವವಿ ರುಚಿಸಿದನು ಕೋಟೀರಕೋಟಿರಣಕರೀಟ ತಾನಾಗಿ (ಶ್ರೀಚಾಪ. ೦೬೨-೨೦೬)· ೪. ಇಷ್ಟಪಡು ; ಆಶಿಸು ; ಬಯಸು : ಪರಿಪೂರಿತ್ಸಾಮ್ಯತಕಿರಣರುಚಿಯಂ ರುಚಿಸುವ ಚಕೋರ ಸೇರಿ ಮರ್ಬಿಂಗೆಳಸುವುದೆ (ಜಸಿ· ೦೦-೦೦)· ೫. ಮೆಚ್ಚಿಗೆಯಾಗು ; ಮನಸ್ಸಿಗೆ ಬರು... ಹಿಡಿಸು : ಉಚಿತವನು ಜಾನಜಾಯೆ ವಾರ್ಧಕರಚಿತನಿಜವನು ನುಡಿಯೆ ನಿನಗವು ರುಚಿಸವೇ ಮಾಣಿ (ಶಾಬ್ಯಾಪ· ೦-೨೩) ; ಹುಡುಗರಿಗೆ ಈ ಸೂಚನೆ ಒಪ್ಪಿತವಾಯಿತು ; ಹುಡುಗಿಯರಿಗೆ ರುಚಿಸದಾಯಿತು (ಪಾಬಹೊ· ೬೨)· [ರುಚಿ + —ಇಸು$_2$]

ರುಚ್ಯ (ಗು)· ೧. ಪ್ರಕಾಶಮಾನವಾದ ; ಹೊಳಪುಳ್ಳ· ೨. ಚೆಲುವಾದ ; ಸುಂದರವಾದ ; ಮನೋಹರವಾದ· ೩. ಸಂತೋಷ ಗೊಳಿಸುವ ; ಆಹ್ಲಾದಗೊಳಿಸುವ· ೪. ಹಸಿವನ್ನು ಉದ್ದೀಪನ ಗೊಳಿಸುವ· (ನಾ)· ೫. ಹೊಳಪು ; ಕಾಂತಿ : " ರುಕ್ ... ರುಚ್ಯಂ, ರೌಚ್ಯಂ, ಈ ೩ ಪ್ರಭಾರ" (ಶಾಕ್ಷ· ೦೩೦)· ೬. ಸುಂದರವಾದುದು ; ಮನೋಹರವಾದುದು : ಪ್ರಕಟಿಸುವವಮಳಧಾನ್ಯ ಪ್ರಕರಂಗಳ್ ... ಬೆಳೆವಕ್ಕಷ್ಟಮಚ್ಯಂಗಳತುಳಫಳರುಚ್ಯಂಗಳ್ (ಈಕ್ಷ·

೯-೦೩). ೭. ಗಂಡ ; ಪತಿ : "ಕಾಂತಃ , . . ರುಜ್ಯಃ . . . ಅನುಕಃ — ಈ ೧೪ ಗಂಡಂ" (ಹಲಾಯು. ೩೨-೩೪೩). [ಸಂ.]

ರುಜ (ನಾ). ನಿರುತ ; ದಿಟ ; ಸತ್ಯ (?): ಇಜೀವ ಅಸಿ ನೋವ ಬಲ್ಲೊದೆ ಬೇಡುವಾತ ರುಜವ ಬಲ್ಲನೇ (ಪೋಪಣ. ೦೯-೩೯) ; ಸ್ಕಂದ ಕೇಳ್ ರುಜದಿಂ ಶಿವಪ್ರಸಾದದೊಳು ನೀಂ ಅಮ್ಮ ಪಾಗಲೆಯೊಳುದಿಸು (ಕ್ರಶಾಕ. ೩-೩೦). [< ಋಜು]

ರುಜಾಂಗ (ನಾ). ಖಾಯಿಲೆಯವನು ; ವ್ಯಾಧಿಗ್ರಸ್ತ ; ರೋಗಿ: ಘನಭುಜಾಂಗನ ಬಿಡುದಲೆಯ ರೋಧಿನಿಯನುಪ್ಪವಡಿಸುವ ಸಮಯ ದೊಳಿನಿಬರನು ಕಾಣ್ಬುದು ಮಹೀಶರಿಗಂಗವಲ್ಲ (ಕುಪಾ೧ಲಾ. ೩-೦೦೭).

[ಸಂ.]

ರುಜಾವು (ನಾ). ತೆಳುವಾದ ಆರಳೆಯ ಗಾದಿ : ಗಾದಿ ರುಜಾವುಗಳ ಮೇಲೆ ಶಯನವನ್ನು ಮಾಡದೆ ಹುಲ್ಲುಜಾಪೆಯ ಮೇಲೆ ದೇಹವನ್ನು ಆವಶ್ಯಕವಾದ ವಿಶ್ರಾಂತಿಗಾಗಿ ಚಲ್ಲುವ ಪ್ರತಿಜ್ಞೆಯನ್ನು ಪ್ರತಾಪನು ಮಾಡಿದನು (ಕಪೀ. ೫೦). ' ರಜಾಯಿ ' ಪರಾ.

[← ಪಾರ. ಮರಾ. ರುಜಾಮಾ]

ರುಜಾರ್ತ (ನಾ). ರೋಗಪೀಡಿತನಾದವನು: ಖರಭ್ರಾಜ್ಞಂದನಸೊಂದಿದಂ ದುದಯದೊಳ್ ರೋಗಾನ್ವಿತಂ ದುಲ್ಕಕಾಲರುಜಾರ್ತಂ . . . ಅಕ್ಕುಂ (ಜಾಹಿ. ೦೬-೦೪). [ಸಂ.]

ರುಜಿನ (ನಾ). ಖಾಯಿಲೆ ; ವ್ಯಾಧಿ ; ರೋಗ : ಅತಿವೈದ್ಯದಿಂದ ಹೊಸರುಜಿನಕಡೆಯಾದೀತೊ (ಮುಂಗಳ. ೩೩೭). ' ರೋಗರುಜಿನ ' ಪರಾ.

[< ಸಂ. ವೈಜನ = ಆಪತ್ತು, ಗಂಡಾಂತರ]

ರುಜು[1] ರಿಜು (ಗು). ೧. ವಕ್ರವಲ್ಲದ ; ನೇರವಾದ : "ರುಜು (ರಿಜು) — ಋಜು = ನೇರ" (ಕಪ್ಪಳೋ. ೯೩೦). (ನಾ). ೨. ನ್ಯಾಯವಾದುದು; ಸರಿಯಾದುದು : ನಿಜಕಾಂತನಿಲ್ಲದೊಡೆ . . . ಪ್ರಜೆಗಳಂ ಪಡೆದು ಸದ್ಗತಿಗೈದಮೇಳ್ಪುದಿದು ರುಜುವಲ್ಲ (ಕೃಪಾಶಾ. ೩೬-೦೪); ಸಹಜವಾಗಿ ಸುಳಿವ ನಿಜಜಂಗಮವಾದಾಚರಣೆ ರುಜುವೆಂದ ಗುರುವೆ ಕೃಪೆಯಾಗು (ಪ್ರಣಾಲಿ. ೭೦-೨೩೩) ; ನೇರಾದ ರೀತಿ ರುಜು ಅವನ ನೀತಿ (ಕೃಕ್ಷಾಲಿ. ೪-೨). ೩. ಸರಳಸ್ವಭಾವದವನು; ಕಪಟವನ್ನರಿಯದವನು: ಎಂತೋ ಕಾಂತೆಯ ವರಿಸೀಮಂತಂ ಕಳೆಗೊಂಡುದಿರ್ಕಲದ ಕುಟಿಲಾಂತಃ ಕುಂತಳಮಂ ಸ್ನಿಗ್ಧಮೃದುತ್ವಂ ತೋಱಲ್ ಪೋಱಗೆ ರುಜುಗಳೇನಂ ಬಲ್ಲರ್ (ಕೃಕೃಪ. ೩-೨೩). ರಿಜು : ೨. ಋಜು — ರಿಜು (ಕಾಮಾ. ೨೬೦ ಕೃಟೀ).

ರುಜುವಾಗು = ಪ್ರಾಮಾಣಿಕವಾಗು ; ಋಜುವಾಗು : ನೀವು ಈ ವಕ್ರವನ್ನು ಬಿಟ್ಟು ರುಜುವಾಗಿ ಇದ್ದರೆ ಸರಿ (ತಿವಿ. ೦೦೪-೦೪); ಶ್ರೀಜಗದತಿಚಿತ್ರವುಮಿಲಮದಿಲ್ಲಿ ನೆಲೆಗೊಂಡು ರುಜುವಾದುದೆನೆ ದೇವಶಿಲ್ಪಿಗಳ ಕರ್ಮಮಂ ಭಜಿಸಿ ಮೆರೆದತ್ತು . . . ವೈವಾಹದುತ್ಸವಂ (ರುಶಾಕ. ೨೬-೩೭). [< ಸಂ. ಋಜು]

ರುಜು[2] (ನಾ). ೧. ಸಹಿ ; ದಸ್ಕತ್ತು ; ಒಪ್ಪಿತ : ರುಜು ಶ್ರೀ ಕೃಷ್ಣ (ಮೈಆ.೦೪೨೨. ೭೩-೩೮ ; 1818) ; ಭಗವಂತಗಿರಿಗೋಸಾವಿ ರುಜುವೂ (ಎಳ್. IX, ಕುಂಗಸಂ. ೩-೨೩ ; 1855); ಕರುಣೇಕರುಗಳು ನಾಡಿಗರು ಗಳಿಂದಲೂ ರುಜುವು ಮಾಡಲ್ಪಟ್ಟ ನಂತರ . . . ರವಾನಿಸಬೇಕು (ಗ್ರಾಮಾಶ್ರ. ೬). ೨. ಆಧಾರ ; ಸಾಕ್ಷಿ ; ಪುರಾವೆ : (ಕೃಸೆಪ. ೪೩. ೩೩೦).

ರುಜುಮಾಡು = ೧. ಸ್ವಹಸ್ತಾಕ್ಷರ ಹಾಕು ; ಸಹಿಮಾಡು : ನಿಮಗೆ ಅವಳ ವಿಚಾರವೆಲ್ಲಾ ಗೊತ್ತಿರುವಂತಿದೆ ; ಅದನ್ನು ಬರೆದು ರುಜು ಮಾಡಿಕೊಡುವಿರಾ ? (ಖಂಚಮು. ೦೨೦). ೨. ರುಜುವಾತು ಮಾಡು ; ಖಚಿತಪಡಿಸು : ಸಮುದ್ರದ ಮೇಲೆ ಬರುವ ಹಡಗವು ಭೂಮಿ ಗುಂಡಾಗಿಯಿರುವುದನ್ನು ರುಜುಮಾಡುತ್ತದೆ (ಕಾಪಂತ. ೪೦).

ರುಜುವಾಗು = ೧. ಸಹಿ ಹಾಕಲ್ಪಡು ; ದಸ್ಕತ್ತು ಮಾಡಲ್ಪಡು : ಸ್ಟಾಕೇರ ರುಜುವಾಗಿದೆ (ರಂಗಳ. ೯). ೨. ರುಜುವಾತಾಗು ; ಸಾಬೀತಾಗು : ದೊಣ್ಣೆಯು ಮುನಿಯನದೆಂದು ರುಜು ವಾಯಿತು (ಮುಂಚಮು. ೨೦೨). ರುಜುಹಾಕು = ಸಹಿಮಾಡು : ರುಜು ಮಾಡು : ಸಂಧಿಗೆ ರುಜುಹಾಕಬೇಕೆಂದೂ ಗಾವಾನಿಗೆ ಹೇಳಿ ಕಳುಹಿಸಿ ದನು (ಕ್ರಶಾತ. II. ೨೩೯) ; ' ವಕಾಲತ್ತು ಫಾರಂಗೆ ರುಜುಹಾಕಿ ಬಂದರು, ಕರಿಯಪ್ಪ, ಶಿವಾರೆಡ್ಡಿ (ಕೆಪೋ. ೦೧೯).

[← ಅಥ. ರುಜೂಲಿ ; ಮರಾ. ರುಜೂ]

ರುಜುಪಡಿಸು (ಕ್ರಿ). ಯಾವುದಾದರೊಂದು ವಿಷಯವನ್ನು ಸಾಕ್ಷ್ಯಾಧಾರಗಳಿಂದ ಸಿದ್ಧಪಡಿಸು ; ರುಜುವಾತು ಮಾಡು : ಅವರು . . . ಜವ್ವನಿಕೆ ಹರೆಯುದಲ್ಲಿಲ್ಲ; ಮನಸ್ಸಿನಲ್ಲಿದ ಎಂಬ ಹುರುಳನ್ನು ರುಜುಪಡಿಸಿದರು (ಶಗುಶ. ೪) ; ಅದನ್ನು ರುಜುಪಡಿಸುತ್ತೀರಾ ? (ಕಾಪೀ. ೦೨೩). [ರುಜು[2] + ಪಡಿಸು]

ರುಜುಭಾವ (ನಾ). ನೇರವಾದ ಸ್ವಭಾವ; ಸರಳತೆ : ಅತ್ಯರಾಭಿಮುಖಂ ಪ್ರಸನ್ನಮುಖಂ ಪದ್ಮಾಸನಮನಪಪ್ಪಂಛಿಸಿ ರುಜುಭಾವದಿಂ ಕುಳ್ಳಿರ್ದು (ಕಾಹರೀ. ೦೬-೧೩ ಪ). [< ಸಂ. ಋಜುಭಾವ]

ರುಜುರೋಹಿತ (ನಾ). ಕೆಂಪಗೆ ನೇರವಾಗಿರುವ ಇಂದ್ರನ ಬಿಲ್ಲು : ಹರಿಯ ಹಳಚಿ ಗದಾಯುಧಮವನೀಶ್ವರನ ಜಱದಜಗರನಿಂದ್ರಪ ವರಿಭವಮಿ ರುಜುರೋಹಿತವನ್ಯಂತಕನ ಸದೆಬಿಡಿದು ಪರಿಭವನು . . . ಧರಿಸಿದ್ದತಿಬಲ ರಿರ್ದ್ದುದು (ಕೂರಣ. ೬-೦೦-೯). [< ಸಂ. ಋಜುರೋಹಿತ]

ರುಜುವತ್ತು ' ರುಜುವಾತು ' ನೋ.

ರುಜುವಾತು, ರುಜುವತ್ತು (ನಾ). ಸಾಕ್ಷ್ಯ; ಆಧಾರ : ಅವ ನಿಮ್ಮೂರಿಗೆ ಹೋದದ್ದಕ್ಕೆ ರುಜುವಾತು ಇದೆ (ಕಂಚಮಂ. ೦೧೪) ; ಅದನ್ನು ರುಜುವಾತು ಪಡಿಸುವುದು ಕಷ್ಟ (ಅಪಾಕ. ೫೪) ; ರುಜುವಾತಿಗಾಗಿ ಮರದ ಪೆಟ್ಟಿಗೆಯನ್ನು ತಲೆಕಳಗು ಮಾಡಿ ತೋರಿಸಿದಳು (ಸ್ವಾಚಿತ್ರ. ೭೪). ರುಜುವತ್ತು: ಈಗಿರುವ ರುಜುವತ್ತೇ ಸಾಕು (ಕಂಪೆ. ೦೦೭).

[← ಅರ. ರುಜಅತ್; ಮರಾ. ರುಜುವಾತ್]

ರುಜುವೆರು (ಕ್ರಿ). ಸರಳಸ್ವಭಾವವನ್ನು ಹೊಂದು ; ಋಜುಭಾವ ದಿಂದಿರು : ಸಕಲದೇಶಮನಾಳ್ವ ನೃಪರೆಲ್ಲ ರುಜುವೆತ್ತು ಕಪ್ಪಮಂ ತೆತ್ತು ಬಾಳುವರು (ಕವಪೂ. ೩-೨೭). [ರುಜು[1] + ಪೆರ್ು (< ಪೆಱ್ು[1])]

ರುಜೆ (ನಾ). ೧. ಒಡೆದುದು ; ಮುರಿದುದು ; ಭಂಗವಾದುದು. ೨. ಖಾಯಿಲೆ ; ರೋಗ : " ರೋಗಃ . . . ರುಜಾ — ಈ ೧೨ ವ್ಯಾಧಿ " (ಹಲಾಯು. ೪೯-೨೪೬); ಇದು ದುಃಖಮೊ ರುಜೆಯೊ ಕಳವಳಮೊ ಪೇಳ್ (ಗಾಕಂಪು. ೬೩೩) ; ರುಜೆಯಡಸಿ ಕೆಡಿಪಿಹ ಹೊತ್ತು ರಂಭೆ ದೊರೆಕೊಂಡಲ್ಲಿ ಫಲವೇನು (ಪಕಣಾ. ೭-೪). ೩. ನೋವು ; ಬಾಧೆ. ೪. ಒಂದು ಬಗೆಯ ಮರ : ಸಿರಿಕಂಡಂ ರಾಜಿ ಮಾಂಸಿ . . . ಎಂಬಿನಿತುಮಂ ಶೀತಾಂಬುವಿಂ ಪೂಸೆ (ಕೂಗೊಸಂ. ೯-೦೬೨). [ಸಂ. ರುಜಾ]

ರುಡ್ಡುಗೋಲು (ನಾ). (?) : ಶಿವನು ಹಱಿಕೊಗಡ್ಡ, ಕೆದಱುಮಿಸೆ, ದೊಡ್ಡಕಚ್ಚೆ . . . ಕೈಯಲ್ಲಿ ರುಡ್ಡುಗೋಲು, ಹೆಗಲ ಮೇಲೆ ಕಂಬಳಿ, ನೊರೆವಾಯಿರೆದ ಗಾವುಡಿಯಾಗಿ, ನಡುಪಟ್ಟಣದೊಳು ಬರುತ (ಕೃಕೃಷ. I, ೨೦೩). [ರುಡ್ಡು ? + ಕೋಲ್ು (< ಕೋಲ್[1])]

ರುಣ. ರಿಣ (ನಾ). ೧. ಸಾಲ ; ಕಡ : ಗೋಣುಮಾಱುಗಳೋಲಗದ ಹಣರುಣವ ನೀಗಿದರು (ಕುಪಾ೧ಲಾ. ೯-೦೩) ; ಜೂಜಾಟಿಕೆ ಸೂಳೆಬಂಟಿಕೆ ರುಣದ ಸಂವಾಜ ಪೆರ್ಗುಡಿಗಳ ಚಿರ್ಪಿ . . . ಮಾಜದು ನಿತ್ಯಕೃತ್ಯದಲಿ (ಪೋಪಕ. ೨೦-೨೬). ೨. (ಆಲಂ) ಹಂಗು : ಎಲ್ಲರ ಮುಂದೆ ಮೊಗ ಗೆಡಿಪ ರುಣದೊಳಗೆ ಸುಡುತಿರುವ ಚಿಂತೆ (ಕೃಳಪ. ೦-೦೯-೩). ರಿಣ :

೨. ಅಖಿಲದಳಭಾರ ಬಿದ್ದುದು ಸಾತ್ಯಕಿಯ ಸುರನಾರಿಯರೆ ತೋಳಿನಲಿ ಕಾಬುದು ವೆಲನ ರಿಣ ಹಱಿದು (ಭಾಷ್ಯಕಳ. ೩-೦೩) ; ಎಣ್ಣೆ ಬೆಣ್ಣೆಯ ರಿಣವು ಅನ್ನವಸ್ತ್ರದ ರಿಣವು ಹೊನ್ನು ಹೆಣ್ಣಿನ ರಿಣ-ತೀರಿದಾಕ್ಷಣದಿ ಮಣ್ಣು ಪಾಲು (ಸರ್ವಜ್ಞ. ೪೩). ೩. ಉಪಕಾರ ; ಯಾವ ಜನ್ಮದಲ್ಲಿನ್ನು ರಿಣವ ತೀರಿಸಲಿ (ಸೂರ್ಯಶ. ೭೯-೩) [< ಸಂ. ಋಣ]

ರುಣಪಾತಕ (ನಾ)· ಸಾಲ ತೀರಿಸದಿರುವುದರಿಂದಾದ ಪಾಪ; ಋಣದ ಪಾಪ : ಅಣು ಹೋಗಿ ಪರ್ವತವಾದರೂ ರುಣಪಾತಕ ಬೆನ್ನು ಬಿಡದು (ಗಾಡಿ). [< ಸಂ. ಋಣಪಾತಕ]

ರುಣಿ (ನಾ). ಸಾಲವನ್ನು ತೀರಿಸದೆ ಇರುವ ವ್ಯಕ್ತಿ: 'ರುಣಿತನ' ಪರಾ. [< ಸಂ. ಋಣಿನ್]

ರುಣಿತನ (ನಾ). ಸಾಲಗಾರಿಕೆ : ಸಂಸಾರವಿಚಾರವನ್ನೂ ಧನಿಕನ ರುಣಿಕನದ ಗತಿಗಳನ್ನೂ (ಶಿಷ್ಟರ. ೦-೦). [ರುಣಿ + — ತನ]

ರುತ (ಗು). ೧. ಶಬ್ದ ಮಾಡಲ್ಪಟ್ಟ ; ಧ್ವನಿಮಾಡಿದ. ೨. ಪೂಡಿ ಮಾಡಿದ ; ಮುರಿದ ; ಜೊರುಜೊರಾದ. (ನಾ). ೩. (ಪಶು, ಪಕ್ಷಿ ಮೊದಲಾದುವುಗಳ) ಧ್ವನಿ; ಕೂಗು : ತಟನೀವ್ಯೂಹದೊಳ್ ಪೂರವಾರಂ ವಿರಹವ್ಯಾತಂ ಬಿಗುರ್ವಂತೊಡನೊಡನೆ ರುತಂ ಪರ್ವಿಸುತ್ತಿರ್ದುವೆತ್ತಂ (ಕಾದಂಬ. ೩೩೨); ಎನ್ನಿರವನಱಿಪುವೆನೆಂದು ಭಿನ್ನಸ್ವರದಿಂ ಸರಂಗೆಯ್ವುದು ಮುಗ್ಧಕಂಗಳ್ ಕೇಳ್ದು ಕಾಕರುತಮಪ್ಪುದೆಂದರಿಮರ್ದವಂಗಱಿಪುವುಮಂ (ಹಂಸಕಂ. ೨೩೯-೨೬). [ಸಂ.]

ರುತಿ (ನಾ). ೧. ಧ್ವನಿ ; ಪಾಸಜಿ ಸಿಂಹಪ್ರಕಮಳನೀರುತಿ ಮಂಗಳಗೀತಿ (ಪಂಪಭಾ. ೭-೨೯); ಮಂಜೀರಕಂಕಣಕಿಂಕಿಣೀರುತಿ ಪೊಣ್ಮೆ (ಜಾಪಿ.೩-೩೩): ಈ ಶಾಶ್ವತರುತಿಗೊಂದಿದ ಅಂದಂದಿನ ಸ್ಮೃತಿಯೋಲ್ (ಗಜಕ. ೨೬-೦), ೨. ಮಾತು : ಸೊಗದಂತಕ ಸೆಳೆದೊಯ್ವುದು ಅದೊ! ನೇಹದ ರುತಿಯು ಇನಿವೇಟದ ಸೊಧಗಡದು ಸವಿದಾಡುವ ಸೈಗರೆದು (ಕಾಣಾ. ೬೬-೨). [ಸಂ.]

ರುತು, ರಿತು (ನಾ). ೧. ವಸಂತ, ಗ್ರೀಷ್ಮ ಮೊದಲಾದ ಆರು ಋತುಗಳು : " ಎರಡೆರಡು ಮಾಸಂ ಕೂಡಿದೊಡೆ ವಸಂತ, ಗ್ರೀಷ್ಮ, ಪ್ರಾವೃಷ್(ಟ್)ಡ್, ಶರ(ದ್)ತ್, ಹೇಮಂತಃ, ಶಿಶಿರಃ – ಎಂದಾಱು ರುತುಗಳಕ್ಕುಂ " (ಜಿಡಾಮ್ಯು. ೦೯-೦೦೩) ; ಈ . ಪೊಬ್ಬಿಂಗೀ ರುತುವಿಂಗೀ ಪಸದನಂ (ಶಂಕಣಾ. ೩-೧೩); ಪಸದನಮಾವುದಾವ ರುತುವಿಂಗಮದೊಪ್ಪುಗುಮಾವ ಪೊಲ್ತದಾವಸಕದೊಳೊಂದುಗುಂ (ಗಣಿಯು. ೦೦-೨೦ ತಿಪಕ್ಕ). ೨. ಮುಟ್ಟು ; ರಜಸ್ಸು : 'ರುತುಕಾಲ' ಪರಾ. ೩. [ಗಣಿತ] ಆರು ಎಂಬ ಸಂಖ್ಯೆಯ ಸಂಕೇತ : ದ್ರವ್ಯ, ಋತು . . . ರುತು . . . ಇಂತಿನಿತುಂ ಒಕ್ಕೆ ಪೆಸರು. (ಕೃಪಶಾ. ೦೦). ' ರುತುವದನ ' ಪರಾ.

ರಿತು : ೧. ತವ್ಮಾತಮ್ಮಂದಿನಂದಮನಾಱುಂ ರಿತು ಪತ್ಪುವಿಟ್ಟು (ಜಾಂತಿಪು. ೯-೦೩೩) ; ಉಮೇಂದ್ರನ ವನಕೇಳಿಯು ಪದನಂ ಸಾರ್ದೋಲಗಕ್ಕೆ ರಿತುಗಳ್ ಬಂದಿರ್ಪುದನಱಿಪುಗುಂ . . . ಸುಮನೋಲತೆಗಳ್ (ಪರ್ಯಪು. ೯-೩೩); ಸಕಲರಿತುವೊಳು ಪೂವ ಪಣ್ಣ ಮರವೇನು ? (ಗಿಳಿಸಂ. ೨೯-೩೮).

[<ಸಂ. ಋತು]

ರುತು² (ನಾ). = ರುತ ೩ : ಅಮರವಿರೋಧಿ ಬಭ್ರು ರುತುಗಾನ ನಭಂಗಳು ಗೀತವಾಚಕಂ " (ಜಾಪಾರ. ೩೩). [<ಸಂ. ರುತ]

ರುತುಕಾಲ (ನಾ)· ಮುಟ್ಟಾಗುವ ಕಾಲ : ರಜೋದರ್ಶನದ ಸಮಯ: ರು[ಪಾಟಾಂ. ಋ]ತುಕಾಲವೇಬುದಜಕ್ಕೆಯಿಲ್ಲ ಸತಿಯಳ (ಹಾ.ಸಾ. ೨-೩೯). [<ಸಂ. ಋತುಕಾಲ]

ರುತುಕಾಲವಡೆ (ಕ್ರಿ)· ಮುಟ್ಟಾಗು ; ರಜಸ್ವಲೆಯಾಗು : ಮೊಡವಿಯು ಮೊಳೆಯನೊತ್ತುತ . . . . ರುತುಕಾಲವಡೆದ ಪುಟ್ಟಿಣಿಯರೊಪ್ಪಿದರು (ಪೋಷಪ. ೦೯-೩೨). [ರುತುಕಾಲ + ಪಡೆ]

ರುತುವದನ (ನಾ)· ಆರುಮುಖಿಗಳನ್ನು ಹೊಂದಿರುವವನು; ಷಣ್ಮುಖ : ರುತುವದನನೆಚ್ಚ ಬಾಣಗಳ ಕತ್ತರಿಸಿ ಮನ್ಮಥ ನುಡಿದ (ಪಪಪೋ. ೩೦-೨೨). [< ಸಂ. ಋತುವದನ]

ರುದಂತಿ (ನಾ). ಒಂದು ಬಗೆಯ ಸಸ್ಯ : ಶ್ರೀಗಂಧಂ ರುದಂತಿ ಜಟಾಮಾಂಸಿ . . . ಇವೆಲ್ಲಮನುದಕೆದಲ್ಲರೆದು ಪೂಸಲ್ ಕಂಚುಕೆ . . . ಗಾಯದ ಪುಣ್ಣಳ್ ಇವೆಲ್ಲಂ ಮಾಣ್ಪುವು (ಕೋಕೋಚ. ೯-೦೩೩ ಬೀಳು); ನಲಿದು ಮಾಕ್ಷಿಕದೆ ಪಿಪ್ಪಲಿ ರುದಂತಿಗಳನೊಡಗಲಸಿ ಮಧುವಿಂದರೆದು (ಪಪಪ. ೦೩-೩೩). [ಸಂ. ರುದಂತೀ]

ರುದಮಿತ್ರ (ನಾ). ದುಃಖಿಕ್ಕೆ ಶತ್ರುವಾದವನು ; ದುಃಖನಿವಾರಕ : ಭಾಸ್ವತ್ರಯಿಾ ಸ್ತೋತ್ರವರಪಾತ್ರ ರುದ[ಪಾಃಂತರು]ಮಿತ್ರ ಶರ್ವ ತ್ರಾಸಿ (ಉಶ್ಯರೇ. ೩-೩೭). [ಸಂ.]

ರುದಾಕ (ನಾ)· ಒಂದು ಬಗೆಯ ವೃಕ್ಷ ; ರುದ್ರಾಕ್ಷಿಮರ : ರುದಾಕ (ರುದ್ರಾಕ್ಷ)—ಒಹು ದೊಡ್ಡವುರ. ಇದರ ಬೀಜಗಳೇ ರುದ್ರಾಕ್ಷಮಣಿಗಳು (ಕಾಣಗ. ೩೬). [< ರುದ್ರಾಕ್ಷಿ]

ರುದಿತ (ಗು)· ೧. ರೋದಿಸಿದ ; ಗೋಳಾಡಿದ ; ಅತ್ತ. (ನಾ). ೨. ಅಳುವುದು ; ರೋದಿಸುವುದು ; ರೋದನ : "ಕ್ರಂದಿತಂ, ರುದಿತಂ, ವಿಲಾಪಃ, ಪರಿದೇವನಂ – ಈ ೪ ಆಟ್ಕೆ" (ಪಣಾಮು. ೦೦೩-೦೩); ಅರಣ್ಯರುದಿತಂ ವಲವೆನ್ನೊಲವಿಂದುವಕ್ಕೆಯಾ (ಪಂಪಭಾ. ೪-೩೯) ; ಕದನ ದೊಳ್ನಡೆದ ವೃತ್ತಾಂತಮಂ ಪೇಳಲ್ಕೆ ರುದಿತದಿಂ ಕೈಪರ್ಲ್ಗಳಸೊತ್ತಿ ಕೊಳುತೆ (ಕೃಪಶಾ. ೨೦-೦೯). [ಸಂ.]

ರುದ್ದು (ಕ್ರಿ). ಕುಟ್ಟು : ಕಡಗಿ ಜವದಿ ರುದ್ದಿ{ದ್ದಿ} ನಸುವಿಸಿಯಿಂದ ಬಡಿಸಿ ಘೃತವನ್ನಿಡೆ ಲಡ್ಡುಗೆಯನರ್ಪಿಸುವುದು (ಅಂಗಪು. ೬-೦೩). [← ತೆಲು. ರುದ್ದು, ರುತ್ತು]

ರುದ್ಧ (ಗು)· ೧. ತಡೆಯಲ್ಪಟ್ಟ ; ಪ್ರತಿಬಂಧಿತ : ಶುದ್ಧತತ್ವಾಧಿಪತಿ ಶಿವನೆನಗೆ ಕರ್ತಾ ತದ್ರುದ್ಧಮಾರ್ಗದೊಳಾನು ಬಂಟಂ (ಏಚ್ಕೃಕ್ತಿ. ೯-೦೦-೯೨). ೨. ಆವರಿಸಿದ ; ಸುತ್ತಲ್ಪಟ್ಟ : " ವೇಷ್ಟಿತಂ, ವಲಯಿತಂ, ಸಂವೀತಂ, ರುದ್ಧಂ, ಆವೃತಂ— ೫ ಈಚಿನವರಿಗೆ ಅಡ್ಡವಾಗಿರುವಂತೆ ಸುತ್ತಿಕೊಳ್ಳಲ್ಪಟ್ಟದ್ದು " (ಸಿಡ್ಕಾಂಟಿ. ೩೩೭). ೩. ಮುಚ್ಚಿದ; ಹಾಕಿದ : ಸತ್ಯವಾದ ಪ್ರೇಮ ಭಾರತವಾಸಿಗಳ ಒಹುದಿನಗಳ ರುದ್ಧದ್ವಾರದಲ್ಲಿ ಯಾವ ಮುಹೂರ್ತದಲ್ಲಿ ಬಂದು ನಿಂತಿತೊ ಆ ಕ್ಷಣ ಅದು ತೆರೆದುಕೊಂಡಿತು (ಜಜಕ. ೨. ೩೦೭). (ನಾ). ೪. ತಡೆ ; ಅಡ್ಡಿ ; ಪ್ರತಿಬಂಧ : ಆಂ ಮಾಡುವ ರುದ್ಧದೊಳ್ಕುಬಿದು ಸಾಚುಗುಮೋ ವಧು (ಕಾದಂಬ. ೬೩೩); ಸ್ವಭಾವತಃ ಆತನ ಮನಸ್ಸು ಶುದ್ಧವಿದ್ದುದರಿಂದ ಆತನ ಶ್ವಾಸಗತಿಯು ರುದ್ಧವಾಗಿ ಆತನಿಗೆ ಸಮಾಧಿಯು ಹತ್ತಿತು (ಕುಗಪ್ರ. ೩೮). [ಸಂ.]

ರುದ್ಧನೇತ್ರ (ನಾ)· ಮುಚ್ಚಿದ ಕಣ್ಣು ; ತೆರೆಯದ ಕಣ್ಣು : ನನ್ನ ರುದ್ಧನೇತ್ರಗಳ ಮುಂದಿದ್ದ ಅಸೀಮಅಂಧಕಾರದ ಮಧ್ಯದಲ್ಲಿ ನಾನು ಏಕಾಕಿಯಾಗಿ ನಿಂತು . . . ಕೂಗಿಕೊಳ್ಳಹತ್ತಿದೆನು (ಇಕ್ಕಳ. ೩೦೩). [ಸಂ.]

ರುದ್ದಿ ' ರಿದ್ದಿ ' ನೋ.

ರುದ್ರ (ಗು)· ೧. ಭಯವನ್ನು ಹುಟ್ಟಿಸುವ ; ಭಯಂಕರವಾದ ; ಭೀಕರವಾದ : ನೋಡು ಬರುತಲಿರುವಳದೋ ರುದ್ರ ಭದ್ರಕಾಳಿಯು (ಕಾಂಚಿಪು. ೦೦-೦೬). (ನಾ). ೨. ಭಯವನ್ನು ಹುಟ್ಟಿಸುವವನು ; ಭೀಕರನಾದವನು. ೩. ತ್ರಿಮೂರ್ತಿಗಳಲ್ಲಿ ಒಬ್ಬ : ಶಿವ : " ಈಶಾನಃ . . . ರುದ್ರ . . . ನೀಲಲೋಹಿತಃ — ಈ ೪೫ ಮಹಾದೇವರ ಪೆಸರ್ " (ಪಣಾಮು. ೩-೦೩); ಕಾಳಾಗ್ನಿರುದ್ರನ ಮೇಳಾಪವನ ಜಾಯದವರು ಕಾಳುದೇಳೆಯನುತಿಪ್ಪರಯ್ಯಾ (ಜಪಪ. ೨೨೬); ಆ ರುದ್ರನ್, ಉರಿಗಣ್ಣನ್, ಆರ ನಚ್ಚಲ್ಲದವ್ . . . ಎನ್ನನ್, ಮರುಳ್ಮಾಡಿಸಿ

(ಆಕ್ಷಣ್ಯ. ೦೬-೬೮). ೪. ಈಶಾನ್ಯದಿಕ್ಕಿನ ಪಾಲಕ : " ಇಂದ್ರಃ . . . ಧನದಃ , ರುದ್ರಃ — ಈ ೮ ಮೂಡಲ್ ಮೊದಲಾದಂಟುದೆಸೆಗಂ ಕ್ರಮದಿಂದೊಡೆಯರ್ " (ಪಡಾಯು.೦೬-೦೦೦). ೫. (ಸೃಷ್ಟಿಯ ಆರಂಭದಲ್ಲಿ ಬ್ರಹ್ಮನ ಭ್ರೂಮಧ್ಯದಿಂದ ಹುಟ್ಟಿದವರೆನ್ನಲಾದ) ಹನ್ನೊಂದು ಜನ ಗಣದೇವತೆಗಳು ; ವಿಕಾದಶರುದ್ರರು : ಸುರ ಮಹೀಂದ್ರನರಾಜ ರುದ್ರರ ಚರಿತಗಳಿಗಿಮ್ಮಡಿಯನಿಸಿ ಸತ್ಪುರುಷನಲ್ಲಿಗೆ ಸಲಹ ಬಂದನು ಬಸವವಿಭುವೆನುತ (೦೪೪. ೪-೬೨); ೪೯ ಮರುತ್ತುಗಳು ೧೧ ರುದ್ರರು (ಹರಿ. ೪-೬೦ ಕಾಕ್ಷರ). ೬. 'ಜಗನ್ನಾಥವಿಜಯ' ಎಂಬ ಕನ್ನಡಕಾವ್ಯವನ್ನು ಬರೆದ ಒಬ್ಬ ಕವಿಯ ಹೆಸರು : ವಾಣಿ ಬಂದು ಸಮಂತರ್ಕ ಸವೀಸಸೌರಭದವೋಲ್ ಜಿಹ್ವಾಗ್ರದೊಳ್ ರುದ್ರನಾ. (ಜಗನ್ನಾ. ೦-೬). ೭. ಯಜುರ್ವೇದದಲ್ಲಿ ಪ್ರಸಿದ್ಧವಾದ ಶತರುದ್ರೀಯವೆಂಬ ಹೆಸರುಳ್ಳ ಹನ್ನೊಂದು ಅನುವಾಕಗಳುಳ್ಳ ವೇದಭಾಗ : (ಕ). ೮. [ಗಣಿತ] ಹನ್ನೊಂದು ಎಂಬ ಸಂಖ್ಯೆಯ ಸಂಕೇತ : " ದಿಶಿ ಹತ್ತು ನಭ ಸೊನ್ನೆ ರುದ್ರರಸಿ ಹನ್ನೊಂದು " (ಜೀಗಣಿ. ೦೦೯-೬). ೯. [ಛಂದ] ಅಂಶಗಣದ ಒಂದು ಪ್ರಭೇದ : ನಾಲ್ಕು ಅಂಶಗಳ ಗಣ : ಎರಡುಂ ಮೂಱುಂ ನಾಲ್ಕುಂ ಗುರುವಿರೆ ಪ್ರಸ್ತರಿಸರ್ . . . ಸರಸಿಜಭವ ವಿಷ್ಣು ರುದ್ರ ಸಂಜ್ಞೆಗಳಕ್ಕುಂ.(ರಂಡಿಕೋಶ. ೩-೨೪೦); ಬ್ರಹ್ಮ, ವಿಷ್ಣು, ರುದ್ರ ಎಂಬ ಅಥವಾ ಎರಡು, ಮೂರು, ನಾಲ್ಕು ಅಂಶಗಳ ಗಣಗಳು ಹೋಗಿ . . . ಮೂರು ಗಣಗಳು ಉಳಿದುವು (ಕ್ಷಿಪ್ರ. ೦೦೯). ೧೦. ಗುರುವಿನ ಸಂಕೇತ ; ದೀರ್ಘಾಕ್ಷರದ ಸಂಕೇತ. [ಸಂ.]

ರುದ್ರಕಾಂತ (ನಾ). [ವಾಸ್ತು] ಕಂಬದ ಪ್ರಭೇದಗಳಲ್ಲಿ ಒಂದು : ಶಿಲ್ಪಶಾಸ್ತ್ರಗಳಲ್ಲಿ ಬ್ರಹ್ಮಕಾಂತ, ವಿಷ್ಣುಕಾಂತ, ರುದ್ರಕಾಂತ ಇತ್ಯಾದಿ ಸ್ತಂಭಪ್ರಭೇದಗಳು ಉಕ್ತವಾಗಿವೆ (ಪೂಜ್ಯಶಾ. ೩೭). [ಸಂ.]

ರುದ್ರಕಾವ್ಯ (ನಾ). ದುಃಖದಲ್ಲಿ ಕೊನೆಗೊಳ್ಳುವ ಕಾವ್ಯ: ದುರಂತ ಕಾವ್ಯ: ಒಂದು ರುದ್ರಕಾವ್ಯವನ್ನು ಓದಿದಾಗ ಸಹ ನಾವು ಅನಂದವಡುತ್ತೇವೆ (ಪಜ್ಞಾ. ೩೭). [ಸಂ.]

ರುದ್ರಗಂಟಿ (ನಾ). ೧. ಒಂದು ಬಗೆಯ ಸಸ್ಯ ಮತ್ತು ಅದರ ಹೂವು : ರುದ್ರಗಂಟಿ ಹಾಜಿ . . . ಅಂಟುಗಳನ್ನು ಮಾಡಿ ಹಚ್ಚಬೇಕು (ಕೃಷಿಕ್ರ. ೨೦೦); ರುದ್ರಗಂಟಿ ಮೂಸಿ ವಿಷ್ಣುಗಂಟಿ ಹಾಸಿ (ಗಂ. ೪೭-೬). ೨. ರುದ್ರಾಕ್ಷಿಯ ಚಿತ್ರದ ಅಂಚಿರುವ ಸೀರೆ ಅಥವಾ ಪಂಚೆ: ಆಕೆಯು ಉಟ್ಟಿರುವುದು ರುದ್ರಗಂಟಿ ಸೀರೆ (ಜೀಪ್ರ). 'ವಿಷ್ಣುಗಂಟಿ' ಪರಾ. [ರುದ್ರ + ಕಂಟ್ಟು]

ರುದ್ರಗಂಟು (ನಾ). [ವೀಶೈ] ಶಿವದಾರದ ಎರಡು ತುದಿಗಳನ್ನೂ ಸೇರಿಸಿ ಹಾಕುವ ಗಂಟು : ಶಿವದಾರಕ್ಕೆ ರುದ್ರಗಂಟು ಹಾಕು (ಜೀಪ್ರ). 'ಬ್ರಹ್ಮಗಂಟು' ಪರಾ. [ರುದ್ರ + ಗಂಟು]

ರುದ್ರಗಣ (ನಾ). ೧. ಪರಮೇಶ್ವರನ ಪರಿವಾರದಲ್ಲಿರುವ ಒಂದು ದೇವತಾಗಣ : ಆ ಕೈರಾಸವೇ ಕಲ್ಯಾಣವಾಗಲಾ ಕಲ್ಯಾಣಕ್ಕೆ ಪ್ರಮಥ ಗಣಂಗಳ್ ರುದ್ರಗಣಂಗಳ ಅಮರಗಣಂಗಳ . . . ತಂದು ನೆರಹಿದಾತ ನಮ್ಮ ಬಸವಯ್ಯನು (ಚೀಪ್ರ.೯. ೬-೨); ರುದ್ರಲೋಕದ ರುದ್ರಗಣಂಗಳೆಲ್ಲರು ರುದ್ರಪದವೆಂಬ ಸಂಸಾರಕ್ಕೊಳಗಾದರು (ಶಪಂ. ೨೪೯-೦೦೬). ೨.[ಛಂದ] ಅಂಶಗಣದಲ್ಲಿ ಒಂದು ಬಗೆ ; ನಾಲ್ಕು ಅಂಶಗಳಿರುವ ಗಣ: ರುದ್ರ ಗಣಮಂತೆಂದೊಡೆ ಗಂಗಾಧೀಶಂ (ರಂಡಿಕೋಶ. ೩-೨೪೦ ಪ); ಬ್ರಹ್ಮಗಣ, ವಿಷ್ಣುಗಣ, ರುದ್ರಗಣ (ಕೃಪಿ. ೦೦೨). [ಸಂ.]

ರುದ್ರಜಟೆ (ನಾ). ಒಂದು ಬಗೆಯ ಬಳ್ಳಿ: "ಶಿವಾ—ರುದ್ರಜಟೆ. ಮುಡಿವಾಳೆ. ವಾಳಲು" (ಚಿಪ್ರ. ೦೩೨) ; ಪುಷ್ಯನಕ್ಷತ್ರದಲಿ ತಂದು ರುದ್ರ ಜಟೆಯಬೇರನಣಲಿಂದಗಿದು ಶಿವಿಯಲೂದೆ ಲಲನೆಯೊಲ್ವಳ್(ಜಪಪ. ೦೩-೪೩) ; ರುದಂತಿ ರುದ್ರಜಟೆ ಸಹದೇವಿ ಮಯೂರಶಿಖಿಯಿವಂ ಸರಿಗೂಡಿ ತಣ್ಣೀರಿಂದ ರದು ಮೈಗೆ ಪೂಸಿಕೊಳ್ಳೆ ಸಕಲಕಾರ್ಯವು ಸಿದ್ಧಿಯಹುದು (ಅಮಣಿ. ೨೬೭). [ಸಂ. ರುದ್ರಜಟಾ]

ರುದ್ರಜಡೆ, ರುದ್ರಜೆಡೆ (ನಾ). = ರುದ್ರಜಟೆ : "ರುದ್ರಾ—ರುದ್ರಜಡೆ" (ಚಿಪ್ರ-೨೪೯). **ರುದ್ರಜೆಡೆ** : ತುಱುಚ,ನೀಲಿ, ರುದ್ರಜೆಡೆ ಇವ ಸಮಾನಂ ಗೊಂಡು ಸಹದೇವಿರಸದಲ್ಲಿ ಲೇಪವಂ ಮಾಡಿದುದು ಜ್ವರಹರ (ಅಕ್ಷ.೦. ೦೪೭). [<ಸಂ. ರುದ್ರಜಟಾ]

ರುದ್ರಜೆಡೆ ' ರುದ್ರಜಡೆ ' ನೋ.

ರುದ್ರನಾಟಕ (ನಾ). ದುಃಖದಲ್ಲಿ ಕೊನೆಗೊಳ್ಳುವ ನಾಟಕ ; ದುರಂತ ನಾಟಕ : ರುದ್ರನಾಟಕವು ಗಂಭೀರವಾದ, ಸ್ವಲ್ಪ ವಿಶಾಲವಾದ, ಸ್ವಸಂಪೂರ್ಣವಾದ ಕಾರ್ಯವೊಂದರ ಅನುಕರಣ (೦೦೫. ೨೪ ೨೦೦೯); ರುದ್ರನಾಟಕದಂತೆ ಸಗರದ ಜೀವನ, ನರನೆ ಈ ನಾಟಕಕಾರ (ಜಜಾಕ. ೦೦೯-೨೬). [ಸಂ.]

ರುದ್ರನಾಟ್ಯ (ನಾ). ಭಯಂಕರವಾದ ನೃತ್ಯ: ಉಗ್ರಮಾನುತನು ವಾತಾವರಣವನ್ನು ಅಲ್ಲೋಲಕಲ್ಲೋಲ ಮಾಡಿ . . . ಅಬ್ಬರದಿಂದ ರುದ್ರನಾಟ್ಯದಲ್ಲಿ ತಾನೆ ತಾಣವಾಗಿ ಮೈಮರೆತಿದ್ದನು (ಪಚಿಪ್ರ. ೦೭೯). [ಸಂ.]

ರುದ್ರನಾಡಿ (ನಾ). ದೇಹದಲ್ಲಿರುವ ನಾಡಿಗಳಲ್ಲಿ ಒಂದು; ಕಾಲು ಹರಡಿನ ಕೆಳಗಿರುವ ನಾಡಿ : ರೋಗಿಗಳಿಗೆ . . . ಕಾಲ ಹರಡಿನ ಕೆಳಗೆ ರುದ್ರನಾಡಿ ಕಾಣಿಸಿಕೊಳ್ಳದೆ ಇದ್ದರೆ ಆತನಿಗೆ ಆ ದಿನವೇ ಮರಣವೆಂದರಿವುದು (ಚಕ್ಕ. ೦೩). [ಸಂ. ರುದ್ರನಾಡೀ]

ರುದ್ರನಾಯಕ (ನಾ). ರುದ್ರನಾಟಕದ ನಾಯಕ ; ದುರಂತನಾಯಕ : ಸಂಪೂರ್ಣವಾಗಿ ನಿರ್ದೋಷಿಯಾದ ಪರಮಸದ್ಗುಣಯುತ ವ್ಯಕ್ತಿಯು ರುದ್ರನಾಯಕನಾಗಲು ಸಾಧ್ಯನೇ (೦೦೫. ೦೩೯); ಇದು ನನ್ನ ಜೀವನದ ರುದ್ರನಾಟಕದ ಕೊನೆಯ ದೃಶ್ಯ, ನಾನೇ ಅದರ ರುದ್ರನಾಯಕ (ಜಚಕ್ಷ. ೦೩೦). [ಸಂ]

ರುದ್ರಪುಷ್ಪ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು ; ದಾಸವಾಳ :. "ರುದ್ರಪುಷ್ಪಂ, ಜಪಾ—ಈ ೨ ದಾಸವಣಂ" (ಶಿಕಾಮು. ೩೩-೨೪). [ಸಂ.]

ರುದ್ರಬಾಣ (ನಾ)! ರುದ್ರಮಂತ್ರವನ್ನು ಅಭಿಮಂತ್ರಿಸಿ ಬಿಡುವ ಬಾಣ: ರವಿಕುಲಾನ್ವಯ ರುದ್ರಬಾಣವ ಬಿಡೆ ಪಿತಾಮಹಗಳು ಕವಿದುದಗಣಿತ ನಂದಿ ವಾಹನ ರವಿಯ ತೇಜದ ಭಾಳನೇತ್ರರು. (ಕಾಪ್ರಾ. ೦೦-೩೯). [ಸಂ.]

ರುದ್ರಭೂಮಿ (ನಾ). ರುದ್ರನು ವಾಸಮಾಡುವ ಸ್ಥಳ ; ಶ್ಮಶಾನ : ಆ ದೇಶದ ಪ್ರಾಣಿಗಳೆಲ್ಲರೂ ಮೃತರಾದರು ಅವರ ಸುಟ್ಟ ರುದ್ರಭೂಮಿಯಲ್ಲಿ ನಾ ನಮ್ಮನಜಿಸುವೆ (ಅಪಡಂ. ೩೩-೩೩೬); ಆ ದಿಗಂಬರಂ ಪಡುವೋಡೆ ರುದ್ರಭೂಮಿ ನಿಮಗಲ್ಲದೊಡೆ . . . ಎಮಗೇನನೆಂದಪರ್ (ಪಜಾಪ. ೨೦); ಬೊಪ್ಪಣ ರುದ್ರಭೂಮಿಗೆ ಬಂದಾಗ ಚಿತೆ ಪ್ರಜ್ವಲಿಸುತ್ತಿತ್ತು (ಜಾಂಕಥ. ೦೦೦). [ಸಂ.]

ರುದ್ರರೂಪಕ (ನಾ). = ರುದ್ರನಾಟಕ : ಒಂದು ರುದ್ರರೂಪಕವನ್ನು ಓದುವಾಗ ಭೀತಿಯೊಡನೆ ಶಾಂತಿಯೂ ಬೆರಕುಕೊಂಡಿರುತ್ತದೆ(ಪಜ್ಞ.ಶಾ. ೩೪); ಶ್ರೀಕಂಠಯ್ಯನವರು . . . ರನ್ನನ ಗದಾಯುದ್ಧವನ್ನು ರುದ್ರರೂಪಕವಾಗಿ ಪರಿವರ್ತಿಸಿದರು (ಪಶಾಕು. ೦೦೬). [ಸಂ.]

ರುದ್ರವಾಸ (ನಾ). [ಸಂಗೀತ] ಹದಿನೆಂಟು ಬಗೆಯ ಕೊಳಲುಗಳಲ್ಲಿ ಒಂದು ; ಮುಖರಂಧ್ರದಿಂದೆ ಧ್ವನಿರಂಧ್ರದವರೆಗೆ ಹನ್ನೊಂದು ಅಂಗುಲ ಅಂತರವಿರುವ ಕೊಳಲು : ಜಾತಿವಾಸ . . . ರುದ್ರವಾಸ . . . ಭುವನಾಧಿವತಿವಾಸವೆಯ ಪದಿನೆಂಟು ತೆಱದ ವಾಸಂಗಳ ಲಕ್ಷಣವ ನಿಜಿದಾ ಜಾತಿ ಮುಖದ ಕಳೆಯ ಮುಯಣಮಂ ಸೈತುಮಾಡಿ (ಪಡೀ. ೦೯೦). [ರುದ್ರ+ವಾಸ]

ರುದ್ರವೀಣೆ (ನಾ). ಒಂದು ಬಗೆಯ ವೀಣೆ : ವೀಣೆ ರುದ್ರವೀಣೆ ತುಂಬುರ ವೀಣೆ ಕಿನ್ನರವೀಣೆ ಕೈಲಾಸವೀಣೆ ಮೊದಲಾದ ತಂತಿ ಕಟ್ಟಿ ನುಡಿವ ವಾದ್ಯ ವನಱಿವುದು (ಆದಿ. ೬-೦೨) ; ವಿಪಂಚಿಕೆ . . . ರುದ್ರವೀಣೆಯೆಂಬ ಇಷ್ಟ ಕೈರಡು ತೆಱದ ತಂತ್ರೀವಾದ್ಯಕ್ರಮವೆಂಬುದು (ಶಬ್ದಮ. ೨೩೬); ಯಾಕೊ ಕಾಣೆ ರುದ್ರವೀಣೆ ಮಿಡಿಯುತಿರ್ಪುದು (ಗೂ. ೦೦೩-೨).

[ಸಂ. ರುದ್ರವೀಣಾ]

ರುದ್ರವೀರ್ಯ (ನಾ). ೧. ಶಿವನ ರೇತಸ್ಸು : (೬). ೨. ಪಾದರಸ ; ಪಾರಜ : (೬). ೩. ಗಂಧಕ : (೬). [ಸಂ.]

ರುದ್ರಸಾವರ್ಣಕ (ನಾ). ಹದಿನಾಲ್ಕುಮನುಗಳಲ್ಲಿ ಹನ್ನೆರಡನೆಯವನು: ಸ್ವಾಯಂಭುವ . . . ರುದ್ರಸಾವರ್ಣಕ . . . ಇಂದ್ರಸಾವರ್ಣಕರೆಂಬ ಹದಿನಾಲ್ಕು ಮನುಗಳೊಳಗೆ (ಶಬ್ದಮ. ೨೦೮). [ಸಂ.]

ರುದ್ರಸೂಕ್ತ (ನಾ). ರುದ್ರನನ್ನು ಕುರಿತು ಪಠಿಸುವ ಋಗ್ವೇದದ ಮಂತ್ರ : ಚತುರ್ಮುಖದಿಂ ರುದ್ರಸೂಕ್ತರಥಂತರಾದಿಮಂತ್ರಮನೋದುವಬ್ಜಭವನಂ . . . ಪೆಪನಾಳ್ದು (ಪಂಪಾ. ೦-೬೯ ಪ). [ಸಂ.]

ರುದ್ರಹೋಮ (ನಾ). ರುದ್ರದೇವತೆಯ ಪ್ರೀತ್ಯರ್ಥವಾಗಿ ಮಾಡುವ ಯಜ್ಞ : ಮುರುಗಸೆಟ್ಟಿಯ ಮಗಂ ಬಸವಯ್ಯಂ ರುದ್ರಹೋಮಂಗೆಯ್ದು (ಚಿಕ್ಕ. IV, ಹೊಸ. ೦೬-೬; ೨೦೩೨). [ಸಂ.]

ರುದ್ರಾಕ್ಷ (ನಾ). ೧. ಒಂದು ಬಗೆಯ ಮರ ಮತ್ತು (ಜಪಮಾಲೆಗೆ ಉಪಯೋಗಿಸುವ) ಅದರ ಕಾಯಿ ; ℙ ಇದು ರುದ್ರನ ಕಣ್ಣೀರಿನಿಂದ ಹುಟ್ಟಿತು ಎಂಬ ನಂಬಿಕೆಯಿದೆ : ನಂದನಾದ್ಯಾರಾಮಂಗಳೊಳು ರುದ್ರಾಕ್ಷ . . . ಶಿರೀಷ (ಶಬ್ದಮ. ೨೦೦). ೨. [ವೀಶೈ] ಅಷ್ಟಾವರಣಗಳಲ್ಲಿ ಒಂದು ; ರುದ್ರಾಕ್ಷಮರದ ಬೀಜ ; ℙ ಶೈವರು ಹಾಗೂ ವೀರಶೈವರು ಇದನ್ನು ಪವಿತ್ರವೆಂದು ದೇಹದಲ್ಲಿ ಧರಿಸುತ್ತಾರೆ : ಮೆಣಸು: ಕಾಳು ದೊಡ್ಡದಿರಬೇಕು, ಮೇಲಿನ ಹುರುಬುರುಕುತನ ಧಮ್ಮಾಗಿದ್ದು ರುದ್ರಾಕ್ಷದಂತೆ ಸ್ಪಷ್ಟಾಗಿರಬೇಕು (ಪುಟಂಜ್ಯ. ೩೦). [ಸಂ.]

ರುದ್ರಾಕ್ಷಹಲಸು (ನಾ). ಒಂದು ಬಗೆಯ ಹಲಸು : ರುದ್ರಾಕ್ಷಹಲಸು ನೆಲಹಲಸು ಬಕ್ಕೆವಲಸು (ಶಬ್ದಮ. ೨೦೦).

[ರುದ್ರಾಕ್ಷ + ಹಲಸು (< ಪಲಸು)]

ರುದ್ರಾಕ್ಷಿ (ನಾ). ೧. = ರುದ್ರಾಕ್ಷ ೧ : ಇರಲು ರುದ್ರಾಕ್ಷಿಗಳ ಬೀಜವ ಹರನ ಉರಿಗಣ್ಣಿದನು ಧರಿಸಲು ದುರಿತನಿರ್ದಹ (ಪಜ್ಞ. ೪೫-೪೯) : ರುದ್ರಾಕ್ಷಿ ಆಮರದವಳ್ . . . ಕಷಾಯವಂ ಕಾಯಿಸಿ ಕುಡಿಯೆ ದಾಹಜ್ವರ ಪರಿಹಾರವಾಗುವುದು (ಸಣ್ಕ. ೩೩). ೨. = ರುದ್ರಾಕ್ಷ ೨ : ವಿಭೂತಿಯನೆ ಪೂಸಿ ರುದ್ರಾಕ್ಷಿಯನೆ ಕಟ್ಟಿ ಶಿವ ನಿಮ್ಮೊಲವಿಲ್ಲದಂತೆ ಅಗಿರ್ದಿನಯ್ಯಾ (ಬಸ. ೫೬೯) ; ಆ ಯಜ್ಞಂಗಳ ಫಲವ ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ ದೊರೆಕೊಂಬುದು ನೋಡಾ (ಪಾಂಡೇ. ೧೪-೨). [< ಸಂ. ರುದ್ರಾಕ್ಷ]

ರುದ್ರಾಕ್ಷೆ (ನಾ). ೧. = ರುದ್ರಾಕ್ಷ ೧ : "ಶಿವಾಕ್ಷಂ . — ರುದ್ರಾಕ್ಷೆ" (ಓಪಲ್ಲಿ. ೫೬೪). ೨. = ರುದ್ರಾಕ್ಷ ೨ : ವಿಭೂತಿಯುಮುನುದ್ದೂಳನಂ ಮಾಡಿ ಹರುಷದಿಂ ಪಾಡುತುಂ ರುದ್ರಾಕ್ಷೆ[ಪಾಣಾ. ಕ್ಷಿ]ಯಂ ಸೂಡಿ (ಹರಿಶ. ೬೮. ೪-೦೦). [ಸಂ. ರುದ್ರಾಕ್ಷ]

ರುದ್ರಾಟ್ಟಹಾಸ (ನಾ). ೧. ಶಿವನ ನಗು : ಎಲೆ ತಾರಾಗಂ ಹರಂ ಕಣ್ಣಡರಿಗಿದುದಂತಲ್ತು ರುದ್ರಾಟ್ಟಹಾಸಂ ಜಲಮಾದತ್ತಲ್ತು . . . ಎಸಲ್ ಚಿಲ್ಲುದಾಯ್ತುಬ್ಜಹುಂಡಂ (ಶಾಂಭ. ೬೬೪). ೨. ಭಯಂಕರವಾದ ನಗು : ಭೀಕರವಾದ ಅಟ್ಟಹಾಸ : ಮೊರೆದುರುಳು, ರತ್ನಧಿಯಂ, ಉಲ್ಲೋಲ ಕಲ್ಲೋಲ ರುದ್ರಾಟ್ಟಹಾಸದಿಂ (ಪಜ್ಞ. ೫೫-೦೬.೨೪).

[ರುದ್ರ + ಅಟ್ಟಹಾಸ]

ರುದ್ರಾಣಿ (ನಾ). ಪರಮೇಶ್ವರನ ಹೆಂಡತಿ ; ಪಾರ್ವತಿ : "ರುದ್ರಾಣೀ . . . ಗಿರಿಜಾ. ಮೇನಕಾತ್ಮಜಾ — ಈ ೨೧ ಗೌರೀದೇವಿಯ ಪೆಸರ್" (ಪಶ್ಚಾಯು.೧-೦೩) ; ರಾಣಿಯು ವಾಸದ ಪೊಸ ನೇರಾಣಿಯೊ ಮಾಡಂಗಳೊಳಗೆ ಕಯ್ಗೊಯ್ದರೆ ರುದ್ರಾಣಿ ವರುಣಾನಿ ನೆಗಟ್ಟಿಂದ್ರಾಣಿಯೆನಲ್ಕಕ್ಕುಮಿಕ್ಕ ಮಹಿಷೀಬ್ಬಂದಂ (ಪಾಂಡಿಪು. ೦೦-೭೦). [ಸಂ. ರುದ್ರಾಣೀ]

ರುದ್ರಾಭಿಷೇಕ (ನಾ). ರುದ್ರಮಂತ್ರವನ್ನು ಪಠಿಸುತ್ತಾ ಶಿವಲಿಂಗಕ್ಕೆ ಮಾಡುವ ಅಭಿಷೇಕ : ಮಧ್ಯಾಹ್ನ ರುದ್ರಾಭಿಷೇಕ . . . ಪೂರೆಂಟು ಆರತಿಯ ರಂಗಪೂಜೆ (ಪೇಪಕಂ. ೧). [ಸಂ.]

ರುದ್ರಾವತಾರ (ನಾ)-೧. ಶಿವನ ಅವತಾರ : ಭಾವಿಸುವಡಿಂತಲ್ಲದಿದ್ದಡೆ ಭೂವಳಯದೊಳಗುದಯಿಸಿದ ರುದ್ರಾವತಾರದ ದಿವ್ಯಮಹಿಮೆಯದೆಂತ ಮರ್ದಪುದು (ಪಚಕ್ರ. ೩೬-೬). ೨. ರುದ್ರನ ಅಂಶದಿಂದ ಹುಟ್ಟಿದವನು: ಅಶ್ವತ್ಥಾಮ ಮೊದಲಾದವರು : ಕವಿಲಕುಲೋದ್ಭವ ಮಿಗೆ ವಿಷ್ಣುಮೂರ್ತಿ. ರುದ್ರಾವತಾರನಿಜಾವಟಿಡುಗಂ (ಗಣಾಯು. ೨-೦೪) ; ರುದ್ರಾವತಾರನು ವೀರಶ್ಯಂಗಾರೆ (ಪಚಕ್ರ. ೬೦-೦) : ಬಾರ, ಬೀರರ ಬೀರ, ದೈವಮನ್ ಲೆಕ್ಕಿಸದ ರುದ್ರಾವತಾರ ! (ಆಕ್ಕಣ್ಣ. ೯-೬೦). ೩. ಭಯಂಕರವಾದ ರೂಪ : ರಣಹಲಗೆ ಸದ್ದಿನಲಿ ಜಿದ್ದುಕಟ್ಟಿದ್ದಿರುವ ಜಡಿಮಳೆಯ ರುದ್ರಾವತಾರ ! (ಪಂಯು. ೦೯-೩) ; ಅವಳ ಚಿತ್ರಪಟಲದ ಮೇಲೆ ಅವಳ ಹಿಂದಿನ ಜೀವನವೆಲ್ಲ ಜೀವ ತಾಳಿ ರುದ್ರಾವತಾರದಿಂದ ಕೊನೆಯತೊಡಗಿತು (ಪಕ್ಕಾಜ. ೬೩).

ರುದ್ರಾವತಾರಜನಕ = ಅಶ್ವತ್ಥಾಮನ ತಂದೆ: ದ್ರೋಣ: ಕೈಲೋಕ್ಯ ಧನುರ್ಧರನುಂ ರುದ್ರಾವತಾರಜನಕನುಂ . . . ಎನಿಸಿದ ಬಿಲ್ಲ ಜಾಣಂ ದ್ರೋಣನಬೀಸನೊಳಂ (ಗಣಾಯು. ೨-೦೦ ಪ). [ಸಂ.]

ರುಧಿರ (ಗು). ೧. ಕೆಂಪಾದ : ರಕ್ತವರ್ಣದ. (ನಾ). ೨. ಕೆಂಪುಬಣ್ಣ : ರಕ್ತವರ್ಣ : ಬಾಳುಡಿ ಪಾಱೆ ಬೀಳೆ ಪಗಲುಳ್ಳದವೊಲ್ ರುಧಿರಂ ದಿಗಂತಮಂ ಮೇಳಿಸಿ ಕೊರ್ವಿ ಕಲ್ಪದಮಸಾನದ ಸಂಜೆಮುಗಿಲ್ಗಳಂದಮಂ ಪಾಳಸೆ (ಪಂಡಾಪ್ರ. ೦೬-೬೬). ೩. ನೆತ್ತರು; ರಕ್ತ : " ಕ್ಷತಜಂ . . . ರುಧಿರಂ . . . ರಕ್ತಂ — ಈ ೭ ನೆತ್ತರು" (ಪಜಾಯು. ೦೦೯-೦೦); ಅಧಿರಿವಪ್ಪಪತಿಬಳನವರುಧಿರಜಳಪ್ಲುವಿತಂ ದ್ರಮಾ ಗದ ಪೊರಿಂ ರುಧಿರಮುಖಿಯಂಬುದು (ಪಂಪಾ. ೬-೨೩); ರುಧಿರಂ ಬಾಯೆ [ಪಜಾಭಾ. ಕಡುಮುಳಿಸಿಂದ] ಹೊಯ್ದು (ಪಪಾ. ೭-೨೩); ರಾಮಾದಿಗಳಂಮಾರಸುತ್ತ ಬಂದು ಕಂಡರು . . . ರುಧಿರಸಿಕ್ತಾಂಗನಂ. ಕ್ಷಾಂತಿ ಸುಗ್ರೀವನಂ (ಕ್ರಿಣಾಪ್ರ. ೪೦೬-೦೬೦). ೪. [ಜ್ಯೋತಿ] ಕುಜಗ್ರಹ ; ಅಂಗಾರಕ : ಹತ್ತನೆಯೊಳ್ ರುಧಿರಂ ನಾಲ್ಕನೆಯೊಳ್ ರವಿ ನಿಧನಂ ಮನುಜಂಗೆ ಲಗುಡಪಾತದಿನಕ್ಕುಂ (ಪಾಪಕಂ. ೨೩-೦೦). [ಸಂ.]

ರುಧಿರೆ (ನಾ). ಒಂದು ಬಗೆಯ ಸಸ್ಯ; ಮದರಂಗಿ : " ರುಧಿರೆಯೆನೆ ಮಧುರಂಗಿ" (ಪಾಂಗಾಪ್ರ. ೩೫-೦೩). [ಸಂ. ರುಧಿರ]

ರುಧಿರೋದ್ಗಾರಿ (ಗು). ೧. ರಕ್ತವನ್ನು ಕಾರುವ. (ನಾ). ೨. ಅರುವತ್ತು ಸಂವತ್ಸರಗಳಲ್ಲಿ ಐವತ್ತೇಳನೆಯದು : ೯ನೆಯ . ರುಧಿರೋದ್ಗಾರಿ ಸಂವತ್ಸರದ ಪುಷ್ಯಶುದ್ಧ ೧೩ (ಕೀಶಾ.ಚಾ. ೪-೯ ; ೧೦೩೨) ; ಮತ್ತಮಾ ವರ್ಷವೇ ಪ್ರಭವ . . . ರುಧಿರೋದ್ಗಾರಿ . . . ಅಕ್ಷಯವೆಂದಜುವತ್ತು ತೆಱವಾಗಿಹುದು (ಶಬ್ದಮ. ೨೬೬). [ಸಂ. ರುಧಿರೋದ್ಗಾರಿನ್]

ರುಪಾಯಿ ' ರೂಪಾಯಿ ' ನೋ.

ರುಬ್ಬು (ಕ್ರಿ)- ತಿರುವು ; ನುಣ್ಣಿಸು : ಆ ಶರಣ ಬೀದಿಲೀ ಬರುತ್ತಲಿರ್ದು ಜೋಳ ರುಬ್ಬುತಲಿಂದುವಂದನೆ ಓರ್ವಳಾರಲಾ ರುಬ್ಬುಕಲ್ಲೂ ಕಂಡು (ಕಲ್ಲಿಮಾ. ೦೫೦-೪); ಆಲದ ಮೊಗ್ಗು . . . ಅಕ್ಕಿ ಇವನ್ನು ರುಬ್ಬಿ ಅಂಬಲಿ ಕಾಯಿಸಿ ತುಪ್ಪ ಹಾಕಿಕೊಂಡು ಕುಡಿಯಲು ಮೂತ್ರ ಬಿಡುವುದು (ಶಬ್ದ. ಪಂ. ೨೭೪). [ದೇ.ಕ ತಮಿ. ರುಪ್ಪು; ತೆಲು. ರುಬ್ಬು]

ರುಬ್ಬುಕಲ್ಲು 'ರುಬ್ಬುಗಲ್ಲು' ನೋ.

ರುಬ್ಬುಗಲ್ಲು. ರುಬ್ಬುಕಲ್ಲು (ನಾ). ಒರಳಿನಲ್ಲಿ ಪದಾರ್ಥವನ್ನು ಹಾಕಿ ತಿರುವಲು ಬಳಸುವ ಗುಂಡಾದ ಕಲ್ಲು: ಗುಂಡುಕಲ್ಲು : ಅವನ ಕೈ ರುಬ್ಬುಗಲ್ಲನ್ನು ಉರುಳಿಸುತ್ತಿತ್ತು (ಹುಣ್ಣಿ. ೬೫). **ರುಬ್ಬುಕಲ್ಲು** : ಆ ಶರಣ ಬೀದಿಲೀ ಬರುತ್ತಲಿರ್ದು . . . ಆ ರುಬ್ಬುಕಲ್ಲೂ ಕಂಡು (ಕಬ್ಬಿಗ. ೦೪೦-೪). [ರುಬ್ಬು + ಕಲ್ಲು (< ಕಲ್³)]

ರುಬ್ಬುಗುಂಡು (ನಾ). = ರುಬ್ಬುಗಲ್ಲು : ನಿಮ್ಮ ಶಿವನ್ನು ಎಂಬುದು ಹೇಗೆ ಬೇಕೋ ಹಾಗೆ ಹೊರಳಿಸಬಲ್ಲ ರುಬ್ಬುಗುಂಡಾಗಬೇಕು (ರೇಣ್ಮ. ೬೨); ಹೃದಯವೋ ರುಬ್ಬುಗುಂಡೋ (ಕಂಡಿಮು. ೨೬-೬). [ರುಬ್ಬು + ಗುಂಡು]

ರುಮಂಡಿ (ನಾ). ಒಂದು ಬಗೆಯ ಮರ; ಔದುಂಬರವೃಕ್ಷ; ಅತ್ತಿಮರ : ಅತ್ತಿ (ಉಂಬರ, ರುಮಂಡಿ) :– ಪ್ರಸಿದ್ಧ – ಕಟ್ಟಗೆ ಸಾಧಾರಣ ತರದ್ದು (ಕಣಾಗ. ೬೩). [← ಮರಾ. ರುಮಂಡ, ರುಂಬಡ]

ರುಮಾಲಿ (ನಾ). ಕಳ್ಳತನಕ್ಕಾಗಿ, ದೇಹವು ಒಳಗೆ ತೂರುವಂತೆ, ಮನೆಯ ಛಾವಣಿಯಲ್ಲಿ ರಂಧ್ರ ಕೊರೆದು ಇಳಿಯುವಿಕೆ : ಬಾಗಿಲಿನ ಹತ್ತಿರ ಗೋಡೆ ಕೊರೆದು ಒಳಸೇರುವುದಕ್ಕೆ "ಬಗಲಿ" ಪದ್ಧತಿಯೆಂದೂ, ಛಾವಣಿಯಿಂದಿಳಿಯುವುದಕ್ಕೆ "ರುಮಾಲಿ" ಪದ್ಧತಿಯೆಂದೂ ಕರೆಯುವ ರೂಢಿಯಿದೆ (ಪಂಗಾಕ. ೦೫೦). [← ಮರಾ. ರುಮಾಲೀ]

ರುಮಾಲು$_1$, ರುಂಬಾಲ, ರುಮಾಲೆ, ರುಮ್ಮಾಲು, ರೂಮಾಲು, ರೂಮಾಲೆ (ನಾ). ತಲೆಗೆ ಸುತ್ತಿಕೊಳ್ಳುವ ಆದ್ದಾವಾದ ಬಟ್ಟೆ ; ಪೇಟ ; ಮುಂಡಾಸು : ಚಿನ್ನದ ಸರಿಗೆರುಮಾಲು ಸುತ್ತಿ ವಲ್ಲಿಗಯಂ ಮುಡಿದು (ಹುಚಕ. ೬೦); ರುಮಾಲುಗಳಂ ಕೈಗಳಿಂ ಸುಮಾನದಿಂದ ಪಿಡಿದು (ತೌಗಂಭ. ೨೬೬-೨೦) ; ಹೊರಗೆ ಹೊರಟಾಗ ತಲೆಗೊಂದು ರುಮಾಲು (ಪ್ರಗೋ. ೫). **ರುಂಬಾಲ** : ವೀ ರುಂಬಾಲ ಸುತ್ತು (ಅಷೋಕ. ೦೬); ನಾಲ್ಕು ಬೆರಳು ಅಂಚಿನ ಜರಿದ ರುಂಬಾಲ (ಕುಂಗಾಕ್ಷ. ೨೬). **ರುಮಾಲೆ** : ಗಂಡಸರು ತಲೆಗೊಂದು ರುಮಾಲೆಯನ್ನು ಬಿಗಿಯುವರು (ಪಾಂಕ್ರ. I. ೬೮೨). **ರುಮ್ಮಾಲು** : ಏಸುನಿಯ ಜರತಾರ ರುಮ್ಮಾಲು ಪೈರಣೆ ಪೊಸತಾದ ದುಪ್ಪಟಿದಿಂದ . . . ರಂಜಿಸಿದನು (ಕಂಪಂ. ೨೬-೬೦) ; ಭಾರಿಜರದ ವಾರಿ ರುಮ್ಮಾಲಾ ಸುತ್ತಿಕೊಂಡಾಂವಾ (ಸಣಗೀ. ೪೨-೬). **ರೂಮಾಲು** : ಜರೀಪೇಟ ರೂಮಾಲನ್ನು ಸುತ್ತಿಕೊಂಡು ಹಾಡುತ್ತಿರಲು (ಕಣಾಪು. IV. ೦೦). **ರೂಮಾಲೆ** : ಪುಮಾಲೆ ಇಲ್ಲದಿದ್ದರೆ ರೂಮಾಲೆ ಬೇಡವೇ ? (ಗಾಪ). [← ಪಾರ. ಹಿಂ. ರುಮಾಲ್, ರೂಮಾಲ್ ; ಮರಾ. ರುಮಾಲ್./ತಮಿ. ರುಮಾಲ್ಕೆ, ಉರು...ಲ್ಲೆ; ತುಳು. ರುಮಾಲ್; ತೆಲು. ರುಮಾಲು]

ರುಮಾಲು$_2$ (ನಾ). ಒಂದು ಘನಅಡಿ ; ಒಂದು ಘನಪೂಟು : ಬಾವಿಯ ಆಳವನ್ನೆಲ್ಲ ಒಂದು ರುಮಾಲಿನಳತೆಯಷ್ಟು ಅಗಿದು ತೆಗೆದರೆ ಹತ್ತು ಆಣೆ ಯೆಂದವರು. ತೀರಿದ್ದರು. ಆದರೆ ಒಂದು ರುಮಾಲೆಂದರೆ ಒಂದು ಘನಪೂಟು ಎಂದು ಲೆಕ್ಕವಿತ್ತು (ಸ್ವ. ೨೫. ೫೬೬). [?]

ರುಮಾಲೆ ' ರುಮಾಲು ' ನೋ.

ರುಮುಜುಮು (ನಾ). ಒಂದು ಅನುಕರಣ ಪದ : ಜುಮ್‌ಜುಮು ರುಮುಜುಮು ಗುಂಗುಣು ದುಮುದುಮ್ಮನಾದದ ನದಿಯೊಂದು ನಡೆಧಾಂಗ (ಸಣಗೀ. ೫೨-೦೩).

ರುಮುರುಮು (ಅ). ವೇಗವಾಗಿ ಎಂಬರ್ಥವನ್ನು ಸೂಚಿಸುವ ಒಂದು ಅನುಕರಣಾವ್ಯಯ : ರುಮುರುಮು ಹೆಜ್ಜೆ ಇಡುತ್ತ ತಿನ್ನನ ಮನೆಯತ್ತ ನಡೆಯಹತ್ತಿದ (ಕುಸರುಣಾ. ೦೦) ; ಗಾಳಿ ರುಮುರುಮು ಬೀಸುತ್ತಿರುತ್ತದೆ (ಕುಸ್ಮಪು. ೭೦).

ರುಮೆ (ನಾ). ಉಷ್ಣನ ಗಣ ; ಉಷ್ಣನ ಮೇಳೆ : "ಉಷ್ಣನ ಕಟ್ಟಿರು ಮನೆ (ರುಮಾ)ಯೆಂಬುದು" (ಪಣಾಯು. ೫೯-೦೬) ; ಪುಷ್ಪಾದಿ ರುಮೆಯ ನ್ನೆರದು ಲವಣವೆನಿಪಂತೆ (ಅಪಣಾ. ೪-೪-೬). [ಸಂ. ರುಮಾ]

ರುಮ್ಮಾಲು ' ರುಮಾಲು ' ನೋ.

ರುಮ್ಮು$_1$ (ಕ್ರಿ). ಸುತ್ತಾಡಿಸು ; ಶ್ರಮವಡಿಸು (?) : ಗಾಣ ಹಾಕಿ ರುಮ್ಮಿದರ ಇದರ ಡುಬ್ಬ ಕಡಿಯಾಕೆ ಆಗದಿದ್ದರ ನನ್ನ ಹೆಸರಗೊಂಡ ಕರಿ ಬ್ಯಾಡಿರಿ.(ರಾಹಾ. ೦೬). [< ರುಬ್ಬು?]

ರುಮ್ಮು$_2$ (ನಾ). (ಉಕ) ಕುಂಟೆಯನ್ನು ಹಿಡಿಯಲು ಅನುಕೂಲಿಸು ವಂತೆ ಅಳವಡಿಸಿರುವ ಹಿಡಿ.–ಹಿಡಿಕೆ : ರುಮ್ಮಿನ ಮೇಲೆ ಭಾರ ಹಾಕಿ ರಂಟಿ ಹೊಡೆಯಲಿ (ಕಜಾ). [?./ಮರಾ. ರುಮಣೇ]

ರುರು (ನಾ). ೧. ಮೈಮೇಲೆ ಬಿಳಿಯ ಚುಕ್ಕೆಗಳಿರುವ ಒಂದು ಬಗೆಯ ಜಿಂಕೆ : "ಸಾರಂಗಃ . . . ರುರುಃ – ಈ ೪ ಸಾರಂಗಂ" (ಪಂಚಮು. ೪೪-೬೭).; ರುರುಗಣಮಿಶ್ರಲಿತ್ತ ವಿಜರನ್ಯೃಗಸಂಕುಳಮಿಶ್ರಲಿತ್ತ (ಶಾದಂಪು. ೦೫೬) ; ಕರಿ ರುರು ಹರಿಣ ಶಶಕ ಸಾರಂಗವು ಮೊದಲಾದ ವ್ಯಗಂಗಳೊಡನೆ ಬದ್ಧವೈರಮಂ ಪತ್ತುವಿಟ್ಟು (ಹಂತಿಕಂ. ೦೦೯-೨೦). ೨. ನಾಯಿ : 'ರುರುಪರಿಚಿತ' ಪರಾ. ೩. ಒಂದು ಬಗೆಯ ಕ್ರೂರ ವ್ಯಗ. [ಸಂ.]

ರುರುಪರಿಚಿತ (ಗು). ೧ ಜಿಂಕೆಗಳಿಂದ ಕೂಡಿರುವ. ೨. ನಾಯಿಗಳಿಂದ ಕೂಡಿರುವ. ೧. ೨ : ಆ ಮಹಾವನಂ . . . ಭೈರವಾವಳಿಯಂತೆ ರುರುಪರಿಚಿತಮುಂ ಪಿತಾಮಹಾವನದಂತೆ ಸಾಮಜಪದಾಧಿರಾಮಮುಂ (ಹರ್ಕೃ. ೩-೩೨೪). [ಸಂ.]

ರುರುವಂತಿ (ನಾ). ಒಂದು ಬಗೆಯ ಸಸ್ಯ ; ತೊಟರೆಗಿಡ : "ತುಂಬಿ ರುರುವಂತಿ ತಿಂದುಕಂ" (ಪಾಂಗಣಾ. ೩೬-೦೩). [?]

ರೇಚಕ (ನಾ)· ೧. ಉಸಿರು ಬಿಡುವುದು ; ನಿಶ್ವಾಸ ; 'ರೇಚಕವಾತ' ಪರಾ. ೨. ಭೇದಿಯಾಗಲು ಕೊಡುವ ಔಷಧ ಮುಂತಾದುವು ; ವಿರೇಚಕ : ಬಾಳೆಹಣ್ಣು ರೇಚಕವೆಂಬುದೇನೋ ನಿಜ. ಆದರೆ ಬೇನೆ ಬಿದ್ದಾಗ ಅದನ್ನು ಯಾರೂ ಕೊಡುವುದಿಲ್ಲ (ಜಾಂಲಾ· ೩೬)· ೩. ಒಳಗಿನ ವಾಯುವನ್ನು ಹೊರಹಾಕುವ ಒಂದು ಬಗೆಯ ಸಲಕರಣೆ ; ನಿಷ್ಕಾಸನಾಳ : ಯಂತ್ರದ ರೇಚಕದಲ್ಲಿ (ಎಗ್ಸಾಸ್ಟ್) ವ್ಯರ್ಥವಾಗ ಬಹುದಾದ ಶಕ್ತಿಯನ್ನು ಬಳಸಿಕೊಂಡು . . . ಅತಿಪುರಕಗಳನ್ನು ನಡಿಸುವುದು ಮತ್ತೊಂದು ವಿಧಾನ (ಕಂಕೋಲ. ೩, ೨೪೬)· ೪. ಕಳಂಕ ; ದೋಷ : ಬೇಚರತ್ವದ ನಿಲವ ಭೂಚರರರಿವರೆ ವಾಚಾಳಿಗಳ ಮಾತ್ರು ಹೊಲ್ಲದು ಮನದೊಳು ರೇಚಕವಳಿಯದೆ ಹೊಳೆಯದು (ಸಿಪ್ರ· ೩೭-೨೩)· ೫. [ಯೋಗ] ಮೂರು ಬಗೆಯ ಪ್ರಾಣಾಯಾಮದ ಅಂಗಗಳಲ್ಲಿ ಒಂದು ; ಮೂಗಿನ ಒಂದು ಹೊರಳೆಯಿಂದ ಉಸಿರನ್ನು ಹೊರ ಹಾಕುವುದು : "ನಾಸಿಕದಿ ಬಿಡುವಾನಿಲಂ ರೇಚಕಮೆನಿಸ್ಕ್ಕೆ" (ಪುಂಗಣ ೦೭-೦೪) ; ವನರುಹವಿಷ್ಟರಂ ರುಚಿರರೇಚಕಪೂರಕಕುಂಭಕಕ್ರಿಯಾಮಮಿರ (ಗಣಪು· ೦೭-೦೫); ರೇಚಕಪೂರಕದ ರಿಂಗಣವನಜೀವ್ಪುದು ಯೋಗಸಿದ್ಧಿಗೆ ಲಕ್ಷಣವನು (ಕುಪ್ಪಾಕಾ· ೪-೯) ; ವಾಸಿಕಾಪುಟದಿಂದೆ ಪ್ರಾಣವಾಯುವನ್ನು . . . ಹೊರಗೆ ಬಿಡುವುದಕ್ಕೆ ರೇಚಕ ಎಂಬು ಹೆಸರು (ಜಾತತ್ತ್ವ· ೩೩೭). ಪೂರಕ ' ಪರಾ. ೬. [ನಾಟ್ಯ] ನೃತ್ಯದ ಒಂದು ಚಲನೆ : ಕರಣಂ ರೇಚಕಮಂಗಹಾರಮಿನಿತೆಂದೋದುತ್ತುಮಿರ್ಪೋದದತ್ತಿರಲ್ (ಪಂಪ· ೬-೦೫೦); ಒಂದು ಅಂಗದ ವರ್ತುಲಾಕಾರಚಲನೆಗೆ ' ರೇಚಕ ' ವೆಂದು ಹೆಸರು (ಜಾಶಾಕೃ· ೩೩)· [ಸಂ.]

ರೇಚಕಯಂತ್ರ (ನಾ)· ಒಳಗಿರುವ ಗಾಳಿಯನ್ನು ಹೊರಕ್ಕೆ ಹೊರಡಿಸುವ ಸಾಧನ; ಪಂಪು : "ರೇಚಕಯಂತ್ರ ; ಪೂರಕಯಂತ್ರ" (Pump· ೧೯೫೨). [ಸಂ.]

ರೇಚಕವಾತ (ನಾ)· ಉಸಿರಿನ ಗಾಳಿ : ಧಾತ್ರಿ ರೇಚಿಸುವ ರೇಚಕವಾತ ದಿನಭೃದೂಡ್ಡುಗಳ್ ರ್ಚಿಸಲ್ (ಪಜಾತೀ· ೯-೦೦)· [ಸಂ.]

ರೇಚಕಾನಿಳಹತಿ (ನಾ)· ಉಸಿರಿನ ಗಾಳಿಯ ಹೊಡೆತ : ಮಿಳರ್ವ ಪತಾಕೆಗಳೆತ್ತಿದ ಶಿಳಮೆನೆ ಜನಿಸಿಶುವ ರೇಚಕಾನಿಳಹತಿಯಿಂ ತಳರ್ದು ನಭೋದ್ಧಿಯ ನೌಸಂಕುಳದಂತೋಡಿದುದು ಸುರವಿಮಾನವಿಕಾಸಂ (ಹರ್ಕ್ರ· ೦೨-೦೩೭). [ಸಂ. ರೇಚಕಾನಿಲಹತಿ]

ರೇಚನ (ನಾ)· ದೋಷವನ್ನು ಹೊರಹಾಕುವಿಕೆ : ನಾಚಿಕೆಯನಾಗಿವುವು ನಮ್ಮ ಸುಖವಿಘಾತುರದ ಯೋಚನೆಗಳವನು ಮರುವಗಲು ಪರಿಕಿಸಲು ಬಾಜಿದ್ದ ರಸನೆ ತಾನೊಳಸೇರಿಕೊಳ್ಳುವುದು ರೇಚನವದಾತ್ಮಕ್ಕೆ (ಪುಂಜಾಪ· ೨೩೩). [ಸಂ.]

ರೇಚನ (ನಾ)· ಒಂದು ಬಗೆಯ ಸಸ್ಯ ; ಲಾಲ್‌ತಿಗಡ್ಡೆ : "ಸರ್ವಾನು ಭೂತಃ . . . ರೇಚನಃ—೭ ಕಿನ್ನನೇ ತಿಗಡಯ ಹೆಸರುಗಳು " (ಸಿದ್ಧಾಂ· ೦೩೩). [ಸಂ. ರೇಚನಃ]

ರೇಚಯ್ಯ (ನಾ)· ಒಬ್ಬಾತನ ಹೆಸರು : ಪೃಥುವೀಪರಮೇಶ್ವರಮಹಾ ನಾಯ್ಕರ ರೇಚಯ್ಯನ ಮಗನ್ (ಚಳ. ೪೪, ಕೂಶಿಕ· ೬೯-೩; ಸು. ೪೩೦)· [ರೇಚ? + ಅಯ್ಯ೩]

ರೇಚಿತ (ಗು)· ೧· ಬರಿದು ಮಾಡಿದ· (ನಾ)· ೨. ಕುದುರೆಯ ಐದು ಬಗೆಯ ನಡಗೆಗಳಲ್ಲಿ ಒಂದು : ನೆಟ್ಟಗೆ ನಿಲ್ಲದೆ ಓಡುವುದು ರೇಚಿತವೆನಿಸಿಕೊಂಬುವುದು (ಅಶ್ವಶಿ· ೨೫-೨) ; ದಾರಿತಿಕ ಸ್ಕಂಧಿತ ಪ್ಲುತ ವಲ್ಗಿತ ಜಾರು ರೇಚಿತಗಳು (ಕ್ಷಾಶಪ· ೪-೩೩). ೩. [ನಾಟ್ಯ] ಹಸ್ತ ಚಲನೆಗಳಲ್ಲಿ ಒಂದು ಬಗೆ ; P''ಪತಾಕಹಸ್ತಗಳೆರಡನ್ನು ಅಂಗೈ ಮೇಲಕ್ಕೆ ಮಾಡಿ ನೀಡುವುದು ಅಥವಾ ಹಂಸಪಕ್ಷಹಸ್ತಗಳೆರಡರ ಮುಂಗೈಗಳನ್ನು ಹಾಗ್ರತೆ ತಿರುಗಿಸುವುದು [ಚಲಿಸುವುದು]" (ಜಾಕೃಕಂ· ೨೪೪ ಗಣ್ಯಪಾಠ) : ಅಂಗೈ ಮೇಗಾಗಿ ಪತಾಕಂಗಳ್ ಮೇಣ್ ಹಂಸಪಕ್ಷವಾಗಿಯೆ ಬೇಗಂ ಪಿಂಗದೆ ಮುಂಗೈ ತಿರುಗಲ್ ಕಂಗೊಳಿಸುವ ರೇಚಿತಾಖ್ಯಹಸ್ತಮೆನಿಕ್ಕುಂ (ಜಾಕೃಕಂ· ೨-೩೩)· ೪. ಕೊರಳನ್ನು ತಿರುಗಿಸುವ ಒಂದು ಪ್ರಕಾರ : ಸಮ, ನಿವೃತ್ತ, ವಲಿತ, ರೇಚಿತ, ಕುಂಚಿತ, ಅಂಚಿತ, ತ್ರ್ಯಸ್ರ, ನತ, ಉನ್ನತ — ಈ ಒಂಬತ್ತುಂ ಕೊರಲ ಭೇದಂಗಳ್ (ಜಾಕೃಕಂ· ೨-೦೦೪). ೫. ಮೂವತ್ತೆರಡು ಬಗೆಯ ಅಂಗ ಹಾರಗಳಲ್ಲಿ ಒಂದು: ಸ್ಥಿರಹಸ್ತ . . . ರೇಚಿತ . . . ಸ್ವಸ್ತಿಕರೇಚಿತ _ ಈ ಮೂವತ್ತೆರಡು ಅಂಗಹಾರಂಗಳ ಪೆಸರು (ಜಾಕೃಕಂ· ೩-೬೪). [ಸಂ.]

ರೇಚಿಸು (ಕ್ರಿ)· ೧. ಉಸಿರನ್ನು ಹೊರಕ್ಕೆ ಬಿಡು ; ನಿಶ್ವಾಸಿಸು : ಧಾತ್ರಿ ರೇಚಿಸುವ ರೇಚಕವಾತದಿನಭೃದೂಡ್ಡುಗಳ್ ರ್ಚಿಸಲ್ (ಪಜಾತೀ· ೯-೦೦) : ಶರಣ ರೇಚಿಸುವಲ್ಲಿಯೇ ಪಂಚಾಕ್ಷರಂಗಳು ಎಡೆಯಾಡುತ್ತಿವೆ (ಶಪಪ· ೩೩-೩೨)· ೨. [ಯೋಗ] ಪ್ರಾಣಾಯಾಮದಿಂದ ನಿರೋಧಿಸಿದ್ದ ವಾಯುವನ್ನು ಮೂಗಿನಿಂದ ಹೊರಕ್ಕೆ ಬಿಡು : ಪದ್ಮಾಸೀನನಾಗಿ . . . ಪ್ರಾಣವಾಯುವಂ ಪೂರಿಸುತೆ ಸಲ್ಲೀಲೆಯಿಂದವಂ ರೇಚಿಸುತೆ (ಕರ್ಣಾ· ೨-೪೩). ೩. [ನಾಟ್ಯ] ಹಸ್ತಾಭಿನಯ ಮಾಡು : ಆರುಣ ಸರೋರುಹದಲರಂ ಮುರಿವಮರಿದೀಡಾಡುವಂತೆ ನಿಟ್ಟಿಸಿ ನೋಡಲ್ ಕರವಮರಿದೆನೆ ಕರವಿಷ್ಟ ಸಾಸಿರಮೆನೆ ರೇಚಿ [ಜಾಕಾಂ· ರೇಚಿಯಿ]ಸಿದಳಾಕಯೆಡಕಂ ಬಲಕಂ (ಅಣಾಶ· ೪-೦೧೦). [ರೇಚ + — ಇಸು೩]

ರೇಜಿಗೆ (ನಾ)· ೧. ಹೊಲಸು ; ಕೊಳಕು : ರೇಜಿಗೆ ರೇಚನದಿಂದ ಅದದ್ದು, ಆರಂಭದ ಅರ್ಥ ಮಾಂತಿ. ಈಗ ಯಾವುದೇ ಹೊಲಸು (ಪಪ್ರಚು· ೦೩೭). ೨. (ಆಲಂ) ರಂಪ ; ರಾದ್ಧಾಂತ; ರಗಳೆ : ಸುಮ್ಮನೆ ನಾವು ಇದನ್ನು ರೇಜಿಗೆ ಮಾಡಬಾರದು. ಕೆತ್ತಿದರೆ ಇನ್ನೂ ಚಿಗುರೇ ಆಗುತ್ತೆ (ಶಚಿಚಾ· ೦೩೭); ಈಗ ನೋಡಿ ಮನೆಲೆಲ್ಲ ಜಗಳ. ಮೂರುಹೊತ್ತೂ ರೇಜಿಗೆ (ಕಾಪಚಿ· ೦೬೦). ೩. ಅಸಹ್ಯ ; ಜುಗುಪ್ಸೆ : ನನಗೆ ಅವರ ಮೇಲೂ ಅವರ ಮಾತು, ಕತೆ, ಆಚಾರಗಳ ಮೇಲೂ . . . ರೇಜಿಗೆಯಾಯ್ತು (ಕಾಪಚಿ· ೦೦೬). [?]

ರೇಜಿಡು (ಕ್ರಿ). ಸಾಲಾಗಿ ನಿಲ್ಲು ; ಸಾಲುಗಟ್ಟು : ಜನ ರೇಜಿಟ್ಟಿತಿ ನೋಡು ನಾಯಕರ ಮನಿಗೆ (ಪಪಣ. ೮೬) : ಅವರ ಮನಿ ಮಂದೆಲ್ಲ ರೇಜುವ್ಯಾಂಗ ಕಾಣತ್ಯತಿ (೦೮೮. ೦೩). [ರೇಜು + ಇಡು$_1$]

ರೇಜು (ನಾ). (ಉಕ) ಸಾಲು; ಓಳ: 'ರೇಜಿಡು'. 'ರೇಜುಗಟ್ಟು' ಪರಾ. ..[← ದುರಾ. ರೇಫ್. / ಸಂ. ರೇಖಾ]

ರೇಜುಗಟ್ಟು (ಕ್ರಿ). = ರೇಜಿಡು : . ಶೇಷಾಚಲದಿಂದ ಆಕಾಶಾಪಪ ಪರ್ಯಾದವರೆಗೂ ಜನಸಮೂಹವು ರೇಜುಗಟ್ಟಿತು (ಪೇಂಚಾಣ. ೦೦೦) : ಜೇನುತುಪ್ಪ ತೀರುವ ತನಕ ಆ ಹಲಿಗೆಯ ಮೇಲೆ ಇರುವೆಯು ಸಾಲು ಒಂದೇ ಸಮನೆ ರೇಜುಗಟ್ಟಿತ್ತು (ಕುಂಬಾಪ. ೫-೦೬). [ರೇಜು + ಕಟ್ಟು$_1$]

ರೇಡಿಯೋ (ನಾ). ೧. ಆಕಾಶದಲ್ಲಿ ಕಲಿಸುವ ನಿಸ್ತಂತುಸಂಜ್ಞೆಗಳನ್ನು ಒಡಿಯುವ ಸಲಕರಣೆ : ರೇಡಿಯೋ ವಾಲ್ವಿನ ಒಳಗಡೆ ಏನಿದೆಯೆಂದು ತೋರಿಸುವ ಚಿತ್ರ (ಪಾಲಶ್ಯ. III. ೦೫೧೩). ೨. ಆಕಾಶವಾಣಿ ; ಬಾನುಲಿ : ಇಂದು ರಾತ್ರಿ ಅವರ ರೇಡಿಯೋ ಭಾಷಣವಿದೆ (ಕಸ್ತೂ). [← ಇಂ. Radio]

ರೇಣು (ನಾ). ೧. ಪುಡಿ ; ಧೂಳು ; ಕಣ : "ಪಾಂಸುಃ, ಕ್ಷೋದಃ, ರೇಣುಃ . . . ರಜಃ—ಈ ೬ ಧೂಳಿ" (ಹೇಣಚಂ. ೭೫೨೦೯೯) ; ಎಲರೆಲೆಪ ದಿಂದುರುಳ್ದು ಪರೆದೆವ ಕುಸುಮರೇಣುಗಳೊಳಂ (ಗಾಪಂಭಾ. ೯೭) ; ಅಣುರೇಣುಮಧ್ಯದಲ್ಲಿ ಗುಣಭರಿತ ನೀನೆಂದು ಮಣಿವುತಿಪ್ಪೆನಯ್ಯ (ಪೇಣಾಪ. ೨-೪) ; ಕೆಂದೂಳಿ ಸೋಂಕಿದ ಸಿರಿಮುಡಿಯ ಕುಡಿಮಿಸೆಯಲಿ ಕೆಂದಡರ್ದ ರೇಣುಗಳ . . . ಪೆಪನ ಬರವ ಕಂಡನು (ಭಾಷ್ಯ. ೦೦. ೯-೬). ೨. ಹೂವಿನಲ್ಲಿರುವ ಪುಡಿ : ಪರಾಗ. ೩. ಒಂದು ಅಳತೆಯ ಪ್ರಮಾಣ: ಅಣುವೆಂಟು ರೇಣುವು (ಕ್ಷಕಪಾ. ೦೫೨೦೪. ೨. ೬-೩೦). [ಸಂ.]

ರೇಣುಕ$_1$ (ನಾ). ೧. ಒಂದು ಬಗೆಯ ಔಷಧದ್ರವ್ಯ ; ಭಸ್ಮಗಂಧಿ : "ಧ್ವಜಾ, ಹರೇಣು ... ಭಸ್ಮಗಂಧಿನೀ ಈ ೬ ರೇಣುಕವೆಂಬ ಗಂಧದ್ರವ್ಯ" (ಪಾಣಾ. ೦೦೦) ; ನವಪೃತದೊಳ್ ಕೊಡಗಿಗೆ ಸೈಂಧವ ರೇಣುಕ ಚಿತ್ರಮೂಲ ವಾಣಿಜಮಿಂಗಂಬಿವನಿಕ್ಕಿ ಪಿಡಮಂ ಮಾಡುವುದು (ಆಕ್ಷಾ. ೦೦ ೦೬) ; ಜಟಾಮಾಂಸಿ, ರೇಣುಕ, ಗಟಚುಪಾರಂಗಿ, ಅರಿಷ (ಶ್ರೀಧಾ. II. ೩೩). ೨. ಒಂದು ಬಗೆಯ ದ್ವಿದಳಧಾನ್ಯ ; ಬಟ್ಟಗಡಲೆ : ರೇಣುಕ (ಶಾಕನೇಮ) (ಪಾಂಲಿಕ್ಕಾ. ೦೭೯). 'ರೇಣುಕಬೀಜ' ಪರಾ. [ಸಂ. ರೇಣುಕಾ]

ರೇಣುಕ$_2$ (ನಾ). ೧. ಒಬ್ಬ ಯಕ್ಷನ ಹೆಸರು. ೨. ಗಣಗಳಲ್ಲಿ ಒಬ್ಬ : ವೀರವೀರಕನಂದಿ ರೇಣುಕದಾರುಕರುವ್ಯಪಮನ್ಯುಭೃಂಗಿಯು ವೀರಭದ್ರಾದಿ ಪ್ರಮಥರೋಲ್ಕೈಪ ಸಮಯದೊಳು (ಶಿಪು. ೦-೩೨). ೩. [ವೀಶೈ] ಪಂಚಾಚಾರ್ಯರಲ್ಲಿ ಒಬ್ಬ ; ಪಂಚಪೀಠಗಳಲ್ಲಿ ಒಂದಾದ ರೇಂಭಾಪುರೀ ವೀರಸಿಂಹಾಸನವನ್ನು ಸ್ಥಾಪಿಸಿದವನು : ರೇಣುಕ ರಾಮಪಂಡಿತ ಮಹಾಮದುಳಾರ್ಯರ . . . ಬನ್ನೆಸುತ್ತೆಳಗಿ ಮೇಣ್ಮಡಮೆಂ ಪರಮಾರ್ಥಸಿದ್ಧಿಯಂ (ಶಿಪು.೦-೦೭). 'ದಾರುಕ' ಪರಾ. ೪. ಒಂದು ಸರ್ಪದ ಹೆಸರು : ಮಿತ್ತಾರಿ ರೇಣುಕನು ... ದಂಡಿಪಾದಾದ್ಯುರುತರದ ಕಿರ್ಪಪ ಫಣೆಗಳು ಲಕ್ಷಸಂಖ್ಯೆಯವು (ಪಾಪ. ೪೩-೩೬). ೫. ಒಂದು ಆನೆಯ ಹೆಸರು [ಸಂ.]

ರೇಣುಕಪೀಠ (ನಾ). [ವೀಶೈ] ಪಂಚಪೀಠಗಳಲ್ಲಿ ಒಂದು : ಬಾಳೆ ಹೊನ್ನೂರಿನಲ್ಲಿ ರೇಣುಕಪೀಠವಿದೆ (ಕಸ್ತೂ). [ಸಂ.]

ರೇಣುಕಬೀಜ (ನಾ). ಒಂದು ಬಗೆಯ ಔಷಧದ್ರವ್ಯ ; ಭಸ್ಮಗಂಧಿ : " ಕಪಿಲೆ – ರೇಣುಕಬೀಜ" (ಗಂಣಾಚಿ. ೭೦) ; ಸೈಂಧವಲವಣ, ರೇಣುಕ ಬೀಜ, ಇವಂ ಸ್ನಾನಾಗಿ ವುತಿಪಾಡಿ ಆ ಕಷಾಯಕ್ಕೆ ಹಾಕಿ ಕೊಳ್ಳಲು ಬಾಣಂತಿಯರ ಸಕಲರೋಗಗಳು ಮಾಣುವುವು (ಅಕ್ಷಂ. ೦೩೭). [ರೇಣುಕ$_2$ + ಬೀಜ]

ರೇಣುಕಾನಂದನ (ನಾ). ರೇಣುಕೆಯ ಮಗ ; ಪರಶುರಾಮ : ನಿಜಭುಜ ಶಕ್ತಿಯಂ ಪ್ರಕಟಂ ಮಾಡಲೆಂದು ರೇಣುಕಾನಂದನನಲ್ಲಿಗೆ ಪೋಗಿ (ಪಂಕಾ. ೦-೦೦೬ ಪ). [ಸಂ.]

ರೇಣುಕೆ (ನಾ). ೧. = ರೇಣುಕಬೀಜ : ಸಬ್ಬಸಿಗೆ, ರೇಣುಕೆ ಇವುಗಳ ಕಷಾಯಮನಕ್ಕೆ ತಗೆದುಕೊಳ್ಳಲು ವಾತಜ್ವರಂ ಮಾಣ್ಗುಂ (ಪಕ್ಕ. ೬೬). ೨. ಜಮದಗ್ನಿಯ ಹೆಂಡತಿ; ಪರಶುರಾಮನ ತಾಯಿ : "ರೇಣುಕಾ= ಜಮದಗ್ನಿಯ ಹೆಂಡತಿ" (ಶಾಪ್ಯ. ೪೬); ಒಲುಮೆಯವಳಂತಿರ್ದು ಗಂಡನ ಕಲೆಯ ರೇಣುಕೆ ತಲೆಸಳಿ (ಪುರಪು. ೩೬-೪೭). [ಸಂ. ರೇಣುಕಾ]

ರೇಣುಕೇಶ (ನಾ). =ರೇಣುಕ$_2$ ೩ : ಶಿವಕ್ಷೋಭಸ್ಯರೇಣುಪ್ರಭವನೆನ್ನಿ ಮುಂ ರೇಣುಕೇಶಾಹ್ವಯಂ ತಾಳ್ದಂ (ಶಾಪಪ. ೦-೩೩). [ಸಂ.]

ರೇಣುಕೇಶ್ವರ (ನಾ). =ರೇಣುಕ$_2$ ೩ : ರೇಣುಕೇಶ್ವರಮಹಾಗುರು ಮುಳ್ಕೆ ಮಗಿಷ್ಯಸಿದ್ಧಿಯಂ (ಪ್ರಸಂ. ೦-೦೦). [ಸಂ.]

ರೇತ (ನಾ). ವೀರ್ಯ ; ಶುಕ್ಲ : "ಇಂದ್ರಿಯಮಂತೆ ಧಾತು ರೇತಂ ಶುಕ್ಲಂ" (ಪಪ್ರ.೬೩೮. ೭೫-೭೦) ; ರೇತ ರಜಸ್ಸಿನಲ್ಲಿ ಜನಿತ ಅಧಿವ್ಯಾಧಿಯ ತವರುಮನೆ . . . ತನು (ಪಪಸಂ. ೪೫-೬೨). [ಸಂ. ರೇತಸ್]

ರೇತಯ್ಯ (ನಾ). ಒಬ್ಬಾತನ ಹೆಸರು : ಶ್ರೀ ಪೆರ್ಗ್ಗಡೆ ರೇತಯ್ಯನ ವೇದ ಸಂಕಯ್ಯ (ಪಶ. II. ೪೭೬; ಸಂ. ೧೦೦೦). [ರೇತ ? + ಅಯ್ಯ$_1$]

ರೇತಸ್ಸು (ನಾ). ೧. = ರೇತ : ಮಲಮೂತ್ರನಿರೋಧದಿಂದಲೂ . . . ರೇತಸ್ಸು ಕ್ಷೀಣವಾಗುವುದು (ಪಪ್ರ. ೨೫೬); ರಾಗಮೆಂಬುದು ರೇತಸ್ಸಿಗೆ ಮೆರಂ (ಕಾಪುಣ. ೨೦೨). ೨. ಪಾದರಸ; ಪಾರಜ. ೩. ನೀರು. [ಸಂ. ರೇತಸ್]

ರೇಪಡಿಸು (ಕ್ರಿ). (ಉಕ) ಎಣ್ಣೆ, ತುಪ್ಪ ಮೊದಲಾದ ಜಿಡ್ಡು ಪದಾರ್ಥಗಳನ್ನು ಸವರು–ಬಳಿ : ಅವಳ ಸರ್ವಾಂಗಕ್ಕೆಲ್ಲವೂ ಅಗ್ನಿರಸವನ್ನು ರೇಪಡಿಸಿದಂತಾಗಿ ಕಣ್ಣ ಕೊನರುಗಳು ಉರಿಯ ಹತ್ತಿದ್ದವು (ಕಕ್ಕ. ೭೧೦). [ರೇಪಡ್ಕ (ಪ್ರ ← ದುರಾ. ರೇಬುಟೇ) + — ಇಸು$_5$]

ರೇಫ (ನಾ). ೧. 'ರ' ಎಂಬ ಅಕ್ಷರ : ಪಲ್ಲಟಿಸಿ ಡಕಾರದ ನೆಲೆಯಲ್ಲಿ ಟಕಾರಂ ಟಕಾರದೊಳ್ ರೇಫಂ ತಾನೆಲ್ಲಿಯುಮಕ್ಕುಂ ಪದವಿಧಿಯಲ್ಲಿ ಪರಂ ವ್ಯಂಜನಾದಿಯಾಗಿರೆ ಬಹುಳಂ (ಶಾಪ್ಯ. ೨೧೬); ರೇಫ ಉಕಾರಂಗಳ ವರ್ಣಿವೃತ್ತಿಗೆ (ಪಾಪ. ೦೯ ಶ್ಲೋ೧); ಹಳಗನ್ನಡದಲ್ಲಿ ರೇಫಯುಕ್ತವಾಗಿದ್ದ ಒತ್ತಕ್ಷರಗಳು ಈಗ ಸಜಾತೀಯ ಸಂಯುಕ್ತವ್ಯಂಜನಗಳಾಗಿವೆ (ಕ್ಷಿಪ. ೬). 'ಶಕಟರೇಫ' ಪರಾ. ೨. 'ರ' ಕಾರದ ಧ್ವನಿ.—ಶಬ್ದ. ೩. ಆಸಕ್ತಿ; ಒಲವು. ೪. ನೀಚ; ಅಧಮ : "ರೇಫ . . . ನಿಕೃಷ್ಟನೆನೆ ಕಪ್ಪನೆಂದಂಬವಗೆ ನಾಮಂ" (ಪುಗಣ. ೬೬-೯). ೫. [ಛಂದ] ಅಕ್ಷರ ಗಣಗಳಲ್ಲಿ ಒಂದು; ರಗಣ (—ು—). [ಸಂ.]

ರೇಫೆ (ನಾ). =ರೇಫ ೧ : ರೇಫ ಪುಟ್ಟುವ ತಾಣಮಂ ಬಿಟ್ಟತ್ತಾಗುಚ್ಚರಿಸೆ ಉಕಾರಂ ಪುಟ್ಟುಗುಂ (ಪುಲ. ೦೨ ಶ್ಲೋ೨). [ಸಂ. ರೇಫ]

ರೇಭಣ (ನಾ). ಆಕಳಿನ ಧ್ವನಿ; ಹಸುವಿನ ಕೂಗು. [ಸಂ.]

ರೇಯ (ನಾ). ಒಡೆಯ; ಪ್ರಭು : ಆದಿಮೂರುತಿ ಸಿರಿಪಯವದನ ರೇಯಾ (ಪಾಂಚಿ. ೫೫-೬); ಬಲವೈರಿನುತ ನಮ್ಮ ವಿಜಯವಿತ್ತಲರೇಯ . . . ನಮ್ಮ ಭಾರ ವಹಿಸುವ (ಪಪಾಕ್ಷ. ೦೯-೩). [< ರಾಯ]

ರೇಯೂರ್ (ನಾ). ಒಂದು ಊರಿನ ಹೆಸರು : ರೇಯೂರುನಾಮ ಗಾಮ [ಟ] (ಪಶ. VII. ೦೫೬-೦೩; ೬೬೫). [? + ಊರ್]

ರೇರಿಹಾಣ (ನಾ). ೧. ಶಿವ ; ಈಶ್ವರ. ೨. ಕಳ್ಳ; ತಸ್ಕರ. ೩. ಒಬ್ಬ ರಾಕ್ಷಸನ ಹೆಸರು. [ಸಂ.]

ರೇಲ (ನಾ). ಒಂದು ಬಗೆಯ ಮರ : ಶಮ್ಯಾಕ : (೭) [← ತೆಲು. ರೇಲ]

ರೇಲು ' ರೈಲು ' ನೋ.

ರೇಲುಬೆ ' ರೈಲ್ವೆ ' ನೋ.

ರೇವ (ನಾ). ೧. ರೈವಂತನ ತಂದೆ. ೨. ನರ್ಮದಾ ನದಿ. ೩. ನೀಲಿಗಿಡ. [ಸಂ.]

ರೇವಂತ (ನಾ). ೧. ಸದ್ಯದ ಕಲ್ಪದ ಐದನೆಯ ಮನುವಿನ ಹೆಸರು. ೨. ಒಬ್ಬಾತನ ಹೆಸರು : ರೇವಂತನಡಿಗೊಂಡ ಸುರಿತಂಣ ಪಿರಿಯ ತಮ್ಮ ಗೌದರು (ಎಕ. VII, ೨೮೩ನೇ. ೦೮೯-೦೮ ; ೧೬೦ ?) ; ವೈರಿಘರಟ್ಟ ವಿಜಮು ಹೆಯಾರೂಢವ್ರಾಡ ರೇವಂತ ಪರಬಳಕ್ಕಂತ್ತಾಂತ (ಕಇಂ. ೦೩-೪-೮೯; ೧೦೧೩). ೩. ಒಬ್ಬ ರಾಜನ ಹೆಸರು : ಕಡುಗಲಿಗಳೇಱುತದಲಿ ವಿಗೆ ರುಂದಿ ಪವಾಡ ದೃಢಾಯತಿಕೆಗಿದು ಪಡಿಯ ನಳ ರೇವಂತರೆಂದುದು ರಾವುತಿಕೆಗಳಲಿ (ಕಾಪ್ರಕಿ. ೬-೩). [ಸಂ.]

ರೇವಡಿ, ಲೇವಡಿ (ನಾ). (ಉಕ) ಸಕ್ಕರೆ ಅಥವಾ ಬೆಲ್ಲದ ಪಾಕಕ್ಕೆ ಎಳ್ಳು ಹಾಕಿ ಮಾಡುವ ಒಂದು ಬಗೆಯ ಸಿಹಿತಿಂಡಿ : ಅವುಗು ಲಡ್ಡಿಗೆ ಬೆಲ್ಲ ಸವಿ ಮೂಱುಂಡೆಯು ರೇವಡಿಯು ಸವಿವಡೆ ತಱಿಗು ಭಾವಿಸುವಂತೆ ಚಿಕ್ಕಲಿ (ಕಡಾ. ೩-೦೦೨) ; ಅವಲಕ್ಕಿ ರೇವಡಿ ಬೆಂಡು ಬೆತ್ತಸ ಪುಟಾಣಿ ಮಕ್ಕಳ ಕಸಕೊಂಡು ಮುಕ್ಕಿತು ಮಂಗ (ಜಕಗೀ. ೩೦). **ಲೇವಡಿ** : ಲೇವಡೀ ರುಚಿ ಹಾವಾಡಿಗ ಬಲ್ಲನೇ ? (ಗಾಪ).

[←ಹಿಂ. ಮರಾ. ರೇವಡಿ. / ತುಳು. ಲೇವಡಿ]

ರೇವಡಿಗಾರ (ನಾ). ರೇವಡಿಯೆಂಬ ತಿಂಡಿಯನ್ನು ಮಾರುವವನು : ಒಬ್ಬ ಒಕ್ಕಲಿಗ, ಬಳಿಕ ಒಬ್ಬ ರೇವಡಿಗಾರ ಬಂದರು (ಜಪತ. ೧೯). [ರೇವಡಿ + — ಗಾರ (< — ಕಾಱ)]

ರೇವಡಿಗಿಡ (ನಾ). ಮುಳ್ಳುಗಳಿಂದ ಕೂಡಿರುವ ಒಂದು ಬಗೆಯ ಗಿಡ : (೫). [ರೇವಡಿ (ಪ್ರ← ತೆಲು. ರೇಮಿಡಿ) + ಗಿಡ (< ಗಿಡು)]

ರೇವಣನಾಥ (ನಾ). ಒಬ್ಬಾತನ ಹೆಸರು : ಆತನ ಸೂನು ದಾನಿ ತಾಂ [? ರೇ]ವಣನಾತನ್ (ಎಕ. XI, ೫೪,ಕು. ೭೨-೮ ; ೧೮೮). [?]

ರೇವತಿ (ನಾ). ೧. ಹಸು. ೨. ಬಲರಾಮನ ಹೆಂಡತಿ : "ರೇವತೀ . . . ಕೃಷ್ಣನಣ್ಣಸ ಲಂಮನ ಹೆಂಡತಿಯುಂ" (ಗಾಪಕ್ಕ. ೦೦೬) ; ರೈವತಕಂ ತಂದು ತನ್ನ ಮಗಳಂ ಕುಡಲ್ ಆ ರೇವತಿಯೊಳ್ ಬಲದೇವಂ ವೈವಾಹೋತ್ಸವದಿ ನೆರೆದು ಸುಖದಿಂದಿರ್ದಂ (ಜಗಪ. ೦೧-೨). ೩. [ಜ್ಯೋತಿ] ಇಪ್ಪತ್ತೇೞು ನಕ್ಷತ್ರರಾಶಿಗಳಲ್ಲಿ ಕೊನೆಯದು ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ : ರೇವತಿ ಪುಷ್ಯಮುಶ್ವಿನಿ ಧನಿಷ್ಠೆ . . . ಕಾರಾವಳಿಯುತ್ತಮಂ . . . ಚೌಲಕರ್ಮದೊಳ್ (ಕೀಗಣಿತ, ೨-೩೮) ; ಅಶ್ವಿನಿ . . . ರೇವತಿ ಗಳೆಂಬಿಪ್ಪತ್ತೇೞು ತಾರೆಗಳ್ (ಜಪೀಗ. ೨೫೬) : ಸೂರ್ಯನು ರೇವತೀತಾರೆಯನ್ನು ಸೇರಿದ ಕ್ಷಣವೇ ಮೇಷಸಂಕ್ರಮಣ (ಜ್ಞಕ್ರ. ೧೬). [ಸಂ. ರೇವತೀ]

ರೇವದಾಸ (ನಾ). ಒಬ್ಬಾತನ ಹೆಸರು : ರೇವದಾಸ ವೀಸೋತ್ತರ ದೀಕ್ಷಿತರತಿಪ್ರದಸ್ಮರತಿಮಾರ್ಗ್ಗಸ್ಥರ್ (ಎಇ. XIII, ೫೫೦-೦೫ ; ೧೭೨). [ಸಂ.]

ರೇವಮಗಾವಿಗ (ನಾ). ಒಬ್ಬಾತನ ಹೆಸರು : ಇದಕೆ ಸಕ್ಕಿ ರೇವಮ ಗಾವಿಗನು (ಎಕ. VIII, ೩೫೮. ೩೭೦-೪೦ ; ೧೧೩). [?]

ರೇವಮ್ಮ (ನಾ). ಒಬ್ಬಾತನ ಹೆಸರು : ಪೃಥ್ವಿತರ ಸಿಂಹ ಶ್ರೀರೇವಮ್ಮನ ಅಣ್ಣನ್ × ಕ್ಕಿಗನ್ (ಎಕ. XVI, ತುಮಕೂರು- ೮೨-೦೯ ; ಸಾ. ೭೫೦). [ರೇವ + ಅಮ್ಮ]

ರೇವಲ್ಚಿನ್ನಿ ' ರೇವಾಚಿನ್ನಿ ' ನೋ.

ರೇವಾಚಿನ್ನಿ, ರೇವಲ್ಚಿನ್ನಿ (ನಾ). ಒಂದು ಬಗೆಯ ಔಷಧೀಸಸ್ಯ : "ಚೀನಾ ಮತ್ತು ಟಿಬೆಟ್ಟುಗಳ ಒಂದು ಸಸ್ಯದ ಬೇರು ; ಇದರಿಂದ ಮಾಡಿದ ಭೇದಿಯ್ಹಧ . ವಿರೇಚಕ ; ರೇವಲ್ಚಿನ್ನಿ, ರೇವಾಚಿನ್ನಿ" (Rhubarb. ೫೦೪೩). ' ದಾಲಚಿನ್ನಿ ' ಪರಾ. **ರೇವಲ್ಚಿನ್ನಿ** : ರೇವಲ್ಚಿನ್ನಿ, ಮಡ್ಡಿ ಕರ್ಪೂರ, ಗಂಧದ ಮರ, ಏಲಕ್ಕಿ . . . ಇವು ಇಲ್ಲಿ ದೊರೆಯುವ ಸಾಮಾನುಗಳು (ಪ್ರಪಾಪ್ರ. I, ೧೯೯). [← ಮರಾ. ರೇವಾಚೀನೀ, ರೇವಚಿನೀ]

ರೇವು (ನಾ). ಸಮುದ್ರದ ದಡದಲ್ಲಿ ಹಡಗುಗಳು ನಿಲ್ಲುವ ಸ್ಥಳ ; ಬಂದರು : ದೇಶದ ಸಮೀಪದಲ್ಲಿ ಹಡಗುಗಳು ಲಂಗರುಹಾಕುವ ಸ್ಥಳವು "ರೇವು" ಅಥವಾ "ಅಳವೆ" ಎಂದು ಕರೆಯಲ್ಪಡುತ್ತದೆ (ಕೂಗೋಳ- ೦೦); ಅವನು ರೇವಿಗೆ ಹೋಗಿ ನೌಕೆಯೊಂದನ್ನು ಸಿದ್ಧಪಡಿಸಿದ (ಪಾಹುಕ್ಕ. ೧೩). [ದೇ.ಕ ತಮಿ. ತುಳು. ತಲು. ರೇವು]

ರೇವುಕುಂಟೆ (ನಾ). ಒಂದು ಸ್ಥಳದ ಹೆಸರು : ತೆಂಙ್ಕಣ ದೆಸೆ ಗುಡ್ಡೆಗಲ್ಲು ತುಮ್ಬಕಾಕ್ಕೆ ಪಾಮ್ಬುಳಕುಣ್ಟೆ (ಎಕ. XVI, ೨೮೨- ೪೪-೪೩; ೪೭೮). [ರೇವು ? + ಕುಂಟೆ]

ರೇವುಪಟ್ಟಣ (ನಾ). ಹಡಗುಗಳ ನಿರ್ಮಾಣವಿರುವ ಪಟ್ಟಣ ; ಬಂದರಿರುವ ನಗರ : ಭಾರತದೇಶದ ಹೆಚ್ಚು ವ್ಯಾಪಾರ ಬೋಬಾಯಿ, ಕಲ್ಕತ್ತ, ಕರಾಚಿ, ರಂಗೂನ್, ಮದರಾಸ್ — ಈ ಐದು ರೇವುಪಟ್ಟಣಗಳ ಮೂಲಕ ನಡೆಯುತ್ತದೆ (ಕೂಪಚ. ೫೬೬). [ರೇವು + ಪಟ್ಟಣ]

ರೇವೆ$_1$ (ನಾ). ೧. ಒಂದು ನದಿಯ ಹೆಸರು; ನರ್ಮದೆ: "ಮೇಖಳಕನ್ಯಾ, ನರ್ಮದಾ, ರೇವಾ — ಈ ೩ ನರ್ಮದೆ" (ಕಲಾಮು. ೦೦೨-೩೨). ೨. ನೀಲಿಗಿಡ. ೩. ರತಿ. [ಸಂ. ರೇವಾ]

ರೇವೆ$_2$ (ನಾ). ೧. ಸಣ್ಣ ಕಣ ; ಪುಡಿ : ಪೀಪಿನ ತಳಕ್ಕೆ ಉಳಿಯುವ ರೇವೆಯೇ ನೀಲಿಯು . . . ಆ ರೇವೆಯನ್ನು ತೆಗೆದು . . . ಬಿಸಿ ಮಾಡುತ್ತಾರೆ (ಕುಂಐಡಿ. ೯-೩೫). ೨. ಪ್ರವಾಹದಲ್ಲಿ ಕೊಚ್ಚಿ ಕೊಂಡು ಬರುವ ಮರಳು ; ಮೆಕ್ಕಲುಮಣ್ಣು : ಸಿಂಧು ಮತ್ತು ಗಂಗಾನದಿಗಳು ಹಿಮಾಲಯದಿಂದ ತಂದ ರೇವೆಯಿಂದ ಬೈಲುಸೀಮೆಯಾಯಿತೆಂದು ಕಂಡು ಬರುತ್ತದೆ (ಹಿಂದುಃ. ೨).

ರೇವೆಯ ಭೂಮಿ = ಮರಳುಮಿಶ್ರವಾದ ಭೂಮಿ ; ಮೆಕ್ಕಲು ಮಣ್ಣಿನ ಜಮೀನು : ರೇವೆಯ ಭೂಮಿ . . . ಸಾಗುಮಾಡಲಿಕ್ಕೆ ಸುಲಭವಾಗಿರುವುದು (ಪಸ್ಯಾ. ೦೩೬). [← ಮರಾ. ರೇವ]

ರೇಶಿಮೆ ' ರೇಶ್ಮೆ ' ನೋ.

ರೇಶ್ಮೆ, ರೇಶಿಮೆ, ರೇಷ್ಮೆ, ರೇಸಿಮೆ, ರೇಸ್ಮೆ (ನಾ). ೧. ಕೋಶದಲ್ಲಿ ವಾಸಿಸುವ ಒಂದು ಬಗೆಯ ಹುಳುವಿನಿಂದ ಉತ್ಪತ್ತಿಯಾಗುವ ಎಳೆ: 'ರೇಶ್ಮೆಬಟ್ಟೆ' ಪರಾ. ೨. ರೇಶ್ಮೆಯ ಎಳೆಯಿಂದ ತಯಾರಿಸಿದ ಬಟ್ಟೆ; ವಸ್ತ್ರವಸ್ತ್ರ : ಶ್ರೀಮನ್ನಾರಾಯಣನು ರೇಶ್ಮೆಯುಟ್ಟುಕೊಂಡು . . . ಮಲಗಿದ್ದಾನೆ (ಪಗಕ್ಕ. ೦೦). **ರೇಶಿಮೆ** : ೨. ರೇಶಿಮೆ, ಮಣ್ಣುಪಾತ್ರೆ ಮುಂತಾದ ಜೀನಸುಗಳು ಚೀನದೇಶದಿಂದ ನಮ್ಮ ದೇಶಕ್ಕೆ ಬರುತ್ತವೆ (ಕುಂಐಡಿ. ೪-೦೩೬); ನೀರೊಡದ ಕಣ್ಣುಗಳನ್ನು ಉಟ್ಟ ರೇಶಿಮೆಯ ಮುಗುಟದಿಂದ ಒರಸಿಕೊಳ್ಳತೊಡಗಿದಳು (ಆಕೋಗ. ೩); ತನ್ನ ರೇಶಿಮೆಯ ಸೆರಗಿನ ತುದಿಯಿಂದೆ ನನ್ನ ಮುಖವನ್ನು ಮುಚ್ಚಿದಳು (ಪ್ರಕಚ. ೩). **ರೇಷ್ಮೆ** : ೧. ರೇಷ್ಮೆಯ ನಾರು ರೇಷ್ಮೆಯ ಹುಳುವಿನಿಂದ ಉತ್ಪತ್ತಿಯಾಗುತ್ತದೆ. ರೇಷ್ಮೆಹುಳು ಕಟ್ಟಿದ ಗೂಡಿನಿಂದ ತೆಗೆದ ದಾರವೇ ರೇಷ್ಮೆ ನಾರು (ಗೃಕಪ. ೬೩). ೨. ರೇಷ್ಮೆಕಮ್ಮಿ ಲಗಾಮು ಸಹ (ಎಕ. XIV, ಸಂಡೂರು- ೨೯೨—೩೮- ೦೪೨; ೧೮೪೭); ಮುನ್ನೂರುವರಹಗಳು ಮಾತ್ರವೇ ಅಲ್ಲ . . . ಅಪೂರ್ವವಾದ ರೇಷ್ಮೆದುಪ್ಪಟ್ಟಿ, ಅದನ್ನೂ ಕೊಡುತ್ತೇನೆ (ಆರ್ಯಾಶ್ರ. ೫). **ರೇಸಿಮೆ** : ೧. ಉಪ್ಪುಪೇರಿಳೆಸೊಪ್ಪು ಕೂಡ ತಳ್ಳನೆ ಬೆಳ್ಳನೆ ರೇಸಿಮೆನೂರಾಗಿ ಮಾರ್ಪಾಟುಗೊಳುವುದು ನೋಡ (ಐಇಶಕ. ೦೫೫-೭೬). **ರೇಸ್ಮೆ** : ೨. ದಿವಿಜರೀಕ್ಷಿಸುವಂತೆ ರೇಸ್ಮೆನಿಡುದುಗುಲಮಂ ಪೋಯಿಸುತೆ ರುಧಿರದೊಳ್ ನಿಂದಿರ್ದಂ (ಪಪಕು. ೩೦-೫೩).

[← ಪಾರ. ಹಿಂ. ರೇಶಮ್; ಮರಾ. ರೇಶೀಮ್. / ಚೀನಿ. ರೇಶವ್]

ರೇಶ್ಮೆಬಟ್ಟೆ, ರೇಷ್ಮೆಬಟ್ಟೆ (ನಾ)· ರೇಶ್ಮೆನೂಲಿನಿಂದ ತಯಾರುಮಾಡಿದ ಬಟ್ಟೆ ; ಪಟ್ಟೆವಸ್ತ್ರ : ಹಳೆರೇಶ್ಮೆಬಟ್ಟೆಯ ತುಂಡು . . . ಫರ್ನಿಚರನ್ನು ಉಜ್ಜಿ ಪಾಲಿಷ್ ಮಾಡಲು ಬಹಳ ಅನುಕೂಲವಾಗಿರುತ್ತದೆ (ಗೃಹಪ್ರ. ೦೬೦). **ರೇಷ್ಮೆಬಟ್ಟೆ** : ರೇಷ್ಮೆಬಟ್ಟೆಗಳು ಮೈಯನ್ನು ಶಾಖವಾಗಿಡುವುವು. ರೇಷ್ಮೆಬಟ್ಟೆಗಳು ಬಹಳ ನುಣುಪಾಗಿರುವುದರಿಂದ ಇವು ಬೇಗ ಕೊಳೆಯಾಗುವುದಿಲ್ಲ (ಗೃಹಪ್ರ. ೬೬). [ರೇಶ್ಮೆ + ಬಟ್ಟೆ]

ರೇಜಣ (ನಾ). ೧. ಅರಚುವುದು; ಆರ್ಭಟಿಸುವುದು. ೨. ಗೊಣಗುವುದು: "ರೇಷಃ- ರೇಷಣಂ, ರೇಷನೇಯಂ, -ಈ ೩. ಗೊಣಗು" (ಶಾಸ್ತ್ರ. ೦೨೦). ೩. ತೋಳದ ಕೂಗು; ಊಳು. ೪. ಗಾಯ. [ಸಂ.]

ರೇಷನ್ನು (ನಾ). ಒಬ್ಬ ಮನುಷ್ಯನಿಗೆ ನಿಗದಿಯಾಗಿ ಕೊಡುವ ಆಹಾರಪದಾರ್ಥಗಳ ಪ್ರಮಾಣ ; ಪಡಿತರ : ರೇಷನ್ನಿನಕ್ಕಿಯ ಬೀಲ ಬಂದಿತು ಕೈಗೆ (ಸಂಧ್ಯಾ. ೪೫-೪೬). [←ಇಂ. Ration]

ರೇಷಮಾನಿ (ನಾ)· = ರೇಶ್ಮೆ ೨: ಒಬ್ಬ ಸಂಗೀತಗಾರನು . . . ಕುತ್ತಿನ ಪಾಯಜಾಮಾ ಹಾಕಿಕೊಂಡು ರೇಷಮಾನಿ ಕೈವಸ್ತ್ರ ಸಹ ಬಹಳ ಡಬ್ಡಾಂಕಿಯಿಂದಹಾಡುತ್ತಿರಲು (ಕಥಾಮಂ· VI, ೯). [<ರೇಶ್ಮೆ]

ರೇಷೆ (ನಾ). ಗೆರೆ; ರೇಖೆ: ಎರಡೂ ಸಂಸ್ಕೃತಿಯ ಪ್ರಗತಿಯು ಎಷ್ಟು ಸಮಾನಾಂತರರೇಷೆಯಲ್ಲಿ ಸಾಗಿತ್ತೆಂಬುದು ಇದರಿಂದ ವ್ಯಕ್ತವಾಗುತ್ತಿದೆ (ಕಾಗಾಭೂ. ೭೭); ಒತಲು ನೂಲಿನಿಂದ ನೇಯುವಂತೆ ಜೇಡ ಜಾಲಾ ತನ್ನ ದೈವರೇಷೆ ಬರೆಯುವಂತೆ ತಾನೆ ಧಾರಾ (ಜಾಜಿವ. ೮೯-೦೦). [ಸಂ. ರೇಷಾ]

ರೇಷ್ಮೆ 'ರೇಶ್ಮೆ' ನೋ.

ರೇಷ್ಮೆಕಾಯಿಲೆ (ನಾ). ಒಂದು ಬಗೆಯ ರೋಗ : ಅವರು ರೇಷ್ಮೆಕಾಯಿಲೆಯಿಂದ ಮೃತರಾಗಿದ್ದರು (ಕಾಜೂಮು. ೭೮). [ರೇಷ್ಮೆ + ಕಾಯಿಲೆ]

ರೇಷ್ಮೆಜ್ವರ (ನಾ). = ರೇಷ್ಮೆಕಾಯ್ಲೆ : ನಾಳಸಂಕೋಲೆ, ಧರಜ್ವರ, ರೇಷ್ಮೆಜ್ವರ, ಗಂಟಲುಬೇನೆಗಳಿಗೆ ಸಿದ್ಧಣ್ಣನ ಮೂಲಿಕೆಗಳು ಸಿದ್ಧೌಷಧವಾಗಿದ್ದುವು (ಹುಂತಂ· ೩೪). [ರೇಷ್ಮೆ + ಜ್ವರ]

ರೇಷ್ಮೆಬಟ್ಟೆ 'ರೇಶ್ಮೆಬಟ್ಟೆ' ನೋ.

ರೇಷ್ಮೆಸೀರೆ (ನಾ). ರೇಶ್ಮೆದಾರದಿಂದ ನೆಯ್ದ ಸೀರೆ ; ಪಟ್ಟೆಸೀರೆ : ತರೋದೆ ಉಂಟಂತೆ. ಒಂದು ರೇಷ್ಮೆಸೀರೆ ತರೋದು ಬೇಡವೆ! (ಪಚ್ಚೂರು. ೨೧೨). [ರೇಷ್ಮೆ (< ರೇಶ್ಮೆ) + ಸೀರೆ]

ರೇಷ್ಮೆಹಿಪ್ಪಲಿಗಿಡ (ನಾ). ರೇಶ್ಮೆಹುಳುಗಳು ತಿನ್ನುವ ಸೊಪ್ಪಿನ ಗಿಡ; ಉಪ್ಪುನೇರಳೆ: ಕಂಬಳಿಗಿಡ, ರೇಷ್ಮೆಹಿಪ್ಪಲಿಗಿಡ (ಪ್ರಕಿಗ. ೩೫-೦೦೦೦). [ರೇಷ್ಮೆ (<ರೇಶ್ಮೆ) + ಹಿಪ್ಪಲಿ + ಗಿಡ (< ಗಿಡು)]

ರೇಷ್ಮೆಹುಳು (ನಾ). ರೇಶ್ಮೆಯನ್ನು ಉತ್ಪತ್ತಿ ಮಾಡುವ ಒಂದು ಬಗೆಯ ಹುಳು: "ಕೌಶೇಯಂ . . . ರೇಷ್ಮೆಹುಳು" (ಕರ್ನಾಪ. ೨೦೨); ರೇಷ್ಮೆಹುಳುಗಳನ್ನು ಮೊಟ್ಟಮೊದಲು ಚೀನಾದೇಶದಲ್ಲಿ ರೇಷ್ಮೆಗಾಗಿ ಸಾಕಲು ಪ್ರಾರಂಭಿಸಿದರು (ಗೃಹಪ್ರ. ೬೫). [ರೇಷ್ಮೆ (<ರೇಶ್ಮೆ)+ಹುಳು (<ಪುಳು)]

ರೇಷಿಮೆ ರೇಶ್ಮೆ ' ನೋ.

ರೇಸು (ನಾ). ಕುದುರೆಗಳೂ, ಕ್ರೀಡಾಪಟುಗಳೂ ಓಡುವ ಪಂದ್ಯದ ಓಟ : ಬೆಂಗಳೂರಿನಲ್ಲಿ ಕುದುರೆರೇಸು ನಡೆಯುತ್ತದೆ (ಪ್ರಾಪ್ರ). [←ಇಂ. Race]

ರೇಶ್ಮೆ, 'ರೇಶ್ಮೆ' ನೋ.

ರೈ (ನಾ). ೧. ದ್ರವ್ಯ ; ಸಂಪತ್ತು: ಐಶ್ವರ್ಯ : "ಧನಕನಕವಾಚಕಂ ರೈ ಶಬ್ದಂ" (ಪಟ್ಟಕೋ. ೦೨೬-೨೨); ಐಕಾರಕ್ಕೆ—ದೈಯೆಂದಂ : ರೈಯೆಂದಮಿತ್ತು (ಕವಾದ· ೩೩ ಪ್ರಯೋ); ಸೌರ್ಯದಿಂದಂಕಮಂ ರೈಯಂ ಕೈಮಿಗೆ ಸಾರ್ಚಿ ಸಂತಮಿಸಿದಾ ಗೋವಿಂದವಂ ಮಂದಿಪೆಂ (ಜಕ್ರಿಗೋ. ೦-೦). ೨. ಚಿನ್ನ ; ಸುವರ್ಣ: " ಗೈರಿಕಂ ... ಕಾಂಚನಂ ರೈ ರುಕ್ಮಮಷ್ಟಾವದಂ . . . ಸ್ವರ್ಣ ಮೆನೆ ಹೊನ್ನಿಗೆ ನಾಮಮಕ್ಕುಂ " (ಪುಂಗಣಾ. ೩೦-೪): ಸಕಳಾರ್ಥವ್ಯಾತ ಚೇತೋಮುದಮನಮನವಾಲರೈಧಾರೆಯಿಂ . . . ಮಾಡಿ (ಕಂದ್ರಪ್ರ· ೯-೬೬). [ಸಂ.]

ರೈಟರು (ನಾ)· ಕರಣಿಕ ; ಗುಮಾಸ್ತ: ನಮ್ಮ ಕಚೇರಿಯಲ್ಲಿ ಇಬ್ಬರು ರೈಟರುಗಳಿದ್ದಾರೆ (ಪ್ರಾಪ್ರ). [←ಇಂ. Writer]

ರೈತ, ರೈಹಿತ್ಯ (ನಾ)· ಆರಂಬಮಾಡುವವನು ; ಒಕ್ಕಲಿಗ ; ವ್ಯವಸಾಯಿಗಾರ : ಸರಕಾರಕ್ಕೆ ರುಜು ಇಲ್ಲದೆ ರೈತನಾಗಬಾರದು ಅದಂತೆಂದೊಡೆ ಇಷ್ಟುಳ್ಳಾತನೇ ಪಾಟ್ಯಾರೈತ (ಪಪಸಂ. ೭೦); ರೈತರು ಯೆಲ್ಲಾ ಬಿತ್ತಿ ಬೆಳದಾ ಧಾನ್ಯ (ಹುಪಪ್ರ· ೦೦); ಎರಡು ವರ್ಷಗಳಿಂದಲೂ ಬರಗಾಲವು ಬಂದು ರೈತರು ದಣಿದಿದ್ದಾರೆ (ಶ್ರೀರಾಚ. ೦೮೬). **ರೈಹಿತ್ಯ** : ಕಿಗ್ಗಟ್ಟುಸತ್ತುನಾಡಂರೈಹಿತರು ಜಂಮ ಭಕ್ತಿಯಿಂದ . . . ರಾಮೇಶ್ವರದೇವರ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಿಯಿದ್ದಾರೆ (ಅಕೆ. I. ೦೦೬-೨; 1840). [← ಅರ. ರಈಯತ್ ; ಹಿಂ. ರಯ್ಯತ್, ರೈಯತ್; ಮರಾ. ರಯತ್, ರಯ್ಯತ್, ರೈಯತ್ /ಇಂ. Ryot]

ರೈತಾಪಿ (ನಾ)· ೧. ಆರಂಬ ; ವೇಸಾಯ : ಆದವಾನೀಗೆವೆ ರೈತರ ಹಿಡಿತುದು ಕೊಡಗಿನ ಸೀಮೆಯಲ್ಲಿ ರೈತಾಪಿಗೆ ಇಟ್ಟು (ಐತಿಕಾಡ. - ೦೭); ೨. ವ್ಯವಸಾಯಗಾರ: ಹೆಚ್ಚು ತರಕಾರಿ ಬೆಳೆಯಬೇಕೆಂಬ ಪ್ರಚಾರವನ್ನು ರೈತಾಪಿ ಜನರು ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ (ಕಂಪ್ರ· ೬೬); ರೈತಾಪಿ ಜನರು . . . ಬಾಧ್ಯವಹುವುದನ್ನೂ ನಿಲ್ಲಿಸುವುದಕ್ಕೆ ಈ ಸಹಕಾರಸಂಘಗಳು ಸ್ಥಾಪಿತವಾದವು (ಗೃಹಪ್ರ. ೦೯೪). [< ರೈತ]

ರೈದ (ನಾ)· ಐಶ್ವರ್ಯವನ್ನು ಕೊಡುವವನು ; ಕುಬೇರ : ಜಯ ಜಯವಿಚಿತ್ರಚಾರಿತ್ರ ರೈದನ ಮಿತ್ರ ಜಯಜಯ . . . ಗುರುಸಂಗಮೇಶಾ (ಕ್ರಕಾಚ· ೬-೦೦೦). [ಸಂ.]

ರೈಲು, ರೇಲು (ನಾ)· ೧. ಕಂಬಿ : ಹಳಿ : 'ರೈಲುಮಾರ್ಗ' ಪರಾ. ೨. ಅವಿ ಅಥವಾ ವಿದ್ಯುಕ್ತಿನ ಸಹಾಯದಿಂದ ಕಂಬಿಗಳ ಮೇಲೆ ಚಲಿಸುವ ಗಾಡಿ ; ಟ್ರೈನು : ರೈಲಿನ ಉಪಯೋಗ ಎಲ್ಲಿಯವರೆಗೆ ? ನಮ್ಮ ಸ್ನೇಷನ್ ಸಿಕ್ಕುವವರೆಗೆ (ಕಾಜಾಕ್ಕ· ೪೭೦)· ಕಳುಹಿಸಿ ಕೊಟ್ಟಳು ಪತಿಯನು ರೈಲಿಗೆ (ಕಂಪ್ರ· ೨೫-೪೭). **ರೇಲು** : ೧. ನೀವು ನಿಲ್ಲನೆ ಮುಟ್ಟುವಲ್ಲಿ ರೇಲು ಹೋಯಿತೆಂಬುದು ಖಚಿತವಾಯಿತು (ಕೆಂರಾಚ. ೦೦); ಆದಪ್ಪ ಮಾಷ್ಟರರು . . . ಬೆಳಗಿನ ರೇಲಿಗೆ ಇಂದು . . . ಊರಿನ ಕಡೆಗೆ ನಡೆದರು (ಅಕಾಲಕ್ಷ· ೨೪೬).

ರೈಲು ಬಿಡು = (ಆಲಂ) ಸುಳ್ಳುಹೇಳು ; ಬುರುಡೆ ಹೊಡೆ : ಬಾರ್ಲಿ ಚಾಪ್ಲಿನ್ ರೈಲುಬಿಟ್ಟ ಮೇಲೆ ರೈಲಿನಲ್ಲಿಯೂ ಕುಳಿತುಕೊಳ್ಳದಾರದೆಂದು ನಿರ್ಧಾರ ಮಾಡಿತು ನನ್ನೂರಿನ ಮಹನೀಯರ ಮಂಡಳಿ (ಪಪಸ್ಮೃ· ೨೯). **ರೈಲು ಹತ್ಸಿಸು** = (ಆಲಂ) ಪೂಸಿಮಾಡುವ; ಪುಸಲಾಯಿಸು : ಈಗ ಅವರಿಗೆ ತಮ್ಮ ಕಲಸವಾಗಬೇಕಾಗಿದೆ, ಅದಕ್ಕೇ ಅವನನ್ನು ರೈಲು ಹತ್ಸಿಸುತ್ತಾ ಇದ್ದಾರೆ (ಪ್ರಾಪ್ರ). [← ಇಂ. Rail]

ರೈಲುಚೆಂಬು, ರೈಲುಚೊಂಬು (ನಾ)· (ಪ್ರಯಾಣದಲ್ಲಿ ತೆಗೆದುಕೊಂಡು ಹೋಗಲು ಉಪಯೋಗಿಸುವ) ನೀರು ತುಳುಕದಂತೆ ತಿರುಪಿನ ಮುಚ್ಚಳವಿರುವ ಚೆಂಬು : ಅವಳು ಕೈಯಲ್ಲಿ ಒಂದು ಸಣ್ಣ ರೈಲುಚೆಂಬು ಹಿಡಿದಿದ್ದಳು (ಕಪಸಂ· ೦೨೦). **ರೈಲುಚೊಂಬು** : ಎರಡು ಟ್ರಂಕ್· ಬೆಡ್ಡಿಂಗ್· ರೈಲುಚೊಂಬು ಇಷ್ಟನ್ನೇ ಸಾಗಿಬಿಟ್ಟು (ಕಾಪಪಂ· ೨). [ರೈಲು + ಚೆಂಬು]

ರೈಲುಚೊಂಬು ' ರೈಲುಚೆಂಬು ' ನೋ.

ರೈಲುಮಾರ್ಗ (ನಾ)· ರೈಲುಗಾಡಿಯು ಚಲಿಸಲು ಉಕ್ಕಿನ ಕಂಬಿಗಳಿಂದ ನಿರ್ಮಿಸಿರುವ ರಸ್ತೆ : ವಿಟ್ಲೂರು : ಬೆಂಗಳೂರು – ಪೂನ ರೈಲು

ಮಾರ್ಗದಲ್ಲಿ ಹದಿಮೂರನೆಯ ನಿರ್ವಾಣ (ಕಟ್ಟಿಗೆ. ೨).

[ರೈಲು + ಮಾರ್ಗ]

ರೈಲ್ವೆ ರೇಲುವೆ (ನಾ). ರೈಲುಮಾರ್ಗ ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯಭಾರವನ್ನು ನಿರ್ವಹಿಸುವ ಇಲಾಖೆ : ರೈಲ್ವೆ ಕಂಪನಿಯ ಯಾ ಸ್ಥಳೀಯಾಧಿಕಾರಿಯ ನೌಕರನಿಗೆ ಸಲ್ಲದೇ ಇರಿದ ಸಂಬಳ (ಸ್ಯಾಮಳೆ. ೬೩). **ರೇಲುವೆ** : ಎಣ್ಣೆಯು ಸೋರಹತ್ತಲು ರೇಲುವೆ ಕಂಪನಿಯವರು ತಕ್ಕೊಳ್ಳುವುದಿಲ್ಲ (ಮುಂಜಾವ. ೪೪ ಕ್ರಮಾ ೨೫). [← ಇಂ. Railway]

ರೈವತ (ನಾ). ೧. ಐಶ್ವರ್ಯವಂತ ; ಧನಿಕ. ೨. ಹದಿನಾಲ್ಕು ಮನುಗಳಲ್ಲಿ ಐದನೆಯವನು : ಸ್ವಾಯಂಭುವ ರೈವತ . . . ಇಂದ್ರ ಸಾವರ್ಣಿಕರೆಂಬ ಹದಿನಾಲ್ಕು ಮನುಗಳು (ಶಿವ. ೫೦೨). ೩. ರೇವತೀ ನದಿಯ ಹತ್ತಿರದಲ್ಲಿರುವ ಒಂದು ಬೆಟ್ಟದ ಹೆಸರು : ಶ್ರೀವೃಕ್ಷಪನಸ ನವಹಮುಮಾವಿಷ್ಟೃತಕುಸುಮವಿಸರಮೆನೆ ಶಿಖರಿವನಂ ತೀವಿರೆ ಶಿಖಂಡ ವಂಡಕರಣಾವಳಿಯಿಂ ಕಾಣಲಾಯ್ತು ರೈವತಶೈಲಂ (ಪಡ. ೦೬-೦). ೪. ಮೋಡ. ೫. ಶಿವ. ೬. ಒಬ್ಬ ರಾಜನ ಹೆಸರು. [ಸಂ.]

ರೈವೃಷ್ಟಿ (ನಾ). ಚಿನ್ನದ ಮಳೆ ; ಸುವರ್ಣವೃಷ್ಟಿ : ಧನದಂ ಕಾಂಚನ ಪಂಚರತ್ನಮಯಮಂ ರೈವೃಷ್ಟಿಯಂ ಮಾಡುವಲ್ಲಿ (ಅಂಪು. ೬-೨೪) ; ಹೇಮಗರ್ಭಂ ವಸುಧಾಂತರ್ಭಾಗಮಾಗಿರ್ದಿನೆಗಮನುದಿನಂ ಕೂಡೆ ರೈವೃಷ್ಟಿಯಂ ನಿರ್ಮಿಸಿದಂ (ಪಜಿತ. ೦೦-೪೨). [ಸಂ.]

ರೈಸು ' ರಯಿಸು ' ನೋ.

ರೈಸ್ತಂಭ (ನಾ). ಚಿನ್ನದ ಕಂಬ ; ಸುವರ್ಣಸ್ತಂಭ : ತ್ರಿಭುವನಮಂಗಲ ತೋರಣನಿಭಮಂ ಪ್ರವಚನಮನೆಯ್ದಿ ರೈಸ್ತಂಭಸಮಪ್ರಭರಂತರ್ನಿಭೃತೋನ್ನತವಿಭವರ್ ಭೂತಬಲಿ ಪುಷ್ಪದಂತಾಚಾರ್ಯರ್ (ಸಂಧ್ಯಾ. ೭-೦೩). [ಸಂ.]

ರೈಹಿಣ$_1$ (ನಾ). ಲಕ್ಷ್ಮಿಗೆ ಹಿತನಾದವನು ; ನಾರಾಯಣ : ಭೀಮ ರೈಹಿತ ರೌದ್ರಸ್ತುತ ರಂಗ ಸಿರಿಧಾಮ ರಕ್ಷಿಸು (ಪಜಸಾಂ. ೬೭-೧೩). [ಸಂ.]

ರೈಹಿತ$_2$ ' ರೈತ ' ನೋ.

ರೊಂಕಣಿ (ನಾ). ಲೇಪನ ; ಗಿಲೀಟು ; ಒಪ್ಪ (?) : ಮಿಱುಗುವ ವಿಂಚಿಗಿಂದಂಗಳೆಯಂ ಎಗೆ ರೊಂಕಣಿಯಂಕ್ಕುವಂತಿರಲ್ಬಜಸೆಟ್ಟಿಪ ನಾಡ ಕಡುನೀಱಿಯರಂ ನಡೆನೋಡಿ ಸೋಲದಿಂ ಮೆಱಿವುದು ರಂಭೆಯೂರ್ವಶಿ ತಿರೋತ್ಸವೆ ಮೇನಕೆ ಮಾಜುಘೋಷೆಯಂಬಿಱಿಕೆಯ ದೇವಸೌಂದರಿಯರಂ ಚರಿಯಿಪ್ಪ ನಿಳಿಂಪಸಂಕುಳಂ (ಸೂಕ್ತಿ. ೨-೦೩೬).

[?. / ಸಂ. ರೋಕ = ಬೆಳಕು, ಕಾಂತಿ]

ರೊಂಕೆ ' ಜೊಂಕಾ ' ನೋ.

ರೊಂಡಿ (ನಾ). ಸೊಂಟದ ಕೆಳಗಿನ ಹಿಂಬದಿಯ ಭಾಗ ; ಕುಂಡೆ : ಪಿರ್ರೆ : " ಕಟಿ – ರೊಂಡಿಯಲ್ಲಿ " (ಶಾಪಟೀ. ೨-೦-೭೭ ಪ); ದೇಹದಲ್ಲಿ ನಡುವಿನ ಕೆಳಗೆ ಎರಡುಪಕ್ಕಗಳಲ್ಲಿಯೂ ಚಾಚಿಕೊಂಡಿರುವ ಕಿಬ್ಬೊಟ್ಟೆಯ ಭಾಗ ; ಟೊಂಕ ; ರೊಂಡಿ ; ಚಪ್ಪೆ ; ಕಟಿ (Rip. ೨೦೪೩).

[ದೇ.ಕಿ ತೆಲು. ರೊಂಡಿ]

ರೊಂಡೆ (ನಾ). ಕೆಸರು ; ರಾಡಿ : " ರೊಂಡೆ = ಕೆಸರು " (ಶಾಪಟೀ.೨೦); ಜಾಜಲಂಬಿದ ಕಾಲ ರೊಂಡೆ [ಪಾಣಾ. ಜೊಂಡೆ, ಜೊಂಪೆ] ಯನೊಜ್ಜಿ ಬವ್ವಂಗಯ್ಯ ಕೆಸಱಂ ತೋಱುತಂ (ಪಪ್ಪ. ೦೦-೪). ' ಜೊಂಪೆ ' ಪರಾ. [?]

ರೊಂದಿಬಗ್ಗ (ನಾ). ನಾಡಾಡಿ ಜನ ; ಅಲ್ಪಜನ (?) : ಸಂದಿಯ ರೊಂದಿ ಬಗ್ಗರ್ ಸಮಕ್ಷದೊಳಿದ್ದುರಿದೆದ್ದು ದುರ್ಜನಂ ನಿಂದಿಸುತಿರ್ಪನುತ್ತಮರ ಕಾವ್ಯಮನಂತಱಿತು ದಲ್ ನಿರಂತರಂ ಪಂದಿಗೆ ಮಿಂದ ಕೆಸಱೊಗ್ಗುವುದಲ್ಲದೆ ತಣ್ಪನೀವ ಸುಚ್ಛಂದನದಣ್ಪದೊಗ್ಗುವುದೆ (ಪಪ್ಪ. ೬). [?]

ರೊಂಯ್ (ನಾ). ಒಂದು ಅನುಕರಣ ಶಬ್ದ : ಗಾಳಿಪಟ ರೊಂಯ್ ಎಂದು ಶಬ್ದ ಮಾಡುತ್ತಿದೆ (ಕೂಡ)

ರೊಕ ' ರೊಕ್ಕ ' ನೋ.

ರೊಕ್ಕ. ರೊಕ, ರೊಖ, ರೊಕ್ಕು, ರೋಕ್ಕ, ರೋಖ, ರೋಕ್ಕು (ನಾ). (ಉಕ) ಬಳಸಲು ಸಿದ್ಧವಾಗಿರುವ ಹಣ ; ನಗದು ; ದುಡ್ಡು : ಪೆಟ್ಟಿಡಿಯ ಕೂಂಡ ರೊಕ್ಕವ ಕೊಡಿ (ಸಳ. II. ೪೩-೪೨); ಅಕ್ಕಿಯರುಗಳುಯೆಂಬ ಹಣಗಳೆ ರೊಕ್ಕಪನು ತೆಗೆಯೆಂಬ ಹರಜನು (ಕಾಶಿಖಂ. ೦೮-೨೪) ; ರೊಕ್ಕ ಎರಡಕ್ಕು ದುಃಖ ಕಾಣಕ್ಕ (ಹರಿಪ. ೩-೪೫ ಪದ್ಯ); ರೊಕ್ಕವಿಲ್ಲದ ಬಾಳ್ವೆ ಮಕ್ಕಳಿಲ್ಲದ ಮನೆಯು ಅಕ್ಕಱವಿರದ ತವರೂರು ಇವು ಮೂಱು ದುಃಕ್ಕ ಕಾಣಯ್ಯ (ಸರ್ವಜ್ಞ. ೦೩೮). **ರೊಕ** : ಗದೆಯ ಮೇಲೆ ರೊಕ ಭತವನೂ (ಸೌಪ. ೦೪೪. ಪೂಗಪುರು. ೦೩೬-೦೯ ; ೨೬೨) ; ಬಂದ ಬಡಿಯ ರೊಕವಪು ಆಗುಮಾಡಿ (ಅಶ್ವ. XIV. ಪುಳ. ೦೦೦-೦೬; ೨೦೦೨). **ರೊಖ** : ರೊಖ ಹಣವು ಮುಂಗಡವಾಗಿ ಕಳುಹಿಸಿ (ಮುಂಜಾಜಾ. ೨೩೯). **ರೊಕ್ಕು** : ರೊಕ್ಕುವು ಗಳಿಸುವಷ್ಟೆ ದುಃಖ ಮಗುಳಾ ಧನವ ರಕ್ಷಿಸುವಷ್ಟತಳಾದುಃಖಂ . . . ರೊಕ್ಕಿಂ ಸ್ವಪ್ಪೆ ಚೋರ ಬಾಧೆಗಳು ದಿನದಿನಂ ಮಿಕ್ಕುದು (ಪುರಂಗ. ೯-೭). **ರೋಕ್ಕ** : ರೋಕರಕಮಿನೀಂದ ವ್ಯವಹಾರ ಮಾಡಿದರೆ . . . ತಕ್ಕೊಳ್ಳಲಾದೀತು (ಮುಂಜಾಜಾ ೦೦ ಕ್ರಸ್ಕಾಕಥೆ). **ರೋಖ** : ಇವತ್ತು ರೋಖ ನಾಳೆ ಉದ್ದರಿ (ಪಡೋದ. ೩೨). **ರೋಕ್ಕು**: ಹಂದೆ ಗಳಿಸಿದ ರೋಕ್ಕು ರೂಪಾಯಿಗಳನ್ನು ಬಡ್ಡಿಗೆ ಹಚ್ಚಿದ್ದರು (ಇಕ್ಕಳ. ೨೯೯) ; ಎಂಭತ್ತೈದು ರೋಕ್ಕು ಎಣಿಸಿಕೊಟ್ಟವ್ನಿ (ಕಂಗಿ. ೦೩). **ರೊಕ್ಕ ಮಾಡು** = ಹಣವನ್ನು ಸಂಪಾದಿಸು ; ಐಶ್ವರ್ಯವನ್ನು ಗಳಿಸು : ತಂಬುಲಿಗರ್ ಹುಟ್ಟಿದ ಧಾರೆಯಿಂ ರೊಕ್ಕಮಾಡಿ ಕುಡುವರ್ (ಮುಂಕಾಂ. XII. ೦೩-೨೪ ; ೧೨೧೩) ; ಈ ವಿಶ್ವನಾಥ ರೊಕ್ಕಮಾದಿದ ರೀತಿ ನನಗೆ ಗೊತ್ತಿಲ್ಲವೆ ? (ಕುಂಕುಂಪಾ. ೭೦). [←ಹಿಂ. ರೋಕ್ ; ಪರಾ. ರೋಖ್./ತಮಿ. ಪುಲ. ತುಳು. ತೆಲು.ರೊಕ್ಕ]

ರೊಕ್ಕಮುಕ್ಕ (ನಾ). ಹಣವನ್ನು ಕಬಳಿಸುವವನು ; ಗಂಟುಗಳ್ಳ : ಪ್ರತಿಭೆಯ ಫಲವನ್ನು ನಾನು ಅನುಭವಿಸುವ ಮುಂಚೆಯೇ "ರೊಕ್ಕಮುಕ್ಕ"ಗಳು ಯಾರಾದರೂ ಅನುಭವಿಸಿಯಾರೆಂದು ಹೆದರಿಕೆ (ಕಂಟಿಪು. ೦೯).

[ರೊಕ್ಕ + ಮುಕ್ಕ$_1$]

ರೊಕ್ಕಸ್ತ (ನಾ). ಹಣವುಳ್ಳವನು ; ಸಾಹುಕಾರ : "ರೊಕ್ಕಸ್ತ = ಸಿರಿವಂತ. ಸಾವುಕಾರ" (ಶಾಪಟೀ. ೦೦). ' ದುಡ್ಡಸ್ತ ' ಪರಾ.

[ರೊಕ್ಕ + – ಸ್ತ]

ರೊಕ್ಕಿ (ನಾ). ಒಂದು ಬಗೆಯ ಸಸ್ಯ ; ಲಕ್ಕಿಗಿಡ : "ಸಿಂಧುಕಃ, ಸಿಂಧುವಾರಃ, ಇಂದ್ರಸುರಸಃ, ನಿರ್ಗುಂಡಿಃ, ಇಂದ್ರಾಣೀ – ಈ ೫ ರೊಕ್ಕಿ " (ಶಾಪಟೀ. ೦೦೬). [< ರೊಕ್ಕ]

ರೊಖ ' ರೊಕ್ಕ ' ನೋ.

ರೊಖ್ಖ 'ರೊಕ್ಕ' ನೋ.

ರೊಚ್ಚು ' ಜುಚ್ಚಿ ' ನೋ.

ರೊಚ್ಚುಗುಂಡಿ. ರೊಚ್ಚಿಗುಂಡಿ (ನಾ). ಕೊಳಕು ನೀರು ನಿಲ್ಲುವ ಸ್ಥಳ : "ಬಚ್ಚಲು. ಚರಂಡಿ. ಪಾಯಖಾನೆ. ಮೊ. ಗಳಿಂದ ಬಂದ ರೊಚ್ಚಿನ ನೀರಿನಲ್ಲಿಯ ಘನಪದಾರ್ಥಗಳನ್ನು ಶಡದಿಟ್ಟುಕೊಳ್ಳುವುದಕ್ಕಾಗಿ ಮಾಡಿದ ತೊಟ್ಟಿ : ರೊಚ್ಚುಗುಂಡಿ" (Cesspool. ೨೦೪೩). **ರೊಚ್ಚಿಗುಂಡಿ** : ರೊಚ್ಚಿಗುಂಡಿಯಲ್ಲಿ ನೀರು ನಿಂತು ಸಂಪತ್ತಿದೆ (ಕೂಡ).

[ರೊಚ್ಚು (<ಜುಚ್ಚಿ) + ಗುಂಡಿ]

ರೊಚ್ಚುಗೊಳ್ಳು (ಕ್ರಿ). ಕೋಪಗೊಳ್ಳು ; ಸಿಟ್ಟಿಗೇಳು ; ರೇಗು : ಕಾರ್ಯಕ್ರಮಗಳ ಬಗೆಗೆ ಸ್ವಲ್ಪ ಭಿನ್ನಾಭಿಪ್ರಾಯವನ್ನು ಸೂಚಿಸಿದೊಡನೆ

ರೊಕ್ಕುಗೊಳ್ಳುವ . . . ಜನರು ಎಲ್ಲೆಲ್ಲೂ ತುಂಬಿದ್ದು (ಹುಚ್ಚಕ್ರ. ೦೬).
[ರೊಚ್ಚು (<ಉಚ್ಚಿ) + ಕೊಳ್ಳು₂ (<ಕೊಳ್₂)]

ರೊಚ್ಚಿ ' ಉಚ್ಚಿ ' ನೋ.

ರೊಚ್ಚಿಗುಂಡಿ ' ರೊಚ್ಚುಗುಂಡಿ ' ನೋ.

ರೊಚ್ಚಿಬ್ಬಿಸು (ಕ್ರಿ)· ಸಿಟ್ಟಿಗೇಳಿಸು ; ರೇಗಿಸು : ಜಗಳವ ತೆಗೆದು ರೊಚ್ಚಿಬ್ಬಿಸುವಿಪಳೇನು ಸಾರಿಯೊ ಮಾರಿಯೊ (ಕಂಪ್ರತಿ. ೦೬-೬).
[ರೊಚ್ಚು (<ಉಚ್ಚಿ) + ಎಬ್ಬಿಸು(<ಎಬ್ಬಿಸು)]

ರೊಚ್ಚಿಳ್ಳು (ಕ್ರಿ)· ಸಿಟ್ಟಿಗೇಳು ; ರೇಗು : ಹೆಂಡತಿ ಬರುತ್ತಲೇ. ಹೆತ್ತು ಸಾಕಿ ಸಲುಹಿದ ತಾಯಿ ಇವನಿಗೆ ದೂರವಾದಳಲ್ಲ ಎಂದು ಅವಳ ಮನಸ್ಸು ರೊಚ್ಚಿದ್ದಿತ್ತು (ಹೂಸಕ್ಕ. ೫೦) ; ಹಟತೊಟ್ಟು ಕಚ್ಚಿ ಕೆಡಮವೆನು ಕುನಿತ ದೊಳು ಬೊಡನಿಗೆ ರೊಚ್ಚಿದ್ದು ಸಿಂಹ ಜಿಗಿದಂತೆ (ಶಕ್ರಾಜ. ೨೯೦).
[ರೊಚ್ಚು (<ಉಚ್ಚಿ) + ಏಳು₁ (< ಏಳು°₁)]

ರೊಜ್ಜು ' ಉಚ್ಚಿ ' ನೋ.

ರೊಟ್ಟಿ, ರೋಟು₁(ನಾ)· ೧. ರಾಗಿ, ಅಕ್ಕಿ, ಜೋಳ ಮೊದಲಾದುವುಗಳ ಹಿಟ್ಟು, ಉಪ್ಪು, ಕಾರ ಮುಂತಾದುವನ್ನು ನೀರಿನಲ್ಲಿ ಕಲಸಿ, ತಟ್ಟಿ, ಹಂಚಿನ ಮೇಲೆ ಬೇಯಿಸಿ ಮಾಡುವ ಒಂದು ಬಗೆಯ ತಿಂಡಿ : ರೊಟ್ಟಿಯುಂ ದೆಲ್ವವನೊರ್ವನಂಬುತತಿಯುಂ ಬಿಡದೀಂಟುವನೊರ್ವನುಂಟು (ಅಷ್ಟಪ್ರ. ೦೦-೬೧) ; ದೋಸೆ ಕಜ್ಜಾಯ ರೊಟ್ಟಿ ಹೊಯಿಗೆಮುತಿರಸಂಗಳ್ (ಪಾರ್ಶ್ವ. ೪೬-೪೨) ; ಶಿವ . . . ರಾಗಿದು ರೊಟ್ಟಿಯನ್ನು ತಿಂದುಕೊಂಡು ಒಂದುವಾರ ಇರಬಲ್ಲ (ರಾಷಾಸ. ೦೦೩) ; ರೊಟ್ಟಿ ತೊಳದು ನೀರು ಕುಡಿದ ಹಾಗೆ (ಗಾಪ). ೨. "ಅಕ್ಕೀಹಿಟ್ಟಿನೊಳಗೆ ಬೆಲ್ಲವನ್ನೂ ತುಪ್ಪವನ್ನೂ ಹಾಕಿ ಮಾಡಿದ ರೊಟ್ಟಿ, ಕಜ್ಜಾಯ" (ಗಂಗಾಪು. ೬.). ೩. ಬ್ರೆಡ್ಡು : ಬೇಕರಿಯಿಂದ ರೊಟ್ಟಿ ತಂದರು (ರಾಷ). ರೋಟು₂ : ೩. ಮೂವ್ಯರೂ ಕೂಡಿ ಚಹಾ ಮತ್ತು ರೋಟು ತೆಗೆದುಕೊಂಡಿವೆ (ಕಾಯಾ. ೦೨); ಆ ಜಾಗಿರದಾರ ಏಳೋದರಾಗ ರೋಟು ತರಿಸಿ ಇಡಬೇಕಂತೆ (ಶಾಗ್ಯಕ್ಷೀ. ೪೧).
[ದೇ.ಶ ತಮಿ. ದುಲ. ತುಳು. ಕೊಡ.ರೊಟ್ಟಿ; ತೆಲು. ರೊಟ್ಟಿ, ರೊಟ್ಟಿಯ./ಹಿಂ. ರೋಟೀ. ರೋಟಾ: ಮರಾ. ಗುಜ ರೊಟಾ, ರೋಟಾ./ಪ್ರಾ. ರುಟ್ಟಿಯಾ. ರೋಟ್ಟಿ. /ಸಂ. ರೋಟಿ. ರೋಟಿಕಾ]

ರೊಟ್ಟೀಹಲಸು (ನಾ). ಹಿಟ್ಟಿನಂತೆ ಮೃದುವಾದ ತಿರುಳುಳ್ಳ ಒಂದು ಬಗೆಯ ಹಲಸು : ದ್ವೀಪದ ಹಲಸು : ಸೀಮೆಹಲಸು. ದೀಪಹಲಸು. ರೊಟ್ಟೀಹಲಸು (ಪ್ಲಾಫಿ. ೯. ೦೬೦). [ರೊಟ್ಟಿ + ಹಲಸು (< ಪಲಸ)]

ರೊಡ್ಡ, ಲೊಡ್ಡ (ನಾ). ೧. ಎಡಗಡೆ ; ವಾಮಭಾಗ : 'ರೊಡ್ಡ ಕೆಯ್' ಪರಾ. ೨. ಎಡಗೈಯನ್ನೇ ಉಪಯೋಗಿಸಿ ಕೆಲಸ ಮಾಡುವವನು ; ಎಡಜಿ : "ರೊಡ್ಡ–ಎಡಪ" (ಪಾರ್ಶ್ವನಾ. ೪೦). ಲೊಡ್ಡ : ೨. ಅಪನೊಬ್ಬ ಲೊಡ್ಡ (ರಾಷ). [←ತೆಲು. ರೊಡ್ಡ, ಜೊಡ್ಡ]

ರೊಡ್ಡಕೆಯ್, ರೊಡ್ಡಗ್ಯೆ (ನಾ). ಎಡಗೈ ; ವಾಮಹಸ್ತ : (೪). ರೊಡ್ಡಗ್ಯೆ : ಎಡಗೈಯನ್ನೇ ಹೆಚ್ಚಾಗಿ ಉಪಯೋಗಿಸುವ ; ಎಡಪು: ರೊಡ್ಡಗ್ಯೆಯ (Left handed· ೫೦೪೩). [ರೊಡ್ಡ + ಕೆಯ್₂]

ರೊಡ್ಡಗ್ಯೆ ' ರೊಡ್ಡಕೆಯ್ ' ನೋ.

ರೊಡ್ಡಿ (ನಾ)· ಒಂದು ಬಗೆಯ ಔಷಧೀಸಸ್ಯ ; ಹಾಕೋಲಿ : ರೊಡ್ಡಿ, ಹಾಲುರೊಡ್ಡಿ. ಮುಂಜೆ . . . ಜೋರ್ನೆಸಿ (ಶೃಧ್ಯಾ I. ೧೦೩) ; ಸಿಂಹಾಲೆ. ರೊಡ್ಡಿ. ಹಾಲರೊಡ್ಡಿ . . . ಕಾಯಿಸಿ ಪಾಕದಲ್ಲಿರಿಸಿ ಶರೀರಕ್ಕೆ ಲೇಪಿಸೆ ಪಿತ್ತಜ್ವರ. ಉನ್ಮಾದ, ಮೂರ್ಛೆ ಸಹ ಮಾಯುವುವು (ಸಸ್ಯ. ೮೩)
[←ಮರಾ. ರೋಡಾ]

ರೊಣಮೊಡಯ (ನಾ)· ಒಬ್ಬಾತನ ಹೆಸರು : ವಿಜ್ಞಾಪ್ಯೆಜಿದು ಬಿಜ್ಜಾರ್ ಕ[ನ್ನ]ರಸರುಬ್ ಇರ್ಕೆ ಚಿವಾನಿಕಳನ ವಾಳ್ಗಬ್ಬ ಕೊಟ್ಟೊದು ರೊಣಮೊಡಯೊಗೆ ಕೊಟ್ಟರ್ (ಎಳ. XVI. ಕುಮಾಕೃ. ೩೩-೬: ೭೫೦). [?]

ರೊಣೆ (ನಾ)· ಒರಟಾದ ಮೈಗೂದಲು ; ರೋಮ : ಕೊಬ್ಬು ಕರಗಿ ಒಣಗ ಹತ್ತಿದ ಕಪ್ಪುರೊಣೆ ತುಂಬಿದ ಕೈರಚ್ಚಿಗಳು (ಪುಷರಾ. ೦೭೯) ; ಪೋರಿಗೆ ಇಮ್ಮಡ್ದ ಕಪ್ಪು ಪೊತ್ತೆ–ಮಾಸಿಗಳು; ಕಪ್ಪು ಎದಯ ಮೇಲೆ ಕಪ್ಪು ರೊಣೆ (ಕೂಚ್ಚಿ. ೦೭೦). [?]

ರೊಪ್ಪ ' ಅಕೊಪ್ಪ ' ನೋ.

ರೊಯ್ (ನಾ). ೧. ಒಂದು ಅನುಕರಣ ಶಬ್ದ : ' ರೊಯ್ಯನೆ ' ಪರಾ. ೨. ಎಮ್ಮೆಯ ಕೂಗು : (೪).

ರೊಯಿಲಿ (ನಾ). "ಶತ್ರುಗಳ ಪಡಗನ್ನು ಹಿಡಿದೆಳೆದುಕೊಳ್ಳುವುದ ಕ್ಕಾಗಿ ಹಗ್ಗ ಕಟ್ಟಿ ಎಸೆಯುವ ಕಬ್ಬಿಣದ ಕೊಂಡಿಗಳುಳ್ಳ ಸಲಕರಣೆ, ಅನೇಕ ಕೊಂಡಿಗಳುಳ್ಳ ಸಣ್ಣ ಲಂಗರು. ಪಾತಾಳಗರಡಿ" (ಅಪಾನಾ).
[←ಮರಾ. ರೋಯಲೀ. ಲೋಯಲೀ]

ರೊಯ್ಯನೆ (ಅ)· ಒಂದು ಅನುಕರಣಾವ್ಯಯ : ಗಾಳಿ ರೊಯ್ಯನೆ ಬೀಸುತ್ತಿದೆ (ರಾಷ). [ರೊಯ್ + – ಅನೆ₁]

ರೊಪ್ಪು (ನಾ). ೧. ಕಾಟ ; ಹಿಂಸೆ : ಆದರೂ ಹಸುವ ಕಟ್ಟುವುದೆ ಸರಿ ; ಇನ್ನೆಷ್ಟು ಹೇಳಿದರು ಎಮ್ಮೆಯೇ ರೊಪ್ಪು (ತಿಪಕ. ೬೬-೯); ಅರಮನೆಗೆ ಬಿಟ್ಟಮಡಕೆಗಳು ಬೇಕೆಂದು ತಗಾದಿ ಹಚ್ಚಿ ಬಹಳವಾಗಿ ರೊಪ್ಪುಮಾಡಿ ತೊಂದರೆಪಡಿಸಿದನು (ಶಾಮಾಂ. IV. ೩೦). ೨. "ಕೊಳೆ" (ಪಡನಾ).
[ದೇ.ಶ ತಮಿ. ರೊಪ್ಪು; ತೆಲು. ರೊಪ್ಪು, ರೊಪ್ಪು]

ರೊಳ್ಳ (ನಾ)· (ಉಶ) ನೆಪ; ಕಾರಣ; ಸೋಗು : ಭಟ್ಟರು ರೊಳ್ಳೇ ತೆಗೆದರು (ರಾಷಾಮು. ೬೬); ಏ ರಂಗಣ್ಣ, ನೀ ಏನಾರ ರೊಳ್ಳೇ ತಗೀಬ್ಯಾಡ (ಅಮಾ. ೮೪). . [?./ತೆಲು. ರೊಲ್ಲು=ಪ್ರಲಾಪಿಸು]

ರೋಂಕಿಸು (ಕ್ರಿ)· ಗರ್ಜನೆ ಮಾಡು ; ಆರ್ಭಟಿಸು : ಭಾನುಸುತ ಬಲ್ಲೊಂಡು ಸಮರಕಿನ್ನಾರೆನುತ ಪಿಡಿದಾಡಿ ರೋಂಕಿಸುತ ಭಂಗಮುಂ ಬರಿಸಿದನು ರಿಪ್ಪಬಲದೊಳು (ಕುರಂಗ. ೬೬-೦).
[ರೋಂಕು (< ಉತ್ಕೊಂಕು) + – ಇಸು₅]

ರೋಂಕು ' ಜುಂಕು ' ನೋ

ರೋಕ₁ (ನಾ)· ೧. ತೂತು ; ರಂಧ್ರ : "ನಿಮ್ಮಂ . . . ರಂಧ್ರ₁. ರೋಕ₁. ಕುಹರ₂. ದರ₂ – ಈ ೧೫ ಕುಟು" (ಹಶಾಡು. ೦೦೩-೨) ; ಕುಹರಕರುವೆಯನಿಡಿಂ ಭದ್ರಮುಂ ಮುಚ್ಚಲಿಕ್ಕೆಳಲಾ ರೋಕಮನ್ನುಂ ಪೆರ್ಚಿ (ಶ್ರೀಧಾಪು. ೬೭-೦೦೭). ೨. ಜಹಜು : ಹಡಗು. ೩. ಕಾಂತಿ ; ಪ್ರಕಾರ. [ಸಂ.]

ರೋಕ್ಕ ' ರೊಕ್ಕ ' ನೋ.

ರೋಕಡ, ರೋಕಡಿ, ರೋಖಡಿ (ನಾ). ನಗದು ಹಣ : **ರೊಕ್ಕ** : ರೈಲುಹಾದಿ ಕಟ್ಟುವ ಮಜೂರರಿಗೆ ರೋಕಡ ಸಂಬಳ ದೊರೆಯಲು ಬಹಳ ಕಾಲ ಹಿಡಿಯಿತು (ರಾಸಂ. ೨೦). **ರೋಕಡಿ** : ರೋಕಡಿಯ ಕೆಲಸ ಅಂದರೆ ಹಣ ಕೊಡುವುದು, ತಕ್ಕೊಂಬುವುದು (ಪುಂಶಾಸ್ತ್ರ. ೨೬೯). **ರೋಖಡಿ** : ರೋಖಡಿ ಮತ್ತು ಕರೆನ್ಸಿನೋಟುಗಳೂ ಇಲ್ಲವಂತಾಗಿವ್ವು ಉಳಿದ ಜಿನುಸುಗಳೆಲ್ಲ ಇಟ್ಟಂತೆಯೇ ಇದ್ದವು (ಕೋಚಿ:ಪ. ೦೩೦).
[← ಹಿಂ. ಮರಾ. ರೋಕಡಾ]

ರೋಕಡಿ ' ರೋಕಡ ' ನೋ.

ರೋಕು (ನಾ)· ರೋಷ ; ಕ್ರೋಧ : ಭೂವರನ ಬೀಳ್ಕೊಂಡು ರೋಕವಿಂ ವಿತಿ ಮುಸಗಿ ಜೀವಾಳಮುಟ್ಟಿಪ್ಪರೊಡಗೊಂಡು (ಹರಿ. ೨೬-೨೦) ; ಆಕಾಶಕೇಶಮಂ . . . ರೋಕಿಸಿಂದಾ ನಿಶಾಟನ ಕೊಲ್ಲಲುರಿಗಣ್ಣಂ ಭೀಕರದಿ ತೆರೆದನಹುದು (ಪಂಚಾಕಾ. ೩-೦೩-೦೭).
[← ಹಿಂ. ಮರಾ. ರೋಪ್./ಸಂ. ರೋಷ]

ರೋಖ ' ರೊಕ್ಕ ' ನೋ·

ರೋಖಡಿ ' ರೋಕಡ ' ನೋ.

ರೋಖು ' ರೊಕ್ಕ ' ನೋ·

ರೋಗ (ನಾ)· ಆರೋಗ್ಯವಿಲ್ಲದಿರುವಿಕೆ ; ಖಾಯಿಲೆ ; ವ್ಯಾಧಿ : ''ರೋಗಃ . . . ರುಜಾ – ಈ ೦೨ ವ್ಯಾಧಿ'' (ಶಶಾಯು· ೯೮-೨೪) ; ದೇಹವನೆರೆದುದಲ್ಲಿ ರೋಗದ ಕೇಳಿ ರೋಗದಿಂ ಪತ್ತೆಂಟು ದೆಸೆಗಳುವುಜ್ ಯಾಗಿ (ಜಪ· ೩-೦೪೯) ; ರಾಗವೇ ಮೂಡಲು ಯೋಗವೇ ಬಡಗಲು ರೋಗವದು ಶುದ್ಧ ಪಡುವಲು ಕೆಂಕಲು ಭೋಗದ ಬೀಡು (ಸರ್ವಜ್ಞ· ೦೬೦೩) ; ಉಗುಳಿ ಉಗುಳಿ ರೋಗ, ಬೊಗಳಿ ಬೊಗಳಿ ರಾಗ (ಗಾಡ)· [ಸಂ.]

ರೋಗಂದ, ರೋಗಂಧ (ನಾ)· ಒಂದು ಬಗೆಯ ಆಂಟುದ್ರವ್ಯ : ಧೂಪದ ಮರ – ಬಹು ಸುಂದರವಾದ ಉನ್ನತವೃಕ್ಷವು . . . ಅಂಟಿನಿಂದ ರೋಗಂದವಾಗುತ್ತದೆ (ಶಬಾಗ· ೪೨) ; ಕಪ್ಪುರವು ಬಹಳ ದೊಡ್ಡ ಔಷಧಿಯಿದೆ, ಅದರಿಂದ ಒಂದು ತರದ ಮೇಲಾದ ರೋಗಂದವು ಆಗುತ್ತದೆ (ಪುಂಆಖ· ೪-೭೨). **ರೋಗಂಧ** : ಕಟ್ಟಿಗೆಗಳು ಹುಳ ಹತ್ತಿ ಕೆಡವ ಹಾಗೆ ಅವುಗಳಿಗೆ ಎಣ್ಣೆರಾಳಿ ಹುರಮಂಜನ್ನು ಕಾದಿಸಿ ಹಚ್ಚಬೇಕು ಅಥವಾ ಡಾಂಬರವನ್ನಾಗಲಿ ರೋಗಂಧವನ್ನಾಗಲಿ ಹಚ್ಚಿದರೂ ಬರುತ್ತದೆ (ಕೃಕಶಿ· ೦೦೨). [← ಪಾರ· ರೌಗನ್, ರೌಘನ್; ಹಿಂ. ರೋಗನ್· ರೌಗನ್; ಮರಾ. ರೋಗಣ್]

ರೋಗಂಧ ' ರೋಗಂದ ' ನೋ·

ರೋಗಗ್ರಾಹಿ (ನಾ)· ರೋಗಗ್ರಸ್ತನಾದವನು ; ವ್ಯಾಧಿಪೀಡಿತ : ರೋಗಗ್ರಾಹಿಗಳಿಗೆ ಮಾತ್ರ ಈ ಇಂಜಕ್ಷನ್‌ಗಳನ್ನು ಕೊಡಬೇಕು (ಕಂಚೀ· ೨೬). [ಸಂ.ರೋಗಗ್ರಾಹಿನ್]

ರೋಗಜೀವ (ನಾ)· ವ್ಯಾಧಿಗ್ರಸ್ತ ; ರೋಗಿ : ವೈದ್ಯ ಬಂದ ಮೋಡಿ . . . ಧರ್ಮವೈದ್ಯನಿವ ಜಗಕೆಲ್ಲ ಒಬ್ಬನೆ ಮರ್ಮ ಬಲ್ಲ ರೋಗಜೀವಂಗಳ (ಕುಂದ· ಧಾ· ೩-೦೪೨-೪). [ಸಂ.]

ರೋಗಜ್ವರ (ನಾ)· ಒಂದು ಬಗೆಯ ಜ್ವರ : ಕಲ್ಯಾಣಪ್ಕೃತ . . . ನಿಂಬೆಕಾಯಿತೋರ ಒಂದು ಮಂಡಲ ಕೊಳ್ಳಲು ರೋಗಜ್ವರ, ಕಾಸರೋಗ . . . ಪರಿಹರವಪ್ಪುದು (ಶಪ್ಕ· ೦೩೯). [ಸಂ.]

ರೋಗತಂತುಲ (ನಾ)· ಒಂದು ಬಗೆಯ ಸಸ್ಯ; '' ವಾಯುವಿಳಂಗ'' (ಅಪಾಣ). [ಸಂ.]

ರೋಗನಿದಾನ (ನಾ)· ವ್ಯಾಧಿಯ ಲಕ್ಷಣಗಳಿಂದ ರೋಗವು ಇಂತಹುದೇ ಎಂದು ಕಂಡು ಹಿಡಿಯುವುದು : ವೀರರಾಜನು . . . ರೋಗನಿದಾನದಲ್ಲಿಯಾಗಲಿ ಚಿಕಿತ್ಸಾಕ್ರಮದಲ್ಲಿಯಾಗಲಿ ಇರುವ ಭಿನ್ನಾಭಿಪ್ರಾಯಗಳನ್ನು ಸೂಚಿಸಿದ್ದಾನೆ (ಶಶಪ್ಕ· IX, ಪ್ರಶ್ನ ೪೨) ; ರೋಗಕ್ಕೆ ಸರಿಯಾದ ರೋಗ ನಿದಾನ ಹುಡುಕಬೇಕು (ಹೃಸಂಕ್ಷಿ· ೨೧೩). [ಸಂ.]

ರೋಗರಾಜ (ನಾ)· ರೋಗಗಳಲ್ಲಿ ಬಹು ದೊಡ್ಡ ರೋಗ ; ಕ್ಷಯ; ರಾಜಯಕ್ಷ್ಮ. [ಸಂ.]

ರೋಗರುಜಿನ (ನಾ)· ರೋಗ ಮತ್ತು ಖಾಯಿಲೆ ; ಖಾಯಿಲೆಕಸಾಲೆ : ಎಲ್ಲ ಜಗವ ನುಂಗಿ ದಕ್ಕಿಸಿಕೊಂಡವಗೆ ಸಲ್ಲದು ರೋಗರುಜಿನವು (ಶಿಶಿಪೋ· ೩೮); ಪ್ರಾಣಿಗಳ ರೋಗರುಜಿನಗಳನ್ನು ಗುಣಮಾಡಲು ಆಸ್ಪತ್ರೆಯನ್ನು ತೆರೆಯಲಾಗಿದ್ದಿತು (ಕಶ್ಚಿ· ೩೦೯). [ರೋಗ + ರುಜಿನ]

ರೋಗಹಾರಿ (ಗು)· ೧· ರೋಗವನ್ನು ನಿವಾರಿಸುವ; ಕಾಯಿಲೆಯನ್ನು ವಾಸಿಮಾಡುವ. (ನಾ)· ೨. ರೋಗವನ್ನು ನಿವಾರಿಸುವವನು; ವೈದ್ಯ; ಡಾಕ್ಟರು : ''ರೋಗಹಾರೀ . . . ವೈದ್ಯಃ, ಚಿಕಿತ್ಸಕಃ– ಇ ವೈದ್ಯನ ಹೆಸರುಗಳು'' (ಹಿಣ್ಣಂ· ೦೮೪). [ಸಂ· ರೋಗಹಾರಿನ್]

ರೋಗಾಣು (ನಾ). ರೋಗಕ್ಕೆ ಕಾರಣವಾದ ಸೂಕ್ಷ್ಮಜೀವಿ : ಮಾನವನಿಗೆ ಬರುಬಹುದಾದ ಕಾಯಿಲೆಗಳಲ್ಲಿ ಹೆಚ್ಚು ಕಾಯಿಲೆಗಳು ರೋಗಾಣುಗಳಿಂದ ಬರುತ್ತವೆ (ಕಂಮೀ· ೪೨, ೭೩೫); ಆಮಶಂಕೆ, ಕ್ಷಯ ಮೊದಲಾದ ರೋಗಗಳು ರೋಗಾಣುಗಳಿಂದ ಕೂಡಿದ ಆಹಾರ ಮತ್ತು ನೀರಿನ ಮೂಲಕ ಹರಡುವ ಸಂಭವವಿದೆ (ಅಪಾಶಾ· ೬೪). [ಸಂ.]

ರೋಗಿ (ನಾ)· ಕಾಯಿಲೆಯಿಂದ ನರಳುತ್ತಿರುವವನು; ವ್ಯಾಧಿಗ್ರಸ್ತ: ಸಲೆ ಸಮೆದ ರೋಗಿ ಬೇಗಂ ತಲೆಯತ್ತಲ್ಯಾಡಿ ನಮೆವನನ್ಯರ ಮಾತದೊಳ್ (ಸಮಚ· ೩–೭೪); ಮುಕ್ಕುಳಿಸಿಸಿದಂ ರೋಗಿಯಿಂ ಬೆಜ್ಜಂ (ಶಶಾಪು· ೩೪೦ ಚಾಚಾ); ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ (ಗಾಡ). [ಸಂ. ರೋಗಿನ್]

ರೋಗಿತ (ಗು)· ೧· ರೋಗದಿಂದ ನರಳುತ್ತಿರುವ ; ಕಾಯಿಲೆಯು. ೨ (ನಾಯಿಯಂತೆ) ಹುಚ್ಚಾದ· [ಸಂ.]

ರೋಗಿಷ್ಠ (ನಾ)· = ರೋಗಜೀವ : ರೋಗಿಷ್ಠನೂ ದಯಾಮಯಿಯೂ ಆದ ಅವರ ವದುಸ್ಸಿನ ಇನ್‌ಸ್ಪೆಕ್ಟರ್‌ನ ಸ್ಥಿತಿ ಆವೆಲ್ಲಕ್ಕಿಂತ ಭಯಾನಕವಾಗಿತ್ತು (ಶೃಕು, ೨೪೪).

ರೋಗಿಷ್ಠವಾಗು = ರೋಗಗ್ರಸ್ತವಾಗು : ಈ ತಾಪವು ಸಾಹಿತ್ಯಕ್ಕೆ ತಪ್ಪಿನಂತೆ ಫಲದಾಯಕವಾಗಿ ಪರಿಣಮಿಸಲು ಬಾರದಿದ್ದರೆ ಸಾಹಿತ್ಯವು ರೋಗಿಷ್ಠವಾಗುವುದು (ಕೃಬಾಥ· ೪೯). [ಸಂ.]

ರೋಗುಟ್ಟು (ಕ್ರಿ)· 'ರೋ' ಎಂದು ಧ್ವನಿಮಾಡು· ನಿನ್ನನ್ನು ಎಷ್ಟೆಷ್ಟು ಸೇವಿಸಬೇಕೆಂದು ಆಶೆ ಇಟ್ಟುಕೊಂಡಿದ್ದೆ . . . ಎಂದು ರೋಗುಟ್ಟ ಅಳಹತ್ತಿದನು (ಕಯುಂಕ· ೨೩೦) [ರೋ ? + ಕುಟ್ಟು]

ರೋಚಕ (ಗು). ೧· ತೇಜಸ್ಸುಳ್ಳ ; ಪ್ರಕಾಶಮಾನವಾದ. ೨. ಹುಸಿವನ್ನುಂಟುಮಾಡುವ. ೩. ಹಿತಕರವಾದ ; ಸುಖಕರವಾದ: ರೋಚಕ ಅರೋಚಕವೆಂಬನ್ನಕ್ಕ ಪ್ರಸಾದಿಸ್ಥಲವಿಲ್ಲ (ಪೋಗವಚ· ೦೩೬–೩೨೬)· ೪. ಜೀರ್ಣಕಾರಿಯಾದ ; ಪಚನಕಾರಿಯಾದ. ೫. ಪ್ರಿಯಕರವಾದ : ಪೇಚರರ ವರ್ತನಾಚಾರದೊಳ್ದರ್ತಿಸುವ ಶೌಚವಿಧ್ಯದ್ಯರಿನಿಪ ರೋಚಕ ಸಾಧುಜಪರುಂಟು (ಬಕೀಪ್ರ· ೩–೩೦)· (ನಾ)· ೬. ಹುಸಿವು ; ಕುಳ್ಳಿರ್ದನು . . . ನಿಬಿಳೇಂದ್ರಿಯದ ರೋಚಕ ಬಿಗಿಯೆ ಬೇಸಱಿನ ಬಸುಗುದಿಯ ಸುಯ್ಲುನಲಿ (ಕುಪ್ಪಾಕ· ೫೨–೦೩)· [ಸಂ]

ರೋಚಕದ್ರವ್ಯ (ನಾ)· ರುಚಿಕರವಾದ ಪದಾರ್ಥ ; ಸವಿಯಾದ ವಸ್ತು : ಅಜ್ಜಯ ಸ್ವಹಸ್ತರಚಿತವಾದ ಉಪ್ಪಿನಕಾಯಿ. ಅವ್ರ ಸತ್ಯ ಮೊದಲಾದ ರೋಚಕದ್ರವ್ಯಗಳನ್ನೆಲ್ಲ ಶೈಲೇಂದ್ರನು . . . ಕದ್ದು ತಿಂದು ತೀರಿಸಿಯೇ ಬಿಟ್ಟಿದ್ದಾನೆ (ಇಕ್ಕ· ೨೯೩). [ಸಂ.]

ರೋಚಕಿ (ನಾ). ಆಸಕ್ತಿಯುಳ್ಳವನು ; ಇಷ್ಟವಿರುವವನು : ಅರೋಚಕಿಯ ಬಾಳಿನಲ್ಲಿ ? ರೋಚಕಿಯರಲಾವ ಪುಣ್ಯ ? (ಪಂಕಪ· ೩೬–೦೬). [ಸಂ. ರೋಚಕಿನ್]

ರೋಚನ (ಗು). ೧· ಹೊಳೆಯುವ ; ಪ್ರಕಾಶಿಸುವ. ೨· ಸುಂದರವಾದ; ಚೆಲುವಾದ· ೩· ಹಸಿವನ್ನುಂಟುಮಾಡುವ ; ಜೀರ್ಣಕಾರಿಯಾದ. (ನಾ)· ೪· ಜೀರ್ಣಕಾರಿಯಾದ ಮಜ್ಜಾ– ಪದಾರ್ಥ. ೫. ಒಂದು ಬಗೆಯ ಮರ ; ಕೆಂಪು ಬೂರುಗ ; ಶಾಲ್ಮಲಿ : '' ರೋಚನಃ· ಕೂಟ ಶಾಲ್ಮಲೀ – ೨ ಕಚ್ಚನೆ ಎಲವದ ಪೆಸರು· ಬೆಟ್ಟಬೂರುಗ, ಕೆಂಪುಬೂರುಗ '' (ಹಿಣ್ಣಂ· ೦೨೬). ೬· ಹಳದಿ ಬಣ್ಣದ ಒಂದು ಬಗೆಯ ಸುಗಂಧ ದ್ರವ್ಯ ; ಗೋರೋಚನ : ಅತಂಜಳೆರೋಚನಾಂಚಿತತಿಳಕಮದು ನೊಸಲ ಕಣ್ಮೊಲೆಯಿರೆ (ಚಾರಂಕೃ· ೪೦); ಸರೋರುಹತಂತು ರೋಚನಂ . . . ಪೂರ್ಣಕುಂಭಮೆಸೆದತ್ತು ವಿವಾಹಗೃಹಾಂತರಾಳದೊಳ್ (ಚಾಪಪ· ೬–೦೦).

[ಸಂ.]

ರೋಚನಿ (ನಾ)· ಒಂದು ಬಗೆಯ ಸಸ್ಯ ಮತ್ತು ಅದರಿಂದ ತಯಾರಿಸಿದ ಔಷಧ : " ಕಾಂಬಲ್ಯಃ . . . ರೋಚನೀ – ಔ ಕಂಬಲ್ಲದ ಹೆಸರು, ರೋಚನೀಯೆಂಬುವ ಓಷಧಿ " (ಶಿಷ್ಟಾ ೦೬. ೦೫೬). [ಸಂ. ರೋಚನೀ]

ರೋಚಮಾನ (ನಾ)· ಕುದುರೆಯ ಕತ್ತಿನಲ್ಲಿರುವ ಸುಳಿ : " ಉರವಿಂದ ಮೇಲಿಪ್ಪ ಸುಟಿ ರೋ[ಚಾಮಾ. ಲೋ]ಚಮಾನ ನಡುಗೂರಲ ಸುಟಿ ದೇವಮಣಿ " (ಶುಂಗಾ· ೬೩–೨೦); ಕೊರಲೊಳ್ ಕಣ್ಣಸದೊಪ್ಪೆ ದೇವಮಣಿ ಮೇಣ್ ರೋಚಮಾನಂ ಪೊದಟ್ಟುರ ಪೂರ್ವಾಂಗದ ದೋಷಮಂ . . . ಪಿಂಗುಗುಂ (ಹಯಕೌಶ. ೦೦–೮೯). [ಸಂ.]

ರೋಚಿ (ನಾ)· ೧. ಬೆಳಕು ; ಕಾಂತಿ. ೨. ಕಿರಣ ; ರಶ್ಮಿ : " ರೋಚಿಃ . . . ವಿರೋಕಃ, ಗೌಃ – ಈ ೩.೨ ರಶ್ಮಿಗಳ ಪೆಸರ್ " (ಹಲಾಯು· ೬–೩೮); ಚಂಚಲ್ಲಸಚ್ಚಂದ್ರರೋಚಿಧ್ವಳು ಮಾಡಿತ್ತು ತನ್ನಂದರಮಿಧರಮು ಕ್ಷೀರಧಾರಾಪ್ರವಾಹಂ ೦೭ಪು· ೪–೩೪); ಕಾಲಾಸಲಾಕ್ಷಿ ಸ್ಫುರದ್ರೋಚಿರ್ಜಾಲಂ ಪೊಣ್ಮೆ (ಶಾಅಪ· ೩–೦೯). [ಸಂ. ರೋಚಿಸ್]

ರೋಚಿಮಂಡಲ (ನಾ)· ಕಾಂತಿಯ ಆವರಣ ; ತೇಜೋವಲಯ : ಮೂಡಣದ್ರಿಯ ಕೋಡುಗಲ್ಲಿನಿಡೆ ರುಚಿರರವಿರೋಚಿಮಂಡಲವಿನಿಕೆ ಬರೆ (ಶಾತ್ರಾಗ· ೫೦–೦೩೭). [ಸಂ.]

ರೋಚಿಷ್ಣು (ಗು)· ೧. ಕಾಂತಿಯುತವಾದ ; ಪ್ರಕಾಶಮಾನವಾದ. ೨. ಅಲಂಕಾರಗೊಂಡ ; ಶೋಭಾಯಮಾನವಾದ : ಜಿಷ್ಣುವಂ ಸಾರಿ ಭಗದೇಹನಾದನುರಿ ರೋಚಿಷ್ಣು ಭೂಪಾಲರಂ ಸಾರಲವರಳಿದರ್ರೆಂದಾ ಮಘವಲಕ್ಷ್ಮಿಯು (ಪುಪು. ೦೭–೨). (ನಾ)· ೩. ಕಾಂತಿ : ಪ್ರಕಾಶ. ಕಾಂಚನರೋಚಿಷ್ಣುಗಳೆ ವಿಶ್ವ ಕುಲಧರೆಲ್ಲಂ (ಪುಚಾಪ· ೦–೮೭). ೪. ಅಲಂಕರಿಸಿಕೊಂಡಿರುವವನು : "ವಿಭ್ರಾಟ್, ಭ್ರಾಜಿಷ್ಣುಃ, ರೋಚಿಷ್ಣು ೩ ಭೂಷಣಾದಿಗಳಿಂದ ಪ್ರಕಾಶಿಸುತ್ತಿರುವವನ ಹೆಸರುಗಳು " (ಸಿಚಾ· ೦೬. ೦೯೦). [ಸಂ.]

ರೋಚಿಸು (ಕ್ರಿ)· ೧. ಬೆಳಗು : ಶೋಭಿಸು ; ರೋಚಿಸ ಸಾನಾಯ ಭಾವೋಚಿತ ಕರಣಾಂಗಹಾರಪಿಧವಲ್ಲಿ ಕಲರ್ ಸೂಚಿಸ ನಾಟ್ಯಮನಾಡಿದರ್ (ಶ್ರಕೃ· ೦೨–೧೩). ೨. ಇಷ್ಟಪಡು ; ಆಶಿಸು : ಯೋಚಿಸಿ ನೀನದುಕಾರಣವನುದಿನ ರೋಚಿಸದಿರು ಮರಣಕ್ಕೆ (ಹಸಗಿಂಚಿ· ೬–೫೭); ನಿಮ್ಮಡಿಯ ಮೇಲೆ ರೋಚಿಸುತು ಮನ (ತಾಗಿ. ೯–೨೬–೬). [ರೋಚನ + – ಇಸು]

ರೋಜ$_1$ ' ರೋಜಾ ' ನೋ.

ರೋಜ$_2$. ರೋಜಾ$_2$ (ನಾ)· ೧. (ಸಾಮಾನ್ಯವಾಗಿ ತಿಳಿಗೆಂಪುಬಣ್ಣದ) ಸುವಾಸನೆಯ ಹೂವುಗಳನ್ನು ಬಿಡುವ ಒಂದು ಬಗೆಯ ಗಿಡ ಮತ್ತು ಅದರ ಹೂವು: ಗುಲಾಬಿ : ಮೇಜಿನ ಮೇಲೊಂದು ರೋಜದ ಹೂವು, ಹಿಂದೆಂದು ಕಾಣದ ಸೊಗಸಿನ ಹೂವು (ಹೂಬಕ· ೦೨–೦). **ರೋಜಾ**$_2$: ೨. ಗುಲಾಬಿ ಹೂವಿನಂತಹ ತಿಳಿಗೆಂಪುಬಣ್ಣ : ಚಿರಂಜೀವಿ . . . ರೋಜಾ ಬಣ್ಣದ ರೇಷ್ಮೆಯ ವಲ್ಲಿಯಮ್ಲು ಹೊದಿರುವಸು (ಕಥಾ· I, ೩೩೬).

[←ಇಂ. Rose]

ರೋಜನಾಮಾ ' ರೋಜುನಾಮ ' ನೋ.

ರೋಜಮೂರಿ (ನಾ)· ಸುವಾಸನೆಯ ಎಲೆಗಳುಳ್ಳ ಒಂದು ಬಗೆಯ ಸಸ್ಯ : (ಪ್ಯಾಫಿ ೨–೨೩).

[←ಇಂ. Rosemary./ ಮರಾ. ರೋಜ್‌ಮೂರೀ]

ರೋಜಮೇಳ (ನಾ)· ಆಯಾದಿನದ ಆಯವ್ಯಯ ; ದಿನದ ಲೆಕ್ಕ : ಪಕ್ಕಿ ರೋಜಮೇಳ ಬರಿಯುವದು (ಶುಂಪಾಖ್ಯಾ· ೨೭೯).

[← ಮರಾ ರೋಜ್‌ಮೇಳ]

ರೋಜ್ಯ$_1$. ರೋಜ$_1$ (ನಾ)· ೧. ಮುಸಲ್ಮಾನರು ರಂಜಾನ್ ತಿಂಗಳಲ್ಲಿ ಕೈಗೊಳ್ಳುವ ಉಪವಾಸವ್ರತ. ೨. (?) : ಮಶೀದಿಯು ರೋಜಾ ಎಂಬುದರ ಪಶ್ಚಿಮಕ್ಕಿರುತ್ತದೆ (ಶುಂಪಾಖ್ಯಾ· ೬–೦೦೪). **ರೋಜ**$_1$: (ಪ್ರ).

[← ಪಾರ. ರೋಜಾ· ರೋಜದ್ ; ಹಿಂ· ಮರಾ· ರೋಜಾ]

ರೋಜ್ಯಾ 'ರೋಜ್ಯ' ನೋ.

ರೋಜಾಂಬರಿ (ನಾ)· ರೋಜಾಹೂವಿನ ಬಣ್ಣದ ಸ್ಫಟಿಕದ ಹೂವು : ಜಾಜಿಮಲ್ಲಿಗೆ ಪುಷ್ಪ ಸೂಜಿಮಲ್ಲಿಗೆ ದವನ ರೋಜಾಂಬರಿ ನಿತ್ಯಮಲ್ಲಿಗೆ (ಶಿಪ್ರಪು· ೦೮–೮೯). ' ನೀಲಾಂಬರ ' ಪರಾ. [< ರೋಜ$_2$]

ರೋಜಾಹೂವು (ನಾ)· ಸಾಮಾನ್ಯವಾಗಿ ತಿಳಿಗೆಂಪುಬಣ್ಣವನ್ನು ಹೊಂದಿರುವ, ಸುವಾಸನಾಯುಕ್ತವಾದ ಒಂದು ಬಗೆಯ ಹೂವು ; ಗುಲಾಬಿಯ ಹೂವು : ಪೋಟೋ ಮೇಲೆ ಇಟ್ಟಿದ್ದ ರೋಜಾಹೂವು ಎರಡು ದಿನವಾದರೂ ಬಾಡಿಲ್ಲ (ಕಸ).

[ರೋಜಾ$_2$ (< ರೋಜ$_2$) + ಹೂವು (< ಪುಷ್ಪ)]

ರೋಜಿ (ನಾ)· ೧. ದಿನಭತ್ಯ : ಪಡಿ : (ಪ್ರ)· ೨. ಕೆಲಸ; ಕಸುಬು ; ವೃತ್ತಿ : (ಪ್ರ)· [← ಪಾರ· ಹಿಂ· ಮರಾ· ರೋಜೀ]

ರೋಜಿನ (ಅ), ಪ್ರತಿದಿನ ; ದಿನವೂ : ಯಜಮಾನರು ರೋಜಿನ ಇಪ್ಪೊತ್ತಿಗೇ ಬತ್ತಿದ್ರು (ಅಪಹಂ· ೩೩).

[← ಪಾರ. ರೋಜ್ಹಾನಹ್ ; ಹಿಂ. ರೋಜಾನಾ]

ರೋಜು (ನಾ). ೧. ದಿನ ; ನಿತ್ಯ : (ಪ್ರ)· ೨. ಕೆಲಸ ; ಉದ್ಯೋಗ : (ಪ್ರ)· ೩. ಕೂಲಿ ; ಸಂಬಳ : (ಪಾಗೌಚ. ೨೦).

[← ಪಾರ. ಹಿಂ. ಮರಾ. ರೋಜ್]

ರೋಜುಗಾರ (ನಾ)· ವೃತ್ತಿಯಲ್ಲಿರುವವನು ; ಕೆಲಸಗಾರ : (ಪ್ರ).

[← ಪಾರ. ಹಿಂ. ಮರಾ. ರೋಜ್‌ಗಾರೀ]

ರೋಜುಗಾರಿ (ನಾ)· ೧. ಕೂಲಿ ; ಮಜೂರಿ : (ಪ್ರ)· ೨. ದಂಧೆ ; ಕೆಲಸ ; ಉದ್ಯೋಗ : (ಪ್ರ)· [←ಪಾರ. ಹಿಂ. ಮರಾ. ರೋಜ್‌ಗಾರ್]

ರೋಜುಗಾರಿಕೆ (ನಾ)· ಕೆಲಸ ; ದಂಧೆ : (ಪ್ರ)· [ರೋಜುಗಾರ + – ಇಕೆ]

ರೋಜುನಾಮ, ರೋಜನಾಮಾ, ರೋಜುನಾಮೆ (ನಾ)· ೧. ಪ್ರತಿದಿನದ ಕಾರ್ಯಕಲಾಪವನ್ನು ಬರೆದಿಡುವ ಪುಸ್ತಕ; ದಿನಚರಿ : (ಪ್ರ)· ೨. ಆಯಾದಿನದ ಖರ್ಚನ್ನು ಬರೆದಿಡುವ ಪುಸ್ತಕ ; ಕಿರ್ದಿ : (ಪ್ರ)· **ರೋಜನಾಮಾ** : ೧. ಬ್ರಹ್ಮಲಿಪಿ ರಾಯರ ಅದು. ಅದೇನು ರೋಜನಾಮಾ ಲಿಪಿನ ? (ಪಾಪು· ೫೬)· **ರೋಜುನಾಮೆ** : (ಅಸಂಹಾ). [←ಪಾರ. ರೋಜ್‌ನಾಮಹ್ ; ಹಿಂ. ರೋಜ್‌ನಾಮಚಾ]

ರೋಜುನಾಮೆ ' ರೋಜುನಾಮ ' ನೋ.

ರೋಟರಿ(ನಾ).ವಿ.ಸುರುಳಿಕಾಗದದಿಂದ ಮುದ್ರಿಸಬಹುದಾದ ಒಂದು ಬಗೆಯ ಮುದ್ರಣಯಂತ್ರ : 'ರೋಟರಿಯಂತ್ರ' ಪರಾ. ೨. " ಮಾನವ ಸೇವೆಯ ಉದ್ದೇಶದಿಂದ ಅಂತರರಾಷ್ಟ್ರೀಯ ಆಧಾರದ ಮೇಲೆ ಸ್ಥಾಪಿಸಿದ, ಹಲವು ಶಾಖೆಗಳುಳ್ಳ, ಒಂದು ವಿಶ್ವವ್ಯಾಪಕ ಸಂಘ " (Rotary. ೦೦೯೩). ' ರೋಟರಿಕ್ಲಬ್ಬು ' ಪರಾ.

[← ಇಂ. Rotary]

ರೋಟರಿಕ್ಲಬ್ಬು (ನಾ)· = ರೋಟರಿ ೨ : ರೋಟರಿಕ್ಲಬ್ಬಿನಲ್ಲಿ ಇಂದು ಅವರ ಭಾಷಣವಿತ್ತು (ಕಸ).

[ರೋಟರಿ + ಕ್ಲಬ್ಬು]

ರೋಟರಿಮುದ್ರಣ (ನಾ)· ರೋಟರಿಯಂತ್ರದಲ್ಲಿ ಮಾಡುವ ಮುದ್ರಣ : ಬಾಗಿದ ಸ್ಟೀರಿಯೋ ತಯಾರಿಕೆಯೂ ಸ್ವಲ್ಪಕಾಲದಲ್ಲೇ ಬಳಕೆಗೆ ಬಂದುದರಿಂದ ರೋಟರಿಮುದ್ರಣವು ಸಾಧ್ಯವಾಯಿತು (ಮುಕ್ರಕ. ೯೯).

[ರೋಟರಿ + ಮುದ್ರಣ]

ರೋಟರಿಯಂತ್ರ (ನಾ). = ರೋಟರಿ ೧ : ಬಿಡಿಹಾಳೆಗಳನ್ನು ಉಡಿಸಿ ಮುದ್ರಿಸುವ ರೋಟರಿಯಂತ್ರಗಳೂ ಇವೆ (ಮುಕ್ರಕ. ೯೯).

[ರೋಟರಿ + ಯಂತ್ರ]

ರೋಟಿ (ನಾ). ೧. ಸೆಳೆಯುವುದು; ಎಳೆಯುವುದು: "ರೋಟಿಸೆಳೆ" (ಶಾಕ್ಯ. ೦೭೦). ೨. ಗಿಡ. ಮರಗಳಿಂದ ಎಲೆ, ಕಾಯಿ, ಸೊಪ್ಪು ಮುಂತಾದುವುಗಳನ್ನು ಕೀಳಲು ಬಳಸುವ, ತುದಿಯಲ್ಲಿ ಕೊಕ್ಕೆ ಇರುವ ಕೋಲು: ದೋಟಿ: ಅಡಿಗೆ ಸೊಪ್ಪು ಸೆಳೆಯಲು ರೋಟಿ ಬೇಕು (ಕೂಡ). ' ರೋಟಿಗಳೆ ' ಪರಾ. [?]

ರೋಟಿಗಳೆ (ನಾ). = ರೋಟಿ ೨: ಫಳಹರದ ಸೂತ್ರಿಕೆಗಳೊತ್ತುಗೆ ತಲೆಜವಳಿ ರೋಟಿಗಳೆ ವೇಟಿನ ಸೆಳವಲಗೆಯಗ್ಗರಣಿ ತಿರುಜೆಯ ಮುರುಜಿ ಹೊರಜಗಳ (ಅಂಬಿಗ. ೫೯-೩).

[ರೋಟಿ + ಗಳೆ (< ಗಟಿ³)]

ರೋಟ್ಟು$_1$ ' ರೊಟ್ಟಿ ' ನೋ.

ರೋಟ್ಟು$_2$ ' ರೋಡು ' ನೋ.

ರೋಡಾಡಿಸು ' ಱೋಡಾಡಿಸು ' ನೋ.

ರೋಡಾಡು ' ಱೋಡಾಡು ' ನೋ.

ರೋಡಿಗ ' ಱೋಡಗ ' ನೋ.

ರೋಡಿಸು ' ಱೋಡಿಸು ' ನೋ.

ರೋಡು. ರೋಟ್ಟು$_2$ (ನಾ). ರಸ್ತೆ: ದಾರಿ: ಮಾರ್ಗ: ಅವರು ಮಾಗಡಿರೋಡಿನಲ್ಲಿ ಮನೆ ಮಾಡಿದ್ದಾರೆ (ಕೂಡ). **ರೋಟ್ಟು**$_2$: ನಡುವೆ ಅಗಲವಾದ ಗಾಡಿರೋಟು ಹೋಗುತ್ತಿದ್ದುದರಿಂದ (ಪಟ್ಟಣ. ೦೩೬).

[← ಇಂ. Road]

ರೋಡೆಗ ' ಱೋಡಗ ' ನೋ.

ರೋಣ (ನಾ). ಒಂದು ಊರಿನ ಹೆಸರು; ಱ ಈಗಿನ ಧಾರವಾಡ ಜಿಲ್ಲೆಯ ರೋಣ: ರೋಣದ ಮಹಾಜನಕೆ . . . ಕೊಟ್ಟು (ಅಣ. XIII. ೦೫೫-೭; ೮೭೬); ರೋಣ[ದ] ಹನ್ನೆರ್ವಱು ಗದ್ಯಾಣಂ (ಇಂ. XII. ೨೩೬-೦೫; ೮೭೧). [?]

ರೋಣುಗಲ್ಲು (ನಾ). ತೆನೆಯಿಂದ ಕಾಳುಗಳನ್ನು ಬೇರ್ಪಡಿಸಲೂ ಗಾರೆ ಮೊದಲಾದುವನ್ನು ಪುಡಿಮಾಡಲೂ ಬಳಸುವ ದುಂಡನೆಯ ಕಲ್ಲನ್ನು ಅಳವಡಿಸಿದ ತಿರುಗುಯಂತ್ರ: ಒಂದು ಪಾಲು ಸುಣ್ಣಕ್ಕೆ ಮೂರು ಪಾಲು ಮರಳನ್ನು ಭರಸಿ ಸುಣ್ಣದ ಕಾಲುವೆಗಳಲ್ಲಿ ರೋಣುಗಲ್ಲಿಗ ಎತ್ತುಗಳನ್ನು ಕಟ್ಟಿ ಹಿಂದೆ ಅರೆಯುತ್ತಿದ್ದರು (ಶಿಶಿ. ೫೯೦): ರೋಣುಗಲ್ಲು ಹತ್ತುತ್ತಾನೆ. ಕಣಮಾಡುವಾಗ, ಎತ್ತುಗಳನ್ನು ತಾಪೆ ಪೆಡಗೆ ಕಟ್ಟಿ . . . ಹಿಗ್ಗುತ್ತಾನೆ (ಪಕುಪು. ೦೩೭). [ರೋಣು$_3$ + ಕಲ್ಲು (< ಕಲ್$_3$)]

ರೋಣುಹೊಡೆ (ಕ್ರಿ). ರೋಣುಗಲ್ಲನ್ನು ತಿರುಗಿಸು: ಅವನು . . . ಕವರಿದ ಹುಲ್ಲಿನ ಮೇಲೆ ರೋಣುಹೊಡೆಯುವನು (ಕಕುಪು. ೦೯೦).

[ರೋಣು$_3$ + ಹೊಡೆ$_1$ (< ಪೊಡೆ$_1$)]

ರೋಣೂರ್ (ನಾ). ಒಂದು ಊರಿನ ಹೆಸರು: ವೆಜ್ಜವೆ × × ಅರಸರ್ ರೋಣೂರಾಳಿ × × ಸಗರ ಮಿಕ್ಕಾಣ (ಎಕ. X, ಶ್ರವಣಾ. ೬೫-೫; ಸು. ೭೬೬). [ರೋಣು$_3$ + ಊರ್]

ರೋತಿ ' ರೋತೆ ' ನೋ.

ರೋತೆ, ರೋತಿ (ನಾ). ೧. ಕೊಳಕು: ಹೊಲಸು: ಹೇಸಿಗೆ: ಪಕ್ಕದಲ್ಲಿ ಮಲಗಿದ್ದ ಗಂಡನ ರೋತೆಯನ್ನು ನೆನೆದು ಚಿಂತಿಸುತ್ತಾ ಮಲಗಿದ್ದಳು (ಪಾಪಪು. ೨೬೩). ೨. ಅಸಹ್ಯ; ಜುಗುಪ್ಸೆ: ಾಡೂ! ಶರಣಾದೆನು! ನಾ ಸೋತೆ! ವಂಗೆನ್ನೆಪು! ತಪ್ಪರಿ ರೋತೆ! (ಪಾಂಡ. ೫೯-೨೦). ೩. ಅಸಹ್ಯಕರನಾದವನು: ಗೌತಮನ ಸತಿಯರಿಗೆ ಗಜವಾಹನನು ಮೆಚ್ಚಿ ರೋತೆಯಾಗಪೆ ಮುನ್ನ ಋಷಿಯ ಶಾಪದಲಿ (ಪಾಂರಂಗ. ೨೬)

ರೋತಿ: ೧. ಋಸರು ಕೂರಳಲ್ಲಿ ಸಿಕ್ಕಿ ತಿರುಗದೆ ಉಬ್ಬಸ ಬಲೆ ಮರುವಾಗಿ ಕರ್ನ ಕಂಗಳ ರೋತಿಯ ಸೋರೆ (ಪಾಪಾಸು. ೫೦-೩).

[ದೇ. ತಮಿ. ರೋನ್ತೈ: ತೆಲು. ರೋತ]

ರೋದನ (ನಾ). ೧. ಅಳುವಿಕೆ; ಪ್ರಲಾಪ: "ಅಟ್ಕೆಯನೆ ರೋದನಂ" (ಸಂಚಿತ. ೭); ರೋದನದಿಂ ಸುತನ ಶಿರತ್ಯೇದನದಬಲಾಜಿದಾಟುಗುಂ ವಿಪುರುಧಿರಾಸ್ವಾದನದಿಂ (ಕಂಗಾಪು. ೯-೭೩); ಆ ರೋದನಕ್ಕುರೆ ಬೆರ್ಚ್. . . ತಾನಾಯೆತ್ತಗೆ ಬರೆ (ಕ್ರೀಡಾಪ್ರ. ೦೯-೩೦೦). ೨. ಕಣ್ಣೀರು; ಕಂಬನಿ: "ಅಶ್ರು, ಬಾ(ಷ್ಪಂ)ಷ್ಪಂ. ರೋದನಂ. ನಯನಜಲಂ. ಅಸ್ರಂ—ಈ ೫ ಕಣ್ಣೀರ್" (ಹಣಾಮು. ೦೬-೭೭೬). [ಸಂ.]

ರೋದನಿ (ನಾ). ಒಂದು ಬಗೆಯ ವನಸ್ಪತಿ; ಬಳ್ಳಿದುರುಬೆ: "ಯಾಸಃ . . . ರೋದನೀ. ಕಚ್ಚುರಾ . . . ದುರಾಲಭಾ—೧೦ ತೀಟಕ ಸಂಧಿ ಹಸರುಗಳು" (ಸಿಶಾ.೦೬. ೦೩೩). [ಸಂ. ರೋದನೀ]

ರೋದನಿಸು (ಕ್ರಿ). ಅಳು; ಪ್ರಲಾಪಿಸು: ರಮಣನಗಲಿದನೆಂದು ರೋದನಿಸಿ ಮುಖ ಬಳಲಿ ಕಪುಲ ನೆಱಿ ನೊಂದು ಜೀವಿಸಲಾಜದಂತಿಹುವು (ಕಪ್ರ. II. ೭೦೦ ಶಿಶಾಂಕ್ಷಪುರಾ). [ರೋದನ + —ಇಸ್ಕು]

ರೋದನೆ (ನಾ). ರೋದನ ೧: 'ರೋದನೆಗೆಯ್' ಪರಾ. [ಸಂ. ರೋದನ]

ರೋದನೆಗೆಯ್ (ಕ್ರಿ). ರೋದನಿಸು: ರೋದನೆಗೆಯ್ಯಲೇತಕೆ ಕೇಳು ಕೇಳು ತಳೋದರಿ (ಪಾಪಾಪ. ೨೦-೩೩). [ರೋದನೆ + ಕೆಯ್$_1$]

ರೋದಸಿ (ನಾ). ಆಕಾಶ ಮತ್ತು ಭೂಮಿ: "ದ್ಯಾವಾಭೂಮಿ. ರೋದಸ್ಯೌ. ರೋದಸೀ. ರೋಪಸೀ – ಈ ೪ ನೆಲನುಂ ಆಕಾಶದ ಪೆಸರ್" (ಹಣಾಮು. ೫೦-೦೨೦): ಪುರಿಪ ಶಂಖಿಂಗಳ ಘನಘೋಷದ ಪರ್ಚುಗೆ ಬಳೆದುಱೆ ತೀವಿತ್ತು ರೋಧ[ದ]ಸೀಮಂಡಲಮಂ (ಕೃಪ್ರ. ೦೯-೩೦).

[ಸಂ. ರೋದಸೀ]

ರೋದಸ್ಸ್ಥಳ (ನಾ). ಸ್ವರ್ಗ: ಚರಾಚರಧಾತ್ರಿಯನೆಯ್ದೆ ಸುತ್ತಿ ರೋದಸ್ಸ್ಥಳಮಂ ಪಳಂಚಲೆವ ಭಂಗಿವರತುಂಗತರಂಗಸಂಗತ (ಪಾಸಪ. ೩೨-೬; ೧೨೫೮). [<ಸಂ. ರೋದಸ್ಸ್ಥಲ]

ರೋದಿಸು (ಕ್ರಿ). = ರೋದನಿಸು: ಸಿತಕಾಜದಳನೇತ್ರಿಯ ಪೊಡೆಯೊಳಗಿರ್ದ ಸುತ ಪೊಬಿಮಟ್ಟು ರೋದಿಸುತ (ಪೋಚಪ. ೦೭-೦೭); ಮಗನ ಮರಣವಾರ್ತೆಯನ್ನು ಅರಿತ ರಾಣಿ ರೋದಿಸಿದಳು (ಪಾಹುತ್ತ. ೫೦).

[ರೋದನ+—ಇಸು$_3$]

ರೋದೋಂಗಣ (ನಾ). ಆಕಾಶಪ್ರದೇಶ: ಗಗನಸ್ಥಳ: ಪಾಱುವ ಕೀರಮೂಲೆ ರೋದೋಂಗಣವೆಂಬ ಪಟ್ಟಿಣದೊಳೊಪ್ಪುವ ಬೆಳ್ಳಗಿಲೆಂಬ ಬಳ್ಳಿವಾಡಂಗಳ ಪೊನ್ನ ಮಾಣಿಕದ ಪಚ್ಚೆಯ ತೋರಣವಂತೆ ರಜಿಸುಂ (ಪಗೂ. ೪-೭೭). [<ಸಂ. ರೋದೋಂಗನ]

ರೋದೋವಾತ (ನಾ). ಆಕಾಶದಲ್ಲಿ ಬೀಸುತ್ತಿರುವ ಗಾಳಿ: ರೋದೋವಾತಮಂ ಕೆತುತತಿ ಜೌಯ (ಕಂಪ್ರಕೃ. ೦೦-೭೦). [ಸಂ.]

ರೋದೋವಿವರ(ನಾ). ಭೂಮಿ ಮತ್ತು ಆಕಾಶಗಳ ಮಧ್ಯದ ಪ್ರದೇಶ·ಗಗನಾಂತರ: ಕ್ಷಿತಿಜ: ಪ್ರಚಂಡಪ್ರಳಯಘನಘಟಾರಾವದಿಂದಾರ್ದು ಬಾಣಾವಲಿಯಿಂದಂ ಪೂಟ್ ರೋದೋವಿವರಮನೊದವಿತ್ತೊಂದು ಘೋರಾಂಧಕಾರಂ (ಪಂಪಭಾ. ೦೦-೦೪೬). [ಸಂ.]

ರೋಧ (ನಾ). ೧. ತಡೆಯುವುದು; ನಿಲ್ಲಿಸುವುದು: ಒಂದು ತಂತಿಮೂಲಕ ವಿದ್ಯುತ್ಪ್ರವಾಹವು ಹರಿಯುವುದನ್ನು ತಡೆಗಟ್ಟುವ ಗುಣವು ಆ ತಂತಿಗೆ ಇರುತ್ತದೆ. ಈ ಗುಣಕ್ಕೆ ರೋಧವೆಂದು (Resistance) ಪೆಸರು (ಕೌಪ್ರ. ೨೫೬). ೨. ಹಿಡಿದುಕೊಳ್ಳುವುದು; ಬಂಧಿಸುವುದು. ೩. ತಡೆ; ಅಡ್ಡಿ. ೪. ನದಿಯ ತೀರ, ಎಡದ: "ತೀರಂ ರೋಧಂ ತಟಂ ಪ್ರಪಾತಂ ಕೂಲಂ" (ಪಸ್ತ್ರಕೋ. ೨೪-೦೩); ರೋಧಮನೈದೆ ನಿಲ್ದೆರತುಮಂ ಪುದಿದೊಪ್ಪುವ ನಂದನವಳಿಯಗ್ಗಾಧರಪಕ್ಷಪ್ರಾಳಿ (ಕಂಪ್ರಕೃ. ೦-೬೨). [ಸಂ.]

ರೋಧಕ (ಗು). ೧. ತಡೆಯುವ ; ಅಡ್ಡಿಪಡಿಸುವ. (ನಾ). ೨. ತಡೆಯುವಂಥದು ; ಅಡ್ಡಿಪಡಿಸುವಂಥದು : ಕಾಜು — ರೇಶಿಮೆಗಳು ವಿದ್ಯುಲ್ಲತೆಯ ರೋಧಕಗಳುಂಟು (ಶುಂಪ್ರಾ. ೩-೨೦೬). [ಸಂ.]

ರೋಧನ (ನಾ). ೧. ತಡೆಯುವುದು ; ಅಡ್ಡಿಪಡಿಸುವುದು. ೨. [ಜ್ಯೋತಿ] ಬುಧಗ್ರಹ. [ಸಂ.]

ರೋಧಸಿ (ನಾ). ದಡಗಳನ್ನು ಹೊಂದಿರುವುದು ; ಹೊಳೆ ; ನದಿ : "ನದಿ ತರಂಗಿಣಿ . . . ರೋಧಸಿ ಸರಿತ್ತು . . . ತೊಱೆಗೆ ನಾಮಂ" (ಶುಂಗಣಾ. ೦೩೨-೦೦). [ಸಂ. ರೋಧಸೀ]

ರೋಧಸ್ವಿನಿ (ನಾ). ನದಿ ; ಹೊಳೆ : ದುರಿತವ್ರಾತಲತಾಕೃಪಾಣಿ ವಿಸರದ್ದುರ್ಭೋಧರೋಧಸ್ವಿನೀತರಣದ್ರೋಣಿ . . . ವಾಣಿ (ಕಂರ್ನಕೃ. ೦-೦೨). [ಸಂ. ರೋಧಸ್ವಿನೀ]

ರೋಧಿ (ನಾ). ತಡೆಯುವವನು ; ಪ್ರತಿಬಂಧಿಸುವವನು. [ಸಂ. ರೋಧಿನ್]

ರೋಧಿನಿ (ನಾ). ತಡೆಯುವವಳು ; ಪ್ರತಿಬಂಧಿಸುವವಳು : ಅಂಗ ಹೀನನ ಪಂಗುತ್ವಾಂಧಕನ ಘನರುಜಾಂಗನ ಬಿಡುದಲೆಯ ರೋಧಿನಿಯನುಪ್ಪ ವಡಿಸುವ ಸಮಯದೊಳಿನಿಪರನು ಕಾಣ್ಬುದು ಮಹೀಶರಿಗಂಗವಲ್ಲ (ಕುಪ್ಕಾಣಾ. ೩-೦೦೭). [ಸಂ. ರೋಧಿನೀ]

ರೋಧೋವಕ್ತ್ರ (ನಾ). = ರೋಧಸಿ : "ಸಿಂಧುಃ . . . ರೋಧೋವಕ್ತ್ರಾ – ಈ ೨೧ ತೊಱೆ" (ಪಣಾಯು. ೦೧೮-೪೪). [ಸಂ. ರೋಧೋವಕ್ತ್ರಾ]

ರೋಧ್ರ (ನಾ). ೧. ಒಂದು ಬಗೆಯ ಮರ ; ಲೋಧ್ರ : " ರೋಧ್ರಂ ತಿಲ್ಲಂ" (ಋತ್ಕೋ. ೩೪-೩). ೨. ಪಾಪ. [ಸಂ.]

ರೋಪ (ನಾ). ೧. ಮೇಲಕ್ಕೆ ಏರಿಸುವುದು. ೨. ನಾಟಿಹಾಕುವುದು ; ನೆಡುವುದು. ೩. ಬಾಣ ; ಸರಳು : "ಶಂಕಪತ್ರಃ, ಶರಃ . . . ರೋಪಃ—ಈ ೧೬ ಅಂಬು" (ಪಣಾಯು. ೬೬-೩೦) ; ನಿಜಧನು ದನುಜಾರಾತಿಜಾತಾಧಿವಾಸಂ ನಿಜರೋಪಂ ವಿಶ್ವರೂಪಂ (ಕಾಸಃ. ೦-೨). ೪. ತೂತು ; ರಂಧ್ರ. [ಸಂ.]

ರೋಪಣ (ನಾ). ಬಾಣ ; ಸರಳು : ಕೊಳದಿಂ ಕೊಪ ಪರಿಕಾಲಿಂದೆ ಪಲ್ಲವರೋಪಣನ ಲೀಲಾಸ್ಪದಂ ದಿಟವೆನಿ ರಾಜಿಪುದು (ಪುರಃಕೃ. ೨-೨೬). [ಸಂ.]

ರೋಪಣಾಸನ (ನಾ). ಬಿಲ್ಲು : ಶರಾಸನ : ಅರ್ಜುನಪರಿರೋಚ್ಚಯ ಸುರೋಪಣಾಸನಕೃತಂ ದುರ್ಜನಕ್ಷಣದಾಚರಾದ್ರಿ ಕುಲಕಾಲಿಕ . . . ಸಂಗಮೇಶ್ವರ ತಕ್ಷಿಸನ್ನ ಸತತಂ (ಪ್ರೌಕಣಾ. ೭-೦). [ಸಂ.]

ರೋಪಿತ (ಗು). ೧. ಬೆಳೆಸಲ್ಪಟ್ಟ. ೨. ನೆಟ್ಟ. [ಸಂ.]

ರೋಪು, ರೋಪ್, ರೋಪ್ಪು (ನಾ). ಜೋರು ; ಜಬರ್ದಸ್ತು : ನಿನ್ನ ರೋಪು ನನ್ನ ಹತ್ತಿರ ತೋರಿಸಬೇಡ (ಸೂಣ). **ರೋಪ್** : "ನಿನ್ನ ಕೀರಿಸಿಬಿಡ್ತಿನಿ' ಅಂತ ಗುಮಾನಿ 'ಪಾಲಿ ರೋಪ್' ಹಾಕಿದ್ದ. (ಕಪ್ಕೂರು. ೨೦೦). **ರೋಪ್ಪು** : ನಿಮ್ಮ ಬೆಂಗಳೂರಿನ 'ರೋಪ್ಪು' ಇಲ್ಲಿ ನಡೆಯೋದಿಲ್ಲ (ಕೂಶಮೂ. ೩೨೦).

[←ಅರ. ರುಆಬ್ ; ಹಿಂ. ರೋಬ್ ; ಮರಾ-ರೋಬ್, ರೂಆಬ್]

ರೋಪ್ ' ರೋಪು ' ನೋ.

ರೋಪ್ಪು ' ರೋಪು ' ನೋ.

ರೋಮ (ನಾ). ೧. ಮೈಮೇಲೆ ಬೆಳೆಯುವ ಕೂದಲು; ತನೂರುಹ : " ರೋಮಾಣಿ, ತನೂರುಹಂ – ಈ ೨ ಮೆಯ್ಯ ಕೂದಲ್ " (ಪಣಾಯು. ೮೬-೩೭೦) ; ಮೆಯ್ಯೊಳ್ ಸಮುದ್ಗತರೋಮಂ . . . ಎಸೆಯುತಿರ್ಪನ್ನ ವಿಂತೆಂದರ್ (ಜಜಿ. ೩-೩). ೨. ಹಕ್ಕಿಯ ಗರಿ. [ಸಂ. ರೋಮನ್]

ರೋಮಂಥ (ನಾ). ೧. (ಹಸು ಮೊದಲಾದ ಪ್ರಾಣಿಗಳು) ತಿಂದ ಆಹಾರವನ್ನು ಮೆಲುಕು ಹಾಕುವಿಕೆ : ಮೃಗಸಂದೋಹರೋಮಂಥ ಫೇನೋದ್ಗಕಬಿಂದುಸ್ಯಂದಿ ತೀಡಿತ್ತಸಗಿ ಸುರಭಿ ವೈಭಾತಿಕಂ ಮಾತರಿಶ್ವಂ (ಕಾರಂಪು. ೦೫೭) ; ಸರಳಲತಾಲಾಸ್ಯನಟಂ ಹರಿಣೇರೋಮಂಥಮಂಥರಂ ಲವಲೀಮರ್ಮರಮುಖರಂ ಕರಿಕರಶೀಕರಶೀತಳಮಿಸಗಿದತ್ತರಣ್ಯಸಮೀರಂ (ಪುಗ್ಗಕೃ. ೦೦-೩೨). ೨. ಪುನರುಕ್ತಿ; ಪುನರಾವೃತ್ತಿ. [ಸಂ.]

ರೋಮಂಥಿಸು (ಕ್ರಿ). ಮೆಲುಕು ಹಾಕು : ರೋಮಂಥಿಸಿತು ರತಿರೋಮ ಹರ್ಷಣದಿ ಭಾವಜವ್ಯಾಪಣಶು (ಕ್ರೀಡಾಸಾ. ೨೦೬-೦೫೫).

[ರೋಮಂಥ + —ಇಸು]

ರೋಮಂಬೊರೆ (ಕ್ರಿ). ಕೂದಲನ್ನು ಹೊಂದು : ಆ ಚಂಡಾಲಕನ್ನಿಕೆ ರೋಮಂಬೊರೆದ ಪಂದೊವಲ ಪಂಜರದೊಳಿಕ್ಕಿ (ಕಾರಂಉ. ೬೩೦).

[ರೋಮ + ಪೊರ್ಮೆ]

ರೋಮಕಂದ (ನಾ). ಗೆಡ್ಡೆಗಳನ್ನು ಬಿಡುವ ಒಂದು ಬಗೆಯ ಸಸ್ಯ ; ವಾರಾಹಿ : " ರೋಮಕಂದಃ – ರೋಮಕಂದರ, ರಸಮೂಲಿಕೆ " (ಓಷಂ. ೦೪೦). [ಸಂ.]

ರೋಮಕಂದರ (ನಾ). = ರೋಮಕಂದ : " ಪರ್ವಮೂರಾ – ರೋಮಕಂದರ, ಪೇನ " (ಓಷಧಿ. ೪೬). [< ಸಂ. ರೋಮಕಂದ]

ರೋಮಕರ್ಣಕ (ನಾ). ೧. ಕೂದಲು ತುಂಬಿದ ಕಿವಿಯುಳ್ಳದು. ೨. ಮೊಲ. [ಸಂ.]

ರೋಮಕಲವಣ (ನಾ). ಒಂದು ಬಗೆಯ ಉಪ್ಪು : "ಉತ್ಕಂ– ರೋಮಕಲವಣಂ" (ಓಷಧಿ. ೦೩). [ಸಂ.]

ರೋಮಕೂಪ (ನಾ). ಕೂದಲು ಬೆಳೆಯುವ ರಂಧ್ರ : ಅನಂತಕೋಟಿ ಬ್ರಹ್ಮಾಂಡಗಳು ನಿಮ್ಮ ರೋಮಕೂಪದೊಳಗಡಗಿಪ್ಪವೆಂದರೆ ಬ್ರಹ್ಮ ವಿಷ್ಣು ರುದ್ರರಿವರೆಲ್ಲ ಒಂದು ಬ್ರಹ್ಮಾಂಡದೊಳಗಣ ಬಾಲಕರು (ಆದಪ. ೨-೪) ; ಬಿಗಿದ ರಕುತದ ರೋಮಕೂಪದ ತೊಗಲ ಕೋಟೆಯ ನಂಬಿ (ಪುಣಾ. ೮೪). [ಸಂ.]

ರೋಮನಾಳ (ನಾ). ಕೂದಲು ಬೆಳೆಯುವ ನಾಳ : ಸಮಾನನಸ್ಸಲಂ . . . ಅನ್ನರಸಮಂ ಲೇಸಾಗಿ ಬಹು ರೋಮನಾಳಕ್ಕೆ ಹಂಚಿಕ್ಕಿ ಸಾಸದಿಂ ದಿಹುದು (ಪಕೃತಿ. ೫-೨೦-೨೬). [ಸಂ. ರೋಮನಾಲ]

ರೋಮಪುಳಕ (ನಾ). ಸಂತೋಷ, ಭಯ ಮುಂತಾದುವುಗಳಿಂದ ಮೈಗೂದಲು ನಿಮಿರುವಿಕೆ : ಕದಡಿತೀ ಬಲ ರೋಮಪುಳಕವ ಹೊದೆದುದಾ ಬಲ . . . ನರನ ರಥ ಸುಳಿಯೆ (ಕುಪ್ಕಾಕ್ರೋ. ೩-೧೭). [ಸಂ. ರೋಮಪುಲಕ]

ರೋಮರಂಧ್ರ (ನಾ). = ರೋಮಕೂಪ : ಶರೀರದಲ್ಲಿ ೭೦ ಲಕ್ಷ ರೋಮರಂಧ್ರಗಳುಂಟೆಂದು ತಿಳಿಯುತ್ತದೆ (ಕುಣಾಯು. ೩-೦೬೯) ; ರೋಮರಂಧ್ರಗಳರಳೆ ಶತಕೋಟಿ ಕಣ್ಣುಗಳು ಆ ಮಹಾರೂಪ ಕಂಡಾ ಕಣಿಯನುಸಿರುವೆನು (ಗಂ. ೦೦-೦೭). [ಸಂ.]

ರೋಮಲತೆ (ನಾ). (ಹೊಕ್ಕುಳಿನಿಂದ ಮೇಲುಭಾಗದಲ್ಲಿ ಬೆಳೆಯುವ) ಕೂದಲಿನ ಸಾಲು : ಬಾಸೆ ಪೊಲೆ ಪೊಣರ್ವಟ್ಟು ರೋಮಲತೆ ಬಟ್ಟೆ ನಿತಂಬಮಿಱುಂಬು ನಾಭಿ ಕುತ್ತುಜುಗುಬ್ಬಿ ಮಿಂಚುಪೊಳ್ದೊಡೆ . . . ಆಗೆ ಮದನಾಟವಿಯಂತಪೊಲೊಪ್ಪಿ ತೋಜಿದಳ್ (ಜಾಸ್ಮಾ. ೩೦೨ ಕೂದ್ರಳ್). [ಸಂ. ರೋಮಲತಾ]

ರೋಮಶ (ನಾ). ೧. ಮೈತುಂಬ ಕೂದಲುಳ್ಳದು. ೨. ಕುರಿ. ೩. ಕಾಡುಹಂದಿ. ೪. ಒಬ್ಬ ಋಷಿಯ ಹೆಸರು : ಮಾರ್ಕಂಡೇಯ ರೋಮಶಪ್ರತ್ಯೇಕರಳವರ್ (ಕೃಜಾಸಾ. ೩೨-೩೦). ೫. ಗುಹ್ಯಾಂಗ. [ಸಂ.]

ರೋಮಸ್ಪನ (ನಾ). ಕುದುರೆಯ ಬಾಲದ ಬುಡ ; ವೇಚಕ (?) : ಬಾಲದ ಕೆಟಗು ತಗರಿಯೆಂಬ ಪೆಸರಕ್ಕುಂ ಅದಱ ಕೆಲಂಗಳ್ಗೆ ವೃತ್ತಿಯೆಂಬ

ಪೆಸರಕ್ಕುಂ ವೃತ್ತಿಯಿಂ ಕಿಟ್ಟಿಗೆ ರೋಮಸ್ಪ(ಸ್ಪ)ನಮೆಂಬ ಪೆಸರಕ್ಕುಂ (ಅಷ್ಟಾ. ೪೪-೦೦). [?]

ರೋಮಹರುಷಿತೆ (ನಾ). ಸಂತೋಷದಿಂದ ಪುಳಕಗೊಂಡವಳು : ಹಾ ಮಹಾದೇವೆಂದು ಪುಳಕಿತ ರೋಮಹರುಷಿತೆಯಾಗಿ. . . ಬಿನ್ನೈಸಿದಳು ಗಿರಿಜಾತೆ (ತೊಡಣಾ. ೦-೨-೦೦). [<ಸಂ. ರೋಮಹರ್ಷಿತಾ]

ರೋಮಹರ್ಷ (ನಾ). = ರೋಮಪುಳಕ : "ರೋಮಾಂ(ಕ)ಚಃ ಪುಳಕಃ . . . ರೋಮಹರ್ಷಃ _ ಈ ೧೦ ರೋಮಾಂಚು" (ಹಲಾಯು. ೦೦೭-೨೯); ವಿಸ್ಮಯಂಬಡೆವ ಮಯಂ ಬೆರಲ್ಮಿಡಿಯನೇ ಸುರವರ್ಧಕಿ ರೋಮಹರ್ಷದೊಳ್ ತೊಡರನೆ ಚೀರಫುಟ್ಟಿ (ತಂಪ್ರಕೃ. ೦-೦೨೨); ನಯನಸಲಿಲದ ರೋಮಹರ್ಷದ ಸತ್ಯಭಾವದ ಭೂಮಿಪತಿ ಮೈಯಿಕ್ಕಿದನು ಮುನಿವರನ ಚರಣದಲಿ (ಋಷ್ಯಾ. ೪-೬). [ಸಂ.]

ರೋಮಹರ್ಷಣ (ಗು). ೧. ರೋಮಾಂಚನಗೊಳಿಸುವ. (ನಾ). ೨. = ರೋಮಪುಳಕ : ವಸುಧೆಯಿರಿತು ಮೇರುತ್ಪಲಮೆಲ್ಲಾಡಿದುದು ಬಸವಳಿದನಹಿ. . . . ಅಹವಂ ಘೋರಮಾದುದು ರೋಮಹರ್ಷಣದೊಳು (ಕೃಪಾ. ೨೫-೨೩). [ಸಂ.]

ರೋಮಹರ್ಷಿತ (ನಾ). ಪುಳಕಿತನಾದವನು ; ರೋಮಾಂಚನಗೊಂಡವನು. [ಸಂ.]

ರೋಮಾಂಗಿ (ನಾ). ಮೈಮೇಲೆ ತುಂಬ ಕೂದಲುಳ್ಳವಳು : ಪಾಮನೆ ವಿಕಳೆ ರೋಮಾಂಗಿ ಮಾರ್ಜಾಲಾಕ್ಷಿ ಕಪಿಲಕಚೆ ಶುನಕಯಾನೆ. . .ಎನಿವಂಗನೆಯರಿಂದ ಗತಾಯು ಪುರುಷಂಗೆ (ಪಡಿಣ. ೦೭-೩೦).

[ಸಂ. ರೋಮಾಂಗೀ (ರೋಮ + ಅಂಗ + —)]

ರೋಮಾಂಚ (ನಾ). ೧. ಮೈಗೂದಲು ನೆಟ್ಟಗೆ ನಿಲ್ಲುವಿಕೆ ; ಪುಳಕ ; ನವಿರು : " ರೋಮಾಂ(ಕ)ಚಃ . . . ರೋಮಹರ್ಷಃ — ಈ ೧೦ ರೋಮಾಂಚಂ" (ಹಲಾಯು. ೦೦೭-೨೯) ; ಶರೀರದೊಳೆತ್ತಂ ರೋಮಾಂಚ ಕಂಚುಕಂ[ಪಾಣಿ. ೪೦] ಮದಿರಾಮದವಾಗಿ ಕೆಗಬ್ಬನಾಕೆಯ ನುಡಿಯೊಳ್ (ಕಖಗ. ೩-೯) ; ರೋಮಾಂಚಮನಾನಂದಾಶ್ರುವಂ ಪಾರ್ದಿದಮಲಯಶಂ ಭಾರತೀಕರ್ಣಪೂರಂ (ಪಂಪಾಚ. ೨-೩೩). ೨. [ಕಾವ್ಯಮಿಮಾ]ಸಾತ್ವಿಕಭಾವಗಳಲ್ಲಿ ಒಂದು : ಸ್ವಂಭ ಸ್ವೇದ ರೋಮಾಂಚ . . . ಸಾತ್ವಿಕಭಾವಂಗಳ್ (ಏಪಗ. ೨೫೭) ; ಮರವಟ್ಟರುವುದು, ರೋಮಾಂಚ ಮುಂತಾದ ಸಾತ್ವಿಕ ಭಾವಗಳು . . . ಚೇತನವನ್ನು ಧ್ವನಿಸುತ್ತವೆ (ಕ್ರಿಶಾಕೋ. ೬೯ ೦೫೮).

[ಸಂ.]

ರೋಮಾಂಚಕಾರಕ (ಗು). ಮೈನವಿರೇಳಿಸುವ ; ಪುಳಕವನ್ನುಂಟುಮಾಡುವ ; ಅದೊಂದು ರೋಮಾಂಚಕಾರಕ ದೃಶ್ಯ (ಅಷ್ಟಾ. ೪೪. ೦೬೨).

[ಸಂ.]

ರೋಮಾಂಚಕಾರಿ (ನಾ). ರೋಮಾಂಚವನ್ನುಂಟುಮಾಡುವುದು ; ಪುಳಕ : ಕೊನೆಯ ವಾಕ್ಯದ ವಿಸ್ಮಯವಂತೂ ರೋಮಾಂಚಕಾರಿಯಾಗಿದೆ (ಕೂಪ್ರಕಾ. ೦೬೪). [ಸಂ. ರೋಮಾಂಚಕಾರಿನ್]

ರೋಮಾಂಚಗೊಳ್ಳು (ಕ್ರಿ). ಮೈಗೂದಲು ನಿಮಿರಿ ನಿಲ್ಲು ; ರೋಮಾಂಚವಾಗು ; ಪುಳಕಪೊಂದು : ಈ ಮಾತನ್ನು ಕೇಳಿ ದಾಶರಾಜನು ಹರ್ಷದಿಂದ ರೋಮಾಂಚಗೊಂಡು 'ಕೊಟ್ಟೆ' ಎಂದನು (ಪಡಣಾ. ೪). [ರೋಮಾಂಚ + ಕೊಳ್ಳು$_{೧}$ (< ಕೊಳ್$_{೧}$).]

ರೋಮಾಂಚತೆ (ನಾ). = ರೋಮಾಂಚ ೧ : ಅಲರ್ದು ಕೆಪಪಿಸ ಪುರಗಳ್ ಪರಿಗತರೋಮಾಂಚತೆಯಂ ದೊರೆಮಾಡಿದುದೆನ್ನ ತನುಪುಪಂ ನೆಜಿ ತನ್ನೊಳ್ (ತಂಪ್ರಕೃ. ೨-೮೯). [ಸಂ. ರೋಮಾಂಚತಾ]

ರೋಮಾಂಚನ (ನಾ). = ರೋಮಾಂಚ ೧ : ಹೊಗೊಂಚಲ ರೋಮಾಂಚನ ಪಡೆದೆ (ಕಶ್ಯಾಚ. ೫೬. ೩). [ಸಂ.]

ರೋಮಾಂಚನಗೊಳ್ಳು (ಕ್ರಿ). = ರೋಮಾಂಚಗೊಳ್ಳು : ಮೈ ಕೂಡಾ ರೋಮಾಂಚನಗೊಂಡಿತು. ಶರೀರವೇ ಒಮ್ಮೆ ನಡುಗಿತು (ಕಂಪಾಚ. ೦೭೩). [ರೋಮಾಂಚನ + ಕೊಳ್ಳು$_{೧}$ (< ಕೊಳ್$_{೧}$)]

ರೋಮಾಂಚನಮೆಸಗು (ಕ್ರಿ). = ರೋಮಾಂಚಗೊಳ್ಳು : ನಿಟ್ಟಿಸುವಳು ಚುಂಬಿಸುವಳು ಮೈ ಜುಮ್ಮೆದಟ್ಟಿ ರೋಮಾಂಚನಮೆಸಗಿ ಉಟ್ಟುದು ಸರಿದು ಮದನಜಲ ನೆಱೆ ಪೊಱಮಟ್ಟುದು ನಾಣೆಡೆಯಿಂದ (ಕಂಪಚ. ೯-೦೧೩). [ರೋಮಾಂಚನ + ಎಸಗು$_{೧}$]

ರೋಮಾಂಚನಿಸು (ಕ್ರಿ). = ರೋಮಾಂಚಗೊಳ್ಳು : ಮಿಂಚಿ ರೋಮಾಂಚನಿಸಿತೆಂಬುವೋಲ್ ಮೊಗಕೆ ಹುಳ್ಕಿದುದು ಕೈದುಸಂ (ಕ್ರಿಭಾಮ. ೪೧೯-೯೧೩). [ರೋಮಾಂಚನ + —ಇಸು$_{೩}$]

ರೋಮಾಂಚವೇಳು (ಕ್ರಿ). = ರೋಮಾಂಚಗೊಳ್ಳು : ಶಂವಿಧ್ವನಿಯು ಮೇಲಿಂದ ಮೇಲೆ ಕಿವಿಗೆ ಬೀಳುತ್ತಲೇ ಇತ್ತು. ಅದನ್ನು ಕೇಳಿದಾಗ ನನ್ನ ಮೈ ರೋಮಾಂಚವೇಳುತ್ತಿತ್ತು (ಪಕಣಾ. ೪೯). [ರೋಮಾಂಚ + ಏಳ್$_{೧}$ (< ಏಟ್$_{೧}$)]

ರೋಮಾಂಚಿತ (ಗು). ೧. ಕೂದಲು ನೆಟ್ಟಗಾದ,— ನಿಮಿರಿದ. (ನಾ). ೨. = ರೋಮಾಂಚ ೧ : ಬರ್ಕನ ವಕ್ತೃತೆಯನ್ನು (Speeches) ಓದಿದರೆ ಶರೀರವೆಲ್ಲಾ ರೋಮಾಂಚಿತವಾಗಿ ಮನಸ್ಸು ಉನ್ಮತ್ತವಾಗಿ ಹೋಗುತ್ತದೆ (ಪಣಾ. ೩೦). [ಸಂ]

ರೋಮಾಳಿ (ನಾ). ೧. = ರೋಮಲತೆ ; ಕರ್ಪೋದವಿದ ರೋಮಾಳಿ ರಂಜಿಸುದೇವತಿಯಾ (ಪಗಾ. ೨-೧೦). ೨. = ರೋಮಾಂಚ ೧ : ಹೊಗಳಿಡುವ ಹರುಷದಲಿ ರೋಮಾಳಿಗಳ ಗುಡಿಯಲಿ ತನ್ನ ನಿಳಯಕೆ ಮುಗುದೆ ಬಂದಳು (ಋಷ್ಯಾ. ೩-೦೦೩). ೩. ಹೆಣೆದ ಕೂದಲು ; ಜಡೆ : ಕವಿಕುಲಪಾರಿಜಾತ ಸನ್ಮಂದಗಾಮಿನಿ ಸಿಂಹಕೇಯರೋಮಾಳಿಸದೃಶೆ (ಪಪ್ರಕೃ. ೦೦-೧೩). ೪. ಮೈನೆರೆದಿರುವ ಸ್ಥಿತಿ ; ಯೌವನದ ಆರಂಭಕಾಲ. [ಸಂ. ರೋಮಾಲೀ]

ರೋಮಿ (ಗು). ೧. ಕೂದಲುಗಳಿಂದ ತುಂಬಿದ ; ರೋಮದಿಂದ ಕೂಡಿದ. (ನಾ). ೨. ಒಂದು ಬಗೆಯ ಜಿಂಕೆ ; ಚಮರೀಮೃಗ : " ರೋಮಿ ಗೋಕರ್ಣಮೆನಲು ಚಮರಿಯ ಮೃಗಂ " (ಪುಂಗಣಾ. ೪೪-೦೦).

[ಸಂ. ರೋಮಿನ್]

ರೋಮೋದ್ಗಮ (ನಾ). = ರೋಮಾಂಚ ೧ : ಆನಂದಾಶ್ರುಬಿಂದು ಪ್ರತತಿ ಸುರಿಯೆ ರೋಮೋದ್ಗಮಂ ಕೂತೆ ಪೊಣ್ಮುತ್ತಿರೆ (ಕಾದಂಪೂ. ೪೯೦); ಹೆಳೆದಳು ಚಿತ್ರ ಪಾರ್ಥಂಗೆ ರೋಮೋದ್ಗಮಂ ಸುಧವಿಸುವಂತೆ (ಪಣ್ಣಿಗ. ೪೭-೦೨೩). [ಸಂ.]

ರೋರುವ (ನಾ). ರುರು ಎಂಬ ಜಾತಿಗೆ ಸೇರಿದ ಒಂದು ಬಗೆಯ ಜಿಂಕೆ : ಈ ಕಾಂಡಕ್ಕೆ ಸುತ್ತಿರುವ ಸ್ನಾಯುವು ಗೋವಿನದ್ದೆ, ಮಹಿಷದ್ದೆ, ರೋರುವದ್ದೆ, ಅಥವಾ ಕೋತಿಯದ ? (ಪಬ್ಬಕ. ೪೦). [<ಸಂ. ರುರು]

ರೋಲಂಬ (ನಾ). ದುಂಬಿ ; ಭೃಮರ : "ಮಧುವ್ರತಃ . . . ರೋಲಂಬಃ. ಬಂಭರಃ— ೧೫ ತುಂಬಿಯ ಹೆಸರುಗಳು " (ಹಿಷ್ಕಾ. ೦೬೨); ಫಾಲಾಕ್ಷಪವಪದ್ಮವಕರಂದರಸಪಾನರೋಲಂಬಸಮರೂಪ (ಪಪ್ರಕೃ-೩೩-೩೨).

[ಸಂ.]

ರೋಲ್ಲೂಜಿತಿ (ನಾ). ಒಂದು ಸ್ಥಳದ ಹೆಸರು : ರೋಲ್ಲೂಜಿ ಜುಕ್ಕುತ್ತರತಃ . . . ಭಾದಕಪೂರ್ವಕಂ ದತ್ತಃ (ಇಆ. ೪೬-೦೩; ೫೩೨). [?]

ರೋವ (ನಾ). = ರೋಮ ೧ : " ರೋವ _ ರೋಮ(ನ್) = ಕೂದಲು, ತುಪ್ಪಳ " (ಪಕ್ರಕೋ. ೩೬), ವಕಾರಕ್ಕೆ ಪಕಾರಂ — ಅಮರೀ — ಅಪರಿ . . . ರೋಮ — ರೋವ (ಪಪಾರ. ೨೬೩ ಕ್ರಿಪೀ).

[<ಸಂ. ರೋಮನ್]

ರೋಷ (ನಾ)· ಸಿಟ್ಟು ; ಕೋಪ : " ಕೋಪಃ· ಕ್ರೋಧಃ· ಅಮರ್ಷಃ, ರೋಷಃ, ಪ್ರತಿಘಃ – ಈ ೫ ಮುನಿಸು " (ಕರಾಟು· ೪೯–೨೦೭); ಅಶೆ ಯಲ್ಲದಿಪ್ಪಲ್ಲಿ ರೋಷವಿಲ್ಲದಿಪ್ಪಲ್ಲಿ ಜಪ (ಜಾಂಕ· ೪. ೦೯೪–೨೬೩); ದುರುಳರಿಬ್ಬರಿಗಿತ್ತರತಿನಿಷ್ಠುರದ ಶಾಪವನಸುರವಂಶೋತ್ಕರದೊಳಗೆ ಸಂಭವಿಸಿ ನೀವೆಂದಧಿಕರೋಷದಲಿ (ಕೂರಾ· ೦–೪–೦೮); ದೋಷ ಮಾಡುವವನಿಗೆ ರೋಷ ಬಹಳ (ಗಾಪ). [ಸಂ.]

ರೋಷಪಡುಪ್ಪು (ಕ್ರಿ)· ಕೋಪವುಂಟಾಗು ; ಸಿಟ್ಟುಬರು ; ಕ್ರೋಧಗೊಳ್ಳು : ಪಡದಿಯರ ಮನದಿ ರೋಷಂದಟ್ಟರೂಡ ಪ್ರಾಣ ಬಿಡುವರೈ (ಕಪಪೋ· ೯–೩೬)· [ರೋಷ + ತಟ್ಟು]

ರೋಷಬಂಬಲಿ (ಕ್ರಿ)· ಕೋಪಗೊಳ್ಳು ; ರೇಗು : ಉಗ್ರರೋಷಂಬಡೆದು ಹೊಯ್ದನು ತೋರಣದ ಕಂಬದಲಿ ರಕ್ಕಸಪ (ಕೂರಾ· ೩–೭–೨೯).

[ರೋಷ + ಪಡೆ]

ರೋಷಶುಷ್ಕತ (ನಾ)· ಕೋಪವನ್ನು ಬಿಟ್ಟವನು ; ಶಾಂತಚಿತ್ತ : ಯತಿಗಳಾದಿರಿ ನೀವು ರೋಷಶುಷ್ಕತರಲೇ ಬಳಿಕೇನು ಧರ್ಮಜ್ಞತೆಯು ನೆಲೆಗೊಳನಜಿದ ಮನವೆಱಗುವುದೆ ಕಾಳಗಕೆ (ಕುಚಾ·ಆ· ೬–೨೦)· [ಸಂ.]

ರೋಷಣ (ಗು)·ಂ· ಸಿಟ್ಟಿಗೆದ್ದ; ಕೋಪಗೊಂಡ. (ನಾ)· ೨. ಸಿಟ್ಟು; ಕೋಪ : "ರೋಷಣಂ· ರೋಷನೀಯಂ, ಈ ೨ ರೋಸಂ" (ಶಾಪ್ಕ· ೨೬೯)· ೩. ಕೋಪಗೊಳ್ಳುವವನು ; ಕೋಪಿಷ್ಠ : "ಕೋಪನಃ, ಕ್ರೋಧನಃ· ಕ್ರೋಧೀ, ರೋಷಣಃ, ಅಮರ್ಷಣಃ – ಈ ೫ ಮುನಿವವಂ" (ಕರಾಟು· ೪೯–೨೦೭)· [ಸಂ.]

ರೋಷಣೆ (ನಾ)· ಕೋಪ ; ಸಿಟ್ಟು : ಚಂತೆ ರೋಷಣೆ ಮಾತ್ರ ಸಮಗುಣವಾಂತುದಲ್ಲಾ ಧಾತು ಬಲಗಳ ವೈಂತನಾಗೆಲೆಯಾತ್ಮ ರಕ್ಷಿಪ ದೇವನನವರತಾ (ಕಾಪಪು· ೩೩೨–೧೩)· [ಸಂ. ರೋಷಣ]

ರೋಷಭೀಷಣ (ನಾ)· ಕೋಪದಿಂದ ಭಯಂಕರನಾದವನು : ರೋಷ ಭೀಷಣನಾಗಿ ಕಾರ್ದನ್ ಕಠೋರಮಂ (ಕ್ರೀಕಾಪು· ೭೨–೧೪೯)· [ಸಂ.]

ರೋಷಸಿ (ನಾ) ಭೂಮಿ ಮತ್ತು ಆಕಾಶ : "ದ್ಯಾವಾಭೂಮಿ, ರೋದಸ್ಸೀ, ರೋದಸೀ, ರೋಷಸೀ – ಈ ೪ ನೆಲಮಂ ಆಕಾಶದ ಪೆಸರ್" (ಕಶಾಮು· ೨೬–೦೨೦)· [ಸಂ. ರೋಷಸೀ]

ರೋಷಿ (ಗು)· ಕೆರಳಿದ ; ಕುಪಿತಗೊಂಡ : ಸೋದರನ ಧನುರ್ಗುಣಮಂ ಛೇದಿಸಿದಂ ರೋಷಿರಾವಣಂ (ಪಂಗಾಮ· ೦೪–೦೩)· [ಸಂ. ರೋಷಿನ್]

ರೋಸ (ನಾ)· = ರೋಷ : ಚಕ್ಕಂಬಿದ ಮೊಲೆಗಳುಂ ಕೈಮೆಯ್ಕಂಕುರದುಗಿಯುಮಲೆಯಿ ಸಳಿಗೊಂಬು ನೊಸಲ್ಗೊಕ್ಕಳಕಮುಮಿವಿಯನ ರೋಸಕ್ಕೆಡಯಾಯ್ತಪ್ಪೆ ತರುಣಿ ಕುರವಕತರುಮೆಂ (ಶೀಶಾಪ· ೦೩–೪೨) ; ಪಕಾರಕ್ಕೆ . . . ರೋಷ – ರೋಸ (ಕಶಬ· ೨೫೩ ಕ್ರಿಯೋ).

[< ಸಂ. ರೋಷ]

ರೋಸಿಕೆ, ರೋಸಿಗೆ (ನಾ)· ಜುಗುಪ್ಸೆ ; ಅಸಹ್ಯ : ಅಧ್ಯಾತ್ಮವನ್ನು ಚಿಂತಿಸಿ ಚಿಂತಿಸಿ ನಮ್ಮವರು ಬೇಸತ್ತಿದ್ದಾರೆ· ಇವರಿಗೆ ಅದರಲ್ಲಿ ರೋಸಿಕೆಯುಂಟಾಗಿದೆ (ಕಮಾಸಾ· ೧೧). **ರೋಸಿಗೆ** : ಷಡುರಥಲೊಂದಾಗಿ ಕೊಂಬೊಬ್ಬ ಹಸುಳೆಯ ಹಂಡದರು ರೋಸಿಗೆಗೊಳದೆ (ಕಾಂಗಾ· ೦೬)· . [ರೋಸು + – ಇಕೆ]

ರೋಸಿಗೆ ' ರೋಸಿಕೆ ' ನೋ.

ರೋಸು$_1$ (ಕ್ರಿ)· ೧. ಬೇಸರಗೊಳ್ಳು ; ಜುಗುಪ್ಸೆಹೊಂದು : ಮಮಸ್ಸು ರೋಸಿ ನುಡಿಯಿತು (ಬಾಕಾಂ· ೩)· ೨. ಕೋಪಗೊಳ್ಳು ; ಸಿಟ್ಟಾಗು : ಸೋಸಿ ದೈತ್ಯರನೆಲ್ಲ ರೋಸಿ ಪ್ರಾಣವ ಕೊಂಡ ದೋಷತನವ ಮಾನು ಹೇಳಲೆ (ಭೂಕಂ· ರಾ· ೩–೦೦೩–೩); ಸನಿಸಿರಗಾವುದಕ್ಕಿದಿ ತನ್ನಿಷ್ಟಾರ್ಥ ಕೈಸಾರುವ ಸಮಯದೊಳು ರೋಸಿ ಬಿಸುಟು ಮರಳುವ ತೆಱದೊಳು (ಶಾಪ್ಕ· ೦೦–೦೩) ; ರೋಷದವರ ಮೇಲೆ ರೋಸುವೆ (ಜಾಕೃಪ· ೬೪)· **ರೋಸಿಕೊಳ್ಳು** = ಹೇಸು : ಬೇಸರಪಡು : ನಾನು ನನ್ನ ಮೇಲೆಯೇ ರೋಸಿಕೊಂಡು ಆಕೆಯನ್ನು ಹಿಂಬಾಲಿಸಿದೆ (ಪಾಣಿ· ೨೦೬)· **ರೋಸಿದಿಡು** = ಕೋಪಗೊಳ್ಳು ; ಸಿಟ್ಟಾಗು : ಈ ಪ್ರಪಂಚವನ್ನು ಕಂಡು ಅಪ್ಪು ರೋಷ ಬಂತು· ರೋಸಿ ಬಿಟ್ಟು ಆ ಮಾತು ಆಡಿದೆ (ಸುಪಂ· ೨೪)· **ರೋಸಿಹೋಗು** = ರೋಸಿಕೊಳ್ಳು : ನನಗೂ ಜೀವ ರೋಸಿಹೋಗಿದೆ (ಜಾಪೋ· ೨೨೪) ; . ಶಾಂತಾಳ ಮನಸ್ಸು ರೋಸಿ ಹೋಯಿತು (ಮಾಭಾಣಾ· ೦೭೦)· [ದೇ· ತೆಲು. ರೋಯು]

ರೋಸು$_2$ (ನಾ)· ಕೊಳಕು ; ಹೇಸಿಗೆ : "ರೋಸು – ಹೊಲಸು" (ಜಾಪೋ· ೪೦)· [< ರೋಸು$_1$]

ರೋಹಣ (ನಾ)· ೧. ಹತ್ತುವುದು; ಏರುವುದು· ೨. ಬೆಳೆಯುವುದು; ಏಳಿಗೆ: "ರುಟ್, ರುಹಂ, ರೋಹಣಂ, ರೋಹಣೇಯಂ—ಈ ೪ ಮೊಳಕೆ" (ಶಾಪ್ಕ· ೦೩೦)· ೩. ಬಾಣ; ಅಂಬು· ೪·(ಸಿಂಹಳದಲ್ಲಿರುವ) ಒಂದು ಪರ್ವತ: ಕಾರಾಚಲಮೊಡನೆ ರೋಹಣಾ ಪೋರ್ದುದೆನಲ್ ವಾರಣ ದೊಡನೆ ಖಗಪ್ರಭುವಾ ರಣದೊಳ್ ಪೋರ್ದು (ಜಪಿ· ೦೩–೦೦೦); ಉರ್ವೀಧ್ರಂ ರೋಹಣಮು ಗಡಪರ್ವರ್ಣಸಲಜ್ಚರಣ್ಣ ತಜ್ಜನಪದಮಂ (ಪಂದ್ರಪು· ೩–೦೦)· [ಸಂ.]

ರೋಹಣದ್ರುಮ (ನಾ)· ಗಂಧದ ಮರ; ಚಂದನವೃಕ್ಷ· [ಸಂ.]

ರೋಹಿ (ನಾ)· ೧. ಸವಾರಿಮಾಡುವವನು; ಸವಾರ: ರೋಹಿ ಜಾಗ್ರತದಪ್ಪೆ ಯಾತ್ರೆ ಸುಖ ಸಾಗೀತೆ (ಪುಂಕಾಳ· ೩೧೩)· ೨. ಬೆಳೆಯುವುದು; ವೃದ್ಧಿ· ೩· ಒಂದು ಬಗೆಯ ಜಿಂಕೆ· ೪· ಒಂದು ಬಗೆಯ ಮರ: "ರೋಹೀ . . . ದಾಡಿಮಪುಷ್ಪಕಃ—ನಾಲ್ಕು ಮುಳ್ಳುಮುತ್ತುಕದ ಹೆಸರುಗಳು" (ಸಿಚ್ಛಾ·೦೫· ೦೩೩)· [ಸಂ.]

ರೋಹಿಣ (ಗು)· ೧. ರೋಹಿಣೇನಕ್ಷತ್ರದಲ್ಲಿ ಹುಟ್ಟಿದ. (ನಾ)· ೨. ವಿಷ್ಣು· ೩. ಒಂದು ಬಗೆಯ ಸಸ್ಯ; ಮುಳ್ಳುಮುತ್ತುಗ· [ಸಂ.]

ರೋಹಿಣಿ (ನಾ)· ೧. ಹತ್ತುವುದು ; ಸವಾರಿ ಮಾಡುವುದು· ೨. ಶ್ರೀಗಂಧ; ಚಂದನ: "ರೋಹಿಣಿ ಮಲಯಜಂ ಚಂದನಂ ಗಂಧಮೆಂದನಿಕ್ಕುಂ" (ಪಾಂಗಣ·೧೯–೨೦)· ೩. ಕೆಂಬಣ್ಣದ ಹಸು: "ರೋಹಿಣಿಯುನಡ್ಡಿಯರ್ಜುನಿ ವೃಷ ಗೋ ವೈಷಭವಾಹನಿಯೆನೆ ಹಸು" (ಪಾಂಗಣ· ೩೩–೩)· ೪. ದಕ್ಷಬ್ರಹ್ಮನ ಮಗಳು; ಚಂದ್ರನ ಹೆಂಡತಿ : "ರೋಹಿಣೀ– ಚಂದ್ರನ ಹೆಂಡತಿ" (ಶಾಪ್ಕ· ೦೩೦); ಕ್ಷಿತಿಗೆ ಲಕ್ಷ್ಮಿಗೆ ರೋಹಿಣಿಗೆ ಧಾರಿತಿಗೆ . . . ನೋಱುಮಡಿ . . . ಗಂಗಾಯಿ (ಜಪಪ್ರ· ೪–೩೦)· ೫. ವಸುದೇವನ ಹೆಂಡತಿ; ಬಲರಾಮನ ತಾಯಿ: ಮಾಯಾದೇವಿ . . . ದೇವಿಯ ಗರ್ಭದರ್ಭಕನನತ್ತಲ್ ಗೋಕುಲಕ್ಕೊಯ್ದು . . . ಯೋಜಿಸಿದಳಂತಾ ರೋಹಿಣೀಗರ್ಭದೊಳ್ (ಜಗ· ೩–೩೦)· ೬. ಮೈನೆರೆದ ಹುಡುಗಿ· ೭. ಒಂದು ಬಗೆಯ ಸಸ್ಯ ; ಕಟುಕರೋಹಿಣಿ : "ಕಟುಃ· ಕಟುಂಭರಾ, ಅಶೋಕಾ, ರೋಹಿಣೀ . . . ಶಕುಲಾದನೀ–ಕ ಕಟುಕರೋಹಿಣೀ ಹೆಸರುಗಳು" (ಸಿಚ್ಛಾ·೦೬· ೦೩೦)· ೮. ಒಂದು ಬಗೆಯ ಕಂಠರೋಗ: ಪಿತ್ತಾಧಿಕ್ಯದಿಂದ ಕಾಂಚಾಗಿ ಕೊರಳ ನರಗಳು ಬಿಗಿದು ಬಾಯಾಱಿಕೆ ತಾಪ, ಬಳಲಿಕೆಗಳ ಉಂಟುಮಾಡುವುದು ರೋಹಿಣಿ ಎನಿಸಿಕೊಂಬ ಕಂಠರೋಗವೆಂದಱಿವುದು (ಶೈರ್ಮಾ· II· ೦೦೭)· ೯. [ಜ್ಯೋತಿ] ಇಪ್ಪತ್ತೇಳುನಕ್ಷತ್ರಗಳಲ್ಲಿ ನಾಲ್ಕನೆಯದು ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ : ಅಶ್ವಿನಿ ರೋಹಿಣಿಯದಿತಿಯಸಿಪ್ಪಿನಿತುಂ ನಕ್ಷತ್ರಮುತ್ತಮಂ ಪೊಸ್ತಪನುಡಲ್ (ಕೋಕೋಚ· ೦–೦೨) ; ತಾವರೆಮರದ ಬದಗಳೆಯಂ ರೋಹಿಣಿನಕ್ಷತ್ರದಲ್ಲಿ ತಂದು ಮುಂಗೈಗೆ ಕಟ್ಟುವುದು (ಶಿಪ್ರ· ೦೩೦) : ರೋಹಿಣಿ ಮೃಗಶಿರ . . . ಆಶ್ಲೇಷ ಈ ಆರು ಮಳೆಗಳಲ್ಲಿ ಮುಂಗಾರಿಯನ್ನು ಬಿತ್ತುವದು (ಕೃಕೃ· ೩೩) ;

ರೋಹಿಣ ಬಿತ್ತನೆ ರೋಗವಿಲ್ಲದ ತೆನೆ (ಗಾಪ).

ರೋಹಿಣ್ಯಾದಿಕಲ್ಕ = ಕಟುಕರೋಹಿಣಿ ಮುಂತಾದುವುಗಳಿಂದ ಮಾಡಿದ ಒಂದು ಬಗೆಯ ಔಷಧದ್ರವ್ಯ: ರೋಹಿಣ್ಯಾದಿಕಲ್ಕ-ಕಟುಕ ರೋಹಿಣಿ, ಕೊತ್ತುಂಬರಿ . . . ಗೋರೋಜನ ಇವುಗಳನ್ನು ಸಮವಾಗಿ ಸೇರಿಸಿ, ಕಲ್ಕ ಮಾಡಿ ಸಹದೇವಿರಸವನ್ನು ಸೇರಿಸಿ ಕೊಟ್ಟರೆ ಸರ್ವಜ್ವರವು ಬಿಡುವುದು (ಸಶಾ. ೦೦೪). ರೋಹಿಣ್ಯಾದಿಘೃತ = ಕಟುಕರೋಹಿಣಿ ಮುಂತಾದುವನ್ನು ಹಾಕಿ ಮಾಡಿದ ಒಂದು ಬಗೆಯ ಔಷಧದ್ರವ್ಯ: ರೋಹಿಣ್ಯಾದಿಘೃತ . . . ಕಟುಕರೋಹಿಣಿ ೫ ತೂಕಮಂ ಜೋರ್ಣವ ಮಾಡಿ ಹಾಕಿ ತೊಳಸಿ ಇರಿಸಿಕೊಂಡು ನಿತ್ಯವೂ ಸೇವಿಸಲು ಹಳೆಯ ಜ್ವರ ಗುಣಮುಕ್ಕುಂ (ಸಶಾ. ೦೨೪). [ಸಂ. ರೋಹಿಣೀ]

ರೋಹಿಣೆಸಂಧಿ (ನಾ). ಕುದುರೆಯ ಒಂದು ಅಂಗ : ತ್ರಿಕದೆರಡುಂ ಕೆಲಕ್ಕುಂ ರೋಹಿಣೆಸಂಧಿಯೆಂಬ ಪೆಸರಕ್ಕುಂ (ಅಶ್ವ. ೮೮-೬). [ರೋಹಿಣೀ + ಸಂಧಿ]

ರೋಹಿಣೇಪರಿಗತ (ನಾ). ೧ ಕೆಂಪುಬಣ್ಣದ ಆಕಳಿನಿಂದ ಕೂಡಿದುದು. ೨. ರೋಹಿಣೀನಕ್ಷತ್ರದಿಂದ ಕೂಡಿದುದು. ೧. ೨ : ನೇಹಾರುಕ್ಕಿತ್ತ ವೃತ್ತದವೊಲ್ ರಜಿತರೋಹಿಣೇಪರಿಗತಂ . . . ಏಂ ಜೆಲ್ವಾಯ್ದೊ ಗವ್ಯಾಶ್ರಯಂ (ಅಲಂಪ. ೩-೦೩೦). [ಸಂ.]

ರೋಹಿಣೇವಲ್ಲಭ (ನಾ). ಚಂದ್ರ : "ಇಂದುಃ . . . ರೋಹಿಣೇವಲ್ಲಭಃ . . . ದಾಕ್ಷಾಯಣೀರಮಣಃ—ಈ ೧೨ ಚಂದ್ರನ ಪೆಸರ್" (ಹರಿಭಾಷು. ೩-೮೨). [ಸಂ.]

ರೋಹಿತ (ಗು). ೧. ಕೆಂಪಾದ; ಕೆಂಪುಬಣ್ಣದಿಂದ ಕೂಡಿದ. (ನಾ). ೨. ಕೆಂಪುಬಣ್ಣ ; ರಕ್ತವರ್ಣ : "ಲೋಹಿತಃ, ರೋಹಿತಃ, ರಕ್ತಃ—೩ ಕೆಂಪುಬಣ್ಣದ ಹೆಸರುಗಳು" (ಹಿಶಾ. ೦೩. ೪೬). ೩. ನೆತ್ತರು; ರಕ್ತ: ಕಾಳೆಮ್ಮೆಯ ಕಜ್ಜಯಲಾಗಿ ಹಾಲು ರೋಹಿತವಾಗಿ ಬಿದ್ದಿತ್ತು (ಹೀಗಳಿಕೆ. ೨೨೬-೭೭೬); ವಿಳ್ಳರುಬಿರ್ದುವಿದತ್ತ ನಿನ್ನ ಪೆರ್ಮೊಲಮುಡಿದ್ಯುಯಿಂ ಸುರಿವ ರೋಹಿತದಿಂ (ಅಜಿತ. ೩-೦೦೯). ೪. ಒಂದು ಬಗೆಯ ಜಿಂಕೆ ; ಚಮರೀ ಮೃಗ : "ರೋಹಿತಃ, ಚಮರಃ -ಚೌರಿಬಾಲದ ಮೃಗ" (ಹಿಶಾ. ೦೩. ೦೫೭). ೫. ಕುಂಕುಮಕೇಸರಿ. ೬. ಮನುಷ್ಯನ ಕಣ್ಣಿಗೆ ಕಾಣುವುದಿಲ್ಲ ವೆಂದೂ ನೆಟ್ಟಗಿರುವುದೆಂದೂ ನಂಬಲಾದ ಕಾಮನ ಬಿಲ್ಲು: "ಇಂದ್ರನ ಬಿಲ್ಲು ನುಮ(ವಾಮದು) ರೋಹಿತಮೆಂಬುದು" (ಹರಿಭಾಷು. ೦೦-೭೭). ೭. ಒಂದು ಬಗೆಯ ಕೆಂಬಣ್ಣದ ಮೀನು : "ರೋಹಿತಃ, ಮದ್ಗುರಃ –ಯಾವಾಗಲೂ ಮುಳುಗಿಕ್ಕೊಂಡಿರುವ ಮೀನು, ಕೆಂಪುಮೀನು" (ಹಿಶಾ. ೦೩. ೬೬); ಆಳದ ಮಡುವಿನೊಳಾಡುತಲಿದ್ದರು ತಾನು ನಿರ್ಗಮ್ ರೋಹಿತನು ಉಂಗುಟುಮಾತ್ರದ ನೀರಿನೊಳಿದ್ದರು ಕಪಿ ತಾ ಪುರ್ಪರಾಯತನು (ಜಂಬಾಚ. ೬೨-೧೯). [ಸಂ.]

ರೋಹಿತಕ (ನಾ). ಒಂದು ಬಗೆಯ ಮರ ; ಮುಳ್ಳುಮುತ್ತುಗ : "ರೋಹೀ, ರೋಹಿತಕಃ, ಪ್ಲೀಸರತ್ರುಃ, ದಾಡಿಮಪುಷ್ಪಕಃ – ೪ ಮುಳ್ಳು ಮುತ್ತುಗದ ಹೆಸರುಗಳು" (ಹಿಶಾ. ೦೩. ೦೩೩). [ಸಂ.]

ರೋಹಿತಾಶ್ವ (ನಾ). ೧. ಕೆಂಪುಕುದುರೆಗಳನ್ನುಳ್ಳವನು ; ಅಗ್ನಿ : "ಅಗ್ನಿಃ . . . ಅನಲಃ, ರೋಹಿತಾಶ್ವಃ . . . ಅಷ್ಟತ್ರಂ – ೩೪ ಅಗ್ನಿ ಹೋತ್ರನ ಪೆಸರುಗಳು" (ಹಿಶಾ. ೦೩. ೨೩). ೨. ಹರಿಶ್ಚಂದ್ರನ ಮಗ: ಲೋಹಿತಾಶ್ವ : ರೋಹಿತಾಶ್ವನು ಮರಣಹೊಂದಿದಾಗ ಅವನ ತಾಯಿ ತಂದೆಗಳು ಹೇಡಿತನದಿಂದ ಅಗ್ನಿಪ್ರವೇಶಮಾಡಲು ಸಿದ್ಧರಾದರು (ಪಚಂಪ. ೪೯ ಒಚಪಗ). [ಸಂ.]

ರೋಹಿಷ (ನಾ). ೧. ಒಂದು ಬಗೆಯ ಸುವಾಸನೆಯ ಹುಲ್ಲು; ಲಾಮಂಚಿ. ೨. ಒಂದು ಬಗೆಯ ಮೀನು. ೩. ಒಂದು ಬಗೆಯ ಜಿಂಕೆ. [ಸಂ.]

ರೋಹಿಸು (ಕ್ರಿ). ಮೇಲೆಬೀಳು : ಆಕ್ರಮಿಸು : ಆ ಕಾಕರಾಸರುಮೆಟ್ಟು ವೆರ್ಗಳ್ಚಿಯ ಕೋಟೆಯಾನ್ ರೋಹಿಸಿ (ಪಾ. VIII. ಸೊಡ. ೦೦-೪; ಪು. ೦೦೦). [ರೋಹಣ + — ಇಸು]

ರೋಹೀತಲ್ಲ (ನಾ). ಒಂದು ಊರಿನ ಹೆಸರು : ತಸ್ಯ ಪೂರ್ವತಃ ರೋಹೀತಲ್ಲಗ್ರಾಮಃ (ಇಶ. XII. ೨೬೬-೫೪; ೦೧೬). [?]

ರೌಕುಳ ' ರವಕುಳ ' ನೋ.

ರೌಕುಳಿ (ನಾ). ಚೆಲ್ಲಾಪಿಲ್ಲಿ ; ಅಸ್ತವ್ಯಸ್ತತೆ: ಆ ರೌಕುಳಿಯ ರಣದೊಳೆತ್ತಿ ಕ್ಕಲುಂ ಪರಿದವಾರಶೋಣಿತನದಿಗಳ್ (ಕಚಣ. ೦೭-೭೬). [<ರವಕುಳ]

ರೌಜನಿಕ (ಗು). ೧. ಹಳದಿಬಣ್ಣದ. (ನಾ). ೨. ಹಲ್ಲಿನ ಮೇಲಿನ ಕೊಳೆ. [ಸಂ.]

ರೌಚ್ಯ (ನಾ). ೧. ಕಾಂತಿ; ಹೊಳಪು: "ರುಕ್ . . . ರುಚ್ಯಂ, ರೌಚ್ಯಂ, ಈ ೭ ಪೊಗರ್" (ಅಚಿಕ. ೦೩೦). ೨. ಹದಿನಾಲ್ಕು ಮನುಗಳಲ್ಲಿ ಒಬ್ಬ: ರುದ್ರಸಾವರ್ಣಿಕ ರೌಚ್ಯ ಇಂದ್ರಸಾವರ್ಣಕರೆಂಬ ಹದಿನಾಲ್ಕು ಮನುಗಳ್ (ಅಪಕಿ. ೨೦೪). [ಸಂ.]

ರೌಡಿ (ನಾ). ತುಂಟ; ಪುಂಡ : ಆ ಹಳ್ಳಿಯಲ್ಲಿ ಅವನು ರೌಡಿರಂಗಣ್ಣ ನೆಂದೇ ಪೆಸರುವಾಸಿಯಾಗಿದ್ದಾನೆ (ಪಾಚ). [←ಇಂ. Rowdy]

ರೌಡು (ನಾ). ಆರ್ಭಟ : ಜೋರು (?) : ಈ ಸಾರಿ ಜಾತ್ರೀ ರೌಡು ಸ್ವಲ್ಪ ಹೆಚ್ಚು ಮಾಡಬೇಕಾಗೇದ (ತಿಮಗಸು. ೮೩) ; ಲಗೂ ಹೋಗಿ ಎಂದು ರೌಡು ಮಾಡಿದನು (ಗಂಶಪಾಮು. ೦೫೮).

ರೌಡಿಗೇಳು = ಉದ್ರೇಕಗೊಳ್ಳು ; ಅಬ್ಬರಮಾಡು : ಅವರು ತುಸು ರೌಡಿಗೆದ್ದೇ ಮಾತಾಡಿದರು (ಗಂಶಪಾಮು. ೫೩). [?]

ರೌದ್ರ (ಗು). ೧. ರುದ್ರನಿಗೆ ಸಂಬಂಧಿಸಿದ. ೨. ಭಯಂಕರವಾದ ; ಭೀಕರವಾದ : ಮಹಾಬೀಭತ್ಸುಕುತ್ಸಿತೋತ್ಕೃತ್ತಿಸ್ಥಾನಂಗಳೊಳುತ್ಕೃಷ್ಟ ಕೃಷ್ಣನೀಲಕಪೋತಲೇಶ್ಯಾನುಬಂಧರೌದ್ರಪರಿಣಾಮಪರಿಣತರುಂ (ಮುಕುಪ. ೦೦-೪೦ ಪ); ಹರುಷದಿಂ ಶಾಂತಿ ಸತ್ಯಂ ಭೂತದಯೆಗಳಂ ದೊರಕಿಸಿಯು ಕ್ರೋಧಾರ್ಥರೌದ್ರಮಿಥ್ಯಂಗಳಂ ಪರಿಹರಿಸಿ (ಪಚಂಪ. ೪-೦೬). (ನಾ). ೩. ಭಯಂಕರತೆ ; ಬೀಭತ್ಸ. ೪. ಕೋಪ ; ಕ್ರೋಧ. ೫. ಬಿಸಿಲು: " ಆತಪಃ, ರೌದ್ರಃ (ಕಥ್ಯತೇ) — ಈ ೨ ಬಿಸಿಲ್ " (ಪಚಾಯು. ೩-೪೦). ೬. ಒಂದು ಕ್ರೂರದೇವತೆ. ೭. ಅರುವತ್ತುನಾಲ್ಕು ಸಂವತ್ಸರಗಳಲ್ಲಿ ಐವತ್ತುನಾಲ್ಕನೆಯದು ; ರೌದ್ರಿ. ೮. [ಕಾವ್ಯಮೀ] ನವರಸಗಳಲ್ಲಿ ಒಂದು; ಕ್ರೋಧವೆಂಬ ಸ್ಥಾಯಿ ಭಾವದಿಂದ ಹುಟ್ಟುವ ರಸ : "ಶೃಂಗಾರಃ, ಹಾಸ್ಯಃ, ಕರುಣಃ, ರೌದ್ರಃ . . . ಶಾಂತಃ — ಈ ೯ ರಸಂಗಳ್" (ಪಚಾಯು. ೦೬-೮೨); ಶೃಂಗಾರ ಹಾಸ್ಯ ಕರುಣ ರೌದ್ರ . . . ನವರಸಾವಸ್ಥೆ (ಪಪಗ. ೨೨೭) ; ರೌದ್ರ– ಗದಾಯುದ್ಧದಲ್ಲಿ ಮತ್ತು ವೇಣುಸಂಹಾರದಲ್ಲಿ ದುರ್ಯೋಧನ ಭೀಮರ ಆಟೋಪ ಬರುವ ಕಡಗಳು (ಕೃವಿ. ೦೧೦). ೯. [ಜೈನ] ನಾಲ್ಕು ಬಗೆಯ ಧ್ಯಾನಗಳಲ್ಲಿ ಒಂದು : ಆರ್ತರೌದ್ರಧರ್ಮಶುಕ್ಲಾಭಿಧಾನಧ್ಯಾನಚತುಷ್ಟಯಮುಮಂ (ಮುಕುಪ. ೩-೪೯ ಪ). [ಸಂ.]

ರೌದ್ರಕ (ನಾ). ಉಗ್ರತೆ ; ತೀಕ್ಷ್ಣತೆ : ಕುಶನೆ ಕೇಳಚ್ಚರಿಯ ಕಜ್ಜಿದವು ರಸವನೆರಡಕ್ಷಿಗಳು ಲಕ್ಷ್ಮಣ ದಶಮುಖರ ಮೇಲಿಂದುಸೂರ್ಯರ ಶಾಂತ ರೌದ್ರಕದ (ತಿಸರಾ. ೬-೨೫-೦). [ಸಂ.]

ರೌದ್ರಕಾಲ (ನಾ). ರಾತ್ರಿ ; ಇರುಳು : ಈ ರೌದ್ರಕಾಲದಲ್ಲಿ ರಾಕ್ಷಸರಿಗೆ ಬಲ ಹೆಚ್ಚಾಗುತ್ತದೆ (ತಸರಾ. ೬೯). [ಸಂ.]

ರೌದ್ರತೆ (ನಾ). ಭಯಂಕರತೆ ; ಭೀಷಣತ್ವ : ನಂದೀಶ್ವರನ ಸರ್ವಜ್ಞತೆಯ ಭೃಂಗೀಶ್ವರನ ಶಿವ ಲಿಂಗೈಕಭಾವನೆ ವೀರಗಣವರನ ಜರಮರೌದ್ರತೆ (ಪಸಪ್ರ. ೩೩-೩). [ಸಂ. ರೌದ್ರತಾ]

ರೌದ್ರತೆವೆಱು (ಕ್ರಿ)· ಭಯಂಕರವಾಗು : ಭೀಷಣತ್ವವನ್ನು ಹೊಂದು : ಪುಟ್ಟೆ ಸಮಸ್ತಧಾತ್ರಿಗೆ ಭಯಂ ವಿಟಲಾಕ್ಷ ಚತುರ್ಭುಜಾನ್ವಿತಂ ಪುಟ್ಟಿದ ಗುರ್ವು ರಮಣ ರೌದ್ರತೆವೆತ್ತವತಾರವೀತನೊಂದೊಬ್ಬಜೆ (ಶಾಕ. ೭-೧೨). [ರೌದ್ರತೆ + ಪೆಱು]

ರೌದ್ರದೃಷ್ಟಿ (ನಾ). [ನಾಟ್ಯ] ಉಗ್ರತೆಯನ್ನು ಸೂಚಿಸುವ ನೋಟ : ಕಿ" ಯಬ್ಬನ್ನು ಗಂಟಿಕ್ಕಿ, ಕಣ್ಣನ್ನು ಕೆಂಪಗೆ ಮಾಡಿ ರೆಪ್ಪೆಬಡಿಯದೆ ನಟ್ಟ ದೃಷ್ಟಿಯಲ್ಲಿ ಆತುರದಿಂದ ನೋಡುವುದು" (ಅಕ್ಕರಂ. ೫೬೭ ಗರ್ಗಸಂಹಿತೆ) : ಎವೆಯೊಯ್ಯದೆ ಕಡುಗೆಂಪಂ ಸವಸಿ ನಟ್ಟಾಲಿಗೊಂಡು ವುರ್ವಂ ಗಂಟಿಕ್ಕುವ ಭಾವದಿಂದೆ ನೋಡುವ ತವಕಂ ವಿಗೆ ರೌದ್ರದೃಷ್ಟಿಯೆನಿಕುಂ (ಅಕ್ಕರಂ· ೫-೦೬). [ಸಂ.]

ರೌದ್ರಧ್ಯಾನ (ನಾ) =ರೌದ್ರ ೯ : ಬಹ್ವಾರಂಭಸುರಂಭರೌದ್ರಧ್ಯಾನ ಪರಿಣತಂ (ಅಪು· ೨-೦೦ ಪ) ; ಬಹ್ವಾರಂಭರೌದ್ರಧ್ಯಾನದಿನುಪಾರ್ಜಿತ ನರಕಾಯುಷ್ಕನಾಸನ್ನಮೃತ್ಯುವಾಗಿ (ಜಾಂಹಿ· ೦೪). [ಸಂ.]

ರೌದ್ರರತಿ (ನಾ)· ಉಗ್ರವಾದ ಸುರತ : ಅವಳು ಕೋಪವಿಂ ಕಿಂಗಣ್ಣಾಗಿ ಎವೆ ಇಕ್ಕದೆ ನೋಡುವಳು. ಅವನತ್ಯಂತ ಭಾವಿಸುವಳು . . . ನಖಕ್ಷತಂಗೈದು ಪೀಡಿಸಿ ಅವನ ಕೆಳಗಿಕ್ಕಿ ಮೇಲೇರಿ ಉಪರಿಸುರತಂಗೈವಳು. ಇದು ರೌದ್ರರತಿ (ಕಾಮಜಾ· ೨೬೮). [ಸಂ.]

ರೌದ್ರರವ (ನಾ)· ಭಯಂಕರವಾದ ಶಬ್ದ.—ಅಬ್ಬರ : ರೌದ್ರರವಭಟ ಭಟತನಿಸ್ಸನದ ಇಡಿದ ಧೂಳಿಯ ಧೂಮಂಃಶಿಯು ಪಡೆ . . . ದಾವಾಗ್ನಿಯಂತಿರೆ ತೋಱಿತು (ಶಾಣ್ಮಂ· ೬-೬). [ಸಂ.]

ರೌದ್ರರಸ (ನಾ)· = ರೌದ್ರ ೮ : ಸ್ಪಪತಾಂಗದೇವ ಮಾರ್ಗೋತ್ಸವ ಮಾರ್ಜಿತೋಕ್ಕಿಗಳಿನಕ್ಕತಿರೌದ್ರರಸಂ ರಸಾವಹಂ (ಶಬಾ· ೨-೦೦೨) ; ಕ್ರೋಧಾತ್ಮಕವಾದ ರೌದ್ರರಸದಲ್ಲಿ ಹೃದಯಸಂವಾದವನ್ನು ಪಡೆಯುವುದು ತಾಮಸಪ್ರಕೃತಿಯುವರಿಗೇ ಸಾಜವು (ಶಾಲಾ· ೪೦೯). [ಸಂ.]

ರೌದ್ರಾವತಾರ (ನಾ)· ಭಯಂಕರವಾದ ಅವತಾರ ; ಉಗ್ರವಾದ ರೂಪ : ನಿನ್ನನ್ನೂ ಸೀಳಿ ನಾಲ್ಕುಭಾಗ ಮಾಡಿ ಫಾಲ್ಗುಬಾಗಿಲುಗಳಿಗೆ ತೋರುಪಾಕುತ್ತೇನೆ ನೋಡು ಈಗ ಎಂದು ರೌದ್ರಾವತಾರ ತಾಳಿ . . . ಒಗೆದೆ ಹೋದನು (ಹಕ್ಕ· ೦೦೬) ; ಜನರು ಅವನ ರೌದ್ರಾವತಾರವನ್ನು ನೋಡಿ ಬೆಕ್ಕಂಬರಗಾಗುತ್ತಿದ್ದರು (ಪಪಾಕ· ೬೨). [ಸಂ.]

ರೌದ್ರಾವಹ (ನಾ). ಭಯವನ್ನುಂಟುಮಾಡುವುದು:ಭೀಕರತೆಯನ್ನುಂಟುಮಾಡುವುದು : ದೇವ ಪಾದೇಭದಾಕೃತಿಯನಾಂತು ಕೃತಾಂತನೆ ಬಂದನೆಂಬ ರೌದ್ರಾವಹವಪ್ಪದೊಂದು ಗಜಮೆತ್ತಣಿನಕ್ಕೆ ಪುರಕ್ಕೆ ಬಂದು (ಪಂಪಭಾ. ೯ ೫೬) [ಸಂ.]

ರೌದ್ರಾಹವ (ನಾ). ಭಯಂಕರವಾದ ಕಾಳಗ: ಭೀಕರವಾದ ಯುದ್ಧ : ಗದಾಯುದ್ಧಂ ಪರಿಚ್ಛನ್ನಮಿಂತು ದಿನಂಗಳ್ ಪದಿನೆಂಟಱಿಂ ಸಮಿದಾ ರೌದ್ರಾಹವಂ ಭಾರತಂ (ಗಜಾಯು. ೯-೩೬) [ಸಂ.]

ರೌದ್ರಿ (ನಾ). ೧. ಭಯಂಕರಸ್ವರೂಪವನ್ನು ಹೊಂದಿರುವವಳು : ದುರ್ಗೆ; ಪಾರ್ವತಿ : ಕ್ರೂರಮಾತೆಯರ, ರೌದ್ರಿಯರ, ಕಟ್ಟುಗ್ರಮೆಱಿಂ, ಪೀರಿಸಿಂ ನಿಮ್ಮ ಕೋಪಂಗಳನ್ (ಅಕ್ಕಶಾ· ೪೪-೩೩೭) ; ಶಕ್ತಿಯು . . . ವಾಮಾ. ಜ್ಯೇಷ್ಠಾ. ರೌದ್ರೀ ಎಂಬ ಸಂಜ್ಞೆಗಳಿಂದಲೂ ಇರುತ್ತಾಳೆ (ಶಾಕರ. ೨೨೨). ೨. ಅರುವತ್ತುಸಂವತ್ಸರಗಳಲ್ಲಿ ಐವತ್ತುನಾಲ್ಕನೆಯದು: ಪ್ರಭವ . . . ರೌದ್ರಿ . . . ಅಕ್ಷಯವೆಂಬಜುವತ್ತು ತೆಱನಾಗಿಹುವು (ಜಪೇ ೩೨೦). ೩. ಒಂದು ಬಗೆಯ ಬಳ್ಳಿ : "ರೌದ್ರಿಯೆನೆ ಕಣಬೆ" (ಪಂಗರಾ· ೪೨-೪೨). [ಸಂ. ರೌದ್ರೀ]

ರೌದ್ರಿಕ (ನಾ)· ಭಯವನ್ನುಂಟುಮಾಡುವವನು : ಮೃತ್ಯುಧ್ವಾಸವನೆ ಮಾವುತಿರುವ ರೌದ್ರಿಕರ ನಡುವೆ ನಡೆದೆ (ಸೂರ್ಯಶಾ· ೧೩-೩). [ಸಂ.]

ರೌದ್ರೆ (ನಾ)· ೧. ಭಯಂಕರವಾಗಿರುವವಳು : ಕಡುವೇದನೆಯು ಕಳಕಳದ ಹಾಹಾರವದ ರೌದ್ರೆ ಸುಭದ್ರೆ ನಡತಂದು (ಭಾಗ್ಯಾಶ್ರೀ· ೩-೦೩). ೨. ದುರ್ಗೆ : ಜಯ ರೌದ್ರೆ ಭೈರವಿ ವಿರೂಪಚ್ಛಹಾಸಿನಿ (ಕೇವಚಂ· ೩೦). [ಸಂ. ರೌದ್ರಾ]

ರೌನಾಡು (ನಾ). ಒಂದು ಪ್ರದೇಶದ ಹೆಸರು : ಅಯ್ಯಪ್ಪ ರೌನಾಡ ಪಶ್ಚಿಮ ಭಾಗದ ತೋಂಟಮವರ್ ಮೂಡಣ ಬಸದಿಗೆ ಕೊಟ್ಟರ್ (ಶ್ರವಾ· ೦೯೦೯, III. ೩-೩ ; ೩೦೦). [? + ನಾಡು]

ರೌಪ್ಯ (ಗು). ೧. ಬೆಳ್ಳಿಯಿಂದ ಮಾಡಿದ ; ರಜತದ. (ನಾ). ೨. ಒಂದು ಬಗೆಯ ಲೋಹ ; ಬೆಳ್ಳಿ ; ರಜತ : "ರೌಪ್ಯಮೆನಿ ಕಾರಮೆನೆ . . . ಬೆಳ್ಗಳಧಿಧಾನಮಕ್ಕುಂ" (ಪುಂಗರಾ· ೩೦-೩) ; ಬೀಚರ ಕಾಂತೆಯ ಹಸ್ತದಿಂ ಕಬಳ್ದಿದ ನವರೌಪ್ಯಕುಂಭಮೆ . . . ಕಾಣಲಾದವು ದೆನಲ್ . . . ಪೊಳೆಯುತಿರ್ದುದು ಚಂಡಮರೀಚಿಮಂಡಲಂ (ಜಗಂ. ೯-೩೦) ; ಬಿಳಿಮಂಜು ತಾಂ ರೌಪ್ಯಧೂಳಿಯ ಸಾಂದ್ರಧೌತಧವಳಮನೆರಚಿ ಮುಚ್ಚಿ ಮ್ಲುಸುಕಿದುದು ಗಿರಿವನಭುವನಮಂ (ಶ್ರೀಪಾಪು· ೦೯೯-೦೩೩). [ಸಂ.]

ರೌಪ್ಯಾದ್ರಿ (ನಾ)· ಬೆಳ್ಳಿಯ ಬೆಟ್ಟ ; ರಜತಗಿರಿ : ಅರ್ಥಶಾಸ್ತ್ರೋದಾತ್ತಂ ದಂತೋಪ[ನತ]ನೆನೆ ರೌಪ್ಯಾದ್ರಿ ಜಿಲ್ವಾದುದಾಗಳ್ (ಜಿಂಪು ೧೦-೩೦) ; ನಗಂ ತೊಟ್ಟನೆ ಚಂಚಚ್ಚಂದ್ರರೋಚಿರ್ಧವಳವೆನಿಸಿ ರೌಪ್ಯಾದ್ರಿಯಂ ತಿರ್ದುದು (ಅಷ್ಟ· ೯-೩೮). [ಸಂ.]

ರೌಮಕ (ಗು). ೧. ರೋಮದೇಶಕ್ಕೆ ಸಂಬಂಧಪಟ್ಟ.— ಸೇರಿದ. (ನಾ)· ೨. ಅಜ್ಮೀರದ ಬಳಿಯಲ್ಲಿ ದೊರೆಯುವ ಒಂದು ಬಗೆಯ ಉಪ್ಪು : "ರೌಮಕಂ ಬಜ್ರಕಂ"— ೨ ಸೌಭರಿದೇಶದಲ್ಲಿ (ರುವಂ) ಎಂಬ ಗಣಿಯೋಗೆ ಹುಟ್ಟುವ ಉಪ್ಪು. ಬೊಳುಪ್ಪಗೆ ಹೆಸರುಗಳು" (ಸಿಕ್ಕಾಂಡಿ. ೨೩೩). [ಸಂ.]

ರೌರವ (ಗು). ೧. ರುರು ಎಂಬ ಜಿಂಕೆಯ ಚರ್ಮದಿಂದ ಮಾಡಿದ. ೨. ಭಯಂಕರವಾದ ; ಭೀಕರವಾದ. ೩. ಅಪ್ರಾಮಾಣಿಕತೆಯಿಂದ ಕೂಡಿದ : ಮೋಸದ. (ನಾ)· ೪. (ಚಿತ್ರವಿಚಿತ್ರ ಹಿಂಸೆಗಳನ್ನು ಕೊಡುವುದೆಂದು ಭಾವಿಸಲಾದ) ಭಯಂಕರವಾದ ನರಕಗಳಲ್ಲಿ ಒಂದು : "ತಪನಃ . . . ರೌರವಃ . . . ಕಾಲಸೂತ್ರಂ . . . ಆ ನರಕಭೇದಂಗಳ ಹೆಸರುಗಳು" (ಸಿಕ್ಕಾಂಡಿ. ೭೪) ; ಭರತದ ಕಥನಪ್ರಸಂಗವು . . . ಘೋರರೌರವವನ್ನು ಕೆಡಿಸುಗು ಕೇಳ್ದ ಸಜ್ಜನರ (ಶಾಣ್ಮಂ· ೦-೨೨) : ರೌರವ . . . ಕಾಲಸೂತ್ರಗಳೆಂಬವೇ ಯೆಂಟು ನರಕಂಗಳು (ಶಪೇ· ೦೬೯). ೭. ಇಪ್ಪತ್ತೈಂಟು ಶಿವಾಗಮಗಳಲ್ಲಿ ಒಂದು : ಕಾಮಿಕ . . . ವೀರ, ರೌರವ, ಮಕುಟ . . . ವಾತುಲಗಳೆಂಬ ಇಪ್ಪತ್ತೈಂಟು ಶಿವಾಗಮಗಳು (ಶಾಕರ· ೭೨). ೮. [ಜೈನ] ಹದಿಮೂರು ಇಂದ್ರಕಗಳಲ್ಲಿ ಒಂದು : ರೌರವ ಭ್ರಾಂತ . . . ವಿಭ್ರಾಂತಾಮ್ಮಿ ತ್ರಯೋದಶೇಂದ್ರಕ . . . ಬಿಲಂಗಳ್ (ಜಪ್ರ· ೦೨೦). [ಸಂ.]

ರೌಸು (ನಾ). ಆರ್ಭಟ ; ಅಬ್ಬರ : ರೌಸಿನಲ್ಲಿ ಯೋಗ್ಯಾಯೋಗ್ಯದ ವಿವೇಕವು ಅಳಿದು ಆವೇಶದ ಕೂಗು ಕೇಳಿಬರುತ್ತದೆ (ಪುಷ್ಪಕ್ರ· ೦೪೬) ; ರೌಸಿನಿಂದ ಎದ್ದು ಕುಳಿತಳು (ಕಂಹೀ· ೯೪). [← ಮರಾ. ರವಸ]

ರೌಹಿಣ (ಗು). ೧ ರೋಹಿಣೀನಕ್ಷತ್ರದಲ್ಲಿ ಹುಟ್ಟಿದ. (ನಾ). ೨. ಶ್ರೀಗಂಧದ ಮರ : ಚಂದನವೃಕ್ಷ. ೩. ಅಗ್ನಿಯ ಹೆಸರುಗಳಲ್ಲಿ ಒಂದು. [ಸಂ.]

ರೌಹಿಣೇಯ (ನಾ)· ೧. ರೋಹಿಣಿಯ ಮಗ : ಬುಧ : "ರೌಹಿಣೇಯಃ· ಬುಧಃ· ಸೌಮ್ಯಃ· ಚಾಂದ್ರಮಸಾಯನಃ— ಈ ಳ

ಬುಧನ ಪೆಸರ್ " (ಹರಿವಂ. ೯-೩೬) ; ನಮ್ಮ ದೇಶದಲ್ಲಿ ಈ ಗ್ರಹಕ್ಕೆ ಬುಧ, ರೌಹಿಣೇಯ (Rauhineya) ಎಂದು ನಾಮಕರಣ ಮಾಡಿದ್ದರು (ಆಗಾ.೦೩). ೨. ವಸುದೇವನ ಹೆಂಡತಿಯಾದ ರೋಹಿಣಿಯ ಮಗ ; ಬಲರಾಮ : "ಬಲದೇವಃ . . . ರೌಹಿಣೇಯಃ . . . ಹಲಾಯುಧಃ— ಈ ೧೮ ಬಲದೇವನ ಪೆಸರ್ " (ಹರಿವಂ. ೬-೩೦) ; ರೌಹಿಣೇಯಂ ಮಾಯಾವೇಷನಾಗಿ ಗೋಪಪ್ಪ ಪ್ರಳಂಬನೊಡನೆ ಮಿಕ್ಕ ಗೋಪಾಲರೆಲ್ಲಂ ಗೋಪಾಲರೊಡನೆ ಗೆದಯಾಗಿ (ಹರಿ. ೪-೩೨ ೪). ೩. ಒಂದು ಬಗೆಯ ರತ್ನ ; ಪಚ್ಚೆ; ಮರಕತ. ೪. ಕರು.

[ಸಂ.]

ರೌಹಿಷ (ನಾ). ೧. ಒಂದು ಬಗೆಯ ಜಿಂಕೆ : " ಸಾರಗ, ರೌಹಿಷ, ಬೆಬ್ಬಕುರಿ . . . ಪೃಷತಃ, ಚುಕ್ಕಿದುಪ್ಪಿ " (ಶಿಷ್ಟಾ.೬೬. ೦೩೩). ೨. ಒಂದು ಬಗೆಯ ಹುಲ್ಲು ; ಕಾಚಿಹುಲ್ಲು : "ಕತ್ಯಾಂ . . . ರೌಹಿಷಂ— ೬ ಕಾಚಿಹುಲ್ಲು " (ಶಿಷ್ಟಾ.೬೬. ೦೩೦). ೩. ಒಂದು ಬಗೆಯ ಮೀನು: (೪). [ಸಂ.]

ರ್‍ಯಾಕಟ್ಟಿ ' ರಾಕಡಿ ' ನೋ.

ರ್‍ಯಾಕಟ್ಟೆ ' ರಾಕಡಿ ' ನೋ.

ರ್‍ಯಾಕಡೆ ' ರಾಕಡಿ ' ನೋ.

ರ್‍ಯಾಗಟ್ಟೆ ' ರಾಕಡಿ ' ನೋ.

*

ಲ

ಲ (ನಾ). ೧. ಕನ್ನಡ ವರ್ಣಮಾಲೆಯ ನಲವತ್ತೈದನೆಯ ಅಕ್ಷರ; ಅವರ್ಗೀಯದ ಮೂರನೆಯ ವರ್ಣ ; ಲಕಾರ. ೨. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ : "ಗ ಡ ಬ ಲಂ ಮೂಱಕ್ಕುಂ" (ಭುಂಗಣ. ೦೫೯-೦೦). ೩. [ಛಂದ] ಲಘು ಎಂಬುದರ ಸಂಕೇತ : "ಮಯರಸತಜಭನಂಲಗವಿನಿಪ್ಪಕ್ಷರಂ ಗ ಣಾ ಕ್ಷ ರ ಗ ಳ ಕ್ಕುಂ" (ಭುಂಗಣ. ೦೦೭-೦೯); ಮಯರಸತಜಭನಲಗವಿನಿಚಯವೆಂಬವು ನಿಯಮದಿಂ ಗಣಾಕ್ಷರಮಕ್ಕುಂ (ಛಂಕೋ.೦೫. ೬-೭೬).

ಲಂಕೆ (ನಾ). ಬಡಗಿ : ಲಂಕೆರೊಕ್ಕಲ್ಲಿ ಆಜುತಿಂಗಳ್ಗೆ ಮಾಣಿಕಿಗೆ ಮರವಿಯೆಂಬವೊನ್ದಕ್ಕುಂ ವರ್ಷಕ್ಕೆ ಮಂಚವೊನ್ದಕ್ಕುಂ (ಆ. XIX. ೫೫-೫೮; 1135) ; " ಬಡಿಗ, ಮರದ ಕೆಲಸ ಮಾಡುವವನು" (ಅ. XIX. ಪು. ೫೫ ಅಡಿಟಿಪ್ಪಣಿ).

ಲಂಕಿಗ (ನಾ). ಲಂಕೆಯಲ್ಲಿ ವಾಸಿಸುವನು ; ಲಂಕೆಯ ಪ್ರಜೆ : ಲಂಕಿಗಿನ್ ಸುಖಮೆಲ್ಲಿ? ಲಂಕಿಗಿನ್ ಶುಭವೆಲ್ಲಿ? ಲಂಕಿಗರ್ ನಮಗೆ ನೆಮ್ಮದಿಯಲ್ಲಿ ? (ಕ್ರಿರಾಮಾ. ೧೬೯-೯೮೦). [ಲಂಕೆ + — ಇಗ]

ಲಂಕಿಣಿ (ನಾ). ೧. ಲಂಕೆಯ ಕಾವಲಿನ ರಾಕ್ಷಸಿ : ಹನುಮಂದಂ . . . ಮಹಾದ್ಭುತಘೋರರಕ್ಕಸಯುವತಿ ಲಂಕಿಣಿಯೆಂಬವಳು ರಕ್ಕಸಿಯರೊಡಗೂಡಿ (ಕುಸಾಹ. ೩-೨-೩) ; ಲಂಕಿಣಿಯನು ಕೊಂದು ಶಂಕೆಯಿಲ್ಲದೆ ನಾನು ಬಂಕದಿಂದಲಿ ಬಂದೆ (ಕುರಾಪ. ೯-೩೯-೨). ೨. (ಆಲಂ) ದುಷ್ಟ ಹೆಂಗಸು; ಗಯ್ಯಾಳಿ : ಆ ಲಂಕಿಣಿಯ ಕಾಲು ಕಟ್ಟಿಕೊಳ್ಳುವ ಸ್ಥಿತಿ ನನಗೆ ಬಂತು (ಕುಪಾಗ. ೪೦). ' ತಾಟಕಿ ' ಪರಾ. [< ಸಂ. ಲಂಕಾ]

ಲಂಕಿಣಿವಿದ್ಯೆ (ನಾ). (ಆಲಂ) ಘಾಟಿತನ ; ಕುಯುಕ್ತಿ : ಅವಳಿಗೇನು ಬಂದಿದೆ ರೋಗ ! ಲಂಕಿಣಿವಿದ್ಯೆ ಮಾಡಿದ್ದಾಳೆ (ಕುಪಾಗ. ೦೬೪).

[ಲಂಕಿಣಿ + ವಿದ್ಯೆ]

ಲಂಕೆ (ನಾ). ೧. ಭಾರತದ ದಕ್ಷಿಣಕ್ಕಿರುವ ಒಂದು ದ್ವೀಪ ; ಸಿಂಹಳ; ಈಗಿನ ಸಿಲೋನು. ಇದರ ರಾಜಧಾನಿಗೆ ಲಂಕಾನಗರಿ ಎಂಬ ಹೆಸರಿತ್ತು : ಲಂಕೆಯ ಚೆಲ್ವಂ ನೋಡುತ್ತುಂ. . . . ಅರಮನೆಯಂ ಪೊಕ್ಕಂ (ಕುಪಾಹ. ೦೯-೧೬); ರಾವಣಾಸುರ ಲಂಕೆಯಲಿ ಮತ್ಸ್ಯಾವತಾರಂ ಮತ್ಸ್ಯಕೇಶ್ವರದೇವರಂ ತಾ ನಿಲಿಸಿ ಭಜಿಸನೆ (ಆಹ್ವ. ೫೯-೬೨) ; ಅಂಕೆಯಿಲ್ಲದ ಕೋತಿ ಲಂಕೆ ಸುಟ್ಟಿತು (ಗಾಕ). ೨. ಒಂದು ದ್ವೀಪಸಮುದಾಯದ ಹೆಸರು : ಗೋದಾವರೀನದಿಯು ಸಮುದ್ರಕ್ಕೆ ಸೇರುವ ಕಡೆ . . ಲಂಕೆಗಳು ಎಂದು ಕರೆಯಲ್ಪಡುವ ಅನೇಕ ದ್ವೀಪಗಳೂ . . . ಇವೆ (ಭೂಗೋ.೫. ೦೦). [ಸಂ. ಲಂಕಾ]

ಲಂಕೋಯಿಕೆ (ನಾ). ಒಂದು ಬಗೆಯ ಸಸ್ಯ; ಸ್ಪೃಕ್ಕೆಯೆಂಬ ಗಂಧದ್ರವ್ಯ ; ಸಂಕೇಬೇರು : "ಮರುನ್ಮಾಲಾ . . . ಲಘುಃ, ಸಮುದ್ರಾಂತಾ, ವಧೂಃ, ಕೋಟವರ್ಷಾ, ಲಂಕೋಯಿಕಾ—೧೦ ಸ್ಪೃಕ್ಕೆಯೆಂಬ ಗ್ರಂಧದ್ರವ್ಯ, ಸಂಕೇಬೇರು" (ಶಿಷ್ಟಾ.೬೬. ೦೦೩). [ಸಂ. ಲಂಕೋಯಿಕಾ]

ಲಂಗ (ನಾ). ಹೆಣ್ಣುಮಕ್ಕಳ ಒಂದು ಉಡುಗೆ ; ಪಾವಡೆ : ಚಿಕ್ಕ ಮಕ್ಕಳು ಇಂಗ್ಲೀಷಿನವರಂತೆ ಪಾಯಿ ಲಂಗಗಳನ್ನು ಹಾಕಿಕೊಳ್ಳುತ್ತಿದ್ದವು (ಪುಶ್ಮತ. ೬) ; ನಿನ್ನ ಲಂಗ ಯಾರು ಹೊಲಿದದ್ದು ? (ಬೀಚರ. ೦೦೦). [← ಹಿಂ. ಮರಾ. ಲಹಂಗಾ]

ಲಂಗಟಿ ' ಲಂಗೋಟಿ ' ನೋ.

ಲಂಗಡ, ಲಂಗಡೆ (ನಾ). ಕಾಲಿನಲ್ಲಿ ಊನವುಳ್ಳವನು ; ಕುಂಟ : ಟೀವುಸುಲ್ತಾನರ ಕಡೆಯಿಂದ ಲಂಗಡಾ ದಾಡಿಸೇಖ್‌ಯಿಮಾಮುಯಂಬ ಶಿಪಾದಾರನು (ರಾಕೇಂದ್ರ. ೦೭). **ಲಂಗಡೆ :** ಪೆಂಕಟಕೃಷ್ಣ ಪಾಪ ಕೊಂಡುಂಟು. ತೀರ ಲಂಗಡೆ ಅಲ್ಲ (ಪಾಪಚ. ೦೫); ಕಾಲುಗೀಲು ಮುರಿದು ಕೊಂಡು ಲಂಗಡೇ ಆಗೀರಿ (ಶಂಚಾಕೃ. ೪೨). [←ಹಿಂ. ಮರಾ. ಲಂಗಡಾ]

ಲಂಗಡೆ ' ಲಂಗಡ ' ನೋ.

ಲಂಗರಖಾನೆ (ನಾ). ಬಡಬಗ್ಗರಿಗಾಗಿ ಇರುವ ತಂಗುಮನೆ.— ಅನ್ನ ಛತ್ರ : ಆರು ತಿಂಗಳಲ್ಲಿ ಮೋದಿಯು ತಯಾರಾಯಿತು. ಲಂಗರಖಾನೆಯು ಕಟ್ಟಡವೂ ಸಿದ್ಧವಾಯಿತು (ದಾಂಜ್. ೨೬೦).

[← ಪಾರ. ಹಿಂ. ಮರಾ. ಲಂಗರ್‌ಖಾನಾ]

ಲಂಗರು. ನಂಗರು, ನಂಗಲ್ಲು (ನಾ)- ಹಡಗನ್ನು ನಿಲ್ಲಿಸುವಾಗ ನೀರಿನಲ್ಲಿ ಇಳಿಬಿಡುವ ಭಾರವಾದ ಕಬ್ಬಿಣದ ಸಲಕರಣೆ; ಗುಂಡು ಮತ್ತು ಸರಪಳಿ : ' ಲಂಗರು ' ಎಂಬುದು ಬಹಳ ಭಾರವಾದ ಕಬ್ಬಿಣದ ತೊಲೆ . . . ಹಡಗು ಗಾಳಿಗೆ ಕದಲದೆ ನಿಲ್ಲಬೇಕಾದ ಸಂದರ್ಭದಲ್ಲಿ ಅದನ್ನು ಸರಪಳಿಯಿಂದ ನೀರಿನಲ್ಲಿ ಬಿಟ್ಟು, ಅದು ನೆಲದ ಮೇಲೆ ಕುಳಿತುಕೊಳ್ಳುವಂತೆ ಮಾಡುವರು (ಗುಜಾಶಾ. ೬೬); ಅದು ಲಂಗರಿಲ್ಲದ ನೌಕೆ (ಹಹಸ್ವ. ೪೯). **ನಂಗರು** : (ಕಂಗಾ. ೦೩೬). **ನಂಗಲ್ಲು** : " ನಂಗಲ್ಲು ಸ್ಥಾಪ್ಯಮಕ್ಕುಂ " (ಕುಂಗಾಶಾ. ೦೨೦-೪); ನಂಗಲ್ಲನಿಳುಹುವ ಪಡಗು ನಿಲ್ಲ್ವಂತೆ ರಥಾಂಗ ನಿಂದುದು ತೊಟ್ಟನಲ್ಲಿ (ಕರಾ. ೨೪-೩೦); ನಂಗಲ್ಲನಿಕ್ಕಿದ ಪಡಗಿನಂತಾ ರಥ ಕಂಗೊಳಿಸುತ ನಿಂದಿರಲು (ಗೋಪುರೀ. ೦೦-೬೬).

ನಂಗರುಎತ್ತು = ಲಂಗರನ್ನು ಎತ್ತು,—ತೂಗು: (ಕಂಗಾ. ೦೩೬). ನಂಗರುಬಿಡು = ಲಂಗರುಹಾಕು : (ಕಂಗಾ. ೦೩೬). ನಂಗರುವಾಡೆ = ಪಡಗನ್ನು ಲಂಗರು ಹಾಕಿ ನಿಲ್ಲಿಸುವ ಸ್ಥಳ : (ಕಂಗಾ. ೦೩೬). ಲಂಗರುಹಾಕು, ನಂಗರುಹಾಕು = ಪಡಗನ್ನು ನಿಲ್ಲಿಸಲು ಲಂಗರನ್ನು ನೀರಿನಲ್ಲಿ ಇಳಿಬಿಡು; ಪಡಗನ್ನು ನಿಲ್ಲಿಸು : ಹರಿಕುಲಿಪನು . . . ಕಪ್ಪಸಮುದ್ರವನ್ನು ದಾಟಿ ಆ ಪುರದ ಬಂದರಿನಲ್ಲಿ ಲಂಗರುಹಾಕಿದನು (ಕುಪ್ರ. ೧೬); ಪಡಗುಗಳು ಲಂಗರುಹಾಕುವ ಸ್ಥಳವು 'ರೇವು' ಅಥವಾ 'ಆಳದ' ಎಂದು ಕರೆಯಲ್ಪಡುತ್ತದೆ (ಕೂಗೋಪ್ರ. ೦೦), [← ಪಾರ. ಹಿಂ. ಲಂಗರ್ : ಮರಾ. ಲಂಗರ್, ನಾಂಗರ್.. ಇಂ. Anchor]

ಲಂಗರುಸುಂಕ (ನಾ)- ಲಂಗರು ಹಾಕಿದ ಪಡಗುಗಳ ಮೇಲೆ ಹಾಕುವ ತೆರಿಗೆ : (Anchorage- ೩೦೪೩). [ಲಂಗರು + ಸುಂಕ್]

ಲಂಗಿಗ (ನಾ). ಬಿದಿರಿನ ಗಳೆಯ ಮೇಲೆ ಕಸರತ್ತು ಮಾಡುವವನು: ದೊಂಬ : ಮೀಯದು ಬಿದಿರ ಮೀಗೇಱಿಯುಮಾಕಾಶದೊಳಾಡುವ ವಿದ್ಯಾಧರ ಲಂಗಿಗರ ಮನೆಯೊಳ್ ಪೆಣ್ಗತ್ತೆಯಾಗಿ ಪುಟ್ಟಿ (ಪಜ್ಞಾಶಾ. ೯-೨೬).

[< ಹ್ರಾ. ಲಂಖಿಗ. / ಸಂ. ಲಂಘಕ]

ಲಂಗಿಸು (ಕ್ರಿ). ನೆಗೆ; ಹಾರು; ಕುಪ್ಪಳಿಸು; ಜಿಗಿ : ತುಂಗಗಿರಿಶಿಖರದಿಂದಂ ಲಂಗಿಸಿ ಶೂದ್ರಕನ ಪೊಳೆವ ಸುರಿಗೆಯ ಮೊನೆಯೊಳ್ . . . ಪಾಯ್ದು ಬರ್ದುದು ಸಿಂಗಂ (ಇಶ್ವಕ್ಷಿ. ೦೦೦೯ ಪೂರ್ವಕ್ಷ); ಪೊಗೆ ಪುಗೆ ಕಣ್ಣಂ ಸಿಂಗಂಗಳಳರೆ ಗರ್ಜಿಸಿ ಲಂಗಿಸಿ ಪೊಡವುದನೆ ಪುಲ್ಗಿ ಸತ್ತುವ ಪಲಪುಂ (ಕಂಪಶಾ. ೩-೮೨); ಸಿಂಗಾಡಿಗಳ ತುಂಡಿಸಿ ನೇಚಿಯುಗಳ ಲಂಗಿಸಿ ಸೆಳೆಸೆಳೆದಿಡುತ (ಕಂಪಪು. ೦೫-೪೬). [<ಲಂಘಿಸು]

ಲಂಗು (ನಾ). ಕಡಿವಾಣದ ಒಂದು ಭಾಗ ; ಕಡಿವಾಣ .

ಲಂಗುಲಗಾಮು = ೧. ಕುದುರೆ ಮತ್ತು ಒಂಟೆಗಳನ್ನು ಹತೋಟಿಯಲ್ಲಿಡಲು ಬಳಸುವ ಸಾಧನಗಳು: ಕಜಾಪೆ ಮತ್ತು ಕಡಿವಾಣ: ಸೊಗಸಾದ ಜೀನುಗಳನ್ನು ಮತ್ತು ಲಂಗುಲಗಾಮುಗಳನ್ನು ಹಾಕಿದ್ದ ಎರಡು ಒಂಟೆಗಳನ್ನೂ . . . ಅರ್ಪಿಸಿದೆ (ಕ್ರಶಾ. II- ೪೮); ಇಂದ್ರಿಯಗಳ ಹಿಂದೆ ಮನಸ್ಸನ್ನು ಲಂಗುಲಗಾಮಿಲ್ಲದ ಕುದುರೆಯಂತೆ ಬಿಟ್ಟುಕೊಟ್ಟು (ಪಾಶಾಕ್ಷ. ೦೦೬). ೨. (ಅಲಂ) ಕಟ್ಟು; ತಡೆ; ನಿರ್ಬಂಧ ; ಹಿಡಿತ : ನಿನ್ನ ಬಾಯಿಗೆ ಲಂಗುಲಗಾಮು ವಿನೂ ಇಲ್ಲ (ರಂಗೋಪ್ರ. ೦೬೦); ಅವರ ಕೋಪಕ್ಕೇನು ಲಂಗುಲಗಾಮೇ ಬೇಡವೆ ? (ಸ್ವಾಬಸ್ವ. ೩೬). [<ಸಂ. ಲಂಮಿನ್]

ಲಂಗೂಟ ' ಲಂಗೋಟಿ ' ನೋ

ಲಂಗೋಟಿ, ಲಂಗಟಿ, ಲಂಗೂಟ (ನಾ). (ಗಂಡಸು) ಗುಹ್ಯಾಂಗವನ್ನು ಮಾತ್ರ ಮುಚ್ಚುವಂತೆ ಧರಿಸುವ ಬಟ್ಟೆ : ಕೌಪೀನ ; ಪುಟಗೋಸಿ : ಲಂಗೋಟಿ ಬಲುವೊಳ್ಕೆದ್ದಣ್ಣಾ ಒಬ್ಬರ್ಹಂಗಿಲ್ಲದೆ ಮಾಡಿಗ ಒದಗುವುದಣ್ಣಾ ಬಡವರಿಗಾಧಾರವಣ್ಣಾ ಈ ಲಂಗೋಟಿ ಬೈರಾಗಿಗಳ ಥಾಗ್ಯವಣ್ಣಾ (ಶ್ರೀಪ್ರ. ೪-೬೬ ಪ್ರಾಣ); ' ಲಿಂಗೋಟಿ ಹಾಕದಿ ಕಂಗೆಟ್ಟು ಕೋಡಿದಿ (ಪಂಗಾ. ೬೩ ಶಂಕಾಕ್ಷಕಂಡಪು); ಲಂಗೋಟಿಯು ಮೇಲೆದೇ ಒಂದು ಸಣ್ಣ ರುಮಾಲಿಯು ಮಾಡಿ ಉಟ್ಟುಕೊಂಡಿದ್ದ (ಕ್ಷಶಿ. ೦೪೩). **ಲಂಗಟಿ** : ಲಂಗೀ ಆರ ಸುತ್ತರೀ ಲಂಗಟ್ಟಾ ಆರ ಲವಾಡಿಸಿರಿ (ಸಹುಚ. ೨೧೩) ; ಒಂದೂವರಿ ಗೇಣಾ ಲಂಗಟಾ ಸಿಗಿಸಿಕೊಂಡು . . . ಹೊರಟ್ರು (ಕಿಹುಗಾ. ೦೪). **ಲಂಗೂಟ** : ಲಂಗೂಟ ಹಾಕಿ ಬತ್ತಲೆಯಾಗಿ ಗುರ್ಜಿಯನ್ನು ಹೊರುವ ಹುತಃಗದು ಕೋವಣ ಧರಿಸುವ ವಿರಕ್ತವೃತ್ತಿಯನ್ನು ಚಿತ್ರಿಸಿದರವು. (ಕ್ಷಕಾ. ೦೩೯).

ಲಂಗೋಟಿಗೆಳೆಯ = ಚಿಕ್ಕಂದಿನ ಸ್ನೇಹಿತ : ಬಾಲ್ಯಮಿತ್ರ : ಲಂಗೋಟಿ ಗೆಳೆಯರೊಂದಿಗೆ ವಿಶ್ವಾಸದಿಂದ ಕಲಿಯುತ್ತಿದ್ದನು (ಕೃಕರು-೩೫೬). ಲಂಗೋಟಿಮಿತ್ರ = ಲಂಗೋಟಿಗೆಳೆಯ : ಅಪರಿಚಿತರನ್ನು ಸಹ ಲಂಗೋಟಿಮಿತ್ರರಂತೆ ಮಾತನಾಡಿಸುತ್ತಾನೆ (ಜಾಅಗೌ. ೪೦). ಲಂಗೋಟಿ ಸ್ನೇಹಿತ =ಲಂಗೋಟಿಗೆಳೆಯ : ಅವರಿಬ್ಬರೂ, ಲಂಗೋಟಿಸ್ನೇಹಿತರು (ಕ್ಷಸಿ). [← ಪಾರ. ಲಂಗೋಟೀ ; ಹಿಂ. ಲಂಗೋಟ್, ಲಂಗೋಟಾ, ಲಂಗೋಟೀ; ಮರಾ. ಲಂಗುಟಾ, ಲಂಗುಟೀ, ಲಂಗೋಟ್, ಲಂಗೋಟಾ, ಲಂಗೋಟೀ]

ಲಂಘಕ (ನಾ)- = ಲಂಗಿಗ : ತನ್ನ ವಿದ್ಯೆಯನ್ನು ತೋರಿಸಲು ಬಯಸುವ ಲಂಘಕನು ನೆಲವನ್ನು ಅಗೆಯಿಸಿ, ಕಲ್ಲುಬಕ್ಕರೆಗಳನ್ನು ತೆಗೆಯಿಸಿ, ನೆಲವನ್ನು ಸಮಗೊಳಿಸಿ, ಮೃದುವಾದ ನೆಲದಲ್ಲಿ ತನ್ನ ವಿದ್ಯೆಯನ್ನು ತೋರಿಸುವನು (ಜಾಕ್ಷ. ಪುಂಲಕ್ಷ. ೮೩). [ಸಂ. / ಪಾಲಿ. ಲಂಘಕ]

ಲಂಘನ (ನಾ)- ೧. ಹಾರುವಿಕೆ ; ನೆಗೆತ; ಜಿಗಿತ: ' ಲಂಘಿಸು ' ಪರಾ. ೨. ಕುದುರೆಯ ಒಂದು ಬಗೆಯ ಓಟ;ನೆಗೆದು ನೆಗೆದು ಓಡುವುದು;ಪ್ಲುತ: ನೆಗೆನೆಗೆಯಿಸಿ ಓಡಿಸುವುದು ಲಂಘನವೆನಿಸಿಕೊಂಬುದು (ಅಕ್ಷಕೀ. ೨೩-೦೦). ೩. ಮಿತಿಯನ್ನು ಮೀರುವುದು; ಹದ್ದು ಮೀರಿದ ವರ್ತನೆ. ೪. ಹತ್ತುವುದು; ಏರುವುದು. ೫ ಉಪವಾಸ ; ನಿರಾಹಾರ : ಲಂಘನವು ದೀಪನ ಪಾಚನಂಗಳನ್ನುಂಟುಮಾಡುವುದು (ಸಶಕ್ಕ. ೦೦೦) ; ಲಂಘನವು ಕೋಧನ, ಶಮನ ಎಂದು ಎರಡು ಪ್ರಕಾರವಾಗಿದೆ (ಪಂಗಾ. ೦೯೩). ೩, ೫ : ಭಕ್ತ ದ್ವೇಷಂ ಜಡಸಂಸ್ತ್ರಿ ಸದಾಚರಿತಲಂಘನಂ . . . ಕುಂದದ ಮುಕ್ಕಜ್ಜರನಂದ ದಿಂದಮಂರಸರೊಳಂದುಂ (ಶಂಪ್ರಪು. ೦೨-೦೦೬).

ಲಂಘನಮಾಡು = ಲಂಘನಹಾಕು : ಅಜೀರ್ಣವಾದಾಗ ಲಂಘನ ಮಾಡಿದರೆ ಒಳ್ಳೆಯದಾಗುತ್ತದೆ (ಕ್ಷಸಿ). ಲಂಘನಹಾಕು = ಉಪವಾಸವಿರು ; ನಿರಾಹಾರಿಯಾಗಿರು : ಎರಡು ದಿವಸ ಲಂಘನಹಾಕಿದರೆ ಸರಿಹೋಗುತ್ತೆ ಎಂದು ಅದನ್ನು ಮಾಡಿದೆ (ಪಾಹೋಸಂ. ೭೩). [ಸಂ.]

ಲಂಘನಂಗೆಯ್ (ಕ್ರಿ)- ಉಪವಾಸವಿರು ; ನಿರಾಹಾರಿಯಾಗಿರು : ಗಜವಷ್ಟಕಮಸ್ಮಿದಿನಜೀರ್ಣಮಾಯ್ತೆಂದು ಲಂಘನಂಗೆಯ್ದವೊಲೇಂ ಗಜವಿವ ಲಂಘಿಸಿದುದೊ (ಪಾಪು. ೪-೩೬). [ಲಂಘನ + ಕೆಯ್]

ಲಂಘನೀಯ (ನಾ). ಮೀರಬೇಕಾದುದು ; ಪರಿಸ್ಕರಿಸಲು ಯೋಗ್ಯವಾದುದು : ಮುದುಗಣ್ಗಳುಚಿತಮಂ ನುಡಿವುದು . . . ಉಚಿತಮಂ ಬಗೆಯದೆ ನುಡಿದೊಡಮವಂಗೆ ಲಂಘನೀಯಮಮೇಯಂ (ಪಾಂಚಪು. ೦೦-೦೨೦). [ಸಂ.]

ಲಂಘನೆ (ನಾ)- = ಲಂಘನ ೧ : ಅಡಿದೊಡವ ನಿಡುಜಡಯ ನಡುಬಳಸಿಯಸನಗೊಡಿಸಿ ಜಡಿವಳೋಲೆಯನೊಡಂಬಡಿಸಿವೊಡನೆ ಲಂಘನೆ ರಾಗು ಬಿಡುತೆಗಳ ಬರುಬನಿಂ (ಪಾಪ. ೪೩). [ಸಂ. ಲಂಘನ]

ಲಂಛಿತ (ಗು)- ೧. ದಾಟಿದ; ಜಿಗಿದ. ೨. ಮೀರಿದ; ಅತಿಕ್ರಮಿಸಿದ. ೩. ತಿರಸ್ಕರಿಸಲ್ಪಟ್ಟ; ಅಲಕ್ಷಿಸಲ್ಪಟ್ಟ; ಅಪಮಾನಿತ. (ನಾ). ೪.

[ನಾಟ್ಯ] ಮೂವತ್ತೈದು ದೇಶೀಯಭೌಮಚಾರಿಗಳಲ್ಲೊಂದು; ☞ "ಒಂದು ಕಾಲನ್ನು ಖಂಡಸೂಚಿಸ್ಥಾನಕದಲ್ಲಿ [ಸ್ಥಾನಕ ೫೯] ನಿಲ್ಲಿಸಿ ಜಾಗ್ರತೆ ಇನ್ನೊಂದು ಕಾಲಿಂದ ದಾಟುವುದು" (ಶಾಸ್ತ್ರಂ. ೩೨೨ ಗದ್ಯಾನುವಾದ) : ಉರು ಖಂಡಸೂಚಿಸ್ಥಾನದಿ ನಿರುತೊಂದುಂ ಪಾದಮದನೆ ಬೇಗಂ ದೇಗಂ ಪಿರಿದುಂ ತೆಗೆವುತೆ ಕದಿತರ· ಚರಣದೆ ದಾಂಟಲ್ಕೆ ಲಂಘಿಕಾಖ್ಯಮೆನಿಕ್ಕುಂ (ಶಾಸ್ತ್ರಂ. ೩-೬೯). ಪಿ. [ಸಂಗೀತ] ಹಾಡುವಾಗ ಅನುಕ್ರಮವಾಗಿ ಉಚ್ಚರಿಸದೆ ಮಧ್ಯದ ಸ್ವರಗಳನ್ನು ಹಾರಿಸಿ ಹೇಳುವುದು : ಮಂದ್ರ ಮಧ್ಯಮ ತಾರವೆಂಬ ತ್ರಿವಿಧವೊಂದಲು ಚಾರವೆಂಬ ಲಯ ಲಂಕ[ಳಿ]ತಂಗಳು ನಿಮಿರ್ದರ್ದಿರಲು . . . ದೇಶೀಮಾರ್ಗವಿಶೇಷಲು (ರಸಿಕ. ೬೯-೦೦); ಲಳಿತ ಗಾಢ ಮಿತಾಯಿ ಲಂಘಿತ ಕಾಕುಜಾಯನುಜಾಯಿ . . . ಬೆತಂಗಮರೆ ಬಾಜಿಸುತೆ ಚಾರುವೀಣೆಯಂ (ಕ್ರಿಕ. ೦೦-೯).

[ಸಂ.]

ಲಂಘಿಸು (ಕ್ರಿ)· ೧. ಹಾರು ; ಜಿಗಿ ; ನೆಗೆ : ಸಿಂಧುರಾರಾತಿಯನು ಜ್ವಲಿತಸುವನಭ್ರಪಥದತ್ತ ಲಂ[ಜಾಣಂ. ೪೦]ಘಿಸಲ್ಕಿರ್ದುದಂ ಜಮೂಪತಿ ಕಂಡಂ (ಕಬಿಕ್ಷ. ೦೬-೮೩); ಕೊಂದಿನ ಮೇಲಣ ಮರ್ಕಟನಂತೆ ಲಂಘಿಸುವುದಿನ್ನ ಮನವು (ಜಸಿ. ೬೨); ಹೊಯ್ದನು ಭೀಮ ಲಂಘಿಸಿ ಗಜದ ಮಸ್ತಕವ (ಶಾಣ್ಮಕ್ರೌ. ೩-೭೫). ೨. ಧಾಟು; ಕ್ರಮಿಸು : ನಿನ್ನಾಜ್ಞೆಯಂತೆ ಗಗನಮನುನ್ನತಿಯಿಂ ದಾಂಟಿ ಪೆಜರ್ಗೆ ಲಂಘಿಸಲರಿದೆಂಬನ್ನಿಗ ಮೊಪ್ಪಿರ್ದುದು (ಕಬಿಕ್ಷ. ೦೦-೫೭); ಜಲಧಿಯ ಲಂಘಿಸಿದವಗೆ ಜಯ ಮಂಗಲ (ಕ್ಷಕಂದ. ೭-೨೫೯ ಪದ್ಯ). ೩. ಮೇಲೇರು : ಹತ್ತು; ವಿರಿಹೋಗು : ತೊಲಗಳೋಗೆ ದುಗಳ ಪಟ್ಟಿ ಲಂಘಿಪ ಬಲುಮೆಕಾಱರ ಮೇಲೆ ನೂಕಿ . . . ತೊಱಿದರು ಜೀವಗಳನು (ಕಂಪಂ. ೦೯-೭೦). ೪. ಮೀರು ; ಮೀರಿ ನಡೆ; ಅತಿಕ್ರಮಿಸು : ಲಂಘಿಸಿದಂ ನಿಮ್ಮಯ ಮಾತನೊರ್ಮಗಮಿದಾಜ್ಞಾಲಂಘನಂ ದೋಷಂ (ಗಣಿಮು. ೫-೩).

[ಲಂಘನ + — ಇಸು]

ಲಂಘ್ಯ (ಗು)· ೧. ಹಾರಬೇಕಾದ; ಜಿಗಿಯಬೇಕಾದ. ೨. ಮೀರಲು ಸಾಧ್ಯವಾದ; ಅತಿಕ್ರಮಿಸಬಹುದಾದ. ೩. ತಿರಸ್ಕಾರಕ್ಕೆ ಯೋಗ್ಯವಾದ; ಅಲಕ್ಷ್ಯ ಮಾಡಬಹುದಾದ. [ಸಂ.]

ಲಂಚ (ನಾ)· ಕಾರ್ಯಸಾಧನೆಗಾಗಿ ಅಕ್ರಮವಾಗಿ ಪಡೆಯುವ ಅಥವಾ ಕೊಡುವ ಹಣ, ವಸ್ತು ಮೊದಲಾದುವು; ರುಷುವತ್ತು : "ಲಂಚಃ, ಉತ್ಕೋಚಃ, ಉಪಾದಾನಂ. ಉಪಚಾರಃ. ಆಮಿಷಂ _ ಈ ೫ ಲಂಚಂ" (ಶಬ್ದಾನು. ೭೦-೨೪೦); ಲಂಚೆಂ ಬೇರ್ಪ್ಪ ಫಲಿಲೆನೆ ತಾಯ್ಗಂ ತಂಗೆಗವಳಿದವಂ ಲೆಕ್ಕವಿಡುವಂ ವಾದಿಗಂ (ಶಿವಾ. IX-i. ೦೦೬-೩೬; ೧೦೬೦); ಕನಿವಣ್ಣಂ ಲಂಚಮಿವೆಂ ಪುರುಳಿ ನಿನಗೆ (ಕಂಕಾ. ೩೦೬); ಹವಣನಾರಯ್ದು ಲಂಚವಂ ಮೊದಲೆ ಕೊಂಡು ಕುಸವರ ಮನರಮನೆಯ ಭಂಡಾರಕೊದಗಿಸುವ . . . ರಾಜಮಂತ್ರಿಗಳ್ (ಹರಿಪು. ೭-೬). ಲಂಚತಿನ್ನ = ಲಂಚವನ್ನು ಸ್ವೀಕರಿಸು : ಸಾವಿರ ಸಾವಿರ ಸಂಬಳ ಬರುತ್ತಿದ್ದರೂ ಅವರು ಲಂಚತಿನ್ನುವುದನ್ನು ಬಿಟ್ಟಿಲ್ಲ (ಶಾಕುಂ. ೦೦೦). ಲಂಚಲಾವಣೆ = ಲಂಚ ಮತ್ತು ಆ ಬಗೆಯ ಇತರ ಹಣ : ಸುಲಭವನ್ನು ಕೊಟ್ಟವರಿಗೂ ತೆಗೆದುಕೊಂಡವರಿಗೂ ಶಿಕ್ಷೆಮಾಡಿ, ಜಗಳಿಗೆ ಲಂಚಲಾವಣಿಗೆ ಆಸ್ಪದವಿಲ್ಲದಂತೆಯೂ . . . ಬಂದೋಬಸ್ತು ಮಾಡಿ ಬುದ್ಧಿಕಲಿಸಿದರು (ಕುಶಾಕಂ. ೩, ೦೩೭); ನಿಮ್ಮ ನಿಮ್ಮ ಎರೆಮೋಸ ಲಂಚಲಾವಣಿಗಳ ಪ್ರಪಂಚವನ್ನೂ . . . ಸಂಗ್ರಹಿಸಿಕೊಂಡಿರುವೆವು (ಪಟ್ಟಿಕ. ೩೨-೨೩). ಲಂಚಹಾಕು = ಅಕ್ರಮವಾಗಿ ಹಣವನ್ನು ಕೊಡು : ಮಹಮ್ಮದಲ್ಲಿಖಾನನು ಮುರಾರಿರಾಯರಿಗೆ ಲಂಚಹಾಕಿ ಆತನ ಮುಖಾಂತ್ರ ಅರಸಿನವರ ಬಳಿಯಲ್ಲಿ ಕವಲು ಮಾಡಿಕೊಂಡ ವಿವರ (ಸ್ವಹ. ೩೯). ಲಂಚಹೊಡೆ = ಅಕ್ರಮವಾಗಿ ಹಣ ತೆಗೆದುಕೊಳ್ಳು : ಲಂಚಹೊಡೆಯುವುದರಲ್ಲಿ ಪಟಾಯಿತನಾಗಿಬಿಟ್ಟಿ (ಕಾಪ್ರೀ. ೦೦೩).

[ಸಂ. ಲಂಚಾ./ಪ್ರಾ. ಲಂಚಾ]

ಲಂಚಂಗುಳಿ, ಲಂಚಗುಳಿ (ನಾ)· ಲಂಚವನ್ನು ತೆಗೆದುಕೊಳ್ಳುವ ಸ್ವಭಾವವುಳ್ಳ ವ್ಯಕ್ತಿ ; ಕೈಯಾಸೆ ಮಾಡುವ ವ್ಯಕ್ತಿ : ಗುಳಿ ಪ್ರತ್ಯಯಕ್ಕೆ–ಅಟಂಗುಳಿ, ಸಾಲಂಗುಳಿ, ಲಂಚಂಗುಳಿ (ಕಬಾಪ. ೨೦೨ ಕ್ರಿಪೀ) ; ಲಂಚಮಂ ಕೊಳ್ವಂ. ಲಂಚಂಗುಳಿ (ಕಣ್ಣಾಕು. ೧೦೪ ಕ್ರಿಪೀ). ಲಂಚಗುಳಿ : ಲಜ್ಜೆಯ ಲಂಚಗುಳಿಯು ನೋಟವ ತವಕಕಾರ್ತಿಯ . . . ಮನಮಂ ತನ್ನತ್ತ ಸೆಳೆವು (ಪಂಪಕ. ೦೯-೧೬); ಇಂಚಿವೋಯಿತ್ತು ನಮ್ಮಯ ಕೇಜಮಿನ್ನೇನು ಲಂಚಗುಳಿಯೂದ ಶಿವ (ಶಿಪ್ಪಣ. ೯-೭೦); ಘಾತಿಸುವರೀ ಲಂಚಗುಳಿಯಂ (ಕೇಷಿಮಾ. ೦೭-೨೦). [ಲಂಚ + — ಗುಳಿ$_{೪}$ (< —ಕುಳಿ$_{೨}$)]

ಲಂಚಂಗೊಡು, ಲಂಚಕೊಡು (ಕ್ರಿ)· ತನ್ನ ಕೆಲಸವನ್ನು ಸಾಧಿಸಿಕೊಳ್ಳಲು ಅಕ್ರಮವಾಗಿ ಹಣ, ವಸ್ತು ಮೊದಲಾದುವನ್ನು ಕೊಡು; ಕೈಯಾಸೆ ತೋರು : ಒಂದು ಕಂಕಣಮನಾಕಗೆ ಲಂಚಂಗೊಟ್ಟು ಬೆಸಗೊಂಡು (ಬಂಷಾ. ೨-೬ ಪ). **ಲಂಚಕೊಡು** : ಆತ ಲಂಚ ಕೊಡುವಾಗ ಪೋಲಿಸರ ಕೈಗೆ ಸಿಕ್ಕಿಬಿದ್ದ (ಕೂಪ್ರ). [ಲಂಚ + ಕೊಡು$_{೧}$]

ಲಂಚಂಗೊಳ್ (ಕ್ರಿ). ಅಕ್ರಮವಾಗಿ ಹಣ, ವಸ್ತು ಮೊದಲಾದುವನ್ನು ಸ್ವೀಕರಿಸು ; ಕೈಯಾಸೆ ಮಾಡು : ಅವನ ಕೆಯ್ಯೊಳು ಲಂಚಂಗೊಂಡ ನಕ್ಕುಮೆಂದು ಕಳ್ಳಂಗಂ ತಳಾಱಂಗಂ ಕೆಳಿಸಂಕಲೆಯನಿಕ್ಕಿದಾಗಳ್ (ಶಾಕುಂಪು. ೬೯) : ರತಿರೂಪಂ ಲಂಚಂಗೊಂಡ ವಿಲಾಸದಿನೆಸೆದತ್ತಾ ರಾನೇಪಾಸ (ಜಯಾ. ೨-೨). [ಲಂಚ + ಕೊಳ್$_{೪}$]

ಲಂಚಕೊಡು ' ಲಂಚಂಗೊಡು ' ನೋ.

ಲಂಚಕೋರ, ಲುಚಕೋರ (ನಾ). ಲಂಚವನ್ನು ತೆಗೆದುಕೊಳ್ಳುವವನು : ಬೇಕನ್ನನು ಲಂಚಕೋರನೆಂದೂ . . . ಯುಧಿಷ್ಠಿರನು ಸುಳ್ಳುಹೇಳಿದನೆಂದೂ, ಅರ್ಜುನ ಮಗನಿಗೆ ಸೋತನೆಂದೂ ಹೇಳಿದೆ (ಜಂಗಮ. ೦೦೯) ; ನೀನೆ ನನ್ನ ಲಂಚಕೋರನಾಗೂಂತ ಹೇಳಬಹುದೇ ? (ಪಡಿಗ. ೦೦). ಲಂಚಖೋರ : ನಮ್ಮಲ್ಲಿಯ ಅಧಿಕಾರಿಗಳಂತೆ ನಮ್ಮನ್ನೂ ಲಂಚಖೋರನೆಂದು ಎಣಿಸಿದ್ದಾರೆ (ಪಡ್ಕೂಂಡ. ೦೩೩).

[ಲಂಚ + — ಕೋರ$_{೪}$·/ಮರಾ. ಲಾಂಚಖೋರ್]

ಲಂಚಕೋರಿ (ನಾ). ಲಂಚವನ್ನು ತೆಗೆದುಕೊಳ್ಳುವವಳು ; ಕೈಯಾಸೆ ಮಾಡುವವಳು : ಬಡವಿ ಅವಳು. ಆದರೇನು ? ಸತ್ಕವಂತೆ. ಲಂಚಕೋರಿಯಲ್ಲ (ಜಾಸ. ೦೯). [ಲಂಚಕೋರ + — ಇ$_{೨}$]

ಲಂಚಖೋರ ' ಲಂಚಕೋರ ' ನೋ.

ಲಂಚಗ (ನಾ). ಕೈಯಾಸೆಯಿಂದ ಜೀವಿಸುವವನು : ಲಂಚದಿಂ ಜೀವಿಸುವಂ ಲಂಚಗಂ. ಲಂಚವಣಿಗಂ (ಕಣ್ಣಾಪು. ೧೦೩ ಕ್ರಿಪೀ) ; ಲಂಚದಿಂದ ಬದುಕುವವನು ಲಂಚಭೋಗನು. ಲಂಚಗನು (ಹೂಪಾಗ. ೩೩).

[ಲಂಚ + — ಗ$_{೨}$]

ಲಂಚಗಾರ ' ಲಂಚಗಾಱಿ ' ನೋ.

ಲಂಚಗಾರಿಕೆ (ನಾ). ಅಕ್ರಮವಾಗಿ ಹಣ, ವಸ್ತು ಮೊದಲಾದುವನ್ನು ತೆಗೆದುಕೊಳ್ಳುವುದು; ಕೈಯಾಸೆಗೊಳಗಾಗುವುದು : ಲಂಚಗುಳಿತನ: ಅವನು ತನ್ನ ಲಂಚಗಾರಿಕೆಯಿಂದ ಇದ್ದ ಕೆಲಸವನ್ನು ಕೆಡುಕುಕೊಂಡ (ಕೂಪ್ರ). [ಲಂಚಗಾರ (< ಲಂಚಗಾಱಿ) + — ಇಕೆ]

ಲಂಚಗಾಱಿ, ಲಂಚಗಾರ (ನಾ)· ಲಂಚವನ್ನು ತೆಗೆದುಕೊಳ್ಳುವವನು ; ಲಂಚಕೋರ : ಲಂಚಗಾಱಿಯಂತೆ ಮಡಿಗೆಡಿಸದೆ [ಏಕಚಿತ್ತದಿಂ] ಕೆಲ್ಸಿರವ್ವುಡೆ ಪೇಳ್ದಪೆಂ (ಧರ್ಮಾಕು. ೦-೦೩೭). **ಲಂಚಗಾರ** : ' ಲಂಚಗಾರಿಕೆ ' ಪರಾ.

[ಲಂಚ + —ಕಾಱಿ]

ಲಂಚಗಿ (ನಾ). ಲಂಚದಿಂದ ಜೀವಿಸುವವಳು : ಬೂತುಗಿ, ಬೂತುಗಿತಿ; ಲಂಚಗಿ, ಲಂಚಗಿತಿ (ಕಣ್ಣಪು. ೦೯೩ ಕ್ರಿಯೋ). [ಲಂಚಗ + —ಇ]

ಲಂಚಗಿತಿ (ನಾ). = ಲಂಚಗಿ : ಲಂಚಗಿ, ಲಂಚಗಿತಿ (ಕಣ್ಣಪು. ೦೯೩ ಕ್ರಿಯೋ). [ಲಂಚಗ + — ಇತ್ತಿ₁ (< — ಇತ್ತಿ)]

ಲಂಚಗುಂಡಿ (ನಾ). = ಲಂಚಂಗುಳಿ : ದೆವಕೊಳ್ ಲಂಚಗುಂಡಿ ಪಾಕರರು ಬಹಳ ಜನಯಿಧಾರೆ (ಹ.ಪಡ. ೩೦). [< ಲಂಚಂಗುಳಿ]

ಲಂಚಗುಳಿ ' ಲಂಚಂಗುಳಿ ' ನೋ.

ಲಂಚಗುಳಿತನ (ನಾ). ಅಕ್ರಮವಾಗಿ ಹಣ, ವಸ್ತು ಮುಂತಾದುವನ್ನು ತೆಗೆದುಕೊಳ್ಳುವ ಸ್ವಭಾವ : ಪೋಲೀಸರು ಲಂಚಗುಳಿತನದಿಂದ ಮಾಡುವ ಅನ್ಯಾಯ (ಇಂಡಿಪ. ೧೦ ಪುಟ್ಟಸ್ವ); ಸರಕಾರಿನೌಕರರಲ್ಲಿ ಲಂಚಗುಳಿತನ ಮಿತಿ ಮೀರಿ ನೆಲೆಯೂರಿದುದರಿಂದ ನಮ್ಮ ದಾರಿ ಸುಗಮವಾಯಿತು (ಕಪುಗಾ. ೧೩೦). [ಲಂಚಗುಳಿ (< ಲಂಚಂಗುಳಿ) + — ತನ]

ಲಂಚನಿರೋಧ (ನಾ). ಅಕ್ರಮವಾಗಿ ಹಣ ಮೊದಲಾದುವನ್ನು ಸ್ವೀಕರಿಸುವುದನ್ನು ತಡೆಗಟ್ಟುವಿಕೆ : " ಭ್ರಷ್ಟಾಚಾರನಿರೋಧ. ಲಂಚನಿರೋಧ " (Anticorruption. ಪ್ರಕಿಪ್ರ. ೩). [ಲಂಚ + ನಿರೋಧ]

ಲಂಚನಿರ್ಮೂಲನ (ನಾ). ಅಕ್ರಮವಾಗಿ ಹಣವನ್ನು ಕೊಡುವ, ತೆಗೆದುಕೊಳ್ಳುವ ವ್ಯವಹಾರವನ್ನು ಕಿತ್ತುಹಾಕುವುದು ; ಭ್ರಷ್ಟಾಚಾರನಿವಾರಣೆ : ಪ್ರತಿಯೊಬ್ಬನೂ ಲಂಚನಿರ್ಮೂಲನ ಬಾಯಿ ತೆರೆದು ಕೂಡಿರುವಾಗ ನನ್ನೊಬ್ಬನಿಂದ ಲಂಚನಿರ್ಮೂಲನ ಹೇಗೆ ತಾನೆ ಸಾಧ್ಯ ? (ಕ್ಷಮಾ. ೩೭). [ಲಂಚ + ನಿರ್ಮೂಲನ]

ಲಂಚಬಡಕ (ನಾ). = ಲಂಚಕೋರ : ಸುತ್ತಮುತ್ತಲಿನ ಸೀಮೆಯಲ್ಲೆಲ್ಲ ಅತ ಲಂಚಬುಡಕ ಗೌಡನೆಂದು ಹೆಸರು ಪಡೆದಿದ್ದ (ಕಾಬ್ಯ. ೩೨). [ಲಂಚ + — ಬಡಕ್ಕ (< — ಬಡಿಕ್ಕ) ?]

ಲಂಚಬಡಕತನ (ನಾ). = ಲಂಚಗುಳಿತನ ? ಲಂಚಬಡಕತನವು ದೇಶದಿಂದ ನಿರ್ನಾಮವಾಗಬೇಕೆಂದು ನ್ಯಾಯದೇವತೆಯು ಅಪೇಕ್ಷಿಸುತ್ತಲಿದ್ದಾಳೆ (ಜ್ಯೋಷ್ಣಾ. ೦೬). [ಲಂಚಬಡಕ + — ತನ]

ಲಂಚವಣಿಗ (ನಾ). = ಲಂಚಕೋರ : ವಣಿಗ ಪ್ರತ್ಯಯಕ್ಕೆ . . . ಲಂಚವಣಿಗಂ, ಸಾಲವಣಿಗಂ (ಕವಿಪ. ೩೦೬ ಕ್ರಿಯೋ) ; ಲಂಚದಿಂ ಜೀವಿಸುವಂ ಲಂಚಗಂ, ಲಂಚವಣಿಗಂ (ಕಣ್ಣಪು. ೨೦೩ ಕ್ರಿಯೋ) ; ಒಲ್ಲೆ ನೊಲ್ಲೆನೀ ಲಂಚವಣಿಗರಂ (ರಾಮಕ್ಷ. ೩೬–೩೦). [ಲಂಚ + — ವಣಿಗ್ಗ]

ಲಂಚವೊಗು (ಕ್ರಿ). ಲಂಚಕ್ಕೆ ಒಳಗಾಗು : ಲಂಚವನ್ನು ಸ್ವೀಕರಿಸು : ಬಲ್ಲಿದಂ ಕೈಕೊಂಡ ಸತಿಯಂತೆ ಲಂಚವೊಕ್ಕಿರ್ದ ಪ್ರಧಾನನಂತೆ . . . ಚಿತ್ತ ದೊಳಾನಂದಂ ಬೆರಸಿರ್ಪುದು (ರತ್ನಾಕ್ಷ. ೯–೩). [ಲಂಚ + ವೊಗು]

ಲಂಜಿಕೆ (ನಾ). ಸೂಳೆ : ಬೆಲೆವೆಣ್ಣು ; ವೇಶ್ಯೆ : ಅದೇಂ ಲಂಜಿಕೆಯರ ಗುಂಜನ್ಮನವಂಜೇರಕಮಂಜುಸಿಂಜಿತಂ ರಂಜಿಸಿತೊ . . . (ಅಷ್ಟ. ೩–೪೨); ರಂಜಿಸಿದುದು ಕಡುಸೊಬಗಿಂ ಲಂಜಿಕೆಯರ ಬೀದಿ ಬೀಯುತಂ ಪರಿಮಳಮಂ (ಕಾಕ್ಷಪ. ೦–೭೬).

ಲಂಜಿಕಾಮದವಾಸ್ಯ = ಬೆಲೆವೆಣ್ಣುಗಳಿಗೆ ಕಾಮನ ಬಾಣದಂತಿರುವವನು ; ಸುಂದರಾಂಗ ; ಒಂದು ಬಿರುದು : ರಿಪುಪ್ಲುಷ್ಟಕಣ್ಣಾವನಕೇಳೀಕುಳ್ಳಾರಂ ಲಂಜಿಕಾಮದವಾಸ್ಯಂ ಚಲದಂಕರಮಾ ನೃಪಲಕ್ಷ್ಮಿಗೆ ಲಕ್ಷ್ಮನಂ ಲಕ್ಷ್ಮಣಂ (ಎಕ. VII. ೪೫೨. ೦೭೬–೨೪ ; 1068).

[ಸಂ. ಲಂಜಿಕಾ]

ಲಂಜಿಗೇಸರ (ನಾ). ಲಕ್ಷ್ಮೀಪತಿ ; ವಿಷ್ಣು (?) : ಲಂಜಗೇಸರಂ ದೇವರ್ಕ ಪೂನಿಜುವ ಮಾಲ(ಲಾ)ಕಾರರ್ಗ್ಗಳ್ (ಇಂ. X. ೭೦–೨ ; 578). [ಲಂಜಗ್ಗ (ಪ್ರಾ— ಸಂ. ಲಂಜಾ = ಲಕ್ಷ್ಮಿ) + ಈಸರ]

ಲಂಜೆ (ನಾ). = ಲಂಜಿಕೆ : ಕಾಂಚಿಪು ಪಟ್ಟಣದಲಿ ಕಣಿಯು ಕೀಳರೊ ಅಲ್ಲಿ ಲಂಜೆ[ಜೆ]ಯರು ಕಿಡಿಸ್ಯಾರು ಕಣಿಯು ಕೀಳರೊ (ಎಬಿಗ. ೦೪೨–೪೦). [ಸಂ. ಲಂಜಾ]

ಲಂಟವಾಣಿ 'ಲಂಟಾನಾ' ನೋ.

ಲಂಟಾನ 'ಲಂಟಾನಾ' ನೋ.

ಲಂಟಾನಾ, ಲಂಟವಾಣಿ, ಲಂಟಾನ, ಲಂತಾನ, ಲಾಂಟನಾ (ನಾ). ನೀರಿನ ಸೌಕರ್ಯವಿಲ್ಲದಿದ್ದರೂ ಪೊದೆಪೊದೆಯಾಗಿ ಬೆಳೆಯಬಲ್ಲ, ಸಣ್ಣ ಹೂವುಗಳನ್ನು ಬಿಡುವ ಒಂದು ಬಗೆಯ ಸಸ್ಯ : ಲಂಟಾನಾ ಹೂಗೊಂಚಲು ನುಡಿಯಿತು (ಸುಗಂತ. ೩೭–೦೩). **ಲಂಟವಾಣಿ** : ಲಂಟವಾಣಿಗಿಡ, ಹೇಸಿಗೆಹೂ ಕಾಡುಜೋಳ (ಕ್ಯಶಿಗ. ೨೯–೪೬). **ಲಂಟಾನ** : ಪಾಳುದೇಗುಲದಲ್ಲಿ ಲಂಟಾನಪೊದೆಯಲ್ಲಿ ಸಾಗುತಿರಲು (ಕೋಗಂಕ. ೪೩–೦೨) ; ನಮ್ಮ ನಿತ್ಯಜೀವನದಲ್ಲಿ ಅದರ ಪ್ರಭಾವ ಲಂಟಾನ ಬೆಳೆ ಹಾಗೆ ಹಬ್ಬಿದ (ಜಾಗಗೀ. ೩೩). **ಲಂತಾನ** : ಲಂತಾನದಂತಹ ಸಣ್ಣಸಣ್ಣ ಪೊದೆ ಪೊದರುಗಳೂ ಮುಳ್ಳುಗಿಡಗಳೂ ಬೆಳೆದಿವೆ (ಜಾಲಗಿ. ೪೬); ಸುತ್ತಲೂ ಲಂತಾನ ಪೊದೆ ಬೆಳೆದಿತ್ತು (ಪುಂಪಾ. ೦೪). **ಲಾಂಟನಾ**: ಮಲೆನಾಡಿನಲ್ಲಿ ಲಾಂಟನಾ ಇದ್ದಹಾಗೆ (ಪಂಗಸಂ. ೪೪). [←ಇಂ. Lantana]

ಲಂಡ₁, ಲಂಡಿ₁, ಲಂಡು, ಲೆಂಡ, ಲೆಂಡು (ಗು). ೧. ದುಷ್ಪತನದಿಂದ ಕೂಡಿದ : ಕೆಟ್ಟತನದ : ' ಲಂಡವೆಣ್ ' ಪರಾ. ೨. ಮೋಟಾದ ; ಮೊಂಡಾದ ; ಗಿಡ್ಡವಾದ : ಲಂಡತೋಳಿನ ಬುಷ್‌ಕೋಟು ಅವನ ಮೊದಲಿನ ನೆಹರುಶರ್ಟನ್ನು ಓಡಿಸಿತ್ತು (ಕಾಸಿ. ೦೦೯). (ನಾ). ೩. ನೀತಿ ನಿಯಮವಿಲ್ಲದವನು ; ದುಷ್ಟ ; ನೀಚ : " ಲಂಡ — ಲಡ್ಡ (ಟ್ಟ) = ಧೂರ್ತ, ಅಸಭ್ಯ" (ಕದ್ಯಕೋ. ೩೬) ; ಜಾರ ಚೋರ ಸಂದಣಿಗ ಲಂಡ ಭಂಡ ಪಾರ್ವಾಕ . . . ಇಂತಿವರಲ್ಲಿ . . . ನುಡಿದಡೆ ಆ ಭಕ್ತಂಗೆ ಭಕ್ತಿಯಿಲ್ಲ (ಶೈಲಕ್ರಿ. ೨೬–೦೦೦) ; ಕಂಡ ನಾರಿಗಿಚ್ಚಿಸುವ ಲಂಡಗೆ ಪುರಾಣವೇಕೆ (ಪ್ರಭಂಡ. ೦–೩೦-೩) ; ಪಂಡಿತನು ಭಂಡರೂಡನಾಡಿ ಅವ ಶುದ್ಧ ಲಂಡ ತಾನಕ್ಯ (ಸರಣ್ಯ. ೩೨೮). ೪. ಧರ್ಮಶ್ರದ್ಧೆಯಿಲ್ಲದವನು; ಪಾಷಂಡಿ : ಧರ್ಮದ ಸೋಗಿನಿಂದ ಸ್ವಾರ್ಥಸಾಧನಕ್ಕಾಗಿ ಮನಬಂದಂತೆ ನಡೆಯುವ ಲಂಡರ ಆಚರಣೆಯೆತ್ತ ? (ಪಾಭಡ. ೯) ; ಪಿಂಡ ಹಾಕಿದರೂ ಲಂಡ ಎನಿಸಿಕೊಳ್ಳೋದು ತಪ್ಪಲಿಲ್ಲ (ಗಾಪಿ). ' ಧರ್ಮಲಂಡ ' ಪರಾ. ೫. ಒರಟ ; ಉದ್ಧತ : ಲಂಡರಹ ದಾನವರ ಕೊಲುವವಖಂಡ ವಿಕ್ರಮವೀರ ನರಹರಿ (ಕೋಗಮು. ೩೬–೮೨). ೬. ತುಂಡಾದುದು ; ಮೋಟಾದುದು ; ಮೊಟಕಾದುದು : ಕೂದಲನ್ನು ಲಂಡವಾಗಿ ಕತ್ತರಿಸಿದ್ದರಿಂದ . . . ಅವು ಹಿಗಲ ಮೇಲೆ ಲೋಲಾಡುತ್ತಿದ್ದವು (ಪೀಸುಂಕ. ೧೪೪). **ಲಂಡಿ₁** : ೩. ಕದನಮುಖದ ಕೈಕೊಂಡುಳಿವರ್ಲ್ಲ ನಿನಗಾತ ನೊಳು ವೈರವೇ ಲಂಡಿ ಹೋಗೆಂದು ನೆರೆ ಜರೆಯ ಕೋಪಾಟೋಪದಿಂ ಖಡ್ಗಮಂ ಜಡಿದನು (ಅಕ್ಷಾ. ೩–೭೦–೭೬) ; ತರಳರೆಂದುದ ಕೇಳಿ ಶ್ರೀಹರಿ ಮುರಳಿ ಪೇಳಿದ ಲಂಡಿಗಳು ನೀವ್ ಬರಿದೆ ಪೊಗಳುವಿರಾಕಯನು (ಹಂಚ್ಯಾಪ. ೯). **ಲಂಡು** : ೧. ಅನಾರ್ಜಿತವ ಮಾಡಿ ಕಡಿಸುವಂಥಾ ಲಂಡು ಪುಂಡರುಯಿದ್ದರೆ ವೀರಮಾಹೇಶ್ವರರು ಪೊಡೆಯರು ಭಕ್ತರು ವಿಚಾರಿಸಿಕೊಂಡು ಅಂಥಾ ಲಂಡು ಪುಂಡರ ತೆಗೆದು ಸತ್ಪುರುಷರ ಯಿರಿಸುವುದು (ಎಕ. XVI, ೫೯ಪಾ. ೦–೨೩ ; 1623). ೭. ನೀಚತನ ; ದುಷ್ಟತನ : ತೊಂಡುತೊಳಸಿಕ್ಕಸಿಕ್ಕ ವಂಚನೆ ಕುಹಕ ಜೂಜು ಕುತ್ಸಿತ ಲಂಡು ಬಂಡು ದುರ್ವಾಸನೆಂಬವೆಲ್ಲ ದುಷ್ಪಸ್ವಭಾವೆಂ ನೀವಿದಕ್ಕೇನ ಮಾಳ್ಪಿರಿ (ಸಮ್ಮ. ೪೨–೪೬). **ಲೆಂಡ** : ೧. ದಂಡಾಧೀಶ್ವರ ಬಂದ ಲೆಂಡಗಣವನಳೆದ (ಕೋಪಡ. ೩–೪). ೪. ದೀಗುವಿಡಿದು ಭಂಡರಾದ ಲೆಂಡರಿಗೇಕೋ ಲಿಂಗದ ಸುದ್ದಿ (ಪೀಸಕಪ್ರ. ೦೮೪–೭೮೩); ಕಂಡುದ ಹೇಳಹೆನೆ ಸಮಯಕ್ಕೆ

ದೂರ ಎನ್ನ ಇರವನ್ನಱಿಯರು ಲೆಂಡನೆಂಬರು ಸುಮ್ಮನಿದ್ದೇನೆ ಇವರೆನ್ನ ಅರ್ಕೈದು ಕಂಡುದ ನುಡಿವರು (ಪಡಕಂ. ೯–೨೪). ಪೆ. ಲೆಂ[ಪಾಣಾಂ-ಲಂ]ಡ ಪುಂಡರ ಕೂಡಿಕೊಂಡು ರಾಜ್ಯವ ನೀವಂಡಲೆವುದನೆಮ್ಮ ರಾಯ ಕಂಡು ಸೈರಿಸುವನೆ (ಕಾಣಾಂ. ೦೦-೦೬) ; ದಂಡವಗೊಳದಿರು ಧರ್ಮವ ಬಿಡದಿರು ಲೆಂಡ ಪುಂಡರ ಸೇರಿಸದಿರು (ಪಾಪ್ರಾ. ೦೨-೯೦). **ಲೆಂದು** : ಪೆ. ಪೃಥುಲನಿಂದಯಗಳಿಂದೊಪ್ಪುವ ಲೆಂಡು ದುರ್ಮಾರ್ಗದುರ್ಗವ ಬಸವ ರಾಜೇಂದ್ರು ಕೊಂಡು (ಪಿಂಗಿಣಾ. ೨೫-೨೦).

ಲಂಡಾಗು = ಗಿಡ್ಡವಾಗು : ನಾವೇ ಅವರ್ಣ್ಣನಿಗೆ ಕೊಟ್ಟ ಧೋತರ ಅವರಿಗೆ ಲಂಡಾಗುತ್ತದೆ (ಕೃ.ಪ. ೪೭). **ಲಂಡೋಬಂಡೋ ಆಟ** = ಲಂಡತನದಿಂದ ಆಡುವ ಆಟ ; ಭಂಡಾಟ : ಲಂಡೋಬಂಡೋ ಆಟ ಆಡಿ ಮೂರಾಬಟ್ಟೆ ಮಾಡಿ ಆತಂತ (ಪಾಪ್ರಾ. ೨೯-೦೩). [<ಸಂ. ಲಡ್ಡ]

ಲಂಡ2 (ನಾ). ಆಸೆ. ಕುದುರೆ ಮುಂತಾದುವುಗಳ ಮೇಲ ; ಲದ್ದಿ ; ಸಗಣಿ : "ಲದ್ದಿಯೆನೆ. ಲಂಡಮಕ್ಕುಂ" (ಶಾಂಗಣಾ. ೪೭-೬) : ಲಂಡ ದೊದವಿಂದಂ ತನ್ನದೀಕೂಲವಮಂ ಕದಮತ್ತಿರ್ದುದು . . . ಕರಿಂದ್ರೋತ್ಕರಂ (ಪುಪ್ರಕೃ. ೦೦-೩೩) ; ಇಕ್ಕಿದ ಲಂಡದ ಬೆಂಕೆಯಿಂ ಕವಿವ ಕಿಬ್ಬದದೊಳ್ವೊನೆ ಲೊಳ್ . . . ತುಯ್ಯಾಜದ ಪೆರ್ಮೊರೆಯಿಂ . . . ಅಜಾದಂ ಕಾಡಾನೆಗಳಾಗಡೆ ಪೋದಾದಂ (ಕಾಪ್ರಕೃ. ೩೫) ; ಪೊಡಯೊತ್ತಿ ಬಾಲಂ ನಿಮಿರೆ ಲಂಡಮನುರ್ಬುವಾಕಳಿಂ (ಪಾಪ್ರಾಕೃ. ೪೩-೨೨). [ಸಂ.]

ಲಂಡಂಗಿ (ನಾ). ಅರ್ಧತೋಳಿನ ಅಂಗಿ ; ಗಿಡ್ಡತೋಳಿನ ಪರಟು : ಬರಿಯೊಂದು ಲಂಡಂಗಿಯ ಮೇಲೆ ಬೆರದಿಂಗಳ್ಗಿ ಹೋಗಿಬಿಟ್ಟ (ಕಕಶ. ೩೨).

[ಲಂಡ1 + ಅಂಗಿ2]

ಲಂಡಗಚ್ಚಿ (ನಾ). ಮೇಲಕ್ಕೆ ಎತ್ತಿ ಕಟ್ಟಿದ ಕಚ್ಚೆ : ರಾಯರು ಲಂಡಗಚ್ಚಿ ಹಾಕಿಕೊಂಡು ತೋಟದ ಕೆಲಸವನ್ನು ಪ್ರಾರಂಭಿಸಿದರು (ಕೂಶ).

[ಲಂಡ1 + ಕಚ್ಚಿ1]

ಲಂಡಚಣ್ಣ (ನಾ). ಗಿಡ್ಡವಾದ ಚಲ್ಲಣ ; ಚಡ್ಡಿ ; ನಿಕ್ಕರು : ಅವನು ಲಂಡಚಣ್ಣ ಹಾಕಿರಬೇಕು (ಕೃಪ. ೬) ; ಕಚೀರಿಗೆ ಖಾಕೀ ಲಂಡಚಣ್ಣದ ಮೇಲೆ ಕಳಿಸಿದ ಆಕೆ ಈಗ ಬದಲಾಗುತ್ತಾಳೆಯೇ ? (ಗಂಪಾಯಿ. ೦೨೬).

[ಲಂಡ1 + ಚಣ್ಣ (<ಚಲ್ಲಣ)]

ಲಂಡತನ, ಲೆಂಡತನ (ನಾ). ಔದ್ಧತ್ಯ; ಉದ್ದಟತನ: ಲಂಡತನದಲಿ ನಡವ ಭಂಡ ಹೊಲೆಯ (ಕುಕಂಪ. ೫-೦೭೬-೨) ; ಲಂಡತನದಿ ಕಾಳಗಕೊದ್ದಿದೊಡ್ಡನು ದ್ದಂಡಿಸಿ ಪುರಕೆ ಪೋವವನ ಕಂಡು ಭಟರು ಪೋಗಬೇಡ ಬೇಡೆನೆ (ಸಂಕ್ಷಶಾಂ. ೬-೭೪) ; ಕಂಡು ಸತಿಯಳ ಭ್ರಾಂತುಗೊಂಡು ಕಳವಳಿಸುತ್ತ ಚಂಡಭುಜಬಲನೆಂದ ಲಂಡತನದಿಂದ (ಪಾಪಾಪ. ೯). ಲೆಂಡತನ: ಅಷ್ಟ ಮದಂಗಳ ವರ್ತನೆಯ ಲೆಂಡತನವ ನಷ್ಟವ ಮಾಡಿ (ಪಾಂಗಪಾ. ೦೧೬-೨೨೬ ೦೪೯). [ಲಂಡ1 + – ತನ]

ಲಂಡಪಂಚಿ, ಲಂಡಪಂಜೆ (ನಾ). ಮೋಟಾದ (ನೀರು)ಪಂಚೆ; ಗಿಡ್ಡವಾದ ಧೋತ್ರ : ಲಂಡಪಂಚೆ ಹಚ್ಚಿಕೊಂಡು . . . ಕ್ಷೌರ ಮಾಡಿಸಿಕೊಂಡು ಆಮೇಲೆ ಗೋಮಹಬ್ಬ ಇತ್ಯಾದಿ ಎಲ್ಲ ವಿಧಾನಗಳು ಆಗತಕ್ಕವು (ಪ್ರಾಂಗಾತ್ರ. ೧೫). **ಲಂಡಪಂಜೆ** : ಅನಂತರ ನಮ್ಮ ಮಡಿಯ ಲಂಡಪಂಜೆಯನ್ನು ಇಳಿಸಿ . . . ಹಳೆಯ ತ್ಯಾಪೀ ಹಚ್ಚಿದ ಅಂಗಿ_ಚಣ್ಣದ ಚಿಲುಮತ್ತು ಏರಿಸುತ್ತಿದ್ದೆವು (ಬಿಚಪ. ೩೫, ೨). [ಲಂಡ1 + ಪಂಜೆ]

ಲಂಡಪಂಜೆ 'ಲಂಡಪಂಚೆ' ನೋ.

ಲಂಡಪಾತಿ (ನಾ). [ಅಶ್ವಶಾ] ಲದ್ದಿಹಾಕುವುದಕ್ಕೆ ಸಂಬಂಧಿಸಿದ ರೋಗ : ಮಾರ್ಜಾಲದ ಕಣ್ಣಂ ಪೋಲ್ವ ಕಣ್ಗಳುನ್ಮೀ(ಣ್ಮಿ)ಲಿತನೇತ್ರದ ಲಂಡಪಾ[ಪಾಣಾಂ- ನಾ]ತಿಯಪ್ಪಾ ಕುದಿರೆಯದು ಗತಾಯುವಕ್ಕುಮೇಜುಬ್ಬು ದೊಳಂ (ಅಶ್ವಶಾ. ೬-೪). [ಸಂ. ಲಂಡಪತಿನ್]

ಲಂಡಪೆಣ್ 'ಲಂಡಪೆಣ್' ನೋ.

ಲಂಡಪೆಣ್, ಲಂಡಪೆಣ್, ಲಂಡಪೆಣ್ಣು (ನಾ). ದುಷ್ಪಹೆಂಗಸು; ನೀಚ ಸ್ತ್ರೀ: ತೊಡುವೆಣ್ಗಳ ನೇಹದೊಡಕಿಗೆ ಸಿಲುಕದೆ ಲಂಡವೆಣ್ಗಳ ಕಾಲಿಸದೆ . . . ನಲ್ವೆಂಡಿರೆಂಬನೆ ಬೆರಸುವೆದು (ಪಡಾ. ೦೦-೨೬). ಲಂಡಪೆಣ್ ; ಇಂತೆಂದು ಲಂಡಪೆಣ್ಗಳು ನುಡಿಯಲು . (ಕಂಗ. ೧೫-೯). ಲಂಡಪೆಣ್ಣು: ಸುಜ್ಞೆಯಿಂದಾಳಬೇಕಣ್ಣಾ ಗಂಡನಾಜ್ಞೆಯ ಮೀಱಿ ನಡವ ಲಂಡಪೆಣ್ಣು (ತೆರಂಪ. ೩-೦೪ ತಮಿಳ್ಕ್ಕಂ). [ಲಂಡ1+ಪೆಣ್2]

ಲಂಡಪೆಣ್ಣು 'ಲಂಡಪೆಣ್' ನೋ.

ಲಂಡಿ1 'ಲಂಡ1' ನೋ.

ಲಂಡಿ2 (ನಾ). ದುಷ್ಟೆ ; ನೀಚಸ್ತ್ರೀ : ಲಂಡಿಯರು ನಿರ್ಲಜ್ಜರಾ ಜಗಳಂಡೆಯರು . . . ಪಾತಕದ ರೂಪಿನ ಕೋಪಿಗಳು (ಪಚಪ್ರ. ೬-೦೩).

[ಲಂಡ1 + –ಇ2]

ಲಂಡು 'ಲಂಡ1' ನೋ.

ಲಂಡೆ. ಲೆಂಡೆ (ನಾ). =ಲಂಡಿ2 : ಉಂಡಳೊಬ್ಬಳೆ ಮಗನ ಪಡೆದಳು ಲಂಡೆ ನಾವೇನುಳಿದರಲ್ಲರು ಹೆಂಡಿರಲ್ಲಾ (ಪಡಾಗ. ೬-೦೩-೨೬); ದುರಿತಗಣಕಂಜದಿಹ ಲಂಡೆಯರ್ದಿಂಡಿಯರ್ನರರ ಹೃದಯವ ಕೊಯ್ವ ಕತ್ತಿಗಳ್ ತಿತ್ತಿಗಳ್ (ಪತಿ. ೨-೩೬) ; ಆ ಲಂಡೆಯರು ತಮ್ಮ ದುರ್ನಡತೆಯನ್ನು ಬಿಟ್ಟಿಲ್ಲ (ಕ್ರಶಾ. II, ೫೦೦). **ಲೆಂಡೆ** : ಗಂಡು ತನ್ನದು ಎಂದು ಲೆಂ[ಪಾಣಾಂ. ಲಂ]ಡೆ ಸುತನೆಂಬುವಳು ಖಂಡಪರಶುವಿನ ವರಪುತ್ರ ಅನು ವೆಱೆ ಕಂಡುದನೆ ನುಡಿದೆ (ಸರಾಕೃ. ೦೩). [ಲಂಡ1 + – ಇ2]

ಲಂತಾನ 'ಲಂಟಾನಾ' ನೋ.

ಲಂದಣ 'ರಂದಣ' ನೋ.

ಲಂದಣಗಿತ್ತಿ 'ರಂದಣಗಿತ್ತಿ' ನೋ.

ಲಂದಣಗ 'ರಂದಣಗೆ' ನೋ.

ಲಂಪಂಬೆಜು (ಕ್ರಿ). ಮೇಲ್ಕೆಯನ್ನು ಪಡೆ ಹಿರಿಮೆಯನ್ನು ಹೊಂದು : ಸಂಪದ್ಧರ್ಮಾರ್ಥಕಾಮಾಂಬುರುಹ ವನಜಮಿತ್ರಂ ಧರಿತ್ರೀಸುವಕ್ಕಂ ಲಂಪಂಬೆತ್ತಿರ್ದೆ ಕಣ್ಗೊಪ್ಪದುದು . . . ಪಂಪಾಕ್ಷೇತ್ರಂ (ಕಾಕೃಪಿ. ೩-೩೪).

[< ಲಂಪು + ಪೆಜು1]

ಲಂಪಟ (ನಾ). ೧. ಯಾವುದಾದರೊಂದು ಚಟವುಳ್ಳವನು,–ಗೀಳುಹಿಡಿದವನು : "ಲೋಲುಪಂ ಲಾಲಸಂ ಲೋಲುಭಂ ಲಂಪಟಂ ಲೋಲ ನೆನಲಳಿವುವವನಕ್ಕುಂ" (ಶಾಂಗಣಾ. ೬೯-೦೦) ; ಕರ್ಣನುಮುದೀರ್ಣವೀರ ರಸಾಸ್ವಾದನಲಂಪಟನಾಗಿ . . . ಬಂದು ತಾಗಿದಾಗಳ್ (ಕಂಕಥಾ. ೦೨-೦೦೬ ೪) ; ಅಧರಪೀಯೂಷಲಂಪಟಜಿಷ್ಣುನೇತ್ರತ್ರಯನೆ(ಕ್ರಾಶಾ. ೩-೨೨). ೨. ಕಾಮಾಸಕ್ತ ; ಕಾಮುಕ : ಅಟಮಟಗಂ ಗಾಳುವಿವಂ ಕುಟಲಂ ಲಂಪಟನೆನಿವ್ವಪಂ ಮಾನಸನೇ (ಕಾಪ್ರಕೃ. ೪೬); ಕಾಮಾಂಧವಶನಾಗಿ ಲಂಪಟನೊರ್ವ ಮಡಿಗೆಟ್ಟ ಮುಪ್ಪದೊರೆ ಹೆಂಗುಸೊರ್ವಳ ಪಿದಕೆ ದಾಸನಾಗುರುಳಿದರೆ, ಪೂಜ್ಯನೀ ರಾವಣಚಂದ್ರಂ ರಾಜ್ಯಮಂ ತ್ಯಜಿಸಿ ವಿಪಿನಾಂತರದ ವಾಸಮಂ ಕೈಕೊಳ್ವುದೇಕೆ? (ಕ್ರಿರಾಪಾ. ೬೦-೬೩). ೩. ಗೀಳು ; ಚಟ ; ಆತ್ಯಾಸಕ್ತ : ಪಂಚೇಂದ್ರಿಯಲಂಪಟದಿಂದಂ ಸುರನರರನೊಯ್ವುದೊಂದಾಶ್ಚರ್ಯವೇ (ಅಂತ. ೩೨-೨) ; ಹೀನವಮಾನವರು ತಾವು ಬ್ರಹ್ಮವೆಂದು ಜಿಹ್ವೆ ಗುಹ್ಯೆ ಲಂಪಟದಲ್ಲಿ ಹೊಂದಿದುದ ನೋಡಿ ನಗುತಿದ್ದನು ನಮ್ಮ ಗುಹೇಶ್ವರಲಿಂಗನು (ಪ್ರೌಪಾಂ. ೩೬). [ಸಂ.]

ಲಂಪಟತನ (ನಾ). ಅತಿಯಾದ ಆಸಕ್ತಿ, – ವ್ಯಾಮೋಹ ; ಲೋಲುಪ್ತಿ : ಜಂಗಮವೇ ಲಿಂಗವೆಂಬುದಕ್ಕೆ ಏನು ಗುಣ ಮನದ ಲಂಪಟತನ ಹಿಂಗದಾಗಿ ಒಡೆಯರ ಬರವಿಂಗೆ ಕುನ್ನಿ ಬಾಲ ಬಡಿದರೆ ಮೆಚ್ಚವೇನು ಹತ್ತುವದು (ಬಸವ. ೨೦೭).

[ಲಂಪಟ + – ತನ]

ಲಂಪಟತೆ (ನಾ)· ವಿಷಯಲೋಲುಪತೆ ; ಕಾಮುಕತೆ : ದಿಟದಿಂದೊಲ್ದ ವರಂ ಲಂಪಟತೆಯಿನಮರ್ದಟ್ಟಿ ನೆರವ ನೆರವನಿತು ಸುವಿಂ ಘಟಿಯಿಸದು ತಮ್ಮೊಳ್ (ಶಂಕ್ರಪು· ೪-೭೨). [ಸಂ· ಲಂಪಟತಾ]

ಲಂಪಟತ್ವ (ನಾ)· ಅತ್ಯಾಸಕ್ತಿ : ಅತಿಯಾಸೆ : ಇವರಚ್ಚುತಾಂಘ್ರಿ ದರ್ಶನಲಂಪಟತ್ವದಿಂದ . . . ಬಂದರ್ (ಕೈವಾಶಾ· ೪-೩೦)· [ಸಂ·]

ಲಂಪಟೆ (ನಾ)· ಕಾಮಾಸಕ್ತಳಾದವಳು ; ವಿಷಯಲೋಲುಪಳಾದ ಸ್ತ್ರೀ : ವಿಟಗೋಷ್ಠಿಯೊಳ್ಯೋಗಮಂ ಬಯಸಿ ಕಾಮಲಂಪಟೆಯಾಗಿ ಮೇಣರ್ಥಮಂ ಗಳಿಸಿ (ಕೈವಾಶಾ· ೪-೩೩)· [ಸಂ· ಲಂಪಟಾ]

ಲಂಪಣ ‘ಲಂಪಳ’ ನೋ·

ಲಂಪಳ, ಲಂಪಣ, ಲಂಬಳ್ (ನಾ)· ೧. ವಿಷಯಾಸಕ್ತ ; ಸುಖಲೋಲುಪ; ಕಾಮುಕ : ಒಂದೊಂದೆ ರಸದ ಸೋಲಮಂದೊಂದೊಂದನೆ ಕೊಲ್ಲುಮೋವೋ ಲಂಪಳ [ಪಾಣಂ· ೬]ರಪ್ಪೆಮ್ಮಂದಿಗರಂ ಬಗೆವಂದದೆ ಕೊಂದಿಕ್ಕವೆ ಸಕಳವಿಷಯವಿಷಮವಿಷಂಗಳ್ (ಜಂಪ್ರ· ೯-೬೬)·**ಲಂಪಣ**:೧· ಲಂಪಣನಪೊಲೇನಾನುಮುಲಂಪಿನ ಸೆನಮಡಿಯ ನವದಿ ನಯ್ದಿಲ ಪುವಿಂದಂ ಪೊಯ್ಕ ಮೂರ್ಛವೋದರ್ (ಪಾಪಚ. ೨-೬೭)· **ಲಂಬಳ್**· ೧. “ಲಂಬಳ (ಲಂಬಾಳ) — ಲಂಪಟ = ಲೋಲುಪ” (ಕ್ರಿಕೋ· ೩೯)· ೨. ವಿಷಯವಾಸಕ್ತಿ ; ವಿಷಯಲೋಲುಪತೆ ; ಕಾಮುಕತೆ : ಲಂಪಟ ಶಬ್ದಕ್ಕಾದ ಲಂಬಳಮೆಂಬುದುಂ ಅಬಳ್ಕೆ ಸಂದೇಹಂ (ಪಜಿಪ· ೨೨ ಪ್ರಯೋ) ; ಪಲದಂ ಚಿಲ್ಮಿಕೆಗತ್ತಿ ಪೊಚ್ಚಪೊಸತೊಂದಂ ಮಾಡಿ ಸಾಲ್ದುರ್ವಿ ಲಂಪಳದಿಂ ತನ್ಮಯಮಪ್ಪವೋಲ್ ಕೊಲಿಸು (ಸಂಚಪ· ೫೦-೦೦೦).

[< ಸಂ· ಲಂಪಟ]

ಲಂಪಳಿಕೆ (ನಾ)· ವಿಷಯವಾಸಕ್ತಿ ; ಮೋಹ ; ಲಂಪಟತನ : “ಲಂಪಳಿಗೆ(ಕ್ಷ) — ಲಾಂಪಟ್ಯ = ಅತ್ಯಾಸಕ್ತಿ” (ಕ್ರಿಕೋ· ೩೦) ; ಬಿಡುದಂ ಮುನ್ನಿನ ತನ್ನ ಲಂಪಳಿಕೆಯಂ (ಜಂಪ್ರ· ೨-೧೨) ; ಅಶ್ವಗ್ರೀವನುಂ ರಾವಣನುಂ ಕೀಚಕನುಂ ದುಶ್ಶಾಸನನುಂ ಕವಿಜನುಮೆಂದಿವರ್ಕ್ಕಳ್ಗುಂ ಪರವನಿತಾಲಂಪಳಿಕೆಯುಂ ಕಟ್ಟರ್ (ಪಾಪಚ· ೩೦೨). [ಲಂಪಳ + — ಇಕೆ]

ಲಂಪು (ನಾ)· ವೈಭವ ; ಆಡಂಬರ : “ಲಂಪನಲು ವಿಭವಂ” (ಶಬ್ದ· ೧೮) ; ನಗರ್ವ ಪೂವಾಲೆಗಳ ಲಂಪಿಂದಲಂಪಿಂದೆ ಮಂಟಪಂ ಚಿಲ್ಮಾದುದು (ಜಂಪ್ರ· ೩೭-೩೨)· ‘ಲಂಪಂಬೆಲು’ ಪರಾ· [<ಅಲಂಪು]

ಲಂಬ (ಗು)· ೧. ಜೋಲುವ ; ನೇತಾಡುವ ; ತೂಗುತ್ತಿರುವ : ಉತ್ಪೀಗಪೀನನಿಜಾಂಸಾರ್ಪಿತ ಲಂಬಹಾರನವನಾ ಪಾಂಡ್ಯಂ (ಹರಚಾ· ೩-೫೨) ; ಲಂಬೋಪರಂ ಲಂಬಕೂರ್ಚಕಲಾಪಂ ಸಿತಕಂಚುಕಂ ತ್ವರಿತದಿಂ ಬಂದಂ ಪ್ರತೀಹಾರಕಂ (ಹರಚಾಪ್ರ· ೨-೨)· ೨.ದೊಡ್ಡದಾದ; ದಪ್ಪವಾದ: ತುಂದಿಕಾಳುಕಾಡಿದಪ್ಪುದಯ್ಯನ ಲಂಬಿಜಠರವಿದೆನುತ (ಪಪಪು· ೫೯-೦೭)· ೩. ಉದ್ದವಾದ ; ಎತ್ತರವಾದ : ದನಗಾಹಿಯು ಕರಿಯ ಕಂಬಳಿಯನ್ನು ತಲೆಯಿಂದ ಮೊಳಕಾಲ ತನಕ ಹೊತ್ತಿದ್ದನು . . . ಒಂದು ಲಂಬಕಟ್ಟಿಗೆಯ ಮೇಲೆ ಕಂಬಳಿಯನ್ನು ಹೊದಿಸಿದಂತೆ ತೋರುತ್ತಿತ್ತು (ಕಕ್ಷಕ್ಷ· ೦೨)· (ನಾ) ೧. ಉದ್ದಳತೆ : ‘ಹೈಫೆನ್ಸ್‌ರಿಂಕ್ಸ್’ ಇದು ದುಯಿಯ ತಳ ಅಥವಾ ಮುಂಬಾಯಿಯ ನಾಲಗೆಯಂತಹ ಲಂಬ (prolongation) (ಕಟಿಪ· ೬೨)· ೪. ಬಾಗಿಲಿನ ಚೌಕಟ್ಟು ಮೊದಲಾದುವುಗಳ ಉದ್ದವಾದ ಪಟ್ಟಿ : “ (ಬಾಗಿಲ ಚೌಕಟ್ಟು, ಗೋಡೆಯ ಹಲಗೆಸೇರುಮೆ. ಮೊ.ಗಳಲ್ಲಿ) ನಿಲು, ಲಂಬ,—ಪಟ್ಟಿ, ಮರ” (ಕಿಟೀ· ೪೮೩)· ೫· [ರೇಖಾಗ] ಸಮತಲ ರೇಪೆಯ ಮೆಲೆ ಸಮಕೋನವಾಗುವಂತೆ ಎಳೆದ ಗೆರೆ : ಒಂದು ರೇಪೆಯು ಮತ್ತೊಂದು ರೇಪೆಯ ಬಳಿ ಬಂದು ಸೇರುವುದರಿಂದ ಎರಡು ಕೋನವಾಗುತ್ತೆ . . . ಹಾಗೆ ಸೇರುವಂತಾ ರೇಪೆಗೆ ಲಂಬಮೆಂಬ ಹೆಸರಾಗುವುದು (ಕೂಬಿಜ· ೦೦)· ೭· ಒಂದು ಸ್ಥಳದ ಹೆಸರು : ವೀರ ವಾಯಕ ಬಲಮ್‌ವೆರಸು ಲಂಬದ ಕೋಟೆಯಮ್ ಕೆಡಿಸಿ (ಕ್ಷಿಪ· ೦೯೨೬, ೩೨-೬; ೨)· [ಸಂ·]

ಲಂಬಕ (ನಾ)· ೧. ಒಂದು ಬಗೆಯ ಆಭರಣ : ಪ್ರತಿಮೆಗಳಿಗೆ . . . ಮುಖ್ಯವಾದ ಆಭರಣಗಳು—ಕೌಸ್ತುಭ, ಕುಂಡಲ, ಕಿರೀಟ, ಜಟಾಮುಕುಟ, ಲಂಬಕ, ಮೇಖಲಾ· ಕಟಕ ಮುಂತಾದುವು (ಶಾಡಕ·೫೦೬)· ‘ಲಂಬಣ’ ಪರಾ· ೨. ಗ್ರಂಥದ ಅಧ್ಯಾಯ.—ಪ್ರಕರಣ. [ಸಂ·]

ಲಂಬಣ, ಲಂಬಳ್ (ನಾ)· ೧. ಉದ್ದವಾದ ಒಂದು ಬಗೆಯ ಸರ : ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ ಲಂಬಣಂ ವಱಯೆ ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ (ಕಂಚಣಾ· ೯-೬೯) ; ಲುಂಗದ ಲಂಬಣಂಗಳಂ ಚಂದನದ ವಂದನಮಾಲೆಗಳಂ . . . ತನ್ನಿನ ತಾಣಮುಮೆನಿಸರ್ವ್ ಲತಾಮಂಟಪಮಂ ಪೊಕ್ಕು (ಶಾಮುಹಾ· ೮೨-೦೩೭ ಪ); ಮುತ್ತಿನ ಸರವೆನ್ನ ರನ್ನವಾವುಗೆಗಳ ಸುತ್ತ ಲಂಬಣಮಾವುದಿಂದುಂ (ಪಂಂ· ೦-೪೨)· ೨. ಕಟ್ಟು ; ಗೊಂಡೆ : ಒಪ್ಪಿದುವು ಶಾಡ್ವಲರತ್ನವಿತಾನದೊಳ್ಕನಂಗೊಳಿಸುವ ಪದ್ಮರಾಗಮಣಿ ಕೇಲಿತ ಲಂಬಣಜಾಲಮೆಂಬಿನಂ (ಪಜ್ಜಿತ· ೩-೦೫) ; ಪಚ್ಚೆಯಂ ಚಿಂಬಳದ ಲಂಬಣದಿಂ ಸಿಂಗರಿಸಿ . . . ನಟ್ಟ ಕಾವನ ಗೆಲ್ಲಗಂಬಮೆನೆ . . . ಕಣ್ಗೆಡ್ಡಮಾಗಿರ್ದಂ ಕೌಂಗುದ್ರೋಂಟಿ (ಜಾಪಾಕೃ· ೩-೨೨) **ಲಂಬಳ್**· ೧. ಬರಗೆಲೆಯುಂ ಕೊಪ್ಪಂ ಪೂವುರದುಂ ಲಂಬಳ [ಜಾಣಂ· ೧]ಮುದಲ್ಗಿ ಮಲ್ಲಿಗೆಯ ಮುಗುಳ್ ಬಿರಿಮುಗುಳೆಂಬಿವು ತನಗಾಗಿರೆ ದೇಸಿಯು ಮಾಸರಿಕ್ಕೆಯಂ ಪೊಸೆಯಿಸಿದಳ್ (ಜಾಂಪ್ರ· ೯-೨೨) ; ಮುತ್ತಿನ ಲಂಬಳದ ಲೋವೆಗಳಕಾಂತಿಯ ಲಳಿಯ ಲಹರಿಯೊಳೆದ್ದನಮರಾರಿ (ಶಾಪ್ರ· ೩-೨೯) : ಕನಕದ ಸಡಕು ಮಣಿಲಂಬಳದ ಹಯು ಮಿಗೆ ಗುಡಿಯಿಂದುಂ ಮೊಗವೆತ್ತಿ ನರ್ತಿಸಿತಸುರವಿದಿರಪಲಿ (ಕೂಪಾ· ೬-೨೯-೦೨)· ೨. ಕೋಮಳಹರಿನ್ಮಿಳ ಭಿತ್ತಿಗಳಿನೊಪ್ಪುವ ಮುತ್ತಿನ ಲಂಬಳಂಗಳಿಂ (ಜಾಶಪು· ೬-೨)·

[< ಸಂ· ಲಂಬನ]

ಲಂಬಣಮಾಲೆ (ನಾ)· ಉದ್ದವಾದ ಸರ ; ಜೋಮಾಲೆ : ರಂಭಾಸ್ತಂಭಂ ಕೇತಕೆ . . . ವಿಚಿತ್ರಿಲ ಲಂಬಣಮಾಲೆಗಳು (ಕೈಕಪು· ೫-೦೭)ಃ ಪಚ್ಚೆಯ ಕುಟ್ಟಿಮಸ್ಥಳಂ ಸುತ್ತಿರಿದಿರ್ದ ಮಾಣಿಕದ ಲಂಬಣಮಾಲೆ (ಜಾಪಪ್ರ· ೫-೨)· [< ಸಂ· ಲಂಬನ ಮಾಲಾ]

ಲಂಬಣಿಗೆ· ಲಂಬಳಿಗೆ (ನಾ)· = ಲಂಬಣಮಾಲೆ : “ಲಂಬನಂ. ಲಲಂತಿಕಾ — ಈ ೨ ಮುತ್ತಿನ ಲಂಬಣಿಗೆ” (ಜಾಪಾ· ೦೨೫) ; ಮಾಣಿಮಕುಟಂ ಶಿಖಿರಂ ಲಂಬಣಿಗೆಯ ಪೊಸಮುತ್ತು ನಿರ್ಘುರಂ . . . ಆಗೆ ತದ್ಗಿರಿಗಣೆಯಾದ್ದಂ ತನ್ನ ಪೆಸರೊಳಂ ವಿಜಯಾರ್ಧ್ಂ (ಜಾಪ್ರ· ೦೩-೦೩)· **ಲಂಬಳಿಗೆ** : ಮುತ್ತಿನ ಲಂಬಳಿಗೆಯಿಂ ದಿವಂಗುವಡೆಯ ಕಟ್ಟಿದ ಕಾಂತಿಯಿಂ ಕಾಂಚೀಪದದೊಳಂಗಜಂಗೆ ಸಾಮ್ರಾಜ್ಯಪಟ್ಟಮಂ ಕಟ್ಟಿಯುಂ (ಪಾಪು· ೭-೧ ಪ)· [< ಸಂ· ಲಂಬನಿಕಾ]

ಲಂಬನ (ನಾ)· ೧. ಜೋಲಾಡುವುದು; ನೇತಾಡುವುದು : “ಲಂಬಿಃ, ಲಂಬನಂ, ಲಂಬನೀಯಂ-ಈ ೩ ಸೇಲ್ಕ್” (ಜಾಪಕ್ಕ· ೦೦೪)· ೨. ಉದ್ದವಾದ ಒಂದು ಬಗೆಯ ಸರ.— ಹಾರ : “ಲಂಬನಂ, ಲಲಂತಿಕಾ—ಈ ೨ ಮುತ್ತಿನ ಲಂಬಣಿಗೆ” (ಜಾಪಾ· ೦೨೫)· ೩. [ಖಗೋಳ] ವೀಕ್ಷಣೆಯ ಸ್ಥಾನವನ್ನು ವ್ಯತ್ಯಾಸಮಾಡುವುದರಿಂದ ವೀಕ್ಷಿತ ವಸ್ತುವಿನ ಸ್ಥಾನವು ಬದಲಾವಣೆಯಾದಂತೆ ಕಂಡುಬರುವುದು : ವಸ್ತುಸ್ಥಾನಾಭಾಸ : ‘ಲಂಬನ’ ಎಂದರೆ ಭಿನ್ನದೃಷ್ಟಿ (ಕೈಗಣಿ· ೨೬೨): ದಶಮ್ಯಾ ವಿಧಾನ ಎಂಬುದಾಗಿ ಕರೆಯಲಾದ ಲಂಬನ (parallax) ವನ್ನು ಕಂಡುಹಿಡಿಯುವ ಮೊದಲನೆಯ ಆರ್ಯಭಟನ ವಾರ್ಗವು ಮುಖ್ಯವಾಗಿ ಭಾರತೀಯವಿಧಾನ (ಕಕ್ಷಜ್ಯಾ· ೧೮೩)· [ಸಂ·]

ಲಂಬಹಸ್ತ (ನಾ). ಕೆಳಗೆ ಇಳಿಬಿಟ್ಟ ಕೈ : ಪೂರ್ವದಲ್ಲಿ ಪಟ್ಟುಜನ್ಮತ್ಯ ಮಾಡುವ ಕೃಷ್ಣ (ಅಭಯ, ಶಂಖ, ಸ್ವರ್ಗಹಸ್ತ, ಚಕ್ರ, ಲಂಬಹಸ್ತ, ದಾನ) (ಕೂಯ್ಯಾ. ೦೩೨).

[ಸಂ.]

ಲಂಬಳ ' ಲಂಪಳ ' ನೋ.

ಲಂಬಳ್ಳ ' ಲಂಬಣ ' ನೋ.

ಲಂಬಳಿಗೆ ' ಲಂಬಣಿಗೆ ' ನೋ.

ಲಂಬಾಡಿ, ಲಂಬಾಣಿ, ಲಮಾಣಿ, ಲವಾಣ (ನಾ). ಒಂದು ಅಲೆಮಾರಿ ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದ ವ್ಯಕ್ತಿ : "ಲಂಬಾಡಿ (ಲಮ್ಮಾಣಿ) — ಒಂದು ಕಾಡುಜನಾಂಗ" (ಜಾತಕೋ. ೧೨). **ಲಂಬಾಣಿ** : 'ತಾಂಡೆ'. ಯಿಂದಲಿ ಬರುವ ಲಂಬಾಣಿ ಹೆಂಗಸರ ಉಡುಪು ತೊಡಪೇನು (ಭಾಷೋ. ೩-೦). **ಲವಾಣಿ** : ಹಾದಿಯೊಳಗ ಲವಾಣಿ ತಾಂಡೆ ಇತ್ತು (ಜಿಕ್ಕೀ. ೩೯) ; ನಮ್ಮ ಊರ ಲವಾಣ್ಯಾರು ಇದ್ದಾರ (ಗಂತಾಪು. ೦೦೮). **ಲವಾಣ** : ಲವಾಣರು, ಇಲ್ಲವೆ ಲಂಬಾಡಿಗರು :— ಇವರು ವಾಡಿಕೆಯಾಗಿ ಅಡವಿಯ ಹತ್ತರ ಇಲ್ಲವೆ ಗುಡ್ಡದ ಮೇಲೆ ಇರುತ್ತಾರೆ (ಕಾಗ. ೦೦೩).

[ದೇ.ಪ ತಮಿ. ಲಮ್ಬಾಟಿ; ತುಳು. ಲಂಬಾಡಿ, ಲಂಬಾಣಿ; ತೆಲು. ಲಂಬಾಡಿ. / ಪೈಶಾ. ಲಂಬಾಣ, ಲವಾಣ]

ಲಂಬಾಡಿಗ, ಲಂಬಾಣಿಗ (ನಾ). = ಲಂಬಾಡಿ : ಲವಾಣರು, ಇವೆಲ್ಲ ಲಂಬಾಡಿಗರು.—ಇವರು ವಾಡಿಕೆಯಾಗಿ ಅಡವಿಯ ಹತ್ತರ ಇಲ್ಲವೆ ಗುಡ್ಡದ ಮೇಲೆ ಇರುತ್ತಾರೆ (ಕಾಗ. ೦೦೩). **ಲಂಬಾಣಿಗ** : ಎತ್ತುಗಳನ್ನು ಅದರ ಸಂಗಡ ಇದ್ದ ಲಂಬಾಣಿಗರನ್ನು ಸಹ ಹಿಡಿದುಕೊಂಡು ಬರುವಾಗ್ಗೆ (ಶಾಕಂಕ್ರ. ೪೩).

[ಲಂಬಾಡಿ + — ಇಗ]

ಲಂಬಾಣಿ ' ಲಂಬಾಡಿ ' ನೋ.

ಲಂಬಾಣಿಗ ' ಲಂಬಾಡಿಗ ' ನೋ.

ಲಂಬಾಳಕ (ನಾ). ಜೋಲುವ ಮುಂಗುಯಿಳುಳ್ಳವನು : ಪ್ರಸಾರಿತ ಕಜ್ಜಲಂ ತಿಳಕವಿಳಸದ್ಭಾಳಂ . . . ತಳೆದಂ ಜಿಲ್ಮಂ ಲಂಬಾಳಕಂ ಸ್ಫಪ ಬಾಲಕಂ (ಪುಣ್ಣಕ. ೪-೦೩೦).

[ಸಂ. ಲಂಬಾಲಕ]

ಲಂಬಿಕಾಯೋಗ (ನಾ). [ಯೋಗ] ಯೋಗದ ಸಾಧನೆಗಳಲ್ಲಿ ಒಂದು ; ನಾಲಗೆಯನ್ನು ಬ್ರಹ್ಮರಂಧ್ರದ ಕುಹರಕ್ಕೆ ಒಯ್ಯುವುದು : ಬಹುಪ್ರಯಾಸಮಾದ ಲಂಬಿಕಾಯೋಗವೆನಿಸುವ ಬಾಹ್ಯಚೇಚರಿಯನವಲಂಬಿಸಿ ನಾಲಗೆಯನು ಧೀಗಿಸುವ ವ್ಯಾಪಾರದಲಿ ತತ್ಪರರಾಗಿ ಕಪಾಲಕುಹರಾಂತರ್ಗತಮಾದ ಶ್ಲೇಷ್ಮರಸಾಸ್ವಾದನಮಂಮಾಳ್ಪ ಹಠಯೋಗಿಗಳಿಂ (ಚಿಮ. ೩-೭೬) ; ಶಿವನು ಪ್ರಸನ್ನವಾಗದಿರಲು, ಲಂಬಿಕಾಯೋಗದಲ್ಲಿ ನಾಲಗೆಯ ಬ್ರಹ್ಮರಂಧ್ರಕೆ ನೀಡಿ . . . ಒಂದು ಕಾಲಲ್ಲಿ ನಿಂದು ಹತ್ತುಸಾವಿರವರುಷ ತಪವ ಮಾಡುವಾಗೆ (ಕೃಶಿ. ೧, ೨೨) ; ಲಂಬಿಕಾಯೋಗದ ದಂಭದಿ ನುಡಿಬೇಡ ತುಂಬಿ ತುಳಕಬೇಕು ಸರ್ವಾಂಗ (ಸಿದ್ಧಿ. ೩೭-೩).

[ಸಂ.]

ಲಂಬಿಕಾಯೋಗಿ (ನಾ). ಲಂಬಿಕಾಯೋಗವನ್ನು ಸಾಧಿಸಿರುವವನು : ಮಥಿಸಿ ಮಸ್ತಕಮಧ್ಯಭಾಗಸ್ಥಿತದ ಚಂದ್ರಾಮೃತವ ಸೇವಿಸಿ ಸತತ ಸೊಕ್ಕಿದ ಲಂಬಿಕಾಯೋಗಿಗಳ ಪರಿಯಂತೆ (ಗಗಣ. ೦೭-೩೩).

[ಸಂ. ಲಂಬಿಕಾಯೋಗಿನ್]

ಲಂಬಿಕೆ (ನಾ). ೧. ನೇತಾಡುವುದು; ತೂಗಾಡುವುದು. ೨. ಕಿರುನಾಲಗೆ : ಖಂಡಿಸಿದ ಕರಗಳಿಂ ಬಿಲ್ಲ ಹಿಡಿಯಬೇಕು ವದನದಿಂ ದೃಕ್ಕಿಯಿಲ್ಲದೆ ನಭವ ನೋಡಬೇಕು ಲಂಬಿಕೆಯಿರಿದು ಬೆಲ್ಲಮಂ ಮೆಲಲು ಬೇಕು (ಲಂಡಿಪ್ರ. ೨೨-೦೩). ೩. ಕವಿಯ ಹಾಲೆ : "ಹಾಲೆ ಪತ್ರಾಶ್ರಯಂ ಲಂಬಿಕಾಖ್ಯಂ" (ಕುಂಗಣ. ೯೪-೩). ೪. =ಲಂಬಿಕಾಯೋಗ: ಹಠಯೋಗ ಲಂಬಿಕೆಯಿಂದು . . . ಇದು ಪೂರ್ವನವನಾಥಸಿದ್ಧರ ಮತೋಕ್ತವೆಂದು. ಕಾಪಾಲಿಕಾಚರಣೆ ಯನಾಚರಿಸುವರಲ್ಲ ಶರಣರು (ಅಪಸಂ. ೦೭೯-೭೨೪) ; ಲಂಬಿಕೆಯಿಂ ಸುಷುಮ್ನೆಯೊಳು ಜ್ಯೋತಿಯಂ ನಡಸಿ (ಸಿದ್ಧಣ. ೪-೩೭). [ಸಂ. ಲಂಬಿಕಾ]

ಲಂಬಿತ (ಗು). ಜೋಲ್ಲಾಡುವ ; ತೂಗಾಡುವ ; ಇಳಿಬಿದ್ದಿರುವ : ಧೃತದಂಡಂ ಚಾರುಚಂಪಕಚ್ಛಾಯಂ ಲಂಬಿತಕೂರ್ಚಂ (ಜಾತಕ. ೦೯-೫೬) ; ಲಲಪೆ ಶಯನಿಸುವಮಳವೃಷ್ಟಕ್ಷನಿಳಯಲಂಬಿತರತ್ನಮಾಲಾಕಲಿತಮಣಿಗಣ ದೀಪವಿಭ್ರಮಕಾಂತಿಯಗ್ಗಳಿಸೆ (ಜಸ್ತಿ. ೦೩-೦೯). [ಸಂ.]

ಲಂಬಿಸು (ಕ್ರಿ). ೧. ತೂಗಾಡು ; ಜೋಲಾಡು : ಸೋರ್ಮುಡಿ ಲಂಬಿಸೆ ಕರ್ಣಪೂರಿತೋತ್ಪಲಮೊಲೆದಾಡೆ ಗಟ್ಟಗಳನಂದು ಮಗುಳ್ಚಿದರಿಂದುವಕ್ತ್ರಯರ್ (ಗಂಗ. ೨-೯೦) ; ಲಂಬಿಸುವ ಫಲಭರದ ರಸದಾಳಿಂಬ ಖರ್ಜೂರಾಮ್ರಕದಳಿಕದಂಬ (ತೀರ್ಥಣ. ೦-೩-೪೦) ; ಲಂಬಿಸುವಲರ್ಮುಡಿಗಳ ಶಿರಂಗಳಿಂ ಬಾಗಿ ಲಕ್ಷ್ಮೀಪತಿಗೆ ವಂದಿಸಿದರು (ಕೃಪುಣ. ೭-೦೩). ೨. ಹೆಚ್ಚು ; ವೃದ್ಧಿಯಾಗು : ಲಂಬಿಸಿತು ಭಯತಿಮಿರ ಶೋಕಾಡಂಬರದ ಡಾವರ ವಿವೇಕ ಜುಂಬಿಸಿತು (ಭಾಷಾ. ೪-೦೯) ; ಬೆಗುರಿದುದು ದುರ್ವಾರ್ತೆಲತೆ ನಿಜನಗರದಲಿ ಲಂಬಿಸಿತು ಕರ್ಣದೊಳಾ ಕಕುತ್ಸ್ಥಜನ (ತೊಡಣ. ೩-೩-೩) : ರಂಭೆ ಮುಖವು ಬಿಗಾದಾಗಿ ಸುಜತರವು ಲಂಬಿಸೆ (ಜ್ಞಾಬಿ. ೪-೪೦). ೩. ದೊಡ್ಡದನ್ನಾಗಿ ಮಾಡು ; ಬೆಳೆಸು ; ಹೆಚ್ಚಿಸು : ಕ್ಷಯದ ವೇಗವನ್ನು ನಿರೋಧಿಸಿ ಜೀವಮಾನವನ್ನು ಲಂಬಿಸುವುದು ಸಾಧ್ಯವು (ಆಯುಶಾ. ೦೬೦); ಯಾವುದೊಂದು ವಿಷಯವಾಗಲಿ ಅತಿಯಾಗಿ ಲಂಬಿಸಿರಬಾರದು (ಶಿಷ್ಟ. ೨೬೬). ೪. ಮೈಚಾಚು ; ಒರಗು ; ಮಲಗು : ತುದಿಮುರವನೂಱಿ ನವಾಯ ವಿಂಗಲರೆನೋಟದಾಲಿಯ ಮಿಡುಕದವಿಣದ ರಾಯದಲಿ ಲಂಬಿಸಿದವೊಲು ವಾನಾಯುಜದ ಸಾಲೆಸೆದುದು (ಭುಜಾಕ್ರೀ. ೦೭-೪). [ಲಂಬ + — ಇಸು]

ಲಂಬು (ಗು). ೧. ಉದ್ದನೆಯ ; ಉದ್ದವಾದ. (ನಾ). ೨. ಉದ್ದಳತೆ: "ಲಂಬು (ರಾಬು) ⊥ ಲಂಬ" (ಕರ್ಣಕೋ. ೩೯). ೩. ಉದ್ದವಾಗಿರುವವನು ; ಎತ್ತರವಾಗಿರುವ ವ್ಯಕ್ತಿ : ಅವನೇನು ಅರೂವರೆ ಅಡಿ ಉದ್ದದ ಲಂಬುವಂತೆ (ಶಿಷ್ಟು. ೦೦೦). [←ಹಿಂ. ಲಂಬೂ. / ಸಂ. ಲಂಬ]

ಲಂಬೂಷ (ನಾ). ಏಳು ಎಳೆಗಳ ಸರ.–ಕಂಠಹಾರ : ತಾರಾತರಲಮುಕ್ತಾ ಫಲಲಂಬಲಂಬೂಷಭೂಷಿತಮುಮವಲಂಬಿತ ಸುರಭಿಕುಸುಮದಾಮಾರ್ಣ ಮುಂ . . . ಅಪ್ಪ ಶ್ರೀಮಂಟಪಮಂ ವಿರಚಿಸಿ (ಆಂಪ್ರ. ೬-೬೩ ಪ); ಪಾಂಡುಕಶಿಲಾತಲೋಪಧಿಮಂಡಪಲಂಬೂಷ ಲಂಬದ್ದನಮಾಲಾಮಂಡಿತ ಲತಾಂತಪರಿಮಳಮಂಡಳಿತ ಮದಾಳಿಗೀತ ಮಂದಸಮೀರಂ (ಆಪಂಪ್ರ. ೩-೧೪).

[<ಸಂ. ಲಂಬಾಪಾ]

ಲಂಬೋದರ (ನಾ). ೧. ದೊಡ್ಡಹೊಟ್ಟೆಯವನು ; ದೊಳ್ಳು ಹೊಟ್ಟೆಯವನು : ಧವಲೋತ್ತರೀಯವಸನಂ ಲಂಬೋದರಂ ಲಂಬಕರ್ಣ ಕಲಾಪಂ . . . ಬಂದಂ ಪ್ರತೀಹಾರಕಂ (ಪಂಚಾಮೃ. ೨-೨) ; ಆಜಾನು ಬಾಹುಗಳುಳ್ಳ ಲಂಬೋದರಸ್ವರೂಪಿಯಾದ ಭವ್ಯತರುಣನೊಬ್ಬನು ನಿಂತು ಕೊಂಡಿದ್ದನು (ಕಳ್ಳಾ. ೩೨). ೨. ಹೊಟ್ಟೆಬಾಕ ; ತಿಂಡಿಪೋತ : (ಕ). ೩. ಗಣೇಶ ; ಬೆನಕ ; ವಿನಾಯಕ : "ಹೇರಂಬಃ, ಲಂಬೋದರಃ . . . ವಿಘ್ನರಾಜಃ — ಈ ೯ ಬೆನಕನ ಪೆಸರ್" (ಚಾಅಮ. ೪-೦೯) ; ಕುರಿಗೊರಳ ತನ್ನ ಕಂಠದಲಿ ಲಂಬೋದರನ ಶ್ವರಿತ ಪುಟ್ಟಿಸಿ (ಕ್ಷಾಶಕಾ. ೦-೦೦) ; ಲಂಬೋದರಗೇತಕೆ ತರಳೋದರೆ ಕುಂಭಶಿರಂಗೇತಕೆ ಬಿಂಬಾಧರೆ (ಗಣೇಶ. ೩-೦೨೦).

[ಸಂ.]

ಲಜ್ಜೋದರಿ (ನಾ). ೧. ದೊಡ್ಡ ಹೊಟ್ಟೆಯುಳ್ಳವಳು. ೨. ಒಬ್ಬ ರಾಕ್ಷಸಿಯ ಹೆಸರು : ರೋಷದಿಂದೊದಱಿದಳ್ ಮತ್ತೊರ್ವಳಸುರಿ ಲಂಬೋದರಿ ನಿಕಾಚರಿ ಮಹಾಭಯಂಕರಿ (ಕೃಪುಣ. ೦೩-೩೩).

[ಸಂ. ಲಂಬೋದರೀ]

ಲಂಭ (ನಾ). ೧. ಪಡೆಯುವುದು ; ದೊರಕಿಸಿಕೊಳ್ಳುವುದು. ೨. ಪ್ರಾಪ್ತಿ ; ಸಿದ್ಧಿ : ವಿವಿಧವಿಭವಶೋಭಾರಂಭಲಂಭವ್ಯಲಂಭೋದ್ಭವ ವಿಹತವಿವಾಹೋತ್ಸಾಹಸಾಕ್ಯಕಲ್ಪಂ . . . ಸಮುದಿತಸೇವಾರಾತಿವೃತ್ತಾಂತ ವೃತ್ತಂ (ಕಉಪ. ೬-೨೦೩). ೩. [ಸಂಗೀತ] ಒಂದು ಬಗೆಯ ಗೀತ ಪ್ರಬಂಧ : ವಿರಾ, ಧೇಂತೀ, ಝೊಂಬಡ, ಲಂಭ, ರಾಸಕ . . . ಲೋಲೀ, ಢೋಲ್ಲರೀ, ದಂತೀ — ಈ ಇಪ್ಪತ್ತೆರಡು ಪ್ರಬಂಧಗಳೂ ತಾರಾವಳಿಗೆ ಜಾತಿಯವೆಂದು ಪ್ರಸಿದ್ಧವಾಗಿವೆ (ಕಚುಕ್ಷ: ೬೬). [ಸಂ.]

ಲಂಭನ (ನಾ). = ಲಂಭ ೧ : ಭಾವೇಂದ್ರಿಯಂ ದ್ವಿವಿಧಂ ಜ್ಞಾನಾವರಣ ಕ್ಷಯೋಪಶಮವಿಶೇಷಮುಪ್ಪ ಲಂಭನಂ ಲಬ್ಧಿ (ಕಕ್ರಪ್ರ. ೯೩).

ಲಕಚ 'ಲಕ್ಕಚಣ' ನೋ.

ಲಕಪರಾಲಿ (ನಾ). ಒಂದು ಊರಿನ ಹೆಸರು : ಅನ್ತೆ ಬಮ್ಮ ಬಳಿ ಕೆಱೆಯ ಪಡುವಣಕಡೆಯಂ ಅನ್ತೆ ಒನ್ದು ಲಕಪರಾಲಿಯ ಮೂಡಣ ಬೇರಿಯಿಂ (ಎಕ. III, ಸಂಕಸ. ೦೬೯-೦೯ ; ೪೧೬ ?). [?]

ಲಕಮಕ 'ಲಕುಮುಕಿ' ನೋ.

ಲಕಲಕ (ನಾ). ಹೊಳೆಯುವುದನ್ನು ಸೂಚಿಸುವ ಒಂದು ಅನುಕರಣ ಪದ : ಪಾತ್ರೆ ಪರಡಿಗಳನ್ನೆಲ್ಲ . ಹುಣಿಸೇಹಣ್ಣಿನಿಂದ ತಿಕ್ಕಿ ಲಕಲಕ ಮಾಡಿದಳು (ಪುಕೃ.ಕಿ. ೨೩) ; ಎರೆಯ ಮೇಲ್ಮೈಯು ಲಕಲಕ ಹೊಳೆಯುವ ಕೆಂಪುಬಣ್ಣದ್ದಿರುತ್ತದೆ (ಪುಂಅಯು. ೪-೭೦).

ಲಕಲಕನೆ (ಅ). ಕಾಂತಿಯಿಂದ ಹೊಳೆಯುವಂತೆ ಎಂಬರ್ಥವನ್ನು ಸೂಚಿಸುವ ಒಂದು ಅನುಕರಣಾವ್ಯಯ : ಹಲವರು ಬಿಂದಿಗೆ ಕೊಡಗಳನ್ನು ಲಕಲಕನೆ ತಿಕ್ಕುತ್ತಿದ್ದಾರೆ (ಕಲಚಂ. ೪).

[ಲಕಲಕ + – ಅನ್ನೆ]

ಲಕಲಕಿಸು (ಕ್ರಿ). ಕಾಂತಿಯಿಂದ ಬೆಳಗು ; ಥಳಥಳಿಸು ; ಮಿಂಚು : ಕಪ್ಪುದ್ರಾಕ್ಷೆಯಲ್ಲಿ ನಕ್ಷತ್ರಗಳನ್ನು ಸರೆಹಿಡಿದಿಟ್ಟಂತೆ ಲಕಲಕಿಸುವ ಕಣ್ಣುಗಳು (ಕಸಂಚಾ. ೬೩) ; ಬೆಳ್ಳಿಯ ಭಾಂಡಗಳು ಎಲ್ಲ ಕಡೆಗೆ ಲಕಲಕಿಸುತ್ತವೆ (ಅಕ್ಷ. ೪೩). [ಲಕಲಕ + – ಇಸು]

ಲಕಲಿ 'ಲೊಕ್ಕಿ' ನೋ.

ಲಕಾರ (ನಾ). 'ಲ' ಎಂಬ ಅಕ್ಷರ : ವಿಕಲ್ಪಂ ಕ್ಷಳನಿಳ್ಗದಿಲ್ಲ ಸಂಸ್ಕೃತ ದೊಳಾ ಲಕಾರಕ್ಕೆ ಪೇಟ್ದೆನಿದಱಿಂ ಕ್ಷಳನಂ (ಕಚಪ್ರ. ೭). [ಸಂ.]

ಲಕುಚ (ನಾ). ೧. ಗಜನಿಂಬೆ : "ಲಕುಚಃ, ಲಿಕುಚಃ, ಡಹಃ — ೩ ಗಜನಿಂಬೇ ಹೆಸರುಗಳು" (ಸಾಪ್ರಕ. ೦೨೩). ೨. ಬೇಲ ; ಕಪಿತ್ಥ : "ಲಿಕುಚಂ [ಲಕುಚಂ] ಕಪಿತ್ಥಮಱಿಗೆ ದಧಿತ್ಥಂ" (ಕಸ್ತೂಕೋ. ೫೫-೩). ೩. ಒಂದು ಬಗೆಯ ಕಾಡುಹಲಸು. [ಸಂ.]

ಲಕುಟಿ (ನಾ). ಬಿಡಿಗೆ ; ದೊಣ್ಣೆ ; ಕೋಲು : "ವೈಣವಃ, ಲಕುಟಿಃ . . . ಯಷ್ಟಿಃ — ಈ ೫ ಕೋಲ್" (ಪಣಾಯು. ೦೨೦-೧೦) ; ಲಕುಟಿಯಜ್ಞಾದಿವಿಧಿಯನುಪದೇಶಂಗೆಯ್ದಾತಂ ಕ್ಷೇಮಂಧರನೆಂಬ ಪೆಸರಂ ಪಡೆದಂ (ಅಪ್ರ. ೬-೩೬ ಪ) ; ಅರಸಂ ಮುಳಿದೆ ಲಕುಟಿ ಕಾಟ(ಡ)ನವೂರ್ವಕಮಾ ಶುನಕನಂ ಕಳೆದಂ (ಪಾಭಾಂಪು. ೪೩೩) ; ಗಳಿತಾಶ್ರು ವಿಷ್ಣಾನ್ನೆಗ್ಗಿಪೂಸಿದನತಿ ರಕ್ತಮಸ್ಯಕುಸುಮಂ ಲಕುಟಾಜನಪಾಶಹಸ್ತಂ (ಶೋಹೊಡ. ೦೦-೩). [ಸಂ.]

ಲಕುಮಿ, ಲಕ್ಕೆ, ಲಕ್ಷುಮಿ, ಲಚ್ಚಿ, ಲಚ್ಚೆ (ನಾ). ೧. ಐಶ್ವರ್ಯ ; ಸಂಪತ್ತು. ೨. ವಿಷ್ಣುವಿನ ಹೆಂಡತಿ ; ಲಕ್ಷ್ಮಿ : "ಲಕುಮಿ ಲಕ್ಷ್ಮಿಯೆನಿಕ್ಕುಂ" (ಕವಂ. ೫೬) ; ನಂದಿಮೆರ್ಮನಿಂಗನೆ ಭೂನಾರಿಗೆ ರತಿಗರುನ್ದತಿದೇವಿಗೆ ಲಕುಮಿನಾರಿಗೆ ಪಡಿಯನೆ ಭೂನುತೆ ತಾ ಚಾಕಣಬ್ಬೆ ಕಾಂತಾರತ್ನ (ಪಾಭಾ. XII, ೦೦೫-೩೭ ; ೩೩೮); ಲಕ್ಷ್ಮೀ— ಲಕುಮಿ, ಶ್ರೀ — ಸಬುದ (ಕಬಾದ. ೨೫೦ ಕ್ರಮಣೀ). ೧ ೨ ೨ : ದೇಹಕಾಂತಿಗೆ ಮುಳಿದ ತರುಣಿಯರ್ ಪಿಡಿದು ಕಾಹನಟ್ಟುನುಜೆ ಲಕುಮಿಯನೊಳಗೆ ತುಂಬಿ ರಾಜಂಗೆ ಕೈಸೆಕೆಯ ತೋಱುವೆನೆನುತ್ತೆ . . . ಆನನುದಯಗಿರಿಯನಡರ್ದಂ (ಶಾಪಾಂ. ೬-೩೪). ೩. ಶೋಭೆ ; ಕಾಂತಿ : ನಿನಗೆ ತಾನೆಲೆ ದೇವ ವಲ್ಲಭೆಯೆನಿಪುವಡೆ ಕೀೞೀ ದ್ರುಮವ ನಡೆ ಮನಕೆ ಬಾರದಡೆಂದಳಪಗತವದನ ಲಕುಮಿಯಂತಿ (ಪಾಚಾಗ. ೦೦-೭೦-೩೪). ಲಕ್ಕಿ : ೨. "ಲಕುಮಿ (ಲಚ್ಚಿ, ಲಕ್ಕಿ)ಲಕ್ಷ್ಮೀ=ಶ್ರೀದೇವಿ" . (ಕ್ರಿಕೋ. ೩೮). ಲಕ್ಷುಮಿ : ಒಳ್ಳೆಱೆ ಶಕುನಫಲವೆಲ್ಲ ನಮಗೆ ಲಕ್ಷುಮಿವಲ್ಲಭನ ಸೇವೆ ದೊರಕೊಂಬುದೇ ರಮಣ (ಕುಸಂ. ೩-೦೦ ಕಗದ್ಯ). ಲಚ್ಚಿ : ೨. "ಲಕ್ಷ್ಮೀ-ಲಚ್ಚಿ" (ಶಬ್ದಾಮ. ೦೬೦ ಕ್ರಮಣೀ). ೪. ಒಬ್ಬಾಕೆಯ ಹೆಸರು : ಬಂಮರಸಂಗಂ ಲಚ್ಚಿಯಬರಸಿಗಂ ಪುಟ್ಟಿದ (ಎಕ. VIII, ಶಾಗಡ. ೦೫-೦೩ ; 1218). ಲಚ್ಚಿ : ೫. [ಜೈನ] ಊರ್ಧ್ವಲೋಕದ ಒಂಬತ್ತು ಅನುದ್ದಿಶ ವಿಮಾನಗಳಲ್ಲಿ ಒಂದು : ನವಗ್ರೈವೇಯಕಂಗಳೊಳವುಲ್ಲಂ ಮೇಗಣ ಲಚ್ಚಿ ಮಹಾಲಚ್ಚಿ ಮಾಳಿನಿ ವೈರಿ ವೈರೋಚನಿ ಸೋಮ ಸೋಮರೂಪೆ ಅಂಕೆ ಪಳಿಕೆ ಅಯಿಚ್ಚೆಯೆಂಬ ನವಾನುದ್ದಿಸಗಳೊಳಂ (ಪಾಪ್ರಾಚಾ. ೧೭-೩೦).

[< ಸಂ. ಲಕ್ಷ್ಮೀ./ಪ್ರಾ. ಲಚ್ಚಿ]

ಲಕಮುಕಿ, ಲಕಮಕೆ (ನಾ). ೧. ಜಾಲಗಾರನ ಹಕ್ಕಿ; ಮಿಂಚುಳ್ಳಿ; (ಪ). ೨. ಟಿಟ್ಟಿಭ ಪಕ್ಷಿ : "ಟಿಟ್ಟಿಭಃ, ಲಕುಮುಕೀ ಹಕ್ಕಿ" (ಸಿಪ್ರಾಂಪ. ೦೬೩). ಲಕಮಕೆ : (ಪ). { ←ತೆಲು. ಲಕುಮುಕಿ }

ಲಕುಲೀಶ (ನಾ). ೧. ಒಂದು ಶೈವಪಂಥದ ಪ್ರವರ್ತಕನಾದ ಒಬ್ಬ ಮಹಾಪುರುಷ : ಆಪುಂಬ ವರ್ಣವ್ಯವಸ್ಥೆಯಮಂ ವರ್ಧಿಪುದು ರಾಯೆಂಬ ವರ್ಣ ಲಕುಲೀಶಗಣಪದಮಕ್ಕುಂ . . . ನಂಬಿಯೆಲ್ಲಮಪ್ರಭುವೆಂಬ ಮಂತ್ರಾ ಮೃತವ ಸೇವಿಸಿ (ಪ್ರಕುಪು. ೪-೩೨). 'ಲಕುಲೀಶಪಾಶುಪತ' ಪರಾ. ೨. ಶೈವ ಧರ್ಮದ ಒಂದು ಪ್ರಭೇದ : ಲಕುಲೀಶನಿಂದ ಸ್ಥಾಪಿಸಲ್ಪಟ್ಟ ಪಂಥ : ಕಾಳಾಮುಖ, ಲಕುಲೀಶ, ಮಾಹೇಶ್ವರ . . . ಇವೇ ಮೊದಲಾದವು ಶಿವಭಕ್ತಿಪಂಥದ ಮುಖ್ಯಪ್ರಭೇದಗಳು (ಶಾಕರ. ೪೦೩).

[ಸಂ.]

ಲಕುಲೀಶಪಾಶುಪತ, ಲಕುಳೀಶಪಾಶುಪತ (ನಾ). ಶೈವಧರ್ಮದಲ್ಲಿ ಒಂದು ಪಂಥ ; ಲಾಕುಳಶೈವಪಂಥ : ಕ್ರಿ.ಶ. ೨ನೇ ಶತಮಾನದಿಂದಲಾದರೂ ಲಕುಲೀಶಪಾಶುಪತವೆಂಬ ಶೈವಧರ್ಮ ಪ್ರಬಾರದಲ್ಲಿತ್ತು (ಕೂಕೃಕಾ. ೫ ಚಿಪ್ರಲೆ). **ಲಕುಳೀಶಪಾಶುಪತ** : ಈ ಲಕುಳೀಶಪಾಶುಪತ ಶೈವಪಂಥವು ಪ್ರವರ್ತಿತವಾದುದು ಕ್ರಿ. ಪೂ. ೨ನೇ ಶತಕದಲ್ಲಿಯೆಂದು . . . ಅಭಿಪ್ರಾಯಪಡುವರು (ಕಚಾ. ೨ ೩೬೯). [ಸಂ.]

ಲಕುಳೆ (ನಾ). ಮುಂಗುಸಿ ; ನಕುಲ : ನರಿ ನವಿಲು ಲ[ಕಾಣಂ.ನ]ಕುಳ ವಾಯಸಂಗಳು ತಿರ್ದ ಶುಭಕರ್ಮಾಂಗಳು (ಶಪಳೆ. ೦೨೩). .[<ಸಂ. ನಕುಲ]

ಲಕುಳೀಶಪಾಶುಪತ 'ಲಕುಲೀಶಪಾಶುಪತ' ನೋ.

ಲಕೋಟಿ 'ಲಗಾಟ' ನೋ.

ಲಕೋಟ್ಟಿ, ಲಕ್ಕೋಟ್ಟಿ (ನಾ). ೧. ಪತ್ರವನ್ನು ಇಟ್ಟು (ಅಂಟಿಸಿ) ಕಳುಹಿಸುವ ಕಾಗದದ ಸಣ್ಣ ಚೀಲ; ಪಾಕೀಟು ; ಸಣ್ಣ ಕವರು : ಅವಳು ಲಕೋಟೆಯೊಳಗಿನ ಕಾಗದವನ್ನು ಹೊರಗೆ ತೆಗೆಯುತ್ತ ನುಡಿದಳು (ಪಮಂಕ. ೩೭೦); ಫೋಟೋವನ್ನು ಲಕೋಟೆಯಿಂದ ತುಸು ಹೊರಗೆಳೆದು ತೀವ್ರಾಸಕ್ತಿಯಿಂದ ನೋಡುತ್ತಿದ್ದಳು (ಕಕರು. ೬೨೬). ೨. ಅಂಟಿಸಿದ ಅಥವಾ ಅಂಟಿಸದೆ ಮುಚ್ಚಿರುವ ಅಂಚೆಯ ಪತ್ರ : ಅಂಚೆಯವನು ಒಂದು ಲಕೋಟೆಯನ್ನತ್ತು ಕೆರಳಿದನು (ಕಾಂಡಾ. ೩೩); ಲಕೋಟೆಯೊಂದನ್ನು ಹೆಕ್ಕಿ ಎಲ್ಲಿಂದ ಬಂದುದೆಂದು ಮುದ್ರೆ ನೋಡಿದ (ಪುಂಅಪಾಮು. ೦೬). **ಲಕ್ಕೋಟ್ಟಿ**: ೧. ಲಕ್ಕೋಟೆಯನ್ನು ಒಡೆದು ನೋಡಿದ (ಕಪಚ-೧೩); ಪತ್ರಗಳನ್ನು ಒಂದು ಲಕ್ಕೋಟೆಯಲ್ಲಿಟ್ಟು ತಲೆಬೀಟು ಹಚ್ಚಿದಳು (ಪ್ರಾಲಪ್ರಕ್ಷೇ. ೦೫೦). [←ಹಿಂ. ಲಪೋಟಾ; ಮರಾ. ಲಪೋಟಾ, ಲಾಪೋಟಾ]

ಲಕೋಟ್ಟೆ · ಲಕ್ಕೋಟ್ಟೆ (ನಾ). ಒಂದು ಬಗೆಯ ಹಣ್ಣು · (ಪ).

ಲಕ್ಕೋಟ್ಟೆ : (ಮೈಸಿ. ೩೪–೩೩೭). [?]

ಲಕೋಟಿಹೋಳಿಗೆ (ನಾ). ಲಕೋಟೆಯ ಆಕಾರದಲ್ಲಿ ಮಡಿಸಿ ಮಾಡಿದ ಒಂದು ಬಗೆಯ ಹೋಳಿಗೆ : (ಪ).

[ಲಕೋಟಿ$_1$ + ಹೋಳಿಗೆ$_1$ (< ಪೋಳಿಗೆ$_1$)]

ಲಕ್ಕ$_{41}$, **ಲಕ್ಕೆ**$_{43}$, **ಲಕ್ಷ**, **ಲಕ್ಷಿ**$_{1}$, **ಲಕ್ಷೆ**, **ಲಚ್ಚ**$_{1}$, **ಲಾಖ** (ನಾ). ಒಂದು ಸಂಖ್ಯೆ ; ನೂರುಸಾವಿರ ; ಲಕ್ಷ: "ಲಕ್ಷದೊಳ್ ಲಕ್ಕಂ" (ಕರ್ನಾಕ. ೭೮) ; ಚತುರತ್ತಂ ಮೂಱುಂಯೋಜನದಳವಿಯಾ ಸಭಾಮಂಟಪಮನೊಂದುಲಕ್ಷ ರಕ್ಕಸವಡೆಯಿಂ ಪೊತ್ತು ತರಿಸಿ (ಪಂಪಭಾ. ೭-೨ ೪) ; ನೂಱು ಕಿರಿಘಟೆ ಲಕ್ಕ ಪಾಯದಳ (ಕುವಂಸ್ಥ. ೩-೯); ಲಕ್ಕದಭಿಮರಲು ಕೆಡುಗುಂ ಚಿಕ್ಕಂದಿನ ವಿದ್ಯೆ ಪೊರಗು (ಕಪ್ರ. ೩-೧೧೭). **ಲಕ್ಕೆ**$_{43}$: ಮೂಱುಲಕ್ಕೆ ದೇವಿಯರಪ್ಪರಿ ಯರ್ಕಳುಂ (ಪಜಿನಾ. ೩೩–೧೯); ಒಂದೊತ್ತಂ ನಡೆಯಿಸುವುದ ದೊಂದೊಂದಱ ಲಯಕೆ ಲಕ್ಕತೆಱನಾಡುವುದೇನೆಂದೇಂ ಬಣ್ಣಿಸುವುದೊ ಸುರಸುಂದರಿಯ ವಿಲಾಸವಿಭ್ರಮಭ್ರೂಲತೆಯಂ (ಪಂಪ. ೯–೩೩); ಮಾರ್ವಡಿ ಸರಲೊಂದಱುಂ ಕಡೆಯೆ ಲಕ್ಕಮು ಲಕ್ಕೆದಿನೆಚ್ಚ ನರ್ಜುನಂ (ಪಭಾಪು. ೦೦–೦೫೯). **ಲಕ್ಷ** : ಕಲ್ಯಾಣದ ನೆಲೆವೀಡಿನೊಳು ಸಪ್ತಾರ್ದ್ಧಲಕ್ಷಭೂಮಿಯಂ ದುಷ್ಟ ನಿಗ್ರಹ ಶಿಷ್ಟಪ್ರತಿಪಾಲನಂಗೆಯ್ದು . . . ರಾಜ್ಯಂಗೆಯ್ಯುತ್ತಿರೆ (ಪಪಾ. VI, ಕರ್ನಾಸಂ. ೩೭–೩ ; 1187 ?). **ಲಖ್ಖಿ**$_{11}$: ವಡ್ಡರಾವುಳದ ಸುಂಕ ಲಖ್ಖಿಕೆ ಅಱುವಣ ಮುಪ್ಪಾಗದೊಳಗೆ ಶ್ರೀಸ್ವಯಂಭುಕಲಿದೇವಸ್ಯಾಮಿದೇವರ ಗ್ರಾಸನದ ಸತ್ರಕ್ಕೆ ಬಿಟ್ಟ ಪಾಗವೊಂದು (ಶಾಸಾಶ. IX–i, ೨೦೦–೫೦; 1122). **ಲಖ್ಖೆ** : ತ್ರೈಲೋಕ್ಯಮಲ್ಲ ವಿಕ್ರಮಾದಿತ್ಯದೇವರು ಸಪ್ತಾರ್ದ್ಧಲಖ್ಖೆ ಪೃಥ್ವಿಯನಾಚಂದ್ರಾರ್ಕತಾರಂಬರಂ . . . ರಾಜ್ಯಂಗೆಯ್ಯುತ್ತಿರೆ (ಪಪಾ. VI, ಕರ್ನಾಸಂ. ೩೫–೪ ; 1173). **ಲಚ್ಚ**$_{1}$: ಪೊನ್ನೂಡಯಂ ಲಚ್ಚದ ಪೊನ್ನೊಡೆಯಂ ಗಡ ಶತಲಕ್ಷದ ಪೊನ್ನೊಟ್ಟಿಲ ನಾನೀವೆಂ (ಅಜ್ಜದೇ. ೨-೩೬). **ಲಾಖ** : ಸಂಭಾವಿತರು ಲಾಖ ಮಂದ್ಯಾಗ ಒಬ್ಬಾವ ಇದ್ದರ ಇರಬೇಕು (ಗ್ರಾಪಾಡು. ೦೨೩).

ಲಕ್ಕಲಕ್ಕ, ಲಚ್ಚಾಳಚ್ಚ (ದ್ವಿರುಕ್ತಿ) : ಲಕ್ಕಲಕ್ಕಕ್ಕಿ ನೆರೆದಭವಭಕ್ತರ ನಡುವೆ (ಪಪಚ. ೦೦–೦೦೭) ; ಲಕ್ಕಲಕ್ಕದಲಿ ಕಿಕ್ಕಿರಿದಿರೆ ಜೇಂಬುಳು ಮೇಣ್ದಂದುಂದಿ (ಕೋಗಿ. ೩೩–೫೦) ; ಲಚ್ಚಾಳಚ್ಚ ಕುದುರೆಯಂ ಗಜರಥವ ಪೊಸ್ತಾಗಿ ಜೋಡಿಸಲ್ಮೇಮಿಸುತ ಕೈದುಗಳ ಮಸ್ತಾಗಿ ಪೊಸದಾದುದಂ ತರಿಸಿ (ಕುರಂಗ. ೩೩–೪೨). **ಲಕ್ಕಮುಕ್ಕ**=ಲಕ್ಷಾಂತರ ಹಣವನ್ನುಳ್ಳ ಮೂರ್ಖ ; ಸಿರಿವಂತನಾಗಿರುವ ದಡ್ಡ : ಅಕ್ಕೊ ಬರುವ, ಸೊಕ್ಕಿ ಮೆರೆವ ಲಕ್ಕಮುಕ್ಕ, ಏನೆ ಇರಲಿ ; ಅರಿತು ಕಣ್ಣಿ, ಹರಿವರಣ್ಣಿ — ಬೆಪ್ಪ, ಬಿಡಲಾ, ಏನೆ ಇರಲಿ (ಹಂಗಾಕ. ೩೭–೦೬). [<ಪ್ರಾ. ಲಕ್ಖ · / ಸಂ. ಲಕ್ಷ]

ಲಕ್ಕ$_{2}$, **ಲಕ್ಕು**, **ಲಚ್ಚ**$_{2}$, **ಲೆಕ್ಕ**$_{1}$ (ನಾ). ೧. ಗಮನ ; ಲಕ್ಷ್ಯ : 'ಲಕ್ಕಿಸು' ಪರಾ. ೨. ವ್ಯಾಪ್ತಿ ಅಥವಾ ವಿವರಣೆಗಳಿಂದ ಹೇಳಲ್ಪಟ್ಟುದು ; ಲಕ್ಷಣಕ್ಕೆ ಉದಾಹರಣೆಯಾದುದು ; ದೃಷ್ಟಾಂತ : ಸಕ್ಕದದಿಂ ಲಕ್ಕಣಮಂ ಲಕ್ಕಮನೊಳ್ಗನ್ನಡಂಗಳಿಂ ವಿವರಿಸಿದಂ (ಶಕ್ರತ. ೦–೦೪). **ಲಕ್ಕು** : ೧. ಗ್ಯಾಲಿಲಿಯೊನಿಗೆ ವಿದ್ಯಾಭ್ಯಾಸದ ಲಕ್ಕು ಬಹಳ (ಪುಂಶಿಯು. ೫–೨೨೨) ; ಆದರೆ ಈಗ ನಿನ್ನ ಲಕ್ಕೆಲ್ಲ ಹೊರಗೆಯೇ ಇದೆ (ತಪ್ರಸ. ೨) ; ಕುಮುದಯ ವೇಲೆ ಅವನ ಲಕ್ಕಂತೆ (ಕಪಕ. ೩೭). **ಲಚ್ಚ**$_{2}$: ೫. ಗುರುತು ; ಚಿಹ್ನೆ : ಇದು ನಿಚ್ಚಂ ತನ್ನ ಲಚ್ಚಂ ಮತರುವೆನಿಪೀ ಮಾಂಛೆಯಿಂ ಚಂದ್ರಮಂ ಸೂಸಿದಪಂ ಪಿಃಯೂಷಮಂ (ಶಾಪ. III. ೩೦೯, ಹರಿಹ್ಮಗರ್ಗಶ ಸಸ್ಕೃತೀಕ್ಷರಣಂ). **ಲೆಕ್ಕ**$_{1}$: ೧. ಅವನಿಗೆ ಹಿಂಯರನ್ನು ಕಂಡರೆ ಲೆಕ್ಕವೇ ಇಲ್ಲ (ಪಜಿ). 'ಲಕ್ಷ$_{1}$', 'ಲೆಕ್ಕಿಸು' ಪರಾ.

[< ಪ್ರಾ. ಲಕ್ಖ · / ಸಂ. ಲಕ್ಷ]

ಲಕ್ಕ$_{3}$ (ನಾ). ಅರಗು ; ಲಾಕ್ಷ : ಲಕ್ಕವ ತಂದಗ್ನಿಮುಖದಲ್ಲಿ ಇಟ್ಟುಂತೆ ಉಕ್ಕುವ ಹೊಳೆಯೊಳು ಪೊಕ್ಕು ಮುಣಗಿದಂತೆ (ಪಪಾಸು. ೯೦–೯).

[<ಪ್ರಾ. ಲಕ್ಖ, ಲಕ್ಖಾ. / ಸಂ. ಲಾಕ್ಷಾ]

ಲಕ್ಕ$_{44}$, **ಲಕ್ಖಿ**$_{12}$ (ಗು). ೧. (ಉಕ) ಸುಂದರವಾದ ; ಚೆನ್ನಾದ ; ಶೋಭೆಯಿಂದ ಕೂಡಿದ : ಏನು ರಾಯರೇ, ಲಕ್ಕ ಬೆಳದಿಂಗಳು ನೋಡಿ ಗೊಂಬೆಯ ಹಾಗೆ ಮಲಗಿಬಿಟ್ಟಿದ್ದಿರೇನು (ಕಾಮುಚ. ೬). (ನಾ). ೨. ಸುಂದರವಾದುದು ; ಒಳ್ಳೆಯದು : ನಾ ಮಾಡಿದ್ದೆಲ್ಲ . . . ಪಾಡ, ನಾ ಪಾಡಿದ್ದಲ್ಲಾ ಲಕ್ಕ . . . ಎಂದು ತುಳಜಾ ಅವನನ್ನಾಣಿಸುತ್ತಾಳೆ (ಪಪಚ. ೬೭). **ಲಕ್ಖಿ**$_{12}$: ೨. ಲಕ್ಖಿದ ಈ ನಿವಾಂತ ಜಾಗಾನನ್ನ ಕೆಲಸಕ್ಕ (ಪಾರಾ. ೨೯).

ಲಕ್ಕಾಗು = ಚೆನ್ನಾಗು ; ಒಳ್ಳೆಯದಾಗು : ನಿಮ್ಮ ಪ್ರಕೃತಿ ಬಹಳ ಲಕ್ಕಾಗಿದ್ಕೆ ಗುರುತು ಸಹ ಹತ್ತುವಂತಿಲ್ಲ (ಸ:ಕಪ್ರ. ೨೨).

[← ಪರಾ. ಲಕ್ಕ, ಲಕ್ಖ, ಲಕ್ಖಿ]

ಲಕ್ಕಂಬಡೆ (ಕ್ರಿ). ಲಕ್ಷ ಬೆಲೆಯನ್ನು ಹೊಂದು ; ಲಕ್ಷ ಹೊನ್ನಿನ ಬೆಲೆ ಬಾಳು : ತೊಡವೆನಗಪ್ಪೊಡೆ ಲಕ್ಕಂಬಡಿವವು ಪಲಪೊಳವು ನಂಬೆಯಪ್ಪೊಡೆ ನೋಡೀಗಡೆ (ರಹಾಕ್ಕ. ೨-೦೨೦). [ಲಕ್ಕ$_{41}$ + ಪಡ್$_{1}$]

ಲಕ್ಕಗೆಯ್ (ಕ್ರಿ). ಲಕ್ಷವನ್ನಾಗಿ ನೂಡು ; ಲಕ್ಷಸಂಖ್ಯೆಗೆ ಏರಿಸು : ಇಮಿರಪ್ಪೊಂಗೆಯ್ದು ಚಿಃ ಕಾಸಟಮಂದೊಂದುಲಕ್ಕಗೆಯ್ವುದಿದರ್ಕಂ ಮಾಸರ ಮುಂಡಲೆಂದಧಿಕವಿಳಾಸದಿನುಡಲಿಕ್ಕೆ ನೆಱೆಯೆ ಬಯಸುಂ ಮೆಱೆದಂ (ಕಂಕಥಾ. ೩-೪೪). [ಲಕ್ಕ$_{41}$ + ಕೆಯ್$_{1}$]

ಲಕ್ಕಚಣ, ಲಕಚೆ (ನಾ). ಒಂದು ಬಗೆಯ ಸಾಧನ. —ಸಣ್ಣ ಆಯುಧ; ಬಾಣ : "ಲಕಚಂ ಲಕ್ಕಚಣಮೆಂದಿಕ್ಕುಂ" (ಪುಂಗಣ. ೦೦೩–೭) ; ಸುಲಿವಲ್ಲಂ ಮೆಱೆವೆಲ್ಲ ಪರಲಲನೆಯರ್ಗಂದಿಕ್ಕುಟಾಂದ ಕೀಟ್ಟರ್ ಪಲ್ಲಂ ಸಲೆ ಕಣ್ಣಂ ಕೆತ್ತುವೆಯೆಂದು ಲಕ್ಕಚಣದಿಂದೆ ಮಿಂಟ ಕಳೆವರ್ ಕಣ್ಣಂ (ಪಾಕ್ಕಗ. ೬-೧೦). **ಲಕಚೆ** : ಮೇಲಿನ 'ಮಂಗರಾ ' ಪ್ರಯೋಗವನ್ನು ನೋಡಿ. [ಲಕ್ಕ$_{1}$ + < ಚೀಣ]

ಲಕ್ಕಡಿ (ನಾ). ಮರದ ದಿಮ್ಮಿ : 'ಲಕ್ಕಡಿಕೋಟೆ' ಪರಾ.

[← ಹಿಂ. ಲಕಡೀ. / ಸಂ. ಲಕುಟ. / ಪ್ರಾ. ಲಕ್ಕುಡ]

ಲಕ್ಕಡಿಕೋಟೆ (ನಾ). ಭಾರವಾದ ಮರದ ದಿಮ್ಮಿಗಳನ್ನು ನಿಲ್ಲಿಸಿ ಕಟ್ಟಿದ ಕೋಟೆ. — ಮರದ ದಿಮ್ಮಿಗಳಿಂದಾದ ದರ್ಗಾ : ಅಲ್ಲಲ್ಲಿ ಲಕ್ಕಡಿಕೋಟೆಗಳ ಹಾಕಿ ಖಾಣ್ಯ ಇಟ್ಟುಕೊಂಡು . . . ಬರುತ್ತಾರೆ (ಜಾಕೋಪ್ರ. ೪೫). [ಲಕ್ಕಡಿ + ಕೋಟಿ$_{1}$ (< ಕೋಂಟೆ)]

ಲಕ್ಕಣ, ಲಚ್ಚಣ$_{1}$, **ಲಚ್ಚಣ** (ನಾ). ೧. ಗುರುತು. —ಚಿಹ್ನೆ : "ಲಕ್ಕಣಮೆನೆ ಲಕ್ಷಣ" (ಕರ್ನಾಕ. ೦೦೩); ಬೂದಿ ಬೆಡೆ ಲಕ್ಕಣಂ ತಪಕಾದುವೆರಟ್ಟೊಡಣೆ ಶರಾಸನಂ ಕವಚಮಿವೆಂಕಾದುವೊ (ಪಂಪಾ. ೬-೧೨). ೨. ಒಂದು ವಸ್ತು ಇಲ್ಲವೆ ಸಂಗತಿಯ ವಿಶಿಷ್ಟವಾದ ಗುಣದ ನಿರೂಪಣೆ ; ವ್ಯಾಖ್ಯೆ; ಸೂತ್ರ : ಏಳೆಯ .ಲಕ್ಕಣ [ಪಾಣಿ. ಲಕ್ಷಣ]ಮಂ ಪೇಟ್ದಿಂ (ರಂಡೋಪಾಖ್ಯಾ. ೫-೨೩೦); ಸಕ್ಕದದ ತದ್ಭವಂಗಳ ಲಕ್ಕಣಮಂ ಕನ್ನಡಕ್ಕೆ ಲಕ್ಷಿಸಿ ಪೇಟ್ದೆಂ (ಕವಿದ. ೨೩೩); ಸಕ್ಕದದಿಂ ಲಕ್ಕಣಮಂ ಲಕ್ಕಮನೊಳ್ಗನ್ನಡಂಗಳಿಂ ವಿವರಿಸಿದಂ (ಶಕ್ರತ. ೦–೦೪). ೩. ದುರ್ಯೋಧನನ ಮಗ; ಲಕ್ಷಣಕುಮಾರ : ಲಕ್ಕಣಂ ಮೊದಲಾಗೆ ನೂರ್ವರ್ ಮಕ್ಕಳುಂ ಸುತ್ತಿಜ್ಜಿದು ಬಳಸಿ ಬರೆ (ಪಂಪಾ. ೦೦–೨೭ ಪ). ೪. [ಕಾವ್ಯಮಿ] ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಗುಣ,... ಲಕ್ಷಣ : ಪುರುಳುಂ ಲಕ್ಕಣಮುಂ ಮೆಯ್ಸಿರಿಯುಂ ತಳ್ಕಸೆಯೆ ಪೇಟ್ದ ಕಬ್ಬಂ (ಕಬ್ಬಾ. ೬); ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ, ತಿರುಳ್ಗನ್ನಡದೊಳೆ ಕತೆಯನುಸಿರ್ವಂ (ಜಾಹಕ್ಕ. ೬–೦೬). **ಲಚ್ಚಣ**$_{1}$: ೧. "ಲಚ್ಚಣಮೆಂದು ಲಕ್ಷಣದೊಳಂ"

(ಶಾಸ. ೮೨–೩೩); "ಲಕ್ಷಣಕ್ಕೆ ಲಚ್ಚಣಮೆನಿವ್ವುದು" (ಶಬ್ದ. ೦೫೯). ೫. [ನಾಟ್ಯ] ಹತ್ತು ಬಗೆಯ ನೃತ್ಯಭೇದಗಳಲ್ಲಿ ಒಂದು : ತಾಂಡವ ನಾಂಟ್ಯ ನೃತ್ಯ ಲಾಸ್ಯ ಗುಂಡಿಲ ಪೆಕ್ಕಣ ಲಚ್ಚಣ. . . ದಶವಿಧಪಾತ್ರಂಗಳಂ ತೋಱಿ ರಂಜಿಸುವ ನರ್ತನ ನರ್ತಕಿಯರಿಂ (ಕೃಷ್ಣ. ೩–೫೫). ಲಚ್ಚಣ: ೫. ತಾಂಡವ ನಾಟ್ಯ ನೃತ್ಯ ಲಾಸ್ಯ ಗುಂಡಿಲ ಪೆಕ್ಕಣ ಲಚ್ಚಣ ಅಪರಿಪಾತ್ರ ಸುಪಾತ್ರ ಸರ್ವತೋಭದ್ರವೆಂಬ ದಶವಿಧಪಾತ್ರಂಗಳಂ (ಏಕಲ. ೨೭೯).

[< ಸಂ. ಲಕ್ಷಣ]

ಲಕ್ಕಣಿಕೆ ' ಲೆಕ್ಕಣಿಕೆ ' ನೋ.

ಲಕ್ಕರಿ ' ಲಷ್ಕರು ' ನೋ.

ಲಕ್ಕಲಿ ' ಲೊಕ್ಕಿ$_{1}$ ' ನೋ.

ಲಕ್ಕಾ (ನಾ). ಪಾರಿವಾಳಗಳಲ್ಲಿ ಒಂದು ಜಾತಿ : ಲಕ್ಕಾ ಎಂಬ ಪಾರಿವಾಳಗಳು (ಹುಂಜಾಜ. ೭–೦೦೦). [← ಅರ. ಪಾರ. ಹಿಂ. ಲಕ್ಕಾ]

ಲಕ್ಕಿ$_{1}$ ' ಲೊಕ್ಕಿ$_{1}$ ' ನೋ.

ಲಕ್ಕಿ$_{2}$ " ಲಕುಮಿ ' ನೋ.

ಲಕ್ಕಿಗಿಡ, ಲಕ್ಕಿಲಿಗಿಡ (ನಾ). ಒಂದು ಬಗೆಯ ಔಷಧೀಸಸ್ಯ; ಲೊಕ್ಕಿ : " ಸಿದ್ಧಾಃ . . . ಇಂದ್ರಾಣಿ . . . ಪಾವಿಲೀಗಿಡದ ಹೆಸರುಗಳು; ಲಕ್ಕಿ : ಗಿಡ " (ಸಿದ್ಧಾ. ೦೩೭); ಎಕ್ಕಿ ಎಲಚಿಯು ಲಕ್ಕಿಗಿಡಗಳು ಸೊಕ್ಕಿ ಮೆರೆವಾ ಸೀಗೆಮರಗಳು (ಗೋಪಾಡು. ೩.೬)/ಲಕ್ಕಿಲಿಗಿಡ : " ಲಕ್ಕಿಲಿಗಿಡ. ನೆಕ್ಕಿ. . . ಪಾಮಿ. ಧೂತವೇಷ " (ಪಸ್ಯ. ೦೩೩); ಲಕ್ಕಿಲಿಗಿಡ. ನೆಕ್ಕಿ (ಪ್ರಾಣಿ. ೬೬–೦೫೧೨). [ಲಕ್ಕಿ$_{1}$ (< ಲೊಕ್ಕಿ$_{1}$) + ಗಿಡ (< ಗಿಡು)]

ಲಕ್ಕಿಮುಷ್ಟಿ (ನಾ). (ಉಕ) ಒಂದು ಬಗೆಯ ಜೂಜಾಟ; " ರೊಕ್ಕ ದಾಟು " (ಪಾಶಕೀಲ. ೨೦) : ಲಕ್ಕಿಮುಷ್ಟಿ ಆಡಿ ಆಸ್ತಿ ಕಳಕೊಂಡ (ಟೂಪ).

[ಲಕ್ಕಿ$_{2}$ (< ಲಕುಮಿ) + ಮುಷ್ಟಿ$_{2}$]

ಲಕ್ಕಿಲಿ ' ಲೊಕ್ಕಿ$_{1}$ ' ನೋ.

ಲಕ್ಕಿಲಿಗಿಡ ' ಲಕ್ಕಿಗಿಡ ' ನೋ.

ಲಕ್ಕಿಸು, ಲೆಕ್ಕಿಸು$_{2}$ (ಕ್ರಿ). ಗಮನ ಕೊಡು; ಲಕ್ಷಿಸು : ಹೂಳಿದನು ಮುರವೈರಿ ಸಾಸಿರಕೋಲುಗಳ ಬಾಯೊಳಗೆ ಲಕ್ಕಿಸದಾಳ್ವಾದುತ ದನುಜನೆಂದವು ಮಂದಹಾಸದಲಿ (ಕೋಗಡು. ೩೬–೦೦). ಲೆಕ್ಕಿಸು$_{1}$: ಅನೇಕ ಶೀಲಗುಣ ದೊಕ್ಕಿದೊರಿಂತು ಲೆಕ್ಕಿಸದುಮಲ್ ನೆನೆಗೆನ್ದೊರು ಮುನಿಯಿಂದಳ್ತಪ್ಪಲೆ ಮೋನ್ದು ಶಾಮ ಪಮಗೆ ಮೃತ್ಯುವರವಾನಱಿದಂ (ಪಞ್ಚ. ೩೩. ೦೦೩–೦; ಪಾ. ೨೦೦) ; ಮನೆನೆಳಲಂ ನೆನೆಯದೆ ಅರ್ಥಮಂ ಲೆಕ್ಕಿಸದೆ ವ್ಯಕ್ತಿಯಂ ವಿಚಾರಿಸದೆ . . . ಬಾಗೆವಾಡಿಯಂ ಪೊಱಮಟ್ಟು (ಬಸ್ತ. ೨–೨೩); ರಾವುತ ನಾಯಕರ ಲೆಕ್ಕಿಸದಕ್ಕಲ ಖನ್ನೋದಗಳಾ ರಕ್ಕಸನದಿರೊಳೊಪ್ಪರು (ಭಾಷಾಂ. ೦೩–೨೨). [ಲಕ್ಷ$_{2}$ + – ಇಸು$_{3}$]

ಲಕ್ಕು ' ಲಕ್ಕ$_{2}$ ' ನೋ.

ಲಕ್ಕೆ$_{1}$ ' ಲೊಕ್ಕಿ$_{1}$ ' ನೋ.

ಲಕ್ಕೆ$_{2}$ ' ಲಕ್ಕ$_{1}$ ' ನೋ.

ಲಕ್ಕೆ (ನಾ). ಗುರಿ; ಉದ್ದೇಶ (?): ವನಧಿಯ ನೀಳ್ದ ಪರ್ದೆಗಳ್ ನೆಲಸಂ ಕವಿದಪ್ಪು ವೀಗಳೆಂಬಿನಮತಿವೇಗದಿಂ ಪರಿವ ಪಾಱುವ ಲಕ್ಕೆಯನೊಡ್ಡಿ ಪೊಳ್ತು ತನ್ನನೆ ನಡೆ ನೋಡಿಸುತ್ತುಮಿರೆ ಜಾಣಿಲಮೊಂದೆರಡೆಂದು ತೋಱಿ ನಿಟ್ಟನೆ ಪದಿನೆಂಟುಕೋಟಿವರೆಗಂ ತಳರ್ದತ್ತು ತುರಂಗಸಾದನಂ (ಕಾಪ. ೫೫–೩೦). [<ಲಕ್ಷ$_{5}$?]

ಲಕ್ಕೋಟೆ$_{1}$ ' ಲಕೋಟಿ$_{1}$ ' ನೋ.

ಲಕ್ಕೋಟೆ$_{2}$ ' ಲಕೋಟೆ$_{2}$ ' ನೋ.

ಲಕ್ಷ ' ಲಕ್ಷ$_{11}$ ' ನೋ.

ಲಕ್ಷಗಡುಗೆ ಲಖಿಗಡುಗೆ (ನಾ). ದೇವರಿಗೆ ಲಕ್ಷ ಗಡಿಗೆಗಳ ನೀರಿನಿಂದ ಮಾಡುವ ಅಭಿಷೇಕ : ಲಕ್ಷಕುಂಭಾಭಿಷೇಕ : ಶ್ರೀಮತು ಕಲಿದೇವರ್ಗೆ ಪ್ರತಿವರ್ಷಂ ಲಕ್ಷಖಗಡುಗೆನಿಮಿತ್ತವಾಗಿಯಲ್ಲಿಯರ್ಗ್ಗವಾಣಯಂ ತಹರು ನಾಲ್ವರು (ಶಾಇಶ. IX-i. ೨೭೨–೭೫ ; ೧೧೩). ಲಖಿಗಡುಗೆ : ಸಮಸ್ತ ನಿವಸ್ಥಾನಂಗಳಿಗೆ ಲಖಿಗಡುಗೆ ನಂದಾದೀವಿಗೆಗಂ ಸುಂಕವನ್ನಾಯ ಸರ್ವ್ವ ಬಾಧವರಿಹಾರವಾಗಿ . . . ಧಾರಾಪೂರ್ವ್ವಕಂ ಮಾಡಿ ಬಿಟ್ಟ ದತ್ತಿ (ಎಕ್ಷ. VI. ೪೮೮೮- ೦೮೪–೫; ೧೨೦೦).

[ಲಕ್ಷ (<ಲಕ್ಷ$_{11}$) + ಗಡುಗೆ (< ಗಡಿಗೆ)]

ಲಕ್ಷ (ನಾ). ಶರೀರದ ಒಂದು ಭಾಗವು ನಿಷ್ಕ್ರಿಯವಾಗುವ ಒಂದು ಬಗೆಯ ರೋಗ ; ಅರ್ಧಾಂಗವಾಯು ; ಪಾರ್ಶ್ವವಾಯು : ಮೃದುತಾಳಗೆಗೆ ಲಕ್ಷ (Paralysis) ಹೊಡೆದಾಗ ನುಂಗಿದ ಆಹಾರ ಮೂಗಿನ ಮೂಲಕ ಹೊರಬರುತ್ತದೆ (ಕಲ್ಯಾ. ೦೮); ವಿಧಿ ಅದನಿಗೆ ಲಕ್ಷ ಹೊಡಿಸಿ. ಪ್ರಾಣಾನ ಕತ್ತುಕೊಂಡುಹೋಯಿತು (ಹಂಗೂ. ೦೩). ಲಕ್ಷಬಡಿ = ಅರ್ಧಾಂಗವಾಯುವುಂಟಾಗು ; ಪಾರ್ಶ್ವವಾಯು ಬರು: ಅವನ ಕ್ರಿಯಾಪಟುತ್ವಕ್ಕೇ ಲಕ್ಷಬಡಿದ ಹಾಗಾಯಿತು (ಕುಕಸು. ೩೬೪). ಲಕ್ಷಹೊಡೆ = ಲಕ್ಷಬಡಿ : ಅವರಿಗೆ ಲಕ್ಷ ಹೊಡೆದು ಆಸ್ಪತ್ರೆ ಸೇರಿದ್ದಾರೆ (ಟೂಪ). [← ಅರ. ಹಿಂ. ಲಕವಾ ; ಮರಾ. ಲಕವಾ. ಲಖಿವಾ]

ಲಕ್ಷ$_{1}$, ಲಕ್ಷೆ (ನಾ). ಗಮನ : ಧ್ಯಾಸ ; ಲಕ್ಷ$_{5}$: ಸಮುದ್ರತಳದಲ್ಲಿ ನಡೆಯುವ ಕೆಲವು ಮಹತ್ಕಾರ್ಯಗಳು ನಿಮ್ಮ ಲಕ್ಷಕ್ಕೆ ಬರದೆ ಇರಲಾರವು (ಹುಂಜಾಜ. ೭–೨೦೪); ಈ ಎಲ್ಲಾ ಪ್ರಕಾರಗಳು ಲಕ್ಷದಲ್ಲಿಡುವುದು ಅವಶ್ಯಕವದ (ಹುಂಜಾಶ್ವಾ. ೯. ಪ್ರಶ್ನಾ೫೫); ನಿರ್ಜನವಾದ ಬೀದಿಯಲ್ಲಿ ಅದು ಬಹುಶಃ ಯಾರ ಲಕ್ಷಕ್ಕೂ ಬರಲಿಕ್ಕಿಲ್ಲ (ಟೂಪ್ಕ. ೫೦೦). ' ಲಕ್ಷಗೊಡು ' ಪರಾ. ಲಕ್ಷೆ : ಕನ್ನ ಮಗಳನುಮೇಕ್ಷಿಸದಿರೆಂದು ಕಟ್ಟಮ್ಮಾಡಿ ತರುಣಿ ಯರವಾಕ್ಷಣವೆ ಕಳುಹಿಸಿ ಯಯಾತಿ ನಂಗದ ಶುಕ್ರ ಮಾಳಿದನು ನಿಜ ನಿಲಯಕೆ ಲಕ್ಷೆ[ಶಾಇಶ. ೭]ಯನ್ನಿವರ ಮೇಲಿಟ್ಟು (ಹುಂಜಾ. ೪–೩೦). ' ಲಕ್ಷ$_{2}$ ' ಪರಾ. [< ಸಂ. ಲಕ್ಷ್ಮ]

ಲಕ್ಷ$_{2}$ (ನಾ). ೧. ಒಂದು ಸಂಖ್ಯೆ : ನೂರುಸಾವಿರ : ಚತುರಶೀತಿಲಕ್ಷ ಪೂರ್ವಾನಪವರ್ತ್ಯಾಯುಷ್ಕನುಮಪ್ರತಿಹತಶಾಸನಮುಮಾಗಿ(ಇಂತಿ. ೦೩–೩೫); ಕಿಬಗಶೀತ ಸಹಸ್ರೋತ್ತರಲಕ್ಷಯೋಜನಬಾಹುಲ್ಯಮನಾಂತು ರತ್ನಪ್ರಭೆ ಯೆಂಬ ವೈಥ್ವಿಯಿರ್ಕುಂ (ಜೀವಸಾ. ೦೦–೧೦ ಪ); ಲಕ್ಷ ಸಂಖ್ಯೆಯ ಹಿರಣ್ಮಯ ತಂದು (ಬಸ. ೬೦೩) ; ಏಳು ಲಕ್ಷವೆ ಲಕ್ಷ . . . ವಚನಗಳ ಹೇಳಿದನು ಕೇಳೂ (ಸಪಾಕ್ಷ. ೫೪); ತುಂಬಿತ್ತೊಡನೆ ವನದೇಶಮಂ ಲಕ್ಷ ಪಕ್ಷಿಯುಲಿ (ಶ್ರೀಣಾಪು. ೩೦–೦೦೩); ಲಕ್ಷವಾದರೂ ಭಿಕ್ಷೆ ಬೇಡಬಾರದು (ಗಣ). ೨. ಗುರುತು ; ಚಿಹ್ನೆ : ಉಕ್ಷಪರಲಕ್ಷ ವಿಜಿತಾಕ್ಷ ಮದದಕ್ಷ ಮಖ ಶಿಕ್ಷ . . . ಜಯಸಿದ್ಧನಂದ (ಗುರುಚಾ. ೬–೨). ೩. ತೋರಿಕೆ ; ನಟನೆ. ೪. ಕಪಟ ; ಮೋಸ. ೫. ಗುರಿ ; ಧ್ಯೇಯ : "ಲಕ್ಷಂ. ಲಕ್ಷಂ. ಶರವ್ಯಂ— ೩ ಗುರಿಯ ಹೆಸರು ; ಗುರಿಯ ಗುರ್ತು" (ಶಿಕಾ. ೫೮೨). ೬. ಮುತ್ತು ; ಮೌಕ್ತಿಕ.

ಲಕ್ಷಗಟ್ಟಲೆ, ಲಕ್ಷಗಟ್ಲೆ = ಲಕ್ಷಾಂತರ ; ಬಹಳ : ರಾಮಾಯಣದಲ್ಲಿ ಲಕ್ಷಗಟ್ಟಲೆಯ ರಾಕ್ಷಸರ ಆಕಾರಗಳು ಬಹುಘೋರವಾಗಿಯೂ, ವಿಚಿತ್ರವಾಗಿಯೂ ಇದ್ದುವೆಂದು ವರ್ಣಿಸಲಾಗಿದೆ (ಕಾರಿ. ೫೬) ; ಅಲ್ಲಿ ನಡೆಯುವ ಜಾತ್ರೆಗೆ ಲಕ್ಷಗಟ್ಲೆಯಲ್ಲಿ ಜನ ಸೇರುತ್ತಾರೆ (ಟೂಪ್ಕ). ಲಕ್ಷ ದೀಪಾರಾಧನೆ = ದೀಪಾವಳಿಯಲ್ಲಿ ಲಕ್ಷದೀಪಗಳನ್ನು ಹಚ್ಚಿಟ್ಟು ಮಾಡುವ ಪೂಜೆ — ಉತ್ಸವ : ಲಕ್ಷದೀಪಾರಾಧನೆಯ ಹಬ್ಬವೆಂದು ಲಕ್ಷಾಧಿಪತಿ ಮಹಾತ್ಮರ ಮುಂದೆ ಬಂದು ಲಕ್ಷಲಕ್ಷಾಂತರದಿ ಹರಸುವೆವು ದೇವಿ (ಕಾಷ್ಟ. ೦೫–೦೭). ಲಕ್ಷಾನುಲಕ್ಷ = ಅನೇಕ ಲಕ್ಷ ; ಲಕ್ಷಗಟ್ಟಲೆ : ಒಂದು ಭಾರೀ ದೂರದರ್ಶಕದ ಮೂಲಕ ಲಕ್ಷಾನುಲಕ್ಷ ನಕ್ಷತ್ರಗಳನ್ನು

ನೋಡಬಹುದು (ಶಾಸ. ೩೨). **ಲಕ್ಷಾವಧಿ=ಲಕ್ಷಗಟ್ಟಲೆ** : ಅನ್ಯಪತ್ರಿಕೆಗಳು ಲಕ್ಷಾವಧಿ ಓದುಗರ ಕೈಗಳಿಗೆ ಹೋಗುತ್ತವೆ (ಒಳಿಪ. ೪). **ಲಕ್ಷೋಪಲಕ್ಷ =ಲಕ್ಷಾನುಲಕ್ಷ** : ಕತ್ತಿಯ ಏಟಿಗೆ ಲಕ್ಷೋಪಲಕ್ಷ ಮೆನ್ನುವರು (ಶಂಚಾಪ. ೨೩೯-೪೦). [ಸಂ.]

ಲಕ್ಷಕ (ಗು). ೧. ಗುರುತಿಸುವ ; ಸೂಚಿಸುವ. (ನಾ). ೨. [ಕಾವ್ಯಮೀಮಾ] ಲಕ್ಷ್ಯಾರ್ಥವನ್ನು ಕೊಡುವ ಶಬ್ದ : ಅರ್ಥವು ಮುಖ್ಯವಾಗಿ ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಮೂರು ವಿಧ : ಈ ಅರ್ಥಗಳನ್ನು ಕೊಡುವ ಶಬ್ದಗಳಿಗೆ (ಕ್ರಮವಾಗಿ) ವಾಚಕ, ಲಕ್ಷಕ, ವ್ಯಂಜಕಗಳೆಂದೂ . . . ಹೆಸರು (ಕೃಷಿ. ೦೬೭) ; ವಾಚ್ಯಾರ್ಥಕ್ಕೆ ಬಾಧೆ ತಟ್ಟಿದಾಗ ಮಾತ್ರ ಲಕ್ಷಣಾವೃತ್ತಿಗೆ ಪ್ರವೃತ್ತಿಯುಂಟಾಗಿ ಲಕ್ಷ್ಯಾರ್ಥವು ಗೋಚರವಾಗುತ್ತದೆ. ಇದನ್ನು ತಿಳಿಸುವ ಶಬ್ದಕ್ಕೆ 'ಲಾಕ್ಷಣಿಕ' ಅಥವಾ 'ಲಕ್ಷಕ' ಎಂದು ಹೆಸರು (ಶಾಕಂತ. ೨೭೩). [ಸಂ.]

ಲಕ್ಷಕೊಡು 'ಲಕ್ಷಗೊಡು' ನೋ.

ಲಕ್ಷಗೊಡು. ಲಕ್ಷಕೊಡು (ಕ್ರಿ). ಗಮನ ಕೊಡು : ಲಕ್ಷಿಸು : ಆಕಾಶವನ್ನು ನೋಡಿ ಹವೆಯಲ್ಲಿ ಮೂಸಿ, ಪ್ರಕೃತಿಯ ಪ್ರಕೋಪಗಳೇನಾದರೂ ತೋರುವುವೋ ಎಂದು ಲಕ್ಷಗೊಡುತ್ತಿದ್ದನು (ಪಂಗಾಡ. ೨೩). **ಲಕ್ಷಕೊಡು** : ಹಿರಿಯರ ಮಾತಿಗೆ ಲಕ್ಷಕೊಡದೆ ಹುಡುಗ ಹಾಳಾದ (ಗೂಪ). [ಲಕ್ಷ್ಯ + ಕೊಡು]

ಲಕ್ಷಣ$_1$ (ನಾ). ೧. ಗುರುತು ; ಚಿಹ್ನೆ ; ಕುರುಹು : "ಚಿಹ್ನಂ ಲಾಂಛನಂ ಕಳಂಕಂ ಲಕ್ಷಣಂ ಲಕ್ಷ್ಮವುಂಕಮದು" (ಪಂಗಣಾ. ೦೦-೩) ; ಜಂಗಮ ಸ್ಥಳಕ್ಕೆ ಲಕ್ಷಣವಾವುದೆಂದರೆ ಹೇಳಿಜೆ ಕೇಳಿರಣ್ಣಾ (ಅಪಸಂ. ೦೦೪-೧೮೦) ; ಲಕ್ಷಣವೆಂದರೆ ಅಯಾ ವಸ್ತುಗಳಲ್ಲಿರುವ ಮುಖ್ಯವಾದ ಸಾಧಾರಣವಲ್ಲದ ಧರ್ಮಗಳು, ಗುರುತುಗಳು (ಶಿಂಪ್ರಾ. ೨೨೦) ; ನೀನಂತೂ ಇಲ್ಲಿಂದ ಬೇಗ ಅಲ್ಲಾಡುವ ಲಕ್ಷಣ ಕಾಣಲಿಲ್ಲ (ಇತ್ಯ. ೩೦೩). ೨. ವಿಶಿಷ್ಟವಾದ ಗುಣ. ೩. ಚಂದ್ರನಲ್ಲಿರುವ ಕಪ್ಪು ಗುರುತು : "ಮೃಗಲಕ್ಷ್ಮ . . . ಲಕ್ಷ್ಮ, ಲಕ್ಷಣಂ, ಕಳಂಕಃ . . . ಈ ೮ ಚಂದ್ರಮಂಡಲದ ನಡುವಣ ಕಪ್ಪು" (ಚಿಂಪ್ರಾ. ೯-೧೩). ೪. (ಮೈಮೇಲಿನ) ಒಳ್ಳೆಯ ಗುರುತು. — ಶುಭಚಿಹ್ನೆ : ಚಿಪ್ಪುವ ಕಟ್ಟಿದ ಬಳಿಕ ಲಕ್ಷಣವನೆಜಪುವರೆ (ಪಚಿ. ೨೩೬) ; ನಿಮ್ಮ ಮಗನಿಗೆ ಯೋಗವುರುಷನ ಲಕ್ಷಣಗಳವೆ (ಕೀಗಾಳ್ಳ. ೪). ೫. (ರೋಗದ) ಸೂಚನೆ ; (ಕಾಯಿಲೆಯ) ಚಿಹ್ನೆ : ಲಕ್ಷಣವೆಂಬುದು ಹುಟ್ಟಿದ ರೋಗದ ವ್ಯಕ್ತಲಕ್ಷಣ (ಪಥ್ಯ. ೨೦) ; ಅಜಾಧಿತ್ವ ಕದಿಮೆಯಾದಾಗ ರೋಗ ತಗುಲಿದರೆ ರೋಗದ ಲಕ್ಷಣಗಳು ಕಾಣಬರುತ್ತವೆ (ಕಠಿಪ್ರ. ೩). ೬. ಬೆಲುವು ; ಅಂದ ; ಸೌಂದರ್ಯ : ಲಕ್ಷಣಕ್ಕವನುರೂಪಮಾದ ವ್ಯಂಜನಕ್ಕಂ ಹಾವಕ್ಕನುರೂಪಮಾದ ಪೆಣ್ಣಾವಕ್ಕಂ . . . ಬೆಕ್ಕಸಂಬಟ್ಟು (ಶಾಂಶಾ. ೩-೩೬ ಪ) ; ಕಣ್ಣು ಮೂಗಿನಿಂದ ಲಕ್ಷಣವಾಗಿದ್ದಳಾದರೂ ಮೈಬಣ್ಣ ಸ್ವಲ್ಪ ಕಪ್ಪು (ಪಾಪ್ರಾಲ. ೦೮೫). ೭. ಒಂದು ವಸ್ತು ಇಲ್ಲವೆ ಸಂಗತಿಯ ವಿಶಿಷ್ಟಗುಣಗಳ ಸೂತ್ರಬದ್ಧವಾದ ನಿರೂಪಣೆ : ವ್ಯಾಖ್ಯೆ : ಪೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ ಸತತಮೆಂದೆ ಪಟಿಗ್ನಡಮಂ ಪೊಲಗೆಡಿಸಿ ನುಡಿವರಾಗವಬಲಪ್ರೀಸರ್ (ಕಪಾ. ೦-೪೬) ; ಕಂದಕ್ಕೆ ಲಕ್ಷಣಮಂ ಪೇಟ್ಪಿಂ (ರಂಪೊಗಾಂ. ೧-೨೩೦) ; ತಮ್ಮಾಯತವ ತಮ್ಮಾರುಭಟಿಯನು ಲಕ್ಷ್ಯಲಕ್ಷಣಭೇದಭಂಗಿಗಳ ಸಾರತರಕೋದಂಡಪಂಡಿತರಾರಯಿಕೆಯಲಿ-ತಜುಬಿ ನಿಂದರು (ಕುಪ್ರಾಕ. ೨೦-೨೬) ; ಸಂಗೀತದಲ್ಲಿ ಲಕ್ಷ್ಯಕ್ಕೂ ಲಕ್ಷಣಕ್ಕೂ ಭಿನ್ನಾಭಿಪ್ರಾಯವಿದ್ದೇಯಿದೆ (ಜಾಕಥ. ೩೩೭). ೮. ನೋಟ; ದರ್ಶನ : "ನಿಭಾಳನಂ . . . ಲಕ್ಷಣಂ, ದರ್ಶನಂ, ದೃಷ್ಟಿಃ, ದ್ಯೋತನಂ —ಈ ೮ ನೋಟಂ" (ಹಣಾಮು. ೧೨-೧೦೨) ; "ಲಕ್ಷಣಂ ದರ್ಶನಂ ಧ್ಯಾಸಮವಲೋಕನಂ ನೋಟಮಕ್ಕುಂ" (ಪಾಂಗೋಪ. ೧೩-೨). ೯. ಗುರಿ; ಉದ್ದೇಶ; ಆಶಯ: ಧ್ಯೇಯ. ೧೦. ದುರ್ಯೋಧನನ ಮಗ ಲಕ್ಷಣಕುಮಾರ. . . . ತನ್ನ ಮಗನಪ್ಪ ಲಕ್ಷಣಕುಮಾರನಂ ನೆನೆದು ಮನ್ಮೋದ್ಗತತಕಂತನಾಗಿ ತದಾಸ್ಪನ್ನಪ್ರದೇಶದೊಳ್ ತನ್ನ ಕುಮಾರನಂ ಕಂದು (ಗದಾಯು. ೮-೩೪ ಪ) ; ನಿಸ್ಸಯ ಬುಜಬಲೀಳೆಯಿ ತೆಗೆವೆವೆನ್ನುಯು ಸಖನನೆನಿತುಂ ಲಕ್ಷಣಾದಿಗಳು ತೆಗೆದಿಪುತ ನೋಲಿಕ್ಕಿದರು (ಕಣ್ಣಕ್ರೀ. ೩-೭೩). ೧೧. = ಲಕ್ಷಣಾವೃತ್ತಿ : ಅಭಿಧಾ, ಲಕ್ಷಣ, ವ್ಯಂಜನವೇ ಮುಂತಾದ ಶಬ್ದಶಕ್ತಿಯನ್ನು ಈ ಕಾಲದ ಯಾವ ಕವಿಯೂ ಕಣ್ಣೆತ್ತಿ ನೋಡಲಿಲ್ಲ (ಜಾಕಥ. ೪೭೩). ೧೨. [ಜೈನ] ವಾರಿವ್ರಾಜ್ಯಲಕ್ಷಣಗಳನ್ನು ತಿಳಿಸುವ ಇಪ್ಪತ್ತೇಳು ಸೂತ್ರಪದಗಳಲ್ಲಿ ಒಂದು : ಲಕ್ಷಣಮೆಂಬುದು ಪರಮಲಕ್ಷಣಧರನಪ್ಪ ಜನಪತಿಯನಾಶ್ರಯಿಸಿ ತನ್ನ ದೇಹಲಕ್ಷಣಮಾನಪಮಾನಂಗಳನ್ನು ತಪದೊಳ್ ನೆಗಳ್ದೊಡೆ ದಿವ್ಯ ಲಕ್ಷಣ ವಿಜಯಲಕ್ಷಣ ಪರಮಲಕ್ಷಣಾಗಳಂ ಪಡೆಯಲಕ್ಕುಂ (ಶಾಪಂಚ್ಚ. ೨೨೯). ೧೩. ಅಷ್ಟಾಂಗನಿಮಿತ್ತಗಳಲ್ಲಿ ಒಂದು : ನೆಲೆಮಾಜೆದೆನಂತರಿಕ್ಷಸ್ವರ ಭೌಮವ್ಯಂಜನಾಂಗಭಿನ್ನಸ್ವಪ್ನೋದ್ಭರಲಕ್ಷಣಮಂದೇ ವಿತ್ತರಿಪಷ್ಟಾಂಗದ ನಿಮಿತ್ತಶಾಸ್ತ್ರವೇಯಂ(ಶಾಂಚಿಕ್ಕ. ೩-೪೪). 'ನಿಮಿತ್ತ', 'ಲಕ್ಷಣನಿಮಿತ್ತ' ಪರಾ. ೧೪. [ಯೋಗ] ಸಮಾಧಿಸ್ಥಿತಿಗೆ ಕಾರಣವಾಗುವ ಚಿತ್ತ ಪರಿಣಾಮ : ನಿರೋಧ, ಸಮಾಧಿ, ಏಕಾಗ್ರತಾ ಎಂಬ ಮೂರು ವಿಧವಾದ ಚಿತ್ತಸ್ಥಿತಿಗಳು ಧರ್ಮ, ಲಕ್ಷಣ, ಅವಸ್ಥಾ ಎಂಬ ಸೂಕ್ಷ್ಮಸ್ಥೂಲರೂಪವಾದ ಚಿತ್ತಪರಿಣಾಮಗಳನ್ನಲ್ಲಡುವುವು . . . ಭೂತ ವರ್ತಮಾನ ಭವಿಷ್ಯತ್ ಎಂಬ ಕಾಲಭೇದದಿಂದ ತಿಳಿಯಲ್ಪಡುವ ಪರಿಣಾಮವು ಲಕ್ಷಣಪರಿಣಾಮ (ಶಿಂಪ್ರಾ. ೦೮೩). [ಸಂ.]

ಲಕ್ಷಣ$_2$ (ನಾ). (ಉಕ) ಉಗುರು ತೆಗೆಯುವ ಸಾಧನ : ಲಕ್ಷಣವನ್ನು ಉಪಯೋಗಿಪುವವನಿಗೆ ಬಹಳ ಜಾಣ್ಮೆ ಇರಬೇಕಾಗುತ್ತದೆ (ಗೂಪ). [?]

ಲಕ್ಷಣಂಬಿಡಿ (ಕ್ರಿ). ಉದ್ದೇಶವನ್ನು ಅನುಸರಿಸು ; ಸೂತ್ರಬದ್ಧವಾಗು : ದಕ್ಷಿಣದೊಳ್ಕೀರವದಿಂ ಲಕ್ಷಣಂಬಿಡದು ಚತುರ್ಮುಖದಿಂ . . . ವಂಕ್ರಮನೋದುವಬ್ಜ ಭವನಂ (ಪಾಚಂ. ೦-೭೯ ಪ). [ಲಕ್ಷಣ$_1$ + ಬಿಡಿ$_1$]

ಲಕ್ಷಣಗೇಡಿ (ನಾ). ಶುಭಚಿಹ್ನೆಗಳಿಲ್ಲದ ವ್ಯಕ್ತಿ : ಲಕ್ಷಣಗೇಡಿ ಹೆತ್ತಳೇ ಲೆಕ್ಕವಿಲ್ಲದ ಮಕ್ಕಳ (ಜಾಪಿ). [ಲಕ್ಷಣ$_1$+ಕೇಡಿ$_1$]

ಲಕ್ಷಣಗ್ರಂಥ (ನಾ). (ಭಾಷೆ, ಕಾವ್ಯ ಮುಂತಾದುವುಗಳ) ಲಕ್ಷಣಗಳನ್ನು ಪ್ರತಿಪಾದಿಸುವ ಗ್ರಂಥ ; ಅಲಂಕಾರಶಾಸ್ತ್ರ, ವ್ಯಾಕರಣ ಇತ್ಯಾದಿ : ಕವಿರಾಜಮಾರ್ಗವು . . . ಅಲಂಕಾರಶಾಸ್ತ್ರಕ್ಕೆ ಸಂಬಂಧಪಟ್ಟ ಲಕ್ಷಣಗ್ರಂಥ (ಕಣಾ. ೦ ಪೀಠಿ); ಈ ಕಾಲದಲ್ಲಿ ಸಾಹಿತ್ಯಾಚಾರ್ಯರು ಲಕ್ಷಣಗ್ರಂಥಗಳನ್ನು ಅನೇಕವಾಗಿ ರಚಿಸಿದರು (ಜಾಸಂ. ೧೬೩). [ಸಂ.]

ಲಕ್ಷಣದೋಷ (ನಾ). [ತರ್ಕಶಾ] ಒಂದು ವಸ್ತು ಇಲ್ಲವೆ ಸಂಗತಿಯ ವಿಶಿಷ್ಟಗುಣಗಳ ನಿರೂಪಣೆಯಲ್ಲಿ ಉಂಟಾಗುವ ಕೊರತೆ. ನ್ಯೂನತೆ: ಇದರಲ್ಲಿ ಅವ್ಯಾಪ್ತಿ, ಅತಿವ್ಯಾಪ್ತಿ, ಅಸಂಭವ, ಆತ್ಮಾಶ್ರಯ ಮತ್ತು ಅನ್ಯೋನ್ಯಾಶ್ರಯಗಳೆಂಬ ಐದು ವಿಧಗಳಿವೆ. 'ದೋಷ' ಪರಾ. [ಸಂ.]

ಲಕ್ಷಣನಿಮಿತ್ತ (ನಾ). = ಲಕ್ಷಣ$_1$ ೧೩ : ಅಂತರಿಕ್ಷನಿಮಿತ್ತ ಭೌಮನಿಮಿತ್ತ . . . ಲಕ್ಷಣನಿಮಿತ್ತ ಭಿನ್ನನಿಮಿತ್ತ ಸ್ವಪ್ನನಿಮಿತ್ತ ಎಂದಿವಷ್ಟಾಂಗನಿಮಿತ್ತಮೆಂಬುವು . . . ಶರೀರದ ಹಲ ಕುಲಿಶ . . . ಶ್ರೀವತ್ಸ ಚಕ್ರ ಅನಲ ಕುಂಭ ಎಂಬ ದ್ವಾತ್ರಿಂಶತ್ ಶುಭಲಕ್ಷಣಾಂಗಳಂ ನೋಡಿ ಶುಭಾಶುಭಂಗಳಂ ಪೇಟ್ಪುದು ಲಕ್ಷಣನಿಮಿತ್ತಮೆಂಬುದು (ಪಾಸಂ. ೩೩೬). [ಸಂ.]

ಲಕ್ಷಣವಂತ (ನಾ). ೧. ಶುಭಚಿಹ್ನೆಗಳಿಂದ ಕೂಡಿದವನು ; ಅದೃಷ್ಟವಂತ. ೨. ಬೆಲುವು ; ಸುಂದರ : ಹುಡುಗನು ಲಕ್ಷಣವಂತನೆಂದು ಅವನ ಮನಸ್ಸಿಗೆ ಹೋಯಿತು (ಜಾಗೃ. ೦೮೩). [<ಸಂ. ಲಕ್ಷಣವತ್]

ಲಕ್ಷಣವಂತೆ (ನಾ). ಚೆಲುವೆ ; ಸುಂದರಿ : ಆ ಹುಡುಗಿ ತುಂಬ ಲಕ್ಷಣವಂತೆ (ರಾಷ). [ಲಕ್ಷಣವಂತ + – ಎ]

ಲಕ್ಷಣವಿಧಿ (ನಾ). ವ್ಯಾಖ್ಯೆಯ ನಿಯಮ ; ಲಕ್ಷಣದಲ್ಲಿ ಹೇಳಿರುವ ಕ್ರಮ ; ಕೋಷ್ಟಾಂಡದ ಪತ್ಯಕ್ಕಂ ಬಿಂದುಗಮುದಬಿಬುಗಮುಂ ಲೋಪ ವೃತ್ತಿ ಲಕ್ಷಣವಿಧಿಯಿಂ (ಕಬಾಪ. ೨೯೪). [ಸಂ.]

ಲಕ್ಷಣಶಾಸ್ತ್ರ (ನಾ). ದೈಹಿಕಬಿಹ್ನೆಗಳಿಂದ ಮನುಷ್ಯರ ಮತ್ತು ಪ್ರಾಣಿಗಳ ಸ್ವಭಾವ, ಯೋಗ್ಯತೆಗಳನ್ನು ತಿಳಿದು ಹೇಳುವ ಶಾಸ್ತ್ರ : ಅಕ್ಷರ ಲಕ್ಷ ಗಂಧರ್ವ ಜ್ಯೋತಿಷ್ಯ . . . ಸಾಮುದ್ರಿಕಶಾಸ್ತ್ರ ಲಕ್ಷಣಶಾಸ್ತ್ರ ಅಶ್ವಪರೀಕ್ಷೆ ಗಜಶಿಕ್ಷೆ . . . ಇವೆಲ್ಲವ ಕಲಿತಡೇನೋ (ಪುರಂದಾ. ೪೩-೩೦). [ಸಂ.]

ಲಕ್ಷಣಾವೃತ್ತಿ (ನಾ). [ಕಾವ್ಯಮೀಮಾ] "ಶಬ್ದದ ವಾಚ್ಯಾರ್ಥವು ಸನ್ನಿವೇಶಕ್ಕೆ ಹೊಂದದಿದ್ದಲ್ಲಿ, ಹೊಂದಿಕೆಯಾಗುವಂತೆ ಅದನ್ನು ಸರಿಪಡಿಸಿ ಅರ್ಥ ಕೊಡುವ ಮತ್ತೊಂದು ವೃತ್ತಿ, ಕೆಲಸ ಮಾಡುತ್ತದೆ : ಇದಕ್ಕೆ ಲಕ್ಷಣಾವೃತ್ತಿಯೆಂದೂ, ಇದರಿಂದ ಬರುವ ಅರ್ಥಕ್ಕೆ ಲಕ್ಷ್ಯಾರ್ಥವೆಂದೂ ಹೆಸರು" (ಕಾಕೃಪ್ರ. ೨೫) : ಅರ್ಥವು ಮುಖ್ಯವಾಗಿ ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಮೂರುವಿಧ ; ಈ ಅರ್ಥಗಳನ್ನು ಕೊಡುವ ಶಬ್ದಗಳಿಗೆ (ಕ್ರಮವಾಗಿ) ವಾಚಕ, ಲಕ್ಷಕ, ವ್ಯಂಜಕಗಳೆಂದೂ ಅವುಗಳಲ್ಲಿರುವ ಸಾಮರ್ಥ್ಯಕ್ಕೆ (ಅಥವಾ ವೃತ್ತಿಗೆ – ಕ್ರಮವಾಗಿ) ಅಭಿಧಾವೃತ್ತಿ, ಲಕ್ಷಣಾವೃತ್ತಿ, ವ್ಯಂಜನಾವೃತ್ತಿ ಎಂದೂ ಹೆಸರು (ಕೃಪ್ರ. ೦೬೬). [ಸಂ.]

ಲಕ್ಷಣಾವ್ಯಾಪಾರ (ನಾ). = ಲಕ್ಷಣಾವೃತ್ತಿ : ಶಬ್ದವು ಮುಖ್ಯವಾದ ವೃತ್ತಿಯನ್ನು (= ಅಭಿಧಾವ್ಯಾಪಾರವನ್ನು) ಬಿಟ್ಟು ಗುಣವೃತ್ತಿಯಿಂದ (= ಲಕ್ಷಣಾವ್ಯಾಪಾರದಿಂದ) ಅರ್ಥವನ್ನು ಬೋಧಿಸುವುದಕ್ಕೆ ಒಂದು ಪ್ರಯೋಜನವೇ ಕಾರಣವಾಗಿರುವುದಷ್ಟೆ (ಕೃಪ್ರಾಕೋ. ೪೬). [ಸಂ.]

ಲಕ್ಷಣೆ (ನಾ). = ಲಕ್ಷಣಾವೃತ್ತಿ : ವಾಚ್ಯ ಲಕ್ಷ್ಯದ ತಿಳಿನದಾವುದು ಲಕ್ಷಣೆಯುಲವಕ್ಕೆಕ್ಕವಂತಪುದು (ಅಪ್ಪಕ. ೩-೦೪) ; ಅರ್ಥಪ್ರಕರಣ ಮೊದಲಾದವುಗಳಿಂದ ಶಕ್ಯಾರ್ಥವ ಹೇಳಕೂಡದೆ ಶಕ್ಯಾರ್ಥ ಸಂಬಂಧವುಳ್ಳದನ್ನು ಜೇಳಿದರೆ, ಅದು ಲಕ್ಷಣೆ (ಕೂಪುಗ. ೦೬೦) ; ಈ ಉಕ್ತಿಯಲ್ಲಿ ಲಕ್ಷಣೆಯ ಚಮತ್ಕಾರವಿದೆ (ಕೃಲಕ್ಷಪ್ರ. ೩). [ಸಂ. ಲಕ್ಷಣಾ]

ಲಕ್ಷವರಾಳಿ (ನಾ). [ಸಂಗೀತ] ಏಳು ಬಗೆಯ ಮಿಶ್ರರಾಗಗಳಲ್ಲಿ ಒಂದು : ಶೋಕವರಾಳಿ ವಸಂತವರಾಳಿ ಜೋಗಿವರಾಳಿ. . .ಲಕ್ಷವರಾಳಿ ನಾಗವರಾಳಿಯೆಂಬ ವರಾಳೀಸಪ್ತಕವೇ ಶುದ್ಧವರಾಳಿಗೆ ಮಿಶ್ರಂಗಳ್ (ಪಪಗೀ. ೨೩೩). [ಲಕ್ಷ್ಯ + ವರಾಳಿ]

ಲಕ್ಷಾಂತರ (ನಾ). ಲಕ್ಷಗಟ್ಟಲೆ ; ಬಹಳ : ಯುದ್ಧಕ್ಕೆ ಹೋದ ಲಕ್ಷಾಂತರ ಸೈನಿಕರ ವೈಕ ಸಾವಿರಾರುಜನ ಗೈರುವಿಲೆ ಆಗಬಿಟ್ಟಿದ್ದಾರೆ (ಪಪಚೋ. ೧೯೬). [ಸಂ.]

ಲಕ್ಷಾಧಿಕಾರಿ (ನಾ). ಲಕ್ಷಸಂಖ್ಯೆಯ ಸಂಪತ್ತಿನ ಒಡೆಯ: ಲಕ್ಷಾಧೀಶ್ವರ: ದುರದೃಷ್ಟದಿಂದ ಲಕ್ಷಾಧಿಕಾರಿಯಾಗಿದ್ದವನು ದರಿದ್ರನಾದನು (ಕೂಪ). [ಸಂ. ಲಕ್ಷಾ ಧಿಕಾರಿನ್]

ಲಕ್ಷಾಧಿಪತಿ (ನಾ). = ಲಕ್ಷಾಧಿಕಾರಿ : ಲಕ್ಷಾಧಿಪತಿ ಮಹಾತ್ಮರ ಮುಂದೆ ಬಂದು ಲಕ್ಷಲಕ್ಷಾಂತರದಿ ಹರಸುವೆವು ಬೇಡಿ (ಕಾಪ್ರ. ೦೫-೦೬). [ಸಂ.]

ಲಕ್ಷಾಧೀಶ್ವರ (ನಾ). = ಲಕ್ಷಾಧಿಕಾರಿ : ಅವನೊಬ್ಬ ಲಕ್ಷಾಧೀಶ್ವರ (ಕೂಪರು. ೩೦೦). [ಸಂ.]

ಲಕ್ಷಿತ (ಗು). ೧. ಲಕ್ಷಣಗಳಿಂದ ಕೂಡಿದ ; ಕುರುಹುಗಳನ್ನುಳ್ಳ. ೨. ಗಮನಕ್ಕೆ ಬಂದ : ಗಮನಿಸಿದ; ಗ್ರಹಿಸಲಾದ. ೩. ಗುರಿಯಾಗಿಟ್ಟುಕೊಂಡ. (ನಾ). ೧. ಲಕ್ಷಣಗಳಿಂದ ಕೂಡಿದುದು; ಚಿಹ್ನೆಗಳಿಂದ ಕೂಡಿದುದು : ಪೂರ್ವಾಪರವಿಷಯವಿಮಿಶ್ರಾರ್ಥವ್ಯಂಜನಾ ಯೋಗಸಂಕ್ರಮಣಲಕ್ಷಣಲಕ್ಷಿತಮಪ್ಪ [ಜಾಣಾಂ. ಲಕ್ಷಣಮಪ್ಪ] . . . ಶುಕ್ಲ ಧ್ಯಾನದೊಳ್ (ಕವಿಕ. ೬-೩೯ ಪ) ; ಅಕ್ಷೋಣಲಕ್ಷಣಲಕ್ಷಿತಂಗಳಪ್ಪ ಪುತ್ರನಂಗ ಪ್ರತ್ಯಂಗಂಗಳಂ ನೀಡುಂ ಭಾಮಿ ನೋಡಿ (ಕಂಪ್ರಕೃ. ೬-೦೮೨ ಪ) ; ತಾಪತ್ರಯದ ಲಕ್ಷಣಲಕ್ಷಿತವನಱಿದು . . . ಪಡೆವಂಗರಿದೆನಿಸುವುದದಾವುದ್ಯ (ಶುಪ್ಯಾಕಾ. ೨-೭೦). [ಸಂ.]

ಲಕ್ಷಿಸು (ಕ್ರಿ). ೧. ಗುರಿಯಿಡು : ವನಿಗಡಯಂ ತೊಟ್ಟು . . . ಕೀಣಮುನಿಂದಟ್ಟು ಕಲಹಮನೊಡಂಬಟ್ಟು ಧಾಳಾಕ್ಷನಂ ಲಕ್ಷಿಸಿ ನೋಡಿ (ನಂಗಳ. ೬-೨೬ ಪ). ೨. ಹೊಂದಿಸು ; ಅಳವಡಿಸು : ಸಕ್ಕದದ ತದ್ಭವಂಗಳ ಲಕ್ಷಣಮಂ ಕನ್ನಡಕ್ಕೆ ಲಕ್ಷಿಸಿ ಪೇಟ್ಟಿಂ (ಕಬಾದ. ೨೫೩). ೩. ಗಮನಿಸು ; ಲಕ್ಷ್ಯಕ್ಕೆ ತೆಗೆದುಕೊಳ್ಳು ; ಪರಿಗಣಿಸು : ತದಾಸ್ಯದ ಗಂಧವಂತೆ ತದ್ಗಂಧಮೆಂದು ಲಕ್ಷಿಸುಗವಳಂ (ಕೂಗೋಚ. ೦೦-೩೪) ; ರಚಿತಮಾಯ ವಿವಾಯ ಮಾಯಾನಟಿತ ಮಾಯಾಧಾರ . . . ಲಕ್ಷಿಸಿ ಕರುಣಿಸುವುದು (ಕಾಬ್ಯಾ. ೬೦೪ ೭-೧೦) ; ಸೇವರೂ ಸಹ ಅವಶ್ಯವಿದ್ದಾಗ ಅಪ್ಪಿ ಅವಳೊಂದಿಗೆ ಕೂಡಿರುತ್ತಾರೆಂಬುದನ್ನಾದರೂ ನೀವು ಲಕ್ಷಿಸಿರುವಿರೋ ? (ಪಪಾಂಕ. ೪೬೯). [<ಲಕ್ಷ್ಯ + – ಇಸು]

ಲಕ್ಷುಮಿ 'ಲಕುಮಿ' ನೋ.

ಲಕ್ಷೆ 'ಲಕ್ಷ್ಯ' ನೋ.

ಲಕ್ಷ್ಮ (ನಾ). ೧. ಗುರುತು ; ಚಿಹ್ನೆ ; ಕುರುಹು : "ಅಭಜ್ಞಾನಚಿಹ್ನ ಲಾಂಛನ ಲಕ್ಷ್ಮಾಖ್ಯಂ" (ಪಪ್ರಾಕೋ. ೦೨-೬೯). ೨. ಚಂದ್ರನಲ್ಲಿರುವ ಕಳಂಕ ; —ಕರೆ : "ಮೃಗಃ . . . ಲಕ್ಷ್ಮ, ಲಕ್ಷಣಂ, ಕಳಂಕಃ . . . ಈ ೨ ಚಂದ್ರಮಂಡಲದ ನಡುವಣ ಕರ್ಪು" (ಪಪಾಮು. ೯-೧೪) ; ನಗೆಯಂಬೀ ನೆವದೆ ಬೆಳಗೀ ಮೊಗಮಂಬೀ ನೆವದೆ ಶಿಂಗಳೊಳಗೆಸೆದಾದಂ ಸೊಗಯಿಸಿ ತೋರ್ಕುಂ ಲೋಚನಯುಗಮೆಂಬೀ ನೆವದೆ ಲಕ್ಷ್ಮವೆನೆ ತದ್ವ್ಯಜಂ (ಕಾದಾ. ೬-೨೬) ; ತೆಳ್ಪಂ ತಾಳ್ದ ಚಂದ್ರೋಪಲಮಮಳಶರತ್ಪೂರ್ಣಶುಭ್ರಾಂಶುವಂ ಸಂತಸದಿಂದಂತಲ್ಲಿ ಪಟ್ಟಿರ್ದೆರಲೆವಱ್ ಲಸಲ್ಲಕ್ಷ್ಮಮಂ ಪೋಲ್ತು (ಕಬ್ಭಾ. ೬-೬೬) ; ಚಂದ್ರಮಧ್ಯವಟಪತ್ರದಲ್ಲಿ ಲಕ್ಷ್ಮೀದೈನಿರ್ಮನೆನೆ ಲಕ್ಷ್ಮ [ಪಾಣಾಂ. ಕ್ಷ್ಮ] ಮೊಪ್ಪುಗುಂ (ಪಾಪಪ್ರ. ೦೦-೬೨). ೩. ಮುಖ್ಯವಾದುದು ; ಪ್ರಮುಖವಾದುದು. [ಸಂ. ಲಕ್ಷ್ಮನ್]

ಲಕ್ಷ್ಮಣ (ನಾ). ೧. ಗುರುತುಳ್ಳದು ; ಚಿಹ್ನೆಯುಳ್ಳದು. ೨. ಶುಭ ಲಕ್ಷಣದಿಂದ ಕೂಡಿದವನು ; ಭಾಗ್ಯಶಾಲಿ ; ಸುದೈವಿ. ೩. ಒಂದು ಬಗೆಯ ಪಕ್ಷಿ ; ಸಾರಸ. ೪. ದಶರಥನ ಮಗ ; ರಾಮನ ತಮ್ಮ ; ಸೌಮಿತ್ರಿ : ಎದ್ಮುದಂಗಂ . . . ರಾಮಂಗಂ ಲಕ್ಷ್ಮಣಂಗೆವಾನತನಾದಂ (ಕಂಪಾರಾ. ೬-೭೩) ; ಧರಣಿಜೆಯ ಬಿಜ್ಜುನುಡಿಗೆ ಲಕ್ಷ್ಮಣ ತೆರಳಿದನಭಸಂಧಿಯಲಿ ಸೀತಾತರುಣಿಯನು ಕದ್ದೊಯ್ದನವಯಿಲಾ ದಶಗ್ರೀವ (ಕೂಪಣಾ. ೬-೯ ಸೂಪಪ) ; ಹಿಂದೆ ಶೂರ್ಪಣಖಿ ಲಕ್ಷ್ಮಣವನಂಡಲೆದು ಪಡೆದಂದಮಂ ನೆನೆದು (ಕೃಪಣಾ. ೦೬-೦೪). [ಸಂ.]

ಲಕ್ಷ್ಮಣಕಂದ (ನಾ). ಒಂದು ಬಗೆಯ ಗಡ್ಡೆ : "ಮಂಜಿಷ್ಠಾ—ಮಂಜಿಷ್ಠೆ. ಲಕ್ಷ್ಮಣಕಂದ" (ಓಪಧಿ. ೦೦೬). [<ಸಂ.ಲಕ್ಷ್ಮಣಾಕಂದ]

ಲಕ್ಷ್ಮಣಕ್ಕಿ (ನಾ). ಹೆಣ್ಣು ಸಾರಸಪಕ್ಷಿ : "ಸಾರಸಾ, ಲಕ್ಷ್ಮಣಾ—ಈ ೨ ಸಾರಸಿ" (ಪಣಾಮು. ೨೦-೨೦) ; "ಲಕ್ಷ್ಮಣಾ. ಸಾರಸಸ್ಯ ಯೋಷಿತ್—ಹೆಣ್ಣಾಜಲಪಕ್ಷಿ" (ಸಿಣಾಂಕಿ. ೦೬೦). [ಸಂ. ಲಕ್ಷ್ಮಣಾ]

ಲಕ್ಷ್ಮಿ (ನಾ). ೧. ಸಂಪತ್ತು ; ಐಶ್ವರ್ಯ ; ಭಾಗ್ಯ. ೨. ಸುದೈವ ; ಅದೃಷ್ಟ. ೩. ಏಳಿಗೆ ; ಅಭಿವೃದ್ಧಿ ; ಯಶಸ್ಸು. ೪. ಚೆಲುವು ; ಶೋಭೆ ; ಸೌಂದರ್ಯ : "ಲಕ್ಷ್ಮೀ, ಶ್ರೀ, ಕಾಂತಿ, ವಿಭ್ರಮ ಮೆಂದಿವು ಶೋಭೆಯಲ್ಲಿಯುಂ ವರ್ತಿಸುಗುಂ" (ಕಣಾಮು. ೨೩೬-೩೬) ; ಲಕ್ಷ್ಮಿ ಮತ್ತು ಶ್ರೀ ಎಂಬ ಎರಡು ಪದಗಳೂ ಸೌಂದರ್ಯವೆಂಬ ಅರ್ಥದಲ್ಲಿ

ಪ್ರಯೋಗದಲ್ಲಿವೆ (ಶಾಂಪ. ೪೪). ೫. ಐಶ್ವರ್ಯ ಮತ್ತು ಸೌಂದರ್ಯಗಳ ಅಧಿದೇವತೆ : ವಿಷ್ಣುವಿನ ಹೆಂಡತಿ : " ಶರಧಿಸುತೆ ರಾಮೆ ಗೋವಿನಿ ಲಕ್ಷ್ಮಿ ಪದ್ಮಮಂದಿರೆ . . . ಮನ್ಮಚಮತೆಯಿನಲು ಸಿಗಕ್ಕುನಾವುಂ " (ಪುಂಗಣಾ. ೬-೦೯) ; ತಕ್ಕೆಯೊಳ್ ಕೆಡೆಗಡೆಯುವ ಸ್ವಪವಿತಂಬಮಿವೆ ಲಕ್ಷ್ಮಿ ನಿನ್ನ ದೂಸಱಿನಲ್ಕೇ (ಗದಾಯು. ೯-೬) ; ಆದಿಶಕ್ತಿಯು ಮಗ ವಿಷ್ಣು ಅವನ ಅರ್ಧಾಂಗಿ ಲಕ್ಷ್ಮಿ (ಜಾಪ. ೬೩೨) ; ಭಾಗ್ಯದ ಲಕ್ಷ್ಮೀ ಬಾರಮ್ಮಾ ನಮ್ಮಮ್ಮಾ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮಾ (ಕೃದಂದ. ೦-೫೦೦ ಪ್ರಸ್ತಾ). ೬. ಒಂದು ಬಗೆಯ ಸಸ್ಯ : ಕರಿಯ ಉಗುನಿ : ಕೃಯಿಯುಮಿ ಲಕ್ಷ್ಮಿಯಂ ಪೇಣ್ ಮಲಬೂರಿಬೆಯುಂ ಪಯೋನ್ತಿತಂ ಕುಡಿಗಾಜ್ಯಪ್ರಯುತಂ ಮೇಗಂಬಿನೆ ಲಕ್ಷ್ಮಿಯ ಬೇರಂ ಸಸ್ಯಮೆಱಿಗೆ ಗರ್ಭಿಣಿಯಕ್ಕುಂ (ಕೋಗಳಾಸ. ೯-೦೭೭) ; ತಿಗಡ ಪರಾಪಕೋಕ ಕೆಲಂದೆ(ದೇ)ಗು . . ಲಕ್ಷ್ಮಿಯೆಂಬ ಗಿಡು ಪುಟ್ಟದ ತಾಣಮನೊಗ್ಗಾಗಿ ನೀಂ ಬಗೆಯುವಱಿಂದ ತೆಂಕೆರಡು ಕಯ್ಯಾರಲಕ್ಕುಗುಬ್ಬಂದು ಧಾರೆ ಬೇಗೊಗೆಗು (ಅಕ್ಕಪ. ೧೦-೫೫). ೭. ಒಂದು ಬಗೆಯ ಗಂಧದ್ರವ್ಯ : " ಯೋಗ್ಯ, ವೃದ್ಧಿ, ಸಿದ್ಧಿ, ಲಕ್ಷ್ಮಿ – ವೃದ್ಧಿಯೆಂಬ ಗಂಧದ್ರವ್ಯಂ " (ಣಾಶಾ. ೪)- ೮. ಅರಿಸಿನ. ೯. ಒಬ್ಬಾಕೆಯ ಹೆಸರು : ವಿಷ್ಣುಮಹೀಶಂ ಸಲೆ ತಾನೆ ವಿಷ್ಣುವೆನಿಪಂ ಲಕ್ಷ್ಮೀವಧೂವಲ್ಲಭಂ (ಎಳೆ. ೪. ೪೫೫೯. ೬೨-೦೭ ; ೨೧೧೨). ೧೦. [ಸಂಗೀತ] ಇಪ್ಪತ್ತಾರು ಆರ್ಯಾಭೇದಗಳಲ್ಲಿ ಒಂದು : ಲಕ್ಷ್ಮೀ ಮೊದಲಾದ ಇಪ್ಪತ್ತಾರು ಆರ್ಯಾಭೇದಗಳನ್ನು (ಸಂಗೀತ)ರತ್ನಾಕರದಲ್ಲಿ ಹೇಳಿದೆ (ಪಟ್ರ. ೦೦೩).

ಲಕ್ಷ್ಮೀಕಾಸು = ಲಕ್ಷ್ಮಿಯ ಚಿತ್ರವಿರುವ ಕಾಸು · ಲಕ್ಷ್ಮೀಕಾಸುಗಳನ್ನು ಪೋಣಿಸಿದ ಸರವನ್ನು ಅಭರಣವಾಗಿ ಧರಿಸುತ್ತಾರೆ (ಭೂಪ).

ಲಕ್ಷ್ಮೀಜೇಳು = ಜರಿ ; ಸಾವಿರಕಾಲು ಜೇಳು : ಲಕ್ಷ್ಮೀಜೇಳು ಕಂಡರೆ ತುಂಬ ಅದೃಷ್ಟವೆಂದು ಅನೇಕರ ನಂಬಿಕೆ ಇದೆ (ಕೃಷ್ಣ).

[ಸಂ. ಲಕ್ಷ್ಮೀ]

ಲಕ್ಷ್ಮೀಕಟಾಕ್ಷ (ನಾ)· ಲಕ್ಷ್ಮಿಯ ಕೃಪೆ ; ಸೌಭಾಗ್ಯ : ಶ್ವೇತಚಾಮರವನ್ನುಪಯೋಗಿಸುವುದರಿಂದ . . . ಲಕ್ಷ್ಮೀಕಟಾಕ್ಷಕ್ಕೂ ಅವಾಸಸ್ಥಾನವಾಗಿ . . . ಚಂದ್ರನಿಗೆ ಸಮಾನವಾದ ಬಳುವು ಉಂಟಾಗುವುದು (ಪಟ್ಯ. ೩೬).

[ಸಂ.]

ಲಕ್ಷ್ಮೀಕಾಂತ (ನಾ)· ಲಕ್ಷ್ಮಿಯ ಪತಿ ; ವಿಷ್ಣು : ಇಂತು ರಮೆಯಮನೋರಥಂಗಳ ಸಂತಸವನೀವುತ್ತ ಲಕ್ಷ್ಮೀಕಾಂತವಸಿದಿರೆ (ಕಾಶಿಖ. ೪೪-೩೩) : ಮುಂದೆ ಸುರಪುರದ ಲಕ್ಷ್ಮೀಕಾಂತನಾವ ತೆಱದಿಂದ ಪರಿಹರಿಪುದನೊ 'ತನ್ನ ಶರಣಾಗತರನೊಂದುಪಾಯದೊಳುಳುಹದಿರನೆಂದು ಧೈರ್ಯಮಂ ತಾಳ್ದರಿಂದ್ರಾದಿ ಸುರರು (ಕೃಪಾಣ. ೯-೩೨). [ಸಂ.]

ಲಕ್ಷ್ಮೀಧವ (ನಾ)· = ಲಕ್ಷ್ಮೀಕಾಂತ : ಲಕ್ಷ್ಮೀಧವನ ಕಳುಹಿದನಿತ್ತ ಬೀಳ್ಕೊಟ್ಟನು ಸುಯೋಧನನ (ಪಾಣ್ಡವ. ೦೦-೦೦)· [ಸಂ.]

ಲಕ್ಷ್ಮೀನಿಡ (ನಾ)· ಲಕ್ಷ್ಮಿಯ ವಾಸಸ್ಥಳ ; ಸಂಪಿಸಂಪತ್ತುಗಳ ಆಶ್ರಯಸ್ಥಾನ : ಆ ನಾಡಿಂಬ ಸರೋವರಕ್ಕೆ ವಿಕಸತ್ಪಂಕೇಜಮೆಂಬಂತೆ ಲಕ್ಷ್ಮೀನಿಡಂ ಭುವನೋನ್ನತಂ . . . ಕಾಕಂದಿನಾವಮಂ ಪುರಂ (ಕಪ್ಪ. ೯-೦೯)· [ಸಂ.]

ಲಕ್ಷ್ಮೀಪತಿ (ನಾ)· ೧· = ಲಕ್ಷ್ಮೀಕಾಂತ : ನಿಜೈನಿಕವನಲ್ಲಿ ಬಿಡಿಸಿದ ದೇವಪುರ ಲಕ್ಷ್ಮೀಪತಿಯ ಮೈದುನಂ ಮುದದೊಳು (ಕೃಪಾಣ. ೯-೦೮). ೨. ಸಿರಿವಂತ; ಧನಿಕ : ಲಕ್ಷ್ಮೀಪುತ್ರರೂ ಲಕ್ಷ್ಮೀಪತಿಗಳ್ಗೂ ಸಾಹಿತ್ಯದ ಕಡೆಗೆ ತಮ್ಮ ದೃಷ್ಟಿಯನ್ನು ತಿರುಗಬೇಕು (ಕಾಪಾಣ. ೯೭).

ಲಕ್ಷ್ಮೀಪುತ್ರ (ನಾ)· ೧· ಲಕ್ಷ್ಮಿಯ ಮಗ ; ಕಾಮ ; ಮನ್ಮಥ. ೨. ಐಶ್ವರ್ಯವಂತ ; ಧನಿಕ : ಲಕ್ಷ್ಮೀಪುತ್ರರೂ. ಲಕ್ಷ್ಮೀಪತಿಗಳೂ ಸಾಹಿತ್ಯದ ಕಡೆಗೆ ತಮ್ಮ ದೃಷ್ಟಿಯನ್ನು ತಿರುಗಬೇಕು (ಕಾಪಾಣ. ೯೭) ; ಬೂರ ಹೊರಗೆ, ಊರಿಗೆ ತಾಗಿಕೊಂಡು, ಲಕ್ಷ್ಮೀಪುತ್ರರಾದ ಬರ್ಮಾ ಮನೆತನದವರು ಕಟ್ಟಿಸಿದೊಂದು ದೇವಾಲಯವಿದೆ (ಆಂಪ್ರ. ೪೩)· [ಸಂ.]

ಲಕ್ಷ್ಮೀರಮಣ (ನಾ)· = ಲಕ್ಷ್ಮೀಕಾಂತ : ಓಲಸನಿಕಂ ಮಾಡಿದಂದಿನ ಕನಾಟಿನಗ್ಗದ ಹಾಳೆಹಳನಿಂತಡಸಿ ಬಂದಾದರುತ್ತ ಲಕ್ಷ್ಮೀರಮಣನಳುಕಿದನು (ಅಸ್ತ ೪೮-೬೨) : ಎಳನಗೆಯು ದೆಬ್ಬಿಂಗಳು ಪನಿಸುವ ದೇವಪುರ ಲಕ್ಷ್ಮೀರಮಣನಾಸ್ಥಚಂದ್ರನಾನಂಪ್ರಮಂ ಜನಗೀಯಲಿ (ಕೃಬಣಾ. ೦-೦). [ಸಂ.]

ಲಕ್ಷ್ಮೀಲೋಲ (ನಾ)· = ಲಕ್ಷ್ಮೀಕಾಂತ . ಲಕ್ಷ್ಮೀಲೋಲನಾಜ್ಞೆಯಲಿವರು ಬಲಿದರು ತಮ್ಮ ವೈಸರವ (ಕಾಬ್ಯಕಾ. ೬-೦) ; ಜೀಯು ಚಕ್ರಿಯೆ ಭೀತವಾಸ ಲಕ್ಷ್ಮೀಲೋಲ . . . ಬಿಟಿಸು ಸಂಸ್ಕಾರವಾಗದಿದೆನ್ನನು (ಕೃಬಣಾ. ೦೩-೨೬). [ಸಂ.]

ಲಕ್ಷ್ಮೀವಲ್ಲಭ (ನಾ)·= ಲಕ್ಷ್ಮೀಕಾಂತ : ಅವ್ಯಾಹನಂ . . . ಲಕ್ಷ್ಮೀವಲ್ಲಭಂ ಗೆತ್ತಿದಾ ಗಗನಸ್ಪೃಕ್ಸಮ ಹೇಮಮಂಡಪಮಿಸರ್ ಸಾಲ್ದುಕ್ಕು ಹೇಮಾಚಲಂ (ಜಗಪ. ೦-೨೩). [ಸಂ]

ಲಕ್ಷ್ಮೀಶ (ನಾ)· ೧. ಲಕ್ಷ್ಮಿಯ ಒಡೆಯ ; ವಿಷ್ಣು : ಮಂಗಳಂ ಜಯ ಮಂಗಳಂ . . . ಕ್ಷೀರಸಾಗರವಾಸಿ ಲಕ್ಷ್ಮೀಶಗೆ (ಶ್ರೀಪ. ೩-೦೫೮-೨); ವಿರಚಿಸಿದಂ . . . ಹೃದ್ವನಜದೊಳ್ದೇವಪುರದ ಲಕ್ಷ್ಮೀಶ ಪದದ್ವಯ ವನವರಗಂ ಧ್ಯಾನಿಸುವರಡಿಗಳಂ ಸದ್ವಿನಯದಿಂ ಭಜಿಪ ಬಲ್ಪಿಂದ (ಕೃಬಣಾ. ೦-೦೦). ೨. ಕನ್ನಡದಲ್ಲಿ ಜೈಮಿನಿಭಾರತವನ್ನು ರಚಿಸಿದ ಕವಿ : ವಿರಚಿಸಿದಂ . . . ಅಗ್ಗಣಮಾಂಕಿನ ಸುತಂ ಸದ್ವಿನುತಕರ್ಣಾಟಕವಿಜೊತ ಮನೈತ್ರ ಲಕ್ಷ್ಮೀಶನೆಂಬೊರ್ವನು (ಕೃಬಣಾ. ೦-೦೦). ೩. [ಸಂಗೀತ] ಒಂದು ತಾಳದ ಹೆಸರು : ವರಾಳರಾಗದ ಇವರ ವರ್ಣವೂ. ೧೦೮ ತಾಳಗಳಲ್ಲಿ ಒಂದಾದ ಲಕ್ಷ್ಮೀಶತಾಳವ ಶಿಲ್ಪಾನವೂ ಉತ್ಕೃಷ್ಟಕೃತಿಗಳು (ಸಂಗೀಕ. ೩೩).

[ಸಂ.]

ಲಕ್ಷ್ಯ (ಗು)· ೧· ಗುರುತಿಸಲ್ಪಡುವ. ೨. ಲಕ್ಷಣಕ್ಕೆ ವಿಷಯವಾದ ; ವ್ಯಾಖ್ಯೆಯಿಂದ ಹೇಳಲ್ಪಡುವ. ೩. ಗುರಿಯಿಡಬೇಕಾದ; ಉದ್ದೇಶಿಸತಕ್ಕ· ೪· ಗಮನಿಸಬೇಕಾದ ; ಗಣನೀಯ. ೫. ವಿಶಿಷ್ಟವಾದ ಗುಣದಿಂದ ಕೂಡಿದ. ೬. ಏವರಿಸಬೇಕಾದ. ೭. ಪರ್ಯಾಯವಾಗಿ ಸೂಚಿಸುವ. (ನಾ)· ೮. ಗುರುತು ; ಚಿಹ್ನೆ. ೯. ಗುರಿ ; ಧ್ಯೇಯ; ಉದ್ದೇಶ : "ಶರವ್ಯ [ನಿಮಿತ್ತ] ವೇಧ್ಯಮಂತದು ಲಕ್ಷ್ಯಂ" (ಪಟ್ಯ. ೪೫-೦೬) ; ನೆರೆದಿನಿರುಮಿಾ ಲಕ್ಷ್ಯವಿರದಕ್ಕಟ ಸರದ ತೆಗೆಯಲಾರ್ತಿರುಮಿಲ್ಲಾ (ಸಣಪಾ. ೨-೩೨) ; ಸ್ಮರಶರಸಂಧಾನಕ್ಕಂಬುರುಹೇಕ್ಷಣೆ ಲಕ್ಷ್ಯಮಾಗೆ (ಪಾಂಶಿಪ್ರ. ೯-೩೨) ; ತಮ್ಮೂರುಘಟಿಯನು ಲಕ್ಷ್ಯಲಕ್ಷಣ ಭೇದಭಂಗಿಗಳ ಸಾರತರ ಕೋದಂಡಪಂಡಿತರಾರಯಿಕೆಯಲಿ ತಱುದಿ ನಿಂದರು (ಕಾಪ್ಯಾ. ೪೦-೨೬). ೧೦. ಲಕ್ಷಣಕ್ಕೆ ಉದಾಹರಣೆಯಾದುದು ; ದೃಷ್ಟಾಂತ ; ನಿದರ್ಶನ : ವ್ಯಸ್ತುತಮೆಂಬುವಲಂಕೃತಿ ವಿಸ್ತರಮಿಂತಕ್ಕುಮದಱ ಲಕ್ಷ್ಯ ವಿಭಾಗಂ (ಕಾಲಾ. ೬-೦೬೯); ತಾಂಡವಕ್ಕೆ ಲಕ್ಷ್ಯಮಿದೆಂಬಂತಿರೆ ದೇವಮನುಜ ಸಭೆಗಿಟ್ಟರಿ ಬೆಚ್ಚರ ದಿವಿಜನಾಯಕಂ ನರ್ತಿಸಿದಂ (ಪಟ್ಟಿ. ೦೩-೦೨) : ಗುಣವರ್ಮ ಶ್ರೀಪುಷ್ಪಯರ ಹೊನ್ನನ ಹಂಪನ ಸುಜನೋತ್ಕಂಸನ ಸುಮಾರ್ಗಮಿದಜಿಂಗೆ ಲಕ್ಷ್ಯಂ (ಕಬಾದ. ೪ ೫೦೪). ೧೧. ಗಮನ ; ಧ್ಯಾಸ ; ಅವಧಾನ : ಈ ಏಸುಮಂಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನಡೆಯುವವನಿಗೆ ಬಹುತರ ಕೋಗಗಳು ಬರಲಿಕ್ಕಿಲ್ಲ (ಪುಂಆಯು. ೯-೩೩); ಒಂದು ಕೊಂಬೆಯುಳ್ಳ ದೊಡ್ಡ ಕವಿಯ ಮರದ ಕೊರಡು ಅವನ ಲಕ್ಷ್ಯವನ್ನು ಎಳೆಯಿತು (ಪಾಣಾ. ೪೪)- ೧೨. ಕೋರಿಕೆ ; ಕಪಟ ; ಮೋಸ : ಲಕ್ಷ್ಯದೀಪಾರಾಧನೆಯ ಹಬ್ಬವೆಂದು ಲಕ್ಷಾಧಿಪತಿಮಹಾತ್ಮರ ಮುಂದೆ ಬಂದು ಲಕ್ಷಲಕ್ಷಾಂತರವ ಹರಸುವೆವು ದೇವಿ. ಲಕ್ಷ್ಯವೇನುಂ ಬೇಡ ; ಮನವೊರಿದು

ನೀಡಿ (ಕಂತ್ರಿ. ೦೩-೬). ೧೫. ಪಾತ. ಲಕ್ಷ್ಯ, ಶೀಘ್ರ, ಘಾತ ಮತ್ತು ಬಹುವೇಗವೆಂಬ ಐದು ಬಗೆಯ ಬಾಣಪ್ರಯೋಗಗಳಲ್ಲಿ ಒಂದು : ಪಾತಂ ಲಕ್ಷ್ಯಂ ಶೀಘ್ರಂ ಘಾತಂ ಬಹುವೇಗಮೆಂಬಿವಯ್ದೇಸಿನೊಳಂತೀತನ ಮೊರೆಯಿಲ್ಲೆನಿಸಿದುದಾತನ ಬಿಲ್ಬಲ್ಮಿ ಸುರಿನಂಬರತಲದೊಳ್ (ಕಂತಿಪು. ೧೪-೦೫). ೧೪. ಒಂದು ಸಂಖ್ಯೆ: ನೂರುಸಾವಿರ : ಲಕ್ಷ.- ೧೫. [ಕಾವ್ಯಮೀ] ಲಕ್ಷಣಾವೃತ್ತಿಯಿಂದ ಸೂಚಿತವಾಗುವ ಅರ್ಥ : ಅರ್ಥವು ಮುಖ್ಯವಾಗಿ ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಮೂರು ವಿಧ (ಕೃಷಿ. ೦೬೭) ; ಲಕ್ಷಣೆಯೆಂಬ ವೃತ್ತಿಯಿಂದ ತೋರುವರ್ಥವು ಲಕ್ಷ್ಯವು (ಜೀಪಂಗ. ೧೩೦).

ಲಕ್ಷ್ಯಕ್ಕೆ ತರು = ಗಮನಕ್ಕೆ ತರು : ಆ ವಿಚಾರವನ್ನು ಅವನ ಲಕ್ಷ್ಯಕ್ಕೆ ತಂದರು (೬೩೨). ಲಕ್ಷ್ಯಕ್ಕೆ ಬಾ = ಗಮನಕ್ಕೆ ಬರು ; ಮನಸ್ಸಿಗೆ ಬರು : ಹಿರಿಯರ ಬುದ್ಧಿಮಾತು ಅವಳ ಲಕ್ಷ್ಯಕ್ಕೆ ಬರಲಿಲ್ಲ (೬೩೨). [ಸಂ.]

ಲಕ್ಷ್ಯಕೊಡು ' ಲಕ್ಷ್ಯಗೊಡು ' ನೋ.

ಲಕ್ಷ್ಯಗೊಡು, ಲಕ್ಷ್ಯಕೊಡು (ಕ್ರಿ). ಗಮನ ಕೊಡು ; ಮನಸ್ಸಿಗೆ ತಂದುಕೊಳ್ಳು : ಕರಗಿದಂತಃಕರಣದಲ್ಲಿಬೆ ಎರಕಹೊಯ್ದಿರಿ ನನ್ನನೆ ಹೋದ ಹೋದೆಡೆ ಲಕ್ಷಲಕ್ಷದಿ ಲಕ್ಷ್ಯಗೊಟ್ಟರಿ ಸುಮ್ಮನೆ (೨೦೮೫. ೩೨-೦೦) ; ಅತ್ತ ಕಡೆಗೆ ಹೆಜ್ಜಾಗಿ ಲೆಕ್ಷ್ಯಗೊತದವನಂತೆ . . . ನೋಡುವುದರಲ್ಲಿ ತಲ್ಲೀನನಾಗಿದ್ದನು (೨೦೦೪. ೫೬). ಲಕ್ಷ್ಯಕೊಡು : ಅವನ ಎಲೆಗಳ ಕಡೆಗೇ ಲಕ್ಷ್ಯ ಕೊಟ್ಟರೂ ತನ್ನ ಆಟವನ್ನು ಸಹ ಬಾಳ ಎಚ್ಚರಿಕೆಯಿಂದೆ ಆಡುತ್ತಿದ್ದನು (೨೦೧೦೫. ೩೨). [ಲಕ್ಷ್ಯ + ಕೊಡು]

ಲಕ್ಷ್ಯಚ್ಯುತ (ನಾ). ಗುರಿ ತಪ್ಪಿದವನು : "ಲಕ್ಷ್ಯಚ್ಯುತಂ ತಪ್ಪರೆಚ್ಚಸಕ್ಕುಂ" (ಪಂಗಣ. ೬೬-೬೩). [ಸಂ.]

ಲಕ್ಷ್ಯಭಾವ (ನಾ). ಉದ್ದೇಶಿಸಿದ ಗುರಿ ; ಮುಟ್ಟಿ ಬಯಸಿದ ಸ್ಥಳ : ಬಸವಣ್ಣ ಸಂಗಮಕ್ಕೆ ಚೆನ್ನಬಸವಣ್ಣ ಉಳುವಿಗೆ ಪ್ರಭು ಕದಳಿಗೆ ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ತಮ್ಮ ಲಕ್ಷ್ಯಭಾವಕ್ಕೆ ಮುಕ್ತಿಯನೆಯ್ದಿಹರು (೨೦೧೮೩. ೦೦೫-೧೧೦). [ಸಂ.]

ಲಕ್ಷ್ಯಲಕ್ಷಿತ (ನಾ). ಗುರಿಗೆ ಸರಿಯಾಗಿ ಹೊಡೆಯುವವನು; ಗುರಿಯನ್ನು ಭೇದಿಸುವವನು : "ಲಕ್ಷ್ಯಲಕ್ಷಿತನೆನಲು ಜಾಗಲೆಸುವನಕ್ಕುಂ" (ಪಂಗಣ. ೬೬-೬೫). [ಸಂ.]

ಲಕ್ಷ್ಯವಿಡು (ಕ್ರಿ). ಗಮನ ಕೊಡು ; ಎಚ್ಚರವಹಿಸು ; ಗುಡಿಸುವಾಗಲೂ ಮೂಲೆಗಳ ಕಡೆಗೆ ಲಕ್ಷ್ಯವಿಟ್ಟುಕೊಳ್ಳುವುದಕ್ಕೆ ಮರೆಯಬಾರದು (೨೦೨೫. ೪೯). [ಲಕ್ಷ್ಯ + ಇಡು]

ಲಕ್ಷ್ಯಸಿದ್ಧಿ (ನಾ). ೧. ಗುರಿಯನ್ನು ಮುಟ್ಟುವುದು ; ಉದ್ದೇಶ ಸಾಫಲ್ಯ : ಗುರು ಲಕ್ಷ್ಯಸಿದ್ಧಿಯಿಲ್ಲೆನೆ ಪಾವಂಬಂ ಪರಿದು ಪಿಡಿವು ವೇಗಂ ತರ್ಪಂತಿರೆ . . . ಮರುತ್ಪುತಂ ಪರಿದಂ (ಗಣಪು. ೬-೨೯) ; ನಿಯಮಿಸುವರ್ ತ್ರಿವಿಧಧನುಃಪ್ರಯೋಗದೊಳ್ ದೃಷ್ಟಿಮುಷ್ಟಿ ಶರಸಂಧಾನಕ್ರಿಯೆ ಲಕ್ಷ್ಯಸಿದ್ಧಿ ನಿಜಶಿಕ್ಷೆಯಿನನುಪಮಮಾಗೆ ಜಕುರಬಾಪಾ ಚಾರ್ಯರ್ (ಕಕ್ಕಕ. ೨-೨೪). ೨. ಉದಾಹರಣೆಗಳಿಂದ ಸಿದ್ಧವಾಗುವಿಕೆ ; ನಿದರ್ಶನಗಳಿಂದ ಸಿದ್ಧಮಾಡಿ ತೋರಿಸುವಿಕೆ : ಧಾತುಗಳವು ನಾನಾರ್ಥೋಪೇತಂಗಳ್ ಲಕ್ಷ್ಯಸಿದ್ಧಿವಿಡಿದುವನೆಱ್ದು . . . ಪೂಸಿಗೆ (ಕಡೂದ. ೫೫೦). [ಸಂ.]

ಲಕ್ಷ್ಯಾರ್ಥ (ನಾ). [ಕಾವ್ಯಮೀ] "ಒಂದೊಂದು ಕಡೆ ಶುದ್ಧ ವಾಚ್ಯಾರ್ಥವು ಸನ್ನಿವೇಶಕ್ಕೆ ಹೊಂದದಿದ್ದಲ್ಲಿ, ಹೊಂದಿಕೆಯಾಗುವಂತೆ ಅದನ್ನು ಸರಿಪಡಿಸಿ ಅರ್ಥಕೊಡುವ ಮತ್ತೊಂದು ವೃತ್ತಿ ಕೆಲಸ ಮಾಡುತ್ತದೆ ; ಇದಕ್ಕೆ ಲಕ್ಷಣಾವೃತ್ತಿಯೆಂದೂ ಇದರಿಂದ ಬರುವ ಅರ್ಥಕ್ಕೆ ಲಕ್ಷ್ಯಾರ್ಥವೆಂದೂ ಹೆಸರು" (ಕಾ-ಶಾ. ೧೪) ; ಬೇರೆ ಅರ್ಥಗಳು ವಾಚ್ಯಾರ್ಥಗಳಿಂದ 'ಸೂಚ್ಯ'ವಾಗಿ ಲಕ್ಷ್ಯಾರ್ಥವಾಗುವವು (ಕೃಶಿ. ೦೬೭). [ಸಂ.]

ಲಕ್ಷ್ಯ (ನಾ). ಗುರಿಯಾಗಿ ಒಳಸುವ ಸಾಧನ; ಗುರಿಹಲಗೆ : ಆದು ಜೋಗಿ ಒಂದು ಗುಟ್ಟಿಯಾಗಿರುವ ಗುರಿಯನ್ನು (Target) ಹೊತೆದು, ಅಲ್ಲಿಯೇ ಕೆಳಗೆ ಬೀಳುವುದೆಂದು ಊಹಿಸುವ . . . ಗುಂದು ಹೊಡೆಗಲ್ಲಿ ಲಕ್ಷ್ಯವು ಬಿಡುವಾಗುತ್ತದೆ (೨೪೭೯. ೦೪). [ಸಂ ಲಕ್ಷ್ಯ]

ಲಖಿಗಡುಗೆ ' ಲಕ್ಷಗಡುಗೆ ' ನೋ.

ಲಖ್ಖ ' ಲಕ್ಷ ' ನೋ.

ಲಖ್ಖಣ ' ಲಕ್ಷಣ ' ನೋ.

ಲಖ್ಖಾಣೆ (ನಾ). ಒಂದು ಬಗೆಯ ಸೈನ್ಯ (?) : ಕುರಿಗನಳ ಪದಾತಿಲಂ ಬಿಲ್ಲಿಗ ಲಖ್ಖಾಣ ವಗ್ಗಸೆನೆ ಬಹುವಡೆಯಿಂ ಬೆಳಗವತ್ತಿಯ ಕೊಟ್ಟಿಯಂ ಮುತ್ತಿ ಪಟ್ಟಿ ಧುರದೊಳು ಬಲಗೊಂಡ ಶಕ್ತಿ . . . ತಕ್ಕಜದಂ (ಪೃಥ್ವಿ. ೦೯೨೨. ೬೬-೬ ; ೧೧೬೬). [ಲಖ್ಖ + ಆಣೆ]

ಲಖ್ಖೆ 'ಲಕ್ಷ' ನೋ.

ಲಗಕ್ರಿಯೆ (ನಾ). [ಛಂದ] ಷಟ್ಪ್ರತ್ಯಯಗಳಲ್ಲಿ ಒಂದು ; ಒಂದು ಛಂದಸ್ಸಿನಲ್ಲಿ ಯಾವುದೇ ಒಂದು ನಿರ್ದಿಷ್ಟವಾದ ವೃತ್ತವು ವಿಷ್ಣನೆಯದು ಎಂಬುದನ್ನು ಕಂಡುಹಿಡಿಯುವ ವಿಧಾನ : ಏಕದ್ವ್ಯಾದಿ ಲಗಕ್ರಿಯೆಯಿಂತಕ್ಕುಂ . . . ಈ ಪ್ರಕ್ರಿಯವು ಯಾವುದಾದರೊಂದು ಛಂದಸ್ಸಿನಲ್ಲಿ ಒಂದು ಲಘುವಿರುವ ವೃತ್ತವೆಷ್ಟು ? ಎರಡು ಲಘುವಿರುವ ವೃತ್ತವೆಷ್ಟು? ಎಂಬ ಒಂದು ಎರಡು ಮೊದಲಾಷ್ಟುಲಘುಗಳಿರುವ ವೃತ್ತಗಳ ಲೆಕ್ಕವನ್ನು ತಿಳಿಸುತ್ತದೆ (ಛಂದೋಅಣ. ೬-೯). 'ಷಟ್ಪ್ರತ್ಯಯ' ಪರಾ. [ಸಂ. ಲಗಕ್ರಿಯಾ]

ಲಗಡ್ಡ ' ಲಗಡು ' ನೋ.

ಲಗಡ್ಡ, ಲಗಡಿ, ಲಗುಡಿ (ನಾ). ೧. ಹೊಡೆತ ; ಪೆಟ್ಟು ; 'ಲಗಡಿಸು' ಪರಾ. ೨. ಮಲ್ಲಯುದ್ಧದ ಒಂದು ಪಟ್ಟು : ಮುಷ್ಟಿ ಕಮ್ಮಂದಿ ಮುಹುದಂ ಜವಕ್ಕವಡಿ ಪಾಸಗೆ ಕಕ್ಕವಮುಮ್ಮಹಗ್ಗಮಾತರಲಗಡಂ . . . ಪಟ್ಟಿ ಕತ್ತರಿಗಳಿನಿಪ್ಪ ಜಟ್ಟಿಗರ ಬಿನ್ನಣಮೊಪ್ಪೆ ಕಡಂಗಿ ಕಾದಿರ್ (ಕೃಷ್ಣ. ೨೬-೦೬). ಲಗಡಿ : ೨. ತರಹಕ್ಕದಲಿ ತವಕಿಸುವ ಲಗಡಿಯಲಿ ಲುಟಕಟಿಸುವಂತರಲಗಡಿಯಲಿ ಲಾಲಿಸುವ . . . ದಿನ್ನಾಣದಲಿ ಹೆಣಗಿದರು (ಕಾಪ್ಯ. ೦೯-೨೩) ; ಸಳದು ತಿರ್ಪನೆ ತಿರುಗಿ ಲಗಡಿಯು ಲೂಳಯ ವಯವಾಡಿನಲಿ ನೆಲಕಪ್ಪಲಿಸಿದೊಡೆ (೨೯೬೫. ೬-೩೩). ಲಗುಡಿ : ೩. ಕೋಲು ; ದೊಣ್ಣೆ : 'ಲಗುಡಿಗ' ಪರಾ ೪. ಕೋಲುಬಾರ ; ವೇತ್ರಧರ : ಪೊಜೆ ಲಗುಡಿ ಭಾಯಿಪಯ್ಯ ಲಗುಡಿಗರ ಧರ್ಮ್ಮವಾಗಿ ಕವ್ಯ ತಜಿಯಂ ಬಿಟ್ಟು ನರಸಿಂಘಯ್ಯನ ಮಗ ಸೋಮನಾಥಯ್ಯನು (ಶಾಇಇ. IX-i. ೦೦೬-೦೯ ; ೧೦೦೦). [< ಸಂ. ಲಗುಡ]

ಲಗಡಿ 'ಲಗಡ್ಡ' ನೋ.

ಲಗಡಿಸು (ಕ್ರಿ). ೧. ಹೊಡೆ : ಬಾರಿಸು ; ಲಗಾಯಿಸು : (೪). ೨. ಮಲ್ಲಯುದ್ಧದೆಲ್ಲಿ ಲಗಡವೆಂಬ ಪಟ್ಟನ್ನು ಹಾಕು : ಬಿಗಿವ ಬಿಡಿಸುವ ಬಿಡಿಸಿದಾಕ್ಷಣ ತೆಗೆವ . . . ಬಗಿವ ಬಳಸುವ ಬಂಧಗತಿಯಲಿ ಲಗಡಿಸುವ ಲೋಕ್ಕೀವೀರರು ಹೊಕ್ಕು ಹೊಣಗಿದರು (ಕಾಪ್ಯ. ೬-೨೬) ; ಹೊಗುವ ಹೊಳಕುವ ಬಿಗುವ ಬಾಗುವ ಲಗಡಿಸುವ ಲಾಗುಗಳ (೨೦೦೫. ೦೬-೨೨). [ಲಗಡ್ಡ + — ಇಸು]

ಲಗಡು, ರಗಡ, ಲಗಡ್ಡ, ಲಗಡಿ, ಲಗುಡ್ಡ (ನಾ). ಒಂದು ಮಾಂಸ ಭಕ್ಷಕ ಪಕ್ಷಿ ; ಗಿಡುಗ ; ಡೇಗೆ : ಒಬ್ಬರ ಕಂಡೊಬ್ಬರ ಮನದೊಳು ಕ್ರೋಧ ಹಬ್ಬಿತು ದೊರೆ ದೊರೆಗಳಗ ಕ್ಬುಕ್ಕಿ ಗಿಳಿಂಡು ಲಗಡು ಸಾಳುವ ನಾನು ತಬ್ಬಿಕೊಬರೆ ಬರುವಂತೆ (೨೦೦೫೦. ೨-೧೦) ; ಲಗಡಿನಂತೆಲ್ಲಿ

ಲಂಗಿಸುವ ಹೋರಾಟದ ವಿಗತವಮಲ್ಲರುಗಳೊಬ್ಬದೆನು (ಕಂವಿ. ೨೦-೧೩); ಪಕ್ಷಿಗಳ ಗೂಡು ಗುಂಪುಗಳ ಗುರ್ಯಾಡುವ ಗಿಡುಗ ಲಗಡು ಪಿಜ್ಜುಗಳಂ (ಕಗಂಂ. ೩೦-೭). **ರಗಡ** : ರಗಡನೆತ್ತಲು ರಾಯಗುಲಗೀಜಗಖಿಗಾವಳಿ ದೆತ್ತ ಸಿಂಹದ ನೆಗೆತಮೆತ್ತಲು ಹರಿಣಪ್ಲೋತಮದೆತ್ತ ಪರಿಕಿಸಲು (ಕಂವಿ. ೧೦-೨೦). **ಲಗಡ**$_1$: ಕುಕ್ಕುಭ ಲಗಡ ಸಲೆ ಕೂಕುಟಗ . . . ಕ್ಕುಕ್ಕೆ ಪೆಬ್ಬಕ್ಕೆಗಳ ನೋಡಿದವು (ಪುರಂ. ೩-೯) : ಎರಗುವ ಲಗಡ ನಂದದೊಳಪಾರಸುಭಟರ ಕಗುಲಿ ವೊಗದೋರಿದವು ಬೆನ್ನಂ ದೋಳೆ ಯಂಬುಗಳು (ಕಂವಿ. ೦೬-೪). **ಲಗಡೆ** : ಲಗಡೆ ರಣಹದ್ದು ಸುಳಿವ ಕಾಳಿಂಗ ಹಂಸ ಚಕೋರನ ಬಳಗವೊಪ್ಪತು ವನದೊಳು (ಗೋಪಾಡು. ೩-೦೨). **ಲಗುಡ**$_1$: ಗಿಡುಗ ಲಗುಡ [ಪಾಠಾಂ. ಗಡು]ಗಳೆಸೆಯಲಲ್ಲಿ ವನಚರರಿಂದ ವನವೆಸದುದು (ಕಶ್ವ. ೩೩-೨೨).

[ದೇ. || ತೆಲು. ಲಗುಡು./ಹಿಂ. ಮರಾ. ಲಗಡ್]

ಲಗಡೆ ' ಲಗಡು ' ನೋ.

ಲಗತ (ನಾ). ಲಯಬದ್ಧವಾದ ಕುಣಿತ, —ನೃತ್ತ : ಪುಗಿಸೆಳಸಂಜೆಯೊಳ್ ಸುಟಿವ ಪಾರಿವ್ರಮಂ ಸಬಿ ಗೂಡಿನೊಳ್ ಮಯೂರಿಗೆ ಲಗತಂಗಳಂ ಕಲಿಸು (ಶಲಾಪ. ೦೮-೦೦೬). [< ಸಂ. ಲಯಗತ ?]

ಲಗತಿಡು (ಕ್ರಿ). ಜೋಡಿಸು : ಸೇರಿಸು ; ಹೊಂದಿಸು : ಈ ಎಲ್ಲ ಖಲಮುಗಳಿಗೆ ಬೇಕಾದ ಧನವಮನ್ನು ಇಲ್ಲಿ ಲಗತಿಟ್ಟು ಕಲಿದೆ (ಜಪಾ. ೮೬). [ಲಗತು (< ಲಗತ್ತು) + ಇಡು$_1$]

ಲಗತು 'ಲಗತ್ತು' ನೋ.

ಲಗತ್ತಿಸು (ಕ್ರಿ). = ಲಗತಿಡು : ಒಂದು ಛಾಯಾಗ್ರಾಹಕಯಂತ್ರವನ್ನು ದೂರದರ್ಶಕಕ್ಕೆ ಲಗತ್ತಿಸಿ ಛಾಯಾಚಿತ್ರ ಹಿಡಿದರೆ ಲಕ್ಷವಿಲ್ಲದಷ್ಟು ನಕ್ಷತ್ರ ಗಳನ್ನು ನೋಡಬಹುದು (ಅಣಸ. ೩೨) ; ನಿರೂಪದ ನಕಲೊಂದನ್ನು ಈ ಕಾಗದದೊಡನೆ ಲಗತ್ತಿಸಿದ್ದೇನೆ (ತಿಪಕು. ೨೬೯).

[ಲಗತ್ತು + ಇಸು$_5$]

ಲಗತ್ತು, ಲಗತು (ನಾ). ೧. ಜೋಡಣೆ ; ಹೊಂದಿಕೆ ; ಸೇರಿಕೆ : ಅದಾ ನಮ್ಮ ಅಳಿಯನಿಗೂ ನಿಮಗೂ ಲಗತ್ತು. ಇನ್ನು ಕಾಸೀಮಂದು ಕರೀಮಂದು ಯಾವುದೂ ಸಂಬಂಧ ಇಲ್ಲ (ಸಾಕುಣಾ. ೨೦೮). **ಲಗತು** : ೨. ಹತ್ತಿರ ; ಸಮೀಪ : ಇಲ್ಲಿ ಲಗತಿನಾಗ ಇರತಾರು (ಜಪಾ. ೮೮).

ಲಗತ್ಕಾಗೆ=ಹೊಂದಿಕೆಯಾಗು ; ಜೋಡಣೆಯಾಗು ; ಸೇರಿಕೆಯಾಗು : ಆ ನೌಕರಿಗೆ ಹುರಿಯಿನಲ್ಲಿ ಲಗತ್ಕಾಗಿದ್ದ ಕೆಲಸಗಳು ಈಗ ಮಾಡ ಲ್ಪಡುತ್ತಿರಲಿ (ಸ್ವಪ್ರಾಶ. ೮೪). [←ಮರಾ. ಲಗತ್]

ಲಗರಗೋಲು (ನಾ). ನಂದಿಕೋಲು (?) : ವೃಷಭನಾಟಕ್ಕೆ ಲಗರ ಗೋಲನಿತ್ತು ನೀವು ಪಶುಪತಿಯ ಮುಂದಣ ಎಸೆವ ಅಸಾದಿಗಳೆಮೆಮ್ಮ ಶೀಲವ ಬಸವಣ್ಣನಿಟ್ಟು ಬೆರಸಿದ (ಬಸ್ಕಾ. ೯-೦೦).

[? + ಕೋಲು$_1$ (< ಕೋಲ್$_1$)]

ಲಗಳಿ ' ಲಗಳೆ ' ನೋ.

ಲಗಳಿಚಣ್ಣ (ನಾ). ನಡಿಲವಾದ ಚಲ್ಲಣ, – ಪಾಯಿಜಾಮಾ : (ಕ್ರಿ).

[ಲಗಳಿ$_1$ + ಚಣ್ಣ (< ಚಲ್ಲಣ)]

ಲಗಳೆ, ಲಗಳಿ (ನಾ). ನೀರು ಮೊದಲಾದ ದ್ರವಪದಾರ್ಥಗಳನ್ನು ತುಂಬುವ ದೊಡ್ಡ ಚರ್ಮದ ಚೀಲ ; ಪಕಾಲಿ : ಹೊಗೆಯ ಕುಡಿದಲೆಯನಗಿವ ಬಾಯಲ್ ಸಿಂದಿಯ ಲಗಳೆಯಂತಿಹುದು (ಸೋಕ್ಷ. ೦೩೦೬); ಶಿಶುನಾಳಧೀಶನ ದಿವ್ಯಜ್ಞಾನದ ಲಗಳೆ ಹೊತ್ತು ತಿರುಗುವ ಕಾಯಕವು ತನ್ನದು (ಶಿಂಶ. ೬೪ ಕೂಡಲಸಂಗಮದೇವ). 'ಸಗ್ಗಳೆ' ಪರಾ. **ಲಗಳಿ** : ಎರಡರಡು ಮೊರಮೊರು ಮೈಲಿನ ಮೇಲಿಂದ ಲಗಳಿಗಳಲ್ಲಿ ಇಲ್ಲವೆ ಭಕ್ಕಡಿಗಳಲ್ಲಿ ನೀರು ತರುತ್ತಿರುತ್ತಾರೆ (ಅಣಸ. ೨೩೩). [?]

ಲಗಾಟಿ, ಲಕೋಟಿ, ಲಗಾಟ್ಟಿ, ಲಫಾಟಿ (ನಾ). ೧. ತಲೆ ಕೆಳಗು ಮಾಡಿ. ಕಾಲು ಮೇಲು ಮಾಡಿ ನೆಗೆದು ಮತ್ತೆ ನಿಲ್ಲುವುದು; ಲಾಗ; ಪಲ್ಟಿ : ಲಿಖಿತಲರಾಟದೋರದಿರಲೇಗೈವೆ ಎಮ್ಮು ಲಗಾಟವ ಹೊಡವ (ಜಾಣಾ. ೦೩೦-೧೦). ೨. (ಆಲಂ) ಅನುತ್ತೀರ್ಣ; ನಪಾಸು; ಫೇಲು: ಮ್ಯಾಟ್ರಿಕ್‌ಪರೀಕ್ಷೆಯಲ್ಲಿ ಪ್ರಥಮ ಲಗಾಟವಾದ ಮೇಲೆ . . . ತಾನಾದರೂ ಶಾಲೆಯ ಲಾಯಿಫ್‌ಮೇಬರ ಎಂಬಂತೆ ವಸಂತ ವರ್ತಿಸತೊಡಗಿದನು (ಗಂಪಾಯಿ. ೬೦). **ಲಕೋಟಿ** : ೧. ರಣಸೂರಬಾಬೂಸಾಹೇಬ ಹೊಡದ ಲಕೋಟಿ ಅದಸುಮಾಕ (ಕ್ರಿಂಚ. ೬೬). **ಲಗಾಟ್ಟಿ**$_1$. **ಲಫಾಟಿ**: ೧. ಲಗಾ ಬೀರಣ್ಣಾ ಲಗುಬೀರಾ ಜಲ್ ಲಫಾಟಿ ಕೊರವಂರು ಬರುತಾರೆ (ಕುಪ್ಪ. ೮೬).

ಲಗಾಟಿಹಾಕು, ಲಗಾಟಿಹಾಕು=೧. ಲಾಗಹಾಕು ; ಪಲ್ಟಿಹೊಡೆ. ೨. (ಆಲಂ) ಸಾಯು ; ಮರಣಹೊಂದು : ಅವಳಾದರೋ ತುಂಬ ಮುದುಕಿ. ಯಾವಾಗ ಲಗಾಟಿಹಾಕುತ್ತಾಳೆ ಎಂಬುದನ್ನು ತಿಳಿಯಲು ಅಸಾಧ್ಯ (ಜಡಿಗಾಡಿ. ೨). ೩. ಅಯಶಸ್ವಿಯಾಗು; ಅನುತ್ತೀರ್ಣವಾಗು; ನಪಾಸಾಗು: ಕನ್ನಡ ನಾಲ್ಕನೆ ಇಯತ್ತೆಯಲ್ಲೇ ಮೂರುಸರತಿ ಲಗಾಟಿ ಹಾಕಿ ಸಾಲಿ ಬಿಟ್ಟು ಈಗ ಅಂಗಡಿಯಲ್ಲಿ ಕೂಡ್ರುತ್ತಾನೆ (ಮೂಕುಣಾ. ೨೭೪). **ಲಗಾಟಿಹೊಡೆ, ಲಗಾಟಿಹೊಡೆ**=ಲಗಾಟಿಹಾಕು ೧ : ಗಿಮಿ ಗಿಮಿ ಹಸಿರು ಹುಲ್ಲ ಮೇಲೆ ಲಗಾಟಿಹೊಡೆಯಬೇಕೆಂದೆನಿಸಿತು (ಪಜಪುಚ. ೮೩) ; ಮಂದೀ ಕುಂದೀ ಮ್ಮಾಲ ಏಟ ದಿನಾ ಲಗಾಟಿಹೊಡೆಯೋದು ? (ಕಾಂಬಾ. ೮೮).

[< ಲಾಗು$_1$ + ಆಟ]

ಲಗಾಟ್ಟಿ ' ಲಗಾಟಿ ' ನೋ.

ಲಗಾಟ್ಟಿ (ನಾ). ಜಗಳಗಂಟಿ ಹಾಗೂ ದುಷ್ಟಳಾದ ಹೆಂಗಸು (ಕ್ರಿ) [?]

ಲಗಾಡಿ (ನಾ). ಕೇಡು ; ನಾಶ ; ನಷ್ಟ : 'ಲಗಾಡಿತೆಗೆ' ಪರಾ.

[←ತುಳು. ಲಗಾಡ್, ಲಗಾಡಿ]

ಲಗಾಡಿತೆಗೆ (ಕ್ರಿ). ಹಾಳುಮಾಡು : ನಾಶಮಾಡು : ಕಳೆ : ಆಸ್ತಿ ಪಾಸ್ತಿಗಳನ್ನು ಲಗಾಡಿತೆಗೆಯಲು ಏನೇನು ಬೇಕೋ ಅದಕ್ಕೆ ತಕ್ಕ ಬರವಸಿಗೆ ಹೇಗಕೊಡುತ್ತಿದ್ದರು (ಕಾಮುಂಡ. ೦೬); ನಮ್ಮ ಮಾಧವನು ಇದ್ದುದನ್ನು ಲಗಾಡಿತೆಗೆದ ಮೇಲೆ . . . ಎಲ್ಲವನ್ನು ಹಂಚಿಕೊಟ್ಟೆ (ಶಾಕುಣ. ೦೬೫); ಬೂದಿಕಟ್ಟೆದೇವರು ಸುಟ್ಟು ಲಗಾಡಿತೆಗೆದ (ಪುಟಕೃ. ೮೪). [ಲಗಾಡಿ + ತೆಗೆ$_1$]

ಲಗಾಮು (ನಾ). ೧. ಕುದುರೆಯನ್ನು ಹಿಡಿತವಲ್ಲಿಟ್ಟುಕೊಳ್ಳಲು, ಅದರ ಬಾಯಲ್ಲಿ ಸಿಕ್ಕಿಸುವ ಕಬ್ಬಿಣದ ತುಂಡು ಮತ್ತು ಅದಕ್ಕೆ ಕಟ್ಟುವ ಚರ್ಮದ ಪಟ್ಟೆ; ವಾಘೆ : ತಡಿ ಸುಪಾಸನ ಸುಗತಿ ಪೋಯಾವುತೆ ಜನಾಪಿ ಲಗಾಮು . . . ಮಣಲಂಬಳದ ಹಯ ಮಿಗೆ ಗುಣಿಯಿಜ್ಜದು ಪೊಗವೆಟ್ಟಿ ವರ್ತಿಸಿತಸುರನಿದಿಂನಲಿ (ತೊರಣ. ೬-೨೯-೦೨); ರಥದ ಅಲಂಕಾರಕ್ಕೆ. . . ೪ ಬೆಳ್ಳಿಮುಲಾವಿನ ಲಗಾಮು ಸಾರಥಿ ಕುಮಾರಿಗೆ (ಎಕ- XIV, ಹಾಸ- ೨೯೨-೪೮.೧೪೩ ; 1847); ಅದರ ಲಗಾಮಿಂಗೆ ಕೈಹಾಕಲು ಅದು ಗರ್ರನೆ ತಿರುಗಿ ಹಿಂಗಾಲು ಜಾಡಿಸಿ ಕೊಸರಿಕೊಂಡು ಓಡಿ ಹೋಯಿತು (ಹುಂಜಾ. ೯-೩೯); ತುಂಟುಕುದುರೆಗೆ ಗಂಟುಲಗಾಮು (ಗಾಡಿ). ೨. (ಆಲಂ) ಅಂಕೆ; ಹತೋಟಿ; ಹಿಡಿತ; ನಿರ್ಬಂಧ : ಈಗವನ ಬುದ್ಧಿಗೆ ಲಗಾಮು ಇಲ್ಲದಾಗಿದೆ (ಪಟ್ಟಣ. ೭೦); "ನಿನ್ನ ನಾಲಗೇಗೆ ಲಗಾಮು ಐತಾ ?" "ನೀವು ಆಕ್ಕೀರಾ, ಲಗಾಮು ?" (ಕೆಂಡ. ೦೬೯).

[←ಪಾರ. ಹಿಂ. ಮರಾ. ಲಗಾಮ್]

ಲಗಾಯಿಸು (ಕ್ರಿ). ೧. ಕೂಡಿಸು; ಜೋಡಿಸು; ಸೇರಿಸು : (೪). ೨. (ಆಲಂ) ಹೊಡೆ; ಬಾರಿಸು; ಪೆಟ್ಟುಕೊಡು : ಹುಚ್ಚು ಮಾತನಾಡಿದರೆ ಒಂದು ಲಗಾಯಿಸುತ್ತೇನೆ ನೋಡು (ಕೃಷಿ). ೩. ತಿನ್ನು; ನುಂಗು : ಸೀಬೆಯ ಹಣ್ಣು ಕೊಡುತ್ತಾವೆ. ಲಗಾಯಿಸು (ಪಡಣಾ. I೪೩೩). ೪. ಒತ್ತಿ ಹೇಳು ; ಗಟ್ಟಿಯಾಗಿ ಉಚ್ಚರಿಸು : ಹಲೊ ಎನ್ನುವಲ್ಲಿ 'ಲ'ವನ್ನು

ಲಗಾಯಿಸಿ ಕೂನಿದ್ದು ಜೋಡಿದಾರರಿಂಗೆ ಅಳತೆಪಡಂತಾಯ್ತು (ಶಾಮಾಚ. ೪೯).
[ಲಗ್ಗಾ (ಶ ← ಹಿಂ. ಲಗಾನಾ) + —ಇಸು-/ತುಳು. ಲಗಾಸ್]

ಲಗಾವು (ನಾ). ಸೇರುವಿಕೆ ; ಹೊಂದಿಕೆ ; ಲಗತ್ತು : ಗ್ರಾಮಸೌಕರ್ಯಗಳ ಅಥವಾ ಸೌಕರ್ಯಗಳಿಗೆ ಲಗಾವಾಗಬೇಕಾದಂಥ್ಲಿವೆಂದು ಸರ್ಕಾರಿ ಗೆಜೆಟ್ಟಿನಲ್ಲಿ . . . ಸರ್ಕಾರದವರು ವಿನಾಯಿಸಬಹುದು (ಗ್ರಾಶಾಕ್ರ. ೮೩).

ಲಗಾವಾಗು = ಸರಿಹೊಂದು ; ಹೊಂದಿಕೆಯಾಗು : ಸೀತೆಗೂ ಕೂಡ ಅದೇ ಪ್ರಕ್ಕುತ್ತರ ಲಗಾವಾಗದಿದ್ದೀತೇ ? (ಪುಲಿಕೇ. ೩೮೦).
[← ಹಿಂ. ಮರಾ. ಲಗಾವ್]

ಲಗಿಮ (ನಾ). ೧. ಅಲ್ಪತೆ; ಲಘುತ್ವ. ೨. ಅಲ್ಪನಾದವನು ; ಹೀನ : ಸುಗುಣಿ ಗುಣಗಳನೆಣಿಸಿ ಸಂತೋಷಮೊಳುವಂತೆ ಲಗಿಮನರಿವನೆ (ಪಂಗಣ. ೪-೦೪-೬). [< ಸಂ. ಲಘಿಮನ್]

ಲಗಿಸು (ಕ್ರಿ). ಯೋಚಿಸು ; ಸಿದ್ಧಪಡಿಸು (?) : ಕಾಳಗಾವುಣ್ಣನ ತಮ್ಮ ಲೆಂಕರಾಯನಂ ಕರದು ಏಮ್ಮುವರ್ದ್ದಾನ ಹೊಮ್ಮಳೆದೇವಂ ಮುಂಗೊಳುವಾಯದ ಕಾಳಗಕೆ ಲಗಿಸಿ ಬೆಸಂಬೇಳೆ ಲೆಂಕರಾಯಂ ಮಾಡಿದ ವರಾಕ್ರಮೋನ್ನತಿಯುದೆಂತೆಂದಡೆ (ಪಂ. ೪. ೬೦೮೮. ೨೦೨-೬; ೧೧೩೮).
[ಶ ಇದು 'ಲಾಗಿಸು' ಎಂಬುದರ ಅಪಲಿಖಿತವಿರಬಹುದು]

ಲಗ್ಗು₁ · ಲಗ್ಗೂ₁ (ನಾ) · ೧. ಹಗುರ; ಭಾರವಿಲ್ಲದುದು : "ಲಗು–ಲಘು = ಕೀಳ್ಪು, ಹಗುರ" (ಕ್ರಿ.ಕೋ. ೪೮). 'ಲಗುಗೆಯ್' ಪರಾ. ೨. ಸರಳವಾದುದು; ಸುಲಭವಾದುದು : ಲಗುಸಿ ಪಾಡಲುಮಾಯ್ದು ನಾಳ್ವುದಿಗರಂ ಲಾಲಿತ್ಯದಿ . . . ಆಗಿಸುವನೊರ್ವಂ ಕಬ್ಬಗಂ (ಸೂಪ. ೪೮-೪). ೩. ಅವಸರ; ತ್ವರೆ. ೪. ಚೇತರಿಸಿಕೊಳ್ಳುವಿಕೆ ; ಆರೋಗ್ಯ ಸುಧಾರಿಸುವಿಕೆ (ಆ). ಲಗ್ಗೂ₁ : ೩. 'ಲಗೂಸೆ' ಪರಾ.

ಲಗ್ಗುಬಿ = ಸರಳತೆ ಮತ್ತು ಬಿಗುಮಾನ.—ಕಾರಿಣ್ : ಮೊದಲನೆಯ ಪತ್ರವು ನಮ್ಮ ಲಗ್ಗುಬಿಗಿಯನ್ನು ನೋಡುವ ಪತ್ರ(ಕ್ರಿ(ಅಚ್ಚು)-೧೧೬).

ಲಗ್ಗುಬಿಗು = ಲಗ್ಗುಬಿಗಿ : ಮೊದಲು ಲಗ್ಗುಬಿಗು ನೋಡಿಕೊಂಡು ಆಮೇಲೆ ಕೆಲಸ ಮಾಡಬೇಕು (ಚಾಲ್ಲ). ಲಗ್ಗುಮಾಡು = ಅವಸರ ಪಡು ; ತ್ವರೆಮಾಡು : ಒಲ್ಲೆ ನಾ ಭಾವಣ್ಣ, ಸಣ್ಣವನಿದ್ದು ನೀ ಲಗ್ಗುಮಾಡಿದೆ (ಪಾಪುಚ. ೩೨-೨೨). [< ಸಂ. ಲಘು]

ಲಗ್ಗು₂, ಲಗ್ಗೂ (ಅ). ಬೇಗನೆ ; ಶೀಘ್ರವಾಗಿ : ಆದಷ್ಟು ಲಗ್ಗು ಬರಸಿದಿದ್ದರೆ ಹಳಸಿ, ಹದಗೆಟ್ಟು, ಹೋಳಾಗಿ ಹೋಗಬಹುದು (ಪಾಚಾಶ. ೧೦೬); ಒಂದಿನಿತು ಲಗ್ಗು ನಡಿ (ಪಂಚಾಂ. ೩೨). ಲಗ್ಗೂ₂ : ಏನು ಗೌಡ್ರು, ಎಮ್ಮು ಲಗ್ಗೂ ಬಂದ್ರಿ (ಪಾಚಾಶ. ೦೩) ; ಆದಷ್ಟು ಲಗ್ಗೂ ತಿಳಿಸೋದು ನಿನಗೂ ಒಳ್ಳೆ (ಪಂಚಾ. ೩೦).

ಲಗ್ಗುಲಗ್ಗು, ಲಗ್ಗೂಲಗ್ಗೂ (ದ್ವಿರುಕ್ತಿ) : ನೂರಾಎಂಟು ಜರೆ . . . ಎಂದೆನ್ನಬೇಕು. ಬಹಳ ಲಗ್ಗುಲಗ್ಗು (ಶಾಪಾಚ. ೩೭) ; ಹೋಗರಿ . . . ಲಗ್ಗೂಲಗ್ಗೂ ಮಾಡಿಕೊಂಡು ಬರ್ರಿ (ಪಾಚಾಶ. ೩೬). [< ಲಗ್ಗು₂]

ಲಗ್ಗುಗೆಯ್ (ಕ್ರಿ). (ಆಲಂ) ಹಗುರವಾಗಿ ಭಾವಿಸು; ಕಡೆಗಣಿಸು ; ಉಪೇಕ್ಷಿಸು : ಲಗ್ಗುಗೆಯ್ಯಬೆನ್ನ ಬಿನ್ನಪವ ಲಾಲಿಪುದುಂ ಸುಗುಣಾಂಗೆ ಬಿನ್ನಯಿಸಿದಳು (ಪ.ಚಾಹಕ. ೪-೩೩). [ಲಗ್ಗು₂ + ಕೆಯ್-₁]

ಲಗುಡ₂ ' ಲಗಡು ' ನೋ.

ಲಗುಡ₂ (ನಾ). ದೊಣ್ಣೆ ; ಬಡಿಗೆ : "ಲಗುಡ – ಲಕುಟ = ದೊಣ್ಣೆ" (ಕ್ರಿ.ಕೋ. ೪೮); ನೇವಾದಿ ವ್ಯಾಯಾಮಲಗುಡವ ಪಿಡಿಯಿಂ ಮಾನವರೆಬ್ಬರಿಕೆ (ಭ್ರಕ್ಷ. ೩೨೦) ; ಬೆಸವೇಡಲು ಬೊಸಬಾವ ಲಗುಡ (ಕೋಲು)ದಿಂದ ಭೂಮಿಯಲ್ಲಿ ಹಳ್ಳ ಕಿತ್ತಿ, ಕಾಳನ್ನು ಬಿತ್ತಲಾಯಿತು (ಪಾಚಾ. ೧ ಮುಖ್ಯ).
[ಸಂ.]

ಲಗುಡತಾಡನೆ (ನಾ). ದೊಣ್ಣೆಯ ಪೆಟ್ಟು ; ಕೋಲಿನ ಹೊಡೆತ. — ಏಟು; ಬೋಳದ ಚಟ್ಟಂ ನೀರಜಲಿಯಂ ವ್ಯತಿದಿನಂ ಕುಡುವುದುದು ಹೆಚ್ಚು ಕಡಮೆಮಾಗೆ ಲಗುಡತಾಡನೆಯಂ ಪಾಳ್ಪೆನೆಂದು ನಿಯಮಿಸೆ (ಕಾಪಾಚ. ೪೨).
[ಸಂ. ಲಗುಡತಾಡನ]

ಲಗುಡಪಾತ (ನಾ). = ಲಗುಡತಾಡನೆ ; ಪಾಲ್ಕಳೆಯೊಳ್ ರವಿ ನಿಧನಂ ಮನುಜಂಗೆ ಲಗುಡಪಾತದಿನಕ್ಕುಂ (ಜಾಕ. ೩೬-೦೦). [ಸಂ.]

ಲಗುಡಿ ' ಲಗಡ್ಡಿ ' ನೋ.

ಲಗುಡಿಗ (ನಾ). ಕೋಲುಕಾರ ; ವೇತ್ರಧರ ; ಒನ್ಪು ಪೊಜೆ ಲಗುಡಿ ಭಾಯಿಪಯ್ಕ ಲಗುಡಿಗರ ಧರ್ಮ್ಮಮಾಗಿ ತಮ್ಮ ತೆಜಿಯಂ ಬಿಟ್ಟು ಸರ ಸಂಪುಯ್ಕನ ಮಗ ಸೋಮಪಾಥಯ್ಕನು (ಕ್ಷೀಇ. IX-i. ೦೦೬-೦೯ ; ೧೦೦೦).
[ಲಗುಡಿ (< ಲಗಡ್ಡ) + — ಗ₂]

ಲಗುಡೆ (ನಾ). ಮಲ್ಲಯುದ್ಧದ ಒಂದು ಪಟ್ಟು : ಜಾಯಕರ ದಂಡೆಯಲಿ ಲಗುಡೆಯು ಲಾಯಿಯೋಗೆ ನವಾಯ ಬಿನ್ನಾಣದಲ್ಲಿ . . . ಆಯತವನ ಜೀವಿಹನೆ ಮಲ್ಲನಳ್ (ಕಣ್ಣ. ೪. ೬೭೩. ೦-೪೬). ' ಲಗಡ್ಡ ' ಪರಾ.
[ಸಂ. ಲಗುಡ]

ಲಗುನ, ಲಗ್ಗನ (ನಾ). ೧. ಮದುವೆ : "ಲಗುನಮೆನೆ ಲಗ್ನಮಕ್ಕುಂ" (ಕಸ. ೧೪) ; ಮುನಿದ ಕೈಯಲ್ಲಿ ಓಲೆ ಕಂಡವ ಕೊಟ್ಟರೆ ಲಗುನವಿಗುನವ ಬರೆಯಿತ್ತು ನೋಡಾ (ಅಕಸ. ೯-೩೬) : ಲಗ್ನ – ಲಗುನ, ಲಕ್ಷಣ – ಲಕುಮಣ (ಪಂಪ. ೨೪೪ ಕ್ರಮೋ). ೨. ಶುಭಮುಹೂರ್ತ : ದಶರಥ ಜನಪನಲ್ಲಿ ಪಯಣ ಲಗುನದೊಳನುವಿನಂ ಪೊರಮಟ್ಟನಾರ್ ಸಾಕೇತಪುರಿಗಾಗಿ (ರಾಮಕ. ೦-೬-೦) ಲಗ್ನ, : ೧. ಕೊಡುವಿಲ್ಲ ಕೊಟ್ಟುವಿಲ್ಲ ಲಗ್ನವಿಲ್ಲ ವಿಲಗ್ನವಿಲ್ಲ (ಪಪ. ೪. ೦೨೦೯). ೩. ಸಂಬಂಧ ; ಸಂಪರ್ಕ : ಯಿ ಹೊಂಸು ಭತ್ಕವಲ್ಲದೆ ಮತ್ಕಾವ ಸೀಮೆ ಸಿದ್ಧಾಯದ ಹೊಂಸು ಭತ್ಕದ ಲಗ್ನವಿಲ್ಲ (ಕ್ಷೀಇ. IX-ii. ೪೦-೪೨ ; ೨೪೪) ; ಮಾಯೆಯ ಲಗ್ನವನು ಪರಿಹರಿಸಿದೆನು ಸುಮಯಾದೆ ನಾನು (ಪಾಗೀ. ೧೦-೪೭-೪೬) ; ಶರಣರ ದ್ವಿತಮಾಕ್ಷರದ ಲಗ್ನವನಾಂತ ಚರಣಾನ್ವಿತ ಕೃಷ್ಣ ಜಯತು (ಪೂಚಾಪ. ೧೦-೦೬).
[< ಸಂ. ಲಗ್ನ]

ಲಗುವಿ (ನಾ). ಆನುರಕ್ತಿ : ಜಗವಂದ್ಯಗೆ ಬೇಟ್ಟವ ಮಾಡಿದೆ . . . ಗಗನ ಗಿರಿಯ ಮೇಲಿರ್ದಹನೆಂದಡೆ ಲಗುವಿಯಾಗಿ ನಾನಲಸುತ ಬಂದೆನು ಅವಹರ ಶರಾಸನ ವಿಮುಗಾನೊಲಿದೆಮು (ಮಾಚಾಪ್ರ. ಪ. ೧೬-೨೫೬).
[ಲಗುವ + — ಇ]

ಲಗುಬಗೆ (ನಾ). ಅವಸರ ; ಆತುರ ; ತ್ವರೆ : ಎಂಥ ಲಗುಬಗೆಯಿಂದ ಕಣ್ಣಾರೆ ಸಂದಯೋ (ಕಾಮುಣ. ೪೯-೨) ; ಲಗುಬಗೆಯಿಂದ ಊಟ ತೀರಿಸಿಕೊಂಡು ಕೋಟು ಟೊಪ್ಪಿಗೆ ಹಾಕಿಕೊಂಡು ಹೊರಟೆ (ಮುಂಗಾಷ. ೧೩).
[ಲಗ್ಗು₂ + ಬಗೆ₂-/ತುಳು. ಲಗಬಗ./ಮರಾ. ಲಗ್‌ಬಗ್]

ಲಗುಬದರಿ (ನಾ). ಒಂದು ಬಗೆಯ ಸಸ್ಯ : "ಮಧುರಃ – ಬೀಯವರಿ. ಲಗುಬದರಿ. ಕೆಂಗಬ್ಬು" (ಚಪಂ. ೦೦೪). [< ಸಂ. ಲಘುಬದರೀ]

ಲಗ್ಗೂ₁ ' ಲಗ್ಗು₁ ' ನೋ.

ಲಗ್ಗೂ₂ ' ಲಗ್ಗು₂ ' ನೋ.

ಲಗೂಸೆ (ಅ). ಬೇಗನೆ ; ಶೀಘ್ರವಾಗಿ ; ತಟ್ಟನೆ ; ಬಸ್ಸು ಬೇಗ ಸಿಕ್ಕಿತು. ಹಾಗಾಗಿ ಲಗೂಸೆ ಬರುವುದಕ್ಕಾಯ್ತು (ಕ್ರಿ.ಕೋ. ೨೪೮); ಬಡವರ ಮದುವೆ ಲಗೂಸೆ ಹ್ಯಂಗ ಆದೀತು ಹೇಳು ? (ಪಪ. ೨೦).
[ಲಗೂ₁ (< ಲಗ್ಗು) + — ಅಸ್₂]

ಲಗೋರಿ (ನಾ). ಒಂದು ಬಗೆಯ ಲಗ್ಗೆಚೆಂಡಾಟ : ಓಣಿಯ ಹುಡುಗರು ಆಟದ ಬಯಲಿನಲ್ಲಿ ಕೂಡಿದರು. ಲಗೋರಿಆಟ ಆಡಲು ಸಿದ್ಧರಾಗಿದರು (ಕಪ್ಪ. ೪-೪೬). ' ಲಗ್ಗೆ ' ಪರಾ.
[← ಮರಾ. ಲಗೋರೀ]

ಲಗ್ಗ1 ' ಲಗುನ ' ನೋ.

ಲಗ್ಗ2 ' ಲಗ್ಗ ' ನೋ.

ಲಗ್ಗಿಕ, ಲಗ್ಗಿಗ (ನಾ)- ಲಗ್ನವನ್ನು ಹೇಳುವವನು ; ಜ್ಯೋತಿಷಿ ; ನೈಮಿತ್ತಿಕ : "ಲಗ್ಗಿಕರೂ ಲಾಗ್ನಿಕರ್ಕಳ್" (ಶಾಸನ- ೪೭). ; ನತ್ವಕ್ಕೆ ಗತ್ವಂ-ಅಗ್ನಿ-ಅಗ್ಗಿ ; ಲಾಗ್ನಿಕ-ಲಗ್ಗಿಕ, ಲಗ್ಗಿಗ (ಪುಟ- ೩೩೩ ಕೃಷ್ಣ). ಲಗ್ಗಿಗ : ಅರಯುಂತ ಲಗ್ಗಿಗರುಸಲು ಕೇಳುತ್ತೆ ಎಗಲಾಗೆ (ಶಾಮಾ. ೨-೩೦) ; ಲಾಗ್ನಿಕ-ಲಗ್ಗಿಗ (ಶಾಸನ- ೧೬೦ ಕೃಷ್ಣ). [< ಸಂ. ಲಾಗ್ನಿಕ]

ಲಗ್ಗಿಗ ' ಲಗ್ಗಿಕ ' ನೋ.

ಲಗ್ಗಿಸು (ಕ್ರಿ)- ಮುತ್ತಿಗೆ ಹಾಕು ; ಆಕ್ರಮಣ ಮಾಡು : ಸುರಕೆಂಬಲಂ . . . ನಡತಂದು ಪರಿದು ನೆರೆದು ಮುಂಗುವಿಗೆದಱಿ ಸಂಗರಪೂಮಿಯೊಳೊಡ್ಡಿ ನಿಂದಿದ್ದಮಾಗಿ ಲಗ್ಗಿಸಿ ಮೊಗ್ಗರಿಸುತ್ತಿರ್ಪುಗೆದಡೆ ನಡೆಗೊಂಟೆಯುಂತೆ ನೆಲೆವೆರ್ಚಿ ನಿಂದು (ಗಿಪಿ- ೬-೫೫ ೮).

[ಲಗ್ಗ + – ಇಸು]

ಲಗ್ಗೆ, ಲಗ್ಗ2, ಲೆಗ್ಗೆ (ನಾ)- ೧. ಮುತ್ತಿಗೆ ; ದಾಳಿ ; ಆಕ್ರಮಣ : "ಲಗ್ಗೆಯ ದಾಳಿಯೆನಿಕ್ಕಂ" (ಪಾರ್ಶ್ವ- ೦೬) ; ಪೆಯ್ದೆತ್ತಿ ಲಗ್ಗೆಯಂ ಮುಱ್ಱುಳ್ಗಳಿಂ ದುರ್ಗದವರ್ಗಳ್ ನುರ್ಗುಮಾಡ ನಾಡಿಯುಂ ಪಿಗ್ಗಾಗಿ ಲಗ್ಗೆಯಂ ತೆಗೆಸಿ (ಶಾಸ್ತ್ರಸಾ- ೭-೦೪೦ ೮) ; ಮೊದಲ ಲಗ್ಗೆಗೆ ಮುಱಿದು ಸಾವಿರತೞರು ನೆಗ್ಗಿದವೆಂದುನಿಮಿಷದಲಿ (ಶಾಂತೀ- ೯-೨೪) ; ತುಡುಕಿ ಲಗ್ಗೆಯನೀಱ್ದಂದು ವಜ್ರೀರ್ಗೆ ಕಡುಂಗಲಿ ಪಾವ ಬೆಸಸಿದ (ಶಂಪಾ- ೦೩-೨೩). ೨. ಕೋಲಾಪಲ ; ಗದ್ದಲ ; ಗಲಭೆ : ಲಗ್ಗೆಯ ರವದ ನಿರಿಚಿದನುಳ್ಳ ಘನಗಂಭೀರನಾದದಲಿ (ಶಾಂತೀ೧೪.೦- ೦೭-೩) ; ಲಗ್ಗೆ ಮಸಗಿತು ಕೂಡೆ ರಕ್ಕಸ ಮೊಗ್ಗರದ ಮುಂದಿನಲಿ (ಕುಸಂ. ೩-೨೦-೩೦). ೩. ಆರ್ಭಟ : ನೊರೆ ಬುದುಬುದವನೊಡಗಲು ಕದಪಿ ಕಂಗಳಮ್ಮ ಲಹರಿಗಳ ಲಗ್ಗೆಯಂದೆಸದ ನದಿಯೊಪ್ಪವನದೇವೊಗೞ್ದೆನು (ಪಾಶ್ವ- ೦೦-೨೯). ೪. (ಆಕ್ರಮಣದ ಸಮಯದಲ್ಲಿ ಬಾರಿಸುವ) ಹಲವು ವಾದ್ಯಗಳ ಮೇಳ : "ಮೊಗೆ ಬಹುವಾದ್ಯಮದು ಲಗ್ಗೆಯಕ್ಕುಂ" (ಪುರಾ. ೮೫-೨೬) ; ತಂಬಟದ ಸೂಕಿನ ಲಗ್ಗೆಯಡವಿದೆ ಚೀಱಿದವು (ಪಾರ್ಶ್ವ- ೩-೦೯) ; ಆಲಿವ ಕೈವಾರಿಗಳ ಲಗ್ಗೆಯ ಬಲಿವ ತಂಬಟಕೋಟಿಗಳ . . . ಅಬ್ಬರಣೆ ಮಿಗೆ ಕೈಕೊಂಡರಿಬಳರು (ಶಾಂತೀ೧೪.೦- ೭-೫೦) ; ಶಿತ್ರಿರಿಯ ತಂಬಟದ ಲಗ್ಗೆಯ . . . ಭಾರಿಯ ಘೋರಘೋಷದಲಿ (ಕುಸಂ- ೩-೩-೩) ; ಹೆಗ್ಗಡಲ ತೆರೆಯಂತೆ ವೊಳಗುವ ಲಗ್ಗೆಗಳಲೋರಂತೆ ಸುಘಟರ . . . ಸಿಂಹನಾದದಲಿ (ಶಂಪಾ. ೦೦-೩೨-೨೩). ೫. ಮಲ್ಲಯುದ್ಧದ ಒಂದು ಪಟ್ಟು,—ವರಸೆ : ಉಬ್ಬಸಮಾದ ತೋರಹತ್ಯಕ್ಕೆ ತಗುಳ್ದು ಪತ್ತಿಸುವ ಮಾಸೆಗೊಳಲಮನಿಪ್ಪ ಡೊಕ್ಕರಕ್ಕಿಕ್ಕಿದ ಮಪ್ಪುಲೇವಮೆನೆ ಪತ್ತುವ ಲಗ್ಗೆಗೆ ಮಾರಿಯೊಳ್ ಮೊಗಂಬೊಕ್ಕವೊಲಾಗೆ ಬೆರ್ಚದನವಂ ಕುಪರಂಗೆನಸಾ ನಿಯುದ್ಧದೊಳ್ (ಕಂಪ್ರತಿ. ೩-೮೦). ೬. ಚೆಂಡಾಟದಲ್ಲಿ ಚೆಂಡನ್ನು ಎಸೆಯಲು ಇಟ್ಟಿರುವ ಗುರಿಹಲಗೆ : ವಿರಹಿಜನದರ್ದೆಯ ಲಗ್ಗೆಯನಿಷುವ ಮನ್ಮಥಜನ ಕರದ ವಾಕ್ಕಿಕದ ಸೆಂಡೋ (ಪಜ್ಜ್ವಲ- ೦-೪೯) ; ವರವೂಜಿಯನಾನಾತು ಮೆಜ್ಜಿವ ಮುತ್ತಿನ ಚೆಂಡು ಬರಬೇಕರು ಲಗ್ಗೆಮೆಚ್ಚೆಗೆ (ಶಾಂತಾಪು- ೪೦-೩): ಗುಂಡಾದ ಮುತ್ತಿನ ಚೆಂಡು ಉಬ್ಬಪಾಗಿರಿಯೆಂಬು ಲಗ್ಗೆಯಂ ತಾಗಿ ಪುಟಿ ಹಾರಿಯದುರೇರಿ ಒನವುದೊಯೆಂಬಂತೆ (ಕೌಗಾಂ- ೦೪೩-೦೬). ೭. ಪೇರಿಸಿ ಇಟ್ಟುದು ; ರಾಶಿ : ಸಜ್ಜಸೇವೆಯ ಮದ . . . ದೋಸೆಯ ಲಗ್ಗೆ ಬೆಲ್ಲಗಾರಿಗೆಯ ಬಣ್ಣಿ (ಪಜ್ಜ್ವಲ- ೭-೨೫). ೮. ಒಂದು ಬಗೆಯ ಚೆಂಡಾಟ ; ಲಗೋರಿ : ಬೊಗರಿ ಗದುಗು ಸಡುಗಾಡು ಲಗ್ಗೆ ಹಿತ್ತಿಗವಡೆ ಮೊದಲಾದ ಆಟವಾಟಗಳು ಪ್ರಸಿದ್ಧವಾಗಿದ್ದುವು (ಶಂಪಾಚ- ೦೩೨). ೯. ಗುಂಪು ; ಸಮೂಹ : ಪಜ್ಜಿಂದಿನ ತನ್ನ ಮಂತ್ರಿಯ ಮುಂದುಮಾಡ್ದಲ್ಲರ ಲಂಪಿ ಓಂದ ಪೆಂಗಳಗೆ ಮೇಚರಮಂತ್ರಿಗಂಟಿಂವಿತ್ತೊಂದೆ ಲಗ್ಗೆಯೊಳು ಕೆಲಂಬಿದ (ಪಾಪ. ೩೭-೦೫೫). ' ಲಾಗ್ಗ2 ' ಪರಿಶೀ. ಲಗ್ಗ3 : ೫. ಕಳಬೊಕ್ಕ . . . ನಾಲ್ಕುಂ ಸ್ಥಂನದೊಳಂ ಮೂಜುಂ ಲಗ್ಗದೊಳಂ ಐದುಂ ದೊಕ್ಕರದೊಳಂ ಎಂಬತ್ತುನಾಲ್ಕು ಬಿನ್ನಣದೊಳಂ ಪಲತೞದ ಜಾತಂಗಳೊಳಂ ನೆರೆದು (ಕಂಪ್ರತಿ- ೩-೩೩ ೮). ಲೆಗ್ಗೆ : ೧. ತೊಡಗಿದರೋಪು ಲೆಗ್ಗಗ ವಿಶೇಷವಿರೋಧ ನಿರೋಧಾಧಿಂ (ಕಬ್ಬಿಗ. ೩-೮೩) ; ಗಿರಿದುರ್ಗದಿಂದ ಲೆಗ್ಗೆಯೊಳಿರ್ಗರ್ವಮನಿಲ್ ಪಲೆರಸಿ ದಿವ್ಯಮೆನಿಸ್ಸಾ ಗಿರಿದುರ್ಗವನೇಱಿಸಿದಂ ನರಪತಿಯಪ್ರತಿಮವೀರಚಕವೇ ಪೇಂದ್ರಂ (ಅಕ್ಕತ- ೩೨-೩). ೧೦. ಜಗಳ : ಕದನ.

ಲಗ್ಗೆಸುಗ್ಗು = ಮುತ್ತಿಗೆ ಹಾಕು ; ಆಕ್ರಮಣ ಮಾಡು : ಮಾಗಿಯು ಮಂಜು ಲಂಕೆಯಂ ಸುತ್ತಿದುದು ಮುತ್ತಿದಾದುಂ ಲಗ್ಗೆಸುಗ್ಗೊಳಹೊಕ್ಕು ನುಂಗಿದುದಬಲಧೃತ್ಯಪಯಂ (ಶ್ರೀಪಾಪು. ೧೭೦-೦೨). ಲಗ್ಗೆದೀಳು = ಲಗ್ಗೆಸುಗ್ಗು : ಲಗ್ಗೆಬವ್ದ ಕೋಟೆಯ ಒಳಗಿನ ಜನರಿಗೂ – ಹೊರಗಿನ ವರಸ್ಸು ತೊಂದರೆಗೀಡುಮಾಡುವುದಕ್ಕೆ ಅನೇಕ ತರದ ಸಾಧನ-ಪಲಕರಣೆ ಗಳಿರುವವು (ಶಾಸನ. ೩). ಲಗ್ಗೆಮಾಡು = ಲಗ್ಗೆಸುಗ್ಗು : ಲಗ್ಗೆಮಾಡಿದ ಪರಾಜಿಸ ಸುತತತಗಳೊಳೊಗ್ಗೊಡೆಯದೆ ತವಂತಮಗೆ ಉಗ್ರದೊಳಸು ತೊಡವರಲು ವಿಘೀಷಣ ಭಾರ್ಗವನಂತಿದಿರಾಗಿ (ಅಂಪಾ- ೬-೧೭೭). ಲಗ್ಗೆಯಾಟ = ಲಗ್ಗೆ ಜೆಂಡಿನ ಆಟ : ಕುಮಾರರಾಮಸೂ ಅತನ ಸಂಗಡಿಗರೂ ಲಗ್ಗೆಯಾಟವನ್ನು ಆಡುತ್ತಿರುವರೆಂಬು ತಿಳಿಸಿದಳು (ಶಾಂತಾಪು. ೦೦೧). ಲಗ್ಗೆಯಕ್ಕ = ಲಗ್ಗೆಸುಗ್ಗು : ಕೋಟೆಗೆ ಲಗ್ಗೆಯಕ್ಕಿದರು (ಶಾಸನ- ೦೪೨) ಲಗ್ಗೆಯೇಕು = ಲಗ್ಗೆಸುಗ್ಗು : ಎರಡು ಕಡೆಯಲ್ಲಿಯೂ ಲಗ್ಗೆಯೇರಿ ಬರುತಲಿರುವ ಆ ಶತ್ರುಜನಗಳು ಅಡಿಯಿಡದಂತೆ . . . ಮಾಡಿದರು (ಪುಪಾಪು. ೨, ೭೪) ; ಆತನ ಪಡೆ ಲಗ್ಗೆಯೇರಲು ತೊಡಗಿತ್ತು (ಶಾಪಾಪು. ೭೬). ಲಗ್ಗೆಹತ್ತು, ಲೆಗ್ಗೆಹತ್ತು = ೧. ಲಗ್ಗೆಸುಗ್ಗು : ರಂಗಪ್ಪಣ್ಣಂಗೆ ಲಗ್ಗೆಹತ್ತುತಿದಾರೆಂಬ ವರ್ತಮಾನ ತಿಳಿಯಿತು (ಅಕ್ಕ. ೩) ; ಶೌರ್ಯದಿಂದ ಕಾದಿದರೂ ಶತ್ರುಗಳು ಲಗ್ಗೆಹತ್ತುವುದನ್ನು ನಿಲ್ಲಿಸಲಾಗದೆ ಹೋಯಿತು (ಬಿಪ್ರ. ೮೨). ೨. ಜಗಳ ವುಂಟಾಗು ; ವಿರೋಧವುಂಟಾಗು : ರೂಪಜಂದನಿಗೂ ದಯಾಮತಿಗೂ ಲೆಗ್ಗೆಹತ್ತಿರುವುದು ಗಜೇಂದ್ರಸಿಂಹನಿಗೆ ಗೊತ್ತಾಗಿತ್ತು (ಶಾಪಾಪು. ೦೩೨). ಲಗ್ಗೆಹಾಕು = ಲಗ್ಗೆಸುಗ್ಗು : ತರೀಕೆರೆ ದಂಡು ಬಂದು ರಂಗ ಪಟ್ಟಣಕ್ಕೆ ಲಗ್ಗೆಹಾಕಿದ್ದು (ಅಕ್ಕ. ೧೭೭- ೪೩೦೦೮ ೦). ಲಗ್ಗೆ ಹೂಡು = ಲಗ್ಗೆಸುಗ್ಗು : ಇವನು ಪಡಸಾಲೆಯಲ್ಲಿ ಕುಳಿತಾಗ ಸ್ತ್ರೀಸ್ಪೈನ್ಯವು ಬಾಗಿಲ ಬಳಿ ಲಗ್ಗೆಹೂಡಿ . . . ಸನ್ನೆ ಮಾಡುತ್ತಿದ್ದರು (ಗಂಪಾಪು- ೩೩).

[< ಸಂ. ಲಂಘನ]

ಲಗ್ಗೆಗೆಯ್ (ಕ್ರಿ)- ಮುತ್ತು ; ದಾಳಿಮಾಡು ; ಲಗ್ಗೆಯಿಕ್ಕು : ತುರಗಾಧಿರೂಢರ್ . . . ಉತ್ಪಾತಾಸಿಚ್ಛರಿತಭುಜವಿಘ್ನರೋದ್ಭೂರ್ ಸೆಣಸಂ ಲಗ್ಗೆಗೆಯ್ದು ಪಾಯಿಸೆ ಜವದಿಂ (ಪಾಂಪ್ರ- ೨-೦೩) ; ಅಬ್ಬೆಯೊಡ ಲೆಂಬ ಮಣ್ಣಾ ಪಜ್ಜೆಗೋಟೆಯೊಳಿಂದ್ರಿಯದುಃಪರಿಗ್ರಹಂಗಳನೆಸಳ ಕೊಂಡು ಜೀವನಿಲಲಾರ್ತಪ ನಾಳೆಯ ಲಗ್ಗೆಗೆದ್ದು ತೊತ್ಪಜ್ಜುಬಿದಿಪ್ಪ ದ್ದವಿಯಿಂ ಜವಂ (ಪಜ್ಜ. ೫೫-೧೩). [ಲಗ್ಗೆ+ಕೆಯ್1]

ಲಗ್ಗೆಚಂಡು ' ಲಗ್ಗೆಸೆಂಡು ' ನೋ.

ಲಗ್ಗೆಚೆಂಡು ' ಲಗ್ಗೆಸೆಂಡು ' ನೋ.

ಲಗ್ಗೆದ್ದಂಬಟ (ನಾ)- ಆಕ್ರಮಣದ ಸಮಯದಲ್ಲಿ ಬಾರಿಸುವ ತಪಟೆ ಗಳ ಸಮೂಹ : ಇಕ್ಕೆಲದ ರಾವುತರ ತೆಂರಿನ ತೆಕ್ಕೆಗಳ ಗಜಘಟೆಯ ಕಾಲಾಳ್ಕಜದ ಸಾಳಿಗಳೂಳಿನ ಲಗ್ಗೆದಂಬಟದ(ಶಾಂತೀ- ೬-೨೬) ; ಸಂತಪಿಸಿತಾ ಸೇನೆ ಕುರುಬಲ ಕಂತುಹರನುದ್ಯೋಗವಾಗೆ ನಿರಂತರದ ನಿಸ್ಸಾಳಸೂಳಿನ

ಲಗ್ಗದಂಬಟಿದ (ಕುಮಾ೫. ೨೧-೦೬)- 'ಲಗ್ಗವಟಿ' ಪರಾ.

[ಲಗ್ಗ + ತಂಬಟಿ]

ಲಗ್ಗದೋಟು (ಕ್ರಿ)- ಗದ್ದಲ ಹುಟ್ಟು; ಗಲಭೆಯಾಗು : ಅಚ್ಚಂ ಕೊಂಡು ಕವಡಯುಂ ತೂಗಿಯನಿತ್ತೆಂದುಂಬಿ ಕೈಚಳಂ ಮಿಗೆ ಬಂದಮೆನಲ್ ಲಗ್ಗದೋಟಲಾಡುತ್ತಿರ್ದರ್ (ದಶಕು. ೯-೩೩). [ಲಗ್ಗ + ತೋಟು]

ಲಗ್ಗಮಣಿ (ನಾ). ೧. ಚೆಂಡನ್ನು ಎಸೆಯುವ ಗುರಿಹಲಗೆ : ಲಗ್ಗಮಣಿ ಚೆಂಡು ತರಲು ಹೊರಟಿದ್ದವನು . . . ಮನೆಯೊಳಗೆ ಒಡಿದನು (ಭುರಿಶ. ೨೪೦). ೨. ಗುರಿಹಲಗೆಗೆ ಚೆಂಡನ್ನು ಎಸೆಯುವ ಆಟ : ಬನ್ನೋ ಲಗ್ಗಮಣಿ ಆಡಾನ (ಭುರಿಶ. ೨೪೦). [ಲಗ್ಗ + ಮಣಿ]

ಲಗ್ಗಪರಿಗೆ (ನಾ)- (ದಾಳಿಗೆ ನುಗ್ಗುವಾಗ) ಆತ್ಮರಕ್ಷಣೆಗಾಗಿ ಬಳಸುವ ಗುರಾಣಿ,–ಢಾಲು : ತಕ್ಕೈವರಿಗೆ ಲಗ್ಗವಿಗುಂದಯ್ಯಂದೆಕ್ಕೈದುಂ ಪಟುಭಟರು ಹೊಕ್ಕು ಹೊಯ್ದಾಡಿ (ಶಂಕಾಪಂ. ೦೨-೭೭).

[ಲಗ್ಗ + ಪರಿಗೆ]

ಲಗ್ಗವಲ್ಲಿ (ನಾ)- = ಲಗ್ಗಮಣಿ ೧ : ಬಳಿಕಾಡುವ ಚೆಂಡು ಲಗ್ಗವಲ್ಲಿಗಳ ಕಂದಿಳುಪಲೂಗದ ಬೊಂಬಿಕರು (ಶಂಕಾಪಂ. ೩೦-೭೭).

[ಲಗ್ಗ + ಪಲ್ಲಿ]

ಲಗ್ಗವಜೆ (ನಾ). = ಲಗ್ಗದಂಬಟಿ : ಅನೇಕದುರ್ಗಸಾಧನವಿಕರಂಗಳ್ಕರಸು ನಡದು ಭೋಗ್ಯರವ ಲಗ್ಗವಜೆಗಳ್ ಮೊಗ ಸುತ್ತಿ ಮುತ್ತಿ (ಜಗ. ೭-೮೬ ಪ); ಲಗ್ಗವಜೆಗಳಿಗಮಮ ಮೌನದ ಸುಗ್ಗಿಯಾಯಿತು (ಶಾಸ್ತ್ರ. ೮-೭೭), ಲಗ್ಗವಜೆ ಮೊಳಗಿದವು ನಿಜಬಲದೊಳು (ಕೈಲಾಸ. ೦೩-೪೩). [ಲಗ್ಗ + ಪಲ್ಲಿ]

ಲಗ್ಗವಿಡಿ (ಕ್ರಿ). ಮುತ್ತಿಗೆ ಹಾಕು ; ಆಕ್ರಮಣ ಮಾಡು : ಗೊಂಡ ಹುರ್ಗಕ್ಕೆ ಚಿಚ್ಚರದಿಂ ಮುತ್ತಿ ಪೊದಳ್ದು ಲಗ್ಗವಿಡಿದಾತ್ಮಾಧೀನಮಂ ಮಾಡಿ (ಕೃಷ್ಣಾ. ೨-೭೯). [ಲಗ್ಗ + ಪಿಡಿ]

ಲಗ್ಗಸೂಳು (ನಾ)- ಅನೇಕ ವಾದ್ಯಗಳ ಜೋರಾದ ಧ್ವನಿ : ನಡುಗಿತವನಿಯಹಾಂಡಖರ್ವರವೊಡೆಯಲವನಿಯ ಲಗ್ಗಸೂಳಿನ ಹೊಡಗುಂಳಿನೊಳ್ಬರಿಸಿದವು ನಿಸ್ಸಾಳಕೋಟಿಗಳು (ಶಾಸ್ತ್ರಿ. ೦೦-೭೯).

[ಲಗ್ಗ + ಸೂಳು (< ಸೂಳ್)]

ಲಗ್ಗಸೆಂಡು, ಲಗ್ಗಚಂಡು, ಲಗ್ಗಚೆಂಡು (ನಾ). . ೧. ಗುರಿಹಲಗೆಗೆ ಚೆಂಡನ್ನು ಎಸೆದು ಆಡುವ ಆಟ : ಬಿಡದೆ ಶಿವಧ್ಯೋಹಿಗಳಂ ಪಡಲಿಡುವೊಡೆ ತಾಳ್ದ ಲಗ್ಗಸೆಂಡದಿನೆಗಂ ನಿಡುಗಣ್ಣ ಗಾವಿಕಾರ್ತಿಯ ಮಾಡುವ ವೃತ್ತತೆಯಿನೊಪ್ಪಿ ಕಣ್ಗೊಳಿಸರ್ಂ (ಪಚಿಂ. ೯-೯). **ಲಗ್ಗಚಂಡು** : ೧. ಲಗ್ಗಚಂತನು ಬಂಗಾರಿ ಗುಡುಗಾಲಂಕಿ ಘನ ಜೂಜ್ಗೆಗಾಡೆ (ಶಾಂಪಗ. ೬) ; ಜತಿಜನರ ಕಲ್ಲೆರ್ದೆಯ ಲಗ್ಗಗಳನೂ . . . ಚೂರ್ಗೈಯದಲ್ಲದೆ ಬಿಡಮೆಂಬ ಮೊಳ್ಕಯಂ ಲಗ್ಗಚಂಡಾಡುತಿರ್ದರು ಸಂಧಿದಿ (ಕಮಪ್ರ. ೦೭-೭೭). **ಲಗ್ಗಚೆಂಡು** : ೨. ಗುರಿಹಲಗೆಗೆ ಎಸೆದು ಆಡುವ ಚೆಂಡು : ನೀನೆಲ್ಲಾ ಹೊಕ್ಕೆ ಹೋಗ್ಬೋ. ನಾ ಲಗ್ಗಚೆಂಡು. ಮಣೆ ಹುಡುಕಿ ತರ್ತೀನಿ (ಪುಲಿ. ೨೯೦). [ಲಗ್ಗ + ಸೆಂಡು]

ಲಗ್ನ (ಗು)- ೧. ಸೇರಿದ; ಕೂಡಿದ : ತತ್ಕಮಳಿತಾನನಕಂಟಕಲಗ್ನಪಾದ ನಾದವೊಲುಡುಗುತ್ತುಮಾತ್ಮಕರಮಂ ರವಿ ಪೊರ್ದಿದನಸ್ತಶೈಲಮಂ (ಪಚಕಾ. ೯-೪೭). ೨. ಅಂಟಿದ : ನಾಟಿದ. ೩. ಸಂಬಂಧಿಸಿದ : ಹೊಂದಿಕೊಂಡ. ೪ ನಾಟಿಕೆಗೊಂಡ. ೫. ಬಳಸಿದ; ಉಪಯೋಗಿಸಿದ. ೬ ಮಂಗಳಕರವಾದ; ಪ್ರಶಸ್ತವಾದ. ೭. ಆಸಕ್ತಿಯುಳ್ಳ; ತತ್ಪರವಾದ. (ನಾ). ೮. ಮುಹೂರ್ತ; ನಿಶ್ಚಿತವಾದ ಕಾಲ : ಸಾವ ಲಗ್ನವ ನನಿಯಂ ಬಂದುದು (ಶಾಪಂ. ೨೬-೭೩). ೯. ಶುಭಕೆಲಸವನ್ನು ಮಾಡಲು ಮಂಗಳಕರವೆಂದು ಗೊತ್ತುಪಡಿಸುವ ಗಳಿಗೆ; ಶುಭಮುಹೂರ್ತ : ನೈಮಿತ್ತಿಕನಂ ಬರಿಸಿ ತದಾತನಮುಮುತ್ಕಂತ ನೂತನಮುಮುಮ್ಮವ್ವುದೋದು ಲಗ್ನಮಂ ಪೇಳುಮೆಂಬುದುಂ (ಪಂಚತಂ. ೩-೪೭೫); ಲಗ್ನವೆಲ್ಲಿಯದೊ ವಿಘ್ನವೆಲ್ಲಿಯದೊ ಸಂಗಯ್ಯ (ಪಚಕಾ. ೬೭೦). ೧೦. ಮದುವೆ; ವಿವಾಹ : ಸುರರ ಸೇನಾಧಿಪ ಕಾನುದರು ಗುಹನಿಗೆ ಲಗ್ನವಾಗಿಲ್ಲವಾಹ! (ಪಂಚಾತಂ. ೦೪೦-೮೯); ನಿಮ್ಮ ಲಗ್ನ ಆಗೇದೇನು (ಪಚಕಾ. ೨೪). ೧೧. ಮದಿಸಿದ ಆನೆ ; ಮದಗಜ: "ಲಗ್ನ:, ಪ್ರಭಿನ್ನ:, ಧಾತ್ತ:_ ಈ ೩ ಮದದಾನೆ" (ಕಂಗತ್ರಿ. ೩೭-೩೭); "ಲಗ್ನಂ ಪ್ರಭಿನ್ನಂ ಮತ್ತಮೆನೆ ಮದಗಜಂ" (ಪುಂಗಣ. ೪೬-೩). ೧೨. ರಾಜನನ್ನು ನಿದ್ದೆಯಿಂದೆಬ್ಬಿಸುವ ಸ್ತೋತ್ರಪಾಠಕ,–ಸ್ತುತಿವಾಚಕ. ೧೩. [ಜ್ಯೋತಿ] ಒಂದು ದಿನದ ಹನ್ನೆರಡನೆಯ ಒಂದು ಭಾಗ. ೧೪. ಸೂರ್ಯ ಅಥವಾ ಗ್ರಹಗಳ ಉದಯ. ೧೫. ಸೂರ್ಯನು ಯಾವುದೇ ರಾಶಿಯನ್ನು ಪ್ರವೇಶಿಸುವ ಕಾಲ,–ಸಮಯ: ಮೇಷಮೇ ಮೊದಲಾದ ರಾಶಿಯ ಉದಯ: "ಪರಿವಿಡಿದು ಮೇಷಾದಿಗಳು ಲಗ್ನಮೆನಿಸುಂ" (ಪುಂಗಣ. ೫೦-೩) ; "ಯಾವ ಕಾಲದಲ್ಲಿ ಯಪ್ಪ ರಾಶಿ ಉದಿಸುತ್ತೋ ಆಗ ಅದು ಲಗ್ನವಹುದು" (ಸಿದ್ಧಾಂತ. ೩೨). ಕನಕನರೆ ಲಗ್ನದೊಳ್ ಕ್ಷತಕನು (ಪಾಪಪು. ೦೮-೯). ೧೬. ಹನ್ನೆರಡು ರಾಶಿಗಳ ಆಕೃತಿ,–ಆಕಾರ.

ಲಗ್ನವಾಗು = ಮದುವೆಯಾಗು ; ವಿವಾಹವಾಗು : ಭಾರತೀಯ ವಿದ್ಯಾರ್ಥಿಗಳು ಅಂಗ್ಲಕನ್ನೆಯರನ್ನು ಏಕೆ ಲಗ್ನವಾಗುತ್ತಾರೆ ? (ಸಚಿತ್ರ. ೦೦೦). [ಸಂ].

ಲಗ್ನಂಬಡೆ (ಕ್ರಿ). ಮಗ್ನವಾಗು; ಆಸಕ್ತವಾಗು: ರಾರಾಜಪ ಲೋಚನಕ್ಕಿರವ ದೊಳು ಕೂರುಗುರ್ಗೀದಗೆಯಸೆಳೊಳು ನೃಪತಿಯ ಚಾರುನಯನಮತಿಲಗ್ನಂ ಬಡದುವು ಬಂಡಾನವಜಯಂತೆ (ಪಚಾಂ. ೬-೦೬). [ಲಗ್ನ + ಪಡಿ]

ಲಗ್ನಕ (ನಾ). ಹೊಣೆಗಾರ; ಜಾಮೀನಾದವನು : "ಪ್ರತಿಭೂ:, ಲಗ್ನಕ:– ಈ ೨ ಹೋ(ಗಾಜಂ)" (ಪಚಂಮು. ೬೪-೨೫೩); "ಲಗ್ನಕ:, ಪ್ರತಿಭೂ:– ೨ ಹೊಣೆಗಾರ. ಜಾಮೀನ್‌ದಾರ್" (ಸಿದ್ಧಾಂ. ೦೬. ೪೦೯). [ಸಂ.]

ಲಗ್ನಕಾಲ (ನಾ)- ಶುಭಕಾರ್ಯಗಳನ್ನು ನೆರವೇರಿಸಲು ಒಳ್ಳೆಯದೆಂದು ನಿಶ್ಚಯ ಮಾಡಿದ ಸಮಯ ; ಶುಭಮುಹೂರ್ತ: ಲಗ್ನಕಾಲಕ್ಕೆ ವಿಘ್ನ ಮಾಡದಾರದು (ಗಾಪ). [ಸಂ].

ಲಗ್ನಪತ್ರಿಕೆ (ನಾ)- ೧. ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳಿಗೆ ಆಮಂತ್ರಿಸುವ ಪತ್ರ,–ಆಹ್ವಾನಪತ್ರಿಕೆ.— ಕರೆಯೋಲೆ : ನಂಟರಿಗೆಲ್ಲ ಲಗ್ನಪತ್ರಿಕೆಗಳನ್ನು ಕಳುಹಿಸಿಬಿಡಿ (ಕಥ. ೧೧); ಕವರು ಬಿಚ್ಚಿ ನೋಡಿದೆ : ಲಗ್ನಪತ್ರಿಕೆ (ಪಾಪಪು. ೬೯). ೨. ಮದುವೆಯ ದಿನ, ಮುಹೂರ್ತಗಳನ್ನು ನಿಶ್ಚಯಿಸಿ ಕರೆಯೋಲೆಯನ್ನು ಸಿದ್ಧಪಡಿಸುವ ಸಮಾರಂಭ; ನಿಶ್ಚಿತಾರ್ಥ: ಅವರ ಮನೆಯಲ್ಲಿ ಈವೊತ್ತು ಲಗ್ನಪತ್ರಿಕೆ (ಕೂಪ). [ಸಂ. ಲಗ್ನಪತ್ರಿಕಾ]

ಲಗ್ನಾಧಿಪತಿ (ನಾ)- ೧. [ಜ್ಯೋತಿ] ಆಯಾ ರಾಶಿಗೆ ಮುಖ್ಯಸ್ಥಾನದಲ್ಲಿರುವ ಗ್ರಹ; ℙ ಉದಾಹರಣೆಗೆ—ಕನ್ಯಾರಾಶಿಗೆ ಬುಧ, ಧನೂರಾಶಿಗೆ ಗುರು ಲಗ್ನಾಧಿಪತಿಗಳು. ೨. ಎಲ್ಲರ ಮದುವೆಯನ್ನು ನಿಷ್ಕರ್ಷೆ ಮಾಡುವ ಅಧಿಕಾರಿ; ಬ್ರಹ್ಮ : ಈ ಮೊದಲು ಲಗ್ನಾಧಿಪತಿಯಾದ ಬ್ರಹ್ಮನು ಎಂದೂ ನನ್ನ ಲಲಾಟಪಟ್ಟದಲ್ಲಿ ಬಂದು ಕುಳಿತಿರದಿದ್ದರೂ ಒಮ್ಮೆ ನನ್ನ ಮಾನಸಪದ್ಮದಲ್ಲಿ ಕುಳಿತಿದ್ದನು (ಚಿತ್ರ. ೨೩೨). [ಸಂ].

ಲಗ್ನಾಹ (ನಾ)- ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳನ್ನು ಮಾಡಲು ಗೊತ್ತುಪಡಿಸಿದ ದಿನ,–ದಿವಸ: ಉದ್ಯಾಹಲಗ್ನಾಹಮುಂ ಭೋಜನೆನೆ ಸಾರ್ತಂದಿರ್ದುದೇನುಂ ತಡವಿರಲಿಡೆಯಿಲ್ಲ (ಪಂಪ್ರಕೃ. ೬-೨೩).

[ಸಂ.]

ಲಗ್ನಿಗ (ನಾ)· ಮದುವೆ, ಮುಂಜಿ ಮೊದಲಾದ ಶುಭಕಾರ್ಯಗಳಿಗೆ ಮುಹೂರ್ತವನ್ನು ನಿಶ್ಚಯಿಸಿ ಹೇಳುವವನು : ಜ್ಯೋತಿಷಿ : ಸಮಯದ ವಿವರವಱಿದು ಲಗ್ನಿಗರು ಪವಕಾಂಚನಘಟದೊಳು ಘಟಿಕಾಪಾತ್ರವನಿರಿದರೊಲವಿಂದ (ಕ್ರಿಚಾಂ· ೦೦-೫೫). [ಲಗ್ನ + — ಇಗ]

ಲಗ್ನಿಸು (ಕ್ರಿ)· ಸಂಬಂಧಿಸು; ಸೇರು; ಬೆರೆ; ಲೀನವಾಗು: ಭಗ್ನದಾರಾತ್ಮಗೆ ಸುಪ್ರಭೆ ಸುಜ್ಞಾನ ಲಗ್ನಿಸಲರಡೊಂದೆ ರೂಪು (ಕಚಿ· ೬೬-೬೬)·

[ಲಗ್ನ + — ಇಸು]

ಲಘಾಟ 'ಲಗಾಟ' ನೋ·

ಲಘಿದು (ನಾ)· ೧· ಹಗುರವಾಗಿರುವಿಕೆ; ಲಘುವಾಗಿರುವಿಕೆ; ಭಾರವಿಲ್ಲದಿರುವಿಕೆ· ೨· ಸಣ್ಣತನ ; ಅಲ್ಪತೆ· ೩· ಕೀಳುತನ ; ಕ್ಷುದ್ರತೆ· ೪· ವಿಚಾರಹೀನತೆ ; ಗಾಂಭೀರ್ಯವಿಲ್ಲದಿರುವಿಕೆ ೫· ವಿಚಾರಶೂನ್ಯನಾದವನು ; ಅವಿವೇಕಿ : ಕಾಮಿನೀವಶನಾದ ನಾವನಾಗಲಿ ಮನೋಭ್ರಾಮಕತ್ವದಿ ತೊಳಲಿ ಲಘಿಮನಪ್ಪಂತೆ (ಪಿಂಗಾಣ· ೨-೬-೫೪)· ೬· [ಯೋಗ] ಅಷ್ಟಸಿದ್ಧಿಗಳಲ್ಲಿ ಒಂದು ; ಇಚ್ಛಿಸಿದಾಗ ದೇಹವನ್ನು ಅತ್ಯಂತ ಹಗುರವಾಗಿಸಿಕೊಳ್ಳಬಲ್ಲ ಶಕ್ತಿ : ಅಣಿಮವೆಂಬುದದು ತಾನೊಂದು . . . ಮತ್ತೆ ಅರಿ ಲಘಿಮವೆಂದುವೆ ನಾಲುಕು (ಕ್ಯಾಚಿಂ· ೨೦-೧೨) ; ಇಂಥಾ ದೃಢಭಕ್ತಿಯಿಂದ ಅಣಿಮ, ಮಹಿಮೆ· ಲಘಿಮ· ಗರಿಮ· ಪ್ರಾಪ್ತಿ· ಪ್ರಾಕಾಮ್ಯ· ಈಶತ್ವ· ವಶಿತ್ವಗಳೆಂಬ ಅಷ್ಟೈಶ್ವರ್ಯಂಗಳನ್ನು ಹೊಂದಿದರು (ಪ್ರಣಾ· ೦೬೨)·

[ಸಂ· ಲಘಿಮನ್]

ಲಘಿಮೆ (ನಾ)· ೧· = ಲಘಿಮ ೧· ೨· ಸಣ್ಣದಾಗಿರುವಿಕೆ; ಚಿಕ್ಕದಾಗಿರುವಿಕೆ· ೩· ಕೀಳುತನ; ಅಲ್ಪತೆ· ೪· ವಿಚಾರಹೀನತೆ· ೫· = ಲಘಿಮು ೬ : " ಅಣಿಮು ಲಘಿಮೆಂಗಳೆನಲ್ಕಷ್ಟಸಿದ್ಧಿಗಳಕ್ಕು " (ಪುಂಗಣ· ೦೭೯-೭೬) ; ಅಣಿಮಾ ಗರಿಮಾ ಮಹಿಮಾ ಲಘಿಮಾ ಪ್ರಾಪ್ತಿ ಪ್ರಾಕಾಮ್ಯ ಈಶತ್ವ ವಶಿತ್ವಮೆಂಬಷ್ಟಗುಣ ಮಣಿಭೂಷಿತನುವಾಗಿ (ಕ್ರಾಪು· ೦೦೯) : ಮಹಾಮೇರುಪರ್ವತಕ್ಕೆ ಸಮಾನವಾದ ಶರೀರಮುಳ್ಳಾತನಂ ಮೇಲಕ್ಕೆ ನೆಗಹುವ ಕೃತ್ಯದಲ್ಲಿ ಪರಮಾಣುವಿಗೆ ಸದೃಶವಹುದೇ ಲಘಿಮೆ (ಜೀಗೀ· ೨೧೦)·

[ಸಂ· ಲಘಿಮನ್]

ಲಘಿಷ್ಠ (ಗು)· ೧· ಬಹಳ ಹಗುರವಾದ· ೨· ಎಲ್ಲಕ್ಕಿಂತ ಸಣ್ಣದಾದ; ಕನಿಷ್ಠಗಾತ್ರದ· ೩· ಅತ್ಯಂತ ವೇಗವುಳ್ಳ : ಚುರುಕಾದ· [ಸಂ·]

ಲಘು (ಗು)· ೧· ಹಗುರವಾದ ; ಭಾರವಿಲ್ಲದ : ತೂಕವಿಲ್ಲದ· ೨· ಸುಲಭವಾದ ; ಸರಳವಾದ· ೩· ಸಣ್ಣದಾಗಿರುವ ; ಚಿಕ್ಕದಾದ· ೪· ದೀರ್ಘವಲ್ಲದ ; ಹ್ರಸ್ವವಾದ ೫· ಅಲ್ಪವಾದ : ತುಚ್ಛವಾದ : ಅತೀವಜಘನ್ಯಪರಿಣಾಮಂ ಕೈಕೊಂಡು ಪುಟ್ಟ ಮತ್ತಮಾಯುಷ್ಯದೊಳ್ ಪಲವುಂ ಸೂಟ್ ಲಘುಜನ್ಮಮಾಗಾಹದಿಂ ಪುಟ್ಟಿ ಸತ್ತು (ಜಗಾಮಾ· ೬-೬ ೫)· ೬· ದುರ್ಬಲವಾದ ; ಬಲಹೀನವಾದ· ೭· ಸತ್ತ್ವರಹಿತವಾದ ; ನಿಸ್ಸಾರವಾದ· ೮· ಮನೋಹರವಾದ ; ಸುಂದರವಾದ· ೯· ಮೃದುವಾದ ; ನಯವಾದ· ೧೦· ವೇಗವಾದ ; ಶೀಘ್ರವಾದ : ಲಘುಲಕ್ಷಸುಟಯೊಳೊದಗಿ ಪೊಕ್ಕು ಪೊಡದಿಱಾದೊಗೆದು ಸಂಗ್ರಾಮಮುಖದೊಳು ಬಗೆಗುಂದಿಸುವನು ಶತ್ರುಗಳ ಭೈರವರಾಜ ನಿಗದಾವನಾಂಪ (ಕ್ಷಕಚೆ· ೬-೦೦)· (ನಾ)· ೧೧· ಮುಖ್ಯವಲ್ಲದುದು ; ಕ್ಷುಲ್ಲಕವಾದುದು ; ತುಚ್ಛವಾದುದು : ಅಧಿಕಸತ್ವಗುಣಕ್ಕೆ ಕಾಗ್ರಣಿಗಾ ನೃಪಂಗೆ ಮನದೊಳ್ ತೃಣವಲ್ಲಘುವಾದುದಾವಗಂ ಸ್ಫೈರ್ಣಮುಖಂ (ಕಾದಂಪು· ೦೯) ; ಗುರುವ ಲಘುವನು ಉತ್ತಮಪಾಧಮವೆರಡ ಸರಿಗಾಂಬವರ ಮಧ್ಯದಿ ಒರಿಯನೇಗುವ ಹೇಮ ಗುಂಜಿಗೆ ಸರಿಯೆನಿಪ್ಪಂತೆ (ಕಾಶಾಗ· ೨೬-೦೦) ; ಲಘುವೆನಿಸಿ ಗುರುವಾಯ್ತಲಾ ! (ಶ್ರೀಗಾಪಾ· ೨೯೯-೬೭೦)· ೧೨· ದೀರ್ಘವಲ್ಲದುದು ; ಸಂಕ್ಷಿಪ್ತವಾದುದು ; ಹ್ರಸ್ವವಾದುದು : ಮಾತುಗಳು ಯಾವತ್ತೂ ತೀರ ಲಘುವಾಗಿ ಇರಲಿ (ಕಚಿಪಂ· ೫೫)· ೧೩· ವೇಗ ; ಶೀಘ್ರತೆ : " ಲಘು ಶೀಘ್ರಂ " (ಪಸ್ಪಶೆ· ೦೦೬-೦೬)· ೧೪· ಗಾಳಿಯ ನಡೆ ; ವಾಯುವಿನ ವೇಗ· ೧೫· ನಿಸ್ಸಾರವಾದುದು· ೧೬· ದೀನತೆ ; ದೈನ್ಯ· ೧೭· ಸುಂದರವಾದುದು· ೧೮· ಒಂದು ಬಗೆಯ ಸುಗಂಧದ್ರವ್ಯ ; ಅಗರು : "ಕರ ಶೀಘ್ರದಲಿ ಮನೋಜ್ಞ ನಿಸ್ಸಾರದಲಿ ಮರುತಗತಿಯಲಿ ಅಗರಿನಲಿ ಲಘುವೆನಿಕ್ಕು" (ಪುಂಗಣಾ· ೨೫೯-೬೯) ; "ವಾಯುಚಾರಂ ದೈನ್ಯಂ ನಿಸ್ಸಾರಮುಂ ಶೀಘ್ರಮುಮಂಗುರು ಮನೋಜ್ಞಂ ಲಘೂವಾಕ್ಯಮಕ್ಕುಂ" (ಜಾಣಚಿ· ೦೧೬)· ೧೯· ಕೈಚಳಕ ; ಲಾಘವ : ' ಲಘುದೋರು ' ಪರಾ· ೨೦· ಗದಾಯುದ್ಧದ ಒಂದು ವರಸೆ· — ಪಟ್ಟು : ಬವರಿ ಮತ್ತೊಂದ್ದತಿ ವಿಲಂಘನ . . . ಲವವಿದ್ಯಮಣ ಲಘುವಿನ್ಯಸ್ತವೆಂಬೀ ವಿಪರದಲಿ ಕಾದಿದರು ಕೌತುಕವೆನಲು ಸುರವಿಕರ (ಜಾಶ್ಯಕ· ೬-೨೫)· ೨೧· ಆರೋಗ್ಯ ; ಸ್ವಾಸ್ಥ್ಯ : ಬರಿದೆ ದೇಹಕ್ಕೆ ಲಘುವಿಲ್ಲವೆಂದು ಮೂರು ಕಾಲ್ಮುದಿನ ಹೋಗದೆ ಇದ್ದು (ಅಕ್ಷಚಿ· ೦೨೨)· ೨೨· ಲಾಮಂಚ ; " ಕರೇಬಾಳದ ಬೇರು " (ಹೊಗಾಪ· ೨೬೬)· ೨೩· [ಛಂದ] ಒಂದು ಮಾತ್ರೆಯ ಅವಧಿಯಲ್ಲಿ ಉಚ್ಚರಿಸುವ ಅಕ್ಷರ ; ಹ್ರಸ್ವಾಕ್ಷರ : ಬರೆದಯ್ದಾ ಲೆಕ್ಕಮನಾದರದಿಂ ಗುರುಲಘುವಿಭೇದಮಂ ಭಾವಿಸು ನೀಂ ಗುರು ಮುಂತೆ ಕೊಂಕೆ ತೋಱುವ ಬರೆ ಪಿಂತಣ ಸೈತನಪ್ಪ ಬರೆ ಲಘು ಕೆಳದಿ (ಪುಂಕೋಣಾ· ೪-೬೬) ; ಮೊದಲು ಕೊವೆಗಳ್ಗಲ್ಲಿ ಲಘುವು ಮಧ್ಯದಲ್ಲಿ ಗುರುವು ಇವ್ವರೆ ಜಗಣವೆಂದು ಸಮ್ಮತಿಸಿದೆ (ಕಚಿಪ್ರ· ೬೬)· ೨೪· [ಸಂಗೀತ] ತಾಳದ ಅತು ಅಂಗಗಳಲ್ಲಿ ಒಂದು : ಪಂಚಸ್ಥಳದಲಿ ಲಘುವಿಡಿದೊಮ್ಮೆ . . . ಪಂಪನಾಟಕಭೇದವ ವಾಚಿಸುತ್ತ (ಕ್ಷಚಿಪ್ರ· ೩-೦೧೪-೩) ; ಕ್ಷೊಂಪಟಿಕಾಲದಲ್ಲಿ ಎರಡೆರಡು ಅಕ್ಷರ(ಕಾಲ)ಗಳ ಎರಡು ದ್ರುತಗಳೂ ಪಂತರ ನಾಲ್ಕಕ್ಷರಪ್ರಮಾಣದ ಒಂದು ಲಘುವೂ ಇವೆಯೆಂದು ತಿಳಿಯಬೇಕು (ಕಚಿಪ್ರ· ೫೫)· 'ಪದಂಗ' ಪರಾ· ೨೫· [ನಾಟ್ಯ] ನೃತ್ಯದ ಒಳಭೇದಗಳಲ್ಲಿ ಒಂದು ; ವಿಷಮ, ವಿಕಟ, ಲಘುವೆಂಬ ಮೂರು ನೃತ್ಯಗಳಲ್ಲಿ ಒಂದು : ಕ್ಷ " ಅಂಚಿತ ಮೊದಲಾದ ಅಲ್ಪ ಕರಣಗಳನ್ನು ಮಾಡುವುದು ಲಘುನೃತ್ತವು " (ಜಾಸ್ಫಶಿ· ೨೦೯ ಗಣ್ಯಪಾಣಿ) : ಒಪವಿದ ನೃತ್ತಂ ತ್ರಿವಿಧಾಪ್ಯದೆ ರಂಜಿಪುದೆಯ್ದೆ ವಿಷಮ ವಿಕಟಂ ಲಘುವೆಂದುದಯಿಪುದು . . . ಅಂಚಿತ ಮೊದಲಾಗಿರುವಲ್ಪಕರಣಮುಂ ಕೀಳ್ ವಿರಚಿಸುವುದು ಲಘುವೆನಿಪ್ಪ ಪೆಸರಂ ಪಡೆಗುಂ (ಜಾಸ್ಫಶಿ· ೦-೩೩)· ೨೬· [ಜೈನ] ಎಂಟು ಬಗೆಯ ಸ್ಪರ್ಶನಾಮಕರ್ಮಗಳಲ್ಲಿ ಒಂದು : ಸ್ಪರ್ಶನಾಮಕರ್ಮವುಜ್ಜವಿಧಮಕ್ಕುಂ ಕರ್ಕತಮೃದುಗುರುಲಘುರೂಕ್ಷ ಸ್ನಿಗ್ಧಶೀತೋಷ್ಣ ಸ್ಪರ್ಶನಾಮಕರ್ಮಮೆಂದಿಂತು (ಗೊಮ್ಮಕಾ· ೪-೦೦)· 'ನಾಮಕರ್ಮಪ್ರಕೃತಿ' ಪರಾ·

ಲಘುವಾಗು = ಗೌರವವನ್ನು ಕಳೆದುಕೊಳ್ಳು : ಅಲ್ಪವಾಗು : ಎನ್ನವರಂ ಲಘುವಾಗದಿರ್ಪೆನೋ ಅನ್ನೆಗಮಿಗಳೇಯೆಡೆಯಾನಾಂ ತೊಲಗಿರ್ದುದು ಕಜ್ಜಂ (ಕಾದಂಪು· ೭೭೨)· [ಸಂ·]

ಲಘುಕರಿ (ನಾ)· [ಜೈನ] ಒಂದು ವಿದ್ಯೆಯ ಹೆಸರು : ಪ್ರಜ್ಞಪ್ತಿ . . . ಪರ್ಣಲಘು ಲಘುಕರಿ . . . ಆಭೋಗಿನಿಯೆಂಬಿವು ಮೊದಲಾಗೆ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನನಾಗಿರ್ದು (ಜಾಪುಂಕ್ಷ· ೦೧೩)·

[ಸಂ·]

ಲಘುಕಾವ್ಯ (ನಾ)· ಸಣ್ಣಕಾವ್ಯ ; ಖಂಡಕಾವ್ಯ : ಕಬ್ಬಿಗರ ಕಾವಮೇನೂ ಒಂದು ಮಹಾಕಾವ್ಯವಲ್ಲ· ಅಮೊಂದು ಲಘುಕಾವ್ಯ (ಕಾಚಿ· ೦೦೩)·

[ಸಂ·]

ಲಘುಕೃತಿ (ನಾ). ಸಣ್ಣಗ್ರಂಥ : ಕವಿಗಳು . . . ದೀರ್ಘಪುರಾಣಗಳ ಬದಲಾಗಿ ಲಘುಕೃತಿಗಳನ್ನು ರಚಿಸುವರೆಂದೂ . . . ಸೂಚಿಸಿದ್ದ ಲಕ್ಷಣ ಗಳಿಗೆ ಈ ಪದ್ಮಪುಸ್ತಕವು ಲಕ್ಷ್ಯವಾಗಿದೆ (ಕಾಪು. ೪೯೪). [ಸಂ.]

ಲಘುಗೀತ (ನಾ). ಶಾಸ್ತ್ರೀಯಸಂಗೀತ ರಾಗ, ತಾಳಗಳಿಂದ ಭಿನ್ನವಾದ ಹಾಡು : ಪದ್ಯಸಮಾಸಗಳು ಲಘುಗೀತಗಳಂತೆ ಸುಂದರವಾಗಿವೆ (ಪ್ರಣಾ. ೫೬). [ಸಂ.]

ಲಘುಟಪ್ಪಣೆ (ನಾ). ಚಿಕ್ಕವಿವರಣೆ ; ಸಣ್ಣಟೀಕೆ : ಮನಸ್ಸಿನ ವಿಷಯ ವಾಗಿ ಶಾಕ್ತದೃಷ್ಟಿಯನ್ನು ಕುರಿತ ಒಂದು ಲಘುಟಪ್ಪಣಿ ಇಲ್ಲಿ ಅಪ್ರಸಕ್ತ ವಾಗುವುದಿಲ್ಲ (ಕಸ್ತೂ. ೧೧೬). [ಸಂ. ಲಘುಟಪ್ಪಣೀ]

ಲಘುತೆ (ನಾ). ೧. ಭಾರವಿಲ್ಲದಿರುವಿಕೆ : ಪಗುರವಾಗಿರುವಿಕೆ : "ಲಾಘವಮುಮು ಲಘುತೆ" (ಪಾಪು. ೦೦೩-೨೯). ೨. ಚುರುಕುತನ ; ಪಟುತ್ವ : ಕೃಷ್ಣ ಸಾಹಿತ್ಯಪ್ರೇಮಿಯಲ್ಲ ; ವಿಮರ್ಶಜ್ಞನೂ. ಜೀವನದ ಲಘುತೆ ಅವನಲ್ಲಿ ತುಂಬಿ ಚಿಲ್ಲುಪಲ್ಲಿದೆ (ಮೂಕಬು. ೫೭). ೩. ದೀರ್ಘ ವಲ್ಲದುದು : ಸಂಕ್ಷಿಪ್ತವಾಮುದು. [ಸಂ. ಲಘು+ತಾ]

ಲಘುತ್ವ (ನಾ). ೧. ಪಗುರವಾಗಿರುವಿಕೆ : ಭಾರವಿಲ್ಲದಿರುವಿಕೆ : ರೂಪ . . . ದ್ರವತ್ವ, ಲಘುತ್ವ, ಮೃದುತ್ವ . . . ಕಠಿನತ್ವ . . . ಸೌಭಾಗ್ಯವೆಂದು, ಸಾಮಾನ್ಯವಾಗಿ ಸುಮತ್ತುವಿಧ ಗುಣಗಳು (ಹಿಂದಿ. ೪೭೩). ೨. ಸಣ್ಣದಾಗಿರುವಿಕೆ. ೩. ಕೀಳುತನ ; ಕ್ಷುದ್ರತನ. ೪. ಹುಡುಗಾಟ ; ಗಂಭೀರರಾಹಿತ್ಯ. ೫. ವೇಗ ; ಶೀಘ್ರತೆ. ೬. ಅಗೌರವ ; ಅವಮರ್ಯಾದೆ. ೭. ಅನುಕೂಲ ; ಸೌಲಭ್ಯ. [ಸಂ.]

ಲಘುದೋರು (ಕ್ರಿ). ಕೈಚಳಕವನ್ನು ತೋರು ; ಲಾಘವವನ್ನು ತೋರು : ಸೆಣಸಿ ಮುಂಬರಿದು ಲಘುದೋರಿ ತಪ್ಪಿಸುತ (ಕಡಲೋ. ೨೪-೩೬). [ಲಘು + ತೋರು (< ತೋಱು)]

ಲಘುದೋಷ (ನಾ). [ಛಂದ] ಗುರುವಿರಬೇಕಾದ ಕಡೆಯಲ್ಲಿ ಲಘು ವನ್ನಿಡುವುದರಿಂದಾಗುವ ದೋಷ : ಕವಿಶರಾರ್ಮಂತು ಪಿಂಗಿಸುಗೆ ಕಾವ್ಯದಿನಾ ಲಘುದೋಷಮುಂ (ಕಾಂಗ. ೦-೦೩೯). [ಸಂ.]

ಲಘುನೃತ್ತ (ನಾ). = ಲಘು ೨೫ : ಅಂಚಿತ ವೆಂದರಾದ ಅಲ್ಪಕರಣ ಗಳನ್ನು ಮಾಡುವುದು ಲಘುನೃತ್ತವು (ಶಾಸ್ತ್ರಂ. ೨೮೪ ಗಣ್ಯಾಖಾಂತ). [ಸಂ.]

ಲಘುಪಾಳಿ (ನಾ). ವೇಗದ ಕ್ರಮ ; ಶೀಘ್ರವಿಧಾನ : ಕಲಿತರು ನಿಪ್ಪು ಪೂರ್ವನ್ಯಪಾಲಕರು ಸರಹಸ್ಯಸಾಂಗೋಪಾಂಗವಿದ್ಯೆಗಳ ಸ್ಥೂಲದಲಿ ಸೂಕ್ಷ್ಮದಲಿ ಬಹುವಿತಾಲದಲಿ ಸಂಕೋಚದಲಿ ಲಘುಪಾಳಿಯಲಿ ಪಾರದಲಿ ವಿವಿಧಾನುಪ್ರಯೋಗದಲಿ (ಕುಪ್ಯಾ. ೭-೦). [ಲಘು + ಪಾಳಿ (< ಪಾಲ್ಪು)]

ಲಘುಪುಟ (ನಾ). ಸ್ವಲ್ಪಮಾತ್ರ ಬೇಯಿಸುವುದು : ಹೆಮ್ಮರದ ತೊಕ್ಕನ್ನು . . . ಇಡಿದು ಮುದ್ದೆಯ ಮಾಡಿ . . . ಲಘುಪುಟವಿಟ್ಟು ಬೆವರಿಸಿ ತಗದು (ಶಿವ. ೩೦೦). [ಸಂ.]

ಲಘುಪ್ರಹಸನ (ನಾ). ದೀರ್ಘವಲ್ಲದ ನಗೆನಾಟಕ; ಸಣ್ಣ ಪ್ರಹಸನ : ಫ್ರೆಂಚ್‌ನಾಟಕಮಂದಿರದಲ್ಲಿ ಲಘುಪ್ರಹಸನಗಳನ್ನು ನೋಡಿ ಬಂದು . . . ಪ್ರೋತ್ಸಾಹ ನೀಡುತ್ತಿದ್ದರು (ಕೃಪಾ. ೩೦). [ಸಂ.]

ಲಘುಬದರಿ (ನಾ). ಒಂದು ಬಗೆಯ ಸಸ್ಯ; ಸಣ್ಣಬೋರೆ : ಎಲಚಿ : "ಬಹುಕಂಟಃ – ಲಘುಬದರಿ" (ಓಷಧಿ. ೦೦೩). [ಸಂ. ಲಘುಬದರೀ]

ಲಘುಲಯ (ನಾ). ಒಂದು ಬಗೆಯ ಸುವಾಸನೆಯ ಬೇರು ; ಲಾವಂಚ : ಮುಡಿವಾಳ : "ಉಶೀರಂ . . . ಲಘುಲಯಂ . . . ಲಾವಂಚದ ಹೆಸರುಗಳು" (ಚಾಣ್ಯ. ೦೩೦). [ಸಂ.]

ಲಘುಶಂಕೆ (ನಾ). ಮೂತ್ರವಿಸರ್ಜನೆ. [ಸಂ. ಲಘುಶಂಕಾ]

ಲಘುಶರೀರಿ (ನಾ). ಚುರುಪಟಿಕೆಯಿಂದ ಕೂಡಿದವನು : ಪ್ರಾಯದ ಜಂಕಿಗಳಂತೆ ಲಘುಶರೀರಿಗಳಾಗಿ ಇಬ್ಬರೂ ಎದ್ದು . . . ಪರ್ವತದ ಸಾನುಪ್ರದೇಶದ ಕಡೆ ತಿರುಗಿದರು (ಹೊಸಕ್ಕ. ೬೩). [ಸಂ. ಲಘುಶರೀರಿನ್]

ಲಘುಸಂಗೀತ (ನಾ). ಶಾಸ್ತ್ರೀಯಸಂಗೀತಕ್ಕಿಂತ ಭಿನ್ನವಾದ; ಆಧುನಿಕ ಕವನ ಮುಂತಾದುವುಗಳ ಮನೋರಂಜಕವಾದ ಹಾಡುಗಾರಿಕೆ : ಈಚಿನ ದಿನಗಳಲ್ಲಿ ಶಾಸ್ತ್ರೀಯಸಂಗೀತಕ್ಕಿಂತ ಲಘುಸಂಗೀತದ ಕಡೆಗೆ ಹೆಚ್ಚು ಜನರ ಒಲವು ಕಾಣುತ್ತಿದೆ (ಕ.ಪ್ರ). [ಸಂ.]

ಲಘುಹಸ್ತ (ನಾ). ೧. ಕೈಚಳಕವುಳ್ಳವನು ; ಕರಕೌಶಲವುಳ್ಳವನು. ೨. ವೇಗವಾಗಿ ಬಾಣಪ್ರಯೋಗ ಮಾಡಬಲ್ಲವನು ; ನುರಿತ ಬಿಲ್ಲುಗಾರ : "ಲಘುಹಸ್ತಃ. ಶೀಘ್ರವೇಧೀ ... ಈ ೨ ಶೀಘ್ರ ವಿಸುವಾತಂ" (ಕಠಾಮು. ೭೬-೪೦೭). [ಸಂ.]

ಲಘೂಕರಣ (ನಾ). ಪಗುರ ಮಾಡುವುದು; ಕಡಮೆಯಾಗಿಸುವುದು : ಯಾವ ವ್ಯಕ್ತಿಯ ಮೇಲಿನ ದಂಡವನ್ನಾದರೂ ಕ್ಷಮಾಮಾಡುವ . . . ಪರಿಹಾರಮಾಡುವ ಅಥವಾ ಲಘೂಕರಣ ಮಾಡುವ ಶಕ್ತಿಯು ರಾಷ್ಟ್ರಪತಿ ಯವರಿಗಿರತಕ್ಕದು (ಕಾರಾ. ೭೩). [ಸಂ.]

ಲಘೂಪಧೆ (ನಾ). [ವ್ಯಾಕ] ಯಾವುದಾದರೂ ಶಬ್ದದ ಕೊನೆಯ ಅಕ್ಷರದ ಹಿಂದಿನ ಅಕ್ಷರವು ಲಘುವಾಗಿರುವ ಶಬ್ದ. -ಪದ : ಗದವಜ ಕಾರುಂವಿದಿರಿಕ ಪದಮಧ್ಯಂ ವಿಷಮಮಾಗಪೇಕ್ಷಾಕ್ಷತದೊಳ್ ಪುದಿಯು ಲಘೂಪಧ ಕಿಲಕಿಲಪೊದವಿರ್ಕುಂ ರಾಂತಳಾಂತಮವ್ವ ಶಿಥಿಲತೆಯಂ (ಕವಾ. ೪೫). [ಸಂ. ಲಘೂಪಧಾ]

ಲಘೂಪಾಗಮ (ನಾ). = ಲಘುದೋಷ : ಬೇಗಮಾ ಲಘುಗಳಲ್ಲದ ತಾಣದೆಸಳಂ ಲಘೂಪಾಗಮಕ್ರಮದಿ ನಂಬುಗೆ ಲಾಘವದೋಷಮಂ (ಕಂಗಾ. ೦-೦೩೬). [ಸಂ.]

ಲಚಂಡ, ಲಚಾಂಡ (ನಾ). ೧. (ಉಕ) ಗೋಜು ; ಸಿಕ್ಕು ; ತೊಡಕು : ವಿನೂ 'ಲಚಂಡ'ವಿಲ್ಲದ ವಿರಕ್ತಿ ಸುಂದರಕ್ಕ. ಅಕೆಯ ಕಣ್ಣಲ್ಲಿ ಈ ವರಿ ಮಾಹಾಪೂರವೇ! (ಕೃ.ಪ. ೩೨೪) ; ನಿನಗೆ ಯಾರು ಹೇಳಿದ್ದು ಎರಡನೆಯವರ ಲಚಂಡ ಸಂಘಾಸಿಸುವದು ! (ಕೃ.ಪ. ೪೦೯). ಲಚಾಂಡ : ೨. ಗೋಳು ; ಸಂಕಟ : ಇಲ್ಲಿಯ ಲಚಾಂಡ ಯಾರು ನೋಡಬೇಕು ? (ದೀಪಿ. ೨. ೨೦೨). [←ಮರಾ. ಲಚಂಡ್, ಲಚಾಂಡ್]

ಲಚಾಂಡ 'ಲಚಂಡ' ನೋ.

ಲಚ್ಚ೧ 'ಲಕ್ಕ೧' ನೋ.

ಲಚ್ಚ೨ 'ಲಕ್ಕ೨' ನೋ.

ಲಚ್ಚಣ್ಣ 'ಲಕ್ಕಣ' ನೋ.

ಲಚ್ಚಣ್ಣ೧, ಲಚ್ಚಣ್ಣೆ (ನಾ). ೧. ಗುರುತು; ಚಿಹ್ನೆ ; ಲಕ್ಷಣ : "ಲಚ್ಚಣಮನೆ ರಾಂಛನಮದು" (ಕಾಸಂ. ೫೯) ; ಅಲ್ಲಿ ವಲ್ಲಭನೊಳೆರವಿಲ್ಲದ ವೆರಮುವನೀ ಲಚ್ಚಣಮೆ ಪೇಜ್ಗುಮಿಲ್ಲಿ ಸಂವೆಗೆದ್ದೇವುದು (ಲೀಲಾವ. ೦೦-೯೬ ೩) ; ಬಂಂಬೋಜಕ್ಕೆ . . . ಲಾಂಛನ–ಲಚ್ಚಣ (ಕವಿಪ. ೨೬೩ ಶ್ರುತೀ) ; ಪರಿಯ ಲಚ್ಚಣದ ಮೆಯ್ಕಟ್ಟು (ಶಬ್ದಾ. ೪-೩೨). ೨. ಕಾಳನ್ನು ರಾಶಿಮಾಡಿದ ಮೇಲೆ ರಾಶಿಯ ಸುತ್ತಲೂ ಹಾಕುವ ಗೆರೆ. – ರೇವೆ : ನಿಮ್ಮ ಶರಣನು ಲಚ್ಚಣವಳಿಮಿದೆ ರಾಸಿಯನಳೆವನು (ಪಡಸಂ. ೦೫೩-೬೩೩) : ರಾಶಿಗಿಕ್ಕಿದ ಲಚ್ಚಣ ರಾಶಿಯ ಕೊಳಬಲ್ಲುದೇನೋ ಮೂಢ ರಾಶಿಯ ಒಡೆಮಲ್ಲದೆ ಆ ಪರಿಯಲ್ಲಿ ಈ ಲಿಂಗವು ಜಂಗಮದ ಮುದ್ರೆ ಎಂದು ತಿಳಿ (ಪಸ್ವ. ೦೦-೬). **ಲಚ್ಚಣ್ಣೆ** : ೨. ಸುರರೂಪು ಗಜನೆಂಬ ಪಾಮರಂ ಬೆಳಸಿದಂರುತ್ತರದ ರಾಜಾಸ್ಥರಾಶಿಯ ಲಚ್ಚಣೆಯೊ . . . ಎನಲು ಮೆಜ್ಜಿದುವಾ ಪರಿವೇಷಪ್ಪತದೊಬ್ಬಿಯು ಕೋ (ಕೇರಮು. ೬-೪೭). 'ಲಕ್ಕಣ' ಪರಾ. [<ಸಂ. ಲಾಂಛನ]

ಲಚ್ಚಣಗಂಬ (ನಾ)· ಸಂಕೇತವಾಗಿ ನೆಟ್ಟ ಕಂಬ ; ಗುರುತಿನ ಕಂಬ : ಎಂಟುವಾನೆಗಳುಂ ತಱುಪಿನಪ್ಪನಂ ಜಯದ ಲಚ್ಚಣಗಂಬದೊಳುದ್ದಿ ಕೊಳುವುವಾಜಿವೆ ವಿಷ್ಣುವಿಕ್ರಮದುಪಕ್ರಮಮಂ (ಪಂ· ೪· ೬೦ಗಂಟು. ೧೭೦–೭೬ ; 1160)· [ಲಚ್ಚಣ್ಣ+ಕಂಬ್ಬ (<ಕಂಭ)]

ಲಚ್ಚಣಿಸು (ಕ್ರಿ)· ೧. ಗುರುತಿಸು ; ಗುರುತುಮಾಡು : ಕೇಳುತವೆ ಕಂಬನಿಗಳೊಸರಿದವಾಲಿಗಳಬೋರಂತೆ . . . ಬೀಳುತಿರಲಾ ಮುಂದೆ ಬಹಳ ವಿಶಾಲಭೋಗಸ್ಥಾನವೆಂಬುದನಾಲಿಸುತ ಲಚ್ಚಣಿಸಿ ತೋಱಿಸುವಂತೆ ಬಂದುಗಳು (ಪಾಶ್ವ· ೦೦–೨೫–೭೭)· ೨. (ಕಾವ್ಯದ) ಲಕ್ಷಣಕ್ಕೆ ಹೊಂದಿಸು : ಹಲಗೆ ಒಳಹದಿಂದ ಚಲಿಸದಂದದಿ ಪ್ರಾಸ ನೆಲೆಮಾದಿದ್ದಿ ಲಚ್ಚಣಿಸಿ ಬಲಿದು ಪದನ ಮಾಡಿ ಪೇೞ್ದನಾವಡೆ (ಪಾಪಾಂ· ೦–೦೫)·

[ಲಚ್ಚಣ್ಣ (<ಲಕ್ಷಣ)+—ಇಸು]

ಲಚ್ಚಣಕ್ಕೆ (ನಾ)· ಸಾರಸ ಪಕ್ಷಿ : ಪಾಡುವ ಸಾಳಗಂ ಲಲಿಯೊಳಾಡುವ ಲಚ್ಚಣಕ್ಕೆ[ಗೆ] (ಕಾಸಾ· ೦೮)· [<ಸಂ. ಲಕ್ಷ್ಮಣಾ]

ಲಚ್ಚಣಕ್ಕ ' ಲಚ್ಚಣ್ಣ ' ನೋ·

ಲಚ್ಚಿ ' ಲಕುಮಿ ' ನೋ·

ಲಜ್ಜರಿಕೆ (ನಾ)· ಮುಟ್ಟಿದರೆ ಮುದುರಿಕೊಳ್ಳುವ ಎಲೆಗಳುಳ್ಳ ಒಂದು ಬಗೆಯ ಗಿಡ ; ಮುಟ್ಟಿದರೆ ಮುನಿ : ಮೊ (ಪೂ)ರಕೆಯ ಬೂದಿಯಂ ಗರುಗದಾ ರಸಮುಂ ಪಿಪ್ಪಲಿಯೊ(ನ)ಚ್ಚಗಲ್ಲ ಲಜ್ಜರಿಕೆ ಸರೋಜನಂ . . . ತಿಲಕೈಲದೊಳಿಟ್ಟು ಪೂಸುಗೆ (ಕೀಪ್ರಾಚಿ· ೯–೨೦೬) ; ವಿವಿಧಸ್ಪರ್ಶ ಘಾಯದೊಳ್ . . . ಹೊನ್ನಗನ್ನೆಯನಕ್ಕೆ ಸಂಭವಿಸೆ ಲಜ್ಜರಿ[ಕಾಕಾ· ಲಿ] ಕಾಖ್ಯಮುಂ . . . ಇವಱೊಳಾವುದನಾದೊಡಂ ಪೊಡೆಗೆ (ಪಾಪು· ೫–೨೦೩)· 'ಲಜ್ಜಾವತಿ' ಪರಾ· [ಸಂ. ಲಜ್ಜರಿಕಾ]

ಲಜ್ಜಾಲು, ಲಜ್ಜಾಳು (ಗು)· ೧. ನಾಚಿಕೆಯ ಸ್ವಭಾವದ ; ಸಂಕೋಚ ಪ್ರವೃತ್ತಿಯ. (ನಾ)· ೨. ನಾಚಿಕೆಯ ಸ್ವಭಾವದ ವ್ಯಕ್ತಿ; ಸಂಕೋಚ ಸ್ವಭಾವದವನು : " ಲಜ್ಜಾಶೀಲಂ ಲಜ್ಜಾಲು" (ಪಾಪು· ೫ಆ· ೬೨–೬೬)· ೩. = ಲಜ್ಜರಿಕೆ· **ಲಜ್ಜಾಳು** : ೨. ನಾನು ಅತ್ಯಂತ ಲಜ್ಜಾಳುವಾದ ಮನುಷ್ಯ (ಇತ್ಯ· ೯೮೨). [ಸಂ.]

ಲಜ್ಜಾವತಿ (ನಾ)· ೧. ನಾಚಿಕೆಯ ಸ್ವಭಾವದವಳು. ೨. = ಲಜ್ಜರಿಕೆ: ಮುಟ್ಟಿದರೆ ಮುನಿ· ಮುಡುಗುವುದಾವರೆ· ನಾಚಿಕಗಿಡ· ಲಜ್ಜಾವತಿ (ಕ್ಯಾಶಿ· ೩೪–೨೦೭೪) ; ನನ್ನ ತೋಟದಲ್ಲಿ ಲಜ್ಜಾವತಿ ಬಳ್ಳಿ (ಕೂಪ್ರಾ· ೬೬).

[ಸಂ· ಲಜ್ಜಾವತೀ]

ಲಜ್ಜಾವಿಹೀನ (ನಾ)· ನಾಚಿಕೆಯಿಲ್ಲದವನು; ನಾಚಿಕೆಗೇಡಿ ; ನಿರ್ಲಜ್ಜ : "ನಾಣೆರಿಯನಲ್ಲೆ ಲಜ್ಜಾವಿಹೀನನು" (ಕಬ್ಬೈ· ೪೮).

[ಸಂ.]

ಲಜ್ಜಾವಿಹೀನತ್ವ (ನಾ)· ನಾಚಿಕೆಯಿಲ್ಲದಿರುವಿಕೆ : ಭಂಡತನ : "ಲಜ್ಜಾವಿಹೀನತ್ವದೊಳ್ ಬಂಡು" (ಕಬ್ಬಮು· ೯೯).

[ಸಂ.]

ಲಜ್ಜಾಶೀಲ (ನಾ)· ೧. ನಾಚಿಕೆಯ ಸ್ವಭಾವ ; ಸಂಕೋಚಪ್ರವೃತ್ತಿ· ೨. ನಾಚಿಕೆಯ ಸ್ವಭಾವದ ವ್ಯಕ್ತಿ ; ಸಂಕೋಚಸ್ವಭಾವದವನು : "ಲಜ್ಜಾಶೀಲಂ ಲಜ್ಜಾಲು" (ಪಾಪು· ೫ಆ· ೬೨–೬)·

[ಸಂ.]

ಲಜ್ಜಾಹೀನ (ನಾ)· ನಾಚಿಕೆಯಿಲ್ಲದ ವ್ಯಕ್ತಿ ; ಭಂಡ : ನಾನು . . . ಲಜ್ಜಾಹೀನರಾದ ನವೀನಸುಂದರಿಯರಮ್ಮ ಕುರಿತು ಬರೆಯುವುದಿಲ್ಲ [ಸಂ.]

ಲಜ್ಜಾಳು ' ಲಜ್ಜಾಲು ' ನೋ·

ಲಜ್ಜಿಕೆ (ನಾ)· ನಾಚಿಕೆಯನ್ನುಂಟುಮಾಡುವಂಥದು ; ಲಜ್ಜಾಸ್ಪದವಾದುದು : ನನ್ನ ಪ್ರಣಯವನ್ನು ಜನ್ಮವನ್ನು ಸರ್ವಸ್ವವನ್ನೂ ಸಾರ್ಥಕ ಮಾಡಿಕೊಳ್ಳುವುದು ಲಜ್ಜಿಕೆಯ ಅನ್ಯಾಯದ ಅಕ್ರಮದ ದ್ರೋಹದ ಅಕಾರ್ಯವೆ ? (ಪಬ್ಬ· ೨೩–೨)· [ಲಜ್ಜೆ + — ಇಕೆ]

ಲಜ್ಜಿತ (ಗು)· ೧. ನಾಚಿಕೆಪಟ್ಟುಕೊಂಡ ; ಲಜ್ಜೆಗೊಳಗಾದ. ೨. ಅವಮಾನಗೊಂಡ ; ಅಪಮಾನವನ್ನು ಹೊಂದಿದ· (ನಾ)· ೩. ನಾಚಿಕೆಗೊಂಡವನು ; ಸಂಕೋಚ ಹೊಂದಿದವನು : ವ್ರಜೇಶ್ವರನು ವಿಸ್ಮಿತನಾಗಿ· ಲಜ್ಜಿತನಾಗಿ . . . ಸ್ವಲ್ಪ ಭಯಮಪ್ಪವನೂ ಆದನು (ಪಾಪಾಂ· ೦೫೯)· ೪. ಅವಮಾನಗೊಂಡ ವ್ಯಕ್ತಿ; ಅಪಮಾನ ಹೊಂದಿದವನು : ಲಜ್ಜಿತನಾಗಿ ತಿರುಗಿದವನುವರದಲ್ಲೀ ಕರ್ಣನು (ಕರ್ಣಾರ್ಜು· ೬–೨೫)· ೫. [ನಾಟ್ಯ] ಇಪ್ಪತ್ತು ಸಂಚಾರಿದೃಷ್ಟಿಗಳಲ್ಲಿ ಒಂದು : ಲಜ್ಜೆಯನ್ನು ವ್ಯಕ್ತಪಡಿಸುವ ನೋಟ: ಶ್" ರೆಪ್ಪೆಗಳನ್ನು ಮೇಲಕ್ಕೂ ಕೆಳಕ್ಕೂ ಚಲಿಸುತ್ತಾ ಕೆಳಗೆ ನೋಡುವುದು" (ಶಾಕ್ಕಂ· ೨೬೪ ಗದ್ಯಾನುವಾದ) : ' ಲಜ್ಜಿತ — ನೆಲನಂ ನೋಡುತೆ ಕಣ್ಣೆಯಲಸದೆ ಮೇಲ್ನೋಡಿ ಬಾಗೆ ಲಜ್ಜೆಯನಿಕ್ಕುಂ (ಶಾಕ್ಕಂ· ೩–೨೯)· [ಸಂ.]

ಲಜ್ಜಿತೆ (ನಾ)· ನಾಚಿಕೊಂಡವಳು ; ಸಂಕೋಚಗೊಂಡವಳು : ಆಯುತ ಬೆಱಗಾಗುತೆ ಸಂವರಿಸಿಕೊಳುತೆ ವಲ್ಕಲವಸನಾಭೋಗಮನತಿಲಜ್ಜಿತೆ ತಲೆವಾಗಿದಳನುರಾಗವೇಱೆ ಪುಳಕಸುತಿರ್ದಳ್ (ಗಂಶ್ರೀ· ೦೦–೨)· [ಸಂ. ಲಜ್ಜಿತಾ]

ಲಜ್ಜಿಸು (ಕ್ರಿ)· ೧. ನಾಚಿಕೊಳ್ಳು ; ಸಂಕೋಚಪಟ್ಟುಕೊಳ್ಳು : ನಿಜರೂಪಮ್ಮತಿಗೆ ಲಜ್ಜಿಸಿ ಕೇಳದಂತೆ ಪೋಗೆ (ಕಾದಂಪೂ· ೭೬೪) ; ತಾನೇ ಧರಣಿಪತಿ ನಳನನಲು ಲಜ್ಜಿಸಿ ಕಿರವ ನಸುಬಾಗಿದಳು (ಪಪಾ· ೩–೧೩) ; ವಲ್ಲಭಯ ನುಡಿಗೆ ಲಜ್ಜಿಸಿ ಮನಂ ಕಂದೆ ಕಣ್ಣಾಲಿಗಳ್ ಕೆಂಪಡರೆ (ಕೃಬಾಣ· ೭–೨೮)· ೨. ನಾಚಿಕೆಪಡಿಸು ; ನಾಚಿಕೊಳ್ಳುವಂತೆ ಮಾಡು : ಸಜ್ಜನ ಸ್ತುತಿಗೆಮ್ಮಲಾತ್ಮಸ್ತುತಿದುಕ್ಕ ಮಜ್ಜೀವವವರಾಗಿ ಕಿಜನರ ಲಜ್ಜಿಸಿ ವಿಂದಿಪೆವಿದು ಪುಣ್ಯಕಥೆ (ಕ್ರಿರಾ· ೦–೦೬)· [ಲಜ್ಜೆ + —ಇಸು]

ಲಜ್ಜೆ (ನಾ)· ೧. ನಾಚಿಕೆ ; ಸಂಕೋಚ: "ವ್ರೀಡೆ ಲಜ್ಜೆಯೆನೆ ಮುಂದಾಕ್ಷಂ" (ಪಪು· ೬೫೯· ೦೦೪–೦೯) ; ಕಾಮಿಗುಂಟೆ ಲಜ್ಜೆ ನಾಚಿಕೆ (ಇಪಾ· ೩೦೬): ಪೀಪಾ ಸೋಲಮುಂ ಮುಱಿದು ಲಜ್ಜೆಯನೊಲ್ಲದೆ ಮತ್ತೆ ಬಂದನೇ ಪಂದೆಗಳೋಜಂ (ಪಪಾ· ೫–೨೫)· ೨. ಅವಮಾನ ; ಅಪಮಾನ : ಲಜ್ಜೆಯಿಂ ತಲೆವಾಗಿ ತೋರ್ಪ ತದೀಯ ದೇಶಿಕನಂದಮಂ . . . ನಿಟ್ಟಿಸಿ (ಅಜಪು· ೫–೦೦೪) ; ನಾರೀವ್ಯಂದ . . . ಗೊಳ್ಪಿಂದು ನಕ್ಕುದು ನೊಂದು ತಲೆವಾಗಿದೆನು ಲಜ್ಜೆಯಲಿ (ಕಾಪ್ರಾ· ೦೨–೭೭)· ೩. [ಕಾವ್ಯಮಿ] ಮೂವತ್ತುಮೂರು ಸಂಚಾರಿಭಾವಗಳಲ್ಲಿ ಒಂದು : ಮತಿನಿರ್ವೇದಾವ ಹಿತ್ಥಶ್ರಮ . . . ಅಪಸ್ಮಾರ ಲಜ್ಜಾ ವಿಷಾದಸ್ಮಿತಿ ಚಿತ್ತಭ್ರಂಶ ಮೋಹಾ ಮಯಕೃತಿಗಳಿವಂತೆಯ್ದೆ ಸಂಚಾರಿಭಾವಂ (ಕಾಶಾ· ೭೧೩) ; ಮತಿ ಲಜ್ಜೆ ಅವೇಗ ಶಂಕೆ . . .ಅಪಸ್ಮಾರವೆಂಬ ಮೂವತ್ತುಮೂಱು ಸಂಚಾರೀಭಾವಂಗಳಂ ಪರಿಪಠಿಸಿ (ಪಪಗ· ೦೫೭)· [ಸಂ· ಲಜ್ಜಾ]

ಲಜ್ಜೆಕಾತಿ (ನಾ)· ನಾಚಿಕೆಯ ಸ್ವಭಾವದವಳು ; ಲಜ್ಜಾಶೀಲೆ : ಮಾನ ಭೂಷಣೆ ಲಜ್ಜೆಕಾತಿ ಸೌಜನ್ಯನಿಧಾನೆ ಗಂಭೀರೆ ಸುಶೀಲೆ (ಶಾಕ· ೪೬–೬೨).

[ಲಜ್ಜೆ + — ಕಾತಿ]

ಲಜ್ಜೆಗಾ (ಕ್ರಿ)· ನಾಚಿಕೆಯಿಂದಿರು ; ಸಂಕೋಚವನ್ನು ಉಳಿಸಿಕೊಳ್ಳು: ಸುತ್ತಲುಂ ಸುಜೀಜನಮಿರೆಯುಂ ವಿಚಾರಿಸನೆ ದುಃಖಿದೊಳಕ್ಕನಿರಲ್ಕೆ ಲಜ್ಜೆಗಾಯೆನೆ ಗುರುಗಳ್ಗೆ ಬೆಳ್ಕಱಿಸೆ ಚೇಟಕಿಯರ್ನೆರೆದಿರ್ದರೆಂಬಿದಂ ನೆನೆಯೆನೆ ಕಿಬ್ಬೆನೇಸನರದಿಂತಾಟು ವಿಭ್ರಮಾದಿಂದೊಡರ್ಚಿದಂ (ಕಾರಂಪಾ· ೭೬).

[ಲಜ್ಜೆ + ಕ್ಕಾ]

ಲಜ್ಜೆಗೆಡು (ಕ್ರಿ). ನಾಚಿಕೆ ಇಲ್ಲವಾಗು ; ನಿರ್ಲಜ್ಜೆಯಿಂದ ವರ್ತಿಸು : ತೊಟ್ಟನೆ ಲಜ್ಜೆಗೆಟ್ಟುಜಾವುಗೆಟ್ಟೆನ್ನಂತೆ ಕಣ್ಣೆಟ್ಟು ವೇಟೊಲವಿಂದಿಂತೆರ್ದಗೆಟ್ಟರಾರ್ (ಶಾಂಭು. ೬೩೦); ಲಜ್ಜೆಗೆಟ್ಟು ಪೆಣ್ಗಳಂತೆ ಮೀಲ್ವಾಯ್ವ ಪೆರ್ಬುಲಿವಿಂದಿಂ (ರಘೂತ್ತ. ೩-೩೬) ; ಲಜ್ಜೆಗೆಟ್ಟಾದರೂ ಲಿಂಗವನೊಲಿಸುವೆ (ಅಪ್ಪ. ೪೧೬). [ಲಜ್ಜೆ + ಕೆಡು$_1$]

ಲಜ್ಜೆಗೇಡಿ (ನಾ). ನಾಚಿಕೆಗೇಡಿ ; ನಿರ್ಲಜ್ಜ : 'ಲಜ್ಜೆಗೇಡಿತನ' ಪರಾ. [ಲಜ್ಜೆ + ಕೇಡಿ$_1$]

ಲಜ್ಜೆಗೇಡಿತನ (ನಾ). ನಾಚಿಕೆಯಿಲ್ಲದಿರುವಿಕೆ ; ನಿರ್ಲಜ್ಜತೆ : ನಿನ್ನ ಲಜ್ಜೆಗೇಡಿತನವನ್ನು ಮನ್ನಿಸಬೇಕು (ಪಡಿಪ. ೬೯). [ಲಜ್ಜೆಗೇಡಿ + —ತನ]

ಲಜ್ಜೆಗೇಡು (ನಾ). ೧. ನಾಚಿಕೆಗೇಡು ; ನಾಚಿಕೆಯಿಲ್ಲದಿರುವುದು. ೨. ಅವಮಾನಾಸ್ಪದವಾದುದು ; ಅಪಮರ್ಯಾದೆಯಿಂದ ಕೂಡಿದುದು : ಅಜ್ಜಯಿಲ್ಲದ ಮನೆಯು ಮಜ್ಜಿಗಿಲ್ಲದ ಊಟ ಕೊಜ್ಜೆಮಾಲ್ಲದರ ಮನೆಯು ಇವು ಮೂಱು ಲಜ್ಜೆಗೇಡು (ಪಡಕ್ಕ. ೭೫೦).

[ಲಜ್ಜೆ + ಕೇಡು]

ಲಜ್ಜೆಗೊಳ್ಳು (ಕ್ರಿ). ನಾಚಿಕೊಳ್ಳು ; ಸಂಕೋಚಪಡು ; ಕೃತ್ರಿಕಾವುಂಜವು ಲಜ್ಜೆಗೊಂಡಂತೆ ಅಡಗಿಕೊಂಡಿರುವುದು (ಕ್ರಿಯಾರ್ಜು. ೪೬).

[ಲಜ್ಜೆ + ಕೊಳ್ಳು$_1$ (< ಕೊಳ್$_2$)]

ಲಜ್ಜೆಪಡು (ಕ್ರಿ). = ಲಜ್ಜೆಗೊಳ್ಳು. ಎರೆ ಮಗಳೆ. ಒಂದು ಮುಹೂರ್ತ ಲಜ್ಜೆವಡದಿರು (ಶಾಂತಿ. ೬೭-೩) ; ತನ್ನ ವೃತ್ತಿ ಕೀಳಾದುದೆಂದು ಭಾವಿಸಿಕೊಂಡು ಲಜ್ಜೆಪಡಬಹುದೆಂಬ ಕಲ್ಪನೆ ಸರ್ವಸಾಧಾರಣವಾದುದು (ಕ್ರಿಯಾ. ೧೧೭). [ಲಜ್ಜೆ + ಪಡು$_1$]

ಲಜ್ಜೆಯೇಱು (ಕ್ರಿ). ನಾಚಿಕೆಯನ್ನು ಹೊಂದು ; ಸಂಕೋಚವನ್ನು ತಾಳು : ಗಣಕರು ಲೆಕ್ಕಿಸಲಾಜದೆ ಬೆಜಗಾಗೆ ಪರಸಮಯಿಗಳ ಮೊಗಂ ಬೆಳ್ಪೇಱೆ ಬಿಜ್ಜಳನ ಮೊಗಂ ಲಜ್ಜೆಯೇಱೆ ಶರಣರ ಮೊಗಂಗಳು ಪರುಪವೇಱೆ (ಬಸ. ೬-೦೨೬). [ಲಜ್ಜೆ + ಏಱು$_1$ (< ಏಱ್$_1$)]

ಲಜ್ಜೆವೆರಸು (ಕ್ರಿ). ನಾಚಿಕೆಯಿಂದ ಕೂಡಿರು ; ಸಂಕೋಚಗೊಳ್ಳು : ಕುವರನಂ ಧಟ್ಟಿಸಿ ಮುರಾಳಧ್ವಜಂ ಕೇಳ್ದೊಡಡಿಗಿಟ್ಟ ದಿಟ್ಟಿಯಿಂದಂ ಮತ್ತಂ ತೊಯ್ಯನೆ ಲಜ್ಜೆವೆರಸಿ ಬಿನ್ನಪಿದನವಂ ಪಿತಂಗೆ (ಕೃಷ್ಣಾ. ೦೦-೨೬) ; ಸಜ್ಜಾತಿಸಿತಿಯರಿನಿಯರ ಸನ್ನಿಧಿಯೊಳು ಲಜ್ಜೆವೆರಸು ರಂಜಿಪುದು (ಪಂಡು. ೬-೬೯). [ಲಜ್ಜೆ + ವೆರಸು$_1$ (< ವೆರೆಯಿಸು)]

ಲಟಕ್ (ನಾ). ಒಂದು ಅನುಕರಣ ಶಬ್ದ : ಕೈಯಲ್ಲಿಯ ಪೆನ್ನನ್ನು ಕೆಳಗಿಟ್ಟು ಕೈಯಿ ಜೊಟ್ಟು ಲಟಕ್ಕೆನುಸಿಕೊಂಡರು (ಆಮು. ೬ ಬಿಕ್ಷೆ ೬).

ಲಟಕಟ (ನಾ). ಬಳಲಿಕೆ; ಆಯಾಸ : "ಲ[ಣಾಂ-ಲ್]ಟಕಟಮೆಂದೊಡೆ ಬಳಲಿಕೆ" (ಶಾಪಿ. ೪೮). 'ಲಟಕಟಿಸು' ಪರಾ.

ಲಟಕಟಿಸು (ಕ್ರಿ). ೧. ಬಳಲು ; ಆಯಾಸಗೊಳ್ಳು : ಗುಣಿಯಾದನು ಮನಸುತವೆಳ್ಕೈಸು ಮಿಡುಕದು ಬಾಲ ಊರ್ಧ್ವಶ್ವಾಸಲಹರಿಯುಲಡಗಡಿಗೆ ಲಟಕಟಿಸಿದನು ಭೀಮ (ಭಾಗ್ಯ. ೦೦-೦೬) ; ಖಂಡೆಯವನುರರುಳಿದು ಕಿಟ ಲಟಕಟಿಸೆ ಘಾತಿಸಲು (ಅಷ್ಟಾ. ೦-೪-೩೯). ೨. ಆತುರವಡು ; ತವಕಿಸು ; ಹಾತೊರೆ : ತದ್ವಾದಿಗುತ್ತರಂಗುಡಲೆಂದು ಲಟಕಟಿಪ ಸಮಯದಲ್ಲಿ (ಪದ್ಮಾ. ೦೦-೬) ; ಘಟ ದೀಳಲವೆದ್ದ ಬಳಿಗೆ ಬಂದವೆನೆಂದು ಲಟಕಟಿಸಿದನು ಕುಮಾರ (ಕೋಚಕ. ೭೦-೨೬) ; ದಮಜಾರ್ಧಟಿಸಿದರ್ ಜಯಕೆ ಲಟಕಟಿಸಿದರ್ (ಪಂಪ. ೦೬-೦೦) ; ಲಟಕಟಿಪ ಸಮರಲಂಪಿರ ಭುಜಗಳ ಹೊಯ್ಲು (ಕೃಷ್ಣಾ. ೪-೦೬). ೩. ಉದ್ರೇಕಗೊಳ್ಳು ; ಉದ್ವೇಪನಗೊಳ್ಳು : ಉಕ್ಕಿದಾ ಕವಿವೇಟ ಕಜ್ಜಟಕ್ಕೆ ತಂದುದು ಕಂಗ ಳೀಕೆಯ ಮುಕ್ಕುಳಿಸಿ ಮೈಸೋಂಕಿನಲಿ ಲಟಕಟಿಸಿದುದು ಹೃದಯ (ಭಾಗ್ಯ. ೫೬-೩೬); ಏಟಲಸೇತ್ರನ ಕೋಪಾಜಿ ಲಟಕಟಿಸುವಂತಿರೆ ಸ್ಮಿತಕಳಲಿಗೆ ಹೆಚ್ಚಿದತಿ ಬಲಜಟವಿಯನು ಸವಜಾದುದು ವಾರ್ಧಳಾಮೋರಶರಜಾಲ (ಭಾಗ್ಯ.೦೬೬. ೩-೬೦). ೪. ಅಬ್ಬರಿಸು ; ಆರ್ಭಟಿಸುವುದು : ಸಂತ್ಯಸಿಕೊಂಡುಮಟುಗಿ ಗದೆಯಲಿ ಹೊಯ್ದು ... ಹೆಚ್ಚಿದನೊಕೆ ಬೊಬ್ಬಿಡುತ ಪುಟದ ಕಂತುಕ ದಂತೆ ಘಣ ಲಟಕಟಿಸಲೊಕಿತು ಗಿಡಗನೆಱಕೆಯ ಪುಟದ ಗಿಳಿಯಂದದಲಿ ಗಿಜಿ ಗಿಜಿಗುಟ್ಟಿದನು ಭೀಮ (ಭಾಗ್ಯ. ೦೩-೩೮) ; ಪಟಪಡಿಂಡಿಮವಾದ್ಯ ವಮಿಶ್ರಿತಾಪ ಭೀಶಿತಂಬಟದಮಾಮಿಗಳಾದಿಯಲಿ ಲಟಕಟಿಸುವ ನಾನಾವಾದ್ಯ ಸಕಲದಿಕ್ಕಟ ಬಿರಿಮಂತೆ ಗರ್ಜಿಸಿತು (ಕವಿಚರ. ೩೭-೯). ೫. ಹೀಗಳೆ ; ಕೀಳುಮಾಡು : ಪಟುಭವನತಿಗಳೆದು ಬಿಂಬಿಸಿ ಲಟಿಟಿಸಿ . . . ಕುಟಿಲ ಕುಂತಳೆಯಧರವಶಿಶುಮಿಂದಲೊಪ್ಪಿದುದು (ಕವಿಗಯ. ೦೩-೩೭). ೬. ತಗ್ಗು ; ಕಡಮೆಯಾಗು : ಝಂಳದ ಲಳಿ ಲಟಕಟಿಸ ಮೂರ್ಗಸ್ಪಲಿತ ಪೀದಸ್ಪೋದಯಿಂದಮಗಳೊಳಸಂಯಿ ರೋಮಾಳಿ ಜಾಲಿಸೆ . . . ಭಾವಿನುತ ಭುಲ್ಲವಿಸಿದನು ಭೀಮ (ಭಾಗ್ಯ. ೦೦-೨೪)- [ಲಟಕಟ + — ಇಸು$_5$]

ಲಟಕರಿಸು (ಕ್ರಿ). ಲಟಲಟೆಯೆಂದು ಸದ್ದುಮಾಡು ; ಲಟಲಟಾ ಲಟಲಟಾ ಲಟಕರಿಸಿ ವಸಜಜಾಂಡ . . . ಬಿಚ್ಚುತಿರಲು (ಶಿಶಾಳ. ೬೩-೨). [ಲಟಕರ್$_0$ + — ಇಸು$_5$]

ಲಟಾಯಿಸು (ಕ್ರಿ). ತೊಗುಹಾಕು; ನೇತುಹಾಕು : ಪಾಧವನ . . . ಚಿತ್ರ ಅವನ ಬಲಪಾರ್ಶ್ವದಲ್ಲಿ ಕಟ್ಟುಗೆಯ ಫಲಗೆ ಲಟಕಾಯಿಸಿತ್ತು (ಅಪ್ಪ. I. ೨೩೬). [ಲಟಕ್$_0$ (ಪ್ರ ← ಹಿಂ. ಲಟಕನಾ, ಲಟಕಾನಾ; ವರಾ. ಲಟಕಣೇ) + — ಇಸು$_5$]

ಲಟಕೆ 'ನೆಟ್ಟಿಕೆ' ನೋ.

ಲಟಕಮುರಿ 'ನೆಟ್ಟಗೆಮುರಿ' ನೋ.

ಲಟಕು 'ನೆಟ್ಟಿಕೆ' ನೋ.

ಲಟಕುಮುರಿ 'ನೆಟ್ಟಿಗೆಮುರಿ' ನೋ.

ಲಟಕ್ಕು 'ನೆಟ್ಟಿಕೆ' ನೋ.

ಲಟಪಟ (ನಾ) ಒಂದು ಅನುಕರಣ ಶಬ್ದ : ಕೈಕಾಲು ಸತ್ತ ಹೋಗಿ ಲಟಪಟ ನಡುಗುತ್ತವೆ (ಮುಂಡಿಗ. ೪-೪೦); ಜಾತಿಕಂದುರೆಗಳು ಮೆಲ್ಲನೆ ಘೂಂಕರಿಸುತ್ತ ಓಟ ಕಿತ್ತುವು ; ಅವುಗಳ ಗೊರಸು ಕಲ್ಲಿಗೆ ತಗುಲಿ ಲಟಪಟ ಧ್ವನಿ ಹೊರಹೊಮ್ಮುತ್ತಿತ್ತು (ಪ್ರಪು. ೬೬೬).

ಲಟಪಟ (ಅ). ಒಮ್ಮಿಂದೊಮ್ಮೆಲೆ; ಇದ್ದಕ್ಕಿದ್ದಂತೆ : ವಿತಜ ಕಟಪಟ ಒಂದಿನ ಹೋಗುತಿದ್ದೆ ಲಟಪಟ (ಕೌಂಪ. ೨-೩೨ ಪ್ರಾಂ).

ಲಟಪಟಿ (ನಾ). ಒಂದು ಅನುಕರಣ ಶಬ್ದ : ಒಣ ಲಟಪಟಿ ಶಬ್ದಗಳ ಬಲ್ಲೆನೆಂದೆಮತೆ ಚಾತುರ್ಯದಿಂದಿ ಕೆಲ ಶಬ್ದಗಳ ಗಟ್ಟಿಕ್ಕೆ (ಕವಿ. ೦-೩೦).

ಲಟಲಟಿ (ನಾ). ಒಂದು ಅನುಕರಣ ಶಬ್ದ : ಲಟಲಟಾ ಲಟಲಟಾ ಲಟಕರಿಸಿ ವಸಜಜಾಂಡ . . . ಬಿಚ್ಚುತಿರಲು (ಶಿಶಾಳ. ೬೩-೨); ನೆಲವ ಲಟಲಟಿ ಮಾಡಿಯೆ ಮೆಚ್ಚವ ಪೆಡಂಭೂತಗಳೆಲ್ಲಿವೆ ? (ಕೃಷ್ಣ. ೩೪-೨). 'ಲಟಿಲಟಿನೆ', 'ಲಟಲಟಿಸು' ಪರಾ.

ಲಟಲಟಿನೆ (ಅ). ಲಟಲಟಿ ಎಂದು ಸದ್ದಾಗುವಂತೆ : ಕಟ್ಟಿದ ಲಿಂಗವ ಬಿಟ್ಟು ಬಿಟ್ಟದ ಲಿಂಗಕ್ಕೆ ಹೋಗಿ ಪೊಟ್ಟರಿಯಾಗಿ ಬೀಳುವ ಲೊಟ್ಟಮೂಳನ ಕಂಡಡೆ ಮೆಟ್ಟಿದ್ದ ಎಡವಾದರಕ್ಷೆಯ ತಗೊಂದು ಲಟಲಟಿನೆ ಹೊಡಿ (ಪಡಿಪ. I. ೩೫೬-೦೨); ಲಟಿಲಟಿನೆ ಲಟಗೆಹೊಡೆಯುತಲಿಹವು ಪೊಗ್ಗೆಗಳಿ (ಶಾಭಾ. ೫೬-೦೩)- [ಲಟಲಟ + — ಅನೆ$_1$]

ಲಟಲಟಿಸು (ಕ್ರಿ). ೧. ತವಕಿಸು ; ಆತುರಪಡು : ನೆಱನೆತ್ತಿ ಬೈವ ಪುರುಡಿವ ಜಱಿಚುವ ಪಿರಿದಲಸೆ ಕೂಡ ಲಟಲಟಿಸುವ ಮೇಲ್ಪರಿಯದೆ ಸೋಂಕುವ ಕೂರದೊಡಜಗುವ ವಿಟನೆಗ್ಗನಲ್ತೆ (ಪಡಿಪ. ೦೦-೨೬); ಪಟ್ಟು ನೋಡುವ ದೃಷ್ಟಿವೆಯಿಕ್ಕಿ ಲಟಲಟಿಸುತಿರೆ ಚಿತ್ರ (ಸೋಮೇಶ್ವ. ೨-೩೬); ಕಟಕದೋದ್ಯಾನಕಾದುರೆ ಬೆದಱಿ ಲಟಲಟಿಸುತತ್ತಿತ್ತಲೋಡಿದುವು

(ಶಕ. ೨೯-೬೬). ೨. ಹಿಂಸೆಪಡು : ತೊಂದರೆಗೊಳಗಾಗು : ಹುವು ನೀರಡಿಕೆಯಿಂ ಲಟಲಟಿಸುತಿಹ ಬಾಧೆ (ಕಿಷ್ಕಿ ೯-೨೮-೩). ೩. ಉತ್ಸಾಹದಿಂದ ಮುನ್ನುಗ್ಗು : ಪುಟಚಂದಿನಂತೆ ಲಂಘಿಸುತಾಗೊಳ್ ಹೊಕ್ಕು ಪಟುವಾದ ಶೌರ್ಯದೇಳ್ಗೆಯಲಿ ಲಟಲಟಿಸುತ ಕಾಲಾಳ ಖಿಂಡಿಸು ತುತ್ಕಟದಲಿ ಕಲಿಯೇಱು ಮೆಱೆದ (ಕಂಪ. ೦೮-೦೬). ೪. ಬೊರು ಬೊರಾಗು; ಛಿನ್ನಭಿನ್ನವಾಗು : ಪಟಿಸಿ ಮೇಗೆತ್ತಿ ಕುಕ್ಕುಱಿಸಿ ನೆಲಸಂ ಟೋದೆದು ಹಲಗೆಯೊತ್ತಿನೊಳಿಸುಗು ಲಟಲ[ಪಾಂಂ. ೪]ಟಿಸಲಿಕ್ಕೆ ವಾಮಾಂಗೆ ಕುಸಿಯಲು (ಕೋಶಾ. ೩-೦೬). [ಲಟಲಟ + — ಇಸು]

ಲಟಹ (ನಾ). ಸೊಗಸು ; ಸೌಂದರ್ಯ : ಪಱಿಯಂ ಪೊಯ್ಸಿಯೊಸೆದು ರಾಗಿ ಕ್ರಿದಂಡಮನಿತ್ತಿ ಸೊರ್ಕದೆ ಪ್ರಜೆವೆಸಸು ಲಟಪದಿಂದಾದಿದೊಂ (ಕಪ್ಪಾಡಾ. ೦೯೦-೦೩); ಲಟಪ[ಪಾಂಂ. ನ]ಯುತಂಗಳ್ ಬಗ್ಗಜ್ಯಟೋಪ್ಪ ಲಂಗಳ್ ತದವರೆಚಮರರುಹಂಗಳ್ (೦೦೫. ೭-೩೦) ; ಆ ತರಳಾವಂಗ ವಿಲಾಸಮೂ ಲಟಹಮೂ ಲಾವಣ್ಯಮೂ ಪೂರ್ಮೆಯಾ ದರಹಾಸಾಮೃತಮೇಂ ಮನಂಗೊಳಿಸಿತೋ (ಗಣಿಪು. ೭-೩೦). [ಸಂ.]

ಲಟಾಪಟಿ (ನಾ). ಹೊಡೆದಾಟ ; ಗುದ್ದಾಟ : ನನಗೂ ಅವನಿಗೂ ಒಮ್ಮೆ ಆಗಿತ್ತು ಲಟಾಪಟಿ (ಪಂಚಪು. ೪) ; ಗಂಡ–ಹೆಂಡತಿ, ಮಾವ–ಅಳಿಯ ಇವರಿಗೆ ಲಟಾಪಟಿ ಜಗಳಗಳಾದದ್ದುಂಟು (ಪಂಜಪು. ೩೪) ; ಧೊಕ್ಕಗಳ ಲಟಾಪಟಿ ಶಬ್ದ ಮುಂತಾಗಿ ಬಹಳ ಗದ್ದಲವು ಹತ್ತಿತು (ಪೀಂಗಾ. ೦೩೮). [← ಹಿಂ. ಮರಾ. ಲಟಾಪಟೀ]

ಲಟ (ನಾ). ಒಂದು ಬಗೆಯ ಭಕ್ಷ್ಯ : ಭಾಗ್ಯವುರದ ಜಿನ್ನಿಗರಾಯಗೆ ಮಾಡಿದ ಸೇವೆ . . . ಕುಪ್ಪದ ಲಟ ಬೆಲ್ಲದ ಕಲ್ಕುಯ ೧೦ ಕಾಂಬೂಲಕೆ ಅಡಕೆಯ ಹೋಳು ೧೦ (ಎಳ. XI. ೫೪೮೬. ೦೦೩-೦೬ ; ೧೬೮೦). [?]

ಲಟಿಕೆ ' ನೆಟ್ಟಿಕೆ ' ನೋ.

ಲಟಿಕೆಹೊಡೆ. ಲಟಿಗೆಹೊಡೆ (ಕ್ರಿ). ಟಿಟಿಕೆಹಾಕು : ನಾನು . . . ಹೇಳಿದರೆ ನಿನ್ನ ಬಾಯಿ ತಾನೇ ಮುಚ್ಚುವುದು (ಲಟಿಕೆಹೊಡೆಯುವಳು) (ಕಾದಕ್ಕೆ. ೫೫) : (ಅಳಿಸಿ ಲಟಿಕೆಹೊಡೆದು) ಕಾರಾಯತಕ್ಕೆ ನಮಃ ! (ಹೂಸಂಣಾ. ೪೦). **ಲಟಿಗೆಹೊಡೆ** : ಲಟಿಗೆಹೊಡೆದು ಮೇಜು ಗುದ್ದಿ . . . ಒಮ್ಮೆಲೆ ನನ್ನನ್ನು ಮಾತನಾಡಿಸಿದ (ಗಾಳಿ. ೫೦) ; ಲಟಲಟಿನೆ ಲಟಿಗೆ ಹೊಡೆಯುತಲಿಹವು ಮೆಗ್ಗೆಗಳು (ಶಬ್ದಾ. ೪೩-೦೩).

[ಲಟಿಕೆ (< ನೆಟ್ಟಿಕೆ) + ಹೊಡೆ$_3$ (< ಪೊಡೆ$_3$)]

ಲಟಿಕೆ 'ನೆಟ್ಟಿಕೆ' ನೋ.

ಲಟಿಕೆಮುರಿ 'ನೆಟ್ಟಿಗೆಮುರಿ' ನೋ.

ಲಟಿಗೆ 'ನೆಟ್ಟಿಕೆ' ನೋ.

ಲಟಿಗೆಮುರಿ 'ನೆಟ್ಟಿಗೆಮುರಿ' ನೋ.

ಲಟಿಗೆಹೊಡೆ 'ಲಟಿಕೆಹೊಡೆ' ನೋ.

ಲಟುಕಿಕೆ (ನಾ). ಒಂದು ಬಗೆಯ ಪಕ್ಷಿ : ಚಿಕ್ಕತಕ್ಕೆಯಾದ ಲಟುಕಿಕೆ ಕೂಡ ತನ್ನ ಗೂಡಿನಲ್ಲಿ ದೇಶಾದುದನ್ನು ಹೇಳುಲ್ಲುದು (ಪಾರ್ಶ್ವ. ೪೦).

[<ಸಂ. ಲಟ್ವಾಕಾ ?]

ಲಟುಕು (ನಾ). ಸೊಗಸು ; ಸೌಂದರ್ಯ : ಸಾಮಾನ್ಯವಾಗಿ ಅಂಥ ಲಟುಕು ಅವರ ಸ್ವಂತದ್ದಾಗಿರುವುದು (ಸಂಕ್ರಾ. ೬೩). [< ಸಂ. ಲಟಹ]

ಲಟ್ಟ$_1$ (ನಾ). ದುಷ್ಟ ; ನೀಚ ; ಧೂರ್ತ : "ಲಂಡ — ಲಡ್ಡ(ಟ್ಟ) = ಧೂರ್ತ, ಅಸಭ್ಯ" (ಕನ್ನಡಪ್ರ. ೪೬).

[ಸಂ.]

ಲಟ್ಟ 'ಲಠ್ಠ' ನೋ.

ಲಟ್ಟಣಗೆ (ನಾ). ೧. ಚಪಾತಿ, ಹಪ್ಪಳ ಮುಂತಾದುವನ್ನು ಲಟ್ಟಿಸುವ (ಮರದ) ಉರುಳೆಯಂಥ ಸಾಧನ ; ರತ್ನೋಡಿ ; ಲತ್ತೋಡಿ ; ಲತ್ತಗುಣ್ಣ : ಒಟ್ಟಿನು ಕೊಟ್ಟರೆ ಭಟ್ಟರು ರೊಟ್ಟಿಯ ಭಟ್ಟನೆ ಸುಟ್ಟು ಕೊಟ್ಟಾರು ಹಿಟ್ಟಲ್ಲದಿದ್ದರೆ ಕುಟ್ಟಿ ಲಟ್ಟಣಗೆಯ ಭಟ್ಟನೆ ಸಿಟ್ಟಗೆದ್ದಾರು (ಹಂಪ್ರಪ. ೦೩-೩೩) : ಲಟ್ಟಣಿಗೆ : ೧೦" ಉದ್ದವಿರಬೇಕು (ಶಾಬಾಳ. ೪೪). ೨. ಮುದ್ರಣಯಂತ್ರದಲ್ಲಿ ಜೋಡಿಸಿದ ಅಚ್ಚಿನ ಮೊಳೆಗಳಿಗೆ ಮಸಿಯನ್ನು ಹಚ್ಚುವ ಉರುಳುಕಂಬಿ ; ಉರುಳೆ : ಅಕ್ಷರಗಳೆಲ್ಲ ಆ ಕಲ್ಲ ಮೇಲೆ ಮೂಡುತ್ತವೆ . . . ಅದರ ಮೇಲೆ ಮಸೀ ಹಚ್ಚುವ ಲಟ್ಟಣಿಗೆಯನ್ನು ಆಡಿಸಿ, ಮೇಲೆ ಬಿಳೀ ಕಾಗದವನ್ನು ಹಾಕಿ ಒತ್ತಿದ ಕೂಡಲೆ ಅದರ ಮೇಲಿನ ಆ ಕಾಗದದ ಮೇಲೆ ಮೂಡುತ್ತವೆ (ಪುಂಲಿಮು. ೪-೩೦೩). [?-/ಮರಾ.ಲಾಟಣೇ, ಲಾಟಣೇ]

ಲಟ್ಟನೆ (ಅ). ಕೂಡಲೆ ಎಂಬರ್ಥವನ್ನು ಸೂಚಿಸುವ ಒಂದು ಅನುಕರಣಾವ್ಯಯ : ಉದಾರ ಹುದ್ದರಿಗಳ ಲೆಕ್ಕಪತ್ರವನ್ನು ಲಟ್ಟನೆ ಗೋಡೆಗೆ ನೇತುಹಾಕಿದ ಪಾಟುಮ ಮೇಲೆ ಹಚ್ಚಿದುವ (ಪುಂಲಿಮು. ೫೩) ; ಅದರ ವಾಸನೆ ನಿನಗೆ ಲಟ್ಟನೇ ಬಡೀತದ (ಪೀಕಕ. II. ೫೩). [ಲಟ್ಟ್$_3$ + — ಅನೆ$_1$]

ಲಟ್ಟಲೂರ್, ಲತ್ತಲೂರ್ (ನಾ). ಒಂದು ಊರಿನ ಹೆಸರು ; ಪ್ರ ಈಗಿನ ಮಹಾರಾಷ್ಟ್ರವಲ್ಲಿರುವ ಲಾತೂರ್ : ಲಟ್ಟಲೂರ ಪುರವರಮೇಶ್ವರಂ ಶ್ರೀಸ್ಯಪತಾಜ್ಞಾನಾಮಾಂಕಿತ ಲಕ್ಷ್ಮೀವಲ್ಲಭೇಂದ್ರಂ (ಇಂ. XIII. ೫೧೬-೦೩ ; ೫೧೬). **ಲತ್ತಲೂರ್** : ಲತ್ತಲೂರ್ ಪುರವರೇಶ್ವರರು (ಎಂ. XIX. ೦೪೬ ೬ : ೨೦೭)

[? + ಊರ್]

ಲಟ್ಟವಾಡ (ನಾ). ಒಂದು ಊರಿನ ಹೆಸರು : ಬಧಪಾರೆದ್ಯಾದಶಸ್ಯಾನ್ವಯ ಲಟ್ಟವಾಡೂ(ಡೋ)ನಾಮಗ್ರಾಮಃ ಶ್ರಿ(ಶ್ರ)ತೀಯಃ (ಇಂ. VII. ೨೦೯-೪೯ ; ಮಂ. ೨೦೫ಮ ೫೫). [ಲಟ್ಟ$_{೨}$ + ವಾಡ (<ವಾಡ)]

ಲಟ್ಟಿಸು (ಕ್ರಿ). (ಚಪಾತಿ, ಹಪ್ಪಳ ಮೊದಲಾದುವನ್ನು ಮಾಡಲು) ಹಿಟ್ಟಿನ ಉಂಡೆಯನ್ನು ಲಟ್ಟಣಿಗೆಯಿಂದ ಒತ್ತಿ ತೆಳ್ಳಗೆ ಮಾಡು : ಮೊನ್ನೆ ಬೇಸಗೆಯಲ್ಲಿ ಲಟ್ಟಿಸಿದ ಹಪ್ಪಳ, ಇಟ್ಟ ಸಂಡಿಗೆ, ತುಂಬಿಟ್ಟ ಉಪ್ಪಿನಕಾಯಿಭರಣಿ ಎಲ್ಲ ತರೆದಿತು (ತಂಪು. ೦೬-೭) ; ಭವಾನಿಯು ಹಪ್ಪಳವನ್ನು ಲಟ್ಟಿಸುತ್ತಾ ಮಾಲಿನಿಯೊಡನೆ ಹರಟೆ ಹೊಡೆಯುತ್ತಲಿದ್ದಳು (ಪೂರ್ಣ. ೫೮). [ಲಟ್ಟ$_{೨}$ (ಪ ← ಮರಾ. ಲಾಟಣೇ) + — ಇಸು]

ಲಟ್ಟಿ$_1$ (ನಾ). ೧. ನಾಲಗೆಯಿಂದ ಮಾಡುವ ಒಂದು ಶಬ್ದ ; — ಧ್ವನಿ ; ಚಪ್ಪರಣೆ; ಲೊಟ್ಟೆ : ಆನೆ ಮುಂದಕ್ಕೆ ಹೊರಟಿತು . . . ಹಯಾತನು ಲಟ್ಟೇ ಹಾಕುತ್ತಲೇ ಇದ್ದ (ಹೊಗಳ್ಕೆ. ೪೮೨). ೨. ವ್ಯರ್ಥವಾದುದು ; ನಿಷ್ಪ್ರಯೋಜಕವಾದುದು : ' ಲಟ್ಟಿಕಾರ ' ಪರಾ.

ಲಟ್ಟಿಹಾಕು = ನಾಲಗೆಯಿಂದ ಶಬ್ದ ಮಾಡು ; ಚಪ್ಪರಿಸು ; ಹಯಾತನು ಕಪ್ಪಗಾಜೆ ನಿಂತು ಲಟ್ಟಿಹಾಕಿದನು (ಹೊಗಳ್ಕೆ. ೪೧೩).

ಲಟ್ಟಿ$_2$ (ನಾ). ಎಳೆಯ ಬಿದಿರು; ಕಳಿಲೆ : ಎಳಮಾವಿನ ಬಿಡಿ ಮೂಗುಳಿ ಮೆಲುಸಿನ ಕರೆ ಬೆತ್ತ ಲಟ್ಟಿಯಾಳೆಯ ಗೊಲೆಯಿಂದಳವಟ್ಟರೆ ಅವಣಕಂಗಳ ನಿಕ್ಕಿದಂಗಳೆಲ್ಲುತ್ತಿಯಿಂದಂಗನೆಯರ್ (ಶುಕಾಪ್ರ. ೦೦-೪೦). 'ಚಿತ್ರಲಟ್ಟಿ' ಪೋ.

ಲಟ್ಟಿ$_3$ (ನಾ). ಕೆಟ್ಟ ಹೆಂಗಸು ; ದುಷ್ಟೆ : ದಿಟ್ಟಿಯುನು ಕುಟಿಲೆಯರು ಕುಹಕದ ಭಟ್ಟೆಯರು ಲಟ್ಟಿ[ಪಾಂಂ. ಮಟ್ಟಿ]ಯರು (ಪಕ್ಷಿ. ೪೦-೫೨). [ಸಂ. 'ಲಟ್ವಾ]

ಲಟ್ಟಿಕಾರ (ನಾ). ನಿಷ್ಪ್ರಯೋಜಕ ವ್ಯಕ್ತಿ : ಲುಬ್ಧಗುಣದಿಂದ ತೊಟ್ಟು ಋಣವನ್ನುಂಗುವರು . . . ಲಟ್ಟಿಕಾರರನೇರಿ ಫಲ ಫಲಿಸಿ ಧರ್ಮಕ್ಕೆ ಭಟ್ಟನೆ ವಜಗುವರು (ಕಾದಿಕ್ಕೇಕ್ರ. ೬-೪೦-೦೩). [ಲಟ್ಟಿ$_{೨}$ + —ಕಾರ$_1$ (<—ಕಾರಿ)]

ಲಟ್ಟಿಕಾರಿಕೆ (ನಾ). ವ್ಯರ್ಥವಾವುದು ; ತಿರುಳಿಲ್ಲದುದು ; ಸತ್ವವಿಲ್ಲದುದು : ವೊಟ್ಟಿಮ ಹೊರುವರು ಲಟ್ಟಿಕಾರಿಕೆಯ ಮಾತಾಡಿ ಜಗದೊಳು ಸಿಟ್ಟಲಿ ಮೆರವರು ಪ್ರಜ್ಞಾನಿ (ಕಾರ್ಕ್ಕೇಕ್ರ. ೬-೪೬-೦೦). [ಲಟ್ಟಿಕಾರ + —ಇಕೆ]

ಲಕ್ಕ, ಲಟ್ಟ (ಗು). ೧. ದಪ್ಪವಾದ ; ಸ್ಥೂಲವಾದ : ಈಗ ಯಜಮಾನನಾಗಿದ್ದಾನೆ. ಈ ಲಕ್ಕ ಹೊಟ್ಟೆಯವ (ಜಾತಿ. ೬೪). (ನಾ). ೨. ದಪ್ಪ : ಸ್ಥೂಲ : ಉಬ್ಬಾ ಎಮ್ಮ ಲಕ್ಕ–ಆಪೆಯಂತಿದ್ದಾಳಲ್ಲ (ಕಂಚಿ. ೩); ಎರಡು ದಿನದಾಗ ಎಷ್ಟ ಲಕ್ಕ ಆಗೀನಿ ನೋಡ್ರಿ (ಕೃಷ್ಣ. ೧೯೪). ೩. ಬಾತಿ; ದೊಣ್ಣೆ : ಲಕ್ಕ ಹಿಡಿದ ಪೋಲೀಸಿನವನು ಗಪ್ಪು ತಿರುಗುತ್ತಿದ್ದನು (ಚಂಪ). ಲಟ್ಟಾ : ೩. ಅವರುಗಳ ಕೈಯಲ್ಲಿ ಹಗಮಚ್ಚಿದ ಲಟ್ಟುಗಳಿದ್ದುವು (ಕೆಂಗಾಳ್ಳ. ೧೧೭). [← ಹಿಂ. ಲಟ್ಠಾ; ಮರಾ. ಲಕ್ಕ]

ಲಡತ್ತು (ನಾ). ಕುಸ್ತಿ; ಜಟ್ಟಿಕಾಳಗ; ಮಲ್ಲಯುದ್ಧ : ನನ್ನ ಎದುರಿಗೆ ಅವರನ್ನು ಲಡತ್ತು ಮಾಡಿಸುತ್ತಿದ್ದರು (ಕಂಚಿ. ೧೧೦).

[← ಹಿಂ. ಲಡಂತ್]

ಲಡಾಯ ' ಲಡಾಯಿ ' ನೋ.

ಲಡಾಯಿ, ಲಡಾಯ, ಲಢಾಯಿ (ನಾ). ಯುದ್ಧ : ಕಾಳಗ : ಅಯತದ ರಣರಾಜಕವ ನೋಡ್ದು ಭೀಮನ ಲತಾಯಿಯುಂಬರಿದು ಗುರು ಪಹಿಲದಿಂ ಬರುತಲು (ಕುರುಗ. ೩೩-೩೭); ಚಿತ್ರಗಲ್ಲಿ ಪಾಳೆಗಾರನು ಶೌರ್ಯದವರ ಮೇಲೆ ಲಡಾಯಿಗೆ ಬಂದಲ್ಲಿ (ಕೃಚಿ. ೫೯); ಬಡಾಯಿ ಬಲ್ಲವನು ಲಡಾಯಿ ಬಲ್ಲನೇ ? (ಗಜ). ಲಡಾಯಿ : ಹೇರಳ ಲಡಾಯವಾಗಿ ಅವರ ಕಡೆ ಸುಮಾರು ೧೫೦೦ ಜನ ಪರಿಯಂತ್ರ ಮೃತವಾಗಿ (ಜಹೇಂದ್ರ. ೬); ಇಬ್ಬರಿಗೂ ಪದ್ಧತಿಯಂತೆ ಬೈಗುಳದ ಒಂದು ಲಡಾಯವೇ ನಡೆದುಹೋಯ್ತು (ಪುರಂ. ೨೩೦). ಲಢಾಯಿ : ಉಳಿವವನೊತನೆ ಏಕೆ ಲಢಾಯಿ ? (ಪರಂ. ೧೬೯–೧೦). [←ಹಿಂ. ಲಡಾಈ ; ಮರಾ. ಲಡಾಈ, ಲಢಾಈ]

ಲಡಿ (ನಾ). ದಾರ ಮುಂತಾದುವುಗಳ ನೀಳವಾದ ಮತ್ತು ಸಡಿಲವಾದ ಸುರುಳಿ. –ಸರ : ನಿದ್ದಗೆಟ್ಟು ದಾರದ ಲಡಿಗಳನ್ನು ಅಳೆದರು . . : ದಾರ ಕಡಿಮೆಯಿರುವುದರಿಂದ ಲಡಿಗಳನ್ನೆಲ್ಲ ವಿರಾಕರಿಸಬೇಕೆಂದು ದಾದಾಭಾಯಿ ಅಭಿಪ್ರಾಯಪಟ್ಟರು (ಜ್ಞಾಯಿ. ೬); ಗೂಡುಗಳನ್ನು ಸಂಗ್ರಹಿಸಿ, ಹದಿಯಲ್ಲಿ ಇವನ್ನು ಬೇಯಿಸಿ ತುಂಡಾಗದ ಸಿಲ್ಕ್‌ನಾರನ್ನು ಲಡಿಗಳನ್ನಾಗಿ ಸುತ್ತುತ್ತಾರೆ (ಗೃಕೈ. ೬೬). [←ಹಿಂ. ಮರಾ. ಲಡ್. ಲಡೀ]

ಲಪ್ಪ (ನಾ). ದುಷ್ಟ : ನೀಚ : ಧೂರ್ತ : "ಲಂಡಲಪ್ಪ(ಟ್ಟ) = ಧೂರ್ತ. ಅಸಭ್ಯ" (ಕನ್ನಡ. ೪೭). [ಸಂ.]

ಲಡ್ಡಿ ' ಲೊಡ್ಡು ' ನೋ.

ಲಡ್ಡಿಕೆ ' ಲಡ್ಡುಗೆ ' ನೋ.

ಲಡ್ಡಿಗೆ ' ಲಡ್ಡುಗೆ ' ನೋ.

ಲಡ್ಡೂ ' ಲೊಡ್ಡು ' ನೋ.

ಲಡ್ಡು (ನಾ). ಒಂದು ಬಗೆಯ ಸಿಹಿತಿನಿಸು ; ಲಾಡು : ಮನಕಕ್ಕರ ತೋರುವ ಬುಂದೆಗಳು ಕರದಿಕ್ಕಿದ ಜಿಲ್ಬಿಲಿ ಲಡ್ಡುಗಳು (ಜಪಗೀ. ೫೩) ; ಲಡ್ಡು ತಿನ್ನುತ್ತೀಯಾ ? (ಉಷಾಪ. ೦೪). ' ಲಾಡು ' ಪರಾ.

[ಸಂ./ಹಿಂ. ಲಡ್ಡೂ ; ಮರಾ. ಲಡ್ಡು]

ಲಡ್ಡುಕ (ನಾ). = ಲಡ್ಡು : ಲಡ್ಡುಕ ಪೂಪ ಗಾರಿಗೆ ಮುಂತಾದ ಬಲವು ಭಕ್ಷ್ಯಗಳ . . . ನೈವೇದ್ಯವೆತ್ತಿದನು (ಜಾಂಬೇಪ. ೯–೧೧). [ಸಂ.]

ಲಡ್ಡುಗೆ ' ಲಡ್ಡುಗೆ ' ನೋ.

ಲಡ್ಡುಗೆ, ಲಡ್ಡಿಕೆ, ಲಡ್ಡಿಗೆ, ಲಡ್ಡುಗ (ನಾ). = ಲಡ್ಡು : ಬಲವುಂ ತಾದ ಲಡ್ಡುಗೆಗಳ್ ಮಂಡಗೆಗಳುಂ ಮೊದಲಾಗೊಡೆಯ ಬಲವುಂ ಭಕ್ಷ್ಯರೂಪಂಗಳುಮಂ ಕೊಂಡು (ಜಿಷ್ಣಾಶ್ವ. ೦೪–೦೩) ; ಮಿಪದ ಲಡ್ಡುಗೆಯ ನಿಕ್ಕೆಯುಂ . . . ಗೆಲಲಾಜದೆ (ಪಂಚತಂ. ೨–೩೨ ಪ) ; ಹೂರಿಗೆಯ ಲಡ್ಡುಗೆಯ ಚಿಟ್ಟಿಂಗಳಲ್ಲಲ್ಲಿ (ಜಪಕ. ೬–೦೦) ; ಮುಂಗಿಲ ಬೆನಕಗೆ ಲಡ್ಡುಗೆಗಳಾದವು ಸಮಸ್ಯಗ್ರಹಸುತಾರೆಗಳು (ಶಬಾಸ. ೦೪–೦೬). **ಲಡ್ಡಿಕೆ** : ಸ್ವಜನಂಗಿಂತ ನಂಟನಿಲ್ಲ. ಲಡ್ಡಿಕೆಗಿಂತ ಕಜ್ಜಾಯವಿಲ್ಲ (ಗಜ). **ಲಡ್ಡಿಗೆ** : ವಿಷದ ಲಡ್ಡಿಗೆ ಮೆದ್ದಿತು ಕೂಸು (ತ್ರಿಂಪು. ೦-೦೯-೨) ; ಲಡ್ಡಿ [ಜಾಹಾಂ. ಡ್ಯಾ] ಗೆಯ ಬಿಜ್ಜೂರಿಗೆಗಳಂ ಬಡ್ಡಿಸದರಂಗನೆಯರು (ಪುರಪ್ರ. ೦೬–೨೪); ತರಗು ಲಡ್ಡಿಗೆಗೆ ಜೊಳ್ಳು ಗಣಪತಿಯೇ ಶ್ರೇಷ್ಠ (ಗಜ). **ಲಡ್ಡುಗ** : ವರದ ಪಾಶಾಂಕುಶಕ ಲಡ್ಡುಗದಿಂದೆ ಕರಮಿಪವ . . . ಗಣನಾಥ ಕರುಣಿಸು ಮತಿಗೆ ಮಂಗಳವ (ಅಷ್ಟಕ. ೮–೩). [< ಸಂ. ಲಡ್ಡುಕ]

ಲಡ್ಡುಮರೆ ' ಲೊಡ್ಡುಮರೆ ' ನೋ.

ಲಢಾಯಿ ' ಲಡಾಯಿ ' ನೋ.

ಲತಾಂಗ (ನಾ). ೧. ಬಳ್ಳಿಯಂತೆ ಬಳುಕುವ ಕೋಮಲವಾದ ಶರೀರ : ಕುಡಿಪುಬ್ಬು ಸಿಂಗಾಡಿಯೋಲ್ ಹೊಳೆವ ಹೊಂಬಣ್ಣದ ಲತಾಂಗ (ಕ್ರಾಶಂ. ೬–೨೬) ; ಮೂಲೆಗಾರ್ತಿಯರ . . . ಲತಾಂಗದಂತಾಗಿ. ಬೀಗಿ. ದಕ್ಷಿಣಾನಿಲನೊತಿರೆ ಪಶ್ಚಿಮಾನಿಲಂ ವೈದೂಜರೊಡಂ (ಅಜಾಚ. ೨–೨೩). ೨. [ಜೈನ] ದೀರ್ಘವಾದ ಕಾಲದ ಒಂದು ಅವಧಿ.—ಮಾನ : ' ಎಂಬತ್ತುನಾಲ್ಕುಲಕ್ಷ ಗುಣಿತಕ್ರಮದಿಂದ . . . ಲತಾಂಗ ಮತ್ತು ಲತಾ. ಮಹಾಲತಾಂಗ ಮತ್ತು ಮಹಾಲತಾ ಎಂಬಿವು ಕ್ರಮದಿಂದ ಆಗುತ್ತವೆ (ಕೃಚಿ. ೪೦೬). [ಸಂ.]

ಲತಾಂಗಿ, ಳತಾಂಗಿ (ನಾ). ೧. ಬಳ್ಳಿಯಂತೆ ಕೋಮಲವಾದ ಶರೀರವುಳ್ಳವಳು ; ಸುಂದರ ಸ್ತ್ರೀ : ಸೇಳಸೀರಜವನಂಗಳ ಚೆಲ್ವುಗಳಂಬುವಾ ಲತಾಂಗಿಯ ಕಡಗಣ್ಣ ಬೆಳ್ಪುಗಳ ಸಿಲ್ಮಿದ ಸಿಲ್ಮಿನ ಸಿಲ್ಮಿವಲ್ಲವೇ (ಪಂಚತಂ. ೪–೩೦) ; ತಲ್ಲಣಾಂಗಿಯ ನಾಮವಣ್ಣಲದೇವಿ (ಜಗತ್ತ. ೧೮–೪) ; ಬಂದಿತ್ತಿದರು ರಾಘವಪ್ಪಾಣಿಯಂ . . . ಲಂಕಾಲತಾಂಗಿಯರ್ (ತ್ರಿಪುರಾ. ೬೨–೩೩). ೨. [ಸಂಗೀತ] ಒಂದು ರಾಗದ ಹೆಸರು : ಅವರು ಹಾಡಿದ ಲತಾಂಗಿರಾಗದ ಕೀರ್ತನೆ ತುಂಬ ಸೊಗಸಾಗಿತ್ತು (ಕಂಚಿ). **ಳತಾಂಗಿ** : ೧. ಪಕ್ಕ ಸೋವ ಳತಾಂಗೀಜನಮೊಂದು ಮೆಲ್ಲುಲಿವುದುಂ ಕೇಳ್ದು (ಪಗಿ. ೨–೬). [ಸಂ. ಲತಾಂಗೀ (ಲತಾ+ಅಂಗ+ –)]

ಲತಾಂತ (ನಾ). ಹೂವು ; ಪುಷ್ಪ : ಏಕಸ್ಥಲತಾಂತಮಂಜರಿ ಫಲ ದೇಬ್ಗೆಯುಂ ನೆಱೆಯ ಪೇಬ್ಬಳೋಲ್ (ಕಾದಂಬಾ. ೩೩೬) ; ವಿಸ್ರಯಪರ್ಣ ಸತಿಯರ್ ಲತಾಂತಮಂ (ಪಗಿ. ೨–೫೫) ; ಅಂಕೋಗೆ ಪುದುಗಿರ್ದ ಪೂಮಳದೊಳೊಪ್ಪುವ ಲತಾಂತಕುಟ್ಮಲದಂತೆ (ಕೃಅಷ್ಟಾ. ೦೬–೦೪). [ಸಂ.]

ಲತಾಕರ (ನಾ). [ನಾಟ್ಯ] ಮೂವತ್ತು ವಿಧವಾದ ನೃತ್ತಹಸ್ತಗಳಲ್ಲಿ ಒಂದು ; P "ಪತಾಕ ಅಥವಾ ತ್ರಿಪತಾಕಹಸ್ತಗಳೆರಡನ್ನು ಜೋತು ಬಿಟ್ಟು ಅಡ್ಡಲಾಗಿ ನೀಡುವುದು" (ಅಸ್ಕರಂ. ೨೩೦ ಗಣ್ಯಹಿಪಾಂದ) ; ಚತುರಸ್ರ. ಆದ್ಯ ಹಸ್ತ . . . ಕೇಪಿಂದ. ಲತಾಕರ. ಕರಿಹಸ್ತ . . . ವರಿತ. ಲಲಿತ—ಈ ಮೂವತ್ತು ನೃತ್ತಹಸ್ತಂಗಳ್ (ಅಸ್ಕರಂ; ೨-೨೪ ಪ). [ಸಂ.]

ಲತಾಕ್ಷೇಪ (ನಾ). [ನಾಟ್ಯ] ಮೂವತ್ತೈದು ಬಗೆಯ ದೇಶೀಯ ಭೂಪಜಾನಿಗಳಲ್ಲಿ ಒಂದು ; P "ಕಾಲನ್ನು ಹಿಂದಕ್ಕಿರಿಸಿ ಪುನಃ ಮುಂದಕ್ಕೆ ನೀಡಿ ನೆಲವನ್ನು ಕುಟ್ಟುವುದು" (ಅಸ್ಕರಂ. ೬೩ ಗಣ್ಯಹಿಪಾಂದ): ಧುರಿಕಂ ವಿಸ್ತರಿಪ ನಿಕುಟ್ಟನಂ ಲತಾಕ್ಷೇಪಾಖ್ಯಂ (ಅಸ್ಕರಂ. ೬-೦೨). [ಸಂ.]

ಲತಾಗೃಹ (ನಾ). ಬಳ್ಳಿಮಂಡಪ ; ಲತಾಮಂಟಪ : ಲತಾಗೃಹದೊಳ್ಪು ಮಲ್ಲಿಕಾಕುಸುಮವ ಬೆಳ್ಪು . . . ತವಾಳದ ಸುರ್ವು ಸುತ್ತಲುಂ (ಪಂಚಮ. ೯–೧೬) : ವಸಲತಾಗೃಹಂಗಳೊಳ್ ವಿಶ್ರಮಿಸುತ್ತಿ (ಪುಷ್ಪಕ. ೯–೧೫ ಪ). [ಸಂ.]

ಲತಾಡ (ನಾ). ಹಿಂಸೆ ; ಕಾಟ ; ತೊಂದರೆ : ಇಬ್ಬರೂ ನನ್ನದು ತನ್ನದು ಎಂದು ಮಗುವನ್ನು ಎಳೆದಾಡಿದರು. ಈ ಹಸುಳೆಯು ಈ ಲತಾಡವನ್ನು

ಸಟಿಸಲಾರದೆ ಗಟ್ಟಿಯಾಗಿ ಅತ್ತಿತು (ಪಚಿತಿಂ. ೩. ೦೯).
[← ಹಿಂ. ಲತಾಡ್]

ಲತಾಬಂಧ (ನಾ). ಜಟ್ಟಿಕಾಳಗದ ಒಂದು ವರಸೆ : ಮೆಲ್ಲಯುವ್ವದ ಒಂದು ಪಟ್ಟು : ಉರೋಬಂಧಂ ಲತಾಬಂಧಮುಜ್ಜಳಬಾಹಾಜರಬಂಧಂ .ಚಿಮತ್ಕರಿಸೆ ನಾನಾತೌಶಲಂದೋಜಿವರ್ (ಪಪಪಂ. ೪-೬೩). [ಸಂ.]

ಲತಾಲೀಢ (ನಾ). ಬಳ್ಳಿಗಳಿಂದ ಆವರಿಸಿಯುದು : ಲತಾಮಂಟಪ : ಪುರಮೆಲ್ಲಂ ಮಾಡದಿಂದಲ್ಲಿಯು ಪುರವನಮೆಲ್ಲಂ ಲತಾಲೀಢದಿಂ ಗೋಪುರ ಮೆಲ್ಲಂ ಚೈತ್ಯಗೇಹಂಗಳಾ . . . ರಂಜಿಸೆ (ಪುಪ್ರಕೃ. ೨-೩). [ಸಂ.]

ಲತಾವೃಶ್ಚಿಕ (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು: "ಒಂದು ಕಾಲನ್ನು ಬೇಳಿನ ಬಾಲದಂತೆ ಹಿಂದಕ್ಕೆತ್ತಿ ಎಡಗೈಯನ್ನು ಲತಾ ಹಸ್ತದಲ್ಲಿ ಹಿಡಿಯುವುದು; ವಿ–ಆಕಾಶದಿಂದ ಬೀಳುವುದನ್ನು ಅಭಿನಯಿಸುವಾಗ" (ಅಸಕೃಂ. ೨೬೬ ಗಣ್ಯಮುಖರ) : ವೃಶ್ಚಿಕರೇಚಿತ ಲತಾವೃಶ್ಚಿಕ . . . ಗಂಗಾವತರಣ — ಈ ಪೂಜಿಂಬು ಕರಣಂಗಳ್ (ಅಸಕೃಂ. ೪-೯೨ ಪ). [ಸಂ.]

ಲತಾವೇಷ್ಟನ (ನಾ). [ಕಾಮಶಾ] ಹನ್ನೆರಡು ಬಗೆಯ ಆಲಿಂಗನಗಳಲ್ಲಿ ಒಂದು : ಪ್ರಷ್ಮರ ವಿವಿಧಕ . . . ಲತಾವೇಷ್ಟನ . . . ಎಂಬ ದ್ವಾದಶ ವಿಧಾಲಿಂಗನಂಗಳಿಂ (ಪಪಗೀ. ೩೨೯) ; ಏಂದಿರ್ದ ಪುರುಷನಂ ಸ್ತ್ರೀಯರು ಮರನನು ಬಳ್ಳಿ ಹ್ಯಾಗೆ ಹತ್ತುವುಮೋ ಹಾಗೆ . . . ಪುರುಷನಂ ಬಾಗಿಸುವಳು. ಇದು ಲತಾವೇಷ್ಟನವೆಂಬ ಆಲಿಂಗನ (ಕಾಮಶಾ. ೩೩೨). [ಸಂ.]

ಲತಿಕಾಗೃಹ (ನಾ). = ಲತಾಗೃಹ : ಓರೊರ್ವ ಸುರಭಿಪರಿಮಳೋದ್ಗಾರಿನಿಷ್ಕೇರಕುಸುಮಮಂಜರೀನಿಕರಭರವಿನತಲತಿಕಾಗೃಹಂಗಳೊಳ್ ಭ್ರಮರ ಮಿಥುನದಂತೆ ಪುಷ್ಪಾಪಚಯದಿಂ ಭ್ರಮಿಸಿಯುಂ (ಪಂಪ್ರ ೫. ೩-೫೫ ಪ). [ಸಂ.]

ಲತಿಕೆ (ನಾ). ಸಣ್ಣ ಬಳ್ಳಿ ; ಹಂಬು.: ಲತಿಕಾಲಾಸ್ಯೋಪದೇಶವ್ಯಸನ . . . ಚಂಚಚ್ಚಂಚರೀಕಂ (ಆದಪು. ೦೫೬) ; ಚಲುವ ಕಣ್ಣಪನಂಬಕಂಗಳ ತಳರ್ವ ಲತಿಕೆಗಳೋ (ಪಪಪು. ೦೬–೬೮). [ಸಂ. ಲತಿಕಾ]

ಲತೆ. ಳತೆ (ನಾ). ೧. ಹಬ್ಬುವ ಸಸ್ಯ ; ಬಳ್ಳಿ : .ಹಂಬು: "ಲತಾ, ಪ್ರತಾನನಿ, ವಲ್ಲೀ, ಪ್ರತತೀ, ಪ್ರತತಿಃ — ಈ ೫ ಬಳ್ಳಿ" (ಕಂಂಪು. ೩೦–೩೬): ಮಿಡಲ್ಲು ಪೂತ ಲತೆಗಳ್ ಕೆಯ್ಗೊಯ್ದು[ಪೂ]ನೀಡಲ್ಕರ್ಘ್ಯಮನೀವಂತೆವೊಲಾದುದು (ಪಂಪಭಾ. ೬-೭೬) ; ಲತೆಗಳ ಜನ್ಮಭೂಮಿ ಪ್ರಳಯಂಗಳ ವೆರ್ಗಣಿ . . . ಸಾಲ ತನ್ಗೆಲ್ಬಲ ತಾಯ್ತನೆ ತಾನೆನಿಸಿರ್ದುದಾ ವನಂ (ಕುಸುಬಾ. ೦೦–೦೭೯) ; ಕುಸುಮಕಿಸಲಯಲತಾಶೋಭಿತದ ರಮಣೀಯಗಂಧಬಂಧುರವೀವಕಾನನ (ಶ್ರೀಪಾಪು. ೦೦–೩೬೯). ☞ ಸುಕುಮಾರವಾದುದು ಎಂಬ ಅರ್ಥದಲ್ಲಿ ಕೆಲವು ಮರಗಳ ಹೆಸರುಗಳ ಕೊನೆಗೂ ಈ ಶಬ್ದ ಸೇರಿ ಬರುವುದುಂಟು. ಉದಾಹರಣೆಗೆ—'ಕಲ್ಪಲತೆ', 'ಚೂತಲತೆ'. ೨. ಕೊಂಬೆ: ರೆಂಬೆ : "ಶಾಖಾ, ಲತಾ . . . ೨ ಕೊಂಬೆಗಳ ಹೆಸರುಗಳು, ರೆಂಬೆಗಳು" (ಕಿಪಾ. ೦೬. ೧೦೨). ೩. ಒಂದು ಬಗೆಯ ಸಸ್ಯ ; ಪ್ರಿಯಂಗು : "ಶ್ಯಾಮಾ, ಮಹಿಲಾಹ್ವಯಾ, ಲತಾ.. . . ಪ್ರಿಯಕಃ — ೧೨ ಪ್ರೇಂಕಣ ಗಿಡದ ಹೆಸರು : ಪ್ರಿಯಂಗು ಪ್ರಸಿದ್ಧವಾದುದ್ದೆ" (ಕಿಪಾ. ೦೬. ೦೨೮). ೪. ಒಂದು ಬಗೆಯ ಗಂಧದ್ರವ್ಯ ; ಸ್ಪಲಕ್ಕೆ : "ಮರುನ್ಮಾಲಾ, ಪಶುನಾ, ಸ್ಪಲಕ್ಕಾ, ದೇವೀ, ಲತಾ . . . ಲಂಕೋಯಿಕಾ—೧೦ ಸ್ಪಲಕ್ಕೆ ಯೆಂಬ ಗ್ರಂಥಿಪ್ರವ್ಯ ; ಸಂತೇಬೇರು" (ಕಿಪಾ. ೦೫೩). ೫. ಕಂಗೊಂಗೆ ಗಿಡ ; ಮಿಂಚುಬಳ್ಳಿಗಿಡ : "ವಾರಾಪತಾಂಘ್ರೀಣಃ, ಕಟಭಿಃ, ಪಣ್ಯಾ, ಜ್ಯೋತಿಷ್ಮತೀ, ಲತಾ — ೫ ಕಂಗೊಂಗೇಗಿಡ, ಕಂಗೊಂದೀಗಿಡ, ಮಿಂಚುಬಳ್ಳಿಗಿಡ" (ಕಿಪಾ. ೦೬. ೦೫೩). ೬. ಒಂದು ಬಗೆಯ ಬಳ್ಳಿ ; ತೊಟ್ಟಿ : "ಗೃಹಛೇದ ಲತೆಯೊಳು ತೊಟ್ಟಿ" (ಹರಿಭಂ. ೧೦). ೭. [ಜೈನ] ಒಂದು ಕಾಲಗಣನೆ : ಎಂಬತ್ತುನಾಲ್ಕುಲಕ್ಷ ಗುಣಿತಕ್ರಮದಿಂದೆ . . . ಲಕಾಂಗ ಮತ್ತು ಲತಾ . . . ಎಂಬುವ ಕ್ರಮದಿಂದ ಆಗುತ್ತವೆ (ಕ್ಷಪ್ರ. ೩೦೬). ೮. [ನಾಟ್ಯ] ನೃತ್ತಹಸ್ತಗಳಲ್ಲಿ ಒಂದು : ಈ ಕೆಳಗೆ ಹೇಳುವ ಹಸ್ತಗಳು ನೃತ್ತಹಸ್ತಗಳು — ಚತುರಸ್ರ, ಉದ್ವೃತ್ತ, . . . ಕೇಶಬಂಧ, ಲತಾ, ಕರಿಹಸ್ತ (ಅಭಾಸ್ತ. ೨೬). ಳತೆ : ೧. ಕಿಂದಳಿರ್ಗೊಂಚಲ ಬೆಲ್ಲಣಂ ಪ್ರವಾಳಳತೆಯ ಬಾಲಗಚ್ಚಿ (ಅಣುತ. ೦೦–೬೩). 'ಳತಾಂಗಿ' ಪರಾ. [ಸಂ. ಲತಾ]

ಲತೆಯಿಜು (ಕ್ರಿ). (ಎಲೆಯಂತೆ) ತೆಳ್ಳಗೆ ಒತ್ತು.— ಲಟ್ಟಿಸು : ಪಟ್ಟೆಯ ಹಿಟ್ಟನೊತ್ತಿ ಲತೆಯಿಜಿದರಿಂದು ಬಟ್ಟಲ ನಡುವೆಯಿರಿಸಿ ಯೆರಡ ಅಂಚುಗಳ ಮ್ಮುರಿದು (ಸೂಪಶಾ. ೦–೦೦) ; ಗೋದುವೆಯ ಪದನಿಗಿ ಹಿಟ್ಟು ಮಾಡಿ ಎಣ್ಣೆಯೊಳು ಕಲಸಿ ಹಪ್ಪಳದಂತೆ ಲತೆಯಿಜಿದು(ಸೂಪಶಾ. ೦-೮೫). [ಲತೆ + ಇಜ್]

ಲತೆವನೆ (ನಾ). = ಲತಾಗೃಹ : ಲತವನೆಯೊಳಗಣ ತಣ್ಬಲ್ಬಲ ಜಾಣ ದೊಳ್ ಕುಸುಮದಿಸಲ ಪಸೆಯಂ ಸೀತಾಪತಿಗೆ ಸಮೆದಂ ಸುಮಿತ್ರಾಸುತಂ (ಪಂಪಭಾ. ೬–೩) ; ಕಾಂತೆಯನೆಮ್ಮೆ ಪದನಂಗೊಳಿಸಿ ಲತವನೆಯೊಳಿರಿಸಿ (ಪಾಶ್ವಪು. ೫೬–೪). [ಲತೆ + ಮನೆ]

ಲತ್ತ 'ನೆತ್ತ' ನೋ.

ಲತ್ತಲೂರ್ 'ಲಟ್ಟಲೂರ್' ನೋ.

ಲತ್ತಾಪ್ರಹಾರ (ನಾ). ಕಾಲಿನಿಂದ ಒದೆಯುವಿಕೆ; ಒದೆತ: ಅವನ ರಥವನ್ನು ಮುರಿದು ಸಾರಥಿಯನ್ನು ಕೊಂದು ಅವನ ಎದೆಗೆ ಲತ್ತಾಪ್ರಹಾರ ಮಾಡಿದನು (ಕುಶಾಭ. ೬೦೦) : ಈ ಅತ್ತಿಮರದ ಕಟ್ಟಿಗೆಯ ಕದವು ನಿನ್ನ ಲತ್ತಾಪ್ರಹಾರಕ್ಕೆ ಮುರಿಯುವುದೆ? (ಅಂಂಕ. ೦೬೨). [< ಲತ್ತೆ + ಪ್ರಹಾರ]

ಲತ್ತೆ, ಲಾತ, ಲಾತು (ನಾ). ೧. = ಲತ್ತಾಪ್ರಹಾರ : ನಿನಗೂ ಲತ್ತೆ ಬೀಳಲಿಕ್ಕಿಲ್ಲ (ಪುಯಾಯು. ೬–೬೩) ; ಅಂದು ಅವನಿಗೆ ಮನೆಯಲಿರಲು ಲತ್ತೆಗಳು ಬಿದ್ದವು (ರಾಪಪು. ೦೦) ; ಕುಬೇರಗೆ ಇಮಾರೆ. ಕತ್ತಿಗೆ ಲತ್ತೆ (ಗಾಪ). **ಲಾತೆ** : ೨. ಏಟು ; ಹೊಡೆತ ; ಪೆಟ್ಟು : ಒಂದು ದಿನ ತಪ್ಪಿಸಿ ಕೊಂಡರೆ ಮೂರನೆಯ ದಿವ ಆರಾರು ರಾತಗಳು (ಶ್ರಾಮಪ್ರ. ೧೫೬) ; ಯಾವಾಗಲೂ ಮುಟ್ಟಿ ನೋಡಿಕೊಳ್ಳುವಂಥ ಲಾತ ಕೊಡುತ್ತೇನೆ (ಕ್ಷತ್ರ. ೪೩); ನಾಲ್ಕು ಲಾತ ಬಿಗಿದು ಇವನಿಗೆ ಬುದ್ಧಿ ಕಲಿಸೋದು (ಕ್ಷತ್ರ. ೦೦೩). **ಲಾತು** : ೨. ಮಗು ಅದರೆ ಎರಡು ಲಾತು ಬಿಗಿದು ಬುದ್ಧಿ ಕಲಿಸಬಹುದು (ಬಣುಗ. ೦೫೬). ೩. (ಅಲಂ) ಮೋಸ ; ದಗಾ : ನಿನ್ನನ್ನು ನೋಡಿದರೆ ಮನೆಗೆ ಲಾತು ಕೊಟ್ಟು ಬಂದವಳೆಂದು ತೋರುತ್ತದೆ (ಶದಂಶ. ೬೪).

ಲತ್ತೆತಿನ್ನು=ಒದೆಯಿಸಿಕೊಳ್ಳು : ಲತ್ತೆ ತಿಂದ ತಿಮನ ನೆತ್ತಿಯಿಂದ ರಕ್ತ ಸುರಿಯುತ್ತಿದ್ದರೂ . . . ಸುಮ್ಮನೆ ಕುಳಿತಿದ್ದನು (ತಂಬಾಕ. ೬೨). **ಲತ್ತೆಹೊಡೆ**=೧. ತ್ಯಜಿಸು ; ಬಿಡು : ತನ್ನ ನೌಕರಿಗೆ ಲತ್ತೆಹೊಡೆದು ಅವರೊಂದಿಗೆ ಹೋಗಿಬಿಡೋಣ ಎಂದನಿಸುತ್ತಿತ್ತು (ಕೂಪಪು. ೦೦೬). ೨. (ಅಲಂ) ಕೆಡುಕಾಗು; ದುರದೃಷ್ಟ ಒದಗು; ಗ್ರಹಚಾರ ಬಡಿ : ಅವನಿಗೆ ಲತ್ತೆ ಹೊಡೆಯುತು (ಕೃಶ).

[<ಪ್ರಾ. ಲತ್ತಾ, ಲತ್ತಿಆ./ಹಿಂ. ಲತ್ತೀ, ಲಾತ್; ಮರಾ. ಲತ್ತಾ, ಲಾತ್, ಲಾಥ್]

ಲತ್ತೆಗುಣಿ (ನಾ). ಲಟ್ಟಿಸಲು ಬಳಸುವ ಸಾಧನ ; ಲಟ್ಟಣಿಗೆ: "ಲಟ್ಟಿಸುವ ಉಳಕೆ" (ಜಾವಪ್ರಾ. ೪೨). [?]

ಲತ್ತ (ನಾ)- = ಲಕಾರ : ದ ದವಂಗಳ- ಪರಮಾಗೆ . . . ಕೊಲ್ ಸಲ್‌ಗಳ ಲತ್ತಕ್ಕಂ ನಕಾರಾದೇಶಂ (ಕಮುರ. ೩೩ ಪ್ರ.ಪ.); ಶ್ಲೋಕದ ಲತ್ತಕ್ಕೆ ದುರ್ಜನ ರಮರೊಳು ಲೋಪವೆ ಸಂಭವಿಸುವುದು(ಛಂಶಾಕ. ೨೦೫–೭೭). [ಸಂ]

ಲದ್ದಿ (ನಾ). ಆನೆ, ಕುದುರೆ, ಕತ್ತೆ, ಒಂಟೆ ಮೊದಲಾದುವುಗಳ ಮಲ :

"ಲದ್ದಿಯೆನೆ ಲಂಡಮಕ್ಕುಂ" (ಶುಂಗಾ. ೪೬-೬); ಕರಮೂಮದೊಳೊಂದಿ ಲದ್ದಿ ಪೋಪುಡಮದು ಶೂರೆಯೆಂದಱಿದು ವಾಜಿಗೆ ಪಿಪ್ಪಲಿ ಶುಂಠಿ ಸೈಂಧವಂ ಗಿಡಿವುದು ಮೂಗಳೊಳ್ (ಶಿವತ. ೯-೨೨೬): ಇದ್ದು ಊಣದಿಪ್ಪ ಬಾಯೊಳಗೆ ಕತ್ತಯ ಲದ್ದಿ[ದ್ದಿ]ಯೇ ಬೀಳ್ದುಂ (ಸಮಾ. ೬೫೮); ವೃದ್ಧಿ ದುಡಿಮೆಯ ಹಾಗೆ ಶುದ್ಧಿ ವಿಾಹವ ಹಾಗೆ ಲದ್ದಿ ಆಹಾರದ ಹಾಗೆ (ತಿಂತಿಣಿ. ೬೨.೧೮). [<ಪ್ರಾ. ಲದ್ದೀ]

ಲದ್ದಿಗುತ್ತ (ನಾ). ದನಕರುಗಳಿಗೆ ಬರುವ ಒಂದು ಬಗೆಯ ರೋಗ; ಲದ್ದಿಗೆ ಸಂಬಂಧಿಸಿದ ರೋಗ: ಅನುಲೋಮವಾಗಿ ವಾಜಿಗೆ ಜನಿಯಿಸಿ ಬಲಮೆರ್ದೆಯು ಲದ್ದಿಗುತ್ತಂ ಪಿರಿದಪ್ಪನಮಲ್ಲಿ ಕಜ್ಜಗಟ್ಟುವುವನುಪಯುದಿಂ ಕುದುಗೆಣ್ಣೆಯಂ ನವರಸಮಂ (ಅಶ್ವಶಾ. ೬-೫೬). [ಲದ್ದಿ+ಕುತ್ತ]

ಲದ್ದಿಬೇನೆ (ನಾ). = ಲದ್ದಿಗುತ್ತ: ಕುದುರೆಗಳಿಗೂ ದನಗಳಿಗೂ ಬರುವ ಸಾಂಕ್ರಾಮಿಕರೋಗವಾದ 'ಆಂತ್ರಾಕ್ಸ್' (ಲದ್ದಿಬೇನೆ, ಗಂಟ್ಲುಕಟ್ಟು) ಎಂಬುದು ಲಂಡನ್ನಿನಲ್ಲಿ . . . ಆಟಿಕೊಂಡ ವಿಷಮುವು ಬಹಳ ವಿಚಿತ್ರವಾಗಿರುವುದು (ಪಶ್ಯಾ. ೫. ೨೫೬). [ಲದ್ದಿ+ಬೇನೆ]

ಲದ್ದು, ಲದ್ದೆ (ನಾ). ಹೊರೆ; ಹೇರು; ಭಾರ: ಕಟ್ಟಿಗೆಯ ರಾಶಿಗೆ ೧ ರೂಪಾಯಿ; ಒಂದು ಎತ್ತಿನ ಲದ್ದಿಗೆ ಒಂದಾಣೆ, ಗಂಡಸಿಪ ತಲೆಹೊರೆಗೆ ೧ ದುಡ್ಡು (ಆಡಾಗ. ೪೪). ಲದ್ದೆ: ಈತನೇ ಒಕ್ಕಲಿಗ ಮುವ್ವಯ್ಯ ನೆಂಬಾತನೀತನೇ ಲದ್ದೆಯಾ ಸೋಮಯ್ಯನೆಂಬಾತನು (ಕಂತಿ. ೫೬-೫೮): ಚನ್ನಯ್ಯಗಳು ಲದ್ದೆಯ ಹುಲ್ಲು ಸೋಮಯ್ಯಗಳು ಬಡತನದಲ್ಲಿ ಶಿವನೊಳು ಬೆರಸಲಿಲ್ಲವ (ಸುಖಸ. ೧೩-೭).

[←ಹಿಂ. ಲಾದಿ, ಲದಾವ್ : ಮರಾ. ಲಾದಾ]

ಲದ್ದೆ 'ಲದ್ದು' ನೋ.

ಲಪಟಾಯಿಸು (ಕ್ರಿ). ಪರರ ವಸ್ತುವನ್ನು ಸ್ವಾಧೀನಪಡಿಸಿಕೊಳ್ಳು--ಎತ್ತಿ ಹಾಕು: ವಿಷ್ಣು, ಲಕ್ಷ್ಮಿ, ಕೌಸ್ತುಭ ಮುಂತಾದ ಅನರ್ಘ್ಯರತ್ನಗಳನ್ನೆಲ್ಲಾ ತಾನೇ ಲಪಟಾಯಿಸಿ, ಏನೂ ತಿಳಿಯದ ಈಶ್ವರನಿಗೆ ವಿಷವನ್ನು ಕುಡಿಸಿಬಿಟ್ಟನು (ತಿಕೂ. ೬೦); ಸಾಮಾನ್ಯಜನರ ಆಸ್ತಿಪಾಸ್ತಿಗಳನ್ನು ಲಪಟಾಯಿಸಿಕೊಂಡಿದ್ದ (ಕೃಕು. ೬೯೭). [?+—ಇಸು. / ತೆಲು. ಲಪಟಾಯಿಂಚು, ಲಪ್ಪಾಯಿಂಚು]

ಲಪನ (ನಾ). ೧. ಮಾತನಾಡುವುದು; ನುಡಿಯುವುದು. ೨. ಮುಖ; ವದನ: "ವದನಮಾನನಮಾಸ್ಯಂ . . . ಲಪನಂ ವಕ್ತ್ರಂ ಮೊಗಕ್ಕೆ ನಾಮಂ" (ಚಿಪ್ರತೋ. ೬೯-೦೩); ಲಪನಂ ಕಾವುಣ್ಮನಂ ಕನ್ನಡಿಪಿ (ಅಧಿಕ. ೦-೩೦); ಮತ್ತೊಂದು ದೆಸೆಗೆ ಲಪನವವೈದೆ ತಿರುಪಲಾ ತಾವಿಗೆಯ್ದೆ (ತಿಸ್ಮಪು. ೪-೨-೩೦). [ಸಂ.]

ಲಪಾಡಿಸು (ಕ್ರಿ). ಸುತ್ತು; ಕಟ್ಟು: ಇಗಾ ಆರ ಹಾಕರೀ! ಲುಂಗೀ ಆರ ಸುತ್ತರೀ; ಲಂಗಟಾ ಆರ ಲಪಾಡಿಸರಿ! (ಸಮೋ. ೨೮೩).

[ಲಪಾಡು . (ಪ್ರ ← ಹಿಂ. ಲಪೇಟನಾ)+—ಇಸು]

ಲಪಿತ (ನಾ). ೧. ಮಾತಾಡಿದುದು; ಹೇಳಿದುದು: "ಉಕ್ತಂ, ಭಾಷಿತಕ್ಕೆ. ಉದಿತಂ, ಜಲ್ಪಿತಂ, ಆಖ್ಯಾತಂ, ಅಭಿಹಿತಂ, ಲಪಿತಂ--ಎ ಹೇಳಲ್ಪಟ್ಟದ್ದು ನುಡಿಯಲ್ಪಟ್ಟದ್ದ" (ಚಿಕ್ಕಾಂ. ೪೩೨). ೨. ಮಾತು; ನುಡಿ. [ಸಂ.]

ಲಪಿಸು (ಕ್ರಿ). ಹೇಳು; ನುಡಿ: ಪೆಣ್ಮಯಪೆನ್ನಲುಲಿ ಮಾಳ್ಪ ಜಪವ ರಸನಾಧಿಕಂ ಮೌನದಿಂ ಚಿತ್ತದೊಳ್ ಲಪಿಸುವುದೆ ಮಾನಸಿಕಂ (ಪಂಕಾಡಾ. ೨-೦೩-೪೪). [ಲಪನ+—ಇಸು]

ಲಪೇಟ, ಲಪ್ಪಟ್ಟೆ, ಲಪ್ಪಾಟಿ (ನಾ). (ತಲೆಗೆ ಅಥವಾ ಸೊಂಟಕ್ಕೆ) ಸುತ್ತಿಕೊಳ್ಳುವ ಬಟ್ಟೆ: ಸಣ್ಣ ಪಂಚೆಯೊಂದನ್ನು ಲಪೇಟಿಯಂತೆ ಅದ್ದ ಸುತ್ತಿಕೊಂಡಿದ್ದ (ಕುಕ್ಕು. ೭೦). ಲಪ್ಪಟ್ಟೆ: ತಲೆಗೆ ಒಂದು ಲಪ್ಪಟ್ಟೆ ಕಟ್ಟಿ ಹೊರಟೇ ಬಿಟ್ಟರು (ಕೊಡ). ಲಪ್ಪಾಟಿ: ಕೇಶವರಾಯನು ತಲೆಗೆ ಲಪ್ಪಾಟಿಯನ್ನು ಸುತ್ತಿ . . . ಎದುರಿಗೆ ಬರುತ್ತಿದ್ದ ದಾಸಪ್ಪನನ್ನು ಕಂಡನು (ಕಱ. ೩). [← ಹಿಂ. ಮರಾ. ಲಪೇಟಾ]

ಲಪ್ಪಟ್ಟೆ 'ಲಪೇಟ' ನೋ.

ಲಪ್ಪಾಟಿ 'ಲಪೇಟ' ನೋ.

ಲಫಂಗ (ನಾ). ಪುಂಡ; ದುರಾಚಾರಿ: ಹೋದಲ್ಲೆಲ್ಲ ತನ್ನ ಚರಿತ್ರ ಹೀನತೆಯನ್ನು ಪ್ರದರ್ಶನಕ್ಕಿಡುವ ಲಫಂಗ (ಜಾಕ್ಕ. ೩೨೬); ಊರಾಗಿನ ಲಫಂಗರದು ಬಂಬಲ ಅದ (ಬೀಚಿ. II. ೦೭೬).

[← ಪಾರ. ಲಫಂಗ್; ಹಿಂ. ಮರಾ. ಲಫಂಗಾ]

ಲಫಂಗಗಿರಿ (ನಾ). ಪುಂಡತನ; ದುರಾಚಾರ: ಅವರ ಲಫಂಗಗಿರಿಯು ವಿಷಮು ಮಾತ್ರ ಸುಳ್ಳೇನೂ ಆಗಲಾರದು! (ಪಂಗ್ರ. ೦೦೦).

[ಲಫಂಗ+—ಗಿರಿ]

ಲಬಕ್ (ನಾ). ಒಂದು ಅನುಕರಣ ಶಬ್ದ: ಅವನು ಕಲ್ಲುಸಕ್ಕರೆಚೂರನ್ನು ಲಬಕ್ ಎಂದು ಬಾಯಿಗೆ ಹಾಕಿಕೊಂಡು ಬಿಟ್ಟನು (ಕೂಡ).

ಲಬಲಬ (ನಾ). ಬಾಯಿ ಬಿಡಿದುಕೊಳ್ಳುವುದನ್ನು ಸೂಚಿಸುವ ಒಂದು ಅನುಕರಣ ಶಬ್ದ: ಲಬಲಬ ಬಾಯಿ ಬಡಿದುಕೊಂಡರು (ಕೂಡ). 'ಲಬಲಬಿಸು' ಪರಾ.

ಲಬಲಬಿ (ಅ). ಬಾಯಿ ಬಡಿದುಕೊಳ್ಳುವುದನ್ನು ಸೂಚಿಸುವ ಒಂದು ಅನುಕರಣಾವ್ಯಯ: ಲಬಲಬನೆ ಬಾಯಿ ಬಡಿದುಕೊಂಡೂ ಎದೆ ಗುದ್ದಿಕೊಂಡೂ ಕೇರಿಯೆಲ್ಲಾ ನೆರೆಯುವಂತೆ ಗೋಳು ಹುಯ್ದುಕೊಂಡಿದ್ದಳು (ಪುಕಸು. ೪೦೬). [ಲಬಲಬ+—ಅನ್ನ್]

ಲಬಲಬಿಸು (ಕ್ರಿ). ಲಬಲಬ ಎಂದು ಬಾಯಿಬಡಿದುಕೊಳ್ಳು: ಅವನ ಅಪ್ಪ . . . ಯಾರಾದರೂ ಸತ್ತರೆ ಬಾಯಿ ಬಡಿದುಕೊಳ್ಳುವಂತೆ ಲಬಲಬಿಸಿದ್ದರು (ಪುಕಸು. ೩೩೭). [ಲಬಲಬ+—ಇಸು]

ಲಬಾಡ (ನಾ). ಸುಳ್ಳುಗಾರ; ಅಸತ್ಯವನ್ನಾಡುವವನು: ಏನೋ ಲಬಾಡಾ, ನಾನು ತಿಂದದ್ದು ಯಾವಾಗ? (ಕೃ.ಪ್ರ. ೨೪೯). [←ಹಿಂ. ಲಬಾಡಾ, ಲಬರಾ; ಮರಾ. ಲಬಾಡ್]

ಲಬಾಡಿ 'ಲಬಾಡು' ನೋ.

ಲಬಾಡು, ಲಬಾಡಿ (ನಾ). ೧. ಮೋಸ; ಕಪಟ; ವಂಚನೆ: ಇನ್ನು ಮುಂದೂ ಲೂಟಿ ಲಬಾಡು ಮಾಡದೆ. ಅಪ್ಪಣೆ ಪ್ರಕಾರನಡಕೊಳ್ಳುತ್ತೇನೆ (ಬಾಹೆಂಶ್ರ. ೦೦೬). ಲಬಾಡಿ: ೧. ಜೀನಸುಗಳು ಲಬಾಡಿಯಿಂದ ಅಂದರೆ ಮೊಟ್ಟಿತನದಿಂದ ತುಂಬಿದ್ದಾದರೆ ಆವಾಗಲೆ ತಿಳಿದು ಬರುವುದು (ಜುಂಬಾ. ೪೨). ೨. ಸುಳ್ಳು; ಸಟೆ; ಅನೃತ: ಲಬಾಡಿ ಬಿಲ್‌ಕುಲ್ ಕೇಳಬೇಡ (ಹೋಡಿ. ೪೦).

[←ಹಿಂ. ಮರಾ. ಲಬಾಡ್, ಲಬಾಡಿ]

ಲಬುಧ (ಗು). ದೊರಕಿದ: ಈಡಗೂರ ದೇವೀಲಬುಧವರಪ್ರಸಾದಮ್ಮಿಗ ಮದೌಮೋದಯರ್ (ಚಳ. XII. ೫೫೭೨. ೦೦೯-೨೦ ; ೧೨೩೦) ; ಜಯನ್ಸೀ ಮದಃ(ಧ)ಕೇಶ್ವರದೇವರ (ವ)ಲಬುಧವರಪ್ರಸಾದಂ ಸಹಜಮ್ಮಿಗಮದಾಮೋದಂ (ಚಂ- XXVII. ೦೩೦-೦೫ ; ೧೨೮೦). [<ಸಂ. ಲಬ್ಧ]

ಲಬೋಲಬೋ (ನಾವ). = ಲಬಲಬ: ಬೀದೀಲಿ ನಿಂತುಕೊಂಡು ಲಬೋ ಲಬೋ ಅಂತ . . . ಕೂಗೋದು (ತುಂಗಭ. ೫೦).

ಲಬ್ಧ (ಗು). ೧. ದೊರಕಿದ: ಪ್ರಾಪ್ತವಾದ: ಸ್ವಪಕ್ಷ ಸ್ವಾಪನೆಯುಂ ಸನ್ಮಾರ್ಗ ಪ್ರಕಾಶನದಿಂ ಮಾರ್ಗಪ್ರಭಾವನೆಯುಂ ಮಾಡಿ ಸಭಾಸದರಿಂ ಲಬ್ಧಪ್ರಶಂಸನಾಗಿ (ಅಪ್ರ. ೨-೨೨೨). (ನಾ). ೨. ಪಡೆದುದು; ಪ್ರಾಪ್ತಿ; ಫಲ: ಅಲಬ್ಧಲಾಭಂ ಲಬ್ಧಪರಿರಕ್ಷಣಂ ರಕ್ಷಿತವಿವರ್ಧನಂ (ಕಂಚಿಪ್ರ. ೪. ೩೦-೦೩) ; ವ್ರೀಹಿಯಂ ನೆರವುತ್ತೊಯ್ಯನೆ ಮಾಱುಗೆಂಟವಯ ತಿಂಗಳ್ಗೆಂದಿದಂ ಮಾಱಿವಿಲ್ ಇರುತಂ ಲಬ್ಧಮನೆಟ್ಟನೆಂದುದೆ ನಯಂ. ಶ್ರೀ ೫೬೨

ಕಂದರ್ಪನಾ (ಜಿಕ್ಕಿಪು. ೬–೩೨). ೨. ಸಂಭಾವಿತ ; ಯೋಗ್ಯ : "ಅಧಿಜಾತಂ ತಾಂ ಲಬ್ಧನುಮಧಿವಿನುತನುಳಪ್ರಸೂತನಂ" (ಪಜ್ಜುರಾ. ೨೨೯–೨೩). ೪. [ಗಣಿತ] ಲೌಕಾಚಾರದ ಪ್ರಕ್ರಿಯೆಗಳ ಮೂಲಕ ಬರುವ ಉತ್ತರ, —ಮೊತ್ತ : ಅರ್ಧನವಾಂಶಂಗಳಿನಾಪುಂವನ್ನೆಱಡು ಭಾಗಂಗೊಂಡು ನೂಱಿಂತುಱುಂವೆ , . . ಪೆತ್ತಾ ಲಬ್ಧಮಂ ನೋಡೆ (ಜಾತಕ. ೬–೬) ; ಗುಣಿಸಿ ಬಂದ ಲಬ್ಧ (ಜಾಸ್ಕಕ. ೨–೬). [ಸಂ.]

ಲಬ್ಧವರ್ಣ (ನಾ). ಅಕ್ಷರಗಳನ್ನು ಕಲಿತವನು; ಪಂಡಿತ; ವಿದ್ವಾಂಸ : "ಧೀರಃ, ಧೀಮಾನ್, ಲಬ್ಧವರ್ಣಾಃ . . . ಮತಿಮಾನ್—ಈ ೨ರ ವಿದ್ವಾಂಸರ್" (ಪಣಾಶು. ೩೫–೩೬). [ಸಂ.]

ಲಬ್ಧಿ (ನಾ). ೧. ದೊರಕಿದುದು ; ಪ್ರಾಪ್ತಿ. ೨. ಗಳಿಕೆ ; ಸಂಪಾದನೆ. ೩. ಲಾಭ ; ಫಾಯಿದೆ : ಸಭೆ : ಪೊದಲುಗೆಟ್ಟಿಹ ಹರದ ಕಾಣೆ ಲಬ್ಧಯನು ಮತಿಬಿಜಿತ ಹೋಗೆಂದ (ತೊರಣ. ೬–೩–೩೬). ೪. = ಲಬ್ಧಿ ೪. ೫. [ಜೈನ] "ಮೋಕ್ಷ ಪೂರ್ವಜ್ಞಾನ" (ತಣಾಪ್ರಾ. ೯–೦೩೨ ಕನ್ನಡ): ಎಮ್ಮಂ ಕಂಡ ದೊಸಜಂ ಕರ್ಮಬಂಧಂ ಶಿಥಿಲವಾದುದೆಂದದಱ ಮನೋನಿಪ್ರಾದಮಂ ಕಳೆದರ್ಕ ಲಬ್ಧಿ ದೊರೆಕೊಂಡುದು (ತಣಾಪ್ರಾ. ೯–೦೩ ಕ) ; ಲಬ್ಧಿವಶದಿಂದೆ ಸ್ಥಸಾರಾಬ್ಧಿಯ ನಾವೀಸರೆಂದು ಬಗೆದು (ಜಾಸ್ಕಕ. ೪–೭೩). ಯಾವುದೊಂದು ವಸ್ತುವನ್ನು ಅವರೊಡನೆ ಸಂಬಂಧವಿರುವ ಯಾವುದೊಂದು ವಿಷಯದ ಸಹಾಯದಿಂದ ನಿರ್ದೇಶಿಸುವುದು ಲಬ್ಧಿಯೆನಿಸುವುದು (ಕೃಪ. VIII. ಜಾಪ್ರಾಣ್ಯಾ). ' ಪಂಚಲಬ್ಧಿ ' ಪರಾ. [ಸಂ.]

ಲಬ್ಧಿಗ್ರಹಣ (ನಾ). [ಜೈನ] ಲಬ್ಧಿಯನ್ನು ಪಡೆಯುವಿಕೆ ; ಸಮ್ಯಕ್ತ್ವ ಜ್ಞಾನಸಂಪಾದನೆ : ಜಿನದೀಕ್ಷಾಗ್ರಹಮಂ ಪಡೆದಳ್ ಲಬ್ಧಿಗ್ರಹಣದಿ ನೊಳ್ಪುವಡವುದೊಂದಚ್ಚರಿಯೇ (ತಣಾಪ್ರಾ. ೯–೨೫). [ಸಂ.]

ಲಬ್ಧಿಚತುಷ್ಕಯ (ನಾ). [ಜೈನ] ಕ್ಷಯೋಪಶಮ, ವಿಶುದ್ಧಿ, ದೇಶನಾ ಮತ್ತು ಪ್ರಾಯೋಗ್ಯಗಳೆಂಬ ನಾಲ್ಕು ಬಗೆಯ ಲಬ್ಧಿಗಳು : ಅವು ಲಬ್ಧಿಚತುಷ್ಕಯಮೆಂಬನಿನ್ನುದ ದುರಿತವಶದೆ ಬಹುವಿಧದುಃಖಾರ್ಣವ ದೊಳಗಟ್ಟಿರ್ದೆ (ಜಾಪ್ರಾಣ್ಯಾ. ೬೭). [ಸಂ.]

ಲಬ್ಧಿತ್ರಯ (ನಾ). [ಜೈನ] ಕಾಲ, ಕರಣ ಮತ್ತು ಉಪಶಮ ಎಂಬ ಮೂರು ಬಗೆಯ ಲಬ್ಧಿಗಳು : ಅಂತು ತನಗೆ ಕಾಲಲಬ್ಧಿಯುಂ ಕರಣಲಬ್ಧಿಯು ಮುಪಶಮಲಬ್ಧಿಯುಮೆಂಬ ಲಬ್ಧಿತ್ರಯಂ ದೊರೆಕೊಳೆ (ಜಾಪ್ರಾ. ೬–೦ ಪ). [ಸಂ.]

ಲಬ್ಧಿಬಧಿರಸಮ (ನಾ). [ಜೈನ] ಹುಟ್ಟುಕಿವುಡನಂತೆ ಮತ್ತೇನನ್ನೂ ಕೇಳದೆ ಜಿನೋಪದಿಷ್ಟತತ್ವವನ್ನು ಮಾತ್ರ ವಿಕಚಿತ್ತದಿಂದ ಗ್ರಹಣ ಮಾಡುವವನು : ಲಬ್ಧಬಧಿರನಮನೆಂದೊಂ ನುಜುಂಗಿ ಕವಿಡನಂತೆ ತೋಟಿಗೆಯ್ಮದೆ ತನ್ನ ಮನೋಫಲಿತಮಪ್ಪರ್ಥಮಂ ಕೇಳ್ದು ಕೈಕೊಳ್ದುದಂ (ಜಾಪ್ರಾಣ್ಯಾ. ೬). [ಸಂ.]

ಲಬ್ಧಿಬುದ್ಧ (ನಾ). [ಜೈನ] ಜ್ಞಾನಪ್ರಾಪ್ತನಾದವನು; ಸಮ್ಯಕ್‌ಜ್ಞಾನಿ : ಅನುಕೂಲಕನುಮನಾಲಸ್ಯನುವನವಕಾರ್ಯನುಂ ಲಬ್ಧಿಬುದ್ಧಸದೃಶನುಂ (ಜಾಪ್ರಾ. ೦೦–೬ ಪ). [ಸಂ.]

ಲಬ್ಧೋಪದೇಶ (ನಾ). ಉಪದೇಶ ಹೊಂದಿದವನು : ವೀರ ಪೋಗಿ ಕಾಳ್ಗೆಜಗಲೊಡಂ ಕೇವಲಜ್ಞಾನವಕ್ಕುಮೆಂದು ಬೆಸಗೊಡೆ ಲಬ್ಧೋಪದೇಶ ದೇರ ಗಿ . . . ಬಂದೆಱಗಿ (ಜಾಪ್ರಾ. ೦೯–೦೩೬ ಪ). [ಸಂ.]

ಲಬ್ಬಿ ' ಲಬ್ಬೆ ' ನೋ.

ಲಬ್ಬೆ, ಲಬ್ಬಿ (ನಾ). ಮೂಲತಃ ಅರಬ್ಬನಾಗಿದ್ದು ತಮಿಳು ಮಾತನಾಡುವ ಮಹಮದೀಯ ವ್ಯಕ್ತಿ ; "ಮುಸಲ್ಮಾನರ ಒಂದು ಪಂಗಡ ; ತೊಗಲು ಪದಮಾಡುವವರು" (ಜಾಪ್ರಾಣ್ಯಾ. ೮೨) : ಅಲ್ಲಿರುವ ಮಾಪಿಳ್ಳೆ ಲಬ್ಬೆ ಬ್ಯಾರಿ ಮೊದಲಾದ ಮಲೆಯಾಳಿಗಳು ಉಡುವಂತಿ . . . ಅಷ್ಟಪಂಚೆ ಸುತ್ತಿ. ಉದ್ದುದ್ದ ಬನೀನು ಹಾಕಿದ್ದರು (ಪುರಪು. ೧೪೫). ಲಬ್ಬಿ : ಕ್ರಿ.ಶ. ೨೪ನೆಯ ಶತಮಾನದ ಹೊತ್ತಿಗೆ ಮುಸ್ಲಿಮರು ಹೆಚ್ಚು ಸಂಖ್ಯೆಯಲ್ಲಿ ಮಲಬಾರಿನಲ್ಲಿ ನೆಲೆಸಿದ್ದರೆಂದು ಮಾಪ್ಪಾಗಳಲ್ಲೂ ಲಬ್ಬಿಗಳಲ್ಲೂ ವಿಶಿಷ್ಟವಿದೆ (ಜಾಕರ. ೬೫೩). [?./ ತಮಿ. ಲಪ್ಪೈ ; ತುಳು. ಲಬ್ಬೆ ; ತೆಲು. ಲಬ್ಬಿ]

ಲಬ್ಬೈ (ನಾ). ಕೂಗು ; ಬೊಬ್ಬೆ : ಈ ಭಯಂಕರದೃಶ್ಯವನ್ನು ನೋಡಿ ಹೌಹಾರಿ ಒಂದೇ ಸಮನೇ ಲಬ್ಬೆ ಇಡತೊಡಗಿದನು (ಕಪಂ. ೬೬). 'ಲಬಲಬ' ಪರಾ. [?]

ಲಭಿಸು (ಕ್ರಿ). ಪ್ರಾಪ್ತವಾಗು; ಉಂಟಾಗು : ಕಾಲಕಾಲದಲ್ಲಿ ನೆನದಕಾರ್ಯ ಲಭಿಸುವದಕ್ಕೆ ಪ್ರತ್ಯಕ್ಷ ಪರೋಕ್ಷಗಳಲ್ಲಿ ನಿದರ್ಶನ ಉಂಟಾಗುತ್ತಿರಲು (ಪಾಗಂಧಿ. ೨೫೦–೬) ; ಸೌಖ್ಯಂ ಲಭಿಸಿತೆಂದರ್ಕಹದಿನುರಿದದ್ದು, ಕಾಳೆಗಂಗೊಡೆ ಮಸಂಮೊಡಿ (ಪಚ್ಚಾಂಗ. ೬೪–೨೦೪). [ಲಭನ್ + — ಇಸು]

ಲಭ್ಯ (ಗು). ೧. ಹೊಂದಬಹುದಾದ ; ಪಡೆಯಬಹುದಾದ. ೨. ಉಚಿತವಾದ ; ತಕ್ಕುದಾದ. ೩. ತಿಳಿಯಲಾಗುವ ; ಗ್ರಹಿಸಲಾಗುವ. (ನಾ). ೪. ದೊರೆತುದು ; ಪ್ರಾಪ್ತಿ : ಯಾವ ಸಂಖ್ಯೆಯನೇನಾ ಸೊನ್ನೆಯಿಂ ಗುಣಿಸಿದರೆ ಲಭ್ಯ ಸೊನ್ನೆ (ಪಾಲಸಾ. ೪೮–೯). ೫. ದೊರಕು ವಂಥವನು : ನಿಶ್ಚಲವಾದ ಅಪೇಕ್ಷೆಯಿಂದ ಯತ್ನ ಪಡಿದರೆ ಎಂತಹ ಕನಿಷ್ಠಜೀವಕ್ಕೂ ದೇವನು ಲಭ್ಯನೆಂಬುದನ್ನು ನಾವು ಮನಗಾಣಬೇಕು (ಧರ್ಮಾಸಾ. ೧೩). ೬. ಅದೃಷ್ಟ ; ಸಂತೋಷಪಡುವುದಕ್ಕೆ ಅವನಿಗೆ ಲಭ್ಯವಿಲ್ಲ (ಕಪಂ). [ಸಂ.]

ಲಮಾಣಿ ' ಲಂಬಾಡಿ ' ನೋ.

ಲಯ (ನಾ). ೧. ಅಂಟಿಕೊಂಡಿರುವುದು ; ಅನುಸರಿಸುವುದು. ೨. ಅಡಗುವಿಕೆ ; ಗುಪ್ತವಾಗಿರುವಿಕೆ. ೩. ಹಾಳು ; ಕೇಡು ; ನಾಶ : ಯುಂಡಿಲ್ಲಿರಂ ಕೊಟ್ಟ ನ್ನಾಯ ಬಲದೊಳ್ ತನಗೆ ಲಯಮಿಲ್ಲದುದನಜಿದು ಮೇಗಿಲ್ಲದ ಗೊಡ್ಡಾಟಮಾಡಲ್ ಬಗೆದು(ಪಂಕಣಾ. ೬–೪ ಕ); ಈ ಹೊತ್ತಿನಲಿ ಧರ್ಮಸ್ಥಿತಿಗೆ ಲಯವಿಲ್ಲ (ಕಾಬ್ಧಿಕ. ೦೩–೨). ೪. ಪ್ರಳಯ : ರಾಗ ರಂಜನೆಯ ಉತ್ಪತ್ತಿ ಸ್ಥಿತಿ ಲಯ ನಿನ್ನೆಂದಾದುವು (ಬಸವ. ೪೬೬); ಪರಿ ಹರ ನಿನಭವಸಾರಾಬ್ಧಿಯಿಂ ಲಯ ಸೃಷ್ಟ್ಯಗ್ಗೆಯುವರು (ಗಗಣಾ. ೦೨–೨೪); ಲಯವಾದ ಮೇಲೆ ಭಯವೇನು ? (ಗಾಪ). ೫. ತನ್ಮಯತೆ; ಲೀನವಾಗುವಿಕೆ; ತಾದಾತ್ಮ್ಯ : ತೇಗೆವ್ಮ ಲಯ ಬೇಕು ಶಿವನ ನೆನವಲ್ಲಿ (ಸಿದ್ಧಿ. ೦–೩೭); ನಾವು ಮಾಡುವ ಕೆಲಸ ಕಲೆಯಾಗಬೇಕಾದರೆ ಅದರಲ್ಲಿ ಮುಖ್ಯವಾದ ಒಂದು ವಿಶಿಷ್ಟಧರ್ಮವಿರಬೇಕು. ಅದನ್ನು ನಾವು ಲಯವೆಂದು ಕರೆಯಬಹುದು (ಜಾಕರ. ೯). ೬. ವಿಶ್ರಮಿಸುವ ಸ್ಥಳ ; ತಂಗುದಾಣ. ೭. ಒರಗುವಿಕೆ ; ನಿದ್ರಿಸುವಿಕೆ : ಲಯವೆಂದರೆ ನಿದ್ರೆಬಾಹಣ (ಜಾಸ್ಕಕ. ೩೪–೦). ೮. ಗತಿ ; ಗಮನ : ಲಯದಿಂ ಮೆಲ್ಲಂ ಪೆಡಂಗಂ ಪಡೆವ ತುರೆಗದಿಂ (ಜಾಪು. ೦೦–೪೬). ೯. [ಸಂಗೀತ] ತಾಳ-ತಾಳಗಳ ನಡುವೆ ಬರುವ ಸಮಾನವಾದ ಕಾಲಪ್ರಮಾಣ: ದ್ರುತ, ಮಧ್ಯಮ ಮತ್ತು ವಿಲಂಬಿತ ಎಂದು ಇವು ಮೂರು ಬಗೆ : " ಹೊತ್ತು ಕ್ರಿಯಾಪ್ರಮಾಣ ತಾಳಮೆನಿಕು ಸಮುವೆತ್ತಲ್ಲಿ ಲಯಮೆನಿಕ್ಕು " (ಕೃಚರಣ. ೨೫–೬): ಒರೊತ್ತಂ ನಡೆಯಿಸುವುದದೊಂದೊಂದಱ ಲಯಕ್ಕೆ ತೆಱನಾಡುವುದೇನೆಂದೇಂ ಬಣ್ಣಿಸುವುದೊ ಸುರಸೌಂದರಿಯ ವಿಲಾಸ ವಿಭ್ರಮಭ್ರೂಲತೆಯಾ (ಜಾಕೃ. ೪–೪೩); ಸಂಗೀತದ ಆಧಾರಸ್ತಂಭಗಳು ಸಾಪ ಮತ್ತು ಲಯ (ಜಾರದ. ೪೪೩). ೧೦. [ಛಂದ] ಛಂದೋಬದ್ಧವಾದ ಗಣಗಳ ನಡುವೆ ಬರುವ ಸಮಾನವಾದ ಕಾಲಪ್ರಮಾಣದ ನಡೆ : ಛಂದಸ್ಸಿನ ಜೀವಾಳ ಲಯ ; ಲಯವನ್ನು ರೂಪಿಸತಕ್ಕವ

ಗಣಗಳು (ಸಪ್ತಶತೀ. ೦೭೬). ೧೧. = ಲಯಯೋಗ : ಮಂತ್ರ ಲಯ ಹಠ ರಾಜವೆಂಬ ನಾಲ್ಕು ಯೋಗತೇದಂಗಳು (ಪಶ್ಚಿ. ೩೨೪); 'ಯೋಗ ಮಾರ್ಗದ ಪ್ರಭೇದಗಳು ಹತ್ತು. ಮಂತ್ರ, ಲಯ, ರಾಜ ಎಂದು ನಾಲ್ಕು ಭಾಗಯಾಗಿವೆ (ಶಾಡಿ. ೦೭೭). [ಸಂ.]

ಲಯಂಗಿಡು (ಕ್ರಿ). [ಸಂಗೀತ] ಕಾಲಪ್ರಮಾಣವು ಕೆಡು : ಲಯಂಗಿಡ ದೊತನುಲಿವಾವು ಬೆರಲ ಕೊನಲ ನಾಲಗೆಮುರಿಗಳ್ (ಶಾಕೃಶಾ. ೬೭೮ ಷಡ್ಪ್ರ). [ಲಯ + ಕಿಡು (< ಕೆಡು)]

ಲಯಕರ್ತೃ (ನಾ). ನಾಶವನ್ನುಂಟುಮಾಡುವವನು ; ಪ್ರಳಯಂಕಾರಿ: ಲಯಕರ್ತೃ ಹರನೆಂಬು ನುತಿಪ ವಾದಿಗಳನಸ್ಯನಮದ ಬಾಧಿಸುತ (ಅಭಾಚ. ೦-೦-೬೭); ಈಶ್ವರನು ಲಯಕರ್ತೃವಾದುದರಿಂದ ಈ ರುದ್ರದೇವರಿಂದೊಗೆದ ಈ ಜ್ವರವು ಕಾಲಮೃತ್ಯುರೂಪವಾಗಿ ಒಪ್ಪುತ್ತದೆ (ಸಹ್ಯ. ೬೮). [ಸಂ.]

ಲಯಕರ್ಮಿ (ನಾ). ಹಾಳುಮಾಡುವವನು ; ನಾಶಗೊಳಿಸುವವನು : ಕಾಣ್. ಗಿರಿಜೆ . . . ಕುಂಭಕರ್ಣ ಮಹೋಗ್ರಸಂಗಾಪ್ರಮುಖಂ. ಪ್ರಿಯಂ ಲಯಮೂರ್ತಿಗನಿವಂ ಲಯಕರ್ಮಿ (ಕ್ರಿರಾಪು. ೬೭೯-೭೭). [ಸಂ. ಲಯಕರ್ಮಿನ್]

ಲಯಕಾಲ (ನಾ). ಪ್ರಳಯಕಾಲ : ನಿನ್ನಂ ಪಿಡಿಂಬಾಂತಕಂ ಲಯ ಕಾಲಾಂತಕನಂತೆ ಕೊಲ್ಲದಿರಂ (ಗಾಡಾಯು. ೪-೬೬); ಮಾಧವ ಸೂತ್ರದ ಯಂತ್ರವಿದು ಲಯಕಾಲ ಸಮಗೆಂದ (ಕೃಜ್ಞಾಕ್ರಿ. ೦೬-೭೨). [ಸಂ.]

ಲಯಕೃತಾಂತ (ನಾ). ಪ್ರಳಯಕಾಲದ ಯಮ : ಕುಂಭಕರ್ಣ ಸ್ಫೋದುವೆನಲದ ಲಯಕೃತಾಂತನ ಕ್ರೂರಪ್ರಾವಾರ (ಕುಚ್ಚಾ. ೫-೦೬). [ಸಂ.]

ಲಯಗತಿ (ನಾ). ೧. ಒಳ್ಳೆಯ ನಡೆಗೆ.—ಗಮನ : ತರದೊಳುಡುಗಿರ್ದ ಬಾಲಂ ಕೊರಲುನ್ನತವಕ್ಷದುಸಿವ ಲಯಗತಿ ತುಧದಂ (ಶ್ರೀಪ. ೬-೬೪). ೨. ಹಾಡುಗಾರಿಕೆಯ ಲಯ : ಕ್ರೀಡಾಸರಸಿಯೊಳಿಳಿಗಳ್ ಪಾಡುವ ಲಯಗತಿಗೆ ಕೃತಕಗಿನಿಯೊಳ್ ನವಿಲೆಳ್ದಾಡುವುವಂ ಪಥಿಕರ್ ನಡ ನೋಡುವರ್ (ಶಂಗಾಪ್ರ. ೨-೨೨). [ಸಂ.]

ಲಯಗ್ರಾಹಿ (ನಾ). [ಛಂದ] ಒಂದು ಅಕ್ಷರವೃತ್ತದ ಹೆಸರು; 'ಭಜಸನಭಜಸನಭಯ' ಎಂಬ ಗಣವಿನ್ಯಾಸವಿದ್ದು ೧೧. ೧೮ ಮತ್ತು ೨೬ನೆಯ ಅಕ್ಷರಗಳ ಸ್ಥಾನವಲ್ಲಿ ದ್ವಿತೀಯಾಕ್ಷರಪ್ರಾಸ ಪುನರಾವರ್ತಸುತ್ತದೆ : ವ್ಯೋಮಂ ನಭೋಕಾಪಮಾಶವ್ವಯುಂಗಳ್ ತಾಮೊಂದಿರಲ್ಕಾ ಸಂಭೋಜನೇತ್ರ ನಾಮಂ ಲಯಗ್ರಾಹಿಯೆಂದಾಯ್ತು (ಲಂಡೋಷ್ಟಲ. ೨-೦೨೪). [ಸಂ. ಲಯಗ್ರಾಹಿನ್]

ಲಯತ್ರಯ (ನಾ). [ಸಂಗೀತ] ಸಂಗೀತ, ನಾಟ್ಯಗಳಲ್ಲಿ ಮತ್ತು ವಾದ್ಯಗಳನ್ನು ನುಡಿಸುವಲ್ಲಿ ಬರುವ ದ್ರುತ, ವಿಲಂಬಿತ ಮತ್ತು ಮಧ್ಯಮವೆಂಬ ಮೂರು ಲಯಗಳು : ಹೃದ್ಯವಾದ್ಯವಿಶೇಷಂಗಳೊಳ್ . . . ದ್ರುತವಿಲಂಬಿತಮಧ್ಯಮಮೆಂಬ ಲಯತ್ರಯಮೊಳಂ . . . ನೆಜ್ದು (ಶಾಪ್ರ. ೫-೨೨ ಪ). [ಸಂ.]

ಲಯದೂರ (ನಾ). ನಾಶವಿಲ್ಲದವನು ; ಪ್ರಳಯಕ್ಕೆ ದೂರವಾದವನು: ಲಯದೂರಂಗೆ ಲಯಾನ್ವಿತರ್ ಸತತ . . . ತೋಷಮಂ ಪೇಳ್ (ಧ್ಯಸಂ. ೬೬-೭೯). [ಸಂ.]

ಲಯನ (ನಾ). ೧. ಅಂಟಿಕೊಂಡಿರುವುದು ; ಹೊಂದಿಕೊಂಡಿರುವುದು. ೨. ಒರಗಿಕೊಳ್ಳುವಿಕೆ ; ವಿಶ್ರಾಂತಿ. ೩. ವಿಶ್ರಮಿಸುವ ಸ್ಥಳ : ತಂಗುದಾಣ. [ಸಂ.]

ಲಯಬದ್ಧ (ಗು). ೧. ಲಯಕ್ಕೆ ಹೊಂದಿಕೊಂಡಿರುವ : ಅದು ಲಯಬದ್ಧ ಆವಿಷ್ಕಾರ ಅಥವಾ ಅಭಿವ್ಯಕ್ತಿ (ಕೃಗಾ. ೦೦೩). (ನಾ). ೨. ಲಯಕ್ಕೆ ಹೊಂದಿಕೊಂಡಿರುವುದು : ಸಂಗೀತರಚನೆಗಳು ಒಂದು ರಾಗದ ಕೆಲವು ಅಂಶಗಳನ್ನು ಲಯಬದ್ಧವಾಗಿ ತೋರುತ್ತವೆ (ಸಂಗೀಪ್ರ. ೨). [ಸಂ.]

ಲಯಮಿತ್ತು (ನಾ). ಪ್ರಳಯಕಾಲದ ಮೃತ್ಯು ; ಲಯಮಿತ್ತು ಮೊಗ ನೆಗಪಿದನೊ ಮಾದದುಬ್ಬಿನಲಿ (ಕೊಪಾಲಾ. ೪-೬-೨೦). [ಲಯ + ಮಿತ್ತು (<ಮಿಬ್ಬು)]

ಲಯಮೂರ್ತಿ (ನಾ). ಪ್ರಳಯವನ್ನುಂಟುಮಾಡುವವನು : ಶಿವ : ಕಾಣ್. ಗಿರಿಜೆ . . . ಕುಂಭಕರ್ಣಮಹೋಗ್ರಸಂಗ್ರಾಮಂ. ಪ್ರಿಯಂ ಲಯಮೂರ್ತಿಗನಿವಂ ಲಯಕರ್ಮಿ (ಕ್ರಿರಾಪು. ೬೭೯-೭೭). [ಸಂ.]

ಲಯಯೋಗ (ನಾ). [ಯೋಗ] ಮಂತ್ರಯೋಗ, ಹಠಯೋಗ, ರಾಜಯೋಗ ಮತ್ತು ಲಯಯೋಗಗಳೆಂಬ ನಾಲ್ಕು ವಿಧವಾದ ಯೋಗಗಳಲ್ಲಿ ಒಂದು ; ಸಾಂಪ್ರದಾಯಿಕವಾದ ಯೋಗಸಾಧನೆಗಳಲ್ಲಿ ಮನಸ್ಸನ್ನು ಲಯಗೊಳಿಸುವಿಕೆ ; ಮನಸ್ಸು ಮತ್ತು ಪ್ರಾಣವಾಯುಗಳು ಪರಸ್ಪರ ಲೀನವಾಗುವುದು : ಮಂತ್ರಯೋಗ ಹಠಯೋಗ ಲಯಯೋಗ ಜ್ಞಾನಯೋಗ ಇವು ಪೊದಲಾದ ಎಲ್ಲ ಯೋಗ ವನಱಿದು (ಷಷ್ಠಸ. ೦೦೪-೨) ; ಈಡಾ ಪಿಂಗಳೆಯಲ್ಲಿ ತುಂಬಿ ಸೂಸುವ ಹಂಸರೂಪವಾದ ಪ್ರಕೃತಿವ್ಯಾಪಾರವಾಯುವನು ಸೋಹಂಭಾವದಿಂದೆ . . . ಪುನೋಮಮರುತಂಗಳೊಳಗೂಡಿ ಲಯಿಸುವುದೆ ಲಯಯೋಗ (ಶಿಸಂಪ್ರ. ೨೦೩-೩೩). [ಸಂ.]

ಲಯಯೋಗಿ (ನಾ). ಲಯಯೋಗವನ್ನು ಆಚರಿಸುವವನು : ಲಯಯೋಗಿಗಳ ರೀತಿ ವೇರೆ. ಇವರು ಅಲ್ಪತ್ಕಪ್ರರಲ್ಲ (ಪಾಚಾಪ್ರ. ೦೦). [ಸಂ. ಲಯಯೋಗಿನ್]

ಲಯವಡಿಸು (ಕ್ರಿ). ಪ್ರಳಯವನ್ನುಂಟುಮಾಡು : ಸಯನಯುಗದಿಂ ಜಗವ ಪೊರದು, ನಿಟಿಲಾಕ್ಷಿಯಿಂ ಲಯವಡಿಸುವುದದೇನು ಶಿವಯೋಗಲೀಲೆ? (ಪಂಗಾಚ. ೬೦೩). [ಲಯವಡು + — ಇಸು]

ಲಯವಡು (ಕ್ರಿ). ನಾಶವಾಗು ; ಪ್ರಳಯವಾಗು : ' ಲಯವಡಿಸು ಪರಾ. [ಲಯ + ಪಡು]

ಲಯವಾದ್ಯ (ನಾ). [ಸಂಗೀತ] ಲಯಕ್ಕಾಗಿ ಬಳಸುವ ವಾದ್ಯ : "ಭೂಮಿದುಂದುಭಿ" ಎಂಬ ಲಯವಾದ್ಯವನ್ನು ಅವರು ಸೃಷ್ಟಿಸಿಕೊಂಡರೆಂದು ತಿಳಿದು ಬಂದಿದೆ (ಸಂಗೀಪ್ರ. ೨೨). [ಸಂ.]

ಲಯವಿನ್ಯಾಸ (ನಾ). [ಸಂಗೀತ] ಲಯದ ಕ್ರಮ, —ಗತಿ : ಈ ತೊಡಕಾದ ಕಾಲದಲ್ಲಿ ಪಲ್ಲವಿಯನ್ನು ಹಾಡುವ ಯಾವ ಗಾಯಕನಿಗೇ ಆಗಲಿ ಲಯವಿನ್ಯಾಸದಲ್ಲಿ ಮಹತ್ತರ ಪ್ರತಿಭೆಯಿರಲೇ ಬೇಕು (ಸಂಗೀಪ್ರ. ೬). [ಸಂ.]

ಲಯವಿಹೀನ (ನಾ). ನಾಶವಿಲ್ಲದವನು ; ಚ್ಯುತಿಯಿಲ್ಲದವನು : ಜಯ ಜಗತ್ಪ್ರಯನಾಥ . . . ಲಯವಿಹೀನ ಮಹೇಶ (ಶಾಪ್ರ. ೬-೦೬). [ಸಂ.]

ಲಯಸಮಯ (ನಾ). ಪ್ರಳಯಕಾಲ : "ಲಯಸಮಯಂ . . . ಮಹಾ ಪ್ರಳಯವೆಂಬುದದು ಸಂವರ್ತಂ" (ಶಾಸ್ಕೃಪ್ರ. ೦೬-೦೭) ; ಲಯಸಮಯಂ ಜಗಕ್ಕೆ ಕೆಜಕಾವುದೊ ರಾವಣಸುಗ್ರಕೋಪಮನ್ನೆಯ ವಿಲಯಾನಿಲಂ ಮುಳಿಸಿ ಕಲ್ಪವಿರಾವಂ (ಪಂಗಾಚ. ೦೪-೦೬೦) ; ಲಯಸಮಯತಾಂಡವಪ್ರಳಯ ನಾಟ್ಯಾಟಂಕಗಳ್ ಕುದಿದು ಘೀಂಕರಿಸಿ ಗದ್ಗದಿಸಿದುವು ಚಕಿತ ದಿಗುದಂತಿ ! (ಕ್ರಿರಾಪು. ೭೭೬-೪೪೯). [ಸಂ.]

ಲಯಾಂತಕ (ಗು). ೧. ಪ್ರಳಯಕಾಲದ : ಲಯಾಂತಕಘೋಷಭೀಷಣಾಂ ಪುರದೊಳಗುನ್ಮೆದತ್ತು ಭಯವಿಹ್ವಲವೌರ್ಕೃತಂ ಮಹಾರುತಂ (ಸಂಪ್ರತಿ. ೯-೮೩). (ನಾ). ೨. ಪ್ರಳಯಕಾಲದ ಯಮ : ಪೊಬ್ಬಿ ಲಯಾಂತಕ ತ್ರಿಶೂಲೋಪಮ ಭೀಷಣಭ್ರುಕುಟಿ ಮುನ್ನಮ ರೌದ್ರಗದಾಯುಧಂಬರಂ ಪೋಪ ಭುಜಾಗ್ರಗಳಂ ರಿವುಗಳ ಗ್ರಹ ಮಾದುದು

ಭೀಮಸೇನನಾ (ಕಂಪ್ರಾ. ೭-೬), [ಸಂ.]

ಲಯಾಗ್ನಿ (ನಾ)· ಪ್ರಳಯಾಗ್ನಿ : ಕಾನಪದುರ್ಗಕ್ಕೆ ಮಹಾದವಾಗ್ನಿ ಜಲದುರ್ಗಕ್ಕುರ್ವಿದೌರ್ವಾಗ್ನಿ ಧಾನ್ವನದುರ್ಗಕ್ಕೆ ಬೃಹಲ್ಲಯಾಗ್ನಿಯೆನೆ·· ... ನ್ಪಪಸುತಂ ವಿಕ್ರಾಂತವುಂ ಕೋಱದಂ (ಕೃಷ್ಣ· ೩-೫೦); ಮಗ್ನನಾದನೆ ಕಪಿಂದ್ರಂ ಮಹಾಸಂದಲಯಾಗ್ನಿಯೊಳ್ ? (ಕ್ರಿಯಾಪ್ರ. ೬೯೦-೭೮). [ಸಂ.]

ಲಯಿಸು (ಕ್ರಿ)· ೧· ನಾಶವಾಡು : ಪೊಲಬುಲ ಮುನ್ನೂಱುಪದ್ಮವ ... ಲಯಿಸಿದನೆಂದು ರಘುರಾಮ (ಕಾಶಾ· ೩೭ ೫೩೫); ಇನಿತಿಲ್ಲದಂತೆ ಲಯಿಸುವ ತೆಱನನು ... ಒರವೆನಾಲಿಸು (ಪರಿಭಾ· ೩-೦೬-೦). ೨. ಲೀನವಾಗು ; ಮಗ್ನವಾಗು ; ತಲ್ಲೀನವಾಗು : ಅಜ್ಞಾನವೆಂಬ ಬೀಜದಲ್ಲಿ ಮನಸ್ಸು ಲಯಿಸುತ್ತದೆ (ಜಾಕ. ೨೩೬) : ಈ ಚಿತ್ತವೃತ್ತಿಗಳು ಅಥವಾ ಭಾವಗಳು ಆತನ ಆತ್ಮ ಅಥವಾ ಹೃದಯಸಮುದ್ರದಲ್ಲಿದ್ದು ಅಲ್ಲೇ ಲಯಿಸಿ ಹೋಗುವ ತರಂಗಗಳು (ಶಾವೃತ್ತಿ· ೦೦). [ಲಯ + – ಇಸು]

ಲಯೋತ್ಕರ (ನಾ)· [ಛಂದ] ಮಾತ್ರಾ — ವರ್ಣ ಮಿಶ್ರವೃತ್ತಗಳಲ್ಲಿ ಒಂದು ; ಇದರಲ್ಲಿ ಕೆಲವು ಪ್ರಭೇದಗಳು ಇವೆ. ಉತ್ಸವವೃತ್ತ ಮತ್ತು ರಮಾವೃತ್ತದ ಪಾದಗಳನ್ನು ಬೆರಸಿ ಇದರ ಪ್ರಭೇದಗಳನ್ನು ಕಲ್ಪಿಸಲಾಗುತ್ತದೆ. ಜಯಕೀರ್ತಿಯ ಲಯೋತ್ಕರವೃತ್ತದ ಮೊದಲನೆಯ ಪ್ರಭೇದದಲ್ಲಿ ಉತ್ಸವದ ಒಂದು ಪಾದ+ರಮಾದ ಒಂದು ಪಾದ ಬರುತ್ತದೆ. ಉದಾಹರಣೆಗೆ — ೨ ಗಲ/ನಗಣ. ಗ+ಜಗಣ. ೨ ಗಲ/ನಗಣ. ಗ· [ಸಂ.]

ಲರಿಲರಿ (ನಾ). ಒಂದು ಅನುಕರಣ ಶಬ್ದ : ತಿಂದರು ಶವಗಳ ಲರಿಲರಿ ಕಡಿಮ (ಜಾಂಷಾ. ೭೦-೬). [ಸಂ.]

ಲಲಂತಿಕೆ (ನಾ). ಒಂದು ಬಗೆಯ ಸರ : ಉದ್ದವಾಗಿರುವ ಕಂಠಹಾರ: "ಏಕಾವಳಿ ಸರಿಗೆ ಸುವರ್ಣಕಳಿತಂ ಲಂಬಾಣಂ ಲಲಂತಿಕೆ ಮುಕ್ತಾಸೀಕಂ. . . ನಕ್ಷತ್ರಮಾಲೆಯೆನಿಕುಂ ಪೆಸರಿಂ" (ಪಕ್ಷ್ಮ· ೩೭-೨). [ಸಂ. ಲಲಂತಿಕಾ]

ಲಲನ (ನಾ). ೧. ಆಟವಾಡುವುದು; ವಿನೋದವಾಡುವುದು ; ಕ್ರೀಡೆ. ೨. ನಾಲಗೆಯನ್ನು ಚಾಚುವುದು.— ಜೋಲುಬಿಡುವುದು. ೩. ಗಂಡ ; ಪತಿ : ಎನ್ನ ಲಲನನಂ ಪಶ್ಚಿಮಸಮುದ್ರಕ್ಕಳಿವಿರಿ ನೀವೆನುತ ದಿನಪತಿ ಸಲೆ ಕರಂ ಮುಗಿದಿಹಪುದು ಕರಂ ಮುಗಿದವದ್ಯಾಳ (ಶಪು· ೦೦-೧೩) ; ಲಲನನಂ ತೊಜೆದು ಬಹುಬುದ್ಧಿಯಿಂದಿರ್ಪಗುಜ್ಜಲ ಕುಂಭದೊಳು ಸೂಳೆ (ಜಕ್ಕಣ· ೨-೨೦-೨೨). [ಸಂ.]

ಲಲನೆ, ಲಳನೆ (ನಾ)· ೧. ಹೆಂಗಸು ; ಹೆಣ್ಣು : ಸ್ತ್ರೀ : "ಪ್ರಮದ ನಿತಂದಿನಿ . . . ಮನೋರಮೆ ಲಲನೆ ಕಾಂತೆ ಎಂದಿಂತು ಮತ್ತಮುಬಾ ವಿಶೇಷ [ಮುಂ ಕಾಮ]ಕ್ಕುಂ" (ಪಕ್ಷ್ಮ· ೩೨-೨) ; ಲಲಪಾಮುಖೇಂದು ಲಾವಣ್ಯಲೀಲೆಯುಂ ಪಡವ ಬ್ಜಾದಿಂ ಕಂಪಿಂದೇನಲೆದುದೊ ವೈತಿಕದುಂತಿರ ಕಪುಮಾಕ್ಷಿಯಮಂ ಕಾಶ್ಮೀರೆಂ (ಆಪ್ತ· ೦೦-೦೨೧) ; ಲಲನೆಯ ಬಾಸೆಯ ಕರ್ಪೆಂ ಗೆಲೆವಂದುದೊ ವಿಷ್ಣು ಗರ್ಭದೊಳ್ಕಲಸರೊಡಾ (ಅಜಂಪ್ರ· ೦೨-೩೪); ಈ ಲಲನೆಯ ಸೌಂದರ್ಯಂ ಸೋಲಿಸಿಮದು ಗಡ ಮದೀಯ ಮನಸಂ (ಇಷಕ್ಷ. ೭-೭೦). ೨. ಹೆಂಡತಿ ; ಪತ್ನಿ : ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದನೆಮ್ಮ (ಬಸವ· ೨೩೯); ಮಲುಹಣಂ ಕಾಮುಬಾಣದಿ ನೊಂದು . . . ಲಲನೆಯಂ ಕಾಣದಲ್ಲದೆ ಊಳಿಯನೆಂದವಳ ಗೃಹಕೆ ಬರುತಿರಲು (ಪ್ರಾಕಣ· ೪-೨೯). ೩. ನಾಲಗೆ. ಲಳನೆ : ೧. ಲಳನಾ ಭೂಷಣೀಕೆ ಭೂಷಾಕೆ ಭೂಪಾಲಕ್ಷ್ಮಿಯಂ ಮಾಬ್ಬುದು (ಪಗೀ· ೦೦-೭೦೩); ಲಳ[ಕಾಂ· ಳ]ನೆ ಮನೋಭವಾಂಬುಧಿಯ ಮಾಬ್ಕೆಯಪ್ಪೋಲ್ಪದಾಶ್ರ ... ರತಾಂತಮಂತಲಘುತರೋಪಕಾಂತ ಘನಾಲದ ಲೀಲೆಯು ಸಾಂತುದಾವಗಾ (ಜಾಕ್ಕಣ್ಣ· ೦೦-೭೭) : ಲಳನಾಧಮ್ಮಿಲ್ಲಮಾರಾತುಸುಪಿಲು ವರಿಮಳಾಮೋದಿ . . . ಸಮೀರಂ (ಕೃಷ್ಣ· ೯-೦೦೬). [ಸಂ. ಲಲಾ]

ಲಲಾಟ (ನಾ)· ೧. ಹಣೆ ; ನೊಸಲು : "ನಿಟಿಲಂ ಭಾಳಮಳಿಕಮಜ್ಞಗೆ ಲಲಾಟಂ" (ಪಕ್ಷ್ಮ· ೭೦-೦೬) ; ಸಹಜಮನೋಜನ ಲಲಾಟ[ಂ] ಪಟ್ಟಂ ಗಟ್ಟಿದ ನೊಸಲ್ಗೆ ಲಕ್ಷಣಮನಱಸಲ್ತೇಡಲಿಂತುಂಡುದುಮಾ (ಪಂಪಭಾ· ೨-೬೧೫); ಲಲಾಟದಲ್ಲಿ ವಿಭೂತಿಯ ಬರೆಯಲಿಕೆ ಪಾಪ ಪಲ್ಲಟವಾಗದೆ (ಬಸವ· ೭೩) ; ಲಿಪಿತ ಲಲಾಟದೊಳಿರದಿರಲೆಗ್ಗೆವೆ ಎಮ್ಮ ಲಗ್ನಾಟವ ಹೊಡವೆ (ತಿಂಶಾಪ. ೦೭೦-೫೦). ೨. [ಕಾಮಶಾ] ಆಲಿಂಗನಗಳಲ್ಲಿ ಒಂದು ಬಗೆ : ಸ್ವೀಯ ಮುಖದಿಂ ತನ್ನ ಮುಖಿಪುಂ ಕಂಗಳಗೆ ಕಂಗಳಂ ಹಣೆಗೆ ಹಣೆಯಿಂದೊತ್ತರಿಸುತ್ತ ಆಲಿಂಗನಂಗಯ್ವುದು ಇದು ಲಲಾಟವೆಂಬಾಲಿಂಗನ (ಕಾಪುಣಾ· ೨೨೪). [ಸಂ.]

ಲಲಾಟಕ (ನಾ)· ೧. ಹಣೆ ; ನೊಸಲು. ೨. [ಕಾಮಶಾ]ಆಲಿಂಗನಗಳಲ್ಲಿ ಒಂದು ಬಗೆ : ಮುಸುಡು ಮುಸುಡೊಳು ನೊಸಲು ನೊಸಲೊಳಿದೆ ದೆದೆಯೊಳಗೆ ಉಸಿರುಸಿರೊಳೊಂದಿ ಬೇಱಿಲ್ಲದಂತೆ ಸುನೆ ತಳ್ತವರ್ವಷ್ಟ ದಸಿಯಳಸಿಯನ ದುಯೊಳಿಸವುದು ಲಲಾಟಕಮಿದಪ್ಪುದುಲೆ (ಜಪ-೭-೦೪) ; ಪುಷ್ಕರ . . . ಲಲಾಟಕವೆಂಬ ದ್ವಾದಶವಿಧಾಲಿಂಗನಂಗಳಂ (ಪಪಂ· ೨೨೪). [ಸಂ.]

ಲಲಾಟನೇತ್ರ (ನಾ)· ೧. ಹಣೆಯಲ್ಲಿರುವ ಕಣ್ಣು; ಹಣೆಗಣ್ಣು : ಮುಳಿಸು ಲಲಾಟನೇತ್ರ ಶಿವಿ ಮೆಚ್ಚಿ ವಿನೊರಸಪ್ರಸಾದಂ (ಪಂಪಭಾ-೦-೨) ; ಸ್ಮರಪುಲಲಾಟನೇತ್ರಸ್ಫುರದುಗ್ರುತವಹನಿನೆಯ್ದೆ ಬೇವುತ್ತಿರ್ದಾ ಸ್ಮರನ ಪೊಗೆಯಿಂದ ಪದಿರ್ದ ರತಿಯವೊಲ್ ಕಾಂತೆ ಕರಮೆ ಕಣ್ಗೆ ಸದಿರ್ದಳ್ (ಶಾದಂಪ್ರ· ೪೫). ೨. ಹಣೆಯಲ್ಲಿ ಕಣ್ಣುಳ್ಳವನು; ಹಣೆಗಣ್ಣ; ಶಿವ: ಲಲಾಟನೇತ್ರ ನಾಗಸೂತ್ರ ವಿಶ್ವಜೈತ್ರ . . . ಪಾಹಿಮಾಂ ಮಹೇಶ್ವರಾ (ಜಾಕಾಕ್ಕ· ೨-೭-೨೮). [ಸಂ.]

ಲಲಾಟಪಟ್ಟ (ನಾ)· ೧. ಹಣೆ : ನಿಜಾನುಜಸಹಿತಮಿದಿರ್ದಂದು ಧರಾತಳ ವಿಷ್ಣ ಲಲಾಟಪಟ್ಟಂ ಸಾಷ್ಟಾಂಗವೆಱಗಿ ಪೊಡವಟ್ಟು ಕದೀಯಾಶೀರ್ವಾದ ಮನಾಂತು (ಪಂಪಭಾ· ೭-೫೯ ಪ) ; ಮಹೀತಳಾಕ್ಷಿಪ್ತಲಲಾಟಪಟ್ಟನೆಱಗಿ ಪೊಡವಟ್ಟು (ಪಾಂಪ್ರ· ೩-೭೦ ಪ). ೨. ಹಣೆಪಟ್ಟಿ : ಈಗಲಾದರೆ 'tourist' ಎಂಬ ಲಲಾಟಪಟ್ಟವನ್ನು ಧರಿಸಿ ಪ್ರೇಕ್ಷಕಸಮುದಾಯವನ್ನು ತುಂಬಿಕೊಂಡು ಅನೇಕ ಬಸ್ಸುಗಳು ಸಂಚರಿಸುತ್ತವೆ (ಪಂಚಮಿ· ೦೦೩). ೩. ಒಂದು ಬಗೆಯ ಆಭರಣ: ಹಣೆಗೆ ಕಟ್ಟುವ ಅಲಂಕಾರದ ಪಟ್ಟಿ : ಸುಜನೈಕಮಿತ್ರ ಅಭಿಮಾನವಂತರ ವಿಭವಪುರಂದರ ಸರಸ್ವತೀಗಣಲಲಾಟಪಟ್ಟ ಕನ್ನಡ್ಕರ ದಿಶಾಪಟ್ಟ ವಾಜಿಕುಳಾಂಬರದ್ಯುಮಣಿ (ಪಾಭಾ· XX. ೬೯-೦೯ ; ೧೨೦೭). [ಸಂ.]

ಲಲಾಟರೇಖೆ (ನಾ)· ೧. ಆಯುಷ್ಯವನ್ನು ಸೂಚಿಸುವ ಹಣೆಯ ಮೇಲಿನ ರೇಖೆ. ೨. ಹಣೆಯ ಬರಹ ; ಅದೃಷ್ಟ : ದೊರೆಗಳು ಎನ್ನಿಸಿಕೊಂಡವರೆಲ್ಲರಿಗೂ ಈ ಭಾಗದಲ್ಲಿ ಲಲಾಟರೇಖೆಯು ವಿಕರೀತಿಯಾಗಿದೆಯೋ (ಪಾಪುಣಾ· ೭೨). [ಸಂ. ಲಲಾಟರೇಖಾ]

ಲಲಾಟಲಿಖಿತ (ನಾ). = ಲಲಾಟರೇಖೆ ೨: ಲಲಾಟಲಿಖಿತ ಬರೆದ ಬಳಿಕ ಪಲ್ಲಟವ ಮಾಡುವಾರದು (ಬಸವ· ೩೬); ಲಲಾಟಲಿಖಿತವಾದ ವಿಧಿಯಚ್ಚಿಯಂತೆ ನಡೆಯುವುದು ನಿನ್ನ ಕರ್ತವ್ಯ (ಕೃಪು. ೨೯೯). [ಸಂ.]

ಲಲಾಟಲೋಚನ (ನಾ). ಹಣೆಯಲ್ಲಿ ಕಣ್ಣುಳ್ಳವನು: ಹಣೆಗಣ್ಣ; ಶಿವ: ಜಯಂತೀಮಧುಕೇಶ್ವರದೇವಲಬ್ಧವರಪ್ರಸಾದಂ ವಿಸ್ತುಗಮದಾಮೋದಾ ತ್ರಿಯಕ್ಷಕ್ಷುಮಾತ್ಪಸಂಭವ ಚತುರಾಸೀತಿಸಗರಾಧಿಷ್ಠಿತ ಲಲಾಟಲೋಚನ (ಪಾಭಾ-XX. ೬೬-೪; ೧೧೬); ಲಲಾಟಲೋಚನನ ಮಹಿಮೆಯು ಪೇಳು ತಿರಲಿಂದು (ಪಚಕ್ಷ· ೨-೩-೨೦). [ಸಂ.]

ಲಲಾಟಶೂನ್ಯ (ನಾ)· ಹಣೆಯ ಮೇಲೆ ತನ್ನ ಧರ್ಮದ ಚಿಹ್ನೆಯನ್ನು ಧರಿಸದೆ ಇರುವವನು; ಹಾಳುಹಣೆಯುಳ್ಳವನು : (೫). [ಸಂ.]

ಲಲಾಟಾಕ್ಷ (ನಾ). = ಲಲಾಟಲೋಚನ : ಪಾಲಿತಾಖಿಸುಮನಸೇ ವಿಧುಮೌಲಿ . . . ಲಲಾಟಾಕ್ಷ ಪ್ರತಿಮ ಬಸವಾಯತೇ ಜಯತು (ಪಸಪು. ೬೦-೫೯). [ಸಂ.]

ಲಲಾಟಿಕೆ (ನಾ). ೧· ಮುಂದಲೆಯಲ್ಲಿ ಧರಿಸುವ ಒಂದು ಬಗೆಯ ಆಭರಣ ; ಬೈತಲೆಮಣಿ· ೨· ಮುಂದಲೆಯಲ್ಲಿ ಧರಿಸುವ ಹೂವಿನ ಕುಚ್ಚು : "ಮಾಲೆಯಂ ಚಂಡಿಕೆಯೊಳ್ಕಿ ಪ್ರಭುಪ್ರಭ್ಯಕಂ ಮುಂದಲೆಯ ಲಲ್ಲವ ಲಲಾಟಿಕಾಖ್ಯಂ" (ಹುಂಗಣಾ. ೯೯-೫೦)· ೩· ಹಣೆಯ ಮೇಲೆ ಚಂದನ ಮೊದಲಾದ ಸುಗಂಧದ್ರವ್ಯಗಳಿಂದ ಇಡುವ ಗುರುತು ; ತಿಲಕ; ಬೊಟ್ಟು : "ತಿಳಕಂ. ತವಾಳವತ್ಸಂ . . . ಲಲಾಟಿಕಾ – ಈ ಬೊಟ್ಟು" (ಶಕಾಹು. ೯೯-೬೬೭) ; ಅನಂಗರುಚಿತಚಂದನಲಲಾಟಿಕಾ ಶ್ರಿಯೊಡ್ಡನುಂ (ಕಾಪು. ೧೦೦). [ಸಂ. ಲಲಾಟಿಕಾ]

ಲಲಾಟೇಕ್ಷಣ (ನಾ)· = ಲಲಾಟಲೋಚನ : ಶಿವಲಿಂಗಾಂತಃಸ್ಥನಾದಂ ವಿಯತ್ಪಿತುರಾರಣ್ಯದವಾಗ್ನಿ ಹಂಪಯ ವಿರೂಪಾಕ್ಷ ಲಲಾಟೇಕ್ಷಣನು (ಶಂಚಕ. ೬ ಸೂ೩೫). [ಸಂ.]

ಲಲಾಮ (ನಾ). ೧· ಮುಂದಲೆಯ ಆಭರಣ : ಬೈತಲೆಮಣಿ : ಆ ವತ್ಸವಿಷಯಂ . . . ಭೂಲಲನಾವದನಲಲಾಮಮೆಂಬನಂ ಸೊಗಯಿಸುಗುಂ (ಶಬಿಪು. ೨-೭೦); ಈ ಭೂಕಾಂತೆಗೆ ಲಲಾಮಮೆಂಬಂತೆ . . . ಒಪ್ಪುವುದಹಿಚ್ಛತ್ರಪುರಂ (ಪಾಪ್ರಕೃ. ೩೬-೦೩). ೨· =ಲಲಾಟಿಕೆ ೩ : ಶಚಿಕಳ ಕಾಂಬಿಯಿಂದ . . . ನಿಟಲಂ ಲಲಾಮದಿಂ ನಿಟಲದಿನಾ ಲಲಾಮಮುಮಲಂಕರಿಸಿರ್ದುವೆಸುತ್ತೆ ನೋಡಿದರ್ (ಶಂಪ್ರಕೃ. ೬-೬೭). ೩· ಗುರುತು; ಚಿಹ್ನೆ· ೪· ಬಾವುಟ ; ಪತಾಕೆ· ೫· ಬಾಲ· ೬· ಹೆಚ್ಚುಗಾರಿಕೆ; ಹಿರಿಮೆ· ೭· ಕೊಂಬು ; ಕೋಡು ; ಶೃಂಗ· ೮· ಕುದುರೆ· ೯· ಮಂಗಳಕರವಾದ ಗುರುತು; ಶುಭಲಕ್ಷಣ. ೧೦· ತಿಲಕ ಪ್ರಾಯವಾದುದು; ಶ್ರೇಷ್ಠವಾದುದು ; ☞ ಸಮಾಸದ ಕೊನೆಯಲ್ಲಿ ಈ ಅರ್ಥ ಬಳಕೆಯಾಗುತ್ತದೆ : ಸಕಲಕ್ಷತ್ರಕುಲಪೂಜ್ಯನಮಳಚರಿತ್ರಂ ಪ್ರೋದ್ದಾಮಸೋಮವಂತಲಲಾಮಂ (ಶಂಚಾ. ೬-೩೦); ಗುರುಕುಲ ಲಲಾಮನಂ ಕಂಡನು (ಚಾಪಂ. ೩-೨೩). ೧೧· ಒಡೆಯ; ಸ್ವಾಮಿ : ಅಪವರ್ಗಸಂಪದ್ವಿಳಾಸಿನೀಲಲಾಮನುಂ (ಕೃಕೃ. ೦೦-೬ ೩). ೧೨· ಚೆಲುವು; ಸೌಂದರ್ಯ· ೧೩· ಸರಸ್ವತಿ· ೧೪· ಲಕ್ಷ್ಮಿ· ೧೫· ಬಸವ; ವೃಷಭ· ೧೬· ಸೂರ್ಯ· ೧೭· ಚಂದ್ರ· ೧೮· ತುದಿ; ಅಗ್ರ· ೧೯· ಕಿರಣ; ರಶ್ಮಿ· ೨೦· ಕೆಂಪುಬಣ್ಣ· ೨೧· ಅರಗು; ಅಲತಗೆ· ೨೨· ಬಿಳಿದು; ಶ್ವೇತವರ್ಣ· ೨೩· ಆಟ; ಕ್ರೀಡೆ· ೨೪· ನಾದ; ಸ್ವರ· ೨೫· ಮುಖ್ಯನಾದವನು; ಪ್ರಧಾನವ್ಯಕ್ತಿ : "ತಿಲಕದಲಿ ಹೆಮ್ಮೆಯಲಿ ಕೋಡಿನಲಿ ಮುಖ್ಯನಲಿ ಅಲತಿಗೆಯೊಳಾಭರಣದಲಿ ತಕಾಕಿಯಲಿ ನೀಳ್ದಲೆವ ಬಾಲದಲಿ ವಾಜಿಗಳಲಿ ಲಲಾಮವೆಂದೆಂಬ ನಿಜನಾಮಮಕ್ಕುಂ" (ಪುಂಗಣಾ. ೦೮೬-೩೪); "ಧಾರತಿ ಗೋಮಿನ ವೃಷಭ ತುಂಗ ಕುರಂಗ ಪತಂಗ ಶೃಂಗ ಶೃಂಗಾರ ವಿಧೂಷಣಾಂಶು ಧವಳಾಗ್ರ ಸಲಕ್ಷಣ ವಾಳ ಕೇಶ ಚಂದ್ರಾರುಣ ಶ್ರೇಷ್ಠ ಪಾದ ತಿಲಕ ಧ್ವಜಮಿಂತು ಲಲಾಮಶಬ್ದಂ" (ಜಾಪಾಕೀ. ೨೬). [ಸಂ.]

ಲಲಾಮಕ (ನಾ)· ಮುಂದಲೆಯಲ್ಲಿ ಧರಿಸುವ ಹೂವಿನ ಕುಚ್ಚು : "ಮುಂದಲೆಯ ಹೂ ಲಲಾಮಕಮೆಂಬುದು" (ಶಕಾಹು. ೧೦-೩೯೯). [ಸಂ.]

ಲಲಾಮೆ (ನಾ). ೧· ತಿಲಕಪ್ರಾಯಳಾದವಳು; ಶ್ರೇಷ್ಠಳಾದವಳು : ಆಗಳಾತನಂತಃಪುರೀಮಂತಿನೀ ಲಲಾಮೆಯಪ್ಪನಂಗವಪ್ಪೆ· ··ಸುಗ್ರೀವನ ಸಂತೋಷದೊಳಾದ ಮನೋರಾಗಮುಮನಪ್ಪಳೆಯ್ದೆ (ಪಂಚಾಪಾ. ೦೦-೩೫). ೨· (?) : ಮಹಿಷಾಸುರನಂತೆ ಸೂಲದೊಳ್ ನೊಂದು ನರಳ್ದ ಕಳ್ಳರಿಂ ಬೊಂತಿಯಂತೆ ದಕ್ಕಿನೊರ್ದ ಪಂದಲೆಗಳಂ ಬಂದಿಕಾಜನಂತೆ ಪೆಜವುವಾರ್ದು ಒಡಿವ ಲೊಕನಿಜುರಿಂ ಮೃಗಯಾಪತಿಯಂತೆ ಕೀಲಾಲಜಲ್ಲ ದೊಳೋಲಾಡುವ ಲಲಾಮೆಯುರಿಂ (?) ಸೋಂಬನಂ ಪೆಚ್ಚಿ ಬೇಱುರ್ಗೆ ಪೋದ ಸೂಳೆಯಂತಾಯ್ಕಲಾಡುವ ರಣಚೇಷ್ಟೆಯುರಿಂದತಿಭಯಂಕರಾಕಾರಮಪ್ಪುದು (ಕಾಶ್ಮಸಾ. ೩೫ ೩೩೭೪). [<ಸಂ. ಲಲಾಮಾ]

ಲಲಿತ, ಲಳಿತ (ಗು)· ೧· ವಿನೋದದ ; ಲೀಲೆಯ· ೨· ಚೆಲುವಾದ ; ಸುಂದರವಾದ ; ಮನೋಹರವಾದ : ಲಲಿತಮುಖಿಸರಸಿಜಂ . . . ನಿಶ್ಚಳತನು ನಡೆ ನೋಡೆ ಭರತರಾಜಂ ಸೋಲ್ತಂ (ಆಪು. ೦೪-೦೦೫) ; ಲಲಿತಾಸನಾಂಬುಜಪುಲರ್ದಸೆದುದು ಪುಂದಹಾಸದಿಂ ಮುರಹರನಾ (ಜಗ. ೩-೩೨); ಜಲರಸಾನಲಮರುದ್ಗಗನರವಿಸೋಮಾತ್ಮ ಲಲಿತಕಾಯಂ (ಅಶ್ರಿಕಾ. ೨-೦). ೩· ಕೋಮಲವಾದ; ಮೃದುವಾದ : ಲಲಿತಕಿಸಲಯಮೆ ಬಾಸಂ ಮಲರಕ್ಷತಮಾಳಿರುತಿ ಶ್ರುತಿ ಸ್ವರಮಾಗಲ್ ಸರೆ ಲಂತುವಿನ ಪುರೋಹಿತಕುಲ ವೆನಿಸಿತು ಬನದ ಬಾಲಚೂತವ್ರಾತಂ (ಕುಚರಿ. ೩-೬೩) ; ಲಲಿತಮೃಣಾಳದಿಂ ತಣಿದು ತಣ್ಬಾಳಿನಸ್ಥಳದೊಳ್ನಿಜೇಚ್ಛೆಯಿಂ ನಲಿವ ಮರಾಳದೊಳ್ನಡೆಯನು . . . ಕಲಲಿಂದು ಬರ್ಪುದು ಶದೀಯ ಬನಕ್ಕಬಲಾಕದಂಚಕಂ (ಜಾಂಶಾಕ್ಕ. ೦೩-೦೮೯). (ನಾ)· ೪· ಚೇಷ್ಟೆ ; ಆಟ ; ಕ್ರೀಡೆ· ೫· ಸ್ತ್ರೀಯ ಶೃಂಗಾರಭಾವಗಳಲ್ಲಿ ಒಂದು : "ಹೇಳಾ ವಿಳಾಸ ವಿಭ್ರಮ ಳೀಳಾ ಬಿಬ್ಬೋಕ ಲಲಿತ ಹಾವಾಖ್ಯಂಗಳ್ . .. ಶೃಂಗಾರಭಾವಸಂಭೂತಂಗಳ್" (ಪಪ್ರಶೋ. ೬೬-೭೨) : "ಹೇಳಾ. ವಿಳಾಸ ... ಲಲಿತಂ, ವಿಭ್ರಮಃ-ಇವು ಮೊದಲಾದುವು ಸ್ತ್ರೀಯರ ಭಾವಂಗಳ್" (ಕಣಾಪು. ೦೫-೦೯). ೬· ಮನೋಹರವಾದುದು ; ಆಕರ್ಷಕವಾದುದು : ದೀಸುವ ಧವಳ ಚಾಮರಂಗಳ್ . . .' ಎಸೆದುವ್ಕತಿಲಲಿತಂಗಳ್ (ಕಸ್ತ್ರಪು. ೫-೦೬). ೭· ಚೆಲುವು ; ಸೌಂದರ್ಯ· ೮· ವೈದುತನ ; ನಯ ; ಮಾರ್ದವತೆ· ೯· ಸರಳತೆ ; ಮುಗ್ಧತೆ· ೧೦· ಲಲಿತಾಗಮದ ನಾಲ್ಕು ಭೇದಗಳಲ್ಲಿ ಒಂದು : ಲಲಿತ ಲಲಿತೋತ್ತರ ಕೌಮಾರತಂತ್ರ ವಿಶ್ವೇಶ್ವರಾಗಮವೆಂದು ಲಲಿತಾಗಮದ ನಾಲ್ಕು ಭೇದಂಗಳು (ಪಜಿಕ. ೬೮)· ೧೧· ಒಂದು ಬಗೆಯ ಸಸ್ಯ : "ಹಸ್ಯಗಣೆ ಲಲಿತವಕ್ಕು" (ಪುಂಗಣಾ. ೬೬-೦೯). ೧೨· [ನಾಟ್ಯ] ಮೂವತ್ತು ಬಗೆಯ ನೃತ್ತ ಹಸ್ತಗಳಲ್ಲಿ ಒಂದು ; "ಅಲ ಪಲ್ಲವ ಹಸ್ತಗಳೆರಡನ್ನು ತಲೆಯ ಹತ್ತಿರ ಮೇಲೆ ಹಿಡಿಯುವುದು" (ಕಾಕೃರೂ. ಗಣ್ಯಮಾನಾದ- ೨೩೩) : ಲಲಿತಮೆನಿಪ್ಪೀ ಹಸ್ತಂ ನೆಲೆಗೊಳ್ಗುಂ ಭರತದಲ್ಲಿ ಮೂವತ್ತೆಂದುಂ (ಕಾಕೃರೂ. ೩-೨೨). ೧೩· ನೃತ್ಯದ ಮೂವತ್ತಾರು ಬಗೆಯ ಸಂಚಾರೀಭಾವದೃಷ್ಟಿಗಳಲ್ಲಿ ಒಂದು ; "ಮುಗುಳ್ನಗೆಯಿಂದ ಕೂಡಿ ಅನುರಾಗ ಹೆಚ್ಚುವಂತೆ ಹುಬ್ಬು ಹಾರಿಸುತ್ತಾ ಕಡೆಗಣ್ಣಿನಿಂದ ನೆಲವನ್ನು ನೋಡುವುದು ; ವಿ – ಹೆಂಗಸರ ವಿಲಾಸವನ್ನು ಅಭಿನಯಿಸುವಾಗ" (ಕಾಕೃರೂ. ೨೬೦ ಪಡ್ಯಮಾನಾದ) : ನೆಲನಂ ನೋಡುವಪಾಂಗಂ ಜಲಿಸುವ ಭ್ರೂ ಮಂ[ದ]ಹಾಸಮುಂ ಗಜನುರ್ಬಂ ಗಲಿ ಮೂಳ್ವ ನೋಟಮೊಪ್ಪರ್ ಜಲಜಾಕ್ಷೀ ಲಲಿತಮೆಂಬ ಪೆಸರಂ ಪಡೆಗುಂ (ಕಾಕೃರೂ. ೬-೩೪). ೧೪· [ಛಂದ] ಒಂದು ಅಕ್ಷರ ವೃತ್ತದ ಹೆಸರು : ☞ ಇದರಲ್ಲಿ ಎರಡು ಬಗೆಗಳಿವೆ. 'ಸನಭನಜನನಯ' ಎಂಬ ವಿನ್ಯಾಸದ್ದು ಒಂದು. 'ಭಜಸನ ಭಜಸನಭಯ' ಎಂಬ ವಿನ್ಯಾಸವಿದ್ದು. ೧೦· ೧೮ನೆಯ ಅಕ್ಷರಗಳು ಪ್ರಾಸಾಕ್ಷರದ ಆವೃತ್ತಿಯಾಗಿರುವುದು ಮತ್ತೊಂದು : ಲಲಿತಾಕ್ಷರ ಪದರಚನೆಗಳಿಂದ ಪರೆದುದು ಲಲಿತಂ (ಛಂಶೋಲಾಂ. ೨-೦೧೦). ೩· ೧೪ : ಹರಿಣೇ ಮತ್ಕೇಭ ವಿಕ್ರೀಡಿತ ಲಲಿತ ಮಜಸೂರಾನ್ವಿತಂ . . . ನಭಮಂ ಪೊಲ್ತು ಚಿಲ್ಕಾಯ್ತುರಣ್ಯಂ (ಜಾಪಾಕೀ. ೩-೬೬). ೧೫· ರಗಳೆ ಛಂದಸ್ಸಿನಲ್ಲಿ ಒಂದು ಬಗೆ : ಪಾದವೊಂದಕ್ಕೆ ಐದು ಮಾತ್ರೆಯ ಗಣವು ನಾಲ್ಕಿರಲು ಲಲಿತರಗಳೆ ಯಾಗುವುದು (ಕೃಚಿ.೧೧).

೧೭. [ಸಂಗೀತ] ಒಂದು ರಾಗದ ಹೆಸರು: ನಾದಭಾಮಕ್ರಿಯಾ . . . ಗೌಲ. ಲಲಿತ, ಗುರ್ಜರೀ ಗುಂಡಕ್ರಿಯಾ. ಮಲಹರಿಪಿಂಬುದು. ೭ ಅರ್ಧದೇಶಿಕಾರಾಗ (ಕಪುತ್ರ. ೦೨೯). **ಲಲಿತ** : ೧. ಲಲಿತ ಲತಾಂಗಭಂಗಿಯ ಬಡಾಗಿಯರಿಕ್ಕುವ ಜಾಮಗುಂ ಸಂಚಲನದ ಚಿತ್ರಕಾಂತಿ ನಿಮಿರುತ್ತಿರಲ್ (ಶಾಂಕೀತ್ರ. ೦೩-೦೨). ೨. ಲಲಿತನಿಜರೂಪವಿಭ್ರಮವಿಲಾಸಮುಡರ್ದೆಸೆಯೆ ಬಿದರ್ . . . ಜಪ್ಪನೆಯರ್ (ಜಪಾ. ೪-೦೨೦); ಲಲಿತತರುಗಂ ಒಳ್ಮೆಱೆ ಲಘತ್ಪುಳಿನಸ್ಥಳಿ ಸತ್ಕಟೀತಟಂ . . . ಎನಿಪ್ಪ ವಿಯತ್ತರಂಗಿಣೀಲಳನೆ (ಕಣಾ. ೬-೦೦೬). ೩. ಲಲಿತತಮಾಳಲತಾಕೋಮಳೆ (ಪಚಿಷ್ಟ. ೦-೭೪); ಲಲಿತ ವಿಲಾಸ ವಿಭ್ರಮ ಕಳಾವತಿಯರ್ (ಪುಕ್ಕ. ೬-೪೭). ೧೭. [ನಾಟ್ಯ] ಒಂದು ಬಗೆಯ ನೃತ್ತ : ಅಂನಿನಿದದ ಮದಕೋಕಿಳಕಳನಿನದದ ಜತಿಯೊಳಿನಯಂ ನೆಗಟ್ಟುನೆಗಂ ಲಳಿತಮನೇನಾಡಿಸಿದನೊ ಮಳಜುಮಾನಿಗರ್ತಕಂ ಲತಾ ನರ್ತಕಿಯುಂ (ಅಷ್ಟ ೦೦-೩೦). [ಸಂ.]

ಲಲಿತಕಲೆ (ನಾ). ಮನಸ್ಸಿಗೆ ಆನಂದವನ್ನುಂಟುಮಾಡುವ ಕಾವ್ಯ, ಸಂಗೀತ, ಚಿತ್ರ, ಶಿಲ್ಪ ಮುಂತಾದ ಕಲೆಗಳು : ಲಲಿತಕಲೆಗಳಲ್ಲಿ ಈ ತತ್ತ್ವದ ಅನುಷ್ಠಾನವನ್ನು ಕಾಣುತ್ತೇವೆ (ಶಾಪಪ್ರ. ೪೦೯) ; ವೈವಿಧ್ಯದ ಅಧ್ಯಯನ ಯೋಜನೆಗಳನ್ನು ಅವರು ಸಲಹೆ ಮಾಡಿರುವರು. ಅವುಗಳಲ್ಲಿ . . . ಲಲಿತಕಲೆ . . . ಇವು ಮುಖ್ಯವಾದುವು (ಶಿಪ್ರ. ೦೧೩); [ಸಂ. ಲಲಿತಕಲಾ]

ಲಲಿತತೆ, ಲಳಿತತೆ (ನಾ). ಲಾವಣ್ಯ ; ಸೊಬಗು: 'ಲಲಿತತವೆಜ್ಜಿ' ಪರಾ. **ಲಳಿತತೆ** : ಶ್ರೀದೇಂ ಶ್ರೀಕಲ್ಲಿನಾಥಂ ಕುಡುಗೆ . . . ಗ್ರೀಂದಾಯಾಣಿಯಾನುಷಂಗಾಕಳಿತಲಳಿತತಾಪ್ಪೋಲ್ಲಸದ್ವಾಮಭಾಗಂ (ಎಕ. XII. ೦೨-೪; 1200). [ಸಂ. ಲಲಿತತಾ]

ಲಲಿತತೆವೆಱು (ಕ್ರಿ). ಸೊಬಗನ್ನು ಪಡೆ ; ಲಾವಣ್ಯವನ್ನು ಹೊಂದು: ಲಲಿತತವೆತ್ತು ಕೊಂಕಿ ಪರಿದೊಪ್ಪದೊಳೊಂದಿರೆ ಪುರ್ವ ಜಾವಮಂ . . . ಪೋಲ್ತಿರೆ (ರಚೋತ್ತ. ೬-೦೧೬). [ಲಲಿತತೆ+ಪೆಱು]

ಲಲಿತಪದ (ನಾ). ೧. ಮೃದುವಾದ ಶಬ್ದ ; ಕೋಮಲವಾದ ಪದ: ಲಲಿತ ಪದಂ ಪ್ರಸನ್ನಕವಿತಾಗುಣಮಿಲ್ಲದೆ ವರ್ಣ್ಯ ಪೇಬ್ದ ಬೆರ್ಗಳ ಕೃತಿಬಂಧಮುಂ ಬರೆ[ಪ]ಣಾಜರ ಕೈಗಳ ಕೇದು ನುಣ್ಣನಪ್ಪಳಕದ ಕೇದು (ಪೊಕಣಾ. ೪-೦೨). ೨. [ಛಂದ] ಒಂದು ಅಕ್ಷರವೃತ್ತದ ಹೆಸರು ; ಪಾದವೊಂದಕ್ಕೆ ಹನ್ನೆರಡು ಅಕ್ಷರಗಳಿರುವ. ಜಗತಿಛಂದಸ್ಸಿನ ಒಂದು ವೈತ್ತ : ಕುಲಿಶಧಾರ್ಷ್ಯಯುಗಂಗಳ ಮುಂದಾ ಜಲಗಣಮೊಪ್ಪರೆ ಬಂಮ ವಿರಾಮಂ ಕುಲಗಿರಿಯೊಳ್ನಲೆ ನಾಕಿಗನಂದು ಲಲಿತಪದಂ ಪೆಸರಿಂ ಲಲಿತಾಂಗೀ (ಕಂವೋಂಬು. ೨-೦೪೬). [ಸಂ.]

ಲಲಿತಭೂಷಕ (ನಾ). ಮನೋಹರವಾದ ಹುಬ್ಬುಗಳುಳ್ಳವನು; ಸುಂದರವಾದ ಭೂವಿನ್ಯಾಸವುಳ್ಳವನು : ಶ್ರೀ ಕಮಳಲೋಚನಂ . . . ಲಲಿತಭೂಷಂ . . . ಉದಿತರ್ದಂ ಕೊಳಲಂ (ಪಾಪ. ೩-೦). [ಸಂ.]

ಲಲಿತಸ್ಖರಣ (ನಾ). ಮೃದುವಾದ ತಲ್ಪ.—ಹಾಸಿಗೆ : "ಚಿತ್ರಾವಳಿಯು ಮೇಲ್ಕಟ್ಟನಲಿ ಲಲಿತಸ್ಖರಣಮಧ್ಯದಲಿ ಹೊಳೆಹೊಳೆವ ನವರತ್ನಭೂಷಣ ಕಳಿತಕಾಯನ ಕಂಡು ರೋಷಪ್ರಳಯಭೈರವರೂಪಸೊದೆದನು ವಾಮಪಾದ ದಲಿ (ಶುಪ್ರಾಗ. ೪-೨೬). [ಸಂ.]

ಲಲಿತಾಂಗ, ಲಳಿತಾಂಗ (ನಾ). ೧. ಸುಂದರವಾದ ದೇಹ ; ಬೆಲುವಾದ ಶರೀರ : ಲಲಿತಾಂಗ ಕನಕಾವದಾತಮಲರ್ಗಣ್ ಸೀರೋತ್ಪಲಚ್ಛಾಯೆ (ಅಪ್ಪ. ೩-೧೩) ; ಲಲಿತಾಂಗಂ ಲತೆ ಕೆಂದಳಂ ತಳಿರಲರ್ ಕಣ್ಣಳ್ ಕುರುಳ್ ಭೃಂಗಸಂಕುಲಂ . . . ಎನಲ್ಕೆ ನಿಂದು . . . ಕಣ್ಗೊಪ್ಪಿದರ್ ಕಾಂತಿಯರ್ (ಶಾಂಕೀತ್ರ. ೩-೦೨) ; ರಾಜಲಕ್ಷಣದ ಚೆಲ್ವಿಡಿದ ಲಲಿತಾಂಗದಿಂ ಕುಶಲವರ್ಮ ಶಲವರ್ಧನಾಗಿ ರಂಜಿಸಿದರು (ಕೃಜಣ. ೦೯-೩೦). ೨. ಕೋಮಲವಾದ ಶರೀರ : ಲಲಿತಾಂಗದ ಬೆಮರ್ವಾನಗಳನೆಲೆದಾಱಿಪ ತೀರಕುಳಿದಿಱಿಂಕೆಯ ಕಡುದಣ್ಣೆಲರ್ಗಳಿ ಪತ್ತಿ ಸೋಯದೆ ಕೆಲಬರ್ ಪಾವುರಿಯರವರ ಬರವನೆ ಪಾರ್ವರ್ (ಕಪ್ರತ್ತ. ೫-೦೪). ೩. ರೂಪವಂತ : ಬೆಲುವ : ಲಲಿತಾಂಗ [ನಂಗ]ವಿಷಮಾಧೀಶಂ ಸುರಸ್ತ್ರೀಜನೋದಾತ್ತಪ್ರಾರ್ಥಿತಯೌವನಂ (ಶಾಂಚಕ್ಷ. ೬-೦೨೩). **ಲಲಿತಾಂಗ** : ೧. ಲಳಿತಾಂಗದ್ಯೋತಿಯಿಂ ಭೂವಳಯವನೆಳಕೊಂಡಿರ್ದರ್ (ಪಾಪ್ರ. XI. ೦೯-೨೯ ; 1076). [ಸಂ.]

ಲಲಿತಾಂಗಿ (ನಾ). ಸುಂದರವಾದ ದೇಹವುಳ್ಳವಳು ; ಚೆಲುವೆ : ಲಲಿತಾಂಗಿ ಮೆಲ್ಲಮೆಲ್ಲನೆ ನಲತೋಳಂ ಬೀಸೆ ವಿಸಗುವಸಿಯುಗುರ್ಗಳ ಪಣ್ಬೆಳಗು ನಿಮಿರ್ದೆಸೆದುವೆ (ಕಾರಂಪ್ರ. ೩೦೬) ; ಲಲಿತಾಂಗಿಯರ ಕರಕಳದ ವಿಮಲಕಲಶೋದಕವನೊಲಿದಿಂಟುತಿರ್ದೊಡು ಮನ ತನಯವು (ಕೃಜಣ. ೬-೦೦). [ಸಂ. ಲಲಿತಾಂಗೀ]

ಲಲಿತಾಕಾರ, ಲಳಿತಾಕಾರ (ನಾ) ಸುಂದರವಾದ ಆಕಾರ; ಮನೋಹರವಾದ ರೂಪ : ಲಲಿತಾಕಾರನವನೀಡು ನಾಡೆ ನಯನಕ್ಕುನಂದಮಂ (ಪಂಗಜಪ. ೬-೦೪೨) ; ಲಲಿತಾಕಾರದ ರಾಜಪುತ್ರತತಿಯಿಂದ . . . ಒಪ್ಪಿರ್ದುದೊಪ್ಪುಲಗಂ (ಶುಸಾಚಪ್ರ. ೬-೭೬). **ಲಳಿತಾಕಾರ** : ಲಳಿತಾಕಾರಂ ವಿಭವಂ ಬೆಳಗುವ ಲಾವಣ್ಯವೆಸೆಯೆ ಬಂದರ್ . . . ಕೋಮಲೆಯರ್ (ಪಗಪ. ೪-೦೨೪). [ಸಂ.]

ಲಲಿತೆ, ಲಳಿತೆ (ನಾ). ೧. ಹೆಂಗಸು ; ಸ್ತ್ರೀ. ೨. ಸ್ವೇಚ್ಛಾಚಾರಿಯಾದ ಹೆಂಗಸು ; ಸ್ವೈರಿಣಿ., ೩. ವಿಲಾಸಿನಿ ; ಸುಂದರಿ : ಲಲಿತೆಯ ಮುಟೇಂಮುಬಂಬಿದ ಬೆಳಗಿನೊಳಿರದಗಿದು ಪೆಜತೆಗೆದು ತವೇಂಬುಳಮಿರ್ದು ದಂದಿವಂ ಕಣ್ಗೊಳಿಸಾಗುಮಪೆಯಂ ವಿಭೀಳಕಬಿಂಬಾರಂ (ಶುಸಾಚಪ್ರ. ೪-೪೬). ೪. ದುರ್ಗೆಯ ಒಂದು ಹೆಸರು. ೫. [ಕಾವ್ಯಮೀ] ಒಂದು ಆಪುಪ್ರಾಸವ ಹೆಸರು : ಸೌಷ್ಠವಗುಣಸಮನ್ವಿತಂ ಲಲಿತಪ್ರವೃತ್ತಿಯಿಂ ಲಲಿತೆಯೆಂಬ ವೃತ್ತಿಯದಕ್ಕುಂ (ಕಾಪ್ರಾಕ. ೫೬೪). ೬. ಒಂದು ಅಲಂಕಾರದ ಹೆಸರು : ಪ್ರಸ್ತುತ ವರ್ಣಸದ ಪ್ರತಿಬಿಂಬ ರೂಪದ ಪ್ರಸ್ತುತವು ವರ್ಣ್ಯವೆ ಲಲಿತೆಯು (ಶುಅಲಂ. ೦೨೪). ೭. = ಲಲಿತ ೧೫ : ಇಪ್ಪತ್ತು ಮಾತ್ರೆ ಲಲಿತೆಗೆ ಬಪ್ಪುದು ಪದಿನಾಱು ವಿಜಾತ್ರೆ ಮುಂದಾ ನಿಲಕಂ ತಪ್ಪದುವುತ್ತಾಪಕ್ಕುಜೆಯೊಪ್ಪುವೆದಿಪ್ಪತ್ತುನಾಲ್ಕು ಮಾತ್ರೆ ಗಳುಲೇ (ಪಂಪೋಲಾಂ. ೬-೨೩೨ ಅವಕ್ಕ). ೮. [ಸಂಗೀತ] ಒಂದು ರಾಗದ ಹೆಸರು : ಕೌಶಿಕ ವೇಳಾವಳ . . . ಲಲಿತೆ . . . ಶಯಸೋದರಿಯೆಂಬ ಮೂವತ್ತುನಾಲ್ಕುರಾಗಂಗಳೇ ಭಾಷಾಂಗದಿಂದ ಪುಟ್ಟಿದವು (ಪಪಗ. ೨೩೬). **ಲಳಿತೆ** : ೧. ಜಾರುವೀಣೆಯ ಬಾಜಿಸುತ್ತ ಲಳತೆಯು ಪಾಡೆ (ಸುಚಾ. ೬-೩೦). [ಸಂ. ಲಲಿತಾ]

ಲಲಿತೋಚ್ಛ್ರಿತ (ನಾ). [ಸಂಗೀತ] ಇಪ್ಪತ್ತೈರಡು ಶ್ರುತಿಗಮಕಗಳಲ್ಲಿ ಒಂದು : ಸ್ಫುರಿತ . . . ಲಲಿತೋಚ್ಛ್ರಿತ [ಶಾಣಂ. ಚೈದ] . . . ಕೋಮಲವೆಂಬ ಇಪ್ಪತ್ತೈರಡು ಶ್ರುತಿಗಮಕಂಗಳು (ಪಪಗ. ೦೬೬). [ಸಂ.]

ಲಲಿತೋತ್ತರ (ನಾ). ಲಲಿತಾಗಮದ ನಾಲ್ಕುಭೇದಗಳಲ್ಲಿ ಒಂದು : ಲಲಿತ ಲಲಿತೋತ್ತರ ಕೌಮಾರತಂತ್ರ ವಿಘ್ನೇಶ್ವರಾಗಮವೆಂದು ಲಲಿತಾಗಮದ ನಾಲ್ಕು ಭೇದಂಗಳು (ಪಪಗ. ೬೬). [ಸಂ.]

ಲಲ್ಲಯಿಸು, ಲಲ್ಲೈಸು (ಕ್ರಿ). ಮುದ್ದಿಸು ; ರಮಿಸು ; ಪ್ರೀತಿಸು : ಎರವ ಪುರಲ್ಕ ಲಲ್ಲಯಿಪ ಕಾಲ್ವಿಡಿವೆಂಬುದಾಂಬುಕೆಯ್ಯಳಂಕರಣ ವಿಳಾಸಮಂ ಮೆಱೆವ ಮೇಳಿಸುವಂದಿನ ರೂಪು ಶಾಸನಂಬರೆದುದು (ಅಷ್ಟ. ೩-೪೩) ; ನುಡಿದು ಕಾತರಿಸದೆ ಕೂಡೆ ಲಲ್ಲಯಿಸದೆ . . . ಬರ್ದೆಯನೊಲಿಪನಾವೆಂ (ಪಳಚರಿತ. ೩-೦೩) ; ಮೆಲ್ಲನೆ ಮೇಳಿಸಿ ಮರ್ಮರ ಲಲ್ಲಯಿಸುವ ಪೆಱರನಟ್ಟಿ ದೂಱುವ . . . ಮನಿಯಲ್ಲಿ ಜನೋಕ್ತಿಯನೆ

ಕೇಳದಾಗದು ಚಿತ್ತರಂ (ಕಬ್ಬಾಮ್ಮ. ೬-೨೦೨). **ಲಲ್ಲೈಸು** : ಕುದರಿರ್ ಪುರಿಗಣ್ಮದುನೆನಿತು ಲಲ್ಲೈಸಿದೊಡಂ (ಶಾಪಣಾ. ೪-೭೬) ; ಕಡುಮುಂಜದ ನಲ್ಲನಂ ಕಾಲ್ವಡಿಪುಂ ಲಲ್ಲೈಸಿ . . . ತಿರ್ಪರ್ (ಶ್ರೀಂಗಾಪು. ೨-೬) ; ಮೆಲ್ಲೆದೆರಾಗದ ಹರಿಯಿಸಿನಿಂದು ಲಲ್ಲೈಸುವನೀ ಧರಣಿಯನಿಂದು (ಶ್ರೀ. ೬೬-೨).

[ಲಲ್ಲೆ + – ಇಸು]

ಲಲ್ಲೆ (ನಾ). ೧. ಮುದ್ದು : ಪ್ರೀತಿ : "ಲಲ್ಲೆಯೆಂದಕ್ಕು ಮುದ್ದಿಂಗೆ ಪೆಸರು" (ಶ್ರೀಪಾಂ. ೬೬) ; ಲಾಲಿಸಿ ಕೀರ್ತಿರ ಕಿವಿಗೋವಮಳವಾಡಿದ ಲಲ್ಲೆಯಿನೆ ಅನುರಾಗದಿ ಲಿಪಿಸುವೆನು (ಜಯಣಾ. ೦-೨೩) ; ಮಾತಿನಲ್ಲಿ ಲಲ್ಲೆ[ಜಾತೀ. ೮೬] ಮನದಲ್ಲಿ ಘಾತಕತನವುಳ್ಳವನ ಕನವ್ಯನೆಂಬರು (ಅಜಿಂತೀ. ೧೯-೨೨). ೨. ವಿನೋದ : ಸರಸ : ಲಘಿತಾಂಗನಂ ದುನಂಗೊಳಿಸುವರಿಚ್ಛೆಕಾರ್ತವದ ಲಲ್ಲೆಯಾ ಪಗ್ಗದ ದೇಸಕಾರ್ತಿಯರ್ (ಶಾಪಾ. ೨-೬೦) ; ತಮ್ಮ ಲಲ್ಲೆ ಕುಣಿತಗಳಲ್ಲಿ, ಪುಷ್ಪಾಪಚಯದಲ್ಲಿ, ಜಲಕ್ರೀಡೆಯಲ್ಲಿ, ಯಾರನ್ನು ಲೆಕ್ಕಿಸದೆ . . . ನುಗ್ಗುತ್ತಿರ್ದರ್ (ಗದ್ಯಕ. ೬೨).

ಲಲ್ಲೆಯಾಡು = ಮುದ್ದಾಡು : ಬಾಲಸೂರ್ಯನ ಬಂಗಾರ ಕಿರಣಗಳು ಎಗಳೆ ಜಾಜಿ ...ಗುಲಾಬಿ ಬಳ್ಳಿಗಳ ಮೇಲೆಲ್ಲ ಲಲ್ಲೆಯಾಡುತ್ತಲಿದ್ದವು (ಪಾಪುಚ. ೦೦೨). ಲಲ್ಲೆ ಹಾಕು = ವಿನೋದಪಡು : ಸಂತೋಷಪಡು : ಕಂಡವರ ಮಕ್ಕಳನ್ನು ಭಾವಿಗೆ ತಳ್ಳಿ ಅವ ತೇಲಿ ಮುಳುಗುವುದನ್ನು ನೋಡಿ ಲಲ್ಲೆ ಹಾಕುವ ಗುಣವಿಲ್ಲ (ಆದಿಪು. ೦೦). **ಲಲ್ಲೆಹೊಡೆ** = ಸರಸವಾಗಿ ಮಾತನಾಡು ; ಚಕ್ಕಂದವಾಡು : ಅವಳೂ ಅವನೊಡನೆ ಲಲ್ಲೆ ಹೊಡೆಮುತ್ತಿದ್ದಳು (ಪುಚಾಶ್ಯಾ. ೦೧) ; ಓಣಿಯಲ್ಲಿಯೋ ಪಡಸಾಲೆಯಲ್ಲಿಯೋ . . . ಏಂತು ಅವರು ಲಲ್ಲೆ ಹೊಡೆಯುತ್ತಿದ್ದರು (ಪ್ರಚು. ೩೭).

[ದೇ.ತ ತುಳು. ಲಲ್ಲೆ, ಲಲ್ಲ; ತೆಲು. ಲಲಿ]

ಲಲ್ಲೆಗಣ್ಣು (ನಾ). ಪ್ರೀತಿಯನ್ನು ಸೂಸುವ ಕಣ್ಣು : ನಿಡಿಗಣ್ಣ ಪುಲ್ಲೆಗಣ್ಣವರೆಸಳ್ಗಣ್ಣ ಲಲ್ಲೆಗಣ್ಣವರ್ ನಗೆನೋಟದ ತೋರ ಧಮ್ಮಿಲ್ಲಿಯರೆಯ್ದಿತೊಗ್ಗಿನಲಿ (ಪೂಚಕ. ೨೪-೦೩).

[ಲಲ್ಲೆ + ಕಣ್ಣು (< ಕಣ್)]

ಲಲ್ಲೆಗರೆ ' ಲಲ್ಲೆಗಜಿ ' ನೋ.

ಲಲ್ಲೆಗಜಿ, ಲಲ್ಲೆಗರೆ (ಕ್ರಿ). ೧. ಪ್ರೀತಿಯ ಮಾತನ್ನು ಆಡು ; ರಮಿಸು : ಮುದ್ದಿಸು : ವಲ್ಲಭನಿದ್ದಾನೆಂದು ಲಲ್ಲೆಗಜಿಯ ಬೇಡ (ಸಿದ್ಧಚ. ೪. ೦೦೨-೬) ; ರುಗ್ಮಮಿಣಿ ಮುನಿಯೆ ಪುಂಡರೀಕಾಕ್ಷನಾಕೆಯ ಚರಣದಲ್ಲಿ ನೊಸಲಂ ಬಾಚಿ ಲಲ್ಲೆಗಜಿಯೆ (ಶಾಕೃಣಾ. ೨೬-೦೦) ; ರನ್ನಗಲ್ಲೆ ಡವು ಪುಲ್ಲ ನಲ್ವಾಸಿನೊಳ್ ಬೆಲ್ಲದಿಂ ನಲ್ಲಳ್ವಿರಸು ನಿಲ್ಲದ ಕಾಳ್ಕೆರ್ದು ಮೆಲ್ಲ ಮೆಲ್ಲನೆ ಲಲ್ಲೆಗಜಿವ (ಜಸಾಪ್ರ. ೬೬-೨). **ಲಲ್ಲೆಗರೆ** : ೧. "ವಾನೇ ಚಿನ್ನವರಿ" ಎಂದು ಪೈದಿ ಬಾಸೋವ್‌ತನಿ ಲಲ್ಲೆಗರೆದನು (ಕುಚ. ೨೨೮). ೨. ಸರಸವಾಡು ; ಚಕ್ಕಂದವಾಡು : ಕೊಂಚ ಸಲುಗೆ ಕೊಟ್ಟೆಯೋ ಲಲ್ಲೆಗರೆಯೋಕೆ ಬರುತ್ತವೆ (ಪ್ರಚು. ೦೨೦). [ಲಲ್ಲೆ + ಕಜ್[1]]

ಲಲ್ಲೆಗಾರಿಕೆ (ನಾ). ಪ್ರೀತಿಯನ್ನು ತೋರಿಸುವುದು ; ಪ್ರಣಯ : ಮಟಿತಿ – ಲಲ್ಲೆಗಾರಿಕೆಯನಾದಿದಪನೆಂಬುದು (ಶಾಪ್ರ. ೦೬).

[ಲಲ್ಲೆ + – ಕಾರ[1] (< – ಕಾಱ) + – ಇಕೆ]

ಲಲ್ಲೆಗಾರ್ತಿ (ನಾ). ಸರಸವಾಡುವವಳು ; ಚೆಲ್ಲಾಟವ ಹೆಣ್ಣು : ಬೆಳತಿಗೆ ಗಣ್ಣ ದಿಡಂಗಿ ಲೋಲಾಪಾಂಗದ ಲಲ್ಲೆಗಾರ್ತಿ ಕುಡುವೆರ್ವಗಳ ಕುಶಲ (ಅಜಿ. ೫-೪೬ ೫). [ಲಲ್ಲೆ + – ಕಾಱ + – ತ್ತಿ[3] (<– ಇತ್ತಿ)]

ಲಲ್ಲೆಗೆಯ್, ಲಲ್ಲೆಗೈ (ಕ್ರಿ). = ಲಲ್ಲೆಗಜಿ ೧ : ಲಲ್ಲೆಗೆಯ್ದು ಲಲ್ಲೆಗೆ ವಜಿದಿರ್ದೊಡೆ (ಶಾಪಣಾ. ೪-೦೦೬) ; ಪಕ್ಕಮಂ ಬಿಚ್ಚ ಲಲ್ಲೆಗೆಯ್ದು [ಜಾತಾಂ. ಗಜಿದ]ತ್ತು ಪಾರಿವಂ ಪಾರಿವದೊಳ್ (ಗಿಶಿ. ೨-೨೨) ಲಲ್ಲೆಗೆಯ್ಯುತ್ತೆ ದೈನ್ಯಂದೋಜಿ (ಶಕ್ರಣಾ. ೭-೩೦). **ಲಲ್ಲೆಗೈ** : ಗಲ್ಲ ಮನೊಲ್ದೊಲಿದಿತ್ತಿ ಮುದ್ದಿ ಪರ್ ಮಾಣವ ಲಲ್ಲೆಗೈವರ್ (ಅಜಿ. ೬-೦೨೩) ; ಲಲ್ಲೆಗೈದೊಲವನಾಣ್ಮಂಗೆ ತಾನೆಸೆದಳು (ಶ್ರೀಪಾಣಾ. ೦೦-೨೨) ; ಬೀಸು ವಿಜಿಸಲಂ ಸೂಸುವ ಸೋನೆಯಂ ಸೈಸಿದೆ ಪಕ್ಕೆಯೊಳಿ ಪಟ್ಟು, ಕಣಸಂ ಲಲ್ಲೆಗೈದು (ರಾಷಾಕ್ಕ. ೩-೨೭). [ಲಲ್ಲೆ + ಕೆಯ್[1]]

ಲಲ್ಲೆಗೈ ' ಲಲ್ಲೆಗೆಯ್ ' ನೋ.

ಲಲ್ಲೆನುಡಿ (ನಾ). ಪ್ರೀತಿಯ ಮಾತು ; ಮುದ್ದುಮಾತು ; ಸರಸ ಸಲ್ಲಾಪ : ಗದ್ಗದತ್ವಂ ಪಡದಿರ್ಪ ಲಲ್ಲೆನುಡಿ ಲೀಲೆಯನೀವು (ಅಜಿ. ೬-೦೦೬) ; ಎಸೆವಂಗಪರಿಮಳಂಗಳ ನಾಸಿಕದಿನೀಂಟಿ . . . ಕರ್ಣಂಗಳೊಳು ಲಲ್ಲೆನುಡಿಯಿನಿದುಗೇಳ . . . ಸುರತಪನೆಸಗಲು (ಶಾಪಣಾ. ೪-೩೦) ; ಸವಿ ಲಲ್ಲೆನುಡಿಗೆ ಲವಲವಿಪ ನಾಲಗೆ ಕೂಟಕೆ ಕಾತರಿಸಿ ಮಿಡುಮಿಡುಕಲೊರ್ವನಾಣತೆ (ಪಾಪು. ೦೯-೩೨). [ಲಲ್ಲೆ + ನುಡಿ[2]]

ಲಲ್ಲೆಮಾತು ' ಲಲ್ಲೆವಾತು ' ನೋ.

ಲಲ್ಲೆವಾತು, ಲಲ್ಲೆಮಾತು (ನಾ). = ಲಲ್ಲೆನುಡಿ : ಲಲ್ಲೆವಾತಿಂ ಗಲ್ಲವ ಪಿಡಿದು ಪೆಪ್ಪರಿಮಗ್ದದಂತೆ ನಾ ನೀನುಭಯವಿಲ್ಲದರಂತೆ ಕೂಡಿಪ್ಪ ಪ್ರಾಣೇಶನೇ (ಕಸಪ. ೨-೦); ಹಲವು ಪರಿಯಲಿ ಲಲ್ಲೆವಾತಿನಲಲದು ರಾಮನ ಕೋಮಲಾಂಭ್ರಯೊಳಿಳುಹಿದಳು ಮೂರ್ಛಿಯನು (ಕೃಪಪಾ. ೬-೪-೨೩); ಜತೆಗೊಂಡು ಸಾರ್ದು ಇನಿಪೊಬ್ಬುಂ ಲಲ್ಲೆವಾತಿಸ ಸೊಲ್ಲ ಸೊಗದೊಳಿರ್ದು (ಜಾಪಪ್ರ. ೬೦-೨೬). **ಲಲ್ಲೆಮಾತು** : ಲೇಸು ಹಾಸು ನೋಟವಾಭರಣ ಆಲಿಂಗನ ವಸ್ತ್ರ ಜುಂಬನವಾರೋಗಣೆ ಲಲ್ಲೆದಮಾತು ತಾಂಬೂಲ ಲವ ಲವಿಕೆಯೆ ಅನುಲೇಪನಮೆನಗೆ (ಪುಚಾರ್ಯ. ೪. ೦೦೪-೨೬೬). [ಲಲ್ಲೆ + ಮಾತು[1]]

ಲಲ್ಲೈಸು ' ಲಲ್ಲಯಿಸು ' ನೋ.

ಲಾಯರಿಕೆ (ನಾ). ವಕೀಲನಾಗಿರುವಿಕೆ ; ವಕೀಲವೃತ್ತಿ : ಸೀತಾರಾಮು ಮೋಡಲು ಗಡುಸಾಗಿದ್ದರೂ ಸ್ವಭಾವ ಮಾತ್ರ ಬಹಳ ಮೃದು . . . ಅದರಿಂದಲೇ ಇರಬೇಕು ಲಾಯರಿಕೆಯಲ್ಲಿ ಅಷ್ಟಾಗಿ ಹೆಸರು ಬಾರಲಿಲ್ಲ (ಆಡುಮ. ೬೬). [ಲಾಯರು + – ಇಕೆ]

ಲಾಯರು, ಲಾಯರ್ (ನಾ). ನ್ಯಾಯವಾದಿ ; ವಕೀಲ : ಮೃದುಸ್ವಭಾವದ ಜನರು ಲಾಯರುಗಳಾದರೆ ಕಕ್ಷಿಗಾರರಿಗೆ ಕೈಲಾಸವೇ ಗತಿ ! (ಆಡುಮ. ೬೬). ಲಾಯರ್ : ಈಗ ಮೈಸೂರಿಗೆ ಬಂದು ಲಾಯರ್ ಆಗಿರಲು ಪ್ರಯತ್ನಿಸುತ್ತಿದ್ದ (ಆಡುಮ. ೬೬). [←ಇಂ. Lawyer]

ಲಾಯವಳ್ಳ (ನಾ). ಲಾಯದ ಸೇವಕ : ಈ ಲಾಯಧಿಂ ಮಿಟ್ಟಿ ಬಂದತ್ತರೇ ಕೊರ್ಗೊಂಡಗಂ ಭೋಯನುತೆ ಪೆಱಗೆ ಸಾರ್ತರ್ಪಿನಂ ಲಾಯವಳ್ಳರ್ (ಪಾಕ್ಕಗೊಪ. ೫೦-೬೯). [ಲಾಯ + – ವಳ್ಳ.(< – ವಳ್ಳ)]

ಲಾಯಿ (ನಾ). ವರಸೆ (?) : ಕಾಯದಲಿ ಸಲಿ ಚೊಕ್ಕಯದಲು ಪಾಯಕರ ದಂಡೆಯಲಿ ಲಗುಡೆಯ ಲಾಯಿಯೊಳಗೆ ನವಾಯಿ ಬಿನ್ನಾಣದಲಿ ಬೇಸಱದ ಸ್ಥಾಯಿಯಲಿ ಸಂಚರಿಯಲೀಯದಳ್ಳಾಯಿಯಲಿ ಬಂಧದ ವಿನೋದದಲಾಯತನವನೞಿಪಿಹನೆ ಮಜ್ಜನ ರಾಯ ಕೇಳೆಂದ (ಭಾಮಾ. ೬೮೬. ೯-೩೬). [?]

ಲಾರಣಾ (ನಾ). (?) : ಮಾರ್ಗದಲ್ಲಿ ಅವರನ್ನೆಲ್ಲಾ ಲೂಟಿಮಾಡಿ ಭರತವ್ಷ ಕುದುರೆ ಹೈಕೆ ಕಲವು ತಮ್ಮ ಕಡೆ ಲಾರಣಾ ಬರಿಸಿಕೊಂಡು . . . ಕೋಟೆಯಲ್ಲಿಯಿದ್ದ ಪಟ್ಟಜನೆಲ್ಲಾ ಹೆಗೆದು ಕಡತನಾಳು ಕೆಲಾಳು ದೋರೆ ಮೇಲೆ ಯಿಳಿಸಿದರು (ಕೃದಪ. ೬೯). [?]

ಲಾರಿ (ನಾ). ಸಾಮಾನು, ಸರಂಜಾಮುಗಳನ್ನು ಸಾಗಿಸುವ ಒಂದು ಬಗೆಯ ಮೋಟಾರು ವಾಹನ : ಲಾರಿಯಲಿ ಇದನು ಸಾಗಿಸಿ ಇಳಿಸಿ ಬಾಗಿಲಲಿ ಹಣ ಸಂದಿತೆಂದು ತೆರೆದನು ಸಂತುಷ್ಟಿಯಲಿ (ಬೀಚಮು. ೬೯-೦೩); ದೊಡ್ಡದೊಂದು ಲಾರಿ ಬಂದು ನಿಂತಿತು (ಕೃಬಿಪ. ೫೮) : ಘಾಟಿಯ ದಾರಿಯ ಲಾರಿಯ ನಡಸುವುದು (ಪಂಧ್ರಪ್ರ. ೦೦೮-೨೯). [←ಇಂ. lorry]

ಲಾಲ್ (ನಾ). ೧. ಕೆಂಪುಬಣ್ಣ ; ಕೆಂಬಣ್ಣ . ೨. ಕಂದುಬಣ್ಣದ ಮೈ ಹಾಗೂ ಕೆಂಬಣ್ಣದ ಎದೆ ಇರುವ ಒಂದು ಬಗೆಯ ಹಕ್ಕಿ : ಚಿಕ್ಕ ಹಕ್ಕಿಗಳಲ್ಲಿ ಹೂಗುಬ್ಬಿಗಳ ಸಾಲಿಗೆ ಸೇರುವ "ಲಾಲ್" ನವ್ಮಲ್ಲಿ ಅತಿ ಪ್ರಿಯವಾದ ಹಕ್ಕಿ (ಪಾಂಪ್ರ. III. ೦೪೩).

ಲಾಲ್‌ತರಣಾರಿ = ಮಾಂಸ : ಮುಖ್ಯವಾಗಿ ಅವನಿಗೆ ಬೇಕಾದುದು ಲಾಲ್‌ತರಣಾರಿ (ಪಜ್ಯೋ. ೨೨೨). [←ಪಾರ. ಹಿಂ. ಮರಾ.ಲಾಲ್]

ಲಾಲ್‌ತಿಗಡೆ (ನಾ). ಒಂದು ಬಗೆಯ ತಿಗಡೆ ; ಕೆಂಪು ತಿಗಡೆ : ''ಸರಳಾ, ಶ್ರಿಪುಟಾ . . . ಭೇದಿಯಾಗುವ ಲಾಲ್‌ತಿಗಡೆ'' (ಕಪ್ರಾಲೆ. ೦೪೬).

[ಲಾಲ್ + ತಿಗಡೆ]

ಲಾಲ್‌ಬಾಗ್, ಲಾಲಬಾಗು (ನಾ). ಉದ್ಯಾನವನ ; ತೋಟ : "ಆಕ್ಸ್‌ಫರ್ಡ್, ಉದ್ಯಾನಂ . . . ಅರಸುಗಳಿಂದ ಹಾತಿಸಲ್ಪಟ್ಟಿರುವ ಊರು ಹೊರಗಣ ತೋಟ, ಲಾಲ್‌ಬಾಗ್" (ಕಪ್ರಾಲೆ. ೦೦೦) ; ಲಾಲ್‌ಬಾಗಿನಿಂದ ದವಲತ್ತುಬಾಗು . . . ಪ್ರಾರಂಭಮಾಡಿಸಿದರು (ಪಾಪೋಕ್ರ. ೪೨). ಲಾಲಬಾಗು : ಸರ್ವಮಾನ್ಯಮಂ ಪಡದು ಒರಿಯ ಕೆಱೆಯ ಕೆಳಗೆ ಲಾಲಬಾಗಿನ ಹರಿನೀರ್ಗೆ ಬಟ್ಟೆಡೆ ತೋಂಟ (ಶಾಇಇ. IX-i. ೫೬೭-೬೪ ; ೧೨೦೦) ; 'ಚಿಕ್ಕಲಾಲ್‌ಬಾಗ್' ಎಂದು ಯಾರು ಹೆರಿಟ್ಟರೋ, ಏಕೆ ಇಟ್ಟರೋ ತಿಳಿಯದು. ಬೆಂಗಳೂರಿಗೆಲ್ಲ ಹಮ್ಮೆಯ ಉದ್ಯಾನವಾದ ಲಾಲ್‌ಬಾಗಿಗೂ ಇದಕ್ಕೂ ಒಂದು ವಿಷಯದಲ್ಲೂ ಹೋಲಿಕೆಯಿಲ್ಲ (ಜ್ಞಾಚೋ. ೪೦). [ಲಾಲ್ + ಬಾಗ್]

ಲಾಲ (ನಾ). ಒಂದು ಬಗೆಯ ಅಳತೆ : "ಸಜ್ಜರಸ – ಲಾಲಿ" (ಲಪಂ. ೦೬೦). [ಸಂ. ಲಾಲಾ]

ಲಾಲಂಕಿ (ನಾ). ಒಂದು ಬಗೆಯ ಆಟ (?) : ಒಂದೆದಿವಸಂ ದ್ರಾಹ್ಮಣರ ಪುತ್ರರೊಳಗೆ ಬಸವಂ ಸಂತೋಷದಿಂದೆ ಲಾಲಂಕಿಯಾಡಲು ಪೊಮ್ ಭ್ರಾಂತನುಂ ಮುಕ್ಕೊರ್ವನುಂ ಬಾವಿಯೊಳು ನೂಂಕಿಯಿಂತು ಕೆಡಪುವರೆ ಬಸವರಸನೇ ಎಂದಮ್ಮುನಿವನ ಮೇಲಿಳ್ಕಲು (ಕ್ರಮಚ. ೬-೭೭). [?]

ಲಾಲಂಗಿ (ನಾ). [ಸಂಗೀತ] ತಾಯಗಳಲ್ಲಿ ಒಂದು ಪ್ರಭೇದ ; ರಾಗಾಲಾಪನೆಯ ಒಂದು ಪ್ರಕಾರ : ಗಮಕಂ ಗಾರವಂಬಡೆಯೆ ಗಹಗಹಿಕೆಗೊಂದಂಗೊಂಡಿ ಚಡಂ ಬಾಹಟಂ ಲಾಲಂಗಿ ತನ್ನೆವನೆ ನಿಸ್ಸರಡೆ ರಂಗರಕ್ಕೆ ಬೇಗವಣಕಿತು . . . ಕಮ್ಮನೆ ಪೆಸರಂ ಬಿಡಂಗುವಡೆಯೆ ಪಾಡುತ್ತಿರೆಯುಂ (ಶಾಅಚಕ್ಕ. ೦೬-೭೮ ಪ). [?]

ಲಾಲಣೆ (ನಾ). (?) : ನೂಕಿದರೆಳ್ಳಾಗೆ ಪಾಲ ಮಣಿಯೊಳ್ ಪರಿಸಾ ಮೇಲುಂ ವಿಷಮಾಗಳಿದ್ದಡೆ ಮೂಲದೊಳುಂ ದ್ವಿಗುಣಗಾಣ್ ಅದನಂ ಮತ್ತಾ ಪಾಲಿಂ ಮೂಱಿನು ಕೂಡಿಸು ಲಾಲಣೆಯೊಳ್ಗುಣಿಸೆ ಔವಮಣೆಯೊಳ್ಪರಿಸಾ (ಜಾಕ್ಕ. ೭೮-೩). [?]

ಲಾಲಣೆ (ನಾ)..೧. ಆಕ್ಷೇಪಣೆಯನ್ನು ತೋರಿಸುವುದು; ಮುದ್ದಾಡುವುದು; ಮುದ್ದಾಟ : ಬಾಲಕನ ಲೀಲೆಯಂ ಕಂಡು ಓಗ್ಗುವಳೊಮ್ಮೆ ಲಾಲನೆಗಳ್ಗೆಂದಳಲ್ದು ಮಱುಗುವಳೊಮ್ಮೆ (ಕೃಪಾಭಾ. ೨೮-೦೯), ಪಾಲನೆ ಇಲ್ಲದಿದ್ದರೆ ಲಾಲನೆಗೆ ಕಿಮಿಯೇ ? (ಗದ). ೨. (ರಕ್ಷಣೆಯಲ್ಲಿರುವ ಕಾಡಿಮ್ಮೆಗಳ) ಗುಂಪು (?): ಕಂಡ ಮೃಗ ಮೈದೋಯದಿಕ್ಕೆಯ ಹಿಂಡು ಹೊಳಿವ ಹುಲಿಯ ಮೇಕೆಯ ಮಿಂಡವಂದಿಯ ಲಾವಣಗೆಯ ಲುಲಾಯ ಲಾಲನೆಯ ತೊಂಡುಮೊಲನ ತೊಡಂಕು ನವಿಲಿನ ಖಂಡೆಯದ ವೊಳನೆಡಪದ ಪಿಡ್ಡದ ಹಿಂಡುಗಳ ತೋಱಿಸುಮೆನು (ಶಾಚಾ. ೦೬-೦೬). [ಸಂ. ಲಾಲನ]

ಲಾಲಬಂದಿ ' ನಾಲಬಂದಿ' ನೋ.

ಲಾಲಬಾಗು ' ಲಾಲ್‌ಬಾಗ್' ನೋ.

ಲಾಲಸ (ನಾ). ೧. ಅತಿಯಾದ ಆಸೆ—ಬಯಕೆ : "ಲಾಲಸಾ, ಮಹಾನ್ಲಗಿ —ಹೆಚ್ಚಾದ ಅಪೇಕ್ಷೆಗೆ ಹೆಸರು" (ಕಿಷ್ಕಾ. ೬೬. ೬೬) ; ಮಾತುಗಳ್ ಮಿಸುನ ರಾಗೋನ್ಮಾದಮಂ ಬೀಱ್ ಬಾಹುಗಳಾಲಿಂಗನಲಾಲಸಂಗಳನೆ ಧೈರ್ಯಂಗೆಟ್ಟು ಮೇಜ್ಞಾಯ್ತ್ ಬೇಱ್ಪೆಗೆ ಪೌಲಸ್ತ್ಯನುಮೊತ್ತುಗೊಟ್ಟನೆಲಾಱಂದರ್ಪಕಂ ದಂಡಿಸಂ (ಪಂಚಾಚಾ. ೯-೦೨೮). ೨. ಅತಿಯಾದ ಆಪೇಕ್ಷೆಯುಳ್ಳವನು : "ಲೋಲುಭಂ, ಲೋಲುಪಂ, ಲೋಲಂ, ಲಾಲಸಂ, ಲಂಪಟಂ–ಈ ೫ ಅಳವುವಂ" (ಹೂಶಾಬು. ೫೮-೦೧೬) ; ಶ್ರೀರಾಮಚಂದ್ರ ದರ್ಶನಲಾಲಸರ್. . . ಕಾಣಿಸಿಕೊಂಡರ್ (ಕಾಪಾಕ್ಕ. ೦೬-೬) ; ಅತ್ಯಲ್ಪ ಸಂಖ್ಯೆಯ ಜನ ಅತಿಧನಿಕರಾಗಿ ಭೋಗಭಾಗ್ಯಗಳಲ್ಲಿ ಲಾಲಸರಾಗಿರುವುದು ಅನ್ಯಾಯ (ಪಜ್ಯೋ. ೨೦೬). [ಸಂ.]

ಲಾಲಸಕ (ನಾ) –ಲಾಲಸ ೨ : "ಲೋಲುಪನಭಿಲಾಷುಕನತಿಲಾಲಸಕಂ ಗೃಧ್ನು ಲಂಪಟಂ ಲುಬ್ಧನವಂ" (ಪಜ್ಞಾಕೋ. ೧೧-೬). [ಸಂ.]

ಲಾಲಸೆ (ನಾ). ೧. ಅತಿಯಾಸೆ; ಉತ್ಕಟವಾದ ಇಚ್ಛೆ; ಔತ್ಸುಕ್ಯ : ಎಲ್ಲಿ ಸೌಂದರ್ಯವಿರುವುದೋ ಅಲ್ಲಿ ಲಾಲಸೆಯು ಸುತ್ತುವರೆದಿರುತ್ತದೆ (ಪಜ್ಞಾಂಕ. ೬೧೬); ನಮ್ಮ ಪ್ರೇಮವು ಶುದ್ಧ. . . ಅದರಲ್ಲಿ ಲಾಲಸೆ ಇಲ್ಲ (ಕ್ರಗಾಜ. ೦೧೦). ೨. ಗರ್ಭಿಣಿಯ ಆಸೆ.—ಬಯಕೆ : "ದೋಹಳಂ,

ದೌಹೃದಂ· ಶ್ರದ್ಧಾ· ಲಾಲಸಾ-ಈ ೪ ಬುಯಕೆ" (ತಂಜಾಮು· ೮೨-೧೮೪). [ಸಂ.]

ಲಾಲಾಂಬು (ನಾ)· ಜೊಲ್ಲು : ಕರಿಕರಭೀಕರಮದಜಲ ತುರಂಗಜಾರಾಂಬು ಸೇಕದಿಂದಬುದುಬಿರ್ದ ರಜಂ ನರೇಂದ್ರಚಾಮರಮರುದ್ವಿಷತಿಯಿಂ ತೆರಳ್ದು ತೂಳ್ದತ್ತು (ಅಭಿ· ೦೦-೩೬)· [ಸಂ.]

ಲಾಲಾಗ್ರಂಥಿ (ನಾ)· ಜೊಲ್ಲು ಉತ್ಪತ್ತಿಯಾಗುವ ಗ್ರಂಥಿ.–ಕೋಶ : ಪಚನಕ್ಕೆ ಸಂಬಂಧಿಸಿದ ಕಿಣ್ವಗಳನ್ನು· ಲಾಲಾಗ್ರಂಥಿಗಳು . . . ಸ್ರವಿಸುತ್ತವೆ (ಕೀಬಿಪ. ೨೯). [ಸಂ.]

ಲಾಲಾಜಲ, ಲಾಲಾಜಳ, ಲಾಳಾಜಳ (ನಾ)·=ಲಾಲಾಂಬು : ಖರೀಸ ಸ್ಖಲನಭೀಮಭುಳಲಾಲಾಜಲಮುಗುತಿರೆ ಕುರಗರತ್ನಮಿಸೆದತ್ಕಾಗಳ್ (ಗಾದಂಪೂ·೧೫೨); ಮೋಹವಲ್ಲರಿ ಪಸರಿಸಿ ಸರ್ವಿದುದು ನುತರ ಲಾಲಾಜಲದಿಂ (ತಂಡಾಪು· ೩-೦೩೯); ಗಜಗಳ ಮದಧಾರಾಜಲದ ಮತ್ತು ಕುದುರೆಗಳ ಲಾಲಾಜಲದ ಪ್ರವಾಹವು . . . ಅನವರತವಾಗಿ ಹರಿಯುತ್ತಿತ್ತು (ಕಬಿಂ· ೧೩). **ಲಾಲಾಜಳ** : ಗಜಮದಧಾರಾಜಳದ ಪಯಂಗಳ ಲಾಲಾಜಳದ ಪೊನಲ್ (ಪ್ರ· VII, ೫೧೨· ೦೦೦-೦೩; ೧೨೨). **ಲಾಳಾಜಳ**: ಘಟ್ಟಿಸಿದ ಈಟಿ ಘಟ್ಟಣೆಯೊಳ್ ಪುಟ್ಟಗೊಡೆದ ತಾಳುಗೆಗಳ ರುಧಿರಜಲದೊಳ್ ಬೆರಸಿ ಪದಗೆಂಪನಾಳ್ದ ಜಾತ್ಯಶ್ವದ ಲಾಳಾಜಳದೊಳಂ (ತಂಕಣಾ. ೦೦-೭೦ ೪); ಹಯರಾಳಾಜಳಮುಂ ಮದೇಭಪದಮೂತ್ರಾ ಸಾರಮುಂ. . . ಪೊಟ್ಟಿಸಿ (ಕುಕೃತಿ. ೩-೧೩)· [ಸಂ.]

ಲಾಲಾಜಳೆ 'ಲಾಲಾಜಲ' ನೋ·

ಲಾಲಾಟ (ಗು)· ೧· ಹಣೆಯಲ್ಲಿರುವ : ಭವಲಾಲಾಟವಿಲೋಚನಾಗ್ನಿ ಶಿಖೆಯಿಂ ಬೆಂದಾ (ತಂಜಾ· ೭-೨೪)· (ನಾ)· ೨· ಹಣೆ: ನೊಸಲು· [ಸಂ.]

ಲಾಲಾಟಿಕ (ನಾ)· ೧· ಒಡೆಯನ ಮುಖವನ್ನು ನೋಡಿಯೇ ಅವನ ಅಭಿಪ್ರಾಯವನ್ನು ತಿಳಿದುಕೊಳ್ಳುವವನು· ೨· ಕೊಟ್ಟ ಕೆಲಸವನ್ನು ಮಾಡಲು ಅಸಮರ್ಥನಾದವನು : "ಲಾಲಾಟಿಕಃ. ಪ್ರಭೋರ್ಭಾವ ದರ್ಶೀ—ಅರಸಿನ ಶಾತ್ಪರ್ಯವನ್ನು ತಿಳಿದವನು. ಕಾರ್ಯಾಕ್ಷಮಃ· ಕೆಲಸವನ್ನು ನಿರ್ವಹಿಸಲಾರದ ಅಸಮರ್ಥನು — ೨ಕ್ಕೂ ಹೆಸರು" (ಶಿಷ್ಟಾಂ· ೭೭೩). [ಸಂ. ಲಾಲಾಟಿಕ]

ಲಾಲಾರಸ (ನಾ)·=ಲಾಲಾಂಬು : "ಜೊಲ್ಲು· ಲಾಲಾ(ರಸ)· ಉಗುಳು· ಬಾಯಿನೀರು" (Saliva· ೨೦೫೩). [ಸಂ.]

ಲಾಲಿ₁ (ನಾ)· ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು; ಜೋಗುಳ : ಲಾಲಿ ಲಾಲಿ ರಂಗಯ್ಯಗೆ ಲಾಲಿ ಲಾಲಿ (ಶೋಂದ· ೩-೨೦೯ ಪ್ಪಂ); ಲಾಲಿ ವಿಸುನಿಯ ಜೊಂಟೆರ್ಸವೆ ಲಾಲಿ ಲಾಲಿಯೆಂದು ತೂಗಿದರಾಳಕನ್ನೆಯರು (ಪಚಪು· ೩೨-೦೦) ; ಜಗದಂಬೆ ತೊಡೆಯಲ್ಲಿ ಲಾಲಿ ಕೇಳುತ್ತ ಸೊಗವಿದ್ದೆಗೊಂಡವನು ಬರುವನೇ ಇತ್ತ ? (ಕಂತ್ರಿ· ೨೬-೦೩)· 'ಲಾಲಿಪದ' ಪರಾ. [ದೇ.ಕ ತಮಿ. ತೆಲು. ಲಾಲಿ]

ಲಾಲಿ₂ 'ಲಾಳಿ' ನೋ·

ಲಾಲಿತ· ಲಾಳಿತ (ಗು)· ೧· ಮಮತೆಯಿಂದ ಕೂಡಿದ; ಪ್ರೀತಿಯ : ಲಾಲಿತಾಸ್ಯವೆ ಮಮತೆ ತೊಳಗುವ ಲೋಲಲೋಚನವಲ್ಲಭಹುಕುಲಾಹಸಮೇಳವಾಗಿಹ ಗಿರಿವೆ ಮೆಜ್ದಳು ಶಂಕರಾಂಕವಲಿ (ಕ್ರಕುಲೀ. ೨-೦೦)· ೨· ಪ್ರೀತಿಯಿಂದ ಪೋಷಿಸಿದ,–ರಕ್ಷಿಸಿದ,–ಸಾಕಿದ : ಲಾಲಿತೋತ್ತಮ ವಾಜಿಗಳು ತೊಂಬತ್ತುಸಾವಿರವೆ (ಪಚಪು· ೩-೦೬). (ನಾ)· ೩· ಒಲವು; ಪ್ರೀತಿ: ಅನುರಾಗ. ೪. ಆನಂದ; ಸಂತೋಷ: 'ಲಾಲಿಸು' ಹೋ· **ಲಾಳಿತ** : ಪ್ರೀತಿಯಿಂದ ಸಾಕಿದುದು,–ಪೋಷಿಸಲ್ಪಟ್ಟುದು : ಲಾಳಿತವಾಗಿ ತನ್ನ ನಡೆಯಿಂ ನಡೆಗಲ್ಕೊಡದರ್ವ ಕೇಳಹಂಸಾಳಿಯ ಬೆನ್ನೊಳ್ಕೆದೆ ನಡೆಯಲ್ ಬಸಮಲ್ಲದೆ ನಿಂದು (ಪಗಾ· ೨-೮೬)· [ಸಂ.]

ಲಾಲಿತ್ಯ (ನಾ)· ೧· ಚೆಲುವು; ಸೌಂದರ್ಯ· ೨· ಮಾಧುರ್ಯ; ಇಂಪು : ಸರಸವದಶಯೊಡ್ಡಶಪಥಾಕರಣಮುಂತ ಲಾಲಿತ್ಯನಿಯಮಾಕ್ಷರ ಸುಲ್ಲಣಾಭಾವಮಾಗಿರೆ ರಚಿಸುವೆಂ ಕೃತಿಯ (ಪಗಾ· ೦-೦೪); ಸಂಗೀತವು . . . ಕೇವಲ ಲಾಲಿತ್ಯದೆಡೆಗೆ ವಾಲಿದಂತಿವೆ (ಪಾಡಿ· ೨೫೨)· ೩. [ಕಾವ್ಯಮೀ] ಶಬ್ದಗುಣಗಳಲ್ಲಿ ಒಂದು : ಶ್ಲೇಷ, ಲಾಲಿತ್ಯ . . . ಯೌಗಿಕೀ ಇವು ಏಳೂ 'ಶಬ್ದಗುಣಗಳು' (ಕೃಶಾ· ೨೩೨ ೦೩೫). [ಸಂ.]

ಲಾಲಿಪದ (ನಾ)·=ಲಾಲಿ₁ : ತಾಯಿಯ ಇಂಪಾದ ಲಾಲಿಪದವನ್ನು ಕೇಳುತ್ತಾ ಮಗು ಮಲಗಿತು (ಪಾಪ)· [ಲಾಲಿ₁+ಪದ]

ಲಾಲಿಸು (ಕ್ರಿ)· ೧· ಅಕ್ಕರೆಯನ್ನು ತೋರಿಸು; ಮುದ್ದಾಡು : ಪರುಗಳ್ ಕಪ್ಪುರಮೃಗಂಗಳ್ . . . ಪ್ರಜೆಗಳುಂ ತಾವೆಲ್ಲರುಂ ತಮ್ಮಯಾ ಶಶುವಂ ಲಾಲಿಸಿದರ್ಪರೇ (ಕೀಬಿಪ. ೨೪)· ಪಳಿಕಿಸುತೆ ಕಂಪಿಸುತೆ ಬೀಳ್ಕೊಂಡನಕ್ಕಜಂ ಲಾಲಿಸುತ್ತಾಲಿಸುತೆ (ಪಚಪು· ೩-೪)· ಯಾವಾಗಲೂ ಅದನ್ನು ಎತ್ತಿಕೊಂಡೇ ಇರುತಾ ಲಾಲಿಸುತಿದ್ದಳು (ಪಪಪುಣಾ· ೦೨೨). ೨· ಪೋಷಿಸಲ್ಪಡು; ಆರೈಕೆ ಹೊಂದು : ಅಂದಳವನೇರಿಕೊಂಡು ತಿರುಗಾಡುವದರಿಂದ ಆಯುಷ್ಯ ಹೆಚ್ಚಿ. . . ಈರ್ತಿಯಿಂದ ಲಾಲಿಸಲ್ಪಟ್ಟು ಬಹುಸಿದ್ಧಿಕರವಾಗಿರುವುದು (ಪಪಕ್ಕ· ೫೫). ೩. (ಕಿವಿಗೊಟ್ಟು) ಕೇಳು; ಆಲಿಸು : ಆಲಿಸಿನ್ನ ಬನ್ನಪವ ಲಾಲಿಸಿನ್ನ ಬಿನ್ನಪವ (ಪುಪಾಡಿ· ೨· ೩೭-೫೦); ಒರೆಯೆ ಲಾಲಿಸಲೋದುತಿರ್ದುದು ಕರಣಿಸಂದೋಹ (ಶಿಷ್ಟಾಂ· ೧೪-೩೦); ದಯವಿಟ್ಟು ನನ್ನ ಮಾತುಗಳನ್ನು ಲಾಲಿಸು (ಅಪಾಗ· ೫೯). ೪. ಸಂತೋಷಿಸು : ಮಾದ್ಯದೆಯ ಗತಿಗೆ ಜಘನಗಳೆದ್ದಾಡಲು ನಗುತ ಕೇಡು ಲಾಲಿಪರ್ ಬಲ್ಲರೆ ಪದ್ಯ ಪದ ಕಾವ್ಯದರ್ಥವ ದೊದ್ದೆಗರೇಂ ಬಲ್ಲರ್ (ಪಗಾಣಾ· ೭೩)· [ಲಾಲನೆ+—ಇಸು]

ಲಾಲಿಹಾಡು (ನಾ)· = ಲಾಲಿ₁ : ತೆಲುಗರ ಜನಪದಸಾಹಿತ್ಯ ತುಂಬಿದ ಸಾಹಿತ್ಯವಾಗಿದೆ· ಲಾಲಿಹಾಡುಗಳು . . . ಸುಗ್ಗಿಯ ಹಾಡುಗಳು ಆಚಾರವಾಗಿವೆ (ಪಾಡಿ· ೨೦೩)· [ಲಾಲಿ₁+ಹಾಡು₂ (<ಪಾಡು₂)]

ಲಾಲೆ, ಲಾಳೆ (ನಾ)·=ಲಾಲಾಂಬು : "ಸ್ಯನಕಾ· ಸ್ಯಂದನೀ· ಲಾಲಾ-ಪಿ ಬಾಯಿಜೊಲ್ಲು" (ಶಿಷ್ಟಾಂ· ೦೮೮) ; "ಲಾಲಾ=ಜೊಲ್ಲು" (ಶಾಸ್ಕೃ· ೫೭೦)· **ಲಾಳಿ** : ಕೊರೆಪೊಡೆ ಬೆಟ್ಟುಗಳ್ ಬಿರಿವುವೆಣ್ಮುವ ಲಾಳೆಯು ಲೊಳೆಗಳ್ ಪೊಸ್ಪುರಿವುವು (ತಂಕಥಾ· ೪-೦೦೦)· ಸಿಂಬುಳ್· ಸಿಳ್ಕುಗಟ್ಟುಳ್ ಲೊಳೆ ಲಾಳೆ ಸರಸ್ಮೂತ್ರಜಳಂ (ಕುಕೃತಿ· ೦೩-೮೪)· [ಸಂ. ಲಾಲಾ]

ಲಾಲ್ಯ (ನಾ)· ಅಕ್ಕರೆ ; ಪ್ರೀತಿ : ಕುಲ್ಮವಾದ್ಯರ ಲಾಲ್ಯವನಳರ ತಾಲ್ಯ ವಕ್ಷವುವೂಲ್ಮವಮಸ್ಕಾಲ್ಯಮ ಕೈವಲ್ಯವೀ ನಿರ್ಮಾಲ್ಯವೆನಲೆಸೆದು (ಪಚಪು· ೨೬-೩೩)· [ಸಂ.]

ಲಾವ (ಗು)· ೧· ಕತ್ತರಿಸುವ ; ತುಂಡುಮಾಡುವ· (ನಾ)· ೨· ಒಂದು ಬಗೆಯ ಪಕ್ಷಿ : ಲಾವುಗೆ ; ಪುರಲೆ : "ಲಾವಃ. ಲಾವಿಗೆ ಹಕ್ಕಿ . . . ಸಿಮಿಮಿಪಕ್ಕಿ—ಈ ೧೩ ಶಬ್ದಗಳೂ ಪಕ್ಷಿಭೇದಗಳಿಗೆ ಬೇರೆಬೇರೆ ಹೆಸರುಗಳು" (ಶಿಷ್ಟಾಂ· ೦೮೩); ಮಾರಾಳ ಲಾವ ಜಾತಕ ಬಕ ಖಂಜನ ದ್ರುಪದಿ ಘಟ ನಿಶಾಟನ ಪತ್ರಿತಂಕ ವರ್ತಕ ಕುರರೀಪ್ಲವಪ್ರಕರದಿಂದೆ ವಿರಾಜಿಸುಮಾನ್ನತಂ ಮನಂ (ಕಬಿಕ್ಕ· ೪-೬೨) ; ಪಿಳಿಪಿಳಿರ್' ಪಿಳಿಲೆಂದು ಲಾವಂಗಳುಬ್ಬಿದುವು (ಪಪು· ೪-೧೪). [ಸಂ.]

ಲಾವಂಚ 'ಲಾಮಂಚ' ನೋ·

ಲಾವಂಚಿ 'ಲಾಮಂಚ' ನೋ·

ಲಾವಕ (ನಾ)· ೧· ಕತ್ತರಿಸುವವನು; ಕಡಿಯುವವನು· ೨· ಬಾಡಿ ಹೇಳುವವನು; ಪಿಸುಣ: ಲಾವಕರ ನುಡಿಗೇಳಿ ನಡದರೆ ಭೂವಳಯ ದೇಕಾಧಿಪತ್ಯದ ಶಾವು ಕಡುವುದು (ಕಾಪ್ರಾ· ೬೨· ೨-೧೩); ಹೊನ್ನ ಭೃತ್ತರ ಮಹಾತ್ಮೆಯನಱಿಯದೀ ಲಾವಕರ ಮಾತಗೇಳಿ ತಗಸಿದ ಭೂರಿದುರ್ಧಾವ

ದುರವಸ್ಥೆಯ ನೋಡಲು (ಸಿಂಗಣ. ೨೨–೭೪) ; ರಾವಕರು ಬಿಜ್ಜಳನೊಳಿಂ ತೆಂದು ಪೇಳ್ದರು (ಕ್ರಮಜು. ೯–೩೬). ೩. ಕೆಡುಕ ; ದುಷ್ಟ : ಅರಸಿಗುಪ ಹತಿಯನೊದವಿಪದ ಲಾವಕ್ಕು ಕುಲಕೋಟಿಸಹಿತ ವಜ್ರವಲಯದೀ ಲಯವನೆಯ್ದುಯೆ ಜೀವಿಸುತ್ತಿಹನು (ಜಪಂತ. ೪–೬೩) : ಕೃಷ್ಣ . . . ಲಾವಕರ ತೊಲಗಿಸೋ (ಪೋಷಣ. ೨೨–೦) ; ಗಾವಿಲಗೆ ಭಾಗ್ಯವಾದೊಡೆ ಲಾವಕರಿಗೆ ರುಷ್ಟದುಷ್ಟದುರ್ಜನರ್ಗಲ್ಲದೆ ಭಾವಕರಿಂಗೊಲಿದೀವನೆ (ಪ್ರಭಾಲಿಂ. ೨೩೫). ೪. ಒಂದು ಬಗೆಯ ಹಕ್ಕಿ; ಲಾವುಗೆ: "ಕಾರಂಡವ ಲಾವಕ ಜೀವಂಜೀವಕ ಶಾರಿಕಾದಿಗಳ್ ವಿಹಗಜಾತಿಯಕ್ಕುಂ" (ಪಟ್ಟಿಕೋ. ೧೩–೨೦) ; ಹಾರಿದ ಗವ್ವುದು ಲಾವಕ ಗುಬ್ಬಿ ಸಾಳುವ (ಕಬ್ಬಣಾ.೬–೩೭). ೫. ಹಾವನ್ನು ಒಡಿದು ಅಡಿಸುವವನು: ಹಾವಾಡಿಗ: "ಪಾವಡಿಗ" (ಪಟ್ಟಿಪ. ೬. ೨, ೩೮). [ಸಂ.]

ಲಾವಕು ? (ನಾ). (?): ಸುಕವಿಪಿಕನಿಕರಪೀತ ಪಹಕಾರನಿವಸಂ ನಿಜ ವಿಪಯಧಿಪಾಸಿ ಲತಾನರ್ತ್ಯಕೀನರ್ತ್ಯನವಿನೋದಲಾವಕುಂ ಕುನಾಗಿಲ [ಕೋ]ಟಾ[ವೀ]ದಾವಪಾವಕಂ . . . ರಾಜಾವಿತ್ಯರಸರ್ (ಶಾಲ. ೨೦–೭–೦೭; ೧೦೮೨). [?]

ಲಾವಕ್ಕಿ (ನಾ). = ಲಾವಕ ೪ : ಗಿಡಗನನ್ನು ನೋಡಿ ಲಾವಕ್ಕಿಗಳ ಹಿಂಡು ಅಡಗಿಕೊಳ್ಳುವಂತೆ (ಕ:ಕಾಕ. ೩೦) ; ಕವುಜಗಪಕ್ಕಿಯ ಜಾತಿಯು. ಬಿಳಿಯು ಆಹಾರವೆಂದೆನಿಸುವ, ಒಂದು ಬಗೆಯ ಪ್ರವಾಸಪಕ್ಷಿ; ಲಾವಕ್ಕಿ; ಪುರಪಹಕ್ಕಿ (Quail. ೩೦೫). [ಲಾವ + ಹಕ್ಕಿ (< ಪಕ್ಷಿ). / ತುಳು. ಲಾವಕ್ಕಿ]

ಲಾವಗ ' ಲಾಪಗೆ ' ನೋ.

ಲಾವಗೆ, ಲಾವಗ, ಲಾವಿಗ, ಲಾವಿಗೆ, ಲಾವುಕ, ಲಾವುಗೆ (ನಾ). ೧. ಒಂದು ಬಗೆಯ ಪಕ್ಷಿ ; ಪುರಲೆ : ಮಂದಪಾಲನೆಂಬ ಮುನಿಗಮೊಂದು ಲಾವಗಂ ಪುಟ್ಟಿದ ನಾಲ್ಕುಂ ಲಾವಗೆಗಳಿಗ್ಗಿಸೂಕ್ಕಂಗಳನೋದುತ್ತುಮಿದಿರ ದಿದಿರಂ ಬರೆ (ಹರಿಹ. ೩–೦೦೦ ೫); ತಗರು ಕೋಟಿಗಳಂ ಲಾವಗೆಗಳನೆಸಿವೆ ಮೈವೋರಿಯಂ ಪಾಪಿಷ್ಠರ್ ಮಿಗೆ ಬಸನದಿಂದ ಪೋರಿಪರ್ (ಕಪಿಚ. ೩–೦೩); ಅರಗಿಳಿ ಪಾರಿವಂ ಕುರರಿ ಲಾವಗೆಯವ್ಯಕ್ಕತಂ (ನಂಚಿ. ೦–೭೪). ಲಾವಗೆ: ೧. 'ಕರಿಲಾವಗ', 'ಕೆಂಪುಲಾವಗ' ಪರಾ. ೨. ಹಾವಾಡಿಗ : "ಲಾವಗ — ಲಾವಕ = ಹಾವಾಡಿಗ" (ಕರ್ನಾಕೋ. ೩೨). ಲಾವಿಗ : ೧. ಲಾವಿಗನ ಹಕ್ಕಿಗಳೂ . . . ಅವನು ಹೇಳಿದಂತೆ ಪಿಕಾರಿ ಮಾಡಿಕೊಂಡು ಅವನ ಪ್ರೀತಿಗೆ ಪಾತ್ರವಾಗಿದ್ದವು (ಪುಗಪೋ. ೨೫). ಲಾವಿಗೆ : ೧. ಗಿಳಿಗಳಾ ಕುಳುವ ಲಾವಿಗೆ ಪುರುಳಿಯೆಜಲಾವಿಗೆ . . . ಹೊಡಗಳೆಂಬ ಪಕ್ಕಿಗಳು (ಜಾಲ್ಹಣ. ೩–೨೦) ; ಅರಿರಾಯಲಾವಿಗೆಗೊಡ್ಡಿದ ಬಲೆಯಿನೆ (ಕಬ್ಬಿಗ. ೦–೩೩) ; ಹದ್ದು ಬಿಗಿವಿಡಿದ ಲಾವಿಗೆಯಂತೆ (ಗೊಲ್ಲಕ್ಕಾ. ೦೦–೨೫೯). ಲಾವುಕ : ೧. ಇದೆ ಚೇತಲಾವುಕಸ್ಥನಂ . . . ಇದೆ ಕಟಿಜಲನಿನದಂ (ಕಾದಂಪು. ೦೫೩) ; ಶುಕ . . . ಲಾವುಕ . . . ಪಕ್ಷಿಕುಲಂಗಳಂ (ಪಜಿಗೆ. ೫೦೨). ೩. ಬಾಡಿ ಹೇಳುವವನು ; ಪಿಸುಣ : ದುಷಿಯಿಂದಿಲ್ಲಿಯಿಱ್ ಮಿಗೆ ಲಾವುಕನಂ (ಪಜಿಪು. ೦೫೦–೫೩); ಲಾವುಕರ ಪುಡಿಗೇಳಿ ಕೊರಿಸದೆ ಕಾವುದೊಲ್ಕಿತು (ಕಕ್ಕಿಪ. ೭–೭೮). ಲಾವುಗೆ : ೧. " ಲಾವುಗೆ ಕಪಿಂಜಲುಮೆನಿಕ್ಕು " (ಪುಂಗಣ. ೩೨–೦೦); ಕೊಂಗಿಲೆ ಜಾವಗೆ ಪೋದಗೆ . . . ಬಲಾಕೆ ಲಾವುಗೆ ಸೇನು (ಜಾಪ್ಪಣ. ೦೦೪೪ ಪೀಠ್ಯ); ತಿವುಗೆಯುಂಕೆ ಕೊರಸುಂ ಮೊದಲಾಗೊಪೆಬು ಪಕ್ಷಿಜಾತಿಗಳಂ ಬಪೆಯ ಪೊಡ್ಡಿ ಪಿಡಿದು (ವರ್ಧಾಣ. ೦೩೦–೩) ; ಲಾವುಗೆಯ ಕಂಠದಪ್ಪುರದಲ್ಕೆವಡಿ ಮಾಡಿ (ಪಜಿಪು. ೩–೩೫). [< ಸಂ. ಲಾವಕ. / ಪ್ರಾ. ಲಾವಗ]

ಲಾವಣಿ₁ (ನಾ). ಸೈನಿಕರ ಪಟ್ಟಿ ; ಸಿಪಾಯಿಗಳ ಯಾದಿ : ಜಡಸೆಂಬು ನುಡಿ ಶರಧಿಯೊಳುಂಟು ಭಂಗವೆಂದೊಡೆ ತೆರೆಯೊಳಗಾದಂತಹುದೂ ಪಡಸೆ ಕಾಣವೆನಲಿಡಿದ ಲಾವಣದೊಳನುತಿಯಲ್ಲದಪ್ಪತವಿಲ್ಲ (ಅಹುಬಾಂ. ೦–೩೪); ಕೃಷ್ಣರಾಯನು ರಾಜ್ಯವಾಳುತ್ತಿರುವಾಗ ನೂರಾಳು ನೂರುಕುದುರೆ ಲಾವಣಕ್ಕೆ ಶೇರದೆ ಇರುವ ದಿವಸ ಒಂದಾದರೂ ಇಲ್ಲ (ಕಣಾಮಂ. ೨೪, ೭೯). [ದೇ.ಪ ತಮಿ. ಇಲಾವಣ ; ಮಲ. ತೆಲು. ಲಾವಣ]

ಲಾವಣ₂ (ಗು). ೧. ಉಪ್ಪಿನಿಂದ ಕೂಡಿದ. (ನಾ). ೨. ಉಪ್ಪು. [ಸಂ.]

ಲಾವಣಿ₁, ಲಾವಳಿ (ನಾ). ಜನಪದಹಾಡುಗಳ ಒಂದು ಪ್ರಕಾರ : ' ಲಾವಣಿಯೆಂಬುದು ಗನಡಿಯವರು ಹಾಡುವ ಹಾಡು ' ಎಂದು ಜನ ಸಾಮಾನ್ಯದ ಅಭಿಪ್ರಾಯ (ಕರ್ಜಾಪಂ. ೫೦); ಹೆಂಗಸರ ಹಾಡುಗಳಲ್ಲಿಯೂ ಲಾವಣಿಗಳಲ್ಲಿಯಷಿ ಈ ಛಂದಸ್ಸಿನ ತಕಪದಿಯನ್ನೂ ರೂಪಾಂತರಗಳನ್ನೂ ಗುರುತಿಸಬಹುದು (ಕೃಡಿ. ೦೦೬) ; ಲಾವಣಿಗಳನ್ನು ಹಾಡಿದರು (ಹುಬ. ೬೫). ಲಾವಳಿ : ಲಘುಗಳ ವಿಳಿತವ ಪಾಡಿ ಕೊನೆಯಲಿ ಗುರುಗಳ ಹೂಡಿ ಅರ್ಥದ ಸಾರವ ಸೋಡಿ . . . ಲಾವಳಿ ಕೃತಿಗಳ ಪಾಡಿ (ರಂಪಾಗೀ. ೩–೦೬). [←ಹಿಂ. ಲಾವನಿ, ಲಾವನೀ ; ಮರಾ. ಲಾವಣೀ. / ತಮಿ. ಲಾವಣಿ ; ತುಳು. ಲಾವಣಿ, ಲಾವಳಿ]

ಲಾವಣ್ಕ ' ಲವಣ್ಕ ' ನೋ.

ಲಾವಣ್ಕೆ (ನಾ). ಭೂಮಿಯ ಒಡೆಯನಿಗೆ ರೈತರು ಸಾಗುವಳಿಗಾಗಿ ಕೊಡುವ ಹಣ ; ಗುತ್ತಿಗೆಹಣ ; ಗೇಣಿ : ಹೊಲಗಳನ್ನೂ ಲಾವಣಿಗೆ ರೈತರಿಗೆ ಬಿಟ್ಟುಕೊಟ್ಟು (ಗಂಪಾಯ. ೯) ; ಒಮ್ಮೆ ಲಾವಣಿಯು ವಸೂಲಿಗೆ ನರಹರಿಯು ಗೇಗೇಲೂರಿಗೆ ಹೋಗುವ ಪ್ರಸಂಗ ಬಂದಿತು (ಸಪಚಾ. ೦೧೦) ; ವಸೂಲಾದ ಹಣದ ಮೇಲೆ ಪ್ರತಿಗ್ರಾಮಕ್ಕೂ ಒಂದೆರಡು ರೂಪಾಯಿಯೂ ಸಲ್ಲುತ್ತಿತ್ತು. ಇದಕ್ಕೆ ಲಾಣಿ (ಲಾವಣಿ) ಎಂದು ಹೆಸರು (ಪಾಳಗ. ೦೨). 'ಲಾವಣೆವದ್ಧತಿ' ಪರಾ. [←ಮರಾ. ಲಾವಣೇ=ಜಮೀನನ್ನು ಬೆಳೆಯಲು ಯೋಗ್ಯವನ್ನಾಗಿ ಮಾಡುವುದು. / ತೆಲು. ಲಾವಣಿ=ಹುಲ್ಲುಗಾವಲಿನಲ್ಲಿ ಪಶುಗಳನ್ನು ಮೇಯಿಸುವುದಕ್ಕಾಗಿ ಕೊಡುವ ಮುಂಗಡ ಹಣ]

ಲಾವಣ್ಯ (ನಾ). ೧. ಗುಂಪು ; ಸಮೂಹ ; ಸಂದಣಿ : "ಬಂಬಲ್ . . . ಲಾವಣ . . . ಗೊಂದಣಿ (ಉಂದಲ್) —ಈ ೪೦ ಸಮೂಹಂ" (ಶಬ್ದ. ೩೩–೨೨೨) ; ತಕ್ಕರ್ಗಳ ಲಾವಣೆಯೊಳಿಳವಳ್ಳಿಬಳಗವೊ[ಪಾಣ್ಡ. ಲಾವಣಿಗೆಯೂ ಎಳೆವಳ್ಳಿಯ ಬಳಗವೊ] (ಸಿಪಪೋ. ೩–೩೦). ೨. ಹೊಂದಿಸುವಿಕೆ ; ಅಳವಡಿಸುವಿಕೆ: 'ಲಾವಣೆಸು' ಪರಾ. [?]

ಲಾವಣ್ಯೆ (ನಾ). ಒಂದು ಬಗೆಯ ಔಷಧೀಸಸ್ಯ : "ಲಾಜಾ (ಜಲಾ)— ಹಿಪ್ಪಲಿ. ಲಾವಣಿ. ಎಸಗ" (ಲಿಪಾ. ೦೧೩). [?]

ಲಾವಣಿಕ (ಗು). ೧. ಸುಂದರವಾದ (ನಾ). ೨. ಉಪ್ಪಿನಿಂದ ಕೂಡಿದುದು : "ಲವಣದಿಂ ಲಾವಣಿಕಂ" (ಪಟ್ಟಿಕೋ. ೧೧–೦೨). ೩. ಉಪ್ಪಿನ ಕಾಯಿ : ಎಳಮಾವಿನ ಮಿಡಿ ಮಾಗುಳಿ ಮೆಟಿಸಿನ ಕರಿ ಬೆತ್ತಲಬ್ಬೆಯಿಳೆಯ ಗೊಲೆಯಿಂದಳವಟ್ಟರೆ ಲಾವಣ[ಣಿ]ಕಂಗಳನಿತ್ಕಿದರಾಗಳಲ್ಕುಯಿಂದಂಗನೆಯರ್ (ಪುಚಾಪ್ರ. ೦೦–೩೦). [ಸಂ.]

ಲಾವಣಿಕಾರ ' ಲಾವಣಿಗಾರ ' ನೋ.

ಲಾವಣಿಗಾರ, ಲಾವಣಿಕಾರ (ನಾ). ಲಾವಣಿಯನ್ನು ರಚಿಸುವವನು : 'ಮಳುಮಾ' (ಲಾವಣಿಗಾರರ ಎರಡು ಗುಂಪ್ಪುಗಳೂ ಸೇರಿ ಹಾಡುವುದಕ್ಕೆ ಕುಳಿತುಕೊಳ್ಳುವ ಸಭೆ) (ಕರ್ಜಾಪಂ. ೫೫). ಲಾವಣಿಕಾರ : ಹಾಪಬಲ್ಲ ' ಲಾವಣಿಕಾರನು ಮಬ್ಬಿಕೊಂಡಂತೆಲ್ಲ ಅವು ಹೊಸಹೊಸ ರೂಪುಗಳನ್ನು ತಾಳುತ್ತವೆ (ಕರ್ಜಾಪಂ. ೫೫). P ಈ ಜನಪದಹಾಡುಗಾರಿಕೆಯ ಪದ್ಧತಿಯಲ್ಲಿ ಏಷ್ಟೋ ಜನರು ಆಶುಲಾವಣಿಗಳನ್ನು ರಚಿಸುವವರೂ ಹಿಂದೆ ಇದ್ದರು. [ಲಾವಣಿ₁ + — ಕಾರ₁ (< — ಕಾಱ)]

ಲಾವಣಿಗೆ₁ (ನಾ). ಉಪ್ಪಿನ ಕಾಯಿ : ಸೋವಿಗೆ ಲಾವಣಿಗೆ ಘೃತಪೂರಂ . . . ಲತ್ತುಗೆ ಮಂಡಗೆ ಮೊದಲಾಗೊಡೆಯ ಪದಿನೆಂಟುಂ ತೆಱದ ಭಕ್ಷ್ಯರೂಪಂಗಳುಮಂ . . . ಬಡ್ಡಿಸಿ (ಪಜಾಪ್ರಾ. ೩೮–೦೩).

[< ಸಂ. ಲಾವಣಿಕ]

ಲಾವಣೆಗ್ಗೆ, ಲಾವಳಿಗೆ (ನಾ)· ೧· ಗುಂಪು ; ಸಮೂಹ ; ಸಂದಣಿ : "ಲಾವಣೆಗೆವೋಲೆಯೆ ಸಮೂಹ" (ಕ೨೯· ೭೦); ಭೂವಾಳಗಳ ರತ್ನವೃಧೆಯ ಲಹರಿಯ ಲಾವಣೆಗೆ ಮಿಗಿಲು (ಕುಮ್ಮಾ· ೭–೫೬); ಬಿಲ್ಲಿಂಗಳ ಹಕ್ಕೆಯು ಹಸುಳೆಗಳ ಲಾವಣೆಗೆಯ ಮುಸುಕಿದವೋಲ್ . . . ಕುವರನ ಲಾವಣ್ಯಾಂಗ ಮನಡರ್ದುವು ಪುರಸತಿಯರ ಕಣ್ಗಳ ಬೆಳಗು (ಪಜಿಚಾ· ೦೦–೫೩)· ೨· ಆಕ್ರಮಣ; ಮುತ್ತಿಗೆ ; ದಾಳಿ : ಪುರವರದಪ್ಪದಿಕ್ಕಿನೊಳೆತಿವಿಡದೆ ಘಟ್ಟರು ಲಾವಣೆಗೆಯವಾದೀಶ್ವರ ಬಿಟ್ಟಹ ರಣಭೂಮಿಯೊಳು (ಕೃತಿಚಾ· ೦೯–೨೦೦); ಲಾವಣೆಗೆಯನೊಡಹಾಯಿಸಿದನಿದಿರಾದ ರಾವುತರನು ಕಡಿಪಿದನು (ಭಾರಣಾ· ೪೫–೫೦) ; ಅವರ ವಿಘಾತಿಯ ಲಾವಣೆಗೆ ಅದ್ರಿಗಳು ಬರಿದುವು (ಜಾಪಸಂ· ೨೯)· ೩· ಸಂಬಂಧ ; ಗೋಜು ; ನಾವೆ ವೈದ್ಯರು ಬರುದುಗಿರುದಿನ ಲಾವಣಿಗೆ ನಮಗೇಕೆ (ಕುಣ್ಯಂ೦· ೯–೩೦)· ೪· ಹಿಡಿತ ; ವಶ ; ಅಧೀನ : ಆಕೆಯಾಕ್ಷಣ ಶಿರವರಿದ ಹಯಕಿದಿರು ಕುಳ್ಳಿರೆ ನೆಗ್ಗೆ ತಾನಾಗಿ ನಿರುತ ಲಾವಣಿಗೆಯಲಿ ಹೊಕ್ಕಿರೆ ಸುರವತಿಯು ಹಯದಲ್ಲಿ ವಸಿಸಿದ ನೆರೆದನ್ಯೆ ತನ್ನಾತ್ಮಸತಿಯಳ ಯಜ್ಞಕಾಲದಲಿ (ಸಂಕಥ· ೩–೨೩) ; ಅವನಜೀವನು ಶರಣಸಂಜೀವನನೆ ತಮಗೆಂತು ಕಂಗಳ ಲಾವಣಿಗೊಳಗಾದೆಯೆಂದನು (ಪಜಾಗ· ೯–೩–೨); ಅವಂ ಲಾವಣಿಗೆಯೊಳ್ ತಪ್ಪದೀವ ಕೈಜೀತದೊಳಂ (ಪಪಪು· ೦೪–೦೬)· ೫· ಒಂದು ಬಗೆಯ ತೆರಿಗೆ : ತಲೆವೆಣಿಗೆ ೩೦೦ ಲಾವಣಿಗೆ ವೊಕ್ಕಲ್ದಱ್ (ಎ೫· XVI· ೩೪–೨೦; ೧೦೭); ಅರಸುವೇಱಿಂಗೆ ಮುನ್ನನ್ನಧ ಪಾಗವಲ್ಲದೆ ಮತ್ತೊಂದು ಪಾಗಮುಂ ಲಾವಣಿಗೆಯ ಪಣಮುಂ . . . ಬಿಟ್ಟನ್ (ಕೌಪ· IX–i· ೦೪೨–೨೪ ; ೧೦೮); ೬· (?): ರಸಭಂಡವೈಪು . . . ದೆಶಿದಿಕ್ಕಿನ ಕಾಲ್ವಡೆಯಱುವತ್ತಾಱುಕೋಟಿ ಹೊಸಲಾವಣಿಗೆ ತಿರ್ದುವ ಸುಂಕ ಸುಪದ (ತಪಗ· ೦೪೯–೧೪೭)· **ಲಾವಳಿಗೆ** : ೧· ರಾವಣನ ಪುರದೊಳಗೆ ಹೊಕ್ಕು ಕಟ್ಟೀಂದ್ರರುರವಣಿಸಿ ಸಾವ ಸಲಿಸಿದರೊಕ್ಕಲಿಕ್ಕಿ ಸುರಾವಳಿಗೆ ಸಂತೋಷದೊಟ್ಟಲು ಲಾವಳಿ[ಪಾಣಾ· ೧]ಗದೋಱಿದರು ದೂಱುದವಪಾಚಿತದ ಫಲವ (ಪಪಗ· ೯–೦೦–೩೦)· [ರಾವಣಿ + – ಗೆ]

ಲಾವಣಿಗೆಗೊಳು ' ಲಾವಣಿಗೆಗೊಳ್ಳು ' ನೋ·

ಲಾವಣಿಗೆಗೊಳ್ಳು, ಲಾವಣಿಗೆಗೊಳು (ಕ್ರಿ)· ೧· ಒಟ್ಟಾಗು ; ಒಂದುಗೂಡು; ಸೇರು : ಭೂಪ ನಿನ್ನಯ ಶಕಾನಿಭಾವನೋರ್ವಂ ಕರಿತುರಗ ಪಂಕ್ತಿಗಳಿಂದ ಲಾವಣಿಗೆಗೊಂಡು ವಿಗಡಿಸಿದಂ ಐನೂರುಗಡಂ ಪೋಂದುಸಾವಿರ ಹಯ (ಕುವಿಚಾ· ೩೩–೪)· ೨· ಆಕ್ರಮಣ ಮಾಡು; ಮುತ್ತು : ಕಮಲವನವನು ಲೋಚನಲಿ ಲಾವಣಿಗೆಗೊಂಡನು ಭೀವು ನಿಮಿಷದಲಿ (ಕುಣ್ಯಂ· ೦೦–೩೬)· ೩· ಹಿಡಿತಕ್ಕೆ ಸಿಕ್ಕಿಸಿಕೊಳ್ಳು ; ವಶವಡಿಸಿಕೊಳ್ಳು : ಅತಿರಥರ ಲಾವಣಿಗೆಗೊಂಡನು ಕರ್ಣ (ಕುಣ್ಯ· ೪–೨೮); ಹರಿಲೀಲೆ ಮಿಗೆ ರಾವಣಿಗೆಗೊಂಡುದು ಲೋಕಜನಮನವ (ಕಥಾಗ· ೦೦–೨೫–೭). **ಲಾವಣಿಗೆಗೊಳು** : ೪· ಹಿಡಿತಕ್ಕೆ ಸಿಕ್ಕು ; ವಶವಾಗು : ಲಾವಣಿಗೆಗೊಳಲಲಸಿ ಯಮನನ್ನು ಜೀವಿಗಳು ಜಡರಾಯ್ತು (ಕುಣ್ಯ· ೪೯–೨೪). [ಲಾವಣಿಗೆ+ಕೊಳ್ಳು (<ಕೊಳ್)]

ಲಾವಣೆಪದ್ಧತಿ (ನಾ)· ಭೂಮಿಯನ್ನು ಗೇಣಿಗೆ ಕೊಡುವ ಪದ್ಧತಿ; ಗುತ್ತಿಗೆ ಪದ್ಧತಿ : ಪಾಲಾವ ಒಂದು ಮಾರಡೊಳಗಾಗಿಯೇ ಜ್ಞಾನ ಶಂಕರರು . . . ಲಾವಣಿಪದ್ಧತಿ ಕಿತ್ತಿಹಾಕುವ ಸಿದ್ಧತೆಯಲ್ಲಿ ತೊಡಗಿದರು (ಕ್ರಚಾಶ್ರ· ೪೪)· [ಲಾವಣಿ + ಪದ್ಧತಿ]

ಲಾವಣಿಸು (ಕ್ರಿ)· ಸೇರಿಸು; ಹೊಂದಿಸು; ಅಳವಡಿಸು : ಮಂದರನಗ ನಿಭಾಂಗನ ವಜ್ರಮಯಪಕ್ಕಗಳ ಪಡಿಮುಖಿದೊಳಗೆ ಲಾವಣಿಸಿದನ್ ಖಂಡಿಯವ (ಕೂಪಣಾ· ೩–೦೦–೦೯); ಆಯುಧಮುಖದ ಶಿಖಿ ತವಹೃದಯ ದಾಮಿಷಮಿಗೆ ಹದಿರಿಕ್ಕುವದ ನೋಡಿನುತ ಹೊದಱುಗೈಗಳಲೆತ್ತಿ ಲಾವಣಿಸಿದನು (ಕಚಣಾ· ೩–೪೯–೪೭)· [ಲಾವಣಿ + – ಇಸು]

ಲಾವಣ್ಯ (ನಾ)· ೧· ಉಪ್ಪಾಗಿರುವುದು; ಉಪ್ಪಿನ ರುಚಿಯುಳ್ಳುದು : ಲಾವಣ್ಯ = 'ಉಪ್ಪಿನ ರುಚಿಯಿಂದ ಕೂಡಿರುವಿಕೆ' ಮುಖ್ಯಾರ್ಥ: 'ಪ್ರಶಸ್ತ' ರೂಢಿಮೂಲವಾದ ಲಕ್ಷ್ಯಾರ್ಥ (ಕ್ರಿಪ್ರಾ೦೩೭· ೪೩)· ೨· ಚೆಲುವು; ಸೌಂದರ್ಯ : ಲಾವಣ್ಯಂ ಲಯಮಾಯ್ತು (ಗಿಅಕ· ೪–೩೨)· ೧, ೨ : ಶ್ರೀವನಿತಾಪ್ರಸವದಿನಾ ಲಾವಣ್ಯದಿನತಿಗಭೀರಭಾವದ ನೀನಿಂತಾವಾರಿಧಿಯಂ ಪೋಲ್ದೆ (ಕಚಾ· ೩–೨೨); ಕಮಲಸಂಭವನಂತೆವೋಲ್ ಸರಸ್ವತಿಯರಸನೆಂಬ ಪೆಸರಂ ಪಡೆದು ಲೋಕಮಱಿಯೆ . . . ಲಾವಣ್ಯ ಲೀಲೆಯಿಂದೆಸೆದಬ್ಜಭವನಲ್ಲ ಸಕಲಭುವನಾಶ್ರಯಂ ತಾನನಿಸುತರ್ಜನಂ ಕಣ್ಗೊಳಿಪುದು (ಶ್ರೀಚಾ· ೩–೩೬)· ೩· ಸೊಬಗು; ಒನಪು; ಒಯ್ಯಾರ: ಲಜ್ಜೆ ಬಿಂಬಿಸೆ ಲಾವಣ್ಯದೊಳಾಯ್ಕನೆ ಪಜ್ಜೆಯಿಡುವುದು ಭಾವೆಯರು (ಪಾಪ· ೪–೪೬)· [ಸಂ·]

ಲಾವಣ್ಯಂದಳೆ (ಕ್ರಿ)· ಚೆಲುವನ್ನು ಪಡೆ; ಅಂದವಾಗು : ನೃಪವರಸೂನು ಹಿಂಗದೆ ಲಾವಣ್ಯಂದಳೆದೆಸೆದುತ್ತುಂಗಪಯೋಧರಯುಗೆಳೆಯ ಬಿಜೆಗೊಳು . . . ಬಳೆದು (ಪಜಿಚಾ· ೩–೩೮)· [ಲಾವಣ್ಯ + ತಳೆ]

ಲಾವಣ್ಯವತಿ (ನಾ)· ಚೆಲುವೆ ; ಸುಂದರಿ ; ಅಂದಗಾತಿ : ಲಾವಣ್ಯವತಿಯರುಂ ನಾನಾವಾಹನದಿಂದಮಿಳ್ದುದು ಮೋಹನವಿದ್ಯಾದೇವತೆಯರಂತೆ (ಶುಕ್ಷಚಿ· ೩–೮೨); ಪ್ರಮಹಿಣಿ ಕಪೋಲದಲಿ ಲವಣಾಶ್ರುಬಿಂದುವತಿ ನದಿ ಹರಿಯುವಂತೆ ಕಡಲಿಂಗೆ ಲಾವಣ್ಯವತಿ ನಡದಳ್ ಲವಣಸಂಧುತಟಕೆ (ಪಜ್ಞಾಪೆ· ೩೩–೦೯೦೦)· [ಸಂ· ಲಾವಣ್ಯವತೀ]

ಲಾವನ (ನಾ)· ಒಂದು ಬಗೆಯ ಕತ್ತರಿಸುವ ಆಯುಧ ; ಕುಡುಗೋಲು; ಮಚ್ಚುಗತ್ತಿ : ಬಿಲ್ಲು ತೀರು . . . ಲಾವನ . . . ಪೇಟಕ ಮುಂತಾದ . . . ಸಾಧನವಿಶೇಷಂಗಳಂ (ಪಪಗ· ೫೩೩)·

[< ಸಂ· ಲವನ]

ಲಾವಳಿ ' ಲಾವಣ್ಣಿ ' ನೋ·

ಲಾವಳಿಗೆ ' ಲಾವಣಿಗ್ಗೆ ' ನೋ·

ಲಾವಾ (ನಾ)· ಜ್ವಾಲಾಮುಖಿಯಿಂದ ಪ್ರವಹಿಸುವ ರಸ ; ಶಿಲಾರಸ : ದಕ್ಷಿಣಭಾಗದ ನೆಲದಲ್ಲಿ· ಲಾವಾ ಹಪ್ಪಗಟ್ಟಿ ಉಂಟಾದ ಬಂಡೆಗಳೇ ಅಧಿಕ (ಅಪುಚ· ೩೩೭) ; ಅಕ್ಕಪಕ್ಕದಲಿಯಕೆಯ ಲಾವಾರಸ ಬುಗ್ಗೆಯಾಗಿ ಹಾರುತ್ತದೆ (ಕಜಜಾಂತ· ೦೦೩); ಅವನ ಲೇಖನ· ಲಾವಾರಸದಲ್ಲಿ ಅದ್ದಿದಂತೆ ಇರುತ್ತಿತ್ತು (ಕಚಾಶಾದ· ೦೪)· [← ಇಂ· Lava]

ಲಾವಿಗ ' ಲಾವಗೆ ' ನೋ·

ಲಾವಿಗೆ ' ಲಾವಗೆ ' ನೋ·

ಲಾವುಕ ' ಲಾವಗೆ ' ನೋ·

ಲಾವುಕೋವು (ನಾ)· ಕಪಟ ; ವಂಚನೆ : ಆ ವೈಶ್ಯನಲ್ಲಭ ಪ್ರಮುಖ್ಯದತ್ತಸೊಳು ತನಗಾವಗಂ ಸ್ನೇಹಮಾದುದಱಿಂದ ದಾಕ್ಷಿಣ್ಯಭಾವಯುತನವಗೊಂದು ಲಾವುಕೋವಂ ಮಾಡಲೀಸದಿಂತೆನುತುಸಿರ್ದನು (ಕಮ್ಮಾಳಿ· ೦೦–೬)·

[?]

ಲಾವುಗೆ ' ಲಾವಗೆ ' ನೋ·

ಲಾಸ (ನಾ)· ಕುಣಿತ ; ನೃತ್ಯ : ಹಂಸನಲ್ಲದ ಸರಸಿ ಬಲುವಿದ್ವಾಂಸರಿಲ್ಲದ ಸಭೆ . . . ಪರಭೃತವಿಲ್ಲದುದ್ಯಾನ ಲಾಸವಿಲ್ಲದ ಗಾನ . . . ನೆರೆಯದು (ಶಾಶಾ· ೦–೨೮)· [ಸಂ·]

ಲಾಸಕ (ನಾ)· ೧· ನೆಗೆಯುವವನು ; ಜಿಗಿಯುವವನು· ೨· ಕುಣಿಯುವವನು ; ನರ್ತಕ· [ಸಂ·]

ಲಾಸಕಿ (ನಾ)· ಕುಣಿಯುವವಳು ; ನೃತ್ಯಗಾತಿ : "ಪರ್ತಕೀ· ಲಾಸಕೀ— ೨ ಕುಣಿಯುವ ನಾಟ್ಯಗಾತಿಯ ಹೆಸರುಗಳು" (ಶಿಪ್ರಾ೦೬· ೫೯) ; ಸತಿ . . .

ಅಂಗಜಲಾಸ್ಯಲೀಲೆಯಂ ಕ್ಷಿತಿಪನ ಚಿತ್ತವೃತ್ತಿಗುವದೇಶಿಪ ಲಾಸಕಿಯಂತೆ ತೋಜಿದಳ್ (ಕಂದ್ರಕೃ. ೩-೧೩). [ಸಂ. ಲಾಸಕೀ]

ಲಾಸಿ (ನಾ). ೧. ಅಲ್ಲಿಂದ ಇಲ್ಲಿಗೆ ಚಲಿಸುವುದು. ೨. ಕುಣಿತ ; ನೃತ್ಯ. [ಸಂ. ಲಾಸಿನ್]

ಲಾಸಿಕೆ (ನಾ). = ಲಾಸಕಿ : "ನರ್ತಿಕೆ ಲಾಸಿಕೆಯೆಂಬಳಕ್ಕುಂ" (ಕಬ್ಬಿಕಾ. ೬೪-೬೩) : ಈಕ್ಷೋಣಿಸಿದಳಿಂದುಕಾಂತಮಣಿಮಂಗಳರಂಗದೊಳ್ಬಾಳೆಮಂ ಪೆಳಿವಿದಂಗಜನೃಪಜಯಲಕ್ಷ್ಮಿಯ ಲಾಸಿಕೆಯಿಕಾಕೆಯೆಂಬಿನಂ (ಪಾಪ್ಪ. ೧-೩೨) : ನರ್ತಿಸುತ್ತಿರ್ಪ ಮರುತ್ಪುದತಿಮರ್ಗಿಂದ್ರನ ಹೃತ್ಪದ್ಮದೊಳಾಡುವ ಭೃತ್ಯ ಲಕ್ಷ್ಮಿ ಲಾಸಿಕೆಯಕ್ಕುಂ (ಕಂದ್ರಪ್ರ. ೦೩-೭೦). [ಸಂ. ಲಾಸಿಕಾ]

ಲಾಸ್ಯ (ನಾ). ೧. ಕುಣಿಯುವುದು ; ನರ್ತಿಸುವುದು. ೨. ಕೋಪ ; ನೃತ್ಯ : ರಾವಣೇಂದ್ರನು ಬಂಡಿಯಂ. ಲಾಸ್ಯಮಾ ತೊಡಗಿ (ಕ್ರಿರಾಪು. ೬೯-೨೬೪). ೩. [ನಾಟ್ಯ] ಗಾಯನ ಮತ್ತು ವಾದ್ಯದಿಂದೊಡಗೂಡಿದ ನೃತ್ಯ. ೪. ಶೃಂಗಾರ ಮೊದಲಾದ ಭಾವಗಳನ್ನು ತೋರಿಸುವ ನಾಟ್ಯ.— ನರ್ತನೆ : "ನೃತ್ಯಂ. ತಾಂಡವಂ. ಲಾಸ್ಯಂ – ಈ ೩ ನಾಟ್ಯಮೆಂಬುದು" (ಪಣಾಮು. ೦೬-೧೩) ; ಸುತ್ರಾಮನಂದಿಂತು ತಾಂಡವಲಾಸ್ಯಂಗಳ ಚೆಲ್ವನೊರ್ವನೆ ತದೀಯಸ್ಥಾನದೊಳ್ ತೋಜಿದಂ (ಪಂಪ. ೭-೦೨೬); ಆ ಶಿವಪ್ರಮುಖತಮಂ ಪಡೆದಾ ಶಿವೆ ಭರತಂಗೆ ಮಧುರನಾಟ್ಯಕ್ರಮದಾ ಮೃಸರಿಯನೊರೆಯಲಾದುದು ಭಾಸುರಕರತುಷ್ಟ ಲಾಸ್ಯನಾಮಂ 'ಜಗದೊಳ್' (ಶಾಸ್ಕಂ. ೦-೦೩) ; ವೀಱ್ ಮುಱಿದಳ್ ಲೀಲಾಲಸಲ್ಲಾಸ್ಯಮಾ (ಗಣಿಕ. ೦೫-೭೨). ೫ ಪಾರ್ವತಿಯಿಂದ ಕಲ್ಪಿತವಾದುದೆನ್ನಲಾದ ಲಾಸ್ಯವು ಸೌಕುಮಾರ್ಯವಾದ ಅಂಗವಿನ್ಯಾಸಗಳಿಂದ ಕೂಡಿದ್ದು, ಶಿವನ ಮತ್ತು ಅವನ ಗಣಗಳ ಉಗ್ರವಾದ ನಾಟ್ಯಕ್ಕೆ ವಿರುದ್ಧವಾದುದಾಗಿದೆ. ೫. ಕುಣಿಯುವವನು : ನರ್ತಕ . 'ತಾಂಡವ' ಪರಾ.

ಲಾಸ್ಯವಾದು = ಕೋಪ: ನಾಟ್ಯವಾಡು: ಅವನ ಮುಮುದಲ್ಲಿ ನಗೆಯು ಲಾಸ್ಯವಾಡುತ್ತಿತ್ತು (ಪಜಾ. ೧೩) ; ಗೆಜ್ಜೆನಾದದಿ ಲಾಸ್ಯವಾಡುತ್ತ ತಣಿಸಿ ಕುಣಿಸುವೆ ರಸಿಕನ (ಕಂದ್ರಪ್ರ. ೩೬-೬). [ಸಂ.]

ಲಾಸ್ಯಾಂಗ (ನಾ). [ನಾಟ್ಯ] ಗೇಯವದ, ಸ್ಥಿತಪಾಠ್ಯ, ಆಸೀನ (ಪಾಠ್ಯ), ಪುಷ್ಪಗಂಡಿಕಾ, ಪ್ರಚ್ಛೇದಕ, ತ್ರಿಗೂಢಕ, ಸೈಂಧವ, ದ್ವಿಗೂಢಕ, ಉತ್ತಮೋತ್ತಮಕ ಮತ್ತು ಉಕ್ತಪ್ರತ್ಯುಕ್ತ ಎಂಬ ನಾಟ್ಯದ ಹತ್ತು ಭೇದಗಳು : ಭಾಣ . . . ಮುಖನಿರ್ವಹಣಸಂಧಿಗಳೂ, ಹತ್ತು ಲಾಸ್ಯಾಂಗಗಳೂ ಪ್ರಯೋಕವಾಗಿ ಧಾರಣೀವೃತ್ತಿಯೂ ಇರುತ್ತವೆ (ಸಂಚಾಲಿ. ೩೦). [ಸಂ.]

ಲಾಹರಿ (ನಾ). ಚಳಕ ; ಕೌಶಲ : ಲಚ್ಚಿನಲ್ಲಿ ಬೇಟದಱಿವು ದೃಷ್ಟವಾಯಿತ್ತು ಮನಮುಚ್ಚಿ ಕೊಟ್ಟ ಲಿಂಗ ಹೃತ್ಕಮಲವಲ್ಲಿ ಪೆಟ್ಟುದಿಲ್ಲಾ ದೃಷ್ಟ ತಾನಾದ್ದಿದೆ ಇದಿಂಗೆ ದೃಷ್ಟವ ಕಟ್ಟಬಾರದು ಕಟ್ಟಕೊಂಡ ಮತ್ತೆ ಗುಱಿಯನೆಚ್ಚ ಕೈಯ ಲಾಹರಿಯಂತಿರಬೇಕು (ಪೋಳಪ. ೦೩೩-೩೭೨).

[< ಲಹರಿ]

ಲಾಹಿರಿ (ನಾ). ಮಂದ ; ಮತ್ಸರ ; ಮಾತ್ಸರ್ಯ : ಕುಲವು ಕುಕುವರನಿಂದ ಶೀಲವಾ ದೇಶಾಂತರಗಳಿಂದ ಲಚ್ಚೆ ಲಾಹಿರಿಗಳಿಂದ . . . ಕೆಡುವುದು (ಪಚಂ. ೦೬-೦೭). [← ತೆಲು. ಲಾಹಿರಿ, ಲಾಹಿರೀ]

ಲಾಹಿರಿಗೊಳ್ (ಕ್ರಿ). ಮಂದಿಸು : ಈವಪ ಸಿಗಿದಾ ರಕುತವನು ಸುರಿಸುರಿದು ಲಾಹಿರಿಗೊಂಡು ಮದವದ್ವಿರದಗಳ ಚಂದದಲಿ ತರುಬದರಾ ಕಪಿವ್ರುದವ (ಚಕಂಗಾ. ೬-೩-೦೭). [ಲಾಹಿರಿ + ಕೊಳ್]

ಲಾಳ[1] (ನಾ). ೧. ಕೊಳವೆ ; ನಳಿಗೆ : (೬). ೨. ದೇಖನಿಗಳನ್ನು ಮಾಡಲು ಬಳಸುವ, ಟೊಳ್ಳಾಗಿರುವ ಒಂದು ಬಗೆಯ ಗಲಗು.— ಬೆತ್ತ : "ಲಾಳ – ನಾಳ" (ಕಬ್ಬಕೋ. ೪೮) ; ಸೆಗ್ಗಳ್ಳಂಗಡಲೇ ಬೇರು . . . ಲಾಳದ ಬೇರು. ನಾಗಕೇಸರ ಇವಿಷ್ಟನೂ ಪ್ರತ್ಯೇಕ ಎರಡು ವರಹ ತೂಕ ಅಡಿನ ಹಾಲಿನಿಂದೆ ಅರೆದು ಕುಡಿಯ ಕೊಡಿಸಲು ಶ್ಲೇಷ್ಮ ಯುಕ್ತವಾದ ಯೋನಿ ಶುದ್ಧವಹುದು (ಶಕ್ಕಚಿ-II. ೮೦) : ಒಂದು ತರದ ಲಾಳದ ಕಡ್ಡಿ ಬೆಳೆಯುತ್ತದೆ. ಈ ಕಡ್ಡಿಗಳಿಂದ ಮಿಣು ಹಿಡಿಯುವ ದೋಣಿಗಳನ್ನು ಮಾಡುತ್ತಾರೆ (ಕ್ರಚಾಕ. II. ೦೨೬) ; ನದಿಯ ಇಬ್ಬದಿಯ ಮೇಲೂ ಲಾಳದ ಕಡ್ಡಿಗಳು ಹುಚ್ಚು ಹುಚ್ಚಾಗಿ ಬೆಳೆದು . . . ತಲೆ ದೂಗುತ್ತಿದ್ದವು (ಕುಸಾಂ. ೪೪).

ಲಾಳದ ಕಡ್ಡಿ = ರಾಳದಿಂದ ಮಾಡಿದ ಲೇಖನಿ : ಕಂಟಿ. ಸೀಸಗಡ್ಡಿ ಕುಂಚಗಳು. ಲಾಳದ ಕಡ್ಡಿ ಮತ್ತು ಮರಗಡ್ಡಿ (wooden pens)ಗಳನ್ನು ಒಳಗೊಳ್ಳುತ್ತದೆ (ಪಾಡಿ. ೦೪). [< ಸಂ. ನಾಲ]

ಲಾಳ[2]. **ಲಾಡ**[1], **ಲಾಟ** (ನಾ). ೧. ಒಂದು ದೇಶದ ಹೆಸರು : ಪ ಈಗಿನ ಗುಜರಾತು : "ಲಾಟಃ—ಲಾಳಂ. ವಾಡು" (ಶಾಪ್ಕ. ೦೩) ; ಆ ವಿಭುವಾಹವಮಲ್ಲ ಮಹೀವಲ್ಲಭನಲ್ಲಿ ಪಡೆದನುರುತರನಿಜವಿದ್ಯಾವಿಭವದಿಂದ ಮೆಚ್ಚಿಸಿ ಭೂವಿನುತಂ ಲಾಳಸಂಧಿವಿಗ್ರಹವನುಮಂ (ಎಇ. XII. ೫೯೦-೦೬೭; 1877) ; ಲಾಳ ಚೋಳ ಪರಾಳ ಯವ ಬಂಗಾಳ . . . ಧರಣೀಪಾಲತತಿ ಸುದಣಿಸಿದಾದು (ಕೀರ್ತಿ. ೦-೭-೦೯). ೨. ಲಾಳದೇಶಕ್ಕೆ ಸೇರಿದವನು : ಓಡಿದ ಲಾಳಂ ಕುವಿಡಿದಾಡಿದ ಚೋಳಂ (ಪಪ. VII. ೬೫೦. ೦೪೭-೫೦ ; 1114). **ಲಾಡ**[1] : ೧. "ಲಾಡಃ = ನಾಡು" (ಶಾಪ್ಕ. ೨೫೦). ೨. ಕರಣ್ಣಗಳ ನೆಯ್ವ ಹೆಂಡರಂ ಲಾಡರಂ ಪರಿಮಳದ ಪೂವಿನಾ ಮೂರೆಗಾಱರ ನೀಲಿಗಾಱರಾ ಪರಮಸೆಗಂ (ಗುಣಾ. ೦-೭೪) ; ಬಿರಿದಂ ನೆಯ್ವ ಜಾಡರುಂ ಲಾಡರುಂ (ಪಪಪು. ೩-೧೭) . **ಲಾಟ** : ೧. "ಲಾಟಕೆ ಲಾಟಂ" (ಸಂಚಾಸ. ೫೦). ೨. ತಱುಸಂದು ಲಾಟರೊಳ್ ತ[೪]ಜಿದೇಜಂ ಪೇಬೆ ಕೇಳ್ದ (ಪುಚಿಕಾ. ೦-೩೭) 'ಲಾಟಬಾಸೆಗ' ಪರಾ.

ಲಾಳಪತಿಯಾಜಿ = ರಾಳಧರನ್ನು ಸದೆಬಡಿಯುವವನು : ಶ್ರೀವಲ್ಲಭಪ್ರಭಾವ್ರಧಾನಂ ಸೇನಾಧಿಪತಿ ಲಾಳಖಂಡಿಯಕಾಱರಧಿಷ್ಠಾಯಕ ವಜಾಗ ಸಾಹಣಾಧಿಪತಿ . . . ಪ್ರತಿಪಾಳಿಸುತ್ತಮಿರ್ದ್ದು (ಶಾಸಾ. IX-೧, ೨೭೭-೨೩ ; 1184). [< ಸಂ. ಲಾಟ]

ಲಾಳ್ಯ 'ನಾಲ್ಯ' ನೋ.

ಲಾಳಕ[1] (ನಾ). ಕುದುರೆ, ದನ ಮುಂತಾದುವುಗಳ ಗೊರಸಿಗೆ ಲಾಳ ಹೊಡೆಯುವವನು : ಗಾಣಿಗರ್ ಚಿಪ್ಪಿಗರ್ ಮುಚ್ಚಿಗರ್ ಲಾಳಕರ್. ಸಾಣಿಗರ್ . . . ಭರತಿರ್ದರು (ಕಬ್ಬ. ೪೭-೧೦).

[ಲಾಳ್ಯ (<ನಾಲ್ಯ) + ಕ]

ಲಾಳಕ[2] (ನಾ). (?) : ಅದರ ಸೊಪ್ಪಿನಲ್ಲಿ ಕಟ್ಟಿ, ಕಟ್ಟಿ ಅಭ್ಯಕದ ಮೇರೆ ಪಡಗಿ ಲಾಳಕದ ಗುಳಿಗೆ ಹುಡಿಮಾಡಿ ಅದರಲ್ಲಿ ಇಟ್ಟು (ಗಂರತ್ರ. ೬-೯).

[?]

ಲಾಳಕಟ್ಟು 'ನಾಲಕಟ್ಟು' ನೋ.

ಲಾಳಗಾರ 'ನಾಲಗಾರ' ನೋ.

ಲಾಳಗುಂಡಿಗೆ 'ಲಾಳವಿಂಡಿಗೆ' ನೋ.

ಲಾಳಗುಡಿಗೆ 'ಲಾಳವಿಂಡಿಗೆ' ನೋ.

ಲಾಳಬಂದಿ 'ನಾಲಬಂದಿ' ನೋ.

ಲಾಳಮುಂಡಿಗೆ 'ಲಾಳವಿಂಡಿಗೆ' ನೋ.

ಲಾಳಲಿಪಿ (ನಾ). ಲಾಟದೇಶದ ಭಾಷೆಯ ಲಿಪಿ : ಕೆಲಂಗಲಿಪಿ . . . ಲಂ [ಪಜಾಂ. ೪೭] ಕಲಿಪಿ ಮೊದಲಾದ ಹಲವು ಲಿಪಿಗಳನೋದಬಲ್ಲಗ್ಗಳದ ಕರಣಿಕರಂ ಕರುಂ (ಶಾಕೃ. ೫-೩೬). [ಲಾಳ[2]+ಲಿಪಿ]

ಲಾಳವಂದಿಗೆ 'ಲಾಳವಿಂಡಿಗೆ' ನೋ.

ಲಾಳವಟ್ಟಿ (ನಾ)· ಲಾಳದ ಕಡ್ಡಿಯ ಸೀಳು.–ವಟ್ಟಿ : ಪುರವರದೊಳೆಡೆ ವಿತರಿಲ್ಲವಾಯ್ತಿಕ್ಕೋದಂಡನಲರ್ಗಣೆಯನಟ್ಟು ಮತ್ತಾಯುಗಾಸು ಪುರಜನಂಗಳರ್ದ್ಯಾಂ ಲಾಳವಟ್ಟಿಯಪ್ಪಂತಿರಿಸುವಾ ಕಾಯಜನ ಕೋಳಾಹಳವನು ಕಂಡು (ಪಜ್ಜ್ಞಿ. ೬–೬೦); ಲಾಳವಟ್ಟಿಯ ಮಾಡಿದುವಾನೆಯೊಡಲನು . . . ಆ ಕಣೆಗಳು (ಪೀಯೂಲಿ. ೫೯–೬೬) ; ಬಿಲ್ಲುವರೆಚ್ಚ ಶರಗಳಿಂದ ಟ್ಟಿಸುತಲೆಯ್ತಂದು ಕಟ್ಟುರ್ಚಿ ರಿಪುಗಳ ಪೇರುರಗಳ ಲಾಳವಟ್ಟಿಯ ಮಾಡಿದವಾಗ (ಕಂಪ್ರಹಾ. ೬–೬೩). [ಲಾಳ$_1$+ವಟ್ಟಿ$_1$]

ಲಾಳವಾಟೆ (ನಾ)· =ಲಾಳವಟ್ಟಿ : ಲಾಳವಾಟಿಗಳಾದವಾನೆಯ ಹಾಳುವಡಲುಗಳು (ಪಜ್ಞಾ. ೭೪–೪). [< ಲಾಳವಟ್ಟಿ]

ಲಾಳವಿಂಡಿಗೆ, ಲಾಳಗುಂಡಿಗೆ, ಲಾಳಗುಡಿಗೆ, ಲಾಳಮುಂಡಿಗೆ, ಲಾಳವಂಡಿಗೆ, ಲಾಳವುಂಡಿಗೆ (ನಾ)· ೧. ಬಾಗಿಲನ್ನು ಮುಚ್ಚಿ ಭದ್ರಪಡಿಸಲು, ಅಡ್ಡಲಾಗಿ ಹಾಕುವ (ಮರದ) ಪಟ್ಟಿ ; ಅಗುಳಿ : ತಾಳು : "ಪರಿಘಃ- ಪರಿಘಾತನಃ- ೨ ಲಾಳವಿಂಡಿಗೆ" (ಪಡಾಮು. ೬೯–೭೦); ದಿಶಾಧಿಪರ್ ದಿಗಿಭಸಂಹತಿಯಂ ಮನಮೊಲ್ದು ಪಾಲಿಸಲಿಕ್ಕಿದ ಲಾಳವಿಂಡಿಗೆಯ [ವಜ್ರ]ಬ್ಯಳಿರ್ದ್ದಾರು ವಿಂಧ್ಯಪರ್ವತಂ (ಪರಾಪು. ೬೬–೬); ತಂದಮ್ಮ ಮನದ ವೇಗದಿ ಬಾಗಿಲುಚ್ಚಿನ ಲೊಳವಿಂಡಿಗೆಯ (ಶಾಪು. ೬೬–೬೬); ಜವನರಮನೆಯ ಮುಂದಾಗಿರ್ಪ್ಪ ಲಾಳವಿಂಡಿಗೆಯಂ ಸವೆ:ವೆನು (ಅಷಾಪ್ರ. ೭೫–೨). ೨. (ಜಾಗಟೆಯನ್ನು ಬಡಿಯುವ) ದಂಡ.—ಕೋಲು : ಒಂದೆಡೆ ಜಾಗಟೆಯನ್ನು ಪೇತುಹಾತಿದ್ದಾರೆ. ಅದನ್ನು ಬಾರಿಸುವ ಕಿರಿಯ ಲಾಳವಿಂಡಿಗೆಯೂ ಪಕ್ಕದಲ್ಲಿದೆ (ಕಂಪ್ರಹಿ. ೦೦೯–೨). **ಲಾಳಗುಂಡಿಗೆ** : ೧. ಮಗದಿಗೆ ಲಾಳಗುಂಡಿಗೆ ಸ್ವಾಮಿವಂಚರ ಗಂಡ (ಎಳ- VII, ೫೫೫- ೬೯-೦೬; ೧೨೮೬). **ಲಾಳಗುಡಿಗೆ** : ೧. ಶರಣಾಗತ ವಜ್ರವಂಜರರುಂ ಗಡಿಗೆ ಲಾಳಗುಡಿಗೆ ಬಂಧುಜನವಾಧಿಪರುಂ (ಎಳ. XI, ೫೦೯೬. ೨೦೦–೫; ೧೬೬೧ ?). **ಲಾಳಮುಂಡಿಗೆ** : ೧. ಹರಿನೀಲದಿಂದಲೆಸವ ಲಾಳಮುಂಡಿಗೆ ವರಕುಲಿಶದ ಬಲುಮೊಳೆಯಂ ಪಿರಿದು ರಂಜಿಪ ದ್ವಾರವಚ್ಚಿದ ಮಹಿಮೆಯನೊರೆವಡಿನ್ನಾರಳವಹುದು (ಪಂಪ. ೬–೦೨) ; ಹುಲಿಮುಖಿಪಂಕ ವಜ್ರದ ಕಂಬದಾಳಿರಿ ಬಲು ಲಾಳಮುಂಡಿಗೆ (ಪೌಂಪಾ. ೫–೬೨). **ಲಾಳವಂಡಿಗೆ** : ೧. ಮಾರುತಿ ಕಡುಹಿನವಲಿ ಭುಗುಭುಗಿಪ ಧಾರಿಯ ಕಿಡಿಗೆದಱಿ ನೋಡಿದನು ಬಾಗಿಲ ಲಾಳವಂ[ಪಾಂಪ. ವಿಂ]ಡಿಗೆಯ (ಕುಪ್ರ. ೦೫–೫೬); ಲಾಳವಂ [ಪಾಂಪ. ವಿಂ]ಡಿಗೆಗಳಲಿ ಬಂಡಿಯ ಗಾಲಿಗಳ ಗಾಡಣಿಗಳಲಿ . . . ರಕ್ಕಸಘಟುಂಗಕ್ಕಜವಾದುದಾ ದುರ್ಗ (ಕಪಂಪಾ. ೬–೬–೦೬) **ಲಾಳವುಂಡಿಗೆ** : ೧. ರಿಪುಬಲವನಸಿಯಿಬ್ಬರೆವಿಧ ಒರೆಕೈಯ ಬಾರಿಯ ಲಾಳವುಂಡಿಗೆಯು ಪರಿಘಗುಂಡಿನೆಳೊಂದನೊಂದಿಬ್ಬೊರಿದವು (ಕುಪ್ರಾ. ೫೬. ೪–೦೦); ಪೊಸ ಬೀಗ ಬಾಗಿಲು ಲಾಳವುಂ [ಪಾಂಪಾ. ಮುಂ]ಡಿಗೆ ಕಣ್ಗಸದವ್ಗೆ ಕುಮ್ಮಟದೊಳಗೆ (ಕುಪಾಪಾ. ೫೭–೫೬). [ಲಾಳ$_1$ + ಪುಂಡಿಗೆ]

ಲಾಳವುಂಡಿಗೆ ' ಲಾಳವಿಂಡಿಗೆ ' ನೋ.

ಲಾಳವ್ಯವಹಾರಿ (ನಾ)· ಲಾಳದೇಶದ ವ್ಯಾಪಾರಿ : ಪರಶುರಾಮ ನಾಯಕ ಪೊಮ್ಮಣನಾಯಕ ಅಮ್ಮುಗಿ ನಾಯಕ ಪ್ರಮುಖರಪ್ಪ ಸಮಸ್ತಲಾಳವ್ಯವಹಾರಿಗಳುಂ (ಎಳ. XII, ೨೦–೫೯ ; ೧೨೦೬).

[ಲಾಳ$_2$ + ವ್ಯವಹಾರಿ]

ಲಾಳಾಜಳ 'ಲಾಲಾಜಲ' ನೋ.

ಲಾಳಿ$_1$, ಲಾಡಿ$_1$, ಲಾಲಿ$_2$ (ನಾ)· ೧. ಒಂದು ಬಗೆಯ ಗಲಗು.–ಬೆತ್ತ : "ವೀರಣಂ- ವೀರತರಂ- ೨ ಮರಕಬ್ಬಿನ ಪೆಸರುಗಳು. ಕೆಲವರು ಲಾಳೀಕಡ್ಡಿಯನ್ನುವರು" (ಶಿಷ್ಟಾ. ೦೬. ೦೩೦). ೨. ಬಟ್ಟೆಯನ್ನು ನೇಯಲು ನೇಯ್ಗೆಯವನು ಉಪಯೋಗಿಸುವ ಒಂದು ಸಾಧನ; ನಾಳಿ: ಸೀರೆಯ ನೆಯ್ಮಾತವ ಕೈಯ ಲಾಳ ಸುಂಗಿತ್ತ ಕಂಡೆ (ಪೀಗೀಷಾ. ೦೦೭–೮೬) : ಹರುಗುಣಿ ಗೂಟ ಪವಣಿಗೋಲು ಲಾಳಿಯು . . . ನಾಲಿಗೆಗೂಟವನಿ ದೊಂದಾಳಿಯದ ಕಟ್ಟಿದವು (ಅಯುಚಾ. ೫-೬); ತರದೆ ಕೊಂಬಿನ ಲಾಳಿಯ ಮುಟ್ಟಿಸದೆ ರುಚಿರತರವಾದ ಪೊದಳೆಯಂ ನೆಯ್ದುಕೊಳ್ಳು (ಪಾಪಾಕ್ಷ. ೫-೬೦)· ೩. ಇಕ್ಕುಳ; ತಂಡಸ : " ಇಕ್ಕುಬಂ ಲಾಳಿ ತಂಡಸ ಗಾರಿಕಾಮ್ಮಂ" (ಕುಂಹಾ. ೦೦೩-೪)· ೪. ಒಂದು ಬಗೆಯ ಆಯುಧ ಭೋಂಕೆನೆ ಮಿಡಿವ ಲಾಳಿಯ ಬಿಲ್ಲು ಪೆಟಲ್ಗಳ ಸಂಕುಲವಿರ್ದ್ದಪ್ಪ (ಕೋಚಾ. ೫೦-೪) ; ಜೇಡರ ' ಲಾಳಿ 'ಯನ್ನು ಅನೇಕರು ನೋಡಿರಬಹುದು. ಹಾಗೆಯೆ ಸಿಡಿದಾಡುವ ಒಂದು ಚಬ್ಬದಿಮೊನೆಯ ಜಡವಾದ ಚಕ್ರ ಆಯುಧವಿದು (ಕಚಾರಾ. ೫೭). **ಲಾಡಿ$_1$** : ೨. ಎಂಥೆಂಥ ಎಂಜಿನ್ ಮಾಡಿ ಇರಿಸಿದಾನೆ . . . ಬೇಲು ಬಚ್ಚುವುದಕ್ಕೊಂದು ಹಡೆನ ಹತೋಟಿಯಲ್ಲಿಡುವುದಕ್ಕೊಂದು. ಲಾಡಿ ತಯಾರಿಸುವುದಕ್ಕೊಂದು ನೂಲುವುದಕ್ಕೆನಲವತ್ತಿಂಟು (ಕಂಹೂಲಿ. ೫೭). **ಲಾಲಿ$_2$** : ೨. ಈ ಬತ್ತಿಗಳ ಮರದ ಲಾಲಿ (bobbins)ಗಳಿಗೆ ಸುತ್ತಲ್ಪಡುವವು (ಪಾಲ್ಕ. I· ೪೭೬)

ಲಾಳ ಅಡಿಸು =ಗಿ. ನೇಯು : ಅವನು ಪಾತ್ರಗಳನ್ನೂ ಘಟನೆಗಳನ್ನೂ ಎರಡುಕಪ್ಪೆಗಳಿಗೆ ಮಧ್ಯೆ ಲಾಳಅಡಿಯಿಡಂತೆ ಅಡಿಸಿ ಅವುಗಳನ್ನು ಹಾಸಹೊಕ್ಕಾಗಿ ನೆಯ್ದಿದ್ದಾನೆ (ಪಂಗಾಚಿ. ೦೦೭). ೨. (ಅಲಂ) ಅಲ್ಲಿಂದಿಲ್ಲಿಗೆ ಓಡಾಡಿಸು ; ಅಲೆಸು : ಪನ್ನನ್ನು ಲಾಳಅಡಿಸಬೇಡ (ಕಷ್ಣ)

[< ಸಂ. ನಾಲೀ]

ಲಾಳಿ$_3$ (ನಾ)· ಲಾಟದೇಶದವಳು : "ರಾಟಿ-ಲಾಳಿ[ಪಾಂಪಾ. ಟಿ] (ಪಮಚ· ೧೩). [ಲಾಳ$_2$ + — ಗ$_2$]

ಲಾಳಿಕೆ (ನಾ)· ಬಾಯಿ ಕಿರಿದಾದ ಪಾತ್ರೆಗೆ ದ್ರವವಸ್ತುಗಳನ್ನು ಹಾಕಲು ಬಳಸುವ, ಅಗಲ ಕಿರಿದಾಗುತ್ತಾ ಹೋಗುವ ಕೊಳವೆ; ಬುದ್ಧಿವಂತ ಪನ್ನಾಲಿ : ಗಾಜಿನ ಪಾತ್ರೆಯಲ್ಲಿರುವ ನೀರಿಗೂ ಲಾಳಿಕೆಯಲ್ಲಿರುವ ದ್ರವಾಣಕ್ಕೂ ಒಂದು ತೆಳುವಾದ ಪೊರೆಯಿದೆ (ಪಸ್ಪಾ. ೫೭) ; ಲಾಳಿಕೆಯಂ (ಫನ್ನಲ್) ಅಗಲ ಕಿರಿದಾಗುತ್ತ ಹೋಗುವ ಕೊಳ್ಳಿ (ಶಿಪಾಪ್ರ. I· ೩೨೬); ತಲೆಗೆ ಮಾಡಿ ಮಲಗಿಸಿ ಮೂಗಿನಲ್ಲೊಂದು ಲಾಳಿಕೆ ಇಟ್ಟರೆ (ಪುಚಿ. ೨೯). [< ಸಂ. ನಾಲಿಕಾ]

ಲಾಳಿಕೋಲು (ನಾ)· ಒಂದು ಬಗೆಯ ಆಯುಧ : ತುರುಕಸಿಂಗಾಸ ಮೇಡಿಯ ಲಾಳಿಕೋಲ ನಿಷ್ಕುರವಾಕ್ಯದಾರ್ಣಕೊಗ್ಗಿಸೊಳು ಚುರುಚುರನೆಯ್ಯ ಕೈಮುಗಿದು (ಕಕಪ. ೨೨-೨೬). [ಲಾಳಿ$_1$ + ಕೋಲು$_2$ (< ಕೋಲ್$_1$)]

ಲಾಳಿತ ' ಲಾಲಿತ ' ನೋ.

ಲಾಳಿತಿ (ನಾ)· ಸಂತೋಷ:ಲಾಳಿತಿಯ ರಮಣೀಯರಸಗಳ ಸೂಳು ನುಡಿಗಳ . . . ಕಥೆಗಳನೊಲಿದು ಬಣ್ಣಿಸುವೆ (ಶಾಪಾಪ. ೬–೬). [<ಸಂ. ಲಾಲಿತ]

ಲಾಳೆ ' ಲಾರೆ ' ನೋ.

ಲಾಳಿ ' ಲಾಳ$_2$ ' ನೋ.

ಲಾಟಿಬಾಸೆಗ (ನಾ). ಲಾಳದೇಶ ಭಾಷೆಯನ್ನು ಆಡುವವನು : ಲಾಟಂ = ಲಾಬಂ; ಲಾಟಭಾಷಿತಂ · = ಲಾಟಬಾಸೆಗಂ (ಕುಚ· ೨೦ ಕ್ರಿಯಾ).

[ಲಾಟ (<ಲಾಳ$_2$) + ಬಾಸೆ$_3$ + — ಗ$_2$]

ಲಿಂಗ (ನಾ)· ೧. ಚಿಹ್ನೆ ; ಗುರುತು: ಶಿರಸ್ಸೆಂಬ ಸ್ಥಾನಾಸ್ಯಕದಲ್ಲಿ ವ್ಯಾ ವಾಯುಸಂಬಂಧಮಾಗಲಲ್ಲಿ ಪುಟ್ಟುವ ಅರ್ಣ ವರ್ಣ ಬೀಜ ಲಿಂ ಮಾತ್ಮಕೆ ಶುದ್ಧಗೆಯೆಂಬ ಪರ್ಯಾಯ ಸಂಜ್ಞೆ (ಕವೀಕ. ೦೭೦); ಶ್ರುತಿ ಎಂದ ಬಾಯಬಟ್ಟು ಹೇಳುವ ಶಬ್ದವು ; ಲಿಂಗವೆಂದರೆ ಆದೆಂದು ತಿಳಿಸುವ ವಿಶೇಷ ರೂಪವಾದ ಗುರುತು (ಬ್ರಹ್ಮಜಾ- ೨೦೨ ೦೭೫) ; ಭಾರತೀಯಮೂರ್ತಿಶಿಲ್ಪ ಹೆಗ್ಗುರುತು. ಆದರಲ್ಲಿನ ಚಿಹ್ನೆ. ಲಿಂಗ ಅಥವಾ ಸಂಜ್ಞೆ (Symbolism (ಶಾಕಪ-೨೦೬). ೨. ಗಂಡಸಿನ ಜನನೇಂದ್ರಿಯ: "ಶಿಶ್ನಃ, ಶೇಫಃ, ಮೇಢ್ರಃ ಲಿಂಗಂ. ಮೇಹನಂ. ಶೇಫಾ—ಈ ೩ ಶೇಫಂ" (ಪಾಪಾಮು. ೦೫–೦೦)

ಲಿಂಗಂ ಬೆನ್ ಜಂಘಾಯುಗಳಂಗಳುಮೆಂದೀ ಪ್ರದೇಶಮಿವು ನಾಲ್ಕುಂ ಪ್ರಸ್ತಂಗಳೆನೆ . . . ನಿಧಿವುರುಪಂ (ಕೋಕಶಾಚ. ೦೦-೧೭). ೩. ಸ್ತ್ರೀ ಅಥವಾ ಪುರುಷಚಿಹ್ನೆ : ಈ ನಿಯಮವನ್ನು ಲಿಂಗಭೇದವಿಲ್ಲದ ಅನುಸರಿಸಬೇಕು (೮೩). ೪. ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸುವ ಶಿವನ ಪ್ರತೀಕವಾದ ಮೂರ್ತಿ ; ಸ್ಥಾವರಲಿಂಗ ; ವಚಸಂಗ ಲಿಂಗ ಶರಣಾಗು (೩೫೨. ೬-೩೩) ; ಸಮ್ಮೂರ ಹೇಮಸ್ಥಾನದಲ್ಲಿ ಈ ದಿನ ಲಿಂಗದ ಪ್ರತಿಷ್ಠಾಪನೆ ಆದೆ (೮೩೨). ೫. [ವೀಶೈ] ಮೈಮೇಲೆ ಧರಿಸುವ ಶಿವನ ಒಂದು ಪ್ರತೀಕ; ಇಷ್ಟಲಿಂಗ: ಹೊತ್ತಾಜೆ ಎದ್ದು ಅಗ್ನಿಮಿಣೆ ಪತ್ರೆದು ತಂದು ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ (೩೫೮. ೦೬೨) ; ಲಿಂಗನಿಜಸದ್ಭಾವದೊಳು ಪುಸಂ ಮುಳುಗಿ (೦೩೫. ೦-೩) ; ಲಿಂಗಕ್ಕೆ ಕಡಯಲ್ಲಿ ಲಿಂಗಲ್ಲ ದೆಡೆಯಲ್ಲಿ ಲಿಂಗದೊಳು ಜಗವು ಒಡಗಿಹುದು ಲಿಂಗವನು ಹಿಂಗಿದವರುಂಟೆ (೩೫೫. ೦೦೭). ೬. [ತರ್ಕಶಾ] ಪ್ರಮಾಣ ; ಪುರಾವೆ : 'ಅನುಮಾನ'ದಲ್ಲಿ ಸಾಧ್ಯವಾದ 'ಲಿಂಗ'ಕ್ಕಿರುವ ವರ್ತನೆಯನ್ನೇ ವ್ಯಂಜಕತ್ವದಲ್ಲಿಯೂ ತೋರಬಹುದು (೪೫೩೬೫. ೨೦೨). ೭. [ವ್ಯಾಕ] ಪುಂ. ಸ್ತ್ರೀ. ನಪುಂಸಕಗಳ ಸೂಚನೆ : ನೀನಱಿ ಕರ್ಣಾಟಕದೊಳ್ ಪೇಸಂ ಸ್ತ್ರೀ ಪುಂ ನಪುಂಸಕೋಭಯ ಪುಂ ಸ್ತ್ರೀ ಸ್ತ್ರೀನಪುಸಕಮಸ್ತ್ರಾಚ್ಯಾನ್ಯೂನಾವ್ಯಯಮೆಂದು ಲಿಂಗಮೊಂಬತ್ತು ತೆಱಂ (೩೮೮. ೦೮); ಲಿಂಗವೆಷ್ಟು ವಿಧವು ? ಪುಲ್ಲಿಂಗವೆಂತಲೂ ಸ್ತ್ರೀಲಿಂಗವೆಂತಲೂ ನಪುಂಸಕಲಿಂಗವೆಂತಲೂ ಮೂರು ವಿಧವಾಗಿರುವದು (೩೩೩೧. ೩೩). ೮. ಯಾವುದೇ ಪ್ರತ್ಯಯ ಮೊದಲಾದುವುಗಳು ಸೇರದೆ ಇರುವ ಶಬ್ದದ ಮೂಲರೂಪ ; ಪ್ರಾತಿಪದಿಕ : ಕ್ರಿಯೆಯಂ ನುಡಿವುದುದು ವಿಭಕ್ತಿಯನಿಲ್ಲದುದರ್ಥಮುಳ್ಳುದಂತದು ಲಿಂಗಂ (೩೮೮. ೬೨) ; ಧಾತು ಪ್ರತ್ಯಯಾಂತಗಳಲ್ಲದ ಅರ್ಥವುಳ್ಳ ಶುದ್ಧಗಳು ಲಿಂಗವೆಂದು ಹೇಳಲ್ಪಡುತ್ತದೆ (೩೩೩೧. ೪೨). " ಅನುಮಾನದೊಳು ಮುಷ್ಟಿದೊಳು ಪ್ರಕೃತಿಯೊಳು ಶೈವಮೂರ್ತಿಯೊಳು ಲಿಂಗಮಕ್ಕುಂ " (೩೮೧೩. ೦೩೦-೩೦).

ಲಿಂಗದ ಕಲ್ಲು = ಲಿಂಗವನ್ನಿರಿಸುವ ಕಲ್ಲು : ನಾಲ್ಕುಂ ದೆಸೆಯೊಳು [ಲ್] ನಟ್ಟ ಲಿಂಗದ ಕಲ್ಲುಗಳು[ಲ್] (೪೩೦೫೫. ೦೫-೭೫; ೧೧೫೫). ಲಿಂಗದ ಕಾಯಿ = ಶಿವಲಿಂಗವನ್ನಿಡುವ ಕರಡಿಗೆ ; ಬೌಕ : ಅವರು ಲಿಂಗದ ಕಾಯನ್ನು ಕೊರಳಲ್ಲಿ ಹಾಕಿದ್ದಾರೆ (೮೩೨). ಲಿಂಗದ ಬೀಳ, ಲಿಂಗದ ವೀರ = ವೀರಭದ್ರನ ಖಡ್ಗ ಹೇಳುವ ಕಾಯಕದವನು; ಪುರವಂತ : ಲಿಂಗದ ಬೀರರು ಖಡ್ಗ ಹೇಳುತ್ತಾರೆ (೮೩೨) ; ಲಿಂಗದ ವೀರರ ಕುಣಿತ. ಗಡ್ಡುರಕುಣಿತ . . . ಗುಮಸಾರ್ಥ ನೃತ್ತಗಳು (೪೦೫೮೮. I, ೭೦೯). [ಸಂ.]

ಲಿಂಗಕಲ್ಲು (ನಾ). ಲಿಂಗದ ಮುದ್ರೆಯುಳ್ಳ ಗಡಿಕಲ್ಲು : ಬಡಗಲು ಬಟ್ಟೆಯ ನಟ್ಟ ಲಿಂಗಕಲ್ಲು (೩೫. XIII, ೦೬೨-೨೦; ೧೦೫೬).

[ಲಿಂಗ + ಕಲ್ಲು (< ಕಲ್ಲ್)]

ಲಿಂಗಕಾಣಿಕೆ (ನಾ). ಒಂದು ಬಗೆಯ ತೆರಿಗೆ : ಯಿವಿಗ್ಗೆ ಜಪರಕಾಣಿಕೆಯಲ್ಲ ಮರ್ರಿಕಾಣಿಕೆಯಿಲ್ಲ ಡೊಂಬುಕಾಣಿಕೆಯಿಲ ಲಿಂಗಕಾಣಿಕೆಯಿಲ (೩೪. XVI. ೧೫೩, ೩೯-೪೩ ; ೨).

[ಲಿಂಗ + ಕಾಣಿಕೆ (< ಕಾಣ್)]

ಲಿಂಗಗ್ರಾಹಕ (ನಾ). ಶಿವತತ್ವವನ್ನು ಅರ್ಥಮಾಡಿಕೊಂಡವನು,—ತಿಳಿದವನು : ಶಿವಲಿಂಗಾರ್ಚನಾತಿಸ್ನೇಹದೊಳು ಕುಳ್ಳಿರ್ದು ಲಿಂಗಗ್ರಾಹಕಂ ಬಸವಣ್ಣನಿಹ ಸದ್ಭಾವಮಂ ನೋಡಿ (೩೫೫. ೩೫-೪೭). [ಸಂ.]

ಲಿಂಗಜ (ನಾ). ೧. ಇಂದ್ರಿಯ ಮೂಲಕವಾಗಿ ಬಂದ ಜ್ಞಾನ : ಶ್ರುತ ಭೇದಂ ತದ್ಭೇದದ್ವಿತಯಂ ಲಿಂಗಜಮುಮಾಗಮಂ ಶುದ್ಧಜಮುಂ ಅಲ್ಲಿ ಲಿಂಗಜಮನೇಕಭೇದಮನಂಗೀಕರಿಸಿರ್ಕುಮಾಗಮಂ (೩೦೪೫೫. ೦೮-೪೩). ೨. ಲಿಂಗಾಯತ : ತೋರದಂತಿನ್ನಸ್ಕರೆಲ್ಲಂಗೋಸರಿಸಿದ ಲಿಂಗಜರನೇ ವಿಸ್ತಾರಗೈವ ಪ್ರಧಾನಿಬಸವನು ಕೇಳ್ ಸದ್ಭಾರರು (೩೩೫೫. ೦-೨೩). [ಸಂ.]

ಲಿಂಗತತ್ವ (ನಾ). ಶಿವಲಿಂಗದ ವಿಚಾರವನ್ನು ತಿಳಿಸುವ ತತ್ವ : ಶಿವತತ್ವ: ಹೀಗೆ ೨೫ ತತ್ವಗಳು ಲಿಂಗೈಕ್ಯವಾದಲ್ಲಿ ಆ ಲಿಂಗತತ್ವಗಳು ಹನ್ನೊಂದು ತಾವು ಪರಸ್ಪರ ಕೂಡಿಕೊಂಡು ಹೋಗುವುವು (೩೩೫೫. ೨೬). [ಸಂ.]

ಲಿಂಗತನು (ನಾ). ೧. [ವೀಶೈ] ಸೂಕ್ಷ್ಮಶರೀರ : ಲಿಂಗತನುಚ್ಚಾಯಯೊಳು ತಾ ಸಂಗಿಸಿ (೩೮೫. ೩-೦೬). ೨. ದೇಹದಲ್ಲಿ ಇಷ್ಟಲಿಂಗವನ್ನು ಧರಿಸಿರುವವನು : ಲಿಂಗಧಾರಿ : ಅಹಂಕಾರಕ್ಕೆ ಎಡೆಗುಡದ ಲಿಂಗತನು ವಾಗಿಯೇಕು (೩೫೮. ೧೦೦). [ಸಂ.]

ಲಿಂಗತೊಂಡೆ (ನಾ). ಒಂದು ಬಗೆಯ ತೊಂಡೆಯ ಗಿಡ : ಲಿಂಗತೊಂಡೆ, ಶಿವಲಿಂಗಿ (ಬ್ಲ ಔ. ೦೯-೨೩೯). [ಲಿಂಗ + ತೊಂಡೆ/ತಲು. ಲಿಂಗದೊಂಡ]

ಲಿಂಗತ್ರಯ (ನಾ). ೧. [ವೀಶೈ] ಇಷ್ಟ, ಪ್ರಾಣ ಮತ್ತು ಭಾವ ಎಂಬ ಮೂರು ಲಿಂಗಗಳು : ಇಷ್ಟಪ್ರಾಣ ಭಾವಗಳೆಂಬ ಲಿಂಗತ್ರಯಗಳನು ನೆಲೆಗೊಳಿಸಿ (೩೫೫. ೦); ಇಷ್ಟ ಪ್ರಾಣ ಭಾವಮೆಂಬ ಲಿಂಗತ್ರಯಂಗಳಂ ಕಳೆದು (೩೫೬. ೬೦ ಬೀ೪). ೨. [ವ್ಯಾಕ] ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗ ಎಂಬ ಮೂರು ಬಗೆಯ ಲಿಂಗಗಳು : ಅವ್ಯಯಲಿಂಗಂ ಸಪ್ತವಿಭಕ್ತಿಗಂ ಲಿಂಗತ್ರಯಕ್ಕಂ ವಚನತ್ರಯಕ್ಕಂ ಸಲಿಯಾಗಿರ್ದ್ ತೆಱದಿನರ್ಥಮಂ ಕುಮುಗುಂ (೩೩೮. ೧೧ ಬೀ೬). [ಸಂ.]

ಲಿಂಗದಾಹ (ನಾ). ಉರಿಮೂತ್ರರೋಗ : ಅಯಲೇಯಾದಿ ಚೂರ್ಣ . . . ಆ ಚೂರ್ಣಮಂ ಸಕ್ಕರೆಗೂಡಿ ಹಸುವಿನ ಹಾಲಿನಲ್ಲಿ ಸೇವಿಸಲು . . . ಕಾಮಾಲೆ, ಶಿರೋದಾಹ, ಲಿಂಗದಾಹ ಪರಿಹರಮಕ್ಕುಂ (೩೪೬. ೦೩೬) [ಸಂ.]

ಲಿಂಗದೀಕ್ಷೆ (ನಾ). ಇಷ್ಟಲಿಂಗವನ್ನು ಧರಿಸುವ ದೀಕ್ಷೆ : ಕಾಳಾಮುಖರು ಈ ಹೊಸ ವೀರಶೈವಪಂಥದಲ್ಲಿ ಲಿಂಗದೀಕ್ಷೆ. ಶಿಷ್ಟಗಳಿಗೆ ಗುರುಗಳಾಗಿ ಜೆಂಗಮರೆಂದು ಕರೆಸಿಕೊಂಡರು (೩೫೫೫. ೦೩೪). [ಸಂ. ಲಿಂಗದೀಕ್ಷಾ]

ಲಿಂಗದೂರ (ನಾ). ಲಿಂಗತನುವೆಲ್ಲದವನು : ತನ್ನ ಅನುವ ಶಾನಱಿಯದೆ ಬಂದುಂಟ ಜಂಗವದಲ್ಲಿ ಅಂಗವನಱಸುವ ಲಿಂಗದೂರರಿಗೇಕೆ ಜಂಗವಭಕ್ತ (೩೫೮೫೩. ೩೬-೦೦೯). [ಸಂ.]

ಲಿಂಗದೆರಿಗೆ (ನಾ). ಒಂದು ಬಗೆಯ ತೆರಿಗೆ : ಹಗೞೊಂಡನಹಳಿ ಗ್ರಾಮದಲಿ ಲಿಂಗ [ಧಾ] ರಿಗಳು ಕೊಡುವಂಥ ಲಿಂಗದೆರಿಗೆಯನು ಸಮರ್ಪಣೆಮಾಡಿ (೩೯೩೦. IX-ii, ೩೩೮-೦೩; ೧೩೫೦). [ಲಿಂಗ + ತೆರಿಗೆ (< ತೆಱಗೆ)]

ಲಿಂಗದೆಱೆ (ನಾ). = ಲಿಂಗವೆರಿಗೆ : ಕೊಟೂರಸೀಮೆಯೊಳಗಣ ಬಾನುಳಿಯ ಸಾಮಿಂದರಿಗೆ ಕಾಣಿಕೆ ಕಡಾಯ ಬಟೆ ಕೊಟಣ ಬತೆಱೆ ಲಿಂಗದೆಱೆ ಏನೊಯಿಪ (೩೯೩೦. IX-ii, ೩೩೨-೦೯; ೧೩೬೭). [ಲಿಂಗ + ತೆಱೆ]

ಲಿಂಗದೇಹ (ನಾ). ಸೂಕ್ಷ್ಮಶರೀರ : ಲಿಂಗದೇಹವ ಹೊದ್ದಿದಂತಿಹ ಸೂಗವದಱೊಳಗಿಲ್ಲ (೩೫೫. ೩-೦೯); ಒಬ್ಬೊಬ್ಬ ಜೀವನಿಗೂ ದೇಹಾವರಣಗಳುಂಟು, ಅವಾವುವೆಂದರೆ, ಮೊದಲು ಜೀವನ ಸ್ವರೂಪದೇಹ. ಎರಡನೆಯದು ಲಿಂಗದೇಹ (೩೩೫. ೩-೭ ಚೀ೩೩೯). ' ಲಿಂಗಶರೀರ ' ಪರಾ. [ಸಂ.]

ಲಿಂಗದೇಹಿ (ನಾ). ಲಿಂಗದೇಹವನ್ನುಳ್ಳವನು : ಸೂಕ್ಷ್ಮಶರೀರಿ : ದೇಹಗುಣಗಳಳಮು ಲಿಂಗದೇಹಿಯಾದ ಶರಣನು ಬಾಹಿರಂಗದ ಬಳಿಕ ಮಾಯಾಮೋಹವನ್ನು ಜಱಿದನು (೩೪೫೦. ೨೪೦-೦೩೦೬).

[ಸಂ. ಲಿಂಗದೇಹಿನ್]

ಲಿಂಗಧರ (ನಾ). ಇಷ್ಟಲಿಂಗವನ್ನು ಧರಿಸಿದವನು ; ಲಿಂಗವಂತ ; ವೀರಶೈವ : ಅನೆಗೊಂದಿಯ ಕಾಡವೀರನೆಂಬ ಲಿಂಗಧರ[ನೂ] . . . ಕೊಡುಪಂಥ ಲಿಂಗದೆರಿಗೆ (೩೯೩೦. IX-ii, ೩೩೮-೦೦; ೧೩೬೦); ಲಿಂಗಧರಾಧರವ್ರತತಿ ಲಿಂಗಮಹೀರುಹಪಂಕ್ತಿ ಲಿಂಗತೀರ್ಥಂಗಳ ರಾಜಿ . . . ಕಣ್ಗೆಸದಿರ್ದುದು (೪೫೫. ೦೦-೨೩). [ಸಂ.]

ಲಿಂಗಧಾರಕ (ನಾ)· = ಲಿಂಗಧರ : ನಿರಪೇಕ್ಷಮಾಹೇಶಕಂಥಾವರಣ ಶರಣರು ಕಕ್ಷಕರತಳಸುರುಚಿರೋರಜ್ಜಳಕಲಿತಶಿವಲಿಂಗಧಾರಕರು (ಬಸ. ೪೯-೩೦); ಗುರುಕಾರುಣ್ಯ ಹೊಂದಿದವನು ಯಾವಾಗಲು ಲಿಂಗಧಾರಕನಾಗಿರತಕ್ಕದ್ದು (ಶೀಣಿಕ· ೦೬–೨೦ ಪಪಠ). [ಸಂ.]

ಲಿಂಗಧಾರಣ (ನಾ)· [ವೀಶೈ] ದೀಕ್ಷಾಪೂರ್ವಕವಾಗಿ ಇಷ್ಟಲಿಂಗವನ್ನು ಕಟ್ಟುವುದು,— ಧರಿಸುವುದು : ಭಕ್ತನು ಲಿಂಗಧಾರಣಮಾಡಿದ ಬಳಿಕ ತನ್ನನ್ನು ನಾನಾವಿಧಿಗೆ ಒಯ್ಯುವ ತತ್ವಗಳ ಸಮುದಾಯವನ್ನು ನಿವಾರಣೆ ಮಾಡಬೇಕು (ಶೀಣಿಕ ೦೬–೨೦ ಪಪಠ) ; ದೀಕ್ಷೆಯನ್ನು ಹೊಂದಿದವನು ಲಿಂಗಧಾರಣಕ್ಕೆ ಅರ್ಹನಲ್ಲ (ಪಗಡ. ೨೪೯). [ಸಂ.]

ಲಿಂಗಧಾರಣೆ (ನಾ)· = ಲಿಂಗಧಾರಣ : ಲಿಂಗಧಾರಣೆಯಾದ ಬಳಿಕ ಆ ಲಿಂಗವೇ ಭಕ್ತನಿಗೆ ಗುರುಸ್ವರೂಪವು (ಶೀಣಿಕ. ೦೬–೨೦, ಪಪಠ).

[ಸಂ. ಲಿಂಗಧಾರಣ]

ಲಿಂಗಧಾರಿ (ನಾ)·ವಿ. =ಲಿಂಗಧರ : ಅವರಿವರುಯಸದಿನ್ನೆಲ್ಲರೊಂದೇ ಲಿಂಗ ಧಾರಿಗಳೇಕಕೂಟವಲಿ (ಪಜ್ಞ· ೮೭-೨೭) ; ಲಿಂಗವನ್ನು ತನ್ನ ಹಸ್ತ ವಲ್ಲರಿಸಿ . . . ಧ್ಯಾನಮುಕ್ತನಾಗಿರುವದು· ಲಿಂಗಧಾರಿಯ ಕರ್ತವ್ಯ (ಶೀಣಿಕ· ೦೬–೨೦ ಪಪಠ) ; ಪಾಶುಪತಯೋಗಚಿಹ್ನೆಗಳುಳ್ಳವನೇ ಲಿಂಗ ಧಾರಿಯೂ· ಇವರೇ ಲಿಂಗಿಗಳು ಎಂದು . . . ಕಾಳಾಮುಖರ ಬಗ್ಗೆ ಹೇಳಿದೆ (ಪೌಳಂ· ೦೪೪). ೨. ಒಂದು ಬಗೆಯ ಮರ :(ಕೋಣನ ಕೊಂಬುಮರ, ಲಿಂಗಧಾರಿ, ಅಂಬುರಿಹೊಡೆ (ಪ್ರಾಣಿ· ೬೩-೦೪೪). [ಸಂ. ಲಿಂಗಧಾರಿನ್]

ಲಿಂಗಪತ್ರಿಕೆ (ನಾ)· (?) : ಮೊದಲ ಪದನಪಭ್ರಂಶಕ್ಕೆ ಬಾರದೆ ಉತ್ತರ ಪದಂ ತದ್ಭವಮಾದ ಸಮಾಸಕ್ಕೆ . . . ಪಾದಶ್ಯಂಖಿಲೆ —ಪಾದಸಂಕಲೆ, ಲಿಂಗಪತ್ರಿಕೆ—ಲಿಂಗವತ್ರಿಗೆ (ಪಪಠ· ಶ· ೭೦೪ ಕ್ರಯೋ). [?]

ಲಿಂಗಪಥ (ನಾ)· [ವೀಶೈ] ಲಿಂಗೈಕ್ಯಸಾಧನೆಯು ದಾರಿ; ಮೋಕ್ಷಮಾರ್ಗ: ಎನಗೆ ಗುರುಪಥವ ತೋರಿದವರಾರು ಲಿಂಗಪಥವ ತೋರಿದವರಾರು (ಪಪಠ. ೬೩); ಲಿಂಗಪಥದಲ್ಲಿ ಪಡಿಸಿ ಮಹಾಲಿಂಗವದರಲ್ಲಿ ನಿಲಿಸುಪಾತ ಜಂಗಮ (ತೋಲಪಾ. ೦೦೦ ಕ್ರಶ್ಲಾ೪೬). [ಸಂ.]

ಲಿಂಗಪ್ರತಿಷ್ಠೆ (ನಾ)· (ಪೂರ್ವೆಗಾಗಿ ದೇವಸ್ಥಾನ ಮೊದಲಾದೆಡೆಗಳಲ್ಲಿ) ಶಿವಲಿಂಗವನ್ನು ಸ್ಥಾಪಿಸುವಿಕೆ : ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ ಆ ಕಲ್ಲಾ ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದನೋ ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ (ಪಪಠ. ೫೦-೨೦೨).

[ಸಂ. ಲಿಂಗಪ್ರತಿಷ್ಠಾ]

ಲಿಂಗಪ್ರಸಾದ (ನಾ)· ಈಶ್ವರಲಿಂಗಕ್ಕೆ ಅರ್ಪಿಸಿದ ನೈವೇದ್ಯ : ಲಿಂಗ ಪ್ರಸಾದವನುಂಡು ಅನ್ಯದೈವಂಗಳ ಕೊಂಡಾಡುವವರ ನಮ್ಮ ಕೂಡಲ ಸಂಗಮದೇವನು ಆ ಭಂಡಾರಿಗೆ ಮಾಡಿದ ಹುಗುಂಗೊಂಡವನು (ಪಪಠ. ೬೦೬); ಅಸಮಭಕ್ತಪ್ರಾಣಾಧಿ ಕರವೊಸದು ಕೈಕೈಯಿಂದವಾರೋಗಿಸುತಿರಲ್ ತ್ರಿಸಂಧಿಯೆಲ್ ಲಿಂಗಪ್ರಸಾದವನು (ಪಪಠ. ೨೪-೦೨). [ಸಂ.]

ಲಿಂಗಪ್ರಸಾದಿ (ನಾ)· [ವೀಶೈ] ಲಿಂಗಪ್ರಸಾದವನ್ನು ಪಡೆದವನು : ಅಧಿಯಿಲ್ಲದಿದ್ದಡೆ ಲಿಂಗಪ್ರಸಾದಿಯೆಂಬೆ ವ್ಯಾಧಿಯಿಲ್ಲದಿದ್ದಡೆ ಜಂಗಮ ಪ್ರಸಾದಿಯೆಂಬೆ (ಪಪಠ. ೭೯-೦೪೭) ; ಲಿಂಗಪ್ರಸಾದಿಗಳಲ್ಲದವರ ಸಂಗ ಭಂಗವೆಂದುದು ಗುರುವಚನ (ಬಸ. ೭೪೦). [ಸಂ. ಲಿಂಗಪ್ರಸಾದಿನ್]

ಲಿಂಗಪ್ರಾಣ (ನಾ)· [ವೀಶೈ] ಲಿಂಗವೇ ಪ್ರಾಣವಾದವನು : ಪೂರ್ವ ಬೀಜಮಾಯುಪ್ರಾಣವೆಲ್ಲ ಲಿಂಗಪ್ರಾಣಮೂ ಶರಣನು (ಬಸ. ೬೭೩) : ಎನ್ನ ದೇಹೇಂದ್ರಿಯ ಮನಃಪ್ರಾಣಾದಿಗಳು ಲಿಂಗದ ಸಹಿಪುರಾಗಿ ಲಿಂಗ ಕ್ಕಿಂದ ಬಮಸಿ ಲಿಂಗಪ್ರಾಣಗಳಾದ ಕಾರಣ ಲಿಂಗಕ್ಕಿಂದೆ ಕೈಕೊಂಡೆನು (ಬಸ. ೨೦-೪೬). [ಸಂ. ಲಿಂಗಪ್ರಾಣಿನ್]

ಲಿಂಗಮುಖ (ನಾ)· [ವೀಶೈ] "ಲಿಂಗಸ್ಥಾನಗಳೂ ಲಿಂಗಸ್ವರೂಪಗಳೂ ಆದ ನಾಸಿಕ· ಜಿಹ್ವೆ· ನೇತ್ರ· ತ್ವಕ್ಕು· ಶ್ರೋತ್ರವೆಂಬ ಜ್ಞಾನೇಂದ್ರಿ ಯಂಗಳು ಮತ್ತು ಗುದ· ಗುಹ್ಯ· ಪಾದ· ಪಾಣಿ· ವಾಕ್ಕು ಗಳೆಂಬ ಕರ್ಮೇಂದ್ರಿಯಂಗಳು ಲಿಂಗಮುಖಗಳೂ ಆಗಿರುವುವು" (ಶಿಪಸೂ· ೯೪): ನರಜನ್ಮದಲ್ಲಿ ಹುಟ್ಟಿ ಲಿಂಗಮುಖವನಱಯದೆ ಉದಮದ ಸೊಕ್ಕ ತಲೆಗೇಱಿತ್ತ ಅಯ್ಯಾ (ಬಸ. ೫೮೬). [ಸಂ.]

ಲಿಂಗಮುದ್ರೆ (ನಾ)·("ಇದು ದೇವರಿಗೆ ಸೇರಿದುದು' ಎಂದು ತೋರಿಸಲು ಎತ್ತು· ಕಲ್ಲು ಮೊದಲಾದುವುಗಳ ಮೇಲೆ ಒತ್ತುವ ಅಥವಾ ಮುದ್ರಿಸುವ) ಲಿಂಗದ ಗುರುತು.— ಜಿಹ್ವೆ : ಬೀದಿಯ ಬಸವಂಗೆ ದೇಗುಲದ ಪಶುವಿಂಗೆ ಹುಟ್ಟಿದ ಕಱುಹೋರಿಗಳು· ಬಸವಗಳಪ್ಪವ ಲಿಂಗಮುದ್ರೆಯನೊತ್ತದನ್ನಕ್ಕರ (ಕಪ್ರ.ಕ. ೦೯೨-೨೨೯) ; ಲಿಂಗಮುದ್ರೆಯು ಸೀಮೆಯ ಮೃತ್ತಿಕೆ ಮರ ಕಲ್ಲು ಮುಂತಾದ ಮತ್ತೊವ ಗುಣಂಗಳೆಲ್ಲವೂ ಲಿಂಗಧಾರಣದ ಸೀಮೆಯವಾಗಿ (ಪಠಚಿ· ೭೪) : ಸ್ವತಃ ಇಳಕಲ್ಲ ಮಹಾಂತ ಸ್ವಾಮಿಗಳವರೇ . . . ಲಿಂಗಮುದ್ರೆಗಳನ್ನು ಸ್ಥಾಪಿಸಿದರು (ಪಪಗ· ೩೨೯)

ಲಿಂಗಮುದ್ರೆಕಲ್ಲು· ಲಿಂಗಮುದ್ರೆಯ ಕಲ್ಲು = ಲಿಂಗದ ಚಿಹ್ನೆಯುಳ್ಳ (ಗಡಿ)ಕಲ್ಲು : ಹೊಲ ಮಾಡಿದಿಟ್ಟು ಪಾಲ್ಕುಮೂಲೆಗೂ ನಾಲ್ಕು ಲಿಂಗ ಮುದ್ರೆಕಲ್ಲು ನಡಿಸಿ ಕಾವುಕಟ್ಟು ಮಾಡಿಸಿಬಿಡು (ಪಗಪಚು· ೪೪) ; ಆ ಶಾಸನುರು ಆ ದೇವರ್ಗೆಗಿಯಂಗಡಿಗೆ ಲಿಂಗಮುದ್ರೆಯ ಕಲ್ಲ ನಡಿಸಿಕೊಟ್ಟರ್ (ಎಇ. XIX. ೫೫–೫೬; ೧೨೬೬) ; ಬಾಣೇಶ್ವರದೇವರ ಲಿಂಗಭೋಗರಂಗ ಭೋಗಕ್ಕೆ ಬಯನಾಡೊಳಗಣ ಬಾಣೂರನು ಹುಲಿಕಲ್ಲನು ಲಿಂಗಮುದ್ರೆಯ ಕಲ್ಲ ಹಾರಿ ಕೊಟ್ಟಿಸು (ಎಇ· III (೩), ಹೊಗಡ. ೦೪೬-೦೬ ; ೨೪೯೭). **ಲಿಂಗಮುದ್ರೆಬಸವ = ಲಿಂಗಮುದ್ರೆಯನ್ನು ಒತ್ತಿರುವ ಬಸವ :** (ಪ್ರಾ೦ಪಚ್. ೪೪೬). **ಲಿಂಗಮುದ್ರೆವಳಯ = ಲಿಂಗಮುದ್ರೆಯ ಕಲ್ಲು ಗಳನ್ನು ನೆಟ್ಟಿರುವ ಗಡಿಯ ವ್ಯಪ್ತಿಪ್ರದೇಶ :** ಆ ಪುರದ ಚತುರ್ದೇವಿಗೆ ಲಿಂಗಮುದ್ರೆವಳಯ ಶಾಸನವ ಹಾರಿಸಿ (ಎಇ. XVI· ೪೪,೫೨· ೬೬–೦೬; ೧೬೨೨). [ಸಂ. ಲಿಂಗಮುದ್ರಾ]

ಲಿಂಗಮೆಣಸು (ನಾ)· ಮೆಣಸಿನಲ್ಲಿ ಒಂದು ಬಗೆ : ·ಲಿಂಗಮೆಣಸ್ಕು ಗುರುಗು (ಪ್ರಾಣಿ. ೨೦-೬೭೩). [ಲಿಂಗ + ಮೆಣಸು (< ಮೆಟಸು)]

ಲಿಂಗರೋಗ (ನಾ)· ಮೇಹರೋಗ; ಪರಂಗಿರೋಗ : ಕ್ರಮುಕ ಮನಕ್ಕೆ ಫಲತ್ರಯದ ಮಸಿಯನಕ್ಕಣಲೆಯುಂ ರಸಾಂಜನಮುಮನಕ್ಕ ಮನುಷ್ಯಕಪಾಲಮನಕ್ಕೆ ಮೊಕ್ಕಳಂ ಪೂಸೆ ಲಿಂಗರೋಗಂ ಕಡುಗುಂ (ಪೋಕೋಪಚ· ೯-೦೪೯). [ಸಂ.]

ಲಿಂಗವಂತ (ನಾ)· [ವೀಶೈ] ಇಷ್ಟಲಿಂಗವನ್ನು ಧರಿಸಿರುವವನು : ಲಿಂಗ ವಂತನ ಸ್ಪೃಧಿಯಿಂದ ಹಿಂದಣ ದುಸ್ಸಂಗ ಕೆಡುವುದು (ಬಸ· ೦೩೦); ಅರಳೆಲೆಯುರಸಂ ಪಾಣಾಯ್ಗಳ ವಲ್ಲಳಿಗಾಱಂ ಹೊಂಗತಗದ ಲಿಂಗವಂತಂ (ಪಪಠ. ೦೦–೦೦೩); ಲಿಂಗಧಾವರು ಲಿಂಗಜೇವರು ಲಿಂಗವಂತರು ಲಿಂಗ ಕಾಂತರು (ಪಸಪ್ರ· ೯-೨೪). [ಸಂ. ಲಿಂಗವತ್]

ಲಿಂಗವತ್ರಿಗೆ (ನಾ)· (?): "ವಾಳೆ(ಲಾಳೆ) = ಲಿಂಗವತ್ರಿಗೆ" (ಪಪಸ· ೫೦· ೨); "ಲಾಳೆಯಿಪೆ ಲಿಂಗವತ್ರಿಗೆ" (ಪಪಗಂ· ೭೪) ; "ಲಿಂಗವೆತ್ರಿಗೆಗೆ ಲಾಳೆಂಬುದು" (ಕ್ಯಾಕೃ· ೦೦). [< ಲಿಂಗಪತ್ರಿಕೆ]

ಲಿಂಗವರ್ಜಿತ (ನಾ)· [ವೀಶೈ] ಇಷ್ಟಲಿಂಗವನ್ನು ತ್ಯಜಿಸಿದವನು : ಸರ್ವ ಸಂಸಾರ ಕಾರಣಭಕ್ತಿಗಮ್ಯನಂ ನಿರ್ವಿಕಾರನ ಲಿಂಗವರ್ಜಿತನುದಾರನಂ ಸರ್ವಾಂಗ ವೆಂದಿ ವಂದಿಸುವೇನ ಲಿಂಗದೊಳಗಿರ್ವನಂ ಕುಜ್ಞಾತಿಂದನು (ಪಪಕೃ· ೬–೦ ೭೭). [ಸಂ.]

ಲಿಂಗವಿಕಾರಿ (ನಾ)· [ವೀಶೈ] ಲಿಂಗಾಭಿಮಾನಕ್ಕೆ ಒಳಗಾದವನು ; ಇಷ್ಟಲಿಂಗಾಭಿಮಾನಿ : ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ ಜಂಗಮ ವಿಕಾರಿಗೆ ಧನವಿಕಾರವೆಂಬುದಿಲ್ಲ (ಬಸ. ೭೮೩). [ಸಂ. ಲಿಂಗವಿಕಾರಿನ್]

ಲಿಂಗವಿವಕ್ಷೆ (ನಾ). [ವ್ಯಾಕ] ಲಿಂಗದ ವಿಷಯವನ್ನು ನಿರ್ಧರಿಸುವುದು : ಪುಲ್ಲಿಂಗ, ಸ್ತ್ರೀಲಿಂಗ ಅಥವಾ ನಪುಂಸಕಲಿಂಗವೇ ಎಂದು ನಿರ್ಧರಿಸುವುದು : ಅರ್ಥಾನುಸಾರಿಯಾಗಿ ಲಿಂಗವಿವಕ್ಷೆ ಮಾಡುವುದು ಎಲ್ಲ ದ್ರಾವಿಡ ಭಾಷೆಗಳ ವೈಶಿಷ್ಟ್ಯವಾಗಿದೆ (ಶಾಸಾಚಾ. ೨೬೨) : ಸರ್ವನಾಮಗಳಲ್ಲಿ ಲಿಂಗ ನಿರ್ದೇಶನ ಕಾಣಿಸಿದರೂ ಅದು ಲಿಂಗವಿವಕ್ಷೆಗೆ ಸಂಬಂಧಪಡದ ವಿಚಾರ (ಕ್ರಾಪ್ರ. ೨೩೮). [ಸಂ. ಲಿಂಗವಿವಕ್ಷಾ]

ಲಿಂಗವೀರ (ನಾ). ವೀರಭದ್ರನ ಸ್ತೋತ್ರವನ್ನು ಹೇಳುವ ಕಾಯಕದವನು : ಲಿಂಗದ ವೀರ : ಪೊರಸಿ ನಂದೀಧ್ವಜವ ಕರದಿಂ ಪೊರವಿ ನೋಳ್ಪೀ ಲಿಂಗವೀರರ ಪರವಿಯೊಳಗಮೈದೆ ಪಿಡ್ಡವ ಪೊಗಳಿಪುತ ಪುರದಿ (ಪಜ್ಞ.ಚ. ೯೨-೩). [ಸಂ.]

ಲಿಂಗವೃತ್ತಿ (ನಾ). ಧರ್ಮದ ಹೆಸರಿನಲ್ಲಿ ಸ್ವಾರ್ಥವನ್ನು ಸಾಧಿಸಿಕೊಳ್ಳುವವನು ; ತಪಸ್ವಿಯ ವೇಷ ಧರಿಸಿಕೊಂಡು ಹೊಟ್ಟೆಹೊರೆಯುವವನು ; ಆಷಾಢಭೂತಿ : "ಧರ್ಮಧ್ವಜ, ಲಿಂಗವೃತ್ತಿ ಈ ೨ ತರೋವೇಷಗೊಂಡಂ" (ಕಬಾಚಾ. ೬೭-೨೩೦). [ಸಂ.]

ಲಿಂಗವ್ಯಭಿಚಾರ (ನಾ). ಪುಲ್ಲಿಂಗ, ಸ್ತ್ರೀಲಿಂಗ ಅಥವಾ ನಪುಂಸಕಲಿಂಗಗಳನ್ನು ವ್ಯತ್ಯಾಸಮಾಡಿ ಹೇಳುವುದು : ಲಿಂಗಸಂಖ್ಯಾಸಾಧಾ■ ವ್ಯಭಿಚಾರನಿವೃತ್ತಿಯಂ ಶಬ್ದಾನುಗತಾರ್ಥವಂ ಕಿಯ್ಕೊಳ್ವುದು ಶುಭಪಯಂ ಪುಷ್ಯಸ್ತಾರಕಾನಕ್ಷತ್ರಮೆಂಬುದು ಲಿಂಗವ್ಯಭಿಚಾರಂ (ಕ್ರಿಕ್ರಿ. ೭೩). [ಸಂ.]

ಲಿಂಗವ್ಯವಸ್ಥೆ (ನಾ). [ವ್ಯಾಕ] ಪುಂ. ಸ್ತ್ರೀ. ನಪುಂಸಕಲಿಂಗಗಳನ್ನು ಉಪಯೋಗಿಸುವ ನಿಯಮ. —ಕಟ್ಟುಪಾಡು : ಭಾಷೆಗೆ ಲಿಂಗವ್ಯವಸ್ಥೆ ಒಂದು ಬಗೆಯ ಅನುರೂಪತೆಯನ್ನು ತಂದುಕೊಡುತ್ತದೆ (ಶಾಸಾಚಾ. ೨೪೭). [ಸಂ. ಲಿಂಗವ್ಯವಸ್ಥಾ]

ಲಿಂಗವ್ಯಸನಿ (ನಾ). [ವೀಶೈ] ಲಿಂಗವನ್ನು ಕುರಿತು ಚಿಂತಿಸುವವನು; ಶಿವಧ್ಯಾನಿ : ಮುರ್ವ್ಯಸನಿ ದುರಾಚಾರಿಯೆಂದೆನಿಸಿರಲ್ಕುಮ್ಮಾ ಎನ್ನ ಲಿಂಗವ್ಯಸನಿ ಜಂಗಮಪ್ರೇಮಿಯೆಂದೆನಿಸಲ್ಕುಮ್ಮಾ (ಪಸಿಪ. ೨೬೨) ; ಎಲ್ಲವನು ಹಿಂಗಿಸಿ ತಾ ಲಿಂಗವ್ಯಸನಿಯಾಗಬಲ್ಲಡೆ ಮುಂದೆ ಮಹಾಪಂಗಳದ ಬೆಳಗು ಕಾಣಿಪುದು (ಅಂಗಪ್ರ. ೨-೪). [ಸಂ. ಲಿಂಗವ್ಯಸನಿನ್]

ಲಿಂಗವ್ಯಾಧಿ (ನಾ). = ಲಿಂಗರೋಗ : ರೋಹಿಣೀಧವನುಗ್ರಗ್ರಹಮುಕ್ತನಾಗಿ ನಿಲೆ ಲಿಂಗವ್ಯಾಧಿಯಿಂ ಬರ್ಮಗುಂ (ಶಾಪಪ. ೨೦-೦೦). [ಸಂ.]

ಲಿಂಗಶರಣ (ನಾ). [ವೀಶೈ] ಲಿಂಗಕ್ಕೆ ಶರಣಾದವನು : ಶಿವಭಕ್ತ : ಲಿಂಗಶರಣನ ಪಂಚೇಂದ್ರಿಯಂಗಳಂ ಲಿಂಗಮುಖವಾಗಿ ನಿಂದು ಮನ ಸಹಿತ ಪಂಚವಿಷಯಂಗಳವಿಲಸುವಿಂಗಳ ಲಿಂಗಾರ್ಪಿತವಿವ ಬೆರಿಪುತ್ತ (ಅಪಪ. ೨೩-೩೦). [ಸಂ.]

ಲಿಂಗಶರೀರ (ನಾ). =ಲಿಂಗದೇಹ: ಭೂತಂಗಳೈದು ಬುದ್ಧಿ ಚಿತ್ತಂಗಳೆರಡು ಇಂತೇಳಂ ಬಿಟ್ಟು ಉಳಿದ ಪದಿನೇಳ್ತತ್ವಂಗಳ್ ಕೂಡಿ ಸೂಕ್ಷ್ಮಶರೀರವಾದುದು ಅದಕ್ಕೆ ಲಿಂಗಶರೀರವೆಂದು ಪೆಸರುಂಟು (ಮಹಿಪಾ. ೩-೩೦) : ಬುದ್ಧಿ ಮೊದಲಾಗಿ ತನ್ಮಾತ್ರೆಗಳ ಪರ್ಯಂತ ಹದಿನೆಂಟು ತತ್ತ್ವಗಳು ಪ್ರತಿ ಪ್ರಾಣಿಗೂ ಲಿಂಗಶರೀರವಾಗಬೇಕಾಗಿರುವುದು (ಹೀರಾಶಾ. ೩೭). [ಸಂ.]

ಲಿಂಗಶರೀರಿ (ನಾ). = ಲಿಂಗಧರ : ನಳಿನಪತ್ರೀಕ್ಷಣಾಪ ಓಲಗಕಾಲೆಗೆ ಸಲುವರೆ ಲಿಂಗಶರೀರಿಗಳು (ತ್ರಿಪು. ರಾ. ೩-೦೩೩-೦). [ಸಂ. ಲಿಂಗಶರೀರಿನ್]

ಲಿಂಗಶುದ್ಧಿ (ನಾ). ಐದು ಬಗೆಯ ಶುದ್ಧಿಗಳಲ್ಲಿ ಒಂದು : ಲಿಂಗ ಜೀವವನ್ನು ನೀರಿನಿಂದ ತೊಳೆಯುವುದು : ಆತ್ಮಶುದ್ಧಿ ಸ್ಥಾನಶುದ್ಧಿ ದ್ರವ್ಯಶುದ್ಧಿ ಲಿಂಗಶುದ್ಧಿ ಮಂತ್ರಶುದ್ಧಿಯೆಂಬ ಪಂಚಶುದ್ಧಿಗಳಂ ವಿಸ್ತರಿಸುವಡಲ್ಲಿ : . . ಲಿಂಗಜೀವಮಂ ಪಾಲಿಯಂ ಪ್ರಕ್ಷಾಲನಂಗೈಪುದೇ ಲಿಂಗಶುದ್ಧಿಯೆನಿಸುಪುದು (ಪಪಚಿ. ೯೨). [ಸಂ.]

ಲಿಂಗಸಲಾಪೆ (ನಾ). ಲಿಂಗದ ಗುರುತುಳ್ಳ ಸಲಾಕೆ. -ಸರಳು (?): × × × ಗ ಮಹಾದೇವಿಯರುಂ ಸ್ವರ್ಗಗಾಮಿಗಳಾದಂ . . . ಶ್ರೀಪರ್ವತಕ್ಕೆಟ್ಟ ಪಾತಾಳಗಂಗೆಯು × × × ಇಬ್ಬರ್ಗಳ್ಗೆ ಸಲಕ್ಷಣಮಪ್ಪ ಲಿಂಗಸಲಾಪುಗಳಂ ತರಿಸಿ (ಎಳ.ಗ.ಗ.ಸಂ.೧೯೬೦.೦೩೬-೩೩; ೨೨೨೧). [ಲಿಂಗ+ಸಲಾಪೆ (<ಸಲಗೈ)]

ಲಿಂಗಸಾರಾಯ (ನಾ). [ವೀಶೈ] ಲಿಂಗತತ್ತ್ವವನ್ನು ಅರಿತವನು; ಶರಣ: ಅಸಂಬಂಧ ಸಂಬಂಧವಾಯಿತ್ತು ಲಿಂಗಸಾರಾಯರ ಸನುಮತದಿಂದ (ಬಸಪು. ೧೧೭). [ಲಿಂಗ + ಸಾರಾಯ್]

ಲಿಂಗಸ್ಥಲ, ಲಿಂಗಸ್ಥಳ (ನಾ). [ವೀಶೈ] ನೂರೊಂದು ಸ್ಥಲಗಳಲ್ಲಿಯು ಒಂದು ವಿಭಾಗ: ಶಿವತತ್ತ್ವವೆ ಸ್ವಶಕ್ತಿಯ ಸ್ಫುರಣೆಯಿಂದ ತಾಳಿದ ಎರಡು ಪ್ರಕಾರಗಳಲ್ಲಿ ಒಂದು : ಸಹಸ್ರಮೂಲಮಂತ್ರಮಂ ಜಪಿಸುತ್ತಾ ಲಿಂಗಸ್ಥಲಕ್ಕೆ . . . ಪ್ರಾಣಪ್ರತಿಷ್ಠೆಯಂ ಮಾಡಿ (ಬಪೀಗ. ೦೧೦) ; ಸ್ಥಲ ತತ್ತ್ವವ ತನ್ನ ವಿಮರ್ಶಕ್ತಿಯ ಕ್ಷೋಭೆಯಿಂದ (ಚುನದಿಂದ) ಲಿಂಗಸ್ಥಲ ವೆಂದೂ ಆಂಗಸ್ಥಲವೆಂದೂ ಎರಡುವಿಧ (ಶಿಪಾಸಾ. ೦೦-೫೨); ಲಿಂಗಸ್ಥಲವು-ಭಾವಲಿಂಗ. ಪ್ರಾಣಲಿಂಗ, ಇಷ್ಟಲಿಂಗ ಎಂದು ಮೂರು ವಿಧವಾಯಿತು (ಚಾಕೈದ. ೨೬೫). **ಲಿಂಗಸ್ಥಳ** : ಆದಿಯಲ್ಲಿ ಶಿವಬೀಜವಲ್ಲದವಂಗೆ ವೇದ್ಯವಾಗದು ಶಿವಜ್ಞಾನ ಶಿವಭಕ್ತಿ ಲಿಂಗಸ್ಥಳವಳವಡದು (ಬಸಪು. ೧೫೬). ಅಂಗಸ್ಥಲ ' ಪರಾ. [ಸಂ.]

ಲಿಂಗಸ್ಥಳ ' ಲಿಂಗಸ್ಥಲ ' ನೋ.

ಲಿಂಗಸ್ಥಾಯತ (ನಾ). [ವೀಶೈ] ಲಿಂಗವನ್ನು ಬ್ರಹ್ಮರಂಧ್ರಪ್ರದೇಶದಲ್ಲಿ ಇರಿಸಿಕೊಳ್ಳುವುದು : ಲಿಂಗಭಾವದ ಸಾಕ್ಷಾತ್ಕಾರ : ಬ್ರಹ್ಮರಂಧ್ರದಲ್ಲಿ ಲಿಂಗಸ್ಥಾಯತ ಭ್ರೂಮಧ್ಯದಲ್ಲಿ ಜಂಗಮಸ್ಥಾಯತ (ಅಪಪ. ೪೭-೨೦೦); ಆ ಗುರುವಿತ್ತ ಲಿಂಗವನೇ ಶಿಷ್ಯನು ಸಾವಧಾನದಿಂದುತ್ತಮಾಂಗಾದಿ ಸ್ಥಾನಂಗಳಲ್ಲಿ ಧರಿಸುವುದೇ ಲಿಂಗಸ್ಥಾಯತವೆನಿಸುವುದು (ಅಪಪ. ೦೦೨). 'ಜಂಗಮಸ್ಥಾಯತ ' ಪರಾ. [ಲಿಂಗ + ಸ್ಥಾಯತ]

ಲಿಂಗಾಚಾರ (ನಾ). [ವೀಶೈ] ಪಂಚಾಚಾರಗಳಲ್ಲಿ ಒಂದು ; ಗುರುವು ಅನುಗ್ರಹಿಸಿದ ಲಿಂಗಕ್ಕಲ್ಲದೆ ಬೇರೆ ಲಿಂಗ ಸೇವೆಯನ್ನು ಸಲ್ಲಿಸದಿರುವುದು : ಲಿಂಗಾಚಾರ ಸದಾಚಾರ ಭೃತ್ಯಾಚಾರ ಶಿವಾಚಾರ ಗಣಾಚಾರಮೆಂಬ ಪಂಚಾಚಾರನಿಷ್ಠನಾಗಿ . . . ಇರ್ಪಾತನೇ ವೀರಶೈವನಪ್ಪಂ (ಪಪಚಿ. ೯೭); ಸದಾಚಾರ ಲಿಂಗಾಚಾರ . . . ಭೃತ್ಯಾಚಾರವೆಂಬ ಪಂಚಾಚಾರಂಗಳಳವಟ್ಟು (ಅಲಂಚಿ. ೩೭-೯೦). 'ಪಂಚಾಚಾರ' ಪರಾ. [ಸಂ.]

ಲಿಂಗಾಣು (ನಾ). ಲಿಂಗದಿಂದ ಉತ್ಪತ್ತಿಯಾಗುವ ಅಣು : ವೀರ್ಯ : ಮಳೆಗಾಲದಲ್ಲಿ ಒಂದೆರಡು ತಿಂಗಳ ಮಟ್ಟಗೆ ಜೀವದಿಂದಿದ್ದು ಒಂದು ಸಲ ಲಿಂಗಾಣುಗಳನ್ನು ಉತ್ಪತ್ತಿಮಾಡಿ . . . ಅಳಿಯುವಂಥದ್ದು (ಕಯುಪ. ೦೧೦) [ಸಂ.]

ಲಿಂಗಾತ್ಮಕ (ನಾ). ಲಿಂಗದಲ್ಲಿ ಸೇರಿಕೊಂಡಿರುವವನು.— ಲೀನವಾಗಿರುವವನು : ಲಿಂಗಮುಖ ನಿರ್ಲಿಂಗ ತೇಜೋಲಿಂಗ ಲಿಂಗಾತ್ಮಕ ಸದಾಶಿವಲಿಂಗ ನಿರ್ಮಾಯಲಿಂಗ ಲಿಂಗಸ್ಥಿತ ಮಹಾಲಿಂಗ. . .ಕರಜಸುವುದು (ಶಾಪ್ರಾಕ. ೬-೦೬). [ಸಂ.]

ಲಿಂಗಾಯತ, ಲಿಂಗಾಯಿತ, ಲಿಂಗಾಯ್ತ (ನಾ). ೧. [ವೀಶೈ] ಗುರುವು ಶಿಷ್ಯನಿಗೆ ಕೊಡುವ ಇಷ್ಟಲಿಂಗವನ್ನು , ಶಿಷ್ಯನಿಗೆ ಪೂಜಿಸಿ ತೋರಿಸುವುದು : ಮಾರಂಗಕ್ರೀಯದು ಸಂಪಾದಿಸಿ ಲಿಂಗಾಯತ ಸ್ಥಾನಾಯತವಾಗಿ ಒಳ ಹೊಜೆಗ್ಗದೆ ವೇಧಿಸಿಕೊಳಲು ಮಿಜಿಜಿದ ಕ್ರೀಯಿಂದೆನಿಸುತ್ತು (ಕಪೀಗ. ೦೦೨-೩೦): ಆಚಾರ್ಯಂ ತಾನು ಶಿಷ್ಯಂಗೆ ಕೊಡಲ್ಬುಕ್ಕ ಲಿಂಗವನರ್ಚಿಸಿ ಶಿಷ್ಯನಂ ನೋಡಿಸುವುದೇ ಲಿಂಗಾಯತವೆನಿಸುವುದು (ಪಪೀಗ. ೦೦೨) : ಆಚಾರ್ಯನು ತಾನು ಶಿಷ್ಯನಿಗೆ ಕೊಡತಕ್ಕ ಲಿಂಗವನ್ನು ಪೂಜಿಸಿ ಶಿಷ್ಯನಿಂದ ನೋಡಿಸುವುದೇ ಲಿಂಗಾಯತವೆನಿಸುವುದು (ಅಶ್ರಾ. ೦). ೨. ಇಷ್ಟಲಿಂಗವನ್ನು ಧರಿಸಿದವನು ; ಲಿಂಗವಂತ : ವೀರಶೈವ : ಲಿಂಗಾಯತರಿಗೆ

ರಶೈವರಂತಲೂ. ಹೆಸರುಂಟು (ಕಾಗ-೧೦). **ಲಿಂಗಾಯಿತ** : ೨. ಗ. ೩೫೩). **ಲಿಂಗಾಯ್ದು** : (ಕ). [ಲಿಂಗ + ಆಯತ$_1$]

ಯಿತ 'ಲಿಂಗಾಯತ' ನೋ.

ಯ್ದು 'ಲಿಂಗಾಯತ' ನೋ.

ರಾಧನೆ (ನಾ). [ವೀಶೈ] ಇಷ್ಟಲಿಂಗವನ್ನು ಪೂಜಿಸುವುದು : ಗಾರಾಧನೆಯು ಮೂಡುವೆ ಜಂಗವಾರಾಧನೆಯ ಮಾಡುವೆ (ಬಸವ. ೭೦೬).

[ಸಂ. ಲಿಂಗಾರಾಧನೆ]

ರ್ಚನೆ (ನಾ). = ಲಿಂಗಾರಾಧನೆ : ನಾನು ಬೆಪಹಾರವ ಮಾಡುವೆ ಯ್ಯಾ ಲಿಂಗಾರ್ಚನೆಗೆಂದು (ಬಸವ ೭೦೬): ನಿತ್ಯಲಿಂಗಾರ್ಚನೆಗೆ ನಡತಂದು ತಸಂಬಡುತೆ ಹರನಾಲಯಕ್ಕೆಯ್ತಂದು (ತೊಡ. ಕೀ. ೪-೭) ; ಲಿಂಗಾ ನೆಯಿಂದ ಜಂಗಮಾರ್ಚನೆಯುಧಿಕ (ಅಖಂತೇ. ೭೦-೪೨).

[ಸಂ. ಲಿಂಗಾರ್ಚನ]

ರ್ಪಿತ (ಗು) ೧. ಲಿಂಗಕ್ಕೆ ಅರ್ಪಿಸಿದ. – ನೀಡಿದ : ಲಿಂಗಾರ್ಪಿತ ಷದೊಳ್ಭಮಂಗರ್ಪಿತಮಾಗಪಡದೆನ್ನಿ ಬೆರಸಿವೆಮೊ ಮಾಹಾಲಿಂಗ ವಿಧೂದಕಮಂ ಪಿಂಗದೆ ನೀಸೊಂದುಗೆಯ್ದುಯೋ ಮಜಪಿಂದಂ (ಕ್ರಶಂ. -೦೬). (ನಾ) ೨. ಆಹಾರಪದಾರ್ಥ ಮುಖ್ಯಾದುವನ್ನು ಂಗಕ್ಕೆ ಅರ್ಪಿಸುವುದು.– ನೀಡುವುದು : ಆಪ ಪದಾರ್ಥವಾದರೇನು ನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ (ಬಸವ. ೬೭೪).

[ಸಂ.]

ವತಾರ (ನಾ). ೧. [ವೀಶೈ] ಶಿವನು ಲಿಂಗದ ಅವತಾರವನ್ನು ರಿಸುವುದು; ಶಿವನು ಲಿಂಗರೂಪವನ್ನು ತಾಳುವುದು. ೨. ಶರಣ; ಮಭಕ್ತ : ಮಂಗಳದ ಲಿಂಗಾವತಾರರ ಸಂಗದಿಂ ಮಡಿವಳಸು ಭಕ್ತ ರಂಗಮಒಮೆಯಜಿಯಲಾಜದೆ ಪಲವರೂಪುಗಳ ಧರಿಸಿ (ಬಸವ. -೩೦).

[ಸಂ.]

(ನಾ). ೧. ಸಂನ್ಯಾಸಿನಿ ; ಯೋಗಿನಿ : ವಿರಕ್ತೆ : ವ್ಯಾಧಿಯುತೆ ೂಳಂ ಲಲನೆ ಮರುಳ್ಗೊಂಡಳೊಳಂ ಲಿಂಗಿಯೊಳಂ . . . ನೆರದೊಡ ಗುಮಸುಮುಂ ಶ್ರೀಯುಂ (ಪುರಂ. ೯-೪) ; ಸೂಳೆ ರಂಡೆ ಕೊಡಗೂಸು ತ್ತು ಲಿಂಗಿ ದೇವತೆ ತಿರ್ಯಗ್ಜಾತಿ ಕೀಳ್ಜಾರೆಯೆಂಬವರ್ಮೊದಲಾಗೊಡೆಯ ೀಯರೊಳು (ಪಜ್ಞ. ೩-೩ ಪ), ೨. ಒಂದು ಬಗೆಯ ಗಿಡ ; ಲಿಂಗಿಯಿನಲ್ಕೆರಣೆ" (ಪಂಗರಾ. ೪೪-೪೨).

[< ಸಂ. ಲಿಂಗಿನೀ]

(ನಾ). ೧. ಯತಿ ; ಮುನಿ ; ಋಷಿ : ಬ್ರಾಹ್ಮಣರಂ ಲಿಂಗಿಗಳಂ ಲೆ ಪೂಂದಿನಂಗಳೊಳಳಿದವರ್ಗಳಪ್ಪರಿಂತಿದನಳಿದರ್ (ಎಕ. XVI. ೩೯-೫೦: ೦೭) ; ಜೈನ ಭೈರವ ಬುದ್ಧ ಲಿಂಗಿಗಳು ವಿವಿಧವರ್ಣಾಶ್ರಮಸುಧರ್ಮ ವಹರಣಪ್ಪರು . . . ಒಪಗಿದರಸುಖ್ಯಾತ (ಕುಣ್ಣೇ. ೦೨-೪೨); ಂಗಿಯಪ್ಪುದಂ ಹಲ್ಲುಹೋವುದಂ . . . ಂತಪ್ಪ ದುಸ್ವಪ್ನಂಗಳಂ ಂಡೊಡೆ ಸಾವರು (ಪಪೇ. ೦೫೯). ೨. [ವೀಶೈ] ಇಷ್ಟಲಿಂಗವನ್ನು ರಿಸಿರುವವನು ; ಲಿಂಗಧಾರಿ : ಶಿವಜ್ಞಾನ ಸಂಪನ್ನನಾದಂ ಜ್ಯೋತಿ ರ್ಮಯಲಿಂಗಿಗೆ ಅಂಗವುಂಟೆ (ವಚ-೭೦).

[ಸಂ. ಲಿಂಗಿನ್]

ಗ (ನಾ). [ವೀಶೈ] ಇಷ್ಟಲಿಂಗವನ್ನು ಹೊಂದಿರುವವನು ; ಂಗಧಾರಿ ; ಲಿಂಗವಂತ : ಸರ್ವಾಂಗಲಿಂಗಿಗಸೆಂದು ಮಂಗಳಾತ್ಮಕ ರು ನಂದಿದ (ಕ್ರಿಂಪು-೨-೪೬). [ಲಿಂಗ + — ಇಗ]

ನಿ (ನಾ). [ವೀಶೈ] ಸಂನ್ಯಾಸಿನಿ ; ಯೋಗಿನಿ : ಬಹುವ್ಯಸನ ಲಿಂಗಿನಿ . . . ಬೆಲೆಪೆಣ್ ಪುಂಮಗುಂಟಣೆ ದೈವಕಾರ್ತಿ ನಾಪಿತೆ ಕಥವೇಳ್ದ

ಲಿಂಗೈಕನಿಷ್ಠ (ನಾ). [ವೀಶೈ] ಇಷ್ಟಲಿಂಗದಲ್ಲಿ ಏಕನಿಷ್ಠೆಯುಳ್ಳವನು : ಲಿಂಗೈಕನಿಷ್ಠನೆನಿಸುವ ಭೃಂಗೀಶಂ ಶಕ್ತಿಯುಕ್ತಮೆನಿಪೀಶನ ವಾಮಾಂಗ ಮನೆ ಪಿಂಗುತಮಂ ಬಲದಂಗಕೆ ಬುಗೆಯೊಕ್ಕಾಗಿ ಭಜಿಸಿದನಲ್ತೇ (ಕ್ರಶಂ. ೪೭-೩೨).

[ಸಂ.]

ಲಿಂಗೈಕ್ಯ (ನಾ). ೧. ಲಿಂಗದಲ್ಲಿ ಐಕ್ಯನಾಗುವುದು. ೨. [ವೀಶೈ] ಮರಣ ಹೊಂದಿದ ವ್ಯಕ್ತಿ ; ಶಿವೈಕ್ಯ : ಲಿಂಗದಲ್ಲಿ ಐಕ್ಯನಾದವನು : ಕೂಡಲಸಂಗನ ಶರಣರಲ್ಲಿ ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ (ಬಸವ. ೦೩೩) ; ನಿರುಪಮನಿರಾಳನು ನೋಡಾ ಲಿಂಗೈಕ್ಯನು (ಅಖಂತೇ. ೩೦೬-೫).

[ಸಂ.]

ಲಿಂಗೋದಕ (ನಾ). [ವೀಶೈ] ಇಷ್ಟಲಿಂಗಕ್ಕೆ ಅಭಿಷೇಕಮಾಡಿದ ನೀರು: ಲಿಂಗದೇವನ ಮುಟ್ಟಿ ಮಜ್ಜನಕ್ಕೆಜಿವ ಕೈಯಲು ವಿಪ್ರನ ಕಾಲ ತೊಳೆವರೆ ಲಿಂಗೋದಕ ಪ್ರಮಾಣುವಲ್ಲಿ ವಿಪ್ರನ ಕಾಲ ತೊಳೆದ ನೀರು ಮುಂಡೆಯ ಮೇಲೆ (ಬಸವ. ೩೫೪) ; ಪಾದವಲ್ಲಿ ಪಾವೋದಕ ಆ ಪಾದತೀರ್ಥವನ್ನು ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬ ಇಚ್ಛೆ ಹುಟ್ಟಿದಲ್ಲಿ ಲಿಂಗೋದಕ ಮಜ್ಜನ ಕ್ಕೆರೆದಲ್ಲಿ ಮಜ್ಜನೋದಕ (ಕಾರ್ತಿ. ೦೩೭).

[ಸಂ.]

ಲಿಂಗೋದ್ಭವ (ನಾ). ೧. ಲಿಂಗದ ಉದ್ಭವ.– ಹುಟ್ಟುವಿಕೆ : ಪರಮ ಸುಜ್ಞಾನನಿಧಿನಂದೀಶ್ವರಂಗಮಲಕರಕಮಲಮಂ ಮುಗಿದು ಕೊಂಡಾಡಿ ಚಿತ್ತಸ್ಥಿರನಾಗಿ ಲಿಂಗೋದ್ಭವದ ನಿರೂಪಣನನು ಸನತ್ಕುಮಾರಂ ಕೇಳಲು (ಶಿಪು. ೪-೧). ೨. "ಅಯೋನಿಜ, ಶಿವಕೃಪೆಯಿಂದ ಜನಿಸಿದವನು" (ಕಣಾ. ೨೪-೭).

[ಸಂ.]

ಲಿಂಗೋಪಾಸನೆ (ನಾ). [ವೀಶೈ] ಇಷ್ಟಲಿಂಗವನ್ನು ಉಪಾಸನೆ ಮಾಡುವುದು ; ಲಿಂಗಪೂಜೆ : ಷಟ್ಸ್ಥಲಮಾರ್ಗವು ವೀರಶೈವರ ಲಿಂಗೋಪಾಸನೆಗಾಗಿ ಯುಕ್ತಿಯುಕ್ತವಾಗಿ ಕಲ್ಪಿಸಿದ ಸಾಧನಮಾರ್ಗವು (ಶಿವತ. IV. ಕ್ರಶ್ಲಾವಸ).

[ಸಂ. ಲಿಂಗೋಪಾಸನ]

ಲಿಂಬಿ 'ನಿಂಬೆ' ನೋ.

ಲಿಂಬೆ 'ನಿಂಬೆ' ನೋ.

ಲಿಖಿತ (ನಾ). ಬರಹ ; ಬರವಣಿಗೆ : ಪಲ್ಲವಾಚಾರಿ ಲಿಖಿತಂ (ಎಕ. II. ೨೦-೫; ಸು. ೭೦೦) ; ದಿನಕರಯ್ಯಶೆಟ್ಟಿಯ ಲಿಖಿತಂ (ಎಕ. IV. ಎಳಂರೂ. ೨೨-೦೩ ; ಸು. ೪೭೬ ?). [< ಸಂ. ಲಿಖಿತ]

ಲಿಖಲಿಖ (ನಾ). ೧. (ಉಪಕರಣಗಳ ಕೀಲು ಮುಂತಾದುವು ಹಳೆಯ ದಾಗುವುದರಿಂದಾಗುವ) ಸಡಿಲ ; ಅಳ್ಳಕ : ಪಾವನ್ಯಾಜ್ಯಕೋಟೆಯು ಭದ್ರಕೀಲುಗಳು ಲಿಖಲಿಖಯಾಗುತ್ತಿದ್ದವು (ಕಳ್ಳಕೃ. ೦೩೨): ಮೊಗಲ ರಾಜ್ಯದ ಕೀಲಗಳು ಸಡಿಲಿಹೋಗಿ, ರಾಜ್ಯವು ಲಿಖಲಿಖಯಾಯಿತು (ರಾಜಾಶಾ. ೦೬); ಮೋಜಾರು ಳ ಬೈಲಿ ದೂರದಲ್ಲಿ ಬರುತ್ತಿದ್ದರೂ ಶಬ್ದವಾಗುವಷ್ಟು ಅವು ಲಿಖಲಿಖಯಾಗಿದ್ದರೆ ಅಂತಹ ಮೋಟಾರಿಗೆ ಹಾರನ್ ಇದ್ದರೆ ಅದನ್ನು ತೆಗೆಯಿಸಿ ಹಾಕುತ್ತೇನೆ (ಜಾತಗೇ. ೭೭). ೨. ಶಿಥಿಲ ; ಜರ್ಜರಿತ: ಕಲ್ಪವೃಕ್ಷವನ್ನು ಸಮೂಲ ಕಿತ್ತು ಬಗೆದಂತೆ ಅರಸನ ಸರ್ವಾಂಗಗಳು ಲಿಖಲಿಖಯಾದವು (ತುಳಚೇ. ೦೦೬) : ಅವನ ಮೈಯೆಲ್ಲ ಲಿಖಲಿಖಯಾಗಿತ್ತು (ಎರೆ. ೯೭) : ಅದರ ಮೇಲಿಂದ ಬಿದ್ದದ್ದರಿಂದ ನನ್ನ ಮೈಯೆಲ್ಲ ಲಿಖಲಿಖಯಾಗಿವೆ (ಕಥೃಸ. ೦೪).

[← ಮರಾ. ಲಿಖಲಿಖೀ]

ಲಿಕುಚ (ನಾ). ೧. ಈಳಿಜಾತಿಗೆ ಸೇರಿದ ಒಂದು ಬಗೆಯ ಮರ ಮತ್ತು ಅದರ ಹಣ್ಣು; ಗಜನುಂಬೆ : "ಲಕುಚಃ ಲಿಕುಚಃ, ಡಹುಃ–ಪಿ ಗಜನಿಂಬೇ ಹೆಸರುಗಳು" (ನಿಘಂ. ೦೩೬): ವರಾಳ ಪಾಟಳಾಶ್ವತ್ಥಜ್ಯಾತಂ ಲಿಕುಚ ನಾಳಿಕೇರದ್ರುಮಜಾತಂ (ಶುಳುಪಾ. ೦೦-೩೬ ಪಗಳ): ಬಲ್ಲೂವಿನ

ಧಾಳಾಕ್ಷನೆಂದರ್ಚಿಸುತ್ತೆ (ರಾಶಾಸ. ೬-೩೦). ೨. ಒಂದು ಬಗೆಯ ಮರ ಮತ್ತು ಅದರ ಹಣ್ಣು; ಬೇಲ; ಬೆಲ್ಲವತ್ತ: "ಲಕುಚಂ (ಲಕುಚಂ) ಕಪಿತ್ಥ ಮಱಿಗೆ ದಧಿತ್ಥಂ" (ಕವಿಕ. ೭೩-೩); ಒರ್ವಳ್ ಲಿಕುಚಕುಚದ ನಸೆಗಾರ್ತಿ ಕಣ್ಮಿರೆ . . . ಕಾಪ್ಪಸಮಂ ಸದಿರ್ದಿದಳ್ (ರಾಪಾಖ್ಯ. ೦೨೩-೦೨). [ಸಂ.]

ಲಕ್ಷಿ (ನಾ)· ೧. ಹೇನಿನ ಮೊಟ್ಟೆ; ಸೀರು: ಮತ್ಕುಣದಂಪಮುಕ ಲಿಕ್ಷಾಯೂಕಪಿಪೀಲಿಕಾದೇಹಿಕಂ (ಪಕ್ಷಪ್ರ ೧೮). ೨. ದೂರವನ್ನು ಅಳೆಯುವ ಒಂದು ಮಾನ: ಆ ತ್ರಸರೇಣುಗಳೇಜಾಗಲೊಂದು ವಾಲಾಗ್ರ ವೆನಿಸುಗುಂ ಆ ಪಾಲಾಗ್ರವೆಜಾಗಲೊಂದು ಲಿಕ್ಷೆಯೆನಿಸುಗುಂ (ಜವೇಕ. ೨೬೯).

[ಸಂ. ಲಿಕ್ಷಾ]

ಲಿಖನ (ನಾ). ೧. ಬರೆಯುವಿಕೆ: 'ಲಿಖನ' ಪರಾ. ೨. ಬರೆಯುವ ಬರವಣಿಗೆ; ಬರಹ. ೩. ಬರೆದ ಆಧಾರ ಪತ್ರ; ದಾಖಲೆ. [ಸಂ.]

ಲಿಖಾವಟ್ಟು (ನಾ). ೧. ಬರವಣಿಗೆ. ೨. ಲಿಖಿತ ದಾಖಲೆ.—ಪತ್ರ: ಈ ಕಾಯಿದೆಯಲ್ಲಿ ಹೊಸದೇನೂ ಇಲ್ಲ. ಇದುವರೆಗೆ ಲಿಖಾವಟ್ಟಿಸಲ್ಪಟ್ಟ ಇಲ್ಲವೆದ್ದಕ್ಕೆ ಈಗ ಲೇಖನರೂಪವನ್ನು ಕೊಟ್ಟಿದೆ (೨೦೪ಮು. ೪೫೯); ಪ್ರಾಚೀನ ಕಾಲದ ಶಾಸನಗಳು ಮತ್ತಿತರ ಲಿಖಾವಟ್ಟುಗಳನ್ನೆಲ್ಲಾ . . . ಸಂಪಾದಿಸಿವ್ವು ಚೊಕ್ಕವಾಗಿ ಇಂಗ್ಲಿಷ್‌ಲಿಪಿಯಲ್ಲಿ ಮುದ್ರಣವಾಗಿವೆ (ಕಾಚ್ಚಾಪ್ರ. ೪೫೩).

[←ಹಿಂ. ಮರಾ. ಲಿಖಾವಟ್]

ಲಿಖಾವಟ್ಟುದಾರ (ನಾ)· ಬರವಣಿಗೆಗಾರ; ಲಿಪಿಗಾರ: ಅನೇಕ ಗ್ರಾಮಗಳಲ್ಲಿ ಕೆಲಸಕ್ಕೆ ಬಾರದ ಲಿಖಾವಟ್ಟುದಾರರಲ್ಲದೆ ಪಟೇಲರುಗಳಿದ್ದರು (೪೦೬. ೦೬೩). [ಲಿಖಾವಟ್ಟು + — ದಾರ]

ಲಿಖಿಚ್ಚು 'ಲಿಖಿಸು' ನೋ.

ಲಿಖಿತ (ಗು)·ನಿ. ಬರೆದ: ಹರಲಿಖಿತಪಪ್ಪೋಲೆಜೋಂದಂಬರದೋರ್ದಾಕ್ಷಿಕಂ ಭೂಧರನ ಸಮ್ಮುಖದಲ್ಲಿ ಬೀಳಲು (೨೪೪. ೪-೩೨): ಸಮಗೆ ದೊರಕಿರುವ ಪ್ರಾಚೀನ ಲಿಖಿತದಾಖಲೆಗಳು ಕ್ರಿ. ಪೂ. ೪ನೆಯ ಶತಮಾನಕ್ಕಿಂತ ಹಿಂದಿನ ವಾಗುವುದಿಲ್ಲ (ಶಾಶಾ. ೪). ೨. ಕೊರೆದ; ಕಂಡರಿಸಿದ· (ನಾ)· ೩. ಬರೆದುದು: ಬರಹ: ಶಿರದ ಲಿಖಿತವ ಕಂಡು ಮರುಳುತಂದಂಗಳು ಓದಿ ನೋಡಲು (೨೪೪. ೪೪೯): ನಿಮ್ಮ ಲಿಖಿತವನಿಂದು ಕಾಣಿಸಿದಿರೇ (೪೦೪. ೬-೬೦). ೪. ಬರೆದ ದಾಖಲೆ: ಕಡತ: ವಾಲ್ಮನೆಯ ಲಿಖಿತದಲ್ಲಿ ಮಂಗರಸನ ಪೂರ್ವಜರ ವಿವರಗಳನ್ನು ಹೇಳಲಾಗಿದೆ (ಶಾಚಾಣಾಂ. ೦೩). ೫. ಸ್ಮೃತಿಯನ್ನು ಬರೆದ ಒಬ್ಬ ಋಷಿಯ ಹೆಸರು: ಆಜ್ಞಾ ದ್ವಿಜಾಧಮಂ ತಾನಾದೇ ದ್ರೋಹಕೆಂದು ಲಿಖಿತಂ ನುಡಿದನು (ಕೃಬಾಣಾ. ೦೩-೩).

[ಸಂ.]

ಲಿಖಿಸು. ಲಿಖಿಚ್ಚು (ಕ್ರಿ). ಬರೆ: ಲೇಖಿಸು: ಬರೆದಂ = (ಪ್ರಯೋಗ) ಲಿಖಿಸಿದಂ (ಕಾಪಾ. ೨೧೪೯. ೬ ಬಿಗ್); ಪುಟಾಕ್ಷರಿಯುನಕ್ಷರವಾಗಿ ಲಿಖಿಪುತ್ತ (೨೪೪. ೩೩-೬೬) : ಮುಖಿಮಾಡ್ದೆವತ್ಸನಾಲ್ಕಕ್ಷಿ ನೂಱಿಂಬರಲ್ ಲಿಖಿಸಿರ್ದ ಪ್ರತಿಮೆಯಂದದಿ ಬೆಱಗುಮ್ಬು ಜನ್ಮಿಬಿನ ಮುಗ್ಧಸುಭಾವಮಂ ಕಂಡು (೪೦೪. ೯-೦). ಲಿಖಿಚ್ಚು : ಶ್ರೀಮತೆನ್ದರ್ಮಮ್ಮ ಜನ್ಮಾಧಿರಾರ್ಣವಮ್ ಲಿಖಿಚ್ಚಿದೋನ್ ದಿವ್ಯಭಾಷ್ಪಾಕುಲನ್ (ಅಕ. XVI, ಶಾಪೂ. ೦೨-೯; ಸು. 754).

[ಲಿಖಿಸ + — ಇಸು]

ಲಿಗಾಡ. ಲಿಗಾಡಿ· ಲಿಗಾಡು (ನಾ)· (ಉಕ) ನಿ. ಒತ್ತಾಯ; ನಿರ್ಬಂಧ: ಈ ಶಿಕ್ಷೆಯು ನಿನ್ನ ಮೇಲೆ ಲಿಗಾಡ ಪಾಕಿ ತೆಗೆದುಕೊಂಡಿದೋ (೪೩೩೮೦. IV· ೬೬). ಲಿಗಾಡಿ : ೨. ಗೋಜು; ಉಸಾಬರಿ; ಗೊಡವೆ: ನಮೆ ದಾವರೂ ಹೋಗುಬಹುದು. ನಿಮ್ಮ 'ಲಿಗಾಡಿ' ಬೇಡ (೪೮೪-೩೭) ಲಿಗಾಡು: ೨. ಈ ಪ್ರಾಣಿಗೆ ಸಮಾಧಾನವೆಯುಂದೇ ಇರಲಿಲ್ಲ-ಬಿವಿಲ್ಲ ಬಂದು ಲಗಾಡು ಬೇಕಾಗುತ್ತಿತ್ತು (೨೦೪೫. ೩೩. ೦೦೭). ೩. ನಷ್ಟಕ್ಕಾಗಿ ಕೊಡುವ ಪರಿಹಾರ: (೬).

[← ಮರಾ. ಲಿಗಾಡ್]

ಲಿಗಾಡಿ 'ಲಿಗಾಡ' ನೋ.

ಲಿಗಾಡು 'ಲಿಗಾಡ' ನೋ.

ಲಿಪಿ (ನಾ). ೧. ಮೆತ್ತುವಿಕೆ: ಬಳಿಯುವಿಕೆ. ೨. ಬರೆಯುವಿಕೆ; ಲೇಖಿಸುವಿಕೆ. ೩. ಅಕ್ಷರ: "ಲಿಪಿಯೆಂಬುದು ಚಿತ್ರದ ಬರಪಮುಂ, ಅಕ್ಷರವ ಬರಪಮುಂ" (ಕಣಾಮು. ೦೫೦-೧೩); ತೆಲುಗಲಿಪಿ ನಾಗರದ ಲಿಪಿ ಗ್ರಂಥಲಿಪಿ ಹಳೆಗನ್ನಡದ ಲಿಪಿ ದ್ರಾವಿಳಲಿಪಿಯು ಪಾರಿಸಲಿಪಿಯು ಲಾಳಲಿಪಿ ಮೊದಲಾದ ಹಲವು ಲಿಪಿಗಳನ್ನೋದಬಲ್ಲಗ್ಗಳದ ಕರಣಿಕರಂ ಕರಸಿ (೨೪೪. ೪-೩೩): ಅಕ್ಷರಗಳನ್ನು ಕಣ್ಣಿಗೆ ಗೋಜುಬರಿಸುವಂತೆ ಮಾಡಲು ನಿಶ್ಚಿತ ವಾಗಿರುವ ಸಂಕೇತಗಳು ಅಥವಾ ಚಿಹ್ನೆಗಳು ಲಿಪಿಗಳೆನಿಸುತ್ತವೆ (೨೦೬೩೮. ೦). ೪. ಬರವಣಿಗೆ: ಕೈಬರಹ; ಹಸ್ತಾಕ್ಷರ: ಪಂಕ್ತಿ ಛೇದಂ ಲಿಪಿಗಳೊಳ್ . . . ಅಕ್ಕುಮಲ್ಲದೆ ಜನಪದದ ಜನಂಗಳೊಳ್ಳಿ (೪೧೦. ೨-೦ ೩). ೫. ಹಣೆಬರಹ; ವಿಧಿಲಿಖಿತ: 'ಲಿಪಿಕರ್ತುಂ' ಪರಾ. ೬. [ತರ್ಕಶಾ] ಹನ್ನೆರಡು ಬಗೆಯ ಪ್ರಮಾಣಗಳಲ್ಲಿ ಒಂದು: ಯಥಾರ್ಥಜ್ಞಾನದ ಲಿಖಿತಪ್ರಮಾಣ. — ಸಾಧನ: ಪ್ರಮಾಣವು ಪ್ರತ್ಯಕ್ಷ. ಅನುಮಾನ. ಉಪಮಾನ. ಶಬ್ದ. ಆರ್ಥಾಪತ್ತಿ. ಅನುಪಲಬ್ಧಿ. ಸಂಭವ. ಐತಿಹ್ಯ. ಲಿಪಿ. ಲೋಕಪ್ರಸಿದ್ಧಿ. ಚೇಷ್ಟೆ. ದ್ಯಾತಿಳ ಎಂಬು ಹನ್ನೆರಡು ವಿಧ (೨೦೮೩ಾ. ೦೩೩).

[ಸಂ.]

ಲಿಪಿಕ (ನಾ). ಬರೆಯುವವನು: ಲೇಖಿಕ: "ಲಿಪಿಕನೆನೆ ಗ್ರಂಥ ಲೇಖಿಕಂ" (ಪಂಗಣಾ. ೦೦೩-೦೩).

[ಸಂ.]

ಲಿಪಿಕರ (ನಾ). ೧. ಸುಣ್ಣ, ಬಣ್ಣ ಬಳಿಯುವವನು. ೨. ಬರೆಯುವವನು: ಲೇಖಿಕ: "ಲೇಖಿಕಃ, ಲಿಪಿಕರಃ — ಈ ೨ ಲೇಖಿಕಂ" (ಪಂಅಮು. ೧೩-೧೩). ೩. ಕೆತ್ತನೆ ಕೆಲಸ ಮಾಡುವವನು: ಶಿಲ್ಪಿ.

[ಸಂ.]

ಲಿಪಿಕರ್ತು (ನಾ)· ಹಣೆಬರಹವನ್ನು ಬರೆಯುವವನು; ಬ್ರಹ್ಮ: ಲಿಪಿ ಕರ್ತುವಿನ ವಾಸಸಪ್ಪತ್ರ ಮತ್ಕರ್ಮವಿಪಿನಕುಶಾರ ನೀ ಬಂದ ಗುಪಿತ ಪೇಳು (೪೦೪೪. ೦೨-೩). [ಲಿಪಿ+ಕರ್ತು (< ಕರ್ತಾರ)]

ಲಿಪಿಕಾರ (ನಾ)·=ಲಿಪಿಕರ ೨ :"ಲಿಪಿಕಾರಂ ಲೇಖಕಂ" (ಪಂತ್ರಿಕಾ. ೩೦-೩೯); ವೀರನಾರಾಯಣನೆ ಕವಿ ಲಿಪಿಕಾರ ಕುವರವ್ಯಾಸ (ಶಾಚ್ಚಾ. ೦-೩); ಲಿಪಿಕಾರ ಎಂಬುದು 'ಲೇಖಕ'ಕ್ಕಿಂತ ಈಚಿನ ಕಾಲದ ಶಬ್ದವೆಂದು ಹೇಳುತ್ತಾರೆ (೪೩೩. ೪೩).

[ಸಂ.]

ಲಿಪಿಗಲ್ಲು (ನಾ)· ಲಿಪಿಯನ್ನು ಕೊರೆದ ಕಲ್ಲು: ಶಿಲಾಶಾಸನ: ಶ್ರೀ ಲೋಕಪಾಲೇಶ್ವರ ಹೊಸ್ಕಾರ ಒಳ (ಪಟ್ಟಿದ ಕಲ್ಲಿನ ವಿರೂಪಾಕ್ಷನ ಗುಡಿಯ ಪ್ರಾಕಾರವಪ್ಪೆಟ್ಟ ಲಿಪಿಗಲ್ಲು ಕ್ರಿ. ಶ. ಎಂಟನೆಯ ಶತಮಾನ) (ಶಾಲಾಣ. ೨೬೩).

[ಲಿಪಿ+ಕಲ್ಲು (< ಕಲ್ಲ್)]

ಲಿಪಿಗಾರ (ನಾ)·= ಲಿಪಿಕರ ೨ : ಈಕ್ಷಿಸದೆ ಭಕ್ತಿಪ್ರಭೆಯು ವಿರಜಾಕ್ಷಿಯಿಂ ಕೃತಾಪ್ಸರದೊಡೆಯನಸಧೋಕ್ಷಜನ ನೀ ವಿಶ್ವಕವಿಗವಗೇತು ಲಿಪಿಗಾರ ? (೧೪೩೩. ೨೩-೪); ಅತ್ತಿಮಬ್ಬೆ ಮೂರಾರು ಜನ ಲಿಪಿಗಾರರನ್ನು ಕರೆಸಿದಳು (ದಾಪಾಶ್ರ. ೦೬೩).

[< ಸಂ. ಲಿಪಿಕಾರ]

ಲಿಪಿಜ್ಞ (ನಾ)· ಬರವಣಿಗೆಯನ್ನು ಬಲ್ಲವನು: ತಿಂದವನ ಮತಿವಿದನ ಭಾಷಾವಳಿಲಿಪಿಜ್ಞನ ಸಾಕ್ಷರನ . . . ಸಂಧಿವಿಗ್ರಹರನಿಸೋಕು (ಕಾಚ್ಚಾ. ೪-೪೯).

[ಸಂ.]

ಲಿಪಿವಿಜ್ಞಾನ (ನಾ)· ಪ್ರಾಚೀನ ಕಾಲದ ಲಿಪಿ ಮತ್ತು ಅದರ ಬೆಳವಣಿಗೆಗೆ ಸಂಬಂಧಿಸಿದ ವಿಜ್ಞಾನ-ಶಾಸ್ತ್ರ; ಅಕ್ಷರಶಾಸ್ತ್ರ: ಇದಂದ ಮುಂದೆ ಶಾಸನ ವಿಜ್ಞಾನ (Epigraphy) ಮತ್ತು ಲಿಪಿವಿಜ್ಞಾನ (Palaeography)ಗಳು ಪ್ರತ್ಯೇಕ ಶಾಖೆಗಳಾಗಿ ಬೆಳೆಯುತೊಡಗಿದವು (ಪ್ರಶಾ- ೪೪).

[ಸಂ.]

ಲಿಪಿವಿಧಾನ (ನಾ)· ಅಕ್ಷರಗಳನ್ನು ಬರೆಯುವ ಕ್ರಮ : ಸೇವಾ ಧರ್ಮೋಚಿತಮೆನಿಸುವಸಿಕರ್ಮಮುಮವನೇಕ ಲಿಪಿವಿಧಾನಾಧೀನಮಾಜ್ಞ ಮಪಿಯುಮಂ . . . .ಪಡೆವು (೦೦೫. ೯-೬೪ ೫)· [ಸಂ.]

ಲಿಪಿಶಾಲೆ (ನಾ)· ಬರಹವನ್ನು ಹೇಳಿಕೊಡುವ ಶಾಲೆ; ಲಿಪಿಯೆನ್ನು ಕಲಿಸುವ ಶಾಲೆ : ಮಹಾವಗ್ಗದಲ್ಲಿ ಸಿದ್ಧಾರ್ಥನು ವಿದ್ಯಾರ್ಥಿಯಾಗಿ ಚಂದನಫಲಕವನ್ನೂ ಸುವರ್ಣಶಲಾಕೆಯನ್ನೂ ಹಿಡಿದು ಲಿಪಿಶಾಲೆಗೆ ಹೋಗುತ್ತಿದ್ದ ವರ್ಣನೆಯಿದೆ (ಜಾಜಾಸಾ. ೦೦೦)· [ಸಂ. ಲಿಪಿಶಾಲಾ]

ಲಿಪಿಶಾಸ್ತ್ರ (ನಾ)·=ಲಿಪಿವಿಜ್ಞಾನ : ಭಿನ್ನಲಿಪಿರೂಪಗಳ . . . ಪ್ರತಿಗಳು ದೊರೆತಾಗ ಲಿಪಿಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸಮಾಡಬೇಕಾಗುತ್ತದೆ (ಕನ್ನಸಂ· ೧೩)· [ಸಂ.]

ಲಿಪಿಶಾಸ್ತ್ರಜ್ಞ (ನಾ)· ಲಿಪಿವಿಜ್ಞಾನವನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡಿದವನು : ಕನ್ನಡಲಿಪಿಯ ಬೆಳವಣಿಗೆಯು ರಾಷ್ಟ್ರಕೂಟರ ಕಾಲದಲ್ಲಿ ಒಂದು ವಿಶಿಷ್ಟಹಂತವನ್ನು ಮುಟ್ಟಿರೆಯೆಂದು ಲಿಪಿಶಾಸ್ತ್ರಜ್ಞರು ಹೇಳಿದ್ದಾರೆ (ಸಿಗಂಶಾ. ೩೦)· [ಸಂ.]

ಲಿಪಿಸಂಖ್ಯಾನಸಂಗ್ರಹ (ನಾ)· [ಜೈನ] ಜವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು : ಅನ್ನಪ್ರಾಶನೋಪ್ಪಿಕೇಶಾವಾಪಲಿಪಿಸಂಖ್ಯಾನ ಸಂಗ್ರಹೋಪನಯನಪ್ರವ್ರತಚರ್ಯಾವ್ರತ . . . ಎಂಬಯ್ತತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (೦೦೫. ೦೫-೦೬ ೫) : ಲಿಪಿಸಂಖ್ಯಾನಸಂಗ್ರಹಮುಂ ಉಪನೀತಿಯುಂ . . . ಅಪ್ಪ ಯ್ತತ್ತುಮೂಱು ಗರ್ಭಾನ್ವಯಕ್ರಿಯೆಯೊಳ್ (ತಾಪು೩. ೨೦೨)· [ಸಂ.]

ಲಿಪಿಸಾದೃಶ್ಯ (ನಾ)· ಅಕ್ಷರಗಳು ಒಂದೇ ರೀತಿಯಾಗಿ ಇರುವಿಕೆ : ಅಕ್ಷರ ಸಾದೃಶ್ಯ : 'ಚಿಕಾರ' ಎಂಬುದಕ್ಕೆ 'ಅರ್ಥವಾಗದ ದೂವೆನೋ ಪ್ರತಿಕಾರ ಅದನ್ನು 'ಚತುರ' ಎಂದು ಭ್ರಮಿಸಿರಬೇಕು, ಲಿಪಿಸಾದೃಶ್ಯ ಕಾರಣವಾಗಿ (ಕನ್ನಸಂ· ೦೧೪)· [ಸಂ.]

ಲಿಪಿಸು (ಕ್ರಿ)· ಬರೆ ; ಲೇಪಿಸು : ಇದಕ್ಕೆ ತಪ್ಪದಂತೆ ಪಣೆಯೊಳಾ ಬ್ರಹ್ಮನೇ ಲಿಪಿಸಿರುವ ಪಾಗೂ . . . ತೋರುತ್ತಾ ಇದ್ದೀತು (ಸಣ್ಣ. ೬)·

[ಲಿಪಿ + — ಇಸ್ಸು]

ಲಿಪಿಸುಧಾರಣೆ (ನಾ)· ಲಿಪಿಯ ಸಂಸ್ಕರಣ; ಅಕ್ಷರಗಳಿಗೆ ಸಂಬಂಧಿಸಿದ ಬೆಳವಣಿಗೆ.—ಮಾರ್ಪಾಟು : ಕನ್ನಡದ ಈಗಿನ ಲಿಪಿಯನ್ನು ಲಿಪಿಯಂತ್ರಕ್ಕೂ . . . ಹೊಂದಿಸುವ ದೃಷ್ಟಿಯಿಂದ ಲಿಪಿಸುಧಾರಣೆಯ ಬಗೆಗೆ ಕೆಲವು ಪ್ರಯತ್ನಗಳೂ ನಡೆದಿವೆ (ಸಂಕೋಧ. ೩)·

[ಸಂ. ಲಿಪಿಸುಧಾರಣಾ]

ಲಿಷ್ಟ (ಗು)· ೧. ಬಳಿದ : ಸವರಿದ ; ಪಚ್ಚಿದ ; ಸದಸದ್ವೇದನೀಯ ಪ್ರಕೃತಿಗೆ ಮಧುಲಿಪ್ತಖಡ್ಗಧಾರೆಯನೋಲ್ ಸುಖಸುಖವಿಪಾಯಕತ್ವಂ ಸ್ವಭಾವಂ (ಕಜ್ಜಕ್ರ. ೨೪೦)· ೨. ಮಲಿನವಾದ : ಮಾಸಿದ. ೩. ವಿಷವನ್ನು ಬೆರಸಿದ. ೪. ತಿಂದ : ಕುಳಿಸಿದ· (ನಾ)· ೫. ಬೇದುದು : "ದಿಗ್ದಂ. ಲಿಪ್ತಂ – ೨ ಬಳಿಯಲ್ಪಟ್ಟದ್ದು" (ಕಜ್ಜ೦ಕ. ೪೧೬). ೬. ವಿಷವನ್ನು ಲೇಪಿಸಿದ ಬಾಣ : "ದಿಗ್ದಃ, ಲಿಪ್ತಃ – ೨ ವಿಷಾಕ್ತೆ – ನೆಜು ಪೂಸಿದ ಕೋಲು. ವಿಷ ಬಳಿಯಲ್ಪಟ್ಟ ಸರಳು, ವಿಷಬಾಣ" (ಕಜ್ಜ೦ಕ. ೨೬೫). ೭. ತಿಂದುದು : "ಭಕ್ಷಿತಂ. ಚರ್ವಿತಂ. ಲಿಪ್ತಂ . . . ಘಸ್ಮರಂ – ೧೪ ಭುಜಿಸಲ್ಪಟ್ಟದ್ದು" (ಕಜ್ಜ೦ಕ. ೩೩೨)· [ಸಂ.]

ಲಿಪ್ಯಂತರ (ನಾ)· ಬೇರೆ ಭಾಷೆಯ ಅಕ್ಷರ; ಬೇರೆಯ ಲಿಪಿ : 'ಲಿಪ್ಯಂತರ ಗೊಳ್ಳು' ಪರಾ· [ಸಂ.]

ಲಿಪ್ಯಂತರಗೊಳಿಸು (ಕ್ರಿ)· ಬೇರೆ ಭಾಷೆಯ ಲಿಪಿಯಲ್ಲಿ ಬರೆ : ಅವುಗಳನ್ನು ಅನುವಾದಿಸುವ ಅಥವಾ ಲಿಪ್ಯಂತರಗೊಳಿಸಬೇಕಾದ ಅಗತ್ಯವೂ ಇಲ್ಲ (ಕ್ರೀಚಕ್ರ· ೬೪)· [ಲಿಪ್ಯಂತರ+ಕೊಳು (<ಕೊಳ್)+ — ಇಸ್ಸು]

ಲಿಪ್ಯಂತರಗೊಳ್ಳು (ಕ್ರಿ)· ಬೇರೆ ಭಾಷೆಯ ಲಿಪಿಯಲ್ಲಿ ಬರೆಯಲ್ಪಡು : ಇವು ಟಿಬೆಟನ್‌ಭಾಷೆಗೋ ಅಥವಾ ಚೈನೀಭಾಷೆಗೋ ಅನುವಾದಿತವಾಗಿವೆ ಇಲ್ಲವೆ ಲಿಪ್ಯಂತರಗೊಂಡಿವೆ (ಜಾದಕ· ೫೬)·

[ಲಿಪ್ಯಂತರ+ಕೊಳ್ಳು (<ಕೊಳ್)]

ಲಿಪ್ಸು (ಗು)· ೧. ಪಡೆಯಬೇಕೆಂಬ ಆಸೆಯುಳ್ಳ· (ನಾ)· ೨. ಆಸೆ ಪಡುವವನು : "ತೃಷಃ· ಗರ್ಧನಃ· ಗೃಧ್ನುಃ· ಲಿಪ್ಸುಃ· ಲುಬ್ಧಃ, ಅಭಿಲಾಷುಕಃ – ಈ ೬ ಕಾಂಕ್ಷಿತಂ" (ಪಣಾಮು· ೬೦-೨೦೬)· [ಸಂ.]

ಲಿಪ್ಸೆ (ನಾ)· ಆಸೆ ; ಕಾಂಕ್ಷೆ : "ತೃಷ್ಣಾ· ಅಭಿಲಾಷಾ· ಲಿಪ್ಸಾ, ಆಶಾ, ಧನಾಯಾ· ಗರ್ಧನಾ – ಈ ೬ ಕಾಂಕ್ಷೆ" (ಪಣಾಮು. ೬೦-೨೦೯)· [ಸಂ. ಲಿಪ್ಸಾ]

ಲಿಫಾಜೆ 'ಲಿಫಾಫೆ' ನೋ·

ಲಿಫಾಫೆ· ಲಿಫಾಪೆ (ನಾ)· ಲಕೋಟೆ : ಹುಜೂರುಖಿಜಂನೆಯಿಂದ ಬಂದ ಸರಾಫ . . . ಈ ದರ್ಶನಹುಂಡಿಯು ಲಿಫಾಫೆಯನ್ನು ತೋರಿಸಿದರು (೦೮೫೮· ೬)· **ಲಿಫಾಪೆ** : (೪೫೦೫. ೦೦೦)·

[←ಅರ. ಹಿಂ. ಲಿಫಾಫಾ; ಮರಾ. ಲಿಫಾಫಾ· ಲಿಫಾಪಾ]

ಲಿಬಿ (ನಾ)· ಅಕ್ಷರ; ಬರಹ : ಅಶೋಕನ ಶಾಸನಗಳಲ್ಲಿ ಲಿಪಿ, ಲಿಬಿ· ದಿಪಿ ಎಂಬ ಸಮಾನಾರ್ಥಕಶಬ್ದಗಳೆಯೆಂದೂ· ದಿಪಿ ಎಂಬುದು ಪುರಾತನ ಪಾರ್ಸೀ ಭಾಷೆಗೆ ಸೇರಿದ್ದೆಂದೂ . . . ತಿಳಿದುಬರುತ್ತದೆ (ಕನ್ನಸಂ· ೪೬)· [ಸಂ.]

ಲಿಬಿಕಾರ (ನಾ)· ಬರೆಯುವವನು ; ಲಿಪಿಕಾರ : ಶ್ರೀ·ಪೂ· ನಾಲ್ಕನೆಯ ಶತಮಾನಕ್ಕಾಗಲೇ ಲೇಖಕವೃತ್ತಿಯವನನ್ನು ಲಿಪಿಕಾರ ಅಥವಾ ಲಿಬಿಕಾರ ಎಂದು ಕರೆದಿದೆ (ಜಾದಕ· ೦೮)· [ಸಂ.]

ಲಿಬಿಲಿಬಿ (ನಾ)· ಸಂಕಟ, ತಳಮಳ ಮುಂತಾದುವನ್ನು ಸೂಚಿಸುವ ಒಂದು ಅನುಕರಣ ಶಬ್ದ : ರಂಗನಾಥ ಸಖಯುವಾಗ ಹಣವನ್ನೂ ದುಷ್ಟಟಗಳನ್ನೂ ಬಿಟ್ಟು ಹೋಗಲಾರದೆ ಲಿಬಿಲಿಬಿ ಒದ್ದಾಡಿ, ಸಾಯಲಾರದೆ ಸಾಯುತ್ತಾನೆ (ಸಂಚಪಂ. ೨೦೬)· 'ವಿಲಿವಿಲಿ' ಹೋ·

ಲಿಲಾವು (ನಾ)· (ಉಕ) ಹರಾಜು ; ಏಲಂ : ಬೆಳಗಾದರೆ ಹಣ ಕಟ್ಟಬೇಕು· ಇಲ್ಲವೆ ಹೊಲಮನೆಗಳ ಲಿಲಾವಿಗೆ ಸಿದ್ಧರಾಗಬೇಕು (ಹಕ. ೬೫೮); ಸರಕಾರದವರು ಜೀನ ತುಪ್ಪ ಜಮೆಮಾಡುವ ಹಣ್ಣು ಪ್ರತಿವರ್ಷ ಲಿಲಾವಿನಿಂದ ಮಾರುವರು·(ಕಜಾಗ. ೬೬)· [← ಮರಾ. ಲಿಲಾವ್· ನಿಲಾವ್]

ಲಿಲಾವುದಾರ (ನಾ)· ಹರಾಜು ಹಾಕುವವನು : ವಕ್ಕಾರ ಪಾಗೂ ಲಿಲಾವುದಾರ ಇವರಲ್ಲಿ ಅಂತರವಿರುವುದೇ ಕ್ವಚಿತ (ಶ್ರವಾತೋ. ೧೩)·

[ಲಿಲಾವು + — ದಾರ್]

ಲಿವಿ$_1$ (ನಾ)· = ಲಿಬಿ : " ಲಿಪಿಯುಂ ಲಿಖಿವಿ} ಲಿಪಿತಾಕ್ಷರಾಳಿನ್ಯಾಸಂ" (ಕಸ್ತೂಸಾ. ೬೦-೩೯)· [ಸಂ.]

ಲಿವಿ$_2$ (ನಾ)· ಹಗುರ ; ಲಘು : ಈ ದಿವಸ ನನ್ನ ದೇಹವು ಬಹು ಲಿವಿಯವಾಗಿದೆ . . . ಹೊರಗೆ ಸ್ವಲ್ಪ ತಿರುಗಾಡಿ ಅಂಗಗಳು ಲಿವಿಯಾಗಿ ಆಡುವಂತೆ ಕೆಲಸವನ್ನು ಮಾಡಿದ ಹೊರತು ನಾವು ತಿಂದ ಅನ್ನ ಜೀರ್ಣಕ್ಕೆ ಬರುವುದಿಲ್ಲ (ಪಂತಿಂ· ೫. ೩೯)·

[←ತೆಲು. ಲಿವ· / ಮರಾ. ಲಿಘು=ಬಗ್ಗುವ· ಮಣಿಯುವ]

ಲಿವಿಸಾಧನೆ (ನಾ)· ದೇಹವನ್ನು ಹಗುರ ಮಾಡಿಕೊಂಡು ಗಳೆಯ ಮೇಲೆ ಲಾಗ ಮುಂತಾದುವನ್ನು ಹಾಕುವುದು : ದೊಂಬರಾಟ : ಎರಡನೆಯದಾದ "ಅಸ್ಸವಿದ್ಯೆ"ಯಲ್ಲಿ ಪುರಾತನಕಾಲದ ಲಿವಿಸಾಧನೆ (Acrobatics)ಯನ್ನು ಕಾಣಬಹುದು (ಅಣಾಕ್ಕ· ೪೪) : ದೊಂಬರಾಟ ; ಲಿವಿಸಾಧನೆ (Acrobatics· ೨೦೪೭)· [ಲಿವಿ+ಸಾಧನೆ]

ಲಿಸ್ (ನಾ)· ಆಯಾಸ ಅಥವಾ ದುಃಖದಿಂದ ಹೊರಹೊಮ್ಮುವ ಉದ್ಗಾರ : ಎಲುಬುಗಳ ಸಂತತವರ್ಷದಲ್ಲಿಯೂ ಲಿಸ್ಸನ್ನದೆ, ಬೆಂಕೆಗೆ ಕೈಹಾಕಿ (ನ್ಯಾಸಚಿತು· ೨೨೬) : ಗೊಡ್ಡದೊಡ್ಡ ಗಾಮಗಳಾದರೆಯೇ

ಕಣ್ಣರೆದು ನೋಡಲಾರವ್ವವರು, 'ಲಿಸ್' ಎನ್ನಲಾರದವರು ಈ ಸಣ್ಣಪುಟ್ಟ ಗಾಯಗಳಿಗೆ ಹೆದರಿಯಾರೆ ? (ಜಪಾ. ೨೬).

ಲಿಸುಗುಟ್ಟು (ಕ್ರಿ)- (ಉಸಿ) 'ಲಿಸ್' ಎಂದು ಶಬ್ದ ಮಾಡು : ಇಳಿಯ ಲಿಕ್ಕೆಂದು ಎದ್ದಾಗ . . . ಅವ್ವ ಲಿಸುಗುಟ್ಟಿದಳು (ಕ್ಯಾ. ೮೯) ; ಗೌಡರು ಧೋತರದ ಶರಗಿನಿಂದ ತುಟಿ ಬಾಯಿ ಒರೆಸಿಕೊಳ್ಳುತ್ತ ಲಿಸುಗುಡುತ್ತ ಬರುತ್ತಾರೆ (ಕಡಲಾ. I, ೨೬೯). [< ಲಿಸ್ + ಕುಟ್ಟು]

ಲಿಸ್ಟು (ನಾ)- ಹೆಸರು ಮೊದಲಾದುವನ್ನು ಬರೆದಿರುವ ಪಟ್ಟಿ ; ಯಾದಿ : ಪ್ರತಿತಿಂಗಳೂ ಅಂಗಡಿಯಿಂದ ಸಾಮಾನುಗಳನ್ನು ತರುವ ಮೊದಲು ಲಿಸ್ಟು ತಯಾರಿಸುವುದು ಒಳ್ಳೆಯ ಅಭ್ಯಾಸ (ಕಾಪ).

[← ಇಂ. List]

ಲೀಟರು(ನಾ). ದ್ರವಪದಾರ್ಥಗಳನ್ನು ಅಳೆಯುವ ಒಂದು ಅಳತೆ : ಒಂದು ಲೀಟರು ಎಳ್ಳೆಣ್ಣಗ ಇವತ್ತಿನ್ದುರೂಪಾಯಿಗಳಾಗಿವೆ (ಕಾಪ)

[← ಇಂ. Litre]

ಲೀಢ (ಗು). ತಿಂದ ; ರುಚಿನೋಡಿದ. [ಸಂ.]

ಲೀಢೆ (ನಾ). ಕಡೆಗಣಿಸುವುದು : ತಿರಸ್ಕಾರ; ಅಪಹೇಳನ : "ಹೇಳಾ. ಅವಹೇಳಾ. ಲೀಢ್ಡಾ. ಅವಜ್ಞಾ. ಅವಲೀಢಾ —ಈ ೫ ಅಮಜ್ಞೆ" (ಶಬ್ದಮ. ೦೦೬-೦೦).

[ಸಂ. ಲೀಢಾ]

ಲೀನ (ಗು)- ೧. ಅಂಟಿಕೊಂಡ ; ಹಚ್ಚಿಕೊಂಡ. ೨. ಕರಗಿದ. ೩. ಆಸಕ್ತಿಯುದ; ಮಗ್ನವಾದ. ೪. ಅಡಗಿದ. ೫. ಕಣ್ಮರೆಯಾದ; ಅಗಲಿದ. (ನಾ). ೬. ಯಾವುದಾದರೊಂದು ವಿಷಯವಲ್ಲಿ ಮಗ್ನನಾದವನು.–ಮುಳುಗಿದವನು: ಸುಖದುಃಖಗಳಲ್ಲಿ ಪದೇಪದೇ ಲೀನನಾಗಿ ತನ್ನನ್ನು ತಾನು ಮರೆತುಬಿಡುತ್ತಿದ್ದನು (ಪಡಣಾ. ೬); ವಾಲ್ಮೀಕಿ ವ್ಯಾಸರು ತಮ್ಮ ಕೃತಿಗಳಲ್ಲಿ . . . ಲೀನರಾಗಿ ಹೋಗಿದ್ದಾರೆ (ಜಾಹೀಗ. ೨). ೭. ಒಂದೇ ವಿಷಯದಲ್ಲಿ ಮುಳುಗುವಿಕೆ; ತಲ್ಲೀನವಾಗುವಿಕೆ: ವಿಜ್ಞಾನಿಗಳು ತಂಡೋಪತಂಡವಾಗಿ ಭೌತಘಟವೆಗಳ ವಿಮರ್ಶೆಯಲ್ಲಿ ಲೀನವಾಗಿದ್ದಾರೆ (ಪಣಾಕ್ಕ. ೦೦೬). ೮. [ಸಂಗೀತ] ಗಮಕದಲ್ಲಿ ಒಂದು ಬಗೆ : ಕಂಪಿತ . . . ಲೀನ . . . ಆಹತಮೆಂಬೇಳು ದೇಶೀಗಮಕಂಗಳು (ಪಪೀಗ. ೨೮೨) ; ಶಾರ್ಙ್ಗದೇವನ ಪಂಚದಶವಿಧ ಗಮಕಗಳು ಹೀಗಿವೆ . . . ಲೀನ – ಹಿಂದಿನ ಸ್ವರವೊಂದು ಮುಂದಿನ ಸ್ವರದಲ್ಲಿ ಮೃದುವಾಗಿಯೂ ನಿಧಾನವಾಗಿಯೂ ಐಕ್ಯವಾಗುವುದು (ಸಂಗೀಪ್ರ. ೨೬). ೯. [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು : ಎರಡುಂ ಕೈಗಳನೂರ್ಧ್ವಮಂಡಲದಿನೊಳ್ಪಂ ಬೆತ್ತು ತದ್ವಕ್ಷದೊಳ್ ಕರಯುಗ್ಮಂಗಳನಂಜಲೀಕೃತಿಯನೊಲ್ದುಂ [ಮಾಡಿ] ನೀಹಂಚತೋತ್ಕರಮುಬೊಂದು ಶಿರಸ್ಸಿನೊಳ್ ಮುಡುಪಿನೊಳ್ ಸೈತಿಟ್ಟು ಕೊಂಕಲ್ ಕೊರಲ್ ಕರಣಂ ಲೀನಮೆನಿಪ್ಪ ಚೆಲ್ವ ವೆಸರಂ ತಾಳ್ದತ್ತು (ಪಾಕ್ಷರಂ- ೪-೨೮) . [ಸಂ.]

ಲೀನತೆ (ನಾ). ೧. ಆಸಕ್ತವಾಗಿರುವಿಕೆ: ಮಗ್ನತೆ. ೨. ಕರಗುವಿಕೆ : ಐಕ್ಯತೆ. [ಸಂ. ಲೀನತಾ]

ಲೀಯ (ಗು)- ೧. ಕೂಡಿಹೋದ; ಬೆರೆತ; ಒಂದಾದ. (ನಾ)- ೨. ಬೆರೆಯುವಿಕೆ ; ಐಕ್ಯ ; ಮನ ದಾಸೋಹಕ್ಕೆ ಲೀಯವಹಂತೆ ಮಾಡು (ಪಪ. ೧೫೮) : ಸಾಗರವನ್ನು ಸೇರಿ ಅದರಲ್ಲಿ ಲೀಯವಾಗಿ ಅದರಲ್ಲಿ ಹರಿದಾಡುವ ನದಿಗೆ ... ಬೇರೆ ಗತಿಯುಂಟೇ? (ಶೋಗವಾ. ೭೭ ಪ್ರಸ್ತಾ ೫೭).

[< ಸಂ. ಲೀನ]

ಲೀಲಾಂದೋಳ (ನಾ). ವಿನೋದವಿಹಾರದಲ್ಲಿ ಬಳಸುವ ಉಯ್ಯಾಲೆ : ಲೀಳಾವನದೊಳೆ ವಿಹರಿಪ ಲೀಳಾಸರದೊಳಗೆ ಮೂಡಿ ಮುಟ್ಟುವ ಲೀಲಾಂದೋಳ್ಗವನೇಱುವ ಲೀಲಾಕೇಳಿಗಳೆ ವಿಲಾಸಕೇಳಿಗಳ್ ನೃಪಸತಿಯಾ (ಅಪಪ್ರ. ೬-೯) [ಸಂ. ಲೀಲಾಂದೋಲ]

ಲೀಲಾಜಲಾಶಯ (ನಾ). ಜಲಕ್ರೀಡೆಗಾಗಿ ನಿರ್ಮಿಸಿದ ಕೊಳ.– ತಟಾಕ : ನಾನಾಭವನವಿನ್ಯಾಸೋದ್ಯಾನಲೀಲಾಜಲಾಶಯಂಗಳುಮಂ . . . ಮಾಡಿ (ಅಪಪ್ರ. ೬-೬೬ ಪ). [ಸಂ.]

ಲೀಲಾದೀರ್ಘ (ನಾ). [ಸಂಗೀತ] ಇಪ್ಪತ್ತೈರಡು ಶ್ರುತಿಗಮಕಗಳಲ್ಲಿ ಒಂದು ಬಗೆ : ಸ್ಫುರಿತ . . . ಲೀಲಾದೀರ್ಘ [ಪಣಾಂ. ಲೀಲೋದ್ದೀರ್ಘ] . . . ಕೋವುಲದೆಂಬವಿಪ್ಪತ್ತೈರಡೇ ಶ್ರುತಿಗಮಕಂಗಳು (ಪಪೀಗ. ೧೦೬).

[ಸಂ.]

ಲೀಲಾಭಾವಿ (ನಾ)- ಆಟವಾಡುವ ಮನಸ್ಸುಳ್ಳವನು ; ಕ್ರೀಡಾಮನಸ್ಕ : ಲೀಲಾಭಾವಿಯಾಗಿ ಏಕೆ ಬಂದೆನೆಂಬುದಱಿಂದು ಸಾಕಾರದ ನೀತಿಯ ನಿರ್ಣಯವ ಕಂಡು ಪ್ರತಱಿಂದ ತಿಳಿವ ನಿಶ್ಚೇತಱಿಂದ ಉಳಿವ ಈ ಉಭಯವ ನೀತಿಯಲ್ಲಿ ನಿಮ್ಮ ಮೇಲಪ್ಪ ತಾಣವನಱಿಯಬೇಕು (ಪಸಿಲಿಪ ೩೮-೨೦೩). [ಸಂ. ಲೀಲಾಭಾವಿನ್]

ಲೀಲಾಯಿತ (ನಾ)- ಆಟ; ವಿನೋದ; ಕ್ರೀಡೆ : ಆದಿಪುರುಷಂ . . . ತಜ್ಞಾಗಾದಂ ಲೀಲಾಯಿತಂ ಸ್ವಯಂಪ್ರಭುಗುಚ್ಚತಂ (ಪಗಿಂ. ೩-೬೯)- [ಸಂ.]

ಲೀಲಾಯುದ್ಧ (ನಾ)- ವಿನೋದದ ಯುದ್ಧ; ಹುಸಿಕಾಳಗ : ಮಲ್ಲ ಯುದ್ಧ ಲೀಲಾಮುದ್ಧಾದಿ ವಿಹಾರಗಳಿಂ (ಪಪೀಗ. ೨೦೩). [ಸಂ.]

ಲೀಲಾರಥ (ನಾ)- ವಿಲಾಸಕ್ಕೆ ಉಪಯೋಗಿಸುವ ತೇರು ; ತನ್ನ ಲೀಲಾರಥದೊಳೆ ಲವಣಾಂಭೋಧಿಯಂ ದಾಂಟಿ (ಅಂಪ್ರ. ೮೨-೦೨೮). [ಸಂ.]

ಲೀಲಾವತಿ. ಲೀಳಾವತಿ (ನಾ). ೧. ವಿನೋದಾಸಕ್ತಳಾದ ಹೆಂಗಸು: ಹಾಸ್ಯದಲ್ಲಿ ನಿರತಳಾದವಳು. ೨. ಚೆಲುವೆ ; ಸುಂದರಿ. ೩. ನೇಮಿಚಂದ್ರನೆಂಬ ಕವಿಯು ಬರೆದ ಒಂದು ಕನ್ನಡ ಜೈನಕಾವ್ಯ ಮತ್ತು ಅದರ ಕಥಾನಾಯಕಿಯ ಹೆಸರು ; ಅತಿಚತುರಸ್ತ್ರೀಯರು ಮತಿಜತುರಕವಿಗಳಂ ಕೇಳ್ದೊಲವಿಂ ಬಾಯಂ ಬಿಡುತಿರೆ ಕರ್ಣರಸಾಯನ ಮೆನೆ ಪೇಟ್ಟೆಸೆಯೆ ಲೀಲಾವತಿಯಂ (ಲೀಚಾಪ. ೦-೮೪) ; ಲೀಲಾವತಿ ಪತಿಯಾವಿನ್ಸಲೋಲತೆಯಿಂದೊಸದು ದೇವಿಯಂ ಪೂಜಿಸಿದಳ್ (ಲೀಚಾಪ. ೦೦-೪). ೪. ಭಾಸ್ಕರಾಚಾರ್ಯನೆಂಬುವನಿಂದ ರಚಿತವಾದ ಗಣಿತ ಶಾಸ್ತ್ರ ಗ್ರಂಥ. **ಲೀಳಾವತಿ** : ೫. ಲೀಳಾವತಿ ಲೀಳಾವತಿ ಬಾಳೆಂಬ ಬಂಧುಪ್ರಿಯರ್ ನಿಜಪ್ರಿಯಸಖಿಯರ್ ಕೇಳ ಕಳವಳದೊಳ್ಬಿದವರ್ (ಲೀಚಾಪ. ೦೦-೭೭). [ಸಂ. ಲೀಲಾವತೀ]

ಲೀಲಾಳಕ (ನಾ)- ಅಲುಗಾಡುವ ಮುಂಗುರುಳು : ಮುನಿಚರಣಕಮಲದೊಳ್ ನಿಜವಿನತಶಿರಃಪದ್ಮವಿನುತ ಲೀಲಾಳಕಭೃಂಗನಿಕಾಯವೆಱಗಿ ತಜ್ಞಾಗಿರೆ (ಪಳಾಪ. ೦-೭೭). [ಸಂ. ಲೀಲಾಲಕ]

ಲೀಲೆ, ಲೀಳೆ (ನಾ)- ೧. ಆನಂದ : ಲೀಲೆಬ್ಬಿಂದುಡಿಸಿ ದಿವ್ಯವಸ್ತ್ರಮಂ . . . ಪೂಮಾಲೆಯುಂ ಮುಡಿಯಿಸುತ್ತುಮರ್ತಿಯಿಂ (ಪಪ್ರಾಕ್ಕ. ೭-೯); ಲೀಲೆಯೆಂದರೆ ಸ್ವಾರ್ಥವಾಗಲಿ ಪೌರ್ಥವಾಗಲಿ ಬೇರೊಂದು ಪ್ರಯೋಜನವನ್ನು ಉದ್ದೇಶಿಸದ ತಾನೇ ಪ್ರಯೋಜನರೂಪವಾದ ಸಂತೋಷವ್ಯಾಪಾರ (ಜಂದಣ ೭೭). ೨. ಆಟ ; ಕ್ರೀಡೆ : ವಿನೋದ : ಲೀಲೆಯೊಳೆ ಮಲಲ ಜಗಲಿಯ ಮೇಲೆ ಸರೋಜಾತಸಖಿಗೆ ವಿಗಿಲಿನಿಸುವ ಸಲ್ಲೀಲೆಯು ತೇಜೋಧಿಕನಂ ಬಾಲಕನಂ ನಲಿಯುತಿರ್ವನಂ ಕಂಡು (ಪಪ್ರಾಕ್ಕ. ೦೦-೦೧೮) ; ಪಾಲುಗಡಲಲಿ ಘನೆಯು ಮಂಚದ ಮೇಲೆ ಪವಡಿಸಿ ಪರಮನೆನಿಸಿದ ಲೀಲೆಯೆತ್ತಲು ಮನುಜಭಾವದ ನಟನೆ ತಾನೆತ್ತ (ಶಾಶಿಗ ೪೩-೮೩); ಚಿವಿಕ್ಕಿ ಪೆಗಪುವ ತೊರೆಯ ಲೀಲೆಯ ಮನೋಹರತೆ (ಪಣ್ಯಾಂಗ ೨೯-೩೦೯). ೩. ಸ್ತ್ರೀಯ ಒಂದು ಬಗೆಯ ಶೃಂಗಾರಭಾವ; ವಿಲಾಸ; ಬೆಡಗು : "ಹೇಳಾ. ವಿಳಾಸಃ. ಜಿಬ್ಬೋಕಃ. ಲೀಲಾ. ಲಲಿತಂ. ವಿಭ್ರಮಃ — ಇವು ಮೊದಲಾದುವ ಸ್ತ್ರೀಯರ ಭಾವಂಗಳ್"

(ಪಂಡಿತ. ೦೩-೮೯) ೧. ಚೆಲುವು : ಸೌಂದರ್ಯ : ಕಿಸಲಯಲೀಲೆಯ ಪೋಲ್ವುದು ಅಧರವು ಬಹುಸುಖಿ ನಿನ್ನ ಸಮ್ಮುಖವು (ಜಾಜಾಕ. ೪-೩೨). ೫. ಸರಾಗ ; ಸುಲಭ ; ಹಗುರ : ವಿರಾಟರಾಜನಗರಂ ವಲ್ಲೂರಿವೆಲ್ಲಂ ಭುಜಾಬಲದಿಂ ಲೀಲೆಯ ಸಾಧ್ಯವಾದುದೆಯಾರ್ವಿಷ್ಣುಕ್ಷಮಾವಳಿನೊಳ್ (ಪಂ. ವಿ. ೦೮ನೇ. ೦-೦೦ ; ೨೧೫೦). ಲೀಲೆ ; ೧. ಲೀಲೆಯನಪ್ಪಕೆಯ್ದು ನಯನೋತ್ಸವಮಂ ದಯೆಗೆಯ್ದ ಗಾಡಿಯಿಂದೇಳಿಸಿ ಕಾಮಕೆಲ್ಪ ಲತೆಯಂ ಪರಿಪೂರ್ಣಕಳಾವಿಳಾಸದಿಂದೇಳಿಸಿ ಜಾರುಚಂದ್ರಕಲೆಯಂ ನೆಲೆ ವೆರ್ಚಿಸಿದಳ್ (ಪಂಡಿತಪು. ೪-೩೨). ೨. ಲೀಲೆಯೊಳ್ ಕಾಮೆ ನಡೆಪದ ಕೇಳೀವನಲತೆಗಳಂ ನಿರೀಕ್ಷಿಸಿ ಸುಯ್ದಾವಾಳವಳಯಂಗಳಂ ಭ್ರಮರಾಳಕಿಯರ್ ಬಾಷ್ಪವಾರಿಯಿಂ ಪೂರಿಸಿದರ್ (ಪಜ್ಞಪ್ತಿ. ೦೩-೮೪).

ಲೀಲಾಜಾಲದಾಗಿ = ಅತಿಸುಲಭವಾಗಿ; ನಿರಾಯಾಸವಾಗಿ : ಚಿತ್ರಗಳನ್ನು ಲೀಲಾಜಾಲವಾಗಿ ಚಿತ್ರಿಸುತ್ತಿದ್ದ. ಕಳ್ಳಕರಾವಿದನೊಬ್ಬ ! (ಕುಗಪಾಂ. ೫೪); ಯಾರೊಡನೆಯೂ ಬಾಯಿಬಿಡದ ನಾನು ವಿನ್ನ ಬಳಿ ಲೀಲಾಜಾಲವಾಗಿ ಮಾತನಾಡಿದ್ದೇನೆ (ಸೀಪ್ರಭೆ. ೬೨).

[ಸಂ. ಲೀಲಾ]

ಲೀಲೆಗಾತಿ (ನಾ). ವಿಲಾಸವತಿ ; ಬೆಡಗಿ : ಲೀಲೆಗಾತಿಯರೆ ಪೆಸ್ತಕದಲಿ ಮಱೆವ ಪೂಮಾಲೆ (ಕೀಚಪ. ೨೦-೨); ಶ್ರೀಲಪದ್ಮದ ಬಟ್ಟವಾವುಗೆಗಳನು ಪೊಂದಾಳೆಯ ನಿಡುಜವರಗಳಾ ಲೀಲೆಗಾತಿಯರೊಯ್ಯನೆ ತಿರೆ ದಕ್ಷಿಣಾಂಕ ನಿಂದಾಲೋಕಿಸುತಿರ್ದನಿನಿಸು (ಪಪ. ೧೬-೧೩). [ಲೀಲೆ + —ಗಾತಿ]

ಲೀಲೆಗಾರ್ತಿ (ನಾ).= ಲೀಲೆಗಾತಿ : ಲೀಲೆಗಾರ್ತಿಯರುಚ್ಚತನಾಜ್ಞೆಯಿಂದ ಪೆರ್ಗಾಲ ಹೊಂದೊಂಬನು ನೆಗಹ ಕೀಲಗೆಯ್ದ ಸುವರ್ಣವೇತಂಡ ಶುಂಡಾಲದೆ ಸುರಿದುದು ಸಲಿಲ (ಕೀಚಪ. ೦೮-೩೩).

[ಲೀಲೆಗಾಜ + —ತಿ (<—ಗಾತ್ರಿ)]

ಲೀಲೆಗಾಱಿ (ನಾ). ವಿಲಾಸಿ; ರಸಿಕ : ಬಾಲೆಯರುಗಳು ಬೊಬ್ಬಿಡಲು ಗೋಪುರದಗ್ರಶಾಲೆಯ ರೋದನಗೇಳಿ ಲೀಲೆಗಾಱಿನ ಕೊಲ್ವುದಿಲ್ಲೆಂದು ದುಃಖಿದ ಕೀಲೆಗೆ ಮಾತನಿತ್ತಿದನು (ಕೀಚಪ. ೩೫-೩೩).

[ಲೀಲೆ + — ಕಾಱಿ]

ಲೀಲೆಗೆಡು (ಕ್ರಿ). ಸಂತೋಷವನ್ನು ಕಳೆದುಕೊಳ್ಳು; ಆನಂದವಿಲ್ಲದಾಗು : ಪಾರ್ಥನು ಲೀಲೆಗೆಟ್ಟಾ ದ್ವಾರವತಿಯನು ಪೊಕ್ಕು . . . ಅಱುಹಿದನು ಸರ್ವರಿಗೆ (ಕಷ್ಣಚ. ೬-೦). [ಲೀಲೆ + ಕೆಡು₁]

ಲೀಲೆದೋಱು (ಕ್ರಿ). ವಿನೋದವನ್ನು ಸೂಸು,— ತೋರಿಸು : ಆ ಸಕಲನಿಃಕಲತತ್ವವೆ ತನ್ನ ಶಕ್ತಿಸಮರಸಸಂಭಾಷಣೆಯಿಂದ ಲೀಲೆದೋಱಿ ಲಾಗಿ ಕಾನೇ ಗುರುವಾದ(ಕಷ್ಣಚ. ೩೧೦-೩೪). [ಲೀಲೆ + ತೋಱು]

ಲೀಲೆವಡೆ (ಕ್ರಿ). ಸೊಗಸಾಗು; ಚೆಲುವನ್ನು ಹೊಂದು ; ಸುಂದರವಾಗಿ ಕಾಣು : ನಿವಿಗೆ ಪಟ್ಟುಡುಗಲೊಡನಿಕ್ಕುವ ಕುಂಚಂ ಲೀಲೆವಡೆಯ (ಅಷ್ಟ. ೦೦-೪೮) ; ವಿಚಕಿಲಮುತುಲಮಾಲೆಯಂತೆ ಕುಚತಟದೊಳ್ ಕಂಠಮಾಲೆ ಲೀಲೆವಡೆಯ (ಜಾಪೀ. ೪-೦೯ ೪). [ಲೀಲೆ + ಪಡೆ₂]

ಲೀಲಾವತಿ 'ಲೀಲವತಿ' ನೋ.

ಲೀಳೆ 'ಲೀಲೆ' ನೋ.

ಲುಂಗ (ನಾ). ಒಂದು ಬಗೆಯ ಮರ. ಮತ್ತು ಅದರ ಹಣ್ಣು; ಮಾದಲ ; ಮಾತುಲುಂಗ : ಕಕುಭಾಶೋಕದಂಬಲುಂಗಲವಲೀ ಭೂಜಾರ್ಜುನಾನೋಕಹಪ್ರಕರಂ (ಪಂಚಾ. ೪-೩೦) ; ತುಲಸಿಯ ಲುಂಗ ಕಷ್ಟಾಯದ ಜಲದೊಳ್ ಗೋವನಧಿಕಬೂದಿಯ ಜಲದೊಳ್ ಕಟವೆಯ ಸಮನಿಸು ಕಾಂ ಮೊಸರೊಳೆ ಮೇಣ್ ಕಲಸಿದೊಡೆ ಪಲವು ದಿವಸಂ ನಿಲ್ಕುಂ (ಕೀಚಕವ. ೮-೩); ಮಿಸುಕುಟಜ ಲವಂಗ ಲುಂಗ ಮಾತುಲುಂಗ . . . ಬರ್ಜಾಶ್ವತ್ಥಾದಿ ವೃಕ್ಷಂಗಳು ಸುಮನಸಧರಿತವಾಗಿ ಕೋಧಿಸುತಲಿತ್ತು (ಕೃಗಾ. ೧೬). [ಸಂ.]

ಲುಂಗಿ (ನಾ). ಗಂಡಸರು ಸೊಂಟಕ್ಕೆ ಸುತ್ತಿಕೊಳ್ಳುವ ನಾಲ್ಕು ಮೊಳದ ವಸ್ತ್ರ; ಲಪಾಟಿ : ಅಲ್ಲಿ ಎಲ್ಲರೂ ಲುಂಗಿ ಸುತ್ತುತ್ತಾರೆ (ಕುಪಂ. ೨೦) ; ಪಚ್ಚಿಗೆ ಮುಖಿಕ್ಕೆ ಚಿತ್ರವಿಚಿತ್ರ ಬಣ್ಣ ಬರೆದು ಒಂದು ಲುಂಗಿಯನ್ನು ಉಡಿಸಿ (ಕುಂಕಥ. ೦೦೦). [←ಪಾರ. ಹಿಂ. ದುರಾ. ಲುಂಗೀ]

ಲುಂಚನ (ನಾ). ಕೀಳುವುದು ; ಕಿತ್ತು ತೆಗೆಯುವುದು : ಕೇಶಲುಂಚನಾನಶನಾತಪಸ್ನಾನಾದಿ ಶರೀರಪೀಡಾಕರಮಪ್ಪ ತಪೋನುಷ್ಠಾನದೊಳಂ (ಕಕ್ಷ. ೫೩). [ಸಂ.]

ಲುಂಜೆ (ನಾ). ಒಂದು ಬಗೆಯ ಮರ ; "ಹೆಂಡ ಇಳಿಸುವ ಮರ" (ಕ್ರಿಕಶ) : ಕದಿಯ ಜೀಗೆಯ ತಾಳ ಲುಂಜೆಯಾಂಬಲ ಸಕಲತರು ಧಾನ್ಯದಿಂದಾದ ಮದ್ಯಮಂ ಕುಡಿಕುಡಿದು ಮರುತಹತಿಯಿಂದ ಜಾಂಡಾಳಿಸುವ ಚಿತ್ರಯನರಸ ನೋಡುತ ಬಂದನು (ಪಪಣಾ. ೫೦. ೨೦೦). [?]

ಲುಂಟಾಕ₁ (ನಾ). ೧. ಕದಿಯುವುದು ; ಅಪಹರಣ: "ಲುಂಟಾಕಮೆನಲಲ್ಲಿ ನೆಗವುವುದಕ್ಕುಂ" (ಕ್ಕಕ್ಕ-೭೬). ೨. ಕದಿಯುವವನು ; ಕಳ್ಳ; ತಸ್ಕರ : ಗೆಂಟಲಾಜುತ ಸೋರಿ ಬರಿದಂಗದಲಿ ರಕ್ತ ಟೆಂಟಣಿಸುತ ಪೋಗಿ ಪೊಲಲು ಎಂಟುಂಗವೆಲ್ಲ ಕತ್ತರಿಸಿ ಬೀಳಲು ಬಿಳ್ದ ಲುಂಟಾಕ ವೈತರಣಿಯೊಳು (ಪಪಗಿ. ೬-೧೪). ೩. ಕಾಗೆ. [ಸಂ.]

ಲುಂಟಾಕ₂ (ನಾ). ಎರಡು ಬೆಟ್ಟಗಳ ಮಧ್ಯದ ಪ್ರದೇಶ: "ಲುಂಟಾಕ= ಗುಡ್ಡದ ಭೂಮ್ಮಿ" (ಸುಚಿಪ್ರ. ೦೦೬) ; "ಲುಂಟಾಕಮೆನಲೆರಡು ಬೆಟ್ಟುಗಳ ಮಧ್ಯಕೆ ಪೆಸರ್" (ಕಪಪ. ೧೬). [?]

ಲುಂಟಾಕಿನಿ (ನಾ). ನಿವಾರಿಸುವವಳು ; ಹೋಗಲಾಡಿಸುವವಳು : ಪರಿಪೂತನಾತಿನೀ ಪಾಪಲುಂಟಾಕಿನೀ ಸುರಭಿದವಲೋಕಿನೀ ಪೂರ್ವಮಂದಾಕಿನಿಯನತಿರ್ದರು (ಪಕ್ಕಪು. ೩-೨೩-೭೪). [ಸಂ. ಲುಂಟಾಕಿನೀ]

ಲುಂಠನ (ನಾ). ದರೋಡೆ ; ಲೂಟಿ : ಮಪಪಮ್ಮೂದನ ಸೈನ್ಯದಲ್ಲಿ ಹೆಚ್ಚು ಹೆಚ್ಚಾಗಿ ಲುಂಠನಪ್ರಿಯರು ಬಂದು ಸೇರಿಕೊಂಡರು (ಪಾಇಪ್ರ. ೩೦೩).

[ಸಂ.]

ಲುಂಠನಕಾರಿ (ನಾ). ಸುಲಿಗೆಮಾಡುವವನು ; ದರೋಡೆಗಾರ; ಕಳ್ಳ : ಅವನು ಅಷ್ಟಿಷ್ಟು ದಂಡನ್ನು ಕಟ್ಟಿಕೊಂಡು ಲುಂಠನಕಾರಿಯಾಗಿ . . . ಪ್ರಸಿದ್ಧಿಗೆ ಬಂದನು (ಕಗಪ್ರ- II, ೩೩); ಕೃಷಿಜೀವಿಗಳೂ ಶಿಲ್ಪೋಪಜೀವಿಗಳೂ, ವರ್ತಕರೂ ದುರ್ವೃತ್ತರಾದ ಲುಂಠನಕಾರಿಗಳ ಕೃಪಾಧೀನರಾದರು (ಕಪುಗಇ. ೦೪೦). [ಸಂ. ಲುಂಠನಕಾರಿನ್]

ಲುಂಠಾಕ (ನಾ). ೧. = ಲುಂಠನಕಾರಿ. ೨. ನಾಪಮಾಡುವವನು: ನಿನ್ನಂಶಾಂಶದಪಕಾರಮೂರ್ತಿಯಿಂ ಲೋಕಲುಂಠಾಕರನಾವ ಪದದೊಳ್ ಮಡಿಯಿಸಲ್ವೇಡರ್ದಪುದವರವರಸಂತಂತೆ ಮಡಿಯಿಪುದು (ಕಗಪ. ೬-೩೩ ೪).

[ಸಂ.]

ಲುಂಠಿಸು (ಕ್ರಿ). ೧. ಸೂರೆಮಾಡು ; ಕೊಳ್ಳೆಹೊಡೆ : ವೀರಭದ್ರದುರ್ಗದ ನೆರವಿಂ ಗೆಂಟಿಪ ಡಂಕಣಕೋಂಟೆಯನಂಟಿಸಿಯಾ ರಾಯ.ಗೋಂಟೆಯಂ ಲುಂಠಿಸಿದಂ (ಪಪಣ. ೫-೦೨೯). ೨. ನಾಶಮಾಡು: ರವಣಗೆಯ್ದವನ ಕಂಠವ ಲುಂಠಿಸಿದ ಕಂಠೀರವಮೂರ್ತಿಗಾನರಗುವೆನು (ಕಪಣಾ. ೬೦-೩೪).

[ಲುಂಠನ + — ಇಸು]

ಲುಂದು₁ (ಕ್ರಿ). ೧. ಮಲಗು ; ಇರುಳ್ ಕಳ್ಯರ್ ವಂದಾಕೆಯ ಲುಂದಿದ[ಪಣಾಂ. ನಿದ್ರೆಗೆಯ್ದ] ಮನೆಯೊಳ್ ಕನ್ನಮಿಕ್ಕಿದೊಡೆ (ಕಪ್ಪಾ. ೦೪-೨); ಕಾರ್ತಿಕಮಾಸದ ಪುಣ್ಣಮಿಯಂದು ಸುಖದಿಂದೆ ಲುಂದಿರ್ದಂ [ಪಣಾಂ. ಉಂದಿರ್ದಂ. ಪಟ್ಟಿರ್ದಂ. ಪಟ್ಟಿರ್ದೊಂ] (ಕಪ್ಪಾ. ೫೪-೭). ೨. ಸಂಭೋಗಿಸು : ಮೇಲ್ವಾಯ್ದುಮೇವೈಸಿಯುಂ ಪಿರಿದುಂ ಲುಂದುವ ಬೇಟದೊಂದು ಸುಖಮುಂ ಮೋಯಿಕ್ಕುಮಾಜಿಕ್ಕುವಗ್ಗಲಿಕ್ಕುಂ (ಪಪಪ. ೦೨-೩೪). ' ಮಜಿಲುಂದು ' ಪರಾ.

ಲುಂದುವೋವರಿಗೆ=ಮಲಗುವ ಕೋಣೆ; ಶಯ್ಯಾಗೃಹ: ಸರ್ವರುಜಾವಹಾರಮೆಂಬ ಹಾರಂ ಸಂತತಿಯಿಂ ವಾಮರಥಂಗೆ ಬಂದುದಂ ವಾಮರಥಂ ಕರುಮಾಡದೇಬನೆಯ ನೆರೆಯೊಳ್ ತನ್ನ ಲುಂದುವೋವರಿಗೆದು [ಪಚಾಂ. ಪವಡಿಪೋವರಿಯಲ್] ಪುಡಿಕೆಯೊಳಿಟ್ಟು (ಪಕ್ಕಾರಾ. ೦೨೬-೬).

ಲುಂದು₂ (ನಾ).೧. ಮಲಗುವಿಕೆ. ೨. ಸಂಭೋಗ: ಬಳಸುವ ಬೇಟದೊಳ್ ಮೊಳಪ ಗೊಟ್ಟಯೋರೆರೆವೋದ ಲುಂದಿನೊಳ್ ಬಳೆದ ವಿಯೋಗದೊಳ್ . . . ಗೊರೆಗೊಂಡ ಬೇಟಂ (ಅಪ್ರ. ೦೨-೨೦); ಆಮರ್ದಿನ ಧಾರೆಯಂತೆ ನುಡಿಯಿಂಪಮರ್ದಂ ತಳಿದಂತೆ ಸೋಂಕಿನಿಂಪಮರ್ದಿಸ ಪೂರದಂತೆ ಪದದಿಂ ಪಮರ್ದಂ ಕುಡಿವಂತೆ ಲುಂದಿನಿಂಪಮರ್ದೊಡಮೇಸಗಲ್ಕೆ ಮುಂಸೆಬೆರಸುಂ ಗಡ ಣಳಕೂಟವಾಗಮರ್ದಿನ ಕುಳಕೂಟದೊಡವುಟ್ಟಿದಳಿಂದಪೆನೆನ್ನ ನಲ್ಲಳಂ (ಅಪ್ರ. ೦೨-೨೬). [< ಲುಂದು₁]

ಲುಂಬಾಳಕಾರಿ (ನಾ). ಒಂದು ಬಿರುದು (?) : ಸಕಳಸಾವುನ್ನ ಲಕ್ಷ್ಮೀಕಾಂತಲಂಬಲುಂಬಾಳಕಾರಿನಿಲುಂ ಬೀರಚಂದ್ರಿಕಾಚಂದನತಿಳಕ (ಜಿಶ. VI. ೪೩೮೮. ೩೫-೪೬ : 1136). [?]

ಲುಕಸಾನ 'ಲುಕ್ಸಾನು' ನೋ.

ಲುಕಸಾನು 'ಲುಕ್ಸಾನು' ನೋ.

ಲುಕಸಾನೆ 'ಲುಕ್ಸಾನು' ನೋ.

ಲುಕುಸಾನು 'ಲುಕ್ಸಾನು' ನೋ.

ಲುಕ್ಸಾನ ' ಲುಕ್ಸಾನು ' ನೋ.

ಲುಕ್ಸಾನು, ನುಕಸಾನಿ, ನುಕಸಾನು, ನುಕ್ಸಾನು, ಲುಕಸಾನ, ಲುಕಸಾನು, ಲುಕಸಾನೆ, ಲುಕುಸಾನು, ಲುಕ್ಸಾನ (ನಾ). ನಷ್ಟ; ಹಾನಿ: ತಮಗೆ ಬಹಳ ಲುಕ್ಸಾನು ಆಯಿತು (ಶಾಕೀಪ್ರ. ೬೬). **ನುಕಸಾನಿ**: ಹೀಗೆ ಮಾಡೋಣದರಿಂದ ಸುಮ್ಮನೆ ನುಕಸಾನಿ ಆಗುವ ಸಂಭವವಿರುತ್ತದೆ (ಪುಂಅಣ್ಣಾ. ೬೬). **ನುಕಸಾನು**: ಸರಕಾರೀಕಂದಾಯದಲ್ಲಿ ಖೇಕಡಾ ಮೂವತ್ತರಂತೆ ಸರಕಾರಕ್ಕೆ ನುಕಸಾನು ಬಂತು (ಕಾಗಿ. ೬೬೬). **ನುಕ್ಸಾನು**: ವ್ಯಾಪಾರದಲ್ಲಿ ಬಹಳ ನುಕ್ಸಾನು ಆಯಿತು (ರಿಆ). **ಲುಕಸಾನ**: ಇದರ ದೆಸೆಯಿಂದ ವರ್ತಕರಿಗೆ ಲುಕಸಾನವಾಗಿ ಬಹಳೇ ಖೇದವಾಗುತ್ತದೆ (ಹುಂಅಣ್ಣಾ. ೬ ಕ್ರ.ಸ್ತಾ.೪೩). **ಲುಕಸಾನು**: ಏಂದಾ ಸಾಗುವಳಿ ಆಗತಕ ಲುಕಸಾನು (ಕ್ಯು.ಆರ್. ೦೪೩೬, ೫೦-೯; 2817); ಇದರ ಲುಕಸಾನು ಸರ್ವನಾಶ (ಪಾಂಧ. ೩. ೪೪೪). **ಲುಕಸಾನೆ**: ಕೆರಫುಂದ ಯಾವನಾದರೊಬ್ಬನಿಗೆ ಲುಕಸಾನೆಯಾಗಿದ್ದರೆ, ಆ ಲುಕಸಾನೆ ಹೊಂದಿದವನು . . . ಧರ್ಮಾದಿ ಮಾಡಬಹುದಾಗಿತ್ತು (ಇಂಗ್ಲಂಡ. ೬೫). **ಲುಕುಸಾನು**: "ಲುಕುಸಾನು _ ನುಕುಸಾನು, ಹಾನಿ" (ಶಾಪ್ರಸೀ. ೮೬). **ಲುಕ್ಸಾನ**: ವಿಷಯದ ಲಾಭ ಲುಕ್ಸಾನವನೆ ಬಲ್ಲನು (ಕಾಗಿ. ೦೫೬-೭).

[←ಅರ. ನುಕ್ಸಾನ್; ಹಿಂ. ಮರಾ. ಲುಕ್‌ಸಾನ್, ನುಕ್‌ಸಾನ್]

ಲುಚ್ಚ ' ಲುಚ್ಚಾ ' ನೋ.

ಲುಚ್ಚತನ ' ಲುಚ್ಚಾತನ ' ನೋ.

ಲುಚ್ಚಾ, ಲುಚ್ಚ, ಲುಚ್ಚಾ (ಗು). ೧. ಕೀಳಾದ; ಯೋಗ್ಯವಲ್ಲದ; ಅಲ್ಪ; ಹೀನ: ಈ ಲುಚ್ಚಾ ಸೂಳೆ ಮಗನ ಮಾತು ನಂಬಿಕೊಂಡಲ್ಲೇ ಈಗೆಲ್ಲಾ ರಾಮರಕ್ಷೆಯಾಗಿ ಕೂತೇದ (ತಿಮು. ೪೦); ಲುಚ್ಚಾಜನರ ಸಹವಾಸ ಮಾಡಿ ಅತೆ ಹಾಳಾದ (ರಿಆ). (ನಾ). ೨. ದುರಾಚಾರಿ; ದುಷ್ಟ; ದುರ್ವ್ಯಸನಿ: ಫಜನೀಮಹಮ್ಮದನೂ ಔರಂಗಜೇಬನೂ ಲುಚ್ಚಾಗಳು ದುಷ್ಕರು ಅಂತ ಬೈತಾನೆ (ಸ್ವಾಜಿಸ್ಮೃ. ೦೩೦). **ಲುಚ್ಚ**: ೧. ಆವಳು ರಂಗಭೂಮಿಯ ಮೇಲೆ ಬಂದಾಗ ತನ್ನ ಪಕ್ಷದವರು ಲುಚ್ಚಮಾತುಗಳನ್ನಾಡಿ ಚಪ್ಪರಿಸಿದಾಗ ತಾನು ಗದರಿಸಲಿಲ್ಲವೆ? (ರಂಗಚಾ. ೬). ೨. ಇಚ್ಚಾಳಗಾತಿ ತಾಯಮ್ಮ ಇದ್ದಾಗ ಲುಚ್ಚವರ ಸಂಗ ನಮಗೇಮು (ಹಳ್ಳಿ. ೬೬); ಮೈಗಳ್ಳ, ಕಳ್ಳ, ಲುಚ್ಚನೆಂಬ ಪದವಿಗಳೇ ಅವನಿಗೆ ದೊರೆತವು (ಕಪ್ರಂ. ೫೬). **ಲುಚ್ಚಾ**: ೧. ಗಂಧರ್ವಭಾಷೆಯಲ್ಲಿ ಆಡದ 'ಲುಚ್ಚಾ' ಮಾತುಗಳಲ್ಲ (ಜಾಂಕಪು. ೫೬); ಲುಚ್ಚಾ ಜನ ನೀವು (ಸಾಹೀಸ್. ೪೪೪).

[← ಪಾರ್. ಹಿಂ. ಮರಾ. ಲುಚ್ಚಾ]

ಲುಚ್ಚಾಗಿರಿ (ನಾ). ಅಲ್ಪತನ; ಕೀಳುತನ: ಈ ಸಣ್ಣ ವಿಚಾರಕ್ಕೆ ಲುಚ್ಚಾಗಿರಿ ತೋರಿಸಬೇಡ (ರಿಆ). [ಲುಚ್ಚಾ + –ಗಿರಿ₂]

ಲುಚ್ಚಾತನ, ಲುಚ್ಚತನ (ನಾ). ೧. ಕೀಳುತನ; ಹೀನಬುದ್ಧಿ: ಅವನ ಲುಚ್ಚಾತನದಿಂದಾಗಿ ಅವನ ನೆಂಟರಿಷ್ಟರೆಲ್ಲ ದೂರವಾದರು (ರಿಆ). ೨. ಪ್ರೋಕರಿತನ; ಸ್ವೇಚ್ಛಾಚಾರ: (೬). **ಲುಚ್ಚತನ**: ೧. ನೀನೋ ವಿನೋದ ಮಾಡಿದರೆ . . . ವಿನೋದ! ವಿಕೃತಕಾವು! ಲುಚ್ಚತನ! (ರಂಗಚಾ. ೦೬೩). [ಲುಚ್ಚಾ + –ತನ]

ಲುಚ್ಚಾ ' ಲುಚ್ಚಾ ' ನೋ.

ಲುಟಾಯಿಸು (ಕ್ರಿ). ಲೂಟಿ ಮಾಡು: ಕೊಳ್ಳೆಹೊಡಿ: ದೋಚು: ನಿಮ್ಮ ಸೀಮೆ ಯಾವತ್ತೂ ಲುಟಾಯಿಸಿ, ಆಕ್ರಮಿಸಿಕೊಳ್ಳುತ್ತೇವೆ (ರಾಕೇಂದ್ರ. ೪೩) : ವರ್ತಕರಿಂದ ತೆರಿಗೆಗಳನ್ನು ಎತ್ತುತ್ತಲೂ . . . ಅವರ ಭಂಡಾಸಾಲೆಗಳನ್ನು ಲುಟಾಯಿಸುತ್ತಲೂ ಇದ್ದರು (ಕಳಿ. ೦೯). [ಲುಟ್ಟಾ (ಪ್ರ ← ಹಿಂ. ಲುಟನಾ = ಲೂಟಿಯಾಗು) + – ಇಸು]

ಲುಟುಲುಟು (ನಾ). ಒಂದು ಅನುಕರಣ ಶಬ್ದ: ಅಡವಿಯಿಂದ ಮನೆಗೆ ಹೋಗುವಾಗ ಲುಟುಲುಟು ಹೆಜ್ಜೆ ಹಾಕುವ ಅಳಿಲ ಕರುವಿನಂತೆ ನೀನು ಹೀಗೇಕೆ ಓಡತೊಡಗಿದ್ದೀಯೆ (ಕುಗಪ್ರಾ. ೦೩೩) ; ಲುಟುಲುಟು ಹೆಜ್ಜೆ ಹಾಕುತ್ತ ಸವಿಾಪದ ಪುಸ್ತಕದ ಅಂಗಡಿಯಲ್ಲಿ ಕುಳಿತು : . . . ಪತ್ರ ಬರೆದು ಬೀದಿಯ ಮಗ್ಗುಲಲ್ಲಿರುವ ಟಪಾಲುಡಬ್ಬಿಯಲ್ಲಿ ಜೊದುಬಿಟ್ಟು (ಹುಕ್ಕೃ. ೮-೬೬).

ಲುಠನ (ನಾ). ೧. ಹೊರಳುವಿಕೆ; ತಿರುಗುವಿಕೆ. ೨. ತಿರುಗು ಮುರುಗು; ತಲಕೆಳಗು. [ಸಂ.]

ಲುಠಿತ (ಗು). ೧. ಹೊರಳಿದ; ತಿರುಗಿದ. (ನಾ). ೨. ಹೊರಳಾಡುವ ಕುದುರೆ: "ಉಪಾವೃತ್ತ, ಲುಠಿತ:—೨ . . . ನೆಲದಲ್ಲಿ ಬಾರಿಬಾರಿಗೂ ಬಿದ್ದು ಹೊರಳಾಡಿದ ಕುದುರೆಯು ಹೆಸರು" (ನಿಘಂ. ೨೫೦). [ಸಂ.]

ಲುಪ್ತ (ಗು). ೧. ಬಿಟ್ಟ; ತಿರಸ್ಕರಿಸಿದ. ೨. ಕರಗಿದ. ೩. ಕಾಣದೆ ಹೋದ; ಮರೆಯಾದ: ಗುಣಲುಪ್ತಪ್ರಮುಖಚಿತ್ತಂ ಪ್ರಳಯದೂರಂ . . . ವಿಕಲ್ಪತನು (ರಸಕ್ಷ. ೯-೩). ೪. ಕಳವು ಮಾಡಿದ; ದೋಚಿದ. ೫. ಇಲ್ಲವಾದ; ಲೋಪವಾದ: 'ಲುಪ್ತೋಪಮೆ' ಪರಾ. (ನಾ). ೬. ಕೊರತೆ; ಕುಂದು; ಊನ: ಕ್ಲಪ್ತಮೆನಿಸುವ ರಾಜಭೋಜ್ಯದೊಳಗಾವುದಂ ಲುಪ್ತಮಾಗದಪ್ಪೊಲಾರೋಗಣೆದುನ್ಮೆದ ಲೋಲುಪ್ತಿಯಿಂ ಮಾಡುತಿರ್ದಂ (ಕೃಬಾಚಾ. ೬-೪೩). ೭. ಮರೆಯಾಗುವಿಕೆ; ಕಾಣದಾಗುವಿಕೆ; ಅದೃಶ್ಯ: ನಾನಾಸಂಪ್ರದಾಯಗಳು ಲುಪ್ತವಾಗಿವೆ (ಪುಣ್ಯಕ. ೦೨೦ ೫೬೮) ; ಲುಪ್ತವಾದ ಭಾರತೀಯಕ್ಷಾತ್ರತೇಜವನ್ನು ಮರಳಿ ಪ್ರಖರಗೊಳಿಸುವ ಉದ್ದೇಶವಿರಲಿಕ್ಕೆ ಬೇಕು (ಕಾಲಗು. ೪೨೮). ೮. ಕಳವುಮಾಲು; ಕದ್ದ ವಸ್ತು: "ಅಪಹೃತಂ ಲುಪ್ತಂ— ಈ ೨ ಕಳ್ಳೊಡವೆ" (ಕಠಾಪ್ರಾ. ೫೬-೦೦೪). [ಸಂ.]

ಲುಪ್ತಪಿಂಡ (ನಾ). ಪಿಂಡಪ್ರದಾನಕ್ಕೆ ಯಾರೂ ಇಲ್ಲದಿರುವವನು.—ವಾರಸುದಾರಿಲ್ಲದವನು: ನೀನು ಲುಪ್ತಪಿಂಡ ಆಗಿ ಸಾಯಿ (ಗುಚರಿಪ್ರ. ೦೦೭). [ಸಂ.]

ಲುಪ್ತಿ (ನಾ). ಇಲ್ಲದಾಗುವಿಕೆ: ಕಾಣದಾಗುವಿಕೆ: ವ್ಯಕ್ತಿ ಲುಪ್ತಿಗಳು ಮಾನವಪ್ರಕೃತಿಯ ಯಾವ ನಿಗೂಢವಾದ ವಿಶೇಷತೆಯೊಡನೆ ಸಂಬಂಧವಾದವು ಎಂಬುದನ್ನು . . . ನಿರ್ಣಯಮಾಡಲಾಗಿಲ್ಲ (ಕಾಅಧ್ಯ. II, ೨೦). [<ಲುಪ್ತ]

ಲುಪ್ತೋಪಮೆ (ನಾ). [ಕಾವ್ಯವಿಮಾ] ಉಪಮೆಯಲ್ಲಿ ಒಂದು ಬಗೆ : ಪ್ರ " ಉಪಮಾನ ಉಪಮೇಯ ಸಾಧಾರಣಧರ್ಮ ವಾಚಕ ಶಬ್ದ ಇವುಗಳಲ್ಲಿ ಒಂದಾದರೂ ಕೆಲವಾದರೂ ಸ್ಪಷ್ಟವಾಗಿ ಉಕ್ತವಾಗದಿರುವ ಸಾದೃಶ್ಯಕ್ಕೆ ಲುಪ್ತೋಪಮೆಯೆಂದು ಹೆಸರು " (ಕೃಬಿ. ೨೩೭) : ಉಪಮೇಯಂ ಉಪಮಾನಂ ಸಮಾಸಧರ್ಮಂ ಉಪಮಾವಾಚಕಪದಂ ಎಂಬೀ ನಾಲ್ಕುಱೊಳ್ ಒಂದನಾದೊಡಮೆರಡ ನಾದೊಡಂ ಮೂಱಿನಾದೊಡಂ ಪೇೞದಿರೆ ಲುಪ್ತೋಪಮೆಯೆನಿಪುದು (ಅಕ್ರಿ. ೭೯). [ಸಂ.ಲುಪ್ತೋಪಮಾ]

ಲುಬ್ಧ (ಗು). ೧. ಆಸೆಯುಳ್ಳ : ಬಯಕೆಯುಳ್ಳ. ೨. ಅತಿಯಾಸೆಯ ; ಲೋಭತನದ ; ದಾನಂ ದುರ್ಜಲಲುಬ್ಧಪ್ರಸ್ತುತಂ (ಪಂಚತಂ.೨-೧೬ ಪ). (ನಾ). ೩. ಅತಿಯಾಸೆಯುಳ್ಳವನು ; ಲೋಭಿ : ಜಪ್ಪಣ : "ತೃಷಕಃ, ಗರ್ಧನಃ, ಗೃಧ್ನುಃ, ಲಿಪ್ಸುಃ, ಲುಬ್ಧಃ, ಅಭಿಲಾಷುಕಃ — ಈ ೬ ಕಾಂಕ್ಷಿತಂ" (ಅಜಯಮು. ೬೦-೨೦೬) ; ಚನ್ನಮಾದೊಡಂ ಗುಣಮಿಲ್ಲ ದಾತಂಗೆ ಲುಬ್ಧನ ಧವದಂತೆ ವಿಫಲಮಕ್ಕು (ಕುವಿ. ೦೦-೨೪) ; ಪಿಂಗಿರಾತ ಬಲಗುವ್ವರು ಅತಿಲುಬ್ಧರು (ಶಾಕುಲು. ೭೫). ೪. ಜೇಟಿಗಾರ; ಬೇಡ. [ಸಂ.]

ಲುಬ್ಧಕ (ನಾ). . ೧. ಅತಿಯಾಸೆಯುಳ್ಳವನು ; ಲೋಭಿ : ಜಿಪ್ಪಣ. ೨. ಬೇಟಿಗಾರ : ಬೇಡ ; " ಮೃಗಯುಃ, ಲುಬ್ಧಕಃ, ವ್ಯಾಧಃ, ವಾಗುರಿಕಃ – ಈ ೪ ಮಾವುಲಿಗು " (ಜಂಗಮು. ೧೦-೧೧೨) ; ಲುಬ್ಧಕಾರಣ್ಯಚರವುಲಿಂದಶುಭಾದಿಪರಿರಕ್ಷಿತಾಂತರಾಲದೇಶಂಗಳಂ (ಅಂಪ್ರ. ೯-೭೬ ಪ) ; ಏನಮರ್ದಿರ್ದನೊ . . . ಕಬ್ಬುಲಿಯ ಪೊತ್ತೊಯಿದೆಂ ಬಿನಮೊರ್ವ ಲುಬ್ಧಕಂ (ತ್ರಿಪು. ೩-೧೪). ೩. [ಜ್ಯೋತಿ] ಇಪ್ಪತ್ತೇೞು ನಕ್ಷತ್ರಗಳಲ್ಲಿ ಆರನೆಯದು ; ಆರ್ದ್ರ : " ಆರ್ದ್ರಾ, ಲುಬ್ಧಕ — ಈ ೨ ಆರ್ದ್ರಾ (ನಕ್ಷತ್ರದ ಪೆಸರ್) " (ಸಂಂಪು. ೯-೪೯) ; " ಕೃಪಾಂ ಶಾಬರಾರ್ದ್ರ ಲುಬ್ಧಕಮೆನಿಕ್ಕಂ" (ಜಾಣಕ. ೦೫೬). [ಸಂ.]

ಲುಬ್ಧತ್ವ (ನಾ). ಅತಿಯಾಸೆ ; ಜಿಪ್ಪುಣತನ. [ಸಂ.]

ಲುಲಾಯ (ನಾ). ಕೋಣ : "ಮಹಿಷಃ, ಸೈರಿಧಃ, ರಕ್ತಾಕ್ಷಃ, ಕಾಸರಃ, ಲುಲಾಯಃ – ಈ ೫ ಕೋಣಂ" (ಜಾಂಪು. ೩೮-೭೪); ಭೀಕರತರಮಾಯ್ತುಧಂ ವಿಲಯಕಾಲಕರಾಳಲುಲಾಯಸ್ನಿಭಂ (ಪಂಪ್ರಕೃ. ೦೦-೧೬) ; ಪೃಥುಳಕಂಧರ ಮೃಗಲುಲಾಯ ರಿತುಮಹಿಷೆಗಳ ಪಡುವಿರ್ದುದು (ಪಚಂ. ೩-೨೮). [ಸಂ.]

ಲುಲಾಯಚ್ಛವಿಕ (ನಾ). ಕೆಂಪಾದ ಬಣ್ಣವುಳ್ಳದು ; ಅತಿಕಪ್ಪು : ದಹನುಹಳಧೂಮಂ ದುಮೋಚ್ಚೈರ್ಲುಲಾಯಚ್ಛವಿಯಂ ಕೃಷ್ಣಾವ ಕಾಯದ್ಯುತಿ . . . ಪರ್ಬಿತ್ತಿಸೆ ದಿಸೆದಿಸೆಯಂ ಮುರ್ಮು ಪರ್ದತ್ತಗುರ್ದಿಂ (ಪಂಚಾಪ. ೦೦-೩೬). [ಸಂ.]

ಲುಲಿತ, ಲುಳಿತ (ಗು). ೧. ಅಲುಗಾಡಿದ ; ಅಲ್ಲಾಡಿದ ; ಕಂಪಿಸಿದ. ೨. ಕೆದರಿದ ; ಅಸ್ತವ್ಯಸ್ತಗೊಂಡ. ೩. ಚಿವುಟಿಸಿದ ; ಸಿಂಪಡಿಸಿದ. ೪. ತೊಟ್ಟಿಕ್ಕಿದ ; ಹನಿಸಿದ : ಪುನ್ನಾಗಪ್ಪದಕಂಠಯುಮಶ್ರುಜಲ ಲುಲಿತಲೋಚನೆಯುಮಾದ ಜಾನಕಿಗೆ ಪಪ್ಪುಮನಿಂತೆರಿಂದಂ (ಪಂಚಪಾ. ೦೦-೦೦೦ ಪ) ; ಲುಲಿತಜಲಲವಲಲಿತನಪಜಲರುಹಪದ್ಮವಿಸರಲಸಿತವಿಮಳ ಮರಾಲಾವಲಿಕಲಿತ . . . ಪಂದಮಾರುತಮಹಿತಂ (ರಾಹಸೇ. ೦೦-೬೬). ೫. ಚೆಲುವಾದ ; ಅಂದವಾದ : ಲಲಿತಮಾಗಿಸವ ಭಾವಲಯ ಪಾತ್ರಂ ಮಾಡಿ ಲುಲಿತಪಿಷಮುದಾರ್ಥನಿಕರಮಂ ಬೈತದಜಿಂಳೊಲಿವಿಂ ವ್ಯಾಣಲಿಂಗಕ್ಕೆ . ಕೊಟ್ಟಾ ಪ್ರಸಾದವನುಂಡು (ಕಾಶ. ೦-೦-೦೦೦). **ಲುಳಿತ** : ವಿ. ನಂದನಾವಳಿಗಳಂ ಒಳಸಿರ್ದ ಮದಾಳಿಸಂಕುಲಂಗಳ ವಿಷಯಾಂಗನಾಲುಳಿತಕುಂತಳದಂತಪ್ಪೆರೊಪ್ಪಿ ತೋಱುಗುಂ (ಪಂಪಾ. ೦-೩೬) ; ಸುವರ್ಣಕುಂಧಯಮಳಮಂ ತರಳತರತರಂಗಲುಳಿತ ಲಲಿತಫೇನಪಿಂಡಮಂ (ಶಾಂಪ್ರ. ೦೦-೫೫ ೬೧೪). ೨. ಚಿತ್ರರಥನಂದನ ತುರಗಖುರಲುಳಿತ . ಧೂಳೀಧೂಸರಮಪ್ಪ ಭವದ್ಗಮನಮಾರ್ಗಮಂ ನೋಡುತ್ತಮಿರ್ದಾ (ಶಾಪಂಚಾ. ೨೦೦). ೩. ಮಲಯಜರಸಲುಳಿತ ನಳಿನೀದಳಾವಕುಂಠಿತಪಾದ ಮೆಲ್ಲೆರ್ದೆಯೊಳಿವೋರೊರ್ವ ಕಳವಳಿಸಿ (ಶಾಪಂಪ್ರ. ೪೩೭). ೪. ಆನಂದಬಾಷ್ಪಜಲಲುಳಿತನೇತ್ರನಾಗಿ (ಪಂಗ. ೬-೨೬೫) ; ಪ್ರಮೋದಬಾಷ್ಪಜಲಲುಳಿತನಯನಪಾಣಿನನುಮಾಗಿ (ಕಂದ್ರಪು. ೨-೦೦೬). (ನಾ). ೫. ಅಲ್ಲಾಡುವುದು ; ಅಲುಗಾಟ ; ಕಂಪನ : "ಪ್ರೇಂಖೋಳಿತಂ, ತರಳಿತಂ, ಪ್ರೇಂಖಿತಂ, ಲುಳಿತಂ —ಈ ೪ ಅಲ್ಲಾಡುವುದು" (ಜಣಮು. ೦೫೬-೬೦). [ಸಂ.]

ಲುಲಿತಕುಂತಲೆ (ನಾ). ಅಲುಗಾಡುವ ಮುಂಗುರುಳುಳ್ಳವಳು : ಸ್ಖಲಿತಗತಿ ಲುಲಿತಕುಂತಲೆ ಪರಿತಸಿಜಗ್ರೀವೆ ಮಗುಳ್ದು ನೋಡಿದ ಳೊರ್ವಳ್ (ಜಾಪ್ರ. ೧-೨೬). [ಸಂ. ಲುಲಿತಕುಂತಲಾ]

ಲುಲಿತಾಳಕಿ, ಲುಳಿತಾಳಕಿ (ನಾ). = ಲುಲಿತಕುಂತಲೆ : ಆವಳೊಬ್ಬ ಡೆಗಂಡಿಯದಿನಿತಿನಿತಂ ಪಳಿಯಲೀಯದಂತೀವುದು ಮನಮಂ ಕಾಣ್ಮುದು ವಿಟುಂ ಸ್ಥಿರನಾಗಿ ಲುಲಿತಾಳಕಿ (ಕುವಿ. ೦೦-೬೬). **ಲುಳಿತಾಳಕಿ** : ಅಳವಿಗಳದೆನ್ನ ಮನದುಮ್ಮಳದಿಂ ಪರಿಣತನಿಪ್ಪ ನೈಮಿತ್ತಿಕನಂ ಲುಳಿತಾಳಕಿ ಬೆಸಗೊಳೆ (ಕುಲಿ. ೯-೨೬) : ಪೂತವನಮಂ ಲುಳಿತಾಳಕಿ ಎಂದು ನೋಡಿದಳ್ (ಪಾಪಾ. ೩-೨೨೬). [< ಸಂ. ಲುಲಿತಾಲಕಾ]

ಲುಲ್ಲಿ (ನಾ). ಒಂದು ಬಗೆಯ ಸಣ್ಣಪುಳು : ಸಮುದ್ರದೊಳಗೆ ಲುಲ್ಲಿಯಂತೆ ಮೃದುಶರೀರವುಳ್ಳದ್ದೊಂದು ಜಾತುವಿರುತ್ತದೆ (ಕುಂಂಷಾ. ೩-೨೯). [?]

ಲುಳಿ೧ (ನಾ). ೧. ರಭಸ ; ವೇಗ : ಮುಂತೆಯ್ದುವ ತೀಳಿಯೊಂ ಘೀಳಿನ {ದ}ಲುಗುವ ದಮರವನಗ್ಗಿಸಿ ಕೊಡಪುವ . . . ಕವಿಘಟೆ ನೆರದುವು ಬಲದೊಳಗೆ (ಪಂಚಪಾ. ೨-೨೬) ; ಲುಳಿಯ .ಬಿಲುವಿದ್ಯಾಚಮತ್ಕೃತಿಯಳವು ಗರುಡಿಯೊಳಲ್ಲದೀ ರಿಪುಬಲಕೆ ತೋಱಿಸಬಹುದೆ (ಶಾಂತೀ. ೩-೪) : ಉರುಕೇಶುಂಧನಂ ವಿಟಜನಕೆ ಬಂಧಸಂ ಕರದ ಲುಳಿ ಕಾಮನಾಟಕಕೆ ಲಳಲುಳಿ (ಸಮ್ಮೇ. ೬-೦೩). ೨. ಕಾಂತಿ ; ಹೊಳಪು : ಬಲಿದಿಂಗಲೀಕ ಹುಬ್ಬರ್ಗಳೇಗೆಳೆ ಲುಳಿಯ ಹೊಗೆಯ ಗಱಿಯ ಬಿಗುಹಿನ ಹಿಳುಕುಗಳ ಹೊಗರಂಬು ಕವಿದಪ್ಪ (ಶಾಪ್ಯಾರ್ಕ್ಯಾ. ೫-೦೩) ; ಸುಳಿವ ಹಸ್ತದ ಜಾತಿ ಭಾವದ ಬಳೆಯಲಾಡುವ ನೋಟ ನೋಟದ ಲುಳಿಯವೊಲು ತೆಗೆದತ್ತ ತಿರುಗುವ ಕೊರಳು (ಕ್ರಮೀ. ೪-೫೬). ೩. ಚುರುಕುತನ ; ಲವಲವಿಕೆ : ಈ ಬಲ್ಮೆಯಾ ಲುಳಿಯಾ ಬಿನ್ನಣಾ . . . ಶ್ರೀಚಂದೇವನೊಳ್ ಮೆಱೆಗುಂ (ಪಚಂ. ೪-೦೪೬).

ಲುಳ್ಳಿ, ರುಳಿ (ನಾ). ಕಾಲಿಗೆ ಧರಿಸುವ ಒಂದು ಬಗೆಯ ಆಭರಣ : ಕಡಗ ಪೆಂಡೆಯ ಕಾಲುಲುಳಿಯ ಮೃಡಶರಣರಿಗುಳಿವುದೆ ಇತ್ತು ರುದ್ರಾಣಿ (ಅಮುಚಾ. ೭-೬೯) ; ಪದಕದ ಲುಳಿಯ ರವೆಯದ ಕಂಠದ . . . ವೆಣ್ಗಳ ತಂದವೆಳಸಿದುದಾರತಿವಿಡಿದು (ಶಾರಾಣಾ. ೪೦-೭೬) ; ಭೂರಿಕುಮಾರರುಂಟಿವಗೆ ಪದಕದಂತೆ ಹಾರದಂದದಿ ಲುಳಿಯಂತೆ (ಪಚಂ. ೧೭-೩೦). **ರುಳಿ** : ಕನ್ಯಾಶಿರೋಮಣಿಯ ಚರಣಗಳಂಗೆಯಂದುಗೆ ಗಜ್ಜೆ ರುಳಿದೊಡರನಿಟ್ಟರೊಲಿದು (ಪಚಂ. ೨೩-೮೨) ; ಕಾಲ ಸರ್ಪಳಿ ರುಳಿ . . . ಜೋಮಾಲಿಗಳು ಇಂಥ ಮೇಲಾಭರಣನಿಟ್ಟು ಲೋಲ್ಯಾಡುತಲಿ ಬೆಲ್ವ ಬಾಲೆಯರು ಬರುವ ವಿಶಾಲವೇನೆಂಬೆನೊ (ಪಚಂ. ೧೪). [← ಮರಾ. ರುಳೀ]

ಲುಳಿತ ' ಲುಲಿತ ' ನೋ.

ಲುಳಿತಾಲಕ, ಲುಳಿತಾಳಕ (ನಾ). ಅಲುಗಾಡುವ ಮುಂಗುರುಳು : ಪದದಿಂದಾ ಲುಳಿತಾಲಕಂಬರಿಗ[ಮಂ]ಗೋವಾಂಗಮಂ ಪಂಚರತ್ನದಿವಂ

ಗೋಚಿತಮಾಗೆ ನಿಮ್ಮಿಸಿ (ಕಇಆ. ೮೦-೦೭.೫೬; ೨೨೨೨). **ಲುಳಿತಾಳಕ** : ಲುಳಿತಾಳಕಜಾಳವೆಂ ಕೊಡಂಕೆಗೆ ತೆಗೆದೆಜಿ ನೂಂಕಿ . . . ಒಬ್ಬರಕಾಂದು ಕಾಂತೆಯರ್ (ಗಾದಾಪು. ೭೦) ; ಸುರಸುಂದರಿಯರ್ನರ್ತಿತಂದರೆಂದು ಸುಯ್ಯೊಗೆದಳಿವಲೆ ತಮ್ಮ ಲುಳಿತಾಳಕದೊಳ್ಪಡವಾದುವೆಂಬಿನಂ (ಪಾಭಾ. ೮೪-೫೬). [ಸಂ. ಲುಲಿತಾಲಕ]

ಲುಳಿತಾಳಕ ' ಲುಳಿತಾಲಕ ' ನೋ.

ಲುಳಿತಾಳಕಿ ' ಲುಲಿತೊಳಕಿ ' ನೋ.

ಲುಳಿದಾರ (ನಾ). ಒಂದು ಬಗೆಯ ಆಭರಣ : ಲುಳಿದಾರ ಮುಂಗೈಯು ಮುರಿ ಪೆಂಡೆಯ ಕೋಳ ಬಳೆ. . . ಮೆಱೆಯೆ ಬಂಬರ ನೋಡಿ ಕಳಹಿದ ನಂದು ಕಗ್ಗೊಲೆಗೆ (ಭಾಬಾಣಾ. ೭೮-೮೩) ; ಲುಳಿದಾರ ಕಂಠಿಕೆ ಖಡೆಯ ಪೊಂಗಲು ಹೊನ್ನ ಬಳೆಯುತ್ತರಿಗೆ ಜಿನ್ನಸರವ ಕಳುವು (ಭಾಬಾಣಾ. ೪೨-೩೯). [ಲುಳಿ$_2$ + ದಾರ$_1$]

ಲುಳಿಮನ (ನಾ). ೧. ಚುರುಕಾದ ಮನಸ್ಸು. ೨. ಆಸಕ್ತವಾದ ಮನಸ್ಸು : ಹಲವು ವಿಧದರ್ಜನೆಗಳಿಂದಿಷ್ಟರಿಂಗವಂ ಲುಳಿಮನದಿ ಪೂಜಿಸಲು ಮುಚ್ಚಿದಂ ಗೌರೀಶ (ಅಶಾಂ. ೦೬-೦೮) ; ನಳನರಿಪುಪಾಲಿಯಿದಿ ರೊಳ್ ತೋಜಿ ಕಾಣುತಂ ಲುಳಿಮನದಿ ಮೆಯ್ಯಿಕ್ಕಿ ಭಕ್ತಿಯಿಂ ಕುತಿಸುತಂ (ಅಶಾಂ. ೫೨-೫೬). [ಲುಳಿ$_1$ + ಮನ]

ಲುಳಿಯಂಬು (ನಾ). ವೇಗವಾಗಿ ಚಲಿಸುವ ಬಾಣ : ಅರಸ ಚಿತ್ತವಿಸು . . . ಲುಳಿಯಂಬು ಕಣಗಲ ಸರಳುಗೂಡಿಪ್ಪತ್ತು ಸಾವಿರವೆರಡುಸಾವಿರ ಪುಳಿದವೀ ಸಾರಾಚಿಸಿರದಲಿ (ಭಾಷ್ಕಾ. ೦೬-೨೦) [ಲುಳಿ$_1$ + ಅಂಬು$_1$]

ಲುಳಿಯಾಣಿ (ನಾ). ರತ್ನದ ಒಂದು ಜಾಗದ ದೋಷ (?) : ಆ ಮೂಱರೊಳ್ ಬೇಱೆ ಬೇಱೆ ಅರ್ಕರಿಂ ಧರಿಸಿದವರಿಗೆ ಫಲವ ಪೇಳುವೆಂ ಕರ್ಕರಕೆ ಭಿನ್ನವೆಂದೊಡದು ಹುಟ್ಟಿದುದೆಂದು ಅಕ್ಕಜದ ಮೊರು ಲುಳಿಯಾಣಿ ಸುನಗಳೆಂದು ಪುಟದೋಷಮೆಂದಿರ್ಪುದು (ಕಕ್ಕಾ. ೯-೫). [?]

ಲುಳಿವಡಿಸು (ಕ್ರಿ). ವೇಗಗೊಳಿಸು : ಕಮಲಜಸೇಱಿದನು ರಥವ . . . ತುರಗವಪ್ರಸರವನು ಬೋಳ್ಕಿಸಿ ರಥವನು ದೆಸೆದೆಸೆಗೆ ಹೊಳಿಸಿದನು ಲುಳಿವಡಿಸಿದ; ಮಹಾರಥವ (ಭಾಷ್ಕಾ. ೬-೦೯). [ಲುಳಿ$_1$+ಪಡಿಸು]

ಲುಳಿವಡೆ (ಕ್ರಿ). ೧. ವೇಗಗೊಳಿಸು : ರಭಸಗೊಳಿಸು : ತುರಗವನು ಬೋಳಯಿಸಿ ವಾಘೆಯ ತಿರುಹಿ . . . ಕೃಷ್ಣ ಪಾರ್ಥನ ರಥವ ಲುಳಿವಡೆದ (ಭಾಷ್ಕಾ.೦೬. ೬-೨) ; ಬಳಿಕ ಶಾರ್ಙ್ಗ ಮಹಾಧನುವನಜ್ಜಲಿತ ಮೌರ್ವಿಯ ನೀವಿ ಬೆರಳಿ ಲುಳಿವಡೆದು ಬರಸೆಳೆದು ಹೂಡಿದನಾ ಮಹಾಶರವ (ಕೂಹಾ. ೬-೩೦-೨೬). ೨. ಚುರುಕುತನವನ್ನು ಹೊಂದು : ಕೊಂಕು ಬಿಂಕಂಬಡೆಯೆ ಬಿಂಕಂ ಲುಳಿವಡೆಯೆ ಲುಳಿ ನವನವಡೆಯೆ ಮೆಱೆದು (ಅಪಂಪ. ೫-೨೪). [ಲುಳಿ$_1$+ಪಡೆ$_1$]

ಲುಳಿವಡಿಸು (ಕ್ರಿ). ವೇಗಗೊಳಿಸು : ವಾಘೆಯ ಕೊಂಡು ತುರಗವ ತಿರುಹಿ ಲುಳಿವಡಿಸುತ್ತ ಪಾರ್ಥಗೆ ಮಾಯೆಯನು ಬೀಸಿ . . . ಎಂದನು ನಗುತ ಮುರವೈರಿ (ಭಾಷ್ಕಾ.೦೬. ೬-೮೨). [ಲುಳಿವಡೆ+—ಇಸು$_2$]

ಲುಳಿವೆರು 'ಲುಳಿವೆಱು' ನೋ.

ಲುಳಿವೆಱು, ಲುಳಿವೆರು (ಕ್ರಿ). ೧. ಕಾಂತಿಯನ್ನು ಪಡೆ ; ಹೊಳಪಾಗು: ನಳನಪತ್ರಾಯತೇಕ್ಷಣೆಯಂಗದೇಶದೊಳ್ ಪುಳಿ[ಪಾಣಾ. ದೆಳ]ಸಿದ ಲಾವಣ್ಯವನದಿ ಲುಳಿವೆಕ್ಕು ರತಿಕಾಮ ದೇವರಾಡುವ ಕಾಸುಗಂಳಿಯನೆ ಹೊಕ್ಕು ಕೊಳ್ಳಿದುದು (ಪಾಭಾಕ. ೩೬-೦೪)- **ಲುಳಿವೆರು** : ೨. ವೇಗವನ್ನು ಹೊಂದು : ಸಡಗರಿಸಿ ಮೆಯ್ಯಳಿಗೊಂಡು ಲುಳಿವೆತ್ತು ನೆರೆದರ್ (ಸಂಚಿ. ೫೬-೬). [ಲುಳಿ$_1$+ಪೆಱು$_1$]

ಲೂಟಿ (ನಾ). ಕೊಳ್ಳೆ ಹೊಡೆಯುವುದೆ ; ಸುಲಿಗೆ ; ದರೋಡೆ : ಕದನದ ಮುಱಿದಿಕ್ಕೆ ಬಳಿಕಾಯನ ಕಸ್ಮಸದನವ ಹೊಕ್ಕು ಲೂಟಿಯಲಿ ಹದ ವಿಲ್ಲು ಕೋಲ್ಗಳ ಕೈಕೊಂಡು ಬತ್ತಿಸಾಯುಧನಾಗಿ ಪೊಱವಟ್ಟು ಬಂದ (ಪೊಚಕಪ. ೦೨-೨೦) ; ಈ ಪುರದೊಳು ಪ್ರಜೆ ಕಾಳುವಿಲ್ಲ ಲೂಟಿಯು ಬಲುಹ ನೇನೆಂಬೆ (ಪಚಂ. ೨೮-೦) ; ಇವರ ಲೂಟಿ. ದರೋಡೆಗಳೆ ಜನತೆಯ ಭೀತಿಗೆ ಮುಖ್ಯ ಕಾರಣವಾಗಿತ್ತು (ಸ್ವಾಪ್ರ. ೦೫೫).

ಲೂಟಿ ಮಾಡಿಸು = ಕೊಳ್ಳೆ ಹೊಡೆಯಿಸು ; ಸೂರೆ ಮಾಡಿಸು : ನಮ್ಮ ತಂಗಿಯರು ತಮ್ಮಂದಿರು . . . ಬೇಕಾದಾಗ ಕರೆಸಿಕೊಳ್ಳುತ್ತೀರಿ. ಮನೆಯೆಲ್ಲ ಲೂಟಿ ಮಾಡಿಸುತ್ತೀರಿ (ಪುಚಾಗ. ೫೫). **ಲೂಟಿ ಮಾಡು** = ಕೊಳ್ಳೆ ಹೊಡೆ ; ಸೂರೆ ಮಾಡು ; ಸುಲಿ : ತೋಟಿಯಿಂದೊಳಪೊಕ್ಕು ಪುರಗಳೊಳಗೆ ಬಲು ಬೇಟೆಯ ನಾಜು ಪಿಡಿವರು ಲೂಟಿ ಮಾಡುವರು (ಭಾಬಾಣಾ. ೦೦-೩) ; ಶತ್ರುಗಳು ದೇಶದ ಮೇಲೆ ನುಗ್ಗಿ ದೇಶವನ್ನೆಲ್ಲಾ ಸುಟ್ಟು ಲೂಟಿ ಮಾಡುತ್ತಿದ್ದರು (ಪಾಬ್ರಾಪ್ರ. ೨). **ಲೂಟಿಯಾಗು** = ಕೊಳ್ಳೆ ಹೋಗು ; ಸೂರೆಯಾಗು ; ಸುಲಿಗೆಯಾಗು : ಪಕ್ಕದ ಹಳ್ಳಿ ಲೂಟಿಯಾಯಿತು (ಪಾಗಪ. ೧೩). **ಲೂಟಿಯಾಡು** = ಲೂಟಿ ಮಾಡು : ಕೇರೀಕೇರಿಯೊಳು ಪುರಿದು ಲೂಟಿಯಾಡಿದರೂರು [ಪಾಣಾ. ಮಾಡುತಲೂರು] ಕಿಚ್ಚನೆ ಬೀಡಾಯ್ತು (ಭಾಣಾಣಾ. ೦೦-೧೩) ; ನೀನಾರ ಗಂಡನಂ ಲೂಟಿಯಾಡಲ್ಬಂದೆ ಎಂದು ಜೇಲಾಗ್ರವಂ ಪಿಡಿದೆಳೆಯಲು (ಕೇಚಮ.೪-೫೬). [← ಹಿ. ಲೂಟ್, ಲೂಟ; ಮರಾ. ಲೂಟ್]

ಲೂಟಿಸು (ಕ್ರಿ). ಕೊಳ್ಳೆಹೊಡೆ : ದೋಚು ; ಲೂಟಿಮಾಡು : ವೇಣಾ ವಧೂಟ್ಯರು ಲೂಟಿಸಿದರಖಿಲವಿಟಚಿತ್ತಧನವಾಂ(ಕಇಪ. ೩೨. ೧೮೫ ಪದ್ಯ) ; ಬಾರಲೆ ವಿಶಾಲಾಕ್ಷಿ ವಿನಗಹಿತಪತ್ನಿಯಾಗುರಮಂ ಲೂಟಿಸು (ಪಕ್ಷಾ. ೬-೨೫); ಹೈದರೆಲ್ಲಿ ಖಾನರು ನಾವಿರುಜಂಗರ ಖಿಜಾನೆ ದ್ರವ್ಯವೆಲ್ಲ ದಿಕ್ಕಾ ಪಾಲಿಗೆ ಲೂಟಿಸಿ ಕೊಂಡೆ ಹೋಗುವರಲ್ಲಿ ಕೆಲವರನ್ನು ಹೊಡದು (ಕ್ಷಚಿ. ೫೬). [ಲೂಟಿ + —ಇಸು$_2$]

ಲೂತಿ, ನೂತಿ$_2$ (ನಾ). ೧. ಒಂದು ಬಗೆಯ ಗುಹ್ಯರೋಗ ; ಗುಹ್ಯ ವ್ರಣ ; ಭಗಂದರ : "ಲೂತಿ [ಪಾಣಾ. ಲೂತಿ, ವ್ಯೂರಿ]ಯೆನಲಾಸನದ ಪುಣ್ಣಕ್ಕೆ" (ಪಾಣಾ. ೦೦೪-೩) ; ಸರ್ವ ವಿಗಿಲೆಂಬಪಂಕಾರೀಕನ್ಯೆಯ್ದೆ ಲೂತಿಯು ಹುಣ್ಣನುಳ್ಳಾತನು (ಪಕೃತಿ. ೪-೨೨-೩೦) ; ಪ್ರೀತಿಯಿಂದ ನೀತಿ ಹುಟ್ಟುವುದು ಲೂತಿಯಿಂದ ಗಜ್ಜಿ ಹುಟ್ಟುವುದು (ಗಾಪ). **ನೂತಿ$_2$**: ೧.ಬಾಳೆ ಹೂವು. ಹುರುಳಿ. ಗೇರ ಹರಳು ಇವೆಲ್ಲುಟ್ಟು ಇಳುಹಿ. ಗೇರ ಹರಳು ಮೆಲಲು ನೂತಿ ಮಾಣ್ಗುಂ (ಪತ್ಯ. ೬೬) ; ನಾಡೀವ್ರಣವೇ ನೂತಿ ಎನಿಸಿ ಕೊಂಬುದು (ಪತ್ಯಚಾ. II. ೦೫೬); ಎಳೇ ನೀಲಿ. . . ನೂತಿ. ಬಾಯಿಹುಣ್ಣು ಗಂಟಲುಹುಣ್ಣು. ಕಾವುಗಣ್ಣುಗಳಿಗೆ ಇದು ಸಂಜೀವನ (ಪಚಿ. ೯). ೨. ಒಂದು ಬಗೆಯ ರೋಗ : ' ಕಣ್ಣು ನೂತಿ ' ಪರಾ.

[<ಸಂ. ಲೂತಾ = ಚರ್ಮರೋಗ /ತುಳು. ಲೂತಿ = ಚರ್ಮರೋಗ]

ಲೂತೆ (ನಾ). ೧. ಜೇಡರ ಹುಳು ; "ಲೂತಾಹ್ವಯಮೂರ್ಣನಾಭಂ" (ಪಚಂ.೪೫. ೧೦-೬) ; ಛದ್ರಾಂಗನೆಂದೆಂಬವನ ಮೇಲೊಂದು ಲೂತೆಯು ಪರಲ್ಕ ಮುನಿಯ ಶಿಷ್ಯನಾಲೋಕಿಸುತ್ತೆ ಕೌಶಲ್ಯನೆಂದೆಂದಾತನದನೆಳೆದು ಕಡಿಗೆ ಹಾಯ್ಕ (ಸಿಪ್ರಕ್ಷ. ೦೫-೦೬). ೨. ಗರುವೆ. ಪಿ./ಜೇಡರ ಹುಳುವಿನ ಎಂಜಲಿನ ಸಂಪರ್ಕದಿಂದ ಉಂಟಾಗುವ) ಒಂದು ಬಗೆಯ ಚರ್ಮರೋಗ: (ಕ). [ಸಂ. ಲೂತಾ]

ಲೂನ (ಗು). ೧. ಕತ್ತರಿಸಿದ ; ಕಡಿದ : ಐರಾವತಕರಲೂನಸಲ್ಲಕೀಶಬಳ ಮುಮಾವ್ರದಯಗಿಯಿಂ ಸೊಗಯಿಸುವ ಮೂಡಣದೆಸೆಗೆ ವಂದು (ಪುಚಾ. ೪-೦೬ ಪ); ಏನ ಹೇಳುವೆನುಭಯಬಲದಲಿ ಲೂನನಿವಹದ ಹಯವ ನಡಗೆಡವಾನೆಗಳ ಹೊದಲ್ಕಿದ್ದು ಮುಗ್ಗಿದ ರಥವ ವಾಜಿಗಳ (ಭಾಷ್ಕಾ.೦೬. ೬-೩)-(ನಾ). ೨. ಕತ್ತರಿಸಿದುದು ; ತುಂಡುಮಾಡಿದುದು : "ದಾತಂ ಲೂನಂ ದಿತಮೆಂಬಿಗೆ". (ಪಪ್ರ.೫೫. ೦೦೬-೨೯). ೩. ಕೊಯ್ದುದು;

ಕಟ್ಟಾವಾದುದು : "ಲೂಪಂ ಕೊಯ್ದು [ಶಾಕಾಂ. ಕೋಯಲು] (ಹುಂಗಣಾ. ೦೦೯-೨). ೪. ಬಾಲ. [ಸಂ.]

ಲೂನವಕ್ಷ (ನಾ). ಕತ್ತರಿಸಿಕೊಂಡುದರಿಂದುಂಟಾದ ಗುರುತನ್ನು ಎದೆಯಲ್ಲಿ ಹೊಂದಿರುವವನು ; ಕ್ಷ ಹಿಂದಿನ ಕಾಲದಲ್ಲಿ ಬೇಳೆ ವಾಳಿಗಳು, ಗರುಡರು ಮುಂತಾದವರು ತಮ್ಮ ಒಡೆಯರ ಸೇವೆಗೆ ತಮ್ಮನ್ನು ಒಪ್ಪಿಸಿಕೊಂಡುದರ ಸೂಚನೆಯಾಗಿ ಹರಿತವಾದ ಆಯುಧದಿಂದ ತಮ್ಮ ಎದೆಯ ಮೇಲೆ ಒಂದು ಗುರುತನ್ನು ಮಾಡಿ ಕೊಳ್ಳುತಿದ್ದರು : ನೃಪಾಲರ ಮಗನೊ ಮೊಮ್ಮನೊ ನೀನವರ ಬಾಂಧವನೊ ಭೃತ್ಯನೊ ನೂ[ಲೂ]ನವಕ್ಷ [ಶಾಕಾಂ. ಪಕ್ಷ]ನೊ ಬೆರಳ ಬದಿಗನೊ (ಕುಪಾ.೪. ೨-೭೨). [ಸಂ. ಲೂನವಕ್ಷ]

ಲೆಂಕ (ನಾ). ೧. ತನ್ನ ಒಡೆಯನ ಸಲುವಾಗಿ ಪ್ರಾಣಾರ್ಪಣೆಯನ್ನು ಮಾಡುವ ನಿಷ್ಠಾವಂತನಾದ ಆಳು ; ಆಪ್ತ ಸೇವಕ : ಕರ್ಣನ ಲೆಂಕರು ಪ್ರತಿಕಾಮಿಯೊಬನುಮಂ . . . ಪೇಬ್ಪೊದೆ (ಪಂಪಭಾ. ೭-೯೫); ತತ್ಪಾದಪದ್ಮೋಪಜೀವಿ ಲೆಂಕ ಬೇಣಮ್ಮಂ (ಕರ್ನಾ. ೫೨-೫. ೫೦-೦೫; 1005); ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ (ಅಪಪ. ೧೧೦), ಸ್ವಾಮಿ ನಿಮ್ಮಡಿಯ ಲೆಂಕರ ಪ್ರಥಮ ಲೆಂಕನೆನಗೀ ವಾತದೇಕೆ (ಪಾಪ್ರ.೩-೨೨). ೨. ಕಿಂಕರ ; ಭಕ್ತ . ಲಂಕನಾಗಲಿ ಕಿಂಕರನಾಗಲಿ ಶರಣನಾಗಲಿ ಸಕಳೇಶ್ವರದೇವರಾರ ಮನದಲ್ಲಿ ಹೋಗಿದ್ದಾನೆಂದಱಿಯುಬಾರದು (ಸಕಪ್ರ ೦೦-೧೩) ; ಲೆಂಕರ ಬೆಗಿದಾವರೆಯೊಳ್ ಬಂತದೆ ಕೆಲಸಿರ್ಪ ದೇವಂ (ಅಚಿತಿಂ ೩೫, ೩) ; ಇಂಥ ಲೆಂಕನ್ನ ದೇವರು ಕೈ ಬಿಡೋದಿಲ್ಲ (ಶಪಾ. ೦೭೯). [ದೇ.ಕ ತುಳು. ಲೆಂಕ ; ತೆಲು. ಲೆಂಕ. ಲೇಕ]

ಲೆಂಕತನ (ನಾ). ಪಾಸತ್ವ ; ಸೇವಕತನ : ನಿಮ್ಮ ಅಂಕೆಗೆ ರುಂಕಿಗೆ ಶಂಕಿಸಿದೆನಾದರೆ ಎನ್ನ ಲೆಂಕತನಕ್ಕೆ ಹಾನಿ (ಶಪಾ. ೬೫೮). [ಲೆಂಕ + — ತನ]

ಲೆಂಕದಂಡ (ನಾ). ಲೆಂತರ ವರ್ಗದ ಜನರಿಗೆ ಅಧಿಕಾರಿಯಾದವನು : ಸೇವಕರ ಮುಖ್ಯಸ್ಥ (?): ಪ್ರಧಾನರುಂ ಪರಿಜಾರಕರುಂ ಪೆರ್ಗಡೆಗಳುಂ ಲೆಂಕದಂಡರುಂ ಸಾಮಂತರುಂ . . . ಪೆರ್ಜ್ ಮೇಗುಮೆಯ್ಯಱಿಯದಂತೆ ರಾಗಿಸಿ ತಮ್ಮೊಳಿಂತೆಂದರ್ (ಕರ್ಕಾಪ್ರ. ೬-೨೦೬). [ಲೆಂಕ + ದಂಡ]

ಲೆಂಕವಳಿ, ಲೆಂಕವಾಳಿ (ನಾ). =ಲೆಂಕತನ : ಲೆಂಕವಳಿಯೊಳು ವೀರತನಂ ಕನಗೆನಿಸಿ ಬೀ[ರ] ಡೊಂಗಿನ ಬಸಮಂ ಕೊಟ್ಟು ಪದದ[ಂ] ಸಗ್ಗದ ಸುಖವನು (ಕ್ಯಾಂ. ೦೯೯೩, ೪೩-೫ : 1317). **ಲೆಂಕವಾಳಿ** : ಕನ್ನಯನಾಯಕಂ ಭಯಂಕರ ಗರುಡಂಗೆ ಮಾರ್ಮಲೆದು ಹೊಯ್ದುಮರ್ದಿಪ್ಪ ನಿಮಿರ್ದೆ ತೋಱುವು ಬಿರುದರ ಗೋವನುರ್ವ್ವರಿಗಿ ಸೋವನ್ಯಪಾಳನ ; ಲೆಂಕ ವಾಳಿಯಂ (ಎಳ. ೫೪, ೪೬೦. ೯-೨೨ : 1267). [ಲೆಂಕ+— ವಳಿ]

ಲೆಂಕವಾಳಿ (ನಾ). = ಲೆಂಕ ೧ : ಲಿಂಗೋವಜ್ಞರಿಗಳುಂ ಮಾಸವಾಳರುಂ ಲೆಂಕವಾಳರುಂ . . . ಈಯುಮರ್ಪ್ಪಣೆಯೊಳಾಚಾರ್ಯರ್ಕ್ಕರ್ಪಿಸಿದ ನಿರವದ್ಯಚಾತರಪ್ಪ ಪಂಚಮಜಾತಿಯುಂ ಕಫಂ ಚಿದ್ದಾನಂಗೊಡಲು ಯೋಗ್ಯರಕ್ಕುಂ (ಪಾಕಾ.೪೨೦). [ಲೆಂಕ + — ವಾಳ್ (<—ವಳ)]

ಲೆಂಕವಾಳಿ 'ಲೆಂಕವಳಿ' ನೋ.

ಲೆಂಕಿ, ಲೆಂಗಿ (ನಾ). ೧. ಸೇವಕಿ ; ದಾಸಿ : ಲೆಂಕದುಡತುಂ ಸಾಮಂತರುಂ ಪೌರುಂ ಲೆಂಕಿಯರುಂ . . . ರಾಗಿಸಿ ತಮ್ಮೊಳಿಂತೆಂದರ್ (ಕರ್ಕಾಪ್ರ. ೬-೨೦೬). ೨. (ಸ್ವಾಮಿನಿಷ್ಠನಾದ) ಸೇವಕನ ಹೆಂಡತಿ : ಲೆಂಕರೊಡನೆ ಸಹಗಮನ ಮಾಡಲು ಲೆಂಕಿಯರು ಸಿದ್ಧರಾಗುತ್ತಿದ್ದರು (ಕಾಣಿ. ೩೦೦). **ಲೆಂಗಿ** : ೧. ಒಕ್ಕುದ ಮಿಕ್ಕುದನುಂಡು ಕವಿವಿಡಿದಾಡುವ ಶರಣರ ಮನೆಯ ಲೆಂಗಿಯ ಡಿಂಗರಿಗ ನಾನು (ಶಪಾ. ೪೩೦). [ಲೆಂಕ+—ಇ]

ಲೆಂಕೆ, ಲೇಕೆ (ನಾ). ೧. ಒಂದು ಬಗೆಯ ಧಾನ್ಯ : ಚೆನಗಿ . ಲೆಂಕೆ ಬಟ್ಟಗಡಲೆ ಕರಿ ಹೆಸರು ಮೊದಲಾದವುಗಳನ್ನು ಕೂಡಿಸಿ ರಿತ್ತಬೇಕು (ಕ್ಯಕ್ರ. ೦೦). **ಲೇಕೆ**: ೨. ನೆಲದ ಮೇಲೆ ಬಿದ್ದಿರುವ ಕಾಳು. – ಧಾನ್ಯ: 'ಲೇಕಿಗ' ಪರಾ. [< ತೆಲು. ಲೇಕೆ]

ಲೆಂಕಿತಿ (ನಾ). ೧. ಸೇವಕಿ; ದಾಸಿ: "ಅಸಿಕ್ಕ ಎಂಬುದು ಲೆಂಕಿತಿ" (ಪಣಾಮು. ೫೦-೫೭೭). ೨. = ಲೆಂಕಿ ೨ : ಲಚಿಯ ನಾಯಕಂ ತಂನ ಹೆಂಡತಿ ಗಂಗಾದೇವಿಯುಂ ಅಯ್ದರು ಲೆಂಕರು ಮೂವರು ಲೆಂಕಿತಿಯರುವೆರಸಿ ಬಾಸೆಯುಂ ಪೂರ್ವೈಯ್ದಿದನು (ವಿಕ್ರ. VI (೩), ಕ್ಕಕ್ಕಣಾ. ೫೫-೭೭ ; 1281). [ಲೆಂಕ + — ಇತಿ (<—ಇತ್ತಿ)]

ಲೆಂಕೆ (ನಾ). ಸೇವಕಿ ; ದಾಸಿ : ಲೆಂಕೆಯನೊಕ್ಕಲಿಕ್ಕುವವೊಲಬ್ಬುಱೆ ಲಂಕೆಯನೊಕ್ಕಲಿಕ್ಕಿ ಕೀಬ್ತ್ತಿಂ ಕದುಪಿಂ ಶ್ರಿಕೂಟಗಿರಿಯಂ (ಪಂಗಾಮಾ. ೦೦-೭೭). [ಲೆಂಕ + — ಎ]

ಲೆಂಗನೆ (ನಾ). ಜಿಗಿತ ; ಹಾರುವಿಕೆ : ಮೃಗದ ಲೆಂಗನೆ ಸೋಗೆಯಾಟ್ಟದ ಸೊಗಸುಗಳನ್ನು ನೋಡುತ (ಕಂಗ. ೫೦-೦೦). [< ಲಂಘನೆ]

ಲೆಂಗಿ 'ಲೆಂಕಿ' ನೋ.

ಲೆಂಡ 'ಲಂಡ' ನೋ.

ಲೆಂಡತನ 'ಲಂಡತನ' ನೋ.

ಲೆಂಡು 'ಲಂಡ' ನೋ.

ಲೆಂಡೆ 'ಲಂಡೆ' ನೋ.

ಲೆಕ್ಕ೧ 'ಲಕ್ಕ೨' ನೋ.

ಲೆಕ್ಕ೧, ಲೆಖ್ಖ (ನಾ). ೧. ಎಣಿಸುವುದು; ಗಣನೆ : ನುಡಿಯಲಕ್ಕುಮೆ ಪೂಗಳ ಲೆಕ್ಕಮಂ (ಆದಿ. ೦೦-೦೦೩); ಕ್ಷಿತಿಯಂ ಶೋಧಿಪಲಕ್ಕು ವೀಚಿಗಳ ಲೆಕ್ಕಂ ಮಾಡಲಕ್ಕುಂ . . . ಸತಿಯಾ ಚಿತ್ತವಭೇದ್ಯವೆ (ಸೋಪುಚ. ೩೦); ಕರ್ಣ ದ್ರೌಣಿಗಳ ತಱುವಾಯ ಲೆಕ್ಕಕ್ಕೆ ಸಂದನೆ (ಶಾಪ್ರ. ೫೦-೭೫); ಸರೆ ಚಿತ್ರಗುಪ್ತರ ಲೆಕ್ಕವ ಟಕ್ಕಿರಿಗೆಳೆದು ಲೆಕ್ಕದ ಕೂರರನಿಪ ಲಯಿಯಲಿ ವಾಚಿಸುತಿಹ ಕರಣಿಕಕುಲತಿಲಕರ ಗೃಹವಿರುತಿಹುವು (ಕಂಪೆ. ೬-೨೪). ೨. ಸಂಖ್ಯೆ; ಅಂಕಿ : "ಅಂಕೆ ಸಂಖ್ಯೆಯವೆ ಲೆಕ್ಕಮಕ್ಕುಂ" (ಹುಂಗಣಾ. ೦೦೯-೦೦); ಗುಣಾರ್ಣವನಂಬು ಲಕ್ಕ ಲೆಕ್ಕದ ಕೊಳೆ (ಪಾಕಣಾ. ೯-೨೦); ಬರೆದೆಯ್ದುಱಿ ಲೆಕ್ಕಮನಾದರದಿಂ ಗುಮುಲಳುವಿಭೇದಮಂ ಭಾವಿಸು ನೀಂ (ಕಂಪೋಚಾ. ೦-೭೭)ಶ ಪಟ್ಟಣದ ಧರ್ಮ್ಮಕ್ಕೆ ಬಿಟ್ಟು ಮತ್ತರು ಪನ್ನೆರಡು ಲೆಕ್ಕದೊಳಂ ೧೨ (ಶಾಇಇ. IX-೫. ೦೩೦-೦೯; 1070), ಕುದುರೆಯ ಗಜ ರಥವ ಭೂಪಾಲರಲ್ಲಿಂದಮವತ ಲೆಕ್ಕಮನೈದೆ ವಿಸ್ತರಿಸಿ (ಕುಪಾ.೪. ೦-೦೭). ೩. ಅಂಕಿಗಳಿಂದ ಮಾಡುವ ಗಣಿತ; ಅಂಕಗಣಿತ : ತರ್ಕವ್ಯಾಕರಣಾಗಮ ಕಾವ್ಯ ಛಂದಸ್ಸು ಲೆಕ್ಕವಾದಿಯ ವಿದ್ಯ (ಅಂಹಿ. ೦-೩೩); ಒಟ್ಟಿ ಹುಡುಗೆ ಪುಸ್ತಕದಲ್ಲಿನ ಲೆಕ್ಕಗಳನ್ನು ಮಾಡುವುದನ್ನು ಬಾಯಪಾಠ ಮಾಡಿದ್ದನು (ಪ್ರಾಶಿ. ೨). ೪. ಆಯವ್ಯಯ; ಜಮಾಖರ್ಚು : ಲೆಕ್ಕಗಳನ್ನು ಬರೆಯುವ ಪ್ರವೃತ್ತಿಯಿರುವ ತರುಣನನ್ನು ವ್ಯವಸ್ಥಾಯ ಮಾಡುವಂತೆ ನಿಯೋಜಿಸುವುದು ಯುಕ್ತವಲ್ಲ (ಕ್ರಿಪಾಶಿ. ೧೩). ೫. ವ್ಯವಹಾರದಲ್ಲಿ ಬರೆದಿಡುವ ಕೊಳುಕೊಡೆಯ ಗಣನೆ. –ಆಯವ್ಯಯದ ಗಣನೆ : ಎಲ್ಲಾ ಕರಣಂಗಳಂ ಕರೆಯಿಸಿ ಭಂಡಾರದ ಲೆಕ್ಕಮಂ ನೋಡಿ (ಪಾಶಿ. ೬-೧೯) ೬. ಪರಿಗಣನೆ : ಪೊಟ್ಟಳಿಸಿ ನೆಗಬ್ತ್ತಿಗಾಟಿಸುವ ದುಷ್ಟ ವಿಯುಂ ಕವಿಯೆಂಬ ಲೆಕ್ಕಮೇ · (ಪಂಪಭಾ. ೦-೦೩) ; ತಾಮೆ ತಮ್ಮ ಮನದೊಳ್ ಸರ್ವಜ್ಞ ರೆಂದಿರ್ಪ ಕಬ್ಬಿಗರುಂ ಕಬ್ಬಿಗರೆಂಬ ಲೆಕ್ಕದೊಳಗೆಂ ಭೂಭೃತ್ಸಭಾಭೂಷಣಂ (ಅರಿಪ್ರ. ೦-೨೩) ; ಲೆಕ್ಕದಲ್ಲಿ ನೀ ಮೊದಲು ಮಾಡಿದ್ದಲ್ಲದೆ ಒಮ್ಮಾನಕ್ಕೆ ವೆಗ್ಗಳವಾಗಿ ಕೊಡುವರುಂಟೆ (ಹರಿಶ. ೯-೦೬೯-೩). ೭. ಲೆಕ್ಕಾಚಾರ; ವ್ಯವಹಾರ : ಲೆಕ್ಕದಲ್ಲಿ ಲೇಸಿತವಾದ ವರಿಗೇಕೆ ಅಜಾತನ ಸುದ್ದಿ (ಪಾಪ್ರಕಾ ೦೨-೫೫). ೮. (ಅಲಂ) ಅಭಿಪ್ರಾಯ; ಅನಿಸಿಕೆ : ಬೆಗೊಳ್ಳ ಗುಣಾರ್ಣವ ಲೆಕ್ಕ [ಪಾಕಾಂ. ಪಂಕ]ಮಂ

ಪೊಕ್ಕಮುಮಂ (ಕಂಚಿಕಾ. ೨-೩೩) : ಯುಧಿಷ್ಠಿರನಟುಮಟಿಸಿ ತಾ ಚುಕ್ಕಿಗಿಕ್ಕುವ ಲೆಕ್ಕ ಲೇಸಾಯ್ತು (ಭಾರ್ಕ್ರೀ. ೨-೩೬). ಲೆಖ್ಖಿ : ೧. ಕ್ಷೋಣಿಯೊಳ್ಪಗೆಗೊಳ್ವ ಲೆಖ್ಖಿಗಳೆಲ್ಲಮುಜ್ಜಳಿಪೊಂದಜೊಳ್ ಮೀಗಡಂಗಿದ ವೊಲ್ (ಗಜಪ. ೩-೨೦೯). ೪. ಲೆಖ್ಖಿನ ಪಟ್ಟಿಗಳು ತೀವ್ರ ಕಳುಹಿಸಲಿಕ್ಕೆ ಕೆಲವು ಅಡಚಣೆಗಳಿರುತ್ತವೆ (ಪುಟಾಬಾ. ೨೪ ಪ್ರ.ಸಾ.೫೮). ೮. ಆ ಲೆಖ್ಖಿಂದ ಎಲ್ಲಾ ಕೆಟ್ಟು ಹಾಳಾಯಿತು (ಶಾಪಮ. ೦೭).

ಲೆಕ್ಕಕೊಡು, ಲೆಕ್ಕಾಕೊಡು = ಮಾಡಿದ ಖರ್ಚಿಗೆ ವಿವರವನ್ನು ನೀಡು. –ಕೊಡು : ದೇವರಿಗೆ ಅದರ ಲೆಕ್ಕ ಕೊಡಬೇಕಾದೀತು (ಭುಂಲಿಂ. ೩-೦೮೯); ಯೂರು ಅಡಿ ಅಟಕಾವು ಮಾಡಿ ನಡಸದೆ ಸುಂಕವ ಲೆಕ್ಕಾಕೊಟ್ಟು (ಎಕ್. XVI. ಕೃಪಾ. ೧೦-೨೭; 1892). **ಲೆಕ್ಕದಾಳು** = ಎಣಿಕೆಗೆ ಮಾತ್ರ ಇರುವ ಆಳು ; ಕೆಲಸಕ್ಕೆ ಬಾರದವನು : ತುಂರಾಳ್ಗಳಲ್ಲದೆ ರಾಮನ ಪೆಯ್ಞಾವಲೊಳಗಿಲ್ಲ ಲೆಕ್ಕದಾಳುಗಳು (ಶಾಂಪಾಂ. ೪-೦೭). **ಲೆಕ್ಕಪಕ್ಕ, ಲೆಕ್ಕಪೊಕ್ಕ** = ಗಣಿತ, ವ್ಯವಹಾರ ಮುಂತಾದುವು : ಲೆಕ್ಕಪಕ್ಕವನಱಿತು ಲೋಕದ ಮಕ್ಕಳಗೆ ವಿಗಿಲಾಗಬೇಕು (ಕ್ರ.ಚಾ.ಪ. ೬-೦೪); ಲೆಕ್ಕಪಕ್ಕಂಗಿಡಲ್ ಕಿಕ್ಕಿರಿದು ಪೊಯ್ದಾಡಿದರ್ (ಶ್ರೀಧಾಪು. ೬೩೦-೩೬); ಸರಕಾರದಿಂದ ಬಿಟ್ಟುಕೊಡುವಂಥಾ ಶೀಮೆ ಲೆಕ್ಕಪೊಕ್ಕವನ್ನು ಬರಸಿ (ರಾಕೋವ್ರ. ೨೨೨). **ಲೆಕ್ಕಬಿಡಿಸು** = ಸವಂಸ್ಯೆಯನ್ನು ಬಿಡಿಸು : ಸನ್ಯಾಸಿಯು . . . ವಿಕಾಗ್ರಮನಸ್ಕನಾಗಿ ಲೆಕ್ಕಬಿಡಿಸುತ್ತಿದ್ದನು (ಜಪ್ರ. ೬೨೦). **ಲೆಕ್ಕ ಮಾಡು** = ಗಣನೆ ಮಾಡು ; ಎಣಿಸು : ರಾಜಣ್ಣ ಲೆಕ್ಕ ಮಾಡುವ ವಿಧಾನವನ್ನೆಲ್ಲಾ ತಿಳಿಸಿ ಮೇಲೆ ಬಂದ (ಕುಚೇ. ೫೮) : ಸ್ವತಂತ್ರವಾಗಿ ಲೆಕ್ಕಮಾಡುತ್ತಿರುವಾಗ ಎಲ್ಲಿ ತಪ್ಪಿರುವೆಯೆಂಬುದನ್ನು . . . ಗಮನ ಕೊಟ್ಟಿಲ್ಲ (ಶ್ಲಿಡ. ೨೬೬). **ಲೆಕ್ಕಹಾಕು** = ೧. ಲೆಕ್ಕವನ್ನು ಮಾಡು ; ಎಣಿಕೆಹಾಕು : ಒಂದುದಿನಕ್ಕೆ ಎಷ್ಟಾಗುವುದೆಂದು ಲೆಕ್ಕಹಾಕಿ ಅದಕ್ಕೆ ಸರಿಯಾಗಿ ನೀವು ಕೊಂಡುಕೊಳ್ಳುವ ಆಹಾರಗಳನ್ನು ನಿಶ್ಚಯಿಸಬೇಕು (ಆಹಾಶಾ. ೦೨೩) ; ಅಲ್ಲಿ ಕೂತು ಶಾಂತವಾಗಿ ತಮ್ಮ ಲಾಭ ನಷ್ಟಗಳನ್ನು ಲೆಕ್ಕಹಾಕುತ್ತಿದ್ದರು (ಪಗಹೂ. ೦೦೭). ೨. ಯೋಚಿಸು ; ಊಹಿಸು : ಶಂಕರಪ್ಪ ಲೆಕ್ಕಹಾಕಿದವನಂತೆ ಹೇಳಿದ (ಕುಚೇ. ೬) ; ದೇವರಾಜಒಡೆಯರನ್ನು ಸಿಂಹಾಸನದಿಂದ ಕದಲಿಸುವ ಸಮಯ ಸಮೀಪಿಸಿತೆಂದು ಪಂಡಿತನು ಲೆಕ್ಕಹಾಕಿದ್ದ (ತಪ್ರಚ. ೨೨೬).

[<ಸಂ. ಲೇಖ್ಯ- / ಪ್ರಾ. ಲೇಕ್ಖ- / ತುಳು. ಲೆಪ್ಪಿ ; ತೆಲು. ಲೆಕ್ಕ]

ಲೆಕ್ಕಂಗೊಳ್, ಲೆಕ್ಕಗೊಳು (ಕ್ರಿ). ೧. ಲೆಕ್ಕ ಮಾಡು ; ಎಣಿಕೆ ಮಾಡು: ಶಾರ್ದೂಲಾಭೀಲವನಂಗಳೊಳ್ ತಿರಿಪಿದೀಯುರ್ಕೊಂದೆ ಲೆಕ್ಕಂಗೊಳಲ್ ಕಾಲಂ ಸಾಲವೆ (ಕಂಚಿಪು. ೯-೨೨) ; ಲೆಕ್ಕಂಗೊಳೆ ಕೊಂಗಬಲಂ ಲಕ್ಕಂಬರ ಮೀರ್ಮಮೆಂಬರ್ (ಪಭಂ. ೩-೪೭) ; ಸಂದಾ ಮುನ್ನರ ದೇಗುಲಂಗಳೆನಿತೋ ಲೆಕ್ಕಂಗೊಳ್ಬರ್ಕುಮೇ (ಪ್ರಬುಮು. ೩-೦೦೦). **ಲೆಕ್ಕಗೊಳು** : ೨. (ಆಲಂ) ಭಾವಿಸು ; ವಿಚಾರಿಸು : ಸಿಕ್ಕಿದರು ತಮಗೆಂದು ಮನದೊಳು ಲೆಕ್ಕಗೊಳಲಿಲ್ಲ (ಪಪ್ರ. ೧೦-೭೬). [ಲೆಕ್ಕ + ಕೊಳ್[1]]

ಲೆಕ್ಕಗೊಳು ' ಲೆಕ್ಕಂಗೊಳ್ ' ನೋ.

ಲೆಕ್ಕಣಿ, ಲೇಖಣಿ (ನಾ). ಮಸಿಯಲ್ಲಿ ಅದ್ದಿಕೊಂಡು ಬರೆಯುವ ಚೂಪಾದ ತುದಿಯುಳ್ಳ ಒಂದು ಸಾಧನ; ಲೇಖನಿ; ಟಾಕು (ಉಕ): "ಲೆಕ್ಕಣ(ಲೇಖಣಿ)_ಲೇಖನೀ" (ಕ್ರಿಕೈ. ೫೯) ; ಕೆಂಗಬಿಗಸುದಿರ್ಗರಿಯ ನೆಲರ ಸೀಗುರಿಯಿಂದು ಮಂರೆತದಂ ಬರೆಯೆ ಲೆಕ್ಕಣ ಎಸಗುವನ್ನ (ಗಿಪಾಂ. ೨೯-೩೨) : ಅವರು ಯಾವ ಶಿಕ್ಷಕನ ಬಗ್ಗೆಯೂ ಲೆಕ್ಕಣಿ ಎತ್ತಿದವರಲ್ಲ (ರಂಗಕೋ. ೬೦). **ಲೇಖಣಿ** : ಹೆಚ್ಚು ಕಡಿಮೆ ಇಂದಿನ ದಬ್ಬಳದಂತೆ ಇದ್ದು ದನ್ನು ಲೇಖಣಿಯನಾಗಿ ಬಳಸುತ್ತಿದ್ದರು (ಪ್ರಾಚಿ. ೮೯) ; ಬರೆಯುವ ಕಾಲದಲ್ಲಿ ನನ್ನ ಲೇಖಣಿ ನಿಲ್ಲಲಾರದು (ಪ್ರಾಸಾ. ೨). [ಸಂ. ಲೇಖನಿ]

ಲೆಕ್ಕಣಿಕೆ, ಲಕ್ಕಣಿಕೆ (ನಾ). ೧. = ಲೆಕ್ಕಣಿ : ತರರಾಪಾಂಗವಿಲಾಸಸ್ಫುರಿತಮೆ ಲೆಕ್ಕಣಿಕೆಯಾಗೆ ನಲ್ಲಳ್ ಮುನ್ನಂ ಬರೆದತನಾಚರಿತವಿಸಗಳ್ ಬರೆದಂತಿರ್ದ ಪುದು ಮನ್ಮನಃಪುಸ್ತಕದೊಳ್ (ಅಭಿ. ೪-೦೪) ; ಧರೆ ಹಲಗೆ ವೃದ್ಧಿಯಾವುದು ಧರಣಿಯ ಮೇಲಿರ್ದ ಮರನೆ ಲೆಕ್ಕಣಿಕೆ (ಕಂರೋಂಮು. ೦-೩೦ ೩೩೮) ; ಶರಮೊಂದಂ ತೆಗೆದು ನಿಜೋದರದಿಂ ಲೆಕ್ಕಣಿಕೆ ಮಾಡಿ ಗಜಮದ ಮಸಿಯಂ ತರಿಸಿ ಪತಾಕಾಪಟದೊಳ್ ಬರೆದಟ್ಟದನಂಧನೃಪತಿಗಾ ಸಿಂಧುಸುತಂ (ಗಣಯು. ೬-೨) ; ಮಸಿಯಲ್ಲಿ ಬರೆಯುವುದಕ್ಕಾಗಿ ಲೆಕ್ಕಣಿಕೆಯನ್ನು ಬಳಸುತ್ತಿದ್ದರು (ಕೃಸಂ. ೯೨). ೨. ಚಿತ್ರ ಬರೆಯುವ ಸಾಧನ ; ಕುಂಚ : "ಈಸಿಕಾ, ತೂಲಿಕಾ–೨ ಚಿತ್ರ ಬರೆಯುವ ಲೆಕ್ಕಣಿಕೆ" (ಸಿಶಾ. ೦೩. ೭೦೬). **ಲಕ್ಕಣಿಕೆ** : ೨. ಲಕ್ಕಣಕೆಯ ಪಿಡಿದೊಸೆದು ಚಿತ್ರಿಗ ಕಣ್ಣಿಕ್ಕಿ ಬರೆವ ಗಂಡುರೂಪ (ಶಾಂಗಾಪಂ. ೨೬-೬) ; ಬಟ್ಟುತರ ಮಸಿಯ ಗುಳ್ಳೆಯು ಲಕ್ಕಣಿಕೆ ದಿಂಡು ಪತ್ರುಂಗಳನು ಪಿಡಿದು (ಪಪ್ರಕೋ. ೨೭-೦೪).

[<ಸಂ. ಲೇಖನಿಕಾ]

ಲೆಕ್ಕತಪಾಸಿಗ (ನಾ). ಲೆಕ್ಕವನ್ನು ಪರಿಶೀಲಿಸುವವನು : ಲೆಕ್ಕಪರೀಕ್ಷಕ : ಪ್ರತಿವರುಷವೂ ಲೆಕ್ಕತಪಾಸಿಗರಿಂದ ಎಲ್ಲ ಲೆಕ್ಕಪತ್ರಗಳ ಶೋಧನೆ ನಡೆಯುತ್ತಿತ್ತು (ಕಾಲು. ೫೫) ; ಲೆಕ್ಕತಪಾಸಿಗರದೊಂದು ವರ್ಗವೆ ನಿರ್ಮಾಣವಾಗಹತ್ತಿದೆ (ಕಕ್ಕಿ. ೬೨). [ಲೆಕ್ಕ + ತಪಾಸು + –ಇಗ]

ಲೆಕ್ಕಪತ್ರ (ನಾ). = ಲೆಕ್ಕ ೫ : ಒಡೆಯರು ಆ ಲೆಕ್ಕಪತ್ರದ ಆಯವ್ಯಯ ಪತ್ರಕದ ಇಲ್ಲವೆ ಲೆಕ್ಕಗಳನ್ನಿಟ್ಟ ಪುಸ್ತಕಗಳ ಬೇಕಾದ ಭಾಗವನ್ನು ನೋಡ ಬಯಸಿದರೂ . . . ಒದಗಿಸಿಕೊಡುವಂತಿರಬೇಕು (ಕಕ್ಕಿ. ೬೨); ಲೆಕ್ಕಪತ್ರಗಳ ಗೊದಲದಿಂದ ಪಾರಾದ ಮೇಲೆ ಮನಸ್ಸು ಶಾಂತಿಯನ್ನು ಬಯಸುತ್ತಿತ್ತು (ಕುಚೇ. ೨೪). [ಲೆಕ್ಕ + ಪತ್ರ]

ಲೆಕ್ಕಪರೀಕ್ಷಕ (ನಾ). = ಲೆಕ್ಕತಪಾಸಿಗ : "ಕರನಿಕೆ. ಲೆಕ್ಕಿಗ . . . ಲೆಕ್ಕಪರೀಕ್ಷಕ" (Accountant. ೫೦೬). [ಲೆಕ್ಕ + ಪರೀಕ್ಷಕ]

ಲೆಕ್ಕಮಿಡು, ಲೆಕ್ಕವಿಡು (ಕ್ರಿ). ೧. ಗಣನೆ ಮಾಡು ; ಎಣಿಕೆಹಾಕು : ಅನಿತಿನಿತೆಂದು ಲೆಕ್ಕಮಿ[ಡಾಜಿ.ವಿ]ಡಲಾನಱಿಯೆಂ ಬನಮಂ ಲತಾನಿಕೇತನ ಕೃತಕಾದ್ರಿಯಂ ಫಲನಮಂ ಕೊಳನಂ (ಪುಗೃಚ. ೫-೪೬) ; ಅಲ್ಲಿಯ ಸಾರಮಪ್ಪ ಬೆಳಸಂ . . . ಲೆಕ್ಕಮಿಡಲ್ಬಣಮಾಜಿಯಂತು ಮತ್ತೆಲ್ಲಮನೆಯ್ದೆ ಲೆಕ್ಕಿಸಿದೊಡಂ ಮನೆಗೆಯ್ದಿಸಲಾಜಿರಂತವಂ (ಪಾರಚ. ೯-೦೬). **ಲೆಕ್ಕವಿಡು** : ೨. ಲೆಕ್ಕವನ್ನು ಬರೆ ; ಲೆಕ್ಕಾಚಾರವನ್ನು ಲಿಖಿತದ ಮೂಲಕ ಇರಿಸಿಕೊಳ್ಳು : ಅಂಗಡಿಗಳಲ್ಲಿ ಲೆಕ್ಕವಿಟ್ಟುಕೊಂಡು ಸಾಮಾನುಗಳನ್ನು ಕೊಳ್ಳುತ್ತಾ ಹೋಗುವುದೇನೋ ಸುಲಭ (ಆಪ:ಸಾ. ೦೨೬).

[ಲೆಕ್ಕ + ಇಡು[1]]

ಲೆಕ್ಕವಣಿಗೆ (ನಾ). ಲೆಕ್ಕದ ವಿವರ ; ಲೆಕ್ಕಾಚಾರ : ತಂದೊಡಮೆಯಿಂ ದಿದಿರೊಳ್ ಪಿತಿದಂಗಜಂಗೆ ಲೆಕ್ಕವಣಿಗೆಯೋಜುವಂತೆಸದು ಶೋಜಿಸಿದು ವಂದಿನ ಬಂದ ವಸಾವುಗಳ್ (ಅಚ್ಚ. ೬-೨೪). [ಲೆಕ್ಕ + – ವಣಿಗೆ]

ಲೆಕ್ಕವಲಗೆ (ನಾ). ಲೆಕ್ಕ ಬರೆಯುವ ಹಲಗೆ,— ಫಲಕ : ಅದಱಿಂದೊಳಗೆ ಪೂರ್ವಾಪರದಿಗ್ಯಾಗದ. ಸಮಭೂತಳಪ್ರದೇಶದೊಳಪೂರ್ವಶಿಲ್ಪಿಕೃತ ಮಪ್ಪ ಲೆಕ್ಕವಲಗೆಯಂ ಕಾಡಿಗೆಯೊಳ್ ಪುಟ್ಟಿಸಿ ಪುಟ್ಟಿಗವಡಿಕೆಯೊಳೊರಸಿ ದಂತೆ ಮಿಂಚಿ . . . ವಾಪಳಿಗಳ್ ಮನೋಹರಂ (ಪಾಂಕತ್ತಿ. ೯-೦೪೩ ಪ).

[ಲೆಕ್ಕ + ಪಲ್ಗೆ]

ಲೆಕ್ಕವಿಡು ' ಲೆಕ್ಕಮಿಡು ' ನೋ.

ಲೆಕ್ಕಾಚಾರ, ಲೆಕ್ಕಾಚಾರ, ಲೆಖ್ಖಾಚಾರ (ನಾ). ೧. ಎಣಿಸುವುದು ; ಲೆಕ್ಕಮಾಡುವುದು : ನಮ್ಮ ನಮ್ಮ ಜಮ – ಖರ್ಚಿನ ಪುಸ್ತಕದಲ್ಲಿ ಲೆಕ್ಕಾಚಾರ ಸರಿಪೂಗಿರುತ್ತದೆ ! (ಪಚಕೋ. ೫೬) ; " ಕೊಳ್ಳುವುದಕ್ಕೆ ೧೦,೦೦೦ ರಿವೇರಿಕೆಲಸಕ್ಕೆ ೧೦,೦೦೦ " ಎಂದು ವಿಜೆಂಟ್ ಹೇಳಿದಾಗ

ಆ ಲೆಕ್ಕಾಚಾರ ಸರಿಯಾಗಿಯೇ ಕಂಡಿತು (ಶೋಕಪ್ರ. ೨೮)· ೨. ನಿಶ್ಚಿತವಾದುದು; ನಿಖರವಾದುದು : ಕಾಲೋಚಿತವಾಗಿ ಗರ್ಭದಲ್ಲಿ ಸಡಿಲಪರಿಗೆ ಒಳ್ಳೆಯ ಫಲವು ದೊರೆಯುವುದು ಲೆಕ್ಕಾಚಾರ (ಹುಕ್ಕ· ೦೬೨) ; ಅವನು ಆಡುವ ಮಾಳ್ಪಲ್ಲಿ ಲೆಕ್ಕಾಚಾರದ ಮಾತು (ಕಂಪ). **ಲೆಕ್ಕಾಚಾರ** : ೨. ನಮ್ಮ ಗ್ರಾಮದ ಹಣ ಲೆಕ್ಕಾಚಾರ ಪ್ರಕಾರ ಕೊಡಿಯಂತ ಈಗಿದಲ್ಲಿ (ಚಿ. VIII. ಪಾಗಿ. ೪೬-೦೩; 1646 ?)· **ಲೆಖ್ಖಾಚಾರ** : ೧. ಅವನು ತನ್ನ ಲೆಖ್ಖಾಚಾರದಿಂದ ಕ್ರಿ· ಪೂ. ೫೦೦ರಲ್ಲಿ ನಡೆದ ಗ್ರಹಣ ಒಂದನ್ನು ಕುರಿತು ಭವಿಷ್ಯ ನುಡಿದಿದ್ದನಂತೆ (ಕಕ್ಕಾಪ್ರಾ· ೪).

ಲೆಕ್ಕಾಚಾರಮಾಡು, ಲೆಖ್ಖಾಚಾರಮಾಡು = ೧. ಎಣಿಸು : ಲೆಕ್ಕ ಮಾಡು : ಅಯನವಲನ(Angle of Position)ವನ್ನು ಲೆಕ್ಕಾಚಾರ ಮಾಡಲು ಅವನು ಅದನ್ನು ಉಪಯೋಗಿಸಿದ್ದಾನೆ (ಕಕ್ಕಾಪ್ರಾ· ೪೭೭). ೨. ಪೂರ್ವಾಪರವನ್ನು ಪರಿಶೀಲಿಸು ; ಆಲೋಚಿಸು : ಮಂಗಗಳ ಮದುವೆ ಮಾಡಬೇಕೆಂದು ಯೋಚಿಸಿದರೆ ತಮಗೆ ಪತ್ರಿರವ· ನೆಂಟೂ ಗಂಟೂ ಉಳಿಯುವುದನ್ನೆಲ್ಲಾ ಲೆಖ್ಖಾಚಾರಮಾಡಿ ಆಮೇಲೆ ಜೋಯಿಸರನ್ನಿ ಹೆಸರು ಬಲ ಕೇಳುವರು (ಹುಬ್ಬಿ. ೦೦). **ಲೆಕ್ಕಾಚಾರಹಾಕು** = ಆಲೋಚಿಸು; ಯೋಚಿಸು : ° ಎಂದುಕೊಂಡಳು· ತನ್ನಲ್ಲೇ. ಮನಸ್ಸಿನಲ್ಲಿ ಏನೇನೋ ಲೆಕ್ಕಾಚಾರ ಹಾಕಿಕೊಳ್ಳುತ್ತ (ಹೂಸಿ. ೦೭). [ಲೆಕ್ಕ + ಆಚಾರ]

ಲೆಕ್ಕಿ ' ಲೊಕ್ಕಿ ' ನೋ·

ಲೆಕ್ಕಿಗ (ನಾ)· ೧. ಲೆಕ್ಕ ಬರೆಯುವವನು ; ಕರಣಿಕ : ಲೆಕ್ಕಿಗಂ ಪಡೆ ಸಡೆದು ಕರಣಸಾಲೆಗೆ ಬಂದು ಕುಳ್ಳಿರ್ದು (ಪಾಪ. ೪-೩೦); ಜೋಯಿಸಿಗಂ, ಲೆಕ್ಕಿಗಂ (ಪಟಂ· ೦೧೬ ಕ್ರಮಣ) ; ಆ ಕಿರಾತನು ತನ್ನ ಕೆಳದಿಗೊಡ್ಡಯಾಗವತ ಎಳದೊಯಿದಿಸಲಾಗೆಮಧರ್ಮಗುಪುರ್ದರು ತಳು ಮಾಡಧಾಗ ಲೆಕ್ಕಿಗರು (ಪಪ್ಪಾ. ೪೨-೩೦) ; ಆ ಸಂಸ್ಥೆಯ ಲೆಕ್ಕಿಗರು ಈ ಎರಡೇ ವರುಷಗಳ· ಅಂತಿಗಳನ್ನಿಟ್ಟದ್ದಾರೆ (ಪಕ್ಕಿ. ೨೦). ೨. ಜೋಯಿಸ ; ಜ್ಯೋತಿಷಿ : " ಕಲಿತೆ=ಜೀವಿಗಳ ಆಯುಷ್ಯಮಂ ಎಣಿಸಿದಪಂ . . . ಲೆಕ್ಕಿಗಂ " (ಶಾಪಕ್ಕ. ೦೦೯).

ಲೆಕ್ಕಿಗರ ಪಿರಿಯ = ಕರಣಿಕರಲ್ಲಿ ಶ್ರೇಷ್ಠನಾದವನು : ಲೆಕ್ಕಿಗರ ಪಿರಿಯನೆನಿಪಾಂಡಯ್ಯಂ (ಪಪ್ಪಾ. ೯). **ಲೆಕ್ಕಿಗರಸ = ಲೆಕ್ಕಿಗರ ಪಿರಿಯ** : ಒಪ್ಪುವ ಲೆಕ್ಕಿಗರರಸಪೊಗೆದನೆಸೆವಾಂಡಯ್ಯಂ (ಪಪ್ಪಾ. ೦೦) ; ಲೆಕ್ಕಿಗರಸ ನಂತೆ ಇವನು ! ಕರಣಿಕಾಗ್ರಣಿಯಂತೆ ! (ಹೂಗಿ. ೦೯).

[ಲೆಕ್ಕ + − ಇಗ]

ಲೆಕ್ಕಿಸು ' ಲಕ್ಕಿಸು ' ನೋ·

ಲೆಕ್ಕಿಸು (ಕ್ರಿ). ಎಣಿಕೆ ಮಾಡು ; ಲೆಕ್ಕ ಹಾಕು : " ಎಣ್ಣೆನೆ ಲೆಕ್ಕಿಪುದುಂ " (ಕಪ್ಪಾ· ೬) ; ಮೇಣಲಸದೆ ಲೆಕ್ಕಿಸುತುಂ ಸಳ್ಳಿಲೆಯಂ ಪಡೆರ್ಗೊಂಡು ಪಜ್ಜಿದೊಡಾದುವು ಕಿಡುಗುಂ (ಶೋಕಪ್ರಾಪ್ರ· ೬-೨೬) ; ಗಣಕರು ಲೆಕ್ಕಿಸಲಾಜದ ಬೆಜಗಾಗೆ (ಪಪ್ಪಾ. ೪-೦೩೭) ; ಲೆಕ್ಕಿಪರಾರು ಕಲ್ಲರೆಗಳ (ಪೂಗಿಪ್ರ. ೦೯-೬೯). [ಲೆಕ್ಕ + − ಇಸು]

ಲೆಕ್ಕಾಚಾರ ' ಲೆಕ್ಕಾಚಾರ ' ನೋ·

ಲೆಚ್ಚಿ ' ಲೆಕ್ಕಿ ' ನೋ·

ಲೆಖ್ಖಿತನಿಧಿ (ನಾ)· ಲೆಕ್ಕದ ಪರಿಶೀಲನೆ,—ತಪಾಸಣೆ : ಭಾರತದ ಜಮಾ ಕಾಸಿನ ಆಡಳಿತಾಧಿಕಾರ – (Controller)' ಮತ್ತು ಲೆಖ್ಖಿತನಿಧಿ ಅಧಿಕಾರಿ . . . ಇವರ ಅಧಿಕಾರ . . . ಈ ಎಲ್ಲ ವಿಷಯಗಳ ಮೇಲೆ ರಾಜ್ಯಾಂಗ ರಚನೆಯಾಗಿದೆ (ಭಜಪ. ೦೫೬). [ಲೆಖ್ಖಿ (< ಲೆಕ್ಕ) + ತನಿಧಿ]

ಲೆಖ್ಖಾಚಾರ ' ಲೆಕ್ಕಾಚಾರ ' ನೋ·

ಲೆಗ್ಗೆ ' ಲಗ್ಗೆ ' ನೋ·

ಲೆಟಗೆ ' ನೆಟ್ಟಿಕೆ ' ನೋ·

ಲೆಡ್ಜರ್ (ನಾ)· ೧. ವ್ಯಾಪಾರ, ವ್ಯವಹಾರಗಳ ಲೇವಾದೇವಿಯ ಲೆಕ್ಕಗಳನ್ನು ಬರೆದಿಡುವ ಪುಸ್ತಕ ; ಮುಖ್ಯಲೆಕ್ಕದ ಪುಸ್ತಕ ; ವರ್ಗ ; ಹಣಕಾಸಿನ ದಾತಿಲೆ : ಲೆಡ್ಜರ್ ಬರೆಯುವ ಅವಾಂತರದಲ್ಲಿ ಕಾಗದವನ್ನು ಒಡೆದು ಓದಿಕೊಂಡ (ಕಾಂಪ್ರ. ೦೭). ೨. ಒಂದು ಬಗೆಯ ಅಳತೆಯ ಕಾಗದ : ಯಂತ್ರದಲ್ಲಿ ಕಾಗದವನ್ನು ತಯಾರಿಸುವಾಗ ' ಸೈಜ್ ' ಅನ್ನು ಸೇರಿಸಿ ಬಾಂಡ್, ಲೆಡ್ಜರ್, ಇಂಡೆಕ್ಸ್ ಮೊದಲಾದ ಕಾಗದಗಳನ್ನು ತಯಾರಿಸುವರು (ಕುದ್ರಕ. ೦೦). [← ಇಂ. Ledger]

ಲೆತ್ತ ' ನೆತ್ತ[1] ' ನೋ·

ಲೆಪ್ಪ (ನಾ)· ೧. ಬಳಿಯುವಿಕೆ ; ಲೇಪನ : " ಲೆಪ್ಪ ಮೊದಲಾಗುಳ್ಳ ಕೆಲಸಮುಂ (ಹ)ಪುಸ್ತಕರ್ಮ ಎಂಬುದು " (ಪಜಾಪು. ೪೭-೪೬) ; ಲೆಪ್ಪದ ಬೊಂಬೆಯನೆರಕಂದೊಯ್ದೊಪ್ಪಂಬಿಸಿದ ಹೃತ್ಪಟಿಯಂ ಬೇಱುಗಿ ತೋಱುಗುಮಲ್ರೆ (ಶಾಪಪ್ರ· ೦೦-೦೯). ೨. ಬಳಿಯುವ ದ್ರವ: ಲೇಪನ ಸಾಮಗ್ರಿ : "ಲೆಪ್ಪಮೆನೆ ಲೇಪ್ಯಂ" (ಶಪ ೧೬); ಇಲ್ಲಿಯ ಚಿತ್ರದ ಲೆಪ್ಪದ ಕಾಪ್ಯಕರ್ಮಾದ ರೂಪುಗಳೊಳಿಲ್ಲಂ (ಪಪ್ಪಾ. ೪೬-೬); ಇರುಳ ಲೆಪ್ಪವ ತೊಡೆದ ಕಾಳೋರಗನ ಪಾನೆಯೊ (ಪಪ್ಪಾ· ೪-೦೬); ಒಪ್ಪಗೆಟ್ಟಾಜುದರುಶನದ ಗತಿ ಮಿತಿಪಿಡಿಯ ಲೆಪ್ಪದಲಿ ಸಮೆವ ಬಹುಭಾಷಿಯುಜ್ಜಿ (ಪಪ್ಪಾ. ೪೬-೨೬೨). ೩. ವಿಗ್ರಹಾದಿಗಳನ್ನು ಮಾಡಲು ಉಪಯೋಗಿಸುವ ಎರಕ : ರುಕ್ಮಿಣೀ ರಮಣ ಲೆಪ್ಪದ ಕಲ್ಲ ಪೆಣ್ಣಿ ರೂಪೆನೆ ಮರವಟ್ಟರ್ (ಪಗಂ. ೦೦-೬೬); ಒಪ್ಪಿದಳ್ ಲೆಪ್ಪದ ಕರುಮಿಸುಮೋಲ್ (ಪಪ್ಪಾ· ೬-೦೨). ೪. ಮಣ್ಣು, ಪೇಣ, ಎರಕ ಮೊದಲಾದುವುಗಳಿಂದ ಮಾಡಿದ ಗೊಂಬೆ.—ಪ್ರತಿಮೆ : ಸಹಜಸುಪ್ತ ಕಾಂತಿಯೊಳೊವ್ಪಳ್ಳುಡೆದು ಲೆಪ್ಪದಂತಿರ್ದ ವಂಗಸಂ ಗೆಂಟನೆಳೆ ಕಂಡು (ಗಾಪಪ್ರಾ. ೬೭); ಇದು ಭೂಪನ ರೂಪಿದು ಲೆಪ್ಪದ ರೂಪೆನಲೆತುಮಾಯಿಯಲಿದು (ಪಂಗಾಪ್ರ. ೬-೨೬); ಲೆಪ್ಪದುರಗನ ಪೊಡವೞಕತಕೆ ಗರುಡಪಿಂಠಕ್ರವ್ಯ (ಕುಣ್ಣಕ್ರಿ. ೪-೬೦); ಸುರಗಿಯಿಂದಾ ಲೆಪ್ಪ ಪಪುಸ ಉರವನಿಱಿದೀಂಟಿದಳು ಮಿಗೆ ನೆತ್ತರಸು (ಪಾಕ್ಕ. ೦೯-೯೯). ೫. (ಆಲಂ) ಸಂಬಂಧ : ಇಂತೀ ಜೀವದ ದೃಷ್ಟವ ಕೆಡಿಪು ವಿಷಗಿದೆತ್ತಳ ಸರ್ವಜೀವದಯ ಈ ರಕ್ತವ ಲೆಪ್ಪವ ಬಿಡಿಸಾ ಕಲ್ಲು ಮಣ್ಣು ಮಂದನಂತೆ (ಪಪ್ಪಾ. ೪೬-೨೪೨). [< ಪ್ರಾ· ಲೇಪ್ಪಾ. / ಸಂ. ಲೇಪ್ಯ]

ಲೆಪ್ಪಗಾಱ (ನಾ)· ಲೇಪಿಸುವವನು ; ಬಳಿಯುವವನು : "ಲೇಪಕಃ, ಪಳಿಗಂಡಃ—ಈ ೨ ಲೆಪ್ಪಗಾಱಂ" (ಪಜಾಪು. ೪೭-೪೬).

[ಲೆಪ್ಪ + − ಕಾಱ]

ಲೆಪ್ಯಾಹಾರ (ನಾ). [ಜೈನ] ಜೈನಾಗಮದಲ್ಲಿ ಹೇಳಿರುವ ಕರ್ಮಾಹಾರ, ನೋಕರ್ಮಾಹಾರ, ಕಬಳಾಹಾರ, ಲೇಪ್ಯಾಹಾರ, ಓಜಾಹಾರ ಮತ್ತು ಮಾನಸಾಹಾರ ಎಂಬ ಆರುಬಗೆಯ ಆಹಾರದ ಪ್ರಕಾರಗಳಲ್ಲಿ ಒಂದು: ವೃಕ್ಷಂಗಳ್ಗೆ ಲೆಪ್ಪಾಹಾರಮಕ್ಕುಂ (ಶ್ರಾಕಾಚಾ. ೭೨-೬) ; ಈ ಗಾಥಾ ಸೂತ್ರವಿರೂಪಿತಕ್ರಮದಿಂ ನೋಕರ್ಮಾಹಾರಮುಂ ಕರ್ಮಾಹಾರಮುಂ ಕಬಳಾಹಾರಮುಂ ಲೆಪ್ಪಾಹಾರಮುಂ ಓಜಾಹಾರಮುಂ ಮಾನಸಾಹಾರಮು ಮೇಂದಕ್ಕುಂ . . . ಏಕೇಂದ್ರಿಯನಿಕಾಯಕ್ಕೆ ಲೆಪ್ಪಾಹಾರಮಕ್ಕುಂ (ಪಾಚಾ· ೩೦೦). [< ಸಂ. ಲೇಪ್ಯಾಹಾರ]

ಲೇ (ಅ)· ಸಂಬೋಧನಾರ್ಥಕ ಅವ್ಯಯ : ಇನ್ನೇನು ಮಾಡಲಿ, ಲೇ (ಪಕ್ಕಿ. ೦೦೨). [< ಎಲ್ಲೆ]

ಲೇಕಿ ' ಲೆಂಕಿ ' ನೋ·

ಲೇಕಿಗ (ನಾ)· (ನೆಲದ ಮೇಲೆ ಬಿದ್ದಿರುವ) ಕಾಳನ್ನು ಆರಿಸಿಕೊಂಡು ತಿನ್ನುವವನು ; (ನೆಲದ ಮೇಲೆ ಬಿದ್ದಿರುವ) ಧಾನ್ಯವನ್ನು ಆರಿಸಿ ಕೊಂಡು ಜೀವಿಸುವವನು : ಏನ್ನ ಪಾಕಶಾಲೆಯಲ್ಲಿ ಬಿದ್ದ ಕಾಳ ರಾಶಿ ತಿಂಬ ಲೇಕಿಗನು (ಪಪ್ಪಾ. ೪೦-೦)· [ಲೇಕಿ (< ಲೆಂಕಿ) + − ಗ]

ಲೇಖಿ (ನಾ)· ೧· ಬರಹದ ದಾಖಿಲೆ : ಬರಹ : ಅವರ ಕೈಯೊಳು ಕೊಟ್ಟು ಲೇಪಾರ್ಥವನೆಱಿದು ನೀವನಿಬರುಂ · ಹೇಳುವುದೆನಲು (ರಾಷ್ಟ. ೩-೫೪); ಮರ ಸುಲಭವಾಗಿ ಒತೆದು ಹೋಗುವುದರಿಂದಲೂ ಗೆದ್ದಲು ಮುಂತಾವ ಕೀಟಗಳಿಗೆ ತುತ್ತಾಗುವುದರಿಂದಲೂ ದೀರ್ಘಕಾಲ ಇರಬೇಕಾದ ಯಾವ ಲೇಖಿಕ್ಕೂ ಅದನ್ನು ಧಾರಣೀಯರು ಉಪಯೋಗಿಸಲಿಲ್ಲ ವೆಂದು ತೋರುತ್ತದೆ (ಕರ್ನಾ· ೭೬). ೨· ಕ್ರಮವರಿತು ವಿಷಯವನ್ನು ಪ್ರತಿಪಾದಿಸುವ ಬರವಣಿಗೆ : ಲೇಖಿನ : ಓಗೆ ಈ ಎಲ್ಲ ಸಂಗತಿಗಳನ್ನು ಒಟ್ಟುಗೂಡಿಸಿ ಅವಳೊಂದು ಲೇಖಿ ಬರೆದಳು (ಇತ್ಯ. ೨೩೦); ವೈಜ್ಞಾನಿಕ ವಿಷಯದ ಲೇಖಿಗಳಿಗೆ ಮೂಲಸ್ಥಾನವೆಂದರೆ ' ಪ್ರಬುದ್ಧಕರ್ನಾಟಕ ' (ಸುವರ್ಣ· ೨೦೬) ೩· ಬರವಣಿಗೆ ಅಥವಾ ಚಿತ್ರಲೇಖಿನಕ್ಕೆ ಉಪಯೋಗಿಸುವ ಹಲಗೆ,–ಲೇಖಿನ ವಸ್ತು : "ಲೇಖಿಮೆನ್ನಲಳಕಮದಕ್ಕುಂ" (ಶಬ್ದ. ೦೮೨). ೪· ದೇವತೆ : "ಅದಿತ್ಯಃ . . . ಲೇಖಿಃ, ಸುಪರ್ವಾ . . . ದೈವತಂ – ಈ ೨೧ ದೇವರ್ಕಳ ಪೆಸರ್" (ಹಲಾಯು. ೩-೪).

ಲೇಖಿವಲ್ಲಭ ' ಪರಾ· [ಸಂ.]

ಲೇಖಿಕ (ನಾ)· ೧· ಬರೆಯುವವನು; ಲಿಪಿಕಾರ : "ಲೇಖಿಕಃ, ಲಿಪಿಕರಃ – ಈ ೨ ಲೇಖಿಕಂ" (ಹಲಾಯು. ೭೬-೭೩); ಚರಣಂಗಳ್ನಿಲ್ಕಿಱೆಯೊಳಂ ಪರಿಸಿ ಕರ್ತಂತ ಕವಿಗೆ ಲೇಖಿಕನಪ್ಪಂಗಿರದಕ್ಕುಮಪಾಯಂಗಳ್ ಚರಣಾಂತ್ಯದೊಳೊದುವಂಗೆ ದುಷ್ಕರಮಕ್ಕುಂ (ಛಂದೋಽಂಬು. ೦-೮೮ ಅಂತರ್ಗ ೦೭); ಪ್ರತಿಯೊಂದು ಪಂಚಾಯಿತಿಯಲ್ಲಿಯೂ ಗಣಕ, ಲೇಖಿಕ ಮೆತ್ತು ಸಾಧ್ಯ ಜಾಲ ಎಂಬ ಮೂವರನ್ನು ನೇಮಿಸಿರುತ್ತಿದ್ದರು (ಶಾಪ್ರ. ೩೭). ೨· ಸಾಹಿತ್ಯದ ಯಾವುದಾದರೂ ಪ್ರಕಾರವನ್ನು ಬರೆಯುವವನು; ಬರಹಗಾರ; ಗ್ರಂಥಕರ್ತ : ಇಷ್ಟು ಅನುಕೂಲವಾದ ರಾಜಮಾರ್ಗ ದೊರೆತ ಮೇಲೆ ಲೇಖಿಕರು ಉಳಿದ ಪ್ರಯೋಗಗಳ ಹವ್ಯಾಸವನ್ನು ಬಿಟ್ಟು ಬಿಟ್ಟರು (ಕರ್ನಾ. II, ೨೩೯). ಓದುಗನಿಗೆ ಲೇಖಿಕನ ಅನುಭವದ ಆನಂದವೂ ಉಂಟಾಗುತ್ತದೆ (ಸ್ವಾತಿ. ೨).

ಲೇಖಿಕಗಿಂವಜ್ರ = ' ಲಿಪಿಕಾರರೆಂಬ ಬೆಟ್ಟಕ್ಕೆ ವಜ್ರಾಯುಧ ದಂತಿರುವವನು : ಒಂದು ಬಿರುದು : ಬಿರುದ ಲೇಖಿಕಗಿಂವಜ್ರಂ ನಾಗದೇವನ ಲಿಖಿತಂ (ಕಾಂ. ೭೦-೨-೦೦೩; 1056)· [ಸಂ.]

ಲೇಖಿತ (ನಾ)· ಸಾಹಿತ್ಯದ ಯಾವುದಾದರೂ ಪ್ರಕಾರವನ್ನು ಬರೆಯುವವಳು,–ರಚಿಸುವವಳು : ರಚನೆಯ ಪ್ರಥಮ ಪ್ರಯತ್ನದ ದೃಷ್ಟಿಯಿಂದ ಲೇಖಿಕಯು ಉದ್ಯಮ ಜೊಗಳತ್ಕೃಂತಹವೇ ಸರಿ (ಇತ್ಯ. ೨೩೨).

[ಲೇಖಿಕ + – ಸ್ತ್ರೀ]

ಲೇಖಿನಿ ' ಲೇಖ್ಯಣಿ ' ನೋ.

ಲೇಖಿನ (ನಾ)· ೧· ಬರಹ; ಬರವಣಿಗೆ : "ಅಕ್ಷರಂ ಲಿಪಿ ಲೇಖಿನಂ ಬರಹಂ" (ಶಾಂಗಣಾ. ೦೦೬-೦೬). ೨· = ಲೇಖಿ ೨ : ಅನೇಕ ಪ್ರಬಂಧಗಳನ್ನೂ ಲೇಖಿನಗಳನ್ನೂ ಪ್ರಕಟಿಸಿದರು (ಸ್ವಾತಿ. ೧೨); ಶಕುಂತಲೆಯ ವಿಷಯದಲ್ಲಿ ಗಮನಾರ್ಹವೆನಿಸಿದ ಕೆಲವಂಶಗಳನ್ನು ವಿವೇಚಿಸುವುದೇ ಈ ಲೇಖಿನದ ಉದ್ದೇಶ (ಶಕುಂತಲಾ. ೭೭). ೩· ತಾಳೆಗರಿ. [ಸಂ.]

ಲೇಖಿನಕಲೆ (ನಾ)· ಅಕ್ಷರವನ್ನು ಸುಂದರವಾಗಿ ಬರೆಯುವಿಕೆ: ಲಿಪಿಶಾಸ್ತ್ರ : ಲೇಖಿನಕಲೆಯನ್ನು (Calligraphy) ಕಲಿಸುವ ಶಾಲೆಗಳೂ ಇದ್ದುವು (ಕರ್ನಸಂ. ೨೦). [ಸಂ. ಲೇಖಿನಕಲಾ]

ಲೇಖಿನಪದ್ಧತಿ (ನಾ)· (ಯೋಚಿಸಿದ ವಿಚಾರಗಳನ್ನು) ಬರಹದಲ್ಲಿ ಮೂಡಿಸುವ ಪದ್ಧತಿ : ಪಠಸಪದ್ಧತಿ (Oral transmission)ಯಿಂದ ಲೇಖಿನಪದ್ಧತಿಗೆ (Written transmission) ಅದ ಈ ಪರಿವರ್ತನೆ ಕ್ರಮಕ್ರಮೇಣ ನಡೆದಿರಬೇಕು (ಶಾರಕ. ೨೪). [ಸಂ.]

ಲೇಖಿನಶಾಲೆ (ನಾ)· ಬರವಣಿಗೆಯ ಕೋಣೆ : ಸಾನ್ಯಾಸಿ ಲಿಪಿಕಾರರು ತಮ್ಮ ಕೊಠಡಿಯಲ್ಲಿ ಅಥವಾ ಕೋಣೆಯಲ್ಲಿ ಕುಳಿತು ಹಸ್ತಪ್ರತಿ ಗಳನ್ನು ಬರೆಯುತ್ತಿರಲಿಲ್ಲ . . . ಇವರಿಗೆ ಮಠದಲ್ಲಿ ಪ್ರತ್ಯೇಕವಾದ ಕೊಠಡಿಯೊಂದಿತ್ತು; ಅದನ್ನು ಲೇಖಿನಶಾಲೆ (scriptorium) ಎಂದು ಕರೆಯುತ್ತಿದ್ದರು (ಕರ್ನಸಂ. ೫೦). [ಸಂ. ಲೇಖಿನಶಾಲಾ]

ಲೇಖಿನಸಾಮಗ್ರಿ (ನಾ)· ಬರೆಯಲು ಬೇಕಾಗುವ ಲೇಖಿನಿ, ಮಸಿ, ಕಾಗದ ಮೊದಲಾದ ವಸ್ತುಗಳು : ಎಲೌ ಸಖಿಯರೆ, ಒಂದು ಗೀತೆಯನ್ನು ಆಲೋಚಿಸಿರುವೆನು ; ಲೇಖಿನಸಾಮಗ್ರಿ ಸಮೀಪದಲ್ಲಿಲ್ಲವಲ್ಲ ? (ಶಾಸಂಕ· ೬೮-೭)· [ಸಂ. ಲೇಖಿನಸಾಮಗ್ರೀ]

ಲೇಖಿನಿ (ನಾ)· = ಲೆಕ್ಕಣಿ : ಬಿಳಿಯ ಕಾಗದ ಹೃದಯ ಬಾಯಿ ಕಲಮು ದಾನಿ ನಾಲಿಗೆ ಎಂಬೋದು ಲೇಖಿನಿಯು (ಕ್ಷೀಪ್ರ. ೨-೦೫-೨) ; ಹರನೊರೆದ ತೆರಿದ ಭಕ್ತರ ಚರಿತಗಳನುಸುರುತಿವರೊರ್ವ ಮಾಹೇಶನಲ್ಲವೆನೆ ಕೋಪದಿಂ ಮರವಿರೂಪಾಕ್ಷನಂ ಲೇಖಿನಿಯೊಳಿಟ್ಟು ಶಿವ ಮತ್ತ ಪೇಳ್ದಿಂತುಸುರಲು (ಗುರುಚ· ೦೬-೨೬) ; ರಾಯನ ಕತ್ತಿಯದ್ದಿಲ್ಲದ ಬಿಸಿಯು ಪೆದ್ದನ್ನನ ಲೇಖಿನಿಯಲ್ಲಿ ಅವೇಶಗೊಂಡಿದೆ (ಶಾಕಾ· ೫೦). [ಸಂ. ಲೇಖಿನೀ]

ಲೇಖಿನಿ (ನಾ)· = ಲೇಖಿಕ ೧ : ತಪ್ಪರೆ ತಿದ್ದಲ್ಬಲ್ಲಂ ಒಪ್ಪುವ ಪಳಿಗವಿಗಳುಸಿರ್ದ ಕನ್ನ(ಡ)ಗಬ್ಬದಿ ತಿಪ್ಪಣಾಖ್ಯಂ ಲೇಖಿನಿಯಪ್ಪಂ ಸೇನಾನಿ ದೇವರಾಯನಿಕಟದೊಳ್ (ಪುಣ್ಯಾ· III, ೩೭೫ ಕ್ರಿಯಾಪಥ೫೪).

[←ತೆಲು. ಲೇಕರಿ]

ಲೇಖಿಲಿಪಿ (ನಾ)· ಒಂದು ಬಗೆಯ ಲಿಪಿ : ಚಕ್ರಲಿಪಿ ಲೇಖಿಲಿಪಿ ದರ್ಪಣ ಲಿಪಿ . . . ಯಾ ಅಗಣಿತಲಿಪಿಗಳನೋದಲಱಿಯದೆ . . . ಕಳಕಳಗೊಳುತಿದ್ದರು ವಿದ್ವಾಂಸರುಗಳೆಲ್ಲ (ಶಾಸ್ತ್ರ· ೭೭-೬). [ಸಂ.]

ಲೇಖಿವಲ್ಲಭ (ನಾ)· ದೇವತೆಗಳ ಒಡೆಯ ; ಇಂದ್ರ : ಕೂಲಿ ಸೂಡಿದ ವಪ್ಪಮೂಲೆಯಂ ಮಾರ್ವಾಸಲೋಲಮುನಿ ಕುಡೆ ಸಿತವ್ಯಾಲಕುಂಭ ಕೈಪ್ಪೊಡಾ ಲೇಖಿವಲ್ಲಭಸ್ಕೂಲಭಾಗ್ಯಂ ಪೋದ ಕಾಲಡೊಳು (ಜಾಪರಂ· ೬-೦೯)· [ಸಂ.]

ಲೇಖಿವಾರ್ತೆ (ನಾ)· ಬರಹದಲ್ಲಿರುವ ಸುದ್ದಿ ; ಪತ್ರದ ಅಭಿಪ್ರಾಯ : ಬಾಹುಬಲಿಃ ಮೂರಱಸ್ಥಿಗಮ ಸ್ಥಿತಿಯೊಳೋಲೆಯುಮಂ ದೂತರುಮನಟ್ಟಿ ದೊಡೆ ಲೇಖಿವಾರ್ತಾಕರ್ಣನದೊಳತಿಕುಪಿತನುಂ ಸಮರಸನ್ನದ್ಧನುಮಾಗಿ (ಶಾಪ್ರಂಪ್ರ. ೪೮) ; ಸೀತೆಯಲ್ಲಿಗೆ ದೂತರನಟ್ಟುವೆಂದು ಲೇಖಿವಾರ್ತೆಯಂ ಕೇಳ್ದು (ಶಾಪ್ರಂಪ್ರ· ೬೦೩). [ಸಂ. ಲೇಖಿವಾರ್ತಾ]

ಲೇಖಿವಾಹ (ನಾ)· ಪತ್ರಗಳನ್ನು ಒಯ್ಯುವವನು ; ಪತ್ರವಾಹಕ ; ಓಲೆಕಾರ : "ಲೇಖಿವಾಹಂ ದೂತಂ" (ಪಟ್ಟಕ· ೭೦-೩೬) ; ಅಂದಿದಿರೊಳೆ ಲೇಖಿವಾಹನಿವಹಂ ಬರೆ ಕುದನಿಳಾಧಿನಾಯಕಂ (ಶಾಪರಂ· ೬೩೬) ; ಉದೆದೋಲುಂ ಪಾಳೆಕಟ್ಟಿಂ ಮಡಪೋಱಿಸಿ ಮೆಟ್ಟಿದಕ್ಕೆವತಮುಂ ಕೆಯ್ಯೊಳ್ ಪಿರಿದಿರ್ದ ಕುಂಚಮುಂ ತಸಗೊಡಂಬದಂಬುಡೆಯ ಲೇಖಿವಾಹಾಕೃತಿಯೊಳ್ (ಪಭಾರತ· ೫-೨೬). [ಸಂ.]

ಲೇಖಿವಾಹಕ (ನಾ)· = ಲೇಖಿವಾಹ : ಲೇಖಿವಾಹಕರ್ ತ್ವರಿತಗತಿ ಸಮೆತಂ ರಾಜಾಧಿರಾಜಂಗೆ ಕೃತಪ್ರಣಾಮರಾಗಿ (ಶಾಪರಂ· ೬೩೯); ಜನಕಂ ದಶರಥನಲ್ಲಿಗೆ ಲೇಖಿವಾಹಕರನಟ್ಟಿ (ತಂಣಾಪ್ರ· ೪-೧೨ ಪ) ; ಲೇಖಿವಾಹಕರಂ ಶತಮಖಸಲ್ಲಿಗೆ ಕಳುಪುವುದುಂ (ಪಂಕ್ರಿ· ೦೪-೩೫ ಪ)· [ಸಂ]

ಲೇಖಿವಾಹನ (ನಾ)· = ಲೇಖಿವಾಹ : ಲೇಖಿವಾಹನಂ ಚಂದ್ರವಾಹನು ಗುತ್ಸಾಹದಿಂ ವಾರ್ತೆಯುಂ ಪೇಟ್ಟುದುಂ (ಶುಕಸಪ್ತ· ೬-೩ ಪ)· [ಸಂ.]

ಲೇಖಾಧುನಿ (ನಾ)· ಸುರನದಿ : ದೇವಗಂಗೆ (?) : ನರನಾಥ ನೋಡಿ ಲೇಖಾಧುನಿಯ ಸಂತಸಂಬೆರೆದು ಸೌಮಿತ್ರಿಯಂ ಕರವೆಂದನಿರುಳಿರುವವರರೆ ಈ ಕಾಣಮತಿರವ್ಯಕರವಾಗಿದೆಕೊ ನೋಡು ತೀರದ ಬನವನು (ಪಂಣಾಪ್ರ· ೫-೦೬-೦)· [<ಲೇಖಿ+ಧುನಿ]

ಲೇಖಿಕೆ (ನಾ). = ಲೇಖಕಿ : ಅವಳು ಲೇಖಿಕೆ, ಕವಯಿತ್ರಿ, ಭಾಷಣಕಾರ್ತಿ –ಹೀಗೆಲ್ಲ ಆಗಬೇಕೆಂದು ಅವರು ಆ ದಿಸೆಯಲ್ಲಿ ಯಾವಾಗಲೂ ಯತ್ನಿಸುತ್ತಿದ್ದರು (ಸ್ಮೃತಿ. ೨೯೯). [ಸಂ. ಲೇಖಿಕಾ]

ಲೇಖಿತ (ಗು). ಬರೆಯಲ್ಪಟ್ಟ ; ಬರೆದ. [ಸಂ.]

ಲೇಖಿಸು (ಕ್ರಿ). ೧. ಬರೆ ; ಲೇಖನ ಮಾಡು. ೨. ಬರೆಯಿಸು : ಹರನಿಂದಧಿಕ ಹರಿಯು ಸರ್ವೋತ್ಕೃಷ್ಟನೆಂದಾಗ ಮಂದಮತಿ ವ್ಯಾಸಪತ್ರಿಕೆಯ ಲೇಪಿಸಿ ಪೇಳಲ ಬಾಗಿಲೊಳ್ಕಟ್ಟಿಸಿದನು (ಕಬಿಚ. ೨-೪-೨೪). ೩. ಚಿತ್ರಿಸು : ತೋಳಿನೊಳೊಪ್ಪಗದಿಯಳ ಕರ್ಣಪೂರದೊಳೆಜಮು ಕತ್ತುರಿರಸವ ನನೆಮೊನೆಯಿಂದ ಲೇಖಿಸಿದ (ಜೈಮಿ. ೦೬-೦). [ಲೇಖನ + —ಇಸು]

ಲೇಖೀ (ಗು). ಬರವಣಿಗೆಯಲ್ಲಿರುವ : ಮಹಾಲಕಾಯ ಲೇಖೀ ಪರವಾನೆಯನ್ನು ಪಡೆಯದೆ ಯಾರೂ ಕದಿಯಲಾಗದು (ಕಾಗಿ. ೫೦. ೦೪). [←ಮರಾ. ಲೇಖೀ]

ಲೇಖೀದಾಖಲೆ (ನಾ) ಲಿಖಿತ ದಾಖಲೆ : ನಮ್ಮ ಪ್ರತಿಯೊಂದು ಕೆಲಸಕ್ಕೂ ಲೇಖೀದಾಖಲೆ ಬೇಕು (ಇಂಧ್ರಾ. ೦೨೦). [ಲೇಖೀ + ದಾಖಲೆ]

ಲೇಖೀಹೊಣೆ (ನಾ). ಲಿಖಿತದ ಮೂಲಕ ಕೊಡುವ ಜಾಮೀನು: ಚಿಕ್ಕನ ರಕ್ಕು ವಸೂಲಿಮಾಡುವ ಜ್ಞಾಂಕಿನವರು ಅದರ ಲೇಖೀಹೊಣೆಯನ್ನು ತಗದುಕೊಂಡರೆ ಚಿಕ್ಕನ ಹಣವನ್ನು ಕೊಡುಲ್ಲವು (ಜ್ಞಾಂಕ್ಕ. ೭೦). [ಲೇಖೀ + ಹೊಣೆ (<ಹೊಣ್ಕೆ)]

ಲೇಪೆ (ನಾ). ೧. ಬರೆಯುವುದು ; ಬರವಣಿಗೆ. ೨. ಪತ್ರ ; ಕಾಗದ: ಜಟಿಲನಾಯನಾರರು . . . ಪಂಬಿಪೂರೂರರ ವಿವಾಹಕ್ಕೆ ಬರುವಂತೆ ಶುಭಲೇಪೆಗಳನ್ನು ಕಳುಹಿಸಿದರು (ಪೂಂಪು. ೨೩). ೩. ಗೆರೆ ; ಸಾಲು ; ಪಂಕ್ತಿ : ಕಡುಗರಿದಪ್ಪ ಲೇಪೆಯುದು ಕಾಳಿಕೆ (ಮೋಹನಚಿ. ೦೦-೦೦) ; ಬಹುಧೂಮಲೇಪೆ ನಿಮಿರ್ದುವು ಮಿಹಿರಾರ್ದ್ರದೊಳಾಂಜನೇಯನೊಡರಿಸೆ ಲಂಕಾವಹನಂ (ಪಂಡಾಪು. ೦೦-೦೫) ; ಡೊಂಕು ಲೇಪೆಗಳೆಲ್ಲ ಬೆಲುವಿಸಲಂಗೆ ಸಂದು (ಪಜಿಪ. ೦೦). 'ಧೂಮಲೇಪೆ' ಪರಾ. ೪. ಚಂಪ್ರಬಿಂಬದ ರೇಖೆ. [ಸಂ. ಲೇಪಾ]

ಲೇಖ್ಯ (ನಾ). ಬರೆಮುದು ; ಪತ್ರ ; ಕಾಗದ : "ಓಲೆ ಪತ್ರವಮದು ಲೇಖ್ಯಮಕ್ಕು" (ಪುಂಗಣ. ೦೦೩-೦೩) ; ವ್ಯವಹಾರಕಾಂಡದಲ್ಲಿ . . . ಸಾಕ್ಷ್ಯ, ಲೇಖ್ಯ, ದಿವ್ಯ . . . ಪ್ರಕೀರ್ಣ ಎಂಬ ೨೫ ಪ್ರಕರಣಗಳಿವೆ (ಬಾಕಿಂ. ೬೨). [ಸಂ.]

ಲೇಖ್ಯದೋಷ (ನಾ). ಬರವಣಿಗೆಯ ತಪ್ಪು– ದೋಷ : ಅಕಾಂತಿ, ವ್ಯಾಘಾತ (=ಆರ್ಥವಿರೋಧ), ಪುನರುಕ್ತ, ಅಪಶ್ರುತಿ, ಸಂಪ್ಲವ (= ಕಟ್ಟಿಹೋಡಣ) – ಇವು ಲೇಖ್ಯದೋಷಗಳು (ಕಬಾಂ. ೧೩). [ಸಂ.]

ಲೇಜಯ 'ನೇಜಯ' ನೋ.

ಲೇಟು (ನಾ). ತಡ ; ನಿಧಾನ ; ವಿಳಂಬ : ಗಾಡಿ ಎಷ್ಟು ದಿನ ಲೇಟು ? (ಜಾಗಗೇ. ೬೦). [←ಇಂ. Late]

ಲೇಣದೇಣ ' ಲೇನದೇನ ' ನೋ.

ಲೇಣ (ನಾ). ಸಾಲ ; ಕಡ : ಸರ್ಕಾರವ ಉದ್ದೇಶಕ್ಕಾಗಿ ಸಮ್ಮಾಟರ ಸ್ವಾಧೀನದಲ್ಲಿಟ್ಟಿದ್ದ ಎಲ್ಲ ಸ್ವತ್ತೂ, ಆಸ್ತಿಯ ರೂಪವ ಲೇಣಗಳೂ . . . ರಾಜ್ಯದ ವಶವಲ್ಲಿ ನೆಲಸತಕ್ಕುದು (ಜಾಗಾಪ-೦೬೯). 'ದೇಣ', 'ಲೇಣದೇಣ' ಪರಾ. [← ಹಿಂ. ಲೇನಾ]

ಲೇಣದೇಣ 'ಲೇನದೇನ' ನೋ.

ಲೇನು (ನಾ). ಓಣಿ ; ಗಲ್ಲಿ; ಸಂದಿ : ಆ ರೋಡಿನ ಒಂದು ಲೇನಿನೊಳಗೆ ತಿರುಗಿದನು (ಇಂಧಾ. ೧೬). [← ಇಂ. Lane]

ಲೇನದೇನ, ಲೇಣದೇಣ, ಲೇಣದೇಣ (ನಾ). (ಸಾಮಾನ್ಯವಾಗಿ ಹಣವನ್ನು) ಸಾಲ ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರ . ಲೇವಾದೇವಿ : "ಲೇನದೇನ" ವ್ಯವಹಾರದ ನಿರ್ಧಾರ್ಗ್ಯರನ್ನೆರ್ಲಾ ಜೀವಣ್ಣ ಅಲ್ಲಿಗೆ ಹಿಡಿದು ತರುತ್ತಿದ್ದ (ಕಾಹಾ. ೦೦೬). ಲೇಣದೇಣ : ಆಯಾ ದಿನ ಲೇಣದೇಣ ಎಲ್ಲಾ ಫೈನಲ್ ಮಾಡಿದಿದುತ್ತೆನೆ (ಬಾಂಳ್. ೦೧೨). ಲೇಣದೇಣ: ಬ್ಯಾಂಕುಗಳಂತೆ ತಮ್ಮ ಲೇಣದೇಣ ಪರಿಸ್ಥಿತಿಯನ್ನು ಪ್ರಕಟಿಸುವುದಿಲ್ಲ (ಕಶಕ್ತಿ. ೦೦೮) ; ತಮ್ಮ ಸ್ಥಿರ ಚರಾಸ್ತಿಭೂಮಿತಾಣಿ ಲೇಣದೇಣಗಳ ವಿವರವಿತ್ತು (ಪಾಹಾಪ. ೨). 'ದೇಣಾಲೇಣ' ಪರಾ.

[←ಹಿಂ. ಲೇನಾದೇನಾ ; ಮರಾ. ಲೇಣದೇಣ]

ಲೇಪ (ನಾ). ೧. ಹಚ್ಚುವಿಕೆ ; ಸವರುವಿಕೆ : ನೇಪಾಳದ ಬೀಜಮಂ ಗಿರಿಕರ್ಣಿಕೆಯ ರಸದಿಂ ಮರ್ದಿಸಿ ನಾಭಿಗೆ ಲೇಪವ ಮಾಡೆ ಶೀಘ್ರವಿರೇಕಮಕ್ಕು (ಸಚಿ. ೩೦೮). ೨. ಮುರಾಮು, ಗಿಲೀಟು, ಸುಣ್ಣ ಮುಂತಾದ ಲೇಪನ ವಸ್ತು : ಕಂದುಬಣ್ಣಕ್ಕೆ ಬಿಸ್ಸಿದ ಲೇಪಕೊಟ್ಟಂತೆ ರಂಜಿಸುತ್ತಿತ್ತು (ಸಚಿ. ೬-೨೬) ; ಹುಣ್ಣು ಬೇನೆಗೆ ಲೇಪ ಹಚ್ಚಿಸಲೊ ? ಉಪ್ಪಿಡಲೊ ? (ಪಚ್ಚ. ೨೨-೩). ೩. ಅಂಟಿಕೊಂಡಿರುವ ವಸ್ತು : ಮಿಪರೇ ಪೋಪರೇ ಜಾಪಪೇನದು ಕೆಸಜ್ ಮಿಪರೆ ಮೈಯ ಮಲ ಪೋವುದಾ ಪಾಪ ಲೇಪವಾಗಿಕ್ಕು (ಸಪಾಕ್ಕ. ೪೨೯). ೪. ಕೊಳೆ ; ಕೊಳಕು : ಜ್ಞಾನಕ್ಕೆ ಲೇಪವಾದವನಿರವು ತುಪ್ಪವ ನಂಜಿದ ಬಕ್ಕಿಯಂತೆ (ಮೋಕಾ. ೯-೦೦). ೫. ಊಟ ; ಆಹಾರ : "ಲೇಪಃ . . . ನ್ಯಾದಃ —ಓ ಭೋಜನದ ಹಸರುಗಳು" (ಕಿಡ್ಕಂ. ೨೯೦). ೬. (ಅಲಂ) ಸಂಬಂಧ : ಗೊಡವೆ : ಈಶ್ವರನೊಬ್ಬನಿದ್ದರೆ . . . ಜಗದ್ವ್ಯವಹಾರದಲ್ಲಿ ಅವನಿಗೆ ಆಸಕ್ತಿದಾಗಲಿ. ಲೇಪವಾಗಲಿ ಇದೆಯೆಂದು ನಿರೀಕ್ಷಿಸಲಾಗುವುದಿಲ್ಲ (ಪುಗ್ಗಾ. ೯ ೨೯೦೪).

ಲೇಪಮಾಡು = ಬಳಿ ; ಹಚ್ಚು ; ಲೇಪಿಸು : ಶ್ರೀತೊಳಪಿಯನ್ನೂ ಸುಗ್ಗೆಬೇರನ್ನೂ ಮಜ್ಜಿಗೆಯಿಂದರೆದು ಲೇಪಮಾಡೆ ಶೀತಪ್ಪರಂ ವರ್ಣಾಂ (ಸಚಿ. ೭೦). **ಲೇಪಹಾಕು** = ೧. ಮುಲಾಮು ಇತ್ಯಾದಿಯನ್ನು ಬಳಿ. – ಸವರು : ತಲೆ ಒಡೆದವನೂ ಸಮ ಲೇಪಹಾಕಿದವನೂ ಸಮ (ಗಾಪ). ೨. (ಅಲಂ) ಸಂತೈಸು ; ಸಮಾಧಾನಮಾಡು : ತಂಡತಿ ಅವನ ನೋದ ಮನಸ್ಸಿಗೆ ಲೇಪಹಾಕಿದಳು (ಪೋಂಪ್ರ. ೨೬). [ಸಂ.]

ಲೇಪಕ (ನಾ). ೧. ಬಳಿಯುವವನು ; ಲೇಪಿಸುವವನು : "ಲೇಪಕಃ, ಪಳಗಂಡಃ –ಈ ೨ ಲೆಪ್ಪಗಾಱಂ" (ಪಣಹಾಂ. ೧೭-೧೭೭). ೨. ಅಚ್ಚು ತಯಾರಿಸುವವನು ; ಮಾದರಿಯನ್ನು ಮಾಡುವವನು. [ಸಂ.]

ಲೇಪನ (ನಾ). ೧. = ಲೇಪ ೧ : "ಲೇಪನಮೆನಲ್ ಪೂಸುವುದೆನಿಕ್ಕು" (ಪುಗಣಾ. ೦೦೦-೨೩) ; ಉಪಚರಿತಪೀಜನಾಳಂಕಾರನುಂ . . . ಆಗಿ (ಇಂಧಾಪ್ರ. ೭೯) ; ದ್ರಾವಕವನ್ನು ಗಂಟಲೊಳಕ್ಕೆ ಲೇಪನ ಮಾಡಿಸಿಕೊಂಡೆ (ಪಂಪಿರಾ. ೬). ೨. =ಲೇಪ ೨. [ಸಂ.]

ಲೇಪಾಳ್ ' ನೇಪಾಲ್ ' ನೋ.

ಲೇಪಾಳ್ (ನಾ). ಒಂದು ದೇಶದ ಹೆಸರು ; ನೇಪಾಳ : 'ಲೇಪಾಳಿಗ' ಪರಾ. [< ಸಂ. ನೇಪಾಲ]

ಲೇಪಾಳಿಗ (ನಾ). ನೇಪಾಳದೇಶದವನು : 'ಲೇಪಾಳಿಗಿತಿ' ಪರಾ. [ಲೇಪಾಳ್ + — ಇಗ]

ಲೇಪಾಳಿಗಿತಿ (ನಾ). ನೇಪಾಳ ದೇಶದವಳು : ಇತಿಗೆ . . . ಕನ್ನಡಿಗಿತಿ, ಲೇಪಾಳಿಗಿತಿ [ಪಾಣಾ. ೪೩] (ಪಚಂದ. ೨೦೦ ಕೃ.ಮೋ.).

[ಲೇಪಾಳಿಗ + — ಇತಿ$_1$ (< — ಇತ್ತಿ)]

ಲೇಪಿ (ನಾ). ಲೇಪಿಸಿಕೊಂಡುದು ; ಬಳಿದುಕೊಂಡುದು : ಅವನೀಶ ಕೇಳ್ ಫೃತಂ ಪೊರೆಯಿ ಕೈ ಜಿಡ್ಡಹುದು ಸವಿಯನಜಿಯಾದು ರಸಜ್ಞಂ ಲೇಪಿಯಲ್ಲದಿನಿದಱಿಯವಂತುಟಿಪ್ಪೆಯಯ್ಯ (ಕಂಪಂ. ೬-೦೬).

[ಸಂ. ಲೇಪಿನ್]

ಲೇಪಿತ (ಗು). ೧. ಬಳಿದ ; ಸವರಿದ : ಆಗ ಇವನು ಸೋತು ಧೂಳು ರಕ್ತ ಯಶಸ್ಸಿನಿಂದ ಲೇಪಿತನಾಗಿ ಬರುತ್ತಾನೆ (ಪ್ರಜಾ. ೦೪) (ನಾ). ೨.(ಅಲಂ) ಅಪಯಶಸ್ಸನ್ನು ಹೊಂದಿರುವುದು ; ಅಪಕೀರ್ತಿಯನ್ನು ಹೊಂದಿರುವುದು (?) : ಲೆಕ್ಕದಲ್ಲಿ ಲೇಪಿತವಾದವರಿಗೇಕೆ ಆಜಾತನ ಸುದ್ದಿ (ಸೋಳಕ. ೦೨-೧೪). [ಸಂ.]

ಲೇಪಿಸು (ಕ್ರ). ೧. ಬಳಿಯಲ್ಪಡು ; ಲೇಪನ ಹೊಂದು : ಅಗಸವೆಲ್ಲಂ ಸುಧೆಯಿಂದೆ ಲೇಪಿಸಿದಾದು . . . ದೆಸೆಯೆಲ್ಲಂ ಚಂದನಾಸಾರದಿಂ ಮುಸು ಕಿತ್ತೆಂಬಿನಮೊಂದು ಬೆಳ್ದಿಳಗು ಪರ್ವಿತ್ತೆಯ್ದೆ ರೋದೋಂತಮಂ (ಗಾಕಂಯು. ೦೦೬). ೨. ಬಳಿ ; ಸವರು : ನಾನು ಪರಿಮಳವ ಲೇಪಿಸುವುದಕ್ಕೆ ಮುನ್ನವೇ ಜಂಗಮಕ್ಕೆ ಸುಗಂಧದ್ರವ್ಯಗಳ ಲೇಪಿಸುವೆ (ಪ್ರಜಾಸಾ. ೪. ೬೩-೦೪೩) ; ಉಬ್ಬಿದ ಸ್ಥಳಕ್ಕೆ ಅರಿಷಿಣಬೇರನ್ನು ಕೆದು ಲೇಪಿಸಿದಳು (ಕಂಗೀ. ೦೪). ೩. ಅಂಟು ; ಹಚ್ಚಿಕೊಳ್ಳು : ಲೋಪವಾದರು ಸರಿಯೆ ಕರ್ಮಜ ಪಾಪವೆಣ್ಣಗಳರ್ಪು ನಿನ್ನನು ಲೇಪಿಸವು (ಪ್ರಜಾಕ. ೨೪-೦೦). [ಲೇಪನ + – ಇಸು]

ಲೇಪು (ನಾ). ಅರಳಿ ತುಂಬಿ ಮಾಡಿದ ತಲ್ಪನೆಯ ಗಾದಿ : ಬಲದೇವ ಮಂತ್ರಿ ತನ್ನ ಬಾಲೆಯಳಿಗಿತ್ತ ಬಹುತಳಿಕ ಹೇಮದ ಮಾಂಜಿ ಲೇಪು ಮುಸ್ಸೈದೆ (ಪರಿ. ೦೪೬-೩) ; ಮಲಗಿಬಿಡೋಣ ಮೆತ್ತನೆ ಲೇಪಿನ ಮೇಲೆ (ಪ್ರಾಂ. ೫೬) ; ಹಂಸತೂಲಿಕಾತಲ್ಪ ಎಂದರೆ . . . ಹಕ್ಕಿಗೆ ಬದಲಾಗಿ ಅದನ್ನು ಉಪಯೋಗಿಸಿ ತುಂಬಿ ಹೊಲಿದ ಲೇಪು (ಪ್ರಾಹೋ. ೩೩). [← ಮರಾ. ಲೇಪ್. / ತಲು. ಲೇವು]

ಲೇಪ್ಯ (ಗು). ೧. ಬಳಿದ ; ಲೇಪಿಸಿದ. (ನಾ). ೨. ಬಳಿಯುವ ವಸ್ತು ; ಲೆಪ್ಪ : "ಲೆಪ್ಯಕ್ಕೆ ಲೇಪ್ಯ" (ಶಬ್ದಾ. ೩೮೧). [ಸಂ.]

ಲೇಲಿಹಾನ (ನಾ). ೧. ಹಾವು ; ಸರ್ಪ : ಈ ಕರ್ಮಾಡುವಿನೊಳ್ ಕಾಳಿಯಮಹಾಸರ್ಪನಿರ್ಪಂ . . . ಈ ಸಮುದ್ದಾಮಧೂಮಸ್ತೋಮಮಾ ಲೇಲಿಹಾನನಾಳೀಲಹಾಳಾಹಳೋದ್ದಾಮಧೂಮಸ್ತೋಮಂ (ಜಗ. ೪-೧೦೫). ೨. ಶಿವ. [ಸಂ.]

ಲೇಲೆ (ನಾ). (ಕರಾ) ಒಂದು ಅನುಕರಣ ಶಬ್ದ : ಬೆಳ್ಳಿ "ಲೇ ಲೇಲೆ" ಎಂದು ಹಾಡತೊಡಗಿದಳು (ಸೋಚುವು. ೪).

ಲೇಲೆಹಾಳು = (ಕುಣಿತದ ತಾಳಕ್ಕೆ ಸರಿಯಾಗಿ) 'ಲೇ ಲೇ' ಎಂದು ಹೇಳು : ನಾವು ಹೊರೆಯರು ನಾಲ್ಕು ಲೇಲೆಹಾಕಿ ಇವತ್ತಾದರೂ ಸ್ವಲ್ಪ ಕುಣಿಯುತ್ತೇವೆ (ಕಂಬಾ. ೦೬). [← ತುಳು. ಲೇಲೆ = ಹೊರೆಯರ ಒಂದು ಬಗೆಯ ಕುಣಿತ]

ಲೇವಡಿ$_1$ (ನಾ). ಗೇಲಿ ; ಅಣಕ ; ಕುಚೋದ್ಯ : ಈ ರಂಪ ಲೇವಡಿ ನೋಡ್ದೊ (ಪುಟ್ಟಕ ೦೬೦) ; ಲೇವಡಿ ಬೇರೆ ಮಾಡ್ತಾಳೆ ? (ಬಪ್ರಹಂ. ೬೦)

ಲೇವಡಿಮಾಡು = ಗೇಲಿಮಾಡು ; ಅಣಕಿಸು : ಹೊಸಮೇಷ್ಟರು ಅವನನ್ನು ಲೇವಡಿಮಾಡಿದುದರಿಂದ ಅವರ ಪ್ರಾಣ ಆಗಿಹೋಗುವುದರಲ್ಲೇ ಇತ್ತಂತೆ (ಚಿಂಬಾಕ್ಷೇ. ೬). **ಲೇವಡಿಬೆಬ್ಬಿಸು, ಲೇವಡಿಎಬ್ಬಿಸು** = ಲೇವಡಿಮಾಡು : ಧರಣಯ್ಯನ ಗೆಳೆಯರು ಅವನನ್ನು . . . ಲೇವಡಿಯೆಬ್ಬಿಸುತ್ತಿದ್ದರು (ಪುಚೆ - ೨೬) : ನಿನ್ನ ಉಲಿತವನ್ನು ಕೇಳಿದ ಕಾರಿ ಲೇವಡಿಎಬ್ಬಿಸಿದ (ಪಪೋ. II, ೦೦೧೦). [← ತೆಲು. ಲೇವಡಿ = ವಾರಿದ್ರ್ಯ, ಕಪ್ಪು. / ಮರಾ. ರೇವಡೀ = ಫಜೀತಿ]

ಲೇವಡಿ$_2$ 'ರೇವಡಿ' ನೋ.

ಲೇವಣ 'ನೇವಳ' ನೋ.

ಲೇವಳ 'ನೇವಳ' ನೋ.

ಲೇವಾದೇವಿ (ನಾ). ಹಣವನ್ನು ಕೊಡುಕೊಳ್ಳುವ ವ್ಯವಹಾರ ; ಹಣದ ಕೊಡುಕೊಳೆಯ ವ್ಯವಹಾರ : ಕೃಷ್ಣಾವರಲ್ಲಿ ಪರಸ್ಪರ ಲೇವಾದೇವಿ ನಡೆಯುತ್ತಿದ್ದಲ್ಲಿ . . . ಮೂರು ವರ್ಷಗಳು (ಸ್ವಾಚಾಳ. ೦೬೭) ; ಸಾಲಿಗರು ಲೇವದೇವಿದು ಫೈಸಲಾತಿ ಕ್ರಮಗಳಿಗೆ ಅವನ್ನೇ ನೇಮಿಸಿದರು (ಚಾಣಾಚ. ೪೦).

ಲೇವಾದೇವಿ ಪತ್ರ = ಹಣವನ್ನು ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರದ ಪತ್ರ : ಲೋಹವನ್ನೂ ನಾಣ್ಯವನ್ನೂ ಬೆಲೆಯನ್ನೂ ಕೊಂಡು ಕರುವ ಸಾಲಪತ್ರ. ಲೇವಾದೇವಿಪತ್ರಗಳೂ ಇರುವುವು (ಪಠಕ್ರ. ೨೮). [← ಹಿಂ. ಲೇವಾದೇಈ]

ಲೇವೆ (ನಾ). (ಕುದುರೆಯ ತಲೆಗೆ ಅಲಂಕರಿಸುವ) ಒಂದು ಬಗೆಯ ಅಲಂಕಾರ ಸಾಧನ ; ತುರಾಯಿ : ಪಸುವಟ್ಟೆಯೆಪವ ಪೊಸಲೇವೆಯೂ ನುಯ್ದುಣ್ಣ ಕಸುಗಲ್ಲ ಕೀಲಣಿಯ ವೊಗಮುಟ್ಟಿ . . . ತದ್ಯಾಜಿಯಾಕಾಶ ದೊಳ್ಮುಸುಮಬಾಣನ ರಥವ ಗಿಳಿಯಂತೆ ವಿಜಯಾರ್ಧಗಿರಿಯ ಬಸದಿಗೆ ಪಾಱುತು (ಪಪ್ಯ. ೦೦-೩೨) ; ಕುದುರೆಗಳ ಜೀನ ಹಲ್ಲಣ ಲೇ[ಪಾಣಾಂ. ೫೬]ವೆ ಕಬ್ಬಿ ಕಂದದ ಹಕ್ಕಂಕೆ ಚಬುಕು ವೊಗರಂಬ ವಾಘಿಗಳ್ (ಪಂಪ. ೪೭-೧೪) ; " ಹೊಲಿದು ಸಿದ್ಧಮಾಡಿದ ಆಸನ " (ಪಂಪ. ೪೩೮), [ದೇ.ತ ತುಳು. ಲೇವೆ ; ತೆಲು. ಲೇವ]

ಲೇಶ (ನಾ). ೧. ತುಂಡು ; ಚೂರು. ೨. ತೀರ ಸ್ವಲ್ಪ ; ಅಲ್ಪ ; ಕೊಂಚ : " ಅಣು ಸೂಕ್ಷ್ಮಂ ಲೇಶಂ ತ್ರುಟಿ ಕಣಾ ಲವಂ " (ಪಸ್ಯ.ಕೋ. ೦೦೬-೫೬) ; ಉದರಪೈರಾಗ್ಯವಿದು ನಮ್ಮ ವದುಮನಾಭವಲ್ಲಿ ಲೇಶಭುಕುತಿಯಿಲ್ಲ (ಪ್ರಭಂಶ. ೩-೨೫ ಪದ್ಯ) ; ಸುಖಲೇಶಮುಂ ಸುಳಿಯದತಿಕಠಿನಕ್ಕೆ. ರಾಜಪುತ್ರಿ, ಲತಾಂಗಿ. ನಿನ್ನನೆಂತೊಯ್ದುಪೆನ್ ಪೇಳ್ ? (ಕೃಣಾಪಾ. ೪೯-೪೦೬). ೩. ಕಿರಿದು ; ಚಿಕ್ಕದು : "ಸೂಕ್ಷ್ಮಃ ಲೇಶಃ ಲವಃ . . . ತ್ರುಟಿಃ – ಈ ೧೫ ಕಿಱಿದು" (ಚಾಣಾಮು. ೦೦೮-೩). ೪. [ಶಾವ್ಯವಿಸಾ] ಒಂದು ಬಗೆಯ ಅಲಂಕಾರ ; ಗುಣದಲ್ಲಿ ಸ್ವಲ್ಪ ಅವಗುಣವನ್ನೂ ದೋಷದಲ್ಲಿ ಸ್ವಲ್ಪ ಗುಣಾಂಶವನ್ನೂ ಸೇರಿಸಿ ವರ್ಣಿಸುವುದು : ಗುಣದೊಳಮಱಿ ಪುವುದಿನಿಸವಗುಣಮಂ ದೋಷದೊಳವಿನಿಸು ಗುಣಮಂ ತಂದಿರ್ಪಿನಿಸು ವುದು ಲೇಶಮೆಂಬುದು (ಕವಿಗ. ೩-೦೬೦) ; ಗುಣವವೆ ತರ್ಪುದು ದೋಷದ ಗುಣಕೆ ದೋಷಮುಮಾಗ್ಗುನಿಸು ಗುಣಗಣಕೆ ತಂದೊಗರ್ವುದು ಲೇಶು (ಕಾಶಾ.ಶ. ೬೩೯). [ಸಂ.]

ಲೇಶಾಲಂಕಾರ (ನಾ). = ಲೇಶ ೪ : ಮರಳಿ ಗುಣದಲಿ ದೋಷ ದೋಷದಲಿ ಗುಣ ತೋಜಿ ಹರುಷದಿ ಲೇಶಾಲಂಕಾರ (ಕುಪಲ. ೦೬೪). [ಸಂ.]

ಲೇಶ್ಯ (ನಾ). ೧. = ಲೇಶ್ಯೆ ೨ : ಪರಮಾಯುವಿಂದವಧಿಯಿಂ ಸಾಮರ್ಥ್ಯದಿಂ ಲೇಶ್ಯದಿಂ[ಪಾಣಾ. ೫೯೩] . . . ಅಮರಕ್ಕಂ ಹೇಯ ಮಪ್ಪುದೇಯಮೇ (ಪಜ್ಜಿಕ. ೦೬-೦೬೨) ; ಅಂತರಾತ್ಮನ ಸಹಜಜ್ಞಾನ ಸೂರ್ತಿಯು ಕೆಲವು ವೇಳೆ ವಿಚಿತ್ರವಾದ ಸೌಂದರ್ಯವನ್ನು ಹೊಳಪನ್ನು ಉಳ್ಳುದಾಗಿಯೂ ಕೆಲವೇಳೆ ವಿಕಾರವಾದ ಲೇಶ್ಯಗಳಿಂದ ಎಳೆಯಲ್ಪ ಟ್ಟಂತಾಗಿಯೂ ಆಂದೋಲನಗೊಳ್ಳುವುದು (ಪ್ರಕಾಪ್ರ. ೦೬೪). ೨. [ಗಣಿತ] ಆರು ಎಂಬ ಸಂಖ್ಯೆಯ ಸಂಕೇತ : ಅರಿಷಡ್ವರ್ಗಾದ್ರ ಲೇಶ್ಯ ಜೀವಂ ದ್ರವ್ಯಂ . . . ಆಱು ನಾಮಂ (ಕ್ಷತ್ರಾ. ೯-೩). [ಸಂ.]

ಲೇಶ್ಯಾವಿಶುದ್ಧಿ (ನಾ). [ಜೈನ] " ಲೇಶ್ಯೆಯು ಹೆಚ್ಚು ಹೆಚ್ಚು ಮಂದವಾಗುತ್ತ ಹೋಗಿ ಅದು ಇಲ್ಲವಾಯಿತೆಂದರೆ ಅದು ಲೇಶ್ಯಾವಿಶುದ್ಧಿ. ಹದಿನಾಲ್ಕನೆಯ ಗುಣಸ್ಥಾನದಲ್ಲಿ ಲೇಶ್ಯೆಯು ಸಂಪೂರ್ಣ ನಷ್ಟವಾಗಿರುತ್ತದೆ. ಆ ಸ್ಥಿತಿಯೇ ಲೇಶ್ಯಾವಿಶುದ್ಧಿ " (ಪಾಪ್ರ. ಕೃಪ ಪಾಂಡಿತ್ಯ ಪ್ರಾ.ಕೋ.) : ಜ್ಞಾನಾದಿ ಪರಿಣಾಮಂಗಳೊಳ್ ನಿರತಿಶಯ ಲೇಶ್ಯಾವಿಶುದ್ಧಿಯಂ ಕಾರ್ದಿ (ಪಪ್ರಾ. ೦೦-೦೪ ಪ). [ಸಂ.]

ಲೇಶ್ಯಾಶುದ್ಧಿ (ನಾ). = ಲೇಶ್ಯಾವಿಶುದ್ಧಿ : ಅಂದು ಪೊಱಗಣೊಳಗಣ ರಡುಂ ಲೇಶ್ಯಾಶುದ್ಧಿಯಂ ಕಾರ್ದಿ (ಪಪ್ರಾಪ್ರ. ೪-೪೬ ಪ). [ಸಂ.]

ಲೇಶ್ಯ (ನಾ). ೧. ಬೆಳಕು: ಕಾಂತಿ. ೨. [ಜೈನ] "ಆತ್ಮವು ಯಾವುದರ ಮುಖಾಂತರ ಪುಣ್ಯ, ಪಾಪಗಳಿಗೆ ಅಧೀನವಾಗುವುದೋ ಅದಕ್ಕೆ ಲೇಶ್ಯಾ ಎಂದು ಹೇಳುವರು" (ಕ್ಷಪ. ೫೮೬): ಗತಿ ಮೆಯ್ವೆತ್ತ ಕಷಾಯುಲಿಂಗತತಿ ವಿಘ್ನಾದರ್ಶನಜ್ಞಾನವಪ್ರತಿಮಾಸಂಯತೆ ತಾನಸಿದ್ಧತೆ ನಿಶಾಂತಂ ಲೇಶ್ಯೆಯೆಂದಿರ್ಪತ್ತೊಂದುತೆಱು (ಜಗಚಮ. ೩೦-೬) ; ಲೇಶ್ಯಾನುವಾದದಿಂ ಆಱುಲೇಶ್ಯವರ್ಗಂ ಮೂಱುಸಮ್ಮಕ್ತ್ವಮುಮಕ್ಕುಂ (ತಚಸ್ಕ. ೦೨). [ಸಂ. ಲೇಶ್ಯಾ]

ಲೇಸಯ್ಯ (ನಾ). ಒಬ್ಬಾತನ ಹೆಸರು: ನೆಗಬ್ದ ಗುಣಾಂಕ ಮಾರ್ಬಲ ಧೀರಂ ಶ್ರೀಮತ್ಲೇಸಯ್ಯ (ಎಳ. ೪, ೪೬೧೧. ೫೬-೦೨; ೪೧). [ಲೇಸು$_1$ + ಅಯ್ಯ$_{11}$]

ಲೇಸಿಗ (ನಾ). ಹಿತವಾದುದನ್ನು ಬಯಸುವವನು; ಒಳ್ಳೆಯದನ್ನು ಹಾರೈಸುವವನು: ಪಶು ಸಾವತ್ಸ ತನ್ನ ಶಿಶುವಿಂಗೆ ಏನ ಗಳಸಿ ಕೊಟ್ಟಪ್ಪು . . . ಅರು ಸತ್ತರೂ ಲೇಸಿಗರಲ್ಲಿ ತಮ್ಮತಮ್ಮಷ್ಟಕ್ಕೆ ಲೇಸಿಗರೆಲ್ಲರೂ (ಸರಪ. ೦೬-೬೭). [ಲೇಸು$_1$ + — ಇಗ]

ಲೇಸು$_1$ (ನಾ). ೧. ಒಳ್ಳೆಯದು; ಹಿತವಾದುದು: ನಮ್ಮಡಿ ಕೂಲೆ ಸಾವುದು ಲೇಸಲ್ತೆ (ತಂತಣಾ. ೧೦-೩೦) :ಲೇಸ ಕಂಡು ಮನ ಬಯಸಿ ಬಯಸಿ ಆಸೆ ಮಾಡಿದೊಡಿಲ್ಲ (ಬಸಪ. ೨೩) ; ಕರ್ಣಂಗೆ ಸಾಮಿನ ಸುಗಿಳೇ ಲೇಸನ.ತ ಕೈಕೊಂಡಚ್ಚನಾ ಭೀಮ (ಕುಪಾ.೪ ೦೬-೬೭). ೨. ಮಂಗಳಕರವಾದುದು; ಶುಭಕರವಾದುದು; ಶ್ರೇಯಸ್ಸು: ಕಿಡದ ವಿಧಾನವನಾಳ್ದ ಇವ ಲೇಸುಗಳ್ಗೆ ಬಟ್ಟೆಯೆನಿಸುವುದೆಂ (ತಂತಣಾ. ೭೩-೨); ದೇವರ್ಕಳಂ ತುಂಬುಮಂ ತಿಳಿಯಲ್ ಸ್ವಪ್ನದಿ ಲೇಸೆಲ್ಲ (ಸಿಂಪುರಾ. ೬೮). ೩. ದೃಢವಾದುದು: ಇರೆ ಶುಧಗ್ರಹಮಾ ಮರಂ ಲೇಸಕ್ಕುಂ (ಜಾಕಪ. ೨-೦೭). ೪. ಶುಭ ಕಾರ್ಯ: ಮಂಗಳಕಾರ್ಯ: ಮದುವೆ ಮುಂಜಿ ಮೊದಲಾದ ಲೇಸುಗಳಲ್ಲಿ ಶೇಷನ ವಾಲಗಕ್ಕೆ ಒಂದು ವೈಭವದ ಸ್ಥಾನವೆ ಇತ್ತು (ತಂಬಚಂ. ೦೦೨). ೫. ಉತ್ತಮವಾದುದು; ಶ್ರೇಷ್ಠವಾದುದು: "ನಿಗರ.ನೆಟ್ಟಿ . . . ಲೇಸು, ಒಳ್ಳು ಕಣ್ಗೆಂದುದು. ಪರಿವಡೆದುದು — ಈ ೧೪ ಮನೋಹರಂ" (ಶಕಾಂ. ೩೭-೨೦೦); ಎಸ್ಮಾಳ್ಳ ಮುಂಡಳಂಗಳೊಳ್ ಪುಟ್ಟಿದ ಲೇಸ[ಜಾಣಂ. ದೊಳ್ಳಿತ]ಸ್ಸ ವಸ್ತುವಾರ್ಗಕ್ಕುಂ (ಜಚಾಣಾ. ೦೦೩-೨೮). ೬. (ಸಂಭೋಗದ)ಸುಖ — ಸಂತೋಷ: ಭಾಷೆಗೆ ತಪ್ಪದ ಬಂಟ ಲೇಸಿಗೆ ಪೊದಗದ ಸ್ತ್ರೀ ವ್ರತದ ದೆಸೆಮನಜ್ಞಯದ ಆಚಾರ . . . ಭಾಸಿಯುಮೆಂತಾಮಿವ್ವೆ (ಬಶಕ್ಕ ೦೮) ; ಬೇಟದೊಳ್ ಬಿರಿದು ಕೂಟದೊಳರ್ದುಂ ಲೇಸಿನೊಳ್ ವಾಸನೆವಡೆದು (ಅಕಂಪ್ರ. ೨-೨೦ ಪ) ; ಲೇಸುದಟ್ಟಿದ ಮನ ಹೊಸಮೋಹ ಮತ್ತವರಾ ಸೆಜ್ಜೆವನೆಯೊಳು ಮಾಳ್ಪ ಲೇಸನವರೆ ಬಲ್ಲರ್ (ಜಪ. ೪೨-೦೩). ೭. ಒಳ್ಳೆಯ ಕೆಲಸ; ಪುಣ್ಯಕಾರ್ಯ: ಹಿಂದಿನ ಜನುಮದಲಿ ಎಂದೋ ಲೇಸನು ಮಾಡಿ ಇಂದು ನಿಮ್ಮಡಿಗೆ ಎಱಗಿದೆಮ (ಸರಪ್ರ. ೦೦೬).

ಲೇಸುಲೇಸು (ದ್ವಿರುಕ್ತಿ): ಲೇಸುಲೇಸಿನ ತಮ್ಮನಾಡಿದ ಭಾಷೆ ಬಾಹಿರವಾಗಬೇಡ (ಕುಪಾ.೪. ೦೭-೦೦) ; ಲೇಸು ಲೇಸು! ನೀರಿಟ್ಟಿಯದ ಗಂಟಲೊಳ್ ಕಡುಬುಂ ತುಱುಕಿದಂತಾಯ್ತು (ಜಕಥಾ. ೬-೪). **ಲೇಸುನಾಡು**=ಒಳ್ಳೆಯದನ್ನು ಹೇಳು: ಲೇಸನಾಡಿದೆ ಕರ್ಣ ನಿನಗೆ ನ್ನೈಸಲೇ ಸಾರಥಿಯ ಕೊಡಿತೆ (ಕ:ಪಾ.೪. ೩-೪). **ಲೇಸ್ಗಲ್ರ್** = ಉಳಿತರು: ಶತ್ರುಗಳು: ಲೇಸ್ಗಲ್ಗರ್ದೆದೇ ಮಂತಣಂ (ಕ್ಕುಣಾ. ೦೫೯). **ಲೇಸಾಗು** = ೧. ಒಳ್ಳೆಯದಾಗು; ಸರಿಯಾಗು: ಹಿತವಾಗು: ನುಡಿದನ ಪ್ಪೊಡೆ ಲೇಸಾಗಿ ನುಡಿಯಲ್ಕೆ ಬಲ್ಲುದೀ ಗಿಳಿ (ಶಾಪಂಕಾ. ೬೩೦) ; ಸಭೆ ಮೆಚ್ಚಿ ಲೇಸಾಯ್ತನುತ್ಸವಿರೆ (ತಿಬಿ. ಬೀ. ೨೦-೩) ; ಕೊರ್ತು ನೀನವ ಗೆಂದುದುದು ಲೇಸಾಯ್ತು (ಶಾಂಪಾ. ೨೩-೦೯). ೨. ಚೆನ್ನಾಗು: ಸೊಗಸಾಗು: ಲೇಸಾಗಿ ತುಲಸಿಯ ಮಾಲೆಯ ಧರಿಸಿದ ವಾಸುದೇವನು ಬಂದ ಕಾಣರೇನೆ (ಕಳೆಂದ. ೦-೦೪೦-೩) ; ಈಶ ನಿಮಗತ್ಯಧಿಕಸುಖವ ಕೊಡರೆಂದು ಲೇಸಾಗಿ ಹರಸಿದೆವು ಬಾಲಕರು ಬಂದು (ಕುಪ್ರ. ೦೩-೦).

[ದೇ.ತೆ ತುಳು. ಲೇಸು. ಲೇಸ್; ತೆಲು. ಲೆಸ್ಸ]

ಲೇಸು$_2$ (ನಾ). "ಬೂಟ್ಸು, ಮೊ. ಗಳ ಎದುರುಬದುರಿನ ಅಂಚುಗಳನ್ನು, ಗುಂಡುರಂಧ್ರಗಳ ಅಥವಾ ಕೊಕ್ಕೆಗಳ ಮೂಲಕ, ಒಟ್ಟಿಗೆ ಬಿಗಿಯುವ ಹುರಿ. ಅಥವಾ ತೊಗಲಿನ ದಾರ. ಬಟ್ಟೆ, ಅಂಗಿ, ಮೊ. ಗಳ ಅಲಂಕಾರಕ್ಕಾಗಿ ಉಪಯೋಗಿಸುವ ಹೆಣಗೆಯ ಪಟ್ಟಿ (ಸಾ. ಜರತಾರಿಯದು); ಕಲಾಬತು: ನಾರು, ಹತ್ತಿ, ಉಣ್ಣೆ, ರೇಷ್ಮೆ, ಲೋಹ–ಇವುಗಳಿಂದ ಮಾಡಿದ ದಾರದಿಂದ ಚಿತ್ರರಚನೆಯಾಗಿ ಹೆಣೆದು ಮಾಡಿದ ಸೂಕ್ಷ್ಮರಚನೆಯ ಅಲಂಕಾರದ ಪಟ್ಟಿ" (Lace. ೫೦೬೭) : ಮನೆಯಿಂದ ಹೊರಡುವ ಮುನ್ನ ನನ್ನ ಮಗಳೊಬ್ಬಳು ಲೇಸಿಗೂ . . . ಮಗನೊಬ್ಬನು ಪೆನ್ಸಿಲಿಗೂ ಪುಸ್ತಕಕ್ಕೂ ಹೇಳಿರುತ್ತಾನೆ (ಪಾಂಗೇ. ೦೬೯) ; ನಾನು ರೈತಹೆಂಗಸರಿಂದ ಲೇಸು ಕೊಂಡ್ಕೋತೀನಿ (ಪಾಯಾ. ೪೪೭). [←ಇಂ. Lace]

ಲೇಸುಗಾತಿ (ನಾ). ಸುಖವನ್ನು ಬಯಸುವವಳು: ನಾಲಗೆಯೊಳಗಿಲ್ಲ ನಿನ್ನೆದೆಯೊಳಗೆ ವಿಶಾಲಕ್ಷಿಯಿದ್ದು ನೀನೆನ್ನ ಜಾಳಿಸುತಿದ್ದೆಯ ತಕ್ಕರ ದೇವ ಯಂದಾ ಲೇಸುಗಾತಿಪೊತ್ತಿದಳು (ಕಪಪ. ೬೭-೫೦). [ಲೇಸು$_1$ + —ಗಾತಿ$_1$]

ಲೇಸುಗಾಱಿ (ನಾ). ಸುಖವನ್ನು ಬಯಸುವವನು: ಲಲನೆಯರಯ್ಯಂದಿರೆಲ್ಲರನೇಕಸಿ ಕಳುಹಿಂದಾ ಲೇಸುಗಾಱಿ (ಕಪಪ. ೩೨-೬೪) ; ಕಾಳಗವೆಂಟು ಪತ್ತದ ಯುದ್ಧ ಬೇಡ ಕೇಳ್ಕೇಲಾದ ಮೃದುಲಯುದ್ಧವನು ತೋಳ ಬಲ್ಕೆಯೊಳ್ ನೀವಿಬ್ಬರು ಪೂಳ್ಪುದೆಂದಾ ಲೇಸುಗಾಱಿಗಳಾತಿದರು (ಕಪಪ. ೫೦-೦೬). [ಲೇಸು$_1$ + — ಕಾಱಿ]

ಲೇಸುಗೆಯ್ (ಕ್ರ). ಒಳ್ಳೆಯದನ್ನು ಮಾಡು; ಹಿತವಾದುದನ್ನು ಆಚರಿಸು: ಕಡು ಗೆಂಟಜ್ಜಿಳಿ ಪೊಸಪಟ್ಟು ಮೆಲ್ಲನೆ ನೀಡಿ ಲೇಸುಗೆಯ್ದು ಯೆಂದೆನ್ನಂ ಕರತಲದೊಳ್ ತಳೆದು (ಶಾಕಂಣಾ. ೬೨೮) ; ಆ ಸುರೋತ್ತಮಂ ಪಾತಸದಿಂದೆ ಭಕ್ತಿವೆರಸಾಗಳೆ ಪೂಜಿಸಿ ಲೇಸುಗೆಯ್ದನಿನ್ನಂತುಟೆ ತನ್ನುನೀಂದ್ರ ಕೃತಮಂ ವಜಿಸೆಂದು ಕೃತಘ್ನನಾಗದೇ (ತುಳುಪಾ. ೯-೩೦).

[ಲೇಸು$_1$ + ಕೆಯ್$_1$]

ಲೇಸುದಟ್ಟು (ಕ್ರಿ). ಸುಖವ ಬಯಸಿಕೆಯಾಗು: ಲೇಸುದಟ್ಟಿದ ಮನ ಹೊಸಮೋಹ ಮತ್ತವರಾ ಸೆಜ್ಜೆವನೆಯೊಳು ಮಾಳ್ಪ ಲೇಸನವರೆ ಬಲ್ಲರ್ (ಕಪಪ. ೪೨-೦೩). [ಲೇಸು$_1$ + ತುಟ್ಟು$_{11}$]

ಲೇಹ (ನಾ). ೧. ನೆಕ್ಕುವುದು: 'ಲೇಹಂಗೈ' ಪರಾ. ೨. [ವೈದ್ಯಶಾ] ಕೆಲವು ಔಷಧೀಯಗುಣವುಳ್ಳ ವಸ್ತುಗಳನ್ನು ಹೆಚ್ಚು ಗಟ್ಟಿಯಾಗಿ ಅಥವಾ ಹೆಚ್ಚು ನೀರಾಗಿ ಆಗದಂತೆ ಪಾಕಮಾಡಿದ, ನೆಕ್ಕಿ ತಿನ್ನ ಬಹುದಾದ ಔಷಧಮಿಶ್ರ: ಜೂರ್ಣ, ಘೃತ, ತೈಲ, ಆಸವ, ಲೇಹ ಇವುಗಳನ್ನು ಮಾಡುವಾಗ ಚಂದನವನ್ನು ಹೇಳಿದ್ದರೆ . . . ಉಪಯೋಗಿಸಬೇಕು (ಸಚಿ. XII. ಶ್ಲಾ.೩೭) ; ಎಲೆ, ಬೇರು ಮತ್ತು ಹೂಗಳನ್ನು ಸೇವಿಸಿ ಮಾಡಿದ ಕಹಿಯಾದ ಲೇಹ ಹೊಟ್ಟೆಯಲ್ಲಿರುವ ಜಂತುಹುಳುಗಳನ್ನು ನಾಶಮಾಡುವುದು (ಕರಿಚಿ. I. ೭೫೯). [ಸಂ.]

ಲೇಹಂಗೈ (ಕ್ರಿ). ನಾಲಗೆಯಿಂದ ನೆಕ್ಕು: ಪುಲ್ಲೆಗಳ್ಕಂಡು . . . ಬಾಲಕನಂಘ್ರಿಪಲ್ಲವದ ರುಧಿರಮಂ ಕುಡಿನಾಲಗೆಗಳಿಂದೆ ಸೊಗಸೆ ಲೇಹಂ [ಶಾಣಾಂ. ಪಂ]ಗೈದುವ(ಕೃಪಾಣಾ. ೨೬-೭೭). [ಲೇಹ + ಗೈ (<ಕೆಯ್$_1$)]

ಲೇಹಕ (ನಾ). ಬರಹಗಾರ: ಲೇಖಿಕ: ಲೇಖಿಕ ಎಂಬುದು ಸಂಸ್ಕೃತದಲ್ಲಿ ತುಂಬ ಹಳೆಯ ಶಬ್ದ. ಲೇಹಕ ಎಂಬುದು ಅದರ ತದ್ಭವ (ಕವಂ. ೪೩). [< ಸಂ. ಲೇಖಿಕ]

ಲೇಹಿನಿ (ನಾ). [ನಾಟ್ಯ] ನಾಲಗೆಯ ಆರು ಬಗೆಯ ಚಲನೆಗಳಲ್ಲಿ ಒಂದು : ಪ್ರ "ನಾಲಗೆಯಿಂದ ತುಟಿ ಮತ್ತು ಹಲ್ಲುಗೆಳನ್ನು ನೋಂಕಿಸಿ ರುಚಿ ನೋಡುವುದು" (ಶಾಕ್ಯಲಂ. ೨೬೮ ಗದ್ಯಾನುವಾದ) : ಮಿಗೆ ಭುಜ್ಯಂ . . . ಲೇಹಿನಿಯೆಂದುಂ ನಗೆಮೊಗವಳೆ ಜಿಹ್ವೆಯಾಜುಭೇದ ದಿನೆಸೆಗುಂ (ಜಾಕ್ಯಲಂ. ೩-೪೪). [ಸಂ. ಲೇಹಿನೀ]

ಲೇಹಿಸು (ಕ್ರಿ). ನೆಕ್ಕು : ನಿಜನಾಸಾಗ್ರದ ವಿಧುವಿಂದುಮಿಗಿರದುತ್ಸವಿಸಿ ಲೇಹಿಸುವವನಂತೇಕೆ ವೃಥಾ ಯಮಗಾಹುತಿಯಹೆ (ಹರಣಾಂ. ೪-೩೩). [ಲೇಹ + ಇಸು]

ಲೇಹ್ಯ (ಗು). ೧. ನೆಕ್ಕಬೇಕಾದ. (ನಾ). ೨. ನೆಕ್ಕಿ ತಿನ್ನಬೇಕಾದುದು : ಭೋಜ್ಯ ಭಕ್ಷಂ ಪೇಯ ಲಲಿತ ಲೇಹ್ಯಂ ಚೋಷ್ಯ ಪಿಚ್ಚಿಪಡ್ರಸಗಳಂ ವಿಳಸವನುಗುಣದ ರುಚಿಯಂ ಮೇಲೆಯುಜ್ಜಿವವರ ಚರಣಾಂಬುಜಕೆ ಶರಣು (ಅಜಿತ. ೪೯-೨೮) ; ಲೇಹ್ಯವೆಂದರೆ ನಾಲಗೆಯಿಂದ ಚಪ್ಪರಿಸಿ ನುಂಗುವುದು (ಹರಿವಂ. ೪-೨ ಕರ್ಣಪರ್ವ). ಸಿ. = ಲೇಹ ೨: ಬಿಲ್ವಾದಿಲೇಹ್ಯ . . . ತೆಗೆದುಕೊಳ್ಳಲು ಸಮಸ್ತ ಪೈತ್ಯಮ್ಮಾಧಿ ಅಂತರ್ಗತಜ್ವರ ಕ್ಷಯರೋಗ ಪಾಂಡುಕಾಮಾದಿ ಮುಂತಾದುವೆಲ್ಲವು ಪರಿಹರಮಕ್ಕುಂ (ಶಿಕ್ಷ. ೦೩೮). [ಸಂ.]

ಲೇಹ್ಯದ್ರವ್ಯ (ನಾ). ಲೇಹ್ಯ ಮಾಡಲು ಬಳಸುವ ಸಾಮಗ್ರಿ : ಲೇಹ್ಯದ್ರವ್ಯಪ್ರಮಾಣವನ್ನು ಹೇಳಲದಿದ್ದರೆ ಭೂರ್ಣಕ್ಕೆ ನಾಲ್ಕರಷ್ಟು ತೂಕ ಸಕ್ಕರೆಯನ್ನು . . . ಮಿಶ್ರ ಮಾಡಿ ಇಳಿಸಬೇಕು (ಶಿಕ್ಷ. XIII. ಕ್ರಿಯಾವಿ). [ಸಂ.]

ಲೇಹ್ಯಪಾಕ (ನಾ). ಲೇಹ್ಯದ ಹದ ; — ಪ್ರಕೃತಿ : ಲಾಮಂಜಿ . . . ಕರಿಜೀರಿಗೆ — ಇವು ಪ್ರತ್ಯೇಕ ಗದ್ಯಾಣ ೪ ತೂಕವಂ ಚೂರ್ಣವ ಮಾಡಿ ಪಾಕದಲ್ಲಿ ಹಾಕಿ ಲೇಹ್ಯಪಾಕವಾಗಿ ಅಟ್ಟು . . . ಭಕ್ಷಿಸಿದರೆ . . . ಪೈತ್ಯರೋಗ ಸಪ ಗುಣಮಕ್ಕುಂ (ಶಿಕ್ಷ. ೦೩೮). [ಸಂ.]

ಲೈಂಗ (ಗು). ಲಿಂಗಕ್ಕೆ ಸೇರಿದ. — ಸಂಬಂಧಿಸಿದ : `ಲೈಂಗಪುರಾಣ' ಪರಾ. [ಸಂ.]

ಲೈಂಗಪುರಾಣ (ನಾ). ಹದಿನೆಂಟು ಮಹಾಪುರಾಣಗಳಲ್ಲಿ ಒಂದು : ಬ್ರಹ್ಮಪುರಾಣ . . . ಲೈಂಗ[ಶಾಕಲ. ಗ್ರ]ಪುರಾಣ . . . ಬ್ರಹ್ಮಾಂಡ ಪುರಾಣವೆಂಬವೇ . . . ಹದಿನೆಂಟು ಮೂಲಪುರಾಣಂಗಳ್ (ಜಿಪೇ. ೬). [ಸಂ.]

ಲೈಂಗಿ (ನಾ). ಲಿಂಗದ ಸಂಬಂಧವುಳ್ಳವನು ; ಲಿಂಗವಂತ : ಲಿಂಗವೆಂದು ಅರ್ಚಿಸಿ ಸಂಗವಮಱಿಯದ ಲೈಂಗಿಗಳಲ್ಲಿಯದೋ ಶಿವಲಿಂಗವೂಡೆ (ಶಿಮೋಶಾ. ೩೨-೨೦೬) ; ಈತನುಚ್ಛಿಷ್ಟವನೆ ಕೊಂದೀ ಭೂತನಾಥಂ ವಿಧಿನಿಷೇಧಾತೀತನಾದಂ ಲಿಂಗವೀತನ ಲೈಂಗಿ[ಶಾಕಾಂ. ಲಿಂಗಿ] ತಾನಾಗಿ(ಜಿಪೇ. ೦೪-೧೪). [ಲೈಂಗ + ಇ]

ಲೈಂಗಿಕ (ನಾ). ಸ್ತ್ರೀ, ಪುರುಷ ಲಿಂಗಕ್ಕೆ ಸಂಬಂಧಿಸಿದುದು : ಈಟಗಳಲ್ಲಿ ಸಂತಾನೋತ್ಪತ್ತಿ ಲೈಂಗಿಕ (ಲಿಪಿಶಿ. ೧೪). [ಸಂ.]

ಲೈಸನ್ಸು (ನಾ). ಅನುಮತಿ ; ರಹದಾರಿ : ಮೂರು ತಿಂಗಳ ಲೈಸನ್ಸು ಪಡೆದುಕೊಂಡು (ಶಾಪಾಂ. ೪). [←ಇಂ. Licence]

ಲೊಂಚು (ನಾ). ಕೀಳುವಿಕೆ (?) : ಮುಂಗ್ಗಿಡು ಲೊಂಚುಗೊಳ್ಳೆ ಚುಂಚು ತಾವರಿಸಿದ ಕಂಕೆ ಭೋಂಕೆನೆ ನೆಲ್ಲುಗಿದ್ದುಟ್ಟುವಣಕ್ಕೆ (ಪಾ. XVI. ೪೫೬-೨೦ ; ೧೦೫೪). [< ಲೋಚು ?]

ಲೊಕಶಿದಿ . ಲೊಕಶಿರಿ (ನಾ). ಅನೆಗೆ ತೊಡಿಸುವ ಅಲಂಕಾರಗಳಲ್ಲಿ ಒಂದು (?) : ಅನೆಗೆ ಹಳದೀಬಣತಿನ ಬಿಬ್ರೀ ಜೂಲು ರೇಶ್ಮೆದಾಲರು ಸಹ ೧ ಬದಸ್ತೂರು ಲೊಕಶಿದಿ ೧ ಕತ್ತಿಗೆ ಕಟ್ಟುವ ಪಟ್ಟಬದಸ್ತೂರು ೧ ಸಹಾ (ಅ. XIV. ಪಟಿಪ. ೨೯೨-೪೫ ೦೪೨; ೧೮೪೭). **ಲೊಕಶಿರಿ** : ಅನೆಗೆ ಸಾದಾಬಣತಿನ ಜೂಲು ೧ ಲೊಕಶಿರಿ ೧ (ಅ. XIV. ಪಟಿಪ. ೨೯೨-೪೫ ೦೪೨; ೧೮೪೭). [?]

ಲೊಕಶಿರಿ `-ಲೊಕಶಿದಿ' ನೋ.

ಲೊಕ್ಕ೧, ನೆಕ್ಕ, ಲಕಲಿ, ಲಕ್ಕಲಿ, ಲಕ್ಕಿ೧, ಲಕ್ಕಿಲಿ, ಲಕ್ಕೆ೧ (ನಾ). (ಕಟುವಾದ ವಾಸನೆಯುಳ್ಳ, ಪೊದೆಯಾಗಿ ಬೆಳೆಯುವ) ಒಂದು ಬಗೆಯ ಔಷಧೀಸಸ್ಯ ; ಸಿಂಧುವಾರ:"ನಿರ್ಗುಂಡಿ, ಸಿಂಧುವಾರ—ಈ ೫ ಲೊಕ್ಕೆ" (ಕರಾಹು. ೩೩-೮೩) ; ಉರಗನಿವಾಸಂ ಲೊಕ್ಕಿಯ ಪೊರೆಯೊಳ್ ಸವಣಿಸಿ ದೊಡದಱ ತೆಂಕಣ ದಿಸೆಯೊಳ್ ಪುರುಷದ್ವಿತಯದೊಳಕ್ಕುಂ ಕರತ್ರಯನಿಂ ಶರದಿಗುಬು ಘಸ್ಮಾದುಜಸಂ (ಶೋಗಾಚಿ. ೩-೦೩) ; ಪೋಬುರ್ಚ್ಚದ ಲೊಕ್ಕಿಯ ಮರದಲ್ಲೆಲಸಿ ಲೊಕ್ಕಿಯಬ್ಬೆಯೆಂಬರಡನೆಯ ಪೆಸರಂ ತಾಳ್ದಿ (ಅ. VIII. ಪಟಿ. ೩೫-೦೩; ೧೮೭೭); ಮಿಗೆ ಸೊಕ್ಕುಗಂಜಸನೇಳಿವ ಉಸುರನು ನಗೆಮೊಗದೊಳು ತೀವಿ ಸೊಗಸಲೂದಿ ಮಗುಳೇಱಿಸಿದರು ಲೊಕ್ಕಿಯ ನಿಮ್ಮ ಜಾತಿಯ ಬಗೆಗೆ ತಪುದು ಪ್ರಿಯ ಕೊರ್ತರ (ಸಿಂಲಿಪ್ರ. ೩-೩೦). "ಕರಿಲೊಕ್ಕಿ' ಪರಾ. ನೆಕ್ಕಿ: "ಲಕ್ಕಿಲಿಗಿಡ, ನೆಕ್ಕಿ . . . ವಾಮಿ, ಭೂತವೇಷಿ" (ಶಿಕ್ಷ. ೦೦೫) ; ಮರೆ ನೆಕ್ಕಿ ನಿಡಿಲು ಹಾಡಿ ಹಕ್ಕಲು (ಕೆಂಪೂ. ೦೧೩೩, ೩೦೯-೬೫ ೧೩೩೦); ತಾ ಕೊಂಡು ಬಾಳು ನೀರು ತೋಟ ಮನೆ ಮಕ್ಕಿ ಮ[ರ] ನೆಕ್ಕಿ ನಿಡಿಲು . . . ನೀರನೆಜದು ಬಿಟ್ಟನು (ಕೆಂಪೂ. IX-ii. ೪೩೬-೩೦ ; ೧೩೬೦). **ಲಕಲಿ** : ಕಾಶಿತಂಬಿ ಲಕಲಿ . . . ಸೂರ್ಯಕಾಂತಿಪುಷ್ಪಗಳು (ಶಿದೃತ್ತಿ. ೦೮-೮೨). **ಲಕ್ಕಲಿ** : (ಜಿಪೇ. II. ೬). **ಲಕ್ಕಿ೧** : "ನಿರ್ಗುಂಡಿಯನೆ ಸಿಂಧುವಾರ ವಿನಲಿಂದ್ರಾಣಿಯೆನೆ ಲಕ್ಕಿ [ಶಾಕಾಂ. ಲೊಕ್ಕಿ]ಯಕ್ಕುಂ" (ಶುಂಗಣ. ೪೪-೦೫) ; ಹುಲಿಗಿಲ ಬೇರ್ತವಸದ ತಿಗುಡು ಲಕ್ಕಿ ಕಡಸಿಗೆಯ ಬೇರ್ ಮರುಂಗುಳಿಯೊಳಗ್ಗಳಿಸಿರೆ (ಶಿಕ್ಕಾಶಾ. ೯-೨೨) : ಲಕ್ಕಿ:—ಈ ಸೊಪ್ಪಿನ ರಸ ಹರಳ ಎಣ್ಣೆಯಲ್ಲಿ ತೆಗೆದುಕೊಳ್ಳೆ ಮಹೋದರ ಮಾಣ್ಗುಂ (ಜಿಕ್ಕಿ. ೬); ಅಲ್ಲಲ್ಲಿ ಸೀಗೆ, ಲಕ್ಕಿ, ಕೆಜಿಗೆ . . . ಕರ್ಜಿ ಇತ್ಯಾದಿ ಪೊದೆಗಳು ಬೆಳೆದುಕೊಂಡಿದ್ದುವು (ಪುಕಾ. ೨೩೨). ' ಕರ್ಲಕ್ಕಿ' ಪರಾ. **ಲಕ್ಕಲಿ** : "ಶೇಫಾಲಿಕಾ . . . ಕರೀಪಮ್ಮಗಳುಳ್ಳ ಲಕ್ಕಲಿ, ಕರೀಲಕ್ಕಿಲಿ" (ಸಿಣ್ಣಂ. ೦೬. ೦೨೮). **ಲಕ್ಕೆ೧** : (ಪಂಪಾ. ೦೮೩).

[ವೇ.ಕ ತಮಿ. ಮಲ.ನೊಚ್ಚಿ ; ತುಳು. ನೆಕ್ಕಿ, ಲಕ್ಕಿ ; ತೆಲು. ಲೊಕ್ಕಿ, ನೊಚ್ಚಲಿ]

ಲೊಕ್ಕಿ೨ (ನಾ). ಒಂದು ಊರಿನ ಹೆಸರು ; ಪ್ರ ಈಗಿನ ಧಾರವಾಡ ಜಿಲ್ಲೆಯ ಲಕ್ಕುಂಡಿ ; ಲೊಕ್ಕಿ ಪೊಗದ್ಯಾಣವರ್ಪತ್ತು ಅಂಕದೊಳ್ಳು (ಶಿಶಾ. XV. ೦-೨೦ ; ೧೦೬೨). 'ಲೊಕ್ಕಿಗುಂಡಿ' ಪರಾ.

ಲೊಕ್ಕಿಯ ಗದ್ಯಾಣ = ಲೊಕ್ಕಿಗುಂಡಿಯಲ್ಲಿ ಟಂಕಿಸಿದ ಗದ್ಯಾಣ : ಬಡ್ಡಿಯಿಂದಕ್ಷಯಮಾಗಿ ಕೊಟ್ಟ ಲೊಕ್ಕಿಯ ಗದ್ಯಾಣಂ (ಅ. VII. ಪಟಿಪ. ೮೨-೫೮ ; ೧೧೩). ಲೊಕ್ಕಿಯಚ್ಚು = ಲೊಕ್ಕಿಗುಂಡಿಯ ಗದ್ಯಾಣವನ್ನು ತಯಾರಿಸುತ್ತಿದ್ದ ಅಚ್ಚು : ದೇವಗ್ಗೆ ಬಿಟ್ಟ ಹೊಸ ಲೊಕ್ಕಿಯಚ್ಚಿನ ಗದ್ಯಾಣ ಹತ್ತು (ಶಿಶಾ. XV. ೨೨-೬೪ ; ೧೧೬೨). ಲೊಕ್ಕಿಯ ಪೊನ್, ಲೊಕ್ಕಿಯ ಹೊನ್ = ಲೊಕ್ಕಿಯ ಗದ್ಯಾಣ : ಶ್ರೀಸ್ವಾಮಿದೇವರ್ ನವಿಲಚ್ಚಿನ ಪೊನ್ನಂ ಲೊಕ್ಕಿಯ ಪೊನ್ನಾನೆಯುಂ(ಂ)ಮಾ ಪೊನ್ನ ತೂಕಮುಮಾಗಿ ಪೊಯ್ದು ಸಲಿಸುವರು (ಶಿಶಾ. IX-i. ೦೬೯-೨೭; ೧೦೭೭) ; ಸೋಮೇಶ್ವರ ಭಟ್ಟರ್ಗ್ಗೆ ಪಾದಪೂಜೆಯಯ್ತಂದ್ರುಗದ್ಯಾಣ ಲೊಕ್ಕಿಯ ಪೊನ್ನ ಕೊಟ್ಟು . . . ಸರ್ವಬಾಧಾಪರಿಹಾರವಾಗಿ ಬಿಟ್ಟ ಗಟ್ಟಿ (ಶಿಶಾ. XX. ೦೦೦-೪೨ ; ೧೧೨೨) ; ಲಕ್ಕಕ್ಕಿಪ್ಪತ್ತೈರಡಂ ಲೊಕ್ಕಿಯ ಹೊನ್ನಿಂಗೆ ಸಾವಿರಕ್ಕಂ ಬೆಲೆ (ಕೃಪಾಂ. ೧೦೬೦೦೬).

[ಪ್ರ ಇದು 'ಲೊಕ್ಕಿಗುಂಡಿ' ಎಮ್ಮುವುದರ ಪಂಕ್ತಿಪ್ರರೂಪ]

ಲೊಕ್ಕಿಗ (ನಾ)· ಒಂದು ಬಗೆಯ ಹಕ್ಕಿ : ಲೊ[ಣಣಂ.ಲೊ]ಕ್ಕಿಗನು ಹುದಿಕೀಲು ಹಾಲ್ವಕ್ಕಿ ಕೋಗಿಲೆ ಕೋಟುಮೇವನ ಕುಕ್ಕುಮಾಯಿಯ ಕೆಂಡವಕ್ಕಿಗಳವಜಿಸೊಲೊಪ್ಪಿದುದು (ಪಾಳ್ಕಾ· ೩-೫೨). [?]

ಲೊಕ್ಕಿಗದ್ಯಾಣ (ನಾ)· ಲೊಕ್ಕಿಗುಂಡಿಯಲ್ಲಿ ಟಂಕಿಸಿದ ಗದ್ಯಾಣ : ವರ್ಷಕ್ಕೆ ಪಣವ್ಯದ್ಧಿಯ ಲೆಕ್ಕದೆ ಕೊಟ್ಟು ಲೊಕ್ಕಿಗದ್ಯಾಣಂ ನೂರಿಪ್ಪತ್ತು (ಎಇ· XII. ೪೯-೬೩; 1112). [ಲೊಕ್ಕಿ$_{೨}$+ಗದ್ಯಾಣ]

ಲೊಕ್ಕಿಗುಂಡಿ (ನಾ). = ಲೊಕ್ಕಿ$_{೨}$: ಎಸೆದುವಸದಳಂ ಲೊಕ್ಕಿಗುಂಡ್ಗೇ ಪುರೋರ್ಬ್ಬೀಪತಿ ಚಂಚದ್ಭುತ್ಸಕೋಟಿಸ್ಫುರಿತಮುಕುಟಸಂಘಾಸಪ್ಪನಾಧಿವಾಸಂ (ಕೌಪಾ. XI-i. ೩೨-೪೪ ; 1008). [ಲೊಕ್ಕಿ$_{೨}$+ಗುಂಡಿ$_{೩}$]

ಲೊಕ್ಕಿಯಬೆ ' ಲೊಕ್ಕಿಯಬ್ಬೆ ' ನೋ·

ಲೊಕ್ಕಿಯಬ್ಬೆ, ಲೊಕ್ಕಿಯಬೆ (ನಾ)· [ಜೈನ] ಪದ್ಮಾವತಿ ಎಂಬ ಯಕ್ಷಿಯ ಹೆಸರು : ಪದ್ಮಾವತೀದೇವಿ . . . ಲೊಕ್ಕಿಯ ಮುರದಲ್ಲಿಲಸಲೊಕ್ಕಿಯಬ್ಬೆಯೆಂಬೆರಡನೆಯ ಜಿನರಂ ತಾಳ್ದಿ (ಎಳ· VIII. ಪಗಕ· ೩೫-೦೨; 1077) ; ಪದ್ಮಾವತಿಯು ಲೊಕ್ಕಿ ಎಂಬ ಮುರದಲ್ಲಿದ್ದುದರಿಂದ ಅವಳಿಗೆ ಲೊಕ್ಕಿಯಬ್ಬೆ ಎಂಬ ಪರ್ಯಾಯನಾಮವೂ ಇತ್ತು (ಕಜಾಶ. ೦೦೦). **ಲೊಕ್ಕಿಯಬೆ** : ಲೊಕ್ಕಿಯಬೆಯುಂ ಜಿನಗೇಹಮುಂ ಮಾಡಿದಂ ಧರೆಮೆಲ್ಲಂ ಪೊಗಳ್ವನ್ನೆಗಂ. . . ಅವನಿಪಾಳಕಂ (ಎಳ.VII.೩೪೩· ೦೦೪-೨೦; ೮೫೦ ?).

[ಲೊಕ್ಕಿ$_{೨}$ + ಅಬ್ಬೆ$_{೨}$]

ಲೊಚ (ನಾ). ಒಂದು ಅನುಕರಣ ಶಬ್ದ : 'ಲೊಚಗರೆ', 'ಲೊಚಗುಟ್ಟು' ಪರಾ.

ಲೊಚಲೊಚ (ದ್ವಿರುಕ್ತಿ) : ನಾದುಗಳು· ಬೆಕ್ಕುಗಳ ಹಾಗೆ ತುದಿನಾಲಗೆಯಿಂದ ಲೊಚಲೊಚ ನೀರು ಕುಡಿಯುತ್ತವೆ (ಮುಂಡಿಯು· ೩-೪೦).

ಲೊಚಕ್ (ನಾ)· ಒಂದು ಅನುಕರಣ ಶಬ್ದ. 'ಲೊಚಕು' ಪರಾ.

ಲೊಚಕು (ಕ್ರಿ). = ಲೊಚಗುಟ್ಟು : ಗವರುತಿವೆ ಹುಲಿಯಿಂತೆ· ಲೊಚಕುತಿದೆ ಹಲ್ಲಿ (ಗಿಳಾ. ೦೦೬-೦೩).[< ಲೊಚಕ್]

ಲೊಚಗರೆ (ಕ್ರಿ)· 'ಲೊಚ್' ಎಂದು ಶಬ್ದಮಾಡು : ನಮ್ಮ ವೃತ್ತಾಂತವನ್ನೆಲ್ಲಾ ಹೇಳಿದ. ಅವರೆಲ್ಲರೂ ಲೊಚಗರೆದರು (ಕಂಗಾಳ್ಳ· ೦೦೩).

[ಲೊಚ + ಕರ್$_{೨}$]

ಲೊಚಗುಟ್ಟು (ಕ್ರಿ). ಬಾಯಿಂದ 'ಲೊಚ್' ಎಂದು ಶಬ್ದಮಾಡು : ಕೊಕ್ಕರೆಯಂತೆ ತಲೆಯಾಡಿಸಿ ಅವಳೇ ಆದ ವಿಶೇಷರೀತಿಯಲ್ಲಿ ಲೊಚಗುಟ್ಟಿದಳು (ಹೂಸ್ಕ್ಷ. ೭೯) ; ಹಲ್ಲಿ ಲೊಚಗುಟ್ಟಿತು (ಪಪಪಂ· ೦೦೦-೦೬).

[ಲೊಚ + ಕುಟ್$_{೨}$]

ಲೊಚ್ಚು (ನಾ)· ಒಂದು ಅನುಕರಣ ಶಬ್ದ : 'ಲೊಚ್ಚುಗರೆ' ಪರಾ.

ಲೊಚ್ಚುಗರೆ (ಕ್ರಿ). = ಲೊಚಗುಟ್ಟು : ಬಾಯಿಂದ ಲೊಚ್ಚುಗರೆಯುತ (ಪಗಂಪಿ· ೨೪೯-೦)· [ಲೊಚ್ಚು + ಕರ್$_{೨}$]

ಲೊಟ (ನಾ). ಒಂದು ಅನುಕರಣ ಶಬ್ದ : 'ಲೊಟಗುಟ್ಟು' ಪರಾ.

ಲೊಟಲೊಟ (ದ್ವಿರುಕ್ತಿ) : ಲೊಟಲೊಟ ಶಬ್ದ ಮಾಡುವೇಡ (ಕಜಾ).

ಲೊಟಕ್ (ನಾ). ಒಂದು ಅನುಕರಣ ಶಬ್ದ : ಲೊಟಕ್ ಎಂದು ಆ ಮರವ ಕೊಂಬೆ ಮುರಿಯಿತು (ಕ.ಗ).

ಲೊಟಕಲು (ನಾ). 'ಲೊಟಲೊಟ' ಎಂದು ಮಾತನಾಡುವಿಕೆ : ಪಟಗುಟ್ಟುವಿಕೆ : ಆ ಮುದುಕಿಯ ಲೊಟಕಲು ಕೇಳಲಾಗುವುದಿಲ್ಲ (ಕಜಾ).

[ಲೊಟಕು + — ಅಲು (< —ಅಲ್$_{೨}$)]

ಲೊಟಕು, ಲೊಟಗು (ಕ್ರಿ)· ಪಟಗುಟ್ಟು : ಗೊಣಗು : ಸೋರುವ ಮನೆಯೂ ಲೊಟಕುವ ಗಂಡನೂ ಸರಿ (ಗಾಡಿ). **ಲೊಟಗು** : ನಮ್ಮ ತಂದೆಯ ಮೇಲೆ ನಮ್ಮಮ್ಮ ಲೊಟಗುತ್ತಿದ್ದರು (ಕಜಾಪ. ೫೬೪).

[< ಲೊಟ]

ಲೊಟಕೆ (ನಾ)· ನಾಲಗೆಯಿಂದ ಮಾಡುವ ಒಂದು ಬಗೆಯ ಶಬ್ದ : ಉಪ್ಪಿನಕಾಯನ್ನು ಲೊಟಕೆ ಹಾಕುತ್ತ ತಿಂದಳು (ಕಜಾ).

ಲೊಟಗು 'ಲೊಟಕು' ನೋ·

ಲೊಟಗುಟ್ಟು (ಕ್ರಿ)· = ಲೊಟಕು : ಹಳಬರೇ ಹೀಗೆ ಏನಾದರೂ ಲೊಟಗುಟ್ಟುತ್ತಲೇ ಇರೋದು (ಪಜ್ಯಪ. ೦೬೯). [ಲೊಟ + ಕುಟ್$_{೨}$]

ಲೊಟಗೆ (ನಾ)· ನಾಲಗೆಯಿಂದ ಮಾಡುವ ಒಂದು ಬಗೆಯ ಶಬ್ದ : "ಸಪೆದರೆ ಈ ಪಾಪವನ್ನು ಸವಿಯುವೇಕು" ಎಂದು ದೊಡ್ಡದಾಗಿ ಲೊಟಗೆ ಹಾಕಿದ (ಪಜಾಪ್ರ· ೦೪).

ಲೊಟನ್ಪಾರಿವಾಳ , ನೊಟನಪಾರಿಪಾಳ (ನಾ). (ನೆಲದ ಮೇಲೆ ಹೊರಳಾಡುವ) ಒಂದು ಬಗೆಯ ಪಾರಿವಾಳ : "ಪಾರಾವತೇಷು ವಿಲುಠನ್ = ಲೊಟನ್ಪಾರಿವಾಳ" (ಪಾಪುಚಾ· ೩೩ ೧೫೪). **ನೊಟನ ಪಾರಿವಾಳ** : ನೊಟನ ನೊಟನಪಾರಿವಾಳ· ಜುಟ್ಟಿನು ಧರಿಸಿಹವು (ಪಾಅಕ್ಷ· II. ೩೭೦). 'ಲೋಟ್ಟಾ' ಪರಾ.

[ಲೊಟನ್$_{೪}$ ($_{೪}$ ← ಸಂ. ಲುಠನ) + ಪಾರಿವಾಳ$_{೨}$]

ಲೊಟಪಟ (ನಾ). ಖುಲಿಮಾಮುದು, ನಿರರ್ಥಕವಾದುದು ಎಂಬರ್ಥವನ್ನು ಸೂಚಿಸುವ ಒಂದು ಅನುಕರಣ ಶಬ್ದ : (ಕ).

ಲೊಟಪಾಟ (ನಾ)· = ಲೊಟಪಟ : ಲೊಟಪಾಟ ಸಂಸಾರದೊಳಗೆ ಸಿಲುಕಿ ನಾ ಏನು ನಿನ್ನ ಧ್ಯಾನವ ಮಾಜಿತೆನಯ್ಯ (ಪ್ರಕಂವ. ೫-೦೨ ಪ್ರಭಾ).

ಲೊಟಲೊಟನೆ (ಅ)· 'ಲೊಟಲೊಟ' ಎಂಬ ಶಬ್ದವನ್ನು ಸೂಚಿಸುವ ಒಂದು ಅನುಕರಣಾವ್ಯಯ : ಆ ಮರದ ಕೊಂಬೆ ಲೊಟಲೊಟನೆ ಮುರಿದು ಬಿತ್ತು (ಕಜಾ)· [< ಲೊಟ + — ಅನ್ಸೆ]

ಲೊಟವಿಟ (ನಾ)· = ಲೊಟಪಟ : ಲೊಟವಿಟ ಸಂಸಾರ ಹೇಯವೆನ್ನಿ (ಪೋಚಂ. ೪೯-೬).

ಲೊಟ್ಟಾಲೊಟ್ಟಿ (ನಾ)· ಒಂದು ಅನುಕರಣ ಶಬ್ದ : ಬಿಟ್ಟ ಸೂಟಿಯುಲರಿ ನೃಪಾಲರ ಮುಟ್ಟಿ ಪೂಡದಲಿಸುತ್ತ ಮೋಹಿಪ ಭಟ್ಟನೊಡಹಾವ್ದುಪಿತ ಬಲದೊಳಗಾನವಿಪರಿದು ಒಟ್ಟುಗುಟ್ಟುತ ಪಣನ ಲೊಟ್ಟಾಲೊಟ್ಟಿ [ಪಾಣಂ. ನೊಟ್ಟಲೊಳೊಟ್ಟಿ, ಪಟ್ಟುಪಟ್ಟಿ] ಮಸಗಲು ಕಳನ ಚೌಕದಲಟ್ಟಿಯಾಯಿಸ ಬಲ್ಲಡದ ರಾವುತನು (ಕಾಪ್ರಾಣ. ೩-೨೦೯) ; ಪೆಟ್ಟಿ ಸೀಳಿದು ಪಾಯ್ಕಿ ದಾಚಿಯ ಕೊಟ್ಟು ಮೋಚಿಯನೊಲೆದು ಹರಿದರೆಯಟ್ಟಿ ಹಿಡಿದಪ್ಪಳಿಸಿ ಜೋದರನಂಜ್ಸಯಿದರೆಮು ಇಟ್ಟು ಕೆಡಹಲು ಪೆಣನ ಲೊಟ್ಟಾಲೊಟ್ಟಿ [ಪಾಣಂ. ಅಟ್ಟಿಗಳೊಟ್ಟಿ, ಮೊಟ್ಟಲೊಳೊಟ್ಟಿ] ಮಸಗಿತು ತುರಗನರರಥ ವಿಟ್ಟಣಿನೆ ಸಪಜಿಪವು ದಂತಿವ್ರಾತವುಳುಮುದೊಳು (ಕಾಪ್ರಾ.೦೯· ೪-೭೬).

[?]

ಲೊಟ್ಟಿ (ನಾ)· ೧. ಹೆಂಡ ; ಮದ್ಯ : 'ಲೊಟ್ಟಿಗ ', 'ಲೊಟ್ಟಿಗುಡಿಹಿಂ' ಪರಾ. ೨. ಮರದಿಂದ ಹೆಂಡವನ್ನು ಇಳಿಸಲು ಬಳಸುವ ಮಣ್ಣಿನ ಸಣ್ಣ ಮಡಕೆ. [ದೇ·ತ ತಮಿ. ತೆಲು. ಲೊಟ್ಟಿ]

ಲೊಟ್ಟಿಗ (ನಾ). ಮಣ್ಣಿನ ಮಡಕೆಯಲ್ಲಿ ಮದ್ಯಪಾನಮಾಡುವವನು : (ಎಕಟ್ಟ· XVII. ೯). [ಲೊಟ್ಟಿ + — ಗ್$_{೨}$]

ಲೊಟ್ಟಿಗುಡಿಹಿಂ (ನಾ)· = ಲೊಟ್ಟಿಗ (?) : ಒಟ್ಟಿದ್ದ ಮಣ್ಣಿಗೂ ನೆಟ್ಟಿದ್ದ ಕಲ್ಲಿಗೂ ಕಟ್ಟಿದ್ದ ಲಿಂಗಪಡಿಯಾಗಿ ಬೀಳುವ ಲೊಟ್ಟಿಗುಡಿಹಿಗಳನೇನೆಂಬೆನಯ್ಯಾ ಕಲಿದೇವರ ದೇವಾ (ಪುಬಪಾ· ೩೨-೩೯).

[ಲೊಟ್ಟಿ + ಕುಡಿಹಿಂ]

ಲೊಟ್ಟಿಮೂಳ (ನಾ)· = ಲೊಟ್ಟಿಗ (?) : ಒಟ್ಟಿದ ಲಿಂಗವ ಬಿಟ್ಟು ಬಿಟ್ಟಿದ ಲಿಂಗಕ್ಕೆ ಹೋಗಿ ಹೊಟ್ಟಿಪಿಯಾಗಿ ಬೀಳುವ ಲೊಟ್ಟಿಮೂಳನ ಕಂಡಡೆ ಮೆಟ್ಟಿದ್ದ ಎಡವಾದರಕ್ಷೆಯ ತಗೊಂಡು ಲಟಲಟನೆ ಹೊಡಿ (ಪಜಾ. I. ೩೫೮). [ಲೊಟ್ಟಿ + ಮೂಳ್$_{೨}$ (< ಮೂಟ)]

ಲೊಟ್ಟೆ₁ (ನಾ)· ನಾಲಗೆಯಿಂದ ಮಾಡುವ ಒಂದು ಬಗೆಯ ಶಬ್ದ : ಲೊಟ್ಟೆಯಲ್ಲಿ ಗಟ್ಟಿಗನಾದರೂ ಕೊಟ್ಟ ವಿನಹಾ ಬಿಡುವುದಿಲ್ಲ (ಗಾಡಿ)

ಲೊಟ್ಟೆಹಾಕು = ನಾಲಗೆಯಿಂದ ಶಬ್ದ ಮಾಡು : ಅವರು ಲೊಟ್ಟೆ ಹಾಕಿಕೊಂಡು ಎತ್ತುಗಳನ್ನು ಓಡಿಸಿದರು (ಕೃಷಿ). **ಲೊಟ್ಟೆಸೊಡೆ** = ಲೊಟ್ಟೆಹಾಕು : ಗಾಡಿ ಹೊಡೆಯುವವ ಲೊಟ್ಟೆಸೊಡೆಮುವಂತೆ ಅಯ್ತು (ಭುಜಬಲಿಶಂ· ೧೦) ; ದುಪ್ಪಾರಿ ಬಡ್ಡಿಗಾರವ್ನ ಕಡೆ ಕಣ್ಣುಮಿಟುಕಿಸಿ ಲೊಟ್ಟೆ ಹೊಡೆದನು (ಪಗಡೂ· ೦೨೨).

ಲೊಟ್ಟೆ₂ (ನಾ). ೧. ಹುರುಳಿಲ್ಲದುದು ; ವ್ಯರ್ಥವಾದುದು : ಹೀಗೆ ಹುತ್ತುಗಯನ್ನು ಬಿಟ್ಟುಕೊಂಡಿರುವುದು ಅಶ್ರೇಯಸ್ಕರ. ಪೂರ್ವಾಚಾರಕ್ಕೆ ವಿರುದ್ಧ. ದ್ರಾಹ್ಮಣಮತಕ್ಕೆ ಸರಿಯಾದ್ದಲ್ಲ – ಹೀಗೆಯು ಏನೇನೋ ಲೊಟ್ಟೆ· ಲಸ್ಯ ಇದೆಯಲ್ಲ (ಜಂಪು· ೧೩). ೨. ಸುಳ್ಳು ; ಸಟೆ : ಹಾಗೆ ಹೀಗೆ ಎಂದು ಕಂಡಾಪಟ್ಟೆ ಲೊಟ್ಟೆಹೊಡೆದರು (ಗಂಗಾಪ· ೦೬೭).

ಲೊಟ್ಟೆಲೊಸಕು, ಲೊಟ್ಟುಲೊಸಕು = ಕೆಲಸಕ್ಕೆ ಬಾರದುದು ಎಂಬುದನ್ನು ಸೂಚಿಸಲು ಬಳಸುವ ಮಾತು : ಲೊಟ್ಟೆಲೊಸಕು ಅಂತ ಸೂರೆಂಟು ಹೇಳಿದರು (ಗಂಗಾಪ· ೦೦೯); ಬಾಬು ನಿಮ್ಮ ಚಿಕ್ಕಮ್ಮಣ್ಣಿಯವರಿಗೆ ವಿನಾಗಬೇಕು ? ಲೊಟ್ಟುಲೊಸಕೂ (ಪಾರ್ವತಿ· ೨೫೦).

[ದೇ.ತ ತಮಿ. ಲೊಟ್ಟೈ ; ಮಲ. ಲೊಟ್ಟ ; ತುಳು. ಲೊಟ್ಟೆ]

ಲೊಟ್ಟೆ₃ (ನಾ)· (?): ದೇಗುಲ, ಲೊಟ್ಟೆ, ಕಟ್ಟೋಗರ (ಆಕ್ಕಳು· ೦೨೮) : ಕಟ್ಟಿನ ಕೆಳಗೆ ಲೊಟ್ಟೆಯ ಶ್ರೀಧರಕ್ಕವಿಸ್ಸರು (ಇಂ· ೦೪೧೬, ಪಾರ್ವತಿ· ೨೪೯-೨೮; ?). [?]

ಲೊಡಕ (ನಾ)· ೧. ವ್ಯರ್ಥವಾದುದು : ಲೊಡಕ ಲೊಡಕ ಜಿಹ್ವರ ಕೆಟ್ಟಸಂಸಾರವ ನೋಡಮ್ಮವ್ವ (ಪ್ರಭಂ· ೪-೦೦೦ ಪದ್ಯ). (ಗು). ೨. ವ್ಯರ್ಥವಾದ : ಲೊಡಕಸಂಸಾರವ ನಮ್ಮೆಲ್ಲರ ಗತಿರಹಿತ ಮಾಡುವ ಲೊಡಲೊಟ್ಟೆಮ್ಮ (ಪ್ರಭಂ· ೪-೦೦೦ ಪದ್ಯ). [?]

ಲೊಡಕಜಿಹ್ವ (ನಾ)· ಹರಟೆ ಹೊಡೆಯುವ ನಾಲಗೆಯವನು : ಲೊಡಕ ಲೊಡಕಜಿಹ್ವರ ಕೆಟ್ಟಸಂಸಾರವ ನೋಡಮ್ಮವ್ವ (ಪ್ರಭಂ· ೪-೦೦೦ ಪದ್ಯ). [ಲೊಡಕ+ಜಿಹ್ವ]

ಲೊಡಲೊಟ್ಟೆ 'ಲೊಳಲೊಟ್ಟೆ' ನೋ.

ಲೊಡಲೊಡ (ನಾ)· ಒಂದು ಅನುಕರಣ ಶಬ್ದ : ಲೊಡಲೊಡ ಎಂದು ಮಾತನಾಡಬೇಡ (ಪಾಠ).

ಲೊಡ್ಡ 'ರೊಡ್ಡ' ನೋ.

ಲೊಡ್ಡು, ಲಡ್ಡಿ, ಲಡ್ಡು₁ (ನಾ)· ೧. ನಿಸ್ಸಾರವಾದುದು : ಪೊಳ್ಳು ; ಜಳ್ಳು : 'ಲೊಡ್ಡುಮರ' ಪರಾ. **ಲಡ್ಡಿ** : ೧. ಹೆಯ ಕಟ್ಟುಗೆಗಳು ನೀರೊಳಗೆ ಇರುವುದರಿಂದ ಲಡ್ಡಿ ಹಾಯದೆ ಕಟ್ಟನಂತೆ ಆಗಿ ಇರುವುವು (ಕೃಷಿ· ೦೦೨). **ಲಡ್ಡು₂** : ೨. ನಿಸ್ಸಾರವಾದ ಜೊಂಡು ಹುಲ್ಲು : ಗದ್ದೆಗಳಲ್ಲೆಲ್ಲಾ ಲಡ್ಡು ಮತ್ತು ಪಡಕ ಬೆಳೆದುಕೊಂಡಿತ್ತು (ಕಪ್ಪೂಕು· ೨೨೦). ೩. (ಆಲಂ) ಪೊಳ್ಳುತನ : ದೌರ್ಬಲ್ಯ : ಈ ದುಡ್ಡಿದ್ದವರ ಲಡ್ಡು ಹಿರಿಯೋ ದಿನಾ ಇನ್ನೇನೂ ದೂರಿಲ್ಲಾ (ಪಂಚತಂ· ೦೭೭). (ಗು)· ೪. ಪೊಳ್ಳಾದ ; ಜಳ್ಳಾದ : ಅದೊಂದು ಹಳೆಯ ಲಡ್ಡುಪೆಟ್ಟಿಗೆ (ಪಾಂಡಿತ್ಯ· ೪೨) : ಹೀಗೆ ನಡೆಯುವ ಲಡ್ಡು ಯಂತ್ರ ಯಾವಾಗ ಮುರಿದು ಬಿದ್ದರೂ ಆಶ್ಚರ್ಯವಿಲ್ಲ (ಪಾಪಚಾರಿ· ೨೫೭). ೫. ನಿಸ್ಸತ್ತ್ವನಾದ : ದುರ್ಬಲನಾದ : ನಮ್ಮ ತಂದೀನೂ ಲಡ್ಡ ಮನುಷ್ಯ ಅಲ್ಲ (ಸಂತಾಪು· ೨೩೦).

ಲೊಡ್ಡಾಗು, ಲಡ್ಡಾಗು = ಪೊಳ್ಳಾಗು ; ನಿಸ್ಸಾರವಾಗು : ಮರದಲ್ಲಿರುವ ನೀರು ವಿನಾಶಕರವಾದ ವಿಕಾಣಾಜೀವಿಗಳಿಗೂ ಅಣುಜೀವಿಗಳಿಗೂ ಆಹಾರವಾಗಿ ಮರವು ಲೊಡ್ಡಾಗುತ್ತದೆ (ಪರಿಜಾ· ೨೯೦) ; ಕೋಟದ ಸಾರ ದಾಟುವಾಗ ಆನೆಕಿವುರಗಳು ತುಂಬ ಲಡ್ಡಾಗಿದ್ದುದರಿಂದ ಬಳುಕಿದವು (ಪಾಂಡ್ಯ· ೦೨೩). **ಲೊಡ್ಡು ಮಾಡು** = ಪೊಳ್ಳುಮಾಡು ; ಟೊಳ್ಳುಮಾಡು : ಅಂಥ ಪದಾರ್ಥವನ್ನು . . . ಒಳಗಿನಿಂದ ಕುಟ್ಟಿ ತಿಂದು ಲೊಡ್ಡು ಮಾಡುತ್ತಲೇ ಇರುತ್ತದೆ (ಪಂಚತಂ· ೨೫೩). **ಲೊಡ್ಡು ಹಿಡಿ** = ಪೊಳ್ಳಾಗು ; ಟೊಳ್ಳಾಗು : ಸಾಮಾನುಗಳು ಮೂಲೆ ಮೂಲೆಯಲ್ಲಿಯೂ ಧೂಳು ತುಂಬಿ ಲೊಡ್ಡುಹಿಡಿದು ಬಿದ್ದಿದ್ದರೆ , ಅದಕ್ಕೆ ಏನೂ ಅರ್ಥವಿರಲಿಲ್ಲ (ಪಾಂಡ. II. ೦).

ಲೊಡ್ಡುಗಿಡಮರ (ನಾ).ಒಂದು ಬಗೆಯ ಮರ : ಬಲಲೊಡ್ಡಿ, ಬುಡಿಗಾನೆ, ರೊಮ್ಮುಗಿನಮರ (ಕ್ಷುಶಿ· ೬೩-೨೯೦). [? + ಮರ₁]

ಲೊಡ್ಡುಮರ, ಲಡ್ಡುಮರ (ನಾ). ಪೊಳ್ಳಾದ ಮರ; ಜಳ್ಳು ಮರ : ಹಳೇಕಾಲದ ಲೊಡ್ಡುಮರ ಅದು (ಶಾಬಾ. ೦೭೩). **ಲಡ್ಡುಮರ** : ಈ ಸಲ ಬಂದ ಬರುಗಾಳಿಗೆ ಲಡ್ಡುಮರಗಳೆಲ್ಲ ಮುರಿದು ಬಿದ್ದವು (ಕೃಷಿ).

[ಲೊಡ್ಡು + ಮರ₁]

ಲೊಡ್ಡಿ 'ಲೊದಳೆ' ನೋ.

ಲೊದಳೆ, ಲೊದಡಿ (ನಾ)· ೧. ಜೊಲ್ಲು ; ಲಾಲಾರಸ : ಸುರಿವ ಬೆದುರಿನ ಬಾಯಿಲೊದಳೆ[ಪಾಣಾ· ಬಾಯ ಲೋಳೆ]ಯ . . . ಕುದುರೆ ಬೀಜಿತು ಭಯವನಹಿತರಿಗೆ (ಕವಿರಾ· ೩-೩೦-೩೩). ೨. ಜಿಗುಟಾದ ಮುದ್ದೆ : ತಲದೊಳ್ ತಕ್ಕೆಗೊಂಡ ಮಣ್ಣಿದುಳ ಲೊದಳೆಯಂ ಮೆಟ್ಟಿ (ಪಾಂಡಿತ್ಯ· ೯-೦೦೯ ಶ). **ಲೊದಡಿ** : ೨. ರಾಯಣಾಹೇಬರು ವೇದನೆಯಿಂದ ಪರಳಿದರು. ಕಮ್ಮ ಬಂತು. ಬಾಯಿಂದ ನೆತ್ತರ ಲೊದಡಿ ಬಿದ್ದಿತು (ಕ್ರಾಕಾಪ್ರ· ೨೦೦). ೩. ಕಫ ; ಶ್ಲೇಷ್ಮ : ಮುದುಕನು ಕೆಮ್ಮು ಕಾಳಿ ಕೊಂಡು ಬಹು ಪ್ರಯಾಸದಿಂದ ಲೊದಡಿಯನ್ನುಗುಳಿ ಕುಳಿತುಕೊಂಡು ಕೇಕಿದನು (ಕಾಬಾಪ್ರ· ೦೦). 'ಲೋಳೆ' ಪರಾ.

ಲೊಲೊಲ್ಲೊಟ್ಟೆ 'ಲೊಳಲೊಟ್ಟೆ' ನೋ.

ಲೊಳ್ (ನಾ)· ಒಂದು ಅನುಕರಣ ಶಬ್ದ : ಲೊಳ್ ಎಂದು ನಾಯಿ ಬಗುಳಿತು (ಪಾಠ).

ಲೊಳ (ನಾ)· ಬರಿದಾಗಿರುವುದನ್ನು ಸೂಚಿಸುವ ಒಂದು ಅನುಕರಣ ಶಬ್ದ : 'ಲೊಳಲೊಟ್ಟೆ' ಪರಾ.

ಲೊಳಲೊಟ್ಟೆ, ಲೊಡಲೊಟ್ಟೆ, ಲೊಲೊಲ್ಲೊಟ್ಟೆ (ನಾ). ಪ್ರಯೋಜನ ವಿಲ್ಲದುದು ; ನಿಷ್ಪ್ರಯೋಜಕವಾದುದು ; ವ್ಯರ್ಥ : ಲೊಳಲೊಟ್ಟೆ ಎಲ್ಲಾ ಲೊಳಲೊಟ್ಟೆ (ಪ್ರಭಂ· ೪-೦೦೦ ಪದ್ಯ). **ಲೊಡಲೊಟ್ಟೆ** : ಲೊಡಕ ಸಂಸಾರವ ನಮ್ಮೆಲ್ಲರ ಗತಿರಹಿತ ಮಾಡುವ ಲೊಡಲೊಟ್ಟೆಮ್ಮ (ಪ್ರಭಂ· ೪-೦೦೦ ಪದ್ಯ). **ಲೊಲೊಲ್ಲೊಟ್ಟೆ** : ಇವಳಿಗೆ ಸಹಾಯ ಲೊಲೊಲ್ಲೊಟ್ಟೆಯೆಂದು ಬೇರೆ ಕೆಲವರು (ಜಾಗೃಪ್ರ· ೨೯೦) ; ಊರಿಗೆ ಹಬ್ಬವಾದರೆ ನಾಯಿಗೆ ಲೊಲೊಲ್ಲೊಟ್ಟೆ (ಗಾಪ). [ಲೊಳ+ಲೊಟ್ಟೆ₂·/ತಮಿ. ಲೊಟಲೊಟ್ಟೈ]

ಲೋಕ (ನಾ)· ೧. ಸೃಷ್ಟಿಯಲ್ಲಿ ಕಾಣುವ ಭೂಮಿ, ಆಕಾಶ, ಸಮುದ್ರ ಗಳ ಎಲ್ಲ ಭಾಗಗಳು ಸೇರಿದ ಭಾಗ ; ವಿಶ್ವ ; ಪ್ರಪಂಚ ; ಜಗತ್ತು : "ಭುವನಂ, ವಿಷ್ಟಪಂ, ಲೋಕಃ, ಜಗತ್ ― ಈ ೪ ಜಗದ ಪೆಸರ್" (ಶಬ್ದಮ· ೨೨-೦೩೩) ; ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯ ಬಿಟ್ಟೊಡೆ ನಿಮ್ಮ ನೆಗುವರಮಾ (ಜಿಪ· ೬೩) ; ಲೋಕವಿವಪ ಮನೆ, ಲೋಕದುದ್ಧಾರಣೆ ಮನೆವಾರ್ತೆ (ಗೋಕೃಕಾ· ೨-೧೨). ೨. ಭೂಮಿ ; ಮರ್ತ್ಯಲೋಕ : ಲೋಕದೊಳಾಂ ಕಾಣದರಿಲ್ಲೀ ಕುತ್ಸಂ ಪೊರ್ದಿ ನಮೆವ ಮಾನಿಸರಂ ಕೇಳಿ . . . ಕಂಡಱಿಯೆಂ (ಧರ್ಮಾಪ್ರ· ೪-೯೦) ; ನಂಬಲಱಯರೀ ಲೋಕದ ಮನುಜರು (ಜಿಪ· ೦೦೬) ; ಲೋಕದೊಳಗೆಲ್ಲ ಕಂಡುದನು ನುಡಿದು ತಾನೇಕವಾಗಿಹನು (ಪಾಪ್ರ· ೦೬). ೩. (ಸಾಮಾನ್ಯ) ಜನ ; ಪ್ರಜೆ ; ಜನತೆ :" ಜನಃ, ಲೋಕಃ, ಪ್ರಜಾ ― ಈ ೩ ಪ್ರಜೆ "

(ಕಂಪಾರಾ. ೪೭-೧೨೯). ೪. ಮನುಷ್ಯಸಮುದಾಯ : ಮಾನವಕುಲ : ಲೋಕಕ್ಕೆ ದರ್ಥಶಾಸ್ತ್ರದ ಟೀಕನಿಸಿದ ತನ್ನ ನುಡಿ ಮನಂಗೊಳಿಸೆ (ಕಂಪಣಾ. ೯-೧೯) ; ಲೋಕದ ಡೊಂಕ ನೀವೇಕೆ ತಿದ್ದುವಿರಿ (ಪಾರ್ವ. ೦೨೪) ; ತಂದೆಯನು ಜಜಿಸಿ ಮಗ ಹೊಲ್ಲ ಲೋಕಕ್ಕೆ ಬಂಧನವೆ ಹೊಲ್ಲ (ಪಾರ್ವ. ೬೯೮). ೫. ಲೋಕದ ವ್ಯವಹಾರ,– ನಡವಳಿಕೆ : ಲೋಕ ಬಲ್ಲವರಿಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ (ಪಾರ್ವ. ೪೭). ೬. ನೋಡುವುದು ; ನೋಟ. ೭. ಭೂಮಿಯಿಂದ ಸೇರಿದಂತೆ ಮೇಲೆ ಏಳು ಮತ್ತು ಕೆಳಗೆ ಏಳು ಎಂದು ಕಲ್ಪಿಸಿರುವ ಜಗತ್ತು : ಆತನಮಯವ ವೆಲ್ಲಮೇ ಸತ್ಯಾದಿ ಲೋಕಗಳು (ಕಬ್ಮ. ೪-೨೬); ಲೋಕಗಳು ೧೪ ಇವೆ. ಅತಲ, ವಿತಲ, ಸುತಲ, ತಲಾತಲ, ವ್ರಪಾತಲ್ಲ, ರಸಾತಲ, ಪಾತಾಲ ಈ ಏಳು ಕೆಳಗಿನ ಲೋಕಗಳು. ಭೂಲೋಕ. ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ. ತಪೋಲೋಕ, ಸತ್ಯಲೋಕ—ಈ ಏಳು ಮೇಲಿನ ಲೋಕಗಳು (ಕಬ್ಮ. ೪-೨೫ ಟೀಕು). 'ಚತುರ್ದಶಲೋಕ' ಪರಾ. ರ. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ : ಹರನಯನ ವಹ್ನಿ . . . ಲೋಕಪಲಕ್ಷಿತಯಂ . . . ಮೂಜಿಜ ನಾಮಂ (ಶ್ರವಣ. ೯). ೯. ಏಳು ಎಂಬ ಸಂಖ್ಯೆಯ ಸಂಕೇತ. ೧೧. ಹದಿನಾಲ್ಕು ಎಂಬ ಸಂಖ್ಯೆಯ ಸಂಕೇತ.

ಲೋಕರ್ = (ಸಾಮಾನ್ಯ)ಜನ : ಲೋಕರಂತೆ ನೀ ಮೃತ್ಯಿಕೆ ಮೆಲ್ಲು ತಾ ಕೋಪಕೆ ಜನನಿಯು (ಕೃಷ್ಣ. ೦-೧೩-೩) ; ಲೋಕರ್ಗೆ ಸಂದೇಹ ಸಲ್ಲ (ಕೃಶಂಪ. ೪-೩೮). ಲೋಕತಿಲಾಮಣಿ = ಜಗತ್ತಿನಲ್ಲಿ ಶ್ರೇಷ್ಠನಾದವನು ; ಒಂದು ಬಿರುದು : ಶ್ರೀಕೊಪಣಪುರವರೇಶ್ವರ ಲೋಕ ತಿಲಾಮಣಿ ವಿಯಚ್ಚರಾನ್ವಯತಿಳಕಂ (ಪಾಭಾ. XX; ೭೦-೨೬; ೧೨೦೦). [ಸಂ.]

ಲೋಕಕಂಟಕ (ನಾ). ಜಗತ್ತಿಗೆ ಕೇಡು ಮಾಡುವವನು : ಕಾವುಸರ್ ಲೋಕಕಂಟಕರಾಗೆ ರಕ್ಕಪರನಿಸಿ ಪುಜುವೆಯ್ಯೊಳಗೆದು . . . ತಿರಿಗೆ ಪೂಜೆಯಾದರ್ (ಜಾಕಪ್ಪ. ೦೪೯-೨೪). [ಸಂ.]

ಲೋಕಕರ್ತ (ನಾ). ಜಗತ್ತನ್ನು ಸೃಷ್ಟಿಸಿದವನು : ಲೋಕಕರ್ತಂ ನಾನೆ ಈತಂ ಲೋಕವಾವನವಮೂರ್ತಿ ಕಾರಣ ಲೋಕಶಿಕ್ಷಕ ನಾನೆ ಈತನು ಲೋಕ ರಕ್ಷಕನು (ಜಪಕ್ಷ. ೫೦-೨೦). [ಸಂ. ಲೋಕಕರ್ತೃ]

ಲೋಕಕಲ್ಯಾಣ (ನಾ). ಜಗದ ಕ್ಷೇಮ ; ಜಗತ್ತಿನ ಕಲ್ಯಾಣ : ಆತ್ಮ ಕಲ್ಯಾಣದಂತೆಯೆ ಲೋಕಕಲ್ಯಾಣವೂ ಈತನ ವ್ಯವಹಾರಗಳ ಧ್ಯೇಯವಾಗಿರ ಬೇಕು (ಜಬಾಗ್ರ. ೧೦ ಪೀಠಿಕೆ). [ಸಂ.]

ಲೋಕಗತಿ (ನಾ). ಜಗತ್ತಿನ ನಡೆ ; ವಿಶ್ವದ ವ್ಯವಹಾರ : ಲೋಕಗತಿ ಪಾಯನಾವಿಲಾಸ ವಿವೇಕಗಳಿಗಿದು ಬಯಲು ಫುಲ್ಲಗುಣ ಸಾಳು ಗರ್ವವ ಬೀಳುಕೊಡು (ಜಬಾಗ್ರ. ೪-೩೪). [ಸಂ.]

ಲೋಕಗಾಳ್ಕೆ (ನಾ). ಒಬ್ಬಾತನ ಹೆಸರು ; ಲೋಕಗಾಳ್ಕೆರ್ಸೊಸವುರಂ ಬ್ರಮ್ಮದಂ ಕೊಟ್ಟು (ಪಾ.ಕಾ. ೦೪೩. ೦೦-೬; ಸಂ. ೬೫೮ ೫೬). [?]

ಲೋಕಗುರು (ನಾ). ೧. ಜಗತ್ತಿಗೆ ಗುರುವಿನಂತಿರುವವನು ; ಪರಮಾತ್ಮ : ಲೋಕಗುರು ಶಂಬಿಚಿಕ್ಕಗದಾಕರನತಿಶಯಚತುರ್ಭುಜಂ (ಕಂಪಣಾ. ೯-೩೦). ೨. ವಿಶ್ವದ ಗುರು ; ಮಹಾತ್ಮ : ಮನ್ಮನೋವಂದಿರಕೆ ಓ ಲೋಕಗುರುಗಳೆಲ್ಲ ಬನ್ನಿ (ಅ೧.ಹಂ. ೯-೨). [ಸಂ.]

ಲೋಕಚಕ್ಷು (ನಾ). ಜಗತ್ತಿಗೆ ಕಣ್ಣಾದವನು ; ನೇಸರು ; ಸೂರ್ಯ. [ಸಂ. ಲೋಕಚಕ್ಷುಸ್]

ಲೋಕಚೂಡಾಮಣಿ (ನಾ). ಜಗತ್ತಿನಲ್ಲಿ ಶ್ರೇಷ್ಠನಾದವನು : ಸುಖ ಸಾದ್ಯಾತಸಂ ಲೋಕಚೂಡಾಮಣಿಯುಂ . . . ಪರಮಬ್ರಹ್ಮಸದ್ಮಕ್ಕೆ ಸಂದಂ (ಶಾಪ್ರ. ೦೬-೩೦). [ಸಂ.]

ಲೋಕಜನನಿ (ನಾ). ಜಗತ್ತಿನ ತಾಯಿ ; ಲೋಕಮಾತೆ ; ಲಕ್ಷ್ಮಿ : "ಇಂದಿರಾ . . . ಲೋಕಜನನೀ. ಕ್ಷೀರಸಾಗರಕನ್ಯಕಾ—ಕ ಲಕ್ಷ್ಮಿಯ ಹೆಸರುಗಳು" (ಕಾಮ್ಯಂಕ. ೦೮). [ಸಂ. ಲೋಕಜನನೀ]

ಲೋಕಜಿತ್ತು (ನಾ). ೧. ಜಗತ್ತನ್ನು ಗೆದ್ದವನು : ವಿಶ್ವವನ್ನು ಜಯಿಸಿದವನು. ೨. ಋಷಿ ; ಸಂನ್ಯಾಸಿ. ೩. ಬುದ್ಧ : "ಬುದ್ಧಂ . . . ಲೋಕಜಿದ್ಧಿ ಸಮಂತಭದ್ರವೆಪರೆ ಬೌದ್ಧಂ" (ಪಾಂಗಣ. ೬-೩೬). [ಸಂ. ಲೋಕಜಿತ್]

ಲೋಕಜ್ಞ (ನಾ). ಭೂಲೋಕದ ರೀತಿನೀತಿಗಳನ್ನು ಅರಿತವನು: ತಮ್ಮ ಮೂಜಿನೆಯ ಭವದ ಜನ್ಮಜನಕಮೋಹಂ ಕಾರಣಮಾಗಿ ನಿಮ್ಮಿಯುಂ ಕಾಣದೆ ಬಂದು ಲೋಕಜ್ಞರುಂ ಸೇವಾವಿಚಕ್ಷಣರುಮುಮ್ಮದಜ್ಞಿಂದಂ . . . ಅವ್ಯಕ್ತರಾಗಿ ನೋಡುತ್ತುಮಿರ್ದರ್ (ಜಾಂತಿ. ೯-೫೫ ೬). [ಸಂ.]

ಲೋಕಟಿಗ (ನಾ). ಒಬ್ಬಾತನ ಹೆಸರು: ಆತನ ವೇಳೆ ಬಡಗೊಣ್ಣದ ಲೋಕ ಟಿಗವರಸಂಗೆ ಪುತ್ರನಿಮಿತ್ತಂ ಕಾರಣಮಾಗಿ ಹಯ್ಯೆಗಣ್ಣದಬ್ಬೆಗೆ ತಲೆಯಂ ಪರುಂ (ಎಕ. VIII. ಸೊರಬ. ೪೭-೭ ;೧೦೬). [?]

ಲೋಕಟೆ (ನಾ). ಒಬ್ಬಾತನ ಹೆಸರು : ರತ್ನಕ್ಷಿತಿಯಮ್ಮ ವರಿಷ್ಠಾ ಪ್ರವರ್ತ್ತಿನಿ ಲೋಕಟೆ ಬನವಸಿ[ಪ]ನ್ನಿಬ್ಬಾರಮುಮನಾಳೆ (ಪೌಷ. XX, ೦೭-೭ ; ೧೦೬). [?]

ಲೋಕತಂತ್ರ (ನಾ). ೧. ಜಗತ್ತಿನ ವ್ಯವಹಾರ : ವಿಶ್ವದ ನಡವಳಿಕೆ : ನಾವು ವಸವಾಸಿಗಳಾದರೂ ಲೋಕತಂತ್ರವನ್ನೆಲ್ಲಾ ಬಲ್ಲೆವು(ಜಾಃಂಕ.೩೩-೯). ೨. ಪ್ರಜೆಗಳು ಸಾಕ್ಷಾತ್ತಾಗಿ ಅಥವಾ ಪ್ರತಿನಿಧಿಗಳ ಮೂಲಕ ನಡೆಸುವ ರಾಜ್ಯಭಾರ : ಪ್ರಜಾಪ್ರಭುತ್ವ : "ಪ್ರಜಾಪ್ರಭುತ್ವ, ಜನತಂತ್ರ, ಲೋಕತಂತ್ರ" (Democracy- ಕಪ್ರಿ. ೫೮). [ಸಂ.]

ಲೋಕದೂರ (ನಾ). ಜಗತ್ತಿನ ವ್ಯವಹಾರದಿಂದ ದೂರವಾದುದು ; ಜಗತ್ತಿನ ಸಂಬಂಧವನ್ನು ಕಳೆದುಕೊಂಡುದು : ರಸಾನುಭವ ಲೋಕಾತಿಶಯ, ಲೋಕೋತ್ತರ ಎಂದರೆ ಲೋಕದೂರವಾಗಲೀ ಲೋಕ ಭಿನ್ನವಾಗಲೀ ಅಲ್ಲ (ಕಾಂದ. ೫೦).

ಲೋಕಧರ್ಮ (ನಾ). ಜನನೆಯ ನಡೆ ; ಲೋಕಾಚಾರ ; ಜನರೂಢಿ : ಲೋಕಧರ್ಮದ ರಕ್ಷಣೆ ರಹಿಸುವುದ್ಯಸದೇ ಪಮಗಿಹುದು ಮಕವಲ್ಲದೊಡೆ ಮಾಣಲಿನುತ್ತ ಮುರಿದೆದ್ದ (ಕಾಂಭಾ. ೫೬-೦೪) ; ಲೋಕದ ನಡವಳಿಕೆಯನ್ನು ಅನುಸರಿಸಿ ಗದ್ಯದಲ್ಲಿ ಮಾತನಾಡುವುದು, ಸ್ವಾಭಾವಿಕವಾಗಿ ನಡೆದಾಡುವುದು ಇವೆಲ್ಲಾ "ಲೋಕಧರ್ಮ" (೪.೮೦. ೨೦೬ ೮೬.೬). [ಸಂ.]

ಲೋಕಧರ್ಮಿ (ನಾ). [ನಾಟ್ಯ] ಎರಡು ಬಗೆಯ ನಾಟ್ಯಸಂಪ್ರದಾಯಗಳಲ್ಲಿ ಒಂದು : ಲೋಕಧರ್ಮಿ ನಾಟ್ಯಧರ್ಮಿಯೆಂಬೆರಡುಂ ಧರ್ಮಿಯುಮಾ . . . ನೆಜಿಯೆ ತೋಜಿ (ಜಾಕ್ಷ. ೫-೪೦ ೬). 'ಧರ್ಮಿ' ಪರಾ. [ಸಂ. ಲೋಕಧರ್ಮಿನ್]

ಲೋಕನಯನ (ನಾ). ಲೋಕಕ್ಕೆ ಕಣ್ಣಿನಂತಿರುವವನು ; ಸೂರ್ಯ : ಶ್ರೀಕರದ ತತ್ಪರೋವರಮಾಶೀ [ವೀ] ಕ್ಷಿಸಿ ರತಿ ಲೋಕನಯನದ ತಾಪವಡಸಿ . . . ಸುಯ್ದಾನದೊಡನೆ (ಜಜಪೀ. ೯-೨೬). [ಸಂ.]

ಲೋಕನಾಥ (ನಾ). ೧. ಜಗತ್ತಿನ ಒಡೆಯ ; ವಿಶ್ವದ ಪ್ರಭು : ಸಭೆಯೊಳ್ ದೇವನಿಕಾಯವೊಪ್ಪುತ್ತಿರೆ ಬಂದಂ ಲೋಕನಾಥಂ ಸ್ವಯಂ ಪ್ರಭವೀರ್ಶ್ವರಂ (ಜಾಂತಿ. ೦-೩೦). ೨. ಬ್ರಹ್ಮ. ೩. ವಿಷ್ಣು : ಲೋಕನಾಥನ ವೆಸಯೋ ವನುಜಾ (ಕೃಂದ. ಭಾ. ೩-೦೮೬ ಅಪಚ್ಛಂ): ೪. ಶಿವ : ಆ ಕುಲಂಗಳ ಮಾತವೇತಕೆ· ಲೋಕನಾಥಪ್ರೋಕ್ತವಾದ ವ್ಯಾಕುಟದ ಜಾತಿಗಳಲಾ ಅವ್ಯಾದಿಶಂಗಳು (ಜಪಕ್ಷ.೩೩-೨೦). ೫. ಬುದ್ಧ. ೬. ರಾಜ ; ದೊರೆ. [ಸಂ.]

ಲೋಕನಾಥರಸ (ನಾ). [ವೈದ್ಯಶಾ] ಒಂದು ಬಗೆಯ ಔಷಧೀತೈಲ : ಪಾವಟಬೀಜ, ಬೀಳಕರ್ಣಕೆಬೀಜ . . . ಮರ್ದಿಸಿ ಕಹಿಸೋರೆಕಾಯಲ್ಲಿ

ತುಂಬಿ ಬೆಲಲ್ಲಿ ಇಟ್ಟಿದ್ದರೆ ತೈಲ ಬರುವುದು . . . ಈ ತೈಲದ ಹೆಸರು ಲೋಕನಾಥರಸ (ಪಥ್ಯ. ೪೦.೨೬೦ ಟಿ). [ಸಂ.]

ಲೋಕನಾಯಕ (ನಾ). ೧. = ಲೋಕನಾಥ ೧ : ಲೋಕನಾಯಕ ಸಿರಿಪುರಂದರವಿಠಲನೆ ಸಾಕಾರವಾದಂಥ ಪರಮಭಾಗವತರು (ಪ್ರಬಂಧ. ಪ್ರ. ೬–೦೭–೬). ೨. = ಲೋಕನಾಥ ೪ : ನಾಳು ಬಾಗಿಲ ನಡುವೆ ಏಕಾಕಿ ವಿಂತಿಹನು ಕೂಕುಳ್ಳ ಕೈರಾಸಮಂದಿರದಿ ಶಿಮಿದ್ದ ಲೋಕನಾಯಕನ ಲೀಲೆಯಲಿ (ಶಿವತ. ೬–೩೭). [ಸಂ.]

ಲೋಕನಿಷ್ಠ (ನಾ). ಜಗತ್ತಿಗೆ ಸಂಬಂಧಪಟ್ಟುದು; ಲೌಕಿಕವಾದುದು : ಕಲೆ ಸತ್ಯವನ್ನು ಪ್ರಕಟಿಸುತ್ತದೆ ಎಂದರೆ ಅದು . . . ಲೋಕನಿಷ್ಠವೇ ಅಥವಾ ಲೋಕಾತೀತವೇ—ಈ ಬಗೆಯ ಹಲವು ಸಮಸ್ಯೆಗಳು ಏಳುತ್ತವೆ (ಕೌಂಪ್ರ. ೧೧). [ಸಂ.]

ಲೋಕನೇತ್ರ (ನಾ). ೧. = ಲೋಕನಯನ: ಲೋಕನೇತ್ರನ ಕುಲೋದ್ಭವ ಕುಮಾರರ್ಕಳಂ . . . ಆಲೋಕಿಸಿದರು (ಕಾವೇಂ. ೯–೦೭); ನಿಜನೇತ್ರಂ ಲೋಕನೇತ್ರಂ . . . ನಿಜರಮಣಿ ಜಗನ್ಮಂಡೀಮಮತೆ ನಿಚ್ಚಂ . . . ನಿಜಮಾದಂ ಸುಪ್ರಮೋದಂ ಕುಡುಗೆಮುಗತ್ತುಳಶ್ರೀಯಮಂ ಶ್ರೀಲಜೇಶಂ (ಶಾಂಪು. ೦–೨). ೨. ಚಂದ್ರ : (ಕ). [ಸಂ.]

ಲೋಕಪತಿ (ನಾ). ಜಿನ ; ತೀರ್ಥಂಕರ : ಲೋಕಪತಿಗಿಚ್ಛಿಸನುಸ್ಮೃತ ಮಾತ್ರಪಾಪವಿಚ್ಛೇದನಮಂ ಜಗತ್ಪ್ರಭುಮಮಂಗಳಮಂ ಹರಿ ಶಾಂತಿನಾಮ್ನಿಯಂ (ಶಾಂಪು. ೦೦–೭೯). [ಸಂ.]

ಲೋಕಪಾಲ (ನಾ). ೧. ಜಗತ್ತನ್ನು ಪಾಲಿಸುವವನು; ವಿಶ್ವವನ್ನು ಕಾಪಾಡುವವನು: 'ಲೋಕಪಾಲತ್ವ' ಪರಾ. ೨. ದಿಕ್ಕನ್ನು ಕಾಯುವವನು; ದಿಕ್ಪಾಲ : ನಾಲ್ವರ್ ಲೋಕಪಾಲರುಂ . . . . ಉಮೆವತ್ತು ಮೂವರ್ ವಲ್ಲಭೆಯರುಂ ತನಗೆ ಪ್ರಸಿದ್ಧಮಾಗೆ (ಶಾಂಪು. ೪–೦೦೦ ಟಿ); ಹರಿಯಿಲ್ಲದ ಪವನಾಧ್ವಂ ಹರಿಯಿಲ್ಲದ ದೇಕಪಾಲಪರಿಷದ್ವಲಯಂ ಹರಿಯಿಲ್ಲದ ಕಾಂತಾರಂ ಹರಿ ನೀನಿಲ್ಲದ ಮದೀಯಗೋಕುಲಮುಪಲಂ (ಪಗಂ. ೪–೧೩). ೩. ಅರಸ : ರಾಜಃ " ರಾಜಾ . . . ಲೋಕಪಾಲಃ—ಈ ೧೨ ಅರಸು" (ಪಣಾಪ್ರ. ೭೯–೨೭೭); ಹರುಷಸಂಕಲಿತಮಹುದೀ ಲೋಕಪಾಲರಂ ಪಡೆದುಖಿಳಭೋಗಂಗಳಂ ಚುಂಬಿಸಿ . . . ಸತಪೋರಾಜ್ಯಪಾಲನೆಗೆ ಗಮಿಸುವುದೆ ಸದ್ಧರ್ಮವು (ಪಂಣಾಚಾ. ೩–೦೦–೦೦). [ಸಂ.]

ಲೋಕಪಾಲಕ (ನಾ). = ಲೋಕಪಾಲ ೨ : ಇಂದ್ರ ಅಗ್ನಿ . . . ಚಂದ್ರ ಈ ಪದಿಂಬರು ಲೋಕಪಾಲಕರಿಂದಂ (ಕ್ಷತ್ರಾ. ೬–೪). [ಸಂ.]

ಲೋಕಪಾಲತ್ವ (ನಾ). ಜಗತ್ತನ್ನು ಪಾಲಿಸುವಿಕೆ ; ವಿಶ್ವದ ಅಧಿಕಾರ : ಅವನಿಗೆ ಅಮರತ್ವ, ಧನಪತಿತ್ವ, ಲೋಕಪಾಲತ್ವ . . . ಇವುಗಳನ್ನು ಕೊಟ್ಟನು (ಪಚಾ. ೧೦೬). [ಸಂ.]

ಲೋಕಪಾವನ (ನಾ). ಜಗತ್ತನ್ನು ಪವಿತ್ರಗೊಳಿಸುವಂಥದು: ಲೋಕಪಾವನನೆನಿಸಿ ಹರಿವ ಕಾವೇರಿಯಿಂ (ಶಿಮಪ. ೫೯. ೨–೩). [ಸಂ.]

ಲೋಕಪಿತ (ನಾ). ಜಗತ್ತಿನ ತಂದೆ; ಪ್ರಜಾಪತಿ; ಬ್ರಹ್ಮ : ಲೋಕಪಿತ ನೊಲ್ದು ಚತುರ್ಮುಖನಿಗೆ ರಾಗಮಂ (ಪಗಂ. ೦–೨). [<ಸಂ. ಲೋಕಪಿತೃ]

ಲೋಕಪೂರಣ (ನಾ). [ಜೈನ] "ಕೇವಲಿಗಳ ಆತ್ಮವು ಭೂಮಂಡಲದ ಹಾಯುತ್ರಯದೊಡನೆ ಲೋಕವನ್ನೆಲ್ಲ ವ್ಯಾಪಿಸುವುದು" (ಕ್ಷಪ್ರ. ೨೨೦). . ' ಲೋಕಪೂರಣಕ್ರಿಯೆ ' ಪರಾ. [ಸಂ.]

ಲೋಕಪೂರಣಕ್ರಿಯೆ (ನಾ). = ಲೋಕಪೂರಣ : ತದನಂತರಕ್ಷಣದೊಳ್ ವ್ಯಾಪ್ತಸಪ್ತಘನರಜ್ಜುಪ್ರಮಾಣಾಶೇಷಜಗತ್ಪ್ರದೇಶಲೋಕಪೂರಣಕ್ರಿಯಾ ಪರಿಣಾಮ್ಯಯಂ ಮಾಡಿ (ಅಂಪ್ರ. ೦೭–೨೧೪) ; ದಂಡಕವಾಟಪ್ರತರ ಲೋಕಪೂರಣಕ್ರಿಯೆಗಳಂ ಪ್ರತಿಸಮಯಂ ಪ್ರಯೋಗಿಸಿ (ಪಂಣಾಚಾ. ೦೭–೭೯ ಟಿ). [ಸಂ. ಲೋಕಪೂರಣಕ್ರಿಯಾ]

ಲೋಕಪ್ರತೀತ (ಗು). ಜಗತ್ಪ್ರಸಿದ್ಧವಾದ ; ವಿಶ್ವವಿಖ್ಯಾತವಾದ : ಲೋಕಪ್ರತೀತ ಸುಭಗವಿವೇಕಾಳಾವಂ ಪ್ರಸನ್ನಮದಳವಿಂತಕ್ಕುಂ (ಶಿಮಾ. ೨–೭೭). [ಸಂ.]

ಲೋಕಪ್ರತೀತಿ (ನಾ). ಜಗತ್ಪ್ರಸಿದ್ಧವಾದುದು : ನಯವಿದುದಿತ ಯುಕ್ತಿ ವ್ಯಕ್ತಿಲೋಕಪ್ರತೀತ್ಯಾಶ್ರಯಸಕಳಕಳಾಲೀಲಾಕರಾಲ್ಪೋಪಜಲ್ಪಂ (ಶಿಮಾ. ೭–೨೦೭). [ಸಂ.]

ಲೋಕಪ್ರಸಿದ್ಧ (ನಾ). = ಲೋಕಪ್ರತೀತಿ : ಶ್ರವಣಬೆಳಗೊಳ ಲೋಕ ಪ್ರಸಿದ್ಧವಾದುದು (ಪಚಾ). [ಸಂ.]

ಲೋಕಪ್ರಸಿದ್ಧಿ (ನಾ). ೧. ಜಗತ್ತಿನಲ್ಲಿ ವ್ಯಾಪಿಸಿದ ಕೀರ್ತಿ ; ವಿಶ್ವದಲ್ಲಿ ಹರಡಿದ ಯಶಸ್ಸು : ಲೋಕರೂಢಿ= ಲೋಕಪ್ರಸಿದ್ಧಿ (ಪಮುಕ. ೪. ೨೩೨ ಟೀಗಳು); ಆದರಂತಹುದೆಷ್ಟೊ ಆಗಲೇಬೇಕಲ್ಲ ಲೋಕಪ್ರಸಿದ್ಧಿಯ ಜಯದಲಿ ಎಂದ (ಜಾಗಕ. ೩೩–೩೯). ೨. ಜನಬಳಕೆಯಲ್ಲಿರುವುದು ; ಲೋಕಾಚಾರ : ಲೋಕಪ್ರಸಿದ್ಧಿಗೆ ವಿರುದ್ಧವಾದುದು (ಕ್ಷತ್ರಾ. ೨೨೮). ೩. [ತರ್ಕಶಾ] ಹನ್ನೆರಡು ವಿಧವಾದ ಪ್ರಮಾಣಗಳಲ್ಲಿ ಒಂದು : ಪ್ರಮಾಣವು ಪ್ರತ್ಯಕ್ಷ . . . ಲಿಪಿ. ಲೋಕಪ್ರಸಿದ್ಧಿ, ಚೇಷ್ಟೆ, ಪ್ರಾತಿಭ ಎಂದು ಹನ್ನೆರಡು ವಿಧವೆಂದು ಕೆಲವರು ಹೇಳುತ್ತಾರೆ (ಸಿಂದಾಮ. ೦೩೬). [ಸಂ.]

ಲೋಕಬಾಂಧವ (ನಾ). ಜಗತ್ತಿಗೆ ಬಂಧುವಾದವನು ; ಸೂರ್ಯ : ಮಹಾಲಯದ ವಿಷವನಿಕ್ಕಿದರಂ ಸಲಹಿದೆ ಮತ್ತಾ ಲೋಕಬಾಂಧವನ ಪಲ್ಗಳೆದೆ (ಪಪ್ರಣ. ೦೩–೦೨); ಲೋಕಬಾಂಧವನುದಯವಾಗಲುಪ್ಪರಡಿಸೂ ಕರಾ ಕುಮಾರರು ನಿತ್ಯಕೃತ್ಯಂಗಳಂ ರಚಿಸಿ (ಕಾಪಾಪ್ರ. ೭–೦೫). [ಸಂ.]

ಲೋಕಬಿಂದುಪೂರ್ವ (ನಾ). [ಜೈನ] ಆಗಮಗಳ ಹದಿನಾಲ್ಕು ಪೂರ್ವಗಳಲ್ಲಿ ಒಂದು ಬಗೆ: ಮೋಕ್ಷಸಾಧನೆಗೆ ಯೋಗ್ಯವಾದ ಕ್ರಿಯೆಗಳ ವರ್ಣನಾಶಾಸ್ತ್ರ ; ಜಗತ್ತಿನ ತಿಳಿವಳಿಕೆ : ಪೂರ್ವಗಳು ಜೈನ ಶಾಸ್ತ್ರವಿಭಾಗಗಳಾಗಿವೆ. (೧) ಆತ್ಮಾಪ್ರವಾದಪೂರ್ವ . . . (೧೪) ಲೋಕ ಬಿಂದುಪೂರ್ವ (ಲೋಕದ ತಿಳಿವಳಿಕೆ) (ಕ್ಷಪ್ರ. ೧೧೮). ' ಚತುರ್ದಶ ಪೂರ್ವ ' ಪರಾ. [ಸಂ.]

ಲೋಕಬೆಟ್ಟು (ನಾ). .(?) : ಪಾಂಡೆನಾಡ ಬಂಗಮಂಜು[ವ] ಮೊದಲಾದ ಹಿರಿಯರು ಲೋಕಬೆಟ್ಟಿಂಬ ಬಾಳಿಕೆಯನು ಬಾಳಿ ಬಂದಲ್ಲಿ (ಕ್ಯೂಇ. IX– ii. ೪೬–೦೨; '1465). [?]

ಲೋಕಬ್ಬೆ (ನಾ). ಒಬ್ಬಾತನ ಹೆಸರು : ತಮ್ಮ ಲೋಕಬ್ಬೆಟ್ಟ × ದಗಟ್ಟ ಕನ್ನಿ ಬಾಚನಯ್ (ಕ್ಯೂಇ. ೦೯೫೫. ೭೨–೫: ೨). [?]

ಲೋಕಭಿನ್ನ (ನಾ). ಜಗತ್ತಿನಿಂದ ಬೇರೆಯಾದುದು ; ವಿಶ್ವಕ್ಕೆ ಸೇರದುದು : ರಸಾನುಭವ ಲೋಕಾತಿಶಯ, ಲೋಕೋತ್ತರ ಎಂದರೆ ಲೋಕ ದೂರವಾಗಲೀ ಲೋಕಭಿನ್ನವಾಗಲೀ ಅಲ್ಲ (ಕೌಂಪ್ರ. ೫೭). [ಸಂ.]

ಲೋಕಮತ (ನಾ). ಜನರ ಅಭಿಪ್ರಾಯ. —ಮತ : " ಜನಸಾಮಾನ್ಯರಲ್ಲಿ ರೂಢಿಯಾಗಿರುವ ಮಂ. ನೈತಿಕವಿಷಯಗಳ ಮೇಲಿನ ಅಭಿಪ್ರಾಯ : ಜನಾಭಿಪ್ರಾಯ; ಲೋಕಮತ " (Opinion- ೨೦೧೨). [ಸಂ.]

ಲೋಕಮರ್ಯಾದೆ (ನಾ). ಜಗತ್ತಿನ ನಡತೆಯ ಇತಿ ಮಿತಿ : ಲೋಕಾಚಾರ : ಲೋಕರೂಢಿ.—ಸಂಪ್ರದಾಯ : ಯಾರೂ ಲೋಕಮರ್ಯಾದೆಯನ್ನು ಮೀರಬಾರದು (ಪಚಾ). [ಸಂ. ಲೋಕಮರ್ಯಾದಾ]

ಲೋಕಮಾತೆ (ನಾ). ಜಗತ್ತಿನ ತಾಯಿ ; ಜಗಜ್ಜನನಿ ; ಲಕ್ಷ್ಮಿ : " ಲೋಕಮಾತೆ ಮನ್ಮಥಮಾತೆಯೆನಲು ಸಿರಿಗಕ್ಕು ನಾಮಂ " (ಪಂಗೋಪ್ರ. ೬–೦೬); ಒಲೆಗಳು ದಳ್ಳುರಿಯ ಕಿಚ್ಚಿಂಗೆಟ್ಟುಗಬಲ್ಲುವೆ ದನುಜ ಕಂಗಳ ತೆಱೆದು ನೋಡಲು ಬಹುದೆ ಸೀತೆಯ ಲೋಕಮಾತೆಯನು (ಕೌಂಪ್ರ. ೪೭–೫೦). [ಸಂ. ಲೋಕಮಾತಾ]

ಲೋಕಮಾನ್ಯ (ನಾ). ಜನರಿಂದ ಮಾನ್ಯತೆ ಪಡೆದವನು ; ಜನರಿಗೆ ಪೂಜ್ಯನಾದವನು : ಲೋಕಮಾನ್ಯನು ಕರ್ಣ (ಕರ್ಣಾ. ೮೨-೬೨). [ಸಂ.]

ಲೋಕಮಿತ್ರ (ನಾ). = ಲೋಕಬಾಂಧವ : ನಿಜಪತ್ನಿಯಗಲಿ ಕೋಟಲೆಗೊಂಬವಂ ಮುನ್ನದಾರೆಂದೊಡೇ ಲೋಕಮಿತ್ರಾಸ್ಥಮಯದಲ್ಲಿ . ಬಂದಾ ಶ್ರೀಕಾನೀಕಕ್ಕೆಯಾಲಯವನೀಯದಾತಂ (ಪಾಕ್ಷ. ೯-೨೨-೬೦). [ಸಂ.]

ಲೋಕಮೂಢ (ನಾ). [ಜೈನ] ಲೋಕಮೂಢ, ದೇವತಾಮೂಢ, ಪಾಷಂಡಿಮೂಢವೆಂಬ ಮೂಢತ್ರಯಗಳಲ್ಲಿ ಒಂದು ; ℘ "ಎಲ್ಲಾ ಸ್ಥಳಗಳೂ ಸಮಾನವೆಂಬುದನ್ನು ಮರೆತು ಗಂಗಾಸ್ನಾನಾದಿಗಳಿಂದ ಪಾಪಪರಿಹಾರವಾಗುವುದೆಂಬ, ಮರಳು ಕಲ್ಲುಗಳನ್ನು ರಾಶಿ ಮಾಡುವುದು, ಬೆಂಕಿಯಲ್ಲಿ ಬೀಳುವುದು ಮುಂತಾದ ಮಿಥ್ಯಾನಂಬಿಕೆ" (ಕೃಪುಪೂ. ೩೨೦) : ಲೋಕಮೂಢಮುಂ ದೇವತಾಮೂಢಮುಂ ಪಾಷಂಡಿಮೂಢಮುಂ ಎಂದು ಮೂಢಂ ತ್ರಿವಿಧಮಕ್ಕುಂ (ಪಾಪು. ೧೪೯). [ಸಂ.]

ಲೋಕಮೂಢತ್ವ (ನಾ). = ಲೋಕಮೂಢ : ಮತ್ತಂ ಲೌಕಿಕ ಪಾರಮರ್ಷಿಕ ಹೇಯೋಪಾದೇಯ ತತ್ತ್ವಪರಿಜ್ಞಾನರಹಿತರನೇಕಮೂರ್ಖ ಲೋಕಪ್ರವಾಹದಿಂ ಬಂದ ಧರ್ಮಾಕರ್ಮಾನುಷ್ಠಾನಮಂ ಮಾಡ್ದುದುವುಂ ಲೋಕಮೂಢತ್ವಮೆಂಬುದು (ಪಾಪು. ೧೪೦). [ಸಂ.]

ಲೋಕಯಾತ್ರೆ (ನಾ). ೧. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಪ್ರವಾಸಮಾಡುವುದು ; ಜಗತ್ತನ್ನು ಸುತ್ತುವುದು : ಗಾಲಿಯೊಂದೇ ರಥಕೆ ಜೋಡಾಗಿ ಪೂಡುವೊಡೆ ಸಾಲದೇಳೆ ಹಮುಂ ಸಹಸುವೊಡೆ ಸಾರಥಿಗೆ ಕಾರಿಲ್ಲ ಲೋಕಯಾತ್ರೆಯನೊಲ್ಲೆನೆಂದೊಡಾಗದ ತನಗೆ ತಿರುಗಲೇಕೆ (ಕೃಪುಪೂ. ೫೬-೫೬). ೨. ಲೋಕಾಚಾರ ; ಲೋಕರೂಢಿ : ಸಮಕೊಂಡ ಪುಣ್ಯಮುಂ ಪಾಪಮುಮಿಲ್ಲದೊಡಾಳ್ದನಾಳ್ ಸರೋಗವಿರೋಗಂ ಶ್ರಮರಹಿತಂ ಕ್ಲೇಶ್ಯಶಶ್ರಮನೆಂದೀ ಲೋಕಯಾತ್ರೆ ಕಿಡದೆ ಮಹಾತ್ಮಾ (ಜಾಂಬ. ೬-೧೧೦). ೩. ಪ್ರಪಂಚದಲ್ಲಿರುವ ಬಾಳು ; ಇಹದ ಬದುಕು : ಈ ಜೀವನಕ್ರಮವು . . . ಲೋಕಯಾತ್ರೆಯನ್ನು ಪತಿಸುತ್ತಿದ್ದ ಪ್ರಾಚೀನ ಧಾರಿಣೀಯರೆಲ್ಲರ ಧರ್ಮವಾಗಿದ್ದಿತು (ಜಾಕಥ. ೧೧೬). [ಸಂ. ಲೋಕಯಾತ್ರಾ]

ಲೋಕಯ್ಯ (ನಾ). ಒಬ್ಬಾತನ ಹೆಸರು : [ಪಾಗವ[ರ್ಮ್ಮ ಸಿ]ರಿಯು ನೂಲನಾಳುತ್ತಿರೆ(ಯು) ಲೋಕಯ್ಯಂ ತು × × × ಗ್ಗೆಗಾಮುಣ್ಣಗೆ ಆಯುತಮ(೦)ಮ್ಮಿಟ್ಟು (ಶಾಂಪು. XX, ೦೩-೬ ; ೧೦೪) ; ಕೊವರಸೆಯ ಚಿಂಪಯ್ಯನುಂ ಲೋಕಯ್ಯನುಂ ಕೊಟ್ಟಾರದ ಮಾರಪುಲಿಯುಂ (ಶಾಂ. XII, ೬೫-೫೦ ; ೬೬೭). [ಲೋಕ+ಅಯ್ಯ]

ಲೋಕರಕ್ಷಕ (ನಾ). ೧. ಜಗತ್ತನ್ನು ಕಾಪಾಡುವವನು : ಲೋಕರ್ತಂ ನಾನೆ ಈತಂ ಲೋಕಪಾವನಮೂರ್ತಿ ಕಾರಣ ಲೋಕಶಿಕ್ಷಕ ನಾನೆ ಈತನು ಲೋಕರಕ್ಷಕನು (ಜಪಪು. ೦೦-೨೦). ೨. ಜಗತ್ತನ್ನು ಕಾಪಾಡುವಂತಹುದು : "ಅಧ್ಯಾತ್ಮತೇಜೋಬಲಂ ಬಲಂ" ಎಂದು ಘೋಷಿಸಿ . . . ಲೋಕವಾಶಕವಲ್ಲದ ಪೂರ್ಣವಾಗಿ ಲೋಕರಕ್ಷಕ ಎಂದು ಇಂದಿನ ಯುಗದಲ್ಲಿ ಅದರ ಸತ್ಯಸ್ಥಾಪನೆ ಮಾಡಿದ ಗಾಂಧಿ ಭರತಖಂಡದ ಪ್ರಾಚೀನ ಸಂಸ್ಕೃತಿಯ ಪ್ರತೀಕ (ಪಾಸ್ಫಾ. ೦೩೦ ೨೮೪). [ಸಂ.]

ಲೋಕರೂಢಿ (ನಾ). ಜನಸಾಮಾನ್ಯರ ಪದ್ಧತಿ.— ಸಂಪ್ರದಾಯ : ಈಕ್ಷಿಸಿ ಶಿಕ್ಷಿಸೂಶ್ರದ ಲಕ್ಷಣಮಂ ಲೋಕರೂಢಿ ಕಿಡದೊಲಜಪರ್ ಲಕ್ಷಿಪುದು ನಾಡಿಗಳೊಳ್ ಬಹುಳಾಕ್ಷೀಪಣವಿಪ್ಲುದಿರೆಯುಮಜಯದ ಕೆಲವಂ (ಕಡಪು. ೨೩೨) ; ದಿಸ್ಟಳೆ ಎಂದು ಅವನ ಮಾತಾಮಹನ ಹೆಸರಿಟ್ಟಿದುದು ಲೋಕರೂಢಿಗೆ ವಿಹಿತವಾಗಿದೆ (ಪುಷಚಂ. ೭೯). [ಸಂ.]

ಲೋಕಲುಂಟಾಕ (ನಾ). ಜಗತ್ತಿಗೆ ತೊಂದರೆ ಕೊಡುವವನು : ಲೋಕಲುಂಟಾ[ಪಾಣಾ.ತಾ]ಕರಸಂಪ್ರಾತರ್ ಕಿರಾತರ್ ನೆರೆದು ನಿಖಿಲ ಭೂಚಕ್ರಮಂ ಸೂಱೆಗೊಂಡರ್ (ಕಂಗಾಪು. ೯-೭೫) ; ರಣಮೇರು ಲೋಕ ಲುಂಟಾಕನಿದಾಘತಾವಪರವರ್ಮಾಣಮೇಘನುದಾತ್ತರಾಘವಂ (ಕಂಗಾಪು. ೭-೬೨). [ಸಂ.]

ಲೋಕವಟ್ಟ (ನಾ). ವಿಶ್ವದ ಸ್ವಾಮಿತ್ವ.— ಅಧಿಕಾರ (?) : ಎಜಗಿದ ಜನಕ್ಕೆ ಪೊಮ್ಮುಗಿಲೆಱಗಿದವೊಲು ಲೋಕವಟ್ಟಮನೆ ಪೊಮ್ಮಳೆಯಂ ಬಱಿಪಾನುಜಬಡಬಗದಹಿತಂಗೆಱಗಿದ ಬಜಸಿಡಿಲೆನಿಪ್ಪನೆಱಿಯಂಗನೃಪಂ (ಪಾ. VI. ೪೬೫೮. ೦೪೯-೫೬; ೧೨೧೩). [ಲೋಕ+ಪಟ್ಟ]

ಲೋಕವಶ್ಯ (ಗು). ೧. ಜಗತ್ತನ್ನು ವಶಪಡಿಸಿಕೊಳ್ಳುವ. (ನಾ). ೨. ಪ್ರಪಂಚದ ಜನರನ್ನು ವಶಪಡಿಸಿಕೊಳ್ಳುವುದು.— ಜನರ ವಶೀಕರಣ : ಲೋಕವಶ್ಯದ ತಿಲಕವೊ ಜಗದೇಕರತ್ನವೊ . . . ಚಿತ್ರ ವಾಯ್ಕಾರ್ವರಿಮು ಬರವು (ಕಬ್ಬಾ. ೬-೩) ; ಆ ಬೇರಂ . . . ಮಂತ್ರಿಸಿ ಮುಖಮಂ ಪೂಸೆ ಲೋಕವಶ್ಯ (ಪಪ್ಪ. ೨); ಲೋಕವಶ್ಯಕೆ ಪುಲ್ಲಾ ವಾಸಿ ಹೋಬೇರು . . . ಮಿಕ್ಕೆಲ್ಲ ಕಾಕುಮುದ್ದೆಂದ (ಸೂಪ್ಪ. ೦೬೦೬). ೩. ಇತರರನ್ನು ಸಮ್ಮ ಇಷ್ಟಾನುಸಾರವಾಗಿ ನಡೆಸಿಕೊಳ್ಳುವ ಶಕ್ತಿ.—ವಿದ್ಯೆ. [ಸಂ.]

ಲೋಕವಾದ (ನಾ). ಜನರಾಡುವ ಮಾತು ; ಜನಶ್ರುತಿ: "ಕಂವದಂತೀ. ಜನಶ್ರುತಿಃ, ಕೋನಂ, ಲೋಕವಾದಃ — ಈ ೪ ಜನವಾರ್ತೆ" (ಶಂಬಾಮಾ. ೨೪-೦೫೬); ಓದುಗಲಿಸುವರೊಲಿದು ಪೊಗಳಿದೊಡಾಪೋದುಗಲಿ ವೆರೋದುಗಳು ಮೇದಿನಿಯೊಳು ಮೇಲಿನವೆಂಬುದು ಲೋಕವಾದವ್ಯಸಲಿ (ಪಂಪ. ೦-೨೪). [ಸಂ.]

ಲೋಕವಾರ್ತೆ (ನಾ). = ಲೋಕವಾದ : ಪರಮದಯಾಗುಣಂ ನಯನದೊಳ್ . . . ಧೃತಮೌನತೆ ಲೋಕವಾರ್ತೆಯೊಳ್ ದೊರೆವಡೆ ದೊಪ್ಪೆ ಸಂದರಮಿಗೀಗಱಜವಂ ಸಲೆ ಸರ್ವಸಾಧುಗಳ್ (ಪಪ್ಪ. ೦-೩); ಜಾಳದಿಂದಂದಿವರು ವೈಷಳಿಷ್ಯಾತಿಯುಲಿ ಕರೆದವರು ಸರ್ವಜನಾತನನು ಬಸವಣ್ಣನೆಂಬರು ಲೋಕವಾರ್ತೆಯಲಿ (ಬಸ್ಫಾ. ೩೩-೩೯). [ಸಂ. ಲೋಕವಾರ್ತಾ]

ಲೋಕವಿಖ್ಯಾತ (ನಾ). ಜಗತ್ಪ್ರಸಿದ್ಧವಾದುದು : ದುಷ್ಕರ ದೌಷ್ಕರ್ಯವ ಲೋಕವಿಖ್ಯಾತವು ತೀರ್ಪುದು ಸುಲಭ ದುಷ್ಕರನು (ಜಾಪಾಕ. ೦೬೬-೬೯). [ಸಂ.]

ಲೋಕವಿಮೂಢ (ನಾ). = ಲೋಕಮೂಢ : ನದಿ ವಾರ್ಧಿಗಳಂ ವಿಭಾವುದುಮದಿರದೆ ಶಸ್ತ್ರಾಗ್ನಿ ಗಿರಿಗಳಂ ಪ್ರಾಯ್ವುದುಮಿಂತಿದು ಲೋಕ ವಿಮೂಢಾ ಮಾದಿಂದಂ ರಾಶಿಮಾಡ್ವುದುಂ ಕಲು ಮಣಲುಂ (ಕಡಪು. ೧೩೦). [ಸಂ.]

ಲೋಕವಿರುದ್ಧ (ನಾ). ೧. ಜನಸಾಮಾನ್ಯರ ಪದ್ಧತಿಗೆ ವಿರೋಧವಾದುದು; ಲೋಕರೂಢಿಗೆ ವಿರುದ್ಧವಾದುದು : ಯಾರೇ ಆಗಲಿ ಲೋಕವಿರುದ್ಧವಾಗಿ ನಡೆಯಬಾರದು (ಕಡಪು). ೨. [ಕಾವ್ಯಮೀ] ಒಂದಂ ಬಗೆಯ ವಾಕ್ಯದೋಷ ; ℘ ಲೋಕಪ್ರಸಿದ್ಧಿಗೆ ವಿರುದ್ಧವಾದುದು : ಲೋಕಮವೂರ್ಧ್ವಾಧೋಽಪಧ್ಯಾಕಾಂಕ್ಷಿತಭೇದರೂಪದಿಂ ಮೂಱಕ್ಕುಂ ಲೋಕವಿರುದ್ಧಂ (ಕವಿಶಾ. ೩-೦೦೯); ಕಾಲ ಸ್ವಭಾವ ದೇಶ ಸಮಾಲಕ್ಷಿತವಸ್ತುರೂಪವಿಪರೀತಮವದಂತಾ ಲೋ[ಕಾಖಿ. ಲೋ]ಕವಿರುದ್ಧಂ (ಕಾಶಾ. ೪೭೦). [ಸಂ.]

ಲೋಕವಿರೋಧಿ (ನಾ). ಜನರ ವಿರೋಧಕ್ಕೆ ಒಳಗಾದವನು : ನ್ಯಾಯನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ ಲೋಕವಿರೋಧಿ ಶರಣನಾರಿ ಗಂಡುವನಲ್ಲ (ಪಪ್ಪ. ೨೪೬); ಖಂಡಿತವಾದಿ ಲೋಕವಿರೋಧಿ (ಗಪ್ಪ). [ಸಂ. ಲೋಕವಿರೋಧಿನ್]

ಲೋಕವ್ಯವಹಾರ (ನಾ). ಪ್ರಪಂಚದ ನಡತೆ,– ಆಚಾರ,– ನಡವಳಿಕೆ; ಅಲಂಕೃತನಾಗಿಯುಂ ನಿಸರ್ಗಸುಂದರನಪ್ಪುದಱಿಂದಮಲಂಕಾರಕ್ಕೆ ತಾನಲುಂ ಕಾರಮುದೊಡು ಲೋಕವ್ಯವಹಾರಾಪೇಕ್ಷೆಯಿಂ ಪ್ರಸಾಧಿತಂ ಮಾಡಿ (ಶಾಂಪು. ೦೦-೫೫ ಪ); ಕವಿಮಾರ್ಗಗತಸಮಾನಸಮಸವನಿನ್ನಜ್ಞಾತಕೆಯೆಂದು ಪೇಳ್ದಿಂ ಲೋಕವ್ಯವಹಾರದಿಂದಂ (ಕವಾಶ. ೦೯೬); ಲೋಕವ್ಯವಹಾರವನ್ನು ಚೆನ್ನಾಗಿ ತಿಳಿದಿರುವ ನೀವೇ . . . ಹೇಳಿದ ಮೇಲೆ ಇನ್ನು ನಾವು ಆಡತಕ್ಕುದೇನು ? (ಶಾಕುಂತ. ೬೬-೨೦). [ಸಂ.]

ಲೋಕಸಂಗ್ರಹ (ನಾ). ಜನರನ್ನು ಪರಸ್ಪರ ಹತ್ತಿರ ತರುವುವರ ಮೂಲಕ, ಜನತೆಗೆ ಮಾಡುವ ಸಹಾಯ : ವಿಶ್ವಕಲ್ಯಾಣ : ಭಾರತೀಯ ರಾಜ್ಯಶಾಸ್ತ್ರದ ಅಂತಿಮಗುರಿ . . . ಲೋಕಸಂಗ್ರಹ (ಕಾರಿ. ೪೭೫) ; ಭಕ್ತರು ಲೋಕಸಂಗ್ರಹಕಾರ್ಯದಲ್ಲಿ ತುಂಬ ನೆರವು ನೀಡಿದ್ದಾರೆ (ಶಮೀಶಾ. ೦೫೦). [ಸಂ.]

ಲೋಕಸಂರಕ್ಷಕ (ನಾ). ಜಗತ್ತನ್ನು ಕಾಪಾಡುವವನು : ಪರಮಾತ್ಮ : ಲೋಕಸಂರಕ್ಷಕ ಅಸುರಸಂಹಾರಕ ಲೋಕೇತ ಪುರಂದರವಿತ್ತಲ (ಪ್ರಹಿಪ್ರ. ೫-೪೭-೬). [ಸಂ.]

ಲೋಕಸಂರಕ್ಷಣ (ನಾ). ಜಗತ್ಸನ್ನು ಕಾಪಾಡುವುದು ; ವಿಶ್ವದ ಸಂರಕ್ಷಣೆ : ಲೋಕಸಂರಕ್ಷಣಾಧಿಕಾರವು ವಿಶ್ರಾಂತಿಯಿಲ್ಲದುದು (ಶಾಕುಂತ. ೬೦-೦೯). [ಸಂ]

ಲೋಕಸಭೆ (ನಾ). ಕೇಂದ್ರಸಂಸತ್ತಿನ ಉಭಯಸಭೆಗಳಲ್ಲಿ ಒಂದು ; P ಜನರಿಂದ ನೇರವಾಗಿ ಚುನಾಯಿತರಾದ ಸದಸ್ಯರ ಸಭೆ : ಭಾರತ ಸಂಘಕ್ಕೆ ರಾಷ್ಟ್ರಪತಿಯವರೂ ರಾಜ್ಯಪರಿಷತ್ತೆಂಬ ಹೆಸರಿನ ಒಂದು ಸದನವೂ ಲೋಕಸಭೆ ಎಂಬ ಹೆಸರಿನ ಒಂದು ಸದನವೂ ಸೇರಿಯವ ಒಂದು ಸಂಸತ್ತು ಇರತಕ್ಕುದು (ಸಾಂಪ್ರ. ೬೯). [ಸಂ. ಲೋಕಸಭಾ]

ಲೋಕಸಾಕ್ಷಿ (ನಾ). ೧. ಜಗತ್ಸಾಕ್ಷಿ; ವಿಶ್ವಸಾಕ್ಷಿ. ೨. ಬ್ರಹ್ಮ. ೩. ಅಗ್ನಿ. [ಸಂ. ಲೋಕಸಾಕ್ಷಿನ್]

ಲೋಕಸೇವಾಆಯೋಗ (ನಾ). ಸಾರ್ವಜನಿಕಸೇವೆ ಸಲ್ಲಿಸಲು ಸರ್ಕಾರವು ನೇಮಿಸಿರುವ, ಕೆಲವು ಸದಸ್ಯರನ್ನೊಳಗೊಂಡ ಒಂದು ಸಮಿತಿ, — ಮಂಡಳಿ : ರಾಜ್ಯದ ಲೋಕಸೇವಾಆಯೋಗದೊಡನೆ . . . ವಿಧಾಯಕ ಮಾಡಬಹುದು (ಶಾಸಾಪ. ೦೨೩). [ಸಂ.]

ಲೋಕಸೇವೆ (ನಾ). ಸಾರ್ವಜನಿಕರಿಗೆ ಸೇವೆ ಸಲ್ಲಿಸುವುದು; ಜನಸೇವೆ: "ಸಾರ್ವಜನಿಕರ ಸೇವೆ; ಸರ್ಕಾರಿ ನೌಕರಿ : (ಪಾಂ) ಲೋಕಸೇವೆ" (Public service· ಪ್ರಕ್ರಿ. ೬೬) ; ರಾಜ್ಯದ ಲೋಕಸೇವಾವ್ಯವಸ್ಥೆಯಲ್ಲಿ ನ್ಯಾಯಪಾಲಿಕೆಯನ್ನು . . . ಜರುಗಿಸತಕ್ಕುದು (ಶಾಸಾಪ. ೨೩). [ಸಂ. ಲೋಕಸೇವಾ]

ಲೋಕಸ್ತುತೆ (ನಾ). ಜಗತ್ತಿನಿಂದ ಹೊಗಳಿಸಿಕೊಂಡವಳು ; ವಿಶ್ವ ಮಾನ್ಯೆಯಾದವಳು: ಲೋಕಸ್ತುತೆ ಮಣಿಕನಕಪತಾಕೆಯನರ್ಜಿಸುವೆನೆಸೆಯ ನಿನ್ನೀ ನಿಲಯಪ್ರಾಕಾರಮಂ (ಅಚಾಸ. ೬-೮೨). [ಸಂ. ಲೋಕಸ್ತುತಾ]

ಲೋಕಹಿತ (ನಾ). ೧. ಜನಹಿತ : ವಿಶ್ವಕಲ್ಯಾಣ : ಲೋಕಹಿತಾಚರಣ ಕಳಾನೀಕಪ್ರಯುತಂಗೆ ಯತಿಗೆ ದಾನವೆನಿರದುದ್ರೇಕಿಸೆ ಮಾಡುವ ಪೀಡೆ ಸುಧಾಕರನಂ ರಾಹು ಪೀಡಿಪುದನುಕರಿಕುಂ (ಪಾಪ್ರ. ೦೫-೦೨೦) ; ಸಾಹುಗಳ ಲಕ್ಷಣವೇ ಅದು ತಾಯಿ. ಆದರಲ್ಲಿಯೂ ಲೋಕಹಿತದ ದೃಷ್ಟಿ ಇದ್ದರಾಯಿತು (ಸಚಿ. ೦೫). ೨. ಜಗತ್ತಿಗೆ ಒಳ್ಳೆಯದನ್ನು ಮಾಡುವವನು : ಮಹಿಷಂ ರಕ್ಷಿಪ ಧರ್ಮಸಂತತಿನಿಮಿತ್ತಂ ರಾಜ್ಯಮಂ ತಾಳ್ದಿ ನಿಸ್ಪೃಹನಾಗಿರ್ಪವೊರ್ವೆನಿನ್ನೆವರಮಿಗಳ್ ದ್ರೋಹ ದುರ್ಮೋಹ ನಿಗ್ರಹ ನಿಷ್ಠಾಗ್ರಹನಾದೆ ಲೋಕಹಿತರಾರಿಲ್ಲಂದಿಂ ಪೀಂ ಬರಂ (ಪೃತ್ಪ. ೦೬-೬೩). [ಸಂ.]

ಲೋಕಾಂತ (ನಾ). ೧. ಜಗತ್ತಿನ ಕೊನೆ ; ವಿಶ್ವದ ತುದಿ. ೨. ಯಾರು ಬೇಕಾದರೂ ಇರಬಹುದಾದ ಸ್ಥಳ ; ಸಾರ್ವಜನಿಕ ಜಾಗ ; ಏಕಾಂತದ ಸುಖವಿಪ್ಪೆ ಲೋಕಾಂತವದೇಕೋ (ಪಪಸು. ೦೦೯-೪೭) ; 'ಲೋಕಾಂತ'ಕ್ಕಿಂತ ಏಕಾಂತ ಅವರಿಗೆ ಹೆಚ್ಚು ಸೇರುತ್ತಿತ್ತು (ತೋಗಚ. ೪೩ ಪ್ರಕಾ.ಪಠ). ೩. ಎಲ್ಲರಿಗೂ ತಿಳಿದ ವಿಷಯ ; ಜಗಜ್ಜಾಹೀರಾದುದು ; ಸಾರ್ವಜನಿಕವಾದುದು : ಏಕಾಂತರಮಣನಂತಕೇಜೋಮಹಿಮೆಯದು ಲೋಕಾಂತವಾಯಿತ್ತೀ ಚತುರ್ದಶಭುವನಮಧ್ಯದಲಿ (ಪಪಪು. ೩೨-೪೩) ; ಒಬ್ಬನಜ್ಞಾದರೆ ಸ್ವಾಂತ ಇಬ್ಬರಲಿ ಏಕಾಂತ ಇಬ್ಬರಿಂದೊಬ್ಬನಱಿದು ಬೇಱೊಬ್ಬನಿಂ ಪಱಿಬ್ಬ ಲೋಕಾಂತ (ಸರಕ್ಷ. ೦೫೭) ; ಇಬ್ಬರಿದ್ದರೆ ಏಕಾಂತ, ಮೂವರಿದ್ದರೆ ಲೋಕಾಂತ (ಗಾದೆ). [ಸಂ.]

ಲೋಕಾಂತರ (ನಾ). ಬೇರೊಂದು ಲೋಕ ; ಪರಲೋಕ ; ಇನ್ನೊಂದು ಜಗತ್ತು : " ಪರಲೋಕದುಜ್ಜಿಗೆ ಲೋಕಾಂತರಮಕ್ಕುಂ" (ಪಜ್ಜಕಚ. ೪೯-೧೬) ; ಇಳೆಯ ಭೋಗದ ದೃಷ್ಟಿ ತೀರಿದ ಬಳಿಕ ಲೋಕಾಂತರವನೆಯ್ದುವರು (ಶಾಬ್ಯಾಲಾ. ೯-೦೪) ; ದೇಹಾತ್ಮಗಳೆರಡೂ . . . ಅಪರವರ ಕರ್ಮಾನುಗುಣವಾಗಿ ಲೋಕಾಂತರಗಳಲ್ಲಿ ಸಂಚರಿಸುವವರಾಗಿಯೂ ಇದ್ದಾರೆ (ಪಾಬ್ಯಾಕ. ೨೪೦). [ಸಂ.]

ಲೋಕಾಂತರಿತ (ನಾ). ಬೇರೆ ಲೋಕಕ್ಕೆ ಹೋದವನು ; ನಿಧನ ಹೊಂದಿದವನು ; ಮರಣ ಹೊಂದಿದವನು : ಪ್ರೇಮುಮತಿ . . . ಇನಿತನ್ಯಾಯಮನಾನೆ ಮಾಡಿದೆನೆನ್ನ ಮಗನ ಮೇಲೆ ದೋಷಮಾವುದು ವಿಲ್ಲೆಂದು ಲೋಕಾಂತರಿತನಾದಂ (ಶಾಚಕಂ. ೦೭೯-೩) ; ಸೋಮಶರ್ಮಂ ಲೋಕಾಂತರಿತ[ನಾದ]ನೆಂಬುವನತಿಬಲಮಹಾರಾಜಂ ಕೇಳ್ದು . . . ಪಿರಿದುಂ ಕುಗ್ಗುತಿರ್ದನು (ಶಾಬುಚಾ. ೪-೦೦೩). [ಸಂ.]

ಲೋಕಾಂತಿಕ (ನಾ). [ಜೈನ] ಬ್ರಹ್ಮಲೋಕದಲ್ಲಿ ವಾಸಿಸುವ ದೇವತೆಗಳ ಒಂದು ಪಂಗಡ : ಬ್ರಹ್ಮಲೋಕನಳಯರಪ್ಪ ಲೋಕಾಂತಿಕರುಂ ದಕ್ಷಿಣೇಂದ್ರರುಂ . . . ಮುಕ್ತಿವಧೂವಿವಾಹವಲ್ಲದೆ ವಧೂವಿವಾಹ ಮನೊಲ್ಲರ್ (ಪಾಂಪು. ೦೨-೧೩೫). [ಸಂ.]

ಲೋಕಾಂತಿಕದೇವ (ನಾ). = ಲೋಕಾಂತಿಕ : ಎಣ್ಬರುಂ ಲೋಕಾಂತಿಕದೇವರ್ ಬಂದು (ಅಪ್ಪ. ೬-೬೦೫) ; ಲೋಕಾಂತಿಕದೇವರ್ ಪರಲೋಕ ಪ್ರಿಯರಲ್ಲದೆಂದು ಮುಂ ಬಾರದರೊಲ್ದೇಕೆ ಜಿನ್ಗಂ ಪರಹಿತಮಂ ಸ್ವೀಕರಿಪ್ಪು ದುಮದನೆ ನುಡಿದು ದೃಢಮೆನಿಸಿದವರ್ (ಪಾಶ್ವ.ಗಣ. ೦೫-೬೩). [ಸಂ.]

ಲೋಕಾಕಾರ (ನಾ). [ಜೈನ] ಲೋಕದ ಆಕಾರ,–ರೂಪು : ಲೋಕಾಕಾರಮವಧಿನಯಿಪಾಕಾರಂ ನೆಗಟ್ಟಿ ನಿಂದು ವೈಜಯಿಸ್ಥಾನಾಕಾರದೊಳ್ . . . ಜ್ಜುಂ ಪಡೆವಂ (ಅಪ್ಪ. ೬-೦೦೬). [ಸಂ.]

ಲೋಕಾಕಾರಕಥನ (ನಾ). [ಜೈನ] ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕಗಳ ವರ್ಣನೆ : ಲೋಕಾಕಾರಕಥನಮುಂ ದೇಶಾವೇಶೋಪದೇಶಮುಂ . . . ಅವದುಪಂಗಳೆಂಟಕ್ಕುಂ (ಅಪ್ಪ. ೦-೧೨ ಪ). [ಸಂ.]

ಲೋಕಾಕಾಶ (ನಾ). ೧. ಆಕಾಶ. ೨. [ಜೈನ] ಲೋಕಾಕಾಶ ಮತ್ತು ಅಲೋಕಾಕಾಶ ಎಂಬ ಎರಡು ಬಗೆಯ ಆಕಾಶಗಳಲ್ಲಿ ಒಂದು : ಜೀವ, ಪುದ್ಗಲಕಾಯ, ಧರ್ಮ, ಅಧರ್ಮ ಇತ್ಯಾದಿ ದ್ರವ್ಯಗಳನ್ನು ಹೊಂದಿರುವ, ಲೋಕಗಳನ್ನು ಒಳಗೊಂಡ ಆಕಾಶಪ್ರದೇಶ : ಲೋಕಾಕಾಶಪ್ರದೇಶಪ್ರಮಾಣಪರಿಮಾಣಮುಮಸ್ಮದಾದ್ಯನುಮೇಯಮುಂ ಸರ್ವಜ್ಞಪ್ರತ್ಯಕ್ಷಗೋಚರಮಪ್ಪುದು ಮುಮ್ಮಿಕಾಲಂ (ಅಪ್ಪ. ೬-೮೨); ಈ ದ್ರವ್ಯಗಳಿರುವ ಸ್ಥಾನಕ್ಕೆ ಲೋಕಾಕಾಶವೆಂದೂ, ಬರಿಯ ಆಕಾಶದ್ರವ್ಯವಿರುವ ಸ್ಥಳಕ್ಕೆ ಅಲೋಕಾಕಾಶವೆಂದೂ ಹೆಸರು (ಪಾರ್ಶ್ವ. ೦೪೬). ' ಅಲೋಕಾಕಾಶ ' ಪರಾ. [ಸಂ.]

ಲೋಕಾಖ್ಯಾನ (ನಾ). [ಜೈನ] ಲೋಕದ ಆಕಾರ ವರ್ಣನೆ : ಪುರಾಣ ಕಥೆಗಳೊಳು ಲೋಕಾಖ್ಯಾನಮುಂ ದೇವತಾಖ್ಯಾನಮುಂ . . . ಫಲಾಖ್ಯಾನ ಮುಮೆಂದಷ್ಟವಿಧವರ್ಣನಮಕ್ಕುಂ ಅಲ್ಲಿ ಲೋಕಾಖ್ಯಾನಮೆಂಬುದನಂತಾ ನಂತವುಮಪ್ಪಾಕಾಶಬಹುಮಧ್ಯಪ್ರದೇಶದೊಳಮಸಂಖ್ಯಾತಾತ್ಮಪ್ರದೇಶಾತ್ಮಕಮಾಗಿ . . . ಕುಳಾಚಳ ಸಿದ್ಧಾಲಯ ವಿಮಾನಾದಿಗಳಾಧಾರಭೂತಮಪ್ಪುದಂ ವೇಟ್ಟುದು (ಶಾಪುಂಪ್ರ. ೦೨). -' ದೇಶಾಖ್ಯಾನ ' ಪರಾ. [ಸಂ.]

ಲೋಕಾಚಾರ (ನಾ). ಜಗತ್ತಿನ ರೂಢಿ, -ಸಂಪ್ರದಾಯ : ವೀರಶೈವನ ಬಗೆಯುದಿಂತೆನಲು ಲಾಲಿಪಾ ಗೌರಿ ಲೋಕಾಚಾರವರ್ಜಿತಂ ಭಾವಿಸಲುದಾರ ಲೋಕಾಲೋಕಪರಿಹರಂ ತಿಥಿಲಗ್ನ ನಕ್ಷತ್ರಯೋಗಕರಣಂ (ಪಚ್ಚೃ. ೭-೬-೬). [ಸಂ.]

ಲೋಕಾನುಗ್ರಹ (ನಾ). ಜಗತ್ತಿಗೆ ಕರುಣೆ ತೋರಿಸುವುದು : ಲೋಕಾನುಗ್ರಹಶಾಸ್ತ್ರಾನೀಕಮನುರುಪುಣ್ಯನದಿಗಳಂ ಶ್ರುತಿತತಿಯಂ ನೀಕರಿಸಿ ಶೈಪಜನಮನನೇಕಾಂಗದಿ ನಿಂದಿಸುತ್ತಮಿರ್ದರ್ ಸಮಣರ್ (ಕೃಶಾ. ೩೨-೦೦); ಪೂಜ್ಯರಾದ ಕಣ್ಣಿರು ಲೋಕಾನುಗ್ರಹಾರ್ಥವಾಗಿ ಕ್ಷೇಮದಿಂದಿರುವರೆ ? (ಶಾಕುಂತ. ೬೫-೩೩). [ಸಂ.]

ಲೋಕಾನುಪ್ರೇಕ್ಷೆ (ನಾ). [ಜೈನ] ಹನ್ನೆರಡು ಬಗೆಯ ಅನುಪ್ರೇಕ್ಷೆಗಳಲ್ಲಿ ಒಂದು : ಲೋಕತ್ರಯದ ಋತ್ವತುವಿಯೊಳು . ಸಿದ್ಧಕ್ಷೇತ್ರಮಕ್ಕುಂ ಅಲ್ಲಿಗೆ ಪೋಪಡೆ ಸಕಲಕರ್ಮಕ್ಷಯಂಗೆಯ್ದೊಡಲ್ಲದೆ ಪೋಗಲ್ಬಾರದೆಂದು ಕರ್ಮನಿರ್ಮುಕ್ತ್ಯರ್ಥಂ ನಿರ್ಮಲಶರ್ಮಾತ್ಮಕಾತ್ಮತತ್ವಮಂ ಭಾವಿಸುವುದು ಲೋಕಾನುಪ್ರೇಕ್ಷೆ (ಕ್ರಾಕಾಪ್ರ. ೦೪೭-೩) ; ಲೋಕಾನುಪ್ರೇಕ್ಷೆ-ಲೋಕವೆಂಬುದು ಎಷ್ಟು ದೊಡ್ಡದು, ಅದರಲ್ಲಿರುವ ಜೀವಗಳು ಯಾವ ಯಾವುವು ? ಇದು ಸಾದಿಯೋ ಅನಾದಿಯೋ ಮೊದಲಾದುವನ್ನು ಭಾವಿಸುವುದು (ಕ್ಷಪ್ರ. ೬೩). 'ದ್ವಾದಶಾನುಪ್ರೇಕ್ಷೆ' ಪರಾ. [ಸಂ. ಲೋಕಾನುಪ್ರೇಕ್ಷಾ]

ಲೋಕಾನುಭವ (ನಾ). ಪ್ರಪಂಚದ ಬಗ್ಗೆ ಇರುವ ಜ್ಞಾನ ; ಲೋಕದ ಆಗುಹೋಗುಗಳಿಂದ ಬರುವ ತಿಳಿವಳಿಕೆ : ಲೋಕಾನುಭವ ವಿನೇನೂ ಸಾಲದು (ಜೂಗೀಕೃ. ೪). [ಸಂ.]

ಲೋಕಾಪವಾದ (ನಾ). ಜನರಿಂದ ಬರುವ ದೂರು, — ಅಪವಾದ ; ಜನರು ಮಾಡುವ ನಿಂದೆ -— ಹೀಯಾಳಿಕೆ : ಲೋಕಾಪವಾದ ಪರಾಧಿಯಲ್ಲದ ತನ್ನನು ತರಣಿಕುಲಸಂಭವಂ ಬಿಟ್ಟನೆಂದೀ ವನದೊಳಿರಿಸಿ ಪೋದಂ ಸುಮಿತ್ರಾತ್ಮಜಂ (ಕೃಶಾಣ. ೦೬-೨೦) ; ಲೋಕಾಪವಾದಕ್ಕೆ ಹೆದರಬೇಕು (ಜಕಪಂಂ. XI, ೨೦). [ಸಂ.]

ಲೋಕಾಭಿರಾಮ (ಗು). ೧. ಜನರಲ್ಲಿ ಪರಸ್ಪರ ಪ್ರೀತಿಯನ್ನು ಬೆಳೆಸುವ ; ಜನರ ಮನವೊಲಿಸುವಂಥ ; ಜನರಂಜಕವಾದ. (ನಾ). ೨. ಯಾವ ಉದ್ದೇಶವೂ ಇಲ್ಲದುದು ; ಸ್ವಾಭಾವಿಕವಾದುದು ; ಸಹಜವಾದುದು : ಈ ಬಗೆಯ ಮಾತುಗಳು ಎಷ್ಟೊ ಸಲ. ಕೇವಲ ಲೋಕಾಭಿರಾಮದ, ಅನಸಿಕೆಯ ಮಾತುಗಳಾಗಿರುತ್ತವೆ (ಪಪ್ರಕೃ. ೩೦) ; ಮುಂದುವೆ ಯಾತಕ್ಕೆ ಮಾಡಿಕೊಳ್ಳಲಿಲ್ಲ ಎಂದು ಲೋಕಾಭಿರಾಮವಾಗಿ ಕೇಳಲು (ಕಣಾಪಂ. IV, ೦೩). [ಸಂ.]

ಲೋಕಾಯತ (ಗು). ೧. ನಾಸ್ತಿಕತೆಯಿಂದ ಕೂಡಿದ. (ನಾ). ೨. ನಾಸ್ತಿಕತೆ; ನಿರೀಶ್ವರ ವಾದ; ಚಾರ್ವಾಕ ಮತ : ಲೋಕಾಯತವೆನಿಸಿದ ಚಾರ್ವಾಕೋಕ್ತಿಯಸಹಿತಶಕ್ತಿಯಂ ಭೇದಿಸುವಂ . . . ಜನಚಂದ್ರಭೂಭುಜಂ (ಶಾಂತಿಪು. ೯-೦೩೫) ; ವೈದಿಕಸಿದ್ಧಾಂತಕ್ಕೂ ಲೋಕಾಯತಮೆಂಬ ಚಾರ್ವಾಕ ಸಿದ್ಧಾಂತಕ್ಕೂ ವ್ಯತ್ಯಾಸವಿಲ್ಲ (ಪಂರಾಚಾ. ೦೫೬). ೩. ನಾಸ್ತಿಕ ; ನಿರೀಶ್ವರ ವಾದಿ ; ಚಾರ್ವಾಕ : ತಗೆಯಲ್ ಜೈಮಿನಿ . . . ದಿಡಲ್ಬುಗೆ ಲೋಕಾಯ ತನೆಯ್ದೆ ಸಾಂಖ್ಯನಡಸ್ಮಮ್ಮ ಪಟ್ಟಕ್ರವೀಧಿಗಳೊಳ್ ತುಳ್ದಿತು ಗೋಪ ನಂದಿದಿಗಿಭಪ್ರೋದ್ಭಾಸಿಗಂಧದ್ವಿಪಂ (ಎಕ. ೪. ಪಪ್ಪಣಾ. ೦೧೬-೪೦ ; ೨೦೨೬) ; ಇಂತಪ್ಪನರ್ಘ್ಯಮಂ ಭಕ್ತರ್ಗೆ ಕೆಯ್ಯಾರೆ ಕೊಡಲಿಲ್ಲ . . . ಲೋಕಾಯ ತರ್ಗೆ ಸಾರುತಲಿರ್ದವುದಕಟ (ಜಪಪ. ೩-೦೫೪) : ನಿರೀಶ್ವರವಾದಿಗಳಾದ ಲೋಕಾಯತರು ಇಂದ್ರಿಯಗಳನ್ನೇ ಆತ್ಮವೆನ್ನುತ್ತಾರೆ (ಕಬ್ಬಿಳ. ೩-೧೩ ಟೀಗಳು). [ಸಂ.]

ಲೋಕಾಯತದರ್ಶನ (ನಾ). = ಲೋಕಾಯತ ೨ : ಸ್ಫೂರ್ತ ಚೇತಸ್ಸಿನ . . . ಗುರಿ ಲೋಕಾಯತದರ್ಶನವೂ ಅಲ್ಲ. ಸ್ಫೂರ್ತವಪ್ರಾಣುದ್ದಿ ರ್ದರ್ಶನವೂ ಅಲ್ಲ ಅಥವಾ ದೂರಸ್ಥವೂ ಪ್ರತ್ಯೇಕವೂ ಆದ ಅಧ್ಯಾತ್ಮಿ ಕತೆಯೂ ಅಲ್ಲ (ಶತ್ಕಾಣಾ. ೦೦೯). [ಸಂ.]

ಲೋಕಾಯತಮತ (ನಾ). ನಾಸ್ತಿಕತೆ ; ಚಾರ್ವಾಕಮತ : ಚಾರ್ವಾಕ ದರ್ಶನವು . . . ಲೋಕದಲ್ಲಿ ಹರಡಿರುವುದರಿಂದ ಇದನ್ನು ಲೋಕಾಯತ ಮತ ಎಂದು ಕರೆಯುತ್ತಾರೆ (ಕಂಪಸಾ. ೦೧). [ಸಂ.]

ಲೋಕಾಯತವಾದಿ (ನಾ). = ಲೋಕಾಯತ ೩ : ಲೋಕಾಯತ ವಾದಿಯಂತೆ ಅನಾಧಿತಗುರುಮತನುಂ (ಕಂದ್ರಕೃ. ೯-೪೨ ಪ). [ಸಂ. ಲೋಕಾಯತವಾದಿನ್]

ಲೋಕಾಯತಿಕ (ನಾ). ೧. ನಾಸ್ತಿಕತೆ; ನಿರೀಶ್ವರವಾದ; ಚಾರ್ವಾಕ ಮತ ; ℙ: "ಇದು ಚಾರ್ವಾಕಮತದ ಮತ್ತೊಂದು ಹೆಸರು. ಇದರಲ್ಲಿ ದೇಹವೇ ಆತ್ಮವೆಂದೂ ಪರಲೋಕವಿಲ್ಲವೆಂದೂ ಪಾಪ ಪುಣ್ಯಗಳಿಲ್ಲವೆಂದೂ ಇಂದ್ರಿಯಾಚ್ಛೆಯನ್ನೇ ತೃಪ್ತಪಡಿಸುವುದು ಸುಖವೆಂದೂ ಬಗೆಯುವ ವಿಚಾರಗಳಿರುತ್ತವೆ. ಇದಕ್ಕೆ ಬೃಹಸ್ಪತಿ ಮತವೆಂದು ಮತ್ತೊಂದು ಹೆಸರು ಇದೆ" (ಜಪಪ್ರ. ಕೃತಜ್ಞತಾಪ್ರಕಾಶಿಕೆ ೦೫೫) ; ಮಹಾಮತಿ ಸಂಭಿನ್ನಮತಿ ಶತಮತಿಗಳ್ ಲೋಕಾಯತಿಕ ಯೋಗಾಚಾರ ಮಾಧ್ಯಮಿಕ ಮತವಿತಥಾಭಿಧಾಯಿಗಳ್ ಜೀವಾಭಾವನೆ ಪಿಡಿಯಚ್ಚುವಿಡಿದು (ಅಂಪ್ರ. ೨-೬ ಪ). ೨. ಚಾರ್ವಾಕಮತಕ್ಕೆ ಸೇರಿದ ವ್ಯಕ್ತಿ ; ನಾಸ್ತಿಕ ; ನಿರೀಶ್ವರ ವಾದಿ : ಚೈತನ್ಯದಿಂದ ಕೂಡಿರುವ ದೇಹವೇ ಆತ್ಮನು ಎಂದು ಸಾಮಾನ್ಯಜನರೂ ! ಲೋಕಾಯತಿಕರೂ ತಿಳಿದು ಕೊಂಡಿರುವರು (ಪ್ರಪ್ರಕಾ. ೨೬).

[ಸಂ.]

ಲೋಕಾಯ್ತವೊಟಿಲ್ (ನಾ). ಒಂದು ಕಿರಿಯ ಹೆಸರು ; ಕೂರವಾಡಿ ಮೂನೂಱರ ಬಳಿಯ ಲೋಕಾಯ್ತವೊಟಲುಂ ಗುಣ್ಟೇಜಿಳಿಳ್ ಇರ್ಪತ್ತ ನಾಲ್ಕು ಪುತ್ತರ್‌ಕ್ಕರಿಯ ಕೆಯ್ಯಂ . . . ಕೊಟ್ಟರ್ (ಎಳ್. XI, ಕೋಳ್ಕ. ೨೩-೦೬ : ೧೮೮). [ಲೋಕಾಯ್ತ್ + ಪೊಟ್ಟಿಲ್]

ಲೋಕಾರೂಢಿ (ನಾ). = ಲೋಕರೂಢಿ ; ಲೋಕಾರೂಢಿಯಾಗಿ ಈಗಿನ ಕಾಲದ ಮುಂದುವೆ ಮುಂಜಿ ವಿಚಾರಗಳಲ್ಲಿ ಚರ್ಚೆ ಮಾಡುತ್ತಾ ಇದ್ದರು(ಜಾಗಪ್ರ. ೨) ; ಅದು . . . ಲೋಕಾರೂಢಿಯು ಮಾತಾಗಿ ಹೋಗಿತ್ತು (ಕ್ಷಪ್ರಾ. ೪೩). ℙ ಇದು ಆಡಿದ್ದರೂಪವಾದರೂ ಪ್ರಯೋಗದಲ್ಲಿ ಅಂಗೀಕೃತವಾಗಿದೆ. [< ಲೋಕರೂಢಿ]

ಲೋಕಾಲೋಕ (ನಾ). ಭೂಮಿಯನ್ನು ಗೋಡೆಯಂತೆ ಸುತ್ತುಗಟ್ಟಿ ಅವ್ಯಕ್ತಲೋಕದ ಕತ್ತಲೆಯಿಂದ ಬೇರ್ಪಡಿಸುವುದೆಂದು ಭಾವಿಸ ಲಾದ , ಪೌರಾಣಿಕಪರ್ವತ ಶ್ರೇಣಿ ; ಚಕ್ರವಾಳ : ಪರಮಾಗಮ ಮೂರ್ತಿ ಚರಾಚರಲೋಕಾಲೋಕಸಂಪ್ರದಾಯಿನಿ ವಿಬುಧೋತ್ಕರ ಮಾನಸಾಬ್ಜವಾಸಿನಿ ಸರಸ್ವತೀದೇವಿ ವರದೆದುಕ್ಕಿಮಗೇದುಂ (ಕಾಪ್ರಾಕ. ೨ ೨೧೫) ; ತರಣಿ ಲೋಕಾಲೋಕಪರ್ವತಾಗ್ರಪ್ರಸಂತು ತಿರುಗುವಂ (ಕಾವಪ್ರ. ೬-೦೦). 'ಚಕ್ರವಾಡಿಕೆ' ಪರಾ. [ಸಂ.]

ಲೋಕಿಗ (ನಾ). ಜಗತ್ತಿನಲ್ಲಿರುವವನು ; ಮಾನವ ; ಸಾಮಾನ್ಯ ಮನುಷ್ಯ : ಮದ್ವಚನಮತಿಕ್ರಮಿಸಿ ಸಜಯದಿರಲೀ ಲೋಕಿಗರ್ ವಾಕಿಗರ್ ಭಯದೊಳು (ಪಪ್ರಕೃ. ೧೦ ೦೫) ; ಲೋಕಿಗರ ಮನದ ಕತ್ತಲೆಯ

ನೋಡಿಸಬೆಂದು ಒಳ್ಳನದಿ ನೀ ಪಿಡಿದ ಪಂಜು (ಕಗಡ್ಯ. ೭೩).

[ಲೋಕ + — ಇಗ]

ಲೋಕೇಶ (ನಾ)· ೧· ಜಗತ್ತಿನ ಒಡೆಯ. ೨. ಬ್ರಹ್ಮ· ೩. ವಿಷ್ಣು : ಲೋಕಸಂರಕ್ಷಕ ಅಸುರಸಂಹಾರಕ ಲೋಕೇಶ ಪುರಂದರ ವಿಶ್ವಲ (ಕುಂಪ. ಭಾ· ೩-೪೩-೩). ೪· ಶಿವ· ೫. ಜಿನ ; ತೀರ್ಥಂಕರ : ಸುರ ವಿಚ್ಚಾನೋಪಯೋಗಂ ಸುರಪತಿಗುಪವಿಚ್ಚಾಸನಾಕಂಪದಿಂದಂ ಬರೆ ಕಂಡ್ಯರಾ ಮಹಾದೇವಿಯರುದರದೊಳಂ ಬರ್ದ ಲೋಕೇಶನಂ (ಜಾಂಪ್ರ· ೯-೦೬೨).

[ಸಂ.]

ಲೋಕೈಕಚಕ್ಷು (ನಾ)· ಜಗತ್ತಿಗೆಲ್ಲ ಒಂದೇ ಕಣ್ಣಿನಂತಿರುವವನು ; ಸೂರ್ಯ : ಲೋಕೈಕಚಕ್ಷು ನವಮಲಾತರಬಾಂಧವನೇಕದಿತಿಸುತ ಪುರಾ[ನೀ]ಕಧಯಂಕರನೆರಡು ವನೀಕಂಗಳನಡರೆ ನೋಡುವಂತುವಲಿಸಿದಂ (ಪಂಚಕ. ೦೦-೫೦)· [ಸಂ. ಲೋಕೈಕಚಕ್ಷುಸ್]

ಲೋಕೈಕವೀರ (ನಾ)· ಜಗತ್ತಿಗೆಲ್ಲ ಒಬ್ಬನೇ ವೀರ ; ಮಹಾಶೂರ : ನೂಱ ಕವಿದುದು ಮುಂದಿ ಮಧ್ಯದೋಳಕ ಮೆಲ್ಲನೆ ಬರುತಲಾ ಲೋಕೈಕ ವೀರನ ಕಂಡಳಾ ಬಾಣಸಿನ ಬಾಗಿಲಲ್ಲಿ (ಶಾಖ್ಯಾಪ· ೩-೦೦೪) ; ಕುರುವಂಶ ಶರಧಿಯ ಸುಧಾಸೂತಿ ಲೋಕೈಕವೀರನಾಮವನು ಕೇಳ್ದರಿಯಮೊ ? (ಶಾಖ್ಯಾಗ· ೩೬-೦೦೦೪). [ಸಂ.]

ಲೋಕೋಕ್ತಿ (ನಾ)· ೧· ಪ್ರಸಿದ್ಧವಾದ ಮಾತು : ಗಾದೆ ; ನಾಣ್ಣುಡಿ : ಮುಕ್ಕಯೊಳಾದ ನಂಬುಗೆ ಮನಂಬುಗದುಬ್ಬಸುಬಾಶಗೆಂಬ ಲೋಕೋಕ್ತಿಯಿಂ (ಜಾಂಪ್ರ· ೦-೩೬); "ಮಾನವನು ತನ್ನ ನಡತೆಯಿಂದ ತಾನೆ ಹಾಳಾದ" ಎಂಬುದು ಒಂದು ಲೋಕೋಕ್ತಿ (ಶಾಬಾಕ್ಕ· ೨೨೩) ; 'ವಿಷ್ವಾನ್ನೆಮಿತರೇ ಜನಾಃ' ಎಂಬುದು ಲೋಕೋಕ್ತಿ (ಚಾಪರ·,೩೨, ೨೫೯)· ೨. ಜನಸಾಮಾನ್ಯರ ಮಾತು,—ನುಡಿ. [ಸಂ.]

ಲೋಕೋತ್ತರ (ಗಂ)· ೧. ಜಗತ್ತಿನಲ್ಲಿಯೆ ಮಿಗಿಲಾದ : ವಿಶ್ವದಲ್ಲಿ ಅತಿಶಯವಾದ : ಪಿರಿಯಂ ಸಮಾಸವಾಗಿರೆ ವಿರಚಿಸುವುದು ಪಾನದೋಜ ಮುಕ್ಕಂ ಲೋಕೋತ್ತರವರ್ಣನಂ ವಿಶೇಷಣ ಪರಪ್ರಕರ್ಷೋಕ್ತಿಯುಕ್ತ ಮುಪ್ಪುದುದಾರಂ (ಕಾಪ್ರಾ ೩೦೩)· (ನಾ)· ೨. ಅಸಾಧಾರಣವಾದುದು; ಅಸಾಮಾನ್ಯವಾದುದು : ಮೊಗಕ್ಕೆ ಮೆಯ್ವೆತ್ತ ಬೆಮರ್ ಮನಂಗೊಳಿಸೆ ಭೂಪತಿಯಂ ಬೆಸವೇಳ್ವಗರ್ವ ಲೋಕೋತ್ತರವಾಗೆ ವೀರಭಟನೇಂ ಪುಣ್ಯನೋ (ಜಾಂಪ್ರ· ೩-೩೮) ; ಮಾಟ್ಟುದಾತ್ಮಹಿತಂ ತಾನದು ದುರ್ಗ ಸಿಂಹನ ಮತಂ ಲೋಕೋತ್ತರಂ ಧಾತ್ರಿಯೊಳ್ (ಪಂಪಾ. ೦೯೯-೦೯): ರಮಣೀಯವೆಂದರೆ ಲೋಕೋತ್ತರವಾದ ಆನಂದವನ್ನುಂಟುಮಾಡ ತಕ್ಕುದ್ದು (ಶಾಬಾಪ್ರ· ೩೨೦)· ೩. ಜಗತ್ತಿನಲ್ಲಿ ಶ್ರೇಷ್ಠನಾದವನು,—ಮಿಗಿಲಾದವನು : ಅತುಳತಪಃಶೀಲಮಂ ಪೂಡೆ ಲೋಕೋತ್ತರ ರಾಜಾರ್ಯರೆವ್ವಂ ನಿಯಮಿಸುಗೆ ನಿಜಾನುಗ್ರಹವೈಧಿಯಾಂತಂ (ಶ್ರೀವ. ೦-೩). ನನಗೆ ಲೋಕೋತ್ತರನಾದ ಒಬ್ಬ ಮಗನಾಗಬೇಕು (ಪಚಾಂ· ೦೩).

[ಸಂ.]

ಲೋಕೋದ್ಧಾರ (ನಾ)· ಜಗತ್ತನ್ನು ಮೇಲಕ್ಕೆತ್ತುವುದು ; ವಿಶ್ವವನ್ನು ರಕ್ಷಿಸುವುದು : ಲೋಕೋದ್ಧಾರದ ವೃಷ್ಟಿಯಿಲ್ಲದೆ, ತಾವು ಅಮರರಾಗಬೇಕು ಎಂಬ ಉದ್ದೇಶದಿಂದ ಅಮೃತಮಂಥನ ಮಾಡಿದರು (ಕೆಂಪಾ· ೦೬೦). [ಸಂ.]

ಲೋಕೋಪಕಾರ (ನಾ)· ೧· ಜನಕ್ಕೆ ಉಪಕಾರ ಮಾಡುವುದು ; ಲೋಕಕ್ಕೆ ಹಿತವನ್ನುಂಟುಮಾಡುವುದು : ಅತಿ ಕುಶಲಜ ಲೀಲಾಚಾರ ಲೋಕೋಪಕಾರೋದಿತ ಪರಮಗುಣೈಕೋದಾರ ಧೀರಾಧಿಕಾರಂ (ಪಂಪಾ· ೩-೨೦೯); ಯಾವಪ ಕೂಡೆ ಲೋಕೋಪಕಾರವೆ ಕೈವಲ್ಯವಹುದು (ಮೋಚಕ. ೩-೩೬); ಸುತನೆ ತೀ ಲೋಕೋಪಕಾರಕೆ ಹಿತದಿ ಜನಿಪುದು (ಜಾಪಾ· ೪-೨೪)· ೨. ಚಾವುಂಡರಾಯನೆಂಬ ಕವಿಯು ಬರೆದ ಒಂದು ಪ್ರಾಚೀನ ಕನ್ನಡಗ್ರಂಥದ ಹೆಸರು· ೧. ೨ : ಮೇದಿನಿಯುಪಕಾರಂ ಕರಮೋಜುಗಳಿಸತೊಳಲ್ದ ನೆಲಸಿರ್ದು ಬಾಧೋವಾದೇಯವಾದ ದೂಜು ನಾದುದೂ ಲೋಕೋಪಕಾರಮೆಂಸಸ್ವರ್ಧಂ (ಮೋಚಕ. ೦-೨೬ ೨೯೫).

[ಸಂ.]

ಲೋಕೋಪಕಾರಕ (ಗು)· ಜಗತ್ತಿಗೆ ಉಪಕಾರ ಮಾಡುವ ; ವಿಶ್ವಕ್ಕೆ ಹಿತವನ್ನುಂಟುಮಾಡುವ. [ಸಂ.]

ಲೋಕೋಪಚಾರ (ನಾ)· ಲೌಕಿಕನು ಮಾಡುವ ಉಪಚಾರ,– ಸೇವೆ : ಲೋಕೋಪಚಾರಕ್ಕೆ ಪಜ್ಜಗಕ್ಕೆಱೆವೆಪಮ್ಮಾ ಮನದ ತಾಮಸ ಬಿಡದು ಮನದ ಕಪಟ ಬಿಡದಮ್ಮಾ (ಚಚಸ· ೨೫೦). [ಸಂ.]

ಲೋಕೋಪಯೋಗಿ (ಗು)· ಸಾರ್ವಜನಿಕರಿಗೆ ಉಪಯೋಗಕರವಾದ,– ಬಳಕೆಗೆ ಬರುವ : 'ಲೋಕೋಪಯೋಗಿಇಲಾಖೆ' ಪರಾ.

[ಸಂ. ಲೋಕೋಪಯೋಗಿನ್]

ಲೋಕೋಪಯೋಗಿಇಲಾಖೆ(ನಾ) ಸಾರ್ವಜನಿಕರಿಗೆ ಉಪಯುಕ್ತವಾದ ಕಾರ್ಯವನ್ನು ಮಾಡುವ ಇಲಾಖೆ ; ಮರಾಮತ್ತು ಇಲಾಖೆ : ಇಂದು ವಿಧಾನಸಭೆಯಲ್ಲಿ ಲೋಕೋಪಯೋಗಿಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆ ನಡೆದಿದೆ (ಪ್ರಾಪ). [ಲೋಕೋಪಯೋಗಿ + ಇಲಾಖೆ]

ಲೋಗ (ನಾ)· ೧· ಜಗತ್ತಿನಲ್ಲಿರುವ ಜನ. ೨. ಬೇರೆಯವನು ; ಅನ್ಯ ; ಪರಕೀಯ : ನರಪಂಗೆಂತೆಂದೊಡಂ ಲೋಗನೆ ಗಡ ಜನನೀಭ್ರಾತೃ (ಕೃಕೃ· ೯-೪) ; ನೀ ಬೇಱಿಸಿಗೆ ಲೋಗನೆ ಕಂದ (ಶಾಬಾ೦೫೨. ೦-೨೫) ; ಇವಂ ತನ್ನವನಿವಾ ಲೋಗನೆನ್ನದೆ ನಯಂಬಡಿದು . . . ಅರಸುಗೆಯ್ವ ತ್ತಮಿರ್ಕುಂ (ಪಾಚಾ· ೦೦-೬೨)· ೩. ಭೂಮಾನ್ಯಮನುಷ್ಯ ; ನಾಡಾಡಿ; ಎಗ್ಗ : ಲೋಗ-ಲೋಕ=ಜನ. ಸಾಮಾನ್ಯ ವ್ಯಕ್ತಿ" (ಕಕ್ಕಕಾ· ೪೯) ; ಲೋಗಜಾದನು ನಿನ್ನ ಜರಣಕೆ ಬೇಗೆಯನು ಬರಿಸಿದನು (ಪಚಾಗ· ೦-೦೩-೨೦).

ಲೋಗರ್, ಲೋಗರು (ಬಹುವ) : ರಸಗೆ ಸುರಿಯ ನೊಳಿವುಗಳ್ ಮಾಸುಜಕೊಂಡು ತಿನೆ ಪೇಸಿದನಾಗಿ ಲೋಗರ ಮನೆಗಳೊಳ್ ಭೈಕ್ಷವಂ ಬೇಡಿ (ಪಚಾ.ಗ· ೦೨೨-೨೪); ಲೋಗರ ಪಸ್ತುವಂ ಕೊಳಲಾಗದು (ಪಂಪಕಾ· ೬೪-೦೯); ಲೋಗರ ಮನೆಯ ಬಾಗಿಲು ಕಾಯ್ದುಕೊಂಡಿಪ್ಪವ ಕೆಲವು ದೈವಂಗಳು (ಪಚಾ, ೨೫೩); ಪೋದಿಗೊಳೆದೆ ಲೋಗರುಚಿತಮೆನಲೊಯ್ಯನೊಯ್ಯನೆಯಮ ವಾಗಿ ನುಡಿವುದು (ಪಚಾ. ೧-೦೦). [< ಸಂ. ಲೋಕ]

ಲೋಗು (ಕ್ರಿ)· ಹಿಜರಿ ; ಹಿಮ್ಮೆಟ್ಟು : ರಾವಣನ ಬರಜೇಳು ರಣಸಂಧಾ ವನಿಗೆ ಲೋಗಿದಡೆ ಸೀತಾದೇವಿಯಂ ತಂದಿತ್ತು ಬದುಕೆಂದೆನುತಲರುಹಿಂದ (ಪಪಣಾ. ೩-೬-೦೩); ಮೈದೆಗೆಯೆ ಮರಣ ಸನ್ನಿಹಿತ ರಣಕೊದಗಿದರೆ ಕೈದು ಗಳಗಶನಮತಿದೂರಪಂಥಾನಗರಿಗೈದಲೊಂದಿತಯ ಮುಂಗಡಯ ಶತ್ರು ಗಣಂಗೆ ಲೋಗಿದವೀರ್ತಿಯಹುದು (ಪಂಚಾಣಾ. ೬-೨೬-೩೩).

[<ತೆಲು. ಲೋಗು]

ಲೋಗೇಶ್ವರ (ನಾ)· "ಲೋಯಿಸರ (?)" (ಪಂಪಾ· ೪೫೫) : ಶರಸಂಧಾನ ಕ್ರಿಯೆಯಿಂದೆರಡುಂದೆಸೆಗಿಸುತಮಿಂತೆ ಪರಿಯಿಸಿ ಲೋಗೇಶ್ವರದೊಳಗೆ ಬಂಡಿವರಿಪಂತಿರೆ ಚಕ್ರವ್ಯೂಹದೊಳಗೆ ಪರಿದತ್ತು ರಥಾ (ಪಂಪಾ. ೦೨-೦೨).

[< ಲೋಯಿಸರ?]

ಲೋಚಕ (ನಾ)· ೧· ದಡ್ಡ ಮನುಷ್ಯ ; ಮೂರ್ಖ. ೨. ಕಣ್ಣಿನ ಪಾಪೆ,– ಹಾಹೆ· ೩· ದೀಪದ ಮಸಿ ; ಕಾಡಿಗೆ· ೪· ಮಾಸದ ಗರಣೆ· ೫. ಹಾವಿನ ಪೊರೆ· ೬. ಹೆಂಗಸರು ಹಣೆಯಲ್ಲಿ ಧರಿಸುವ ಆಭರಣ; ಹಣೆಪೊಟ್ಟು· ೭. ಒಂದು ಬಗೆಯ ಕವಿಯ ಆಭರಣ. ೮. ಬಾಳೆಗಿಡ. ೯. ಕಪ್ಪು ಅಥವಾ ನೀಲವರ್ಣದ ಉಡುವು. ೧೦. ಬಿಲ್ಲಿನ ಹಗ್ಗ; ಹೆದೆ. ೧೧. ಸುಕ್ಕುಗಟ್ಟಿದ ಚರ್ಮ. [ಸಂ.]

ಲೋಚನ (ಗು)· ೧. ಹೊಳೆಯುವ; ಪ್ರಕಾಶಿಸುವ· ೨. ಕಾಣಿಸುವ; ಗೋಚರಿಸುವ. (ನಾ). ೩. ಕಾಣುವಂತೆ ಮಾಡುವ ಅಂಗ : ಕಣ್ಣು : ನಯನ : "ದೃಕ್, ದೃಷ್ಟಿ, ನೇತ್ರಂ, ಲೋಚನಂ . . . ಅಕ್ಷಿ–ಈ ೯ ಕಣ್" (ಹಾಹಾಹು. ೬೭–೭೭) ; ಕಳಕಂಠಲೋಚನಚ್ಛವಿವಿಳಾಸಮಂ ತಳೆದ ನೀಲ ಪಾಟಲ ಜಂಬೂಫಲಾಳಿಯಂ (ಗಾದಂಹೃ· ೬೬) : ಬಗೆ ಮಿಱು ಲೋಚನದೊಳೊಗೆವ ಭಾಷ್ಪಜಲ (ಪಪಪಾ. ೩–೭೦) ; ಕಾಚು ವೀಳಯಕಿಂಬು ಲೋಚನಾಂಜನಕಿಂಬು (ಪಪಗಕ್ಕ· ೨೭೩). ೪. ದೃಶ್ಯ ; ನೋಟ. ೫. [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ : ಯಮಳ. ಲೋಚನ, ದಂಪತಿ ಇಂತಿನಿತುಂ ನಿಕ್ಕಿ ಪೆಸರು (ಕೃಪಪಾ· ೦೦). [ಸಂ.]

ಲೋಚನಜಲ, ಲೋಚನಜಳ (ನಾ). ಕಣ್ಣೀರು ; ಕಂಬನಿ ; ಅಶ್ರು. **ಲೋಚನೆಜಳ** : ಲೋಚನಜಳವಿಪತನಭಯಸಾಚೀಕೃತವದನೆ ವಿಮುಖ ವಿಧಿಯಂ ತೋರ್ಪಂತೆ (ಅಪಾಚ· ೭–೮೪). [ಸಂ.]

ಲೋಚನಜಳ ' ಲೋಚನಜಲ ' ನೋ.

ಲೋಚನವಾರಿ (ನಾ)· = ಲೋಚನಜಲ : ಬಹುವಯ್ಯಂ ಪ್ರಳಾಪಿಪು ತೊಂದನೊಂದಂ ಕಿನ್ನರನ ಗುಣವೃಂದಮುಂ ನೆನೆನೆನೆದು ಲೋಚನವಾರಿಯಲಿ ನನೆದು (ಜಪಪ· ೪೭–೪) ; ಹೃದಯಶಿಖಿಯುಜ್ಜಿ ತಳಿತು ಲೋಚನವಾರಿ ತುಳುಕಿತು (ಭಾಪ್ರೀ· ೭–೪). [ಸಂ.]

ಲೋಚನಶ್ರುತಿಪ (ನಾ)· ಸರ್ವಗಳ ಅಧಿಪತಿ ; ಆದಿಶೇಷ : ಕೃತುಭುಜರ ಸುದಲು ಗರಳವನುಗುಳ್ದ ಲೋಚನಶ್ರುತಿಪ [ಜಜಾಂ· ಲೋಚನದ ಶ್ರುತಿಪ] ನಂತುಬೆರಾವೃತತ್ವದಿಂ . . . ಒಪ್ಪಿತು ಸಮುದ್ರಂ (ಭಾಪಪಂ. ೨–೨೩). [ಸಂ.]

ಲೋಚನಾಂಬು (ನಾ). = ಲೋಚನಜಲ : ಲೋಚನಾಂಬುಗಳಾಕ್ಕಿದವು ಕಳವಳಿಸಿದವು ಕರಣೇಂದ್ರಿಯಾದಿಗಳು (ಭಾಣ್ಯಾ. ೨೦–೩೩). [ಸಂ.]

ಲೋಚನಾಂಶು (ನಾ). ಕಣ್ಣಿನ ಕಾಂತಿ : ನಡು ನಡುಪುತ್ತು ತನ್ನಸೆಸೆ ಮಯ್ ಬಡವಾದುದು ಲೋಚನಾಂಶುಗಳ್ ಬಿಡೆ ತೊಡರ್ದಂತೆ ಗಂಡಯುಗಳಂ ದಿಳಿದಾದುದು (ಹಂಪ್ರಕ· ೩–೦೫೪) ; ಲೋಚನಾಂಶು ಸೆಳೆಮಿಂಚು (ಜಾಪಪಂ· ೦೪–೩೩). [ಸಂ.]

ಲೋಚಮಸ್ಯಕ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಕಾಳು; ಓಮ: "ಖರಾಶ್ವಾ, ಕಾರವೀ . . . ಲೋಚವಃಸ್ಯಕಃ–೫ ಓವುದ ಹಸರುಗಳು" (ಶಿಶ್ಯಿಪ. ೦೭೨) ; "ಕಲ್ಲಕೆಹೂ . . . ಮಯೂರಶಿಖಿ, ಲೋಚಮಸ್ಯಕ, ಹೊರೆಯೆಸುಸವ" (ಪಸ್ಯಿ· ೩೦).

ಲೋಚು (ನಾ). ೧. [ಜೈನ] ಮುನಿಧರ್ಮಗಳಲ್ಲಿ ಒಂದು ; ತನ್ನ ತಲೆಯ ಮತ್ತು ಮುಖದ ಕೂದಲನ್ನು ತಾನೇ ಕಿತ್ತು ತೆಗೆಯುವುದು ಅಥವಾ ಬೇರೆಯವರಿಂದ ಕೀಳಿಸಿಕೊಳ್ಳುವುದು ; ಲುಂಚನಕ್ರಿಯೆ : ಲೋಚಂಗಾಱದ ತಪಮಂ ಕೊಳಲಂಜ ಮೆಲ್ಲನಲ್ಲಿಂ ಜಗುಬ್ಬುವೋಗಿ ತಲೆಯಂ ಬೋಳಿಸಿಕೊಂಡು ಬ್ರಹ್ಮಚಾರಿವೇಷಮಂ ಕೈಕೊಂಡು (ಧಪಚಾಕ್ಕ· ೬–೩೭); ಮುನಿಕುವರರು ಬಿಟ್ಟ ವಸ್ತ್ರಾಭರಣ ಲೋಚನ ಕೇಶಗಳನೊಯ್ದು ಸುರರು ವನಧಿಯೊಳಿಂಬಿಟ್ಟರು (ಕಚ· ೭೦–೦೦೬). ೨. ಲುಂಚನಕ್ರಿಯೆಯ ಸಂದರ್ಭದಲ್ಲಿ ನಡೆಸುವ ಸಮಾರಂಭ.—ಉತ್ಸವ : ಜಿನಗುಮತಿಗಳ ಸಿದ್ಧ ಸಾಧಕ ಮುನಿಗಳೆಂಬವದಿರುಗಳನು ನಾ ಮುನಿದು ಕಚ್ಚುಟ ಕಂತೆ ಬತ್ತಲೆ ಬೋಳು ಜಿಡ ಲೋಚು ಅನಶನವ್ರತ ವಾರುಬೇರೆಯನಿತಱಲಿ ದಂಡಿಸುವೆ ನಾ (ಕೃಕುಚ· ೬–೩೩) ; ತನುವೆರವೆಂಬುದ ದೃಢಮಾಳ್ಪುದಕೆ ಲೋಚು (ಪಪಚ· ೭೦–೮೪) ; ಲೋಚು ಮುಗಿದ ಮೇಲೆ ಜಿನಗಂಧೋದಕವನ್ನು ಮುನಿಯ ತಲೆಗೆಲ್ಲ ಸವರಿದರು (ಜಾಪಪಂ· ೨). ೩. ತಲೆಯ ಕೂದಲು.—ಕೇಶ(?): ಆಱಮೇ ಗುರು ಅಚಾರವೆ ಶಿಷ್ಯ ಹ್ಞಾನವೇ ಲಿಂಗ ಪರಿಣಾಮವೇ ತವ ಸಮತೆ ಎಂಬುದೇ ಯೋಗ ನೋಡಾ ಈಸುವಜ್ಜುಯದೆ ಲೋಚು ಬೋಳಾದರೇನು ಮಹಾಲಿಂಗ ಕಲ್ಲೇಶ್ವರದೇವರು ನಗುವರು (ಪಪಸಂ· ೦೪೭–೩೨) ; ಲೋಚು ಬೋಳಾಗಿ ಜಿಡೆಗಟ್ಟಿ ದಿಸೆದಿಸೆಗಳಂ ತಿರುಗಿ ಭಿಕ್ಷಾಂದೇಹಿಯಾದ ಸಂದೇಹಿಗಳ ಶಿವನೊಲ್ಲನು (ಪಪಗಚ· ೫೫–೫೭).

[ಸಂ. ಲುಂಚ್]

ಲೋಚುಗೆಯ್ (ಕ್ರಿ)· ಜಿನದೀಕ್ಷೆ ಕೈಕೊಂಡವರ ಕೂದಲನ್ನು ಕೀಳು : ಲೋಚುಮಾಡು : ದೇವತೆಗಳ್ ಮಾಡಿದಾಹಾರಮುಂ ರಿಸಿಯರ್ಗೆ ಚರಿಗೆಮಾಡಲಾಗದೆಂದು ಬಾರಿಸಿಯವರ್ಗೆ ಲೋಚುಗೆಯ್ದು ಬ್ರತಂಗಳ ನೇಜಿಸಿ (ಪಪಗಾ· ೧೦–೨೪) ; ಲೋಚುಗೆಯ್ದುಂಕಾಜಿಂಗೆ . . . ಪಂಚ ಮಹಾವ್ರತಂಗಳನೇಜಿಸಿ (ಪಂಪಂ· ೦೦–೭೦ ಪ) ; ಬೆಳುವಲ್ಲ ಪುಲಿನ ದೇಹದ ಲೋಚುಗೆಯ್ದು ಬೋಳ್ದಲೆಯ . . . ಜಿನಗುರುಗಳು (ಪಾಂಪಪ್ರ· ೦೨–೭೬). [ಲೋಚು+ಕೆಯ್₁]

ಲೋಟ ' ಲೋಟ್ಟಾ₁ ' ನೋ.

ಲೋಟಕ (ನಾ). ತುಳಿಯುವವನು ; ಮೆಟ್ಟುವವನು : "ಲೋಟಕಃ, ಲೋಟಿಮಾನಃ, ಈ ೨ ತುಳಿವಂ" (ಶಾಪ್ಯ· ೨೭೦). [ಸಂ.]

ಲೋಟನ (ನಾ). ೧. ಉರುಳುವಿಕೆ ; ಬೀಳುವಿಕೆ : 'ಲೋಟಿಸು' ಪರಾ. ೨. ತುಳಿಯುವಿಕೆ ; ತುಳಿತ : "ಲುಟ್ . . . ಲೋಟ್ಟುಃ, ಲೋಟನಂ, ಲೋಟನೀಯಂ, ಈ ೬ ತುಳಿ" (ಶಾಪ್ಯ· ೨೭೦). [ಸಂ.]

ಲೋಟ್ಟಾ₁, ಲೋಟ, ಲೋಟೆ (ನಾ). ಮಣ್ಣು ಅಥವಾ ಲೋಹದ ಸಣ್ಣ ಕುಡಿಯುವ ಪಾತ್ರೆ : ಅವನ ಫಲಾರವೆಂದರೆ ಲೋಟಾ ನೀರು (ಕಾಪ್ರಾ· ೦೯) ; ನಮ್ಮ ಲೋಟಾಗಳಲ್ಲಿ ಮತ್ತೊಂದು ಸರು ಕಾಫಿಯನ್ನು ಬಗ್ಗಿಸಿದಳು (ಪಪಪಾ· ೩೩, ೨೩೮). **ಲೋಟೆ** : ಪಕ್ಕದ ಸ್ಟೂಲಿನ ಮೇಲೆ ಹೊಳಪಿನ ಕಂಚಿನ ಕೂಜ, ಲೋಟ (ಕಂಗಕ· ೬೦) ; ಅವನ ಹಾಸಿಗೆಯ ಪಕ್ಕದಲ್ಲಿ ಒಂದು ಚಂಬು, ಅದರ ಪಕ್ಕದಲ್ಲಿ ಒಂದು ಲೋಟವಿತ್ತು (ಪಪಪಾ· ೩). **ಲೋಟೆ** : ಒಂದು ಲೋಟೆ ಬಾಯಾರಿಕೆಯನ್ನು ಕಾನೇ ತಂದು ಕೊಟ್ಟನು (ಪುಂಅಪಪು· ೨೪). [←ಆರ. ಹಿಂ. ಮರಾ. ಲೋಟಾ]

ಲೋಟ್ಟಾ₂ (ನಾ). ಒಂದು ಬಗೆಯ ಪಾರಿವಾಳ : ಲೋಟಾ ಎಂಬ ಪಾರಿವಾಳಗಳು ನೆಲದ ಮೇಲೆ ಉರುಳುತ್ತ ಹೋಗುತ್ತವೆ (ಪುಂಅಪಪು· ೬-೦೦೦). [?]

ಲೋಟಿಸು (ಕ್ರಿ)· ಉರುಳಿಸು ; ಕೆಡವು ; ಬೀಳಿಸು : ಅಗಡಿಯಲಿ ಲೋಟಿಸಿ ನಿರಂತರ ಲಗಡಿಯಲಿ ಲಾಗಿಸಿ . . . ಹೊಣಗಿದರು (ಭಾಣ್ಯಾ. ೨–೧೪); ವಿಗಡರದ ಲೆಕ್ಕಿಸದೆ ಲೋಟಿಸಿ ಮಗುಚಿದರು (ಭಾಣ್ಯಾ· ೦೨–೩೬).

[ಲೋಟನ+ — ಇಸು]

ಲೋಟು (ನಾ)· (?) : ಜಯಗೋಪಕನ್ಯಕಾಕಾಮಕಲೆ ಶಾಸ್ತ್ರಪ್ರಭೆಲೋಟನೊಳು ತ್ರಿವಳಿಕುಕ್ಷ ಜಯವನಧಿದರ್ಶಾ (ಶ್ರೀಕ್ಷಾ· ೦). [?]

ಲೋಟೆ ' ಲೋಟ್ಟಾ₁ ' ನೋ.

ಲೋಡನ (ನಾ)· ೧. ಕದಡುವಿಕೆ ; ಕಲಕುವಿಕೆ : ಮಥನ. ೨. ಪ್ರಚೋದನೆ. [ಸಂ.]

ಲೋಡಿಗೆ (ನಾ)· ಒರಗಿಕೊಂಡು ಕೂತುಕೊಳ್ಳಲು ; ಅರಳಿ ಮೊದಲಾದುವನ್ನು ತುಂಬಿ ಮಾಡಿದ ಮೃದುವಾದ ದಿಂಬು : ಬಳಿಯ ಚೌರಿಯ ಹೊಜೆಯ ಚಿತ್ರಾವಳಿವಿಧಾನದ ಹಾಸುಗಳ ಹೊಂಬಳಿಯ ತೆರೆಸೀರೆಗಳ ಛತ್ರ ವ್ಯಜನ ಸೀಗುರಿಯ ಹೊಳೆವ ಪಟ್ಟೆಯ ಲೋಡಿಗೆಯ . . . ಸುವರ್ಣಾವಳಿಯ ದಿಂಡುಗಳೊಟ್ಟಿದವು (ಭಾಣ್ಯಾ· ೨-೦೨).

[< ಲೋಡು₁]

ಲೋಡು₂ (ನಾ)· = ಲೋಡಿಗೆ : . ಒಱಗಿಕೊಂಬುದಕೆ ಲೋಡಾಗಲು ಮತ್ತೊಂದು ಮಿಱುಗುವ ಗದ್ದುಗೆಯಾಗೆ (ಜಾ.ಪಪ· ೩೫–೨೮) ; ಪಾಸಿನೊಳ್ ನೀಳಮಾದೊಂದು ಲೋಡಂ ಮಲಂಗಿಸಿ . . .ಪೊದೆಯಿಸಿ (ಪಪಪ· ೪–೩೪); ಕನ್ನಡಿಮಹಲಿನಲ್ಲಿ ಕುತನಿಯ ಗಾದಿಯ ಮೇಲೆ ಲೋಡಿಗೆ ಆತುಕೊಂಡು

ಕುಳಿತರು (ಕಾಂಬಾಕ. ೦೦).

[ದೇ.॥ ತುಳು. ತೆಲು. ಲೋಡು. / ಮರಾ. ಲೋಡ. ಲೋಢ]

ಲೋಡ್ಡು (ನಾ). ವ್ಯಾಯಾಮ ಮಾಡುವುದಕ್ಕಾಗಿ ಕೈಯಲ್ಲಿ ಹಿಡಿದು ತಿರುಗಿಸುವ ಮರದ ಭಾರವಾದ ಸಾಧನ : ಗರುಡನಸಯಂ ಪೊಕ್ಕು . . . ತಿರುಹುತ್ತ ಲೋಡು ವಿಜಾಸಾಣಾಗಳ (ಕಾಚಾ. ೬-೦೦) : ಕೈಗಳಿಂದ ತಿರಿಗಿಸಲ್ಪಟ್ಟಿಂಥಾ ತಿರಿಸ್ಸಿನ ಸುತ್ತಲು ತಿರಿಗಿಸುವದರಿಂದ ಮಲ್ಲ ವಂಥಾ. ತೋರವಾಗಿಯಿದ್ದಂಥಾ ಅದಕೆ ಲೋಡುಯೆಂಬ ಹೆಸರು (ಜೈಶಿ. ೬-೩೦) ; ಗರುಡಿಮನೆಗೆ ಗಂಧೇರ ಹೋಗವ್ವೆ ಗಂಧದ ಲೋಡ ತಿರುಗುವ ದೊರೆಮಗನಿಗೆ ಮಗಳ ಕೊಡಬೇಕು (ಜೈ.ಪು. ೫೩).

[ದೇ.॥ ತೆಲು. ಲೋಡಿ. ಲೋಡಿ]

ಲೋಡ್ಡು (ನಾ). ಹೊರೆ; ಬೇರು : 'ಫೈಲ್' 'ವ್ಯಾಗನ್' 'ಲೋಡು' ಬರೆದುಕೊಂಡರು (ಜಯಚಾ. ೨೦); ಗಾಡಿಗೆ ಲೋಡು ಜಾಸ್ತಿಯಾಗಿದೆ (ಪ್ರಾಪ್ರ).

[← ಇಂ. Load]

ಲೋಣ (ನಾ). ಒಂದು ಬಗೆಯ ಉಪ್ಪು : "ಲವಣೋತ್ಕಂ. ಲವಣಾರಂ— ಈಯರಡು ಲೋಣ. ಲವಣ" (ಚಿಪ್ರ. ೧೫೩).

[< ಪ್ರಾ. ಲೋಣ. / ಸಂ. ಲವಣ]

ಲೋಣಾರ (ನಾ). ಉಪ್ಪು ಮಾಡುವವನು; ಉಪ್ಪಾರ : ಲೋಣಾರರು:— ಇವರ ಜನ್ಮಭಾಷೆ ಕನ್ನಡ . . . ಸೋರುವ್ಪು ಮುಂತಿ ಮೂರುವರು (ಕಾಜಾ. ೧೬೬).

[← ಮರಾ. ಲೋಣಾರ. / ಸಂ. ಲವಣಾಕರ]

ಲೋಣಿಕೆ (ನಾ). ಒಂದು ಬಗೆಯ ಸಸ್ಯ; ಪುಳ್ಳಂಪುರಿಜೆ : "ಅ ಲೋಣಿಕೆ ಕ್ಷುಲ್ಲಕಾಮ್ಲಿ ಪುಳ್ಳಂಪುಣಾಸೆ" (ಹುಂಗಣಾ. ೪೨-೩೯).

[ಸಂ.]

ಲೋದ್ರ (ನಾ). ಒಂದು ಬಗೆಯ ಮರ : "ನಾಲವಃ. ಕಾಬರಃ. ಲೋದ್ರಃ . . . ವಾರ್ಜನಃ — ಈ ೬ ಲೋದ್ರಗಿರಿದ ಹೆಸರು. ಇದು ಜಾಲಾರಿಮರವಲ್ಲಿ ಭೇದ. ಅರಗಿನ ಮರ" (ಕಣ್ಣಂಕ. ೩೦೯); ಜೋತಾವನೀ ಜಾತ ಲೋದ್ರಲವಂಗಪ್ರಕರಪ್ರವಾಳದುಚಿತಂ . . . ಕಣ್ಣೊಳಿಸುಗುಂ (ಕಾದಂಪು. ೨೦೬) ; ಜಾತ ಬಕುಳಂ ತುಂಬೆ ಲೋದ್ರವಗ್ಗಳಗುಳ್ಳ ಕಣಗಿಲುಮತಿಕೋಕೆಯುನ್ನತ್ತ (ಜೈಕೃ. ೬-೦೦-೦೬) ; ಪಿಪ್ಪಲಿ. ಲೋದ್ರ. ಧದ್ರಮುಸ್ಕ. . . .ಕೊಡಲು ಪ್ರಳಯಾಗ್ನಿಗೆ ಸಮಾನವಾದ ಉಷ್ಣಜ್ವರವೂ ತಾಪಜ್ವರ ಕಡುಜ್ವರಗಳೂ ಸಲ ಮಾಣುವುವು (ಗಕೃ. ೭೫).

[ಸಂ.]

ಲೋದ್ರಪುಷ್ಪ (ನಾ). ಒಂದು ಬಗೆಯ ಮರ : ಇಪ್ಪೆ: ಮಧೂಕ : "ಇಪ್ಪೆ ಮಧುಕಂ ಲೋದ್ರಪುಷ್ಪ ಗುಡಪುಷ್ಪಮಕ್ಷಂ" (ಹುಂಗಣಾ. ೪೨-೩೮).

[ಸಂ.]

ಲೋಪ (ನಾ). ೧. ಜೊರುಮಾಡುವುದು ; ಓಡೆಯುವುದು. ೨. ಹಾಳುಮಾಡುವಿಕೆ ; ನಾಶ. ೩. ಸುಲಿಗೆಮಾಡುವುದು : ಕೊಳ್ಳೆ. ೪. ಇಲ್ಲದಾಗುವುದು : 'ಸ್ವರಮಿರೆ ಪೆರದೊಳ್ ಪೂರ್ವಸ್ವರಲೋಪಂ (ಕಾಶ್ಮಿ. ೩) ; ದಕಾರದಡಗೆ ಒರಿಪೊಂ ಲೋಪಂ (ಕಜಾಪ್ರ.೦೭); ಇಲ್ಲಿಯೂ ರೇಫ ಲೋಪವಾಗಿವೆಯೊಂಮ ತಿಳಿಸುವರಂ (ಜಾಸಂ. ೩೩). ೫. ಕೊರತೆ ; ಊನ : ಜಾಪದಂತವ ಹೊಂದಿ ಶಸ ಇರೆ ಪಾವ ಚಂದ್ರಪ ರಕ್ಷಣೆಯು ತಾ ಲೋಪವಿಲ್ಲದೆ ತಾಳಿರಲು ಹನ್ನೊಂದು ವರುಷ (ಗಚಕ್ರ. ೨-೦೨); ಲೋಪವೇನೂ ಇಲ್ಲ. ದೀಪಕೆ ಮಾತ್ರ ಬಗೆಯಲ್ಲ (ಗಪ). ೬. [ವ್ಯಾಕ] ಕನ್ನಡದ ಲೋಪ. ಆಗಮ ಮತ್ತು ಆದೇಶಗಳೆಂಬ ಸಂಧಿಗಳಲ್ಲಿ ಮೊದಲನೆಯದು : ಸ್ವರದ ಮುಂದೆ ಸ್ವರ ಬಂದರೆ ಹಿಂದಿನ ಸ್ವರ ಬಿಟ್ಟುಹೋಗುವುದು : ಸ್ವರಮಿದಿರೊಳಿರೆ ವಿಘಟ್ಟ ಸ್ವರಂ ಪುಳ್ಕೆಶಿಸ್ವರಕಮಕ್ಕುಂ ಲೋಪಂ (ಜಾಪ್ರ. ೫೭) 'ಲೋಪಸಂಧಿ' ಪರಾ.

ಲೋಪದೋಷ – ಕುಂದು ವಂತ್ಸು ಕೊರತೆ ; ಅಂಕುಡೊಂಕು : ಪ್ರಜಾಪ್ರಭುತ್ವದಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಅದು ಸರ್ವಾಧಿಕಾರ ಶ್ರುಭುತ್ವಕ್ಕಿಂತ ಸಾವಿರಪಾಲು ಮೇಲು (ಹಂಚಂ. ೦೫೫). [ಸಂ.]

ಲೋಪಪೌರ್ವ್ಯ (ಕ್ರಿ). ಲೋಪವನ್ನು ಹೊಂದು ; ಇಲ್ಲದಂತಾಗು : ಇರ್ಮಾದನುಲಾಯದೆ ವಯದಿಂ ಪೌರ್ವಾವಾಗಮಮವೆಯ್ದಂ ಪೋಪುವ ಲೋಪಂಬೊರ್ದಿ ವಿಘಕ್ರಿಯ ಬಬುಮಿದು (ಕಜಾಪ್ರ. ೦೬೬).

[ಲೋಪ + ಪೌರ್ವ್ಯ]

ಲೋಪಗೈಸು (ಕ್ರಿ). ಇಲ್ಲದಂತೆ ಮಾಡು ; ಅಳಿಸು : ದೀಪ ದಿವದಲಿ ಕಂಡರಾದಡೆ ಲೋಪಗೈಸುವರಾಕ್ಷಣ (ಜಾಪ್ರ. ೦೬-೭೭).

[ಲೋಪ + ಕೈಸು (<ಕೆಯ್ಸು)]

ಲೋಪವೃತ್ತಿ (ನಾ). ಬಿಟ್ಟುಹೋಗುವಿಕೆ ; ಇಲ್ಲವಾಗುವಿಕೆ : ವಿದಿತಂ ದಾವಿದು ಕೂಷ್ಮಾಂಡದ ಮತ್ತ ಸ್ಥಾನದಲ್ಲಿ ಬತ್ಸಂ ಕೂಷ್ಮಾಂಡದ ಪತ್ತಕ್ಕಂ ಬಂದುಗಮುದಯಿಸುಗುಂ ಲೋಪವೃತ್ತಿ ಲಕ್ಷಣವಿಧಿಯಿಂ (ಕಜಾಪ್ರ. ೨೦೦).

[ಸಂ.]

ಲೋಪಸಂಧಿ (ನಾ): = ಲೋಪ ೬ : ಸ್ವರದ ಮುಂದೆ ಸ್ವರವು ಬಂದರೆ ಸಾಮಾನ್ಯವಾಗಿ ಹಿಂದಿನ ಸ್ವರವು ಬಿಟ್ಟುಹೋಗುತ್ತದೆ. ಹೀಗೆ ವರ್ಣವು ಬಿಟ್ಟು ಹೋಗುವುದಕ್ಕೆ ಲೋಪವೆಂದೂ ಈ ಸಂಧಿಗೆ ಲೋಪಸಂಧಿಯೆಂದೂ ಹೆಸರು (ಜಾಪ್ರ. ೦೬).

ಲೋಪಿಸು (ಕ್ರಿ). ಬಿಡು ; ಕಳೆ ; ತೆಗೆದುಹಾಕು : ತವನಪ್ರತಾಪಮಂ ಲೋಪಿವ ನಾಲ್ಕತ್ತೆಂಟುಕೋಟಿ ಮಯಿಗೆಯಸೆಗುಂ (ಕಾಕ್ಕ. ೪-೦೦); ಎಲ್ಲಿಯುವಮಮಂತ್ರಣದೊಳ್ ಬಲ್ಲರ್ ಪ್ರಥಮೈಕವಚಮಮಂ ಲೋಪಿಪುವರ್ (ಕಚಿಪ. ೦೨೬); ಪಾಪವಾಸನೆಯನು ಪುಣ್ಯವಾಸನೆಯಿಂದ ಲೋಪಿಸಿ ತನ್ನೊಳು ಏಂದು (ಕಚಿ. ೦೬-೬೬). [ಲೋಪ + —ಇಸು]

ಲೋಪ್ಪ (ನಾ). ಕದ್ದ ಮಸ್ತು ; ಕಳವಿನ ಮಾಲು : "ಲೋಪ್ಪಮೆಪೆ ಕಳವಿಮೊದಪೆ" (ಹುಂಗಣಾ. ೬೭-೩).

[ಸಂ.]

ಲೋಭ (ನಾ). ೧. ಅತಿಯಾಸೆ ; ಕೃಪಣತೆ : ಲೋಭ – ಲೋಬ (ಕಚಿಪ. ಕೊಣ ಪ್ರಯೋ). ೨. ಅತಿಯಾಸೆಯುಳ್ಳವನು ; ಕೃಪಣ : ಲೋಭಿ : ಹುಟುವ ಮಾತುಗುಟ್ಟದಿರು ಲೋಬನ ಮಾತನಡಂಗಿಸಾಜಿಯೊಳ್ಳುಸಿವನ ಮಾತುಗೇಳದಿರು (ಕಾ. ೨. ೨೨-೭೬ ; ೨೨೫).

[< ಸಂ. ಲೋಭ]

ಲೋಬಾನ, ಲೋಭಾನ (ನಾ). ಸುಗಂಧ ದ್ರವ್ಯದಂತೆ ಬಳಸುವ ಒಂದು ಬಗೆಯ ಮರದ ಅಂಟು ; ತುರುಷ್ಕ : ಲೋಬಾನ ಚಂದನ ಗಾದಿನೊಳ್ಪಂದಿ ಮತ್ತೇಭಂಗಳಿರೆ ಕಂಡರವರು (ಕಚಿಪ. ೦೯-೨೦) : ಕನ್ನಡದಲ್ಲಿ ಲೋಬಾನ ಎಂತಲೂ ಹಾಲುಮಡ್ಡಿ ಎಂತಲೂ ಕರೆಯುತ್ತಾರೆ (ಕ್ರಿಪಾ. ೨. ೯೯ ೦೦೫) ; ಕಾಯಿ ಒಡೆದು ಲೋಬಾನ ಹಾಕಿದ್ದ (ಹುಚಿಪ. ೭೭). ಲೋಭಾನ : ಲೋಭಾನ [ಧೂಪದಿಂ] [ದೊತ್ತಿರಿಸಿ] (ಚಿಪಿಪ್ರ. ೩-೦೩) ; ಕೋಣೆಯಲ್ಲಿ ಲೋಭಾನವು ವಿಶೇಷವಾಗಿ ಸುಡಲ್ಪಟ್ಟಿದ್ದರಿಂದ ಅದರ ವಾಸನೆಯು ಕೋಣೆಯ ತುಂಬ ಇದಿಗಿತ್ತು (ಗಕೃ. ೦೦೨) : ಲೋಭಾನದ ಹೊಗೆಯನ್ನು ಹಾಕಿದ್ದಾರೆ (ಜೈಉಪ್ರ. ೦೫೦).

[←ಅರ. ಹಿಂ. ಲೋಬಾನ ; ಮರಾ. ಲೋಬಾನ, ಲೋಭಾನ]

ಲೋಭ (ನಾ). ೧. ಅತಿಯಾಸೆ ; ದುರಾಸೆ : ಅನ್ಯತಂ ಲೋಭಂ ಭಯಮಂದಿನಿತುಂ ನೀವಿರ್ದ್ ನಾಡೊಳಿರ್ಕುಮೆ ರವಿನಂದನ (ಗಣಚಮು. ೩-೦೩) ; ಕಾಮ. ಕ್ರೋಧ. ಲೋಭ. ಮೋಹ. ಮದ. ಮಾತ್ಸರ್ಯ ಎಂಬ ಆರು ಶತ್ರುಗಳನ್ನು (ಜಮ್ಮಕ. ೦-೨೫ ಟೀಕು) ; ಲೋಭ ಪಡೆ ಪಡೆ ಭೋಗ ಕೆಡಸಿಕೊಂಡ (ಗಪ). ೨. ಜಿಪುಣತನ; ಕೃಪಣತನ: ಕೊಡೆಯನೀಯನೆ ಲೋಭವೇ ಕರಸ (ಜಚಿಪ.೨-೦೩). ೩. ಜಿಪುಣ; ಕೃಪಣ:

'ಕಡುಲೋಭ' ಪರಾ. ೪. (ಉಕ) ಪ್ರೀತಿ ; ವಾತ್ಸಲ್ಯ ; ಅಕ್ಕರೆ : ಅಣ್ಣಾ ಹೋಗಿಬರುತ್ತೇನೆ· ಲೋಭವಿರಲಿ (ಮುಂಡಾ· ೪-೦೯) ; ತಂಗೀ ನ್ನು ನಾನು ಹೋಗಿ ಬರುತ್ತೇನವಾ· ಲೋಭವಿರಲಿ (ಅಣ್ಣಾ. ೪೩). ೫. [ಜೈನ] ಐದು ಬಗೆಯ ಅಂತರಾಯಕರ್ಮಗಳಲ್ಲಿ ಒಂದು : ಅಂತರಾಯಕರ್ಮಂ ಪಂಚವಿಧಮಕ್ಕುಂ ದಾನ ಲೋಭ ಭೋಗೋಪಮೀರ್ಯಾಂತರಾಯಕರ್ಮಮೆಂದು (ಗೊಮ್ಮ.ಜೀ.೪-೯). 'ಅಂತರಾಯಪಂಚಕ' ಪರಾ. [ಸಂ.]

ಲೋಭಕ (ಗು). ಲೋಭದಿಂದ ಕೂಡಿದ ; ಕೃಪಣತನದಿಂದ ಕೂಡಿದ : ಮುಮ್ಮೊಲಮಱುಗುತ್ತುಮಿವ ಕಡುಲೋಭಕದಾನಗುಣಂಗಳಂ ಪಳಂಚಿ (ಶಾಪ್ರ· ೪೨-೦೬). [ಸಂ.]

ಲೋಭಾನ 'ಲೋಬಾನ' ನೋ.

ಲೋಭಿ (ನಾ)· ಕೃಪಣ ; ಜಿಪುಣ : "ಕದರ್ಯಃ . . . ಮಿತಂಪಚಃ—ಈ ೫ ಲೋಭಿ" (ಶಬ್ದಮ. ೫೬-೦೯೨); ರವಿ ಚಾಪಕ್ಷೇತ್ರದೊಳ್ ನಿಂದೊಡೆ ಧನವತಿ . . . ಮಕರದೊಳಿರೆ ವಸೂರ್ಯಂ ಖಳಂ ಲೋಭಿ (ಶಾಪ್ರ· ೦೬-೦೬); ಭೋಗಿಗೆ ಲೋಭಿಗೆ ಯೋಗಂ ತ್ಯಾಗಂ ಹಿತವಾಗದು (ಪಟ್ಟಾ· ೨-೭); ಪಾಟಿಗೆ ಪರವಾಯು, ಲೋಭಿಗೆ ಚರಾಯು (ಗಾಪ). [ಸಂ.]

ಲೋಭಿಗಲಿ (ನಾ). ಜಿಪುಣನಾದ ಬಂಟ ; ಮಾರ್ಗವಿಮಾಯದ ಬಿದಿರಿದ ಲೋಭಿಗಲಿಗಳುಮಂ ನೊಂದು ಪಲ್ಗರಿದೋಡುವ ಪುಲ್ಗಲಿಗಳುಮಂ . . . ನೋಡಿ (ಗಜಾಷ್ಟ· ೯-೪೪ ೪)· [ಲೋಭಿ + ಕಲ್ಲಿ]

ಲೋಭಿತನ (ನಾ)· ಜಿಪುಣತನ ; ಕೃಪಣತ್ವ ; (ಅ). [ಲೋಭಿ + – ತನ]

ಲೋಭಿಸು (ಕ್ರಿ). ಅತಿಯಾಸೆಪಡು : ನಿತ್ಯತ್ವಂಬೆತ್ತ ಪಾಂಗಿಂ ಪಳವ ಮುಳವ ಕಾಮಿಪ್ಪ ಕೋವಿಪ್ಪ ಲೋಭಿಪ್ಪತ್ಮಂತಂ ಗರ್ವಿಪ್ಪೀ ಮಾಡೆ ಪರಮವೈರಾಗ್ಯಮಂ ಕೊಟ್ಟು . . . ರಕ್ಷಿಪ್ಪುದೆನ್ನಂ (ಕೃಪಾ· ೦೬)· [ಲೋಭ + —ಿಸು]

ಲೋಮ (ನಾ)· ೧. ಮನುಷ್ಯ ಅಥವಾ ಯಾವುದೇ ಪ್ರಾಣಿಯ ಮೈಗೂದಲು ; ರೋಮ : "ಲೋಮಮೆನೆ ಮೆಯ್ಯ ಕೂದಲಕ್ಕುಂ" (ಪಾಂಡಾ· ೪೪-೩); "ತನೂರುಹಂ, ರೋಮ· ಲೋಮ_ ೩ ಮೈಯೋಗೆ, ಹುಟ್ಟಿದ ಕೂದಲು ಹೆಸರುಗಳು. ಮೈಗೂದಲು" (ನಿಘಂ·ಪ· ೦೯೩)· ೨. ಕೂದಲಿನಂತಿರುವ ಸಣ್ಣ ಬೇರು : ನಿಜವಾದ ಬೇರುಗಳಿಲ್ಲದಿದ್ದರೂ ಅವಕ್ಕೆ ಬದಲಾಗಿ ಹುಟ್ಟಿರುವ ಲೋಮಗಳ ಸಹಾಯದಿಂದ . . . ತನ್ನ ಆಹಾರದ ಏರ್ಪಾಟನ್ನು ಹಾನೇ ನಿರ್ವಹಿಸಿಕೊಳ್ಳುತ್ತದೆ (ಪಪುಷ. ೦೯೦). ೩. ಬಾಲ ; ಪುಚ್ಛ. ೪. ಒಂದು ಬಗೆಯ ಸಸ್ಯ : "ಲೋಮ ಕರ್ಕಟಕಂ" (ಪಾಂಗಣ· ೪೦-೩೪)· [ಸಂ.]

ಲೋಮಕ (ನಾ)· ಒಂದು ಬಗೆಯ ಸಸ್ಯ ; ತೊರೆಗಣಗಿಲು : "ತೊರೆಗಣಗಿಲಾ ಲೋಮಕಂ" (ಪಾಂಗಣ· ೩೪-೦೦)· [ಸಂ.]

ಲೋಮನಾಳ (ನಾ). ಕೂದಲಿನಷ್ಟು ಸೂಕ್ಷ್ಮವಾದ (ರಕ್ತ)ನಾಳ: ರೋಗಾಣುಗಳು ಲೋಮನಾಳಗಳಲ್ಲಿ ಸೇರಿಕೊಂಡು ರಕ್ತಚಲನೆಗೆ ಅಡ್ಡಿ ಮಾಡುವುದರಿಂದ ಈ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ (ಕಂಮೂ· ೩೦); ಸಲ್ಫೂರೋಸನ್ನು ರಸಾಯನಿಕವಸ್ತುಗಳಲ್ಲಿ ಕರಗಿಸಿ ತಯಾರಿಸಿದ ದ್ರವವನ್ನು ಲೋಮನಾಳ (capillaries)ಗಳ ಮೂಲಕ ಹಾಯಿಸಿ ಹೊರ ಹೊರಟ ಎಳೆಗಳನ್ನು ಅರಿಸಿ ಹದಗೊಳಿಸಿದ ಪದಾರ್ಥವೇ ರೆಯೊನ್ ಎಳೆಗಳು (ಕೃಪ್ರ· ೩೦). [ಸಂ. ಲೋಮನಾಲ]

ಲೋಮತ (ಗು). ೧. ಕೂದಲಿನಿಂದ ತುಂಬಿರುವ ; ರೋಮದಿಂದ ಕೂಡಿರುವ· (ನಾ). ೨. ಕೂದಲಿನಿಂದ ತುಂಬಿರುವ ಪ್ರಾಣಿ : ಲೋಮಕ ಎಂದರೆ ತುಂಬ ಕೂದಲು ಬೆಳೆದ ಪ್ರಾಣಿ ಎಂದು ಅರ್ಥ (ಪಾಲಾಂ· ೨೨)· ೩. ಒಬ್ಬ ಋಷಿಯ ಹೆಸರು: ಲೋಮತ :

ಕಳುಹಿದನು ಲೋಮಶನನವನೀತಳಕೆ ಸುರವತಿ (ಕಾಶ್ಯ· ೯-೨)· [ಸಂ.]

ಲೋಮಶೆ (ನಾ)· ೧. ಒಂದು ಬಗೆಯ ಔಷಧೀಮೂಲಿಕೆ ; ಸುಗಂಧ ಪದಾರ್ಥ ; ಜಟಾಮಾಂಸಿ : "ಜಟಿಲೆ· ಜಟಮಾಂಸಿ, ಸುಗಂಧಮುಸ್ತೆ" (ಪ್ರಕ· ೯೩). ೨. ನರಿ. ೩. ಕೋತಿ· [ಸಂ. ಲೋಮಶಾ]

ಲೋಮಹರ್ಷ (ನಾ)· ಅತಿಯಾದ ಸಂತೋಷ, ಭಯ ಮುಂತಾದುವುಗಳಿಂದ ಮೈಗೂದಲು ನೆಟ್ಟಗಾಗುವುದು. —ಮೈನವಿರೇಳುವುದು· 'ರೋಮಹರ್ಷ' ಪರಾ. [ಸಂ.]

ಲೋಮಹರ್ಷಣ (ನಾ). ೧. = ಲೋಮಹರ್ಷ. ೨. ಅತಿಯಾದ ಸಂತೋಷ, ಭಯ ಮುಂತಾದುವು ಮೈಗೂದಲನ್ನು ನೆಟ್ಟಗಾಗುವಂತೆ ಮಾಡುವುದು; ರೋಮಾಂಚಗೊಳಿಸುವುದು· 'ರೋಮಹರ್ಷಣ' ಪರಾ. [ಸಂ.]

ಲೋಮಿ (ನಾ). ಕುದುರೆಯ ಗೊರಸಿಗೆ ಹಾಕುವ (ಚಿನ್ನ ಅಥವಾ ಬೆಳ್ಳಿಯ) ಬಳೆ : "ವಳಯಂ ಲೋಮಿಮೆಸರಕ್ಕು" (ಪಾಂಗಣ· ೦೦-೦೬). [?]

ಲೋಮಿಕೆ (ನಾ). ಒಂದು ಬಗೆಯ ಸಸ್ಯ ; ಬೆಂಡೆ : "ಲೋಮಿಕೆಯನಲ್ ಬೆಂಡೆ" (ಪಾಂಗಣ· ೪೩-೪೬)· [?]

ಲೋಯಿಪರ 'ಲೋಳೆಸರ' ನೋ.

ಲೋಲ, ಲೋಳ (ಗು). ೧. ಅಶಿತ್ತ, ಅಲುಗಾಡುವ, ಚಲಿಸುವ ; ಚಂಚಲವಾದ : ಚಮರೀಲೋಲಲಾಂಗೂಲಮಾಲಾವಲಿವಿಕ್ಷೇಪಂಗಳಂ ತಚ್ಚಮರರುಹ ಮಹಾಶೋಭ ಕೈಗಣ್ಕೆ (ಶಾಪ್ರ· ೪-೦೪) ; ಮಹಿಭುಜನ ಮೆಯ್ಸಿರಿಯಂ ಸಱಿಸೆಯ್ಯೆ ತಚ್ಚರೋಷಾವನಿ ತನ್ನ ಲೋಲಪಯನೋತ್ಪಲ ಮೂಲೆ ಸ್ಪಪಂಗೆ ಮಾಲೆಯಂ ತಾನೊಸೆದಿಕ್ಕಿದಳ್ (ಪಾಂಡಾ· ೬-೦೪)· ೨. ಅಸ್ಥಿರಪ್ರಕಾಶದ ; ಮಿಣುಕುವ : ಲೋಲತಾರೆಗಳೆಸವಿರುಳನ ಮೊಗವನು ರಾಗದಿಂದೆಯೆ ಚಂದ್ರಮನು (ಜಾಹ· ೦೦೦-೦೨). (ನಾ). ೩. ಅಲ್ಲಾಡಿಸುವುದು; ಚಲಿಸುವುದು ; ಅಲುಗಾಟ : " ಲೋಲಂ, ಚಪಳಂ . . . ಸಂಚಳಂ—ಈ ೧೦ ಸಂಚಳಂ " (ಪಾಂಡಾ· ೨೦೩-೦೦), ೪. ಪ್ರೀತಿ ; ಅಕ್ಕರೆ : ಬಾಲನ ಓಗ್ಗುವ ಕಂಡು ಲೋಲದಿ ಎತಿಕೊಂಡು ತಲೆ ಮೇಲೆ ಕೈಯ ತಿರವುತ' ಪುಲ್ಲಯ್ಯ ಬಾಲಸಿದ್ದನಿಗೆ ಮುದ್ದಿಟ್ಟನು (ಸಿಸಿ· ೬-೦೦). ೫. ಆಟವಾಡುವವನು ; ಕ್ರೀಡಾಸಕ್ತ : ಬಾಲನಾ ಲೀಲೆಯನು ಹೇಳಲಿನ್ನೇನು ನಾ ? ಲೋಲ ಹಿಡಿಹಿಡಿದೆಳವ ಮುಂಗುರುಳ (ಗಜಾ· ೪-೩)· ೬. ವಿಷಯಲಂಪಟ; ಕಾಮುಕ : ಲೋಲಂಗೀ ವಿಷಗಂಗೀ ಬಾಲೆಯನೀ ಮುಗ್ಧೆಯಂ ವಿಚಾರಿಸದೆಯುಂ . . . ಕಾವುದೆ (ಶಾದಂಬ· ೬೪). ೭. ಪ್ರೀತಿಯುಳ್ಳವನು : ಲೋಲ ಪುರಂದರವಿಠ್ಠಲ (ಪುರಂದ. ಕೃ· ೬-೦೦೯-೬)· ' ಸಿರಿಲೋಲ ' ಪರಾ. ಲೋಳ ; ೧. ಲೋಳ ಕೂಪಕ್ಷೀಕ್ಷ್ಣಕರದಿಂ ತೆಗೆದಿಕ್ಕಿಗೆ ಸಲ್ಲ ಮೇಳದಿಂ ಮೇಳಿಸಿ ಕೇಯಿಂ (ಕಾಕ್ಕ·ಪ· ೦೦-೬೭) ; ಲೋಳತರಂಗರಾಜಿತವಿಯತ್ಪತ್ತನೀತುಚಾರು ಕಲ್ಪಭೂಪಾಳಿಯ ಬೀಬರೆಂದನೆ (ಕಾಸುಪ· ೨-೧೪). ೨. "ಲೋಳಂ ಚಲಮುಂ" (ಪಪ್ರ·ಕೋ· ೦೨೯-೬೩). [ಸಂ.]

ಲೋಲಂಗಿತ (ನಾ)· [ಸಂಗೀತ] ಒಂದು ಬಗೆಯ ಗತಿ (?): ಕಮ್ಮವಿಲ್ ಲೋಲಂಗಿತ ನುತಶುದ್ಧಸಾಳಂಗ ಸಂಕೀರ್ಣಮುಂ ಯಥೋಚಿತತಾರ ಮಧುರ ಮುದ್ರಂಗಳಂ ಹಾಡಿ (ಪಪ್ರ· ೭-೩)· [ಸಂ.]

ಲೋಲಂಬ, ಲೋಳಂಬ (ನಾ)· ತುಂಬಿಯಲ್ಲಿ ಒಂದು ಬಗೆ ; ದೊಡ್ಡ ದುಂಬಿ: ಲೋಲಂಬ ಕಟಕ (ಪಪ್ರ· ೩೬-೦೦)· ಲೋಳಂಬ : ಅಂಬುರುಹ ಲೋಳಂಬ [ಪಾಪ್ರ· · ರೋಲಂಬ] ವಾತ್ಸಲ್ಯಕಚ್ಚಪ ವಾರಿಕಂಬುಪೀಕರ ಚಕ್ರವಾಕಶ್ಯವಾಲಹಾದಂಬಗಂಭೀರ ಸ್ಪೈಕ ದ್ಯುಷಾಳಂಗಳಿವು ಕಮಲಯ ಪಂಗಳಾಗೆ (ಕೃಪಾಪ್ರ· ೯-೨೦)· [ಸಂ.]

ಲೋಲಂಬಕದಂಬ (ನಾ). ೧. ದುಂಬಿಗಳ ಗುಂಪು : ಭ್ರಮರಗಳ ಸಮೂಹ. ೨. ದುಂಬಿಗಳಿಂದ ಆವರಿಸಲ್ಪಟ್ಟವನು : ವಿಲಿತ್ರಯಕ್ಷ ಕರ್ದಮಾಮೋದಾಕೃಷ್ಟವನಕುಸುಮಾಲೋಲಲೋಲಂಬಕದಂಬನುಂ . . . ಬರ್ಪಾಗಳ್ (ಶಂಪ್ರಪು. ೬-೮೪ ಪ). [ಸಂ.]

ಲೋಲಕ್ 'ಲೋಲಾಕು' ನೋ.

ಲೋಲಕ (ನಾ). ಅತ್ತಿತ್ತ ತೂಗಾಡುವ ವಸ್ತು : ಆ ಬಳ್ಳಿಗಳ ಕೆಳಭಾಗದಲ್ಲಿ ತ್ರಿಕೋನಾಕೃತಿಯಾದ ಲೋಲಕಗಳು ಜೋಕಾಡುತ್ತಿರುತ್ತವೆ (ಶುಂಶಾಮು. ೬-೮೬); ಆಗಿನ ಕಾಲದಲ್ಲಿ ಗಡಿಯಾರಗಳಿಗೆ ಪೆಂಡುಲಮ್ (Pendulum) ಅಥವಾ ಲೋಲಕಗಳನ್ನು ಉಪಯೋಗಿಸುತ್ತಿರಲಿಲ್ಲ (ಭೌಶಾ. ೫೬). [ಸಂ.]

ಲೋಲಕ್ಕು 'ಲೋಲಾಕು' ನೋ.

ಲೋಲಚಿಬುಕ (ನಾ). [ನಾಟ್ಯ] ಎಂಟು ಬಗೆಯ ಚಿಬುಕಭೇದಗಳಲ್ಲಿ ಒಂದು : ಪ್ರ "ಅಗಿಯುವಾಗ ಮಾಡುವಂತೆ ಗಡ್ಡವನ್ನು ಅಡ್ಡಲಾಗಿ ಚಲಿಸುವುದು" (ಅಕ್ಕಂ. ೨೯೦ ಗದ್ಯಾನುವಾದ) : ನೆಗಳ್ದಗಿವ ಸಮಯದೊಳ್ ಪೆಟ್ಟುಗೆಯಂ ಚಲಿಸಲ್ಕೆ ಲೋಲಚಿಬುಕಮೆನಿಸ್ಕುಂ (ಅಕ್ಕಂ. ೩-೦೭೩). [ಸಂ.]

ಲೋಲಜ್ಞಾನ (ನಾ). ಹತ್ತು ಸಾತ್ವಿಕಲಕ್ಷಣಗಳಲ್ಲಿ ಒಂದು : ಅಸ್ಥಿರ ಜ್ಞಾನ ; ಚಂಚಲತೆ : ಹೇಳ್ದ ಕೀರ್ತಾಶ್ವೀಕದಜಪನು ಬಾಲಬುದ್ಧಿಯು ಒಂದು ಸಹಜ ಸಂಧೇಳಿಸುತಲಿಹುದೆರಡು ಸತ್ಯವೆಯೆಂಬದದು ಮೂರು ಲೋಲಜ್ಞಾನವು ನಾಲ್ಕು (ಜ್ಞಾಕೋ. ೨೬-೨). [ಸಂ.]

ಲೋಲತೆ, ಲೋಳತೆ (ನಾ). ೧. ಅಲುಗಾಟ ; ಚಂಚಲತೆ. ೨. ಆಸೆ ; ಒಯಕೆ : ಲೋಲತೆಯಿಂದೀಕ್ಷಿಪ ಗಣಿಕಾಲಿಯವಾಂಗ ಕ್ರಿಮರ್ಣರುಚಿಗಳ್ ನೀಳ್ದೇಂ ಲೀಲೆಯಿಂ ಇತುವೆ ಮುತ್ತಿನ ನೀಲದ ಮಾಣಿಕದ ತೋರಣಂಗಳ ತೆಱದಿಂ (ಶಂಪ್ರಪು. ೦೦-೪): ಲೋಲತೆಯಂ ಸುರಾಗದ ಸುರಾಗದ ಪೂವನುದಿರ್ಚುತಂ ಲತಾಡಾಳಜಾಳಕಂಗಳನೆಬ್ಬಿತವಳ್ಗಿಜೆದಭ್ರದಭ್ರಯಂ ಜಾಳಿಸುತುರ (ಪ್ರಪ್ರ. ೦೦-೬೬). ಲೋಳತೆ: ೨. ಲೋಳತೆಯಿಂದೆ ಪುಷ್ಪವತಿಯಂ ಮಧುಧಾಜವೆಯಂ . . . ಸಲೆ ಸೋಂಕುತಿರ್ಪಂ (ಭುಪುಚಂ. ೦೦-೦೬೬). [ಸಂ. ಲೋಲತಾ]

ಲೋಲಲೋಚನೆ (ನಾ). ಚಂಚಲವಾದ ಕಣ್ಣುಗಳನ್ನುಳ್ಳವಳು ; ಬೆಲುವೆ : ಪಾಲು ಸಕ್ಕರೆ ಅಮೃತಾನ್ನವ ನೀನುಂಡು ಲೋಲಲೋಚನೆಯರೊಳಗದ ಮೇರಾದ ಸಿರಿ (ಪಂರಾಚ. ೧-೪೬) ; ನಿನ್ನ ಚೆಂದುಟಿಗಳಿಂ ತೇಳಲಾಟವೆನದಂ. ಲೋಲಲೋಚನೆ (ಪಜ್ಯಾಗೀ. ೪೭-೦೦೦೬).

[ಸಂ. ಲೋಲಲೋಚನಾ (ಲೋಲ + ಲೋಚನ + —)]

ಲೋಲಾಕು, ಲೋಲಕ್, ಲೋಲಕ್ಕು (ನಾ). (ಲೋಲಕದಂತೆ ಅಲುಗಾಡುತ್ತಿರುವ) ಒಂದು ಬಗೆಯ ಕಿವಿಯ ಆಭರಣ: ತೂಗುಬಿಟ್ಟ ಎರಡು ಬಿಲ್ಲಿನಾಕಾರದ ಲೋಲಾಕುಗಳು ! (ಅಂಹಾ. ೯) ; ಕಿವಿಯಿಂದ ಚಿನ್ನದ ಲೋಲಾಕು ನೇಣಾಡುತ್ತಿರುತ್ತವೆ (ಕ್ರಚಾಸಾ. ೫೫. ೩೩೦). ಲೋಲಕ್: ಸೊಟ್ಟಿ ಬೈತಲೆಯ ಲೋಲಕ್ ಫಳಿನ ಬಳುಕುನದುವಿನ ಜಾರ್ಜೆಟ್‌ಸೀರೆಯ ಬಿಡಿಗಿನ ಚೆಲುವೆ (ಶುಚಾಪ. ೫೩). ಲೋಲಕ್ಕು : ಬಳೆಗಳು, ಲೋಲಕ್ಕುಗಳು, ಜುಮುಕಿ . . . ಇತ್ಯಾದಿ (ಅಚಿಸಾ. ೨. ೩೨೦). [<ಸಂ. ಲೋಲಕ]

ಲೋಲಾಕ್ಷಿ (ನಾ). = ಲೋಲಲೋಚನೆ : ಲೋಲಾಕ್ಷಿಯರ್ಕಳುತ್ತಿರೆ ಸಾಲಿಟ್ಟವರಳಕಗಂಧಕೊಡನೆತ್ತರುತಂ ರೋಲಂಬಮಾಲೆ ಮೇಲದು ನೀಲದ ನಡತೋರಣಂದೊಳೇನೊಪ್ಪದುದೋ (ಜಾಹಾ. ೨-೦೦೪). [ಸಂ. ಲೋಲಾಕ್ಷೀ]

ಲೋಲಾಡಿಸು (ಕ್ರ). (ನೀರಿನಲ್ಲಿ) ಮುಳುಗಾಡಿಸು : ಓಲಾಡಿಸು : ಪರಿಪರಿಯಲುಂಡುಂಡುಮೆ ಸುಖಾಗರದಿ ಲೋಲಾಡಿಸುವ ವುಂಗಳಚರಿತ ಚಿನ್ಮಯಗಾತ್ರ (ಜಾಸಿ. ೨-೦೩) ; ತನ್ನ ಪ್ರಜೆಗಳನ್ನು ಸರ್ವಕಾಲಕ್ಕೂ ಸಂತೋಷದ ಸಾಗರದಲ್ಲಿ ಲೋಲಾಡಿಸುತ್ತಾನೆ (ಶುಜಾಕಾ. ೬೦). [ಲೋಲಾಡು + —ಇಸು]

ಲೋಲಾಡು (ಕ್ರಿ). ೧. ಅಲುಗಾಡು ; ಅಲ್ಲಾಡು ; ಚಲಿಸು : ಕೂವಲನ್ನು ಲಂಡವಾಗಿ ಕತ್ತರಿಸಿದ್ದರಿಂದ ಗೊಡುಗೊಂಡಾಗಿ ಅವು ಹೆಗಲ ಮೇಲೆ ಲೋಲಾಡುತ್ತಿದ್ದವೆ (ಹಪುಂಕ. ೦೧೪). ೨. ಮುಳುಗಾಡು ; ಓಲಾಡು : ಎರೆ ಶರವೆ ನೀನಧೋಕ್ಷಜನ ಶ್ರೀಚರಣದ ಜಲರುಹ ದೊಳಗಳುಯುತೆ ಲೋಲಾಡು (ಶ್ರಂಪ್ರ. ಧಾ. ೩-೬೦-೩) ; ಪರಮಾನಂದ ಪಯೋನಿಧಿಯಲ್ಲಿ ಓಲಾಡಿ ತೇಲಾಡಿ ಲೋಲಾಡಬೇಕೆಂಬ ಅವರು . . . ಶಂಭುಲಿಂಗನ ಬೆಟ್ಟವನ್ನು ಆಶ್ರಯಿಸಬಕ್ಕಾರೆ (ಚಪ್ರ. ೫೧೦) ; ಅವಳು ಆನಂದಸಾಗರದಲ್ಲಿ ಲೋಲಾಡಹಕ್ಕಿದಳು (ಷಡ್ಗು. ೦೨೦). ೩. ಸುಖಿಸು ; ಚಕ್ಕಂದವಾಡು : ವಿಂಡನ್ನ ಕೂಡಿ ಲೋಲಾಡುತಿಹಳು (ಶಕಂದ. ೦-೦೪೯-೩) ; ಶಾಲಿವನಗಳಲ್ಲಿ ಕುಳಿತು ಲೋಲಾಡುವ ಈ ಹಕ್ಕಿಗಳನ್ನು 'ಸೋಗಯ್ಯರ್' ನಾರಿಯರು ಬಳಗ ಬೇರೆ ಬೇಕು (ಗಆಗು. ೭೭).

[ಲೋಲ + ಆಡು]

ಲೋಲಾಪಾಂಗ (ನಾ). ಚುಂಚಲವಾದ ಕಡೆಗಣ್ಣು : ಲೋಲಾಪಾಂಗದಲ್ಲಿ ಕ್ರೂರವಾದದರ ಕಟಾಕ್ಷವು ಮೇಘಗಳ ಮಧ್ಯದಲ್ಲಿ ಕಣ್ಮೊಳಿಸುವ ವಿದ್ಯುದ್ದಾಮವೋ ಎಂಬಂತಿರುವುದು (ಶಾಶಾಬ್ರ. ೧೩). [ಸಂ.]

ಲೋಲಾಪಾಂಗೆ (ನಾ). ಚಂಚಲವಾದ ಕಡೆಗಣ್ಣುಗಳನ್ನುಳ್ಳವಳು ; ಸುಂದರಿ: ಯಜ್ಞನೆಯ್ದಿದಮತ್ತುಂಗತರಂಗೆಯುಂ ಶಫರಲೋಲಾಪಾಂಗೆಯುಂ ಗಂಗೆಯುಂ (ಹಂಹರಿ. ೨೬೩-೮೬). [ಸಂ. ಲೋಲಾಪಾಂಗಾ]

ಲೋಲಾಪ್ಪಿ 'ಲೋಲುಪ್ಪಿ' ನೋ.

ಲೋಷ್ಟಾಸನ (ನಾ). [ಯೋಗ] ಆಸನಗಳಲ್ಲಿ ಒಂದು ಬಗೆ : ಮುಖ್ಯವಾದ ಕೆಲವು ಆಸನಗಳು . . . ೧೦ ಲೋಲಾಸನ (ಆಹಪ. ೦೪೬). [ಸಂ.]

ಲೋಲಿತ, ಲೋಳಿತ (ಗು). ೧. ಅತ್ತಿತ್ತ ಅಲುಗಾಡುವ.—ಚಲಿಸುವ.—ಅಲ್ಲಾಡುವ. (ನಾ). ೨. ಚಂಚಲಮನಸ್ಸಿನವನು : ಜೀವ ಸರ್ವೇಂದ್ರಿಯಂಗಳ್ಗಿ ಲೋಲಿತನಾಗದೆ (ಹೋಗಪ್ರ. ೦೫೯-೨೧೮). ೩. [ನಾಟ್ಯ] ಶಿರೋಭೇದಗಳಲ್ಲಿ ಒಂದು ; ಪ್ರ "ಹೆದರಿದಂತೆ ಮಬ್ಬು ದೃಷ್ಟಿಯಿಂದ ಕೂಡಿ ತಲೆಯನ್ನು ಎಲ್ಲ ದಿಕ್ಕಿಗೂ ಆಡಿಸುವುದು" (ಅಕ್ಕಂ. ೨೨೨ ಗದ್ಯಾನುವಾದ) : ಬೆದಱಿದವೊಲೆಂಟುದಿಕ್ಕಿಂಗೊದಗದೆ ಚಲಿಸಲ್ಕೆ ಶಿರಮದೇ ಲೋಲಿತಂ (ಅಕ್ಕಂ. ೦-೦೩). ಲೋಳಿತ : ೩. ಕರಮೊಂದು ರೇಚಿತದೆ ಬತ್ತರಿಸಲ್ಕಿಂತನ್ಮಹಸ್ತ ಮುಲಪಲ್ಲವದಿಂಗರೆ ವಕ್ಷದಲ್ಲಿ ಮತ್ತಂ ಶಿರಮದು ಲೋಳಿತದ ತೆಱಮೊಳೆರಡುಂ ಕೆಲದೊಳ್ (ಅಕ್ಕಂ. ೨-೦೬೨).

[ಸಂ.]

ಲೋಲು (ನಾ). ೧. ಕಾಮುಕತನ ; ಲಂಪಟತ್ವ. ೨. ಮೋಜು ; ಮಜ : ಅವನ ಲೋಲು ಹೇಳತೀರದು (ಜಾಪ). ೩. ತೂಗಾಟ ; ಎಳೆತ ; ಸೆಳೆತ : ಅಮಲಿನ ಲೋಲಿನಲ್ಲಿ ಗಾಢನಿದ್ರೆ ಹೋದರು (ಜಾಅಕಾ. ೨೫೮). ೪. ಹಣೆಯಲ್ಲಿ ತೂಗಾಡುವಂತೆ ಕಟ್ಟುವ ಒಂದು ಬಗೆಯ ಆಭರಣ ; ಬೈತಲೆಮಣಿ : ಲತೆಗಳನುವ ನಾರಿಯರ ಪಣೆಯೊಳಿರುವ ಮುತ್ತಿನ ಬಟ್ಟನ ಕೆಂಪುರತ್ನದ ರೋಲುಗಳೊ ಯೆಂಬಂತೆ (ಪ್ರಗೀಂ. ೧೬೮-೨೦). [< ಸಂ. ಲೋಲ]

ಲೋಲುಪ (ಗು). ೧. ಅತಿಯಾಸೆಯಿಂದ ಕೂಡಿದ ; ಅಳಿಯಾಸೆಯ : ಜೀವನೋಪಾದುಮುಮಂ ಪಾಲಿಪುದೆ ಬೆಸನಮದಱಂ ಲೋಲುಪ ಮನದಲಿ × × × (ಪ್ರಾಪ್ರ. XII. ೭೦-೭೦: ಸು. ೧೧೦೩). (ನಾ). ೨. ಅತಿಯಾಸೆಯುಳ್ಳವನು : ಲಂಪಟ : "ಲೋಲುಭಂ, ಲೋಲುಪಂ . . . ಲಂಪಟಂ — ಈ ೫ ಅಳವುವಂ" (ಚಾಅಮು. ೭೬-೦೧೮). ೩. ಹೆಚ್ಚಿನ ಆಸಕ್ತಿಯುಳ್ಳವನು ; ಆಸಕ್ತ : ನೈಪೀತಂ ಕುರಗ

ಪ್ರಿಯಂ· ವಿಷಮವಾಹಾರೋಹಣಾತ್ಯಂತಲೋಲುಪನೊಬ್ಬೇಱದೆ ಮಾಣಂ ನೇಱಿದೊಡೆ ಸಾಲ್ಗುಂ (ಹಂಪನಚ. ೪-೦೦೩). [ಸಂ.]

ಲೋಲುಪತೆ (ನಾ)· ಅತಿಯಾಸೆ ; ವ್ಯಾಮೋಹ : ಲೋಲುಪತೆಯವನಯ ಲಿಹರೆ ಬರಹೇಳು ಯಮನಂದನನನು (ಶಾಂತೀಶ್ವ. ೪-೨೦) :· ಅವಳು ಅಧಿಕಾರಲೋಲುಪತೆಯನ್ನು ತ್ಯಜಿಸಲು ಸಿದ್ಧಳಾಗಿರಲಿಲ್ಲ (ತುತಾಂತ. ೨). [ಸಂ. ಲೋಲುಪತಾ]

ಲೋಲುಪತ್ವ (ನಾ). = ಲೋಲುಪತೆ· [ಸಂ.]

ಲೋಲುಪ್ಪ (ನಾ)· ೧. ವಿಷಯಾಸಕ್ತ ; ಲಂಪಟ : ಬಾಲ್ಯ ಯೌವನದೊಳಗೆ ಲೋಲುಪ್ಪನಾಗಿ ನೀನೇಳ್ತುತಲೆ ಪಾಪಿಸುತಿರಬೇಡ ಅನುದಿನವಿ ಶೂಲಿಯನು ನೆನೆಯೊ (ಸರ್ವಜ್ಞ. ೨೯೩). ೨. ಆಸಕ್ತಿಯುಳ್ಳವನು : ಇಷ್ಟಲಿಂಗಪೂಜೆಯಲ್ಲಿ ಲೋಲುಪ್ಪನಾಗಿರಬೇಕು (ಪಸಿಸ್ಥ. ೦೬೨). [ಸಂ.]

ಲೋಲುಪ್ಪಿ, ಲೋಲಾಪ್ಪಿ (ನಾ). ೧. =ಲೋಲುಪತೆ : ಪರಸ್ಪರಪ್ರೇಮದ ಲೋಲುಪ್ಪಿಯಿಂ ಮನಮೆ ತನುವಾದುದನುಜಾಪ್ರಭವತೆ (ಜೀಡಾಪ. ೦೨-೪೩ ಪ); ಸಪ್ತರಸನಂ ತಪ್ಪದೆಂದಾ ನೃಪಂ ತಿಳಿದು ಗುಪ್ತದಿಂ ತನ್ನ ಸತಿಯನುಚಿತಯಂ ಕರೆಸಿ ಲೋಲುಪ್ಪಿಯಿಂ ಬಂದಿವಂಗಿಗೆಯುದೇಕಾಣಗೆಯುಂ ಶಿವಿಯಹುದೆ ನೋಡನಲ್ಲೆ (ಕೃಷ್ಣಾ. ೪-೬). ೨. ಸಖಿ; ಸಂತೋಷ; ಕೃಷ್ಣ ಸುಂದರೀ ವದನಾರವಿಂದಮಕರಂದವಾನಲೋಲುಪ್ಪಿಗಿದು ಪೊಲ್ತಲ್ತೆ (ಗಾಪಕೃ. ೦೨-೦೪). **ಲೋಲಾಪ್ಪಿ** : ೨. ಗೋಳಾಡಲುಂ ಬೇಡ ಲೋಲಾಪ್ಪಿಯುಂ ಬೇಡ (ಪುಂಗಿಪ. ೨೬೪). ೩. ಸರಸ ; ಚಕ್ಕಂದ : ಅವರ ಲೋಲಾಪ್ಪಿ ನಡೆಯುತ್ತಿತ್ತು (ಅಂಕುಶ ೨೦೦೩). [<ಲೋಲುಪತೆ]

ಲೋಲುಭ (ನಾ). = ಲೋಲುಪ· ೨: "ಲೋಲುಭಂ, ಲೋಲುಪಂ, ಲೋಲಂ, ಲಾಲಸಂ, ಲಂಪಟಂ- ಈ ೫ ಅಳಿವುವರ್ಥಂ" (ಶಬ್ದಮ. ೩೮-೦೪೬). [ಸಂ.]

ಲೋಲುವೆ (ನಾ). = ಲೋಲುಪತೆ : ಲೀಲೆಯ ಕುಜಿತು ಆಡುವರೆಲ್ಲರು ಕಾಲಸಂಹರನ ಬಂಧುಗಳು ಲೀಲಾಂಗನಾಸುಖದ ಕುಜಿತು ಆಡುವವರೆಲ್ಲರು ಲೋಲುವೆಯ ಬಂಧುಗಳು (ಪೋಷಶ. ೦೨-೨೬). [<ಲೋಲುಪತೆ ?]

ಲೋಲೆ (ನಾ). ೧. ಲಕ್ಷ್ಮಿ. ೨. ಮಿಂಚು. ೩. ನಾಲಗೆ. ೪. ಹೆಬ್ಬೆಟ್ಟಿನಲ್ಲಿರುವ ಒಂದು ನಾಡಿಯ ಹೆಸರು : ಧಮನಿ, ಗಮನಿ, ಲೋಲೆ, ಧೃತಿ, ಸರ್ವಗಾ ಎಂಬೈದು ನಾಮವನುಳ್ಳ ನಾಡಿಯು . . . ಹೆಬ್ಬೆಟ್ಟಿನ ಮೂಲದಲ್ಲಿರುವ ನರದ ಮೇಲೆ ಸ್ಪಂದನಾಗಿ ಕಾಣಬರುವುದು (ಪಶ್ಯ. ೦೦). [ಸಂ. ಲೋಲಾ]

ಲೋಲೇಕ್ಷಣ (ನಾ). ಚಂಚಲವಾದ ಕಣ್ಣು : ಚಳಮಿನಂ ಪದ್ಮಪಂದಂ ತರಳಮಧುಕರಾಲಂಕೃತಂ ಪದ್ಮನಾಳಂ ವಿಶೃಂಗೋದ್ಯಾಸಿ ಚಂದ್ರಂ ಸೊಗಯಿಸಿತೆನೆ· ಲೋಲೇಕ್ಷಣಾ ಸಂಚಲತ್ಸಂತಳಮುದ್ಯೂವಿಪ್ರಮಂ ಶೋಭಿಸೆ (ಆಷ್ಟ. ೨-೪೦). [ಸಂ.]

ಲೋವಿಸರ ' ಲೋಳೆಸರ ' ನೋ·

ಲೋವೆ (ನಾ). ೧. ಗೋಡೆಯಿಂದ ಮುಂದಕ್ಕೆ ಚಾಚಿದ ಸೂರಿನ ಭಾಗ ; ಮುಂಜೂರು : "ಮಾಸೇಜಿಸಿವ ಹೊದಿಕೆ ವಳಭಚ್ಚಿದೆಯಿನಿಕ್ಕು ಲೋವೆ ಗೋಪಾನಸೀಸಮಾಳ್ಕಂ" (ಪುಂಗಿಪ. ೩೯-೦೩); ಮನೆಮಾಡರ ಮುಂದಣ ಪಚ್ಚಿಯ ಮೊಗಸಾಲೆಯ ಲೋವೆಯೊಳ್ ಪೊಚರತ್ನದಿಂ ದಿಕ್ಕಿದ ರಂಗವಲ್ಲಿಯ (ಪುಚರಿತ.೦೦-೨೨೨ ಪ); ಪಚ್ಚಿಗಳ ಕಂಬಂಗಳಿಂ ಪವಳ ವಲಗೆಗಳ ಮುಚ್ಚಳ್ಗಳಿಂ ನೀಲಮನೆಯ ಲೋವೆಗಳಿಂ . . . ಪೆಚ್ಚಿದುಪ್ಪ ಗೃಹಗೃಹದ್ವಾರಂಗಳೊಳ್ ಮಹಾಪೇರ್ವುವೆಗಳು (ಪಾಪ್ರ. ೩-೩): ತೋಪೆಯಿಲ್ಲದ ಉಟ ಲೋವೆಯಿಲ್ಲದ ಮನೆಯು ನೋವಸಜ್ಜಯದವಳ ಮನೆವಾರ್ತೆ ಸಿಹಿಯಪ್ಪಸಿ ಬೇವು ತಿಂದಂತೆ (ಸರ್ವಜ್ಞ.೦೨೦೯). ೨. ಚಾವಣಿಯ ಬೊಕಟ್ಟು: (೪).

ಲೋಲೆಪಟ್ಟಿ (ನಾ). ಹೊರಕ್ಕೆ ಲೋವೆಯಂತೆ ಬಾಗಿಕೊಂಡಿರುವ ಪಟ್ಟಿ ; ಬಾಗ್ದುಪಟ್ಟಿ: ಮೇಲಿಟೀಕಕ್ಕೆ ಲೋವೆಪಟ್ಟಿ· (೩೪· XIV· ೫೦೩೫. ೨೫೯-೪೮ ೦೩೯; 1847). [ಲೋವೆ + ಪಟ್ಟಿ]

ಲೋಷ್ಟ (ನಾ). ಮಣ್ಣಿನ ಮುದ್ದೆ ; ಹೆಂಟೆ: "ಲೋಷ್ಟಕಃ. ಲೋಷ್ಟಂ–ಈ ೨ ಹೆಟ್ಟೆ" (ಪಣಾಮು. ೧೪-೧೨೨). [ಸಂ.]

ಲೋಷ್ಟಕ (ನಾ). = ಲೋಷ್ಟ: "ಲೋಷ್ಟಕಃ. ಲೋಷ್ಟಂ–ಈ ೨ ಹೆಟ್ಟೆ" (ಪಣಾಮು· ೧೪-೧೨೨). [ಸಂ.]

ಲೋಷ್ಟಭೇದ (ನಾ). ಮಣ್ಣುಹೆಂಟೆಯನ್ನು ಒಡೆಯುವ ಒಂದು ಬಗೆಯ ಸಾಧನ ; ಹಲಬೆ: " ಲೋಷ್ಟಭೇದಂ ಕೊಱಿಡು" (ಪುಂಗಿಪ. ೦೦೯–೦). [ಸಂ.]

ಲೋಷ್ಟಭೇದನ (ನಾ). = ಲೋಷ್ಟಭೇದ· : " ಕೋಟಿ(೧)ಶಂ, ಲೋಷ್ಟಭೇದನಂ–ಈ ೨ ಹಲಿಕೆ " (ಪಣಾಮು. ೧೪-೧೨೨). [ಸಂ.]

ಲೋಷ್ಠ (ನಾ). = ಲೋಷ್ಟ : ಪರಸತಿಯು ವಿಜಯನ ವರಧನವಿರದೆ ಲೋಷ್ಠವು . . . ಎನುತ ಭಾವಿಸುವೆ (ಶಾಂಪ್ರ. ೩-೨೬); ಪರವಿತ್ತಮಂ ಲೋಷ್ಠದಂತರಿದು (ಬಾಭಾ. ೩೬-೦೫). [< ಸಂ. ಲೋಷ್ಟ]

ಲೋಸು (ನಾ). ಒಂದು ಬಗೆಯ ದ್ವಿಪಧೀಸಸ್ಯ : " ಅವಿಷ್ಟ –ದೆಳ್ಳು, . . . ಲೋಸು (ಬೇಪು?), ಕರಿಯುರಿದಳ " (ಲಿಪ್ರ· ೩). [?]

ಲೋಹ (ಗು). ೧. ಕೆಂಪಾದ ; ಕೆಂಪುಬಣ್ಣದ ; ತಾಮ್ರವರ್ಣದ. (ನಾ). ೨. ಯಾವುದಾದರೂ ಖನಿಜ.– ಧಾತು : ಅಗ್ನಿಯಿಂದ ತಪ್ಪವಾವ ಲೋಹದ ಪುತ್ಥಳಿಯುತೆ (ಕಮೀ· ೦೦೫–೭೦); ಕಾಣಿಸ್ಯ ದಲ್ಲಿ · ಕಬ್ಬಣಕ್ಕೆ ಸರಿಯಾದ ಲೋಹವಿಲ್ಲ (ಮುಂಕಾಮು. ೯-೦೧೩). ೩. ಕರಿಯ ಬಣ್ಣದ ಲೋಹ ; ಕಬ್ಬಿಣ : " ಗಿರಿಸಾರಂ, ಅಶ್ಮಸಾರಂ, ಲೋಹಂ, ಕಾಳಾಯಸಂ– ಈ ೪ ಕರ್ಬುನಂ " (ಪಣಾಮು· ೨೮-೦೭) : ಮಾಧುಮುತಂ ಘೃತಕರ್ಪಟ ಕುಲ್ಮನಾಗಲೋಹರಜಮನಟ್ಟು ಕಟ್ಟೆ ಕಳೆದಿಕ್ಕುಗುಮಾವಗವಚ್ಛಿವ್ಯದ್ದಿದುಂ (ವೈಕೋವೈ. ೯-೦೨೮); ಗಗನಾಗ್ರದೊಳ್ ಮುಪ್ಪುರಂಗಳಂ ಬೂಡುವೆವು ಸೊಗಸಾಗಿ ಕನಕ ಕುಲಧೌತ ಲೋಹಂಗಳಿಂ (ಸಾಪ್ರ. ೪೦-೦೪)· ೪. ಶುದ್ಧಪಡಿಸಿದ ಕಬ್ಬಿಣ : ಉಕ್ಕು- ೫. ಚಿನ್ನ ; ಸುವರ್ಣ . ೬. ತಾಮ್ರ· ೭. ಕಂಚು : " ಕಂಚುಃ — ಲೋಹಂ " (ಶಾಪ್ರ. ೯೬). ೮. ಕಡಿಪಾಣ ; ಖಲೀನಃ ಲೋಹಕ್ಕೆ ನಿರಾಳಮಾಗಿ ಮೊಗಮಿತ್ತುದ್ಭಾವಮಂ ಜಾಜುಕಲ್ಪರಿವಂತಾಸೆಯ ವೈಸರಂ ಮೆಱಿವ ಚೆಲ್ಮಂ ದೇವ ನೀವೇಱಿ ನೋಡಿರೆ ಚಿತ್ತಂಬಡಿದಪ್ಪ ವೆಂದು ಮೆಱಿದರ್ ವಾಹಂಗಳಂ ವಾಹಕರ್ (ಆಪಂಪ್ರ. ೨-೩೦). ೯. ರಕ್ತ ; ನೆತ್ತರು. ೧೦. ಒಂದು ಬಗೆಯ ಆಯುಧ· ೧೧. ಒಂದು ಬಗೆಯ ಸುಗಂಧದ ಮರ ; ಕೃಷ್ಣಾಗರು : " ವಂಶಕಂ, ಅಗರು, ರಾಜಾರ್ಹಂ, ಲೋಹಂ, ಕ್ರಿಮಿಜಂ,ಜೋಣಕಂ–೬ ಅಗರು ಗಂಧ, ಶ್ವೇತಾಗರು" (ಶಾಧ್ವ. ೨೦೭). ೧೨. ಮಿಂಚಿನ ಗಾಳ· [ಸಂ.]

ಲೋಹಕರ್ಮ (ನಾ). ಕಬ್ಬಿಣದ ಕೆಲಸ ; ಕರ್ಮಾರವೃತ್ತಿ : ಹೇಮ ಕರ್ಮ ಲೋಹಕರ್ಮ ಶಿಲಾಕರ್ಮ . . . ಹಸ್ತಕುಶಲತೆಯುಳ್ಳ ವಿಶ್ವಕರ್ಮನಿರ್ಮಿತಮಪ್ಪ ಗವಜಾಚಾರ್ಯ (ಪಶ್ಯ. IV. ೬.೬.೫೦-೦೦ ; 1116). [ಸಂ. ಲೋಹಕರ್ಮನ್]

ಲೋಹಕವಚ (ನಾ). ಲೋಹದಿಂದ ಮಾಡಿದ ರಕ್ಷಾಕವಚ ; ಲೋಹದ ರಕ್ಷಾಸಾಧನ : ಅವೆಗಳು ಲೋಹಕವಚಗಳನ್ನು ಧರಿಸಿ ಬೆಟ್ಟಗಳಂತೆ ಕಾಣಲಾಗಿದ್ದವು (ತತಾ. ೨೬೩). [ಸಂ.]

ಲೋಹಕಾರ (ನಾ)· ೧. ಲೋಹದ ಕೆಲಸಮಾಡುವವನು. ೨. ಕಬ್ಬಿಣದ ಕೆಲಸಮಾಡುವವನು : ಕರ್ಮಾರ. ೩. ತಾಮ್ರದ ಕೆಲಸಮಾಡುವವನು ; ಬೋಗಾರ : "ಪ್ಲೋಕಾರಃ, ಲೋಹಕಾರಃ—ಈ ೨ ಬೋಗಾಱಂ"

(ಪರಾಶು. ೧೭-೧೭೧) ; ಹಿಪಿಸ್ಟಸ್: ದೇವತೆಗಳ ಲೋಹತಂಪ್ರಜ್ಞ ; ಸ್ವತಃ ಲೋಹಕಾರದೇವತೆ (ಅಧ್ಯಕ್ರ. XLVI, ಐರಿಕ ಸಮಾಸ್ಕೃ). ೪. ಕಂಚಿನ ಕೆಲಸಮಾಡುವವನು ; ಕಂಚುಗಾತ : "ಲೋಹಕಾರನೆನಿಸಲ್ ಕಂಚುಗಾಱಾ" (ಪುಂಗಣಾ. ೦೦೦ ೦). [ಸಂ.]

ಲೋಹಕಟ್ಟ (ನಾ). ಕಬ್ಬಿಣದ ಮೇಲೆ ಹತ್ತುವ ಜಂಗು; ತುಕ್ಕು. [ಸಂ.]

ಲೋಹಕುಮಿರವಾಹ (ನಾ). ಲಾಳ ಕಟ್ಟಿಸಿದ ಕುದುರೆ : ಎರಡುಂ ಪಕ್ಕದೆ ಪಣ್ಣಿದೋಜೆವಿಡಿಯಂ ಕೈಗೆಯ್ದು ಬಂದೇಱಿ ಚಾಮರಮಂ ಚನ್ನೆಯರಿಕ್ಕೆ ಲೋಹಖುರವಾಹಂ ಸುತ್ತಿ ಕಾಲ್ಗಾಪಿನೊಳ್ ಬರೆ ಬಂದಂ . . . ವಜ್ರ ಬಾಹುವುಹಿಪಂ ವಜ್ರಾಯುಧಂ ಬರ್ಪವೊಲ್ (ಹಂಚಕಚ. ೩-೦೦). [ಸಂ.]

ಲೋಹಚುಂಬಕ (ನಾ). ಕಬ್ಬಿಣವನ್ನು ಆಕರ್ಷಿಸುವ ಗುಣವುಳ್ಳದು ; ಸೂಜಿಗಲ್ಲು ; ಅಯಸ್ಕಾಂತ : ಲೋಹಚುಂಬಕಧರ್ಮವು ಒಂದು ಜಾತಿಯ ಕಬ್ಬಿಣದಲ್ಲಿರುತ್ತದೆ ; ಆ ಕಬ್ಬಿಣಕ್ಕೆ ಲೋಹಚುಂಬಕವೆನ್ನುವರು (ಪುಂಜಾಬು. ೩-೨೫) ; ಲೋಹಚುಂಬಕವನು ಕಂಡ ಲೋಹದಂತೆ ನುಗ್ಗಿದ (ಗುಂಗಣ. ೦೩-೬). [ಸಂ.]

ಲೋಹಚುಂಬಕತ್ವ (ನಾ). ಕಾಂತಶಕ್ತಿ ; ಅಯಸ್ಕಾಂತ ಗುಣ : ಉಷ್ಣತೆ. ಪ್ರಕಾಶ, ವಿದ್ಯುತ್ತು, ಲೋಹಚುಂಬಕತ್ವ ಈ ನಾಲ್ಕು ನಮ್ಮ ಇಂದ್ರಿಯಗಳಿಗೆ ತಿಳಿಯುವಂಥದು (ಪುಜಾಬು. ೩-೩೩). [ಸಂ.]

ಲೋಹಜ (ಗು). ಕಬ್ಬಿಣದಿಂದ ಆದ : 'ಲೋಹಜಬಂಧ' ಪರಾ. [ಸಂ.]

ಲೋಹಜಬಂಧ (ನಾ). ಕಬ್ಬಿಣದಿಂದ ಮಾಡಿದ ಸರಪಣಿ : ತ್ರಿಜಗದ್ಭೂಷಣವಾರಣಂ ಮುಜಳಯೆ ಪಯ್ದಾಲಾನಮಂ ತ್ವಗಜಲೋಹಜಬಂಧಂಗಳ ನೆಲ್ಲವುಂ ಪಱಿವಿನಂ . . . ಬಂದು (ಹಂಚಕಚ. ೦೫-೩೦). [ಸಂ.]

ಲೋಹಜಿತ್ತು (ನಾ). ಒಂದು ಬಗೆಯ ರತ್ನ; ವಜ್ರ. [ಸಂ. ಲೋಹಜಿತ್]

ಲೋಹಟಂಕ (ನಾ). ಕಬ್ಬಿಣದ ಸುತ್ತಿಗೆ : "ಸುತ್ತಿಗೆ ಲೋಹಟುಂಕಂ" (ಪುಂಗಣಾ. ೦೦೬-೬). [ಸಂ.]

ಲೋಹತೈಲ (ನಾ). ಗಣಿಗಳಲ್ಲಿ ದೊರೆಯುವ ಎಣ್ಣೆ ; ಖನಿಜತೈಲ : ಸಮುದ್ರದಲ್ಲಿ ಆಥವಾ ಸರೋವರದಲ್ಲಿ ನದಿ ತನ್ನ ಭಾರವನ್ನು ಇಳಿಸಿದಾಗ ತಳದಲ್ಲಿ ಮುಚ್ಚಿಹೋದ ಪ್ರಾಣಿಗಳ, ಸಸ್ಯಗಳ ಭಾಗಗಳಿಂದ ಲೋಹತೈಲ (Mineral oils)ಗಳಾಗುತ್ತವೆ (ಪಾಜಿ. ೦೩೬). [ಸಂ.]

ಲೋಹದ್ರವ (ನಾ). ಕಬ್ಬಿಣದ ದ್ರವ ; ಕರಗಿದ ಕಬ್ಬಿಣ : ಸಮಾಕುಲಿತರ್ ಮೋಹಿಸಿ ಮುಚ್ಚಿವೋಗೆ ಪರಿತಂದುತ್ಪಪ್ರಲೋಹದ್ರವಂ ಜಲಮೆಂಬಲ್ಲಿಯ ನಾರಕರ್ ತಳಪುದುಂ (ಪಾಂತಪು. ೬-೫೯). [ಸಂ.]

ಲೋಹನಿಧಿ (ನಾ). ಚಿನ್ನದ ರೂಪದಲ್ಲಿರುವ ನಿಧಿ ; ತೆಗೆದಿಟ್ಟಿರುವ ಚಿನ್ನ ಮೊದಲಾದ ಲೋಹ : ಹಣದ ಬೆಂಗಾವಲಾದ ತನ್ನ ಲೋಹನಿಧಿಯ ಗಾತ್ರವನ್ನೂ ರಚನೆಯನ್ನೂ ಹೇಗೆ ಕಾಪಾಡಿಕೊಳ್ಳುತ್ತಿರಬೇಕು ? (ಪಾಶ್ರ. ೦೩೦). [ಸಂ.]

ಲೋಹಪರೀಕ್ಷೆ (ನಾ). "ಒಂದು ಖನಿಜದಲ್ಲಾಗಲಿ, ಲೋಹಮಿಶ್ರಣದಲ್ಲಾಗಲಿ ಇರುವ ಒಂದು ಲೋಹದ ಮೊತ್ತವನ್ನು ನಿಷ್ಕರ್ಷಿಸುವುದು ; ಲೋಹಪರೀಕ್ಷೆ" (Assay, ೫೦೪೭.). [ಸಂ. ಲೋಹಪರೀಕ್ಷಾ]

ಲೋಹಪೃಷ್ಠ (ಗು). ೧. ಲೋಹದಂತೆ ಗಟ್ಟಿಯಾದ ಹಿಂಭಾಗವನ್ನು ಹೊಂದಿರುವ. ೨(ನಾ). ೨. ಒಂದು ಬಗೆಯ ಪಕ್ಷಿ : ಕ್ರೌಂಚಪಕ್ಷಿ : ಹರಡೆಹಕ್ಕಿ : "ಲೋಹಪೃಷ್ಠ ಕಂಕ ಶಬ್ದಗಳು ಹರಡೆಹಕ್ಕಿಯ ಹೆಸರುಗಳು. ಇದು ಹದ್ದುಗಳಲ್ಲಿ ಭೇದ. ಕಬ್ಬರಹದ್ದೆಂಬರು . . . ಪಟ್ಟೆಯಾಗಿರುವ ಪಿಲ್ರೆಗಳುಳ್ಳದ್ದು" (ಗುಖಾಣ. ೦೫೯). [ಸಂ.]

ಲೋಹಪ್ರತಿಮೆ (ನಾ). ೧. ಲೋಹದಿಂದ ಮಾಡಿದ ವಿಗ್ರಹ.— ಬೊಂಬೆ. ೨. ಕಮ್ಮಾರನ ಅಡಿಗಲ್ಲು. [ಸಂ. ಲೋಹಪ್ರತಿಮಾ]

ಲೋಹಫಲಕ (ನಾ). ಲೋಹದ ಹಲಗೆ : ಖರೋಷ್ಠಿಲಿಪಿ ಭೂರ್ಜಪತ್ರಗಳ ಮೇಲೆ ಬರೆದಿರುವುದಲ್ಲದೆ ಲೋಹಫಲಕದ ಮೇಲೂ . . . ದೊರೆತಿದೆ (ಪ್ರಾಬಿ. ೬೦). [ಸಂ.]

ಲೋಹಭಸ್ಮ (ನಾ). ೧. ಕಬ್ಬಿಣದ ಕಿಟ್ಟ.— ಜಂಗು. ೨. (ಔಷಧಿಗಾಗಿ) ಕಬ್ಬಿಣದ ಕಿಟ್ಟದಿಂದ ತಯಾರಿಸುವ ಒಂದು ಬಗೆಯ ಭಸ್ಮ ; ಲೋಹಭಸ್ಮ : ಇವನ್ನು ಮಾಡುವ ಕ್ರಮ — ಅರಹುಡಿಯನ್ನು ಅಂಬಲಿಯಲ್ಲಿ ತೊಳೆದು ಅತ್ತಿಯ ತಿಗಡಿನ ರಸದಲ್ಲಿ ಆ ಹುಡಿ ಮುಳುಗುವ ಹಾಗೆ ಹಾಕಿ ಸೂರ್ಯವುಟವಲ್ಲಿರಿಸಿದರೆ ಆ ಅರಹುಡಿ ಭಸ್ಮವಹುದು (ಖಪ್ಕ. ೪೭) ; ಕಬ್ಬಿಣವ ಕಿಟ್ಟ ತಂದು. ಪುಟಕ್ಕೆ ಹಾಕಿ ಲೋಹಭಸ್ಮ ಮಾಡುವರು (ಪುಜಾಬು. ೪-೦೪೩). [ಸಂ. ಲೋಹಭಸ್ಮನ್]

ಲೋಹಮಂಡೂರ (ನಾ). = ಲೋಹಭಸ್ಮ ೧ : ಜೀನುತುಪ್ಪವ ಹಸಿ ಲೋಹಮಂಡೂರ ಹಲವಂ ಹಾಕಿ . . . ಸೇವಿಸೆ ಕ್ಷಯರೋಗ ಪಾಂಡುರೋಗ . . . ಸಹ ಗುಣಮಕ್ಕು (ಪಕ್ಕ. ೨೪೨). [ಸಂ.]

ಲೋಹಮಾರ್ಗ (ನಾ). ಕಬ್ಬಿಣದ ಕಂಬಿಯ ಮಾರ್ಗ : ರೈಲುರಸ್ತೆ : ರೈಲ್ವೆ ಎಂಬ ಲೋಹಮಾರ್ಗವು ಈ ಊರ ಮೇಲೆ ಹಾಯ್ದು . . . ಕೂಡುತ್ತದೆ (ಪುಜಾಬು. ೪-೦೧೩). [ಸಂ.]

ಲೋಹಯುಗ (ನಾ). ಮಾನವರು ಲೋಹವನ್ನು ಹೆಚ್ಚಾಗಿ ಬಳಕೆಗೆ ತಂದ ಕಾಲ : ತೈವಸಂಸ್ಕೃತಿಯು . . . ಲೋಹಯುಗಕ್ಕೆ ಹಿಂದಿನ ದೆಂತಲೂ ಅಭಿಪ್ರಾಯಪಟ್ಟಿದ್ದಾರೆ (ಇತಿದ. ೨೦೩). [ಸಂ.]

ಲೋಹಲ(ಗು). ೧. ಕಬ್ಬಿಣದಿಂದ ಮಾಡಿದ. ೨. ಅಸ್ಪಷ್ಟವಾಗಿ ಮಾತನಾಡುವ. (ನಾ). ೩. ಅಸ್ಪಷ್ಟವಾಗಿ ಮಾತನಾಡುವವನು : "ಲೋಃಲಲನಭಿವ್ಯಕ್ತವ್ಯಾಹಾರಂ" (ಪಟ್ಟ ಕೃಪೀ. ೦೦೦-೦೭). [ಸಂ.]

ಲೋಹವಕ್ಕರಿಕೆ (ನಾ). (ಆನೆ, ಕುದುರೆ ಮೊದಲಾದುವುಗಳ ಪಕ್ಕಕ್ಕೆ ಕಟ್ಟುವ) ಉಕ್ಕಿನ ಕವಚ : ಕುರುಕ್ಷೇತ್ರದೊಳ್ ವಜ್ರಪ್ರಹರಣದಿನೆ ಅಂವೆರಸು ಕೆಡವ ಪರ್ವತಂಗಳಂತೆ ಲೋಹವಕ್ಕರಿಕೆಗಳ್ವೆರಸು . . . ಕೆಡವ ಮದಾಂಧಗಂಧಸಿಂಧುರಂಗಳ್ (ಗದಾಪ. ೬-೨೮ ಪ) ; ರಾಜಪ ಲೋಹವಕ್ಕರಿಕೆಯ ತೇಜಗಳ ಲೆಕ್ಕವಿಲ್ಲದೆ ತಂದೊಟ್ಟಿಸಿ (ಜಾಗೆ. ೦೬-೬೩). [ಲೋಹ+ಪಕ್ಕರಿಕೆ]

ಲೋಹವಕ್ಕರೆ (ನಾ). = ಲೋಹವಕ್ಕರಿಕೆ : ಏಱಿಸಿದ ಬಿಸುಗೆಗಳು ಮಿಕ್ಕಿದ ಲೋಹವಕ್ಕರೆಗಳುಮುರ್ಚಿದ ಮೊಗವಡಂಗಳುಂ (ಹಂಕಣ. ೦೦-೫೦ ಪ) ; ಪದಿನೆಣ್ಭಸಿರ ಲೋಹವಕ್ಕರೆಯ ಜಾತ್ಯಶ್ವಂಗಳ್ (ಹಜುದ. ೬೮ ಕೃಪೋ) ; ಕುದುರೆಗಳಿಗೆ ಲೋಹವಕ್ಕರೆ ಉಕ್ಕಿನ ಮೊಗಲಂಬುಗಳನ್ನೂ ಧರಿಯಿಸಿ (ಪಾಂಕೃಕ. ೧೪-೦೩). [ಲೋಹ+ಪಕ್ಕರೆ]

ಲೋಹಮರೆ (ನಾ). ಲೋಹಗಳಲ್ಲಿ ಶ್ರೇಷ್ಠವಾದುದು ; ಚಿನ್ನ ; ಬಂಗಾರ. [ಸಂ.]

ಲೋಹಶಾಸ್ತ್ರ (ನಾ). ಲೋಹಕ್ಕೆ ಸಂಬಂಧಪಟ್ಟ ವಿದ್ಯೆ : ಇವುಗಳಲ್ಲಿ ಕಾಣುವ ಲೋಹಶಾಸ್ತ್ರದ ಸಾಧನೆಯು ಎಲ್ಲರ ಗೌರವಕ್ಕೂ ಪಾತ್ರವಾಗಿದೆ (ಐಲಾ. ೧೪). [ಸಂ.]

ಲೋಹಶ್ರವಣೆ(ನಾ).ಲೋಹದ ಕರ್ಣಾಭರಣವನ್ನು ಹೊಂದಿರುವವಳು: ವಿವಿಧಾಭರಣಾಢ್ಯೆ ವಿಚಿತ್ರವಸ್ತ್ರಗಳನಜಸುವಳ್ ಕಲಾವಿದೆ ಲೋಹಶ್ರವಣೆ ಕಮಲಾಕ್ಷಿ . ಧೂಮ್ರಾಭವರ್ಣೆ ಮೃಗನಿಲಯಮಧ್ಯಮದ್ರೇಕ್ಕಾಣಂ (ಣಹಚ. ೫೯-೫೪). [ಸಂ. ಲೋಹಶ್ರವಣಾ (ಲೋಹ+ಶ್ರವಣ+—)]

ಲೋಹಸಿಂಧೂರ (ನಾ). ಔಷಧಿಗಾಗಿ, ಕಬ್ಬಿಣದ ಹುಡಿಯಿಂದ ತಯಾರಿಸಿದ ಪುಡಿ : ಲೋಹಸಿಂಧೂರ— ಲೋಹದ ಅರಹುಡಿಯನ್ನು ಗೋಮೂತ್ರದಿಂದ ಐದಾದಿವ ನೆನೆಯಿಕ್ಕಿ . . . ಖಲ್ವದೊಳಿಕ್ಕಿ ಸೂಕ್ಷ್ಮ ಚೂರ್ಣ ಮಾಡಲು, ಶುದ್ಧಸಿಂಧೂರವಾಗುವುದು (ಪಕ್ಕ. ೧೪). [ಲೋಹ+ಸಿಂಧೂರ]

ಲೋಹಾಣ (ನಾ)· ವ್ಯಾಪಾರಿಗಳ ಒಂದು ಪಂಗಡ : ಲೋಹಾಣರು . . . ಈ ದೇಶದಿಂದ ಕಾನಡಾಜೆಲ್ಲಿಗೆ ಬಂದವರು (ಗಾಣ· ೧೦೫). [?]

ಲೋಹಾಭಿಸಾರ (ನಾ)· ೧· ಆಯುಧಗಳನ್ನು ಹೊಳೆಯುವಂತೆ ಮಾಡುವುದು· ೨· ಯುದ್ಧಪೂರ್ವದಲ್ಲಿ ಸೈನಿಕರನ್ನು ಸಿದ್ಧಗೊಳಿಸಲು ರಾಜರು ಮಾಡುತ್ತಿದ್ದ ಒಂದು ಉತ್ಸವ : "ಲೋಹಾಭಿಸಾರಃ ಅಸ್ತ್ರಭೃತಾಂ ರಾಜ್ಞಾಂ ನೀರಾಜನಾವಿಧಿಃ— ಯುದ್ಧಪ್ರಯಾಣಾದಿಗಳಲ್ಲಿ ಆಯುಧಗಳನ್ನು ಧರಿಸಿದ ಅರಸುಗಳಿಗೆ ರಕ್ಷೆಯಾಗಿ ಆರತಿಯನ್ನು ಏವಾಳಿಸಿ ಬೆಳಗುವಿಕೆ" (ಕಾಣ್ಯ· ೨೬೬). [ಸಂ·]

ಲೋಹಾಭಿಹಾರ (ನಾ)· = ಲೋಹಾಭಿಸಾರ· [ಸಂ·]

ಲೋಹಾಸನ (ನಾ)· ಒಂದು ಬಗೆಯ ಆಸನ : ಲೋಹದಿಂದ ಮಾಡಿದ ಪೀಠ : ಆತನುಂ ಪಿರಿಯ ಲೋಹಾಸನಮೇಱಿ ಪಲಂಬರ್ ಪಾರ್ವರ್ಗ್ ವಷ್ಟಾಣಿಸುತ್ತಿರ್ದ (ಕಪ್ಪಾಣ· ೭-೦೬) ; ಸಿಂಹಾಸನದರಡೋಳಿಯೊಳಂ ಸಾರ್ದ ಲೋಹಾಸನದೊಳ್ (ಪಾಂಪ. ೩-೩೦ ಪ). ಪ್ರ "ಇದರ ಲಕ್ಷಣ, ಪಂಚಭಿಃ ಸಪ್ತಭಿರ್ವಾಪಿ ನವಭಿರ್ಲೋಹಪಟ್ಟಕೈಃ ಪದ್ಮೈಃ ಲೋಹಪಟ್ಟಕೃತಾಧಾರೈರ್ಲೋಹಪಾಲಕ ಮೂರ್ಧನಿ ಭದ್ರಿಕಾಪಟ್ಟ ಗರ್ಭಸ್ಥಂ ಕಾರ್ಮಾಸೇನ ವಿಮಿಶ್ರಿತಂ ಲೋಹಾಸನಮಿದಂ ಪ್ರೋಕ್ತಮುಪರಿಷ್ಟಾತ್ಸುಕೀಲಿತಂ " (ಕಪ್ಪಾಣ. ೫೯೬· ೨೦೦ ಶ್ಲೋ). [ಸಂ·]

ಲೋಹಾಸನಸ್ಥಿತ (ನಾ)· ಲೋಹಾಸನದಲ್ಲಿ ಕುಳಿತಿರುವವನು : ಊರ್ವರಾವರ ಸಭಾಭ್ಯಂತರ ಲೋಹಾಸ್ಥಿತಂ ತದಾಸನದಿನಿಬಂದು (ಸಾಂಪ್ರ· ೬-೬ ಪ)· [ಸಂ·]

ಲೋಹಿತ (ಗು)· ೧· ಕೆಂಪಾದ ; ಕೆಂಬಣ್ಣದ : 'ಲೋಹಿತಲೋಚನ' ಪರಾ· (ನಾ)· ೨· ಕೆಂಪುಬಣ್ಣ ; ರಕ್ತವರ್ಣ : "ಅರುಣಃ . . . ಲೋಹಿತಃ —ಈ ೭ ಕೆಂಪು" (ಪಣಾಪ್ರ· ೦೨೦-೧೪) ; ತರದಿಂದಂ ಲೋಹಿತಸಿತಹರಿತ[೦] . . . ಬಭ್ರುಕ ಮಲಿನವರ್ಣಮಿವು ಗೃಹವರ್ಣಂ (ಜಾತ· ೧-೨೦); ಆನೆಯ ರಕ್ತದಿಂದ ಕೆಂಪಾದ ಸಿಂಹದ ಕೇಸರದಂತೆ ಲೋಹಿತವಾಗಿ (ಪೌಪಪ· ೦೧೬). ೩· ನೆತ್ತರು ; ರಕ್ತ : "ಕೃತಜಂ, ಲೋಹಿತಂ . . . ರಕ್ತಂ—ಈ ೭ ನೆತ್ತರು"(ಪಣಾಪ್ರ· ೦೦೪-೦೦); ವೈರಿಬಲಲೋಹಿತಬಂಧುರದಂಡಮಿಂ ಭುಜಾದಂಡಂ (ಗಣಿತ· ೦-೭೬); ಅಂಗದನ ಕನೆ ಮಹೋದರನಂಗದ ಲೋಹಿತಮನೀಂಟಿ ಪಿಂಗೆ ದಶಪ್ರಾಣಾಗಳುಂ (ಪಂಚಪ· ೦೭-೦೨೬) ; ಲೋಹಿತ ಸ್ರೋತದೊಳ್ಕಳುಗಿ, ಮಜ್ಜೆಯೊಳದ್ದಿ (ಪಣ್ಯಂ· ೭೬-೧೭೦). ೪· ಕೆಂಪು ಲೋಹ ; ತಾಮ್ರ· ೫· ಕೋಪ ; ರೋಷ : ಹರಿಯುವ ರಕ್ತದ ವಾಹಿನಿ ನಾನು ! ಲೋಹಿತವಿಸ್ಫವದುರಿ ನಾನು ! (ಪಾಂಕಥ· ೦೭-೦೨). ೬· ಆನಂದ ; ಸಂತೋಷ· ೭· ಕೊಡಲಿ ; ಪರಶು· ೮· ಸಮಗ್ರವಾದುದು : ಅಖಿಲ; ಸಮಸ್ತ· ೯· ಒಂದು ಬಗೆಯ ಮೀನು : "ಶಾಲಃ . . . ಲೋಹಿತಃ, ಪಲ್ಲವಕಃ— ಈ ೬ ಮತ್ಸ್ಯದ ಭೇದಂಗಳ್" (ಪಣಾಪ್ರ· ೦೦೪-೭೭) ; ಜಾಲದೊಳ್ಸಿಕ್ಕತ್ತಯ್ಯಾಗಿರ್ದ ಮೀನದಂ ಶಾದ್ಧಕೆತ್ಯುತ್ತಮಲೋಹಿತಮತ್ಸ್ಯಮುಮುತ್ತಮಮೆಂದೊಂದು ಕಡೆಯಿಂ ತೆಗೆದಿಸಿದನರಸಂ (ಹುಣೀಪ· ೬-೩೦)· 'ರೋಹಿತ' ಪರಾ· ೧೦· ಒಂದು ಬಗೆಯ ಸುಗಂಧವಸ್ತು : "ಕುಂಕುಮಕ್ಷೀರಲೋಹಿತಂ ಘುಸೃಣಮೆಸೆ ಕುಂಕುಮಂ" (ಪಾಂಗಣ· ೫೯-೬೨)· ೧೧· ಗ್ರಹಗಳಲ್ಲಿ ಒಂದು ; ಅಂಗಾರಕ : ಕುಜ· ೧೨· ಒಂದು ಬಗೆಯ ಜಿಂಕೆ ; ಕೆಂಬಣ್ಣದ ಜಿಂಕೆ· ೧೩· ಬ್ರಹ್ಮಪುತ್ರಾ ನದಿ· ೧೪· ಒಂದು ಬಗೆಯ ಬತ್ತ ; ಕೆಂಬಾರೆ· ೧೫· ಬೆಲೆಬಾಳುವ ಒಂದು ಬಗೆಯ ಕೆಂಪುರತ್ನ ; ಮಾಣಿಕ್ಯ· ೧೬· ಕಣ್ಣಿನ ಒಂದು ಬಗೆಯ ರೋಗ ; ಕೆಂಗಣ್ಣು ರೋಗ· ೧೭· ಅಂಕುಶ· ೧೮· ಶಿರೀಷ ಕುಸುಮ· [ಸಂ·]

ಲೋಹಿತಕ (ನಾ)· ಕೆಂಪುಬಣ್ಣದ ರತ್ನ ; ಮಾಣಿಕ್ಯ : "ಶೋಣರತ್ನಂ, ರೋಹಿತಕಃ, ಪದ್ಮರಾಗಃ — ೩ ಕೆಂಪುಗಳು, ಕೆಂಪುಕಲ್ಲುಗಳು" (ಕಾಣ್ಯ· ೬೦೩· ೩೦೩)· [ಸಂ·]

ಲೋಹಿತಚಂದನ (ನಾ)· ೧· ಒಂದು ಬಗೆಯ ಕೆಂಪುಬಣ್ಣದ ಪುಡಿ; ಕುಂಕುಮ : "ಕುಂಕುಮಂ . . . ಲೋಹಿತಚಂದನಂ . . . ಜಾವಕಂ —ಈ ೭ ಕುಂಕುಮಂ" (ಪಣಾಪ್ರ· ೧೯-೧೯೯)· ೨· ಒಂದು ಬಗೆಯ ಮರ ; ರಕ್ತಚಂದನ· ೧, ೨ : ಆ ವನಂ . . . ಕಾಂತಾಕದಂಬದಂತೆ ಲೋಹಿತಚಂದನಾಲಂಕೃತಮುಂ . . . ಆಗಿಯುಂ (ಚಂದ್ರಪ್ರ· ೩-೩೨ ಪ). [ಸಂ·]

ಲೋಹಿತಜಲ (ನಾ)· ಕೆನ್ನೀರು ; ರಕ್ತ : ಖರದುಶ್ಶಾಸನಲೋಹಿತಜಲಮುಂ ಕುಡಿದೆಂ (ಗಣಭಾ· ೯-೩)· [ಸಂ· ಲೋಹಿತಜಲ]

ಲೋಹಿತಲೋಚನ (ನಾ)· (ಕೋಪದಿಂದ) ಕೆಂಪಾದ ಕಣ್ಣುಗಳುಳ್ಳವನು : ನೆಱಿಯದ ಸರಕಾಯುಷ್ಮಮಂ ನೆಱಪುವನೆಂಬಂತೆ ಮುಳಿದು ವಿಘೂರ್ಣಮಾನಲೋಹಿತಲೋಚನಂ . . . ಗಱಯುರ್ದ (ಚಂಪ್ರ· ೨-೦೪ ಪ); ಆಕಾಲಸಂಧ್ಯಾಪ್ರದಾನಪ್ರವೀಣಲೋಹಿತಲೋಚನನುಂ . . . ಆಗಿಯುಂ ರಾಜಸೇವಾನಭಿಜ್ಞನುಮಾಗಿದಂ (ಶಾಪಂಚ· ೦೬೭). [ಸಂ·]

ಲೋಹಿತಾಂಗ (ನಾ)· ೧· ಕೆಂಪುಬಣ್ಣದ ಒಂದು ಬಗೆಯ ಸಸ್ಯ· ೨· [ಜ್ಯೋತಿ] ಕೆಂಪುಬಣ್ಣದ ಒಂದು ಗ್ರಹ ; ಮಂಗಳ ; ಕುಜ : "ಲೋಹಿತಾಂಗನಂಗಾರಕಂ ಕುಜಂ" (ಪಬ್ಬು·ಪ್ರ· ೦೬-೭೨). [ಸಂ·]

ಲೋಹಿತಾಶ್ಮ (ನಾ)· ೧· ಕೆಂಪುಬಣ್ಣದ ಕುದುರೆಯುಳ್ಳವನು ; ಅಗ್ನಿ : "ಸಪ್ತಾರ್ಚಿಃ . . . ಲೋಹಿತಾಶ್ಮಃ· ಹುತಾಶನಃ — ಈ ೪೦ ಅಗ್ನಿಯ ಪೆಸರ್" (ಪಣಾಪ್ರ· ೦೨-೬೪) ; ಪುಸಗಿರ್ದ ಲೋಹಿತಾಶ್ವಪ್ರಸರಂ ಕಾಳ್ಗರ್ಡಮೆಲ್ಲಮಂ ಮೇಯೆ (ಪಗಂ· ೦೬-೬೩). ೨· ಹರಿಶ್ಚಂದ್ರನ ಮಗನ ಹೆಸರು : ಬಂದರಂ ಲೋಹಿತಾಶ್ವ ಎಂದು . . . ಕರೆಕರದು ಬಿಡೆ ಬೀದಿಗುವಿನಂತೆ (ಪಣಾ· ೦೨-೦೬). [ಸಂ·]

ಲೋಹಿನಿ (ನಾ)· ೧· ಕೆಂಪುಬಣ್ಣ : "ದಾಸವಣದ ಹೂವಿನ ಬಣ್ಣವಂ ಲೋಹಿನಿಯೆಂಬುದುಂ" (ಪಣಾಪ್ರ· ೦೨೨-೩೬)· ೨· ಕೆಂಪುಬಣ್ಣದವಳು· ೩· ಸಿಟ್ಟಿನಿಂದ ಕೆಂಪಾದವಳು· [ಸಂ· ಲೋಹಿನೀ]

ಲೋಳ 'ಲೋಲ' ನೋ·

ಲೋಳಂಬ 'ಲೋಲಂಬ' ನೋ·

ಲೋಳತೆ 'ಲೋಲತೆ' ನೋ·

ಲೋಳಸರ 'ಲೋಳಿಸರ' ನೋ·

ಲೋಳಿ 'ಲೋಳಿ' ನೋ·

ಲೋಳಿತ 'ಲೋಲಿತ' ನೋ·

ಲೋಳಿಸರ 'ಲೋಳಿಸರ' ನೋ·

ಲೋಳಿ, ಲೋಳಿ (ನಾ)· ೧· ಬಾಯಿಯಿಂದ ಸುರಿಯುವ ದ್ರವ; ಲಾಲಾರಸ ; ಜೊಲ್ಲು : ಕೂರೆವೊಡೆ ಬೆಟ್ಟುಗಳ್ ಬಿರಿವವುಣ್ಮುವ ಲಾಳೆಯ ಲೋಳಿಗಳ್ ಪೊನಲ್ಗುರಿವವು (ಶಾಪ್ರಾ· ೪-೦೦೦) ; ಮುದುಕರಂತೆ ಲೋಳಿ ಸುರಿವ ಬಾಯುಂ (ಪಮಾಕ್ಕು· ೨-೭೨) ; ಬೀಳ್ವ ಲೋಳೆಯ ಬಿಗಿದ ಗಲ್ಲುಗಳ . . . ಮಾನಿಸರು (ಪಸಪ್ರ· ೪೬-೩೭)· 'ಲೊದಳೆ' ಪರಾ· ೨· ಶುಕ್ಲ· ೩· ಪೊಟ್ಟೆಯ ಒಳಗಿರುವ ಜಿಗುಟಾದ ದ್ರವ : "ಮೊಟ್ಟೆಯ ಹಳದಿ ಲೋಳೆ, ಬಂಡಾರ" (Kolk. ಬಾಳೆ·)· ೪· ಶ್ಲೇಷ್ಮ· ಲೋಳೆ : ೧, ವಿಕಸಿತಸ್ಪೃಷ್ಟದ ಲೋಳಗಳ . . . ಹಮಾವಳಿ ಕಳನ ಗೆರ್ದವು (ಶಾಕ್ಯಾ೯೮· ೩-೨)· [ದೇ-೩ ಮುಲ· ನೋಳ ; ತುಳು· ನೋಣೆ; ತೆಲು· ನೊಚ್ಚೆಲ್ಲು· / ಸಂ· ಲಾಲಾ]

ಲೋಳೆಮೀನು (ನಾ)· ಒಂದು ಬಗೆಯ ಮೀನು : "ಸರಿಸುಮಾರಾಗಿ ಪಾರದರ್ಶಕವಾದ· ಘನದ್ರವದೇಹವುಳ್ಳ ಒಂದು ಸಮುದ್ರ ವಿಸಾಜಾತಿ:

ಲೋಳೆಮೀನು : ಅಂಬಲಿಮೀನು" (Jelly-fish. ೨೦೪೨); ಲೋಳ್ಳಮೀನು (Jelly-Fish) ರಣ್ಣು ಪಡೆದ ವಿಶ್ವದಲ್ಲಿನ ಮೊದಲ ಜೀವಿ (ಪ್ರಾಧ್ಯ. ೦).
[ಲೋಳೆ + ಮೀನು (<ಮೀನ್)]

ಲೋಳೆವಾಯ್, ಲೋಳೆವಾಯಿ (ನಾ)· ಜೊಲ್ಲು ಸುರಿಯುತ್ತಿರುವ ಬಾಯಿ : ಕಲುಮಣ್ಣನೂಪುರಂ ತನಗೊತೀಬಡೆ ಗಾಡಿಗೆ ಲೋಳೆವಾಯ್ ಮನಂಗೊಳೆ (೨೩೨. ೩-೬೨); ಬೀಂಬಿಸಿದ ಲೋಳೆವಾಯಂ ಬಿಂಬಾಧರೆ . . . ಬೀಂಬಿಸಿ (ಪುರಿ· ೦೦-೩೨); ಅಲರ್ಗಣ್ ಪೊಂಗಿದ ಲೋಳೆ [ಪಾಣಿ· ಲಾಳೆ, ತೊಡೆ] ವಾಯ್ ನಗೆಮೊಗಂ . . . ಬೆಲ್ಲಾಗಿರೆ (ಪಾರ್ಶ್ವ· ೨೦೬).
ಲೋಳೆವಾಯಿ : ಕಱುನಗೆ ಲೋಳೆವಾಯಿ [ಪಾಣಿ· ಯಾ] ತೊದಳ ದೊಂದಿದ ನಾಲಗೆ . . . ತಳರ್ದಿಡೆ ಮುದ್ದು ಮೊಗಂ (ಶಾಲಿಸಿ. ೪-೮೯).
[ಲೋಳೆ + ಬಾಯ್]

ಲೋಳೆವಾಯಿ ' ಲೋಳೆವಾಯ್" ನೋ·

ಲೋಳೆವೊರೆ (ಕ್ರಿ)· ಜೊಲ್ಲಿನ . ಜಿಗುಟು ಹತ್ತಿಕೊಂಡಿರು : ಆಗಳ್ ಬಲದೇಮ್ಮಾಮಿ ಲೋಳೆವೊರೆದ ಮೆಯ್ಯಂ ಮೋವೊರೆದ ಕಸುಗುಳನಾಗಿ ಪೋಗಿ ಹರಿಗೆ ತೋಱಿ ನೀಬ್ಯೊಡೆ (೨೦೫. ೪-೪೪ ಪ)· [ಲೋಳೆ + ಒರೆ]

ಲೋಳೆಸರ, ಲೋಯಿಸರ, ಲೋವಿಸರ, ಲೋಳಸರ, ಲೋಳಿಸರ (ನಾ)· ಅಂಟಾದ ರಸವನ್ನು ಹೊಂದಿರುವ ಒಂದು ಬಗೆಯ ಔಷಧೀಸಸ್ಯ; ಕುಮಾರಿ : ಲೋಳಿಸರ, ' ಮುಸಾಬ್ಬ (ಪ್ರಕಾ· ೩-೦೦).
ಲೋಯಿಸರ : " ಲೋಯಿಸರದಮದು ಕುಮಾರಿಯಕ್ಕು " (ಪಂಗಡ· ೪೪-೪೪) ; ತೊಡೆದು ತಿಲತೈಲಮಂ ಕರವು(ವು)ಡಿ ಸಾಸಿವೆ ಲೋಯಿಸರದ ತಿರುಳೆಂಬಿವನಿಟ್ಟಡೆ ಬಗಿತಾಗಿ ಕಟ್ಟಲ್ ನಿಮಿಷಂಗುಡಿದರ್ದ ಕಬ್ಬಿಂ ಭಂಗಂಬಡುಗುಂ (ಕೀರ್ತಿಪರಿ. ೯-೦೩೩) ; ಲೋಯಿಸರದ ಮೇಲೆ ಬಂಡಿ ಪರಿದಂತೆ (ಧರ್ಮಾಮೃ· ೨-೪೯) **ಲೋವಿಸರ** : ಲೋವಿಸರದ ಮೇಲೆ ಭಂಡಿ ಪರಿದಂತೆ (ಪಾರ್ಶ್ವ· ೩-೦೨೦)· **ಲೋಳಸರ** : ಬಿದರಕ್ಕಿ· ಲೋಳಸರ. ಮುಳಗಳ್ಳಿ ಮುಂತಾದವುಗಳು . . . ನಿರುಪಯುಕ್ತಪದಾರ್ಥಗಳು (ಪುಣ್ಯಾಸ್ರ· ೩-೨೪೩); ಲೋಳಸರದ ರಸದಲ್ಲಿ ಉದ್ದಿನ ಹಿಟ್ಟು ಅರಮು (ಗಂಧಪ್ರ· ೩-೩)· **ಲೋಳಿಸರ** : ಲಿಂಗವನಱಿದು ಮಜ್ಜಿದಪ್ಪ ಲೋಳೆ [ಪಾಣಿ· ಲೊಯಿ· ಲೋಯಿ]ಸರದ ಮೇಲೆ ಭಂಡಿ ಪರಿದಂತೆ (ಕಪಿಲ· ೦೦೮-೩೩೩) ; ಲೋಳಿಸರದ ಹಳುಕುಗಳಿಗೆ ಅಳಲೆಕಾಯಿಚೂರ್ಣವನ್ನು ಹಾಕಿಟ್ಟರೆ ನೀರು ಬರುವುದು (ಪಥ್ಯ· ಪರಿ. ೩೦೩) : ಲೋಳಿಸರದ ರಸದಿಂದ ಕಲಸಿ ಮಾಡಿದ ಕಪ್ಪನ್ನು ಸವರಿ ಒಣಗಿದ ಮೇಲೆ . . . ಒರಸಿ (ಗುಣಾ· ೩). [ದೇ·ತ ತುಳು. ನೋಲಿಸರ· / ಮರಾ. ಲೋಳಿಸರ್]

ಲೋಳೆಸುರಿಕ (ನಾ)· ಜೊಲ್ಲು ಸುರಿಸುವವನು ; ಲೋಳೆಬಾಯಿಯವನು : ಅವನೊಬ್ಬ ಲೋಳೆಸುರಿಕ (ಕಸಾ).
[ಲೋಳೆ + ಸುರಿ$_1$ + − ಕ$_2$]

ಲೌಕರಿ (ನಾ)· (ಉಕ) ಉಣ್ಣೆಯ ದಾರ : ಮನೆಯಲ್ಲಿ ಲೌಕರಿ ರೇಶಿಮೆ ತಂದು ತನ್ನ ಭಾವೀ ಕಮ್ಮನಿಗಾಗಿ ಸ್ವೆಟರು, ಕಾಲುಚೀಲ ಹಾಕುತ್ತ . . . ಕಾಲ ಕಳೆಯತೊಡಗಿದಳು (ಸಂಕಣಾ. ೩೭೬); ಆತ ನಮ್ಮ ಹೆಳವನ ಲೌಕರಿ ತುದಿ ಹಿಡಿದು ಜಗ್ಗಿದ್ದು (ಕ್ಯಾ. ೦೩೮). [← ಮರಾ. ಲೋಕರ್]

ಲೌಕಿಕ (ಗು)· ೧. ಲೋಕಕ್ಕೆ ಸಂಬಂಧಿಸಿದ ; ಪ್ರಾಪಂಚಿಕವಾದ ; ಐಹಿಕವಾದ· (ನಾ)· ೨. ಲೋಕಕ್ಕೆ ಸಂಬಂಧಿಸಿದುದು; ಪ್ರಾಪಂಚಿಕವಾದುದು; ಐಹಿಕ: ಬೆಳಗುವೆನ್ನಲ್ಲಿ ಲೌಕಿಕಮನಲ್ಲಿ ಜಿನಾಗಮಮಂ (ಸಂಪೂ ೦೪-೩೦) ; ಲೌಕಿಕವನ್ನು ಕಳೆದವನಜಾಪ್ತನೇ · ಕಡುಗುನ್ನತದ ಪದವಿ (ಕಬ್ಬಿಗ ೩-೦೦). ೩. ಲೋಕದ ನಡತೆ,—ವಾಡಿಕೆ; ಲೋಕವ್ಯವಹಾರ : ಭರತ ನಾತನ ಹಿಂದೆ ನಡೆದನಮ್ಮನ ಮೆಯ್ಯ ಲೌಕಿಕವನೆಸಗೆ (ಕ್ರಿಪಾಪು. ೦೦೭-೦೩೦); ಅಪ್ಪನದು ಹೀಗೆ ವೈದಿಕವೃತ್ತಿಯಾದರೆ ಶ್ಯಾಮಕ್ಕನದು ಸಂಪೂರ್ಣ ಲೌಕಿಕ (ಕುಸಾಪ್ರ· ೨೪೯); ಲೌಕಿಕ ನಡೆಸಿ ಲೋಕ ಮರೆತ (ಗದ)· ೪. ವೈದಿಕವಲ್ಲದುದು : ಸಂಸ್ಕೃತಭಾಷೆಯು ವೈದಿಕ ಲೌಕಿಕವೆಂಬುದಾಗಿ ಎರಡು ವಿಧವಾಗಿ ವಿಭಾಗಿಸಲ್ಪಟ್ಟಿರುವುದು (ಭಾಡಕ· ೩೩೯) ; ವೈದಿಕ ಲೌಕಿಕೋಭಯ ವಿದ್ಯಾನಿಪುಣರು ನಮ್ಮ ಆ ದೊಡ್ಡಪ್ಪನವರು (ಜಂಗಾಕ· ೦೩-೬೦). ೫. ಲೋಕದ ನಡವಳಿಕೆಯನ್ನು ತಿಳಿದಿರುವವನು; ಲೌಕಿಕರ ಕಂಡು ಅಡುವ ಹಾಡುವೆ (ಪಪಕ. ೨೪೬). ೬. [ತರ್ಕಶಾ] ಇಂದ್ರಿಯಗಳಿಂದುಂಟಾಗುವ ಪ್ರತ್ಯಕ್ಷಪ್ರಮಾಣ : ಪ್ರತ್ಯಕ್ಷವು ಲೌಕಿಕ, ದಿವ್ಯವೆಂದು ಎರಡುಪ್ರಕಾರ. ಲೌಕಿಕವೆ ಚಕ್ಷುರಾದಿ ಇಂದ್ರಿಯಗಳಿಂದ ಬರತಕ್ಕುದು–ಐದುವಿಧ (ಹಂಡಾಶಾ. ೨೪೦). ೭. ಶಬ್ದದಲ್ಲಿ ಒಂದು ಬಗೆ : ಇದಕ್ಕೆ ಅನುಗುಣವಾಗಿ ಶಬ್ದವನ್ನು ಲೋಕ· ವೇದ ಎಂದು ಎರಡು ವಿಭಾಗಮಾಡಿ ಲೌಕಿಕಶಬ್ದವನ್ನು ಅನುಮಾನದಲ್ಲಿ ಸೇರಿಸಿ· ವೈದಿಕಶಬ್ದವೇ ಶಬ್ದಪ್ರಮಾಣವೆಂದು ಪ್ರಾಭಾಕರರು ನಿರ್ಣಯಿಸಿರುವರು (ಹಂಡಾಶಾ. ೦೪೪). [ಸಂ.]

ಲೌಕಿಕಕಲೆ (ನಾ)· ಪ್ರಾಪಂಚಿಕವಾದ ಕಲೆ : ಈ ಕಾಲದಲ್ಲಿ ಕಥಕಕಲೆಯು ದೇವಸ್ಥಾನವನ್ನು ಬಿಟ್ಟು ರಾಜಾಸ್ಥಾನವನ್ನು ಸೇರಿ ಲೌಕಿಕಕಲೆಯಾಯಿತು (ಭಾಕ. ೨೩೬). [ಸಂ. ಲೌಕಿಕಕಲಾ]

ಲೌಕಿಕಕಾವ್ಯ (ನಾ)· ಇಹಲೋಕಕ್ಕೆ ಸಂಬಂಧಿಸಿದ ಕಾವ್ಯ; ಐಹಿಕಕಥೆಯನ್ನು ಹೇಳುವ ಕಾವ್ಯ: ರನ್ನನೂ ಪಂಪ-ಪೊನ್ನರಂತೆ ಒಂದು ಆಗಮಿಕ ಕಾವ್ಯವನ್ನೂ ಜಿಂದು ಲೌಕಿಕಕಾವ್ಯವನ್ನೂ ಬರೆದಿರುವನು (ಪಾಕ. ೨೭).
[ಸಂ.]

ಲೌಕಿಕಛಂದಸ್ಸು (ನಾ)· ವೇದದ ಛಂದಸ್ಸಿಗೆ ಭಿನ್ನವಾದ ಛಂದಸ್ಸು ; ಕಾವ್ಯ· ನಾಟಕಾದಿಗಳಲ್ಲಿರುವ ಛಂದಸ್ಸು : ಲೌಕಿಕಛಂದಸ್ಸು ಇತಿಹಾಸ ಪುರಾಣ ಕಾವ್ಯ ನಾಟಕಗಳಲ್ಲಿರುವುದು (ಕೃಷ· ೦೦೩).
[ಸಂ. ಲೌಕಿಕಛಂದಸ್]

ಲೌಕಿಕತ್ವ (ನಾ)· = ಲೌಕಿಕ ೨ : ಲೋಕಭಾವಗಳೆಲ್ಲ ಕವಿಯ ನಿರ್ಮಿತ ಪರಿಭಾವನೆಗೆ ಸಂದು ತಮ್ಮ ಲೌಕಿಕತ್ವವನ್ನು ಕಳೆದುಕೊಂಡು ರಸವಾಗುತ್ತವೆ (ಸೌಂದ· ೦೯).
[ಸಂ.]

ಲೌಕಿಕಪರಿಣತಿ (ನಾ)· ಲೋಕವ್ಯವಹಾರದ ಪರಿಪಕ್ವವಾದ ಜ್ಞಾನ : ಪ್ರಕಟ ಲೋಕೋತ್ತರ ಲೌಕಿಕಪರಿಣತಿ ಪುನ್ನಿಗಂಗೆ (ಪಾಂಡಿತ್ಯ· ೦೨-೩೩).
[ಸಂ.]

ಲೌಕಿಕಪ್ರತ್ಯಕ್ಷ (ನಾ)· ಇಂದ್ರಿಯಗಳಿಂದ ಉಂಟಾಗುವ ಅನುಭವ : ಪ್ರತ್ಯಕ್ಷಜ್ಞಾನದಲ್ಲಿ ಲೌಕಿಕಪ್ರತ್ಯಕ್ಷ, ಅಲೌಕಿಕಪ್ರತ್ಯಕ್ಷ ಎಂದು ಎರಡು ವಿಧ. ಲೌಕಿಕಪ್ರತ್ಯಕ್ಷವು ಆರು ಇಂದ್ರಿಯಗಳಿಂದ ಉಟಾಗುವುದರಿಂದ ಆರು ವಿಧ (ಹಂಡಾಶಾ. ೦೪೬)· [ಸಂ.]

ಲೌಕಿಕಪ್ರಯೋಜನ (ನಾ)· ಲೋಕದ ವ್ಯವಹಾರಕ್ಕೆ ಸಂಬಂಧಿಸಿದ ಪ್ರಯೋಜನ ; ಪ್ರಾಪಂಚಿಕಲಾಭ : ಇತರ ವಿಧವಾದ ಲೌಕಿಕ ಪ್ರಯೋಜನದ ಗುರಿಯಿಲ್ಲದೆ, ಜ್ಞಾನೈಕದೃಷ್ಟಿಯಿಂದ ವಿಜ್ಞಾನವನ್ನು ಬೆಳಸಿದವರಲ್ಲಿ ಗ್ರೀಕರು ಮೊದಲಿಗರು (ಪಾಶ್ಚಾ· ೨ ೦೬೫). [ಸಂ.]

ಲೌಕಿಕವ್ಯವಹಿತ (ನಾ)· ಸಾಮಾನ್ಯಜೀವನಕ್ಕೆ ವಿರುದ್ಧವಾದುದು ; ಲೋಕವ್ಯವಹಾರಕ್ಕೆ ವಿರುದ್ಧವಾದುದು : ಏಕಪತಿ ಬಹುಸತಿಯರೆಂಬುದು ಲೋಕವಿದ್ಧತಿಯಾದುದರಿಂದ ತಾನೇಕಸತಿ ಬಹುಪತಿಗಳೆಂದು ವೈದಿಕ ವಿರುದ್ಧವಲೆ ಲೌಕಿಕವ್ಯವಹಿತದ ಕರ್ಮವನೀ ಕುವಾರ್ಗಿಗಳಲ್ಲಿ ಕಂಡವು (ಪಾಶ್ಚಾ· ೦೪-೮೬).
[ಸಂ.]

ಲೌಕಿಗ ' ಲೌಕೀಕ ' ನೋ·

ಲೌಕೀಕ, ಲೌಕಿಗ (ನಾ)· ೧. = ಲೌಕಿಕ ೩ : ಅವನು ಲೌಕೀಕರೊಳಗೆ ಮಾಳುಗಿ ಪಾರಮಾರ್ಥಿಕ ಮರೆತಿದ್ದಾನೆ (ಕಸಾ). **ಲೌಕಿಗ**: ೨. = ಲೌಕಿಕ ೫ : ನಿರ್ಮೋಹಿ ಲೌಕಿಗರನು [ಪಾಣಿ· ಲೋಕಗಳನು] ಸ್ಮರನೆಂಬ ಕಾಲ

ರುದ್ರಂ ಪ್ರಳಯಮೈದಿಸಲ್ ಗುರುತರ ಕ್ರೋಧದಿಂ ತೆಜಿದ ಶಿವನೇತ್ರ ದಂತಿರಲೆಸೆದಮರುದಯಾದ್ರಿಯೊಳ್ ಚಂದ್ರಮಂಡಲಂ (ಪಂಪಭಾ. ೯-೦೭).

[< ಸಂ. ಲೌಕಿಕ]

ಲೌಡಿ$_1$ ' ಲವುಡಿ$_1$' ನೋ.

ಲೌಡಿ$_2$, ಲವಡಿ, ಲವುಡಿ$_2$ (ನಾ)· ೧· ತೊಕ್ಕು ; ದಾಸಿ : (ಕ್ರಿ)· ೨· ವೇಶ್ಯೆ ; ಸೂಳೆ : ಆ ಬಜಾರಿ ಲೌಡಿನ ಸೊಸೆಯಾಗಿ ಕರಕೋ ಅಂತ ನನಗೆ ಅಂತೀರಾ ? (ಕಂಗಪ. ೨೬೨) ; ಆ ಕುಲಗೆಟ್ಟ ಲೌಡಿನ ವಹಿಸಿ ಮಾತನಾಡಿದ್ದು ಹೇಗಿದೆ? (ಪಜಕಬ್ಬು. ೮೩) . ೩· ದಾಸಿ ಅಥವಾ ಸೂಳೆ ಎಂಬರ್ಥದ ಒಂದು ಬಯ್ಗುಳು : 'ಲೌಡಿಮಗ' ಪರಾ. ಲವಡಿ : ೧· ಏರೇ ಏನಂತ ನಾ ಕೇಳದ್ರ,ನೀ ಯಾರ ಲವಡೀ ನನ್ನ ಕೇಳಾಕಿ ಅಂದರೂ ಅಂದರ (ಪ್ರಸಕ. II· ೦೮೬)· ಲವುಡಿ$_3$: ೨· ' ಲವುಡಿಮಗ ' ಪರಾ. [←ಪಾರ. لوند ; ಹಿಂ. ಲೌಂಡೀ ; ಮರಾ. ಲೌಂಡೀ, ಲವಂಡೀ]

ಲೌಡಿಗಾಟ (ನಾ)· ದೊಣ್ಣೆಯನ್ನು ಹಿಡಿದಿರುವವನು; ದಡಿಗ : ಶೂರ: ನೆತ್ತರ್ವೊನಲಿಂ ಒಡಲಾಯ್ತುನಿಮಿಷವಿನಾಹವದೆಡೆಯನೆನುತ್ತೊರ್ವ ಲೌಡಿಗಾಜಂ ಮೆಱೆದಂ (ಪಚಿಭಾ· ೬-೩೩)· [ಲೌಡಿ$_1$ (<ಲವುಡಿ$_1$) + – ಗಾಜ(<–ಕಾಱ)]

ಲೌಡಿಮಗ, ಲವುಡಿಮಗ (ನಾ)· ದಾಸಿ ಅಥವಾ ಸೂಳೆಯ ಮಗ ಎಂಬರ್ಥದ ಒಂದು ಬಯ್ಗುಳು : ಆ ಲೌಡಿಮಗನ ಕೊಲ್ಲಬೇಕು (ರಾಕೇಂದ್ರ. ೨೬೨) ; ಲೌಡೀಮಗನೆ, ನಿಮ್ಮಪ್ಪ ಮಹೀಕಾಕ್ಕೆ ಕೊಡ್ತಿದ್ದ (ಹುಳ್ಳಿಹ. ೦೩೫). ಲವುಡಿಮಗ : ದೊಸ್ಡಬಾಲು ತಡದರು . . . ಇಲ್ಲದೆ ಹೋದರೆ ಆ ಲವುಡೀಮಗನಿಗೇ...! (ಪಾಕೇಚ್. ೦೫೦). [ಲೌಡಿ$_2$ + ಮಗ]

ಲೌಡೆ 'ಲವುಡಿ$_1$' ನೋ.

ಲೌಢ್ಯ (ನಾ)· ಅತಿಯಾಸೆ ; ಲೋಭ · [ಸಂ.]

ಲೌಲಿ (ನಾ)· [ಯೋಗ] ಹೊಟ್ಟೆಯಲ್ಲಿ ಕರುಳನ್ನು ಕಂಬದಂತೆ ನಿಲ್ಲಿಸಿ ಎಡಕ್ಕೆ ಬಲಕ್ಕೆ ಹೊರಳಿಸುವುದು : ಕಂಭವ ನಿಲ್ಲಿಸಿ ಯಡಜಾರಿ ಬಲುಜಾರಿಯಾಗಿ ಕುಕ್ಷಿಯನು ತಿರಿಗಿಸೂದು ಲೌಲಿಯೆನಿಸೂದು (ಶಪಕ್ರ. ೬-೬). [← ಮರಾ. ನೌಲಿ]

ಲೌಲ್ಯ (ನಾ)· ೧· ಅಸ್ಥಿರತೆ ; ಚಂಚಲತೆ. ೨· ಅತಿಯಾಸೆ ; ಗೀಳು : ಕುಲ್ಯವಾದ್ಯರಲಾ [ಪಾಣಾ.ಲಾ]ಲ್ಯವನಧರ ತಾಲ್ಯವಕ್ಷಯ . . .ವನೆಸೆದು ಕರಮೆಸಯೆ (ಶಪಕ್ರ. ೪೭-೪೬) ; ತೊಱೆದೆನೋ ' ಶೀಲವಂ ಲೌಲ್ಯದಿಂದಂ (ಪ್ರಕಸ. ೩೦-೫೫) ; ಶಿಖಲೀಲಾಮುಕಾವಮನಃಗೈದರೇನೆಂಬುದೀ ಬಾಪಲ್ಯತರ ಲೌಲ್ಯಕೆ (ವಂಗಾಣ. ೩-೯-೪೬). ೩· ಆಸೆಯುಳ್ಳವನು ; ಲೋಲುಪ : ಅನಕಂ ಕುಂಡಲಿ ಧಾಭ್ರುವೀರ್ಯನ್ನಕಿಲಾಲ್ಯಂ ಕೊಬರಂ ಕಾತರಂ (ಪುರಪ. ೦-೩೨) ; ಶರಣಾಗತಭಯವಿನಾಶನಂ ಗುಣರಾಲ್ಯನಂ ಸದ್ಭಕ್ತಿ ಲೌಲ್ಯನು . . . ಸಾಷ್ಟಾಂಗದಲಿ ನಮಿಸಿ (ಅಪಕ್ಷ. ೪೬-೭೨). [ಸಂ.]

ಲೌಲ್ಯತ್ವ (ನಾ)· = ಲೌಲ್ಯ ೨ : ಪಡೆದಂ ಪದ್ಮಾಸನಂ ವೇಶ್ಯೆಯಂ ಸಲೆ ಲೌಲ್ಯತ್ವದೆ (ಪುರಪ: ೦೦-೦). [ಸಂ.]

ಲೌಲ್ಯಭಾವ (ನಾ)· ಲಂಪಟತೆ ; ಲೋಲುಪತೆ : ಕಾಯಲ್ಬಂದಡೆ ವಜ್ರಶ್ಯೆಳಕೃತದುರ್ಗ್ಗಂ ಲೌಲ್ಯಭಾವಂ ಪರಸ್ತ್ರೀಯಲ್ಬಂದಡೆ ರಾವಣಾತ್ಮಜ ಚಮೂವಿದ್ರಾವಣಂ ಲಕ್ಷ್ಮಣಂ (ಅಕ· VII, ೪೫೫· ೦೩೬-೩೦ ; 1068).[ಸಂ.]

ಲೌಲ್ಯರಸ (ನಾ)· [ಕಾವ್ಯಮೀ] ಒಂದು ಬಗೆಯ ರಸ : ಆರ್ದ್ರ ಸ್ಥಾಯಿ ಲೌಲ್ಯರಸಮೆಂದೊಡದುಪುಂ ಹಾಸದಲ್ಲಿ ಮೇಣ್ ರತಿಯಲ್ಲಿ ಮೇಣ ನೃತ್ತದಲ್ಲಿ ಅಂತರ್ಭಾವಂ (ಪಚಿಂ·೧-೦೬ ೪೬); ಆಸೆಯೇ ಸ್ಥಾಯಿಭಾವವಾದ ಲೌಲ್ಯರಸವನ್ನು ನಿರಾಕರಿಸುವುದರಲ್ಲೂ ಇದೇ ಸರಣಿಯನ್ನು ಅನುಸರಿಸ ಬೇಕು (ಶಾರಚಿ· ೪೦೬)· [ಸಂ.]

ಲೌಲ್ಯವಾಹಿತ (ನಾ)· ಪ್ರೀತಿಯನ್ನು ಪ್ರಕಟಿಸುವವನು ; ಅನುರಾಗ ಪುಳ್ಳವನು : ಪರರಿಂಗಿತಜ್ಞರ ಲೌಲ್ಯವಾಹಿತರ . . . ಕಪಟಿಂಗಳಿಲ್ಲದ ಪಿರಿಯ ವೃದ್ಧರ ಸೇವಿಪರಸಗೆ ವೃದ್ಧಿಯಹುದು (ತಿಪ್ಪಾಣಂ· ೦-೪೬). [ಸಂ.]

ಲೌಲ್ಯೆ (ನಾ)· [ಕಾವ್ಯಮೀ] ನಾಲ್ಕು ಬಗೆಯ ನಾಯಿಕೆಯರಲ್ಲಿ ಒಬ್ಬಳು : ನಲವತ್ತೆರಡು ವರ್ಷಕ್ಕಿಂತ ಹೆಚ್ಚು ವಯಸ್ಸಾದ ಹೆಂಗಸು : ವಯಸವಿಭೇದದಿಂ ಬಾಲೆ ಯಾವನೆ ಪ್ರೌಢೆ ಲೌಲ್ಯೆಯಂದಿಂತು ಧರಿತ್ರಿಯೊಳಸ್ಪರ್ಷಾಲ್ಪಕಾರ್ಯಂತೆಯರ್ . . . ಪಾಲ್ವತ್ತೆರಡಾ ಪ್ರೌಢಾಸ್ಪದ ಮಾಕೆಗೆ ವಿಸಹಂದಪ್ಪದಂಗನೆಗಂ ಮೇಲೆ ಲೌಲ್ಯೆಗಬ್ದಂ ವನಿತೆ (ಪುರಪ. ೬-೦). [ಸಂ. ಲೌಲ್ಯಾ]

ಲೌಹ (ಗು)· ೧· ಲೋಹದಿಂದ ಮಾಡಿದ ; ಲೋಹಸಂಬಂಧವಾದ : ನಿಶ್ಚಲಂ ನಿಂದ ಹನುಮನ ಕಿವಿಗೆ ಭೋಂಕನೆಯೆರಗಿದತ್ತು . . . ನೈಶಚರ ನೈನಿಕರ ಸಶ್ರಮದ ಸಮುದಾಯವದಹತಿಯ ಲೌಹಘೋಷಂ (ಕ್ರಿಣಾವಿ· ೪೭೬-೪೪) ; ತನ್ನ ಎದುರು ಮೇಲೆ ಮಿರುಗುತ್ತಿದ್ದ ಲೌಹಫಲಕ ಗಳಿಂದ . . . ಅವನೊಂದು ಹಕ್ಕಯಂತೆ ಕಾಣುತ್ತಿದ್ದನು (ಪ್ರಪಕು· ೪೫೯). ೨· ತಾಮ್ರದ. ೩· ಕಬ್ಬಿಣದ : ಪುವಹಿಸುವ ಲೌಹ ರೇಖಾಸಾಳಗಳ ಹೋಲಿ . . . ಹರಿಯುತಿದೆ ಕಂಬಿದಾರಿ (ಕಾಚಿಕಿ· ೩೩-೦೦). (ನಾ)· ೪· ಲೋಹ· ೫· ಕಬ್ಬಿಣ. [ಸಂ.]

ಲೌಹಿತ್ಯ (ನಾ)· ೧· ಕೆಂಪುಬಣ್ಣ. ೨· ಬ್ರಹ್ಮಪುತ್ರಾನದಿ : ಲೌಹಿತ್ಯ ಮನಂಬುಧಿ ಪರಿವಾಹಮುಪವನೀಶಸೀಱ್ ತತ್ಪತನ್ಯಪಸಂದೋಹವೆಱಗಿದು ದಧೀಶಗಜಾಪತಕಾಲಾಗುರುದ್ಭುಮಂಬೆರಸಾಗಳ್ (ಪಂಚಪ್ರ.೦೦-೩೪). [ಸಂ.]

*

ಮುದ್ರಿಕೆ (ನಾ). ೧. ಭವ್ಯತೆಗಾಗಿ ಮೊಹರುಮಾಡಲು ಬಳಸುವ ಅರಗು, ಸೀಸ ಮುಂತಾದುವುಗಳ ಮೇಲೆ ಒತ್ತುವ. ಚಿಹ್ನೆಯುಳ್ಳ ಲೋಹದ ಪಸ್ತು ; ಮುದ್ರೆ ; ಉಂಡಿಗೆ : ಕೋರ್ಟಿನವರು ಆ ಮನೆಯ ಬಾಗಿಲಿಗೆ ಬೀಗಹಾಕಿ ಮುದ್ರಿಕೆಯನ್ನು ಒತ್ತಿದ್ದಾರೆ (ಪ್ರಾಯ). ೨. ಲಕೋಟೆ. ದಸ್ತೈವಜು ಮುಂತಾದುವುಗಳ ಮೇಲೆ ಸರಕಾರದ ಸರವಾಗಿ ಹಾಕುವ ಮುದ್ರೆ.— ಛಾಪು : ರಿಜಿಸ್ಟ್ರೇಷನ್ನಿನ ಮುದ್ರಿಕೆ ಇಲ್ಲದ ಮೂಲಕವೂ ಹಳೆಯ ಮಂಶಿಯ ಮೂಲಕವೂ ಅದು ಪ್ರಕಟಿಮಂತೆ ತೋನುತ್ತದೆಯಷ್ಟೆ (ಸಂಪಾದಿ. ೫೬೪). ೩. ಚಿಹ್ನೆ ; ಗುರುತು ; ಆಚ್ಚು : ಅವನ ಘುಂಗೈ ಮೇಲೆ ಜಾನಕಿಯಾಯರ ಅಗ್ರದಂತಗಳು ತಮ್ಮ ಮುದ್ರಿಕೆಗಳನ್ನು ಮೂಡಿಸಿದ್ದವು (ಸಮುಚ. ೧೮೬). ೪. ಕವಿಯು ತನ್ನ ಕಾವ್ಯದ ಕಡೆಯಲ್ಲಿ ಅಥವಾ ಪ್ರತಿ ಅಧ್ಯಾಯದ ಕಡೆಯಲ್ಲಿ ತನ್ನ ಇಷ್ಟದೈವ ಅಥವಾ ಪ್ರಿಯರ ಹೆಸರಿನಲ್ಲಿ ಮಾಡಿರುವ ಅರ್ಪಣೆ ; ಅಂಕಿತ : ಧ್ವನ್ಯಾಲೋಕದಲ್ಲಿಯೂ ಹೀಗೇಯೇ ಗ್ರಂಥಾದಿಯಲ್ಲಿಯೂ 'ಆನಂದ' ಶಬ್ದವು ಮುದ್ರಿಕೆಯಂತೆ ಬರುತ್ತದೆ (ಕ್ಷಾತ್ರಟೀ. xxvii. ೧೮೫೪); ಭಾಗಣ್ಣನು ನಿತ್ಯವೂ ಮಾಡುತ್ತಿದ್ದ ಕೆಲಸವೆಂದರೆ . . . ವೆಂಕಟಕೃಷ್ಣ ಎಂಬ ಮುದ್ರಿಕೆಯಿಂದ ಕವಿತ್ವ ಮಾಡುವುದು (ಕಖಂ. ೧೪೦). ೫. ಜಪ. ಸಂಧ್ಯಾವಂದನೆ. ಪೂಜೆ ಮುಂತಾದ ಸಮಯಗಳಲ್ಲಿ ಕೈಬೆರಳುಗಳನ್ನು ಒಂದು ನಿರ್ದಿಷ್ಟಕ್ರಮವಲ್ಲಿ ಮಡಿಚಿ ತೋರುವ ವಿನ್ಯಾಸ.— ಕರವಿನ್ಯಾಸ. ೬. (ರಾಜನ ಅಥವಾ ಪ್ರಭುತ್ವದ ಕುರುಹಾಗಿ) ಒಂದು ನಿರ್ದಿಷ್ಟ ಲಾಂಛನವನ್ನು ಕೆತ್ತಿರುವ ಉಂಗುರ ; ಮುದ್ರೆಯುಂಗುರ : "ಭೂರ್ಮಿಕಮದಾವುದಂಗುರ ಮೆನಿಕ್ಕ ವರ್ಕರಂ ಬರೆಯಿ ಕಾ ಮುದ್ರಿಕೆಗಳೆಂದೆನಿಕ್ಕುಂ" (ಸಂಗಂಗಾ. ೦೦೦-೨೬); ನಾಡ ಧರೆಯೆಲ್ಲಂ ಧರಿಸಲೆ ರೂಢಿಸಿದ ಘನರಾಜಸಂ ಶುಭಮೂಡ ನಿಕ್ಕಿದನೊಂದು ಬೆರಳನ ಮುದ್ರಿಕೆಯ ತೆಜವಿ (ಬಸಪು. ೫೪-೫೫); ವೇಂದಿನಿಯು ಸುತೆಗಂಕಿತದ ಮುದ್ರಿಕೆಯನಿತ್ತು . . . ಲಂಕೆಯಂ ಸುಟ್ಟು ಬಂದೊಸಗೆಮೇಳ್ದನಿಲಜಸಸುರಾರಿ ಪುನ್ನಿಸಿದನು (ಕ್ಷತ್ರಾ. ೦೬-೭). ೭. ಯಾವುದಾದರೊಂದು ನಿರ್ದಿಷ್ಟಚಿಹ್ನೆಯನ್ನುಳ್ಳ ನಾಣ್ಯ ; ಮುದ್ರಿಸಿದ ನಾಣ್ಯ. ೮. ಮೊಹರು ಅಥವಾ ರುಜುಮಾಡಿದ ಕಾಗದ.— ಪತ್ರ. ೯. ಅಕ್ಷರ, ಚಿತ್ರ ಅಥವಾ ಸಂಕೇತಗಳಿಂದ ಕೂಡಿರುವ ವಸ್ತು : ಸಂಗೀತ ನರ್ತನಗಳು ಪ್ರಚಾರದಲಿದ್ದವೆಂದು ಕೆಲವು ವಿಗ್ರಹಗಳಿಂದಲೂ ಮುದ್ರಿಕೆಗಳಿಂದಲೂ ಅರ್ಥಮಿಸುಬಹುದು . . . ಅತಿಸುಂದರವಾಗಿ ಅಭರಣಗಳಂತೆ ತಯಾರಿಸಿದ ಬಳಪದ ಕಲ್ಲಿನ ಮುದ್ರಿಕೆಗಳ ಮೇಲೆ ಪಾತ್ರ ಲಿಪಿ ಕಂಡು ಬರುತ್ತದೆ (ಚಾಕಲ. ೦೩); ಮೊಹೆಂಜೊದಾರೊ ಪಾತ್ರ ಹರಪ್ಪಗಳಲ್ಲಿ ದೊರೆತ ಮುದ್ರಿಕೆಗಳ ಬೇಳಿನ ಲಿಪಿಯನ್ನು ಚಿತ್ರಲಿಪಿ (Pictography) ಎಂದು ಕರೆದಿದ್ದಾರೆ (ಚಾ.ಇತಿ. ೨೩). [ಸಂ. ಮುದ್ರಿಕಾ]

ಮುದ್ರಿಕೆಗುಱುಪು (ನಾ). ಪೊಪರು ಸಹಿತವಾದ ಗುರುತು.— ಚಿಹ್ನೆ : ರಾಯ ನಿನ್ನ ಕೊಲ್ಲೆಂದು ಕೋಪದಿಂ ಮುದ್ರಿಕೆಗುಱುಪಿತ್ತು, ನಿಲ್ಲದೆನ್ನನು ಕಳುಪಿದನು (ಕುಂಬಾ೩೦-೩೫-೦೪೦). [ಮುದ್ರಿಕೆ + ಕುಱುಪು (<ಕುಱಿ+ಪು)]

ಮುದ್ರಿಕೆಯುಂಗುರ (ನಾ). = ಮುದ್ರಿಕೆ ೬ : ಮುದ್ರಿಕೆಯುಂಗುರಂಗಳು ಚಂದ್ರಾಭರಣ ಭುಜಕೀರ್ತಿ . . . ಪೆಂಡೆಯಂ ಮೊದಲಾದ ಸಕಲಾಭರಣಂಗಳನಾ ಶೌಂಡಿಕಂಗೆ ತೋಜಿಲ್ (ಪಪ್ಪಚಾ. ೭-೦೦೦ ಪ).

[ಮುದ್ರಿಕೆ + ಉಂಗುರ]

ಮುದ್ರಿತ (ಗು). ೧. ಮೊಹರುಮಾಡಿದ ; ಮುದ್ರಿಸಿದ. ೨. ಗುರುತು ಮಾಡಿದ ; ಕುರುಹನ್ನುಂಟುಮಾಡಿದ. ೩. ಅಚ್ಚುಮಾಡಿದ ; ಮುದ್ರಣಗೊಳಿಸಿದ. ೪. ಮುಚ್ಚಿಕೊಂಡಿರುವ ; ಮುಗಿದ. ೫. ಆವರಿಸಿದ : ಆಚ್ಛಾದನೆಯನ್ನುಳ್ಳ : ಚಿತ್ರಕೂಟಾದ್ರಿಯುದೊ ಕಣ್ಗೊಳಿಸು ತಿಪುದಲ್ಲಿ. ಮೇಳ್ಪಮುದ್ರಿತಮಹಾಶೃಂಗಚಿವಲೀಗಮೋಲ್ (ಶ್ರೀಣಾಪು. ೧೩೬-೩೯). ೬. ಎಲ್ಲೆಯಂತೆ ಸೆಕ್ತುವರಿದಿರುವ : ಮೇರೆಯಾಗುಳ್ಳ : ಬಿಸಕಿಲ್ದುತ್ತು ಸಮುದ್ರಮುದ್ರಿತಧರಾಚಕ್ರಂ ಪ್ರಕಾಪಕ್ಕಗುರ್ವಿಸೆ (ಕುಪಾ. ೦-೦೦೦); ಸಮಸ್ತಸಮುದ್ರಮುದ್ರಿತ ಮೇದಿನಿಯಂತಿರಿಗೋಟಂಗಿಸೊಳ್ ಪಡಂಗಿರಿಸಲ್ಬಗೆದು (ಪಂಚಕಂ. ೪೬-೬); ಈದಮುದ್ರಿ ಆಸ್ಯಾದ್ರಿಗಳ ಮಧ್ಯೆ ಶರಧಿಮುದ್ರಿತ ಧರೆಯು ರಾಷ್ಟ್ರರಾಷ್ಟ್ರಂಗಳಂ ಜರಿಸಿ ಬಂದಿಪೆನು ನೀಂ (ಕಚ್ಚಾಂಗ. ೩೬-೨೬). (ನಾ). ೭. [ಸಂಗೀತ] ಹದಿನೈದು ಬಗೆಯ ಗಮಕಗಳಲ್ಲಿ ಒಂದು : ಬಾಯನ್ನು ಮುಚ್ಚಿಕೊಂಡು ನಡೆಸುವ ಸ್ವರಕಂಪ : ಮುದ್ರಿತ — ತುಟಿಗಳನ್ನು ಮುಚ್ಚಿ ಶ್ರುತಿರೀತಿಯಾಗಿ ಹಾಡುವುದು (ಸಂಗೀಶಂ. ೨೭); ಬಾಯಿಹಾಡುಗಾರಿಕೆಯು ವಿಶೇಷವಾದ ಸೊಗಸಾದ ಮುದ್ರಿತ ಮುಂತಾದುವನ್ನು ಅವರ ಬಾಯಿಂದ ಕೇಳುವುದೇ ಒಂದು ಅಪರೂಪವಾದ ಆನಂದ (ಸಂಗೀತ. ೭೦). [ಸಂ.]

ಮುದ್ರಿಸು (ಕ್ರಿ). ೧. ಮೊಹರುಮಾಡು ; ಮುದ್ರೆಯೊತ್ತು : ನೆಗೆದ ಪಯೋಧರವ್ಯಯಬೊಳಾಕಿಯು ಗರ್ಭದ ರಾ ಜ ಪ್ರ ತ್ರ ನಾ ರೊ ಗಿ ಸು ವ ಪಾಲ್ಗಳಂ ಮಡಗಿ ಮುದ್ರಿಸಿದಂತೆ ವಿಧಾತ್ರನೊಯ್ಯನೊಯ್ಯಗೆ ಕುಚಜೋಪು ಕಂಗಳೊಳ್ . . . ಕರ್ಪುಕವದಿಂದಡಿಯಿಟ್ಟುದು ಭೃಂಗ ಭಾಸುರಂ (ಅರಣ್ಯ. ೨-೨೩); ಭದ್ರಮೆನಿಸಿರ್ದ ಕುಸುಮಲಸದ್ಗಸಮಂ ಪೀರ್ವ ವದದೊಳೊಪ್ಪಿತು ಮಧನಂ ಮುದ್ರಿಸಿದಂಬಿನ ಲಾಕ್ಷಮುದ್ರೆಯಿಂದೆಂಬಂತೆ ತೀವಿವಳಿನಕುರುಂಬುಂ (ನಿಂಗ. ೩-೭೬). ೨. ಗುರುತುಮೂಡು ; ಚಿಹ್ನೆಯನ್ನು ಮೂಡಿಸು : ಉಂಡಿಗೆ, ಎಂದರೆ ರಹವಾರಿಗಳನ್ನು ಮುದ್ರಿಸುವ ಕಮ್ಮಟವೇ ಉಂಡಿಗೆಯ ಕಮ್ಮಟವೆಂದು ಅರ್ಥಮಾಡಬಹುದೇ ? (ಕಾಶಾ. ೬೯೯ ೧೦೭). ೩. ಪುಸ್ತಕ ಮುಂತಾದುವನ್ನು ಅಚ್ಚುಹಾಕು.— ಮುದ್ರಣಮಾಡು : ಒಂದು ದಿನಸದಲ್ಲಿ ಒಂದು ಕಲ್ಲ ಮೇಲೆ ಸಾವಿರದಿಂದ ಎರಡುಸಾವಿರದವರೆಗೆ ಕಾಗದಗಳನ್ನು ಮುದ್ರಿಸಿ ತೆಗೆಯಬಹುದು (ಪಾಬಾಮಿ. ೪-೨೦೩); ಶ್ರೀ ಜೆ. ಆರ್. ಡ್ಯೋಶ್ಕರವರು . . . ಮೊದಲನೆಯ ಭಾಗವನ್ನು ಮುದ್ರಿಸಿ ಮುಂದುವರಿಯುವುದಕ್ಕಾಗುವುದಿಲ್ಲವೆಂದು ಬಿಟ್ಟರು (ಪಂಗಾಕ್ಕ. iii. ಮುಖ್ಯ೩). ೪. ನಾಣ್ಯವನ್ನು ಟಂಕಿಸು : ನಾಣ್ಯವನ್ನು ಮುದ್ರಿಸುವ ಸ್ಥಳಕ್ಕೆ ಟಂಕಸಾಲೆ ಎನ್ನುತ್ತಾರೆ (ಲೂತ). ೫. ಅಚ್ಚೊತ್ತಿಸಿದ ಹಾಗೆ ನೆಲಸು.— ಗಾರು : ಮುದ್ರಿಸಲಾಜ್ಞೆ ಘೂತಳದೊಳ್ (ಪಚ. III (R). ಪಂಚಪ. ೨೬೯-೯; ೧೨೮೦); ಪರಾಕ್ರಮಂ ಮುದ್ರಿಸಿದ ತನ್ನಂಗವಟ್ಟವ ಜುಗುಪ್ಸೆಜುಂದೀಕ್ಷಿಸಿ (ಕಚ್ಚಾಂಗ. ೦೬-೪೪೯). ೬ (ಬಾಗಿಲು, ಪೆಟ್ಟಿಗೆಯ ಮುಚ್ಚಳ ಮುಂತಾದುವನ್ನು) ಮುಚ್ಚು ; ಹಾಕು : ತೆರೆಯು ದಂಪಿರಿಸು : ಲಲನಾಪಂಜೀರನಾದತ್ಯುಲಿಗುವೆನುತೆ ಛಾಛಾಗ್ಯಹೋತ್ಕಿರಿತೀಂವೂಪಲಹಂಸಾಸ್ಯಂಗಳಂ ಮುದ್ರಿಸುವರ್ (ಶಾಪಂಚಾ. ೨೨೯); ಅಭರಣಂಗಳ ಪೆಟ್ಟಿಗೆಯಂ ತರಿಸಿ ರತ್ನಮಂಜುಳಿಕೆಯ ಮುದ್ರಿಸಿದ ಮುಚ್ಚುಳಂ ತೆಗೆದು (ಬಸಕ. ೪-೦೭); ಕೆಲರರಿಗಳಂಜಿಬಿ ಬರೆ ಕಂಡೊ ಪೆರ್ಜಾಗಿಲ್ಗಳಂ ಬೇಗ ಮುದ್ರಿಸಿದರ್ (ಶಂಪ್ರ. ೨೪-೨೩). ೭. ಒಪ್ಪ ಹಾಕು ; ಒಪ್ಪಿಗೆ ನೀಡು : "ಮುದ್ರಿಸು — ಅಂಗೀಕರಣೇ. (ಬಪ್ಪು)" (ಕಪುಣಾ). ೮. (ಆಲಿ) ಕವಿ : ಆವರಿಸು : ವ್ಯಾಪಿಸು : ಸುತ್ತುವರಿ : ಮುದ್ರಿಸಿ ದೆಸೆಯಂ ಚೆಲ್ವುನ್ಮುದ್ರಿತಮೆನೆ ತವುಗೆ ಜೀರಕಾದ್ಯವನವಾರಿವ್ರ ಕವಾಟೋತ್ಕರವುನ್ಮಿದ್ರಿತಕಮಲಾಕರಂಗಳಂ ಸೊಗಯಿಸುಗುಂ (ಪುಪ್ರಪು. ೨-೪೭): ಅಂಧಕಾಸುರಂ ಕೋಪದಿಂ ತೆಗೆದಿಸುಬಲು ಮುದ್ರಿಸಿದುದಾಕಾಶ ಭೂಮಿ ದಿಗ್ವಾಲಂ (ಕಬಿಪ್ರ. ೫೦-೩೩); ಕೇಸುರಿಯು ಹರಿಯು ರಶ್ಮಿಕೇಸರಗಳಿಂ ಮುದ್ರಿಸಿತು ಮಾಂತಿಯಂ ಕೆನ್ನವಿನ ರಾತಿ (ಶ್ರೀಣಾಪು. ೨೩-೭೦). ೯. ಹೊಮೆಸು ; ಆಚ್ಛಾದಿಸು : ಬಾಪರಾಜನು ಮುನ್ನ ತಾಂ ಮುದ್ರಿಸಿದ ಮುಸುಕಂ ತೆಗೆಯಲು (ಬಸಪು. ೪೬ ೩೬) ೧೦. ಮಾ ಪಿಸುವಂತೆ ಮಾಡಿ...

ಕರ್ನಾಟಕ ಸರ್ಕಾರದ ಉದಾರ ಧನಸಹಾಯದಿಂದ ಕನ್ನಡಿಗರ ಬಹುದಿನಗಳ ಬೇಡಿಕೆಯಾಗಿದ್ದ ಕನ್ನಡ ನಿಘಂಟಿನ ಎಂಟು ಸಂಪುಟಗಳು ಈಗ ಪುನರ್ಮುದ್ರಣಗೊಂಡು ನಿಮ್ಮ ಕೈಸೇರುತ್ತಿವೆ.

ಸಮಸ್ತ ಕನ್ನಡಿಗರಿಗೆ ಈ ಸಂಪುಟಗಳನ್ನು ಒಪ್ಪಿಸಲು ನೆರವು ನೀಡಿದ ಕರ್ನಾಟಕ ಸರ್ಕಾರವನ್ನು ನಾನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ.

ಡಾ. ಸಬ್ಬೂರು ಪ್ರಸಾದ್ ಆರ್. ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು